ಪಂಪನ ನುಡಿಗಣಿ

ಡಾ. ಪಿ.ವಿ. ನಾರಾಯಣ

ಊಒಊಓಂ ಓಗಆಖಉಂಓಖ – ೦ ಉಟಥಿಚಿಡಿಥಿ, ತಿಙು ತುಟಣಾಚಿಡಿಣಾಜ್ಞಿ, ಡಿ ಫಾಡಿಜ ಗಜಾ ಛಿಥಿ ಊಚಿಟಾಚಿ ತು ಉಙಾ ಖಿತಿರ ಔಟಜ ಏಚಿಟಿಟಿಚಿಜಚಿ ಅಟಚಿಙ್ಞಿ, ‘೦ಜಾಣಾಡಿಚಿಟಿಚಿ’ ಚಿಟಿಜ ‘ಗಿಙಾಡಿಚಿಟುಚಿಡಿರಿಣಾಚಿ ಗಿಙಾಚಿಥಿಚಿ’ – ರಿಡಿಜಾಚಿಡಿಜಾ ಛಿಥಿ ಆಡಿ. ಕಿಗಿ. ಓಚಿಡಿಚಿಥಿಚಿಟಿಚಿ, ಚಿಟಿಜ ಕಾಙುಙ್ಞಜಾ ಛಿಥಿ ಆ.ಏ. ಖುಚಿಟುಚಿಣಾಟಿಜಚಿಡಿ ಖಚಿರ ಜಿಡಿ **‘ಏಚಿಟುಚಿಜುಙಚಿಣಿ,** ಓಚಿರುಚಿರಿರಿಚಿ ಖಾಡಿಜಾ, ಖುಙಚಿಜಡಿಣಾಡಿಚಿಟ ಃಚಿಟಿರುಚಿಟಡಿಜ

ಕೃತಿಕಾರನ ಅರಿಕೆ

ಪಂಪ ಕನ್ನಡದ ಆದಿಕವಿ ಎಂಬ ಹೆಗ್ಗಳಿಕೆಗೆ ಪ್ರಾಪ್ತನಾದವನು. ಅವನ ಆದಿತನ ಕಾಲಕ್ಕೆ ಸೀಮಿತವಾದುದಲ್ಲ, ಹೆಗ್ಗಳಿಕೆಗೆ ಸಂಬಂಧಿಸಿದ್ದು. ಅವನಿಗಿಂತ ಹಿಂದೆ ಹತ್ತಾರು ಮಂದಿ ಗದ್ಯಪದ್ಯಗಳಲ್ಲಿ ಬರೆದವರು ಇದ್ದರೆಂಬ ವಿಷಯ 'ಕವಿರಾಜಮಾರ್ಗ'ದಲ್ಲಿಯೇ ಇದೆ. ಚಂಪೂ ಪ್ರಕಾರ ಕೂಡ ಪಂಪನಿಗೆ ಹಿಂದೆಯೇ ಕನ್ನಡದಲ್ಲಿ ಆರಂಭಗೊಂಡಿತ್ತು; ಅದು ಕಾಲಕಾಲಕ್ಕೆ ಚೆಂದಗೊಳ್ಳುತ್ತ ಪಂಪನ ಕಾವ್ಯಗಳಲ್ಲಿ ತನ್ನ ಶಿಖರಸ್ಥಿತಿಯನ್ನು ತಲುಪಿತು. ಈ ದೃಷ್ಟಿಯಿಂದ ಅವನು ಮೊದಲ ಕವಿ. ಅಲ್ಲದೆ ಅಕ್ಷರವೃತ್ತಗಳಿಗೆ ಕನ್ನಡತನವನ್ನು ತುಂಬಿ ಅನಾಯಾಸವಾಗಿ ಬರೆದವನು ಅವನು, ಹಳೆಯ ಕತೆಗೆ ಹೊಸ ಸತ್ವ ತುಂಬಿದವನು, ಯಾರದೋ ವಸ್ತುವಿಗೆ ಕನ್ನಡತನದ ಜೀವ ಹತ್ತಿಸಿದವನು, ಸೀಮಿತತೆಯಲ್ಲಿ ಅಸೀಮವಾದುದನ್ನು ಧ್ವನಿಸಿದವನು, ಬದುಕಿನ ಒಳ–ಹೊರ ಆಕಾರಗಳ ಬಗ್ಗೆ ಹಾಗೂ ಹೂರಣದ ಬಗ್ಗೆ ಚಿಂತಿಸಿದವನು. ಈ ಅಂಶಗಳನ್ನೇ ಒಟ್ಟಾಗಿ ಅವನು 'ದೇಸಿ' ಎಂದು ಕರೆದಂತೆ ಕಾಣುತ್ತದೆ.; ಅದಕ್ಕೇ ಅವನು ತನ್ನೆರಡೂ ಕಾವ್ಯಗಳಲ್ಲಿ ದೇಸಿ ಇದೆ ಎಂದು ಹೇಳಿಕೊಳ್ಳುವುದು. ಮಾರ್ಗದ ಹಾದಿಯುದ್ದಕ್ಕೂ ದೇಸಿಯ ನೆರಳು ಹಬ್ಬಿಸಿದವನು ಆತ. ಅದಕ್ಕಾಗಿಯೇ ಅವನ ಕಾವ್ಯಗಳನ್ನು ಕಾಲಕಾಲಕ್ಕೆ ಸಾಹಿತ್ಯಾಸಕ್ತರು ಆದರಿಸುತ್ತ ಬಂದಿದ್ದಾರೆ; "ಪಸರಿಪ ಕನ್ನಡಕ್ಕೊಡೆಯನೆ ಸತ್ಕವಿ ಪಂಪನಾವಗಂ" ಎಂಬ ಉದ್ಗಾರ ಹೊರಹೊಮ್ಮಿದೆ. ಅವನಿದ್ದುದು, ಕಾವ್ಯರಚಿಸಿದ್ದು ಸುಮಾರು ಒಂದು ಸಾವಿರದ ಒಂದು ನೂರು ವರ್ಷಗಳ ಹಿಂದೆ; ಆದರೂ ಅವನ ಕಾವ್ಯಗಳ ಗಮಲು ಹಾಗೆಯೇ ಇದೆ, ಮುಂದೆಯೂ ಇರುತ್ತದೆ. ಅವನನ್ನು ಮುಂದಿನವರು ನಾನಾ ಬಗೆಯಲ್ಲಿ ಅನುಸರಿಸುತ್ತಲೇ ಅಭಿನಂದಿಸಿದ್ದಾರೆ. ಈ ಕಾಲದಲ್ಲಿಯೂ ಅವನ ಕೃತಿಗಳನ್ನು ನೇರವಾಗಿ ಪರಿಚಯ ಮಾಡಿಕೊಳ್ಳುವುದು ಕೆಲವರಿಗಾದರೂ ಆವಶ್ಯಕ; ಅಂಥವರು ಎಲ್ಲ ಕಾಲದಲ್ಲೂ ಇದ್ದೇ ಇರುತ್ತಾರೆ. ಹಿಂದಿನದನ್ನು ಇಂದಿನ ಕಣ್ಣುಗಳಲ್ಲಿ ಕಾಣಲು ಇದು ಬೇಕು. ಅವನ ಕಾವ್ಯಗಳ ಅಧ್ಯಯನ ಎಲೆಮರೆಯಲ್ಲಿ ನಡೆಯುತ್ತಲೇ ಇದೆ. ಹಿಂದಿನದರ ಬಗೆಗಿನ ತಿಳಿವು ಮತ್ತು ಆವಶ್ಯಕತೆಯ ಅರಿವಿರುವ ಇಂದಿನವರಿಗೆ ಒಂದಷ್ಟು ಸಹಕಾರಿಯಾಗಬೇಕೆಂಬ ಬಯಕೆಯಿಂದ ಸಿದ್ಧಗೊಂಡದ್ದು ಈ 'ಪಂಪನ ನುಡಿಗಣಿ'. ಅವನ ಶಬ್ದಕೋಶ ಅಪೂರ್ವವಾದುದು, ತೇಜಸ್ವಿಯಾದುದು. ಅವನು ತಕ್ಕಡಿಯ ಎರಡು ಬಟ್ಟುಗಳಲ್ಲಿ ಒಂದರಲ್ಲಿ ಕನ್ನಡವನ್ನು ಇನ್ನೊಂದೆಡೆ ಸಂಸ್ಕೃತವನ್ನು ಇಟ್ಟು ಹೊಯ್‌ಕೈಯಾಗಿಸಿದ್ದಾನೆ. ಸಂಸ್ಕೃತದ ಆಕೃತಿಯಲ್ಲೂ ಕನ್ನಡದ ಜೀವ ತುಂಬಿದೆ. ಹಾಗಾಗಿ ಅವನು ಈ ವಿಷಯದಲ್ಲೂ ಮುಂದಿನವರಿಗೆ ಮಾದರಿಯಾದ. ವಸ್ತು–ಶೈಲಿ–ಆಶಯಗಳಗಳಲ್ಲಿ ಸದ್ಯ ಮತ್ತು ಶಾಶ್ವತಗಳನ್ನು ಸಮನ್ವಯಗೊಳಿಸಿರುವುದರ ಪರಿಚಯ ಮಾಡಿಕೊಳ್ಳಲು ಬಯಸುವವರಿಗೆ ಒಂದಷ್ಟು ನೆರವು ನೀಡುವುದು ಈ 'ನುಡಿಗಣಿ'ಯ ಉದ್ದೇಶ.

ಇದನ್ನು ಸಿದ್ಧಪಡಿಸುತ್ತಿರುವ ವಿಷಯವನ್ನು, ಮಾತಿನ ನಡುವೆ, ಪ್ರಸ್ತಾಪಿಸಿದಾಗ, ಪ್ರೊ. ಡಿ. ಕೆ, ಶ್ಯಾಮಸುಂದರ ರಾವ್ ಅವರು ತಮ್ಮ '**ಕಾಮಧೇನು**'ವಿನ ಮೂಲಕ ಅದನ್ನು ಹೊರತರುವ ಬಯಕೆ ವ್ಯಕ್ತಪಡಿಸಿದರು, ಲೇಖಕನಿಗೆ ಇದಕ್ಕಿಂತ ಸಂತಸದ ವಿಷಯ ಬೇರಾವುದಿದ್ದೀತು? ಒಪ್ಪಿದೆ. ಅವರು ಪ್ರಕಟಿಸುವ ವಿಷಯ ಖಚಿತವಾದ ಮೇಲೆ ನನ್ನ ಕೆಲಸಕ್ಕೆ ಮತ್ತಷ್ಟು ತೇಜಿ ಬಂತು. ಅವರ ಉದಾರತೆಯಿಂದ ಈ ಹೊತ್ತಗೆ ಬಹು ಬೇಗ ಬೆಳಕು ಕಾಣುವಂತಾಗಿದೆ; ಹೀಗಾಗಿ ಈಗದು ಅಭ್ಯಾಸಿಗಳ ಮುಂದಿದೆ. ಇದು ವಿದ್ವಾಂಸರಿಗೆ ಸಹಾಯಕವಾಗಬಲ್ಲ ಕೃತಿ ಎಂಬ ಭ್ರಮೆ ನನಗಿಲ್ಲ; ಅಭ್ಯಾಸಿಗಳಿಗೆ ನೆರವಾಗಬಹುದೆಂಬ ನಿರೀಕ್ಷೆಯಿದೆ, ಅಷ್ಟೆ. ಕೆಲಸವನ್ನು, ಯಾವುದೇ ಕೆಲಸವನ್ನು, ಪರಿಪೂರ್ಣವಾಗಿ ಮಾಡಬಹುದೆಂದು ನನಗೆ ಅನ್ನಿಸುವುದಿಲ್ಲ; ಅಲ್ಲದೆ ಪರಿಪೂರ್ಣವಾಗುವವರೆಗೂ ಏನನ್ನೂ ಹೊರತರುವುದಿಲ್ಲ ಎಂಬ ಶಪಥತೊಟ್ಟ ಶಕ್ತಿವಂತರು ತಮ್ಮ ಸಾಮರ್ಥ್ಯವನ್ನು ತಮ್ಮಲ್ಲಿಯೇ ಅಡಗಿಸಿಕೊಂಡು ಕಣ್ಮರೆಯಾಗಿದ್ದಾರೆ. ಏಕೆಂದರೆ ಪರಿಪೂರ್ಣತೆ ಎಂಬುದು ಒಂದು ಕನಸು, ಆದರ್ಶ, ಇಲ್ಲದ್ದು ಅಥವಾ ಇರಲಾರದ್ದು. ಅದರ ಬೆನ್ನು ಹತ್ತಿ ಒಂದಷ್ಟು ದೂರ ತೆವಳುವುದು ಮಾತ್ರ ನನ್ನಂಥವನಿಂದ ಸಾಧ್ಯ. ನನಗೆ ನನ್ನ ಮಿತಿಯ ಅರಿವಿರುವುದರಿಂದ ಇರಲ್ಲಿರಬಹುದಾದ ಕೊರತೆಗಳ ಬಗ್ಗೆ ಒಂದಷ್ಟು ಕಲ್ಪನೆಯಿದೆ, ಅವುಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಇದಕ್ಕಿಂತ ಹೆಚ್ಚು ದೂರ ಸಾಗುವುದು ನನ್ನಿಂದ ಆಗದು, ಆದರೆ 'ಏನಾದರೂ ಮಾಡುತಿರು ತಮ್ಮ' ಎಂಬ ಮಾತನ್ನು ಅನುಸರಿಸುವ ಜಾಯಮಾನದವನಾದ ನಾನು ಇಂಥದೊಂದು 'ಸಾಹಸ'ಕ್ಕೆ ಕೈಹಾಕಿದ್ದೇನೆ. ಇದನ್ನು ತಿಳಿದೂ ಪ್ರಕಟಣೆಗೆ ಮುಂದಾಗಿರುವ ಪ್ರೊ. ಶ್ಯಾಮಸುಂದರ ರಾವ್ ಅವರಿಗೆ ನಾನು ಕೃತಜ್ಞ, ಸುಂದರವಾಗಿ ಪುಸ್ತಕವಿನ್ಯಾಸ ಮಾಡಿ ಮುದ್ರಿಸಿರುವ ಮೆ.   ಅವರಿಗೆ ನನ್ನ ನೆನಕೆಗಳು

ಬೆಂಗಳೂರು

ಪಿ.ವಿ. ನಾರಾಯಣ

‘ಪಂಪನ ನುಡಿಗಣಿ’ಯ ಸ್ವರೂಪ ಕುರಿತು’

ಪಂಪನ ಎರಡು ಮಹತ್ವದ ಕೃತಿಗಳಾದ **‘ಆದಿಪುರಾಣ’** ಮತ್ತ **‘ವಿಕ್ರಮಾರ್ಜುನ ವಿಜಯ’**ಗಳ ಪ್ರತಿ ಪದ್ಯದ ಓದಿನಿಂದ ಸಂಗ್ರಹಿಸಿರುವ ಪದಗಡಣ ಇದರಲ್ಲಿದೆ. ಇದರಲ್ಲಿನ ಪ್ರತಿ ಉಲ್ಲೇಖವೂ – ಎಂದರೆ ಬಿಡಿಶಬ್ದ, ಸಾಧಿತ ಪದ, ಕೂಡುಪದ, ನುಡಿಗಟ್ಟು ಹಾಗೂ ಸಂಸ್ಕೃತೋಲ್ಲೇಖ – ಸ್ವತಂತ್ರವೆಂಬಂತೆ ದಾಖಲುಗೊಂಡಿದೆ. ಅದರಲ್ಲಿನ ಪ್ರತಿಯೊಂದಕ್ಕೆ ಇರುವ ಅರ್ಥ ಅಥವಾ ಅರ್ಥಗಳನ್ನು ನೀಡಿದೆ. ಹಾಗೆ ನೀಡುವಾಗ ಒಂದೊಂದು ಅರ್ಥದ ಒಂದೊಂದು ಪ್ರಯೋಗವನ್ನು ಈ ಎರಡೂ ಕಾವ್ಯಗಳ ಸಾಲುಗಳ ಮೂಲಕ ದೃಢಪಡಿಸಿದೆ. ಯಾಕಂದರೆ ಶಬ್ದದ ಅರ್ಥ ಬಹುವೇಳೆ ಸಂದರ್ಭಾನುಸಾರಿ; ಹೀಗಾಗಿ ಸಂದರ್ಭವಾಕ್ಯವನ್ನು ನೀಡಿದಾಗಲೇ ಶಬ್ದದ ಅರ್ಥ ಸ್ಫುಟಗೊಳ್ಳುವುದು. ಉಲ್ಲೇಖದ ನಂತರ ಆಯಾ ಪದದ ಬಗೆಯನ್ನು – [ನಾ], [ಕ್ರಿ], [ಗು], [ಕ್ರಿವಿ], [ಅ] – ಮುಂತಾಗಿ ಸೂಚಿಸಿದೆ. ಆದರೆ ದೇಶ್ಯ ಅನ್ಯದೇಶ ಎಂಬ ವಿಭಾಗವಿಲ್ಲ. ಆನಂತರ ಅರ್ಥ ಕೊಟ್ಟು, ಸಂಬಂಧಿಸಿದ ಆರ್ಥವನ್ನು ಹೊಂದಿರುವ ಶಬ್ದವಿರುವ ಪ್ರಯೋಗವನ್ನು ನೀಡಿದೆ. ಪ್ರತಿ ಅರ್ಥಕ್ಕೂ ಬೇರೆಯದೇ ಉಲ್ಲೇಖ. ಒಂದಕ್ಕಿಂತ ಹೆಚ್ಚು ಅರ್ಥವಿರುವ ಉಲ್ಲೇಖಗಳಗೆ ಸಂಬಂಧಿಸಿದಂತೆ, ಕ್ರಮಾಗತವಾದ ಪ್ರಯೋಗವಾಕ್ಯಗಳಿಗನುಗುಣವಾಗಿ ಅರ್ಥಗಳನ್ನು ನೀಡಲಾಗಿದೆ; ಮೊದಲು **‘ಆದಿಪುರಾಣ’**, ನಂತರ **‘ವಿಕ್ರಮಾರ್ಜುನ ವಿಜಯ’**, ಅದೂ ಶಬ್ದಗಳು ಕಾಣಿಸಿಕೊಳ್ಳುವ ಅನುಕ್ರಮದಲ್ಲಿಯೇ. ಪ್ರತಿ ಅರ್ಥ ನೀಡುವ ಮುನ್ನ ಪದದ ಬಗೆಯನ್ನು ಸೂಚಿಸಿದೆ. ಹಲವು ಕಡೆಗಳಲ್ಲಿ ಅರ್ಥ ಸಿಕ್ಕದಿರುವಾಗ, ಉಲ್ಲೇಖ ಮತ್ತು ಪ್ರಯೋಗಗಳನ್ನು ನೀಡಿದ್ದರೂ, ಅರ್ಥದ ಸ್ಥಳದಲ್ಲಿ ? ಇರುತ್ತದೆ. ಸಂಖ್ಯಾ ವಿಶಿಷ್ಟ ಶಬ್ದಗಳಿಗೆ ವಿವರಣೆಯನ್ನು ನೀಡಿದೆ; ಆ ಸಂಖ್ಯೆ ಯಾವುದನ್ನು ಸೂಚಿಸುವುದೋ ಅದರ ಬಿಡಿ ಹೆಸರುಗಳ’ ಉಲ್ಲೇಖವೂ ಇದೆ. ಉದಾಹರಣೆಗೆ, ‘ದ್ವಾದಶಾದಿತ್ಯ’ ಎಂಬ ಉಲ್ಲೇಖದಲ್ಲಿ ಹನ್ನೆರಡು ಮಂದಿ ಆದಿತ್ಯರ ಹೆಸರುಗಳು ಇವೆ, ಹಾಗೆಯೇ ‘ಸಪ್ತಾಶ್ವ’, ‘ಷೋಡಶಕ್ರಿಯೆ’ ಇತ್ಯಾದಿ. ಪಂಪ ಬಳಸಿರುವ ಎಲ್ಲ ಜೈನ ಪಾರಿಭಾಷಿಕ ಶಬ್ದಗಳಿಗೂ ಅರ್ಥ ನೀಡುವ ಪ್ರಯತ್ನ ಇಲ್ಲಿದೆ. ಉಲ್ಲೇಖವು ದೊಡ್ಡ ಮತ್ತು ದಪ್ಪ ಅಕ್ಷರಗಳಲ್ಲಿದ್ದರೆ, ಪದದ ಬಗೆಯು ಸಣ್ಣ ಆದರೆ ದಪ್ಪ ಅಕ್ಷರಗಳಲ್ಲಿವೆ; ಅರ್ಥಗಳು ಉಲ್ಲೇಖಕ್ಕಿಂತ ತುಸು ಕಿರಿದಾದ ಅಕ್ಷರಗಳಲ್ಲಿದ್ದರೆ, ಉಲ್ಲೇಖಗೊಂಡ ಕಾವ್ಯದ ಸಂಕೇತ [**ಆದಿಪು** ಅಥವಾ **ಪಂಪಭಾ**] ಅರ್ಥವಿರುವ ಗಾತ್ರದ ದಪ್ಪ ಅಕ್ಷರಗಳಲ್ಲಿವೆ. ಅನೇಕ ಸಂದರ್ಭಗಳಲ್ಲಿ ಉಲ್ಲೇಖದ ಮೂಲವನ್ನು ಅಥವಾ ವಿವರಣೆಯನ್ನು ಚೌಕ ಕಂಸಗಳಲ್ಲಿ [] ನೀಡಿದೆ. ಶಬ್ದವೊಂದರ ಧಾತುರೂಪವನ್ನು √ ಎಂಬ ಚಿಹ್ನೆಯಿಂದ ಸೂಚಿಸಿದೆ; ಅಂತೆಯೇ ಸಾಧಿತ ಶಬ್ದದ ಮೂಲಪದವವನ್ನು < ಚಿಹ್ನೆಯಿಂದಲೂ, ಸಾಧಿತವಾದ ರೂಪವನ್ನು > ಚಿಹ್ನೆಯಿಂದಲೂ ಸೂಚಿಸಿದೆ. ಉಲ್ಲೇಖ ಹಾಗೂ ಪ್ರಯೋಗಗಳಲ್ಲಿ ಆಕರಗಳಲ್ಲಿರುವಂತೆಯೇ ಶಬ್ದರೂಪಗಳನ್ನು ಬಳಸಿಕೊಳ್ಳಲಾಗಿದೆ; ಸಂಸ್ಕೃತದ ಲಕಾರ ಕ್ಷಳವಾಗುವ ಸಂದರ್ಭಗಳಲ್ಲಿಯೂ ಇದೇ ನಿಯಮವನ್ನು ಅನುಸರಿಸಿದೆ, ಮತ್ತು ಅಕಾರಾದಿಯಾಗಿ ಪವಣಿಸುವಾಗ ಆಯಾ ವರ್ಣಗಳಿರುವ ಜಾಗಗಳಲ್ಲಿಯೇ ಸೇರಿಸಲಾಗಿದೆ.

ಪ್ರಯೋಗಗಳ ಮುಂದಿನ ಸಂಖ್ಯೆಗಳು ಕ್ರಮವಾಗಿ ಆಯಾ ಕಾವ್ಯದ ಆಶ್ವಾಸಹಾಗೂ ಪದ್ಯಸಂಖ್ಯೆಗೆ ಸಂಬಂಧಿಸಿದವು, ಗದ್ಯವ ಸೂಚಿತ ಪದ್ಯಸಂಖ್ಯೆಯ ನಂತರ ಬರುವಂಥದು, ರಗಳೆ ಅಥವಾ ಶ್ಲೋಕವಾಗಿದ್ದರೆ, ಅವುಗಳನ್ನು ಸೂಚಿಸಲೂ ಇದೇ ಕ್ರಮವನ್ನು ಅನುಸರಿಸಲಾಗಿದೆ.

ಅನುಕೂಲದ ದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು, ಉಲ್ಲೇಖಗಳನ್ನು ಒಂದೇ ಆಕರದಿಂದ ತೆಗೆದು ನೀಡಲಾಗಿದೆ. ಪಂಪನ ಎರಡೂ ಕೃತಿಗಳ ಇತ್ತೀಚಿನ ಮುದ್ರಣವೆಂದರೆ ೨೦೦೬ ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಹೊರತಂದ ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಸಂಪಾದಿಸಿರುವ, ಪಾಠಾಂತರಗಳನ್ನು ಒಳಗೊಳ್ಳದ, **‘ಪಂಪಸಂಪುಟ’**ದಲ್ಲಿನ ಎರಡೂ ಕಾವ್ಯಗಳು; ಪ್ರಯೋಗವಾಕ್ಯಗಳು ಬರುವ ಆಶ್ವಾಸ ಮತ್ತು ಪದ್ಯ ಸಂಖ್ಯೆಗಳು ಈ ಆವೃತ್ತಿಯವು. ಆದರೆ ಆಕರಗಳಾಗಿ ಈ ಕೆಳಗಿನ ಆವೃತ್ತಿಗಳನ್ನೂ ಗಮನಿಸಲಾಗಿದೆ:

ಡಾ. ಎಲ್. ಬಸವರಾಜು ಅವರು ಸಂಪಾದಿಸಿ ಮೈಸೂರಿನ ಮೆ. ಗೀತಾ ಬುಕ್ ಹೌಸ್ ೧೯೭೬ ರಲ್ಲಿ ಮೊದಲ ಮುದ್ರಣವಾಗಿ ಹೊರತಂದಿರುವ ವಿದ್ವತ್ ಆವೃತ್ತಿಯಾದ **‘ಪಂಪನ ಆದಿಪುರಾಣ’**; ಕನ್ನಡ ಸಾಹಿತ್ಯ ಪರಿಷತ್ತು ೨೦೦೪ ರಲ್ಲಿ ಹೊರತಂದಿರುವ ಕೆ.ಎಲ್. ನರಸಿಂಹಶಾಸ್ತ್ರಿ ಅವರು ಮಾಡಿರುವ ಗದ್ಯಾನುವಾದ ಸಮೇತವಾದ **‘ಪಂಪ ಮಹಾಕವಿಯ ಆದಿಪುರಾಣಂ’**;

ಮೈಸೂರು ವಿಶ್ವವಿದ್ಯಾನಿಲಯವು ೧೯೭೩ ರಲ್ಲಿ ಮೊದಲ ಮುದ್ರಣವಾಗಿ ಹೊರತಂದಿರುವ **‘ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ’**ನ ಪಾಠಾಂತರ ಸಮೇತವಾದ ಕನ್ನಡ ಸಾಹಿತ್ಯ ಪರಿಷತ್ತು ಆವೃತ್ತಿ; ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ‘ಕನ್ನಡ ಅಧ್ಯಯನ ಸಂಸ್ಥೆ’ಯು ೧೯೭೬ ರಲ್ಲಿ ಮೊದಲ ಮುದ್ರಣವಾಗಿ ಹೊರತಂದಿರುವ ಡಿ.ಎಲ್. ನರಸಿಂಹಾಚಾರ್ ರಚಿಸಿರುವ **‘ಪಂಪಭಾರತ ದೀಪಿಕೆ’**. [ಇದರಲ್ಲಿ ಹಲವೆಡೆ ಪರಿಷತ್ತಿನ ಆವೃತ್ತಿಯ ಪಾಠಗಳಿಗೆ ಪರ್ಯಾಯಗಳನ್ನು ಸೂಚಿಸಲಾಗಿದೆ.]

ಒಂದೇ ಆಕರದಿಂದ ಪ್ರಯೋಗಗಳನ್ನು ಕೊಡಲಾಗಿದ್ದರೂ, ಪಾಠಭೇದಗಳನ್ನು ಸ್ವೀಕರಿಸಿರುವ ಸಂದರ್ಭಗಳಲ್ಲಿ, ಆಯಾ ಉಲ್ಲೇಖಗಳ ಕೊನೆಯಲ್ಲಿ ಸ್ವೀಕೃತ ಪಾಠವಿರುವ ಆಕರವನ್ನು ಸೂಚಿಸಲಾಗಿದೆ. ಪ್ರಯೋಗಗಳಲ್ಲಿ ತುಂಬ ದೀರ್ಘ ಸಮಾಸಗಳಿರುವೆಡೆಗಳಲ್ಲಿ ಮತ್ತು ಮುದ್ರಣದ ಗೊಂದಲ ನಿವಾರಿಸುವ ಕಾರಣದಿಂದ ನೇಕ ಕಡೆಗಳಲ್ಲಿ ಪದಚ್ಛೇದ ಮಾಡಿ ಕೊಡಲಾಗಿದೆ.

ಇನ್ನು ಅರ್ಥನಿಷ್ಕರ್ಷೆಯ ಸಂದರ್ಭದಲ್ಲಿ ನೆರವಾಗಿರುವ ಆಕರಗಳು:

ಈ ಮೇಲಿನ ಎಲ್ಲ ಆವೃತ್ತಿಗಳ **ಅರ್ಥಕೋಶ**ಗಳು,

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಎಂಟು ಸಂಪುಟಗಳ **'ಕನ್ನಡ ನಿಘಂಟು',**

ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ ಅವರ **'ಶಬ್ದಾರ್ಥ ಕೌಸ್ತುಭಃ'** ಎಂಬ ಸಂಸ್ಕೃತ–ಕನ್ನಡ ನಿಘ'ಂಟಿನ ಆರು ಸಂಪುಟಗಳು;

ಮೈಸೂರು ವಿಶ್ವವಿದ್ಯಾನಿಲಯವು ೨೦೦೬ ರಲ್ಲಿ ಮುದ್ರಿಸಿರುವ ಎನ್. ಬಾಲಸುಬ್ರಹ್ಮಣ್ಯ ಅವರಿಂದ ಪರಿಷ್ಕೃತವಾದ ಲೂಯಿ ರೈಸ್ ಸಂಪಾದಿತ **'ಅಮರಸಿಂಹನ ಅಮರಕೋಶ';**

ಕನ್ನಡ ಪುಸ್ತಕ ಪ್ರಾಧಿಕಾರವು ೧೯೯೯ ರಲ್ಲಿ ಹೊರತಂದಿರುವ ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರ **'ಶ್ರೀವತ್ಸ ನಿಘಂಟು';**

೨೦೧೧ ರಲ್ಲಿ ಮೆ. ಸಪ್ನಾ ಬುಕ್ ಹೌಸ್ ಪ್ರಕಟಿಸಿರುವ ಪ್ರಕೃತ ಲೇಖಕನ **'ಚಂಪೂ ನುಡಿಗನ್ನಡಿ';**

ಬಿ. ಶ್ರೀನಿವಾಸಚಾರ್ಯರ **'ಶಬ್ದರತ್ನಾಕರಮು'** ಎಂಬ ತೆಲುಗು ಕೋಶ;

ಹಾಗೂ ಬೇರೆ ಇನ್ನೂ ಅನೇಕ ಕಾವ್ಯಗಳ ಅರ್ಥಕೋಶಗಳು

ಈ ಎಲ್ಲ ಆಕರ ಆವೃತ್ತಿಗಳ ಸಂಪಾದಕರುಗಳಿಗೆ, ಶಬ್ದಕೋಶ ತಯಾರಕರಿಗೆ ಹಾಗೂ ನೆರವಾದ ಗ್ರಂಥಗಳ ಸಂಪಾದಕರುಗಳಿಗೆ **'ಪಂಪನ ನುಡಿಗಣಿ'** ಕರ್ತೃವಿನ ಹೃತ್ಪೂರ್ವಕ ವಂದನೆಗಳು.

ಅ

ಅಂಕ – [ನಾ] ಶ್ರೇಷ್ಠ (ನಾಕದ ಫಣಿಲೋಕದ ಅಂಕದ ಪೊಟಿಲ್ಗಳನೀ ಪೊಟಿಲೊಂದು ರಮ್ಯಹರ್ಮ್ಯದ ಬೆಳೆಗಂಬರಂ ನೆಱೆಯದು: **ಆದಿಪು,** ೬. ೮೯ ['ಅಂಕದ ಪೊಟಿಲ್' – ಎಲ್. ಬಸವರಾಜು ಆವೃತ್ತಿಯಲ್ಲಿ]; ತೊಡೆ (ಜಗತ್ತ್ರಿತಯಪತಿಯಂ ತ್ರಿದಶಪತಿಯ ನೀಡಿದ ಕೇಯೂರರಶ್ಮಿರಂಜಿತ ಭುಜಯುಗಳಕ್ಕೆ ನೀಡಿದಾಗಳ್ .. .. ನಿಜಾಂಕಮನೇಱಿಸಿದಂ: **ಆದಿಪು,** ೭. ೪೮ ವ); [ನಾ] ಶೌರ್ಯ (ಸಾಗರದೊಳಗಿರ್ದಂಕದ ಮಾಗಧನಂ ಕಟ್ಟಿದಲ್ಲದೆ ಇರಂ ಅರಸಂ ಎನುತ್ತೋಗಡಿಸದೆ ನಡೆದುದು ಬಲಸಾಗರಮಾ ಸಾಗರಂಬರಂ ತರತರದಿಂ: **ಆದಿಪು,** ೧೨. ೬೮); [ನಾ] ಗುರುತು (ತನ್ನಂಕದೊಂದುಗ್ರಸಾಯಕದಿಂ ನಾಯಕರಂ ಪಡಲ್ವಡಿಸುತುಂ: **ಪಂಪಭಾ,** ೧. ೭೪); [ನಾ] ಪ್ರಸಿದ್ಧ (ವಿನತಾಪುತ್ರನ ವಜ್ರ ತುಂಡ ಹತಿಗಂ ಮೆಯ್ಯಾಂತು ಕಂಡಂಗಳುಳ್ಳಿನಂ ಅಂಗಂಗಳಂ ಒಡ್ಡಿ ಒಡ್ಡಿ ತನುವಂ ಕೊಟ್ಟಂತು ಜೀಮೂತವಾಹನನೆಂಬ ಅಂಕದ ಚಾಗಿ: **ಪಂಪಭಾ,** ೪. ೨೬); [ನಾ] ಬಿರುದು (ದನುಜಾಂತಕನೆಂಬೀ ನಿನ್ನ ನಚ್ಚುವೋದ ಅಂಕಂ ಎಲವೊ ಮುನ್ನೆನ್ನನ್ನಂ ದನುಜಂ ಪುಟ್ಟದೆ ಸಂದುದು: **ಪಂಪಭಾ,** ೬. ೫); [ನಾ] ದ್ವಂದ್ವಯುದ್ಧ (ದೇವರೆಲ್ಲರುಂ ಅಂಬರತಳದೊಳಿರ್ದಂಕಮಂ ನೋಟ್ಪಂತೆ ನೋಡೆ: **ಪಂಪಭಾ,** ೮. ೨೧ ವ)

ಅಂಕತಳ – [ನಾ] ತೊಡೆಯ ಮೇಲ್ಭಾಗ (ತದಂಗನಾ ಅಂಕತಳದೊಳ್ ಬಾಲಾರ್ಕನಂ ಪೋಲ್ತು ಭಾಸುರತೇಜೋಧಿಕನಪ್ಪ ಬಾಳನಂ ಅಟ್ಟಿರ್ದು ನೋಡುತ್ತುಂ: **ಆದಿಪು,** ೭. ೪೪)

ಅಂಕದಂಬು – [ನಾ] ಹೆಸರುವಾಸಿಯಾದ ಬಾಣ (ಅಂಕದಂಬೆತ್ತಲುಂ ತುಱುಗಿ ನಡುವಿನಂ ಸಾರ್ದು ಸಾರ್ದೆಚ್ಚೆಚ್ಚು ಕಾದಿದರ್: **ಪಂಪಭಾ,** ೧೩. ೩೯)

ಅಂಕಮಾಲಾ – [ನಾ] [ರಾಜರ] ಸ್ತುತಿಮಾಲೆ (ಮಹಾವಂದಿವೃಂದ ಅಂಕಮಾಲಾನಾದಂ ಗಂಭೀರನಾದಂ ನೆಗೞ್ದಿರೆ ತಳರ್ದಂ ರಾಗದಿಂ ಸಾರ್ವಭೌಮಂ: **ಆದಿಪು,** ೧೧. ೧೪)

ಅಂಕವಣೆ – [ನಾ] ಕುದುರೆಯ ರಿಕಾಪು (ಅನ್ನೆಗಂ ನಕುಳನುಂ ಅಂಕವಣೆಯುಂ ಬಾಳುಂ ಬಾರುಂ ಚಮ್ಮಟಿಗೆಯನುಮಂ: **ಪಂಪಭಾ,** ೮. ೫೪ ವ)

ಅಂಕಿತ – [ನಾ] ಗುರುತು ಮಾಡಲ್ಪಟ್ಟ (ಆಸೇತೋ ರಾಮಚಾಪ ಅಟನಿತಟಯುಗ ಟಂಕ ಅಂಕಿತ ಆಖಂಡಖಂಡಾತ್: **ಪಂಪಭಾ,** ೧೪. ೨೭)

ಅಂಕುರ – [ನಾ] ಆಗ ತಾನೆ ಮೂಡಿದ ಮರದ ಟಿಸಿಲು (ಕಳಿಕಾಂಕುರ ಕುಸುಮೋತ್ಕರ ಫಳಪಲ್ಲವರಹಿತ ಮಹಿಜಮಂ ಕಂಡುದಱೆಂ: **ಆದಿಪು.** ೧೫. ೩೪); ಮೊಳಕೆ, ಚಿಗುರು (ಪೊಸೆದಲ್ಲಿ ಕಾಳಕೂಟ ಅಂಕುರಂ ಅಂದು ಅಸದಳಮೊಗೆದಂತೊಗೆದುವು ಬಸಿಱೆಂ ನೂಱೊಂದು ಪಿಂಡಂ ಅರುಣಾಕೀರ್ಣಂ; **ಪಂಪಭಾ,** ೧. ೧೩೦)

ಅಂಕುರವೃದ್ಧಿ – [ನಾ] ಮೊಳಕೆಯ ಬೆಳವಣಿಗೆ (ಉದಕವೃದ್ಧಿಯೊಳ್ ಅಂಕುರವೃದ್ಧಿಯೆಂತಂತೆ ಸಹಕಾರಿಕಾರಣಂ: **ಆದಿಪು,** ೨. ೧೦ ವ)

ಅಂಕುರಶಾಖಾಭಿನಯ – [ನಾ] ಒಂದು ಬಗೆಯ ನೃತ್ಯ? (ಅಂಕುರ ಪಲ್ಲವ ಕುಸುಮಾಳಂಕಾರದ ಚೂತಲತಿಕೆ ನರ್ತಕಿವೋಲ್ ತನ್ನಂಕುರದಿಂ ಶಾಖೆಯಿಂ ಏನಂಕುರಶಾಖಾಭಿನಯಮಂ ಅಭಿನಯಿಸಿದುದೋ: **ಆದಿಪು,** ೧೧. ೯೪)

ಅಂಕುರಿತ – [ಗು] ಮೊಳಕೆವೊಡೆದು ಚಿಗುರು ಬಿಟ್ಟ (ಕೋರಕಿತ ಅಂಕುರಿತ ಪಲ್ಲವಿತ ಮುಕುಳಿತ ವಿಸ್ತಾರಿತ ರಮ್ಯಾಶೋಕ ಮಹೀರುಹಮುಮಂ ಅಭವನ ಅಂಗರುಚಿ ಪುದಿದಿರ್ಕುಂ : **ಆದಿಪು,** ೯. ೧೧೧)

ಅಂಕುರಿಸು – [ಕ್ರಿ] ಚಿಗುರು ಮೊಳೆ (ವಜ್ರಜಂಘಚಕ್ರವರ್ತಿ ಸೂಕ್ತಾಮೃತಸಿಕ್ತಮಪ್ಪ ನಿಜಮನೋರಥಾಮರದ್ರುಮದಿಂ ಒಗೆದಂಕುರಿಸಿದ ಅಂಕುರನಿಕರಮಂ: **ಆದಿಪು,** ೪. ೨೯ ವ); ನವಿರೇಳು (ಬೇಟದೊಳ್ ಬಿರಿವೊಡಲೊಯ್ಯನಂಕುರಿಸೆ: **ಪಂಪಭಾ,** ೫. ೧೪)

ಅಂಕುಸ – [ನಾ] ನಿಯಾಮಕ (ಪಾಣ್ಬರಂಕುಸಂ ಅಮ್ಮನ ಗಂಧವಾರಣಂ ಪಡೆಮೆಚ್ಚೆಗಂಡಂ: **ಪಂಪಭಾ,** ೧. ೧೪೮ ವ); [ನಾ] ಅಂಕುಶ (ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ: **ಪಂಪಭಾ,** ೪. ೩೦)

ಅಂಕುಸವಿಡು – [ಕ್ರಿ] ಅಡ್ಡಿಮಾಡು (ಆರಂಕುಸವಿಟ್ಟೊಡಂ ನೆನವುದೆನ್ನ ಮನಂ ವನವಾಸಿ ದೇಶಮಂ: **ಪಂಪಭಾ,** ೪. ೩೦)

ಅಂಗ – [ನಾ] ದೇಹದ ಭಾಗ (ಅಂಗೋಪಾಂಗಂಗಳೊಳ್ ಎಸೆವ ಆಂಗಿಕಮಂ ಗಾನಪಾಠ್ಯದೊಳ್ ವಾಚಿಕಮಂ ತುಂಗಕುಚೆ ಮೆಱೆದಳಾ ದಿವಿಜಾಂಗನೆಗೆ ಆಹಾರ್ಯ ಸಾತ್ವಿಕಂ ನಿಜಮೆ ವಲಂ: **ಆದಿಪು,** ೯. ೨೮); [ನಾ] [ಜೈನ] ಜೈನಾಗಮದ ಒಂದು ವಿಭಾಗ (ಅಂತು ಜೈನದೀಕ್ಷೆಯಂ ಕೈಕೊಂಡು ಗುರುವಿನನುಮತದಿಂ ದ್ವಾದಶಾಂಗ ಚತುರ್ದಶಪೂರ್ವಂಗಳಂ ಕಲ್ತು: **ಆದಿಪು,** ೧೪. ೧೩೯ ವ); [ನಾ] ದೇಹ (ಮುನಿಮುಖ್ಯಮುಖಾಂಭೋಜೋದರ ನಿರ್ಗತ ಮಂತ್ರಪೂತ ಅಂಗಮಂ ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ,** ೧. ೧೧೫)

ಅಂಗಜ – [ನಾ] ಮನ್ಮಥ (ಇವನೆ ವಲಂ ಕೊಂಬುಗೊಂಡ ಅಂಗಜಂ ಮೆಲ್ಲಗೆ ಪಾರ್ದಾರ್ದಾಗಳುಂ ಕಿನ್ನರಯುವತೀವ್ರಾತಮಂ ತನ್ನ ನಲ್ಲಂಬುಗಳಿಂದೆಚ್ಚೆಚ್ಚು: **ಪಂಪಭಾ,** ೪. ೨೩)

ಅಂಗಜನೆಂಬಜಂ – [ನಾ] ಮನ್ಮಥನೆಂಬ ಬ್ರಹ್ಮ (ಈ ಕನ್ನೆಯಂ ಮಾಡುವಲ್ಲಿಗೆ ಚಂದ್ರಂ ಮಳಯಾನಿಳಂ ಮಳಯಜಂ ನೀರೇಜಂ ಇಮ್ಮಾವು ಮಲ್ಲಿಗೆ ಎಂದಿಂತಿವಂ ಅಟ್ಟಿಱೆಂದ ಅಮರ್ದಿನೊಳ್ ತಾನಟ್ಟಿಯಿಂ ತೊಯ್ದು ಮೆಲ್ಲಗೆ ಸಂದಂಗಜನೆಂಬಜಂ ಪಡೆದಂ: **ಪಂಪಭಾ,** ೪. ೭೫)

ಅಂಗಜನ್ಮ – [ನಾ] ಮನ್ಮಥ (ಸೆಱೆಗೆಯ್ದು ಕಣ್ಣುಮಂ ಮನಮುಮಂ ಅಂಗಜನ್ಮನರಲಂಬುಗಳಿಂದೆ ಮರುಳ್ಚಿ: **ಪಂಪಭಾ,** ೨. ೪೦)

ಅಂಗಜಾಸ್ತ್ರ – [ನಾ] ಮನ್ಮಥನ ಬಾಣ (ರಾಜಪುತ್ರಿಸ್ಮಿತ ಮಧುಮಧುರಾಪಾಂಗ ಜೈತ್ರಾಂಗಜಾಸ್ತ್ರಂಗಳ ಕೋಳಂ ನೂತನಪ್ರೇಮದೆ ನಿಮಿರ್ವಡೆಯೊಳ್ ಕಾವನಾವಂ: **ಆದಿಪು**, ೪. ೫೧)

ಅಂಗಜೋತ್ಪತ್ತಿಸುಖ – [ನಾ] ಕಾಮಸುಖ (ಪೂಣ್ದೆನಗಾಗದಂಗಜೋತ್ಪತ್ತಿ ಸುಖಕ್ಕೆ ಸೋಲಲಟಿಗುಂ ಪುರುಷವ್ರತಂ: **ಪಂಪಭಾ,** ೧. ೭೫)

ಅಂಗಜೋತ್ಪನ್ನ ವಿಮೋಹ – [ನಾ] ಕಾಮದಿಂದಾದ ವ್ಯಾಮೋಹ (ನೃಪತಿ ಬೇಡಿದುದಂ ಕುಡಲೊಲ್ಲದೆ ಅಂಗಜೋತ್ಪನ್ನ ವಿಮೋಹದಿಂದಟಿದಪಂ: **ಪಂಪಭಾ,** ೧. ೭೨)

ಅಂಗದ – [ನಾ] ಭುಜಕೀರ್ತಿ, ತೋಳಬಂದಿ (ಫಣಾಮಣಿಯುಂ ಮಣಿಕುಂಡಲ ಅಂಗದಪ್ರಮುಖವಿಭೂಷಣಮುಂ ನಿಜಾಂಗರುಚಿಯೊಳ್ ಪೆಣೆದಿರೆ: **ಆದಿಪು,** ೯. ೧೧೦)

ಅಂಗನಾಯಕ – [ನಾ] ಅಂಗದೇಶದ ದೊರೆ, ಕರ್ಣ (ಬೇಗಂ ಇಸು ವೈರಿಯನೀಗಳೆ ಕೊಂದಪೆಂ ರಸಾಂಬರಧರಣೀ ವಿಭಾಗದೊಳಗಾವೆಡೆವೊಕ್ಕೊಡಂ ಅಂಗನಾಯಕಾ: **ಪಂಪಭಾ**, ೧೨. ೨೦೩)

ಅಂಗನೃಪ – [ನಾ] ಅಂಗರಾಜ್ಯದ ದೊರೆ, ಕರ್ಣ (ಅಂದು ಭೋಂಕನೆ ಕಂಡಂ ಗಂಗಾಂಗನೆಯಂ ಕಾಣ್ಬವೋಲ್ ಅಂಗನೃಪಂ ಮುಂದೆ ನಿಂದ ಕೊಂತಿಯನಾಗಳ್: **ಪಂಪಭಾ,** ೯. ೭೩)

ಅಂಗಮಹೀಶ – [ನಾ] ಅಂಗರಾಜ್ಯಾಧಿಪತಿ, ಕರ್ಣ (ತನ್ನೀವಳವಿಂ ಪಾರ್ವಂಗಂ ಅಳಿಪಿ ಬೇಡಿದ ಪಾರ್ವಂಗಂ ಪಿರಿದನಿತ್ತಂ ಅಂಗಮಹೀಶಂ: **ಪಂಪಭಾ,** ೯. ೭೨)

ಅಂಗರಾಗ – [ನಾ] ಮೈಗೆ ಹಚ್ಚಿಕೊಳ್ಳುವ ಪರಿಮಳದ್ರವ್ಯ (ಮಱುದೆವಸಂ ಲತಾಲಲಿತೆ ಕೀಚಕನಲ್ಲಿಗೆ ಕಾಮನೊಂದು ಸೆಱೆಯೆನಿಪ ಅಂಗರಾಗಮಂ ಇಳೇಶ್ವರವಲ್ಲಭೆಯಟ್ಟಲ್ ಉಯ್ದೊಡೆ: **ಪಂಪಭಾ,** ೮. ೭೩)

ಅಂಗಲತಾ – [ನಾ] ದೇಹವೆಂಬ ಬಳ್ಳಿ (ಅಂಗಲತಾಲಾಲಿತಸಾಂದ್ರ ಚಂದನರಸಂ ಬೆಳ್ದಿಂಗಳ್ ಎಂಬೊಂದು ಪಂಬಲ ಬಂಬಲ್ಗೆಡೆಯಾಗೆ ಬೆಳ್ಪಸದನಂ ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೭)

ಅಂಗವಲ್ಲಭ – [ನಾ] ಅಂಗರಾಜ್ಯದ ದೊರೆ, ಕರ್ಣ (ಇನ್ನುಂ ಈ ಒಡಲೊಳಿರ್ದುದು ನಾಣಿಲಿಜೀವಂ ಎಂದೊಡೆ ಆವೆಡೆಯೊಳೆ ನಿನ್ನೊಳೆನ್ನ ಕಡುಗೂರ್ಮೆಯುಂ ಅಟ್ಟಿಱುಂ ಅಂಗವಲ್ಲಭಾ: **ಪಂಪಭಾ,** ೧೩. ೪)

ಅಂಗಮಹೀತಳ – [ನಾ] ಅಂಗದೇಶ (ಮಂಗಳವಱಿಗಳ್ ಶುಭವಚನಂಗಳ್ ಚಮರರುಹಂಗಳ್ ಆ ಶ್ವೇತಚ್ಛತ್ರಂಗಳ್ ಅಮರ್ದೆಸೆಯೆ ಕರ್ಣಂಗೆ ಅಂಗಮಹೀತಳವಿಭೂತಿಯಂ ನೆಱೆಯಿತ್ತಂ: **ಪಂಪಭಾ,** ೨. ೮೪)

ಅಂಗರಾಗ – [ನಾ] ಸುಗಂಧ (ಲತಾಲಲಿತೆ ಕೀಚಕನಲ್ಲಿಗೆ ಕಾಮನೊಂದು ಕೈಸೆಱೆಯೆನಿಪ ಅಂಗರಾಗಮಂ ಇಳೇಶ್ವರವಲ್ಲಭೆಯಟ್ಟಲ್ ಉಯ್ದೊಡೆ: **ಪಂಪಭಾ,** ೮. ೭೩)

ಅಂಗಹಾರ – [ನಾ] ನೃತ್ಯ, ನಟನೆಯ ಮುದ್ರೆ, ಅಂಗಚಲನೆಯ ಮೂಲಕ ಭಾವಾಭಿವ್ಯಕ್ತಿ (ಕರಣಂ ರೇಚಕಂ ಅಂಗಹಾರಂ ಇನಿತೆಂದು ಓದುತ್ತುಂ ಇರ್ಪ ಓದು ಅದತ್ತಿರಲಿ ಈ ನಾಟ್ಯರಸಂ ಸಮಸ್ತ ಸುರವೃಂದಾಧೀಶನಿಂದಂ ಪೊನಲ್ವರಿದತ್ತು: **ಆದಿಪು,** ೭. ೧೨೦)

ಅಂಗಹೀನ – [ಗು] ದೈಹಿಕ ಊನವುಳ್ಳವನು (ಪಾಂಡುರಾಜಂಗೆ ಧೃತರಾಷ್ಟ್ರನಂಗಹೀನನೆಂದು ವಿವಾಹದೊಸಗೆಯೊಡನೆ ಪಟ್ಟಬಂಧದೊಸಗೆಯಂ ಮಾಡಿ ನೆಲನನಾಳಿಸೆ: **ಪಂಪಭಾ,** ೧. ೧೦೭ ವ)

ಅಂಗುಟ – [ನಾ] ಉಂಗುಷ್ಠ, ಕಾಲಿನ ಹೆಬ್ಬೆರಳು (ಮಡದೆಡೆ ನಾಲ್ವೆರಲ್ ಅಂಗುಟದೆಡೆಯೊಳ್ ಗೇಣಾಗೆ ನಿಲ್ವುದಿಚ್ಛಾಗತಂ ಅಂದೆಡೆಯೊಳ್ ವಾಚಂಯಮತೆಯೊಳ್ ಒಡಂಬಡಂ ಪಡೆದು ನಿಂದನಾದಿಬ್ರಹ್ಮಂ: **ಆದಿಪು,** ೯. ೮೪)

ಅಂಗುಳಿ – [ನಾ] ಆನೆಯ ಸೊಂಡಿಲ ತುದಿ (ಮೃದುದೀರ್ಘವಿಸ್ತೃತ ಅಂಗುಳಿಯುಂ .. .. ಸಪ್ತದ್ವಾಸ್ಥಿತನುವುಮಪ್ಪ ವಿಜಯ ಪರ್ವತಗಜೇಂದ್ರಂ ಬಂದು ಮುಂದೆ ನಿಲ್ವುದುಂ: **ಆದಿಪು,** ೧೨. ೫೬ ವ)

ಅಂಗುಳಿತ್ರಾಣ – [ನಾ] ಬೆರಳ ಕಾಪು (ಬದ್ಧ ಗೋಧಾಂಗುಳಿತ್ರಾಣ ಯೋಧಸಿಂಧುರಘಟಾ ಸಂಘಟ್ಟಮುಂ: **ಆದಿಪು,** ೧೪. ೯೩ ವ)

ಅಂಗೋದ್ಭವ – [ನಾ] ಮನ್ಮಥ (ಮಸೆದ ಅಂಗೋದ್ಭವನ ಅಸ್ತ್ರದಂತೆಸೆವ ನಿನ್ನೀ ರೂಪು ವೃದ್ಧತ್ವದೊಳ್ ಪೊಸತೊಂದಾಯ್ತು: **ಆದಿಪು,** ೨. ೪೭)

ಅಂಗೋದ್ಭೂತ – [ನಾ] ಮನ್ಮಥ (ಶೃಂಗಾರಾಮೃತವಾರ್ಧಿಜಾತೆ .. .. ಸಂದ ಅಂಗೋದ್ಭೂತನಗಣ್ಯ ಪುಣ್ಯನಿಧಿ: **ಕರ್ಣನೇಮಿ,** ೮. ೯೫)

ಅಂಘ್ರಿಪ – [ನಾ] ಮರ (ಧರ್ಮಂ ಪ್ರಧಾನಂ ಅರ್ಥಂ ಧರ್ಮಾಂಘ್ರಿಪದ ಫಳಂ ಅದರ್ಕೆ ರಸಮದು ಕಾಮಂ: **ಆದಿಪು,** ೧೦. ೫೦)

ಅಂಚಿತ – [ಗು] ಸುತ್ತಲ್ಪಟ್ಟ (ಕಳಧೌತಘಟಂ ಮುಕ್ತಾಫಳಾಂಚಿತಗ್ರೀವಂ ಎಟಿದುಕೊಂಡುದು ತಾರಾವಳಿಪರಿವೃತನವಸಂಧ್ಯಾಜಳದದ ಗಾಡಿಯಂ: **ಆದಿಪು,** ೭. ೮೪); [ಗು] ಪೂಜಿತ (ಸಕಳಕ್ಷ್ಮಾಚರಖೇಚರಾಂಚಿತ ಮಹಾಮಾಣಿಕ್ಯ ಗಾಣಿಕ್ಯ ಹಾಸ್ತಿಕ ರತ್ನೋರ್ಜಿತ ಚಕ್ರವರ್ತಿವಿಭವಂ: **ಆದಿಪು,** ೧೬. ೮)

ಅಂಚಿರ – [ಗು] ಅಸ್ಥಿರ, ಹೆಚ್ಚು ಕಾಲ ಉಳಿಯದ (ಪೊಸನನೆಯೊಳ್ ಪಸುರ್ಪಲರೊಳಂಚಿರಮಲ್ಲದ ಬೆಳ್ಪು: **ಆದಿಪು,** ೧. ೬೬)

ಅಂಚೆ – ಹಂಸ (ಕಡವಿನ ಕಂಪು ಅಡಂಗಿದುದು ಜಾದಿಯ ಕಂಪು ಒದವಿತ್ತು ಸೋಗೆಯ ಉರ್ಕು ಉಡುಗಿದುದು ಅಂಚೆಯುರ್ಕು ಪೊಸತಾಯ್ತು: **ಪಂಪಭಾ,** ೭. ೬೯); ಬಟ್ಟೆ (ಒಂದು ಅಂಚೆಯಂ ಪೊದೆದು ಒಂದು ಅಂಚೆಯಂ ಉಟ್ಟ ನಿನ್ನಿರವು ಇದೇಂ ಅಂಭೋಜಪತ್ರೇಕ್ಷಣೇ: **ಪಂಪಭಾ,** ೮. ೬೬)

ಅಂಜನ – [ನಾ] (ಆ ರಥದೊಳ್ ಒಡಂಬಡೆ ಪೂಡಿದ ನಾಲ್ನೂಱು ಗೊಂಕುಱುಗಟ್ಟಿಯುಂ ಅಂಬರಸ್ಥಲಮನಡರ್ವ ಗೃಧ್ರಧ್ವಜಮುಂ ಅಂಜನಪುಂಜದಂತಾಗಿ: **ಪಂಪಭಾ,** ೧೨. ೭ ವ)

ಅಂಜನಪುಂಜ – [ನಾ] ಕಾಡಿಗೆಯ ಮುದ್ದೆ (ಅಂಜನಪುಂಜದಂತಪ್ಪ ಮೆಯ್ಯುಂ ಸಿಡಿಲಂ ಅಡಸಿದಂತಪ್ಪ ದಾಡೆಯುಂ ಉರಿಯ ಉರುಳಿಯಂತಪ್ಪ ಕಣ್ಣುಂ ಕೃತಾಂತನಂತೆ ಆಕಾರಮಾಗಿ: **ಪಂಪಭಾ**, ೪. ೪೨ ವ)

ಅಂಜಮೆಗುಡು – [ಕ್ರಿ] ಹೆದರಿಕೆಯನ್ನು ಹೋಗಲಾಡಿಸು, ಅಭಯ ಕೊಡು (ಜನಮಂ ನೀಮಂಜಲಿಂ ಎಂದಜೆವಂ ಅರ್ವಿನಮಂಜನೆಗೊಟ್ಟಜೆದು ನಿಜೆಸಿದಂ: **ಆದಿಪು,** ೬. ೬೧)

ಅಂಜರಿಕಾಸ್ತ್ರ – [ನಾ] ಅರ್ಜುನನಿಗೆ ಶಿವನು ಪಾಶುಪತಾಸ್ತ್ರವಿತ್ತಾಗ ಪಾರ್ವತಿ ನೀಡಿದ ದಿವ್ಯಾಸ್ತ್ರ (ಈಶ್ವರಂ ಕೊಟ್ಟುದರ್ಕೆ ತೆಲ್ಲಂಟಿಯೆಂದು ಗೌರಿದೇವಿಯುಂ ಅಂಜರಿಕಾಸ್ತ್ರಮೆಂಬ ಅಮೋಘಾಸ್ತ್ರಮಂ ವಿಕ್ರಮಾರ್ಜುನಂಗೆ ಕುಡೆ: **ಪಂಪಭಾ**, ೮. ೨೬ ವ)

ಅಂಜಲಿಂ – [ಗು] ಹೆದರಬೇಡಿ (ಕಾಗೆವೊಲಿಂತು ಬಿಲ್ಗೆ ಕರಂ ಅಂಜುವಿರಿ ಅಂಜಲಿಂ: **ಪಂಪಭಾ**, ೧೦. ೧೨೨)

ಅಂಜಲಿಪುಟ – [ನಾ] ಬೊಗಸೆ (ನೀರಂ ಕುಡಿಯಲೆಂದು ನಿಜಾಂಜಲಿಪುಟಮಂ ನೀಡಿದಾಗಳ್ ಒಂದು ದಿವ್ಯವಚನಂ ಆಕಾಶದೊಳ್: **ಪಂಪಭಾ**, ೮. ೩೮ ವ)

ಅಂಜಿಸು – [ಕ್ರಿ] ಹೆದರಿಸು, ಭಯವುಂಟುಮಾಡು (ದೇವಸೌಂದರೀಗಣದ ವಿಳಾಸಂ ಅಂಜಿಸುವವೋಲ್ ಪೆಡೆಯಂ ಮುಡಿಯಲ್ಲಿ ತೋರ್ಪ ನಾಗಿಣಿಯರ ಕೆಯ್ತಂ: **ಆದಿಪು**, ೪. ೪೭)

ಅಂಜು – [ಕ್ರಿ] ಹೆದರು (ಮುಳಿಸಜೆದು ಅಂಜಿ ಬಾಟಿಸ್ತಿಯಜೆದಿತ್ತು ಮನಂಗೊಳೆಯುಂ ಕನಲ್ವುದರ್ಕಳವಿಯುಂ ಅಂತುಂ ಇಲ್ಲ : **ಪಂಪಭಾ**, ೪. ೯೮)

ಅಂಜುಮೆ – [ನಾ] ಅಂಜಿಕೆ (ಚಲದಿನೆಜಗಿಸಲಿರೆ ಭರತಂಗೆಜಕಮ್ ಅಂಜುಮೆಯಲ್ತೇ: **ಆದಿಪು**, ೧೪. ೭೫)

ಅಂಟಪರಿಚೆ – [ನಾ] ಹಣೆಗೆ ಅಂಟಿಸಿಕೊಳ್ಳುವ ಬಟ್ಟು ? (ತೀವಿದ ಕೊಗ್ಗಿಯ ಕತ್ತುರಿಯುಂ ಕತ್ತುರಿಯೊಳ್ ಅಂಟಪರಿಚೆಯುಂ ಪರಿಚೆಯೊಳ್ ಪರಿಚಯಂಬಡೆದ ಮದವಟ್ಟೆಯುಂ: **ಆದಿಪು**, ೪. ೪೧ ವ)

ಅಂಡಕೋಶ – [ನಾ] ಬೀಜಕೋಶ, ವೃಷಣ (ಸಮಸಂಕ್ಷಿಪ್ತ ಪ್ರಚ್ಛನ್ನವಾಯುಪ್ರವೇಶನುಂ ಅಪಿಂಜೋತ್ಪನ್ನಾಂಡಕೋಶನುಂ: **ಆದಿಪು**, ೧೨. ೫೬ ವ)

ಅಂಡುಗೊಳ್ – [ಕ್ರಿ] ಹತ್ತಿರವಿರು (ಮತ್ತೊರ್ವಳ್ ಅತಿಸಂಭ್ರಮ ತ್ವರಿತದಿಂ ಮೇಖಳಾಕಳಿತ ರುಚಿರಲುಳಿತಾಧರಪಲ್ಲವೆ ನೋಟ್ಟಿ ದಂಡುಗಳೊಳಂಡುಗೊಂಡು ಸೊರ್ಕಿದಾನೆ ಬರ್ಪಂತೆ ಬಂದು: **ಪಂಪಭಾ**, ೪. ೩೬ ವ)

ಅಂತ – [ನಾ] ಗಡಿ, ಸೀಮೆ (ದೇವಮಾತೃಕ ಸಾಧಾರಣಾನೂಪ ಜಾಂಗಳಭೇದಂಗಳುಂ ಅನಂತಪಾಳಪಾಳಿತದುರ್ಗಪರಿವೃತ ಅಂತಗಳುಂ: **ಆದಿಪು,** ೮. ೬೩ ವ); [ನಾ] ತುತ್ತ ತುದಿ (ಅಂತು ಭರತಕುಲತಿಲಕರಪ್ಪ ಇರ್ವರ್ ಮಕ್ಕಳಂ ಪೆತ್ತು ಕೊಂತಿ ಸಂತಸದ ಅಂತಮನೆಯ್ದಿರ್ಪುದುಂ: **ಪಂಪಭಾ,** ೧. ೧೨೮ ವ)

ಅಂತಂ – [ನಾ] ಕೊನೆ, ಮುಗಿವು (ರಾಜಸೂಯಾಂತಂ ಕಳಹಮೆಂಬುದಂ ಬಗೆದು ತಾನುಂ ಕಲಹಪ್ರಿಯನಪ್ಪುದಜೆಂದಂ ಅನಿತೆ ನುಡಿದು ಮಾಣ್ದ: **ಪಂಪಭಾ**, ೬. ೧೮ ವ)

ಅಂತಂ ಬರ್ – [ಕ್ರಿ] ಕೊನೆಗೊಳ್ಳು (ಆ ಮಧುರಾಕಾರ ಲತಾಕೋಮಳೆ ತನಗಾಗಳ್ ಆಯುರಂತಂ ಬರೆ ಸೌದಾಮಿನಿವೊಲ್ ಭೋಂಕೆನೆ ಸುರಕಾಮಿನಿ ರಂಗದೊಳ್ ಅದೃಶ್ಯೆಯಪ್ಪುದುಂ: **ಆದಿಪು**, ೯. ೪೧)

ಅಂತಂ ಮಾಡು – [ಕ್ರಿ] ಕೊಲ್ಲು, ಮುಗಿಸಿಬಿಡು (ಅಂಜಲಿಕಾಸ್ತ್ರಮಂ ಅಮೋಘಾಸ್ತ್ರಧನಂಜಯಂ ಆಕರ್ಣಾಂತಂಬರಂ ತೆಗೆದು ಆ ಕರ್ಣಾಂತಂ ಮಾಡಲ್ ಬಗೆದು: **ಪಂಪಭಾ**, ೧೨. ೨೧೨ ವ)

ಅಂತಃಪುರ – [ನಾ] ರಾಣಿವಾಸದ ಜನ (ಚೆಲ್ವೆಸೆದುದು ಷಣ್ಣವತಿಸಹಸ್ರ ಅಂತಃಪುರಮವಯವದೊಳೆ ಭರತಚಕ್ರವರ್ತಿಯ ಕೆಲದೊಳ್: **ಆದಿಪು**, ೧೧. ೩೯)

ಅಂತಃಪುರದಾಸೇರಕ – [ನಾ] ಅಂತಃಪುರದ ದಾಸೀಪುತ್ರ (ಅಂತಃಪುರದಾಸೇರಕನನೇಜೆ ಕಿಂಚಿದಾಕುಂಚಿತಾಗ್ರ ತರ್ಜನೀನಿಶಿತಾಂಕುಶಂ ಅಂತಃಪುರಪ್ರಮದವನವಿಷ್ಟನಾಗಿ: **ಆದಿಪು,** ೮. ೪೧ ವ)

ಅಂತಃಪ್ರತಿಹಾರಿ – [ನಾ] ಅಂತಃಪುರದ ದ್ವಾರಪಾಲಕ (ವಿಚಿತ್ರವೇತ್ರಲತಾ ಶೋಭಿತತಳಕಮಳೆಯರ್ ಅಂತಃಪ್ರತಿಹಾರಿಯರಾದರ್ ಅಮರಕಾಂತೆಯರರೆಬರ್: **ಆದಿಪು,** ೭. ೧೪)

ಅಂತಕತನಯ – [ನಾ] ಯಮನ ಮಗ, ಧರ್ಮರಾಯ (ಅಟ್ಕಜಿಂ ತನಗೆರ್ದೆಯೊಳ್ ಚೋದಿಸೆ ಪರಸಿದಂ ಆಶೀರ್ವಾದ ಪರಂಪರೆಯಿಂ ಆಗಳ್ ಅಂತಕತನಯಂ: **ಪಂಪಭಾ**, ೧೩. ೧)

ಅಂತಕನಂದನ – [ನಾ] ಯಮನ ಮಗ, ಯುಧಿಷ್ಠಿರ (ಯಾಗವಿಧಿಯಂ ನಿರ್ವರ್ತಿಸಿ ನೆರೆದ ರಾಜಕುಲಮೆಲ್ಲಮಂ ಪೂಜಿಸಿ ವಿಸರ್ಜಿಸಿದಾಗಳ್ ಮುರಾಂತಕಂ ಅಂತಕನಂದನನಂ ಇಂತೆಂದಂ: **ಪಂಪಭಾ**, ೬. ೬೫ ವ)

ಅಂತಕಸರ್ಪ – [ನಾ] ಯಮನೆಂಬ ಹಾವು (ಅಂತಕಸರ್ಪಂ ಕೊಳೆ ಬರ್ದುಕುವನ್ನರಾರ್ ಸಂಸೃತಿಯೊಳ್: **ಆದಿಪು**, ೩. ೬೫)

ಅಂತಕಾತ್ಮಜ – [ನಾ] ಯಮನ ಮಗ, ಧರ್ಮರಾಯ (ಸಮಸ್ತಧಾತ್ರಿಯುಮಂ ಆಳಿಪೆವು ಎಂದುಲಿವಂತೆ ಪಕ್ಕಿಗಳ್ ಚಿಲಿಮಿಲಿಯೆಂಬ ಪೊಟ್ತುಜಿಸೊಳೆ ಬಂದು ಉಜಿದೆ ಒಡ್ಡಿದಂ ಅಂತಕಾತ್ಮಜಂ: **ಪಂಪಭಾ**, ೧೧. ೩೩)

ಅಂತಕಾನನ – [ನಾ] ಯಮನ ಬಾಯಿ (ವಿಂಧ್ಯ ಮಳಯ ಹಿಮವನ್ನಿವಾಸಿಗಳಪ್ಪ ಪರ್ವತರಾಜರುಮಂ ಭೀಮಸೇನಂ ಅಂತಕಾನನಮಂ ಎಯ್ದಿಸಿದಂ: **ಪಂಪಭಾ**, ೧೩. ೪೧ ವ)

ಅಂತಕಾಲ – [ನಾ] ಕೊನೆಗಾಲ, ಸಾವು (ಅಂತು ಗರ್ಭನಿರ್ಭರ ಪ್ರದೇಶದೊಳ್ ಅರಾತಿಗಳ್ಗೆ ಅಂತಕಾಲಂ ದೊರೆಕೊಳ್ವಂತೆ ಪ್ರಸೂತಿಕಾಲಂ ದೊರೆಕೊಳೆ: **ಪಂಪಭಾ,** ೧. ೧೨೬ ವ)

ಅಂತಪಾಳ – [ನಾ] ಗಡಿಕಾಪಿನವರು (ದೇವಮಾತೃಕ ಸಾಧಾರಣಾನೂಪ ಜಾಂಗಳಭೇದಂಗಳುಮಂ ಅಂತಪಾಳ ಪಾಳಿತದುರ್ಗಪರಿವೃತ ಅಂತಗಳುಂ: **ಆದಿಪು,** ೮. ೬೩ ವ)

ಅಂತಪ್ಪ – [ಗು] ಅಂತಹ, ಹಾಗಿರುವ (ಅಂಜನಪುಂಜದಂತಪ್ಪ ಮೆಯ್ಯುಂ ಸಿಡಿಲಡೆಸಿದಂತಪ್ಪ ದಾಡೆಯುಂ: **ಪಂಪಭಾ,** ೮. ೪೨ ವ)

ಅಂತರ – [ನಾ] ಮೇರೆ, ಎಲ್ಲೆ (ಮೇರುವೆ ಮಂದಿರೆಯುಂ ಬೀರದ ಬಿಯದಂತರಕ್ಕೆ ಕಿಡೆದೆಂದು ಚಿಂತಿಪ ಪ್ರಿಯಗಳ್ಗಂ: **ಪಂಪಭಾ,** ೧. ೪೮) ; [ನಾ] ವ್ಯತ್ಯಾಸ, ಭೇದ (ಕರಿಗಂ ಪರಮಾಣುಗಂ ಅಂತರಮಾವುದೊ ನಿಮಗಂ ಅಸುರವೈರಿಗಂ ಏನಂತರಮಂತೇ: **ಪಂಪಭಾ,** ೧೦. ೭)

ಅಂತರಂಗ – [ನಾ] ಮನಸ್ಸು (ಮದನನಲರ್ಗಣೆ ಬರ್ದುಕಿತ್ತು ಎನಿಸುತ್ತೊಳಪೊಕ್ಕಳ್ ಭೋಂಕೆನೆ ನಿಖಿಳಜನಾಂತರಂಗಮಂ ರಂಗಮುಮಂ: **ಆದಿಪು,** ೯. ೧೯); ಮನಸ್ಸುಳ್ಳವನು [ಗು] (ಅನಂಗಮತಂಗಜ ಕೋಳಾಹಳಾಕುಳೀಕೃತಾಂತರಂಗನಾಗಿ: **ಪಂಪಭಾ,** ೪. ೭೪ ವ)

ಅಂತರಕರಣ – [ನಾ] [ಜೈನ] ಕೆಡಿಸಿಕೊ (ಕಿಡೆಕಿಡೆದು ಬೇಗದಿಂ ತನ್ನ ಪರಿಣಾಮವಿಶೇಷದಿಂ ಚತುಸ್ಸಂಜ್ವಲನ ನವನೋಕಷಾಯಂಗಳೆಂಬ ಪದಿಮೂಱು ಪ್ರಕೃತಿಗಳುಮಂ ಅಂತರಕರಣಂ ಮಾಡಿ: **ಆದಿಪು,** ೧೦. ೧೪ ವ)

ಅಂತರದ್ವೀಪ – [ನಾ] ಬೇರೆ ಬೇರೆಯಾಗಿರುವ ದ್ವೀಪಗಳು? (ಐವತ್ತಾಱಂತರದ್ವೀಪಂಗಳು ಏಕಕೋಟಿಪ್ರಮಾಣಸ್ಥಾಲಿಗಳುಂ: **ಆದಿಪು,** ೧೫. ೩ ವ)

ಅಂತರಾಂತರ – [ನಾ] ನಡುನಡುವೆ (ಆ ಜಂಬೂದ್ವೀಪದ ನಟ್ಟ ನಡುವೆ .. .. ಅಂತರಾಂತರ ನಿರಂತರ ಕಾಂತ ಸೋಮ ಯಮ ವರುಣ ಕುಬೇರ ಪ್ರಮುಖ ಲೋಕಪಾಲಾಭಿಯೋಗ್ಯ ದಿಗ್ಗಜೇಂದ್ರದೇವ ವಿಹಾರ ಪ್ರಾಸಾದಾಭಿರಾಮಮುಂ: **ಆದಿಪು,** ೧. ೪೯ ವ)

ಅಂತರಾಯ – [ನಾ] [ಜೈನ] ಮೋಕ್ಷಸಂಪಾದನೆಗೆ ಬರುವ ಅಡ್ಡಿ (ತ್ರಿಗುಪ್ತಿಗುಪ್ತ ಸಮಾಧಿಗುಪ್ತರೆಂಬ ಯತಿಪತಿಗಳಧ್ಯಯನಂ ನಿನಗನಿಷ್ಟಮಪ್ಪುದಱಿಂ ಅಧ್ಯಯನಾಂತರಾಯಮಂ ಮಾಡಲೆಂದು: **ಆದಿಪು,** ೩. ೩೮ ವ)

ಅಂತರಾಯಪಂಚಕ – [ನಾ] [ಜೈನ] ಐದು ಬಗೆಯ ಅಂತರಾಯಗಳು (ಚಕ್ಷು ಅಚಕ್ಷು ಅವಧಿ ಕೇವಲದರ್ಶನಾವರಣೀಯ ಚತುಷ್ಕಮುಮಂ ದಾನ ಲಾಭ ಭೋಗ ಉಪಭೋಗ ವೀರ್ಯಾಂತರಾಯಪಂಚಕಮುಮಂ ನಿರ್ಮೂಳಮಪ್ಪಂತೆ: **ಆದಿಪು,** ೧೦. ೧೪ ವ)

ಅಂತರಾಯಮಾಣ – [ಗು] ಅಡ್ಡಿಗಳಿಂದ ಕೂಡಿದ (ಸಕಳವಿಷ್ಟಪ ಪ್ರಣೂತನಂ ಈತನಂ ಅಂತರಾಯಮಾಣ ಪರಮಾನಂದ ಸಮಯದೊಳ್ .. .. ನಿಱಿಸುವುದುಂ: **ಆದಿಪು,** ೮. ೮)

ಅಂತರಾಳ – [ನಾ] ಒಳಭಾಗ (ರಾಜಹಂಸ ಪಾರಾವತ ಮಿಥುನಂಗಳ್ ಉತ್ತುಂಗ ಪ್ರಾಸಾದಶಿಖರ ಮಣಿಗವಾಕ್ಷ ಅಂತರಾಳ ವಿವಿಧ ಗೃಹಾಂತರಗತಂಗಳಾದುವು: **ಪಂಪಭಾ** ಪರಿಷತ್ತು, ೪. ೪೯ ವ)

ಅಂತರಿತ – [ಗು] ಹುದುಗಿಹೋದ (ನಾಲ್ಕುಂ ಮಹೀವೀಥೀ ಮಧ್ಯಂಗಳೊಳ್ ರತ್ನತೋರಣಶತಾಂತರಿತಂಗಳುಂ ನಿಜೇಂದ್ರ ರುಂದ್ರ ಸಿದ್ಧಾಭ್ಯರ್ಚಿತಂಗಳುಂ: **ಆದಿಪು,** ೧೦. ೩೪ ವ)

ಅಂತರಿಸು – [ಕ್ರಿ] ನಡುವೆ, ಎಡೆ ಬಿಡು (ಎನ್ನಂ ಅಂತರಿಸದೆ ತೊಟ್ಟು ಬೇಗಂ ಇಸು ವೈರಿಯನೀಗಳೆ ಕೊಂದಪೆಂ ರಸಾಂಬರಧರಣೀ ವಿಭಾಗದೊಳಗಾವೆಡೆವೊಕ್ಕೊಡಂ: **ಪಂಪಭಾ,** ೧೨. ೨೦೩)

ಅಂತರೀಯ – [ನಾ] ಉಟ್ಟುಕೊಳ್ಳುವ ವಸ್ತ್ರ (ನಾಭಿವಿಲಂಬಮಾನ ಲಂಬಸ್ತನವಿಸ್ರಸ್ತ ಅಂತರೀಯೋತ್ತರೀಯ ವೃದ್ಧಧಾತ್ರೀ ನರ್ತನನಿರೀಕ್ಷಣ ಜನತಾಜನಿತಹಾಸನಿವಾಸಮುಂ: **ಆದಿಪು,** ೮. ೩೫ ವ)

ಅಂತರ್ಗತ – [ನಾ] ಮನಸ್ಸು, ಸ್ವಗತ (ಮಹಾಪ್ರಸಾದಂ ಎಂದು ದುರ್ಯೋಧನಂ ಪೋದಂ ಇತ್ತ ಗಾಂಗೇಯಂ ತನ್ನ ಅಂತರ್ಗತದೊಳ್: **ಪಂಪಭಾ,** ೧೦. ೧೦ ವ)

ಅಂತರ್ಧಾನಕ್ಕೆ ಸಲ್ – [ಗು] ಮಾಯವಾಗು (ತಥಾಸ್ತುವೆಂದು ತನ್ನಂಶಮನಾಕೆಯ ಗರ್ಭದೊಳವತರಿಸಿ ಯಮಭಟ್ಟಾರಕಂ ಅಂತರ್ಧಾನಕ್ಕೆ ಸಂದಂ : **ಪಂಪಭಾ,** ೧. ೧೧೯)

ಅಂತರ್ನಿಗೂಢ – [ಗು] ಒಳಗೆ ತುಂಬಿಕೊಂಡ (ಧರಣೇಂದ್ರನಿದಿರೊಳ್ ಅವರ್ ಅಂತರ್ನಿಗೂಢಕೋಪಾವಲೇಪರುಂ ಈಷತ್ ಆರೋಪಿತಭ್ರೂಚಾಪರುಂ ಆಗಿ: **ಆದಿಪು,** ೯. ೧೦೪ ವ)

ಅಂತರ್ನಿಹಿತ – [ಗು] ಒಳಗಿರುವ (ನಾಮಗ್ರಹಣಮಾತ್ರದಿಂದಮೆ ಸಮಸ್ತವಸ್ತು ವಿಸ್ತಾರಾಂತರ್ನಿಹಿತ ವಸ್ತುಸಮರ್ಪಣ ಪರಾಯಣನಪ್ಪ ಕಾಮವೃಷ್ಟಿಯೆಂಬ ಗೃಹಪತಿರತ್ನಮುಂ: **ಆದಿಪು,** ೧೧. ೩ ವ)

ಅಂತರ್ಬಹೀರೂಪ – [ನಾ] ಒಳಗಿನ ಮತ್ತು ಹೊರಗಿನ ಆಕಾರ (ಆವುದಂತರ್ಬಹೀರೂಪಂ ವಿಶದದರ್ಶನಾವಗಮ್ಯಂ ಅದೆಲ್ಲಮಸತ್ಯಾವಭಾಸಿ: **ಆದಿಪು,** ೨. ೯ ವ)

ಅಂತರ್ಭೇದ – [ನಾ] ರಹಸ್ಯ ಭೇದೋಪಾಯ (ಅಂತರ್ಭೇದದೊಳಂತು ಛಿದ್ರಿಸಿದರಾ ಗಾಂಗೇಯರಂ ಕೊಂದರ್ ಇದಿಂತೀಗಳ್ ಪುಸಿದು ಈ ಘಟೋದ್ಭವನಂ: **ಪಂಪಭಾ,** ೧೨. ೪೭)

ಅಂತರ್ಮಂಡಲಸಾಧನ – [ನಾ] ಒಳದೇಶ [ಅಂತರಂಗ]ವನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯ (ನಿನಗರಸ ಬಹಿರ್ಮಂಡಲಮನೆ ಸಮಱಿಲ್ಲಿನಿತು ಬರಿಸಮುಂ ಪೋದುವು ಕೇಳಿನಿಸು ಅಂತರ್ಮಂಡಲಸಾಧನಮುಂಟೆಂದು ಅಱಿಪಿದುದುಮಂ ಇನ್ನಱಿಪುವೆವೇ: **ಆದಿಪು,** ೧೪. ೧೫)

ಅಂತರ್ಮುಹೂರ್ತ – [ನಾ] [ಜೈನ] ಒಂದು ಮುಹೂರ್ತಕ್ಕಿಂತ ಕಡಿಮೆಯ ಕಾಲ [೪೮ ನಿಮಿಷ] (ಬಱಿಯಂ ಅಂತರ್ಮುಹೂರ್ತದೊಳ್ ಆಹಾರ ಶರೀರ ಇಂದ್ರಿಯೋಚ್ಛ್ವಾಸ ಭಾಷಾ ಮನಃಪರ್ಯಾಪ್ತಿಗಳೊಳ್ ನೆರೆದು: **ಆದಿಪು,** ೫. ೮೩ ವ)

ಅಂತರ್ವಂಶಿಕ – [ನಾ] ರಾಣಿವಾಸದ ಮೇಲ್ವಿಚಾರಕ (ಮಂಡಳಿಕ ಮಹಾಸಾಮಂತ ಮಂತ್ರಿಪ್ರಧಾನ ಪುರೋಹಿತ ಅಂತರ್ವಂಶಿಕಾದಿ ಪರಿವಾರ ಪರಿವೃತಂ: **ಆದಿಪು,** ೨. ೨ ವ)

ಅಂತರ್ವಣ – [ನಾ] ಕಾಡಿನ ಮಧ್ಯ ಪ್ರದೇಶ (ವಜ್ರವೇದಿಕೋತ್ತುಂಗ ತೋರಣದ್ವಾರದ ಅಂತರ್ವಣ ತುಂಗ ಕುಜಂಗಳ ನೆಟಿಲ್ಗಳೊಳ್: **ಆದಿಪು,** ೧೨. ೬೮ ವ)

ಅಂತರ್ವಂಶಿಕ – [ನಾ] ರಾಣಿವಾಸದ ಮುಖ್ಯಸ್ಥ (ಆಸ್ಥಾನಮಂಡಪದೊಳ್ ಅತಿಪ್ರಚಂಡಮಂಡಳಿಕ ಮಹಾಸಾಮಂತ ಮಂತ್ರಿಪ್ರಧಾನಪುರೋಹಿತ ಅಂತರ್ವಂಶಿಕಾ ಪರಿವಾರಪರಿವೃತಂ: **ಆದಿಪು,** ೨. ೨ ವ)

ಅಂತರ್ವತ್ನಿ – [ನಾ] ಬಸುರಿ ಹೆಂಗಸು (ಚೋದ್ಯಮಿದೆಂದು ಮರಲ್ದು ಬಣ್ಣಿಸಿದರ್ ಇಂದ್ರನ ಕಾಂತೆಯರ್ ಅಂತರ್ವತ್ನಿಯಂ ಆ ನೃಪಪತ್ನಿಯಂ: **ಆದಿಪು,** ೭. ೩೧)

ಅಂತರ್ವರ್ತಿಯಾಗು – [ಕ್ರಿ] ಒಳಗೆ ಹೊಗು (ತನ್ನೊಡನೆಯ ಬಲಮೆಲ್ಲಮಂ ಪಡುವಣ ಸೋಪಾನಂಗಳಿಂದಂ ಬೆಂಕೆ ಭೋಂಕನಳುರದಂತು ಬೇಗಂ ಮ್ಲೇಚ್ಛಖಂಡ ಅಂತರ್ವರ್ತಿಯಾಗೆ ಮುನ್ನಂ ಕಳಿಪಿ: **ಆದಿಪು,** ೧೩. ೩೫ ವ)

ಅಂತವಾಸ – [ನಾ] ಊರಿನ ಹತ್ತಿರದ ಶಿಬಿರ (ಅಮರ್ದಿನ ಕಡಲೊಳಗಿರ್ಪಂತಿರ್ದಂ ಅಂತವಾಸದೊಳಾಗಳ್: **ಆದಿಪು,** ೧೧. ೨೮)

ಅಂತಸ್ಸಾರ – [ನಾ] ಅಂತಸ್ಸತ್ವ (ನೀಮೆ ಗಂಭೀರರ್ ಅಂತಸ್ಸಾರರಿರ್ ನೀಮಿರೆ ಪೆಱರೊಳರೇ ಸಕ್ಕಿಮಾಡಲ್ಕೆ: **ಆದಿಪು,** ೯. ೧೧೫)

ಅಂತಸ್ಸ್ಥಿತ – [ಗು] ಒಳಗಿದ್ದ (ಅದಱ ಮುದ್ರಿಕೆಯನೊಡೆದು ಅಂತಸ್ಸ್ಥಿತಕಾರ್ಯಪತ್ರಮಂ ಬಾಜಿಸಿ ನೋಡಿ ವಿಸ್ಮಯಾಕ್ರಾಂತಚಿತ್ತನಾಗಿ: **ಆದಿಪು,** ೪. ೮೬ ವ)

ಅಂತಿಕ – [ಗು] ಹತ್ತಿರ, ಸಮೀಪ (ಗುರುಪದಪದ್ಮಾಂತಿಕದೊಳ್ ಪರಮೇಶ್ವರದೀಕ್ಷೆಯಂ ಮನಂ ಬಿಡೆ ಕೊಂಡು ಈ ಧರೆಯಂ ಪೊಗೞಿಸಿದಂ: **ಆದಿಪು,** ೧೪. ೧೩೯)

ಅಂತಿಲ್ಲದ – [ಗು] ಅಪರಿಮಿತವಾದ, ಹೇಳಲಾರದ (ಭರತೇಶ್ವರಂ ಸಕಳಾಂತಃಪುರಸಹಿತಮಲ್ಲಿ ವಿಶ್ರಮಿಸಿ ವನಾಭ್ಯಂತರಮಂ ತೊೞಲೆ ಮನಕ್ಕಂತಿಲ್ಲದ ಮುದಮನುಂಟುಮಾಡಿದುದು ಬನಂ: **ಆದಿಪು,** ೧೧. ೮೩)

ಅಂತು – [ನಾ] ಕೊನೆ, ತುದಿ (ವನಾಭ್ಯಂತರಮಂ ತೊೞಲೆ ಮನಕ್ಕೆ ಅಂತು ಇಲ್ಲದ ಮುದಮನುಂಟುಮಾಡಿದುದು ಬನಂ: **ಆದಿಪು,** ೧೧. ೮೩); ಹಾಗೆ (ಅಂತು ಕಂಡು ಮನಂಗೊಂಡೆತ್ತಿಕೊಂಡು ಮನೆಗೆ ತಂದು: **ಪಂಪಭಾ,** ೧. ೯೬ ವ ಮತ್ತು ೧. ೯೭)

ಅಂತುಟೆ – [ಗು] ಹಾಗೆಯೇ (ಅಱಿಮರುಳಂತುಟೆ ಸೊರ್ಕಿನ ತೆಱನಂತುಟೆ ಮನಮೊಱಲ್ದು ಎರ್ದೆಯುರಿವುದು ಮೆಯ್ಯೆಱಗುವುದು ಪದೆವುದು ಆನಿದನಱಿಯನಿದೇಕೆಂದು ಕನ್ನೆ ತಳವೆಳಗಾದಳ್; **ಪಂಪಭಾ,** ೪. ೭); [ಅಂತುಟು+ಎ] ಅಷ್ಟೇ, ಅಂತಹುದೇ (ಮುದುಪರ ಬಿಲ್ಬಲ್ಮೆಯುಂ ಇಱಿವ ಅದಟುಂ ಬಗೆವಾಗಳ್ ಅಣ್ಣನೆಂದಂತುಟೆ: **ಪಂಪಭಾ,** ೧೦. ೨೪)

ಅಂತುವರಂ – ಕೊನೆಯವರೆಗೆ (ಭುವನೇಶ್ವರ ನಿಜರೂಪಸ್ತವ ವಸ್ತುಸ್ತವ ಗುಣಸ್ತವಳನಂತುವರಂ ಬಣ್ಣಿಸಲಮರೇಂದ್ರ ವಾಸುಕಿ ಪ್ರಭುಗಳಾರ್ತರಿಲ್ಲ ಎನ್ನಳವೇ: **ಆದಿಪು,** ೧೦. ೫೨)

ಅಂತುಟು – [ಗು] ಅಷ್ಟು (ಅವನೀವಂತುಟಂ ಈಯದಂತುಟಂ ಅದಟನದಂ ಬಲ್ಲಂತು ಕಾಲ್ಗುತ್ತಿ ನೋಡು: **ಪಂಪಭಾ,** ೯. ೨೬)

ಅಂತೆ – [ಅ] ಹಾಗೆ, ಹೋಲಿಕೆಯನ್ನು ತೋರಿಸುವ ಪದ (ಬಸಂತದೊಳ್ ಕಕಳಿಕೆಗರ್ಚಿದ ಕೋಗಿಲೆಯಂತೆ: **ಆದಿಪು,** ೨. ೯)

ಅಂತೆಂಬಂ – [ನಾ] ಹಾಗೆ ಹೇಳಿಕೊಳ್ಳುವವನು (ಅಂತೆಂಬಂ ಆರ್ಗೆ ಪಿರಿದುಂ ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇೞೆಂತೆನಗೆ ಕೆಳೆಯನೇ: **ಪಂಪಭಾ,** ೨. ೪೭)

ಅಂತೆವೊಲ್ – [ಅ] ಅದರಂತೆ, ಹೋಲಿಕೆಯ ಪದ (ಕೃಶಾನುವ ನೆಟಿಲಳುರುವಂತೆವೊಲ್ ಕನ್ನಡಿಯಂ: **ಆದಿಪು,** ೭. ೩೨)

ಅಂತ್ರ – [ನಾ] ಕರುಳು (ಆಮಂತ್ರಿತ ಡಾಕಿನೀ ದಶನಘಟ್ಟನಜಾತ ವಿಭೀಷಣಂ ಮದೇಭ ಅಂತ್ರನಿಯಂತ್ರಿತ ಅಶ್ವಶವ ಮಾಂಸರಸಾಸವ ಮತ್ತಯೋಗಿನೀತಂತ್ರಂ: **ಪಂಪಭಾ,** ೧೨. ೧೨೦)

ಅಂದ – [ನಾ] ರೀತಿ (ಇದಱಂದಂ ಬಿಸವಂದಂಮಿಂತಿದು ಅಮರೇಂದ್ರಾವಾಸದೊಂದಂದಂ: **ಆದಿಪು,** ೪. ೫); ಚೆಲುವು (ಜವ್ವನದ ವಿಳಾಸದಂದದ ಬೆಡಂಗಿನ ಪೆಂಡಿರೆ ಪೆಂಡಿರ್: **ಪಂಪಭಾ,** ೪. ೮೫); **[ನಾ]** ಉದ್ದೇಶ (ನೀವಿರ್ವರುಂ ಬಂದಂದಮುಮಂ ಮನೆವಾೞ್ತೆಯಂ ಪೇೞೆಂ ಎಂದೊಡೆ: **ಪಂಪಭಾ,** ೯. ೧೧ ವ)

ಅಂದಂಬೆಱು – [ಕ್ರಿ] ಅಂದಂಬಡೆ (ನಿನ್ನನಾ ಕೋಮಳೆಯಂದಂಬೆತ್ತ ಸುತ್ತುಂಗುರುಳಳವಡಿಸಲ್: **ಆದಿಪು,** ೪. ೨೧)

ಅಂದಿಗ – [ನಾ] ಅಂತಹವನು (ಓವೋ ಲಂಪಳರಪ್ಪ ಎಮ್ಮಂದಿಗರಂ ಬಗೆವಂದದೆ ಕೊಂದಿಕ್ಕವೆ ಸಕಳವಿಷಯ ವಿಷಮವಿಷಂಗಳ್: **ಆದಿಪು,** ೪. ೭೩)

ಅಂದು – [ನಾ] ಆ ಸಮಯದಲ್ಲಿ (ಮೃದುಮಧುರವಚನ ರಚನೆಯೊಳ್ ಉದಾತ್ತಂ ಅರ್ಥಪ್ರತೀತಿಯಂ ಕೇಳ್ವ ಜನಕ್ಕೆ ಇದಿರೊಳ್ ಕುಡದಂದು ಅದು ಕಬ್ಬದೊಳಿರ್ದುಂ ಕವಿಯ ಮನದೊಳಿರ್ದಂತೆ ವಲಂ: **ಆದಿಪು,** ೧. ೧೯); **[ನಾ]** ಆ ಪಕ್ಷದಲ್ಲಿ (ಬಾಹ್ಯಾರ್ಥ ಶೂನ್ಯಂಗಳಪ್ಪುದಱಿಂ ಅಂತ್ಯಂಗಳಕ್ಕುಮಾದಂದು ಅಸತ್ಯೇತರವಿಭಾಗಂಗಳಂ ಪಡೆಯಲಾಗದು: **ಆದಿಪು,** ೨. ೧೦ ವ)

ಅಂಧಕದ್ವಿಷ – [ನಾ] ಅಂಧಕನ ಶತ್ರು, ಈಶ್ವರ (ಆತಂಗೆ ಅಮರಾಪಗೆ ಮೆಚ್ಚಿ ಪಾಯ್ವುದುಂ ಗಗನದಿಂ ಅಂಧಕ'ದ್ವಿಷಜಟಾಟವಿಯೊಳ್ ಬೞಿಕಾದ ಶೈಳದೊಳ್ ಸೊಗಯಿಸೆ ಪಾಯ್ದುದು: **ಪಂಪಭಾ,** ೪. ೧೩)

ಅಂಧಕಾರ – [ನಾ] ಕತ್ತಲೆ (ಇದು ದಲ್ ಘೋರಾಂಧಕಾರಕ್ಕೆ ಮಾಡಿದ ಕೂಪಂ: **ಪಂಪಭಾ,** ೧೩. ೭೨)

ಅಂಧನೃಪ – [ನಾ] ಕುರುಡು ರಾಜ, ಧೃತರಾಷ್ಟ್ರ (ತನಗೆ ಸಂತಸಂ ಪೆರ್ಚಿಯುಂ ಅಂದು ಇನಿಸು ಅಂಧನೃಪಂ ತನ್ನಯ ಜನದೊಳ್ ಕೆಲನಱಿಯೆ ಕೃತಕಶೋಕಂಗೆಯ್ದಂ: **ಪಂಪಭಾ,** ೩. ೮)

ಅಂಧರಾಣ್ಣಂದನ – [ನಾ] [ಅಂಧರಾಜ್+ನಂದನ] ಕುರುಡ ರಾಜನ ಮಗ, ದುರ್ಯೋಧನ

(ಅಂದರಾಣ್ಣಂದನನಲ್ಲದುಂತು ತಲೆಯುರ್ಚುಗುಮೇ ರಣರಂಗಭೂಮಿಯೊಳ್: **ಪಂಪಭಾ,** ೧೩. ೭೫)

ಅಂಬರ – [ನಾ] ವಸ್ತ್ರ (ಮಜ್ಜನಭೋಜನತಾಂಬೂಲ ಅಂಬರ ಅನುಲೇಪನಭೂಷಣಾದಿ ವಿವಿಧವಿಶೇಷಸತ್ಕಾರಂಗಳಿಂ ಸಂತಸಂಬಡಿಸಿ: **ಆದಿಪು,** ೪. ೨೫ ವ); [ನಾ] ಆಕಾಶ ಮತ್ತು ಬಟ್ಟೆ ಎಂಬ ಶ್ಲೇಷೆ (ತುಂಬಿದ ರಕ್ತತೆಯಿಂ ನಿಜಬಿಂಬಂ ವಾರುಣಿಯನೊಸೆದು ಸೇವಿಸೆ ನಾಣ್ಗೆಟ್ಟಂಬೋಲ್ ತೇಜಂ ಮಸುಳ್ವಿನಂ ಅಂಬರಮಂ ಬಿಸುಟಂ ಆಗಳಂಬುಜಮಿತ್ರಂ: **ಪಂಪಭಾ,** ೩. ೨೩); [ನಾ] ಆಕಾಶ (ಆ ರಥದೊಳ್ ಒಡಂಬಡೆ ಪೂಡಿದ ನಾಲ್ಕೂಱು ಗೊಂಕುಱುಗಟ್ಟೆಯುಂ ಅಂಬರಸ್ಥಲಮನಡರ್ವ ಗೃಧ್ರಧ್ವಜಮುಂ ಅಂಜನಪುಂಜದಂತಾಗಿ: **ಪಂಪಭಾ,** ೧೨. ೭ ವ)

ಅಂಬರಚರ – [ನಾ] ಖೇಚರ (ಆಂ ಅಂಬರಚರನಾದಂದು ನಾಲ್ವರೊಳಲ್ಲಿ ಮೂವರುಂ ಮಂತ್ರಿಗಳಂತೇನಾದರ್: **ಆದಿಪು,** ೫. ೭೪)

ಅಂಬರತಲ – [ನಾ] ಆಕಾಶ (ಬದ್ದವಣದ ಪಱೆಗಳ್ ಕಿವಿ ಸದ್ದಂಗಿಡೆ ಮೊಟಗೆ ದೇವದುಂದುಭಿರವಮೊಂದು ಉದ್ದಾನಿ ನೆಗಟೆ ಮುಗುಳ ಅಲರ ಒದ್ದೆ ಕರಂ ಸಿದ್ಧಮಾದುದು ಅಂಬರತಲದೊಳ್: **ಪಂಪಭಾ,** ೧೨. ೨೧೮)

ಅಂಬರಪಟಳ – [ನಾ] ಆಕಾಶದ ಮೇಲ್ಭಾವಣಿ (ಘಟೆಯ ದಟಿದ ಉಲಿವು ಲಯಘನಘಟೆಗಳ ಮೊಟಗೆನಿಸೆ ಪೊಟ್ಟಗೆ ಒಡೆದತ್ತು ರಟತ್ ಪಟು ಪಟಹ ಶಂಖ ಭೇರಿಯ ಚಟುಳಿತದಿಂದ ಅತಳಪಟಂ ಅಂಬರಪಟಳಂ: **ಪಂಪಭಾ,** ೧೦. ೬೭)

ಅಂಬರಾಂಬರ – [ನಾ] ದಿಗಂಬರ ಯತಿ (ಒರೊರ್ವರೆ ವಿಹರಿಪುದಂ ಬಿಸುಟು ಅಂಬರಾಂಬರರ್ ತಮ್ಮ ಸಮುದಯಂ ಬೆರಸಿರ್ಪರ್: **ಆದಿಪು,** ೧೫. ೩೨)

ಅಂಬುರಾಶಿ – [ನಾ] ಸಮುದ್ರ (ಆದಿಪುರುಷ ಜನ್ಮೋತ್ಸವ ಸುಧಾಂಬುರಾಶಿಯೊಳ್ ಕೂಡಿ ಮೂಡಿ ಮುಟ್ಟಾಡುವುದಂ ನೋಡಿ: **ಆದಿಪು,** ೭. ೧೧೫ ವ)

ಅಂಬರೇಚರ – [ನಾ] ಖೇಚರ (ಸಾಳತಮಾಳಕಾನನಭರೋದ್ಧತ ಸಿಂಧುರಕಂಠ ಗರ್ಜನಾಭೀಳಮಂ ಅಂಬರೇಚರವಧೂ ಕರಪಲ್ಲವ ಸಂಚಳಲ್ಲತಾಂದೋಳಮಂ: **ಪಂಪಭಾ,** ೭. ೭೬)

ಅಂಬಾಲೆ – [ನಾ] ವಿಚಿತ್ರವೀರ್ಯನ ಹೆಂಡತಿ (ಅಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಱಿಂದಾಕೆಗೆ ಪಾಂಡುರೋಗಸಂಗತನುಮನೇಕ ಭದ್ರಲಕ್ಷಣಲಕ್ಷಿತನುಂ ಅತ್ಯಂತಪ್ರತಾಪನುಮಾಗಿ ಪಾಂಡುರಾಜನೆಂಬ ಮಗನಕ್ಕುಂ: **ಪಂಪಭಾ,** ೧. ೮೫ ವ)

ಅಂಬಿಕೆ – [ನಾ] ತಾಯಿ (ಅಂಬಿಕೆ ಸರಸ್ವತಿ ಮತ್ ಮುಖಪದ್ಮರಂಗದ ಏಟಗ್ಗೆಯಂ ಎಡೆಗೊಂಡು ಕೊಂಡುಕೊನೆದು ಈಗೆ ಅರಿಗಂಗೆ ವಿಶುದ್ಧಬುದ್ಧಿಯಂ: **ಪಂಪಭಾ,** ೧. ೫)

ಅಂಬಿಗ – [ನಾ] ಬೆಸ್ತ (ಫಿಂದೆ ಕಡಂಗಿ ತೇರನೆಸಗೆಂಬನನಂಬಿಗಂ ಆಜಿರಂಗದೊಳ್ ಮುಂದೆ ಸಮಾನನಾಗಿ ಬೆಸದಿರ್ಪವನುಂ ತುಱುಕಾಱನಾಗೆ: **ಪಂಪಭಾ,** ೧೨. ೯೪)

ಅಂಬಿನಮೊನೆ – [ನಾ] ಬಾಣಯುದ್ಧ (ಸುರಪನ್ನಗಕಿನ್ನರ ಸೈನ್ಯಮೆಲ್ಲಂ ಅಂಬಿನಮೊನೆಯೊಳ್ ಪಡಲ್ವಡೆ ಲತಾಭವನಂ ಕೃತಕಾಚಳಂಗಳ್ ಎಂಬಿನಿತುಂ ಅವು ಅಟ್ಟೆ ತಟ್ಟೆ: **ಪಂಪಭಾ,** ೫. ೧೦೪)

ಅಂಬಿರಿವಿಟ್ಟು ಪಾಯ್ – [ಕ್ರಿ] ಪ್ರವಾಹವಾಗಿ ಹರಿ (ಸುರಿವ ಬಿಸುನೆತ್ತರ ಸರಿಯೊಳಮಂಬಿನ ಸರಿಯೊಳಂಬಿರಿವಿಟ್ಟು ಪಾಯ್ವ ಮದಗಜಂಗಳ ಮದಜಲದೊಳಂ: **ಪಂಪಭಾ,** ೧೦. ೭೦ ವ)

ಅಂಬಿರಿವಿಡು – [ಕ್ರಿ] ಧಾರಾಕಾರವಾಗಿ ಸುರಿ (ತೊರೆದ ಕುಚಯುಗಂಗಳವು ಅಂದು ಅಂಬಿರಿವಿಡೆ ಮೊಲೆವಾಲಂ: **ಪಂಪಭಾ,** ೯. ೭೪)

ಅಂಬು – [ನಾ] ನೀರು (ಸಲಿಲಂ ಜೀವನಂ ಅಂಬು: **ಅಭಿಧಾವ,** ೧. ೪. ೧); [ನಾ] ಬಾಣ (ತಪಕೆ ಬಿಲ್ಲುಮಂಬುಂ ದೊರೆಯೇ: **ಪಂಪಭಾ,** ೮. ೩)

ಅಂಬುಕ – [ನಾ] ಜಲ, ನೀರು (ಉಗ್ರ ವೈರಿಸಂಘಾತ ಕರೀಂದ್ರರುಂದ್ರ ಕಟಕೂಟ ಪರಿಚ್ಯುತ ಭೃಂಗಮಾಳಿಕಾ ಪೀತಮದಾಂಬುಕಂ: **ಪಂಪಭಾ,** ೧೪. ೩)

ಅಂಬುಖಾತಿಕೆ – [ನಾ] ನೀರು ತುಂಬಿದ ಕಂದಕ (ವಿಳಸನವಿದಗ್ಧ ಖೇಚರನಿಳಿಂಪದಂಪತಿಯಿಂ ಅಂಬುಖಾತಿಕೆ ರಯ್ಯಂ: **ಆದಿಪು,** ೧೦. ೨೬)

ಅಂಬುಗಾಣಿಸು – [ಕ್ರಿ] ಬಾಣಪ್ರಯೋಗಿಸು, ಎದುರಿಸು (ಬಲದೇವನನುಮತದೊಳ್ ಪೆಱಗಂ ತಗುಳ್ವ ಯಾದವಬಲಂ ಉಂಟಪ್ಪೊಡೆ ಅದನಂಬುಗಾಣಿಸಲ್ ನೀನೆ ಸಾಲ್ವಯ್: **ಪಂಪಭಾ,** ೫. ೨೦ ವ)

ಅಂಬುಜ – [ನಾ] ನೀರಲ್ಲಿ ಹುಟ್ಟಿದುದು, ತಾವರೆ (ಆಗಳ್ ಆ ವಿಕಚಾಂಬುಜಸೌರಭಮನೊಸೆದು ಸೇವಿಸುವಾ ಪೆಣ್ದುಂಬಿಗಳ ಸರಮನೆತ್ತಿ ತಱುಂಬುತ್ತುಂ ಬಂದುದಾ ಪ್ರಭಾತಸಮೀರಂ: **ಪಂಪಭಾ,** ೧೨. ೧೦೫)

ಅಂಬುಜನಿಳಯೆ – [ನಾ] ಲಕ್ಷ್ಮಿ (ನಿಂದ ಶಿಲೆ ತಪನತಪ್ತಮಿದೆಂದು ಅಂಬುಜನಿಳಯೆ ಪದ್ಮವಿಷ್ಟರಮಂ .. .. ಪಡೆದು ಪದೆಪಂ ಮೆರೆದಳ್: **ಆದಿಪು,** ೯. ೮೫)

ಅಂಬುಜಪತ್ರಾಂಬು – [ನಾ] ತಾವರೆಯ ಎಲೆಯಿಂದ ಮಾಡಿದ [ದೊನ್ನೆಗಳಲ್ಲಿನ] ನೀರು (ದಿಕ್ಕರಿಗಳ್ ಅಂಬುಜಪತ್ರಾಂಬುವಿಂ ಬೆಡಂಗಡಸಿರೆ ಮಜ್ಜನಂಬುಗಿಪುದಂ ಸತಿ ಕಂಡೊಸೆದಳ್ ನಿಶಾಂತದೊಳ್: **ಪಂಪಭಾ,** ೧. ೧೪೦)

ಅಂಬುಜಮಿತ್ರ – [ನಾ] ಕಮಲದ ನಂಟ, ಸೂರ್ಯ (ಪುತ್ರನೆನ್ನ ದೊರೆಯಂ ನಿನಗಕ್ಕೆ ಎಂಬುದುಂ ಒದವಿದ ಗರ್ಭದೊಳಂಬುಜಮಿತ್ರನನೆ ಪೋಲ್ವ ಮಗನೊಗೆತಂದಂ: **ಪಂಪಭಾ,** ೧. ೯೪)

ಅಂಬುಜಮುಖಿ – [ನಾ] ಕಮಲಮುಖಿ (ಮುಂ ಬೇಡಿದ ವರಮಂ ಕುಡದೆ ಅಂಬುಜಮುಖಿ ಪುತ್ರನೆನ್ನ ದೊರೆಯಂ ನಿನಗಕ್ಕೆ ಎಂಬುದುಂ ಒದವಿದ ಗರ್ಭದೊಳ್: **ಪಂಪಭಾ,** ೧. ೯೪)

ಅಂಬುಜಸೂತ್ರ – [ನಾ] ತಾವರೆದಂಟಿನ ನೂಲು (ಸುರಿದ ಅಂಬುಜಸೂತ್ರದಿಂದೆ ಮತ್ತನಿತಱಿೊಳಂ ಮುಗುಳ್ಸರಿಗೆ

ತೋಳ್ವಳೆ ಕಂಕಣವಾರಮೆಂದು ಬೇಟ್ಟನಿತನೆ ಮಾಡಿ: **ಪಂಪಭಾ,** ೨. ೧೬)

ಅಂಬುಜಾಕ್ಷಿ – [ನಾ] ಕಮಲಮುಖಿ (ಮೊಕ್ಕಳಮದಾರ್ ನಡೆ ನೋಟಿಸ್ಟೊಡಮಿಂತುಂ ಮೂಱಸಿಯವು ಮೂಱು ದೊಡ್ಡಿದುವು ಮೂಱಿಡೆ ತೆಳ್ಳಿದುವಂಬುಜಾಕ್ಷಿಯಾ: **ಪಂಪಭಾ,** ೪. ೭೨)

ಅಂಬುಜೋದರ – [ನಾ] [ಅಂಬುಜ+ಉದರ] ಹೊಕ್ಕುಳಲ್ಲಿ ಕಮಲವುಳ್ಳವನು (ಅಂಬುಜೋದರಂ ನಯದ ವಿನಯದ ಮಾತು ನೀನೆಂದಂತು ತೊಱಗೆ ನೀರಡಕಲುಂ ಆದಿತ್ಯಂಗೆ ಸೊಡರಿಡಲುಂ ಇಂದ್ರಂಗೆ .. .. ಕಜ್ಜಂಬೇಟ್ಟುದು: **ಪಂಪಭಾ,** ೯. ೧೮ ವ)

ಅಂಬುದ – [ನಾ] ಮೋಡ (ಅಂತು ನೀಲ ಅಂಬುದ ಶ್ಯಾಮನುಂ ಕನಕಪಿಂಗಳ ಜಟಾಬಂಧಕಳಾಪನುಂ.. .. ಆಗಿ: **ಪಂಪಭಾ,** ೧. ೬೯ ವ)

ಅಂಬುದಘೋಷ – [ನಾ] ಗುಡುಗು (ಕಾಳಾಂತ ಪವನಹತಿ ಕಲ್ಲೋಳವಿಳ ಜಳಧಿನಿನದಮೋ ನಿರ್ಘಾತಾಭೀಳತರ ರಭಸಮೋ ಲಯಕಾಳಾಂಬುದಘೋಷಮೋ ನೆಲಂ ಮೊಱಗಿದುದೋ: **ಆದಿಪು,** ೧೨. ೯೧)

ಅಂಬುದಪಥ – [ನಾ] ಆಕಾಶ (ಅಂತು ಗಗನತಳಮಂ ತಱುಂಬುವಂತೆ ನೆಗೆದ ವಜ್ರವೇದಿಕೆಯುಮಂ ಅಂಬುದಪಥಕ್ಕೆ ಆಲಂಬಮಿರ್ಪಂತಿರ್ದ ಲವಣಾಂಬುರಾಶಿಯಂ ನೋಡಿ: **ಆದಿಪು,** ೧೨. ೭೦ ವ)

ಅಂಬುದಾಗಮ – [ನಾ] ಮೋಡಗಳು ಆಗಮಿಸುವ ಕಾಲ, ಮಳೆಗಾಲ (ಅಂಬುದಾಗಮದ ಕೋಗಿಲೆಯಂತಿರೆ ಮೂಗುವಟ್ಟು: **ಆದಿಪು,** ೩. ೨೬)

ಅಂಬುದುಡು – [ಕ್ರಿ] [ಅಂಬು+ತುಡು] ಬಾಣ ಹೂಡು (ನದೀಪುತ್ರಂಗೆ ಪೇಟಿಸಾರ್ ಚಲಂಬಟ್ಟುಂ ಮಾರ್ಮಲೆದು ಅಂಬುದೊಟ್ಟುಂ ಉಟಿವರ್ ಸಂಗ್ರಾಮರಂಗಾಗ್ರದೊಳ್: **ಪಂಪಭಾ,** ೧೦. ೧೧೭)

ಅಂಬುಧರ – [ನಾ] ಮೋಡ (ಸಿರಿಯ ಶರೀರದ ರೂಪಿನ ನರರ ಐಶ್ವರ್ಯದ ಪೊದಳ್ಕೆಗಳ್ ಕರಗುವವೋಲ್ ಶರದಂಬುಧರಂ ಭೋಂಕೆನೆ ಕರಗಿದೊಡೆ: **ಆದಿಪು,** ೪. ೬೪)

ಅಂಬುಧಿನಿನಾದ – [ನಾ] ಸಮುದ್ರಘೋಷ (ಪರಸುವ ಪುರಜನದ ಒದವಿದ ಪರಕೆಗಳ ಅಂಬುಧಿನಿನಾದಮಂ ಮಿಗೆ ತಮ್ಮಯ್ವರುಂ ಒಡನೆ ಮೆಱೆದು: **ಪಂಪಭಾ,** ೫. ೨೩)

ಅಂಬುನಿಧಿ – [ನಾ] ಜಲರಾಶಿ (ಎನಿತಾನುಂ ಅಂಬುನಿಧಿಗಳನನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತಿಲ್ಲೆನಗೆ ನರಭೋಗಂ: **ಆದಿಪು,** ೯. ೫೭)

ಅಂಬುಪಾಯಿ – [ಗು] ನೀರನ್ನು ಕುಡಿಯುವ (ವಿವಿಧಮೂಲ ಪಲಾಶಿಗಳುಂ ಸರೋವರ ನದೀನಿರ್ಝರ ಅಂಬುಪಾಯಿಗಳುಮಾಗಿ: **ಆದಿಪು,** ೯. ೯೩ ವ)

ಅಂಬುರಾಶಿ – [ನಾ] ಸಮುದ್ರ (ಪೊಲಸುನಾಱುವ ಮೆಯ್ಯನೆ ಕರ್ಚಲೆಂದು ಚೆಚ್ಚರಂ ಅಪರ ಅಂಬುರಾಶಿಗೆ ಇೞಿವಂತಿರೆ ಇೞಿದಂ ಕಮಳೈಕಬಾಂಧವಂ: **ಪಂಪಭಾ,** ೧೧. ೫೧)

ಅಂಬುರುಹ – [ನಾ] ಕಮಲ, ತಾವರೆ (ಕೆಡೆದಂ ಪದ್ಮಜಂ ಆಸನಾಂಬುರುಹದಿಂದೆ ಅಗಳ್ ಸುರೇಂದ್ರಾಚಳಂ ನಡುಗಿತ್ತು: **ಪಂಪಭಾ,** ೧೦. ೨೬)

ಅಂಬುವಾಹ – [ನಾ] ಮೋಡ (ರಾಗದಿಂ ಇನರಶ್ಮಿಯೆಂಬ ಕಸಮಂ ಕಳೆದು ಅಂಬರಮೆಂಬ ಪಾಟಂ ಏೞಿದುದು ಅಸಿತಾಂಬುವಾಹಕುಳಮೆಂಬ ಕುಟುಂಬಕದಂಬಕೋತ್ಕರಂ: **ಆದಿಪು,** ೬. ೭೧)

ಅಂಬುವೀಡು – [ನಾ] ಬಾಣ ಹೋಗುವಷ್ಟು ದೂರ (ಅಂತು ಒಂದಂಬುವೀಡಿನೆಡೆಯೊಳ್ ಕಾಮನ ಅಂಬುವೀಡಿಂಗೊಳಗಾಗಿ ತಾಂ ಕಾಮರೂಪೆಯಪ್ಪುದಱಿಂ ದಿವ್ಯಕನ್ಯಕಾಸ್ವರೂಪಮಂ ಕೆಯ್ಕೊಂಡು: **ಪಂಪಭಾ,** ೩. ೧೩ ವ)

ಅಂಬೆ – [ನಾ] ಭೀಷ್ಮನು ವಿಚಿತ್ರವೀರ್ಯನಿಗಾಗಿ ಗೆದ್ದು ತಂದು ಮೂವರು ಕನ್ಯೆಯರಲ್ಲಿ ಒಬ್ಬಳು (ಅಂಬೆಯೆಂಬ ದುಂಡುರುಂಬೆ ನಿನಗೆ ವಧಾರ್ಥಮಾಗಿ ಪುಟ್ಟುವೆನಕ್ಕೆಂದು ಕೋಪಾಗ್ನಿಯಿಂದಮಗ್ನಿಶರೀರಿಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟೆ: **ಪಂಪಭಾ,** ೧. ೮೦ ವ)

ಅಂಬೆತ್ತು – [ಕ್ರಿ] ಬಾಣವನ್ನು ಮೇಲೆತ್ತಿ ಸವಾಲು ಎಸೆ (ಕಲಿಗಂ ಬಲ್ಲಾಳ್ಗಂ ಅಂಬೆತ್ತಿದೆಂ ಇದುವೆ ಪದಂ ಮಾರ್ಕೊಳಲ್ ಸಿಂಧುರಾಜಂ ಗೆಲಲೆಂದು ಆಂ ಬಂದೆಂ: **ಪಂಪಭಾ,** ೧೧. ೧೪೮)

ಅಂಬೇಱು – [ನಾ] ಬಾಣದ ಹೊಡೆತ (ಒಡವಂದಂಕದ ಕೌರವರ್ ದ್ರುಪದನ ಅಂಬೇಱಂಗೆ ಮೆಯ್ಯೊಡ್ಡದೆ ಒಡ್ಡೊಡೆದೋಡುತ್ತಿರೆ: **ಪಂಪಭಾ,** ೨. ೬೨)

ಅಂಭಃಖಾತಿಕೆ – [ನಾ] ನೀರಿನ ಕಂದಕ (ಧೂಳೀಶಾಳಮಾನಸ್ತಂಭ ಅಂಭಃಖಾತಿಕಾವಲ್ಲೀಮನೋಪವನಪತಾಕಾವನಿಕಲ್ಪಭೂರುಹ ’: **ಆದಿಪು,** ೧೦. ೫೨ ವ)

ಅಂಭೋಜ – [ನಾ] ತಾವರೆ (ಇನಕಿರಣದ್ಯೋತಿಗೆತ್ತು ಆಗಳಾಗಳ್ ಮುಗಿದಿರ್ದ ಅಂಭೋಜಂ ಓರೊಂದಲರ್ದುದು: **ಆದಿಪು,** ೧೨. ೯)

ಅಂಭೋಜನಾಭ – [ನಾ] ಹೊಕ್ಕುಳಲ್ಲಿ ತಾವರೆಯುಳ್ಳವನು, ವಿಷ್ಣು (ರಸೆಯೊಳ್ ಕಾಲಾಗ್ನಿರುದ್ರಂ ಜಲಶಯನದೊಳ್ ಅಂಭೋಜನಾಭಂ ಪೊದಳ್ದು ಆಗಸದಿಂ ಸುತ್ತಿರ್ದ ಅಜಾಂಡೋದರದೊಳ್ ಅಜಂ ಅಡಂಗಿರ್ಪವೋಲ್; **ಪಂಪಭಾ,** ೮. ೮೬)

ಅಂಭೋಜಪತ್ರೇಕ್ಷಣೆ – [ನಾ] ತಾವರೆಯ ಎಸಳಿನಂತಹ ಕಣ್ಣು[ಳ್ಳವಳು] (ಒಂದು ಅಂಚೆಯಂ ಪೊದೆದು ಒಂದು ಅಂಚೆಯಂ ಉಟ್ಟ ನಿನ್ನಿರವು ಇದೇಂ ಅಂಭೋಜಪತ್ರೇಕ್ಷಣೇ: **ಪಂಪಭಾ,** ೮. ೬೬)

ಅಂಭೋಜಿನಿ – [ನಾ] ಕಮಲಿನಿ, ತಾವರೆ (ಕಳಹಂಸೀಲೀಲೆ ನೀಲೋತ್ಪಳರುಚಿ ಕನಕಾಂಭೋಜಿನೀಲಕ್ಷ್ಮಿ ಭೃಂಗೀವಳಯಂ ಶ್ರೀಚಕ್ರವಾಕದ್ವಯವಿಳಸನಂ: **ಆದಿಪು,** ೧೧. ೧೪೧)

ಅಂಭೋದ – [ನಾ] ಮೋಡ (ಲಯಾಂಭೋದಂಗಳ್ ಕವಿವಂತೆವೋಲ್ ಕವಿವುದುಂ ಕಾಲ್ಗಾಪು ಕಾಲ್ಗಾಪಿನೊಳ್ ಜೋದರ್ ಜೋದರೊಳ್ .. .. ಅಗುರ್ವಪ್ಪನ್ನೆಗಂ: **ಪಂಪಭಾ,** ೧೦. ೯೩)

ಅಂಭೋದಪಥ – [ನಾ] ಆಕಾಶ (ಸುರಾಸುರರ ಅಂಭೋದಪಥಕ್ಕೆ ಅಳಂಕರಣಮಾಗುಯ್ದರ್: **ಆದಿಪು,** ೯. ೭೩)

ಅಂಭೋದಮಾರ್ಗ – [ನಾ] ಆಕಾಶ (ಅಂಭೋದಮಾರ್ಗಂ ಪೊಸತೆ ತೊಳೆದುದೀಗಳ್ ಪಾಲೊಳೆಂಬಂತು: **ಆದಿಪು,** ೮. ೩೫)

ಅಂಭೋಧರ – [ನಾ] ಮೋಡ (ಪಕ್ವಬಿಂಬಾಧರಂ ಕೋಮಳವಂಶ ಶ್ಯಾಮಂ ಅಂಬೋಧರರವನಳಿನೀಕುಂತಲಂ: **ಆದಿಪು,** ೮. ೫೧)

ಅಂಭೋಧರಧ್ವನಿ – [ನಾ] ಗುಡುಗು (ಮುಂದಣ ಕಜ್ಜದ ಬಿಣ್ಪುಮಂ ಅಜಿದು ಅಂಭೋರುಹನಾಭಂ ಶುಂಭತ್ ಅಂಭೋಧರಧ್ವನಿಯಿನಿಂತೆಂದಂ: **ಪಂಪಭಾ,** ೬. ೨೨ ವ)

ಅಂಭೋಧರಸ್ತನಿತ – [ನಾ] ಗುಡುಗು (ಆ ಸಮರಸನ್ನಾಹ ಭೇರೀನಿನಾದಮಂಭೋಭಾರಗಂಭೀರ ಅಂಭೋಧರಸ್ತನಿತ ಬಹುಸ್ನಿಗ್ಧಂಗಳಪ್ಪ ಮದಸ್ತಂಭೇರಮ ಬೃಂಹಿತಂಗಳಿಂದಂ: **ಆದಿಪು,** ೧೪. ೮೬ ವ)

ಅಂಭೋಧಿಪಥ – [ನಾ] ಸಮುದ್ರಮಾರ್ಗ (ಕೇತನಚಂಚಲಾಂಚಳ ನಿಚಯದಿಂದಂ ಅಂಭೋಧಿಪಥಮುಂ ಅತಿಚಕಿತವಿದ್ವಿಷ್ಟದೃಷ್ಟಿ ಪಥಮುಂ ನಿರವಕಾಶಮಾಗೆಯುಂ: **ಆದಿಪು,** ೧೩. ೭೭ ವ)

ಅಂಭೋಧಿವೇಲೆ – [ನಾ] ಸಮುದ್ರದ ತೀರ (ಅಮೃತಾಂಶುವಿನ ಉದಯದೊಳ್ ಅಂಭೋಧಿವೇಲೆ ಭೋರ್ಗರೆವವೊಲ್ ಒರ್ಮೊದಲೆಸೆದುವು .. .. ಸುರದುಂದುಭಿಗಳ್: **ಪಂಪಭಾ,** ೧. ೧೪೬)

ಅಂಭೋನಿಧಿ – [ನಾ] ಸಮುದ್ರ (ಸುರಾಸುರರಿಂ ಆ ಗೋವಿಂದನಿಂ ಮುನ್ನೆ ಕೋಳ್ಪಡೆದು ಅಂಭೋನಿಧಿಯಂತೆ ಬಂದು ನೆಗಟ್ಟು ಇಂದ್ರಪ್ರಸ್ಥಮಂ ಧರ್ಮಜಂ: **ಪಂಪಭಾ,** ೪. ೯)

ಅಂಭೋರಾಶಿ – [ನಾ] ಸಮುದ್ರ (ಸಾರವಸ್ತುಗಳಿಂ ನೆಱೆದಂಭೋರಾಶಿಯೆ ಕಾದಿಗೆ ಕಾವನುಂ ಸೀರಪಾಣೀ ವಿಳಾಸದಿಂ ಆಳ್ದಂ: **ಪಂಪಭಾ,** ೪. ೩೨)

ಅಂಭೋರುಹ – [ನಾ] ತಾವರೆ (ನೆರೆಯಲರ್ದ ಅಂಭೋರುಹದ ಅಲರ್ದುಱುಗಲಂ ಅಲೆದೊಗೆದುವು ಎಸೆಯೆ ಜಲದೇವತೆಗಳ್ ನಿಜೆವಿಡಿಯಲ್ ನಿಮಿರ್ಚಿದ ಕುಱುವಡಿಯ ತರಂಗದಂತೆ ಬಂಬಲ್ದೆರೆಗಳ್: **ಪಂಪಭಾ,** ೫. ೫೭)

ಅಂಶು – [ನಾ] ಕಿರಣ (ಇದಱ ಅಭ್ರಂಕಷಕೂಟಕೋಟಿಗಳೊಲಿರ್ದ ಅಂಭೋಜಷಂಡಂಗಳಂ ಪುದಿದು ಉಷ್ಣಾಂಶುವಿಂ ಊರ್ಧ್ವಗಾಂಶುನಿವಹಂ ಮೆಯ್ಯಿಟ್ಟಲರ್ಚುತ್ತುಮಿರ್ಪುದು: **ಪಂಪಭಾ,** ೪. ೨೨)

ಅಂಶುಕ – [ನಾ] [ಬಿಳಿಯ] ಬಟ್ಟೆ (ಲಳಿತೋತ್ಸವಧ್ವಜಾಂಶುಕ ವಿಳಸನಮಂ ಮುಂದೆ ನಿನಗೆ ತೋರ್ಪಂತಿರೆ ಕಣ್ಗೊಳಿಸಿರ್ದುದು ನೋಡ ಹಿಮಾಚಳಶಿಖರದ ಮೇಲೆ ಪಾಯ್ವ ಗಂಗಾಸ್ರೋತಂ: **ಪಂಪಭಾ,** ೭. ೭೩)

ಅಂಶುಕಧ್ವಜ – [ನಾ] ಬಟ್ಟೆಯ ಬಾವುಟ (ಸಂಛನ್ನವಂದನಮಾಳಾಲಲಿತ ಅಂಶುಕಧ್ವಜವಿಳಾಸಾಕೀರ್ಣಮಮಂ ಮೆಚ್ಚಿ: **ಆದಿಪು,** ೧೪. ೧೪೯)

ಅಂಶುಮಾಳಿ – [ನಾ] ಕಿರಣಗಳ ಮಾಲೆಯುಳ್ಳವನು, ಸೂರ್ಯ (ಅವರ್ಗೆ ಪುಟ್ಟಿದ ಮಗಂ ಉಗ್ರಪ್ರತಾಪ ವಿಜಿತಾಂಶುಮಾಳಿ ಮಣಿಮಾಳಿಯೆಂಬೊಂ: **ಆದಿಪು,** ೨. ೧೪ ವ)

ಅಂಸ – [ನಾ] [ಆನೆಯ] ಹೆಗಲು (ಕಂಸಾರಿಸಖಂ ಪರಿಧ್ವಂಸಿತ ರಿಪುನೃಪಸಮೂಹಂ ಒಡ್ಡಿದನಾಗಳ್ ಹಂಸವ್ಯೂಹಮಂ ಉತ್ತುಂಗಾಂಸಂ ತಾಂ ವಿಬುಧವನಜವನಕಳಹಂಸಂ: **ಪಂಪಭಾ,** ೧. ೧೧೦)

ಅಂಹೋದೂರ – [ನಾ] ಪಾಪದಿಂದ ದೂರವಾದುದು (ಚಾರು ವಿವಿಧಾಗ್ನಿಕಾರ್ಯ ಮಹಾದ್ವಿಜನ್ಮಘೋಷದಿಂ ಅಂಹೋದೂರಮುಮಂ ಅವನಿತಳಾಳಂಕಾರಂ ಸಂಸಾರಸಾರಂ ಗಂಗಾದ್ವಾರಂ: **ಪಂಪಭಾ,** ೪. ೧೫)

ಅಃ – [ಅ] [ಕತ್ತರಿಸಿ ಕೊಡುವಾಗ, ನೋವಿನಿಂದ] ಅಯ್ಯೋ ಎಂಬ ಉದ್ಗಾರ (ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊದನೀವೆನೆಂದನೆ ನೊಂದು ಅಃ ಎಂದನೆ ಸೆರಗಿಲ್ಲದೆ ಪಿಡಿಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ: **ಪಂಪಭಾ,** ೧. ೧೦೨)

ಅಕಳಂಕರಾಮ – [ನಾ] ಅರಿಕೇಸರಿಯ ಬಿರುದು, ಅರ್ಜುನ (ಚತುರಂಗಮೆಯ್ದೆ ಕೀಲಿಸೆ ಪಡೆ ಚಿತ್ರದೊಂದು ಪಡೆಯಂತೆವೊಲಾಯ್ತು ಅಕಳಂಕರಾಮನಿಂ: **ಪಂಪಭಾ,** ೧೧. ೧೩೫)

ಅಕಾಂಡತಾಂಡವ – [ನಾ] ಅಕಾಲದ ನರ್ತನ, ಹೊತ್ತಲ್ಲದ ಹೊತ್ತಿನ ಕುಣಿತ (ಅಕಾಂಡತಾಂಡವಾರಂಭಶೌಂಡ ಶಿಖಂಡಿ ಮಂಡಳಮುಮಂ: **ಆದಿಪು,** ೪. ೫೪ ವ)

ಅಕಾಂಡಪ್ರಳಯ – [ನಾ] ಅಕಾಲದಲ್ಲುಂಟಾದ ಪ್ರಳಯ (ಸಮುದ್ಯತ್ ರಜತಗಿರಿ ತಟ ಸ್ಪಷ್ಟ ಸಂಶ್ಲಿಷ್ಟ ಮೌರ್ವೀನಿನದಂ ಪರ್ವಿತ್ತು ಅಕಾಂಡಪ್ರಳಯ ಘನಘಟಾಟೋಪ ಗಂಭೀರನಾದಂ: **ಪಂಪಭಾ,** ೧೨. ೧೩೭)

ಅಕಾರಾದಿ ಹಕಾರಾಂತ – [ಗು] ಸಂಸ್ಕೃತ ವರ್ಣಮಾಲೆಯ ಮೊದಲಕ್ಷರವಾದ ಅ ಇಂದ ಕೊನೆಯದಾದ ಹವರೆಗೆ [ಕನ್ನಡದಲ್ಲಾದರೆ ಇದು ಅಕಾರಾದಿಳಕಾರಾಂತ] (ಅಂತಕಾರಾದಿ ಹಕಾರಾಂತಸ್ವರವ್ಯಂಜನಭೇದಭಿನ್ನ ಶುದ್ಧಾಕ್ಷರಂಗಳುಮಂ ಆಯೋಗವಾಹಕಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಹ್ಮಿಗೆ ದಕ್ಷಿಣಹಸ್ತದೊಳ್ ಉಪದೇಶಂಗೆಯ್ದು: **ಆದಿಪು,** ೮. ೫೯ ವ)

ಅಕಾಲಕಾಲ – [ನಾ] ಅಕಾಲಪ್ರಳಯ (ಪ್ರಕುಪಿತಮೃಗಪತಿಶಿಶುಸನ್ನಿಕಾಶರ್ ಅತಿ ವಿಕಟಭ್ರೂಭಂಗರ್ ನಕುಲಸಹದೇವರ್ ಇರ್ವರುಂ ಅಕಾಲಕಾಲಾಗ್ನಿರೂಪಮಂ ಕೆಯ್ಕೊಂಡರ್: **ಪಂಪಭಾ,** ೭. ೮)

ಅಕಾಲಚಕ್ರ – [ನಾ] ಅಪಮೃತ್ಯು (ಆವಂಗಕಾಲಚಕ್ರಮನೋವದೆ ಮಾಡಲ್ಕೆ ಚಕ್ರಮಿದು ಬಗೆದುದೊ: **ಆದಿಪು,** ೧೪. ೫)

ಅಕುಲೀನ – [ನಾ] ಸದ್ವಂಶದಲ್ಲಿ ಹುಟ್ಟದವನು (ಕರಿಪತಿಯನೇಜೆ ಕೋಡಗಮಿರೆ ಕಂಡುದಜೆಂದಂ

ಆದಿಭೂಪರ್ ಕಿಡೆ ಬೇಡರುಂ ಅಕುಲೀನರುಂ ಅತಿದುಶ್ಚರಿತ್ರರುಂ ಭೂಪರಪ್ಪರ್: **ಆದಿಪು,** ೧೫. ३೭)

ಅಕೃತ್ಯ – **[ನಾ]** ಕೃತಜ್ಞತೆಯಿಲ್ಲದವನು (ದಂಡಮಂ ನಿನಗೆ ಮಾಡಿದ ಅಕೃತ್ಯರಂ ಅಂತು ಮಾಣ್ಬುದೇ ಬಗೆ: **ಪಂಪಭಾ,** ೮. ೮೮)

ಅಕೃಷ್ಟಪಚ್ಯ – **[ಗು]** ಬೇಸಾಯವಿಲ್ಲದೆ ಬೆಳೆಯುವ (ಕಲ್ಪವೃಕ್ಷಪರಿಕ್ಷಯದೊಳ್ ಪ್ರಜಾಜೀವನೋಪಾಯ ಹೇತುಗಳ್ ಅಕೃಷ್ಟಪಚ್ಯಂಗಳಾಗಿ: **ಆದಿಪು,** ೬. ೭೨ ವ)

ಅಕ್ಕಟ – **[ಅ]** ವಿಷಾದಸೂಚಕ ಉದ್ಗಾರ (ಅರಗಿನ ಮನೆಯೊಳ್ ಪಾಂಡವರುರುದಟ್ಟಿದರಕ್ಕಟಯ್ಯೋ: **ಪಂಪಭಾ,** ೬. ೭)

ಅಕ್ಕರ – **[ನಾ]** [ಅಕ್ಷರ] ವಿದ್ಯೆ (ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನಿಂಪುಗಳ್ಗಾಗರಮಾದ ಮಾನಸರೆ ಮಾನಸರ್: **ಪಂಪಭಾ,** ೨. ೨೯); **[ನಾ]** ಅಕ್ಷರ, ಲಿಪಿರೂಪದ ವರ್ಣ (ಮೆಯ್ಯೊಳ್ ಅತ್ತಂ ಇತ್ತಂ ತೆಱಿದಿರ್ದ ಪುಣ್ಗಳ್ ಎಸೆವ ಅಕ್ಕರದಂತಿರೆ ನೋಡಿ ಕಲ್ಲಿಂ ಎಂಬಂತೆವೊಲಿರ್ದಂ: **ಪಂಪಭಾ,** ೧೧. ೪೬)

ಅಕ್ಕರಗೊಟ್ಟಿ – **[ನಾ]** ವಿದ್ವಾಂಸರ ಮೇಳ (ಅಕ್ಕರಗೊಟ್ಟಿಯುಂ ಚದುರರೊಳ್ವಾತುಂ: **ಪಂಪಭಾ,** ೪. ३೧)

ಅಕ್ಕಿ – **[ನಾ]** ಅಕ್ಷತೆಕಾಳು (ತಳಿರ್ಗಳ ತೊಂಗಲಿಂದಂ ಅಲರೋಳಿಗಳಲ್ಲುಗುವಂತೆ ಕೆಂದಳಂಗಳಿಂ ಉದಿರ್ವ ಅಕ್ಕಿಗಳ್: **ಆದಿಪು,** ೪. ೫೯); **[ನಾ]** ಬತ್ತದೊಳಗಿನ ಬೆಳ್ಳನೆ ಕಾಳು (ನಮಗಕ್ಕಿಗೊಟ್ಟು ಮಡಗೂಟುಣ್ಬಂದಮಂ ಪೋಲದೇ: **ಆದಿಪು,** ೧೪. ३೨)

ಅಕ್ಕುಂ – **[ಕ್ರಿ]** [√ಆಗು] ಆಗುತ್ತದೆ (ಘೋರತಪೋವೃತ್ತಿಯನಾಂತ ಪೆಂಪು ಅತಿಬಳಂಗಕ್ಕುಂ ಪೆಱರ್ಗಕ್ಕುಮೇ: **ಆದಿಪು,** ೧. ೮೧)

ಅಕ್ಕೆ – **[ಕ್ರಿ]** ಆಗಲಿ (ಸುರನದಿಯ ನೀರೊಳ್ ಮಿಂದು ಇನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆ ಎಂದಾಹ್ವಾನಂಗೆಯ್ಯಲೊಡಂ: **ಪಂಪಭಾ,** ೧. ೯೧)

ಅಕ್ಕೆಮ – ಆಯ್ತಲ್ಲವೇ (ಚಕ್ರಂ ಪುಟ್ಟಿದೊಡೀಗಳ್ ಚಕ್ರೇಶ್ವರನೆಂಬ ಪೆಸರುಮಾಯ್ತಕ್ಕೆಮ ತಾಂ ಚಕ್ರೇಶನಾದೊಡಂ ತನ್ನಾಕ್ರಮಣಮಂ ಎನ್ನೊಳೇಕೆ ಕೆಮ್ಮನೆ ತೋರ್ಪಂ: **ಆದಿಪು,** ೧೪. ೭೯)

ಅಕ್ರಮ – **[ನಾ]** ಕ್ರಮಹೀನತೆ (ಬರಲ್ಕೆವೇಟ್ಟುದನಟೆದೆಂ ವಿಕ್ರಮಮನುಟಿದೆಂ ಎನತೊಂದು ಅಕ್ರಮಮಂ ಸೈರಿಸೊಂದು ಸೂಟ್ ಚಕ್ರಧರಾ: **ಆದಿಪು,** ೧೨. ೧೧३)

ಅಕ್ಷಪಾತ – **[ನಾ]** ಕಣ್ಣ ನೋಟ (ಜಳಧರಸಮಯನಿಶಾಸಂಚಲಿತ ವಿದ್ಯುತ್ ಪಿಂಗಳಾಕ್ಷಪಾತಂಗಳಿಂ ದೆಸೆಗಳಂ ನುಂಗುವಂತೆ ಮುಳಿದು ನೋಡಿ: **ಪಂಪಭಾ,** ೧३. ೭೫ ವ)

ಅಕ್ಷಕ್ರೀಡೆ – **[ನಾ]** ಪಗಡೆಯಾಟ (ತನಗೆ ಸಾವಂ ಸಮಕಟ್ಟುವಂತೆ ಪಿಂಗಾಕ್ಷಂ ಅಕ್ಷಕ್ರೀಡೆಯಂ ಶಕುನಿಯೊಳ್ ಸಮಕಟ್ಟಿ: **ಪಂಪಭಾ,** ೬. ೬೯ ವ)

ಅಕ್ಷಮಾಲಿಕೆ – **[ನಾ]** ಜಪಸರ (ಸರಿಗೆಯೊಳ್ ಸಮೆದ ಅಕ್ಷಮಾಲಿಕೆ ಪೊನ್ನ ಮುಂಜಿ ತೊಳಪ್ಪ ಕಪ್ಪುರದ ಭಸ್ಮರಜಃ ತ್ರಿಪುಂಡ್ರಕಮೊಪ್ಪೆ: **ಪಂಪಭಾ,** ೬. ೮)

ಅಕ್ಷಯ ತೃತೀಯೆ – **[ನಾ]** [ಜೈನ] ಅಕ್ಕ ತದಿಗೆ, ಶ್ರೇಯಾಂಸನು ಆದಿಜಿನನಿಗೆ ಕಬ್ಬಿನ ಹಾಲ ಭಿಕ್ಷೆ ನೀಡಿದ ದಿನಕ್ಕೆ ಬಂದ ಹೆಸರು (ಅಕ್ಷಯದಾನಂ ನಿಮಗಕ್ಕಕ್ಷುಣ್ಣಮಿದೆಂದು ಪರಮ ಮುನಿ ಪರಸೆ ಬೞಿಕ್ಕಕ್ಷಯತೃತೀಯೆಯಿಂದಖಿಲಕ್ಷಿತಿಗಂ ನೆಗೞ್ದುದಲ್ತೆ ತತ್ಪುಣ್ಯದಿನಂ: **ಆದಿಪು,** ೧೦. ೬)

ಅಕ್ಷಯ ದಾನ – **[ನಾ]** [ಜೈನ] ಭಿಕ್ಷೆಯಿಟ್ಟವರಿಗೆ ಯತಿಗಳು ಮಾಡುವ ಆಶೀರ್ವಾದ (ಅಕ್ಷಯದಾನಂ ನಿಮಗಕ್ಕೆ ಅಕ್ಷುಣ್ಣಂ ಇದೆಂದು ಪರಮದಾನಿ ಪರಸೆ: **ಆದಿಪು,** ೧೦. ೬)

ಅಕ್ಷರ – **[ಕ್ರಿವಿ]** ಮಾತಿಲ್ಲದೆ (ದಕ್ಷಿಣಕಟಮನೆ ಸಿವುಱುವ ದಕ್ಷಿಣರದನದೊಳೆ ಹಸ್ತಮಂ ಪೇಱುವ ಚೆಲ್ವು ಈಕ್ಷಣಹರಂ ಎನೆ ಜಯಮಂ ಅಕ್ಷರಮಱಿಪಿದುದು ಭರತರಾಜಮದೇಭಂ: **ಆದಿಪು,** ೧೨. ೫೯)

ಅಕ್ಷಸೂತ್ರ – **[ನಾ]** ಜಪಸರ (ಪರಶುಫಳ ಅಕ್ಷಸೂತ್ರ ವರದೋಚಿತಚಿಹ್ನ ಚತುರ್ಭುಜಂ ಮನೋಹರ ವೃಷಲಾಂಛನಂ: **ಆದಿಪು,** ೧. ೮)

ಅಕ್ಷಿನಿಮೇಷ – **[ಕ್ರಿ]** ಕಣ್ಣ ರೆಪ್ಪೆ ಮಿಟುಕಿಸುವುದು (ತಪ್ತತಪನೀಯಚ್ಛಾಯನುಂ ಸಪ್ತಹಸ್ತೋಚ್ಛ್ರಯನುಂ ನಿದ್ರಾಲಸ ಅಕ್ಷಿನಿರ್ಮೇಷ ಜರಾ ಶೋಕ ವಿಷಾದ ವಿರಹಿತನುಂ: **ಆದಿಪು,** ೬. ೬೯ ವ)

ಅಕ್ಷಿಪಕ್ಷ್ಮ – **[ನಾ]** ಕಣ್ಣ ರೆಪ್ಪೆ (ನಡೆ ನೋಟ್ಟವರ್ಗೆ ಅಕ್ಷಿಪಕ್ಷ್ಮವಿಕ್ಷೇಪಣಮೊಂದೆ ಮಾಡುವುದು ಅವಳ್ ಮನುಜಾಂಗನೆಯೆಂಬ ಭೇದಮಂ: **ಆದಿಪು,** ३. ೨೦)

ಅಕ್ಷಿವಿಕ್ಷೇಪ – **[ನಾ]** ಕಣ್ಣ ನೋಟ (ಪೊಳೆಯುತ್ತಿರ್ಪ ಅಕ್ಷಿವಿಕ್ಷೇಪದ ಪೊಳಪುಗಳಿಂದ ಆನನಶ್ರೀವಿಲಾಸಂಗಳಿಂ ಅಂಗೋಪಾಂಗದೊಳ್ ಸಂಗಳಿಸುವ ಪಲವುಂ ಭಂಗಿಯಿಂ: **ಆದಿಪು,** ೧೧. ೧೫೯)

ಅಕ್ಷಿಪಕ್ಷ್ಮವಿಕ್ಷೇಪಣ – **[ನಾ]** ಕಣ್ಣ ರೆಪ್ಪೆ ಮಿಟುಕಿಸುವುದು (ನೋಟ್ಟವರ್ಗೆ ಅಕ್ಷಿಪಕ್ಷ್ಮವಿಕ್ಷೇಪಣಮೊಂದೆ ಮಾಡುವುದವಳ್ ಮನುಜಾಂಗಾಂಗನೆಯೆಂಬ ಭೇದಮಂ: **ಆದಿಪು,** ३. ೨೦)

ಅಕ್ಷುಣ್ಣ – **[ಗು]** ಕೊರತೆಯಿಲ್ಲದೆ, ಕಡಿಮೆಯಿಲ್ಲದ (ಅಕ್ಷಯದಾನಂ ನಿಮಗಕ್ಕಕ್ಷುಣ್ಣಮಿದೆಂದು ಪರಮ ಮುನಿ ಪರಸೆ ಬೞಿಕ್ಕಕ್ಷಯತೃತೀಯೆಯಿಂದಖಿಲ ಕ್ಷಿತಿಗಂ ನೆಗೞ್ದುದಲ್ತೆ ತತ್ಪುಣ್ಯದಿನಂ: **ಆದಿಪು,** ೧೦. ೬)

ಅಕ್ಷೂಣ – **[ಗು]** ಕಡಿಮೆಯಿಲ್ಲದ, ಬಲಿಷ್ಠ (ಇಳಾಭಾರಕ್ಷಮಾಕ್ಷೂಣನಂ ಅಂತು ಸರ್ವಲಕ್ಷಣ ಸಂಪೂರ್ಣನಪ್ಪ ಮಗನನಮೋಘಂ ಪಡೆವೆಂ: **ಪಂಪಭಾ,** ೧. ೧३೪ ವ)

ಅಕ್ಷೋಹಿಣಿ – **[ನಾ]** ಅಕ್ಷೌಹಿಣಿ; ೨೧೮೭೦ ಆನೆ, ೨೧೮೭೦ ರಥ, ೬೫೬೧೦ ಕುದುರೆ ಮತ್ತು ೧೦೯३೫೦ ಪದಾತಿಯಿರುವ ಸೈನ್ಯ; **ಪಂಪಭಾರತ** ದಲ್ಲಿ ಹೇಳಿರುವ ಸಂಖ್ಯೆ ಹೀಗಿದೆ: ೯೦೦೦ ಆನೆ, ೯೦೦೦೦೦ ರಥ, ೯೦೦೦೦೦೦೦ ಕುದುರೆ ಮತ್ತು ೯೦೦೦೦೦೦೦೦೦ ಕಾಲಾಳುಗಳ ಸೈನ್ಯ (ಕರಿಗಳ್ .. .. ಒಂಬತ್ತು ಸಾಸಿರಂ ಅಂತೊಂದು ಗಜಕ್ಕೆ ನೂಱು ರಥಂ ಅಂತಾ ಸ್ಯಂದನಕ್ಕೊಂದಱೊಳ್ ತುರಗಂ ನೂಱು ಅನಿತುಂ

ತುರಂಗದಱಿಂ ಒಂದೊಂದರ್ಕೆ ನೂಱುಆಳ್ ತಗುಳ್ದಿರೆ ಬಲ್ಲರ್ ನಡೆ ನೋಡಿ ಕೂಡೆ ಪಡೆದತ್ತು ಅಕ್ಷೋಹಿಣೀಸಂಖ್ಯೆಯಂ: **ಪಂಪಭಾ,** ೯. ೯೫)

ಅಕ್ಷೋಹಿಣಿಪತಿ – **[ನಾ]** ಒಂದೊಂದು ಅಕ್ಷೋಹಿಣಿಗಿದ್ದ ನಾಯಕ: ಕೌರವರ ಹನ್ನೊಂದು ಅಕ್ಷೋಹಿಣಿಯ ನಾಯಕರು – ಜಯದ್ರಥ, ಜಯತ್ಸೇನ, ಸುದಕ್ಷಿಣ, ಶಲ್ಯ, ಶಕುನಿ, ಧೃಷ್ಟಕೇತು, ನೀಳ, ಭಗದತ್ತ, ಶ್ರುತಾಯುಧ, ನಿಯತಾಯುಧ, ಅಚ್ಯುತಾಯುಧ (ಪನ್ನೊಂದಕ್ಷೋಹಿಣಿಪತಿಗಳುಂ ಗಾಂಗೇಯ ದ್ರೋಣ ಅಶ್ವತ್ಥಾಮ ಕೃಪ ಕೃತವರ್ಮ ಪ್ರಭೃತಿಗಳುಂ: **ಪಂಪಭಾ,** ೧೦. ೨೭ ವ)

ಅಖಂಡ – **[ಗು]** ಸಮಗ್ರವಾದ (ಆಸೇತೋ ರಾಮಚಾಪ ಅಟನಿತಟಯುಗ ಟಂಕ ಅಂಕಿತ ಆಖಂಡಖಂಡಾತ್: **ಪಂಪಭಾ,** ೧೪. ೨೭)

ಅಖಂಡಿತಂ – **[ಗು]** ಕತ್ತರಿಸದ, ಪೂರ್ಣವಾದ (ಏನಖಂಡಿತಮೋ ಶೌರ್ಯಗುಣೋನ್ನತಿ ರಾಜರಾಜನಾ: **ಪಂಪಭಾ,** ೧೩. ೬೫)

ಅಖಂಡಿತಮತಿ – **[ನಾ]** ಮಹಾಬುದ್ಧಿವಂತೆ (ಅನ್ನೆಗಂ ಇತ್ತಲುಂ ಅಖಂಡಿತಮತಿ ಪಂಡಿತೆಯುಂ ತನ್ನ ಪೂಣ್ದು ಪೋದ ಕಜ್ಜಮಂ ಸಾಧ್ಯಂಮಾಡಿ: **ಆದಿಪು,** ೩. ೮೪ ವ)

ಅಖಲ್ಯ – **[ನಾ]** ಅಪ್ರಯೋಜಕ (ಶಲ್ಯಂ ಅಂದು ಅಖಲ್ಯನಂ ಬಗೆವವೊಲ್ ಏಳಿದಂ ಬಗೆದು ದಂತಿಯನಾಗಡೆ ತೋಱಿಕೊಟ್ಟು: **ಪಂಪಭಾ,** ೧೦ ೧೧೧)

ಅಖಿಳರ್ಧಿ – **[ನಾ]** [ಅಖಿಳ+ಋದ್ಧಿ] ಎಲ್ಲ ಋದ್ಧಿಗಳು; ತಪಸ್ಸಿನಿಂದ ಪ್ರಾಪ್ತವಾಗುವ ಬುದ್ಧಿ, ತಪ, ಔಷಧ, ರಸ, ಬಲ, ಜ್ಞಾನ ಚಾರಣ ಎಂಬ ಏಳು ಮಹಿಮೆಗಳು (ವಿಸ್ರಸ್ತಬಹಳದೋಷತ ಮಿಸ್ರರಂ ಅಖಿಳರ್ಧಿಗುಣ ವಿಭೂಷಣರಂ ಪುಣ್ಯಾಸ್ರವ ಕಾರಣರಂ ಪಿಹಿತಾಸ್ರವ ಮುನಿಪತಿಗಳಂ ಮನಂ ಬಿಡೆ ಕಂಡೆಂ **ಆದಿಪು,** ೩. ೩೬)

ಅಖಿಳಾಗಮವಿತ್ತ್ವ – **[ನಾ]** [ಜೈನ] ಎಲ್ಲ ಶಾಸ್ತ್ರಗಳ ಪರಿಣತೆ (ಮಿತನಖಕೇಶಶೋಭಿತ ತನುತ್ವಂ ಅಭುಕ್ತ್ಯುಪಸರ್ಗಭಾವಂ ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ: **ಆದಿಪು,** ೧೦. ೪೩)

ಅಗ – **[ನಾ]** ಬೆಟ್ಟ (ಪಿಡಿದ ಗದೆಗಳನಿಳಿಪಂತಾದುದು ಸುಯೋಧನ ಉಗ್ರವೃಕೋದರರ್ ಒರ್ಮೊದಲೆ ಶಿಖರಮುಳ್ಳ ಎರಡು ಅಗಮಂ: **ಪಂಪಭಾ,** ೨. ೭೨)

ಅಗಣ್ಯ – **[ಗು]** ಲೆಕ್ಕವಿಲ್ಲದಷ್ಟು (ಒಂದು ದಿವಸಂ ಉಪವಾಸಮಿರ್ದು ಅಗಣ್ಯಪುಣ್ಯತೀರ್ಥಂಗಳಂ ಮಿಂದು: **ಪಂಪಭಾ,** ೧. ೧೩೬ ವ); ಅಪಾರವಾದ (ಪಲ್ಲಂ ಸುಲಿದು ಅಗಣ್ಯಪುಣ್ಯ ತೀರ್ಥೋದಕಂಗಳಂ ಮಿಂದು ಮಂಗಳವಸದನಂಗೊಂಡು: **ಪಂಪಭಾ,** ೧೦. ೪೬ ವ)

ಅಗಪಡು – **[ಕ್ರಿ]** ಸಿಕ್ಕಿಹಾಕಿಕೊ (ನರನೊಳ್ ಮುನ್ನ ಅಗಪಟ್ಟುದೊಂದಱಿಲೊಳಾಂ ಕೈಲಾಸಶೈಳೇಶನಂ ಪಿರಿದುಂ ಭಕ್ತಿಯೊಳರ್ಚಿಸುತ್ತುಮಿರೆ: **ಪಂಪಭಾ,** ೧೧. ೯೮)

ಅಗರು – **[ನಾ]** ಸುಗಂಧ, ಸುಗಂಧದ ಮರ (ಅಗರುವ ಮೆಚ್ಚು ಅಚ್ಚ ಸಿರಿಕಂಡದೊಳಗ್ಗಲಿಸಿತ್ತು ಬಸಂತಮಾಸದೊಳ್: **ಪಂಪಭಾ,** ೫. ೩೦)

ಅಗಲ್ – **[ನಾ]** ಊಟದ ಬಟ್ಟಲು (ಲವಲವಿಕೆಯಂ ಪರಿಯಣಮಂ ಬಿತ್ತರಿಸಲುಂ ಪದ್ಮಿಕೆಯಂ ಅಗಲಂ ತಂದು ಮುಂದಿರಿಸಲುಂ: **ಆದಿಪು,** ೭. ೨೧ ವ); **[ಕ್ರಿ]** ಅಗಲವಾಗು (ಇದು ನಿನ್ನೀ ಅಗಲ್ದುರದೊಳ್ ಪೊದಳ್ದು ತನತೊಂದು ಜನ್ಮಮಂ ಸಫಳಂ ಮಾಟ್ಟುದು: **ಆದಿಪು,** ೧೨. ೧೧೯); **[ಕ್ರಿ]** ದೂರ ಹೋಗು (ದುಶ್ಶಾಸನನಂ ಕಂಡು ಆತನಂ ಸುತ್ತಿಱಿದ ಮುದುವರ್ದುಗಳುಮಂ ಅಗಲೆ ಮೆಟ್ಟಿ: **ಪಂಪಭಾ,** ೧೩. ೫೬ ವ)

ಅಗಲ – **[ನಾ]** ಒಂದು ವಸ್ತುವಿನ ಅಡ್ಡಳತೆ (ಅದರಗಲಮೊಂದು ಯೋಜನಂ: **ಆದಿಪು,** ೧೦. ೨೭)

ಅಗಲಿತು – **[ಗು]** ವಿಶಾಲ (ಅದಱೊಳಗೆ ಕಪ್ಪುರವಳುಕಿನ ಜಗಲಿ ಅಗಲತಾಗಿ ಸಮೆದು ಚಂದನದೆಳದಳಿರ್ಗಳಂ ಪಾಸಿ: **ಪಂಪಭಾ,** ೫. ೬ ವ); **[ನಾ]** ವಿಸ್ತಾರ (ಪುಸಿ ನಸುವಂಚನೆ ನೋರ್ಪು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ ಕುಸುರಿ ನುಸುಳೆಂಬ ಕೇಣದ ಕುಸುರಿಯಂ ಅಱಿದು ಇಱಿದು ಮೆಱೆದು ಉಱಿದೆ ಅರೆಬರ್: **ಪಂಪಭಾ,** ೧೦. ೮೧)

ಅಗಲುರ – **[ನಾ]** ಹರವಾದ ಎದೆ (ಮೃಗಮದದ ಪುಳಿಂಚುಗಳ್ ಪನಿತ್ತಿರಲೆಡೆಯಾದ ಅಗಲುರಮನೆನಗೆ ಪಡೆದಜಂ ಒಗಸುಮಲ್ಲು ಎಲಗೆ ನಿನ್ನನೆನಗೆಯೆ ಒಡೆದಂ: **ಪಂಪಭಾ,** ೮. ೬೭)

ಅಗಲೆ ಪೋಟ್ – **[ಕ್ರಿ]** ಅಗಲವಾಗಿ ಸೀಳು, ಹೋಳುಮಾಡು (ಕುಡಿವೆಂ ದುಶ್ಶಾಸನ ಉರಸ್ಥಳಮಂ ಅಗಲೆ ಪೋೞ್ದು ಆರ್ದು ಕೆನ್ನೆತ್ತರಂ: **ಪಂಪಭಾ,** ೭. ೧೩)

ಅಗಲೆವೋಗು – **[ಕ್ರಿ]** ಅಗಲಿಯೇ ಹೋಗು, ದೂರ ಹೋಗು (ಅಗಲೆವೋದ ಹಂಸನನಱಸಲ್ ಪದದೆಳಸುವ ಪೆಣ್ಣಂಚೆ: **ಪಂಪಭಾ,** ೫. ೫೬)

ಅಗಲೊತ್ತು – **[ಕ್ರಿ]** ಹರವಾಗಿ ಒತ್ತು (ಸುರಿಗೆಯೊಳುರಮಂ ಬಿಕ್ಕನೆ ಬಿರಿಯಿಱಿದು ಬರಿಯನಗಲೊತ್ತಿ ಮನಂ ಕೊಕ್ಕರಿಸದೆ: **ಪಂಪಭಾ,** ೧೨. ೧೫೩)

ಅಗಲ್ಕೆ – **[ನಾ]** ಅಗಲುವಿಕೆ, ವಿಯೋಗ (ಮೆಯ್ಗೊಂಡ ಒಲವಿಂದೆ ಅಗಲ್ಕೆಗೆ ಅಣಂ ಆಱದೆ ಪಕ್ಕಿಗಳೆಲ್ಲಮಂ ಮರುಳ್ಗೊಂಡವೊಲ್ ಊಳ್ದು ಕೂಡೆ ಬೆಸಗೊಂಡು ಬಟಿಲ್ದುವು ಜಕ್ಕವಕ್ಕಿಗಳ್: **ಪಂಪಭಾ,** ೪. ೪೮)

ಅಗಲ್ಚು – **[ಕ್ರಿ]** ಕಳಚು (ಪಸರಿಸೆ ಜರಾಯುಪಟಲಂ ಪಸುಗೂಸುಗಳೊಡಲೊಳ್ ಅವನಗಲ್ಚುವ ಮತಿಯಂ ವಸುಮತಿಗಱಿಪಿ: **ಆದಿಪು,** ೬. ೬೫)

ಅಗಟಿ್ – **[ನಾ]** ಕಂದಕ (ಈಂಟುಜಳಧಿಯೆನಿಪ ಅಗಟಿ ನೀಳ್ಪಿನಿಂ: **ಪಂಪಭಾ,** ೩. ೨೨)

ಅಗಾಧ – **[ಗು]** ಅಳೆಯಲಾಗದ (ಅಗಾಧವಾರಿಧಿಯೆ ಗುಣ್ಪಂ .. .. ಏಳಿದಮಾಗೆ ಬಿಸುಟಿಪ್ಪೊಡಂ ಬಿಸುಟಿಕ್ಕಿಮ ಬಿಸುಡೆಂ ಮದೀಯ ಪುರುಷವ್ರತಮೊಂದುಮನೀಗಳಂಬಿಕೇ: **ಪಂಪಭಾ,** ೧. ೮೩)

ಅಗಾಧಬೋಧನಿಳಯ – **[ನಾ]** ಆಳವಾದ ತಿಳಿವಿಗೆ ಆಕರನಾದವನು (ಜಗತ್ಸ್ವಾಮಿ ಸಂದ ಆದಿಬ್ರಹ್ಮಂ ಅಗಾಧಬೋಧನಿಳಯಂ ದುರ್ವಾರಸಂಸಾರ ವಿಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ: **ಆದಿಪು,** ೧. ೧)

ಅಗಾರಣ್ಯ – [ನಾ] ಬೆಟ್ಟಗಾಡು (ಅಲ್ಲಿಂ ಪೋಱಮಟ್ಟು ಮುನ್ನ ಧನಮಂ ಬಯ್ತಿದರ್ ಅಗಾರಣ್ಯದೊಳ್: **ಆದಿಪು,** ೫. ೪)

ಅಗಿ – [ಕ್ರಿ] ಕಟ್ಟು ಬೀಳು (ಮದುವೆಗಂ ರಾಜ್ಯದ ಪತ್ತುಗೆಗಂ ಗುರೂಪದೇಶಕ್ಕಗಿದು ಮನಂದಂದಂ: **ಆದಿಪು,** ೬. ೨); [ಕ್ರಿ] ಹೆದರು (ಕಿಡುವೊಡಲ ಕಿಡುವ ರಾಜ್ಯದ ಪಡೆಮಾತುಗೊಳಲ್ಕಮೆನ್ನ ಮೆಯ್ಯಗಿದಪುದು: **ಆದಿಪು,** ೧೪. ೧೨೭)

ಅಗುಂತಿ – [ನಾ] ಆಧಿಕ್ಯ, ಅತಿಶಯತೆ (ಆಕೆಯ ಬಗೆದ ಬಗೆಯೊಳೊಡಂಬಡುವಂತೆ ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ ಆದಿತ್ಯನ ತೇಜದಗುಂತಿಯುಮಂ: **ಪಂಪಭಾ,** ೧. ೧೩೯ ವ); [ನಾ] ಏಳಿಗೆ (ಇದಱೊಳ್ ತನ್ನಿಷ್ಟವಪ್ಪನ್ನಂ ಉತ್ತರಂ ಅಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ: **ಪಂಪಭಾ,** ೧೪. ೬೫)

ಅಗುಂದಲೆ – [ನಾ] ಅತಿಶಯ (ಮೂಲೋಕಕ್ಕೆ ಪೆಂಪಿಂದ ಅಗುಂದಲೆಯಾಗಿರ್ದುದು ದೇವದಂಪತಿರತಿಶ್ರೀಸುಂದರಂ ಮಂದರಂ: **ಆದಿಪು,** ೧. ೫೦); [ಗು] ಮೀರಿದುದು (ರಾಜ್ಯಮಂ ತೃಣದಿಂದಂ ಲಘುವಾಗೆ ಬಗೆದು ಬಗೆದರ್ ತಾಮುಂ ತಂದೆಯ ಬಗೆದುದನೆ ಎಂದೊಡೆ ಅಗುಂದಲೆ ಪೊಗಟಲ್ಕೆ ಚಕ್ರಿನಂದನರಳವಂ: **ಆದಿಪು,** ೪. ೮೮)

ಅಗುರುಲಘುತ್ವ – [ನಾ] [ಜೈನ] ಸಿದ್ಧಪರಮೇಷ್ಠಿಗಳ ಅಷ್ಟಗುಣಗಳಲ್ಲಿ ಒಂದು, [ಮನಸ್ಸು] ಹಗುರ ಅಥವಾ ಭಾರವಾಗದ ಸಮಸ್ಥಿತಿ (ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ನೆನೆಯುತ್ತುಂ: **ಆದಿಪು,** ೧೦. ೧೪ ವ)

ಅಗುರ್ಬು – [ನಾ] ಭಯಂಕರತೆ (ಮದಧಾರಾ ಜಳಾಸಾರದಿಂದುರ್ಬಿದ ಅಗುರ್ಬಂ ತಾಳ್ದಿ ನಿಂದೂರ್ಜಿತ ಜಯಗಜಮಂ ರಾಗದಿಂದೇಱಿದಂ: **ಆದಿಪು,** ೧೨. ೬೧) [ನಾ] ಅದ್ಭುತ (ಅಂತು ನೂರ್ವರೊಳ್ ಒರ್ವನ ಅಗುರ್ಬು ಪರ್ಬಿ ಪರಕಲಿಸೆ ಸಂಪೂರ್ಣ ವಯಸ್ಕನಾಗಿ ಘೃತಘಟವಿಘಟನನುಮಾಗಿ ಪುಟ್ಟುವುದುಂ: **ಪಂಪಭಾ,** ೧. ೧೩೧ ವ)

ಅಗುರ್ವಾಗು – [ಕ್ರಿ] ಭಯವನ್ನುಂಟುಮಾಡುವಂತಿರು (ತೋಳೆಂಟು ಅಗುರ್ವಾಗಿರೆ ಬಣ್ಣಂ ಪೊನ್ನ ಬಣ್ಣಕ್ಕೆಣೆಯೆನೆ: **ಆದಿಪು,** ೧. ೭)

ಅಗುರ್ವಿಸು – [ಕ್ರಿ] ಭಯಪಡಿಸು (ನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗಳ್ವಿಡಿದು ವಿಷೋರಗಪ್ರತತಿ ನೋಟಿಸ್ಪೊಡಗುರ್ವಿಸೆ ಸುಯ್ವ ಸುಯ್ಯಳಿಂ: **ಆದಿಪು,** ೧೪. ೧೪೦); [ಕ್ರಿ] ಹೆದರು (ಬೆಸಕೆಯ್ದತ್ತು ಸಮುದ್ರಮುದ್ರಿತ ಧರಾಚಕ್ರಂ ಪ್ರತಾಪಕ್ಕಗುರ್ವಿಸೆ ಗೋಟುಂಡೆಗೊಳುತ್ತುಮಿರ್ದುದು ದಿಶಾಚಕ್ರಂ: **ಪಂಪಭಾ,** ೧. ೧೧೦); [ಕ್ರಿ] ವಿಜೃಂಭಿಸು (ಸೂರ್ಯಪ್ರಭಾ ಪ್ರಸರಂಗಳ್ ಮಸುಳ್ವನ್ನೆಗಂ ಪೊಳೆವುದೊಂದಂ ಶಕ್ತಿಯಂ ಕೊಂಡಗುರ್ವಿಸಿ ಗಾಂಗೇಯಂ ಇಟ್ಟಂ: **ಪಂಪಭಾ,** ೧೦. ೧೨೩)

ಅಗುರ್ವು – [ನಾ] ಅದ್ಭುತ, ವಿಸ್ಮಯ (ವಾರಿಧಿಯೆ ಗಗನಮಂ ಮುಟ್ಟಿ ನಿಂದಂತೆ ಅಗುರ್ವಿನಿಂದಾದಂ ಚೆಲ್ವಾಯ್ತು ಚಕ್ರದ್ವಿಪಘಟೆ ನಿಶಿತಾಸ್ತ್ರಾಂಶುಜಾಳಾವಲೀಢಂ: **ಆದಿಪು,** ೧೪. ೯೭); [ನಾ] ಭಯ (ವಿಕ್ರಮದಿಂದೆ ನಿಂದಗುರ್ವೆನಲಿಱಿದಾಂತನಂ ಮೊಸಳೆಯಂ ಪಿಡಿವಂತಿರೆ ನೋರೊಳೊತ್ತಿ ಭೀಮನತಿಗರ್ವದಿಂ ಪಿಡಿಯೆ: **ಪಂಪಭಾ,** ೧. ೨೬); [ನಾ] ಆಶ್ಚರ್ಯ (ಬಿಯಂ ಆರೆರ್ದೆಗಂ ಬರೆ ಬರ್ಪ ಪಾಂಗು ಅಗುರ್ವಾಗಿರೆ ಚೆಲ್ವನಾಯ್ತು ಅರಬೊಜಂಗರ ಲೀಲೆ ಸುರೇಂದ್ರಲೀಲೆಯಿಂ; **ಪಂಪಭಾ,** ೪. ೮೭); [ನಾ] ಸಾಹಸ (ಮಹಾರಥರಾಜಿಯೊಳ್ ಅಂತಗುರ್ವಿನಚ್ಚುಡಿದಿರೆ ಕಾದಿ ಬಿಚ್ಚಳಿಸಿದರ್: **ಪಂಪಭಾ,** ೧೦. ೧೧೪); [ನಾ] ಅತಿಶಯತೆ (ಮತ್ಪ್ರತಾಪಕ್ಕಿದಱಿಂದಂ ನೋಡ ಅಗುರ್ವು ಉರ್ವಿದುದು ಇದುವೆ ಮಹಾಭಾರತಕ್ಕಾದಿಯಾಯ್ತು: **ಪಂಪಭಾ,** ೧೨. ೧೫೬); [ನಾ] ಭೀಕರತೆ (ಸುಯೋಧನನ ಸಕಲರಾಜ್ಯಶ್ರೀಯುಂ ಸಡಿಲಿಸಿದ ತೋಳನಾಗಳ್ ಸಡಿಲಿಸಲಣ್ಮಳೆ ದಲ್ ಅದಱ ಅಗುರ್ವು ಏಂ ಪಿರಿದೋ: **ಪಂಪಭಾ,** ೧೨. ೧೯೩)

ಅಗುರ್ವುಗೊಳ್ – [ಕ್ರಿ] ಹೆದರು (ಷಟ್ಖಂಡಭೂಮಂಡಳಂ ನಿಮಿರ್ದಾಜ್ಞಾಪ್ರಸರಕ್ಕಗುರ್ವುಗೊಳೆಯುಂ: **ಆದಿಪು,** ೧೫. ೪)

ಅಗುಳ್ – [ನಾ] ಅನ್ನದ ಅಗುಳು (ಕುಕ್ಕುಟಗುದಿವಲ್ಲಿ ಕೂಟುಗ್ದಿಯೆ ಮೇಗೆ ಸಿಡಿಲ್ದ ಅಗುಳಂತೆ: **ಪಂಪಭಾ,** ೧೧. ೧೫೩)

ಅಗುಟ್ – [ನಾ] [ಕುಳಿ] ಅಗೆ (ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿನೊಳ್ ಕೂಸನಿಟ್ಟೊಡೆ ರಾಗಿಸಿ ಸುತನ ಸೂತಕಮಂ ಕೊಂಡಾಡೆ ಅಗುಟ್ದಿರಲ್: **ಪಂಪಭಾ,** ೧. ೯೬ ವ ಮತ್ತು ೧. ೯೭); [ಕ್ರಿ] ತೋಡು (ಘನಾಘನನಿನಾದದಿಂ ಬೃಂಹಿತಂಗೆಯ್ವ ವಿಜಯಗಜಮಂ ನೆಲನಂ ಪೊಕ್ಕಡಂಗಿದ ಪಗೆವರಂ ಅಗುಟ್ದು ಕೊಲ್ವುದಂ ಉದಾಹರಿಸುವಂತೆ: **ಪಂಪಭಾ,** ೯. ೯೫ ವ)

ಅಗೆ – [ನಾ] ಮೊಳಕೆ, ಅಂಕುರ (ತಾರಗೆಗಳ್ ಅಗೆಗಳಂತಿರೆ ತಾರಾಪಥದೊಳ್ ನಿರಂತರಂ ತುಱುಗಿರೆ: **ಆದಿಪು,** ೬. ೫೪)

ಅಗೇಂದ್ರ – [ನಾ] ಪರ್ವತಶ್ರೇಷ್ಠ (ನೀಳ್ಪಿಂ ಪರ್ವಿ ಪೂರ್ವಾಪರ ಜಳಧಿಗಳಂ ಮುಟ್ಟಿ ನಿಂದತ್ತಗೇಂದ್ರಂ: **ಆದಿಪು,** ೯. ೧೧೫)

ಅಗ್ಗ – [ನಾ] ಶ್ರೇಷ್ಠ (ನಿಮ್ಮೊಳಗ್ಗದ ಪರಶುಧರಂ ಪೊಣರ್ದು ತಾನದಂದೇನಾದಂ: **ಪಂಪಭಾ,** ೧೦. ೭)

ಅಗ್ಗಲ – [ಗು] ಅಧಿಕ, ಅತಿಶಯ (ಮೈಮೆಯ ಮಾನಸಿಕ್ಕೆ ಅಗ್ಗಲದ ಪೊಗಟ್ತೆ ತನ್ನದೆನೆ ಪೆಂಪು ಮನೋಹರಿಗಲ್ಲದಕ್ಕುಮೇ: **ಆದಿಪು,** ೧. ೭೨)

ಅಗ್ಗಲಿಸು – [ಕ್ರಿ] ಅಧಿಕವಾಗು (ತನಗೆ ಅಗ್ಗಲಿಸಿದಲಂಪಂ ಕುಡೆ ಪೊಸತಲರ್ದಂಕುರಿಸಿರ್ದ ಕಲ್ಪಲತೆಯನೆ ಪೋಲ್ತಳ್: **ಆದಿಪು,** ೭. ೪೭); [ಕ್ರಿ] ಹೆಚ್ಚಾಗು (ಭೂರುಹಂ ಕುಸುಮಶೋಭೆಯೊಳ್ ಅಗ್ಗಲಿಸಿರ್ದವೊಲ್ ಮನೋಹರಮೆನಿಸಿತ್ತು: **ಆದಿಪು,** ೮. ೪); [ಕ್ರಿ] ವ್ಯಾಪಿಸು (ಅಗ್ಗಳದ ವೈಷ್ಣವಮೋಹಮೆ ನಿನ್ನೊಳ್ ಅಗ್ಗಲಿಸಿದುದಕ್ಕುಂ: **ಪಂಪಭಾ,** ೯. ೪೪); [ಕ್ರಿ] ಪ್ರಬಲವಾಗು (ಕುಲಜರಂ ಉದ್ಧತರಂ ಭುಜಬಲಯುತರಂ ಹಿತರಂ ಈ ಸಭಾಮಧ್ಯದೊಳ್ ಅಗ್ಗಲಿಸಿದ ಮದದಿಂ ನಾಲಗೆ ಕುಲಮಂ ತುಬ್ಬುವವೊಲ್ ಉಱದೆ ನೀಂ ಕೆಡೆನುಡಿವೈ: **ಪಂಪಭಾ,** ೧೦. ೨೦);

ಅಗ್ಗಳಂ – [ಗು] ಮಿಗಿಲು (ಎಮಗಂ ಎಮಗಪ್ಪ ಭಾಗದ ಸಮಕಟ್ಟಂ ದೇವ ಕುಡಲೆವೇೞ್ಪುದು ನಂಟರ್ ನಿಮಗೆ ಎಮ್ಮಿಂದ ಅಗ್ಗಳಮಾರ್: **ಆದಿಪು,** ೯. ೯೯); **[ನಾ]** ಮೀರಿದವನು (ಭುವನಗುರುಗೆಱಗಿದರಂತೆ ಅನಿಬರುಂ ಅವಱಿಂದ ಅಗ್ಗಳಮೆನೆ ನೆಗೞ್ದಾ ಬಾಹುಬಲಿಯಂ ಎಂತೆಱಗಿಸುವೆಂ: **ಆದಿಪು,** ೧೪. ೪೧); **[ನಾ]** ಹೆಚ್ಚು (ಒಡ್ಡಮಂ ಪೇೞೆಂ ಎನೆ ಪೊೞ್ತುಪೋಗಿಂಗಂ ಅಟ್ಟೆಗಂ ಆಡುವ ತಮ್ಮುಕ್ಕಿರ್ವರ ಪಲಗೆಗೆ ಸಾಯಿರ ಗದ್ಯಾಣದ ಪೊನ್ನೆ ಸಾಲ್ಗುಂ ಅಗ್ಗಳಂ ಬೇಡ: **ಪಂಪಭಾ,** ೬. ೭೧ ವ)

ಅಗ್ಗಳಗಣ್ – [ನಾ] ಹೆಚ್ಚಾದ [ಮೂರನೆಯ] ಕಣ್ಣು, ವಿಶೇಷ ದೃಷ್ಟಿ (ತೋಱಿದನೆಱಕದೆ ಹರಿಗಂಗೆ ರುದ್ರಂ ಅಗ್ಗಳಗಣ್ಣಂ: **ಪಂಪಭಾ,** ೮. ೨೩)

ಅಗ್ಗಳಿಕೆ – [ನಾ] ಅತಿಶಯ, ಮಹಿಮೆ (ಆ ಸಂಖ್ಯೆಯೊಳ್ ತಾತ್ಪರ್ಯಗೆಯ್ವನ್ನವೆಂಬ ಅಗ್ಗಳಿಕೆಯಿಂ ಎಸೆದತ್ತು ಏಕರಜ್ಜುಪ್ರಮಾಣಂ ತಿರ್ಯಗ್ಲೋಕಂ: **ಆದಿಪು,** ೧. ೪೮)

ಅಗ್ಗಳಿಕ್ಕೆ – [ನಾ] ಅಗ್ಗಳಿಕೆ (ನಿಜಾನುಜರ್ ನೆರಪಿದೊಂದೈಶ್ವರ್ಯದಿಂ ರಾಜಸೂಯಮಂ ಇಂದು ಅಗ್ಗಳಿಕ್ಕೆಯ ಮಖಂ ತಾನೆಂಬಿನಂ: **ಪಂಪಭಾ,** ೬. ೬೬)

ಅಗ್ಗಳಿಸು – [ಕ್ರಿ] ಹರಡಿಕೊ (ಮಲರ್ದಲರ್ದ ನಾಗಸಂಪಗೆಯಲರ್ಗಳೊಳ್ ಅಗ್ಗಳಿಸಿ ಬಿರಿವ ಪೊಂಬಾೞೆಯ ಪೊಸಗಂಪಿನೊಳ್: **ಆದಿಪು,** ೧. ೬೮); **[ಕ್ರಿ]** ಮೀರಿಸು (ಅಳವಿನೊಳ್ ಎನ್ನುಮಂ ಇನಿಸಗ್ಗಳಿಸಿದ ಹರಿಗನೊಳ್ ಇದಿರ್ಚಿ ಕರ್ಣಂ ಗೆಲಲ್ ಉಮ್ಮಳಿಪಂ ಗಡ: **ಪಂಪಭಾ,** ೧೨. ೧೪೪); **[ಕ್ರಿ]** ಹೆಚ್ಚಾಗು (ಬೆಳಗುವ ಸೊಡರ್ಗಳ ಬೆಳಗು ಅಗ್ಗಳಿಸುವವೋಲ್ ಪೋಪ ಪೊೞ್ತಱೊಳ್ ತೇಜಂ ಪಜ್ಜಳಿಸೆ: **ಪಂಪಭಾ,** ೧೨. ೨೧೦)

ಅಗ್ನಿ – [ನಾ] ಬೆಂಕಿ (ಶಸ್ತ್ರ ಪಾಷಾಣ ಆತಪ ವರ್ಷ ವಿಷ ಅಗ್ನಿ ಕಾಷ್ಠ ಕಂಟಕ ತ್ರಿದೋಷಸಂಭವಾಮಯ ಜರಾದಿ ಬಾಧಾವಿದೂರನುಂ: **ಆದಿಪು,** ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]

ಅಗ್ನಿಕಾರ್ಯ – [ನಾ] ಹೋಮಹವನಗಳು (ಚಾರು ವಿವಿಧಾಗ್ನಿಕಾರ್ಯ ಮಹಾದ್ವಿಜನ್ಮಘೋಷದಿಂ ಅಂಹೋದೂರಮುಮಂ ಅವನಿತಳಾಳಂಕಾರಂ ಸಂಸಾರಸಾರಂ ಗಂಗಾದ್ವಾರಂ: **ಪಂಪಭಾ,** ೪. ೧೫)

ಅಗ್ನಿತ್ರಯ – [ನಾ] ಮೂರು ಬಗೆಯ ಬೆಂಕಿಗಳು: ಆಹವನೀಯ, ಗಾರ್ಹಪತ್ಯ ಮತ್ತು ದಕ್ಷಿಣ (ಶರೀರ ಸಂಸ್ಕಾರಾದಿ ಗಾರ್ಹಪತ್ಯ ದಕ್ಷಿಣಾಗ್ನ್ಯಾಹವನೀಯಮೆಂಬ ಪೆಸರಂ ಪಡೆದ ಅಗ್ನಿತ್ರಯಂಗಳೊಳ್: **ಆದಿಪು,** ೧೫. ೭೬ ವ)

ಅಗ್ನಿಪರಿಚಾರಕ – [ನಾ] ಅಗ್ನಿಯ ಸೇವೆ ಮಾಡುವ ಒಬ್ಬ ಪುರೋಹಿತ (ವ್ಯಾಸ ಕಶ್ಯಪ ವಿಶ್ವಾಮಿತ್ರ ಭರದ್ವಾಜ ಬ್ರಹ್ಮ ಅಧ್ವರ್ಯು ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ: **ಪಂಪಭಾ,** ೬. ೩೩ ವ)

ಅಗ್ನಿಮುಖಾಸ್ತ್ರ – [ನಾ] ಬೆಂಕಿಯುಗುಳುವ ಬಾಣ (ತಮದೊಡ್ಡಿರ್ಪವೊಲಿರ್ಪ ಕಾರ್ಮುಗಿಲ ತಳ್ತೊಡ್ಡೆಲ್ಲಮಂ ಮುನ್ನಂ ಅಗ್ನಿಮುಖಾಸ್ತ್ರಂಗಳಿನೆಚ್ಚು ತೂಳ್ದು: **ಆದಿಪು,** ೧೩. ೬೧)

ಅಗ್ನಿಶರೀರೆ – [ನಾ] ಅಗ್ನಿಪ್ರವೇಶ ಮಾಡಿ ಕಿಚ್ಚಿಗರ್ಪಿಸಿದ ದೇಹವುಳ್ಳವಳು (ಅಂಬೆಯೆಂಬ ದಂಡುರುಂಬೆ ನಿನಗೆ ವಧಾರ್ಥಮಾಗಿ ಪುಟ್ಟುವೆನಕ್ಕೆಂದು ಕೋಪಾಗ್ನಿಯಿಂದಂ ಅಗ್ನಿಶರೀರೆಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟಿ: **ಪಂಪಭಾ,** ೧. ೮೦ ವ)

ಅಗ್ನಿಸಂಧಾನ – [ನಾ] ಬೆಂಕಿಯನ್ನು ಹೊತ್ತಿಸುವುದು (ಮೂಱುಂ ಕೊಂಡಂಗಳೊಳ್ ಉತ್ತರವೇದಿಯೊಳಗೆ ಅಗ್ನಿಸಂಧಾನಂಗೆಯ್ದು: **ಪಂಪಭಾ,** ೬. ೩೩ ವ)

ಅಗ್ನಿಸೂಕ್ತ – [ನಾ] ಅಗ್ನಿಯ ಸ್ತೋತ್ರ (ಮಂದಪಾಲನೆಂಬ ಮುನಿಗಂ ಒಂದು ಲಾವಗೆಗಂ ಪುಟ್ಟಿದ ನಾಲ್ಕುಂ ಲಾವಗೆಗಳ್ ಅಗ್ನಿಸೂಕ್ತಂಗಳಂ ಓದುತ್ತುಂ ಅದಿರದೆ ಇದಿರಂ ಬರೆ: **ಪಂಪಭಾ,** ೫. ೧೦೦ ವ)

ಅಗ್ನಿಹೋತ್ರಶಾಲೆ – [ನಾ] ಹೋಮಾಗ್ನಿಯಿರುವ ಸ್ಥಳ (ಅಗ್ನಿಹೋತ್ರಶಾಲೆಗೆ ವಂದು ದರ್ಭಶಯನದೊಳ್ ಒಱಗಿ ಬೆಳಗಪ್ಪ ಜಾವದೊಳ್: **ಪಂಪಭಾ,** ೧೩. ೩೨ ವ)

ಅಗ್ನೀಧ್ರ – [ನಾ] ಯಜ್ಞಾಗ್ನಿಯನ್ನು ಪ್ರಜ್ವಲನ ಮಾಡುವವನು (ವ್ಯಾಸ ಕಶ್ಯಪ ವಿಶ್ವಾಮಿತ್ರ ಭರದ್ವಾಜ ಬ್ರಹ್ಮ ಅಧ್ವರ್ಯು ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ: **ಪಂಪಭಾ,** ೬. ೩೩ ವ)

ಅಗ್ರಗಣ್ಯ – [ನಾ] ಶ್ರೇಷ್ಠ (ಅಂತು ಧನುರ್ಧರಾಗ್ರಗಣ್ಯನಾಗಿರ್ದೊಂದು ದಿವಸಂ ತನ್ನ ತೊಡೆಯ ಮೇಲೆ ತಲೆಯನಿಟ್ಟು ಪರಶುರಾಮಂ ಮಱೆದೊಱಗಿದಾ ಪ್ರಸ್ತಾವದೊಳ್: **ಪಂಪಭಾ,** ೧. ೧೦೪ ವ)

ಅಗ್ರಜಾತ – [ನಾ] ಅಣ್ಣ (ನೆಗೞ್ದಭಿಮನ್ಯುವಂ ಚಲದಿಂ ಅಂದಿಱಿದು ಇಂದು ನಿಜಾಗ್ರಜಾತನಂ ಸುಗಿವಿನಂ ಎಚ್ಚು ಬೀರದೊಳೆ ಬೀಗುವ ಸೂತಸುತಂಗೆ: **ಪಂಪಭಾ,** ೧೨. ೨೦೮)

ಅಗ್ರತನೂಭವ – [ನಾ] ಹಿರಿಯ ಮಗ (ನಿಜಾನ್ವಯೋದ್ಧರಣ ಸಮರ್ಥನಪ್ಪ ಅಗ್ರತನೂಭವಂಗೆ ಆತ್ಮೀಯ ಧರ್ಮ ಧನ ಬಂಧುಗಳಂ ಸಮರ್ಪಿಪ ಸಕಳದತ್ತಿಯುಂ: **ಆದಿಪು,** ೧೫. ೧೩ ವ)

ಅಗ್ರನಿರ್ವೃತಿ – [ನಾ] ಜೈನ] ಒಂದು ಗರ್ಭಾನ್ವಯಕ್ರಿಯೆ (ಆರ್ಹಂತ್ಯ ವಿಹಾರ ಯೋಗತ್ಯಾಗ ಅಗ್ರನಿರ್ವೃತಿಯೆಂಬ ಅಯ್ವತ್ತಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಅಗ್ರಪಲ್ಲವ – [ನಾ] ಆನೆಯ ಸೊಂಡಿಲ ತುದಿ (ಶಿಖರಿತರಂಗಿತ ಚತುರಂಗುಳ ಅಗ್ರಪಲ್ಲವನಿವಸನಂ: **ಆದಿಪು,** ೧೩. ೪೫. ವ)

ಅಗ್ರಪುತ್ರ – ಹಿರಿಯ ಮಗ (ತಪಕ್ಕೆ ಪೋಪ ಪದದೊಳ್ ತನ್ನಗ್ರಪುತ್ರಂ ಕ್ರಮಂಬಿಡಿದಿರ್ದಂ: **ಆದಿಪು,** ೨. ೩೭ ವ)

ಅಗ್ರಪೂಜೆ – [ನಾ] ಮೊದಲ ಗೌರವ (ಪೇೞಿಮೀ ಸಭೆಯೊಳ್ ಅಗ್ರಪೂಜೆಗಾರ್ ತಕ್ಕರ್: **ಪಂಪಭಾ,** ೬. ೪೦ ವ)

ಅಗ್ರಮಹಿಷಿ – [ನಾ] ಪಟ್ಟದ ರಾಣಿ (ತನ್ನಗ್ರಮಹಿಷಿಯ ಮನಮನಾಱೆ ನುಡಿದು ಪಂಡಿತೆಯಂ .. .. ಮನಂಗೆಲ್ವುದೆಂದು ನಿಯೋಜಿಸಿ ಪೋದಂ: **ಆದಿಪು,** ೩. ೨೬ ವ)

ಅಗ್ರಸೂನು – [ನಾ] ಹಿರಿಯ ಮಗ (ಅವರ್ಗೆ ಅಗ್ರಸೂನು ಸಂಪತ್ಪತಿ ವಜ್ರಜಂಘಂ ಎನೆ ತಲ್ಲಿತಾಂಗನೆ ಬಂದು ಪುಟ್ಟಿದಂ: **ಆದಿಪು**, ೩. ೯)

ಅಗ್ರಹಸ್ತ – [ನಾ] ಹೊಂಡಿಲ ತುದಿ (ಘನಸಾರ ಸರಳಚಂದನವನ ಮೃದುಪಲ್ಲವಮಂ ಅಗ್ರಹಸ್ತದೆ ಕೊಂಡೊಯ್ಯನೆ ಬೀಸೆ ಚೆಲ್ವುವಡೆದದು ಜಿನಂಗೆ ಚಾಮರವಿಕ್ಕುವಂತಮರಗಜಂ: **ಆದಿಪು**, ೭. ೭೧)

ಅಗ್ರಹಾರ – [ನಾ] ಬ್ರಾಹಣರ ವಾಸಸ್ಥಳ (ಮಹಾಗ್ರಹಾರಂಗಳ ಮಹಾಜನಂಗಳ ಕೊಟ್ಟ ಪೊನ್ನ ಜನ್ನಿವಿರಂಗಳಂ ಪರಕೆಯುಮಂ ಕೆಯ್ಕೊಳುತ್ತುಂ: **ಪಂಪಭಾ**, ೨. ೯೭ ವ)

ಅಘ – [ನಾ] ಪಾಪ (ಸುಧರ್ಮಮುನಿಪದ್ಮಕ್ಕೆಱಗಿ ಜಿನರೂಪಮೆಂಬೊಂದಱ ಅಡಿವಿಡಿದು ಅಘಬಲಮನಲೆದು ಶಿಲೆಯೊಳ್ ಪೊಯ್ದಂ: **ಆದಿಪು**, ೩. ೫೧

ಅಘಟಂ – [ನಾ] ಅಸಾಂಗತ್ಯ, ಹೊಂದಾಣಿಕೆಯಿಲ್ಲದ್ದು (ನುಡಿವೊಡೆ ರಾಜಕಾರ್ಯನಯಮೆತ್ತ ಅಬಲಾಜನದ ಬುದ್ಧಿಯೆತ್ತ ಉಡುಪತಿವಂಶ ನೋಡುವೊಡೆ ಇದೊಂದಘಟಂ: **ಪಂಪಭಾ**, ೭. ೪೫)

ಅಘಟಮಾನ – [ಗು] ಹೊಂದುವುದಲ್ಲದ (ನಿನ್ನೆಂದಂತುಟೆ ಮೋಕ್ಷಕ್ಕೆನ್ನಿರ್ಪಿರವು ಅಘಟಮಾನವೈಹಿಕದ ತೋಡರ್ಪು ಎನ್ನಿರವಿನೊಳುಂಟಱಿಪದೆ ನಿನ್ನಂ ಪುಸಿಯಾಡಿ: **ಪಂಪಭಾ.** ೮. ೪)

ಅಘಟಿತಘಟಿತಂ – [ನಾ] ಆಗಬಾರದ್ದು ಆಗುವುದು (ಎತ್ತ ವನಂ ಎತ್ತ ಮೃಗಯಾವೃತ್ತಕಂ ಈ ತಪಸಿಯೆತ್ತ ಮೃಗಂ ಎಂದು ಎಂತು ಆನೆತ್ತಚ್ಚೆನ್ ಆತ್ಮಕರ್ಮಾಯತ್ತಂ ಪೆಱತಲ್ತಿದು ಎಲ್ಲಂ ಅಘಟಿತಘಟಿತಂ: **ಪಂಪಭಾ,** ೧. ೧೧೩)

ಅಘನ – [ನಾ] ಘನವಲ್ಲದ್ದು, ದೃಢವಲ್ಲದ್ದು (ಘನಾಘನದಿಂದಂ ಅಱಿಯಲಾದುದು ಘನಾಘನಂ ಜವನ ದಾಟಿಗಿಲ್ಲೆಂಬಿನಿತಂ: **ಆದಿಪು**, ೪. ೬೫)

ಅಘಮರ್ಷಣಪೂರ್ವಕಂ – [ಕ್ರಿವಿ] ಪಾಪನಿವಾರಕ ಮಂತ್ರೋಚ್ಚಾರದಿಂದ (ಅಂತು ಚಾಗಂಗೆಯ್ದು ಜಗನ್ಮಂಗಳ ಗಂಗಾವಾರಿಯೊಳ್ ಅನಿವಾರಿತಪರಾಕ್ರಮಂ ಅಘಮರ್ಷಣಪೂರ್ವಕಂ ಮಿಂದು: **ಪಂಪಭಾ**, ೯. ೭೨ ವ)

ಅಘವಿಘಟಪಟು – [ನಾ] ಪಾಪವಿನಾಶ ಕುಶಲಿ (ಅಯುಕ್ತಮೋ ಯುಕ್ತಮೊ ಪೇಟಿದು ಹಾನಿಯೊ ವೃದ್ಧಿಯೊ ತಾನದಾವುದಂ ಪೊಂದಿ ನಿಲ್ಕುಂ ಅಘವಿಘಟಪಟೂ: **ಆದಿಪು**, ೧೫. ೨೫)

ಅಘವಿಘಾತ – [ನಾ] ಪಾಪವಿನಾಶ (ಅಘವಿಘಾತಾರ್ಥಂ ಉದ್ಧತಾಭಿನಯಪ್ರಾಯಮುಂ ಆರಭಟೀ ವೃತ್ತಿಯುಂ: **ಆದಿಪು,** ೭. ೧೧೫ ವ)

ಅಘಸಮಿತಿ – [ನಾ] ಪಾಪಸಮೂಹ (ಕರ್ಶನವಘಸಮಿತಿಗೆ ಸದ್ದರ್ಶನದಿಂದಪ್ಪುದಕ್ಕೆ ನಿಮಗಕ್ಕೆ ಪುನರ್ದರ್ಶನಂ: **ಆದಿಪು**, ೫. ೬೪)

ಅಘಾಟ – [ನಾ] ಅತಿಶಯ, ಅದ್ಭುತ (ಮಹೀಭುಜನೆಯ್ದಿದಂ ಫಳವಿನಮ್ರಮಹೀಜಸಹಸ್ರ ಅಘಾಟಮನುತ್ಪಳಖೇಟಮಂ: **ಆದಿಪು,** ೪. ೫೮)

ಅಘಾಟಶುದ್ಧಿ – [ನಾ] ಸೀಮೆಯ ಪರಿಷ್ಕಾರ (ಮರ್ಯಾದಾ ವಿಪ್ರಪತ್ತಿಯಿಂದಮೂಳ್ವಾರ್ಯಜನಕ್ಕೆ ಅಘಾಟಶುದ್ಧಿಯಂ ಮಾಡಿ: **ಆದಿಪು,** ೬. ೫೭ ವ)

ಅಘಾತಿಚತುಷ್ಕ – [ನಾ] [ಜೈನ] ನಾಮ, ಗೋತ್ರ. ಆಯು, ವೇದನೀಯ ಎಂಬ ಕರ್ಮಗಳು (ಖಂಡಿತಾಘಾತಿಚತುಷ್ಕಸ್ಥಿತ್ಯನುಭಾಗಂ ಅಪಗತ ಮೂಲಶರೀರಪ್ರಮಾಣಾತ್ಮಪ್ರದೇಶಂ: **ಆದಿಪು**, ೧೬. ೪೯ ವ)

ಅಚಲ – [ನಾ] ಬೆಟ್ಟ (ವಿಶ್ವ ಅಚಲ ಚಕ್ರೇಶತ್ವಮಂ ತಾಳ್ದಿದುದು ಅಖಿಳ ಧರಾರಮ್ಯ ಹೈಮಾಚಳಂ: **ಪಂಪಭಾ**, ೪. ೧೪)

ಅಚಲಿತ – [ಗು] ಚಲಿಸಲಾರದ, ಬದಲಿಸಲಾರದ (ಅಂತು ಅಚಲಿತಪ್ರತಿಜ್ಞಾರೂಢನಾದ ಗಾಂಗೇಯನಂ ಏಗೆಯ್ದುಮೊಡಂಬಡಿಸಲಾಱದೆ: **ಪಂಪಭಾ,** ೧. ೮೪ ವ)

ಅಚಾಮ್ಲವರ್ಧನತಪ – [ನಾ] [ಜೈನ] ಒಂದು ಉಪವಾಸವ್ರತ: ಒಂದು ದಿನ ಅಚಾಮ್ಲ [ಗಂಜಿ] ಸೇವನೆ ಒಂದು ಪಾರಣೆ, ಎರಡು ಅಚಾಮ್ಲ ಸೇವನೆ ಒಂದು ಪಾರಣೆ, ಮೂರು ಅಚಾಮ್ಲ ಸೇವನೆ ಒಂದು ಪಾರಣೆ – ಈ ಕ್ರಮದಲ್ಲಿ ಹತ್ತು ಅಚಾಮ್ಲಗಳವರೆಗೆ ಸಾಗಿ ಆನಂತರ ಒಂಬತ್ತು ಅಚಾಮ್ಲ, ಎಂಟು ಅಚಾಮ್ಲ ಹೀಗೆ ಒಂದರವರೆಗೆ ಇಳಿಸುತ್ತ ಬರುವ ವ್ರತ; ಇದರಲ್ಲಿ ಒಟ್ಟು ನೂರು ಅಚಾಮ್ಲಗಳೂ ಹತ್ತೊಂಬತ್ತು ಪಾರಣೆಗಳೂ ಆಗುತ್ತವೆ (ನಂದನಗುರುಗಳಂ ಸಾರ್ದು ಶಾಶ್ವತಸೌಖ್ಯವರ್ಧನಕರಮಪ್ಪ ಅಚಾಮ್ಲವರ್ಧನತಪದೊಳ್ ನೆಗಟ್ದು: **ಆದಿಪು**, ೩. ೬೫ ವ)

ಅಚಿರ – [ಗು] ಅತಿಶೀಘ್ರ (ದಕ್ಷಿಣಭುಜಂ ಅಚಿರಪ್ರತಿಪಕ್ಷ ಮಹೀಪಾಲ ವಿಜಯಲಕ್ಷ್ಮೀಲಲನಾ ವಕ್ಷೋಜಸ್ಪರ್ಶನಮಂ ಅನಕ್ಷರಮಱಿಪಿದುದು ಪತಿಗೆ ಅಮಂದಸ್ಪಂದಂ: **ಆದಿಪು**, ೧೧. ೧೧)

ಅಚಿರರುಚಿಸಂಚಳ – [ಗು] ಮಿಂಚಿನ ಕಾಂತಿಯಂತೆ ಚಂಚಲವಾದ (ಭೂತಳರಾಜ್ಯವಿಮೋಹಂ ಅಚಿರರುಚಿಸಂಚಳಂ ಇಂತಳವುಗಿಡಿಸಿದುದು ಮನುಕುಳತಿಳಕನುಮಂ: **ಆದಿಪು,** ೧೪. ೧೨೧)

ಅಚೇತನನಾಗು – [ಕ್ರಿ] ಮೂರ್ಚೆ ಹೋಗು (ದುರ್ಯೋಧನ ಗದಾಪ್ರಹರಣದಿಂದ ಅಚೇನನಾಗಿರ್ದೊಡೆ ಬಿಟ್ದಿನಂ ಇಱಿಯೆನೆಂದು: **ಪಂಪಭಾ**, ೧೩. ೯೫ ವ)

ಅಚೇತನರ್ – [ನಾ] ಪ್ರಾಣರಹಿತರು (ಅಂತೆ ಗೆಯ್ವೆನೆಂದು ಬಂದು ಕೊಳನ ತಡಿಯೊಳ್ ಅಚೇತನರಾಗಿ ಬಿಟ್ದಿರ್ದ ತಮ್ಮಂದಿರಿರ್ವರುಮಂ ಕಂಡು: **ಪಂಪಭಾ**, ೮. ೪೦ ವ)

ಅಚ್ಚ – [ಗು] ಶುದ್ಧ (ಮಹೀಶಂ ತೆಗೆದೆಚ್ಚನಚ್ಚ ಬಿಸುನೆತ್ತರ ಸುಟ್ಟುರೆ ಸೂಸುವನ್ನೆಗಂ: **ಪಂಪಭಾ**, ೧೦. ೯೮)

ಅಚ್ಚಬೆಳ್ದಿಂಗಳ್ – [ನಾ] ಶುಭ್ರವಾದ ಬೇಳುದಿಂಗಳು (ಅಂತು ಸೊಗಯಿಸುವ ಅಚ್ಚಬೆಳ್ದಿಂಗಳೊಳ್ ಸುಧಾಧವಳಿತ ಉತ್ತುಂಗ ರಮ್ಯಹರ್ಮ್ಯದೆರಡನೆಯ ನೆಲೆಯ: **ಪಂಪಭಾ**, ೪. ೫೨ ವ)

ಅಚ್ಚರಸಿ – [ನಾ] [ಅಪ್ಸರಸ್ತ್ರೀ] ಅಪ್ಸರೆ (ಪೂತ ಜಂಗಮಲತೆಗಳಂತೆಱಗಿ ತನ್ನ ಮುಂದೆ ಬಂದಾಡುವಚ್ಚರಸಿಯರುಮಂ: **ಆದಿಪು**, ೨. ೬೫ ವ)

ಅಚ್ಚರಸೆ – [ನಾ] ಅಪ್ಸರೆ (ಉಗ್ರಗ್ರಾಹಸ್ವರೂಪದೊಳಿರ್ದ ಅಚ್ಚರಸೆಯರಂ ವಿಶಾಪೆಯರ್ಮಾಡಿ: **ಪಂಪಭಾ,** ೪, ೨೦ ವ)

ಅಚ್ಚರಿಯಾಗು – [ಕ್ರಿ] ಆಶ್ಚರ್ಯಕರವಾಗು (ಬಳಸಿದ ವೇದಪಾರಗರ ಸಂದಣಿಯೆಂಬಿವಱಿಂ ವಿವಾಹಮಂಗಳಮದು ಕುಂತಿಮಾದ್ರಿಗಳೊಳ್ ಅಚ್ಚರಿಯಾದುದು ಪಾಂಡುರಾಜನಾ: **ಪಂಪಭಾ,** ೧. ೧೦೭)

ಅಚ್ಚರಿವೇಱು – [ಕ್ರಿ] ಅಚ್ಚರಿಗೊಳಿಸು (ಆ ಲಲಿತಾಂಗಿ ಬೆಚ್ಚನುಸಿರ್ದಚ್ಚರಿವೆತ್ತಿರೆ ಮೂರ್ಛೆವೋಪುದುಂ: **ಆದಿಪು,** ೩. ೨೩)

ಅಚ್ಚವೆಳ್ದಿಂಗಳ್ – [ನಾ] ಶುಭ್ರ ಬೆಳುದಿಂಗಳು (ತನ್ನ ಜಸದಂತೆ ಪಸರಿಸಿದಚ್ಚವೆಳ್ದಿಂಗಳಂ: **ಪಂಪಭಾ**, ೪. ೬೯ ವ)

ಅಚ್ಚಸಿರಿಕಂಡ – [ನಾ] ಅಚ್ಚ ಶ್ರೀಗಂಧ (ಅಗರುವ ಮೆಚ್ಚು ಅಚ್ಚ ಸಿರಿಕಂಡದೊಳ್ ಅಗ್ಗಲಿಸಿತ್ತು ಸೂಡುಶಯ್ಯೆಗಳ ಬಯಕ್ಕೆ ಜೊಂಪಲರ್ದವು: **ಪಂಪಭಾ**, ೫. ೩೦)

ಅಚ್ಚಿಗ – [ನಾ] ಭ್ರಾಂತಿ, ಗೊಂದಲ (ನೀನೆಱಿಗಿದೆ ಎನ್ನ ಪಕ್ಕದೆ ಪೆಱಳ್ಗನೆ ಬೆರ್ಚಿ ಲತಾಂಗಿಗಾಗಳಾನೆಱಿಗಿದೆಂ ಆದುದಾ ಲತೆಯಿಂ ಅಚ್ಚಿಗಮಿಂತೆನಗಂ ಲತಾಂಗಿಗಂ: **ಆದಿಪು**, ೪. ೧೩); [ನಾ] ದುಃಖ (ನಲ್ಲಳಗಲ್ಕೆಯಿಂದಂ ಆದ ಅದವಟಲಚ್ಚಿಗಂ ಮಱುಕಮೆಂಬಿವಱಿಂದೆ ಕನಲ್ದು ಮುನ್ನೆ ಬೇಟದ ಸವಿಗಂಡನಲ್ಲದಱಿಯಂ ಶ್ರಮಮಂ ಕಡುವೇಟಕಾಱರಾ: **ಆದಿಪು**, ೧೨. ೨೨); [ನಾ] ಗಾಬರಿ (ನೆಗಟ್ಟಿನ್ನ ಗುಣಮಲಂಘ್ಯಂ ಜಗದೊಳದಂ ಕಿಡಿಸಿದಪ್ಪನೀ ನೃಪನೆಂದು ಅಚ್ಚಿಗದೊಳೆ ಪುಯ್ಯಲಿಪಂತೆವೊಲ್ ಒಗೆದುದು ಚಳದನಿಲಹತ ಪಯೋಧಿನಾದಂ: **ಆದಿಪು**, ೧೨. ೭೬)

ಅಚ್ಚಿಗಂಗೊಳ್ – [ಕ್ರಿ] ತುಂಬ ದುಃಖಪಡು (ಅಚಳಿತಧೈರ್ಯನ ಮನಮಂ ಚಳಿಯಿಸಲಾಱದೆ ಅಚ್ಚರಸೆಯರ್ ಅಚ್ಚಿಗಂಗೊಂಡಂತಾಗೆಯುಂ: **ಪಂಪಭಾ,** ೭. ೯೪ ವ)

ಅಚ್ಚಿಱಿ – [ಕ್ರಿ] ಮುದ್ರೆಯೊತ್ತು (ಅಂದಿನ ರೂಪು ಶಾಸನಂ ಬರೆದುದು ಬರ್ಚಿಸಿತ್ತು ಅಮರ್ದುದು ಅಟ್ಟುದು ಅಳಂಕಿದುದು ಉರ್ಚಿ ಪೊಕ್ಕು ಬೇರ್ವರಿದುದು ಬೆಚ್ಚುದು ಅಚ್ಚಿಱಿದುದು: **ಆದಿಪು**, ೩. ೪೩); [ಕ್ರಿ] ಎರಕವಾಗು (ಆತ್ಮಾಂಗದೊಳ್ ರೋಹಿಣೀಚರಣಾಲಕ್ತಕಂ ಅಚ್ಚಿಱಿದುದು: **ಪಂಪಭಾ**, ೪. ೫೦); [ಕ್ರಿ] ಮುದ್ರೆ ಹಾಕು (ಮೆಯ್ಯನಿಕ್ಕುತ್ತಿರೆ ಪತ್ತಿ ಕೆಂದಳಿರ್ಗಳಚ್ಚುಗಳಚ್ಚಿಱಿದಂತೆ ಕಾಮನ ಬೇಟದಚ್ಚುಗಳ ಮಾಟಕ್ಕಿಯೊಳ್ ಇರ್ದುದು ಮೆಯ್ ಸುಭದ್ರೆಯಾ: **ಪಂಪಭಾ**, ೫. ೧೭)

ಅಚ್ಚು – [ನಾ] [ಅಕ್ಷ] ಎರಕ ಹೊಯ್ದ ವಸ್ತು (ಶೋಭಿಸಿದಂ ಕುಮಾರನಾನಂದದಿತರೂಪನಂದೆಸೆಯೆ ತಂದೆಯೊಳಚ್ಚಿನೊಳ್ ಒತ್ತಿದಂತೆವೋಲ್: **ಆದಿಪು,** ೮. ೪೩) [ನಾ] ಬಂಡಿಯ ಇರಚಿ (ಉಡಿದಿರ್ದೆಚ್ಚಟಿವೀಸು ತಟ್ಟಿದ ನೊಗಂ ಜೀಱಿಟ್ಟಿ ಚಕ್ರಂ: **ಪಂಪಭಾ**, ೧೦. ೯೧)

ಅಚ್ಚುಡಿ – [ಕ್ರಿ] [ರಥದ] ಅಚ್ಚು ಮುರಿ (ನರನ ರಥಮಂ ಪಡುವು ಎಣ್ಣಾಗ್ವುದುವರಂ ಸಿಡಿಲ್ವಿನಂ ಎಚ್ಚು ಅಚ್ಚುಡಿಯೆ: **ಪಂಪಭಾ**, ೧೧. ೨೦)

ಅಚ್ಛಜಳ – [ನಾ] ಶುದ್ಧ ನೀರು, ತಿಳಿ ನೀರು (ಕುಂದಧವಳ ನೃಪದಶನೇಂದು ಜ್ಯೋತ್ಸ್ನಾಮೃತಾಚ್ಛಜಳ ಪರಿಷೇಕಂ ಮಾಂದಿಸುವಂತಾದುದು ನೃಪನಂದನೆಯ ಎರ್ದೆಯೊಳಗೆ ಬಳೆದ ಶೋಕಾನಳನಂ: **ಆದಿಪು**, ೩. ೪೯)

ಅಚ್ಛಾಂಬು – [ನಾ] ಶುದ್ಧವಾದ ನೀರು (ವನಕುಸುಮಸ್ತಬಕದ ನೆಟಿಲಿನಿಸಚ್ಛಾಂಬುವಿನೊಳೆಸೆಯೆ: **ಆದಿಪು,** ೧೧. ೬೨)

ಅಚ್ಛೋದಕ – [ನಾ] (ಅಚ್ಛ+ಉದಕ) ನಿರ್ಮಲವಾದ ನೀರು, ತಿಳಿನೀರು (ಕರಿಯೂಥಪತಿಗಳೆರಡುಂ ಸರಸೀಜಳಮಂ ವಿಳಾಸದಿಂ ಪುಗುವವೊಲಾದರದಿಂದೆ ಪೊಕ್ಕು ತುಳುಕಿದರ್ ಅರವಿಂದರಜಃಪಿಶಂಗಿತಾಚ್ಛೋದಕಮಂ: **ಆದಿಪು**, ೧೪. ೧೦೬)

ಅಚ್ಯುತೇಂದ್ರ – [ನಾ] [ಜೈನ] ಅಚ್ಯುತಕಲ್ಪದ ಇಂದ್ರ (ಅಚ್ಯುತೇಂದ್ರನೊಡನೆ ನಿಜಪೂಜಾವಿಳಾಸಮಂ ಮೆಱೆಯಲೆಂದು ಪೋಗಿ: **ಆದಿಪು**, ೨. ೭೭ ವ)

ಅಜ – [ನಾ] ಆದಿಜಿನ (ನಿಜಮಕುಟಮಣಿಮರೀಚಿಯಿಂ ಅಜನ ಪದಾಂಬುಜದ ಕೆಂಪನಿರ್ಮಡಿಸಿ ಕುಲಧ್ವಜ ಬೆಸಸು ನಿನ್ನವೊಲೀ ಪ್ರಜಾಪತಿತ್ವಕ್ಕೆ ಮುನ್ನ ನೋಂತರುಮೊಳರೇ: **ಆದಿಪು**, ೮. ೬೩); [ನಾ] ಆಡು, ಮೇಕೆ (ಹರಿತಾಂಕುರ ಪಲ್ಲವ ಪತ್ರರಾಜಿಯಂ ಬಿಸುಟು ಶುಷ್ಕಪತ್ರಂಗಳನಾದರದಿಂ ಮೇವ ಅಜಕುಳಮಂ: **ಆದಿಪು**, ೧೫. ೩೫); [ನಾ] ಬ್ರಹ್ಮ (ಕೊಂದೆನ್ನ ಮಗನಂ ಇಂ ಭಯದಿಂದಂ ರಸೆವೊಕ್ಕುಂ ಅಜನ ಗುಂಡಿಗೆವೊಕ್ಕುಂ ಮಂದರಧರನ ಈ ಪೊರ್ಕುೞಿ ಪೊಂದಾವರೆವೊಕ್ಕು ಮೇಣವಂ ಬರ್ದುಕುವನೇ: **ಪಂಪಭಾ**, ೧೧. ೧೨೧); [ನಾ] ಹುಟ್ಟಿಲ್ಲದವನು, ಕೃಷ್ಣ (ಜಯದ್ರಥಂ ಇಕ್ಕುಟಿದು ಆರೊಳಂ ತೊಡಂಕವೇಡ ಎನುತುಂ ಅಜಂ ಮರುಜ್ಜವದೆ ಚೋದಿಸೆ: **ಪಂಪಭಾ,** ೧೧. ೧೪೫)

ಅಜಕುಕ್ಷಿ – [ನಾ] ಆಡಿನ ಹೊಟ್ಟೆಯಂತೆ ತೆಳ್ಳಗಿನ ಹೊಟ್ಟೆಯಿರುವ [ಆನೆ] (ಮಹಾವ್ಯೂಢೋರಸ್ಕನುಂ ವಿಪುಳೋಪಚಿಂತಾಂಸನುಂ ಸಮಪಾರ್ಶ್ವನುಂ ಅಜಕುಕ್ಷಿಯುಂ ಗೋಧೋತ್ರಿಷ್ಟನುಂ: **ಆದಿಪು,** ೧೨. ೫೬ ವ)

ಅಜಗರ – [ನಾ] ಹೆಬ್ಬಾವು (ಅವಧಿಜ್ಞಾನಿಗಳಂ ಕಂಡು ಅಜಗರ ವೃತ್ತಾಂತಮಂ ಬೆಸಗೊಂಡು: **ಆದಿಪು**, ೨. ೧೫ ವ)

ಅಜನಿಸು – [ಕ್ರಿ] ಕೀಳ್ಮಾಡು, ತಿರಸ್ಕರಿಸು (ಎನ್ನಿಂದ ಅಜನಿಸಿ ನುಡಿಯಿಸಿದುವು ಅಹಿಧ್ವಜನೋವದೆ ಮುನ್ನೆ ನೆಗಟ್ಟಿ ದುಶ್ಚರಿತಂಗಳ್: **ಪಂಪಭಾ**, ೯. ೨೧)

ಅಜಮುಖವ್ಯಾಘ್ರ – [ನಾ] ಮೇಕೆ ಮುಖದ ಹುಲಿ, ಕಪಟಿ (ಈತಂ ಅಜಮುಖವ್ಯಾಘ್ರಂ ಶ್ವೇತಕೃಷ್ಣಕಾರಕಂ ಈತನ ಮಾತು ಮಾತಲ್ಲ: **ಪಂಪಭಾ**, ೫. ೭೨ ವ)

ಅಜರ – [ನಾ] ನಿರ್ಜರ, ಕೃಷ್ಣ (ಅದು ವಿಲಯಾದ್ರಿಯ ಕಿಡಿಗಳನುಗುಟುತ್ತುಮೆಯ್ದೆವರ್ಪುದುಮಿದಿರಂ ನಡೆದ ಅಜರಂ ಉರದಿನಾಂತೊಡೆ: **ಪಂಪಭಾ,** ೧೧, ೭೭); [ನಾ] ದೇವತೆ (ಸುರಿವ ಅಜರಪ್ರಸೂನರಜದಿಂ ಕವಿಲಾದ ಶಿರೋರುಹಂ: **ಪಂಪಭಾ**, ೧೨. ೨೨೧)

ಅಜಸ್ರ – [ಅ] ಸದಾ, ಸತತ (ಪ್ರಚಣ್ಡವಿಕ್ಷೋತ್ಪಾತಪ್ರಶಮನ ಶಾನ್ತ್ಯುದಕ ಧಾರಾಕಾರ ತತ್ಕ್ಷಣಕ್ಷರತ್ ಅ’ಜಸ್ರ ದಾನಪ್ರಮೋದಜಳ ಧಾರಾಭಿರಾಮ ಕರಟಿಘಟಾಚಕ್ರನುಂ: **ಆದಿಪು**, ೧೪. ೯೧ ವ)

ಅಜಾಂಡ – [ನಾ] ಬ್ರಹ್ಮಾಂಡ (ಪುಟುವಾನಸನೆಂಬಂ ಅಜಾಂಡಮೆಂಬ ಅತ್ತಿಯ ಪಣ್ಣೊಳಿರ್ಪ ಪುಟುವಲ್ಲದೆ ಮಾನಸನೇ: **ಪಂಪಭಾ,** ೫. ೭೫)

ಅಜಾಂಡತಟ – [ನಾ] ಬ್ರಹ್ಮಾಂಡದ ಮೇರೆ (ಮದವದ್ದಂತಿಗಳಂ ಕಱುತ್ತು ಅಸಗವೊಯ್ವೊಯ್ದು ಆಜಿಯೊಳ್ ಭೀಮಂ ಆರ್ದು ಒದೆದು ಈಡಾಡಿದೊಡೆ ಅತ್ತ ಅಜಾಂಡತಟಮಂ ತಾಪನ್ನೆಗಂ: **ಪಂಪಭಾ,** ೧೧. ೬೭)

ಅಜಾತ – [ನಾ] ಹುಟ್ಟಿಲ್ಲದವನು, ಕೃಷ್ಣ (ನಿಜಮತಮನೆನಗೆ ಮೀಱಲ್ಕಜಾತ ದೊರೆಯಲ್ಲಂ: **ಪಂಪಭಾ,** ೯. ೨೧)

ಅಜಾತಭಯಂ – ಭಯರಹಿತ (ಆತತ ಯಶೋವಿತಾನಂ ಅಜಾತಭಯಂ ಪೂರ್ವಪರಿಮಿತ ಆಯುಷ್ಯಂ ಸಂಜಾತದಯಂ: **ಆದಿಪು,** ೬. ೬೪)

ಅಜಾತಶತ್ರು – [ನಾ] ಶತ್ರು ಹುಟ್ಟದಿರುವವನು, ಧರ್ಮರಾಯ (ಅಂತು ಅಜಾತಶತ್ರು ಶತ್ರುಪಕ್ಷಕ್ಷಯಕರಕರವಾಳದಂಷ್ಟ್ರಾಭೀಳ ಭುಜಂಗಮೂರ್ತಿ .. .. ಅಪ್ಪ ಅರಿಕೇಸರಿಯ ತೋಳ್ವಲದೊಳ್: **ಪಂಪಭಾ,** ೪. ೧೦ ವ)

ಅಜಾನೇಯ – [ನಾ] ಒಳ್ಳೆಯ ತಳಿಯ ಕುದುರೆ (ಶುಭಲಕ್ಷಣ ಲಕ್ಷಿತಂಗಳಪ್ಪಜಾನೇಯ ಕಾಂಭೋಜ ವಾಜಿರಾಜಿಗಳೊಳ್: **ಪಂಪಭಾ,** ೨, ೨೯ ವ)

ಅಜಿತ – [ನಾ] ಜಯಿಸಲಸಾಧ್ಯನಾದವನು, ಕೃಷ್ಣ (ಧರ್ಮರಾಜಂ ರಾಜರಾಜನಲ್ಲಿಗೆ ನಿರ್ವ್ಯಾಜದಿಂ ದಿತಿಜಕುಳ ವಿಜಯಿಯಪ್ಪಜಿತನನೆ ದೂತಕಾರ್ಯಕ್ಕಟ್ಟಿದೊಡೆ: **ಪಂಪಭಾ,** ೯. ೨೬ ವ)

ಅಜಿನ – [ನಾ] ಚರ್ಮ (ತ್ರಿಜಗತ್ ಸಾಶ್ಚರ್ಯ ದಂಡಸ್ಥಪತಿ ಗೃಹಪತಿ ಛತ್ರಿ ಯೋಷಿತ್ ಪುರೋಧ ಗಜ ನಿಸ್ತ್ರಿಂಶ ಅಶ್ವ ಕಾಕಿಣಿ ಅಜಿನ ಮಣಿ ಚಮೂನಾಥಚಕ್ರಾಧಿನಾಥಂಗೆ: **ಆದಿಪು,** ೧೨. ೮)

ಅಜಿರ – [ನಾ] ಅಂಗಳ (ಸಂಗರಾಜಿರದೊಳ್ ಕೌರವರೆಂಬ ಕಾಕಕುಳಕ್ಕೆನ್ನೀಯೊಂದೆ ಬಿಲ್ ಸಾಲದೇ: **ಪಂಪಭಾ,** ೧೨. ೧೩೫)

ಅಜೀವತತ್ವ – [ನಾ] [ಜೈನ] ಅಜೀವ, ಚೇನರಹಿತವಾದದ್ದು. ಅವುಗಳಲ್ಲಿ ಐದು ಬಗೆ (ಚೇತನಾರಹಿತಮಜೀವತತ್ತ್ವಂ ಅದು ಗತಿಸ್ಥಿತ್ಯವಗಾಹ ಶರೀರಾದಿ ವರ್ತನಾಹೇತು ಧರ್ಮಾಧರ್ಮಾಕಾಶ ಪುದ್ಗಲಕಾಲಭೇದದಿಂ ಪಂಚವಿಧಂ: **ಆದಿಪು,** ೧೦. ೬೧ ವ)

ಅಜ್ಜ – [ನಾ] [ಆರ್ಯ] ತಂದೆ ಅಥವಾ ತಾಯಿಯ ತಂದೆ (ತನಯಂ ತಾಯ್ ತಂದೆ ತಮ್ಮಂ ಕೆಳೆಯಂ ಅಳಿಯಂ ಆಳ್ ಪಜ್ಜಂ ಎಮ್ಮಜ್ಜಂ ಇಷ್ಟಾಂಗನೆಯೆಂದು: **ಆದಿಪು,** ೩. ೫೫)

ಅಜ್ಞಾನತೆ – [ನಾ] ತಿಳಿವಳಿಕೆಯಿಲ್ಲದ ಬಗೆ (ದಿವ್ಯವಚನಮಂ ಅದಂ ಅಂತೇನುಂ ಬಗೆಯದೆ ಕುಡಿದು ಅಜ್ಞಾನತೆಯಿಂ ನಂಜುಗುಡಿದರಂತಿರೆ ಕೆಡೆದಂ: **ಪಂಪಭಾ,** ೮. ೪೦)

ಅಟನಿ – [ನಾ] ಬಿಲ್ಲಿನ ಕೊಪ್ಪು (ಆಸೇತೋ ರಾಮಚಾಪ ಅಟನಿತಟಯುಗ ಟಂಕ ಅಂಕಿತ ಆಖಂಡಖಂಡಾತ್: **ಪಂಪಭಾ,** ೧೪. ೨೭)

ಅಟವಿ – [ನಾ] ಕಾಡು (ಲಳಿತ ವಿಚಿತ್ರ ಪತ್ರ ಫಲ ಪುಷ್ಪಯುತಾಟವಿ: **ಪಂಪಭಾ,** ೧. ೫೪)

ಅಟ್ಟಟ್ಟಿ – [ನಾ] ದೌತ್ಯ (ಕಾಮ್ಯಕವನಮಂ ಪೊಕ್ಕು ತದ್ವನತಪೋಧನರ ಗೋಷ್ಠಿಯೊಳಂ ಆಟವಿಕರ ಅಟ್ಟಟ್ಟಿಯೊಳಂ ತಮಗಿಂದ್ರಪ್ರಸ್ಥದ ರಾಜ್ಯಶ್ರೀಯಂ ಮರಳಿಸೆ: **ಪಂಪಭಾ,** ೭. ೨೭ ವ); [ನಾ] ದೂತ (ಇನ್ನಳಿಪಿಂದ ಅಟ್ಟುವ ಅಟ್ಟಟ್ಟಿಗಳಂ ಬಿಸುಟ್ಟುದು: **ಪಂಪಭಾ,** ೯. ೮೯); [ನಾ] [ದೂತ] ಸಂದೇಶ (ಎಮಗಂ ತಮಗಂ ಮುಳಿಸಿಂದಂ ಈಗಳ್ ಅಟ್ಟಟ್ಟಿಗಳ್ ಅಪ್ಪುವು ಎಂದಿದನೆ ದಲ್ ನುಡಿದು ಅಟ್ಟಿದಂ ಎಮ್ಮ ಭೂಭುಜಂ: **ಪಂಪಭಾ,** ೯. ೮೯)

ಅಟ್ಟಟ್ಟು – [ಕ್ರಿ] ದೂತರನ್ನು ಕಳಿಸು (ನೀನುಂ ಇಳೆಯಂ ಮುಂ ಬೇಡಿ ಅಟ್ಟಟ್ಟೆ ಮಾರ್ಮಲೆದಾತಂ ಕುಡದಿರ್ದೊಡೆ ಇಱಿಯ ನೀಂ ಲೋಕಂ ಗುಣಂಗೊಳ್ವಿನಂ: **ಪಂಪಭಾ,** ೯. ೨೦)

ಅಟ್ಟಲಾಗದೆ – ಕಳಿಸಬಾರದಾಗಿತ್ತೇ (ಬಾಟಿಸ್ತೆಯುಳ್ಳೊಡೆ ನೀನೆ ಬರ್ಪಂತುಟಾದುದೆ ಪೇಟಿ ನೀಂ ಬಟಿಯಟ್ಟಲಾಗದೆ ಕೆಮ್ಮನಿನ್ನೆಂತುಂ ಏಂ ಮನೆವಾಟಿಸ್ತೆಯಂ ಬೆಸಸಲ್ಕೆ ಬಂದೆಯಿಳಾಧಿಪಾ: **ಪಂಪಭಾ,** ೧೨. ೮೯)

ಅಟ್ಟಲೆವೇೞ್ – [ಕ್ರಿ] ಹೇಳಿಕಳಿಸು (ಎರೆದಿಂತಟ್ಟಲೆವೇೞ್ವ ಕನ್ನೆ ಬಟಿಯಂ ಬಂದಳ್ ಮರುಳ್ದು ಅಂಬುಜೋದರನಿಂತಟ್ಟಿದಂ: **ಪಂಪಭಾ,** ೫. ೨೪)

ಅಟ್ಟವಣೆಕೋಲ್ – [ನಾ] ಪುಸ್ತಕವಿರಿಸುವ ಪೀಠ, ವ್ಯಾಸಪೀಠ (ಇರ್ದಂ ಅಟ್ಟವಣೆಕೋಲ್ಗಳ ಮೇಲೆಸೆದಿರ್ದ ವೀರಸಿದ್ಧಾಂತದ ಶಾಸನಂಬರೆದ ಪೊತ್ತಗೆಯಂತಮರಾಪಗಾತ್ಮಜಂ: **ಪಂಪಭಾ,** ೧೧. ೪೬)

ಅಟ್ಟಳೆ – [ನಾ] ಕೋಟೆಯ ಬುರುಜು (ಎರಡೆರಡು ಅಟ್ಟಳೆಗೆ ತರಂತರದಿಂದೊಂದೊಂದು ಗೋಪುರಂ: **ಆದಿಪು,** ೬. ೧೦೬)

ಅಟ್ಟಾಲ – [ನಾ] ಕೋಟೆಯ ಬುರುಜು (ಆಕಾಶಾಂತಮನೆಯ್ದೆ ನೀಳ್ದ ವಿಕಟ ಅಟ್ಟಾಲಂಗಳೊಳ್: **ಆದಿಪು,** ೬. ೧೦೪)

ಅಟ್ಟಾಳಕ – [ನಾ] ಅಟ್ಟಾಲ (ನಿರಂತರ ಅಟ್ಟಾಳಕಪ್ರತೋಳೀಂದ್ರ ಕೌಶಳ ದೇವಪಥಸನಾಥಂಗಳುಂ: **ಆದಿಪು,** ೧೩. ೫೭ ವ)

ಅಟ್ಟಾಳಿಕೆ – [ನಾ] ಅಟ್ಟಳೆ (ರಾಹುಗೆತ್ತು ಇದಿರ್ದ ಅಟ್ಟಾಳಿಕೆಗಳಲ್ಲಿ ನಾಡೆಯುಂ ಆಳೋಚಂಬೆರಸು ತಡೆದು ನಡೆವಂ ದಿನಪಂ: **ಆದಿಪು,** ೬. ೧೦೫)

ಅಟ್ಟಿ ತಿನ್ – [ಕ್ರಿ] ಅಟ್ಟಿಸಿಕೊಂಡು ಹೋಗಿ ಕೊಲ್ಲು (ನಿಮ್ಮ ಕುಲಂಗಳಾಂತು ಮಾರ್ಮಲೆವನನಟ್ಟಿ ತಿಂಬುವೇ: **ಪಂಪಭಾ,** ೧೦. ೨೧)

ಅಟ್ಟಿ ಪತ್ತು – [ಕ್ರಿ] ಬೆನ್ನಟ್ಟಿ ಹತ್ತಿಕೊ (ನೂಂಕೆ ಬೇಟಕಾಱನ ಮನವಟ್ಟಿ ಪತ್ತುವುದು ಬೇಟವಿದೇಂ ವಿಪರೀತವೃತ್ತಿಯೋ: **ಪಂಪಭಾ,** ೪. ೧೦೩)

ಅಟ್ಟಿ ಮುಟ್ಟು – [ಕ್ರಿ] ಅಟ್ಟಿಸಿಕೊಂಡು ಹೋಗಿ ತಲುಪು (ಪೊಡೆದುದು ಬಿಲ್ಲ ಜೇವೊಡೆಯೆ ಮೀಱುವ ವೈರಿನರೇಂದ್ರರಂ ಸಿಡಿಲ್ವೊಡೆದವೊಲಟ್ಟಿ ಮುಟ್ಟಿ ಕಡಿದಿಕ್ಕಿದುದು: **ಪಂಪಭಾ,** ೧. ೯೯)

ಅಟ್ಟು – [ಕ್ರಿ] [ಪಾರಿತೋಷಕ] ಕಳಿಸಿಕೊಡು (ತನ್ನೊಳ್ ನೆರೆಯಲಿದು ಜಯಶ್ರೀಯ ಮುಂದಟ್ಟಿದ ಏಕಾವಳಿಯೆಂಬಂತಿರ್ದುದಂ ಕಂಠಿಕೆಯಂ: **ಆದಿಪು,** ೧. ೭೬); [ನಾ] ಅಟ್ಟ (ಅವಱ ಮೇಗಣಟ್ಟುಗಳೊಳಿಟ್ಟ ಜೇನಪುಟ್ಟಿಗಳಂ ಅನುಕರಿಸುವ ಅತಿರೌದ್ರ ಬೀಭತ್ಸಕುತ್ಸಿತ

ಸ್ಥಾನಂಗಳೊಳ್: **ಆದಿಪು,** ೫. ೮೩ ವ); **[ಕ್ರಿ]** [ಊಟದಲ್ಲಿ] ಒತ್ತಾಯಮಾಡು (ಪಲರುಂ ಬಂದುಣೆ ನೋಡಿಯುಂ ನುಡಿದುಂ ಅಟ್ಟುತ್ತುಂ ಪಸಾಯಂಗಳಂ ಕೆಲಕೆಲ್ಲಂ ಭರತೇಶನಾರೋಗಿಸಿದಂ: **ಆದಿಪು**, ೧೧. ೨೭); **[ಕ್ರಿ]** ಕಳಿಸಿಕೊಡು (ಆಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂಳೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡೆ: **ಪಂಪಭಾ,** ೧. ೮೫ ವ); **[ಕ್ರಿ]** ಬೆನ್ನು ಹತ್ತು (ಎಚ್ಚರನಂಬಟ್ಟುವಿನಂ: **ಪಂಪಭಾ,** ೧೦. ೭೪) ಕಳಿಸಿಕೊಡು (ಅಟ್ಟಲೆವೇಟ್ಟಿನವರ್ಗೆ ಶಾಸನಹರರಂ: **ಆದಿಪು,** ೧೪. ೩೦)

ಅಟ್ಟುಂಬರಿಗೊಳ್ – **[ಕ್ರಿ]** ಅಟ್ಟಿ ಓಡಿಸು (ಬಟ್ಟಗೊಡೆ ಚಂದ್ರಕಾಂತಿಯಂ ಅಟ್ಟುಂಬರಿಗೊಳೆ ಪೊದಳ್ದ ಕೃಷ್ಣಾಜಿನಂ ಒಂದು ಇಟ್ಟಳಮೆಸೆಯೆ ಬೆಡಂಗಂ ಪುಟ್ಟಿಸೆ ಗಾಡಿಗಳೊಳೆಸೆವ ವೀಣಾಕ್ವಣಿತಂ: **ಪಂಪಭಾ**, ೬. ೯)

ಅಟ್ಟುವೆಱು – **[ಕ್ರಿ]** ಬೆನ್ನಟ್ಟುವಿಕೆಗೆ ಒಳಗಾಗು (ಮತ್ತಮೊಂದೆಡೆಯೊಳ್ ಪೞುವಟೆಯ ಬೇಟದ ತೋಟಿಯಂ ತೊಡರ್ದಟ್ಟುವೆತ್ತ ಪೊಲವುಲ್ಲೆಯಳ್ಳೆವಿಳ್ಳಿಯಾದ: **ಆದಿಪು,** ೨೮. ವ)

ಅಟ್ಟೆ – **[ನಾ]** ಮುಂಡ, ತಲೆಯಿಲ್ಲದ ದೇಹ (ಇನ್ನುಂ ತಲೆ ಮತ್ತಮಟ್ಟೆಗಳ ಮೇಲಿರ್ದಪ್ಪುವು: **ಪಂಪಭಾ,** ೭. ೧೪)

ಅಡಂಗು – ತಹಬಂದಿಯಲ್ಲಿರು **[ಕ್ರಿ]** (ಕಪ್ಪಮೀಯದೆ ಚಪ್ಪರಿಸುವ ಮಂಡಳಿಕರುಮಂ ಅಡಂಗದ ಆಟವಿಕರುಮಂ ಒತ್ತಿ ಬರ್ಪ ಪಾರ್ಷ್ಣಿಗ್ರಾಹಕರುಮಂ ಅಱಿದು: **ಆದಿಪು**, ೪. ೮೨ ವ); **[ಕ್ರಿ]** ಅಡಗಿಹೋಗು, ತಲೆಮರೆಸಿಕೊ (ಈಯದರೆಂಬ ಅದಟರ್ ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱಿ: **ಪಂಪಭಾ**, ೧. ೧೦೯); **[ಕ್ರಿ]** ಹತೋಟಿಗೆ ಬರು (ಕಪ್ಪಮೀಯದೆ ಚಪ್ಪರಿಸುವ ಮಂಡಳಿಕರುಮಂ ಅಡಂಗದಾಟವಿಕರುಮಂ: **ಪಂಪಭಾ**, ೪. ೮೨ ವ); **[ಕ್ರಿ]** ಶಮನವಾಗು (ಈಗಳಡಂಗಿತೆಮ್ಮ ಹೃದ್ರೋಗಮನೇಕಮಂಗಳ ಪರಂಪರೆಗಳ್ ದೊರೆಕೊಂಡುವೀಗಳ್: **ಪಂಪಭಾ,** ೨. ೬೦**)**; ಮರೆಯಾಗು (ಇದಱೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ ಪುದಿದುಱ್ಕಾಡಿತ್ತು ಅಡಂಗಿತ್ತಿದಱೊಳೆ ಕುರುರಾಜಾನ್ವಯಂ:: **ಪಂಪಭಾ**, ೧೨. ೧೫೬); **[ಕ್ರಿ]** ಕುಸಿ, ಕೆಳಗಿಳಿ (ಸರಲ ಬರಮಂ ಕಂಡಾಗಡೆ ಚಕ್ರಿ ನೆಲನೊಳ್ ಎಣ್ಬೆರಲ್ ಅಡಂಗೆ ನರರಥಮನೊತ್ತಿದಂ ನಿಪುಣತೆಯಿಂ: **ಪಂಪಭಾ**, ೧೨, ೨೦೦)

ಅಡಕ – **[ನಾ]** ಹತೋಟಿ, ಸಂಯಮ (ಓವಿ ಜೀವಮಂ ಅಡಕಂಬೆರಸುಯ್ದು ಸಮಿತಿಯೊಳ್ ಮುನಿ ನೆಗಟ್ದಂ: **ಆದಿಪು,** ೬. ೨೮)

ಅಡಕಿಲ್ವೆಸರ್ – **[ನಾ]** ಒಂದರ ಮೇಲೊಂದು ಪೇರಿಸಿಕೊಂಡ ಹೆಸರು (ಧರೆಯಂ ಕುಡುವಂದೆನಗಂ ಗುರು ತನಗಂ ರಾಜನಾಮಮಂ ಕೊಟ್ಟೊಡೆ ನೋಡಿರೆ ತನಗೀಗಳ್ ರಾಜಾಧಿರಾಜನೆಂದಿಟ್ಟುಕೊಂಡನಡಕಿಲ್ವೆಸರಂ: **ಆದಿಪು,** ೧೪. ೭೮)

ಅಡಕು – **[ಕ್ರಿ]** ಅಡಕವಾಗಿಸು, ತುಂಬಿಡು (ಹರಿ ಕರವಿನ್ಯಾಸಂಗಳ್ ನುಡಿಯಂ ಅಡಕುವಂತಿರೆ ನುಡಿದಂ: **ಪಂಪಭಾ**, ೯. ೩೪)

ಅಡಕೆ – **[ನಾ]** ಸಣ್ಣ ಬೆಲೆಬಾಳುವ ವಸ್ತು (ಒಡೆವೆಯನರ್ಥಿಗಿತ್ತೆಂ ಅವನೀತಳಮಂ ಗುರುಗಿತ್ತೆಂ ಈಗಲ್ ಒಂದಡಿಕೆಯುಂ ಇಲ್ಲ ಕೈಯೊಳ್: **ಪಂಪಭಾ,** ೨. ೪೬); **[ನಾ]** ಕೌಂಗು, ಕ್ರಮುಕ (ಅವಱ ಮೇಲಿರ್ದೆಲೆಯಡಕೆಯುಮಂ: **ಪಂಪಭಾ,** ೫. ೪೭ ವ)

ಅಡಗು – **[ಕ್ರಿ]** ಬಚ್ಚಿಟ್ಟುಕೋ (ಎನ್ನೊಡವುಟ್ಟಿದರುಂ ತಂದೆಯುಮಡಗಿರ್ದರ್ ಖಳಕೃತಾಂತದಂತಾಂತರದೊಳ್: **ಆದಿಪು,** ೩. ೩೪); **[ನಾ]** ಮಾಂಸ, ಬಾಡು (ಅಡಗಿನ ಬಸನಿಗನ್ಯೆ ತಿನ್ ಪಿಡಿ ಎಂದು ಅವನ ಅಡಗಂ ಅವನ ಬಾಯೊಳ್ ಗಿಡಿವರ್: **ಆದಿಪು**, ೫. ೮೬)

ಅಡಪ – **[ನಾ]** ಎಲೆಯಡಕೆಯ ಪೆಟ್ಟಿಗೆ (ಚಾಮರದಡಪದ ಡವಕೆಯ ಕನ್ನಡಿಯ ಪರಿಚಾರಿಕೆಯರುಮಂ: **ಆದಿಪು,** ೩. ೨೩ ವ)

ಅಡರ್ – **[ಕ್ರಿ]** ಹಬ್ಬು (ಬಳ್ಳಿಗಳ್ ಇಮ್ಮಾವಿನ ಮರನುಳ್ಳೆಡೆಗಳನಱಿಸಿ ಪೋಪುವಲ್ಲವು ಕೆಲದೊಳ್ ಕಳ್ಳಿಯಿರಲ್ ಅಡರ್ವುವು: **ಆದಿಪು**, ೧೨. ೧೬); **[ಕ್ರಿ]** ಗಾಢವಾಗು (ಎಯ್ದೆ ಮಡಲ್ತ ತಳ್ತ ಮೆಯ್ಗಳೊಳ್ ಅಡರ್ದು ಓತ ದೂತವಚನಾಮೃತದೊಳ್ ಗೊಲೆಗೊಂಡ ಬೇಟವೆಂಬ ಎಳಲತೆ: **ಆದಿಪು**, ೧೨. ೨೦); **[ಕ್ರಿ]** ಹತ್ತು (ದಿಕ್ಕರಿಗಳ್ ಅಂಬುಜಪತ್ರಾಂಬುವಿಂ ಬೆಡಂಗಡಸಿರೆ ಮಜ್ಜನಂಬುಗಿಪುದಂ ಸತಿ ಕಂಡೊಸೆದಳ್ ನಿಶಾಂತದೊಳ್: **ಪಂಪಭಾ**, ೧. ೧೪೦); **[ಕ್ರಿ]** ಏರು, ಹಾರು (ಎಂದು ಅರವಿಂದಪ್ರಿಯಸಖಂ ಅಂದು ಅಬರತಳಮಂ ಅಡರ್ವುದುಂ: **ಪಂಪಭಾ**, ೯. ೭೯); **[ಕ್ರಿ]** ಅಧಿಕವಾಗು (ಅಱಿದರಂ ಮೆಚ್ಚುತ್ತುತ್ಸಾಹದಿಂ ಪೊಗೞುತ್ತಂ ಒಳ್ಪಡರೆ ನುಡಿಯುತ್ತುಂ ಅಂತಿರ್ದು: **ಪಂಪಭಾ**, ೧೧. ೬೨)

ಅಡರೆ ತೊಡರೆ ಬಳಸು – **[ಕ್ರಿ]** ನೋಟದ ನಾನಾ ಬಗೆ: ಮೇಲೆ ನಾಟು ಮತ್ತು ಸುತ್ತು (ಅಳಿಕುಳಂಗಳ ಚೆಲ್ವಂ ಮಾಸಿಸಿದುವು ವಾಸವನ ವಿಳಾಸಂಬೆರಸಡರೆ ತೊಡರೆ ಬಳಸುವ ಕಣ್ಗಳ್: **ಆದಿಪು**, ೭. ೧೧೭)

ಅಡರ್ಪು – **[ನಾ]** ಆಧಾರ (ಕಳೆಗೆ ಕುಲಭವನಮುಂ ಪ್ರತಾಪಕ್ಕಡರ್ಪುಮಾಗಿ ಬಳೆವನ್ನೆಗಂ: **ಆದಿಪು,** ೬. ೨೨ ವ); **[ನಾ]** ಆಶ್ರಯ (ಅಯನಯಪರಾಕ್ರಮ ಉಪಾಶ್ರಯಂಗಳಂ ಶ್ರೀಗೆ ಅಡರ್ಪುಮಾಡಿದ ನಿನ್ನಿಂದ್ರಿಯಜಯಮೆ ಕೂಡೆ ಲೋಕತ್ರಯದಿಂ ಪೊಗೞಿಸಿದುದು: **ಪಂಪಭಾ**, ೯. ೩೫)

ಅಡವಿ – **[ನಾ]** ಕಾಡು (ಆವಡವಿಗಳೊಳ್ ಪಣ್ಬಲಮಾವಗಮೊಳವು: **ಪಂಪಭಾ,** ೭. ೪೬)

ಅಡಸಿ ಕಟ್ಟು – **[ಕ್ರಿ]** ಬಿಗಿಯಾಗಿ ಕಟ್ಟು (ಪಾವುಗಳಂ ಕೊಳಿಸಿ ಮಹಾಗ್ರಾವಮಂ ಉಱಿದೆ ಅಡಸಿ ಕಟ್ಟಿ ಕೊರಲೊಳ್ ಗಂಗಾದೇವಿಯ ಮಡುವಿನೊಳ್ ಅಟ್ಟಿದರ್: **ಪಂಪಭಾ**, ೨. ೩೨)

ಅಡಸು – **[ಕ್ರಿ]** ಮೇಲೆ ಬೀಳು (ಇಡಿದಡರೆ ಕಾಯ್ತ ಚೂತಮನಡಸಿ ಸಿಡಿಲ್ ಪೊಯ್ದುದೆನಿಸೆ: **ಆದಿಪು,** ೩. ೩೪); **[ಕ್ರಿ]** ಹಿಡಿದುಕೊ (ನೀರೊಳಗೆ ತನ್ನನಡಸಿದ ನೆಗೞಿಂ ಬಾಯೞಿವಿನಂ ಇಸಿಸಿಯುಂ ಅರೆ ಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗೞೆ **ಪಂಪಭಾ**, ೨. ೬೦); **[ಕ್ರಿ]** ತುರುಕು (ಪಿಡಿದಡಸಿ ತಿನಲ್ ಬಂದಿರ್ದೆಡೆಯೊಳ್ ನಿನಗಾಗಿ ಮದನನೆನ್ನನೆ ತಿನೆ ಕೇಳ್ ಪಡೆನೋಡಲ್ ಬಂದವರಂ ಗುಡಿವೊಱಿಸಿದರೆಂಬುದಾಯ್ತು ನಿನ್ನನ್ನೆಡೆಯೊಳ್: **ಪಂಪಭಾ**, ೩. ೧೫); **[ಕ್ರಿ]** ತುಂಬು, ಮಿಶ್ರಮಾಡು (ಕುಡಿಬಿದಿರ ಕುಡಿಯ ಮಾವಿನ ಮಿಡಿಯ

ಮಾರುಡಿನ ಮೆಣಸುಗಡಲೆಯ ಪುಡಿಯೊಳಡಸಿದದಲ್ಲದ ಅಲಲ್ಲಣಿಗೆಯ ಚಕ್ಕಣಮಂ ಸವಿಸವಿದು: **ಪಂಪಭಾ,** ೪. ೮೭ ವ); [ಕ್ರಿ] ರಭಸದಿಂದ ನುಗ್ಗು (ಜಂಬೂವೃಕ್ಷದ ಕೆಲದೊಳಡಸಿ ರಸದ ತೊಱೆ ಪರಿವಂತೆ: **ಪಂಪಭಾ,** ೬. ೩೦ ವ); [ಕ್ರಿ] ತೆತ್ತಿಸು, ಅಳವಡಿಸು (ಬೃಹಂದಳೆಯಾಗಿ ಗಾಂಡೀವಜ್ಯಾಘಾತದೊಳ್ ಇಂದ್ರನೀಲಂಗಳನಡಸಿದಂತಿರ್ದ ಎರಡುಂ ಮುಂಗೆಯ್ಗಳ ಕರ್ಪಂ ತೀವೆ ತೊಟ್ಟ ಬಳೆಗಳ್: **ಪಂಪಭಾ,** ೮. ೫೫ ವ)

ಅಡಿ – [ನಾ] ಹೆಜ್ಜೆ (ಪರಮೋತ್ಸಾಹದಿಂ ಆಗಳೇಬಡಿವರಂ ಭೂಪಾಲರುಯ್ದರ್ ವಿಯಚ್ಚರರೇಬಡಿಯಂ ವಿಯದ್ಗಮನದಿಂದಾಂತುಯ್ದರ್: **ಆದಿಪು,** ೯. ೭೩)

ಅಡಿಗಡಿಗೆ – [ಕ್ರಿವಿ] ಮತ್ತೆ ಮತ್ತೆ (ವನಜಮುಖಿ ಪಿರಿದುಮನುರಾಗದಿಂದಡಿಗಡಿಗೆ ಸೊಗಯಿಸಿದಳಾಗ ಮೊಗರಾಗದಿಂ: **ಆದಿಪು,** ೭. ೨೭ ರಗಳೆ)

ಅಡಿಗರ್ದು – [ಕ್ರಿ] ಕೆಳಕ್ಕೆ ಮುಳುಗಿಸು (ಒಂದಱ ನೀರ್ಮಳಲೊಂದಕೊರ್ಂದುತುಂ ಮೇಗೆ ಕೊಂಡು ನೆಗೆವುದಿದೇಂ ಮತ್ತೊಂದಱ ನೀರಡಿಗರ್ದುವುದೆಂದತಿ ವಿಸ್ಮಯದೆ ನೋಡಿದಂ ಭರತೇಶಂ: **ಆದಿಪು,** ೧೩. ೫೧)

ಅಡಿಗಟ್ಟು – [ಕ್ರಿ] ತಳದಲ್ಲಿ ಮುಳುಗಿಸು (ಪಾವುಗಳಂ ಕೊಳಿಸಿ ಮಹಾಗ್ರಾವಮಂ ಉಱದೆ ಅಡಸಿ ಕಟ್ಟಿ ಕೊರಲೊಳ್ ಗಂಗಾದೇವಿಯ ಮಡುವಿನೊಳ್ ಅಟ್ಟಿದರ್ ಏವಯಿಸದೆ ತಮ್ಮ ಕುಲಮಂ ಅಡಿಗಟ್ಟುವವೋಲ್: **ಪಂಪಭಾ,** ೨. ೩೨)

ಅಡಿಗಿಡು – [ಕ್ರಿ] [ಅಡಿ+ಕಿಡು] ಆಧಾರ ತಪ್ಪು (ಬೊದಿಲ್ಲೆನೆ ಬಿಟ್ಟಿತ್ತಡಿಗಿಡೆ ಕೂರ್ಮನ ಬೆನ್ನಂದೊಡೆದು ಸಿಡಿಲ್ದೊಡನೆ ನುಚ್ಚುನೂಱಪ್ಪಿನೆಗಂ: **ಪಂಪಭಾ,** ೧೦. ೭೦); [ಕ್ರಿ] ನಡಿಗೆ ತಪ್ಪು (ಮಚ್ಚರದಿಂ ಗಜೆಗೊಂಡು ಸುತ್ತುಗೊಂಡು ಅಡಿಗಿಡೆ ನುರ್ಗಿ ಪೊಯ್ದು ಪೆಱಪಿಂಗುವುದುಂ: **ಪಂಪಭಾ,** ೧೧. ೭೪)

ಅಡಿಗುಟ್ಟು – [ಕ್ರಿ] ಹೆಜ್ಜೆ ಹಾಕು, ಕುಣಿ (ದೇವವನಿತೆಯರೆ ಪರಿವಿಡಿಯೊಳ್ ಅಡಿಗುಟ್ಟೆಯುಂ: **ಆದಿಪು,** ೨೭ ರಗಳೆ)

ಅಡಿಗೊತ್ತು – [ಕ್ರಿ] ಕೆಳಕ್ಕೆ ಅದುಮು (ಬಿರುದರಂ ಒತ್ತಿ ಬೀರರಂ ಅಡಂಗಿಸಿ ಕೊಂಕಿಗರಂ ಕಟಿಲ್ಚಿ ಚೆನ್ನರಂ ಅಡಿಗೊತ್ತಿ ಮಂಡಳಿಕರಂ ಬೆಸಕಯ್ಸಿ .. .. ಮಾಡಿರೆ ರಾಜಸೂಯಮಂ: **ಪಂಪಭಾ,** ೭. ೧೮)

ಅಡಿಮೊದಲ್ – [ನಾ] ಪಾದದ ಮೂಲ (ಎಮ್ಮಂ ನಡಪು ಉಪದೇಶದಿನಲ್ಲದೊಡೆ ಒಡಗಟಿದಪೆವು ಅಸುವನಿಲ್ಲಿ ನಿನ್ನಡಿಮೊದಲೊಳ್: **ಆದಿಪು,** ೬. ೭೫)

ಅಡಿಯೂಡು – [ಕ್ರಿ] ಪಾದಗಳಿಗೆ ಲೇಪಿಸು (ಅಡಿಯೂಡಲ್ಕಲತಗೆಯಂ ತುಡಲ್ಕೆ ತುಡುಗೆಯಂ ಉಡಲ್ಕೆ ದಿವ್ಯಾಂಬರಮಂ: **ಆದಿಪು,** ೭. ೧೧)

ಅಡಿಯೆತ್ತು – [ಕ್ರಿ] ಹೆಜ್ಜೆ ಇಡು, ಹೊರಡು, ದಯಮಾಡಿಸು (ಪೆರ್ಜಸಮನೆ ಪಿಡಿದೆನ್ನನೆ ರಣದೊಳಟಿವೆಂ ಇರದಡಿಯೆತ್ತಿಂ: **ಪಂಪಭಾ,** ೯. ೮೭)

ಅಡಿವಜ್ಜೆ – [ನಾ] [ಅಡಿ+ಪಜ್ಜೆ] ಹೆಜ್ಜೆಯ ಅಡಿ, ಪಾದ (ಕೊಳದ ತಡಿಯೊಳ್ ಹಳಿಕುಳಿಶಶಂಖಚಕ್ರಲಾಂಛಿತಮಪ್ಪ ಅಡಿವಜ್ಜೆಯಂ ಕಂಡು: **ಪಂಪಭಾ,** ೧೩. ೭೬ ವ);

ಅಡಿವಿಡಿ – [ಕ್ರಿ] ಅನುಸರಿಸು (ಬಿಡೆ ತಿರ್ದಿದ ಶಕುನದ ನಯದ ಅಡಿವಿಡಿದು ಪುರೋಹಿತಂ ನೃಪಂಗೀ ನುಡಿಯಂ ನುಡಿದಂ: **ಆದಿಪು,** ೫. ೬); [ಕ್ರಿ] [ಅಡಿ+ಪಿಡಿ] ಕೆಳಗಿನಿಂದ ಆರಂಭಿಸು (ಅಡಿವಿಡಿದಿಟ್ಟ ಪುತ್ತುಗಳ ನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗಳ್: **ಆದಿಪು,** ೧೪. ೧೪೦)

ಅಡು – [ಕ್ರಿ] ಬೇಯಿಸು (ಅಯ್ವರ್ ಆಲದ ಕೆಬಗಿಂ ತೊಡರ್ದರ್ ನಮ್ಮ ಭಕ್ಷದೊಳ್ ಅಡು ಪಣ್ಣಿಡು ಪೋಗು ನೀನುಮಾನುಂ ತಿಂಬಂ: **ಪಂಪಭಾ,** ೩. ೧೨)

ಅಡುಕು – [ಕ್ರಿ] ಸಾಗಿಸು, ಬೇರೆಡೆಗೆ ಒಯ್ (ಸ್ತಂಬಕರ್ಯಾದಿ ನಾನಾವಿಧ ಧಾನ್ಯಂಗಳಂ ಪದನಱಿದುಡುಗುವ ಕಣಂ ಮಾಡುವ ಒಕ್ಕುವ ಅಡುಕುವ ಬಯ್ತಿಡುವ ಅಕ್ಕಿ ಮಾಡುವ ವಿವಿಧ ಭಾಜನಂಗಳೊಳ್ ಅಡುವ: **ಆದಿಪು,** ೬. ೭೭ ವ)

ಅಡುಗೆ – [ನಾ] ಬೇಯಿಸಿದ ಆಹಾರ (ಎನ್ನ ಅಟ್ಟ ಅಡುಗೆಯಂ ಉಂಡೊಡೆ ಬಿನ್ನಣಂ ಏನರಸ ನರೆಗಳಾಗವು: **ಪಂಪಭಾ,** ೮. ೫೪)

ಅಡುಱು – [ಕ್ರಿ] [ಅಡ್+ಉಱು=ಅಡುಱು=ಹತ್ತಿರ ಇರು] ಸಮೀಪಿಸು, ದಾಳಿಮಾಡು (ಅಸುರರ ಮೆಯ್ಯೊಳಾದ ವಿರಹಾಗ್ನಿಯನಾಱಿಸುತಿಂತೆ ತನ್ನ ಕೂರಸಿಯೊಳಡುರ್ತು ಕೊಂದಸಿಯಳಿರ್ಕಸಿಯೊಳ್: **ಪಂಪಭಾ,** ೧. ೬)

ಅಡೆವೊತ್ತು – [ಕ್ರಿ] [ಅಡೆ+ಪೊತ್ತು] ಅರ್ಧ ಹೊತ್ತಿಕೊ (ಅಡೆವೊತ್ತದೆ ಕಿಱಿಕಿಱಿದನೆ ಸುಡದೆ ಇನಿಸು ಅರೆವೊರೆಕನಾಗದೆಯೆ ಸಸಿದಂದೊಂದೆಡೆಯೊಳಗೊಟ್ಟಿರ್ದರಳೆಯಂ ಒಡನಳುರ್ವಂತೆ ಅಳುರ್ದಂ ಅನಲಂ ಅರಗಿನ ಮನೆಯಂ: **ಪಂಪಭಾ,** ೩. ೫)

ಅಡ್ಡಂ – [ನಾ] ತಡೆ (ಮಿಱುಗುವ ತೋರಹಾರಮುಮನಪ್ಪಿನ ಕಾಳಸೆಗಡ್ಡಮೆಂಬ ಬೇಸಱಿನೊಳೆ ಕಟ್ಟಲೊಲ್ಲದೆ: **ಪಂಪಭಾ,** ೪. ೧೦೫)

ಅಡ್ಡಂಬೀೞ್ – [ಕ್ರಿ] ಅಡ್ಡಲಾಗಿ ಬೀಳು (ಬೇಂಟೆಯ ನೆಪದಿಂದದಲ್ಲಿಂ ತಳರ್ದು ಬಟ್ಟೆಯ ಕಣ್ಣೊಳಡ್ಡಂ ಬಿಟ್ಟಿರ್ದ ವೃದ್ಧವಾನರನಂ ಕಂಡು: **ಪಂಪಭಾ,** ೮. ೩೧ ವ)

ಅಡ್ಡಂ ಮಾಡು – [ಕ್ರಿ] ಅಡ್ಡಗಟ್ಟು (ಪಣಮುಡಿದರಂತೆ ಅಡ್ಡಂ ಮಾಡಲುಂ ಎಸೆದ ದೆಸೆಗಳ್ಗೋಡಿಸಲುಂ ಕುಮಾರಸ್ವಾಮಿಯ ನಿಮ್ಮಡಿಯ ಕೆಲದೊಳಾನೆ ಬಲ್ಲೆಂ: **ಪಂಪಭಾ,** ೫. ೪೩ ವ)

ಅಡ್ಡಣ – [ನಾ] ಗುರಾಣಿ (ರಿಪುಕುರಂಗಕಂಠೀರವನ ಕಟಿತಟಂ ಒಲ್ದು ನೋಡುವ ಗಾಡಿಕಾರ್ತಿಯರ ಕಣ್ಗೆ ಕಾಮನ ಅಡ್ಡಣದಂತೆ ದೊಡ್ಡಿತ್ತಾಗಿ: **ಪಂಪಭಾ,** ೨. ೩೯ ವ)

ಅಡ್ಡಮಿರ್ – [ಕ್ರಿ] ಅಡ್ಡಲಾಗಿರು (ಪಡೆಗಡ್ಡಮಿರ್ದ ಬೆಟ್ಟಿಟ್ಟೆಡೆ ಮಟ್ಟಮಿಱುಂಬಮೆಂಬಿವಂ ಸಣ್ಣಿಸಿ: **ಆದಿಪು,** ೧೧. ೪೭)

ಅಡ್ಡಾಯುಧ – [ನಾ] ಒಂದು ಬಗೆಯ ಕತ್ತಿ (ಉದ್ಧೃಷ್ಟರಶ್ಮಿ ಪಾಂಡುರಪಾಳಿತ ಕರವಾಳ ಅಡ್ಡಾಯುಧಂ ಇಕ್ಷುದಂಡಪ್ರಣೀತ ಕ್ರೀಡಾವಖಂಡಿತೋಚ್ಚಂಡ ಶುಂಡಾಳಗಾತ್ರಾಪರಪತಿ: **ಆದಿಪು,** ೧೩. ೪೫ ವ)

ಅಣ್ – [ಕ್ರಿ] ಲೇಪಿಸು (ಕತ್ತುರಿಯೊಳ್ ಅಣ್ಬ ಪರಿಚೆಯುಂ: **ಆದಿಪು,** ೪. ೪೧ ವ)

ಅಣಂ – [ಅ] ಖಂಡಿತವಾಗಿ (ಇದು ದಲ್ ನೋಡ ಮನುಷ್ಯವಿದ್ಧಂ ಅಣಂ ಅಲ್ತು ಈ ಗಂಡರೂಪಾವುದು ಇಂತಿದಱೊಳ್ ತಳ್ತಸೆದಿರ್ದ ಪೆಣ್ ಸುರವಧೂಬಿಂಬಂ: **ಆದಿಪು,** ೩. ೮೭); [ಅ] ಅಲ್ಪಸ್ವಲ್ಪವೂ

(ಆಗಳುಮಿಂದುಸೂರ್ಯರಣಮಿಲ್ಲದೆ ಕಟ್ಟಿಲೆಯೆಂಬುದಿಲ್ಲ: **ಪಂಪಭಾ,** ೪. ೧೬)

ಅಣಕ – [ನಾ] ಪೀಡೆ, ಹಿಂಸೆ (ಧಾತ್ರಿ ಬಿಣ್ಪಿದೆನಗೆಂದಿನಂದವಲ್ತು ಅಣಕಮಿದೆಂದು ಕಣ್ ತುಮುಳ್ಚಿ: **ಪಂಪಭಾ,** ೯. ೯೯)

ಅಣಮೆ – [ಕ್ರಿವಿ] ಸ್ವಲ್ಪವಾದರೂ (ಪಿಡಿದಾರ್ಪ ಭರದಿಂ ಎತ್ತಲ್ಕೊಡರಿಸಿದೊಡೆ ನೆಲದಿಂ ಅಣಮೆ ತಳರದೆ ಬಿಲ್ ನಿಲ್ತೊಡೆ: **ಪಂಪಭಾ,** ೩. ೫೯)

ಅಣಲ್ – [ನಾ] ಗಂಟಲು (ತನ್ನುಮಂ ಅಣಲೊಳ್ ಅಡ'ಸಲೆಂದಿರ್ದ ವಿಕ್ರಮಾರ್ಜುನನಂ ನೋಡಿ; **ಪಂಪಭಾ,** ೧೨. ೧೬೯ ವ)

ಅಣಿ – [ನಾ] ಕಾಲಾಳುಸೈನ್ಯ (ರಥಂ ಮಕರಂಗಳಂತೆ ಅಗುರ್ವುವರಿಯುತ್ತುಂ ಇರ್ಪ ಅಣಿ ಬೃಹದ್ಬಡಬಾನಳನಂತೆ: **ಪಂಪಭಾ,** ೮. ೯೯)

ಅಣಿಮಾ – ದೇವತೆಗಳು ಹೊಂದುವ ಎಂಟು ಬಗೆಯ ಋದ್ಧಿಗಳಲ್ಲಿ ಒಂದಾದ ವಿಕ್ರಿಯಾಋದ್ಧಿಯ ಅಣಿಮಾ, ಲಘಿಮಾ, ಗರಿಮಾ, ಅಂತರ್ಧಾನ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವಗಳೆಂಬ ಎಂಟು ಸಾಮರ್ಥ್ಯಗಳಲ್ಲಿ ಒಂದು; ಅತ್ಯಂತ ಸೂಕ್ಷ್ಮರೂಪವನ್ನು ಹೊಂದಬಲ್ಲ ಶಕ್ತಿ (ಅಣಿಮಾದ್ಯಷ್ಟ ಗುಣೈಶ್ವರ್ಯೋಪೇತನುಂ ಸಪ್ತಸಾಗರಪ್ರಮಿತಜೀವಿತನುಂ; **ಆದಿಪು,** ೨. ೧೯ ವ)

ಅಣಿಯರಂ – [ಗು] ಅಧಿಕ, ಹೆಚ್ಚು (ಬೆಡಂಗು ಅಣಿಯರಂ ಈಕೆಗೆಂದು ಪೊಗಟ್ಟರ್ ಕೆಲರಲ್ಲಿ ಹಿಮಾಂಶುವಕ್ತ್ರೆಯಂ: **ಆದಿಪು**, ೪. ೪೭); [ಕ್ರಿವಿ] ತ್ವರಿತತೆ (ದ್ರುಪದನಂ ಗಡ ಕೋಡಗಗಟ್ಟುಗಟ್ಟಿ ತಂದಣಿಯರಮೊಪ್ಪಿಸಿಂತಿದನೆ ಬೇಡಿದೆನಾಂ: **ಪಂಪಭಾ,** ೨. ೬೧); [ಗು] ಅತಿಶಯ (ಅಣಿಯರಮೊದವಿದ ಮುಳಿಸಿನೊಳಣಂ ಉಱದವರೆಂದು ರಣದೆ ಜಯಿಸಲ್: **ಪಂಪಭಾ,** ೧೦. ೧೧); [ಕ್ರಿವಿ] ಸಡಗರದಿಂದ (ಸಾಮಂತಚೂಡಾಮಣಿಯಂ ಅಣಿಯರಂ ಬಂದು ಕಂಡಂ ಸುರೇಂದ್ರಂ: **ಪಂಪಭಾ,** ೭. ೯೫)

ಅಣುಗ – [ನಾ] ಪ್ರೀತಿಪಾತ್ರ (ಅವರೊಳ್ ಕಿಱಯಾತನೆ ನೃಪತಿಗಂ ಪರಿವಾರಕ್ಕಂ ಅಣುಗನಾಗಿ ಬಳೆಯೆ: **ಆದಿಪು,** ೨. ೩೭ ವ)

ಅಣುಗದಮ್ಮ – [ನಾ] ಮುದ್ದು ತಮ್ಮ (ಎನ್ನಣುಗದಮ್ಮನಿಲ್ಲದೆ ಬಿನ್ನನೆ ಸಾಮ್ರಾಜ್ಯಮಿನಿತುಂ ಆದ ಎಱಕಮುಂ ಅತ್ಯುನ್ನತಿಯುಲ್ತು: **ಆದಿಪು**, ೧೪. ೬೨)

ಅಣುಗಭೋಗಿ – [ನಾ] ಪ್ರೀತಿಪಾತ್ರನಾದ ಭೋಗಿ, ವಿಲಾಸಿನಿ (ವಿಳಾಸಂಬೆರಸು ಅಣುಗಭೋಗಿಯರ್ ಕರಮೆಸೆದರ್: **ಆದಿಪು,** ೧೧. ೪೦)

ಅಣುಗಮೆಯ್ದುನ – [ನಾ] ಪ್ರೀತಿಯ ಮೈದುನ (ನಿಂದಂ ಸುಯೋಧನನಣುಗಮಯ್ದುನಂ ಸಿಂಧುದೇಶಾಧೀಶ್ವರಂ ಜಯದ್ರಥಂ: **ಪಂಪಭಾ,** ೧೦. ೫೭ ವ)

ಅಣುಗರ್ – [ನಾ] ಮಕ್ಕಳು (ಅರಸಿಯರಂ ಅಣುಗರಂ ಬೇಟ್ಪರುಮಂ ಮೊನೆಗಾಱರಂ ಪ್ರಗೀತರಂ ಇಂಬಾಗಿರೆ ಚೌಪಳಿಗೆಗಳೊಳ್ ಕುಳ್ಳಿರಿಸಿದರ್ ಒಡನೆಸೆಯೆ ನೆರೆದ ಪುರಜನಸಹಿತಂ: **ಪಂಪಭಾ,** ೨. ೬೭)

ಅಣುಗಿಱಿವೊಯ್ – [ಕ್ರಿ] [ಅಣುಗು+ಇಱಿ=ಹತ್ತಿರ ಬರು+ಪೊಯ್] ಹತ್ತಿರದಿಂದ ತಿವಿದು ಹೊಡೆ (ರಥದಿಂದ ಇಳೆಗಿಟಿದವಂ ಅವನಿಪತಿಯಂ ಅಣುಗಿಱಿವೊಯ್ದಂ: **ಪಂಪಭಾ,** ೧೩. ೪೭)

ಅಣುಗು – [ನಾ] ಪ್ರೀತಿ (ಎಂದಿಂತು ತಮ್ಮತಮ್ಮಣುಗಿಂದಂ ಪೆಸರಿಟ್ಟು ಬುಧಸಮೂಹಮಿದಂ ಪೇಟ್ಟಿಂದೊಡೆ: **ಆದಿಪು,** ೧. ೩೪); ವಾತ್ಸಲ್ಯ (ಅಣುಗಿನೊಳೆನ್ನ ಚಟ್ಟರೊಳ್ ಈತನೆ ಜೆಟ್ಟಿಗನೆಂದು ವಿದ್ದೆಯಂ ಗುಣಕಱುಗೊಂಡು ಕೊಟ್ಟು: **ಪಂಪಭಾ,** ೨. ೬೧)

ಅಣುಗೆ – [ನಾ] ಪ್ರೀತಿಪಾತ್ರಳು (ಆನನಾಂಬುಜಮನೊಯ್ಯನೆ ಬಾಗಿರೆ ಕಾದಲಂಗೆ ಸಯ್ತಂತಿರು ನಾಣ್ಚದೆ ಎಂದು ಅಣುಗೆಯರ್ ಪಿಡಿದು ಅಟ್ಟಿಱೊಳ್ ಎತ್ತಿ ಬುದ್ಧಿವೇಟ್ಪಂತೆ: **ಪಂಪಭಾ,** ೩. ೭೮)

ಅಣುವ – [ನಾ] ಹನುಮಂತ (ನಿಮ್ಮಣ್ಣಂ ಅಣುವನೆಂ ಆನಪ್ಪೆಂ ಎಂದು ಪೇಟ್ಟುದುಂ ಆಗಳ್ ಸಾಷ್ಟಾಂಗಮೆಱಗಿ: **ಪಂಪಭಾ,** ೮. ೩೩ ವ)

ಅಣುವ್ರತ – [ನಾ] [ಜೈನ] ಶ್ರಾವಕರು ಅನುಸರಿಸಬೇಕಾದ ಐದು ವ್ರತಗಳು: ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ (ಬಾದರರೂಪದಿಂದೆ ಕೊಲ್ಲದ ಪರನಾರಿಗಾಟಿಸದ ಕಳ್ಳದ ಅಸತ್ಯದೊಳೊಂದದ ಆಗಳುಂ ಕುದಿದಪತೃಷ್ಣೆಯಂ ಕುಸಿದು ಮಾಣಿಸುವ ಅಯ್ದು ಅಣುವ್ರತಂಗಳಂ: **ಆದಿಪು,** ೬. ೭)

ಅಣೆ – [ಕ್ರಿ] [ಅಂಕುಶದಿಂದ] ತಿವಿ (ತನ್ನ ನಚ್ಚುವ ಕೆಯ್ದುಗಳನಿತುಂ ಪೊಳೆಯೆ ಮಸೆದೊಟ್ಟಿ ಮತ್ತಹಸ್ತಿಯನಣೆದು ತೋಱಿಕೊಟ್ಟಾಗಳ್: **ಪಂಪಭಾ,** ೧೨. ೮೩ ವ)

ಅಣೋರಣ್ವಂತರವ್ಯತಿಕ್ರಮಣಮಾತ್ರಂ – [ನಾ] ಅಣುಮಾತ್ರದ ಅಂತರದ ಉಲ್ಲಂಘನೆ (ಜಿನ ನಿನ್ನಂ ಸ್ಮರಿಯಿಪುದಂ ಅಣೋರಣ್ವಂತರ ವ್ಯತಿಕ್ರಮಣಮಾತ್ರಮಂ ಮಱೆದಪನೇ: **ಆದಿಪು,** ೧೦. ೫೯)

ಅಣ್ಕೆ – [ನಾ] ಲೇಪನ (ಚೆಂಬೊನ್ನ ಪಟ್ಟವಣೆ ರನ್ನದ ಕನ್ನಡಿವೆರಸು ಸರ್ವಧಾನ್ಯದ ನಡುವಿರೆ ಮೊಸರಣ್ಕೆವೆರಸಿದ ಎಳೆದಳಿರ್ಗಳಸಂ: **ಆದಿಪು,** ೪. ೩೩)

ಅಣ್ಪು – [ನಾ] ಲೇಪನ (ಮೃಗಮದದಣ್ಪು ಜಾದಿಯ ಬಱಲ್ಮುಡಿ ನೆಯ್ದಿಲ ಕರ್ಣಪೂರಂ ಉತ್ತು: **ಆದಿಪು,** ೧೨. ೧೨)

ಅಣ್ಮಿ ಸಾಯಿಂ – [ಕ್ರಿ] ಹೋರಾಡಿ ಸಾಯಿರಿ (ಕುರುಕ್ಷೇತ್ರಮಂ ಕಳವೇಟ್ಟಿಟ್ಟಿದಂ ಅಣ್ಮಿ ಸಾಯಿಂ ಉಟಿಯಿಂ ನಿಮ್ಮೊಂದು ಬಾಟ್ವಾಸೆಯಂ: **ಪಂಪಭಾ,** ೯. ೯೦)

ಅಣ್ಮು – [ಕ್ರಿ] ಧೈರ್ಯಮಾಡು (ಸಂಸೃತಿಯೊಳ್ಮತ್ತೆ ಗಡಂ ಕಡಂಗಿ ತೊಡರ್ದಾಂ ಮಾಣ್ದಿರ್ಪೆಂ ಎಂದು ಅಣ್ಮಿ ಘೋರ ತಪೋವೃತ್ತಿಯನಾಂತ ಪೆಂಪು ಅತಿಬಳಂಗಕ್ಕುಂ ಪೆಱರ್ಗಕ್ಕುಮೇ: **ಆದಿಪು,** ೧. ೮೧); [ನಾ] ಪರಾಕ್ರಮ (ತಪೋವನದ ಮುನಿಜನಮುಂ ದೇವತಾಜನಮುಂ ತನ್ನ ಅಣ್ಮಂ ಪೊಗಟ್ಟಿ: **ಪಂಪಭಾ,** ೨. ೨೬ ವ); [ಕ್ರಿ] ಪ್ರಯತ್ನಿಸು (ಬಳೆಯಲ್ಕಣ್ಮಿದುದಿಲ್ಲ ವಿಂಧ್ಯಗಿರಿಯುಂ ತನ್ನಾಜ್ಞೆಯಿಂದೊರ್ಮೆ ಮುಕ್ಕುಳಿಸಲ್ ಅಂಬುನಿಧಿ ಸಾಲ್ದುದಿಲ್ಲ: **ಪಂಪಭಾ,** ೪. ೨೦); [ಕ್ರಿ] ಪೌರುಷ ತೋರು

(ಅನಿತು ಅಣ್ಮಿ ಸತ್ತ ನರನಂದನಂಗೆ ಕಣ್ ಸೋಲ್ತು ಬಗೆಯದೆ ಅಮರೇಂದ್ರನಂ ಇನ್ನೆನಗೆ ಎನಗೆಂಬ ದೇವಾಂಗನೆಯರ ಕಳಕಳಮೆ ಪಿರಿದುಮಾಯ್ತು: **ಪಂಪಭಾ,** ೧೧. ೧೦೫)

ಅಣ್ಮುಗುಂದು – [ಕ್ರಿ] ಪೌರುಷ ಕುಗ್ಗು (ಅಳ್ಕದೆ ಬಳ್ಕದೆ ತನ್ನೊಡಲ್ ಪಡಲ್ವಡುವಿನಮಣ್ಮುಗುಂದದನೆ ದಲೇನಭಿಮಾನಧನಂ ಸುಯೋಧನಂ: **ಪಂಪಭಾ,** ೧೩. ೯೭)

ಅತನು – [ನಾ] ದೇಹವಿಲ್ಲದವನು, ಮನ್ಮಥ (ಎನಗೆಡೆವೇಟ್ಟುಮೆ ಎಂಬವೊಲ್ ಅನಿಬರುಮಂ ಪೊಣ್ದಂ ಅತನು ನನೆಯಂಬುಗಳಿಂ: **ಪಂಪಭಾ**, ೩. ೪೨)

ಅತನುಚರಿತ – [ನಾ] ಕಾಮಕೇಳಿಯ ಚರಿತ್ರೆ (ತರಳಾಪಾಂಗವಿಳಾಸ ಸ್ಫುರಿತಮೆ ಲೆಕ್ಕಣಿಕೆಯಾಗೆ ನಲ್ಲಳ್ ಮುನ್ನಂ ಬರೆದತನು ಚರಿತಮೀಗಳ್ ಬರೆದಂತಿರ್ಪುದು ಮನ್ಮನಃಪುಸ್ತಕದೊಳ್: **ಆದಿಪು**, ೪. ೧೪)

ಅತನುಧನು – [ನಾ] ಕಾಮನ ಬಿಲ್ಲು (ಲತೆಯುಂ ಕರ್ನೆಯ್ದಿಲುಂ ಸೋಗೆಯುಂ ಅತನುಧನುರ್ಲೇಖೆಯುಂ: **ಆದಿಪು,** ೪. ೨೦)

ಅತನುಪರಿತಾಪಿತ – [ಗು] ಕಾಮಬಾಧೆಯಿಂದ ಬೇಯುವ (ತನ್ನ ನಾಣ್ಗಾಪನೆ ಬಗೆದು ಅತನುಪರಿತಾಪಿತಶರೀರನಾಗಿ ಶಂತನು ಕರಂಗಿ: **ಪಂಪಭಾ,** ೧. ೭೧ ವ)

ಅತನುಮತ್ತದ್ವಿರದ – [ನಾ] ಕಾಮನ ಮದ್ದಾನೆ (ನೋಡುವ ನೋಟಕರಂ ಅತನುಮತ್ತದ್ವಿರದಂ ಕೋಡಂ ಕಾಣಿಸಿ ಪಿಡಿದೀಡಾಡುವುದು ಎಂಬಿನೆಗಂ ಆಡಿ ರಂಜಿಸಿದಳವಳ್: **ಆದಿಪು,** ೯. ೩೭)

ಅತನುರಸ – [ನಾ] ಶೃಂಗಾರರಸ **(**ಅತನುರಸೋಪೇತವಿಳಂಬಿತ ಮಧ್ಯಮದ್ರುತಲಯಂಗಳೊಳ್: **ಆದಿಪು,** ೯. ೨೩)

ಅತನುವಿಕಾರ – [ನಾ] ಕಾಮವಿಕೃತಿ (ಪಲವುಂ ಧಾರಾಗೃಹಂಗಳ್ ಅತನುವಿಕಾರಮನೊದವಿಪುದು ದೇವದಂಂಪತಿಗದಱೊಳ್: **ಆದಿಪು**, ೬. ೯೫)

ಅತನುಶಿಖಿ – [ನಾ] ಕಾಮದ ಬೆಂಕಿ (ಸುರಯಿಯ ಬಿರಿಮುಗುಳ್ಗಳ ಪೊರೆವೊರೆಯೊಳ್ ಪೊರೆವೊರಕನಲ್ಲದೆ ಅಲ್ಲುಗುವ ರಜಂಬೊರೆದು ಪರಕಲಿಸಿದ ಅಳಿಕುಳಪರಿಕರಮುಮಂ ಅತನುಶಿಖಿಯ ಕಿಡಿಗಳೆ ಗೆತ್ತಳ್: **ಪಂಪಭಾ**, ೫. ೫)

ಅತನುಶ್ರೀ – [ನಾ] ಮನ್ಮಥಲಕ್ಷ್ಮಿ (ಕಾಮಕಲ್ಪಲತೆಯೊ ಮೇಣಂಗನಾರೂಪದ ಅಬ್ಜಿನಿಯೊ ಮೇಣ್ ಲಲನಾಸ್ವರೂಪದ ಅತನುಶ್ರೀರೂಪಮೋ: **ಆದಿಪು**, ೩. ೪೭)

ಅತನುಶ್ರೀಕಾಮಿನಿ – [ನಾ] ರತಿದೇವಿ (ಅತನುಶ್ರೀಕಾಮಿನೀ ಮಣಿದರ್ಪಣಮೆನಿಸುವ ತದ್ವಕ್ತ್ರಶೀತಾಂಶು ನೇತ್ರಾಸಿತ ನೀರೇಜಾತಯುಗ್ಮಕ್ಕೆ ಅಮೃತಸಲಿಲಸಂಸೇಕಮಂ ಮಾಡೆ: **ಆದಿಪು**, ೮. ೨೩)

ಅತರ್ಕ್ಯ – [ಗು] ನಿರ್ಣೀತವಾದುದು (ಅತರ್ಕ್ಯಂ ವಿಕ್ರಾಂತಂ ಭುಜಬಲಮಸಾಮಾನ್ಯಂ ಅಧಿಕಂ ಪ್ರತಾಪಂ ಪೋಗೀತಂಗೆಣೆಯೆ: **ಪಂಪಭಾ**, ೧. ೮೦); **[ಗು]** ತರ್ಕಿಸಲಸಾಧ್ಯವಾದುದು (ಇದು ದಲ್ ಚೋದ್ಯಂ ಅತರ್ಕ್ಯಂ ಅದ್ಭುತಂ ಅಸಂಭಾವ್ಯಂ ವಿಚಾರಕ್ಕೆ ಬಾರದುದು: **ಪಂಪಭಾ**, ೮. ೮೪)

ಅತರ್ಕ್ಯಬೋಧ – [ನಾ] ನಿಲುಕದ ಜ್ಞಾನವುಳ್ಳವನು (ಸುತನೆಂಬ ಮೇಳದಿಂ ನಿನಗೆ ಅತರ್ಕ್ಯಬೋಧಂಗೆ ಯುಕ್ತಿಯಂ ತೋಱೆ: **ಆದಿಪು**, ೮. ೧೪)

ಅತಸಿ – [ನಾ] ಅಗಸೆ (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರ ತಿಳ ಅತಸಿ ಮಸೂರಿಕಾ: **ಆದಿಪು,** ೬. ೭೨ ವ)

ಅತಳಪಟಳ – [ನಾ] ಅತಳ ಎಂಬ ಪಾತಾಳದ ಮಾಳಿಗೆ (ಲಯಘನಘಟೆಗಳ ಮೊಟಗೆನಿಸೆ ಪೊಟ್ಟಗೆ ಒಡೆದತ್ತು ರಟತ್ ಪಟು ಪಟಹ ಶಂಖ ಭೇರಿಯ ಚಟುಳಿತದಿಂದ ಅತಳಪಟಂ ಅಂಬರಪಟಳಂ: **ಪಂಪಭಾ**, ೧೦. ೬೭)

ಅತಿಕ್ರಮಿಸು – [ಕ್ರಿ] ಮೀರು, ಉಲ್ಲಂಘಿಸು (ಕಿರಾತದೂತಂ ತನ್ನತಿಕ್ರಮಿಸಿ ನುಡಿದುದರ್ಕೆ ಮುಳಿದು: **ಪಂಪಭಾ,** ೮. ೧೮ ವ)

ಅತಿಕ್ರಾಂತ – [ಗು] ಅಳಿದು ಹೋದ (ಅಂತಿಕ್ರಾಂತ ಅನೇಕ ಚಕ್ರವರ್ತಿಗಳ ವಿಶದಯಶಃಪುಂಜಮುಮಂ: **ಆದಿಪು**, ೧೩. ೬೯ ವ)

ಅತಿಕ್ರಾಂತೆ – [ನಾ] ಗತಿಸಿದವಳು, ಮೃತಿಹೊಂದಿದವಳು (ಅನ್ನೆಗಂ ಸ್ವಯಂಪ್ರಭಾಭಿಧಾನೆಯರ್ ಪಲಂಬರುಂ ಅತಿಕ್ರಾಂತೆಯರಾಗೆ: **ಆದಿಪು**, ೨. ೭೨ ವ)

ಅತಿತರಳ – [ಗು] ಅತ್ಯುಜ್ವಲ (ಉದ್ದೀಪಿತರತ್ನಪ್ರದೀಪಂಗಳಿಂದಂ ಅತಿತರಳ ಮುಕ್ತಾಮಣಿಪ್ರಲಂಬಂಗಳಿಂದಂ: **ಆದಿಪು,** ೨. ೩೨ ವ)

ಅತಿದಾಹಜ್ವರ – [ನಾ] ತುಂಬ ಸುಡುವ ಜ್ವರ (ಉರಿಯಳುರ್ವಂತೆ ಅತಿದಾಹಜ್ವರಮಳುರೆ: **ಆದಿಪು,** ೨. ೧೨)

ಅತಿದ್ರುತ ಪ್ರವಾಹಮಾನ – [ಗು] ತುಂಬ ವೇಗವಾಗಿ ಹರಿಯುವ (ತಡತಡಿಸಿ ಪರಿತಂದು ಅತಿದ್ರುತಪ್ರವಾಹಮಾನ ಅರುಷ್ಕರ ದ್ರವಾವರ್ತಗರ್ತಗಂಭೀರೆಯುಂ: **ಆದಿಪು**, ೫. ೮೭ ವ)

ಅತಿರಕ್ತ – [ಗು] ಕಡುಗೆಂಪು (ರಕ್ತಾಶೋಕಪಲ್ಲವಾಧರೆಯರ್ ಅತಿರಕ್ತಪಲ್ಲವಾಶೋಕ ಆನೋಕಹಂಗಳುಮಂ: **ಆದಿಪು**, ೧೧. ೯೫ ವ)

ಅತಿರಥ – [ನಾ] ಅತಿರಥ, ಸಮರಥ, ಮಹಾರಥ ಮತ್ತು ಅರ್ಧರಥ ಎಂಬ ನಾಲ್ಕು ಶ್ರೇಣಿಯ ರಥಿಕರಲ್ಲಿ ಆತ್ಯಂತ ಶ್ರೇಷ್ಠನಾದವನು, ಅಪರಿಮಿತ ಸಂಖ್ಯೆಯ ಶತ್ರುಗಳೊಡನೆ ಯುದ್ಧಮಾಡಬಲ್ಲವನು (ಎಂಬುದುಂ ಅತಿರಥಮಥನನಂ ಇಂತೆಂದಂ: **ಪಂಪಭಾ**, ೨. ೮೦ ವ)

ಅತಿವೃತ್ತ – [ಗು] ತುಂಬ ಗುಂಡಗಿನ (ಅತಿವೃತ್ತದೆ ರವಿಬಿಂಬಾಕೃತಿ ಯೋಜನಶತಸಹಸ್ರವಿಷ್ಕಂಭಂ: **ಆದಿಪು,** ೧. ೪೯)

ಅತಿಶಯಂಗಳ್ – [ನಾ] [ಜೈನ] ಜಿನನ ಹತ್ತು ವಿಶೇಷತೆಗಳು (ಮಿತನಖಕೇಶಶೋಭಿತತನುತ್ವಂ ಆಭುಕ್ತಿ ಉಪಸರ್ಗಭಾವಂ ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ ಅಪಕ್ಷ್ಮತಾಸಂ ಆಯತಗಗನಪ್ರಚಾರಂ ಅಪಜೀವವಧಂ ಪರಿವೀತದೇಹಬಿಂಬತೆವೆರಸು ಇಂತು ಪತ್ತಿತಿಶಯಂಗಳ್

ಇವೇಂ ಜಿನನೊಳ್ ಪೊದಳ್ದುವೋ: **ಆದಿಪು**, ೧೦. ೪೩) [ಇವುಗಳೊಡನೆ **'ಸುಭಕ್ಷೆ'** ಸೇರಿ ಒಟ್ಟ ಹತ್ತು ಅತಿಶಯಗಳು]; ಜಿನನ ಎಂಟು ವಿಶೇಷತೆಗಳು (ಕರ್ಮಾರಿವಿಜಯ, ಅನಂತಚತುಷ್ಟಯಪ್ರಾಪ್ತಿ, ವಾಕ್, ಪೂಜಾ, ಆಸ್ಥಾಯಿಕಾ, ವಿಹಾರ, ಶರೀರ, ಪ್ರಕೃತಿಗಳೆಂಬ ಎಂಟುಂ ಅತಿಶಯಂಗಳಂ ಅತಿಶಯಭಕ್ತಿಯಿಂ ಸ್ತುತಿಯಿಸಿ: **ಆದಿಪು**, ೧೦. ೪೭)

ಅತೀಂದ್ರಿಯ – **[ನಾ]** ಇಂದ್ರಿಯಾತೀತತೆ (ಶಬ್ದ ಸ್ಪರ್ಶ ರೂಪ ರಸ ಗಂಧ ಸಮುದ್ಭವಸುಖದೊಳ್ ತೊಡರ್ವುದೆ ಸುಖಂ ಅವಿಲ್ಲದಂದು ಇಲ್ಲ ಅದರ್ಕೆ ಅತೀಂದ್ರಿಯಮೆ ಸುಖಂ: **ಆದಿಪು**, ೧೪. ೧೨೬)

ಅತೀಂದ್ರಿಯಸುಖ – **[ನಾ]** ಇಂದ್ರಿಯಗಳಿಗೆ ಮೀರಿದ ಸುಖ (ಅತೀಂದ್ರಿಯಸುಖಾಮೃತಾಂಬುನಿಧಿ ನಿವಾಸಮೊಂದೊಂದಂ ಆತ್ಮತತ್ತ್ವವಿದ ಮುಕ್ತಿಮಾರ್ಗಮನೆ ಕೇಳೆ ಕಂಡ್ಯೆ: **ಆದಿಪು**, ೧೩. ೮೫)

ಅತೀತಭವ – **[ನಾ]** ಹಿಂದಿನ ಜನ್ಮ (ಅತೀತ ಭವಾಂತರದೊಳೀ ವರಾಹನುಂ ಅರಸಾ ಈ ವಿಷಯದ ವಿಜಯಪುರದೊಳ್ ಆನಂದನೃಪತಿಗಂ ವಸಂತಸೇನೆಗಂ ಹರಿಕಾಂತನೆಂಬ ತನಯಂ: **ಆದಿಪು**, ೫. ೧೬ ಮತ್ತು ೧೬ ವ)

ಅತೀತನಾಗು – **[ಕ್ರಿ]** ಸಾಯು (ಇತ್ತಲ್ ಅಮರಾಪಗಾಸುತನ ಮೊನೆಯೊಳ್ ಭರಂಗೆಯ್ದು ಕಾದುವ ಸೇನಾನಾಯಕಂ ಶ್ವೇತಂ ತನ್ನ ತಮ್ಮಂ ಅತೀತನಾದುದಂ ಕೇಳ್ದು: **ಪಂಪಭಾ**, ೧೦. ೧೧೨ ವ)

ಅತುಚ್ಛ – **[ಗು]** ಕೀಳಲ್ಲದ, ಶ್ರೇಷ್ಠ (ದೇಹಪ್ರಭಾಪ್ರವಾಹ ಲಲಿತಮಣಿ ದೀಪ್ತಿಪ್ರಸರದೊಳ್ ಅತುಚ್ಛ ಮಳಯಜಚ್ಛಟಾಸಿಕ್ತ ಮರಕತಮಣಿಕುಟ್ಟಿಮಪ್ರಕೀರ್ಣ: **ಆದಿಪು**, ೭. ೨೭ ವ); **[ಗು]** ದೊಡ್ಡ (ತದ್ಬಲಕರಟಿಕಟಬಾಹುಗಳ್ ಅನಲ್ಪ ಅತುಚ್ಛ ಛಿದ್ರಂಗಳ್ಮಾಡಲ್ಪಡದೆಯುಂ: **ಆದಿಪು**, ೧೪. ೧೦೩ ವ)

ಅತ್ತ – **[ಅ]** ಆ ಬಳಿಕ, ಆಮೇಲೆ (ಭೋಗಿಪೆಂ ಎನ್ನ ಜವ್ವನಮುಂ ಈ ಧನಮುಂ ತವುವನ್ನೆಗಂ ಕುಚಾಭೋಗ ಭರಾನತಾಂಗಿಯರೊಳ್ ಅನ್ನೆಗಂ ಅತ್ತ ಅಱನಂ ತಗುಳ್ವೆಂ: **ಆದಿಪು**, ೩. ೬೩)

ಅತ್ತಣಿಂ – **[ಕ್ರಿವಿ]** ದೆಸೆಯಿಂದ (ಕಾಯಾಕಾರಪರಿಣತ ಪೃಥ್ವಿ ಅಪ್ ತೇಜೋ ವಾಯುಗಳತ್ತಣಿಂ ಬಂದು ಗರ್ಭಾದಿಮರಣ ಪರ್ಯಂತಂ ತದಾತ್ಮಕಂ ಚೈತನ್ಯಂ ಪುಟ್ಟುಗುಂ: **ಆದಿಪು**, ೨. ೯ ವ); **[ಕ್ರಿವಿ]** ಆ ಕಡೆಯಿಂದ ಎಂಬ ಅರ್ಥದ ಪಂಚಮೀ ವಿಭಕ್ತಿ ಪ್ರತ್ಯಯ (ದಾಯಿಗರತ್ತಣಿನಪ್ಪ ಅಪಾಯಕೋಟಿಗೆ ಪವಣಿಲ್ಲ ಕಲ್ಪಿಗೆ ಎಡೆಯಾವುದೊ ಪಾಟಿಯ ಬಟ್ಟೆದಪ್ಪಿ ಮುಂ ನೆಗಟಿಲ್ದೆಯಿಲ್ಲ: **ಪಂಪಭಾ**, ೭. ೨೧)

ಅತ್ತಪರ – **[ನಾ]** ಗುರಾಣಿ (ಧಗಧಗಿಸುವ ಜ್ವಾಲಾಮಾಲೆಗಳೊಳ್ ಕಿಟ್ಟಿ ಬಾಳುಂ ಅತ್ತಪರಮುಂ ಅಭೇದ್ಯಕವಚಮುಂ ಬೆರಸೊಗೆದ ಧೃಷ್ಟದ್ಯುಮ್ನೆಂಬ ಮಗನುಮಂ: **ಪಂಪಭಾ**, ೩. ೩೨ ವ)

ಅತ್ತಳಗ – **[ನಾ]** ತಳಮಳ (ಒದವಿದ ಬೇಟದತ್ತಳಗದೊಳ್ ಮುಳಿಸಂ ಪುರುಡುಂಟುಮಾಡೆ: **ಆದಿಪು**, ೪. ೧೦); ಅಸಾಧ್ಯ (ತವೆ ನೋಡಲ್ ಮೆಚ್ಚಲ್ ಮನದೊಳಸದಳಂ ಮೆಚ್ಚಿ ನಾನಾ ವಿಶೇಷಸ್ತವದಿಂದಂ ಕೀರ್ತಿಸಲ್ಕೆ ಅತ್ತಳಗಂ: **ಆದಿಪು**, ೫. ೧೦೦); **[ನಾ]** ಅಶಕ್ಯ (ಒದವಿದ ಬೇಟವಪ್ಪೊಡೆನಗತ್ತಳಗಂ ಬಗೆವೇಟಿಪ್ಪೊಡೆನ್ನ ಮೇಳದ ಕೆಳೆಯರ್ಕಳಿಲ್ಲ: **ಪಂಪಭಾ**, ೪. ೭೯); **[ನಾ]** ವ್ಯಥೆ (ಪಗೆಯೊಡ್ಡು ಗೆಲಲ್ಕಳುಂಬಮೆಂಬನಿತುವರಂ ಮನಕ್ಕೆ ನಿಮಗತ್ತಳಂ ಬರೆ ಮತ್ತೆ ಮಾಣ್ಬನೇ: **ಪಂಪಭಾ**, ೧೧. ೮೮)

ಅತ್ತಿಗೆ – **[ನಾ]** [ಅಟ್ಟಿಗೆ] ಪ್ರೀತಿಸಿದವಳು, ನಲ್ಲೆ (ಈಗಳಬ್ಬೆಯೆಂದತ್ತಿಗೆಯೆಂಬ ಮಾತನೆನಗೇನನೆನಲಕ್ಕುಮೊ ಪಂಕಜಾನನೇ: **ಪಂಪಭಾ**, ೧. ೭೫)

ಅತ್ತಿತ್ತೆಡೆಯಾಡು – **[ಕ್ರಿ]** ಅಲ್ಲಿ ಇಲ್ಲಿ ನಡುವೆ ಬಾ (ಮಜ್ಜನಂಬುಗದೆ ಆರೋಗಿಸಲೊಲ್ಲದೆ ಇರ್ಪ ಇರವಿದೇಂ ನಾಣಳ್ಕು ಇದೇಂ ಕಾಮನಂಬುಗಳ್ ಅತ್ತಿತ್ತೆಡೆಯಾಡೆ ಸೋಂಕವೆ ವಲಂ ನಿನ್ನಂ ಸರೋಜಾನನೇ: **ಪಂಪಭಾ**, ೪. ೬೮)

ಅತ್ಯಂತ ವಸ್ತು – **[ನಾ]** ತುಂಬ ಬೆಲೆಬಾಳುವ ವಸ್ತುಗಳು (ಅರಿಕೇಸರಿಯೆಂಬ ಸುಂದರಾಂಗನತ್ಯಂತ ವಸ್ತುವಂ ಮದಕರಿಯಂ ಹರಿಯಂ ಪಡಿವಡೆಗುರ್ಚಿದ ಕರವಾಳನೆ ತೋಱೆ ನೃಪತಿ ಗೆಲ್ಲಂಗೊಂಡಂ: **ಪಂಪಭಾ**, ೧. ೧೮)

ಅತ್ಯಧರೀಕೃತ – **[ಗು]** ಬಹುವಾಗಿ ಕೀಳುಮಾಡಲ್ಪಟ್ಟ (ಆಶ್ರಿತಾದ್ರಿ ನದಕೂಳಮಂ ಅತ್ಯಧರೀಕೃತ ಅನ್ಯಕುಕ್ಷೀಳಂ ಇಂದುಕಾಂತಸುನೀಳಮಂ ಎಯ್ದಿದಂ ಇಂದ್ರಕೀಳಮಂ: **ಪಂಪಭಾ**, ೭. ೭೬)

ಅತ್ಯನ್ತವಸ್ತ್ರ – **[ನಾ]** ಬೆಲೆಬಾಳುವ ಬಟ್ಟೆ (ಇದಿರೊಳ್ ಸೂಸುವ ಹೇಮಭಾಜನಚಯಕ್ಕೆ ಅತ್ಯನ್ತವಸ್ತ್ರಕ್ಕೆ ಮೆಚ್ಚಿದ ಅನರ್ಘ್ಯ ಆಭರಣಕ್ಕೆ: **ಆದಿಪು**, ೪. ೩೫)

ಅತ್ಯಾದರಸ್ಸಂಭ್ರಮಂ ಉತ್ಪಾದಯತಿ – ಅತಿಯಾದ ಸಡಗರ ಸಂಶಯವನ್ನು ಹುಟ್ಟಿಸುತ್ತದೆ (ಅತ್ಯಾದರಸ್ಸಂಭ್ರಮಂ ಉತ್ಪಾದಯತಿ ಎಂಬುದೀ ಪುರೋಚನನೆಂಬ ಬೂತು ಸುಯೋಧನನ ಬೆಸದಿಂ .. .. ನಮ್ಮಂ ಮೆಟ್ಟಿಡಿಸಲೆಂದೆ ಮಾಡಿದಂ: **ಪಂಪಭಾ**, ೩. ೪ ವ)

ಅತ್ಯಾಯಾಮ – **[ಗು]** ಅತಿ ವಿಸ್ತರ (ಜೀವಿತಾಶಯದಂತೆ ಅತ್ಯಾಯಾಮಮುಂ ಮುಕ್ತಜ್ವರದಂತೆ ನಿರ್ಮುಕ್ತೋಷ್ಮಮುಂ: **ಆದಿಪು**, ೧೩. ೪೬ ವ)

ಅತ್ಯಾಸನ್ನ – **[ಗು]** [ಅತಿ+ಆಸನ್ನ] ತುಂಬ ಹತ್ತಿರ (ಆದಿದೇವನ ಪರಿನಿಷ್ಕ್ರಮಣಕಲ್ಯಾಣಮತ್ಯಾಸನ್ನಮೆಂಬುದಂ: **ಆದಿಪು**, ೯. ೮ ವ)

ಅತ್ಯುನ್ನತಿ – **[ನಾ]** [ಅತಿ+ಉನ್ನತಿ] ಮಹಾ ವೈಯಕ್ತಿಕ ಪರಿಶುದ್ಧತೆ (ಚಲದೊಳ್ ದುರ್ಯೋಧನಂ ನನ್ನಿಯೊಳ್ ಇನತನಯಂ ಗಂಡಿನೊಳ್ ಭೀಮಸೇನಂ ಬಲದೊಳ್ ಮದ್ರೇಶಂ ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ: **ಪಂಪಭಾ**, ೧೪. ೬೪)

ಅದಂತೆ – **[ಕ್ರಿವಿ]** [ಅದು+ಅಂತೆ] ಅದು ಹಾಗೆಯೇ, ಹೇಳಿದ್ದು ನಿಜವೇ (ಅಱಿಯದೆಯುಂ ವಿಚಾರಿಸದೆಯುಂ ನೃಪ ನೀಂ ನೆಗಟ್ಟನ್ನನಲ್ಲಯ್ ಆನಱಿವೆಂ ಅದಂತೆ: **ಪಂಪಭಾ**, ೧೨. ೧೦೦)

ಅದಟ – [ನಾ] (ಅಧಟ) ಗರ್ವಿಷ್ಟ (ಮೀಱುವೆವೆಂಬ ಮಾಂಡಳಿಕರ್ ಈಯದರೆಂಬ ಅದಟರ್ ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱ್ ನಭಕ್ಕೆ ಪಾಱಿದುದು **ಪಂಪಭಾ,** ೧. ೧೧೯); ಶೂರ (ಅದಟಂ ಪುಟ್ಟಿದನಭಿಮನ್ಯು ಕಲಿತನಂ ಪುಟ್ಟುವವೋಲ್; **ಪಂಪಭಾ,** ೫. ೨೯)

ಅದಟುಗ್ಗು – [ಕ್ರಿ] ಶೌರ್ಯ ಕುಸಿ (ಸಾಯಕದ ಬೆಂಬಲದೊಳ್ ಕಲಿಯೆಂದು ಕೆಮ್ಮನಮ್ಮನ ಅದಟುಗ್ಗುತಿರ್ಪ ಇರವಿದೇಂ: **ಪಂಪಭಾ,** ೧೧. ೮೮)

ಅದಟು – [ನಾ] ಪರಾಕ್ರಮ (ಎಮ್ಮಂ ಪಿಡಿದೆಱೆವಂದಿನ ನಿಮ್ಮದಟುಗಳೀಗಳೆತ್ತವೋದುವೋ: **ಪಂಪಭಾ,** ೭. ೩೯)

ಅದಭ್ರ – [ಗು] ಅಧಿಕವಾದ (ಮುಂದೊಂದೆಡೆಯೊಳದಭ್ರಾಭ್ರ ವಿಭ್ರಮಭ್ರಾಜಿತೋತ್ತುಂಗಶೈಲಮಂ ಕಂಡು: **ಪಂಪಭಾ,** ೪. ೨೫ ವ)

ಅದವಟಲ್ – [ನಾ] ದುಃಖ (ನಲ್ಲಳಗಲ್ಕೆಯಿಂದಂ ಆದ ಅದವಟಲಚ್ಚಿಗಂ ಮಱುಕಮೆಂಬಿವಱಿಂದೆ ಕನಲ್ದು ಮುನ್ನೆ ಬೇಟದ ಸವಿಗಂಡನಲ್ಲದಱಿಯಂ ಶ್ರಮಮಂ ಕಡುವೇಟಕಾಱರಾ: **ಆದಿಪು,** ೧೨. ೨೨)

ಅದಱಿಯೆ – [ಅ] [ಅದಱ+ಎ] ಅದರ (ಧರೆಯೊಳ್ ಕುಲಾಲಚಕ್ರಂ ತಿರಿವಂತಿರೆ ತಿರಿಯೆ ಚಕ್ರಂ ಅದಱಿಯೆ ಬಱಿಯಿಂ ತಿರಿತಿರಿದು ಮಾಡಿದಂ ಕುಲಧರಕುಲದೊಳ್ ಪಿರಿದು ಮಹಿಮೆಯಂ ನಿಮ್ಮರಸಂ: **ಆದಿಪು,** ೧೪. ೬೯) [ಎಲ್. ಬಸವರಾಜು ಈ ಶಬ್ದದ ಜಾಗದಲ್ಲಿ **'ಅದಱಿಯ'** – ಅದಱ+ಎ+ಅ – ಬಳಸುತ್ತಾರೆ]

ಅದಱಿಂ – [ಅ] ಆದ್ದರಿಂದ (ಕಾಯಾಕಾರಪರಿಣತ ಪೃಥ್ವಿ ಅಪ್ ತೇಜೋ ವಾಯುಗಳತ್ತಣಿಂ ಬಂದು ಗರ್ಭಾದಿಮರಣ ಪರ್ಯಂತಂ ತದಾತ್ಮಕಂ ಚೈತನ್ಯಂ ಪುಟ್ಟುಗುಂ ಅದಱಿಂ ಪರಲೋಕಮಿಲ್ಲ: **ಆದಿಪು,** ೨. ೯ ವ)

ಅದಿತಿಪ್ರಿಯಪುತ್ರ – [ನಾ] ಸೂರ್ಯ (ಉದಯಗಿರಿತಟದೊಳ್ ಉದಯಿಸುವ ಅದಿತಿಪ್ರಿಯಪುತ್ರನಲ್ಲದೆ ಇತ್ತೊರ್ವಂ ಭಾನು ದಲ್ ಒಗೆದಂ: **ಪಂಪಭಾ,** ೧೨. ೫೩)

ಅದಿರ್ – [ಕ್ರಿ] ಹೆದರು (ಪ್ರತಿಜ್ಞಾಗಾಂಗೆಯಂಗೆ ಅದಿರದೆ ಇದಿರ್ನಿಲ್ವನ್ನರೊಳರೇ: **ಪಂಪಭಾ,** ೧. ೮೦); **[ಕ್ರಿ]** ಅಲುಗಾಡು, ಚಂಚಲಗೊಳ್ಳು (ಅದಿರದ ಚಿತ್ತಂ ಅಳ್ಕದ ಮನಂ ಬಗೆಗೊಳ್ಳದ ಮೋಹಂ ಎತ್ತಿ ಕಟ್ಟಿದ ಜಡೆ ತೊಟ್ಟ ರತ್ನಕವಚಂ: **ಪಂಪಭಾ,** ೭. ೭೯)

ಅದಿರ್ಪು – [ಕ್ರಿ] ನಡುಗಿಸು (ನಕುಳನಂ ಯಮನನದಿರ್ಪಲ್ವೇಟ್ಟಂತೆ ದಕ್ಷಿಣಾದಿಶಾಭಾಗಕ್ಕೆ ಬೆಸಸಿ: **ಪಂಪಭಾ,** ೬. ೨೮ ವ)

ಅದಿರ್ಪುಗೆಯ್ – [ಕ್ರಿ] ಪ್ರಯತ್ನಿಸು (ಈ ವನೇಭಮಾಘ್ರಾಣಿಸಿ ಪೆರ್ಚಿದ ಮಸಕದಿಂದೆ ಪಾಯಲ್ಕದಿರ್ಪುಗೆಯ್ದಪುದು ನೋಡ ವನವೇದಿಕೆಯಂ: **ಆದಿಪು,** ೧೧. ೬೪)

ಅದಿರ್ಮುತ್ತೆ – ಮಾಧವೀಲತೆ, ಇರುವಂತಿಗೆ, ವಸಂತದೂತಿ (ಮುಗುಳ್ವದನಾದ ಸಂಪಗೆ ಮಡಲ್ತದಿರ್ಮುತ್ತೆ ಮರದಲ್ದರಲ್ದ ಮಲ್ಲಿಗೆ: **ಪಂಪಭಾ,** ೫. ೩೫)

ಅದುಕಾರಣ – [ಅ] ಆ ಕಾರಣದಿಂದ (ಅದು ಕಾರಣಂ ಗಂಗಾನದಿಯ ತಟದೊಳ್ ವಾರಣವತಮೆಂಬುದು ಪೊಳಲ್ .. .. ಅಲ್ಲಿಗೆ ಪೋಗಿ ಸುಖಮಿರಿಂ: **ಪಂಪಭಾ,** ೨. ೯೨ ವ)

ಅದೃಶ್ಯೆ – [ನಾ] ಕಾಣಿಸದಾದವಳಾಗು (ಆ ಮಧುರಾಕಾರಲತಾಕೋಮಳೆ ತನಗಾಗಳ್ ಆಯುರಂತಂ ಬರೆ ಸೌದಾಮಿನಿವೊಲ್ ಭೋಂಕನೆ ಸುರಕಾಮಿನಿ ರಂಗದೊಳ್ ಅದೃಶ್ಯೆಯಪ್ಪುದುಂ: **ಆದಿಪು,** ೯. ೪೧)

ಅದೆಂತೆನ್ನ – [ಕ್ರಿ] [ಅದು+ಎಂತು+ಎನ್ನ] ಅದು ಹೇಗೆ ಎನ್ನುವೆಯೋ (ಎನ್ನ ನನ್ನಿಯ ಪೆಂಪು ನಿನ್ನ ಮಹತ್ವದಿಂದಮೆ ಸಂದುದು ಅದೆಂತೆನ್ನ: **ಪಂಪಭಾ,** ೯. ೧೭)

ಅದೇವರ್ – [ಕ್ರಿ] ಏನು ಮಾಡುತ್ತಾರೆ (ಒಡೆಯರ್ ಅದೇವರ್ ಎಂದು ನಿನಗಿತ್ತೊಡೆ ಪಟ್ಟಮಂ ಉರ್ಕಿದಪ್ಪೆ: **ಪಂಪಭಾ,** ೪. ೬)

ಅದೇಪಿರಿದು – [ನಾ] ಅದು ಏ ಪಿರಿದು, ಅದೇನು ಮಹಾ (ಎನ್ನ ವೇಟ್ಟುದಂ ತಣಿಯಲೀವುದು ಎನೆ ಪಾರ್ಥಂ ಅದೇಪಿರಿದು ಇತ್ತೆಂ: **ಪಂಪಭಾ,** ೫. ೭೧)

ಅದ್ಭುತತೇಜ – [ನಾ] ಮಹಾಕಾಂತಿ (ಜ್ಞಾನದಿನಿರ್ದು ನಿಟ್ಟಿಪೊಡೆ ದಿವ್ಯಮುನೀಂದ್ರಂ ಕೊಟ್ಟ ಮಂತ್ರಸಂತಾನಮನೋದಿಯೋದಿ ಯಮರಾಜನನದ್ಭುತತೇಜನಂ ಸರೋಜಾನನೆ ಜಾನದಿಂ ಬರಿಸೆ: **ಪಂಪಭಾ,** ೧. ೧೧೯)

ಅದ್ರೀಂದ್ರ – [ನಾ] [ಅಂದ್ರಿ+ಇಂದ್ರ] ಪರ್ವತಶ್ರೇಷ್ಠ (ಸುಕಮಿರ್ಪನ್ನೆಗಂ ಇತ್ತ ಕುಂತಿ ಶತಶೃಂಗಾದ್ರೀಂದ್ರದೊಳ್ ದಿವ್ಯಬಾಲಕನಿನ್ನೊರ್ವನಂ: **ಪಂಪಭಾ,** ೧. ೧೩೪)

ಅದ್ರೀಂದ್ರಾತ್ಮಜಾ – [ನಾ] ಗಿರಿಪುತ್ರಿ, ಪಾರ್ವತಿ (ಒಂದು ದಿವಸಂ ಕೌಂತೇಯರಂ ಕಾದಿ ಗೆಲ್ ನಿರುತಂ ನೀಂ ಎನೆ ಪೆತ್ತೆನಾಂ ಬರಮಂ ಅದ್ರೀಂದ್ರಾತ್ಮಜಾಧೀಶನೊಳ್: **ಪಂಪಭಾ,** ೧೧. ೯೮)

ಅದ್ವೈತಸಾಹಸರ್ – [ನಾ] ಎರಡಿಲ್ಲದ ಸಾಹಸವುಳ್ಳವರು, ಅಖಂಡ ಸಾಹಸಿಗಳು (ಎಂದು ತಮ್ಮೊಳ್ ಅಯ್ವರುಂ ಏಕಕಾರ್ಯಾಲೋಚನಪರರಾಗಿ ದ್ವೈತವನದೊಳ್ ಅದ್ವೈತಸಾಹಸರಿರ್ಪನ್ನೆಗಂ: **ಪಂಪಭಾ,** ೭. ೩೦ ವ)

ಅಧಃಪ್ರವೃತ್ತಿ – [ನಾ] [ಜೈನ] ಅಧಃಪ್ರವತ್ತಿಕರಣ: ಕರಣಲಬ್ಧಿಗಳಲ್ಲಿ – ಅಧಃಪ್ರವೃತ್ತಿಕರಣ, ಅಪೂರ್ವಕರಣ, ಅನಿವೃತ್ತಿಕರಣ – ಒಂದು (ತದನಂತರಂ ಅಪ್ರಮತ್ತ ಗುಣಸ್ಥಾನಂಗಳೊಳ್ ಅಧಃಪ್ರವೃತ್ತ್ಯಪೂರ್ವಾನಿವೃತ್ತಿಕರಣ ಪರಿಣಾಮಂಗಳಿಂದಂ ಅನಂತಾನುಬಂಧಿ ಕ್ರೋಧ ಮಾನ ಮಾಯಾ ಲೋಭಂಗಳಂ ವಿಸಂಯೋಜಿಸಿ: **ಆದಿಪು,** ೧೦. ೧೪ ವ)

ಅಧಃಸ್ಥಳಂಬಿಡಿ – [ಕ್ರಿ] ತಳಭಾಗವನ್ನು ಅವಲಂಬಿಸು, ಆಶ್ರಯಪಡೆ(ನೆಲಸಿರ್ದಪ್ಪುದಧಸ್ಸ್ಥಳಂಬಿಡಿದಧೋಲೋಕಂ ಸಮಂತೆಯ್ದೆ ಸುತ್ತಲುಮಿರ್ದಪ್ಪುದು ಮಧ್ಯಲೋಕಂ: **ಆದಿಪು,** ೧. ೫೦)

ಅಧಃಸ್ಥಳ – [ನಾ] ಅಧಃಸ್ಥಳ, ಕೆಳಗಿನ ಪ್ರದೇಶ (ಅಧಃಸ್ಥಳ ಪ್ರಸರ್ಪತ್ಸಿಂಧುವಾಹಪ್ರವಾಹ ವಿರಾಜಿತಮುಂ: **ಆದಿಪು,** ೧೩. ೪೬ ವ)

ಅಧಮ – **[ಗು]** ಕ್ಷುಲ್ಲಕ, ಕೀಳಾದವನು (ಅದಟಂ ಕೊಂಡಾಡದೆ ಬೇಡಿದರ್ಗೀಯದೆ ಮಱಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದ ಅಧಮಂ ಅದೇತರ್ಕೆ ಬಾರ್ತೆ ಜೀವನ್ಮೃತಕಂ: **ಆದಿಪು,** ೧೨. ೯೭)

ಅಧರ – **[ನಾ]** [ಕೆಳ] ತುಟಿ (ಪದೆವೆರ್ದೆ ಬತ್ತೆ ಕೆತ್ತುವಧರಂ ದೆಸೆಗೆಟ್ಟ ಅಲರ್ಗಣ್ಣ ನೋಟಂ ಉಣ್ಮಿದ ಬೆಮರ್ ಓಳಿವಟ್ಟ ನಿಡುಸುಯ್ ತೊದಳಿಂಗೆಡೆಗೊಂಡ ಮಾತು: **ಪಂಪಭಾ,** ೪. ೬೦); ತಿರಸ್ಕರಿಸಲ್ಪಟ್ಟ (ಗಂಧರ್ವರ್ ಗರ್ವಮನುಱಿದು ಒಂದೊರ್ವರಂ ಮಿಗೆಯೋಡೆಯುಂ ವಿದ್ಯಾಧರರ್ ಅಧರರಾಗೆಯುಂ: **ಪಂಪಭಾ,** ೫. ೮೮ ವ)

ಅಧರಂ ಮಾಡು – **[ಕ್ರಿ]** ಕೀಳುಮಾಡು (ಮುಗುಳ್ನಗೆ ನಗುವಂತಿರ್ದಧರಮುಂ ಅಧರಮನಧರಂ ಮಾಡಿ ಪೊಳೆವ ಸುಳಿಪಲ್ಲ ಪೊಳೆಪುಂ: **ಆದಿಪು,** ೪. ೪೧ ವ)

ಅಧರಿತ – **[ಗು]** ಉರುಳಿಸಲ್ಪಟ್ಟ (ಅಧರಿತ ಅನೇಕ ರಿಪುನೃಪಾನೇಕರಣಂಗಳಪ್ಪ ವಾರಣಂಗಳಿಂದಂ: **ಆದಿಪು,** ೧೪. ೪೩ ವ); ಕೀಳುಮಾಡಲ್ಪಟ್ಟ (ಬಧಿರಿತ ಸಮಸ್ತ ದಿಕ್ತಟಮಧರಿತ ಸರ್ವೇಭ್ಯಗರ್ವಿತಂ ಕ್ಷುಭಿತಾಂಭೋನಿಧಿ ಸಲಿಲಂ ಪರೆದುದು ಧುರವಿಧಾನ ಪಟುಪಟಹ ಕಹಳ ಭೇರೀರಭಸಂ: **ಪಂಪಭಾ,** ೧೨. ೧೭೧)

ಅಧರೀಕೃತ – **[ಗು]** ಕಡೆಗಣಿಸಲ್ಪಟ್ಟ (ಕಾಂತೆ ಪೊದಳ್ದ ನಾಣ ಭರದಿಂ ಅಧರೀಕೃತ ಚಂದ್ರಬಿಂಬ ಸತ್ಕಾಂತಿಯಂ ಆನನಮೊಯ್ಯನೆ ಬಾಗಿರೆ: **ಆದಿಪು,** ೩. ೭೮)

ಅಧರೋತ್ತರ – **[ನಾ]** ಶೃಂಗಾರದ ಇಳಿಕೆ ಮತ್ತು ಏಳಿಕೆ, ಸಂಗೀತದ ಅವರೋಹಣ ಆರೋಹಣ (ಅಧರೋತ್ತರಂಗಳೊಳ್ ಮಿಸುಪ ರಸಾಂತರಂಗಳಿಂ ಎಡಂಬಡನಾಗದೆ ತನ್ನೊಳಿಂತು ಪೋಲಿಸುವೊಡೆ ಪೋಲಿಸಲ್ಕೆ ದೊರೆ ವೀಣೆಯನಾ ಸುರತಪ್ರವೀಣೆಯಂ: **ಆದಿಪು,** ೨. ೭೭)

ಅಧರ್ಮ – **[ನಾ]** [ಜೈನ] ಆರು ದ್ರವ್ಯಗಳಲ್ಲಿ ಒಂದು, ಜೀವ ಮತ್ತು ಪುದ್ಗಲಗಳ ಸ್ಥಿತಿಗೆ ಸಹಾಯಮಾಡುವಂಥದು (ಅದು ಗತಿಸ್ಥಿತಿ ಅವಗಾಹಶರೀರಾದಿವರ್ತನಾಹೇತು ಧರ್ಮಾಧರ್ಮ ಆಕಾಶ ಪುದ್ಗಲ ಕಾಲಭೇದದಿಂ ಪಂಚವಿಧಂ: **ಆದಿಪು,** ೧೦. ೬೩ ವ)

ಅಧರ್ಮಯುದ್ಧ – **[ನಾ]** ಅನ್ಯಾಯದ ಯುದ್ಧ (ಅಧರ್ಮಯುದ್ಧದೆ ನರಂ ಕೊಲ್ವಲ್ಲಿ ಕಂಡು ಇಂತುಪೇಕ್ಷಿಸಿ ನೀಮುಂ ನಡೆ ನೋಡುತ್ತಿರ್ದಿರಿ ಎನೆ ಮತ್ತಿನ್ನಾರಂ ನಂಬುವೆಂ: **ಪಂಪಭಾ,** ೧೧. ೮೩)

ಅಧಿಕ – **[ನಾ]** ಅತಿಶಯನಾದವನು (ಅಱಿದರ್ ಅಧಿಕರ್ ಭೀಷ್ಮ ದ್ರೋಣ ಅಂಗನಾಯಕರ್ ಈಗಳ್ ಇನ್ನುೞಿದರ್ ಅವರಿಂ ಮೇಲೆಂಬನ್ನರ್ ಮಹಾರಥರಲ್ತೆ : **ಪಂಪಭಾ,** ೧೩. ೨೨)

ಅಧಿಕಾರ – **[ನಾ]** [ಜೈನ] ಜೈನನಾದವನಿಗೆ ಲಭಿಸುವ ವಿಶೇಷಗಳು (ಅತಿಬಾಲವಿದ್ಯಾ, ಕುಲಾವಧಿ, ವರ್ಣೋತ್ತಮತ್ವ, ಪಾತ್ರತ್ವ, ಸೃಷ್ಟ್ಯಧಿಕಾರ, ವ್ಯವಹಾರೇಶಿತ್ವ, ಅವಧ್ಯತ್ವ, ಅದಂಡತ್ವ, ಮಾನಾರ್ಹತ್ವ, ಪ್ರಜಾಸಂಬಂಧಾಕರಮೆಂಬ ಪತ್ತುಮಧಿಕಾರಂಗಳನಱಿಪಿ: **ಆದಿಪು,** ೧೫. ೧೬ ವ)

ಅಧಿಕ್ಷೇಪ – **[ನಾ]** ನಿಂದೆ (ಪರಸ್ಪರವಿರೋಧ ಅಧಿಕ್ಷೇಪ ಹರ್ಷಿತ ಮಾರ್ಗ ಪ್ರಹಸ್ತ ಪ್ರಸಾಧಿತ ಘೋರಸಂಗ್ರಾಮರುಂ: **ಪಂಪಭಾ,** ೧೩. ೯೨ ವ)

ಅಧಿನಾಥ – **[ನಾ]** ಪ್ರಧಾನ ಅಧಿಕಾರಿ, ಒಡೆಯ (ಸೈನ್ಯಾಧಿನಾಥನಧಿನಾಥನ ಕೆಲದೊಳ್ ಪಕ್ಷಗಣಾಧಿರೂಢನಾಗಿ: **ಆದಿಪು,** ೧೩. ೪೫ ವ)

ಅಧಿರಾಜ – **[ನಾ]** ಮಹಾರಾಜ (ಬಲದೇವವಾಸುದೇವರಾಗಿ ಬಳೆಯೆ ಮದೀಯಜನಕಂ ಎಮ್ಮಿರ್ವರಂ ಅಧಿರಾಜ ಯುವರಾಜ ಪದವಿಯೊಳ್ ನಿಱಿಸಿ: **ಆದಿಪು,** ३. ೫೦ ವ)

ಅಧಿರೋಹಣ – **[ನಾ]** [ಜೈನ] ಮೇಲೆ ಹತ್ತುವುದು (ಮೋಕ್ಷಪ್ರಾಸಾದ ಅಧಿರೋಹಣ .. .. ಅಪೂರ್ವಕರಣ ಕ್ಷಪಕ ಪ್ರಥಮ ಶುಕ್ಲಧ್ಯಾನಪರಿಣತನಾಗಿರ್ದು: **ಆದಿಪು,** ೧೦. ೧೪ ವ)

ಅಧಿವಾಸ – **[ನಾ]** ಕಲಶದ ಮೇಲೆ ಮುಚ್ಚಿದ ವಸ್ತ್ರ (ಕೆಲಬರ್ ಇಂದ್ರನೀಲಮಣಿಕಳಶರುಚಿನಿಚಯನಿಚಿತಂಗಳಾಗಿ ನಿಕ್ಷಿಪ್ತ ಅಧಿವಾಸ ನೀಲನಳಿನದ್ಯುತಿಪಟಲ ವಿಭ್ರಾಂತಿಯಂ ಪಡೆವ ಸಲಿಲಂಗಳಿಂದಂ: **ಆದಿಪು,** ೮. ೬೯ ವ) ['ನಿಕ್ಷಿಪ್ತಾಧಿವಾಸ' ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳು ಸ್ವೀಕರಿಸಿರುವ ಪಾಠ]

ಅಧಿವಾಸಿತ ಜೈತ್ರಾಸ್ತ್ರ – **[ನಾ]** ಭಂಡಾರದಲ್ಲಿಟ್ಟ ವಿಜಯಾಸ್ತ್ರ (ಅಧಿವಾಸಿತ ಜೈತ್ಯಾಸ್ತ್ರಂ ವಿಧುವಿಶದ ದುಕೂಲವಸನಶೋಭಂ ನಾನಾವಿಧ ಮಂತ್ರಾನುಷ್ಠಾನಪ್ರಧಾನಂ: **ಆದಿಪು,** ೧೨. ೭೪)

ಅಧಿವಾಸಿಸು – **[ಕ್ರಿ]** ಪ್ರತಿಷ್ಠಾಪಿಸು (ಸರಸ್ವತಿಯಂ ಪೂಜಾಪೂರ್ವಕಮ್ ಅಧಿವಾಸಿಸಿ ನಿಜತನೂಜೆಯರಿರ್ವರುಮನೆರಡು ಕೆಲದೊಳಿರಿಸಿ: **ಆದಿಪು,** ೮. ೫೮ ವ); **[ಕ್ರಿ]** [ಭಂಡಾರದಲ್ಲಿ] ಇರಿಸು (ಇವು ದಿವದೊಳಗಗ್ಗಳಮೆನಿಸುವ ರತ್ನವ್ರಾತಮೆಮ್ಮ ಮನೆಯೊಳ್ ಮಿಗಿಲಪ್ಪುವು ನಿಧಿಗಧಿವಾಸಿಸಲಪ್ಪುವೆಂದು ರತ್ನಂಗಳನಿತುಮಂ ಮುಂದಿಟ್ಟಂ: **ಆದಿಪು,** ೧೨. ೧೧೬); **[ಕ್ರಿ]** ಪೂಜಿಸು (ಧವಳಚ್ಛತ್ರ ಚಾಮರಸಿಂಹಾಸನ ಪಟ್ಟವರ್ಧನ ಕುಲಧನಾದಿ ರಾಜ್ಯಚಿಹ್ನಂಗಳಂ ವಿವಿಧ ವಿಧಾನದಿಂದಮಧಿವಾಸಿಸಿ: **ಪಂಪಭಾ,** ೧೪. ೧೭ ವ)

ಅಧಿವ್ಯಾಧಿ – **[ನಾ]** ರೋಗಗಳು (ಅನಲ್ಪಕಲ್ಪಾವನಿಜಂಗಳ್ ಅಪೇತರಸವೀರ್ಯಪಾಕಂಗಳಾಗಿಯುಂ ಅಧಿವ್ಯಾಧಿ ಬಾಧಿತಶರೀರರ್ ಮಾನವರ್ **ಆದಿಪು,** ೮.. ೬೧ ವ)

ಅಧಿಷ್ಠಾನಂಗಟ್ಟು – **[ಕ್ರಿ]** ತಳಹದಿ ಹಾಕು (ಗಾಂಗೇಯಂ .. .. ಮುನ್ನೆ ತನ್ನ ನುಡಿದ ನುಡಿವಳಿಯೆಂಬ ಪ್ರಾಸಾದಕ್ಕೆ ಅಧಿಷ್ಠಾನಂಗಟ್ಟುವಂತೆ ಚಿತ್ರಾಂಗದಂಗೆ ಪಟ್ಟಮಂ ಕಟ್ಟಿ: **ಪಂಪಭಾ,** ೧. ೭೩ ವ)

ಅಧಿಷ್ಠಿತ – **[ಗು]** ನೆಲೆಗೊಂಡ (ಅತಿಸಮೃದ್ಧ ಕೃಷೀವಲಕುಳ ಅಧಿಷ್ಠಿತಂಗಳುಮಪ್ಪ ಅಭಿರಾಮ ಜಲಾಶಯಂಗಳುಮಂ: **ಆದಿಪು,** ೮. ೬೩ ವ)

ಅಧಿಷ್ಠಿಸು – **[ಕ್ರಿ]** ಸ್ಥಾಪಿಸು (ವಿಶದಯಶಸ್ಸಿದ್ಧಾಧಿಷ್ಠಾನಮೆನಿಪ ಮಜ್ಜನಪೀಠಮಂ ಅಧಿಷ್ಠಿಸಿದಾಗಳ್: **ಆದಿಪು,** ೮. ೬೯ ವ)

ಅಧೀಶ – [ನಾ] ಸ್ವಾಮಿ, ಯಜಮಾನ (ಮುನ್ನಮೆ ಪೋಗಿ ನಲ್ಮೆ ಗೆಲ್ಲಂಗೊಳೆ ದೇವಲೋಕದೊಳ್ ಅಧೀಶನಂ ಆಂ ಇದಿರ್ಗೊಳ್ವೆಂ: **ಪಂಪಭಾ,** ೧೦. ೪೫)

ಅಧೋಕ್ಷಜ – [ನಾ] ಕೃಷ್ಣ (ಕಿರ್ಚೆಟ್ಟಿ ಲಂಕೆಯಂ ನೋಟ್ಟಂತೆ ನೋಡೆ ಧರ್ಮಪುತ್ರನಂ ಅಧೋಕ್ಷಜನಿಂತೆಂದಂ: **ಪಂಪಭಾ,** ೧೨. ೫ ವ)

ಅಧೋಗ್ರೈವೇಯಕ – [ನಾ] [ಜೈನ] ಒಂಬತ್ತು ಗ್ರೈವೇಯಕಗಳೆಂಬ ಕಲ್ಪಾತೀತ ಸ್ವರ್ಗಗಳಲ್ಲಿ ಕೆಳಗಿನದು (ತಪೋಭರದೊಳ್ ನಾಲ್ವರುಂ ನಿಂದು ಜೀವಿತವ್ಯಪಾಯದೊಳ್ ಅಧೋಗ್ರೈವೇಯಕದೊಳ್ ಅಹಮಿಂದ್ರಪದವಿಯಂ ತಾಳ್ದಿದರ್: **ಆದಿಪು,** ೫. ೨೭ ವ); ನೋಡಿ, **'ಗ್ರೈವೇಯಕ'**

ಅಧೋಗ್ರೈವೇಯಕದಿವಿಜ – [ನಾ] [ಜೈನ] ಅಹಮಿಂದ್ರ (ಅತಿಗೃದ್ಧ ಮಹೀಶನುಂ ನಾರಕನುಂ ವ್ಯಾಘ್ರನುಂ ಈಶಾನಕಲ್ಪಜನುಂ ಮತಿವರಮಂತ್ರಿಯುಂ ಅಧೋಗ್ರೈವೇಯಕದಿವಿಜನುಂ: **ಆದಿಪು,** ೧೬. ೫೮ ವ)

ಅಧೋಭೂಮಿ – [ನಾ] ಕೆಳಗಿನ ಲೋಕ (ರಮಣೀಜಾತಿಯೊಳಲ್ತೆ ನಂಬಿದವರ್ಗಳ್ ಸಮ್ಯಕ್ತ್ವಮಂ ಪುಟ್ಟರಾರುಮ್ ಅಧೋಭೂಮಿಯೊಳ್: **ಆದಿಪು,** ೫. ೬೩)

ಅಧೋಲೋಕ – [ನಾ] ಅಧೋಭೂಮಿ (ನೆಲೆಸಿರ್ದಪುದು ಅಧಃಸ್ಥಳಂಬಿಡಿದು ಅಧೋಲೋಕಂ ಸಮಂತೆಯ್ದೆ ಸುತ್ತಲುಮಿರ್ದಪ್ಪುದು ಮಧ್ಯಲೋಕಂ: **ಆದಿಪು,** ೧. ೫೦)

ಅಧ್ಯಯನ – [ನಾ] [ಜೈನ] ವಿದ್ಯಾಭ್ಯಾಸ, ಧಾರ್ಮಿಕ ಅಧ್ಯಯನ (ಉಪಾಸಕಾಧ್ಯಯನ ಅಧ್ಯಾಪನಾನಂತರಂ ಸಕಳಶಾಸ್ತ್ರಂಗಳನೋದುವ ಓದಿಸುವ ನೆನೆವ ಬರೆವ ಪರಮಸ್ವಾಧ್ಯಾಯಮುಂ: **ಆದಿಪು,** ೧೫. ೧೩ ವ); **[ನಾ]** ಬ್ರಾಹ್ಮಣನ ಷಟ್ಕರ್ಮಗಳಲ್ಲಿ ಒಂದಾದ ವೇದಾಧ್ಯಯನ (ಭವಿಷ್ಯದ್ವಿಜನ್ಮವರ್ಣಕ್ಕೆ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ: **ಆದಿಪು,** ೪. ೭೬ ವ)

ಅಧ್ಯಯನಾಂತರಾಯ – [ನಾ] ಶಾಸ್ತ್ರವ್ಯಾಸಂಗಕ್ಕೆ ಆಗುವ ಅಡ್ಡಿ, (ಅಧ್ಯಯನಂ ನಿನಗನಿಷ್ಟಮಪ್ಪುದರಿಂ ಅಧ್ಯಯನಾಂತರಾಯಮಂ ಮಾಡಲೆಂದು: **ಆದಿಪು,** ೩. ೩೮ ವ)'

ಅಧ್ಯಾತ್ಮವಿಶಾರದ – [ನಾ] ತತ್ವಶಾಸ್ತ್ರದಲ್ಲಿ ನಿಪುಣ, ದರ್ಶನದಲ್ಲಿ ಪರಿಣತ (ಅಂತು ಭಾವಿತಾತ್ಮಂ ಅಧ್ಯಾತ್ಮವಿಶಾರದನಾಗಿ ಪರಮಾತ್ಮನೊಳ್ ಕೂಡಿದನಾಗಳ್: **ಪಂಪಭಾ,** ೧೨. ೨೯ ವ)

ಅಧ್ಯಾಪನ – [ನಾ] ವೇದವನ್ನು ಪಾಠ ಹೇಳುವುದು; ಬ್ರಾಹ್ಮಣನ ಷಟ್ಕರ್ಮಗಳಲ್ಲಿ ಒಂದು (ಭವಿಷ್ಯದ್ವಿಜನ್ಮವರ್ಣಕ್ಕೆ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ: **ಆದಿಪು,** ೪. ೭೬ ವ); **[ನಾ]** ಓದಿಸುವುದು, ಪಾಠ ಹೇಳುವುದು (ಉಪಾಸಕ ಅಧ್ಯಯನ ಅಧ್ಯಾಪನಾನಂತರಂ: **ಆದಿಪು,** ೧೫. ೧೩ ವ)

ಅಧ್ಯಾಸಿತ – [ಗು] ವಾಸಿಸಲ್ಪಟ್ಟ (ಪ್ರಧಾನಪುರುಷ ಅಧ್ಯಾಸಿತಂಗಳಪ್ಪ ಪುರಂಗಳುಮಂ: **ಆದಿಪು,** ೮. ೬೩ ವ); **[ಗು]** ಕೂಡಿದ (ಪೂರ್ವಭವಾಭ್ಯಸ್ತಸಮಸ್ತಾಗಮಾರ್ಥರುಂ ಉಪಚಿತ ಶುಭಭಾವನಾಧ್ಯಾಸಿತಾಂತಃಕರಣರುಂ: **ಆದಿಪು,** ೯. ೬೦ ವ)

ಅಧ್ಯುಷಿತ – [ಗು] ನೆಲೆಸಿದ, ಸ್ಥಾನ ಪಡೆದ (ತೃಣಶಿಖರ ಅಧ್ಯುಷಿತಾಂಭಃಕಣಸಂಚಳಂ ಅಮರಚಾಪಚಪಳಂ ವಿದ್ಯುತ್ ಕ್ಷಣಿಕಂ: **ಆದಿಪು,** ೪. ೭೫)

ಅಧ್ರುವ – [ನಾ] [ಜೈನ] ದ್ವಾದಾಶಾನುಪ್ರೇಕ್ಷೆಯಲ್ಲಿನ ಅನಿತ್ಯ (ಅಧ್ರುವಾದಿ ದ್ವಾದಶಾನುಪ್ರೇಕ್ಷಾಭಾವನಾ ಭಾವಿತಾಂತಃಕರಣನಾಗಿ: **ಆದಿಪು,** ೧೦. ೧೪ ವ); **[ಗು]** ಅಸ್ಥಿರ (ಭೋಗೀಂದ್ರಭೋಗಂ ಮಹೇಂದ್ರ ಮಹೈಶ್ವರ್ಯಂ ಇವೆಲ್ಲಂ ಅಧ್ರುವಂ: **ಆದಿಪು,** ೧೦. ೫೯)

ಅಧ್ವರ – [ನಾ] ಸೋಮಪಾನಪ್ರಧಾನವಾದ ಯಜ್ಞ (ಭರತಂ ಅನೇಕ ಅಧ್ವರಭರನಿರತಂ ಜಸಮುಟಿಯೆ ಕಟಿಯೆ ಭೂಪರ್ ಪಲರಾದರಿಸಿದ ಧರಣೀಭರಮಂ ಧರಿಯಿಸಿದಂ: **ಪಂಪಭಾ,** ೧. ೬೪)

ಅಧ್ವರಧೂಮ – [ನಾ] ಹೋಮಧೂಮ, ಯಾಗದ ಹೊಗೆ (ವರದಿಗ್ವನಿತೆಗೆ ಮಾಟದ ಕುರುಳ್ ಆ ತ್ರೈಭುವನಕಾಂತೆಗಂ ದಲ್ ಕಂಠಾಭರಣಂ ಎನೆ ಪರೆದ ತನ್ನಧ್ವರಧೂಮದೆ ಕರಿದು ಮಾಡಿದಂ ನಿಜಯಶಮಂ: **ಪಂಪಭಾ,** ೧೪. ೪೪)

ಅಧ್ವರಭರನಿರತ – [ನಾ] ಯಜ್ಞಕಾರ್ಯಗಳಲ್ಲಿ ಆಸಕ್ತನಾದವನು (ಭರತನನೇಕಾಧ್ವರಭರನಿರತಂ ಜಸಮುಟಿಯೆ ಕಟಿಯೆ: **ಪಂಪಭಾ,** ೧. ೬೪)

ಅಧ್ವರ್ಯು – [ನಾ] ಯಜ್ಞಕ್ಕೆ ಬೇಕಾದ ಕೆಲಸವನ್ನು ಮಾಡುವ ಜೊತೆಗೆ ಯಜುರ್ವೇದವನ್ನು ಪಠಿಸುವ ವ್ಯಕ್ತಿ (ವ್ಯಾಸ ಕಶ್ಯಪ ವಿಶ್ವಾಮಿತ್ರ ಭರದ್ವಾಜ ಬ್ರಹ್ಮ ಅಧ್ವರ್ಯು ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ: **ಪಂಪಭಾ,** ೬. ೩೩ ವ)

ಅಧ್ವಾನ – ಮಾರ್ಗ (ವಿಶಾಳವಟವಿಟಪಿಯನೆಯ್ತಂದು ಅದಱ ಕೆಟಗೆ ಅಯ್ವರುಮನಿಟೆಪಿದೊಡೆ ಅಧ್ವಾನಪದಪರಿಶ್ರಮ ಶ್ರಾಂತರ್ ನಿದ್ರಾಭರಪರವಶರಾಗಿರೆ: **ಪಂಪಭಾ,** ೩. ೧೦ ವ)

ಅನಂಗಚಿಹ್ನ – [ನಾ] ಮನ್ಮಥಚಿಹ್ನೆಗಳು, ಕಾಮಕೇಳಿಯಿಂದಾದ ಗುರುತುಗಳು (ಈಕ್ಷಣಕ್ಕೆ ಪರಮಾನಂದಾಮೃತಂ ಸಾರ್ವಿನಂ ಮೆಱಿದರ್ ಚಕ್ರಿಯ ಮುಂದೆ ತತ್ಕೃತವಿಚಿತ್ರ ಅನಂಗಚಿಹ್ನಂಗಳಂ: **ಆದಿಪು,** ೧೧. ೧೫೩)

ಅನಂಗಜಂಗಮಲತಾ[ತೆ] – [ನಾ] ನಡೆದಾಡುವ ಕಾಮನ ಬಳ್ಳಿ, ಅಂದರೆ ಸುಂದರಿ (ಸಾರಂ ಅನಂಗಜಂಗಮಲತಾ ಲಲಿತಾಂಗಿಯರಿಂದಮಲ್ತೆ ಸಂಸಾರಂ: **ಪಂಪಭಾ,** ೧೧೪)

ಅನಂಗಮತಂಗಜ – [ನಾ] ಮನ್ಮಥನೆಂಬ ಆನೆ (ಅನಂಗಮತಂಗಜ ಕೋಳಾಹಳಾಕುಳೀಕೃತಾಂತರಂಗನಾಗಿ: **ಪಂಪಭಾ,** ೪. ೭೪ ವ)

ಅನಂಗಮತ್ತಮಾತಂಗ – [ನಾ] ಕಾಮದಿಂದ ಮದಿಸಿದ ಆನೆ (ಸಿಂಹಬಲಂ ಅಂತು ಅನಂಗಮತ್ತಮಾತಂಗ ಕೋಳಾಹಳೀಕೃತ ಅಂತರಂಗನಾಗಿ: **ಪಂಪಭಾ,** ೮. ೬೪)

ಅನಂಗರಾಗರಸ – [ನಾ] ಕಾಮಪ್ರೇಮದ ರಸ (ಗಾಡಿ ದಿಟ್ಟಿಗಳೊಳ್ ಅನಂಗರಾಗರಸಂ ಉಣ್ಮುವಿನಂ ನಡೆ ನೋಡಿ: **ಪಂಪಭಾ,** ೨. ೧೮)

ಅನಂಗರಾಜ – [ನಾ] ಮನ್ಮಥ (ಎಮೆಯಿಕ್ಕದೆ ನೋಡುವ ನರರಮರರ ಕಣ್ಗಳೊಳನಂಗರಾಜನ ಬಯ್ತಿಟ್ಟ ಅಮರ್ದಂ

ಕೊಳೆ ತಳಿದುದು ನಾಭಿಮೂಳಮುಂ ಬಾಹುಮೂಳಮುಂ ಸುರವಧುವಾ: **ಆದಿಪು,** ೯. ೩೫)

ಅನಂಗವಿನೋದ – [ನಾ] ಕೂಟದ ಸಂತಸ (ಆಕೆಯುಂ ಅನಂಗವಿನೋದದೊಳ್ ಎನ್ನ ಪಂಬಲೊಳ್ ಮಱುಗುವಳ್: **ಆದಿಪು,** ೧೨. ೨೯)

ಅನಂಗಶರ – [ನಾ] ಕಾಮಬಾಣ (ಎಂದು ನಂದನವನ ಉಪಕಂಠಂಗಳೊಳ್ ಅನಂಗಶರವಶನಾಗಿ ತೊಳಲ್ದು: **ಪಂಪಭಾ,** ೫. ೧೩ ವ)

ಅನಂಗಾಕಾರ – [ನಾ] ಕಾಮನಂತೆ ಸುಂದರ (ವಿದುರನೆಂಬಂ ಅನಂಗಾಕಾರನುಂ ಆಚಾರವಂತನುಂ ಬುದ್ಧಿವಂತನುಂ ಅಕ್ಕುಮೆಂದು ಪೇೞ್ದು ಮುನಿಪುಂಗವಂ ಪೋದಂ: **ಪಂಪಭಾ,** ೧. ೮೫ ವ)

ಅನಂಗಾಮೃತವರ್ಷ – [ನಾ] ಕಾಮವೆಂಬ ಅಮೃತದ ಮಳೆ (ಅರಲ್ದ ತಾವರೆಯೆಸಳ್ಗಳೊಳ್ ಪುದಿಸು ಪುದುಂಗೊಳಿಸಿದಂತಾನುಂ ಅನಂಗಾಮೃತವರ್ಷಮಂ ಒದವಿಸಿ: **ಪಂಪಭಾ,** ೪. ೪೧ ವ)

ಅನಂಗೋತ್ಸವ – [ನಾ] ಕಾಮೋತ್ಸವ, ಕಾಮವೈಭವ (ಲಾವಣ್ಯಾಬ್ಧಿ ತರಂಗಭಂಗ ಲಲಿತಭ್ರೂಭಂಗ ದಿವ್ಯಾಂಗನಾಭಾವ ಅಪಾಂಗ ನಿರೀಕ್ಷಣಾಮೃತಕೃತ ಅನಂಗೋತ್ಸವಂ: **ಆದಿಪು,** ೨. ೬)

ಅನಂತ – [ನಾ] ಕೃಷ್ಣ (ಜಲಕ್ರೀಡೆಯಾಡಲ್ ಬಗೆದು ತಾನುಂ ಅನಂತನುಂ ಅಂತಃಪುರಪರಿವಾರಂ ಬೆರಸು: **ಪಂಪಭಾ,** ೫. ೫೮ ವ); **[ನಾ]** ಆದಿಶೇಷ (ಆಗಳ್ ಅನಂತಂ ಅನಂತಫಣಾಗಣಮಣಿಕಿರಣಂ ಎಸೆಯೆ ದುರ್ಗಾರ್ಣವದೊಳ್ ರಾಗದಿನಿರ್ಪಂತಿರ್ದಂ ಭೋಗಿ ತಟತ್ತಟೆಸೆ ಬೆಳಗೆ ಕೆಯ್ದೀವಿಗೆಗಳ್: **ಪಂಪಭಾ,** ೪. ೫೩)

ಅನಂತಜ್ಞಾನ – [ನಾ] [ಜೈನ] ಅನಂತಚತುಷ್ಟಯದಲ್ಲಿ ಒಂದು (ಸೂಕ್ಷ್ಮರೂಪನುಂ ಅನಂತಜ್ಞಾನಾದಿ ಗುಣರೂಪನುಂ: **ಆದಿಪು,** ೨. ೧೦ ವ)

ಅನಂತಚತುಷ್ಟಯ – [ನಾ] [ಜೈನ] ಅನಂತಜ್ಞಾನ ಅನಂತದರ್ಶನ ಅನಂತಸುಖ ಮತ್ತು ಅನಂತವೀರ್ಯಗಳೆಂಬ ನಾಲ್ಕು (ಅಳಱೆ ಕಿಡೆ ಘಾತಿಗಳ್ ದಾನ ಳಾಭ ಭೋಗ ಉಪಭೋಗ ವೀರ್ಯಂಗಳೊಳ್ ಅಗ್ಗಳಿಸಿದ ಅನಂತಚತುಷ್ಟಯವಿಳಾಸಿ ಕೈವಲ್ಯಲಕ್ಷ್ಮಿಯಂ ಯತಿ ಪಡೆದಂ: **ಆದಿಪು,** ೧೦. ೧೫)

ಅನಂತವಸ್ತುಪ್ರಕಾಶಿ – [ಗು] ಎಲ್ಲ ವಸ್ತುಗಳಿಗೂ ಕಾಣುವಂತೆ ಮಾಡುವ (ಮಾನಕಷಾಯಂ ಮುನಿಪತಿಗೆ ಪೋಗೆ ಪುಟ್ಟಿದದು ಅನಂತವಸ್ತುಪ್ರಕಾಶಿ ಕೇವಳಬೋಧಂ: **ಆದಿಪು,** ೧೪. ೧೪೫)

ಅನಂತವೀರ್ಯ – [ನಾ] [ಜೈನ] ಸಿದ್ಧಪರಮೇಷ್ಠಿಗಳ ಅಷ್ಟಗುಣಗಳಲ್ಲಿ ಒಂದು, ಅಪರಿಮಿತ ಶಕ್ತಿ (ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ನೆನೆಯುತ್ತುಂ: **ಆದಿಪು,** ೧೦. ೧೪ ವ)

ಅನಂತಾನುಬಂಧಿ ಕ್ರೋಧ – [ನಾ] ಅನಂತಾನುಬಂಧಿ ಚತುಷ್ಕದಲ್ಲಿ ಒಂದು; ಸಮ್ಯಕ್ತ್ವವನ್ನು ಕೆಡಿಸುವ ಕ್ರೋಧವೆಂಬ ಕಷಾಯ (ತದನಂತರಮಪ್ರಮತ್ತಗುಣ ಸ್ಥಾನಂಗಳೊಳಧಃಪ್ರವೃತ್ತ್ಯಪೂರ್ವಾನಿವೃತ್ತಿಕರಣ ಪರಿಣಾಮಂಗಳಿಂದಂ ಅನಂತಾನುಬಂಧಿ ಕ್ರೋಧ ಮಾನ ಮಾಯಾ ಲೋಭಂಗಳಂ ವಿಸರ್ಜಿಸಿ: **ಆದಿಪು,** ೧೦. ೧೪ ವ)

ಅನಕ್ಷರಂ – [ಗು] ಮಾತಿಲ್ಲದ (ಚೆಲ್ವೀಕ್ಷಣಹರಮೆನೆ ಜಯಮಂ ಅನಕ್ಷರಮಱೆಪಿದುದು ಭರತರಾಜಮದೇಭಂ: **ಆದಿಪು,** ೧೨. ೫೯)

ಅನಗಾರಕೇವಳಿ – [ನಾ] [ಜೈನ] ಮನೆಯಲ್ಲಿ ವಾಸಿಸದ ಮುನಿ, ತೀರ್ಥಂಕರರೂ ಗಣಧರರೂ ಅಲ್ಲದ ಕೇವಲಿ (ತೀರ್ಥಕರ ಗಣಧರ ಅನಗಾರಕೇವಳಿಗಳ ಪರಿನಿರ್ವಾಣಕ್ಷೇತ್ರದೊಳ್ **ಆದಿಪು,** ೧೫. ೧೬ ವ)

ಅನತಿಜರಠ – [ಗು] ಹೆಚ್ಚು ಬಿರಿಯದ (ಅನತಿಜರಠ ಕರ್ಣಿಕಾರಮುಕುಳ ಸ್ಥೂಳತ್ರಿಚತುರ ಸುವರ್ಣಬದ್ಧೋದ್ಧುರ ಕಂಧರಂ: **ಆದಿಪು,** ೧೩. ೪೫ ವ)

ಅನತಿಶಯ – [ನಾ] ಅಸಾಮಾನ್ಯ (ಅನತಿಶಯ ಕೇವಲಜ್ಞಾನ ನಿರೀಕ್ಷಿತವಿಶ್ವನಾಥಾನಾದಿಜಿನಂ: **ಆದಿಪು,** ೧೦. ೧೬)

ಅನಧ್ಯವಸಾಯ – [ನಾ] [ಜೈನ] ನಿಶ್ಚಿತಜ್ಞಾನರಾಹಿತ್ಯ (ಸಂಶಯ ವಿಪರ್ಯಯ ಸಾವದ್ಯ ಅನಧ್ಯವಸಾಯ ಸ್ವಭಾವರಹಿತಮಾಗಿ ಜೀವಾದಿಪದಾರ್ಥ ಯಥಾತ್ಮ್ಯಾವಗಮಂ ಸಮ್ಯಕ್‌ಜ್ಞಾನಂ: **ಆದಿಪು,** ೧೦. ೬೩ ವ)

ಅನನೀಕ – [ನಾ] ಸೈನ್ಯರಹಿತ (ಕೌಳಾಧೀಶರಂ ಸಾಧಿಸಿ ಕಿಂಪುರುಷರಂ ಕಾಪುರುಷರ್ ಮಾಡಿ ಬಾಹ್ಲಿಕರಂ ಅನನೀಕರ್ ಎನಿಸಿ ಮಾಳವಿಗರಂ ಕೆಟಗಿವಿಗೆಯ್ಯಲ್ ಈಯದೆ: **ಪಂಪಭಾ,** ೬. ೨೯ ವ)

ಅನಪವರ್ತ್ಯ – [ಗು] ಶಸ್ತ್ರಹತಿ ಮುಂತಾದವುಗಳಿಗೆ ಕುಗ್ಗದ, ಕಡಿಮೆಯಾಗದ (ಚತುರಶೀತಿಲಕ್ಷಣ ಪೂರ್ವ ಅನಪವರ್ತ್ಯ ಆಯುಷ್ಯನುಂ ಅಪ್ರತಿಹತಶಾಸನನುಮಾಗಿ: **ಆದಿಪು,** ೧೫. ೩ ವ)

ಅನಯ – [ನಾ] ಅಕ್ರಮ, ಅನೀತಿ (ಪಗಲಿರುಳೆಂಬ ಭೇದಂ ಅನಯಂ: **ಆದಿಪು,** ೫. ೩೦)

ಅನರ್ಘ್ಯದರ್ಘ್ಯ – [ನಾ] ಅಮೂಲವಾದ ಅರ್ಘ್ಯ (ಮಹಾಪ್ರಳಯಜಳಧಿ ನಾದದಿಂ ಇರದೆ ಉಚ್ಚಳಿಸಿ ನುಡಿದಂ ತೆ ಕಳೆ ಕಳೆ ಗರಿಗೆತ್ತಿದ ಅನರ್ಘ್ಯದರ್ಘ್ಯಮಂ ಧರ್ಮಸುತಾ: **ಪಂಪಭಾ,** ೬. ೪೨)

ಅನರ್ಘ್ಯರತ್ನ – [ನಾ] ಅನರ್ಘರತ್ನ (ತಮ್ಮ ಮನೆಯೊಳುಳ್ಳ ಅನರ್ಘ್ಯರತ್ನಂಗಳೆಲ್ಲಮಂ ಬಟೆವಟೆಗೊಟ್ಟು: **ಆದಿಪು,** ೧೩. ೮೦ ವ)

ಅನರ್ಥಕ – [ಗು] ಅರ್ಥವಿರದ (ತದುಪನ್ಯಸ್ತ .. .. ಅನರ್ಥಕ ವಚನರಚನಾ ಪ್ರಳಾಪಮಂ ಅವ್ಯಗ್ರಕುಶಾಗ್ರೀಯ ಬುದ್ಧಿಸಮೃದ್ಧಂ ಸ್ವಯಂಬುದ್ಧಂ ಅವಧಾರಿಸಿ: **ಆದಿಪು,** ೨. ೯ ವ); **[ಗು]** ವ್ಯರ್ಥವಾದ (ವಿಪಕ್ಷಕ್ಷತ್ರಿಯ ಪರಾಕ್ರಮಾಕೀರ್ಣನೋದೀರ್ಣ ಕ್ರೋಧದೊಳ್ ಅಳೀಕಭ್ರುಕುಟಿಯುಂ ಅನರ್ಥಕಲಲಾಟತ್ರಿಪತಾಕೆಯುಂ: **ಆದಿಪು,** ೧೪. ೮೧ ವ)

ಅನಲ – [ನಾ] ಬೆಂಕಿ (ಗಾಂಗೇಯನುಂ ಸತ್ಯವತಿಯುಂ ಅತ್ಯಂತ ಶೋಕಾನಲದಹ್ಯಮಾನಮಾನಸರ್ಕಳಾಗಿ ಆತಂಗೆ

ಪರಲೋಕ ಕ್ರಿಯೆಗಳಂ ಮಾಡಿ: **ಪಂಪಭಾ,** ೧. ೮೦ ವ); [ನಾ] ಅಗ್ನಿ (ಅನಲಂ ಇಷ್ಟಾರ್ಥಸಿದ್ಧಿಯಕ್ಕುಂ ಎಂದು ಪರಸಿ ಮನಃಪವನವೇಗದಿಂ ಪಾಲ್ಗಡಲನೆಯ್ದಿ: **ಪಂಪಭಾ,** ೫. ೭೭ ವ)

ಅನಲಬಾಣ – [ನಾ] ಬೆಂಕಿಯ ಬಾಣ, ಆಗ್ನೇಯಾಸ್ತ್ರ (ದನುತನೂಜನೆಚ್ಚ ವಾರ್ಧಿಗೆ ಅನಲಬಾಣದಿಂದೆಚ್ಚು ನಚ್ಚುಗಿಡಿಸೆ ಕೊಂಡು ಶೂಲಮಂ ಘಟೋತ್ಕಚಂ: **ಪಂಪಭಾ,** ೧೨. ೧೩)

ಅನಲಶರ – [ನಾ] ಬೆಂಕಿಯುಗುಳುವ ಬಾಣ, ಆಗ್ನೇಯಾಸ್ತ್ರ (ಸುರಿವ ಪಲವಂದದ ಕೂರಂಬುಗಳುಮಂ ಒಡನಳುರ್ದುವು ಅದೇಂ ಬಿಸಿಯವೊ ಜಯಕುಮಾರನನಲಶರಂಗಳ್: **ಆದಿಪು,** ೧೩. ೬೪)

ಅನಲ್ಪ – [ಗು] ಕಡಿಮೆಯಲ್ಲದ, ಹೆಚ್ಚಾದ (ಮುನ್ನಂ ಅಕೃಷ್ಟಪಚ್ಯಂಗಳಾಗಿಯುಂ ಅನಲ್ಪಕಲ್ಪಾವನಿಜಂಗಳ್ ಅಪೇತರಸವೀರ್ಯಪಾಕಂಗಳಾಗಿಯುಂ: **ಆದಿಪು,** ೮.. ೬೧ ವ)

ಅನವದ್ಯ – [ನಾ] ದೋಷರಹಿತ, ನಿರ್ದುಷ್ಟ (ಇಂತು ಅನವದ್ಯಮಪ್ಪ ಪದದೊಳ್ ಪತಿಯಂ ನಡೆಯಲ್ಕೆ ಪೇಟ್ದು: **ಆದಿಪು,** ೨. ೬೧)

ಅನವರತ – [ನಾ] ಸದಾಕಾಲ, ಯಾವಾಗಲೂ (ಅನವರತಸ್ಫುರಿತ ತಾರಕಾಕಾರಮುಕ್ತಾಭರಣಕಿರಣನಿಕರ ವಿಳಸಿತ ವಿಶಾಲ ಉರಸ್ಥಳನುಂ: **ಪಂಪಭಾ,** ೯. ೨೮ ವ)

ಅನಶನ – [ನಾ] [ಜೈನ] ನಾಲ್ಕು ಬಗೆಯ ಆಹಾರವಿಸರ್ಜಿಸಿ ಮಾಡುವ ತಪಸ್ಸು (ಮೋಹಾಂಧತಮಸ್ತೋಮಮಂ ಕಳೆದು ಕೃತ ಅನುಶಯಂ ಅನಶನವಿಧಾನದಿಂ ಅಸುವಂ ವಿಸರ್ಜಿಸಿ ಸೌಧರ್ಮಕಲ್ಪದೊಳ್ ದೇವನಾಗಿ: **ಆದಿಪು,** ೨. ೧೭ ವ); [ನಾ] ಸಾಕಾರ ನಿರಾಕಾರಗತವಾದ ಮೊದಲ ತಪಸ್ಸು (ದಶಧರ್ಮಂಗಳಂ ಕೈಕೊಂಡು ಸಾಕಾರನಿರಾಕಾರಗತಮಪ್ಪ ಅನಶನಮೆಂಬ ಮೊದಲ ತಪದೊಳಂ: **ಆದಿಪು,** ೬. ೩೦ ವ)

ಅನಶನವೃತ್ತಿ – [ನಾ] ಅನಶನವ್ರತ (ಅನಶನವೃತ್ತಿ ಆದಿ ತಪೋನುಷ್ಠಾನಮಂ .. .. ಪೇಟ್ದು ಕೈಕೊಳಿಸಿ: **ಆದಿಪು,** ೧೫. ೧೩ ವ)

ಅನಶ್ವರಾವಾಸ – [ನಾ] ಶಾಶ್ವತಸ್ಥಾನ, ಮುಕ್ತಿ (ಭಾಸುರದೇವಕೋಟಿ ವಿಭುವಪ್ಪ ಮಹರ್ದ್ಧಿಕನಪ್ಪ ವಾಸವಂಗಾಸನಕಂಪಮಂ ಪಡೆದು ತೀರ್ಥಕರತ್ವಮನಿತ್ತು ಅನಶ್ವರಾವಾಸಮನೆಯ್ದಿಸಲ್ಕೆ: **ಆದಿಪು,** ೧೬. ೮೧)

ಅನಶ್ವರಾಸ್ಪದ – [ನಾ] ಮೋಕ್ಷಸ್ಥಾನ (ಅನಂತಗುಣನಿಳಯಂ ಆದಿದೇವಂ ಪಲಬರ್ ಮುನಿಪತಿಗಳ್ವೆರಸಡರ್ದಪಂ ಅನಶ್ವರಾಸ್ಪದಮಂ: **ಆದಿಪು,** ೧೬. ೪೯)

ಅನಳಾರ್ಚಿ – [ನಾ] ಬೆಂಕಿಯ ಜ್ವಾಲೆ (ಬಳೆದ ಜಡೆ ಬಳ್ಳಿಗಳೊಳೆ ಪೆಣೆದು ವಿಷೋರಗ ಅನಳಾರ್ಚಿಗಳಿಂದಂ ಮಿಳಿರ್ದುವು: **ಆದಿಪು,** ೧೪. ೧೪೨)

ಅನಳಾಸ್ತ್ರ – [ನಾ] ಆಗ್ನೇಯಾಸ್ತ್ರ (ಜ್ವಳತ್ ಅನಳಾಸ್ತ್ರದಿಂದಂ ಇಸೆ ಕಟ್ಟಲೆ ತೂಳ್ದು ತೆರಳ್ದಾಗಳ್ ಉಮ್ಮಳಿಸಿ ಮಹಾರಥರ್ ಪೆಳಱ್: **ಪಂಪಭಾ,** ೧೧. ೧೪೯)

ಅನಾಕುಳ – [ಗು] ಧೈರ್ಯದಿಂದ (ಇನಿತೊಂದು ನುಡಿವ ಬಲ್ಮೆಯೆ ನಿನಗಿಲ್ಲದೊಡೇಕೆ ನಿನ್ನನಾಳ್ದಂ ನಿನ್ನಂ ಮನಮೊಲ್ದು ನಚ್ಚಿಯಟ್ಟಿದಂ ಅನಾಕುಳಂ ದೂತನಿಂತು ನುಡಿಯಲ್ವೇಟ್ಟುಂ: **ಆದಿಪು,** ೧೪. ೬೫); [ಕ್ರಿವಿ] ಅನಾಯಾಸವಾಗಿ (ಈ ಸಭಾವಳಯದೊಳ್ ಎನ್ನನೇಳಿಸಿದ ನಿನ್ನಂ ಅನಾಕುಳಮೆನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತನೇ: **ಪಂಪಭಾ,** ೨. ೫೦)

ಅನಾಗತ – [ಗು] ಇನ್ನೂ ಸಂಭವಿಸದ, ಭವಿಷ್ಯದ (ಪುರಜನಂಗಳೆಲ್ಲಮೋರೊರ್ವರನೆ ಪಿಡಿಯಚ್ಚುವಿಡಿದು ನುಡಿಯೆ ಕೆಲರ್ ಅನಾಗತಮನಱಿವ ಬುದ್ಧಿಯೊಡನೆ ಇಂತೆಂದರ್: **ಪಂಪಭಾ,** ೨. ೮೬ ವ)

ಅನಾಗತಬಾಧಾಪ್ರತಿಷೇಧ – [ನಾ] ಮುಂದಾಗಲಿರುವ ಹಾನಿಗೆ ತಡೆಯೊಡ್ಡು (ಸಂಜಯನಂ ಧೃತರಾಷ್ಟ್ರನಲ್ಲಿಗೆ ಸಂಧಾನವಾರ್ತೆಯಂ ಸಮಕೊಳಿಸುವಂತೆ ಅನಾಗತ ಬಾಧಾಪ್ರತಿಷೇಧಂ ಮಾಡುವಂತೆ ಅಟ್ಟಿ: **ಪಂಪಭಾ,** ೧೩. ೭೦ ವ)

ಅನಾಗತಮತಿ – [ನಾ] ಭವಿಷ್ಯವನ್ನು ತಿಳಿದವನು (ಮುನಿವರರ್ ಎಂತೀ ಗಿರಿಗೆ ಚರಿಗೆಗೆವರ್ಪರ್ ಅನಾಗತಮತಿ ಬಗೆಯ ನೀನುಪಾಯಾಂತರಮಂ: **ಆದಿಪು,** ೫. ೭)

ಅನಾಘ್ರಾತ – [ಗು] ಮೂಸಿನೋಡದ, ಮೀಸಲಾದ (ಅಮರೇಶ್ವರನಿಂ ಶಚಿಯಿಂ ನಮಗಿದನಾಘ್ರಾತಪೂತಮೆನಿಸಿ ಪರೀತ ಭ್ರಮರಾವತಂಸಮಾದುದು ನಮೇರು ಮಂದಾರ ಪಾರಿಜಾತ ಸ್ತಬಕಂ: **ಆದಿಪು,** ೭. ೭೧)

ಅನಾದಿಪ್ರಭವ – [ನಾ] ಅನಾದಿಕಾಲದಲ್ಲಿ ಹುಟ್ಟಿದ್ದು (ಇದು ಅನಾದಿಪ್ರಭವಂ ಭವಭ್ರಮಣ ದುಃಖೋಗ್ರಾಗ್ನಿಯೊಳ್ ಮಗ್ಗಿದಪ್ಪುದು ಜೀವಂಗಳಂ: **ಆದಿಪು,** ೧೫. ೧೯)

ಅನಾದ್ಯನಿಧನ – [ನಾ] ಹುಟ್ಟುಸಾವಿಲ್ಲದ್ದು, ಅನಾದಿ ಅನಂತವಾದುದು (ವಸ್ತುಗಳೆಲ್ಲಂ ಒಳವಪ್ಪುದಱಿಂ ಅನಾದ್ಯನಿಧನ ಸ್ವಭಾವನುಂ: **ಆದಿಪು,** ೨. ೧೦ ವ)

ಅನಾಪಾಂಗಾವಲೋಕನ – [ನಾ] ಕುಡಿನೋಟವಿಲ್ಲದವನು (ಸ್ತಿಮಿತೇಕ್ಷಣ ಅಭ್ರೂಭಂಗಂ ಅನಾಪಾಂಗಾವಲೋಕನಂ ಸುಶ್ಲಿಷ್ಟೋತ್ತಮ ದಶನಚ್ಛದ ಮಾನಸಮುಮರ್ದುದು ಯೋಗಪ್ರಯೋಗದೊಳ್ ಮುನಿಪತಿಯಾ: **ಆದಿಪು,** ೯. ೮೭)

ಅನಾರತಂ – [ಕ್ರಿವಿ] ಬಿಡುವಿಲ್ಲದೆ, ನಿರಂತರವಾಗಿ (ವರರತ್ನದ್ವೀಪಂ ಭಾಸುರರತ್ನಾಳಿಯಿಂ ಅನಾರತಂ ಕೊಟ್ಟು ವಸುಂಧರೆಗಭ್ರದತ್ತ ನೆಗೆಯಲ್ಕೆ: **ಆದಿಪು,** ೧೬. ೪೪)

ಅನಾಹಾರ – [ನಾ] ಆಹಾರವಿಲ್ಲದಿರುವುದು (ಕಾಮಗ್ರಹ ಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭ ಕಂಪ ಸ್ವೇದ ವೈವರ್ಣ್ಯ ಸಂತಾಪನ ಅನಾಹಾರ ವ್ಯಾಮೋಹ ಗದ್ಗದ ಅಶ್ರುಮೋಕ್ಷ ಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ,** ೪. ೫೯ ವ)

ಅನಿತಂ ಮಾಡು – [ಕ್ರಿ] ಹಾಗೆ ಮಾಡು, ಅಷ್ಟು ಮಾಡು (ಅವರ್ಗಳ್ಗೆ ಅನಿತಂ ಮಾಡಿದ ದೈವಂ ಪ್ರತ್ಯಕ್ಷಮಾಗಿ ಗಜಱಿ ಗರ್ಜಿಸುತ್ತುಂ ಬಂದು: **ಪಂಪಭಾ,** ೮. ೪೨ ವ)

ಅನಿತು – [ಅ] ಅಷ್ಟು (ಅನುವದಿಸಿದಪುದು ನುಡಿ ನುಡಿದನಿತುಮಂ ತೊದಳ ತೊದಳ ದೆಸೆಯಿಲ್ಲೆನೆ: **ಆದಿಪು,** ೨. ೧೦)

ಅನಿತೆಡೆ – [ನಾ] ಅಷ್ಟು ದೂರ, ಕೊಂಚ ದೂರ (ಎಮ್ಮ ಪೋಗು ಗೆಂಟು ಅನಿತೆಡೆಯಂ ತಗುಳ್ದು ಬರಲಾರ್ಪಿರೆ ನಿಮ್ಮ ವಿಳಾಸಯಾನದಿಂ: **ಆದಿಪು,** ೧೧. ೧೩೮)

ಅನಿತ್ಯತೆ – [ನಾ] ನಶ್ವರತೆ (ವಿದ್ಯಾನಿಳಯನಜೆದದಂ ದೇಹಾನಿತ್ಯತೆ ಮನದೊಳ್ ಬೇರೂಜಿದುದು: **ಆದಿಪು,** ೯. ೪೪)

ಅನಿಧನ – [ಗು] ಸಾವಿಲ್ಲದ, ನಾಶವಿಲ್ಲದ (ಅನಾದಿ ಅನಿಧನ ಗುಣಯುತಂ ಅದು ಅಕೃತ್ರಿಮಂ ಅದು ಮರುತ್ತ್ರಿಕಾವೇಷ್ಟಿತಂ: **ಆದಿಪು,** ೧. ೪೪)

ಅನಿಬರ್ – [ನಾ] ಅಷ್ಟು ಮಂದಿ (ಪನ್ನಿರ್ಛಾಸಿರದೇೞ್ನೂರೈವದಿಂಬರ್ ಮನಃಪರ್ಯಯಜ್ಞಾನಿಗಳುಂ ಅನಿಬರೆ ವಾದಿಗಳುಂ: **ಆದಿಪು,** ೧೬. ೪೦ ವ); [ನಾ] ಅಷ್ಟೂ ಮಂದಿ (ಸಾಸಿರ್ವರ್ ಏಜೆದೊಡಲ್ಲದೆ ಈ ಓಡಂ ನಡೆಯದು ಎಂಬುದುಂ ಆಂ ಅನಿಬರ ಬಿಣ್ಪುಮಪ್ಪೆಂ ಏಜೆಸೆಂದೊಡೆ ಗೆಯ್ವೆಂ ಎಂದೊಡಂ ಏಜೆಸಿ ನಡೆಯಿಸುವಲ್ಲಿ: **ಪಂಪಭಾ,** ೧. ೬೮ ವ)

ಅನಿಮಿತ್ತಂ – [ಕ್ರಿವಿ] ಕಾರಣವಿಲ್ಲದೆ (ಹಾಹಾಕ್ರಂದನಧ್ವನಿಗಳ್ ಅನಿಮಿತ್ತಂ ಆಕಾಶದೊಳ್ ನೆಗೞ್ಗೆಯುಂ: **ಪಂಪಭಾ,** ೧೦. ೨೬ ವ)

ಅನಿಮಿಷ – [ನಾ] ಕಣ್ಣ ರೆಪ್ಪೆ ಮಿಟುಕಿಸದವನು, ದೇವತೆ (ವಾನರಾರ್ಯಂ ನಂದ್ಯಾವರ್ತವಿಮಾನದೊಳ್ ಸುರನಾರೀಮನೋಹರಂ ಮನೋಹರನೆಂಬಂ ಅನಿಮಿಷನಾದಂ: **ಆದಿಪು,** ೫. ೭೦ ವ)

ಅನಿಮೇಷ – [ನಾ] ದೇವತೆ (ಅನಿಮೇಷರ್ ನೂತನಪ್ರಸ್ತುತ ಸುರಭಿ ಸುಧಾ ಕ್ಷೀರಧಾರಾ ಅಭಿಷೇಕಾರ್ಚನೆಯಂ .. .. ಪರಸಿದರ್ ಮಸ್ತಕನ್ಯಸ್ತಹಸ್ತರ್: **ಆದಿಪು,** ೧೪. ೧೧೬)

ಅನಿಮ್ನನಾಭಿ – [ಗು] ಆಳವಿಲ್ಲದ ಹೊಕ್ಕಳುಳ್ಳ (ಸಮಪಾರ್ಶ್ವನುಂ ಅಜಕುಕ್ಷಿಯುಂ ಗೋಧೋತ್ರಿಷ್ಟನುಂ ಮೋಹಜಘನಾಪರನುಂ ಅನಿಮ್ನನಾಭಿಯು: **ಆದಿಪು,** ೧೨. ೫೬ ವ)

ಅನಿಲಪಥ – [ನಾ] ಗಾಳಿಯ ದಾರಿ, ಆಕಾಶ (ರಸೆ ಪತ್ತಿತ್ತೆತ್ತಮಾಕಾಶದೊಳ್ ಅನಿಲಪಥಂ ಧಾರಿಣೀಚಕ್ರದೊಳ್ ಕಾಳಸಗೊಂಡತ್ತೆಂಬಿನಂ: **ಆದಿಪು,** ೧೪. ೯೫)

ಅನಿವಂಗೆಯ್ – [ಕ್ರಿ] ಬಲಾತ್ಕರಿಸು (ಅನಿವಂಗೆಯ್ದುಟಿಯೆಂಬ ತಾಯ ನುಡಿಯಂ ಕೈಕೊಂಡೆನೇ: **ಆದಿಪು,** ೧೨. ೩೬)

ಅನಿವಾರಿತ – [ಗು] ತಡೆಯಲಾಗದ್ದು (ನಿನಗಂ ಮೈತ್ರೇಯರ್ ಕೊಟ್ಟ ಊರುಭಂಗಶಾಪಂ ಅನಿವಾರಿತಂ: **ಪಂಪಭಾ,** ೧೩. ೬೫ ವ)

ಅನಿವಾರಿತದಾನ – [ನಾ] ತಡೆಯಿಲ್ಲದೆ, ನಿರಂತರವಾಗಿ ನೀಡುವ ದಾನ (ಮೇರುವ ಪೊನ್ ಕಲ್ಪಾಂಘ್ರಿಪದಾರವೆ ರಸದೊಜವು ಪರುಸವೇದಿಯ ಕಣಿ ಭಂಡಾರದೊಳುಂಟೆನೆ ಕುಡುವ ಅನಿವಾರಿತದಾನಕ್ಕೆ ಪೋಲ್ವರಾರ್ ಬದ್ದೆಗನಂ: **ಪಂಪಭಾ,** ೧. ೨೮)

ಅನಿವಾರ್ಯಸುತೇಜ – [ನಾ] ತಡೆಯಲಸಾಧ್ಯವಾದ ತೇಜಸ್ಸುಳ್ಳವನು (ಉದಯಾಚಳದಿಂ ದಿನಪಂ ಒಗೆವಂತೆ ಪುಟ್ಟಿದಂ ಅನಿವಾರ್ಯಸುತೇಜಂ ಎನಿಪಂ ಇನಜನ ತನಯಂ: **ಪಂಪಭಾ,** ೧. ೧೨೧)

ಅನಿವಿರಿದು – [ನಾ] ಅಷ್ಟು ದೊಡ್ಡದು (ಅನಿವಿರಿದೊಂದು ಯೌವನಮದಕ್ಕೆ ಎಡೆಯಾಗಿಯುಂ ಅಂದು ರಾಗಸಂಜನಮನೆಯ್ದೆ ತಾಳ್ದಿದವಿನಶ್ವರಕೀರ್ತಿಯೊಳಂ: **ಆದಿಪು,** ೮. ೭)

ಅನಿವೃತ್ತಿಕರಣ – [ನಾ] [ಜೈನ] ಮೂರು ಬಗೆಯ ಕರಣಲಬ್ಧಿಗಳಲ್ಲಿ – ಅಧಃಪ್ರವೃತ್ತಿಕರಣ, ಅಪೂರ್ವಕರಣ, ಅನಿವೃತ್ತಿಕರಣ – ಒಂದು; ಒಂಬತ್ತನೆಯ ಗುಣಸ್ಥಾನದಲ್ಲಿ ಜೀವನಿಗೆ ಧ್ಯಾನದಿಂದ ಉಂಟಾಗುವ ಪರಿಶುದ್ಧ ಭಾವಗಳು (ಪ್ರತಿಸಮಯಮನಂತಗುಣಶಕ್ತಿ ಖಚಿತೈಕಪರಿಣಾಮ ನಿವೃತ್ತಿಕರಣ ಕ್ಷಪಣಕನಾಗಿ: **ಆದಿಪು,** ೧೦. ೧೪ ವ)

ಅನಿಷ್ಟ – [ನಾ] ಇಷ್ಟವಿಲ್ಲದಿರುವುದು (ತ್ರಿಗುಪ್ತಿಗುಪ್ತ ಸಮಾಧಿಗುಪ್ತರೆಂಬ ಯತಿಪತಿಗಳಧ್ಯಯನಂ ನಿನಗನಿಷ್ಟಮಪ್ಪುದಜೆಂ ಅಧ್ಯಯನಾಂತರಾಯಮಂ ಮಾಡಲೆಂದು: **ಆದಿಪು,** ೩. ೩೮ ವ)

ಅನೀಕ – [ನಾ] ಸಮೂಹ (ದೇವೇಂದ್ರನೈರಾವತಾಳಾನಸ್ತಂಭಸಮಂಗಳಪ್ಪ ಭುಜಸಂದೋಹಂಗಳೊಳ್ ವೀರಕಾಂತಾನೀಕಕ್ಕೆಣೆಯಾಗಿ ಕೂಡೆ ಕುಣಿದರ್: **ಆದಿಪು,** ೭. ೧೨೪)

ಅನುಕಂಪೆ – [ನಾ] ದಯೆ (ತ್ರಿಶುದ್ಧಿಯಿನನುಕಂಪೆವೆರಸು ಸಮಸ್ತ ಪ್ರಾಣಿಗಳ್ಗೆ ಅಭಯಂಗುಡುವ ದಯಾದತ್ತಿಯುಂ: **ಆದಿಪು,** ೧೫. ೧೩ ವ)

ಅನುಕರಿಸು – [ಕ್ರಿ] ಹೋಲು, ಹೋಲಿಕೆಯನ್ನು ಪಡೆ (ತನ್ನ ಕೈಗೊಂಡ ಬೆಳ್ವಸದನದೊಳ್ ಕೀರ್ತಿಶ್ರೀಯುಂ ವಾಕ್ಶ್ರೀಯುಮಂ ಅನುಕರಿಸಿ ಮಂತ್ರಾಕ್ಷರನಿಯಮದೊಳ್ ಇಂದ್ರನಂ ಬರಿಸಿ: **ಪಂಪಭಾ,** ೧. ೧೩೭ ವ)

ಅನುಕೂಲಮಾರುತ – [ನಾ] ಅನುಕೂಲಕರವಾಗಿ ಬೀಸುವ ಗಾಳಿ (ಕವಿದೆತ್ತಿದ ಬಾಸಿಗದೊಂದು ಕಂಪಿನೊಳ್ ಪೊರೆದು ಮದಾಳಗಳ್ವೆರಸು ಬಂದುದೊಂದು ಅನುಕೂಲಮಾರುತಂ: **ಪಂಪಭಾ,** ೨. ೯೫)

ಅನುಕ್ರಮ – [ಗು] ಕ್ರಮಬದ್ಧ (ಉಪವಾದಕ ಪರಿವಾದಕ ವಾದ್ಯಂಗಳೊಳ್ ಕಿನ್ನರೀಜನ ಮಧುರಗೀತಾನುಗತಂಗಳಂ ಅನುಕ್ರಮದೊಳ್ ನೆಗೞೆ: **ಆದಿಪು,** ೭. ೧೧೮ ವ)

ಅನುಗತ – [ಗು] ಜೊತೆಗಿನ (ಉಪವಾದಕ ಪರಿವಾದಕ ವಾದ್ಯಂಗಳೊಳ್ ಕಿನ್ನರೀಜನ ಮಧುರಗೀತ ಅನುಗತಂಗಳಂ ಅನುಕ್ರಮದೊಳ್ ನೆಗೞೆ: **ಆದಿಪು,** ೭. ೧೧೮ ವ); ಅನುಸರಿಸುವ (ಮಂಗಳಗೀತ ನೃತ್ಯೋನ್ಮಿಶ್ರಿತ ಅನೇಕಾನಕಲಯಾನುಗತ ಲೀಲಾಲಾಸ್ಯಪ್ರಸಕ್ತ ಕಾಮಿನೀಕಮನೀಯಮಾಗಿ: **ಆದಿಪು,** ೮. ೩೫ ವ)

ಅನುಗಮಿಸು – [ಕ್ರಿ] ಅನುಸರಿಸಿ ನಡೆ (ಅಂತೆಂತಾನುಮವರಂ ಅನುಗಮಿಸಿ ಸೋಮಪ್ರಭನುಂ ಶ್ರೇಯಾಂಸನುಂ ಮಗುೞ್ದು ಬಂದು: **ಆದಿಪು,** ೧೦. ೭ ವ)

ಅನುಗಮ್ಯಮಾನ – ಹಿಂಬಾಲಿಸಲ್ಪಟ್ಟವನು (ಆಳೋಕಸಂಭ್ರಮೋಪೇತ ಪುರಜನಾನುಗಮ್ಯಮಾನಂ ಸೋಮಪ್ರಭರಾಜಮಂದಿರಾಭಿಮುಖನಾಗಿ ಬರ್ಪನ್ನೆಗಂ: **ಆದಿಪು,** ೯.೩೦ವ)

ಅನುಗೆಯ್ – [ಕ್ರಿ] ಸಿದ್ಧವಾಗು (ತಲೆ ನೆಲದೊಳ್ ಉರುಳ್ವೊಡಂ ಮೆಯ್ಗಲಿಯೊರ್ವಂ ಪಿಡಿದು ತಲೆಯಂ ಇಟ್ಟು ಅಟ್ಟೆಯೊಳ್ ಅಗ್ಗಲಿಸಿದ ಮುಳಿಸಿಂ ಮಾಟದ

ತಲೆಯಿಟ್ಟು ಆಡುವವನಂ ಇನಿಸು ಪೋಲ್ತನುಗೆಯ್ದಂ: **ಪಂಪಭಾ,** ೧೦. ೮೫)

ಅನುಚರ – [ನಾ] ಹಿಂಬಾಲಕ (ಅರಸನ ನೆಗೞ್ದಿಂದದೊಳ್ ಅನುಚರಂಗೆ ನೆಗೞಲ್ಕೆವೇೞ್ಕುಂ ಎಂದು ಅಜೆಯದೆ ತದ್ಗುರುವಿನ ಮತಮಂ ಭಕ್ತಿಯ ಭರದಿಂ ಜಾತರೂಪಮಂ ಕೈಗೊಂಡರ್: **ಆದಿಪು,** ೯. ೮೧)

ಅನುಜ – [ನಾ] ತಮ್ಮ (ಪುಂಡರೀಕಷಂಡೋಪಾಂತದೊಳ್ ವಿಗತಜೀವರಾಗಿರ್ದ ಮೂವರನುಜರಂ ಕಂಡು: **ಪಂಪಭಾ,** ೮. ೪೧ ವ)

ಅನುಜೆ – [ನಾ] ತಂಗಿ (ಬಂಚಿಸಿ ತನ್ನನುಜೆಯಂ ಧನಮಂ ಚಪಳಂ ಕೊಂಡು ಪುಸಿದು ಕಳವಳಿಸಿ: **ಆದಿಪು,** ೫. ೧೮)

ಅನುತ್ತರೀಯ – [ಗು] ದಾಟಲಾಗದ (ಅನುತ್ತರೀಯಕಂಟಕಂ ಅತಿಸುಭಟಮದೋತ್ಕಂಠಂ ಇದು ಕರ್ಣಾಟಬಲಂ: **ಆದಿಪು,** ೧೩. ೪೫ ವ)

ಅನುದಿಶ – [ನಾ] [ಜೈನ] ಒಂಬತ್ತು ಗ್ರೈವೇಯಕಗಳ ಮೇಲೆ ಎಷ್ಟೋ ಯೋಜನಗಳ ಮೇಲ್ಭಾಗದಲ್ಲಿನ ವಿಮಾನದ ಗುಂಪು (ಸಹಸ್ರೈಕನವತಿಗ್ರೈವೇಯಕಾಣಾಂ ತ್ರಿಕೇವಿಖ್ಯಾತಾ ವಸತಿರ್ನವಸ್ವನುದಿಶಾ ವಾಸೇಷು: **ಆದಿಪು,** ೧೬. ೬೬)

ಅನುದ್ಧತವೇಷ – [ನಾ] ನಮ್ರ ವೇಷ, ನಮ್ರ ವ್ಯಕ್ತಿ (ವಕ್ರೋಕ್ತನಿಪುಣನುಂ ಆಧೇಯವಚನನುಂ ಅನುದ್ಧತವೇಷನುಂ .. .. ಅಪ್ಪ ಮಹತ್ತರನ ಕೈಯೊಳ್: **ಆದಿಪು,** ೧೪. ೪೩ ವ)

ಅನುನಯ – [ನಾ] ಪ್ರೀತಿ (ವೈರಿನರೇಂದ್ರೋದ್ದಾಮ ದರ್ಪೋದ್ದಳನನೆ ಕಥಾನಾಯಕಂ ಮಾಡಿ ಸಂದರ್ಜುನನೊಳ್ ಪೋಲ್ವೀ ಕಥಾಭಿತ್ತಿಯಂ ಅನುನಯದಿಂ ಪೇೞಲೆಂದೆತ್ತಿಕೊಂಡೆಂ: **ಪಂಪಭಾ,** ೧. ೫೧)

ಅನುನಯಿಸು – [ಕ್ರಿ] ಸಮಾಧಾನಪಡಿಸು, ಓಲೈಸು (ಎಂದು ವನಲತೆಗಳಂ ಅನುನಯಿಸಿ: **ಆದಿಪು,** ೧೧. ೧೩೩ ವ)

ಅನುಪಮಮಂಗಳ – [ನಾ] [ಜೈನ] ಚಕ್ರವರ್ತಿಗೆ ಒದಗುವ ಚಾಮರದ ಹೆಸರು (ಯಕ್ಷಕರವಿಧೂಯಮಾನಮಪ್ಪ ಅನುಪಮ ಮಂಗಳಮೆಂಬ ಮೂವತ್ತೆರಡು ಚಾಮರಂಗಳುಂ: **ಆದಿಪು,** ೧೫. ೩ ವ)

ಅನುಪೂರ್ವ – [ಗು] ಒಡಗೂಡಿದ (ಅನುಪೂರ್ವ ದೀರ್ಘ ವಾಳಧಿಯುಂ ಮಾನುಷದುಗ್ಧಾವಿಳಾಸನೋಪೇತ ಪೇಚಕನುಂ: **ಆದಿಪು,** ೧೨. ೫೬ ವ)

ಅನುಪ್ರವಿಶತ್ – [ಗು] ಒಳಹೊಕ್ಕ (ಪವನಹತಂಗಳ್ ಮುನಿಪುಂಗವನ ಜಟಾಜಾಳಲತಿಕೆಗಳ್ ನಿಮಿರ್ದುವು ಅನುಪ್ರವಿಶತ್ ಧ್ಯಾನಾನಲದಗ್ಧ ವಿಸ್ಫುರಜ್ಜೀವಕ ಕನಕಕಾಳಿಕೆಗಳವೋಲ್: **ಆದಿಪು,** ೯. ೯೫)

ಅನುಪ್ರೇಕ್ಷೆ – [ನಾ] [ಜೈನ] ಯತಿಗಳು ಧ್ಯಾನಮಾಡಬೇಕಾದ ಅನಿತ್ಯತ್ವ, ಅಶರಣತ್ವ, ಸಂಸಾರ, ಏಕತ್ವ, ಅನ್ಯತ್ವ, ಅಶುಚಿ, ಆಸ್ರವ, ಸಂವರ, ನಿರ್ಜರೆ, ಲೋಕ, ಬೋಧಿದುರ್ಲಭತ್ವ, ಧರ್ಮ ಎಂಬ ಹನ್ನೆರಡು ತತ್ವಗಳ ಚಿಂತನೆ (ಮುನಿವೃಂದೋಚ್ಚಾರಿತ ಪಂಚನಮಸ್ಕೃತಿಗಾಂತು ಕಿವಿಯಂ ಅರ್ಹತ್ಪದಮಂ ನೆನೆಯುತ್ತುಮನುಪ್ರೇಕ್ಷೆಯೆ ಮನದೊಳ್ ತಣ್ಮಲೆಯೆ ಸೇಸೆಗೊಳ್ ಖಚರಪತೀ: **ಆದಿಪು,** ೨. ೫೭)

ಅನುಬಂಧಿಸು – [ಕ್ರಿ] ಕೂಡು, ಸೇರು (ಇದು ನಿಜಪೂರ್ವಪುಣ್ಯಫಲದಿಂ ದೊರೆಕೊಂಡ ವಿಮಾನಂ ಈ ವಿಮಾನದೊಳ್ ಅನುಬಂಧಿಸಿರ್ದುದು ಇದು ದೇವನಿಕಾಯಂ: **ಆದಿಪು,** ೨. ೬೮); [ಕ್ರಿ] ಕಟ್ಟಿಹಾಕು (ಎಂದನುಬಂಧಿಸಿದ ಮೋಹಪಾಶದೊಳ್ ತಾಯ್ತಂದೆಯ ನುಡಿದ ನುಡಿಯಂ ಕೇಳ್ದು: **ಪಂಪಭಾ,** ೧೩. ೧೩ ವ)

ಅನುಬಲ – [ನಾ] ಅನುಕೂಲಕರ ಶಕ್ತಿ (ಮನಸಿಜನಂಬು ಅರಲ್ದ ಪೊಸಮಲ್ಲಿಗೆ ತೆಂಕಣ ಗಾಳಿಯೆಂಬಿವಿಂತು ಅನುಬಲದಿಂದಂ ಎನ್ನಂ ಅಲೆದಪ್ಪುವು: **ಪಂಪಭಾ,** ೪. ೬೮); [ನಾ] ಒತ್ತಾಸೆ (ಸುಯೋಧನನೆಂಬ ಪಾಪಕರ್ಮನ ಮಾಡಿದನುವರಂ ನಿಮ್ಮ ಅನುಬಲದೊಳಂ ಅರಿಕೇಸರಿಯ ಭುಜಬಲದೊಳಂ ಎಮಗಿಂಬುವಂದುದು: **ಪಂಪಭಾ,** ೯. ೧೭ ವ); [ನಾ] ಸಮರ್ಥನೆ (ಒಡಂಬಡು ನಿನ್ನಂ ಕೆಯ್ಯನೊಡ್ಡಿ ಬೇಡಿದಪ್ಪೆಂ ಎಂದ ಧೃತರಾಷ್ಟ್ರನ ನುಡಿಗೆ ಅನುಬಲಮಾಗಿ ಗಾಂಧಾರಿಯಿಂತೆಂದಳ್: **ಪಂಪಭಾ,** ೧೩. ೧೧ ವ); [ನಾ] ಬೆಂಬಲ (ವೀರಲಕ್ಷ್ಮಿ ನಿಮ್ಮ ಅನುಬಲದಿಂದಮಲ್ಲದೆ ಎನಗಾಗದು ದಲ್ : **ಪಂಪಭಾ,** ೧೩. ೨೯)

ಅನುಭವಿಕೆ – [ನಾ] ಅನುಭವಿಸಲಿ (ಭೋಗಂಗಳ್ ಸಲೆ ಮನದೊಳ್ ರಾಗಮನೊದವಿಸುಗುಮಪ್ಪೊಡೆ ಅನುಭವಿಕೆ: **ಆದಿಪು,** ೩. ೭೦)

ಅನುಭಾಗ – [ನಾ] [ಜೈನ] ಕರ್ಮಪುದ್ಗಲಗಳಿಗಿರುವ ಸ್ವಗತ ಸಾಮರ್ಥ್ಯವಿಶೇಷ; ಆತ್ಮನಿಗೆ ಕರ್ಮಗಳ ಫಲಕೊಡುವ ಶಕ್ತಿ (ಬಾದರ ಸಾಂಪರಾಯ ಕೃಷ್ಣರೂಪ ಅನುಭಾಗಮಂ ಅನಂತಗುಣಹಾನಿರೂಪದಿಂ ಕುಂದಿಸಿ: **ಆದಿಪು,** ೧೦. ೧೪ ವ)

ಅನುಭಾವ – [ನಾ] ಪ್ರಭಾವ (ಶುಭಭಾವ ಶುಕ್ಲಲೇಶ್ಯಾನುಭಾವದಿಂ ಧವಳಪುಂಡರೀಕನಿಕಾಶಪ್ರಭೆ ದೊರೆಕೊಂಡುದು: **ಆದಿಪು,** ೬. ೪೨); [ನಾ] ಭಾವಕ್ಕನುಗುಣವಾದ ದೇಹಚೇಷ್ಟೆ (ಭಾವದ ಅನುಭಾವದ ಎಸೆವ ವಿಭಾವದ ಪಸುಗೆಗಳೊಳೊಸರ್ವ ರಸದಭಿನಯಮಂ: **ಆದಿಪು,** ೯. ೨೭)

ಅನುಭೂತ – [ಗು] ಅನುಭವಿಸಿದ, ಈ ಹಿಂದಿನ (ದೃಷ್ಟ ಶ್ರುತ ಅನುಭೂತ ಕಥೆಗಳಂ ತದನ್ವಯಸಂಬಂಧಿಗಳಂ ಇಂತೆಂದು ಪೇೞಲ್ ತಗುಳ್ದಂ: **ಆದಿಪು,** ೨. ೧೧ ವ)

ಅನುಭೂತಪೂರ್ವ – [ಗು] ಮೊದಲೇ ಅನುಭವಿಸಿದ, ಸುಪರಿಚಿತವಾದ (ಜೀವಂಗಳ್ .. .. ನಾನಾಶರೀರೋಪಾದಾನ ಪರಿತ್ಯಜನಪುರಸ್ಸರಂ ಪರಿಭ್ರಮಿಸುಗುಂ ಅದು ನಮ್ಮಿಬ್ಬರ ಭವಾವಳಿಯಿಂದೆ ನಮಗನುಭೂತಪೂರ್ವಂ: **ಆದಿಪು,** ೧೬. ೫೭ ವ)

ಅನುಮಾನ – [ನಾ] ಊಹೆ (ಎನ್ನ ಕಂಡ ಕನಸುಗಳ್ ಈ ಯುಗದ ಕಡೆಯೊಳ್ ಪ್ರಜೆಗಳ್ಗೆ ವಿವಿಧೋಪದ್ರವ ಸೂಚಕಂಗಳಾಗಿ ತೋರ್ಕುಮೆಂದನುಮಾನದಿಂ ಅಸ್ಪಷ್ಟರೂಪದಿನಜೆದು: **ಆದಿಪು,** ೧೫. ೨೧ ವ)

ಅನುಮೋದ – [ನಾ] ಒಪ್ಪಿಗೆ (ಮತ್ತಂ ಉತ್ತಮಪಾತ್ರದಾನ ಅನುಮೋದಫಲದಿಂದಲ್ಲಿ ಪುಟ್ಟುವ ಜೀವಂಗಳ್: **ಆದಿಪು,** ೫. ೪೧ ವ)

ಅನುಯೋಗ – [ನಾ] [ಜೈನ] ತೀರ್ಥಂಕರರು ಉಪದೇಶಿಸಿದ ಶಾಸ್ತ್ರ ಸಮೂಹ; ನಾಲ್ಕು: ಪ್ರಥಮ, ಕರಣ, ಚರಣ, ದ್ರವ್ಯ ಎಂಬ ಅನುಯೋಗಗಳು (ಅನುಯೋಗಕುಸುಮಪಾದಪಂ ಅನೇಕನಯಲತಿಕ ಮಂಗಫಳಮಹೀಜಂ ಸದ್ವನವನಂ ಎಮಗೆ ವಿಶ್ರಮವನಮಕ್ಕೆ ಅತಿವಿಶ್ರುತಶ್ರುತಸ್ಕಂಧವನಂ: **ಆದಿಪು**, ೧. ೧೦)

ಅನುರಾಗ – [ನಾ] ವಾತ್ಸಲ್ಯ, ಕೃಪೆ (ತಪೋವನದ ಮುನಿಜನದ ಪರಮಾನುರಾಗಮಂ ಪೆರ್ಚಿಸಿ ಕಾಮಾನುರಾಗಮಂ ಬೆರ್ಚಿಸಿ ತದಾಶ್ರಮದೊಳ್ ಆಶ್ರಮಕ್ಕೆ ಗುರುವಾಗಿ ಪಾಂಡುರಾಜನಿರ್ಪನ್ನೆಗಂ: **ಪಂಪಭಾ,** ೧. ೧೧೬ ವ); [ನಾ] ಸಂತೋಷ (ಈ ತೆಱದಿಂ ನೆಗಟ್ದು ಎಯ್ದೆ ವೀರಲಕ್ಷ್ಮಿಗೆ ನೆಲೆಯಾಗು ಪೋಗೆನೆ ನೃಪಂ ಪೊಡೆವಟ್ಟು ಮನೋನುರಾಗದಿಂ: **ಪಂಪಭಾ**, ೧೧. ೩೨)

ಅನುರೂಪ – [ನಾ] ತಕ್ಕ ರೀತಿ (ತಂದೆಯಿತ್ತವನಿತಳಂ ಪೊರೆಯುಂಟೆ ತನಗೆ ಭಾಗ್ಯಾನುರೂಪದಿಂ ಬಾಳ್ವಂ ಎಱಗೆವೆಂಬತಿಮದದಿಂ: **ಆದಿಪು**, ೧೪. ೧೬); [ನಾ] ಸದೃಶವಾದುದು, ರೀತಿಯದು (ಗುರುವ ಕೇಶಕಳಾಪಮಂ ತೆಗೆದಂ ತೆ ಗಂಡನುಮಾದಂ ಈ ಪರಿಭವಕ್ಕೆ ಅನುರೂಪಮಿಂ ಪೆಱತೊಂದುಮಿಲ್ಲ ಅಹಿಕೇತನಾ: **ಪಂಪಭಾ**, ೧೨. ೩೭)

ಅನುಲಿಪ್ತ – [ಗು] ಲೇಪಿಸಿದ (ಸಾಂದ್ರಚಂದನದ್ರವಾನುಲಿಪ್ತ ಆದ್ರೃಪ್ತ ಕುಚಕಳಶಂಗಳಂ ತರಳತರತಾರಹಾರದಿಂದಳಂಕರಿಸಿ: **ಆದಿಪು**, ೪. ೪೧ ವ)

ಅನುಲೇಪನ – [ನಾ] ಗಂಧ (ಕಿಱಿದು ಪೊೞ್ತು ಕುಳ್ಳಿರ್ದು ಮಜ್ಜನ ಭೋಜನ ತಾಂಬೂಲ ಅನುಲೇಪನ ವಿಭೂಷಣ ಸುರಭಿಕುಸುಮದಾಮಾದಿಗಳಿಂ ಸಂತಸಂಬಡಿಸಿ: **ಪಂಪಭಾ,** ೪. ೪೩ ವ)

ಅನುವದಿಸು – [ಕ್ರಿ] ಹೇಳಿಕೊಟ್ಟಂತೆ ಹೇಳು (ಮುನಿಜನಂ ಓದಿಸಿದೋಜೆಯೊಳ್ ಅನುವದಿಪುದು: **ಆದಿಪು,** ೧. ೧೪)

ಅನುವರ – [ನಾ] ಸಂಕಟ (ಗೋಗ್ರಹಣಮನೆ ನೆವಂ ಮಾಡಿ ಸುಯೋಧನನೆಂಬ ಪಾಪಕರ್ಮನ ಮಾಡಿದ ಅನುವರಂ ನಿಮ್ಮನುಬಲದೊಳಂ ಅರಿಕೇಸರಿಯ ಭುಜಬಲದೊಳಂ ಎಮಗಿಂಬುವಂದುದು: **ಪಂಪಭಾ,** ೯. ೧೭ ವ); [ನಾ] ಯುದ್ಧ (ಪಾಂಡವರಂ ಒಂದು ದೆವಸದ ಅನುವರದೊಳ್ ಗೆಲ್ವೆನಕ್ಕೆ ಎಂದು ಬರಂಬಡೆದು ಪೋದಂ: **ಪಂಪಭಾ,** ೭. ೩೨ ವ)

ಅನುವಱಿ – [ಕ್ರಿ] ಕ್ರಮವನ್ನು ಅರಿ, ಔಚಿತ್ಯ ತಿಳಿ (ಅಂತು ಅನುವಱಿದು ಒಸಗೆಯೊಳ್ ಅಮರರಾಜನುಂ ಸನಾಭಿಗಳ್ವೆರಸು ನಾಭಿರಾಜನುಂ ಬಂದು .. .. ಪಾಣಿಗ್ರಹಣಂಗೆಯ್ಸಿದಾಗಳ್: **ಆದಿಪು,** ೮. ೨೨ ವ)

ಅನುವಿಸು – [ಕ್ರಿ] ಮಧ್ಯೆ ಬಾಯಿಹಾಕು (ಭುವನೈಕನಾಥನಂ ಸಲ್ಗೆವೆರಸು ಬೇಡುತ್ತಿರೆ ಬಂದು ಅನುವಿಸುವ ನಿಮ್ಮ ಮುದುಗಣ್ಣನದೊದೊಳಿದೇನುಂತೆ ಬಟ್ಟೆವೋಪೊಡೆ ಪೋಗಿಂ: **ಆದಿಪು,** ೯. ೧೦೬); [ಕ್ರಿ] ಅನುನಯ ಮಾಡು (ನಭದೊಳಿರ್ದಪೆಯಪ್ಪುದಱಿಂದೆ ನಿನ್ನನಾಂ ಅನುವಿಪೆನೆನ್ನ ಮೆಯ್ಬಡವೊ ನಲ್ಲನ ಮೆಯ್ಬಡವೋ ನಿಶಾಚರಾ: **ಆದಿಪು:** ೧೨. ೪೧); [ಕ್ರಿ] ಕೇಳಿಕೊ, ಪ್ರಾರ್ಥಿಸು (ನೀನುಂ ಎನ್ನನೆ ನೋಡಿ ನಭದೊಳಿರ್ದಪೆಯಪ್ಪುದಱಿಂದೆ ನಿನ್ನನಾಂ ಅನುವಿಪೆಂ ಎನ್ನ ಮೆಯ್ಬಡವೊ ನಲ್ಲನ ಮೆಯ್ಬಡವೋ ನಿಶಾಕರಾ: **ಆದಿಪು**, ೧೨. ೪೧); [ಕ್ರಿ] ಒತ್ತಾಯಿಸು (ಅನುವಿಸೆ ಬೇಟಕಾಱನೊಲವಿರ್ಮಡಿಯಪ್ಪುದು ಬಯ್ಕೆ ಬೇಟಕಾಱನ ಬಗೆ ನಿಲ್ಲದಿಕ್ಕೆಗೊಳಗಪ್ಪುದು: **ಪಂಪಭಾ,** ೪. ೧೦೨); [ಕ್ರಿ] ಪ್ರೀತಿಯನ್ನುಂಟುಮಾಡು, ಪ್ರಿಯವೆನಿಸು (ಧ್ವನತ್ ಅಳಿಕುಳಾಕುಳೀಕೃತ ವನಂಗಳಿಂದೆಸೆವ ಪದ್ಮಷಂಡಂಗಳ ಚೆಲ್ವಿನೊಳಂ ಕಣ್ಣ ಮನಮಂ ಅನುವಿಸುವ ವಿರಾಟಪುರಮನೆಯ್ದಿದರ್ ಅವರ್ಗಳ್: **ಪಂಪಭಾ,** ೮. ೫೨); [ಕ್ರಿ] ಸೇರು (ಪ್ರಳಯದುರಿಯಂ ಉರುಳಿಮಾಡಿದಂತಾನುಂ ಬಡವಾಗ್ನಿಯಂ ಅನುವಿಸಿದಂತಾನುಂ: **ಪಂಪಭಾ**, ೧೦. ೮೦ ವ)

ಅನುವು – [ನಾ] ರೀತಿ (ಪುಸಿ ನಸುವಂಚನೆ ನೋರ್ಪ ಅನುವು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ಕುಸುರಿ ನುಸುಳ್ ಎಂಬ ಕೇಣದ ಕುಸುರಿಯಂ ಅಱಿದಿಱಿದು ಮೆಱೆದು ನೆಱೆದೆ ಉಱಿದೆ ಅರೆಬರ್: **ಪಂಪಭಾ**, ೧೦. ೮೧)

ಅನುಶಯ – [ನಾ] ಪಶ್ಚಾತ್ತಾಪ (ಮೋಹಾಂಧತಮಸ್ತೋಮಮಂ ಕಳೆದು ಕೃತಾನುಶಯಂ ಅನಶನವಿಧಾನದಿಂ ಅಸುವಂ ವಿಸರ್ಜಿಸಿ: **ಆದಿಪು,** ೨. ೧೭ ವ)

ಅನುಶೋಣಿತ – [ನಾ] ಅನುಸರಣೆಯಿಂದ ಕೆಂಪಾದ (ಲೀಲಾಕಮಲಾಲಾಕರಾನೀಕ ರಕ್ತಕಮಳಂಗಳಂ ಆಸ್ಯ ಅನುಶೋಣಿತ ಶೋಣರಿಪು ನೃಪಶಿಶುಗಳೆಂದು ತುಱಿಯಿಸಿಯುಂ: **ಆದಿಪು,** ೮. ೪೧ ವ)

ಅನುಷ್ಠಿಸು – [ಕ್ರಿ] ಮಾಡು, ನೆರವೇರಿಸು (ಎಂದು ಯುಧಿಷ್ಠಿರಂ ನಿಶ್ಚಿತಕಾರ್ಯಮನುಷ್ಠಿಸೆ ನಿಜಪರಿವಾರಜನಮೆಲ್ಲಮಂ .. .. ಪೋಗಲ್ವೇೞ್ದು: **ಪಂಪಭಾ**, ೮. ೫೦ ವ)

ಅನುಸಂಧಿಸು – [ಕ್ರಿ] ಜೋಡಿಸು, ಸೃಷ್ಟಿಸು (ರಸಭಂಗಭಯದಿನಿಂದ್ರಂ ಪೊಸತೊಂದು ಆ ದೊರೆಯ ಪಾತ್ರಮಂ ತಂದನನುಸಂಧಿಸುವುದುಂ: **ಆದಿಪು,** ೯. ೪೨)

ಅನುಸ್ಮರಣ – [ನಾ] ನೆನಪು (ಮಹಾನದಾವಗಾಹನಸಮಯ ನೌದ್ರೋಣಿ ಸಂಕ್ರಮಾದಿವಿಧಾನ ಪ್ರಾಗಲ್ಭ್ಯನುಂ ಅನುಸ್ಮರಣಮಾತ್ರ ನಿಷ್ಪಾದಿತ ಸಪ್ತತಳಾದಿ ಪ್ರಾಸಾದಪ್ರಕರಣನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ: **ಆದಿಪು**, ೧೧. ೩ ವ)

ಅನೂಪ – [ನಾ] ನೀರು ಸಮೃದ್ಧವಾಗಿರುವ ಭೂಮಿ (ಬಟೆಕಂ ದೇವಮಾತೃಕ ಸಾಧಾರಣ ಅನೂಪ ಜಾಂಗಳ ಭೇದಂಗಳುಮಂ ಅಂತಪಾಳ ಪಾಳಿತದುರ್ಗ ಪರಿವೃತಾಂತಂಗಳುಂ: **ಆದಿಪು**, ೮. ೫೪ ವ)

ಅನೃತಧನ – [ನಾ] ಸುಳ್ಳುಗಾರ (ಮಧುಮದ್ಯಮಾಂಸಲೋಲುಪರ್ ಅಧಾರ್ಮಿಕರ್ ಪರವಧೂರತಿಪ್ರಿಯರ್ ಅಧಮರ್ ವಧನಿರತರ್ ಪಾಪಿಗಳ್ ಅನೃತಧನರ್ ದ್ವಿಜರಿನ್ನಪ್ಪರಾ ಕಲಿಯುಗದೊಳ್: **ಆದಿಪು,** ೧೫. ೨೭)

ಅನೇಕಪ – [ನಾ] ಆನೆ (ಕುಪಿತ ಅನೇಕಪ ದಂದಶೂಕ ದವ ದೈತ್ಯ ಅರಾತಿ ಚೋರ ಅಂಧಕಾರ ಪತದ್ವಜ ವಿಷ ಅಭಿಚಾರಿಕ ಜರಾತಂಕಾದಿ ಭೇದಂಗಳಪ್ಪ: **ಆದಿಪು.** ೧೬. ೯)

ಅನೇಕಭೋಗಭಾಗಿ – [ಗು] ನಾನಾ ಭೋಗಗಳಿಗೆ ಪಾತ್ರ (ವಿನಯವಿನಮಿತ ಮಣಿಮುಕುಟನಾದ ವಜ್ರಜಂಘನಂ ಅನೇಕಭೋಗಭಾಗಿಯಾಗೆಂದು ಪರಸಿ: **ಆದಿಪು,** ೪. ೨೪ ವ)

ಅನೇಕಾಕ್ಷರಸ್ವರೂಪ – [ನಾ] ವಿವಿಧ ಲಿಪಿಗಳ ತಿಳಿವಳಿಕೆ (ಅನೇಕಾಕ್ಷರಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಣ ಶಕ್ತಿ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳಂ: **ಪಂಪಭಾ,** ೨. ೩೪ ವ)

ಅನೇಡಮೂಕ – [ನಾ] ಕಿವುಡ ಮತ್ತು ಮೂಗ (ಕವಿತಾರಹಸ್ಯಮಂ ಸತ್ಕವಿಯಱಿಗುಂ ಅನೇಡಮೂಕನೇಡಂ ಜಡನೆಂಬವಂ ಅಱಿಗುಮೆ: **ಆದಿಪು,** ೧. ೨೦)

ಅನೈಕಾಂತಿಕ – [ನಾ] ಏಕಾಂಗಿಯಲ್ಲದವನು (ಅನೈಕಾಂತಿಕರ್ ಕೆಲರ್ ತನುತರತನುಗಳೊಳಂ ಅತಿವಿಶದ ಪ್ರಜ್ಞಾತಿಶಯಮಂ ಕಾಣಲಾದಪ್ಪುದು: **ಆದಿಪು,** ೨. ೧೦ ವ)

ಅನೋಕಹ – [ನಾ] ಮರಗಿಡ (ರಕ್ತಾಶೋಕಪಲ್ಲವಾಧರೆಯರ್ ಅತಿರಕ್ತಪಲ್ಲವ ಅನೋಕಹಂಗಳುಮಂ .. .. ನೋಡುತ್ತುಂ ಕುಸುಮಾಪಚಯಕ್ರೀಡಾವಿಳಾಸದಿಂ ತೊಟಲ್ವಲ್ಲಿ: **ಆದಿಪು,** ೧೧. ೯೫ ವ)

ಅನ್ನಂ – [ಅ] ಹಾಗೆ, ರೀತಿಯಲ್ಲಿ (ಎಸೆದತ್ತು ಏಕರಜ್ಜುಪ್ರಮಾಣಂ ತಿರ್ಯಗ್ಲೋಕಂ ಸ್ವಯಂಭೂರಮಣಜಲಧಿಪರ್ಯಂತಮಂ ತಾಗುವನ್ನಂ: **ಆದಿಪು,** ೧. ೪೮); [ಅ] ಅಂತಹವನು (ದನುಜಾಂತಕನೆಂಬೀ ನಿನ್ನ ನಚ್ಚುವೋದಂಕಮೆಲವೊ ಮುನ್ನಂ ಎನ್ನನ್ನಂ ದನುಜಂ ಪುಟ್ಟಿದೆ ಸಂದುದು: **ಪಂಪಭಾ,** ೬. ೫೪)

ಅನ್ನದಾನ – [ನಾ] ಧರ್ಮಕ್ಕಾಗಿ ಆಹಾರ ನೀಡುವುದು (ಅತಿಥಿಯೊಳ್ ಇನ್ನು ಅನ್ನದಾನಮಂ ಕುಡುವೆಡೆಯೊಳ್: **ಆದಿಪು,** ೧೫. ೪೦)

ಅನ್ನಪ್ರಾಶನ – [ನಾ] [ಜೈನ] ಮಗುವಿಗೆ ಅನ್ನ ತಿನ್ನಿಸುವುದು, ಒಂದು ಗರ್ಭಾನ್ವಯಕ್ರಿಯೆ (ಅನ್ನಪ್ರಾಶನ .. .. ಆಗ್ರನಿರ್ವೃತಿಯೆಂಬಯ್ವತ್ತೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಅನ್ನವಾಗು – [ಕ್ರಿ] ಹಾಗೆ ಆಗು, ಅಂತಹುದಾಗು (ಕನಕಪ್ರಾಸಾದಪಙ್ತಿಗಳ ಪಟಿಪಟನೆ ಬೆಳಗುವ ಸೊಡರ್ಗಳಂ ಆದಿತ್ಯನ ನಂಟರೆಂದು ತಮೋರಾಜಕಂ ಮುಳಿದು ಸೆಱೆಗೆಯ್ದ ಬೆಳಗಿನ ಸೆಱೆಯ ಮನೆಗಳನ್ನವಾದುವು: **ಪಂಪಭಾ,** ೪. ೪೯ ವ)

ಅನ್ನವಾಸ – [ನಾ] ಊಟದ ಮನೆ (ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗಟ್ದ ಮಾತಱಿವರ ಸಬ್ಬವದವರೊಡನಂತೊಸೆದು ಅನ್ನವಾಸದ ಓಲಗದೊಳಿರ್ದನಾಗಳ್ ಹರಿಗಂ: **ಪಂಪಭಾ,** ೩. ೮೦)

ಅನ್ನೆಗಂ – [ಅ] ಆದ್ದರಿಂದ (ಜೀವಕ್ಕೇಗೆಯ್ದುಮಿದು ಸಹಜಂ ಅನ್ನೆಗಂ ಎಯ್ದುಗುಮುದಾತ್ತಮುಕ್ತಿಶ್ರೀಯಂ: **ಆದಿಪು,** ೯. ೫೨); [ಅ] ಆ ಸಮಯದಲ್ಲಿ (ಮೃಗಯಾಕ್ರೀಡೆಗೆ ಪಾಂಡುರಾಜತನಯರ್ ಪೋಪನ್ನೆಗಂ ಬಂದು ತೊಟ್ಟಗೆ ಪಾಂಚಾಳಿಯನೆತ್ತಿ ತನ್ನ ರಥದೊಳ್ ತಂದಿಟ್ಟುಕೊಂಡುಯ್ದಂ: **ಪಂಪಭಾ,** ೭. ೩೧)

ಅನ್ನೆಯ – [ನಾ] ಅನ್ಯಾಯ (ಸನ್ನತದಿಂ ರತಕ್ಕೆಳಸಿ ನಲ್ಲಳೊಳೋತು ಒಡಗೂಡಿದೆನ್ನನಿಂತು ಅನ್ನೆಯಂ ಎಚ್ಚುದರ್ಕೆ ಪೆಱತಿಲ್ಲದು ದಂಡಂ: **ಪಂಪಭಾ,** ೧. ೧೧೨)

ಅನ್ಯಜನ್ಮ – [ನಾ] ಜನ್ಮಾಂತರ (ಮನದೊಳೊಗೆದ ಅನ್ಯಜನ್ಮದ ಮುನಿಸದು ಕಣ್ಣಿಂ ತುಳುಂಕೆ ಸೈರಿಸದವನುರ್ವಿನ ಕಲಿತನಕ್ಕೆ ದುರ್ಯೋಧನನುಂ ಭೀಮನೊಳೆ ಸೆಣಸಿ ಗದೆಯಂ ಕಲ್ತಂ: **ಪಂಪಭಾ,** ೨. ೫೯)

ಅನ್ಯತರವೇದನೀಯ – [ನಾ] [ಜೈನ] ಘಾತಿಕರ್ಮಗಳ ನಾಶದಿಂದ ದುಃಖಫಲವನ್ನು ನೀಡಲು ಅಸಮರ್ಥವಾಗಿ ಸುಟ್ಟ ಬೀಜದಂತೆ ಉಳಿದುಕೊಂಡಿರುವ ಅನುದಯ ಎಂಬ ಅಸಾತಾವೇದನೀಯ ಕರ್ಮಪ್ರಕೃತಿ (ನಿಜದ್ವಿಚರಸಮಯದಳ್ ಅನ್ಯತರವೇದನೀಯ ದೇವಗತಿತತ್ರಯೋಗ್ಯಾನುಪೂರ್ವ ಶರೀರಬಂಧನ ಸಂಘಾತವರ್ಣರಸಪಂಚಕ ಸಂಸ್ಥಾನ ಸಂಹನನ ಪಂಚಷಟ್ಕಾಂಗೋಪಾಂಗದ್ವಿಕಂ ಗಂಧದ್ವಿಕಂ: **ಆದಿಪು,** ೧೬. ೪೯ ವ)

ಅನ್ಯಥಾನುಪಪತ್ತಿ – [ನಾ] ಬೇರೆ ರೀತಿಯಲ್ಲಿ ಸಾಧಿಸಲಾಗದ ಸ್ಥಿತಿ (ಅಸು ಸಾಧನದೂಷಣಪ್ರಯೋಗ ಅನ್ಯಥಾನುಪಪತ್ತಿಯಿಂ ಬಹಿರರ್ಥ ಸಿದ್ಧಿಯಕ್ಕುಂ: **ಆದಿಪು,** ೨. ೧೦ ವ)

ಅನ್ಯಥಾವಾಸ – [ನಾ] ಬೇರೆ ಬಗೆಯಾದ ವಾಸ [ಅಜ್ಞಾತವಾಸ] (ಧರ್ಮಪುತ್ರಂ ಪನ್ನೆರಡು ವರುಷಂಬರಂ ನಾಡಂ ಪುಗದೆ ಅರಣ್ಯದೊಳಿರ್ದಿಂತು ಅನ್ಯಥಾವಾಸದೊಳ್ ಒಂದು ವರುಷದೊಳ್: **ಪಂಪಭಾ,** ೭. ೩ ವ)

ಅನ್ಯಭವ – [ನಾ] ಬೇರೊಂದು ಜನ್ಮ (ಪಟಮಿದೆ ಸಾಲ್ಗುಂ ಅನ್ಯಭವವಲ್ಲಭನಂ ಪಟವಿದ್ಯೆಯೆತ್ತಲುಂ ಜಟಮಟಿಕರ್ಕಳಂ ತೊಡರೆ ಸುತ್ತಲುಂ ಅಪ್ಪುದಱಿಂ: **ಆದಿಪು,** ೩. ೪೫)

ಅನ್ಯಭೂಪಾಲಕಿರೀಟತಾಟಿತಪದಂ – [ನಾ] ಬೇರೆ ರಾಜರುಗಳ ಕಿರೀಟಗಳು ತಾಕಿದ ಪಾದವುಳ್ಳವನು (ಅನ್ಯಭೂಪಾಲಕರೀಟತಾಟಿತಪದಂ ಯಮನಂದನಂ ಅಜ್ಜ ನಾಡೆಯುಂ ಸೋಲದೊಳಾದಂ ಏವಯಿಸಿದೆಂ ನುಡಿಗೆ ಇನ್ನೆಡೆಯಿಲ್ಲ ಪೋಗಿಂ ಆತ್ಮಾಲಯಕೆ: **ಪಂಪಭಾ,** ೬. ೭೪)

ಅನ್ಯಸಮಯ – [ನಾ] ಬೇರೆಯ ಮತ (ಶ್ರೀ ಜೈನಧರ್ಮಂ ಮೊದಲ್ಗೊದವಿತ್ತಿರ್ದುದು ಮತ್ತಿನ ಅನ್ಯಸಮಯಕ್ಕೆ ಉತ್ಪತ್ತಿಯಿಲ್ಲೊಂದಱಿಸೊಳ್: **ಆದಿಪು,** ೧. ೫೧)

ಅನ್ಯೋನ್ಯ – [ಗು] ಒಬ್ಬರೊಬ್ಬರ, ಪರಸ್ಪರ (ಅನ್ಯೋನ್ಯಹಸ್ತ ಪರಂಪರೋಪನೀಯಮಾನ ನಾನಾ ಸ್ನಾನೋಪಕರಣದೊಳ್: **ಆದಿಪು,** ೮. ೬೭ ವ)

ಅನ್ಯೋನ್ಯನಿವೇದ – [ಕ್ರಿ] ಪರಸ್ಪರರಿಗೆ ಹೇಳಿಕೊ (ಒಂದೊರ್ವರಂ ಅಗಲ್ದಿಂ ಬಟಿಯಮಾದ ಸುಖದುಃಖಗಳಂ ಅನ್ಯೋನ್ಯನಿವೇದನಂ ಗೆಯ್ದು: **ಪಂಪಭಾ,** ೯. ೮ ವ)

ಅನ್ವಯ – [ನಾ] ವಂಶ (ಗುರುವನಿನ್ನೀನಾತನಂ ಬೇಗಮಿಕ್ಕದೆ ಕಣ್ಣೀರ್ಗಳನಿಕ್ಕೆ ಚಂದ್ರಧವಳಂ ನಿನ್ನ ಅನ್ವಯಂ ಮಾಸದೇ: **ಪಂಪಭಾ,** ೧೨. ೩೫)

ಅನ್ವಯಾಗತ – [ಗು] ಕುಲಕ್ರಮದಿಂದ ಬಂದ [ಹುದ್ದೆಯಲ್ಲಿದ್ದವನು] (ಜನಪದಸಮಭಿಜಾತನುಂ ಅನ್ವಯಾಗತನುಂ ಅಭಿರೂಪನುಂ ಪ್ರತ್ಯುತ್ಪನ್ನಪ್ರತಿಭನುಂ .. .. ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್: **ಆದಿಪು,** ೧೪. ೪೩ ವ)

ಅನ್ವರ್ಥ – [ನಾ] ಅರ್ಥಕ್ಕನುಗುಣ (ಭೀಮಂ ಭಯಂಕರಂ ಪೆಱತೇ ಮಾತು ಈ ಕೂಸಿನಂದಂ ಈತನ ಪೆಸರುಂ ಭೀಮನೆ ಪೋಗೆನೆ ಮುನಿಜನಮೀ ಮಾಟಕ್ಕೆಯಿಂ ಆಯ್ತು ಶಿಶುಗೆ ಪೆಸರನ್ವರ್ಥಂ: **ಪಂಪಭಾ,** ೧. ೧೨೮)

ಅನ್ವರ್ಥತೆ – [ನಾ] ಅರ್ಥಕ್ಕೆ ಅನುಗುಣವಾಗಿರುವುದು (ಅನ್ವರ್ಥತೆಯಂ ತಾಳ್ದಿತ್ತು ವಿದೇಹಂ ವಿದೇಹಮೆಂಬೀ ಪೆಸರಿಂ: **ಆದಿಪು,** ೧. ೫೩)

ಅನ್ವರ್ಥನಾಮ – [ನಾ] ಅರ್ಥಾನುಸಾರಿಯಾದ ಹೆಸರು (ಅಪೂರ್ವಾಭಿಧಾನಮಂ ಪ್ರಯೋಗಿಪ್ಪ ಅನ್ವರ್ಥನಾಮಂಗಳುಂ ಲೋಕಪ್ರಸಿದ್ಧಮಾಗಿರಲ್: **ಆದಿಪು,** ೮. ೭೫ ವ)

ಅನ್ವವಾಯ – [ನಾ] ವಂಶ, ಕುಲ (ಇಂತವಿಹತಗತಿಯಿಂ ಮುನ್ನ ಅನ್ವವಾಯಭೂಧರದ ಶಿಖರಮಂ ಮುಟ್ಟಿದರಾರ್: **ಆದಿಪು,** ೧೪. ೪೦)

ಅನ್ವಿತ – [ನಾ] ಸಮೂಹ (ಒಡೆವಳೆದ ಅಂಬರೇಚರರನ್ವಿತ ಮಂತ್ರಿಸಮೂಹಮಂ ಮನಂಬಿಡೆ ಪೊರೆದ ಇಷ್ಟಬಂಧುಜನಮಂ ಕರೆದು: **ಆದಿಪು,** ೨. ೫೦); [ಗು] ಒಡಗೂಡಿದ (ಸುರವೃಂದಾನ್ವಿತಂ ಬಂದನಾಗಳ್ ಸುರರಾಜಂ ರಾಜದ್ಯೈರಾವತವಿಪುಳತರಸ್ಕಂಧದೇಶಾಭಿರಾಮಂ: **ಆದಿಪು,** ೮. ೬೭)

ಅನ್ವಿತದಾನ – [ನಾ] ದಾನಗುಣವುಳ್ಳ (ಅನ್ವಿತದಾನಂಗೆ ಅರಿದುಂಟೆ ಸೌಖ್ಯಂ ಎನುತುಂ ದಾನಪ್ರಭಾವಕ್ಕೆ ಸಂಚಿತಪುಣ್ಯೋದಯಂ ಆಗಳ್ ಆದಮೊಸೆದಂ: **ಆದಿಪು,** ೪. ೯೯)

ಅಪಕ್ಷ್ಮತಾ[ತೆ] – [ನಾ] ರೆಪ್ಪೆ ಬಡಿಯದವನು, ದೇವತೆ (ಅಪಕ್ಷ್ಮತಾಸಮಾಯತ ಗಗನಪ್ರಚಾರಮಪಜೀವನಧರಂ .. .. ಏಂ ಜಿನನೊಳ್ ಪೊದಳ್ದುವೋ: **ಆದಿಪು,** ೧೦. ೪೨)

ಅಪಕ್ಷ್ಮತಾಸ – [ನಾ] [ಜೈನ] ರೆಪ್ಪೆ ಬಡಿಯದಿರುವುದು (ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ ಅಪಕ್ಷ್ಮತಾಸಂ ಆಯತಗಗನಪ್ರಚಾರಂ ಅಪಜೀವವಧಂ ಪರಿವೀತ ದೇಹಬಿಂಬತೆ: **ಆದಿಪು,** ೧೦. ೪೩)

ಅಪಗತ – [ಗು] ಬಾಗಿದ (ತನ್ನ ಮುನ್ನಿನ ಜನ್ಮಂಗಳಂ ಇಂತೆಂದು ಬರೆದು ತೋರ್ಪಂತೆ ನೆಲನಂ ಬರೆಯುತ್ತುಂ ಅಪಗತಮುಖಮುದ್ರೆಯಾಗಿ: **ಆದಿಪು,** ೩. ೩೨ ವ); [ಗು] ದೂರವಾದ (ಅಂತು ಅಪಗತಗುರುಶೋಕವೇಗನಾಗಿ ಗಣಧರಚರಣ ಸರಸಿಜಂಗಳ್ಗೆಱಗಿ: **ಆದಿಪು,** ೧೬. ೬೦ ವ)

ಅಪಗತಕಪಟ – [ನಾ] ವಂಚನೆಯಿರದ ಸ್ಥಿತಿ (ಅಪಗತಕಪಟದೆ ನಟಂ ಅದಂ ಉಪದೇಶಂಗೆಯ್ದು ಪರಸಿ ಪೋಗೆನೆ: **ಪಂಪಭಾ,** ೧೧. ೧೩೧)

ಅಪಗತಕಲುಷ – [ಗು] ಕೊಳೆಯಿಲ್ಲದ, ನಿರ್ಮಲವಾದ (ನಿಜಪರಿರಕ್ಷಣಕ್ಷಮ ಕ್ಷಮಾವಲ್ಲಭ ಲಾಭಪ್ರಮುದಿತ ಮೇದಿನೀಹೃದಯದಂತೆ ಜಳಂ ಅಪಗತಕಲುಷಮಾಗೆ: **ಆದಿಪು,** ೭. ೩೬ ವ)

ಅಪಗತತಾಲ್ವೋಷ್ಠಸ್ಪಂದನ – [ನಾ] [ಅಪಗತ+ತಾಲು+ಉಷ್ಠ+ಸ್ಪಂದನ] ನಾಲಗೆ ತುಟಿಗಳ ಚಲನೆಯಿಲ್ಲದಿರುವುದು (ಅಂದು ಅಪಗತತಾಲೋಷ್ಠಸ್ಪಂದನಂ ಅಸ್ಪೃಶ್ಯಕರಣವರ್ಣಂ ಜಗದಾನಂದಕರಂ: **ಆದಿಪು,** ೧೦. ೬೩)

ಅಪಗತತೇಜ – [ನಾ] ಪ್ರತಾಪವನ್ನು ಕಳೆದುಕೊಂಡವನು (ಕಾಶ್ಮೀರ ಹಿಮವಂತ ಹೇಮಕೂಟ ಕೈಳಾಸ ಪಾರಿಯಾತ್ರ ಶ್ವೇತಶೃಂಗ ಗಂಧಮಾದನಗಿರಿನಿಕಟವರ್ತಿಗಳಪ್ಪ ಪರ್ವತರಾಜರಂ ಅಪಗತತೇಜರ್ಮಾಡಿ: **ಪಂಪಭಾ,** ೬. ೩೦ ವ)

ಅಪಗತದುರಿತ – [ನಾ] ಪಾಪರಹಿತ, ಪುಣ್ಯವಂತ (ಪಾರ್ವಂ ಏನಟ್ಟಿ ತನಗದಂ ಬೇಡಿದೊಡೆ ಇನ್ನು ಅಪಗತದುರಿತರ್ ಸಂಪೂರ್ಣಪುಣ್ಯರಾನಲ್ಲದಿಲ್ಲ: **ಪಂಪಭಾ,** ೫. ೭೦)

ಅಪಗತಪರಿಶ್ರಮ – [ನಾ] ಆಯಾಸವನ್ನು ನೀಗಿಕೊಂಡವನು (ತಮ್ಮ ಭಾವಂ ಕೃಪನ ಮನೆಯೊಳ್ ಅಪಗತಪರಿಶ್ರಮನಾಗಿ: **ಪಂಪಭಾ,** ೨. ೫೦ ವ)

ಅಪಗತಪರಿಶ್ರಮನ – [ನಾ] ಆಯಾಸ ಪರಿಹಾರ (ಆನಂದದಿಂ ಪೊಟಲಂ ಪೊಕ್ಕು ಮಜ್ಜನಭೋಜನಾದಿಗಳಿಂದಂ ಅಪಗತಪರಿಶ್ರಮನಂ ಮಾಡಿ: **ಪಂಪಭಾ,** ೯. ೮ ವ)

ಅಪಗತಪಾಪ – [ನಾ] ಪಾಪವು ತೊಲಗಿದವನು, ಪುಣ್ಯಶಾಲಿ (ಪಂಪಂ ಧಾತ್ರೀವಳಯನಿಳಿಂಪಂ ಚತುರಂಗಭಯ ಭಯಂಕರಣಂ ನಿಷ್ಕಂಪಂ ಲಲಿತಾಲಂಕರಣಂ ಪಂಚಶರೈಕರೂಪಂ ಅಪಗತಪಾಪಂ: **ಪಂಪಭಾ,** ೧೪. ೪೯)

ಅಪಗತಪ್ರತಿಭ – [ನಾ] ಮಂಕುಹಿಡಿದವನು (ಮೂವರುಂ ಪ್ರತಿವಾದಿಗಳಂ ಅಪ್ರತಿಹತಪ್ರತಿಭೆಯಿಂ ಅಪಗತಪ್ರತಿಭರ್ಮಾಡಿ ಸಭಾಪತಿಯಾಗಿರ್ದ ಮಹಾಬಳನುಮಂ: **ಆದಿಪು,** ೨. ೧೦ ವ)

ಅಪಗತವಿಳಯ – [ನಾ] ನಾಶವಿಲ್ಲದ್ದು (ಬೆಡಂಗೊಡರಿಪ ವಕ್ಷಾರಾದ್ರಿಗೆ ಪಡುವಣದು ಸುಜನನಿಳಯಂ ಅಪಗತವಿಳಯಂ: **ಆದಿಪು,** ೧. ೫೬)

ಅಪಘನ – [ನಾ] ಶರೀರ (ಘನದ ಕರಗಿದುದನಱಿದು ಅಪಘನದ ವಿಳಾಸಮನದೆಂತು ನಂಬುವುದೊ: **ಆದಿಪು,** ೪. ೬೫); ಶರೀರವುಳ್ಳವನು (ಅನೇಕವರ್ಷಕೋಟ್ಯಂತರದೊಳ್ ಸಪ್ತಶತಶಿಳೀಮುಖಾಸನೋನ್ನತಾಪಘನನುಂ: **ಆದಿಪು,** ೬. ೫೭ ವ)

ಅಪಚಯ – [ನಾ] [ಜೈನ] ಆಯುಷ್ಯ, ಬಲ, ಶರೀರ, ವೈಭವ ಮುಂತಾದವು ಕುಂದುವುದು (ಶರೀರ ಬಳ ಆಯುಃ ದೇಹಪ್ರಮಾಣ ಉಪಚಯ ಅಪಚಯಹೇತುತ್ವದಿಂದಂ ಉತ್ಸರ್ಪಿಣಿ ಅವಸರ್ಪಿಣಿ ನಾಮಮಂ ಪಡೆದುದು: **ಆದಿಪು,** ೬. ೪೮ ವ); [ನಾ] ಕೀಳುವುದು (ಕುಸುಮಾಪಚಯ ವ್ಯಸನಾವಸಕ್ತ ಸುರಯುವತಿಪಾಣಿಪಲ್ಲವರಾಗಂ: **ಆದಿಪು,** ೬. ೯೬)

ಅಪಜೀವವಧ – [ನಾ] [ಜೈನ] ಪ್ರಾಣಿಹಿಂಸೆಯಿಲ್ಲದಿರುವುದು (ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ ಅಪಕ್ಷ್ಮತಾಸಂ

ಆಯತಗಗನಪ್ರಚಾರಂ ಅಪಜೀವವಧಂ ಪರಿವೀತದೇಹಬಿಂಬತೆ: **ಆದಿಪು,** ೧೦. ೪೩)

ಅಪತೃಷ್ಣೆ – [ನಾ] ದುರಾಶೆ (ಆಗಳುಂ ಕುದಿದು ಅಪತೃಷ್ಣೆಯಂ ಕುಸಿದು ಮಾಣಿಸುವ: **ಆದಿಪು,** ೬. ೭)

ಅಪತ್ಯವರ್ಗ – ಮಕ್ಕಳ ಸಮೂಹ (ವೃಷಭನಾಥನುಚಿದ ಅಪತ್ಯವರ್ಗಕ್ಕೆಲ್ಲಂ ಇಳಾತಳವಿಭಾಗಮಂ ಪಚ್ಚುಕೊಟ್ಟು: **ಆದಿಪು,** ೯. ೭೨ ವ)

ಅಪನಯನ – [ನಾ] ದೂರ ಮಾಡುವುದು (ಜಿನಮತಪದಾರ್ಥಶಂಕಾ ಅಪನಯನಮುಂ ಭೋಗಕಾಂಕ್ಷೆಯೊಳ್ ವಿಮುಖತೆಯುಂ : **ಆದಿಪು,** ೫. ೫೭)

ಅಪನೀತ – [ಗು] ತೆಗೆದುಹಾಕಲಾದ (ಅದಂ ಮಹಾಸಂಧಿವಿಗ್ರಹಿ ಕೊಂಡು ಅಪನೀತಮುದ್ರೆಯಂ ಮಾಡಿ: **ಆದಿಪು,** ೧೪. ೪೫ ವ)

ಅಪಮೃತ್ಯು – ಅಕಾಲ ಮರಣ (ಮಱುಕಮಾಮಯಮಪ್ಪ ಅಪಮೃತ್ಯುವೆಂಬಿವಲ್ಲಿಗೆ ಪೊಱಗು: **ಆದಿಪು,** ೫. ೩೦)

ಅಪರಗಿರಿ – [ನಾ] ಪಶ್ಚಿಮ ಬೆಟ್ಟ (ಅಂತು ಪತಂಗಮಂಡಲಂ ಅಪರಗಿರಿಯತಟಮನೆಯ್ದುವುದುಂ ಎರಡುಂ ಪಡೆಗಳ್ ಅಪಹಾರತೂರ್ಯಂಗಳಂ ಬಾಜಿಸಿ ತಂತಮ್ಮ ಬೀಡುಗಳ್ಗೆ ಪೋದುವಾಗಳ್: **ಪಂಪಭಾ,** ೧೨. ೮೮ ವ)

ಅಪರಜಲನಿಧಿ – [ನಾ] ಪಶ್ಚಿಮ ಸಮುದ್ರ (ಶ್ವೇತನ ಬೀರಮಂ .. .. ಪಾತಾಳಕ್ಕಜೆಪುವೆನೆಂಬೀ ತೆಱದೊಳೆ ದಿನಪಂ ಅಪರಜಲನಿಧಿಗಿಳಿದಂ: **ಪಂಪಭಾ,** ೧೦. ೧೨೪)

ಅಪರದಿಗ್ಭಾಗ – [ನಾ] ಪಶ್ಚಿಮ ದಿಕ್ಕು (ತದಪರದಿಗ್ಭಾಗದೊಳ್ ಅನಗಾರಕೇವಳಿ ಹುತಾಶನ ಕುಂಡಮಂ ಸ್ಥಾಪನಂಗೆಯ್ದು: **ಆದಿಪು,** ೧೬. ೫೨ ವ)

ಅಪರವಾರ್ಧಿ – [ನಾ] ಪಶ್ಚಿಮ ಸಮುದ್ರ (ಬೇಸಱಿ ಲೋಕಮಂ ತಗುಳ್ದು ಸುಟ್ಟ ಅಟಲಿಂದೆ ಖರಾಂಶು ನಾರಕಾವಾಸದೊಳ್ ಆಟ್ವವೋಲ್ ಅಪರವಾರ್ಧಿಯೊಳ್ ಆಟ್ದುದುಂ: **ಪಂಪಭಾ,** ೩. ೮೧)

ಅಪರವಿದೇಹ – ಸುಮೇರುಪರ್ವತದ ಪಶ್ಚಿಮದಲ್ಲಿರುವ ಗಂಧಮಾಲಿನೀ ಮುಂತಾದ ಹದಿನಾರು ಕ್ಷೇತ್ರಗಳು (ಜಂಬೂದ್ವೀಪದಪರವಿದೇಹದೊಳ್ ಗಂಧಿಳಮೆಂಬುದು ವಿಷಯಂ: **ಆದಿಪು,** ೨. ೩೫ ವ)

ಅಪರಾಂಬುರಾಶಿ – [ನಾ] ಅಪರವಾರಿಧಿ (ನಿಜತೇಜದಿಂ ಆಂತ ದೈತ್ಯರಂ ತಳವೆಳಗಾಗೆ ಕಾದಿ ಚಳಿತು ಎಯ್ದಿ ಬಟಲ್ದು ಅಪರಾಂಬುರಾಶಿಯೊಳ್ ಮುಟುಗುವ ತೀವ್ರದೀಧಿತಿವೊಲ್ ಆ ಕೊಳದೊಳ್ ಫಣಿರಾಜಕೇತನಂ ಮುಟುಗಿದಂ: **ಪಂಪಭಾ,** ೧೩. ೭೪)

ಅಪರಾಜಿತೆ – [ನಾ] [ಜೈನ] ದಿಗ್ವನಿತೆಯರಲ್ಲಿ ಒಬ್ಬಳು (ಜಯಂತೆ ಅಪರಾಜಿತೆ .. . ಎಂಬ ಎಣ್ಬರುಂ ದಿಗ್ವನಿತೆಯರುಂ: **ಆದಿಪು,** ೭. ೩ ವ)

ಅಪವರ್ಗ – [ನಾ] ಮೋಕ್ಷ (ಬುಧರ್ ಸ್ವರ್ಗ ಅಪವರ್ಗಕ್ಕಮಾಸ್ಪದಮಪ್ಪ ಆದಿಪುರಾಣವಸ್ತುಕೃತಿಯಂ: **ಆದಿಪು,** ೧೬. ೭೯)

ಅಪವರ್ಗಪದ – [ನಾ] ಮೋಕ್ಷಪದವಿ (ಶತಬಳನಂ ಸಹಸ್ರಬಳಖೇಚರನಿಟ್ಟು ತಪೋನಿಯೋಗನಿಶ್ಚಿತಮನನಾಗಿ ಸಂದಂ ಅಪವರ್ಗಪದಕ್ಕೆ: **ಆದಿಪು,** ೨. ೧೯)

ಅಪವರ್ಗಮಾರ್ಗ – [ನಾ] ಮೋಕ್ಷಮಾರ್ಗ (ನಿನಗೀ ಖಿಳಸಂಸ್ಕೃತಿಯೆಂಬುದೊಂದು ಱಾಟಣದೊಳಗಮ್ಮ ನೀಂ ಮೊಗಪೆಯಾಗದೆ ತಾಳ್ದಪವರ್ಗಮಾರ್ಗಮಂ: **ಆದಿಪು,** ೩. ೭೧)

ಅಪವರ್ಗಲಕ್ಷ್ಮಿ – [ನಾ] ಮೋಕ್ಷಲಕ್ಷ್ಮಿ (ಸಂಸಾರಮಂ ದಾಂಟುವ ಊರ್ಜಿತಪುಣ್ಯಂಗೆ ಅಪವರ್ಗಲಕ್ಷ್ಮಿವರೆಗಂ .. .. ಜಯಂ: ಆದಿಪು, ೧೬. ೧೦)

ಅಪಸತ್ – [ಗು] ಲ್ಲದ, ಅಪೂರ್ವವಾದ (ಸ್ಮರಾಕುಳಿತಂ ಮನಂದಳಿತಂ ಅಪಸತ್ ಮುಗ್ಧಂ ಸ್ನಿಗ್ಧಂ ವಿಳೋಕನಮೋಪಳಾ: **ಪಂಪಭಾ,** ೪. ೭೭)

ಅಪಸನ್ಮುಗ್ಧಂ – [ನಾ] [ಅಪಸತ್+ಮುಗ್ಧ] ಮುಗ್ಧತೆಯಿಲ್ಲದವನು, ಪ್ರೌಢನಾದವನು (ಲಳಿತ ಮಧುರಂ ಲಜ್ಜಾಳೋಳಂ ಸ್ಮರಾಕುಳಿತಂ ಮನಂ ದಳಿತಂ ಅಪಸನ್ಮುಗ್ಧಂ: **ಪಂಪಭಾ,** ೪. ೭೭)

ಅಪಸವ್ಯ – [ಗು] ಬಲದಿಂದ ಎಡಕ್ಕೆ ಸುತ್ತುವ, ಒಂದು ರಥಚೋದನಾ ವಿಶೇಷ (ಆಗಳ್ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತಂಗಳೆಂಬ ರಥಕಲ್ಪ ವಿಶೇಷವಿನ್ಯಾಸಂಗಳಂ ಅಱಿದು ಸಾರಥಿಗಳ್ ಚೋದಿಸುವಾಗಳ್: **ಪಂಪಭಾ,** ೧೨. ೭೫ ವ)

ಅಪಸಿದ್ಧಾಂತ – [ನಾ] ತಪ್ಪು ಅಥವಾ ಮಿಥ್ಯಾ ತತ್ವ (ಭರತಸುತಂ ಮರೀಚಿ ಪರಿಗೃಹೀತಪರಿವ್ರಾಜಕಂ ಅಪಸಿದ್ಧಾಂತ ಭಾಷಿತಂಗಳಿಂ ಮಿಥ್ಯಾತ್ವವೃದ್ಧಿಯಂ ಮಾಡಿ: **ಆದಿಪು,** ೯. ೯೩ ವ)

ಅಪಸ್ಕಾರ – [ನಾ] ಆನೆಯ ಸೊಂಡಿಲ ಮೇಲಿರುವ ಮುಖದ ಒಂದು ಭಾಗ (ಹ್ರಸ್ವಚೂಚುಕನುಂ ಸುವೃತ್ತ ಅಪಸ್ಕಾರನುಂ ಸುಸಂಚಿತ ಪ್ರೋಹಪಳಿಹಸ್ತಗಾತ್ರನುಂ .. .. ವಿಜಯ ಪರ್ವತಗಜೇಂದ್ರಂ ಬಂದು: **ಆದಿಪು,** ೧೨. ೫೬ ವ)

ಅಪಹತಕದನ – [ನಾ] ಯುದ್ಧ ನಿಲ್ಲಿಸಿದ (ಧರ್ಮಪುತ್ರನಂ ಭೀಮಸೇನ ನಕುಳ ಸಹದೇವ ಸಾತ್ಯಕಿ ದ್ರುಪದ ವಿರಾಟಾದಿಗಳ್ ಅಪಹತಕದನರ್ ಮುಂದಿಟ್ಟೊಡಗೊಂಡು ಬೀಡಿಂಗೆ ಪೋದರಾಗಳ್: **ಪಂಪಭಾ,** ೧೧. ೧೦೬ ವ)

ಅಪಹಸಿತ – [ನಾ] ಅಪಹಾಸ್ಯಕ್ಕೊಳಗಾದ (ಅಪಹಸಿತ ಶರದಿಂದು ಕುಂದಸ್ತಬಕ ಕರ್ಣಚಾಮರ ರಾಜಹಂಸ ಲೀಲೋತ್ತಂಸದೊಳಂ: **ಆದಿಪು,** ೧೨. ೬೧ ವ)

ಅಪಹಾರತೂರ್ಯ – [ನಾ] ಯುದ್ಧವನ್ನು ನಿಲ್ಲಿಸಲು ಮಾಡುವ ತುತ್ತೂರಿಯ ಸದ್ದು (ಅಂತು ಪತಂಗಮಂಡಲಂ ಅಪರಗಿರಿಯ ತಟಮನೆಯ್ದುವುದುಂ ಎರಡುಂ ಪಡೆಗಳ್ ಅಪಹಾರತೂರ್ಯಂಗಳಂ ಬಾಜಿಸಿ: **ಪಂಪಭಾ,** ೧೨. ೮೮ ವ)

ಅಪಾಂಗ – [ನಾ] ಕಡೆಗಣ್ಣ ನೋಟ (ಗಣಿಕೆಯರ ವಿಳಾಸಾಗಾರದೊಳ್ ಪ್ರಣಯಿನಿಯರ ಅಪಾಂಗಶ್ರೇಣಿಗಳ್ ಮೂಱುಬಣ್ಣಂ ಪೆಣೆದೊದವೆ: **ಆದಿಪು,** ೧೧. ೨೩)

ಅಪಾಂಡವಂ – [ಗು] ಪಾಂಡವರಿಲ್ಲದಂತೆ (ರೋಷದಿಂ ಅಪಾಂಡವಮಾಗಿರೆ ಮಾಡದಂದು ಬಿಲ್ಲೆಱಿಯನ ಪುತ್ರನಲ್ಲ ಎನುತುಂ ಗುರುಪುತ್ರಂ: **ಪಂಪಭಾ,** ೧೨, ೩೧)

ಅಪಾತ್ರ – [ನಾ] [ಜೈನ] ದಾನಕ್ಕೆ ಯೋಗ್ಯನಲ್ಲದವನು (ಮಿಥ್ಯಾದೃಷ್ಟಿಯಪ್ಪಂ ತನ್ನನೆಂತುಂ ಸಮಜಿ ನೆಗಟಿಸ್ದೊಡಂ ಆತಂ ಅಪಾತ್ರಮೆ: **ಆದಿಪು,** ೧೦. ೯. ವ)

ಅಪಾತ್ರದಾನಿ – [ನಾ] ಯೋಗ್ಯರಲ್ಲದವರಿಗೆ ದಾನವೀಯುವವನು (ಮತ್ತಮಲ್ಲಿ ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ ಮಾಯಾಚಾರಪರಿಣತರಪ್ಪ ಅಪಾತ್ರದಾನಿಗಳುಂ: **ಆದಿಪು**, ೫. ೪೧ ವ)

ಅಪಾಪಿ – [ನಾ] ಪಾಪ ಮಾಡದವನು (ನಿಜಶರೀರಂಗಳ್ ಮಂಜು ಕರಗುವಂತೆ ಕರಗೆ ಸಹಜದೊಳ್ ಅಪಾಪಿಗಳುಂ ಆರ್ಜವಂಗಳುಂ ಅತಿಮೃದುಗಳುಮಪ್ಪುದಜೆಂದೆ: **ಆದಿಪು**, ೫. ೪೧ ವ)

ಅಪಾಯಬಹುಳ – [ನಾ] ಹೆಚ್ಚು ಅಪಾಯಕಾರಿ[ಯಾದುದು] (ಕಲಹಂ ಅಪಾಯಬಹುಳಂ ಇನ್ನುಂ ನಯದತ್ತ ಎಱಗುವೊಡೆ ಸಂಧಿ ಹರಿಗನೊಳ್ ಉಱುಗುಂ: **ಪಂಪಭಾ**, ೧೩. ೨೩)

ಅಪಾಯವಿಚಯ – [ನಾ] [ಜೈನ] ನಾಲ್ಕು ಬಗೆಯ ಧರ್ಮಧ್ಯಾನಗಳಲ್ಲಿ ಎರಡನೆಯದು; ಲೋಕದ ಅಜ್ಞಾನ–ದುಃಖಗಳನ್ನು ಹೋಗಲಾಡಿಸುವ ಚಿಂತನೆ (ಆಜ್ಞಾವಿಚಯಂ ಅಪಾಯವಿಚಯ ವಿಪಾಕವಿಚಯ ಸಂಸ್ಥಾನವಿಚಯಮೆಂಬ ನಾಲ್ಕುಂ ಧರ್ಮಧ್ಯಾನಮಂ ಧ್ಯಾನಿಸುತ್ತುಂ: **ಆದಿಪು**, ೧೦ ೧೪ ವ)

ಅಪಾಯಶತ – [ನಾ] ನೂರು [ಅಸಂಖ್ಯ] ಅಪಾಯಗಳು (ರಾಜಸೂಯಾಂತಂ ಇದೆಂತು ಬೇಳ್ದಪಿರಿ ಅಪಾಯಶತಂ ಬರೆ ರಾಜಸೂಯಮಂ: **ಪಂಪಭಾ**, ೬. ೨೩)

ಅಪಾರವೀರ್ಯ – [ನಾ] ಅತಿಶಯ ಪರಾಕ್ರಮಿ (ಅಪಾರವೀರ್ಯನುಂ ಪಂಚಶತಚಾಪೋತ್ಸೇಧನುಂ: **ಆದಿಪು**, ೧೫. ೩ ವ)

ಅಪಾರ್ಥ – [ನಾ] ಅರ್ಥವಿಲ್ಲದ (ವಿಪಕ್ಷಕ್ಷತ್ರಿಯ ಪರಾಕ್ರಮಾಕೀರ್ಣನೋದೀರ್ಣ ಕ್ರೋಧದೊಳ್ ಅಳೀಕಭ್ರುಕುಟಿಯುಂ .. .. ಅಪಾರ್ಥವಿಲೋಹಿತ ವಿಲೋಚನರುಚಿಯುಂ: **ಆದಿಪು**, ೧೪. ೮೧ ವ)

ಅಪಾಸ್ತ – [ಗು] ದೂರಮಾಡಲ್ಪಟ್ಟ (ನೆಱವಂ ತಾಳ್ದಿದ ಅಪಾಸ್ತದುರ್ನಯತಮೋಬಂಧಂ ಶ್ರುತಸ್ಕಂದಮಾದರವಿಂದಂ: **ಆದಿಪು**, ೧. ೩೯)

ಅಪೂರ್ವಕರಣ – [ನಾ] [ಜೈನ] ಅಪೂರ್ವಕರಣ, ಮೂರು ಬಗೆಯ – ಅಧಃಪ್ರವೃತ್ತಿಕರಣ, ಅಪೂರ್ವಕರಣ, ಅನಿವೃತ್ತಿಕರಣ– ಕರಣಲಬ್ಧಿಗಳಲ್ಲಿ ಒಂದು (ತದನಂತರಂ ಅಪ್ರಮತ್ತ ಗುಣಸ್ಥಾನಂಗಳೊಳ್ ಅಧಃಪ್ರವೃತ್ತ್ಯಪೂರ್ವಾನಿವೃತ್ತಿಕರಣ ಪರಿಣಾಮಂಗಳಿಂದಂ ಅನಂತಾನುಬಂಧಿ ಕ್ರೋಧ ಮಾನ ಮಾಯಾ ಲೋಭಂಗಳಂ ವಿಸಂಯೋಜಿಸಿ: **ಆದಿಪು**, ೧೦. ೧೪ ವ); [ನಾ] ಅಪರೂಪವಾದ (ತನ್ನ ರತ್ನಪ್ರತತಿಗಳೊಳ್ ಅಪೂರ್ವಂಗಳಂ ಕೊಂಡು: **ಆದಿಪು**, ೧೩. ೯೧); [ನಾ] ಶ್ರೇಷ್ಠ (ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ: **ಪಂಪಭಾ**, ೧. ೧೧)

ಅಪೇತರಸವೀರ್ಯಪಾಕ – [ನಾ] ರುಚಿ ಮತ್ತು ಪೌಷ್ಟಿಕತೆಗಳಿಲ್ಲದ (ಮುನ್ನಮಕೃಷ್ಟಪಚ್ಯಂಗಳಪ್ಪುವಂದು ವಿರಳಂಗಳಾಗಿಯುಂ ಅನಲ್ಪಕಲ್ಪಾವನಿಜಂಗಳ್ ಅಪೇತರಸವೀರ್ಯಪಾಕಂಗಳಾಗಿಯುಂ: **ಆದಿಪು**, ೮. ೬೧ ವ)

ಅಪ್ಪ – [ಗು] ನೀಡಬೇಕಾದ (ನಿಮಗಪ್ಪ ಭಾಗಮಂ ಕುಡಲೆನ್ನಂ ಗುರು ಮುನ್ನಂ ಬೆಸಸಿದಂ: **ಆದಿಪು**, ೯. ೧೧೧); [ಗು] ಆದ, ಆಗಿರುವ (ಕುರುವೃದ್ಧನುಂ ಬುದ್ಧಿವೃದ್ಧನುಂ ಅಪ್ಪ ಗಾಂಗೇಯಂ ಧೃತರಾಷ್ಟ್ರಂಗಿತೆಂದಂ: **ಪಂಪಭಾ**, ೭. ೧೫ ವ); [ಗು] ತಕ್ಕುನಾದ, ಯೋಗ್ಯವಾದ (ಗುಡಿಗಂ ಬದ್ದವಣಕ್ಕಂ ಅಪ್ಪ ಪಡೆಮಾತಿದು: **ಪಂಪಭಾ**, ೮. ೮೩)

ಅಪ್ಪಂದು – [ಅ] ಸೃಷ್ಟಿಯಾಗುವಾಗ (ಅಂತಲ್ತು ಅಪ್ಪಂದು ಆ ಕಾಂತೆಯಂ ವಿಧಾತ್ರಂ ಮಾಡುವಂದು ಕೊಸಗಿನ ಕೇಸರಂಗಳಂ ಅಮೃತರಸದೊಳಂ ಶೃಂಗಾರರಸದೊಳಂ ಭಾವಿಸಿ: **ಪಂಪಭಾ**, ೪. ೭೫ ವ)

ಅಪ್ಪನ್ನ – [ಅ] ಆಗುವಂತೆ (ಇದಱೊಳ್ ತನ್ನಿಷ್ಟವಪ್ಪನ್ನಂ ಉತ್ತರಂ ಅಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ: **ಪಂಪಭಾ**, ೧೪. ೬೫)

ಅಪ್ಪಯಿಸು – [ಕ್ರಿ] ಸೂಚನೆ ನೀಡು (ಕಟಕಮಂ ಮೆಲ್ಲಮೆಲ್ಲನೊಡಗೊಂಡು ಬರ್ಪಂತು ಕೂರ್ಚಾಳ ತುಂದಿಳ ಜರತ್ ಸಾಮಂತಸಂದೋಹಕ್ಕಪ್ಪಯಿಸಿ: **ಆದಿಪು**, ೪. ೯೧ ವ); [ಕ್ರಿ] ಒಪ್ಪಿಸು (ಆ ರಾಜ್ಯದೊಳ್ ಪದುಳಂ ಮಾಡಿ ಮಹಾಸಾಮಂತಮಂತ್ರಿಮಂಡಳಕ್ಕೆ ಅಪ್ಪಯಿಸಿ: **ಆದಿಪು**, ೫. ೨೧ ವ)

ಅಪ್ಪಳಿಸು – [ಕ್ರಿ] ಹೊಡೆ (ಕಾಳಿಂದಿಯ ಪಾಪಮಂ ಅಪ್ಪಳಿಸಿದೆಂ ಸಿಡಿದೀ ಸಿಲೆಯಲ್ಲಿ: **ಪಂಪಭಾ**, ೫. ೩೮)

ಅಪ್ಪು – [ನಾ] ಆಲಿಂಗನ (ಬೇಡಿಸುವ ಅಪ್ಪುಗಳ್ಗೆ ಒರೆವ ಲಲ್ಲೆಯ ಮೆಲ್ನುಡಿಗಳ್ಗೆ ಕೂಡೆ ನಾಣೂಡಿದ ಕೆಂದುಗಳ್ಗೆ ತಲೆದೂಗುವಂತೆವೋಲ್: **ಪಂಪಭಾ**, ೩. ೮೩)

ಅಪ್ಪುಕಯ್ – [ಕ್ರಿ] ಒಪ್ಪಿಕೊ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಳ್ ಎೞೆದಿಕ್ಕಿದಂತೆ ಸುದತಿಯೊಳ್ ಸಮವಾಗಿರೆ: **ಪಂಪಭಾ**, ೭. ೮೮)

ಅಪ್ಪುಕೆಯ್ – [ಕ್ರಿ] ತಬ್ಬಿಕೊ (ನೀನುಂ ಆನುಂ ಒಡನಿರ್ದಿರವಂ ನೆನೆ ಬಾಳ ಚೂತಮೇ ಎಂದು ಮಾಕಂ ಮಹೀರುಹಮಂ ಅಪ್ಪುಕೆಯ್ದು: **ಆದಿಪು**, ೧೧. ೧೩೨ ವ); [ಕ್ರಿ] ಆರಿಸಿಕೊ (ಅಂತು ಸ್ವಯಂಬರದೊಳ್ ನೆಱೆದರಸುಮಕ್ಕಳೊಳ್ ಅಪ್ಪುಕೆಯ್ದು ಕುಂತಿಯೊಡನೆ ಮದ್ರರಾಜನ ಮಗಳ್ ಶಲ್ಯನನೊಡವುಟ್ಟಿದ ಮಾದ್ರಿಯುಮನೊಂದೆ ಪಸೆಯೊಳಿರಿಸಿ: **ಪಂಪಭಾ**, ೧. ೧೦೬ ವ); [ಕ್ರಿ] ಅಂಗೀಕರಿಸು (ಮುರಾರಿಯ ತಂಗೆಯನಪ್ಪುಕೆಯ್ದು ಚಚ್ಚರನೊಳಪೊಯ್ದು ನೀಂ ನಿನಗೆ ಮಾಡುವುದು: **ಪಂಪಭಾ**, ೪. ೩೪)

ಅಪ್ಪುದಱಿನ್ – [ಅ] ಆದುದುರಿಂದ (ಅಪ್ಪುದರಿಂದದುವುಂ ತ್ರಿಕಾಲಾನುಯಾಯಿ ಜೀವಾಸ್ತಿತ್ವಮನಱಿಪಲಾಱದು: **ಆದಿಪು**, ೨. ೯ ವ)

ಅಪ್ಪೈಸು – [ಕ್ರಿ] ವಶಕ್ಕೆ ಕೊಡು (ಒಪ್ಪಿಸಿದೆಂ ಕೆಯ್ಯೆಡೆಯೆಂದು ಅಪ್ಪೈಸಿದ ನಿನ್ನ ಮಗನನೀಗಳೆ ನಿನಗೆಂದಪ್ಪೈಸಿ ಗಂಗೆ ಪೋಪುದುಂ: **ಪಂಪಭಾ**, ೯. ೭೬)

ಅಪ್ಪೊಡಂ – [ಅ] ಆದರೂ (ರಾಜ್ಯಲಕ್ಷ್ಮಿಗೆ ಅನ್ಯಭವದೊಳಪ್ಪೊಡಂ ನೆಱೆಯೆ ನೋಂಪೆನೆನುತ್ತೆ ಜಗನ್ನುತ ಸ್ವಯಂಪ್ರಭ ಗುರುಪಾದಮೂಲದೊಳೆ ಕೊಂಡನಖಂಡಿತಜೈನದೀಕ್ಷೆಯಂ: **ಆದಿಪು**, ೨. ೩೯)

ಅಪ್ಪೋ – [ನಾ] ಆಗಿದ್ದೀಯೆ (ನೀಂ ಭವ್ಯನೆ ಅಜ್ಞಾನಿಯವೊಲ್ ನಿನ್ನಂ ಮಱ್ದೇನೀ ವಿಷಯದ ಸುಖಕ್ಕೆ ಲಂಪಟನಪ್ಪೋ: **ಆದಿಪು,** ೩. ೬೬)

ಅಪ್ರತಿಮಲ್ಲ – [ನಾ] ಸಮಾನರಿಲ್ಲದ ಮಲ್ಲ (ಕ್ಷಿತಿತಳದೊಳ್ ನೆಗಟ್ದಿರ್ದ ಅಪ್ರತಿಮಲ್ಲನನಿಕ್ಕಿ: **ಆದಿಪು,** ೧೪. ೧೩೪)

ಅಪ್ರತಿರಥ – [ನಾ] ಎದುರು ನಿಲ್ಲುವ ರಥಿಕರೇ ಇಲ್ಲದವನು (ಅಪ್ರತಿರಥಂ ರಥಮನೇಱಿ ಮನಃಪವನವೇಗದಿಂ ದ್ವಾರಾವತಿಯನೆಯ್ದಿ: **ಪಂಪಭಾ,** ೯. ೧೦ ವ)

ಅಪ್ರತಿಹತ – [ಗು] ಸೋಲಿಸಲಾಗದ (ಮೂವರುಂ ಪ್ರತಿವಾದಿಗಳಂ ಅಪ್ರತಿಹತಪ್ರತಿಭೆಯಿಂ ಅಪಗತಪ್ರತಿಭರ್ಮಾಡಿ ಸಭಾಪತಿಯಾಗಿರ್ದ ಮಹಾಬಳನುಮಂ ಪ್ರಾಶ್ನಿಕರಾಗಿರ್ದ ವಿದ್ವಜ್ಜನಮುಮಂ ಸಭಾಜನಮುಮಂ ತಿಳಿಪಿ: **ಆದಿಪು,** ೨. ೧೦); **[ಗು]** ಪ್ರತಿಭಟನೆಯಿಲ್ಲದ, ಪ್ರತಿಭಟಿಸಲಸಾಧ್ಯರಾದ (ಕೃತಶಾಸ್ತ್ರರ್ ಧೃತಶಸ್ತ್ರರ್ ಅಪ್ರತಿಹತಪ್ರಾಗಲ್ಭ್ಯರ್ ಈಗಳ್ ಪೃಥಾಸುತರ್ ಉದ್ಯೋಗಮಂ ಎತ್ತಿಕೊಳ್ವ ದೆವಸಂ ಸಾರ್ಚಿತ್ತು: **ಪಂಪಭಾ,** ೮. ೮೭)

ಅಪ್ರತ್ಯಾಖ್ಯಾನಕ್ರೋಧ – [ನಾ] [ಜೈನ] ಭೂಮಿಯಲ್ಲಿ ಕೊರೆದ ರೇಖೆಯಂತೆ ಇರುವ ತೀವ್ರತರವಾದ ಕ್ರೋಧ, ಅಹಿಂಸೆ ಮುಂತಾದ ವ್ರತಗಳ ಆಚರಣೆಯಲ್ಲಿ ಅಡ್ಡಿಯಾಗುವ ಒಂದು ಕರ್ಮಾವರಣ; ಮೋಹನೀಯ ಕರ್ಮಗಳಲ್ಲಿ ಒಂದು (ಧನದತ್ತಂಗಮಾತನ ಪರದಿತಿ ಧನದತ್ತೆಗಂ ಉಗ್ರಸೇನನೆಂಬೊಂ ತನೂಜಂ ಅಪ್ರತ್ಯಾಖ್ಯಾನಕ್ರೋಧದಿಂ ತಿರ್ಯಗಾಯುಷ್ಯಂಗಟ್ಟಿ: **ಆದಿಪು,** ೫. ೧೪ ವ)

ಅಪ್ರತ್ಯಾಖ್ಯಾನಚತುಷ್ಕ – ಕ್ರೋಧ, ಮಾನ, ಮಾಯ ಮತ್ತು ಲೋಭವೆಂಬ ಕಷಾಯಗಳು (ವಿಶುದ್ಧಪರಿಣಾಮಾತಿಶಯಪರವಶನಪ್ರತ್ಯಾಖ್ಯಾನ ಕ್ರೋಧಮಾನ ಮಾಯಾಲೋಭಂಗಳೆಂಬೆಂಟು ಕಷಾಯಂಗಳಂ ಕಿಡಿಸಿ; **ಆದಿಪು,** ೧೦. ೧೪ ವ)

ಅಪ್ರತ್ಯಾಖ್ಯಾನಮಾನ – [ನಾ] [ಜೈನ] ಮಾನಕಷಾಯ, ಅಹಿಂಸೆ ಮುಂತಾದ ವ್ರತಗಳ ಆಚರಣೆಯಲ್ಲಿ ಅಡ್ಡಿಯಾಗುವ ಒಂದು ಕರ್ಮಾವರಣ; ಮೋಹನೀಯ ಕರ್ಮಗಳಲ್ಲಿ ಒಂದು (ಈ ವಿಷಯದ ವಿಜಯಪುರದೊಳ್ ಆನಂದನೃಪತಿಗಂ ವಸಂತಸೇನೆಗಂ ಹರಿಕಾಂತನೆಂಬ ತನಯಂ ಅಪ್ರತ್ಯಾಖ್ಯಾನಮಾನದೊಳ್: **ಆದಿಪು,** ೫. ೧೬ ಮತ್ತು ೧೬ ವ)

ಅಪ್ರತ್ಯಾಖ್ಯಾನಮಾಯೆ – [ನಾ] [ಜೈನ] ಅಹಿಂಸೆ ಮುಂತಾದ ವ್ರತಗಳ ಆಚರಣೆಯಲ್ಲಿ ಅಡ್ಡಿಯಾಗುವ ಒಂದು ಕರ್ಮಾವರಣ; ಮೋಹನೀಯ ಕರ್ಮಗಳಲ್ಲಿ ಒಂದು (ಕುಬೇರದತ್ತಂಗಂ ತದ್ವನಿತೆ ವಸುದತ್ತೆಗಂ ನಾಗದತ್ತನೆಂಬೊಂ ಮಗಂ ಅಪ್ರತ್ಯಾಖ್ಯಾನಮಾಯೆಯಂ ಕೈಕೊಂಡು: **ಆದಿಪು,** ೫. ೧೭ ವ)

ಅಪ್ರತ್ಯಖ್ಯಾನಲೋಭ – [ನಾ] [ಜೈನ] ಮಾನಕಷಾಯ, ಅಹಿಂಸೆ ಮುಂತಾದ ವ್ರತಗಳ ಆಚರಣೆಯಲ್ಲಿ ಅಡ್ಡಿಯಾಗುವ ಒಂದು ಕರ್ಮಾವರಣ; ಮೋಹನೀಯ ಕರ್ಮಗಳಲ್ಲಿ ಒಂದು (ಸುಪ್ರತಿಷ್ಠಪುರದೊಳ್ ಅಪ್ರತ್ಯಾಖ್ಯಾನಲೋಭಾಭಿಭೂತಂ ದ್ರವ್ಯಲೋಲುಪನೆಂಬೊಂ ಕಲ್ಲುರಿಗನಾಗಿ: **ಆದಿಪು,** ೫. ೧೮ ವ)

ಅಪ್ರಮತ್ತ – [ನಾ] [ಜೈನ] ಆತ್ಮನ ಎರಡು ಅವಸ್ಥೆಗಳಲ್ಲಿ ಒಂದು, ಹದಿನಾಲ್ಕು ಗುಣಸ್ಥಾನಗಳಲ್ಲಿ ಏಳನೆಯದರಿಂದ ಮೇಲಿನವುಗಳಲ್ಲಿರುವ ಆತ್ಮ (ಬೞಿಯಂ ಅಂತರ್ಮುಹೂರ್ತಕಾಲಂ ಪ್ರಮತ್ತಾಪ್ರಮತ್ತ ಪರಾವರ್ತನಸಹಸ್ರಂಗೆಯ್ದು: **ಆದಿಪು,** ೧೦. ೧೪ ವ)

ಅಪ್ರಮತ್ತಗುಣಸ್ಥಾನ – [ನಾ] [ಜೈನ] ಜೀವಾತ್ಮನ ಆಧ್ಯಾತ್ಮಿಕ ಉನ್ನತಿಯನ್ನು ಸೂಚಿಸುವ ಹದಿನಾಲ್ಕು ಗುಣಸ್ಥಾನಗಳಲ್ಲಿ ಏಳನೆಯದು: ಕಷಾಯಗಳ ತೀವ್ರತೆಯು ಕಡಿಮೆಯಾಗಿ ಪ್ರಮಾದವು ದೂರವಾಗುತ್ತದೆ ಮತ್ತು ಧರ್ಮಧ್ಯಾನವು ಪ್ರಾಪ್ತವಾಗುತ್ತದೆ (ತದನಂತರಂ ಅಪ್ರಮತ್ತ ಗುಣಸ್ಥಾನಂಗಳೊಳ್ ಅಧಃಪ್ರವೃತ್ತ್ಯಪೂರ್ವಾನಿವೃತ್ತಿಕರಣ ಪರಿಣಾಮಂಗಳಿಂದಂ ಅನಂತಾನುಬಂಧಿ ಕ್ರೋಧ ಮಾನ ಮಾಯಾ ಲೋಭಂಗಳಂ ವಿಸಂಯೋಜಿಸಿ: **ಆದಿಪು,** ೧೦. ೧೪ ವ)

ಅಪ್ರಾಗೇಯ – [ನಾ] ? (ಕಂಚ ಆಕಸ್ಮಿಕ ಪಾಂಸುಪಲ್ಲವ ಜಳಸ್ಯಂದೀ ಸದಾಸಿಂಧುರ್ ಅಪ್ರಾಗೇಯಂ ಪ್ರಿಯಗಳ್ಪಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ,** ೯. ೯೭)

ಅಪ್ರಾಸುಕ – [ನಾ] [ಜೈನ] ಜೀವಂತ ವಸ್ತುಗಳಿಂದ ಕೂಡಿರುವ (ಧರೆ ಪೂಗಳ ತುಱುಗಲೊಳೆಸೆಯೆ ಪೊಟಲಿದು ಅಪ್ರಾಸುಕಮೆಂದೊಳಪುಗದೆ: **ಆದಿಪು,** ೫. ೧೦)

ಅಪ್ರಿಣಾಕ – ? (ಅಪ್ರಿಣಾಕ ಭಾವಿಳಶ್ಲಿಷ್ಠಿತಚಳನುಂ ಶ್ಲಕ್ಷ್ಣ ಸ್ನಿಗ್ಧ ಮೃದು ಬಹಳಚ್ಛವಿಯುಂ ಬಂಧುಜೀವ ಶಾಕ ಪುಷ್ಪ ಸಪದ್ಮಮಹಾರಜಶಂಖಾಸತಳವೆಂಬ ಸಪ್ತದ್ವಾಸ್ಥಿತನುಂ: **ಆದಿಪು,** ೧೨. ೫೬ ವ)

ಅಬಲಾಜನ – [ನಾ] ಸ್ತ್ರೀಯರು (ನುಡಿವೊಡೆ ರಾಜಕಾರ್ಯನಯಮೆತ್ತ ಅಬಲಾಜನದ ಒಂದು ಬುದ್ಧಿಯೆತ್ತ: **ಪಂಪಭಾ,** ೭. ೪೫)

ಅಬ್ಜಗರ್ಭ – [ನಾ] ಬ್ರಹ್ಮ (ಹಂಸಗ್ರೀವನಿಹಿತ ಏಕಪಾದಂ ಇಳಾವಂದ್ಯಂ ಅನಿಂದ್ಯಂ ಅಬ್ಜಗರ್ಭಂ ಬಂದಂ: **ಪಂಪಭಾ,** ೧೨. ೧೩೮)

ಅಬ್ಜಜಪುತ್ರ – [ನಾ] ಬ್ರಹ್ಮನ ಮಗ, ನಾರದ (ಧರ್ಮಪುತ್ರಂ ಅಬ್ಜಪುತ್ರನಂ ಮುಂದಿಟ್ಟು ಒಡಗೊಂಡು ಬಂದು ಮಣಿಕನಕರಚನ ವಿಚಿತ್ರವೇತ್ರಾಸನದೊಳ್ ಇರಿಸಿ: **ಪಂಪಭಾ,** ೬. ೧೧ ವ)

ಅಬ್ಜರೇಣು – [ನಾ] ತಾವರೆಯ ಪರಾಗ (ಆಗಳ್ ಅಬ್ಜರೇಣುಗಳನೆತ್ತಿ ಬಂದುದು ಇದಿರ್ವರ್ಪವೋಲ್ ನಂದನೋತ್ಕರಂಬಿಡಿದು ಮಾರುತಂ ಚಳತ್ತರಂಗೆಯಿಂ ಗಂಗೆಯಿಂ: **ಆದಿಪು,** ೧೧. ೫೫)

ಅಬ್ಜಾಕರ – [ನಾ] ತಾವರೆಗಳ ಆಗರ, ಸರೋವರ (ಮನಃಖೇದಂಬೆರಸು ಎಯ್ದೆವಂದನಬ್ಜಾಕರಮಂ: **ಪಂಪಭಾ,** ೮. ೪೫)

ಅಬ್ಜಿನಿ – [ನಾ] ತಾವರೆಯ ಬಳ್ಳಿ (ಪೊಸಪೂ ಅಬ್ಜಿನಿಯೊಂದಱೊಳ್ ಸೊಗಯಿಕುಂ: **ಆದಿಪು,** ೭. ೫೪)

ಅಬ್ದ – [ನಾ] ವರುಷ (ಪುಗುವುದು ಅರಣ್ಯಂ ಇರ್ಪ ಇರವು ಪನ್ನೆರಡು ಅಬ್ದಂ ಅದಲ್ಲದೆ ಅಲ್ಲಿ ಕೋಳ್ಮಿಗದ

ವನೇಚರಾಧಿಪರ ದಾಯಿಗರತ್ತಣಿನಪ್ಪ ಅಪಾಯಕೋಟಿಗೆ ಪವಣಿಲ್ಲ: **ಪಂಪಭಾ,** ೭. ೨೧)

ಅಬ್ಧಿಪರೀತಮಹಿ – [ನಾ] ಸಮುದ್ರದಿಂದ ಸುತ್ತುವರಿಯಲ್ಪಟ್ಟ ಭೂಮಿ (ಕುಡಿವುದಱಿಂದಂ ಅಬ್ಧಿಗಳಂ ಅಬ್ಧಿಪರೀತ ಮಹಿ ಈಶನಂ .. .. ನೀನಮೋಘಂ ಪಡೆವೆ: **ಪಂಪಭಾ,** ೧. ೧೪೧ ಮತ್ತು ೧. ೧೪೧ ವ)

ಅಬ್ಧಿಮಥನ – [ನಾ] ಸಮುದ್ರಮಥನ (ಅಬ್ಧಿಮಥನಪ್ರಾರಂಭದೊಳ್ ಮಂದರಾಚಲಮಂ ತಂದವನಾವಂ ಆತನೆ ವಲಂ ತಕ್ಕಂ ಪೆಱರ್ ತಕ್ಕರೇ: **ಪಂಪಭಾ,** ೬. ೪೧)

ಅಬ್ಬೆ – [ನಾ] [ಅಂಬಾ] ತಾಯಿ (ಅಂಗಜೋತ್ಪತ್ತಿಸುಖಕ್ಕೆ ಸೋಲಲಟೆಗುಂ ಪುರುಷವ್ರತಂ ಈಗಳ್ ಅಬ್ಬೆಯೆಂದು ಅತ್ತಿಗೆಯೆಂಬ ಮಾತಂ ಎನಗೇನೆನಲಕ್ಕುಮೊ ಪಂಕಜಾನನೇ: **ಪಂಪಭಾ,** ೧. ೭೫)

ಅಭಯ[ದಾನ] – [ನಾ] ನಾಲ್ಕು ದಾನಗಳಲ್ಲಿ ಒಂದು, ಅಭಯವನ್ನು ಕೊಡುವುದು (ಕುಡುವುದುಂ ಆಹಾರ ಅಭಯ ಭೈಷಜ್ಯ ಶಾಸ್ತ್ರದಾನದಿಂ ಚತುರ್ವಿಧಮಕ್ಕುಂ: **ಆದಿಪು,** ೧೦. ೯ ವ)

ಅಭವ – [ನಾ] ಜನ್ಮರಹಿತ, ಶಿವ (ಧ್ಯಾನದೊಳ್ ಅಭವಂ ನೆಱೆದದಿನಿಸಾನುಮನರೆಮುಚ್ಚಿ ಕಣ್ಗಳಂ ನಿಶ್ಚಳಿತಂ ತಾನಿರ್ದು ಮಱೆದು ಕೆಂದಿದ ಮೀನಂ ತಳ್ತಾಡದಿರ್ದ ಮಡುವಂ ಪೋಲ್ತಂ: **ಪಂಪಭಾ,** ೮. ೧೩); **[ನಾ]** ಜಿನ (ಕೋರಕಿತ ಅಂಕುರಿತ ಪಲ್ಲವಿತ ಮುಕುಳಿತ ವಿಸ್ತಾರಿತ ರಮ್ಯಾಶೋಕ ಮಹೀರುಹಮುಮಂ ಅಭವನ ಅಂಗರುಚಿ ಪುದಿದಿರ್ಕುಂ : **ಆದಿಪು,** ೯. ೧೧೧)

ಅಭವ್ಯ – [ನಾ] [ಜೈನ] ಮುಕ್ತಿ ಹೊಂದಲಾರದ ಜೀವ (ನೀಂ ಬೆಸಸಿ ಅಭವ್ಯನೊ ಭವ್ಯನೊ ದೂರಭವ್ಯನೋ: **ಆದಿಪು,** ೨. ೩೪)

ಅಭಿಖ್ಯಾತಿ – [ನಾ] ಕೀರ್ತಿ (ನಿಜಾಭಿಖ್ಯಾತಿಯಂ ಇಳೆಯೊಳ್ ನಿಱಿಸಲ್ಕೀ ತೆಱದ ಇತಿಹಾಸಕಥೆಯಂ ಒಪ್ಪಿಸೆ ಕುಱಿತಂ: **ಪಂಪಭಾ,** ೧೪. ೫೧)

ಅಭಿಘಾತ – [ನಾ] ಅಡ್ಡಿ (ವಜ್ರಕೀಟಂಗಳ್ ಕರ್ಣನೆರಡುಂ ತೊಡೆಯುಮಂ .. .. ಉರ್ಚಿ ಪೋಗೆಯುಂ ಅದನಱಿಯದಂತೆ ಗುರುಗೆ ನಿದ್ರಾ ಅಭಿಘಾತಮಕ್ಕುಮೆಂದು ತಲೆಯನುಗುರಿಸುತ್ತುಮಿರೆಯಿರೆ: **ಪಂಪಭಾ,** ೧. ೧೦೪ ವ)

ಅಭಿಚಾರಕ್ರಿಯೆ – [ನಾ] ಮಾಟ (ಮಲೆಪರ್ಗಭಿಚಾರಕ್ರಿಯೆ ವಲಮೆನಿಸಲ್ ಚಕ್ರಪೂಜನಂ ಸಕಳಮಹೀವಳಯಕ್ಕೆ ಶಾಂತಿಕರ್ಮಂ ವಲಮೆನಿಸಲ್ ಜಾತಕರ್ಮಮೇಂ ನೆಱೆದತ್ತೋ: **ಆದಿಪು,** ೧೧. ೫)

ಅಭಿಚಾರಮಾಗು – [ಕ್ರಿ] ಮಾಟಮಾಡಿ ಕೊಲ್ಲು (ದುರ್ಯೋಧನನ ಬೆಸದೊಳ್ ಆತನ ಪುರೋಹಿತಂ ಕನಕಸ್ವಾಮಿಯೆಂಬಂ ಪಾಂಡವರ್ಗೆ ಅಭಿಚಾರಮಾಗೆ ಬೇಳ್ವ ಬೇಳ್ವೆಯ ಕೊಂಡದೊಳಗಣಿಂದಂ: **ಪಂಪಭಾ,** ೮. ೪೨ ವ)

ಅಭಿಚಾರಿಕ – [ನಾ] ಮಾಟಗಾರ (ಕುಪಿತ ಅನೇಕಪ ದಂದಶೂಕ ದವ ದೈತ್ಯ ಅರಾತಿ ಚೋರ ಅಂಧಕಾರ ಪತದ್ವಜ ವಿಷ ಅಭಿಚಾರಿಕ ಜರಾತಂಕಾದಿ ಭೇದಂಗಳಪ್ಪ: **ಆದಿಪು.** ೧೬. ೯)

ಅಭಿಜನವತ್ಸಳ – [ನಾ] ಸದ್ವ್ಯಕ್ತಿಗಳಲ್ಲಿ ಪ್ರೀತಿಯುಳ್ಳವನು (ವತ್ಸಕುಲತಿಲಕಂ ಅಭಿಜನವತ್ಸಳಂ ಅಭಿಮಾನಮೂರ್ತಿ: **ಆದಿಪು,** ೧. ೩೦)

ಅಭಿಜಾತ – [ನಾ] ಉತ್ತಮ ವಂಶದಲ್ಲಿ ಹುಟ್ಟಿದವನು (ಚತುರಂಗಬಲೋಪೇತಂ ಅತಿಧವಳರಥಂ ಅಭಿಜಾತಂ ಕ್ಷತ್ರಿಯರನುಱದ ಕಲಿ ಕೃಪನಾತಂ: **ಪಂಪಭಾ,** ೧೦. ೫೫

ಅಭಿಜಿನ್ಮುಹೂರ್ತ – [ನಾ] ದಿನದ ಎಂಟನೆಯ ಮುಹೂರ್ತ, ಕುತುಪಕಾಲ (ತತ್ಪುರುದೇವಂ ಮುಕ್ತಿವಧೂವರತೆಯಂ ಅಭಿಜಿನ್ಮುಹೂರ್ತದೊಳ್ ಕೈಕೊಂಡಂ: **ಆದಿಪು,** ೧೬. ೫೧)

ಅಭಿಧಾನ' – [ನಾ] ನಿಘಂಟು (ಮತ್ತಂ ಸ್ವಯಂಭುವ ಅಭಿಧಾನ ಪದವಿದ್ಯಾ ಛಂದೋವಿಚಿತಿ ಅಲಂಕಾರಂಗಳೆಂಬ ಮೂಱಱಿಂ ಪೆಸರ್ವಡೆದ ವಾಙ್ಮಯಮುಮಂ: **ಆದಿಪು,** ೮. ೬೦ ವ); **[ನಾ]** ಹೆಸರು (ಸಮಸ್ತರಾಜಕಚ್ಛತ್ರದಿನಂದು ಛತ್ರವತಿಯೆಂಬ ಅಭಿಧಾನಮನಾಳ್ದುದಾ ಪೊಟಲ್: **ಪಂಪಭಾ,** ೩. ೩೯)

ಅಭಿನಯ – [ನಾ] ನಾಟ್ಯಪ್ರದರ್ಶನ (ಅಳಿನಿನದದ ಮದಕೋಕಿಳ ಕಳನಿನದದ ಜತಿಯೊಳಭಿನಯಮಂ ನೆಗಟ್ವಿನೆಗಂ ಲಳಿತಮನೇನಾಡಿಸಿದನೊ ಮಳಯಾನಿಳನರ್ತಕಂ ಲತಾನರ್ತಕಿಯಂ: **ಆದಿಪು,** ೧೧. ೯೩)

ಅಭಿನವ – [ಗು] ಹೊಸದಾದ, ನೂತನ (ಅಭಿನವಸಂಗಸಮುತ್ಪನ್ನ ಸಾಧ್ವಸ ರಸರಮಣೀಯತರ ಮುಗ್ಧವಧೂವದನವಿಲೋಕನ ಸುಖಮನನುಭವಿಸಿ: **ಆದಿಪು,** ೪. ೫೧ ವ)

ಅಭಿನಿವೇಶ – [ನಾ] ಬಹಳಕಾಲದ ಅಭಿಪ್ರಾಯ, ನಂಬಿಕೆ (ಅದಱಿಂ ಪರಲೋಕಸುಖಾರ್ಥಂ ಆತ್ಮಾಸ್ತಿತ್ವ ಅಭಿನಿವೇಶದಿಂ ತನುಧನನಿಧನಂ ಮಾಡಿ ಸೇದೆಗಿಡಲ್ವೇಡ: **ಆದಿಪು,** ೨. ೯ ವ)

ಅಭಿನಿಷಾದಿ – [ನಾ] ಮುಂದೆ ಕೂತು ವೀರನಿಗೆ ಸಹಾಯಮಾಡುವ ಮಾವತಿಗ (ಇತ್ತಂ ಯುವರಾಜನಾ ಬಗೆದು ಅಭಿನಿಷಾದಿಯುಮಂ: **ಆದಿಪು,** ೧೪. ೯೮ ವ)

ಅಭಿನ್ನಾಂಗಿ – [ನಾ] ಏಕರೂಪವುಳ್ಳವಳು (ಹಿಮಶೈಳದೊಳಂ ಜಳಧಿಯೊಳಂ ಎಂತು ಅಭಿನ್ನಾಂಗಿ ಗಂಗೆ ಸಂಗತೆ: **ಆದಿಪು,** ೧. ೭೭)

ಅಭಿಭವ – [ನಾ] ಸೋಲು, ತಿರಸ್ಕಾರ (ರಾಜ್ಯದೊಳೆನ್ನನವಸ್ತುಮಾಡಿ ಪೊಣ್ದು ಅಭಿಭವಮೀಗಳೀ ಭವದೊಳಿಂತಿದು ನೀಗದು: **ಆದಿಪು,** ೨. ೩೯)

ಅಭಿಭವಿಸು – [ಕ್ರಿ] ಶಕ್ತಿಗುಂದಿಸು (ಅಭಿಮನ್ಯು ಮರಣವಾರ್ತಾಪ್ರಭೂತ ಶೋಕಾಗ್ನಿ ಧರ್ಮತನಯನಂ ಇರದೆ ಅಂದು ಅಭಿಭವಿಸಿ ತನ್ನನಳುರ್ದಂತೆ ಭಾಸ್ಕರಂ ಕೆಂಕಮಾದಂ ಅಸ್ತಾಚಲದೊಳ್: **ಪಂಪಭಾ,** ೧೧. ೧೦೬)

ಅಭಿಮಂತ್ರಿಸು – [ಕ್ರಿ] ಆಹ್ವಾನಿಸು (ಮಂತ್ರಾಕ್ಷರ ನಿಯಮದಿಂ ಅಭಿಮಂತ್ರಿಸಿ ಬರಿಸಿದೊಡೆ ವಾಯುದೇವಂ ಬಂದು ಏಂ ಮಂತ್ರಂ ಪೇಱ್ನೆ ಕುಡು ರಿಪುತಂತ್ರಕ್ಷಯಕರನಂ ಎನಗೆ ಹಿತನಂ ಸುತನಂ: **ಪಂಪಭಾ,** ೧. ೧೨೪); **[ಕ್ರಿ]** ಮಂತ್ರ ಜಪಿಸಿ ಶಕ್ತಿಯುತವಾಗಿಸು (ಕಸೆಯಂ ಬಿಟ್ಟುಱದಭಿಮಂತ್ರಿಸಿ ಚಕ್ರಮಂ ಅಸುರವೈರಿಯಿಡುವಾಗಳ್: **ಪಂಪಭಾ,** ೨. ೨೧೧)

ಅಭಿಮತ – [ನಾ] ಇಷ್ಟ (ಏನಭಿಮತಂ ಅವರ್ಗೆ ಅವರ್ಗೆ ಅದನೇನುಂ ತೊದಳಿಲ್ಲದಿತ್ತು ಮನ್ನಿಸಿದಂ ಸನ್ಮಾನಪುರಸ್ಸರಂ: **ಆದಿಪು,** ೧೫. ೧೨)

ಅಭಿಮಾನ – [ನಾ] ಆತ್ಮಗೌರವ (ಅಭಿಮಾನಮೊಂದೆ ಕುಲಂ ಅಣ್ಮು ಕುಲಂ: **ಪಂಪಭಾ,** ೧೦. ೨೧)

ಅಭಿಮಾನಧನ – [ನಾ] ಆತ್ಮಗೌರವವನ್ನೇ ಸಂಪತ್ತಾಗುಳ್ಳವನು (ಎಂದನುಬಂಧಿಸಿದ ಮೋಹಪಾಶದೊಳ್ ತಾಯ್ತಂದೆಯ ನುಡಿದ ನುಡಿಯಂ ಕೇಳ್ದು ಅಭಿಮಾನಧನಂ ಸುಯೋಧನಂ ಇಂತೆಂದಂ: **ಪಂಪಭಾ,** ೧೩. ೧೩ ವ)

ಅಭಿಯೋಗ – [ನಾ] ಒತ್ತಾಯ (ತಮ್ಮತಮ್ಮ ಪುತ್ರರಂ ಅಭಿಯೋಗದಿಂದತಿಬಳಂಗೆ ನಿಯೋಜಿಸಿ: **ಆದಿಪು,** ೨. ೫೧)

ಅಭಿಯೋಗ್ಯ – [ನಾ] [ಜೈನ] ಇಂದ್ರ ಮುಂತಾದವರಿಗೆ ವಾಹನಸೇವೆ ಮಾಡುವವರು, ಒಂದು ದೇವತಾವರ್ಗ (ಸಾಮಾನಿಕ ತ್ರಾಯಸ್ತ್ರಿಂಶತ್ಪಾರಿಷದ ಆತ್ಮರಕ್ಷ ಲೋಕಪಾಳ ಅಭಿಯೋಗ್ಯ ಕಿಲ್ಬಿಷರೊಡನೆ: **ಆದಿಪು,** ೭. ೪೨ ವ) [**'**ತ್ರಾಯಸ್ತ್ರಿಂಶ**'** ನರಸಿಂಹಶಾಸ್ತ್ರಿಗಳು ಅನುಮೋದಿಸಿರುವ ಪಾಠ]

ಅಭಿರಾಮ – [ನಾ] ಸುಂದರ (ಅತಿಸಮೃದ್ಧ ಕೃಷೀವಲಕುಳ ಅಧಿಷ್ಠಿತಂಗಳುಮಪ್ಪ ಅಭಿರಾಮ ಜಲಾಶಯಂಗಳುಮಂ: **ಆದಿಪು,** ೮. ೬೩ ವ): ಶೋಭಿಸುವವನು (ಸುರವೃಂದಾನ್ವಿತಂ ಬಂದನಾಗಳ್ ಸುರರಾಜಂ ರಾಜದ್ಯೈರಾವತ ವಿಪುಳತರ ಸ್ಕಂಧದೇಶಾಭಿರಾಮಂ: **ಆದಿಪು,** ೮. ೬೭)

ಅಭಿರೂಪ – [ನಾ] ಸುಂದರ ರೂಪುಳ್ಳವನು (ಜನಪದಸಮಭಿಜಾತನುಂ ಅನ್ವಯಾಗತನುಂ ಅಭಿರೂಪನುಂ: **ಆದಿಪು,** ೧೪. ೪೩ ವ)

ಅಭಿವಾಂಚಿತ – [ನಾ] ಇಷ್ಟ, ಆಸೆ (ಅನಿತು ಬಯಕೆಯುಳ್ಳೊಡೆ ನಿಮ್ಮಿರ್ಬರುಂ ಇಂ ಮರುಳಾಗದೆ ಆ ಭರತನನೋಲಗಿಸಿ ಪಡೆಯಿಮಭಿವಾಂಛಿತಮಂ: **ಆದಿಪು,** ೯. ೧೦೪)

ಅಭಿವಾದಯೆ – [ಕ್ರಿ] ನಮಸ್ಕಾರಮಾಡುತ್ತೇನೆ (ತನ್ನ ದೊಣೆಯಂಬುಗಳ್ ತವುವನ್ನೆಗಂ ಎಚ್ಚು ಅಂಬು ತಪ್ಪೊಡೆ ಅಭಿವಾದಯೆನಲ್ಕೆ ಇನ್ನೆನಗೆ ಪದಂ ಇದು ಎಂದು ಕರಂ ನಗೆ ಸುರರ್: **ಪಂಪಭಾ,** ೧೩. ೪೦)

ಅಭಿಶಂಕೆ – [ನಾ] ಆಳವಾದ ಸಂದೇಹ (ಸದ್ವನಾಬ್ಜವಿಳಾಸಾವಾಸದೊಳ್ ತಳರದೆ ನಿಂದ ವಾಗ್ವನಿತೆ ಎಂಬ ಅಭಿಶಂಕೆಯಂ ಉಂಟುಮಾಡಿದಳ್: **ಆದಿಪು,** ೨. ೨೭)

ಅಭಿಷವಣ – [ನಾ] ಅಭಿಷವ, ಅಭಿಷೇಕ (ಸುರರಾಜಂ ತಾನೆ ರಾಜ್ಯಾಭಿಷವಣವಿಧಿಯಂ ಮಾಡಿದಂ: **ಆದಿಪು,** ೬. ೧೦೮)

ಅಭಿಷವೋತ್ಸವ – ಅಭಿಷೇಕ (ಆತ್ಮಬಾಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂಶಜರಾಜ್ಯಾಭಿಷವೋತ್ಸವಂ ನೆಗೞ್ದುದೆಂಬಾಶಂಕೆಯಂ ಮಾಡಿದಂ: **ಆದಿಪು,** ೧೪. ೧೩೩)

ಅಭಿಷೇಕ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ತಪಶ್ಚರಣದಿಂದ ಹೊಂದುವ ಅಭಿಷೇಕಪ್ರಾಪ್ತಿ (ಅಭಿಷೇಕ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಅಭಿಸಾರಿಕೆ – [ನಾ] ಸಂಕೇತಸ್ಥಾನದಲ್ಲಿ ಪ್ರಿಯನನ್ನು ನಿರೀಕ್ಷಿಸುವವಳು (ಪಿರಿದುಂ ಗೞಪುತ್ತುಮಿರ್ಪಳಂ ಸಾರಿಕೆಯೆಂಬರಲ್ಲದೆ ಅಭಿಸಾರಿಕೆಯೆಂಬರೆ ಬುದ್ಧಿಯುಳ್ಳವರ್: **ಪಂಪಭಾ.** ೪. ೮೩)

ಅಭಿಹತಿ – [ನಾ] ಪೆಟ್ಟು, ಹೊಡೆತ (ರಜಂ ನರೇಂದ್ರಚಾಮರಮರುದ್ ಅಭಿಹತಿಯಿಂ ತೆರಳ್ದು ತೂಳ್ದತ್ತಾಗಳ್: **ಆದಿಪು,** ೧೧. ೩೮)

ಅಭೀತಮನ – [ನಾ] ಹೆದರದ ಮನಸ್ಸಿನವನು (ಎನೆ ಬಗೆಗೊಂಡು ಅಭಿತಮನನರ್ಚಿಸಿ ಬಂದಿಸಿ ಚೈತ್ಯಗೇಹಮುಳ್ಳನಿತುಮಂ: **ಆದಿಪು,** ೩. ೪)

ಅಭೀಷ್ಟ – [ನಾ] ಆಕಾಂಕ್ಷೆ (ಭಟ್ಟಾರಕರಂ ಮೂಱು ಸೂೞ್ ಬಲವಂದು ಕೃತಾಭೀಷ್ಟಸ್ತವನಪರಂ ಮಹಾಮಹಮೆಂಬ ಮಹಾ ಪೂಜೆಯಂ ಮಹಾವಿಭೂತಿಯಿಂ: **ಆದಿಪು,** ೧೬. ೪೯ ವ)

ಅಭುಕ್ತಿ – [ನಾ] [ಜೈನ] ಭೋಜನಾಭಾವ (ಮಿತನಖಕೇಶಶೋಭಿತ ತನುತ್ವಂ ಅಭುಕ್ತ್ಯುಪಸರ್ಗಭಾವಂ ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ: **ಆದಿಪು,** ೧೦. ೪೩)

ಅಭೇದ್ಯ – [ಗು] ಭೇದಿಸಲಾಗದ್ದು (ವಿಷಮೋಚಿಕಗಳೆಂಬ ಪಾವುಗೆಗಳುಂ ಅಭೇದ್ಯಮೆಂಬ ಕವಚಮುಂ: **ಆದಿಪು,** ೧೫. ೩ ವ)

ಅಭ್ಯಂತರ – [ನಾ] ಒಳಭಾಗ (ಭರತೇಶ್ವರಂ ಸಕಳಾಂತಃಪುರಸಹಿತಮಲ್ಲಿ ವಿಶ್ರಮಿಸಿ ವನಾಭ್ಯಂತರಮಂ ತೊೞಲೆ ಮನಕ್ಕಂತಿಲ್ಲದ ಮುದಮನುಂಟುಮಾಡಿದುದು ಬನಂ: **ಆದಿಪು,** ೧೧. ೮೩)

ಅಭ್ಯಂತರತಪಸ್ – [ನಾ] [ಜೈನ] ಪ್ರಾಯಶ್ಚಿತ್ತ, ವಿನಯ, ವೈಯಾಪೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ, ಧ್ಯಾನ ಎಂಬ ಆರು ಬಗೆಯ ಅಂತರಂಗ ತಪಸ್ಸು (ಮತ್ತಂ ಅಭ್ಯಂತರತಪಷ್ಷಟ್ಕದೊಳಂ ಪ್ರಾಯಶ್ಚಿತ್ತ ವಿನಯ ವೈಯಾಪತ್ಯ ಸ್ವಾಧ್ಯಾಯ ಧ್ಯಾನ ವ್ಯುತ್ಸರ್ಗಂಗಳೊಳಂ ಕೈಕೊಂಡು: **ಆದಿಪು,** ೬. ೩೩ ವ)

ಅಭ್ಯರ್ಣ – [ನಾ] ಸಮೀಪ, ಹತ್ತಿರ (ಮಚ್ಚರಿಸಿ ಕಲಿಯುಗಾಭ್ಯರ್ಣದೊಳ್ ದ್ರವ್ಯಲೋಭಾತುರರ್ ಉನ್ಮಾರ್ಗೋಪದೇಶೋದ್ಯತಮತಿಗಳ್ ಅತಿಕ್ರೂರರಪ್ಪರ್ ದ್ವಿಜನ್ಮರ್: **ಆದಿಪು,** ೧೫. ೨೬)

ಅಭ್ಯಸನ – [ನಾ] ಅಭ್ಯಾಸ (ಭೂಷಾ ಅಭ್ಯಸನಚತುರ ಭಾಷಾವಿಶೇಷ ಕುಶಲೆಯರಪ್ಪ: **ಆದಿಪು,** ೨. ೬೫ ವ)

ಅಭ್ಯಸ್ತ – [ಗು] ಕಲಿಯಲಾದ (ಆ ಮಹಾಬಳಂ .. .. ಅಭ್ಯಸ್ತ ಸಮಸ್ತ ವಿದ್ಯಾಧರ ವಿದ್ಯಾಪಾರಗನುಂ: **ಆದಿಪು,** ೧. ೭೩ ವ)

ಅಭ್ಯುದಯ – [ನಾ] ಉದಯ, ಏಳಿಗೆ (ಇದಂ ಇಂದ್ರನಟ್ಟಿದಂ ನಿನಗೆ ಇದೞ ಪೆರ್ ದೇವದತ್ತಮೆಂಬುದು ನಿನಗೆ ಅಭ್ಯುದಯಕರಂ ಶಂಖಂ ರಿಪುಹೃದಯಕವಾಟಪುಟ ವಿಘಟನಂ ನೋಡರಿಗಾ: **ಪಂಪಭಾ,** ೬. ೪)

ಅಭ್ರ – [ನಾ] ಆಕಾಶ (ವಸುಂಧರೆಗೆ ಅಭ್ರದತ್ತ ನೆಗೆಯಲ್ಕಿರೆ ಕಂಡಂ ಭರತಮಂತ್ರಿಮುಖ್ಯನುಮಾಗಳ್: **ಆದಿಪು,** ೧೬.

೪೪); [ನಾ] ಮೋಡ (ಮುಂದೊಂದು ಎಡೆಯೊಳ್ ಅದಭ್ರ ಅಭ್ರವಿಭ್ರಮ ಭ್ರಾಜಿತ ಉತ್ತುಂಗಶೈಲಮಂ ಕಂಡು: **ಪಂಪಭಾ**, ೪. ೨೫ ವ)

ಅಭ್ರಂಕಷ – [ಗು] ಆಕಾಶವನ್ನು ಉಜ್ಜುವ (ಅಭ್ರಂಕಷಶಿಖರಿ ಶಿಖರದುರ್ಲಂಘ್ಯಮಪ್ಪ ಗಿರಿದುರ್ಗದ ಪೆಂಪುಮಂ: **ಆದಿಪು**, ೧೩. ೫೭ ವ)

ಅಭ್ರಪಥ – [ನಾ] ಆಕಾಶಮಾರ್ಗ (ಅಭ್ರಪಥದತ್ತ ಲಂಘಿಸಲ್ಕೆ: **ಆದಿಪು**, ೧೬. ೪೫)

ಅಭ್ರಾಂತರ – **[ನಾ]** [ಅಭ್ರ+ಅಂತರ] ಮೋಡಗಳೊಳಗೆ (ಅಂತೆ ಅತ್ತ ಪರಿದ ತಲೆಯಂ ಅದಂ ತಂದು ಅಟ್ಟೆಯೊಳಮರ್ಚಿ ಸುರಗಣಿಕೆಯರ್ ಅಭ್ರಾಂತರದೊಳೆ ತಮ್ಮ ವಿಮಾನಾಂತರದೊಳಗಿಟ್ಟು ಕರ್ಣತನಯನನುಯ್ದರ್: **ಪಂಪಭಾ**, ೧೨. ೧೬೯)

ಅಭ್ರೂಭಂಗಂ – [ನಾ] ಚಲಿಸದ ಹುಬ್ಬುಗಳುಳ್ಳವನು (ಸ್ತಿಮಿತೇಕ್ಷಣವಭ್ರೂಭಂಗಂ ಅನಾಪಾಂಗಾವಲೋಕನಂ ಸುಶ್ಲಿಷ್ಟೋತ್ತಮದಶನಚ್ಛದ ಮಾನಸಮಮರ್ದುದು ಯೋಗಪ್ರಯೋಗದೊಳ್ ಮುನಿಪತಿಯಾ: **ಆದಿಪು**, ೯. ೮೭)

ಅಭ್ಯಸ್ತ – **[ಗು]** ಕಲಿತ, ಅಭ್ಯಾಸ ಮಾಡಿದ (ಜನ್ಮಾಂತರ ಅಭ್ಯಸ್ತ ಕಳಾಕುಶಳನುಂ ಪ್ರತ್ಯಕ್ಷೀಕೃತಸಕಲ ವಾಙ್ಮಯನಪ್ಪುದಱಿಂದಂ: **ಆದಿಪು**, ೮. ೩ ವ);

ಅಮಂದಧ್ವನಿ – [ನಾ] ಗಟ್ಟಿಯಾದ ಕೂಗು, ಗರ್ಜನೆ (ಅರಾತಿಗಜಘಟೆಗಳ್ ಎನಿತು ಬಂದೊಡ್ಡೆಯುಂ ತನ್ನೊಂದು ಅಮಂದಧ್ವನಿಗೆ ಒಡ್ಡೊಡೆದೋಡುವುದಱಿಂ ವೈರಿಗಜಘಟಾ ವಿಘಟನನುಂ: **ಪಂಪಭಾ**, ೧೪. ೩೭ ವ)

ಅಮಂದಸ್ಪಂದ – [ನಾ] ಬಲವಾಗಿ ಅದುರುವಿಕೆ (ವಿಜಯಲಕ್ಷ್ಮೀಲಲನಾ ವಕ್ಷೋಜಸ್ಪರ್ಶಮನಕ್ಷರಮಱಿಪಿದುದು ಪತಿಗೆ ಅಮಂದಸ್ಪಂದಂ: **ಆದಿಪು,** ೧೧. ೧೧)

ಅಮರ್ – **[ಕ್ರಿ]** ಒಪ್ಪು, ಶೋಭಿಸು (ಜಿನಪತಿಪದಪಂಕಜಮನೆ ಮನದೊಳ್ ಬಗೆದು ಅಮರೆ ಮುಗಿದ ಕೈವೆರಸು ಸುರಾಂಗನೆಯರ್: **ಆದಿಪು**, ೬. ೨೦); **[ಕ್ರಿ]** [ಸಂಭೋಗಕ್ರಿಯೆಯಲ್ಲಿ] ಬಿಗಿಗೊಳ್ಳು (ಅಮರ್ದಂ ಕುಡಿವಂತೆ ಲುಂದಿನಿಂಪು ಅಮರ್ದೊಡಮೇನಗಲ್ಕೆ ಮುಳಿಸೆಂಬೆರಡುಂ ಗಡ ಕಾಳಕೂಟಂ: **ಆದಿಪು**, ೧೨. ೨೭); **[ಕ್ರಿ]** ಸೇರು (ಮತ್ ಸ್ಯಂದನಚೋದನಕ್ರಮಮದುಂ ಪೊಲೆಯಂಗೆ ಅಮರ್ದು ಇರ್ಕುಂ: **ಪಂಪಭಾ**, ೧೨. ೯೪); **[ಕ್ರಿ]** ಸರಿಯಾಗಿರು (ಸಮಕಟ್ಟಱಿಯದೆ ಹರಿಗೆ ಅರ್ಘ್ಯಮೆತ್ತಿ ನಿಂದಿರ್ದ ಯಜ್ಞಮದು ಮೊದಲೊಳ್ ತಾನಮರ್ದುಂ: **ಪಂಪಭಾ**, ೬. ೪೮)

ಅಮರಕಾಂತೆ – **[ನಾ]** [ಜೈನ] ಜಿನಜನನಿಯ ಗರ್ಭಶೋಧನ ಸಂದರ್ಭದಲ್ಲಿ ವಿವಿಧ ಸೇವೆಗಳಿಗೆ ನಿಯೋಜಿತರಾದ ದೇವತೆಯರು (ಅನ್ಯನಗನಿವಾಸಗಳಪ್ಪ ಮಾಳಿಕೆ ಮಾಳಿನಿ ಕನಕದೇವಿ ಕಚಿತ್ರೆ ಪುಷ್ಪಚೂಳಿಕೆ ಮಾಳತಿ ಸುರದೇವಿ ತ್ರಿಶಿರೆ ಮೊದಲಾಗಿ ಪೆಱರುಮಮರಕಾಂತೆಯರಂ: **ಆದಿಪು**, ೭. ೩ ವ)

ಅಮರಗಿರಿ – [ನಾ] ಮೇರುಪರ್ವತ (ಚಂದ್ರಾದಿತ್ಯ ತಾರಾನಕ್ಷತ್ರದಿನಹರ್ನಿಶಂ ಬೆಳಗುವ ಅಮರಗಿರಿಯನೆ ಪೋಲ್ತಂ: **ಆದಿಪು**, ೬. ೬೮)

ಅಮರತರು – [ನಾ] ಕಲ್ಪವೃಕ್ಷ (ಭಾಸುರರತ್ನಾಭರಣಂಗಳ್ ಶರೀರದಿಂದುದಿರ್ದುವು ಅಮರತರುಕುಸುಮದವೊಲ್: **ಆದಿಪು**, ೧೬. ೩೭)

ಅಮರದ್ರುಮ – [ನಾ] ಕಲ್ಪವೃಕ್ಷ (ವಜ್ರಜಂಘಚಕ್ರವರ್ತಿ ಸೂಕ್ತಾಮೃತಸಿಕ್ತಮಪ್ಪ ನಿಜಮನೋರಥಾಮರದ್ರುಮದಿಂ ಒಗೆದಂಕುರಿಸಿದ ಅಂಕುರನಿಕರಮಂ: **ಆದಿಪು**, ೪. ೨೯ ವ)

ಅಮರನದೀನಂದನ – [ನಾ] ಭೀಷ್ಮ (ಅಮರನದೀನಂದನ ಉಪದೇಶದಿಂದಾತಂ ಕೊಳನಂ ಪೊಕ್ಕು ಕಾಲವಂಚನೆಗೆಯ್ಯಲಿರ್ದನಕ್ಕುಂ: **ಪಂಪಭಾ**, ೧೩. ೭೬ ವ)

ಅಮರಮಹೀಜ – [ನಾ] ಕಲ್ಪವೃಕ್ಷ (ರಾಜಾಧಿರಾಜಂ ಅಮರಮಹೀಜದ ಲೀಲೆಯನೆ ಲೀಲೆಯಿಂ ಕೈಕೊಂಡಂ: **ಆದಿಪು**, ೧೧. ೪)

ಅಮರಸರಿತ್ – [ನಾ] ದೇವನದಿ, ಗಂಗಾನದಿ (ಹಿಮವದ್ಗಿರಿಕಟಕದಿಂ ಒಗೆವ ಅಮರಸರಿತ್ ಸ್ರೋತಮೆಂಬ ಮಾತಂ ಪಡೆದು: **ಆದಿಪು**, ೪. ೩೮)

ಅಮರಸಿಂಧೂದ್ಭವ – [ನಾ] ಭೀಷ್ಮ (ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ: **ಪಂಪಭಾ,** ೧೪. ೬೪)

ಅಮರಾಧಿಪ – **[ನಾ]** ಸೌಧರ್ಮೇಂದ್ರ (ಅಮರಾಧಿಪಪ್ರಹಿತ ಪ್ರತಿದಿನ ಪ್ರವರ್ಧಮಾನ ಸುರತರುಪ್ರಸೂನ ಗ್ರಥಿತ ಸುರಭಿದಾಮ: **ಆದಿಪು**, ೮. ೩ ವ)

ಅಮರಾಪಗಾನಂದನ – [ನಾ] ದೇವಗಂಗೆಯ ಮಗ, ಭೀಷ್ಮ (ನಿನ್ನಂ ಆನಿನಿತಂ ಕೈಯೊಡ್ಡಿ ಬೇಡಿದಪೆಂ ಎಂದ ಸತ್ಯವತಿಗೆ ಅಮರಾಪಗಾನಂದನಂ ಇಂತೆಂದಂ: **ಪಂಪಭಾ**, ೧. ೮೧ ವ)

ಅಮರಾಪಗಾಸುತ – [ನಾ] ಭೀಷ್ಮ (ಮನದೊಳ್ ನೊಂದ ಅಮರಾಪಗಾಸುತ ಕೃಪ ದ್ರೋಣಾದಿಗಳ್ ಬೇಡವೇಡೆನೆಯುಂ ಮಾಣದೆ: **ಪಂಪಭಾ**, ೭. ೫)

ಅಮರಾಪಗೆ – **[ನಾ]** ದೇವನದಿ, ಗಂಗೆ (ಭಗೀರಥಂ ನೆಗೞ್ದ ತಪೋನಿಯೋಗದೊಳ್ ಅವಂಗೆ ಅಮರಾಪಗೆ ಮೆಚ್ಚಿ ಪಾಯ್ವುದುಂ: **ಪಂಪಭಾ**, ೪. ೧೩)

ಅಮರಾವಾಸ – **[ನಾ]** ದೇವತಾವಾಸ (ರಮಣೀಜಾತಿಯೊಳಲ್ತೆ ನಂಬಿದವರ್ಗಳ್ ಸಮ್ಯಕ್ತ್ವಮಂ ಪುಟ್ಟರಾಱುಂ ಅಧೋಭೂಮಿಯೊಳಂತೆ ಮೂಱುಂ ಅಮರಾವಾಸಂಗಳೊಳ್: **ಆದಿಪು**, ೫. ೬೩)

ಅಮರು – [ಕ್ರಿ] ಆಕರ್ಷಿಸು (ವಾರನಾರೀರಮಣೀಯನೃತ್ತಂ ಅಮರುತ್ತಿರೆ ಸಂದ ವಿರಾಟಂ ಅಂದು ಕೆಯ್ನೀರೆಱೆದೀಯೆ ಗೆಯ್ದರ್ ಅಭಿಮನ್ಯುಗಂ ಉತ್ತರೆಗಂ ವಿವಾಹಮಂ: **ಪಂಪಭಾ**, ೯. ೯)

ಅಮರೇಂದ್ರ – [ನಾ] ದೇವೇಂದ್ರ (ಅಮರೇಂದ್ರಪುತ್ರನಂ ಕರೆವವೊಲಾದುದು ಪುರದ ವಾತವಿಧೂತ ವಿನೂತಕೇತುಗಳ್: **ಪಂಪಭಾ,** ೪. ೩೪)

ಅಮರೇಂದ್ರಗಣಿಕೆ – **[ನಾ]** ಅಪ್ಸರಸ್ತ್ರೀ (ಸ್ನಾನಾರ್ಥಂ ಒಂದು ಕಳಶಮಂ ನಿಯಮನಿಧಾನಂ ಎಟಿಲೆ ಪಿಡಿದು ಅಮಳಿನ

ಗಂಗಾನದಿಗೆ ವಂದು ಸುರತನಿಧಾನಿ ಅಮರೇಂದ್ರಗಣಿಕೆಯಂ ಮುನಿ ಕಂಡಂ: **ಪಂಪಭಾ,** ೨. ೪೧)

ಅಮರೇಂದ್ರನಂದನ – [ನಾ] ಇಂದ್ರನ ಮಗನಾದ ಅರ್ಜುನ ಮತ್ತು ಇಂದ್ರನಿಗೆ ಸೇರಿದ ನಂದನವಾದ ಖಾಂಡವ (ನುಡಿಯಂ ನುಡಿದಂತೆ ನೆಗಟ್ಟಿಲ್ ಅಗ್ನಿದೇವನಂ ಅಮರೇಂದ್ರನಂದನಮಂ ಊಡಿದಂ ಅಮರೇಂದ್ರನಂದನಂ: **ಪಂಪಭಾ,** ೫. ೧೦೫)

ಅಮರೇಂದ್ರಪುತ್ರ – [ನಾ] ದೇವೇಂದ್ರನ ಮಗ, ಅರ್ಜುನ (ಅಮರೇಂದ್ರಪುತ್ರನಂ ಕರೆವವೊಲಾದುದು ಪುರದ ವಾತವಿಧೂತವಿನೂತಕೇತುಗಳ್: **ಪಂಪಭಾ,** ೪. ೩೪)

ಅಮರ್ಕೆ – [ನಾ] ಬೆಸುಗೆ (ಬಿಗಿದಮರ್ದಪ್ಪುವಪ್ಪುಗಳ್ ಅಮರ್ಕೆಗಳೊಯ್ಯನೆ ಸುಯ್ವ ಸುಯ್ಯ ಗಾಳಿಗಳೊಳಮ್ ಅಮರ್ಕೆಗೆಟ್ಟೊಡೆ: **ಆದಿಪು,** ೧೨. ೩೭)

ಅಮರ್ಕೆವೆಱು – [ಕ್ರಿ] ಜೊತೆಯಾಗು, ಎಣೆಯಾಗು (ತಂದೆಯೊಂದಂದಮೆ ತಂದೆಯೊಂದು ನುಡಿಯೋಜೆಯೆ ತನ್ನೊಳ್ ಅಮರ್ಕೆವೆತ್ತುದು: **ಆದಿಪು,** ೮. ೪೪)

ಅಮರ್ಚು – [ಕ್ರಿ] ಸೇರಿಸು (ಪಲವುಂ ತೆಱದ ಪಲವುಂ ಪೊಱಿ೯ಯಾಗಿ ಕಟ್ಟಿದ ಬಲೆಗಳುಮಂ ಪಡಿಗಳಂ ಅಮರ್ಚಿ: **ಪಂಪಭಾ,** ೫. ೪೭ ವ)

ಅಮರ್ದಪ್ಪು – [ಕ್ರಿ] ಬಿಗಿಯಾಗಿ ಅಪ್ಪಿಕೊ (ನುಡಿವ ನಡೆನೋಡುವಾಡುವ ಪೊಡೆವಡುವ ಅಮರ್ದಪ್ಪಿಕೊಳ್ವ ತಮ್ಮಿನಿಯರ: **ಆದಿಪು,** ೪. ೩೨)

ಅಮರ್ದಿನೆಸಕ – [ನಾ] [ಅಮರ್ದಿನ+ಎಸಕ] ಅಮೃತದ ಶೋಭೆ (ಆವರಿಸಿತ್ತೊ ನಭೋಂತರ್ಭೂವಿವರಮಂ ಅಮರ್ದಿನೆಸಕಂ ಎನೆ ಬಿರಯಿಗಳ್ ಓ ಓ ಇದು ಮದನನ ಸೋದನದೀವಿಗೆಯೆನೆ ತೊಳಗಿ ಬೆಳಗಿದುದು ತುಹಿನಕರಂ: **ಪಂಪಭಾ,** ೪. ೫೨)

ಅಮರ್ದಿರೆ – [ಕ್ರಿವಿ] [ಅಮರರ್ದು+ಇರೆ] ಸೇರಿಕೊಂಡಿರಲು (ಒಡವುಟ್ಟಿದ ಮಣಿಕುಂಡಲಂ ಒಡವುಟ್ಟಿದ ಸಹಜಕವಚಂ ಅಮರ್ದಿರೆ ತನ್ನೊಳ್ ತೊಡರ್ದಿರೆಯುಂ ಬಂದಾಕೆಯ ನಡುಕಮಂ ಒಡರಿಸಿದನಾಗಳ್: **ಪಂಪಭಾ,** ೧. ೯೫)

ಅಮರ್ದು – [ನಾ] [ಅಮೃತ] ಪೀಯೂಷ (ಅಮರ್ದಿನ ಸವಿಯೊಳಗೀ ಸವಿ ಸಮನೆನೆ ತೇಜೋಬಳ ಆಯುರಾರೋಗ್ಯ ಸಮೇತಮಂ: **ಆದಿಪು,** ೫. ೩೯); ಹೊಂದಿಕೊಳ್ಳು (ಸ್ತಿಮಿತೇಕ್ಷಣವಭ್ರೂಭಂಗಂ ಅನಾಪಾಂಗಾವಲೋಕನಂ ಸುಶ್ಲಿಷ್ಟೋತ್ತಮದಶನಚ್ಛದ ಮಾನಸಮಮರ್ದುದು ಯೋಗಪ್ರಯೋಗದೊಳ್ ಮುನಿಪತಿಯಾ: **ಆದಿಪು,** ೯. ೮೭)

ಅಮಳ್ – [ನಾ] ಜೋಡಿ, ಅವಳಿಮಕ್ಕಳು (ಬಳೆದುವು ತೋಳ್ಗಳ್ ಎಕ್ಕೆಯಿಂ ಅಮಳ್ ಬಳೆವಂತಿರೆ ಮುಯ್ಯುಗಳ್ ಕುಳಾಚಳ ಶಿಖರಂಗಳಂ ಮಸುಳೆವಂದುವು: **ಪಂಪಭಾ,** ೨. ೩೭)

ಅಮಳರ್ – [ನಾ] ಅವಳಿಗಳು (ಅವರಿತ್ತ ವರದೊಳವರ ವಂಶಮೆ ಸಂಭಾವಿಸೆ ಗರ್ಭದೊಳ್ ಅಮಳರನಾ ವನಜದಳಾಕ್ಷಿ ಪಡೆದು ಸಂತತಿವೆತ್ತಳ್: **ಪಂಪಭಾ,** ೨. ೩)

ಅಮಳ್ಗಳ್ – [ನಾ] ಅವಳಿಜವಳಿ (ನಾಲ್ವತ್ತೊಂಬತ್ತು ಅಮಳ್ಗಳ್ ಪುಟ್ಟಿದವು ಗುಣದಮಳ್ ಪುಟ್ಟಿದವೋಲ್; **ಆದಿಪು,** ೪. ೬೨); ನಕುಲ ಸಹದೇವರು (ಏದೊರೆಯಂ ಯಮನಂದನಂ ಏದೊರೆಯಂ ಭೀಮಸೇನಂ ಏದೊರೆಯಂ ಕಂಜೋದರನ ಮೈದುನಂ ತಾಮೇ ದೊರೆಯರ್ ಅಮಳ್ಗಳ್: **ಪಂಪಭಾ,** ೭. ೧೭)

ಅಮಳಿನ – [ನಾ] ಪರಿಶುದ್ಧ, ಪವಿತ್ರ (ಸ್ನಾನಾರ್ಥಂ ಒಂದು ಕಳಶಮಂ ನಿಯಮನಿಧಾನಂ ಎಟಲೆ ಪಿಡಿದು ಅಮಳಿನ ಗಂಗಾನದಿಗೆ ವಂದು ಸುರತನಿಧಾನಿ ಅಮರೇಂದ್ರಗಣಿಕೆಯಂ ಮುನಿ ಕಂಡಂ: **ಪಂಪಭಾ,** ೨. ೪೧)

ಅಮಳ್ವೆಸರ್ – [ನಾ] ಜೋಡಿ ಹೆಸರು (ನಕುಲ ಸಹದೇವರೆಂದು ಅವರ್ಗೆ ಅಮಳ್ವೆಸರಂ ಇಟ್ಟು: **ಪಂಪಭಾ,** ೨. ೩ ವ)

ಅಮಾನುಷ – [ನಾ] ಮನುಷ್ಯರಿಗೆ ಅಸಾಧ್ಯವಾದುದು (ಶ್ರಮಾಂಬುಲವಮೊಂದುಮಂ ನಿನಗೆ ಪುಟ್ಟಿಸಲ್ಕಾರ್ತುದಿಲ್ಲ ಅಮಾನುಷಂ ಅನಂತವೀರ್ಯಗುಣಂ ಆದಿತೀರ್ಥೇಶ್ವರಾ: **ಆದಿಪು,** ೧೩. ೮೩)

ಅಮಿತ್ರ – [ನಾ] ಮಿತ್ರನಲ್ಲದವನು, ಶತ್ರು (ಇತ್ತ ಅರಿಗಂಗೆ ಅಮಿತ್ರಜಯಂ ಅಪ್ಪುದುಂ ಅತ್ತ ಅಮರರ್ಕಳ್ ಆರ್ದು ಸೂಸುತ್ತಿರೆ ಪುಷ್ಪವೃಷ್ಟಿಗಳಂ: **ಪಂಪಭಾ,** ೧೧. ೮೧)

ಅಮುಂಕು – [ಕ್ರಿ] ಅದುಮು, ಹಿಸುಕು (ಯಮುನಾನದೀತರಂಗಂ ಅಮುಂಕಿ ವನಲತೆಯ ಮನೆಗಳಂ ಸೋಂಕಿ ವನಭ್ರಮಣಪರಿಶ್ರಮಂ ಮುನ್ನಮೆ ಕಳೆದುದು ಬಂದು ಅದೊಂದು ಮಂದಶ್ವಸನಂ: **ಪಂಪಭಾ,** ೫. ೫೩)

ಅಮೃತಕರ – [ನಾ] ಚಂದ್ರ (ಸುಯೋಧನಂಗೆ ಮುಳಿಸಿಂ ಕಿಸುಗಣ್ಚಿದ ತೆಱದಿಂ ಅಮೃತಕರನುದಯಿಸಿದಂ: **ಪಂಪಭಾ,** ೨. ೮೮)

ಅಮೃತಕಿರಣ – [ನಾ] ಚಂದ್ರ (ಶ್ರೀಮತ್ ಚಳುಕ್ಯವಂಶವ್ಯೋಮ ಅಮೃತಕಿರಣವೆನಿಪ ಕಾಂತಿಯನೊಳಕೊಂಡೀ ಮಹಿಯೊಳಾತ್ಮವಂಶಶಿಖಾಮಣಿ ಜಸಮೆಸೆಯೆ ಯುದ್ಧಮಲ್ಲಂ ನೆಗಟ್ದಂ: **ಪಂಪಭಾ,** ೧. ೧೫)

ಅಮೃತಗರ್ಭ – [ನಾ] ಒಂದು ಬಗೆಯ ತುಪ್ಪ (ಅಮೃತಗರ್ಭಂಗಳೆಂಬ ಸದ್ಯೋಘೃತಮುಂ: **ಆದಿಪು,** ೧೫. ೩ ವ)

ಅಮೃತರಸಾಯನ – [ನಾ] ಒಂದು ಬಗೆಯ ಪಾನಕ (ಅಮೃತರಸಾಯನಮೆಂಬ ಪಾನಮಂ: **ಆದಿಪು,** ೧೫. ೩ ವ)

ಅಮೃತವರ್ಷಿ – [ಗು] ಅಮೃತವನ್ನು ಸುರಿಸುವ (ಅಪ್ಪಿಕೊಂಡು ಅಮೃತವರ್ಷಿ ಕರಪರಿಷೇಕದಿಂದೆ ಪುತ್ರಸ್ಪರ್ಶನಂ ಆಪ್ಯಾಯನಕೋಟಿಯಾಗೆ: **ಪಂಪಭಾ,** ೧೩. ೮ ವ)

ಅಮೃತವಾರ್ಧಿ – [ನಾ] ಹಾಲ್ಗಡಲು (ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ: **ಪಂಪಭಾ,** ೧. ೧೩)

ಅಮೃತಾಂಶು – [ನಾ] [ಅಮೃತ+ಅಂಶು] ಚಂದ್ರ (ಅಮೃತಾಂಶುವಿನ ಉದಯದೊಳ್ ಅಂಭೋಧಿವೇಲೆ ಭೋರ್ಗರೆವವೊಲ್ ಒರ್ಮೊದಲೆಸೆದುವು ಘನಪಥದೊಳ್ ತ್ರಿದಶಕರಾಹತಿಯಿಂ ಒಡನೆ ಸುರದುಂದುಭಿಗಳ್: **ಪಂಪಭಾ,** ೧. ೧೪೬)

ಅಮೃತಾಂಶುಬಿಂಬ – [ನಾ] ಚಂದ್ರಬಿಂಬ (ಜಗತ್ತ್ರಿತಯಾಳಂಕಾರಮಿದು ದಿವ್ಯಮಾತಪವಾರಣಂ ಅಮೃತಾಂಶುಬಿಂಬಧವಳವಿಳಾಸಂ: **ಆದಿಪು,** ೧೩. ೧೭)

ಅಮೃತಾಂಶುವಕ್ತ್ರೆ – [ನಾ] ಚಂದ್ರಮುಖಿ (ಇಂಪು ಪೊದಳ್ದು ಬಂದು ಬಂಧುರ ಹಿಮಮಂದಗಂಧವಹಮೆೞ್ಚೆಸಿತ್ತು ಅಮೃತಾಂಶುವಕ್ತ್ರೆಯಂ: **ಆದಿಪು,** ೩. ೨೨)

ಅಮೃತಾಸವ – [ನಾ] ಅಮೃತದಂತಹ ಮಧು (ಚಕೋರಂ ಇಂದುಮಂಡಳಗಳಿತ ಆಸವಾಮೃತಮನುಂಡುಸಿರುತ್ತಿರೆ ಚೆಲ್ವು ಶಾರದಂ: **ಪಂಪಭಾ,** ೭. ೭೦)

ಅಮೇಯ – [ಗು] ಅಳತೆಗೆ ಸಿಕ್ಕದ (ಸಮಸ್ತಸುರಕೋಟಿ ಹೇಮಘಟಕೋಟಿಯಿಂ ತೀವಿ ತಂದು ಅಮೇಯ ಭುಜಕೋಟಿಯಿಂ ಮಿಸಿಸೆ: **ಆದಿಪು,** ೧೩. ೮೩); **[ಗು]** ಅಪರಿಮಿತ (ಅಮಿತ ಮತಿ ಗುಣದಿನತಿ ವಿಕ್ರಮ ಗುಣದಿಂ ಶಾಸ್ತ್ರಪಾರಮುಂ ರಿಪುಬಳ ಪಾರಮುಮೊಡನೆ ಸಂದುವೆನಿಸಿದನಮೇಯ ಬಲಶಾಲಿ ಮನುಜ ಮಾರ್ತಾಂಡ ನೃಪಂ: **ಪಂಪಭಾ,** ೧. ೪೫)

ಅಮೋಘ – [ಗು] ಉತ್ತಮವಾಗಿ, ಚೆನ್ನಾಗಿ (ನೋಡುತ್ತೆಂತಿರ್ಪಮೀ ಬಂದತಿಥಿಗೆ ಅತಿಥಿ ಸತ್ಕಾರಮಂ ನಾಂ ಅಮೋಘಂ ಮಾಡಲ್ವೇೞ್ಕುಂ ಯಥಾಶಕ್ತಿಯಿಂ: **ಆದಿಪು**. ೧೧. ೯೨); **[ಗು]** ವ್ಯರ್ಥವಾಗದ, ಸಾರ್ಥಕವಾದ (ದಿವ್ಯಮುನಿವಾಕ್ಯಂ ಅಮೋಘವಾಕ್ಯಮಕ್ಕುಂ ಅದರ್ಕೇನುಂ ಚಿಂತಿಸಲ್ವೇಡ: **ಪಂಪಭಾ,** ೧. ೧೧೮ ವ)

ಅಮೋಘಂ – [ಗು] ವ್ಯರ್ಥವಾಗದ ಹಾಗೆ (ಸರ್ವಲಕ್ಷಣ ಸಂಪೂರ್ಣಂ ಅಪ್ಪ ಮಗನಂ ಅಮೋಘಂ ಪಡೆವೆಂ: **ಪಂಪಭಾ,** ೧. ೧೩೪ ಮತ್ತು ೧೩೪ ವ); **[ಅ]** ಖಂಡಿತವಾಗಿಯೂ (ಎನಗಲ್ತು ಆರ್ಗಂ ಅಸಾಧ್ಯನಲ್ತೆ ವಿಜಯಂ ನೀಂ ಆತನಂ ಗೆಲ್ವ ಮಾತಂ ಅಮೋಘಂ ಬಿಸುಡಿಂದೆ: **ಪಂಪಭಾ,** ೧೧. ೮೪)

ಅಮೋಘಬಾಣಂ – [ನಾ] ನಿಷ್ಫಲವಾಗದಂತೆ ಬಾಣ ಪ್ರಯೋಗಿಸುವವನು (ಅಂತಮೋಘಬಾಣಂ ಬಾಣಧಿಯಿಂ ಬಾಣಮನುರ್ಚಿಕೊಂಡು: **ಆದಿಪು,** ೧೨. ೮೮ ವ)

ಅಮ್ಮ – [ನಾ] ತಂದೆ (ಒಯ್ಯನೆ ಕೇಳ ಕರ್ಣ ನಿನ್ನಾದಿಯೊಳ್ ಅಬ್ಬೆ ಕೊಂತಿ ನಿನಗಮ್ಮಂ ಅಹರ್ಪತಿ: **ಪಂಪಭಾ,** ಪರಿಷತ್ತು ೯. ೬೪)

ಅಮ್ಮನ ಗಂಧವಾರಣಂ – [ನಾ] ಅರ್ಜುನ (ತನ್ನ ಒಡವುಟ್ಟಿದರ್ ಸಮಂತು ಒಡವರೆ ವಾರಣಾವತಮನೆಯ್ದಿದಂ ಅಮ್ಮನ ಗಂಧವಾರಣಂ: **ಪಂಪಭಾ,** ೨. ೯೮) [ಇದು ಅರಿಕೇಸರಿಯ ಬಿರುದು]

ಅಯ – [ನಾ] ಸದ್ವರ್ತನೆ (ಪ್ರಿಯವಿಷಯಕಾಂಕ್ಷೆಯಿಂದ ಇಂದ್ರಿಯಂಗಳೆಂತೆಯ್ದೆ ಮನಮನಾಶ್ರಯಿಸುಗುಂ ಅಂತು ಅಯ ನಯಪರರ್ ಅಯ್ವರುಂ ಆಶ್ರಯಿಸಿದರ್ ವಿಷಯಕಾಂಕ್ಷೆಯಿಂ ಮುರರಿಪುವಂ: **ಪಂಪಭಾ,** ೯. ೧೩)

ಅಯಃಪುತ್ರಿಕೆ – [ನಾ] ಕಬ್ಬಿಣದ ಪ್ರತಿಮೆ (ಪರವಧು ದುರ್ವ್ಯಸನಂ ನಿನಗೆಂದಮರ್ದಪ್ಪಿಸುವರ್ ಕೆಂಪೆಸೆಯೆ ಕಾಯ್ದ ಅಯಃಪುತ್ರಿಕೆಯಂ: **ಆದಿಪು,** ೫. ೮೭)

ಅಯನ – [ನಾ] [ಜೈನ] ಮೂರು ಋತುಗಳು ಅಥವಾ ಆರು ಮಾಸಗಳ ಅವಧಿ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ)

ಅಯನಯ – [ನಾ] ಒಳ್ಳೆಯ ನಡವಳಿಕೆ ಹಾಗೂ ನೀತಿ (ಅಯನಯಪರಾಕ್ರಮ ಉಪಾಶ್ರಯಂಗಳಂ ಶ್ರೀಗೆ ಅಡರ್ಪುಮಾಡಿದ ನಿನ್ನಿಂದ್ರಿಯಜಯಮೆ ಕೂಡೆ ಲೋಕತ್ರಯದಿಂ ಪೊಗೞಿಸಿದುದು: **ಪಂಪಭಾ,** ೯. ೩೫)

ಅಯನಯಪರ – [ನಾ] ಶುಭವಿಧಿ ಮತ್ತು ನಯಜ್ಞತೆಗಳನ್ನು ಪಡೆದ[ವನು] (ಪ್ರಿಯವಿಷಯಕಾಂಕ್ಷೆಯಿಂದ ಇಂದ್ರಿಯಂಗಳ್ ಎಂತು ಎಯ್ದಿ ಮನಮಂ ಆಶ್ರಯಿಸುಗುಂ ಅಂತು ಅಯನಯಪರರ್ ಅಯ್ವರುಂ ಆಶ್ರಯಿಸಿರ್ದರ್ ವಿಷಯಕಾಂಕ್ಷೆಯಿಂ ಮುರರಿಪುವಂ: **ಪಂಪಭಾ,** ೯. ೧೩)

ಅಯಶಸ್ಕೀರ್ತಿ – [ನಾ] [ಜೈನ] ಎಪ್ಪತ್ತೆರಡು ಪ್ರಕೃತಿಗಳಲ್ಲಿ ಅಪಕೀರ್ತಿ ಎಂಬ ಪ್ರಕೃತಿ ಅಥವಾ ಕರ್ಮ (ಶುಭಾಶುಭ ಸುಸ್ವರ ದುಸ್ವರ ಸುಭಗ ದುರ್ಭಗ ಪ್ರತ್ಯೇಕ ಶರೀರ ಅಯಶಸ್ಕೀರ್ತಿ ಅನಾದೇಯ .. .. ದ್ವಿಸಪ್ತತಿ ಪ್ರಕೃತಿಗಳಂ: **ಆದಿಪು,** ೧೬. ೪೯ ವ)

ಅಯಸ – [ನಾ] [ಅಯಶ] ಸೆಟೆದಿರುವಿಕೆ (ಅಯಸಂ ನಮಗುೞಿದು ಬೇಗಮೆೞಗದೊಡುಱುಗುಂ: **ಆದಿಪು,** ೧೨. ೧೦೮)

ಅಯಸ್ಕಾಂತ – [ನಾ] ಸೂಜಿಗಲ್ಲು (ತಮ್ಮ ಮೆಯ್ಯೊಳ್ ಉಡಿದ ಅಂಬುಗಳುಮಂ ಎಲ್ವುಂ ನಟ್ಟುಡಿದ ಬಾಳ ಕಕ್ಕಡೆಯುಡಿಗಳುಮಂ ಅಯಸ್ಕಾಂತಮಂ ತೋಱಿ ತೆಗೆಯಿಸುತ್ತುಂ: **ಪಂಪಭಾ,** ೧೧, ೨ ವ)

ಅಯುತ – [ನಾ] ಹತ್ತು ಸಾವಿರ (ಅಯುತಪ್ರಮಿತಸಾಮಾನಿಕ ಸುರಾನೀಕನುಂ: **ಆದಿಪು,** ೬. ೧೩ ವ)

ಅಯೋಗಕೇವಳಿ – [ನಾ] [ಜೈನ] ಮನೋವಾಕ್ಕಾಯಗಳ ಚಾಂಚಲ್ಯವಿಲ್ಲದವನು, ಹದಿನಾಲ್ಕನೆಯ ಗುಣಸ್ಥಾನವನ್ನು ಸೇರಿದವನು (ವೃಷಭನಾಥಂ ಸ್ವಸ್ಥಂ ಅಯೋಗಕೇವಳಿ ಕೇವಳಿಪ್ರದೇಶನಿರ್ಜರೆಯಂ ಮಾಡುತ್ತುಂ: **ಆದಿಪು,** ೧೬. ೪೯ ವ)

ಅಯೋಗಗುಣಸ್ಥಾನ – [ನಾ] [ಜೈನ] ಹದಿನಾಲ್ಕನೆಯ ಗುಣಸ್ಥಾನ (ಪಂಚಹ್ರಸ್ವಾಕ್ಷರೋಚ್ಚಾರಣ ಮಾತ್ರ ಕಾಲಪ್ರಮಿತಾಯೋಗ ಗುಣಸ್ಥಾನಸ್ಥಿತಂ: **ಆದಿಪು,** ೧೬. ೪೯ವ)

ಅಯೋಗವಾಹಚತುಷ್ಕ – [ನಾ] ಬಿಂದು, ವಿಸರ್ಗ, ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯ ಎಂಬ ನಾಲ್ಕು ವರ್ಣಗಳು (ಅಂತು ಅಕಾರಾದಿ ಹಕಾರಾಂತ ಸ್ವರವ್ಯಂಜನ ಭೇದಭಿನ್ನ ಶುದ್ಧಾಕ್ಷರಂಗಳುಮಂ ಆಯೋಗವಾಹಕ ಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಹ್ಮಿಗೆ ದಕ್ಷಿಣಹಸ್ತದೊಳ್ ಉಪದೇಶಂಗೆಯ್ದು: **ಆದಿಪು,** ೮. ೫೯ ವ)

ಅಯೋಧ್ಯ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಜೀವರತ್ನಗಳಲ್ಲೊಂದಾದ ಸೇನಾನಿರತ್ನದ ಹೆಸರು (ಮ್ಲೇಚ್ಛರಾಜ ಸೇನಾಪತಿಚ್ಛೃದ ಮದಾವಲೇಪಪರಿಲೋಪ ವಿಳಾಸಿಯುಂ ಷಡ್ವಿಧಸೇನಾನಾಯಕ ಪರಾಯಣನುಮಪ್ಪ ಅಯೋಧ್ಯನೆಂಬ ಸೇನಾನಿರತ್ನಮುಂ: **ಆದಿಪು,** ೧೧. ೩ ವ)

ಅಯೋಧ್ಯೆ – [ನಾ] ಜಯಿಸಲಸಾಧ್ಯವಾದುದು (ಅಂತು ಸಮೆದ ಪುರಕ್ಕೆ ಅರಾತಿನಿಕರಕ್ಕೆ ಅಯೋಧ್ಯೆಯಪ್ಪುದಱಿಂದೆ

ಅಯೋಧ್ಯೆಯುಂ ಅನೇಕನಿಕೇತನಸಮನ್ವಿತಮಪ್ಪುದಱಿಂ ಸಾಕೇತಮುಂ: **ಆದಿಪು**, ೬. ೧೦೭ ವ)

ಅಯೋನಿಸಂಭವ – [ನಾ] ಅಯೋನಿಜ, ದ್ರೋಣ (ಅಭೇದ್ಯರುಂ ಅಸಾಧ್ಯರುಂ ಅಪ್ಪ ಅಯೋನಿಸಂಭವರೆ ಹೇಳಾಸಾಧ್ಯರಾದರ್: **ಪಂಪಭಾ**, ೧೩. ೨೧ ವ)

ಅಯ್ದನೆಯ ಜಲಧಿ – [ನಾ] ಐದನೆಯ ಸಮುದ್ರ, ಕ್ಷೀರಸಮುದ್ರ (ಅಯ್ದನೆಯ ಜಲಧಿವರಂ ಇರದೆಯ್ದುವ ಮೊಗೆವಂತೆ ಮೊಗೆದುಂ ಓರೊರ್ಬರ ಕೈಗೆಯ್ದಿಸುವ ಬೇಗಮುಂ: **ಆದಿಪು**, ೭. ೮೩)

ಅಯ್ದರಲಂಬು – [ನಾ] [ಜೈನ] ಕಾಮನ ಐದು ಬಾಣಗಳು: ಮನೋಮಥನ ಮದನ ಮೋಹನ ಸಂತಾಪನ ವಶೀಕರಣ (ಮನೋಮಥನ ಮದನ ಮೋಹನ ಸಂತಾಪನ ವಶೀಕರಣಂಗಳೆಂಬ ಕಾಮದೇವಂ ಅಯ್ದು ಅರಲಂಬಿಂ ಶಕ್ತಿಗಳುಮಂ ಒಂದುಮಾಡಿ ಲೋಕಮೆಲ್ಲಮಂ ಮರುಳ್ಮಾಡಲೆಂದು ಪೆಣ್ಮಾಡಿದಿನಕ್ಕುಂ: **ಪಂಪಭಾ**, ೪. ೭೫ ವ)

ಅಯ್ದು – [ನಾ] ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಜ್ಞಾನವನ್ನುಂಟುಮಾಡುವ ಕಿವಿ ಚರ್ಮ ಕಣ್ಣು ನಾಲಿಗೆ ಮತ್ತು ಮೂಗು ಎಂಬ ಐದು ಜ್ಞಾನೇಂದ್ರಿಯಗಳು (ಪರಿಕಿಪುದು ಒಂದಱಿಂದೆ ಎರಡಂ ಓತುಕೊಳ್ವುದು ಮೂಱ್ಱಿಂದೆ ನಾಲ್ಕರಿದಱಿದು ಅಯ್ದಱಿಂದೆ ನೆಱೆ ಕಲ್ವುದು ನಿರ್ಣಯಂ ಆಱ್ಱೊಳ್ ಪರಿಣತನಪ್ಪುದು ಏೞಱೊಳಂ ಒಂದದೆ ನಿಲ್ವುದು: **ಪಂಪಭಾ**, ೧೩. ೬೬)

ಅಯ್ದು ತೆಱದ ಮಂತ್ರ – [ನಾ] ಕಾರ್ಯೋದ್ಯೋಗೋಪಾಯ, ಪುರುಷದ್ರವ್ಯಸಂಪತ್ತಿ, ದೇಶಕಾಲಪರಿಜ್ಞಾನ, ವಿಘ್ನಪ್ರತೀಕಾರ ಮತ್ತು ಕಾರ್ಯಸಿದ್ಧಿ ಎಂಬ ಐದು ಮಂತ್ರಗಳು (ಪದಿನೆಂಟು ಧರ್ಮಶಾಸ್ತ್ರಂಗಳೊಳಂ, ನಾಲ್ಕುವೇದಂಗಳೊಳಂ ಆಱಂಗದೊಳಂ ಅಯ್ದು ತೆಱದ ಮಂತ್ರಂಗಳೊಳಂ: **ಪಂಪಭಾ**, ೨. ೩೪ ವ)

ಅಯ್ದುಸಮಿತಿ – [ನಾ] [ಜೈನ] ಮುನಿಗಳು ಆಚರಿಸಬೇಕಾದ ಈರ್ಯಾ, ಭಾಷಾ, ಏಷಣಾ, ಆದಾನನಿಕ್ಷೇಪಣ, ಉತ್ಸರ್ಗ ಎಂಬ ಐದು ವ್ರತರೂಪದ ಪ್ರತಿಜ್ಞೆ (ನಡೆವ ನುಡಿವ ಉಣ್ಬ ಕೊಳ್ವ ಇಡುವ ಎಡೆಯೊಳ್ ತಾಂ ಕಾಯಮಲಮನುಗುಳ್ವೆಡೆಯೊಳ್ ಎಡಂಬಡಂ ಎನಿಸದೆ ಓವಿ ಜೀವಮನಡಕಂಬೆರಸು ಅಯ್ದುಸಮಿತಿಯೊಳ್ ಮುನಿ ನೆಗಟ್ದಂ: **ಆದಿಪು**, ೬. ೨೮)

ಅಯ್ದೆಮಿನುಗು – [ನಾ] ತಾಳಿಬೊಟ್ಟು, ಮಾಂಗಲ್ಯ (ವರುಣನ ಮಕರಮುಂ ವರುಣಾನಿಯ ಕೊರಲೊಳ್ ಅಯ್ದೆಮಿನುಗುಂ ಉೞಿಯೆ ಉೞಿದ ವಸ್ತುಗಳೆಲ್ಲಮಂ ತಂದು ಮುಂದಿಟ್ಟು: **ಪಂಪಭಾ**, ೬. ೩೨ ವ)

ಅಯ್ದೇಸು – [ನಾ] ಬಾಣಪ್ರಯೋಗದ ಐದು ಕ್ರಮಗಳು: ಪಾತ, ಲಕ್ಷ್ಯ, ಶೀಘ್ರ, ಘಾತ ಮತ್ತು ಬಹುವೇಗ (ಪಾತಂ ಲಕ್ಷ್ಯಂ ಶೀಘ್ರಂ ಘಾತಂ ಬಹುವೇಗಮೆಂಬಿವಯ್ದೇಸಿನೊಳ್ ಅಂತೀತನ ದೊರೆಯಿಲ್ಲೆನಿಸಿದುದಾತನ ಬಿಲ್ಬಲ್ಮೆ ಸುರಿನಂಬರತಲದೊಳ್: **ಪಂಪಭಾ**, ೧೨. ೧೮೫)

ಅಯ್ನೂರ್ವರ್ – [ನಾ] ಐದು ನೂರು ಮಂದಿ (ತಪಶ್ರೀಯಂ ಕೈಕೊಳಲ್ಬಗೆದು ಸಾಸಿರ್ವರ್ ಅರಸುಮಕ್ಕಳುಂ ಅಯ್ನೂರ್ವರ್ ಅರಸಿಯರುಂ ಬೆರಸು ಗುಣಧರ ಕೇವಳಿಗಳ ಪಾದಮೂಲದೊಳ್: **ಆದಿಪು**, ೧. ೮೦ ವ)

ಅಯ್ಯ – [ನಾ] ತಂದೆ, (ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ: **ಪಂಪಭಾ**, ೧. ೭೦)

ಅಯ್ವರ್ – [ನಾ] ಐದು ಮಂದಿ (ಈ ಅಯ್ದು ಮಂತ್ರಕ್ಕಯ್ವರ್ಮಕ್ಕಳಂ ನಿನ್ನ ಬಗೆಗೆ ಬಂದವರಂ ಆಹ್ವಾನಂಗೆಯ್ಯಲ್ ಅವರ ಪೋಲ್ವೆಯ ಮಕ್ಕಳಂ ಪಡೆವೆ: **ಪಂಪಭಾ**, ೧. ೧೧೮ ವ)

ಅಯ್ಸಾಸಿರ್ವರ್ – ಐದು ಸಾವಿರ ಜನ (ಸಾಸಿರ್ವರ್ ವನಿತೆಯರ್ ಅಯ್ಸಾಸಿರ್ವರ್ ಪ್ರಿಯತನೂಜರ್: **ಆದಿಪು**, ೬. ೫)

ಅರಗಿಳಿ – [ನಾ] ಅರಗಿಣಿ, ಶ್ರೇಷ್ಠವಾದ ಗಿಳಿ (ಕೋಗಿಲೆಯಕ್ಕೆ ಎಲರಕ್ಕೆ ತುಂಬಿಯಕ್ಕೆ ಅರಗಿಳಿಯಕ್ಕೆ ಬಂದೊಡಂ ಒಱಲ್ದೆರ್ದೆಯಾಱುವರ್: **ಆದಿಪು**, ೩. ೮೬); [ನಾ] ಬುದ್ಧಿವಂತ ಗಿಳಿ (ಮುನಿಕುಮಾರರೋದುವ ವೇದವೇದಾಂಗಂಗಳಂ ತಪ್ಪುವಿಡಿದು ಜಡಿದು ಬಗ್ಗಿಸುವ ಪದುಮರಾಗದ ಬಣ್ಣದರಳಗಿಳಿಗಳುಮಂ: **ಪಂಪಭಾ**, ೧. ೧೧೫ ವ)

ಅರಗು – [ನಾ] ಮರದ ಮೇಲಿನ ಮೇಣ (ಅರಗು ಮೊದಲಾಗೆ ಘೃತ ಸಜ್ಜರಸಂ ಬೆಲ್ಲಂ ಸಣಂಬೆಂಬಿವಱಿಂ ವಿಸ್ತರಿಸಿ: **ಪಂಪಭಾ**, ೩. ೩)

ಅರಣಿ – [ನಾ] ಹೋಮದಲ್ಲಿ ಹವಿಸ್ಸನ್ನು ನೀಡಲು ಅಗ್ನಿಯನ್ನು ಉತ್ಪತ್ತಿ ಮಾಡುವ ಕಡೆಗೋಲು (ವಿಪ್ರರ್ ತೆರಳ್ದೋಡೆ ತಾಪಸರಂ ಬೆರ್ಚಿಸಿ ತೂಳ್ದಿ ಬೇಳ್ವ ಅರಣಿಯಂ ಕೊಂಡು: **ಪಂಪಭಾ**, ೮. ೩೭)

ಅರಣ್ಯ – [ನಾ] ಕಾಡು (ಎರಲೆಗೆ ಪಾಡುವ ಗೋರಿಯಂ ಅರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ: **ಆದಿಪು**, ೧೪. ೮೦)

ಅರಣ್ಯರುದಿತ – [ನಾ] ಅರಣ್ಯರೋದನ, ನಿರರ್ಥಕ (ಮೂರ್ಖಜಡಜನಾರಣ್ಯದೊಳಿಂ ಪೋಗಡಿಸಿದ ಕವಿಶಬ್ದಮದು ಏಗೆಯ್ದುಂ ಅರಣ್ಯರುದಿತಮದು ಬಗೆವಾಗಳ್: **ಆದಿಪು**, ೧. ೨೩)

ಅರತಿ – [ನಾ] ಚಾರಿತ್ರ ಮೋಹನೀಯಕರ್ಮದ ಪ್ರಕೃತಿಗಳಲ್ಲಿನ ಒಂಬತ್ತು ನೋಕಷಾಯಗಳಲ್ಲಿ ಒಂದು; ಅರುಚಿಯನ್ನುಂಟುಮಾಡುವಂಥದು (ಕ್ರಮಕ್ರಮದೊಳೆ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ ಪುರಾತನ ಸತ್‌ಕರ್ಮದೊಡನೆ ಹಾಸ್ಯರತ್ಯರತಿಶೋಕಭಯಜುಗುಪ್ಸಾಭಿಧಾನ ನೋಕಷಾಯ ಷಟ್ಕಮುಮಂ ಘಾತಿಸಿ: **ಆದಿಪು**, ೧೦. ೧೪ ವ)

ಅರದ – [ನಾ] ತೇರು, ರಥ (ಮಾಣದೆ ಚೋದಿಸು ಬೇಗಮತ್ತ ಅರದಮನೆಂದು ಭೋರ್ಗರೆಯೆ ಬಂದನರಾತಿಗೆ ಮಿೞು ಬರ್ಪವೋಲ್: **ಪಂಪಭಾ**, ೧೧. ೧೨) ['ಬೇಗಮತ್ತರದಮನೆಂದು' ಎಂಬುದಕ್ಕೆ ಇರುವ ಪಾಠಾಂತರ 'ಬೇಗಮತ್ತ ರಥಮನೆಂದು' ಎಂಬುದು]

ಅರಬೊಜಂಗ – [ನಾ] ರಾಜವಿಟ (ಚೆಲ್ವನಾಯ್ತು ಅರಬೊಜಂಗರ ಲೀಲೆ ರಾಜಲೀಲೆಯಿಂ: **ಪಂಪಭಾ,** ೪. ೮೭)

ಅರರೀಪುಟ – [ನಾ] ಬಾಗಿಲ ರೆಕ್ಕೆ, ಕದ (ಅರರೀಪುಟಮೆರಡುಂ ಜೀರ್ಗರೆದು ಮರಲ್ದಂದಮೆಂತುಟಾಯ್ತೆನ್ನ ಭಯಂಕರ ದಂಡರತ್ನಹತಿಯಿಂ: **ಆದಿಪು,** ೧೩. ೩೭)

ಅರಲ್ – [ಕ್ರಿ] ಹೂ ಅರಳು (ಜಿನುಗುವ ತುಂಬಿ ತುಂಬಿಯೊಳ್ ಅರಲ್ದರಲೆಂಬಿವಱಿಂ ಬಸಂತರಾಜನ ಮನೆಯಂತೆ ಕಣ್ಗೆಸೆದು ತೋಱುಗುಮಲ್ಲಿಯ ನಂದನಾಳಿಗಳ್: **ಆದಿಪು,** ೧. ೬೫); [ನಾ] ಹೂ (ಸುರಿವ ಸುರಯಿಯ ಅರಲ ಮುಗುಳ್ಗೆ ಮೊಗಸಿದಳಿಕುಳಂಗಳಿಂ ತೊದಲ್ವ ಶಿಶುಶುಕಂಗಳಿಂ: **ಪಂಪಭಾ,** ೧. ೫೮)

ಅರಲಂಬು – [ನಾ] ಹೂಗಣೆ, ಹೂಬಾಣ (ಉಣ್ಮಿಪೊಣ್ಮಿ ಕಣ್ಮಲರ್ಗಳಿಂ ಎಚ್ಚುಪಾಯ್ದುವು ಅರಲಂಬುಗಳಂತೆ ವಿಲೋಚನಾಂಬುಗಳ್: **ಪಂಪಭಾ,** ೪. ೧೦೮)

ಅರಲೆ – [ನಾ] ಕಾಳು ತೆಗೆದ ಹತ್ತಿ, ಅರಳೆ (ತನು ಪಂಜಿವೊಲ್ ಬೆಳತಿರ್ಪಿನೆಗಂ ಹಿಮಂ ಅರಲೆವೋಲ್ ಪುದಿದಿರೆಯುಂ: **ಆದಿಪು.** ೬. ೩೩)

ಅರವಾವು – [ನಾ] [ಅರಸು+ಪಾವು] ಹೆಬ್ಬಾವು (ಬಿಸಿಲ್ಕೆಕಿಲ್ ಪಸಿವುಗ್ರದಂಶಮಶಕವ್ಯಾಬಾಧೆ ಪೊಯ್ವ ಸಿಡಿಲ್ ತಿಂಬ ಅರವಾವು ಪುಲಿಯೆಂಬೀ ಬಾಧೆಯೊಳ್: **ಆದಿಪು,** ೬. ೩೪)

ಅರವಿಂದಪ್ರಿಯಸಖ – [ನಾ] ತಾವರೆಗೆ ಪ್ರಿಯವಾದ ಸಂಗಾತಿ, ಸೂರ್ಯ (ಕೊಂತಿ ಹರಿಯ ಮತದಿಂ ಕಾಯಲ್ಕೊಡರಿಸಿ ಬಂದಳ್ ಸುತರಂ ಕುಡದಿರ್ ಪುರಿಗಣೆಯಂ ಎನಿತು ಲಲ್ಲೈಸಿದೊಡಂ: **ಪಂಪಭಾ,** ೯. ೭೮)

ಅರವಿಂದಬಾಂಧವ – [ನಾ] ಕಮಲದ ನಂಟ, ಸೂರ್ಯ (ನಭೋಭಾಗದಿಂ ಭೂಮಿಭಾಗಕ್ಕಿೞಿದು ತನ್ನ ಮುಂದೆ ನಿಂದ ಅರವಿಂದಬಾಂಧವನಂ ನೋಡಿ: **ಪಂಪಭಾ,** ೧. ೯೧ ವ)

ಅರವಿಂದಾಲಯೆ – [ನಾ] ಕಮಲವನ್ನು [ತನ್ನ] ಮನೆಯಾಗುಳ್ಳವಳು (ನಡೆ ಕುರುಕ್ಷ್ಮಾಪಾಳನಿರ್ದಲ್ಲಿಗೆ ಎಂದು ಅರವಿಂದಾಲಯೆಯಂ ಮಗುೞ್ಚಿದಂ ಆದೇನಾ ದ್ರೌಣಿ ಶೌರ್ಯಾರ್ಥಿಯೋ: **ಪಂಪಭಾ,** ೧೩. ೧೦೨)

ಅರವಿಂದಿನಿ – [ನಾ] ಸರೋವರ (ಅಂತು ಭಗವದಾಸ್ಥಾನ ಅರವಿಂದಿನಿಯಂ ರಾಜಹಂಸನಂತಳಂಕರಿಸುತ್ತುಂ ಬಂದು: **ಆದಿಪು,** ೧೪. ೧೩೬ ವ)

ಅರವಿಂದೋದ್ಭವ – [ನಾ] ಕಮಲದಸಲ್ಲಿ ಹುಟ್ಟಿದವನು, ಬ್ರಹ್ಮ (ತಿರಿಪಿದೊಡನೆ ಎಳೆ ತಿಱ್ಱನೆ ತಿರಿದುದು ತಿರುವಾಯೊಳಿಡೆ ಸುರರ್ ಮೊಱೆಯಿಟ್ಟರ್ ಭರದೆ ತೆಗೆನೆಱೆಯೆ ಮೆಯ್ದೆಗೆದರ್ ಅರವಿಂದೋದ್ಭವನಿಂ ಒಗೆದುದು ಆ ಬ್ರಹ್ಮಾಂಡಂ: **ಪಂಪಭಾ,** ೧೨. ೧೯೨)

ಅರವುರನೆ – [ಕ್ರಿವಿ] ತ್ವರಿತವಾಗಿ ಕರಕಾಂಬುವಂ ತಳಿದು ಅರವುರನೆ ಎೞ್ಚರಿಸೆ ಮೂರ್ಛೆ ತಿಳಿದು ಕುಮಾರಂ: **ಆದಿಪು,** ೪. ೧೭)

ಅರಸಾಳ್ – [ನಾ] [ಅರಸು+ಆಳ್] ರಾಜಭಟ (ಮುನ್ನೆ ತನ್ನ ಮಾಡಿದ ನಾಟಿವಾಸಗೆಗಳಂ ಅರಸಾಳಂತೆ ಕಣ್ಣಱಿದು ಮೆಟ್ಟಿ ಮಟ್ಟಂ ಅಱಿದು ಇಕ್ಕುವಾಗಳ್: **ಪಂಪಭಾ,** ೬. ೭೧ ವ)

ಅರಸಾಳ್ತನ – [ನಾ] ಅರಸಾಳಿನ ಕರ್ತವ್ಯ, ಅಧಿಕಾರ (ನಿನಗೆ ಅರಸಾಳ್ತನಂ ನುಡಿವ ಬೀರರ ಬೀರದಳುರ್ಕೆ ವಿಕ್ರಮಾರ್ಜುನನೊಳದೇಕೆ ಸಲ್ಲದು: **ಪಂಪಭಾ,** ೧೧. ೧೩೮)

ಅರಸಿ – [ನಾ] ರಾಣಿ (ತಪಶ್ರೀಯಂ ಕೈಕೊಳಲ್ಬಗೆದು ಸಾಸಿರ್ವರ್ ಅರಸುಮಕ್ಕಳುಂ ಅಯ್ನೂರ್ವರ್ ಅರಸಿಯರುಂ ಬೆರಸು ಗುಣಧರ ಕೇವಳಿಗಳ ಪಾದಮೂಲದೊಳ್: **ಆದಿಪು,** ೧. ೮೦ ವ)

ಅರಸಿಕೆ – [ನಾ] ರಾಜತನ (ಕರುಣದಿಂ ಎಮ್ಮಂ ತಾಯ್ವೋಲ್ ತರುವಲಿಗಳಂ ಎಯ್ದೆ ನಡೆಪಿದಜ್ಜರ್ ನೀಂ ಇಂತಿರೆಯುಂ ನೋಡಿದೆವೇನೆಮಗೆ ಅರಸಿಕೆಯೋ ಪೇೞಿಮೆಂದು ಶೋಕಂಗೆಯ್ದರ್: **ಪಂಪಭಾ,** ೧೧. ೪೮)

ಅರಸು – [ನಾ] ಅರಸುತನ (ಭರತಂಗೆಱಗುವರೆಂಬಿದೆ ಪರಿಭವಂ ಎಮಗಿಂತು ಮಾನಭಂಗಂ ಬರೆ ಬರ್ಪರಸು ಏವುದು: **ಆದಿಪು,** ೧೪. ೩೯); [ನಾ] ರಾಜ (ಅರಸುಗಳೆಲ್ಲಂ ಬಾಯ್ಕೇಳ್ದರೆಂದುಂ ಆಶಾಂತರಂಗಳಳ್ಕಿದುವೆಂದುಂ ಧರಣೀತಳಂ ಕೀರ್ತಿಸೆ: **ಆದಿಪು,** ೧೪. ೪೯); [ನಾ] ರಾಜವಿನೋದ, ದೊಡ್ಡವಿನೋದ (ಸೂಚಮನುರ್ಚಿ ಪುಲ್ಲೆಗಾಟಿಸಿ ಮಲೆತರ್ಪರಲೆಯ ಸೋಲಮಂ ಅಟ್ಟೆಯೊಳ್ ಅರಿಕೇಸರಿ ನಿಂದು ನೋಟ್ಟುದೊಂದು ಅರಸಲ್ತೇ: **ಪಂಪಭಾ,** ೫. ೪೪); [ನಾ] ಶ್ರೇಷ್ಠ (ಬೇಂಟೆಯೆ ಬಿನದಂಗಳ ಅರಸಲ್ತೇ; **ಪಂಪಭಾ,** ೫. ೪೭)

ಅರಸುಗಿಡು – [ಕ್ರಿ] ರಾಜತ್ವ ಕೈತಪ್ಪು (ತಮ್ಮ ಅರಸುಗೆಟ್ಟು ಕಟಿಲ್ದು ಎರ್ದೆಗೆಟ್ಟು ಅರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಿಂ: **ಪಂಪಭಾ,** ೮. ೮೫)

ಅರಸುಗೆಯ್ – [ಕ್ರಿ] ರಾಜ್ಯಭಾರ ಮಾಡು, ಆಳು (ತನ್ನ ಒಡನಾಡಿಯಪ್ಪ ಕೆಳೆಯಂ ದ್ರುಪದಂ ಛತ್ರಾವತಿಯೊಳ್ ಅರಸುಗೆಯ್ದಪನೆಂದು ಕೇಳ್ದು ಆ ಪೊೞಲ್ಗೆ ವಂದು: **ಪಂಪಭಾ,** ೨. ೪೬ ವ)

ಅರಸುಮಗ – [ನಾ] ದೊರೆಗುವರ (ಒಡನೆ ನೆರೆದರಸುಮಕ್ಕಳ ನಿಡುಗಣ್ಗಳ ಬಳಗಮೆಱಗೆ ತನ್ನಯ ಮೆಯ್ಯೊಳ್: **ಪಂಪಭಾ,** ೩. ೫೧); [ನಾ] ಕ್ಷತ್ರಿಯ (ಮುನ್ನೆ ಪರಶುರಾಮಂ ಈ ಲೋಕದೊಳುಳ್ಳ ಅರಸುಮಕ್ಕಳೆಲ್ಲರುಮಂ ಇರ್ಪತ್ತೊಂದು ಸೂಟ್ವರಂ ಪೇೞ ಪೆಸರಿಲ್ಲದಂತು ಕೊಂದು: **ಪಂಪಭಾ,** ೯. ೧೦೪ ವ)

ಅರಸುವಡೆ – [ನಾ] [ಅರಸು+ಪಡೆ] ರಾಜತ್ವವನ್ನು ಹೊಂದು, ಒಡೆಯನನ್ನು ಪಡೆ (ಪುರುಪರಮೇಶ್ವರನಿಳೆಗವತರಿಸಿದಂ ಇಂದು ಅರಸುವಡೆದೆವೆಂಬಂತೆ ವಲಂ ಪರಮಾನಂದ ಪರಂಪರೆ ದೊರೆಕೊಂಡತ್ತಿಂತು ಪಂಚಭೂತಂಗಳೊಳಂ: **ಆದಿಪು,** ೭. ೩೭)

ಅರಳೆ – [ನಾ] ಬೀಜ ತೆಗೆದ ಹತ್ತಿ (ಒಂದೆಡೆಯೊಳ್ ಒಟ್ಟಿರ್ದ ಅರಳೆಯಂ ಒಡನಳುರ್ವಂತು: **ಪಂಪಭಾ,** ೩. ೫)

ಅರಳೆಲೆ – [ನಾ] ಅರಳಿ ಎಲೆಯಾಕಾರದ ಒಂದು ಆಭರಣ (ನೊಸಲೊಳ್ ಒಡಂಬಡುವ ಅರಳೆಲೆ ಇವಱಿಂ ಚೆಲ್ವಿಡಿದಿರ್ದುದು ಧರ್ಮಾತ್ಮಜನಾ: **ಪಂಪಭಾ,** ೨. ೪)

ಅರಾತಿ – [ನಾ] ಶತ್ರು (ಎಮಗಂ ಅರಾತಿಗಳೊಳರೆಂಬಿನಿತು ಪರಾಭವಮನೀಗಳೀ ಚಕ್ರಂ ಸೂಚನೆಗೈದುದು: **ಆದಿಪು,** ೧೪. ೯)

ಅರಾತಿಕುಲ – [ನಾ] ಶತ್ರುಸಮೂಹ (ಬಾಹುಬಲೀಶನೇೞೆಸಿದನಾ ನಮ್ರಾಟನೀನಾದಸಂಜನಿತ ಅರಾತಿಕುಲ ಅಂಗನಾಜನ ಮನಸ್ಸಂತಾಪಮಂ ಚಾಪಮಂ: **ಆದಿಪು,** ೧೪. ೯೯)

ಅರಾತಿಕುಳಕಮಳಹಿಮಕರ – [ನಾ] ʼತ್ರುಸಂತತಿ ಎಂಬ ತಾವರೆಗೆ ಚಂದ್ರನಂತಿರುವವನು (ಭರತಕುಲಗಗನದಿನಕರಂ ಅರಾತಿಕುಳಕಮಳಹಿಮಕರಂ ಶಿಶು ತೇಜೋವಿರಚನೆಯುಂ ಕಾಂತಿಯುಂ ಆವರಿಸಿರೆ ಗರ್ಭೋದಯಾದ್ರಿಯಿಂದ ಉದಯಿಸಿದಂ: **ಪಂಪಭಾ**, ೧. ೧೪೫)

ಅರಾತಿಚಕ್ರ – [ನಾ] ಶತ್ರುಸಮೂಹ (ಪರಾಕ್ರಮಾಕ್ರಾಂತ ಅರಾತಿಚಕ್ರನುಂ ಸಾಧಿತದಿಕ್ಚಕ್ರನುಂ: **ಆದಿಪು,** ೩. ೨೯ ವ)

ಅರಾತಿನಿಕಾಯ – [ನಾ] ಶತ್ರುಸಮೂಹ (ವನಧಿದ್ವೀಪಸಮೀಪವರ್ತಿ ವಸುಧಾಂತರ್ವರ್ತಿಯಾಗಿರ್ದ ಅರಾತಿನಿಕಾಯಕ್ಕಿದು ಯಾಮಿನೀಸಮುದಿತಂ: **ಆದಿಪು;** ೧೪. ೯೯)

ಅರಿ – [ಕ್ರಿ] ಕತ್ತರಿಸು (ಅಲ್ಲಾಡದೆ ಕೊಳ್ ಎಂದು ಅರಿದು ಈಡಾಡಿದಂ ಇಂದ್ರಂಗೆ ಕವಚಮಂ ರಾಧೇಯಂ: **ಪಂಪಭಾ**, ೧. ೧೦೨)

ಅರಿಕಾಂತಾಳಿಕಫಳಕ ತಿಳಕಹರಂ – [ನಾ] ಶತ್ರುಗಳ ಸ್ತ್ರೀಯರ ಹಣೆಯೆಂಬ ಹಲಗೆಯ [ಮೇಲಿನ] ತಿಲಕವನ್ನು ಅಳಿಸುವವನು (ಅಂತಾ ಫಣಿಕಾಂತೆಗಂ ಅರಿಕಾಂತಾಳಿಕ ಫಳಕತಿಳಕಹರನೆನಿಪ ಅರಿಗಂಗಂ ತನಯಂ ಅಧಿಕತೇಜೋವಂತಂ ಇಳಾವಂತಂ ಇಂದು ಮಂಡಳಕಾಂತಂ: **ಪಂಪಭಾ**, ೪. ೧೮)

ಅರಿಕೇಸರಿ – [ನಾ] ಶತ್ರುಗಳಿಗೆ ಸಿಂಹದಂತಿರುವವನು, ಪಂಪನ ಆಶ್ರಯದಾತ (ಉದಾತ್ತನಾರಾಯಣಂ ಎಮಗೀಗೆ ಅರಿಕೇಸರಿ ಸೌಖ್ಯಕೋಟಿಯಂ: **ಪಂಪಭಾ**, ೧. ೧)

ಅರಿದುಕೊಳ್ – [ಕ್ರಿ] ಕತ್ತರಿಸಿಕೊ (ಬೇಡಿದುದನರಿದುಕೊಳ್ಳೆನೆ ಬೇಡಿದುದಂ ಮುಟ್ಟಲಾಗದೆನಗೆನೆ ನೆಗಟ್ದಿಲ್ಲಾಡದೆ ಕೊಳ್ಳೆಂದರಿದೀಡಾಡಿದನಿಂದ್ರಂಗೆ ಕವಚಮಂ ರಾಧೇಯಂ: **ಪಂಪಭಾ,** ೧, ೧೦೧)

ಅರಿಗ – [ನಾ] ಅರ್ಜುನ (ಅರಿಗನ ಬಿಲ್ಬಲ್ಮೆಯೊಳ್ ಅಂದೆರಡಿಲ್ಲದೆ ಬಗೆದ ಮುಳಿಸುಂ ಏವಮುಂ ಎರ್ದೆಯೊಳ್ ಬರೆದಿರೆ ತೋೞೆದನಾಯತ ಕರಪರಿಘಂ ಕರ್ಣಂ ಆತ್ಮಶರಪರಿಣತಿಯಂ: **ಪಂಪಭಾ**, ೨. ೭೯)

ಅರಿಗಂಬರಂ – [ನಾ] ಅರಿಕೇಸರಿಯ ಮಟ್ಟಕ್ಕೆ (ಗಜಂಗಳ ಆಟಂದಱಿಸಿ ಕೊಲುತಿರ್ಪುವು ಎಂಬೀ ಕಱುಪಿನೊಳ್ ಅರಿಗಂಬಂರಂ ಗಜಪ್ರಿಯರೊಳರೇ: **ಪಂಪಭಾ**, ೫. ೫೦)

ಅರಿದು – [ಗು] ಕಷ್ಟಸಾಧ್ಯ (ಬೇಗೆ ಕರಂ ಅರಿದು ಎರಡುಂ ಮೃಗಂಗಳುಂ ತಣ್ಬುಟಿಲೊಳ್ ನೆರೆದೊಡವಂದುವು: **ಪಂಪಭಾ,** ೫. ೩೯) ['ಕರಮಱಿದು' ಎಂಬ ಭಾಗವನ್ನು 'ಕರಮರಿದು' ಎಂದು ಪರಿಷ್ಕರಿಸಿದೆ]

ಅರಿನರಪ – [ನಾ] ಶತ್ರುರಾಜ (ಅರಿಕೇಸರಿಗೆ ಆತ್ಮಜರ್ ಅರಿನೃಪಶಿರೋದಳನ ಪರಿಣತೋಗ್ರಾಸಿ ಭಯಂಕರರ್: **ಪಂಪಭಾ**, ೧. ೨೨)

ಅರಿಗ – [ನಾ] ಅರಿಕೇಸರಿ ಎಂಬ ರಾಜ (ಸರಸ್ವತಿ .. .. ಈಗೆ ಅರಿಗಂಗೆ ವಿಶುದ್ಧಬುದ್ಧಿಯಂ: **ಪಂಪಭಾ,** ೧. ೫)

ಅರಿದು – [ಅ] ಅಸಾಧ್ಯ (ದೇವರ ಭುಜವರ್ಗಕ್ಕೇನಾವುದುಂ ಅರಿದುಂಟೆ: **ಆದಿಪು,** ೧೨. ೭೩)

ಅರಿನರಪ – [ನಾ] ಶತ್ರು ರಾಜ (ಅರಿಕೇಸರಿಗಾತ್ಮಜರ್ ಅರಿನರಪ ಶಿರೋದಳನ ಪರಿಣತೋಗ್ರಾಸಿ ಭಯಂಕರ ಕರರ್: **ಪಂಪಭಾ,** ೧. ೨೨)

ಅರಿನಾರೀವೈಧವ್ಯದಿವ್ಯದೀಕ್ಷಾದಕ್ಷ – [ನಾ] ಶತ್ರುಗಳ ಹೆಂಡತಿಯರಿಗೆ ವಿಧವೆಯ ಪಟ್ಟವನ್ನು ಕಟ್ಟುವುದರಲ್ಲಿ ನಿಸ್ಸೀಮ (ಶ್ರೀರಮಣೀರಮಣಂಗೆ ಅರಿನಾರೀವೈಧವ್ಯ ದಿವ್ಯದೀಕ್ಷಾದಕ್ಷಂಗೆ ಆರ್ ಎಣೆ ಹರಿಗಂಗೆ: **ಪಂಪಭಾ**, ೭. ೧)

ಅರಿಭೂಪಾನೀಕಭಯಂಕರ – [ನಾ] ಶತ್ರು ರಾಜಸಮೂಹಕ್ಕೆ ಭಯವುಂಟುಮಾಡುವವನು (ಆಕಾಶಧ್ವನಿಯಂ ಉಱದೆ ಕುಡಿದು ಅರಿಭೂಪಾನೀಕಭಯಂಕರನುಂ ಗಡಂ ಏಕೆಂದಱೆಯೆಂ ಬಟಿಲ್ದು ಜೋಲ್ದಂ ಧರೆಯೊಳ್: **ಪಂಪಭಾ**, ೮. ೪೧)

ಅರಿಯ – [ನಾ] ಅಸಾಧ್ಯನಾದವನು (ಪಿರಿದು ಪೊಗಟೆಸಿದ ಪಾಡಿಸಿದ ಅರಿಯರಂ ಆನಲ್ಕೆ ಪಿರಿಯರಂ ಪೂಣಿಗರಂ ಬಿರುದರಂ ಅದಟಿನೊಳುಬ್ಬರಂ ಉರಿವರಂ ಆಯ್ದು ಅಱಿಸಿ ಕೊಂಡುವು ಅರಿಗನ ಕಣೆಗಳ್: **ಪಂಪಭಾ**, ೧೧. ೧೧೪)

ಅರಿಯದು – [ನಾ] ಅಸಾಧ್ಯವಾದದ್ದು (ಉಳ್ಳ ಓದುಗಳೊಳಗೆ ಎನಿತಱೆವುಳ್ಳರ್ಗಂ ತಿಳಿಪಲ್ ಅರಿಯದೆನಿಪ ಎಡೆಗಳುಮಂ ತೆಳ್ಳಿಗಿರೆ ತಿಳಿಪುಗುಂ ಬೆಸಗೊಳ್ಳ ಗುಣಾರ್ಣವನ ಲೆಕ್ಕಮಂ ಪೊಕ್ಕಮುಮಂ: **ಪಂಪಭಾ,** ೨. ೩೫)

ಅರುಚಿ – [ನಾ] ರುಚಿಯಿರದುದು, ನಿರಾಸಕ್ತಿ (ಮಾಂಸ ಮಧು ಮದ್ಯಸೇವನೆ ಹಿಂಸಾರುಚಿ ಪರಮಜಿನಮತಾರುಚಿ ಕುಲಟಾಸಂಸರ್ಗಂ ಎಂಬಿವಲ್ಲದೆ ಸಂಸಾರಭ್ರಮಣಕಾರಣಂ ಪೆಱವೊಳವೇ: **ಆದಿಪು**, ೫. ೮೦)

ಅರುಣ – [ನಾ] ಲೋಕಾಂತಿಕ ದೇವರಲ್ಲಿ ಒಂದು ಬಗೆ ಸಾರಸ್ವತ ಆದಿತ್ಯ ವಹ್ನಿ ಅರುಣ ... ದೇವರ್ ಬಂದು: **ಆದಿಪು**, ೯. ೬೦ ವ)

ಅರುಣಜಲ – [ನಾ] ಕೆಂಪು ದ್ರವ, ರಕ್ತ (ಮೂಕದಾನವನಂ ಆ ನೆವದೊಳೆ ಕೊಂದು ವರಾಹ ಅರುಣಜಲಧಾರಾ ಅರುಣಮಾಗಿರ್ದ ಆತ್ಮೀಯ ಬಾಣಮಂ: **ಪಂಪಭಾ**, ೮. ೧೬ ವ)

ಅರುಣಮಣಿ – [ನಾ] ಮಾಣಿಕ್ಯ (ಕೇರಳವಿಟೀಕಟೀ ಸೂತ್ರಾರುಣಮಣಿ ಮಲಯಯುವತಿಜಘನಕಾಂಚೀರತ್ನಂ ಸ್ತನಭರವಿನಮ್ರಗಣಿಕಾ ಸ್ತನತಟಹಾರಂ ಸರಸ್ವತೀಮಣಿಹಾರಂ: **ಆದಿಪು**, ೧. ೩೨)

ಅರುಣಸಲಿಲ – [ನಾ] ಕೆಂಪು ನೀರು, ರಕ್ತ (ಭಯಂಕರಶಿಂಶುಮಾರ ವಿಕಟದಂಷ್ಟ್ರಾ ಕ್ರಕಚಪಾಟ್ಯಮಾನ ನಾರಕನಿಕರ ರುಧಿರಚ್ಛಟ ಅಚ್ಛಾರುಣಿಸಲಿಲ ಹರಿಕಾನಿಕರಕರಾಳೆಯುಂ: **ಆದಿಪು**, ೫. ೮೭ ವ)

ಅರುಣಾಕೀರ್ಣ – [ನಾ] [ಅರುಣ+ಆಕಿರ್ಣ] ಕೆಂಬಣ್ಣದಿಂದ ಕೂಡಿದುದು (ಪೊಸೆದೊಡೆ ಪಾಲ್ಗಡಲಂ ಮಗುಟ್ದಿಸುರರ್ ಪೊಸೆದಲ್ಲಿ ಕಾಳಕೂಟಾಂಕುರಂ ಅಂದು

ಅಸದಳಮೊಗೆದಂತೊಗೆದುವು ಬಸಿಱಿಂ ನೂಱಿಸೊಂದು ಪಿಂಡಂ ಅರುಣಾಕೀರ್ಣಂ; **ಪಂಪಭಾ,** ೧. ೧೩೦)

ಅರೆ – [ಅ] ಒಂದು ಭಾವಸೂಚಕಾವ್ಯಯ (ಅರೆ ಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗೞ್ದಿಂ: **ಪಂಪಭಾ,** ೨. ೬೦); [ಕ್ರಿ] ತೇಯಿ (ಕೂರ್ಗಣೆಗಳಂ ತಱಿದೊಟ್ಟಿ ತೆರಳ್ಚಿ ತೂಳ್ದಿಕೊಂಡರೆದು ಮಗುೞ್ಚಿ ಸಣ್ಣಿಸಿದಂ ಆಂತ ಚತುರ್ವಲಮಂ ಗುಣಾರ್ಣವಂ: **ಪಂಪಭಾ,** ೧೧. ೧೪೭)

ಅರೆಗಟಿಗೆ – [ನಾ] ಅರ್ಧ ಗಳಿಗೆ, ಬಹು ಬೇಗ (ಅಲರ್ದರೆಗಟಿಗೆಯೆ ಜಾದಿಯ ಮಲೆಪುಂ ಮಲ್ಲಿಗೆಯ ಪೊಂಕಮುಂ ಬಟಿಕವಂ ಆರ್ ತಲೆಯೊಳ್ ತಾಳ್ದುವರ್: **ಆದಿಪು,** ೧೧. ೧೨೨)

ಅರೆಬರ್ – [ನಾ] ಕೆಲವರು (ಧರೆಯೊಳ್ ಸಲೆ ಪಾಷಂಡಿಗಳ್ ಅರೆಬರ್ ಪುಟ್ಟಿಯುಮಡಂಗುವರ್: **ಆದಿಪು,** ೧೫. ೨೯)

ಅರೆಮುಗುಳ್ – [ಕ್ರಿ] ಅರ್ಧ ಮುಚ್ಚಿಕೊ (ಅರೆಮುಗುಳ್ದ ರಕ್ತಾಂಭೋಜದಳ ವಿಳಾಸೋಪಹಾಸಿಗಳಪ್ಪ ಕಣ್ಗಳಂ: **ಪಂಪಭಾ,** ೧೩. ೬೩ ವ)

ಅರೆವೊತ್ತು – [ನಾ] [ಅರೆ+ಪೊತ್ತು] ಸ್ವಲ್ಪ ಹೊತ್ತಿಕೊ, ಉರಿ (ಅರೆವೊತ್ತಿ ತೊಟ್ಟ ತನ್ನಣವುರಿಯಲ್ಕೊಡರಿಸಿದೊಡೆ: **ಪಂಪಭಾ,** ೧೦. ೭೯)

ಅರೆವೊರೆಕ – [ನಾ] [ಅರೆ+ಪೊರೆಕ] ಅಸ್ತವ್ಯಸ್ತ (ಪೋಣ್ಮಿದ ಘರ್ಮಬಿಂದುಗಳಿಂ ನಾಂದು ಪುಚ್ಚಳಿದು ಅರೆವೊರೆಕನಾದ ಕುಂಕುಮಪತ್ರಭಂಗದ ಕೊರಗಿದ ನಗೆಮೊಗಂಗಳುಂ: **ಆದಿಪು,** ೧೧. ೭೦ ವ); [ಕ್ರಿ] ಅರ್ಧ ವ್ಯಾಪಿಸು (ಅಡೆವೊತ್ತದೆ ಕಿಱಿಕಿಱಿದನೆ ಸುಡದೆ ಇನಿಸು ಅರೆವೊರೆಕನಾಗದೆಯೆ ಸಸಿದಂದೊಂದೆಡೆಯೊಳಗೊಟ್ಟಿರ್ದ ಅರಳೆಯಂ ಒಡನಳುರ್ವಂತೆ ಅಳುರ್ದಂ ಅನಲಂ ಅರಗಿನ ಮನೆಯಂ: **ಪಂಪಭಾ,** ೩. ೫)

ಅರೆಸೀ – [ಕ್ರಿ] ಅರ್ಧ ಸುಡು (ಉರಿ ಮುಟ್ಟಿದರಳೆಯಂತೆ ಅಂಬರಂ ಉರಿದತ್ತು ಅಜನ ಪದ್ಮವಿಷ್ಟರದ ಎಸಳ್ ಅಂದು ಅರೆಸೀದುವು: **ಪಂಪಭಾ,** ೧೦. ೩೬)

ಅರ್ಕ – [ನಾ] ಸೂರ್ಯ (ಅರ್ಕಂ ಅಳುರ್ಕೆಗೆಟ್ಟು ನಭದಿಂ ತೂಳ್ದಂ ಸುರುಳ್ದಪ್ಪಿದಳ್ ಮೃಡನಂ ಗೌರಿ ಸಮಸ್ತಂ ಈ ತ್ರಿಭುವನಂ ಪಂಕೇಜಪತ್ರಾಂಬುವೋಲ್ ನಡುಗಿತ್ತು: **ಪಂಪಭಾ,** ೧೦. ೨೬)

ಅರ್ಕಪೂಜೆ – [ನಾ] [ಜೈನ] ಸೂರ್ಯಪೂಜೆ (ಎಂಟುಂ ತೆಱದ ಪೂಜೆಯುಮಂ ಅರ್ಕಪೂಜೆಯುಮಂ ಮನ್ನಿಸಿ: **ಆದಿಪು,** ೧೫. ೧೩ ವ)

ಅರ್ಗಳಾಕಾರ – [ನಾ] ಅಗುಳಿಯಂತೆ ದಂಡಾಕಾರದ (ಸಕಟೋದ್ವೃಷ್ಟವನೇಭ ತುಂಗಜರಠಸ್ಥೂಳ ಅರ್ಗಳಾಕಾರಮಾರ್ಗ ಕುಜಂ: **ಆದಿಪು.** ೧೩. ೫೫)

ಅರ್ಘ್ಯ – [ನಾ] ಕೈ ತೊಳೆಯುವ ನೀರು (ನಾಗಪುರಕ್ಕೆ ವರ್ಪ ಪರಶುರಾಮನ ಬರವಂ ಕೇಳ್ದು ಗಾಂಗೇಯಂ ಕೇಳ್ದಿದಿರ್ವಂದು ಕನಕರಜತಪಾತ್ರಂಗಳೊಳ್ ಅರ್ಘ್ಯಮಂ ಕೊಟ್ಟು ಪೊಡೆಮಟ್ಟು: **ಪಂಪಭಾ,** ೧. ೭೭ ವ); [ನಾ] ಗೌರವಪೂರ್ವಕವಾಗಿ ಕೊಡುವ ಅರ್ಘ್ಯತೀರ್ಥ (ಗಾಂಗೇಯನ ಮಾತಂ ಮನದೆಗೊಂಡು ಆನಂದಂಬೆರಸು ಅಂತೆ ಗೆಯ್ವೆನೆಂದು ಪುರುಷೋತ್ತಮಂಗೆ ಅರ್ಘ್ಯಮೆತ್ತಿದಾಗಳ್: **ಪಂಪಭಾ,** ೬. ೪೧ ವ); [ನಾ] ಸಂಧ್ಯಾವಂದನೆಯಲ್ಲಿ ಸೂರ್ಯನಿಗೆ ಅರ್ಪಿಸುವ ಮಂತ್ರಪೂರ್ವಕ ನೀರು (ಮಿಂದು ಕನಕಪಾತ್ರದೊಳ್ ತೆಕ್ಕನೆ ತೀವಿದ ಕನಕಕಮಳಂಗಳಿಂದ ಆದಿತ್ಯತೇಜಂ ಆದಿತ್ಯಂಗೆ ಅರ್ಘ್ಯಮೆತ್ತಿ: **ಪಂಪಭಾ,** ೯. ೭೨ ವ)

ಅರ್ಘ್ಯಪ್ರದೀಪ – [ನಾ] ಗೌರವದ ಹಣತೆ (ಅರಿಮಕುಟರತ್ನಮಂ ನಿಜಚರಣಕ್ಕರ್ಘ್ಯಪ್ರದೀಪಮಾಗಿರ್ಪುದಂ ಆ ಭರತೇಶ್ವರಂಗೆ ಕಾಣ್ಬಂತಿರೆ ಸೂಚಿಸಿದತ್ತು ದಕ್ಷಿಣಾಕ್ಷಿಸ್ಪಂದಂ: **ಆದಿಪು,** ೧೧. ೧೨)

ಅರ್ಘ್ಯಹಸ್ತ – [ನಾ] ಕೈಯಲ್ಲಿ ಅರ್ಘ್ಯವನ್ನು ಹಿಡಿದವನು (ಉಡುಗಿ ಪಿಂಛಚ್ಛತ್ರಮಂ ಪ್ರಶ್ರಯಾಕರವೇಷೋಚಿತರ್ ಅರ್ಘ್ಯಹಸ್ತರ್ ಇದಿರಂ ಬಂದರ್ ಭಯಭ್ರಾಂತಿಯಿಂ: **ಆದಿಪು,** ೧೨. ೬೮)

ಅರ್ಘ್ಯೋದ್ಧರಣ – [ನಾ] ಎತ್ತಿ ಅರ್ಘ್ಯವನ್ನು ಸಲ್ಲಿಸುವುದು (ಕಳಮಧವಳಾಕ್ಷತಂಗಳ ಪೊಳೆವಲರ್ಗಳ ಚಂದನದ್ರವೋನ್ಮಿಶ್ರ ಜಲಂಗಳ ಪೊಳೆಪಿನೊಳೆಸೆದುದು ವಿಯತ್ತಳಂಬರಂ ನೆಗೆದುದಿಂದ್ರನರ್ಘ್ಯೋದ್ಧರಣಂ: **ಆದಿಪು,** ೭. ೮೦)

ಅರ್ಚನೆ – [ನಾ] ಪೂಜಾಸಾಮಗ್ರಿ (ವಿವಿಧ ಅರ್ಚನೆಗಳಿನರ್ಚಿಸಿ ವಿವಿಧಸ್ತುತಿಶತಸಹಸ್ರದಿಂ ಸ್ತುತಿಯಿಸಿ: **ಆದಿಪು,** ೫. ೭೨)

ಅರ್ಚಿ – [ನಾ] ಬೆಂಕಿಯ ಜ್ವಾಲೆ (ಮದನ ದವಾನಲಾರ್ಚಿ ತನುವಂ ಸುಡೆ ತಳ್ತ ಎಮೆಯೊಳ್ ಪಳಂಚಿ ಬೀಗಿದ ಬೆಳರ್ವಾಯೊಳ್ ಉಚ್ಚಳಿಸಿ: **ಪಂಪಭಾ,** ೫. ೯)

ಅರ್ಚಿತಸಮಸ್ತಶಸ್ತ್ರ – [ನಾ] ಪೂಜಿಸಲ್ಪಟ್ಟ ಎಲ್ಲ ಆಯುಧಗಳುಳ್ಳ[ವನು], ಎಲ್ಲ ಆಯುಧಗಳನ್ನೂ ಪೂಜಿಸಿದ[ವನು] (ಧೃತಧವಳವಸನರ್ ಆರಾಧಿತಶಿವರ್ ಅರ್ಚಿತಸಮಸ್ತಶಸ್ತ್ರರ್ ನೀರಾಜಿತತುರಗರ್ ಒಪ್ಪಿದರ್ ಕೆಲರ್ ಅತಿರಥ ಸಮರಥ ಮಹಾರಥ ಅರ್ಧರಥರ್ಕಳ್: **ಪಂಪಭಾ,** ೧೦. ೩೭)

ಅರ್ಚಿಸು – [ಕ್ರಿ] [ಜೈನ] ವೀರಶಯ್ಯೆಯ ಮೇಲೆ ಏಕಪಾರ್ಶ್ವದಲ್ಲಿ ಮಲಗಿ ಆಹಾರಬಿಟ್ಟು ಮರಣವನ್ನು ಸಾಧಿಸುವ ಕ್ರಮ (ಸಿದ್ಧಕೂಟಮಂ ತ್ರಿಃಪ್ರದಕ್ಷಿಣಂಗೈದು ಜಿನೇಂದ್ರಾರ್ಚನಾ ಪುರಸ್ಸರಂ ವಾಚನಾಗ್ರಹಣಸಮೇತಂ ಆರಾಧನೆಯಿಂ ಅರ್ಚಿಸಿ: **ಆದಿಪು,** ೨. ೫೦ ವ); [ಕ್ರಿ] ಪೂಜೆ ಮಾಡು (ಸೂಟ್ ಸೂಟಿಸೊಳ್ ಎಚ್ಚಾಗಳ್ ಅರ್ಚಿಸಿದಂತೆ ಇರ್ದುದು ಉರುಳ್ದ ಕೌರವಶಿರಃಪದ್ಮಂಗಳಿಂ ಕೊಳ್ಗುಳಂ: **ಪಂಪಭಾ,** ೧೨. ೧೪೫)

ಅರ್ಜುನ – [ನಾ] ಬಿಳಿ (ಏಟು ಜನಪದಂಗಳಿಂದಂ ಪೂರ್ವಾಪರ ಆಯತಂಗಳುಂ ಹೇಮ ಅರ್ಜುನ ತಪನೀಯ ವೈಡೂರ್ಯ ವಜ್ರ ರಜತ ಹೇಮಮಯಂಗಳುಂ; **ಆದಿಪು,** ೧. ೪೮ ವ); [ನಾ] ಬಿಳಿಮತ್ತಿಯ ಗಿಡ (ಕಕುಭ ಅಶೋಕ ಕದಂಬ ಲುಂಗ ಲವಲೀಭೂಜ ಅರ್ಜುನ ಅನೋಕಹಪ್ರಕರಂ: **ಪಂಪಭಾ,** ೫. ೮೦)

ಅರ್ಣವ – [ನಾ] ಸಮುದ್ರ (ಇದು ನಿಚ್ಚಂ ಪೊಸತು ಅರ್ಣವಂಬೊಲತಿಗಂಭೀರಂ ಕವಿತ್ವಂ: **ಆದಿಪು,** ೧. ೨೭)

ಅರ್ಣವ ನಿನಾದ – [ನಾ] ಸಮುದ್ರದ ಘೋಷ (ಕರ್ಣಂ ಆರ್ಣವ ನಿನಾದದಿಂದೆ ಆರ್ದು ಗುಣಾರ್ಣವನೊಳ್ ಬಂದು ತಾಗಿ: **ಪಂಪಭಾ,** ೩. ೭೦ ವ)

ಅರ್ಥ – [ನಾ] ಅರ್ಥ ಹಾಗೂ ಹಣ (ಲಲಿತಪದಂ ಪ್ರಸನ್ನ ಕವಿತಾಗುಣಮಿಲ್ಲದೆ ಪೊಣ್ದು ಪೇೞ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೇಡು ಪೇೞೆಸಿದೊಡರ್ಥದ ಕೇಡು: **ಪಂಪಭಾ,** ೧. ೧೨)

ಅರ್ಥಪ್ರತೀತಿ – [ನಾ] ಅರ್ಥಸ್ಪಷ್ಟತೆ (ಮೃದುಮಧುರ ವಚನವಿರಚನೆಯೊಳುದಾತ್ತಂ ಅರ್ಥಪ್ರತೀತಿಯಂ ಕೇಳ್ವ ಜನಕ್ಕಿದಿರೊಳ್ಕುಡದಂದು ಅದು ಕಬ್ಬದೊಳಿರ್ದುಂ ಕವಿಯ ಮನದೊಳಿರ್ದಂತೆ ವಲಂ: **ಆದಿಪು,** ೧. ೧೯)

ಅರ್ಥಪ್ರವರ್ತನ – [ನಾ] ಆರ್ಥಿಕ ವ್ಯವಹಾರ, ಹಣಗಳಿಕೆ (ವಣಿಗ್ವಂಶಕ್ಕೆ ಜಳಸ್ಥಳಯಾತ್ರಾಸಂವೃತಂ ಅರ್ಥಪ್ರವರ್ತನಮುಮಂ .. .. ನಿಜೆಸಿ: **ಆದಿಪು,** ೮. ೭೩ ವ)

ಅರ್ಥಮುಳ್ಳಿನೆಗಂ – [ಕ್ರಿವಿ] ಸಂಪತ್ತು ಇರುವವರೆಗೂ (ಜೀವಮುಳ್ಳಿನಂ ಇಜೆದು ಅರ್ಥಮುಳ್ಳಿನೆಗಂ ಇತ್ತು ನೆಗಟ್ತೆಯನಾಂಪುದೆಂಬ ಪೆಂಪಿನ ಸಮಕಟ್ಟು: **ಪಂಪಭಾ,** ೫. ೭೭)

ಅರ್ಥರಾಜ್ಯಹರಂ – [ನಾ] ಸಂಪತ್ತು ಮತ್ತು ರಾಜ್ಯಗಳನ್ನು ಅಪಹರಿಸುವವನು (ಸ್ವಾಮ್ಯಾರ್ಥಂ ಸ್ವಾಮ್ಯವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಥರಾಜ್ಯಹರಂ ಭೃತ್ಯಂ ಯೋನ ಹನ್ಯಾನ್ಸ ಹನ್ಯತೇ: **ಪಂಪಭಾ,** ೨. ೯೦ ಶ್ಲೋಕ)

ಅರ್ಥಶಾಸ್ತ್ರ – [ನಾ] ಕೌಟಿಲ್ಯದ ರಾಜನೀತಿಯ ಗ್ರಂಥ, ರಾಜನೀತಿಶಾಸ್ತ್ರ (ಲೋಕಕ್ಕಿದು ಅರ್ಥಶಾಸ್ತ್ರದ ಟೀಕೆನಿಸಿದ ತನ್ನ ನುಡಿ ಮನಂಗೊಳಿಸೆ: **ಪಂಪಭಾ,** ೯. ೧೪)

ಅರ್ಥಶಾಸ್ತ್ರಸದ್ಭಾವ – [ನಾ] ಅರ್ಥಶಾಸ್ತ್ರದ ಅಭಿಪ್ರಾಯ (ಎಂಬುದರ್ಥಶಾಸ್ತ್ರಸದ್ಭಾವಂ: **ಪಂಪಭಾ,** ೨. ೯೦ ವ)

ಅರ್ಥಿ – [ನಾ] ಯಾಚಕ (ಪೊನ್ನರಾಶಿಗಳಂ ಅರ್ಥಿ ಜನಕ್ಕೆ ಗೋಸನೆಯಿಟ್ಟು ಕುಡವೇೞ್ದು: **ಪಂಪಭಾ,** ೧೨. ೫೨ ವ)

ಅರ್ದಿಡು – [ಕ್ರಿ] ಬಲವಾಗಿ ಚುಚ್ಚು (ಅಲ್ಲಿ ಮೆಯೊಳ್ ಅರ್ದಿಡುವುವು ಪತ್ರ ಪುಷ್ಪ ಫಲಸಂಕುಳದಂದದ ಶಸ್ತ್ರಕೋಟಿಗಳ್: **ಆದಿಪು,** ೫. ೮೮)

ಅರ್ದು – [ಕ್ರಿ] ಅೞ್ದು, ಮುಳುಗು (ಅತಿಶೋಕಾಗ್ನಿಯೊಳರ್ದು ಬರ್ದು ಪುದಿದಾತ್ಮಧ್ಯಾನದಿಂ ಘೋರ ದುರ್ಗತಿಯಂ ಪೊಕ್ಕು: **ಆದಿಪು,** ೩. ೫೬); [ಕ್ರಿ] ತಳ್ಳು (ಒಂದಱ ನೀರ್ ಮಳಲೊಂದರ್ಕೊಂದಿಸುತುಂ ಮೇಗೆ ಕೊಂಡು ನೆಗೆವುದು ಇದೇಂ ಮತ್ತೊಂದಱ ನೀರಡಿಗರ್ದುವುದು: **ಆದಿಪು,** ೧೩. ೫೧)

ಅರ್ಧಕರವಾಳ – [ನಾ] ಅಡಾಯುಧ (ಲಾಕ್ಷಾ ಹಿಂಗುಲಿಕ ಪಾಟಲಫಲಕ ಅರ್ಧಕರವಾಳ ಚಾಳನಪ್ರಕಟಿತ ಭಟಬಿಭೀಷಿಕಾಡಂಬರಂ: **ಆದಿಪು,** ೧೩. ೪೫ ವ)

ಅರ್ಧಗುಚ್ಛ – [ನಾ] ಇಪ್ಪತ್ತನಾಲ್ಕು ಎಳೆಗಳ ಹಾರ (ನಕ್ಷತ್ರಮಾಳಾ ಅರ್ಧಗುಚ್ಛ ಮಾಣವಕಾರ್ಧಮಾಣವಕಂಗಳೆಂಬ ಪನ್ನೊಂದು ನಾನಾ ರತ್ನದ: **ಆದಿಪು,** ೮. ೫೪ ವ)

ಅರ್ಧಮಂಡಳಿಕ – [ನಾ] ಅರ್ಧ ಮಂಡಲದ ಒಡೆಯ (ಅರ್ಧಮಂಡಳಿಕರ್ ಮಾಱ್ಪ ಸರ್ವತೋಭದ್ರಮೆಂಬ ಪೆಸರಂ .. .. ಬಗೆದು: **ಆದಿಪು,** ೧೫. ೧೩ ವ)

ಅರ್ಧಮಾಣವಕ – [ನಾ] ಹನ್ನೆರಡು ಎಳೆಗಳ ಮುತ್ತಿನ ಹಾರ (ನಕ್ಷತ್ರಮಾಳಾ ಅರ್ಧಗುಚ್ಛ ಮಾಣವಕ ಅರ್ಧಮಾಣವಕಂಗಳೆಂಬ ಪನ್ನೊಂದು ನಾನಾ ರತ್ನದ ಸುವರ್ಣಪದಕರಚನವಿರಚನಾದಿ ಭೇದದಿಂ: **ಆದಿಪು,** ೮. ೫೪ ವ)

ಅರ್ಧರಥ – [ನಾ] ತನ್ನೊಡನೆ ಮತ್ತೊಬ್ಬನನ್ನು ಸಹಾಯಕ್ಕಿರಿಸಿಕೊಂಡು ಯುದ್ಧಮಾಡಬಲ್ಲ ರಥಿಕ (ಧೃತಧವಳವಸನರ್ ಆರಾಧಿತಶಿವರ್ ಅರ್ಚಿತಸಮಸ್ತಶಸ್ತ್ರರ್ ನೀರಾಜಿತತುರಗರ್ ಒಪ್ಪಿದರ್ ಕೆಲರ್ ಅತಿರಥ ಸಮರಥ ಮಹಾರಥ ಅರ್ಧರಥರ್ಕಳ್: **ಪಂಪಭಾ,** ೧೦. ೩೭)

ಅರ್ಧಹಾರ – [ನಾ] ಅರವತ್ತುನಾಲ್ಕು ಎಳೆಗಳ ಮುತ್ತಿನ ಹಾರ (ವಿಜಯಚ್ಛಂದಹಾರ ದೇವಚ್ಛಂದ್ರ ಅರ್ಧಹಾರರಶ್ಮಿಕಳಾಪ ನಕ್ಷತ್ರಮಾಳಾ: **ಆದಿಪು,** ೮. ೫೪ ವ)

ಅರ್ಧಾವಲಿಕ – [ನಾ] ಒಂದು ಬಗೆಯ ಅಸ್ತ್ರ, ಅರ್ಧಚಂದ್ರಾಕೃತಿಯ ಬಾಣ (ಅಂತು ಅಶ್ವಸೇನಂ ಅರ್ಧಾವಲಿಕಮೆಂಬ ಅಮೋಘಾಸ್ತ್ರಮಾಗಿ ಕರ್ಣನ ದೊಣೆಯೊಳಿರ್ದಂ: **ಪಂಪಭಾ,** ೫. ೧೦೦ ವ)

ಅರ್ಧಾವಳೀಕ – [ನಾ] ಅರ್ಧಾವಲಿಕ (ಮುಳಿಸಂ ನೆಱಪಲ್ಕೆ ಅರ್ಧಾವಳೀಕಶರರೂಪದಿಂದಸುಂಗೊಳೆ ದೊಣೆಯಿಂ ಪೊಳೆದು ಬರೆ ಕೆಯ್ಗೆ ತಾಂ ವಿಸ್ಫುಳಿಂಗಪಿಂಗಳಿತ ಭುವನವಭವನಾಭೋಗಂ: **ಪಂಪಭಾ,** ೧೨. ೧೯೧)

ಅರ್ಧಾಸನಮೇಱು – [ಕ್ರಿ] ಅರ್ಧ ಸಿಂಹಾಸನದಲ್ಲಿ ಕುಳಿತುಕೊ, ಪ್ರೀತಿಯಿಂದ ಸಿಂಹಾಸನದಲ್ಲಿ ಕೂರಿಸಿಕೊಳ್ಳುವುದು (ಪೆಂಪಿಂದಂ ಇಂದ್ರನೊಳರ್ಧಾಸನಂ ಏಱಿದೊಟ್ಟು ಪರಿಗಂಗಕ್ಕುಂ ಪೆಱಂಗಕ್ಕುಮೇ: **ಪಂಪಭಾ,** ೮. ೨೮)

ಅರ್ಧೈಕದೇಶ – [ನಾ] ಅರ್ಧಭಾಗ (ಅಮರಸಮಿತಿವೆರಸು ಓಲಂಗಂಗೊಟ್ಟಿರ್ದಲ್ಲಿ ಮದೀಯ ಸಿಂಹಾಸನಾರ್ಧೈಕದೇಶಮಂ ಅಳಂಕರಿಸಿ ಪದೆವಡೆದು ಕುಳ್ಳಿರ್ದ ರೂಪುಮಂ: **ಆದಿಪು,** ೪. ೮ ವ)

ಅರ್ಬಿಸು – [ಕ್ರಿ] ಆಕ್ರಮಿಸು, ದಾಳಿಮಾಡು (ಬಾಳ್ಗಿಟ್ಟು ಮೇಲ್ವಾಯ್ವೊಡೆ ಅರ್ಬಿಸೆ ತಿಣ್ಣಂ ತೆಗೆದು ಅರ್ಧಚಂದ್ರಶರದಿಂ ಸೂಟ್ ಸೂಟಿಯೊಳ್ ಎಚ್ಚಾಗಳ್: **ಪಂಪಭಾ,** ೧೨. ೧೪೫)

ಅರ್ಭಕ – [ನಾ] ಮಗು (ಪಿರಿದೊಂದು ದೋಹಳಂ ನೆಗೞ್ದುದು ಗರ್ಭದ ಅರ್ಭಕನ ದೋರ್ಬಲಗರ್ಬಮನಂದು ಪೇೞ್ವವೊಲ್: **ಆದಿಪು,** ೮. ೪೮)

ಅರ್ವಿ – [ನಾ] ಅಬ್ಬಿ, ಗಿರಿನದೀಪ್ರವಾಹ (ಎತ್ತ ಅಗುರ್ವಿಸಿ ಪಾಯ್ವ ಅರ್ವಿಗಳಿಂ ಮದಾಂಧವನಗಂಧೇಭಂಗಳಿಂ ಕಣ್ಗಗುರ್ವಿಸೆಯುಂ: **ಪಂಪಭಾ,** ೭. ೨೬)

ಅರ್ವಿಸು – [ಕ್ರಿ] ವ್ಯಾಪಿಸು (ಮುಸುಕಿದ ನೀರದಾವಳಿಗಳಂ ಕಿರಣಂಗಳೊತ್ತಿ ತೇಜಮರ್ವಿಸುವಿನಂ ಒರ್ಮೊದಲೆ ಮೂಡುವ ಬಾಳದಿನೇಶಬಿಂಬದೊಂದೆಸಕದಿಂ: **ಪಂಪಭಾ,** ೩. ೬೧): [ನಾ] ಸುಡು (ಆ ಲಯಕ್ರೀಡೆಯೊಳ್ ಈ ಚರಾಚರಮುಮಂ ಸುಡುವಂದಿನ ಮೆಯ್ಗುಮಗ್ಗಳಂ ಮಾಡಿ ತಗುಳ್ದು ನೀಳ್ದು ಬಳೆದು ಅರ್ವಿಸೆ ಪರ್ವಿದನಾ ವನಾಂತಮಂ: **ಪಂಪಭಾ,** ೫. ೮೫)

ಅರ್ಹತ್ – [ನಾ] [ಜೈನ] ಅರಹಂತ, ಪಂಚಪರಮೇಷ್ಠಿಗಳಲ್ಲಿ ಒಬ್ಬ, ಸಯೋಗಕೇವಲಿ, ಘಾತಿಕರ್ಮಗಳನ್ನು ನಾಶಪಡಿಸಿಕೊಂಡವನು (ಉದ್ಧರಿಸುಗೆ ತಾತ್ಪರ್ಯದಿಂ

ಅರ್ಹತ್ ಸಿದ್ಧ ಆಚಾರ್ಯ ಉಪಾಧ್ಯಾಯ ಸರ್ವಸಾಧುಗಳೆಮ್ಮಂ: **ಆದಿಪು,** ೧. ೬)

ಅರ್ಹತ್ಪದ – [ನಾ] ತೀರ್ಥಂಕರ ಪದವಿ, ತೀರ್ಥಂಕರನ ಪಾದ (ಅರ್ಹತ್ಪದಮಂ ನೆನೆಯುತ್ತುಂ ಅನುಪ್ರೇಕ್ಷೆಯೆ ಮನದೊಳ್ ತಣ್ಮಲೆಯೆ: **ಆದಿಪು,** ೨. ೫೭)

ಅರ್ಹತ್ಪ್ರತಿಮೆ – [ನಾ] [ಜೈನ] ಜಿನಪ್ರತಿಮೆ (ಉನ್ನತ ವೇದೀತಳಾಷ್ಟಮಹಾಪ್ರಾತಿಹಾರ್ಯಸಮನ್ವಿತ ಜಗತ್ಪೂಜ್ಯ ಪೂಜಿತಾರ್ಹತ್ಪ್ರತಿಮೆಗಳಂ ನಿಜೆಸಿ: **ಆದಿಪು,** ೧೫. ೧೬ ವ)

ಅರ್ಹದಾಲಯ – [ನಾ] [ಅರ್ಹತ್+ಆಲಯ] ಬಸದಿ (ಅವಱಿಡೆಯೊಳ್ ತಾನೊಂದೊಂದು ಅರ್ಹದಾಲಯಂ ಸೊಗಯಿಸುಗುಂ: **ಆದಿಪು,** ೧೦. ೨೪)

ಅರ್ಹದ್ರೂಪ – [ನಾ] [ಜೈನ] [ಅರ್ಹತ್+ರೂಪ] ಜಿನನ ರೂಪ (ಭರತರಾಜಪುತ್ರಂ ಮರೀಚಿಯೊರ್ಬನುೞಿಯೆ ಮುನ್ನಂ ಭಗ್ನತಪರಾದ ಕಚ್ಛಮಹಾಕಚ್ಛಾದಿಗಳ್ ಅರ್ಹದ್ರೂಪಮಂ ಕೈಕೊಂಡರ್: **ಆದಿಪು,** ೧೦. ೬೫ ವ)

ಅಲಂಕಾರ – [ನಾ] ಅಲಂಕಾರಶಾಸ್ತ್ರ, ಕಾವ್ಯಲಕ್ಷಣ (ಮತ್ತಂ ಸ್ವಯಂಭುವ ಅಭಿಧಾನ ಪದವಿದ್ಯಾ ಛಂದೋವಿಚಿತಿ ಅಲಂಕಾರಂಗಳೆಂಬ ಮೂಱುಂ ಪೆಸರ್ವಡೆದ ವಾಙ್ಮಯಮುಮಂ: **ಆದಿಪು,** ೮. ೬೦ ವ)

ಅಲಂಘ್ಯತ್ವ – [ಗು] ದಾಟಲಾಗದ ಸ್ಥಿತಿ (ಕಾಲಾನುಭಾವದಿಂ ಯುಗಾರಂಭದ ವರ್ಷಾರಂಭದೊಳಂ ತಗುಳ್ದೀ ದ್ವೀಪದೊಳಗಣ ನದೀನದಂಗಳ ಜಲಂಗಳನೊಳಗೊಂಡ ಅಲಂಘ್ಯತ್ವದೊಳಂ: **ಆದಿಪು,** ೧೨. ೬೮ ವ)

ಅಲಂಘ್ಯಬಲ – [ನಾ] ಮೀರಲಾಗದ ಶಕ್ತಿಯುಳ್ಳವನು (ಈ ನಾಲ್ವರ್ಕಳ ಅಸುವಂ ಅವರ್ಗಳ ಮೆಯ್ಯಿಂ ತೊಲಗಿಸಿ ಮುನ್ನಮೆ ಕಾದಿರ್ದ ಅಲಂಘ್ಯಬಲನೆನಿಸಿದ ಎನಗೆ ನೀನಗ್ಗಳಮೇ: **ಪಂಪಭಾ,** ೮. ೪೩)

ಅಲಂಪು – [ನಾ] ಸೌಖ್ಯ (ಸೋಂಕಿನೊಳ್ ನಲಿವ ನಲ್ಲಳ ಅಲಂಪನೊಡರ್ಚೆ ಲೀಲೆ ಕಣ್ಗಸದಳಮಾಗೆ ಪಾಱುವ ಮಹೀಧರನೆಂಬ ವಿಯಚ್ಚರೇಂದ್ರಂ: **ಆದಿಪು,** ೨. ೪೧); [ನಾ] ಲಾಂಪಟ್ಯ (ಕಟಿಯೆ ವಿಳಾಸಮಂ ಪಡೆದ ರಾಗದ ಭೋಗದ ಅಲಂಪಿನ ಇಂಪು ಪೊಂಪೊಟಿಯೆನೆ ತದ್ವಿಮಾನದೊಳೆ ಪುಟ್ಟಿದ ತನ್ನಯ ದೇವಿಯರ್ ಪಲರ್ ಕಟಿವಿನಂ: **ಆದಿಪು,** ೨. ೭೨); [ನಾ] ಪ್ರೀತಿ (ಪೂತ ಕಲ್ಪಲತೆಯಂ ಲಲಿತಾಂಗಿಯೆ ಗೆತ್ತ ಅಲಂಪಿನಿಂದೆಱಗುವುದುಂ: **ಆದಿಪು,** ೪. ೧೩); [ನಾ] ವೈಭವ (ಇಂದ್ರಂ ಮಕುಟದೊಡಲನಲಂಪಿಂ ಪಟ್ಟಮಂ ಕಟ್ಟೆ ಲೋಕಪ್ರಕಟಮೆನೆ ಪೊದಳ್ದತ್ತಾದಿದೇವಪ್ರಭಾವಂ: **ಆದಿಪು,** ೮. ೭೨); [ನಾ] ಅತಿಶಯ (ವದನಂ ತೋಳ್ ತೊಡೆ ಪಾದವೆಂಬಿವನಿವರ್ ಶುಶ್ರೂಷೆಗೆಯ್ಯಲ್ಕೆ ಲಾಭದಲಂಪಿಂ ನಡೆಯಲ್ಕೆ ಕೈದುವಿಡಿಯಲ್ಕೆ ಓದಲ್ಕೆ: **ಆದಿಪು,** ೮. ೭೩); [ನಾ] ಸಂತೋಷ (ಈತನೊರ್ವನೆ ಧನುರಾಗಮದೆಡೆಗೆ ಕುಶಲನಕ್ಕುಮದಕೇಂ ಕಿನಿಸದಿರಿಂ ಮುನ್ನಱಿಪಿದೆನೆನೆ ಭೀಷ್ಮನಲಂಪು ಮಿಗೆ ಮುಗುಳ್ನಕ್ಕಂ: **ಪಂಪಭಾ,** ೨. ೫೫)

ಅಲಂಪುವಡೆ – [ಕ್ರಿ] ಹರ್ಷವನ್ನುಂಟುಮಾಡು (ಘ್ರಾಣೇಂದ್ರಿಯೌತ್ಸುಕ್ಯಮಂ ಪ್ರಕಟಂ ಮಾಡಿ ನೃಪಂಗಲಂಪುವಡೆದತ್ತು ಅಂಭೋಜಗಂಧಾಸವಂ: **ಆದಿಪು,** ೪. ೬೯)

ಅಲಕ – [ನಾ] ಮುಂಗುರುಳು (ಅಲಕಂ ಮಂದಾರಶೂನ್ಯಂ ಕದಪು ಮಕರಿಕಾಪತ್ರಶೂನ್ಯಂ: **ಆದಿಪು,** ೩. ೧೩)

ಅಲಕ್ತಕ – [ನಾ] ಅರಗು (ತ್ರಿದಶೇಂದ್ರಮೌಳಿಮಣಿಶೋಣದೀಪ್ತಿಗಳ್ ಪುದಿದು ಪೊಳೆವ ಅಲಕ್ತಕರಸದಿಂ ಪುದಿದು: **ಆದಿಪು,** ೧೦. ೫೩)

ಅಲಕ್ತಕದ್ರವ – [ನಾ] ಅರಗಿನ ರಸ (ಈ ಜಗನಮಿದೇಕೆ ಹೇಮರಶನಾಧ್ವನಿಯಿಲ್ಲದೆ ಮೂಗುವಟ್ಟುದು ಈ ಬಗೆಯೋಲ್ ಅಲಕ್ತಕದ್ರವದೊಳೊಂದದೆ ನಿಂದುವು ಪಾದಪಂಕಜಂ: **ಪಂಪಭಾ,** ೪. ೬೨)

ಅಲಘುನಿತಂಬ – [ನಾ] ಭಾರವಾದ ಪಿರ್ರೆ (ಅಲಘುನಿತಂಬದ ಪೊಯ್ಲೊಳ್ ನೆಲೆಮೊಲೆಯಳ್ಳೇಱೆನೊಳ್: **ಆದಿಪು,** ೧೧. ೧೪೬)

ಅಲತಗೆ – [ನಾ] ಅರಗು (ಅಡಿಯೊಡಲ್ಕೆ ಅಲತಗೆಯಂ ತುಡಲ್ಕೆ ತುಡುಗೆಯಂ: **ಆದಿಪು,** ೭. ೧೧)

ಅಲಪು – [ನಾ] ತೊಂದರೆ (ಸುರಕುಜದ ನೆೞಲೊಳಂಗಣದೊಳೇನುಂ ಅಲಪಿಲ್ಲದೆ ಕಟ್ಟಿರೆ ಕಾಮಧೇನು: **ಪಂಪಭಾ,** ೪. ೧೦)

ಅಲರ್ – [ಕ್ರಿ] ನಸು ಅರಳು (ಅಲರ್ದಲರ್ಗಣ್ಗಳ ನೋಟದೆ ಸುಲಲಿತತನು ಶಿಶುವ ಮೆಯ್ಯ ತೀಟದೆ ತನಗಗ್ಗಲಿಸಿದಲಂಪಂ ಕುಡೆ ಪೊಸತು ಅಲರ್ದು ಅಂಕುರಿಸಿರ್ದ ಕಲ್ಪಲತೆಯನೆ ಪೋಲ್ತಳ್: **ಆದಿಪು,** ೭. ೪೭); [ನಾ] ಹೂವು (ಬಿರಿದ ಅಲರೊಳ್ ತೆಱಂಬೊಳೆವ ತುಂಬಿ ತಳಿರ್ತೆಳಮಾವು ಮಾವಿನಂಕುರಮನೆ ಕರ್ಚಿ ಬಿಚ್ಚಳಿಪ ಕೋಗಿಲೆ: **ಪಂಪಭಾ,** ೫. ೧೧)

ಅಲರಂಬು – [ನಾ] ಹೂವಿನ ಬಾಣ (ಮತ್ತೊರ್ವಳ್ ಕರ್ವಿನ ಬಿಲ್ಲ ತಿರುವಿಂ ಬರ್ದುಂಕಿ ಬರ್ಪಲರಂಬು ಬರ್ಪಂತೆ ಬಂದು: **ಪಂಪಭಾ,** ೪. ೩೭ ವ)

ಅಲರಪಸೆ – [ನಾ] ಹೂವಿನ ಪೀಠ (ಸೊನೆಯ ಸೋನೆಯನೆ ಪುದುಂಗೊಳಿಸಿದೆಳವಳ್ಳಿಮಾವಿನ ಕುಳಿರ್ವೊರ್ವರಿಯ ಅಲರಪಸೆಯೊಳುಸಿರ್ದರ್ ಕೆಲಬರ್: **ಆದಿಪು,** ೧೧. ೮೦)

ಅಲರೊದ್ದೆ – [ನಾ] ಹೂ ರಾಶಿ (ಮುಗುಳ ಅಲರೊದ್ದೆ ಕರಂ ಸಿದ್ಧಮಾದುದಂಬರತಲದೊಳ್: **ಪಂಪಭಾ,** ೧೨. ೨೧೮)

ಅಲರೋಳಿ – [ನಾ] ಹೂಸಾಲು, ರಾಶಿ (ತಳಿರ್ಗಲ ತೊಂಗಲಿಂದಂ ಅಲರೋಳಿಗಳಲ್ಲುಗುವಂತೆ: **ಆದಿಪು,** ೪. ೫೯)

ಅಲರ್ಗಣ್ – [ನಾ] ಹೂವಿನಂತಹ ಕಣ್ಣು (ಪದೆವೆರ್ದ ಬತ್ತೆ ಕೆತ್ತುವಧರಂ ದೆಸೆಗೆಟ್ಟು ಅಲರ್ಗಣ್ಣ ನೋಟಂ ಉಣ್ಮಿದ ಬೆಮರ್ ಓಳಿವಟ್ಟ ನಿಡುಸುಯ್ ತೊದಳಿಂಗೆಡೆಗೊಂಡ ಮಾತು: **ಪಂಪಭಾ,** ೪. ೬೦)

ಅಲರ್ಚು – [ಕ್ರಿ] ಅರಳಿಸು, ಅರಳುವಂತೆ ಮಾಡು (ಎಸೆವ ಪ್ರಚಂಡ ಮಾರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ: **ಪಂಪಭಾ,** ೧. ೩)

ಅಲರ್ದುಱುಗಲ್ – [ನಾ] ಅಲರ್+ತುಱುಗಲ್] ಹೂವಿನ ರಾಶಿ (ಅಂಭೋರುಹದ ಅಲರ್ದುಱುಗಲೆನಲೊಗೆದುವು .. .. ಬಂಬಲ್ದೆರೆಗಳ್: **ಪಂಪಭಾ,** ೫. ೫೭)

ಅಲರ್ಮೞೆ – [ನಾ] ಹೂಮಳೆ (ಸುರತರುನಂದನಂಗಳಿನಲರ್ಮೞೆ ಬಂದೆಱಗಿತ್ತು: **ಆದಿಪು,** ೨. ೬೫)

ಅಲರ್ವಪದ – [ನಾ] ಹೂ ಬಿಡುವ ಕಾಲ (ಅಲರ್ವ ಪದಕ್ಕೆ ಬಂದಲೆವ ತೆಂಬೆಲರಿಲ್ಲದೆ ಮಾಣ್ದ ಮಲ್ಲಿಕೋಜ್ಜ್ವಲ ಮುಕುಳಕ್ಕಮಾದ ಪೊಸಗಂಪನಗುಟ್ಟಿರಲಿರ್ದು ರಾಗದಿಂ ನಲಿವ ಮದಾಳಿಯಿಲ್ಲದೆ: **ಆದಿಪು,** ೩. ೧೯)

ಅಲರ್ವಾಸು – [ನಾ] ಹೂವಿನ ಹಾಸಿಗೆ (ಅಗರುವ ಮೆಚ್ಚು ಅಚ್ಚ ಸಿರಿಕಂಡದೊಳ್ ಅಗ್ಗಲಿಸಿತ್ತು ಸೂಡುಶಯ್ಯೆಗಳ ಬಯಕ್ಕೆ ಜೊಂಪದಲರ್ವಾಸುಗಳೊಳ್ ನೆಲಸಿತ್ತು: **ಪಂಪಭಾ,** ೫. ೩೦)

ಅಲಸಿಕೆ – [ನಾ] ಆಲಸ್ಯ, ದಣಿವು (ಆಕೆಯ ಮಂದಗಮನಮುಂ ಪಗೆವರ ಮನಂಗಳಂ ಒಡನೊಡನೆ ಅಲಸಿಕೆಯಂ ಕೈಕೊಂಡುವು: **ಪಂಪಭಾ,** ೧. ೧೪೧ ವ)

ಅಲಸು – [ಕ್ರಿ] ಆಲಸ್ಯಮಾಡು (ಆಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂಳೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡೆ: **ಪಂಪಭಾ,** ೧. ೮೫ ವ); [ಕ್ರಿ] ಆಯಾಸಪಡು (ಮೃಗದೊಲವರಮುಮಂ ಅರಸನ ಬಗೆಯುಮಂ ಅಱಿದು ಅಲಸದೆ ಎಳಸದೆ ಓಲಗಿಸಲ್: **ಪಂಪಭಾ,** ೫. ೪೨)

ಅಲಱ್ – [ಕ್ರಿ] ಕ್ಷೋಭೆಗೊಳ್ಳು (ಅಲಘುನಿತಂಬದ ಪೊಯ್ಲೊಳ್ ನೆಲೆಮೊಲೆಯಳ್ಳೇಱೆನೊಳ್ ತರಂಗಂಗಳ್ ತೂಳ್ದು ಅಲಱುಗುಂ ಅವಳ ಅಳ್ಳೇಱೆನೊಳ್ ಅಲಱುಗುಂ ಎರ್ದೆ ತೆರೆಗಳಳೞ್ ತೂಳ್ವುದು ಪಿರಿದೇ: **ಆದಿಪು,** ೧೧. ೧೪೬); [ಕ್ರಿ] ಒಡೆದುಹೋಗು (ನೆಲಸಿರ್ದ ವಜ್ರಪಂಜರಮಲಱುವಿನಂ ಪಾಯ್ದ ಸಿಂಧುರಾರಾತಿಯಂ ಉಜ್ಜ್ವಲತನುವನಭ್ರಪಥದತ್ತ ಲಂಘಿಸಲ್ಕಿರ್ದುದಂ ಚಮೂಪತಿ ಕಂಡಂ: **ಆದಿಪು,** ೧೬. ೪೫); [ಕ್ರಿ] ಚೆದುರಿಹೋಗು (ಸುಯೋಧನನೊಡ್ಡುಗಳ್ ಕೞಲ್ದು ಅಲಱಿ ತೆರಳ್ದು ತೂಳ್ದು ಬಿಱುತೋಡೆ: **ಪಂಪಭಾ,** ೧೧. ೩೩)

ಅಲಾಬು – [ನಾ] ಸೋರೆ ಬುರುಡೆ (ಸ್ನಾಯು ಅಲಾಬು ದಂಡ ಅಂಗುಷ್ಠ ಅಂಗುಳಿಪ್ರಯತ್ನದಿಂ ಶ್ರವಣರಮಣೀಯಕ್ವಣಿತಂ ಎಂತು ನೆಗೞ್ದಿಪ್ಪುದು: **ಆದಿಪು,** ೨. ೯ ವ)

ಅಲುಗಾಡು – [ಕ್ರಿ] ಕದಲು, ಮನಸ್ಸು ಅಸ್ಥಿರಗೊಳ್ಳು (ಬೇಡಿದುದನರಿದುಕೊಳ್ಳೆನೆ ಬೇಡಿದುದಂ ಮುಟ್ಟಲಾಗದೆನಗೆನೆ ನೆಗೞ್ದಿಲ್ಲಾಡದೆ ಕೊಳ್ಳೆಂದರಿದೀಡಾಡಿದನಿಂದ್ರಂಗೆ ಕವಚಮಂ ರಾಧೇಯಂ: **ಪಂಪಭಾ,** ೧, ೧೦೧)

ಅಲೆ – [ಕ್ರಿ] ಸೋಲಿಸು (ಸುಧರ್ಮಮುನಿಪದ್ಮಕ್ಕೆಱಗಿ ಜಿನರೂಪಮೆಂಬೊಂದಱ ಅಡಿವಿಡಿದು ಅಘಬಲಮಂ ಅಲೆದು ಶಿಲೆಯೊಳ್ ಪೊಯ್ದಂ: **ಆದಿಪು,** ೩. ೫೧); [ಕ್ರಿ] ಕಾಡು ತೊಂದರೆಪಡಿಸು (ನಮ್ಮ ಜನ್ಮಾಂತರದಿಂದ ಬಂದ ಮೋಹು ಬಿಡದೆ ಅಲೆವುದಱಿಂದಾದೊಡಂ ಧೈರ್ಯದಿಂ ಸಂಸರಣ ಅಂಭೋರಾಸಿಯಂ ದಾಂಟುವ ಬಗೆಯನೆ: **ಆದಿಪು,** ೪. ೮೯); [ಕ್ರಿ] ನಿವಾರಿಸು (ಬಳ್ಳಿಗವುಂಗಂ ತಳ್ತೆಲೆವಳ್ಳಿಯ ಕೞ್ತಲೆಯಂ ಅಲೆವ ಸೊಡರ್ಗುಡಿಗಳಂ: **ಆದಿಪು,** ೧೧. ೬೭); [ಕ್ರಿ] [ದೂತನಾಗಿ] ಕಳಿಸು (ರತಿಗೆ ಮುಡಿಯಲ್ಕೆ ಮದನಂಗೆ ತುಱುಂಬಲ್ಕೆ ಇರ್ದುದೆಂದು ಮಧು ಸುಱಿದ ಮಧುವ್ರತಮುಮಂ ಅಲೆದಪನೆಂಬೀ ಪ್ರತೀತಿಗೆ ಇರುವಂತಿಯಂತೆ ನೋಂತ ಅಲರೊಳವೇ: **ಆದಿಪು,** ೧೧. ೧೧೧); [ಕ್ರಿ] ತೊಳೆ (ಪುಳಿಯೊಳ್ ಅಲೆದ ಪವಳದ ಬಟ್ಟಿನಂತೆ ಸೊಗಯಿಸುವ ಸಂಸಾರಸಾರೋದಯಯನ ಬಿಂಬಾಧರಂ ಅನಂಗರಾಗರಸದ ಉರುಳಿಯಂತಾದುದು: **ಪಂಪಭಾ,** ೨. ೩೯ ವ); [ಕ್ರಿ] ಪೀಡಿಸು (ತಳಿರಿಡಿದು ಪೂತ ಲತೆಗಳಂ ಒಡನೊಡನೆ ಅಲರ್ ಅಲೆಯೆ ಬಿಡದೆ ಸುರಿವ ಅಲರ್ಗಳಂ: **ಪಂಪಭಾ,** ೫. ೫೫); [ಕ್ರಿ] ಹಿಂಸಿಸು, ಕಾಡು (ನಗೆ ಪಗೆವಾಡಿ ಗೋಗ್ರಹಣದೊಳ್ ಪೋಱಮಾಱಿದ ಬನ್ನಂ ಒಂದು ನೆಟ್ಟಗೆ ಮನಮಂ ಪಲಂಚಲೆಯೆ: **ಪಂಪಭಾ,** ೧೦. ೧೧೧)

ಅಲೆಗೆ – [ಕ್ರಿ] ಪೀಡಿಸಲಿ (ಅಲರ್ಗಣ್ಗಳ್ ಚಪಳಂಗಳಾಗಿ ಜಘನಂ ಕಾಂಚೀಕಪಾಲಪ್ರಭೋಜ್ಜ್ವಲಂ ಉದ್ವೃತ್ತಮುಂ ಆಗಿ ತಾಂ ಅಲೆಗೆ: **ಪಂಪಭಾ,** ೪. ೭೪)

ಅಲೆದಪ್ಪು – [ಕ್ರಿ] ಹಿಂಸೆ ಮಾಡು (ಮನಸಿಜನಂಬು ಅರಲ್ದ ಪೊಸಮಲ್ಲಿಗೆ ತೆಂಕಣ ಗಾಳಿಯೆಂಬಿವಿಂತು ಅನುಬಲದಿಂದಂ ಎನ್ನಂ ಅಲೆದಪ್ಪುವು: **ಪಂಪಭಾ,** ೪. ೬೮)

ಅಲೆದಾಟಿಕ್ಕೆ – [ಕ್ರಿ] ಲೆದಾಡಿಸಲಿ (ಗರುಡಂ ವಾಹಮಾಗಿರ್ಪ ಚಕ್ರೇಶ್ವರಿ ಭಾಸ್ವದ್ಧರ್ಮಚಕ್ರಾಕ್ರಮಿಗಳಂ ಅಲೆದಾಟಿಕ್ಕೆ ವಿಕ್ರಾಂತದಿಂದಂ: **ಆದಿಪು,** ೧. ೭)

ಅಲೆಪ – [ನಾ] ಸಂಚಾರ, ಬೀಸುವಿಕೆ (ತೆಂಕಣೆಲರ ಅಲೆಪದಿಂದಂಕುರಿಸಿದ ಚೂತದಂತೆ ಆತಂ ರೋಮಾಂಚ ಕಂಚುಕಿತನಾಗಿ: **ಆದಿಪು:** ೪. ೨೧ ವ)

ಅಲೆಪು – [ನಾ] ಬೀಸುವಿಕೆ (ಚಾಮರದ ಗಾಳಿಯ ಅಲೆಪಿನೊಳಲ್ಲುಗುವ ಬಂಬಲ್ಗುರುಳ್ಗಳ ಬಂಬಲಿಂದಂ: **ಆದಿಪು,** ೪. ೯ ವ)

ಅಲೆಯಲಾಱವಾಗು – [ಕ್ರಿ] ತೊಲಗಿಸಲು ಶಕ್ಯವಾಗು (ಆಗಳಾ ತಾರಾಗಣಂಗಳ್ ದಿಶಾವನಿತೆಯರ ಮಕುಟಮಾಣಿಕಂಗಳಂತೆ ಎನಿತು ಬೆಳಗಿಯುಂ ಕೞ್ತಲೆಯಂ ಅಲೆಯಲಾಱವಾದುವು: **ಪಂಪಭಾ,** ೪. ೪೯ ವ)

ಅಲ್ಗು – [ಕ್ರಿ] ಅಳ್ಳಾಡು (ಚತುರಂಗಮುಂ ಒರ್ಮೊದಲೆ ನಡುಗಿದುದು ಕೂಡಿದ ಚದುರಂಗದ ಮಣೆಯಂ ಅಲ್ಗಿದಂತಪ್ಪಿನೆಗಂ: **ಪಂಪಭಾ,** ೧೧. ೭೦)

ಅಲ್ತೆ – [ಅ] [ಅಲ್ತು+ಎ] ಅಲ್ಲವೇ, ಅಂಗೀಕಾರ (ಗಜದಂತ ಅಕಾರಂಗಳ್ ಗಜದಂತಾದ್ರಿಗಳಿವಲ್ತೆ: **ಆದಿಪು,** ೨. ೨೭)

ಅಲ್ಪಘಾಟ – [ನಾ] ಆನೆಗಳ ಕೆನ್ನೆಯ ಪಕ್ಕ, ಕುತ್ತಿಗೆಯ ಹಿಂಭಾಗ (ಅಲ್ಪಘಾಟನುಮನುನ್ನತಶಿಖನುಂ ಪೀನಮಾಂಸಕಟಶ್ಲಿಷ್ಟನುಂ: **ಆದಿಪು,** ೧೨. ೫೬ ವ)

ಅಲ್ಪಮಧ್ಯೆ – [ನಾ] ತೆಳುವಾದ ನಡುವುಳ್ಳವಳು (ಸೋಲ್ತು ನೋಡಿದರ ಮನಕ್ಕಣಂ ಪಡೆಯದಲ್ತೆ ವಿಕಲ್ಪಮಂ ಅಲ್ಪಮಧ್ಯೆಯಾ: **ಆದಿಪು,** ೪. ೧೯)

ಅಲ್ಪಾಂತರ – [ನಾ] ಸ್ವಲ್ಪವೇ ದೂರ (ಬಿಟ್ಟನಂ ಇಱಿಯೆನೆಂದು ಪವಮಾನಮಾರ್ಗದೊಳ್ ಅಲ್ಪಾಂತರದೊಳ್ ಗದೆಯಂ ಬೀಸುವಾಗಳ್: **ಪಂಪಭಾ,** ೧೩. ೯೫ ವ)

ಅಲ್ಲಕಲ್ಲೋಳ – [ನಾ] ದೊಡ್ಡ ಅಲೆಗಳೆದ್ದಾಗಿನ ಸಮುದ್ರದ ಕ್ಷೋಭೆ (ಸಡಗರದೇೞ್ಗೆಯುಂ ಕಳವಳಧ್ವನಿಯುಂ

ಬೆರಸಾಡುವಂತೆ ಎರಟ್ಟಿಡೆಯೊಳ್ ಆಗಳೊರ್ಮೊದಲೆ ಪಲ್ಲಣಮಿಕ್ಕಿಪುದು ಅಲ್ಲಕಲ್ಲೋಳಂ: **ಪಂಪಭಾ,** ೧೩. ೩೩)

ಅಲ್ಲಕಲ್ಲೋಲ – [ನಾ] ಅಲ್ಲೋಲಕಲ್ಲೋಲ, ಕ್ಷೋಭೆ (ಪಾಂಡವ ಬಲಮೆಲ್ಲಮಂ ಅಲ್ಲಕಲ್ಲೋಲಂ ಮಾಡಿ: **ಪಂಪಭಾ,** ೧೧. ೬೦ ವ)

ಅಲ್ಲದಲ್ಲಣಿಗೆ – ಹಸಿ ಶುಂಠಿಯ ಮಿಶ್ರಣ (ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮಾರುಡಿನ ಮೆಣಸುಗಡಲೆಯ ಪುಡಿಯೊಳ್ ಅಡಸಿದ ಅಲ್ಲದಲ್ಲಣಿಗೆಯ ಚಕ್ಕಣಂಗಳಂ ಸವಿಸವಿದು: **ಪಂಪಭಾ,** ೪. ೮೭ ವ)

ಅಲ್ಲದುದು – [ಗು] ತಕ್ಕುದಲ್ಲದ್ದು (ತನಗಲ್ಲದುದಂ ಮಾಡಿದನಿನಿಸಂ ಚಕ್ರೇಶನೆಂಬ ಕುಲವೃದ್ಧರ ಭೂವನಿತಾಧೀಶರ ನುಡಿಗಳ್ಗೆ ನಾಣ್ಚಿದಂ ಭರತರಾಜಂ: **ಆದಿಪು,** ೧೪. ೧೧೯)

ಅಲ್ಲಳಿಗಾಳಗ – [ನಾ] ಮೇಳಗಾಳಗ, ವಿನೋದದ ಯುದ್ಧ (ಧರ್ಮಪುತ್ರಂಗೆ ತನ್ನ ನುಡಿದ ನುಡಿವಳಿಯಂ ನೆನದು ಅಲ್ಲಳಿಗಾಳೆಗಂಗಾದೆ: **ಪಂಪಭಾ,** ೧೧. ೪೩ ವ)

ಅಲ್ಲಾಟ – [ನಾ] ಅಲುಗಾಟ, ನಡುಕ (ಬಗೆಯಂ ತೆಗೆಯಂ ಅಲ್ಲಾಟಮಂ ಕಾಟಮಂ ನೋವುದಂ ಸಾವುದಂ ಎಲ್ಲಂದದಿಂ: **ಪಂಪಭಾ,** ೫. ೪೩)

ಅಲ್ಲಿ – [ಅ] ಆ ಸ್ಥಳದಲ್ಲಿ (ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ: **ಪಂಪಭಾ,** ೧೪. ೬೦); [ಅ] ಸಂದರ್ಭದಲ್ಲಿ, ಆಗಲೆ (ಕೃಷ್ಣೆಯ ಮುಂದಲೆಯಂ ಪಿಡಿದು ಪಿಡಿದೆಟಿವಲ್ಲಿಯೆ ತಲೆವಿಡಿದರ್ ನಮ್ಮ ಬೀರಮಂ ಕೌರವರುಂ: **ಪಂಪಭಾ,** ೫. ೫೬)

ಅಲ್ಲಿಗೆ – [ನಾ] ಅದಕ್ಕೆ, ಆ ವಿಷಯಕ್ಕೆ (ಕಲ್ವುದಲ್ತೆ ವಿಟರಿಂ ವಿಟವೃತ್ತಮಂ ಎಮ್ಮೊಳ್ ಅಲ್ಲಿಗೆ ಆಂ ಒವಜರೆಮೆಂಬವೋಲ್ ಮೊರೆವ ಮೆಲ್ಪೆಸೆಯುತ್ತಿರೆ: **ಆದಿಪು,** ೧೧. ೧೨೬)

ಅಲ್ಲುಗು – [ಕ್ರಿ] ಅಲುಗಾಡು (ಬೀಸುವ ಚಾಮರದ ಗಾಳಿಯಲೆಪಿನೊಳ್ ಅಲ್ಲುಗುವ ಬಂಬಲ್ಗುರುಳ್ಗಳ ಬಂಬಲಿಂದಂ: **ಆದಿಪು,** ೪. ೯ ವ)

ಅಲ್ಲೆ – [ಅ] ಅಲ್ಲ ಅಲ್ಲವೇ (ಮಗನೆ ನಿನಗಪ್ಪೊಡೆ ದೆಯ್ವಂ ಪ್ರತಿಕೂಳಂ ಎಂತುಂ ಕಾದಿ ಗೆಲಲಾರ್ಪೆಯಲ್ಲೆ: **ಪಂಪಭಾ,** ೧೩. ೬೫ ವ)

ಅಲ್ಲೆಂ – [ನಾ] ನಾನಲ್ಲ (ಕಣ್ಣಜೆಯದ ಬೆಳ್ಳಂ ಅಲ್ಲೆಂ ಅಜೆದೆಂ ಧವಳಾಕ್ಷಿಯ ನೋಟದಂದಮಂ: **ಪಂಪಭಾ,** ೪. ೭೬)

ಅಲ್ಲೊಗು – [ಕ್ರಿ] ಲ್ಲು, ಸೂಸು (ಉದಿರ್ದು ಅಲ್ಲೊಕ್ಕ ವಿಚಿತ್ರಪುಷ್ಪಚಯದಿಂ ತದ್ಗಂಧಸಂಸಕ್ತಷಟ್ಪದದಿಂ: **ಆದಿಪು,** ೧೧. ೧೫೪)

ಅವಕರ್ಣಿಸು – [ಕ್ರಿ] ಅಲಕ್ಷ್ಯದಿಂದ ಕೇಳು (ಪಗೆವರಂ ಎನ್ನ ಮಂಚದ ಕಾಲೊಳ್ ಕಟ್ಟಿದೆನೆಂದು ಪೊಟ್ಟಳಿಸುವ ಸುಯೋಧನನ ನುಡಿಯಂ ಅವಕರ್ಣಿಸಿ ಕರ್ಣನಿಂತೆಂದಂ: **ಪಂಪಭಾ,** ೧೦. ೧೫ ವ)

ಅವಕಾಶಂಗುಡು – [ಕ್ರಿ] ಎಡೆಮಾಡಿಕೊಡು (ತದೀಯ ಯಶಃಪ್ರಸರಕ್ಕೆ ಅವಕಾಶಂಗುಡುವಂತೆ .. .. ಪ್ರಕಾಶಿತಾಶಾಂತಮಾಗೆ: **ಆದಿಪು,** ೭. ೭೫ ವ)

ಅವಗಡ – [ನಾ] ಕ್ರೌರ್ಯ (ಪವನಜನಂತು ಪೂಣ್ದು ಯುವರಾಜನ ನೆತ್ತರನಾರ್ದು ಪೀರ್ದಂ ಇಂತು ಅವಗಡದಿಂ ದಿನೇಶಜನಂ ಅಂಕದ ಗಾಂಡಿವಿ ಕೊಂದಂ: **ಪಂಪಭಾ,** ೧೩. ೮)

ಅವಗತ – [ಗು] ಚೆನ್ನಾಗಿ ತಿಳಿಯಲ್ಪಟ್ಟ (ಅವಗತ ಅನೇಕ ಲೋಕವ್ಯಾಪಾರಕನುಂ ಜನ್ಮಾಂತರಾಭ್ಯಸ್ತಕಳಾಕುಶಲನುಂ: **ಆದಿಪು,** ೮. ೩ ವ)

ಅವಗಮ್ಯ – [ಗು] ತಿಳಿಯಬಹುದಾದ (ಶೂನ್ಯವಾದಪ್ರಕಾಶನಪರಂ ಆವುದಂತರ್ಬಹೀರೂಪದಿಂ ವಿಶದದರ್ಶನಾವಗಮ್ಯಂ ಅದೆಲ್ಲಂ ಅಸತ್ಯಾವಭಾಸಿ: **ಆದಿಪು,** ೨. ೯ ವ)

ಅವಗಟೆಯಿಸು – [ಕ್ರಿ] ಅಧಿಕವಾಗು, ಅತಿಶಯವಾಗು (ಹರಿವಕ್ಷಮಂ ಅಟ್ಟಿಟಿವೋಗೆಯೆಚ್ಚು ಮುಳಿಸವಗಟೆಯಿಸುತಿರೆ ನರನ ಬಿಲ್ಲ ಗೊಣೆಯಮನೆಚ್ಚಂ: **ಪಂಪಭಾ,** ೧೨. ೨೧೯)

ಅವಗಾಢ – [ನಾ] ಒತ್ತಾದ, ದಟ್ಟವಾದ (ನಿಬಿಡನಿಪೀಡಿತ ಪ್ರಾಸಮುಷ್ಟಿದುರ್ಧರ ಅಶ್ವಾರೋಹತುರಂಗಬಲ ಅವಗಾಢನುಂ: **ಆದಿಪು,** ೧೪. ೯೩ ವ)

ಅವಗಾಹ – [ನಾ] ಅಗಲ (ಯೋಜನಸಹಸ್ರ ಅವಗಾಹಮುಂ ಸರ್ವರತ್ನಜಾಂಬೂನದವೈಡೂರ್ಯಮಯಮುಂ: **ಆದಿಪು,** ೧. ೪೯ ವ); [ನಾ] [ಜೈನ] ಸಿದ್ಧಪರಮೇಷ್ಠಿಗಳ ಅಷ್ಟಗುಣಗಳಲ್ಲಿ ಒಂದು, ಸಿದ್ಧಜೀವದಲ್ಲಿ ಅನೇಕಜೀವಗಳು ಸಂಕ್ರಮಿಸಲು ಇರುವ ಅವಕಾಶ (ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ನೆನೆಯುತ್ತುಂ: **ಆದಿಪು,** ೧೦. ೧೪ ವ); [ನಾ] ಮುಳುಗುವಿಕೆ, ಸ್ನಾನ (ಆ ನೃಪತಿ ನಿಚ್ಚಲ್ ಅಯ್ಯೂಱಾನೆಯಂ ಅವಗಾಹಮಿರಿಸುವಂ ಬೋದನದೊಳ್: **ಪಂಪಭಾ,** ೧. ೧೭)

ಅವಗಾಹನ – [ನಾ] ದಾಟುವಿಕೆ (ಮಹಾನದಾವಗಾಹನಸಮಯ ನೌದ್ರೋಣಿ ಸಂಕ್ರಮಾದಿವಿಧಾನ ಪ್ರಾಗ್ಲಲ್ಭ್ಯನುಂ ಅನುಸ್ಮರಣಮಾತ್ರ ನಿಷ್ಪಾದಿತ ಸಪ್ತತಳಾದಿ ಪ್ರಾಸಾದಪ್ರಕರಣನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ: **ಆದಿಪು,** ೧೧. ೩ ವ)

ಅವಗಾಹಮಿರಿಸು – [ಕ್ರಿ] ಮುಳುಗಿಸಿ ಸ್ನಾನ ಮಾಡಿಸು (ಏನಂ ಪೇಟ್ವುದೊ ಸಿರಿಯುದ್ದಾನಿಯಂ ಎಣ್ಣೆಯೊಳ್ ತೀವಿ ದೀರ್ಘಿಕೆಗಳಂ ಅಂತಾ ನೃಪತಿ ನಿಚ್ಚಲ್ ಅಯ್ಯೂಱ್ ಆನೆಯಂ ಅವಗಾಹಮಿರಿಸುವಂ ಬೋದನದೊಳ್: **ಪಂಪಭಾ,** ೧. ೧೭)

ಅವಗ್ರಹ – [ನಾ] ಅನಾವೃಷ್ಟಿ, ಬರಗಾಲ (ದೇವ ವಿನಯೋತ್ಕರ ಸಸ್ಯಾವಳಿ ಸುಗಿದಗಿದು ಕೂಡೆ ಬಾಡಿರ್ದುದು ಪಾಪಾವಗ್ರಹದಿಂ: **ಆದಿಪು,** ೧೦. ೬೩ ವ)

ಅವಗ್ರಾಹ – [ನಾ] ಆನೆಯ ಹಣೆ (ನಿರ್ಯಾಣೋನ್ನತ ಅವಗ್ರಾಹವಿಭಕ್ತವಿದುವಿಧಾನಶರೀರನುಂ: **ಆದಿಪು,** ೧೨. ೫೬ ವ)

ಅವಘಾಟಕ – [ನಾ] ಮಧ್ಯೆ ಕ್ರಮವಾಗಿ ಸಣ್ಣ ಸಣ್ಣ ಮುತ್ತುಗಳಿರುವ ಹಾರ (ಪ್ರತ್ಯೇಕೋಪಶೀರ್ಷಕ ಅವಘಾಟಕ ಪ್ರಕಾಂಡಕರತಳತರಬಂಧೋಪಪದ ಪಂಚಕಸಮೇತಂಗಳಾಗಿ: **ಆದಿಪು,** ೮. ೫೪ ವ)

ಅವಚಱ – [ನಾ] ಬೇಸರ, ಜಿಗುಪ್ಸೆ (ಕೊಂಕುವೆತ್ತ ಪೊಸನುಡಿಯೆ ಪುಗುಗುಮುಟಿದುದು ಸೈಱುತವಚಱನೆ ಮಾಡಿ: **ಆದಿಪು,** ೧. ೧೮)

ಅವಚಱು – [ಕ್ರಿ] [ಪ್ರೀತಿಗೆ] ದ್ರೋಹ ಬಗೆ (ಒರ್ಮೆಯುಂ ಅವಚಱದ ಒಲವಿನ ಕೂರ್ಮೆಯ ತತ್ಪತಿಗಂ ಆಕೆಗಂ ನಿಜವಂಶಕ್ಕಾರ್ಮಮೆನೆ ಪುಟ್ಟಿದರ್ ಜಯವರ್ಮ ಶ್ರೀವರ್ಮರೆಂಬರ್: **ಆದಿಪು,** ೨. ೩೭); [ಕ್ರಿ] ಬೇಸರ ಪಡು, ಜಿಗುಪ್ಸೆ ತಾಳು (ದಿವಸಮನೊಂದು ಮೇಣೆರಡು ಮೂಱನೆ ನಿಲ್ವುದು ಮೂಱುತಿಂಗಳಾಯ್ತು ಅವಚಱದಿಂತು ನಿಂದನೊಳನೇ: **ಆದಿಪು,** ೯. ೮೯)

ಅವತರಣಮಾರ್ಗ – [ನಾ] ದಾಟುವ ದಾರಿ (ಅನವರತ ನಿಹತ ನರ ಕರಿ ತುರಗ ನಿಕುರುಂಬ ಕೀಲಾಲ ಕಲ್ಲೋಲ ಪ್ರವರ್ತನ ಅನೇಕ ನದ ನದೀ ಪ್ರವಾಹಬಾಹುಳ್ಯದುಸ್ತರಾವತರಣ ಮಾರ್ಗಮುಂ: **ಪಂಪಭಾ,** ೧೩. ೫೧ ವ)

ಅವತಂಸ – [ನಾ] ಆಭರಣ (ಆಘ್ರಾತಪೂತಮೆನಿಸಿ ಪರೀತ ಭ್ರಮರಾವತಂಸಮಾದುದು ನಮೇರು ಮಂದಾರ ಪಾರಿಜಾತಸ್ತಬಕಂ: **ಆದಿಪು,** ೭. ೭೧)

ಅವತರಿಸು – [ಕ್ರಿ] ಇಳಿಬಿಡು (ಎನಗೀವುದು ನಿನ್ನನೆ ಪೋಲ್ವ ಪುತ್ರನಂ ಎಂಬುದುಂ ತಥಾಸ್ತುವೆಂದು ತನ್ನಂಶಮನಾಕೆಯ ಗರ್ಭದೊಳವತರಿಸಿ ಯಮಭಟ್ಟಾರಕಂ ಅಂತರ್ಧಾನಕ್ಕೆ ಸಂದಂ : **ಪಂಪಭಾ,** ೧. ೧೧೯); [ಕ್ರಿ] ಕೆಳಗಿಳಿದು ಬರು (ಅರಗು ಮೊದಲಾಗೆ ಧೃತ ಸಜ್ಜರಸಂ ಬೆಲ್ಲಂ ಸಣಂಬಿವೆಂಬಿವಱೆಂ ವಿಸ್ತರಿಸಿ ಸಮೆದ ಇಂದ್ರಭವನಮೆ ಧರೆಗವತರಿಸಿರ್ದುದೆನಿಸುವ ಅರಗಿನ ಮನೆಯಂ: **ಪಂಪಭಾ,** ೩. ೩)

ಅವತಾರ – [ನಾ] [ಜೈನ] ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು, ಜಿನನಾಗುವವನು ಮಾತೃಗರ್ಭಕ್ಕವತರಿಸುವುದು (ಅವತಾರ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ); [ಜೈನ] ನಲವತ್ತೆಂಟು ದೀಕ್ಷಾನ್ವಯಕ್ರಿಯೆಗಳಲ್ಲಿ ಒಂದು (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ); [ನಾ] ಇಳಿಸುವಿಕೆ (ಮಹಾಭಾರಾವತಾರದೊಳ್ ಅತಿರಥ ಮಹಾರಥ ಸಮರಥ ಅರ್ಧರಥರ್ಕಳಂ ಪಡಲ್ವಡಿಸುವುದಱೆಂ .. .. ಬೀರದೊಳರಿಕೇಸರಿಯುಮಾಗಿ, **ಪಂಪಭಾ,** ೧೪. ೩೭ ವ)

ಅವತಾರಂಗೆಯ್ – [ಕ್ರಿ] ಇಳಿದು ಬರು (ಚಾರಿಸಿ ಬಾಳಾಗಮಮಂ ಅವತಾರಂಗೆಯ್ದಂತೆ ಕಾಲದಂತಕನನೆ ಪೋಲ್ತು ಆರುತ್ತುಂ ಕವಿವ ಅದಟರಂ ಓರೊಂದೋರೊಂದೆ ಪೊಯ್ದು ಕೊಂದರ್ ಪಲರಂ: **ಪಂಪಭಾ,** ೧೦. ೮೩)

ಅವತೀರ್ಣ – [ಗು] ಇಳಿದ (ಕೊಳಗೊಂಡಾ ನೀರೊಳರ್ದಿರ್ದು ಚಿತ್ತಶಯಾಕ್ರೀಡಸರೋವತೀರ್ಣ ರತಿಯೊಂದಾಕಾರಮಂ ತಾಳ್ದಿದಳ್: **ಆದಿಪು,** ೧೧. ೧೮)

ಅವದಾತ – [ಗು] ಸ್ವಚ್ಛವಾದ (ಉತ್ತಪ್ತಾವದಾತಲೋಹಪುತ್ರಿಕಾನದ್ಧ ಲಾಕ್ಷಾ ಹಿಂಗುಲಿಕ ಪಾಟಲಫಲಂ ಅರ್ಧಕರವಾಳಜಾಳನ ಪ್ರಕಟಿತಭಟಬಿಭೀಷಿಕಾಡಂಬರಂ: **ಆದಿಪು,** ೧೩. ೪೫ ವ)

ಅವದಾತೆ – [ನಾ] ಬೆಳ್ಳಗಿರುವಾಕೆ, ಸುಂದರಿ (ಚಂಪಕದಾಮ ಅವದಾತೆಯುಮಾಗಿ ಕುಸುಮ ಸುಕುಮಾರತನುವಪ್ಪುದಱೆಂದೆ ಅತನು ಪರಿತಾಪಮಂ ಸೈರಿಸಲಾಱದೆ: **ಆದಿಪು,** ೪. ೨೧ ವ)

ಅವಧರಿಸು – [ಕ್ರಿ] ತಿಳಿ, ಅರ್ಥಮಾಡಿಕೊ (ಜವನಾಣೆಗಂ ಆಜ್ಞೆಗಂ ಉಂಟೆ ವಕ್ರಂ ಆ ಖಳನ ತುಟಿವುಮಂ ಸೋಂಕುಮಂ ಆರವಧರಿಪರ್: **ಆದಿಪು,** ೪. ೬೭); [ಕ್ರಿ] ಮನಸ್ಸಿಗೆ ತಂದುಕೊ (ಎನಿತೆನಿತು ಭವದೊಳಾಯ್ತಿಲ್ಲೆನಿತಂ ನೆನವುದನಿತಂ ಅವಧರಿಸುವುದೋ: **ಆದಿಪು,** ೯. ೫೪); [ಕ್ರಿ] ವಿವೇಚನೆ ಮಾಡು (ಅವಧರಿಸದೆ ನಿನ್ನೊಳ್ ಪಿರಿದೊಂದವಿನಯಮಂ ನೆಗಟ್ದ ದೋಷಮಂ ತಪದೊಳ್ ನೀಗುವೆಂ: **ಆದಿಪು,** ೧೪. ೧೩೧)

ಅವಧಾರಿಸು – [ಕ್ರಿ] ಗಮನವಿಟ್ಟು ಕೇಳು (ದೂತನ ನುಡಿಯುಮಂ ರಾಜಾದೇಶಮುಮಂ ಅವಧಾರಿಸಿ ಬಂದ ದೂತನಂ ಮನ್ನಿಸಿ: **ಆದಿಪು,** ೧೪. ೩೧ ವ); [ಕ್ರಿ] ಸೈರಿಸು (ಅಶ್ವತ್ಥಾಮಂ ಕರ್ಣನೊಳಾದ ಮುಳಿಸಂ ಅವಧಾರಿಸಲಾಱದೆ ಸುಯೋಧನನಿಂತೆಂದಂ: **ಪಂಪಭಾ,** ೧೨. ೪೨ ವ)

ಅವಧಿ – [ನಾ] [ಜೈನ] ಕಾಲದೇಶಗಳು ಎಷ್ಟೇ ದೂರವಾಗಿದ್ದರೂ ಅಲ್ಲಿನ ವಿಷಯಗಳನ್ನು ತಿಳಿಯಬಹುದಾದ ಅವಧಿಜ್ಞಾನ: ಕುಮತಿ ಕುಶ್ರುತ ವಿಭಂಗ ಮತಿ ಶ್ರುತ ಅವಧಿ ಮನಃಪರ್ಯಾಯ ಮತ್ತು ಕೇವಲ ಎಂಬ ಎಂಟು ಬಗೆಯ ಜ್ಞಾನಗಳಲ್ಲಿ ಒಂದು (ಮನಃಖೇದಮಿದಂ ಪ್ರಬೋಧಿಸಿ ನಿಜ ಅವಧಿಯಿಂ ಕಳೆಯಿಂ ಮುನೀಶ್ವರಾ: **ಆದಿಪು,** ೨. ೩೫); [ನಾ] ಕಾಲಮಿತಿ, ಗಡುವು (ಅವಧಿಯನೊಂದು ತಿಂಗಳೆಡೆಯಿಟ್ಟು ಇನಿಯಂ ತಡೆದಿರ್ಪನಲ್ಲನೆಂಬವಸರದೊಳ್: **ಆದಿಪು,** ೧೨. ೪೨); ಎಲ್ಲೆ, ಮೇರೆ (ಸಪ್ತಸಮುದ್ರಂ ಕರೆಗಣ್ಮಿ ತನ್ನವಧಿಯಂ ದಾಂಟಿತ್ತು: **ಪಂಪಭಾ,** ೯. ೯೪)

ಅವಧಿಜ್ಞಾನ – [ನಾ] ಕಾಲದೇಶಗಳ ಮಿತಿ ಮೀರಿ ಯಾವುದೇ ಜಾಗ ಕಾಲದಲ್ಲಿ ನಡೆಯುವದನ್ನು ತಿಳಿಯುವ ಶಕ್ತಿ (ಅವಧಿಜ್ಞಾನದಿಂ ತಾನಾ ಕನಸುಗಳನಱೆವನಾಗಿಯುಂ: **ಆದಿಪು.** ೧೫. ೨೫ ವ);

ಅವಧೂತ – [ಗು] ಅಲುಗಾಡಿಸಲ್ಪಟ್ಟ, ತಳ್ಳಲ್ಪಟ್ಟ (ಜಯವರ್ಮನುಂ ಅವಮಾನಪವಮಾನಾವಧೂತನಾಗಿ ಪೋಗಿ: **ಆದಿಪು,** ೨. ೩೮ ವ); ಬೀಸಲ್ಪಟ್ಟ (ಸುರವಧೂಲೀಲಾವಧೂತ ಪ್ರತಿಕ್ಷಣ ಚಂಚಚ್ಚಮರೀರುಹಂ: **ಆದಿಪು,** ೨. ೭೮); [ಗು] ಗೆದ್ದ (ಭವದೀಯ ಬಳವಿಜೃಂಭಿತರವದಿಂ ತ್ರಸ್ತನೆಂ ಅಧೀಶ ಬಂದೆಂ ಕಾಣಲ್ ಭವದಂಘ್ರಿಸರೋಜಮಂ ಅವಧೂತಾರಾತಿನೃಪ ಭವತ್ಕಿಂಕರನೆಂ: **ಆದಿಪು,** ೧೩. ೨೮)

ಅವಧ್ಯ – [ನಾ] ಕೊಲ್ಲಲಸಾಧ್ಯನಾದವನು (ಜಗದೊಳ್ ಅವಧ್ಯನಂ ಗೆಲಲ್ ಬಾರದು ಆದೊಡಮೇಂ ಶಿಖಂಡಿ

ತೊಟ್ಟಗೆ ಕೊಳೆ ಬಂದು ಮುಂದೆ ನಿಲೆ ಸಾವೆನಗಪ್ಪುದು: **ಪಂಪಭಾ**, ೧೧. ೩೨)

ಅವನತ – [ಗು] ನಮ್ರವಾದ (ಅಂತು ಪಾಂಡುರಾಜಂ ಅಧಿಕತೇಜನುಂ ಅವನತವೈರಿ ಭೂಭೃತ್ಸಮಾಜನುಂ ಆಗಿ ನೆಗಟುತ್ತಿರ್ದೊಂದು ದಿವಸಂ: **ಪಂಪಭಾ**, ೧. ೧೧೦ ವ)

ಅವನತಮಣಿಮಕುಟ – [ನಾ] [ತನ್ನ] ರತ್ನಖಚಿತ ಕಿರೀಟವನ್ನು ಬಾಗಿಸಿದವನು (ಧರ್ಮತನೂಜಂಗೆ ವಿರಾಟಂ ಅವನತಮಣಿಮಕುಟಂ ಇಂತೆಂದು ಬಿನ್ನಪಂಗೆಯ್ದಂ: **ಪಂಪಭಾ**, ೯. ೬ ವ)

ಅವನತವೈರಿ – [ಗು] ಬಗ್ಗಿಸಲ್ಪಟ್ಟ ವೈರಿಯುಳ್ಳವನು (ಕೌರವಬಲದ ಉರ್ಕನೊಂದಿನಿಸು ಮಾಣಿಸಿ ಪೋಪಂ ಇಳೇಶನಲ್ಲಿಗೆ ಎಂದು ಅವನತವೈರಿ ವೈರಿಬಲವಾರಿಧಿಯಂ ವಿಶಿಖೌರ್ವವಹ್ನಿಯಿಂ ತವಿಸಿ: **ಪಂಪಭಾ**, ೧೨. ೧೨೧)

ಅವನತಿ – [ನಾ] ಬೀಳುವಿಕೆ, ಬಾಗುವಿಕೆ (ಏಕಾಯ್ತೀ ಕಿರೀಟಕ್ಕವನತಿಯೆನೆ ದೇವೋತ್ತಮಾಂಗಂಗಳುಂ ಬಾಗಿದುವು: **ಆದಿಪು**, ೭. ೩೯)

ಅವನತೋತ್ತಮಾಂಗ – [ನಾ] ಬಾಗಿದ ತಳೆಯುಳ್ಳ, ತಲೆಬಾಗಿದ, ನಮಸ್ಕರಿಸಿದ (ಅರಿನೃಪವನಕ್ಕೆ ಉಪದ್ರವಕಾರಿಯಾಗಿ ನೆಲಂ ಮೂರಿವಿಟ್ಟಂತೆ ಬಿಟ್ಟಿರ್ದ ಅಜಾತಶತ್ರುವಂ ಅವನೋತ್ತಮಾಂಗನಾಗಿ ಕಂಡು: **ಪಂಪಭಾ**, ೯. ೮೭ ವ)

ಅವನದ್ಧ – [ನಾ] ಮೃದಂಗದಂತಹ ಚರ್ಮವಾದ್ಯ (ತತ ಘನ ಸುಷಿರ ಅವನದ್ಧವಾದ್ಯಂಗಳಂ: **ಆದಿಪು**, ೫. ೩೫)

ಅವನಮ್ರ – [ಗು] ಬಾಗಿದ (ಮತ್ತಂ ಅನೇಕ ಕುಸುಮಕಿಸಲಯ ಫಳಪರಿಣತಫಳಾವನಮ್ರ ಆಮ್ರತರುನಿರಂತರಿತ ವನಲಕ್ಷ್ಮಿಯಂ ಒಱಲ್ದು ನೋಡುತ್ತಿರ್ಪನ್ನೆಗಂ: **ಆದಿಪು**, ೫. ೪೫ ವ)

ಅವನಿ – [ನಾ] ಭೂಮಿ (ಗೋಕರ್ಣನಾಥನಂ ಗೌರೀನಾಥನಂ ಅವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ ಮೂರ್ತಿಯಂ ತ್ರೈಲೋಕ್ಯಸಂಗೀತಕೀರ್ತಿಯಂ ಕಂಡು ಕೆಯ್ಗಳಂ ಮುಗಿದು: **ಪಂಪಭಾ**, ೪. ೨೬ ವ)

ಅವನಿಜ – [ನಾ] ಮರ (ನೆರೆದು ಅವರೊಳ್ ಮುನ್ನಿನ ಭವದ ಪುಣ್ಯಕಲ್ಪಾವನಿಜದ ತನಿವಣ್ಣ ರಸದೆ ತಣ್ಣನೆ ತಣಿವಂ: **ಆದಿಪು**, ೬. ೪೮)

ಅವನಿಪತಿ – [ನಾ] ರಾಜ (ಆತಂ ನಿಜವಿಜಯಖ್ಯಾತಿಯನಾಳ್ದು ಆಳ್ದನಧಿಕಬಲನವನಿಪತಿವ್ರಾತ ಮಣಿ ಮಕುಟ ಕಿರಣದ್ಯೋತಿತ ಪಾದಂ ಸಪಾದ ಲಕ್ಷಕ್ಷಿತಿಯಂ: **ಪಂಪಭಾ**, ೧. ೧೬)

ಅವಭಾಸಿ – [ಗು] ಕಾಣಿಸಿಕೊಡುವ (ಯುಗಪತ್ ಸಕಳಪದಾರ್ಥ ಯಥಾರ್ಥಾವಭಾಸಿಯಪ್ಪ ಕೇವಲಜ್ಞಾನದಿಂ ವಿಶೇಷ ನಿಶ್ಚಯಮಂ ಮಾಡುವನೆಂದು: **ಆದಿಪು**, ೧೫. ೨೧ ವ)

ಅವನಿಭೃತ್ – [ನಾ] ಪರ್ವತ (ಉದ್ವಂಶವಿಂಧ್ಯಾ ಅವನಿಭೃತ್ ಮೂರ್ಧಾಧಿರೂಢ ದ್ವಿಪಭಯದ ರವಂ: **ಆದಿಪು**, ೧೪. ೯೮)

ಅವನಿಭೃನ್ಮೂರ್ಧ – [ನಾ] (ಅವನಿಭೃತ್+ಮೂರ್ಧ) ಪರ್ವತಶಿಖರ (ಉದ್ವಂಶವಿಂಧ್ಯಾ ಅವನಿಭೃನ್ಮೂರ್ಧಾಧಿರೂಢ ದ್ವಿಪಭಯದ ರವಂ: **ಆದಿಪು**, ೧೪. ೯೮)

ಅವನೀರಕ್ಷಣದಕ್ಷದಕ್ಷಿಣಭುಜಸ್ತಂಭ – [ನಾ] ಭೂಮಿಯನ್ನು ರಕ್ಷಿಸುವುದರಲ್ಲಿ ಕಂಬದ ಹಾಗಿರುವ ಬಲದೋಳು (ಎನ್ನ ಭಾಗಮನದಂ ತಾನೀಯದಿರ್ದಾಗಳ್ ಎನ್ನ ಅವನೀರಕ್ಷಣದಕ್ಷದಕ್ಷಿಣಭುಜಸ್ತಂಭಂ ಕೊಲಲ್ ಸಾಲದೇ: **ಪಂಪಭಾ**, ೯. ೨೬)

ಅವನೀಪಾಲ – [ನಾ] ರಾಜ (ನಾಳೆ ಸಯಂಬರಮೆನೆ ಪಾಂಚಾಳ ಮಹೀಪಾಳಂ ಅಖಿಳ ಭೂಭೃತ್ ನಿಕರಕ್ಕೆ ಓಳಿಯೆ ಸಾಱೆದೊಡೆ ಅವನೀಪಾಲರ್ ಕೆಯ್ಗಯ್ಯಲೆಂದು ಪೞಿಮೞಿಯಾದರ್: **ಪಂಪಭಾ**, ೩. ೪೨)

ಅವಪಾತ – [ನಾ] ಕಂದರ (ಜಾನುಭಂಜನಿಶೂಲಪ್ರಕರ ಪರಿವೃತಂಗಳುಂ ಕೂಪ ಕೂಟ ಅವಪಾತ ಲೋಹಕಂಟಕ ಸಂಕಟಂಗಳುಂ: **ಆದಿಪು**, ೧೩. ೫೭ ವ)

ಅವಭಾಸಿ – [ನಾ] ತೋರುವಂಥದು (ಶೂನ್ಯವಾದಪ್ರಕಾಶನಪರಂ ಆವುದಂತರ್ಬಹೀರೂಪದಿಂ ವಿಶದದರ್ಶನಾವಗಮ್ಯಂ ಅದೆಲ್ಲಂ ಅಸತ್ಯಾವಭಾಸಿ: **ಆದಿಪು**, ೨. ೯ ವ)

ಅವಭೃತಸವನ – [ನಾ] ಸಮಾರೋಪ ಸ್ನಾನ (ಮನದೊಳೊದವಿದಲಂಪಿಂ ಜಿನಸವನಗಂಧತೋಯದಿಂ ಅನಿಮಿಷಲೋಚನವರ್ಗಮಾದುದು ಅವಭೃತಸವನಂ: **ಆದಿಪು**, ೭. ೧೦೪)

ಅವಭೃತಸ್ನಾನ – [ನಾ] ಯಾಗದ ಕೊನೆಯಲ್ಲಿ ಮಾಡುವ ಮಂಗಳಸ್ನಾನ (ಅನಿತೊಂದು ಮಹಾಪ್ರಘಟ್ಟದೊಳ್ ಅಗ್ರಪೂಜೆಯಂ ನಾರಾಯಣಂಗೆ ಕೊಟ್ಟ ಅವಭೃಥಸ್ನಾನದೊಳ್ ಪಿರಿದುಮೊಸಗೆಯಂ ಮಾಡಿ: **ಪಂಪಭಾ**, ೬. ೬೫ ವ)

ಅವಮೋದರ್ಯ – [ನಾ] [ಜೈನ] ಒಂದು ಬಗೆಯ ತಪಸ್ಸು; ಆಹಾರದಲ್ಲಿ ಒಂದೊಂದು ತುತ್ತು ಕಡಿಮೆ ಮಾಡುತ್ತ, ಕೊನೆಗೆ ಒಂದು ಅಗುಳಿಗೆ ಸೀಮಿತಗೊಳಿಸುವ ಕ್ರಮ (ಏಕಕಬಳೋನಾದ್ಯೇಕಸಿಕ್ಥಪ್ರಮಾಣಂಬರಂ ಬರ್ಪ ಅವಮೋದರ್ಯಮೆಂ ಎರಡನೆಯ ತಪದೊಳಂ: **ಆದಿಪು**, ೬. ೩೦ ವ)

ಅವಯವ – [ನಾ] ಪಂಪನ **ಆದಿಪುರಾಣ**ದ ಎಂಟು ವರ್ಣನ ವಿಷಯಗಳು (ಲೋಕಕಾರಕಕಥನಮುಂ ದೇಶನಿವೇಶೋಪ ದೇಶಮುಂ ನಗರಸಂಪತ್ ಪರಿವರ್ಣನಮುಂ ರಾಜ್ಯರಮಣೀಯತಾಖ್ಯಾನಮುಂ ತೀರ್ಥಮಹಿಮ ಸಮರ್ಥನಮುಂ ಚತುರ್ಗತಿಸ್ವರೂಪ ನಿರೂಪಣಮುಂ ತಪೋದಾನವಿಧಾನವರ್ಣನಮುಂ ತತ್ಫಳಪ್ರಾಪ್ತಿಪ್ರಕಟನಮುಂ ಎಂದಿಂತು ಅವಯಂವಂಗಳ್ ಎಂಟಕ್ಕುಂ: **ಆದಿಪು**, ೧. ೪೨ ವ); **[ನಾ]** ಲೀಲಾಜಾಲವಾಗಿ, ಸುಲಭ (ನಾಕಿನಿಕಾಯಂ ಜ್ಯೋತಿರ್ಲೋಕಮಂ ಅವಯವದಿನುಱಿಯೆ ಪೋಗೆ: **ಆದಿಪು**, ೭. ೬೦); ಇಡಿಯಾಗಿ (ಚೆಲ್ವೆಸೆದುದು ಷಣ್ಣವತಿಸಹಸ್ರ ಅಂತಃಪುರಮವಯವದೊಳೆ ಭರತಚಕ್ರವರ್ತಿಯ ಕೆಲದೊಳ್: **ಆದಿಪು**, ೧೧. ೩೯); **[ನಾ]** ಅಲಕ್ಷ್ಯ (ದಿವಿಜಾಶ್ವತ್ಥಾಮದೊಳ್ ಈ ಭುವನಂಗಳ್ ನಡುಗೆ ಶಿಶು ಸರಂಗೆಯ್ದೊಡೆ ನಕ್ಕು ಅವಯವದೆ ಕುಂಭಸಂಭವಂ ಇವಂ ಅಶ್ವತ್ಥಾಮನೆಂದು ಪೆಸರಿಡೆ

ನೆಗಟ್ಟಿಂ: **ಪಂಪಭಾ,** ೨. ೪೪); **[ನಾ]** ಲೀಲೆ, ವಿಲಾಸ (ಮನಮಂ ಪತ್ತಿಸಿ ಜೊತ್ತಿಸೆ ಮದನೋನ್ಮತ್ತೆಯರ್ ಅವಯವದೆ ಬಂದರ್ ಅರಸಿಯರ್ ಅರೆಬರ್: **ಪಂಪಭಾ,** ೫. ೫೯)

ಅವರಪಾರ – ಪರಿಮಿತ ವಿಸ್ತಾರದ (ಮುಕ್ತಿಸಾಮ್ರಾಜ್ಯದೊಳ್ ಅತಿಪ್ರಾಜ್ಯಸಂಜೀವಿತ ನಿಸ್ಸ್ಪೃಹನನ್ ಅವರಪಾರ ಕುಲ್ಯಾಪರಿಕ್ಷೇಪ ಪರಿಮಿತದೊಳ್: **ಆದಿಪು,** ೮. ೮ ವ) [ಎಲ್. ಬಸವರಾಜು ಅವರು ಅಂಗೀಕರಿಸಿರುವ ಪಾಠ]

ಅವರುದ್ಧ – [ಗು] ತುಂಬಿದ, ಹರಡಿದ (ಉಪವನಲತಾ ಕುಸುಮಪರಿಮಳ ಸಮೀರಣ ಆಂದೋಳಿತ ಪ್ರಾಸಾದ ಪತಾಕಾವರುದ್ಧ ಅಂಬರಮುಂ: **ಆದಿಪು,** ೩. ೮ ವ)

ಅವರೋಧವಧು – [ನಾ] ಅಂತಃಪುರಸ್ತ್ರೀ (ಮೂವತ್ತಿರ್ಛಾಸಿರ್ಬರ್ ಅವರೋಧವಧೂನಿವಹಮಂ: **ಆದಿಪು,** ೧೫. ೩ ವ)

ಅವಲಗ್ನ – [ಗು] ಜೋಡಿಸಿದ (ವಿವಿಧಮಣಿನಿಕೇತನಾಗ್ರಾವಲಗ್ನ ಕೇತುಮಾಲಾವಿಳಸಿತ ಸಾಕೇತಮಂ ಬಳಸಿ: **ಆದಿಪು,** ೭. ೪೩ ವ)

ಅವಲಿಪ್ತ – [ನಾ] ಮದಿಸಿದವರು (ಅಂತು ನಿಜವಿದ್ಯಾಜ್ಞಾನ ಮದಾವಲಿಪ್ತರ್ ಇರ್ವರುಂ ಒಂದು ದಿವಸಂ: **ಆದಿಪು,** ೩. ೭೫ ವ)

ಅವಲೀಢ – [ಗು] ವ್ಯಾಪಿಸಿದ (ಅಗುರ್ವಿಂದಾದಂ ಚೆಲ್ವಾಯ್ತು ಚಕ್ರಿದ್ವಿಪಘಟೆ ನಿಶಿತಾಸ್ತ್ರಾಂಶುಜಾಳಾ ಅವಲೀಢಂ: **ಆದಿಪು,** ೧೪. ೯೭)

ಅವಲೇಪ – [ನಾ] ಮದವುಳ್ಳವನು (ಧರಣೇಂದ್ರನಿದಿರೊಳ್ ಅವರಂತರ್ನಿಗೂಢಕೋಪ ಅವಲೇಪರುಮ್ ಈಷತ್ ಆರೋಪಿತಭ್ರೂಚಾಪರುಮಾಗಿ: **ಆದಿಪು,** ೯. ೧೦೪ ವ); **[ನಾ]** ಸೊಕ್ಕು, ಮದ (ಎಂದು ನಿಜಭುಜಬಳಾವಲೇಪಮನೆ ಮುಂದಿಟ್ಟು ನುಡಿದ ಚಕ್ರವರ್ತಿಯಂ ಪುರೋಹಿತಪ್ರಮುಖ ಕುಲವೃದ್ಧರ್: **ಆದಿಪು,** ೧೨. ೭೨ ವ)

ಅವಷ್ಟಂಭ – [ನಾ] ಆಶ್ರಯ (ಏವನೆಮಗೆಂಬ ಶೌರ್ಯಮದ ಅವಷ್ಟಂಭದೊಳವಂದಿಜೆಂತುಱದಿರೆ: **ಆದಿಪು,** ೧೪. ೨೯); **[ನಾ]** ದರ್ಪ (ಆಗಳಾ ಕುಂಭಸಂಭವಂ ಪರಾಕ್ರಮಧವಳನ ಪರಾಕ್ರಮಕ್ಕೆ ಮೆಚ್ಚಿ ಕದಪಂ ಕರ್ಚಿ ದ್ರುಪದನಂ ತನ್ನ ಮಂಚದ ಕಾಲೊಳ್ ಕಟ್ಟವೇೞ್ದು ತಲೆಯ ಮೇಲೆ ಕಾಲನವಷ್ಟಂಭದಿಂ ನೀಡಿ: **ಪಂಪಭಾ,** ೨. ೬೨ ವ); **[ನಾ]** ಹೆಮ್ಮೆ (ದೇವರಂ ಅಡಿಗಡಿಗೆ ಎೞಗಿಸಿ ಸಕಳ ಅವನಿತಳದ ಅದಟರಂ ಪಡಲ್ವಡಿಸಿದ ಶೌರ್ಯ ಅವಷ್ಟಂಭದೊಳ್ ಆನಿರೆ ಗೋವಳಿಗಂಗೆ ಅಗ್ರಪೂಜೆಯಂ ನೀಂ ಕುಡುವಾ: **ಪಂಪಭಾ,** ೬. ೫೭)

ಅವಷ್ಟಂಭಿಸು – [ಕ್ರಿ] ಹೆಮ್ಮೆಪಡು (ಮಧ್ಯಮಖಂಡಮುಮಂ ಔಂಕಿ ಪೂಟಿ ಪೊಕ್ಕು ಅವಷ್ಟಂಭಿಸಿ ನಿಂದಾಗಳ್: **ಆದಿಪು,** ೧೩. ೫೬ ವ); **[ಕ್ರಿ]** ಕುಳಿತುಕೊ (ದುಕೂಲಪ್ರಚ್ಛದಾಚ್ಛಾದಿತ ಸುಖಾಸೀನಂ ಮಣಿಮಯಸಿಂಹಾಸನಮನವಷ್ಟಂಭಿಸಿ: **ಆದಿಪು,** ೧೧. ೨೭ ವ)

ಅವಸಕ್ತ – [ಗು] ತನ್ಮಯವಾದ (ಕುಸುಮಾಪಚಯ ವ್ಯಸನ ಅವಸಕ್ತ ಸುರಯುವತಿ ಪಾಣಿಪಲ್ಲವರಾಗಂ: **ಆದಿಪು,** ೬. ೯೬)

ಅವಸಥ – [ನಾ] ನೆಲೆ (ಎಸಗಿದುದು ಸಮೀರಂ ಶೈತ್ಯಸೌರಭ್ಯಮಾಂದ್ಯ ಅವಸಥಂ: **ಆದಿಪು,** ೮. ೩೫); **[ನಾ]** ಆವಾಸಸ್ಥಾನ (ಪೆಸರೊಳ್ ಲಕ್ಷ್ಮಿಯೆಂ ಇನ್ನೆಗಂ ನೆಲಸಿ ತಾಂ ದುರ್ಯೋಧನೋರುಸ್ಥಳ ಅವಸಥಂ ದ್ರೋಣನದೀಜ ಕರ್ಣಭುಜವೀರ್ಯಾವೇಷ್ಟಿತಂ ಮಾಡೆ ಸಂತಸದಿಂದಿರ್ದೆಂ: **ಪಂಪಭಾ,** ೧೩. ೧೦೦)

ಅವಸರ – [ನಾ] ಅವಕಾಶ (ಪರಮನನೋಲಗಿಸಿ ಕೃತಾರ್ಥರೆಂ ಅಪ್ಪೆವು ಅಮೋಘ ಅವಸರಂಗುಡಿಸುವುದು: **ಆದಿಪು,** ೯. ೧೦); **[ನಾ]** ಸಂದರ್ಭ (ಅವಧಿಯನೊಂದು ತಿಂಗಳೆಡೆಯಿಟ್ಟು ಇನಿಯಂ ತಡೆದಿರ್ಪನಲ್ಲನೆಂಬವಸರದೊಳ್: **ಆದಿಪು,** ೧೨. ೪೨); **[ನಾ]** ಆವಶ್ಯಕತೆ (ನಿನ್ನವಸರಕ್ಕೆ ಬಂದು ಕೂಡುವ ಬಲದೇವನುಮಂ ನಿನ್ನಿರ್ದೆಡೆಯಂ ಅಱಿಯದೆ ಅಱಸುವ ಅಶ್ವತ್ಥಾಮ ಕೃಪಕೃತವರ್ಮರುಮಂ ಕೂಡಿಕೊಂಡು: **ಪಂಪಭಾ,** ೧೩. ೭೦ ವ);

ಅವಸರ್ಪಿಣಿ – [ನಾ] [ಜೈನ] ಧರ್ಮ, ಸತ್ಯ, ನ್ಯಾಯ, ಆಯುಸ್ಸು, ಬಲ, ಸುಖ ಮುಂತಾದುವು ಕ್ರಮವಾಗಿ ಕಡಿಮೆಯಾಗುತ್ತ ಅಧರ್ಮ ಅನ್ಯಾಯಾದಿಗಗಳೇ ತುಂಬಿಕೊಳ್ಳುವ ಕಾಲ (ಶರೀರ ಬಳ ಆಯುಃ ದೇಹಪ್ರಮಾಣೋಪಚಯ ಅಪಚಯ ಹೇತುತ್ವದಿಂದಂ ಉತ್ಸರ್ಪಿಣಿ ಅವಸರ್ಪಿಣಿ ನಾಮಮಂ ಪಡೆದುದು: **ಆದಿಪು,** ೬. ೪೮ ವ)

ಅವಸಾನ – [ನಾ] ಅಂತ್ಯ, ಕೊನೆ (ಆಗಳ್ ಉಭಯಬಲಂಗಳೊಳಂ ಚಾತುರ್ಯಾಮಾವಸಾನಘಟಿತ ಘಂಟಿಕಾಧ್ವನಿಗಳುಂ ಸಂಧ್ಯಾಸಮಯಸಮುದಿತ ಶಂಖಧ್ವನಿಗಳುಂ: **ಪಂಪಭಾ,** ೧೦. ೩೫ ವ)

ಅವಸಾನಕಾಲ – [ನಾ] ಕೊನೆಗಾಲ, ಅಂತಿಮ ಕಾಲ (ಪಾರ್ವನೆಂದೆನ್ನೊಳ್ ಮುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಮವಸಾನಕಾಲದೊಳ್ ಬೆಸಕೆಯ್ಯದಿರ್ಕೆ: **ಪಂಪಭಾ,** ೧. ೧೦೫ ವ)

ಅವಸ್ಕಂದ – [ನಾ] ಮುತ್ತಿಗೆ (ಅವಸ್ಕಂದಪ್ರಯಾಣಕ್ಷಮಾ ಅವನಿಪಾಳವ್ರಜಮೀಗಳೆಮ್ಮೊಡನೆ ಬರ್ಕೆಂದಂ ರಣಾನಂದದಿಂ: **ಆದಿಪು** ನರಸಿಂ, ೪. ೯೧)

ಅವಸ್ತು – [ನಾ] ಯೋಗ್ಯನಲ್ಲದವನು (ಮೃದುಪಾದಮಾದ ವಾಕ್ತ್ರೀಸುಭಗಂ ಕಳಾಕಳಿತಮೆಂಬ ನೆಗೞ್ತೆಯನಾಳ್ದ ಕಬ್ಬಮಂ ಕೂಸುಮಂ ಈವುದು ಈವುದರಿಕೇಸರಿಗಲ್ಲದೆ ಅವಸ್ತುಗೀವುದೇ: **ಪಂಪಭಾ,** ೧. ೯); **[ನಾ]** ಕಃಪದಾರ್ಥ, ಕೆಲಸಕ್ಕೆ ಬಾರದುದು (ಇದು ದಲ್ ಅವಸ್ತುವೆನ್ನದೆ ಮದುಕ್ತಿಯನೊಯ್ಯನೆ ಕೇಳ್ದು ದಿವ್ಯಚಿತ್ತದೊಳವಧಾರಿಸು: **ಆದಿಪು,** ೮. ೧೧)

ಅವಸ್ತುಭೂತ – [ನಾ] ನಿಷ್ಪ್ರಯೋಜಕ (ಅವಸ್ತುಭೂತನೆಂದಾದಮೆ ಭೂತಳಂ ಪಱಿಯೆ ತೇಜಮೆ ಕೆಟ್ಟಪುದು ಇಂತಿದರ್ಕೆ ಪದ್ಮೋದರ ನೀನೆ ಪೇೞ್ ಬಗೆದು ಕಜ್ಜಮನೀಗಳೆ ದಿವ್ಯಚಿತ್ತದಿಂ: **ಪಂಪಭಾ,** ೯. ೧೮)

ಅವಸ್ತುಮಾಡು – [ಕ್ರಿ] ಗಣನೆಗೆ ತಂದುಕೊಳ್ಳದಿರು (ಪ್ರಭು ಕಿಱೆಯಾತನಂ ನಿಱೆಸಿ ರಾಜ್ಯದೊಳೆನ್ನಂ ಅವಸ್ತುಮಾಡಿ ಪೂಣ್ಧಭಿಭವಂ ಈ ಭವದೊಳಿಂತಿದು ನೀಗದು: **ಆದಿಪು,** ೨. ೩೮)

ಅವಹಿತ – [ಗು] ಗಮನವಿತ್ತ (ಯೋಗಯೋಗ್ಯಂಗಳೊಳ್ ಅವಹಿತಧ್ಯಾನಾಧೀನಮಾನಸನಾಗಿ ವಿಹಾರಿಸುತ್ತುಂ: **ಆದಿಪು,** ೧೦. ೧೩ ವ)

ಅವಳ್ದಿರ್ – **[ನಾ]** ಅವಳ್ ಎಂಬ ಸರ್ವನಾಮದ ಬಹುವಚನ ರೂಪ, ಆಕೆಗಳು (ದೇವಸೌಂದರಿಯರ ದಿವ್ಯಮಪ್ಪ ಪೊಸಗಂಪಿನ ಅಲಂಪಂ ಅವುಂಕಿಕೊಂಡು ಅವಳ್ದಿರ ಮಿಳಿರ್ವ ಒಳ್ನುರುಳ್ಗಳನೆ ಲೀಲೆಯಿನಾಡಿಸಿ: **ಆದಿಪು,** ೨. ೬೫)

ಅವಱ್ – **[ನಾ]** ಅವುಗಳು (ಕೆಲದ ಪೆಣಂಗಳೆಲ್ಲಮಂ ಅವಱ ಮೇಲೊಟ್ಟಿ: **ಪಂಪಭಾ,** ೮. ೫೨ ವ)

ಅವಾಗ್ಗೋಚರ – [ನಾ] ವರ್ಣನೆಗೆ ಸಿಕ್ಕದ (ಖೇಚರಿಯೋ ಭೂಚರಿಯೋ ನಿಶಾಚರಿಯೋ ರೂಪು ಬಣ್ಣಿಸಲ್ಕೆ ಆರ್ಗಂ ಅವಾಗ್ಗೋಚರಂ ಈ ಕಾನನಮುಂ ಅಗೋಚರಂ ಇವಳ್ ಇಲ್ಲಿಗೇಕೆ ಬಂದಳೊ ಪೇೞಿಂ: **ಪಂಪಭಾ,** ೩. ೧೪)

ಅವಾಙ್ಮಾನಸಗೋಚರ – **[ನಾ]** [ಅ+ವಾಕ್+ಮಾನಸಗೋಚರ] ಮಾತಿಗೂ ಮನಸ್ಸಿಗೂ ಕಾಣಿಸದ, ನಿಲುಕದ (ವರತನುವನೊತ್ತಿ ಕಪ್ಪಂಗೊಂಡುದ್ಯೋಗದ ಕಲಿತನಮಂ ಪೊಗೞ್ವಾಗಳವಾಙ್ಮಾನಸಗೋಚರಂ ಪೌರವನಾ: ೧೩. ೩)

ಅವಾಪ್ತ – [ಗು] ಪಡೆಯಬಹುದಾದ (ಮನೋರಥ ಅವಾಪ್ತ ದಿವ್ಯಭೋಗಂ ಮನೋರಥನೆಂಬ ಕಲ್ಪಜನಾದಂ: **ಆದಿಪು,** ೫. ೭ ವ)

ಅವಾಪ್ತಿ – [ನಾ] ಪ್ರಾಪ್ತಿ, ಲಾಭ (ಪಾಪಹೃತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀ ಸುಖ ಅವಾಪ್ತಿಯಂ: **ಆದಿಪು,** ೧. ೧)

ಅವಾಮ – **[ನಾ]** ಎಡವಲ್ಲದ್ದು, ಬಲ (ವಾಮಂ ಕರತಳಮದು ಕೆಂದಾಮರೆಯರಲೆನಿಪುದು ಉಚಿತಪರ್ಯಂಕದೊಳುದ್ದಾಮಂ ಉಪದೇಶಹಸ್ತಮವಾಮಂ: **ಆದಿಪು,** ೫. ೬೯)

ಅವಾರಪಾರ – [ನಾ] ಸಮುದ್ರ (ಚಕ್ರೇಶಭೂಭೃತ್ಕುಳ ಚಕ್ರಾವಾರಪಾರಂ ಸುಭಟಜನಚಮತ್ಕಾರಿ ತೇಜೋಮಹೌರ್ವಾನಳಂ: **ಆದಿಪು,** ೧೩. ೪೫)

ಅವಾರ್ಯವೀರ್ಯ – [ಗು] ತಡೆಯಲಾಗದ ಸಾಮರ್ಥ್ಯವಿರುವ (ಏಂ ಮತಮಱಿದೋಲಗಿಪುದೋ ದಂಪತಿಗೆಂದುಂ ಅವಾರ್ಯವೀರ್ಯ ತೂರ್ಯಕ್ಷ್ಮಾಜಂ: **ಆದಿಪು,** ೫. ೩೫)

ಅವಿಕಲ್ಪ – **[ನಾ]** ಅನಿವಾರ್ಯ (ಸಮ್ಯಗ್ದರ್ಶನಚಾರಿತ್ರಂಗಳ್ ಅವಿಕಲ್ಪಂಗಳ್ ಮೋಕ್ಷಕಾರಣಂಗಳ್: **ಆದಿಪು,** ೧೦. ೬೩ ವ)

ಅವಿಕಳ – ಕುಂದಿಲ್ಲದ (ಶ್ರೀಯಂ ಭುಜಬಳದಿಂ ನಿರ್ದಾಯಾದ್ಯಂ ಮಾೞ್ಪ ಬಗೆಯಿಂ ಅವಿಕಳನಿಯಮಶ್ರೀಯನಳವಡಿಸಿ: **ಪಂಪಭಾ,** ೮. ೧)

ಅವಿಘ್ನ – [ಗು] ಅಡ್ಡಿ ಮಾಡದ (ವೃಷಭನಾಥ ಕಥಾರಚನೋಕ್ತಿಯಲ್ಲಿ ಮಾೞ್ಕೆ ಇರದೆಮಗಾಗಳುಂ ವೃಷಭಯಕ್ಷಂ ಅವಿಘ್ನಮನಃಪ್ರವೃತ್ತಿಯಂ: **ಆದಿಪು,** ೧. ೮)

ಅವಿಧೃತೋದ್ರೇಕ – **[ನಾ]** [ಅವಿಧೃತ+ಉದ್ರೇಕ] ಉದ್ವೇಗವನ್ನು ತಡೆದುಕೊಳ್ಳುವುದು (ಊರ್ಜಿತರಾತಿರಾಜಪ್ರತಾಪಮುಂ ಅವಿಧೃತೋದ್ರೇಕಮಾಗೆಯುಂ: **ಆದಿಪು** ನರಸಿಂ, ೧೩. ೭೭ ವ)

ಅವಿನಶ್ವರ – [ನಾ] ನಶ್ವರವಲ್ಲದ, ಶಾಶ್ವತವಾದ (ಅಂದು ರಾಗಸಂಜನನಮನೆಯ್ದೆ ತಾಳ್ದಿ ಅವಿನಶ್ವರಕೀರ್ತಿಯೊಳಂ ಸರಸ್ವತೀವನಿತೆಯೊಳಂ: **ಆದಿಪು,** ೮. ೬)

ಅವಿನಾಣ – **[ನಾ]** [ಅಭಿಜ್ಞಾನ] ಗುರುತು (ಅತಿರಹಸ್ಯಂಗಳಪ್ಪ ಕೆಲಕೆಲವು ಅವಿನಾಣಂಗಳಂ ನಾಣ್ಚಿ ಬಂಚಿಸಿ ಪಿರಿದುಮನುರಾಗದಿಂದಮೆನ್ನ ಬರೆದ ಪಟಮನಿದನರ್ಚಿಸಿ: **ಆದಿಪು,** ೩. ೪೩ ವ)

ಅವಿನೀತ – **[ನಾ]** ಅವಿಧೇಯ (ಆನಂದನೃಪತಿಗಂ ವಸಂತಸೇನೆಗಂ ಹರಿಕಾಂತನೆಂಬ ತನಯಂ ಅಪ್ರತ್ಯಾಖ್ಯಾನದೊಳ್ ತಂದೆಗವಿನೀತನಾಗಿ ಪೇಱ್ದುದಂ ಗೆಯ್ಯದೆ: **ಆದಿಪು,** ೫. ೧೬ ಮತ್ತು ೧೬ ವ)

ಅವಿನ್ನಾಣ – **[ನಾ]** ಗುರುತು (ವಿದುರನಟ್ಟಿದ ಅವಿನ್ನಾಣಂಗಳಂ ಪೇೞ್ದು ನಂಬಿಸಿ: **ಪಂಪಭಾ,** ೩. ೪ ವ)

ಅವಿಪಾಕ[ನಿರ್ಜರೆ] – **[ನಾ]** [ಜೈನ] ನಿರ್ಜರೆಯ ಎರಡು ರೂಪಗಳಲ್ಲಿ ಒಂದು: ಕರ್ಮವು ಉದಯವಾಗಿ ಫಲ ಕೊಡುತ್ತಿದ್ದರೂ ರಾಗದ್ವೇಷರಹಿತವಾದ ಆತ್ಮನಿಗೆ ಹೊಸಕರ್ಮಗಳ ಬಂಧವಾಗುವುದಿಲ್ಲ, ಮತ್ತು ಪೂರ್ವಬದ್ಧ ಕರ್ಮಗಳು ಉದುರಿಹೋಗುತ್ತವೆ (ಯಥಾಕಾಲಾನುಭವನ ಸವಿಪಾಕ ಅವಿಪಾಕರೂಪದಿಂ ಪೂರ್ವಾರ್ಜಿತನಿರ್ಜರಣಂ ನಿರ್ಜರೆಯೆಂಬುದು: **ಆದಿಪು,** ೧೦. ೬೩ ವ)

ಅವಿರಳ – [ಗು] ಒತ್ತೊತ್ತಾದ (ನರಕನಗರಲಗ್ನ ಆಕಸ್ಮಿಕಾಗ್ನಿ ಸ್ಫುಲಿಂಗಸ್ಫುರತ್ ಅವಿರಳ ಲಾಕ್ಷಾಗೇಹಪೂರ್ಯೈಕಭಾವ ತ್ವರಿತವಿಚಳತ್ ಅಸ್ಥಿಗ್ರಂಥಿಸಂಸ್ಥಾನಬಂಧರ್: **ಆದಿಪು,** ೫. ೮೯)

ಅವಿಹತಗತಿ – [ಗು] ತಡೆಯಲಸಾಧ್ಯವಾದ ವೇಗ (ಪುರಾಣಪುರುಷರವೋಲಿಂತು ಅವಿಹತಗತಿಯಿಂ ಮುನ್ನನ್ನವಾಯಭೂಧರದ ಶಿಖರಮಂ ಮುಟ್ಟಿದರಾರ್: **ಆದಿಪು,** ೧೪. ೪೦)

ಅವುಂಕಿಸು – [ಕ್ರಿ] ಸಿಕ್ಕಿಹಾಕಿಸು (ಒಳಪುಗುವುದರ್ಕೆ ಎಡೆಮಾಡಲುಂ ಎಡೆಯಾಗದ ಮೃಗಮಂ ಅವುಂಕಿಸಲುಂ .. .. ನಿಮ್ಮಡಿಯ ಕೆಲದೊಳಾನೆ ಬಲ್ಲೆಂ: **ಪಂಪಭಾ,** ೫. ೪೩ ವ)

ಅವುಂಕು – [ಕ್ರಿ] ಒತ್ತರಿಸು (ದೇವಸೌಂದರಿಯರ ದಿವ್ಯಮಪ್ಪ ಪೊಸಗಂಪಿನಲಂಪಂ ಅವುಂಕಿಕೊಂಡು: **ಆದಿಪು,** ೨. ೬೫); **[ಕ್ರಿ]** [ಅಂಕುಶದಿಂದ] ತಿವಿ (ಅನ್ನೆಗಮಿತ್ತಂ ಯುವರಾಜನಾ ಬಗೆದಭಿನಿಷಾದಿಯುಮಂ ನಿಜವಿಜಯಸಿಂಧುರಮುಮಂ ನೂಂಕಲುಂ ಅವುಂಕಲುಂ ಬೆಸಸಿ: **ಆದಿಪು,** ೧೪. ೯೮ ವ)

ಅವುಂಡು – [ನಾ] ಔಡು, ದವಡೆ (ಹರಿಪೋತಮಂ ಬೆದಱುತುಂ ಕರಿಪೋತಂ ಅವುಂಡುಗರ್ಚಿ ಕೇಸರಿಣಿಯಂ ಕೆಚ್ಚಲಂ ತುಡುಕುತಂ ಪರಿದತ್ತು: **ಪಂಪಭಾ,** ೭. ೮೦)

ಅವ್ಯಕ್ತಾಕ್ಷರ – **[ನಾ]** [ಅವ್ಯಕ್ತ+ಅಕ್ಷರ] ಗೊತ್ತಾಗದಂತಹ ಅಕ್ಷರ, ತಿಳಿಯದ ಮಾತು (ಪರಮನೊಳಗೊಳಗೊಂದಂ ಪರಿಜಪನಂಗೆಯ್ಯೆಯುಂ ನೆಗೞ್ದವ್ಯಕ್ತಾಕ್ಷರದಿಂ ನಿಗೂಢತರ ನಿರ್ಝರರವ ಗುಂಜದ್ಗುಹಾತಳಕ್ಕೆಣೆಯಾದಂ: **ಆದಿಪು,** ೯. ೮೬)

ಅವ್ಯಗ್ರ – [ಗು] ಏಕಾಗ್ರ ಮನಸ್ಸಿನ (ಅವ್ಯಗ್ರಕುಶಾಗ್ರೀಯ ಬುದ್ಧಿಸಮೃದ್ಧಂ ಸ್ವಯಂಬುದ್ಧಂ ಅವಧಾರಿಸಿ: **ಆದಿಪು,** ೨. ೯ ವ)

ಅವ್ಯವಚ್ಛಿನ್ನ – [ಗು] ಎಡೆಬಿಡದ, ನಿರಂತರವಾದ (ಹಿರಣ್ಯಗರ್ಭ ಬ್ರಹ್ಮರಿಂ ತಗುಳ್ದು ಅವ್ಯವಚ್ಛಿನ್ನಮಾಗಿ ಬಂದ ಸೋಮವಂಶಂ ಈಗಳ್ ಎಮ್ಮ ಕುಲಸಂತತಿಗಂ ಆರುಮಿಲ್ಲದೆ ಎಡವಜೆದು ಕಿಡುವಂತಾಗಿರ್ದುದು: **ಪಂಪಭಾ,** ೧. ೮೪ ವ)

ಅವ್ಯವಧಾನ – [ಗು] ಸಂತತವಾದ (ಭ್ರಾಂತಿವಶದಿಂ ಗ್ರಾಹ್ಯಸಂವೇದನಾಕಾರತ್ರಯಾಕ್ರಾಂತಂಗಳ್ ವಿಜಾತೀಯ ಅವ್ಯವಧಾನ ಲಘೂತ್ಪತ್ತಿ ಸದೃಶಾಪರಾಪರೋತ್ಪತ್ತಿ ಎಂಬಿವಱಿಂ: **ಆದಿಪು,** ೨. ೯ ವ)

ಅವ್ಯಾಜ – [ನಾ] ಸಹಜವಾದ (ಭವ್ಯಶ್ರೇಣಿಗೆ ಅವ್ಯಾಜದಿಂದೆ ಅಱಿಯಲ್ ನಾಲ್ಕನುಯೋಗಮಾದುದು: **ಆದಿಪು,** . ೩೯)

ಅವ್ಯಾಬಾಧ – [ನಾ] [ಜೈನ] ಸಿದ್ಧಪರಮೇಷ್ಠಿಗಳ ಅಷ್ಟಗುಣಗಳಲ್ಲಿ ಒಂದು, ಯಾವುದರಿಂದಲೂ ಕುಂದದ ಅಥವಾ ಹೆಚ್ಚದ ಅನಂತಸುಖತ್ವ (ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ನೆನೆಯುತ್ತುಂ: **ಆದಿಪು,** ೧೦. ೧೪ ವ)

ಅವ್ವಳಿಸು – [ಕ್ರಿ] ವ್ಯಾಪಿಸು (ಚಳದಳಕಾಳಿ ನಿನ್ನ ವದನಾಂಬುಮಂ ನಡೆ ನೋಡಲೀಯದೆ ಅವ್ವಳಿಸುವುದು ಔಪರಿಷ್ಟಕದೊಳೆನ್ನಂ: **ಆದಿಪು,** ೪. ೧೨); **[ಕ್ರಿ]** ಮೀರಿಸು (ಎಳವಿದಿರ ಬಣ್ಣಮೊಳ್ನಡು ಕಳಶಮನವ್ವಳಿಪ ಮೊಲೆ ಪೊದಳ್ದೆಳಸುವ ಬಾಯ್ ಬಳಸುವ ಕಣ್: **ಆದಿಪು,** ೪. ೪೪); **[ಕ್ರಿ]** ಅಪ್ಪಳಿಸು, ಬೀಳು (ಭುವನನುತ ಮಾಣದರಿನೃಪಭುವನಕ್ಕವ್ವಳಿಪ ತೋಳ್ಗೆ ಕುಶಲಮೆ ನಿನ್ನಾ: **ಆದಿಪು,** ೧೩. ೨೫)

ಅಶಕ್ಯಾನುಷ್ಠಾನ – [ಗು] ಅನುಷ್ಠಾನಮಾಡಲು ಸಾಧ್ಯವಾಗದ್ದು (ಮಹೀತಳರಾಜ್ಯದೊಳ್ ನಿಱಿಸುವುದುಂ ಮದುವೆ ನಿಱಿಸುವುದುಂ ಎನಗಶಕ್ಯಾನುಷ್ಠಾನಮಾದೊಡಂ: **ಆದಿಪು,** ೮. ೮ ವ)

ಅಶನ – [ನಾ] ಆಹಾರ, ಅನ್ನ (ತ್ರಿದಶಸ್ತ್ರೀಜನದೊಳಂ ಅಮೃತದೊಳಂ ಅಣಂ ಮಟ್ಟಿದುರಿವ ಮದನಾಗ್ನಿಯ ಕೊರ್ಬು ಉದರಾಗ್ನಿಯ ಪೆರ್ಚು ಏಂ ಮಟ್ಟೆದಪುದೆ ಲಲನೆಯರೊಳಶನದೊಳ್ ಮಾನವರಾ: **ಆದಿಪು,** ೯. ೫೬)

ಅಶನಿ – [ನಾ] ಸಿಡಿಲು (ಮನದೊಲವರದಿಂದೀ ಯಮತನಯನ ಕಂಡುವಗ್ರಪೂಜೆ ಮತ್ಸನ್ನಿಧಿಯೊಳ್ ನನಗಶನಿಯ ಮಿಟ್ಟುವ ನಂಜಿನ ದೊರೆ: **ಪಂಪಭಾ,** ೬. ೫೧)

ಅಶಲ್ಯ – [ನಾ] ಆಯುಧವಿಲ್ಲದ, ನಿರಾಯುಧ (ಶಲ್ಯನಂ ಅಂದು ಅಶಲ್ಯನಂ ಬಗೆವವೊಲ್ ಏಳಿದಂಬಗೆದು ದಂತಿಯಂ ಆಗಡೆ ತೋಱಿಕೊಟ್ಟು: **ಪಂಪಭಾ,** ೧೦. ೧೧೧)

ಅಶಿಶಿರಕರ – [ನಾ] ತಣ್ಣಗಿಲ್ಲದ ಕಿರಣ, ಉಷ್ಣಕಿರಣ, ಸೂರ್ಯ (ಆರ್ದ್ರ ಚಂದನಾನ್ವಿತಮುಂ ಅಶಿಶಿರಕರ ರಥ ತುರಗಖುರಶಿಖರ ನಿಖಂಡಿತ ಲವಂಗಪಲ್ಲವಮುಂ: **ಪಂಪಭಾ,** ೪. ೧೮ ವ)

ಅಶೇಷ – [ಗು] ಎಲ್ಲ, ಸಕಲ (ಸಮಸ್ತ ಉರ್ವೀಧರ ಅಶೇಷ ಶೇಷ ಮಹಾನಾಗಫಣಾಮಣಿದ್ಯುತಿಯನೇಂ ಖದ್ಯೋತದೊಳ್ ಕಾಣ್ಬರೇ: **ಪಂಪಭಾ,** ೫. ೭೬)

ಅಶೋಕ – [ನಾ] ಒಂದು ಮರ (ಕಕುಭ ಅಶೋಕ ಕದಂಬ ಲುಂಗ ಲವಲೀ ಭೂಜ ಅರ್ಜುನ ಆನೋಕಹಪ್ರಕರಂ: **ಪಂಪಭಾ,** ೫. ೮೦)

ಅಶ್ರಮ – [ನಾ] ಶ್ರಮವಿಲ್ಲದ, ಅನಾಯಾಸ (ಅಂತು ಸಂಧಿ ಸಂಧಿಯೊಳ್ ಸಹಸ್ರಸಿಂಹಬಲನೆನಿಪ ಸಿಂಹಬಲನಂ ಅಶ್ರಮದೊಳೆ ಕೊಂದು: **ಪಂಪಭಾ,** ೮. ೭೮ ವ)

ಅಶ್ರುಜಲ – [ನಾ] ಕಣ್ಣೀರು (ಒಗೆದ ಸುತಶೋಕದಿಂದ ಆವಗೆಯಂತೆ ಒಳಗು ಉರಿಯೆ ಭೋಂಕನೆ ಎರ್ದೆ ತೆಱಿಯಲ್ ಹಾ ಮಗನೇ ಎಂದು ಅಶ್ರುಜಲ ಆರ್ದ್ರಗಂಡಂ ಆ ಗಂಡಿನೊಡನೆ ಬಿಸುಟಂ ಬಿಲ್ಲಂ: **ಪಂಪಭಾ,** ೧೨. ೨೮)

ಅಶ್ರುಮೋಕ್ಷ – [ನಾ] ಕಣ್ಣೀರು ಸುರಿಸುವುದು, ಪರಿತಪಿಸುವುದು (ಕಾಮಗ್ರಹಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭ ಕಂಪ ಸ್ವೇದ ವೈವರ್ಣ್ಯಸಂತಾಪನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ,** ೪. ೫೯ ವ)

ಅಶ್ರುವಾರಿ – [ನಾ] (ಮನಂ ಮಱುಕಕ್ಕೆ ನೀಳ್ದ ಕಣ್ ಒಱಿದು ಉಗುವ ಅಶ್ರುವಾರಿಗೆ ತೊದಳ್ನುಡಿ ಲಲ್ಲೆಗೆ ಪಕ್ಕುಗೊಟ್ಟು: **ಪಂಪಭಾ,** ೪. ೧೨)

ಅಶ್ವತಂತ್ರ – [ನಾ] ಅಶ್ವಶಾಸ್ತ್ರ (ಬಾಹುಬಲಿಗೆ ಕಾಮತಂತ್ರ ಸಾಮುದ್ರಿಕ ಆಯುರ್ವೇದ ಧನರ್ವೇದ ಹಸ್ತಿ ಅಶ್ವತಂತ್ರ ರತ್ನಪರೀಕ್ಷೆಗಳುಮಂ .. .. ಉಪದೇಶಂಗೆಯ್ದಂ: **ಆದಿಪು,** ೮. ೬೦)

ಅಶ್ವತ್ಥಾಮ – [ನಾ] ಕುದುರೆಯ ಶಕ್ತಿ ಅಥವಾ ಕೆನೆತ (ದಿವಿಜ ಅಶ್ವತ್ಥಾಮದೊಳ್ ಈ ಭುವನಂಗಳ್ ನಡುಗೆ ಶಿಶು ಸರಂಗೆಯ್ದೊಡೆ ನಕ್ಕು ಅವಯವದೆ ಕುಂಭಸಂಭವಂ ಇವಂ ಅಶ್ವತ್ಥಾಮನೆಂದು ಪೆಸರಿಡೆ ನೆಗಟ್ದಂ: **ಪಂಪಭಾ,** ೨. ೪೪)

ಅಶ್ವರತ್ನ – [ನಾ] [ಜೈನ] ಚಕ್ರವರ್ತಿಯ ಹದಿನಾಲ್ಕು ರತ್ನಗಳಲ್ಲೊಂದು, ವಿಜಯಾರ್ಧಪರ್ವತದಲ್ಲಿ ಹುಟ್ಟಿದ್ದು (ವಿಜಯಾರ್ಧ ಪರ್ವತದೊಳ್ ಪುಟ್ಟಿದ ಗಜಾಶ್ವಸ್ತ್ರೀರತ್ನಂಗಳುಂ: **ಆದಿಪು,** ೧೫. ೩ ವ)

ಅಶ್ವಹೃದಯ – [ನಾ] ಕುದುರೆಗಳ ಬಗೆಗಿನ ಜ್ಞಾನ (ತ್ರಿಣೇತ್ರನೊಳ್ ಕಲ್ತ ಅಶ್ವಹೃದಯದೊಳಂ ರಥಕಲ್ಪದೊಳಂ ಶಲ್ಯಂ ಮುರಾಂತಕಂಗಂ ಪ್ರವೀಣನಪ್ಪುದಱಿಂದೆ: **ಪಂಪಭಾ,** ೧೨. ೮೮ ವ)

ಅಶ್ವಿನೀದೇವತೆ – [ನಾ] ಸವಿತೃವಿನ ಹೆಂಡತಿ ತ್ವಾಷ್ಟ್ರೀಯ ಮಕ್ಕಳಾದ ನಾಸತ್ಯ ಮತ್ತು ದಸ್ರ ಎಂಬ ಇಬ್ಬರು ದೇವವೈದ್ಯರು (ಏಕಾದಶರುದ್ರರುಂ ದ್ವಾದಶಾದಿತ್ಯರುಂ ಅಷ್ಟವಸುಗಳುಂ ಅಶ್ವಿನೀದೇವರುಂ ಮೊದಲಾಗೆ ಮೂವತ್ತಮೂದೇವರುಂ ಇಂದ್ರಂಬೆರಸು ವೈಮಾನಿಕದೇವರುಂ ನೆರೆದು: **ಪಂಪಭಾ,** ೧. ೧೪೭ ವ)

ಅಶ್ವೀಯಬಹುಳ – [ನಾ] ಕುದುರೆಗಳ ಹೆಚ್ಚಳ (ಮ್ಲೇಚ್ಛರಾಜರ್ ಧನುರ್ಧರಪ್ರಾಯಮಂ ಅಶ್ವೀಯಬಹುಳಮಂ

ಹಾಸ್ತಿಕಸಾಧನಮುಮಪ್ಪ ತಮ್ಮ ಬಲಮನೊಂದುಮಾಡಿ: **ಆದಿಪು,** ೧೩. ೫೬ ವ)

ಅಷ್ಟಗುಣ – [ನಾ] ಅಣಿಮಾ ಮಹಿಮಾ ಲಘಿಮಾ ಗರಿಮಾ ಪ್ರಾಪ್ತಿ ಪ್ರಾಕಾಮ್ಯ ಈಶಿತ್ವ ವಶಿತ್ವ ಎಂಬ ಎಂಟು ವಿಶೇಷ ಸಾಮರ್ಥ್ಯಗಳು (ಅಣಿಮಾದ್ಯಷ್ಟಗುಣಂಗಳ ಕಣಿಯಿರ್ಪಂತಿರ್ದುಂ ಅಖಿಳ ಸುರಲೋಕಶಿಖಾಮಣಿಗಳ್ ಲೋಕೈಕಶಿಖಾಮಣಿಗಳುಂ ಅಲ್ಲರ್ದುಂ ವಿನತಮಸ್ತಕರಪ್ಪರ್: **ಆದಿಪು**, ೬. ೪೧); **[ನಾ]** [ಜೈನ] ಸಿದ್ಧಪರಮೇಷ್ಠಿಗಳು ಗಳಿಸಿಕೊಳ್ಳುವ ಎಂಟು ಗುಣಗಳು (ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ನೆನೆಯುತ್ತುಂ: **ಆದಿಪು**, ೧೦. ೧೪ ವ)

ಅಷ್ಟಗುಣೈಶ್ವರ್ಯ – [ನಾ] ಅಷ್ಟಗುಣ (ಪರಿತ್ಯಕ್ತಜೀವಿತಂ ಮಾಹೇಂದ್ರಕಲ್ಪದೊಳ್ ಅಣಿಮಾದಿ ಅಷ್ಟಗುಣೈಶ್ವರ್ಯ ಉಪೇತನುಂ ಸಪ್ತಸಾಗರಪ್ರಮಿತ ಜೀವಿತನುಂ ಲಬ್ಧಾತ್ಮಲಾಭನುಂ ಆಗಿ: **ಆದಿಪು**, ೨. ೧೯ ವ)

ಅಷ್ಟಮಂಗಳ – [ನಾ] ಎಂಟು ಬಗೆಯ ಮಂಗಳವಸ್ತುಗಳು: ಛತ್ರ, ಧ್ವಜ, ಕುಶ, ಚಾಮರ, ಸುಪ್ರತಿಷ್ಠಕ, ಭೃಂಗಾರ, ದರ್ಪಣ, ವ್ಯಜನ (ಅಲ್ಲಿಂದತ್ತ ವನವನಿತೆಯ ಕನಕಕಾಂಚೀಕಳಾಪಮಂ ಅನುಕರಿಸಿ ರತ್ನಾಭರಣತೋರಣ ಘಂಟಾಜಾಳಮುಕ್ತಾಲಂಬನ ಪುಷ್ಪದಾಮ ಅಷ್ಟಮಂಗಳಮನವನಿಧಿಪ್ರಧಾನಂಗಳುಂ: **ಆದಿಪು,** ೧೦. ೪೨ ವ)

ಅಷ್ಟಮಹಾಪ್ರಾತಿಹಾರ್ಯ – [ನಾ] [ಜೈನ] ಜಿನನಿಗೆ ಒದಗುವ ಅಶೋಕ ವೃಕ್ಷ, ಸುರಪುಷ್ಪವೃಷ್ಟಿ, ದಿವ್ಯಧ್ವನಿ, ಚತುಃಷಷ್ಟಿ [ಚಾಮರ], ರತ್ನಜಡಿತ ಸುವರ್ಣಪೀಠ [ಸಿಂಹಾಸನ], ಪ್ರಭಾವಲಯ, ದೇವದುಂದುಭಿ, ಛತ್ರತ್ರಯ ಎಂಬ ಎಂಟು ಮಂಗಳ ಲಾಂಛನಗಳು (ಸಕಳ ಶ್ರಾವಕವ್ರತಂಗಳಂ ಷೋಡಶ ತೀರ್ಥಕರಭಾವನೆಗಳಂ ಚತುಸ್ತ್ರಿಂಶದತಿಶಯಂಗಳುಮಂ ಅಷ್ಟಮಹಾಪ್ರಾತಿಹಾರ್ಯಂಗಳುಮಂ: **ಆದಿಪು**, ೩. ೪೦ ವ)

ಅಷ್ಟವಸು – [ನಾ] ಎಂಟು ಮಂದಿ ವಸುಗಳು: ಧರ, ಧ್ರುವ, ಸೋಮ, ಅಹಃ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ (ಏಕಾದಶರುದ್ರರುಂ ದ್ವಾದಶಾದಿತ್ಯರುಂ ಅಷ್ಟವಸುಗಳುಂ ಅಶ್ವಿನೀದೇವರುಂ ಮೊದಲಾಗೆ ಮೂವತ್ತಮೂದೇವರುಂ ಇಂದ್ರಂಬೆರಸು ವೈಮಾನಿಕದೇವರುಂ ನೆರೆದು: **ಪಂಪಭಾ,** ೧. ೧೪೭ ವ)

ಅಷ್ಟಶೋಭೆ – [ನಾ] ಕಳಶ, ಕನ್ನಡಿ, ಬಾವುಟ, ತೋರಣ, ಧೂಪ, ದೀಪ, ಭೇರಿ, ಬೀಸಣಿಗೆ ಎಂಬ ಎಂಟು ಬಗೆಯ ಅಲಂಕಾರಗಳು (ಸೊಗಯಿಸುವ ಪೊಟಿಲೊಳ್ ಅಷ್ಟಶೋಭೆಯಂ ಮಾಡಿ ದುರ್ಯೋಧನನ ಸಂಕೇತದೊಳ್ .. .. ಇದಿರ್ವಂದು ಮೆಯ್ಯಿಕ್ಕಿ ಪೊಡೆಮಟ್ಟು: **ಪಂಪಭಾ**, ೩. ೨ ವ)

ಅಷ್ಟಾದಶ – [ನಾ] ಹದಿನೆಂಟು (ಮತ್ತಂ ಚತುರಶೀತಿಸಹಸ್ರ ಗುಣಮಣಿಭೂಷಣವಿಭೂಷಿತನುಂ ಅಷ್ಟಾದಶಸಹಸ್ರ ಶೀಲರತ್ನಾಕರನುಂ ಆಗಿ ಪಂಚದಶಪ್ರಮಾದಂಗಳಂ ಬಂಚಿಸಿ: **ಆದಿಪು**, ೬. ೨೯ ವ)

ಅಷ್ಟಾಪದಶೈಲ – [ನಾ] ಮೇರುಪರ್ವತ (ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ ಮಹಾ ಅಷ್ಟಾಪದಶೈಲದೊಳ್ ವಿಜಿತಘಾತಿಚತುಷ್ಟಯಂ: **ಆದಿಪು,** ೧. ೪೦)

ಅಷ್ಟಾವಿಂಶತಿಮೋಹನೀಯಕಳಂಕ – [ನಾ] ಇಪ್ಪತ್ತೆಂಟು ಮೋಹನೀಯ ಕರ್ಮಗಳು: ಸಾತವೇದನೀಯ ಅಸಾತವೇದನೀಯ ಮೋಹನೀಯವೆಂಬ ವೇದನೀಯ ಕರ್ಮಪ್ರಕೃತಿಗಳು; ಸಮ್ಯಕ್ತ್ವ ಪ್ರಕೃತಿ ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ ಎಂಬ ದರ್ಶನ ಮೋಹನೀಯಗಳು: ಹಾಸ್ಯ ರತಿ ಅರತಿ ಶೋಕ ಭಯ ಜುಗುಪ್ಸೆ ಸ್ತ್ರೀವೇದ ಪುಂವೇದ ನಪುಂಸಕವೇದಗಳೆಂಬ ಅಕಷಾಯವೇದನೀಯಗಳು; ಅನಂತಾನುಬಂಧಿ ಕ್ರೋಧ ಮಾನ ಮಾಯಾ ಲೋಭಗಳು, ಹಾಗೂ ಅಪ್ರತ್ಯಾಖ್ಯಾನಕ್ರೋಧ, ಮಾನ ಮಾಯಾ ಲೋಭಗಳು, ಸಂಜ್ವಲನ ಕ್ರೋಧ ಮಾನ ಮಾಯಾ ಲೋಭಗಳೆಂಬ ಎಂಬ ಕಷಾಯವೇದನೀಯಗಳು (ಸೂಕ್ಷ್ಮಸಾಂಪರಾಯಲೋಭಕ್ಕೆ ನಿರ್ಮೂಲವಿಲಯಮಂ ಮಾಡಿ ನಿರಸ್ತಾಷ್ಟಾವಿಂಶತಿ ಮೋಹನೀಯಕಳಂಕನಾಗಿ: **ಆದಿಪು**, ೧೦. ೧೪ ವ)

ಅಷ್ಟಾಹ್ನಿಕ – [ನಾ] [ಜೈನ] ಆಷಾಢ ಕಾರ್ತಿಕ ಫಾಲ್ಗುಣ ಮಾಸಗಳಲ್ಲಿ ಶುಕ್ಲಪಕ್ಷದ ಅಷ್ಟಮಿಯಿಂದ ಪೂರ್ಣಮಿಯವರೆಗೆ ಮಾಡುವ ನಂದೀಶ್ವರ ಪೂಜೆ (ಸಮಸ್ತಭವ್ಯಜನನಿರ್ವರ್ತ್ಯಮಾನ ಅಷ್ಟಾಹ್ನಿಕಮುಂ ಚೈತ್ಯಾಲಯ ನಿರ್ಮಾಣನಿರ್ಮಾಪಣ ಶಾಸನಾರೋಪಿತ ಗ್ರಾಮಕ್ಷೇತ್ರವಿತರಣಮುಂ: : **ಆದಿಪು,** ೧೫. ೧೩ ವ)

ಅಷ್ಟೋತ್ತರಶತ – [ನಾ] ನೂರೆಂಟು (ಇವು ಮೊದಲಾಗೆ ಪಲವುಂ ಅಷ್ಟೋತ್ತರಶತನಾಮಂಗಳನಿಟ್ಟು ವಿಶೇಷಾಶೀರ್ವಚನಂಗಳಿಂ ಪರಸಿ: **ಪಂಪಭಾ**, ೧. ೧೪೮ ವ)

ಅಷ್ಟೋತ್ತರಸಹಸ್ರ – [ನಾ] ಒಂದು ಸಾವಿರದೆಂಟು (ವೃಷಭನಾಥನಂ ಅರ್ಥಾನುಗತ ಅಷ್ಟೋತ್ತರಸಹಸ್ರ ನಾಮಾಂಕಿತಗಳಿಂ ಸ್ತುತಿಯಿಸಿ: **ಆದಿಪು**, ೧೫. ೨೧ ವ)

ಅಸಂಖ್ಯೇಯ – [ನಾ] ಎಣಿಕೆಗೆ ಸಿಗದಷ್ಟು (ಆ ಮನ್ವಂತರಂ ಅಸಂಖ್ಯೇಯವರ್ಷಕೋಟಿ ಕುಂದುತ್ತುಂ ಬರ್ಪಿನಂ: **ಆದಿಪು**, ೬. ೫೩ ವ)

ಅಸಂಚಳ – [ಗು] ಅಲುಗಾಡದ (ಅಂದು ಎಯ್ದುಂದಂ ಅಸಂಚಳ ಕಾಂಚನದ್ವಾರ ಬಂಧುರಬಂಧಗೃಹ ಉದ್ಯತ್ ದ್ವಾರಾವತೀಪುರಮಂ ನರಂ: **ಪಂಪಭಾ**, ೪. ೩೨)

ಅಸಂಜ್ಞಿ – [ನಾ] [ಜೈನ] ಪಂಚೇಂದ್ರಿಯ ಜೀವಿಗಳಲ್ಲಿ ಒಂದು ಬಗೆ; ಆಹಾರ ಮೈಥುನ ಭಯ ಪರಿಗ್ರಹ ಎಂಬ ನಾಲ್ಕು ಸಂಜ್ಞೆಗಳಿಲ್ಲದ ಜೀವಿ (ಕ್ರಮದೊಳ್ ಅಸಂಜ್ಞಿಯುಂ ಸರಿಸೃಪಾಳಿಯುಂ ವಿಹಗಾಳಿಯುಂ ಭುಜಂಗಮತತಿಯುಂ ಮೃಗಾರಿಗಣಮುಂ ಲಲನಾಜನಮುಂ: **ಆದಿಪು**, ೫. ೯೩)

ಅಸಂಭಾವ್ಯ – [ಗು] ನಡೆಯಲು ಸಾಧ್ಯವಿಲ್ಲದ್ದು (ಇದು ದಲ್ ಚೋದ್ಯಂ ಅತರ್ಕ್ಯಂ ಅದ್ಭುತಂ ಅಸಂಭಾವ್ಯಂ ವಿಚಾರಕ್ಕೆ ಬಾರದುದು: **ಪಂಪಭಾ**, ೮. ೮೪)

ಅಸಂಯುತ – [ನಾ] [ಜೈನ] ಇಂದ್ರಿಯನಿಗ್ರಹಿಯಲ್ಲದವನು (ದರ್ಶನವಿಶುದ್ಧನಾಗಿಯುಂ ಶೀಲವ್ರತಭಾವನಾರಹಿತಂ ಅಸಂಯುತಂ ಜಘನ್ಯಪಾತ್ರಂ: **ಆದಿಪು**, ೧೦. ೯ ವ)

ಅಸಕಟಿ – [ಕ್ರಿ] ಆಕ್ರಮಿಸು (ಬೆಳಗುವ ಮಣಿಮುಕುರಂಗಳುಂ ಅವರ್ಕೆ ತಾಂಗಾಗಿ ಪಚ್ಚೆಯ ಪಸಲೆಯ ಪಸುರಂ

ಅಸಕಟಿದು ನಿಮಿರ್ದ ನೆಲೆವಡಲಗೆಯ ಜಾಗಂಗಳುಮಂ: **ಆದಿಪು,** ೮. ೧೫ ವ); **[ಕ್ರಿ]** ಮಿತಿಮೀರು (ಇನ್ನೇವೆಸಗೊಳ್ವುದೊ ಕಡುವೇಗದಿಂ ಅಸಕಟಿದುದು ಮನಮುಮಂ ತುರಂಗಮರತ್ನಂ: **ಆದಿಪು,** ೧೩. ೩೯)

ಅಸಕೃತ್ – [ನಾ] ಅನೇಕ ಸಲ (ಮದಸ್ತಂಬೇರಮ ಬೃಂಹಿತಂಗಳಿಂದಂ ಅಸಕೃತ್ ಆಸ್ಫಾಲಿತ ಅನೇಕದುಂದುಭಿ ಧ್ವನಿ ಮಧುರಗಂಭೀರಂಗಳಪ್ಪ ಹಯಹೇಷಿತಂಗಳಿಂದಂ: **ಆದಿಪು**, ೧೩. ೪೨ ವ)

ಅಸಗವೊಯ್ಲು – [ನಾ] ಅಗಸನ ಒಗೆತ (ಎರಡುಂ ಕೆಲನಂ ಎರಡುಂ ಕರಪರಿಘದಿನಡಸಿ ಗುರ್ದಿ ಪೆಱಪಿಂಗುವಿನಂ ಮುರಿದಡಸಿ ಪಿಡಿದು ಘಟ್ಟಿಸಿ ಪಿರಿಯಱೆಯೊಳ್ ಪೊಯ್ವಂ ಅಸಗವೊಯ್ಲಂ ಭೀಮಂ: **ಪಂಪಭಾ,** ೩. ೩೦)

ಅಸಗವೊಯ್ವೊಯ್ – [ಕ್ರಿ] [ಅಸಗ+ಪೊಯ್+ಪೊಯ್] ಅಗಸನ ಹೊಡೆತ ಹೊಡೆ (ಮದವದ್ದಂತಿಗಳಂ ಕಱುತ್ತು ಅಸಗವೊಯ್ವೊಯ್ದು ಆಜಿಯೊಳ್ ಭೀಮಂ ಆರ್ದೊದೆದು ಈಡಾಡಿದೊಡೆ: **ಪಂಪಭಾ,** ೧೧. ೬೭)

ಅಸದಳ – [ನಾ] ಅಸಾಧ್ಯ (ಭಾವಿಸುವೊಡಾದಿದೇವನ ದೇವೇಂದ್ರನ ಬಗೆಗಂ ಅಸದಳಂ ನರ್ತಕಿಯಾ: **ಆದಿಪು,** ೯. ೨೭); [ನಾ] ಅತಿಶಯ (ಅಗುಟ್ದಿರಲ್ ಆ ಕುಟಿಯೊಳ್ ತೊಟ್ಟಗೆ ನಿಧಿಗಂಡಂತೆ ವಸುಧೆಗೆ ಅಸದಳಮಾಯ್ತು ಆ ಮಗನ ಅಂದಂ: **ಪಂಪಭಾ,** ೧. ೯೭); [ನಾ] ಅಪರಿಮಿತ (ಪಾಲ್ಗಡಲಂ ಮಗುಟ್ದಸುರರ್ ಪೊಸೆದಲ್ಲಿ ಕಾಳಕೂಟಾಂಕುರಂ ಅಂದು ಅಸದಳಮೊಗೆದಂತೊಗೆದುವು ಬಸಿಱೆಂ ನೂಱೊಂದು ಪಿಂಡಂ ಅರುಣಾಕೀರ್ಣಂ; **ಪಂಪಭಾ,** ೧. ೧೩೦)

ಅಸದಾಗ್ರಹ – [ನಾ] ಸಲ್ಲದ ಹಟ (ಬಿಡುವುದು ಅಸದಾಗ್ರಹಮಂ ಪ್ರಸನ್ನಗಂಭೀರಚಿತ್ತದಿಂದಿದನವಧಾರಿಸುವುದು: **ಆದಿಪು,** ೧೪. ೧೦೪)

ಅಸದೃಶ – [ಗು] ಅನುರೂಪವಲ್ಲದ್ದು (ದುಷ್ಷಮಕಾಲದೊಳ್ ಅಸದೃಶಕೈವಲ್ಯಬೋಧದಿನಕರಬಿಂಬಂ: **ಆದಿಪು,** ೧೫. ೩೩)

ಅಸಮಪ್ರೇಕ್ಷಣ – [ನಾ] ಅಸದೃಶವಾದ [ಕೃಪಾ]ದೃಷ್ಟಿಯುಳ್ಳವನು (ಅಸಮಪ್ರೇಕ್ಷಣ ವೀಕ್ಷಣೈಕರಸಮಂ ಪಾರ್ದಿರ್ದುದೀ ರಾಜಪುತ್ರಸಮೂಹಂ: **ಆದಿಪು,** ೯. ೧೨)

ಅಸವಸ – [ನಾ] ಆತುರ (ಪೊಡೆವಡುವನಿತುವರಮೆನ್ನ ಮನದೊಳಱೆವಿಲ್ಲದೆಯುಂ ಅಸವಸದೊಳಾದ ಮನದೆಱಕದಿನೆಱಗಿ: **ಆದಿಪು,** ೩. ೩೬ ವ); [ನಾ] ಸಂಭ್ರಮ (ಪಸರಿಸಿ ಪೊಸಯಿಸಿ ಪೊಸಸುಸಿಲ ಮಸಕದ ಬಸದೊಳೆ ಬಸದಾಗಿಯುಮಸಿಯಳೆನಗೆ ಅಸವಸದೊಳೆ ಬೆಸೆದು ಪೋಗಿ: **ಆದಿಪು,** ೪. ೧೨ ವ); [ನಾ] ಬೇಗ (ಪೋಕೆ ಇನಿತಱೊಳ್ ಅಸವಸದಿಂದೀ ಕಲಹಂ: **ಪಂಪಭಾ,** ೧೩. ೧೩)

ಅಸಹಾಯ – [ನಾ] ಇತರರ ಸಹಾಯವಿಲ್ಲದೆ ಕಾರ್ಯ ನಿರ್ವಹಿಸುವ ಸಾಮರ್ಥ್ಯ (ದೇವರ ಬಾಹುಬಳಂ ಅಜೇಯಮುಂ ಅಸಹಾಯಮುಂ ಅಪ್ಪುದಾದೊಡಂ: **ಪಂಪಭಾ,** ೧೩. ೫೧ ವ)

ಅಸಾಮಾನ್ಯ – [ನಾ] ಅಸಾಧಾರಣವಾದದ್ದು (ಅತರ್ಕ್ಯಂ ವಿಕ್ರಾಂತಂ ಭುಜಬಲಮಸಾಮಾನ್ಯಂ ಅಧಿಕಂ ಪ್ರತಾಪಂ ಪೋಗೀತಂಗೆಣೆಯೆ: **ಪಂಪಭಾ,** ೧. ೮೦)

ಅಸಾರತೆ – [ನಾ] ಸತ್ವಹೀನತೆ (ಸಂಸಾರ ಅಸಾರತೆಯಂ ಅಱೆದನುಂ ಮಹಾಸತ್ತ್ವನುಂ ಅಪ್ಪುದಱೆಂ ತನ್ನಂ ತಾನೆ ಸಂತೈಸಿಯುಂ ಸೇತರಿಸಿಯುಂ: **ಪಂಪಭಾ,** ೧೩. ೨೦ ವ)

ಅಸಿ – [ನಾ] ಸೈನಿಕವೃತ್ತಿ (ಸೇವಾಧರ್ಮೋಚಿತಮೆನಿಸುವ ಅಸಿಕರ್ಮಮುಮಂ ಅನೇಕ ಲಿಪಿವಿಧಾನಂಗಳಪ್ಪ ಮಷಿಯುಮಂ ಕೃಷೀವಲ ಕುಲೋಚಿತಮಪ್ಪ ಕೃಷಿಯುಮಂ: **ಆದಿಪು,** ೮. ೬೪ ವ); [ನಾ] ಕತ್ತಿ (ಮಿಕ್ಕಸುರರ ಮೆಯ್ಯೊಳಾದ ವಿರಹಾಗ್ನಿಯಂ ಆಱೆಸುತಿಂತೆ ತನ್ನ ಕೂರಸಿಯೊಳಡುರ್ತು ಕೊಂದು: **ಪಂಪಭಾ,** ೧. ೬); [ಗು] ಕೃಶ (ಆಕೆಯ ಬಾಸೆಗಳುಂ ಪಗೆವರ ಬಾೞ್ವಾಸೆಗಳುಂ ಒಡನೊಡನೆ ಅಸಿಯಾದುವು: **ಪಂಪಭಾ,** ೧. ೧೪೧ ವ); [ಗು] ಸೂಕ್ಷ್ಮ, ನವಿರಾದ (ಬಿಳಿಯ ತಾವರೆಯ ಎಳಗಾವಿನ ಅಸಿಯ ನೂಲೊಳ್ ಕೋದ ತೋರಮಲ್ಲಿಗೆಯ ಬಿರಿಮುಗುಳ ಸರಿಗೆಯುಮಂ: **ಪಂಪಭಾ,** ೫. ೬ ವ); [ಗು] ಸಣ್ಣ, ತೆಳುವಾದ (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱೆ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ ದಳಿವದ ತೊಟ್ಟ ಅಂಗಿ: **ಪಂಪಭಾ,** ೫. ೩೬)

ಅಸಿಕರ್ಮ – [ನಾ] ಖಡ್ಗಕಾರ್ಯ, ಯೋಧವೃತ್ತಿ (ಸೇವಾಧರ್ಮೋಚಿತಮೆನಿಸುವ ಅಸಿಕರ್ಮಮುಮಂ ಅನೇಕ ಲಿಪಿವಿಧಾನಂಗಳಪ್ಪ ಮಷಿಯುಮಂ ಕೃಷೀವಲ ಕುಲೋಚಿತಮಪ್ಪ ಕೃಷಿಯುಮಂ ಶಾಸ್ತ್ರಾನುಗತಮಪ್ಪ ವಿದ್ಯೆಯುಮಂ ವಣಿಗ್ವ್ಯವಹಾರಾನುಕಾರಿಯಪ್ಪ ವಾಣಿಜ್ಯಮುಮಂ: **ಆದಿಪು,** ೮. ೬೪ ವ)

ಅಸಿತ – [ನಾ] ಕಪ್ಪು (ಅಸಿತ ಇಂದೀವರಲೋಲಲೋಚನೆಯಂ ಅಂದು ಅಂತಾ ಸಭಾಮಧ್ಯದೊಳ್ ಪಸುವಂ ಮೋದುವವೋಲೆ ಮೋದೆಯುಂ: **ಪಂಪಭಾ,** ೭. ೫೮)

ಅಸಿತಾಂಬುವಾಹ – [ನಾ] [ಅಸಿತ+ಅಂಬುವಾಹ] ಕಾರ್ಮೋಡ (ಅಂಬರಮೆಂಬ ಪಾಟಿನೇಱೆಸಿದುದು ಅಸಿತಾಂಬುವಾಹಂ ಎಂಬ ಕುಟುಂಬಕದಂಬೋತ್ಕರಂ: **ಆದಿಪು,** ೬. ೭೧)

ಅಸಿತೇಂದೀವರ – [ನಾ] ಕನ್ನೈದಿಲೆ (ಅಸಿತೇಂದೀವರ ಲೋಲಲೋಚನೆಯಂ ಅಂದಂತಾ ಸಭಾಮಧ್ಯದೊಳ್ ಪಸುವಂ ಮೋದುವವೋಲೆ ಮೋದೆಯುಂ: **ಪಂಪಭಾ,** ೭. ೫೮)

ಅಸಿದು – [ಗು] ಕೃಶವಾದ (ಪೊಡರ್ದ ಪಗೆವರೊಡನೆ ಕರಂ ಅಸಿದಾದ ಮಧ್ಯಪ್ರದೇಶಮುಂ: **ಆದಿಪು,** ೩. ೯ ವ); [ನಾ] ಕೃಶತೆ (ಪುಸಿ ನಸುವಂಚನೆ ನೋರ್ಪ ಅನುವು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ಕುಸುರಿ ನುಸುಳ್ ಎಂಬ ಕೇಣದ ಕುಸುರಿಯಂ ಅಱೆದಱೆದು ಮೆಱೆದು ನೆಱೆದುರಱದರೆಬರ್: **ಪಂಪಭಾ,** ೧೦. ೮೧)

ಅಸಿದ್ಧ – [ಗು] ಸಿದ್ಧತೆಯಿಲ್ಲದ (ವಿದ್ವಿಷ್ಟವಿದ್ರಾವಣನ ಮೊನೆಯಂಬಿನ ಏಱೆಂಗೆ ಅಳ್ಕಿ ಹತವಿಹತ ಕೋಳಾಹಳರಾಗಿ ಸಿದ್ಧರ್ ಅಸಿದ್ಧರಾಗೆಯುಂ: **ಪಂಪಭಾ,** ೫. ೮೮ ವ)

ಅಸಿಧೇನು – [ನಾ] ಸಣ್ಣ ಕತ್ತಿ (ಘೂರ್ಣಮಾನಲೋಹಿತಲೋಚನಂ

ದಶನನಿಪೀಡಿತದಶನವಸನಂ ಅಸಿಧೇನುವಂ ಕಿೞ್ತು: **ಆದಿಪು**, ೨. ೧೪ ವ)

ಅಸಿಧೇನುಕೋಶ – [ನಾ] ಕತ್ತಿಯ ಒರೆ (ಮಲ್ಲಿಕಾಮುಕುಳಾಕಾರ ವಿತಸ್ತಿಮಾತ್ರ ಅಸಿಧೇನುಕೋಶಮುಂ: **ಆದಿಪು**, ೧೩. ೪೫ ವ)

ಅಸಿನೆಱಂ – [ನಾ] ಕೋಮಲಶರೀರಿ (ಬಾಳಂ ಬಾಳಮೃಣಾಳದಂತೆ ಅಸಿನೆಱಂ: **ಆದಿಪು,** ೭. ೯೧)

ಅಸಿಪತ್ರ – [ನಾ] ಕತ್ತಿಯ ಅಲಗು (ನಿಶಿತ ಅಸಿಪತ್ರಪತಿತ ಪ್ರಚಂಡ ಸುಭಟ ಮಸ್ತಕೋಚ್ಚಳಿತ ಚಟಾಚ್ಚಾಟನ ದುರ್ನಿರೀಕ್ಷ್ಯ: **ಪಂಪಭಾ**, ೧೩. ೫೧ ವ)

ಅಸಿಪತ್ರನಂದನ – [ನಾ] ಕತ್ತಿಯಂತೆ ಚೂಪಾದ ಎಲೆಗಳ ಮರಗಳುಳ್ಳ ತೋಟ (ಎಲ್ಲಿಗೆ ಪೋಪೆವೆಂದು ಮೆಟ್ಟಿಡಿಂ ಅಸಿಪತ್ರನಂದನಮನೊಯ್ಯನೆ ಸಾರ್ವುದುಂ: **ಆದಿಪು,** ೫. ೮೮)

ಅಸಿಯನಾಗಿಸು – [ನಾ] ಕೃಶಗೊಳಿಸು, ತೆಳ್ಳಗಾಗಿಸು (ಪಸಿವು ದೊರೆಕೊಳ್ವುಂ ಉಣಿಸುಗಳ್ ಇನಿಕೆಯ್ವುಂ ಆವಂದದೊಳ್ ಕನಲ್ದು ಆದ ಮೆಯ್ಯಂ ಅಸಿಯನಾಗಿಪುದು: **ಪಂಪಭಾ,** ೫. ೪೭)

ಅಸಿಯನಾಗು – [ಕ್ರಿ] ಕೃಶನಾಗು (ಸುರರ್ಗೆ ಅಮೃತಮಂ ಉಂತೆ ಕಳಾಂತರದಿಂದಿತ್ತು ಅಸಿಯನಾದ ಚಂದ್ರನವೋಲ್: **ಪಂಪಭಾ**, ೭. ೬೨)

ಅಸಿಯ – [ನಾ] ಕೃಶ (ನಕುಳನುಂ ತೆಂಕಣದೆಸೆಯ ಮಲೆಪರಂ ಮಂಡಳಿಕರ್ ಅಸಿಯರಾಗೆ ಕವರ್ದುಕೊಂಡು: **ಪಂಪಭಾ,** ೪. ೭೨)

ಅಸಿಯ ಬಾಸೆ – [ನಾ] ಎದೆಯಿಂದ ಹೊಕ್ಕುಳವರೆಗಿನ ಸೂಕ್ಷ್ಮ ರೋಮರಾಜಿ (ಮುನ್ನಿನ ಚೆಲ್ವನಪ್ಪ ಅಸಿಯ ಬಾಸೆಗೆ ಕರ್ಪಸೆದತ್ತೆ ಚೋದ್ಯಮಿದೆಂದು ಮರಲ್ದು: **ಆದಿಪು,** ೭. ೩೧)

ಅಸಿಯಳ್ – [ನಾ] ತೆಳುವಾದ ದೇಹವುಳ್ಳವಳು (ಪೊಸಸುಸಿಲ ಮಸಕದ ಬಸದೊಳೆ ಬಸದಾಗಿಯುಂ ಅಸಿಯಳೆನಗಸವಸದೊಳೆ ಬೆಸೆದು ಪೋಗಿ: **ಆದಿಪು,** ೪. ೧೨ ವ)

ಅಸಿಲತೆ – [ನಾ] ಬಳ್ಳಿಯಂತಹ ಕತ್ತಿ (ಗಂಗಾವಾರ್ಧಿಯೊಳಾತ್ಮ ತುರಂಗಮುಮಂ ಮಿಸಿಸಿ ನೆಗಳ್ದಿ ಡಾಳಪ್ರಿಯನೊಳ್ ಸಂಗತಗುಣನಸಿಲತೆಯನಸುಗೊಳೆ ಭುಜ ವಿಜಯ ಗರ್ವದಿಂ ಸ್ಥಾಪಿಸಿದಂ: **ಪಂಪಭಾ**, ೧. ೩೮)

ಅಸುಂಗೊಳ್ – [ಕ್ರಿ] ಪ್ರಾಣಹರಣ ಮಾಡು, ಕೊಲ್ಲು (ಗಂಗಾವಾರ್ಧಿಯೊಳಾತ್ಮತುರಂಗಮಂ ಮಿಸಿಸಿ ನೆಗಳ್ದಿ ಡಾಳಪ್ರಿಯನೊಳ್ ಸಂಗತಗುಣಂ ಅಸಿಲತೆಯಂ ಅಸುಂಗೊಳೆ ಭುಜವಿಜಯಗರ್ವದಿಂ ಸ್ಥಾಪಿಸಿದಂ: **ಪಂಪಭಾ**, ೧. ೩೮) ['ಅಸುಂಗೊಳ್' ಎಂಬುದಕ್ಕೆ 'ಚೇತನವನ್ನು ಆಕರ್ಷಿಸು' ಅಥವಾ 'ಮನವನ್ನಾಕ್ರಮಿಸು' ಎಂದು ಅರ್ಥವಿಸಬಹುದೆಂದು ಡಿಎಲ್ಎನ್; 'ಪ್ರಾಣಶಕ್ತಿಯಿಂದ' ಎಂಬರ್ಥ ಎನ್ನುತ್ತಾರೆ ಎಲ್. ಬಸವರಾಜು]: [ಕ್ರಿ] ಬೇಗನೆ, ಶೀಘ್ರವಾಗಿ (ಜಕ್ಕವಕ್ಕಿಗಳ್ ಸುರತಮಕರಧ್ವಜನ ಸುಭದ್ರೆಯ ವಿರಹಸಂತಾಪಮಂ ಪಚ್ಚುಕೊಂಡಸುಂಗೊಡಗಲೆ: **ಪಂಪಭಾ,** ೪. ೪೮ ವ) [ಡಿಎಲ್ಎನ್]; [ಕ್ರಿ] ತೀವ್ರಗೊಳ್ಳು (ಕಡಲುರಿಯಂತೆ ಅಕಾಲಘನಗರ್ಜನೆಯಂತೆ ಸಮಸ್ತದಿಕ್ತಟಂ ಪಿಡುಗುವಿನಂ ರಣಾನಕರವಂಗಳಸುಂಗೊಳೆ: **ಪಂಪಭಾ**, ೧೩. ೩೩)

ಅಸುಂಗೊಳಿಸು – [ಕ್ರಿ] ಅಚ್ಚರಿಪಡಿಸು (ತ್ರಿಣೇತ್ರನುಮಂ ಅಸುಂಗೊಳಿಸಿದ ಸಾಹಸದೊಳ್ ಕದನತ್ರಿಣೇತ್ರನುಂ: **ಪಂಪಭಾ**, ೧೪. ೩೭ ವ)

ಅಸುಗೆ – [ನಾ] ಅಶೋಕೆ (ಯುವತಿ ಪಾಣಿಪಲ್ಲವರಾಗಂ ಮುಸುಕಿದುದೆನಿಸಿದ ಅಸುಗೆಯ ಪೊಸದಳಿರ್ಗಳೊಳೆಸೆವ ಕೆಂಪು ನಂದನವನದೊಳ್: **ಆದಿಪು,** ೬. ೯೬)

ಅಸುರ – [ನಾ] ಅಸುರಕುಮಾರರೆಂಬ ದೇವತೆ (ರಸಭಂಗ ಭಯದಿನಿಂದ್ರಂ ಪೊಸತೊಂದು ಆ ದೊರೆಯ ಪಾತ್ರಮಂ ತಂದನುಸಂಧಿಸುವುದುಂ ಅದನಣಂ ಅಱಿಯಲ್ಕೆ ಸುರಾಸುರಸಮಿತಿಗಾದುದಿಲ್ಲಾಕ್ಷಣದೊಳ್: **ಆದಿಪು**, ೯. ೪೨); [ನಾ] ರಾಕ್ಷಸ (ಪೊಸೆದೊಡೆ ಪಾಲ್ಗಡಲಂ ಮಗುಳ್ದಸುರರ್ ಪೊಸೆದಲ್ಲಿ ಕಾಳಕೂಟಾಂಕುರಂ ಅಂದು ಅಸದಳಮೊಗೆದಂತೊಗೆದುವು ಬಸಿಱಿಂ ನೂಱೊಂದು ಪಿಂಡಂ ಅರುಣಾಕೀರ್ಣಂ; **ಪಂಪಭಾ,** ೧. ೧೩೦)

ಅಸುರಪ್ರಧ್ವಂಸಿ – [ನಾ] ರಾಕ್ಷಸರ ಶತ್ರು, ವಿಷ್ಣು (ಮಂದರದಿಂದಂಬುಧಿಯಂ ಕಲಂಕಿದ ಅಸುರಪ್ರಧ್ವಂಸಿವೋಲ್ ಬಾಹುಮಂದರದಿಂ ವೈರಿಬಲಾಬ್ಧಿ ಘೂರ್ಣಿಸೆ ಬಿಗುರ್ತೀ ಕೌರವರ್ ಕೂಡೆ ನೂರ್ವರುಮಂ ಕೊಲ್ವೆಂ: **ಪಂಪಭಾ**, ೭. ೧೫)

ಅಸುರವಿಜಯಿ – [ನಾ] ರಾಕ್ಷಸರನ್ನು ಗೆದ್ದವನು, ಶ್ರೀಕೃಷ್ಣ (ಅಸುರವಿಜಯಿಯುಂ ಕತಿಪಯಪ್ರಯಾಣಂಗಳಿಂ ಮದಗಜೇಂದ್ರಪುರಮನೆಯ್ದಿ: **ಪಂಪಭಾ**, ೯. ೨೬ ವ)

ಅಸುರವೈರಿ – [ನಾ] ರಾಕ್ಷಸನ ವೈರಿ (ಪಿಡಿದದವರ್ ಅಸುರವೈರಿನೊಡಂಬಡಿಂ ತೊಟ್ಟುವೆಸದಿನಾಂ ನಿಮ್ಮಡಿಯಂ ಪಿಡಿದೆಂ: **ಪಂಪಭಾ,** ೧೦. ೮)

ಅಸುರಾರಿ – [ನಾ] ರಾಕ್ಷಸನ ಶತ್ರು, ಶ್ರೀಕೃಷ್ಣ (ಎಂದು ಅನಿತಱಿೊಳ್ ಮಾಣದೆ ಗೀರ್ವಾಣಾರಿ ಅಸುರಾರಿಯಂ ಇಂತೆಂದಂ; **ಪಂಪಭಾ**, ೬. ೪೯ ವ)

ಅಸುಹೃತ್ – [ನಾ] ಶತ್ರು (ಸಿಂಗದ ಮುಪ್ಪುಂ ನೆಗಟ್ದೀ ಗಾಂಗೇಯರ ಮುಪ್ಪುಂ ಇಳಿಕೆವಡೆಗುಮೇ ವನಮಾತಂಗಂಗಳಿಂ ಅಸುಹೃತ್ ಚತುರಂಗಬಲಂಗಳಿಂ: **ಪಂಪಭಾ,** ೧೦. ೧೯)

ಅಸುಹೃದ್ಬಳ – [ನಾ] ಶತ್ರುಸೈನ್ಯ (ನರೇಂದ್ರಂ ಒಂದೆ ರಥದಿಂದ ಅಸುಹೃದ್ಬಳಮಂ ಇರದೆಯ್ದಿ ಭೀಷ್ಮರ ಚಳಣಯುಗಕ್ಕೆಱಗೆ ನಿನಗೆ ಜಯಮಕ್ಕೆ ಎಂದಂ: **ಪಂಪಭಾ**, ೧೦. ೬೦)

ಅಸೃಕ್ – [ನಾ] ರಕ್ತ (ಶ್ರೀಯಂ ಅರಾತಿಬಳ ಅಸೃಕ್ ತೋಯಧಿಯೊಳ್ ಪಡೆದ ವೀರಂ ಉಱದೆ ಅರಿಗಳಂ ಆತ್ಮೀಯಪದಸ್ಫುರಿತ ನಖಚ್ಛಾಯೆಗಳೊಳ್ ನಿಱಿಸಿ ನಿಂದ ಗಂಡಂ ಹರಿಗಂ: **ಪಂಪಭಾ**, ೩. ೧)

ಅಸೃಗ್ವಾರಿ – [ನಾ] [ಅಸೃಕ್+ವಾರಿ] ರಕ್ತಜಲ, ರಕ್ತ (ಕುಡಿದೆಂ ದುಶ್ಶಾಸನೋರಸ್ಥಳವಿಗಳದಸೃಗ್ವಾರಿಯಂ ಕಂಡದಂ ಮುನ್ನಡೆ ನೋಡುತ್ತಳ್ಕಿ ಮಾಣ್ದೈ: **ಪಂಪಭಾ**, ೧೩. ೭೮)

ಅಸ್ಖಲಿತಗತಿ – [ನಾ] ದೃಢವಾದ, ತಡೆಯಿಲ್ಲದ ನಡಿಗೆ (ಅಸ್ಖಲಿತಗತಿಯಪ್ಪ ಚಕ್ರರತ್ನಸ್ಖಲನಕ್ಕೆ .. .. ಚಕ್ರಿ ವಿಸ್ಮಯಂಬಟ್ಟು: **ಆದಿಪು,** ೧೪. ೬ ವ)

ಅಸ್ತ – [ನಾ] [ಸೂರ್ಯನ] ಮುಳುಗುಬೆಟ್ಟ (ನಾಳೆ ದಿನೇಶಂ ಅಸ್ತದತ್ತ ಉಡುಗದ ಮುನ್ನ ಸೈಂಧವನಗುರ್ವಿಸೆ ಕೊಲ್ಲದೊಡೇನೊ ಗಾಂಡಿವಂಬಿಡಿದು: **ಪಂಪಭಾ,** ೧೧. ೧೨೨)

ಅಸ್ತಗಿರಿ – [ನಾ] ಸೂರ್ಯ ಮುಳಗುವ ಬೆಟ್ಟ, ಪಶ್ಚಿಮ ದಿಕ್ಕು (ತನ್ನ ಮಗಂಗೆ ಸಮಂತು ಬುದ್ಧಿವೇೞ್ವಂತೆವೊಲ್ ಅಸ್ತಗಿರಿಯಂ ಮಱೆಗೊಂಡುದು ಸೂರ್ಯಮಂಡಲಂ: **ಪಂಪಭಾ,** ೨. ೮೬)

ಅಸ್ತಮಯ – [ನಾ] ಮುಳುಗುವುದು (ಸುಯೋಧನಂ ನಿನಗೆ ಮಾಡಿದ ರಾಜ್ಯವಿಭೂತಿಗೆ ಉಂತೆ ಮುಯ್ವಾಂತಿರದಿರ್ ಗುಣಾರ್ಣವನ ಅಸ್ತಮಯಕ್ಕಿದು ಸಾಲ್ಗುಂ ಎಂಬಂತೆವೊಲ್: **ಪಂಪಭಾ,** ೨. ೮೬)

ಅಸ್ತಮಸ್ತಕ – [ನಾ] ಅಸ್ತಗಿರಿಯ ನೆತ್ತಿ (ದಿನಕರಂ ಅಸ್ತಮಸ್ತಕಮಂ ಆಸೆವಡಲ್ ಬಗೆದಪ್ಪಂ ಏಕೆ ಕೆಮ್ಮನೆ ತಡೆವೈ: **ಪಂಪಭಾ,** ೧೧. ೧೪೫)

ಅಸ್ತಶೈಲ – [ನಾ] ಸೂರ್ಯ ಮುಳಗುವ ಬೆಟ್ಟ (ತತ್ಕಮಳಕಾನನ ಕಂಟಕಲಗ್ನಪಾದನಾದವೊಲ್ ಉಡುಗುತ್ತುಂ ಆತ್ಮಕರಮಂ ರವಿ ಪೊರ್ದಿದಂ ಅಸ್ತಶೈಲಮಂ: **ಪಂಪಭಾ,** ೪. ೪೭)

ಅಸ್ತಾಚಲ – [ನಾ] ಸೂರ್ಯ ಮುಳುಗುವ [ಪಶ್ಚಿಮದ] ಬೆಟ್ಟ (ಅಭಿಮನ್ಯು ಮರಣವಾರ್ತಾಪ್ರಭೂತ ಶೋಕಾಗ್ನಿ ಧರ್ಮತನಯನಂ ಇರದಂದು ಅಭಿಭವಿಸಿ ತನ್ನಂ ಅಳುರ್ದಂತೆ ಭಾಸ್ಕರಂ ಕೆಂಕಮಾದಂ ಅಸ್ತಾಚಲದೊಳ್: **ಪಂಪಭಾ,** ೧೧. ೧೦೬)

ಅಸ್ತಾಚಳಸ್ಥಂ – [ನಾ] ಪಶ್ಚಿಮ ಗಿರಿಯಲ್ಲಿ ನಿಂತವನಾದ, ಮುಳುಗಿದ (ಭೀಷ್ಮಂ ತಱೆಗುಂ ಮುನ್ನಂ ಅಡಂಗುವೆಂ ಎಂಬವೊಲ್ ಅಸ್ತಾಚಳಸ್ಥನಾದಂ ದಿನಪಂ: **ಪಂಪಭಾ,** ೧೧. ೨೪)

ಅಸ್ಥಿಗ್ರಂಥಿ – [ನಾ] ಅಸ್ಥಿಪಂಜರ, ಮೂಳೆಗಳ ಕಟ್ಟು (ನರಕನಗರಲಗ್ನ ಆಕಸ್ಮಿಕಾಗ್ನಿ ಸ್ಫುಲಿಂಗಸ್ಫುರತ್ ಅವಿರಳ ಲಾಕ್ಷಾಗೇಹಪೂರೈಕಭಾವ ತ್ವರಿತವಿಚಳತ್ ಅಸ್ಥಿಗ್ರಂಥಿಸಂಸ್ಥಾನಬಂಧರ್: **ಆದಿಪು,** ೫. ೮೯)

ಆಸ್ಫಾಲಿತ – [ಗು] ಅಪ್ಪಳಿಸಿದ (ಮದಸ್ತಂಬೇರಮಬೃಂಹಿತಂಗಳಿಂದಂ ಅಸಕೃತ್ ಆಸ್ಫಾಲಿತ ಅನೇಕದುಂದುಭಿಧ್ವನಿ ಮಧುರಗಂಭೀರಂಗಳಪ್ಪ ಹಯಹೇಷಿತಂಗಳಿಂದಂ: **ಆದಿಪು,** ೧೩. ೪೨ ವ)

ಅಸ್ಮತ್ – [ಗು] ನನ್ನ (ರಥದಿಂ ಧಾತ್ರಿಗೆ ಪಾಯ್ದು ಕೊಂಡು ಗದೆಯಂ ಕೆಯ್ಸಾರ್ದುದು ಅಸ್ಮತ್ ಮನೋರಥಂ ಇಂದು ಎಂದು ಕಡಂಗಿ: **ಪಂಪಭಾ,** ೧೧. ೬೬)

ಅಸ್ರ – [ನಾ] ರಕ್ತ (ಅತಿವಿಶದ ವಿಶಾಲೋರುಕ್ಷತದಿಂದೊಱೆದನಿತು ಜಡೆಯುಮಮಂ ನಾಂದಿ ಮನಃಕ್ಷತದೊಡನೆಟ್ಟಿರಿಸಿದುದು ಉತ್ಥಿತಮಾ ವಂದಸ್ರಮಿಶ್ರಗಂಧಂ ಮುನಿಯಂ; **ಪಂಪಭಾ,** ೧. ೧೦೫)

ಅಸ್ರಕ್ – [ನಾ] ಹೂ (ಮದ್ಯ ವಿಭೂಷಣ ವಸ್ತ್ರ ಆತೋದ್ಯ ಅಸ್ರಕ್ ಭವನ ಭಾಜನ ಅಶನ ದೀಪ ಪ್ರೋದ್ಯಜ್ಜ್ಯೋತಿ: **ಆದಿಪು,** ೫. ೩೧)

ಅಸ್ರಮಿಶ್ರಗಂಧ – [ನಾ] ರಕ್ತದಿಂದ ಕೂಡಿದ ವಾಸನೆ (ಅತಿವಿಶದವಿಶಾಲ ಊರುಕ್ಷತದಿಂದೊಱೆದನಿತು ಜಡೆಯುಮಮಂ ನಾಂದಿ ಮನಃಕ್ಷತದೊಡನೆ ಎಟ್ಟಿರಿಸಿದುದು ಉತ್ಥಿತಮಾ ವಂದಸ್ರಮಿಶ್ರಗಂಧಂ ಮುನಿಯಂ: **ಪಂಪಭಾ,** ೧. ೧೦೫)

ಅಹಃ – [ನಾ] ದಿನ, ಹಗಲು (ಚಂದ್ರಾದಿತ್ಯ ತಾರಾನಕ್ಷತ್ರದಿನಹರ್ನಿಶಂ ಬೆಳಗುವ ಅಮರಗಿರಿಯನೆ ಪೋಲ್ತಂ: **ಆದಿಪು,** ೬. ೬೮)

ಅಹಮಿಂದ್ರ – [ನಾ] ಹದಿನಾರು ಸ್ವರ್ಗಗಳೂ ಅಣೂತ್ತರಗಳು ಆದ ಮೇಲಿನ ಗ್ರೈವೇಯಕದಲ್ಲಿ ಹುಟ್ಟುವ ಜೀವ (ನಿಜಜೀವಿತಾವಸಾನದೊಳ್ ಸೌಮನಸವೆಂಬ ಊರ್ಧ್ವಮಧ್ಯಮದ ನವಗ್ರೈವೇಯಕದೊಳ್ ಅಹಮಿಂದ್ರನಾಗಿ: **ಆದಿಪು,** ೩. ೭೮ ವ)

ಅಹರ್ನಿಶಂ – [ನಾ] ಹಗಲು ರಾತ್ರಿ, ಸದಾ ಕಾಲ (ಚಂದ್ರಾದಿತ್ಯ ತಾರಾನಕ್ಷತ್ರದಿನಹರ್ನಿಶಂ ಬೆಳಗುವ ಅಮರಗಿರಿಯನೆ ಪೋಲ್ತಂ: **ಆದಿಪು,** ೬. ೬೮)

ಅಹರ್ಪತಿ – [ನಾ] ಸೂರ್ಯ (ಒಯ್ಯನೆ ಕೇಳ ಕರ್ಣ ನಿನ್ನಾದಿಯೊಳ್ ಅಬ್ಬೆ ಕೊಂತಿ ನಿನಗಮ್ಮಂ ಅಹರ್ಪತಿ: **ಪಂಪಭಾ,** ಪರಿಷತ್ತು ೯. ೬೪)

ಅಹರ್ಪತಿಸುತ – [ನಾ] ಸೂರ್ಯನ ಮಗ, ಕರ್ಣ (ಎಂಬುದುಂ ಕುರುಪಿತಾಮಹಂ ಅಹರ್ಪತಿಸುತನಂ ಇಂತೆಂದಂ: **ಪಂಪಭಾ,** ೧೨. ೫೫ ವ)

ಅಹಿಂಸೆ – [ನಾ] ಕೊಲ್ಲದಿರುವುದು; ಸೂಕ್ಷ್ಮವಾದ ಸಸ್ಯ ಮುಂತಾದ ಏಕೇಂದ್ರಿಯ ಜೀವ, ಶ್ರಾವಕನು ಅದನ್ನು ಕೊಲ್ಲಬಹುದು; ಆದರೆ ಕ್ರಿಮಿ ಮುಂತಾದ ದ್ವೀಂದ್ರಿಯ ಮುಂತಾದ ಜೀವಿಗಳೂ ಸ್ಥೂಲ, ಆದರೆ ಅವುಗಳನ್ನು ಕೊಲ್ಲದಿರುವುದೇ ಅಹಿಂಸಾವ್ರತ (ಕೊಲ್ಲದ ಪರನಾರಿಗಾಟಿಸದ ಕಳ್ಳದಸತ್ಯದೊಳೊಂದದಾಗಳುಂ ಕುದಿದಪತೃಷ್ಣೆಯಂ ಕುಸಿದು ಮಾನಿಸುವಯ್ದುಮಣುವ್ರತಂಗಳಂ**: ಆದಿಪು,** ೬. ೭)

ಅಹಿ – [ನಾ] ಹಾವು, ಸರ್ಪ (ಪುರಿಗಣೆಯಪ್ಪ ಕಾರಣದಿಂ ಅಂತದು ತಪ್ಪಿದೆನೆಂದು ನೊಂದು ಪಲ್ಮೊರೆದು ಅಹಿರೂಪದಿಂ ಮಗುೞ್ದು ಬಂದು: **ಪಂಪಭಾ,** ೧೨. ೨೦೩)

ಅಹಿಕಟಕ – [ನಾ] ಸರ್ಪವನ್ನೇ ಬಳೆ[ಕಟಕ]ಯಾಗುಳ್ಳವನು [ಶಿವ] (ಸಂದ ಅಹಿಕಟಕಪ್ರಸಾದದೆ ಮನೋಜನುಮಂ ಗೆಲೆವಂದನಾಗಳುಂ ಸಹಜಮನೋಜಂ ಎಮಗೀಗೆ ವಿಚಿತ್ರರತೋತ್ಸವಂಗಳಂ: **ಪಂಪಭಾ,** ೧. ೪)

ಅಹಿಕೇತನ – [ನಾ] ಸರ್ಪಧ್ವಜ, ದುರ್ಯೋಧನ (ಗುರುವ ಕೇಶಕಳಾಪಮಂ ತೆಗೆದಂ ತೆ ಗಂಡನುಮಾದಂ ಈ ಪರಿಭವಕ್ಕೆ ಅನುರೂಪಮಿಂ ಪೆಱತೊಂದುಮಿಲ್ಲ ಅಹಿಕೇತನಾ: **ಪಂಪಭಾ,** ೧೨. ೩೭)

ಅಹಿಕೇತು – [ನಾ] ದುರ್ಯೋಧನ (ಅಂತು ಕೆಯ್ಕೊಳಲ್ ಅಹಿಕೇತು ಸಿಂಧುತನಯಂ ಬೆರಸು ಆಗಡೆ ಬಂದು ತಾಗಿದಂ: **ಪಂಪಭಾ,** ೧೦. ೧೧೩)

ಅಹಿತ – [ನಾ] ಹಿತನಲ್ಲದವನು, ಶತ್ರು (ನಂಬು ನಂಬೆನ್ನ ಕಣ್ಣಿಂ ಕಿಡಿಯುಂ ಕೆಂಡಂಗಳುಂ ಸೂಸಿದಪುವು ಅಹಿತರಂ ನೋಡಿ ಪಂಕೇಜವಕ್ತ್ರೇ: **ಪಂಪಭಾ,** ೭. ೧೩)

ಅಹಿಧ್ವಜ – [ನಾ] ದುರ್ಯೋಧನ (ನುಡಿಯಿಸಿದುದು ಅಹಿಧ್ವಜನೋವದೆ ಮುನ್ನೆ ನೆಗೞ್ದ ದುಶ್ಚರಿತಂಗಳ್: **ಪಂಪಭಾ,** ೯. ೨೧)

ಅಹಿಭೂಷಣ – [ನಾ] ಹಾವನ್ನು ಆಭರಣವಾಗುಳ್ಳವನು, ಶಿವ (ಏಕಪಾದತಪದೊಳ್ ನಿಲೆ ಗೀರ್ವಾಣನಾಥಾತ್ಮಜನಲ್ಲಿಗೆ ಗುಹನಂ ಅಹಿಭೂಷಣನ ಅಂಬಂ ಬೇಡಿ ಅಟ್ಟಿದೊಡೆ: **ಪಂಪಭಾ,** ೮. ೧೬ ವ)

ಅಹಿಮಹಿಮಕರಬಿಂಬ – [ನಾ] ಸೂರ್ಯಚಂದ್ರರ ಬಿಂಬ (ಗಗನಗಜಕ್ಕಿಕ್ಕಿದ ಪೊನ್ನ ಗಂಟೆಯೆರಡೆನಲುಂ ಅಂಬರಾಂಭೋನಿಧಿಯೊಳ್ ನೆಗೆದುರಿವೌರ್ವಾನಳಂ ಉರ್ಬುಗಳೆನಲುಂ ನೆಗೆದುವು ಅಹಿಮಹಿಮಕರಬಿಂಬಂ: **ಆದಿಪು,** ೬. ೫೨)

ಅಹಿರಾಜ – [ನಾ] ಆದಿಶೇಷ (ಅವರಿರ್ವರ ಸಹಜಸ್ನೇಹಮುಮಂ ಅವರ್ಗಳಿರ್ವರ ವಿದ್ಯಾಮಹಿಮೆಯುಮಂ ಬಣ್ಣಿಸಲರಿದು ಅಹಿರಾಜಂಗೆ ಉಟಿದ ಜಡರದೇಂ ಪೊಗಟ್ವರ್: **ಆದಿಪು,** ೩. ೭೪)

ಅಹೀಂದ್ರ – [ನಾ] ಆದಿಶೇಷ (ಪಗೆ ಪೊಲ್ಲ ಪಾಂಡುನಂದನರೊಳ್ ಅಹೀಂದ್ರಕೇತನನ ಜೂದಿನ ಗೆಲ್ಲಂ: **ಪಂಪಭಾ,** ೬. ೭೫)

ಅಹೀಂದ್ರಕೇತನ – [ನಾ] ಸರ್ಪಧ್ವಜ (ಅಹೀಂದ್ರಕೇತನನ ಜೂದಿನ ಗೆಲ್ಲಮದೆಂತುಟೆನ್ನ ನಂಜಿನ ಸವಿಯಂತುಟೆಂದೊಡೆ: **ಪಂಪಭಾ,** ೬. ೭೫)

ಅಹೋ – [ಅ] ಆಹಾ ಎಂಬ ಉದ್ಗಾರ (ಸಭೆಯಿಂ ಅಹೋ ಗೀತಂ ಅಹೋ ವಾದಿತಂ ಎನಿಸಿದುದುದು ಅಮರೀಜನಗೀತಂ ಅಮರವಾದಿತಂ ಆಗಳ್: **ಆದಿಪು,** ೯. ೧೬)

ಅಳಂಕಾರ – [ನಾ] ಸಂಗೀತದಲ್ಲಿನ ಚಮತ್ಕಾರಯುಕ್ತ ರಾಗವಿನ್ಯಾಸ (ಗಮಕ ಪ್ರಯೋಗಂ ಆಭೋಗಂ ಅಳಂಕಾರಂ ಪೊಗರ್ ನಯಂ ಮಿಙುಗು ಪೊದಳ್ದಮರೆ ಕೊಳೆ ಪಾಡುವಮರಿ: **ಆದಿಪು,** ೭. ೧೬); [ನಾ] ಅಲಂಕಾರಶಾಸ್ತ್ರ, ಲಕ್ಷಣಶಾಸ್ತ್ರ (ಛಂದೋವಿದ್ಯಾಳಂಕಾರ ಪದವಿಚಾರ ಕಾವ್ಯ ಗೀತ ನೃತ್ಯ ಆತೋದ್ಯಾದಿ ಗೋಷ್ಠಿಗಳೊಳಂ: **ಆದಿಪು,** ೮. ೩ ವ)

ಅಳಂಕಾರಧ್ವನಿ – [ನಾ] ಆಭರಣಗಳ ಸದ್ದು ಮತ್ತು ಕಾವ್ಯಮೀಮಾಂಸೆಯ ಒಂದು ಪಾರಿಭಾಷಿಕ ಶಬ್ದ, ವಾಚ್ಯವಾದ ಅಲಂಕಾರಕ್ಕಿಂತ ಅದರಿಂದ ಧ್ವನಿತವಾಗುವ ಅರ್ಥ ಉನ್ನತವಾಗಿರುವುದು (ಧ್ವನಿಯೆನಿಸಿದ ಅಳಂಕಾರಧ್ವನಿಯೆಸೆವುದಲ್ಲಿ ಮಧುರವಿಪಂಚಧ್ವನಿಯೊಡನೆ: **ಆದಿಪು,** ೯. ೧೧೯)

ಅಳಂಕಾರಿಸು – [ಕ್ರಿ] ಅಲಂಕರಿಸು (ಪೂರ್ಣಕಳಶಂಗಳುಮಂ ಅವನಳಂಕಾರಿಸಿ ವಧೂವರರ ರಾಗಾಂಕುರಂಗಳಿರ್ಪಂತಿರ್ದ ರತ್ನದೀಪಂಗಳುಂ ಎಸೆಯೆ: **ಆದಿಪು,** ೮. ೧೫ ವ)

ಅಳಂಕು – [ಕ್ರಿ] ಮುದ್ರೆಯೊತ್ತು ? (ಅಂದಿನ ರೂಪು ಶಾಸನಂ ಬರೆದುದು ಬರ್ಚಿಸಿತ್ತು ಅಮರ್ದುದು ಅಟ್ಟುದು ಅಳಂಕಿದುದು ಉರ್ಚಿ ಪೊಕ್ಕು ಬೇರ್ವರಿದುದು: **ಆದಿಪು,** ೩. ೪೩)

ಅಳಂಕೃತಿ – [ನಾ] [ಕಾವ್ಯದ] ಅಲಂಕಾರಗಳು (ಪುದಿದ ಜಸಂ ಪೊದಳ್ದ ಚಳಂ ಒಂದಿದ ಅಳಂಕೃತಿ ಕೈತ ದೇಸಿ ಎಂಬುದಂ ಎನೆ ವಸ್ತುವಿದ್ಯೆಯೆನೆ ಕಬ್ಬಮೆ ಮುನ್ನಂ ಅವಂತಿವಲ್ಲದಲ್ಲದೆ ಪೆಱವಿಲ್ಲ ಕಬ್ಬಂ ಎನೆ: **ಪಂಪಭಾ,** ೧೪. ೫೯)

ಅಳಂಕೆಗೊಳ್ – [ಕ್ರಿ] ಸೇರಿಕೊ, ಉಂಟಾಗು (ನಿನಗಂ ಪುಣ್ಯೋದಯಂ ಸಾರ್ಚಿ ಬಂದುದು ಧಾತ್ರಂಗಂ ಅಳಂಕೆಗೊಂಡ ಪಿರಿದುಂ ಚಿಂತಾಂತರಂ ಪೋಯ್ತು: **ಆದಿಪು,** ೪. ೧೮)

ಅಳಕ – [ನಾ] (ಅಲೇಖ=ಬರೆಯದಿರುವ ಓಲೆಗರಿ) ಬರೆಯುವ ಓಲೆ (ಲಲಿತಪದಂ ಪ್ರಸನ್ನಕವಿತಾಗುಣಮಿಲ್ಲದೆ ಪೂಣ್ದು ಪೇೞ್ದ ಬೆಳ್ಗಳ ಕೃತಿಬಂಧಮೇಂ ಬರೆಪಕಾರರ ಕೈಗಳ ಕೇಡು ನುಣ್ಣನಪ್ಪ ಅಳಕದ ಕೇಡು: **ಪಂಪಭಾ,** ೧. ೧೨)

ಅಳಕೆ – [ನಾ] ಮುಂಗುರುಳುಳ್ಳವಳು (ಆ ನರಸಿಂಹಮಹೀಶ ಮನೋನಯನಪ್ರಿಯೆ ವಿಳೋಳನೀಳ ಅಳಕೆ ಚಂದ್ರಾನನೆ ಜಾಕವ್ವೆ ದಲ್ ಆ ಜಾನಕಿಗಗ್ಗಳಮೆ ಕುಲದೊಳಂ ಶೀಲದೊಳಂ: **ಪಂಪಭಾ,** ೧. ೩೯)

ಅಳಗ – [ನಾ] ಆಧಿಕ್ಯ (ಶಕ್ರಕಾರ್ಮುಕವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ,** ೭. ೨೫)

ಅಳವಡಿಸು – [ಕ್ರಿ] ಹೊಂದಿಸು (ಆರ್ಯಜನಕ್ಕವಂ ಅಳವಡಿಸುವ ಬಗೆಯಂ ಮಹಾತ್ಮಂ ಪೇೞ್ದಂ: **ಆದಿಪು,** ೬. ೫೬); [ಕ್ರಿ] ಸಂತಸಪಡಿಸು (ಸುರ್ಕಟಿದುರುಳಿಗುರುಳ್ ನಸುಸುರ್ಕಿದ ಕುಚಚೂಚುಕಂ ಬೆಳರ್ತಧರಂ ನೀರ್ ಪೋರ್ಕುಳಿಯೊಳ್ ಜೋಲ್ದುಳ್ಳುಡೆ ಸಾರ್ಕೆಯೊಳೇಂ ನೃಪನ ಮನಮನಳವಡಿಸಿದುದೋ: **ಆದಿಪು,** ೧೧. ೧೪೯); [ಕ್ರಿ] ವಶದಲ್ಲಿರಿಸಿಕೊ (ಮತ್ತೊರ್ವಳ್ ನಿಜಪ್ರಾಣೇಶ್ವರನನೆಂತುಂ ತನ್ನೊಳ್ ಅಳವಡಿಸಲಾಱದೆ ನಿಜಪ್ರಿಯಸಖಿಗಿಂತೆಂದಳ್: **ಆದಿಪು,** ೧೨. ೩೫ ವ); [ಕ್ರಿ] ಒಲಿಸಿಕೊ (ಅದಱಿಂದಂ ಆತನಂ ಸಾಮದಿಂದಮಳವಡಿಸಿ ನೋಡುವೆಂ ಸಾಮದೊಳಂ ಪದವಡದೊಡೆ ಬಟಿಕಿರ್ದಪುದಲ್ತೆ ಪದವಡಿಸಲೆನ್ನ ಬಯಕೆಯ ದಂಡಂ: **ಆದಿಪು,** ೧೪. ೪೩)

ಅಳವಡು – [ಕ್ರಿ] ತೃಪ್ತಿಪಡೆ (ಎಯ್ದುದಱೊಳ್ ಅಳವಡದುದುಂ ಎಯ್ದುದುದನೆ ಬಯಸುತಿರ್ಪುದುಂ ಜೀವಕ್ಕೇಗೆಯ್ದುಂ ಇದು ಸಹಜಂ: **ಆದಿಪು,** ೯. ೫೨); [ಕ್ರಿ] ಸೇರಿಸು, ಕೂಡಿಸು (ಕೆಯ್ಸೆಱೆಯಂ ಕೊಟ್ಟು ಅಳವಟ್ಟ ಸಾರಧನಮಂ ಮೂವಿಟ್ಟಿಗಂ ಪೂಣ್ದು ಕಾಲ್ಗೆಱಗಿತ್ತು ಅಂತೆ ಅರಿಗಂಗೆ ಬೆರ್ಚಿ ಭಯದಿಂ ಗ್ರಾಮಂ ಕುಳಂ ರಾಜಕಂ: **ಪಂಪಭಾ,** ೬. ೩೦)

ಅಳವಱಿ – [ಕ್ರಿ] [ಅಳವು+ಅಱಿ] ಅಳತೆಯನ್ನು ತಿಳಿ (ಸೂರ್ಯಕಾಂತದ ಧೂಪಗುಂಡಿಗೆಯೊಳ್ ಅಳವಱಿಯದೆ ಸೆಜ್ಜೆವಳನಿಕ್ಕಿದ ಕೇಶಸಂಸ್ಕಾರಕಾಳಾಗರುಧೂಪಂ: **ಆದಿಪು,** ೫. ೨೩)

ಅಳವಟಿ – [ಕ್ರಿ] [ಅಳವು+ಅಟಿ] ಸಾಮರ್ಥ್ಯಗುಂದು (ಮಹಿಮಾಕರಂ ಈ ದೊರೆಯನುಂ ಅಳವಟಿಯೆ ವಸುಂಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ: **ಆದಿಪು,** ೧೪. ೧೧೨)

ಅಳವಿ – [ನಾ] ಪ್ರಮಾಣ, ಅಳತೆ (ಸಾರಸಹಕಾರಧಾರಾಸಾರಂ ಕೊಳದ ಅಳವಿಯಂತೆ ಸುರಿತರೆ: **ಆದಿಪು,** ೬. ೯೫); ಶಕ್ತಿ, [ನಾ] ಯೋಗ್ಯತೆ (ಕಡಲ ತಡಿಯೆಯ್ದೆ ನೆಲನಂ ಪಡೆದರ್

ಭವದೀಯಪುತ್ರರುಳ್ಳ ಅಳವಿಗಳೊಳ್: **ಆದಿಪು,** ೯. ೯೮); [ನಾ] ಸಂಪನ್ನತೆ (ಆ ವಿವಿಧ ಲಕ್ಷಣಂಗಳೊಳಾವರಿಸಿದ ಕುಲದ ಬಲದ ಚಲದ ಅಳವಿಗಳೊಳ್ ಮೂವರುಮನಾದಿಪುರುಷರ್ ಮೂವರುಮೆನಲಲ್ಲದತ್ತ ಮತ್ತೇನೆಂಬರ್: **ಪಂಪಭಾ,** ೧. ೮೭)

ಅಳವಿಯ ಅಳವು – [ನಾ] ಬೆಳೆದ ಅಳತೆಯ ಪ್ರಮಾಣ (ಸುದತಿಯ ಮೃದು ಪದವಿನ್ಯಾಸಮುಮಂ ಶೇಷಂ ಆನಲಾರದೆ ಸುಯ್ದಂ ಬೇಸಜೆಂ ಎಂದೊಡೆ ಗರ್ಭದ ಕೂಸಿನ ಬಳೆದಳವಿಯಳವಂ ಅಳೆವರುಂ ಒಳರೇ: **ಪಂಪಭಾ,** ೧. ೧೨೬)

ಅಳವಿಗಟೆ – [ಕ್ರಿ] ಮಿತಿ ಮೀರು (ಕೆಚ್ಚುವಿರ್ದ ಮಚ್ಚನುಂ ಉರ್ಚಿಪೋದ ಮೇಳಮುಮಂ ಅಳವಿಗಟೆದಲಂಪುಮಂ: **ಆದಿಪು,** ೪. ೫೨ ವ)

ಅಳವಿಗಾಣ್ – [ಕ್ರಿ] ಪರಿಮಿತಿಯನ್ನು ಕಾಣು (ಮಾನಭಂಗಮಂ ಮಾಡೆ ಮನಃಕ್ಷತಕ್ಕೆ ಅಳವಿಗಾಣೆವು: **ಪಂಪಭಾ,** ೬. ೧೬)

ಅಳವಿಗೆಡು – [ಕ್ರಿ] ಅಂತಸ್ತನ್ನು ಕಳೆದುಕೊ (ಪೆಱನಿಕ್ಕುಂಗೂಟಿಸೊಳಂ ಕೀಟೆಲೊಳಂ ಅಳವಿಗೆಟ್ಟಿರ್ಪ ನಿಮ್ಮಿರ್ಪುದರ್ಕಂ ಮಱುಗುತ್ತಿರ್ಪಳ್ಗೆ: **ಪಂಪಭಾ,** ೮. ೭೧)

ಅಳವಿದಪ್ಪು – [ಕ್ರಿ] ಗುರಿ ತಪ್ಪು, ಅಳತೆ ತಪ್ಪು (ಬಟೆಗೊಳ್ವ ಮಿಗಮುಮಂ ಜುಟಿಪದೆ ತಾನೊಂದಳವಿದಪ್ಪದೆ ಎಚ್ಚು: **ಪಂಪಭಾ,** ೫. ೪೮)

ಅಳವಿಬಳೆ – [ಕ್ರಿ] ಪರಾಕ್ರಮವು ಬೆಳೆ (ಅಂತು ವಸುಷೇಣನಾ ಲೋಕಾಂತಂಬರಮಳವಿ ಬಳೆಯೆ ಬಳೆದೆಸಕಮನೋರಂತೆ ಜನಂಗಳ ಕರ್ಣೋಪಾಂತದೊಳೊಗೆದೆಸೆಯೆ ಕರ್ಣನೆಂಬನುಮಾದಂ: **ಪಂಪಭಾ,** ೧. ೯೮)

ಅಳವು – [ನಾ] ಧೈರ್ಯ (ರಾಜ್ಯಮಂ ತೃಣದಿಂದಂ ಲಘುವಾಗೆ ಬಗೆದು ಬಗೆದರ್ ತಾಮುಂ ತಂದೆಯ ಬಗೆದುದನೆ ಎಂದೊಡೆ ಅಗುಂದಲೆ ಪೊಗಟಲ್ಕೆ ಚಕ್ರಿನಂದನರಳವಂ: **ಆದಿಪು**, ೪. ೮೮); [ನಾ] ಶಕ್ತಿ (ವಿಜಯಾರ್ಧಾದ್ರಿಯನುರ್ಚಿ ಬರ್ಪ ಅಳವಿದೇಂ ಸಾಮಾನ್ಯಮೇ: **ಆದಿಪು,** ೧೩. ೫೭); [ನಾ] ಅಳತೆ (ಸಹಜಮನೋಜನ ಕುಲದ ಚಲದ ಚಾಗದ ಬೀರದ ಭಾಗ್ಯದ ಸೌಭಾಗ್ಯದ ಅಗುಂತಿಗಳಂ ಅಂತುಂ ಅಳವಲ್ಲದೆ ಪೊಗಟ್: **ಪಂಪಭಾ,** ೪. ೪೦ ವ); [ನಾ] ಯೋಗ್ಯತೆ (ಜಗಂಗಳನಳ್ಳಾಡಿಸುವ ಮದೀಯ ಉಗ್ರಾಸ್ತ್ರಂ ಪೆಸರ್ಗೊಳಲೇಂ ತನಗೆ ದೊರೆಯೆ ಖಳಂ ಅಳವಜೆಯಂ: **ಪಂಪಭಾ,** ೮. ೧೯)

ಅಳವುಗಿಡಿಸು – [ಕ್ರಿ] ವಿವೇಚನೆಯನ್ನು ಕೆಡಿಸು (ಭೂತಳರಾಜ್ಯ ವಿಮೋಹಂ ಅಚಿರರುಚಿಸಂಚಳಂ ಇಂತಳವಿಗಿಡಿಸಿದುದು ಮನುಕುಲತಿಲಕನುಮಂ: **ಆದಿಪು,** ೧೪. ೧೨೧)

ಅಳಸಗಾಮಿನಿ – [ನಾ] ಮಂದಗಾಮಿನಿ (ಕಚಭಾರ ಅಳಸಗಾಮಿಣಿಪರಿವೃತಂ ಗಂಗಾತರಂಗೋಪಮಾನ ಚಳಚ್ಚಾಮರವಾತಪೀತ ನಿಜಘರ್ಮಾಂಭಃಕಣಂ .. .. ಇರ್ದನಂದು ಸುಖದಿಂ: **ಪಂಪಭಾ,** ೩. ೮೫)

ಅಳಸು – [ಕ್ರಿ] ಸುರತಧ್ವನಿ ಮಾಡು (ಅಳಸುವ ಪುರುಳಿಯ ಗಟಿಪುವ ಗಿಳಿಯ ತೆಱಂದಿರಿದು ಮರೆವ ಪೆಣ್ದುಂಬಿಯ ಬಿಚ್ಚಳಿಪ ಪರಭೃತದ ಕಳಕಳದೊಳೆ ಮಸುಳ್ದುದು ದಿವಿಜಯುಗಳ ಕಳಕಳನಿನದಂ: **ಆದಿಪು,** ೬. ೯೪) ['ಅಳಸುವ' – ಎಲ್. ಬಸವರಾಜು ಅಂಗೀಕರಿಸಿರುವ ಪಾಠ]

ಅಳಱ್ – [ಕ್ರಿ] ಸೀಳು (ಗಾಳಿಯನೆಡೆಗಲಿಸಿದುದು ವಿನೀಳಘನಾಘನಮನಳಱ್ ಪಱೆದುದು: **ಆದಿಪು,** ೪. ೮೫); ತೊಲಗಿ ಹೋಗು (ಅಳಱೆ ಕಿಡೆ ಘಾತಿಗಳ್ ದಾನಳಾಭಭೋಗೋಪಭೋಗವೀರ್ಯಂಗಳೊಳ್ ಅಗ್ಗಳಿಸಿದ ಅನಂತಚತುಷ್ಟಯ: **ಆದಿಪು,** ೧೦. ೧೫); [ಕ್ರಿ] ನಡುಗು (ಭರದಿಂದಂ ದಂಡದೊಳ್ ತಾಟಿಸಿದೊಡೆ ವಿಜಯಾರ್ಧಾಚಳಂ ತೊಟ್ಟನಾಗಳ್ ಬಿರಿದತ್ತೆಂಬಂತುಂ ಆ ಪರ್ವತಂ ಅಳಱೆದುದೆಂಬಂತು: **ಆದಿಪು,** ೧೩. ೩೬); [ಕ್ರಿ] ಭಯಪಡು (ಸಕಳಭುವನಂ ಒಂದೊಂದಱೊಳ್ ಕೇಣಿಗೊಂಡು ಉಚ್ಚಳಿಸಲ್ ಸೂಸಲ್ ಪಳಂಚಲ್ ಪಿಡಿದು ಒಡೆದು ಅಳಱಲ್ ಪಾಱೆ ಜೀಱೇಟಿಲ್: **ಪಂಪಭಾ,** ೧೦. ೬೫); [ಕ್ರಿ] ಚದುರು (ಅನ್ನೆಗಮತ್ತ ಸಂಸಪ್ತಕಬಲಮೆಲ್ಲಮಂ ಅಳಱ್ ಪೆಳಱ್ ಕಿವುಟಿದುಟಿದು ಕೊಲ್ವಲ್ಲಿ ವಿಕ್ರಮಾರ್ಜುನಂ ಮುರಾಂತಕನೊಳ್ ಇಂತೆಂದಂ: **ಪಂಪಭಾ,** ೧೧. ೧೦ ವ); [ಕ್ರಿ] ಹಾಳಾಗು (ಕರಿಮಕರಾಹತಿಯಿಂ ಬಿರಿದಳಱುವ ಭೈತ್ರದಂತೆ ವಿವಿಧಾಯುಧದಂತುರಿತಂಗಳಟೆದುವು: **ಪಂಪಭಾ,** ೧೩. ೩೫)

ಅಳಿ – [ನಾ] ದುಂಬಿ (ಬಾಯ ಕಂಪಿಂಗೆ ಸಾರ್ವ ಅಳಿಪ್ರಕರಂ ಅಂದು ಸೀಗುರಿವೊಲಾಗೆ ನಾಣ್ಗೆಟ್ಟು ಮೊಕ್ಕಳಂ ಜತಿಗೆ ಮೆಟ್ಟುವಳ್ ಪಿಡಿದು ಮೆಟ್ಟುವಳ್ ನೋಟ್ಟಿರಂ: **ಪಂಪಭಾ,** ೪. ೮೯)

ಅಳಿಕ – [ನಾ] ಅಲಿಕ, ಹಣೆ (ಅಂತಾ ಫಣಿಕಾಂತೆಗಂ ಅಮರಿಕಾಂತಾ ಅಳಿಕಫಳಕತಿಳಕಹರನೆನಿಪ ಅರಿಗಂಗಂ ತನಯನಧಿಕ ತೇಜೋವಂತಂ ಇಳಾವಂತಂ ಇಂದುಮಂಡಳಕಾಂತಂ: **ಪಂಪಭಾ,** ೪. ೧೮)

ಅಳಿಕುಳಾಕುಳೀಕೃತ – [ಗು] ದುಂಬಿಗಳ ಸಮೂಹದಿಂದ ಪೀಡಿಸಲ್ಪಟ್ಟ (ಧ್ವನದಳಿಕುಳಾಕುಳೀಕೃತ ವನಂಗಳಿಂದೆಸೆವ ಪದ್ಮಷಂಡಂಗಳ ಚೆಲ್ವಿನೊಳಂ ಕಣ್ಣ ಮನಮಂ ಅನುವಿಸುವ ವಿರಾಟಪುರಮನೆಯ್ದಿದರ್ ಅವರ್ಗಳ್: **ಪಂಪಭಾ,** ೮. ೫೨)

ಅಳಿನೀ – [ನಾ] ಹೆಣ್ಣು ದುಂಬಿ (ಪಾಸಱ್ ಸಿಂಹಪೀಠಂ ಅಳಿನೀರುತಿ ಮಂಗಳಗೀತಿ ಭೂತಳಂ ಪಾಸು ಮೃಗವ್ರಜಂ ಪರಿಜನಂ ಪೊದಱ್ ಓಲಗಸಾಲೆ: **ಪಂಪಭಾ,** ೭. ೨೯)

ಅಳಿನೀರುತಿ – [ನಾ] ದುಂಬಿಗಳ ಝೇಂಕಾರ (ಪಾಸಱ್ ಸಿಂಹಪೀಠಂ ಅಳಿನೀರುತಿ ಮಂಗಳಗೀತಿ ಭೂತಳಂ ಪಾಸು ಮೃಗವ್ರಜಂ ಪರಿಜನಂ ಪೊದಱ್ ಓಲಗಸಾಲೆ: **ಪಂಪಭಾ,** ೭. ೨೯)

ಅಳಿನೀಳ – [ಗು] ದುಂಬಿಯಂತೆ ಕಪ್ಪಾದ (ಅಳಿನೀಳ ನೀಳಗಳಕಂಠ ತಮಾಳವಿನೀಳ ನೀರದಪ್ರಸರ ವಿಭಾಸಿಯಾದುದು ಸಮೀರಂ: **ಪಂಪಭಾ,** ೭. ೨೨)

ಅಳಿಪಿಳಿವೋಗು – [ಕ್ರಿ] ವ್ಯರ್ಥವಾಗು (ತನ್ನ ನುಡಿಗಳ್ ಅಳಿಪಿಳಿವೋಗೆ ಸೈರಿಸಲಾಱದೆ ಪಿಡಿವುದುಂ ಪಾಂಚಾಲರಾಜತನೂಜೆ ಇಂತೆಂದಳ್: **ಪಂಪಭಾ,** ೮. ೬೯ ವ)

ಅಳಿಪು – [ನಾ] ಆತಿಯಾಸೆ (ಮನದ ಅಳಿಪಿಂ ತಮಾಳಲತಿಕಾಂಗಿಯರಾಟಿಸೆ ಬರ್ದುಗೆಟ್ಟು

ಕಾಂಚನಲತಿಕಾಂಗಿಯರ್ ಬಯಸೆ: **ಆದಿಪು,** ೨. ೪೬); [ನಾ] ಅಳಿವು, ನಾಶ (ಈ ರೂಪೆಂಬುದು ಭುವನಜನಾರಾಧ್ಯಂ ಚಕ್ರಜನನಿಷೇವಿತಂ ಇದಱೊಳ್ ಸಾರದಳಿಪೆಂದು ಪೆಳ್ಪನೆ ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್: **ಆದಿಪು,** ೯. ೯೩); [ನಾ] ಲಾಂಪಟ್ಯ (ಪಾತಕಿಯೊಳ್ ಲಕ್ಷ್ಮಿಯೊಳ್ ಅತಿಕಾತರ ಕಾಪುರುಷಗಣನೆಯೊಳ್ ನೆರೆಯಲ್ಕಿಂತೀತನೆ ಬಗೆಗೆ ಆಂ ಪುರುತನುಜಾತರ ಬಗೆದುದನೆ ಬಗೆವೆಂ ಅಳಿಪಂ ಬಗೆಯೆಂ: **ಆದಿಪು,** ೧೪. ೧೨೩); [ಕ್ರಿ] ಆಸೆಪಡು (ಎಂದು ಎನಿತಾನುಂ ತೆಱದೊಳ್ ಅಳಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳಂ ನುಡಿದುಂ ಕಾಲ್ವಿಡಿದುಂ ಅಚಳಿತಧೈರ್ಯನ ಮನಮಂ ಚಲಿಯಿಸಲಾಱದೆ: **ಪಂಪಭಾ,** ೭. ೯೪ ವ); [ಕ್ರಿ] ಪ್ರೀತಿಯುಂಟುಮಾಡು (ಮೃಗಶಿಶುನೇತ್ರೆಯ ನಡುವು ಎರ್ದೆ ಉುರ್ಗುರ್ಗಳ್ ಕರಂ ಅಸಿದು ಕನಕಕಾಂಚೀ ನಿನದಪ್ರಗಣಿತಂ ಅಗಲ್ದ ನಲ್ಲಳ ಜಗನಮಿದು ಎನ್ನೆರ್ದೆಯನೆಂತು ಪೊಕ್ಕಳಿಪುವುದೋ: **ಪಂಪಭಾ,** ೪. ೭೩); [ನಾ] ಪ್ರೀತಿ (ಎಂದೆನಿತಾನುಂ ತೆಱದೊಳ್ ಅಳಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳಂ ನುಡಿದುಂ: **ಪಂಪಭಾ,** ೭. ೯೪ ವ)

ಅಳಿಯೆ ನೋ – [ಕ್ರಿ] ಸಾವಿನಂತಹ ಸಂಕಟಪಡು (ಎರಡುಂ ಪಡೆಯ ನಾಯಕರ್ ಅಟಿಯೆ ನೊಂದ ತಮ್ಮಣುಗಾಳ್ಗಳ ಕೊಂಡಾಟದಾನೆಗಳ ನಚ್ಚಿನ ಕುದುರೆಗಳ ಪುಣ್ಗಳಂ ಉಡಿಯಲುಂ ಓವಲುಂ: **ಪಂಪಭಾ,** ೧೧. ೨ ವ)

ಅಳೀಕ – [ನಾ] ಕಪಟ (ಅನೇಕಕ್ಷುದ್ರವಿದ್ಯಾಗರ್ವ ದುರ್ವಿದಗ್ಧರುಮ್ ಅಳೀಕವಿಚಕ್ಷಣರುಂ ಅಪ್ಪುದಱೆಂದಂ ಅದಂ ಅನುಮಾನದಿಂದಱೆದು: **ಆದಿಪು,** ೩. ೮೭ ವ)

ಅಳೀಕಭ್ರುಕುಟಿ – [ನಾ] ಹುಸಿ ಹುಬ್ಬುಗಂಟು, ತೋರಿಕೆ ಕೋಪ (ಉದಾರವೀರಚರಿತನಿರತಕದನಕರ್ಕಶಕ್ಷತ್ರಿಯಂಗೆ ವಿಪಕ್ಷ ಕ್ಷತ್ರಿಯಪರಾಕ್ರಮಾಕರ್ಣನೋದೀರ್ಣ ಕ್ರೋಧದೊಳ್ ಅಳೀಕಭ್ರುಕುಟಿಯುಂ ಅನರ್ಘಲಲಾಟ ತ್ರಿಪತಾಕೆಯುಂ: **ಆದಿಪು,** ೧೪. ೮೧ ವ)

ಅಳೀಕೋದಂತ – [ನಾ] ಸುಳ್ಳು ಸುದ್ದಿ (ಪರಿಪೀತಾಸವನಂತಿರ್ದ ವಾಸವನಂ ದುರ್ದಂತಂ ಅಳೀಕೋದಂತಂಗಳಂ ಆಱೆಸುತ್ತಿರ್ಪುದುಂ: **ಆದಿಪು,** ೩. ೮೮ ವ)

ಅಳುಂಕು – [ಕ್ರಿ] ಅಲುಗಾಡು (ಅಂದಿನ ರೂಪು ಶಾಸನಂ ಬರೆದುದು ಬರ್ಜಿಸಿತ್ತಮರ್ದುದು ಅಳುಂಕಿದುದುರ್ಚಿ ಪೊಕ್ಕು ಬೇರ್ವರಿದುದು: **ಆದಿಪು,** ೩. ೪೩)

ಅಳುಂಬ – [ನಾ] ತಡೆಯಲಾರದ್ದು (ತೀರ್ದುದಾದರದೊಳೆ ನಿನ್ನ ನೆಚ್ಚಿನ ಮನೋರಥಂ ಆದೊಡಂ ಅಂತದಂ ಸವಿಸ್ತರದೊಳೆ ಪೇೞದಂದೆನಗೆ ರಾಗದ ಭಾರಮಳುಂಬಮಾಗದೇ: **ಆದಿಪು,** ೩. ೮೫); [ನಾ] ಅತಿಶಯ, ವೆಗ್ಗಳ (ಕೇಳ್ವಂಗೆ ಬಿತ್ತರಿಪಂಗಾದಂ ಅಳುಂಬಮಲ್ತೆ ಭಗವಜ್ಜನ್ಮಾಭಿಷೇಕೋತ್ಸವಂ: **ಆದಿಪು,** ೭. ೧೦೧); [ನಾ] ಅಸಾಧ್ಯ (ನೋಡಲ್ ಅಳುಂಬಂ ಎಂದೊಡೆ ಇದಂ ಆಂತು ಇಱೆದಾರ್ ತವಿಪನ್ನರ್ ಎಂದು ನಾಣ್ಗೊಡೆ; **ಪಂಪಭಾ,** ೮. ೧೦೦)

ಅಳುಂಬಮಾಗು – ಅತಿಶಯವಾಗು (ಅಲರ್ವ ಆದರಮಾದ ಅಳುಂಬಮಾಗೆ ವೈಮಾನಿಕಚಕ್ರವಾಕದೊಲವುಣ್ಮಿರೆ: **ಆದಿಪು,** ೧೦. ೧೭)

ಅಳುರ್ – [ಕ್ರಿ] ಆವರಿಸು, ಹಬ್ಬು (ಉರಿ ಅಳುರ್ವಂತತತಿದಾಹಜ್ವರಮ್ ಅಳುರೆ: **ಆದಿಪು,** ೨. ೧೨); ಪೀಡಿಸು (ಅಳುರ್ವ ಪಸಿವಂ ಆಂ ಏಗೊಂಡು ಏಂಗಳ ಗೆಯ್ದೆವು: **ಆದಿಪು,** ೬. ೭೩); [ನಾ] [ದೃಷ್ಟಿಯ] ವ್ಯಾಪ್ತಿ (ಕರಂ ಪೊಳೆವ ಪಾಂಗೆ ಕಣ್ಣಿಂದೆ ಅಳುರ್ ತುಳುಂಕೆ ನಿಡುವುರ್ವುಗಳ್ ಪೊಡರೆ: **ಪಂಪಭಾ,** ೪. ೮೯); [ಕ್ರಿ] ಸುಡು (ಬನಮನಿತುಂ ಶಿಖೆಗಳಳುರೆ ಬೆಂಕೆಯ ಪೊಯ್ದು ಉರ್ವಿನೊಳೆ ಕೊರಗಿರ್ದ ಲತೆಗಳ ನನೆಕೊನೆಯನೆ ದಹನಂ ಅಳುರ್ದು ಕೊನೆಗೊನೆಗೊಂಡಂ: **ಪಂಪಭಾ,** ೫. ೮೭)

ಅಳುರ್ಕೆ – [ನಾ] ವ್ಯಾಪಿಸುವಿಕೆ (ಚುಂಬನಾಭಿಲಾಷೆ ತನಿಗೆತ್ತು ಬಾಯ್ಗೆ ಬಳಸಲ್ ಪದೆದಟ್ಟು ಅಳುರ್ಕೆ ತೋಳ್ಗೆ ಬಂದೊದವಿರೆ: **ಆದಿಪು,** ೪. ೧೫); [ನಾ] ಪ್ರತಾಪ (ನಮ್ಮ ಕುಲದೇವತೆಗಳಪ್ಪ ಮೇಘಮುಖರೆಂಬ ನಾಗರಾಜರೆಂಬ ನಾಗರಾಜರಿಂದಂ ಈತನ ಅಳುರ್ಕೆಯುಮನುರ್ಕುಮಂ ಕಿಡಿಸಿ ಗೆಲ್ವಂ: **ಆದಿಪು,** ೧೩. ೫೮ ವ); [ನಾ] ಆಧಿಕ್ಯ (ಮುನಿದೆರಡು ಅಂಬಿನೊಳ್ ರಥಮುಮಂ ಪದವಿಲ್ಲುಮಂ ಎಯ್ದೆ ಪಾರ್ದು ನೆಕ್ಕನೆ ಕಡಿದು ಇಂದ್ರನಂದನಂ ಅಳುರ್ಕೆಯಿಂ ಆರ್ದೊಡೆ: **ಪಂಪಭಾ,** ೧೧. ೧೯); [ನಾ] ತುಂಬ, ಪೂರ್ತಿ (ಡೊಕ್ಕನೆ ಸುರಿಗೆಯೊಳ್ ಉರಮಂ ಬಿಕ್ಕನೆ ಬಿರಿಯಿಱೆದು ಬರಿಯಗಲನೊತ್ತಿ ಮನಂ ಕೊಕ್ಕರಿಸದೆ ಬೆಲಗಸೆಯಿಂ ಅಳುರ್ಕೆಯೆ ಮೊಗೆಮೊಗೆದು ನೆತ್ತರಂ: **ಪಂಪಭಾ,** ೧೨. ೧೫೩)

ಅಳುರ್ಕೆಗಿಡು – [ಕ್ರಿ] ವ್ಯಾಪ್ತಿಯನ್ನು ಕಳೆದುಕೊ (ಅರ್ಕಂ ಅಳುರ್ಕೆಗೆಟ್ಟು ನಭದಿಂ ತೂಳ್ದಂ ಸುರುಳ್ದಪ್ಪಿದಳ್ ಮೃಡನಂ ಗೌರಿ ಸಮಸ್ತಂ ಈ ತ್ರಿಭುವನಂ ಪಂಕೇಜಪತ್ರಾಂಬುವೋಲ್ ನಡುಗಿತ್ತು: **ಪಂಪಭಾ,** ೧೦. ೨೬)

ಅಳುರ್ಕೆಗೊಳ್ – [ಕ್ರಿ] ಆವರಿಸು (ಜಲಜಲನೆ ಒಟ್ಟುತಿರ್ಪ ಪರಿಕಾಲ್ ಪರಿಕಾಲೊಳ್ ಅಳುರ್ಕೆಗೊಂಡ ನೈದಿಲ ಪೂ .. . ಸಿರಿ ನೋಡುಗುಮಾ ವನಾಂತರಾಳದೊಳ್: **ಪಂಪಭಾ,** ೧. ೫೨)

ಅಳೆವರ್ – [ನಾ] ಅಳೆಯುವವರು (ಸುದತಿಯ ಮೃದು ಪದವಿನ್ಯಾಸಮುಮಂ ಶೇಷಂ ಆನಲಾರದೆ ಸುಯ್ದಂ ಬೇಸಱೆಂ ಎಂದೊಡೆ ಗರ್ಭದ ಕೂಸಿನ ಬಳೆದಳವಿಯಳನಳೆವರುಂ ಒಳರೇ: **ಪಂಪಭಾ,** ೧. ೧೨೬)

ಅಳ್ಕು – [ಕ್ರಿ] ಅಳುಕು, ಹೆದರು (ನೀಮಿದಾವುದು ಪಡೆಮಾತನಿಂತು ನುಡಿದಿರ್ ಪುದುವಾೞ್ಕೆಯೊಳೆನ್ನ ಬಳ್ಕಿದ ಅಳ್ಕಿದ ಬಗೆಗಂಡಿರೇ: **ಪಂಪಭಾ,** ೧೧. ೫೦); [ಕ್ರಿ] ಹಿಂಜರಿ (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏಟುತಿರೆ: **ಪಂಪಭಾ,** ೩. ೯); [ಕ್ರಿ] ಸುಸ್ತಾಗು (ಭವಲಾಲಾಟವಿಲೋಚನಾಗ್ನಿಶಿಖೆಯಿಂ ಬೆಂದಳ್ಕಿ ಮತ್ತಂ ಮನೋಭವಂ ಎೞ್ಚತ್ತೊಡೆ: **ಪಂಪಭಾ,** ೭. ೨೪)

ಅಳ್ಕುಱು – [ಕ್ರಿ] ಭಯಪಡು (ಕರಿ ನೊಂದು ಕೋಪದಿಂ ಪಿಡಿದೆಱಗಿತ್ತು ಭೀಮನನುಗುರ್ವಿಸಿ ಪಾಂಡುಸೈನ್ಯಂ ಅಳ್ಕುಱಲ್: **ಪಂಪಭಾ,** ೧೧. ೭೪)

ಅಳ್ಗಿಡಿ – [ನಾ] ಸಣ್ಣ ಕಿಡಿ (ಮೊನೆಯಂಬುಗಳ್ ಅಳ್ಗಿಡಿವೋಗೆಯುಂ ಮನಂಗಿಡಂ ಆಂಕೆಗೊಳ್ಳಂ ಅಗಿಯಂ ಸುಗಿಯಂ ಸುರಸಿಂಧುನಂದನಂ; **ಪಂಪಭಾ**, ೧೧. ೪೪)

ಅಳ್ಗುರಳ್ – [ನಾ] ಮಟ್ಟಸವಾದ ಕೂದಲು (ಮಂದರೋಪವನ ಸಂಭವಂ ನಯದಿನಾಡಿಸಿತ್ತಾಗಳ್ ಅಪ್ಸರಃಪ್ರಕರದ ಅಳ್ಗುರುಳ್ಗಳನದೊಂದು ಮಂದಾನಿಳಂ: **ಆದಿಪು**. ೭. ೬೭) ['ಅಳ್ಗರುಳ್' – ಎಲ್. ಬಸವರಾಜು ಸ್ವೀಕರಿಸಿರುವ ಪಾಠ]

ಅಳ್ಪು – [ನಾ] ಅಳಿಪು, ಅತಿಯಾಸೆ (ಕುಲಿಂಗಿಗಳ್ ವಿಕೃತಿಗಳಿಂ ವಿರಹಿತರಪ್ಪರ್ ಮದಸಿಂಧುರಭಾರಮನಾನಲಾಱದ ಅಳ್ಪಿಂ: **ಆದಿಪು**, ೧೫. ೩೦)

ಅಳ್ಳಾಟ – [ನಾ] ನಡುಕ (ನೋಟದೊಳಟ್ಟಿಜಂಬಡೆದು ಮೆಲ್ಲುಡಿಯೊಳ್ ಬಗೆವೊಕ್ಕು ಜಾಣೊಳ್ ಅಳ್ಳಾಟಮನೆಲ್ಲಮಂ ಕಿಡಿಸಿ: **ಪಂಪಭಾ**, ೩. ೮೨)

ಅಳ್ಳಿಱಿ – [ಕ್ರಿ] ಚಾಚಿ ತಿವಿ (ಕಟ್ಟಿಲೆಯನಲೆವ ಸೊಡರ್ಗುಡಿಗಳನೀ ಅಳ್ಳಿಱಿದಲೆವುವು ಬನದೊಳಗುಳ್ಳಲರ್ದುಜ್ವಳಿಪ ಚಂಪಕ ಪ್ರಸವಂಗಳ್: **ಆದಿಪು**, ೧೧. ೬೭)

ಅಳ್ಳಿಱಿಸು – [ಕ್ರಿ] ನಡುಗುವಂತೆ ಮಾಡು (ಆ ತನೂದರಿಯರ್ ಆ ನಾಭೀಯನ ಮನಸ್ಸರಸ್ತಟಮಂ ತಮ್ಮ ವಳಿತ್ರಯ ತರಂಗಗಳಿಂದಂ ಅಳ್ಳಿಱಿಸಿಯುಂ: **ಆದಿಪು**, ೮. ೨೪ ವ) [ಎಲ್. ಬಸವರಾಜು ಅವರ ಆವೃತ್ತಿ]

ಅಳ್ಳೈಜೊಳ್ಳೈತನ – [ನಾ] ನಿಸ್ಸಾರವಾಗಿರುವುದು (ಜೋಲ್ದು ಸಡಿಲ್ದಿರ್ದೊಡಲ ಅಳ್ಳೈಜೊಳ್ಳೈತನಮಂ ಮೇಣ್ಕಾಣನೋ: **ಆದಿಪು**, ೨. ೪೫)

ಅಳ್ಳೈಯಾಗು – [ಕ್ರಿ] ದುರ್ಬಲಗೊಳ್ಳು (ಬೇಟದ ತೋಟಿಯಂ ತೊಡರ್ದಟ್ಟುವೆತ್ತ ಪೊಲೆವುಲ್ಲೆ ಅಳ್ಳವಿಳ್ಳೈಯಾದ ಮಾತಂ ತನ್ನ ಸೂೞೆಯ ಬೇಸಱಿಂ ಕೆಳೆಯಂಗಿತೆಂದಂ: **ಆದಿಪು**, ೧೨. ೨೮ ವ)

ಅಳ್ಳೈರ್ದೆ – [ನಾ] ಮೃದುಹೃದಯ (ಸ್ವಯಂಪ್ರಭೆ ಲಲಿತಾಂಗನ ಅಳ್ಳೈರ್ದೆಗೆ ತೊಟ್ಟನೆ ಬೇಂಟಮೆ ಪುಟ್ಟೆ ಪುಟ್ಟಿದಳ್: **ಆದಿಪು**, ೨. ೭೩); [ನಾ] ದುರ್ಬಲವಾದ ಹೃದಯ (ಒದವಿದ ನೂಲ ತೊಂಗಲುಲಿ ದೇಸೆಯನಾಂತು ವಿಳಾಸದಿಂದಿಱುಂಕಿದ ನಿಱಿ ಗಂಡರಳ್ಳೈರ್ದೆಗಳಂ ತುೞಿವೋಜೆಯನುಂಟುಮಾಡುವಂದದೆ: **ಪಂಪಭಾ**, ೪. ೩೫)

ಅಳ್ಳೈವಿಳ್ಳೈಯಾಗು – [ಕ್ರಿ] ತುಂಬ ದಣಿ (ಪಯಣದೊಳ್ ಅಳ್ಳೈವಿಳೆಯಾಗಿ ಬಂಬಲ ಬಾಡಿದ ತನುಲತೆಗಳುಂ: **ಆದಿಪು**, ೧೧. ೭೦ ವ); [ಕ್ರಿ] ಚದುರಿ ಹೋಗು (ಓಳಿವಟ್ಟು ಬರ್ಪ ಶಂಖದ ಬಳ್ಳವಳ್ಳಿಗಳುಮನಳ್ಳೈವಿಳ್ಳೈಯಾಗಿ ಪೋಗಲೀಯದೆ: **ಆದಿಪು**, ೧೨. ೭೯ ವ); [ಕ್ರಿ] ಜರ್ಜರಿತವಾಗು (ಪಗಲಿನ ಅನುವರದೊಳ್ ಅಳ್ಳೈವಿಳ್ಳೈಯಾದ ಪಾಂಡವರಂ ಇರುಳೊಳ್ ಗೆಲ್ವೆನೆಂದು ಚತುರ್ಬಲಂಗಳಂ ಒಂದುಮಾಡಿ: **ಪಂಪಭಾ**, ೧೨. ೪ ವ)

ಅಳ್ಳೇಱು – [ನಾ] ಮೆಲುವಾದ ಏಟು (ಪಾಱುವ ವಿಮಾನದೊಂದಳ್ಳೇಱಿಂ ಪಱಿದುಗುವ ಮುಗಿಲ ನೀರ್ಗಳ ಪಲವುಂ ಪೀಱುಗಳೊಳ್: **ಆದಿಪು**, ೪. ೮೬); [ನಾ] ಸ್ಪರ್ಶ (ತಾರಕಾಸಂಕುಳಂ ತೋಳ್ಗಳದೊಂದು ಅಳ್ಳೇಱಿನೊಳ್ ಪೂವಲಿವೊಲುದುರ್ವಿನಂ: **ಆದಿಪು**, ೭. ೧೨೧); [ನಾ] ನಯವಾದ ತಿವಿತ (ಏಱಿಯೆ ನಂದಿಯಂ ಆ ಪೆಱಗೇಱಿದ ಗಿರಿಸುತೆಯ ಮೊಲೆಗಳ ಅಳ್ಳೇಱಿಂ ನೀರೇಱಿಸುತಿರೆ ಕರ್ಣಾರ್ಜುನರ ಏಱಂ ನೋಡಲ್ಕೆ ಬಂದಂ ಭೂನಾಥಂ: **ಪಂಪಭಾ**, ೧೨. ೧೩೯)

ಅಱ – [ನಾ] ಧರ್ಮ (ಅಸತ್ಯವಾದಮಂ ಪೊಸಯಿಸಿ ಜೀವನಿಲ್ಲ ಮೊಱೆಯಿಲ್ಲ ಅಱನಿಲ್ಲ ಪರತ್ರೆಯಿಲ್ಲ: **ಆದಿಪು**, ೨. ೧೧)

ಅಱಗುಲಿ – [ನಾ] ಧರ್ಮದ್ರೋಹಿ (ತೆಱಪನೆ ಪಾರ್ದಿರ್ಪಂ ಮಾಯ್ದು ಅಱಗುಲಿ ಜವಂ: **ಆದಿಪು**, ೪. ೭೬)

ಅಱಮಗ – [ನಾ] ಧರ್ಮರಾಜ (ಅಱಮಗನ ಪವನತನಯನಂ ಎಱೆದು ಆಶೀರ್ವಚನಶತಮಂ ಆಂತು: **ಪಂಪಭಾ**, ೯. ೩)

ಅಱವಱಗಾಗು – [ಕ್ರಿ] ಒಣಗಿ ಹೋಗು, ಮಳೆಯಿಲ್ಲದೆ ಒಣಗು (ಅಂತು ನಿಶಾಚರಬಲಂ ಅಱವಱಗಾದ ಕಾಡಂ ಅಳುರ್ವ ಬೇಗೆಯ ದಳ್ಳುರಿಯಂತೆ: **ಪಂಪಭಾ**, ೧೨. ೭ ವ)

ಅಱಸು – [ಕ್ರಿ] ಹುಡುಕು (ಆವ ಅಡವಿಗಳೊಳ್ ಪಣ್ವಲಂ ಆವಗಂ ಒಳವು ಅಲ್ಲಿಗೆ ಅಱಸಿ ಪರಿಪರಿದು ಕರಂ ತಾವಡಿಗೊಳ್ವ ಈ ಭೀಮನ ಬೇವಸಮಿದು ನಿನ್ನ ಮನಮನೊನಲಿಸಿತಿಲ್ಲಾ: **ಪಂಪಭಾ**, ೭. ೪೬)

ಅಱಿ – [ಕ್ರಿ] ತಿಳಿ, ಗೊತ್ತಾಗು (ಆಗದು ಇನ್ನು ಅಱಿದು ಇರಲ್ ನಮಗೆ ಅಬ್ದಮನೊಂದುಂ ಇರ್ದೊಡೆ ಏತಱ ಪಡೆಮಾತೊ ಮತ್ತಂ ಇರವೇಟ್ಟುದು ಪನ್ನೆರಡಬ್ದಮಂ ಮನಂ ಮಱುಗೆ ಬನಂಗಳೊಳ್: **ಪಂಪಭಾ**, ೮. ೪೯)

ಅಱಿಕೆ – [ನಾ] ತಿಳಿವಳಿಕೆ, ಗೊತ್ತಿರುವ (ಅಱಿಕೆಯ ಭವಸಂಬಂಧಮಂ ಕಂಡು ನಿಚ್ಚಂ ನೆನೆವೋ: **ಆದಿಪು.** ೩. ೫೫); [ನಾ] ಉತ್ತಮ (ಕೊಯ್ದು ಅಱಿಕೆಯ ಪೂಗಳಿಂ ಶಿವನನರ್ಚಿಸಿಯುಂ ಬಿಡದೊರ್ಮೆ ನೋಂತುಂ ಓದಱಿವರ ಪೇೞ್ದ ನೋಂಪಿಗಳಂ: **ಪಂಪಭಾ**, ೧. ೧೩೫); [ನಾ] ಪ್ರಸಿದ್ಧ (ಪಾಂಡವಬಲಮಂ ಅಸುಂಗೊಳೆ ಕಾದುವಲ್ಲಿ ಪಾಂಡವಬಲದ ಒಳ್ವೆಸರ ಅಱಿಕೆಯ ನಾಯಕಂ ಕೃತವರ್ಮಂ: **ಪಂಪಭಾ**, ೧೨. ೬೦ ವ)

ಅಱಿಕೆಗಾಳೆಗ – [ನಾ] ಪ್ರಸಿದ್ಧ ಕಾಳಗ (ವಿಕ್ರಮಮಂ ಸೊಲ್ವಿನಂ ಆವರ್ಜಿಸಿದಂ ನಾಲ್ವತ್ತೆರಡು ಅಱಿಕೆಗಾಳೆಗಂಗಳೊಳ್ ಈತಂ: **ಪಂಪಭಾ**, ೧. ೨೫)

ಅಱಿಕೆಯ ಪಱೆ – [ನಾ] ಘೋಷಣೆ ಮಾಡಲು ಬಳಸುವ ತಮಟೆ (ಅಯೋಧ್ಯೆಗೆ ಮೊಗಸಿದಂ ಅಱಿಕೆಯ ಪಱೆ ಪಲವುಮೆಸೆಯೆ ಭರತಮಹೀಶಂ: **ಆದಿಪು**, ೧೪. ೨)

ಅಱಿದುಂ ಅಱಿಯದೆ – [ನಾ] ತಿಳಿದೂ ತಿಳಿಯದೆ (ಬರಿಸಿದ ಕಾರಣಮಾವುದೊ ತರುಣಿ ಮುನೀಶ್ವರನ ಮಂತ್ರಮೇದೊರೆಯೆಂದಾಂ ಮರುಳಿಯೆನೆ ಅಱಿದುಮಱಿಯದೆ ಬರಿಸಿದೆನಿನ್ನೇೞಿಮೆಂದೊಡಾಗದು ಪೋಗಲ್: **ಪಂಪಭಾ**, ೧. ೯೩)

ಅಱಿಪಲ್ – [ಕ್ರಿ] ತಿಳಿಸಬೇಡಿ (ಅಱಿಯರ್ ಪಾಂಡವರೆನ್ನುಮಂ ಇನ್ನುಂ ಅಱಿಪಲ್ ನೀಂ ಎಂದದಂ ಚಕ್ರಿಗಾನಱಿಪಿರ್ದಂ: **ಪಂಪಭಾ**, ೧೨. ೧೯೮)

ಅಱಿಪು – [ಕ್ರಿ] ಪರಿಚಯಿಸಿಕೊ (ಎಂದು ತನ್ನಂ ಮುನ್ನಱಿಪಿ: **ಆದಿಪು**, ೧೩. ೨೯ ವ); [ಕ್ರಿ] ತಿಳಿಸು (ಅಂತು ಕಂಡು ಮುನಿಕುಮಾರರೋದುವ ವೇದನಿನಾದದಿಂ ವಿಗತನಿದ್ರೆಯಾಗಿ ಪಾಂಡುರಾಜಂಗಂ ಅಲ್ಲಿಯ

ಮುನಿಜನಂಗಳ್ಗಂ ಅಱಿಪಿದೊಡೆ: **ಪಂಪಭಾ,** ೧. ೧೪೦ ವ)

ಅಱಿಮರುಳ್ – [ನಾ] ಮನೋವಿಕಲತೆ, ಭ್ರಮೆ (ಅಱಿಮರುಳಂತುಟೆ ಸೊರ್ಕಿನ ತೆಱನಂತುಟೆ ಮನಮೊಱಲ್ದು ಎರ್ದೆಯುರಿವುದು ಮೆಯ್ಯೆಱಗುವುದು ಪದೆವುದು ಆನಿದನಱಿಯನಿದೇಕೆಂದು ಕನ್ನೆ ತಳವೆಳಗಾದಳ್; **ಪಂಪಭಾ,** ೪. ೭೪ ವ)

ಅಱಿಯ – [ಕ್ರಿ] ತಿಳಿದುಕೊ (ಕ್ಷಿತಿಗೆ ಸಮಸ್ತಭಾರತಮುಂ ಆದಿಪುರಾಣಮುಂ ಈಗಳ್ ಒಂದು ಅಳಂಕೃತಿಯವೊಲಿರ್ದುವು ಏಕಱಿಯ: **ಪಂಪಭಾ,** ೧೪. ೬೧)

ಅಱಿಯದಂ – [ನಾ] ತಿಳಿಯದವನು (ದುರ್ಯೋಧನಂ ಒಕ್ಕಲಂ ಪುಡಿಯೊಳ್ ಪೊರಳ್ಚುವಂತೆ ಪಾಸಂಗೆಯಂ ಪೊರಳ್ಚಿ ಮುನ್ನಂ ನೆತ್ತಮನಱಿಯದನಂತೆ ಅವರ ದಾಯಮನಾಡೆ: **ಪಂಪಭಾ,** ೬. ೭೧ ವ)

ಅಱಿಯಮಿಕೆ – [ನಾ] ತಿಳಿಗೇಡಿತನ, ಅಜ್ಞಾನ (ಅಱಿಯದಿದಂ ಮಾಡಿದೆಂ ಎನ್ನ ಅಱಿಯಮಿಕೆಗೆ ಸೈರಿಸು ಎಂದು ನೀನ್ ಸಭೆಯೊಳ್ ಕಾಲ್ಗೆಱಗು: **ಪಂಪಭಾ,** ೬. ೫೮)

ಅಱಿಯಮೆ – [ನಾ] ಅಜ್ಞಾನ (ಅಱಿಯಮೆ ತಿಣ್ಣಂ ನಿನಗೇನಱಿವೊ ಮಹಾಬಳನೆನ್ನನೆಲೆ ಶತಮತಿ ನಿನ್ನ ಅಱಿಯಮೆಯೆ ನಿನ್ನನಿನಿತಂ ಮಱುಗಿಸಿದುದು: **ಆದಿಪು,** ೫. ೯೫)

ಅಱಿವಿಡಿ – [ಕ್ರಿ] ಅರಿತುಕೊ (ಜಾತ್ಯಶ್ವದಂತೆ ಬೇಗಮಾಗಿ ಕೋಟಿಕಾಳಿಕಾಱನಂತೆ ಬೞಿಯಱಿವಿಡಿದು ತುಂಬಿನ ನೀರಂ ಉರ್ಚಿದಂತೆ: **ಪಂಪಭಾ,** ೫. ೪೬ ವ)

ಅಱಿವಿರೆ – [ಕ್ರಿ] ಗುರುತಿಸುತ್ತೀರಾ (ಸಿರಿಮೆಯ್ಯೊಳಗೆ ಅಂದು ಅಱಿವಿರೆ ನೆರವಿಯೊಳಾಱಿವರ್ ಒರ್ಮೆ ಕಂಡರಂ ಅಱಿಯಲ್ಕರಿದೆಮ್ಮಂ ಬಡಪಾರ್ವರನರಸರೆ ನೀಮೀಗಳ್ ಅಱಿವಿರಱಿಯಿರೋ ಪೇೞಿಂ: **ಪಂಪಭಾ,** ೨. ೬೩)

ಅಱಿವು – [ನಾ] ತಿಳಿವಳಿಕೆ, ಜ್ಞಾನ (ಕರವಾಳಂ ಘರವಟ್ಟಿಸಿ ಶಿರೋಜಮಂ ಪಿಡಿದು ತೆಗೆದು ಗುರುವಂ ಪಚ್ಚಂತಿರೆ ಪಿರಿದು ಪೊಯ್ದಂ ಎಂತಪ್ಪರೊಳಂ ಮುಳಿಸು ಅಱಿವಂ ಆಗಲೇನಿತ್ತಪುದೇ: **ಪಂಪಭಾ,** ೧೨. ೩೦)

ಅಱಿವೋ – [ಕ್ರಿ] ತಿಳಿ (ಉತ್ತುಂಗವಿಭವಂಗಳೆಸೆಯೆ ಮನಂಗೊಳೆ ಪೂಜಿಸಿದೆಂ ಅಚ್ಯುತೇಂದ್ರನೆಂ ಅಱಿವೋ: **ಆದಿಪು,** ೩. ೫೯)

ಅಱುದಿಂಗಳ್ – [ನಾ] ಆರು ತಿಂಗಳು (ಅಮರಲೋಕಭೋಗಂ ಏಕಸಾಗರಪ್ರಮಿತಜೀವಿತಂ ಅಱುದಿಂದಳುೞಿದುದು: **ಆದಿಪು,** ೩. ೨ ವ)

ಅಱುವರ್ – [ನಾ] ಆರು ಮಂದಿ [ಪಾಂಡವರೈವರು ಮತ್ತು ಶ್ರೀಕೃಷ್ಣ] (ಮಱುದೆವಸಂ ಅಱುವರುಂ ಆಱುಂ ಗುಣಂಗಳೆ ಮೂರ್ತಿಮಂತಂಗಳಾದಂತೆ ಮಂತ್ರಶಾಲೆಯಂ ಪೊಕ್ಕಿರ್ದಾಗಳ್: **ಪಂಪಭಾ,** ೯. ೧೨ ವ)

ಅಱುವರುಂ ದೇವಿಯರ್ – [ನಾ] ಪದ್ಮಾದಿ ಸರೋವರವಾಸಿನಿಯರಾದ ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಯರು (ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಅಱುವರುಮಂ ಆತ್ಮೀಯ ಗುಣಗಣಮಣಿವಿಭೂಷಣಂಗಳಿಂ ಜಿನಜನನಿಯಂ ಅಲಂಕರಿಸಲುಂ ... ಸೌಧರ್ಮೇಂದ್ರಂ ಬೆಸಸುವುದುಂ: **ಆದಿಪು,** ೭. ೩ ವ)

ಅಱುವರ್ಮಕ್ಕಳ್ – [ನಾ] ಬ್ರಹ್ಮಮಾನಸ ಪುತ್ರರಾದ ಆರುಜನ: ಪುಲಹ, ಮರೀಚಿ, ಅತ್ರಿ, ಅಂಗೀರಸ, ಪುಳಸ್ತ್ಯ, ಕ್ರತು (ಅಂತು ಹಿರಣ್ಯಗರ್ಭ ಬ್ರಹ್ಮ ಮನಸ್ಸಂಭವದೊಳ್ ಪುಟ್ಟಿದ ಅಱುವರ್ಮಕ್ಕಳೊಳಗೆ: **ಪಂಪಭಾ,** ೧. ೬೦ ವ)

ಅಱುಸಾಸಿರ – [ನಾ] ಆರು ಸಾವಿರ (ಅಱುಸಾಸಿರ ಬಿಲ್ಪಿಡಿಯರಾಗಿ: **ಆದಿಪು,** ೫. ೪೧ ವ)

ಅಱ್ – [ನಾ] ಪೆಟ್ಟು (ಕಳ್ಳರಾಯಿಲಂ ಅಱ್ ಏಱು ಮಾರಿ ಪಸವಿಟ್ಟ್ದ ಬಱಂ ಪೆಱವುಂ ಭಯಂಗಳ್: **ಆದಿಪು,** ೧. ೫೨); [ನಾ] ಆಧಿಕ್ಯ, ಕಟ್ಟರೆ (ಒದವಿದ ಅಲಂಪು ಕಣ್ಣೆವೆ ಕರುಳ್ ತನಗೆಂಬುದನುಂಟುಮಾಡೆ ನೋಡಿದುದಱ್ ಕಣ್ಗಳ್ ಅಟ್ಟಮೆವಡುತ್ತಿರೆ: **ಪಂಪಭಾ,** ೧೨. ೨೧೯)

ಅಱ್ಯೊತ್ತು – [ನಾ] ಒಳಕ್ಕಿಳಿಯುವಂತೆ ತಟ್ಟು (ನೆತ್ತಿಯೊಳ್ ಎಱ್ದೆಱ್ದು ಇನಿಸು ಅಱ್ಯೊತ್ತಿ ಬೞಿಕ್ಕಿೞಿಯೆ ಪೊಸೆದು ಜಡೆಗೊಂಡಿರ್ದ ಉದ್ವೃತ್ತಕುಚಯುಗೆಯ ಕೇಶಮಂ ಎತ್ತಂ ಪಸರಿಸಿದಂ: **ಪಂಪಭಾ,** ೧೨. ೧೫೪)

ಅೞ್ – [ಕ್ರಿ] ಕುಸಿ, ಕುಗ್ಗು (ಎನಗಿಂ ಬಾೞ್ವಾಸೆಯೆಲ್ಲಿತ್ತೊ ಬಿಟ್ಟುೞಿದೆಂ ಮತ್ತಿನ ಮಕ್ಕಳಾಸೆಯುಮಂ ಆಂ ಎಂದು ಅೞ್ಗ ಶೋಕಾಗ್ನಿ ಪೊಂಪುೞಿವೋಗುತ್ತಿರೆ: **ಪಂಪಭಾ,** ೯. ೮೬)

ಅೞಲ್ – [ಕ್ರಿ] ದುಃಖಿಸು (ಒಡನಿರಲಿತ್ತುದಿಲ್ಲ ವಿಧಿ ನಮ್ಮನೞಲ್ದುೞಿವೇಡ ನೀಂ ಮನಂಬಿಡೆ ನಡೆಯೆಂದು ಪೇೞ್ದು: **ಆದಿಪು,** ೧೨. ೨೪)

ಅೞವೆ – [ನಾ] [ಕೆರೆಯ] ತೂಬು (ಸಾರಸಹಕಾರಧಾರಾಸಾರಂ ಕೊಳದೞವೆಯಂತೆ ಸುರಿತರೆ ಪಲವುಂ ಧಾರಾಗೃಹಂಗಳ್ ಅತನುವಿಕಾರಮನೊದವಿದಪುದು ದೇವದಂಪತಿಗದಱೊಳ್: **ಆದಿಪು,** ೬. ೯೫) ['**ಕೊಳದೞವೆಯಂತೆ**' – ಎಲ್. ಬಸವರಾಜು ಸ್ವೀಕರಿಸಿರುವ ಪಾಠ]

ಅೞಿ – [ಕ್ರಿ] ಕಳೆದುಕೊ (ನಡಪು ಉಪದೇಶದಿಂ ಅಲ್ಲದೊಡೆ ಅಡಗಿ ಅೞಿದಪೆವು ಅಸುವನಿಲ್ಲಿ ನಿನ್ನಡಿ ಮೊದಲೊಳ್: **ಆದಿಪು,** ೬. ೭೫); [ಕ್ರಿ] ಕೊಲ್ಲು (ಪಿಡಿಯೆಂ ಪುರಿಗಣೆಯಂ ನರಂ ಎಡೆಗೋದೊಡಂ ಉೞಿದ ನಿನ್ನ ಮಕ್ಕಳಂ ಇನ್ನೇರ್ದೊಡಂ ಅೞಿಯೆಂ: **ಪಂಪಭಾ,** ೯. ೮೭); [ಕ್ರಿ] ಸಾವಿಗೆ ಈಡುಮಾಡಿಕೊ (ಪೆರ್ಜಸಮನೆ ಪಿಡಿದು ಎನ್ನನೆ ರಣದೊಳ್ ಅೞಿವೆಂ ಇರದೆ ಅಡಿಯೆತ್ತಿಂ: **ಪಂಪಭಾ,** ೯. ೮೭); [ಕ್ರಿ] ಸಾಯಿ, ನಾಶಗೊಳ್ಳು (ಒರ್ವಂ ಮೊಮ್ಮಂ ಪರಮಗುರು ಒರ್ವಂ ಅವರಿರ್ವರುಮಂ ಕಾದಿ ಅೞಿವೆಂ ಉೞಿದ ರಿಪುಬಲನೃಪಬಲಮಂ: **ಪಂಪಭಾ,** ೧೦. ೧೪); [ಕ್ರಿ] ನಾಶಮಾಡು (ಅಂತು ಗುರುನಂದನಂ ಮರುನ್ನಂದನವಿರಚಿತ ನಿಶಾತ ವಿಶಿಖಪಂಜರಮನೞಿದು ಕೞಕುೞಂ ಮಾಡಿಯುಂ ಅನಿತಱೊಳ್ ಮಾಣದೆ: **ಪಂಪಭಾ,** ೧೨. ೬೮ ವ)

ಅೞಿಗಾಳೆಗ – [ನಾ] ಸಣ್ಣ ಕಾಳಗ (ಮನದೊಳೊಡಂಬಟ್ಟಂತೆ ಮನಮಂ ಎಡಗಲಿಸಿ ಪರಿವ ಜಾತ್ಯಶ್ವಂಗಳೆಲ್ಲಂ ಅೞಿಗಾಳೆಗದೊಳ್ ಸತ್ತೊಡೆ: **ಪಂಪಭಾ**, ೮. ೯೪ ವ)

ಅೞಿನುಡಿ – [ನಾ] ಕೆಟ್ಟ ಮಾತು (ನಿನಗಪ್ಪುದು ಈ ಅೞಿನುಡಿ ಬರ್ಕೆ ನಿನ್ನ ಪಿರಿಯಣ್ಣನೆ ಪಣ್ಣನೆ ನೋೞ್ಪಂ ಆತನ ಒಡ್ಡೞಿಯದ ಗಂಡವಾತಂ: **ಪಂಪಭಾ**, ೩. ೧೬)

ಅೞಿಪು – [ಕ್ರಿ] ಆಸೆಪಡು (ಅೞಿಪದೆ ಪದಗೞಿಪದೆ ಪೊಂಪುೞಿವೋಗೆ ಯಶಃಪ್ರಕಾಶಂ ಈಗಳೆ ಧರೆಯಂ ಪೞಿಕೆಯ್ದು: **ಆದಿಪು**, ೪. ೮೭)

ಅೞಿಯಳವು – [ನಾ] ಕ್ಷೀಣಗೊಂಡ ಸಾಮರ್ಥ್ಯ (ನಳನಳಿದು ನಡೆವ ಹಯದ ಅೞಿಯಳವಂ ಕಂಡುದಱಿಂ: **ಆದಿಪು**, ೧೫. ೩೧)

ಅೞಿಯೂರ್ – [ನಾ] ಕುಗ್ರಾಮ (ಸರ್ವನಿವೇದಕಮೆಂಬ ಯಜ್ಞದೊಳ್ ಕ್ಷಿತಿ ಪೊಗೞ್ವಿನ್ನಮಿತ್ತು ಗುರುದಕ್ಷಿಣೆಯಾಗಿರೆ ಕಶ್ಯಪಪ್ರಜಾಪತಿಗೆ ಸಮುದ್ರಮುದ್ರಿತಧರಿತ್ರಿಯನೊಂದು ಅೞಿಯೂರಂ ಈವವೊಲ್: **ಪಂಪಭಾ**, ೨. ೪೫)

ಅೞಿಯೆ ನೊಯ್ – [ಕ್ರಿ] ಸಾಯುವಂತೆ ನೋವುಪಡು (ಅೞಿಯೆ ನೊಂದ ತಮ್ಮ ಅಣುಗಾಳ್ಗಳ ಕೊಂಡಾಟದಾನೆಗಳ ನಚ್ಚಿನ ಕುದುರೆಗಳ ಪುಣ್ಗಳಂ ಉಡಿಯಲುಂ ಓವಲುಂ ಮರ್ದುಬೆಜ್ಜರುಮಂ ಅೞ್ತುತ್ತುಂ: **ಪಂಪಭಾ**, ೧೧. ೨ ವ)

ಅೞಿವಡೆಮಾತು – [ನಾ] ಹೀನ ಮಾತು (ಉೞಿದ ಅೞಿವಡೆಮಾತಂ ಮಾಡಿ ನೀನೆ ಕೆಮ್ಮನೆ ನುಡಿವೈ: **ಪಂಪಭಾ**, ೧೨. ೧೮೧) [ಈ ಶಬ್ದವನ್ನು ಅೞಿವ+ಅಡೆಮಾತು ಎಂದು ಬಿಡಿಸಬಹುದೇ? ನಾಶವಾಗುವ ಅಂದರೆ ಉಳಿಯಲಾರದ – ಅಡೆಮಾತು – ಅಡ್ಡಮಾತು, ಕೆಟ್ಟಮಾತು ಎಂದು ಅರ್ಥವಿಸಬಹುದೇ!]

ಅೞಿವಾಡ – [ನಾ] ಕುಗ್ರಾಮ (ಅಯ್ದು ಅೞಿವಾಡದೊಳ್ ಅಯ್ವರುಮಂ ನೀಂ ಕೂರ್ತಿರಿಸೆಂದೊಡಂ ಏಗೆಯ್ದುಂ ಒಲ್ಲದ ಕಾರಣದಿಂದಂ: **ಪಂಪಭಾ**, ೧೩. ೮೬)

ಅೞಿವು – [ನಾ] ವಿನಾಶ, ಸಾವು (ತನೂಜನಾಳ್ವ ಸಾಮಿಗಂ ಅೞಿವಾಗೆ ಶೋಕರಸಮಿರ್ಮಡಿಸಿತ್ತು: **ಪಂಪಭಾ**, ೧೩. ೧೦೬)

ಅೞಿವೆಯ್ದೆವರ್ – [ಕ್ರಿ] ಸಾವು ಸಮೀಪಿಸು, ಸಾವಿಗೆ ನಿಗದಿಯಾದ ಕ್ಷಣ (ದಿವಿಜಾಧೀಶನ ಕೊಟ್ಟ ಶಕ್ತಿಯನದಂ ಕರ್ಣಂ ನರಂಗೆಂದು ಬಯ್ತು ಅವಂ ಇಂದೆ ಅೞಿವೆಯ್ದೆ ವಂದೊಡೆ ಅದಱಿಂದಾತನಂ ಕೊಂದಂ: **ಪಂಪಭಾ**, ೧೨. ೧೬)

ಅೞಿವೆಸನ – [ನಾ] ಹೀನ ಆಸೆ (ಪೆಸರೊಳ್ ಸೈರಂಧ್ರಿಯೆಂ ಅೞಿವೆಸನದ ದೆಸೆಯಱಿಯೆಂ ಎನಗೆ ಗಂಧರ್ವರ ಕಾಪು ಅಸದಳಂ ಉಂಟು: **ಪಂಪಭಾ**, ೮. ೫೭)

ಅೞಿವೊಡಲ್ – [ನಾ] ನಶ್ವರವಾದ ಶರೀರ (ಮಿಡಿದನಿತು ಬೇಗದಿಂದೆ ಅೞಿವೊಡಲನಿದಂ ಪೋಗೆ ನೂಂಕಿ: **ಆದಿಪು**, ೨೨. ೫೮)

ಅೞು – [ಕ್ರಿ] ಕಣ್ಣೀರು ಹಾಕು (ಒಡನಿರಲಿತ್ತುದಿಲ್ಲ ವಿಧಿ ನಮ್ಮನೞಲ್ದುೞವೇಡ ನೀಂ ಮನಂಬಿಡೆ ನಡೆಯೆಂದು ಪೇೞ್ದು: **ಆದಿಪು**, ೧೨. ೨೪)

ಅೞ್ಕಜ – [ನಾ] ಅಕ್ಕಜ, ಆಶ್ಚರ್ಯ (ತನ್ನ ತೊಡಂಕದೆಯ್ದೆ ನೂರ್ಮಡಿ ಮನದೊಳ್ ಪಳಂಚಲೆಯೆ ಡಕ್ಕೆಯೊಳ್ ಅೞ್ಕಜವಾಗೆಯಾಡಿದಳ್: **ಪಂಪಭಾ**, ೪. ೯೦)

ಅೞ್ಕಮೆ – [ನಾ] ಅಜೀರ್ಣ (ಗೞ್ಕನೆ ಕೊಳೆ ಕಡುಗಂಪಿನೊಳ್ ಅೞ್ಕಮೆಗೊಳಗಪ್ಪೆವೆಂದು ಮಧುಪಂಗಳ್: **ಆದಿಪು**, ೧೧. ೧೧೯)

ಅೞ್ಕಮೆವಡು – [ಕ್ರಿ] ಸಾಕು ಎನ್ನಿಸು (ಒದವಿದ ಅಲಂಪು ಕಣ್ಣೆವೆ ಕರುಳ್ ತನಗೆಂಬುದನುಂಟುಮಾಡೆ ನೋಡಿದುದಱ ಕಣ್ಗಳ್ ಅೞ್ಕಮೆವಡುತ್ತಿರೆ: **ಪಂಪಭಾ**, ೧೨. ೨೧೯)

ಅೞ್ಕಱ್ – [ಕ್ರಿ] ಮನಸೋಲು (ರಾಜತಾಂದ್ರೀಂದ್ರಶೋಭಾವಿಭವಕ್ಕೆ ಅೞ್ಕಱ್ತು ತತ್ಪರ್ವತನಿಕಟವನೋಪಾಂತದೊಳ್ ಬೀಡುವಿಟ್ಟಂ: **ಆದಿಪು**, ೧೩. ೭೮); [ಕ್ರಿ] ಪ್ರೀತಿಸು (ಏಱಿಸಿ ನಡೆಯಿಸುವಲ್ಲಿ ದಿವ್ಯಕನ್ಯೆಯನೞ್ಕಱ್ತು ನೋಡಿ: **ಪಂಪಭಾ**, ೧. ೬೮ ವ)

ಅೞ್ಕಱುಳುರ್ಕೆ – [ನಾ] ಪ್ರೀತಿಯ ಅತಿಶಯ (ಪಾಯ್ದವಳನಪ್ಪಿದನಾ ವಿಭು ತನ್ನ ಶಾಪಮಂ ಬಗೆಯದೆ ಮಿೞ್ತುದೇವತೆಯಂ ಅೞ್ಕಱುಳುರ್ಕೆಯಿನಪ್ಪುವಂತೆವೋಲ್: **ಪಂಪಭಾ**, ೨. ೧೮)

ಅೞ್ಕಱು – [ನಾ] ಅಕ್ಕರೆ (ದಿಗಂಗನಾಸಮಿತಿಗೆ ಅೞ್ಕಱಿನೊಳ್ ಕುಡುವಲ್ಲಿ ಕೇಸರಂಬೆರಸಿದ ಪೊನ್ನ ಬಾಯಿನದ ಬಟ್ಟಲಿವೆಂಬಿನಂ: **ಆದಿಪು**, ೧೧. ೧೧೭)

ಅೞ್ಕಾಡು – [ಕ್ರಿ] ನಾಶವಾಗು (ವಿರೋಧಿ ಕ್ಷ್ಮಾಪರ್ ಎನ್ನೀ ಗದಾಪರಿಘಾತದಿಂ ಅೞ್ಗಿ ತೞ್ಗಿ ಮಡಿದಿನ್ನು ಅೞ್ಕಾಡದೇಂ ಪೋಪರೇ: **ಪಂಪಭಾ**, ೧೩. ೯೦); [ಕ್ರಿ] ಹಾಳಾಗಿ ಹೋಗು (ಏೞ್ಕಟ್ಟಿನೆೞ್ದು ನಿಮ್ಮಂ ನಾೞ್ಕಡೆಗೞಿದೊಡೆ ಮದೀಯ ನಾಥಂ ಬೇರಂ ಬಿೞ್ಕೆಯನೆ ತಿಂದ ದೆವಸದೊಳ್ ಅೞ್ಕಾಡಿದ ಬೀರಮೀಗಳೇಂ ಪೊಸತಾಯ್ತೇ: **ಪಂಪಭಾ**, ೧೨. ೧೭೮)

ಅೞ್ಕು – [ಕ್ರಿ] ನಾಶವಾಗು (ಭವಲಲಾಟವಿಲೋಚನಾಗ್ನಿಶಿಖೆಯಿಂ ಬೆಂದು ಅೞ್ಕಿ ಮತ್ತಂ ಮನೋಭವಂ ಎೞ್ಚಿತ್ತೊಡೆ: **ಪಂಪಭಾ**, ೭. ೨೪)

ಅೞ್ಕಿ ಮೆೞ್ಕು – [ಕ್ರಿ] [ನಾಶಮಾಡಿ ಸಾರಿಸು] ಸಂಪೂರ್ಣವಾಗಿ ನಾಶವಾಗು (ತನ್ನ ಬಲಮೆಲ್ಲಂ ಅೞ್ಕಿ ಮೆೞ್ಕಿದಂತಾದುದೆಂಬುದಂ ಕೇಳ್ದು: **ಪಂಪಭಾ**, ೫. ೧೦೦ ವ) [ಪರಿಷತ್ ಮುದ್ರಣದಲ್ಲಿ 'ಅಳ್ಕಿಮುೞ್ಕಿ' ಎಂಬ ಪಾಠವಿದೆ]

ಅೞ್ಕೆ – [ನಾ] ರೋದನ (ತನುಗೆ ಪೊಱ ತುಡುಗೆ ನವಲೇಪನಮೆ ಮಳಂ ಗೀತಮೞ್ಕೆ ನೃತ್ಯಂ ಬಗೆಯಲ್ಕೆನಗೆ ದಲ್ ಉನ್ಮತ್ತವಿಳಾಸಂ ಇಂತಿನಿತಱೊಳಮೊಂದಱೊಳ್ ಪುರುಳುಂಟೇ: **ಆದಿಪು**, ೯. ೫೫)

ಅೞ್ಗಿತೞ್ಗು – [ಕ್ರಿ] ನಾಶವಾಗಿ ತಗ್ಗು (ಎಡವಱಿದೊಳ್ ಎಱಗಿ ಬಱಸಿಡಿಲ್ ಇಡುಮುಡುಕನೆ ಪೊಡೆದುದೆನಿಸಿ ಪಾಂಡ್ಯನ ರಥದ ಅಚ್ಚು ಉಡಿದು ಅೞ್ಗಿತೞ್ಗಿ ಕೊಂಡುವು ಕಡುಗೂರಿದುವೆನಿಪ ಗುರುತನೂಜನ ಕಣೆಗಳ್: **ಪಂಪಭಾ**, ೧೨. ೮೨)

ಅೞ್ಗಿ ಮೞ್ಗು – [ಕ್ರಿ] ನಾಶವಾಗಿ ನೆಲಸಮವಾಗು (ಹಿರಣ್ಯ ಕಾಳನೇಮಿಗಳ್ ಮೊದಲಾಗಿ ನೆಗೞ್ತೆಯ ದೈತ್ಯರೆಲ್ಲಂ ಚಕ್ರಘಾತದೊಳ್ ಅೞ್ಗಿ ಮೞ್ಗಿದಂತಾದರ್: **ಪಂಪಭಾ,** ೬. ೨೪ ವ)

ಅೞ್ಗಿಸು – [ಕ್ರಿ] ನಾಶಮಾಡು (ಇನ್ನಿನಿಸಂ ಇರ್ದೊಡಂ ಆಜಿಯೊಳ್ ಎನ್ನ ತನೂಜನುಮಂ ಅೞ್ಗಿಪಂ ನರಂ: **ಪಂಪಭಾ,** ೧೨. ೮೮)

ಅೞ್ಗು – [ಕ್ರಿ] ನಾಶವಾಗು (ಅೞ್ಗಿದ ಬಿಲ್ವಡೆ ಮಾಣದೆ ತೞ್ಗಿದ ರಥಮೆಯ್ದೆ ಬಗಿದ ಪುಣ್ಗಳ ಪೊಱೆಯಂ ಮೊೞ್ಗಿದ ಕರಿಘಟೆ ಜವನಡುವೞ್ಗಿಯನನುಕರಿಸೆ ವೀರಭಟರಣರಂಗಂ: **ಪಂಪಭಾ,** ೧೧. ೬೪)

ಅೞ್ಗೆ – [ನಾ] ಅಡುಗೆ (ಅೞ್ಗಿದ ಬಿಲ್ವಡೆ ಮಾಣದೆ ತಗ್ಗಿದ ರಥಂ ಎಯ್ದೆ ಬಗಿದ ಪುಣ್ಗಳ ಪೊಱೆಯಿಂ ಮೊೞ್ಗಿದ ಕರಿಘಟೆ ಜವಂ ಅಡುವ ಅೞ್ಗೆಯಂ ಅನುಕರಿಸೆ ವೀರಭಟರಣರಂಗಂ: **ಪಂಪಭಾ,** ೧೧. ೬೪):

ಅೞ್ತಿ – [ನಾ] ಪ್ರೀತಿ (ಮನ್ನಿಸಿ ಮನ್ತ್ರಿಮುಖ್ಯಿತಿಭಕ್ತಿಭರಾನತಮೂರ್ಧಂ ಅೞ್ತಿಯಿಂ ಬಿನ್ನವಿಕುಂ: **ಆದಿಪು,** ೨. ೩೪); [ನಾ] ಸಂತೋಷ (ನಾನಾಪ್ರಕಾರದಿಂದಮದೇನೆಂಬುತ್ಸವಮಂ ಅೞ್ತಿಯಿಂ ಮಾಡಿದರೋ: **ಆದಿಪು,** ೧೬. ೫೪); [ನಾ] ಇಷ್ಟ (ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗೞ್ತಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್: **ಪಂಪಭಾ,** ೧. ೧೪); [ನಾ] ಆಸಕ್ತಿ (ನೋಡುವುದಱೊಳ್ ಏಂ ಅೞ್ತಿಯೊಳ್ ಆಡುತ್ತಿರಲಾಗ ತಮ್ಮುತಿರ್ವರುಂ: **ಪಂಪಭಾ,** ೬. ೭೦)

ಅೞ್ತಿಯೆ – [ಕ್ರಿವಿ] ಪ್ರೀತಿಯಿಂದ (ಉರ್ಚಿದ ಬಾಳೊಳ್ ಆತ್ಮಮುಖಬಿಂಬಮಂ ಅೞ್ತಿಯೆ ನೋಡಲುಂ: **ಪಂಪಭಾ,** ೧. ೧೪೨)

ಅೞ್ತಿವಡು – [ಕ್ರಿ] ಆಸೆಪಡು (ಪೌದನಪುರಮನೆಯ್ದಿ ಪುರಶ್ರೀಯಂ ಅೞ್ತಿವಟ್ಟು ನೋಡಿ ಮೆಚ್ಚುತುಂ: **ಆದಿಪು,** ೧೪. ೪೩ ವ); [ಕ್ರಿ] ಆಸಕ್ತಿ ತೋರು (ತಾರಾತರಳ ಮುಕ್ತಾಫಳಂಗಳುಮನೞ್ತಿವಟ್ಟು ನೋಡುತ್ತುಂ ಪೋಗೆವೋಗೆ: **ಆದಿಪು,** ೧೨. ೭೯ ವ)

ಅೞ್ತಿವರ್ – [ಕ್ರಿ] ಪ್ರೀತಿಯ ಸುದ್ದಿ ಬರು (ಬಿರಯಿಸಿ ಬೇಟದೊಳ್ ಬಿರಿವ ನಲ್ಲರ್ ಅಗಲ್ದು ಕನಲ್ದು ಒಲ್ದು ನಲ್ಲರ ದೆಸೆಯಿಂದಂ ಅೞ್ತಿವರೆ: **ಪಂಪಭಾ,** ೪. ೧೦೧)

ಅೞ್ದಿರಿ – [ಕ್ರಿ] ತಗ್ಗಾಗು (ಸ್ಫುರಿತವರೂಥಚಕ್ರಹತಿಯಿಂ ಧರಣೀತಳಂ ಅತ್ತಂ ಇತ್ತಂ ಅೞ್ದಿರಿಯೆ: **ಪಂಪಭಾ,** ೧೪. ೪)

ಅೞ್ದೞಿವೋಗು – [ಕ್ರಿ] ನಾಟಿಕೊಂಡು ಹೊರಬರು (ಹರಿವಕ್ಷಮಂ ಅೞ್ದೞಿವೋಗೆಯೆಚ್ಚು ಮುಳಿಸವಗೞಿಯಿಸುತಿರೆ ನರನ ಬಿಲ್ಲ ಗೊಣೆಯುಮನೆಚ್ಚಂ: **ಪಂಪಭಾ,** ೧೨. ೨೦೯)

ಅೞ್ದು – [ಕ್ರಿ] ಊರು (ಅಂದಿನ ರೂಪು ಶಾಸನಂ ಬರೆದುದು ಬರ್ಚಿಸಿತ್ತು ಅಮರ್ದುದು ಅೞ್ದುದು ಅಳಂಕಿದುದು ಉರ್ಚಿ ಪೊಕ್ಕು ಬೇರ್ವರಿದುದು: **ಆದಿಪು,** ೩. ೪೩); [ಕ್ರಿ] ಅದ್ದು, ಮುಳುಗಿಸು (ಪಾವುಗಳಂ ಕೊಳಿಸಿ ಮಹಾಗ್ರಾವಮಂ ಉಱದೆ ಅಡಸಿ ಕಟ್ಟಿ ಕೊರಲೊಳ್ ಗಂಗಾದೇವಿಯ ಮಡುವಿನೊಳ್ ಅೞ್ದಿದರ್ ಏವಯಿಸದೆ ತಮ್ಮ ಕುಲಮಂ ಅಡಿಗೞ್ದುವವೋಲ್: **ಪಂಪಭಾ,** ೨. ೩೨); [ಕ್ರಿ] ಮುಳುಗು (ಉನ್ನತಮಸ್ತಕದೊಳ್ ಅಂಬುಗಳ್ ಅೞ್ದು ಉಡಿದಿರ್ದೊಡೆ ಅತ್ತಂ ಇತ್ತಂ ಎೞೆತಂದು ಬಲ್ದಡಿಗರ್ ಇೞ್ಕುೞಿನೊಳ್ ಕಿೞೆ: **ಪಂಪಭಾ,** ೧೧. ೩)

ಅೞ್ದುಬರ್ – [ಕ್ರಿ] ಮುಳುಗಿ ಹೋಗು, ಹೂತುಹೋಗು (ಮಣಲೊಳ್ ಅೞ್ದುವರೆ ಮೆಲ್ಲಡಿಗಳ್ ನಡೆಯದ ಬೇವಸಮಂ ತಾಂ ನಡೆಯಿಸುವಂತೆ ಅವರ್ಗಳ್ ಒಯ್ಯನೊಯ್ಯನೆ ನಡೆದರ್: **ಪಂಪಭಾ,** ೭. ೮೫)

ಅೞ್ವು – [ಕ್ರಿ] ಬೇಗೆಯಾವರಿಸು (ಪುತ್ತಿನೊಳಗೊಯ್ಯನೆ ಕುತ್ತಿದ ಕಯ್ಯಂ ಆಗಡೆ ಪಸಿವೞ್ವೆ ನೀಳ್ದ ಪೊಗೆಯುಂ ಕಿಡಿಯುಂ ಬಿಸುಸುಯ್ಯ ಗಾಳಿಯೊಳ್ ತೊಡರ್ದುದು: **ಆದಿಪು,** ೨. ೪೦); [ಕ್ರಿ] ಹಬ್ಬು (ವನದಹನಂ ವನಾಂತರಮನೊರ್ಬುಳಸಾಗಿರೆ ಮುತ್ತಿ ಸುತ್ತಿ ಸುತ್ತಿನ ನಡುವಿರ್ದುದಾ ಮರನಂ ಅೞ್ವಿದುದು: **ಆದಿಪು,** ೯. ೫೯); [ಕ್ರಿ] ಸುಡು (ವೈರಿಕಾಂತಾರಮಂ ಅೞ್ವಿಲ್ ಅಂಕದ ಬೃಹಂದಳೆ ಚೋದಿಸೆ ಚೋದ್ಯಮಪ್ಪಿನಂ: **ಪಂಪಭಾ,** ೮. ೯೮); [ಕ್ರಿ] ಗರ್ಜಿಸು (ಪಿಂಗಾಕ್ಷ ನೀನೇಕೆ ಮಿಳ್ಮಿಳ ನೋಡುತ್ತ ಉಳನೆ ಇರ್ದೆ ಎಂದು ಅದಟರಂ ಭೀಮಂ ಪಳಂಚೞ್ವಿದಂ: **ಪಂಪಭಾ,** ೧೨. ೧೫೦); [ಕ್ರಿ] ಆಕ್ರಮಿಸು (ಕವಿವ ಶರಾಳಿಯಂ ನಿಜಶರಾಳಿಗಳೞ್ವಿ ತೆರಳ್ದಿ ತೂಳ್ದಿ ಮಾರ್ಕವಿದು ಪಳಂಚಿ ಪಾಯ್ದೊರಸೆ: **ಪಂಪಭಾ,** ೧೨. ೧೯೦)

ಆ

ಆಂಕೆಗೊಳ್ – [ಕ್ರಿ] ಪ್ರತಿಭಟಿಸು, ಎದುರಿಸು (ಮೊನೆಯಂಬುಗಳ್ ಅಳ್ಗಿಡಿವೋಗೆಯುಂ ಮನಂಗಿಡಂ ಆಂಕೆಗೊಳ್ಳಂ ಅಗಿಯಂ ಸುಗಿಯಂ ಸುರಸಿಂಧುನಂದನಂ; **ಪಂಪಭಾ,** ೧೧. ೪೪)

ಆಂಗಿಕ – [ನಾ] ಆಂಗಿಕ, ಸಾತ್ವಿಕ, ವಾಚಿಕ ಮತ್ತು ಆಹಾರ್ಯ ಎಂಬ ನಾಲ್ಕು ಅಭಿನಯ ರೂಪಗಳಲ್ಲಿ ಒಂದು; ದೇಹಚಲನೆ ಮತ್ತು ಮುಖಭಾವಗಳಲ್ಲಿ ಭಾವಪ್ರಕಟಣೆ (ಅಂಗೋಪಾಂಗಂಗಳೊಳ್ ಎಸೆವ ಆಂಗಿಕಮಂ ಗಾನಪಾಠ್ಯದೊಳ್ ವಾಚಿಕಮಂ ತುಂಗಕುಚೆ ಮೆಱೆದಳಾ ದಿವಿಜಾಂಗನೆಗೆ ಆಹಾರ್ಯ ಸಾತ್ವಿಕಂ ನಿಜಮೆ ವಲಂ: **ಆದಿಪು,** ೯. ೨೮);

ಆಂಗೊಳಗು – [ನಾ] ಹಸುವಿನ ಗೊರಸು (ಜಳಧಿಯ ನೀರನದೊಂದು ಆಂಗೊಳಗಿನ ನೀರೆಂದು ಬಗೆದು ದಾಂಟಿದ ವಸುಧಾತಳಪತಿಗಿತ್ತಂ .. .. ಪ್ರಭಾಸಾಮರನುಂ: **ಆದಿಪು,** ೧೩. ೪)

ಆಂತರ್ – [ನಾ] ಎದುರಿಸಿದವರು (ವಿಕ್ರಮದಿಂದೆ ನಿಂದಗುರ್ವೆನಲಿಱಿದಾಂತರಂ: **ಪಂಪಭಾ,** ೧. ೨೬)

ಆಂತುಕೊಳ್ – [ಕ್ರಿ] ಇರಿಸಿಕೊ (ಇದು ರಿತುವಿಮಾನಮಂ ತನ್ನುದಗ್ರಚೂಳಿಕೆಯೊಳ್ ಆಂತುಕೊಂಡಿರೆ ಸಗ್ಗಕ್ಕಿದು ನಿಚ್ಚಣಿಗೆಪ್ಪವೊಲ್ ಇರ್ದುದಲ್ತೆ: **ಆದಿಪು,** ೨. ೩೦)

ಆಂದೋಳ – [ನಾ] ಬೀಸುವಿಕೆ (ಸುರವಿರಚಿತ ಮಂದಾನಿಳ ಆಂದೋಳದಿಂದಂ ಸುರವಂದಿಸ್ತೋತ್ರದಿಂದಂ ದೆಸೆ ಗಗನತಳಂ ತೀವಿ **ಆದಿಪು,** ೧೦. ೧೮); [ನಾ] ಉಯ್ಯಾಲೆ (ನಸುನೇಲ್ವ ಕರ್ಣಾಟೀಕರ್ಣಪೂರನ ಪಾಲೆಗಳುಂ ಸರಸ್ವತಿಯಾಡುವ ಲೀಲಾಂದೋಳದಂತಾದುವು: **ಪಂಪಭಾ,** ೨. ೩೯ ವ)

ಆಂದೋಳನ – [ನಾ] ಬೀಸುವಿಕೆ (ಮಲಯಜ ರಸಲುಳಿತ ಕದಳೀದಳವ್ಯಜನ ಮಂದಮಾರುತಾಂದೋಳನದಿಂ ಎಂತಾನುಂ ಮೂರ್ಛೆಯಿಂದೆಚ್ಚೆತ್ತೆಸಿ: **ಆದಿಪು,** ೩. ೨೩ ವ)

ಆಂದೋಳಿತ – [ಗು] ತೂಗುವ (ಮುಹುರ್ಮುರುಹಾಂದೋಳಿತ ಮಸ್ತಕನುಂ ಉದಂಚದ್ರೋಮಾಂಚಕಂಚುಕಿತನುಂ ಆಗಿ: **ಆದಿಪು,** ೧೦. ೫೨ ವ)

ಆಂದೋಳಾಯಮಾನ – [ಗು] ಉಯ್ಯಾಲೆಯಂತಹ ತೂಗಾಟ (ಅನುಕೂಲ ಆಂದೋಳಾಯಮಾನ ರಾಜಕುಂಜರ ವಿಜಯಕದಳಿಕಾತರಂಗಿತ ಗಗನಾಂಗಣನುಂ: **ಆದಿಪು,** ೧೨. ೬೧ ವ)

ಆಂಧ್ರೀ – [ನಾ] ಆಂಧ್ರದೇಶದ ಹೆಂಗಸು (ಆಂಧ್ರೀ ನೀರಂಧ್ರಬಂಧುರ ಸ್ತನಹಾರನುದಾರಂ ಸರಸ್ವತೀಮಣಿಹಾರಂ: **ಆದಿಪು,** ೧. ೩೨)

ಆಂಪಂ – [ನಾ] ಎದುರಿಸುವವನು (ಅವರಿವರ್ ಅನ್ನರಿನ್ನರ್ ಎನವೇಡ ಅರಿಕೇಸರಿಗೆ ಆಂಪನಿಲ್ಲ: **ಪಂಪಭಾ,** ೨. ೮೭)

ಆಂಪಾ – [ಕ್ರಿ] ಸ್ವೀಕರಿಸುತ್ತೀಯೇನು? (ಶಂಖದೊಳ್ ಪಾಲೆಱೆದಂತಿರೆ ಮಲಿನಮಿಲ್ಲದ ಒಳ್ಗುಲದ ಅರಸುಗಳಿರೆ ನೀನುಂ ಅಗ್ರಪೂಜೆಯಂ ಆಂಪಾ: **ಪಂಪಭಾ,** ೬. ೫೦)

ಆಂಪುದು – [ನಾ] ತಾಳುವುದು, ತಾಳಬೇಕು (ನೀನಲ್ಲದೆ ಎನ್ನ ಶರಸಂಧಾನಮಮಂ ಆನಲ್ಕೆ ನೆಱೆವರಿಲ್ಲೀ ಪಡೆಯೊಳ್ ನೀನಿನಿಸು ಆಂಪುದು: **ಪಂಪಭಾ,** ೧. ೭೯)

ಅಂಬುಪಾಯಿ – [ನಾ] ನೀರು ಕುಡಿಯುವವನು (ಬಹುಪ್ರಕಾರವಿಟಪಿರಾಜಿಗಳೊಳಿರ್ದು ವಿವಿಧಮೂಲ ಫಲಾಶಿಗಳುಂ ಸರೋವರ ನದೀ ನಿರ್ಝರ ಅಂಬುಪಾಯಿಗಳುಂ: **ಆದಿಪು,** ೯. ೯೩ ವ)

ಆಕಂಪ – [ಕ್ರಿ] ನಡುಗು, ಅಲ್ಲಾಡು (ತ್ರಿಭುವನಂಗಳ್ ಆಕಂಪಂಗೊಳೆ ಮುರಜಕೇತನವಿರಾಜಿತಮಪ್ಪ ತನ್ನ ರಥಮಂ ಅದಿರದೆ ಇದಿರಂ ಪರಿಯಿಸಿ: **ಪಂಪಭಾ,** ೧೩. ೧೩. ೪೪ ವ)

ಆಕರ್ಣ – [ಕ್ರಿವಿ] ಕಿವಿಯವರೆಗೆ (ಆಕರ್ಣಾಕೃಷ್ಟ ಉತ್ಸೃಷ್ಟ ನಿಜ ವಿಕೀರ್ಣಟಂಕಂಗಳಿಂದಂ ತತ್ಪತಾಕಿನೀಕುಂಜರ ಶಿರಶ್ಶಿಳಾ ಪಟ್ಟಕಂಗಳಂ ಇರ್ಬಗಿಮಾಡಲ್ಪಡದೆಯುಂ: **ಆದಿಪು,** ೧೪. ೧೦೩ ವ)

ಆಕರ್ಣನ – [ನಾ] ಕೇಳುವಿಕೆ (ತತ್ ವಾರ್ತಾ ಆಕರ್ಣನ ಉದೀರ್ಣ ಶೋಕವ್ಯಾಕುಳೆಯಾಗಿರ್ದ ನಿಜವಲ್ಲಭೆಯಲ್ಲಿಗೆ ಬಂದು: **ಆದಿಪು,** ೪. ೮೮ ವ)

ಆಕರ್ಣಾಂತಂ – [ಕ್ರಿವಿ] ಕಿವಿಯವರೆಗೂ (ಒಂದೆ ಸೂಟಿಚ್ ತೆಗೆದು ಆಕರ್ಣಾಂತಮಂ ತಾಗೆ .. .. ಸಮಂತೆಚ್ಚು ಮೆಚ್ಚಿಸಿದಂ: **ಪಂಪಭಾ,** ೩. ೬೩)

ಆಕರ್ಣಾಂತಂಬರಂ – [ಕ್ರಿವಿ] ಆಕರ್ಣಾಂತಂ (ಧನಂಜಯಂ ಆಕರ್ಣಾಂತಂಬರಂ ತೆಗೆದು ಆ ಕರ್ಣಾಂತಂ ಮಾಡಲ್ ಬಗೆದು: **ಪಂಪಭಾ,** ೧೨. ೨೧೨ ವ)

ಆಕರ್ಣಾಂತವಿಶ್ರಾಂತಲೋಚನ – [ನಾ] ಕಿವಿಯವರೆಗೂ ಚಾಚಿಕೊಂಡಿರುವ ಕಣ್ಣುಗಳುಳ್ಳವನು (ಹರಿಗಂ ಆಕರ್ಣಾಂತವಿಶ್ರಾಂತಲೋಚನಂ ಆ ಲೋಚನಗೋಚರಂಬರೆಗೆ ಒಲ್ದು ಆ ಕನ್ನೆಯಂ ನೋಡಿದಂ: **ಪಂಪಭಾ,** ೪. ೪೨)

ಆಕರ್ಷಣ – [ನಾ] [ಬಾಣವನ್ನು ತೊಟ್ಟು] ಎಳೆಯುವಿಕೆ (ಶರಸಂಧಾನ ಆಕರ್ಷಣ ಹರಣಾದಿ ವಿಶೇಷವಿವಿಧಸಂಕಲ್ಪಕಳಾಪರಿಣತಿಯಂ ಮೆಱೆದುದು: **ಪಂಪಭಾ,** ೧೨. ೧೮೬)

ಆಕಸ್ಮಿಕ – [ನಾ] ಅನಿರೀಕ್ಷಿತ (ನರಕ ನಗರ ಲಗ್ನಕೆ ಆಕಸ್ಮಿಕ ಅಗ್ನಿಸ್ಫುಲಿಂಗಸ್ಫುರದವಿರಳ ಲಾಕ್ಷಾಗೇಹಪೂರಂ: **ಆದಿಪು,** ೫. ೮೯)

ಆಕಸ್ಮಿಕಪಾಂಸು – [ನಾ] ಇದ್ದಕ್ಕಿದ್ದಂತೆ ಎದ್ದ ಧೂಳು (ಕಿಂಚ ಆಕಸ್ಮಿಕ ಪಾಂಸುಪಲ್ಲವ ಜಳಸ್ಯಂದೀ ಸದಾಸಿಂಧುರ್ ಅಪ್ರಾಗೇಯಂ ಪ್ರಿಯಗಳ್ಗಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ,** ೯. ೯೭)

ಆಕಳಿತ – [ಗು] ಹಿಡಿದ, ಹೊಂದಿದ (ಮುನಿಪತಿಯಾಗಿರ್ದು ಏಕೆಂದಜೆಯೆಂ ದಶಧರ್ಮಾಕಳಿತಕರಾಗ್ರನಾದಂ ಎನಗಿದು ಚೋದ್ಯಂ: **ಆದಿಪು,** ೬. ೩೦); [ಗು] ಕೂಡಿದ (ಮೇಖಳಾಕಳಿತ ರುಚಿರ ಲುಳಿತಾಧರಪಲ್ಲವೆ ನೋಟ್ಟಿ ದಂಡುಗಳೊಳಂಡುಗೊಂಡು ಸೊರ್ಕಿದಾನೆ ಬರ್ಪಂತೆ ಬಂದು: **ಪಂಪಭಾ,** ೪. ೩೬ ವ)

ಆಕಾರವಿಕೃತ – [ಗು] ಆಕಾರ ಮರೆಸಿಕೊಂಡ (ಶುಕ ಶಿಖಂಡಿ ಹಂಸ ಸಾರಸ ಕ್ರೌಂಚ ಕರಿ ಕಳಭ ಮಲ್ಲಾದ್ಯನೇಕ ಅನೇಕಾಕಾರ ವಿಕೃತಾಮರಕುಮಾರ: **ಆದಿಪು,** ೮. ೩ ವ)

ಆಕಾಶಧ್ವನಿ – [ನಾ] ಆಗಸದಿಂದ ಬಂದ ಧ್ವನಿ, ಅಶರೀರವಾಣಿ (ಆ ಕಮಳಾಕರಮಂ ಪೊಕ್ಕು ಆಕಾಶಧ್ವನಿಯಂ ಉಱದೆ ಕುಡಿದು ಅರಿಭೂಪಾನೀಕಭಯಂಕರನುಂ ಗಡಂ ಏಕೆಂದಜೆಯೆಂ ಬಟಲ್ದು ಜೋಲ್ದಂ ಧರೆಯೊಳ್: **ಪಂಪಭಾ,** ೮. ೪೧)

ಆಕಾಶವಚನ – [ನಾ] ಆಕಾಶದಿಂದ ಬಂದ ಮಾತು (ಆಕಾಶವಚನಮಿದು ಸುತಶೋಕಮಂ ಎನಗೆ ಅಱೆಪಿದಪ್ಪುದು ಅಸ್ಮತ್ತನಯಂಗೆ .. .. ಆದುದಾಗಲೆವೇಟ್ಟುಂ: **ಪಂಪಭಾ,** ೧೧. ೧೧೩)

ಆಕಿಂಚನ್ಯ – [ನಾ] ಯತಿಯ ದಶಧರ್ಮಗಲ್ಲಿ ಒಂದು, ತನ್ನದಾಗಿ ಏನನ್ನೂ ಹೊಂದದಿರುವುದು (ಎಂಬಿನಮುತ್ತಮಕ್ಷಮಾಮಾರ್ದವಾರ್ಜವಸತ್ಯಶೌಚ ಸಂಯಮ ತಪಸ್ತ್ಯಾಗಾಕಿಂಚನ್ಯ ಬ್ರಹ್ಮಚರ್ಯಪರ್ಯಾಯಪರ್ಯಾಪ್ತ ದಶಧರ್ಮಂಗಳುಮಂ ಕೈಕೊಂಡು: **ಆದಿಪು,** ೬. ೩೦ ವ)

ಆಕೀರ್ಣ – [ಗು] ತುಂಬಿದ, ಕಿಕ್ಕಿರಿದ (ಪರಮಜಿನೇಂದ್ರಮುಖಚಂದ್ರ

ವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣ ಸೂಕ್ತಿಕಲ್ಲೋಲ ಮಾಲಾಕೀರ್ಣ: **ಆದಿಪು,** ೧. ಆಶ್ವಾಸಾಂತ್ಯ ಗದ್ಯ)

ಆಕುಲ – [ನಾ] ದುಃಖ (ಬಗೆವಾಗಳ್ ಈಗಳ್ ಈ ಕಲಹದೊಳ್ ಅಣ್ಣ ನಿಮ್ಮ ಕುಲಂ ಆಕುಲಮಮ ನಿಮಗುಂಟುಮಾಡುಗುಂ: **ಪಂಪಭಾ,** ೧೦. ೨೧)

ಆಕುಲಮತಿ – [ನಾ] ವ್ಯಾಕುಲಗೊಂಡ ಮನಸ್ಸಿನವನು (ಧರ್ಮಪುತ್ರನುಂ ಕುಲಧನಸಂಕುಲಗಳನೆ ತಂದು ಇಟ್ಟು ಅವನಾಡಿ ಸೋಲ್ತಂ ಆಕುಲಮತಿ: **ಪಂಪಭಾ,** ೬. ೭೨)

ಆಕುಲಿತೆ – [ನಾ] ಕಳವಳ (ಕಳ್ಳರಾಯಿಲಮಜೆಯೇಱು ಮಾರಿ ಪಸವಿಟ್ಟಿದ್ದ ಬಱಂ ಪೆಱವುಂ ಭಯಂಗಳ್ ಆಕುಲಿತೆಗಳಿಲ್ಲ: **ಆದಿಪು,** ೧. ೫೨)

ಆಕುಳ – [ಗು] ಆವರಿಸಿದ, ತುಂಬಿದ (ಸ್ಯಂದಮಾನ ಫೇನಸಲಿಲಸ್ರೋತಶ್ಶತಂಗಳಿಂದಂ ಆಕುಳವ್ಯಾಕುಳನಯನ ರಾಜತನೂಜಸಮಾಜವದನಾಭಿಮುಖಚಟುಳ: **ಆದಿಪು.** ೧೪. ೯೫ ವ); **[ಗು]** ಶಬ್ದಮಾಡುವ, ಮೊರೆಯುವ (ಕಾಚಮೇಚಕ ಚಯಚ್ಛಾಯಾಂಬುವಿಂ ಗುಣ್ಪಿನಿಂ ಪುದಿದಿರ್ದತ್ತು ಸರೋವರಂ ಬಕಬಳಾಕಾನೀಕರಾವಾಕುಳಂ: **ಪಂಪಭಾ,** ೧೩. ೭೨)

ಆಕುಳಿತ – [ಗು] ಸಂಭ್ರಮಗೊಂಡ (ವಿಸ್ಫುತಿಪಕ್ಷ್ಮಪಾತನಂ ಅಪೂರ್ವಾಳೋಕನಾಕೌತುಕ ಆಕುಳಿತ ಅಂತಃಕರಣಂ: **ಆದಿಪು,** ೪. ೬೦); **[ಗು]** ದುಃಖಗೊಂಡ (ಅತಿಸಂಭ್ರಮ ಆಕುಳಿತಪರೀತ ಪರಿವಾರಜನ ಉಪನೀತ ಚಂದನಕರ್ಪೂರ ಮಿಶ್ರಿತ ಹಿಮಶಿಶಿರಧಾರಾಪರಿಷೇಕದಿಂದೆ: **ಪಂಪಭಾ,** ೧೩. ೨ ವ)

ಆಕುಳೀಕೃತ – [ಗು] ಕದಡುವಂತೆ ಆದ (ಧ್ವನದ ಅಳಿಕುಳಾಕುಳಿಕೃತವನಂಗಳಿಂದೆಸೆವ ಪದ್ಮಷಂಡಂಗಳ: **ಪಂಪಭಾ,** ೮. ೫೨)

ಆಕುಳೆ – [ನಾ] ವ್ಯಾಕುಲಕ್ಕೊಳಗಾದವಳು (ನಿಮಿರ್ವ ಸುಯ್ಗಳಿಂ ಕುಸಿಯುತ್ತುಂ ಶರಪಾಶಂಗಳ ನಡುವಣ ಹರಿಣಿಯವೋಲ್ ಮನದೊಳಾಗಳ್ ಆಕುಳೆಯಾದಳ್: **ಆದಿಪು,** ೪. ೫೦)

ಆಕೂರ್ಪರ – [ಕ್ರಿವಿ] ಮೊಳಕೈವರೆಗೆ (ಆಕೂರ್ಪರರಚಿತ ಕಾಳಾಯಸ ವಳಯ ಭಯಂಕರಕರದ್ವಯಮುಂ: **ಆದಿಪು,** ೧೩. ೪೫ ವ)

ಆಕೃತಿ – [ನಾ] ರೂಪ, ವೇಷ (ಆಗಳೆ ಕೈಗೂಡಿದ ವಟುವಾಕೃತಿಯೊಳೆ ಬೇಡಿದನಾ ಸಹಜಕವಚಮಂ ಕುಂಡಳಮಂ; **ಪಂಪಭಾ,** ೧. ೧೦೦)

ಆಕೃತಿಸಂವೃತಿ – [ನಾ] ರೂಪು ಮರೆಮಾಚುವಿಕೆ (ವಿಸ್ಮಯಾಕ್ಷಿಪ್ತಚಿತ್ತನಾಗಿ ನಿಜ ಆಕೃತಿಸಂವೃತಿಯಿಂ ತ್ರಿಃಪ್ರದಕ್ಷಿಣಂಗೆಯ್ದು: **ಆದಿಪು,** ೯. ೧೦೦ ವ)

ಆಕೃಷ್ಟ – [ಗು] ಆಕರ್ಷಣೆಗೊಂಡ (ವಿಜೃಂಭಮಾಣ ನವನಳಿನ ಪರಿಕರ ಆಕೃಷ್ಟ ಮಧುಕರರಮಣೀಯ ಪುಳಿನ ಪರಿಸರ ಪ್ರದೇಶಮಂ ಎಯ್ದೆವಂದು: **ಪಂಪಭಾ,** ೫. ೧೦ ವ); **[ಗು]** ಎಳೆಯಲ್ಪಟ್ಟ (ಪ್ರಕುಪಿತ ಸೂತಹೂಂಕಾರ ಕಾತರಿತ ತರಳತರ ತುರಂಗ ದ್ರುತವೇಗಾಕೃಷ್ಟ ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ: **ಪಂಪಭಾ,** ೧೩. ೫೧ ವ)

ಆಕೆಗಳ್ – [ನಾ] ಆಕೆಯರು, ಆ ಹೆಣ್ಣುಗಳು (ಅಂತಾಕೆಗಳಿರ್ವರುಂ ಎರಡುಂ ಕೆಲದೊಳಿರೆ ಕಲ್ಪಲತೆಗಳೆರಡಱ ನಡುವಣ ಕಲ್ಪವೃಕ್ಷಮಿರ್ಪಂತಿರ್ದ ಪಾಂಡುರಾಜಂಗೆ: **ಪಂಪಭಾ,** ೧. ೧೦೭ ವ)

ಆಕೌತುಕ – [ಗು] ತವಕದಿಂದ ಕೂಡಿದ (ವಿಸ್ಮೃತಿಪಕ್ಷ್ಮಪಾತನಂ ಅಪೂರ್ವಾಳೋಕನಾಕೌತುಕ ಆಕುಳಿತ ಅಂತಃಕರಣಂ: **ಆದಿಪು,** ೪. ೬೦)

ಆಕ್ರಂದತ್ – [ಗು] ಅಳುವಿನ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ)

ಆಕ್ರಂದನ – [ನಾ] ಅಳುವಿಕೆ (ಕಾರುಣ್ಯ ಆಕ್ರಂದನಂ ಅನಿವಾರಿತಂ ಒರ್ಮೊದಲೆ ಬಂದು ತೀಡಿತ್ತಾಗಳ್: **ಪಂಪಭಾ,** ೩. ೨೪)

ಆಕ್ರಾಂತ – [ಗು] ತುಂಬಿದ, ಆವರಿಸಿದ (ಆತಂ ಅತ್ಯಂತ ಸಂಭ್ರಮಾಕ್ರಾಂತಹೃದಯನಾಗಿ ಬೇಗಂ ಇದಿರೇಟಿ: **ಪಂಪಭಾ,** ೧೨. ೮೮ ವ)

ಆಕ್ರಮಣ – [ನಾ] ದಾಳಿ (ತಾಂ ಚಕ್ರೇಶನಾದೊಡಂ ತನ್ನಾಕ್ರಮಣಮಂ ಎನ್ನೊಳೇಕೆ ಕೆಮ್ಮನೆ ತೋರ್ಪಂ: **ಆದಿಪು,** ೧೪. ೭೯)

ಆಕ್ರಮಿ – [ನಾ] ಆಕ್ರಮಿಸುವವನು, ಎದುರಾಳಿ (ಗರುಡಂ ವಾಹಮಾಗಿರ್ಪ ಚಕ್ರೇಶ್ವರಿ ಭಾಸ್ವದ್ಧರ್ಮಚಕ್ರಾಕ್ರಮಿಗಳಂ ಅಲೆದಾಟಿಕ್ಕೆ ವಿಕ್ರಾಂತದಿಂದಂ: **ಆದಿಪು,** ೧. ೭)

ಆಕ್ಷೇಪ – [ನಾ] ಬೈಯುವಿಕೆ (ಆಕ್ಷೇಪಮಂ ಮಾಣ ನೀಂ ಕ್ರೋಧನನಾಗಲ್ ನಿನ್ನ ತಮ್ಮಂ ನಿನಗೆಱಗಂ: **ಆದಿಪು,** ೧೪. ೮೪); **[ನಾ]** ಕೇಡಿಗತನ (ಲಾಕ್ಷಾಗೃಹಮಂ ಪುಗಿಸಲುಂ ಅಕ್ಷಕ್ರೀಡೆಯೊಳೆ ಧರಣಿಯಂ ಕೊಳಲುಂ ಪಿಂಗಾಕ್ಷಂಗೆ ವೇಟ್ಟು ಸೈರಿಸದೆ ಆಕ್ಷೇಪದಿಂ ಎಮ್ಮನಿಲ್ಲಿ ಛಿದ್ರಿಸ ಬಂದೈ: **ಪಂಪಭಾ,** ೭. ೩೨)

ಆಖಂಡಳ – [ನಾ] ಇಂದ್ರ (ಮುದುಪಾರ್ವನಾಗಿ ಮೆಲ್ಲನೆ ಸಾರ್ವ ಆಖಂಡಳನಂ ಕಾಣಲೊಡಂ ಗಾಂಡಿವಿಗಿರದುರ್ಚಿ ಪಾಯ್ದುವು ಅಶ್ರುಜಲಂಗಳ್: **ಪಂಪಭಾ,** ೮. ೨)

ಅಖಂಡಳತನಯ – [ನಾ] ಇಂದ್ರನ ಮಗ, ಅರ್ಜುನ (ಅಶ್ವಸೇನನೆಂಬ ಪನ್ನಗಂ .. .. ದಹನಾರ್ಚಿಗಳಿಂ ಬರ್ದುಂಕಿ ನೆಗೆದು ಪಾಱುವಾಗಳ್ ಅದಂ ಎರಟ್ಟುಂಡಮಪ್ಪಿನಂ ಆಖಂಡಳತನಯಂ ಇಸುವುದುಂ: **ಪಂಪಭಾ,** ೫. ೯೯ ವ)

ಆಖಂಡಳವನ – [ನಾ] ಇಂದ್ರನ ವನ, ನಂದನವನ (ಆಖಂಡಳವನಸುಮನೋಮಾಲಿಕಾಲಂಬಲೀಲಾರ್ಚನೆಯ ೦: **ಆದಿಪು,** ೧೪. ೧೧೬)

ಆಖೇಟ – [ನಾ] ಬೇಟೆ (ಕರೆದೊಡೆ ಜೂದಿಂಗಂ ಧುರಭರಕೆ ಆಖೇಟಕ್ಕೆ ಭೂಭುಜಂಗೆ ಆಗದು ಮೆಯ್ಗರೆದಿರಲ್ ಆಗದು ಎಂಬ ಪುರಾತನ ಗುರುವಚನಂ ತನಗೆ ನಿಟ್ಟೆಪಟ್ಟುದಱಿಂ: **ಪಂಪಭಾ,** ೬. ೭೧)

ಆಖ್ಯಾನ – [ನಾ] ನಿರೂಪಣೆ, ಕಥಾನಕ, ಜೈನ ಪುರಾಣಗಳ ಎಂಟು ಭಾಗಗಳಲ್ಲಿ ಒಂದು (ಆ ಪುರಾಣಕ್ಕಂ ಲೋಕಾಕಾರಕಥನಮುಂ ದೇಶನಿವೇಶೋಪದೇಶಮುಂ ನಗರಸಂಪತ್ಪರಿವರ್ಣನಮುಂ ರಾಜ್ಯರಮಣೀಯತಾ ಆಖ್ಯಾನಮುಂ ತೀರ್ಥಮಹಿಮ ಸಮರ್ಥನಮುಂ ಚತುರ್ಗತಿಸ್ವರೂಪನಿರೂಪಣಮುಂ ತಪೋದಾನವಿಧಾನ

ವರ್ಣನಮುಂ ತತ್ಫಳಪ್ರಾಪ್ತಿಪ್ರಕಟನಮುಂ ಎಂದಿಂತು ಅವಯವಂಗಳೆಂಟಕ್ಕುಂ: **ಆದಿಪು,** ೧. ೪೨ ವ)

ಆಖ್ಯಾಯತೇ – ಹೇಳುತ್ತದೆಯೋ (ಮತ್ತ ಅರಿದ್ವಿಪ ಮಸ್ತಕಸ್ಥಿತ ಶಿಲಾಪಟ್ಟಂ ಸದಾಖ್ಯಾಯತೇ: **ಪಂಪಭಾ,** ೧೪. ೨೮)

ಆಗ – [ಕ್ರಿ] [ಆಗು+ಅ] ಆಗದು (ಪಿಡಿದುಯ್ದುದು ಗಂಧರ್ವರ ಪಡೆ ನಿಮ್ಮಣ್ಣನಂ ಸುಯೋಧನನಂ ಇದಂ ಕಡೆಗಣಿಸಲ್ ಆಗ ನಮಗೆ: **ಪಂಪಭಾ,** ೭. ೩೭)

ಆಗಡು – [ಅ] ಆ ಸಮಯದಲ್ಲಿ (ಕರ್ಮದ ತೊಡರಂ ಪಱಿವಂತೆ ಕೇಶಪಾಶಮನಂತಾಗಡೆ ಪಱಿದು ತಪಂಗೊಂಡಂ: **ಆದಿಪು,** ೬. ೨೪)

ಆಗಡುಂ – [ಅ] ಯಾವಾಗಲೂ (ಮೆಯ್ವೋಗಂ ಆಗಡುಂ ಆರ್ಗಂ ಕುಡುತಿರ್ಪ ಕಪ್ಪುರದ ಬಂಬಲ್ದಂಬುಲಂ ರಾಗಮಂ ಪಡೆಗೆಲ್ಲಂ ಪಡೆವಂದದಿಂ: **ಪಂಪಭಾ,** ೯. ೧೦೪)

ಆಗಡೆ – [ಅ] ಆ ಸಮಯದಲ್ಲಿ (ಮಾಗಧರಂ ಗೆಲ್ದಂತೆವೊಲ್ ಆಗಡೆ ವರತನುವನೊತ್ತಿ: **ಆದಿಪು,** ೧೩. ೩); ಆಗಲೇ (ನಲ್ಲಳೊಳ್ ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋಗು: **ಪಂಪಭಾ,** ೧. ೧೧೨)

ಆಗದೆ – [ಅ] ಅಲ್ಲವೇ (ಎನಿತಱಿಯದಿರ್ದೊಡಂ ಸೋದರಿಕೆಯೆ ಮಿಕ್ಕು ಬರ್ಕುಮಾಗದೇ: **ಪಂಪಭಾ,** ೧೨. ೨೦೭ ವ)

ಆಗಮ – [ನಾ] ಸಾಂಪ್ರದಾಯಿಕ ಗ್ರಂಥ, ಶಾಸ್ತ್ರ (ಆಪ್ತನೆ ಪೇೞ್ದುದದು ಆಗಮಂ ಆಗಮದರ್ಥಮಾವುದು ಅದುವೆ ಪದಾರ್ಥಂ: **ಆದಿಪು,** ೫. ೫೪)

ಆಗಮವಿತ್ತ್ವ – [ನಾ] ಆಗಮಜ್ಞಾನ (ಅನ್ವಿತ ಚತುರಾನನತ ಆಗಮವಿತ್ವಂ .. .. ಇಂತು ಪತ್ತತಿಶಯಂಗಳಿವೇಂ ಜಿನನೊಳ್ ಪೊದಳ್ದುವೋ: **ಆದಿಪು,** ೧೦. ೪೩)

ಆಗರ – [ನಾ] [ಆಕರ] ಮನೆ (ಸುತ್ತಿಱಿದ ರಸದ ತೊಱೆಗಳೆ ಮುತ್ತಿನ ಮಾಣಿಕದ ಪಲವುಂ ಆಗರಮೆ ಮದೋನ್ಮತ್ತ ಮದಕರಿವನಂಗಳೆ ಸುತ್ತಲುಂ: **ಪಂಪಭಾ,** ೧. ೫೭)

ಆಗಲೀ – [ಕ್ರಿ] [ಆಗಲ್+ಈ] ಆಗಲು ಬಿಡು, ಆಗಲು ಅವಕಾಶಕೊಡು (ಓವೋ ಸಗ್ಗಂಗಳೊಳಿರ್ಪ ದೇವಡಿತಿತೊಟ್ಟೆರೊಳ್ ಅಟ್ಟಿಯಂ ಆಗಲೀವನೇ: **ಪಂಪಭಾ,** ೧೦. ೪೫)

ಆಗಲೆವೇೞ್ಕುಂ – [ಕ್ರಿ] ಆಗಲೇಬೇಕು (ಅದಱಿಂ ಪಾಂಡವರ್ಯೆವರುಂ ವಿರಾಟಪುರದೊಳಿರ್ದರಾಗಲೆವೇೞ್ಕುಂ: **ಪಂಪಭಾ,** ೮. ೮೪ ವ)

ಆಗಸ – [ನಾ] [ಆಕಾಶ] ಬಾನು (ದೆಸೆಗೆತ್ತಂ ಗಜಱುತ್ತುಮಿರ್ಪ ಪುಲಿಯಿಂ ನೀಳಾಭ್ರಮಂ ದಂತಿಗೆತ್ತು ಸಿಡಿಲ್ದು ಆಗಸಕೆ ಎಯ್ದೆ ಪಾಯ್ವ ಪಲವುಂ ಸಿಂಗಂಗಳಿಂದೆತ್ತಗುರ್ವಿಸಿ: **ಪಂಪಭಾ,** ೭. ೨೬)

ಆಗಳಾಗಡೆ – [ಅ] ಆ ಕ್ಷಣವೆ (ಮಡಗಿಡಲೆಂದು ಪುತ್ತಿನೊಳಗೊಯ್ಯನೆ ಕುತ್ತಿದ ಕಯ್ಯನಾಗಳಾಗಡೆ .. .. ಮಹೋರಗನೆಯ್ದೆ .. .. ಕೊಂಡುದು ತತ್ತಪಸ್ವಿಯಂ: **ಆದಿಪು,** ೨. ೪೦)

ಆಗಳಾಗಳ್ – [ಅ] ಆಗಷ್ಟೇ (ಇನಕಿರಣದ್ಯೋತಿಗೆತ್ತು ಆಗಳಾಗಳ್ ಮುಗಿದಿರ್ದ ಅಂಭೋಜಂ ಓರೊಂದಲರ್ದುದು: **ಆದಿಪು,** ೧೨. ೯)

ಆಗಳಾಗಳೆ – [ಅ] ಆಗತಾನೆ (ಚಾರಣಯುಗಳಕ್ಕೆ ವಿಧಿಪೂರ್ವಕಂ ಮಹಾದಾನಮನಿತ್ತುದಂ ಆಗಳಾಗಳೆ ಪುಟ್ಟಿದ ಭವಸಂಸ್ಕಾರದಿಂದಂ ಸವಿಸ್ತರಮಱಿದು: **ಆದಿಪು,** ೯. ೧೩೧ ವ)

ಆಗಳುಂ – [ಅ] ಯಾವಾಗಲೂ (ಆಗಳುಂ ಇಂದುಸೂರ್ಯರ್ ಅಣಂ ಇಲ್ಲ ಕಟ್ಟಲೆಯೆಂಬುದಿಲ್ಲ ತದ್ಭೋಗಿಫಣಾದ್ಯುತಿಯೆ ಕಟ್ಟಲೆಯಂ ತಲೆದೋಱಲೀಯದು: **ಪಂಪಭಾ,** ೪. ೧೬)

ಆಗಳೆ – [ಅ] ಒಡನೆ, ತಕ್ಷಣ (ಎಳೆಯೊಳ್ ತೋಱಿದ ರೂಪನಾಗಳೆ ನಭೋಭಾಗಾಗ್ರದೊಳ್ ತೋರ್ಪಂ ಆಗಳೆ ಗೆಂಟು ಆಗಳೆ ಸಾರೆಯಾಗಿ ಪೊಳೆವಂ: **ಆದಿಪು,** ೭. ೧೨೨)

ಆಗಳೆ ಗೆಂಟು ಆಗಳೆ ಸಾರೆ – ಒಮ್ಮೆ ದೂರ ಒಮ್ಮೆ ಹತ್ತಿರ (ಎಳೆಯೊಳ್ ತೋಱಿದ ರೂಪನಾಗಳೆ ನಭೋಭಾಗಾಗ್ರದೊಳ್ ತೋರ್ಪಂ ಆಗಳೆ ಗೆಂಟು ಆಗಳೆ ಸಾರೆಯಾಗಿ ಪೊಳೆವಂ: **ಆದಿಪು,** ೭. ೧೨೨)

ಆಗಾಮಿಕ – [ಗು] ಭವಿಷ್ಯತ್ತಿಗೆ ಸಂಬಂಧಿಸಿದ (ಆಗಾಮಿಕ ಸಂಗ್ರಾಮಕ್ಕೆ ಪಾತ್ರಂಗಳಂ ಸಮೆಯಿಸುವ ಸೂತ್ರಧರನಂತೆ: **ಪಂಪಭಾ,** ೨. ೫೯ ವ)

ಆಗಾರ – [ನಾ] ಮನೆ (ನಗರಾರಣ್ಯನಿರ್ವಿಶೇಷಂ ಉತ್ತಮ ಮಧ್ಯಮ ಜಘನ್ಯಾಗಾರಂಗಳೊಳ್ ಚಂದ್ರಗತಿಯಿಂ ಸಲುತ್ತುಂ: **ಆದಿಪು,** ೯. ೧೩೦ ವ)

ಆಗು – [ನಾ] ಹುಟ್ಟು (ಸಂತಸದಿನಿರ್ದು ಮಕ್ಕಳಸಂತತಿಗೀ ದೊರೆಯರ್ ಇನ್ನುಮಾಗದೊಡೆ ಎಂತುಂ ಸಂತಸಮೆನಗಿಲ್ಲ ಎಂದಾ ಕಾಂತೆ ಸುತಭ್ರಾಂತೆ ಮುನ್ನಿನಂತೆವೊಲಿರ್ದಳ್: **ಪಂಪಭಾ,** ೧. ೧೨೩); [ಕ್ರಿ] ಸರಿಹೊಂದು (ಬೂದಿ ಜೆಡೆ ಲಕ್ಕಣಂ ತಪಕೆ ಆದುವು ಎರಟಿಗ್ಗೊಣೆ ಶರಾಸನಂ ಕವಚಂ ಇದೆಂತಾದುವೊ: **ಪಂಪಭಾ,** ೭. ೯೨); [ಕ್ರಿ] ಸೃಷ್ಟಿಯಾಗು (ಒಡಲುಂ ಪ್ರಾಣಮುಂ ಎಂಬಿವು ಕಿಡಲಾದುವು ಜಸಮದೊಂದೆ ಕಿಡದು: **ಪಂಪಭಾ,** ೧೨. ೧೮೧)

ಆಗುಳಿ – [ನಾ] ಆಕಳಿಕೆ, ಆಲಸ್ಯ (ವಿಭೂಷಣಂಗಳೊಳ್ ತೀಡುವ ರಶ್ಮಿಗಳ್ ಮಸುಳ್ದುವು ಆಗುಳಿಯಾಯ್ತು: **ಆದಿಪು,** ೩. ೩)

ಆಗುಳಿಸು – [ಕ್ರಿ] ಆಕಳಿಸು (ಲಸತ್ಕಿರ್ಣಕೇಸರಮಂ ಪರಪುತ್ತುಮಾರ್ಗ ಆಗುಳಿಸುವ ಬಾಯ ಕೆಂಪನುದಯಂಗೆಯೆ: **ಆದಿಪು,** ೧೨. ೫)

ಆಗ್ರಹ – [ನಾ] ಹಿಡಿಯುವುದು ಮತ್ತು ಹಟ (ಕಂತುಶರಭವನಂ ಆ ಪ್ರಿಯಕಾಂತಾಭ್ರೂವಿಭ್ರಮಗ್ರಹ ಆಗ್ರಹವಶದಿಂ ಭ್ರಾಂತಿ ಸದುಪಶಾಂತಂ ಮನಂ ಶಂತನುಗಿತ್ತಂ ಸಮಸ್ತರಾಜ್ಯಶ್ರೀಯಂ: **ಪಂಪಭಾ,** ೧. ೬೬); [ನಾ] ಒತ್ತಾಯ (ಎನಗೆ ವೀರಶ್ರೀಯುಂ ಕೀರ್ತಿಶ್ರೀಯುಂ ಅಲ್ಲದೆ ಉೞಿದ ಪೆಂಡಿರ್ ಮೊಱೆಯಲ್ಲ ನೀವಿದನೇಕಾಗ್ರಹಂಗೆಯ್ವಿರಿ: **ಪಂಪಭಾ,** ೧. ೭೮ ವ); [ನಾ] ಕೋಪ (ಉತ್ತರ ಗೋಗ್ರಹಣಂ ಪಿರಿದುಮಾಗ್ರಹಮಂ ಮನದೊಳ್ ತಗುೞ್ಚೆ: **ಪಂಪಭಾ,** ೮. ೯೨)

ಆಘಾಟ – [ನಾ] ಎಲ್ಲೆ, ಮೇರೆ (ಮಹೀಭುಜನೆಯ್ದಿದಂ ಫಳವಿನಮ್ರಮಹೀಜಸಹಸ್ರಾಘಾಟಮಮಂ ಉತ್ಪಳಖೇಟಮಂ: **ಆದಿಪು**, ೪. ೫೮)

ಆಘಾಟಶುದ್ಧಿ – [ನಾ] ಮೇರೆಯನ್ನು ನಿಶ್ಚಯಿಸುವುದು (ಆರ್ಯಜನಕ್ಕೆ ಆಘಾಟಶುದ್ಧಿಯಂ ಮಾಡಿ ಸೀಮಂಧರನಾದಂ: **ಆದಿಪು,** ೬. ೫೭ ವ)

ಆಘಾತ – [ನಾ] ಹೊಡೆತ, ಏಟು (ತುಂಗವನ್ಯಮತಂಗಜದಂತೆ ಆಘಾತನಿಪಾತಿಸಲ್ಲಕೀಭಂಗಮಂ .. .. ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ,** ೧. ೧೧೫)

ಆಘ್ರಾಣಿಸು – [ಕ್ರಿ] ಮೂಸಿನೋಡು (ಸಪ್ತಚ್ಛದಗಂಧಮನೀ ವನೇಭಂ ಆಘ್ರಾಣಿಸಿ ಪೆರ್ಚಿದ ಮಸಕದಿಂದೆ: **ಆದಿಪು,** ೧೧. ೬೪)

ಆಚಂದ್ರಸ್ಥಾಯಿ – [ನಾ] ಚಂದ್ರನಷ್ಟು ಸ್ಥಿರ, ಶಾಶ್ವತ (ಪತ್ತೆಂಟು ಕೋಲನೆಚ್ಚು ಅಟ್ಟೆಯುಂ ನೆಲದೊಳ್ ಆಚಂದ್ರಸ್ಥಾಯಿಯಾಗೆ ಚತುರ್ದಶಭುವನಂಗಳಂ ಪಸರಿಸಿ ನಿಂದೊಡೆ: **ಪಂಪಭಾ,** ೧೨. ೨೧೩ ವ)

ಆಚಕ್ಷತೇ – [ಕ್ರಿ] ನೋಡುತ್ತಾನೆ (ಕಂಚ ಆಕಸ್ಮಿಕ ಪಾಂಸುಪಲ್ಲವ ಜಳಸ್ಯಂದೀ ಸದಾಸಿಂಧುರ್ ಅಪ್ರಾಗೇಯಂ ಪ್ರಿಯಗಳ್ಳಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ,** ೯. ೯೭)

ಆಚಮಿತ – [ಗು] ಆಚಮನ ಮಾಡಿದ, ಮುಕ್ಕುಳಿಸಿದ (ಬಟೆಯಂ ಆಚಮಿತ ಚಂದ್ರಕಾಂತದ್ರವಸುರಭಿಸಲಿಲನುಂ: **ಆದಿಪು,** ೧೧. ೨೭ ವ)

ಆಚಮಿಸು – [ಕ್ರಿ] ಆಚಮನ ಮಾಡು (ಆಚಮಿಸಿ ಕನಕಕಮಳಂಗಳಿಂ ಕಮಳಾಕರಬಾಂಧವಂಗೆ ಅರ್ಘ್ಯಮನೆತ್ತಿ: **ಪಂಪಭಾ,** ೧೨. ೧೦೮ ವ)

ಆಚಾಮ್ಲವರ್ಧನತಪ – [ನಾ] ಆಚಾಮ್ಲವರ್ಧನ; ಒಂದು ಉಪವಾಸವ್ರತ: [ಒಂದು ದಿನ ಆಚಾಮ್ಲ ಗಂಜಿ ಸೇವನೆ ಒಂದು ಪಾರಣೆ, ಎರಡು ಆಚಾಮ್ಲ ಸೇವನೆ ಒಂದು ಪಾರಣೆ, ಮೂರು ಆಚಾಮ್ಲ ಸೇವನೆ ಒಂದು ಪಾರಣೆ – ಈ ಕ್ರಮದಲ್ಲಿ ಹತ್ತು ಆಚಾಮ್ಲಗಳವರೆಗೆ ಸಾಗಿ ಆನಂತರ ಒಂಬತ್ತು ಆಚಾಮ್ಲ, ಎಂಟು ಆಚಾಮ್ಲ ಹೀಗೆ ಒಂದರವರೆಗೆ ಇಳಿಸುತ್ತ ಬರುವ ವ್ರತ; ಇದರಲ್ಲಿ ಒಟ್ಟು ನೂರು ಆಚಾಮ್ಲಗಳೂ ಹತ್ತೊಂಬತ್ತು ಪಾರಣೆಗಳೂ ಆಗುತ್ತವೆ (ಭವ್ಯಜನ ಮನೋನಂದನರನೆನಿಸಿದಭಿನಂದನ ಗುರುಗಳಂ ಸಾರ್ದು ಶಾಶ್ವತಸೌಖ್ಯವರ್ಧನ ಕರಮಪ್ಪಾಚಾಮ್ಲ ವರ್ಧನ ತಪದೊಳ್ ನೆಗಟ್ದು ಪರಮಪದಮನೆಯ್ದಿದಂ: **ಆದಿಪು,** ೩. ೬೫ ವ)

ಆಚಾರ – [ನಾ] ದರ್ಶನಾಚಾರ, ಜ್ಞಾನಾಚಾರ, ಚಾರಿತ್ರಾಚಾರ, ತಪಾಚಾರ ಮತ್ತು ವೀರ್ಯಾಚಾರಗಳೆಂಬ ಐದು ಬಗೆಯ ನಡವಳಿಕೆ (ಸಂದ್ಯೆದುಮಾಚಾರದೊಳ್ಸದ್ಭಾವಂ ಕೈಗಣ್ಮೆ: **ಆದಿಪು,** ೧. ೩)

ಆಚಾರವಂತ – [ನಾ] ಒಳ್ಳೆಯ ನಡವಳಿಕೆಯುಳ್ಳವನು (ಅಂಬಿಕೆಯ ಸೂಳೆಯಪ್ಪಾಕೆ ದರಹಸಿತ ವದನಾರವಿಂದೆಯಾಗಿ ಬರವಂ ಕೈಕೊಂಡಳಪ್ಪುದಜೆಂದಾಕೆಯ ಮಗಂ ವಿದುರನೆಂಬಂ ಅನಂಗಾಕಾರನುಮಾಚಾರವಂತನುಂ ಬುದ್ಧಿವಂತನುಮಕ್ಕುಂ: **ಪಂಪಭಾ,** ೧. ೮೫ ವ)

ಆಚಾರ್ಯ – [ನಾ] ಪಂಚಪರಮೇಷ್ಠಿಗಳಲ್ಲಿ ಒಬ್ಬ ಆವಶ್ಯಕವಾದ ಮೂವತ್ತಾರು ಗುಣಗಳನ್ನು ಹೊಂದಿ, ಐದು ಆಚಾರಗಳನ್ನು ತಮ್ಮ ಜೀವನದ ಭಾಗವಾಗಿಸಿಕೊಂಡು ಶಿಷ್ಯರ ನಡವಳಿಕೆಯ ಕ್ರಮವನ್ನು ಕರುಣೆಯಿಂದ ನೇರ್ಪಡಿಸುತ್ತ, ಅವರ ಬಳಿ ದೋಷಗಳು ಸಾರದಂತೆ ಎಚ್ಚರವಹಿಸುವರು ಆಚಾರ್ಯರುಗಳು (ಮೂವತ್ತಾಱು ಗುಣಂಗಳ್ತಮಗಮರ್ದಿರೆ ಸಂದ್ಯೆದುಮಾಚಾರದೊಳ್ಸದ್ಭಾವಂ ಕೈಗಣ್ಮೆ ಶಿಷ್ಯಾಚರಣವಿಧಿಗಳಂ ತಿರ್ದಿ ಕಾರುಣ್ಯದಿಂದಂ ಸಾವದ್ಯಂ ಸಾರದಂತಾಗಿರೆ ನಿಯಮಿಸುವಾಚಾರ್ಯರ್: **ಆದಿಪು,** ೧. ೩)

ಆಚಾರ್ಯಪದವಿ – [ನಾ] ಗುರುವಿನ ಜವಾಬ್ದಾರಿ (ದ್ರೋಣಚಾರ್ಯಂ ಆಚಾರ್ಯಪದವಿಯಂ ಕೈಕೊಂಡು ಪಾಂಡವಕೌರವರ್ಗೆ ಚತುರಂಗಧನುರ್ವೇದಮುಮಂ ದಿವ್ಯಾಸ್ತ್ರಂಗಳಂ .. .. ಉಪದೇಶಂಗೆಯ್ಯುತ್ತಿರೆ: **ಪಂಪಭಾ,** ೨. ೫೫ ವ)

ಆಚಾರ್ಯರ್ – [ನಾ] ಗುರುಗಳು (ಇವರೆಮ್ಮ ಆಚಾರ್ಯರೆಂದೋವದೆ ಏರ್ವಸನಂ ಮಾಣದೆ ಕೈದುಗೊಳ್: **ಪಂಪಭಾ,** ೧. ೭೮)

ಆಚೂಳಸ್ವಸ್ತಿಕಬದ್ಧ – [ಗು] ಶಿರಸ್ಸಿನವರೆಗೆ ಸ್ವಸ್ತಿಕಾಕೃತಿಯಲ್ಲಿ ಕಟ್ಟಿದ (ಆಚೂಳಕಸ್ವಸ್ತಿಬದ್ಧವಿಚಿತ್ರವಸ್ತ್ರ ದ್ವಯೋದ್ದಾಮಧಾನುಷ್ಕಂ: **ಆದಿಪು,** ೧೩. ೪೫. ವ)

ಆಚ್ಛನ್ನ – [ಗು] ಮುಚ್ಚಲ್ಪಟ್ಟ (ಅಹಿತಮತಂಗವಿಜಯ ಕದಳಿಕಾಕಾನನ ಬಹುಳಚ್ಛಾಯಾಚ್ಛನ್ನರಾಗಿ: **ಆದಿಪು,** ೧೪. ೮೪ ವ)

ಆಚ್ಛಾದನ – [ನಾ] ಮುಚ್ಚುವಿಕೆ, ಹೊದಿಕೆ (ಕುಂಕುಮಚ್ಛದ ಪಂಕಚ್ಛಟಾಚ್ಛಾದನದೊಳೆ ಸೊಗಯಿಸುವ ಗೃಹಾಂಗಣಗಳುಂ: **ಆದಿಪು**, ೭. ೩೭ ವ)

ಆಚ್ಛಾದಿತ – [ಗು] ಹೊದಿಸಲ್ಪಟ್ಟ (ದುಕೂಲಪ್ರಚ್ಛದಾಚ್ಛಾದಿತ ಸುಖಾಸೀನಂ ಮಣಿಮಯಸಿಂಹಾಸನಮನವಷ್ಟಂಭಿಸಿ: **ಆದಿಪು,** ೧೧. ೨೭ ವ); [ಗು] ಮುಸುಕಲ್ಪಟ್ಟ (ಪಾದಾಭಿಘಾತವಿಚಳತ್ ಮೇದಿನಿ ಉತ್ಥಿತ ವಿಶಾಲಧೂಳೀಪಟಲಾಚ್ಛಾದಿತಗಗನಂ ನಡೆದುದು ಪಾದಾತಂ: **ಆದಿಪು**, ೧. ೩೩)

ಆಜವಂಜವವಿಭಾವ – [ನಾ] ಹುಟ್ಟುಸಾವುಗಳ ವ್ಯಾಪಾರ (ಎಂದಾ ಮಹಾನುಭಾವಂ ಆಜವಂಜವವಿಭಾವಕ್ಕೇವಯಿಸಿ: **ಆದಿಪು,** ೪. ೬೭ ವ)

ಆಜವಂಜವವ್ಯಸನ – [ನಾ] ಹುಟ್ಟುಸಾವುಗಳಿರುವ ಸಂಸಾರದ ಬಗೆಗಿನ ವ್ಯಾಮೋಹ (ಇನ್ನು

ಆಜವಂಜವವ್ಯಸನಪುಂಜಮಂ ಕಿಡಿಪುದಾದಿತೀರ್ಥೇಶ್ವರಾ: **ಆದಿಪು,** ೧೩. ೮೮)

ಆಜಸ್ರಂ – [ಅ] ಸದಾಕಾಲ (ಚರಣಾಸಂಘಾತಕರಜಂ ಆಜಸ್ರಂ ನೆರೆದು ಅಂಬರಕೊಗೆಯಲ್: **ಪಂಪಭಾ,** ೧೦. ೬೮)

ಆಜಾನುವಿಳಂಬಿ – [ಗು] ಮೋಳಕಾಲವರೆಗೆ ಉದ್ದವಾದ (ಬಾಹುಗಳ್ ಆಜಾನುವಿಳಂಬಿಗಳ್ ತೊಡೆಗಳುಂ ರಂಭಾಮೃದುಸ್ತಂಭ ಶೋಭೆಗಳಂ ಗೆಲ್ದವು: **ಆದಿಪು,** ೧. ೭೪)

ಆಜಾನೇಯ – [ನಾ] ಉತ್ತಮ ಜಾತಿಯ ಕುದುರೆ (ದಾನಾಂಭಃ ಪೀನಗಂಡಸ್ಥಳ ಕರನಿಕರಂ ಬಾಟಿಸ್ತೆಯೋ ಮೆಚ್ಚುವೇಟಿಗಾಜಾನೇಯ ಆಶ್ವೋತ್ಕರಂ ಬಾಟಿಸ್ತೆಯೊ: **ಪಂಪಭಾ,** ೬. ೪೦)

ಆಜಿ – [ನಾ] ಯುದ್ಧ (ಆರ್ತು ಆಜಿಗೆ ಬಂದೊಡ್ಡಲ್ಕೆ ಪೇಟ್ಲಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೈ: **ಆದಿಪು,** ೧೪. ೮೨)

ಆಜಿರಂಗ – [ನಾ] ಯುದ್ಧರಂಗ (ಪಿಂದೆ ಕಡಂಗಿ ತೇರಂ ಎಸಗು ಎಂಬವಂ ಅಂಬಿಗಂ ಆಜಿರಂಗದೊಳ್ ಮುಂದೆ ಸಮಾನನಾಗಿ ಬೆಸೆದೆ ಇರ್ಪವನುಂ ತುಱುಕಾಱನಾಗೆ: **ಪಂಪಭಾ,** ೧೨. ೯೪)

ಆಜ್ಞಾಕರಣ – [ನಾ] ಆಜ್ಞೆಯ ಪಾಲನೆ (ಸಕಳಜನಮುಮಂ ಆಜ್ಞಾಕರಣವಿಧಾನದೊಳ್ ನಿಯೋಜಿಸಿ: **ಆದಿಪು,** ೬. ೧೦೭ ವ)

ಆಜ್ಞಾಫಲ – [ನಾ] ಆಜ್ಞೆಯ ಪ್ರಯೋಜನ (ಉದ್ಯೋಗದೊಳ್ ನೆಗಟ್ಟಾಜ್ಞಾಫಲಂ ಆಜ್ಞಾಫಲದೊಳ್ ತೊಡರ್ದಗುರ್ವು: **ಪಂಪಭಾ,** . ೨೭)

ಆಜ್ಞಾಲಂಘನಗೆಯ್ – [ನಾ] ಆಜ್ಞೆ ಮೀರು (ಅಣ್ಣನ ಕಣ್ಸನ್ನೆಗೆ ಮೀಱಲಣ್ಮದೆ ಸಮಂತಿರ್ದರ್ ಪೃಥಾಪುತ್ರರ್ ಅಂತಿನಿತೊಂದಾದೊಡಮೇಂ ಮಹಾಪುರುಷರ್ ಆಜ್ಞಾಲಂಘನಂ ಗೆಯ್ವರೇ: **ಪಂಪಭಾ,** ೭. ೯)

ಅಜ್ಞಾವಿಚಯ – [ನಾ] [ಜೈನ] ನಾಲ್ಕು ಬಗೆಯ ಧರ್ಮಧ್ಯಾನಗಳಲ್ಲಿ ಒಂದು; ಆಗಮಗುಣಗಳ ಕುರಿತಾದ ಚಿಂತನೆ (ಆಜ್ಞಾವಿಚಯಂ ಅಪಾಯವಿಚಯ ವಿಪಾಕವಿಚಯ ಸಂಸ್ಥಾನವಿಚಯಮೆಂಬ ನಾಲ್ಕುಂ ಧರ್ಮಧ್ಯಾನಮಂ ಧ್ಯಾನಿಸುತ್ತುಂ: **ಆದಿಪು,** ೧೦ ೧೪ ವ)

ಆಜ್ಞೆ – [ನಾ] ಅಪ್ಪಣೆ (ಪೊದಳ್ದಾಜ್ಞೆಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳಾರಾ ಪಾಂಡುರಾಜಂಬರಂ: **ಪಂಪಭಾ,** ೧. ೧೧೦)

ಆಜ್ಯ – [ನಾ] ತುಪ್ಪ (ಆಜ್ಯ ಕ್ಷೀರ ದಧಿ ನಾಳಿಕೇರ ಸಹಕಾರ ಪೂಗೀಫಲ ಪುಂಡ್ರೇಕ್ಷುರಸಂಗಳಿಂದಂ .. .. ಅಭಿಷೇಕಂಗೆಯ್ದು: **ಆದಿಪು,** ೧೬. ೧ ವ)

ಆಜ್ಯಾವೇಕ್ಷಣ – [ನಾ] [ಆಜ್ಯ+ಅವೇಕ್ಷಣ] ತುಪ್ಪದಲ್ಲಿ [ಮುಖ] ನೋಡಿಕೊಳ್ಳುವುದು (ಅಂಗರಾಜಂ ತನ್ನಂ ಪರಿಚ್ಛೇದಿಸಿ ನೇಸಱ್ ಮೂಡೆ ಆಜ್ಯಾವೇಕ್ಷಣಂಗೆಯ್ದು ಸವತ್ಸುರಭಿಯಂ ಅಭಿವಂದಿಸಿ: **ಪಂಪಭಾ,** ೧೨. ೧೦೮ ವ)

ಆಜ್ಯಾಹುತಿ – [ನಾ] ಹೋಮದಲ್ಲಿ ಅಗ್ನಿಗೆ ತುಪ್ಪ ಆಹುತಿಯಾಗಿ ನೀಡುವುದು (ಗಣನಾತೀತ ಆಜ್ಯಾಹುತಿಗಣದಿಂದಂ ತಣಿಯೆ ಜಾತವೇದನುಂ ಆ ಬ್ರಾಹ್ಮಣಸಮಿತಿ ಬೇಳೆ ದೇವರ್ ತಣಿಯುಂಡರ್ ನೆರೆದು ದಿವ್ಯ ಹವ್ಯಾಮೃತಮಂ: **ಪಂಪಭಾ,** ೬. ೩೭)

ಆಟ – [ನಾ] ಕುಣಿತ, ನರ್ತನ (ಸುರೇಂದ್ರಸೌಂದರಿಯರ ಆಟದಿಂ ಗಾಡಿವೆತ್ತದೇಂ ಗಗನಮಂಡಲಂ ನೆಱೆಯೆ ಶೋಭೆಯಂ ಪೆತ್ತುದೋ: **ಆದಿಪು,** ೭. ೫೯)

ಆಟಂದು – [ಕ್ರಿ] (√ಆಟರ್) ಮೇಲೆ ಹಾಯು (ಕ್ರಂದತ್ ಸ್ಯಂದನ ಜಾತ ನಿರ್ಗತ ಶಿಖಿಜ್ವಾಳಾಸಹಸ್ರಂಗಳ್ ಆಟಂದೆತ್ತಂ ಕವಿದೇಟ್ವೆ ಬೇವ ಶವಸಂಘಾತಂಗಳಂ: **ಪಂಪಭಾ,** ೧೩. ೭೧)

ಆಟಪಾಟ – [ನಾ] ನೃತ್ಯ ಸಂಗೀತ (ತಪ್ಪದೆ ರಯ್ಯಮಾಯ್ತು ಎಸೆವ ಆಟಪಾಟದ ಗೀತಿ: **ಪಂಪಭಾ,** ೧೪. ೧೫)

ಆಟರ್ – [ಕ್ರಿ] ಮೇಲೆ ಬೀಳು (ವಿಯೋಗಿಯಳ್ಳೆರ್ದೆಯಂ ಆಯ್ದು ಅದಂ ಆಟರಲ್ ಎಂದೆ ಮನ್ಮಥಂ ಘಟಿಯಿಸಿ: **ಪಂಪಭಾ,** ೫. ೩೨)

ಆಟರಲ್ – [ಕ್ರಿ] ಮೇಲೆ ಬೀಳಲು (ಅರಿನೃಪಕೋಟಿಯಂ ಆಟರಲೆಂದು ಆಸ್ಫೋಟಿಸಿ ನಿಶಿತಶರಕೋಟಿಯೊಳ್ ತಟಿಗೋಂಟೆಯನಿಕ್ಕಿ ವೀರರಸನಿಕೇತನನಾಗಿರ್ದ ಕಳಶಕೇತನನಂ ನೋಡಿ ದ್ರುಪದಂ ಸೈರಿಸದೆ: **ಪಂಪಭಾ,** ೧೨. ೧೮ ವ)

ಆಟವಿಕ – [ನಾ] ಕಿರಾತ (ಕಪ್ಪಮೀಯದೆ ಚಪ್ಪರಿಸುವ ಮಂಡಳಿಕರುಮಂ ಅಡಂಗದ ಆಟವಿಕರುಮಂ ಒತ್ತಿ ಬರ್ಪ ಪಾರ್ಷ್ಣಿಗ್ರಾಹಕರುಮಂ ಅಱಿದು: **ಆದಿಪು,** ೪. ೮೨ ವ); [ನಾ] ಕಾಡಿನಲ್ಲಿ ವಾಸಿಸುವವನು (ಕಾಮ್ಯಕವನಮಂ ಪೊಕ್ಕು ತದ್ವನತಪೋಧನರ ಗೋಷ್ಠಿಯೊಳಂ ಆಟವಿಕರ ಅಟ್ಟಟ್ಟಿಯೊಳಂ ತಮಗಿಂದ್ರಪ್ರಸ್ಥದ ರಾಜ್ಯಶ್ರೀಯಂ ಮರಳಿಸೆ: **ಪಂಪಭಾ,** ೭. ೨೭ ವ)

ಆಟಿಸು – [ಕ್ರಿ] ಬಯಸು (ಪುಸಿಯದುದು ಪರಾಂಗನೆಗೆ ಆಟಿಸದುದು ಕೊಲದುದು ಮೋಹಮಿಲ್ಲದುದಜೀವಂ ಪೊಸಯಿಸುವುದು: **ಆದಿಪು,** ೫. ೭೯); [ಕ್ರಿ] ಪ್ರಯತ್ನಿಸು (ಬಾಲಮಂ ಸಲೆ ಮುರಿದು ಎತ್ತಲಾಟಿಸೆ ಧರಿತ್ರಿಗೆ ಕೀಲಿಸಿದಂತುಟಾಗೆ: **ಪಂಪಭಾ,** ೮. ೩೨)

ಆಟೋಪ – [ನಾ] ಅಬ್ಬರ, ದರ್ಪಪ್ರದರ್ಶನ (ಸಮದ ಗಜಘಟಾಟೋಪಂಬೆರಸು ನೆಲನದಿರೆವಂದು ತಾಗಿದ: **ಪಂಪಭಾ,** ೯. ೫೨)

ಆಡಂಬರ – [ನಾ] ಅಬ್ಬರ (ಎಂಬುದುಂ ಸುಯೋಧನಂ ಕ್ರೋಧಾನಲ ಉದ್ದೀಪಿತಹೃದಯನಾಗಿ ಶೌರ್ಯ ಮದ ಆಡಂಬರದೊಳ್ ಅಂಬರಂಬರಂ ಸಿಡಿಲ್ದು: **ಪಂಪಭಾ,** ೯. ೪೩)

ಆಡಂಬರಿಸು – [ಕ್ರಿ] ಅಬ್ಬರಿಸು (ಹಿಡಿಂಬನಾಡಂಬರಂಗೈದು ತುಂಬುರುಕೊಳ್ಳಿಯಂತೆ ಅಂಬರಂಬರಂ ಸಿಡಿಲ್ದು: **ಪಂಪಭಾ,** ೩. ೧೭ ವ)

ಆಡಿಸು – [ಕ್ರಿ] ನಟಿಸುವಂತೆ ಮಾಡು (ವಿರಾಟನ ಮಗಳು ಉತ್ತರೆ ಮೊದಲಾಗೆ ಪಲವುಂ ಪಾತ್ರಂಗನಾಡಿಸುತ್ತುಂ: **ಪಂಪಭಾ,** ೮. ೫೫ ವ); ನರ್ತಿಸುವಂತೆ ಮಾಡು

(ಮಾಣದೆ ಆಡಿಸಿದಾತಂ ಅಂಗಜನೆಂಬ ನಟ್ಟುವಂ: **ಆದಿಪು,** ೪. ೧೫)

ಆಡು – **[ಕ್ರಿ]** ನರ್ತಿಸು (ಆಡುವ ಮರುಳ್ಗಳಂ ನಡೆ ನೋಡಿದುದಜೆನಿಂತು ಕನಸಿನೊಳ್ ಮಕ್ಕಳ್ಗಂ ಕೂಡೆ ಪೆಸರಿಟ್ಟು ಸಲೆ ಕೊಂಡಾಡಿದರಾರ್: **ಆದಿಪು,** ೧೫. ೩೯); **[ಕ್ರಿ]** ಕುಣಿದಾಡು (ಪ್ರತಿಮೆಗಳಟ್ಟು ಮೊಟಗಿದುದತಿರಭಸದೆ ಧಾತ್ರಿ ದೆಸೆಗಳುದುರಿದುವು ಭೂತಪ್ರತತಿಗಳಾಡಿದುವು: **ಪಂಪಭಾ,** ೧. ೧೩೨); **[ಕ್ರಿ]** ನುಡಿ (ಆ ಪಾಣ್ಬರಂಕುಸಂ ಆ ಪಾಣ್ಬೆಯರ ಗೆಯ್ದ ಗೆಯ್ತಂಗಳುಮಂ ತೋರ್ಪ ಸನ್ನೆಗಳುಮಂ ಆಡುವ ಮಿಟ್ಟುಗೊಡ್ಡಂಗಳುಮಂ ಕಂಡು ಚೋದ್ಯಂಬಟ್ಟು: **ಪಂಪಭಾ,** ೪. ೮೩ ವ); **[ಕ್ರಿ]** ಚಲಿಸು (ನಿಶ್ಚಳಿತಂ ತಾನಿರ್ದು ಮಱಿದು ಕೆಂದಿದ ಮೀನಂ ತಳ್ತಾಡದಿರ್ದ ಮಡುವಂ ಪೋಲ್ತಂ: **ಪಂಪಭಾ,** ೮. ೧೩)

ಆಡುತ್ತಿರಲಾಗ – ಆಡುತ್ತಿರಲಾಗದು! ಎಂದರೆ ಆಡುತ್ತಿರಬಾರದೇ (ನೋಡುವುದಱಿೊಳ್ ಏಂ ಅಟ್ಟೆಯೊಳ್ ಆಡುತ್ತಿರಲಾಗ ತಮ್ಮುತಿರ್ವರುಂ: **ಪಂಪಭಾ,** ೬. ೭೦)

ಆಡುವಮೆ – ಆಡೋಣವೇ? (ನಾವಾಡುವಮೆ ಬನ್ನಿಂ ಎಂಬುದುಂ ಆಡುವ ಬಗೆ ಬಂದು ನೆತ್ತಮಂ ಧರ್ಮಸುತಂ: **ಪಂಪಭಾ,** ೬. ೭೦

ಆಢಕೀ – **[ನಾ]** (ರಾಜಮಾಷ ಆಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧ ಧಾನ್ಯಭೇಧಂಗಳುಂ: ಆ**ದಿಪು,** ೬. ೭೨ ವ)

ಆಣತಿಗೆಯ್ – **[ಕ್ರಿ]** ಧ್ವನಿ ಮಾಡು (ಮುಗುಳ್ವದನಾದ ಸಂಪಗೆ ಮಡಲ್ತ ಅದಿರ್ಮುತ್ತೆ ಮರಲ್ದರಲ್ದ ಮಲ್ಲಿಗೆ ಕಾಕಳಿಯೊಳ್ ಆಣತಿಗೆಯ್ವ ಮದಾಳಿ: **ಪಂಪಭಾ,** ೫. ೩೫)

ಆಣ್ಮ – **[ನಾ]** ಗಂಡ (ಸುರಿಯಲ್ವೇಡಮದರ್ಕೆ ಬಾಷ್ಪಜಳಮಂ ನಿನ್ನ ಆಣ್ಮನಂ ಕೂಡುವೆವು ಎಮ್ಮೊಳಾದ ಕಲಹಕ್ಕೆಂತಾದೊಡಂ ಕೇಳ ನೂರ್ವರೆ ದಲ್ ಕೌರವರ್ ಆಮುಂ ಅಯ್ವರೆ ವಲಂ: **ಪಂಪಭಾ,** ೭. ३೬)

ಆತಂಕ – **[ನಾ]** ಹೆದರಿಕೆ, ತಲ್ಲಣ (ಜನನ ಮೃತಿ ಜರಾ ಆತಂಕ ಶೋಕಾಗ್ನಿಯಿಂದ ಆವನುಂ ಈ ಸಂಸಾರದೊಳ್ ಬೇಯದನೊಳನೆ: **ಆದಿಪು,** ೩. ೬)

ಆತತ – **[ಗು]** ಕೂಡಿದ, ಹೊಂದಿದ (ಧಾತುಮಳದೋಷರಹಿತಂ ವೀತನಖಶ್ಮಶ್ರುಕೇಶ ಲೋಮಂ ಶೋಭಾನ್ವಿತ ಪರಿಪೂರ್ಣಯೌವನಂ ಆತತಶುಭಲಕ್ಷಣಂ: **ಆದಿಪು,** ೬. ३೮); **[ಗು]** ವ್ಯಾಪಿಸಿದ (ಆತತಯಶೋವಿತಾನಂ ಅಜಾತಭಯಂ ಪೂರ್ವಪರಿಮಿತಾಯುಷ್ಯಂ ಸಂಜಾತದಯಂ: **ಆದಿಪು,** ೬. ೬೪); **[ಗು]** ದಟ್ಟವಾದ (ಆತಂ ಪುರೋಹಿತಂ ಬೆರಸು ಆತತತಿಮಿರಪ್ರಭೇದನೋಪಾಯಮಿದೆಂದು ಆ ತಮಮಂ ಕಿಡಿಸಲ್ ಸಂಜಾತನಯಂ ಬಗೆದು: **ಆದಿಪು,** ೧೩. ೪೮)

ಆತಪ – **[ನಾ]** ಕಾಂತಿ (ನೂತನಮಣಿಭೂಷಣ ಬಾಳಾತಪ ಸಿತಮಣಿಮರೀಚಿ ಚಂದ್ರಾತಪ ಪಿಷ್ಟಾತಕಪರಾಗ ಪಿಂಜರಿತಾತಪಮಯವಾದುದು ಆ ಧರಾಧಿಪಭವನಂ: **ಆದಿಪು,** ೭. ೧೧೫); **[ನಾ]** ಬಿಸಿಲು (ಪಾದತಳಂಗಳ್ ಅಡಿಗೆಱಗಿದ ಅರಿನರಪಾಲರ ಮಕುಟಮಾಣಿಕ್ಯಮರೀಚಿಜಾಲ ಬಾಳಾತಪಂಗಳನಲೆದು ಕೆಂಕಮಾದುವು: **ಪಂಪಭಾ,** ೨. ೩೯ ವ)

ಆತನಿಂ ಕಿಱಿಯ – **[ನಾ]** ಅವನಿಗಿಂತ ಚಿಕ್ಕವನು, ಅವನ ತಮ್ಮ (ಆತನಿಂ ಕಿಱಿಯರಂ ಪನ್ನೊರ್ವರಂ ಕೊಂದು ಮತ್ಸ್ಯಜನಂ ಮಾಣದೆ ಕೊಂದನೊಂದೆ ಶರದಿಂ ನಿಶ್ಶಂಕನಂ ಶಂಕನಂ: **ಪಂಪಭಾ,** ೧೧. ೫೯)

ಆತಪ – **[ನಾ]** ಬಿಸಿಲು (ಶಸ್ತ್ರ ಪಾಷಾಣ ಆತಪ ವರ್ಷ ವಿಷ ಅಗ್ನಿ ಕಾಷ್ಠ ಕಂಟಕ ತ್ರಿದೋಷಸಂಭವಾಮಯ ಜರಾದಿ ಬಾಧಾವಿದೂರನುಂ: **ಆದಿಪು,** ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]; **[ನಾ]** ಶಾಖ (ಅತ್ಯುಗ್ರಾಸ್ತ್ರ ಶಸ್ತ್ರಪ್ರಕರಕಿರಣಸಂಘಾತ ತೀವ್ರಾತಪೋದ್ಯೋತದಿಂ ಅರ್ಧಶ್ಯಾಮಳಂ ಮಾಡಿದುದು ದಿನಮುಮಂ ಕೂಡೆ ರಾಜೇಂದ್ರಸೈನ್ಯಂ: **ಆದಿಪು,** ೧೪. ೮೮)

ಆತಪತ್ರ – **[ನಾ]** [ಆತಪ+ತ್ರ] ಕೊಡೆ, ಛತ್ರಿ (ಹಿಮಧವಳ ಆತಪತ್ರಮನೆ ಪೋಲೆ ಮುಖೇಂದುವ ಬೆಳ್ಪು ಪೂರ್ಣಕುಂಭಮನೆ ನಿರಂತರಂ ಗೆಲೆ ಕುಚಂಗಳ ತೋರ್ಪು: **ಪಂಪಭಾ,** ೧. ೧೨೦)

ಆತಪಪರಿಶ್ರಮ – **[ನಾ]** ಬಿಸಿಲ ದಣಿವು (ಕುಳಿರ್ವ ಪುಳಿನಂಗಳೊಳಂ ಕೋಡುವ ಧಾರಾಗೃಹಂಗಳೊಳಂ ವಿಶ್ರಮಿಸಿ ಶಾರದಾತಪಪರಿಶ್ರಂಮಂ ಕಳೆಯೆ: **ಆದಿಪು,** ೧೧. ೭೪ ವ)

ಆತಪಬಾಧೆ – **[ನಾ]** ಬಿಸಿಲಿನ ಬಾಧೆ (ಹಿಮಮೆಂದು ಆತಪಬಾಧೆಯೆಂದು ಮಱೆಯೆಂದು: **ಆದಿಪು,** ೫. ೨೯)

ಆತಪವಾರಣ – **[ನಾ]** ಕೊಡೆ, ಛತ್ರಿ (ದಿವ್ಯಂ ಆತಪವಾರಣಂ ಅಮೃತಾಂಶುಬಿಂಬಧವಳವಿಳಾಸಂ: **ಆದಿಪು,** ೧೪. ೧೭)

ಆತಪವಾರಣತ್ರಿತಯ – **[ನಾ]** ಮುಕ್ಕೊಡೆ (ಆತಪವಾರಣತ್ರಿತಯದಿಂ ತ್ರೈಲೋಕ್ಯಸಾಮ್ರಾಜ್ಯಭೂಷಣ ಮಾಣಿಕ್ಯ ಜಿನೇಂದ್ರಬಿಂಬಮೆ ಜಯಂ ಶುಭಂ ಮಂಗಳಂ: **ಆದಿಪು,** ೧೬. ೪)

ಆತಾಮ್ರದಶನವಸನಂ – ಕೆಂಪಾದ ತುಟಿಯುಳ್ಳವನು (ವಿಕಸಿನ ನಾಸಾಪುಟನತಿವಿಕಂಪಿತ ಆತಾಮ್ರದಶನವಸನಂ ಬದ್ಧಭ್ರುಕುಟಿಪುಟಂ: **ಆದಿಪು,** ೧೪. ೨೪)

ಆತೋದ್ಯ – **[ನಾ]** ಬಾಜಿಸುವ ವಾದ್ಯ (ಆಗಳ್ ದ್ರುಪದಂ ನಿಜಾಂತಃಪುರಪರಿವಾರಂ ಬೆರಸು ಉದಾರಮಹೇಶ್ವರನಲ್ಲಿಗೆ ಓಲಗಕ್ಕೆ ವಂದು ನೃತ್ಯವಾದ್ಯ ಗೀತಾ ಆತೋದ್ಯಂಗಳೊಳ್ ಕಿಱಿದುಂ ಬೇಗಮಿರ್ದು: **ಪಂಪಭಾ,** ೩. ೮೧ ವ)

ಆತೋದ್ಯನಾದ – **[ನಾ]** ಆತೋದ್ಯಘೋಷ (ಮಂಗಳಗೀತ ಆತೋದ್ಯನಾದಂಗಳೊಳೆ ಪುದುವಿನಂ ಕಟ್ಟಿದಂ ಖೇಚರೇಂದ್ರಂ: **ಆದಿಪು,** ೧. ೭೬)

ಆತೋದ್ಯಲಯ – **[ನಾ]** ತಾಳವಾದ್ಯಗಳ ಲಯ (ವಿವಿಧ ಆತೋದ್ಯಲಯಾನುಬಂಧಿವಿಳಸಲ್ಲಾಸ್ಯಂ ತಗುಳ್ದಲ್ಲಿ ನಾಟ್ಯವಿದರ್ ತಾಂಗೆಯುಮೇಱಿ ನೃತ್ಯಗೃಹಮಂ: **ಆದಿಪು,** ೧೧. ೧೯)

ಆತ್ತ – **[ಗು]** ವ್ಯಾಪಿಸಿದ (ದುರಿತಘನತಿಮಿರಮೆತ್ತಂ ತೆರಳ್ದು ಜಿನಸವನಮಂಗಳಕ್ಕಿದಾಗಳ್ ಪರೆವಂತಾದುದು ಕಾಳಾಗರು ಧೂಪಶ್ಯಾಮಧೂಮಮಾತ್ತವ್ಯೋಮಂ: **ಆದಿಪು,** ೭. ೮೦); **[ಗು]** ಸಾಧಿಸಿದ (ಕಟ್ಟಿದಿರೊಳೆ ಬಂದು ನಿಂದುದು ಅಜಿತಂಜಯಮಾತ್ತಮನೋರಥಂ ರಥಂ: **ಆದಿಪು,** ೧೧. ೧೩); **[ಗು]** ಪಡೆದ (ಇತ್ತ ವಂದ ಸಂಧ್ಯಾಸಮಯಾತ್ತ

ರಕ್ತರುಚಿ ಪಿಂಗೆ ಬಟಿಕ್ಕುದಯಾದ್ರಿಯೊಳ್ ಪದಂಗಾಸಿದ ಪೊನ್ನ ಪುಂಜಿಯವೊಲಿರ್ದುದು ಕಣ್ಗೆ ಹಿಮಾಂಶುಮಂಡಲಂ: **ಪಂಪಭಾ,** ೩. ೮೧)

ಆತ್ತನಿರ್ವೇಗೆ – [ನಾ] ವಿರಕ್ತಿಯನ್ನು ಒಪ್ಪಿದವಳು (ಅತ್ತನಿರ್ವೇಗೆಯರ್ ವಿವಾಹವಿಮುಖೆಯರಾಗಿ ಗುರುಪ್ರಸಾದದಿಂ ದೀಕ್ಷೆಯಂ ಕೈಕೊಂಡು: **ಆದಿಪು,** ೧೦. ೬೫ ವ)

ಆತ್ತವ್ಯೋಮ – [ನಾ] ಕವಿದ ಆಕಾಶ (ಪರೆವಂತಾದುದು ಕಾಳಾಗರುಧೂಪಶ್ಯಾಮ ಆತ್ತವ್ಯೋಮಂ: **ಆದಿಪು,** ೭. ೭೯)

ಆತ್ಮ – [ಗು] ತನ್ನ (ಹಿಮಕರಂ ಆತ್ಮಶೀತರುಚಿಯಂ ಏಳಿದಮಾಗೆ .. .. ಬಿಸುಟಲ್ಪೊಡಂ ಬಿಸುಟಲ್ಕೆಮ ಬಿಸುಡೆಂ ಮದೀಯ ಪುರುಷವ್ರತಮೊಂದುಮನೀಗಳಂಬಿಕೇ: **ಪಂಪಭಾ,** ೧. ೮೩)

ಆತ್ಮಕರ – [ನಾ] ತನ್ನ ಕಿರಣ (ತತ್ಕಮಳಕಾನನ ಕಂಟಕಲಗ್ನಪಾದನಾದವೊಲ್ ಉಡುಗುತ್ತುಂ ಆತ್ಮಕರಮಂ ರವಿ ಪೊರ್ದಿದಂ ಅಸ್ತಶೈಲಮಂ: **ಪಂಪಭಾ,** ೪. ೪೭)

ಆತ್ಮಕರ್ಮಾಯತ್ತ – [ನಾ] ತಾನು ಮಾಡಿದ ಕರ್ಮಫಲ (ಎತ್ತ ವನಂ ಎತ್ತ ಮೃಗಯಾವೃತ್ತಕಂ ಈ ತಪಸಿಯೆತ್ತ ಮೃಗಂ ಎಂದು ಎಂತು ಆನೆತ್ತಚ್ಚೆನ್ ಆತ್ಮಕರ್ಮಾಯತ್ತಂ ಪೆಱತಲ್ತಿದು ಎಲ್ಲಂ ಅಘಟಿತಘಟಿತಂ: **ಪಂಪಭಾ,** ೧. ೧೧೩)

ಆತ್ಮಗತಾರ್ಥ – [ನಾ] ನಿನ್ನ ಮನಸ್ಸಿನಲ್ಲಿರುವ ಅಭಿಲಾಷೆ (ಯಮರಾಜನನದ್ಭುತತೇಜನಂ ಸರೋಜಾನನೆ ಜಾನದಿಂ ಬರಿಸೆ ಬಂದು ಯಮಂ ಬೆಸನಾವುದು ಆವುದು ಆತ್ಮಾನುಗತಾರ್ಥಂ ಎಂದೊಡೆ ಎನಗೀವುದು ನಿನ್ನನೆ ಪೋಲ್ವ ಪುತ್ರನಂ: **ಪಂಪಭಾ,** ೧. ೧೧೯)

ಆತ್ಮಚಿತ್ತ – [ನಾ] ತನ್ನ ಮನಸ್ಸು, ಸ್ವಗತ (ದೇವನದೀಸುತಂ ಆತ್ಮಚಿತ್ತದೊಳ್ ಬಗೆದಂ ಇದೇನಖಂಡಿತಮೊ ಶೌರ್ಯಗುಣೋನ್ನತಿ ರಾಜರಾಜನಾ: **ಪಂಪಭಾ,** ೧೩. ೬೫)

ಆತ್ಮಜ – [ನಾ] ಮಗ (ಏಕಪಾದತಪದೊಳ್ ನಿಲೆ ಗೀರ್ವಾಣನಾಥ ಆತ್ಮಜನಲ್ಲಿಗೆ ಗುಹನಂ ಅಹಿಭೂಷಣನ ಅಂಬಂ ಬೇಡಿ ಅಟ್ಟಿದೊಡೆ: **ಪಂಪಭಾ,** ೮. ೧೬ ವ)

ಆತ್ಮಜನೊಸಗೆ – [ನಾ] ಗಂಡುಮಗು ಹುಟ್ಟಿದ ಸಂಭ್ರಮ (ಪುರುದೇವಂಗಾದ ಕೈವಲ್ಯದ ಮಹಿಮೆಯಂ .. .. ಚಕ್ರೋದ್ಭವದ ಪಿರಿದುಮಾಶ್ಚರ್ಯಮಂ .. .. ಮಾದೇವಿಗಾದಾತ್ಮಜನೊಸಗೆಯಂ: **ಆದಿಪು,** ೧೦. ೪೯)

ಆತ್ಮಜನ್ಮ – [ನಾ] ಮಗ (ದೀರ್ಘಬಾಹಾಲಂಬಂ ಭುಜವೀರ್ಯವಿಕ್ರಮಯುತಂ ಗಂಗಾ ಆತ್ಮಜನ್ಮಂ ಜಯಶ್ರೀಲೋಲಂ: **ಪಂಪಭಾ,** ೧. ೬೮)

ಆತ್ಮಜವಿಗತಜೀವಿ – [ನಾ] ಮಗನಿಲ್ಲದವನು (ವಿಚಿತ್ರವೀರ್ಯನುಂ ಅವಾರ್ಯವೀರ್ಯನಾಗಿ ಕೆಲವು ಕಾಲಂ ರಾಜ್ಯಲಕ್ಷ್ಮಿಯಂ ತಾಳ್ದಿ ರಾಜಯಕ್ಷ್ಮತಪ್ತಶರೀರಂ ಆತ್ಮಜವಿಗತಜೀವಿಯಾಗಿ ಪರಲೋಕಪ್ರಾಪ್ತನಾದೊಡೆ: **ಪಂಪಭಾ,** ೧. ೮೦ ವ)

ಆತ್ಮತತ್ತ್ವ – [ನಾ] ಆತ್ಮದ ಸ್ವರೂಪ (ಆತ್ಮತತ್ತ್ವದೊಳ್ ಬಗೆ ಗಡಂ: **ಆದಿಪು,** ೨. ೬೦)

ಆತ್ಮತುರಂಗ – [ನಾ] ತನ್ನ ಕುದುರೆ (ಗಂಗಾವಾರ್ಧಿಯೊಳಾತ್ಮ ತುರಂಗಮುಮಂ ಮಿಸಿಸಿ ನೆಗಟ್ಟಿ ಡಾಳಪ್ರಿಯನೊಳ್ ಸಂಗತಗುಣನಸಿಲತೆಯನಸುಂಗೊಳೆ ಭುಜ ವಿಜಯ ಗರ್ವದಿಂ ಸ್ಥಾಪಿಸಿದಂ: **ಪಂಪಭಾ,** ೧. ೩೮)

ಆತ್ಮಭವ – [ನಾ] ಮಗ (ಆತ್ಮಭವನಾ ನರಾಧಿಪ ಆತ್ಮಜಂ ಆ ನಹುಷ ಪೃಥು ಭಗೀರಥ ನಳ ಮಹಾತ್ಮರನಿಳಿಸಿ ನೆಗಟ್ಟಿ ಮಹಾತ್ಮಂ ನರಸಿಂಹನಜೆವಿನೊಳ್ ಪರಮಾತ್ಮಂ: **ಪಂಪಭಾ,** ೧. ೩೧)

ಆತ್ಮಮಂದಿರ – [ನಾ] ತನ್ನ ಮನೆ, ಶಿಬಿರ (ಪೊಕ್ಕಂ ಆತ್ಮಮಂದಿರಮಂ ಉದಾತ್ತಚಿತ್ತಂ ಅವನೀತಳಪೂಜ್ಯಗುಣಂ ಗುಣಾರ್ಣವಂ: **ಪಂಪಭಾ,** ೧೦. ೧೨೫)

ಆತ್ಮಮುಖಬಿಂಬ – [ನಾ] ತನ್ನ ಮುಖಮಂಡಲ (ಉರ್ಜಿದ ಬಾಳೊಳ್ ಆತ್ಮಮುಖಬಿಂಬಮಂ ಅಟ್ಟೆಯೆ ನೋಡಲುಂ: **ಪಂಪಭಾ,** ೧. ೧೪೨)

ಆತ್ಮಯೋಗಿ – [ನಾ] ತನ್ನಷ್ಟಕ್ಕೆ ಯೋಗಿಯಾದ, ಒಳಗೆ ಯೋಗಿಯಾದ (ಪಿಡಿವೆಂ ಇನ್ನಿದಂ ಎಂದು ಇರದೆ ಆತ್ಮಯೋಗಿ ತನ್ನಸುವಂ ಉದಾತ್ತಯೋಗದೊಳೆ ಬಿಲ್ಲೊವಜಂ ಕಳೆದಂ ರಣಾಗ್ರದೊಳ್: **ಪಂಪಭಾ,** ೧೨. ೨೯)

ಆತ್ಮರಕ್ಷ – [ನಾ] [ಜೈನ] ಒಂದು ದೇವತಾವರ್ಗ (ಸಾಮಾನಿಕ ತ್ರಾಯಸ್ತ್ರಿಂಶತ್ಪಾರಿಷದ ಆತ್ಮರಕ್ಷ ಲೋಕಪಾಳ ಅಭಿಯೋಗ್ಯ ಕಿಲ್ಬಿಷರೊಡನೆ: **ಆದಿಪು,** ೭. ೪೨ ವ) ['ತ್ರಾಯಸ್ತ್ರಿಂಶ' ನರಸಿಂಹಶಾಸ್ತ್ರಿಗಳು ಅನುಮೋದಿಸಿರುವ ಪಾಠ]

ಆತ್ಮವಂಶಶಿಖಾಮಣಿ – [ನಾ] ತನ್ನ ಕುಲಕ್ಕೆ ತಲೆಮಣಿ (ಶ್ರೀಮಚ್ಚಳುಕ್ಯವಂಶ ವ್ಯೋಮಾಮೃತಕಿರಣನೆನಿಪ ಕಾಂತಿಯನೊಳಕೊಂಡೀ ಮಹಿಯೊಳಾತ್ಮ ವಂಶಶಿಖಾಮಣಿ ಜಸಮೆಸೆಯೆ ಯುದ್ಧಮಲ್ಲಂ ನೆಗಟ್ದಂ: **ಪಂಪಭಾ,** ೧. ೧೫)

ಆತ್ಮಸಮಾನ – [ನಾ] ತನಗೆ ಸರಿಸಮನಾದವನು (ಕ್ರಿಯಾಮಂತ್ರಂಗಳಿಂದಂ ಆತ್ಮಸಮಾನ ಶ್ರಾವಕಾಗ್ರಣಿಗಳ್ಗೆ ಕನ್ಯಾ ಭೂಮಿ ಸುವರ್ಣ ಹಸ್ತಿ ಅಶ್ವ ರಥ ರತ್ನಾದಿಗಳಂ ಕುಡುವ ಸಮದತ್ತಿಯುಂ: **ಆದಿಪು,** ೧೫. ೧೩ ವ)

ಆತ್ಮಾಂಗನೆ – [ಆತ್ಮ+ಅಂಗನೆ] ತನ್ನ ಹೆಂಗಸು, ಹೆಂಡತಿ (ಗಂಗೆಗೆ ಕೆಯ್ಯೆಡೆಯೆಂದು ಉತ್ತುಂಗಸ್ತನಿ ಕೊಟ್ಟು ಪೋಗೆ ಸೂತಂ ಕಂಡು ಆತ್ಮಾಂಗನೆಗೆ ರಾಧೆಗಿತ್ತು: **ಪಂಪಭಾ,** ೯. ೬೫)

ಆತ್ಮಾನುಗತಾರ್ಥ – [ನಾ] ಮನಸ್ಸಿನಲ್ಲಿರುವ ಆಸೆ (ಯಮಂ ಬೆಸನಾವುದು ಆವುದು ಆತ್ಮಾನುಗತಾರ್ಥಂ ಎಂದೊಡೆ ಎನಗೀವುದು ನಿನ್ನನೆ ಪೋಲ್ವ ಪುತ್ರನಂ: **ಪಂಪಭಾ,** ೧. ೧೧೯)

ಆತ್ಮಾಲಯ – [ನಾ] [ಆತ್ಮ+ಆಲಯ] ತನ್ನ ಮನೆ (ಮಗುಟಿಲ್ವೇಟ್ಟು ನಾರಾಯಣಂ ಪೋದಂ ಇತ್ತಲ್ ಅಂಗರಾಜನುಂ ಆತ್ಮಾಲಯಕ್ಕೆ ವಂದು ಚಿಂತಾಕ್ರಾಂತನಾಗಿ: **ಪಂಪಭಾ,** ೯. ೬೯ ವ)

ಆತ್ಮಾಸ್ತಿತ್ವ – [ನಾ] ಆತ್ಮನ ಇರುವಿಕೆ (ಆತ್ಮಾಸ್ತಿತ್ವ ಅಭಿನಿವೇಶದಿಂ ತನು ಮನ ಧನ ನಿಧನಂ ಮಡಿ ಸೇದೆಗಿಡಲ್ವೇಡ: **ಆದಿಪು,** ೨. ೯ ವ)

ಆತ್ಮೀಯ – [ಗು] ಪ್ರಿಯವಾದ (ಅವರ ವಚನದಿಂ ಆತ್ಮೀಯ ಪಿತೃಮರಣಮುಮಂ ಆತನ ನರಕಗತಿ ಗಮನಮುಂ ಅಱೆದು: **ಆದಿಪು,** ೨. ೧೪ ವ); **[ಗು]** ತನ್ನ (ಕಲ್ಹಾರಸಾರಾಮೃತ ಶಶಿ ವಿಶದಾತ್ಮೀಯವಂಶಕ್ಕೆ ಚೂಡಾಮಣಿಯಂ: **ಪಂಪಭಾ,** ೭. ೯೫); **[ಗು]** ತಾನಾಗಿ (ಅದಲ್ಲದೆಯುಂ ಸಿದ್ಧಿತ್ರಯಂಗಳ್ ನಿನಗೆ ಆತ್ಮೀಯಾಯತ್ತಸಿದ್ಧಿಯಾಗಿ ನಿಂದುದಱಿಂ ನೀನೆ ಬೀರವಟ್ಟಮಂ ತಾಳ್ದಿ ನಿಲ್ವುದು: **ಪಂಪಭಾ,** ೧೩. ೩೧ ವ)

ಆತ್ಮೋಚಿತ – [ಗು] [ಆತ್ಮ+ಉಚಿತ] ತನಗೆ ತಕ್ಕುನಾದ (ಮಣಿಮಕುಟಬದ್ಧರ್ ಆತ್ಮೋಚಿತಪ್ರದೇಶಾಸನಂಗಳೊಳ್ ಇರ್ದು ಓಲಗಿಸುತ್ತಿರ್ದನ್ನೆಗಂ: **ಆದಿಪು,** ೯. ೮ ವ)

ಆದಂ – [ಅ] ಸಂಪೂರ್ಣವಾಗಿ (ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ ಕಿಡದ ಗುಣಂ ಪೊರ್ದೆ ಬಂದೆಂಟುಮಾದಂ ತಣಿವಂ ಕೈಕೊಂಡಮೂರ್ತರ್ ಚರಮತನುಸಮಾಕಾರರ್: **ಆದಿಪು,** ೧. ೨); **[ಅ]** ವಿಶೇಷವಾಗಿ (ನಿನಗೊರ್ವಂಗಲ್ತವಸ್ಥಾಂತರಂ ಅಮರಜನಕ್ಕೆಲ್ಲಮೀ ಪಾಂಗೆ ಕಾರುಣ್ಯನಿನಾದಂ ನಿನ್ನಂ ಆದಂ ನಗಿಸುಗುಂ: **ಆದಿಪು,** ೩. ೬); **[ಅ]** ನಿಶ್ಚಯವಾಗಿ (ಕೇಳ್ವಂಗೆ ಬಿತ್ತರಿಪಂಗೆ ಆದಂ ಅಳುಂಬಮಲ್ತೆ ಭಗವಜ್ಜನ್ಮಾಭಿಷೇಕೋತ್ಸವಂ: **ಆದಿಪು,** ೭. ೧೦೧); **[ಅ]** ಅತಿಶಯವಾಗಿ (ಕರಂ ಮೇಳಿಸಿದಪ್ಪುದೆನ್ನೆರ್ದೆಯಂ ಎಂದು ಬೊದಿಲ್ಲನೆ ಪಾಯ್ದು ನೀರೊಳಾ ಬಾಳಂ ಆದಂ ಆದರದೆ ಕಂಡೊಸೆದು ನಿಧಿಗಂಡನಂತೆವೋಲ್: **ಪಂಪಭಾ,** ೧. ೯೬)

ಆದಮೆ – [ಅ] [ಆದಂ+ಎ] ವಿಶೇಷವಾಗಿಯೇ (ದುರ್ಧರ ಜಳಯುದ್ಧಮುಂ ಆದಮೆ ಪರಿಭವಮಂ ಚಕ್ರವರ್ತಿಗಿತ್ತತ್ತಾಗಳ್: **ಆದಿಪು,** ೧೪. ೧೦೮)

ಆದರ – [ನಾ] ಪ್ರೀತಿ (ಕರಂ ಮೇಳಿಸಿದಪ್ಪುದೆನ್ನೆರ್ದೆಯಂ ಎಂದು ಬೊದಿಲ್ಲನೆ ಪಾಯ್ದು ನೀರೊಳಾ ಬಾಳನನಾದಮಾದರದೆ ಕಂಡೊಸೆದು ನಿಧಿಗಂಡನಂತೆವೋಲ್: **ಪಂಪಭಾ,** ೧. ೯೬); **[ನಾ]** ಗೌರವ (ಆದಲೆ ಗುಂಡಿತ್ತೆಂದು ಈದಲೆಯೊಳೆ ನಿಂದು ಸತಿಗೆ ಹರಿಗಂ ತೋಱುತ್ತ ಆದರದೆ ಜಾನುದಘ್ನಂ ಉರೋದಘ್ನಂ ಕಂಠದಘ್ನಂ ಎಂಬ ಅಳವಿಗಳಂ: **ಪಂಪಭಾ**. ೫. ೬೨)

ಆದರಂಗೊಳ್ – [ಕ್ರಿ] ಆಸಕ್ತಿ ಹೊಂದು (ನಾಲ್ವರುಮಂ ಆದರಂಗೊಂಡು ಆ ನಾಲ್ಕುಂ ದೆಸಗೆ ಬೆಸಸಿಂ ಬೆಳ್ಕುಱುವಿನಂ: **ಪಂಪಭಾ,** ೬. ೨೮)

ಆದರ್ಶ – [ನಾ] ಕನ್ನಡಿ (ಆದರ್ಶಾದಿ ಅಷ್ಟಮಂಗಳ ಧ್ವಜ ಮಾಳಾ ವಿತಾನ ವಿಚಿತ್ರಾಂಬರನುಂ; **ಆದಿಪು,** ೧೦. ೬೭ ವ)

ಆದಲೆ – [ನಾ] ಅತ್ತ ಕಡೆ (ಕೆಲದೊಳ್ ರಾಜಕುಮಾರವೃಂದ ಪ್ರಕರಮಿದಿರೊಳ್ ವಾರಾಂಗನಾವರ್ಗಂ ಆದಲೆ ವಂದಿಪ್ರಕರಂ: **ಆದಿಪು,** ೧೧. ೨೭)

ಆದವರ್ – [ನಾ] ಈಗಿರುವವರು (ಏಕಜೆಯ ಪೋದವರಾದವರೊಳ್ ಸರಸ್ವತೀಮತಿ ಕವಿತಾಗುಣಕ್ಕೆ ಪದೆದೆಯ್ದೆವರಲ್ತೆ: **ಪಂಪಭಾ,** ೧೪. ೬೧)

ಆದಾನ – [ನಾ] ಐವತ್ಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು (ನಾಮಕರ್ಮಬಹಿರ್ಯಾನನಿಷದ್ಯಾನ್ನಪ್ರಾಶನವ್ಯುಷ್ಟಿ ... ತ್ಯಾಗಾಗ್ರನಿರ್ವೃತಿ ಯೆಂಬಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಆದಿ – [ನಾ] ಹಿಂದಿನ (ಇವನುಣ್ಬುದು ಖಾಂಡವಂ ಈತಂ ಅಗ್ನಿ ಮುಂ ಪುಸಿದು ಇವನಿಂತೆ ಪಾಯಿಸಿದಂ ಇಂದ್ರನೊಳ್ ಆದಿ ನರೇಂದ್ರೆಲ್ಲರಂ: **ಪಂಪಭಾ,** ೫. ೭೨); **[ನಾ]** ಮೊದಲು, ಹುಟ್ಟು (ಒಯ್ಯನೆ ಕೇಳ ಕರ್ಣ ನಿನ್ನಾದಿಯೊಳ್ ಅಬ್ಬೆ ಕೊಂತಿ ನಿನಗೆ ಅಮ್ಮಂ ಅಹರ್ಪತಿ ಪಾಂಡುನಂದನರ್ ಸೋದರರ್ ಎಯ್ದೆ ಮಯ್ದುದನನೆಂಅಂ: **ಪಂಪಭಾ,** ೯. ೬೪)

ಆದಿಂ ಬಟೆಯಂ – [ಅ] ಆದ ಮೇಲೆ (ಅಂತು ಪುಟ್ಟಿದ ವಿಭಂಗಜ್ಞಾನದಿಂದಪಗತ ನರಕಲೋಕ ವೃತ್ತಾಂತರಾದಿಂಬಟೆಯಂ: **ಆದಿಪು,** ೫. ೮೫ ವ)

ಆದಿಕ್ಷತ್ರಿಯ – [ನಾ] ಪುರಾತನರಾದ ಕ್ಷತ್ರಿಯರು (ಆದಿಕ್ಷತ್ರಿಯರೊಳಂ ಇಲ್ಲೆನಿಸಿದುದು ಈ ತ್ರಿಜಗದೊಳೆಗಿದೆಸಕಮರಿಕೇಸರಿಯಾ: **ಪಂಪಭಾ,** ೧. ೨೧)

ಆದಿಗರ್ಭೇಶ್ವರ – [ನಾ] ಹುಟ್ಟಿನಿಂದ ರಾಜವಂಶಕ್ಕೆ ಸೇರಿದ; ಆಗರ್ಭ ಶ್ರೀಮಂತ (ತಾವು ಆದಿಗರ್ಭೇಶ್ವರರ್ ಅಪ್ಪುದಱಿಂ ತಳರ್ದೆಡೆಯೆಡೆಯ ಮರಂಗಳ ತೊಱೆಗಳ ಬಾಡಂಗಳ ಪೇರ್ಗಳಂ ಬೆಸಗೊಳುತ್ತುಂ .. .. ಬಂದು: **ಪಂಪಭಾ,** ೨. ೯೭ ವ)

ಆದಿಜಿನ – [ನಾ] [ಜೈನ] ಮೊದಲ ತೀರ್ಥಂಕರ, ವೃಷಭನಾಥ (ಅನತಿಶಯ ಕೇವಲಜ್ಞಾನಂ ಅನಿರೀಕ್ಷಿತ ವಿಶ್ವನಾಥಂ ಆದಿಜಿನಂ: **ಆದಿಪು,** ೧೦. ೧೫)

ಆದಿಜಿನೇಂದ್ರ – [ನಾ] [ಜೈನ] ಆದಿಜಿನ (ದೇವಾಸುರಮಕುಟಮಣಿದ್ಯುತಿ ಭಾಸುರ ಚರಣಾರವಿಂದನಾದಿಜಿನೇಂದ್ರಂ: **ಆದಿಪು,** ೧೦. ೩೮)

ಆದಿತೀರ್ಥಕರ್ತಾರ – [ನಾ] ಆದಿತೀರ್ಥಂಕರ (ಇತ್ತಲ್ ಆದಿತೀರ್ಥಕರ್ತಾರಂ ಅಮರಗಿರಿಯಂತೆ ಅಚಳನುಂ ಪಾರಾವಾರದಂತೆ ಅಕಲುಷಿತನುಂ ಅನಿಲನಂತೆ ನಿಸ್ಸಂಗನುಂ ಅಂಬರದಂತೆ ನಿರ್ಲೇಪನುಂ ಆಗಿ ನಿಲೆ: **ಆದಿಪು,** ೯. ೯೩ ವ)

ಆದಿತೀರ್ಥಪ್ರವರ್ತಕ – [ನಾ] [ಜೈನ] ಆದಿಜಿನ (ಈ ಭವಕ್ಕೆಂಟನೆಯ ಭವದೊಳ್ ಭರತದೊಳ್ ನೀನಾದಿತೀರ್ಥಪ್ರವರ್ತಕನಾದಂದೀ ಶ್ರೀಮತಿ ದಾನತೀರ್ಥಪ್ರವರ್ತಕಂ ಶ್ರೇಯಾಂಸನಕ್ಕುಂ: **ಆದಿಪು,** ೫. ೧೩ ವ)

ಆದಿತೀರ್ಥೇಶ್ವರ – [ನಾ] [ಜೈನ] ಆದಿಜಿನ (ವಾಗ್ವಧೂಮುದ್ರೆಯೊಳ್ ಮುದ್ರಿಸಿ ನಿಂದತ್ತಾದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ: **ಆದಿಪು,** ೧೬. ೪೩)

ಆದಿತ್ಯ – [ನಾ] [ಜೈನ] ಎಂಟು ಮಂದಿ ಲೋಕಾಂತಿಕ ದೇವರಲ್ಲಿ ಒಬ್ಬ (ಸಾರಸ್ವತ ಆದಿತ್ಯ ವಹ್ನಿ ಅರುಣ ಗರ್ತತೋಯ ತುಷಿತಾವ್ಯಾಬಾಧಾರಿಷ್ಟರೆಂಬ ಎಣ್ಬರುಂ ಲೋಕಾಂತಿಕದೇವರ್ ಬಂದು: **ಆದಿಪು,** ೯. ೩೦ ವ); **[ನಾ]** ಸೂರ್ಯ (ಆದಿತ್ಯಂ ಮಸುಳ್ವನ್ನೆಗಂ

ಧ್ವಜಘಟಾಟೋಪಂಗಳಿಂದಂ ಲಯಾಂಭೋದಂಗಳ್ ಕವಿವಂತೆವೋಲ್ ಕವಿವುದುಂ: **ಪಂಪಭಾ,** ೧೦. ೯೩)

ಆದಿತ್ಯತೇಜ – [ನಾ] ಸೂರ್ಯನಂತಹ ತೇಜಸ್ಸು[ಪ್ರತಾಪ] ಉಳ್ಳವನು (ಮಿಂದು ಕನಕಪಾತ್ರದೊಳ್ ತೆಕ್ಕನೆ ತೀವಿದ ಕನಕಕಮಳಂಗಳಿಂದ ಆದಿತ್ಯತೇಜಂ ಆದಿತ್ಯಂಗೆ ಅರ್ಘ್ಯಮೆತ್ತಿ: **ಪಂಪಭಾ,** ೯. ೭೨ ವ)

ಆದಿದೇವ – [ನಾ] ಮೊಟ್ಟ ಮೊದಲ ದೇವ, ಜಿನ (ಇದಿರ್ಗೊಳ್ವಂತಾಯ್ತು .. .. ಬಂದೊಡೆ ಆದಿದೇವಂ: **ಆದಿಪು,** ೭. ೬೦)

ಆದಿನಾಥ – [ನಾ] ಆದಿಜಿನ (ಆದಿನಾಥನ ಮುನಿರೂಪಮಂ ಕಾಣಲೊಡಂ ಜಾತಿಸ್ಮರನೆನಾಗಿ ಮಾರ್ಗಸ್ಥಿತಿಯನಱಿದು ನಿಱಿಸಿದೆಂ: **ಆದಿಪು,** ೧೦. ೮ ವ)

ಆದಿಪುರಾಣ – [ನಾ] ಜೈನ] ಮೊದಲ ತೀರ್ಥಂಕರನನ್ನು ಕುರಿತ ಪುರಾಣ (ನೆಗೞ್ದ ಆದಿಪುರಾಣದೊಳ್ ಅಱಿವುದು ಕಾವ್ಯಧರ್ಮಮಂ ಧರ್ಮಮುಮಂ: **ಆದಿಪು,** ೧. ೩೮)

ಆದಿಪುರುಷ – [ನಾ] [ಉದಾತ್ತ] ನಾರಾಯಣ, ಅರಿಕೇಸರಿ, ಅರ್ಜುನ (ಬೇಡಂ ಈ ಬಿನದಂ ತಪ್ಪಲೆ ಕಲ್ಪಿತಂ ಪರಿಯದಾತಂಗೆಂದು ನಿನ್ನೀ ಮನಂ ನಿನಗಾತಂ ದೊರೆ ನೆಟ್ಟನಾದಿಪುರುಷಂಗೇಕಕ್ಕ ನೀನ್ನಾಣ್ಚುವೈ: **ಪಂಪಭಾ,** ೪. ೬೯)

ಆದಿಪುರುಷರ್ – [ನಾ] ಬ್ರಹ್ಮವಿಷ್ಣುಮಹೇಶ್ವರರೆಂಬ ಮೂವರು ಆದಿಪುರುಷರು (ಆ ವಿವಿಧ ಲಕ್ಷಣಂಗಳೊಳಾವರಿಸಿದ ಕುಲದ ಬಲದ ಚಲದ ಅಳವಿಗಳೊಳ್ ಮೂವರುಮನಾದಿಪುರುಷರ್ ಮೂವರುಮೆನಲಲ್ಲದತ್ತ ಮತ್ತೇನೆಂಬರ್: **ಪಂಪಭಾ,** ೧. ೮೭)

ಆದಿಪೂರುಷ – [ನಾ] ಆದಿಜಿನ (ಎಮ್ಮ ಬಾೞ್ವ ತೆಱನಾವುದು ದೇವ ಶರಣ್ಗೆ ವಂದೆವು ಆದರದೆ ಎಮಗಪ್ಪುದಂ ಬೆಸಸಿ ಕಾವುದು ಲೋಕಮನಾದಿಪೂರುಷಾ: **ಆದಿಪು,** ೮. ೬೨)

ಆದಿಬ್ರಹ್ಮ – [ನಾ] ಆದಿಜಿನ (ಶ್ರೀದೇವೇಂದ್ರಮುನೀಂದ್ರವಂದಿತ ಗುಣವ್ರಾತಂ ಜಗತ್ಸ್ವಾಮಿ ಸಂದ ಆದಿಬ್ರಹ್ಮಂ ಅಗಾಧಬೋಧನಿಳಯಂ: **ಆದಿಪು,** ೧. ೧); **[ನಾ]** ಕೃತಯುಗವನ್ನು ಆರಂಭಿಸಿದ್ದರಿಂದಾಗಿ ಆದಿಜಿನನಿಗೆ ಈ ಹೆಸರು (ಕೃತಯುಗಾರಂಭಕ್ಕಾದಿಯಾದುದಱಿಂದಂ ಆದಿಬ್ರಹ್ಮನುಂ ಎಂಬ ಅಪೂರ್ವಾಭಿಧಾನಮಂ: **ಆದಿಪು,** ೮. ೭೫ ವ)

ಆದಿಭಟ್ಟಾರಕ – [ನಾ] ಆದಿತೀರ್ಥಂಕರ (ಮಹಾಂಭೋರಾಶಿ ಗಂಭೀರನಪ್ಪ ಆದಿಭಟ್ಟಾರಕನ ಚಿತ್ತವೃತ್ತಿಯಂ ಆ ಮಹಾತ್ಮನಾವ ಮಾಟಕ್ಕೆಯೊಳಱಿದಂ: **ಆದಿಪು,** ೧೦. ೭ ವ)

ಆದಿಭೂಪರ್ – [ನಾ] ಪುರಾತನ ರಾಜವಂಶದವರು (ಕರಿಪತಿಯನೇಱಿ ಕೋಡಗಮಿರೆ ಕಂಡುದಱಿಂದಂ ಆದಿಭೂಪರ್ ಕಿಡೆ ಬೇಡರುಂ ಅಕುಲೀನರುಂ ಅತಿದುಶ್ಚರಿತ್ರರುಂ ಭೂಪರಪ್ಪರ್: **ಆದಿಪು,** ೧೫. ೩೭)

ಆದಿಭೂಭುಜ – [ನಾ] ಮೊದಲ ಚಕ್ರವರ್ತಿ, ಭರತ (ರಾಜರಾಜನಧಿರಾಜಂ ಚಕ್ರನಿಧೀಶಂ ಆದಿಭೂಭುಜನೆನೆ ನೆಗೞ್ದಂ ಭರತಚಕ್ರಿ ವಿಶ್ವಂಭರೆಯೊಳ್: **ಆದಿಪು,** ೧೫. ೩)

ಆದೃಪ್ತ – [ಗು] ಪುಷ್ಟವಾದ (ಸಾಂದ್ರಚಂದನದ್ರವಾನುಲಿಪ್ತ ಆದೃಪ್ತ ಕುಚಕಳಶಂಗಳಂ ತರಳತರತಾರಹಾರದಿಂದಳಂಕರಿಸಿ: **ಆದಿಪು,** ४. ४೧ ವ)

ಆದೇಶ – [ನಾ] ವಿಧಿ, ನಿಯಮ (ನಲಿನಲಿದಾಡುವ ಜಂತ್ರದ ಮೀನಂ ಎಚ್ಚನುಮಾಕೆಗೆ ಗಂಡನಕ್ಕುಂ ಎಂದು ಆದೇಶಂ ಅಂತಪ್ಪ ಸಾಹಸಪುರುಷಂ ವಿಕ್ರಮಾರ್ಜುನನಲ್ಲದೆ ಪೆಱರಿಲ್ಲ: **ಪಂಪಭಾ,** ೩. ೩೨ ವ): **[ನಾ]** ಭವಿಷ್ಯವಾಣಿ (ಆತನುಂ ಭೀಮನ ಕೆಯ್ಯೊಳಲ್ಲದೆ ಸಾಯಂ ಎಂಬುದು ಆದೇಶಂ: **ಪಂಪಭಾ,** ೬. ೨೬ ವ); **[ನಾ]** ಆಜ್ಞೆ, ನಿರ್ದೇಶನ (ಬಿಸುಟಾ ಧರಾಧಿಪತಿಯಂ ನಾರಾಯಣಾದೇಶಂ ಒಡ್ಡಿಸೆ ಪಾಂಡುಪ್ರಿಯಪುತ್ರರೊಳ್ ನೆರೆಯಲೆಂದಿಂತೀಗಳಾಂ ಪೋದಪೆಂ: **ಪಂಪಭಾ,** ೧೩. ೧೦೦)

ಆದೊಡಂ – [ಅ] ಆದರೂ (ಕತೆ ಪಿರಿದಾದೊಡಂ ಕತೆ ಮೆಯ್ಗೆಡಲೀಯದೆ .. .. ಮುಂ ಪೇೞ್ದ ಕವೀಶ್ವರರಿಲ್ಲ: **ಪಂಪಭಾ,** ೧. ೧೧)

ಆದೊಡೆ – [ಅ] ಹಾಗಾದರೆ ಎಂಬ ಅರ್ಥದ ಒಂದು ಅವ್ಯಯ (ಪವನಜನಿಂದೆ ಕೌರವಕುಲಂ ಪಡಲಿಟ್ಟವೊಲಕ್ಕುಂ ಆದೊಡೆ ಇನ್ನವರಾರುಮಿಲ್ಲಣಮೆ ಸಂತತಿ ಕೆಟ್ಟಪುದು: **ಪಂಪಭಾ,** ೧೦. ೬೩)

ಆದೊರೆತು – [ನಾ] ಅದಕ್ಕೆ ಸಮನಾದ, ಅಂತಹ (ವಿದ್ಯಾಪ್ರಭಾವಂ ಆದೊರೆತೆ ವಲಂ: **ಪಂಪಭಾ,** ೨. ೫೬)

ಆದೊರೆಯ – [ನಾ] ಅಂತಹ (ಆ ದೊರೆಯ ವಿಭವದೊಳ್ ಪರಮಾದರದಿಂ ದಿವಿಜಸಮಿತಿಯಿಂ ತಮ್ಮ ಮಗಂಗಾದ ಮಹಿಮೆಗೆ : **ಆದಿಪು,** ೭. ೧೧೧)

ಆದ್ಯಮಹೀಪತಿ – [ನಾ] ಮೊದಲ ಚಕ್ರವರ್ತಿ, ಭರತ (ವಿಮಿಶ್ರಮುಕ್ತಾಕ್ಷತದಿಂದ ಆದ್ಯಮಹೀಪತಿಗೆತ್ತಿದ ಪಾದ್ಯಮಂ ಅನುಕರಿಪುದಾಯ್ತು ವಾರ್ಧಿವಿಳಾಸಂ: **ಆದಿಪು.** ೧೨. ೭೭)

ಆಧಾನ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ (ಆಧಾನ .. .. ಆಗ್ರನಿರ್ವೃತಿಯೆಂಬಯ್ವತ್ತೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಆಧೇಯ – [ನಾ] ಆಧಾರವಾಗಿರುವ, ಆಶ್ರಯ (ಎಂದು ಕೊಂತಿಯಂ ವಿಸರ್ಜಿಸಿ ಚಾಗದ ಕುಲದ ನನ್ನಿಯಂ ಆವರ್ಜಿಸಿ ರಾಧೇಯಂ ಒಳ್ಪಿಂಗೆ ಆಧೇಯಮಾಗಿರ್ದಂ: **ಪಂಪಭಾ,** ೯. ೮೭ ವ)

ಆಧೇಯವಚನ – [ನಾ] ಒಪ್ಪುವಂತೆ ಮಾತನಾಡುವವನು (ವಕ್ರೋಕ್ತಿನಿಪುಣನುಂ ಆಧೇಯವಚನನುಂ ಅನುದ್ಧತ ವೇಷನುಂ ಪರಿಚಿತಾಶೇಷ ದೇಶಭಾಷನುಂ: **ಆದಿಪು,** ೧४. ४३ ವ)

ಆಧೋರಣ – [ನಾ] ಆನೆಯ ಸವಾರ, ಮಾವುತ (ಮದೀಯ ಜೀವಿತೇಶಂ ಆಧೋರಣಂ ಕೆಡೆವಂತೆ ಧರಾತಳಕ್ಕೆ ಕೆಡೆವುದುಂ: **ಆದಿಪು,** ೩. ४೦ ವ)

ಆನ್ – ನಾನು ಎಂಬ ಸರ್ವನಾಮ (ಪಂಚಧನುಶ್ಶತಂ ಪವಣ್ಣೆಲೆ ನರರ್ಗೆ ಎಂದೊಡೆ ಇನ್ನಿಮಿರೆ ಬಣ್ಣಿಸಲ್ ಆನ್ ಅಱಿಯೆಂ ವಿದೇಹಮಂ: **ಆದಿಪು,** ೧. ೫೨); **[ಕ್ರಿ]** ಧರಿಸು (ಸುರಸಂದೋಹದ ತೀವಿತಂದ ಘಟಸಂಘಾತಗಳಂ ಆನಲ್ಕೆ ಬಾರದೆ ಮಾಣೆ: **ಆದಿಪು,** ೭. ೮೬); **[ಕ್ರಿ]** ಎದುರಿಸು (ಎನ್ನ

ಚತುರಂಗಬಲಮನಿದಂ ನರರಾಜರ್ ಆರ್ ಆಂಪರ್ ಎಂಬ ನಿಮ್ಮರಸನ ಗರ್ವೋನ್ನತಿಯುಡುಕಮಂ: **ಆದಿಪು,** ೧೪. ೧೦೩); **[ಕ್ರಿ]** ತಾಳು (ಪೊಂಗೊಡನಂ ತಮಾಳಪಲ್ಲವದೊಳೆ ಮುಚ್ಚಿದಂದದೊಳೆ ಚೂಚುಕಮಾಂತುದು ಕರ್ಪನಾಕೆಯಾ: **ಪಂಪಭಾ,** ೧. ೧೨೫); **[ಕ್ರಿ]** ಸ್ವೀಕರಿಸು (ಆನಿರ್ದ ಸಭೆಯೊಳ್ ಅರ್ಘ್ಯಮಂ ಆನಲ್ಕೆ ಆಟಿಸಿದ ನಿನ್ನ ಬಿಸುನೆತ್ತರಂ ಇಂತು ಈ ನೆರವಿ ನೋಡೆ ಕುಡಿಯದೊಡೇನೋ ಶಿಶುಪಾಲನೆಂಬ ಪೆಸರೆಸೆದಪುದೇ: **ಪಂಪಭಾ,** ೬. ೫೫); **[ಕ್ರಿ]** ಒಡ್ಡು (ಪಲರುಂ ಬಣ್ಣಿಸೆ ಕಿವಿಯನಾಂತು ಕೇಳುತ್ತುಂ: **ಪಂಪಭಾ,** ೧೧. ೨)

ಆನಂದನಾಟಕ – [ನಾ] ಹರ್ಷದಿಂದ ಮಾಡುವ ನೃತ್ಯ (ಆನಂದನಾಟಕಂ ಪರಮಾನಂದಮನಂದು ಮಾಡೆ: **ಆದಿಪು,** ೧೬. ೫೪)

ಆನಂದನೃತ್ಯ – [ನಾ] ಜಿನನ ಹುಟ್ಟಿನಿಂದ ಆನಂದತುಂದಿಲನಾಗುವ ಇಂದ್ರ ಮಾಡುವ ನೃತ್ಯ (ಅಖಿಳಾಶಾಂತರಂ ದೇವತೂರ್ಯಾವಳೀಗೀತಧ್ವಾನದಿಂದಂ ಪುದುವಿನಂ ಎಸೆದತ್ತು ಇಂದ್ರನ ಆನಂದನೃತ್ಯಂ: **ಆದಿಪು,** ೭. ೧೨೦)

ಆನಂದಬಾಷ್ಪೋದ – [ನಾ] ಆನಂದಾಶ್ರು, ಸಂತಸದ ಕಣ್ಣೀರು (ಮುದಿತ ಸುರಾನಂದಬಾಷ್ಪೋದ ಬಿಂದೂತ್ಕರಮೆಂಬಂತಾಗೆ ತಂದತ್ತರಲ ಮಟಿಗಳಂ ಪುಷ್ಪಮೇಘಪ್ರತಾನಂ: **ಆದಿಪು,** ೧೪. ೧೧೮)

ಆನಕ – [ನಾ] ಭೇರಿ (ಕದನ ಆನಕರಾವಂ ಅಗುರ್ವಿನಂ ಉರ್ವು ಪರ್ವುತ್ತಿರೆ ಚಾರುವೀರಭಟಕೋಟಿಗೆ ರಾಗರಸಂ ಪೊದಳ್ದು ತುಳ್ಕುತ್ತಿರೆ: **ಪಂಪಭಾ,** ೮. ೯೨)

ಆನತ – [ನಾ] [ಜೈನ] ಹದಿನಾರು ಕಲ್ಪಗಳಲ್ಲಿ ಒಂದು, ಹದಿಮೂರನೆಯ ಸ್ವರ್ಗ (ಆನತಪ್ರಭೃತಿಷು ಸ್ವರ್ಗೇಷು ತೇಷ್ವಚ್ಯುತಪ್ರಾಂತೇಷು ತ್ರಿದಶಾರ್ಚಿತಾ: **ಆದಿಪು,** ೧೬. ೬೫)

ಆನತಮೂರ್ಧಂ – [ನಾ] ತಲೆಬಾಗಿದವನು (ಮಂತ್ರಿಮುಖ್ಯಂ ಅತಿಭಕ್ತಿಭರಾನತಮೂರ್ಧಂ ಅಟ್ತೆಯಿಂ ಬಿನ್ನವಿಕುಂ: **ಆದಿಪು,** ೨. ೩೪)

ಆನತರಿಪು – [ನಾ] ಬಾಗಿದ ಶತ್ರುಗಳುಳ್ಳವನು, ಶತ್ರುಗಳನ್ನು ಬಾಗಿಸಿದವನು (ತಾನುಂ ಸರೋಜಷಂಡಮಂ ಆನತರಿಪು ಪೊಕ್ಕು ದಿವ್ಯವಚನಮಂ ಅದಂ ಅಂತೇನುಂ ಬಗೆಯದೆ: **ಪಂಪಭಾ,** ೮. ೪೦)

ಆನದ್ಧ – [ನಾ] ಕಟ್ಟಲ್ಪಟ್ಟದ್ದು (ನಾಲ್ಕುಂ ಮಾನಸ್ತಂಭಂಗಳ್ ರತ್ನ ಆನದ್ಧಂಗಳ್ ನಿರಂತರಂ ಸೊಗಯಿಸುಗುಂ: **ಆದಿಪು,** ೧೦. ೨೪)

ಆನನ – [ನಾ] ಬಾಯಿ (ನಿನ್ನುಮನಾನನಸೀಧುವಿಂದೆ ಪೂಟ್ದುದೇ ಕೃತಮಾವುದಿಂ ಮಱೆವುದೆಮ್ಮ ಮದೋತ್ಕಟ ಚೇಷ್ಟಿತಂಗಳಂ: **ಆದಿಪು,** ೧೧. ೧೩೧) [**'ಆನನಸೀಧು'** – **'ಆಸವಸೀಧು'**ವಿಗೆ ಬದಲಾಗಿ ಎಲ್. ಬಸವರಾಜು ಒಪ್ಪಿರುವ ರೂಪ]

ಆನನಪದ್ಮ – [ನಾ] ಮೊಗದಾವರೆ, ತಾವರೆಯಂತಹ ಮುಖ (ಅನಿತೊಂದುರ್ಕಿನೊಳ್ ಉರ್ಕಿ ಕೌರವಖಳರ್ ಪಾಂಚಾಳರಾಜಾತ್ಮಜಾ ಆನನಪದ್ಮ ಗ್ಲಪನೈಕಕಾರಣಪರರ್ ತಾಮಾಗೆಯುಂ: **ಪಂಪಭಾ,** ೭. ೯)

ಆನನೇಂದು – [ನಾ] ಮುಖಚಂದ್ರ (ತ್ರಿವಳಿಗಳುಂ ವಿರೋಧಿನೃಪರುತ್ಸವಮುಂ ಕಿಡೆವಂದುವು ಆನನೇಂದುವ ಕಡುವೆಳ್ಪು ಕೂಸಿನ ನೆಗಟ್ತೆಯ ಬೆಳ್ಪುವೊಲಾಯ್ತು: **ಪಂಪಭಾ,** ೧. ೧೨೫)

ಆನಮ್ರಾಟನೀನಾದ – [ನಾ] ಬಗ್ಗಿಸದ ಬಿಲ್ಲಿನ ತುದಿಭಾಗದಿಂದ ಕೊಮ್ಮಿದ ಶಬ್ದ (ಬಾಹುಬಲೀಶನೇಜಿಸಿದಂ ಆನಮ್ರಾಟನೀನಾದಸಂಜನಿತ ಅರಾತಿಕುಲಾಂಗನಾಜನ ಮನಸ್ಸಂತಾಪಮಂ ಚಾಪಮಂ: **ಆದಿಪು,** ೧೪. ೯೯)

ಆನಲಾರದೆ – [ಕ್ರಿವಿ] ತಾಳಲಾರದೆ (ಸುದತಿಯ ಮೃದು ಪದವಿನ್ಯಾಸಮುಮಂ ಶೇಷಂ ಆನಲಾರದೆ ಸುಯ್ದಂ ಬೇಸಱಿಂ ಎಂದೊಡೆ ಗರ್ಭದ ಕೂಸಿನ ಬಳೆದಳವಿಯಳನಳೆವರುಂ ಒಳರೇ: **ಪಂಪಭಾ,** ೧. ೧೨೬)

ಆನೀಕ – [ನಾ] ಸಾಲು, ಸಮೂಹ (ಅಳಕಾನೀಕಂಗಳಂ ಸೊರ್ಕಿದಾಱಿಡಿಗೆತ್ತು ಆಱಿಡಿ ಸುತ್ತುತುಂ ಬರೆ ಬನಂ ಬಂದಂತೆ ಬಂದಾಕೆಗಳ್: **ಪಂಪಭಾ,** ೭. ೮೬); ಸೈನ್ಯ (ಬಳಸಂಪನ್ನರಂ ಆಸೆಗೆಯ್ದೆ ಚತುರಂಗಾನೀಕಮಂ ಕೂಡಿ ಕೊಳ್ಗುಳಮಂ ಗಂಡುಮಂ ಅಪ್ಪುಕೆಯ್ಗೆ: **ಪಂಪಭಾ,** ೯. ೯೦)

ಆನುಷಂಗಿಕಫಲ – [ನಾ] ಮುಖ್ಯವಾದುದಲ್ಲದೆ ಒದಗುವ ಅಪ್ರಧಾನ ಪ್ರಯೋಜನ (ಆನುಷಂಗಿಕಫಲಂ ಭೂಪೇಂದ್ರ ದೇವೇಂದ್ರ ರಾಜ್ಯವಿಳಾಸಂ ಪೆಱತಲ್ತು ನಂಬು ವಿದ್ಯಾಧರಾಧೀಶ್ವರಾ: **ಆದಿಪು,** ೨. ೭)

ಆನೆ – [ಕ್ರಿವಿ] [ಆನ್+ಎ] ತಾಳಲು, ತಡೆದುಕೊಳ್ಳಲು (ಅರಿಕೇಸರಿಯ ಒಂದು ಗಾಡಿಯ ಉದ್ದಾನಿ ತಗುಳ್ದು ಕಣ್ಣೊಳೆ ತೊಟಲ್ದು ಎರ್ದೆಯೊಳ್ ತಡಮಾಡೆ ಬೇಟದುದ್ದಾನಿಯನಾನೆ ಮನ್ಮಥಮಹೀಭುಜನೋವದೆ: **ಪಂಪಭಾ,** ೪. ೫೮)

ಆನೆಗಂಬ – [ನಾ] ಆನೆಯನ್ನು ಕಟ್ಟುವ ಕಂಬ (ಬೀಡಿಂಗೆ ಬೀಡುವಿಡಲ್ ನೆಲನುಂ .. .. ಆನೆಗಂಬಕ್ಕೆ ಪೆರ್ಮರಂಗಳುಮಂ ಆ ಪಡೆಗೆ ನೆಱೆಯವೆನಿಸಿ: **ಪಂಪಭಾ,** ೯. ೧೦೪ ವ)

ಆನೆಗೊಲೆಗೊಲ್ – [ಕ್ರಿ] [ಆನೆ+ಕೊಲೆ+ಕೊಲ್] ಆನೆ ಕೊಂದಂತೆ ಕೊಲ್ಲು (ಮನ್ಮಥಮಹೀಭುಜನೋವದೆ ತೋಱಿಕೊಟ್ಟುದು ಒಂದಾನೆಯೆ ತನ್ನನಾನೆಗೊಲೆಗೊಂದಪುದೆಂದು ಲತಾಂಗಿ ಬೆರ್ಚಿದಳ್: **ಪಂಪಭಾ,** ೪. ೫೮)

ಆನೆತ್ತೆಚ್ಚೆನ್ – ನಾನು ಎಲ್ಲಿ ಬಾಣಪ್ರಯೋಗ ಮಾಡಿದೆ (ಎತ್ತ ವನಂ ಎತ್ತ ಮೃಗಯಾವೃತ್ತಕಂ ಈ ತಪಸಿಯೆತ್ತ ಮೃಗಂ ಎಂದು ಎಂತು ಆನೆತ್ತಚ್ಚೆನ್ ಆತ್ಮಕರ್ಮಾಯತ್ತಂ ಪೆಱತಲ್ಲಿದು ಎಲ್ಲಂ ಅಘಟಿತಘಟಿತಂ: **ಪಂಪಭಾ,** ೧. ೧೧೩)

ಆನೆಯ ಕೋಡು ಬಾಗದು – ಆನೆಯ ದಂತ ಬಗ್ಗುವುದಿಲ್ಲ (ಆನೆಯ ಕೋಡು ಬಾಗದು ಎಂಬಂತೆ ದುರ್ಯೋಧನನ ಉದ್ವೃತ್ತತೆಯುಮಂ ಭೀಮಸೇನನ ಮಹಾಪ್ರತಿಜ್ಞೆಯುಮಂ ಆರ್ಗಂ ಬಾರಿಸಲ್ಬಾರದು: **ಪಂಪಭಾ,** ೭. ೧೬ ವ)

ಆನೋಕಹ – [ನಾ] ಮರ (ರಕ್ತಾಶೋಕಪಲ್ಲವಾಧರೆಯರ್ ಅತಿರಕ್ತಪಲ್ಲವಾಶೋಕ ಆನೋಕಹಂಗಳುಮಂ: **ಆದಿಪು,** ೧೧. ೯೫ ವ)

ಆಪಣ – [ನಾ] ಅಂಗಡಿ (ಧನದ ಭವನಮೆನಿಪ ಸಿರಿಯ ಬಚ್ಚರ ಆಪಣಂಗಳಿಂ ಪೊದಳ್ದ ಕಾವಣಂಗಳಿಂ: **ಪಂಪಭಾ,** ೧. ೫೮)

ಆಪತ್ಪಯೋಧಿ – [ನಾ] ಆಪತ್ತುಗಳ ಸಮುದ್ರ (ಆಪತ್ಪಯೋಧಿಯೊಳಗೆ ಅತ್ಯಾಪತ್ತಿಂದಟ್ಟಿಮೆಟ್ಟಿ ನಮೆವೆಮಗೆ ಶರಣ್ ಪಾಪಹರ ನೀಮೆ: **ಪಂಪಭಾ,** ೭. ೬೧)

ಆಪತ್ಪ್ರತಿಕಾರ – [ನಾ] [ಆಪತ್+ಪ್ರತಿಕಾರ] ಕಷ್ಟನಿವಾರಣೆ (ನೀಮೆ ಶರಣ್ ಪಾಪಹರ ನೀಮೆ ಬಗೆದು ಎಮಗೆ ಆಪತ್‌ಪ್ರತಿಕಾರಮಾವುದೀಗಳೆ ಬೆಸಸಿಂ: **ಪಂಪಭಾ,** ೭. ೬೧)

ಆಪಾತಮಾತ್ರರಮಣೀಯತರ – [ನಾ] ಮೇಲುನೋಟಕ್ಕೆ ಮಾತ್ರ ಸುಂದರವಾದ (ಸ್ತ್ರೀಸಂಸರ್ಗಂ ಸುಖಮೆಂಬೀ ಸಂಸಾರಿಗಳೆ ಜಡರಪ್ಪೊಡೆ ತನುಗಾಯಾಸಕರಂ ಶುಕ್ಲಾರ್ತವವಾಸಿತಂ ಆಪಾತಮಾತ್ರರಮಣೀಯತರಂ: **ಆದಿಪು,** ೬. ೪೪)

ಆಪಾದಮಸ್ತಕ – [ಅ] ಕಾಲಿನಿಂದ ಹಿಡಿದು ತಲೆಯವರೆಗೆ (ಸುಭದ್ರೆಯ ರೂಪಂ ಆಪಾದಮಸ್ತಕಂಬರಂ ಎಯ್ದೆ ನೋಡಿ ತನ್ನೊಳಾದ ಬೇಟದೊಳ್ ಬಡವಟ್ಟು: **ಪಂಪಭಾ,** ೫. ೧೫ ವ)

ಆಪಾಳಿತ – [ಗು] ವ್ಯಾಪ್ತವಾದ (ಶ್ರೀಪತಿಗೆ ಯುದ್ಧಮಲ್ಲ ಮಹೀಪತಿಗೆ ನೆಗಟ್ತೆ ಪುಟ್ಟೆ ಪುಟ್ಟಿದಂ ಅಖಿಳಕ್ಷ್ಮಾಪಾಲಮೌಳಿಮಣಿಕಿರಣ ಆಪಾಳಿತ ನಖಮಯೂಖರಂಜಿತಚರಣಂ: **ಪಂಪಭಾ,** ೧. ೧೮)

ಆಪೂಪ – [ನಾ] ತಿನಿಸು (ಶಾರ್ದೂಲ ವರಾಹ ಗೋಲಾಂಗೂಲ ನಕುಳಂಗಳಂ ನೋಡುತ್ತುಂ ಅವರ್ಕೆ ಭಕ್ಷ್ಯಾಪೂಪಂಗಳಂ ತರಿಸಿ ನೀಡುತ್ತುಂ ಇರ್ದು: **ಆದಿಪು,** ೫. ೨ ವ)

ಆಪೂರ್ಣ – [ಗು] ಪೂರ್ಣಗೊಳಿಸಿಕೊಂಡ (ಶ್ರೀಪತಿ ಪುರುಪರಮೇಶ್ವರಂ ಆಪೂರ್ಣಮನೋರಥಂ ನಮನ್ನೃಪಮಕುಟಾಟೋಪಂ: **ಆದಿಪು,** ೯. ೧)

ಆಪೊತ್ತುಂ – [ಅ] ಯಾವ ಹೊತ್ತೂ, ಯಾವಾಗಲೂ (ಆಪೊತ್ತುಂ ಮಣಿದೀಪಕಳಾಪೋದ್ಯಜ್ಜ್ಯೋತಿಗಳ್ ದಿಶಾಮಂಡಲಮಂ ವ್ಯಾಪಿಸುತಿರೆ: **ಆದಿಪು,** ೫. ೪೦)

ಆಪೋಶನಂಗೊಳ್ – [ಕ್ರಿ] ಆಪೋಶನ ತೆಗೆದುಕೊ, ಸಂಪೂರ್ಣವಾಗಿ ಕಬಳಿಸು (ಪೀರ್ದುಕೊಂಡಂ ಮನಂಗೊಳೆ ಸಪ್ತಾರ್ಚಿ ಪೊದಳ್ದು ನೀಳ್ದು ಒಸಗೆಯಿಂದ ಆಪೋಶನಂಗೊಳ್ವವೋಲ್: **ಪಂಪಭಾ,** ೫. ೮೬)

ಆಪ್ತವಂತ – [ನಾ] ಆತ್ಮೀಯತೆಯುಳ್ಳವನು, ನಂಬಿಕಸ್ಥ (ರಸದಾನಾದಿಗಳೊಳ್ ಛಿದ್ರಿಸುವಮಪ್ಪೊಡೆ ಅವರ್ ಆಪ್ತವಂತರುಂ ಬುದ್ಧಿವಂತರುಂ ಆಗಿ ನೆಗಟ್ಟರ್: **ಪಂಪಭಾ,** ೬. ೬೭ ವ)

ಆಪ್ಯಾಯನ – [ನಾ] ಸುಖ, ತೃಪ್ತಿ (ಪುತ್ರಸ್ಪರ್ಶನ ಆಪ್ಯಾಯನ ಕೋಟಿಯಾಗೆ: **ಪಂಪಭಾ,** ೧೩. ೮ ವ)

ಆಭ – [ನಾ] ಕಾಂತಿ (ಅದೊಂದಿನಿಸು ಬೇಗದಿಂ ನವಜಪಾ ಪ್ರಸೂನಾಭಮಾಯ್ತು ಅದೊಂದಿನಿಸು ಬೇಗದಿಂ ಕನಕಕುಂಭದಂತಾಯ್ತು: **ಆದಿಪು,** ೧೨. ೭)

ಆಭಿಚಾರ – [ನಾ] ಶೂನ್ಯ ಮಾಟ (ಅತ್ತ ದುರ್ಯೋಧನನ ಬೆಸದೊಳ್ ಆತನ ಪುರೋಹಿತಂ ಕನಕಸ್ವಾಮಿಯೆಂಬಂ ಪಾಂಡವರ್ಗೆ ಆಭಿಚಾರಮಾಗೆ ಬೇಳ್ವ ಬೇಳ್ವೆಯ ಕೊಂಡು: **ಪಂಪಭಾ,** ೮. ४೨ ವ)

ಆಭಿಚಾರಿಕ – [ನಾ] ಮಾಟ, ಮೋಡಿ (ಆಭಿಚಾರಿಕಜರಾತಂಕಾದಿ ಭೇದಂಗಳಪ್ಪುಪಸರ್ಗಂಗಳ: **ಆದಿಪು,** ೧೬. ೯)

ಆಭಿಯೋಗ್ಯದೇವತೆ – [ನಾ] ಸೌಧರ್ಮಾದಿ ಕಲ್ಪಗಳಲ್ಲಿ ಹುಟ್ಟುವ ದೇವತೆಗಳಿಗೆ ವಾಹನಾದಿ ಕರ್ಮಗಳಲ್ಲಿ ತೊಡಗಿರುವ ದೇವತೆಗಳ ಒಂದು ಪಂಗಡ (ಸೋಮ ಯಮ ವರುಣ ಕುಬೇರ ಪ್ರಮುಖ ಲೋಕಪಾಲಾಭಿಯೋಗ್ಯ ದಿಗ್ಗಜೇಂದ್ರ ದೇವವಿಹಾರ ಪ್ರಾಸಾದಾಭಿರಾಮಮುಂ: **ಆದಿಪು,** ೧. ४೯ ವ)

ಆಭೀಳ – [ಗು] ಭಯಂಕರವಾದ (ಅಂತು ಅಜಾತಶತ್ರು ಶತ್ರುಪಕ್ಷಕ್ಷಯಕರ ಕರವಾಳದಂಷ್ಟ್ರಾಭೀಳ ಭುಜಂಗಮೂರ್ತಿ .. .. ಅಪ್ಪ ಅರಿಕೇಸರಿಯ ತೋಳ್ವಲದೊಳ್: **ಪಂಪಭಾ,** ೪. ೧೦ ವ)

ಆಭೀಳತರ – [ಗು] ಭೀಕರ (ಕಾಳಾಂತ ಪವನಹತಿ ಕಲ್ಲೋಳವಿಳ ಜಳಧಿನಿನದಮೋ ನಿರ್ಘಾತಾಭೀಳತರರಭಸಮೋ ಲಯಕಾಳಾಂಬುದಘೋಷಮೋ ನೆಲಂ ಮೊಟಗಿದುದೋ: **ಆದಿಪು,** ೧೨. ೯೧)

ಆಭೋಗ – [ನಾ] ಹರಹು (ಕ್ಷಣಿಕಂ ನಿಟ್ಟೆಯೆ ತನುಭೃದ್ಗಣ ಯೌವನ ರೂಪ ವಿಭವ ಭೋಗ ಆಭೋಗಂ: **ಆದಿಪು,** ४. ೭೫); [ನಾ] ಸಂಗೀತದ ಒಂದು ಕ್ರಮ (ಗಮಕಂ ಪ್ರಯೋಗಂ ಆಭೋಗಮಳಂಕಾರಂ ಪೊಗರ್ ನಯಂ ಮಿಱುಗು: **ಆದಿಪು** ೭. ೧೬)

ಆಮಂತ್ರಿತ – [ಗು] ಆಹ್ವಾನಿಸಲ್ಪಟ್ಟ (ಆಮಂತ್ರಿತ ಡಾಕಿನೀ ದಶನಘಟ್ಟನಜಾತ ವಿಭೀಷಣಂ ಮದೇಭ ಅಂತ್ರನಿಯಂತ್ರಿತ ಅಶ್ವಶವಮಾಂಸರಸಾಸವಮತ್ತಯೋಗಿನೀತಂತ್ರಂ: **ಪಂಪಭಾ,** ೧೨. ೧೨೦)

ಆಮಯ – [ನಾ] ರೋಗ, ಕಾಯಿಲೆ (ಅಳಿಪಾಯಿಲಂ ಮಱುಕಂ ಆಮಯಂ ಅಪ್ಪ ಅಪಮೃತ್ಯುವೆಂಬಿವಲ್ಲಿಗೆ ಪೊಱಗೆಂದೊಡೆ ಸುಖಮನೇವೊಗಟ್ಟಪ್ಪುದೊ ಭೋಗಭೂಮಿಯಾ: **ಆದಿಪು,** ೫. ೩೦)

ಆಮಲಕ – [ನಾ] ನೆಲ್ಲಿಗಿಡ, ಕಾಯಿ (ಪರಮಾತ್ಮನಂತೆ ಲೋಕಾಲೋಕದ ವಸ್ತುಗಳುಮಂ ಕರತಳ ಆಮಲಕಮಾಗಿ ಅಱಿವುದಱಿಂ ನೃಪಪರಮಾತ್ಮನುಂ: **ಪಂಪಭಾ,** ೧४. ೩೭ ವ)

ಆಮಿಷ – [ನಾ] ಆಕರ್ಷಣೆ (ಮಾತ್ಸರ್ಯ ಮಹಾವಿಷಮಮತಿಯಿಂದೆ ದೋಷಾಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂಗಳ್: **ಆದಿಪು,** ೧. ೨೨)

ಆಮೋದ – [ನಾ] ಸುವಾಸನೆ (ಶ್ರೀಮದಮರಾಂಗನಾ ತಾಮರಸಾಮೋದ ಮತ್ತಮಧುಕರಂ ಕಲ್ಪಾಮರಂ: **ಆದಿಪು,**

೩. ೧); ಮಕರಂದ (ಪೀರ್ದಂ ನೃಪಂ ತುಂಬಿ ಕೇಸರಮಂ ಮುಟ್ಟದೆ ಬಂದು ಪದ್ಮಿನಿಯ ಪದ್ಮಾಮೋದಮಂ ಪೀರ್ವವೊಲ್: **ಆದಿಪು**, ೭. ೩೪)

ಆಮ್ನಾಯ – [ನಾ] ವಂಶಪರಂಪರೆ (ಮೇಲಪ್ಪ ಮಣಿಮಾಳಿಗಿತ್ತಂ ಅವು ತಮ್ಮಾಮ್ನಾಯದಿಂ ಬಂದೊಡೆ ಈತನುಂ ಈಗಳ್ ನೆಱೆ ತೊಟ್ಟು ಬಂದಂ ಇದಂ: **ಆದಿಪು**, ೨. ೧೮)

ಆಮ್ರ – [ನಾ] ಮಾವು (ಪಕ್ವಫಲನಮ್ರ ಆಮ್ರಾದಿಭೂಜಂಗಳ್ ಈ ಯುಗದೊಳ್ ಕಲ್ಪಕುಜಂಗಳಂತೆ: **ಆದಿಪು**, ೬. ೭೭)

ಆಮ್ರಚೂಷಿತಕ – [ನಾ] ಔಪರಿಷ್ಟಕವೆಂಬ ರತಿಭೇದಗಳಲ್ಲಿ ಮಾವಿನ ಹಣ್ಣನ್ನು ಚೀಪಿ ಚಪ್ಪರಿಸುವುದನ್ನು ಹೋಲುವ ಒಂದು ಭೇದ (ಚೂಷಿತಕಮಂ ಔಪರಿಷ್ಟಕರತಂಗಳ ಭೇದದೊಳೊಂದಿದ ಆಮ್ರಚೂಷಿತಕಮನಾಮ್ರಪಕ್ವಫಳದೊಳ್ ಶುಕಕಾಮಿನಿ ಚೆಲ್ವುದೋಱಿದಳ್: **ಆದಿಪು**, ೧೧. ೯೯)

ಆಮ್ರರಸ – [ನಾ] ಮಾವಿನ ಹಣ್ಣಿನ ರಸ (ಘೃತ ಕ್ಷೀರ ದಧಿ ನಾಳೀಕೇರತೋಯ ಆಮ್ರರಸ ಇಕ್ಷುರಸ ಗಂಧೋದಕಾದಿಗಳಿಂ ಮಾಡುವ ಸವನಮುಂ: **ಆದಿಪು**, ೧೫. ೧೩ ವ)

ಆಮ್ರವನೋದ್ಯಾನ – [ನಾ] ಮಾವಿನ ತೋಪು (ವಜ್ರಸೇನ ಮಹಾರಾಜಂ ಪರಿನಿಷ್ಕ್ರಮಣಕಲ್ಯಾಣಪರಿಣತಮನಂ ಆಮ್ರವನೋದ್ಯಾನದೊಳ್: **ಆದಿಪು**, ೬. ೨೩ ವ)

ಆಯ್ – [ಕ್ರಿ] [ಹೂ] ಬಿಡಿಸಿಕೊ (ಪೂತ ಸುರಯಿಯ ಮುಗುಳಂ ಪಸವಟ್ಟಂತೊರ್ವಳ್ತನಗೆ ಸರಿಗೆಗಂ ಲಂಬಣಕ್ಕಂ ಅಟ್ಟೆಯೊಳಾಯ್ದಳ್: **ಆದಿಪು**, ೧೧. ೧೦೩) ['ಅಟ್ಟೆಯೆ ಕೊಯ್ದಳ್' ಬದಿಗೆ ಎಲ್. ಬಸವರಾಜು ಅವರು 'ಅಟ್ಟೆಯೊಳಾಯ್ದಳ್' ಎಂಬ ರೂಪ ಸ್ವೀಕರಿಸುತ್ತಾರೆ]; [ಕ್ರಿ] ಆರಿಸಿಕೊ (ಇವಂ ಆಯ್ವುದೊ ತಪ್ಪದೆ ಪೇೞೆಂ: **ಪಂಪಭಾ**, ೯. ೬೯)

ಆಯ – [ನಾ] ಸಾಮರ್ಥ್ಯ (ಕುಲದ ಚಲದ ಆಯದ ಅೞಿವಿನ ಕಲಿತನದ ಉನ್ನತಿಯನಲಸದೀ ಸುರಸಭೆಯೊಳ್ ಪಲವಾಡುವೆನ್ನ ನಾಲಗೆ ಬಲಸ್ಥನೊರ್ವಂಗೆ ಜೀಯ ದೇವೆಂದಪುದೇ: **ಆದಿಪು**, ೧೨. ೧೦೧); [ನಾ] ದ್ರವ್ಯಲಾಭ (ಆತನೊಳಱಿವೊಡವುಟ್ಟಿದುದು ಅಱಿವಿಂಗೆ ಪೆಂಪು ಪೆಂಪಿನೊಳಾಯಂ ಕಟ್ಟಾಯದೊಳ್ ಅಳವಳವಿನೊಳ್ ಒಟ್ಟಜೆ ಪುಟ್ಟಿದುದು: **ಪಂಪಭಾ**, ೧. ೨೪): [ನಾ] ವಿಶಾಲ (ಛಾಯಾಲಕ್ಷ್ಯಮನೊಡ್ಡಿಯುಂ ಆಯದ ನೀರೊಳಗೆ ತನ್ನನಡಸಿದ ನೆಗಬಂ ಬಾಯಟಿವಿನಮಿಸಿಯುಮರೆಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗೞ್ದಂ: **ಪಂಪಭಾ**, ೨. ೬೦); [ನಾ] ಔಚಿತ್ಯ (ಶ್ರೀಗೆ ಫಳಂ ಚಾಗಂ ವಾಕ್‌ಶ್ರೀಗೆ ಫಳಂ ಸರ್ವಶಾಸ್ತ್ರಪರಿಣತಿ ವೀರಶ್ರೀಗೆ ಫಳಂ ಆಯಂ ಎಂದಿಂತಾಗಳುಂ ಅಱಿದೆಸೆಗಿದಂ ಪರಾಕ್ರಮಧವಳಂ: **ಪಂಪಭಾ**, ೬. ೧); [ನಾ] [ದರ್ಶನ] ಲಾಭ (ಮದಾಯಂ ಅಮೋಘಂ ಸೂಟ್ಟಿಡೆಯಲ್ಕೆನಗಕ್ಕುಂ ಇನ್ನೆಡೆಯೊಳ್ ಎಂದೆಂ ಅದೆಂದುದು ಅದೇಂ ತಪ್ಪಾದುದೆ: **ಪಂಪಭಾ**, ೧೨. ೫೬); [ನಾ] ಹೆಚ್ಚುಗಾರಿಕೆ (ಈಗಳ್ ಬಳ್ವಳನೆ ನುಡಿದಪುದೆ ನುಡಿವಂತೆ ಅಳವುಂ ಪೆರ್ಮಾತುಂ ಆಯಮುಂ ನಿನಗಾಯ್ತೇ: **ಪಂಪಭಾ**, ೧೨. ೧೭೭)

ಆಯತ – [ಗು] ಹಬ್ಬಿರುವ (ಏಬು ಜನಪದಂಗಳಿಂದಂ ಪೂರ್ವಾಪರ ಆಯತಂಗಳುಂ ಹೇಮ ಅರ್ಜುನ ತಪನೀಯ ವೈಡೂರ್ಯ ವಜ್ರ ರಜತ ಹೇಮಮಯಂಗಳುಂ; **ಆದಿಪು**, ೧. ೪೮ ವ); [ಗು] ಅಗಲ (ಸೇನಾನೀ ನಿಯಮದೊಳ್ ಪ್ರಭೂತಾಯತ ಸಮಾನಮಾಗೆ ನಡೆದು ಕೆಲವು ಪಯಣಂಗಳಿಂ: **ಆದಿಪು**, ೧೩. ೫೦ ವ); [ಗು] ಅಗಲವಾದ (ಸಾಲಪ್ರಾಂಶು ವಿಶಾಲಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕವಕ್ತ್ರಂ ಆಯತ ಸಮಗ್ರ ಉರಸ್ಥಳಂ: **ಪಂಪಭಾ**, ೧. ೬೮); [ಗು] ನೀಳವಾದ (ಬಗೆದ ಮುಳಿಸುಂ ಏವಮುಂ ಎರ್ದೆಯೊಳ್ ಬರೆದಿರೆ ತೋಱಿದನಾಯತ ಕರಪರಿಘಂ ಕರ್ಣಂ ಆತ್ಮಶರಪರಿಣತಿಯಂ: **ಪಂಪಭಾ**, ೨. ೭೯)

ಆಯತನ – [ನಾ] ದೇವಾಲಯ (ಅಲ್ಲಿಗಲ್ಲಿಗೆ ಒಡೆದ ಕೆಱೆಗಂ ಅಟಿದ ಆಯತನಕ್ಕಂ ಧನಮನಿತ್ತು ಜೀರ್ಣೋದ್ಧಾರಂಗಳಂ ಮಾಡಿಸುತ್ತುಂ: **ಪಂಪಭಾ**, ೨. ೯೭ ವ)

ಆಯತಿ – [ನಾ] ವಿಸ್ತಾರ, ಸಾಮರ್ಥ್ಯ (ಎನಗುಳ್ಳ ಆಯತಿ ಮೇರುಗುಂಟೆ: **ಆದಿಪು**: ೯. ೧೧೪); ಮಹಿಮೆ (ಧರ್ಮಚಕ್ರಂ ಆಯತಿಯಂ ಕೈಕೊಳೆ: **ಆದಿಪು**, ೧೦. ೬೭); [ನಾ] ಜೋಪಾನ (ತೋಯಜಷಂಡಮನಿದಂ ಆಂ ಆಯತಿಯಿಂ ಕಾವೆಂ ಎನ್ನ ಮಾತಿಂಗೆ ಎಲೆ ಕೌಂತೇಯ ಮಱುಮಾತನಿತ್ತು ಮದೀಯ ಸರೋವರದ ತೋಯಮಂ ಕುಡಿ ಕೊಂಡುಯ್: **ಪಂಪಭಾ**, ೮. ೩೯)

ಆಯತ್ತ – [ನಾ] ಒಳಪಡಿಸು (ವಸಿಷ್ಠಪರ್ವತಂಗಳೆಂಬ ತೀರ್ಥಂಗಳೊಳ್ ಓಲಾಡುತ್ತುಂ ಆ ದಿಶಾಭಾಗಮಂ ಆತ್ಮೀಯ ಶಾಸನ ಆಯತ್ತಂ ಮಾಡುತ್ತುಂ: **ಪಂಪಭಾ**, ೪. ೧೮ ವ); [ಗು] ಸ್ವಾಧೀನ (ಅದಲ್ಲದೆಯುಂ ಸಿದ್ಧಿತ್ರಯಂಗಳ್ ನಿನಗೆ ಆತ್ಮೀಯಾಯತ್ತಸಿದ್ಧಿಯಾಗಿ ನಿಂದುದಱಿಂ ನೀನೆ ಬೀರವಟ್ಟಮಂ ತಾಳ್ದಿ ನಿಲ್ವುದು: **ಪಂಪಭಾ**, ೧೩. ೩೧ ವ)

ಆಯಾಮ – [ನಾ] ಉದ್ದ, ನೀಳತೆ (ದ್ವಾದಶಯೋಜನ ಆಯಾಮದೊಳಂ ನವಯೋಜನವಿಸ್ತಾರದೊಳಂ: **ಆದಿಪು**, ೧೧. ೩ ವ)

ಆಯಿಲ – [ನಾ] ಕೊಳ್ಳೆ (ಕಳ್ಳರ ಆಯಿಲಮಱಿಯೇಱು ಮಾರಿ ಪಸವು ಇಟಿಟ್ಟಿ ಬಱಂ ಪೆಱವುಂ ಭಯಂಗಳ್: **ಆದಿಪು**, ೧. ೫೨)

ಆಯುಃ – [ನಾ] ಆಯುಸ್ಸು, ಬದುಕಿನ ದೀರ್ಘತೆ (ತನು ರೂಪ ವಿಭವ ಯೌವನ ಧನ ಸೌಭಾಗ್ಯ ಆಯುರಾದಿಗಳ್ಗೆಣೆ ಕುಡುಮಿಂಚಿನ ಪೊಳೆಪು ಮುಗಿಲ ನೆೞಲ್ ಇಂದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ: **ಆದಿಪು**, ೯. ೯. ೪೬)

ಆಯುಃಪಾರ – [ನಾ] ಆಯುಸ್ಸಿನ ಕೊನೆ (ಎಮ್ಮಯ್ಯನಿನಾದುದೊಂದು ಪಗೆಯಿಂ ಸೀಳ್ದು ಉಗ್ರಪಾಂಚಾಳ ರಾಜ ಆಯುಃಪಾರಮಂ ಅನ್ಯಭೂಪಬಲಮಂ ಪರ್ದಿಂಗೆ ಬಿರ್ದಿಕ್ಕುವೆಂ: **ಪಂಪಭಾ**, ೧೨. ೩೮)

ಆಯುಧಾಗಾರ – [ನಾ] [ಜೈನ] ಚಕ್ರವರ್ತಿ ತನ್ನ ಶಸ್ತ್ರಗಳನ್ನಿಡುವ ಜಾಗ (ಆ ಮುನಿಯ ಮನೋಗಾರದೊಳ್

ಧ್ಯಾನಚಕ್ರಂ ಪುಟ್ಟಿತ್ತು ಆ ರಾಜ್ಯಾಶ್ರಮಮುನಿಯ ಆಯುಧಾಗಾರದೊಳ್ ಚಕ್ರರತ್ನಂ ಪುಟ್ಟಿತ್ತು: **ಆದಿಪು,** ೬. ೨೪ ವ)

ಆಯುಧಾಧ್ಯಕ್ಷ – [ನಾ] ಶಸ್ತ್ರಾಗಾರದ ಮುಖ್ಯಾಧಿಕಾರಿ (ಭರತರಾಜಂ ಅಯೋಧ್ಯೆಯೊಳ್ ಆಸ್ಥಾನಮಂಟಪದೊಳಿರೆ ತತ್ಪುರೋಹಿತ ಆಯುಧಾಧ್ಯಕ್ಷ ಅಂತಃಪುರವೃದ್ಧಕಂಚುಕಿಗಳ್ ಬಂದು: **ಆದಿಪು,** ೧೦. ೪೮ ವ)

ಆಯುರಬ್ಧಿ – [ನಾ] ಒಂದು ಸಾಗರದಷ್ಟು ಆಯುಸ್ಸು (ತನ್ನಯ ದೇವಿಯರ್ ಪಲರ್ ಕಟಿವಿನಂ ಆಯುರಬ್ಧಿಯೊಳ್ ಅನುಕ್ರಮದಿಂ ಪಳಿತೋಪಮಂಗಳ್ ಅಯ್ದುಟಿವಿನೆಗಂ: **ಆದಿಪು,** ೨. ೭೨)

ಅಯೋಗ – [ನಾ] ಬರುವ (ಸಮವಿಳಾಸದಗ್ಗಳಿಕೆಯೊಳಾರ್ ಸಮನಿವರ್ಗೆನೆ ಸಮರಸದೊಳ್ ಸಮಸಂದತ್ತವರ್ಗೆ ಸಮಸಮಾಯೋಗಸುಖಂ: **ಆದಿಪು,** ೮. ೨೪); [ನಾ] ಅಲಂಕಾರ (ನಡೆಯೆ ತುರಗಂ ಪೊನ್ನ ಆಯೋಗಂಗಳಿಂ ಅಮರ್ದು ಅತ್ತೆಯಿಂ ಪಡೆಯೆ ನೆಳಲಂ ಚಂಚತ್ ಪಿಂಛಾತಪತ್ರಮೆ ಕೂಡೆ ತಮ್ಮೊಡನೆ ಬರೆ: **ಪಂಪಭಾ,** ೯. ೧೦೨)

ಆಯೋಗಂಗೊಳ್ – [ಕ್ರಿ] ಸೇರ್ಪಡೆಯಾಗು (ಮುತ್ತಿನ ಮಾಣಿಕದ ಮಂಡನ ಆಯೋಗಂಗಳೊಳ್ ಆಯೋಗಂಗೊಂಡು ಬಂದ ಮದಾಂಧ ಗಂಧಸಿಂಧುರಮಪ್ಪ ಪಟ್ಟವರ್ಧನನ ಬೆಂಗೆ ವಂದು: **ಪಂಪಭಾ,** ೧೦. ೨೬ ವ)

ಆಯೋಧನ – [ನಾ] ಯುದ್ಧ (ಪರಿಪಠನ ಮೃದುಕೂಜಿತ ರಸಿತದರಹಸಿತ ಕ್ರೇಂಕಾರಾರೋಹಣ ಆಯೋಧನಾದಿ ನಾನಾ ವಿನೋದಂಗಳೊಳಂ: **ಆದಿಪು,** ೮. ೩ ವ)

ಆಯೋಧನಾಪಟಹ – [ನಾ] ಯುದ್ಧಭೇರಿ (ದಂತಿಸಂಘಟ್ಟಾರುದಿತ ಸ್ವಚ್ಛಂದಂ ಆಯೋಧನಾ ಪಟಹರವೋಜ್ಜೃಂಭಿತಂ: **ಆದಿಪು,** ೧೪. ೯೩)

ಆರ್ – [ನಾ] ಯಾರು (ಪೊದಳ್ದಾಜ್ಞೆಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳ್ ಆರ್ ಆ ಪಾಂಡುರಾಜಂಬರಂ: **ಪಂಪಭಾ,** ೧. ೧೧೦); [ಕ್ರಿ] ಗಟ್ಟಿಯಾಗಿ ಕೂಗು, ಅರಚು (ಮಚ್ಚರದಿಂ ಒರ್ವರೊರ್ವರಂ ಉಚ್ಚಳಿಸಿ ತಗುಳ್ದು ಗೋವಂ ಆರ್ದು ಇಸೆ ಕೀಟಂ ಕರ್ಚಿ ಪುಡಿಯೊಳ್ ಪೊರಳ್ದುವು ನಚ್ಚಿನ ಕಾಂಭೋಜವಾಜಿಗಳ್ ಕೆಲವಾಗಳ್: **ಪಂಪಭಾ,** ೮. ೯೪); [ಕ್ರಿ] ತೃಪ್ತಿಯಾಗು, ತಣಿ (ಕೋಟಲೆಗೊಳ್ವ ರತ್ನಮುಕುಟದ್ಯೋತೋತ್ತಮಾಂಗಂ ವಿರಾಜಿಸುವನ್ನಂ ಪುಡಿಯೊಳ್ ಪೊರಳ್ವ ಪಗೆಯಂ ಕಣ್ಣಾರ್ವಿನಂ ನೋಡಿದಳ್: **ಪಂಪಭಾ,** ೧೨. ೧೫೧)

ಆರ – [ನಾ] ಹಾರ (ಮೆಲ್ಲನೆ ವಕುಲ ಆಳವಾಳತಳದೊಳ್ ಸುರಿದ ಅಂಬುಜಸೂತ್ರದಿಂದೆ ಮತ್ತನಿತಱೊಳಂ ಮುಗುಳ್ಗರಿಗೆ ತೋಳ್ವಳೆ ಕಂಕಣವು ಆರಮೆಂದು ಬೇಟ್ಪನಿತನೆ ಮಾಡಿ: **ಪಂಪಭಾ,** ೨. ೧೬)

ಆರಂಭ – [ನಾ] [ಜೈನ] ಹಿಂಸೆಗೆ ಕಾರಣವಾಗುವ ಕಾರ್ಯ (ವಿವಿಧಾರಂಭಪರಿಗ್ರಹಂ ದ್ರವಿಣಮಂ ಬೈತುದ್ಧತಂ ತನ್ನುಸಿರ್ ತವೆ: **ಆದಿಪು,** ೫. ೪)

ಆರಕ್ತ – [ಗು] ಕೆಂಪಾದ (ಆಗಳಾಕೆಗಳ್ ಅಲಕ್ತಾರಕ್ತ ಮಣಿನೂಪುರಕ್ವಣಿತ ಸುಭಗವಾಮಪಾದಪ್ರಹರಣದೊಳ್ ಅಶೋಕತರುಗಳಂ ಕುಸುಮಿಸಿಯುಂ: **ಆದಿಪು,** ೧೧. ೧೩೦ ವ)

ಆರಜತಾದ್ರಿಮುದ್ರಿತ – [ಗು] ಹಿಮವತ್ಪರ್ವತದವರೆಗಿನ (ಆರಜತಾದ್ರಿ ಮುದ್ರಿತ ಮಹೀತಳಮಂ ಬೆಸಕಯ್ಸಿ ತದ್ಗುಹಾದ್ವಾರಮನುರ್ಚಿಪೋಗಿ ವಿಜಿತೋತ್ತರಭೂತಳಂ: **ಆದಿಪು,** ೧೪. ೫೯ ವ)

ಆರಡಿಗಳ್ಳ – [ನಾ] ಸೂರೆಕಾರ (ಬಿದಿಯೆಂಬ ಆರಡಿಗಳ್ಳಂ ಎನ್ನನುಜನಂ ಗೋವಿಂದನಂ ನಿರ್ನೆರುಯ್ವುದುಂ; **ಆದಿಪು,** ೩. ೫೨)

ಆರನಾದೊಡಂ – [ಅ] ಯಾರನ್ನಾದರೂ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩)

ಆರಬ್ಧ – [ಗು] ಆರಂಭಗೊಂಡ (ಮೃಗಪತಿಪ್ರಧ್ವಾನಗರ್ಜದ್ಗುಹಂ ಮದಿರೋನ್ಮತ್ತ ನಿಳಿಂಪ ಕಿಂಪುರುಷಕಾಂತಾರಬ್ಧಸಂಗೀತಂ ಒಪ್ಪಿದುದು: **ಪಂಪಭಾ,** ೭. ೭೨)

ಆರಬ್ಧಗೀತ – [ನಾ] ಸ್ವಾಗತಗೀತೆ (ಅಂಗಣರಚಿತಮೌಕ್ತಿಕ ರಂಗಬಲಿಯುಂ ಬಲಿಕುಸುಮ ನಿಪತತ್ ಅಳಿಕುಳಾರಬ್ಧಗೀತಮುಂ: **ಆದಿಪು,** ೪. ೫೮ ವ)

ಆರಭಟಿ – [ನಾ] ಸಾಹಸ (ನಿಸ್ಸಹಾಯ ಸಾಹಸೋತ್ತೀರ್ಣ ಮಹಾಹವಾರ್ಣವ ಪ್ರವೀರ ಪ್ರಾರಬ್ದ ಆರಭಟೀ ಸಮುದ್ಘಟ ಕಥೆಗಳನೆ ಕೇಳಲುಂ: **ಆದಿಪು,** ೮. ೪೨ ವ); [ನಾ] ನಾಟ್ಯದ ವೃತ್ತಿಗಳಲ್ಲಿ ಒಂದು, ಓಜಸ್ವೀ ಮಾತುಗಳಿಂದ ರೌದ್ರ ಬೀಭತ್ಸ ರಸಗಳನ್ನು ಅಭಿನಯಿಸುವ ಕ್ರಮ (ಭಾರತಿ ಸಾತ್ವತಿ ಕೈಶಿಕಿ ಆರಭಟಿಯುಮೆಂಬ ವೃತ್ತಿಯೊಳ್ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು: **ಆದಿಪು,** ೯. ೨೬)

ಆರಭಟೀರಸ – [ನಾ] ಶೌರ್ಯೋದ್ರೇಕ (ವೀರಭಟರ್ ಉದ್ಭಟ ಆರಭಟೀರಸರಿವರವರೆನ್ನದೆ ಎನ್ನರುಂ ಸೆಣಸುವೊಡೇ ಕಾರಣಮೋ ಚಕ್ರಂ: **ಆದಿಪು,** ೧೪. ೨೬)

ಆರಭಟೀಸಮುದ್ಘಟಕಥೆ – [ನಾ] ಕಲಹ ಕ್ರೋಧಾದಿಗಳಿಂದ ಕೂಡಿದ ಕತೆ (ಸಾಹಸೋತ್ಕೀರ್ಣಮಹಾಹವ ಅರ್ಣವಪ್ರವೀರಪ್ರಾರಬ್ಧ ಆರಭಟೀಸಮುದ್ಘಟಕಥೆಗಳನೆ ಕೇಳಲುಂ: **ಆದಿಪು,** ೮. ೩೨ ವ)

ಆರಯ್ – [ಕ್ರಿ] ವಿಚಾರಿಸು, ವಿಮರ್ಶಿಸು (ಆರಯೆ ಕಜ್ಜಂ ಪೆಱತಿಲ್ಲ ಶಂತನುಸುತಂಗೆನ್ನಂ ಕರಂ ನಂಬಿದಂಬೆಯೊಳ್ ಎನ್ನಂಬೆ ವಲಂ ವಿವಾಹವಿಧಿಯಂ ಮಾಟ್ಪೆಂ: **ಪಂಪಭಾ,** ೧. ೭೭); [ಕ್ರಿ] ಸುಧಾರಿಸಿಕೊ (ತುಡುಗೆಗಳೊಳ್ ಸರಿಗೆಯುಮಂ ಕಡುವಿಣ್ಣಿತ್ತೆನಿಸಿ ನಡೆದುಂ ಓರಡಿಯನಣಂ ನಡೆಯಲುಂ ಆಱದೆ ಕೆಮ್ಮನೆ ಬಿಡದಾರಯ್ವನಿತುಮಾಗೆ ಬಳೆದುದು ಗರ್ಭಂ: **ಪಂಪಭಾ,** ೧. ೧೪೪); [ಕ್ರಿ] ಹುಡುಕು, ಕಂಡುಹಿಡಿ (ಇದು ನಮ್ಮಂ ಆರಯಲೆ ವೈರಿಯ ಮಾಡಿದ ಗೊಡ್ಡಂ ಇಲ್ಲಿ ಮಾಣ್ದಿರಲಾಗ: **ಪಂಪಭಾ,** ೮. ೯೦); [ಕ್ರಿ] ಮರ್ಮ ತಿಳಿ (ತನ್ನ ಪೊನ್ನ ರಥದೊಳ್ ನೆಲಸಿರ್ದ ವಿಳಾಸದಿಂದೆ ಭೀಮನ ಮೊನೆಯಂ ವನೀಪಕರಂ ಆರಯಲಟ್ಟಿ: **ಪಂಪಭಾ,** ೧೦. ೫೮)

ಆರಯ – **[ನಾ]** ರಕ್ಷಣೆ (ಒದವಿದ ಕೂರ್ಮೆಯಿಲ್ಲದಳಿಪು ಆರಯಮಿಲ್ಲದ ಪಾಳಿ, ರಾಗಮಿಲ್ಲದ ಸುಸಿಲ್ ಅಟ್ಟಿಜೆಲ್ಲದ ಪದಂ: **ಆದಿಪು,** ೧೨. ೪೫)

ಆರವೆ – **[ನಾ]** ಉದ್ಯಾನ (ಮೇರುವ ಪೊನ್ ಕಲ್ಪಾಂಘ್ರಿಪದಾರವೆ ರಸದೊಱವು ಪರುಸವೇದಿಯ ಕಣಿ ಭಂಡಾರದೊಳುಂಟೆನೆ ಕುಡುವ ಅನಿವಾರಿತದಾನಕ್ಕೆ ಪೋಲ್ವರಾರ್ ಬದ್ದೆಗನಂ: **ಪಂಪಭಾ,** ೧. ೨೮)

ಆರಾಧನೆ – **[ನಾ]** [ಜೈನ] ಸಮ್ಯಕ್‌ಜ್ಞಾನ ದರ್ಶನ, ಚಾರಿತ್ರ, ತಪಸ್ಸುಗಳ ಸಾಧನೆ: ನಾಲ್ಕುವಿಧವಾದ ಜ್ಞಾನಾರಾಧನೆ, ದರ್ಶನಾರಾಧನೆ, ಚಾರಿತ್ರಾರಾಧನೆ ಮತ್ತು ತಪಾರಾಧನೆ ಎಂಬವು (ಜಿನೇಂದ್ರಾರ್ಚನಾಪುರಸ್ಸರಂ ವಾಚನಾಗ್ರಹಣಸಮೇತಂ ಆರಾಧನೆಯಿನರ್ಚಿಸಿ ವೀರಸಂಸ್ಥಾನಾರೂಢನಾದಾಗಳ್: **ಆದಿಪು,** ೨. ೫೦ ವ)

ಆರಾಧಿತ – **[ಗು]** ಪೂಜಿಸಲ್ಪಟ್ಟ (ಮನಂ ಆರಾಧಿತ ಹೋಮಭೂಮಿ ಪಶುಗಳ್ ಕಾಮಾತುರರ್ ಬಂದ ಮಾವನಿತುಂ ಸ್ಥಾಪಿತಯೂಪಕೋಟಿ: **ಪಂಪಭಾ,** ೪. ೫೯)

ಆರಾಧಿತಶಿವ – **[ನಾ]** ಶಿವನನ್ನು ಪೂಜಿಸಿದ[ವನು] (ಧೃತಧವಳವಸನರ್ ಆರಾಧಿತಶಿವರ್ ಅರ್ಚಿತಸಮಸ್ತಶಸ್ತ್ರರ್ ನೀರಾಜಿತತುರಗರ್ ಒಪ್ಪಿದರ್ ಕೆಲರ್ ಅತಿರಥ ಸಮರಥ ಮಹಾರಥ ಅರ್ಧರಥರ್ಕಳ್: **ಪಂಪಭಾ,** ೧೦. ೩೬)

ಆರಾಧಿಸು – **[ಕ್ರಿ]** ಪೂಜಿಸು, ಓಲಯಿಸು (ಕೈಮುಗಿದು ಆರಾಧಿಸಿ: **ಆದಿಪು,** ೬. ೮೫)

ಆರಾಧ್ಯ – **[ನಾ]** ಪೂಜೆಗೊಳ್ಳುವವನು, ಪೂಜ್ಯ (ಪುಷ್ಪಸಂಕುಳದೊಳ್ ನೀನೆ ವಿಳಾಸಿಯೈ ಮಿಡಿಗಳೊಳ್ ನೀಂ ಚೆಲ್ವನೈ ಪಣ್ತ ಪಣ್ಗಳಿನೋವೋ ಪೆಱತೇನೋ ನೀನೆ ಭುವನಕ್ಕಾರಾಧ್ಯನೈ: **ಆದಿಪು,** ೧೧. ೯೮)

ಆರಾವ – **[ನಾ]** ಶಬ್ದ, ಧ್ವನಿ (ಉಭಯಬಲದರಸುಗಳ್ .. .. ಕೆಯ್ವೀಸೆ ಲಯಕ್ಷುಭಿತ ಜಲನಿಧಿನಿನಾದಮಂ ಅಭಿನಯಿಸಿದುದು ಒಗೆದು ನೆಗೆದ ಸಮರ ಆರಾವಂ: **ಪಂಪಭಾ,** ೧೧. ೩೪)

ಆರಿಂದಂ – **[ಅ]** ಯಾರಿಗಿಂತಲೂ ಎಲ್ಲರಿಗಿಂತಲೂ (ನಕುಲಂ ಕುಂತಶಸ್ತ್ರದೊಳತಿಪ್ರವೀಣನಾಗಿ ಅಶ್ವವಿದ್ಯೆಯೊಳಾರಿಂದಂ ಪಿರಿಯನಾದಂ: **ಪಂಪಭಾ,** ೨. ೩೬ ವ)

ಆರುಷ್ಕರ – **[ನಾ]** ಗೇರುಬೀಜ (ಆರುಷ್ಕರದ್ರವ ಆವರ್ತಗರ್ತ ಗಂಭೀರೆಯುಂ .. .. ವೈತರಣಿಯಂ ಪೊಕ್ಕಾಗಳ್: **ಆದಿಪು,** ೫. ೮೭ ವ)

ಆರೂಢ – **[ಗು]** ಹತ್ತಿ ಕುಳಿತ (ಆಗಳ್ ಅಂತಕತನಯನುಂ ಧೃತರಾಷ್ಟ್ರತನಯನುಂ ಆರೂಢಮದಗಜರುಂ ಉಪಾರೂಢ ವಿಶೇಷಕರುಂ ಆಗಿ: **ಪಂಪಭಾ,** ೧೩. ೩೩ ವ)

ಆರೂಢಪ್ರತಿಜ್ಞ – **[ನಾ]** ಪ್ರತಿಜ್ಞೆಯನ್ನು ಕೈಗೊಂಡವನು (ನಿನ್ನಂ ಅನಾಕುಳಂ ಎನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ.. .. ಎಂದು ಆರೂಢಪ್ರತಿಜ್ಞನಾಗಿ: **ಪಂಪಭಾ,** ೨. ೫೦ ಮತ್ತು ವಚನ)

ಆರೂಢ ಸರ್ವಜ್ಞ – **[ನಾ]** ಇದು ಮೂರನೆಯ ಅರಿಕೇಸರಿಯ ಬಿರುದು (ವೀರ ವೈರಿಕ್ಷಿತಿಪ ಗಜ ಘಟಾಟೋಪ ಕುಂಭಸ್ಥಳೀ ಭೇದನುಗ್ರೋದ್ಭಾಸಿ ಭಾಸ್ವದ್ಭುಜ ಪರಿಘನಾರೂಢ ಸರ್ವಜ್ಞನಂ .. .. ಕಥಾನಾಯಕನಂ ಮಾಡಿ: **ಪಂಪಭಾ,** ೧. ೫೧); **[ನಾ]** ಆರೋಪಿಸಲ್ಪಟ್ಟ ಸರ್ವಜ್ಞತ್ವವುಳ್ಳವನು (ಅತಿಪ್ರವೀಣನುಂ ಆರೂಢಸರ್ವಜ್ಞನುಂ ಮಹೇಂದ್ರಜಾಣನುಂ ಆಗಿ: **ಪಂಪಭಾ,** ೨. ೩೪ ವ)

ಆರೆಂದು – ಯಾರು ಎಂದು ಭಾವಿಸಿ (ಮರುಳೇ ಗಾಂಡೀವಿ ಆರೆಂದು ಇಳಿಸಿ ನುಡಿವೆ: **ಪಂಪಭಾ,** ೯. ೫೫)

ಆರೋಗಿಸು – **[ಕ್ರಿ]** ಊಟಮಾಡು (ಮಜ್ಜನಂಬುಗದೆ ಆರೋಗಿಸಲೊಲ್ಲದೆ ಇರ್ಪ ಇರವಿದೇಂ ನಾಣಳ್ಕು ಇದೇಂ ಕಾಮನಂಬುಗಳ್ ಅತ್ತಿತ್ತೆಡೆಯಾಡೆ ಸೋಂಕವೆ ವಲಂ ನಿನ್ನಂ ಸರೋಜಾನನೇ: **ಪಂಪಭಾ,** ೪. ೬೮)

ಆರೋಪಿತ – **[ಗು]** ಹೊತ್ತುಕೊಂಡ, ಧರಿಸಿದ (ಧರಣೇಂದ್ರನಿದಿರೊಳ್ ಅವರ್ ಅಂತರ್ನಿಗೂಢ ಕೋಪಾವಲೇಪರುಂ ಈಷತ್ ಆರೋಪಿತಭ್ರೂಚಾಪರುಂ ಆಗಿ: **ಆದಿಪು,** ೯. ೧೦೪ ವ); **[ಗು]** ಹೆದೆಯೇರಿಸಿದ (ಆರೋಪಿತಚಾಪಂ ಸಂಧಾರಿತಕವಚಂ ಧೃತೋಗ್ರ ಶರಧಿಯುಗಂ ತಾನಾರಂದಮಲ್ಲವಂ ತ್ರಿಪುರಾರೀ ಕೇಳ್ ತ್ರಿಪುರಮಿಸುವ ನಿನ್ನನೆ ಪೋಲ್ವಂ; **ಪಂಪಭಾ,** ೮. ೧೩)

ಆರೋಹಕ – **[ನಾ]** ಸವಾರ (ಅಂತಾ ದಂತಿಘಟೆಗಳಂ ಆರೋಹಕರ್ ತೋಱಿಕೊಟ್ಟು ಒಂದೊಂದರ್ಕೆ ಮೊಗಂಬುಗಿಸಿದಾಗಳ್: **ಪಂಪಭಾ,** ೧೦. ೯೩ ವ)

ಆರೋಹಣ – **[ನಾ]** ಮೇಲೇರುವುದು (ಉಪಪರ್ವತಂಗಳ್ ಅತಿಪ್ರಕಟಮಾಗೆ ಸೋಪಾನಪದ್ಧತಿಗಳೊಳ್ ಗಿರಿದುರ್ಗಾರೋಹಣಮುಮಂ: **ಆದಿಪು,** ೬. ೬೨ ವ)

ಆರ್ಗಂ – **(ಸ)** ಯಾರಿಗೂ, ಎಲ್ಲರಿಗೂ (ಮೆಯ್ವೊಗಂ ಆಗಡುಂ ಆರ್ಗಂ ಕುಡುತಿರ್ಪ ಕಪ್ಪುರದ ಬಂಬಲ್ದಂಬುಲಂ ರಾಗಮಂ ಪಡೆಗೆಲ್ಲಂ ಪಡೆವಂದದಿಂ: **ಪಂಪಭಾ,** ೯. ೧೦೪)

ಆರ್ಗಳಾಕಾರ – **[ನಾ]** ಅಗುಳಿಯ ಆಕಾರ (ಸಕಟೋದ್ಘೃಷ್ಟ ವನೇಭ ತುಂಗ ಜರಠ ಸ್ಥೂಳ ಆರ್ಗಳಾಕಾರ ಮಾರ್ಗಕುಜಂ: **ಆದಿಪು,** ೧೩. ೫೫)

ಆರ್ಗೆ – **(ಸ)** (ಯಾರಿಗೆ, ಯಾರ ಮಗ[ಳು] (ತಮ್ಮ ಅಕ್ಕನಂ ಈಕೆ ಆರ್ಗೆ ಎಂದು ಬೆಸಗೊಂಡೊಡೆ ಆತನ ಸೋಲ್ತ ಕಣ್ಣಱಿದು: **ಪಂಪಭಾ,** ೮. ೬೩ ವ)

ಆರ್ಜವ – **[ನಾ]** ಪ್ರಾಮಾಣಿಕತೆ, ಸಮಚಿತ್ತತೆ, ವಿನಮ್ರಸ್ವಭಾವ (ಸಹಜದೊಳ್ ಅಪಾಪಿಗಳುಂ ಆರ್ಜವಂಗಳುಂ ಅತಿಮೃದುಗಳುಮಪ್ಪುದಱಿಂದೆ ನಾಕಲೋಕಪ್ರಾಪ್ತಂಗಳಕ್ಕುಂ: **ಆದಿಪು,** ೫. ೪೧ ವ); **[ನಾ]** ದಶಧರ್ಮಗಳಲ್ಲಿ ಒಂದು (ಎಂಬಿನಮುತ್ತಮಕ್ಷಮಾಮಾರ್ದವಾರ್ಜವಸತ್ಯಶೌಚ ಸಂಯಮತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಪರ್ಯಾಯ ಪರ್ಯಾಪ್ತ ದಶಧರ್ಮಂಗಳುಮಂ ಕೈಕೊಂಡು; **ಆದಿಪು,** ೬. ೩೦ ವ)

ಆರ್ತ – **[ನಾ]** ಸಮರ್ಥ (ಪಡೆದಂ ಬ್ರಹ್ಮಂ ಜಗಮಂ ಪಡೆಯಲ್ ತಾನಾರ್ತನಿಲ್ಲ ಪೆಂಪಂ: **ಪಂಪಭಾ,** ೬. ೧೨)

ಆರ್ತಧ್ಯಾನ – **[ನಾ]** [ಜೈನ] ಇಷ್ಟವಾದದ್ದು ದೂರವಾದೀತೆಂಬ ಮತ್ತು ಅದರ ಬಗೆಗಿನ ಆಕಾಂಕ್ಷೆಯಿಂದ ಕೂಡಿದ ಚಿಂತೆ (ಅಂತು ಆರ್ತಧ್ಯಾನದೊಳ್ ಅಜಗರನಾಗಿ ತನ್ನ ಮುನ್ನಿನ

ಸಂಚಿತವಸ್ತುಗಳಂ ಕಾವಂದು ಮಗಂ ಮಣಿಮಾಳಿಯಂ ಕಂಡು ಜಾತಿಸ್ಮರನಾಗಿ: **ಆದಿಪು,** ೨. ೧೫ ವ)

ಆರ್ತವ – [ನಾ] ರಜಸ್ಸು (ಉತ್ತಮ ಪಾತ್ರದಾನಾನುಮೋದ ಫಲದಿಂದಲ್ಲಿ ಪುಟ್ಟುವ ಜೀವಂಗಳ್ ನಾರಿಪುರುಷ ಸಂಯೋಗನಿಯೋಜಿತ ಶುಕ್ಲಾರ್ತವಂಗಳೊಳ್ ಜೀವಯುಗಳಂಗಳಾಗಿ ನೆಲಸಿ: **ಆದಿಪು,** ೫. ೪೧ ವ)

ಆರ್ತುಪವಾಸ – [ನಾ] ಪೂರ್ತಿ ಉಪವಾಸ, ಕಟ್ಟುಪವಾಸ (ಎಱಗಿಯುಮೊರ್ಮೆ ದಿವ್ಯಮುನಿಗೆ ಆರ್ತುಪವಾಸಮನಿರ್ದುಂ ಒರ್ಮೆ ಕೊಯ್ದು ಅಜಿಕೆಯ ಪೂಗಳಿಂ ಶಿವನನರ್ಚಿಸಿಯುಂ: **ಪಂಪಭಾ,** ೧. ೧೩೫)

ಆರ್ದ್ರ – [ಗು] ನೆನೆದ, ತೊಯ್ದ (ಉಗ್ರವೈರಿ ಮದವನ್ಮಾತಂಗಕುಂಭ ಆರ್ದ್ರ ಮೌಕ್ತಿಕ ಲಗ್ನೋಜ್ಜ್ವಲಬಾಣನಂ: **ಪಂಪಭಾ,** ೧. ೧೩೪)

ಆರ್ದ್ರಗಂಡಂ – [ಗು] ತೋಯ್ದ ಕೆನ್ನೆಯುಳ್ಳವನು (ಒಗೆದ ಸುತಶೋಕದಿಂದ ಆವಗೆಯಂತೆ ಒಳಗು ಉರಿಯೆ ಭೋಂಕನೆ ಎರ್ದೆ ತೆಱಿಯಲ್ ಹಾ ಮಗನೇ ಎಂದು ಅಶ್ರುಜಲಾರ್ದ್ರಗಂಡಂ ಆ ಗಂಡಿನೊಡನೆ ಬಿಸುಟಂ ಬಿಲ್ಲಂ: **ಪಂಪಭಾ,** ೧೨. ೨೮)

ಆರ್ದ್ರಮೃತ್ತಿಕಾವಿರಚಿತ – [ಗು] ಹಸಿ ಮಣ್ಣಿನಿಂದ ಮಾಡಿದ (ವಿವಾಹಗೇಹಮಂ ಸಮೆಯಿಸಿ ಅದಱ ನಡುವಣ ಆರ್ದ್ರಮೃತ್ತಿಕಾವಿರಚಿತಮಪ್ಪ ಚತುರಾಂತರದೊಳ್: **ಪಂಪಭಾ,** ೩. ೭೪ ವ)

ಆರ್ದ್ರಾಶಯ – [ನಾ] [ಆರ್ದ್ರ+ಆಶಯ] ತೊಯ್ದ ಹೃದಯವುಳ್ಳವನು (ಎಂಬುದುಂ ತದೀಯಕರುಣಾರಸ ಪ್ರೇರಿತಾರ್ದ್ರಾಶಯಂ ತತ್ಪ್ರಜಾಜೀವನೋಪಾಯಮಂ ಪೂರ್ವಾಪರ ವಿದೇಹಸ್ಥಿತಿ ಸಮಾನಮಾಗೆ: **ಆದಿಪು,** ೮. ೬೨ ವ)

ಆರ್ಪು – [ನಾ] ಸಾಮರ್ಥ್ಯ, ಪರಾಕ್ರಮ (ಇದನಾವನೆಚ್ಚಂ ಆತಂ ತ್ರಿದಶಂ ಮೇಣಕ್ಕೆ ದಾನವಂ ಮೇಣಕ್ಕೆ ಆವುದು ಗಹನಂ ಆಂತನಾತನ ಪೊದರ್ಪುಂ ಆರ್ಪುಂ ಎನಿಪುವೆಮ್ಮೊಳೇಂ ಸಂದಪುವೇ: **ಆದಿಪು,** ೧೨. ೯೩)

ಆರ್ಪೊಡೆ – [ನಾ] ಸಾಧ್ಯವಾಗುವುದಾದರೆ, ಸಾಮರ್ಥ್ಯ ಇರುವುದಾದರೆ (ಮಹೀತಳದರ್ಥಮಂ ತರಿಸಿ ನೆಗೞ್ತಿಯಂ ನಿಜೆಸಲಾರ್ಪೊಡೆ ಮಾಡಿರೆ ರಾಜಸೂಯಮಂ: **ಪಂಪಭಾ,** ೬. ೧೮)

ಆರ್ಮ – [ನಾ] ಶ್ರೇಯಸ್ಕರ (ನಿಮಗಮೆಮಗಂ ಆಮ್ನಾಯದಿಂ ಬಂದುದು ಇಂತೀ ಜಿನಧರ್ಮಂ ಪ್ರಾಣಿಗಾರ್ಮಂ ಮಱೆಯದಿರು: **ಆದಿಪು,** ೨. ೨೦); [ನಾ] ನೆಲೆ, ರಕ್ಷಣೆ (ಒಲವಿನ ಕೂರ್ಮೆಯ ತತ್ಪತಿಗಂ ಆಕೆಗಂ ನಿಜವಂಶಕ್ಕೆ ಆರ್ಮಮೆನೆ ಪುಟ್ಟಿದರ್ ಜಯವರ್ಮ ಶ್ರೀವರ್ಮರೆಂಬರ್ ಇರ್ವರ್ ತನಯರ್: **ಆದಿಪು,** ೨. ೩೭)

ಆರ್ಯ – [ನಾ] ಭೋಗಭೂಮಿಯಲ್ಲಿ ಹುಟ್ಟಿದವನು (ಆತನ ಸೇನನಾಯಕ ಮಂತ್ರಿಪುಂಗವ ಪುರೋಹಿತರ್ ಮೂವರುಂ ನೃಪನ ದಾನಾನುಮೋದದ ಫಲದಿಂದಮುತ್ತರಕುರುವಿನೊಳಾರ್ಯರಾಗಿ; **ಆದಿಪು,** ೫. ೧೩ ವ)

ಆರ್ಯಷಟ್ಕರ್ಮ – [ನಾ] [ಜೈನ] ಮೊದಲನೆಯ ಚಕ್ರವರ್ತಿಯಾದ ಭರತನು ತಾನು ಹೊಸದಾಗಿ ಸೃಷ್ಟಿಸಿದ ಬ್ರಾಹ್ಮಣವರ್ಗದವರಿಗೆ [ವೈದಿಕ ಬ್ರಾಹ್ಮಣರ ಷಟ್ಕರ್ಮಗಳಾದ ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ ಮತ್ತು ಪ್ರತಿಗ್ರಹಗಳಿಗೆ ಪರ್ಯಾಯವಾಗಿ] ಅನುಸರಿಸಬೇಕೆಂದು ನಿಯೋಜಿಸಿದ ಆರು ಕರ್ಮಗಳು: ಪೂಜೆ [ಇಜ್ಯಾ], ವಾರ್ತೆ, ದತ್ತಿ, ಸ್ವಾಧ್ಯಾಯ, ಸ್ವಭಾವಸಂಯಮ, ತಪೋನುಷ್ಠಾನ; (ಪಂಚಾಣುವ್ರತ .. .. ಆರ್ಯಷಟ್ಕರ್ಮಂಗಳಂ ನಿಮಗಿವು ಕುಲಾಚಾರಂಗಳ್: **ಆದಿಪು,** ೧೩. ೧೬ ವ)

ಆರ್ಯಿಕಾ – [ನಾ] [ಜೈನ] ಕಂತಿ (ಪ್ರಭಾವತಿಯುಂ ಪದ್ಮಾವತಿ ಆರ್ಯಿಕಾಪಾದಮೂಲದೊಳ್ ಉಪಾರ್ಜಿತ ರತ್ನಾವಳಿ ತಪದೊಳ್ ಅಚ್ಯುತಕಲ್ಪದೊಳ್ ಪ್ರತೀಂದ್ರಪದವಿಯಂ ಪಡೆದಳ್: **ಆದಿಪು,** ೩. ೫೮ ವ)

ಆರ್ಹಂತ್ಯ – [ನಾ] [ಜೈನ] ಮೋಕ್ಷ (ಪೂಜಾರ್ಹಂ ಆರ್ಹಂತ್ಯಲಕ್ಷ್ಮೀಕಾಂತಂ ಮುನಿಸುವ್ರತಂ ನಮಗೆ ಮಾಳ್ಕೆ ಇಷ್ಟಾರ್ಥ ಸಂಸಿದ್ಧಿಯಂ: **ಪಂಪರಾ,** ೧. ೧); ಅರ್ಹಂತಸ್ಥಿತಿ (ಘಾತಿಗಳಂ ಘಾತಿಸಿ ತದ್ಯುಗಂಧರಮಹಾಯೋಗೀಶ್ವರಂ ಪೊರ್ದಿದಂ: **ಆದಿಪು,** ೩. ೮೦); ಒಂದು ಗರ್ಭಾನ್ವಯಕ್ರಿಯೆ, ಅರ್ಹಂತನಾಗುವ ಸ್ಥಿತಿ (ಆರ್ಹಂತ್ಯ ವಿಹಾರ ಯೋಗತ್ಯಾಗಾಗ್ರನಿರ್ವೃತಿಯೆಂಬ ಅಯ್ವತ್ತಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಆಲ – [ನಾ] ಆಲದ ಮರ (ತಮ್ಮ ಪಗೆ ಪರ್ವುವಂತೆ ಪನ್ನಿರ್ಮತ್ತರ್ ಪರ್ವಿದ ಆಲದ ಮರದ ಮೇಲೆ: **ಪಂಪಭಾ,** ೨. ೩೦ ವ)

ಆಲಂಬ – [ನಾ] ಆಶ್ರಯ (ದೀರ್ಘಬಾಹಾಲಂಬಂ ಭುಜವೀರ್ಯ ವಿಕ್ರಮಯುತಂ ಗಂಗಾತ್ಮಜನ್ಮಂ ಜಯಶ್ರೀಲೋಲಂ ಜಮದಗ್ನಿಮುನಿಯೊಳ್ ಕಲ್ತಂ ಧನುರ್ವಿದ್ಯೆಯಂ: **ಪಂಪಭಾ,** ೧. ೩೮)

ಆಲಕ್ತಕ – [ನಾ] ಅರಗಿನ ಬಣ್ಣ (ಆತ್ಮಾಂಗದೊಳ್ ರೋಹಿಣೀ ಚರಣಾಲಕ್ತಕಂ ಅಚ್ಚೞಿದುದೂ: **ಪಂಪಭಾ,** ೪. ೫೦)

ಆಲಸ – [ಗು] ಭಾರವಾದ, ಮಂದವಾದ (ರಸಭಾವ ಆಲಸನಯನ ಪ್ರಸರಂಗಳ ಪೊಳೆವ ಪೊಳೆಪುಗಳ್ ಬಳ್ವಳ ನೀಳ್ದೆಸೆದುವು ರಂಗದೊಳ್: **ಆದಿಪು,** ೭. ೧೧೮)

ಆಲಿ – [ನಾ] ಕಣ್ಗುಡ್ಡೆ (ಬಿಗಿದು ಅಮರ್ದಿರ್ದ ತೋಳ್ ಸಡಿಲೆ ಜೋಲೆ ಮೊಗಂ ಮೊಗದಿಂದಂ ಒಯ್ಯಗೊಯ್ಯಗೆ ನಗೆಗಣ್ಗಳ ಆಲಿ ಮಗುಟ್ದಂತಿರೆ ಮುಚ್ಚಿರೆ: **ಪಂಪಭಾ,** ೨. ೧೯)

ಆಲಿಕಲ್ – [ನಾ] ಗಟ್ಟಿಯಾದ ಮಳೆಯ ಹನಿ (ಬಣ್ಣವುರಂ ತೀವಿದ ಮಾಟಿಕ್ಕೆಯಾಯ್ತು .. .. ಇಂದ್ರಗೋಪವಿಳಾಸಂಗಳಿಂ ಆಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ; **ಪಂಪಭಾ,** ೭. ೨೪)

ಆಲಿನೀರ್ – [ನಾ] ಮಂಜಿನ ನೀರು (ಕುಳಿರ್ವ ಆಲಿನೀರ್ಗಳಿಂ ತುರಿಪದೆ ಸೂಸುತುಂ ಕೆಳದಿಯರ್ ನದಿಪುತ್ತುಮಿರೆ: **ಪಂಪಭಾ,** ೫. ೮)

ಆಲಿಮುಗುಟಿ್ – [ನಾ] ಕಣ್ಣುಗುಡ್ಡೆ ಓರೆಯಾಗು (ಜೋಳೆ ಮೊಗಂ ಮೊಗದಿಂದಮೊಯ್ಯಗೊಯ್ಯಗೆ ನಗೆಗಣ್ಗಳ ಆಲಿಮುಗುಟ್ದಿಂತಿರೆ ಮುಚ್ಚಿರೆ: **ಪಂಪಭಾ,** ೨. ೧೯)

ಆಲಿಸು – [ಕ್ರಿ] ಗಮನವಿರಿಸಿ ಕೇಳು (ಧನುರ್ಲತಾಗುಣನಿನಾದಮಂ ಆಲಿಸಿ ಕೇಳಲುಂ: **ಪಂಪಭಾ,** ೧. ೧೪೨)

ಆಲೀಢ – [ಗು] ಆವರಿಸಿದ (ಅಮರೀನೀಲಾಲಕ ಆಲೀಢಪಾದಯುಗಂ ತತ್ಕುಚಕೂಟಘಟ್ಟಿತ ವಿಶಾಲೋರುಸ್ಥಲಂ: **ಆದಿಪು,** ೫. ೭೧); [ನಾ] ಬಿಲ್ಗಾರನು ಕುಳಿತುಕೊಳ್ಳುವ ಒಂದು ರೀತಿ (ಆಲೀಢ ಪ್ರತ್ಯಾಲೀಢ ಸಮಪಾದಂಗಳೆಂಬ ಆಸನಂಗಳೊಳಂ ಪೆಱವುಂ ಶರಾಸನವಿದ್ಯೆಗಳೊಳ್ ಅತಿ ಪ್ರವೀಣರುಂ ಜಾಣರುಂ ಆಗಿ: **ಪಂಪಭಾ,** ೧೩. ೩೮ ವ) [**"**ಬಲಗಾಲನ್ನು ಮುಂದಕ್ಕೆ ಮಡಿಸಿಕೊಂಡು ಎಡಗಾಲನ್ನು ಹಿಂದಕ್ಕೆ ಮಡಿಸಿ ಕುಳಿತುಕೊಳ್ಳುವುದು**" – ದೀಪಿಕೆ,** ಪು. ೫೨೩]

ಆಲೋಕನಂಗೆಯ್ – [ಕ್ರಿ] ನೋಡು (ಆನಂದಜಳಪರಿಪೂರ್ಣ ವಿಸ್ತೀರ್ಣವಿಲೋಚನಂಗಳಿಂದಂ ಮುಹುರ್ಮುಹುರ್ ಆಲೋಕನಂಗೆಯ್ಯುತ್ತುಂ: **ಪಂಪಭಾ,** ೪. ೩೩ ವ)

ಆಲೋಲ – [ಗು] ಕದಡಿದ (ಜಯದ್ಘೋಷಣಂ ಮಂದಮಂದಂ ತೀಡಿತ್ತು ಆಲೋಲ ಗಂಗಾಲಲಿತಲಹರಿಕಾಸಾರಸಾರಂ ಸಮೀರಂ: **ಆದಿಪು,** ೭. ೨೫)

ಆವಂ – [ನಾ] ಸಾಧ್ಯವಾಗುವವನು, ಸಮರ್ಥ (ಮುಳಿಯಿಸಿ ಬರ್ದುಂಕಲಾವನುಂ ಒಳನೆ ಯುಧಿಷ್ಠಿರನಂ ಅಮಳರ ಅಳವೆಂಬುದು ಭೂವಳಯಪ್ರಸಿದ್ಧಂ: **ಪಂಪಭಾ,** ೯. ೫೧)

ಆ ವಂದ – ಅಗೋ ಬಂದ, ಆಗ ಬಂದ (ಅತಿವಿಶದವಿಶಾಲ ಊರುಕ್ಷತದಿಂದೊಱಿದನಿತು ಜಡೆಯುಮಂ ನಾಂದಿ ಮನಃಕ್ಷತದೊಡನೆ ಎಟ್ಟರಿಸಿದುದು ಉತ್ಥಿತಮಾ ವಂದಸ್ರಮಿಶ್ರಗಂಧಂ ಮುನಿಯಂ: **ಪಂಪಭಾ,** ೧. ೧೦೫)

ಆವಗಂ – [ಅ] ಬಹಳವಾಗಿ (ನಾನಾ ವಿಧದ ಪದಪಿನೊಳ್ ಹರಿಗಾವಗಮಾಱಿದುದು ಪಥಪರಿಶ್ರಮಮೆಲ್ಲಂ: **ಪಂಪಭಾ,** ೯. ೨೮)

ಆವಗೆ – [ನಾ] ನರಕಬಿಲ, ನರಕದಲ್ಲಿನ ರಂಧ್ರ (ಮೂವತ್ತಿರ್ಪತ್ತೈದು ಅಂತು ಆವಗೆ ಪದಿನೈದು ಮತ್ತುಂ ಆಱು ಅಯ್ದು ಊನಂ ಭಾವಿಪೊಡೆ ಇಂತಿವು ಲಕ್ಕೆಗಳ್: **ಆದಿಪು,** ೫. ೮೩); [ನಾ] ಮಡಕೆ ಸುಡುವ ಕುಂಬಾರನ ಒಲೆ (ಜೀಮೂತಂಗಳೆಲ್ಲಂ ತೆರಳ್ದೋಡಿದೊಡೆ ಅಗ್ನಿದೇವಂ ಆವಗೆಯ ಕಿರ್ಚಿನಂತೆ ಒಳಗೊಳಗೆ ಅಳುರ್ದು: **ಪಂಪಭಾ,** ೫. ೯೬ ವ)

ಆವಗೆಯುರಿ – [ನಾ] ಆವಗೆಗಿಚ್ಚು (ಫಣಿಕೇತನನಿರ್ದಟಿಲೊಂದು ತನ್ನಂ ಆವಗೆಯುರಿಯಟ್ಟಿವೋಲಳುರೆ: **ಪಂಪಭಾ,** ೧೨. ೧೭೦)

ಆವರಿಸು – [ಕ್ರಿ] ಸುತ್ತುವರಿ, ವ್ಯಾಪಿಸು (ಅವನ ಸೈನ್ಯದೊಳಾಚರಿಸಿದ ಧೂಳಿ ಪೊಟ್ಟುವುದಂಭೋನಿಧಿಯಂ: ಆದಿಪು, ೧೩. ೭೪); ಪ್ರಾಪ್ತವಾಗು (ಗುರೂಪದೇಶಮಾವರಿಸೆ ಜಿನೇಂದ್ರಭಕ್ತಿ ಪೊಱಪೊಣ್ಮೆ ದಯಾರಸಂ: **ಆದಿಪು,** ೫. ೫೩)

ಆವರ್ಜನ – [ನಾ] ಬಗ್ಗಿಸುವುದು (ದುರ್ಜಯರಿಪು ನೃಪಶೌರ್ಯೋನ್ನಮನ್ಮಸ್ತಕ ಆವರ್ಜನ ವಾಂಛಾದುರ್ಧರಂ; **ಆದಿಪು,** ೧೪. ೧೯)

ಆವರ್ಜಿಸು – [ಕ್ರಿ] ಎಳೆದುಕೊ, ಸಂಪಾದಿಸು (ಬಲ್ವರಿಕೆಯೊಳರಿ ನೃಪರ ಪಡಲ್ವಡೆ ತಳ್ತಿಱಿದು ರಣದೊಳಾ ವಿಕ್ರಮಮಂ ಸೊಲ್ವಿನಮಾವರ್ಜಿಸಿದಂ ನಾಲ್ವತ್ತೆರಡಱಿಕೆಗಾಳೆಗಂಗಳೊಳೀತಂ: **ಪಂಪಭಾ,** ೧. ೨೫)

ಆವರ್ತಗರ್ತ – [ನಾ] ಸುಳಿಸುತ್ತುವ ಮಡು (ಸೈರಿಸಲಾಱದೆ ತಡತಡಿಸಿ ಪರಿತಂದ ಅತಿದ್ರುತ ಪ್ರವಾಹಮಾನ ಆರುಷ್ಕರದ್ರವಾವರ್ತಗರ್ತ ಗಂಭೀರೆಯುಂ: **ಆದಿಪು,** ೫. ೮೭ ವ); ಸುಳಿದಾಟ (ಮಂಗಳಪಟಹಂಗಳುಂ ಮಂಗಳಗೀತಿಗಳುಂ ಎಸೆಯೆ ಕಳಕಳಾವರ್ತಮಾಗೆ ಜಾಗರಮಿರ್ದು: **ಪಂಪಭಾ,** ೧೪. ೧೭ ವ)

ಆವರ್ತನಸಿದ್ಧಿ – [ನಾ] ಸುಳಿಯಂತಿರುವುದು, ಸುಳಿಗಳನ್ನು ಹೊಂದಿರುವುದು (ಗಂಭೀರಗುಣದೊಳಂ ಆವರ್ತನ ಸಿದ್ಧಿಯೊಳಂ ಜಳನಿಧಿಯನೆ ಪೋಲ್ವ ಶರಣಾಗತ ಜಳಧಿಯ ನಿಮ್ಮ ನಾಭಿ ಚೆಲ್ವಿಂಗೆ ತಾನೆ ನಾಭಿಯಾದುದು: **ಪಂಪಭಾ,** ೨. ೩೯ ವ)

ಆವರ್ತಮಾನ – [ಗು] ಸುಳಿದಾಡುವ, ತಿರುಗುವ (ವಿಷಮ ಕಠೋರ ಕೂರ್ಮ ಘರ್ಮನಿರ್ಝರೋಚ್ಛ್ವಾಸ ಭರದ್ವೈಧೀಭವತ್ ಅಂಭಃಪ್ರಕಟಿತ ಅಗಾಧ ರಂಧ್ರಾವರ್ತಮಾನ ಜಳಚರ ಸಂಚರಣ ವಿಸ್ಮಯನೀಯ ಭಯಾನಕೆಯುಂ: **ಆದಿಪು,** ೫. ೮೭ ವ)

ಆವರ್ತಿಸು – [ಕ್ರಿ] ವ್ಯಾಪಿಸು (ಶಂತನು ತನ್ನದೊಂದು ಸವಿಗಂ ಸೋಲಕ್ಕಂ ಇತ್ತಂ ನಿಜಕ್ರಮಮಂ ತನ್ನಯ ಬೇಟದಾಕೆಯ ಮಗಂಗೆ ಎಂಬೊಂದು ಅಪಖ್ಯಾತಿ ಲೋಕಮಂ ಆವರ್ತಿಸೆ: **ಪಂಪಭಾ,** ೧. ೭೧)

ಆವಸಥ – [ನಾ] ವಾಸಸ್ಥಾನ, ಮನೆ (ಅತ್ತ ಸುರೇಶ್ವರ ಆವಸಥಂ ಇತ್ತ ಮಹೀತಳಂ ಉತ್ತ ಪನ್ನಗೋದಾತ್ತಸಮಸ್ತಲೋಕಂ: **ಪಂಪಭಾ,** ೧. ೭೫)

ಆವಳಿ – [ನಾ] ಸಾಲು, ಸಮೂಹ (ಇರುಳ್ ಶಶಿರುಚಿಯಂ ಪರಿಭವಿಸಿ ನಭಮನಡರ್ದುವು ನರೇಂದ್ರತಾಪಸ ತಪೋಮಯೂಖಾವಳಿಗಳ್: **ಪಂಪಭಾ,** ೮. ೧೦)

ಆವಳಿಕ – [ನಾ] [ಜೈನ] ಆವಲಿ, ಒಂದು ಕಾಲಪ್ರಮಾಣ, ಅಸಂಖ್ಯಾತ ಸಮಯಗಳು ಸೇರಿ ಒಂದು ಅವಲಿ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾನುಕ್ರಮದಿಂ: **ಆದಿಪು,** ೬. ೪೮ ವ)

ಆವಾಪ – [ನಾ] ವಿದೇಶಾಂಗ ವ್ಯವಹಾರ (ನಿರಂತರಂ ತಂತ್ರಾವಾಪ ಚಿಂತಾಂತರಾಯಪ್ರಾಯಸುಖಲವದೊಳ್ ಈ ಮಹೀರಾಜ್ಯದೊಳ್ ನಿಱಿಸುವುದುಂ: **ಆದಿಪು,** ೮. ೮ ವ) {ಈ ಶಬ್ದಕ್ಕೆ ಎಲ್. ಬಸವರಾಜು **'**ನಡುವುದು**'** ಎಂಬ ಅರ್ಥ ನೀಡುತ್ತಾರೆ]

ಆವಾಪ್ತಿ – [ನಾ] ಪ್ರಾಪ್ತಿ, ಲಾಭ (ವಿಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪಹೃತ್ಪಾದಾಬ್ಜಂ ದಯೆಗೆಯ್ವನಕ್ಕೆ ಎಮಗೆ ಮುಕ್ತಿಶ್ರೀ ಸುಖಾವಾಪ್ತಿಯಂ: **ಆದಿಪು,** ೧. ೧)

ಆವಿರ್ಭಾವಿತ – [ಗು] ಹುಟ್ಟಿದ, ಮೂಡಿದ (ಕ್ರೋಶ ದ್ವಿಕ್ರೋಶ ಸೀಮಾಭಾಗಯೋಜನ ಪಂಚಶತಕುಟುಂಬಕುಲ

ಆವಿರ್ಭಾವಿತ ಅಧಮೋತ್ತಮ ಭೇದಂಗಳುಮಂ: **ಆದಿಪು,** ೮. ೬೩ ವ)

ಆವಿರ್ಭೂತ – **[ಗು]** ಉತ್ಪನ್ನವಾದ (ಶೌರ್ಯಾವಿರ್ಭೂತ ದವಾನಳನಾವನ ಚತುರಂಗಬಲಮನಿಂ ಸುಟ್ಟಪುದೋ: **ಆದಿಪು,** ೧೪. ೫)

ಆವಿಲ – **[ಕ್ರಿ]** ಕದಡಿದ, ಒಂಡು (ಕೌರವಕುಲಹಿಮಕರ ಆವಿಲಪ್ರಚಯವರ್ಷವಾರಿದನಪ್ಪ ಪವನತನಯಂ ಬದ್ಧವಪುವಾಗಿ ದುರ್ಯೋಧನಾನುಜರಂ ಪೆರ್ವೆಸರೊಳೆ ಕರೆದು ಮೂದಲಿಸೆ: **ಪಂಪಭಾ,** ೧೨. ೧೪೪ ವ); ಕಶ್ಮಲ (ಕೌರವಕುಲ ಹಿಮಕರ ಆವಿಲಪ್ರಚಯ ವರ್ಷವಾರಿದನಪ್ಪ ಪವನತನಯಂ ಬದ್ಧವಪುವಾಗಿ: **ಪಂಪಭಾ,** ೧೨. ೧೪೪ ವ)

ಆವಿಷ್ಕೃತ – **[ಕ್ರಿ]** ಉಂಟಾದ (ಅಳಕೋತ್ಸಾರಿತ ಕೇಶಸಂಯಮನ ನೀವೀಬಂಧನಾವಿಷ್ಕೃತ ಸ್ಖಳಿತಂ: **ಆದಿಪು,** ೪. ೬೦)

ಆವಿಳ – **[ಗು]** ಕದಡಿದ (ಸಮುನ್ಮಿಷದ್ವಿವಿಧ ರತ್ನಮಾಲಾ ಪ್ರಭಾಭಿದಾರುಣ ಜಲಪ್ಲವಾವಿಳ ವಿಲೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ: **ಪಂಪಭಾ,** ೧. ೫೧ ವ) [ಈ ಗದ್ಯಭಾಗವನ್ನು ಪೃಥ್ವೀ ವೃತ್ತವೆಂದು ಗುರುತಿಸಿ ಪರಿಷತ್ತಿನ ಮುದ್ರಣದಲ್ಲಿ ಅಡಿಟಿಪ್ಪಣಿಯಾಗಿ ನೀಡಲಾಗಿದೆ]; **[ಗು]** ಕಲುಷಿತವಾದ, ಬಗ್ಗಡವಾದ (ಬಾಡಬಾನಳ ಆವಿಳಜಳಮಂ ಮನಂ ಬಯಸಿ ನೋಡಿದಂ ಅರ್ಣವಮಂ ಗುಣಾರ್ಣವಂ: **ಪಂಪಭಾ,** ೪. ೨೫)

ಆವುತಿ – **[ನಾ]** ಒಂದು ಬಗೆಯ ಅಯುಧ (ಬೀಸುವ ಆವುತಿಯ ಕಳಂಕಪಂಕದೊಳೆ ಪೆರ್ಚಿದ ಕಟ್ಟಲೆ ತೀವ್ರಶಸ್ತ್ರಸಂಹತಿಗಳ ದೀಪ್ತಿಯಿಂ ಬಿಸುಗೆಯಾಗೆ: **ಪಂಪಭಾ,** ೧೦. ೫೦)

ಆವುದು – **(ಸ)** ಯಾವುದು, ಏನು (ನೀನಾರ್ಗೆ ಏನೆಂಬೆ ಆವುದು ಕಾರಣದಿಂದಮೆನ್ನ ದೊಣೆಯಂ ಪೊಕ್ಕಿರ್ದೆ: **ಪಂಪಭಾ,** ೧೨. ೨೦೩ ವ)

ಆವುದು ಗಹನಂ – ಯಾವ ಮಹಾ, ಏನು ಮಹತ್ತರವಾದುದು (ಎಂಬುದುಂ ಈ ಬೆಸಂ ಅದಾವುದು ಗಹನಂ ಎಂದು ಪೂಣ್ದು ಪೋಗಿ: **ಪಂಪಭಾ,** ೨. ೬೧ ವ);

ಆವೃತ – **[ಗು]** ಹೊದಿಸಲ್ಪಟ್ಟ (ಅಂತು ವಲ್ಕಲ ಆವೃತ ಕಟಿತಟನುಮಾಗಿರ್ದ ಜಟಾಕಲಾಪನುಮಾಗಿ ತಪೋವನಕ್ಕೆ ಪೋಪ ಭಾರ್ಗವಂ: **ಪಂಪಭಾ,** ೨. ४೫ ವ)

ಆವೆ – **[ನಾ]** ಆಮೆ, ಕೂರ್ಮ (ಮೀನ್ ಆವೆ ಪಂದಿ ಎಂದು ಎನಿತಾನುಂ ತೆಱನಾಗಿ ಡೊಂಬವಿದ್ಯೆಯನಾಡಲ್ ನೀನಱಿವೆ: **ಪಂಪಭಾ,** ೭. ೫೭)

ಆವೆಡೆ – **(ಸ)** ಎಲ್ಲಿ (ಅದಱಿಂ ಜೀವಮೆಂಬುದೆಲ್ಲಿತ್ತು ಪರಲೋಕಮೆಂಬುದಾವೆಡೆಯದು ಅದರ್ಕೆ ಕಾರಣಮಪ್ಪ ಪಾಪಪುಣ್ಯಂಗಳೆತ್ತಣಿಂ ಬಂದುವು: **ಆದಿಪು,** ೨. ೯ ವ)

ಆವೇಗ – **[ನಾ]** ಉದ್ವೇಗ, ತೀವ್ರತೆ (ಆ ಶೋಕಾವೇಗಮನಾಱಿಸಿ ಬಂದ ವಿದ್ಯಾಧರರಂ ಯಥೋಚಿತಪ್ರತಿಪತ್ತಿಗಳಿಂ ಸಂತೋಷಂಬಡಿಸಿ: **ಆದಿಪು,** ೪. ೮೯ ವ); **[ನಾ]** ತ್ವರೆ, ಸಂಭ್ರಮ (ಕಾದಲ್ ನಡೆತರ್ಪ ಆವೇಗದೊಳ್ ಮಮ್ಮಟಿಸಿದ ಪಲವುಂ ರಾಜಚಿಹ್ನಂಗಳಂ ಬೆಳ್ಗೊಡೆಗಳ್ ತಳ್ವೊಯ್ದು ಅದೇಂ ಕಣ್ಗೊಳಿಸಿದುದೋ: **ಪಂಪಭಾ,** ೧೩. ೩೮)

ಆವೇಷ್ಟಿತ – **[ಗು]** ಸುತ್ತುವರಿದ (ತಾರಾನಿಕರ ಆವೇಷ್ಟಿತ ತಾರಾಪತಿಯಂ ಸಮಸ್ತಸುರಲೋಕಮುಮಂ ನೇರಿತ್ತು ಬೆಳಗಿ ಪೋಪುದಂ: **ಆದಿಪು,** ೧೬. ೪೬); **[ನಾ]** ರಕ್ಷಣೆ (ಪೆಸರೊಳ್ ಲಕ್ಷ್ಮಿಯೆಂ ಇನ್ನೆಗಂ ನೆಲಸಿ ತಾಂ ದುರ್ಯೋದನೋರುಸ್ಥಳ ಅವಸಥಂ ದ್ರೋಣ ನದೀಜ ಕರ್ಣಭುಜವೀರ್ಯಾವೇಷ್ಟಿತಂ ಮಾಡೆ ಸಂತಸದಿಂದಿರ್ದೆಂ: **ಪಂಪಭಾ,** ೧೩. ೧೦೦)

ಆವ್ಯಾನ – **[ಗು]** ಮುಚ್ಚಿದ, ಆವೃತ (ನೀನಪ್ಪುದನಱಿಯದೆ ದಾನವಮಾನವಸುರೇಂದ್ರಮಣಿಮಕುಟತಟ ಆವ್ಯಾನಪದಂಗೆ ಆ ನೆಗೞ್ದುದಂ ಆನೇತಱೊಳ್ ಎಂತು ನೀಗುವೆಂ ನೀಂ ಬೆಸಸಾ: **ಪಂಪಭಾ,** ೮. ೨೫)

ಆಶಂಕೆ – **[ನಾ]** ಸಂದೇಹ, ಅನುಮಾನ (ಗದೆಯೊಳ್ ಘಟ್ಟಿಸೆ ಪುಟ್ಟಿದ ಉಳ್ಕತತಿ ನೀಳ್ದಾಕಾಶಮಂ ತಾಪಿನಂ ಪುದಿದು ಆ ದೇವರ ಕಣ್ಣೊಳುಳ್ಕಿ ವಿಳಯೋಳ್ಕಾಶಂಕೆಯಂ ಮಾಡೆ: **ಪಂಪಭಾ,** ೧೩. ೯೪)

ಆಶಯ – **[ನಾ]** ಅಭಿಪ್ರಾಯ (ಅಂಭೋಧಿಯಂತೆ ಗಂಭೀರಾಶಯರುಂ ಆದಿತ್ಯನಂತೆ ನಿರ್ಧೂತತಮಸ್ತಮರುಂ ಚಂದ್ರನಂತೆ ಸರ್ವಸತ್ತ್ವಸೌಮ್ಯರುಂ: **ಆದಿಪು,** ೪. ೯೫ ವ); ಹೃದಯ (ಸಕಳಕಳಾಪ ವಿದ್ಯೋಪದೇಶೋತ್ಸುಕ ಆಶಯಕುಶೇಶಯನಾಗಿರ್ಪನ್ನೆಗಂ: **ಆದಿಪು,** ೮. ೫೫ ವ); ಕೊಳ (ಜಳಮಂತ್ರಮಂತ್ರಿತ ಆಶಯಜಳದೊಳ್ ನರನಿನಿಸು ಮುಟುಗೆ: **ಪಂಪಭಾ,** ೧೧. ೧೧೧)

ಆಶಯಕುಶೇಶಯ – **[ನಾ]** ಹೃದಯ ಕಮಲ (ಸಕಳಕಳಾಪ ವಿದ್ಯೋಪದೇಶೋತ್ಸುಕ ಆಶಯಕುಶೇಶಯನಾಗಿರ್ಪನ್ನೆಗಂ: **ಆದಿಪು,** ೮. ೫೫ ವ)

ಆಶಾ – **[ನಾ]** ದಿಕ್ಕು (ಇದಿರೊಳ್ ಕಟ್ಟಿದ ತೋರಣಂ ನಿಜೆದಳಿರ್ ಪೂಗೊಂಚಲ್ ಅಂದಂಬೆತ್ತಿದ ಪೂಮಾಲೆ ಪರಾಗರಾಗಮುದಿತ ಆಶಾ ಭಾಸಂ: **ಪಂಪಭಾ,** ೫. ೬)

ಆಶಾಂಗನೆ – **[ನಾ]** [ಜೈನ] ದಿಗಂಗನೆ (ಮಂಗಳಮನೆ ಪಾಡುತ್ತುಂ ಮಂಗಳಧಾರಿಣಿಯರಾಗಿ ಮುಂದಂ ನಡೆವಾಶಾಂಗನೆಯರಿಂದೆ: **ಆದಿಪು,** ೭. ೪೮)

ಆಶಾಂತ – **[ನಾ]** ದಿಗಂತ (ಶರದ್ವಿಧುವಿಶದ ತದೀಯ ಯಶಃಪ್ರಸರಕ್ಕವಕಾಶಂಗುಡುವಂತೆ ಜಲಧರಪಟಲ ನಿರೋಧರಹಿತಂ ಆಕಾಶಂ ಅತಿಪ್ರಕಾಶಿತಾಶಾಂತಮಾಗೆ: **ಆದಿಪು,** ೭. ३೬ ವ)

ಆಶಾಂತರ – **[ನಾ]** ದಿಕ್‌ಪ್ರದೇಶ (ವನಧಿಪ್ರಧ್ವಾನದಿಂ ಮಂಗಳಪಟಹರವಂ ಪೆರ್ಚೆ ಮಾಂಗಲ್ಯಗೇಯಧ್ವನಿಯಿಂದೆ ಆಶಾಂತರಂ ಘೂರ್ಣಿಸಿ ಸೊಗಯಿಸೆ: **ಪಂಪಭಾ,** ೧೪. ೧೮)

ಆಶಾಂಬರಭಾಗ – **[ನಾ]** ದಿಗ್ವಿಭಾಗ, ದಿಕ್ಕುಗಳ ಆಕಾಶಪ್ರದೇಶ (ವಾಜಿರಾಜಿಶ್ರವಣ ಚಮರಜಶ್ರೇಣಿ ಸಂವೀಜಿತ ಆಶಾಂಬರಭಾಗಂ: **ಆದಿಪು,** ४. ೨೪)

ಆಶಾಗಜೇಂದ್ರ – **[ನಾ]** ದಿಕ್ಕರಿ (ನೆಲನಂ ನುಂಗವ ಮೇರುವಂ ಕೀೞ್ವ ಆಶಾಗಜೇಂದ್ರಂಗಳಂ ಚಲದಿಂ ಕಟ್ಟುವ ಸಪ್ತಸಪ್ತಿಯಂ ಇಳಾಭಾಗಕ್ಕೆ ತರ್ಪ: **ಪಂಪಭಾ,** ೭. ೭)

ಆಶಾಚಕ್ರ – [ನಾ] ದಿಕ್ಚಕ್ರ, ದಿಙ್ಮಂಡಲ (ಸುರಕಾಂತಾನೃತ್ಯಮೆತ್ತಂ ಪಸರಿಸಿರೆ ನಭೋಭಾಗದೊಳ್ ದೇವತೂರ್ಯಸ್ವರಂ ಆಶಾಚಕ್ರದೊಳ್ ಬಳ್ವಳಬಳೆದಿರೆ: **ಆದಿಪು,** ೮. ೬೭)

ಆಶಾವಧು – [ನಾ] [ಜೈನ] ರುಚಕಾಚಳದ ಪಶ್ಚಿಮದಿಕ್ಕಿನ ಎಂಟು ಕೂಟಗಳ ದೇವಿಯರು (ದ್ವಿಗುಣ ಚತುಃಕೂಟಂಗಳೊಳಂ ಸಂಚರಿಸುವ ಇಳಾದೇವಿ ಸುರಾದೇವಿ ಪೃಥ್ವಿ ಪದ್ಮಾವತಿ ಕಾಂಚನೆ ನವಮಿಕೆ ಸೀತೆ ಭದ್ರೆ ಎಂಬ ಎಣ್ಬರುಂ ಆಶಾವಧೂವರರಂ: **ಆದಿಪು,** ೭. ೩ ವ)

ಆಶೀರ್ಘೋಷ – [ನಾ] ಆಶೀರ್ವಾದ (ದಾನಪ್ರಮೋದ ವಾಚಾಳಷಟ್ಚರಣ ಚಾರಣ ಗಣೋಚ್ಚಾರ ಝಂಕಾರಜಯಾಶೀರ್ಘೋಷಮುಮಪ್ಪ ವಿಜಯಗಜದ ಬೆಂಗೆ ವಂದು: **ಆದಿಪು,** ೧೪. ೯೦ ವ)

ಆಶೀಸ್ತವ – [ನಾ] ಆಶೀರ್ವಾದ (ಸುರಜಯಸ್ತೋತ್ರಂ ಸುರ ಆಶೀಸ್ತವಂ ಸುರರಾಜೇಂದ್ರಮಹಾವಿಭೂತಿ: **ಆದಿಪು,** ೧೩. ೯೨)

ಆಶು – [ಕ್ರಿವಿ] ಬೇಗನೆ, ಜಾಗ್ರತೆ (ಪ್ರಚಂಡಲಯತಾಂಡವ ಕ್ಷುಭಿತಯಾಶು ಯಸ್ಯಾನಯಾ: **ಪಂಪಭಾ,** ೪. ೨೭)

ಆಶುಶುಕ್ಷಣಿ – [ನಾ] ಬೆಂಕಿ, ಅಗ್ನಿ (ಒಣಗಿದುದೊಂದು ಪೆರ್ವಿದಿರ ಪೆರ್ವೊದಜೆಂ ಮೊರೆದುರ್ವುವ ಆಶುಶುಕ್ಷಣಿಯವೊಲ್ ಖಟ್ಗನಿವಹಕ್ಕೆ ರಥಕ್ಕೆ ದಟಿಕ್ಕೆ: **ಪಂಪಭಾ,** ೧೧. ೯೪)

ಆಶೆವಡು – [ಕ್ರಿ] ಬಯಸು, ಇಚ್ಚಿಸು (ಭವ್ಯಜನಂಗಳ್ ಆಶೆವಡುತಿರ್ಪ ಆರ್ಹಂತ್ಯಮುಂ ಸಾರ್ಗುಂ: **ಆದಿಪು,** ೪. ೯೯)

ಆಶೈಶವ – [ಅ] ಬಾಲ್ಯದಿಂದಲೂ (ಆಶೈಶವ ಪ್ರಭೃತಿಪ್ರರೂಢ ನಿರ್ಭರಪ್ರೇಮರಸರುಂ ಅನೇಕ ಅರ್ಥಶಾಸ್ತ್ರ ಪ್ರಯೋಗಕುಶಲರುಂ: **ಆದಿಪು,** ೧, ೮೧ ವ)

ಆಶ್ಲಿಷ್ಟ – [ಗು] ಕೂಡಿದ (ಆಯತ ಪೃಥುಪಿಬಸ್ತಾನು ಉಪದಿಗ್ಧಾಂದಪೂರ್ವಪೀನ ರಕ್ತಾರ್ರೋಮಾಶ್ಲಿಷ್ಟಸಮಾಸಮ ಸಗದನುಂ: **ಆದಿಪು,** ೧೨. ೫೬ ವ)

ಆಶ್ವಾಸ – [ನಾ] ಕಾವ್ಯದ ವಿಭಾಗ (ಅನಶ್ವರಾವಾಸಮಂ ಎಯ್ದಿಸಲ್ಕಿದುವೆ ಷೋಡಶಭಾವನೆಯಿಂದೆ ಷೋಡಶಾಶ್ವಾಸಮನೆಯ್ದೆ ಭಾವಿಸುಗೆ ಭವ್ಯರನಂತ ಸುಖಾಭಿಲಾಷಿಗಳ್: **ಆದಿಪು,** ೧೬. ೮೧)

ಆಷಾಢ – [ನಾ] ಒಂದು ಚಾಂದ್ರಮಾನ ತಿಂಗಳು (ಗರ್ಭಾವತರಣಂ ಆಷಾಢ ಬಹುಳ ಬಿದಿಗೆಯುತ್ತರಾಷಾಢ ನಕ್ಷತ್ರದ ಬೆಳಗಪ್ಪ ಜಾವದೊಳ್: **ಆದಿಪು,** ೭. ೩೨ ವ)

ಆಸಂಗ – [ನಾ] ಸೇರುವಿಕೆ, ಕೂಡಲು (ರಂಗತ್ತುಂಗತರಂಗ ಭಂಗುರಲಸತ್ ಗಂಗಾಜಳಂ ನರ್ಮದಾಸಂಗ ಸ್ವಚ್ಛವನಂ: **ಪಂಪಭಾ,** ೧೪. ೩೧)

ಆಸಂದಿ – [ನಾ] ಪೀಠ (ಸೌಂದರಾನೇಕಮಣಿರುಚಿಜಳಸ್ಯಂದಿಯಂ ಮಂದರೋತ್ತುಂಗಕಂಠೀರವಾಸಂದಿಯಂ: **ಆದಿಪು,** ೭. ೨೭ ರಗಳೆ)

ಆಸನ – [ನಾ] ೯ಠ (ವಾಸವಂ .. .. ಆಸನದಿಂದೆರ್ದು ಮೂಱು ಸೂಟಿಬ್ ಪೊಡೆವಟ್ಟಂ: **ಆದಿಪು,** ೭. ୪೧); [ನಾ] ಆನೆಯ ಹೆಗಲು (ಪೀನಾಯತಾಮ್ರಪಲ್ಲವ ಕೋಶ ಸುಕೋಶ ಮೇಹನನುಂ ವಿಪುಳಾಸನನುಂ: **ಆದಿಪು,** ೧೨. ೫೬ ವ); [ನಾ] ಉದಾಸೀನತೆ (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ: **ಪಂಪಭಾ,** ೧೦. ೭೮)

ಆಸನಂದೋಱು – [ಕ್ರಿ] ಯುದ್ಧದಲ್ಲಿ ಉಪೇಕ್ಷೆಯನ್ನು ಅಥವಾ ತಾಟಸ್ಥ್ಯವನ್ನು ತೋರಿಸು (ಆಸನಂದೋಱುವ ಬಲ್ಪುದೋಱುವ ಎರ್ದೆದೋಱುವ ಕಯ್ಪೆಸರಂಗಳ್ ಎಮ್ಮನುಂತೇಱವು: **ಪಂಪಭಾ,** ೮. ೨೦)

ಆಸನಕಂಪ – [ನಾ] [ಜೈನ] ತೀರ್ಥಂಕರನ ಜೀವಿತದ ವಿಶೇಷ ಪ್ರಸಂಗಗಳಲ್ಲಿ ಆಗುವ ದೇವೇಂದ್ರನ ಪೀಠದ ಅಲುಗಾಟ (ವಾಸವನ ಆಸನಕಂಪದಿಂ ಆ ಸಮಯದೊಳು ಅವಧಿಯಂ ಪ್ರಯೋಗಿಸಿ ಬೋಧಾವಾಸಪ್ರಿಯನ ಉದಯಮನಱಿದು: **ಆದಿಪು,** ೭. ୪೧); [ನಾ] ಪೀಠದ ನಡುಕ, ಅಧಿಕಾರ ಹೋಗುವ ಭಯ (ದೇವೇಂದ್ರಂ ತನಗಾದ ಹೃತ್ಕಂಪದೊಳಂ ಆಸನಕಂಪದೊಳಂ ನರೇಂದ್ರತಾಪಸಂ ತನ್ನಿಂದ್ರತ್ವಮಂ ಕೊಳಲೆಂದು ತಪಂಗೆಯ್ದಪಂ ಎಂಬ ಸಂಕೆಯೊಳ್: **ಪಂಪಭಾ,** ೭. ೮೦ ವ)

ಆಸನ್ನ – [ಗು] ಹತ್ತಿರ (ಪನ್ನೆರಡು ವರುಷದವಧಿಯುಂ ಇಂ ನೆಱಿಯಲ್ ಬಂದುದು ಅಹಿತಂ ಇಳೆಯಂ ಕುಡಂ ಆಸನ್ನಂ ಕಾಳೆಗಂ: **ಪಂಪಭಾ,** ೭. ೬೪)

ಆಸನ್ನಭವ್ಯ – [ನಾ] [ಜೈನ] ಶೀಘ್ರದಲ್ಲಿಯೇ ಮನಃಪರಿಪಾಕವನ್ನು ಹೊಂದುವವನು (ಆತನಭವ್ಯನಲ್ಲಂ ಭವ್ಯನೇ, ಭವ್ಯನಾಗಿಯುಂ ಆಸನ್ನಭವ್ಯಂ: **ಆದಿಪು,** ೨. ೩೫ ವ)

ಆಸನ್ನಮೃತ್ಯು – [ನಾ] ಮೃತ್ಯು ಸಮೀಪವಾಗಿರುವುದು (ವಿದ್ಯಾವಚನದಿಂ ಆತನಾಸನ್ನಮೃತ್ಯುವನಱಿದು: **ಆದಿಪು,** ೨. ೧೪ ವ)

ಆಸವ – [ನಾ] ಮಧು (ಅಭಿನವಪಾರಿಜಾತ ಕುಸುಮ ಆಸವಮೊರ್ಮೊದಲುಣ್ಮೆ: **ಆದಿಪು,** ೨. ೭೩); ಮದ್ಯ (ಮತ್ತಮೊರ್ವಳ್ ಅಭಿನವಯೌವನ ಆಸವಮದವಿಳಾಸ ನಿರಂಕುಶೆ: **ಆದಿಪು,** ೧೧. ೨೦ ವ)

ಆಸವಸೇಕ – [ನಾ] ಮದ್ಯಸೇಚನೆ (ವಾಸವವನಿತಾವದನಾಬ್ಜ ಆಸವಸೇಕಪ್ರಭಿನ್ನಮುಕುಳಂ ವಕುಳಂ: **ಆದಿಪು,** ೮. ೯೭)

ಆಸಱು – [ಕ್ರಿ] ಆಯಾಸಗೊಳ್ಳು (ಆಸತ್ತು ತಿರಿದು ಅರಣ್ಯಾವಾಸದ ಪರಿಭವದ ಕುದಿಪಮಂ ನೀಗಿ ಸುಖಾವಾಸಮನೆಯ್ದಿಸಿದುದು ದುಶ್ಯಾಸನನಿರ್ದಿರವು ಮನದೊಳಾ ದ್ರೌಪದಿಯಾ: **ಪಂಪಭಾ,** ೧೨, ೧೫೨)

ಆಸಾರ – [ನಾ] ತುಂತುರು (ಜಯದ್ಘೋಷಣಂ ಮಂದಮಂದಂ ತೀಡಿತ್ತು ಆಲೋಲ ಗಂಗಾಲಲಿತಲಹರಿಕಾಸಾರಸಾರಂ ಸಮೀರಂ: **ಆದಿಪು,** ೭. ೨೫); [ನಾ] ಜಡಿಮಳೆ (ಇದು ವಿದ್ವಿಷ್ಟಪ್ರತಾಪೋದಯ ದವದಹನೋದ್ರೇಕವಿಧ್ವಂಸಿ ನೀಳಾಂಬದ ಧಾರ ಆಸಾರಂ ಎಂಬಂತೊದವಿದ ಮದಧಾರಾಜಳಸಾರದಿಂ: **ಆದಿಪು,** ೧೨. ೬೧)

ಆಸೀನ – [ನಾ] ಕುಳಿತುಕೊಂಡ (ಉತ್ತುಂಗ ಸಿಂಹಾಸನಾಸೀನಂ: **ಆದಿಪು,** ೨. ೨ ವ)

ಆಸುಕರಂ – [ಕ್ರಿವಿ] ತೀವ್ರತೆಯಿಂದ (ಕೆಯ್ವೀಸಲೊಡಂ ಅಜೆದು ತಾಗಿದುವು ಆಸುಕರಂ ಬೆರಸು ತಡೆಯದುಭಯಬಲಂಗಳ್: **ಪಂಪಭಾ,** ೧೧. ೫೭)

ಆಸುರತರ – [ಗು] ಅತಿ ಭಯಂಕರವಾದ (ಕಹಕಹಧ್ವನಿ ಕೌಳಿಕನಾದಂ ಆದುದು ಆಸುರತರಮಾಗೆ ಬಂದು ಕವಿದತ್ತು ಘಟೋತ್ಕಚರೌದ್ರಸಾಧನಂ: **ಪಂಪಭಾ,** ೧೨. ೭)

ಆಸೆಕಾಱ – [ನಾ] ಆಸೆಯನ್ನು ಹೊಂದಿದವನು (ಬಂದ ಚೆನ್ನಿಗರಂ ಆಸೆಕಾಱರುಮಂ ಒಲ್ಲದೆ: **ಪಂಪಭಾ,** ೧. ೧೦೬)

ಆಸೆಗಾಣ್ – [ನಾ] ಭರವಸೆ ಹೊಂದು (ಆವೆಡೆಯೊಳಂ ಆಸೆಗಾಣೆಂ: **ಪಂಪಭಾ,** ೪. ೧೦೪)

ಆಸೆದೋಱು – [ಕ್ರಿ] ಆಸೆ ತೋರಿಸು (ಪುಸಿದೊಡಂ ಆಸೆದೋಱಿ ಬಗೆದೋಱಿದೊಡಂ: **ಪಂಪಭಾ,** ೪. ೯೨)

ಆಸೆವಾತು – [ನಾ] (ಆಸೆ+ಮಾತು] ಭರವಸೆಯ ಮಾತು (ಆಗಳಂತಃಪುರವೃದ್ಧರವರಂ ಅರಸರೀಗಳೆ ಬಂದಪ್ಪರ್ ಅಂಜದಿರಿಂ ಎಂದು ಆಸೆವಾತುಗಳೊಳಾಱಿಸಿ ನುಡಿದು: **ಆದಿಪು,** ೯. ೭೬ ವ); [ನಾ] ಆಸೆಯನ್ನುಂಟುಮಾಡುವ ನುಡಿ, ಪ್ರೀತಿಯ ನುಡಿ (ಆಸೆವಾತಂ ಎನಗೆ ಓಪನೆ ನೀಂ ದಯೆಗೆಯ್ಯಲಾಗದೇ: **ಪಂಪಭಾ,** ೪. ೯೯)

ಆಸೇವಿತ – [ನಾ] ಸೇವಿಸಲ್ಪಟ್ಟ[ವನು], ಸೇವೆ ಮಾಡಲ್ಪಟ್ಟವನು (ದೇವಬ್ರಹ್ಮಮುನೀಂದ್ರಾಸೇವಿತಂ ಉತ್ತಪ್ತಕನಕವರ್ಣಂ ಹಂಸಗ್ರೀವನಿಹಿತ ಏಕಪಾದಂ ಇಳಾವಂದ್ಯಂ ಅನಿಂದ್ಯಂ ಅಬ್ಜಗರ್ಭಂ ಬಂದಂ: **ಪಂಪಭಾ,** ೧೨. ೧೩೮)

ಆಸ್ತ – [ಗು] ಪ್ರೀತಿಗೊಂಡ (ನವಪ್ರಸವ ಪರಾಗಾಸವಾಸ್ತಭೃಂಗಾಂಗನಾ ಗೀತಂಗಳುಮಂ: **ಆದಿಪು,** ೧೧. ೭೪ ವ)

ಆಸ್ತರಣ – [ನಾ] ಕುಳಿತುಕೊಳ್ಳಲು ಹರಡುವ ಚಾಪೆ ಮುಂತಾದ ಸಾಧನ (ನಿಜವಿಜಯತುರಂಗರಥಂಗಳಂ ಅರ್ಚಿಸಿ ಪೊಡೆವಟ್ಟು ದರ್ಭಾಸ್ತರಣದೊಳ್ ಆ ಇರುಳಂ ಕಳೆದು: **ಪಂಪಭಾ,** ೧೨. ೫೨ ವ)

ಆಸ್ಥಾನಾರವಿಂದಿನಿ – [ನಾ] ಆಸ್ಥಾನವೆಂಬ ಕೊಳ (ಅಂತು ಭಗವತ್ ಆಸ್ಥಾನಾರವಿಂದಿನಿಯಂ ರಾಜಹಂಸನಂತೆ ಅಳಂಕರಿಸುತ್ತುಂ: **ಆದಿಪು,** ೧೪. ೧೩೬ ವ)

ಅಸ್ಥಾಯಿಕೆ – [ನಾ] ಆಸ್ಥಾನ, ರಾಜಸಭೆ (ಕಣ್ಣ ಕೆಂಪುಂ ಭ್ರುಕುಟಿಪ್ರಸಾರಾಂಧಕಾರಮುಂ ದೆಸೆದೆಸೆಗೆಸೆದವು ಬಾಹುಬಲಿನೃಪ ಆಸ್ಥಾಯಿಕೆಯೊಳ್: **ಆದಿಪು;** ೧೪. ೮೩)

ಆಸ್ಪದ – [ನಾ] ಆಶ್ರಯ (ಅದು ಮದದಂತಿ ದಂತಮುಸಲ ಪ್ರವಿಭಗ್ನ ಮಹಾ ಮಹೀರುಹಾಸ್ಪದಂ: **ಪಂಪಭಾ,** ೩. ೧೦)

ಆಸ್ಫಾರ – [ಗು] ಹೊಳೆಯುವ (ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಯತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ,** ೧೩. ೫೧ ವ)

ಅಸ್ಪೃಶ್ಯ – [ನಾ] ಆದಿದೇವನು ವಿಭಾಗಿಸಿದ ಮೂರುವರ್ಣಗಳಲ್ಲಿ ಕೊನೆಯದಾದ ಶೂದ್ರರಲ್ಲಿ ಒಂದು ವರ್ಗ (ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾನಿಯೋಗಂಗಳುಮಂ .. .. ಉಪದೇಶಂಗೆಯ್ದು: **ಆದಿಪು,** ೮. ೬೪ ವ)

ಅಸ್ಪೃಶ್ಯಕರಣ – [ಗು] ಅಂಗಗಳ ಪ್ರಯತ್ನರಹಿತವಾದ (ಅಂದು ಅಪಗತ ತಾಲು ಓಷ್ಠಸ್ಪಂದನಂ ಅಸ್ಪೃಶ್ಯಕರಣವರ್ಣಂ ಜಗದಾನಂದಕರಂ ಜಳಧರರವಸೌಂದರಂ: **ಆದಿಪು,** ೧೦. ೬೩)

ಆಸ್ಫಾಳ – [ನಾ] ಹೊಡೆತ (ಸಮದಕರಿಮಕರಹತಿಯಿಂ ಸಮುಚ್ಚಳತ್ ವೀಚಿಮಾಳಿಕಾಸ್ಫಾಳಾಂತಸ್ಸ್ಥಿಮಿತಾಕ್ಷಗಳಿಂ ಈ ತಿಮಿ ತಿಮಿಂಗಿಳಂಗೆತ್ತು ನೋೞ್ಪುದೀ ಸ್ಯಂದನಮಂ: **ಆದಿಪು,** ೧೨. ೧೨೩)

ಆಸ್ಫಾಳನ – [ನಾ] ಹೊಡೆತ (ಮಹಾವಾಹಿನೀವಾರಣೇಂದ್ರ ಘಟಾನ್ಯೋನ್ಯಸಂಘಟ್ಟ ಘಂಟಾಟಂಕಾರಾಸ್ಫಾಳನದಿಂದಂ ಉದಗ್ರಗಿರಿಗುಹಾಂತರಂಗಳುಂ ಉದೀರ್ಣವಿಕ್ರಮಾರಾತಿ ಕರ್ಣಾಂತರಂಗಳುಂ ವಿಕೀರ್ಣಂಗಳಾಗೆಯುಂ: **ಆದಿಪು,** ೧೩. ೭೭ ವ)

ಆಸ್ಫಾಳನಕರ್ಕಶ – [ನಾ] ತಟ್ಟುವುದರಿಂದ ಒರಟಾಗು (ರಕ್ತಾಶೋಕ ಪಲ್ಲವದಂತೆ ತೊಳತೊಳಗುವ ಅಂಘ್ರೀಕುಚಕಲಶಪಲ್ಲವನ ಕರತಳಪಲ್ಲವಂಗಳ್ ಸಮದಗಜಕುಂಭಶ್ಥಳ ಆಸ್ಫಾಳನ ಕರ್ಕಶಂಗಳಾದುವು: **ಪಂಪಭಾ,** ೨. ೩೯ ವ)

ಆಸ್ಫಾಳಿತ – [ಗು] ಅಪ್ಪಳಿಸಲ್ಪಟ್ಟ (ದುಗ್ಧಪ್ಲವಂ ಸ್ಥೂಳ ಕಲ್ಲೋಳಾಸ್ಫಾಳಿತಹೇಮಶೈಲಂ: **ಆದಿಪು,** ೭. ೯೧)

ಆಸ್ಫೋಟಿಸು – [ಕ್ರಿ] ಕೋಪದಿಂದ ಸಿಡಿ (ಕಾದಿದೊಡಲ್ಲದೆ ಈಯೆಂ ಅಜೆದಿರ್ಕೆ .. .. ಎಂಬುದುಂ ವೃಕೋದರಂ ಮುಳಿದು ಆಸ್ಫೋಟಿಸಿ: **ಪಂಪಭಾ,** ೯. ೯೦ ಮತ್ತು ೯೦ ವ)

ಆಸ್ಯಂದಿ – [ಕ್ರಿ] ಜಿನುಗು (ವಾರಸೌಂದರಿಯರ ಸೂಸುವ ಪರಮಾನಂದಸ್ಮಿತಸುಧಾಸ್ಯಂದಿಸಂತತ ಆರ್ದ್ರಂಗಳಪ್ಪ ಆರ್ದ್ರಾಕ್ಷತ ಸಿತಕುಸುಮಾಂಜಳಿಗಳನಿದಿರ್ಗೊಂಡು: **ಆದಿಪು,** ೪. ೬೧ ವ)

ಆಸ್ರವ – [ನಾ] [ಜೈನ] ಸಪ್ತತತ್ವಗಳಲ್ಲಿ ಒಂದು: ಪುಣ್ಯಪಾಪರೂಪವಾದ ಕರ್ಮವು ಜೀವದೊಳಕ್ಕೆ ಹರಿಯುವುದು (ವಿಸ್ರಸ್ತಬಹಳದೋಷತಮಿಸ್ರರಂ ಅಖಿಳರ್ಧಿಗುಣ ವಿಭೂಷಣರಂ ಪುಣ್ಯಾಸ್ರವಕಾರಣರಂ ಪಿಹಿತಾಸ್ರವ ಮುನಿಪತಿಗಳಂ ಮನಂ ಬಿಡೆ ಕಂಡೆಂ **ಆದಿಪು,** ೩. ೩೬)

ಆಸ್ವಾದನ – [ನಾ] ರುಚಿನೋಡುವಿಕೆ (ಅನ್ನೆಗಂ ಇತ್ತ ಕರ್ಣನುಂ ಉದೀರ್ಣ ವೀರರಸ ಆಸ್ವಾದನದಲಂಪಟನಾಗಿ: **ಪಂಪಭಾ,** ೧೨. ೧೧೬ ವ)

ಆಹತ – [ಗು] ಹೊಡೆಯಲ್ಪಟ್ಟ (ಚಳತ್ ಅನಿಳ ಆಹತ ಕ್ಷುಭಿತ ಭಂಗುರತುಂಗತರಂಗಮಾಳಿಕಾವಳನ: **ಪಂಪಭಾ,** ೪. ೨೫)

ಆಹತಿ – ಹೊಡೆತ (ಅಂಭೋಧಿವೇಲೆ ಭೋರ್ಗರೆವವೊಲ್ ಒರ್ಮೊದಲೆಸೆದವು ಘನಪಥದೊಳ್ ತ್ರಿದಶಕರ ಆಹತಿಯಿಂ ಒಡನೆ ಸುರದುಂದುಭಿಗಳ್: **ಪಂಪಭಾ,** ೧. ೧೪೬)

ಆಹವ – [ನಾ] ಯುದ್ಧ (ಗಾಣರ ಗೇಯಂ .. .. ಓಪಳ ಸೋಂಕು .. .. ಕಂಪು ಕಂಪನೊಳಕೊಂಡವೊಂದೆಲರೆಂಬಿವು ಅಂದು ಪಾಱಿಸುವುವು ಉದಗ್ರವೀರಭಟರ ಆಹವಕೇಳಿ ಪರಿಶ್ರಮಂಗಳಂ: **ಪಂಪಭಾ,** ೧೧. ೪)

ಆಹವವ್ಯಾಪಾರ – [ನಾ] ಯುದ್ಧೋದ್ಯೋಗ (ಅಂತು ಯುಧಿಷ್ಠಿರಂ ನಿಷ್ಠಿತಾಹವವ್ಯಾಪಾರನಾಗಿ ಮಧುಕೈಟಭಾರಾತಿಯಂ ಬೀಡಿಂಗೆ ಪೋಗಲ್ವೇಟ್ಟು: **ಪಂಪಭಾ**, ೧೨. ೩೨ ವ)

ಆಹಾರ[ದಾನ] – [ನಾ] ನಾಲ್ಕು ಬಗೆಯ ದಾನಗಳಲ್ಲಿ ಒಂದು, ಸತ್ಪಾತ್ರರಿಗೆ ಆಹಾರವನ್ನು ಕೊಡುವುದು (ಕುಡುವುದುಂ ಆಹಾರ ಅಭಯ ಭೈಷಜ್ಯ ಶಾಸ್ತ್ರದಾನದಿಂ ಚತುರ್ವಿಧಮಕ್ಕುಂ: **ಆದಿಪು**. ೧೦. ೯ ವ)

ಆಹಾರ್ಯ – [ನಾ] [ವೇಷಭೂಷಣಗಳಿಂದ ಕೂಡಿದ] ಅಭಿನಯದ ಒಂದು ಬಗೆ (ಅಂಗೋಪಾಂಗಂಗಳೊಳ್ ಎಸೆವ ಆಂಗಿಕಮಂ ಗಾನಪಾಠ್ಯದೊಳ್ ವಾಚಿಕಮಂ ತುಂಗಕುಚೆ ಮೆಱೆದಳಾ ದಿವಿಜಾಂಗನೆಗೆ ಆಹಾರ್ಯ ಸಾತ್ವಿಕಂ ನಿಜಮೆ ವಲಂ: **ಆದಿಪು**, ೯. ೨೮)

ಆಹುತಿ – [ನಾ] ಹವಿಸ್ಸು (ಇಕ್ಕಿದ ಆಹುತಿಗಳ ಗೊಂದಳದಿಂ ಒಡನೊಗೆದ ಪೊಗೆಗಳ್ ಬಳಸಿದುವೆಡೆವಿಡದೆ ಕನಕಯೂಪಮನಾಗಳ್: **ಪಂಪಭಾ**, ೬. ೩೫)

ಆಹೂತ – [ಗು] ಆಹ್ವಾನಿಸಲ್ಪಟ್ಟ (ಭೂತಳೋದ್ದೇಶದೊಳ್ ಉತ್ಪತ್ಸ್ಯಮಾನ ಭಾವಿತೀರ್ಥಕರಪುಣ್ಯದೂತಾಹೂತಂ ಪುರುಹೂತಂ ಬಂದು: **ಆದಿಪು**, ೬. ೮೮ ವ); [ಗು] ಆರಂಭಿಸಿದ (ಆದಿದೇವಂ ಇಕ್ಷುರಸಸಂಗ್ರಹಣ ಸಮಯಾಹೂತ ಭೂತಳನಪ್ಪುದಱಿಂ ಇಕ್ಷ್ವಾಕುಕುಳತಿಳಕನುಂ: **ಆದಿಪು**, ೮. ೭೫ ವ)

ಆಹ್ವಾನಂಗೆಯ್ – [ಕ್ರಿ] ಪ್ರಾರ್ಥಿಸಿ ಕರೆ (ಅಂತು ಕೊಟ್ಟ ಅಯ್ದು ಮಂತ್ರಂಗಳಂ ಆಹ್ವಾನಂಗೆಯ್ದು ನಿನ್ನ ಬಗೆಗೆ ಬಂದ ಪೋಲ್ವೆಯ ಮಕ್ಕಳಂ ಪಡೆವೆ ಎಂದು ಬೆಸಸಿದೊಡೆ: **ಪಂಪಭಾ**, ೧. ೮೯ ವ)

ಆಳ್ – [ನಾ] ಪ್ರಜೆ (ನೀಂ ಆಳ್ಗಳಿರ್ ಆನೆ ನಿಮ್ಮ ಕುಲಪತಿಯೆನಗೆ ಮಲೆವರುಮೊಳರೇ: **ಆದಿಪು,** ೧೨. ೯೫); [ಕ್ರಿ] ಆಜ್ಞೆಮಾಡು (ತಮಿಸ್ರಗುಹಾಕೂಟಸ್ಥಿತನಂ ನೀನೆನ್ನನಾಳ್ವುದು ಆಳ್ವೆಸಗೆಯ್ವೆಂ: **ಆದಿಪು**, ೧೩. ೨೯); [ಕ್ರಿ] ಹೊಂದು (ಆತಂ ನಿಜವಿಜಯಖ್ಯಾತಿಯನಾಳ್ದು ಆಳ್ದನಧಿಕಬಲನವನಿಪತಿವ್ರಾತ ಮಣಿ ಮಕುಟ ಕಿರಣದ್ಯೋತಿತ ಪಾದಂ ಸಪಾದ ಲಕ್ಷಕ್ಷಿತಿಯಂ: **ಪಂಪಭಾ**, ೧. ೧೬); [ಕ್ರಿ] ಅಧಿಕಾರ ನಡೆಸು (ವಾರಿಧಿಪರೀತ ಮಹೀತಳಮಂ ನಿಮಿರ್ಚಿ ಜೆಟ್ಟಿಗರಂ ಅಯೋನಿಸಂಭವರಂ ಆಳ್ದು ಅರಿವರ್ಗದೊಳಾಂತು ಕಾದೆಯುಂ: **ಪಂಪಭಾ**, ೧೩. ೧೦೩)

ಆಳಜಾಳ – [ನಾ] ಸುಳ್ಳು ಬಲೆ (ಭೀಮನೆಚ್ಚ ನಚ್ಚಿನ ಘನಬಾಣಜಾಳಮದು ಭೋಂಕನೆ ನೋಡುವೊಡೆ ಆಳಜಾಳವಾಯ್ತೆನೆ ಕಡಿದೊಟ್ಟಿ ಸುಟ್ಟುವು ಪತತ್ರಿಗಳಂ ಗುರುಪುತ್ರನಂಬುಗಳ್: **ಪಂಪಭಾ**, ೧೨. ೬೮)

ಆಳವಾಳ – [ನಾ] ಪಾತಿ (ಮೆಲ್ಲನೆ ವಕುಲ ಆಳವಾಳತಳದೊಳ್ ಸುರಿದ ಅಂಬುಜಸೂತ್ರದಿಂದೆ ಮತ್ತನಿತಱೊಳಂ ಮುಗುಳ್ಗಳಿಗೆ ತೋಳ್ವಳೆ ಕಂಕಣವಾರಮೆಂದು ಬೇಟ್ವನಿತನೆ ಮಾಡಿ: **ಪಂಪಭಾ**, ೨. ೧೬)

ಆಳಾನಸ್ತಂಭ – [ನಾ] ಆನೆಯನ್ನು ಕಟ್ಟುವ ಕಂಬ (ದೇವೇಂದ್ರನ ಐರಾವತ ಆಳಾನಸ್ತಂಭಸಮಾನಂಗಳಪ್ಪ ಭುಜಸಂದೋಹಂಗಳೊಳ್: **ಆದಿಪು**, ೭. ೧೨೪)

ಆಳಾಪ – [ನಾ] ಧ್ವನಿ (ನೂಪುರಾಳಾಪಶೂನ್ಯಂ ಲಲಿತಾಂಗಂ ಪೋದೊಡೆ ಆಯ್ತಾಕೆಗೆ ದಿವಮನಿತುಂ ನಿರ್ಜನಾರಣ್ಯಶೂನ್ಯಂ: **ಆದಿಪು**, ೩. ೧೩); [ನಾ] ಮಾತು, ಸಂಭಾಷಣೆ (ಮಹೀಪಾಳರೊಳಾದ ಕಾರ್ಯಗತಿಗಳ್ ಬಗೆಯಲ್ಕೆ ಬಹುಪ್ರಕಾರಮೋ ಎಂಬ ಪುರಜನ ಆಳಾಪಂಗಳ್ ನೆಗೞೆ: **ಪಂಪಭಾ**, ೯. ೬ ಮತ್ತು ೬ ವ)

ಆಳಾಪನ – [ನಾ] ಸಂಭಾಷಣೆ (ನೇತ್ರತ್ರಿಭಾಗಕಟಾಕ್ಷ ಸಮಗ್ರೇಕ್ಷಣ ಭ್ರೂವಿಭ್ರಮದರಹಸಿತ ಆಳಾಪನ ಪರಿಹಾಸ ವಿಸ್ರಂಭಾಳಾಪಂಗಳಿಂ ಸಂತಸಂಬಡಿಸುತ್ತುಂ: **ಆದಿಪು,** ೧೧. ೨೫ ವ)

ಆಳಿಸು – [ಕ್ರಿ] ಕಟ್ಟಿಹಾಕು (ಆ ತ್ರಿಲೋಕತಿಳಕನ ಮನೋಮದೇಭಮಂ ತಮ್ಮ ರಂಭಾಸ್ತಂಭಾಯಮಾನ ಊರುಸ್ತಂಭಂಗಳೊಳ್ ಆಳಿಸಿಯುಂ: **ಆದಿಪು**, ೮. ೨೪ ವ); [ಕ್ರಿ] [ರಾಜ್ಯವನ್ನು] ಆಳುವಂತೆ ಮಾಡು (ಪಾಂಡುರಾಜಂಗೆ ಧೃತರಾಷ್ಟ್ರನಂಗಹೀನನೆಂದು ವಿವಾಹದೊಸಗೆಯೊಡನೆ ಪಟ್ಟಬಂಧದೊಸಗೆಯಂ ಮಾಡಿ ನೆಲನನಾಳಿಸೆ: **ಪಂಪಭಾ,** ೧. ೧೦೭ ವ); [ಕ್ರಿ] ಆಳಿಕೆಯನ್ನು ನಡೆಸು (ಪಟ್ಟಮಂ ತಡೆಯದೆ ಕಟ್ಟಿ ಭೂತಳಮನಾಳಿಸದಿರ್ದಡೆ ಅದರ್ಕೆ ಸೊರ್ಕಿ ನೀಂ ನುಡಿಯದಿರಣ್ಣ: **ಪಂಪಭಾ**, ४. ೬)

ಆಳೈಸು – [ಕ್ರಿ] ಆಲಾಪಿಸು (ಗಿಳಿಗಳೊಳೆ ಗೞಪಿ ಮೊಱೆವಳಿಕುಳದೊಡನೆ ಆಳೈಸಿ ಪುರುಳಿಯೊಡನೆಳಸಿ: **ಆದಿಪು,** ೧೧. ೮೨)

ಆಳೋಕ – [ನಾ] ಪ್ರಭೆ, ಕಾಂತಿ (ಆಳೋಕಗತಾಂಶುವ್ರಾತರತ್ನೋಜ್ಜ್ವಳ ಸುರತರುವಂ ಸ್ವಪ್ನದೊಳ್ ದೇವಿ ಕಂಡಳ್: **ಆದಿಪು**, ೮. ೨೬)

ಆಳೋಕಸಂಭ್ರಮ – [ನಾ] ನೋಡುವ ತವಕ (ಆಳೋಕಸಂಭ್ರಮೋಪೇತ ಪುರಜನಾನುಗಮ್ಯಮಾನಂ ಸೋಮಪ್ರಭರಾಜಮಂದಿರಾಭಿಮುಖನಾಗಿ ಬರ್ಪನ್ನೆಗಂ: **ಆದಿಪು**, ೯. ೧೩೦ ವ)

ಆಳೋಚ – [ನಾ] ಆಲೋಚನೆ (ಇದನೇವಣ್ಣಿದಂ ಶಕ್ರಂ ಎಂಬ ಆಳೋಚಂಬೆರಸಿರ್ಪ ದೇವಗಣಮಂ ನಂಬಿಪ್ಪುದಾಯ್ತಾಗಳ್: **ಆದಿಪು**, ೭. ೯೧)

ಆಳೋಚಂಬೆರಸು – [ಕ್ರಿ] ಆಲೋಚನೆಯಿಂದ ಕೂಡು (ರಾಹುಗೆತ್ತು ಅಗಿದಿರ್ದ ಅಟ್ಟಾಳಿಕೆಗಳಲ್ಲಿ ನಾಡೆಯುಂ ಆಳೋಚಂಬೆರಸು ತಡೆದು ನಡೆವಂ ದಿನಪಂ: **ಆದಿಪು**, ೬. ೧೦೫)

ಆಳೋಳತುಳಾ – [ನಾ] [ಆಲೋಲತುಲಾ] ಅಲ್ಲಾಡುವ ಆಭರಣ (ಮದನಡಿಂಡಿಮರವಾಡಂಬರ ಆಳೋಳತುಳಾಕೋಟಿ ಕ್ವಣಿತಮೆ ನಿಗಳಾಂದುಕಾರವಮಾಗೆ: **ಆದಿಪು**, ೧೧. ೨೦ ವ)

ಆಳ್ತನ – [ನಾ] ಪರಾಕ್ರಮದ [ಮಾತುಗಳು] (ನಿನಗೆ ಅರಸ ಆಳ್ತನಂ ನುಡಿವ ಬೀರರ ಬೀರದಳುರ್ಕೆ ವಿಕ್ರಮಾರ್ಜುನನೊಳ್ ಅದೇಕೆ ಸಲ್ಲದು; **ಪಂಪಭಾ**, ೧೧. ೧೩೮)

ಆಳ್ದಂ – [ನಾ] ಒಡೆಯ, ಪ್ರಭು ಈ ದೊರೆಯನಂ ಆಳ್ದನಂ ಪಡೆವುಪಾಯಮದಾವುದೋ ಜನ್ಮಜನ್ಮದೊಳ್: **ಆದಿಪು,** ೯. ೭೫)

ಆಳ್ಮಾಡು – ೩ ಆಳಾಗಿ ಮಾಡು, ಸೇವೆ ಮಾಡು (ನಾರಾಯಣಂ ತನ್ನಾಳ್ದನಂ ಮಾಡಿ ತಾನಾಳ್ಮಾಡಿಯುಂ: **ಪಂಪಭಾ**, ೨. ೩೯ ವ)

ಆಳ್ವಂ – [ನಾ] ಆಳುವವನು (ಇದು ಪರುದೇವಶಾಸನಂ ಇವರ್ ನಿಮಗಾಳ್ವರುಂ ಇವರ್ ಎನ್ನ ಪೇೞ್ದುದಂ ಇದನಿಂತೆ ನಂಬಿ ಬೆಸಕೆಯ್ವುದು ನೀಂ ಇವರ್ಗೆ: **ಆದಿಪು**, ೯ ೧೨೨)

ಆಳ್ವೆಂ – [ಕ್ರಿ] ಆಳಾಗಿಸಿಕೊಳ್ಳುತ್ತೇನೆ, ಕೆಲಸದವನಾಗಿ ನೇಮಿಸಿಕೊಳ್ಳುತ್ತೇನೆ (ನಿನ್ನಂ ಆಳ್ವೆಂ ಎಂದು ಬಾಣಸಿನ ಕರಣಕ್ಕೆ ನಿರೂಪಣಂಗೆಯ್ದುಂ: **ಪಂಪಭಾ**, ೮. ೫೪ ವ)

ಆಳ್ವೆಸ – [ನಾ] [ಆಳ್+ಬೆಸ] ಸೇವಾವೃತ್ತಿ (ನೃಪ ನೀಂ ದಯೆಯಿಂದಂ ಇಲ್ಲಿ ಬಂದಿರೆ ದೊರೆವೆತ್ತುದೆನ್ನ ಆಳ್ವೆಸಂ ಎನ್ನ ತನೂಜೆಗೆ ಅಂಕದ ಉತ್ತರೆಗೆ ವಿವಾಹಮಂಗಳಮಂ ಇನ್ನು ಅಭಿಮನ್ಯುಗೆ ಮಾೞ್ಪುದು; **ಪಂಪಭಾ**, ೯. ೭)

ಆಳ್ವೆಸಗೆಯ್ – [ಕ್ರಿ] ಸೇವೆಮಾಡು (ನೀನೆನ್ನಾಳ್ವುದು ಆಳ್ವೆಸಗೆಯ್ವೆಂ: **ಆದಿಪು,** ೧೩. ೨೯)

ಆಳ್ವೆಸನ – [ನಾ] ಸೇವಾಕಾರ್ಯ (ಇರದುಟಿದಾವ ಮಂಡಲದೊಳಂ ನೃಪ ನೀಂ ದಯೆಯಿಂ ಇಲ್ಲಿ ಬಂದಿರೆ ದೊರೆವೆತ್ತುದು ಎನ್ನ ಆಳ್ವೆಸನಂ: **ಪಂಪಭಾ**, ೯. ೭)

ಆಳ್ವೇಲಿ – [ನಾ] ಮನುಷ್ಯರ ಬೇಲಿ (ಉದ್ಧತಸಿದ್ಧಖೇಚಚರೆ ತಾಂ ಆಳ್ವೇಲಿಯಾಗಿಂತು ನಿಚ್ಚಲುಂ ಓರಂತೆ ಕಾವರೀ ದೊರೆತು ಕಾಪು ನಂದನಕ್ಕಿಂದ್ರನಾ: **ಪಂಪಭಾ**, ೫. ೮೧)

ಆಱ್ – [ಕ್ರಿ] ಸಮರ್ಥವಾಗು (ಕುರುಗೋತ್ರಂ ಧರೆಯೊಳ್ ಪವಿತ್ರಮೆನಿಸಲ್ಕೆ ಇನ್ನು ಆರ್ತುದು ಇಂದೆಮ್ಮ ಮಂದಿರಂ: **ಆದಿಪು,** ೧೦. ೫)

ಆಱಂಗ – [ನಾ] ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಮತ್ತು ಜ್ಯೋತಿಷ ಎಂಬ ವೇದಾಂಗಗಳು (ಪದಿನೆಂಟು ಧರ್ಮಶಾಸ್ತ್ರಂಗಳೊಳಂ, ನಾಲ್ಕುವೇದಂಗಳೊಳಂ ಆಱಂಗದೊಳಂ: **ಪಂಪಭಾ**, ೨. ೩೪ ವ)

ಆಱಡಿ – [ನಾ] ದುಂಬಿ (ಮುಡಿಯಂ ಸೋಗೆಯೆ ಗೆತ್ತು ಸೋಗೆ ನಡೆಯಂ ಪೆಣ್ಣಂಚೆಗೆತ್ತು .. .. ಅಳಕಾನೀಕಂಗಳಂ ಸೊರ್ಕಿದ ಆಱಡಿಗೆತ್ತು ಆಱಡಿ ಸುತ್ತುತುಂ ಬರೆ: **ಪಂಪಭಾ**, ೭. ೮೬)

ಆಱಡಿಗಳ್ಳ – [ನಾ] ಸುಲಿಗೆಗಾರ, ಲೂಟಿಕೋರ (ಬಿದಿಯೆಂಬಾಱಡಿಗಳ್ಳಂ ಎನ್ನನುಜನಂ ಗೋವಿಂದನಂ ನಿರ್ನೆರಂ ಉದುದುಂ: **ಆದಿಪು,** ೩. ೫೨)

ಆಱದೆ – ಸಾಮರ್ಥ್ಯವಿಲ್ಲದೆ (ಅಂತು ಗಾಂಗೇಯನೊಳ್ ಪರಶುರಾಮಂ ಕಾದಿ ಬಸವಟಿದುಸಿರಲಪ್ಪೊಡಮಾಱದೆ ಮೂರ್ಛೆವೋಗಿರ್ದನಂ ಕಂಡು: **ಪಂಪಭಾ,** ೧. ೮೦ ವ)

ಆಱವಧಿ – [ನಾ] [ಜೈನ] ಅನುಗಾಮಿ, ಅನನುಗಾಮಿ, ವರ್ಧಮಾನ, ಹೀಯಮಾನ, ಅವಸ್ಥಿತ ಮತ್ತು ಅನವಸ್ಥಿತ ಎಂಬ ಆರು ಬಗೆಯ ಅವಧಿಜ್ಞಾನಗಳು (ಪದಿನಾಲ್ಕು ಪೂರ್ವಂಗಳುಮಂ ಅಯ್ದು ಚೂಳಿಕೆಯುಮಂ ಆಱವಧಿಯುಮಂ ಪೆಸರ್ಗೊಂಡು: **ಆದಿಪು**, ೩. ೪೦ ವ)

ಆಱೆಸು – [ಕ್ರಿ] ದಣಿವು ನಂದಿಸು, ಶಾಂತಗೊಳಿಸು (ಪೊಸಗಂಪಿನೊಳ್ ಪುದಿದು ಅಲೆವ ಎಲರ್ ಆಱೆಪುದು ಖಚರದಂಪತಿಶತಮಂ: **ಆದಿಪು,** ೧. ೬೮); [ಕ್ರಿ] ಸಮಾಧಾನಪಡಿಸು (ಆಗಳಂತಃಪುರವೃದ್ಧರವರಂ ಅರಸರೀಗಳೆ ಬಂದಪ್ಪರ್ ಅಂಜದಿರಿಂ ಎಂದು ಆಸೆವಾತುಗಳೊಳಾಱೆಸಿ ನುಡಿದು: **ಆದಿಪು**, ೯. ೭೬ ವ); [ಕ್ರಿ] ತಂಪು ನೀಡು (ಜಗಮನೊಡನೆ ಕಪ್ಪುರದ ರಜಂ ಮುಸುಕಿದುದೆನೆ ಪುದಿದೇಣಾಱೆಸಿದುದೊ ಪೊಳೆವಮೃತಕಿರಣನಮೃತಕಕರಂಗಳ್: **ಆದಿಪು**, ೧೨. ೧೧); [ಕ್ರಿ] [ಸಂತಾಪ] ಹೋಗಲಾಡಿಸು (ಸುಭದ್ರೆ ಪಲುಂಬಿ ಮನಂಬಸದೆ ತನುವಂ ಆಱೆಸಲ್ ಅಲರಿಂ ತುಂಬಿಗಳಿಂ ತಣ್ಣೆಲರಿಂ ತುಂಬಿದ ತಿಳಿಗೊಳದ ಬನಮಂ ಪೊಕ್ಕಳ್: **ಪಂಪಭಾ**, ೫. ೨); [ಕ್ರಿ] ಒಣಗಿಸು, ಒರೆಸಿಕೊ (ಪಂಚರತ್ನಗರ್ಭಂಗಳಪ್ಪ ಮಂಗಳಜಳಂಗಳಂ ಮಿಂದು ಮೆಯ್ಯನಾಱೆಸಿ ದುಕೂಲಾಂಬರಮನುಟ್ಟು: **ಪಂಪಭಾ**, ೧೨. ೧೦೮ ವ)

ಆಱು – [ಕ್ರಿ] ತೃಪ್ತಿಗೊಳ್ಳು (ಆದ ವಿನೋದಂಗಳ್ ಅನಂಗರಾಗರಸಸಂಕೀರ್ಣಂಗಳಾದಂದು ಆಱುವ ಪಾಂಗಾವುದು: **ಆದಿಪು**, ೧೨. ೨೧); [ಕ್ರಿ] ನಂದಿಹೋಗು (ಗುಹಾದ್ವಾರಮಂ ಪೂರ್ವೋಕ್ತಕ್ರಮದೊಳೆ ತೆಱೆದು ಅದಱ ಬೆಂಕಿಯಾಱುವನ್ನೆಗಂ .. .. ಪೋಗೆ: **ಆದಿಪು,** ೧೩. ೭೮ ವ); [ಕ್ರಿ] ತಣ್ಣಗಾಗು (ಮುನಿಸಂ ಮಾಡಿದರಾತಿನಾಥರ ಅಡಗಂ ಸುಪ್ಪಲ್ಗೆ ಕೆನ್ನೆತ್ತರಂ ಕೆನೆಗೊಂಡಾಱಿದ ಪಾಲ್ಗೆ ದೊಂಡೆಗರುಳಂ ಕರ್ಬಿಂಗೆ ಲೆಕ್ಕಕ್ಕೆ ತಂದು: **ಪಂಪಭಾ,** ೧೨. ೧೬೦); [ನಾ] ಸಂಧಿ ವಿಗ್ರಹ ಯಾನ ಆಸನ ಸಂಶ್ರಯ ದ್ವೈಧೀಭಾವ ಎಂಬ ಷಡ್ಗುಣಗಳು (ಪರಿಕಿಪುದು ಒಂದಱಿಂದೆ ಎರಡಂ ಓತುಕೊಳ್ವುದು ಮೂಱಱಿಂದೆ ನಾಲ್ಕರಿದಱಿದು ಅಯ್ದಱಿಂದೆ ನೆಱೆ ಕಲ್ವುದು ನಿರ್ಣಯಂ ಆಱ್ಱೊಳ್ ಪರಿಣತನಪ್ಪುದು ಏೞಱೊಳಂ ಒಂದದೆ ನಿಲ್ವುದು: **ಪಂಪಭಾ**, ೧೩. ೬೬)

ಆಱುಂ ಋತು – [ನಾ] ವಸಂತ, ಗ್ರೀಷ್ಮ, ವರ್ಷ, ಶರತ್, ಹಿಮಂತ ಮತ್ತು ಶಿಶಿರಗಳೆಂಬ ವರ್ಷದ ಆರು ಋತುಗಳು (ಆಗಳ್ ಆಱುಂ ಋತುಗಳ ಪೂಗಳಂ ಒಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದ ಓಜನ ಸಾಲೆಯಿರ್ಪಂತಿರ್ಪ ಪೂವಿನ ಸಂತೆಯೊಳ್: **ಪಂಪಭಾ**, ೪. ೮೦ ವ)

ಆಱುಂ ಕುಲಗಿರಿ – [ನಾ] ಹಿಮವನ್ ಮಹಾಹಿಮವನ್ ನಿಷಧ ನೀಲ ರುಗ್ಮಿ ಶಿಖರಿ ಎಂಬ ಆರು ವರ್ಷಧರಪರ್ವತಗಳು (ಇದು ಹೈಮಾಂದ್ರೀಂದ್ರಂ ಆಱುಂ ಕುಲಗಿರಿಗೆ ಮೊದಲ್: **ಆದಿಪು,** ೧೩. ೬೮)

ಆಱುಂ ಗುಣಂಗಳ್ – [ನಾ] ರಾಜರಿಗಿರಬೇಕಾದ ವಕ್ತೃತ್ವ, ಶತ್ರುದಮನಸಿದ್ಧತೆ, ತರ್ಕಕುಶಲತೆ, ಸ್ಮರಣಶಕ್ತಿ, ನೀತಿಶಾಸ್ತ್ರಜ್ಞತೆ ಮತ್ತು ವಿದ್ವತ್ತೆ ಎಂಬ ಆರು ಗುಣಗಳು (ಮಱುದೆವಸಂ ಅಱುವರುಂ ಆಱುಂ ಗುಣಂಗಳೆ ಮೂರ್ತಿಮಂತಂಗಳಾದಂತೆ ಮಂತ್ರಶಾಲೆಯಂ ಪೊಕ್ಕಿರ್ದಾಗಳ್: **ಪಂಪಭಾ**, ೯. ೧೨ ವ); [ನಾ] ಷಾಡ್ಗುಣ್ಯ ಅಂದರೆ ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ ಮತ್ತು ದ್ವೈಧೀಭಾವ ಎಂಬ ಗುಣಗಳು (ನಿನಗೆ ದೈವಂ ವಿಮುಖಮಪ್ಪುದಱಿಂದ ಅಪಾಯಬಹುಳಮಾಗಿ ಬಂದುದು ಆಱುಂ ಗುಣಂಗಳನೆ ತಂದುವು: **ಪಂಪಭಾ**, ೧೩. ೨೧ ವ)

ಆಱುಂ ದರ್ಶನಂಗಳ್ – [ನಾ] ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ ಮತ್ತು ವೇದಾಂತ ಎಂಬ ಆರು ತತ್ವಶಾಸ್ತ್ರ (ನಾಲ್ಕುವೇದಂಗಳೊಳಂ ಆಱಂಗದೊಳಂ ಅಯ್ದು

ತೆಱದ ಮಂತ್ರಂಗಳೊಳಂ ಆಱುಂ ದರ್ಶನಂಗಳೊಳಂ: **ಪಂಪಭಾ,** ೨. ೩೪ ವ)

ಆಱುಂ ಬಲಂಗಳ್ – [ನಾ] [ಅ] ಆನೆ ಕುದುರೆ ರಥ ಪದಾತಿ ದಿವಿಜ ಖೇಚರ ಸೇನೆಗಳು (ನೆಗಟ್ದೀ ಷಟ್ಖಂಡಭೂಮಂಡಲಮಂ ಅನಿತುಮಂ ಗೆಲ್ದು ಅಖಂಡಪ್ರತಾಪಂ ನೆಗಟ್ವಂತೆ ಆಱುಂ ಬಲಂಗಳ್ವೆರಸು ಒದವಿದ ಸಂಗ್ರಾಮಸಂರಂಭದಿಂದಂ: **ಆದಿಪು,** ೧೪. ೮೨)

ಆಱುಮಾಸ – [ನಾ] ಆರು ತಿಂಗಳು (ಬಗೆಗೊಂಡು ಅಭೀತಮನಂ ಅರ್ಚಿಸಿ ಬಂದಿಸಿ ಚೈತ್ಯಗೇಹಮುಳ್ಳನಿತುಮಂ ಆಱುಮಾಸಂ ಅದಱಿಂ ಬಳಿಕ ಅಚ್ಯುತಕಲ್ಪದೊಳ್: **ಆದಿಪು,** ೩. ೮) [ಇದು **'ಅಱುಮಾಸ'** ಎಂದರೆ ಅರ್ಧ ತಿಂಗಳು ಎಂದಿರಬೇಕೆಂದು ನರಸಿಂಹಶಾಸ್ತ್ರಿಗಳು ಸೂಚಿಸುತ್ತಾರೆ; ಆದರೆ ಅದು ಛಂದಸ್ಸಿಗೆ ಸರಿಹೋಗುವುದಿಲ್ಲ]

ಆಱಿ ನುಡಿ – [ಕ್ರಿ] ತೃಪ್ತಿಯಾಗುವಂತೆ, ಸಮಾಧಾನವಾಗುವಂತೆ ಹೇಳು (ನಿನ್ನ ಬಗೆಯಂ ಬಗೆದಂತೆ ತೀರ್ಚುವೆಂ ಎಂದು ಅನೇಕ ಪ್ರಕಾರವಚನರಚನೆಗಳಿಂದಾಕೆಯ ಮನಮಂ ಆಱಿ ನುಡಿಯುತ್ತಿರ್ಪಿನಂ: **ಪಂಪಭಾ,** ೪. ೬೯ ವ)

ಆೞ್ – [ಕ್ರಿ] ಮುಳುಗು (ಕುದುರೆಯ ಖುರಂಗಳಿನಿಸು ಆೞದೆಯುಂ ಚಕ್ರಂಗಳರ್ದು ಬಾರದೆಯುಂ: **ಆದಿಪು,** ೧೨. ೮೨)

ಆೞಿಸು – [ಕ್ರಿ] ಮುಳುಗಿಸು (ಪುನ್ನಾಗದ ಬಾಸಿಗಂ ಬಗೆದ ಬಣ್ಣದ ಪುಟ್ಟಿಗೆ ನಾಗಜಾಲಮೆಂದಾಗಡೆ ನಾಗಲೋಕವಿಭವಂಗಳೊಳ್ ಆೞಿಸಿ: **ಪಂಪಭಾ,** ೪. ೧೭)

ಆೞ್ಕಿವೆಱು – [ಕ್ರಿ] ಅಚ್ಚೊತ್ತು (ತಂದೆಯ ರೂಪೆ ತಂದೆಯ ವಿಳಾಸಮೆ ತಂದೆಯ ಚೆಲ್ವೆ ತಂದೆಯೊಂದಂದಮೆ ತಂದೆಯೊಂದು ನುಡಿವೋಜೆಯೆ ತನ್ನೊಳಮಾೞ್ಕಿವೆತ್ತುದು: **ಆದಿಪು,** ೮. ೪೩) [**'ತನ್ನೊಳಮಾೞ್ಕಿವೆತ್ತುದಾ'** ಎಂದುದರ ಬದಲು ವೆಂಕಟಾಚಲಶಾಸ್ತ್ರಿಗಳು **'ತನ್ನೊಳಮರ್ಕಿವೆತ್ತುದಾ'** ಎಂಬ ಪಾಠವನ್ನು ಸ್ವೀಕರಿಸುತ್ತಾರೆ]

ಇ

ಇಂ – [ಅ] ಇನ್ನು, ಉನ್ನು ಮುಂದೆ (ಪಂಚಧನುಶ್ಶತಂ ಪವಣ್ಣೆಲೆ ನರರ್ಗೆ ಎಂದೊಡೆ ಇಂ ನಿಮಿರೆ ಬಣ್ಣಿಸಲ್ಕಾನಱಿಯೆಂ ವಿದೇಹಮಂ: **ಆದಿಪು,** ೧. ೫೧)

ಇಂಚೆ – [ನಾ] ಹಂಸೆ (ಇಂಚೆಯ ಪಸವಿನ ಬಱದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ದಿಡಿವೊಲಾದುವಾ ನಾಡೂರ್ಗಳ್: **ಪಂಪಭಾ,** ೮. ೫೧)

ಇಂಡೆ – [ನಾ] ರಾಶಿ, ಹಿಂಡು (ನಾಟಕಶಾಲೆಯೊಳೆಯ್ದೆ ರಕ್ತಪುಷ್ಪಾಂಜಳಿಗೆಯ್ದ ಮಾೞ್ಕೆಯವೊಲಿರ್ದುವು ಖಂಡದಿಂಡೆಗಳ್: **ಪಂಪಭಾ,** ೮. ೭೮)

ಇಂಡೆಯಾಡು – [ಕ್ರಿ] ರಾಶಿಹಾಕು (ಓರೊರ್ವರ್ರೊಳ್ ಬೀರಮುಮಂ ಬಿಂಕಮುಮಂ ಮೆಱೆದು ದಾಸವಣದಂಡೆಯಂ ತೋರದ ಇಂಡೆಯಾಡಿದಂತೆ: **ಪಂಪಭಾ,** ೧೧. ೧೪೦ ವ)

ಇಂತು – [ಅ] ಹೀಗೆ, ಈ ರೀತಿಯದು (ನಿನ್ನ ಉತ್ಪತ್ತಿಯಂ ಇಂತೆಂದು ಎನ್ನರುಂ ಅಣಂ ಅಱಿಯರ್ ಅಱಿವೆನಾಂ ಸಹದೇವಂ ಪನ್ನಗಕೇತು ದಿನೇಶಂ ನಿನ್ನಂಬಿಕೆ ಕೊಂತಿ ಇಂತಿವರ್ ನೆಱೆ ಬಲ್ಲರ್: **ಪಂಪಭಾ,** ೯. ೬೬)

ಇಂತುಟಪ್ಪುದು – [ನಾ] ಹೀಗಿರುತ್ತದೆ (ಮಾರೀಚಿ ತೊಡರ್ಪುಳಿಂದೆ ಸರದಿಂ ಕಂಪಿಲ್ಲ ಚಿಂತಾಮಣಿಗೇವುದಕ್ಕ ದಳಂ ಇಲ್ಲ ಈ ಕಕ್ಕರಕ್ಕಿಂತುಟಪ್ಪುದು ಕಳ್ಳಪ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮಂ ಕಾಂತೆಯರ್: **ಪಂಪಭಾ,** ೪. ೮೮)

ಇಂತುಟೆ – [ಅ] ಇಂಥದ್ದೇ (ಉಸಿರದಿರೆ ಮನದೊಳರ್ದೆಯಂ ಪಸರಿಸುಗುಂ ಮಱುಕಂ ಅದಱಿಂ ಎನಗೆ ಇಂತುಟೆ ಎಂದು ಉಸಿರ್: **ಪಂಪಭಾ,** ೪. ೬೫)

ಇಂದಿಂದಿರ – [ನಾ] ದುಂಬಿ, ಗುಂಗೀಹುಳು (ಸಮುದ್ಯತ್ ಮಂದವ್ರಾತ ಇಂದಿಂದಿರ ಚಂಡ ತಾಂಡವ ಕಲ ಸ್ವಾಭಾವಿಕಶ್ರೇಯಸಃ; **ಪಂಪಭಾ,** ೯. ೯೭)

ಇಂದೀವರ – [ನಾ] ಕನ್ನೈದಿಲೆ (ದಳಿತಾಂಭೋಜಾಸ್ಯಂ ಇಂದೀವರದಳ ನಯನಂ ಪಕ್ವಬಿಂಬಾಧರಂ: **ಆದಿಪು,** ೮. ೫೧)

ಇಂದು – [ನಾ] ಚಂದ್ರ (ಕುಂದ ಇಂದು ದುಗ್ಧಾಬ್ಧಿಪಾಂಡುರ ಕೈಲಾಸನಗೇಂದ್ರದೊಳ್ ನೆಲಸಿದಂ ಸಂಸಾರಸಾರೋದಯಂ: **ಆದಿಪು,** ೧೦. ೬೯)

ಇಂದುಕಾಂತ – [ನಾ] ಚಂದ್ರಕಾಂತಶಿಲೆ (ಆಶ್ರಿತಾದ್ರಿ ನದಕೂಳಮಂ ಅತ್ಯಧರೀಕೃತ ಅನ್ಯಕುಕ್ಷೀಳಂ ಇಂದುಕಾಂತಸುನೀಳಮಂ ಎಯ್ದಿದಂ ಇಂದ್ರಕೀಳಮಂ: **ಪಂಪಭಾ,** ೭. ೭೬)

ಇಂದುಕಾಂತಕರ – [ನಾ] ಬೆಳುದಿಂಗಳು (ಬಸಿವ ಇಂದುಕಾಂತಕರ ಸಂಕುಳಮೊಯ್ಯನವುಂಕಿ ಸೋಂಕೆ: **ಆದಿಪು,** ೪. ೪೯)

ಇಂದುಕಾಂತಮಣಿಪುತ್ರಿಕೆ – [ನಾ] ಚಂದ್ರಕಾಂತಶಿಲೆಯ ಬೊಂಬೆ (ಸೋಂಕಿನೊಳೊಱೆವ ಇಂದುಕಾಂತ ಮಣಿಪುತ್ರಿಕೆಯಂದದಿಂ ಒಪ್ಪಿ ತೋಱಿದಳ್: **ಆದಿಪು,** ೪. ೪೯)

ಇಂದುಕುಳತಿಳಕ – [ನಾ] ಚಂದ್ರವಂಶಶ್ರೇಷ್ಠ (ಉನ್ನತ ಧವಳಚ್ಛತ್ರಚ್ಛನ್ನ ವಿಯತ್ತಳನಂ ಇಂದುಕುಳತಿಳಕನಂ ಇಂತು ಅನ್ನೆಯದಿಂದ ಈ ಪಟುವಿನೊಳ್ ಎನ್ನರಸನಂ ಇಂತು ಬಿದಿಯೆ ತಂದಿಕ್ಕುವುದೇ: **ಪಂಪಭಾ,** ೨. ೨೨)

ಇಂದುಮಂಡಲಗಳಿತ – [ಗು] ಚಂದ್ರಮಂಡಲದಿಂದ ಸುರಿಯುವ (ಚಕೋರಂ ಇಂದುಮಂಡಳಗಳಿತ ಆಸವಾಮೃತಮನುಂಡು ಉಸಿರುತ್ತಿರೆ ಚೆಲ್ವು ಶಾರದಂ: **ಪಂಪಭಾ,** ೭. ೭೦)

ಇಂದುಮರೀಚಿ – [ನಾ] ಚಂದ್ರನ ಕಿರಣ, ಬೆಳುದಿಂಗಳು (ಇಂದುಮರೀಚಿಗಳಿಂದುರುಳ್ಚಿ ಪೂವಿನ ಪಸೆಯೊಳ್ ಪೊರಳ್ಚಿದಂ ಅಳುರ್ಕೆಯ ಬರ್ದೆಯರಂ ಗುಣಾರ್ಣವಂ: **ಪಂಪಭಾ,** ೨. ೪೦)

ಇಂದುವಕ್ತ್ರೆ – [ನಾ] ಚಂದ್ರನಂತೆ [ಸುಂದರ] ಮುಖವುಳ್ಳವಳು (ಚಿತ್ತದೊಳಾದ ಬೇಸಱಂ ನುಡಿವವೊಲಾಗೆ ಬರ್ಪ ಕಮಳಾಯತನೇತ್ರೆಯಂ ಇಂದುವಕ್ತ್ರೆಯಂ: **ಪಂಪಭಾ,** ೧೩. ೯೯)

ಇಂದೊಳ – [ನಾ] ಮಧುರ ಗಾನ (ಇಂದೊಳದಿಂ ಉನ್ಮದಷಟ್ಪದವೃಂದಮೀಗಳೀಗಳೆ ಮೊರೆದತ್ತು: **ಆದಿಪು,** ೧೩. ೫)

ಇಂದೋಳ – [ನಾ] ಇಂದೊಳ (ಇದು ಲೀಲಾಂದೋಳಂ ಇಂದೋಳದ ದನಿ ನೆಱೆಗೊಳ್ವನ್ನೆಗಂ ಪಾಡಲೆಂದೇಱಿದಳಂ ತೂಗುತ್ತುಮಿರ್ದನ್ನಯ ಪರಿಜು: **ಆದಿಪು,** ೪. ೯)

ಇಂದ್ರ – [ನಾ] ಒಂದೊಂದೂ ಕಲ್ಪದ ಒಡೆಯ (ಇಂದ್ರರ್ ಮಾಟ್ಟಿ ಇಂದ್ರಧ್ವಜಮುಂ ಸಮಸ್ತಭವ್ಯಜನ ನಿರ್ವರ್ತ್ಯಮಾನಾಷ್ಟಾಹ್ನಿಕಮುಂ: **ಆದಿಪು,** ೧೫. ೧೩ ವ)

ಇಂದ್ರಕ – [ನಾ] [ಜೈನ] ನರಕಬಿಲಗಳಲ್ಲಿ ಒಂದು ಬಗೆ (ಆ ಬಿಲಂಗಳುಂ ಇಂದ್ರಕ ಶ್ರೇಢೀಬದ್ಧ ಪ್ರಕೀರ್ಣಕಂಗಳೆಂದು ಮೂಱು ತೆಱನಕ್ಕುಂ: **ಆದಿಪು,** ೫. ೮೩ ವ)

ಇಂದ್ರಕೀಲ – ಒಂದು ಪರ್ವತದ ಹೆಸರು (ಇಂದ್ರಕೀಲನಗೇಂದ್ರದ ತಪೋಧನರೆಲ್ಲಂ ನೆರದು ಬಂದು: **ಪಂಪಭಾ,** ೮. ೧೦ ವ)

ಇಂದ್ರಕೋಶ – [ನಾ] ತವಗ, ಸುಖಾಸನ (ನಿರಂತರಾಟ್ಟಾಳಕಪ್ರತೋಳಿ ಇಂದ್ರಕೋಶ ದೇವಪಥ ಸನಾಥಂಗಳುಂ: **ಆದಿಪು**: ೧೩. ೫೭ ವ) [ನರಸಿಂಹಶಾಸ್ತ್ರಿಗಳು ಬಳಸುವ ರೂಪ]

ಇಂದ್ರಗೇಹ – [ನಾ] ಇಂದ್ರನ ಮನೆ (ಇಂದ್ರಾನೋಕಹಂ ಒಪ್ಪುವ ಇಂದ್ರತುರಗಂ ಸಂದ ಇಂದ್ರಗೇಹಂ: **ಪಂಪಭಾ,** ೩. ೭೯)

ಇಂದ್ರಗೋಪ – [ನಾ] ಮಿಂಚುಹುಳು, ಹೊನ್ನೆ ಹುಳು (ಬಣ್ಣವುರಂ ತೀವಿದ ಮಾಟಿಕ್ಕೆಯಾಯ್ತು ನವಿಲಿಂ ಕುಂದಂಗಳಿಂ ಇಂದ್ರಗೋಪವಿಳಾಸಂಗಳಿಂ ಆಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ: **ಪಂಪಭಾ,** ೭. ೨೪)

ಇಂದ್ರಚಾಪ – [ನಾ] ಇಂದ್ರನ ಬಿಲ್ಲು, ಮಳೆಬಿಲ್ಲು (ಧನದಂ ಕಾಂಚನಪಂಚರತ್ನಮಯಮಂ ರೈವೃಷ್ಟಿಯಂ ಮಾಡುವಲ್ಲಿ ನಭೋಭಾಗದಿಂ ಇಂದ್ರಚಾಪಮನಿತುಂ ಭೂಭಾಗದೊಳ್ ಬಂದು: **ಆದಿಪು,** ೭. ೨೪)

ಇಂದ್ರಚ್ಛಂದ – [ನಾ] ಸಾವಿರದೆಂಟು ಎಳೆಗಳಿಂದ ಕೂಡಿದ ಮುತ್ತಿನ ಹಾರ (ಬೆಳಗಿಂದೆ ಜಗಂ ಬಾಸಣಿಸಿದುದೆನೆ ಸಕಳಸುರಾಸುರಪತಿಯುರದೊಳೆಸೆದುದು ಇಂದ್ರಚ್ಛಂದಂ: **ಆದಿಪು,** ೯. ೭)

ಇಂದ್ರಜಾಲ – [ನಾ] ಮಾಯೆಮೋಡಿ ತಿಳಿಸುವ ಶಾಸ್ತ್ರ (ಸರಭೇದ ರತಿತಂತ್ರ ಇಂದ್ರಜಾಲ ವಿವಿಧವಿದ್ಯೆಗಳೊಳಂ: **ಪಂಪಭಾ,** ೨. ೩೪ ವ)

ಇಂದ್ರಜಾಲಿಗತನ – [ನಾ] ಮಾಯೆ (ಬಿತ್ತರಿಸಿದಂ ಇಂದ್ರಜಾಲಿಗತನಮಂ: **ಆದಿಪು,** ೫. ೧೮)

ಇಂದ್ರತನೂಜ – [ನಾ] ಇಂದ್ರನ ಮಗ, ಅರ್ಜುನ (ಕುರಂಗಯೂಥದೊಳ್ ಬೆರೆಸಿದುವಂದು ಪೆರ್ಬುಲಿಗಳ್ ಇಂದ್ರತನೂಜತಪಃಪ್ರಭಾವದಿಂ: **ಪಂಪಭಾ,** ೭. ೮೦)

ಇಂದ್ರತುರಗ – [ನಾ] ಇಂದ್ರನ ಕುದುರೆ, ಉಚ್ಚೈಸ್ರವಸ್ಸು (ಇಂದ್ರಾನೋಕಹಂ ಒಪ್ಪುವ ಇಂದ್ರತುರಗಂ ಸಂದ ಇಂದ್ರಗೇಹಂ: **ಪಂಪಭಾ,** ೩. ೭೯)

ಇಂದ್ರತ್ಯಾಗ – [ನಾ] [ಜೈನ] ಐವತ್ತಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ಪದವಿತ್ಯಾಗ (ಇಂದ್ರತ್ಯಾಗ .. .. ಅಗ್ರನಿರ್ವೃತಿ ಎಂಬ ಅಯ್ವತ್ತಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಇಂದ್ರತ್ವ – [ನಾ] ಇಂದ್ರಪದವಿ (ದೇವೇಂದ್ರಂ ತನಗಾದ ಹೃತ್ಕಂಪದೊಳಂ ಆಸನಕಂಪದೊಳಂ ನರೇಂದ್ರತಾಪಸಂ ತನ್ನಿಂದ್ರತ್ವಮಂ ಕೊಳಳೆಂದು ತಪಂಗೆಯ್ದಪಂ ಎಂಬ ಸಂಕೆಯೊಳ್: **ಪಂಪಭಾ,** ೭. ೮೦ ವ)

ಇಂದ್ರಧ್ವಜ – [ನಾ] [ಜೈನ] ಇಂದ್ರಾದಿಗಳು ಮಾಡುವ ಜಿನಪೂಜೆ (ಇಂದ್ರರ್ ಮಾಟ್ಟಿ ಇಂದ್ರಧ್ವಜಮುಂ ಸಮಸ್ತಭವ್ಯಜನನಿರ್ವರ್ತ್ಯಮಾನ ಅಷ್ಟಾಹ್ನಿಕಮುಂ: **ಆದಿಪು,** ೧೫. ೧೩ ವ)

ಇಂದ್ರನ ಬಿಲ್ – [ನಾ] ಕಾಮನ ಬಿಲ್ಲು (ತನು ರೂಪ ವಿಭವ ಯೌವನ ಧನ ಸೌಭಾಗ್ಯ ಆಯುರಾದಿಗಳ್ಗೆಣೆ ಕುಡುಮಿಂಚಿನ ಪೊಳೆಪು ಮುಗಿಲ ನೆಟಿಲ್ ಇಂದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ: **ಆದಿಪು,** ೯. ೯. ೪೬)

ಇಂದ್ರನ ಮೇಲೆ ವೇಟ್ – [ಕ್ರಿ] ಇಂದ್ರನಮೇಲೆ ದಂಡೆತ್ತಿಹೋಗು (ಅಂತು ಭೀಮಸೇನನಂ ಇಂದ್ರನ ಮೇಲೆ ವೇಟ್ಟಂತೆ ಪೂರ್ವದಿಗ್ಭಾಗಕ್ಕೆ ವೇಟ್ಟು: **ಪಂಪಭಾ,** ೬. ೨೮ ವ)

ಇಂದ್ರನೀಲ – [ನಾ] ನೀಲವರ್ಣದ ರತ್ನ (ಮೂಱುಬಣ್ಣಂ ಪೆಣೆದೊದವೆ ಗವಾಕ್ಷಸ್ಥ ಇಂದುಕಾಂತ ಇಂದ್ರನೀಲ ಅರುಣಮಣಿಕಿರಣಂಗಳ್ ಪೊಣ್ಮುವಂತಾದುವಾಗಳ್: **ಆದಿಪು,** ೧೧. ೨೩)

ಇಂದ್ರವನ – [ನಾ] ಇಂದ್ರನ ನಂದನವನ (ಓಗರವೂಗಳ ಬಂಡಂ ಎಯ್ದೆ ಪೀರುತ್ತ ಒಡವಂದುವು ಇಂದ್ರವನದಿಂ ಮಱಿದುಂಬಿಗಳ್; **ಪಂಪಭಾ,** ೧೧. ೮೧)

ಇಂದ್ರಾಂಗನೆ – [ನಾ] [ಜೈನ] ಶಚೀದೇವಿ (ಕಮಳದಳಕರತಳದಿಂ ಪಿಡಿದೆತ್ತಿಕೊಂಡ ಸಂತಸದೊಡಮೆಯಂ ಆಂ ಪೊಗಟಲಱಿಯೆನಿಂದ್ರಾಂಗನೆಯಾ: **ಆದಿಪು,** ೭. ೪೬)

ಇಂದ್ರಾಣಿ – [ನಾ] ಇಂದ್ರನ ಹೆಂಡತಿ, ಶಚೀದೇವಿ (ಒಪ್ಪುವ ಇಂದ್ರತುರಗಂ ಸಂದ ಇಂದ್ರಗೇಹಂ .. .. ಇಂದ್ರೈಶ್ವರ್ಯಂ ಇಂದ್ರಾಣಿ ಸಂದ ಇಂದ್ರಾನರ್ಘ್ಯವಿಭೂಷಣಂ: **ಪಂಪಭಾ,** ೩. ೭೯)

ಇಂದ್ರಾನೇಕಪ – [ನಾ] ಇಂದ್ರನ ಆನೆ, ಐರಾವತ (ಪೊದಳ್ದಿಂದ್ರಾನೇಕಪಂ .. .. ಈಗೆ ಅರಿಗಂಗೆ ಮಂಗಳ ಮಹಾಶ್ರೀಯಂ: **ಪಂಪಭಾ,** ೩. ೭೯)

ಇಂದ್ರಾನೋಕಹ – **[ನಾ]** [ಇಂದ್ರ+ಆನೋಕಹ] ಇಂದ್ರನ ಮರ, ಕಲ್ಪವೃಕ್ಷ (ಇಂದ್ರಾನೋಕಹಂ ಒಪ್ಪುವ ಇಂದ್ರತುರಗಂ ಸಂದ ಇಂದ್ರಗೇಹಂ: **ಪಂಪಭಾ,** ೩. ೭೯)

ಇಂದ್ರಾಭಿಷೇಕ – **[ನಾ]** [ಜೈನ] ಐವತ್ತಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು (ಇಂದ್ರಾಭಿಷೇಕ ಗುರುಪೂಜೋಪಲಂಭನ ಯೌವರಾಜ್ಯ .. .. ಎಂಬ ಅಯ್ವತ್ತಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಇಂದ್ರಿಯಕ್ಷರಣೆ – **[ನಾ]** ರೇತಸ್ಸಿನ ಸ್ಖಲನೆ (ಋತುಕಾಲಪ್ರಾಪ್ತೆಯಾಗಿರ್ದ ನಲ್ಲಳಲ್ಲಿಗೆ ಬರಲ್ ಪಡೆಯದೆ ಆಕೆಯಂ ನೆನೆದು ಇಂದ್ರಿಯಕ್ಷರಣೆಯಾದೊಡೆ: **ಪಂಪಭಾ,** ೧. ೬೮ ವ)

ಇಂದ್ರೇಂದ್ರ – **[ನಾ]** ಇಂದ್ರರಾಜ, ಇಂದ್ರರಾಜನೆಂಬುವವನು ಒಬ್ಬ ರಾಷ್ಟ್ರಕೂಟ ದೊರೆ, ಕ್ರಿ.ಶ. ೯೧೨–೯೧೭ ರ ನಡುವಣ ಕಾಲದಲ್ಲಿ ಆಳಿದವನು, ಇವನನ್ನು ಮುಮ್ಮಡಿ ಇಂದ್ರ ಎನ್ನುತ್ತಾರೆ (ಈ ನರೇಂದ್ರಂ ಸಾಕ್ಷಾತ್ ಇಂದ್ರಂ ತಾನೆನೆ ಸಲೆ ನೆಗೞ್ದಿಂದ್ರೇಂದ್ರನ ತೋಳೆ ತೊಟ್ಟಿಲಾಗಿರೆ ಬಳೆದಂ: **ಪಂಪಭಾ,** ೧. ೪೪)

ಇಂದ್ರೋಪಪಾದ – **[ನಾ]** [ಜೈನ] ಒಂದು ಗರ್ಭಾನ್ವಯಕ್ರಿಯೆ, ಅವಧಿಜ್ಞಾನವನ್ನು ಹೊಂದಿ ತಾನೇ ಇಂದ್ರನೆಂಬ ಭಾವನೆಯನ್ನು ತಾಳುವುದು (ಇಂದ್ರೋಪಪಾದ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಇಂಧನ – **[ನಾ]** ಕಟ್ಟಿಗೆ (ದುರಿತ ಇಂಧನಾನಳ ಲಸತ್ ರತ್ನತ್ರಯಂಗಳ್ ಸುಖೋಪಾಯಂಗಳ್ ಗಡಿಂ ಎಂದು ಭವ್ಯಜನಮಂ ಕಣ್ಣೊಳಿ ಕಲ್ಪಿಪ್ಪ: **ಆದಿಪು,** ೧. ೪)

ಇಂಪನಾಳ್ – **[ಕ್ರಿ]** ಇಂಪಿನಿಂದ ಕೂಡು (ಒಳ್ನುಡಿಗೇಳ್ದೊಡಂ ಇಂಪನಾಳ್ದ ಗೇಯಂ ಕಿವಿವೊಕ್ಕೊಡಂ .. .. ನೆನೆವುದೆನ್ನ ಮನಂ ಬನವಾಸಿ ದೇಶಮಂ: **ಪಂಪಭಾ,** ೪. ೩೦)

ಇಂಪು – **[ನಾ]** ಸೊಗಸು, ಮಾಧುರ್ಯ (ಕಬ್ಬದ ಗೇಯದೊಂದು ಸುಸಿಲೊಂದಿಂಪೆಂಬುದು ಏಗೆಯ್ಯದೋ: **ಆದಿಪು,** ೧೨. ೨೩)

ಇಂಪುಗಾಣ್ – **[ಕ್ರಿ]** ರುಚಿ ಕಾಣು (ಕರ್ಬಿನ ರಸಕ್ಕಂ ಇನಿಸು ಇಂಪುಗಾಣೆಂ ಎಂದು ಅನಿಲಸುತಂ ಸವಿಸವಿದು: **ಪಂಪಭಾ,** ೧೨. ೧೫೬)

ಇಂಬಱಿ – **[ಕ್ರಿ]** [ಇಂಬು+ಅಱಿ] ಮರ್ಮವನ್ನು ತಿಳಿ (ಸಮೀರೋತ್ಥಿತ ವಿಶಾಳವಿಲೋಳ ತರಂಗರೇಖೆ ಪದ್ಮಾಂತರದಿಂದಂ ಇಂಬಱಿದು: **ಪಂಪಭಾ,** ೩. ೫೭)

ಇಂ ಬೞಿಯಂ – **[ಅ]** ಆ ಬಳಿಕ (ಇತ್ತ ವಿಕ್ರಮಾರ್ಜುನನುಂ ಓಲಗಂ ಪರಿದಿಂ ಬೞಿಯಂ ತನ್ನ ಪವಡಿಸುವ ಮಾಡಕ್ಕೆ ಒಡನೊಡನೋಲಗಿಸುತ್ತುಂ ಬಂದ: **ಪಂಪಭಾ,** ೪. ೬೯ ವ)

ಇಂಬಾಗು – **[ಕ್ರಿ]** ಅಡಕವಾಗು (ಆ ದುಗ್ಧಧಾರೆ ಕರಮಿಂಬಾದುದು ಜಿನಮಸ್ತಕಾಗ್ರದೊಳ್ ಗಂಗಾಕೂಟೋಗ್ರಶಿಖರದೊಳ್ ಚೆಲ್ವಾದಮೆ ಮಿಗೆ ಸುರಿವ ಗಗನಗಂಗಗಾನದಿವೊಲ್: **ಆದಿಪು,** ೭. ೮೭); **[ಕ್ರಿ]** ಪ್ರಬಲವಾಗು (ಪಾದರಿ ಪೂತುವು ತೋರಿದುವಾದುವು ಮಲ್ಲಿಗೆಗಳ್ ಎಯ್ದೆ ಪಣ್ತುವು ಮಾವು ಇಂಬಾದುದು ನಿದಾಘ : **ಆದಿಪು,** ೧೧. ೮೭); **[ಕ್ರಿ]** ಚೆಂದವಾಗು (ಆಗಳ್ ದೊರೆಕೊಂಡಿರೆ ದೇವಾಗಮಂ ಏಕಾತಪತ್ರಮೆಸೆದಿರೆ ಕರಮಿಂಬಾಗಿರೆ ಚಾಮರಯುಗ್ಮಮದಾಗಳೆ ನಿಲೆ ದಿವ್ಯವಿಷ್ಟರಂ ಮಣಿಖಚಿತಂ: **ಆದಿಪು,** ೧೪. ೧೪೬)

ಇಂಬು – **[ನಾ]** ಸಂತೋಷ, ಸುಖ (ಮಡಿದನಂ ದೇವಾಂಗನಾನೀಕಂ ಉತ್ಸವದಿಂದುಯ್ಗುಂ ಅದೆಂತುಂ ಇಂಬು ಸುಭಟಂಗೆ ಇಂತಪ್ಪುದಂ: **ಪಂಪಭಾ,** ೧೦. ೪೪) [ಡಿಎಲ್ಎನ್ ಸ್ವೀಕರಿಸಿರುವ ಪಾಠ]; **[ನಾ]** ಆಶ್ರಯ, ಎಡೆ (ನಂಬಿ ನೃಪನೆನಗೆ ಸೈಂಧವನಂ ಬಂದಪ್ಪೆಸೆ ಪೂಣ್ದೆಂ (ಆದುದಂ ಆಗಲ್ಕೆ ಇಂಬು ಅಟಿದನುವರದೊಳ್ ಅವಂ ಮುಂಬಯಣಂಬೋದಂ ಎನಗೆ ಮಾಣ್ದುದು ದೊರೆಯೇ: **ಪಂಪಭಾ,** ೧೨. ೨); **[ನಾ]** ಸೊಗಸು, ಚೆಂದ (ತದಂತ್ರದೆ ಕೃಷ್ಣೆಗೆ ಇಂದು ಧಮ್ಮಿಲ್ಲವಂ ಇಂಬಿನಿಂ ಮುಡಿಸಿ: **ಪಂಪಭಾ,** ೧೨. ೧೬೧)

ಇಂಬುಕೆಯ್ – **[ಕ್ರಿ]** ಅಂಗೀಕರಿಸು (ದೇವನ ದರಹಸಿತಾನನದೊಳ್ ತನಗೆ ಇಂಬುಕೆಯ್ದು ಬಗೆಯಂ ಪದಿನಾಲ್ಕನೆಯ ಮನು ಜಲಕನಱಿದು: **ಆದಿಪು,** ೮. ೧೫); **[ಕ್ರಿ]** ಸಹಾಯಕವಾಗಿ ನಡೆದುಕೊ (ಮತ್ತರುಂ ಕುರುಡರುಂ ಎನ್ನದೆ ಎಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್: **ಪಂಪಭಾ,** ೧೩. ೧೨); **[ಕ್ರಿ]** ವಿಧೇಯವಾಗಿರು (ಇನತನಯಂಗೆ ಸಾವುಂ ತನಗೆ ಇನಿತೊಂದು ಅೞಲುಂ ದಿನೇಶಪುತ್ರನೆ ನಿನಗೆ ಇಂಬುಕೆಯ್ಯುದುದಱಿಂ: **ಪಂಪಭಾ,** ೧೩. ೨೯)

ಇಂಬುಕೆಯ್ಸು – **[ಕ್ರಿ]** ಹಿತವುಂಟುಮಾಡು (ತನ್ನ ಮುನ್ನಟಿವು ಬೇಟದ ಲಲ್ಲೆಯ ಬಲ್ಮೆ ಪತ್ತಿ ಸುತ್ತಿಸೆ ಪುರುಡು ಇಂಬುಕೆಯ್ಸೆ ಬಿಯಮಾಗಿಸೆ ಪೊಂದದವಂ ಬೊಜಂಗನೇ: **ಆದಿಪು,** ೧೨. ೧೭)

ಇಂಬುವಡೆ – **[ಕ್ರಿ]** ಹೊಂದಿಕೊಳ್ಳು (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱಿದ ನಿತಂಬ ಇಂಬುವಡೆದ ಒಳ್ತೊಡೆ ನೆಕ್ಕರವದ್ದೆ ತಾನೆ ಪೋ ಕಿಱುದೊಡೆ ಎಂದು ಧಾತ್ರಿ ಪೊಗಟ್ಟುಂ ಪೊಗಟ್ಟನ್ನರೆ ಕುಂತಿ ಮಾದ್ರಿಗಳ್: **ಪಂಪಭಾ,** ೧. ೧೦೮)

ಇಂಬುವರ್ – **[ಕ್ರಿ]** ಅನುಕೂಲಕರವಾಗು (ಸುಯೋಧನನೆಂಬ ಪಾಪಕರ್ಮನ ಮಾಡಿದನುವರಂ ನಿಮ್ಮ ಅನುಬಲದೊಳಂ ಅರಿಕೇಸರಿಯ ಭುಜಬಲದೊಳಂ ಎಮಗಿಂಬುವಂದುದು: **ಪಂಪಭಾ,** ೯. ೧೭ ವ)

ಇಂಬುವೆಱು – **[ಕ್ರಿ]** ಚೆನ್ನಾಗಿರು (ಕರಣಗಣಂ ಕುನುಂಗಿರೆ ಮನಂ ನೊಸಲಲ್ಲಿರೆ ಲೋಚನಂಗಳ್ ಅರೆಮುಗುಟ್ದಿಂಬುವೆತ್ತಿರೆ: **ಆದಿಪು,** ೧೦. ೧೪)

ಇಂಬೆಳಸು – **[ಕ್ರಿ]** ಚೆನ್ನಾದ ಬೆಳಸು, ಇನಿದಾದ ಬೆಳೆ (ನಾಡ ಕಾಡ ಬೆಳಸು ಇಂಬೆಳಸಾ ವಿಷಯಾಂತರಾಳದೊಳ್: **ಪಂಪಭಾ,** ೧. ೫೪)

ಇಕ್ಕಿ ಮೆಟ್ಟು – **[ಕ್ರಿ]** ಬೀಳಿಸಿ ತುಳಿ (ಅವಂತಿವಲ್ಲದಲ್ಲದೆ ಪೆಱವಿಲ್ಲ ಕಬ್ಬಂ ಎನೆ ಮುನ್ನಿನ ಕಬ್ಬಮನೆಲ್ಲಮಂ ಇಕ್ಕಿಮೆಟ್ಟಿದುವು ಸಮಸ್ತಭಾರತಮುಂ ಆದಿಪುರಾಣ ಮಹಾಪ್ರಬಂಧಮುಂ: **ಪಂಪಭಾ,** ೧೪. ೫೯)

ಇಕ್ಕು – [ಕ್ರಿ] ಬಿಸಾಕು (ಸಕಳಾವನಿತಳವಲ್ಲಭನಂ ಭೋಂಕನೆತ್ತಿ ಪೊತ್ತಿರ್ದಂ ಇಕ್ಕಲೊಲ್ಲದೆ ನೆಲದೊಳ್: **ಆದಿಪು,** ೧೪. ೧೧೧); **[ಕ್ರಿ]** ಹೊಡೆ, ಬೀಳಿಸು (ಇಕ್ಕಿದಂ ಅಭವಂ ಪಾರ್ಥನಂ ಇಕ್ಕಿದನಾ ತ್ರಿಪುರಹರನಂ ಅರ್ಜುನಂ: **ಪಂಪಭಾ,** ೮. ೨೨); **[ಕ್ರಿ]** ಕುಗ್ಗು (ಈ ಕೂಸುಗಳ್ ಮನಮಿಕ್ಕಿಯುಂ ಎರ್ದೆಯಿಕ್ಕಿಯುಂ ಕಿಡುವರ್: **ಪಂಪಭಾ,** ೨. ೨೮ ವ); **[ಕ್ರಿ]** ಕೊಲ್ಲು (ನಾಳೆ ವಿಜಯಂ ಮಾರ್ಕೊಳ್ವದಂದು ಉರ್ಕಿ ಪೊಕ್ಕನಂ ಆಂತು ಒರ್ವನಂ ಇಕ್ಕುವೆಂ ಕದನದೊಳ್ ಮೇಣ್ ಕಟ್ಟುವೆಂ ಧರ್ಮನಂದನನಂ: **ಪಂಪಭಾ,** ೧೧. ೮೪)

ಇಕ್ಕುಂಗೂಳ್ – [ನಾ] [ಇತರರು] ನೀಡುವ ಅನ್ನ, ಭಿಕ್ಷೆ (ಪೆಱನಿಕ್ಕುಂಗೂಟಿಗೊಳಂ ಕೀಟಿಲೊಳಂ ಅಳವಿಗೆಟ್ಟಿರ್ಪ ನಿಮ್ಮಿರ್ಪುದಕ್ಕಂ .. .. ನೀಗು ನೀಂ ಭೀಮಸೇನಾ: **ಪಂಪಭಾ,** ೮. ೭೧)

ಇಕ್ಕುಟಿಲ್ – [ನಾ] ಇಕ್ಕುಳ (ಪುಸಿ ಬಸನಮೆಂದು ಕೆಲಬರ್ ಕುಸಿವರ್ ನಾಲಗೆಯಂ ಇಕ್ಕುಟಿಗೊಳ್: **ಆದಿಪು,** ೫. ೮೭)

ಇಕ್ಕೆ – [ನಾ] ಇರುವ ಜಾಗ, ಮನೆ (ತನಗೆ ಇಕ್ಕೆಯಾದ ಕಡಲಂ ಕುಂಭಂಗಳಂ ಪೊಕ್ಕ ದೇವನಿಕಾಯಂಗಳನಿಂದ್ರಂ .. .. ಪವಿತ್ರಮೆನಿಸಿತ್ತು: **ಆದಿಪು, ನರಸಿಂ,** ೭. ೯೬)

ಇರ್ಕೆ – [ನಾ] ಮೂಲಸ್ಥಾನ (ಜಿನನಾಥಸ್ನಪನಾಂಬು ತಜ್ಜಿನತನು ಶ್ರೀಸಂಗದಿಂ ತಾನೆ ಪಾವನಮಾಯ್ತೋ ತನಗಿರ್ಕೆಯಾದ ಕಡಲಂ ಕುಂಭಂಗಳಂ .. .. ಪವಿತ್ರಮೆನಿಸಿತ್ತು: **ಆದಿಪು,** ೧. ೯೬); **[ನಾ]** ಇರುವಿಕೆ, ನೆಲೆ (ಮೂಱುಂ ಲೋಕದೊಳಂ ನಿನ್ನಿರ್ಕೆಯ ಲೋಕಾಗ್ರಮೆ ಸಂತಂ ಅದನೆ ಮಾಡೆನಗರ್ಹಾ: **ಆದಿಪು,** ೧೦. ೫೭)

ಇರ್ಕೆದಾಣ – [ನಾ] ಇರುವ ಜಾಗ (ಕೋಗಿಲೆಯಿರ್ಕೆದಾಣದೊಳ್ ಜಿನುಗುವ ತುಂಬಿ ತುಂಬಿಯೊಳರಲ್ದ ಅರಲ್ ಎಂಬಿವಱೆಂ ಬಸಂತರಾಜನ ಮನೆಯಂತೆ ಕಣ್ಗೆಸೆದು ತೋಱುಗುಂ: **ಆದಿಪು,** ೧. ೬೫)

ಇರ್ಕೆಲ – [ನಾ] ಎರಡೂ ಪಕ್ಕ (ಕಲ್ಪಕ್ಷಿತಿರುಹಮನೆ ಪೋಲ್ತಿರ್ದನಾ ಆ ಕಾಂತೆಯರ್ ತಮ್ಮತಿರಾಗದಿಂ ಪರ್ಚಿ ತನ್ನಿರ್ಕೆಲದೊಳಮಿರೆ ತನ್ನಾಭಿರಾಜಾಗ್ರಪುತ್ರಂ: **ಆದಿಪು,** ೮. ೨೩)

ಇಕ್ಷುಚಾಪ – [ನಾ] ಕಬ್ಬಿನ ಬಿಲ್ಲು, ಮನ್ಮಥನ ಬಿಲ್ಲು (ಪೊಳೆವ ಕಣ್ಗಳ ಬೆಳ್ಪು ಪಳಂಚಿ ಚಿನ್ನಪೂಗಣೆಗೆಣೆಯಾಗೆ ಪುರ್ವುಂ ಎಮೆಗಳ್ ಬಿಡದಳ್ಳಿಱಿದ ಇಕ್ಷುಚಾಪದೊಳ್ ಖಳ ಕುಸುಮಾಸ್ತ್ರಮನಿಟ್ಟು ಗೊಣೆಯಕ್ಕೆಣೆಯಾಗಿರೆ: **ಪಂಪಭಾ,** ೪. ೩೬)

ಇಕ್ಷುದಂಡ – [ನಾ] ಕಬ್ಬಿನ ಜಲ್ಲೆ, ಕಬ್ಬಿನ ಬಿಲ್ಲು (ಉದ್ಧೃಷ್ಟರಶ್ಮಿಪಾಂಡುರಪಾಳಿತ ಕರವಾಳ ಅಡ್ಡಾಯುಧಂ ಇಕ್ಷುದಂಡಪ್ರಣೀತ ಕ್ರೀಡಾವಖಂಡಿತೋಚ್ಚಂಡ ಶುಂಡಾಳಗಾತ್ರಾಪರಪತಿ: **ಆದಿಪು,** ೧೩. ೪೫ ವ)

ಇಕ್ಷುಪುಷ್ಪ – [ನಾ] ಕಬ್ಬಿನ ಹೂ, ಸೂಲಂಗಿ (ವಿಸಸನದೊಳ್ ವಿರೋಧಿನೃಪರಂ ತಱಿದೊಟ್ಟಲುಂ .. .. ನೋಯಿಸಿದಪುದು ಇಕ್ಷುಪುಷ್ಪದವೊಲೆನ್ನಯ ನಿಷ್ಫಲಪುಷ್ಪದರ್ಶನಂ: **ಪಂಪಭಾ,** ೧. ೧೧೭)

ಇಕ್ಷುಯಂತ್ರ – [ನಾ] ಕಬ್ಬು ಹಿಂಡುವ ಸಾಧನ (ಓರೊರ್ವರ್ ಓರೊರ್ವರಂ ಇಕ್ಷುಯಂತ್ರಂಗಳೊಳ್ ಕಬ್ಬಂ ಪಿಟಿವಂತೆ ಪಿಟಿವರುಂ: **ಆದಿಪು,** ೫. ೮೫ ವ)

ಇಕ್ಷುರಸ – [ನಾ] ಕಬ್ಬಿನ ರಸ (ಕನಕಕಳಶದೊಳ್ ತೀವಿದ ಅಮೃತರಸಸಮಾನ ಧವಳೇಕ್ಷುಧಾರೆ ಪುಣ್ಯಧಾರೆಯಂತೆ ಸೋಗಯಿಸುವಿನಂ: **ಆದಿಪು,** ೯. ೧ ವ)

ಇಕ್ಷುರಸಸಂಗ್ರಹಣ – [ನಾ] ಕಬ್ಬಿನ ರಸವನ್ನುತೆಗೆಯುವುದು (ಆದಿದೇವಂ ಇಕ್ಷುರಸಸಂಗ್ರಹಣ ಸಮಯಾಹೂತ ಭೂತಳನಪ್ಪುದಱೆಂ ಇಕ್ಷ್ವಾಕುಕುಳತಿಳಕನುಂ: **ಆದಿಪು,** ೮. ೭೫ ವ)

ಇಕ್ಷ್ವಾಕುಕುಳತಿಳಕ – [ನಾ] ಸೂರ್ಯವಂಶದ ಆದಿನಾಥನು ಕಬ್ಬಿನ ರಸವನ್ನು ತೆಗೆದು ಸಂಗ್ರಹಿಸುವುದನ್ನು ಪ್ರಜೆಗಳಿಗೆ ತೋರಿಸಿದ್ದರಿಂದ ಇಕ್ಷ್ವಾಕುವಂಶತಿಳಕ ಎನ್ನಿಸಿಕೊಂಡ (ಅಂತಾದಿದೇವನಿಕ್ಷುರಸಸಂಗ್ರಹಣಸಮಯಾಹೂತ ಭೂತಳನಪ್ಪುಱೆಂದಂ ಇಕ್ಷ್ವಾಕುಕುಳತಿಳಕನುಂ: **ಆದಿಪು,** ೮. ೭೫ ವ)

ಇಚ್ಚೆ – [ನಾ] ಸ್ವೇಚ್ಛೆ (ಪುಚ್ಚವಣಂ ನೋಡುವೆಂ ಎನ್ನಿಚ್ಚೆಯೊಳೀ ಮುನಿಯವರದ ಮಹಿಮೆಯನೆನುತುಂ: **ಪಂಪಭಾ,** ೧. ೯೦); **[ನಾ]** ಆಸೆ, ಬಯಕೆ (ಕಾಮಕಾಂತೆ ಬಟೆಯಂ ತನ್ನಿಚ್ಚೆಯಂ ಮೆಚ್ಚಿ ಬಣ್ಣವುರಂ ತೀವಿದ ಮಾಟಕ್ಕೆಯಾಯ್ತು: **ಪಂಪಭಾ,** ೭. ೨೪); **[ನಾ]** ಇಚ್ಛಾಶಕ್ತಿ (ಬಾಣಸಂಘಾತದ ಕೋಳೊಳ್ ಇಚ್ಚೆಯೆ ಕೆಟ್ಟೊಡೆ ಆತಂ ಅತ್ತ ಈತನುಂ ಇತ್ತ ಜೋಲ್ದ ರಣಮಂ ಪೊಗಟುತ್ತಿರೆ ದೇವಕೋಟಿಗಳ್: **ಪಂಪಭಾ,** ೧೨. ೭೭)

ಇಚ್ಚೆಕಾರ್ತನ – [ನಾ] ಕಾಮವಾಂಛೆ (ಲಲಿತಾಂಗನಂ ಮನಂಗೊಳಿಸುವರ್ ಇಚ್ಚೆಕಾರ್ತನದ ಲಲ್ಲೆಯ ಸಗ್ಗದ ದೇಸೆಕಾರ್ತಿಯರ್: **ಆದಿಪು,** ೨. ೭೧)

ಇಚ್ಚೆಗೆಡು – [ಕ್ರಿ] ಆಸೆ ಇಲ್ಲವಾಗು (ತಳೋದರಿಯ ಸುಯ್ಗಳ ಬೆಂಕೆಯೊಳ್ ಇಚ್ಚೆಗೆಟ್ಟು ತೊಟ್ಟಗೆ ಕೊಳೆ: **ಪಂಪಭಾ,** ೫. ೧೦)

ಇಚ್ಚೆಯಾಣ್ಮ – [ನಾ] ಮನದನ್ನ (ಇಚ್ಚೆಯಾಣ್ಮನೆಲ್ಲಿರ್ದಂ ಎರ್ದೆಯಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ: **ಆದಿಪು,** ೩. ೧೫)

ಇಚ್ಛಾಗತ – [ನಾ] [ಜೈನ] ಇಷ್ಟದಂತೆ ನಡೆಯುವವನು, ಹಿಮ್ಮಡಿಯ ಬದಿ ನಾಲ್ಕು ಬೆರಳಷ್ಟು ಮತ್ತು ಉಂಗುಷ್ಠದ ಬದಿ ಒಂದು ಗೇಣಿನಷ್ಟೂ ಎರಡು ಕಾಲುಗಳ ನಡುವೆ ಅವಕಾಶವಿರುವ ಹಾಗೆ ನಿಲ್ಲುವ ಒಂದು ಭಂಗಿ (ಮಡದೆಡೆ ನಾಲ್ವೆರಲ್ ಅಂಗುಟದೆಡೆಯೊಳ್ ಗೇಣಾಗೆ ನಿಲ್ವುದಿಚ್ಛಾಗತಂ ಅಂದೆಡೆಯೊಳ್ ವಾಚಂಯಮತೆಯೊಳ್ ಒಡಂಬಡಂ ಪಡೆದು ನಿಂದನಾದಿಬ್ರಹ್ಮಂ: **ಆದಿಪು,** ೯. ೮೪)

ಇಟ್ಟಗೆ – [ನಾ] [ಇಷ್ಟಕಾ] ಇಟ್ಟಿಗೆ (ಎಲ್ಲಿ ನೋಡುವೊಡಂ ಇಟ್ಟಗೆ ಕಲ್ಮರನೆಂಬುದಿಲ್ಲ ಕೂರದಂ ಇದನೊಡ್ಡಿದಂ ಪಗೆಗೆ ಸಂತಸಮಾಗಿರೆ ಮಾರಿ ಸುಯ್ಗುಮೇ: **ಪಂಪಭಾ,** ೩. ೪)

ಇಟ್ಟಳಂ – [ಅ] ಅತಿಶಯವಾಗಿ (ಕೆತ್ತಿತ್ತು ದಲ್ ಬಲಗಣ್ಣುಂ ಬಲದೋಳುಂ ಆ ಬಲಿಬಲಪ್ರಧ್ವಂಸಿಗೆ ಅಂದು ಇಟ್ಟಳಂ: **ಪಂಪಭಾ,** ೪. ೩೩); **[ಅ]** ಚೆಲುವಾಗಿ (ಸಂಚಳಿಸುವ

ಚಾಮರಂ ಕನಕಪದ್ಮದ ಸೀಗುರಿ ತೊಟ್ಟ ಮಾಣಿಕಂಗಳ ಬೆಳಗು ಇಟ್ಟಳಂ ತನಗೊಡಂಬಡೆ: **ಪಂಪಭಾ,** ೪. ೪೦)

ಇಟ್ಟಿ – [ನಾ] ಈಟಿ (ದಿಂಕುಗೊಳ್ವ ಕಕ್ಕಡೆಗೆ ಇದಿರ್ ಉರ್ಚುವ ಇಟ್ಟಿಗೆ ಇದಿರಾನೆಯ ಕೋಟ್ಗಳ ಕೋಳ್ಗೆ ನೊಂದು ಬಾಯ್ವಿಡದೆ **ಪಂಪಭಾ,** ೧೦. ೯೪)

ಇಟ್ಟೆಡೆ – [ನಾ] (ಅಡಿಯಿಡಲೀ ಧರೆ ಇಟ್ಟೆಡೆಯೆಂಬಿನಂ ಅಭ್ರಮಂಡಲಂ ಕಡುನಳಿದಾದುದು: **ಆದಿಪು,** ೧೨. ೬೨); ಸಮ್ಮರ್ದ, ಒತ್ತೊತ್ತಾಗಿರುವಿಕೆ (ಘನೋತ್ತುಂಗಸ್ತನದ್ವಂದ್ವದ ಇಟ್ಟೆಡೆಯಂ ಕೋಕಮೆಗೆತ್ತು ಕೋಕಂ: **ಪಂಪಭಾ,** ೭. ೮೬)

ಇಟ್ಟೆಡೆವೆರ್ಗಡೆತನ – [ನಾ] ಇಕ್ಕಟ್ಟಿನ ಹೆಗ್ಗಡೆತನ (ಇಟ್ಟೆಡೆವೆರ್ಗಡೆತನದೊಳ್ ಇದೇವಡೆವಿರ್ ನಿಮಗೆಮ್ಮ ಕಜ್ಜದೊಳ್ ಪೊರೆಯುಂಟೆ: **ಆದಿಪು,** ೯. ೧೦೭)

ಇಡಿ – [ಕ್ರಿ] ದಟ್ಟವಾಗು (ಇಡಿದಡರೆ ಕಾಯ್ತ ಚೂತಮನಡಸಿ ಸಿಡಿಲ್ವೊಯ್ದುದೆನಿಸೆ: **ಆದಿಪು,** ೩. ೩೪); ತುಂಬಿಕೊಳ್ಳು (ಇಡಿದಿರೆ ಪೂತಮರದ್ರುಮದ ಇಡುವುಗಳೊಳ್ ಬದ್ದವಣದ ಪುಡಿವೊಲ್ ಬೆನ್ನೊಳ್ ಬಿಡದಲುಗೆ ಕುಸುಮಕುಳ ರಜಮಡರ್ದುದು ಸುರಗಿರಿಯಂ ಇಂದ್ರರುಂದ್ರಗಜೇಂದ್ರಂ: **ಆದಿಪು,** ೭. ೭೩)

ಇಡಿವೋಗು – [ಕ್ರಿ] ಒತ್ತೊತ್ತಾಗು, ಕಿಕ್ಕಿರಿ (ಆತಂ ಆರ್ದು ಒಡನೊಡನೆ ಎಚ್ಚ ಮೊನೆಯಂಬುಗಳ್ ಅಟ್ಟಿ ಇಡಿವೋಗೆಯುಂ ಮನಂಗಿಡಂ: **ಪಂಪಭಾ,** ೧೧. ೪೪) ['ಅಟ್ಟಿಡಿವೋಗು' ಎಂಬುದು ಡಿಎಲ್ಎನ್ ಪರಿಷ್ಕರಣ]

ಇಡು – [ಕ್ರಿ] ಪೇರಿಸು (ಗಣಿಕಾಸೃಷ್ಟಿಯಂ ಪುಷ್ಪಚಾಪಂ ಪೊಸತಂ ಮಾಡಿಟ್ಟನೋ ನಿಪ್ಪೊಸತು ದಲ್ ಇದಱೊಂದಂದಂ ಎಂಬಂತದೇಂ ರಂಜಿಸಿತೋ ವಿದ್ಯಾಧರಾಧೀಶ್ವರನ ಕೆಲದ ವಿದ್ಯಾಧರಸ್ತ್ರೀಸಮೂಹಂ: **ಆದಿಪು,** ೧. ೮೨); [ಕ್ರಿ] ನಿಯೋಜಿಸು, ಅಧಿಕಾರದಲ್ಲಿ ಕೂರಿಸು (ಶತಬಳನಂ ಸಹಸ್ರಬಳಖೇಚರನಿಟ್ಟು ತಪೋನಿಯೋಗನಿಶ್ಚಿತಮನನಾಗಿ ಸಂದನಪವರ್ಗಪದಕ್ಕೆ: **ಆದಿಪು,** ೨. ೧೯); [ಕ್ರಿ] ಹೊಡೆ (ನಲ್ಲಳ ರತಿಶ್ರಮವಿಶ್ಲಥಕೇಶಪಾಶದೊಳ್ ಸವಸವನಾಗಿ ತೋಱದಪುದು ಎಂಬುದೆ ಕಾರಣದಿಂದಂ ಗುಣಾರ್ಣವಂ ಇಡಲ್ ಒಲ್ದನಿಲ್ಲ: **ಪಂಪಭಾ,** ೫. ೫೧); [ನಾ] ಸಂದಿ ಮತ್ತು ಧರಿಸು (ಅವನ ಬರಿಯ ನರವಿನ ಅಡಗಿನ ಇಡುವಿನ ಎಡೆಯ ಕೆನ್ನೆತ್ತರೊಳ್ ಒರ್ವರೊರ್ವರಂ ತಳ್ಕಿಱಿದುಂ ಬೊಬ್ಬಿಱಿದುಂ ತ್ರಿಪುಂಡ್ರಮಿಟ್ಟುಂ ಕೂಕಿಱಿದುಂ: **ಪಂಪಭಾ,** ೧೨. ೧೫೮ ವ)

ಇಡುಮುಡುಕು – ಛಿಟಛಿಟಿರೆನ್ನುವ ಶಬ್ದ, ಸಿಡಿಲಿನ ಅಬ್ಬರ (ಎಡೆವಱದೊಳ್ ಎಱಗಿ ಬಱಸಿಡಿಲ್ ಇಡುಮುಡುಕೆನೆ ಪೊಡೆದುದೆನಿಸಿ ಪಾಂಡ್ಯನ ರಥದ ಅಚ್ಚು ಉಡಿದು ಅಟ್ಟೆಗೆಟ್ಟೆ ಕೊಂಡುವು ಕಡುಗೂರಿದುವೆನಿಪ ಗುರುತನೂಜನ ಕಣ್ಗಳ್: **ಪಂಪಭಾ,** ೧೨. ೮೨)

ಇಡುವಗೆ – [ನಾ] [ಇಡು+ಪಗೆ] ಬದ್ಧದ್ವೇಷ (ಜೂದೆ ನೆವಮಾಗಿರೆ ಮೂಲಿಗನಾದೆಂ ಆನೆ ಪೂಣ್ದಿಡುವಗೆಗೆ ಎನ್ನೊಳಾದ ಕಿಸುರ್ ಎನ್ನೊಡವೋಪುದು ಒಳ್ಳಿತೆನ್ನ ಪಿಂಬಡಿನೊಳೆ: **ಪಂಪಭಾ,** ೧೩. ೧೮); [ನಾ] ಬದ್ಧದ್ವೇಷಿ (ತೊಡರ್ದು ಬಿಡಿಂ ಸುಯೋಧನನಂ ಎನ್ನುಮಂ ಆನಿರೆ ಕೌರವಾಧಿಪಂಗೆ ಇಡುವಗೆ ಪೇೞಿಂ ಇಂ ಪೆಱರೊಳಂ ಮುಳಿಸುಂಟೆ: **ಪಂಪಭಾ,** ೧೩. ೯೧)

ಇಡುವು – [ನಾ] ಸಂದಿಗೊಂದಿ, ಇಕ್ಕಟ್ಟು (ಇಡಿದಿರೆ ಪೂತಮರದ್ರುಮದ ಇಡುವುಗಳೊಳ್ ಬದ್ದವಣದ ಪುಡಿವೊಲ್ ಬೆನ್ನೊಳ್ ಬಿಡದಲುಗೆ: **ಆದಿಪು,** ೭. ೭೩); [ನಾ] ರಾಶಿ (ನೆಣದ ಪಳ್ಳಂಗಳಂ ಪಾಯ್ದುಂ ನೆತ್ತರ ತೊಱೆಗಳಂ ಬಂಚಿಸಿಯುಂ ಅಡಗಿನ ಇಡುವುಗಳಂ ದಾಂಟಿಯುಂ: **ಪಂಪಭಾ,** ೧೩. ೫೩ ವ)

ಇಡೆ ಮುಡಿವು – [ಕ್ರಿ] ಪ್ರಯೋಗಿಸಿ ತೀರು, ಮುಗಿದುಹೋಗುವ ಹಾಗೆ [ಬಾಣ] ಬಿಡು (ಪಿಡಿಕೆಯ್ಯ ದೊಣೆಯ ಪೊದೆಯಂಬು ಇಡೆ ಮುಡಿವಿನಂ ಎಚ್ಚು: **ಪಂಪಭಾ,** ೧೦. ೭೫)

ಇತರೇತರ – [ಅ] ಪರಸ್ಪರ (ಪ್ರವಾಹಸಹಸ್ರಂಗಳಿಂದಂ ಇತರೇತರ ಹೇಷಾರವ ಆಕರ್ಣನೋದೀರ್ಣರೋಷಹಯ ಹೂಂಕಾರ ನಿಷ್ಠುರ: **ಆದಿಪು,** ೧೪. ೯೫ ವ)

ಇತಿವೃತ್ತ – [ನಾ] ನಾಟಕದ ಒಂದು ಭಾಗ (ನಾಂದೀ ಪ್ರರೋಚನಾ ಪ್ರಸ್ತಾವನಾ ಇತಿವೃತ್ತ ಸಂಧಿ ಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ: **ಪಂಪಭಾ,** ೨. ೩೪ ವ)

ಇತಿಹಾಸಕಥೆ – [ನಾ] ಚರಿತ್ರೆ ಮತ್ತು ಕತೆಗಳು ಒಂದಾದ ಕತೆ (ನಿಜಾಭಿಖ್ಯಾತಿಯಂ ಇಳೆಯೊಳ್ ನಿಱಿಸಲ್ಕೀ ತೆಱದ ಇತಿಹಾಸಕಥೆಯಂ ಒಪ್ಪಿಸೆ ಕುಱಿತಂ: **ಪಂಪಭಾ,** ೧೪. ೫೧)

ಇತ್ತುಂ ತೆತ್ತುಂ – [ಅ] ಕೊಡಬೇಕಾದ್ದನ್ನು ಕೊಟ್ಟು (ಪರಮಂಡಳ ವ್ಯಸನಮಂ ಆರಯ್ವುಮಪ್ಪೊಡೆ ಇತ್ತುಂ ತೆತ್ತುಂ ಬಾಳ್ವ ಮಂಡಲಮಲ್ಲದೆ ಕೀೞೆಯುಂ ಮೀಱೆಯುಂ ನೆಗೞ್ವ ಮಂಡಲಮಿಲ್ಲ: **ಪಂಪಭಾ,** ೬. ೬೭ ವ)

ಇತ್ತೆಯೆ – [ಅ] [ಇತ್ತೆ+ಎ] ಈ ಕಡೆಯೇ, ಇಲ್ಲೇ (ಎಮ್ಮಾಳ್ವ ಷಟ್ಖಂಡಕ್ಕೆ ಇಂತಿದಱಿಂದಿತ್ತೆಯೆ ಮೇರೆ ನೋಡೆಮಗೀ ಶೈಳೇಂದ್ರಂ: **ಆದಿಪು,** ೧೩. ೬೯)

ಇದಂ – (ಸ) ಇದು, ಈ (ಶೈಲೇಳಾಕಲ್ಪಕಾಳಂ ಕ್ಷಿತಿವಲಯಮಿದಂ ಪಾತು ವಿಕ್ರಾಂತತುಂಗಃ: **ಪಂಪಭಾ,** ೧೪. ೨೭)

ಇದಿರ್ – [ನಾ] ಎದುರು (ಕೂಟಶಾಲ್ಮಲಿಗಳಂ ಅಡರವೇಟ್ಟು ಇದಿರಂ ಬೞಿಯಂ ಉರ್ಚುವರುಂ: **ಆದಿಪು,** ೫. ೮೫ ವ); ವಿರೋಧ (ತನಗಿದಿರಂ ಅದಿರದೆ ಒಡ್ಡಿ ವಿದ್ವಿಷ್ಟಬಲಂ ನೋಡೆ ನೋಡೆ ಕರಗುವುದಱಿಂ: **ಪಂಪಭಾ,** ೧೪. ೩೭ ವ)

ಇದಿರ್ ನಿಲ್ – [ಕ್ರಿ] ಎದುರಿಸು (ದಿವಿಜರ್ ವಾಯುಪಥದೊಳ್ ಶಿತಾಸ್ತ್ರಂಗಳಂ ಪೊಂಕಂಗಿಡಿಸೆ ಸುಗಿದಂ ಭಾರ್ಗವಂ ಇದೇಂ ಪ್ರತಿಜ್ಞಾಗಾಂಗೇಯಂಗೆ ಅದಿರದೆ ಇದಿರ್ ನಿಲ್ವನ್ನರೊಳರೇ: **ಪಂಪಭಾ,** ೧. ೮೦)

ಇದಿರಂ ನೋಡು – [ಕ್ರಿ] ನಿರೀಕ್ಷಿಸು (ಎಲ್ಲಿವೊಕ್ಕೊಡಂ ಕೊಂಡುಬಂದಪೆನೆಂದು ಬಗೆಯದೆ ಇದರಂ ನೋಡುತ್ತಿರಿಮೆಂದು: **ಪಂಪಭಾ,** ೭. ೩೭ ವ)

ಇದಿರಂ ಬರ್ – [ಕ್ರಿ] ಎದುರುಗೊಳ್ಳು, ಸ್ವಾಗತಿಸು (ಅತಿವಿಳಾಸವಿಧೃತದುಕೂಲಂ ಧೃತರತ್ನಾರ್ಘ್ಯಂ ಬಂದಂ

ಪತಿಗಿದಿರಂ ಶಂಖನಿಧಿಯೆ ಬರ್ಪಂತಾಗಳ್: **ಆದಿಪು,** ೧೩. ೧೨)

ಇದಿರಂ ಬೞಿಯಂ – [ಅ] ಮುಂದೆ ಮತ್ತು ಹಿಂದೆ (ಕೂಟಶಾಲ್ಮಲಿಗಳನಡರವೇಟ್ಟು ಇದಿರಂ ಬೞಿಯಂ ಉರ್ಚುವರುಂ: **ಆದಿಪು,** ೫. ೮೫ ವ)

ಇದಿರಿದಿರ್ – [ನಾ] ಎದುರುಬದುರು, ಮುಖಾಮುಖಿ (ಅರಿವ ನಡುವ ಉಡಿವ ನೇರ್ಗೋಲ್ಗಳಿಂದು ಉರ್ಚುವ ನಟ್ಟು ತೊನೆವ ಕಣೆಗಳ್ಗೆ ಮೊಗಂದಿರಿಯದೆ ಇದಿರಿದಿರಂ ಅದಿರದೆ ಸುರಿಗಿಱಿವಂತೆ: **ಪಂಪಭಾ,** ೧೦. ೭೪)

ಇದಿರೀಸು – [ಕ್ರಿ] ಪ್ರವಾಹಕ್ಕೆ ವಿರುದ್ಧವಾಗಿ ಈಜು (ಎೞಿವ ತೊಱೆಯಂ ಇದಿರೀಸುವುದೆಲ್ಲಿಯ ಗಾಂಪು: **ಆದಿಪು,** ೧೨. ೧೦೮)

ಇದಿರೇೞ್ – [ಕ್ರಿ] ಗೌರವದಿಂದ ಎದುರುಗೊಳ್ಳು (ಜಗದ್ಗುರುಗೆ ಬೇಗಂ ಉಚ್ಚಾಸನದಿಂದ ಇದಿರೇೞಿಂ ಎಂದು ಪೇೞ್ವವೋಲ್: **ಆದಿಪು,** ೭. ೪೦)

ಇದಿರ್ಗೊಳ್ – [ಕ್ರಿ] ಸ್ವಾಗತಿಸು (ದುರಿತವಿಜಯಮಂ ತನಗೆ ಮಹೋತ್ಸವದಿನಱಿಪುತ್ತುಂ ಇದಿರ್ಗೊಳ್ವವೊಲೆಸೆದುದು ಸಮವಸರಣ ದುಂದುಭಿನಿನದಂ: **ಆದಿಪು,** ೧೪. ೧೩೬)

ಇದಿರ್ವರ್ – [ಕ್ರಿ] ಎದುರುಗೊಳ್ಳು, ಸ್ವಾಗತಿಸು (ಮದಕರಿಕರೇಣು ತುರಗಾದಿ ನಾನಾ ವಿಧ ವಾಹನಂಗಳಂ ಏಱೆ ಮಯ್ದುನಂಗಿದಿರ್ವಂದು: **ಪಂಪಭಾ,** ೪. ೩೩ ವ)

ಇದುವೆ – (ಸ) [ಇದು+ಎ] ಇದೇ (ಇದು ಶಾಲ್ಮಲಿಪಾದಪಂ ಇಂತಿದು ಜಂಬೂವೃಕ್ಷಂ ಇದುವೆ ಕುರುಭೂಮಿಗಳೊಪ್ಪಿದುವು ಅರ್ಧಚಂದ್ರಾಕಾರದಿಂ ಉಚಿತದಶಾಂಗಕಲ್ಪಕುಜ ನಿಳಯಂಗಳ್: **ಆದಿಪು,** ೨. ೨೬)

ಇಧ್ಮ – [ನಾ] ಸಮಿತ್ತು, ಸೌದೆ (ಬಳವತ್ ಕಾಮಾಗ್ನಿ ಹೋಮಾಗ್ನಿ ಚಂದನ ಕರ್ಪೂರ ಮೃಣಾಳನಾಳಮೆ ಪೊದಳ್ದ ಇಧ್ಮಂಗಳ್ ಇಂತಾಗೆ ತಾನಿನಿತುಂ ಕಾಮನ ಬೇಳ್ವೆಯೆಂದು ಸುಗಿದಳ್ ತನ್ವಂಗಿ ಬೆಳ್ದಿಂಗಳೊಳ್: **ಪಂಪಭಾ,** ೪. ೫೯)

ಇನ್ – [ಅ] ಇನ್ನು ಮೇಲೆ (ನೀಂ ಗಳ ಪಂಬಲನೆ ಬಿಸುಡಿಂ ಇನ್ ಎನ್ನ ಎಡೆಯೊಳ್: **ಪಂಪಭಾ,** ೯. ೮೫)

ಇನ – [ನಾ] ಸೂರ್ಯ (ಸುರನದಿಯ ನೀರೊಳ್ ಮಿಂದು ಇನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆ ಎಂದಾಹ್ವಾನಂಗೆಯ್ಯಲೊಡಂ: **ಪಂಪಭಾ,** ೧. ೯೧)

ಇನಜನ ತನಯ – [ನಾ] ಸೂರ್ಯನ ಮಗ ಯಮ, ಅವನ ಮಗ, ಧರ್ಮರಾಯ (ವನನಿಧಿಯಿಂದಂ ಚಂದ್ರಂ ವಿನತಾ ಉದರದಿಂ ಗರುತ್ಮಂ ಉದಯಾಚಳದಿಂ ದಿನಪಂ ಒಗೆವಂತೆ ಪುಟ್ಟಿದಂ ಅನಿವಾರ್ಯ ಸುತೇಜಂ ಎನಿಪಂ ಇನಜನ ತನಯಂ: **ಪಂಪಭಾ,** ೧. ೧೨೧)

ಇನತನೂಜ – [ನಾ] ಕರ್ಣ (ಪಿಡಿದನೆ ಪುರಿಗಣೆಯಂ ಎರೞ್ನುಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ ಪಿಡಿದು ಅೞಿದಂ ಎಂದು ದೇವರ ಪಡೆ ಗಡಣದೆ ಪೊಗೞ್ದುದು ಇನತನೂಜನ ಗಂಡಂ: **ಪಂಪಭಾ,** ೧೨. ೨೧೬)

ಇನಪಥ – [ನಾ] ಸೂರ್ಯಪಥ, ಆಕಾಶ (ಪಜ್ಜಳಿಸುತಿರ್ಪ ಇನಪಥಮಣಿಮುಕುರದೊಳ್ ಇಂದ್ರನ ಪೊೞಲ್ ಆ ಪೊೞಲ ನೆೞಲನನುಕರಿಸಿರ್ಕುಂ: **ಆದಿಪು,** ೬. ೯೦)

ಇನವಳಯ – [ನಾ] ಸೂರ್ಯಮಂಡಲ (ಒಳಕೊಂಡ ಕೆಂಪಿನಿಂದ ಇನವಳಯಂ ಪೋಲ್ತಿರ್ದುದು ಅಪರದಿಗ್ವಧು ಭೂಭೃತ್ತಿಳಕಂಗೆ ಪಿಡಿವ ಬಗೆ ಕೈಕೊಳೆ ಬೆಳಗಿದ ಪದ್ಮರಾಗಮಣಿದರ್ಪಣಮಂ: **ಆದಿಪು,** ೧೨. ೨)

ಇನಾತ್ಮಜ – [ನಾ] [ಇನ+ಆತ್ಮಜ] ಸೂರ್ಯನ ಮಗ, ಕರ್ಣ (ಚಿಃ ಪೆಱಂಪೆಱಂ ನುಡಿದೊಡೆ ಕೇಳ್ದಂ ಎಂದು ಎನಗೆ ನೋಯನೆ ಸಗ್ಗದೊಳಿರ್ದ ಇನಾತ್ಮಜಂ: **ಪಂಪಭಾ,** ೧೩. ೨೮)

ಇನಾತ್ಮಜಾತ – [ನಾ] ಕರ್ಣ (ನೆಲನಂ ಕೊಟ್ಟಂ ಇನಾತ್ಮಜಾತಂ ಎನಗೆ ಆಂ ತಕ್ಕೂರ್ಮೆಯಿಂದಂ ಜಳಾಂಜಳಿಯುಮಂ ಕೊಟ್ಟೆನುಮಿಲ್ಲ: **ಪಂಪಭಾ,** ೧೩. ೬೦)

ಇನಿ – [ಗು] ಮಧುರ (ಪುಲಿಗೆಱೆಯ ತಿರುಳ ಕನ್ನಡದೊಳ್ ನಿರ್ವ್ಯಾಜದ ಎಸಕದೊಳೆ ಪುದಿದೊಂದೋಜೆಯ ಬಲದಿನಿಯ ಕವಿತೆ ಪಂಪನ ಕವಿತೆ: **ಪಂಪಭಾ,** ೧೪. ೫೮)

ಇನಿಕೆಯ್ – [ಕ್ರಿ] ರುಚಿಯಾಗು (ಪಸಿವು ದೊರೆಕೊಳ್ದುಂ ಉಣಿಸುಗಳ್ ಇನಿಕೆಯ್ದುಂ ಆವಂದದೊಳ್ ಕನಲ್ದು ಆದ ಮೆಯ್ಯಂ ಅಸಿಯನಾಗಿಪುದು: **ಪಂಪಭಾ,** ೫. ೪೭)

ಇನಿತುಂ – [ಅ] ಇಷ್ಟಾದರೂ, ಸ್ವಲ್ಪವೂ (ನಿಮ್ಮ ಮನದಿಂ ಮಿಥ್ಯಾಕಳಂಕಂ ತೆರಳ್ದಿನಿತುಂ ಪೋಗದು ಕಾಲಲಬ್ಧಿ ದೊರೆಕೊಂಡಂದಲ್ಲದೇಂ ಪೋಕುಮೇ: **ಆದಿಪು,** ೨. ೨೨)

ಇನಿಯದು – [ನಾ] ಸಿಹಿಯಾದುದು (ಇನಿಯವು ಮೊದಲೊಳ್ ನಂಜಿನ ಪನಿವೊಲ್ ಬೞಿಕ ಎಯ್ದೆ ಮುಳಿದು ಕೊಂದಿಕ್ಕುವುದು: **ಆದಿಪು,** ೧೪. ೧೨೫)

ಇನಿವಿರಿದು – [ಗು] [ಇನಿತು+ಪಿರಿದು] ಇಷ್ಟು ಹಿರಿದು (ಇನಿವಿರಿದೊಂದು ಮೇಳಮುಂ ಒಡಂಬಡು ಅೞ್ಕಱುಂ ಎನ್ನ ನಿನ್ನ ಮುನ್ನಿನ ಭವದೊಂದು ಕೂರ್ಮೆಯೊಳೆ ಕೂಡಿದುದು: **ಆದಿಪು,** ೪. ೫೨)

ಇನಿಸಾನುಂ – [ನಾ] ಕೊಂಚ (ಅಂತಃಕರಣದೊಳ್ ಇನಿಸಾನುಂ ನಿಂದುದೊಂದು ಮಾನಕಷಾಯಂ ಮುನಿಪತಿಗೆ: **ಆದಿಪು,** ೧೪. ೧೪೫)

ಇನಿಸಾನುಂ ಬೇಗ – [ನಾ] ಆದಷ್ಟು ಬೇಗ (ಆ ಮದಮವರ್ಗೇನೆನತಱಿೞಾಯ್ತು ಅದನನಿಸಾನುಂ ಬೇಗದೊಳೆ ಕಳೆದು ತೋಱೆನೆ ರಣದೊಳ್: **ಆದಿಪು,** ೧೪. ೨೫)

ಇನಿಸು – [ನಾ] **ಇನಿಸು** – [ನಾ] ಇಷ್ಟು (ಕೊಂಡಕುಂದಾನ್ವಯ ನಂದನವನಶುಕಂ ಎಂದೆನಗೆ ಇನಿಸು ಅನುಗ್ರಹಂಗೆಯ್ಗೆ ಕರುಣದಿಂ ಮುನಿನಿವಹಂ: **ಆದಿಪು,** ೧. ೧೪); [ನಾ] ಸ್ವಲ್ಪ (ಜಳನಿಧಿ ತೊಱೆಗಳನೆನಿತುಮನೊಳಕೊಳ್ವವೊಲ್ ಇನಿಸು ತಳರದೆ ಆಶ್ಚರ್ಯಮಹಾಜಳನಿಧಿ ಪಯಃಪ್ಲವಂಗಳನೊಳಕೊಂಡು ಸುರರ ಮಿಸಿಸುವವಸರದಾಗಳ್: **ಆದಿಪು,** ೭. ೯೦)

ಇನ್ನಂ – [ನಾ] ಇಂತಹವನು (ನೆಟ್ಟನಿದಿರ್ಚುವ ನಿಚ್ಚಟಿಕ್ಕೆಯೊಳ್ ಭೀಮನುಂ ಇನ್ನಂ ಅಲ್ಲಂ ಎನೆ ಪೋಲ್ವೆಗೆ ಇವಂಗೆಣೆ ಗಂಡರೆಂಬರಾರ್: **ಪಂಪಭಾ,** ೧೨. ೮೪)

ಇನ್ನಪ್ಪ – [ಅ] [ಇನ್ನು+ಅಪ್ಪ] ಮುಂದೆ ಆಗಲಿರುವ, ಸ್ಥಾಪನೆಗೊಳ್ಳಲಿರುವ (ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ

ಭರತನಿಂದಮಿನ್ನಪ್ಪ ವಿಪ್ರವರ್ಣಕ್ಕಂ ಯಥೋಚಿತ ವೃತ್ತಿಗಳನಜಿಪಲೆಂದು: **ಆದಿಪು**, ೮. ೭೨ ವ)

ಇನ್ನರ್ – [ನಾ] ಇಂಥವರು (ಅಜಿಯದೆ ತಂದೊಡಮೇಂ ಎಮ್ಮ ಎಱ಼ೆಯಂಗೆ ಅದಂ ಎಮ್ಮ ಕೆಯ್ಯೊಳಟ್ಟಿಂ ನೀಂ ಇಂತಜಿಯುತ್ತುಂ ಪೆಱರೊಡಮೆಯಂ ಉಱ಼ ಸೆಱ಼ವಿಡಿದಿರ್ಪಿರಿ: **ಪಂಪಭಾ**, ೮. ೧೮)

ಇನ್ನವು – [ನಾ] ಇಂಥವು (ನಿನ್ನ ಪೆಡಗೆಯ್ಗಟ್ಟಂ ಶರದಿಂ ಬಿಡಿಸಿದನಲ್ಲನೆ ಸರಿತ್ಸುತಂ ಬನ್ನವಿನ್ನವು ಎಂಬುವುಮೊಳವೇ: **ಪಂಪಭಾ**, ೮. ೫೩)

ಇನ್ನಿಂತಿರವೇಡ – [ಕ್ರಿ] ಇನ್ನು ಹೀಗಿರಬೇಡ (ಚಿಂತೆಯಿದೇನೊ ಸಂತತಿಗೆ ನೆಟ್ಟನೆ ಮಕ್ಕಳೆ ಬಾರ್ತೆಯಪ್ಪೊಡೆ ಇನ್ನಿಂತಿರವೇಡ: **ಪಂಪಭಾ**, ೧. ೧೧೮)

ಇನ್ನುಣಿಸು – [ನಾ] ಇನಿದಾದ ಉಣಿಸು (ಮಣಿಕನಕಾದಿ ವಸ್ತುಗಳನೊಂದುಮಂ ಒಲ್ಲೆಂ ಏವುವಾದವು ಇನ್ನುಣಿಸೆನಗೆ ಅಟ್ಟೆ ಮೆಯ್ ಪಸಿದು ಜೊಮ್ಮನೆ ಪೋದಪುದು: **ಪಂಪಭಾ**, ೫. ೭೧)

ಇನ್ನೆಗಂ – [ಅ] ಇದುವರೆಗೂ (ಭರತ ಯಯಾತಿ ಕುತ್ಸ ಪುರುಕುತ್ಸ ಪುರೂರವದಿಂದಂ ಇನ್ನೆಗಂ ಪರಿವಿಡಿಯಿಂದೆ ಬಂದ ಶಶಿವಂಶಂ: **ಪಂಪಭಾ**, ೭. ೧೬)

ಇನ್ನೆವರೆಂ – [ಅ] ಇದುವರೆಗೆ (ಭಯಂಕರಾಟವಿಯೊಳ್ ಇನ್ನೆವರಂ ನೆಲಸಿರ್ದ ಸೇದೆ: **ಪಂಪಭಾ**, ೯. ೪೨)

ಇನ್ನೇೞಿಂ – [ಕ್ರಿ] [ಇನ್ನು+ಏೞಿಂ] ಇನ್ನು ಹೊರಡಿ (ಬರಿಸಿದ ಕಾರಣಮಾವುದೊ ತರುಣಿ ಮುನೀಶ್ವರನ ಮಂತ್ರಮೇದೊರೆಯೆಂದಾಂ ಮರುಳಿಯೆನೆ ಅಜಿದುಮಜಿಯದೆ ಬರಿಸಿದೆನಿನ್ನೇೞಿಮೆಂದೊಡಾಗದು ಪೋಗಲ್: **ಪಂಪಭಾ**, ೧. ೯೩)

ಇನ್ನೊಡ್ಡು – [ನಾ] ಇನ್ನೊಂದು ಪಣದ್ರವ್ಯ (ಮಡಿಮಡಿಗುಱುವುದುಂ ಒಂದು ಪತ್ತೆಂಟು ಪಲಗೆಯಂ ಮೆಟ್ಟಿಡಿಸಲೆಂದು ಸೋಲ್ತು ಸೋಲದೊಳೇವಯಿಸಿ ಇನ್ನೊಡ್ಡಂ ಕೊಳ್ಳಿಂ ಎಂದು: **ಪಂಪಭಾ**, ೬. ೭೧ ವ)

ಇಭ್ಯ – [ನಾ] ಆನೆಗಳ ಗುಂಪು (ಬಧಿರಿತ ಸಮಸ್ತ ದಿಕ್ತಟಂ ಅಧಿರಿತ ಸರ್ವ ಇಭ್ಯಗರ್ವಿತಂ ಕ್ಷುಭಿತಾಂಭೋಸಲಿಲಂ ಪರೆದುದು ಧುರವಿಧಾನ ಪಟು ಪಟಹ ಕಹಳ ಭೇರೀರಭಸಂ: **ಪಂಪಭಾ**, ೧೨. ೧೭೧)

ಇಮ್ಮನೆ – [ಅ] ಒಂದೇ ಸಮನೆ, [ದೃಷ್ಟಿ] ನಟ್ಟು (ಸುರಾಂಗನೆಯರ್ ನಿಜವದನಮಂ ಇಮ್ಮನೆ ನೋಟ್ಟಿನಮಚ್ಯುತಂ ಪರಿಚ್ಯುತನಾದಂ: **ಆದಿಪು**, ೬. ೨೦)

ಇಮ್ಮಾವು – [ನಾ] [ಇನಿದು ಮಾವು] ಸಿಹಿ ಮಾವು (ತನಿವಣ್ಣಾಗಿರ್ದುದು ಇಮ್ಮಾವು ಕಟ್ಟಿಲಿಸಿದ'ತ್ತು ಎಳೆವಳ್ಳಿ ಕಾಯ್ತು ಕರೆವಂತಿರ್ದತ್ತು ಚೆಂದೆಂಗು: **ಆದಿಪು**, ೧೧. ೬೮)

ಇರ್ – [ಕ್ರಿ] ಜೀವಿಸು, ವಾಸಮಾಡು (ಇನ್ನಾವ ಶೈಳದೊಳಿರ್ಪೆ ಇರ್ಪೆಡೆವೇೞು ನೀಂ ತ್ರಿಪುರಾಂತಕ: **ಪಂಪಭಾ**, ೮. ೧೧); ಸಮಾಸದಲ್ಲಿ ಎರಡು ಎಂಬುದಕ್ಕೆ ಆದೇಶವಾಗುವ ರೂಪ (ಹರನೊಳೆ ಪತ್ತಿ ತೆತ್ತಿಸಿದ ಚಿತ್ತಮಂ ಇರ್ಬಗಿಯಾಗೆ ಮೋಹಮೊತ್ತರಿಸೆ: **ಪಂಪಭಾ**, ೧೩. ೬೩)

ಇರವು – [ನಾ] ಇರುವಿಕೆ, ಸ್ಥಿತಿ (ಗಟಿಯಿಸೆ ಕೆಂಪು ಕಣ್ಗಳ ಮೊದಲ್ಗಳೊಳ್ ಒಯ್ಯನೆ ತೋಱ಼ ಬಾಡಿ ಪಾಡಟಿದು ಬಟಿಲ್ದು ಜೋಲ್ದ ಇರವು: **ಪಂಪಭಾ**, ೪. ೬೧); ವಾಸ್ತವ್ಯ, ವಾಸ (ಪುಗುವುದು ಅರಣ್ಯಂ ಇರ್ಪ ಇರವು ಪನ್ನೆರಡು ಅಬ್ದಂ ಅಲ್ಲದೆ ಅಲ್ಲಿ ಕೋಳ್ಮಿಗದ ವನೇಚರಾಧಿಪರ ದಾಯಿಗರತ್ತಣಿನಪ್ಪ ಅಪಾಯಕೋಟಿಗೆ ಪವಣಿಲ್ಲ: **ಪಂಪಭಾ**, ೭. ೨೧)

ಇರ್ಕಚ್ಚೆ – [ನಾ] ಜೋಡುಗಚ್ಚೆ (ಕಾಮರಸಂ ಭೋಂಕನೆ ಸೂಸೆ ತಾಳಲರಿದೆಂದು ಇರ್ಕಚ್ಚೆಯಂ ಕಟ್ಟಿದಳ್: **ಪಂಪಭಾ**, ೪. ೩೮)

ಇರ್ಕುಟಿಗೊಳ್ – [ಕ್ರಿ] ಆಕರ್ಷಿಸು (ಆ ಪುಣ್ಯವತಿಯರಿರ್ಬರುಂ ಆ ಪರಮೇಶ್ವರನ ಮನಮನಿರ್ಕುಟಿಗೊಳೆ: **ಆದಿಪು**, ೮. ೨೫); ಒಳಗೊಳ್ಳು (ಭರದಿಂದಂ ತುಳ್ಕಿದ ನೀರುರದೊಳ್ ಹಾರಾಂಶರುಚಿಯನಿರ್ಕುಟಿಗೊಳೆ ದುರ್ಧರ ಜಳಯುದ್ಧಮುಂ ಆದಮೆ ಪರಿಭವಮಂ ಚಕ್ರವರ್ತಿಗಿತ್ತಾಗಳ್: **ಆದಿಪು**, ೧೪. ೧೦೮)

ಇರ್ಕೆ – [ನಾ] ಇರುವಿಕೆ (ಮೂಱುಂ ಲೋಕದೊಳಂ ನಿನಿರ್ಕೆಯ ಲೋಕಾಗ್ರಮೆ ಸಂತಂ ಅದನೆ ಮಾಡೆನಗರ್ಹಾ: **ಆದಿಪು**, ೧೦. ೫೭); [ನಾ] [ಬೇಟೆಯ ಪ್ರಾಣಿ] ಇರುವ ಜಾಗ (ಮೃಗಮಂ ಗಾಳಿಯಂ ಇರ್ಕೆಯಂ ಪಕ್ಕೆಯಂ ಗಣಿದಮಂ ಕಂಡಿಯಂ ಮಾರ್ಕಂಡಿಯಂ: **ಪಂಪಭಾ**, ೫. ೪೩)

ಇರ್ಕೆದಾಣ – [ನಾ] ಇರುವ ಜಾಗ, ನೆಲೆ (ಮಾವನೆ ಮಱ಼ಗೊಂಡು ಬಗ್ಗಿಸುವ ಕೋಗಿಲೆ ಕೋಗಿಲೆಯ ಇರ್ಕೆದಾಣದೊಳ್ ಜಿನುಗುವ ತುಂಬಿ: **ಆದಿಪು**, ೧. ೬೫)

ಇರ್ಕ್ಕೆ – [ನಾ] ಮನೆ (ತನಗೆ ಇರ್ಕ್ಕೆಯಾದ ಕಡಲಂ ಕುಂಭಂಗಳಂ ಪೊಕ್ಕ ದೇವನಿಕಾಯಂಗಳನಿಂದ್ರಂ .. .. ಪವಿತ್ರಮೆನಿಸಿತ್ತು: **ಆದಿಪು**, ೭. ೯೬);

ಇರ್ಛಾಸಿರ – [ನಾ] ಎರಡು ಸಾವಿರ (ಸ್ಮರಿಯಿಪಂ ಇರ್ಪತ್ತು ಇರ್ಛಾಸಿರ ಬರಿಸಕ್ಕೊರ್ಮೆ: **ಆದಿಪು**, ೬. ೧೬)

ಇರ್ತೆಱ – [ನಾ] ಎರಡು ಗುಂಪು, ವರ್ಗ (ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾನಿಯೋಗಂಗಳುಮಂ .. .. ಉಪದೇಶಂಗೆಯ್ದು: **ಆದಿಪು**, ೮. ೬೪ ವ); [ನಾ] ಎರಡು ತೆರ (ಸಂಸಾರಿಜೀವಂ ತ್ರಸಸ್ಥಾವರ ವಿಕಲ್ಪದಿಂ ಇರ್ತೆಱನಕ್ಕುಂ: **ಆದಿಪು**. ೧೦. ೬೩)

ಇರ್ದೆನೆ – ಇದ್ದೇನೆ [ಅಲ್ಲವೇ] (ಆಂ ವಿಕ್ರಮದಾತನೆಂ ಕ್ರಮದ ಮಾತಂತಿರ್ಕೆ ಮಾಣ್ದಿರ್ದೊಡೆ ಆಂ ಕ್ರಮಕೆಂದಿರ್ದೆನೆ: **ಪಂಪಭಾ**, ೧೧. ೯೨)

ಇರ್ಪತ್ತಿರ್ಛಾಸಿರ – [ನಾ] ಇಪ್ಪತ್ತೆರಡು ಸಾವಿರ (ಸ್ಮರಿಯಿಪಂ ಇರ್ಪತ್ತಿರ್ಛಾಸಿರ ಬರಿಸಕ್ಕೊರ್ಮೆ ಮನದೊಳುಣಿಸಂ: **ಆದಿಪು**, ೬. ೧೬)

ಇರ್ಪತಿರ್ಬರ್ – [ನಾ] ಇಪ್ಪತ್ತೆರಡು ಮಂದಿ (ಗಾರುಡ ನೀಲ ಶೋಣಮಣಿ ಹೇಮಚ್ಛಾಯೆಯಿಂದೆ ಇರ್ಪತಿರ್ಬರೆನಲ್ ಸಂದೊಡಂ ಏಕರೂಪಮೆ ಜಗಕ್ಕಾಶ್ಚರ್ಯಮಂ ಪುಟ್ಟಿಸುತ್ತಿರೆ: **ಆದಿಪು**, ೧೬. ೫)

ಇರ್ಪತ್ತಿರ್ವರ್ – [ನಾ] ಇಪ್ಪತ್ತೆರಡು ಮಂದಿ (ನಿನ್ನ ದೇವನಪ್ಪ ಲಲಿತಾಂಗಂ ಬೆರಸು ಇರ್ಪತ್ತಿರ್ವರ್ ಲಲಿತಾಂಗರಂ ಕೊಂಡಾಡಿದೆಂ: **ಆದಿಪು**, ೩. ೭೨ ವ)

ಇರ್ಪತ್ತುಸಾಸಿದಱುನೂರ್ವರ್– [ನಾ] ಇಪ್ಪತ್ತು ಸಾವಿರದ ಆರುನೂರು ಮಂದಿ (ಇರ್ಪತ್ತುಸಾಸಿರ್ವರ್ ಕೇವಳಜ್ಞಾನಿಗಳುಂ ಇರ್ಪತ್ತುಸಾಸಿರದಱುನೂರ್ವರ್ ವಿಕ್ರಿಯಾಪ್ರಾಪ್ತರುಂ: **ಆದಿಪು.** ೧೬. ೪೦ ವ)

ಇರ್ಪನ್ನೆಗಂ – [ಅ] ಇರುತ್ತಿರಲಾಗಿ (ಸುಕಮಿರ್ಪನ್ನೆಗಂ ಇತ್ತ ಕುಂತಿ ಶತಶೃಂಗಾದ್ರೀಂದ್ರದೊಳ್ ದಿವ್ಯಬಾಲಕನಿನ್ನೊರ್ವನಂ .. .. ಪಡೆವೆನೆಂಬ ಉದ್ಯೋಗಮನೆತ್ತಿಕೊಂಡು: **ಪಂಪಭಾ,** ೧. ೧೩೪, ಮತ್ತು ೧೩೪ ವ)

ಇರ್ಪುದು – [ನಾ] ಇರುವ ಸ್ಥಿತಿ, ಇರುವಿಕೆ (ಪೆಱನಿಕ್ಕುಂಗೂಟಿಗೊಳಂ ಕೀೞಿಲೊಳಂ ಅಳವಿಗೆಟ್ಟಿರ್ಪ ನಿಮ್ಮಿರ್ಪುದರ್ಕಂ ಮಱುಗುತ್ತಿರ್ಪಳ್ಗೆ: **ಪಂಪಭಾ,** ೮. ೭೧)

ಇರ್ಪೋಡು – [ಕ್ರಿ] ಒಣಗಿಹೋಗು (ಸೂಡಿದ ಪಾರಿಜಾತದ ನರ್ಮೇರುವ ಬಾಸಿಗಮೊಯ್ಯನೊಯ್ಯನೆ ಇರ್ಪೋಡಿದುದು ಅಂದಿನಂಗರುಚಿ ಕಣ್ಗೆಳಿದಾಯ್ತು: **ಆದಿಪು,** ೩. ೩)

ಇರ್ಬಗಿ – [ನಾ] ಇರ್ವಗಿ, ಇಬ್ಬಗಿ, ಎರಡು ಹೋಳು (ಹರನೊಳೆ ಪತ್ತಿ ತೆತ್ತಿಸಿದ ಚಿತ್ತಮಂ ಇರ್ಬಗಿಯಾಗೆ ಮೋಹಮೊತ್ತರಿಸೆ: **ಪಂಪಭಾ,** ೧೩. ೬೩)

ಇರ್ಬಗಿಮಾಡು – [ಕ್ರಿ] ಎರಡು ಹೋಳಾಗಿ ಸೀಳು (ತತ್ವತಾಕಿನೀಕುಂಜರಶಿರಶ್ಶಿಳಾಪಟ್ಟಕಂಗಳಂ ಇರ್ಬಗಿ ಮಾಡಲ್ವಡೆಯದೆಯುಂ: **ಆದಿಪು,** ೧೪. ೧೦೩ ವ)

ಇರ್ಮಡಿ – [ನಾ] ಎರಡರಷ್ಟು, ಹೆಚ್ಚಾಗು (ಅನುವಿಸೆ ಬೇಟಕಾಱನೊಲವಿರ್ಮಡಿಯಪ್ಪುದು ಬಯ್ಯೆ ಬೇಟಕಾಱನ ಬಗೆ ನಿಲ್ಲದಿಕ್ಕೆಗೊಳಗಪ್ಪುದು: **ಪಂಪಭಾ,** ೪. ೧೦೩)

ಇರ್ಮಡಿಸು – [ಕ್ರಿ] ಎರಡರಷ್ಟಾಗು, ಹೆಚ್ಚಾಗು (ಮಗನಟಿಲೊಳ್ ಕರಂ ಮಱುಗುತ್ತಿರ್ಪಿನಂ ಎನ್ನ ತನೂಜನಾಳ್ವ ಸಾವಿಗಂ ಅಟಿವಾಗೆ ಶೋಕರಸಂ ಇರ್ಮಡಿಸಿತ್ತು: **ಪಂಪಭಾ,** ೧೩. ೧೦೫)

ಇರ್ಮೆ – [ನಾ] ಎರಡು ಬಾರಿ (ಕುಲಧನಂಗಳಂ ಕೈಕೊಂಡು ಕೋಶಾಧ್ಯಕ್ಷಹಸ್ತನ್ಯಸ್ತಂಗಳ್ಮಾಡಿ ಬೆಸನಂ ಇರ್ಮೆ ಕೇಳದಂತು ಪೂಣಿಸಿ ಕಟಿಪಿ: **ಆದಿಪು,** ೧೩. ೮೦ ವ)

ಇರ್ವರ್ – (ಸ) ಇಬ್ಬರು (ಅಂತು ಭರತಕುಲತಿಲಕರಪ್ಪ ಇರ್ವರ್ ಮಕ್ಕಳಂ ಪೆತ್ತು ಕೊಂತಿ ಸಂತಸದ ಅಂತಮನೆಯ್ದಿರ್ಪುದುಂ: **ಪಂಪಭಾ,** ೧. ೧೨೮ ವ)

ಇರ್ವಲ – [ನಾ] ಎರಡು [ಕಡೆಯ] ಸೈನ್ಯಗಳು (ವಿಳಯಕಾಲದ ಬೇಗೆ ಸಾರ್ವಂತೆ ಇರ್ವಲದ ಅಳವುಂ ಕಿರ್ಚುಂ ಕಿಡಿಯುಮಾಗೆ ತಾಗಿದಾಗಳ್: **ಪಂಪಭಾ,** ೧೦. ೭೬ ವ)

ಇರ್ವೆಮುಂ – ನಾವಿಬ್ಬರೂ (ಅಟಿಲ್ ನಿನತಲ್ತು ಕೇಳ್ ಎನತು ತಂದೆಯ ಶೋಕಮಂ ಇರ್ವೆಮುಂ ಮುನಿವರಂ ತವೆ ಕೊಂದು ಒಡನೀಗುವಂ: **ಪಂಪಭಾ,** ೧೨. ೩೬)

ಇಲ್ಲದ – [ಕ್ರಿ] ಸುಳ್ಳು, ತೋರಿಕೆಯ (ಎಲ್ಲಿ ಪುಟ್ಟಿದಲೊ ಮತ್ ಪ್ರಾಣೇಶೆ ಎಂದು ಇಲ್ಲದ ಉಬ್ಬೆಗಮಂ ಭಾವಿಸಿ ಪಲವನಾ ಶೈಲೂಷವೇಷಂಗಳಂ: **ಆದಿಪು,** ೩. ೮೮)

ಇಲ್ಲಾ – [ಕ್ರಿ] ಇಲ್ಲವೇ (ಭರತಕುಲತಿಳಕರಿರ್ ವರಶರಾಸನವ್ಯಗ್ರಹಸ್ತರಿರ್ ಬಳಯುತರಿರ್ ನೆರೆದಿನಿಬರುಂ ಇರದೆ ಈ ಲಕ್ಷ್ಯಮಂ ಇರದಕ್ಕಟ ಸರದೆ ತೆಗೆಯಲಾರ್ತರುಮಿಲ್ಲಾ: **ಪಂಪಭಾ,** ೨. ೫೨)

ಇಲ್ಲಿ – ಈ ಬದುಕಿನಲ್ಲಿ (ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ ನಲಿವುದು ಕಂಡರಾರ್ ಮಱುಭವಂಗಳನಿಲ್ಲಿ ವಿಯಚ್ಚರೇಶ್ವರಾ: **ಆದಿಪು,** ೨. ೯)

ಇಲ್ಲಿಗೆ – [ಅ] ಈ ಸಮಯಕ್ಕೆ (ಜಳಪ್ರವೇಶಂ ಇಲ್ಲಿಗೆ ಪದನೆಂದು ನಿಶ್ಚಯಿಸಿ ವಾರಿಜನಾಥಂ ಅನಾಥನಾಗಿ ತೊಟ್ಟನೆ ಮುಱುಪಂತೆವೊಲ್ ಮುಱುಗಿದಂ: **ಪಂಪಭಾ,** ೧೩. ೧೦೬)

ಇವರ್ – **(ಸ)** ಇವುಗಳು (ವದನಂ ತೋಳ್ ತೊಡೆ ಪಾದಮೆಂಬಿವಂ ಇವರ್ ಶುಶ್ರೂಷೆಗೆಯ್ಯಲ್ಕೆ ಲಾಭದಲಂಪಿಂ ನಡೆಯಲ್ಕೆ ಕೈದುವಿಡಿಯಲ್ಕೆ ಓದಲ್ಕೆ ಅಜಂ ಬೇಱೆ ತೋಱಿದೊಡೆ: **ಆದಿಪು,** ೮. ೭೩)

ಇವಳ್ದಿರ್ – **(ಸ)** ಈಕೆಗಳು, ಈ ಹೆಣ್ಣುಮಕ್ಕಳು (ವಸುಧೆಯನೇನಿವಳ್ದಿರ ಅರುಣಾಬ್ಜದಳಂಗಳೊಳ್ ಅಟ್ಟೆಯಿಂದಂ ಅರ್ಚಿಸಿದರೊ ಪೇಟಿಮೆಂಬಿನಂ: **ಆದಿಪು,** ೭. ೨೨)

ಇವಱಿಂ – **(ಸ)** ಇವುಗಳಿಂದ (ಬಳಸಿದ ವೇದಪಾರಗರ ಸಂದಣಿಯೆಂಬಿವಱಿಂ ವಿವಾಹಮಂಗಳಮದು ಕುಂತಿಮಾದ್ರಿಗಳೊಳಚ್ಚರಿಯಾದುದು ಪಾಂಡುರಾಜನಾ: **ಪಂಪಭಾ,** ೧. ೧೦೭)

ಇಷುವಿದ್ಯಾ – [ನಾ] ಧನುರ್ವಿದ್ಯೆ (ಕೂರಿಸೆ ಗುರುಶುಶ್ರೂಷೆಯೊಳಾ ರಾಮನನುಗ್ರಹಪರಶುಪಾಟಿತ ರಿಪುವಂಶಾರಾಮನಂ ಇಷುವಿದ್ಯಾಪಾರಗನೆನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ,** ೧. ೧೦೪)

ಇಷ್ಟಾಂಗನಾಸುರತಂ – [ನಾ] ಬಯಸಿದ ಹೆಣ್ಣಲ್ಲಿ ಪ್ರಣಯ (ಇದಱೆೊಳ್ ತನ್ನಿಷ್ಟವಪ್ಪನ್ನಂ ಉತ್ತರಂ ಅಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ: **ಪಂಪಭಾ,** ೧೪. ೬೫)

ಇಷ್ಟಿ – [ನಾ] ಯಾಗ (ಮುನಿಜನಕ್ಕೆ ಇಷ್ಟಿವಿಘ್ನಂಗಳಂ ದಾರುಣದೈತ್ಯರ್ ಮಾಡೆ ನೀಡಿಲ್ಲದೆ ಸಲೆ ಚಲದಾಟಂದು ಕೊಂದಿಕ್ಕದೆ: **ಪಂಪಭಾ,** ೪. ೧೧)

ಇಸಲ್ – [ಕ್ರಿ] ಪ್ರಯೋಗಿಸಬೇಡ, ಬಿಡಬೇಡ (ಆಕರ್ಣಾಂತಂ ತೆಗೆನೆಱೆದಾ ಕರ್ಣಂ ಇಸಲ್ಕೆ ಬಗೆದೊಡೆ ಉಡುಗು ಉಡುಗು ಇಸಲ್ ಈ ಭೀಕರಬಾಣಮಂ ಆದ ವಿವೇಕದಿಂ ಉರದೆಡೆಗೆ ತುಡದೆ ತಲೆಗೆಯೆ ತುಡುವಾ: **ಪಂಪಭಾ,** ೧೨. ೧೯೪)

ಇಸಿಸು – [ಕ್ರಿ] ಬಾಣಪ್ರಯೋಗ ಮಾಡಿಸು (ಛಾಯಾಲಕ್ಷ್ಯಮನೊಡ್ಡಿಯುಂ ಆಯದ ನೀರೊಳಗೆ ತನ್ನನಡಸಿದ ನೆಗಟಿಂ ಬಾಯಟಿವಿನಂ ಇಸಿಸಿಯುಂ: **ಪಂಪಭಾ,** ೨. ೬೦)

ಇಸು – [ಕ್ರಿ] ಬಾಣಪ್ರಯೋಗ ಮಾಡು (ಒರ್ವರಿಂ ಒರ್ವರೆ ಮಿಕ್ಕು ಪಾರ್ದು ಸಾರ್ದು ಇಸೆ ತುಱುಗಾಱರ್ ಅಂದು ಇನಿಸು ಬಳ್ವಳನಾದುದು ಅದೊಂದು ಕಾಳಗಂ: **ಪಂಪಭಾ,** ೮. ೯೩)

ಇಸುವೆಸ – [ನಾ] ಕೆಲಸ, ಕರ್ತವ್ಯ (ಇಂತು ಪೆಱವುಂ ಇಸುವೆಸಂಗಳನವರವರ್ಗೆ ತಕ್ಕುವಂ ತಕ್ಕಂದದಿಂ ಪೇಟ್ದಾಗಳ್: **ಆದಿಪು,** ೭. ೨೧ ವ)

ಇಳಾಚಕ್ರ – [ನಾ] ಭೂಚಕ್ರ, ಭೂಮಂಡಲ (ಪಿಡಿಯೆಂ ಚಕ್ರಮಂ ಎಂಬ ಚಕ್ರಿಯಂ ಇಳಾಚಕ್ರಂ ಭಯಂಗೊಳ್ವಿನಂ ಪಿಡಿಯಿಪ್ಪೆಂ ಕರಚಕ್ರಮಂ: **ಪಂಪಭಾ,** ೧೦. ೨೫)

ಇಳಾತಳ – [ನಾ] ಇಳಾಗ್ರ (ಭವಂ ಭವನ ಗೋತ್ರದಿಂದ ಅಜಂ ಅಜಾಂಡದಿಂ ಭಾನು ಭಾನುವೀಧಿಯಿಂ ಇಳಾತಳಂ ತಳದಿನೆಯ್ದೆ ಕಿಟ್ಟಿತ್ತು: **ಪಂಪಭಾ,** ೧೧. ೧೩೩)

ಇಳಾಧರ – [ನಾ] ಭೂಮಿಯನ್ನು ಹೊತ್ತವನು, ಶ್ರೀಕೃಷ್ಣ (ಒಸೆದಿತ್ತಂ ಆಂ ಎನೆ ಎರೆಯೆ ಕೇಳ್ದಂ ಇಳಾಧರ ನೀನಿದರ್ಕೆ ಮಾತೆರಡಣಮಾಡಲಾಗದು: **ಪಂಪಭಾ,** ೫. ೭೩)

ಇಳಾಧರೇಶ್ವರ – [ನಾ] ರಾಜರ ರಾಜ, ಧರ್ಮರಾಜ (ಆ ಮುನೀಶ್ವರಂ ಇಳಾಧರೇಶ್ವರಂ ಬೆಸಗೊಂಡಂದದೊಳೆ ದೇವಲೋಕದ ಪಡೆಮಾತೆಲ್ಲಮಂ ಪೇೞ್ದು: **ಪಂಪಭಾ,** ೬. ೧೫ ವ)

ಇಳಾಧಿನಾಥ – [ನಾ] ರಾಜ (ಪಟ್ಟಂಗಟ್ಟಿದ ಇಳಾಧಿನಾಥರೆ ಪಯಿಂಛಾಸಿರ್ವರ್ ಒಳ್ಳಾನೆಗಳ್ ಪಟ್ಟಂಗಟ್ಟಿದುವು ಒಂದು ಲಕ್ಕ ತುರಗಂ ಪತ್ತೆಂಟು ಲಕ್ಕಂ: **ಪಂಪಭಾ,** ೧೦. ೧೧೭)

ಇಳಾಧಿಪ – [ನಾ] ರಾಜ (ಕಲಿ ಕರ್ಣನೇಕೆ ಪೇೞ್ ಮಿಳಮಿಳ ನೋಡುತಿರ್ದಂ ಅವನುರ್ಕಂ ಇಳಾಧಿಪರುಂಟೆ ನಿನ್ನವೋಲ್: **ಪಂಪಭಾ,** ೧೩. ೨೫)

ಇಳಾಪಾಲ – [ನಾ] ರಾಜ (ವ್ಯಾಳಗಜಂಗಳಂ ಅಗ್ಗದ ಸೂಳೆಯರ ಒಕ್ಕಲಂ ಅನರ್ಘ್ಯವಸ್ತುಗಳಂ ಇಳಾಪಾಲಂ ಸೋಲ್ತೊಡೆ: **ಪಂಪಭಾ,** ೭. ೩)

ಇಳಾಪ್ರಭು – [ನಾ] ಲೋಕಕ್ಕೆ ರಾಜ (ಶುಭತಿಥಿ ಶುಭನಕ್ಷತ್ರಂ ಶುಭವಾರಂ ಶುಭಮುಹೂರ್ತಮೆನೆ ಗಣಕಂ ಇಳಾಪ್ರಭುವೊಗೆದಂ ಉದಿತಕಾಯಪ್ರಭೆಯೊಗೆದಿರೆ ದಳಿತಶತ್ರು ಗೋತ್ರಂ ಪುತ್ರಂ: **ಪಂಪಭಾ,** ೧. ೧೨೭)

ಇಳಾಭಾಗ – [ನಾ] ಭೂಭಾಗ, ಭೂಮಿಯ ಮೇಲಕ್ಕೆ (ನೆಲನಂ ನುಂಗವ ಮೇರುವಂ ಕೀೞ್ವ ಆಶಾಗಜೇಂದ್ರಂಗಳಂ ಚಲದಿಂ ಕಟ್ಟುವ ಸಪ್ತಸಪ್ತಿಯಂ ಇಳಾಭಾಗಕ್ಕೆ ತರ್ಪ: **ಪಂಪಭಾ,** ೭. ೭)

ಇಳಾಭಾರಕ್ಷಮ – [ನಾ] ಭೂಮಿಯ ಭಾರವನ್ನು ಹೊರುವ ಸಾಮರ್ಥ್ಯವುಳ್ಳ (ಪ್ರವಿಮಲಸದ್ಗೀರ್ವಾಣದಾತವ್ಯ ಸಾಯಕ ಸಂಪೂರ್ಣ ಕಳಾಪ್ರವೀಣನಂ ಇಳಾಭಾರಕ್ಷಮ ಅಕ್ಷೂಣನಂ .. .. ಸರ್ವಲಕ್ಷಣಸಂಪೂರ್ಣಂ ಅಪ್ಪ ಮಗನಂ ಅಮೋಘಂ ಪಡೆವೆಂ: **ಪಂಪಭಾ,** ೧. ೧೩೪ ಮತ್ತು ೧೩೪ ವ)

ಇಳಾಭೃತ್ – [ನಾ] ಬೆಟ್ಟ, ಪರ್ವತ (ಶಿಖರನಾಮೋದ್ಯನ್ನಗಂ ಪ್ರಸ್ಫುರತ್ ಪ್ರಾಳೇಯಾಚಲಂ ಈತಂ ಎಮ್ಮವೊಳ್ ಇಳಾಭೃನ್ನಾಥಂ ಎಂದು: **ಪಂಪಭಾ,** ೧೪. ೩೩)

ಇಳಾಮರ – [ನಾ] ಬ್ರಾಹ್ಮಣ (ಎನೆಯೆನೆ ರತ್ನರಶ್ಮಿಜಟಿಳಂ ಮಕುಟಂ ಮಣಿಕುಂಡಳಂ ಕನತ್ ಕನಕ ಪಿಶಂಗ ದೇಹರುಚಿ .. .. ತೋಱಿದಂ ಇಳಾಮರಂನಂದು ಅಮರೇಂದ್ರರೂಪಮಂ: **ಪಂಪಭಾ,** ೮. ೭)

ಇಳಾಲತಾಂಗಿ – [ನಾ] ಭೂಮಿ ಎಂಬ ಹೆಣ್ಣು (ಎನಗೆ ಎಕ್ಕಬಾಗೆ ನೋಡೀಗಳ್ ಈ ಇಳಾಲತಾಂಗಿ ಪುದುವಲ್ಲಳ್: **ಪಂಪಭಾ,** ೯. ೪೬)

ಇಳಾವಂದ್ಯ – [ನಾ] ಲೋಕದ ಗೌರವಕ್ಕೆ ಪಾತ್ರನಾದವನು (ಹಂಸಗ್ರೀವನಿಹಿತ ಏಕಪಾದಂ ಇಳಾವಂದ್ಯಂ ಅನಿಂದ್ಯಂ ಅಬ್ಜಗರ್ಭಂ ಬಂದಂ: **ಪಂಪಭಾ,** ೧೨. ೧೩೮)

ಇಳಾವಧು – [ನಾ] ಭೂಮಿಯೆಂಬ ಹೆಣ್ಣು (ಇಳಾವಧು ತನ್ನ ತಿಣ್ಪಂ ಉತ್ತಮಕುಲಶೈಲಮುನ್ನತಿಯನೇೞಿದಮಾಗೆ ಬಿಸುಟಿಸ್ಸೊಡಂ ವಿಸುಟಿಸ್ಸೆಮ: **ಪಂಪಭಾ,** ೧. ೮೩)

ಇಳಾವಲ್ಲಭ – [ನಾ] ರಾಜ (ಪರಮಬ್ರಹ್ಮ ತನೂಭವರ್ ದ್ವಿಜವರರ್ ವರ್ಣೋತ್ತಮರ್ ಲೋಕಪೂಜ್ಯರ್ ಇಳಾವಲ್ಲಭಮಾನ್ಯರ್ ಉನ್ನತಗುಣರ್ ಚಾರಿತ್ರಶುದ್ಧರ್ ಧರಾಮರರ್ ಈ ಬ್ರಾಹ್ಮಣರ್: **ಆದಿಪು,** ೧೫. ೨೦)

ಇಳಿಕೆವಡೆ – [ಕ್ರಿ] ಉಪೇಕ್ಷೆಗೊಳಗಾಗು (ಸಿಂಗದ ಮುಪ್ಪುಂ ನೆಗೞ್ದೀ ಗಾಂಗೇಯರ ಮುಪ್ಪುಂ ಇಳಿಕೆವಡೆಗುಮೇ ವನಮಾತಂಗಂಗಳಿಂ ಅಸುಹೃತ್ ಚತುರಂಗಬಲಂಗಳಿಂ: **ಪಂಪಭಾ,** ೧೦. ೧೯)

ಇಳಿದಾಗು – [ಕ್ರಿ] ಕ್ಷೀಣವಾಗು (ಅಂದಂದಿನ ಅಂಗರುಚಿ ಕಣ್ಗಿಳಿದಾಯ್ತು ವಿಭೂಷಣಂಗಳೊಳ್ ತೀಡುವ ರಶ್ಮಿಗಳ್ ಮಸುಳ್ದುವು: **ಆದಿಪು,** ೩. ೩)

ಇಳಿಪು – [ನಾ] ಪ್ರೇಮ (ಕನ್ನೆತನಂಗೆಯ್ಯಲ್ ಬಗೆಗುಂ ನಾಣ್ ಮಿಗೆ ಮನಮುಂ ಇಟ್ಟುವರಿಯಲ್ ಬಗೆಗುಂ ಕನ್ನಡಿಕುಂ ತನ್ನಳಿಪಂ ತನ್ನಲೆ ತಾನಿಂತು ಕನ್ನೆ ತಳವೆಳಗಾದಳ್: **ಪಂಪಭಾ,** ೪. ೫೫)

ಇಳಿವೋಗು – [ಕ್ರಿ] ತಿರಸ್ಕೃತವಾಗು (ಎನಿತಾನುಂ ತೆಱದ ಲಲ್ಲೆಯಿಂ ಅಳಿಪಂ ತೋಱೆ ಬಾಯೞಿದು ತನ್ನ ನುಡಿಗಳ ಅಳಿಪು ಇಳಿವೋಗೆ ಸೈರಿಸಲಾಱದೆ: **ಪಂಪಭಾ,** ೮. ೬೯ ವ)

ಇಳಿಸಿ ನುಡಿ – [ಕ್ರಿ] ಅವಗಣಿಸಿ ಮಾತಾಡು (ಮರುಳೇ ಗಾಂಡಿವಿ ಯಾರೆಂದು ಇಳಿಸಿ ನುಡಿವೈ ಗಂಧರ್ವರುಯ್ವಂದು ನಿನ್ನಂ ಕರುವಿಟ್ಟಂತಿರ್ದುದಿಲ್ಲಾ ನೆರದ ಕುರುಬಲಂ ತಂದವಂ ಪಾರ್ಥನಲ್ಲಾ: **ಪಂಪಭಾ,** ೯. ೫೫)

ಇಳಿಸು – [ಕ್ರಿ] ಮೀರಿಸು (ವಿಜಯಾರಂಭ ಪುರಸ್ಸರ ವಿಜಯ ಗಜಂಗಳನೆ ಪಿಡಿದು ಘೂರ್ಜರ ರಾಜಧ್ವಜಿನಿಯನಿಱಿದೋಡಿಸಿ ಭುಜವಿಜಯದೆ ವಿಜಯಮನಿಳಿಸಿದಂ ನರಸಿಂಹಂ: **ಪಂಪಭಾ,** ೧. ೩೬)

ಇಳೇಶ್ವರಪುತ್ರಿ – [ನಾ] ರಾಜಕುಮಾರಿ (ಇಳೇಶ್ವರಪುತ್ರಿ ತೀರ್ದುದಾದರದೊಳೆ ನಿನ್ನ ನೆಚ್ಚಿನ ಮನೋರಥಂ: **ಆದಿಪು,** ೩. ೮೫)

ಇಳೇಶ್ವರವಲ್ಲಭೆ – [ನಾ] ಮಹಾರಾಣಿ (ಲತಾಲಲಿತೆ ಕೀಚಕನಲ್ಲಿಗೆ ಕಾಮನೊಂದು ಕೈಸೆಱೆಯೆನಿಪ ಅಂಗರಾಗಮಂ ಇಳೇಶ್ವರವಲ್ಲಭೆಯಟ್ಟಲ್ ಉಯ್ದೊಡೆ: **ಪಂಪಭಾ,** ೮. ೭೩)

ಇಱಿ – [ಕ್ರಿ] ಯುದ್ಧ ಮಾಡು (ಅರ್ಕಸುಡುಕೆಯ್ದು ಪಾಂಡವರೊಳ್ ಆಂತು ಇಱಿಯಲ್ ನೆಱೆವನ್ನರ್ ಇಂತಿದೇತರ್ಕೆ ಬಿಗುರ್ತಪೈ: **ಪಂಪಭಾ,** ೯. ೫೦); [ಕ್ರಿ] ಇಳಿಬಿಡು (ಇಱಿವ ಪಿನಿಲ್ ತೆರಳ್ದೊಱೆವ ಕಣ್ಬನಿ ಮಾಣದೆ ಮೋದೆ: **ಪಂಪಭಾ,** ೧೪. ೫)

ಇಱಿದೋಡಿಸು – [ಕ್ರಿ] ಹೊಡೆದೋಡಿಸು (ವಿಜಯಾರಂಭ ಪುರಸ್ಸರ ವಿಜಯ ಗಜಂಗಳನೆ ಪಿಡಿದು ಘೂರ್ಜರ

ರಾಜಧ್ವಜಿನಿಯನಿಱಿದೋಡಿಸಿ ಭುಜವಿಜಯದೆ ವಿಜಯಮನಿಳಿಸಿದಂ ನರಸಿಂಹಂ: **ಪಂಪಭಾ,** ೧. ೩೬)

ಇಱಿಯ – [ಕ್ರಿ] ಯುದ್ಧಮಾಡು (ನೀನುಂ ಇಳೆಯಂ ಮುಂ ಬೇಡಿ ಅಟ್ಟಟ್ಟೆ ಮಾರ್ಮಲೆದಾತಂ ಕುಡದಿರ್ದೊಡೆ ಇಱಿಯ ನೀಂ ಲೋಕಂ ಗುಣಂಗೊಳ್ವಿನಂ: **ಪಂಪಭಾ,** ೯. ೨೦)

ಇಱಿಸಿಲ್ – [ನಾ] ಮನೆಯ ಇಳಿಜಾರು ಛಾವಣಿ (ತಳಿರ್ಗಳ ಕಂಡವಡಂಗಳೆ ತಳಿರ್ಗಳ ಪಾಸುಗಳೆ ತಳಿರ್ಗಳ ಓವರಿಗಳೆ ಕೆಂದಳಿರ್ಗಳ ಪೊಳೆವ ಇಱಿಸಿಲ್ಗಳೆ: **ಆದಿಪು,** ೧೧. ೭೯)

ಇಱುಂಕು – [ಕ್ರಿ] ಅದುಮಿ ಹಿಡಿ, ಹಿಸುಕು (ಅಗ್ಗದ ನಿಡುಗೋಡು ಮೇಡುವಂ ಅಮರುತ್ತುಂ ಇಱುಂಕಿದ ಕೆಚ್ಚಲ್ ಎತ್ತಮೆತ್ತಿದ ಕುಡಿವಾಲಂ ಅಂದೆಸೆಯೆ ಕರ್ಬುಸುಗಳ್ ಪರಿಗೊಂಡುವಾಜಿಯೊಳ್: **ಪಂಪಭಾ,** ೮. ೧೦೪)

ಇಱುಂಬ – [ನಾ] ಇಕ್ಕಟ್ಟಾದ ಪ್ರದೇಶ (ಪಡೆಗಡ್ಡಮಿರ್ದ ಬೆಟ್ಟಿಟ್ಟೆಡೆ ಮಟ್ಟಮಿಱುಂಬಮೆಂಬಿವಂ ಸಣ್ಣಿಸಿ ಸಾರ್ವೆಡೆ ನಡೆವ ದಂಡರತ್ನಂ ಮುಂದೆ ನಡೆಯೆ: **ಆದಿಪು,** ೧೧. ೪೭)

ಇಱುಂಬು – [ನಾ] ಪೊದರು (ಅಶೋಕಲತೆಯ ವಿಳಾಸಗೃಹಂಗಳೊಳಂ ನವಮಾಲಿಕಾ ಲತೆಯ ಇಱುಂಬುಗಳೊಳಂ: **ಆದಿಪು,** ೪. ೯೨ ವ)

ಇೞಿ – [ಕ್ರಿ] ಕೆಳಕ್ಕೆ ಬರು (ರಥದಿಂದಮಿೞಿದು ಮಣಿಮಯ ಪೀಠದೊಳ್ ಕುಳ್ಳಿರ್ದು: **ಪಂಪಭಾ,** ೯. ೨೭ ವ); ಕೆಳಜಾರು (ನೆತ್ತಿಯೊಳ್ ಎಱ್ದೆಱ್ದು ಇನಿಸು ಅಱ್ಯೊತ್ತಿ ಬೞಿಕ್ಕೞಿಯೆ ಪೊಸೆದು ಜಡೆಗೊಂಡಿರ್ದ ಉದ್ವೃತ್ತಕುಚಯುಗೆಯ ಕೇಶಮಂ ಎತ್ತಂ ಪಸರಿಸಿದಂ: **ಪಂಪಭಾ,** ೧೨. ೧೫೪)

ಇೞಿಪು – [ಕ್ರಿ] ಕಳೆದುಕೊಳ್ಳು (ಮಹಾಬಳ ಖಚರೇಂದ್ರಂ ಪ್ರಾಯೋಪಗಮನ ವಿಧಿಯಿಂದಮಾತ್ಮೀಯ ಶರೀರಭಾರಮನಿೞಿಪೆ: **ಆದಿಪು,** ೨.೭೧ ವ)

ಇೞಿಸು – [ಕ್ರಿ] ಕೀಳುಗೈ (ಮದನನ ಬಿಲ್ಲೊಳಮಾತನ ಸುದತಿಯ ಬೀಣೆಯೊಳಮೆಸೆವ ದನಿಯುಮಂ ಇೞಿಸಿತ್ತಿದು ದಲ್ ಎನಿಸಿದುದು ಸುರತೂರ್ಯದ ರವದೊಳ್ ಪುದಿದ ಸುರವಧೂಗೀತರವಂ: **ಆದಿಪು,** ೯. ೧೫); [ಕ್ರಿ] ಕುಗ್ಗಿಸು (ಜಸಕ್ಕೆ ಅಡರ್ಪು ಅಪ್ಪನ್ನೆಗಂ ಸಂದನೀ ಜಗದೊಳ್ ಬದ್ದೆಗಂ ಅನ್ನಂ ಆವಂ ಇೞಿಕುಂ ಭ್ರೂಕೋಟಿಯಿಂ ಕೋಟಿಯಂ: **ಪಂಪಭಾ,** ೧. ೨೭)

ಇೞ್ಕುೞ್ – [ನಾ] ಇಕ್ಕುಳ (ಉನ್ನತ ಮಸ್ತಕಸ್ಥಳದೊಳ್ ಅಂಬುಗಳ್ ಅೞ್ದುಡಿದಿರ್ದೊಡಂ ಅತ್ತಮಿತ್ತನೆೞ್ತಂದು ಬಲ್ದಡಿಗರ್ ಇೞ್ಕುೞಿನೊಳ್ ಕಿೞ್ ನೊಂದೆಂ ಎನ್ನದೆ: **ಪಂಪಭಾ,** ೧೧. ೩)

ಇೞ್ಕುೞಿಗೊಳ್– [ಕ್ರಿ] ಸೆಳೆದುಕೊ, ಆಕರ್ಷಿಸು (ಅೞ್ಕಱಿಂ ಈಯೆ ಸಂಬಳಂಗೊಳ್ವವೊಲ್ ಆ ತಳೋದರಿಯ ಚಿತ್ತಮಂ ಇೞ್ಕುೞಿಗೊಂಡಂ ಅರ್ಜುನಂ: **ಪಂಪಭಾ,** ೭. ೬೮)

ಇೞ್ದುವರಿ – [ಕ್ರಿ] ಎಳೆದುಕೊಂಡು ಹೋಗು (ಕನ್ನೆತನಂಗೆಯ್ಯಲ್ ಬಗೆಗುಂ ನಾಣ್ ಮಿಗೆ ಮನಮುಂ ಇೞ್ದುವರಿಯಲ್ ಬಗೆಗುಂ ಕನ್ನಡಿಕುಂ ತನ್ನಳಿಪಂ ತನ್ನಲೆ ತಾನಿಂತು ಕನ್ನೆ ತಳವೆಳಗಾದಳ್: **ಪಂಪಭಾ** ಪರಿಷತ್ತು: ೪. ೫೫)

ಇೞ್ದಿ – [ನಾ] ಸುಲಿಗೆ, ಲೂಟಿ (ಕಳ್ಳರಾಯಿಲಮಱಿಯೇಱು ಮಾರಿ ಪಸವು ಇೞ್ದಿ ಬಱಂ ಪೆಱುವುಂ ಭಯಂಗಳ್ ಆಕುಲಿತೆಗಳಿಲ್ಲ: **ಆದಿಪು,** ೧. ೫೨)

ಈ

ಈ – [ಕ್ರಿ] ಎಡೆಗೊಡು (ಮಣಿಮಾಲಿಯಲ್ಲದೆ ಉೞಿದಾರುಮಂ ಸಾರಲ್ ಈಯದೆ ಭಂಡಾರಮಂ ಕಾದುಕೊಂಡಿರ್ಪುದುಂ: **ಆದಿಪು,** ೨. ೧೫ ವ); [ಕ್ರಿ] ದಾನಮಾಡು (ಜೀವಮುಳ್ಳಿನಂ ಇಱಿದು ಅರ್ಥಮುಳ್ಳಿನೆಗಂ ಇತ್ತು ನೆಗೞ್ತೆಯನಾಂಪುದೆಂಬ ಪೆಂಪಿನ ಸಮಕಟ್ಟು: **ಪಂಪಭಾ,** ೫. ೭೭)

ಈಂಟುಜಳಧಿ – [ನಾ] ಕುಡಿನೀರಿನ ಸಾಗರ (ಈಂಟುಜಳಧಿಯೆನಿಪ ಅಗೞ ನೀಳ್ಪಿನಿಂ ನೆಗದು ಸೊಗಯಿಸುವ ಕೋಂಟೆಯೊಳ್ಪಿನಿಂ: **ಪಂಪಭಾ,** ೩. ೨೨)

ಈಕ್ಷಂಗಳ್ – [ನಾ] ನೋಟಗಳು (ಆಕೆಯ ಹಾವಭಾವವಿಳಾಸ ವಿಭ್ರಮಕಟಾಕ್ಷ ಈಕ್ಷಂಗಳ್ ಮನಮಂ ಒನಲಿಸೆಯುಂ ಕನಲಿಸೆಯುಂ: **ಪಂಪಭಾ,** ೪. ೭೪ ವ)

ಈಕ್ಷಣಹರ – [ನಾ] ಕಣ್ಸೆಳೆಯುವಂಥದು (ದಕ್ಷಿಣಕಟಮೆನೆ ಸಿವುಱುವ ದಕ್ಷಿಣರದನದೊಳೆ ಹಸ್ತಮಂ ಪೇಱುವ ಚೆಲ್ವು ಈಕ್ಷಣಹರಮೆನೆ: **ಆದಿಪು,** ೧೨. ೫೯)

ಈಗಡೆ – [ಅ] ಈಗಲೇ (ಮಂತ್ರಾವಾಸದೊಳ್ ಮಂತ್ರನಿಶ್ಚಿತನಾಗಿ ಈಗಡೆ ಕಾದಿದಲ್ಲದೆ ಇಳೆಯಂ ನೀನೆಂತುಮಿತ್ತಪಯ್: **ಪಂಪಭಾ,** ೮. ೮೭)

ಈಗಳ್ – [ಅ] ಈಗ (ಪೊಸತಂ ಸ್ತ್ರೀರಾಜ್ಯಮಂ ಮೇಣ್ಪಡೆದನೊ ಬಿದಿ ಲಾವಣ್ಯಸಿಂಧುಪ್ರವಾಹಂ ಪೊಸತೀಗಳ್ ಬಂದು ಬೆಳ್ಳಂಗೆಡೆದುದೊ: **ಆದಿಪು,** ೧. ೮೨)

ಈಡಾಡು – [ಕ್ರಿ] ಳೆದಾಡು (ಆಡುವ ವಿಳಾಸಮಂ ನಡೆ ನೋಡುವ ನೋಟಕರಂ ಅತನುಮತ್ತದ್ವಿರದಂ ಕೋಡಂ ಕಾಣಿಸಿ ಪಿಡಿದೀಡಾಡುವುದೆಂಬಿನೆಗಂ ಆಡಿ ರಂಜಿಸಿದಳ್ ಅವಳ್: **ಆದಿಪು,** ೯. ೩೭); [ಕ್ರಿ] ಚೆಲ್ಲಾಡು, ಬಿಸಾಡು (ಜಲದೇವತೆಗಳಪ್ಪೊಡಂ ಮನಂಗಾಣ್ಬರೆಂದು ನಿಧಾನಮಂ ಈಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳ್: **ಪಂಪಭಾ,** ೧. ೯೫ ವ); [ಕ್ರಿ] ನಿರ್ಲಕ್ಷ್ಯದಿಂದ ಕೊಟ್ಟುಬಿಡು (ಕೊಳ್ ಎಂದು ಅರಿದು ಈಡಾಡಿದಂ ಇಂದ್ರಂಗೆ ಕವಚಮಂ ರಾಧೇಯಂ: **ಪಂಪಭಾ,** ೧. ೧೦೧); [ಕ್ರಿ] ಚಾಚಿಕೊ (ಕರ್ಣನ ಬೞಿವೞಿಯನೆ ತನ್ನ ಪೋಪುದನಭಿನಯಿಸುವಂತೆ ಶೋಕೋದ್ರೇಕದೊಳ್ ಮೆಯ್ಯಱಿಯದೆ ಕನಕರಥದೊಳ್ ಮೆಯ್ಯನೀಡಾಡಿ: **ಪಂಪಭಾ,** ೧೨. ೨೨೦ ವ)

ಈದಲೆ – [ಅ] , ಈ ಕಡೆ (ಆದಲೆ ನೀರ್ ಗುಂಡಿತ್ತು ಎಂದು ಈದಲೆಯೊಳೆ ನಿಂದು ಸತಿಗೆ ಹರಿಗಂ ತೋಱುತ್ತ ಆದರದೆ ಜಾನುದಘ್ನಂ ಉರೋದಘ್ನಂ ಕಂಠದಘ್ನಮೆಂಬ ಅಳವಿಗಳಂ: **ಪಂಪಭಾ,** ೫. ೫೩)

ಈ ದೊರೆಯರ್ – [ಗು] ಇಂಥವರು (ಸಂತಸದಿನಿರ್ದು ಮಕ್ಕಳಸಂತತಿಗೀ ದೊರೆಯರ್ ಇನ್ನುಮಾಗದೊಡೆ ಎಂತುಂ

ಸಂತಸಮೆನಗಿಲ್ಲ ಎಂದಾ ಕಾಂತೆ ಸುತಭ್ರಾಂತೆ ಮುನ್ನಿನಂತೆವೊಲಿರ್ದಳ್: **ಪಂಪಭಾ,** ೧. ೨೨೩)

ಈನ್ – [ಕ್ರಿ] (ಶರಸಂಧಾನದ ಬೇಗಂ ಅಂಬುಗಳಂ ಅಂಬು ಈಂಬಂತೆ ಮೇಣಂಬಿನಾಗರಮೆಂಬಂತೆನೆ ಪಾಯ್ದ ಅರಾತಿಶರಸಂಘಾತಂಗಳಂ ನುರ್ಗಿ: **ಪಂಪಭಾ,** ೧೧. ೪೦)

ಈಪೊಟ್ಟಿಱ್ – [ನಾ] ಈ ಹೊತ್ತು (ನಿನಗೀ ಪೊಟ್ಟಿಱೊಳ್ ಇತ್ತ ಬರ್ಪದಟನಿಂತಾರಿತ್ತರ್: **ಪಂಪಭಾ,** ೩. ೩೪)

ಈಯದರ್ – [ನಾ] [ಕಪ್ಪ ಕಾಣಿಕೆಗಳನ್ನು] ಕೊಡುವುದಿಲ್ಲ ಎನ್ನಿಸಿಕೊಂಡವರು (ಮೀಱುವೆವೆಂಬ ಮಾಂಡಳಿಕರ್ ಈಯದರೆಂಬ ಅದಟರ್ ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ವಾಱಿ ನಭಕ್ಕೆ ಪಾಱಿದುದು: **ಪಂಪಭಾ,** ೧. ೧೧೯)

ಈರಣ – [ನಾ] ಬೀಸುವಿಕೆ (ಮಲಯಸಮೀರಣ ಈರಣ ಚಲತ್ತರುಶಾಖೆಗಳೊರ್ಮೆಗೊರ್ಮೆಗೆ ನೀರೊಳಗೆ ಬಟಲ್ದು: **ಆದಿಪು,** ೧೧. ೬೭)

ಈರಯ್ದು – [ನಾ] ಎರಡು ಬಾರಿ ಐದು, ಐದೆರಡಲ=ಹತ್ತು (ಇಸೆ ಮಸಗಿ ಭೀಮಂ ಈರಯ್ದು ಶಿತಾಸ್ತ್ರದಿಂ ಉರುಳೆ ಸೂತಂ ಉಡಿಯೆ ರಥಂ ಕೀಲಿಸೆ ಕುದುರೆ ಮುಱಿಯೆ: **ಪಂಪಭಾ,** ೧೦. ೯೯)

ಈರೆಂಟು – [ನಾ] [ಇರ್+ಎಂಟು] ಎರಡು ಸಲ ಎಂಟು, ಹದಿನಾರು (ನರಮಾತಂಗ ತುರಂಗ ಸೈನ್ಯಂ ಇದಿರಾಂತು ಈರೆಂಟು ಲಕ್ಕಂಬರಂ ಕರಗಿತ್ತು: **ಪಂಪಭಾ,** ೧೨. ೧೩೫)

ಈರೆಂಟುಂ ಒಳ್ಗನಸಿನೆಸೆವೋಳಿ – [ನಾ] [ಒಳ್ಗನಸಿನ+ಎಸೆವ+ಓಳಿ] ನಾಭಿರಾಜನ ಮಹಾರಾಣಿ ಮರುದೇವಿ ಗರ್ಭಾವತರಣದ ಸಂದರ್ಭದಲ್ಲಿ ಕಂಡ ಹದಿನಾರು ಕನಸುಗಳು: ಗಜ, ಗೂಳಿ, ಸಿಂಹ, ಕಮಲೆ, ನವಮಾಲೆ, ಚಂದ್ರ, ಬಾಲಸೂರ್ಯ, ಮೀನುಗಳ ಜೋಡಿ, ಕೊಳ, ಸಮುದ್ರ, ಸಿಂಹಾಸನ, ಸುರರಾಜನ ವಿಮಾನ, ಹುತ್ತ, ರತ್ನಸಮೂಹ, ಅಗ್ನಿ, ವೃಷಭ (ಚಂಡಗಜಗಮನೆ ಪರಿಖಂಡಿತಾಘಾಳಿಯಂ ಕಂಡಳೀರೆಂಟು ಒಳ್ಗನಸಿನೆಸೆವೋಳಿಯಂ: **ಆದಿಪು,** ೭. ೨೭ ವ)

ಈರೆಲೆವೋಗು – [ಕ್ರಿ] [ಒಂದಿದ್ದುದು] ಎರಡೆಲೆಯಾಗು, ಎಳಿಗೆಯಾಗು (ಬಳಸುವ ಬೇಟದೊಳ್ ಮೊಳೆತ ಗೊಟ್ಟಿಯೊಳ್ ಈರೆಲೆವೋದ ಲುಂದಿನೊಳ್ ಬಳೆದ ವಿಯೋಗದೊಳ್: **ಆದಿಪು,** ೧೨. ೧೯)

ಈರೊಡಲ್ – [ನಾ] ಎರಡು ದೇಹ (ತೊಟ್ಟನೆ ಪೋಪುವು ನಲ್ಲರೀರ್ವರ ಒಡಲೊಳಗಿರ್ಪ ಜೀವಂ: **ಪಂಪಭಾ,** ೪. ೧೦೪)

ಈರ್ಯಾಗೋಚರ – [ನಾ] ನಡೆಯುವಾಗ ಪ್ರಾಣಿಗಳಿಗೆ ನೋವಾಗದಂತೆ ನೋಡಿಕೊಳ್ಳುವುದು (ತಳರ್ದಂ ಈರ್ಯಾಗೋಚರಂ ಶುದ್ಧಿ ತಳ್ತಿರೆ ತನ್ನೊಳ್ ಧರೆಯಂ ಪದಾಂಬುಜರಜಂಗಳ್ ನೀರಜಂ ಮಾಟ್ಪಿನಂ: **ಆದಿಪು,** ೯. ೧೨೪)

ಈವಟ್ಟೆ – [ನಾ] [ಈವ+ಅಟ್ಟೆ] ಕನ್ಯಾದಾನ ಮಾಡಿಕೊಡುವ ಪ್ರೀತಿ (ಕುಡಲಿರ್ಪಂ ಬಲದೇವನೆನ್ನಱೆಯಂ ದುರ್ಯೋಧನಂಗೆ ಆಂ ಒಡಂಬಡೆಂ ಈವಟ್ಟೆಯದು ಆಗಳುಂ ನಿನಗೆ ದಲ್: **ಪಂಪಭಾ,** ೫. ೨೦)

ಈವೆಡೆ – [ನಾ] [ಈವ+ಎಡೆ} ದಾನಮಾಡುವ ಸಂದರ್ಭ (ಒಟ್ಟಿದ ಪೊನ್ನ ಬೆಟ್ಟುಗಳಂ ಈವೆಡೆಗೆ ಆವುದೊ ತೂಕಂ ಕೆಯ್ಗಟ್ಟಳೆ ಕೊಳ್ಳಿಂ ಎಂದು ಕುಡೆ ಷೋಡಶ ಋತ್ವಿಜರ್ಗೆ: **ಪಂಪಭಾ,** ೬. ೩೯)

ಈಶ – [ನಾ] ಶ್ವರ, ಶಿವ (ಮುನಿದು ಈಶಂ ತವೆ ಸುಟ್ಟು ಮುಂ ಕರುಣದಿಂದಿತ್ತಂ ಪುನರ್ಜನ್ಮಮಂ ನಿನಗೆ: **ಪಂಪಭಾ,** ೪. ೫೧)

ಈಶಶಾಸನ – [ನಾ] ಒಡೆಯನ ಆಜ್ಞೆ, ರಾಜಾಜ್ಞೆ (ಈಶಶಾಸನಮಂ ನೆತ್ತಿಯೊಳಾಂತು ಬನ್ನಿಂ ಎಱಗಿಂ ಚಕ್ರೇಶಪಾದಾಬ್ಜದೊಳ್ **ಆದಿಪು,** ೧೪. ೩೧)

ಈಶಾನ – [ನಾ] ಶಾನ್ಯ ದಿಕ್ಕು (ಈಶಾನದೊಳಿರ್ದ ಗಂಗಾಕೂಟಕ್ಕಭಿಮುಖವಾಗಿ ತತ್ಸಮೀಪದೊಳ್ ಆತ್ಮೀಯಮಂಗಳಜಳಂಗಳಿಂದಭಿಷೇಕಂಗೆಯ್ದು: **ಆದಿಪು,** ೧೩. ೭೭ ವ)

ಈಶಾನಕಲ್ಪ – [ನಾ] [ಜೈನ] ಹದಿನಾರು ಸ್ವರ್ಗಗಳಲ್ಲಿ ಎರಡನೆಯದು (ಅಂತಾ ದೇವಂ ಈಶಾನಕಲ್ಪದಿಂದ ಅತಿಪ್ರೀತಿವರ್ಧನಕರಂ ಎಂಬ ಮದ್ವಿಮಾನಮಂ ಪ್ರೀತಿವರ್ಧನಕರಮಾಗೇಱಿಸಿಕೊಂಡು ಉಯ್ದು: **ಆದಿಪು,** ೩. ೫೮ ವ)

ಈಶಾನೇಂದ್ರ – [ನಾ] [ಜೈನ] ಈಶಾನಕಲ್ಪದ ದೇವೇಂದ್ರ (ಹಿಮಕರಬಿಂಬನಿಭಚ್ಛತ್ರಮಂ ಈಶಾನೇಂದ್ರನೆತ್ತಿದಂ: **ಆದಿಪು,** ೭. ೫೦)

ಈಶ್ವರ – [ನಾ] ಶಿವ (ಆದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ ಮದನನ ಸೌಭಾಗ್ಯಮುಮಂ ಕಲ್ಪತರುವಿನ ಉದಾರಶಕ್ತಿಯುಮಂ ಈಶ್ವರನ ಪ್ರಭುಶಕ್ತಿಯುಮಂ .. .. ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ,** ೧. ೧೩೯ ವ)

ಈಶ್ವರಕಲ್ಪಿತ – [ನಾ] ದೇವರ ನಿಯಮ (ಈಶ್ವರಕಲ್ಪಿತದಿಂ ರಾಕ್ಷಸರ್ಗೆ ಸದ್ಯೋಗರ್ಭಂ ಸದ್ಯಃಪ್ರಸೂತಿಯುಂ ಸದ್ಯೋಯೌವನಮುಂ ಉಳ್ಳ ಕಾರಣದಿಂದೆ: **ಪಂಪಭಾ,** ೩. ೨೦ ವ)

ಈಷತ್ – [ನಾ] ಕೊಂಚ (ಈಷತ್ ವಿಷಣ್ಣವದನನಾಗಿರ್ದ ಬಾಹುಬಲಿಕುಮಾರನಂ ಮನ್ತ್ರಿಪುಂಗವರ್ ನೋಡಿ: **ಆದಿಪು,** ೧೪. ೧೦೩ ವ)

ಈಷತ್ಪ್ರಾಗ್ಭಾರ – [ನಾ] [ಜೈನ] ಸಿದ್ಧಕ್ಷೇತ್ರ (ಸಮವೃತ್ತಮುಂ ಎನಿಸಿದ ಈಷತ್ಪ್ರಾಗ್ಭಾರದ ಮೇಗಣ ಘನೋದಧಿ ಘನಾನಿಳ ತನುವಾತತ್ರಿತಯಭಾಗದೊಳ್: **ಆದಿಪು,** ೧೬. ೫೧ ವ)

ಈಷದಾರೋಪಿತ – [ಗು] ಸ್ವಲ್ಪ ಏರಿಸಿದ (ಧರಣೀಶನಿದಿರೊಳ್ ಅವರ್ ಅಂತರ್ನಿಗೂಢಕೋಪಾವಲೇಪರುಂ ಈಷತ್ ಆರೋಪಿತ ಭ್ರೂಚಾಪರುಮಾಗಿ: **ಆದಿಪು,** ೯. ೧೦೪ ವ)

ಈಸು – [ಗು] [ಈಷಾ] ಈಜು (ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯಂ ಈಸುವೆಂ ಕವಿವ್ಯಾಸನೆಂ ಎಂಬ ಗರ್ವಮೆನಗಿಲ್ಲ: **ಪಂಪಭಾ,** ೧. ೧೩); [ನಾ] ಬಂಡಿಯ ಈಚು, ಇರ್ಚಿಮರ (ಉಡಿದಿರ್ದ ಅಚ್ಚು ಅಟಿದ ಈಸು ತಟ್ಟಿದ ನೊಗಂ ಜಱಿಯ್ಟಿ ಚಕ್ರಂ .. .. ನೆತ್ತರ ಪೊನಲ್ ಕಣ್ಗೊಂಡುದುಗ್ರಾಜಿಯೊಳ್: **ಪಂಪಭಾ,** ೧೦. ೯೧)

ಈೞ್ಕೊಳ್ – [ಕ್ರಿ] ಸೆಳೆದುಕೊ, ಆಕರ್ಷಿಸು (ಖಚರೀಜನಾನನ ನವಾಂಭೋಜಂಗಳೊಳ್ ಕಂಪಂ ಈೞ್ಕೊಳುತುಂ: **ಆದಿಪು,** ೧. ೮೪)

ಉ

ಉಂಗುರವಿಡು – [ಕ್ರಿ] ಮದುವೆ ನಿಶ್ಚಿತಾರ್ಥದಲ್ಲಿ ಉಂಗುರ ತೊಡಿಸು (ತನಗೆ ಕಿಱಿಯಂದು ಉಂಗುರವಿಟ್ಟ ಸಾಲ್ವಲನೆಂಬಲ್ಲಿಗೆ ಪೋಗಿ ನೀನೆನ್ನಂ ಕೈಕೊಳವೇೞ್ಕುಂ ಎಂದೊಡೆ: **ಪಂಪಭಾ**, ೧. ೭೫ ವ)

ಉಂಟಕ್ಕುಂ – [ಅ] ಇರಬೇಕು (ಚಿತ್ತಕ್ಕತಿಪ್ರೀತಿ ತೊಟ್ಟನೆ ಕೈಗಣ್ಮುವುದೇಕೆ ಪೂರ್ವಭವದೊಳ್ ಬಂಧುತ್ವಂ ಉಂಟಕ್ಕುಂ: **ಆದಿಪು**. ೫. ೪೭)

ಉಂಟು – [ಅ] ನಿಜ, ಇದೆ (ನಣ್ಪಿಂ ನಿಮಗಂ ಎಮಗಂ ಆಮ್ನಾಯದಿಂ ಬಂದುದು ಇಂತೀ ಜಿನಧರ್ಮಂ ಪ್ರಾಣಿಗಾರ್ಮಂ ಮಱೆಯದಿರಿದು ನಿನ್ನೆಂದುದು ಉಂಟು ಇಲ್ಲ ಪೇೞಿಂ: **ಆದಿಪು**, ೨. ೨೦)

ಉಂಟೊಡೆತಾಗಿ ಮಾಡು – [ಕ್ರಿ] ಹೌದು, ಇದೆ ಎಂಬಂತೆ ಮಾಡಿ (ಆತ್ಮವಿಟತತ್ತ್ವಮಂ ಉಂಟೊಡೆತಾಗಿ ಮಾಡಿ ಬಾಂದೊಱೆಯನೆ ಪೊತ್ತು ಗೌರಿಗೆ ಕವಲ್ದೊಱೆಗೆಯ್ದಿದಂ ಈ ಪ್ರದೇಶದೊಳ್: **ಪಂಪಭಾ**, ೭. ೭೫)

ಉಂಡಿಗೆ ಸಾಧ್ಯಂ ಮಾಡು – [ಕ್ರಿ] ತನ್ನ ಹೆಸರಿನ ಮುದ್ರೆ ಬೇರೆಡೆ ಚಲಾವಣೆಯಾಗುವಂತೆ ಮಾಡು, ಆ ಪ್ರದೇಶವನ್ನು ಗೆಲ್ಲು (ಅಂತು ಷಟ್ಖಂಡಭರತಮಂಡಳಮಂ ಉಂಡಿಗೆ ಸಾಧ್ಯಂ ಮಾಡಿ: **ಆದಿಪು,** ೧೫. ೩ ವ)

ಉಂಡು ಪಟ್ಟಿರ್ಪಂ – [ನಾ] ಮಲಗಿದವನು (ಗುಣಮುಂಟೆಂದು ಉಂಡು ಪಟ್ಟಿರ್ಪನಂ ಅಣಮೆ ನಿರುದ್ಯೋಗಿಯಂ ಭೂಪನೆಂಬರ್: **ಪಂಪಭಾ**, ೪. ೧೧)

ಉಂತಪ್ಪ – [ಅ] ಹೇಗೆಯೋ (ಸಹಜಮನೋಜನ ಕುಲದ ಚಲದ ಚಾಗದ ಬೀರದ ಭಾಗ್ಯದ ಸೌಭಾಗ್ಯದ ಅಗುಂತಿಗಳಂ ಉಂತುಂ ಅಳವಲ್ಲದೆ ಪೊಗೞೆ: **ಪಂಪಭಾ,** ೪. ೪೦ ವ)

ಉಂತು – [ಅ] ಮಿಕ್ಕದ್ದು, ಹೆಚ್ಚಿನದು (ಭವದಗ್ರಜದಿಗ್ವಿಜಯೋತ್ಸವಂ ಅಧಿಕಮಹೋತ್ಸವಂ ವಲಂ ನಿನಗಾದಂ ಶ್ರವಣಸುಖಮೆಂದೆ ದಿಙ್ಮಾತ್ರವರ್ಣನಂಗೆಯ್ವೆಂ ಉಂತದೇನೆನ್ನಳವೇ: **ಆದಿಪು**, ೧೪. ೫೧); [ಅ] ಸುಮ್ಮನೆ (ಏಱಿನೆ ಸೂಱೆಗೊಂಡು ನುಡಿವೀ ನುಡಿಯಲ್ಲದೆ ಮತ್ತಮಾಸನಂದೋಱುವ ಬಲ್ಪುದೋಱುವ ಎರ್ದೆದೋಱುವ ಕಯ್ಪೆಸರಂಗಳೆಮ್ಮ ಉಂತು ಏಱುವು: **ಪಂಪಭಾ**, ೮. ೨೦)

ಉಂತೆ – [ಅ] ವ್ಯರ್ಥವಾಗಿ (ನಿಮ್ಮ ಮುದಿಗಣ್ತನದೊಳ್ ಇದೇಂ ಉಂತೆ ಬಟ್ಟೆವೋಪೊಡೆ ಪೋಗಿಂ: **ಆದಿಪು,** ೯. ೧೦೬); ಸುಮ್ಮನೆ (ಇಂತು ಸುಯೋಧನಂ ನಿನಗೆ ಮಾಡಿದ ರಾಜ್ಯವಿಭೂತಿಗೆ ಉಂತೆ ಮುಯ್ವಾಂತಿರದಿರ್: **ಪಂಪಭಾ,** ೨. ೮೬)

ಉಂತೇಂ – [ಅ] ಅಷ್ಟಲ್ಲದೆ, ಹಾಗಲ್ಲದೆ (ಆಱುಂ ವೃತ್ತಿಗಳನಿವಂ ಮೀಱಿದರಲ್ಲರ್ ದ್ವಿಜನ್ಮರ್ ಈ ವೃತ್ತಿಗಳಿಂ ಬೇಱಾದರ್ ದ್ವಿಜರು ಉಂತೇಂ ಬೇರುಂಟೆ: **ಆದಿಪು**, ೧೫. ೧೪)

ಉಕ್ಕೆವ – [ನಾ] ಠಕ್ಕು, ಮೋಸ (ಜೂದಿನೊಳ್ ಉಕ್ಕೆವದಿಂದೆ ಗೆಲ್ದ ನಿನ್ನಂ ಅವನಿತಳಂ ಕರಾತಳದವೋಲ್ ತನಗಂ ಬೆಸಕೆಯ್ಯೆ ಕೆಯ್ಗೆ ಮಾಡುವ ನಯಂ ಆ ಬೃಹಸ್ಪತಿಯುಮಂ ಗೆಲೆವಂದುದು ಧಾರ್ತರಾಷ್ಟ್ರನಾ: **ಪಂಪಭಾ**, ೭. ೪೦)

ಉಕ್ತಿ – [ನಾ] ಮಾತುಗಾರಿಕೆ (ಫಳದಿಂ ಕಲ್ಪದ್ರುಮಮಂ ಜಳದಿಂ ಜಳನಿಧಿಯಂ ಉಕ್ತಿಯಿಂ ಸುರಗುರುವಂ ಬೆಳಗಿಂ ದಿನಪನಂ ಅರ್ಚಿಪ ಚಳಮತಿಗಳ ತೆಱನಂ ಆಮುಂ ಅನುಕರಿಸಿರೆವೇ: **ಆದಿಪು**, ೧೪. ೧೧)

ಉಗಿ – [ಕ್ರಿ] ಹೊರಗೆಳೆ (ವಿನೇಯೋತ್ಕರ ಸಸ್ಯಾವಳಿ ಸುಗಿದು ಅಗಿದು ಕೂಡೆ ಬಾಡಿರ್ದುದು: **ಆದಿಪು,** ೧೦. ೬೬); [ಕ್ರಿ] ಸೀಳು (ತನ್ನ ಸಹಜಕವಚಮಂ ನೆತ್ತರ್ ಪನಪನ ಪನಿಯೆ ತಿದಿಯುಗಿವಂತುಗಿದು ಕೊಟ್ಟೊಡೆ ಇಂದ್ರನಾತನ ಕಲಿತನಕೆ ಮೆಚ್ಚಿ: **ಪಂಪಭಾ,** ೧. ೧೦೨ ವ); [ಕ್ರಿ] ಎಳೆದಾಡು (ನೋಡಾದೞಿಲಂ ಎನಗೆ ಕಣ್ಸೋಲದಿಂ ಕೀಚಕಂ ಬಂದುಱಿದೆನ್ನಂ ಕಾಡಿ ಕೈಗೆಲ್ದು ಉಗಿದಂ: **ಪಂಪಭಾ,** ೮. ೭೧); [ಕ್ರಿ] ಪಕ್ಕಕ್ಕೆ ಸರಿ (ಭೋರೆಂದು ಬಂದು ಎಚ್ಚ ಆ ದಿವ್ಯಾಸ್ತ್ರಂಗಳಿಂ ತಮ್ಮ ಒವಜರ್ ಉಗಿಯೆ: **ಪಂಪಭಾ,** ೧೧. ೬೧); [ಕ್ರಿ] ಕತ್ತರಿಸು (ತಿದಿ ಉಗಿದು ಕೊಟ್ಟೆಂ ಒಡವುಟ್ಟಿದ ಕವಚಮಂ ಅಮರಪತಿಗೆ: **ಪಂಪಭಾ,** ೧೨. ೧೦೯); [ಕ್ರಿ] ಬಿಡು, ಬದಲಿಸು (ಮುಂ ತೊಟ್ಟ ಅಂಬಂ ಅದಂ ಉಗಿದು ಕುಂದಿಸಿದಂ ಭಯದಿಂ ಕರ್ಣನೆಂದು ಲೋಕಂ ನಗದೇ: **ಪಂಪಭಾ,** ೧೨. ೧೯೯)

ಉಗಿಬಗಿಮಾಡು – [ಕ್ರಿ] ಕಲಕು (ಸೇಸಿಕ್ಕಲೆಂದು ಬಂದಮರ ಪುರಂಧ್ರಿಯರುಮಂ ಆಳೋಕನಮಾತ್ರದೊಳೆ ಮನಮಂ ಉಗಿಬಗಿಮಾಡಿ: **ಆದಿಪು,** ೨. ೬೫ ವ); [ಕ್ರಿ] ಹರಡು (ಮಳಯಜದ ಕಂಪುಮಂ ಸೂಡಿದ ಬಾಸಿಗದ ಪೊಸಗಂಪುಮಂ ನೆರೆದುಗಿಬಗಿಮಾಡಿದುವು ಚಮರರುಹ ಪವನಂಗಳ್: **ಆದಿಪು**, ೯. ೪); [ಕ್ರಿ] ಉಗುರಿನಿಂದ ಪರಚು (ತನ್ನನಡಪಿದ ಗಿಳಿಯ ಕೈಯೊಳೋಪಳಲ್ಲಿಗಟ್ಟಿದೊಡೆ .. .. ಒಂದು ಗಿಡುಗನೆಡೆಗೊಂಡು .. .. ಉಗಿಬಗಿ ಮಾಡಿದಾಗಳ್: **ಪಂಪಭಾ**, ೧. ೬೮ ವ)

ಉಗು – [ಕ್ರಿ] ಚಿಮ್ಮು (ಮಹೋರಗನೆಯ್ದೆ ಪಲ್ಗಳರ್ದೊಡೆ ಕಿಡಿವೀೞೆ ನೆತ್ತರೊಱೆದು ಉರ್ಚೆ ಉಗೆ ಕೊಂಡುದು ತತ್ತಪಸ್ವಿಯಂ: **ಆದಿಪು**, ೨. ೪೦); [ಕ್ರಿ] ಉದುರು (ತಳಿರ್ಗಳ ತೊಂಗಲಿಂದಂ ಅಲರೋಳಿಗಳಲ್ಲುಗುವಂತೆ ಕೆಂದಳಂಗಳಿಂ ಉದಿರ್ವ ಅಕ್ಕಿಗಳ್: **ಆದಿಪು**, ೪. ೫೯); [ಕ್ರಿ] ಸುರಿ (ಪಾಱುವ ವಿಮಾನದೊಂದಳ್ಳೇಱಿಂ ಪಱಿದು ಉಗುವ ಮುಗಿಲ ನೀರ್ಗಳ ಪಲವುಂ ಪೀಱುಗಳೋಳೆಳಸಿ ಖಚರರನಾಱಿಸಿದುದು: **ಆದಿಪು**, ೪. ೮೬); [ಕ್ರಿ] ಚೆಲ್ಲು, ಹೊರಬೀಳಿಸು (ಕುಡಿತೆಯ ನಿರಂತೆ ಉಗಲುಂ ಕುಡಿಯಲ್ಕುಂಟೆನಗೆ ಲವಣವಾರ್ಧಿಯ ನೀರಂ: **ಆದಿಪು,** ೧೨. ೮೭); [ಕ್ರಿ] ಸುರಿ (ಮನಂ ಮಱುಕಕ್ಕೆ ನೀಳ್ದ ಕಣ್ ಒಱೆದು ಉಗುವ ಅಶ್ರುವಾರಿಗೆ ತೊದಳ್ನುಡಿ ಲಲ್ಲೆಗೆ ಪಕ್ಕುಗೊಟ್ಟು: **ಪಂಪಭಾ**, ೪. ೧೨)

ಉಗುತರ್ – [ಕ್ರಿ] ಉಕ್ಕಿಬರು, ಸುರಿ (ಒಗೆದ ಶರಸ್ತಂಬದೊಳ್ ಇರ್ಬಗಿಯಾಗಿ ಮನೋಜರಾಗರಸಂ ಉಗುತರೆ ತೊಟ್ಟಗೆ ಬಿಸುಟು ಬಿಲ್ಲಂ ಅಂಬುಮಂ ಅಗಲ್ದಂ ಆಶ್ರಮದಿಂ ಉದಿತಲಜ್ಜಾವಶಂ: **ಪಂಪಭಾ,** ೨. ೩೩)

ಉಗುರಿಸು – [ಕ್ರಿ] ಉಗುರಿನಿಂದ ಕೆರೆ, ಚಿಂತಿಸು (ಅದನಱಿಯದಂತೆ ಗುರುಗೆ ನಿದ್ರಾಭಿಘಾತಮಕ್ಕುಮೆಂದು ತಲೆಯಂ ಉಗುರಿಸುತ್ತುಂ ಇರೆಯಿರೆ: **ಪಂಪಭಾ,** ೧. ೧೦೪ ವ)

ಉಗುಟ್ – [ಕ್ರಿ] [ಕಣ್ಣೀರು] ಹೊರಸೂಸು (ಕುಂಕುಮದೊಳರ್ದಿದ ಬಾಳೆಗಳನ್ನವಾಗಿ ಕೆಂಪಡರ್ದ ಅಲರ್ಗಣ್ಗಳಿಂದುಗುಟ್ದು ನೋಡಿದುದಂ ನೆನೆವೆಂ ಮೃಗಾಕ್ಷಿಯಾ: **ಆದಿಪು,** ೧೨. ೨೪); [ಕ್ರಿ] ಉಗುಳು (ರಾಹು ತವೆ ನುಂಗಿದ ಚಂದ್ರನಂ ಒಯ್ಯನೊಯ್ಯನೆ ಅಂದು ಉಗುಟ್ವವೊಲ್ ಒಪ್ಪಿರಲ್ ಬಲದೊಳುರ್ವಸಿ ದೇಸಿಗೆ ದೇಸಿಯಾಡಿದಳ್: **ಪಂಪಭಾ,** ೭. ೮೮)

ಉಗುಟ್ಟಿರ್ – [ಕ್ರಿ] ಹೊಮ್ಮಿಸು (ಮಲ್ಲಿಕೋಜ್ಜ್ವಲಮುಕುಳಕ್ಕಮಾದ ಪೊಸಗಂಪಂ ಉಗುಟ್ಟಿರಲಿರ್ದು: **ಆದಿಪು,** ೩. ೧೯)

ಉಗ್ಗಡ – [ಗು] [ಉತ್ಕಟ] ಆಧಿಕ್ಯ (ಇದು ಮನೆಯಲ್ತು ಉರಿವ ದಳ್ಳುರಿ ಉಗ್ಗಡದಂದಮಾಗಿ ತೋಱಿದಪುದು ಕಣ್ಗೆ: **ಪಂಪಭಾ,** ೩. ೪)

ಉಗ್ಗಡಿಸು – [ಕ್ರಿ] [ಉದ್ಘೋಷಿಸು] ಕೂಗಿ ಹೇಳು (ರಪಣಮಂ ತೋಱಿಯುಂ ಒತ್ತೆಯಂ ಉಗ್ಗಡಿಸಿಯುಂ ಆಡಿಂ ಎನೆ ಪೆಱತೇನುಪಾಯಮಿಲ್ಲದೆ ಎಮ್ಮಾಳ್ವ ನೆಲನೊತ್ತೆಯೆಂದೊಡೆ: **ಪಂಪಭಾ,** ೭. ೩ ವ); ಎತ್ತಿ ಆಡು (ಕುಲಮನೆ ಮುನ್ನಂ ಉಗ್ಗಡಿಪಿರೇಂ ಗಳ ಕುಲಂ ಕುಲಮಲ್ತು ಚಲಂ ಕುಲಂ ಗುಣಂ ಕುಲಂ ಅಭಿಮಾನಮೊಂದೆ ಕುಲಂ ಅಣ್ಮು ಕುಲಂ: **ಪಂಪಭಾ,** ೧೦. ೨೧)

ಉಗ್ರ – [ಗು] ಭಯಂಕರವಾದ (ಕದನಪ್ರಾರಂಭಶೌಂಡಂ ರಿಪುನೃಪಬಲ ದಾವಾನಲಂ ವೈರಿಭೂಭೃತ್ ಮದವತ್ ಮಾತಂಗ ಕುಂಭಸ್ಥಳದಳನ ಖರ ಉಗ್ರ ಅಸಿ ಪಂಚಾಸ್ಯಧೈರ್ಯಂ: **ಪಂಪಭಾ,** ೬. ೭೭)

ಉಗ್ರಗ್ರಾಹ – [ನಾ] ಮೊಸಳೆ (ತರಳತರಂಗತುರಂಗಂ ಕರಿ ಮಕರ ಕರೀಂದ್ರಂ ಅಖಿಳಶಫರಪದಾತ್ಯುತ್ಕರಂ ಉಗ್ರಗ್ರಾಹರಥಂ ಭರತಂಗಿತ್ತುದು ಪಯೋಧಿಬಳವಿಳಸನಮಂ: **ಆದಿಪು,** ೧೨. ೭೮)

ಉಗ್ರಘೋಷ – [ನಾ] ಭಯಂಕರ ಧ್ವನಿ (ಪೆರ್ಚಿತ್ತು ಉಗ್ರಘೋಷಂ ಪ್ರಳಯಘನಘಟಾಟೋಪಗಂಭೀರಘೋಷಂ: **ಆದಿಪು,** ೧೩. ೩೬)

ಉಗ್ರವಾಣಿ – [ನಾ] ಕೋಪದ ಮಾತನ್ನಾಡುವವನು (ಆ ಪ್ರಸ್ತಾವದೊಳ್ ಆತನ ಪರಿವಾರಾಮರರ್ ನಾನಾವಿಧಾಯುಧವ್ಯಗ್ರಪಾಣಿಗಳುಂ ಉದಾರವೀರರಸರಭಸೋಗ್ರವಾಣಿಗಳುಂ ಆಗಿ: **ಆದಿಪು,** ೧೨. ೯೨ ವ)

ಉಗ್ರವೈರಿ – [ನಾ] ಕಡುವಿರೋಧಿ (ಉಗ್ರವೈರಿ ಮದವನ್ಮಾತಂಗಕುಂಭ ಆರ್ದ್ರ ಮೌಕ್ತಿಕ ಲಗ್ನೋಜ್ಜ್ವಲಬಾಣನಂ ಪ್ರವಿಲಸತ್ ಗೀರ್ವಾಣ ದಾತವ್ಯ ಸಾಯಕ ಸಂಪೂರ್ಣಕಳಾಪ್ರವೀಣನಂ ಇಳಾಭಾರಕ್ಷಮ ಅಕ್ಷೂಣನಂ: **ಪಂಪಭಾ,** ೧. ೧೩೪)

ಉಗ್ರಸಾಯಕ – [ನಾ] ಭಯಂಕರ ಬಾಣ (ತನ್ನಂಕದೊಂದುಗ್ರ ಸಾಯಕದಿಂ ನಾಯಕರಂ ಪಡಲ್ವಡಿಸುತುಂ: **ಪಂಪಭಾ,** ೧. ೭೪)

ಉಗ್ರಾಸಿ – [ನಾ] [ಉಗ್ರ+ಅಸಿ] ತುಂಬ ಹರಿತವಾದ (ಅರಿಕೇಸರಿಗೆ ಆತ್ಮಜರ್ ಅರಿನೃಪಶಿರೋದಳನ ಪರಿಣತೋಗ್ರಾಸಿ ಭಯಂಕರರ್ ಆ ಇರ್ವರೊಳ್ ಆರ್ ದೊರೆಯೆನೆ ನರಸಿಂಹ ಭದ್ರದೇವರ್ ನೆಗೞ್ದರ್: **ಪಂಪಭಾ,** ೧. ೨೨)

ಉಗ್ರೇಷು – [ನಾ] [ಉಗ್ರ+ಇಷು] ಭಯಂಕರವಾದ ಬಾಣ (ಎಯ್ತಂದರಂ ತೋಱಿಕೊಳ್ವಂತಿರೆ ಕೊಂಡುವು ಅಂದು ಅರಿಗನೆಚ್ಚು ಉಗ್ರೇಷುಧಾರಾಜಳಂ: **ಪಂಪಭಾ,** ೫. ೨೧)

ಉಗ್ರೋಗ್ರ – [ನಾ] [ಉಗ್ರ+ಉಗ್ರ] ಭಯಂಕರವಾದವುಗಳಲ್ಲಿ ಭಯಂಕರ, ಮಹಾಭಯಂಕರ (ಅಂತು ಉಗ್ರೋಗ್ರತಪಂಗೆಯ್ಯೆ ತತ್ ತಪಸ್ತಪನವಿಪುಳಮರೀಚಿಗಳ್ ತಮಗೆ ತಪೋವಿಘಾತಮಂ ಮಾಡುವುದುಂ: **ಪಂಪಭಾ,** ೮. ೧೦ ವ)

ಉಚಿತ – [ನಾ] ಹೊಂದಿರುವಂಥದು (ಶಂಖ ಚಕ್ರ ನಂದ್ಯಾವರ್ತಕ ಸ್ವಸ್ತಿಕ ಧ್ವಜಾವರ್ತ ರಕ್ತಬಿಂದೂಚಿತನುಂ: **ಆದಿಪು,** ೧೨. ೫೬ ವ); [ಗು] ತಕ್ಕ, ಸೂಕ್ತ (ಓಲಗಿಸುತ್ತುಂ ಬಂದ ಪಂಡಿತರ್ಕಳುಮಂ ಉಚಿತ ಪ್ರತಿಪತ್ತಿಗಳಿಂ ವಿಸರ್ಜಿಸಿ: **ಪಂಪಭಾ,** ೪. ೬೯ ವ)

ಉಚ್ಚ – [ಗು] ಭೀಕರ (ತಮ್ಮ ಬಲಮನೊಂದುಮಾಡಿ ಕೂಡಿಕೊಂಡು ಚಕ್ರವರ್ತಿಯೊಳ್ ಉಚ್ಚವಿಗ್ರಹಂಗೆಯ್ಯಲ್ ಎತ್ತಿಕೊಂಡುದಂ ಕಂಡು: **ಆದಿಪು,** ೧೩. ೫೬ ವ)

ಉಚ್ಚಮಾಗು – [ಕ್ರಿ] ಹೆಚ್ಚಾಗು (ಆತನ ಬೆಳ್ಗೊಡೆಯ ಪಜ್ಜಳಿಸುವ ಪಜ್ಜಳಿಕೆಯೆ ತನ್ನೊಳಪೊಕ್ಕಂತೆ ಚಂದ್ರಮಂಡಲಕುಚ್ಚಮಾಗೆ ಪಳಚ್ಚನಪ್ಪ ಬೆಳ್ದಿಂಗಳುಂ: **ಆದಿಪು,** ೧೧. ೫ ವ); [ಕ್ರಿ] ಎತ್ತರವಾಗು (ದೆಸೆಗಳನೆಂಟುಮಂ ನೆಱಿಯೆ ಮುನ್ನಮೆ ಬಳ್ವಳನಾಗೆ ಮಾಡದೆ ಆಗಸಮುಮನುಚ್ಚಮಾಗಿ ಇನಿಸನೆತ್ತದೆ: **ಆದಿಪು,** ೧೧. ೩೫)

ಉಚ್ಚವಿಗ್ರಹ – [ನಾ] ಘೋರ ಕಾಳಗ (ತಮ್ಮ ಬಲಮನೊಂದುಮಾಡಿ ಕೂಡಿಕೊಂಡು ಚಕ್ರವರ್ತಿಯೊಳ್ ಉಚ್ಚವಿಗ್ರಹಂಗೆಯ್ಯಲ್ ಎತ್ತಿಕೊಂಡುದಂ ಕಂಡು: **ಆದಿಪು,** ೧೩. ೫೭ ವ)

ಉಚ್ಚಸ್ತನಿ – [ನಾ] ತೋರ ಮೊಲೆಯವಳು (ನೋಡುವೆನೆನ್ನೆಚ್ಚೆಯೊಳೀ ಮುನಿಯ ವರದ ಮಹಿಮೆಯಂ ಎನುತ ಅಂದು ಉಚ್ಚಸ್ತನಿ ಗಂಗೆಗೆ ಶಫರ ಉಚ್ಚಳಿತ ತರತ್ತರಂಗೆಗೆ ಒರ್ವಳೆ ಬಂದಳ್: **ಪಂಪಭಾ,** ೧. ೯೦)

ಉಚ್ಚಸ್ಥಾನ – [ನಾ] ಮಗು ಹುಟ್ಟುವ ಕ್ಷಣದಲ್ಲಿ ಗ್ರಹಗಳು ಇರುವ ಶ್ರೇಷ್ಠ ಸ್ಥಾನ (ಗ್ರಹಂಗಳೆಲ್ಲಂ ತಂತಮ್ಮ ಉಚ್ಚಸ್ಥಾನಂಗಳೊಳಿರ್ದು ಷಡ್ವರ್ಗಸಿದ್ಧಿಯನುಂಟುಮಾಡೆ ಶುಭಲಗ್ನೋದಯದೊಳ್: **ಪಂಪಭಾ,** ೧. ೧೪೪ ವ)

ಉಚ್ಚಳತ್ – [ಗು] ಮೇಲೆ ಚಿಮ್ಮುವ (ಮತ್ತದ್ವಿಪೇಂದ್ರಾವಳಿಹಸ್ತಾಗ್ರ ಉಚ್ಚಳತ್ ಶೀಕರಸಮುದಯಂ: **ಆದಿಪು,** ೧೩. ೮)

ಉಚ್ಚಳಿತ – **[ಗು]** ಮೇಲೆ ಚಿಮ್ಮಿದ (ಪುಚ್ಚವಣಂ ನೋಡುವೆನೆನ್ನೆಚ್ಚೆಯೊಳೀ ಮುನಿಯ ವರದ ಮಹಿಮೆಯಂ ಎನುತ ಅಂದು ಉಚ್ಚಸ್ತನಿ ಗಂಗೆಗೆ ಶಫರ ಉಚ್ಚಳಿತ ತರತ್ತರಂಗೆಗೆ ಒರ್ವಳೆ ಬಂದಳ್: **ಪಂಪಭಾ,** ೧. ೯೦)

ಉಚ್ಚಳಿಸು – **[ಕ್ರಿ]** ಮೇಲಕ್ಕೆ ಚಿಮ್ಮು (ಒರ್ವರಂ ಒರ್ವರ್ ಎಚ್ಚು ನಿಜಪೀತಾಂಭೋಜದಿಂ ಬ್ರಹ್ಮನುಚ್ಚಳಿಪನ್ನಂ ಪಿರಿದೊಂದು ಸಂಕಟಮನೀ ತ್ರೈಲೋಕ್ಯದೊಳ್ ಮಾಡಿದರ್: **ಪಂಪಭಾ,** ೧. ೭೯)

ಉಚ್ಚಾಟಿತ – **[ಗು]** ಎಸೆಯಲ್ಪಟ್ಟ (ವಾಜಿಖರಾಹತಿಸ್ಫುಟಿತ ಗ್ರಾವಸ್ಥಳಂ ಸೈನ್ಯದಂತಿಕರೋಚ್ಚಾಟಿತ ಸಲ್ಲಕೀಕಿಸಲಯಂ: **ಆದಿಪು,** ೧೩. ೫೫)

ಉಚ್ಚಾಟಿಸು – **[ಕ್ರಿ]** ಓಡಿಸು (ಬೇಳ್ವೆಗಳ್ಗೆ ಉಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತಶರಕೋಟಿಯಿಂದಂ ಉಚ್ಚಾಟಿಸಿ ಕೆಲವು ದಿವಸಮಿರ್ದು: **ಪಂಪಭಾ,** ೪. ೧೫ ವ)

ಉಚ್ಚಾರ್ಯಮಾಣ – ಉಚ್ಚರಿಸುತ್ತಿರುವ (ಪುರೋಹಿತ ಉಚ್ಚಾರ್ಯಮಾಣ ಪುಣ್ಯಾಶೀರ್ವಚನನಿರ್ಘೋಷದತ್ತಕರ್ಣನುಂ ಆಗಿರ್ದಾಗಳ್: **ಆದಿಪು,** ೧೧. ೧೦ ವ)

ಉಚ್ಚಾವಚ – **[ಕ್ರಿವಿ]** ಸ್ಫುಟವಾಗಿ (ಭ್ರೂವಲ್ಲಭಸೋತ್ಕ್ಷೇಪ ಭ್ರೂವಿಲಸಿತದತ್ತವಾಚನ ಮಧುರೋಚ್ಚಾವಚ ಗಂಭಿರನಿನಾದದಿಂ ಬಾಜಿಸಿದಂ: **ಆದಿಪು,** ೧೪. ೪೬) [**'ಮಧುರೋಚ್ಚಾವಚ'** ಎಲ್. ಬಸವರಾಜು ಅವರು ಸ್ವೀಕರಿಸಿರುವ ಪಾಠ]

ಉಚ್ಚಾಸನ – **[ನಾ]** ಉನ್ನತ ಪೀಠ (ಬೇಗಂ ಉಚ್ಚಾಸನದಿಂದ ಇದರೇಟಿಂ ಎಂದು ಪೇೞ್ವವೊಲದೇಂ ಕರಂ ತೀರ್ಥಕರರ ಪುಣ್ಯಂ ಪಿರಿದೋ: **ಆದಿಪು,** ೭. ೪೧)

ಉಚ್ಚಿತ್ತಿ – **[ನಾ]** ಕತ್ತರಿಸುವುದು (ಮೂಲೋತ್ತರಾದಿಭೇದ ಭಿನ್ನಕರ್ಮಪ್ರಕೃತಿಗಳ ನಿರ್ಮೂಳ ಉಚ್ಚಿತ್ತಿ ಮೋಕ್ಷಮೆಂಬುದು: **ಆದಿಪು,** ೧೦. ೬೩ ವ)

ಉಚ್ಚುಂಬ್ಯಮಾನ – **[ಗು]** ಚುಂಬಿತವಾದ (ಕರಿಸೇನಾಸಾರಿನದ್ಧ ಉತ್ತರಳಕದಳಿಕಾ ಕಾನನೋಚ್ಚುಂಬ್ಯಮಾನಾಂಬರಚಕ್ರಂ: **ಆದಿಪು,** ೪. ೨೪)

ಉಚ್ಛ್ರಯ – **[ನಾ]** [ಉಚ್ಛ್ರಾಯ] ಎತ್ತರ (ತಪ್ತತಪನೀಯಚ್ಛಾಯನುಂ ಸಪ್ತಹಸ್ತೋಚ್ಛ್ರಯನುಂ ನಿದ್ರಾಲಸ ಅಕ್ಷಿನಿಮೇಷ ಜರಾ ಶೋಕ ವಿಷಾದ ವಿರಹಿತನುಂ: **ಆದಿಪು,** ೨. ೬೯ ವ)

ಉಚ್ಛ್ರಿತ – **[ಗು]** ಎತ್ತರವಾದ (ತತ್ ಪ್ರಸ್ತಾವದೊಳ್ ತ್ರಿಶತಯುತಸಹಸ್ರ ದಂಡೋಚ್ಛ್ರಿತ ಶರೀರನುಂ: **ಆದಿಪು,** ೬. ೫೩ ವ); ಮೇಲೆತ್ತಿದ (ಉಚ್ಛ್ರಿತಾತಪತ್ರ ಚಿತ್ರಾತಪತ್ರಧೋಧೂಯಮಾನ ಧವಳಚಾಮರ ಸಹಸ್ರಸಂಭಾದಿತ: **ಆದಿಪು,** ೧೧. ೧೪ ವ)

ಉಚ್ಛ್ವಸಿತ – **[ಗು]** ಉಬ್ಬಿದ (ಆ ದುಶ್ಯಾಸನ ಉರಃಸ್ಥಲ ಉಚ್ಛ್ವಸಿತ ಅಸೃಕ್ ಜಲಪಾನಮಂ ಬಯಸಿ ಬಾಯ್ ತೇರೈಸೆ ಸೈತಿರ್ಪನೇ: **ಪಂಪಭಾ,** ೭. ೫೮)

ಉಚ್ಛ್ವಾಸ – **[ನಾ]** [ಜೈನ] ಕಾಲವನ್ನು ಅಳೆಯುವ ಒಂದು ಪ್ರಮಾಣ, ಸಂಖ್ಯಾತ ಆವಲಿ ಒಂದು ಉಚ್ಛ್ವಾಸ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾನುಕ್ರಮದಿಂ: **ಆದಿಪು,** ೬. ೪೮ ವ)

ಉಚ್ಛ್ವಾಸಭರತ್ – **[ಗು]** ಉಸಿರಾಟದ ವೇಗದಿಂದಾದ (ವಿಷಮ ಕಠೋರ ಕೂರ್ಮ ಘರ್ಮನಿರ್ಭರೋಚ್ಛ್ವಾಸ ಭರದ್ವೈಧೀಭವದಂಭಃಪ್ರಕಟಿತ ಅಗಾಧ ರಂಧ್ರಾವರ್ತಮಾನ ಜಳಚರ ಸಂಚರಣ ವಿಸ್ಮಯನೀಯ ಭಯಾನಕೆಯುಂ: **ಆದಿಪು,** ೫. ೮೭ ವ)

ಉಜ್ಜ್ವಲಬಾಣ – **[ನಾ]** ಪ್ರಕಾಮಾನವಾದ ಬಾಣ[ವುಳ್ಳವನು] (ಉಗ್ರವೈರಿ ಮದವನ್ಮಾತಂಗಕುಂಭ ಆರ್ದ್ರ ಮೌಕ್ತಿಕ ಲಗ್ನೋಜ್ಜ್ವಲಬಾಣನಂ ಪ್ರವಿಲಸತ್ ಗೀರ್ವಾಣ ದಾತವ್ಯ ಸಾಯಕ ಸಂಪೂರ್ಣಕಳಾಪ್ರವೀಣನಂ ಇಳಾಭಾರಕ್ಷಮ ಅಕ್ಷೂಣನಂ: **ಪಂಪಭಾ,** ೧. ೧೩೪)

ಉಜ್ಜವಣೆ – **[ನಾ]** [ಉದ್ಯಾಪನಾ] ವ್ರತಸಮಾಪ್ತಿ (ಒಂದಕ್ಷೋಹಿಣಿಬಲಂ ಎರಡುಂ ದೆಸೆಯೊಳಂ ಉಟಿದುವು ಅಂತೆ ಭಾರತಂ ಎಮಗೆ ಇಂದು ಉಜ್ಜವಣೆ ದಲ್ ಎಂದು ಅದಟೊಂದುತ್ತರಮಾಗೆ ಕಾದಿದರ್ ಕಟ್ಟಾಳ್ಗಳ್: **ಪಂಪಭಾ,** ೧೩. ೩೬)

ಉಜ್ಜಳ – **[ಗು]** [ಉಜ್ಜ್ವಲ] ಪ್ರಕಾಶಿಸುವ (ಮುಳಿಸು ಲಲಾಟನೇತ್ರಶಿಖಿ ಮೆಚ್ಚೆ ವಿನೂತ ರಸಪ್ರಸಾದಂ ಉಜ್ಜಳಜಸಂ ಅಂಗಸಂಗತ ಲಸತ್ ಭಸಿತಂ ಪ್ರಭುಶಕ್ತಿ ಶಕ್ತಿ ನಿರ್ಮಳಮಣಿಭೂಷಣಂ ಫಣಿಭೂಷಣಂ: **ಪಂಪಭಾ,** ೧. ೨)

ಉಜ್ಜಳಿಕೆ – **[ನಾ]** ಪ್ರಕಾಶ (ಅದೇಂ ಬಟಿಕೆ ಬಿಂಬದ ಉಜ್ಜಳಿಕೆಯೋ ಸುಧಾಸೂತಿಯಾ: **ಆದಿಪು,** ೧೨. ೭)

ಉಜ್ಜಳಿಸು – **[ಕ್ರಿ]** ಪ್ರಕಾಶಗೊಳಿಸು (ಕುಳಿಶಾಸ್ತ್ರೋತ್ತಂಸಿತಪದನಳಿನಂಗೆ ತನೂಜರಾಗಿ ಪುರುಷಾರ್ಥಮಂ ಉಜ್ಜಳಿಸದೆ ಮಾಣ್ಬಮೆ: **ಆದಿಪು,** ೧೪. ೩೩)

ಉಜ್ಜುಗ – **[ನಾ]** [ಉದ್ಯೋಗ] ಪ್ರಯತ್ನ (ಅಲ್ಲಿ ಗಾಂಪಿಂ ತೊಡರ್ವನೆ ಪಡೆವೆಂ ಶಾಶ್ವತಶ್ರೀಯನೆಂಬುಜ್ಜುಗದೊಳ್ ಚಿತ್ತಂ ಕರಂ ತಣ್ಮಲೆಯೆ: **ಆದಿಪು,** ೬. ೨೬); ಉದ್ದೇಶ (ಗುಣಾರ್ಣವಂಗೆ ಕುಡು ಗೆಲ್ಲಮಂ ಇಂತಿದೆ ಕಜ್ಜದ ಉಜ್ಜುಗಂ: **ಪಂಪಭಾ,** ೫. ೧೦೨)

ಉಜ್ವಳಂ ಮಾಡು – **[ಕ್ರಿ]** ಶುಚಿಗೊಳಿಸು (ನಿಪುಣಿಕೆಯಂ ಜಿನಜನನಿಯ ಸೆಜ್ಜೆಯಂ ಉಜ್ವಳಂ ಮಾಡಲುಂ: **ಆದಿಪು,** ೭. ೨೧ ವ)

ಉಜ್ವಳಿಕೆ – **[ನಾ]** ಕಾಂತಿ (ಚಂದ್ರಕಿರಣದುಜ್ವಳಿಕೆಯಿಂ ಆ ಭರತನ ಮುಳಿಸೊಗೆಯನನುಕರಿಸಿದುದು ಏಂ ಚಕ್ರವರ್ತಿವೃತ್ತಮೊ ಶರದಂ: **ಆದಿಪು,** ೧೧. ೭)

ಉಟಜ – **[ನಾ]** ಪರ್ಣಶಾಲೆ (ತಮಗೆ ತಾವೆ ವನಪ್ರವೇಶಂ ಮಾಡಿ ಬಹುಪ್ರಕಾರೋಟಜರಾಜಿಗಳೊಳಿರ್ದು: **ಆದಿಪು,** ೯. ೯೧ ವ) [**'ಬಹುಪ್ರಕಾರವಿಟಪಿರಾಜಿ'** – ಟ.ವಿ. ವೆಂಕಟಾಚಲಶಾಸ್ತ್ರಿಗಳು ಅನುಸರಿಸಿರುವ ಪಾಠ]

ಉಟ್ಟುದಿಕ್ಕು – **[ಕ್ರಿ]** [ಉಟ್ಟುದು+ಇಕ್ಕು] ಬಟ್ಟೆಯನ್ನು ಬಿಡು, ದಿಗಂಬರನಾಗು (ತಲೆವಜಿದು ಉಟ್ಟುದಿಕ್ಕಿ ಸುರಲೋಕಸುಖಂಗಳಂ ಉಣ್ಬೆವೆಂಬ ಬತ್ತಲೆಗರ ಮಾತುಗೇಳದಿರು: **ಆದಿಪು,** ೨. ೯)

ಉಟ್ಟುದುವರಂ – [ಅ] ಉಟ್ಟ ಬಟ್ಟೆಯವರೆಗೂ (ಬಯ್ದು ಎನಿತಾನುಂ ತೆಱದಿಂದಂ ಉಟ್ಟುದುವರಂ ಕೆಯ್ದಂದು ದುಶ್ಶಾಸನಂ ತನಗಂ ಮೆಲ್ಲನೆ ಮೃತ್ಯು ಸಾರೆ ತೆಗೆದಂ ಧಮ್ಮಿಲ್ಲಮಂ ಕೃಷ್ಣೆಯಾ: **ಪಂಪಭಾ,** ೭. ೫)

ಉಡಮೊಗ – [ನಾ] ಬಾಗೆಹೂ[ವಿನಂತಹ] ಮುಖ (ಉಡಮೊಗಮೆಂಬ ತಾವರೆಯ ನೀಳ್ದೆಸಳೊಳ್ ಮಱೆದುಂಬಿ ಪಾಯ್ದು ಒಡಂಬಡನೊಳಕೊಂಡು ಕಣ್ಮಲರ ಬೆಳ್ಪುಗಳ್ ಆಲಿಯ ಕರ್ಪಿನೊಳ್ ಪೊದಳ್ದು; **ಪಂಪಭಾ,** ೫. ೭೮)

ಉಡಲಿಕ್ಕು – [ಕ್ರಿ] ಉಡುಗೊರೆಯನ್ನು ಕೊಡು (ಸಾಸಿರ ಪೊಂಗೆಯ್ದುಂ ಚೀಃ ಕಾಸಟಮೆಂದು ಒಂದು ಲಕ್ಕಗೆಯ್ದುದಿರ್ದರ್ಕಂ ಮಾಸರಂ ಉಡಲೆಂದು ಅಧಿಕ ವಿಳಾಸದಿಂದ ಉಡಲಿಕ್ಕಿ ನೆಱೆಯೆ ಬಿಯಮಂ ಮೆಱೆದಂ: **ಪಂಪಭಾ,** ೩. ೪೪)

ಉಡಿ – [ಕ್ರಿ] ತುಂಡುಮಾಡು (ಕಡುಲೋಭಂ ತನ್ನ ಕಾಲ್ಗಳಂ ಪಿಡಿದು ಉಡಿದಂ: **ಆದಿಪು,** ೫. ೨೦); [ಕ್ರಿ] ಕಳೆದುಕೊ (ಕಾಯ್ದು ಪಜ್ಜಳಿಸುವ ಲೋಹಪಿಂಡಮನೆ ಭೋಂಕೆನೆ ನೀರೊಳಗರ್ದಿದಂತೆವೊಲ್ ಪೊಳೆಪುಡಿದಿರ್ದಂ: **ಆದಿಪು,** ೭. ೯೮); [ಕ್ರಿ] ಸೋಲಿಸು (ದರ್ಪಿತ ದುರಿತಮಲ್ಲನುಮಂ ಉಡಿವ ತಕ್ಕಿನಿಂ ಸಭೆಗೆ ನಡೆದಂ ಇಂದ್ರಾರ್ಚಿತನಾ: **ಆದಿಪು,** ೧೪. ೧೩೪); [ಕ್ರಿ] ಚಿಗುರಿಡು (ಪೊಲನುಡುಗಿ ಬಂದುದು ಉಡಿದುದು ಪುಲ್ ಕಾಡುಂ ದಲೆಲೆಯಿಕ್ಕಿ ಫಳಿಲೆನೆ ನಿಂದುವು ತಣಿದುವು ಮೃಗಂಗಳೆತ್ತಲುಮೀಗಳ್: **ಪಂಪಭಾ,** ೫. ೩೭); [ಕ್ರಿ] ಮುರಿ (ಅರಿವ ನಡುವ ಉಡಿವ ನೇರ್ಗೋಲ್ವರಿದು ಉರ್ಚುವ ನಟ್ಟು ತೊನೆವ ಕಣೆಗಳ್ಗೆ ಮೊಗಂದಿರಿಯದೆ: **ಪಂಪಭಾ,** ೧೦. ೭೪): [ನಾ] ಚೂರು (ಎಲ್ಲಂ ನಟ್ಟುಡಿದ ಬಾಳ ಕಕ್ಕಡೆಯುಡಿಗಳುಮಂ ಅಯಸ್ಕಾಂತಮಂ ತೋಱೆ ತೆಗೆಯಿಸುತ್ತುಂ: **ಪಂಪಭಾ,** ೧೧. ೨ ವ); [ಕ್ರಿ] ಅಳಿಸು, ಹೋಗಲಾಡಿಸು (ನೊಂದ ತಮ್ಮಬುಗಾಳ್ಗಳ ಕೊಂಡಾಟದಾನೆಗಳ ನಚ್ಚಿನ ಕುದುರೆಗಳ ಪುಣ್ಗಳಂ ಉಡಿಯಲುಂ ಓವಲುಂ: **ಪಂಪಭಾ,** ೧೧. ೨ ವ)

ಉಡುಕ – [ನಾ] ಉಡುಗುವಿಕೆ, ಕುಂದುವಿಕೆ (ದಾನಗುಣಂಗಳ್ ಕಿಡೆ ತೇಜದ ಉಡುಕಮೇಂ ಪಿರಿದಾಯ್ತೋ: **ಆದಿಪು,** ೬. ೫೧)

ಉಡುಗಿಬರ್ – [ಕ್ರಿ] ಒಕ್ಕಣೆಯಾಗು (ಪೊಲನುಡುಗಿ ಬಂದುದು ಉಡಿದುದು ಪುಲ್ ಕಾಡುಂ ದಲ್ ಎಲೆಯಿಕ್ಕಿ ಫಳಿಲೆನೆ ನಿಂದುವು ತಣಿದುವು ಮೃಗಂಗಳ್ ಎತ್ತಲುಮೀಗಳ್: **ಪಂಪಭಾ,** ೫. ೩೭)

ಉಡುಗಿಸು – [ಕ್ರಿ] ಪರಿಹರಿಸು (ಸೀಮೆಗಳ ತೊಡರಂ ಉಡುಗಿಸಿ ಸೀಮಂಕರನೆಂಬುದೊಂದು ಪೆಸರಂ ಪಡೆದಂ: **ಆದಿಪು,** ೬. ೫೭)

ಉಡುಗು – [ಕ್ರಿ] ಕಡಿಮೆ ಮಾಡು (ಕುಳಿರ್ವ ತಿಳಿನೀರಂ ಉಡುಗದೆ ತಳಿ: **ಆದಿಪು,** ೨. ೧೪); [ಕ್ರಿ] ಸ್ವಚ್ಛಮಾಡು (ನಾನಾವಿಧ ಧಾನ್ಯಂಗಳಂ ಪದನಱೆದು ಉಡುಗುವ ಕಣಂ ಮಾಡುವ ಒಕ್ಕುವ ಅಡುಕುವ: **ಆದಿಪು,** ೬. ೭೭ ವ); [ಕ್ರಿ] ನಿಲ್ಲಿಸು (ಬಿಡದೆ ಅಟಲ್ವ ಬಂಧುಜನದ ಒಟ್ಟುಡಿಯದ ಕಣ್ಣೀರ ಪೂರಂ ಆ ಪ್ರೇತಮಂ ಓಗಡಿಸದೆ ಸುಡುವುದು ಗಡಂ ಇನ್ನುಡುಗುವುದೀ ಶೋಕಮಂ ಸರೋಜದಳಾಯತಾಕ್ಷೀ: **ಪಂಪಭಾ,** ೨. ೨೮); [ಕ್ರಿ] ಸಂಕೋಚಗೊಳಿಸು (ತತ್ಕಮಳಕಾನನ ಕಂಟಕಲಗ್ನಪಾದನಾದವೊಲ್ ಉಡುಗುತ್ತುಂ ಆತ್ಮಕರಮಂ ರವಿ ಪೊರ್ದಿದಂ ಅಸ್ತಶೈಲಮಂ: **ಪಂಪಭಾ,** ೪. ೪೭); [ಕ್ರಿ] ಹಿಂದೆಗೆದುಕೊ (ಆಕರ್ಣಾಂತಂ ತೆಗೆನೆಱೆದಾ ಕರ್ಣಂ ಇಸಲ್ಕೆ ಬಗೆದೊಡೆ ಉಡುಗು ಉಡುಗು ಇಸಲ್ ಈ ಭೀಕರಬಾಣಮಂ ಆದಂ ವಿವೇಕದಿಂ ಉರದೆಡೆಗೆ ತುಡದೆ ತಲೆಗೆಯೆ ತುಡುವಾ: **ಪಂಪಭಾ,** ೧೨. ೧೯೪); [ಕ್ರಿ] ಬರಿದಾಗು, ಬತ್ತು (ಉರ್ವರೆ ನಡುಗಿತ್ತು ಅಜಾಂಡಂ ಒಡೆದತ್ತು ನೆಲಂ ಪಿಡುಗಿತ್ತು ಸಪ್ತಸಾಗರಂ ಉಡುಗಿತ್ತು ಸಾಹಸಮದೇಂ ಪಿರಿದೊ ಕದನತ್ರಿಣೇತ್ರನಾ: **ಪಂಪಭಾ,** ೧೨. ೨೧೨)

ಉಡುಪತಿವಂಶ – [ನಾ] ನಕ್ಷತ್ರಗಳ ರಾಜ[=ಚಂದ್ರ]ವಂಶ[ದಲ್ಲಿ ಹುಟ್ಟಿದವನೇ] (ನುಡಿವೊಡೆ ರಾಜಕಾರ್ಯನಯಮೆತ್ತ ಅಬಲಾಜನದ ಬುದ್ಧಿಯೆತ್ತ ಉಡುಪತಿವಂಶ ನೋಡುವೊಡೆ ಇದೊಂದಘಟಂ: **ಪಂಪಭಾ,** ೭. ೪೫)

ಉಡೆ – [ನಾ] ಉಡುವ ವಸ್ತ್ರ (ಕರವೆರಸಿದ ಪೊಸದುಗುಲದ ತೆರಳ್ಕೆವೆತ್ತ ಉಡೆ ಹಟತ್ಕಟೀಸೂತ್ರಪರಿಸ್ಫುರಿತದೊಳಂ ಕಟ್ಟಿದ ಪೊಂಜುರಿಗೆಯೊಳಂ: **ಆದಿಪು,** ೪. ೩೬)

ಉಡೆವಣಿ – [ನಾ] ಗೆಜ್ಜೆಯುಳ್ಳ ಉಡಿದಾರ (ಉಡೆವಣಿ ಪಱೆಯದ ಮುನ್ನಮೆ ತೊಡಗಿ ಚಲಂ ನೆಗೞೆ ರಿಪುಬಲಂಗಳನೆ ಪಡಲ್ವಡಿಸಿ ಪರಬಲದ ನೆತ್ತರ ಕಡಲೊಳಗಣ ಜಿಗುಳೆ ಬಳೆವ ತೆಱದೊಳೆ ಬಳೆದಂ; **ಪಂಪಭಾ,** ೧. ೪೬)

ಉಣ್ – [ಕ್ರಿ] ಅನುಭವಿಸು (ತಲೆವಱೆದು ಉಟ್ಟುದಿಕ್ಕಿ ಸುರಲೋಕಸುಖಂಗಳಂ ಉಣ್ಬೆವೆಂಬ ಬತ್ತಲೆಗರ ಮಾತುಗೇಳದಿರು: **ಆದಿಪು,** ೨. ೯); [ಕ್ರಿ] ಊಟಮಾಡು, ತಿನ್ನು (ಆವುದು ಉಣ್ಬ ಉಣಿಸು ಎನೆ ಪೇೞ್ವೆನೆಂಬ ಪದದೊಳ್ ನರಕಾಂತಕಂ ಅಗ್ನಿದೇವನಂ ಕಾಣಲೊಡಂ: **ಪಂಪಭಾ,** ೫. ೭೧ ಮತ್ತು ೭೧ ವ)

ಉಣಿಸು – [ನಾ] ಊಟ, ಆಹಾರ (ನಾಳಿನ ಉಣಿಸು ಎನಗೆ ದೊರೆಕೊಳಿಸಿ ಬಂದುದು ಕರಮೊಳ್ಳಿತ್ತಾಯ್ತೆಂದು ನಗುತಿರ್ಪನ್ನೆಗಂ: **ಪಂಪಭಾ** ೩. ೨೬ ವ)

ಉಣ್ಣದಪಡು – [ಕ್ರಿ] ಉಣ್ಣದೆ ಮಲಗು (ಪಸಿದುಣ್ಣಪಟ್ಟು ಬಿರ್ದಿರ್ದು ಸಮುದ್ರದ ತಡಿಯೊಳ್ ಉದಕಮಂತ್ರವದ ಬಲದಿಂ ನುಸುಳ್ದೊಡೆ ಜಳನಿಧಿಯಂ ಕರುಣಿಸಿ ಕೊಟ್ಟರ್ ಧನಮನಂಜೆ ಕೊಟ್ಟರೆ ದಿವಿಜರ್: **ಆದಿಪು,** ೧೪. ೬೮)

ಉಣ್ಮಿಪೊಣ್ಮು – [ಕ್ರಿ] ಚಿಮ್ಮಿ ಸೂಸು (ಉಣ್ಮಿಪೊಣ್ಮಿ ಕಣ್ಮಲರ್ಗಳಿಂ ಎಚ್ಚು ಪಾಯ್ದುವು ಅರಲಂಬುಗಳಂತೆ ವಿಲೋಚನಾಂಬುಗಳ್: **ಪಂಪಭಾ,** ೪. ೧೦೮)

ಉಣ್ಮಿ ಪೊಣ್ಮಿ ನಿಲ್ – [ಕ್ರಿ] ಹುಟ್ಟಿ ಪ್ರಕಟವಾಗಿ ನಿಲ್ಲು (ತ್ರಿದಶನರಾಸುರೋರಗಗಣಪ್ರಭು ನಿಶ್ಚಿತತತ್ತ್ವಯೋಗಿ ಯೋಗದ ಬಲಮುಣ್ಮಿ ಪೊಣ್ಮಿ ನಿಲೆ: **ಪಂಪಭಾ,** ೧. ೮೫)

ಉಣ್ಮು – [ಕ್ರಿ] ಉಬ್ಬು, ಉಕ್ಕಿ ಬರು (ನರಲೋಕಂಬರಂ ಉಣ್ಮಿ ಪೊಣ್ಮಿದ ಪಯಃಪೂರಂಗಳಿಂದಂ: **ಆದಿಪು,** ೭. ೧೦೧); [ಕ್ರಿ] ಹೊಮ್ಮು (ಸುಯ್ವ ಸುಯ್ಗಳಿಂ ಕಿಡಿ ಪೊಱಪೊಣ್ಮೆ ಬಾಹುಬಲಿಯೋಗಿಯ ಘೋರತಪೋಮಹಾಗ್ನಿಯಿಂ ಸುಡೆ

ಸುಟೆದಿರುಣ್ಮುತ್ತಿರ್ಪ ಕಿಡಿಗಳ್ಗೆಣೆಯಾದುವು: **ಆದಿಪು,** ೧೪. ೧೪೦)

ಉತ್ಕಂಚಂ ನುಡಿ – **[ಕ್ರಿ]** ಗಟ್ಟಿಯಾಗಿ ಮಾತಾಡು (ಎಡೆಗೊಂಡಿರಿಂ ಉತ್ಕಂಚಂ ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಮಿರ್ಪೆಡೆಯೊಳಿರಿಂ ನೀವಜೆವಿರ್ ಮಿಡುಕಿದೊಡೆ ಎನೆ ಚಿತ್ರವೇತ್ರದಂಡಧರರ್ಕಳ್: **ಪಂಪಭಾ,** ೧೪. ೨೨)

ಉತ್ಕಂಠಿತ – [ಗು] ತವಕದಿಂದ ಕೂಡಿದ (ತನ್ನ ವಿಜಯಶ್ರೀಯ ಬರವಿಂಗೆ ಇದಿರ್ವಂದಂತೆ ಬಂದ ಶರತ್ಕಾಲಶ್ರೀಯಂ ಉತ್ಕಂಠಿತ ಹೃದಯನಾಗಿ ಮೆಚ್ಚಿ ನೋಡುತ್ತುಂ: **ಪಂಪಭಾ,** ೭. ೭೧ ವ)

ಉತ್ಕಂಪ – [ಗು] ಬಳುಕುವ (ನಿಮಿರ್ದಲ್ಲಾಡುವ ಕಾಂತಾಕುಂತಳಂ ತುಂಗಸ್ತನಕ್ಷೋಭವಿಭ್ರಮಂ ಉತ್ಕಂಪದರಿದ್ರಮಧ್ಯಂ: **ಆದಿಪು,** ೮. ೭೦)

ಉತ್ಕಚ – [ಗು] ಮೇಲಕ್ಕೆದ್ದ ಕೂದಲು, ಕೆದರಿದ ಕೂದಲು (ಉತ್ಕೋಪದಹನದೊಡನೆ ಪೃಷತ್ಕಂಗಳ್ ಕೋಟಿಗಣಿತದಿಂದ ಉಱುವಿನಂ ಆರ್ದ ಉತ್ಕಚದಿಂ ಉಱದೆ ಘಟೋತ್ಕಚನಂ ಬಿಟ್ಟು ಮೂರ್ಛೆವೋಪಿನಂ ಎಚ್ಚಂ: **ಪಂಪಭಾ,** ೧೧. ೮)

ಉತ್ಕಟ – [ಗು] ಅತಿಶಯ, ತೀವ್ರ (ಮಾರುತಘಾತ ಸಂಚಳಿತ ಕೇತುಸಮೂಹಂ ಉದಗ್ರ ಚಕ್ರಚೀತ್ಕಾರಂ ಉದಾರ ವೀರಭಟಸಿಂಹನಾದವಿಮಿಶ್ರಿತ ಉತ್ಕಟಜ್ಯಾರವಂ: **ಪಂಪಭಾ,** ೧೦. ೮೫)

ಉತ್ಕರ – [ನಾ] ಸಮೂಹ (ಭಸಿತಂ ಕರ್ಪೂರಕಾಳಾಗರು ಬಹುಳರಜಂ ವಲ್ಕಲಂ ಕಲ್ಪವೃಕ್ಷಪ್ರಸವಂ ಯಜ್ಞೋಪವೀತಂ ಕನಕಕಮಳನಾಳೋತ್ಕರಂ: **ಪಂಪಭಾ,** ೭. ೭೮)

ಉತ್ಕರ್ಷತೆ – [ನಾ] ಶ್ರೇಷ್ಠತೆ (ಎಂಬುದುಂ ಸಂಕರ್ಷಣಂ ಆತನ ಮನದ ಉತ್ಕರ್ಷತೆಯನಜಿದು ಪೆಱತಂ ಇನ್ನೆನಗೆ ನುಡಿಯಲೆಡೆಯಿಲ್ಲ: **ಪಂಪಭಾ,** ೧೩. ೯೦ ವ)

ಉತ್ಕಶಿಖಂಡಿತಾಣ್ಡವ – [ನಾ] ಉತ್ಕಂಠಿತವಾದ ನವಿಲಿನ ಕುಣಿತ (ಉತ್ಕಶಿಖಂಡಿತಾಣ್ಡವಮನೋಹರಂ ಉಜ್ಜ್ವಳ ರತ್ನ ರಾಜತ್ಕಟಕಂ: **ಆದಿಪು,** ೧. ೬೩)

ಉತ್ಕಳಿತ – [ನಾ] ಮೊಗ್ಗು ಒಡೆದ (ಸಕಳ ಕಳೋತ್ಕಳಿತ ಸರಸ ಸಹಕಾರಕೋರಕಕಬಳನಮದಮಧುರ ಕೋಕಿಳ ಕೋಳಾಹಳಾಕುಳಿತ ಕೃತಕಕೇಳೀಶೈಳಶಿಖರಂಗಳೇ: **ಆದಿಪು,** ೪. ೫೨ ವ)

ಉತ್ಕೀರ್ಣ – [ಗು] ಕೊರೆಯಲ್ಪಟ್ಟ (ಸಮುದ್ರ ಉತ್ಕೀರ್ಣ ನಿವಾಸಂಗಳಪ್ಪ ಪಟ್ಟಣಂಗಳುಮಂ: **ಆದಿಪು,** ೮. ೬೩ ವ); **[ಗು]** ಕೆತ್ತಲ್ಪಟ್ಟ (ಗರ್ವಾಕೃಷ್ಟವಿಕರ್ಣ ಟಂಕನಿಕರ ಉತ್ಕೀರ್ಣ ಪ್ರಭಾವಾಕ್ಷರೈಃ: **ಪಂಪಭಾ,** ೧೪. ೨೮)

ಉತ್ಕೃಷ್ಟ – [ನಾ] ಉತ್ತಮವಾದ (ಅಲ್ಲಿ ಉತ್ಕೃಷ್ಟನಿಕೃಷ್ಟಕಾಲಸ್ಥಿತಿಯೊಳ್ ಅಯ್ನೂಱು ಬಿಲ್ಲಿಂದಂ ಏೞುಮೊೞದೇಹಪ್ರಮಾಣದೊಳ್: **ಆದಿಪು,** ೯. ೧೨೧ ವ)

ಉತ್ಕೇತು – [ಗು] ಹಾರಾಡುವ (ಸಾಕೇತಂ ಉತ್ಕೇತು ಬಾಹುಗಳಿಂದಂ ಕರೆವಂತೆ ಏನೆಸೆದುದೋ ಸರ್ವಾರ್ಥಸಿದ್ಧೀಶನಂ: **ಆದಿಪು,** ೭. ೨)

ಉತ್ಕೇಸರಕೋಟಿ – [ನಾ] ಮೇಲೆದ್ದ ಅಸಂಖ್ಯಾತ ಕೇಸರಗಳು (ಈ ಸರಸೀರುಹಂಗಳ ಅವನೀಪದದೊಳ್ ಬಿಸುಟೆಂತು ಪೋಪೆವೆಂಬೀ ಸಮಕಟ್ಟಿನೊಳ್ ನೆಲಸಿದಂತೆರಗಿರ್ದುವು ಷಟ್ಪದಂಗಳ್ ಉತ್ಕೇಸರಕೋಟಿ ಸಂಕಟ ಕುಶೇಶಯ ಕೋಶಕುಟೀರಕಂಗಳೊಳ್: **ಪಂಪಭಾ,** ೪. ೪೭)

ಉತ್ಕ್ಷೇಪ – [ಕ್ರಿ] ಮೇಲೆ ಹಾರಿಸು (ಭೂವಲ್ಲಭ ಸೋತ್ಕ್ಷೇಪ ಭ್ರೂವಿಲಸಿತದತ್ತವಾಚನಾದೇಶಂ ಇದಂ ಭಾವಿಸಿಂ ಎಂದು ಅತಿಮಧುರೋದ್ಭಾವಿತ ಗಂಭೀರನಾದದಿಂ ಬಾಜಿಸಿದಂ: **ಆದಿಪು,** ೧೪. ೪೬)

ಉತ್ಖಾತ – [ಗು] ಒರೆಯಿಂದ ಹೊರಕ್ಕೆಳೆದ (ಉತ್ಖಾತಮಾತ್ರವಿತ್ರಸ್ತ ಸಮಸ್ತಾರಿಮಂಡಲಮುಂ: **ಆದಿಪು,** ೧೧. ૩ ವ)

ಉತ್ಖಾತಪ್ರತಿರೋಪಿತ – [ಗು] ಬೇರುಸಹಿತ ಕಿತ್ತು ಬೇರೊಂದೆಡೆ ನಡುವುದು (ಮತ್ತಮಲ್ಲಿ ಕೆಲರಂ ಮೈತ್ರಾಸನವೃತ್ತಿಯೊಳ್ ನಿಜೆಸಿ ಕೆಲರಂ ಉತ್ಖಾತಪ್ರತಿರೋಪಿತರ್ಮಾಡಿ ಕೆಲರಂ ಉಚ್ಚಾಟಿಸಿ ಸರ್ವಹರಣಂಗೆಯ್ದು: **ಪಂಪಭಾ,** ೬. ೩೦ ವ)

ಉತ್ತ – [ನಾ] ಮಧ್ಯದ ಪ್ರದೇಶ (ಅತ್ತ ಮಹೀಶ್ವರ ಅವಸಥಂ ಇತ್ತ ಮಹೀತಳಂ ಉತ್ತ ಪನ್ನಗೋದಾತ್ತ ಸಮಸ್ತಲೋಕಂ: **ಪಂಪಭಾ,** ೧. ೭೫)

ಉತ್ತಂಸ – [ನಾ] ಶ್ರೇಷ್ಠನಾದವನು (ಸೌಂದರಿಯರ ಏಕಚ್ಛತ್ರರಾಜ್ಯಾಭಿಷೇಕಂ ಇದೆಂಬಂತಿರೆ ಮಜ್ಜನಂಬುಗಿಸಿದರ್ ಮನ್ವನ್ವಯೋತ್ತಂಸನಂ: **ಆದಿಪು,** ೮. ೭೦); **[ನಾ]** ತಲೆಯ ಆಭರಣ (ಪದೆದು ಉತ್ತಂಸ ಅವತಂಸಶೋಭೆಗೆ ಭವದ್ಬಾಳಪ್ರವಾಳೋಲ್ಲಸತ್ ಮೃದುಪುಷ್ಪಸ್ತಬಕಂಗಳಂ ಪಱೆದೆವು: **ಆದಿಪು,** ೧೧. ೧೩೪)

ಉತ್ತಂಸಿತ – [ಗು] ಅಲಂಕೃತಗೊಂಡ (ಅಂತೊಗೆದು ದಿಕ್ಕರಿ ಕರಾನುಕಾರಿ ಪರಿಘ ಉತ್ತಂಸಿತ ತೋರಣೀಕೃತ ರೌದ್ರ ಗದಾದಂಡನುಂ ಪ್ರಚಂಡನುಂ ಆಗಿ: **ಪಂಪಭಾ,** ೧೩. ೮೨ ವ)

ಉತ್ತಪ್ತ – [ಗು] ಚೆನ್ನಾಗಿ ಕಾಸಿದ (ದೇವಬ್ರಹ್ಮಮುನೀಂದ್ರಾಸೇವಿತಂ ಉತ್ತಪ್ತಕನಕವರ್ಣಂ ಹಂಸಗ್ರೀವನಿಹಿತ ಏಕಪಾದಂ ಇಳಾವಂದ್ಯಂ ಅನಿಂದ್ಯಂ ಅಬ್ಜಗರ್ಭಂ ಬಂದಂ: **ಪಂಪಭಾ,** ೧೨. ೧೩೮)

ಉತ್ತಮ – [ನಾ] ಶ್ರೇಷ್ಠ (ಉತ್ತಮಕುಲಶೈಲಂ ಉನ್ನತಿಯಂ ಏಳಿದವಾಗೆ ಬಿಸಟಿಸ್ವೊಡಂ ಬಿಸುಟಿಕ್ಕಿಮ ಬಿಸುಡೆಂ ಮದೀಯ ಪುರುಷವ್ರತಮೊಂದುಮಂ: **ಪಂಪಭಾ,** ೧. ೮೩)

ಉತ್ತಮತಪ – [ನಾ] ಶ್ರೇಷ್ಠ ತಪಸ್ಸು (ಉತ್ತಮ ತಪಂಗಳಿಂದತ್ಯುತ್ತಮದೇಹರ್ ವಿದೇಹರಪ್ಪುದಱಿಂ ಮೆಯ್ವೆತ್ತನ್ವರ್ಥತೆಯಂ ತಾಳ್ದಿತ್ತು ವಿದೇಹಂ ವಿದೇಹಮೆಂಬೀ ಪೆಸರಂ: **ಆದಿಪು,** ೧. ೫೩)

ಉತ್ತಮಪಾತ್ರ – [ನಾ] [ಜೈನ] ದಾನವನ್ನು ಪಡೆಯುವವರಲ್ಲಿನ ಒಂದು ಬಗೆ, ಶ್ರೇಷ್ಠನಾದವನು (ದರ್ಶನವಿಶುದ್ಧನುಂ ಶೀಲಸಂಪನ್ನನುಂ ಅಪ್ಪ ಸಂಯತಂ ಉತ್ತಮಪಾತ್ರಂ: **ಆದಿಪು,** ೧೦. ೯ ವ)

ಉತ್ತಮ ಭೋಗಭೂಮಿ – [ನಾ] ಉತ್ತಮ, ಮಧ್ಯಮ ಮತ್ತು ಜಘನ್ಯ ಎಂಬ ಮೂರು ಭೋಗಭೂಮಿಗಳಲ್ಲಿ ಶ್ರೇಷ್ಠವಾದದ್ದು (ಪುಣ್ಯಫಲದಿಂದಮೀ ಜಂಬೂದ್ವೀಪದ

ಮಂದರಮಹೀಧರದುತ್ತರ ದಿಗ್ಭಾಗದೊಳಿರ್ದುತ್ತರ ಕುರುವೆಂಬುತ್ತಮ ಭೋಗಭೂಮಿಯೆ ಜನ್ಮಭೂಮಿಯಾದುದು; **ಆದಿಪು,** ೫. ೨೭ ವ)

ಉತ್ತಮಾಂಗ – [ನಾ] ಶ್ರೇಷ್ಠವಾದ ಅವಯವ, ತಲೆ (ಪದಪದ್ಮಂಗಳಂ ಕರ್ಚಿ ತತ್ಪಾದಪವಿತ್ರೋದಕಂಗಳಂ ಅನಿಬರುಂ ಉತ್ತಮಾಂಗದೊಳ್ ತಳಿದುಕೊಂಡಿರ್ದಾಗಳ್: **ಪಂಪಭಾ,** ೭. ೫೯ ವ)

ಉತ್ತರ – [ನಾ] ಮರು ನುಡಿ (ಮರುಳಾಗದೆನ್ನ ನುಡಿಗುತ್ತರಮಂ ಮುನ್ನಿತ್ತು ಕುಡಿಯೆ ಕಜ್ಜಂ ನಿನಗುತ್ತರಿಸುಗುಂ ಅಂತಲ್ಲದೆ ಇವಂದಿರಂತೆ ನೀನುಂತೆ ಮೂರ್ಖನಾಗದಿರು: **ಪಂಪಭಾ,** ೮. ೪೭); ಅತಿಶಯತೆ (ಅಂತಾಗಳ್ ಒಂದುತ್ತರಂ ಬಳೆಯೆ ಸೊಗಯಿಸುವ ಪೊಟಿಲ್ ಅಷ್ಟಶೋಭೆಯಂ ಮಾಡಿ: **ಪಂಪಭಾ,** ೩. ೨ ವ)

ಉತ್ತರಂ – [ಕ್ರಿವಿ] ಅತಿಶಯವಾಗಿ (ಇದಱಿಂ ಳ್ ತನ್ನಿಷ್ಟವಪ್ಪನ್ನಂ ಉತ್ತರಂ ಅಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ: **ಪಂಪಭಾ,** ೧೪. ೬೫)

ಉತ್ತರಂ ಬಳೆ – [ಕ್ರಿ] ಅತಿಶಯತೆ ಮಿಗಿಲಾಗು (ಅಂತಾಗಲೊಂದು ಉತ್ತರಂ ಬಳೆಯೆ ಸೊಗಯಿಸುವ ಪೊಟಿಲೊಳ್ ಅಷ್ಟಶೋಭೆಯಂ ಮಾಡಿ: **ಪಂಪಭಾ,** ೩. ೨ ವ)

ಉತ್ತರಕುರು – [ನಾ] [ಜೈನ] ವಿದೇಹಕ್ಷೇತ್ರದಲ್ಲಿ ಮೇರುಪರ್ವತದ ಉತ್ತರದ ಭೋಗಭೂಮಿ (ನೀನೆನ್ನಂ ನಿನ್ನ ಗಗನಗಾಮಿನೀವಿದ್ಯೆಯಿಂ ಉತ್ತರಕುರುವನೆಯ್ದಿಸು: **ಆದಿಪು,** ೨. ೧೪ ವ); [ನಾ] ಕುರುದೇಶದ ಉತ್ತರಭಾಗ (ನಿನ್ನ ಗಗನಗಾಮಿನೀವಿದ್ಯೆಯಿಂ ಉತ್ತರಕುರುವನೆಯ್ದಿಸು: **ಆದಿಪು,** ೨. ೧೪೫ ವ)

ಉತ್ತರಗುಣಂಗಳು – [ನಾ] ಮುನಿಗಳ ಆಚರಣೆ: ಇಪ್ಪತ್ತೆರಡು ಪರೀಷಹಗಳೂ ಹನ್ನೆರಡು ತಪಸ್ಸುಗಳೂ ಸೇರಿ ಮೂವತ್ತನಾಲ್ಕು ಉತ್ತರಗುಣಗಳು; ದ್ವಾದಶ ತಪಸ್ಸುಗಳೂ ಷಡಾವಶ್ಯಕಗಳೂ ಸೇರಿ ಮೂವತ್ತಾರು ಉತ್ತರಗುಣಗಳು (ಮತ್ತಮಿವು ಮೊದಲಾಗಿ ಇರ್ಪತ್ತೆಂಟು ಮೂಲಗುಣಂಗಳೊಳಂ ಉತ್ತರಗುಣಂಗಳೊಳಂ ಉತ್ತರೋತ್ತರಂ ನೆಗಟ್ದು: **ಆದಿಪು,** ೬. ೨೮ ವ)

ಉತ್ತರಗುಹಾದ್ವಾರ – [ನಾ] ಗುಹೆಯ ಹಿಂಬಾಗಿಲು (ಕೆಲವು ಪಯಣಂಗಳಿಂದೆ ಉತ್ತರಗುಹಾದ್ವಾರಮಂ ಅನಾಯಾಸದೊಳ್ ತೆಱೆದು ಪೊಱಮಟ್ಟಾಗಳ್: **ಆದಿಪು,** **ಆದಿಪು,** ೧೩. ೫೩ ವ)

ಉತ್ತರಣ – [ನಾ] ದಾಟುವಿಕೆ (ದ್ರೋಣಿಪಾತ್ರಾದಿಗಳೊಳ್ ಜಲದುರ್ಗ ಉತ್ತರಣಮುಮಂ ಉಪದೇಶಂಗೆಯ್ದು: **ಆದಿಪು,** ೬. ೬೨ ವ)

ಉತ್ತರಮಾಗು – [ಕ್ರಿ] [ಉತ್ತರಂ+ಆಗು] ಅತಿಶಯವಾಗು (ಪೆತ್ತಳ್ ಕೊಂತಿಯೆ ಮಕ್ಕಳ್ವೆತ್ತರೊಳ್ ಎಂಬವರೆ ಕೊಂತಿಮಾದೇವಿಗಂ ಒಂದು ಉತ್ತರಮಾದಳ್ ಕರ್ಣಂಬೆತ್ತಕ್ಕಳೆ ಎಂದು ಪೊಗಟ್ದರ್ ಎರಡುಂ ಪಡೆಯೊಳ್: **ಪಂಪಭಾ,** ೧೨. ೧೨೫)

ಉತ್ತರಳ – [ಗು] ಬಹುವಾಗಿ ಕಂಪಿಸುವ (ಕರಿಸೇನಾಸಾರಿನದ್ಧೋತ್ತರಳ ಕದಳಿಕಾಕಾನನ ಉಚ್ಚುಂಬ್ಯಮಾನ ಅಂಬರಚಕ್ರಂ: **ಆದಿಪು,** ೪. ೨೪)

ಉತ್ತರಾಪಥ – [ನಾ] ವಿಂಧ್ಯಪರ್ವತದಿಂದ ಉತ್ತರಕ್ಕಿರುವ ದೇಶ (ವೃದ್ಧಪರಾಶರಮುನೀಂದ್ರನುತ್ತರಾಪಥಕ್ಕೆ ಪೋಗುತ್ತುಂ ತೊಱೆಯಂ ಪಾಯಿಸೆಂಬುದುಂ: **ಪಂಪಭಾ,** ೧. ೬೮ ವ); [ನಾ] ಉತ್ತರಮಾರ್ಗ (ಉತ್ತರಾಪಥದ ಹಸ್ತಿನಪುರದಿಂ ಬಂದೆಂ ಎಂದೊಡೆ ಅಲ್ಲಿ ಪಾಂಡವರ ಪಡೆಮಾತಾವುದು ಧೃತರಾಷ್ಟ್ರ ಸುಯೋಧನರ್ ಇರ್ಪಂದಮಾವುದು ಎಂದು ಬೆಸಗೊಳ್: **ಪಂಪಭಾ,** ೩. ೩೧ ವ)

ಉತ್ತರಾಭಿಮುಖ – [ಗು] ಉತ್ತರಕ್ಕೆ ಮುಖಮಾಡಿಕೊಂಡಿರುವ (ಉತ್ತರಾಭಿಮುಖನಾಗಿ ಸಿದ್ಧಭಕ್ತಿಪೂರ್ವಕಂ ತ್ರಿಜಗದ್ಗುರುವೇ ಗುರುವೆಂದು ತತ್ಪದಸರಸಿಜಧ್ಯಾನಪರಾಯಣನಾಗಿ: **ಆದಿಪು,** ೧೬. ೭೨ ವ)

ಉತ್ತರಾಭಿವೃದ್ಧಿ – [ನಾ] ನಿರಂತರ ಅಭಿವೃದ್ಧಿ (ಅಯ್ವರ್ ಕೂಸುಗಳುಂ ಏಟಿಗ್ಗವಾಡಿವದ ಚಂದ್ರನಂತೆ ಉತ್ತರಾಭಿವೃದ್ಧಿಯೊಳ್ ಸೊಗಯಿಸಿ ಬಳೆಯೆ: **ಪಂಪಭಾ,** ೨. ೩)

ಉತ್ತರಾಯಣ – [ನಾ] ಸೂರ್ಯ ಉತ್ತರದ ಕಡೆಗೆ ಓಲಿ ಸಾಗುವ ಕಾಲ (ಅಂತು ಶರಪಂಜರದೊಳ್ ಒಱಗಿಯುಂ ಒಡಲಿಂ ಪತ್ತುವಿಟ್ಟು ಪೋಪ ಜೀವಮಂ ಪೋಗಲೀಯದೆ ಸ್ವಚ್ಛಂದಮಿಟ್ಟು ಅಪ್ಪುದಱಿಂ ಉತ್ತರಾಯಣಂ ಬರ್ಪನ್ನಂ ಇರಿಸಿದಂ: **ಪಂಪಭಾ,** ೧೧. ೪೭ ವ)

ಉತ್ತರಾರ್ಧ – [ನಾ] [ಜೈನ] ಒಂದು ಪರ್ವತದ ಹೆಸರು (ವಿಜಯಾರ್ಧಜಯವಿದೆನಗಾವ ಜಯಂ ನೆಗಟ್ದಿ ಉತ್ತರಾರ್ಧಜಯಮೆ ಜಯಂ: **ಆದಿಪು,** ೧೩. ೧೯)

ಉತ್ತರಿಸು – [ಕ್ರಿ] ಚಿಮುಕಿಸು (ಲವಂಗಪಲ್ಲವರಸದೊಳ್ ವಿಳಾಸಾವಾಸಭವನಮಂ ಉತ್ತರಿಸಲುಂ: **ಆದಿಪು,** ೭. ೨೧ ವ); [ಕ್ರಿ] ಉತ್ತರ ನೀಡು ಮತ್ತು ನೆರವೇರು (ಮರುಳಾಗದೆನ್ನ ನುಡಿಗೆ ಉತ್ತರಮಂ ಮುನ್ನಿತ್ತು ಕುಡಿಯೆ ಕಜ್ಜಂ ನಿನಗೆ ಉತ್ತರಿಸುಗುಂ ಅಂತಲ್ಲದೆ ಇವಂದಿರೋರಂತೆ ನೀನುಂತೆ ಮೂರ್ಖನಾಗದಿರರಸಾ: **ಪಂಪಭಾ,** ೮. ೪೭); [ಕ್ರಿ] ದಾಟು (ಕೌರವಜಳನಿಧಿಯ ನಡುವಂ ಉತ್ತರಿಸಿ ಬರ್ಪ ಸಾತ್ಯಕಿಯಂ ಭೂರಿಶ್ರವನೆಡೆಗೊಂಡು: **ಪಂಪಭಾ,** ೧೧. ೧೩೯ ವ)

ಉತ್ತರೀಯ – [ನಾ] ಉತ್ತರಿಗೆ, ಹೊದೆದುಕೊಳ್ಳುವ ಬಟ್ಟೆ (ಉತ್ತರೀಯಾಂತರೀಯಂ ತೊನೆಯೆ ತೊಲಗಿ ನಿಂದಿರ್ದಲ್ಲಿ ತಂದಿತ್ತುವುಚ್ಚ ಸ್ತನದೊಳಮರ್ದ ಹಸ್ತಸ್ವಸ್ತಿಕಂಗಳ್ ಬೆಡಂಗಂ: **ಆದಿಪು,** ೧೧. ೧೫೨)

ಉತ್ತರೀಯಾಂಶುಕ – [ನಾ] ಉತ್ತರೀಯದ ಬಟ್ಟೆ (ನಿಜೋತ್ತರೀಯಾಂಸುಕಮನೆ ಮಹೋತ್ಸವಧ್ವಜಮಂ ಮಾಡಿ: **ಆದಿಪು,** ೪. ೩೦ ವ)

ಉತ್ತರೋತ್ತರ – [ನಾ] ಹೆಚ್ಚು ಹೆಚ್ಚು ಅಭಿವೃದ್ಧಿ (ವರಂಬಡೆದ ಸಂತಸಂ ಮನದೊಳಾಗಲ್ ಒಂದು ಉತ್ತರೋತ್ತರಂ ಬಳೆವ ಮಾಟಕ್ಕಿಯಿಂ ಬಳೆದ ಗರ್ಭಮಂ ತಾಳ್ದಿ: **ಪಂಪಭಾ,** ೧. ೮೬)

ಉತ್ತಾನಶಯಿತ – [ನಾ] ಅಂಗತ್ತಲಾಗಿ ಮಲಗುವುದು (ಲಲಿತ ಉತ್ತಾನಶಯಿತ ದರಹಸಿತತರಂಗಿತ ಗತಿಸ್ಖಲಿತ

ಮುಗ್ಧಜಲ್ಪಿತಾದಿ ಬಾಲ್ಯವಿಳಾಸಂಗಳಿಂದಂ: **ಆದಿಪು,** ೮. ೫೦ ವ)

ಉತ್ತಾನಶಯ್ಯೆ – [ನಾ] ಉತ್ತಾನಶಯಿತ (ನಿಜಾಂಗುಳಿಜನಿತ ರಸಾಯನಾಸ್ವಾದದೊಳಂ ಉತ್ತಾನಶಯ್ಯೆಯೊಳಂ ಕಟಿಪಿ: **ಆದಿಪು,** ೫. ೪೧ ವ)

ಉತ್ತಾಯಕ – [ನಾ] ಪ್ರತಾಪವನ್ನು ಮೆರೆದವನು, ಪ್ರತಿಭಟಿಸಿದವನು (ಯುಧಿಷ್ಠಿರನಟೆಯೆ ನೊಂದ ನೋವಂ ಕಂಡು ಪಾಂಡವಬಲದ ನಾಯಕರ್ ಉತ್ತಾಯಕರಾಗಿ ತಂತಮ್ಮ ಚತುರ್ವಲಂಗಳಂ ಒಂದು ಮಾಡಿಕೊಂಡು: **ಪಂಪಭಾ,** ೧೨. ೧೧೮ ವ)

ಉತ್ತಾರಿತ – [ಗು] ಅರಳಿದ (ವಿಚಿತ್ರಚಿತ್ರವಿದ್ಯಾಕೌಶಲಮಂ ಅತಿ ಕುತೂಹಲದೊಳ್ ಉತ್ತಾರಿತಲೋಚನನಾಗಿ ನೀಡುಂ ಭಾವಿಸಿ ನೋಡಿ: **ಆದಿಪು,** ೪. ೪ ವ)

ಉತ್ತಾಳ – [ಗು] ಎತ್ತರವಾದ (ದವದಹನಧೂಮಾದಧಿಕಶ್ಯಾಮಳಿತ ಉತ್ತಾಳ ತಾಳಕಾಯಂ: **ಆದಿಪು,** ೧೩. ೪೫ ವ)

ಉತ್ತೀರ್ಣ – [ಗು] ತೀರದಲ್ಲಿರುವ (ಸಮುದ್ರೋತ್ತೀರ್ಣನಿವಾಸಂಗಳಪ್ಪ ಪಟ್ಟಣಂಗಳುಮಂ: **ಆದಿಪು,** ೮. ೬೩ ವ)

ಉತ್ತು – [ಕ್ರಿ] [√ಉಱು=ಹೊಂದು] ಹೊಂದಿ, ಪಡೆದು (ವೃತ್ತೋತ್ತುಂಗಸ್ತನೆಯರ್ ಶ್ರಮಮುತ್ತುಂ ಅದೇಂ ಸುರಭಿಗಂಧಮಂ ಬೀಜಿದರೋ: **ಆದಿಪು,** ೧೧. ೭೩)

ಉತ್ತುಂಗ – [ನಾ] ಎತ್ತರವಾದ ಶಿಖರ (ಮಣಿಮೌಕ್ತಿಕ ನೀಳಸ್ಥೂಳಶಿಲಾಪ್ರವಿಭಾಸಿತ ಉತ್ತುಂಗಮಂ .. .. ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ,** ೧. ೧೧೫); **[ನಾ]** ಎತ್ತರವಾದ (ಪರ್ವತದ ಮೇಲೆ ಕಱಂಗಿ ಕಟ್ಟಿಲಿಸಿದ ಮರದುಱುಗಲ ನಡುವೆ ಸುಧಾಧವಳಿತ ಉತ್ತುಂಗ ರಮ್ಯಹರ್ಮ್ಯಂಗಳಂ ಕಾಣ್ಬಿರಪ್ಪೊಡೆ ಅದು ಹಿಡಿಂಬಪುರಂ: **ಪಂಪಭಾ,** ೩. ೧೮ ವ)

ಉತ್ತುಂಗಸ್ತನಿ – [ನಾ] ತೋರ ಮೊಲೆಯುಳ್ಳವಳು (ಗಂಗೆಗೆ ಕೆಯ್ಯೆಡೆಯೆಂದು ಉತ್ತುಂಗಸ್ತನಿ ಕೊಟ್ಟು ಪೋಗೆ ಸೂತಂ ಕಂಡು ಆತ್ಮಾಂಗನೆಗೆ ರಾಧೆಗಿತ್ತು ಮನಂಗೊಳೆ ರಾಧೇಯನೆನಿಸಿ ಸೂತಜನಾದ್ಯೆ: **ಪಂಪಭಾ,** ೯. ೬೫)

ಉತ್ಥಾಪಿತ – [ಗು] ಹಾಕಿದ್ದ, ಸ್ಥಾಪಿಸಿದ್ದ (ಪ್ರತಿನಿಕೇತನೋತ್ಥಾಪಿತ ವಿಚಿತ್ರಕೇತನಮುಂ ಮೃಗಮದಜಳಚ್ಛಟಾಸಿಕ್ತಪ್ರಾಂಗಣಮುಂ: **ಆದಿಪು,** ೮. ೩೫ ವ)

ಉತ್ಥಿತ – [ಗು] ಉಂಟಾದ (ಅಂತು ಕಾಳಿಂದೀಜಲಶಿಶಿರಶೀಕರ ವಾರಿಚಾರಿಯುಂ ಮೃಗಯಾಪರಿಭ್ರಮಶ್ರಮ ಉತ್ಥಿತ ಸ್ವೇದಜಲಲವಹಾರಿಯುಂ ಆಗಿ ಬಂದ ಮಂದಾನಿಲಕ್ಕೆ: **ಪಂಪಭಾ,** ೫. ೫೩ ವ)

ಉತ್ಥಿತಂ – [ನಾ] ಮೇಲಕ್ಕೆದ್ದುದು (ಮನಃಕ್ಷತದೊಡನೆ ಎಟ್ಟರಿಸಿದುದು ಉತ್ಥಿತಮಾ ವಂದಸ್ರಮಿಶ್ರಗಂಧಂ ಮುನಿಯಂ: **ಪಂಪಭಾ,** ೧. ೧೦೫)

ಉತ್ಪತ್ತಿ – [ನಾ] ಅವಕಾಶ (ಶ್ರೀಜೈನಧರ್ಮಂ ಪೊದಲ್ದೊದವುತ್ತಿರ್ಪುದು ಮತ್ತಿನ ಅನ್ಯಸಮಯಕ್ಕೆ ಉತ್ಪತ್ತಿಯಿಲ್ಲ: **ಆದಿಪು,** ೧. ೫೧); **[ನಾ]** ಮೂಡುವಿಕೆ (ವನತರುಪತ್ರಂಗಳಂ ಒಯ್ಯನೆ ನೆಲೆಯಿಂ ಪತ್ತುವಿಡಿಸಿ ಕಳಿಕೆಗಮುತ್ಪತ್ತಿನಿಮಿತ್ತಮಾಗಿ ಶಿಶಿರಂ: **ಆದಿಪು,** ೧೧. ೯೧); **[ನಾ]** ಜನ್ಮ, ಹುಟ್ಟು (ನಿನ್ನ ಉತ್ಪತ್ತಿಯಂ ಇಂತೆಂದು ಎನ್ನರುಂ ಅಣಂ ಅಜಿಯರ್ ಅಜಿವೆನಾಂ ಸಹದೇವಂ ಪನ್ನಗಕೇತು ದಿನೇಶಂ ನಿನ್ನಂಬಿಕೆ ಕೊಂತಿ ಇಂತಿವರ್ ನೆಱೆ ಬಲ್ಲರ್: **ಪಂಪಭಾ,** ೯. ೬೭)

ಉತ್ಪತ್ತಿಸ್ಥಾನ – [ನಾ] [ನರಕಗಳಲ್ಲಿ] ಹುಟ್ಟುವ ಸ್ಥಳ (ಅವಱ ಮೇಗಣ ಅಟ್ಟುಗಳೊಳ್ ಇಟ್ಟ ಜೇನಪುಟ್ಟಿಗಳನನುಕರಿಸುವ ಅತಿರೌದ್ರ ಬೀಭತ್ಸ ಕುತ್ಸಿತ ಉತ್ಪತ್ತಿಸ್ಥಾನಂಗಳೊಳ್: **ಆದಿಪು,** ೫. ೮೩ ವ)

ಉತ್ಪತ್ಸ್ಯಮಾನ – ಜನಿಸಲಿರುವ (ಭೂತಳೋದ್ದೇಶದೊಳ್ ಉತ್ಪತ್ಸ್ಯಮಾನ ಭಾವಿತೀರ್ಥಕರಪುಣ್ಯದೂತಾಹೂತಂ ಪುರುಹೂತಂ ಬಂದು: **ಆದಿಪು,** ೬. ೮೮ ವ)

ಉತ್ಪನ್ನ – [ಗು] ಹುಟ್ಟಿದ (ಜಿನಪದಾಂಭೋಜ ವರಪ್ರಸಾದೋತ್ಪನ್ನ .. .. ಕವಿತಾಗುಣಾರ್ಣವ ವಿರಚಿತಮಪ್ಪ ವಿಕ್ರಮಾರ್ಜುನವಿಜಯ: **ಪಂಪಭಾ,** ೧. ಆಶ್ವಾಸಾಂತ ಗದ್ಯ)

ಉತ್ಪಾಟಿತ – [ಗು] ಕಿತ್ತುಹಾಕಿದ (ಆಗಳ್ ತತ್ ಉತ್ಪಾಟಿತ ವಿನೀಳಕುಟಿಲಕುಂತಳಂಗಳಂ ಅಮರತರು ಕುಸುಮದಾಮೋದ್ದಾಮ ರಜೋರಂಜಿತಂಗಳಂ .. .. ಆಂತುಕೊಂಡು ಪೋಗಿ: **ಆದಿಪು,** ೯. ೭೯ ವ)

ಉತ್ಪಾತ – [ನಾ] ಅಪಶಕುನ, ದುರ್ನಿಮಿತ್ತ (ಅಂತೊಗೆದ ಅನೇಕ ಉತ್ಪಾತಂಗಳಂ ಕಂಡು ಚದುರವಿದುರಂ ಇಂತೆಂದಂ: **ಪಂಪಭಾ,** ೧. ೧೩೨ ವ); **[ಗು]** ಮೇಲೆದ್ದ, ಮೇಲಕ್ಕೆ ನೆಗೆದ (ಪ್ರಳಯಕಾಲಜಾತ ಉತ್ಪಾತವಾತನಿರ್ಘಾತದಿಂದಂ ಅಳ್ಕಾಡಿ ತಳ್ಳಂಕಗುಟ್ಟುವ ಜಳನಿಧಿಗಳಂತೆ; **ಪಂಪಭಾ,** ೧೦. ೬೫ ವ); **[ಗು]** ದುರಂತಕಾರಕ ಪ್ರಾಕೃತಿಕ ಘಟನೆ (ಕಲ್ಪಾಂತ ದಿನಕರ ದುರ್ನಿರೀಕ್ಷ್ಯಂ ಉತ್ಪಾತ ಮಾರುತನಂತೆ ಸಕಲ ಭೂಭೃತ್ಕಪಂಕಾರಿಯುಂ .. .. ಭೈರವಾಕಾರನುಂ ಆಗಿ: **ಪಂಪಭಾ,** ೧೧. ೧೧೭ ವ)

ಉತ್ಪಾತಕೇತು – [ನಾ] ಕೇಡುಂಟುಮಾಡುವ ಗ್ರಹ (ವಿಜಯಂಗೆ ವಿಜಯಮಾಗಿರೆ ನೀಮಾತನ ಕೇತನದೊಳ್ ಫಣಿಕೇತನಬಲಕೆ ಉತ್ಪಾತಕೇತುವಪ್ಪುದೆ ಸಾಲ್ದುಂ: **ಪಂಪಭಾ,** ೮. ೩೬)

ಉತ್ಪಾತಮರುತ್ – [ನಾ] ಚಂಡಮಾರುತ (ಅನಿಬರುಂ ಉತ್ಪಾತಮರುತ್ ಅಭಿಘಾತೋದ್ಧೂತಪಯೋನಿಧಿಗಳಂತೆ ಮಸಗಿದರಾಗಳ್: **ಆದಿಪು.** ೧೪. ೬)

ಉತ್ಪಾತಮಾರುತ – [ನಾ] ಪ್ರಳಯಮಾರುತ (ಕಲ್ಪಾಂತ ದಿನಕರ ದುರ್ನಿರೀಕ್ಷ್ಯಂ ಉತ್ಪಾತಮಾರುತನಂತೆ ಸಕಲ ಭೂಭೃತ್ಕಪಂಕಾರಿಯುಂ .. .. ಭೈರವಾಕಾರನುಂ ಆಗಿ: **ಪಂಪಭಾ,** ೧೧. ೧೧೭ ವ)

ಉತ್ಪಾತಶಾಂತಿ – [ನಾ] ಅಪಶಕುನ ನಿವಾರಣೆ (ಉತ್ಪಾತಶಾಂತಿ ಪೌಷ್ಟಿಕಕ್ರಿಯೆಗಳಂ ಮಹಾಬ್ರಾಹ್ಮಣರಿಂದಂ ಬಳೆಯಿಸಿ ಬದ್ದವಣಮಂ ಬಾಜಿಸಿ ಮಂಗಳಮಂ ಪಾಡಿಸಿ ಕೂಸಿಂಗೆ ದುರ್ಯೋಧನನೆಂದು ಪೆಸರನಿಟ್ಟು: **ಪಂಪಭಾ,** ೧. ೧೩೩ ವ)

ಉತ್ಪಾದ – [ನಾ] ಉತ್ಪತ್ತಿ (ಉತ್ಪಾದ ವ್ಯಯ ದ್ರವ್ಯಾತ್ಮಕನುಂ ಸಕಲಕರ್ಮನಿರ್ಮೂಲನಕರನುಂ: **ಆದಿಪು,** ೨. ೧೦ ವ)

ಉತ್ಪಾದಿಸು – [ಕ್ರಿ] ಹುಟ್ಟಿಸು (ಸೋದರರೊಳ್ ಸೋದರರಂ ಕಾದಿಸುವುದು ಸುತನ ತಂದೆಯೆಡೆಯೊಳ್ ಉತ್ಪಾದಿಸುವುದು ಕೋಪಮಂ: **ಆದಿಪು,** ೧೪. ೧೨೨); **[ಕ್ರಿ]** ಹುಟ್ಟು ಹಾಕು, ಆರಂಭಿಸು (ನೀನಿರ್ದಂತೆ ಆನಾದ ಮರುಳ್ತನದಿಂದುತ್ಪಾದಿಸಿದೆಂ ಬ್ರತಸಮೇತವಿಪ್ರಾನ್ವಯಮಂ: **ಆದಿಪು**, ೧೫. ೨೩)

ಉತ್ಪುಷ್ಪ – [ಗು] ಉದುರುತ್ತಿರುವ ಹೂ (ತತ್ಕುಂಜಸಂಜಾತಭೂಜಗಳ ಉತ್ಪುಷ್ಪ ರಾಗಸೌರಭಹೃನ್ಮಂದಾನಿಲಂ; **ಆದಿಪು,** ೧೩. ೧೧)

ಉತ್ಪ್ರೇಂಖತ್ – [ಗು] ಮೇಲೆ ತೇಲಾಡುವ (ಕಣ್ಗೊಪ್ಪಿ ತೋರ್ಪುದಿದು ಉತ್ಪ್ರೇಂಖತ್ ಅಸಂಖ್ಯ ಶಂಖಧವಳಂ ಗಂಭೀರನೀರಾಕರಂ: **ಪಂಪಭಾ**, ೪. ೨೪)

ಉತ್ಫುಲ್ಲ – [ಗು] ಅರಳಿದ (ಆಂ ನಿನ್ನಿನಿಯನಂ ಅಱಸಲ್ ಸಾರ್ವೆಂ ಎಲ್ಲಂದದಿಂ ಚಿಂತಿಸದಿರ್ ತಾ ತೋಱು ನಿನ್ನೀ ಬರೆದ ಪಟಮಂ ಉತ್ಫುಲ್ಲಪಂಕೇಜವಕ್ತ್ರೇ: **ಆದಿಪು**, ೩. ೪೪)

ಉತ್ಥಿತ – [ಗು] ಮೇಲೆದ್ದ (ಪಾದಾಭಿಘಾತವಿಚಳತ್ ಮೇದಿನಿ ಉತ್ಥಿತವಿಶಾಲಧೂಳೀಪಟಲಾಚ್ಛಾದಿತಗಗನಂ ನಡೆದುದು ಪಾದಾತಂ: **ಆದಿಪು**, ೧. ೩೩)

ಉತ್ಸಂಗ – [ನಾ] ತೊಡೆ (ದಂತ ಉತ್ಸಂಗಸ್ಥಿತಜಯಕಾಂತೆಗೆ ಚೆಲ್ವಾಗೆ ಪಿಡಿದ ಸೀಗುರಿದಟಿಯೆಂಬಂತೆವೋಲ್: **ಆದಿಪು,** ೧೨. ೬೦); **[ನಾ]** ಸಮೀಪ (ಗುಹೋತ್ಸಂಗಮಂ ತಾನೊರ್ಬನೆಯ್ದೆವಂದು ತುರಗರತ್ನಮನೇಱಿ ಪಶ್ಚಿಮಾಭಿಮುಖನಾಗಿ ನಿಂದು: **ಆದಿಪು**, ೧೩. ೩೫ ವ)

ಉತ್ಸಂಚ – [ಗು] ಜೋರಾಗಿ, ಗಟ್ಟಿಯಾಗಿ (ಎಡೆಗೊಂಡಿರಿಂ ಉತ್ಸಂಚಂ ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಪಿರ್ಮಡೆಯೊಳಿರಿಂ: **ಪಂಪಭಾ**, ೧೪. ೨೨)

ಉತ್ಸನ್ನಶರೀರೆ – [ನಾ] ತೊರೆದ ದೇಹದವಳು (ಗುರುಪಂಚಕಮಂ ನೆನೆಯುತ್ತೆ ಭೋಂಕನೆ ಉತ್ಸನ್ನಶರೀರೆಯಾಗಿ ದಿವದಿಂದಿಟಿದಳ್: **ಆದಿಪು,** ೩. ೧೭)

ಉತ್ಸರ್ಪಿಣಿ – [ನಾ] [ಜೈನ] ಮನುಷ್ಯರ ಭೋಗ ಆಯುಸ್ಸು ಮುಂತಾದವು ಹೆಚ್ಚುವ ಕಾಲ (ಶರೀರ ಬಳ ಆಯುಃ ದೇಹಪ್ರಮಾಣೋಪಚಯ ಅಪಚಯಹೇತುತ್ವದಿಂದಂ ಉತ್ಸರ್ಪಿಣಿ ಅವಸರ್ಪಿಣಿ ನಾಮಮಂ ಪಡೆದುದು: **ಆದಿಪು**, ೬. ೪೮ ವ)

ಉತ್ಸವ – [ನಾ] ಸಂಭ್ರಮ (ತಮ್ಮ ಮಗಂಗಾದ ಮಹಿಮೆಗೆ ಮನಂಗೊಳಲಾದ ಉತ್ಸವಮರಿದು ಪೊಗಟಲಾ ದಂಪತಿಯಾ: **ಆದಿಪು**. ೭. ೧೧೧); **[ನಾ]** ವೈಭವ (ತ್ರಿವಳಿಗಳುಂ ವಿರೋಧಿನೃಪರುತ್ಸವಮುಂ ಕಿಡೆವಂದುವು ಆನನೇಂದುವ ಕಡುವೆಳ್ಪು ಕೂಸಿನ ನೆಗಟ್ತೆಯ ಬೆಳ್ಪುವೊಲಾಯ್ತು: **ಪಂಪಭಾ,** ೧. ೧೨೫)

ಉತ್ಸವಾನಕ – [ಗು] ಸಡಗರಸೂಚಕ ವಾದ್ಯಗಳಿಂದ ಕೂಡಿದ (ಅದೇಂ ಸೊಗಯಿಸಿರ್ದುದೊ ತತ್ಪುರಮಂ ಉತ್ಸವಾನಕಂ ಉತ್ತರೋತ್ತರಣಂ: **ಆದಿಪು,** ೮. ೫೦)

ಉತ್ಸಾರಿತ – [ಗು] ಹಾರಾಡುವ, ಕೆದರಿದ (ಅಳಕ ಉತ್ಸಾರಿತ ಕೇಶಸಂಯಮನ ನೀವೀಬಂಧನಾವಿಷ್ಕೃತಸ್ಖಳಿತಂ: **ಆದಿಪು,** ೪. ೬೦) [**'ಕೇಶಸಂಚಯಮ'** ಎಂಬ ಭಾಗಕ್ಕೆ ಬದಲಾಗಿ ಎಲ್. ಬಸವರಾಜು **'ಕೇಶಸಂಯಮನ'** ಎಂಬ ಪಾಠ ಬಳಸುತ್ತಾರೆ]; **[ಗು]** ಸಿದ, ಸೋಲಿಸಿದ (ಲೀಲೋತ್ಸಾರಿತ ರಿಪುನೃಪಾಲ ಸಾಮಂತಸೀಮಂತಿನೀಸೀಮಂತರಪ್ಪ ಮಹಾಸಾಮಂತರಿಂದಂ: **ಆದಿಪು**, ೧೪. ೪೩ ವ)

ಉತ್ಸಾಹಂ ಪಡೆ – [ಕ್ರಿ] ವೇಗವನ್ನು ಹೆಚ್ಚಿಸು (ಅಂತು ಶೂರಸಾರಥಿ ಚೋದಿತಮಪ್ಪ ರಥಮುಂ ಪುಣ್ಯಸಾರಥಿಚೋದಿತಮಪ್ಪ ಮನೋರಥಮುಂ ಉತ್ಸಾಹಮಂ ಪಡೆಯೆ: **ಆದಿಪು**, ೧೨. ೮೪ ವ)

ಉತ್ಸೃಷ್ಟ – [ಗು] ಬಿಡಲ್ಪಟ್ಟ (ಆಕರ್ಣಾಕೃಷ್ಟ ಉತ್ಸೃಷ್ಟ ನಿಜ ವಿಕೀರ್ಣಟಂಕಂಗಳಿಂದಂ ತತ್ಪತಾಕಿನೀಕುಂಜರ ಶಿರಶ್ಶಿಳಾ ಪಟ್ಟಕಂಗಳಂ ಇರ್ಬಗಿಮಾಡಲ್ಪಡದೆಯುಂ: **ಆದಿಪು**, ೧೪. ೧೦೩ ವ)

ಉತ್ಸೇಧ – [ನಾ] [ಜೈನ] ಎತ್ತರ (ಅದು ಮರುತ್ತಿಕಾವೇಷ್ಟಿತಂ ಅಂತದು ಸುಪ್ರತಿಷ್ಠಕೋಪಮಂ ಅದು ಜಿನಮತದೊಳ್ ದ್ವಿಸಪ್ತರಜ್ಜೂತ್ಸೇಧಂ: **ಆದಿಪು**, ೧. ೪೪); **[ನಾ]** ಔನ್ನತ್ಯ (ಎನಗುಳ್ಳಾಯತಿ ಮೇರುಗುಂಟೆ ಪೆಱತೇಂ ಉತ್ಸೇಧಮೊಂದುಂಟೆ: **ಆದಿಪು,** ೯. ೧೧೪)

ಉತ್ಸೇಧನ್ – [ನಾ] ಎತ್ತರವಾಗಿರುವವನು (ಅನೇಕಸಂವತ್ಸರಸಹಸ್ರ ಅತಿಕ್ರಮದೊಳ್ ಪಂಚವಿಂಶತ್ಯಧಿಕಧನುರುತ್ಸೇಧನುಂ ಕುಮುದಾಂಗಸಂಖ್ಯಾತವರ್ಷಾಯುಷ್ಯನುಮಾಗಿ: **ಆದಿಪು**, ೬. ೬೦ ವ)

ಉದಂಚತ್ – [ಗು] ಮೇಲೆದ್ದ (ಮುಹುರ್ಮುರುಹಾಂದೋಳಿತ ಮಸ್ತಕನುಂ ಉದಂಚದ್ರೋಮಾಂಚಕಂಚುಕಿತನುಂ ಆಗಿ: **ಆದಿಪು**, ೧೦. ೫೨ ವ)

ಉದಂತ – [ನಾ] ಮಾತು, ಬಾಯುಪಚಾರ (ಆಗಳ್ ಪರಿಪೀತಾಸವನಂತಿರ್ದ ವಾಸವನಂ ದುರ್ದಂತಂ ಅಳೀಕ ಉದಂತಂಗಳಿಂ ಆಟಿಸುತ್ತಿರ್ಪುದುಂ: **ಆದಿಪು,** ೩. ೮೮ ವ)

ಉದಕಮಂತ್ರ – [ನಾ] ಜಲಸ್ತಂಭನ ವಿದ್ಯೆ (ಬಿರ್ದಿರ್ದು ಸಮುದ್ರದ ತಡಿಯೊಳ್ ಉದಕಮಂತ್ರದ ಬಲದಿಂ ನುಸುಳ್ದೊಡೆ ಜಳನಿಧಿಯಂ: **ಆದಿಪು**, ೧೪. ೬೮)

ಉದಗ್ರ – [ಗು] ಎತ್ತರವಾದ (ಲವಣಜಳಧಿ ಬಳಸಿದಂತೆ ಬಳಸಿದ ಅಗಟ ನೀಳದಿಂ ಉದಗ್ರ ಕನಕಶಾಳದಿಂ: **ಪಂಪಭಾ**, ೧. ೫೮); **[ಗು]** ಶ್ರೇಷ್ಠ (ಒದವುಗೆ ನಿನ್ನ ಸಂತತಿಗೆ ನೂರ್ವರ್ ಉದಗ್ರ ಸುತರ್ಕಳ್ ಒಂದೆ ಗರ್ಭದೊಳ್ ಎನೆ ಕೆಮ್ಮನಿಂತು ಪೊಸೆದಿಕ್ಕಿದೆ ಪೊಲ್ಲದುಗೆಯ್ದೆ: **ಪಂಪಭಾ**, ೧, ೧೩೧); **[ಗು]** ದೊಡ್ಡ (ಮಾರುತಘಾತ ಸಂಚಳಿತ ಕೇತುಸಮೂಹಂ ಉದಗ್ರ ಚಕ್ರಚೀತ್ಕಾರಂ ಉದಾರ ವೀರಭಟಸಿಂಹನಾದವಿಮಿಶ್ರಿತ ಉತ್ಕಟಜ್ಯಾರವಂ: **ಪಂಪಭಾ**, ೧೦. ೮೫)

ಉದನ್ವತ್ – [ನಾ] ಸಮುದ್ರ (ಪದವಿನ್ಯಾಸದ ತುಱುಗಲ್ ಪೊದಳೆ ಲಯಂಬೆರಸು ರಂಗಮಂ ಬಳಸಿದನಾ ತ್ರಿದಶನಾಥಂ ಅಳೆವವೊಲ್ ಉದನ್ವದಾವೇಷ್ಟಿತಾಖಿಳಾವನಿತಳಮಂ: **ಆದಿಪು,** ೭. ೧೧೯)

ಉದಬಿಂದು – [ನಾ] ನೀರ ಹನಿ (ಚಾದಗೆ ನವ ಉದಬಿಂದುವನಾದರಿಪವೊಲ್ ಉಟಿದ ಕೆಱೆಯ ತೊಱೆಯುದಕಮನೇನಾದರಿಕುಮೆ: **ಆದಿಪು,** ೯. ೧೦೯)

ಉದಯ – [ನಾ] ಪ್ರಾದುರ್ಭಾವ, ಜನನ (ದೇವೋತ್ತಮಾಂಗಂಗಳುಂ ಬಾಗಿದುವು ತ್ರೈಲೋಕ್ಯ ನಾಥೋದಯಮನಱಿಪುವಂತಾ ತ್ರಿಳೋಕಕ್ಕಮಾಗಳ್: **ಆದಿಪು,** ೭. ೩೯); **[ನಾ]** ಅಭಿವೃದ್ಧಿ (ಉದಿತೋದಿತನೈ ನೀಂ ನಿನಗೆ ಉದಯದ ಮೇಲುದಯಂ ಎಂದು ನೆಗೞ್ದ ಅರಿಗಂಗೆ ಅಭ್ಯುದಯಮನಱಿಪುವ ತೆಱದಿಂದ: **ಪಂಪಭಾ,** ೨. ೯೩)

ಉದಯಗಿರಿ – [ನಾ] ಸೂರ್ಯ ಹುಟ್ಟುವ ಮೂಡಣ ಬೆಟ್ಟ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ)

ಉದಯಾಚಳ – [ನಾ] ಉದಯಗಿರಿ (ವನನಿಧಿಯಿಂದಂ ಚಂದ್ರಂ ವಿನತೋದರದಿಂ ಗರುತ್ಮನುದಯಾಚಳದಿಂ ದಿನಪನೊಗೆವಂತೆ ಪುಟ್ಟಿದಂ ಅನಿವಾರ್ಯಸುತೇಜನೆನಿಪನಿನಜನ ತನಯಂ: **ಪಂಪಭಾ,** ೧. ೧೨೧)

ಉದಯಾದ್ರೀಂದ್ರ – [ನಾ] ಸೂರ್ಯ ಹುಟ್ಟುವ [ಪೂರ್ವದ] ಬೆಟ್ಟ (ಪೂಣ್ದಂ ಗಡಂ ದ್ರೋಣಂ ಅಂತದುವಂ ನೋಡುವೆನೆಂದು ಕಣ್ ತಣಿವಿನಂ ನೋಡಲ್ಕೆ ಬರ್ಪಂತೆ ಬಂದು ಉದಯಾದ್ರೀಂದ್ರಮನೇಱೆ ಭಾನು ಪೊಱಮಟ್ಟೊಡೆ: **ಪಂಪಭಾ,** ೧೧. ೫೫)

ಉದರ – [ನಾ] ಒಳಗು (ಮಣಿಮೌಕ್ತಿಕ ನೀಳಸ್ಥೂಳಶಿಲಾಪ್ರವಿಭಾಸಿತ ಉತ್ತುಂಗಮಂ ಮುನಿಮುಖ್ಯಮುಖಾಂಭೋಜೋದರ ನಿರ್ಗತ ಮಂತ್ರಪೂತಾಂಗಮಮಂ: **ಪಂಪಭಾ,** ೧. ೧೧೫); **[ನಾ]** ಗರ್ಭ (ವನನಿಧಿಯಿಂದಂ ಚಂದ್ರಂ ವಿನತಾ ಉದರದಿಂ ಗರುತ್ಮಂ ಉದಯಾಚಳದಿಂ ದಿನಪಂ ಒಗೆವಂತೆ ಪುಟ್ಟಿದಂ: **ಪಂಪಭಾ,** ೧. ೧೨೧)

ಉದರದೊಳಿಟ್ಟುಕೊಳ್ವನಿತಕ್ಕಱ್ – [ನಾ] ಹೊಟ್ಟೆಯಲ್ಲಿಟ್ಟುಕೊಳ್ಳುವಷ್ಟು ಪ್ರೀತಿ, ಅತಿಶಯವಾದ ಪ್ರೀತಿ (ದಾಮೋದರಂ ಉದರದೊಳಿಟ್ಟುಕೊಳ್ವನಿತಕ್ಕಱೊಳ್ ಅಪಗತಪರಿಶ್ರಮನಂ ಮಾಡಿ: **ಪಂಪಭಾ,** ೪. ೪೩ ವ)

ಉದರವಹ್ನಿ – [ನಾ] ಹೊಟ್ಟೆಯೊಳಗಿನ ಬೆಂಕಿ, ಜಠರಾಗ್ನಿ (ವಾತಾಪಿ ಪೊಕ್ಕು ಅಳುರ್ವ ಆತ್ಮೋದರವಹ್ನಿಯಿಂ ಪೊಱಮಡಲ್ ತಾನಾರ್ತನಿಲ್ಲ: **ಪಂಪಭಾ,** ೪. ೨೦)

ಉದರಾಂತರ – [ನಾ] ಬಸಿರೊಳಗು (ಜಲಶಯನೋದರಾಂತರದಿನೀ ತ್ರಿಜಗಂ ಪೊಱಮಟ್ಟುದೀಗಳೆಂಬುಲಿ ಸಲೆ: **ಪಂಪಭಾ,** ೧೦. ೫೨)

ಉದರಾಗ್ನಿ – [ನಾ] ಹೊಟ್ಟೆಯ ಬೆಂಕಿ, ಹಸಿವು (ಸುಡುವ ಉದರಾಗ್ನಿಯುಂ ಒಡಲಂ ಮಿಡುಕುವಿನಂ ಕಡಿವ ಕಟ್ಟಿಱುಂಪೆಗಳುಂ ಅದಾವೆಡೆಯನುಟಿಸುವುದೊ: **ಆದಿಪು,** ೫. ೧೩)

ಉದಶ್ರು – [ನಾ] ಉಕ್ಕಿಬರುವ ಕಣ್ಣೀರು (ನೇಸಱೆಂದೊಳಗೆ ಆಂ ದಿನಕರಸುತನಂ ಇಕ್ಕಿ ಬಂದಲ್ಲದೆ ಕಾಣೆಂ ದಲ್ ಭವತ್ ಪದಾಬ್ಜಮಂ ಎಂದು ಎಟ್ದಿಂ ಉದಶ್ರುಜಳಲವಾರ್ದ್ರ ಕಪೋಳಂ: **ಪಂಪಭಾ,** ೧೨. ೧೩೪)

ಉದಶ್ರುಲೋಚನ – [ನಾ] ಕಣ್ಣಲ್ಲಿ ನೀರು ತುಂಬಿಕೊಂಡವನು (ಬಳಗಂ ಬೆರಸರೆಬರ್ ಕಾಲ್ಗಳ ಮೊದಲೊಳ್ ಉದಶ್ರುಲೋಚನರ್: **ಆದಿಪು,** ೯. ೧೨೯)

ಉದಾತ್ತ – [ಗು] ಉದಾರನಾದ (ಉದಾತ್ತನಾರಾಯಣನಾದ ದೇವಂ ಎಮಗೀಗೆ ಅರಿಕೇಸರಿ ಸೌಖ್ಯಕೋಟಿಯಂ: **ಪಂಪಭಾ,** ೧. ೧) ['ಉದಾತ್ತ ನಾರಾಯಣ' ಎಂಬುದು ಅರಿಕೇಸರಿಯ ಒಂದು ಬಿರುದು]; **[ಗು]** ಶ್ರೇಷ್ಠವಾದ (ಮಹೀತಳಂ ಮನಂಗೊಳೆ ನೆಱೆದತ್ತು ಉದಾತ್ತ ನವಯೌವನಂ ಒರ್ಮೆಯೆ ಧರ್ಮಪುತ್ರನಾ: **ಪಂಪಭಾ,** ೨. ೩೭)

ಉದಾತ್ತಪುಣ್ಯ – [ನಾ] ಅತಿಶಯ ಪುಣ್ಯವುಳ್ಳವನು (ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷದ್ಬಲಮಂ ಸುಟ್ಟಂ ಉದಾತ್ತಪುಣ್ಯನವಂ ಚೈತಾಗ್ನಿಯಿಂ ಸುಟ್ಟೆನಿಲ್ಲ ಒಲವಿಂದ ಇಂದಿಂತು ಎರ್ದೆಮುಟ್ಟೆ ಕೂರ್ತನೊಳನೇ ಕರ್ಣಂಗೆ ದುರ್ಯೋಧನಂ: **ಪಂಪಭಾ,** ೧೩. ೬೦)

ಉದಾತ್ತಭಕ್ತಿ – [ನಾ] ಅತಿಶಯವಾದ ಭಕ್ತಿ (ಶ್ವೇತನ ಬಿಲ್ಲೊಳಿರ್ದ ಮದನಾರಿಯ ರೂಪು ಎರ್ದೆಗೊಳ್ವುದುಂ ನದೀಜಾತಂ ಉದಾತ್ತಭಕ್ತಿಯೊಳೆ: **ಪಂಪಭಾ,** ೧೦. ೧೧೮)

ಉದಾತ್ತಯೋಗ – [ನಾ] ಶ್ರೇಷ್ಠವಾದ ಯೋಗ (ಪಿಡಿವೆಂ ಇನ್ನಿದಂ ಎಂದು ಇರದೆ ಆತ್ಮಯೋಗಿ ತನ್ನಸುವಂ ಉದಾತ್ತಯೋಗದೊಳೆ ಬಿಲ್ಲೊವಜಂ ಕಳೆದಂ ರಣಾಗ್ರದೊಳ್: **ಪಂಪಭಾ,** ೧೨. ೨೯)

ಉದಾರ – [ಗು] ಅತಿಶಯವಾದ (ಆ ಪ್ರಸ್ತಾವದೊಳ್ ಆತನ ಪರಿವಾರಾಮರರ್ ನಾನಾವಿಧಾಯುಧವ್ಯಗ್ರಪಾಣಿಗಳುಂ ಉದಾರವೀರರಸರಭಸೋಗ್ರವಾಣಿಗಳುಂ ಆಗಿ: **ಆದಿಪು,** ೧೨. ೯೨ ವ); **[ಗು]** ವಿಶಾಲವಾದ (ಉಜ್ಜ್ವಲಮುಕ್ತಾಭರಣಂ ತರತ್ತರಳ ತಾರ ಉದಾರ ಭಾ ಭಾರಂ ಅಂಗಲತಾಲಾಲಿತ ಸಾಂದ್ರಚಂದನರಸಂ ಬೆಳ್ದಿಂಗಳ್: **ಪಂಪಭಾ,** ೧. ೧೩೭); **[ನಾ]** ಶ್ರೇಷ್ಠ (ಮಾರುತಘಾತ ಸಂಚಳಿತ ಕೇತುಸಮೂಹಂ ಉದಗ್ರ ಚಕ್ರಚೀತ್ಕಾರಂ ಉದಾರ ವೀರಭಟಸಿಂಹನಾದವಿಮಿಶ್ರಿತ ಉತ್ಕಟಜ್ಯಾರವಂ: **ಪಂಪಭಾ,** ೧೦. ೮೫); **[ನಾ]** ತ್ಯಾಗ (ಅನುಪಮವಿಕ್ರಮಕ್ರಮಂ ಉದಾರಗುಣಂ ಋತವಾಕ್ಯಂ ಎಂಬ ಪೆಂಪೆನಲಿವು ಮೂಱೆ ನಾಲ್ಕೆ ಗುಣಂ: **ಪಂಪಭಾ,** ೧೨. ೯೩)

ಉದಾರಶಕ್ತಿ – [ನಾ] ಔದಾರ್ಯ (ಚಂದ್ರನ ಕಾಂತಿಯುಮಂ ಮದನನ ಸೌಭಾಗ್ಯಮುಮಂ ಕಲ್ಪತರುವಿನ ಉದಾರಶಕ್ತಿಯುಮಂ ಈಶ್ವರನ ಪ್ರಭುಶಕ್ತಿಯುಮಂ ಜವನ ಬಲ್ಲಾಳ್ತನಮುಮಂ .. .. ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ,** ೧. ೧೩೯ ವ)

ಉದಾರ ಮಹೇಶ್ವರ – [ನಾ] ಔದಾರ್ಯದಲ್ಲಿ ಶಿವ (ಲಸತ್ ಭಸಿತಂ ಪ್ರಭುಶಕ್ತಿ ಶಕ್ತಿ ನಿರ್ಮಳಮಣಿಭೂಷಣಂ ಫಣಿಭೂಷಣಂ ಆಗೆ ನೆಗಱ್ತೆಯಂ ಪುದುಂಗೊಳಿಸಿದಂ ಈಶ್ವರಂ ನೆಗೞ್ದ ಉದಾರಮಹೇಶ್ವರಂ ಈಗೆ ಭೋಗಮಂ: **ಪಂಪಭಾ,** ೧. ೨); ['ಉದಾರ ಮಹೇಶ್ವರ' ಎಂಬುದು ಅರಿಕೇಸರಿಯ ಬಿರುದು]

ಉದಾಹರಣ – [ನಾ] ನಿದರ್ಶನ (ಒಳ್ಪಿನ ಉದಾಹರಣಮುಂ ಆಗೆ ಗುಣಾರ್ಣವನ ಶರಪರಿಣತಿಯಿಂದೆ ಕುಲಶೈಲಂ

ಬೀೞ್ವಂತೆ ನೆಲನದಿರೆ ಬಿರ್ಬಿದಾಗಳ್: **ಪಂಪಭಾ,** ೧೨. ೨೧೬)

ಉದಾಹರಿಸು – **[ಕ್ರಿ]** ದೃಷ್ಟಾಂತವಾಗಿ ತೋರಿಸು (ಘನಾಘನನಿನಾದದಿಂ ಬೃಂಹಿತಂಗೆಯ್ವ ವಿಜಯಗಜಮಂ ನೆಲನಂ ಪೊಕ್ಕಡಂಗಿದ ಪಗೆವರಂ ಅಗುೞ್ದು ಕೊಲ್ವುದಂ ಉದಾಹರಿಸುವಂತೆ: **ಪಂಪಭಾ,** ೯. ೯೫ ವ)

ಉದಿತ – **[ಗು]** ಉಂಟಾದ (ಬುಧಸಮೂಹಮಿದಂ ಪೇೞ್ಕಿಂದೊಡೆ ಪೇೞಲ್ಕಾಂ ಬಗೆದಂದೆಂ ಎನ್ನಳವೆ ಗಣಧರೋದಿತ ಚರಿತಂ: **ಆದಿಪು,** ೧. ೩೪)

ಉದಿತಕಾಯಪ್ರಭೆ – **[ನಾ]** ಹುಟ್ಟಿದ ದೇಹಕಾಂತಿ (ಶುಭತಿಥಿ ಶುಭನಕ್ಷತ್ರಂ ಶುಭವಾರಂ ಶುಭಮುಹೂರ್ತಮೆನೆ ಗಣಕಂ ಇಳಾಪ್ರಭುವೊಗೆದಂ ಉದಿತಕಾಯಪ್ರಭೆಯೊಗೆದಿರೆ ದಳಿತಶತ್ರುಗೋತ್ರಂ ಪುತ್ರಂ: **ಪಂಪಭಾ,** ೧. ೧೨೭)

ಉದಿತೋದಿತ – **[ನಾ]** ನಿರಂತರ ಏಳಿಗೆಯುಳ್ಳವನು (ಉದಿತೋದಿತನೈ ನೀಂ ನಿನಗೆ ಉದಯದ ಮೇಲುದಯಂ ಎಂದು ನೆಗೞ್ದ ಅರಿಗಂಗೆ ಅಭ್ಯುದಯಮನಱಿಪುವ ತೆಱದಿಂದ ಉದಯಾಚಳಚುಂಬಿಬಿಂಬಂ ಇನಂ ಉದಯಿಸಿದಂ: **ಪಂಪಭಾ,** ೨. ೯೩)

ಉದಿರ್ಪು – **[ಕ್ರಿ]** ಉದುರಿಸು, ಬೀಳಿಸು (ಕಾಯಕ್ಲೇಶದಿಂ ಅಡವಿಯ ಕಾಯಂ ಪಣ್ಣುಮಂ ಉದಿರ್ಪಿ ತಿಂದು ಅಗಲದೆ ನಿಂದೀ ಯಮಳರ್ ಆವತೆಱದಿಂ ನೋಯಿಸರಯ್ ನಿನ್ನ ನನ್ನಿಕಾಱನ ಮನಮಂ: **ಪಂಪಭಾ,** ೭. ೪೮)

ಉದೀರಿತ – **[ಗು]** ನುಡಿದ, ಉಂಟಾದ (ಅಂತು ಶಾರೀರ ಮಾನಸ ಕ್ಷೇತ್ರಜ ಪರಸ್ಪರೋದೀರಿತ ದನುಜೋದೀರೀತಂಗಳೆಂಬ ಅಯ್ದುಂ ತೆಱದ ದುಃಖಂಗಳೊಳ್ ಒಳರ್ದು: **ಆದಿಪು,** ೫. ೮೮ ವ)

ಉದೀರ್ಣ – **[ಗು]** ಅಧಿಕವಾದ, ಹೆಚ್ಚಾದ (ತದ್ವಾರ್ತಾಕರ್ಣನ ಉದೀರ್ಣಶೋಕವ್ಯಾಕುಳೆಯಾಗಿರ್ದ ನಿಜವಲ್ಲಭೆಯಲ್ಲಿಗೆ ಬಂದು: **ಆದಿಪು,** ೪. ೪೪ ವ)

ಉದ್ಗಂಧಿ – **[ಗು]** ಉದ್ಗಂಧವನ್ನು ಹೊಂದಿದ (ಕರಿಕರ್ಣತಾಳಾನಿಳನೆ ಮಳಯರುಹನಂದನಾಂದೋಳನ ಉದ್ಗಂಧಿಯಂ: **ಆದಿಪು,** ೧೩. ೬ ವ)

ಉದ್ಗಚ್ಛತ್ – **[ಗು]** ಹೊಮ್ಮುವ (ಕ್ರೋಧೋದ್ಗಚ್ಛತ್ ಅಚ್ಛೇದ ಸ್ವೇದಜಳ ಧಾರಾಸಾರ ಭೀಕರಲೋಹಿತಕಪೋಳತಳಮುಂ: **ಆದಿಪು,** ೧೪. ೬೩ ವ)

ಉದ್ಗತ – **[ಗು]** ಮೇಲಕ್ಕೆ ಬಂದ (ಬೆಡಂಗಿನೊಳ್ ಪುದಿದೆೞ್ದಿರ್ದ ಉದಿತ ಚಂದ್ರಸಿಂಹದಾ: **ಆದಿಪು,** ೧೨. ೫)

ಉದ್ಗಮ – **[ನಾ]** ಉಂಟಾಗುವಿಕೆ (ತಣಿಯೆಯೊ ದೇವಲೋಕ ಸುಖಸಾಗರಮಂ ತವೆ ಪೀರ್ದುಮೀಗಳೇಂ ತಣಿವೊ ಮನುಷ್ಯಕೀಟಸುಖಾಂಬುಲವೋದ್ಗಮದೊಳ್: **ಆದಿಪು,** ೩. ೭೧); **[ನಾ]** ಹೊಮ್ಮುವಿಕೆ, ಉದಯ (ಜ್ವಲಜ್ವಲನ ಜ್ವಾಳಾಕಳಾಪ ಉದ್ಗಮಮನನುಗುಣಂ ಮಾಡುತುಂ: **ಆದಿಪು,** ೧೧. ೨)

ಉದ್ಗಾತೃ – **[ನಾ]** ಯಜ್ಞಯಾಗಗಳಲ್ಲಿ ಸಾಮವೇದ ಹೇಳುವ ಋತ್ವಿಕ್ಕು (ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ ಉದ್ಗಾತೃ ನೇತೃ ಹೋತೃ ಜಮದಗ್ನಿ ಆದಿಗಳಪ್ಪ ಷೋಡಶರ್ ಋತ್ವಿಜರ್ಕಳಿಂ: **ಪಂಪಭಾ,** ೬. ೩೩ ವ)

ಉದ್ಘ – **[ಗು]** ಉನ್ನತವಾದ, ತೋರವಾದ (ಈ ಧರೆಯ ಪೆಂಡಿರ್ ಉದ್ಘಪಯೋಧರೆಯ ಮನೋಜರಾಗರಸಪೂರಿತ ಬಿಂಬಾಧರೆಯ ಕಂಬುಕಮ್ರಶಿರೋಧರೆಯ: **ಆದಿಪು,** ೪. ೪೬); **[ಗು]** ಪ್ರಶಸ್ತವಾದ (ನಭದೊಳಿರ್ದ ಅಮೃತಾಂಶುವಿಂ ಉದ್ಘಕಾಂತಿಸಂತಾನಮಂ ಆವಗಂ ತನಗೆ ಮಾಡಿದಳ್: **ಪಂಪಭಾ,** ೪. ೭೧)

ಉದ್ಘಾಟಿಸು – **[ಕ್ರಿ]** ಆಕ್ಷೇಪಿಸು (ತನ್ನನುದ್ಘಾಟಿಸಿ ನುಡಿದೊಡೆ ಉಮ್ಮಚ್ಚರದೊಳ್ ಮೆಚ್ಚದೆ: **ಪಂಪಭಾ,** ೧೨. ೧೭೬)

ಉದ್ಘಾಸಿ – **[ನಾ]** (ಉದ್ಘ+ಅಸಿ) ಶ್ರೇಷ್ಠವಾದ ಕತ್ತಿ (ವೀರವೈರಿಕ್ಷಿಪ ಗಜಘಟಾಟೋಪ ಕುಂಭಸ್ಥಳೀಭೇದನಂ ಉದಗ್ರ ಉದ್ಘ ಅಸಿ ಭಾಸ್ವತ್ ಭುಜಪರಿಘನಂ ಆರೂಢಸರ್ವಜ್ಞನಂ: **ಪಂಪಭಾ,** ೧. ೫೧)

ಉದ್ಘೃಷ್ಟ – **[ಗು]** ತಿಕ್ಕಿದ, ಉಜ್ಜಿದ (ಮದಪಯಃ ಕಂಡೂಳ ಗಂಡಸ್ಥಳದ್ವಿರದ ಉದ್ಘೃಷ್ಟಘನಸ್ರವತ್ಸರಳಸಾರಾಮೋದಂ ಉದ್ದಾಮಭೃಂಗರವಂ: **ಆದಿಪು,** ೧೩. ೯)

ಉದ್ದಂಡ – **[ನಾ]** ಉದ್ದವಾದ ದಂಟು (ಸಾರ್ದತ್ತು ಜಕ್ಕವಕ್ಕಿಯ ಪೊಣರುಂ ಗ್ಲಪಿತಮನಮಾಗಳ್ ಉದ್ದಂಡ ಪುಂಡರೀಕೋಜ್ಜ್ವಳಾತಪತ್ರದ ನೆೞಲಂ: **ಆದಿಪು,** ೧೧. ೫೦)

ಉದ್ದಂ ನುಡಿ – **[ಕ್ರಿ]** ಹೆಚ್ಚು ಮಾತಾಡು (ಎಡೆಗೋದಿರದಿರಿಂ ಉದ್ದಂ ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ: **ಆದಿಪು,** ೯. ೬)

ಉದ್ದಂ ಬರ್ – **[ಕ್ರಿ]** ಸಾಲಾಗಿ ಬಾ (ಚಿತ್ರಿತಚ್ಛತ್ರಿಕಾಲೀಲೆಯಿಂ ಉದ್ದಂ ಬರ್ಪ ಚೇಟೀನಿವಹದ ಬರವಿಂ: **ಆದಿಪು,** ೧೧. ೪೫)

ಉದ್ದಬಿದ್ದಮಾಗು – **[ಕ್ರಿ]** ನೀರಿನಿಂದ ತುಂಬು (ಉಪಜಲಧಿಗಳೆನೆ ಜನಮುಱಿಯಱಿಯೆ ದಲ್ ಉದ್ದಬಿದ್ದಮಾಯ್ತುವನಿತಳಂ: **ಆದಿಪು,** ೬. ೬೨)

ಉದ್ದರ್ಪ – **[ನಾ]** ಹೆಚ್ಚಿನ ಸೊಕ್ಕು (ಪುಷ್ಪೋತ್ಕರಬಳವಿಜಯ ಉದ್ದರ್ಪ ಕಂದರ್ಪಲೀಲಾಕರನಾದಂ ತಾನಾಗೆ: **ಆದಿಪು,** ೧೩. ೭)

ಉದ್ದಳನ – **[ನಾ]** ಸೀಳುವುದು (ವೈರಿನರೇಂದ್ರ ಉದ್ದಾಮದರ್ಪ ಉದ್ದಳನನೆ ಕಥಾನಾಯಕಂ ಮಾಡಿ ಸಂದರ್ಜುನನೊಳ್ ಪೋಲ್ವೀ ಕಥಾಭಿತ್ತಿಯಂ ಅನುನಯದಿಂ ಪೇೞಲೆಂದೆತ್ತಿಕೊಂಡೆಂ: **ಪಂಪಭಾ,** ೧. ೫೧)

ಉದ್ದಾನಿ – **[ನಾ]** ಹೋಲಿಕೆ (ವಾನರ ವಾರಣ ಉಷ್ಟ್ರ ಖರ ಮತ್ಸ್ಯ ಕಳೇವರ ಪೂತಿಗಂಧಮೇನೇನೊಳವುಳ್ಳುವೊಂದೆಡೆಗೆ ಬಂದುಂ ಅವಂದಿರ ಮೆಯ್ಯ ಗಂಧದುದ್ದಾನಿಗೆ ವಾರದು: **ಆದಿಪು,** ೫. ೯೦); **[ನಾ]** ಅತಿಶಯ (ಆನೆಯನೇಱಿ ಸೌಷ್ಠವದೆ ಬರ್ಪ ಅರಿಕೇಸರಿಯ ಒಂದು ಗಾಡಿಯ ಉದ್ದಾನಿ ತಗುಳ್ದು: **ಪಂಪಭಾ,** ೪. ೫೮)

ಉದ್ದಾಮ – **[ಗು]** ದೊಡ್ಡ (ಅದಱೊಳ್ ಪೂರ್ವಾನುಯೋಗಾಬ್ಧಿಯಿಂ ಪೊಱಪೊಣ್ಮಿತ್ತದು ವೇಳೆಯಂತೆ ಕಥೆ ಲಂಬ ಉದ್ದಾಮವೀಚೀಚಯಂ: **ಆದಿಪು,** ೧. ೩೯)

ಉದ್ದಾಮಭೀಮ – **[ನಾ]** ಅತಿಶಯ ಭಯಂಕರ (ಗಂಧೇಭ ಚರ್ಮಂಗಳಂ ಪಸರಂಗೆಯ್ದನೊ ಶಂಭುವೆಂಬ ಬಗೆಯಿಂದ

ತಳ್ವೊಯ್ದು ಕಟಿಸ್ಥೇಜೆ ಸೂಚಿಸಲಾರ್ಗಂ ವಶಮಾಗದಂತು ಕವಿದತ್ತು ಉದ್ದಾಮಭೀಮಂ ತಮಂ: **ಪಂಪಭಾ,** ೪. ೪೯)

ಉದ್ದಿಷ್ಟ – [ಗು] ಹೇಳಿದ (ಸೇನಾನಾಯಕನ ಮೊಗಮಂ ನೋಡಿ ಕೃತಮಾಳಾಮರೋದ್ದಿಷ್ಟ ಉಪಾಯಮನೆಲ್ಲಮಂ ಪೇೞ್ದು: **ಆದಿಪು,** ೧೩. ೩೨ ವ)

ಉದ್ದೀಧಿತಿ – [ಗು] ಕಾಂತಿಯನ್ನು ಮೇಲೆರಚುವ (ಉನ್ಮೀಲಿತನವಕುಸುಮೋಪಹಾರಂ ಉದ್ದೀಧಿತಿ ತಾರಾನಿಕರತಾರಂ: **ಆದಿಪು,** ೪. ೩೦ ರಗಳೆ)

ಉದ್ದೀಪನಪಿಂಡ – [ನಾ] ಆನೆಗೆ ಕೋಪ ಬರಿಸಲು ತಿನ್ನಿಸುವ ಮದ್ದಿನ ಉಂಡೆ (ಉದ್ದೀಪನಪಿಂಡಪ್ರದೀಪ್ತ ಕಪಾಲೋಚ್ಚಳತ್ ಅತುಚ್ಛ ಮದಜಳಚ್ಛಟಾಟೋಪಭೀಷಣಾರುಣ ಗಂಡಸ್ಥಲಮುಂ: **ಆದಿಪು,** ೧೪. ೬೩ ವ)

ಉದ್ದೀಪಿತ – [ಗು] ಉರಿಯುವ (ಸುಯೋಧನಂ ಕ್ರೋಧಾನಲ ಉದ್ದೀಪಿತಹೃದಯನಾಗಿ ಶೌರ್ಯ ಮದಾಡಂಬರದೊಳ್ ಅಂಬರಂಬರಂ ಸಿಡಿಲ್ದು: **ಪಂಪಭಾ,** ೯. ೪೩)

ಉದ್ದೆಸ – [ನಾ] ಉದ್ದೇಶ (ಅಸದಳಮೆಸೆದುದು ಮೊಗೆವುದ್ದೆಸದೊಳೆ ತಳಳತಳಿಸಿ ಪೊನ್ನ ಕಳಸಂಗಳ್: **ಆದಿಪು,** ೭. ೮೫)

ಉದ್ದೃಪ್ತ – [ಗು] ಗರ್ವದಿಂದ ಕೂಡಿದ (ಸಪ್ತಸಮುದ್ರಮುದ್ರಿತ ಧರಾತಳಮಂ ಬೆಸಕಯ್ಸು ಮೀಱಿದ ಉದ್ದೃಪ್ತ ವಿರೋಧಿ ಸಾಧನಮಂ ಆಹವದೊಳ್ ತಱಿದೊಟ್ಟು: **ಪಂಪಭಾ,** ೧. ೧೪೯)

ಉದ್ಧತ – [ಗು] ಪ್ರೌಢ (ಮಘವಂ ಅಘವಿಘಾತಾರ್ಥಂ ಉದ್ಧತಾಭಿನಯಪ್ರಾಯಮುಂ ಆರಭಟೀವೃತ್ತಿಯುಕ್ತಮುಂ ಅಪ್ಪ ತಾಂಡವಮನಾಡಲ್ ಉದ್ಯೋಗಂಗೆಯ್ದು: **ಆದಿಪು,** ೭. ೧೧೫ ವ); **[ನಾ]** ಗರ್ವಿಷ್ಠ (ಸೂರ್ಯಕಿರಣಾನೀಕಕ್ಕಂ ಎಂದಪ್ಪೊಡಂ ಸಲವು ಇಲ್ಲ ಉದ್ಧತಸಿದ್ಧಖೇಚರರೆ ತಾಂ ಆಳ್ವೇಲಿಯಾಗಿಂತು ನಿಚ್ಚಲುಂ ಓರಂತಿರೆ ಕಾವರ್: **ಪಂಪಭಾ,** ೫. ೮೧); **[ನಾ]** ಶ್ರೇಷ್ಠ (ಕುಲಜರಂ ಉದ್ಧತರಂ ಭುಜಬಲಯುತರಂ ಹಿತರಂ ಈ ಸಭಾಮಧ್ಯದೊಳ್ ಅಗ್ಗಲಿಸಿದ ಮದದಿಂ ನಾಲಗೆ ಕುಲಮಂ ತುಬ್ಬುವವೊಲ್ ಉಱದೆ ನೀಂ ಕೆಡೆನುಡಿವೈ: **ಪಂಪಭಾ,** ೧೦. ೨೦); **[ಗು]** ಬಲಿಷ್ಠವಾದ (ಪ್ರಚಂಡ ಮಾರ್ತಂಡಮರೀಚಿ ತೀವ್ರಜ್ವಳನಾಸ್ಫಾರ ಕರಾಳ ಕರವಾಳ ಭಾಮಂಡಲಪರೀತ ಉದ್ಧೃತ ದೋರ್ದಂಡ ಚಂಡಪ್ರಚಂಡ ಸುಭಟ: ಪಂಪಭಾ, ೧೩. ೫೧ ವ)

ಉದ್ಧರಣ – [ನಾ] ಉದ್ಧಾರ ಮಾಡುವಂಥದು (ದುರಿತಘನತಿಮಿರ ದಶಶತಕಿರಣಂ ಅತಿಪ್ರೀತಿಕರಣಂ ಅಖಿಳವಿನೇಯೋದ್ಧರಣಂ ಎಮಗಭವ ಭವಭಯಹರಣಂ ಭವದೀಯ ಸಮವಸರಣಂ ಶರಣಂ: **ಆದಿಪು,** ೧೪. ೩೮)

ಉದ್ಧುರ – [ಗು] [ರಥದಿಂದ] ಕಳಚಿದ (ಕರಮೆರಡುಂ ಪಱಿವುದುಂ ಆತುರದಿಂದಂ ತನ್ನ ಕುನ್ನಗೆಯ್ಯೊಳೆ ಕೊಂಡು ಉದ್ಧುರಚಕ್ರದಿಂ ಇಟ್ಟಂ ತಿರಿಪಿ ನರಪ್ರಿಯತನೂಜನ ಅಕ್ಷೋಹಿಣಿಯಂ: **ಪಂಪಭಾ,** ೧೧. ೧೦೩)

ಉದ್ಧೂತರವ – [ನಾ] ಜೋರಾದ ದನಿ (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರ ಉದ್ಧೂತರವಂ ಎಸೆಯೆ: **ಪಂಪಭಾ,** ೧೨. ೧೦೬)

ಉದ್ಧೂತಲೇಪರ್ – [ನಾ] [ಐಹಿಕತೆಯ] ಲೇಪವನ್ನು ದೂರ ಎಸೆದವರು (ಚರಮತನುಸಮಾಕಾರರ್ ಉದ್ಧೂತಲೇಪರ್ ಪ್ರಣುತರ್ ನಿತ್ಯರ್ ಜಗನ್ಮಂಗಳನಿಳಯರ್: **ಆದಿಪು,** ೧. ೨)

ಉದ್ಧೂಯಮಾನ – [ಗು] ಮೇಲೆತ್ತಿದ, ಹೆದೆಯೇರಿಸಿದ (ಉದ್ಧೂಯಮಾನಪ್ರಕೀರ್ಣ ಚಾಪಲಕ್ಷಿತ ಕ್ಷತ್ರಪುತ್ರ ನಿರಂತರಮುಮಪ್ಪ ನಿಜಬಲಂಬೆರಸು: **ಆದಿಪು,** ೧೪. ೯೩ ವ)

ಉದ್ಧೃತ – [ಗು] ಎತ್ತಲ್ಪಟ್ಟ, ಎತ್ತಿ ಹಿಡಿದ (ಅಮರೇಂದ್ರ ಕರತಳೋದ್ಧೃತ ಕಾರ್ತಸ್ವರವಿಳಾಸ ಕಳಶಮುಖವಿಗಳಿತಸ್ಥೂಲ ದುಗ್ಧವಾರಿ ಧಾರಾಸಹಸ್ರಂಗಳ್: **ಆದಿಪು,** ೭. ೯೭)

ಉದ್ಘೃಷ್ಟ – [ಗು] ತಿವಿಯಲ್ಪಟ್ಟ, ಉಜ್ಜಲ್ಪಟ್ಟ (ಸಕಟೋದ್ಘೃಷ್ಟ ವನೇಭ ತುಂಗ ಜರಠ ಸ್ಥೂಳ ಆರ್ಗಳಾಕಾರ ಮಾರ್ಗಕುಜಂ: **ಆದಿಪು,** ೧೩. ೫೫)

ಉದ್ಬೋಧಕರ –ಅರಳಿಸುವ (ಬುಧಕುಶೇಶಯುದ್ಬೋಧಕರ ಲಸತ್ ತಿಗ್ಮಕರಂ: **ಆದಿಪು,** ೬. ೬೬)

ಉದ್ಬದ್ಧಜೂಟ – [ನಾ] ಎತ್ತಿ ಕಟ್ಟಿದ ಜಡೆಯುಳ್ಳ (ಉತ್ಕಟಹಾಟಕ ಪದಕಮಣಿ ತ್ರಿಖಂಡಕರ್ಣಾಭರಣಂ ಉದ್ಬದ್ಧಜೂಟಂ: **ಆದಿಪು,** ೧೬. ೪೫ ವ)

ಉದ್ಭಟ – [ನಾ] ಶೂರ (ವೀರಭಟರ್ ಉದ್ಭಟ ಆರಭಟೀರಸರಿವರವರೆನ್ನದೆ ಎನ್ನರುಂ ಸೆಣಸುವೊಡೇ ಕಾರಣಮೋ ಚಕ್ರಂ: **ಆದಿಪು,** ೧೪. ೨೬)

ಉದ್ಭಾವಿತ – [ಗು] ಕೂಡಿದ (ಭೂವಲ್ಲಭ ಸೋತ್ಕ್ಷೇಪ ಭ್ರೂವಿಲಸಿತದತ್ತವಾಚನಾದೇಶಂ ಇದಂ ಭಾವಿಸಿಂ ಎಂದು ಅತಿಮಧುರೋದ್ಭಾವಿತ ಗಂಭೀರನಾದದಿಂ ಬಾಜಿಸಿದಂ: **ಆದಿಪು,** ೧೪. ೪೬)

ಉದ್ಭಾಸನ – [ನಾ] [ಉತ್+ಭಾಸನ] ಪ್ರಕಾಶಗೊಳಿಸುವುದು (ವಿಪುಳಗುಣ ವತ್ಸಳತ್ವಮುಂ ಅಪಗತಮಳ ಜೈನಶಾಸನ ಉದ್ಭಾಸನಮುಂ: **ಆದಿಪು,** ೫. ೫೮)

ಉದ್ಭಿದ್ಯಮಾನ – [ಗು] ಚಿಗುರುತ್ತಿರುವ (ಅಭಿನವ ಉದ್ಭಿದ್ಯಮಾನ ಮೃದುಕುಟಿಳಶ್ಮಶ್ರು ಮಧುಕರಪಟಳ ಪರಿವೃತ ಮುಗ್ಧಮುಖಸರಸಿಜನುಂ: **ಆದಿಪು,** ೩. ೯೦ ವ)

ಉದ್ಭೂತ – [ಗು] ಮೇಲೆದ್ದ (ಅನಿಬರುಂ ಉತ್ಪಾತಮರುದಾಭಿಘಾತ ಉದ್ಭೂತಪಯೋನಿಧಿಗಳಂತೆ ಮಸಗಿದರಾಗರ್: **ಆದಿಪು,** ೧೪. ೬); **[ಗು]** ಉತ್ಪನ್ನವಾದ (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರ ಉದ್ಭೂತರವಂ ಎಸೆಯೆ: **ಪಂಪಭಾ,** ೧೨. ೧೦೬)

ಉದ್ಭ್ರಾಂತ – [ನಾ] ಮೇಲೆ ಗಿರ್ರೆಂದು ತಿರುಗುವ, ಒಂದು ರಥಚೋದನಾ ರೀತಿ (ಆಗಳ್ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತಂಗಳೆಂಬ ರಥಕಲ್ಪ ವಿಶೇಷವಿನ್ಯಾಸಂಗಳಂ ಅಱಿದು ಸಾರಥಿಗಳ್ ಚೋದಿಸುವಾಗಳ್: **ಪಂಪಭಾ,** ೧೨. ೭೫ ವ); **[ನಾ]** ಗದೆಯನ್ನು ಮೇಲೆ ತಿರುಗಿಸುವುದು (ಸವ್ಯಾಪಸವ್ಯ ಭ್ರಾಂತೋದ್ಭ್ರಾಂತ ಕರ್ಷಣ ಮಂಡಳ ಆವರ್ತನಾದಿಗಳಪ್ಪ ಮೂವತ್ತೆರಡು ಗದಾವಿಕ್ಷೇಪದೊಳಂ: **ಪಂಪಭಾ,** ೧೩. ೯೨ ವ)

ಉದ್ಭ್ರೂಲತೆ – [ನಾ] [ಉತ್+ಭ್ರೂಲತೆ] ಉನ್ನತವಾದ ಹುಬ್ಬು ಎಂಬ ಬಳ್ಳಿ (ಕೋಮಲತನು ಅಲರ್ಗಣ್ ನೀಳ್ದ ಧಮ್ಮಿಲ್ಲಂ

ಉದ್ಧೂಲತೆ ಸದ್ದಂತಚ್ಛದಂ ದಂತರುಚಿ ರುಚಿರಶೋಭಾಕರಂ: **ಆದಿಪು,** ೪. ೨೦)

ಉದ್ಯಚ್ಛೃಂಗ – **[ನಾ]** ಮೇಲೆ ಚಾಚಿಕೊಂಡಿರುವ ಕೋಡು, ಶಿಖರ (ಮಂತ್ರಪೂತಾಂಗಮಂ ನೃಪನೆಯ್ದಿದಂ ಉದ್ಯಚ್ಛೃಂಗಮಂ ಆ ಶತಶೃಂಗಮಂ: **ಪಂಪಭಾ,** ೧. ೧೧೫)

ಉದ್ಯಜ್ಜ್ಯೋತಿ – **[ನಾ]** [ಉದ್ಯತ್+ಜ್ಯೋತಿ] ಅಪರಿಮಿತ ಬೆಳಕು (ಆಪೊತ್ತುಂ ಮಣಿದೀಪಕಳಾಪೋದ್ಯಜ್ಜ್ಯೋತಿಗಳ್ ದಿಶಾಮಂಡಲಮಂ ವ್ಯಾಪಿಸುತಿರೆ: **ಆದಿಪು,** ೫. ೪೦)

ಉದ್ಯತ್ – **[ಗು]** ಮೇಲೇಳುವ (ಎತ್ತಿದ ಪರಾಗರಾಗ ಮುದಿತ ಆಶಾ ಭಾಸಂ ಉದ್ಯತ್ ಮಧು ಉನ್ಮದಭೃಂಗಧ್ವನಿ ಮಂಗಳಧ್ವನಿಯೆನಲ್: **ಪಂಪಭಾ,** ೫. ೬); **[ಗು]** ಅತಿಶಯ (ಪಾರ್ಥಂಗೊಸೆದು ತುಡಲುಡಲ್ ಪೂಸಲುಂ ಸಾಲ್ದಿನಂ ಸಾಧಿಸಿತು ಉದ್ಯತ್ ಭಕ್ತಿ ಭಾರಾನತವನವನಿತಾವೃಂದಂ ಆನಂದದಿಂದಂ: **ಪಂಪಭಾ,** ೭. ೭೮)

ಉದ್ಯತ – **[ನಾ]** ಪ್ರಯತ್ನವುಳ್ಳವನು (ರಣೋದ್ಯತನಾಗೆಂಬುದಂ ಎಮ್ಮಂ ಅನ್ಯರವೊಲೇಂ ನೀಂ ಪ್ರಾರ್ಥಿಸಲ್ವೇೞ್ಪುದೇ: **ಪಂಪಭಾ,** ೧೦. ೧೦); ಎತ್ತರವಾದ (ಪ್ರಚಂಡ ಮಾರ್ತಂಡಮರೀಚಿ ತೀವ್ರಜ್ವಳಣ ಆಸ್ಫಾರ ಕರಾಳಕರವಾಳಭಾಮಂಡಳಪರೀತ ಉದ್ಯತ ದೋರ್ದಂಡಚಂಡಪ್ರಚಂಡ: **ಪಂಪಭಾ,** ೧೩. ೫೧ ವ)

ಉದ್ಯಮ – **[ನಾ]** ಪ್ರಯತ್ನ (ಆ ಕೌಂತೇಯರಾಯಕ್ಕೆ ಗೆಂಟೆಂತಕ್ಕುಂ ಅದಂ ಮತ್ ಉದ್ಯಮಮೆ ಪೇೞ್ಗೆ: **ಪಂಪಭಾ,** ೧೨. ೪೭)

ಉದ್ಯೋಗ – **[ನಾ]** ಕಾರ್ಯ, ಉದ್ದೇಶ (ಸರ್ವಲಕ್ಷಣಸಂಪೂರ್ಣನಪ್ಪ ಮಗನನಮೋಘಂ ಪಡೆವೆಂ ಎಂಬ ಉದ್ಯೋಗಮನೆತ್ತಿಕೊಂಡು: **ಪಂಪಭಾ,** ೧. ೧೩೪ ವ)

ಉದ್ಯೋಗಂಗೆಯ್ – **[ಕ್ರಿ]** ತೊಡಗು (ಆರಭಟೀವೃತ್ತಿಯುಕ್ತಮಪ್ಪ ತಾಂಡವಮಂ ಆಡಲ್ ಉದ್ಯೋಗಂಗೆಯ್ದು: **ಆದಿಪು,** ೭. ೧೧೪ ವ)

ಉದ್ಯೋತಿ – **[ನಾ]** ಪ್ರಕಾಶವುಳ್ಳದ್ದು (ಭೂಷಣಾಡಂಬರ ಉದ್ಯೋತಿಯಿಂ ಒಪ್ಪಿರ್ದುದ್ವಿಳಾಸಂ ವಿಳಸಿತಕಮಳಾವಾಸಮೀ ಬರ್ಪುದೇಂ ರಾಣಿಯವಾಸಂ: **ಆದಿಪು,** ೧೧. ೪೬)

ಉದ್ವಂಶ – **[ನಾ]** ಎತ್ತರವಾದ ಬಿದಿರುಮೇಳೆ ಮತ್ತು ಉತ್ತಮವಂಶ (ಉದ್ವಂಶ ವಿಂಧ್ಯಾವನಿಭೃನ್ಮೂರ್ಧಾಧಿರೂಢ ದ್ವಿಪಭಯದ ರವಂ ರಾಜಕಂಠೀರವಂ ತಾನೆನೆ: **ಆದಿಪು,** ೧೪. ೯೮)

ಉದ್ವಿಳಾಸ – **[ನಾ]** ಅತಿಶಯ ಬೆಡಗು (ಭೂಷಣಾಡಂಬರ ಉದ್ಯೋತಿಯಿಂ ಒಪ್ಪಿರ್ದ ಉದ್ವಿಳಾಸಂ: **ಆದಿಪು,** ೧೧. ೪೬)

ಉದ್ವೃತ್ತ – **[ನಾ]** ಉದ್ಧಟ (ಉದ್ವೃತ್ತರಿಪುನೃಪತಿಗಳಂ ಏಸಾಡುತ್ತುಂ ಅಲ್ಲಿಂ ತಳರ್ದು: **ಪಂಪಭಾ,** ೪. ೧೮ ವ); ಉಬ್ಬಿ ಬೆಳೆದಿರುವುದು (ಅಲರ್ಗಣ್ಗಳ್ ಚಪಳಂಗಳಾಗಿ ಜಘನಂ ಕಾಂಚೀಕಲಾಪಪ್ರಭೋಜ್ವ್ವಲಂ ಉದ್ವೃತ್ತಮುಂ ಆಗಿ ತಾಂ ಅಲೆಗೆ: **ಪಂಪಭಾ,** ೪. ೭೪); **[ಗು]** ಗಡುಸಾದ (ನೆತ್ತಿಯೊಳ್ ಎೞಿದೆೞಿದು ಇನಿಸು ಅೞಿಯೊತ್ತಿ ಬಟಿಕ್ಕಿಟಿಯೆ ಪೊಸೆದು ಜಡೆಗೊಂಡಿರ್ದ ಉದ್ವೃತ್ತಕುಚಯುಗೆಯ ಕೇಶಮಂ ಎತ್ತಂ ಪಸರಿಸಿದಂ: **ಪಂಪಭಾ,** ೧೨. ೧೫೪)

ಉದ್ವೃತ್ತತೆ – **[ನಾ]** ಉದ್ಧಟತನ (ಆನೆಯ ಕೋಡು ಬಾಗದು ಎಂಬಂತೆ ದುರ್ಯೋಧನನ ಉದ್ವೃತ್ತತೆಯುಮಂ ಭೀಮಸೇನನ ಮಹಾಪ್ರತಿಜ್ಞೆಯುಮಂ ಆರ್ಗಂ ಬಾರಿಸಲ್ಬಾರದು: **ಪಂಪಭಾ,** ೭. ೧೬ ವ)

ಉದ್ವೃತ್ತವೃತ್ತತೆ – **[ನಾ]** ಅತಿಶಯ ವರ್ತುಲತ್ವ (ಒಲ್ದು ನೋಡುವ ಗಾಡಿಕಾರ್ತಿಯರ ಕಣ್ಗೆ ಕಾಮನ ಅಡ್ಡಣದಂತೆ ದೊಡ್ಡಿತ್ತಾಗಿ ಮೀಱುವ ಉದ್ವೃತ್ತವೃತ್ತತೆಯಂ ಈಟ್ಟುಕೊಂಡಂತೆ ಉದ್ವೃತ್ತಂಗಳಾದುವು: **ಪಂಪಭಾ,** ೨ ೩೯ ವ)

ಉನ್ನತ – **[ಗು]** ನಿಡಿದಾದ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ಉನ್ನತಿ – **[ನಾ]** ಉಚ್ಚತೆ (ಉತ್ತಮಕುಲಶೈಲಂ ಉನ್ನತಿಯಂ ಏಳಿದವಾಗೆ ಬಿಸಟಿಸ್ದೊಡಂ ಬಿಸುಟಕ್ಕೆಮ ಬಿಸುಡೆಂ ಮದೀಯ ಪುರುಷವ್ರತಮೊಂದುಮಂ: **ಪಂಪಭಾ,** ೧. ೮೩)

ಉನ್ನತಿಮಾಡು – **[ಕ್ರಿ]** ದೊಡ್ಡದಾಗಿ ಮಾಡು (ಮುಂದಿಟ್ಟು ಚಕ್ರಮಂ ತಿರಿತಂದುದುಮಂ ಪೂಟಿದಿರ್ದು ಬಯ್ತುಂಗೊಳ್ವೊಂದಂದ'ದೆ ಕೊಂಡುದುಮಂ ಅದೇನೆಂದುನ್ನತಿಮಾಡಿ ಪೊಗೞ್ವೆಯೊಳಗಜೆಯದುದೇ: **ಆದಿಪು,** ೧೪. ೬೭) ['ಪೂಟಿದಿರ್ದು ಬಯ್ತುಂಗೊಳ್ವೊಂದಂದದೆ' ಎಂಬುದರ ಬದಲು ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳು 'ಪಾಳಮಿರ್ದು ಬೈಕಂಗೊಳ್ವೊಂದಂದದೆ' ಎಂಬ ಪಾಠವನ್ನು ಸ್ವೀಕರಿಸುತ್ತಾರೆ]

ಉನ್ನಿದ್ರ – **[ಗು]** ಅರಳಿದ (ತೆಗೆದಪ್ಪಿದೊಡೆ ಉನ್ನಿದ್ರಾಂಭೋಜಾಸ್ಯೆಗೆ ಮದನದ್ರವಮುಂ ಕಣ್ಣನೀರುಂ ಉಣ್ಮಿದುವಾಗಳ್: **ಆದಿಪು,** ೧೨. ೪೪)

ಉನ್ನಿದ್ರನಾಗು – **[ಕ್ರಿ]** ನಿದ್ದೆಯಿಂದ ಎಚ್ಚರಗೊಳ್ಳು (ಮಂಗಳಪಾಠಕರವಂಗಳೊಡನೆ ಭರತೇಶ್ವರಂ ಉನ್ನಿದ್ರನಾದಂ: **ಆದಿಪು,** ೧೨. ೫೩ ವ)

ಉನ್ನುನ್ನಂ – **[ಅ]** ವಿಶೇಷವಾಗಿ (ಬಿನ್ನನೆ ಕುರುಳ ನೆಟಿಲ್ಗಳ್ ತನ್ನೊಳೆ ತಳ್ವೊಯ್ದು ನೆಗಟ್ದಿ ಕಱಿಯನೆ ಪೋಲ್ತು ಉನ್ನುನ್ನಂ ಸೊಗಯಿಸುತಿರೆ: **ಆದಿಪು,** ೭. ೧೦)

ಉನ್ಮಗ್ನನಿಮಗ್ನಜಲ – **[ಗು]** ಮೇಲೆ ಚಿಮ್ಮುವ ಕೆಳಗೆ ದುಮುಕುವ ನೀರು (ಗುಹಾಮಧ್ಯದೊಳ್ ಉನ್ಮಗ್ನನಿಮಗ್ನಜಲ ನಿಮ್ನಗಾತಟದೊಳ್ ಬೀಡಂ ಬಿಡಿಸಿ: **ಆದಿಪು,** ೧೩. ೫೦ ವ)

ಉನ್ಮತ್ತವಿಳಾಸನ – **[ನಾ]** ಹುಚ್ಚಾಟ (ನೃತ್ಯಂ ಬಗೆಯಲೆನಗೆ ದಲ್ ಉನ್ಮತ್ತವಿಳಾಸನಂ: **ಆದಿಪು,** ೯. ೫೫)

ಉನ್ಮದ – **[ಗು]** [ಉತ್+ಮದ] ಸೊಕ್ಕಿದ, ಮದಿಸಿದ (ಉರಿಯಿಂ ಕರಿಮುರಿಕನಾದುವು ಉನ್ಮದ ಪರಭೃತ ಷಟ್ಚರಣ ರಾಜಕೀರಕುಲಂಗಳ್: **ಪಂಪಭಾ,** ೫. ೯೦)

ಉನ್ಮದಾಳಿ – [ನಾ] ಸೊಕ್ಕಿದ [ಹೆಣ್ಣು]ದುಂಬಿ (ಆ ಸತಿಯಿಕ್ಕಿದ ಕಣ್ಣ ನೀರ ಧಾರೆಗಳೊಳೆ ನಾಂದು ಎಲರ್ಚಿ ಪೊದಳ್ದು ಒರ್ಮೆಯೆ ಪಾಱಿದುವು ಉನ್ಮದಾಳಿಗಳ್: **ಪಂಪಭಾ,** ೫. ೧೦)

ಉನ್ಮನ – [ನಾ] ಉತ್ಕಂಠಿತ ಮನಸ್ಸು (ಜನ್ಮಾಭಿಷೇಕ ಕಾರ್ಯದೊಳ್ ಉನ್ಮನರಪ್ಪ ಇಂದ್ರರೆರಡುಮಾಸಮಿರ್ಕುಂ: **ಆದಿಪು,** ೭. ೭೬)

ಉನ್ಮಯೂಖ – [ನಾ] [ಉತ್+ಮಯೂಖ] ಮಹಾ ಕಾಂತಿಯುಕ್ತವಾದ (ಬಾಹುಬಲಿಕುಮಾರಂಗೆ ಲೇಖಮಂ ಉನ್ಮಯೂಖ ರತ್ನಾಭರಣಪ್ರಾಭೃತ ಸಮೇತಮನಟ್ಟುವಂತು ಮಹಾಸಂಧಿವಿಗ್ರಹಿಗೆ ಬೆಸಸಿದೊಡೆ: **ಆದಿಪು,** ೧೪. ೪೩ ವ)

ಉನ್ಮಾರ್ಗ – [ನಾ] ತಪ್ಪು ದಾರಿ (ಮಚ್ಚರಿಸಿ ಕಲಿಯಗಾಭ್ಯರ್ಣದೊಳ್ ದ್ರವ್ಯಲೋಭಾತುರರ್ ಉನ್ಮಾರ್ಗೋಪದೇಶೋದ್ಯತಮತಿಗಳ್ ಅತಿಕ್ರೂರರಪ್ಪರ್ ದ್ವಿಜನ್ಮರ್: **ಆದಿಪು,** ೧೫. ೨೬)

ಉನ್ಮೀಲತ್ – [ಗು] ಅರಳಿದ (ಸಾಲಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಸ್ಥಳಂ: **ಪಂಪಭಾ,** ೧. ೬೮)

ಉನ್ಮೀತನಯನ – [ನಾ] ಅರಳಿದ ಕಣ್ಣುಳ್ಳವರಾಗಿ, ಕಣ್ಣು ಬಿಟ್ಟು (ಆ ಪ್ರಸ್ತಾವದೊಳ್ ಮಂಗಳಪಾಠಕರ ಮಂಗಳ ವೃತ್ತೋಚ್ಚಾರಣೆಗಳಿಂದಂ ಪಾಂಡವರಯ್ವರುಂ ಉನ್ಮೀಲಿತನಯನರಾಗಿ: **ಪಂಪಭಾ,** ೨. ೯೩ ವ)

ಉನ್ಮೀಳಿತಲೋಚನ – [ನಾ] ಅರಳಿದ ಕಣ್ಣು (ಶ್ರೀಮತಿಯ ನಿಕಾಮಕೋಮಳಕರತಳಪಲ್ಲವಸ್ಪರ್ಶನಸುಖ ಉನ್ಮೀಳಿತ ಲೋಚನನಾಗೆ: **ಆದಿಪು,** ೪. ೪೮ ವ)

ಉನ್ಮುಕ್ತ – [ಕ್ರಿ] ಚೆಲ್ಲಿದ, ಬಿದ್ದ (ನಿಜವಿಜಯಕರ ಉನ್ಮುಕ್ತಂಗಳಪ್ಪ ಮುಕ್ತಾಮುಕ್ತ ವಿನಿರ್ದಳಿತ ವೀರಯೋಧ ರುಧಿರವಾರಾಶಿ ಶೀಕರಂಗಳಿಂ ಉದಗ್ರಕೋಪಾನಳನನಾಱಿಸಲ್ಪಡದೆಯುಂ: **ಆದಿಪು,** ೧೪. ೧೦೩ ವ)

ಉನ್ಮುಖಮಾನಸ – [ನಾ] ಆಸಕ್ತಚಿತ್ತ (ಅಭಿನವ ಯೌವನಾರಂಭಪ್ರೇರಿತ ಇಂದ್ರಿಯವಿಷಯಸುಖಾನುಭವ ಉನ್ಮುಖಮಾನಸರ್ ಕೃಪಾಣ ಖೇಟಕವ್ಯಗ್ರಪಾಣಿಗಳ್ ಬಂದು: **ಆದಿಪು,** ೯. ೯೭ ವ)

ಉನ್ಮುಚ್ಯಮಾನ – [ಗು] ಬಿಡಲ್ಪಟ್ಟ (ಗಣಬದ್ಧ ಅಮರಹೂಂಕೃತಂ ಜಯಕುಮಾರ ಉನ್ಮುಚ್ಯಮಾನೋಗ್ರಮಾರ್ಗಣಂ: **ಆದಿಪು,** ೧೩. ೬೭)

ಉಪಕಂಠ – [ನಾ] ತಪ್ಪಲು ಪ್ರದೇಶ (ಆ ಪರ್ವತದ ವಿಪುಳವನ ಉಪಕಂಠಂಗಳೊಳ್ ತಾಪಸಕನ್ಯೆಯರ್ ನಡಪಿದೆಳಲತೆಗಳೊಳೆಱಗಿ ತುಱುಗಿ: **ಪಂಪಭಾ,** ೧. ೧೧೫ ವ); ಸಮೀಪದ ಪ್ರದೇಶ (ಎಂದು ನಂದನವನ ಉಪಕಂಠಂಗಳೊಳ್ ಅನಂಗಶರವಶನಾಗಿ ತೊಳಟ್ಟು: **ಪಂಪಭಾ,** ೫. ೧೩ ವ)

ಉಪಕೃತ – [ನಾ] ಉಪಕಾರ, ಸಹಾಯ (ನೆನೆದಾಗಳ್ ನಿಜನಂದನ ಉಪಕೃತಮಂ ತದ್ದೇವನೆಯ್ತಂದು ದೇವನಿಕಾಯಂ ಬೆರಸು: **ಆದಿಪು,** ೨. ೧೮)

ಉಪಗತ – [ಗು] ಯುಕ್ತವಾದ (ಅಂತದಂ ಕಂಡು ಅಪಗತ ಮೋಹರಸನುಂ ಉಪಗತನಿರ್ವೇಗರಸನುಂ ಆಗಿ: **ಆದಿಪು,** ೧೬. ೬೧ ವ); **[ಗು]** ಹೆಚ್ಚು ಮಾಡಿದ (ಯುಧಾಮನ್ಯೂತ್ತಮೌಜಸರ್ ಗೆಲೆ ಕಾದಿ ಕೃಪನಂ ಉಪಗತಪರಿಶ್ರಮನಂ ಮಾಡಿದರ್: **ಪಂಪಭಾ,** ೧೩. ೪೧ ವ)

ಉಪಗೂಹನ – [ನಾ] [ಜೈನ] ತನ್ನಲ್ಲಿ ಸದ್ಗುಣಗಳನ್ನು ಬೆಳೆಸಿ ಸಧರ್ಮಿಗಳ ದೋಷವನ್ನು ಮುಚ್ಚುವುದು (ಉಪಗೂಹನಮುಂ ಸದ್ಧರ್ಮಪಥಚ್ಯುತ ಭವ್ಯಸಂಹತಿ ಸ್ಥಾಪನಮುಂ ವಿಪುಳಗುಣವತ್ಸಳತ್ವಮುಂ ಅಪಗತ ಅಮಳಜೈನಶಾಸನೋದ್ಭಾಸನಮುಂ: **ಆದಿಪು,** ೫. ೫೮)

ಉಪಗೃಹೀತ – [ಗು] ಕೈವಶಮಾಡಿಕೊಂಡ (ಉಪಜಾಪೋಪಗೃಹೀತ ವಿರೋಧಿನರೇಂದ್ರಾಸ್ವಾದತೀರ್ಥನುಂ: **ಶಾಂತಿಪು,** ೧. ೭೧ ವ)

ಉಪಘಾತ – [ನಾ] ಪೆಟ್ಟು, ಏಟು (ದೇವೋಪಘಾತ ಶೌರ್ಯಾವಷ್ಟಂಬದಿನದೆಂತು ಗೆಲ್ದೆಯೋ ಪೇೞ್: **ಶಾಂತಿಪು,** ೮. ೬೯)

ಉಪಚಯ – [ನಾ] ಹೆಚ್ಚಳ (ಅವರ್ ನಿನ್ನ ಪಾಪೋಪಚಯಕಾರಣ ದುರಾಚಾರಮಂ ನೋಡಿ: **ಆದಿಪು,** ೩. ३೮ ವ); **[ನಾ]** [ಜೈನ] ಆಯುಷ್ಯ, ಬಲ, ಶರೀರ, ವೈಭವ ಮುಂತಾದವುಗಳ ಬೆಳವಣಿಗೆ (ಶರೀರ ಬಳ ಆಯುಃ ದೇಹಪ್ರಮಾಣ ಉಪಚಯ ಅಪಚಯಹೇತುತ್ವದಿಂದಂ ಉತ್ಸರ್ಪಿಣಿ ಅವಸರ್ಪಿಣಿ ನಾಮಮಂ ಪಡೆದುದು: **ಆದಿಪು,** ೬. ೪೮ ವ)

ಉಪಚರಿತ – [ಗು] ನೆರವೇರಿಸಿದ (ಉಪಚರಿತ ಗರ್ಭಾದಾನ ಮಂಗಳವಿಧಾನಂ ದಶರಥಮಹಿನಾಥಂ .. .. ಒಳಗುವುದುಂ: **ಪಂಪರಾ,** ೩. ೭೭ ವ)

ಉಪಚಿತ – [ಗು] ಹೆಚ್ಚಾದ (ಪೂರ್ವಭವಾಭ್ಯಸ್ತ ಸಮಸ್ತಾಗಮಾರ್ಥರುಂ ಉಪಚಿತ ಶುಭಭಾವನಾಧ್ಯಾಸಿತ ಅಂತಃಕರಣರುಂ: **ಆದಿಪು,** ೯. ೬೦ ವ)

ಉಪಜಲಧಿ – [ನಾ] ಜಲಾಶಯ (ಕದಡಿ ಬರ್ಪ ತೊಱೆ ಬೆಟ್ಟು ತೆವರ್ ಮೊಱಡುಗಳ್ ಉಪಜಲಧಿಗಳೆನೆ .. .. ಉದ್ದಬಿದ್ದಮಾಯ್ತವನಿತಳಂ: **ಆದಿಪು,** ೬. ೬೨)

ಉಪಜೀವನ – [ನಾ] ಜೀವನನಿರ್ವಹಣೆ (ತದನಂತರಂ ಪ್ರಜಾಪತಿಯುಂ ಪ್ರಜೋಪಜೀವನನಿಮಿತ್ತಮಾಗೆ ಸೇವಾಧರ್ಮೋಚಿತಮೆನಿಸುವ: **ಆದಿಪು,** ೮. ೬೪ ವ)

ಉಪದಂಶ – [ನಾ] ವ್ಯಂಜನಪದಾರ್ಥ (ಅನೇಕ ಭಕ್ಷ್ಯ ಉಪದಂಶ ರಸಪ್ರಚುರಚಾರುಚರುಕಂಗಳಿಂದಂ: **ಆದಿಪು,** ೨. ३೨ ವ)

ಉಪದಿಗ್ಧ – [ಗು] ಲೇಪಿಸಲ್ಪಟ್ಟ (ಆಯತ ಪೃಥುಪಿಬಸ್ತಾನುಪದಿಗ್ಧಾಂದಪೂರ್ವಪೀನ ರಕ್ತಾರೋಮಾಶ್ಲಿಷ್ಟ ಸಮಾಸಮ ಸಗದನುಂ: **ಆದಿಪು,** ೧೨. ೫೬ ವ)

ಉಪದ್ರವ – [ನಾ] ಕಾಟ, ತೊಂದರೆ (ಮುನಿಜನಂಗಳ ಬೇಳ್ವೆಗೆ ಉಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತಶರ ಕೋಟಿಯಿಂದಂ ಉಚ್ಚಾಟಿಸಿ: **ಪಂಪಭಾ,** ೪. ೧೫ ವ)

ಉಪಧಾನ – [ನಾ] ದಿಂಬು (ಪ್ರಚ್ಛದಾಚ್ಛಾದಿತ ವಿಚಿತ್ರನೇತ್ರೋಭಯ ಉಪಧಾನಶಯ್ಯಾತಳದೊಳ್: **ಆದಿಪು,** ೫. ೨೨ ವ)

ಉಪಧೆ – [ನಾ] ಪ್ರಾಮಾಣಿಕತೆಯ ಪರೀಕ್ಷಾ ವಿಧಾನ: ರಾಜಭಕ್ತಿ, ಸ್ವಾರ್ಥರಾಹಿತ್ಯ, ಇಂದ್ರಿಯಜಯ ಮತ್ತು ಧೈರ್ಯ ಇವುಗಳು (ಸಕಳಕಳಾವಗಾಹನ ಸಮಾಹಿತಮತಿಗಳುಮಾಗಿ ನಾಲ್ಕುಂ ಉಪಧೆಗಳೊಳಂ ಶುದ್ಧರಾಗಿ: **ಆದಿಪು,** ೧. ೮೧)

ಉಪನತ – [ಗು] ನಮಸ್ಕರಿಸಲ್ಪಟ್ಟ (ಉಪನತ ಅಮರೇಂದ್ರ ದನುಜೇಂದ್ರ ನರೇಂದ್ರಪದಂ ಸಮಸ್ತವಿದ್ಯಾಪತಿ ನಾಭಿನಂಧನಂ: **ಆದಿಪು,** ೧. ೪೦)

ಉಪನಯನ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ (ಉಪನಯನ.. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ); [ನಾ] ಮುಂಜಿ (ಅಂತವರ್ಗೆ ಜಾತಕರ್ಮ ನಾಮಕರಣಾನ್ನಪ್ರಾಶನಚೌಲೋಪನಯನಾದಿ ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ: **ಪಂಪಭಾ,** ೧, ೮೭, ವ)

ಉಪನೀತ – [ಗು] ಹತ್ತಿರ ತರಲಾದ (ಅನ್ನೆಗಂ ಅತ್ತ ದುರ್ಯೋಧನಂ ಅತಿಸಂಭ್ರಮಾಕುಳಿತಪರೀತಜನ ಉಪನೀತ ಚಂದನಕರ್ಪೂರ ಮಿಶ್ರಿತ ಹಿಮಶಿಶಿರ ಧಾರಾಪರಿಷೇಕದಿಂದ ಎಂತಾನುಂ ಮೂರ್ಛೆಯಿಂದೆೞ್ಚತ್ತು: **ಪಂಪಭಾ,** ೧೩. ೨ ವ)

ಉಪನೀಯಮಾನ – [ಗು] ಹತ್ತಿರಕ್ಕೆ ತರಲಾಗುತ್ತಿರುವ (ಅನ್ಯೋನ್ಯಹಸ್ತ ಪರಂಪರೋಪನೀಯಮಾನ ನಾನಾ ಸ್ನಾನೋಪಕರಣದೊಳ್: **ಆದಿಪು,** ೮. ೬೭ ವ); [ಗು] ತೆಗೆದುಕೊಂಡು ಹೋಗುವ (ಜಿನಗೃಹಜನಸತತ ಉಪನೀಯಮಾನ ಪಾದ್ಯ ಗಂಧ ಅಕ್ಷತ ಕುಸುಮ ಚರು ಧೂಪ ದೀಪ ಫಲಾದಿ ಅರ್ಚನಾತ್ಮಕಮಪ್ಪ ನಿತ್ಯಮಹಮುಂ: **ಆದಿಪು,** ೧೫. ೧೩ ವ)

ಉಪಪತ್ತಿ – [ನಾ] ಸಿದ್ಧಾಂತಸಮರ್ಥನೆಗೆ ಅನುಸರಿಸುವ ತರ್ಕ, ಯುಕ್ತಿ (ಪರಪಕ್ಷದೂಷಣಪುರಸ್ಸರಂ ಅನೇಕ ಉಪಪತ್ತಿಗಳಿಂ ಸ್ವಪಕ್ಷಸ್ಥಾಪನಂ ಗೆಯ್ದು: **ಆದಿಪು,** ೨. ೨೨ ವ)

ಉಪಪದಪಂಚಕ – [ನಾ] ಸಮ ಅಥವಾ ಸದೃಶ ಆಕಾರದ ಐದು ವಸ್ತುಗಳ ಗುಂಪು (ಶೀರ್ಷಕ ಉಪಶೀರ್ಷಕ ಆಘಾಟಕ ಪ್ರಕಾಂಡಕ ತರಳತರಬಂಧ ಉಪಪದಪಂಚಕಸಮೇತಂಗಳಾಗಿ: **ಆದಿಪು,** ೮. ೫೪ ವ)

ಉಪಪಾದತಳ್ಪತಳ – [ನಾ] ದೇವದೇವಿಯರು ಉದ್ಭವಿಸುವ ಹಾಸಿಗೆ (ಶ್ರೀಪ್ರಭವಿಮಾನದೊಳ್ ಉಪಪಾದತಳ್ಪತಳದ ಪೊರೆಯೊಳಂ ಪೊರವೊರೆಯಿಲ್ಲದ ಮದನಾನುರಾಗರಸದೊಳ್: **ಆದಿಪು,** ೨. ೭೨ ವ)

ಉಪಪಾದಶಯನ – [ನಾ] ಉಪಪಾದತಳ್ಪತಳ (ಅದಱ ಪರಾರ್ಥ್ಯರತ್ನರಚನಾವಿಚಿತ್ರ ಉಪಪಾದಶಯನದೊಳ್ ಅಂತರ್ಮುಹೂರ್ತದೊಳ್ ಪರ್ಯಾಪ್ತಿಯಂ ಕೈಕೊಂಡು: **ಆದಿಪು,** ೬. ೩೭ ವ)

ಉಪಪ್ರಚ್ಛದ – [ನಾ] ಹೊದಿಕೆ, ಮಗ್ಗುಲು ಹಾಸಿಗೆ (ಪಯಃಪಯೋಧಿಫೇನಸಂಕಾಶದುಕೂಲ ಉಪಪ್ರಚ್ಛದ ಆಚ್ಛಾದಿತ ವಿಚಿತ್ರನೇತ್ರಂ: **ಆದಿಪು,** ೫. ೨೨ ವ)

ಉಪಪ್ಲವ – [ನಾ] ಅನಿಷ್ಟ (ಎನ್ನ ಕನಸುಗಳೀ ಯುಗದ ಕಡೆಯೊಳ್ ಪ್ರಜೆಗಳ್ಗೆ ವಿವಿಧೋಪಪ್ಲವ ಸೂಚಕಂಗಳಾಗಿ ತೋರ್ಕುಂ: **ಆದಿಪು,** ೧೫. ೨೧ ವ) ['ವಿವಿಧೋದ್ರವ' – ಟಿ.ವಿ.ವೆಂ. ಆವೃತ್ತಿಯ ಪಾಠ]

ಉಪಭೋಗ – [ನಾ] ವಿಷಯಾನುಭವ (ಸುರತರುಪ್ರಸೂನ ಗ್ರಥಿತ ಸುರಭಿದಾಮ ದುಕೂಲಾಂಬರ ವಿಚಿತ್ರಭೂಷಣ ಸುರಭಿವಿಲೇಪನ ಪ್ರಮುಖ ಭೋಗೋಪಭೋಗಂಗಳೊಳಂ: **ಆದಿಪು,** ೯. ೩ ವ)

ಉಪಭೋಗ್ಯ – [ನಾ] ಅನುಭವಿಸಲು ಯೋಗ್ಯವಾದ (ಎನಗೊರ್ವಂಗೆ ಉಪಭೋಗ್ಯಮಲ್ತು ವಸುಧಾಸಾಮ್ರಾಜ್ಯಂ ಓರಂತೆ ನಿಮ್ಮನಿಬರ್ಗಂ: **ಆದಿಪು,** ೧೪. ೩೧)

ಉಪಮಾನ – [ನಾ] ಹೋಲುವ (ಗಂಗತರಂಗೋಪಮಾನ ಚಳಚ್ಚಾಮರವಾತಪೀತ ನಿಜಘರ್ಮಾಂಭಃಕಣಂ ದ್ರೌಪದೀಕಚಕುಂಭಾರ್ಪಿತ ಕುಂಕುಮದ್ರವವಿಲಿಪ್ತೋರಸ್ಥಳಂ: **ಪಂಪಭಾ,** ೩. ೮೫)

ಉಪಯೋಗತ್ವ – [ನಾ] [ಜೈನ] ನಲವತ್ತೆಂಟು ದೀಕ್ಷಾನ್ವಯಕ್ರಿಯೆಗಳಲ್ಲಿ ಒಂದು (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ)

ಉಪರಿಚರವಸು – [ನಾ] ಗಂಗಾದೇಶದ ರಾಜ (ಗಂಗಾದೇಶದೊಳ್ ಉಪರಿಚರವಸುವೆಂಬರಸಂ ಮುಕ್ತಾವತಿಯೆಂಬ ತೊಱೆಯೊಳ್ ವಿಶ್ರಮಿಸಿರ್ದೊಡೆ: **ಪಂಪಭಾ,** ೧. ೬೮ ವ)

ಉಪರಿತಳ – [ನಾ] ಮೇಲ್ಭಾಗ (ಹಿಮವದ್ದೇವೇಂದ್ರಶೈಳ ಉಪರಿತಳವನದೊಳ್ ತೊಳಲ್ತು ಅಲಂಪಿಂ: **ಆದಿಪು,** ೨. ೭೮)

ಉಪರಿಮ – [ಗು] ಮೇಲುಭಾಗದ (ಪಂಚಷಡ್ಯೋಜನ ಅಧೋವಿಸ್ತಾರದೊಳಂ ತದರ್ಧಯೋಜನೋತ್ಸೇಧದೊಳಂ ದಶಯೋಜನ ಉಪರಿಮತಳ ವಿಸ್ತಾರದೊಳಂ: **ಆದಿಪು,** ೧. ೬೨ ವ)

ಉಪರಿಮತಳ – [ನಾ] ಮೇಲಂತಸ್ತು, ಮಹಡಿ (ಪುರಜನಂಗಳ್ ಉತ್ತುಂಗಪ್ರಾಸಾದಕೂಟಕೋಟಿಗಳುಮಂ ಉದಗ್ರಸೌಧ ಉಪರಿಮತಳಂಗಳುಮಂ ಏಱೆ ನೋೞ್ಪಲ್ಲಿ: **ಆದಿಪು,** ೪. ೨೪ ವ)

ಉಪರೋಧ – [ನಾ] ಬಲಾತ್ಕಾರ (ಅಂತು ತನ್ನ ಉಪರೋಧದೊಳಂ ಪ್ರಜಾನುಗ್ರಹಬುದ್ಧಿಯೊಳಂ ಪೋಗಲಾಱದೆ: **ಆದಿಪು,** ೮. ೧೫ ವ)

ಉಪಲಕ್ಷಿತ – [ಗು] ಗುರುತನ್ನುಳ್ಳ (ಬೇಱೊಂದು ಮೊನೆಯೊಳ್ ಕಾದುತ್ತಿರ್ದ ಅಶ್ವತ್ಥಾಮಂ ಕಂಡು ಮುಟ್ಟೆವರ್ಪನ್ನೆಗಂ ಶೋಣಾಶ್ವೋಪಲಕ್ಷಿತ ನಿಜಪಿತೃಸೂತಕೇತನಕಥಿತಮಾಗಿರ್ದ ರಥಮಂ ಉಪಲಕ್ಷಿಸಿ: **ಪಂಪಭಾ,** ೧೨. ೩೦ ವ)

ಉಪಲಕ್ಷಿಸು – [ಕ್ರಿ] ನೋಡು, ಗುರುತಿಸು (ಆ ಗುರುವಿನ ಚಿತ್ತವೃತ್ತಿಯಂ ಅದೆಂತು ಉಪಲಕ್ಷಿಸಲಾರ್ತೆಯೋ: **ಆದಿಪು,** ೧೦. ೮)

ಉಪವನ – [ನಾ] ಉದ್ಯಾನವನ (ವಾರವಿಳಾಸಿನಿಯರ ನೂಪುರಂಗಳ ರವಂಗಳೊಳ್ ನೃಪಭವನೋಪವನ ದೀರ್ಘಿಕಾ ಹಂಸಕುಳಂಗಳ್ ತಳವೆಳಗಾದುವು: **ಪಂಪಭಾ,** ೪. ೪೯ ವ)

ಉಪವಾದಕ – [ನಾ] ಸ್ವರ್ಗದ ಒಂದು ವಾದ್ಯ (ಆಗಳ್ ನಾಕಲೋಕವಾದ್ಯಂಗಳೊಳ್ ಅನೇಕಭೇದಂಗಳಪ್ಪ ಉಪವಾದಕ ಪರಿವಾದಕ ವಾದ್ಯಂಗಳೊಳ್: **ಆದಿಪು,** ೭. ೧೧೮ ವ)

ಉಪವೀಣಿತ – [ಗು] ವೀಣೆಯ ವಾದನದಿಂದ ಕೂಡಿದ (ಮಧುಕರನಿಕರನಿನಾದೋಪವೀಣಿತ ಕ್ರೀಡಾಸರೋವರಂಗಳೇ ಜಳಕೇಳೀಕುತೂಹಲನಿಳಯಂಗಳಾಗೆಯುಂ: **ಆದಿಪು,** ೪. ೫೨ ವ)

ಉಪಶಮ – [ನಾ] ಸಹನೆ, ಸಮಸ್ಥಿತಿ (ನಿನ್ನದೊಂದು ಉಪಶಮಮಂ ಪಡೆದತ್ತು ಮನುಷ್ಯಜನ್ಮಮಂ: **ಆದಿಪು,** ೩. ೪೦); [ನಾ] [ಜೈನ] ಕರ್ಮದ ಉದಯವನ್ನು ಕೆಲ ಸಮಯ ತಡೆಯುವುದು, ಅದರಿಂದಾಗುವ ಜೀವಶುದ್ಧಪರಿಣಾಮ ಔಪಶಮಿಕಭಾವ (ಬಟೆಯಂ ಮೋಹನೀಯ ಕರ್ಮೋಪಶದೊಳ್ ವಿಶುದ್ಧಾತಿಶಯವಿಶೇಷದಿಂ ಉಪಶಮ ಶ್ರೇಣ್ಯಾರೋಹಣಂಗೆಯ್ದು: **ಆದಿಪು,** ೬. ೩೩ ವ); [ನಾ] ಪಶ್ಚಾತ್ತಾಪ (ಮನದೊಳ್ ಮುಂ ಪುದಿದಿರ್ದ ಕೋಪಮನಿತುಂ ತೂಳ್ದಾಗಳ್ ಎತ್ತೆತ್ತ ಗೆಯ್ದೆನಿದಂ ತಮ್ಮನೊಳ್ ಎಂಬುದೊಂದುಪಶಮಂ ಕೈಗಣ್ಮೆ: **ಆದಿಪು,** ೧೪. ೧೩೨)

ಉಪಶಾಂತಗುಣಸ್ಥಾನ – [ನಾ] [ಜೈನ] ಕರ್ಮಗಳ ಉದಯಾದಿ ಅವಸ್ಥೆಗಳಲ್ಲುಂಟಾಗುವ ಆತ್ಮಪರಿಣಾಮವೇ ಗುಣಸ್ಥಾನ, ಇವುಗಳಲ್ಲಿನ ಹದಿನಾಲ್ಕು ನೆಲೆಗಳಲ್ಲಿ ಇದು ಹನ್ನೊಂದನೆಯದು (ಪೃಥಕ್ತ್ವವಿತರ್ಕವಿಚಾರಮೆಂಬ ಮೊದಲ ಶುಕ್ಲಧ್ಯಾನದೊಳ್ ಸಮಾಹಿತಂ ಉಪಶಾಂತಗುಣಸ್ಥಾನದೊಳ್ ಪ್ರಾಣಪರಿತ್ಯಾಗಂಗೆಯ್ದು: **ಆದಿಪು,** ೬. ೩೪ ವ)

ಉಪಶಾಂತಮನ – [ನಾ] ಸಮಾಧಾನಚಿತ್ತ (ಪ್ರಿಯಕಾಂತಾ ಭ್ರೂವಿಭ್ರಮ ಗ್ರಹಾಗ್ರಹವಶದಿಂ ಭ್ರಾಂತಿಸದೆ ಉಪಶಾಂತಮನಂ ಶಂತನುಗಿತ್ತಂ ಸಮಸ್ತರಾಜ್ಯಶ್ರೀಯಂ: **ಪಂಪಭಾ,** ೧. ೬೬)

ಉಪಶಾಂತವಚನ – [ನಾ] ಸಮಾಧಾನದ ಮಾತು, ಸಾಂತ್ವನದ ನುಡಿ (ಉಪಶಾಂತವಚನಂಗಳಿಂದಂ ಆಕೆಯ ಉಬ್ಬೆಗಮನಾಱೆ ನುಡಿದುಂ ಮುನಿಜನಮೆಲ್ಲಂ: **ಪಂಪಭಾ,** ೨. ೨೮ ವ)

ಉಪಶಾಂತಸ್ವಾಂತ – [ನಾ] ಸಮಾಧಾನಚಿತ್ತ (ಶಾರ್ದೂಲಂ ಜಾತಿಸ್ಮರನಾಗಿ ಪರಿತ್ಯಕ್ತ ಆಹಾರಶರೀರನಾಗಿ ಉಪಶಾಂತಸ್ವಾಂತನಿರ್ದುದು: **ಆದಿಪು,** ೫. ೧೧ ವ)

ಉಪಶೀರ್ಷಕ – [ನಾ] ಮಧ್ಯದಲ್ಲಿ ಕ್ರಮವಾಗಿ ದೊಡ್ಡದಾಗಿರುವ ಮೂರು ಮುತ್ತುಗಳುಳ್ಳ ಹಾರ (ಪ್ರತ್ಯೇಕ ಶೀರ್ಷಕ ಉಪಶೀರ್ಷಕ ಅವಘಾಟಕ ಪ್ರಕಾಂಡಕ ತರಳತರಬಂಧ ಉಪಪದ ಪಂಚಕಸಮೇತಂಗಳಾಗಿ: **ಆದಿಪು,** ೮. ೫೪ ವ)

ಉಪಶೋಭಿತ – [ನಾ] ಅಲಂಕರಣ (ಪರಸ್ಪರಸ್ಪರ್ಧಮಾನ ಪರಿಕ್ಷಿಪ್ತ ಮಲ್ಲಿಕಾಮುಕುಳ ಮುಕ್ತಾಫಳೋಪಶೋಭಿತದೊಳ್ ಇಂದ್ರನೀಲಮಣಿ ಕುಟ್ಟಿಮಸಂಕ್ರಾಂತ ಮೌಕ್ತಿಕಧಾಮಾಭಿರಾಮದೊಳ್: **ಆದಿಪು,** ೮. ೬೭ ವ)

ಉಪಸಂಹಾರಿಸು – [ಕ್ರಿ] ನಾಶಮಾಡು (ತೇರಂ ಕುದುರೆಯಂ ಎಸಗುವ ಸಾರಥಿಯ ಪೊಡರ್ಪಂ ಅಯ್ದುಬಾಣದೊಳ್ ಉಪಸಂಹಾರಿಸಿ: **ಪಂಪಭಾ,** ೧೨. ೬೯); [ಕ್ರಿ] ಕೊಲ್ಲು (ಕೊಂದೆವಿಲ್ಲವಿನ್ನುಂ ಬಳವತ್ ಕ್ರೂರಾರಾತಿಯಂ ಉಪಸಂಹಾರಿಪೆವು ಏವಿರಿಯನಾದಂ ಎಂಬುದುಂ: **ಪಂಪಭಾ,** ೧೨. ೧೨೮)

ಉಪಸರ್ಗ – [ನಾ] ಬಾಧೆ (ಪುರುಪರಮೇಶ್ವರತನೂಭವರ ಯುದ್ಧಾಡಂಬರ ಉಪಸರ್ಗದೊಳಂ ಆಕುಳ ವ್ಯಾಕುಳರಾಗಿ: **ಆದಿಪು,** ೧೪. ೧೧೫ ವ)

ಉಪಸರ್ಗಭಾವ – [ನಾ] [ಜೈನ] ದೇಹಪೀಡೆ ಆಗದಿರುವುದು (ಮಿತನಖಕೇಶಶೋಭಿತ ತನುತ್ವಂ ಅಭುಕ್ತ್ಯುಪಸರ್ಗಭಾವಂ ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ: **ಆದಿಪು,** ೧೦. ೪೩)

ಉಪಸ್ಥಾಪನೆ – [ನಾ] [ಜೈನ] ಐದು ಬಗೆಯ ನಡವಳಿಕೆಗಳಲ್ಲಿ ಒಂದು, ಹತ್ತಿರದಲ್ಲಿ ಇರಿಸುವುದು (ಸಮ್ಯಕ್ಚಾರಿತ್ರಮೆಂಬುದು ಅದು ಸಾಮಾಯಿಕಚ್ಛೇದ ಉಪಸ್ಥಾಪನಾ ಪರಿಹಾರಶುದ್ಧಿ ಸೂಕ್ಷ್ಮಸಂಪರಾಯ ಯಥಾಖ್ಯಾತಚಾರಿತ್ರಭೇದದಿಂ ಪಂಚವಿಧಂ: **ಆದಿಪು,** ೧೦. ೬೩ ವ)

ಉಪಹಾರ – [ನಾ] ಕಾಣಿಕೆ (ಭರತೇಶ್ವರಚಕ್ರವರ್ತಿ ಮಹೀತಳನಿಹಿತಮಣಿ ಕಿರೀಟರಶ್ಮಿ ಸಂದೋಹ ಸಾಂದ್ರಕುಂಕುಮಪಂಕದಿಂ ವಿಹಿತ ಉಪಹಾರನಾಗಿ: **ಆದಿಪು,** ೧೩. ೮೨ ವ)

ಉಪಹಾಸಿ – [ನಾ] ತಿರಸ್ಕಾರ ಅಥವಾ ಹಾಸ್ಯ ಮಾಡುವ (ಪಾಂಡುಶಿಲಾತಲವಿಳಾಸ ಉಪಹಾಸಿ ಚಂದ್ರಕಾಂತ ಶಿಳಾತಳದೊಳ್ ಶಿಬಿಕೆಯನಿರಿಸಿ: **ಆದಿಪು,** ೯. ೭೬ ವ); [ಗು] ನಗುವಂತೆ (ಯೋಗಾಭ್ಯಾಸದೊಳ್ ಅರೆಮುಗುಳ್ದ ರಕ್ತಾಂಭೋಜದಳವಿಳಾಸ ಉಪಹಾಸಿಗಳಪ್ಪ ಕಣ್ಗಳಂ ಒತ್ತಂಬದಿಂ ತೆಱೆದು: **ಪಂಪಭಾ,** ೧೩. ೬೩ ವ)

ಉಪಹಾಸಿತ – [ಗು] ತಿರಸ್ಕರಿಸುವಂತಿರುವ (ಅಲರಂಬಿನ ಮೊನೆಗೆ ಪೂಣೆ ಪೊಕ್ಕು ಪಕ್ಕಾಗಿರೆ ಪೊಟಲೊಳಗಣಿಂ ಬಂದು ದಿವಿಜೇಂದ್ರವಿಳಾಸೋಪಹಾಸಿತಮಪ್ಪ ನಿಜಮಂದಿರಮಂ ಪುಗೆ: **ಪಂಪಭಾ,** ೪. ೩೮ ವ)

ಉಪಾಂಗ – [ನಾ] ದೇಹದ ಸಣ್ಣ ಪುಟ್ಟ ಭಾಗಗಳು (ಅಂಗೋಪಾಂಗಂಗಳೊಳ್ ಎಸೆವ ಆಂಗಿಕಮಂ ಗಾನಪಾಠ್ಯದೊಳ್ ವಾಚಿಕಮಂ ತುಂಗಕುಚೆ ಮೆಱೆದಳಾ ದಿವಿಜಾಂಗನೆಗೆ ಆಹಾರ್ಯ ಸಾತ್ವಿಕಂ ನಿಜಮೆ ವಲಂ: **ಆದಿಪು,** ೯. ೨೮);

ಉಪಾಂತ – [ನಾ] ಸಾನ್ನಿಧ್ಯ (ದಿಗಂಬರವಿಳಾಸಮಂ ಬಯಕೆ ತೀರ್ವಿನಂ ತಾಳ್ದಿದೆಂ ಯುಗಂಧರಮಹಾಮುನೀಂದ್ರ ಪಂಕಜೋಪಾಂತದೊಳ್: **ಆದಿಪು,** ೩. ೫೭); [ನಾ] ಹತ್ತಿರ (ಅಂತು ವಸುಷೇಣನಾ ಲೋಕಾಂತಂಬರಂ ಅಳವಿ ಬಳೆಯೆ ಬಳೆದ ಎಸಕಂ ಅದು ಓರಂತೆ ಜನಂಗಳ ಕರ್ಣ ಉಪಾಂತದೊಳ್ ಒಗೆದೆಸೆಯೆ ಕರ್ಣನೆಂಬನುಂ ಆದಂ: **ಪಂಪಭಾ,** ೧. ೯೮)

ಉಪಾಂಶುವಧ – [ನಾ] ರಹಸ್ಯವಾದ ಕೊಲೆ (ಅಂತು ವಿಕ್ರಮಾರ್ಜುನಂ ಬಿಲ್ಗೊಳಲುಂ ಭೀಮಸೇನಂ

ಗದೆಗೊಳಲುಂ ಆಂಪುದರಿದು ಉಪಾಂಶುವಧದೆ ಕೆಯ್ಗೆ ಮಾಡುವುದುತ್ತಮಪಕ್ಷಂ: **ಪಂಪಭಾ,** ೨. ೯೦ ವ)

ಉಪಾಖ್ಯಾನ – [ನಾ] ಉಪಕಥನ (ಪೆಱವುಂ ಉಪಾಖ್ಯಾನ ಕಥೆಗಳೊಳ್ ಒಂದುಮಂ ಕುಂದಲೀಯದೆ ಪೇೞ್ವೆಂ: **ಪಂಪಭಾ,** ೧೪. ೫೨ ವ)

ಉಪಾದಾನ – [ನಾ] ತೆಗೆದುಕೊಳ್ಳುವುದು (ಉತ್ತರೋತ್ತರಚಿತ್ತಕ್ಷಣಂಗಳ್ ಉಪಾದಾನೋಪಾದೇಯಕ್ಷಣಸಂಪೃಕ್ತಂಗಳ್: **ಆದಿಪು,** ೨. ೯ ವ); [ನಾ] ಅಪ್ಪುವುದು (ಜೀವಂಗಳ್ .. .. ನಾನಾಶರೀರ ಉಪಾದಾನಪರಿತ್ಯಜನಪುರಸ್ಸರಂ ಪರಿಭ್ರಮಿಸುಗುಂ: **ಆದಿಪು,** ೧೬. ೫೭ ವ)

ಉಪಾದೇಯ – [ನಾ] [ಜೈನ] ತತ್ತ್ವದ ಎರಡು ಬಗೆಗಳಲ್ಲಿ ಒಂದು, ಮುಕ್ತಿಕಾರಣವಾದುದು (ನಿನ್ನ ಬೆಸಗೊಂಡ ತತ್ತ್ವಮುಂ ಹೇಯೋಪಾದೇಯರೂಪದಿಂ ದ್ವಿವಿಧಮಕ್ಕುಂ ಸಂಸಾರಕಾರಣಂಗಳ್ ಹೇಯಂಗಳ್ ಮುಕ್ತಿಕಾರಣಂಗಳ್ ಉಪಾದೇಯಂಗಳ್: **ಆದಿಪು,** ೧೦. ೬೩ ವ); [ನಾ] ಸ್ವೀಕಾರಾರ್ಹ (ಹೇಯಂ ಸಾಮ್ರಾಜ್ಯಂ ಉಪಾದೇಯಂ ಪ್ರವ್ರಜ್ಯಂ: **ಆದಿಪು,** ೧೬. ೬೨)

ಉಪಾದ್ರಿ – [ನಾ] ಬೆಟ್ಟದ ಬಳಿ (ವಿವಿಧಾರಂಭಪರಿಗ್ರಹಂ ವಿಷಯಸೌಖ್ಯಾಯತ್ತಂ ಅತ್ಯಂತಲೋಭವಿಷಯಗ್ರಸ್ತಂ ಉಪಾದ್ರಿಯೊಳ್ ದ್ರವಿಣಮಂ ಬಯ್ತು: **ಆದಿಪು,** ೫. ೪)

ಉಪಾಯ – [ನಾ] ಅನುಕೂಲ (ತಪೋವನಕ್ಕೆ ಪೋಪ ಭಾರ್ಗವಂ ದ್ರವ್ಯಾರ್ಥಿಯಾಗಿ ಬಂದ ಕುಂಭಸಂಭವನಂ ಕಂಡು ಕನಕಪಾತ್ರಕ್ಕುಪಾಯಮಿಲ್ಲಪ್ಪುದಱಿಂ ಮೃತ್ಪಾತ್ರದೊಳ್ ಅರ್ಘ್ಯಮೆತ್ತಿ ಪೂಜಿಸಿ: **ಪಂಪಭಾ,** ೨. ೪೫ ವ)

ಉಪಾಯನ – [ನಾ] ಉಡುಗೊರೆ, ಕಾಣಿಕೆ (ಭರತನಾಥದೂತಂ ಆತ್ಮಪಾರ್ಶ್ವಚರಕರತಳದಿಂ ಉಪಾಯನ ರತ್ನಕರಂಡಕಮಂ ಕೊಂಡು: **ಆದಿಪು,** ೧೪. ೪೫ ವ)

ಉಪಾರೂಢ – [ಗು] ಮೇಲೇರಿದ (ಆರೂಢ ಸಮರರಸನುಂ ಉಪಾರೂಢಕನಕರಥನುಂ ಆಗಿ ಕೈಲಾಸವಾಸಿಗೆ ಪೊಡೆವಟ್ಟು ಬಿಲ್ಲಂ ಕೊಂಡು ಗಂಗಾಸುತಂಗೆ ಅದಿರದೆ ಇದಿರ್ಚಿ ನಿಂದಾಗಳ್: **ಪಂಪಭಾ,** ೧೦. ೫೨ ವ); [ಗು] ಜೊತೆಯಲ್ಲಿ ಹತ್ತಿ ಕುಳಿತ (ಆಗಳ್ ಅಂತಕತನಯನುಂ ಧೃತರಾಷ್ಟ್ರತನಯನುಂ ಆರೂಢಮದಗಜರುಂ ಉಪಾರೂಢ ವಿಶೇಷಕರುಂ ಆಗಿ: **ಪಂಪಭಾ,** ೧೩. ೩೩ ವ)

ಉಪಾಲಂಭಂಗೆಯ್ – [ಕ್ರಿ] ನಿಂದಿಸು (ಮೇಲಾದ ಪಾಂಡುಸುತರಂ ಉಪಾಲಂಭನಗೆಯ್ಯುತಿರ್ಪ ದುರ್ಯೋಧನನಂ ಲೀಲೆಯೆ ನುಂಗುವ ಮೃತ್ಯುವ ನಾಲಗೆಯೆನೆ ನೆಗೆದುವುರಿಯ ನಾಲಗೆ ಪಲವುಂ: **ಪಂಪಭಾ,** ೩. ೬)

ಉಪಾಶ್ರಯ – [ನಾ] ಅವಲಂಬನ (ಅಯನಯಪರಾಕ್ರಮ ಉಪಾಶ್ರಯಂಗಳಂ ಶ್ರೀಗೆ ಅಡರ್ಪುಮಾಡಿದ ನಿನ್ನಿಂದ್ರಿಯಜಯಮೆ ಕೂಡೆ ಲೋಕತ್ರಯದಿಂ ಪೊಗಟೆಸಿದುದು: **ಪಂಪಭಾ,** ೯. ೩೫)

ಉಪಾಶ್ರಯಂಬಡೆ – [ಕ್ರಿ] ಹೊಂದಿಕೊ (ಬಹುವಿಧ ಅರ್ಚನೆಗಳಿಂದರ್ಚಿಸಿ ಧರ್ಮಚಕ್ರಚ್ಛತ್ರತ್ರಿತಯಂಗಳಂ ಬಳಸಿಯುಂ ಉಪಾಶ್ರಯಂಬಡೆಯೆ: **ಆದಿಪು,** ೧೫. ೧೬ ವ)

ಉಪಾಶ್ರಯವಿಶೇಷ – [ನಾ] ವಿಶೇಷ ಅವಲಂಬನ, ನೃತ್ಯಗೀತ ಮುಂತಾದ ಅವಲಂಬನ (ದೋಷದೊಳ ತೊಡರ್ವುದುಂ ಒಂದು ಉಪಾಶ್ರಯವಿಶೇಷದೊಳ್ ಒಳ್ಪನೆ ತಾಳ್ದುದಾಗದೇ; **ಪಂಪಭಾ,** ೪. ೯೧)

ಉಪಾಶ್ರಿತ – [ಗು] ಆಶ್ರಯಪಡೆದ (ಆಶ್ರಿತ ನಾಭಿನಂದನಂ ಉಪಾಶ್ರಿತ ಭವ್ಯಜನಾಭಿಧೇಯನುಂ: **ಆದಿಪು,** ೧. ೪೦)

ಉಪಾಸಕ – [ನಾ] [ಜೈನ] ಶ್ರಾವಕ (ಧವಳಾತಪವಾರಣ ಕಕುದ ವಿಭೂತಿಯನುಟೆದು ನೆಗೞ್ದ ಉಪಾಸಕನಾದಂ: **ಆದಿಪು,** ೬. ೬)

ಉಪಾಸಕವ್ರತ – [ನಾ] [ಜೈನ] ಜೈನ ಗೃಹಸ್ಥನ ಹನ್ನೆರಡು ವ್ರತಗಳು: ಐದು ಅಣುವ್ರತಗಳೊಡನೆ ದಿಗ್ವ್ರತ, ದೇಶವ್ರತ, ದಂಡವಿರತಿವ್ರತ, ಎಂಬ ಮೂರು ಸಾಮಯಿಕ ವ್ರತಗಳು ಹಾಗೂ ಸಾಮಾಯಿಕವ್ರತ, ಪ್ರೋಷಧವ್ರತ, ಅತಿಥಿಸಂಗ್ರಹ, ಸಲ್ಲೇಖನಾ, ಎಂಬ ನಾಲ್ಕು ಶಿಕ್ಷಾವ್ರತಗಳು (ಗೃಹೀತ ಉಪಾಸಕವ್ರತಂ ಅನಶನಂ ಅವಮೋದರ್ಯಾದ್ಯಾಚರಣ ಪರಿಣತಂ ಯಥೋವಿಧಿಯಿಂದಾಯುರವಸಾನದೊಳ್: **ಆದಿಪು,** ೨. ೧೯ ವ)

ಉಪಾಸಕಾಧ್ಯಯನ – [ನಾ] [ಜೈನ] ಶ್ರಾವಕರ ಕರ್ತವ್ಯ ತಿಳಿಸುವ ಶಾಸ್ತ್ರ (ಅರ್ಹದರ್ಚನಾಶೇಷ ಘೃತತಿಳಾಜ್ಯಾಹುತಿಗಳಿಂ ಉಪಾಸಕಾಧ್ಯಯನಗದಿತ ಸಮಸ್ತಪ್ರಕಾರ ಪಿಪೀಲಿಕಾಜಾತ್ಯಾದಿ ಮಂತ್ರಂಗಳಿಂ ಕ್ರಿಯಾಯುಕ್ತಮಾಗೆ ಪೇೞ್ದು: **ಆದಿಪು,** ೧೫. ೧೬ ವ)

ಉಪೇಂದ್ರ – [ನಾ] ಕೃಷ್ಣ (ಪೊಡೆಮಟ್ಟು ಪಸಾದಮೆಂದ ಹರಿಗನಂ ಉಪೇಂದ್ರಂ ಆ ದರ್ಭಶಯನತಳಕಿಟೆಸುವುದುಂ: **ಪಂಪಭಾ,** ೧೧. ೧೩೧)

ಉಪೇಕ್ಷಿಸು – [ಕ್ರಿ] ಅಲಕ್ಷಿಸು (ಅಧರ್ಮಯುದ್ಧದೆ ನರಂ ಕೊಲ್ವಲ್ಲಿ ಕಂಡು ಇಂತು ಉಪೇಕ್ಷಿಸಿ ನೀಮುಂ ನಡೆ ನೋಡುತ್ತಿರ್ದಿರಿ ಎನೆ ಮತ್ತಿನ್ನಾರಂ ನಂಬುವೆಂ: **ಪಂಪಭಾ,** ೧೧. ೮೩)

ಉಪೇತ – [ಗು] ಕೂಡಿದ (ಆತನ ಸಾರೆ ಕಮಂಡಲು ಕೇತನಂ ಅಂಬರಮಂ ಅಡರೆ ಚತುರಂಗಬಲ ಉಪೇತಂ ಅತಿಧವಳರಥಂ ಅಭಿಜಾತಂ: **ಪಂಪಭಾ,** ೧೦. ೫೫)

ಉಪ್ಪಟ – [ನಾ] ಶ್ರೇಷ್ಠ ವಸ್ತ್ರ (ತುಡುಗೆ ನಿಚ್ಚಲುಂ ಪಂಚರತ್ನಂಗಳುಂ ಪೊಱಮಡೆ ತನ್ನುಡುವ ಉಪ್ಪಟಂಗಳ್ ಮಡಿಯೊಳಾಗೆಯುಂ: **ಪಂಪಭಾ,** ೧೪. ೫೫)

ಉಪ್ಪವಡಿಸು – [ಕ್ರಿ] ನಿದ್ದೆಯಿಂದ ಎಚ್ಚರಗೊಳ್ಳು (ಉಪ್ಪವಡಿಸಿ ಮಜ್ಜನ ಮಂಡನವಿಧಿಯಂ ಲತಾಂಗಿ ನಿರ್ವರ್ತಿಸಿ ಭೂಮಂಡಳಪತಿಗೞೆಪಿದೊಡೆ: **ಆದಿಪು,** ೭. ೨೮)

ಉಪ್ಪಿಕ್ಕಿದೊಡೆ ತುಪ್ಪದ ಮೆಟ್ಟಿಡಿತು – ಉಪ್ಪು ಹಾಕಿದರೆ ತುಪ್ಪಕ್ಕೆ ಕೇಡು ಎಂಬ ಗಾದೆ (ಭೀಮಸೇನಂ ಧರ್ಮಪುತ್ರಂಗೆಂದಂ ಉಪ್ಪಿಕ್ಕಿದೊಡೆ ತುಪ್ಪದ ಮೆಟ್ಟಿಡಿತೆಂಬಂತೆ ನಮ್ಮ ಕೆಮ್ಮನಿರ್ಪಿರಿದೇ ಕಾರಣಂ: **ಪಂಪಭಾ,** ೭. ೧೬ ವ)

ಉಬ್ಬದಿಗ – [ನಾ] ಉದ್ವೇಗ, ಅತಿಶಯ (ಸಾರ್ಚಿದಗಲ್ಕೆಯೊಳಿಂತು ಬೇಟದ ಉಬ್ಬದಿಗಮನಾಂತ ನಲ್ಲಳ ಮುಖಾಂಬುಜಮಂ ನಡೆ ನೋಡಿ ನೋಡಿ: **ಆದಿಪು,** ೧೨. ೨೫)

ಉಬ್ಬರ – [ನಾ] [ಶತ್ರುಗಳ] ಆವೇಶ? (ಉಬ್ಬರಮೆಂಬಿವನಱಿದು ಇಱಿದರ್ ಪೆಣಬಣಂಬೆಗಳ್ ನೆಗೆವಿನೆಗಂ: **ಪಂಪಭಾ,** ೧೦. ೮೨)

ಉಬ್ಬರಮುರಿ – [ಕ್ರಿ] ಅತಿಶಯ ಗರ್ವದಿಂದ ಕೂಡಿರು (ಬಿರುದರಂ ಅದಟಿನೊಳ್ ಉಬ್ಬರಮುರಿವರಂ ಆಯ್ದಱಿಸಿಕೊಂಡುವು ಅರಿಗನ ಕಣೆಗಳ್: **ಪಂಪಭಾ,** ೧೨. ೧೧೪)

ಉಬ್ಬರಿಸು – [ಕ್ರಿ] ಅಧಿಕವಾಗು, ವೆಗ್ಗಳವಾಗು (ಮೆಯ್ಯಂಕುರಿಸೆ ಸುರಿವ ಅಶ್ರುಜಲಂ ಉಬ್ಬರಿಸಿ ಪೊನಲ್ ಪೊನಲನಟ್ಟೆ ಜನನುತೆಗಾಗಳ್: **ಪಂಪಭಾ,** ೯. ೭೪)

ಉಬ್ಬೆಗ – [ನಾ] [ಉದ್ವೇಗ] ದುಃಖ (ಇನಿತು ಉಬ್ಬೆಗಂ ಮೊಗಂ ಬಾಡೆ ತಗುಳ್ದು ಸೂಚಿಸಿದುವಾ ದಿವಿಜಂಗವಸಾನಕಾಲಮಂ: **ಆದಿಪು**, ೩. ३); ಚಿಂತೆ (ಉಪಶಾಂತವಚನಂಗಳಿಂದಂ ಆಕೆಯ ಉಬ್ಬೆಗಮನಾಱಿ ನುಡಿದುಂ ಮುನಜನಮೆಲ್ಲಂ: **ಪಂಪಭಾ**, ೨. ೨೮ ವ)

ಉಭಯಗಿರಿ – [ನಾ] [ಪೂರ್ವ ಪಶ್ಚಿಮಗಳ ಎರಡೂ ಪರ್ವತ (ಆಚಂದ್ರಾರ್ಕಪ್ರತೀತ ಉಭಯಗಿರಿಶಿಖರಾತ್ ಸ್ವೋದಯಸ್ಯೈಕಹೇತೋಃ: **ಪಂಪಭಾ,** ೧೪. ೨೭)

ಉಭಯತಟ – [ನಾ] [ನದಿಯ] ಎರಡೂ ದಡಗಳು (ಮಹಾನದ್ಯುಭಯತಟ ಮೃದುಮೃತ್ಸ್ನಾವಿಲಸಿತ ವೇದಿಕಾವಿರಾಜಮಾನದೊಳ್: **ಆದಿಪು,** ೮. ೬೭ ವ)

ಉಭಯೋಪಧಾನ – [ನಾ] ಎರಡೂ ಕಡೆಯ ದಿಂಬುಗಳು (ದುಕೂಲೋಪಪ್ರಚ್ಛಾದಿತ ವಿಚಿತ್ರ ನೇತ್ರ ಉಭಯೋಪಧಾನಶಯ್ಯಾತಳದೊಳ್: **ಆದಿಪು,** ೫. ೨೨ ವ)

ಉಮ್ಮಚ್ಚ – [ನಾ] [ಉನ್ಮತ್ತ] ಕೋಪ, ಅಸಮಾಧಾನ (ಮಱೆವುದು ಮನದ ಉಮ್ಮಚ್ಚಮಂ ಅಜ್ಜ ನಿಮ್ಮಂ ಎರೆಯಲೆ ಬಂದೆಂ: **ಪಂಪಭಾ,** ೧೨. ೫೪)

ಉಮ್ಮಚ್ಚರ – [ನಾ] ತೀವ್ರ ಕೋಪ (ಮದ್ರರಾಜಂ ಉಮ್ಮಚ್ಚರದೊಳ್ ಉಮ್ಮನೆ ಬೆಮರ್ತು ಕಿನಿಸಿ ಕಿಂಕಿರಿವೋಗಿ: **ಪಂಪಭಾ,** ೧೨. ೯೧ ವ)

ಉಮ್ಮನೆ – [ಗು] [ಊಷ್ಮ>ಉಮ್ಮ] ಬಿಸಿಬಿಸಿಯಾಗಿ (ಆ ಮಾತಿಂಗೆ ಮಱುಮಾತುಗುಡಲಱಿಯದೆ ಪಂದೆಯಂ ಪಾವಡರ್ದಂತೆ ಉಮ್ಮನೆ ಬೆಮರುತ್ತುರ್ದ ಕರ್ಣನಂ ದುರ್ಯೋಧನಂ ಕಂಡು: **ಪಂಪಭಾ,** ೨. ೮೨ ವ)

ಉಮ್ಮಳ – [ನಾ] ದುಃಖ (ಸಿಡಿಲವೊಲ್ ಎಱಗುವ ನರಗನ ಪಡೆಗೆ ಅಗಿದು ಉಮ್ಮಳದಿಂ ಉಂಡೆಡೆಯೊಳ್ ಉಣ್ಣದೆಯುಂ ಕೆಡೆದೆಡೆಯೊಳ್ ಕೆಡೆಯದೆಯು ನಿಂದೆಡೆಯೊಳ್ ನಿಲ್ಲದೆಯುಂ ಓಡಿದಂ ಮಹೀಪಾಲಂ: **ಪಂಪಭಾ,** ೧. ೩೭)

ಉಮ್ಮಳಿಕೆ – [ನಾ] ಉಮ್ಮಳ (ನೀರೊಳ್ ಮುಟುಂಗಿದರಂತೆ ಉಮ್ಮನೆ ಬೆಮರುತ್ತುಂ ಉಮ್ಮಳಿಕೆವಂದು ಬೆಚ್ಚನೆ ಸುಯ್ವೊಡೆ: **ಪಂಪಭಾ,** ೪. ೬೪ ವ)

ಉಮ್ಮಳಿಸು – [ಕ್ರಿ] ದುಃಖಿಸು (ಅತ್ತ ಮನುಜಮನೋಜನುಂ ಮದನಪರಿತಾಪಕ್ಕಾಱದೆ ಉಮ್ಮಳಿಸಿ ಮಧುಮಥನನ ಕಣ್ಣಂ ಬಂಚಿಸಿ .. .. ವನಮಂ ಎಯ್ದೆವಂದು: **ಪಂಪಭಾ,** ೫. ೧೦ ವ); [ಕ್ರಿ] ಗಾಬರಿಗೊಳ್ಳು (ಇತ್ತ ಧರ್ಮಪುತ್ರಂ ಸಹದೇವಂ ತಡೆದುದರ್ಕೆ ಉಮ್ಮಳಿಸಿ ನಕುಲನ ಮೊಗಮಂ ನೋಡಿ: **ಪಂಪಭಾ,** ೮. ೩೯ ವ); [ಕ್ರಿ] ಆಲೋಚಿಸು (ಅಳವಿನೊಳ್ ಎನ್ನುಮಂ ಇನಿಸಗ್ಗಳಿಸಿದ ಹರಿಗನೊಳ್ ಇದಿರ್ಚಿ ಕರ್ಣಂ ಗೆಲಲ್ ಉಮ್ಮಳಿಪಂ ಗಡ: **ಪಂಪಭಾ,** ೧೨. ೧೪೪)

ಉಯ್ – [ಕ್ರಿ] ತೆಗೆದುಕೊಂಡು ಹೋಗು (ತನ್ನ ತಳದೊಳ್ ತೆಮಳ್ದಿಕೊಂಡು ತುಂಬಿಯ ಬಂಬಲ್ಗಳಂ ಕೆಂದಾವರೆಯ ಅರಲ್ಗಳೊಳ್ ಪುದಿದು ಉಯ್ವಂತೆ ಉಯ್ದು: **ಆದಿಪು,** ೨. ೩೯ ವ); [ಕ್ರಿ] ಕರೆದುಕೊಂಡು ಹೋಗು (ಸಭಾಲಯಮಂ ನಿಜರಾಜಲೀಲೆಯೊಳ್ ಕೂಡಿ ಯುಧಿಷ್ಠಿರಪ್ರಭುಗೆ ತಾನೆ ಸುಯೋಧನಂ ಉಯ್ದು ತೋಱಿದಂ: **ಪಂಪಭಾ**. ೬. ೬೯)

ಉಯ್ಯಲ್ – [ನಾ] ಉಯ್ಯಾಲೆ (ಉಣ್ಮುವ ಉಯ್ಯಲ ಪೊಸಗಾವರಂ ಪುಗಿಲೊಳ್ ಏಂ ಎಸೆದತ್ತೋ ಬಸಂತಮಾಸದೊಳ್: **ಪಂಪಭಾ,** ೨. ೧೨)

ಉರ – [ನಾ] ಎದೆ (ಮೃಗಪದಪತ್ರಲೇಖೆಗಳಂ ಏಕೆಗೆ ತಾಳ್ದಿರದಾದುವು ಈ ಕದಂಪುಗಳ್ ಉರಮೇಕೆ ಹಾರಮಣಿಮಂಜರಿಯಿಲ್ಲದೆ ಬಿನ್ನಗಿರ್ದುದು: **ಪಂಪಭಾ,** ೪. ೬೨)

ಉರಃಸ್ಥಲ – [ನಾ] ಎದೆಯ ಪ್ರದೇಶ (ಆ ದುಶ್ಶಾಸನ ಉರಃಸ್ಥಲ ಉಚ್ಛ್ವಸಿತ ಅಸೃಕ್ ಜಲಪಾನಮಂ ಬಯಸಿ ಬಾಯ್ ತೇರ್ಸೈಸೆ ಸೈತಿರ್ಪನೇ: **ಪಂಪಭಾ,** ೭. ೫೮)

ಉರಗ – [ನಾ] ಎದೆಯಿಂದ ಚಲಿಸುವಂಥದು, ಹಾವು (ಮಂತ್ರಪದಕ್ಕೆ ಉರಗಂ ಸುಗಿವಂತೆವೊಲ್ ಅಗಿದು ಸುಗಿದು ತಲೆಗರೆದಿರ್ಪಂ: **ಪಂಪಭಾ,** ೭. ೪೩)

ಉರಗರಾಜ – [ನಾ] ನಾಗರಾಜ, ವಾಸುಕಿ (ರಸೆಯಿಂದಮೊಗೆದು ಪೆಡೆಗಳ್ ಪೊಸಮಾಣಿಕದ ಎಳವಿಸಿಲ್ಗಳೊಳ್ ಪೊಸದಳಿರೊಳ್ ಮುಸುಕಿದ ತೆಱದಿಂದೆಸೆದಿರೆ ಪೊಸತೆನೆ ನಡೆ ನೋಡಲ್ ಉರಗರಾಜಂ ಬಂದಂ: **ಪಂಪಭಾ,** ೧೨. ೧೪೧)

ಉರಗೌಘ – [ನಾ] ಹಾವುಗಳ ಸಮೂಹ, ನಾಗದೇವತೆಗಳ ಸಮೂಹ (ಮೇಘಮುಖರೆನಿಸಿ ಸಂದ ಉರಗೌಘನಂದೋಘಮೇಘಂ ಆದೊಡೆ ಮಟಿ ಶೌರ್ಯಾಘಾತಂ ನೆಗಟಿ: **ಆದಿಪು,** ೧೪. ೭೧)

ಉರಚಲ್ಲಿ – [ನಾ] ಎದೆಗೆ ಕಟ್ಟಿಕೊಳ್ಳುವ ಕನ್ನಡಿ (ಅಮರಿ ನರ್ತಿಸೆ ಚೆಲ್ವಂ ಪುದಿದು ಉರಚಲ್ಲಿಯೊಳೆಸೆದುದು ತತ್ ಉರೋಜ ಸರೋಜಮುಕುಳ ಯುಗಸಂಚಳನಂ: **ಆದಿಪು,** ೭. ೧೯)

ಉರದೆಡೆ – [ನಾ] [ಉರದ+ಎಡೆ] ಎದೆಯ ಪ್ರದೇಶ (ನರನ ರಥಮಂ ಪಡುವು ಎಣ್ಗಾವುದುವರಂ ಸಿಡಿಲ್ವಿನಂ ಎಚ್ಚು ಅಚ್ಚುಡಿಯೆ ಭುಜಬಲದ ಹರಿಯ ಉರದೆಡೆಯಂ ಬಿರಿಯೆಚ್ಚು ಮೆಱೆದಂ ಅಳವಂ ಭೀಷ್ಮಂ: **ಪಂಪಭಾ,** ೧೧. ೨೦)

ಉರಸ್ತಟ – [ನಾ] ಎದೆಯ ಪ್ರದೇಶ (ಜಟಮಟಿಸಿಕೊಂಡು ನಿಮ್ಮೀ ಘಟಿಯಿಸುವ ಈ ಸಂಧಿ ಕೌರವರ್ಕಳೊಳ್ ಎನ್ನಿಂ ಘಟಿತ ಜರಾಸಂಧ ಉರಸ್ತಟ ಸಂಧಿವೊಲ್ ಒಂದೆ ಪೊಟ್ಟಿಱಿಗೊಳ್ ವಿಘಟಿಸದೇ: **ಪಂಪಭಾ,** ೯. ೨೩)

ಉರಸ್ಥಳ – [ನಾ] [ಉರಃ+ಸ್ಥಳ] ಎದೆಯ ಪ್ರದೇಶ ಅರಳಿದ (ಸಾಲಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್

ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಸ್ಥಳಂ: **ಪಂಪಭಾ,** ೧. ೬೮)

ಉರಿ – [ನಾ] ಕೆಂಡ (ಪದ್ಮರಾಗದ ಪೊಸಗೆಂಪಂ ಮಾಂಸಮೆಂದು ಮುಂ ಕರ್ದುಕಲ್ಕೆ ಆಟಿಸಿಯುಂ ಬಟಿಕದನುರಿಯೆಂಬ ಸಂಕೆಯಿಂ ಪೊರ್ದದಿರ್ದುವೀ ಮತ್ಸ್ಯಂಗಳ್: **ಆದಿಪು** ೧೨. ೧೨೨); [ನಾ] ಜ್ವಾಲೆ (ಉರಿ ಮುಟ್ಟಿದರಳೆಯಂತೆ ಅಂತಂಬರಂ ಉರಿದತ್ತು: **ಪಂಪಭಾ,** ೧೦. ೩೫ ವ)

ಉರಿಗೇಸಂ – [ನಾ] ಉರಿಯಂತಹ ಕೇಶವುಳ್ಳವನು (ಕಾರಿರುಳ ತಿರುಳ ಬಣ್ಣ ಕೂರಿದುವೆನೆ ತೊಳಪ ದಾಡೆ ಮಿಳಿರ್ವ ಉರಿಗೇಸಂ ಪೇರೊಡಲ್ ಎಸೆದಿರೆ ಪುಟ್ಟಿದಂ ಆರುಂ ಅಗುರ್ವಿಸೆ ಮಗಂ ಘಟೋತ್ಕಚನೆಂಬಂ: **ಪಂಪಭಾ,** ೩. ೨೦)

ಉರಿದತ್ತು – [ಕ್ರಿ] ಉರಿದುಹೋಗುತ್ತದೆ (ಕೀಲೊಳೆ ಕಿರ್ಚು ಪುಟ್ಟಿ ಭೋರ್ಗರೆದುರುವಂತೆ ನಿನ್ನ ಮಗನಿಂದ ಉರಿದತ್ತು: **ಪಂಪಭಾ,** ೭. ೧೬)

ಉರಿಪು – [ಕ್ರಿ] ಉರಿಯುವ ಹಾಗೆ ಮಾಡು (ಹೋಮಾಗ್ನಿಯಂ ಎಱಂಕೆಯ ಗಾಳಿಯಿಂ ನಂದಲೀಯದುರಿಪುವ ರಾಜಹಂಸೆಗಳುಮಂ: **ಪಂಪಭಾ,** ೧. ೧೧೫ ವ)

ಉರಿಮಾಲೆ – [ನಾ] ಉರಿಯುವ ಹಾರ (ಸುತ್ತುಲುಮುರಿಮಾಲೆಗಳೆನೆ ಪೊತ್ತಿಸಿದವೊಲಳುರೆ ತಪನಕಿರಣಾಳಿ ಮುನೀಂದ್ರೋತ್ತಮ ಗುರು ಕಲ್ಲೆನೆ ನಿಂದೆತ್ತಿದ ಬೆಳ್ಗೊಡೆಯ ನೆಟಿಲೊಳಿರ್ಪಂತಿರ್ದಂ: **ಆದಿಪು,** ೬. ೩೧)

ಉರಿವರಿ – [ಕ್ರಿ] ಉರಿಯ ಹಾಗೆ ಉಲ್ಬಣಗೊಳ್ಳು (ಬೀರಂ ಆತನಿಂ ಉರಿವರಿದತ್ತು ಚಾಗಂ ಅವನಿಂದೆಸೆದತ್ತು ಸಮಸ್ತಧಾತ್ರಿಯೊಳ್: **ಪಂಪಭಾ,** ೯. ೬೧)

ಉರಿವುರಿ – [ನಾ] [ಉರಿ+ಪುರಿ] ಉರಿಯ ಹುರಿ (ಏಱುಂ ಮಾಳವಮಂ ಪಾಱಿಕೇಟಿ ತಗುಳ್ದಿಱಿದು ನರಗನುರಿಪಿದೊಡೆ ಕರಿಂ ಕೇಟಿಸಿದಂ ಆತನ ತೇಜದ ಬೀಟಿಲಂ ಅನುಕರಿಪುವಾದುವೊಗೆದು ಉರಿವುರಿಗಳ್: **ಪಂಪಭಾ,** ೧. ೩೫)

ಉರು – [ಗು] ಕಠಿಣ (ಪೊಕ್ಕು ಉಡಿವೆಂ ಪಿಂಗಾಕ್ಷನ ಊರುದ್ವಯಮಂ ಉರು ಗದಾಘಾತದಿಂ ನುಚ್ಚು ನೂಱಾಗೆ ಒಡೆವೆಂ ತದ್ರತ್ನರಶ್ಮಿಪ್ರಕಟಮಕುಟಮಂ: **ಪಂಪಭಾ,** ೭. ೧೩)

ಉರುಳಿ – [ನಾ] ಉಂಡೆ (ಪುಳಿಯೊಳ್ ಅಲೆದ ಪವಳದ ಬಟ್ಟನಂತೆ ಸೊಗಯಿಸುವ ಸಂಸಾರಸಾರೋದಯಯನ ಬಿಂಬಾಧರಂ ಅನಂಗರಾಗರಸದ ಉರುಳಿಯಂತಾದುದು: **ಪಂಪಭಾ,** ೨. ೩೯ ವ)

ಉರುಳಿಗುರುಳ್ – [ನಾ] [ಉರುಳಿ+ಕುರುಳ್] ಗುಂಗುರು ಕೂದಲು (ಸುರ್ಕಟಿದ ಉರುಳಿಗುರುಳ್ ನಸುಸುರ್ಕಿದ ಕುಚಚೂಚುಕಂ ಬೆಳರ್ತಧರಂ ನೀರ್ ಪೋರ್ಕುಳಿಯೊಳ್ ಜೋಲ್ದ ಉಳ್ಳುಡೆ: **ಆದಿಪು,** ೧೧. ೧೪೯)

ಉರೋಜ – [ನಾ] ಮೊಲೆ (ಅಮರಿ ನರ್ತಿಸೆ ಚೆಲ್ವಂ ಪುದಿದು ಉರಚೆಲ್ಲಿಯೊಳೆಸೆದುದು ತದುರೋಜ ಸರೋಜಮುಕುಳ ಯುಗಸಂಚಳನಂ: **ಆದಿಪು,** ೭. ೧೯)

ಉರೋದಘ್ನ – [ಗು] ಎದೆ ಮುಟ್ಟುವಷ್ಟು [ಆಳ] (ಈದಲೆಯೊಳೆ ನಿಂದು ಸತಿಗೆ ಹರಿಗಂ ತೋಱುತ್ತ ಆದರದೆ ಜಾನುದಘ್ನಂ ಉರೋದಘ್ನಂ ಕಂಠದಘ್ನಮೆಂಬ ಅಳವಿಗಳಂ: **ಪಂಪಭಾ,** ೫. ೫೩)

ಉರೋಮಣಿ – [ನಾ] ಆನೆಯ ಗಂಟಲು ಮತ್ತು ಎದೆಗಳ ನಡುವಣ ಭಾಗ (ಪೀನೋಪಚಿತಮಾಂಸವಿಕ್ಷೋಭನುಂ ನಾಭಿಕಪೋಳ ಉರೋಮಣಿಯುಂ: **ಆದಿಪು,** ೧೨. ೫೬ ವ)

ಉರೋರುಹ – [ನಾ] ಮೊಲೆ (ಸ್ಫುರದೀಷತ್ ಪ್ರೋದ್ಗತ ಉರೋರುಹಮುಕುಳೆಯರ್ ಉನ್ನತ್ತಹಂಸೀಕ್ವಣತ್ ನೂಪುರೆಯರ್: **ಆದಿಪು,** ೮. ೫೬)

ಉರ್ಕು – [ನಾ] ಕೆಚ್ಚು (ಅಶನಿ ಹರಿ ದಿನಪೋದಯಮೆನಿಸಿದುದು ವಿದ್ಯೆಯೊಂದು ಉರ್ಕು ಅವರಾ: **ಆದಿಪು,** ೩. ೭೫); ಉತ್ಸಾಹ (ಕೊಡೆ ತಟಿ ತಳ್ತ ಸೀಗುರಿ ಕರೀಂದ್ರಘಟಾಳಿ ತುರಂಗಸೈನ್ಯಂ ಉರ್ಕುಡುಗದೆ ಬರ್ಪ ನಾಯಕಬಲಂ: **ಆದಿಪು,** ೪. ೯೨); [ನಾ] ಹಿಗ್ಗು (ಅನಿತೊಂದುರ್ಕಿನೊಳ್ ಉರ್ಕಿ ಕೌರವಖಳರ್ ಪಾಂಚಾಳರಾಜಾತ್ಮಜಾನನಪದ್ಮ ಗ್ಲಪನೈಕ ಕಾರಣಪರರ್ ತಾಮಾಗೆಯುಂ: **ಪಂಪಭಾ,** ೭. ೯); [ನಾ] ಗರ್ವ (ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋಳ್ವಲದ ಪೊಡರ್ಪು: **ಪಂಪಭಾ,** ೧೦. ೨೩)

ಉರ್ಕುಗಿಡು – [ಕ್ರಿ] ಎದೆಗುಂದು (ಕವಿದುವು ಸಪ್ತಸಾಗರಜಲಂಗಳೆ ಲೋಕಮಂ ಎಂಬಿನಂ ಕವಿದು ಮುಗಿಲ್ಗಳಲ್ಲಿ ಕಱಿಯುತ್ತಿರೆ ಪಾವಕಂ ಉರ್ಕುಗೆಟ್ಟು: **ಪಂಪಭಾ,** ೫. ೯೬)

ಉರ್ಚಿಕೊಳ್ – [ಕ್ರಿ] ಒರೆಯಿಂದ ಅಥವಾ ಬತ್ತಳಿಕೆಯಿಂದ ಸೆಳೆದುಕೋ (ತನಗೆ ವಿನಾಯಕಂ ದಯೆಯಿನಿತ್ತ ಜಯಾಸ್ತ್ರಮಂ ಉರ್ಚಿಕೊಂಡು ಭೋಂಕೆನೆ ಶರಾಸನದೊಳಾಂತು ಅದನಾಗಡೆ ಪೂಡಿ .. .. ಎಚ್ಚೊಡೆ: (**ಪಂಪಭಾ,** ೧೨. ೧೬೮)

ಉರ್ಚಿಪಾಯ್ – [ಕ್ರಿ] ರಭಸದಿಂದ ಚಿಮ್ಮು (ಭುಗಭುಗನೆ ಉರ್ಚಿಪಾಯ್ವ ಬಿಸುನೆತ್ತರ ಸುಟ್ಟುರೆಯಂ ನೆಲಕ್ಕೆ ಪರ್ದುಗಳ್ ಉಗಲೀಯದೆ ಅವ್ವಳಿಸಿ ಪೀರ್ವಿನಂ: **ಪಂಪಭಾ,** ೧೦. ೮೦)

ಉರ್ಚಿಪೋಗು – [ಕ್ರಿ] ಕಳಚಿಹೋಗು (ಕೆಚ್ಚುವಿರ್ದ ಮಚ್ಚುಮಂ ಉರ್ಚಿಪೋದ ಮೇಳಮುಮಂ ಅಳವಿಗೆಟಿದಲಂಪುಮಂ: **ಆದಿಪು,** ೪. ೫೨ ವ); [ಕ್ರಿ] ಭೇದಿಸು (ವಜ್ರಕೀಟಂಗಳ್ ಕರ್ಣನೆರಡುಂ ತೊಡೆಯುಮಂ ಉಳಿಯನೂಱಿ ಕೊಡತಿಯೊಳ್ ಬೆಟ್ಟಿದಂತೆ ಅತ್ತಂ ಇತ್ತಂ ಉರ್ಚಿಪೋಗೆಯುಂ: **ಪಂಪಭಾ,** ೧. ೧೦೪ ವ

ಉರ್ಚಿಮುಕ್ಕು – [ಕ್ರಿ] ಕಿತ್ತು ತಿನ್ನು (ತಕ್ಕಿನ ಅಭಿಮನ್ಯುವ ಕೂರ್ಗಣೆ ಪಾಯ್ದು ನುಂಗಲುಂ ನೊಣೆಯಲುಂ ಉರ್ಚಿಮುಕ್ಕಲುಂ ಇದೇಂ ನೆಱಿ ಕಲ್ತುವೊ ಯುದ್ಧರಂಗದೊಳ್: **ಪಂಪಭಾ** ಪರಿಷತ್ತು, ೧೧. ೯೪)

ಉರ್ಚು – [ಕ್ರಿ] ತೆರೆ (ಆ ರಜತಾದ್ರಿಮುದ್ರಿತ ಮಹೀತಳಮಂ ಬೆಸಕಯ್ಸಿ ತದ್ಗುಹಾದ್ವಾರಮನುರ್ಚಿಪೋಗಿ ವಿಜಿತೋತ್ತರಭೂತಳಂ: **ಆದಿಪು,** ೧೪. ೩೯ ವ); [ಕ್ರಿ] ಹೊಮ್ಮು (ಫಣೀಂದ್ರಾಳಯದಿಂದಂ ಉರ್ಚಿದ ಫಣಾಮಣಿಮಂಗಳರಶ್ಮಿಯೋ ಕರಂ ಮೇಳಿಸಿದಪ್ಪುದು ಎನ್ನೆರ್ದೆಯಂ ಎಂದು ಬೊದಿಲ್ಲನೆ ಪಾಯ್ದು: **ಪಂಪಭಾ,**

೧. ೯೬); [ಕ್ರಿ] ಸೀಳು (ಅರಿವ ನಡುವ ಉಡಿವ ಉರ್ಚುವ ನಟ್ಟು ತೊನೆವ ಕಣ್ಗಳ್ಗೆ ಮೊಗಂದಿರಿಯದೆ: **ಪಂಪಭಾ,** ೧೦. ೭೪); [ಕ್ರಿ] ಹೊರಕ್ಕೆ ತೆಗೆ (ಮುಳಿದು ತಳಮಳಿಸಿ ತಳರದೆ ತೊಳಗುವ ಕರವಾಳಂ ಉರ್ಚಿ ಮೆಯ್ವೆರ್ಚಿ .. .. ಅವನಿಪತಿಯಂ ಅಣುಗಿಜೆ ಪೊಯ್ದಂ: **ಪಂಪಭಾ,** ೧೩. ೪೭); [ಕ್ರಿ] ಚುಚ್ಚು (ಇಡಿದಿರೆ ರೋಮಕೂಪದೊಳಗೆ ಉರ್ಚಿದ ಸಾಲ ಸರಲ್ಗಳುಂ ತೆಱಂಬಿಡಿದಿರೆ ಬೆಟ್ಟು ಒರ್ಗುಡಿಸಿದಂತೆ ನೆಱಲ್ದಿರೆ: **ಪಂಪಭಾ,** ೧೩, ೬೨); [ಕ್ರಿ] ಒಳಗೆಳೆದುಕೊ [ತಲೆ] ತಪ್ಪಿಸಿಕೊ (ಅಲ್ಲದೆ ಉಂತೆ ತಲೆಯುರ್ಚುಗುಮೇ ರಣರಂಗಭೂಮಿಯೊಳ್: **ಪಂಪಭಾ,** ೧೩. ೭೫)

ಉರ್ಬು – [ನಾ] ಉಬ್ಬು, ಉಬ್ಬರದಲೆ (ಅಂಬರಾಂಭೋನಿಧಿಯೊಳ್ ನೆಗೆದುರಿವ ದೌರ್ವಾನಳನ ಉರ್ಬುಗಳೆನಲುಂ ನೆಗೆದುವು ಅಹಿಮಹಿಮಕರಬಿಂಬಂ: **ಆದಿಪು,** ೬. ೫೨); [ನಾ] ಉಬ್ಬಿರುವಿಕೆ (ತನು ರೂಪ ವಿಭವ ಯೌವನ ಧನ ಸೌಭಾಗ್ಯ ಆಯುರಾದಿಗಳ್ಗೆಣೆ ಕುಡುಮಿಂಚಿನ ಪೊಳೆಪು ಮುಗಿಲ ನೆಟಿಲ್ ಇಂದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ: **ಆದಿಪು,** ೯. ೯. ೪೬)

ಉರ್ವರಾಶ್ರೀ – [ನಾ] ಭೂಮಿಯೆಂಬ ಲಕ್ಷ್ಮಿ (ನೀ ತಲೆವೀಸದೆ ಉರ್ವರಾಶ್ರೀಯಂ ಇದಾಗದೆನ್ನದೆ ಒಳಕೊಳ್ ಪರಮೋತ್ಸವದಿಂ ಗುಣಾರ್ಣವಾ: **ಪಂಪಭಾ,** ೧೪. ೧೭)

ಉರ್ವರೆ – [ನಾ] ಭೂಮಿ (ಕೆಂಬಣ್ಣದ ಕುದುರೆಗಳೊಳ್ ಒಡಂಬಡೆ ನಿಜರಜತರಥಂ ಅಗುರ್ವು ಉರ್ವರೆಯಂ ತಿಂಬೆ: **ಪಂಪಭಾ,** ೧೦. ೫೪)

ಉರ್ವಿ – [ನಾ] ಭೂಮಿ (ತೋಡುವೆಂ ಒರ್ವನ ಒಳ್ಗರುಳಂ ಉರ್ವಿಗೆ ನೆತ್ತರನೆತ್ತಿ ಪೀರ್ದು ವಿದಾರ್ಡುವೆಂ ಒರ್ವನ ಊರುಗಳಂ ಎನ್ನ ಗದಾಶನಿಘಾತದಿಂದೆ ನುರ್ಗಾಡುವೆಂ: **ಪಂಪಭಾ,** ೯. ೨೪)

ಉರ್ವೀತಳ – [ನಾ] ಭೂಪ್ರದೇಶ (ಮತ್ತ ಮಾತಂಗ ಪದನಖ ಖರ್ವಿತ ಉರ್ವೀತಳಮುಂ ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಯತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ,** ೧೩. ೫೧)

ಉರ್ವೀಧರ – [ನಾ] ಬೆಟ್ಟ (ಉರ್ವೀಧರರನಿರುದ್ಧಂಗಳಪ್ಪ ಖರ್ವಡಂಗಳುಮಂ: **ಆದಿಪು,** ೮. ೬೩ ವ); [ಗು] ಭೂಮಿಯನ್ನು ಹೊತ್ತಿರುವ (ಸಮಸ್ತ ಉರ್ವೀಧರ ಅಶೇಷ ಶೇಷ ಮಹಾನಾಗ ಫಣಾದ್ಯುತಿಯನೇಂ ಖದ್ಯೋತದೊಳ್ ಕಾಣ್ಬರೇ: **ಪಂಪಭಾ,** ೫. ೭೬)

ಉರ್ವೀಪತಿ – [ನಾ] ಜಗದೊಡೆಯ, ಪರಮ (ಸರ್ವಸ್ವಮುಮಂ ಕುಡದಿರಲುರ್ವೀಪತಿ ಬಂದೊಡೆ ಆಗದು ಎಂದು ಅತಿಭಕ್ತರ್ ಖರ್ವಡನಿವಾಸಿಗಳ್: **ಆದಿಪು,** ೯. ೧೨೮); [ನಾ] ಭೂಮಿಯ ಒಡೆಯ, ರಾಜ (ಆ ಪ್ರಸ್ತಾವದೊಳ್ ತನ್ನ ದೋರ್ವಲದ ಅಗುರ್ವಿನೊಳ್ ಉರ್ವೀಪತಿಯಂ ಇಂತೆಂದಂ: **ಪಂಪಭಾ,** ೧೦. ೩೮ ವ)

ಉರ್ವೀಭಾರ – [ನಾ] ರಾಜ್ಯಭಾರ, ರಾಜ್ಯದ ಹೊಣೆಗಾರಿಕೆ (ನಿಜತನೂಜಂ ಅಜಿತಂಜಯಂಗೆ ಜಯಜಯನಿನಾದ ಪೂರ್ವಕಂ ಉರ್ವೀಭಾರಮಂ ಕೊಟ್ಟು: **ಆದಿಪು,** ೩. ೬೫ ವ)

ಉರ್ವು – [ನಾ] ರಭಸ (ನನೆಕೊನೆಯ ತಳಿರಪೂವಿನ ಬನಮನಿತುಂ ಶಿಖೆಗಳಲುರೆ ಬೆಂಕೆಯ ಪೊಯ್ದು ಉರ್ವಿನೊಳೆ ಕೊರಗಿರ್ದ ಲತೆಗಳ ನನೆಕೊನೆಯನೆ ದಹನನಳುರ್ದು ಕೊನೆಗೊನೆಗೊಂಡಂ: **ಪಂಪಭಾ,** ೫. ೮೭); [ಕ್ರಿ] ಹಬ್ಬು, ವ್ಯಾಪಿಸು (ನಟ್ಟ ಕೂರ್ಗಣೆಯ ಬಿಣ್ಪೊಱೆಯಿಂದೆ ಬಟಿಲ್ದಂ ಉರ್ವಿ ಪೆರ್ವಿದಿರ ಸಿಡಿಂಬಿನೊಳ್ ಪುದಿದದೊಂದು ಕುಳಾಚಳದಂತೆ ಸಿಂಧುಜಂ: **ಪಂಪಭಾ,** ೧೧. ೪೪); [ಕ್ರಿ] ಮೇಲೇಳು (ಒಣಗಿದುದೊಂದು ಪೆರ್ವಿದಿರ ಪೆರ್ಪೊದಱೆಂ ಮೊರೆದು ಉರ್ವಿದ ಆಶುಶುಕ್ಷಿಣಿಯವೊಲ್ : **ಪಂಪಭಾ,** ೧೧. ೯೪); [ಕ್ರಿ] ವೆಗ್ಗಳವಾಗು, ತೀವ್ರವಾಗು (ಮತ್ತ್ರತಾಪಕ್ಕಿದಱೆಂದಂ ನೋಡ ಅಗುರ್ವು ಉರ್ವಿದುದು ಇದುವೆ ಮಹಾಭಾರತಕ್ಕಾದಿಯಾಯ್ತು: **ಪಂಪಭಾ,** ೧೨. ೧೫೬)

ಉಲಿ – [ಕ್ರಿ] ಮಾತನಾಡು (ಉಲಿವ ಜನದ ಕಳಕಳರವಮುಮಂ ಮೊಟಗುವ ಪಱೆಗಳುಮಂ ಬಾರಿಸಿ: **ಪಂಪಭಾ,** ೨. ೭೪ ವ); [ನಾ] ಶಬ್ದ (ಒದವಿದ ನೂಲ ತೊಂಗಲುಲಿ ದೇಸೆಯನಾಂತು ವಿಳಾಸದಿಂದಿಱುಂಕಿದ ನಿಱೆ ಗಂಡರಳ್ಳೆರ್ದೆಗಳಂ ತುಟಿವೋಜೆಯನುಂಟುಮಾಡುವಂದದೆ: **ಪಂಪಭಾ,** ೪. ೩೫)

ಉಲಿಪು – [ನಾ] ಧ್ವನಿ, ಕೂಗು (ಬೇಲಿಯ ಕೆಲದೊಳಲ್ಲದೆ ಪೆಱಗಣ ಉಲುಪಿಂಗಂ ಉಳ್ಳೊಳಕ್ಕಂ ಗೆಂಟಾಗಿ ಬೀಡಂ ಬಿಡಿಸಿ: **ಪಂಪಭಾ,** ೫, ೪೭ ವ)

ಉಲ್ಕ್ಯಾ[ಲ್ಕ] – [ನಾ] ಕೊಳ್ಳಿ, ಆಕಾಶದಿಂದ ಬೀಳುವ ಹೊಳೆಯುವ ವಸ್ತು (ಮಹಾಪ್ರಳಯ ಉಲ್ಕೋಪಮ ಮತ್ ಗದಾಹತಿಯಿಂ ಅತ್ಯುಗ್ರ ಆಜಿಯೊಳ್ ಮುನ್ನಂ ಈ ಖಳ ದುಶ್ಶಾಸನನಂ ಪೊರಳ್ಚಿ: **ಪಂಪಭಾ,** ೭. ೧೨)

ಉಲ್ಲಸತ್ – [ಗು] ಹೊರಸೂಸುವ (ವಿರಚಿತೋದ್ದಾಮ ಸುರಪತಿಧನುಬ್ರಾತಮಂ ಸುರುಚಿರಾಂಶೂಲ್ಲಸತ್ ರತ್ನಸಂಘಾತಮಂ: **ಆದಿಪು,** ೭. ೨೭ ರಗಳೆ)

ಉಲ್ಲುಳಿತ – [ಗು] ಚಲಿಸುವ (ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿಪರಿಮಳಮಿಳಿತ ಉಲ್ಲುಳಿತ ಅಳಿ ಜಲಜಮಾಯ್ತು ಆ ಜಳಜದೊಳಗೆ ಒಗೆದಂ ಹಿರಣ್ಯಗರ್ಭಂ: **ಪಂಪಭಾ,** ೧. ೫೯)

ಉಷ್ಟ್ರ – [ನಾ] ಒಂಟೆ (ವಾನರ ವಾರಣ ಉಷ್ಟ್ರ ಖರ ಮತ್ಸ್ಯ ಕಳೇವರ ಪೂತಿಗಂಧಮೇನೇನೊಳವುಳ್ಳುವೊಂದೆಡೆಗೆ ಬಂದುಂ ಅವಂದಿರ ಮೆಯ್ಯ ಗಂಧದುದ್ದಾನಿಗೆ ವಾರದು: **ಆದಿಪು,** ೫. ೯೦)

ಉಷ್ಣದೀಧಿತಿ – [ನಾ] ಬಿಸಿಯಾದ ಕಾಂತಿ (ಹಿಮಕರಂ ಆತ್ಮ ಶೀತರುಚಿಯಂ ದಿನನಾಯಕಂ ಉಷ್ಣದೀಧಿತಿಕ್ರಮಮಂ ಅಗಾಧವಾರಿಧಿಯೆ ಗುಣ್ಪಂ ಇಳಾವಧು ತನ್ನ ತಿಣ್ಪಂ ಬಿಸುಟಿಲ್ವೊಡಂ; **ಪಂಪಭಾ,** ೧. ೮೩)

ಉಷ್ಣಾಂಶು – [ನಾ] ಸೂರ್ಯ (ಉಷ್ಣಾಂಶುವಿನೂರ್ಧ್ವಗಾಂಶುನಿವಹಂ ಮೆಯ್ಯಿಟ್ಟು ಅಲರ್ಚುತ್ತುಂ ಇರ್ಪುದು: **ಪಂಪಭಾ,** ೪. ೨೨)

ಉಷ್ಣೀಷ – [ನಾ] ಪಾಗು, ಶಿರಸ್ತ್ರಾಣ (ಧವಳಹಯಂ ಧವಳರಥಂ ಧವಳ ಉಷ್ಣೀಷಂ ಶಶಾಂಕಸಂಕಾಶ ಯಶೋಧವಳಿತ ಭುವನಂ ತಾಗಿದಂ ಅವಯವದಿಂ ಬಂದು ಧರ್ಮತನಯನ ಬಲದೊಳ್: **ಪಂಪಭಾ,** ೧೧. ೩೯)

ಉಷ್ಮ – [ಗು] ಬಿಸಿಯಾದ (ಗುಹಾಗಹ್ವರನಿರ್ಜಜ್ಝರತ್ ಅಜಗರ ಗಳಗಳಿತ ಗರಳಶಬಳಿತಸಲಿಲ ಪ್ರವಾಹೆಯಂ ಪ್ರವಾಹಾತ್ಯುಷ್ಮ ತಾಪಹಸಿತ ಪ್ರಳಯಕಾಲ ಪ್ರೌಢತರತರಣಿಯಂ ವೈತರಣಿಯಂ: **ಆದಿಪು,** ೫. ೮೭ ವ)

ಉಸಿರ್ – [ಕ್ರಿ] ಉಸಿರಾಡು (ಅಲರ ಮಸುರಿಗೆಯೊಳ್ ಉಸಿರ್ದುರ್ ಉಳ್ಳರ್ದಡ್ಡಂ ನಿಮಿರ್ದ ಲತೆಯ ಮೇಲೆ ವಿಳಾಸಂ ನಿಲೆ ಕಾಲಂ ನೀಡಿ: **ಆದಿಪು,** ೧೧. ೭೮); [ಕ್ರಿ] ಸಮಾಧಾನ ತಾಳು, ಆರಾಮವಾಗು (ಸೊನೆಯ ಸೋನೆಯನೆ ಪುದುಂಗೊಳಿಸಿದೆಳವಳ್ಳಿಮಾವಿನ ಕುಳಿರ್ವೋವರಿಯಲರ ಪಸೆಯೊಳುಸಿರ್ದರ್ ಕೆಲಬರ್: **ಆದಿಪು,** ೧೧. ೮೦); [ಕ್ರಿ] ಹೇಳು (ಉಸಿರದಿರೆ ಮನದೊಳರ್ದೆಯಂ ಪಸರಿಸುಗುಂ ಮಱುಕಂ ಅದಱಿಂ ಎನಗೆ ಇಂತುಟೆ ಎಂದು ಉಸಿರ್: **ಪಂಪಭಾ,** ೪. ೬೫)

ಉಸಿರ್ ತವು – [ಕ್ರಿ] ಉಸಿರು ನಿಲ್ಲು, ಪ್ರಾಣ ಹೋಗು (ತನ್ನುಸಿರ್ ತವೆ ಪಂಕಪ್ರಭೆಯೊಳ್ ದಶಾಬ್ಧ್ಯುಪಮೆಯಿಂ ದುಃಖಾಗ್ನಿಯೊಳ್ ಬೆಂದು ಮತ್ತವನಲ್ಲಿಂ ಪೊಱಮಟ್ಟು: **ಆದಿಪು,** ೫. ೪)

ಉಸಿರದಿರಿಂ – [ಕ್ರಿ] ಮಾತಾಡಬೇಡಿ (ನೀಮಱೆಯಿರಿ ಉಸಿಱದಿರಿಂ ಅದರ್ಕೆ ತಕ್ಕ ಸವಕಟ್ಟಂ ಮಾಡಿಂ: **ಪಂಪಭಾ,** ೩. ೨೬ ವ)

ಉಸಿರಲಪ್ಪೊಡಂ – [ಕ್ರಿ] ಮಾತನಾಡುವುದಕ್ಕೂ (ಅಂತು ಗಾಂಗೇಯನೊಳ್ ಪರಶುರಾಮಂ ಕಾದಿ ಬಸವಱಿದುಸಿರಲಪ್ಪೊಡಮಾಱದೆ ಮೂರ್ಛೆವೋಗಿರ್ದನಂ ಕಂಡು: **ಪಂಪಭಾ,** ೧. ೮೦ ವ)

ಉಸಿರೊತ್ತು – [ನಾ] ಉಸಿರ ಒತ್ತಡ (ಉಸಿರೊತ್ತಿಂ ತಿದಿಯಂತಿರೆ ಒತ್ತಿದ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್ ಮಸಕಂಗುಂದಿದ ಮೆಯ್: **ಪಂಪಭಾ,** ೧೨. ೧೫೧)

ಉಸಿರ್ಪತ್ತು – [ನಾ] ಉಸಿರಾಟ (ಶಾರೀರ ಮಾನಸ ಕ್ಷೇತ್ರಜ ಪರಸ್ಪರೋದೀರಿತ ದನುಜೋದೀರಿತಂಗಳೆಂಬ ಅಯ್ದುಂ ತೆಱದ ದುಃಖಂಗಳೊಳರ್ದು ನಿಮಿಷಮಾತ್ರಮಪ್ಪೊಡಂ ಉಸಿರ್ಪತ್ತಂ ಪಡೆಯಂ: **ಆದಿಪು,** ೫. ೮೮ ವ)

ಉಳನೆ – [ಅ] [ಸೇನೆಯ] ಮಧ್ಯದಲ್ಲಿ (ಪಿಂಗಾಕ್ಷ ನೀನೇಕೆ ಮಿಳ್ಳಿಳ ನೋಡುತ್ತ ಉಳನೆ ಇರ್ದೆ ಎಂದು ಅದಟರಂ ಭೀಮಂ ಪಳಂಚಟಳ್ವಿದಂ: **ಪಂಪಭಾ,** ೧೨. ೧೫೦)

ಉಳಿ – [ನಾ] ಕಲ್ಲು ಕತ್ತರಿಸುವ ಸಾಧನ (ವಜ್ರಕೀಟಂಗಳ್ ಕರ್ಣನೆರಡುಂ ತೊಡೆಯುಮಂ ಉಳಿಯನೂಱಿ ಕೊಡತಿಯೊಳ್ ಬೆಟ್ಟಿದಂತೆ ಅತ್ತಂ ಇತ್ತಂ ಉರ್ಚಿಪೋಗೆಯುಂ: **ಪಂಪಭಾ,** ೧. ೧೦೪ ವ); [ಕ್ರಿ] ಅವಿತುಕೊ (ಇಂದೆ ಹಳಿಯುಂ ಗಡ ಕೂಡುವಂ ಆತನಂ ಗೆಲಲ್ ಬಂದಪುದೇ ಬಟಿಕ್ಕೆ ಅದುವೆ ಕಾರಣಮಾಗಿ ಉಳಿದಿರ್ದಂ ಅಂಧರಾಣ್ಣಂದನಂ: **ಪಂಪಭಾ,** ೧೩. ೭೫)

ಉಳಿಸೆಂಡು – [ನಾ] ಚೆಂಡನ್ನು ಬಚ್ಚಿಟ್ಟು ಆಡುವ ಆಟ (ಒಡನಾಡಿಯುಂ ಒಡನೋದಿಯುಂ ಒಡವಳೆದುಂ ಗುಳ್ಳೆಗೊಟ್ಟಿ ಬಟ್ಟು ಉಳಿಸೆಂಡುಂ ಪೊಡೆಸೆಂಡು ಇವಂ ಆಡುತ್ತ ಒಡವಳೆದರ್ ತಮ್ಮೊಳೆಸೆ ತಂತಂಗೆಡೆಗಳ್: **ಪಂಪಭಾ,** ೨. ೩೦)

ಉಳ್ಕೆ – [ನಾ] ಉಲ್ಕೆ (ಶೌರ್ಯಾಂಬುನಿಧಿ ತೊಟ್ಟು ಇಸಲ್ ಒಡಮಿರದಂಬರದಿಂದ ಉಳ್ಕುವುಳ್ಕಮಂ ಪೋಲ್ತು ಶರಂ: **ಆದಿಪು,** ೧೨. ೯೦)

ಉಳ್ಕು – [ಕ್ರಿ] ಉರಿ, ಜ್ವಲಿಸು (ಶೌರ್ಯಾಂಬುನಿಧಿ ತೊಟ್ಟು ಇಸಲ್ ಒಡಮಿರದಂಬರದಿಂದ ಉಳ್ಕುವುಳ್ಕಮಂ ಪೋಲ್ತು ಶರಂ: **ಆದಿಪು,** ೧೨. ೯೦); [ಕ್ರಿ] ಹೆದರು (ಪುರಜನಂ ಅಂತಃಪುರಜನಮುಂ ಪರಿಜನಮುಂ ಉಳ್ಕಿ ತದ್ರಾಜನಿಕೇತನದಲ್ಲಿ ಬಿರ್ದು ಪಡೆದುದು ಮನಕ್ಕೆ ಕಡುಮುಳಿಸಿನೆಸಕಮಂ ಮಾಗಧನಾ: **ಆದಿಪು,** ೧೨. ೯೨); [ಕ್ರಿ] ಉಕ್ಕು, ಸೂಸು (ತೇಜಃಪುಂಜಮೆ ಕಣ್ಣೊಳ್ ಉಳ್ಕುವಂತೆ ಸೈರಿಸದೆಮೆಯಿಕ್ಕಿ ದೃಷ್ಟಿಯುದ್ಧದೊಳ್ ಸೋಲೆ: **ಆದಿಪು,** ೧೪. ೧೦೫ ವ)

ಉಳ್ಗರುಳ್ – [ನಾ] ಒಳ ಕರುಳು (ತೋಡುವೆಂ ಒರ್ವನ ಒಳ್ಗರುಳಂ ಉರ್ವಿಗೆ ನೆತ್ತರನೆತ್ತಿ ಪೀರ್ದು ವಿರ್ದಾಡುವೆಂ ಒರ್ವನ ಊರುಗಳಂ ಎನ್ನ ಗದಾಶನಿಘಾತದಿಂದೆ ನುರ್ಗಾಡುವೆಂ: **ಪಂಪಭಾ,** ೯. ೨೪)

ಉಳ್ಳ ಮಾಟಕ್ಕೆ – [ನಾ] ಇರುವ ರೀತಿ, ಇದ್ದುದು ಇದ್ದಂತೆ (ಕುಂಜರಂ ಮಡಿದುದೆದು ಮಹೀಭುಜಂ ಉಳ್ಳ ಮಾಟಕ್ಕೆಯಿಂ ಪುಸಿಯದೆ ಪೇಟಿಲ್ದೊಡಂ ಕಿಱಿದು ನಂಬದೆಯುಂ: **ಪಂಪಭಾ,** ೧೨. ೨೯)

ಉಳ್ಳರೆಮುಗುಳ್ – [ಕ್ರಿ] ಒಳಗೆ ಅರ್ಧ ಮುಚ್ಚಿಕೊಳ್ಳು (ಲೋಚನಂಗಳ್ ಉಳ್ಳರೆಮುಗುಟ್ದೆಂಬುವೆತ್ತಿರೆ ಕರದ್ವಯಪಲ್ಲವಮಂಕದೊಳ್ ಮರಲ್ದಿರೆ: **ಆದಿಪು,** ೧೦. ೧೪)

ಉಳ್ಳಲರ್ – [ಕ್ರಿ] ನಸುವಾಗಿ ಅರಳು (ಅಲರ್ದಂಭೋರುಹಷಂಡಂ ಉಳ್ಳಲರ್ದ ಚೆನ್ನೆಯ್ದಿಲ್ಗೊಳಂ: **ಆದಿಪು,** ೧. ೬೭)

ಉಳ್ಳಾಯ – [ನಾ] [ಉಳ್ಳ+ಆಯ] ಇರುವ ಸಾಮರ್ಥ್ಯ (ಶ್ರೀಯುವತಿಯಂ ಆ ವೀರಶ್ರೀಯುವತಿಗೆ ಸವತಿ ಮಾಟಲ್ವೆನೆಂದು ಅರಿನೃಪರಂ ಉಳ್ಳಾಯವೆರಸು ಎಟಲ್ದುಕೊಂಡು ಧರಾಯುವತಿಗೆ ನೆಗಟ್ದ ಹರಿಗನೊರ್ವನೆ ಗಂಡಂ: **ಪಂಪಭಾ,** ೧೧. ೧)

ಉಳ್ಳುಡೆ – [ನಾ] ಒಳ ಉಡುಪು (ಅವಯವದಿಂದಮೆ ದೇವಾಂಗವಸ್ತ್ರದ ಉಳ್ಳುಡೆಯಂ ಆಕೆಯೋಸರಿಸುವ ಸೂಸುವ ಹಾರಲತೆಯನಳವಡಿಸುವ: **ಆದಿಪು,** ೯. ೩೬)

ಉಳ್ಳೊಳ – [ನಾ] ಗದ್ದಲ (ಬೇಲಿಯ ಕೆಲದೊಳಲ್ಲದೆ ಪೆಱಗಣ ಉಲುಪಿಂಗಂ ಉಳ್ಳೊಳಕ್ಕಂ ಗೆಂಟಾಗಿ ಬೀಡಂ ಬಿಡಿಸಿ: **ಪಂಪಭಾ,** ೫, ೪೭ ವ)

ಉಳ್ಳೋಳ – [ನಾ] ಕೋಲಾಹಲ, ಕ್ಷೋಭೆ (ದಳ್ಳಿಸಿ ಕುಕಿಲುತ್ತಂಬುಧಿಯ ಉಳ್ಳೋಳಂ ನೆಗಟಲ್: **ಆದಿಪು,** ೧೩. ೫೩)

ಉಱದವರ್ – [√ಉಱ] ಹೊಂದಿಕೊಳ್ಳದವರು, ಹುದುವಾಗದವರು (ಅಣಿಯರಂ ಒದವಿದ ಮುಳಿಸಿನೊಳ್ ಅಣಂ ಉಱದವರ್ ಎಂದು ರಣದೆ ಜಯಿಸಲ್ ನಾರಾಯಣನೊಳಂ ಉದಾತ್ತನಾರಾಯಣನೊಳಂ ಇಂತು ಎತ್ತಿಕೊಂಡ ಗಂಡರುಂ ಒಳರೇ: **ಪಂಪಭಾ,** ೧೦. ೧೧)

ಉಱದೆ – [ಕ್ರಿವಿ] [√ಉಱ] ಲಕ್ಷ್ಯ ಮಾಡದೆ (ಏವನೆಮಗೆಂಬ ಶೌರ್ಯಮದಾವಷ್ಟಂಭದೊಳ್ ಅವಂದಿರಿಂತುಱದಿರೆ ಪೇೞಾವುದೊ ಬಾಯ್ಕೇೞಿಸಿಯುಂ ಇದೇವುದೊ ಷಟ್ಖಂಡಮಂಡಿತಂ ಭೂವಳಯಂ: **ಆದಿಪು,** ೧೪. ೨೯); [ಕ್ರಿವಿ] ಬಿಡದೆ (ಮೇಣ್ ಪುರಂದರಂ ಒಸೆದಿತ್ತುದೊಂದು ಬರದಿಂ ಉಱದೆ ಎನ್ನ ವಿರೋಧಿವರ್ಗಮಂ ಕರಗಿಪೆಂ: **ಪಂಪಭಾ,** ೮. ೬); [ಕ್ರಿವಿ] ಹೊಂದಾಣಿಕೆಯಾಗದೆ (ಪಱಿವಿಡಲಣಮೀಯದವರಂ ಅವರ್ಗಳ ಬಾೞೊಳ್ ನಿಱಿಸಲ್ ಬಗೆದೈ ಕರಮನೆ ಉಱದೆ ಇರ್ಕುಮೆ ನಿನ್ನ ಪೇೞ್ದ ಧರ್ಮಶ್ರವಣಂ: **ಪಂಪಭಾ,** ೯. ೪೫); [ಕ್ರಿವಿ] ವಿಚಾರಮಾಡದೆ (ಕುಲಜರಂ ಉದ್ಧತರಂ ಭುಜಬಲಯುತರಂ ಹಿತರಂ ಈ ಸಭಾಮಧ್ಯದೊಳ್ ಅಗ್ಗಲಿಸಿದ ಮದದಿಂ ನಾಲಗೆ ಕುಲಮಂ ತುಬ್ಬುವವೊಲ್ ಉಱದೆ ನೀಂ ಕೆಡೆನುಡಿವೈ: **ಪಂಪಭಾ,** ೧೦. ೨೦)

ಉಱು – ತಕ್ಕುನಾದುದು (ಎೞೆವ ತೊಱೆಯನಿದಿರಿಸುವುದದೆಲ್ಲಿಯ ಗಾಂಪು ಚಕ್ರವರ್ತಿಯೊಳ್ ಅಯಸಂ ನಮಗುಱದು ಬೇಗಮೆಱಗದೊಡುಱುಗುಂ: **ಆದಿಪು,** ೧೨. ೧೦೮); [ಪಣದ್ರವ್ಯ] [ಕ್ರಿ] ಹೆಚ್ಚಾಗು, ಜಾಸ್ತಿ ಮಾಡು (ಮಡಿಮಡಿಗುಱುವುದುಂ ಒಂದು ಪತ್ತೆಂಟು ಪಲಗೆಯಂ ಮೆಟ್ಟುಡಿಸಲೆಂದು ಸೋಲ್ತು ಸೋಲದೊಳೇವಯಿಸಿಯಿನ್ನೊಡ್ಡಂ ಕೊಳ್ಳಿಂ ಎಂದು: **ಪಂಪಭಾ,** ೬. ೭೧ ವ); [ಕ್ರಿ] ಹೊಂದು (ನೀಂ ಇಂತಱಿಯುತ್ತುಂ ಪೆಱರೊಡಮೆಯಂ ಉಱೆ ಸೆಱೆವಿಡಿದಿರ್ಪಿರಿ ಇನ್ನರ್ ಉರ್ವಿಯೊಳ್ ಒಳರೇ: **ಪಂಪಭಾ,** ೮. ೧೮); [ಕ್ರಿ] ಇರು (ಉತ್ಕಚದಿಂ ಉಱದೆ ಘಟೋತ್ಕಚನಂ ಬಿಟ್ಟು ಮೂರ್ಛೆವೋಪಿನಂ ಎಚ್ಚಂ: **ಪಂಪಭಾ,** ೧೧. ೮); [ಕ್ರಿ] ಒಪ್ಪು, ಶೋಭಿಸು (ತನಗೆ ಉಱು ಅಂತುಟಾಗೆ ಕಡುನನ್ನಿಯ ಪೆಂಪುಮನಾಂತು ಭೂಭುಜರ್ ತನಗಿನಿತು ಊನಮಾಗೆ ಮಱೆದಾ ಭುಜವೀರ್ಯಮನಾಂತು ಮಾೞ್ಪುದೇಂ: **ಪಂಪಭಾ,** ೧೨. ೧೯೭); [ನಾ] ಸಾಧ್ಯ (ಕಲಹಂ ಅಪಾಯಬಹುಳಂ ಇನ್ನುಂ ನಯದತ್ತ ಎಱಗುವೊಡೆ ಸಂಧಿ ಹರಿಗನೊಳ್ ಉಱುಗುಂ: **ಪಂಪಭಾ,** ೧೩. ೨೩)

ಉಱುಗು – [ಕ್ರಿ] ಎರಗು, ಅಪ್ಪಳಿಸು (ಎೞೆವ ತೊಱೆಯನಿದಿರಿಸುವುದದೆಲ್ಲಿಯ ಗಾಂಪು ಚಕ್ರವರ್ತಿಯೊಳ್ ಅಯಸಂ ನಮಗುಱದು ಬೇಗಮೆಱಗದೊಡುಱುಗುಂ: **ಆದಿಪು,** ೧೨. ೧೦೮); [ಕ್ರಿ] ಒಲಿ, ಬೀಳು (ಭಯಮಱಿಯದ ಕಲಿಯುಂ ಚಾಗಿಯುಂ ಎನಿಸದೆ ನಾಡೆ ಲೋಭಿಯುಂ ಪಂದೆಯುಂ ಆಗಿಯೆ ಬಾೞ್ವಿಂಗಲ್ಲದೆ ಸೂಳೆಯ ಕಣ್ ಪಾಸಗೆಯ ಕಣ್ಣುಂ ಏಂ ಉಱಗುಗುಮೇ: **ಪಂಪಭಾ,** ೬. ೭೩)

ಉಱುಮಿಕೆ – [ನಾ] ಸೆಡವು (ಕಱುಪೆಟ್ಟ ಪಗೆಯ ಬೇರ್ವರಿದ ಉಱುಮಿಕೆಯ ಪೊದಳ್ದ ಗಂಡಮಚ್ಚರದ ಒದವಿಂ ನೆಱನೆ ಮೂದಲಿಸುತ್ತುಂ: **ಪಂಪಭಾ,** ೧೨. ೧೪೭)

ಉಱೆ – [ಗು] ಅತಿಶಯವಾಗಿ (ಕಾಯ್ವ ಅೞಲ್ ಉಱೆ ಜತುಗೃಹದೊಳಗೆ ಅಯ್ವರುಮಂ ಮಂತ್ರಬಲದೆ ಸುಟ್ಟೊಡಂ ಅವರಂ ದೆಯ್ವಬಲಮೊಂದೆ ಕಾದುದು ದೆಯ್ವಮಂ ಆರಯ್ಯೆ ಮೀಱಿ ಬಾೞಲ್ ನೆಱೆವರ್: **ಪಂಪಭಾ,** ೪. ೩); [ಕ್ರಿ] ಬಿಟ್ಟುಬಿಡು (ಎನುತುಂ ಬರ್ಪನೊಂದೆಡೆಯೊಳೊರ್ವಂ ಪೞಿಕೆಯ್ದು ನಲ್ಲಳಂ ಉೞಿಯಲಾಱದೆ ಸುೞಿಯೆ: **ಪಂಪಭಾ,** ೪. ೯೧ ವ)

ಉೞಿ – [ಕ್ರಿ] ತ್ಯಜಿಸು (ಪೊಂಪುೞಿವೋಗೆ ಯಶಃಪ್ರಕಾಶಂ ಈಗಳೆ ಧರೆಯಂ ಪೞಿಕೆಯ್ದು ತೊಟ್ಟನುೞಿವಂತೆ ಉೞಿದಂ ಸಾಮ್ರಾಜ್ಯಲಕ್ಷ್ಮಿಯಂ ಚಕ್ರಧರಂ: **ಆದಿಪು,** ೪. ೮೭); [ಕ್ರಿ] ಬಿಡು (ಒರ್ವಳ್ ಕುಂಟಣಿಯುಪರೋಧಕ್ಕೆ ಪಿರಿದೀವ ಮುದುಪಮಂ ಉೞಿಯಲಂಜಿ ತನ್ನ ಬೇಸಱಿಂ ತನ್ನ ಸಬ್ಬವದಾಕೆಗೆ ಇಂತೆಂದಳ್: **ಪಂಪಭಾ,** ೪. ೯೯ ವ); [ಕ್ರಿ] ಬದುಕು (ಆದಿತ್ಯತೇಜ ಬೆಸಸು ಇದಿರಾದ ಪೃಥಾಸುತರಂ ಉೞಿಯಲೀಯದೆ ಕೊಲ್ವೆಂ: **ಪಂಪಭಾ,** ೧೩. ೧೦೪)

ಉೞಿದ – [ಗು] ಮಿಕ್ಕ (ಮತ್ತಮಾ ವೃಷಭನಾಥಂ ಉೞಿದ ಅಪತ್ಯವರ್ಗಕ್ಕೆಲ್ಲಂ ಇಳಾತಳವಿಭಾಗಮಂ ಪಚ್ಚುಕೊಟ್ಟು: **ಆದಿಪು,** ೯. ೭೨ ವ)

ಉೞಿದರ್ – [ಗು] ಮಿಕ್ಕವರು (ಮಣಿಮಾಳಿಯಂ ಕಂಡು ಜಾತಿಸ್ಮರನಾಗಿ ಮಣಿಮಾಲೆಯಲ್ಲದೆ ಉೞಿದರ್ ಆರುಮಂ ಸಾರಲೀಯದೆ: **ಆದಿಪು,** ೨. ೧೫ ವ)

ಉೞಿದುದು – [ಅ] ಇತರ (ಕಿವಿಯಿಂ ಬಗೆವುಗುವೊಡೆ ಕೊಂಕುವೆತ್ತ ಪೊಸನುಡಿಯೆ ಪುಗುಗುಂ ಉೞಿದುದು .. .. ಬಗೆಯಂ ಮುಟ್ಟುಗುಮೇ: **ಆದಿಪು,** ೧. ೧೮)

ಉೞಿಯೆ ಪೋಗು – [ಕ್ರಿ] ಹಿಂದೆ ಹಾಕಿ ಹೋಗು, ದಾಟಿ ಸಾಗು (ನಾಕನಿಕಾಯಂ ಜ್ಯೋತಿರ್ಲೋಕಮನವಯವದಿನುೞಿಯೆ ಪೋಗೆ: **ಆದಿಪು,** ೭. ೬೦)

ಉೞಿವು – [ನಾ] ಉಳಿಯುವಿಕೆ (ಎಮ್ಮ ಸಾವುಂ ಉೞಿವುಂ ದೈವೇಚ್ಛೆಯಾಯ್ತಾಗದೇ: **ಪಂಪಭಾ,** ೨. ೮೯)

ಉೞುಗಿಸು – [ಕ್ರಿ] ಒಲಿಸು (ನಿನ್ನಂ ಉೞುಗಿಸಲುಂ ಆಜಿಯೊಳ್ ಎನ್ನಂ ಬೆಂಕೊಂಡು ಕಾದಲುಂ ಬಂದು ಈಗಳ್ ಬಿನ್ನನೆ ಮೊಗದಿಂ ಬೀರರ್ ಬೆನ್ನಿತ್ತುದಂ ಇನಿಸು ನೋಡ ಸರಸಿಜಮುಖೀ: **ಪಂಪಭಾ,** ೩. ೭೩)

ಉೞ್ಗು – [ಕ್ರಿ] ಅನುರಾಗಿಸು, ಪ್ರೀತಿಗೊಳ್ಳು (ಆಕೆಯ ಪತ್ತಿದ ಕಣ್ಣುಮಂ ಉೞ್ಗಿದ ಮನಮುಮಂ ಜೋಲ್ದ ನಾಣುಮಂ ನೀಳ್ದ ಸರಮುಮಂ ಅಱಿದು: **ಪಂಪಭಾ,** ೪. ೪೦); [ಕ್ರಿ] ಮೆಚ್ಚು (ಕಲಿಯೆಂದು ಕೆಮ್ಮನೆ ಅಮ್ಮನ ಅದಟು ಉೞ್ಗುತಿರ್ಪ ಇರವು ಇದೇಂ: **ಪಂಪಭಾ,** ೧೧. ೮೮) [‘ಅದಟೞ್ಗುತಿರ್ಪ’ ಎಂಬುದನ್ನು ಡಿಎಲ್‌ಎನ್ **‘**ಅದಟುೞ್ಗುತಿರ್ಪ**’** ಎಂದು ಪರಿಷ್ಕರಿಸುತ್ತಾರೆ]

ಊ

ಊಡು – [ಕ್ರಿ] ಉಣಿಸು, ಆಹಾರ ನೀಡು (ಎನಗೆ ಇಂ ಮಾಣ್ಬುದು ಸೂೞೆ ಖಾಂಡವಮಂ ಆಂ ತಳ್ವಿಲ್ಲದೆ ಇಂದೂಡುವೆಂ: **ಪಂಪಭಾ,** ೫. ೭೪)

ಊದು – [ಕ್ರಿ] ಗಾಳಿ ಬೀಸು (ಸೊಡರ್ಗುಡಿ ಒಯ್ಯನಾಗೆ ಪೊಸಮಲ್ಲಿಗೆ ಕಂಪುನಾಱೆ ತಣ್ಬೊಡಿದ ಎಲರ್ ಊದೆ ಗಾವರದ ಮೆಲ್ಲುಲಿ ತುಂಬಿಯ ಗಾವರಂಗಳ ಗೆಡೆಗೊಳೆ: **ಪಂಪಭಾ,** ೪. ೧೧೦)

ಊನ – [ನಾ] ಕೊರತೆ (ತನಗಿನಿತು ಊನಮಾಗೆ ಮೆಱೆದಾ ಭುಜವೀರ್ಯಮನಾಂತು ಮಾಣ್ದುದೇಂ: **ಪಂಪಭಾ,** ೧೨. ೧೯೭)

ಊನತ್ವ – [ನಾ] ನ್ಯೂನತೆ, ಕೊರತೆ (ಸಾಹಸದ ನಿಮ್ಮಯ್ವರುಂ ಮಕ್ಕಳಾಗಿರೆಯುಂ ನಿಚ್ಚಲುಂ ಇಂದ್ರನೀಲಗದೊಳ್ ಅಂತಾ ಪಾಂಡುರಾಜಂಗೆ ನಿರ್ನೆರಮಪ್ಪ ಒಂದಪಮಾನದಿಂದಂ ಇನಿತೊಂದು ಊನತ್ವಮಪ್ಪಂತುಟೇ: **ಪಂಪಭಾ,** ೬. ೧೭)

ಊರ್ – [ನಾ] ವಾಸಿಸುವ ಸ್ಥಳ (ತನಗದೊಂದು ಊರ್ ನಾಮದೊಳಂ ವೆಂಗಿಪೞು: **ಪಂಪಭಾ,** ೧೪. ೪೦)

ಊರು – [ನಾ] ತೊಡೆ (ತೋಡುವೆಂ ಒರ್ವನ ಒಳ್ಗರುಳಂ ಉರ್ವಿಗೆ ನೆತ್ತರನೆತ್ತಿ ಪೀರ್ದು ವಿದಾರ್ಡುವೆಂ ಒರ್ವನ ಊರುಗಳಂ ಎನ್ನ ಗದಾಶನಿಘಾತದಿಂದೆ ನುರ್ಗಾಡುವೆಂ: **ಪಂಪಭಾ,** ೯. ೨೪)

ಊರುಕ್ಷತ – ತೊಡೆಯ ಗಾಯ (ಅತಿವಿಶದವಿಶಾಲ ಊರುಕ್ಷತದಿಂದೊಱೆದನಿತು ಜಡೆಯುಮಂ ನಾಂದಿ ಮನಃಕ್ಷತದೊಡನೆ ಎೞ್ಚರಿಸಿದುದು ಉತ್ಥಿತಮಾ ವಂದಸ್ರಮಿಶ್ರಗಂಧಂ ಮುನಿಯಂ: **ಪಂಪಭಾ,** ೧. ೧೦೫)

ಊರುಭಂಗ – [ನಾ] ತೊಡೆ ಮುರಿಯುವಿಕೆ (ಕೃಷ್ಣೆಗಿಂದು ಧಮ್ಮಿಲ್ಲಮಂ ಇಂಬಿನಿಂ ಮುಡಿಸಿ ಕೌರವನಾಯಕನ ಊರುಭಂಗಮೊಂದಲ್ಲದೆ ಎಲ್ಲಮಂ ನೆಱಪಿದೆಂ: **ಪಂಪಭಾ,** ೧೨. ೧೬೧)

ಊರುಯುಗ – [ನಾ] ಎರಡು ತೊಡೆಗಳು (ಭವತ್ ಊರುಯುಗಂಗಳಂ ಆಜಿರಂಗದೊಳ್ ಗಿಜಿಬಿಜಿಮಾಡಲೆಂದು ಅವನ ಪೂಣ್ದುದು ನಿಕ್ಕುವಂ ಆಗದಿರ್ಕುಮೇ: **ಪಂಪಭಾ,** ೯. ೫೨)

ಊರುಯುಗಳ – [ನಾ] ಜೋಡಿ ತೊಡೆ (ವೃಕೋದರ ಗದಾಸಂಚೂರ್ಣಿತ ಊರುಯುಗಳನುಂ ಭೀಮಸೇನ ಚರಣಪ್ರಹರಣಗಳಿತ ಶೋಣಿತಾರ್ದ್ರ ಮೌಳಿಯುಂ ಆಗಿ: **ಪಂಪಭಾ,** ೧೩. ೧೦೨ ವ)

ಊರುಯುಗ್ಮ – [ನಾ] ಎರಡು ತೊಡೆಗಳು (ವ್ಯೂಢವಕ್ಷಸ್ಸ್ಥಳಂ ಆಜಾನುಪ್ರಲಂಬ ಪಬಲಭುಜಯುಗಂ ಚಾರುವೃತ್ತೋರು ಯುಗ್ಮಂ: **ಆದಿಪು,** ೮. ೫೧)

ಊರ್ಜಿತ – [ಗು] ಹೆಚ್ಚಿದ (ವಿಕ್ರಮಪುರವೆಂಬುದುಂ ಅಗ್ರಹಾರ ಸಂಪತ್ಪದವಿಗಳೊಳಂ ಅಗ್ರಗಣ್ಯಂ ಊರ್ಜಿತಪುಣ್ಯಂ: **ಪಂಪಭಾ,** ೧೪. ೪೧)

ಊರ್ಧ್ವಗಾಂಶು – [ನಾ] ಮೇಲೆ ಹರಡುವ ಕಿರಣ (ಉಷ್ಣಾಂಶುವಿನ ಊರ್ಧ್ವಗಾಂಶುನಿವಹಂ ಮೆಯ್ಯಿಟ್ಟು ಅಲರ್ಚುತ್ತುಂ ಇರ್ಪುದು: **ಪಂಪಭಾ,** ೪. ೨೨)

ಊರ್ಧ್ವಲೋಕ – [ನಾ] [ಜೈನ] ಮೇಲುಗಡೆಯ ಸ್ವರ್ಗಗಳಲ್ಲಿ ಕೊನೆಯದು (ಮಧ್ಯಲೋಕಮೆಸೆದಿರ್ದಾ ಚೂಳಿಕಾ ಭಾಗದಾದಲೆಯೊಳ್ ನಿಂದಪುದು ಊರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದ ಅಂಗುದಲೆಯಾಗಿರ್ದುದು: **ಆದಿಪು,** ೧. ೫೦)

ಊರ್ಮಿ – [ನಾ] ದೊಡ್ಡ ತೆರೆ, ಅಲೆ (ಇದಿರೊಳ್ ನಿಂದೊಡೆ ವಜ್ರಿ ಸೈರಿಸಂ ಇರಲ್ವೇಡ ಎಮ್ಮೊಳೊಳ್ವೊಕ್ಕು ನಿಲ್ವುದು ನೀಂ ಎಂದು ಕಡಂಗಿ ಕಾಲ್ವಿಡಿವವೋಲ್ ತನ್ನೂರ್ಮಿಗಳ್ ಬಂದುವು: **ಪಂಪಭಾ,** ೪. ೨೪)

ಊರ್ಮಿಮಾಳಿನಿ – [ನಾ] ಅಲೆಗಳ ಮಾಲೆಯುಳ್ಳದ್ದು, ನದಿ (ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ ನೂಂಕುವುವು ಊರ್ಮಿಮಾಳಿನಿಯ ತುಂಗತರತ್ತರಳೋರ್ಮಿಮಾಲೆಗಳ್: **ಆದಿಪು,** ೧. ೬೧)

ಊರ್ಮೆ – [ನಾ] ಆಧಿಕ್ಯ, ಶ್ರೇಷ್ಠತೆ (ಸೊಗಯಿಸುವ ತಮ್ಮ ಜವ್ವನದ ತಮ್ಮ ವಿಭೂತಿಯ ತಮ್ಮ ತಮ್ಮ ಚೆಲ್ವುಗಳ ವಿಲಾಸದ ಊರ್ಮೆಗಳೊಳ್ ಆವು ಎವಗೆ ಆಗಿಪೆವು: **ಪಂಪಭಾ,** ೧. ೧೦೬)

ಊಷ್ಮ – [ನಾ] ತಾಪ, ಬೆಂಕಿ (ಕುಲಕ್ರಯಾತಪ್ರತಾಪ ಊಷ್ಮಮಂ ಪತ್ತುವಿಡುವರಾತಿಗಳ ಸಂಖ್ಯೆಯೊಳಂ: **ಆದಿಪು,** ೧೪. ೮೪ ವ)

ಊಳ್ – [ಕ್ರಿ] ಗಟ್ಟಿಯಾಗಿ ಶಬ್ದಮಾಡು (ತಳಿರೊಳ್ಗೊಂಬಿನೊಳ್ ಊಳ್ವ ಕೋಕಿಳಕುಳಂ ಪೂಗೊಂಬಿನೊಳ್ ಪಾಡುತಿರ್ಪಳಿವೃಂದಂ: **ಆದಿಪು,** ೧೧. ೯೬); [ಕ್ರಿ] ಕೂಗು (ಮೆಯ್ಗೊಂಡ ಒಲವಿಂದೆ ಅಗಲ್ಕೆಗೆ ಅಣಂ ಆಱದೆ ಪಕ್ಕಿಗಳೆಲ್ಲಮಂ ಮರುಳ್ಗೊಂಡವೊಲ್ ಊಳ್ದು ಕೂಡೆ ಬೆಸಗೊಂಡು ಬೞಲ್ದುವು ಜಕ್ಕವಕ್ಕಿಗಳ್: **ಪಂಪಭಾ,** ೪. ೪೮); [ನಾ] ನಾಯಿನರಿಗಳ ಧ್ವನಿ (ನೆತ್ತರಂ ಪಡೆಯದೆ ಆಕಾಶಕ್ಕೆ ಬಾಯಂ ತೆಱೆದು ಊಳ್ವ ಬಳ್ಳುಗಳುಮಂ ನರವುಮಂ ಬರಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ ತಾನೆ ಸೋದು: **ಪಂಪಭಾ,** ೧೩. ೫೬ ವ)

ಊೞೆ ಸಾೞು – [ಕ್ರಿ] ಒತ್ತಿ ಹೇಳು (ಇದಂ ಪುಗಲಿಂ ಗಡಿಂ ಎಂದು ಬೇಟಕಾಱರಂ ಇರದೆ ಊೞೆ ಸಾೞೆ ಜಡಿವಂತೆ ಎಸೆಗುಂ ಸಹಕಾರಕೋಮಳ ಅಂಕುರಪರಿತುಷ್ಟ ಪರಪುಷ್ಟಗಳ ಧ್ವನಿ ನಂದನಂಗಳೊಳ್: **ಪಂಪಭಾ,** ೨. ೧೩)

ಊೞು – [ಕ್ರಿ] ಕೆತ್ತು (ಕರ್ಣನ ಎರಡುಂ ತೊಡೆಯುಮಂ ಉಳಿಯಂ ಊೞೆ ಕೊಡಂತಿಯೊಳ್ ಬೆಟ್ಟಿದಂತೆ ಅತ್ತಂ ಇತ್ತಂ ಉರ್ಚಿಪೋಗೆಯುಂ: **ಪಂಪಭಾ,** ೧. ೧೦೪ ವ); [ಕ್ರಿ] ನಾಟು, ಚುಚ್ಚು (ಗಂಡರ ನೆತ್ತಿಯೊಳೊತ್ತಿ ಬಾಳಂ ಇನ್ನೂೞಿಗುಂ ಎಂದೊಡೆ ಏಂ ಪಿರಿದೋ ತೇಜದ ದಳ್ಳುರಿ ಪಾಂಡುರಾಜನಾ: **ಪಂಪಭಾ,** ೧. ೧೯); [ಕ್ರಿ] ಸ್ಪಷ್ಟಪಡಿಸಿಕೊ (ಕಂಡಿಯಂ ಮಾರ್ಕಂಡಿಯಂ ಪುಗಿಲಂ ಪೋಗಂ ಬಾರಿಯಂ ಸನ್ನೆಯಂ ಊೞುವಮರ್ಚುವ ನಿಲ್ವೆಡೆಯಂ ಬಗೆಯಂ ತೆಗೆಯಂ: **ಪಂಪಭಾ,** ೫. ೪೩); [ಕ್ರಿ] ಕುಳ್ಳಿರು, ಕುಂಡಿಯೂರು (ಅಂತು ಮುಗಿಲೂಱಿದ ಮೂಱುಲೋಕಮುಂ ಕರ್ಣಾರ್ಜುನರ ಯುದ್ಧಮಂ ನೋಡಲ್ ನೆರೆದಲ್ಲಿ: **ಪಂಪಭಾ,** ೧೨. ೧೪೪ ವ)

ಋ

ಋಚ – [ನಾ] ಮಂತ್ರ (ನಾಲ್ಕು ವೇದಂಗಳೊಳ್ ನಾಲ್ಕುಂ ಋಚಂಗಳಂ ಪೇೞ್ದು ಸಿತ ದೂರ್ವಾಂಕುರವಿಮಿಶ್ರಂಗಳಪ್ಪ ಶೇಷಾಕ್ಷತೆಗಳಂ ಕೊಟ್ಟು ಮುಂದೆ ನಿಂದನಂ ನಿಮಗೆ ಬಾೞ್ತೆಯಪ್ಪುದಂ ಬೇಡಿಕೊಳ್ಳಿಂ ಎನೆ: **ಪಂಪಭಾ,** ೫. ೭೦ ವ)

ಋಚೆ – [ನಾ] ವೇದಸೂಕ್ತಗಳು (ಅಂತು ಸೊಗಯಿಸೆ ಪಾಡುವ ಮಂಗಳರವಂಗಳುಂ ಓದುವ ಋಚೆಗಳುಂ ಪರಸುವ ಪರಕೆಗಳುಂ ಎಸೆಯೆ ಪಸೆಯೊಳಿರ್ದು: **ಪಂಪಭಾ,** ೩. ೭೬ ವ)

ಋಣಸಂಬಂಧ – [ನಾ] ಕರ್ಮಾಧೀನ ಬಾಂಧವ್ಯ (ಅಂಬಿಗನೊಳ್ ಆದುದು ಋಣಸಂಬಂಧಂ ನಿನಗೆ ಅಮೋಘಂ: **ಪಂಪಭಾ,** ೧೩. ೨೬)

ಋತವಾಕ್ಯ – [ನಾ] ಋತವಚನ, ನೇರಾದ ನುಡಿ, ಸತ್ಯ (ಅನುಪಮ ವಿಕ್ರಮಕ್ರಮಂ ಉದಾರಗುಣಂ ಋತವಾಕ್ಯಂ ಎಂಬ ಪೆಂಪೆನಲಿವು ಮೂಱ್ ನಾಲ್ಕೆ ಗುಣಂ: **ಪಂಪಭಾ,** ೧೨. ೯೩)

ಋತು – [ನಾ] [ಜೈನ] ಎರಡು ಮಾಸಗಳ ಅವಧಿ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ); [ನಾ] ಎರಡು ತಿಂಗಳ ಕಾಲ (ಆಗಳ್ ಆಱುಂ ಋತುಗಳ ಪೂಗಳಂ ಒಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದ ಓಜನ ಸಾಲೆಯಿರ್ಪಂತಿರ್ಪ ಪೂವಿನ ಸಂತೆಯೊಳ್: **ಪಂಪಭಾ,** ೪. ೮೦ ವ)

ಋತುಕಾಲಪ್ರಾಪ್ತೆ – [ನಾ] ಋತುಮತಿ (ಋತುಕಾಲ ಪ್ರಾಪ್ತೆಯಾಗಿರ್ದ ನಲ್ಲಳಲ್ಲಿಗೆ ಬರಲ್ ಪಡೆಯದೆ ಆಕೆಯಂ ನೆನೆದು ಇಂದ್ರಿಯಕ್ಷರಣೆಯಾದೊಡೆ: **ಪಂಪಭಾ,** ೧. ೬೮ ವ)

ಋತ್ವಿಜ – [ನಾ] ಯಾಗದಲ್ಲಿ ಯಜಮಾನನಿಗೆ ಸಹಾಯ ಮಾಡುವವರು, ಯಜ್ಞಪುರೋಹಿತ (ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ ಉದ್ಗಾತೃ ನೇತೃ ಹೋತೃ ಜಮದಗ್ನಿ ಆದಿಗಳಪ್ಪ ಷೋಡಶರ್ ಋತ್ವಿಜರ್ಕಳಿಂ: **ಪಂಪಭಾ,** ೬. ೩೩ ವ)

ಋದ್ಧ – [ಗು] ವೃದ್ಧಿ ಹೊಂದಿದ (ಮೃಗಭೂ ಋದ್ಧ ವಿಳಾಸಿನೀ ಕಬರಿಕಾಬಂಧಗಳಂ ಪೊತ್ತು ಮಲ್ಲಿಗೆಯೊಳ್ ಭಾವಿಸಿ .. .. ಸುಟಿದತ್ತು ಅಂದೊಂದು ಮಂದಾನಿಳಂ: **ಪಂಪಭಾ,** ೪. ೮೦)

ಋದ್ಧಿ – [ನಾ] [ಜೈನ] ತಪಸ್ಸಿದ್ಧಿ ಹೊಂದಿದವರಿಗೆ ಉಂಟಾಗುವ [ಏಳು] ಮಹಿಮೆಗಳು (ಬುದ್ಧಿ ತಪೋ ವಿಕ್ರಿಯ ಔಷಧಿ ರಸ ಬಲ ಅಕ್ಷೀಣಾಭಿಧಾನ ಸಪ್ತರ್ಧಿಗಳೊಳಂ ನೆಱೆದು: **ಆದಿಪು,** ೬. ೩೩ ವ)

ಋದ್ಧಿಪ್ರಾಪ್ತ – [ನಾ] ಋದ್ಧಿಯನ್ನು ಹೊಂದಿದವನು (ಧರಣೇಪಾಲಕ ಮುನಿಪರ್ ಪಂಚಮಕಾಲದೊಳಣಂ ಆಗರಲ್ತೆ ಋದ್ಧಿಪ್ರಾಪ್ತರ್: **ಆದಿಪು,** ೧೫. ೪೧)

ಎ

ಎಂಜಲ್ – [ನಾ] ತಿಂದ ಮೇಲೆ ಉಳಿಯುವುದು (ನೀನೆ ಜಾತಿದೇವತೆಯಪ್ಪೊಡೆ ಎನ್ನೆಂಜಲನೆಂತು ತಿಂಬೆ: **ಪಂಪಭಾ,** ೮. ೪೩ ವ)

ಎಂಜಲೆವುಟು – [ನಾ] ಎಂಜಲ ಅಗುಳು (ತಾವಿರ್ಬರುಂ ತಿರಿದು ತಂದಿಕ್ಕಿದೆಂಜಲೆವುಟುಮಂ ತಿಂದು ಪೆಸರುಮಿಲ್ಲದೆ ನಿರ್ನಾಮಿಕೆಯೆಂದು ಪೆಸರಾಗಿ ಬಳೆಯೆ: **ಆದಿಪು,** ೩. ೩೪ ವ) [ಎಲ್. ಬಸವರಾಜು ಅವರು 'ಎಂಜಲುಮೆವುಟು' ಎಂಬ ಪಾಠವನ್ನು ಸ್ವೀಕರಿಸಿ, ಅದಕ್ಕೆ "ಎಂಜಲುಮುಂಜಲು" ಎಂಬ ಅರ್ಥವನ್ನು ಕೊಡುತ್ತಾರೆ]

ಎಂಟುಂ ಕಿಲ್ಬಿಷಂಗಳ್ – [ನಾ] ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ ಎಂಬ ನಾಲ್ಕು ಘಾತಿ ಕರ್ಮಗಳು ಹಾಗೂ ವೇದನೀಯ, ಆಯು, ನಾಮ, ಗೋತ್ರ ಎಂಬ ನಾಲ್ಕು ಅಘಾತಿ ಕರ್ಮಗಳು (ಪೆಣೆದೆಂಟುಂ ಕಿಲ್ಬಿಷಂಗಳ್ ಕಿಡೆ ಕಿಡದ ಗುಣಂ ಪೊರ್ದೆ ಬಂದು ಎಂಟುಂ: **ಆದಿಪು,** ೧. ೨)

ಎಂಟುಂ ಕೂಟಂಗಳ್ – [ನಾ] [ಜೈನ] ರುಚಕಾಚಳದ ಉತ್ತರ ದಿಕ್ಕಿನ ಎಂಟು ಶಿಖರಗಳು (ತದ್ಗಿರೀಂದ್ರೋತ್ತರ ಕಕುದ್ದೇಶದ ಸ್ಫಟಿಕ ಅಂಜನ ಕಾಂಚನ ರಜತ ರುಚಕ ಕುಂಡಳ ರುಚಿರ ಸುದರ್ಶನಂಗಳೆಂಬ ಎಂಟು ಕೂಟಂಗಳೊಳ್: **ಆದಿಪು,** ೭. ೩ ವ)

ಎಂಟುಂ ತೆಱದ ಪೂಜೆ – [ನಾ] [ಜೈನ] ಇಜ್ಯೆಗಳು, ಕಲ್ಪದ್ರುಮ, ಚತುರ್ಮುಖ, ಸರ್ವತೋಭದ್ರ, ಐಂದ್ರಧ್ವಜ, ಅಷ್ಟಾಹ್ನಿಕ, ಬಲಿ, ಸವನ, ತ್ರಿಸಂಧ್ಯಾಸೇವೆ ಎಂಬ ಎಂಟು ಬಗೆಯ ಪೂಜೆಗಳು (ಎಂಟುಂ ತೆಱದ ಪೂಜೆಯುಮಂ ಅರ್ಕಪೂಜೆಯುಮಂ ಮನ್ನಿಸಿ: **ಆದಿಪು,** ೧೫. ೧೩ ವ)

ಎಂತಪ್ಪ – [ಅ] ಎಂತಹ, ಎಂಥ (ವಿರಾಟನಂ ಕಂಡು ಎಂತಪ್ಪ ದುಷ್ಟಾಶ್ವಂಗಳುಮನೇಱಲುಂ ತಿರ್ದಲುಂ ಬಲ್ಲೆಂ ಎಂದು: **ಪಂಪಭಾ,** ೮. ೫೪ ವ)

ಎಂತಪ್ಪೊಡಂ – [ಅ] ಹೇಗಾದರೂ (ಪುರುಷಕಾರದ ಪೆಂಪಂ ಚಿಂತಿಸಿ ತರಿಸಿ ಮಹೀಶನಂ ಎಂತಪ್ಪೊಡಂ ಎನಗೆ ಪುರುಷಭಿಕ್ಷಮನಿಕ್ಕಿಂ: **ಪಂಪಭಾ,** ೭. ೩೪)

ಎಂತಾನುಂ – [ಅ] ಅರೆಮನಸ್ಸಿನಿಂದ (ಮೆಯ್ಯಲಸಿದಂತೆ ಎಂತಾನುಂ ಎೞ್ದಿರ್ದು ಕೇಸರಿಪೀಠಾಗ್ರದಿಂ ಅಪ್ಪಿಕೊಂಡು: **ಪಂಪಭಾ,** ೯. ೩೧); [ಅ] ಹೇಗಾದರೂ, ಯಾವುದೇ ರೀತಿಯಲ್ಲಿಯಾದರೂ (ಅನ್ನೆಗಂ ಇತ್ತ ಸಂಸಪ್ತಕ ನಿಕುರುಂಬದೊಳಗೆ ಒರ್ವರುಮಂ ಕಿಱುವೀಟಲೀಯದೆ ರಸಮಂ ಕೊಲ್ವಂತೆ ಎಂತಾನುಂ ಕೊಂದು: **ಪಂಪಭಾ,** ೧೨. ೧೨೦ ವ); [ಅ] ಅಂತೂ, ಕೊನೆಗೆ (ಅನ್ನೆಗಂ ಅತ್ತ ದುರ್ಯೋಧನಂ ಅತಿಸಂಭ್ರಮಾಕುಳಿತ ಪರೀತಜನ ಉಪನೀತ ಚಂದನಕರ್ಪೂರಮಿಶ್ರಿತ ಹಿಮಶಿಶಿರ ಧಾರಾಪರಿಷೇಕದಿಂದ ಎಂತಾನುಂ ಮೂರ್ಛೆಯಿಂದೆೞ್ಚತ್ತು: **ಪಂಪಭಾ,** ೧೩. ೨ ವ)

ಎಂತುಂ – [ಅ] ಎಲ್ಲ ಕಾಲಕ್ಕೂ (ಕಡುಗಲಿತನಮುಂ ಚಾಗದ ಪಡೆಮಾತುಂ ವಿದ್ಯೆಯುರ್ಕುಂ ಒರ್ವನೊಳೆಂತುಂ ನಡೆಯವು: **ಆದಿಪು,** ೧೨. ೧೦೪); [ಅ] ಹೇಗೂ (ನಿಮ್ಮಡಿಯುಂ ಗೆಲಲರಿಯರಂ ಆ ಪಾಂಡುಸುತರಂ ಎಮ್ಮಂದಿಗರ್ ಅಚ್ಚರಿಯಲ್ತೆ ಗೆಲ್ವರೆಂಬುದು ಹರಿಗನೊಳ್ ಎಂತುಂ ಎನ್ನ ಚಲಮನೆ ಮೆಱೆವೆಂ: **ಪಂಪಭಾ,** ೧೨. ೫೫)

ಎಂತುಟು – [ಅ] ಎಂಥದು (ಅವಱೊಳ್ ಲೋಕಮೆಂತುಟೆಂದೊಡೆ ಸಮಂಗಾವಂಗಂ ಎತ್ತೆತ್ತ

ನೋಡುವೊಡಂ ನೋಡಲ್ ಅನಂತಂ: **ಆದಿಪು,** ೧. ೪೩); **[ಅ]** ಹೇಗೆ (ಸುಯೋಧನಂಗೆ ರಣಭೂಮಿಯೊಳ್ ಎಂತುಟವಸ್ಥೆಯೋ: **ಪಂಪಭಾ,** ೧೨. ೬೩)

ಎಂದಂದೆ – **[ಅ]** ಎಂಬುದರಿಂದ (ಸಂಸರಣಾಂಭೋರಾಶಿಯಂ ದಾಂಟುವ ಬಗೆಯನೆ ಕಯ್ಕೊಂಡಂ ಎಂದಂದೆ ಮಾವಂ ಚರಿತಾರ್ಥಂ: **ಆದಿಪು,** ೪. ೮೯)

ಎಂದಿಂಗಂ – **[ಅ]** ಎಂದಿಗೂ (ಚಕ್ರೇಶ ಸಿಗ್ಗನುೞಿ ಮುಳಿಸಂ ನೀನೆಂದಿಗಂ ಬಿಸುಡು ಈ ತಮ್ಮಂದಿರೊಳಿಂತಿಂತು ಕಡ್ಡುವಪ್ಪುದು ಪೆಂಪೇ: **ಆದಿಪು,** ೧೪. ೧೨೮)

ಎಂದುಂ – **[ಅ]** ಯಾವಾಗಲೂ (ಪಟ್ಟದ ಮೊದಲಿಗರ್ ಆಜಿಗೆ ಜೆಟ್ಟಿಗರ್ ಅವರ್ ಎಂದುಂ ಆಳ್ವ ಮುನ್ನಿನ ನೆಲನಂ ಕೊಟ್ಟು ಬೞಿಯನಟ್ಟು: **ಪಂಪಭಾ,** ೯. ೪೦)

ಎಂದುದನೆನ್ನು – **[ಕ್ರಿ]** [ಎಂದುದಂ+ಎನ್ನು] ಹೇಳಿದ್ದನ್ನು ಕೇಳು, ಹೇಳಿದಂತೆ ಅನುಸರಿಸು (ಇನಂ ಮಂತಣದಿಂದೆ ಬಾರಿಸೆಯುಂ ಎಂದುದನೆನ್ನದೆ ಮೀಱಿ ಕೊಟ್ಟಂ ಓರಂತು ಜಸಕ್ಕೆ ನೋಂತು ನೆರ್ದೊಡಲೊಳ್ ತೊಡರ್ದಾ ತನುತ್ರಮಂ: **ಪಂಪಭಾ,** ೯. ೬೨)

ಎಂಬ – **[ಕ್ರಿ]** ಎನ್ನುವೆಯಾ? (ಉದಗ್ರ ಮೃಗರಾಜನುಮಂ ಮದವದ್ವಿರೋಧಿ ಭೇದನಕರಮಪ್ಪ ಶೌರ್ಯಮದದೆನ್ನುಮಂ ಒಂದೊಡಲ್ ಎಂಬ ಸಂಜಯಾ: **ಪಂಪಭಾ,** ೧೩. ೫೧)

ಎಂಬಿವರ್ – **[ಅ]** ಇತ್ಯಾದಿ, ಮುಂತಾದುವು (ಬಗ್ಗಿಸುವ ಕೋಗಿಲೆ ಕೋಗಿಲೆಯಿರ್ಕೆದಾಣದೊಳ್ ಜಿನುಗುವ ತುಂಬಿ ತುಂಬಿಯೊಳ್ ಅರಲ್ದ ಅರಲ್ ಎಂಬಿವಱಿಂ: **ಆದಿಪು,** ೧. ೬೫)

ಎಂಬುದನೆನಿಸು – **[ಕ್ರಿ]** ಎಂಬ ಹಾಗೆ (ಕೆದಱಿದಪುದು ದೆಸೆದೆಸೆಗಮೃತದ ಪನಿಯನಿದೊಂದು ಮುನಿಪಮುಖ ಚಂದ್ರಮಂ ಎಂಬುದನೆನಿಸೆ: **ಆದಿಪು,** ೫. ೩)

ಎಕ್ಕತುಳ – **[ನಾ]** [ಏಕತುಲ] ದ್ವಂದ್ವಯುದ್ಧ (ಅಂತು ಮುಳಿಸಿನ ಮೋಪಿನ ಗಂಡಮಚ್ಚರದ ಮೆಚ್ಚವಣಿಗೆಯ ಅಂಕಕಾಱರ್ ಎಕ್ಕತುಳಕ್ಕೆ ಎಕ್ಕೆಯಿಂ ಸೂೞ್ೞೆಱೆವಂತೆ ಒರ್ವರ್ ಒರ್ವರೊಳ್ ಕಾದೆ: **ಪಂಪಭಾ,** ೧೨. ೭೬ ವ)

ಎಕ್ಕಬಾಗೆ – **[ನಾ]** [ಏಕಭೋಗ್ಯೆ] ಒಂದೇ ಪಾಲುಳ್ಳವಳು (ಎನಗೆ ಎಕ್ಕಬಾಗೆ ನೋಡೀಗಳ್ ಈ ಇಳಾಲತಾಂಗಿ ಪುದುವಲ್ಲಳ್ ಅದೆಂತೆನೆ ಮುನ್ನ ನೂಲ ತೋಡಾಗದೆ ಕೆಟ್ಟು ಪೋದವರಂ ಇಂ ಮಗುೞ್ದುಂ ನಿಱಿಪಂತು ಬೆಳ್ಳನೇ: **ಪಂಪಭಾ,** ೯. ೪೬)

ಎಕ್ಕವಡ – **[ನಾ]** ಎಕ್ಕಡ, ಪಾದರಕ್ಷೆ (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱಿ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ ದಳಿವದ ತೊಟ್ಟ ಅಂಗಿಗೆ ತನ್ನೊಳ್ ಅಮರೆ ಬೇಂಟೆಯನೊರ್ವಂ; **ಪಂಪಭಾ,** ೫. ೩೬)

ಎಕ್ಕಸಕ್ಕತನ – **[ನಾ]** ನಿಂದೆ, ಪರಿಹಾಸ (ಮುಗುಳ್ನಗೆ ನಕ್ಕು ವಿಕ್ರಮಾರ್ಜುನಂ ಇಳಿಸಿ ನುಡಿವ ನಿನ್ನ ಏಣಗೋಣಂಗಳುಂ ಎಕ್ಕಸಕ್ಕತನಂಗಳುಂ ಎತ್ತವೋದುವು: **ಪಂಪಭಾ,** ೧೧. ೧೩೮)

ಎಕ್ಕಸರ – **[ನಾ]** ಒಂದೆಳೆಯ ಹಾರ (ಎಕ್ಕಸರಮಿದಾವುದು ಆಂ ಮುಳಿಯೆ ಕಾಲ್ವಿಡಿದಿಂದ್ರನ ಕೊಟ್ಟುದಲ್ತೆ: **ಪಂಪಭಾ,** ೪. ೮೬)

ಎಕ್ಕಾವಳಿ – **[ನಾ]** ಏಕಾವಳಿ, ಒಂದೆಳೆಯ ಸರ (ತನ್ನೊಳ್ನೆರೆಯಲಿದು ಜಯಶ್ರೀಯ ಮುಂದಟ್ಟಿದ ಎಕ್ಕಾವಳಿಯೆಂಬತಿರ್ದುದು: **ಆದಿಪು,** ೧. ೭೬)

ಎಕ್ಕು – **[ಕ್ರಿ]** ಹಿಂಜು, ಬಿಡಿಸು, ಬೇರ್ಪಡಿಸು (ತನು ಪಂಜಿಯವೊಲ್ ಬೆಳತಿರ್ಪನೆಗಂ ಹಿಮಮೆಕ್ಕಿದ ಅರಲೆವೋಲ್ ಪುದಿದಿರೆಯುಂ: **ಆದಿಪು,** ೬. ೩೩)

ಎಕ್ಕೆ – **[ನಾ]** ಒಟ್ಟಿಗೆ, ಸಂಗಡ (ನಿರುಪಮದೇಹದೀಪ್ತಿಗಳೊಳ್ ಎಕ್ಕೆಯಿನೆಯ್ದೆ ಪಳಂಚಿ ಮಿಂಚುವಾಭರಣದ ಮಿಂಚು: **ಆದಿಪು,** ೨. ೫); **[ನಾ]** ಅಧಿಕ (ಮುದಮಂ ಜಪಾಪ್ರಸವ ರಕ್ತಾಶೋಕಬಂಧೂಕಶೋಣ ಮಣಿಜ್ಯೋತಿಗಳ್ ಎಕ್ಕೆಯಿಂ ಕುಡೆ: **ಆದಿಪು,** ೧೬. ೩); **[ನಾ]** ಸಮಾನವಾಗಿ (ಬಳೆದುವು ತೋಳ್ಗಳ್ ಎಕ್ಕೆಯಿಂ ಅಮಳ್ ಬಳೆವಂತಿರೆ ಮುಯ್ವುಗಳ್: **ಪಂಪಭಾ,** ೨. ೩೭); **[ನಾ]** ಒಂದೇ ಸಲ (ಅಂತು ತೋಡುಂ ಬೀಡುಂ ಕಾಣಲಾಗದೆ ಎರ್ದೆಗಾಯಲ್ ಎಕ್ಕೆಯಿಂ ಎಂಬತ್ತು ನಾಲ್ಕು ಲಕ್ಕ ಬಂಡಿಯೊಳ್ ತೀವಿದ: **ಪಂಪಭಾ,** ೧೧. ೧೯ ವ)

ಎಕ್ಕೆಕ್ಕೆ – **[ಅ]** ಒಟ್ಟೊಟ್ಟಾಗಿ (ಕುಂಭಸಂಭವ ನದೀಜ ಕೃಪ ಪ್ರಮುಖ ಪ್ರವೀರರ್ ಎಕ್ಕೆಕ್ಕೆಯಿಂ ಒರ್ವರೊರ್ವರೆ ಬಿಗುರ್ತಿರದೆ ಆಂತು: **ಪಂಪಭಾ,** ೮. ೧೦೮); **[ಅ]** ಮೇಲೆ ಮೇಲೆ (ದೀವಿಗೆಗಳ್ ಜಲಕ್ಕನೆ ಎಕ್ಕೆಕ್ಕೆಯಿನಿಟ್ಟಳಂ ಬೆಳಗುತಿರ್ದುವು: **ಪಂಪಭಾ,** ೧೨. ೫)

ಎಕ್ಕೆವಾಱು – **[ನಾ]** [ಎಕ್ಕೆ+ಪಾಱು] ಒಂದೇ ಹಾರು, ನೆಗೆತ (ಎರಡುಂ ಬಲದ ಕಡಿತಲೆಯ ನಾಯಕರ್ ಕೆಯ್ಕೊಂಡು ಬಳ್ಳುಗೆಡೆದು ಎಕ್ಕೆವಾಱುವಾಱಿ ಪಲಗೆವಾಱಿ ಗೂಳಿಸೊರ್ಕಿ ಮಾರ್ಕೊಂಡು ಕಾದೆ: **ಪಂಪಭಾ,** ೧೦. ೮೦ ವ)

ಎಗ್ಗ – **[ನಾ]** ಮೂಢ, ಗಾಂಪ (ಆ ಸುದತಿಯ ರೂಪನಿಂ ಪೆಱತನೆಂದೊಡೆ ಚಿಃ ಕರಂ ಎಗ್ಗನಾಗನೇ: **ಆದಿಪು,** ೨. ೭೪)

ಎಗ್ಗು – **[ನಾ]** ದಡ್ಡತನ (ಕಾಂತಾನೀಕದ ಮರುಳ್ವುದಂ ಮದನಾಕುಳತೆಯಂ ಉಂತೆ ಪೇೞ್ವುದೊಂದು ಎಗ್ಗಲ್ತೇ: **ಆದಿಪು,** ೮. ೫೨)

ಎಚ್ಚನುಂ – **[ನಾ]** [ಬಾಣದಿಂದ] ಹೊಡೆಯುವವನು (ಆ ಸರಲ್ಗಳಿಂದಾತನ ಮನೆಯ ಮುಂದೆ ನಭದೊಳ್ ನಲಿನಲಿದಾಡುವ ಜಂತ್ರದ ಮೀನೆಚ್ಚನುಮಾಕೆಗೆ ಗಂಡನಕ್ಕುಂ: **ಪಂಪಭಾ,** ೩. ೩೨ ವ)

ಎಚ್ಚು – **[ಕ್ರಿ]** [ಇಸು] ಬಾಣಪ್ರಯೋಗ ಮಾಡಿ (ಮೆಲ್ಲನೆ ಮೃಗಮೆಂದು ಸಾರ್ದು ನೆಱನಂ ನಡೆ ನೋಡಿ ನರೇಂದ್ರನೆಚ್ಚು ಭೋಂಕನೆ ಮೃಗಚಾರಿಯಂ ತನಗೆ ಮಾಣದೆ ತಂದನದೊಂದು ಮಾರಿಯಂ: **ಪಂಪಭಾ,** ೧. ೧೧೧); **[ಕ್ರಿ]** ಚಿಮ್ಮು (ಭುಗಭುಗನೆಚ್ಚು ಪಾಯ್ವ ಬಿಸುನೆತ್ತರ ಸುಟ್ಟುರೆಯಂ ನೆಲಕ್ಕೆ ಪರ್ದುಗಳ್ ಉಗಲೀಯದೆ ಅವ್ವಳಿಸಿ ಪೀರ್ವಿನಂ: **ಪಂಪಭಾ,** ೧೦. ೮೦)

ಎಚ್ಚುಪಾಯ್ – **[ಕ್ರಿ]** ಚಿಮ್ಮಿ ಹರಿ (ಉಣ್ಮಿಪೊಣ್ಮಿ ಕಣ್ಮಲರ್ಗಳಿಂ ಎಚ್ಚುಪಾಯ್ದುವು ಅರಲಂಬುಗಳಂತೆ ವಿಲೋಚನಾಂಬುಗಳ್: **ಪಂಪಭಾ,** ೪. ೧೦೮)

ಎಡಂಬಡ – **[ನಾ]** ದ್ವೇಷ (ಮಾಗಧ ಪೆಱತಂ ಬಗೆಯದಿರ್ ಆಗದು ಚಕ್ರಿಯೊಳ್ ಎಡಂಬಡಂ ನೆಗಟಿಲ್ ನೀನೀಗಟಿ ಪೂಜಿಸು ಶರಮಂ: **ಆದಿಪು,** ೧೨. ೧೦೭); **[ನಾ]**

ಎಡವಟ್ಟಾದ ಮಾತು (ಇನಿಯಂ ನೋಯ್ಗುಂ ಎಡಂಬಡಂ ನುಡಿದೊಡೆ ಎಂದಪ್ಪೊಡಂ ನಿನ್ನೊಳೆಳ್ಳನಿತುಂ ದೋಷಮನುಂಟುಮಾಡದಿರೆಯುಂ: **ಪಂಪಭಾ,** ೪. ೯೩); **[ನಾ]** ಬಾಧೆ (ಬೆಸಸಿದ ನಿನ್ನ ಮಾತಿನಂತುಟೆ ಗೆಲ್ಲವು ಪಾಂಡುಪುತ್ರರಂ ಬಸನದ ಎಡಂಬಡಂ: **ಪಂಪಭಾ,** ೬. ೬೮); **[ನಾ]** ಕೀಟಲೆ (ಸಾಹಸಾಭರಣನೊಳ್ ಏನಾನುಂ ಎಡಂಬಡಂ ಮಾಡಿ ಮಾಯಾಯುದ್ಧದೊಳ್ ಆತನ ಸಾಹಸದ ಚಲದ ಬಲದ ಬಿಲ್ಲಾಳ್ತನದ ಅಳವಿಗಳನಳೆದು ನೋಡಿ ವರದನಪ್ಪೆಂ: **ಪಂಪಭಾ,** ೮. ೧೩ ವ)

ಎಡಂಬಡಮಾಗು – **[ಕ್ರಿ]** ಹೊಂದಿಕೆಯಾಗು (ಅಧರೋತ್ತರಂಗಳೊಳ್ ಮಿಸುಪ ರಸಾಂತರಂಗಳಿಂ ಎಡಂಬಡನಾಗದೆ ತನ್ನೊಳಿಂತು ಪೋಲಿಸುವೊಡೆ ಪೋಲಿಸಲ್ಕೆ ದೊರೆ ವೀಣೆಯನಾ ಸುರತಪ್ರವೀಣೆಯಂ: **ಆದಿಪು,** ೨. ೭೭)

ಎಡಂಬಡು – **[ನಾ]** ಎಡವಟ್ಟು (ಗ್ರಾಮ ನಗರ ಖೇಡ ಖರ್ವಡ ಮಡಂಬಗಳೊಳ್ ಎಡಂಬಡಿಲ್ಲದೆ ಚರ್ಯಾಮಾರ್ಗದೊಳ್ ನಡೆವಲ್ಲಿ: **ಆದಿಪು,** ೯. ೧೨೪ ವ); **[ನಾ]** ಅಸಮಾಧಾನ (ಪಿರಿದುಂ ಕಾಯ್ಪಿನೊಳ್ ಎಯ್ದೆ ಕಾಯ್ವ ಸಮಕಟ್ಟಿಂ ದೋಷಮಲ್ತೆ ಅಕ್ಕ ಮಚ್ಚರಮುಂ ಮೋಘಂ ಎಡಂಬಡುಂ ಕಲುಷಮುಂ ಮುನ್ನುಳ್ಳುದು: **ಪಂಪಭಾ,** ೭. ೩೫); **[ನಾ]** ಅಸಮಾಧಾನದ ಕೆಲಸ (ಈ ಸೂಟ್ ಒಂದುಂ ಎಡಂಬಡಿಲ್ಲದೆ ಗೋಗ್ರಹಣಮನೆ ನೆವಂ ಮಾಡಿ ಸುಯೋಧನನೆಂಬ ಪಾಪಕರ್ಮನ ಮಾಡಿದನುವರಂ: **ಪಂಪಭಾ,** ೯. ೧೭ ವ)

ಎಡಂಬಡೆನಿಸು – **[ಕ್ರಿ]** ಕ್ರಮದಪ್ಪು (ನಡೆವ ನುಡಿವ ಉಣ್ಬ ಕೊಳ್ವ ಇಡುವೆಡೆಯೊಳ್ ತಾಂ ಕಾಯಮಲಮನುಗುಟ್ವೆಡೆಯೊಳ್ ಎಡಂಬಡೆನಿಸದೆ: **ಆದಿಪು,** ೬. ೨೮)

ಎಡಗಲಿಸು – **[ಕ್ರಿ]** ಮೀರು (ಅಂತು ತಮ್ಮ ಮನದೊಳೊಡಂಬಟ್ಟಂತೆ ಮನಮಂ ಎಡಗಲಿಸಿ ಪರಿವ ಜಾತ್ಯಶ್ವಂಗಳೆಲ್ಲಂ ಅಟೆಗಾಳೆಗದೊಳ್ ಸತ್ತೊಡೆ: **ಪಂಪಭಾ,** ೮. ೯೪ ವ); **[ಕ್ರಿ]** ನೂಕು, ಪಕ್ಕ ಸರಿಸು (ಆಗಳ್ ಪ್ರತಿವಿಂಧ್ಯನಂ ವಿಂಧ್ಯಾಚಲಮಂ ಎಡಗಲಿಸಿದ ಅಗಸ್ತ್ಯನಂತೆ ಭೀಮಸೇನಂ ತಡೆಯದೆಡಗಲಿಸಿ: **ಪಂಪಭಾ,** ೧೨. ೬೫ ವ)

ಎಡಪು – **[ಕ್ರಿ]** ಎಡಹು, ಎಡವು (ಜಾತ್ಯಶ್ವಂಗಳ ಪೆಣೆದ ತಿಂತಿಣಿಯೊಳ್ ತೊಡರ್ದು ಎಡಪುತ್ತುಂ ಆಡುವ ಸುಭಟರ ಅಟ್ಟೆಗಳುಂ: **ಪಂಪಭಾ,** ೧೦. ೧೧೬ ವ)

ಎಡರ್ – **[ನಾ]** ಅಡಚಣೆ, ಕಷ್ಟ (ಬಟಲ್ದಿರೆ ಕಂಡಿರೆ ನಿಮ್ಮಳವಂ ನಿಮಗಂ ಈ ಎಡರಾಯ್ತೇ: **ಪಂಪಭಾ,** ೭. ೩೯)

ಎಡವಕ್ಕ – **[ನಾ]** [ಎಡ+ಪಕ್ಕ} ಎಡಗಡೆ, ಎಡ ಭಾಗ (ಯಾದವರ ಕುಲದೊಡನೆ ಅಕ್ಷೋಹಿಣೀಪತಿನಾಯಕಂ ಭೂಪತಿಯೆಡವಕ್ಕದೊಳ್ ನಡೆಯೆ: **ಪಂಪಭಾ,** ೯. ೯೫ ವ)

ಎಡಱ್ – **[ನಾ]** ಬಡತನ (ಸಿಡಿಲ್ವೊಡೆದವೊಲಟ್ಟಿ ಮುಟ್ಟಿ ಕಡಿದಿಕ್ಕಿದುದಾದುದೆಡಱಂ ನಿರಂತರಂ ಕಡಿಕಡಿದಿತ್ತ ಪೊನ್ನೆ ಬುಧಮಾಗಧವಂದಿಜನಕ್ಕೆ ಕೊಟ್ಟ ಕೋಡು: **ಪಂಪಭಾ,** ೧. ೯೯); **[ನಾ]** ಕೇಡು (ಎನ್ನಂ ಬಂಚಿಸಿ ಪೋದುದಱೊಳ್ ನಿನಗೆ ಪಗೆವರಿಂದ ಇನಿತೆಡಱಾಯ್ತು: **ಪಂಪಭಾ,** ೧೩. ೧೦೪)

ಎಡಱ್ ಪೋಗು – **[ಕ್ರಿ]** ಬಡತನ ನಿವಾರಣೆಯಾಗು (ಆ ದೀನಾನಾಥರ್ಗೆ ವೃದ್ಧದ್ವಿಜಮುನಿನಿಕರಕ್ಕೆ ಅಂದು ಎಡಱು ಪೋಪಿನಂ ಕಃ ಕೇನಾರ್ಥೀ ಕೋ ದರಿದ್ರಃ ಎನುತುಂ ಅನಿತುಮಂ ಧರ್ಮಜಂ ಸೂಱೆಗೊಟ್ಟಂ: **ಪಂಪಭಾ,** ೬. ೪೦)

ಎಡಱು – **[ಕ್ರಿ]** ಪ್ರತಿಭಟಿಸು (ಎಡಱುವ ಅಹಿತರಂ ಚಕ್ರಮೆ ಸಾಧಿಸಿದಪ್ಪುದು ನವನಿಧಿಗಳ್ ಪೊಸಯಿಸಿದಪ್ಪುವು ವಿಭೂತಿಯಂ ಪುರುಸುತನಾ: **ಆದಿಪು,** ೧೪. ೬೧); **[ಕ್ರಿ]** ಕಷ್ಟವೊದಗು (ಸವಿಯೊಳ್ ನಿನ್ನಂ ಮೆಚ್ಚಿಪೆಂ ಎಡಱೆದೊಡೆ ಎನ್ನರೊಳಂ ಮಲ್ಲಂ ಒರ್ವ ವಲ್ಲಲನೆಂಬೊಂ: **ಪಂಪಭಾ,** ೮. ೫೪); **[ನಾ]** ಅಡ್ಡಿ (ಸಂಧಿಯಂ ಮಾಡಲೊಲ್ಲದೆ ಸುಹೃದ್ಬಲಮೆಲ್ಲಮನಿಕ್ಕಿ ಯುದ್ಧಮಂ ಮಾಡಿದ ಜಾತಿಬೆಳ್ ನಿನಗೆ ಅದೇವಿರಿದು ಈ ಎಡಱು: **ಪಂಪಭಾ,** ೧೩. ೫೪)

ಎಡೆ – **[ನಾ]** ಸ್ಥಾನ, ಜಾಗ (ಬಡಗಣ ತಡಿಯೊಳಮೇಟಿನೆಯ ಎಡೆಯದು ನೀಳಾಚಳಕ್ಕೆ ತೆಂಕಣದು ಬೆಡಂಗೊಡರಿಪ ವಕ್ಷಾರಾದ್ರಿಗೆ ಪಡುವಣದು ಸುಜನಿಳಯಮಪಗತವಿಳಯಂ: **ಆದಿಪು,** ೧. ೫೬); **[ನಾ]** ಆಶ್ರಯ (ಶರಭಂಗಳ್ಗೆಡೆ ಸಿಂಹದುರ್ವು ವನಗಂಧೇಭೋತ್ಕರಕ್ಕೆಂದುಂ ಆಗರಂ ಈ ಭೂಧರಂ: **ಆದಿಪು,** ೧೩. ೮೨); **[ನಾ]** ನಡುವೆ (ಸೋದರರೊಳ್ ಸೋದರರಂ ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದುತ್ಪಾದಿಸುವುದು ಕೋಪಮಂ: **ಆದಿಪು,** ೧೪. ೧೨೨); **[ನಾ]** ಜಾಗ, ಸ್ಥಳ (ಎನಿತಱವುಳ್ಳರ್ಗಂ ತಿಳಿಪಲರಿಯದೆನಿಪ ಎಡೆಗಳುಮಂ ತೆಳ್ಳಿಗಿರೆ ತಿಳಿಪುಗುಂ ಬೆಸಗೊಳ್ಳ ಗುಣಾರ್ಣವನ ಲೆಕ್ಕಮಂ ಪೊಕ್ಕಮುಮಂ: **ಪಂಪಭಾ,** ೨. ೩೫); **[ನಾ]** ಸಂದರ್ಭ (ಎಲ್ಲವಡಗಾಗೆ ಮೋದಲೆಂದಿರ್ದ ಎಡೆಯೊಳ್ ಗುರು ತನ್ನ ಮಗನಂ ಎಡೆವುಗವೇಟ್ಟಂ: **ಪಂಪಭಾ,** ೨. ೭೩); **[ನಾ]** ವಿಷಯ (ನೀಂ ಗಳ ಪಂಬಲನೆ ಬಿಸುಡಿಂ ಇನ್ ಎನ್ನ ಎಡೆಯೊಳ್: **ಪಂಪಭಾ,** ೯. ೮೫); **[ನಾ]** ಅವಕಾಶ (ಉರದೆಡೆಗೆ ತುಡೆ ಜಯಶ್ರೀಗೆ ಇರಲ್ ಎಡೆ ನಿನಗಪ್ಪುದು ಆ ಸುಯೋಧನನೊ ಶ್ರೀಗಿರಲ್ ಎಡೆಯಪ್ಪುದು: **ಪಂಪಭಾ,** ೧೨. ೧೯೫); ಅರ್ಧದಾರಿ (ನೆಗೆದು ಬರ್ಪ ವಿಷಪನ್ನಗನಂ ಪನ್ನತನಂ ಎಡೆಯೊಳ್ ಅರಿಗಂ ತನ್ನಯ ಗರುಡಾಸ್ತ್ರದಿಂದೆ ಕುಱೆದಱೆದಱೆದಂ: **ಪಂಪಭಾ,** ೧೨. ೨೦೫)

ಎಡೆಗಲಿಸು – **[ಕ್ರಿ]** ಸೇರು, ಮಧ್ಯೆ ಸೇರಿಕೊ (ಗಾಳಿಯನೆಡೆಗಲಿಸಿದುದು ವಿನೀಳಘನಾಘನಮನಳಱೆ ಪಱೆದುದು: **ಆದಿಪು,** ೪. ೮೫)

ಎಡೆಗಿಡಿಸು – **[ಕ್ರಿ]** ಸ್ಥಳಾಂತರಿಸು (ಒಡೆವುದೆ ವಜ್ರಕವಾಟಮಂ ಅಡರ್ವುದೆ ವಿಜಯಾರ್ಧಗಿರಿಯಂ ಇಂತೀಗಳೆ ಪೊಟೆದ್ದೆಡೆಗಿಡಿಪುದೇ ಸಿಂಧುವಂ: **ಆದಿಪು,** ೧೩. ೨೧)

ಎಡೆಗಿಡು – **[ಕ್ರಿ]** ಸ್ಥಳಾಂತರ ಹೊಂದು, ನೆಲೆಗೆಡು (ನಭಂ ಮುಟ್ಟೆ ಸಿಡಿಲ್ದು ಎಡೆಗಿಡುವಿನಂ ಒಟ್ಟಿದ ಕೈದುಗಳ ಮೇಲೆ ಬಿದ್ದನಂ: **ಆದಿಪು,** ೫. ೮೪)

ಎಡೆಗಿಱೆ – **[ಕ್ರಿ]** ತುಂಬಿಕೊ, ಆಕ್ರಮಿಸು (ತಳ್ತು ಎಡೆಗಿಱೆದೆತ್ತಲುಂ ನಡೆವ ದಂತಿಘಟಾಳಿಯಿಂ: **ಆದಿಪು,** ೧೨. ೬೨)

ಎಡೆಗುಡು – [ಕ್ರಿ] ಅವಕಾಶ ಕೊಡು, ಆಸ್ಪದ ನೀಡು (ಸುರಿವ ಅಲರ್ಗಳಂ ಅಂದು ಎಡೆಗುಡದೆ ನೂಂಕಿ ಮೆಲ್ಲನೆ ತಱಿಯಂ ಸಾರ್ಚಿದಪುದಿದಱ ಬಂಬಲ್ದೆರೆಗಳ್: **ಪಂಪಭಾ,** ೫. ೫೫)

ಎಡೆಗೆಯ್ – [ಕ್ರಿ] ಜಾಗ ಕೊಡು, ಅವಕಾಶ ಕೊಡು (ಮಹಾಪ್ರತಿಜ್ಞೆಯೊಳ್ ತೊಡರ್ದನುಂ ಆನೆ ಭೂತಳಂ ಅದಿರ್ಕೆ ಎಡೆಗೆಯ್ ಗೆಲಲ್ ಆರ್ತರ್ಗೆ ಎರಟ್ಟುಡಿಯದಿರ್ ಎಂದು ಒಡಂಬಡಿಸಿದಂ ಹಳಿಯಂ ನಯದಿಂ ವೃಕೋದರಂ: **ಪಂಪಭಾ,** ೧೩. ೯೧)

ಎಡೆಗೊಳ್ – [ಕ್ರಿ] ನಡುವೆ ಹೋಗು (ಮದ್ರರಾಜಂ ಪನ್ನಿರ್ಛಾಸಿರ ಆನೆವೆರಸು ನೃಪನ ಚಕ್ರರಕ್ಷಕಂ ನೀಳಂ ಎಡೆಗೊಂಡು ತಾಗಿದನಾಗಳ್: **ಪಂಪಭಾ,** ೧೦. ೧೦೮ ವ); [ಕ್ರಿ] ಅವಕಾಶ ಕಲ್ಪಿಸು (ಬೀರವಟ್ಟಮಂ ಆನಿರೆ ನೀಂ ಈ ಸೂತಸುತಂಗೆ ಎಡೆಗೊಂಡು ಕೈವಾರದಿಂದ ಒಸೆದು ಇತ್ತೊಡಂ ಏನಾಯ್ತು: **ಪಂಪಭಾ,** ೧೨. ೪೩); [ಕ್ರಿ] ಖಾಲಿ ಜಾಗ ಮಾಡು (ಪುದುಂಗೊಳಿಸಿದ ಬಿದಿರ ಸಿಡುಂಬನೆಡೆಗೊಳೆ ಕಡಿವ ಪೋಡುಂಗಾಱನಂತೆ: **ಪಂಪಭಾ,** ೧೨. ೧೬೭ ವ); [ಕ್ರಿ] [ತಮ್ಮ ತಮ್ಮ] ಸ್ಥಳದಲ್ಲಿರು (ಎಡೆಗೊಂಡಿರಿಂ ಉತ್ಸಂಚಂ ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಪಿರ್ಮೆಡೆಯೊಳಿರಿಂ: **ಪಂಪಭಾ,** ೧೪. ೨೨)

ಎಡೆಗೋ – [ಕ್ರಿ] [ಎಡೆ+ಕೋ] ತೂರಿಕೊ, ಮಧ್ಯದಲ್ಲಿ ಅಸ್ತವ್ಯಸ್ತವಾಗಿ ನಿಲ್ಲು (ಎಡೆಗೋದಿರದಿರಿಂ ಉದ್ದಂ ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಮಿರ್ಪೆಡೆಯೊಳಿರಿಂ ನೀಮಱಿವಿರ್ ಮಿಡುಕಿದೊಡೆ ಎನೆ: **ಆದಿಪು,** ೯. ೬); [ಕ್ರಿ] [ಯುದ್ಧದಲ್ಲಿ] ಎದುರಾಗಿ ಪ್ರಯೋಗಿಸು (ಪಿಡಿಯೆಂ ಪುರಿಗಣೆಯಂ ನರಂ ಎಡೆಗೋದೊಡಂ ಉಱಿದ ನಿನ್ನ ಮಕ್ಕಳಂ ಇನ್ನೇರ್ದೊಡಂ ಅಱಿಯೆಂ: **ಪಂಪಭಾ,** ೯. ೮೭)

ಎಡೆನೆಱೆ – ಜಾಗ ಸಾಕಾಗು (ಎಡೆ ನೆಱೆಯದು ಭುವನತಳಂ ನಡೆವ ಚತುರ್ಬಲಕೆ: **ಆದಿಪು,** ೧೧. ೩೪)

ಎಡೆಮಡಗು – [ಕ್ರಿ] ತಡಮಾಡು (ತುಡು ಪಾಶುಪತಮನೆನೆ ನರನೆಡೆಮಡಗದೆ ತುಡೆ ದಿಶಾಳಿ ನಡುಗಿದುದು: **ಪಂಪಭಾ,** ೧೧. ೧೫೨); [ಕ್ರಿ] ದಾಕ್ಷಿಣ್ಯ ತೋರಿಸು (ಪಡೆದರ್ ತಾಯುಂ ತಂದೆಯುಂ ಒಡಲಂ ಪ್ರಾಣಮುಮಂ ಅವು ಅವರವು ಕೆಯ್ಯೆಡೆಯಂ ಕುಡುವುದು ಅರಿದಾಯ್ತೆ ನೀಂ ಎನಗೆ ಎಡೆಮಡಗದೆ ಬೆಸಪ ತೊಟ್ಟುವೆಸನಂ ಬೆಸಸಿಂ: **ಪಂಪಭಾ,** ೯. ೮೧); [ಕ್ರಿ] ಅವಕಾಶ ನೀಡು, ವಿಳಂಬಿಸು (ತುಡು ಪಾಶುಪತಮಂ ಎನೆ ನರಂ ಎಡೆಮಡಗದೆ ತುಡೆ ದಿಶಾಳಿ ನಡುಗಿದುದು: **ಪಂಪಭಾ,** ೧೧. ೧೫೨)

ಎಡೆಮಾಡು – [ಕ್ರಿ] ಅವಕಾಶವೊದಗಿಸು (ಆತನ ಪಡೆಗೆ ನಡೆಯಲೆಡೆಮಾಡಿದಂತೆ ಬಳ್ವಳಾದ ದೆಸೆಗಳುಂ: **ಆದಿಪು,** ೧೧. ೫ ವ)

ಎಡೆಯಱಿ – [ಕ್ರಿ] ಔಚಿತ್ಯವನ್ನು ತಿಳಿದು (ಪಂಚರತ್ನಮಯ ವಿವಾಹಮಂಟಪದೊಳ್ ಎಡೆಯಱಿದು ನಿಱಿಸಿದ ಕನಕರಜತಮಯ ಅನೇಕಭಂಗಿ ಭೃಂಗಾರಂಗಳುಂ: **ಆದಿಪು,** ೮. ೧೫ ವ) [ಕ್ರಿ] ಅಂತಸ್ತು ತಿಳಿದು, ಮಟ್ಟಕ್ಕೆ ತಕ್ಕುದಾಗಿ (ಮಯನ ಕೊಟ್ಟ ಸಭಾಮಂಟಪದೊಳ್ ಬ್ರಹ್ಮಋಷಿಯರುಮಂ ಅರಸು ಮಕ್ಕಳುಮಂ ಎಡೆಯಱಿದು ಇರಿಸಿ: **ಪಂಪಭಾ,** ೬. ೩೩ ವ)

ಎಡೆಯಾಗು – [ಕ್ರಿ] ಹೊಂದಿಕೆಯಾಗು (ಅಂಗಲತಾಲಾಲಿತಸಾಂದ್ರ ಚಂದನರಸಂ ಬೆಳ್ದಿಂಗಳ್ ಎಂಬೊಂದು ಪಂಬಲ ಬಂಬಲ್ಗೆಡೆಯಾಗೆ ಬೆಳ್ಪಸದನಂ ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೭); [ಕ್ರಿ] ಸಿಕ್ಕಿಹಾಕಿಕೊ (ನಂಬಿದುದಂ ಬಿಡಿಸಲುಂ ಒಳಪುಗುವುದರ್ಕೆ ಎಡೆಮಾಡಲುಂ ಎಡೆಯಾಗದ ಮೃಗಮಂ ಅವುಂಕಿಸಲುಂ .. .. ನಿಮ್ಮಡಿಯ ಕೆಲದೊಳಾನೆ ಬಲ್ಲೆಂ: **ಪಂಪಭಾ,** ೫. ೪೩ ವ)

ಎಡೆಯಾಡು – [ಕ್ರಿ] ಓಡಾಡು, ತಿರುಗಾಡು (ಪೆಣ್ತಂಡಂ ಇಂದ್ರಾಣಿಯೆಂದುದನೆಂದೆಂದು ಎಡೆಯಾಡುತಿರ್ಪುದು: **ಆದಿಪು,** ೮. ೨೨)

ಎಡೆಯಿಡು – [ಕ್ರಿ] ಅವಕಾಶ ನೀಡು (ಅವಧಿಯನೊಂದು ತಿಂಗಳೆಡೆಯಿಟ್ಟನಿಯಂ ತಡೆದಿರ್ಪನಲ್ಲಂ ಎಂಬವಸರದೊಳ್: **ಆದಿಪು,** ೧೨. ೪೩)

ಎಡೆಯುಡುಗು – [ಕ್ರಿ] ವಿಚ್ಛೇದಗೊಳ್ಳು, ಕೊಂಡಿ ತುಂಡರಿಸು (ನಿನಗೆ ಎಡೆಯುಡುಗದೆ ಕುಡುಗುಂ ಉಚಿತಮುಕ್ತಿಶ್ರೀಯಂ: **ಆದಿಪು,** ೫. ೫೦)

ಎಡೆಯೊಳ್ – [ಗು] ಮಧ್ಯದಲ್ಲಿ (ಶರಪರಿಣತಿಯಂ ತಾಂ ತೋರ್ಪಂ ಎನಗೆ ಎನುತ್ತಿರದೆ ಅಂತನಿತುಮಂ ಒಡನೆ ಕಡಿದಂ ಎಡೆಯೊಳೆ ಚಿತ್ರಂ: **ಪಂಪಭಾ,** ೧೨. ೬೩)

ಎಡೆವಱ – [ನಾ] ನಡುವಣ ಬರ[ಗಾಲ] (ಎಡೆವಱದೊಳ್ ಎಱಗಿ ಬಱಸಿಡಿಲ್ ಇಡುಮುಡುಕನೆ ಪೊಡೆದುದೆನಿಸಿ ಪಾಂಡ್ಯನ ರಥದ ಅಚ್ಚು ಉಡಿದು ಅಟ್ಟೆತಟ್ಗೆ ಕೊಂಡುವು ಕಡುಗೂರಿದುವೆನಿಪ ಗುರುತನೂಜನ ಕಣೆಗಳ್: **ಪಂಪಭಾ,** ೧೨. ೮೨)

ಎಡೆವಱಿ – [ಕ್ರಿ] [ಎಡೆ+ಪಱಿ] ಮಧ್ಯೆ ತುಂಡರಿಸಿಹೋಗು (ಹಿರಣ್ಯಗರ್ಭಬ್ರಹ್ಮರಿಂ ತಗುಳ್ದು ಅವ್ಯವಚ್ಛಿನ್ನಮಾಗಿ ಬಂದ ಸೋಮವಂಶಂ ಈಗಳ್ ಎಮ್ಮ ಕುಲಸಂತತಿಗಂ ಆರುಮಿಲ್ಲದೆ ಎಡೆವಱಿದು ಕಿಡುವಂತಾಗಿರ್ದುದು: **ಪಂಪಭಾ,** ೧. ೮೪ ವ)

ಎಡೆವಱಿಯದೆ – [ಕ್ರಿ] ಮಧ್ಯೆ ಜಾಗ ಬಿಡದೆ (ಸಭಾಮಂಟಪದೊಳ್ ಒಡ್ಡೋಲಂಗೊಟ್ಟು ಎಡೆವಱಿಯದೆ ಅವರವರವರ ಪಡೆದ ಪ್ರತಿಪತ್ತಿಗಳಂ ಅಱಿದು ಇಕ್ಕಿದ ಲೋಹಾಸನಂಗಳೊಳಂ .. .. ಕುಳ್ಳಿರಿಸಿ: **ಪಂಪಭಾ,** ೯. ೨೮ ವ)

ಎಡೆವಿಡಿಸು – [ಕ್ರಿ] ಜಾಗ ಕೊಡು (ಸರಲೆನಿತು ಅನಿತುಮಂ ಎಡೆವಿಡದೆ ತಱಿದು ತಲೆಯಂ ತಱಿಯಾ: **ಪಂಪಭಾ,** ೧೨. ೧೬೭)

ಎಡೆವುಗು –[ಕ್ರಿ] [ಎಡೆ+ಪುಗು] ಮಧ್ಯೆ ಪ್ರವೇಶಿಸು (ಗೆಡೆವಚ್ಚಿರ್ವರ್ ಮನಗೊಂಡು ಒಡನೊಡನೆ ಓರಂತು ತಗುಳ್ದು ಝೇಂಕರಿಸಿದೊಡೆ ಎಲ್ವಡಗಾಗೆ ಮೋದಲೆಂದಿರ್ದ ಎಡೆಯೊಳ್ ಗುರು ತನ್ನ ಮಗನಂ ಎಡೆವುಗವೇಟ್ಟಿಂ: **ಪಂಪಭಾ,** ೨. ೭೩)

ಎಡೆವೆಱು – [ಕ್ರಿ] ಸ್ಥಳವನ್ನು ಪಡೆ, ಅವಕಾಶ ಪಡೆ (ಎಡೆವೆತ್ತೊರ್ಮೆಯೆ ಮುಪ್ಪು ಕುತ್ತದೊಳಡಂಬಟ್ಟೊತ್ತೆ ಮತ್ತಲ್ಲಿ ಮೆಟ್ಟಿಡದೆ ಆರ್ತಣ್ಮೆ ತಪಕ್ಕೆ ಪೋಪ ಪದದೊಳ್; **ಆದಿಪು,** ೨. ೩೮)

ಎಡೆವೇಡು – [ಕ್ರಿ] ಜಾಗಕ್ಕಾಗಿ ಬೇಡು (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಮುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ)

ಎಡೆವೇಟಿಲ್ – [ಕ್ರಿ] ಕಾರಣವನ್ನು ತಿಳಿಸು (ನಿನಗೆ ಎಡೆವೇಟಿದೆ ಪೇಟಲ್ ಆರ್ಗೆ ಪೇಟಿಪ್ಪೆಂ: **ಪಂಪಭಾ,** ೪. ೬೬)

ಎಡೆವೋಗು – [ಕ್ರಿ] ಸಂಕೇತಸ್ಥಾನಕ್ಕೆ ಹೋಗು (ಅಲರ್ಗಣ್ಣೊಳ್ ಸ್ಮರನಿರ್ದಪನಕ್ಕುಂ ಎಡೆವೋಪಾ ಜೋಡೆ ಕಾಮಂಗೆ ಕಾದಲೆಯಕ್ಕುಂ: **ಪಂಪಭಾ,** ೪. ೮೪)

ಎಡ್ಡ – [ನಾ] ಸುಂದರ (ಭ್ರೂಲಾಸ್ಯಮಂ ನೀಳ್ದಪಾಂಗದ ಬೆಳ್ದಿಂಗಳಂ ಎಡ್ಡಮಪ್ಪ ಕಬರೀವಿಸ್ತಾರಮಂ ತೋಜಿದಳ್: **ಆದಿಪು,** ೧೧. ೧೭)

ಎಣ್ – ಸಮಾಸವಾಗುವಾಗ ಎಂಟು ಎಂಬುದಕ್ಕೆ ಬರುವ ರೂಪ (ನರನ ರಥಮಂ ಪಡುವೆಣ್ಗಾವುದುವರಂ ಸಿಡಿಲ್ವಿನಂ ಎಚ್ಚು ಅಚ್ಚುಡಿಯೆ ಭುಜಬಲದ ಹರಿಯ ಉರದೆಡೆಯಂ ಬಿರಿಯೆಚ್ಚು ಮೆಚಿದಂ ಅಳವಂ ಭೀಷ್ಮಂ: **ಪಂಪಭಾ,** ೧೧. ೨೦)

ಎಣಿಕೆ – [ನಾ] ಲೆಕ್ಕ, ಅಂದಾಜು (ಅಳತೆಗೆ ತೂಕಕ್ಕೆ ಎಣಿಕೆಗಂ ಒಳಗಾದುವು ಸಕಳವಸ್ತುಗಳ್ : **ಆದಿಪು,** ೧೦. ೫೫)

ಎಣಿಕೆಗಟಿ – [ಕ್ರಿ] ಲೆಕ್ಕಕ್ಕೆ ಮೀರು (ಎಣಿಕೆಗಟಿದ ಕರಿ ತುರಗ ವರೂಥ ಪದಾತಿಗಳುಮಂ ನೋಡಿ: **ಆದಿಪು,** ೧೪. ೨ ವ)

ಎಣಿಸು – [ಕ್ರಿ] ಲೆಕ್ಕಹಾಕು (ಭುವನಜನಕ್ಕೆ ಅಳೆಯಲ್ ತೂಗಲ್ಕೆ ಎಣಿಸಲ್ಕೆ ಅಳುಂಬಮೆನಿಸಿದುವು ನಿನ್ನ ಗುಣಗಣಮರ್ಹಾ: **ಆದಿಪು,** ೧೦, ೫೪)

ಎಣೆ – [ನಾ] ಸಮಾನ (ಮಿಳಿರ್ವ ಕುರುಳ್ಗಳೊಳ್ ಪೊಳೆವ ಕಣ್ಗಳ ಬೆಳ್ಪು ಪಳಂಚಿ ಚಿನ್ನಪೂಗಣೆಗೆಣೆಯಾಗೆ: **ಪಂಪಭಾ,** ೪. ೩೬)

ಎಣೆಗಂತೊಣೆಗಂ – [ನಾ] ಸರಿಸಮಾನಕ್ಕೆ (ಅಜಿಯದೆಯುಂ ವಿಚಾರಿಸದೆಯುಂ ನೃಪ ನೀಂ ನೆಗಟ್ವನ್ನನಲ್ಲಯ್ ಆನಜಿವೆಂ ಅದಂತೆ ಕರ್ಣನ ಎಣೆಗಂ ತೊಣೆಗಂ ನೃಪರಾರುಮಿಲ್ಲ: **ಪಂಪಭಾ,** ೧೨. ೧೦೦)

ಎಣ್ಗಾವುದು – [ನಾ] ಎಂಟು ಗಾವುದ (ನುಡಿವಳಿಗೆ ನರನ ರಥಮಂ ಪಡುವು ಎಣ್ಗಾವುದುವರಂ ಸಿಡಿಲ್ವಿನಂ ಎಚ್ಚು ಅಚ್ಚುಡಿಯೆ ಭುಜಬಲದ ಹರಿಯ ಉರದೆಡೆಯಂ ಬಿರಿಯೆಚ್ಚು ಮೆಚಿದಂ ಅಳವಂ ಭೀಷ್ಮಂ: **ಪಂಪಭಾ,** ೧೧. ೨೦)

ಎಣ್ಬತ್ತುನಾಲ್ವರ್ – [ನಾ] ಋಷಭದೇವನ ಗಣಧರರಾದ ಎಂಬತ್ತನಾಲ್ಕು ಮಂದಿ (ಎಂಬ ಎಣ್ಬತ್ತುನಾಲ್ವರ್ ಗಣಧರದೇವರುಂ ನಾಲ್ಸಾಸಿಱದೇೞ್ನೂಱಯ್ವದಿಂಬರ್ ಸಕಳಪೂರ್ವದೇವರುಂ: **ಆದಿಪು,** ೧೬. ೪೦ ವ)

ಎಣ್ಬತ್ತುನಾಲ್ಸಾಸಿರದೆಣ್ಬತ್ತನಾಲ್ವರ್ – [ನಾ] ಎಂಬತ್ತುನಾಲ್ಕು ಸಾವಿರದ ಎಂಬತ್ತು ನಾಲ್ಕು ಮಂದಿ (ವಾದಿಗಳುಂ ಮೊದಲಾಗಿ ಎಣ್ಬತ್ತುನಾಲ್ಸಾಸಿರದೆಣ್ಬತ್ತುನಾಲ್ವರ್ ಮುನಿಪತಿಗಳುಂ: **ಆದಿಪು,** ೧೬. ೪೦ ವ)

ಎಣ್ಬರ್ – [ನಾ] ಎಂಟು ಮಂದಿ (ಮಾದೇವಿಯರೆಣ್ಬರ್ ಮದನೋದಯಮಂ ಕುಡೆ ಮನಃಪ್ರವೀಚಾರದೊಳಂತಾ ದೇವಂ: **ಆದಿಪು,** ೬. ೧೪)

ಎಣ್ಬೆರಲ್ – [ನಾ] ಎಂಟು ಬೆರಳು[ಗಳಷ್ಟು ಅಗಲವಾದ] (ನಿನ್ನ ದಯೆಗೆಯ್ದ ವೀರವಟ್ಟಮೆಂಬುದು ಎನಗೆ ಎಣ್ಬೆರಲ ಪಟ್ಟಂ ಎಂಬುದುಂ ಬದ್ದವಣಂ ಬಾಜಿಸಿ ಕರ್ಣನಂ ಕನಕಪೀಠದೊಳ್ ಕುಳ್ಳಿರಿಸಿ: **ಪಂಪಭಾ,** ೧೨. ೫೧ ವ)

ಎತ್ತ – [ಅ] ಎಲ್ಲ ಕಡೆಯೂ (ಸೂಸುವ ಶೀತಳವಾರಿ ಮೆಯ್ಯನೆಯ್ತಂದು ಇರದೆ ಎತ್ತ ಬತ್ತಿದುವು: **ಪಂಪಭಾ,** ೫. ೭)

ಎತ್ತಂ – [ಅ] ಎಲ್ಲೆಲ್ಲೂ (ಕಪ್ಪುರದ ಬಂಬಲ್ದಂಬುಲಂ ರಾಗಮಂ ಪಡೆಗೆಲ್ಲಂ ಪಡೆವಂದದಿಂ ನಡೆದರಂದು ಎತ್ತಂ ಕೆಲರ್ ನಾಯಕರ್: **ಪಂಪಭಾ,** ೯. ೧೦೪)

ಎತ್ತಣಂ – [ನಾ] ಎಲ್ಲಿಯವನು (ಎಲ್ಲಿದಂ ಎತ್ತಣಂ ಎಂದು ಕರ್ಣನ ಕಳೇವರಮಂ ನೋಡಿ ನೋಡಲಾಱದೆ ಕಣ್ಗಳಂ ಮುಚ್ಚಿ: **ಪಂಪಭಾ,** ೧೩. ೫೮ ವ)

ಎತ್ತಾನುಂ – [ಅ] ಎಲ್ಲಿಯಾದರೂ, ಯಾವಾಗಲಾದರೂ (ಪೆಸರ್ಗೊಂಡು ಇಂದ್ರ ನರೇಂದ್ರವಂದ್ಯನಂ ಒಱಲ್ದು ಎತ್ತಾನುಂ ಓರೊರ್ಮೆ ಚಿಂತಿಸಿದೊಂಗಂ ಪವಣಿಲ್ಲ ಪುಣ್ಯಂ: **ಆದಿಪು,** ೧. ೩೭)

ಎತ್ತಿದ ಬೋನ – [ನಾ] ಬಡಿಸಿದ ಊಟ (ಎಂದು ಮಂಗಳವೃತ್ತಂಗಳನೋದೆ ಕಿಜಿದುಂ ಬೇಗಂ ಇರ್ದು ಎತ್ತಿದ ಬೋನದೊಳ್ ಕಲ್ಯಾಣಾಮೃತಮನಾರೋಗಿಸಿ: **ಪಂಪಭಾ,** ೭. ೭೯ ವ)

ಎತ್ತಿಸು – [ಕ್ರಿ] ಏರಿಸು (ನಿಜರಥತುರಗದಿವ್ಯಾಸ್ತ್ರಂಗಳುಟಿಯೆ ಪಸುರ್ಮಣಿಯನಪ್ಪೊಡಂ ಉಟಿಯದಂತು ಚಾಗಂಗೆಯ್ದು ಚಾಗಬೀರದ ಪಟಿಯಿಗೆಯನೆತ್ತಿಸಿ: **ಪಂಪಭಾ,** ೧೨. ೧೦೮ ವ)

ಎತ್ತು – [ಕ್ರಿ] ಬೆಟ್ಟು ಮಾಡಿ ತೋರಿಸು (ನೀನ್ನಿನ್ನ ನೃಪನ ದಿಗ್ವಿಜಯೋನ್ನತಿಯಂ ಪೊಗಟ್ದು ಮೂರ್ಛೆವೋಪೈ ಪೊಗಟ್ದುಂ ನೀನ್ನಿನ್ನ ಮನದೊಳಿಂತಿದು ಬನ್ನಮನೆತ್ತುವವೊಲಾಯ್ತು ನಿನ್ನವನಿಪನಾ: **ಆದಿಪು,** ೧೪. ೬೬); [ಕ್ರಿ] ಎತ್ತರವಾಗಿ ಕಟ್ಟು (ತಳಿರ್ಗಳಸಂ ಮುಕುಂದ ರವಂ ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಙ್ಕ್ತಿ ಪಸುರ್ವಂದಲೊಳ್ ಒಲ್ದು ಎಡೆಯಾಡುವ ಎಯ್ದೆಯರ್: **ಪಂಪಭಾ,** ೧. ೧೦೭); [ಕ್ರಿ] ಎಚ್ಚರಿಸು, ಎಬ್ಬಿಸು (ಮಱಕೆಂದಿದರನೆತ್ತುವಂತೆ ನಾಲ್ವರುಮನೆತ್ತಿ ತಾಂ ಮುನ್ನಂ ತಂದರಣೆಯಂ ಕೊಟ್ಟು ಕೃತಾಂತನಂತರ್ಧಾನಕ್ಕೆ ಸಂದಂ: **ಪಂಪಭಾ,** ೮. ೪೮ ವ); [ಕ್ರಿ] ಎಬ್ಬಿಸು, ಉಂಟುಮಾಡು (ಆಗಳ್ ಆ ವಿಕಚಾಂಬುಜಸೌರಭಮನೊಸೆದು ಸೇವಿಸುವಾ ಪೆಣ್ದುಂಬಿಗಳ ಸರಮನೆತ್ತಿ ತಱುಂಬುತ್ತುಂ ಬಂದುದಾ ಪ್ರಭಾತಸಮೀರಂ: **ಪಂಪಭಾ,** ೧೨. ೧೦೫)

ಎತ್ತೆತ್ತ – [ಅ] ಏನೇನು (ಮನದೊಳ್ ಮುಂ ಪುದಿದಿರ್ದ ಕೋಪಮನಿತುಂ ತೂಳ್ದಾಗಳ್ ಎತ್ತೆತ್ತ ಗೆಯ್ದೆನಿದಂ ತಮ್ಮನೊಳ್ ಎಂಬುದೊಂದುಪಶಮಂ ಕೈಗಣ್ಮೆ: **ಆದಿಪು,** ೧೪. ೧೩೨)

ಎನತು – [ಗು] ನನ್ನದು (ನೀನೀಯೆ ಬಂದುದೆನಗೆ ಇದಂ ಎನತು ಎಂದು ಏಂ ನಿನಗೆ ಬಗೆಯಲಪ್ಪುದೆ: **ಆದಿಪು,** ೧೪. ೧೪೪)

ಎನಿತಾನುಂ – [ನಾ] ಎಷ್ಟೆಷ್ಟೋ, ಹಲವು ಬಗೆಗಳಲ್ಲಿ (ಎಂದು ಎನಿತಾನುಂ ತೆಱದೊಳ್ ಅಳಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳಂ ನುಡಿದುಂ ಕಾಲ್ವಿಡಿದುಂ ಅಚಳಿತಧೈರ್ಯನ ಮನಮಂ ಚಲಿಯಿಸಲಾಱದೆ: **ಪಂಪಭಾ,** ೭. ೯೪ ವ)

ಎನಿತು – [ನಾ] ಎಷ್ಟು (ಆಗಳಾ ತಾರಾಗಣಂಗಳ್ ದಿಶಾವನಿತೆಯರ ಮಕುಟಮಾಣಿಕಂಗಳಂತೆ ಎನಿತು ಬೆಳಗಿಯುಂ ಕಟ್ಟಿಲೆಯಂ ಅಲೆಯಲಾಱವಾದುವು: **ಪಂಪಭಾ,** ೪. ೪೯ ವ)

ಎನಿಬರಾನುಂ – [ನಾ] ಎಷ್ಟೋ ಜನ (ನಂಟರಪ್ಪ ಅಶ್ವಗ್ರೀವ ವಿದ್ಯುನ್ಮಾಲಿ ನೀಲಾದಿಗಳಪ್ಪ ಪ್ರಭೃತಿಗಳ್ ಎನಿಬರಾನುಂ ಮುರಾಂತಕನಂ ಬಂದು ತಾಗಿದೊಡೆ: **ಪಂಪಭಾ,** ೬. ೬೪ ವ)

ಎನಿಸು – [ಕ್ರಿ] ಎನ್ನುವಂತೆ ಮಾಡು, ಅನ್ನಿಸು (ನೆಗಟ್ದಾದಿ ಕ್ಷತ್ರಿಯರೊಳಂ ಇಲ್ಲೆನಿಸಿದುದೀ ತ್ರಿಜಗದೊಳ್ ಎಸಗಿದ ಎಸಕಂ ಅರಿಕೇಸರಿಯಾ: **ಪಂಪಭಾ,** ೧. ೨೧)

ಎನು – [ಕ್ರಿ] ಹೇಳು (ಎಂದು ತನ್ನ ಮನಮನಱಿದು ಮುಟ್ಟಿ ನುಡಿದ ಕೆಳದಿಯ ನುಡಿಗೆ ಪೆಱತೇನುಮಂ ಎನಲಱಿಯದೆ: **ಪಂಪಭಾ,** ೪. ೬೪ ವ)

ಎನೆ – ಎನ್ನಿಸುವಂತೆ, ಎಂದು ತೋರುವಂತೆ (ಪುಸಿ ಎನೆ ರಥಮಂ ಹರಿ ಚೋದಿಸುವಂತೆವೊಲಿರ್ದು ಅದೆಂತು ನರನಂ ಗೆಲಿಪಂ ವಿಸಸನದೊಳ್: **ಪಂಪಭಾ,** ೧೨. ೯೧)

ಎನೆಯೆನೆ – [ಕ್ರಿ] [ಎನೆ+ಎನೆ] ಎಂದು ಹೇಳಲು (ಎನೆಯೆನೆ ಬಾಷ್ಪವಾರಿ ಪುಳಕಂಬೆರಸು ಒರ್ಮೆಯೆ ಪೊಣ್ಮೆ ಮುನ್ನೆ ನೀವೆನಗಿದನೇಕೆ ಪೇೞ್ದಿರೊ: **ಪಂಪಭಾ,** ೯. ೬೮)

ಎನ್ನ – [ಕ್ರಿ] ಎನ್ನುವೆಯಾ? (ಅರರೀಪುಟಮೆರಡುಂ ಜೀರ್ಗರೆದು ಮರಲ್ದಂದಮೆಂತುಟಾಯ್ತು ಎನ್ನ ಭಯಂಕರ ದಂಡರತ್ನಹತಿಯಿಂ ಗಿರಿ ನೊಂದು ನರಳ್ವ ಮಾೞ್ಕೆಯಂತಾಯ್ತಾಗಳ್: **ಆದಿಪು,** ೧೩. ೩೭); **[ಗು]** ನನ್ನ (ಅಸದಾಗ್ರಹಮಂ ಬಿಸುಡುವುದೊರ್ಮೆಗೆ ಮಱೆವುದು ಎನ್ನ ದುರ್ವಿಳಸನಮಂ: **ಆದಿಪು,** ೧೪. ೧೩೧)

ಎನ್ನ ಗೆಯ್ದ – [ಗು] ನಾನು ಮಾಡಿದ (ಎನ್ನ ಗೆಯ್ದ ಕಾಮಾಕ್ರಾಂತಕ್ಕೆ ಕಾಮಕೃತಮೇಂ ಪಿರಿದಲ್ತು: **ಪಂಪಭಾ,** ೧. ೧೧೨ ವ)

ಎನ್ನರ್ – [ನಾ] ನನ್ನವರು (ಅಱೆದೆಂ ಸೋದರರೆಂದು ಪಾಂಡವರಂ ಇನ್ನೆಂತು ಎನ್ನರಂ ಕೊಲ್ವೆಂ: **ಪಂಪಭಾ,** ೯. ೭೧)

ಎನ್ನರುಂ – [ಗು] ಎಂತಹವರೂ (ಎನ್ನರುಂ ತೀವಿ ತಳ್ತಿವಳೀ ಕುಚಂಗಳಂ ಅೞ್ಕಱೆಂದ ಅಮರ್ದಪ್ಪಿ ಪೋಗು ಆವ ಉಪಾಯದೊಳಾದೊಡಂ ನೆರೆದಲ್ಲದಿನ್ನಿರೆನೀಕೆಯೊಳ್: **ಪಂಪಭಾ,** ೮. ೬೩); **[ಗು]** ಯಾರೂ (ನಿನ್ನ ಉತ್ಪತ್ತಿಯಂ ಇಂತೆಂದು ಎನ್ನರುಂ ಅಣಂ ಅಱೆಯರ್ ಅಱೆವೆನಾಂ ಸಹದೇವಂ ಪನ್ನಗಕೇತು ದಿನೇಶಂ ನಿನ್ನಂಬಿಕೆ ಕೊಂತಿ ಇಂತಿವರ್ ನೆಱೆ ಬಲ್ಲರ್: **ಪಂಪಭಾ,** ೯. ೬೬)

ಎನ್ನರೊಳಂ – [ಗು] ಎಂಥವರಲ್ಲೂ (ಸವಿಯೊಳ್ ನಿನ್ನಂ ಮೆಚ್ಚಿಪೆಂ ಎಡಱೆದೊಡೆ ಎನ್ನರೊಳಂ ಮಲ್ಲಂ ಒರ್ವ ವಲ್ಲಲನೆಂಬೊಂ: **ಪಂಪಭಾ,** ೮. ೫೪)

ಎನ್ನಿರ್ಪ – [ಗು] ನಾನಿರುವ (ನಿನ್ನೆಂದಂತುಟೆ ಮೋಕ್ಷಕ್ಕೆ ಎನ್ನಿರ್ಪಿರವು ಅಘಟಮಾನವೈಹಿಕದ ತೊಡರ್ಪು ಎನ್ನಿರವಿನೊಳುಂಟು: **ಪಂಪಭಾ.** ೮. ೪)

ಎನ್ನೆಗಂ – [ಅ] ಯಾವಾಗಲೂ (ಎಯ್ದುದಱೆೊಳ್ ಅಳವಡದುದುಂ ಎಯ್ದುದುದನೆ ಬಯಸುತಿರ್ಪುದುಂ ಜೀವಕ್ಕೇಗೆಯ್ದುಂ ಇದು ಸಹಜಂ ಅನ್ನೆಗಂ ಎಯ್ದುಗುಂ ಎನ್ನೆಗಂ ಉದಾತ್ತ ಮುಕ್ತಿಶ್ರೀಯಂ: **ಆದಿಪು,** ೯. ೫೨)

ಎಮೆ – [ನಾ] ಎವೆ, ಕಣ್ಣುರೆಪ್ಪೆ (ಮದನ ದವಾನಲಾರ್ಚಿ ತನುವಂ ಸುಡೆ ತಳ್ತ ಎಮೆಯೊಳ್ ಪಳಂಚಿ ಬೀಗಿದ ಬೆಳರ್ವಾಯೊಳ್ ಉಚ್ಚಳಿಸಿ .. .. ಎಯ್ದಿದುವು ನೇತ್ರಜಲಬಿಂದುಗಳ್ ಆಕೆಯ ನಿಮ್ನನಾಭಿಯಂ: **ಪಂಪಭಾ,** ೫. ೯)

ಎಮೆಯಿಕ್ಕು – [ನಾ] ರೆಪ್ಪೆ ಬಡಿ, ಕಣ್ಣು ಮಿಟುಕಿಸು (ಸೋಲದೊಲೆಯ್ದೆ ಪೀರ್ದ ತೆಱದಿಂದೆಮೆಯಿಕ್ಕದೆ ನೋೞ್ಪ ಕಣ್ ಪೀಲಿವೊಲಾಗೆ: **ಪಂಪಭಾ,** ೪. ೪೩)

ಎಮ್ಮಂದಿಗ – [ನಾ] ನಮ್ಮಂಥವನು (ಎಮ್ಮಂದಿಗರ್ ಪ್ರಣಾಮದೊಳೆ ಪುಣ್ಯಮಂ ಪಡೆವರ್: **ಆದಿಪು,** ೧೩. ೯೦)

ಎಮ್ಮಾಳ್ವ – [ಗು] ನಾವು ಆಳುವ (ರಪಣಮಂ ತೋಱೆಯುಂ ಒತ್ತೆಯಂ ಉಗ್ಗಡಿಸಿಯುಂ ಆಡಿಂ ಎನೆ ಪೆಱತೇನುಪಾಯಮಿಲ್ಲದೆ ಎಮ್ಮಾಳ್ವ ನೆಲನೊತ್ತೆಯೆಂದೊಡೆ: **ಪಂಪಭಾ,** ೭. ೩ ವ)

ಎಮ್ಮುಳ್ಳದು – [ಗು] ನಮ್ಮಲ್ಲಿರುವುದು (ಎಮ್ಮುಳ್ಳುದಂ ನೆಱೆ ಕೊಂಡು ಎಮ್ಮಯ ಬಾೞ್ವೆಯೊಳ್ ನಿಱೆಸುವಂ ನೀಂ ಎಂದು ತಂದಿತ್ತು ಕೆಯ್ಸೆಱೆಯಿಂ ಕೊಟ್ಟು ಅಳವಟ್ಟ ಸಾರಧನಮಂ: **ಪಂಪಭಾ,** ೬. ೩೦)

ಎಮ್ಮೆವೋೞೆ – [ನಾ] [ಎಮ್ಮೆ+ಪೋೞೆ] ಕೋಣ (ಎರಡೆಮ್ಮೆವೋೞೆಯೊಳ್ ಪೂಡಿದ ಪನ್ನಿರ್ಕಂಡುಗದಕ್ಕಿಯ ಕೂಟುಮಂ ಅದರ್ಕೆ ತಕ್ಕ ಪರಿಕರಮುಮಂ ಒರ್ವ ಮಾನಸಂ ಕೊಂಡು ಪೋಪಂ: **ಪಂಪಭಾ,** ೩. ೨೫ ವ)

ಎಯ್ – [ನಾ] ಮುಳ್ಳುಹಂದಿ, ಎಕ್ಕಲ (ಅಡಂಗಿ ಪರಿವ ಪುಲಿಗಳುಮಂ ಸೋಂಕಿ ಪರಿವ ಎಯ್ಗಳುಮಂ ತಡಂಮೆಟ್ಟಿ .. .. ಪಲವನೆಚ್ಚು: **ಪಂಪಭಾ,** ೫. ೪೮ ವ)

ಎಯ್ತರ್ – [ಕ್ರಿ] ಸಮೀಪಿಸು (ನೆನೆದಾಗಳ್ ನಿಜನಂದನನೋಪಕೃತಮಂ ತದ್ದೇವನೆಯ್ತಂದು ದೇವನಿಕಾಯಂ ಬೆರಸಪ್ಪಿಕೊಂಡು: **ಆದಿಪು.** ೨. ೧೮)

ಎಯ್ದಿಸು – [ಕ್ರಿ] ತಲುಪುವವಂತೆ ಮಾಡು (ತನ್ನ ದುಸ್ಸಹಾವಸ್ಥಾಂತರಮನಱೆಪಿ ನೀನೆನ್ನಂ ನಿನ್ನ ಗಗನಗಾಮಿನೀವಿದ್ಯೆಯಿಂ ಉತ್ತರಕುರುವನೆಯ್ದಿಸು .. .. ಎಂದು ನಿಜನಂದನನಂಗೆ ಪೇೞ್ದೊಡೆ: **ಆದಿಪು,** ೨. ೧೪ ವ); **[ಕ್ರಿ]** ಸಾಗಿಸು (ಅಯ್ದನೆಯ ಜಲಧಿವರಮಿರದೆಯ್ದುವ ಮೊಗೆವಂತೆ ಮೊಗೆದುಂ ಓರೊರ್ಬರ ಕೈಗೆಯ್ದಿಸುವ ಬೇಗಮಂ: **ಆದಿಪು,** ೭. ೮೩)

ಎಯ್ದು – [ಕ್ರಿ] ಹೊಂದು, ಪಡೆ (ಉದ್ವಪಯೋಧರೆಯ ಮನೋಜರಾಗರಸಪೂರಿತ ಬಿಂಬಾಧರೆಯ ಕಂಬುಕಮ್ರ ಶಿರೋಧರೆಯ ಬೆಡಂಗಂ ಆರುಮೇನೆಯ್ದುವರೇ: **ಆದಿಪು,** ೪. ೪೬); **[ಕ್ರಿ]** ಪ್ರಾಪ್ತವಾಗು (ಇದು ಸಹಜಂ, ಅನ್ನೆಗಂ ಎಯ್ದುಗುಂ ಎನ್ನೆಗಮುದಾತ್ತಮುಕ್ತಿಶ್ರೀಯಂ: **ಆದಿಪು,** ೯. ೫೨) **[ಕ್ರಿ]** ತಲುಪು, ಸೇರು (ಉತ್ತುಂಗಮಂ

ಮುನಿಮುಖ್ಯಮುಖಾಂಭೋಜೋದರ ನಿರ್ಗತ ಮಂತ್ರಪೂತಾಂಗಮಮ ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ,** ೧. ೧೧೫); **[ಕ್ರಿ]** ವಾಪಸ್ಸು ಬರು (ತಱೆದೊಟ್ಟಿ ವೈರಿಗಳಂ ಎನ್ನ ಅಸುವುಳ್ಳಿನಂ ಎಯ್ದುವೈ ಗಡಾ: **ಪಂಪಭಾ,** ೧೩. ೧೦೫)

ಎಯ್ದೆ – [ನಾ] ಅಯ್ದೆ [ಸುಮಂಗಲಿ] (ತಳಿರ್ಗಳಸಂ ಮುಕುಂದ ರವಂ ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಙ್ಕ್ತಿ ಪಸುರ್ವಂದಲೊಳ್ ಒಲ್ದು ಎಡೆಯಾಡುವ ಎಯ್ದೆಯರ್: **ಪಂಪಭಾ,** ೧. ೧೦೭); **[ಕ್ರಿವಿ]** ಐದೆ, ಚೆನ್ನಾಗಿ (ಧರಾತಳಮಂ ಒಲ್ಲಣಿಗೆಯಂ ಪಿಟಿವಂತೆ ತಳಂ ಎಯ್ದೆ ಸುರುಳ್ವಿನಂ ಮುಯ್ಯೇಱು ಸೂಟ್ ಪಿಟಿದ ಸಾಹಸಮುಂ: **ಪಂಪಭಾ,** ೧೨. ೪೮ ವ)

ಎಯ್ದೆ ಪಾಯ್ – **[ಕ್ರಿ]** ಮುಟ್ಟುವಂತೆ ನುಗ್ಗು (ದೆಸೆಗೆತ್ತಂ ಗಜಱುತ್ತುಮಿರ್ಪ ಪುಲಿಯಿಂ ನೀಳಾಭ್ರಮಂ ದಂತಿಗೆತ್ತು ಸಿಡಿಲ್ದು ಆಗಸಕೆ ಎಯ್ದೆ ಪಾಯ್ವ ಪಲವುಂ ಸಿಂಗಂಗಳಿಂದೆತ್ತಗುರ್ವಿಸಿ: **ಪಂಪಭಾ,** ೭. ೨೬)

ಎಯ್ದೆವರ್ – [ಕ್ರಿ] ಸಮೀಪಿಸು (ಗಂಗಾಜಲಕ್ರೀಡಾಸಕ್ತಚಿತ್ತನಾಗಿ ತತ್ಪರಿಸರಪ್ರದೇಶಮಂ ಎಯ್ದೆವಂದು: **ಆದಿಪು,** ೧೧. ೧೩೯ ವ)

ಎರಡಂ ನುಡಿ – [ಕ್ರಿ] ಎರಡು ಮಾತನ್ನಾಡು, ಮಾತಿಗೆ ತಪ್ಪು (ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಱ್ತೆ ನನ್ನಿಯ ನುಡಿಯಂ ಕಿಡೆ ನೆಗಱ್ ನಾನುಮೆರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ: **ಪಂಪಭಾ,** ೧. ೮೨)

ಎರಡಱೆ – [ಕ್ರಿ] ಬೇರೆ ಯೋಚಿಸು (ಅಱೆವಂ ಮೆಱ್ದು ಎರಡಱೆಯದ ತಱೆಸಲವು ಅಮರ್ದಿರೆ ಸುಧರ್ಮಮುನಿಪದ್ಮಕ್ಕೆಱಗಿ ಜಿನರೂಪಮೆಂಬೊಂದಱ ಅಡಿವಿಡಿದು: **ಆದಿಪು,** ೩. ೫೧); **[ಕ್ರಿ]** ಕಪಟ ತಿಳಿ (ತನಗೆರಡಱೆಯದೆ ಒಲ್ದ ನಲ್ಲಳಂ ಏತಱ್ಗೊಳಪ್ಪೊಡಂ ಏವಮಂ ಮಾಡದೆ: **ಪಂಪಭಾ,** ೪. ೯೨ ವ)

ಎರಡಿರು – [ಕ್ರಿ] ಇಬ್ಬಗೆಯಾಗು, ದ್ರೋಹ ಬಗೆ (ಮಱುಗುವೆನಾನಿವಳ್ಗೆ ಇವಳ್ ಅವಂಗೆರಡಿಲ್ಲದೆ ನಲ್ಲಳ್: **ಆದಿಪು,** ೧೨. ೨೯)

ಎರಡು – [ನಾ] ಕಾರ್ಯ ಅಕಾರ್ಯ ಅಥವಾ ಪಾಪ ಪುಣ್ಯ (ಪರಿಕಿಪುದು ಒಂದಱೆಂದೆ ಎರಡಂ ಓತುಕೊಳ್ವುದು ಮೂಱ್ಱಿಂದೆ ನಾಲ್ಕರಿದಱೆದು ಅಯ್ದಱೆಂದೆ ನೆಱ್ ಕಲ್ವುದು ನಿರ್ಣಯಂ ಆಱ್ಱೊಳ್ ಪರಿಣತನಪ್ಪುದು ಏೞಱ್ಗೊಳಂ ಒಂದದೆ ನಿಲ್ವುದು: **ಪಂಪಭಾ,** ೧೩. ೬೬)

ಎರಡುಂ ಕಾಲ – [ನಾ] [ಜೈನ] ಮಧ್ಯಮಖಂಡದಲ್ಲಿನ ಮುಖ್ಯ ಮತ್ತು ವ್ಯವಹಾರ ಎಂಬ ಎರಡು ಬಗೆಯ ಕಾಲಗಣನೆ (ಭರತಕ್ಷೇತ್ರಮಧ್ಯ ಮಧ್ಯಮಖಂಡದೊಳ್ ಮುಖ್ಯ ವ್ಯವಹಾರಮೆಂಬೆರಡು ಕಾಲದೊಳಗೆ ಆದಿಮಧ್ಯಾವಸಾನ ವಿರಹಿತಮುಂ: **ಆದಿಪು,** ೬. ೪೮ ವ)

ಎರಲೆ – [ನಾ] ಜಿಂಕೆ (ಎರಲೆಗೆ ಪಾಡುವ ಗೋರಿಯಂ ಅರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ: **ಆದಿಪು,** ೧೪. ೮೦); **[ನಾ]** ವಿಷಕ್ರಿಮಿ (ಅರಗಿನ ಮನೆಯೊಳ್ ಪಾಂಡವರ್ ಉರಿದು ಅೞ್ಗಿದರ್ ಅಕ್ಕಟ ಅಯ್ಯೊ ದುರ್ಯೋಧನನೆಂಬ ಎರಲೆಯಿಂ ಎಂದು ಅೞುತುಂ ತತ್ಪುರಜನಂ ಅೞಲ್ ಒದವೆ ಪರಿದು ನೋಡಿತ್ತಾಗಳ್: **ಪಂಪಭಾ,** ೩. ೮); **[ನಾ]** ಗಂಡು ಜಿಂಕೆ (ಸೂಚಮನುರ್ಚಿ ಪುಲ್ಲೆಗಾಟಿಸಿ ಮಲೆತರ್ಪರಲೆಯ ಸೋಲಮಂ ಅಟ್ಟಿಯೊಳ್ ಅರಿಕೇಸರಿ ನಿಂದು ನೋಟ್ಟುದೊಂದರಸಲ್ತೇ: **ಪಂಪಭಾ,** ೫. ೪೪)

ಎರಟ್ಟುಂಡ – **[ನಾ]** ಎರಡು ತುಂಡು (ಅದಂ ಎರಟ್ಟುಂಡಮಪ್ಪಿನಂ ಆಖಂಡಳತನಯಂ ಇಸುವುದುಂ ತನ್ನ ಬಾಲಂಬೆರಸು ಉರಿಯೊಳ್ ಮಿಡುಕುತಿರ್ದ ಜನನಿಯಂ: **ಪಂಪಭಾ,** ೫. ೯೯ ವ)

ಎರಟ್ಟಂಡ – [ನಾ] ಎರಡು ತಂಡ ಅಥವಾ ಸೈನ್ಯಗಳು (ಎನ್ನನೆ ನಚ್ಚಿದಂ ಅನುವರಕೆ ಎನ್ನನೆ ಪೂಣಿಸಿದಂ ಎನಗೆ ಎರಟ್ಟಂಡಮುಂ ಓರನ್ನರೆ: **ಪಂಪಭಾ,** ೧೦. ೧೨)

ಎರಟ್ನುಡಿ – [ನಾ] ಎರಡು ನುಡಿ, ಮಾತಿಗೆ ತಪ್ಪು (ಎಡೆಗೆಯ್ ಗೆಲಲ್ ಆರ್ತರ್ಗೆ ಎರಟ್ನುಡಿಯದಿರ್ ಎಂದು ಒಡಂಬಡಿಸಿದಂ ಹಳಿಯಂ ನಯದಿಂ ವೃಕೋದರಂ: **ಪಂಪಭಾ,** ೧೩. ೯೧)

ಎರಟ್ಬಿಗಿ – [ನಾ] ಎರಡು ಭಾಗ (ಆ ಪಡೆ ಕಣ್ಬಡೆದಂತೆ ಸೋಪಾನಾಂತರದೊಳ್ ಇೞಿದು ಎರಟ್ಬಿಗಿಯಾಗಿ ಸಿಂಧುವಿನೆರಡುಂ ತಡಿಯೊಳಂ: **ಆದಿಪು,** ೧೩. ೫೦ ವ)

ಎರೆ – [ಕ್ರಿ] ಬೇಡು (ನಿರಪೇಕ್ಷನಂ ಏಕೆ ಎರೆವಿರ್ ಪುರುದೇವನಂ: **ಆದಿಪು,** ೯. ೧೦೪); **[ಕ್ರಿ]** ಕನ್ಯಾಯಾಚನೆ ಮಾಡು (ಎರೆದಿಂತಟ್ಟಲೆವೇಟ್ಟ ಕನ್ನೆ ಬೞೆಯಂ ಬಂದಳ್ ಮರುಳ್ದು ಅಂಬುಜೋದರನಿಂತಟ್ಟಿದಂ: **ಪಂಪಭಾ,** ೫. ೨೪)

ಎರೆದಂ – [ನಾ] ಬೇಡಿದವನು (ಎರೆದನ ಪೆಂಪುವೇೞ್ವೊಡೆ ಅನಲಂ ಪೊಣರ್ವಾತನ ಪೆಂಪುವೇೞ್ವೊಡೆ ಆ ಸುರಪತಿ ಕೊಟ್ಟ ತಾಣದೆಡೆವೇೞ್ವೊಡೆ ಯಮುನಾನದೀತಟಾಂತರಂ: **ಪಂಪಭಾ,** ೫. ೭೩)

ಎರ್ದೆ – [ನಾ] ಎದೆ (ಆಗಳ್ ಪ್ರಳಯದುಳ್ಕಮುಳ್ಕುವಂತೆ ತನ್ನೆಚ್ಚಂಬು ಮುನಿಕುಮಾರನ ಕಣ್ಣೊಳಮೆರ್ದೆಯೊಳಂ ಉಳ್ಕೆ: **ಪಂಪಭಾ,** ೧. ೧೧೧ ವ)

ಎರ್ದೆ ಕರಗು – [ಕ್ರಿ] ದುಃಖವಾಗು (ನರರ ಐಶ್ವರ್ಯದ ಪೊದಳ್ಕೆಗಳ್ ಕರಗುವವೋಲ್ ಶರದಂಬುಧರಂ ಭೋಂಕೆನೆ ಕರಗಿದೊಡೆ ಎರ್ದೆ ಕರಗಿ ಕೊರಗಿದಂ ಧರಣೀಶಂ: **ಆದಿಪು,** ೪. ೬೪)

ಎರ್ದೆಗಂ ಬರು – [ಕ್ರಿ] ಹೃದಯವನ್ನು ಮುಟ್ಟು (ಬೀರಮಂ ಚಾಗದ ಪೆಂಪುಮಂ ಪೊಗಟ್ಟ ಸಂಗಡವರ್ಪವರೊಳ್ವಿನಿಂದೆ ಮೆಯ್ವೋಗದಳುಂಬಮಪ್ಪ ಬಿಯಂ ಆರ ಎರ್ದೆಗಂ ಬರೆ ಬರ್ಪ ಪಾಂಗು: **ಪಂಪಭಾ,** ೪. ೮೭)

ಎರ್ದೆಗಾ – [ಕ್ರಿ] [ಎರ್ದೆ+ಕಾ] ಮನಸ್ಸನ್ನು ವಶದಲ್ಲಿಟ್ಟುಕೊ (ಅಂತು ತೋಡುಂ ಬೀಡುಂ ಕಾಣಲಾಗದೆ ಎರ್ದೆಗಾಯಲ್ ಎಕ್ಕೆಯಿಂ ಎಂಬತ್ತು ನಾಲ್ಕು ಲಕ್ಕ ಬಂಡಿಯೊಳ್: **ಪಂಪಭಾ,** ೧೧. ೧೯ ವ)

ಎರ್ದೆಗಿಡು – [ಕ್ರಿ] ಎರ್ದೆಗುಂದು (ಸಿಡಿಲಿಂ ಮಿಂಚಿಂ ಮೊಱಗಿಂ ಪಡೆಗುಳ್ಕಂ ಪಡೆವಹೀಂದ್ರರ್ ಎರ್ದೆಗಿಡುವಿನೆಗಂ: **ಆದಿಪು,** ೧೩. ೬೨)

ಎರ್ದೆಗೊಳ್ – [ಕ್ರಿ] ಸಂತುಷ್ಟನಾಗು (ಭೂಮಂಡಳಪತಿಗಱೆಪಿದೊಡೆ ಎರ್ದೆಗೊಂಡು ಅದಱ

ಫಲಂಗಳನಿತುಮಂ ಮನು ತಿಳಿದಂ: **ಆದಿಪು,** ೭. ೨೮); **[ಕ್ರಿ]** ಹೃದಯಂಗಮವಾಗು (ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ,** ೭. ೨೫); **[ಕ್ರಿ]** ಆಕರ್ಷಿಸು (ಶ್ವೇತನ ಬಿಲ್ಲೊಳಿರ್ದ ಮದನಾರಿಯ ರೂಪು ಎರ್ದೆಗೊಳ್ವುದುಂ ನದೀಜಾತಂ ಉದಾತ್ತಭಕ್ತಿಯೊಳೆ: **ಪಂಪಭಾ,** ೧೦. ೧೧೮); **[ಕ್ರಿ]** ಮನಸ್ಸನ್ನು ತುಂಬು (ಕಣ್ಣು ಪೊಡೆವಟ್ಟು ನಯಂ ಎರ್ದೆಗೊಂಡಿರೆ ಪತಿ ನುಡಿದಂ: **ಪಂಪಭಾ,** ೧೧. ೨೮)

ಎರ್ದೆಗೊಳಿಸು – **[ಕ್ರಿ]** ಮನಸೆಳೆ, ಆಕರ್ಷಿಸು (ಜಳಕೇಳಿಯೊಳ್ ಅಧಿಪನನೆರ್ದೆಗೊಳಿಸಿದುವು ಅಂತಃಪುರೀಜನಂಗಳ ಲೀಲಾಕಿಳಕಿಂಚಿತ ಲಲಿತವಿಹೃದ್ವಿಳಾಸವಿಚ್ಛಿತ್ತಿವಿಭ್ರಮಾದಿ ಗುಣಂಗಳ್: **ಆದಿಪು,** ೧೧. ೧೪೨)

ಎರ್ದೆದೆಱ್ – **[ಕ್ರಿ]** ಎದೆಬಿರಿವಂತೆ ಅಳು (ಪೞಯಿಸುವ ಮಾದ್ರಿಯ ಸರಮಂ ಕುಂತಿ ಕೇಳ್ದು ಭೋಂಕನೆರ್ದೆದೆಱ್ದು: **ಪಂಪಭಾ,** ೨. ೨೨ ವ)

ಎರ್ದೆದೋಱು – **[ಕ್ರಿ]** ಧೈರ್ಯ ತೋರಿಸು (ಏಱನೆ ಸೂಱ್ಗೊಂಡು ನುಡಿವೀ ನುಡಿಯಲ್ಲದೆ ಮತ್ತಂ ಆಸನಂದೋಱುವ ಬಲ್ಪುದೋಱುವ ಎರ್ದೆದೋಱುವ ಕಯ್ಪುಸರಂಗಳ್ ಎಮ್ಮಂ ಉಂತೆ ಏಱವು: **ಪಂಪಭಾ,** ೮. ೨೦)

ಎರ್ದೆಮುಟ್ಟು – **[ಕ್ರಿ]** ಎದೆ ಸೋಂಕು, ಮನಮುಟ್ಟು (ಚೈತಾಗ್ನಿಯಿಂ ಸುಟ್ಟೆನಿಲ್ಲ ಒಲವಿಂದೆ ಇಂದಿಂತು ಎರ್ದೆಮುಟ್ಟಿ ಕೂರ್ತನೊಳನೇ ಕರ್ಣಂಗೆ ದುರ್ಯೋಧನಂ: **ಪಂಪಭಾ,** ೧೩. ೬೦)

ಎರ್ದೆಯಾಣ್ಮ – **[ನಾ]** ಪ್ರಿಯಕರ (ಇಚ್ಚೆಯಾಣ್ಮನೆಲ್ಲಿದಂ ಎರ್ದೆಯಾಣ್ಮನೆನ್ನರಸಂ ಎಲ್ಲಿದನೋ: **ಆದಿಪು,** ೩. ೧೫)

ಎರ್ದೆಯಾಱು – **[ಕ್ರಿ]** ಶಾಂತಮನಸ್ಕರಾಗು (ನಲ್ಲರ ದೆಸೆಯಿಂದಮಟ್ಟಿವರೆ ಕೋಗಿಲೆಯಕ್ಕೆ ಎಲರಕ್ಕೆ ತುಂಬಿಯಕ್ಕೆ ಅರಗಿಳಿಯಕ್ಕೆ ಬಂದೊಡಂ ಒಱಲ್ದೆರ್ದೆಯಾಱುವರೆಂದೊಡೆ: **ಆದಿಪು,** ೩. ೮೬)

ಎರ್ದೆಯುರಿ – **[ಕ್ರಿ]** ಎದೆ [ವಿರಹದಿಂದಾಗಿ] ಉರಿ (ಅಜಿಮರುಳಂತುಟೆ ಸೊರ್ಕಿನ ತೆಱನಂತುಟೆ ಮನಮೊಱಲ್ದು ಎರ್ದೆಯುರಿವುದು ಮೆಯ್ಯೆಱಗುವುದು ಪದೆವುದು ಆನಿದನಜೆಯನಿದೇಕೆಂದು ಕನ್ನೆ ತಳವೆಳಗಾದಳ್; **ಪಂಪಭಾ,** ೪. ೭)

ಎರ್ದೆಯೆಱಕ – **[ನಾ]** ಮನದಿಚ್ಚೆ, ಪ್ರೀತಿ (ಎರ್ದೆಯೆಱಕದೆ ಪೊಗಟ್ದಖಿಳಭುವನಜನನಿಯನಾಗಳ್: **ಆದಿಪು,** ೭. ೪೫)

ಎರ್ದೆವುಗು – **[ಕ್ರಿ]** [ಎದೆ+ಪುಗು] ಮನಸ್ಸನ್ನು ಸೇರು (ಅವಿನಾಣಮನಿತುಂ ಎರ್ದೆವುಗೆ ಕಿವಿವುಗೆ ಪಂಡಿತೆಗೆ ನುಡಿದ ನಲ್ಲನ ನುಡಿ: **ಆದಿಪು,** ೪. ೨೩)

ಎರ್ದೆವೇೞ್ – **[ಕ್ರಿ]** ಎದೆಬಿಚ್ಚಿ ಹೇಳು (ನುಡಿವೊಡೆ ಲಲ್ಲೆಯೆಂಗುಂ ಎರ್ದೆವೇೞ್ದೊಡೆ ಕೈತವಮೆಂಗುಂ: **ಆದಿಪು,** ೧೨. ೪೨)

ಎಲಗೆ – **[ಅ]** ಲೇ [ಸ್ತ್ರೀ ಸಂಬೋಧನೆ] (ನಿವೇದಿಸು ನಿಜಾಂತರಂಗಗತಮಪ್ಪುದಂ ನೀನಿದಂ ವಿವೇಕವಿಕಳರ್ಕಳಂತೆ ಎಲಗೆ ಚಿತ್ತದೊಳ್ ತಾಳ್ದುವೋ: **ಆದಿಪು,** ೩. ೩೨)

ಎಲರ್ – **[ನಾ]** ಗಾಳಿ ಮತ್ತು ನರ್ತಕ (ಅವಳ್ದಿರ ಮಿಳಿರ್ವ ಒಳ್ಗರುಳ್ಗಳನೆ ಲೀಲೆಯಿನಾಡಿಸಿ ಪುಷ್ಪಕೇಸರಂ ತೆರಳೆ ತೆರಳ್ಚಿ ಬೀಸಿದುದು ತೆಂಬೆಲರ್ ಎಂಬ ಎಲರ್ ಅಪ್ಪಿಕೊಳ್ವವೋಲ್: **ಆದಿಪು,** ೨. ೬೫) [ನರಸಿಂಹಶಾಸ್ತ್ರಿಗಳು ನೀಡುವ ಅರ್ಥ]

ಎಲರ್ಚು – **[ಕ್ರಿ]** ಚೇತನಗೊಳ್ಳು (ಆ ಸತಿಯಿಕ್ಕಿದ ಕಣ್ಣ ನೀರ ಧಾರೆಗಳೊಳೆ ನಾಂದು ಎಲರ್ಚಿ ಪೊದಳ್ದು ಒರ್ಮೆಯೆ ಪಾಱೆದುವು ಉನ್ಮದಾಳಿಗಳ್: **ಪಂಪಭಾ,** ೫. ೧೦)

ಎಲೆ – **[ಅ]** ಲೋ [ಪುರುಷ ಸಂಬೋಧನೆ] (ವಿಷಯಾಮಿಷ ಲಂಪಟತೆಯೆ ವಿಷಧರನೆನಿಸಿದುದು ನಿನ್ನಂ ಎಲೆ ವಿಷಧರ ನೀಂ ವಿಷಧರನಾಗದೆ .. .. ನಿರ್ವಿಷನಾಗು: **ಆದಿಪು,** ೨. ೧೭)

ಎಲೆಮಿಡುಕು – **[ಕ್ರಿ]** ಎಲೆಯಂತೆ ಅಲ್ಲಾಡು (ಸಭಾಸದರೆಲ್ಲಂ ಎಲೆಮಿಡುಕದೆ ಪಂದೆಯಂ ಪಾವಡರ್ದವೊಲ್ ಉಸಿರದಿರೆ: **ಪಂಪಭಾ,** ೬. ೫೯ ವ)

ಎಲೆಯಿಕ್ಕು – **[ಕ್ರಿ]** ಚಿಗುರು (ಪೊಲಂ ಉಡುಗಿ ಬಂದುದು ಉಡಿದುದು ಪುಲ್ ಕಾಡುಂ ದಲ್ ಎಲೆಯಿಕ್ಕಿ ಫಳಿಲೆನೆ ನಿಂದುವು ತಣಿದುವು ಮೃಗಂಗಳ್ ಎತ್ತಲುಮೀಗಳ್: **ಪಂಪಭಾ,** ೫. ೩೭)

ಎಲೆವಳ್ಳಿ – **[ನಾ]** ವೀಳ್ಯದೆಲೆಯ ಬಳ್ಳಿ (ಸೊಗಯಿಸಿ ಬಂದ ಮಾಮರನೆ ತಳ್ತ ಎಲೆವಳ್ಳಿಯೆ ಪೂತ ಜಾತಿಸಂಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ: **ಪಂಪಭಾ,** ೪. ೨೮)

ಎಲ್ಲಂದ – **[ನಾ]** ಎಲ್ಲ ಬಗೆಗಳು (ಎಲ್ಲಂದದಿಂ ಬಗೆದಾಗಳ್ ಅರಸರೊಳೆಲ್ಲ ಕೇಳ್ ನೀಂ ಬಲ್ಲೆ ಬೇಂಟೆಕಾಱರೊಳೆಲ್ಲವಾನೆ ಬಲ್ಲೆಂ: **ಪಂಪಭಾ,** ೫. ೪೩)

ಎಲ್ವಡಗಾಗು – **[ಕ್ರಿ]** [ಎಲ್ವು+ಅಡಗು] ಮೂಳೆ ಮಾಂಸವಾಗು, ಅಂದರೆ ಜಜ್ಜಿಹೋಗು (ಗೆಡೆವಚ್ಚಿರ್ವರ್ ಮನಗೊಂಡು ಒಡನೊಡನೆ ಓರಂತು ತಗುಳ್ದು ಝೇಂಕರಿಸಿದೊಡೆ ಎಲ್ವಡಗಾಗೆ ಮೋದಲೆಂದಿರ್ದ ಎಡೆಯೊಳ್ ಗುರು ತನ್ನ ಮಗನಂ ಎಡೆವುಗವೇಟ್ದಂ: **ಪಂಪಭಾ,** ೨. ೭೩)

ಎಲ್ವು – **[ನಾ]** ಎಲುಬು, ಮೂಳೆ (ಬಿಸುನೆತ್ತರ್ ನೆಣಂ ಅಡಗು ಎಲ್ವು ಸಮಸ್ತಂ ಸುರಿಯೆ ಕೈಗೆ ತೊವಲ್ ಉಱೆಯಲ್ ಅಗುರ್ವಿಸಿದುದು ತೀವಿದ ಗುಳ್ಳೆಯ ಪಸುಂಬೆಯಂ ಸೋರ್ಚಿದಂತೆ ತನು ಕೀಚಕನಾ: **ಪಂಪಭಾ,** ೮. ೭೭)

ಎವಗೆ ಆಗಿಪೆವು – ನಮಗೆ ವಶಮಾಡಿಕೊಳ್ಳುತ್ತೇವೆ (ಸೊಗಯಿಸುವ ತಮ್ಮ ಜವ್ವನದ ತಮ್ಮ ವಿಭೂತಿಯ ತಮ್ಮ ಚೆಲ್ವುಗಳ ವಿಲಾಸದ ಊರ್ಮೆಗಳೊಳ್ ಆವು ಎವಗೆ ಆಗಿಪೆವು: **ಪಂಪಭಾ,** ೧. ೧೦೬)

ಎವು – ಆಗಿದ್ದೇವೆ ಎಂಬರ್ಥದ ಪ್ರಥಮಾ ವಿಭಕ್ತಿ ವರ್ತಮಾನ ಕಾಲ ಬಹುವಚನದ ಆಖ್ಯಾತ ಪ್ರತ್ಯಯ (ನಾಮೆಲ್ಲಂ ಒಂದೆ ಗರುಡಿಯೊಳ್ ಓದಿದ ಮಾನಸರಪ್ಪೆವು: **ಪಂಪಭಾ,** ೯. ೪೮ ವ)

ಎಸಕ – **[ನಾ]** ಕೆಲಸ (ಧರ್ಮಮ್ ಅಮರೇಂದ್ರಗತಿಯಂ ಅಧರ್ಮಂ ಅಧೋಗತಿಯಂ ಎಸಗುವ ಎಸಕದೊಳೀಗುಂ ಧರ್ಮಾಧರ್ಮ ಕ್ರಿಯೆಗಳಂ: **ಆದಿಪು,** ೫. ೭೮); ಪರಿಣಾಮ (ಪುರಜನಮಂತಃಪುರಜನಮುಂ ಪರಿಜನಮುಂ ಅಳ್ಕೆ ತದ್ರಾಜನಿಕೇತನದಲ್ಲಿ ಬಿರ್ದು ಪಡೆದುದು ಮನಕ್ಕೆ ಕಡುಮುಳಿಸಿನೆಸಕಮಂ ಮಾಗಧನಾ: **ಆದಿಪು,** ೧೨. ೯೨);

[ನಾ] ಅಭಿಪ್ರಾಯ (ಈ ಕನ್ನೆಯಂ ಪಸುರ್ವಂದರ್ ಪಸೆಯೆಂಬಿವಂ ಸಮೆದು ನೀಂ ಕೈಕೊಳ್ ಕೊಳಲ್ಕಾಗದೆಂಬ ಎಸಕಂ ಚಿತ್ತದೊಳುಳ್ಳೊಡೆ: **ಪಂಪಭಾ,** ೧. ೭೮); [ನಾ] ವೈಭವ (ಅಂತು ವಸುಷೇಣನಾ ಲೋಕಾಂತಂಬರಂ ಅಳವಿ ಬಳೆಯೆ ಬಳೆದ ಎಸಕಂ ಅದು ಓರಂತೆ ಜನಂಗಳ ಕರ್ಣ ಉಪಾಂತದೊಳ್ ಒಗೆದೆಸೆಯೆ ಕರ್ಣನೆಂಬನುಂ ಆದಂ: **ಪಂಪಭಾ,** ೧. ೯೮); [ನಾ] ಪ್ರತಾಪ (ಮಕ್ಕಳ್ ಒಸಗೆಯಂ ಈವುದು ನಿನ್ನೆಸಕದ ಮಸಕಮನೆ ಪೋಲ್ವ ಮಗನಂ ಮಘವಾ: **ಪಂಪಭಾ,** ೧. ೧೩೯); [ನಾ] [ಕವಿತಾ] ಕಾರ್ಯ (ಪುಲಿಗೆಱೆಯ ತಿರುಳ ಕನ್ನಡದೊಳ್ ನಿರ್ವ್ಯಾಜದ ಎಸಕದೊಳೆ ಪುದಿದೊಂದೋಜೆಯ ಬಲದಿನಿಯ ಕವಿತೆ ಪಂಪನ ಕವಿತೆ: **ಪಂಪಭಾ,** ೧೪. ೫೮)

ಎಸಕಂಗಾಯ್ – [ಕ್ರಿ] ಕರ್ತವ್ಯಪಾಲಿಸು (ಹರಿಯುಂ ತಾನುಂ ಭರಂಗೆಯ್ದು ತನ್ನ ಎಸಕಂ ಕಾಯದೆ ಅಧರ್ಮಯುದ್ಧದೆ ನರಂ ಕೊಲ್ವಲ್ಲಿ: **ಪಂಪಭಾ,** ೧೧. ೮೩)

ಎಸಕಂಗಿಡು – [ಕ್ರಿ] ಪ್ರತಾಪಹೀನವಾಗು (ಬೆಸಸಿದೊಡೆ ಅದು ಮಾರ್ಕೊಳ್ಳದೆ ಬೆಸನಂ ಬಲವಂದು ಬಾಹುಬಲಿಯಂ ಅಣಂ ಭೇದಿಸಲಾಱದುದಱಿಂ ಇರ್ದುದು ಮಸುಳ್ದೆಸಕಂಗೆಟ್ಟು ಬಲದ ಮುಯ್ವಿನ ಕೆಲದೊಳ್: **ಆದಿಪು,** ೧೪. ೧೧೭)

ಎಸಗು – [ಕ್ರಿ] ಗಾಳಿ ಬೀಸು (ಪೊಸಪೂವಿನ ಸರಿ ಪರಿದಾಯ್ತಸದಳಂ ಎಸಪ ಎಲರದೊಂದು ಮೇಲ್ವಾಯ್ದಾಗಳ್: **ಆದಿಪು,** ೧೦. ೨); [ಕ್ರಿ] ಮಾಡು (ಲೋಕದ ಪಟಿ ಪೊರ್ದದೆ ಮಾಣೆ ಧರ್ಮಯುದ್ಧದೊಳ್ ಎಸಗಿಂ: **ಆದಿಪು** ೧೪. ೧೦೨); [ಕ್ರಿ] ನಡೆದುಕೊ (ಶ್ರೀಗೆ ಫಳಂ ಚಾಗಂ ವಾಕ್‌ಶ್ರೀಗೆ ಫಳಂ ಸರ್ವಶಾಸ್ತ್ರಪರಿಣತಿ ವೀರಶ್ರೀಗೆ ಫಳಂ ಆಯಂ ಎಂದಿಂತಾಗಳುಂ ಅಜಿದೆಸೆಗಿದಂ ಪರಾಕ್ರಮಧವಳಂ: **ಪಂಪಭಾ,** ೬. ೧); [ಕ್ರಿ] [ರಥ] ನಡೆಸು (ಪಿಂದೆ ಕಡಂಗಿ ತೇರಂ ಎಸಗು ಎಂಬವಂ ಅಂಬಿಗಂ ಆಜಿರಂಗದೊಳ್ ಮುಂದೆ ಸಮಾನನಾಗಿ ಬೆಸದೆ ಇರ್ಪವನುಂ ತುಱುಕಾಱನಾಗೆ: **ಪಂಪಭಾ,** ೧೨. ೯೪); [ಕ್ರಿ] ನಡೆದುಕೊ (ಒಂದೆ ಗಡ ಹರಿಯ ಪೇಟಿಕ್ಕೊಂದಂದದೆ ನರನೆಸಗುವಂತೆ ಕರ್ಣನುಂ ಎನ್ನೆಂದ ಒಂದೋಜೆಯೊಳ್ ಎಸಗದೊಡೆ: **ಪಂಪಭಾ,** ೧೨. ೧೦೧)

ಎಸಟ್ – [ನಾ] ಎಸಳು, ಹೂವಿನ ಪಕಳೆ (ತಾವರೆಯ ನೀಳ್ದೆಸಟಿರೊಳ್ ಮಜಿದುಂಬಿ ಪಾಯ್ದು ಒಡಂಬಡನೊಳಕೊಂಡು: **ಪಂಪಭಾ,** ೪. ೭೮)

ಎಸೆ – [ಕ್ರಿ] ಶೋಭಿಸು (ಮಂಗಳತೂರ್ಯನಾದಂ ಎಸೆಯುತ್ತಿರ್ಪನ್ನೆಗಂ ಚಕ್ರಿ ರಾಗಿಸಿ ಕೆಯ್ನೀರ್ ಎಱೆದಂ ಗುಣಾರ್ಣವ ಮಹೀಪಾಲಂಗಂ ಆ ಕನ್ನೆಯಂ: **ಪಂಪಭಾ,** ೫. ೨೫); [ಕ್ರಿ] ಹಾಡು (ಮಿಡಿವಂ ಬೀಣೆಯನಿವಂ ಇವಳ್ ಒಡನೆ ಎಸೆವಳ್ ಬೆರಲ ಕೊರಲ ಕೂಟಂ ಬೆರಲಂ ಮಿಡಿಯಿಸಿದುದೆನಿಸಿ: **ಆದಿಪು,** ೯. ೧೧೭); [ಕ್ರಿ] ಹೊರಹೊಮ್ಮು (ಕೋಟಿ ತೆಱದಿಂದಂ ಎಸೆವ ಈ ನಾಟಕಮಂ ತೋಜಿ ಮಾಣ್ದಳಿಲ್ಲಳ್: **ಆದಿಪು,** ೯. ೪೫); [ಕ್ರಿ] ಮೊಳಗು (ಆನಂದದುಂದುಭಿಧ್ವನಿ ತಾನೊಡನೊಡನೆಸೆಯೆ ನಭದೊಳ್ ಒಡನೆಸೆದುದು ಅಹೋ ದಾನಿ ಅಹೋ ಪಾತ್ರಂ ಅಹೋ ದಾನಂ ಅಹೋ ದೇಯಮೆಂಬ ದಿವ್ಯಧ್ವನಿಗಳ್: **ಆದಿಪು,** ೧೦. ೪); [ಕ್ರಿ] ಮಧುರ ಧ್ವನಿಮಾಡು (ಫಳಾಮೃತಾಸ್ವಾದದೆ ತಣ್ಣನೆ ತಣಿದು ಕಿವಿಯೊಳ್ ಅಮರ್ದಿನ ಪನಿ ಪನಿವಿನಂ ಎಸೆದರ್ ಅರೆಬರ್ ಅಳಿಕುಳರುತಿಯಿಂ: **ಆದಿಪು,** ೧೧. ೮೦)

ಎಳಗಂಪು – [ನಾ] ನವಿರು ವಾಸನೆ (ನನೆಯ ಎಳಗಂಪನೆತ್ತಿಯುಂ ಅಣಂ ನನೆನಾಱದೆ ಅರಲ್ದ ಅನೇಕ ಕೋಕನದವನಂಗಳೊಳ್ ಸುಟಿದು ತಣ್ಣಸಮಾಗದೆ: **ಪಂಪಭಾ,** ೫. ೩೪)

ಎಳಗಾವು – [ನಾ] [ಎಳ+ಕಾವು] ಎಳೆಯ ದಂಟು (ಬಿಳಿಯ ತಾವರೆಯ ಎಳಗಾವಿನ ಅಸಿಯ ನೂಲೊಳ್ ಕೋದ ತೋರಮಲ್ಲಿಗೆಯ ಬಿರಿಮುಗುಳ ಸರಿಗೆಯುಮಂ: **ಪಂಪಭಾ,** ೫. ೬ ವ)

ಎಳಗೊಂಬು – [ನಾ] ಎಳೆಯ ಕೊಂಬೆ (ಮಾಮರಂಗಳಂ ಅಡರ್ದು ತೊಡರ್ದು ಎಳಗೊಂಬುಗಳ್ವಿಡಿದು ದಾಂಗುಡಿವಿಡುವ ಮಾಧವೀಲತೆ: **ಪಂಪಭಾ,** ೨. ೧೨ ವ)

ಎಳದಳಿಸು – [ಕ್ರಿ] ಎಳವೆಯಿಂದ ಹೊಳೆ, ನಳನಳಿಸು (ಪೊಳೆವೆಳೆದರಿಲೊಳೆ ಪುದಿದು ಎಳದಳಿಸಿ ಕುಳಿರ್ಕೊಟ್ಟಿ ಸೋನೆಯ ಸೊನೆಯನೆ ಪುದುಂಗೊಳಿಸಿದುದು: **ಆದಿಪು,** ೧೧. ೮೦)

ಎಳನೀರ್ – [ನಾ] ಸೀಯಾಳ (ಎಳನೀರೊಳೊತ್ತಿನೊಳೊತ್ತಿ ಬರ್ಪ ಪೊನಲೊಳ್: **ಆದಿಪು,** ೧. ೬೪)

ಎಳವಾಳೆ – [ನಾ] ಬಾಳೆಯ ಮೀನು (ಮಿಳಿರ್ವ ಜಳದೊಳಗೆ ಪೊಳೆವೆರಡು ಎಳವಾಳೆಯಂ: **ಆದಿಪು,** ೭. ೨೭ ರಗಳೆ)

ಎಳವಿದಿರ್ – [ನಾ] [ಎಳತು ಬಿದಿರ್] ಎಳೆಯ ಬಿದಿರು (ಎಳವಿದಿರ ಬಣ್ಣಮೊಳ್ನಡು ಕಳಶಮನವ್ವಳಿಪ ಮೊಲೆ: **ಆದಿಪು,** ೪. ೪೪)

ಎಳವಿಸಿಲ್ – [ನಾ] ಎಳೆಯ ಬಿಸಿಲು (ರಸೆಯಿಂದಮೊಗೆದು ಪೆಡೆಗಳ್ ಪೊಸಮಾಣಿಕದ ಎಳವಿಸಿಲ್ಗಳೊಳ್ ಪೊಸದಳಿರೊಳ್ ಮುಸುಕಿದ ತೆಱದಿಂದೆಸೆದಿರೆ ಪೊಸತೆನೆ ನಡೆ ನೋಡಲ್ ಉರಗರಾಜಂ ಬಂದಂ: **ಪಂಪಭಾ,** ೧೨. ೧೪೧)

ಎಳವೆಱೆ – [ನಾ] [ಎಳತು ಪೆಱೆ] ಬಾಲ ಚಂದ್ರ (ಬ್ರಹ್ಮಾಂಡಮಂ ತಾಗಿದ ವಿಕಟಾಂಗಮುಂ ಎಳವೆಱೆಯನಡಸಿದಂತಪ್ಪ ದಾಡೆಯುಂ ಅಗುರ್ವಾಗೆ: **ಪಂಪಭಾ,** ೧೨. ೭ ವ)

ಎಳಸು – [ಕ್ರಿ] ಆಸೆಪಡು (ಎಳಸಿ ಸುರಸಮಿತಿ ಕಲ್ಪಂಗಳ ದೆಸೆಯನೆ ಬಿಸುಟು ರಮಿಯಿಸುತ್ತುಂ: **ಆದಿಪು,** ೭. ೬೩)

ಎಳೆ – [ನಾ] ಇಳಾ, ಭೂಮಿ (ಎಳೆಯೊಳ್ ತೋಜಿದ ರೂಪನಾಗಳೆ ನಭೋಭಾಗಾಗ್ರದೊಳ್ ತೋರ್ಪಂ ಆಗಳೆ ಗೆಂಟು ಆಗಳೆ ಸಾರೆಯಾಗಿ ಪೊಳೆವಂ: **ಆದಿಪು,** ೭. ೧೨೨)

ಎಳ್ಳನಿತುಂ – [ಅ] ಎಳ್ಳಿನಷ್ಟು, ಸ್ವಲ್ಪವೂ (ನಿನ್ನೊಳೆಳ್ಳನಿತುಂ ದೋಷಮನುಂಟುಮಾಡದಿರೆಯುಂ: **ಪಂಪಭಾ,** ೪. ೯೩)

ಎಱಂಕೆ – [ನಾ] ರೆಕ್ಕೆ (ಭೋಂಕನೆ ಪಾಯ್ದು ಎಱಂಕೆ ನಾಂದೊಡೆ ಜಿನುಂಗಿ ನೆಲಸಿದುದು ವಿಕಚಕನಕಾಬ್ಜಿನಿಯೊಳ್: **ಆದಿಪು,** ೧೧. ೬೨)

ಎಱಕ – [ನಾ] ಪ್ರೀತಿ (ಭರತನ ಕಣ್ಗೆ ಎಱಕಮನೆ ಪಡೆದು ಚೆಲ್ವಿಂ ಮಱಸಿದುವು ಉದ್ಯಾನಲತೆಗಳಂ ವನಲತೆಗಳ್:

ಆದಿಪು, ೧೧. ೯೫); [ನಾ] ನಮಸ್ಕಾರ, ಎರಗುವಿಕೆ, ಬಾಗುವಿಕೆ (ಚಲದಿಂ ಎಱಗಿಸಲಿರೆ ಭರತಂಗೆ ಎಱಗುವ ಎಱಕಂ ಅಂಜುಮೆಯಲ್ತೇ: **ಆದಿಪು,** ೧೪. ೭೫)

ಎಱಕಂಬೆರು – [ಕ್ರಿ] ಎರಕ ಹೊಯ್ಯು (ಇನ್ನಿಲ್ಲಿ ಪೆಂಪು ಎಱಕಂಬೆತ್ತಿರೆ ಕಾವೆನೆನ್ನ ನುಡಿಯಂ ಕೆಯ್ಕೊಂಡ ಕಟ್ಟಾಯಮಂ: **ಪಂಪಭಾ,** ೧೨. ೧೯೮)

ಎಱಗಿಸು – [ಕ್ರಿ] ನಮಸ್ಕರಿಸುವಂತೆ ಮಾಡು (ಭವಭಯಹರ ಭರತನನೆಮಗವಯವದೆ ಎಱಗಿಸುವ ತಪಮನೀಗಳೆ ದಯೆಗೈ: **ಆದಿಪು,** ೧೪. ೩೭)

ಎಱಗು – [ಕ್ರಿ] ಮನಸೋಲು (ಮನಮಂ ಅಳಿಗಳ ಬಳಗಂ ಜಗದ ಮನದೊಡನೆ ಸೇವಂತಿಗೆಗಂ ಗೊಜ್ಜಗೆಗಂ ಅಲ್ಲದೆ ಏನೆಱಗುಗುಮೇ: **ಆದಿಪು**, ೧೧. ೧೨೫); [ಕ್ರಿ] ಬಾಗು (ಗಜೆಸನ್ನೆಗೆಯ್ದು ತೆಗೆನೆಱೆದು ಎಱಗಿ ಪರಂಕಲಿಸಿ ಪರ್ವಿ ಕೂಕಿಱಿದು ಇಸೆ ಕೆಂಗಱಿಯ ಮೊನೆಯಂಬುಗಳ್ ಕಣ್ದೆಱೆಯಿಸಿದುವು ಪೊಣರ್ವ ಬಿಲ್ಲ ಕಡುವಿತ್ತೆಗರಂ; **ಪಂಪಭಾ,** ೧೦. ೭೩); [ಕ್ರಿ] ಮೇಲೆ ಬೀಳು (ಎಡೆವಱದೊಳ್ ಎಱಗಿ ಬಱಸಿಡಿಲ್ ಇಡುಮುಡುಕನೆ ಪೊಡೆದುದೆನಿಸಿ ಪಾಂಡ್ಯನ ರಥದ ಅಚ್ಚು ಉಡಿದು ಅಟ್ಟೆಗೆಟಗ್ಗೆ ಕೊಂಡುವು ಕಡುಗೂರಿದುವೆನಿಪ ಗುರುತನೂಜನ ಕಣೆಗಳ್: **ಪಂಪಭಾ,** ೧೨. ೮೨); [ಕ್ರಿ] ಒಲಿ, ಆಯ್ಕೆಮಾಡು (ಕಲಹಂ ಅಪಾಯಬಹುಳಂ ಇನ್ನುಂ ನಯದತ್ತ ಎಱಗುವೊಡೆ ಸಂಧಿ ಹರಿಗನೊಳ್ ಉಱುಗುಂ: **ಪಂಪಭಾ,** ೧೩. ೨೩)

ಎಱಪು – [ಕ್ರಿ] ಬಾಗು (ಒಲ್ದು ಎಱಪಂತೆ ತಳ್ತ ಪೂವಿನ ಪೊಸಗೊಂಚಲಿಂ ಮರನಿದೇನೆಸೆದಿರ್ದುವೊ: **ಪಂಪಭಾ,** ೧. ೧೧೬); [ಕ್ರಿ] ಮೇಲೆ ಬೀಳು (ಬಱಸಿಡಿಲ್ ಎಱಪಂತಿರೆ ಬಂದೆಱಗಿದರಂ ತಳ್ತು ಬಾಳ ಕೀಟಿಸ್ಕೊನೆಯಿಂ ತಳ್ತಱದಱಿದು: **ಪಂಪಭಾ,** ೧೦. ೮೨)

ಎಱೆ – [ಕ್ರಿ] ಮೀರು (ಇನಿಸು ಪೊಟ್ಟುಂ ತನ್ನಂ ಮಱೆದಿರಲಕ್ಕುಮೆ ತಳರದೆ ತಱಿಸಲದೆ ಇನ್ನೆಱೆದುಂ ಅಱೆದುಂ ಇರ್ಪುದೆ ಚದುರಂ: **ಆದಿಪು,** ೪. ೭೬); [ನಾ] ಆಧಿಪತ್ಯ (ನನೆಯಂಬನೆ ಕರ್ಚಿ ಪಾಱೆದಪುದೋ ಶೃಂಗಾರವಾರಾಶಿ ಭೋಂಕನೆ ಬೆಳ್ಳಂಗೆಡೆದತ್ತೊ ಕಾಮನ ಎಱೆ ಮೆಯ್ವೆರ್ಚಿತ್ತೊ ಪೇಟಿ ಈಕೆಗೆ ಎಂಬಿನಂ: **ಪಂಪಭಾ,** ೪. ೪೨); [ಕ್ರಿ] ಸುರಿ, ಹೊಯ್ಯಿ (ಮಂಗಳತೂರ್ಯನಾದಂ ಎಸೆಯುತ್ತಿರ್ಪನ್ನೆಗಂ ಚಕ್ರಿ ರಾಗಿಸಿ ಕೆಯ್ನೀರ್ ಎಱೆದಂ ಗುಣಾರ್ಣವ ಮಹೀಪಾಲಂಗಂ ಆ ಕನ್ನೆಯಂ: **ಪಂಪಭಾ,** ೫. ೨೫)

ಎಱೆಪು – [ಕ್ರಿ] ಹೇಳು (ಪಡಿಯಱಂ ಬಂದು ಆ ಮಾಟಿಕ್ಕೆಯೊಳ್ ಎಱೆಪೆ ದ್ರೋಣಂ ಒತ್ತಂಬದಿಂದ ಒಳಗಂ ಪೊಕ್ಕು: **ಪಂಪಭಾ,** ೨. ೪೭ ವ)

ಎಱೆಯ – [ಕ್ರಿ] ಒಡೆಯ, ಪ್ರಭು (ಅಱೆಯದೆ ತಂದೊಡಮೇಂ ಎಮ್ಮ ಎಱೆಯಂಗೆ ಅದಂ ಎಮ್ಮ ಕೆಯ್ಯೊಳಟ್ಟಿಂ ನೀಂ: **ಪಂಪಭಾ,** ೮. ೧೮); ಪ್ರೀತಿಪಾತ್ರ (ತನ್ನೆಱೆಯನೊಳೊಲ್ದು ಕೋಪಿಸುವ ಕಾಮಿನಿಗೀ ಮುನಿಸೊಂದೆ ಸಾಲದೇ: **ಗಿರಿಜಾಕ,** ೪. ೧೪೮)

ಎಱೆವಿಱನಾಗು – [ಕ್ರಿ] ಎರ್ರಾಬಿರ್ರಿಯಾಗು (ಬಂಬಲ ಬಾಡಿದ ತನುಲತೆಗಳುಂ ಎಱೆವಿಱನಾದ ತಲೆದುಡುಗೆಗಳುಂ: **ಆದಿಪು,** ೧೧. ೭೦ ವ);

ಎಟಲ್ – [ಕ್ರಿ] ಜೋಲಾಡು (ಸ್ನಾನಾರ್ಥಂ ಒಂದು ಕಳಶಮಂ ನಿಯಮನಿಧಾನಂ ಎಟಲೆ ಪಿಡಿದು ಅಮಳಿನ ಗಂಗಾನದಿಗೆ

ಎಟ್ಪತ್ತಿರ್ಛಾಸಿರ – [ಕ್ರಿ] ಎಪ್ಪತ್ತೆರಡು ಸಾವಿರ (ಎಟ್ಪತ್ತಿರ್ಛಾಸಿರ ಪೊಟಲ್ಗಳುಂ ತೊಂಬತ್ತಾರು ಕೋಟಿ ಗ್ರಾಮಂಗಳುಂ: **ಆದಿಪು,** ೧೫. ೩ ವ)

ವಂದು ಸುರತನಿಧಾನಿ ಅಮರೇಂದ್ರಗಣಿಕೆಯಂ ಮುನಿ ಕಂಡಂ: **ಪಂಪಭಾ,** ೨. ೪೧); [ಕ್ರಿ] ಬಳಲು (ಪೆಸರಱೆಯದಮರತೂರ್ಯಪ್ರಸರಂಗಳ ಜತಿಗೆ ತೊಡರದೆ ಇನಿಸು ಎಟಲದೆ: **ಆದಿಪು,** ೯. ೩೧); [ಕ್ರಿ] ಸಡಿಲಗೊಳ್ಳು (ಆದಿಮಧ್ಯ ಅವಸಾನದೊಳೆಲ್ಲಿಯುಂ ಎಟಲದ ಕಲಿತನದಳವಿಂಗೆ ಮನಂಗೊಂಡು: **ಪಂಪಭಾ,** ೧೩. ೬೫ ವ)

ಎಟಲಿಕ್ಕು – [ಕ್ರಿ] ತೂಗು ಹಾಕು (ಎಟಲಿಕ್ಕಿದ ಮುಕ್ತಾದಾಮಶೋಭೆ ಲಕ್ಷ್ಮೀಲಲನಾ ದರಹಾಸ ಶೋಭೆ: **ಆದಿಪು**, ೪. ೩೦ ರಗಳೆ)

ಎಟೆ – [ಕ್ರಿ] ರಭಸವಾಗಿ ಹರಿ (ನಯಮಪ್ಪೊಡೆ ವ್ಯೆತಸವೃತ್ತಿಯೆ ದಲ್ ನಮಗೆ ಎಟೆವ ತೊಱೆಯನಿದಿರಿಸುವುದದೆಲ್ಲಿಯ ಗಾಂಪು ಚಕ್ರವರ್ತಿಯೊಳ್ ಅಯಸಂ ನಮಗುಱದು ಬೇಗಮೆಱಗದೊಡುಱುಗುಂ: **ಆದಿಪು**, ೧೨. ೧೦೮)

ಎಟೆಗೋಣ – [ನಾ] [ಬಲಿಗಾಗಿ] ಎಳೆದು ತಂದ ಕೋಣ (ಅಂತು ದ್ರೋಣಂ ಎಟೆಗೋಣಸಾವಂ ಸಾವುದುಂ ಭೋರ್ಗರೆದಾರ್ದ ಪಾಂಡವ ಪತಾಕಿನಿಯುಮಂ ಒಂದು ತಲೆಯಾಗೋಡುವ ಕೌರವ್ಯಧ್ವಜಿನಿಯುಮಂ: **ಪಂಪಭಾ,** ೧೨. ೩೦ ವ) [**'**ಎಟೆಗೋಣಸಾವು**'** ಎಂಬುದು ಡಿ.ಎಲ್. ಎನ್ ಸ್ವೀಕರಿಸಿರುವ ಪಾಠ, **ದೀಪಿಕೆ** ೪೪೬)

ಎಟೆದಿಕ್ಕು – [ಕ್ರಿ] ತಂತಿಯನ್ನು ಎಳೆ, ನೂಲನ್ನು ತೆಗೆ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಳ್ ಎಟೆದಿಕ್ಕಿದಂತೆ ಸುತಿಯೊಳ್ ಸಮವಾಗಿರೆ: **ಪಂಪಭಾ,** ೭. ೮೮)

ಎಟೆದುಕೊಳ್ – [ಕ್ರಿ] ಸೆಳೆದುಕೋ (ರಾಜರಾಜನ ಪಡೆ ಚೆಲ್ವನೇನೆಟೆದುಕೊಂಡುದೋ ಬಂದ ಬಸಂತರಾಜನಾ: **ಆದಿಪು**, ೧೩. ೬)

ಎಟ್ಚತ್ತಿರು – [ಕ್ರಿ] ಎಚ್ಚರಿಕೆಯಿಂದಿರು (ದೇವರ ಮುಂದೆ ಆನಱೆಯೆಂ ಪಿರಿದುಂ ಗಟಪಲ್ ಮಱಸೊಂದಿದನಿಲ್ಲಂ ಅಹಿತಂ ಎಟ್ಚತ್ತಿರ್ದಂ: **ಪಂಪಭಾ,** ೭. ೪೪)

ಎಟ್ಚಱ್ – [ಕ್ರಿ] ಎಚ್ಚರಗೊಳ್ಳು (ಬಣ್ಣವ್ವರಂ ತೀವಿದ ಮಾಟಿಕ್ಕೆಯಾಯ್ತು ನವಿಲಿಂ ಕುಂದುಂಗಳಿಂ ಇಂದ್ರಗೋಪ ವಿಳಾಸಂಗಳಿಂ ಆಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ: **ಪಂಪಭಾ,** ೭. ೨೪)

ಎಟ್ಟಿರ್ – [ಕ್ರಿ] ದಂಡೆತ್ತಿ ಬರು (ಕಿಱೆಯಂದಿಂದಿತ್ತ ದುರ್ಯೋಧನನೆನಿಸಿದ ವಿಕ್ರಾಂತಮೇನಾದುದು ಎಟ್ಟಿಂದು ಇಱೆವ ಉರ್ಕಿಲ್ಲಿತ್ತೊ: **ಪಂಪಭಾ=,** ೧೩. ೭೭)

ಎಟ್ಟಿರಂ – [ನಾ] ಅಭ್ಯುದಯ (ಆಗುಳಿಸುವ ಬಾಯ ಕೆಂಪಂ ಉದಯಂಗೆಯೆ ಪೊಣ್ಮುವ ಕೆಂಪು ಪೋಲ್ವಿನಂ ತಳರೆ ಬೆಡಂಗಿನೊಳ್ ಪುದಿದು ಎಟ್ಟಿರಂ ಉದ್ಗತಚಂದ್ರಸಿಂಹದಾ: **ಆದಿಪು,** ೧೨. ೫)

ಎಟ್ಟಿರವು – [ನಾ] ಬರುವಿಕೆ (ಈ ಮದದಂತಿಯ ಎಟ್ಟಿರವುಂ ಈತನ ಶೌರ್ಯಂ ಇಂ ಈ ಮಹೋಗ್ರಸಂಗ್ರಾಮದೊಳ್

ಎನ್ನುಮಂ ಚಳಿಯಿಸಲ್ ಬಗೆದಪುದು: **ಪಂಪಭಾ,** ೧೨. ೮೪)

ಎಟ್ಟಿ – [ನಾ] ಎತ್ತು (ನೋಂತರ ಪಗೆವರಂ ಎಟ್ಟೆಜೆದಂತಾಯ್ತು ಎಂದಿರದೆ ಪುರುಷಕಾರದ ಪೆಂಪಂ ಚಿಂತಿಸಿ: **ಪಂಪಭಾ,** ೭. ೩೪)

ಎಟ್ಟಾಡು – [ಕ್ರಿ] [ಎಟ್ಟು+ಆಡು] ಎದ್ದು ಕುಣಿದಾಡು (ಅಚ್ಚರೆಸೆಯರ್ ಎಟ್ಟಾಡುವರ್ ಎಂದೊಡೆ ಪೊಗಟಲ್ವೇಡ ಗುಣಾರ್ಣವನ ಜನ್ಮದಿನದ ಬೆಡಗಂ: **ಪಂಪಭಾ,** ೧. ೧೪೮)

ಎಪ್ಪತ್ತೆರ್ಛಾಸಿರ – [ಕ್ರಿ] ಎಪ್ಪತ್ತೆರಡು ಸಾವಿರ (ಎಪ್ಪತ್ತೆರ್ಛಾಸಿರ ಪೊಟಲ್ಗಳುಂ ತೊಂಬತ್ತಾರು ಕೋಟಿ ಗ್ರಾಮಂಗಳುಂ: **ಆದಿಪು,** ೧೫. ೩ ವ)

ಎಟ್ಟಿಡು – [ಕ್ರಿ] ಅಟ್ಟಿಸಿಕೊಂಡು ಹೋಗು (ಕೆಲಬರೆಮ್ಮಂ ಎಟ್ಟಿಟ್ಟಿ ಪಿಡಿದುಕೊಳ್ಗುಮೆಂದು ಮಗುಟ್ಟು ನೊಡುತ್ತುಂ; **ಆದಿಪು,** ೯. ೯೨ ವ); ಎಬ್ಬು, ಮೇಲೆತ್ತು (ಸುಭಟರ ಅಟ್ಟೆಗಳಂ ಎಟ್ಟಿಟ್ಟಿ ಕುಟ್ಟುವ ತೊಂಡು ಮರುಳ್ಗಳುಂ: **ಪಂಪಭಾ,** ೧೦. ೧೧೬ ವ)

ಏ

ಏಂ – [ಅ] ಏನು ಕಾರಣ, ಏಕೆ (ಇಱಿವಂತು ನಿನಗೆ ಮನದೊಳ್ ತಱಿಸಲವುಂಟಪ್ಪೊಡೆ ಎಲವೊ ದೇವೇಶನಂ ಏಂ ಸೆಱೆವಿಡಿದೆ: **ಪಂಪಭಾ,** ೧೦. ೧೨೧)

ಏಂ ಗಳ – ಏನಪ್ಪಾ! ಹಾಗಲ್ಲವೇ (ಪಸಿವನಾಮೇಗೊಂಡು ಏಂ ಗಳ ಗೆಯ್ದೆವು: **ಆದಿಪು,** ೭. ೭೩)

ಏಂ ಪಿರಿದೋ – ಏನು ದೊಡ್ಡದೋ! (ಕೊಡಗೂಸುತನದ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಡಿಯಲ್ ಒಡಗೂಡೆ ಗಂಗೆಯ ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ: **ಪಂಪಭಾ,** ೧. ೯೨)

ಏ ಕಜ್ಜಂ – ಆಗಬೇಕಾದುದೇನು, ಏನು ಉಪಯೋಗ? (ರವಿರಶ್ಮಿಗಳ್ ಪುಗಲೆವೇಡ ಈ ರಶ್ಮಿಗಳ್ ಸಾಲ್ಗುಂ ಇಂತೇ ಕಜ್ಜಂ ಬೆಳಗು: **ಆದಿಪು,** ೬. ೧೦೪)

ಏಕಕಾರ್ಯಾಲೋಚನಪರ – [ನಾ] ಒಂದೇ ಕಾರ್ಯದ ಬಗ್ಗೆ ಆಸಕ್ತರಾದ[ವರು] (ಎಂದು ತಮ್ಮೊಳ್ ಅಯ್ವರುಂ ಏಕಕಾರ್ಯಾಲೋಚನಪರರಾಗಿ ದ್ವೈತವನದೊಳ್ ಅದ್ವೈತಸಾಹಸರಿರ್ಪನ್ನೆಗಂ: **ಪಂಪಭಾ,** ೭. ೩೦ ವ)

ಏಕಗ್ರಾಹಿ – [ನಾ] ಒಂದೇ ಪಟ್ಟು ಹಿಡಿದವನು. ಹಟಮಾರಿ (ಕಣ್ಣಾಣದ ಇಂತಪ್ಪ ಏಕಗ್ರಾಹಿಗಂ ಒಱಂಟಂಗಂ ರಥಮಂ ಎಸಗೆಂ ಎಂದು ವರೂಥದಿಂದ ಇೞಿದು ಪೋಗೆ: **ಪಂಪಭಾ,** ೧೨. ೨೦೫ ವ)

ಏಕಚ್ಛತ್ರಚ್ಛಾಯೆ – [ನಾ] ಒಂದೇ ಕೊಡೆಯ ನೆರಳು, ಒಬ್ಬ ರಾಜನ ಆಳ್ವಿಕೆ (ಅಂತು ಭರತಂ ಭರತಮಂಡಲಮಂ ಏಕಛತ್ರಚ್ಛಾಯೆಯಿಂದಂ ಪ್ರತಿಪಾಲಿಸುತ್ತಮಿರೆಯಿರೆ: **ಆದಿಪು,** ೫. ೪ ವ)

ಏಕತ್ವ – [ನಾ] ಷೋಡಶಭಾವನೆಗಳಲ್ಲಿ ಒಂದು (ಮಮತ್ವಮಂ ಬಿಸುಟು ನೀನೇಕತ್ವಮಂ ಭವ್ಯ ಭಾವಿಸು ನಿನ್ನೀ ತನುವಂ ತಪೋವನವನಕ್ರೀಡಾಸುಖಕ್ಕೊಡ್ಡು: **ಆದಿಪು,** ೨. ೪೭)

ಏಕತ್ವವಿತರ್ಕವಿಚಾರ – [ನಾ] [ಜೈನ] ಎರಡನೆಯ ಶುಕ್ಲಧ್ಯಾನ, ಮೋಹಕರ್ಮಸಹಿತವಾಗಿ ಜ್ಞಾನಾವರಣೀಯ, ದರ್ಶನಾವರಣೀಯ ಮತ್ತು ಅಂತರಾಯ ಎಂಬ ಮೂರು ಕರ್ಮಗಳ ನಾಶವಾಗಿ ಕೇವಲಜ್ಞಾನಪ್ರಾಪ್ತಿಗೆ ಎಡೆಮಾಡಿಕೊಡುವಂಥದು (ವೀತರಾಗದ್ವೇಷಭಾವನಾಭಾವಿತ ಯಥಾಖ್ಯಾನಚಾರಿತ್ರಕ್ಷೀಣ ಕಷಾಯ ವೀತರಾಗಚ್ಛದ್ಮ ಗುಣಸ್ಥಾನಂ ಏಕತ್ವವಿತರ್ಕವಿಚಾರಾಭಿಧಾನಧ್ಯಾನಪರಿಣತಂ: **ಆದಿಪು,** ೧೦. ೧೪ ವ)

ಏಕದಂಡಿ – [ನಾ] ಶಿಖೆ ಮತ್ತು ಯಜ್ಞೋಪವೀತಗಳನ್ನು ತ್ಯಜಿಸಿ ಒಂದು ದಂಡವನ್ನು ಮಾತ್ರ ಹಿಡಿದ ಸನ್ಯಾಸಿ (ಏಕದಂಡಿ ತ್ರಿದಂಡಿಗಳಪ್ಪ ಪರಿವ್ರಾಜಕರುಂ ಆಗಿ ತಮಗೆ ತಾವೇ ವನಪ್ರವೇಶಮಂ ಮಾಡಿ: **ಆದಿಪು,** ೯. ೯೩ ವ)

ಏಕಪಾದ – [ನಾ] ಒಂಟಿ ಕಾಲಲ್ಲಿ ನಿಂತು ಮಾಡುವ ತಪಸ್ಸು (ತೊಡರ್ದು ಏಕಪಾದದೊಳ್ ಬಲಿದುಪವಾಸದೊಳ್ ನಮೆದು ನೋಂಪಿಗಳೊಳ್ ನಿಯಮಕ್ರಮಂಗಳಂ ಸಲಿಸಿದರಿಂತು ನೋನದೆ ಗುಣಾರ್ಣವನಂ ಪಡೆಯಲ್ಕೆ ತೀರ್ಗುಮೇ: **ಪಂಪಭಾ,** ೧. ೧೩೬)

ಏಕಪಾದತಪ – [ನಾ] ಒಂಟಿಕಾಲಲ್ಲಿ ನಿಂತು ಮಾಡುವ ತಪಸ್ಸು (ಏಕಪಾದತಪದೊಳ್ ನಿಲೆ ಗೀರ್ವಾಣನಾಥಾತ್ಮಜನಲ್ಲಿಗೆ ಗುಹನಂ ಅಹಿಭೂಷಣನ ಅಂಬಂ ಬೇಡಿ ಅಟ್ಟಿದೊಡೆ: **ಪಂಪಭಾ,** ೮. ೧೬ ವ)

ಏಕವರ್ಣ – [ನಾ] ಒಂದೇ ಬಣ್ಣ ಅಥವಾ ವರ್ಣ (ಜಗಜ್ಜನಕನೊಟ್ಟಿದ ಪೊನ್ನ ರಾಶಿಗಳಂ ಜಗಜ್ಜನಕಿತ್ತು ತತ್ಕನಕವರ್ಣದಿಂ ಏಕವರ್ಣಮೆ ಮಾಡಿದಂ ಜಗಮೆಲ್ಲಮಂ: **ಆದಿಪು,** ೮. ೬೫)

ಏಕವಿಂಶತಿ – [ನಾ] ಇಪ್ಪತ್ತೊಂದು (ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ಮೊದಲ್ಗಿಡೆ ಮುನ್ನಂ ಏಕವಿಂಶತಿ ಪರಿಸಂಖ್ಯೆಯಿಂ ತವಿಸಿ: **ಪಂಪಭಾ,** ೨. ೪೫)

ಏಕವಿಹಾರಿ – [ನಾ] [ಜೈನ] ಒಂಟಿಯಾಗಿ ಸಂಚರಿಸುವುದು (ಪನ್ನೆರಡು ತಪದೊಳ್ ನೆಱೆದಿರ್ಪತ್ತೆರಡು ಪರೀಷಹಂಗಳಂ ಗೆಲ್ದು ಗಣಧರಗಣಮಂ ಬಿಟ್ಟು ಏಕವಿಹಾರಿಯಾಗಿ: **ಆದಿಪು,** ೬. ೩೩ ವ)

ಏಕವೃತ್ತಿ – [ನಾ] ಏಕಪ್ರಾಕಾರ, ಒಂದು ಸುತ್ತಿನ ಪ್ರಾಕಾರ (ಅವಱ ಬಳಸಿಯುಂ ಯಥೋಚಿತಪ್ರದೇಶಂಗಳೊಳ್ ಏಕವೃತ್ತಿ ಪರಿವೃತಂಗಳುಂ: **ಆದಿಪು,** ೮. ೬೩ ವ)

ಏಕಸ್ಥ – [ಗು] ಒಟ್ಟಾಗಿ, ಒಂದಾಗಿ (ಪನ್ನೆರಡು ಮಾಸದೊಳಾದ ದಿಗ್ವಿಜಯಪ್ರಪಂಚಮುಮಂ ಸುಭದ್ರಾಹರಣಮುಮಂ ಪುರುಷೋತ್ತಮನ ಪರಮಮಿತ್ರತ್ವಮುಂ ಅಱಿದು: **ಪಂಪಭಾ,** ೫. ೨೩ ವ)

ಏಕಾಂತ – [ನಾ] ಸ್ಯ, ಗುಟ್ಟು (ಎಂದು ಚಿಂತಾಕ್ರಾಂತೆಯಾಗಿದ್ದ ಕುಂತಿಯಂ ಕಂಡು ಪಾಂಡುರಾಜಂ ಏಕಾಂತದೊಳಿಂತೆಂದಂ: **ಪಂಪಭಾ,** ೧. ೧೧೭ ವ)

ಏಕಾದಶನಿಳಯ – [ನಾ] ಶ್ರಾವಕರ ಹನ್ನೊಂದು ನೆಲೆಗಳು: ಸಮ್ಯಗ್ದರ್ಶನ, ಅಣುವ್ರತ, ಸಮತ್ವೀಭಾವ, ಪ್ರೋಷಧೋಪವಾಸ, ಹಸಿಯ ಹಣ್ಣು ಹೂ ಮುಂತಾದವನ್ನು ಸ್ವೀಕರಿಸದಿರುವುದು [ಸಚಿತ್ತವಸ್ತುತ್ಯಾಗ], ಹಗಲು ಸ್ತ್ರೀಸಂಗವರ್ಜನೆ, ಬ್ರಹ್ಮಚರ್ಯ, ಆರಂಭತ್ಯಾಗ, ಪರಿಗ್ರಹತ್ಯಾಗ, ಅನುಮತಿತ್ಯಾಗ ಮತ್ತು ಉದಯತ್ಯಾಗ [ಉದ್ದಿಷ್ಟತ್ಯಾಗ] (ಭೂಭುವನದೊಳಂ ಪರೆದ ಏಕಾದಶನಿಳಯಂ ಅರಸಂ ಅನುಕ್ರಮದಿನಿನಿತುಮಂ ಕೈಕೊಂಡಂ: **ಆದಿಪು**, ೬. ೧೧)

ಏಕಾದಶರುದ್ರ – [ನಾ] ಮೃಗವ್ಯಾಧ, ಸರ್ಪ, ನಿರ್‌ಋತಿ, ಅಜೈಕಪಾತ್, ಅಹಿರ್ಬುದ್ಧ, ಪಿನಾಕಿ, ದಹನ, ಈಶ್ವರ, ಕಪಾಲಿ, ಸ್ಥಾಣು ಮತ್ತು ಭವ ಎಂಬ ಹನ್ನೊಂದು ಮಂದಿ ರುದ್ರರು (ಏಕಾದಶರುದ್ರರೊಳಗೆ ತುತ್ತತುದಿಯ ರುದ್ರನುಂ ರೌದ್ರನುಂ ಅಪ್ಪ ಅಶ್ವತ್ಥಾಮಂ ಏವದೊಳ್ ಕಣ್ಣಾಣದೆ ಮಾರ್ಕೊಂಡು ವಿಕ್ರಮಾರ್ಜುನನಂ: **ಪಂಪಭಾ**, ೧೩. ೩೯ ವ)

ಏಕಾದ್ಯೇಕೋತ್ತರದಶಾಂತಂಬರಂ – [ನಾ] ಒಂದರಿಂದ ಹನ್ನೊಂದರವರೆಗೆ (ಪದ್ಮನಿಧಿಯೆಂಬ ನಿಧಿಯಂ ತರಿಸಿ ತಪನೀಯಸೂತ್ರದೊಳ್ ಏಕಾದ್ಯೇಕೋತ್ತರದಶಾಂತಂಬರಂ .. .. ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ: **ಆದಿಪು**, ೧೫. ೧೧ ವ)

ಏ ಕಾರಣಂ – [ಸ] ಯಾವ ಕಾರಣದಿಂದ (ನಗೆಗಣ್ ಸೋರ್ವ ಕದುಷ್ಣವಾರಿಜಯದಿಂ ಬಿಂಬಾಧರಂ ಸುಯ್ಯ ಬೆಂಕೆಗಳಿಂ ನಾಡೆ ಬೆಡಂಗುಗೆಟ್ಟ ಇರವು ಇದಿಂತೇಕಾರಣಂ: **ಪಂಪಭಾ**, ೪. ೬೮)

ಏಕಾರ್ಣವ – [ನಾ] ನೀರಿನಿಂದ ತುಂಬು (ಸೋನೆಯಿಂ ಸರಿಗಳಿಂ ತಂದಲ್ಗಳಿಂದಂದು ಭೂತಳಂ ಏಕಾರ್ಣವಮಾಗೆ ಚಕ್ರಿಯ ಬಲಕ್ಕಾತಂಕಮಂ ಮಾಡಿದರ್: **ಆದಿಪು**, ೧೩. ೫೯)

ಏಕೆಗೆ – [ಸ] ಏಕೆಲೆ, ಏಕೆಯೋ (ಮೃಗಪದಪತ್ರಲೇಖೆಗಳಂ ಏಕೆಗೆ ತಾಳ್ದಿರದಾದುವು ಈ ಕದಂಪುಗಳ್ ಉರಮೇಕೆ ಹಾರಮಣಿಮಂಜರಿಯಿಲ್ಲದೆ ಬಿನ್ನಗಿರ್ದುದು: **ಪಂಪಭಾ**, ೪. ೬೨)

ಏಕೈಕಕಾರಣಪರರ್ – [ನಾ] ಏಕೈಕ [ಒಂದೇ] ಕಾರಣವಾದವರು (ಅನಿತೊಂದುರ್ಕಿನೊಳ್ ಉರ್ಕಿ ಕೌರವಖಳರ್ ಪಾಂಚಾಳರಾಜಾತ್ಮಜಾ ಆನನಪದ್ಮ ಗ್ಲಪನೈಕಕಾರಣಪರರ್ ತಾಮಾಗೆಯುಂ: **ಪಂಪಭಾ**, ೭. ೯)

ಏಕೋತ್ತರದಶ – [ನಾ] ಹನ್ನೊಂದು (ತಪನೀಯಸೂತ್ರದೊಳ್ ಏಕಾದ್ಯೇಕೋತ್ತರದಶಾಂತಂಬರಂ ಅವರವರ ನೆಲೆಗಳೊಳ್ ಬ್ರಹ್ಮಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ: **ಆದಿಪು**, ೧೫. ೧೧ ವ)

ಏಕೋನಪಂಚಾಶತ್ – [ನಾ] ನಲವತ್ತೊಂಬತ್ತು (ಜಗತ್ತ್ರಯಾಂತಸ್ಥಿತ ಏಕೋನಪಂಚಾಶನ್ನರಕಪ್ರಸ್ತರ ಭವನವ್ಯಂತರಾವಾಸ ಅಸಂಖ್ಯಾತದ್ವೀಪ: **ಆದಿಪು**, ೧೦. ೬೩ ವ)

ಏಗೆಡು – [ಕ್ರಿ] ಏನು ಕೆಡು, ಹಾಳೇನಾಗು (ಎನಗರಸಿಯಾಣೆ ನಿನ್ನೊಡನೆನಗೆ ಏಗೆಟ್ಟಪುದೆಂದು ಜಿಸೋಡಾಡಲ್: **ಪಂಪಭಾ**, ೮. ೬೮)

ಏಗೆಯ್ದುಂ – [ಅ] ಏನುಮಾಡಿದರೂ (ತನ್ನ ನುಡಿದ ಪ್ರತಿಜ್ಞೆಯಂ ಏಗೆಯ್ದುಂ ತಪ್ಪಿದನಿಲ್ಲ: **ಪಂಪಭಾ**, ೧, ೮೩ ವ)

ಏಗೆಯ್ವುದು – [ಕ್ರಿ] ಏನು ಮಾಡಬೇಕು (ಕೃಷ್ಣದ್ವೈಪಾಯನನಂ ನೆನೆದು ಬರಿಸಿದೊಡೆ ವ್ಯಾಸಮುನೀಂದ್ರನೇಗೆಯ್ವುದೇನಂ ತೀರ್ಚುವುದೆಂದೊಡೆ ಸತ್ಯವತಿಯಿಂತೆಂದಳ್: **ಪಂಪಭಾ**, ೧. ೮೪ ವ)

ಏಗೆಯ್ವುದೊ – [ಕ್ರಿ] ಏನನ್ನು ಮಾಡಬೇಕಾಗಿದೆ (ಬೆಸನೇಂ ಏಗೆಯ್ವುದೊ ನಿನಗೊಸೆದೇನಂ ಕುಡುವುದು ಎಂದೊಡೆ ಅವಳ್ ಮಕ್ಕಳ ಒಸಗೆಯನೆನಗೀವುದು ನಿನ್ನೆಸಕದ ಮಸಕಮನೆ ಪೋಲ್ವ ಮಗನಂ ಮಘವಾ: **ಪಂಪಭಾ**, ೧. ೧೩೯)

ಏಗೊಳ್ – [ಕ್ರಿ] ಒಪ್ಪು, ಅಂಗೀಕರಿಸು (ಎಂಬುದುಂ ಅದನೆ ಮನದೆ ಏಗೊಂಡು: **ಆದಿಪು**, ೩. ೧೬ ವ)

ಏಡ – [ನಾ] ಕಿವುಡ (ಕವಿತಾರಹಸ್ಯಮಂ ಸತ್ಕವಿಯಱಿಗುಮ್ ಅನೇಡಮೂಕಂ ಏಡಂ ಜಡಂನೆಂಬವನಱಿಗುಮೆ: **ಆದಿಪು**, ೧. ೨೦)

ಏಡಿಸು – [ಕ್ರಿ] ಹೀಯಾಳಿಸು, ಗೇಲಿಮಾಡು (ನಿನಗೆ ಅದೇವಿರಿದು ಈ ಎಡಱ್ ಎಂದು ಮುಂದೆ ಬಂದು ಏಡಿಸುವಂತಿರೆ ಆಡಿದುದೊಂದು ಮರುಳ್ ಫಣಿರಾಜಕೇತುವಂ: **ಪಂಪಭಾ**, ೧೩. ೫೪)

ಏಣಗೋಣ – [ನಾ] ಗರ್ವ, ವಕ್ರತೆ (ಮುಗುಳ್ನಗೆ ನಕ್ಕು ವಿಕ್ರಮಾರ್ಜುನಂ ಇಳಿಸಿ ನುಡಿವ ನಿನ್ನ ಏಣಗೋಣಂಗಳುಂ ಎಕ್ಕಸಕ್ಕತನಂಗಳುಂ ಎತ್ತವೋದುವು: **ಪಂಪಭಾ**, ೧೧. ೧೩೮ ವ)

ಏಣಗೋಣಸಾವು – [ನಾ] ದುರ್ಮರಣ (ಅಂತು ದ್ರೋಣಂ ಏಣಗೋಣಸಾವಂ ಸಾವುದುಂ: **ಪಂಪಭಾ**, ೧೨. ೩೦ ವ) ['ಏಣಗೋಣ' ಎಂಬುದರ ಬದಲು ಡಿಎಲ್ಎನ್ 'ಎಱಗೋಣ' ಎಂದು ಪಾಠವನ್ನು ಪರಿಷ್ಕರಿಸಿ "{ಬಲಿಯಾಗಿ} ಎಳೆದು ತಂದ ಕೋಣನ ಸಾವು" ಎಂದು ಅರ್ಥ ನೀಡುತ್ತಾರೆ – **'ದೀಪಿಕೆ'**, ಪು, ೪೪೬]

ಏತಱೊಳಂ – [ಅ] ಯಾವುದರಲ್ಲಿಯೂ (ಈಶ್ವರಂ ನೀನುದಾರ ಮಹೇಶ್ವರನಪ್ಪುದಱಿಂ ನಿನಗಂ ಎನಗಂ ಏತಱೊಳಂ ವಿಕಲ್ಪಮುಂ ವಿಚ್ಛಿನ್ನಮುಂ ಇಲ್ಲ ಎಂದಂ: **ಪಂಪಭಾ**, ೫. ೧೦೩ ವ

ಏತರ್ಕೆ ಬಾರ್ತೆ – [ನಾ] ಯಾವ ಪ್ರಯೋಜನಕ್ಕೆ [ಬರುವವನು] (ಅದಟಂ ಕೊಂಡಾಡದೆ ಬೇಡಿದರ್ಗೀಯದೆ ಮಱಿಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದ ಅಧಮಂ ಅದೇತರ್ಕೆ ಬಾರ್ತೆ ಜೀವನ್ಮೃತಕಂ: **ಆದಿಪು**, ೧೨. ೯೭)

ಏತೊದಳ್ – [ನಾ] ಏನು ಅಡ್ಡಿ, ಏನು ತೊಂದರೆ (ನೀಂ ಇನಿಸು ಕಾಲ ಇರ್ದೆಯಪ್ಪೊಡೆ ಏ ತೊದಳೊ ಸರೋವರಾಂಬುವನಿತಂ ತವೆ ತುಳ್ಕಿ ರಸಾತಳಂಬರಂ ಬೆದಕಿಯುಂ ಎಂತುಂ ಅಪ್ಪಳಿಸಿ ಕೊಂದಪೆಂ: **ಪಂಪಭಾ**, ೧೩. ೮೦)

ಏದೊರೆತು – [ನಾ] ಯಾವ ಬಗೆಯದು, ಎಂತಹುದು (ಎಮ್ಮನ್ವಯಕ್ಷ್ಮಾಪರ್ ಆವ ವಿಳಾಸಂಗಳೊಳ್ ಇರ್ಪರ್

ಏದೊರೆತು ತಾಂ ಎಮ್ಮಯ್ಯನೈಶ್ವರ್ಯಂ ಇಂತು ಇವನೆಲ್ಲಂ ತಿಳಿವಂತುಟಾಗಿ ಬೆಸಸಿಂ ಪಂಕೇಜಗರ್ಭಾತ್ಮಜಾ: **ಪಂಪಭಾ,** ೬. ೧೫)

ಏದೊರೆಯಂ – [ನಾ] ಯಾರು ಸಮರ್ಥ (ಪೆಱರಾತಿತೀರ್ಥಕರನಂ ನಿಱಿಸಲ್ಕೆ ಏದೊರೆಯರ್: **ಆದಿಪು,** ೧೦. ೧); ಎಂಥವನು (ಏದೊರೆಯಂ ಯಮನಂದನಂ ಏದೊರೆಯಂ ಭೀಮಸೇನಂ ಏದೊರೆಯಂ ಕಂಜೋದರನ ಮೈದುನಂ ತಾಮೇ ದೊರೆಯರ್ ಅಮಳ್ಗಳ್: **ಪಂಪಭಾ,** ೭. ೧೭)

ಏದೊರೆಯದು – [ನಾ] ಎಂಥದ್ದು (ಬರಿಸಿದ ಕಾರಣಮಾವುದೊ ತರುಣಿ ಮುನೀಶ್ವರನ ಮಂತ್ರಮೇದೊರೆಯೆಂದಾಂ ಮರುಳಿಯೆನೆ ಅಱಿದುಮಱಿಯದೆ ಬರಿಸಿದೆನಿನ್ನೇಟಿಂ ಎಂದೊಡಾಗದು ಪೋಗಲ್: **ಪಂಪಭಾ,** ೧. ೯೩)

ಏನಂ ತೀರ್ಚುವುದು – [ಕ್ರಿ] ಏನನ್ನು ಬಗೆಹರಿಸಬೇಕು, ಏನು ಮಾಡಬೇಕು (ಕೃಷ್ಣದ್ವೈಪಾಯನನಂ ನೆನೆದು ಬರಿಸಿದೊಡೆ ವ್ಯಾಸಮುನೀಂದ್ರನೇಗೆಯ್ವುದೇನಂ ತೀರ್ಚುವುದೆಂದೊಡೆ ಸತ್ಯವತಿಯಿಂತೆಂದಳ್: **ಪಂಪಭಾ,** ೧. ೮೪ ವ)

ಏನಾನುಮಂ – [ಅ] ಏನಾದರೂ ಅದನ್ನು (ನನೆಯಂಬಂ ತೆಗೆದೆಚ್ಚಂ ಅಂಗಜನ ತಪ್ಪು ಏನಾನುಮಂ ತೋಱಿ ಕಾಣ್ಬನಿತಂ ಮಾಡದೆ ಪದ್ಮಜಂ ಮದನನಂ ಬೈದಂತುಟೇ: **ಪಂಪಭಾ,** ೪. ೬೯)

ಏನುಂ ಮಾಣದೆ – [ಅ] ಸ್ವಲ್ಪವೂ ತಡಮಾಡದೆ (ಅಂತು ತನ್ನ ಬಲಮೆಲ್ಲಮಂ ಜವನಂತೆ ಒಕ್ಕಲಿಕ್ಕಿ ಕೊಲ್ವ ಕಳಶಕೇತನನಂ ಯಜ್ಞಸೇನಂ ಏನುಂ ಮಾಣದೆ ಆತನ ಮೇಲೆ ಬಟ್ಟಿನಂಬಿನ ಬೆಳ್ಸರಿಯುಮಂ ಕೆಲ್ಲಂಬಿನ ತಂದಲುಮಂ ಪಾರೆಯಂಬಿನ ಸೋನೆಯುಮಂ ಸುರಿಯೆ: **ಪಂಪಭಾ,** ೧೨. ೨೧ ವ)

ಏನೋದಾವ – [ನಾ] ಪಾಪವೆಂಬ ಕಾಳ್ಗಿಚ್ಚು (ಆಚಾರ್ಯರ್ ಇನ್ನೆಮ್ಮಂ ಏನೋದಾವಂ ತಳ್ತವ್ವದಂತೆ ಓಸರಿಸಿ ಕಳೆಗೆ ಸಮಸಾರಕಾಂತಾರದಿಂದಂ: **ಆದಿಪು,** ೧. ೩)

ಏಬಂಡಂ –[ನಾ] ಏನು ಪ್ರಯೋಜನ (ಬಿಸುಡು ನೀಂ ಬಲಗರ್ವಮಂ ಆ ಸಮುದ್ರಂ ಏಬಂಡಮೊ ಪಾಯ್ವೊಡೆ ಎಂದು ನಿಜಸಾಯಕದೊಳ್ ಬರೆದು: **ಪಂಪಭಾ,** ೬. ೩೩)

ಏಬಾರ್ತೆ – [ನಾ] ಏನು ಗತಿ (ಈತನಿಲ್ಲದೆ ಪೇಱ್ ಮಾನಸವಾಟಿ ಮೋಹಮನೆನಗಿನ್ನು ಏಬಾರ್ತೆ ಎಂದುಗ್ರಶೋಕದಿಂ ಆಕ್ರಂದಿಸಿದೆಂ: **ಆದಿಪು,** ೩. ೫೨)

ಏವಾಟಿತ್ತೆ – [ನಾ] ಏನು ಬದುಕು, ಏವಾರ್ತೆ (ಬೆಸನಾವುದು ಎಮಗೆ ಬೆಸನಂ ಬೆಸಸು ಏವಾಟಿತ್ತೆಯೆಂದು ಮುಂದಿಟ್ಟರ್ ಸ್ರಗ್ವಸನವಿಲೇಪನ ಭೂಷಾಪ್ರಸರಂಗಳಂ: **ಆದಿಪು,** ೯. ೧೨೫)

ಏರ್ವೆಸ – [ನಾ] ಯುದ್ಧ ಪ್ರಯತ್ನ (ಪೂರ್ವಾಪರ ಜಳನಿಧಿಗಳ್ ಅಗುರ್ವಿಸುವಿನಂ ಒಂದನೊಂದು ತಾಗುವವೊಲ್ .. .. ಏರ್ವೆಸದಿಂದಂದು ಬಂದು ತಾಗಿತ್ತಾಗಳ್: **ಪಂಪಭಾ,** ೧೦. ೬೫)

ಏರ್ವೆಸನ – [ನಾ] ಯುದ್ಧದ ಆವೇಶ (ಎಸೆವುಗ್ರರಣಾನಕ ರೌದ್ರಘೋಷಂ ಏರ್ವೆಸನಮಂ ಉಂಟುಮಾಡಿದುದು ಪಂದೆಗಮಂದಿನ ವೀರಗೋಷ್ಠಿಯೊಳ್: **ಆದಿಪು,** ೧೪. ೯೦); ಯುದ್ಧಕಾರ್ಯ (ಕೊಳ್ಗುಳನಂ ನಡೆ ನೋಟ್ಟಿ ಅಹೀಂದ್ರರೊಳ್ ಸೆಣಸಿದುವೆಂದೊಡೆ ಏವೊಗಟ್ಟುವುದು ಏರ್ವೆಸನಂ ಸುರಸಿಂಧುಪುತ್ರನಾ: **ಪಂಪಭಾ,** ೧೧. ೪೧)

ಏವ – [ನಾ] ಅಸೂಯೆ (ನೀಳ್ದ ನಗೆಗಣ್ಗಂ ತಾಂ ಗಡಂ ತನ್ನ ನೀಳ್ದ ದಳಂಗಳ್ ಗಡ ಪೋಲ್ವೆಯೆಂಬ ಸೆಣಸಿಂ ಮಿಕ್ಕೇವದಿಂದಿಕ್ಕಿ ಮೆಟ್ಟಿದರ್ ಈ ಕಾಂತೆಯರ್: **ಆದಿಪು,** ೭. ೫೫); [ನಾ] ಅಸಮಾಧಾನ (ಅರಿಗನ ಬಿಲ್ಬಲ್ಮೆಯೊಳ್ ಅಂದೆರಡಿಲ್ಲದೆ ಬಗೆದ ಮುಳಿಸುಂ ಏವಮುಂ ಎರ್ದೆಯೊಳ್ ಬರೆದಿರೆ ತೋಱಿದನಾಯತ ಕರಪರಿಘಂ ಕರ್ಣಂ ಆತ್ಮಶರಪರಿಣತಿಯಂ: **ಪಂಪಭಾ,** ೨. ೭೯); [ನಾ] ಬೇಸರ, ವ್ಯಥೆ (ಏವದ ಮುಳಿಸಿನ ಕಾರಣಮಾವುದೊ; **ಪಂಪಭಾ,** ೨. ೮೨); [ನಾ] ಅಸಮಾಧಾನ (ಯುಧಿಷ್ಠಿರಂ ತಲೆಗವಿವನಲ್ಲದೆಯುಂ ಏವದೊಳ್ ತಲೆಗವಿದು ಸಿಗ್ಗಂ ಕೊಂಡಾಡಿ ನೆತ್ತಮನಾಡಿ: **ಪಂಪಭಾ,** ೭. ೨ ವ); [ನಾ] ದ್ವೇಷ, ಮುಳಿಸು (ಏಕಾದಶರುದ್ರರೊಳಗೆ ತುತ್ತತುದಿಯ ರುದ್ರನುಂ ರೌದ್ರನುಂ ಅಪ್ಪ ಅಶ್ವತ್ಥಾಮಂ ಏವದೊಳ್ ಕಣ್ಣಾಣದೆ ಮಾರ್ಕೊಂಡು ವಿಕ್ರಮಾರ್ಜುನನಂ: **ಪಂಪಭಾ,** ೧೩. ೩೯ ವ)

ಏವಂ – [ಕ್ರಿ] ಏನು ಮಾಡುತ್ತಾನೆ (ಏವನೆಮಗೆಂಬ ಶೌರ್ಯಮದಾವಷ್ಟಂಭದೊಳ್ ಅವಂದಿರಿಂತುಱದಿರೆ ಪೇಱಾವುದೊ ಬಾಯ್ಕೇಟಿಸಿಯುಂ ಇದೇವುದೊ ಷಟ್ಖಂಡಮಂಡಿತಂ ಭೂವಳಯಂ: **ಆದಿಪು,** ೧೪. ೨೯)

ಏವಂಬಡೆ – [ಕ್ರಿ] ಮಾತ್ಸರ್ಯಹೊಂದು (ಧರಣೀನಾರಿಗೆ ಪಾಂಡುವಿಂ ಬಳಿಯಂ ಇಲ್ಲಾರುಂ ಪೆಱರ್ ಗಂಡರ್ ಅಂತಿರಲ್ ಏವಂಬಡೆದಿರ್ದೊಡೆ ಅಟ್ಟು ಕಿಡುಗುಂ: **ಪಂಪಭಾ,** ೪. ೮)

ಏವಮಂ ಮಾಡು – [ಕ್ರಿ] ಅಸಮಾಧಾನವನ್ನುಂಟುಮಾಡು (ಮತ್ತೊರ್ವಂ ತನಗೆರಡಱಿಯದೆ ಒಲ್ದ ನಲ್ಲಳನೇತಱೊಳಪ್ಪೊಡಂ ಏವಮಂ ಮಾಡದೆ ಬೇಟಮಂ ಸಲಿಸುವುದರ್ಕೆ ಸಂತಸಂಬಟ್ಟು ಮುಂತಣ್ಗೆ ಕಾಪನಿಟ್ಟು: **ಪಂಪಭಾ,** ೪. ೯೨ ವ)

ಏವಯಿಸು – [ಕ್ರಿ] ಹೇಸಿಕೆಪಡು (ಎಂದಾ ಮಹಾನುಭಾವನಾ ಜವಂಜವವಿಭಾವಕ್ಕೆ ಏವಯಿಸಿ ವಜ್ರಜಂಘನೊಳ್ ಆತ್ಮೀಯ ಧರಾಭಾರಮಂ ನಿಱಿಸಿ: **ಆದಿಪು,** ೪. ೬೭ ವ); [ಕ್ರಿ] ಕ್ರೋಧಗೊಳ್ಳು, ಅಸಮಾಧಾನ ಹೊಂದು (ಪೊಡೆವಟ್ಟ ಇರ್ವರುಮಂ ಪರಸಿ ನಿನಗೆ ಮುನ್ನಂ ಏಱಿಲ್ ತರಿಸಿದೊಡೆ ಸುಯೋಧನನಂ ಏವಯಿಸಿ ನಿನ್ನಂ ಪೋಗಲ್ವೇಟ್ಟು: **ಪಂಪಭಾ,** ೯. ೬೬ ವ)

ಏವರ್ – [ಕ್ರಿ] ಏನು ಬರು, ಏನು ಮಾಡುವರು? (ಎಚ್ಚು ಏವರ್ ಎಂದು ಉಱದಿಂ ಒರ್ವಂ ಅಗುರ್ವು ಪರ್ವಿರೆ ದೇವರಂ: **ಪಂಪಭಾ,** ೫. ೯೪)

ಏವಾಟಿತ್ತೆ – [ನಾ] [ಏ+ಬಾಟಿತ್ತೆ] ಏನು ಪ್ರಯೋಜನ (ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪು ಅದೇವಾಟಿತ್ತೆ ನನ್ನಿಯ ನುಡಿಯಂ ಕಿಡೆ ನೆಗಟೆ ನಾನುಂ ಎರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ: **ಪಂಪಭಾ,** ೧. ೮೨)

ಏವಿರಿದು – [ನಾ] [ಏ+ಪಿರಿದು] ಏನು ದೊಡ್ಡದು, ಯಾವ ಮಹತ್ವದ್ದು (ಅವರಿರ್ಪೆಡೆಯುಂ ವಿರಾಟನಿರ್ಪ ಅಱಿಕೆಯ ಪಟ್ಟಣಂ ನಮಗೇವಿರಿದಪ್ಪುದು: **ಪಂಪಭಾ,** ೮. ೮೯)

ಏವಿರಿಯ – [ನಾ] ಏನು ದೊಡ್ಡವನು, ಏನು ಮಹಾ ಆದವನು (ಕೊಂದೆವಿಲ್ಲವಿನ್ನುಂ ಬಳವತ್ ಕ್ರೂರಾರಾತಿಯಂ ಉಪಸಂಹಾರಿಪೆವು ಏವಿರಿನಾದಂ ಎಂಬುದುಂ: **ಪಂಪಭಾ,** ೧೨. ೧೨೮)

ಏವುದು – [ಸ] ಏನು ಮಾಡುವುದು (ಪೋ ಬಿಡು ಕಟಿಸೂತ್ರಮಂ ತೊಡೆಯ ಬಿಣ್ಪು ಪದಾಂಬುರುಹಕ್ಕೆ ತಿಣ್ಣಂ ಎಂತು ಉಡಿಸುವುದಕ್ಕ ನೂಪುರಮಂ ಈ ತೊಡವು ಏವುದೋ ರೂಪ ಸಾಲದೇ: **ಪಂಪಭಾ,** ೩. ೪೬); [ಸ] ಏನು ಪ್ರಯೋಜನ (ಭೂವಲಯಮನಯ್ಯನಿತ್ತುದುಮಂ ಆಂ ನಿನಗಿತ್ತೆಂ ಇದೇವುದಣ್ಣ ನೀನೊಲಿದ ಲತಾಂಗಿಗಂ ಧರೆಗಂ ಆಟಿಸಿದಂದು ನೆಗಟ್ತ್ ಮಾಸದೇ: **ಆದಿಪು,** ೧೪. ೧೩೦); [ಸ] ಯಾವುದು, ಏತಕ್ಕೆ (ಮಾರೀಚಿ ತೊಡರ್ಪುಳಿಂದೆ ಸರದಿಂ ಕಂಪಿಲ್ಲ ಚಿಂತಾಮಣಿಗೇವುದಕ್ಕ ದಳಮಿಲ್ಲ ಈ ಕಕ್ಕರಕ್ಕಿಂತುಟಪ್ಪುದು ಕಳ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮಂ ಕಾಂತೆಯರ್: **ಪಂಪಭಾ,** ೪. ೮೮)

ಏವೆಸಗೊಳ್ – [ಕ್ರಿ] [ಏ+ಬೆಸಗೊಳ್] ಏನೆಂದು ಕೇಳುವುದು (ಇನ್ನು ಏವೆಸಗೊಳ್ವುದೊ ಕಡುವೇಗದಿಂ ಅಸಕಟಿದುದು ಮನಮುಮಂ ತುರಂಗಮರತ್ನಂ: **ಆದಿಪು,** ೧೩. ೩೯)

ಏವೇಡು – [ಗು] ಬಯಸಿದ್ದು (ಅಕ್ಕರಗೊಟ್ಟಿಯುಂ ಚದುರರ ಒಳ್ವಾತುಂ ಕುಳಿರ್ ಕೋಟ್ಟ ಜೊಂಪಮುಂ ಏವೇಟ್ಟುದನುಳ್ಳ ಮೆಯ್ಸುಕಮುಂ: **ಪಂಪಭಾ,** ೪. ೩೧)

ಏವೈಸು – [ಕ್ರಿ] ದುಃಖಪಡು (ಕೌರಬಲಪ್ರಧಾನನಾಯಕನಪ್ಪ ಚಿತ್ರಸೇನಂ ಕೃತವರ್ಮನ ಕೆಯ್ಯೊಳ್ ಅತೀತನಾದುದರ್ಕೆ ಏವೈಸಿ: **ಪಂಪಭಾ,** ೧೨. ೬೧ ವ)

ಏಸಾಡು – [ಕ್ರಿ] (√ಇಸು) ಬಾಣ ಪ್ರಯೋಗಮಾಡು (ಅನಿತುಂ ಬಲಮಂ ಮುತ್ತಿ ಚಿಳಾತಾವರ್ತರ್ ಸುತ್ತಲುಂ ಏಸಾಡಿ ಪಿರಿದು ತಿಣಿಕಂ ತಂದರ್: **ಆದಿಪು,** ೧೪. ೭೦)

ಏಸು – [ನಾ] ಬಾಣಪ್ರಯೋಗದ ಬಗೆ (ಒಂದೆ ಕೆಲ್ಲಂಬಿನಿಂ ಮೆಲ್ಲಗೆ ಪಾರ್ದು ಆರ್ದು ಎಚ್ಚಂ ಏಸಿಂ ತಲೆ ಪಱಿದು ಸಿಡಿಲ್ದತ್ತ ಬೀಟ್ವನ್ನಮಾಗಳ್: **ಪಂಪಭಾ,** ೧೨. ೧೮)

ಏಹಿ – [ಕ್ರಿ] ಹೋಗು (ಮನದೊಳ್ ನಿಷ್ಕಾರಣಂ ಕಾಯ್ವರೇಂ ಪರಚಿಂತಾಕರ ಏಹಿ ಎಂಬ ನುಡಿಯಂ ಮುಂ ಕೇಳ್ದೆನಿಲ್ಲಾಗದೇ: **ಪಂಪಭಾ,** ೭. ೩೫)

ಏಳಾ – [ನಾ] ಏಲಕ್ಕಿ (ನೆಗಟ್ದೀ ಕರ್ಪೂರ ಕಾಳಾಗರು ಮಳಯಮಹೀಜಂಗಳ್ ಏಳಾಲತಾಳೀ ಸ್ಥಗಿತಂಗಳ್ ಕಣ್ಗೆವಂದಿರ್ದುವಂ ಇವನೆ ವಲಂ ಕೊಂಬುಗೊಂಡ ಅಂಗಜಂ: **ಪಂಪಭಾ,** ೪. ೨೩)

ಏಳಾವನ – [ನಾ] ಏಲಕ್ಕಿ ತೋಟ ಚೂತ ಸಪ್ತಚ್ಛದ ಏಳಾವನಸುರಭಿ .. .. ಆಶಾಚಕ್ರಂ ಗಂದೇಭಚಕ್ರಂ: **ಆದಿಪು,** ೧೧. ૩೦)

ಏಳಿದಂಬಗೆ – [ಕ್ರಿ] ತಿರಸ್ಕಾರದಿಂದ ಕಾಣು (ಶಲ್ಯನಂ ಅಂದು ಅಖಿಲ್ಯನಂ ಬಗೆವವೊಲ್ ಏಳಿದಂಬಗೆದು ದಂತಿಯಂ ಆಗಡೆ ತೋಟಿಕೊಟ್ಟು: **ಪಂಪಭಾ,** ೧೦. ೧೧೧)

ಏಳಿದವಾಗು – [ಕ್ರಿ] ತಿರಸ್ಕಾರಯೋಗ್ಯವಾಗು (ಉತ್ತಮಕುಲಶೈಲಂ ಉನ್ನತಿಯಂ ಏಳಿದವಾಗೆ ಬಿಸಟಿಪ್ಪೊಡಂ ಬಿಸುಟಕ್ಕೆಮ ಬಿಸುಡೆಂ ಮದೀಯ ಪುರುಷವ್ರತಮೊಂದುಮಂ: **ಪಂಪಭಾ,** ೧. ೮೩)

ಏಳಿದಿಕ್ಕೆ – [ನಾ] ದೀನತನ (ಪಾಂಚಾಲರಾಜತನೂಜೆ ಪಗೆವರ ಕಟ್ಟುವಟ್ಟಿರ್ದ ಏಳಿದಿಕ್ಕೆಗೆ ಸಂತಸಂಬಟ್ಟು ಸೈರಿಸಲಾಱದೆ ಇಂತೆಂದಳ್: **ಪಂಪಭಾ,** ೭. ೩೮ ವ)

ಏಳಿಸು – [ಕ್ರಿ] ತಿರಸ್ಕಾರಮಾಡು, ಅವಹೇಳನಗೈ (ದಿವಮಂ ಏಳಿಪಂತು ಮಿಳಿರ್ವ ವಿವಿಧಕೇತನಂಗಳಿಂ ಸದಾನಿಕೇತನಂಗಳಿಂ: **ಪಂಪಭಾ,** ೧. ೫೮)

ಏಱ್ – [ನಾ] ಯುದ್ಧ (ತಱಿಸಂದು ಲಾಟದೊಳ್ ತಳ್ತಿಱಿದ ಏಱಂ ಪೇಟಿ್ ಕೇಳ್ದು: **ಪಂಪಭಾ,** ೧. ೩೩); [ನಾ] ಏಟು, ಹೊಡೆತ (ಒಡವಂದಂಕದ ಕೌರವರ್ ದ್ರುಪದನ ಅಂಬ ಏಱಿಂಗೆ ಮೆಯ್ಯೊಡ್ಡದೆ ಒಡ್ಡುತಿರೆ ಸೂಸೆ ಬೀಟ್ವ ತಲೆಗಳ್ ಸೂಟ್ಟಿಟ್ಟಂ: **ಪಂಪಭಾ,** ೨. ೬೨); [ಕ್ರಿ] ಅಡರು, ಹತ್ತು (ಏಱನೆ ಸೂಱ್ಗೊಂಡು ನುಡಿವೀ ನುಡಿಯಲ್ಲದೆ ಮತ್ತಮಾಸನಂದೋಱುವ ಬಲ್ಪುದೋಱುವೆರ್ದೆದೋಱುವ ಕಯ್ಪೆಸರಂಗಳೆಮ್ಮ ಉಂತು ಏಱವು: **ಪಂಪಭಾ,** ೮. ೨೦); [ಕ್ರಿ] ಸವಾರಿ ಮಾಡು (ಎಂತಪ್ಪ ದುಷ್ಟಾಶ್ವಂಗಳುಮಂ ಏಱಲುಂ ತಿರ್ದಲುಂ ಬಲ್ಲೆನೆಂದು ಪೇಟ್ದು ಆಳಾಗಿ ತಂತ್ರಪಾಳವೆಸರೊಳ್ ಮಾಸಾದಿಯಾಗಿರ್ದಂ: **ಪಂಪಭಾ,** ೮. ೫೪ ವ)

ಏಱಲ್ ತರಿಸು – [ಕ್ರಿ] [ಏರಲು] ಕುಳಿತುಕೊಳ್ಳಲು ಪೀಠ ತರಿಸು (ತಾಪಸಾಶ್ರಮದೊಳ್ ಸತ್ಯಂತಪರೆಂಬ ದಿವ್ಯಜ್ಞಾನಿಗಳಂ ಕಂಡು ಪೊಡೆವಟ್ಟ ಇರ್ವರುಮಂ ಪರಸಿ ನಿನಗೆ ಮುನ್ನಂ ಏಱಲ್ ತರಿಸಿದೊಡೆ: **ಪಂಪಭಾ,** ೯. ೬೬ ವ)

ಏಱಿಸು – **ಮೇಲಕ್ಕೆ ಹತ್ತಿಸು** (ನಿಜವಿಜಯಗಜೇಂದ್ರಮನೇಱಿಸಿ ಮುಂದಿಟ್ಟೊಡಗೊಂಡು ಬರೆ: **ಆದಿಪು,** ೪. ೨೪ ವ); ಬಿಲ್ಲಿನ ಹೆದೆಯೇರಿಸು (ದ್ರೋಣಂ ಬಾಟಗ್ಗಿಂದು ಮಹಾಪ್ರಚಂಡಗಾಂಡೀವಮಂ ಕೊಂಡೇಱಿಸಿ ನೀವಿ ಜೇವೊಡೆದು, **ಪಂಪಭಾ,** ೧೦. ೬೪ ವ);

ಏಱು – [ನಾ] ಗಾಯ (ತಮೋಗಜದ ಕೋಡೇಱಿಂದಮೇಂ ನೊಂದುದೊ ಹರಿಣಂ; **ಪಂಪಭಾ,** ೪. ೫೦); [ನಾ] ಯುದ್ಧ (ವಿದ್ವಿಷ್ಟವಿದ್ರಾವಣನ ಮೊನೆಯಂಬಿನ ಏಱಿಂಗೆ ಅಳ್ಕಿ ಹತವಿಹತ ಕೋಳಾಹಳರಾಗಿ: **ಪಂಪಭಾ,** ೫. ೮೮ ವ); [ನಾ] ಹೊಡೆತ (ಸುಪ್ರತೀಕಂ ಕೆಯ್ಯ ಕಾಲ ಕೋಡ ಏಱಿನೊಳ್ ಬಲಮನೆಲ್ಲಂ ಜವನೆ ಚಿವುಳಿದುಟಿವಂತೆ ತೊಟ್ತುಟಿದುಟಿದು: **ಪಂಪಭಾ,** ೧೧. ೭೨ ವ); [ಕ್ರಿ] ದೊಡ್ಡದಾಗು, ಮಹತ್ವದ್ದಾಗು (ನೀಂ ಪುರುಡಿಸಿ ನುಡಿದೊಡೆ ನಿನ್ನ ನುಡಿದ ಮಾತೇಱುಗುಮೇ: **ಪಂಪಭಾ,** ೧೨. ೧೮೦)

ಏಱುವೇಟ್ – [ಕ್ರಿ] ಯುದ್ಧಗಳನ್ನು ಹೇಳುವ (ಭಗವತಿಯ ಏಱುವೇಟ್ವ ತೆರದಿಂ ಕಥೆಯಾಯ್ತು ಇವರೇಱು: **ಪಂಪಭಾ:** ೧೦. ೧೬)

ಏಟ್ – [ಕ್ರಿ] ಬದುಕಿ ಬರು (ಕಟಿದವರ್ಗೆ ಅಟ್ಟುದು ಅಟಿಸ್ತೊಡೆ ಅವರೇಟ್ವರೇ ಮೇಣ್ ಅವರಿಂ ಬಟಿಕ್ಕೆ ತಾಮುಟಿವರೇ: **ಆದಿಪು,** ೩. ೫೩)

ಏಟು – [ನಾ] ಸ್ತ್ರೀ, ದ್ಯೂತ, ಬೇಟೆ, ಮದ್ಯಪಾನ, ವಾಕ್ಪಾರುಷ್ಯ, ದಂಡಪಾರುಷ್ಯ, ಅರ್ಥದೂಷಣ ಎಂಬ ಏಳು ವ್ಯಸನಗಳು (ಪರಿಕಿಪುದು ಒಂದಱಿಂದೆ ಎರಡಂ ಓತುಕೊಳ್ವುದು ಮೂಱ್ಟಿಂದೆ ನಾಲ್ಕರಿದಱಿದು ಅಯ್ದಱಿಂದೆ ನೆಱಿ ಕಲ್ವುದು ನಿರ್ಣಯಂ ಆಱ್ಟಿಗೊಳ್ ಪರಿಣತನಪ್ಪುದು ಏಟಱಿಗೊಳಂ ಒಂದದೆ ನಿಲ್ವುದು: **ಪಂಪಭಾ,** ೧೩. ೬೬)

ಏೞುಂ ಪರಮಸ್ಥಾನ – [ನಾ] ಸಜ್ಜಾತಿತ್ವ, ಸದ್ಗೃಹತ್ವ, ಪಾರಿವ್ರಾಜ್ಯ, ಸುರೇಂದ್ರತ್ವ, ಸಾಮ್ರಾಜ್ಯ, ಅರ್ಹಂತ್ಯ, ನಿರ್ವಾಣ ಎಂಬ ಮೋಕ್ಷಪದವಿಯ ಏಳು ಹಂತಗಳು (ಸಜ್ಜಾತಿ ಸದ್ಗೃಹತ್ವ ಪಾರಿವ್ರಾಜ್ಯಪದ ಸುರೇಂದ್ರತ್ವ ಸಾಮ್ರಾಜ್ಯ ಪರಮಾರ್ಹಂತ್ಯ ಪರಿನಿರ್ವಾಣಮೆಂಬ ಏೞುಂ ಪರಮಸ್ಥಾನ: **ಆದಿಪು,** ೧೫. ೧೬ ವ)

ಏೞುಂ ಮಾೞ – [ನಾ] ಮಾಲವದೇಶದ ಏಳು ಭಾಗಗಳು (ಏೞುಂ ಮಾೞಮುಮಂ ಪಾೞ್ಗೆೞ್ ತಗುಳ್ದಿಱಿದು ನರಗನುರಿಪಿದೊಡೆ ಕರಿಂಕೇೞಿಸಿದಾತನ ತೇಜದ ಬೀೞಲನನುಕರಿಪುವಾದುವು ಒಗೆದುರಿವುರಿಗಳ್: **ಪಂಪಭಾ,** ೧. ೩೫)

ಏೞುಂ ಸಮುದ್ರಂಗಳ್ – [ನಾ] (ಉಪ್ಪು ನೀರು, ಹಾಲು, ಕಬ್ಬಿನ ರಸ, ಮೊಸರು, ಜೇನುತುಪ್ಪ, ತುಪ್ಪ, ರುಚಿಯಾದ ನೀರುಗಳಿಂದ ಕೂಡಿದ ಸಮುದ್ರಗಳು (ಕ್ಷಾರ ಕ್ಷೀರ ಇಕ್ಷು ದಧಿ ಮಧು ಘೃತ ಸ್ವಾದೂದಕಂಗಳೆಂಬ ಏೞುಂ ಸಮುದ್ರಂಗಳ ಚತುರ್ದಶ ಮಹಾನದಿಗಳ ನೀರುಮಂ: **ಪಂಪಭಾ,** ೧೪. ೧೭ ವ)

ಏೞು ಜನಪದ – [ನಾ] ಏಳು ಜನಸಮುದಾಯ (ಆ ತಿರ್ಯಗ್ಲೋಕದ ನಟ್ಟ ನಡುವೆ ಲವಣಜಲಧಿಪರಿವೃತಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತ ಐರಾವತಂಗಳೆಂಬ ಏೞು ಜನಪದಂಗಳಿಂದಂ: **ಆದಿಪು,** ೧. ೪೮ ವ)

ಏೞುಮಂಬುಧಿ – [ನಾ] ಏಳು ಸಮುದ್ರಗಳು, ಪೌರಾಣಿಕವಾದ ಸಪ್ತಸಮುದ್ರಗಳು (ಕುಡಿವುದಂ ಏೞುಮಂಬುಧಿಯುಮಂ ಕುಲಶೈಲಕುಳಂಗಳುಂ ತಗುಳ್ದಡರ್ವುದನೊಂದಿ ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊಡರ್ವುದಂ: **ಪಂಪಭಾ,** ೧. ೧೪೦) [ಲವಣ, ಇಕ್ಷು, ಸುರಾ, ಸರ್ಪಿಸ್, ದಧಿ, ಕ್ಷೀರ, ಮತ್ತು ಜಲಸಮುದ್ರಗಳು]

ಏೞ್ಕಟ್ಟು – [ನಾ] [ಏಡು+ಕಟ್ಟು] ವರ್ಷಗಳ ಅವಧಿಯ ಕಟ್ಟುಪಾಡು, ಕಾಲಾವಧಿಯ ಕಟ್ಟುಪಾಡು (ಏೞ್ಕಟ್ಟನೆೞ್ದು ನಿಮ್ಮಂ ನಾಟ್ಕಡೆಗೞಿದೊಡೆ ಮದೀಯ ನಾಥಂ ಬೇರಂ ಬೞ್ಕಿಯನೆ ತಿಂದ ದೆವಸದೊಳ್ ಅೞ್ಕಾಡಿದ ಬೀರಮೀಗಳೇಂ ಪೊಸತಾಯ್ತೇ: **ಪಂಪಭಾ,** ೧೨. ೧೭೮)

ಏೞ್ಗೆವಾಡಿವ – [ನಾ] [ಏೞ್ಗೆ+ಪಾಡಿವ=ಚಂದ್ರ ಬೆಳೆಯುವ ಕಾಲದ] ಶುಕ್ಲಪಕ್ಷದ ಪಾಡ್ಯ (ಅಯ್ವರ್ ಕೂಸುಗಳುಂ ಏೞ್ಗೆವಾಡಿವದ ಚಂದ್ರನಂತೆ ಉತ್ತರಾಭಿವೃದ್ಧಿಯೊಳ್ ಸೊಗಯಿಸಿ ಬಳೆಯೆ: **ಪಂಪಭಾ,** ೨. ೩)

ಏೞ್ತರ್ – [ಕ್ರಿ] ಹೊರಟು ಬಾ (ಆದಿಬ್ರಹ್ಮನೇೞ್ತರ್ಪುದನೆ ಕನಸುವೇೞ್ದಿಪ್ಪುದು ಎಂದು ಅಗ್ರಜಂಗೆ ಆದರದಿಂದಂ ಪೇೞ್ದು: **ಆದಿಪು,** ೯. ೧೩೦)

ಏೞ್ಪೋಗು – [ಕ್ರಿ] ಎದ್ದು ಹೋಗು (ಏೞ್ಪೋಗು ದೂತನಪ್ಪನ ಬೇೞ್ಪನ ನುಡಿಗೇೞ್ದು ಮುಳಿಯಲಾಗದು ನೀನುಂ ಮೆಚ್ಚಿಟ್ಟು ವಿದುರನೆಂಬೀ ತೊೞ್ತುಟ್ಟಿಯ ಮನೆಯ ಕೂೞ್ ನುಡಿಯಿಸೆ ನುಡಿದೈ: **ಪಂಪಭಾ,** ೯. ೫೮)

ಐ

ಐಂದ್ರ – [ನಾ] ಇಂದ್ರಪದವಿ (ಸಕಳಕ್ಷ್ಮಾಚರಖೇಚರಾಂಚಿತ ಮಹಾಮಾಣಿಕ್ಯ ಗಾಣಿಕ್ಯ ಹಾಸ್ತಿಕ ರತ್ನೋರ್ಜಿತ ಚಕ್ರವರ್ತಿವಿಭವಂ ಮುನ್ನಂ ಬೞಿಕ್ಕೆ ಐಂದ್ರಂ: **ಆದಿಪು,** ೧೬. ೮); [ನಾ] ಇಂದ್ರಾಸ್ತ್ರ (ಕಳವೇೞ್ದು ಇರ್ವರುಂ ಐಂದ್ರ ವಾರುಣದೆ ವಾಯವ್ಯಾದಿ ದಿವ್ಯಾಸ್ತ್ರಸಂಕುಳದಿಂದ ಒರ್ವರಂ ಒರ್ವರ್ ಎಚ್ಚು: **ಪಂಪಭಾ,** ೧. ೭೯)

ಐಂದ್ರಬಾಣ – [ನಾ] ಇಂದ್ರಾಸ್ತ್ರ (ಜ್ವಳನಪತತ್ರಿಯಂ ಕಡಿದು ವಾರುಣಪತ್ರಿಯಿಂ ಐಂದ್ರಬಾಣಮಂ ಕಳೆದು ಸಮೀರಣಾಸ್ತ್ರದಿಂ ಭೂಭುಜರೆಲ್ಲರಂ ಭಯಂಗೊಳಿಸಿ: **ಪಂಪಭಾ,** ೧೧. ೪೩)

ಐಕಿಲ್ – [ನಾ] ಚಳಿ (ಬಿಸಿಲ್ ಐಕಿಲ್ ಪಸಿವು ಉಗ್ರದಂಶಮಶಕವ್ಯಾಬಾಧೆ ನೀರಟ್ಕೆ ಪೊಯ್ವ ಸಿಡಿಲ್ ತಿಂಬರವಾವು ಪಾಯ್ವ ಪುಲಿ: **ಆದಿಪು,** ೬. ೩೪)

ಐದುಮಾಚಾರ – [ನಾ] ದರ್ಶನ, ಜ್ಞಾನ, ಚಾರಿತ್ರ, ತಪ ಮತ್ತು ವೀರ್ಯಗಳೆಂಬ ಆಚಾರಗಳು ಐದಾಚಾರ (ಸಂದೈದುಮಾಚಾರದೊಳ್ಸದ್ಭಾವಂ ಕೈಗಣ್ಮೆ: **ಆದಿಪು,** ೧. ೩)

ಐರಾವಣಾನ್ವಯ – [ನಾ] [ಐರಾವಣ+ಅನ್ವಯ] ಐರಾವತವೆಂಬ ಆನೆಯ ವಂಶ (ಮತ್ತಂ ಐರಾವಣಾನ್ವಯನುಂ ಸುರಭಿನಿಶ್ವಾಸನುಂ ಸೂಕ್ಷ್ಮಬಿಂದುರುಚಿರನುಂ: **ಪಂಪಭಾ,** ೧೪. ೨೦ ವ)

ಐಸರ – [ನಾ] ಐದೆಳೆಯ ಹಾರ (ಮೃಗಮದದಣ್ಪು ಜಾದಿಯ ಬೞಲ್ಮುಡಿ ನೆಯ್ದಿಲ ಕರ್ಣಪೂರಂ ಉತ್ತು ಅಗಲದೆ ಕಟ್ಟಿದ ಐಸರಂ: **ಆದಿಪು,** ೧೨. ೧೨)

ಐಸಾಸಿರ್ವರ್ – [ನಾ] ಐದು ಸಾವಿರ ಮಂದಿ (ನಿಜತನೂಭವರೈಸಾಸಿರ್ವರ್ ಪದಿನಾಱುಸಾಸಿರ್ಬರ್ ಮಕುಟಬದ್ಧರ್ ನಿಜಲತಾಂಗಿಯರ್ ಅಯ್ವತ್ತು ಸಾಸಿರ್ವರ್: **ಆದಿಪು,** ೬. ೨೭)

ಐರಾವತ – [ನಾ] ಇಂದ್ರನ ಆನೆ (ಮದಶ್ರೀಯುತೈರಾವತಸ್ಕಂಧಗತಂ ನಾನಾತಪತ್ರಸ್ಥಗಿತ ದಶದಿಶಾಮಂಡಲಂ ... ವಿಳಾಸಂ ಮಿಗೆ ಸೌಧರ್ಮೇಂದ್ರನಂದಾ ಶಚಿವೆರಸು ಮಹೋತ್ಸಾಹದಿಂ ಬಂದನಾಗಳ್: **ಆದಿಪು.** ೭. ೪೩); ಜಘನ್ಯಭೋಗಭೂಮಿಯ ಏಳರಲ್ಲಿ ಒಂದು ಜನಪದದ ಹೆಸರು (ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತೈರಾವತಗಳೆಂಬೇೞು ಜನಪದಂಗಳಿಂದಂ: **ಆದಿಪು,** ೧. ೪೮ ವ)

ಐಹಿಕ – [ಗು] ಇಹಲೋಕಕ್ಕೆ ಸಂಬಂಧಿಸಿದ, ಇಹಲೋಕದ (ನಿನ್ನೆಂದಂತುಟೆ ಮೋಕ್ಷಕ್ಕೆನ್ನಿರ್ಪಿರವು ಅಘಟಮಾನವೈಹಿಕದ ತೊಡರ್ಪು ಎನ್ನಿರವಿನೊಳುಂಟು: **ಪಂಪಭಾ.** ೮. ೪)

ಐಳಾವನ – [ನಾ] ಏಲಕ್ಕಿಯ ತೋಟ (ತಳರ್ದುದೆತ್ತಂ ಚೂತಸಪ್ತಚ್ಛದ ಐಳಾವನಸುರಭಿಮದಾಸಾರಾಸ: **ಆದಿಪು,** ೧೧. ೩೦)

ಒ

ಒಂದಲ್ಲದುದು – [ನಾ] ಒಂದನ್ನು ಬಿಟ್ಟು (ಕೌರವನಾಯಕನ ಊರುಭಂಗಮೊಂದಲ್ಲದುದೆಲ್ಲಮಂ ನೆಱಪಿದೆಂ ಗಡಂ ಓಳಿಯೆ ಕೇಳಿಮೆಲ್ಲರುಂ: **ಪಂಪಭಾ,** ೧೨. ೧೬೧)

ಒಂದವಿಂದ – [ನಾ] ಇಜ್ಜೋಡು, ಬೇರ್ಪಡುವಿಕೆ (ಆಕೆಯಂ ಎನ್ನಂ ಓವೋ ಕಾಯ್ದಿಜೆಯೆ ವಿಧಾತ್ರನೇಂ ಪಡೆದನೋ ಬಿಸವಂದಮನೊಂದವಿಂದಮಂ: **ಆದಿಪು,** ೧೨. ೨೯)

ಒಂದವಿಂದಿ – [ನಾ] ಇಜ್ಜೋಡು (ಪೊಂದಳಿರೊಳ್ ಒಂದವಿಂದಿಯಲ್ಲದದೊಂದು ನಾಡೆಯುಂ ಅಂದಂಬಡೆದು ಪೊಳೆವ ಪೊಂದಳಿರುಂ: **ಆದಿಪು,** ೪. ೪೧ ವ)

ಒಂದಿದ – [ಗು] ನಂಬಿಕಸ್ಥನಾದ (ಒದವಿದ ಬೇಟವಪೊ'ಡೆನಗತ್ತಳಗಂ ಬಗೆವೇಟಿಸ್ದೊಡೆನ್ನ ಮೇಳದ ಕೆಳೆಯರ್ಕಳಿಲ್ಲ .. .. ಓತು ಮಾತಡಕಲೊಂದಿದ ದೂದವರಿಲ್ಲ ನೆಟ್ಟನೆ: **ಪಂಪಭಾ,** ೪. ೭೯)

ಒಂದಿ ನಿಲ್ – [ಕ್ರಿ] ಸೇರಿ ನಿಲ್ಲು, ಸಜ್ಜಾಗಿ ನಿಲ್ಲು (ಇತ್ತ ತಪದೊಳ್ ನರಂ ಇಂತು ಒಂದಿ ನಿಲೆ ತಪದ ಬಿಸುಪಿಂ ಬೆಂದಟೆದುದು ವನದೊಳುಳ್ಳ ತಪಸಿಯರ ತಪಂ: **ಪಂಪಭಾ,** ೮. ೧೦)

ಒಂದಿ ಬಾರದಂ – [ನಾ] ಕೂಡಿ ಬರದವನು (ಅಖಿಳಶಾಸ್ತ್ರವಿಶಾರದನಪ್ಪನುಂ ಗೆಲಲ್ಕರಿಯನುಂ ಒಂದಿ ಬಾರದನುಂ ಅಂಕದ ಕರ್ಣನೆ: **ಪಂಪಭಾ,** ೯. ೬೧)

ಒಂದಿನಿಸು – [ನಾ] ಒಂದಿಷ್ಟು, ಕೊಂಚ (ಪವನಸುತಂಗೆ ಪಾಸಟಿಗಳೊರ್ವರುಂ ಇಲ್ಲದಜೆಂದಂ ಆಂತ ಕೌರವಬಲದ ಉರ್ಕನೊಂದಿನಿಸು ಮಾಣಿಸಿ ಪೋಪಂ: **ಪಂಪಭಾ,** ೧೨. ೧೨೧)

ಒಂದು – [ಕ್ರಿ] ಲೇಪಿತವಾಗು (ಈ ಜಗನಮಿದೇಕೆ ಹೇಮರಶನಾಧ್ವನಿಯಿಲ್ಲದೆ ಮೂಗುವಟ್ಟುದು ಈ ಬಗೆಯೋಲ್ ಅಲಕ್ತಕದ್ರವದೊಳೊಂದದೆ ನಿಂದುವು ಪಾದಪಂಕಜಂ: **ಪಂಪಭಾ,** ೪. ೬೨); [ನಾ] ಒಂದು ಎಂಬ ಸಂಖ್ಯೆ (ಒಂದುಂ ಎಡಂಬಡುಂ ಪೊರೆಯುಂ ಇಲ್ಲ ಅವರ್ಗೆ ಎಂಬುದಂ ಎಯ್ದೆ ನಂಬಿ ನಾಡಂ ದಯೆಗೆಯ್ದು ನೀಂ ಕುಡುವಿನಂ: **ಪಂಪಭಾ,** ೯. ೪೩); [ಕ್ರಿ] ಕೂಡು, ಸೇರು (ಮುತ್ತಿನ ಪಚ್ಚೆ ಮಾಣಿಕದ ವಜ್ರದ ಕೇಟಿಯೊಳ್ ಒಂದಿ ಸಾಂದಿನೊಳ್ ಕತ್ತುರಿಯೊಂದು ಕೋಟಿಗೆಸಱೊಳ್: **ಪಂಪಭಾ,** ೧೪. ೨೦); [ನಾ] ಬುದ್ಧಿ (ಪರಿಕಿಪುದು ಒಂದಜೆಂದೆ ಎರಡಂ ಓತುಕೊಳ್ವುದು ಮೂಜ್ಟಿಂದೆ ನಾಲ್ಕರಿದಜೆದು ಅಯ್ದಜೆಂದೆ ನೆಱ ಕಲ್ವುದು ನಿರ್ಣಯಂ ಆಜ್ಜೊಳ್ ಪರಿಣತನಪ್ಪುದು ಏೞಱೊಳಂ ಒಂದದೆ ನಿಲ್ವುದು: **ಪಂಪಭಾ,** ೧೩. ೬೬)

ಒಂದುಗುಂದು – [ಕ್ರಿವಿ] ಒಂದೂ [ಸ್ವಲ್ಪವೂ] ಕಡಿಮೆಯಾಗದೆ (ಪ್ರಯತ್ನದೆ ಬಿಗಿದಿರ್ದ ಎರಟಿನ್ದೊಣೆ ಮಿಸುಪ್ಪ ಅಸಿ ಖೇಟಕಂ ಇಂತಿವು ಒಂದುಗುಂದದೆ ನಿಲೆ ನೋಟ್ಟಿ ನೋಟಕರ್ಗೆ ಸೌಮ್ಯಭಯಂಕರನಾದಂ ಅರ್ಜುನಂ: **ಪಂಪಭಾ,** ೭. ೭೯)

ಒಂದು ತಲೆಯಾಗೋಡು – [ಕ್ರಿ] ಒಂದೆ ದಿಕ್ಕಿಗೆ ತಲೆತಿರುಗಿಸಿಕೊಂಡು ಓಡು (ಭೋರ್ಗರೆದಾರ್ದ ಪಾಂಡವ ಪತಾಕಿನಿಯುಮಂ ಒಂದು ತಲೆಯಾಗೋಡುವ ಕೌರವ್ಯಧ್ವಜಿನಿಯುಮಂ ಬೇಱಗೊಂದು ಮೊನೆಯೊಳ್ ಕಾದುತಿರ್ದ ಅಶ್ವತ್ಥಾಮಂ ಕಂಡು: **ಪಂಪಭಾ,** ೧೨. ೩೦ ವ)

ಒಂದುತ್ತರಂ – [ನಾ] ಒಂದಿಷ್ಟು ಅಧಿಕವಾಗಿ (ರಥಮಂ ಬಂದೇಜೆ ಮಗನ ಮನಕತಂ ಒಂದುತ್ತರಮೆರ್ದೆಯನಲೆಯೆ ನರನಿಂತೆಂದಂ: **ಪಂಪಭಾ,** ೧೧. ೧೧೪)

ಒಂದು ಪತ್ತೆಂಟು ಪಲಗೆ – [ನಾ] ಒಂದು ಹತ್ತೆಂಟು ಆಟ, ಅಂದರೆ ಕೆಲವು ಆಟಗಳು (ಮಡಿಮಡಿಗುಱುವುದುಂ ಒಂದು ಪತ್ತೆಂಟು ಪಲಗೆಯಂ ಮೆಟ್ಟಿಡಿಸಲೆಂದು ಸೋಲ್ತು ಸೋಲದೊಳ್ ಏವಯಿಸಿಯಿನ್ನೊಡ್ಡಂ ಕೊಳ್ಳಿಂ ಎಂದು: **ಪಂಪಭಾ,** ೬. ೭೧ ವ)

ಒಂದುಮಾಡಿಕೊ – [ಕ್ರಿ] ಒಟ್ಟಾಗು (ತಂತಮ್ಮ ಚತುರ್ಬಲಂಗಳಂ ಒಂದುಮಾಡಿಕೊಂಡು ಕಾಲಾಗ್ನಿಯಂ ಕೀಡಿ ಸುತ್ತುವಂತೆ ಕರ್ಣನಂ ಸುತ್ತಿ ಮುತ್ತಿಕೊಂಡು: **ಪಂಪಭಾ,** ೧೨. ೧೧೮ ವ)

ಒಂದೆ ಗಡ – [ಅ] ಒಂದೆ ಅಲ್ಲವೆ, ಒಂದು ವಿಷಯ (ಒಂದೆ ಗಡ ಹರಿಯ ಪೇಟಿನ್ದೊಂದಂದದೆ ನರನೆಸಗುವಂತೆ ಕರ್ಣನುಂ ಎನ್ನೆಂದ ಒಂದೋಜೆಯೊಳ್ ಎಸಗದೊಡೆ: **ಪಂಪಭಾ,** ೧೨. ೧೦೧)

ಒಂದೆ ಪಸೆಯೊಳಿರಿಸು – [ಕ್ರಿ] ಒಂದೇ ಹಸೆಯ ಮೇಲೆ ಕುಳ್ಳಿರಿಸು, ಒಟ್ಟಿಗೆ (ಅಂತು ಸ್ವಯಂಬರದೊಳ್ ನೆಱೆದರಸುಮಕ್ಕಳೊಳ್ ಅಪ್ಪುಕೆಯ್ದು ಕುಂತಿಯೊಡನೆ ಮದ್ರರಾಜನ ಮಗಳ್ ಶಲ್ಯನನೊಡವುಟ್ಟಿದ ಮಾದ್ರಿಯುಮನೊಂದೆ ಪಸೆಯೊಳಿರಿಸಿ: **ಪಂಪಭಾ,** ೧. ೧೦೬ ವ)

ಒಂದೆ ಮೆಯ್ – [ನಾ] ಏಕಾಕಿ (ಅತ್ತ ವಿಜಯಕಟಕಜನಂ ಅಂಬುಧಿತಟದೊಳಿರ್ದ ಅರಸನೊಂದೆ ಮೆಯ್ಯೊಳ್ ಪೋಗಿ ಬಾರದೆ ತಡೆದುದರ್ಕೆ ಕಟ್ಟುಕಡೆದು: **ಆದಿಪು,** ೧೨. ೧೨೪ ವ)

ಒಂದೆವಿಂದೆ – [ಗು] ಒಂದು ಗುಂಪಾಗಿ ಅಲ್ಲದೆ, ಬೇರೆ ಬೇರೆಯಾಗಿ (ಅತಿರಥ ಸಮರಥ ಮಹಾರಥ ಅರ್ಧರಥರ್ ಒಂದೆವಿಂದೆಯಲ್ಲದೆ ಒಂದೊರ್ವರೊಳ್ ಸಂಧಿಸಿ ಗೊಂದಣಿಸಿ ನಿಂದಾಗಳ್: **ಪಂಪಭಾ,** ೧೧. ೧೪೬ ವ)

ಒಂದೊಡಲ್ – [ನಾ] [ಒಂದು+ಒಡಲ್] ಒಂದೇ ದೇಹ, ಏಕಾಂಗಿ (ಉದಗ್ರ ಮೃಗರಾಜನುಮಂ ಮದವದ್ವಿರೋಧಿ ಭೇದನಕರಮಪ್ಪ ಶೌರ್ಯಮದಮದೆನ್ನುಮಂ ಒಂದೊಡಲ್ ಎಂಬ ಸಂಜಯಾ: **ಪಂಪಭಾ,** ೧೩. ೫೧)

ಒಂದೊರ್ವರ್ – [ನಾ] ಒಬ್ಬರೊಬ್ಬರು (ಒಂದೊರ್ವರಂ ಅಗಲ್ದಿಂ ಬಟಿಯಮಾದ ಸುಖದುಃಖಗಳಂ ಅನ್ಯೋನ್ಯನಿವೇದನಂ ಗೆಯ್ದು: **ಪಂಪಭಾ,** ೯. ೮ ವ)

ಒಂಬೈಸಾಸಿರ – [ನಾ] ಒಂಬತ್ತು ಸಾವಿರ (ನಾಲ್ಸಾಸಿರದೈನೂಱಯ್ವದಿಂಬರ್ ಶಿಕ್ಷಕರುಂ ಒಂಬೈಸಾಸಿರರವಧಿಜ್ಞಾನಿಗಳುಂ: **ಆದಿಪು,** ೧೬. ೪೦ ವ)

ಒಕ್ಕಲ್ – [ನಾ] ಮನೆತನ (ಮಲೆಪರ್ ಮಂಡಳಿಕರ್ ಕಱುಂಬರ್ ಅದಟರ್ ವೀರರ್ಕಳುಂ ತಮ್ಮ ಬಾೞ್ದಲೆಯಂ ಬೇಡಿದ ವಸ್ತುವಾಹನಮುಮಂ ಮುಂದಿಟ್ಟು ಮೂವಿಟ್ಟಿಯ ಒಕ್ಕಲವೋಲ್ ಇಂ ಬೆಸಕಯ್ಯೆ ಸಂತಮಿರುತುಂ: **ಪಂಪಭಾ,** ೯. ೧೦)

ಒಕ್ಕಲಿಕ್ಕು – [ಕ್ರಿ] ಒಕ್ಕಣೆ ಮಾಡು, ಬಡಿ (ಅಂತು ತನ್ನ ಬಲಮೆಲ್ಲಮಂ ಜವನಂತೆ ಒಕ್ಕಲಿಕ್ಕಿ ಕೊಲ್ವ ಕಳಶಕೇತನನಂ: **ಪಂಪಭಾ,** ೧೨. ೨೧ ವ)

ಒಕ್ಕಲಿಗ – [ನಾ] ಬೇಸಾಯ ಮಾಡುವವನು (ಮಲೆ ತಲೆದೋಱದೆಂದುದನೆ ಕೊಟ್ಟುದು ಡಂಗಮಡಂಗಿ ಬಂದುದು ಒಕ್ಕಲಿಗವೆಸರ್ಗೆ ಪೂಣ್ದುದು: **ಪಂಪಭಾ,** ೨. ೯೦)

ಒಕ್ಕು – [ಕ್ರಿ] [√ಉಗು] ಪೈರಿನಿಂದ ಕಾಳನ್ನು ಬೇರ್ಪಡಿಸು (ಸ್ತಂಬಕರ್ಯಾದಿ ನಾನಾವಿಧ ಧಾನ್ಯಂಗಳಂ ಪದನಱಿದುಡುಗುವ ಕಣಂ ಮಾಡುವ ಒಕ್ಕುವ ಅಡುಕುವ ಬಯ್ತಿಡುವ ಅಕ್ಕಿ ಮಾಡುವ ವಿವಿಧ ಭಾಜನಂಗಳೊಳ್ ಅಡುವ: **ಆದಿಪು,** ೬. ೭೭ ವ); [ಕ್ರಿ] ಹೊರಕ್ಕೆ ಸುರಿ (ತಿಸುಳದೊಳ್ ಉಚ್ಚಳಿಪ್ಪ ಪೊಸನೆತ್ತರೆ ಕೆಂದಳಿರಾಗೆ ಕಣ್ಗೆ ಅಗುರ್ವಿಸುವಿನಂ ಒಕ್ಕು ನೇಲ್ವ ಕರುಳೋಳಿಯೆ ಬಾಳಮೃಣಾಳಮಾಗೆ: **ಪಂಪಭಾ,** ೧. ೬); [ಕ್ರಿ] ತೊರೆ, ಅವಗಣಿಸು (ಭಯಮುಂ ಲೋಭಮುಂ ಎಂಬ ತಮ್ಮುತೆರಡುಂ ಪಾಪಕ್ಕೆ ಪಕ್ಕಾಗೆ ಪಾಟಿಯನೊಕ್ಕು ಆಳ್ದನ ಗೆಯ್ದ ಸತ್ಕೃತಮುಂ ಪಿಂತಿಕ್ಕಿ: **ಪಂಪಭಾ,** ೯. ೮೪)

ಒಗಸುಗ – [ನಾ] ಅಸಾಧಾರಣ (ಮೆಲ್ಪಿನ ತೊದಳ್ನುಡಿಗಪ್ಪೊಡಮೆಯ್ದೆವಾರವು ಏಂ ಒಗಸುಗಂ ಎಂದು ತಳ್ತಗಲನಾಕೆಯಂ ಲಲಿತಾಂಗವಲ್ಲಭಂ: **ಆದಿಪು,** ೨. ೭೫); [ನಾ] ಅತಿಶಯ (ಅಗಲುರಮಂ ಎನಗೆ ಪಡೆದ ಅಜನ ಒಗಸುಗಂ ಅಲ್ತು ಎಲಗೆ ನಿನ್ನನೆನಗೆಯೆ ಪಡೆದಂ: **ಪಂಪಭಾ,** ೮. ೬೭)

ಒಗೆ – [ಕ್ರಿ] ಹುಟ್ಟು, ಕಾಣಿಸಿಕೊ (ಕಮಲೋದ್ಭವನ ಅಮಳಿನ ಹೃತ್ಕಮಲದೊಳ್ ಒಗೆದರ್ ಸುರೇಂದ್ರಧರಕರ್ ಆ ವಾಗಮಳರ್ ನೆಗೞ್ದಿರ್ದರ್ ಪುಲಹ ಮರೀಚಿ ಅತ್ರಿ ಅಂಗಿರಸ ಪುಳಸ್ತ್ಯ ಕ್ರತುಗಳ್: **ಪಂಪಭಾ,** ೧. ೬೦); [ಕ್ರಿ] ಉಂಟಾಗು (ಅಂತೊಗೆದ ಅನೇಕ ಉತ್ಪಾತಂಗಳಂ ಕಂಡು ಚದುರವಿದುರಂ ಇಂತೆಂದಂ: **ಪಂಪಭಾ,** ೧. ೧೩೨ ವ); [ಕ್ರಿ] ಚಿಮ್ಮು (ಬಿಗಿದೊಗೆದ ನಿನ್ನ ಮೊಲೆಗಳ ಮೃಗಮದದ ಪುಳಿಂಚುಗಳ್ ಪಗಿಲ್ತಿರಲ್ ಎಡೆಯಾದ ಅಗಲುರಮನೆನಗೆ ಪಡೆದಜನೊಗಸುಗಮಲ್ತೆಲಗೆ ನಿನ್ನನೆನಗೆಯೆ ಪಡೆದಂ: **ಪಂಪಭಾ,** ೮. ೬೭)

ಒಗೆತರ್ – [ಕ್ರಿ] ಹೊರಬಾ (ಒಡನುಣ್ಮಿ ಭೋಂಕನೊಗೆತರ್ಪ ಮಹೋರಗನೆಯ್ದೆ ಪಲ್ಗಳರ್ದೊಡೆ ಕಿಡಿವೀೞ್ ನೆತ್ತರೊೞಿರ್ದುರ್ಚುಗೆ ಕೊಂಡುದು ತತ್ತಪಸ್ವಿಯಂ: **ಆದಿಪು,** ೨. ೪೦); [ಕ್ರಿ] ಹುಟ್ಟಿ ಬರು (ಮುಂ ಬೇಡಿದ ವರಮಂ ಕುಡದೆ ಅಂಬುಜಮುಖಿ ಪುತ್ರನೆನ್ನ ದೊರೆಯಂ ನಿನಗಕ್ಕೆ ಎಂಬುದುಂ ಒದವಿದ ಗರ್ಭದೊಳಂಬುಜಮಿತ್ರನನೆ ಪೋಲ್ವ ಮಗನೊಗೆತಂದಂ: **ಪಂಪಭಾ,** ೧. ೯೪)

ಒಟ್ಟಜೆ – [ನಾ] ಅತಿಶಯ (ತನ್ನ ನಣ್ಪಂ ಒಟ್ಟಜೆಯಿಂ ತೋಱಿ ವಜ್ರಬಾಹುಮಹೀಪತಿಯಂ ಕರೆದುಂ: **ಆದಿಪು,** ೪. ೫೨ ವ); [ನಾ] ಅತಿಶಯತ್ವ (ಕಟ್ಬಾಯದೊಳ್ ಅಳವು ಅಳವಿನೊಳ್ ಒಟ್ಟಜೆ ಪುಟ್ಟಿದುದು ಪೋಲ್ವರಾರ್ ಬದ್ದೆಗನಂ: **ಪಂಪಭಾ,** ೧. ೨೪); [ನಾ] ಬಲಾತ್ಕಾರ (ಕೂರದರ್ ನೆಲನಂ ಒಟ್ಟಜೆಯಿಂ ಕೊಳೆ ಕೊಟ್ಟು ಮುಟ್ಟುಗೆಟ್ಟು ಇನ್ನುಂ ಅರಣ್ಯದೊಳ್ ನಮೆದಪಂ ಯಮನಂದನನಂ: **ಪಂಪಭಾ,** ೭. ೫೫); [ನಾ] ಪರಾಕ್ರಮ (ವಿಜಿಗೀಷುತ್ವದೊಳ್ .. .. ರಣದೊಳ್ ಭೂಭಾಗಮಂ ನೆಟ್ಟನೆ ಒಟ್ಟಜೆಯಿಂದ ಅಂಜಿಸಿ ಕೊಳ್ಳದಿರ್ಪರೆ: **ಪಂಪಭಾ,** ೯. ೪೭); [ನಾ] ಪುಂಜ (ಎತ್ತಿಕೊಂಡ ಶ್ರುತಿಯಂ ಪಲ್ಲಟಿಸದೆಯುಂ ಮತ್ತಂ ಪರಿಚ್ಛೇದಂಗಳಂ ಅಱಿದುಂ ಒಟ್ಟಜೆಯ ರಾಜಿಯಿಂ ಕಣ್ಗಳಿಂಚರದೊಳಂ ಪೊಂಪುೞಿವೋಗೆ: **ಪಂಪಭಾ,** ೧೪. ೩೦ ವ)

ಒಟ್ಟಲ್ – [ಕ್ರಿ] ರಾಶಿಹಾಕು (ವಿಸಸನದೊಳ್ ವಿರೋಧಿನೃಪರಂ ತಱಿದೊಟ್ಟಲುಂ ಅರ್ಥಿಗರ್ಥಮಂ ಕಸವಿನ ಲೆಕ್ಕಮೆಂದು ಕುಡಲುಂ: **ಪಂಪಭಾ,** ೧. ೧೧೭)

ಒಟ್ಟು – [ಕ್ರಿ] ರಾಶಿಮಾಡು (ನೆರೆದ ವಿರೋಧಿನಾಯಕರಂ ಆಹವದೊಳ್ ತಱಿದು ಒಟ್ಟಲ್: **ಪಂಪಭಾ,** ೧೧. ೫೧)

ಒಟ್ಟೆ – [ನಾ] [ಉಷ್ಟ್ರ] ಒಂಟೆ (ಪಡೆವಳ್ಳಂ ಗಡಂ ಆ ಬಲಕ್ಕೆ ದಲೆ ಧೃಷ್ಟದ್ಯುಮ್ನನೆಂಬ ಒಳ್ಳೆ ಆ ಪಡೆಯೊಳ್ ಗಂಡನುಂ ಆ ಮೊಲಂ ದ್ರುಪದನುಂ ಪೇರೊಟ್ಟೆ ಆ ಮತ್ಸ್ಯನುಂ ಗಡಂ: **ಪಂಪಭಾ,** ೧೦. ೪)

ಒಟ್ಟೈಸು – [ಕ್ರಿ] ಆಕ್ರಮಿಸು (ಜರೆ ಬಂದು ಒಟ್ಟೈಸೆ ಮಾಣ್ದಿರ್ದಳಿಪೆನಗಿದೆ ಮುಂ ಸಾಲದೇ: **ಆದಿಪು,** ೨. ೪೯); [ಕ್ರಿ] ದಟ್ಟವಾಗು (ಬರ್ದುಂಕಿದ ಮದನನಲರಂಬೆಂಬಿನಂ ಇಂಬಾಗಿರೆ ನೆಲೆವೊಟ್ಟುಂ ನೆಲೆವೊಟ್ಟಿನೊಳ್ ಒಟ್ಟೈಸಿದ ಪಳಂಚಲೆವ ಕುರುಳೋಳಿಯುಂ: **ಆದಿಪು,** ೪. ೪೧ ವ)

ಒಡಂಗೊಳ್ – [ಕ್ರಿ] ಜೊತೆಯಲ್ಲಿ ಸೇರಿಸಿಕೊ (ಪೃಥಾತನೂಜರಂ ನಿನ್ನ ಬಲ್ಲ ಮಾಟಕ್ಕಿಯಿಂ ನುಡಿದು ಒಡಂಗೊಂಡು ಬರ್ಪುದು: **ಪಂಪಭಾ,** ೪. ೩ ವ)

ಒಡಂಬಡಂ – [ಕ್ರಿ] ಹೊಂದಿಕೊ (ವ್ಯೂಹದೊಳ್ ನಿಟ್ಟೆವಟ್ಟು ಮಣಿಮಯ ಮಂಡನಾಯೋಗದೊಳೊಡಂಬಟ್ಟ ಪಿಡಿಗಳುಮಂ: **ಆದಿಪು,** ೪. ೫೪ ವ); [ನಾ] ಒಪ್ಪಿಗೆ (ತದ್ವೃತ್ತಾಂತರಮೆಲ್ಲಮಂ ಅಱಿಪಿ ಹಿಡಿಂಬೆ ಡಂಬಮಿಲ್ಲದೆ ಭೀಮಸೇನಂಗೆ ಒಡಂಬಡಂ ನುಡಿಯೆ: **ಪಂಪಭಾ,** ೩. ೧೮ ವ)

ಒಡಂಬಡಂ ನುಡಿ – [ಕ್ರಿ] ಒಪ್ಪುವಂತೆ ಹೇಳು (ತದ್ವೃತ್ತಾಂತಮೆಲ್ಲಮಂ ಅಱಿಪಿ ಹಿಡಿಂಬೆ ಡಂಬವಿಲ್ಲದೆ ಭೀಮಸೇನಂಗೆ ಒಡಂಬಡಂ ನುಡಿಯೆ: **ಪಂಪಭಾ,** ೩. ೧೮ ವ)

ಒಡಂಬಡಂ ಪಡೆ – [ಕ್ರಿ] ಜೋಡಿಸಲ್ಪಡು (ಮಿಱುಮಿಱುಗುವ ತಲೆದುಡುಗೆಯುಂ ತಲೆದುಡುಗೆಯೊಳ್ ಒಡಂಬಡಂ ಪಡೆದು ಮಿಳಿರ್ದು ಪೊಳೆವ ಪೊಂದಳಿರುಂ: **ಆದಿಪು,** ೪. ೪೧ ವ)

ಒಡಂಬಡಂಬಡೆ – [ಕ್ರಿ] ಹೊಂದಿಕೆಯಾಗು, ಸೇರಿಕೊ (ವರ್ಣಕಂ ಕತೆಯೊಳ್ ಒಡಂಬಡಂಬಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಂ; **ಪಂಪಭಾ,** ೧. ೧೧)

ಒಡಂಬಡನೊಳಕೊಳ್ – [ಕ್ರಿ] ಒಪ್ಪಿಗೆಯನ್ನು ಪಡೆ (ಉಡಮೊಗಮೆಂಬ ತಾವರೆಯ ನೀಳ್ದೆಸಳೊಳ್ ಮಱಿದುಂಬಿ ಪಾಯ್ದು ಒಡಂಬಡನೊಳಕೊಂಡು ಕಣ್ಮಲರ ಬೆಳ್ಪುಗಳ್ ಆಲಿಯ ಕರ್ಪಿನೊಳ್ ಪೊದಳ್ದು: **ಪಂಪಭಾ,** ೫. ೭೮)

ಒಡಂಬಡಿಸು – [ಕ್ರಿ] ಅಳವಡಿಸಿಕೊ (ಈ ಮನುಜರ್ ಅಖಿಳಕರಣಗ್ರಾಮಮಂ ಒಂದೊಡಲೊಳ್ ಎಂತು ಒಡಂಬಡಿಸಿದರೋ: **ಆದಿಪು,** ೪. ೭೨); [ಕ್ರಿ] ಸೇರಿಸು, ಕೂಡಿಸು (ಬೆಳಗುವ ಕೈದೀವಿಗೆಗಳ ಬೆಳಗುಂ ತರತರದಿನೊಗೆವ ತಾರಗೆಗಳ ಗೊಂದಳಮುಂ ಇಳಾತಳದ ವಿಯತ್ತಳದ ವಿಳಾಸಮನದೇನೊಡಂಬಡಿಸಿದುದೋ: **ಆದಿಪು,** ೧೨. ೩); [ಕ್ರಿ] ಒಪ್ಪಿಸು (ಅಂತು ಅಚಲಿತಪ್ರತಿಜ್ಞಾರೂಢನಾದ ಗಾಂಗೇಯನಂ ಏಗೆಯ್ದುಮೊಡಂಬಡಿಸಲಾಱದೆ: **ಪಂಪಭಾ,** ೧. ೮೪ ವ); [ಕ್ರಿ] ಪಾಲಿಸು, ಅನುಸರಿಸು (ಮೆಯ್ಯೊಳ್ ಅಟ್ಟು ಇಡಿದ ವಿಕರ್ಣಕೋಟಿಯೊಳ್ ಅಣಂ ನೆಲಮುಟ್ಟದೆ ನೋಡೆ ಬಿಟ್ಟು ಒಡಂಬಡಿಸಿದಂ ಅಯ್ಯ ಶೌಚಗುಣದುನ್ನತಿಯಂ ಸುರಸಿಂಧುನಂದನಂ: **ಪಂಪಭಾ,** ೧೧. ೪೭)

ಒಡಂಬಡು – [ಕ್ರಿ] ಅನುಗುಣವಾಗು (ಆಕೆಯ ಬಗೆದ ಬಗೆಯೊಳೊಡಂಬಡುವಂತೆ ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ: **ಪಂಪಭಾ,** ೧. ೧೩೯ ವ); [ಕ್ರಿ] ಒಪ್ಪು (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱಿ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ: **ಪಂಪಭಾ,** ೫. ೩೬); [ನಾ] ಶೋಭೆ (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ: **ಪಂಪಭಾ,** ೧೦. ೭೭); [ಕ್ರಿ] ಒಪ್ಪಿಕೊ, ಅನುಸರಿಸು (ಮಹಾಜಿಯಲ್ಲಿ ಮಾವಂ ತಾನೇನೆಂಬಂ ಅದಂ ಅಂತೆ ಮೀಱದೆ ಒಡಂಬಡು ನೀಂ ಎಂದು ಭೂಭುಜಂ ಪ್ರಾರ್ಥಿಸಿದಂ: **ಪಂಪಭಾ,** ೧೨. ೧೦೨); [ನಾ] ಒಪ್ಪಿಗೆ, ಹೊಂದಾಣಿಕೆ (ಒರ್ವರೊರ್ವರೊಳ್ ಮೂಗುದುಱಿಸಲಾಗದ ಕಡ್ಡಂ ಅವರ್ಗೆಂತುಂ ಒಡಂಬಡಾಗದು: **ಪಂಪಭಾ,** ೧೨. ೧೦೩ ವ); [ಕ್ರಿ] ಜೊತೆಗೂಡು, ಒಂದಾಗಿ ಸೇರು (ಇರ್ದಾಗಳ್ ಒಳ್ಪಿನ ಪೆರ್ಮಾತಿನ ನನ್ನಿ ಬನ್ನದೊಳ್ ಒಡಂಬಟ್ಟಿರ್ಪುದಂ ಮಾಣ್ಪೆನೇ: **ಪಂಪಭಾ,** ೧೨. ೧೯೬)

ಒಡಗಳೆ – [ಕ್ರಿ] ಜೊತೆಯಲ್ಲಿ [ಪ್ರಾಣ] ಬಿಡು (ತೋಳಂ ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮಂ ಅಂದು ಒಡಗಳೆದರ್: **ಆದಿಪು,** ೫. ೨೪)

ಒಡಗಾಣ್ – [ಕ್ರಿ] ಜೊತೆಜೊತೆಗೆ ಕಾಣು (ಪಸರಿಸಿದ ತಾರಹಾರದ ಪೊಸವೆಳ್ದಿಂಗಳುಮಂ ಅಮರ್ದ ಪೆರ್ದುಡುಗೆಗಳೊಳ್ ಮಿಸುಗುವ ಪೊಸಮಾಣಿಕದ ಎಳವಿಸಿಲುಮಂ ಒಡಗಾಣಲಾದುದು ಅರಿಗನ ಸಭೆಯೊಳ್: **ಪಂಪಭಾ,** ೧೪. ೨೬)

ಒಡಗೂಡು – [ಕ್ರಿ] ಜೊತೆಗೂಡಿಸು, ಸೇರಿಸು (ಸಮಸ್ತ ಭೂಪಟಲಮನಾಂ ತೊಟಲ್ದು ಅಱಸಿ ನಿನ್ನನೊಡಗೂಡಿ ನಿಜೇಶನಂ ಯಶಃಪಟಹನಿನಾದಮಂ ಪರಪುವೆಂ ದೆಸೆಯಂತುವರಂ: **ಆದಿಪು,** ೩. ೪೫); [ಕ್ರಿ] ಜೊತೆಗೆ ಸೇರು (ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಡಿಯಲ್ ಒಡಗೂಡೆ ಗಂಗೆಯ ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ: **ಪಂಪಭಾ,** ೧. ೯೨); [ಕ್ರಿ] ಸಂಭೋಗಿಸು (ಸನ್ನತದಿಂ ರತಕ್ಕೆಳಸಿ ನಲ್ಲಳೊಳೋತು ಒಡಗೂಡಿದೆನ್ನನಿಂತು ಅನ್ನೆಯಂ ಎಚ್ಚುದರ್ಕೆ ಪೆಱತಿಲ್ಲದು ದಂಡಂ: **ಪಂಪಭಾ,** ೧. ೧೧೨); [ಕ್ರಿ] ಐಕ್ಯವಾಗು (ಕರ್ಣನೊಡಲಿಂದಾಗಳ್ ನಡೆ ನೋಡೆ ನೋಡೆ ದಿನಪನೊಳಗೂಡಿದುದು ಒಂದು ಮೂರ್ತಿ ತೇಜೋರೂಪಂ: **ಪಂಪಭಾ,** ೧೨. ೨೧೫)

ಒಡನಾಡಿ – [ನಾ] ಜೊತೆಗಾರ (ತನ್ನ ಒಡನಾಡಿಯಪ್ಪ ಕೆಳೆಯಂ ದ್ರುಪದಂ ಛತ್ರಾವತಿಯೊಳ್ ಅರಸುಗೆಯ್ದಪನೆಂದು ಕೇಳ್ದು ಆ ಪೊೞಲ್ಗೆ ವಂದು: **ಪಂಪಭಾ,** ೨. ೪೬ ವ)

ಒಡನಾಡಿಗ – [ನಾ] ಒಡನಾಡಿ (ಒಡನಾಡಿಯುಂ ಒಡನೋದಿಯುಂ ಒಡವಳೆದುಂ ಗುಳ್ಳೆಗೊಟ್ಟಿ ಬಟ್ಟು ಉಳಿಸೆಂಡುಂ ಪೊಡೆಸೆಂಡು ಇವಂ ಆಡುತ್ತ ಒಡವಳೆದರ್ ತಮ್ಮೊಳ್ಳೆಳಸೆ ತಂತಂಗೆಡೆಗಳ್: **ಪಂಪಭಾ,** ೨. ೩೦)

ಒಡನಾಡು – [ಕ್ರಿ] ಜೊತೆಯಲ್ಲಿ ಆಡು, ಸ್ನೇಹಮಾಡು (ಒಡನಾಡಿಯುಂ ಒಡನೋದಿಯುಂ ಒಡವೆಳದುಂ: **ಪಂಪಭಾ,** ೨. ೩೦)

ಒಡನೀಗು – [ಕ್ರಿ] ಜೊತೆಯಲ್ಲಿ ಕಳೆ (ಅೞಲ್ ನಿನತಲ್ತು ಕೇಳ್ ಎನತು ತಂದೆಯ ಶೋಕಮಂ ಇರ್ವರ್ಮುಂ ಮುನಿವರಂ ತವೆ ಕೊಂದು ಒಡನೀಗುವಂ: **ಪಂಪಭಾ,** ೧೨. ೩೬)

ಒಡನುಣ್ಣು – [ಕ್ರಿ] ಜೊತೆಗೆ ಊಟಮಾಡು, ಸ್ನೇಹದಿಂದಿರು (ಪಾಟಿಸುವೆಂ ಒಯ್ಯನೆ ಮುಳ್ಳೊಳೆ ಮುಳ್ಳಂ ಎಂದು ತಾನೀ ನಯದಿಂದೆ ಪೆರ್ಚಿ ಪೊರೆದು ಅಟ್ಟಱಿಸೊಳ್ ಅಂದು ಒಡನುಂಡನಲ್ಲನೇ: **ಪಂಪಭಾ,** ೯. ೬೭)

ಒಡನೆ ವರ್ – [ಕ್ರಿ] ಜೊತೆಯಲ್ಲಿ ಬಾ (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ,** ೧. ೧೧೫ ವ)

ಒಡನೊಡನೆ – [ಅ] ಜೊತೆಜೊತೆಯಾಗಿ (ಗೆಡೆವಚ್ಚಿರ್ವರ್ ಮನಗೊಂಡು ಒಡನೊಡನೆ ಓರಂತು ತಗುಳ್ದು ಝೇಂಕರಿಸಿದೊಡೆ ಎಲ್ಲಡಗಾಗೆ ಮೋದಲೆಂದಿರ್ದ ಎಡೆಯೊಳ್ ಗುರು ತನ್ನ ಮಗನಂ ಎಡೆವುಗವೇಟ್ದಿಂ: **ಪಂಪಭಾ,** ೨. ೭೩)

ಒಡನೋಡುವಡು – [ಕ್ರಿ] ಜೊತೆಯಲ್ಲಿ ನೋಡಲ್ಪಟ್ಟ (ಕಣ್ಮಲರ ಬೆಳ್ಪುಗಳ್ ಆಲಿಯ ಕರ್ಪಿನೊಳ್ ಪೊದಳ್ದು ಒಡನೋಡುವಟ್ಟ ಎನಗೆ ಸಂತಸಮಂ ಮಱುಕಕ್ಕೆ ಮಾಣ್ದೊಡೆ: **ಪಂಪಭಾ,** ೪. ೭೮)

ಒಡನೋದಿ – [ನಾ] ಜೊತೆಯಲ್ಲಿ ವಿದ್ಯಾಭ್ಯಾಸ ಮಾಡುವವನು (ಒಡನಾಡಿಯುಂ ಒಡನೋದಿಯುಂ ಒಡವಳೆದುಂ ಗುಳ್ಳೆಗೊಟ್ಟಿ ಬಟ್ಟು ಉಳಿಸೆಂಡುಂ ಪೊಡೆಸೆಂಡು ಇವಂ ಆಡುತ್ತ ಒಡವಳೆದರ್ ತಮ್ಮೊಳ್ಳೆಳಸೆ ತಂತಂಗೆಡೆಗಳ್: **ಪಂಪಭಾ,** ೨. ೩೦)

ಒಡನೋದಿದಂ – [ನಾ] ಜೊತೆಗೆ ಓದಿದವನು, ಸಹಪಾಠಿ (ಎನ್ನೊಳೆ ಮುನ್ನೆ ಮಚ್ಚರಿಪನೇ ಒಡನೋದಿದಂ ಎಂಬ ಮೇಳದಿಂದ: **ಪಂಪಭಾ,** ೧೨. ೨೩)

ಒಡಮೆ – [ನಾ] ಧನ, ಒಡವೆ, ಆಸ್ತಿ (ನೀಮಿಂತು ಅಱಿಯುತ್ತುಂ ಪೆಱರೊಡಮೆಯಂ ಉಱಿ ಸೆಱಿವಿಡಿದಿರ್ಪಿರಿ ಇನ್ನರುಂ ಉರ್ವಿಯೊಳ್ ಒಳರೇ: **ಪಂಪಭಾ,** ೮. ೧೮)

ಒಡರಿಸು – [ಕ್ರಿ] ಉಂಟುಮಾಡು (ಜ್ಯೋತಿರ್ಲೋಕಂ ಇದೊಂದುಂಟೆಂಬ ವಿವೇಕಮಂ ಒಡರಿಸಿದುದು ಅಮರಸಮಿತಿಯ ಮನದೊಳ್: **ಆದಿಪು**, ೭. ೯೪); [ಕ್ರಿ] ಪ್ರಯತ್ನಿಸು (ಲವಣಾಂಭೋರಾಶಿ ತೂಳ್ದುಚ್ಚಳಿಸಲ್ ಒಡರಿಸಿತ್ತು ಈ ಧರಾಭಾಗಮಮಂ: **ಆದಿಪು**, ೧೨. ೮೮); [ಕ್ರಿ] ತೊಡಗು (ಅಂಭೋರುಹರಜಃಪಟಾವೃತವಾರಿಯಂ ಆ ನೃಪತಿ ಕುಡಿಯಲ್ ಒಡರಿಸಿದಾಗಳ್: **ಪಂಪಭಾ**, ೮. ೪೬); [ಕ್ರಿ] ನಿರ್ಧರಿಸು (ನಿನ್ನಂಬಿಕೆ ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯಲ್ಕೊಡರಿಸಿ ಬಂದಳ್ ಸುತರಂ: **ಪಂಪಭಾ**, ೯. ೭೮)

ಒಡರ್ಚು – [ಕ್ರಿ] ಆರಂಭಿಸು (ದರಹಸಿತಾನನಾಬ್ಜಂ ಆವುದು ನಿಮಗಾನಂದಂ ಅದು ಅಕ್ಕೆ ಎನೆ ನುತಸುರವೃಂದಂ ಸಂಗೀತಕ್ಕೊಡರ್ಚಲೆವೇಟ್ಟಿಂ: **ಆದಿಪು**, ೯. ೧೩); [ಕ್ರಿ] ತೊಡಗು (ವರ್ಣಕಂ ಕತೆಯೊಳಂಬಡಂ ಪಡೆಯೆ ಪೇಟಿಸ್ವೊಡೆ ಪಂಪನೆ ಪೇಟ್ಗುಮೆಂದು ಪಂಡಿತರೆ ತಗುಳ್ದು ಬಿಚ್ಚಳಿಸೆ ಪೇಟಲೊಡರ್ಚಿದೆನೀ ಪ್ರಬಂಧಮಂ: **ಪಂಪಭಾ,** ೧. ೧೧)

ಒಡಲ್ – [ನಾ] ಶರೀರ (ಪಡೆದರ್ ತಾಯುಂ ತಂದೆಯುಂ ಒಡಲಂ ಪ್ರಾಣಮುಮಂ ಅವು ಅವರವು ಕೆಯ್ಯೆಡೆಯಂ ಕುಡುವುದು ಅರಿದಾಯ್ತೆ: **ಪಂಪಭಾ**, ೯. ೮೧)

ಒಡಲಳವಿ – [ನಾ] ಒಡಲ ಅಳವಿ, ದೇಹದ ಅಳತೆ (ಕುಲಗಿರಿ ಕೆಡೆವಂತೆ ಅಯ್ಯಾಗ್ಗವುದು ನೆಲಂ ಒಡಲಳವಿಯಾಗೆ ಬಿಟ್ದಿರ್ದ ಘಟೋತ್ಕಚನ ಸಾವಿಂಗೆ ಕರಮುಟಿಲ್ದು: **ಪಂಪಭಾ**, ೧೨. ೧೫ ವ)

ಒಡಲುರಿ – [ನಾ] [ವಿರಹತಾಪದಿಂದ] ಮೈ ಸುಡು (ಅತ್ತ ಸುಭದ್ರೆಯುಂ ಒಡಲುರಿಯುತ್ತಿರೆ ಮರವಟ್ಟು ವಿಜಯನಿರ್ದತ್ತಲೆ ನೋಡುತ್ತಿರೆ: **ಪಂಪಭಾ**, ೪. ೫೪)

ಒಡವಡೆ – [ಕ್ರಿ] [ಒಡಂ ಪಡೆ] ಕೂಡಿಯೇ ಪಡೆ (ಪಡೆದೊಡೆ ಕಂಪಂ ಬಣ್ಣಬಡೆಯವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ ಪಡೆಯವು ಉಟಿದ ಅಲರ್ಗಳ್ ಎರಡುಮಂ ಒಡವಡೆದ ಈ ಚಂಪಕಕ್ಕೆ ಪೂಗಳ್ ದೊರೆಯೇ: **ಆದಿಪು**, ೧೧. ೧೧೮)

ಒಡವರ್ – [ಕ್ರಿ] ಜೊತೆಯಲ್ಲಿ ಬರು (ಒಡವಂದಂಕದ ಕೌರವರ್ ದ್ರುಪದನ ಅಂಬ ಏಟೆಂಗೆ ಮೆಯ್ಯೊಡ್ಡದೆ ಒಡ್ಡುತಿರೆ ಸೂಸೆ ಬೀಟ್ವಿ ತಲೆಗಳ್ ಸೂಟ್ಪಟ್ಟಂ: **ಪಂಪಭಾ**, ೨. ೬೨)

ಒಡವರಿ – [ಕ್ರಿ] ಜೊತೆಯಾಗಿ ಹರಿ (ನೆತ್ತರ ತೆರೆಗಳ್ ಸುಟಿಸುಟಿದು ಒಡಬರಿದುವು ಕಲ್ವಟಿಯೊಳ್ ಭೋರ್ಗರೆದುಪರಿವ ತೊಱೆಗಳ ತೆಱದಿಂ: **ಪಂಪಭಾ**, ೧೧. ೩೬)

ಒಡವಳೆ – [ಕ್ರಿ] ಜೊತೆಯಾಗಿ ಬೆಳೆ (ಒಡನಾಡಿಯುಂ ಒಡನೋದಿಯುಂ ಒಡವಳೆದುಂ ಗುಳ್ಳೆಗೊಟ್ಟಿ ಬಟ್ಟು ಉಳಿಸೆಂಡುಂ ಪೊಡೆಸೆಂಡು ಇವಂ ಆಡುತ್ತ ಒಡವಳೆದರ್ ತಮ್ಮೊಳೆಳಸೆ ತಂತಂಗೆಡೆಗಳ್: **ಪಂಪಭಾ**, ೨. ೩೦)

ಒಡವುಟ್ಟಿದಳ್ – [ನಾ] ಜೊತೆಗೆ ಹುಟ್ಟಿದವಳು (ಅಗಲ್ಕೆ ಮುಳಿಸೆಂಬೆರಡುಂ ಗಡ ಕಾಳಕೂಟಂ ಅಮರ್ದಿನ ಕಾಳಕೂಟದೊಡವುಟ್ಟಿದಳೆಂದೆಪನೆನ್ನ ನಲ್ಲಳಂ: **ಆದಿಪು**, ೧೨. ೨೭); ಸೋದರಿ (ಮದುವೆಯಂ ಮಾಡಲೆಂದು ಧೃತರಾಷ್ಟ್ರಂಗೆ ಗಾಂಧಾರರಾಜ ಸೌಬಲನ ಮಗಳಪ್ಪ ಗಾಂಧಾರಿಯಂ ಶಕುನಿಯೊಡವುಟ್ಟಿದಳಂ ತಂದುಕೊಟ್ಟು: **ಪಂಪಭಾ**, ೧, ೮೭, ವ)

ಒಡವುಟ್ಟು – [ಕ್ರಿ] ಜೊತೆಯಲ್ಲೇ ಹುಟ್ಟು (ಒಡವುಟ್ಟಿದ ಮಣಿಕುಂಡಲಂ ಒಡವುಟ್ಟಿದ ಸಹಜಕವಚಂ ಅಮರ್ದಿರೆ ತನ್ನೊಳ್ ತೊಡರ್ದಿರೆಯುಂ: **ಪಂಪಭಾ,** ೧. ೯೫)

ಒಡಸಾಯ್ – [ಕ್ರಿ] ಜೊತೆಯಲ್ಲಿ ಮರಣಹೊಂದು (ಆ ಪ್ರಾಣವಲ್ಲಭರ್ ಪ್ರಾಣಮಂ ಅಂದು ಒಡಗಳೆದರ್ ಓಪರ್ ಓಪರೊಳ್ ಒಡಸಾಯಲ್ ಪಡೆದರ್ ಇನ್ನವೇಂ ಸೈಪು ಒಳವೇ: **ಆದಿಪು,** ೫. ೨೪)

ಒಡೆ – [ಕ್ರಿ] ಭೇದಿಸಿಕೊಂಡು ಬಾ (ಕೆನ್ನೆಯಿಂದೆ ಒಡೆದು ಓರೊಂದೊಗೆತಂದುವಂದು ನರೆಗಳ್ ವಿದ್ಯಾಧರಾಧೀಶನಾ: **ಆದಿಪು**, ೧. ೭೯)

ಒಡ್ಡ – [ನಾ] ರಾಶಿ, ಸಮೂಹ (ವಿಳಾಸದ ಒಡ್ಡವಿನಿತುಂ ದಿವದಿಂದ ಒಡವಂದುವೆಂಬನಿತ್ತಾದುದು ರೂಪು ಜವ್ವನಮನೊತ್ತರಿಸುತ್ತಿರೆ ವಜ್ರಜಂಘನಾ: **ಆದಿಪು**, ೩. ೧೦); [ನಾ] ಜೂಜಿನ ಪಣದ್ರವ್ಯ (ನಾಟವಾಸಗೆಗಳಂ ಅರಸಾಳಂತೆ ಕಣ್ಣಱಿದು ಮೆಟ್ಟಿ ಮಟ್ಟಮಱಿದು ಇಕ್ಕುವಾಗಳ್ ಒಡ್ಡಮಂ ಪೇಟಿಮೆನೆ: **ಪಂಪಭಾ**, ೬. ೭೧ ವ)

ಒಡ್ಡಣ – [ನಾ] ಸೈನ್ಯ (ಶ್ವೇತನ ಗಂಗಾಜಾತನ ಮಾತನೆ ಪಾರ್ದು ಎರಡು ಒಡ್ಡಣಂ ಕಾದಲ್ಕೆಂದೀ ತೆಱದಿನೊಡ್ಡಿ ನಿಂದುವು: **ಪಂಪಭಾ**, ೧೦. ೫೩); [ನಾ] ಯುದ್ಧರಂಗ (ವಿರೋಧಿರುಧಿರಜಲನಿಧಿವೊಲ್ ಸಂಧ್ಯಾಸಮಯಮೆಸೆಯೆ ತಟತಟ ನೇಸಱ್ ಮೂಡುವುದುಂ ಒಡ್ಡಣಕೆಳ್ತಂದರ್: **ಪಂಪಭಾ**, ೧೧. ೬)

ಒಡ್ಡಯಿಸು – [ಕ್ರಿ] ಒಟ್ಟಾಗು, ಜೊತೆಯಲ್ಲಿ (ಅರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಂ ಮಗುಟ್ದುಂ ಬಿಱುತು ಓಡಿ ಬೇಡರೊಳ್ ನೆರೆದಿರಲ್ ಒಡ್ಡಯಿಸಿ ರಾಜ್ಯದೊಳೇಂ ನೆರೆಯಲ್ಕೆ ತೀರ್ಗುಮೋ: **ಪಂಪಭಾ**, ೮. ೮೫)

ಒಡ್ಡಟಿ – [ಕ್ರಿ] ಸತ್ವಗುಂದು (ನಿನಗಪ್ಪುದು ಈ ಅಟಿನುಡಿ ಬರ್ಕೆ ನಿನ್ನ ಪಿರಿಯಣ್ಣನೆ ಪಣ್ಣನೆ ನೋಟ್ಪಂ ಆತನ ಒಡ್ಡಟಿಯದ ಗಂಡವಾತಂ: **ಪಂಪಭಾ**, ೩. ೧೬); [ನಾ] ರಾಶಿರಾಶಿ (ಅನಿತು ಅಟ್ಕಟಿಂ ಇಟ್ಕುಳಿಗೊಂಡು ಅಲಂಪಿನತ್ತೆಱಗಿದ ನಲ್ಲಳೆರ್ದೆಯೊಳ್ ಒಡ್ಡಟಿಯದೆ ಒಡ್ಡಿಸೆ ಸೈರಿಸುವಂತುಟಾದುದೇ: **ಪಂಪಭಾ**, ೪. ೧೦೫)

ಒಡ್ಡಿಸು – [ಕ್ರಿ] ಮೀರಿಸು (ವನಧಿಧ್ವಾನಮನೊಡ್ಡಿಸುತ್ತಿರೆ ನದದ್ಗಂಭೀರಭೇರೀಬೃಹದ್ಧ್ವನಿ ನಾನಾವಿಧಮಂಗಳಾನಕರವಂ ಕೈಗಣ್ಮೆ: **ಆದಿಪು**, ೧೪. ೧೪೯); [ಕ್ರಿ] ಒಡ್ಡಯಿಸು, ಒಡ್ಡವಿಸು, ಒಡ್ಡುವಂತೆ ಮಾಡು (ಕಾಣಲುಂ ಕಾಣಿಸಲುಂ ಕಡಂಗಲುಂ ಕಡಂಗಿಸಲುಂ ಅಡಂಗಲುಂ ಅಡಂಗಿಸಲುಂ ಒಡ್ಡಲುಂ ಒಡ್ಡಿಸಲುಂ .. .. ಆನೆ ಬಲ್ಲೆಂ: **ಪಂಪಭಾ**, ೫. ೪೩ ವ); [ಕ್ರಿ] ಪ್ರತಿಭಟಿಸು, ಎದುರಿಸು (ಒಡ್ಡಿಸೆ ಕಾದಂ ಆಗಳ್ ಅರ್ಜಿಸೆ ತೆಗೆದೆಚ್ಚ ವೈಷ್ಣವಮಂ ಒಡ್ಡಿಸಿ ವೈಷ್ಣವದಿಂ ಮುರಾಂತಕಂ; **ಪಂಪಭಾ**, ೧೨. ೩೨); [ಕ್ರಿ] ಹೊಂಚು ಹಾಕು (ನಿನಗಪ್ಪಪಾಯಮಂ ನೆನೆದು ಮದೇಭರೂಪಮನೆ ತೋಱಿ ನಿಜಾಶ್ರಮದಿಂದಗಲ್ಚಿ ನಿನ್ನನುಜರಂ ಈ ಉಪಾಯದೊಳೆ ಕೀರ್ತಿಗೆಯೊಡ್ಡಿಸೆ ಕಾದೆನಾಂ: **ಪಂಪಭಾ**, ೮. ೪೮); [ಕ್ರಿ] ಒದಗಿಸು (ಬಿಸುಟಾ ಧರಾಧಿಪತಿಯಂ ನಾರಾಯಣಾದೇಶಂ ಒಡ್ಡಿಸೆ

ಪಾಂಡುಪ್ರಿಯಪುತ್ರರೊಳ್ ನೆರೆಯಲೆಂದಿಂತೀಗಳಾಂ ಪೋದಪೆಂ: **ಪಂಪಭಾ,** ೧೩. ೧೦೦)

ಒಡ್ಡಿಜೆ – [ಕ್ರಿ] ಮುತ್ತಿಕೊ (ನಿನ್ನ ಮೆಯ್ ದೊಂಬದಡ್ಡಿಸಕ್ಕೆ ಗುಜಿಯಪ್ಪುದು ಒಡ್ಡಿಜಿದು ತಿಂಬರ್ ಅನ್ಯರ್: **ಆದಿಪು,** ೩. ೬೦)

ಒಡ್ಡು – [ನಾ] ಗುಂಪು, ಸಮೂಹ (ಬಳೆದ ತಮೋಮದೇಭಘಟೆಯ ಒಡ್ಡೊಡೆವನ್ನೆಗಂ ಉನ್ನತೋದಯಾಚಳಗುಹೆಯಿಂ ಲಸತ್ಕಿರಣಕೇಸರಮಂ ಪರಪುತ್ತುಂ: **ಆದಿಪು,** ೧೨. ೫); [ಕ್ರಿ] ಮುಂಚಾಚು (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱೆದ ನಿತಂಬ ಇಂಬುವಡೆದ ಒಳ್ದೊಡೆ ನೆಕ್ಕರವದ್ದೆ ತಾನೆ ಪೋಕಿಱುದೊಡೆ ಎಂದು ಧಾತ್ರಿ ಪೊಗಟ್ಟುಂ ಪೊಗಟ್ವನ್ನರೆ ಕುಂತಿ ಮಾದ್ರಿಗಳ್: **ಪಂಪಭಾ,** ೧. ೧೦೮); [ಕ್ರಿ] ಇರಿಸು (ಛಾಯಾಲಕ್ಷ್ಯಮನೊಡ್ಡಿಯುಂ ಆಯದ ನೀರೊಳಗೆ ತನ್ನನಡಸಿದ ನೆಗಟಿಂ ಬಾಯಟಿವಿನಂ ಇಸಿಸಿಯುಂ: **ಪಂಪಭಾ,** ೨. ೬೦); [ಕ್ರಿ] ಪಣವಾಗಿ ಮುಂದಿಡು (ಪಲಗೆಗೆ ಪತ್ತು ಸಾಯಿರಮೆ ಗದ್ಯಣಂ ಎಂದಿರದೆ ಒಡ್ಡಿ ತಾಮ್ ಎರಟ್ವಿಲಗೆಯಂ ಆಡಿ ಸೋಲ್ತೊಡೆ: **ಪಂಪಭಾ,** ೬. ೭೨); [ಕ್ರಿ] ಸೈನ್ಯವನ್ನು ಯುದ್ಧಕ್ಕೆ ನಿಲ್ಲಿಸು (ಅದಿರದಿದಿರ್ಚಿ ತಳ್ತಿಱಿಯಲ್ ಈ ಮಲೆದೊಡ್ಡಿದ ಚಾತುರಂಗಬಲಮೆಂಬುದು ನಿನಗೊಡ್ಡಿ ನಿಂದುದು: **ಪಂಪಭಾ,** ೧೦. ೬೪); [ಕ್ರಿ] ಉಂಟಾಗು (ಅಳವು ಅಮರ್ದು ಒಡವುಟ್ಟಿತ್ತು ಪೂಣ್ದೀವ ಚಾಗಂ ಕರ್ಣಂಗೆ ಒಡ್ಡಿತ್ತು ದಲ್: **ಪಂಪಭಾ,** ೧೨. ೧೦೪); [ಕ್ರಿ] ಏರ್ಪಡು (ನಿನಗೆ ಎನ್ನೊಳಂ ಪಿರಿದು ಕಲುಷಂ ಕರ್ಣಂಗೊಡ್ಡಿತ್ತು ಭಾರತಂ: **ಪಂಪಭಾ,** ೧೨. ೧೭೩)

ಒಡ್ಡೋಲಗ – [ನಾ] [ವೃದ್ಧ>ವಡ್ಡ>ಒಡ್ಡ ಮತ್ತು ಅವಲೋಕನ>ಓಲಗ = ದೊಡ್ಡ ದರ್ಶನ ಎಂಬ ಮೂಲಾರ್ಥ] ರಾಜನ ಆಸ್ಥಾನ, ಸಭೆ (ಸುಯೋಧನನ ಒಡ್ಡೋಲಗಂ ಇಂದ್ರನ ಓಲಗಮುಮಂ ಕೀಟಿಮ್ಮಾಡಿ ಕಣ್ಗೊಪ್ಪುಗುಂ: **ಪಂಪಭಾ,** ೯. ೨೯)

ಒಡ್ಡೋಲಗಂಗುಡು – [ಕ್ರಿ] ರಾಜಸಭೆ ನಡೆಸು (ಸಿಂಹಾಸನಮಸ್ತಕ ಸ್ಥಿತನುಂ ವಿರಾಜಮಾನಧವಳಚ್ಛತ್ರಚಾಮರ ಸಹಸ್ರ ಸಂಛಾದಿತನುಂ ಆಗಿ ವಿಕ್ರಾಂತತುಂಗಂ ಒಡ್ಡೋಲಗಂಗೊಟ್ಟಿರೆ: **ಪಂಪಭಾ,** ೧೪. ೨೧ ವ)

ಒಣರ್ – [ಕ್ರಿ] ಗಮನಿಸು, ತಿಳಿ (ಸಂತತ ವ್ಯಸನೋದ್ರೇಕದ ಕುಂದಂ ಒಣರನೋ ಶಕ್ತಿಕ್ಷಯಂಗಾಣನೋ: **ಆದಿಪು,** ೨. ೪೫)

ಒಣರ್ಚು – [ಕ್ರಿ] ಸೇರಿಸು, ಒಂದುಗೂಡಿಸು (ದೋಣೆಗಳಿಂ ಉರ್ಚುವ ತಿರುವಾಯ್ ಒಣರ್ಚಿ ತೆಗೆನೆಱೆವ ಬೇಗಮಂ ಕಾಣದೆ: **ಪಂಪಭಾ,** ೧೨. ೧೮೪)

ಒತ್ತಂಬ – [ನಾ] ಒತ್ತರಿಸುವಿಕೆ, ಒತ್ತಡ (ಪುಳಕಪ್ರೋದ್ಭೇದ ಘರ್ಮೋದಕವಿಸರಮಂ ಒತ್ತಂಬದಿಂ ತಾಗೆಯುಂ: **ಆದಿಪು,** ೪. ೫೧); [ನಾ] ಒತ್ತಾಯ, ಬಲಾತ್ಕಾರ (ನುಡಿದುದಂ ಪಡಿಯಱಿಂ ಬಂದು ಆ ಮಾಟಕ್ಕೆಯೊಳ್ ಅಜಿಪೆ ದ್ರೋಣಂ ಒತ್ತಂಬದಿಂದೆ ಒಳಗಂ ಪೊಕ್ಕು ದ್ರುಪದನಂ ಕಂಡು: **ಪಂಪಭಾ,** ೨. ೪೭ ವ); [ನಾ] ಪ್ರಯತ್ನಪೂರ್ವಕವಾಗಿ (ಯೋಗಾಭ್ಯಾಸದೊಳ್ ಅರೆಮುಗುಳ್ದ ರಕ್ತಾಂಭೋಜದಳ ವಿಳಾಸ ಉಪಹಾಸಿಗಳಪ್ಪ ಕಣ್ಗಳಂ ಒತ್ತಂಬದಿಂ ತೆಱೆದು: **ಪಂಪಭಾ,** ೧೩. ೬೩ ವ)

ಒತ್ತರಂ – [ನಾ] ಒಂದೇ ಸಲ (ಆಗಳದಂ ಕಂಡು ಉತ್ತರಂ ಒತ್ತರಂ ಒತ್ತಿದಂತೆ ಬೆರ್ಚಿ ಬೆಗಡುಗೊಂಡು: **ಪಂಪಭಾ,** ೮. ೯೯ ವ)

ಒತ್ತರಿಸು – [ಕ್ರಿ] ಅನುಸರಿಸು (ರೂಪು ಜವ್ವನಮನೊತ್ತರಿಸುತ್ತಿರೆ ವಜ್ರಜಂಘನಾ: **ಆದಿಪು,** ೩. ೧೦); [ಕ್ರಿ] ಗಾಢವಾಗು (ಕತ್ತುರಿಯ ಕಂಪುಮಂ ಬೆಮರೊತ್ತರಿಸಿ ಪೊದಳ್ದ ಕಂಪನೀಯುತ್ತಿರೆ ವೃತ್ತೋತ್ತುಂಗಸ್ತನೆಯರ್ ಶ್ರಮಮುತ್ತುಂ ಅದೇಂ ಸುರಭಿಗಂಧಮಂ ಬೀಜೆದರೋ: **ಆದಿಪು,** ೧೧. ೭೩); [ಕ್ರಿ] ದಟ್ಟವಾಗು (ಕುಳಿರ್ವ ಆಲಿನೀರ್ಗಳಿಂ ತುರಿಪದೆ ಸೂಸುತುಂ ಕೆಳದಿಯರ್ ನದಿಪುತ್ತುಮಿರೆ ನೋಡೆ ದಾಹಂ ಒತ್ತರಿಸಿದುದು: **ಪಂಪಭಾ,** ೫. ೮); [ಕ್ರಿ] ಒಂದೆಡೆಗೆ ತಳ್ಳು (ಘೂರ್ಣಿತ ಅರ್ಣವಮಂ ಒತ್ತರಿಸಿತ್ತು ಚತುರ್ಬಲ ಆರ್ಣವಂ: **ಪಂಪಭಾ,** ೧೦. ೨೮)

ಒತ್ತಿ ಪುಗು – [ಕ್ರಿ] ಆಕ್ರಮಿಸು (ವಿಜಯಾದ್ರೀಂದ್ರಮನುರ್ಚಿ ಬರ್ಪ ಅಳವಿದೇಂ ಸಾಮಾನ್ಯಮೇ ದೇಶಮಂ ಭುಜವಿಕ್ರಾಂತದಿಂ ಒತ್ತಿ ಪೊಕ್ಕದಟಿದೇನಾಶ್ಚರ್ಯಮಲ್ತೇ: **ಆದಿಪು,** ೧೩. ೫೭)

ಒತ್ತು – [ನಾ] ಸಂಗಿತದ ಕಾಲ, ತಾಳ (ಒಂದೊತ್ತಂ ನಡೆಯಿಸುವುದು ಅದೊಂದೊತ್ತಿನ ಲಯಕೆ ಲಕ್ಕೆತೆಱನಾಡುವುದು: **ಆದಿಪು,** ೯. ೩೩); [ಕ್ರಿ] ಸೋಲಿಸು (ಧರಿತ್ರಿಯಂ ಜೀಯ ಎನೆ ಬೇಡಿ ಕೊಳ್ಳದೆ ವಿರೋಧಿನರೇಂದ್ರರಂ ಒತ್ತಿ ಕೊಂಡುಂ: **ಪಂಪಭಾ,** ೧. ೧); [ಕ್ರಿ] ಚುಚ್ಚು, ತಿವಿ, ನಾಟು (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏಟುತಿರೆ: **ಪಂಪಭಾ,** ೩. ೯); [ಕ್ರಿ] ಬಲವಾಗಿ ಅದುಮು (ಪಗೆವರ ಗಂಟಲನೊತ್ತುವಂತೆ ಪೌಂಡ್ರವೆಂಬ ಶಂಖಮನೊತ್ತಿ ಮುಂದೊಡ್ಡಿದೊಡ್ಡೆಲ್ಲಮಂ ಅಂಬಿನ ಬಂಬಲೊಳೆ ಪಡಲ್ವಡಿಸುತ್ತುಂ: **ಪಂಪಭಾ,** ೧೦. ೯೭ ವ); [ನಾ] ಅಮುಕುವಿಕೆ (ಉಸಿರೊತ್ತಿಂ ತಿದಿಯಂತಿರೆ ಒತ್ತಿದ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್ ಮಸಕಂಗುಂದಿದ ಮೆಯ್: **ಪಂಪಭಾ,** ೧೨. ೧೫೧)

ಒತ್ತುಗೊಳ್ – [ಕ್ರಿ] ಆಶ್ರಯಿಸು, ಮರೆಯಾಗು (ಕೆಲಬರ್ ಕಂಡೊಡೆ ಕರೆಗುಂ ಎಂದು ಕೆಲದ ಮರಂಗಳಂ ಒತ್ತುಗೊಂಡುಂ: **ಆದಿಪು,** ೯. ೯೨ ವ)

ಒತ್ತೆ – [ನಾ] ಜೂಜಿನ ಪಣದ್ರವ್ಯ (ರಪಣಮಂ ತೋಜೆಯುಂ ಒತ್ತೆಯಂ ಉಗ್ಗಡಿಸಿಯುಂ ಆಡಿಂ ಎನೆ ಪೆಱತೇನುಪಾಯಮಿಲ್ಲದೆ ಎಮ್ಮಾಳ್ವ ನೆಲಂ ಒತ್ತೆಯೆಂದೊಡೆ: **ಪಂಪಭಾ,** ೭. ೩ ವ)

ಒತ್ತೆಯಿಡು – [ಕ್ರಿ] ಅಡವಿಡು (ಸಮಂತಾವಗಂ ತಲೆಯಂ ಮೂಗುಮಂ ಒತ್ತೆಯಿಟ್ಟು ನೆರೆವಂತುಟೇನವರ್ ಗಾಂಪರೇ: **ಪಂಪಭಾ,** ೪. ೮೪)

ಒತ್ತೆವಿಡಿ – [ಕ್ರಿ] ಒತ್ತೆಯಾಗಿ ಸ್ವೀಕರಿಸು (ನಿನ್ನ ನನ್ನಿಯೊಳಂ ವರ್ಷಾವಧಿಯೊಳಲ್ಲದೆ ನೆಲನಂ ಒತ್ತೆವಿಡಿಯೆಂ ಎಂದೊಡೆ; **ಪಂಪಭಾ,** ೭. ೩ ವ)

ಒತ್ತೆವಿಡಿಸು – [ಕ್ರಿ] ಒತ್ತೆಯಿಂದ ಬಿಡಿಸು (ಸುಣ್ಣದೆಲೆಯಂ ಒತ್ತೆಯಿಟ್ಟು ಮದದಾನೆಯುಮಂ ಮಾಣಿಕಮುಮಂ ಒತ್ತೆವಿಡಿಸಲಟ್ಟುವ ಚಿಕ್ಕ ಪೋಖುಟಿ ಬೊಜಂಗರುಮಂ **ಪಂಪಭಾ**, ೪. ೮೭ ವ)

ಒತ್ತೆವೋಗು – [ಕ್ರಿ] ಜೂಜಿನ ಪಣವಾಗಿ ಕಳೆದುಹೋಗು (ದಾಯಿಗಂಗೆ ನೆಲಂ ಜೂದಿನೊಳ್ ಒತ್ತೆವೋಗೆ ಬನಮಂ ಪೊಕ್ಕಣ್ಣಂ ಎಂದೊಂದು ಮಾತಂ ಅಣಂ ಮೀಱದೆ: **ಪಂಪಭಾ**, ೮. ೫)

ಒದವಿದ ಗರ್ಭ – [ನಾ] ಉಂಟಾದ ಬಸಿರು (ಮುಂ ಬೇಡಿದ ವರಮಂ ಕುಡದೆ ಅಂಬುಜಮುಖಿ ಪುತ್ರನೆನ್ನ ದೊರೆಯಂ ನಿನಗಕ್ಕೆ ಎಂಬುದುಂ ಒದವಿದ ಗರ್ಭದೊಳಂಬುಜಮಿತ್ರನನೆ ಪೋಲ್ವ ಮಗನೊಗೆತಂದಂ: **ಪಂಪಭಾ,** ೧. ೯೪)

ಒದವಿಸು – [ಕ್ರಿ] (ಅರಲ್ದ ತಾವರೆಯೆಸಳ್ಗಳೊಳ್ ಪುದಿಸು ಪುದುಂಗೊಳಿಸಿದಂತಾನುಂ ಅನಂಗಾಮೃತ ವರ್ಷಮಂ ಒದವಿಸಿ: **ಪಂಪಭಾ**, ೪. ೪೧ ವ)

ಒದವು – [ನಾ] ಸಮೃದ್ಧಿ (ಕೊಳಗಳ ಮರಗಳ ಲತೆಗಳ ಫಳಪ್ರಸೂನಂಗಳ ಒದವಿನೊಳ್ ಪಕ್ಷಿಗಣಂಗಳ ಪುದುವಿನೊಳ್ ಆಱುಂ ಋತುಗಳ ಚೆಲ್ವಂ ಕಾಣಲಾದುದು ನಂದನದೊಳ್: **ಆದಿಪು**, ೧೧. ೮೪); [ಕ್ರಿ] ಉಂಟಾಗು (ಅರಗಿನ ಮನೆಯೊಳ್ ಪಾಂಡವರ್ ಉರಿದು ಅಟ್ಟೆದರ್ ಅಕ್ಕಟ ಅಯ್ಯೊ ದುರ್ಯೋಧನನೆಂಬ ಎರಲೆಯಿಂ ಎಂದು ಅಟುತುಂ ತತ್ಪುರಜನಂ ಅಟಲ್ ಒದವೆ ಪರಿದು ನೋಡಿತ್ತಾಗಳ್: **ಪಂಪಭಾ**, ೩. ೮); [ನಾ] ಉಕ್ಕುವಿಕೆ (ಮದೀಯ ಮನೋಗತ ಕಾಮಸಾಗರದ ಒದವಿಂಗೆ ನಲ್ಲಳ ವಿಲೋಚನ ಚಂದ್ರಿಕೆಯೊಂದೆ ಸಾಲದೇ: **ಪಂಪಭಾ**, ೫. ೧೧); [ಕ್ರಿ] ಸಮೃದ್ಧಿಯಾಗು (ಒದವಿದ ಅಲಂಪು ಕಣ್ಣೆವೆ ಕರುಳ್ ತನಗೆಂಬುದನುಂಟುಮಾಡೆ: **ಪಂಪಭಾ**, ೧೨. ೨೧೯); [ನಾ] ಸಾಮರ್ಥ್ಯ (ಅದಱಿಂ ನಿಶ್ಶಲ್ಯಮಪ್ಪಂತು ನಿನ್ನ ಒದವಿಂ ಮಾಟ್ಟುದು ಅಗಾಧಸಾಗರಪರೀತ ಅಶೇಷಭೂಭಾಗಮಂ: **ಪಂಪಭಾ**, ೧೩. ೩೧)

ಒದವುಗೆ – [ಅ] ಉಂಟಾಗಲಿ (ಒದವುಗೆ ನಿನ್ನ ಸಂತತಿಗೆ ನೂರ್ವರ್ ಉದಗ್ರ ಸುತರ್ಕಳ್ ಒಂದೆ ಗರ್ಭದೊಳ್ ಎನೆ ಕೆಮ್ಮನಿಂತು ಪೊಸೆದಿಕ್ಕಿದೆ ಪೊಲ್ಲದುಗೆಯ್ದ: **ಪಂಪಭಾ**, ೧, ೧೩೧)

ಒದವೇಱು – [ಕ್ರಿ] [ಒದ+ಪೇಱು] ಬಹಳವಾಗಿ ತುಂಬಿಕೊ (ಪಸರಿಸಿ ದುಗ್ಧಾಬ್ಧಿಜಳಪ್ರಸರಂನೊದವೇಱೆ ಬಂದು ಕಱಿವುವು ಮೇಘಪ್ರಸರಂಗಳ್: **ಆದಿಪು**, ೧. ೫೯) [ಎಲ್. ಬಸವರಾಜು ಅವರು ಸ್ವೀಕರಿಸಿರುವ ಪಾಠ]

ಒದ್ದೆ – [ನಾ] ನೆನೆದಿರುವುದು, ಮಳೆ (ದೇವದುಂದುಭಿ ರವದೊಂದುದ್ದಾನಿ ನೆಗಟಿ ಮುಗುಳಲರೊದ್ದೆ ಕರಂ ಸಿದ್ಧಮಾದುದು ಅಂಬರತಲದೊಳ್: **ಪಂಪಭಾ,** ೧೨. ೨೧೮) ['ಒದ್ದೆ'ಗೆ ಡಿಎಲ್‌ಎನ್ **'ರಾಶಿ'** ಎಂಬ ಅರ್ಥ ಕೊಡುತ್ತಾರೆ – **'ದೀಪಿಕೆ'** – ಪು. ೫೦೭]

ಒನಲ್ – [ಕ್ರಿ] ಕ್ರೋಧಗೊಳ್ಳು (ಬಿರಿಯಿಸೆ ಬೇಟದೊಳ್ ಬಿರಿದ ನಲ್ಲರಗಲ್ದು ಕನಲ್ದು ಒನಲ್ದು ನಲ್ಲರ ದೆಸೆಯಿಂದಂ ಅಟ್ತೆವರೆ: **ಆದಿಪು**, ೩, ೮೬)

ಒನಲಿಸಿತಿಲ್ಲಾ – ಕೆರಳಿಸಲಿಲ್ಲವೇ? (ಆವಡವಿಗಳೊಳ್ ಪಣ್ವಲಂ ಆವಗಂ ಒಳವು ಅಲ್ಲಿಗಱಿಸಿ ಪರಿಪರಿದು ಕರಂ ತಾವಡಿಗೊಳ್ವ ಈ ಭೀಮನ ಬೇವಸಮಿದು ನಿನ್ನ ಮನಮಂ ಒನಲಿಸಿತಿಲ್ಲಾ: **ಪಂಪಭಾ**, ೭. ೪೬)

ಒಪ್ಪಂ – [ನಾ] ಒಪ್ಪಿಗೆ (ನಿನಗೆ ಅಹಿತರ್ ಎಯ್ದೆ ತಪ್ಪಿರ್ದರ್ ಅವರ್ ತಪ್ಪಿದ ಬಟಿಕ್ಕೆ ತಪ್ಪಿದ ತಪ್ಪೇಂ ಗಳ ನನ್ನಿಗೊಪ್ಪಮಲ್ಲದೆ ತಪ್ಪೇ: **ಪಂಪಭಾ**, ೭. ೫೨)

ಒಪ್ಪಿಸು – [ಕ್ರಿ] [ಮರಳಿ] ವಶಕ್ಕೆ ಕೊಟ್ಟುಬಿಡು (ಮಗನ ಕರೆದು ಒಪ್ಪಿಸವೇಟ ಯುಧಿಷ್ಠಿರಂಗೆ ಮುನ್ ಗೆಲ್ದ ವಸ್ತುವಾಹನಚಯಮಂ: **ಪಂಪಭಾ**, ೬. ೭೬)

ಒಪ್ಪು – [ಕ್ರಿ] ಅಂದವಾಗು (ಕಳಹಂಸನಾದರಮಣೀಯತರಂ ಮದದಂತಿದಾನಗಂಧೋತ್ಕಟಂ ಒಪ್ಪುಗುಂ .. .. ಆ ವಿಜಯಾರ್ಧಪರ್ವತಂ: **ಆದಿಪು**, ೧. ೬೩)

ಒಪ್ಪುಗೊಳ್ – [ಕ್ರಿ] ವಹಿಸಿಕೊ (ತನುವನಿನ್ನೊಪ್ಪುಗೊಳ್ ಮುನ್ನಮಿನ್ನುಂ ಕರಣೀಯಂ ನಿನ್ನ ವಾಕ್ಯಂ ನಿಜಮತಮೆ ಮತಂ: **ಆದಿಪು**, ೨. ೪೯); [ಕ್ರಿ] ಒಪ್ಪಿಸಿಕೊ (ಒಪ್ಪುಗೊಳ್ಗೆ ತನ್ನಳಿಯನಂ ಎಯ್ದೆ ಪಾಲಿಸುಗೆ ಬಂದಿದಂ ಈಗಳ್ ಅನಾಥಯೂಥಮಂ: **ಆದಿಪು**, ೪. ೮೪)

ಒಯ್ಯನೆ – [ಅ] ನೇರವಾಗಿ (ನೆಱಯೆ ಧನುರ್ವಿದ್ಯೆಯ ಕಣ್ದೆಱವಿನೆಗಂ ಕಲ್ತ ನಿಮ್ಮ ಮಕ್ಕಳ ಮೆಯ್ಯೊಳ್ ಮೆಱದಪ್ಪೆಂ ಎನ್ನ ವಿದ್ದೆಯಂ ನೆರೆದು ನೋಟ್ಟುದನಿಬರುಮೀಗಳ್: **ಪಂಪಭಾ**, ೨. ೬೫)

ಒಯ್ಯನಾಗು – [ಕ್ರಿ] ಕ್ಷೀಣವಾಗು, ಕಾಂತಿಹೀನವಾಗು (ಸೊಡರ್ಗುಡಿ ಒಯ್ಯನಾಗೆ ಪೊಸಮಲ್ಲಿಗೆ ಕಂಪುನಾಱ ತಣ್ಪಿಡಿದ ಎಲರ್ ಊದೆ ಗಾವರದ ಮೆಲ್ಲುಲಿ ತುಂಬಿಯ ಗಾವರಂಗಳ ಗೆಡೆಗೊಳೆ: **ಪಂಪಭಾ**, ೪. ೧೧೦)

ಒಯ್ಯನೆ – [ಅ] ಮೆಲ್ಲನೆ, ಮೃದುವಾಗಿ (ಎಂದು ಒಯ್ಯನೆ ಇಟಿಪೆ ನೆಲದೊಳ್ ದುಂದುಭಿರವದೊಡನೆ ವಿಜಯಘೋಷಣೆ ನೆಗಟ್ದಿತ್ತು: **ಆದಿಪು**, ೧೪. ೧೧೩); [ಅ] ಗಮನವಿಟ್ಟು (ಭೇದಿಸಲೆಂದೆ ದಲ್ ನುಡಿದರೆನ್ನದಿರು ಒಯ್ಯನೆ ಕೇಳ ಕರ್ಣ ನಿನ್ನಾದಿಯೊಳ್ ಅಬ್ಬೆ ಕೊಂತಿ ನಿಗಮ್ಮನಹರ್ಪತಿ: **ಪಂಪಭಾ**, ೯. ೬೪) [ಈ ಪದ್ಯ ವೆಂಕಟಾಚಲಶಾಸ್ತ್ರಿಯವರ ಆವೃತ್ತಿಯಲ್ಲಿ ಬಿಟ್ಟುಹೋಗಿದೆ]

ಒಯ್ಯನೊಯ್ಯನೆ – [ಅ] ನಿದನಿದಾನವಾಗಿ (ಅಮರ್ದ ಲೀಲೆಯಿಂ ಪೆಂಡವಾಸದೊಳ್ ಪೆಂಡಿರೊಯ್ಯನೊಯ್ಯನೆ ನಡೆದರ್: **ಆದಿಪು**, ೧೧. ೪೧)

ಒರಸು – [ಕ್ರಿ] ಉಜ್ಜು, ಘರ್ಷಿಸು (ಬೆರಲೊಳ್ ಬೀಣೆಯ ತಂತಿಗಳ್ ಒರಸಿದ ಕೆಂಗಲೆಗಳ್ ಅಕ್ಷಮಾಲೆ: **ಪಂಪಭಾ,** ೬. ೧೦)

ಒರೆ – [ನಾ] ಪರೀಕ್ಷೆ (ಶರ ಚಾಪ ಚಕ್ರ ಭೀಕರಕರವಾಳಾಯುಧ ವಿರಾಜಿ ಮತ್ಕರಯುಗಂ ಇಂದು ಒರೆಗೆ ಇಡೆ ಪೆಱಂಗೆ ಮುಗಿವುದೆ: **ಆದಿಪು**, ೧೨. ೧೦೦); [ನಾ] ಸಮಾನ (ಸಮಕಟ್ಟಿಂಗೆ ಒರೆಗೆ ಆರುಂ ಇಲ್ಲ ಅರಿಗ ಕೇಳ್ ನಿನ್ನೊಳ್: **ಪಂಪಭಾ**, ೫. ೭೬)

ಒರ್ಗುಡಿಸು – [ಕ್ರಿ] ಓಲು, ಓರೆಯಾಗು (ಇಡಿದಿರೆ ರೋಮಕೂಪದೊಳಗೆ ಉರ್ಚಿದ ಸಾಲಸರಲ್ಗಳುಂ ತೆಱಂಬಿಡಿದಿರೆ ಬೆಟ್ಟು ಒರ್ಗುಡಿಸಿದಂತೆ ನೆಱಲ್ದಿರೆ .. .. ಬಿಟ್ಟಂ ಏನೆಸೆದನೋ ಶರಶಯ್ಯೆಯೊಳ್ ಅಂದು ಸಿಂಧುಜಂ: **ಪಂಪಭಾ**, ೧೩, ೬೨)

ಒರ್ಬಳಸು – [ನಾ] ಒಂದು ಸುತ್ತು (ವನದಹನಂ ವನಾಂತರಮಂ ಒರ್ಬಳಸಾಗಿರೆ ಮುತ್ತಿ ಸುತ್ತಿ ನಡುವಿರ್ದುಂ ಆ ಮರನನಟ್ಟೆದುದು: **ಆದಿಪು**, ೯. ೫೯)

ಒರ್ಮೆ – [ನಾ] ಒಂದು ಬಾರಿ (ಎಱಗಿಯುಂ ಒರ್ಮೆ ದಿವ್ಯಮುನಿಗಾರ್ತು ಉಪವಾಸಮನಿರ್ದು ಒರ್ಮೆ: **ಪಂಪಭಾ**, ೧. ೧೩೫)

ಒರ್ಮೆಗೆ – [ಅ] ಒಂದು ಸಲಕ್ಕೆ (ಅಸದಾಗ್ರಹಮಂ ಬಿಸುಡುವುದು ಒರ್ಮೆಗೆ ಮಱೆವುದೆನ್ನ ದುರ್ವಿಳಸನಮಂ: **ಆದಿಪು**, ೧೪. ೧೩೧)

ಒರ್ಮೆ ನುಡಿ – [ಕ್ರಿ] ಒಂದು ಬಾರಿ ಹೇಳು (ರಂಗತ್ತರಂಗ ವಾರ್ಧಿಚಯಂಗಳ್ ತಂತಮ್ಮ ಮೇರೆಯಂ ದಾಂಟುವೊಡಂ ಗಾಂಗೇಯನುಂ ಪ್ರತಿಜ್ಞಾಗಾಂಗೇಯನುಮೊರ್ಮೆ ನುಡಿದುದಂ ತಪ್ಪುವರೇ: **ಪಂಪಭಾ**, ೧. ೮೪)

ಒರ್ಮೆಯೆ – [ಅ] ಒಮ್ಮೆಗೇ, ಇದ್ದಕ್ಕಿದ್ದಂತೆ (ಭೀಕರರಥಚಕ್ರಮಂ ಪಿಡಿದು ನುಂಗಿದಳ್ ಒರ್ಮೆಯೆ ಧಾತ್ರಿ ಕೋಪದಿಂ: **ಪಂಪಭಾ**, ೧೨. ೨೦೬); ಒಟ್ಟಿಗೆ, ಒಂದೇ ಬಾರಿಗೆ (ಆ ಸತಿಯಿಕ್ಕಿದ ಕಣ್ಣ ನೀರ ಧಾರೆಗಳೊಳೆ ನಾಂದು ಎಲರ್ಚಿ ಪೊದಳ್ದು ಒರ್ಮೆಯೆ ಪಾಱಿದುವು ಉನ್ಮದಾಳಿಗಳ್: **ಪಂಪಭಾ**, ೫. ೧೦)

ಒರ್ಮೊದಲ್ – [ಅ] ಒಂದೇ ಬಾರಿಗೆ (ತ್ರಿದಶೇಂದ್ರಾಮರರ್ ಕಳಕಳಪ್ರಧ್ವಾನದಿಂ ಶಾತಕುಂಭದ ಕುಂಭಂಗಳ ನೀರಂ ಒರ್ಮೊದಲೆ ಭೋರ್ಭೋರೆಂದು ಪೊಯ್ದಾಗಳ್: **ಆದಿಪು**: ೭. ೯೭); [ಅ] ಮೊದಲಿಗೇ (ಅನಂಗನಿರ್ದೆಡೆವೇಟ್ಟುವೊಲ್ ಒರ್ಮೊದಲೆ ಗೀತವಾದಿತರವಂ ಏವೇಟ್ಟುದೊ ಸಭೆಯಂ ರಸದೊಳ್ ಪೂಟ್ಟುವೊಲೆಸೆದತ್ತು: **ಆದಿಪು**, ೯. ೧೪); [ಅ] ಕೂಡಲೇ (ಸಾರೆಯೊಳ್ ಅಟ್ಟಿ ಮಹಾದ್ವಿಜನಾರಿಯ ಮಮತಾವಿಪೂರಿತ ಊರ್ಜಿತರವದಿಂ ಕಾರುಣ್ಯಾಕ್ರಂದನಂ ಅನಿವಾರಿತಮೊರ್ಮೊದಲೆ ಬಂದು ತೀಡಿತ್ತಾಗಳ್: **ಪಂಪಭಾ**, ೩. ೨೪)

ಒರ್ಮೊರ್ಮೆ – [ನಾ] ಒಂದೊಂದು ಬಾರಿ (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏಟುತಿರೆ: **ಪಂಪಭಾ**, ೩. ೯)

ಒರ್ವ – [ನಾ] ಒಬ್ಬ (ಒರ್ವ ಗೋವಳಂ ಅನಿಬರ ಸಾವುಮಂ ಕಂಡು: **ಪಂಪಭಾ**, ೮. ೯೫ ವ)

ಒರ್ವಾಗ – [ನಾ] ಒಂದು ಭಾಗ, ಪಾಲು (ಏಗೆಯ್ದುಂ ಎನ್ನ ಧರೆಯ ಒರ್ವಾಗಮುಮಂ ನೀಮೆ ಬೆಸಸೆಯುಂ ಕುಡದೆ ಇನಿತಂ ಮೇಗಿಲ್ಲದೆ ನೆಗಟ್ದು ಅಟೆದಂ ನಾಗಧ್ವಜಂ: **ಪಂಪಭಾ**, ೧೪. ೬)

ಒರ್ವುಳಿ – [ನಾ] ಒಂದು ಕಡೆ, ಗುಂಪಾಗಿ (ತಮ್ಮನಿಬರುಮಂ ಅಂದು ಒರ್ವುಳಿ ನೆರೆದು ಅತಿಲಲಿತದೋರ್ವೀಸುಖಮಂ ಉಣುತುಮಿರೆ ಪಲಕಾಲಂ: **ಆದಿಪು**, ೬. ೪)

ಒರ್ವೆಸರ್ – [ನಾ] ಒಂದೇ ಹೆಸರು, ಅದೇ ಹೆಸರು (ಹತೋಶ್ವತ್ಥಾಮಾ ಎನೆ ನೃಪಂ ಅಶ್ವತ್ಥಾಮನೆ ಗೆತ್ತು ಒಣರ್ದಂ ಒವಜಂ ಒರ್ವೆಸರಿಭಮಂ: **ಪಂಪಭಾ**, ೧೨. ೨೭)

ಒಲ್ – [ಕ್ರಿ] ಸಂಭ್ರಮದಿಂದ ಕೂಡು (ತಳಿರ್ಗಳಸಂ ಮುಕುಂದ ರವಂ ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಙ್ಕ್ತಿ ಪಸುರ್ವಂದಲೊಳ್ ಒಲ್ದು ಎಡೆಯಾಡುವ ಎಯ್ದೆಯರ್: **ಪಂಪಭಾ**, ೧. ೧೦೭); [ಕ್ರಿ] ಬಯಸು (ನೀನಾರ್ಗೆ ಏಕೆ ಬಂದೆಯೆಂದೊಡೆ ಎರಡಟೆಯದೊಲ್ದು ನಿನ್ನೊಳೆರಡಂ ನುಡಿಯಲಾಗದೆನಗೆ ಬನಂ ಹಿಡಿಂಬವನಂ ಎಂಬುದು: **ಪಂಪಭಾ**, ೩. ೧೪ ವ); [ಕ್ರಿ] ಇಷ್ಟಪಡು (ಈ ಕೂಸುಗಳ್ ಯೋಗ್ಯರಪ್ಪುದಂ ಇನ್ನು ಒಲ್ವೊಡೆ ಶಸ್ತ್ರವಿದ್ಯೆಗೊವಜಂ ನೀನಾಗು ಕುಂಭೋದ್ಭವಾ: **ಪಂಪಭಾ**, ೨. ೫೩); [ಕ್ರಿ] ಮೋಹಗೊಳ್ಳು, ಪ್ರೀತಿಸು (ಸುಯೋಧನನ ರಾಜ್ಯಮಂ ಒಲ್ವೊಡಂ ಶಲ್ಯನನೆ ಸಾರಥಿಮಾಡಿ ಕಾದುವುದು ಎಂದು ಪರಸಿ ಪೋಗೆಂಬುದುಂ: **ಪಂಪಭಾ**, ೧೨. ೫೯ ವ)

ಒಲವರ – [ನಾ] ಪ್ರವೃತ್ತಿ, ಒಲವು (ಮೃಗದ ಒಲವರಮುಮಂ ಅರಸನ ಬಗೆಯುಮಂ ಅಱಿದು ಅಲಸದೆ ಎಳಸಿ ಓಲಗಿಸಲ್ ನೆಟ್ಟನೆ ಬಲ್ಲನುಳ್ಳೊಡೆ ಅವನಲ್ತೆ ಗುಣಾರ್ಣವ ಬೇಂಟೆಕಾಱಂ ಓಲಗಕಾಱಂ: **ಪಂಪಭಾ**, ೫. ೪೨); [ನಾ] ಪ್ರೀತಿ, ಗೌರವ (ಮನದೆ ಒಲವರಂ ಉಳ್ಳೊಡೆ ಕುಡು ಮನೆಯೊಳ್ ಹರಿಗೆ ಅಗ್ರಪೂಜೆಯಂ: **ಪಂಪಭಾ**, ೬. ೪೫)

ಒಲವು – [ನಾ] ಗಂಡುಹೆಣ್ಣಿನ ಪ್ರೇಮ (ಒರ್ಮೆಯುಂ ಅವಚಱದ ಒಲವಿನ ಕೂರ್ಮೆಯ ತತ್ಪತಿಗಂ ಆಕೆಗಂ ನಿಜವಂಶಕ್ಕಾರ್ಮಮೆನೆ ಪುಟ್ಟಿದರ್ ಜಯವರ್ಮ ಶ್ರೀವರ್ಮರೆಮಬರಿರ್ವರ್ ತನಯರ್: **ಆದಿಪು**, ೨. ೩೭)

ಒಲಿ – [ಕ್ರಿ] ಒಲ್, ಆಸೆಪಡು (ಕುಲಮೆಂಬುದುಂಟೆ ಬೀರಮೆ ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀಂ ಒಲಿದಲ್ಲಿ ಪುಟ್ಟಿ ಬಳೆದಿರೊ ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ: **ಪಂಪಭಾ**, ೨. ೮೩)

ಒಲಿಸು – [ಕ್ರಿ] ಪ್ರೀತಿಸುವಂತೆ ಮಾಡು (ಒಲಿಸುವ ರೂಪು ಗಾಡಿಯೊಳೊಡಂಬಡೆ ಗಾಡಿ ವಿಳಾಸದೇಟಿಗ್ಗೆಯೊಳ್ ನೆಲಸೆ: **ಆದಿಪು**, ೧. ೭೨)

ಒಲೆ – [ಕ್ರಿ] ಓಲಾಡು, ತೂಗಾಡು (ಅಂತು ಒಲೆಯದಿರ್ ಉರ್ಕಿನೊಳ್ ನುಡಿವೆ ಈ ಕರಿ ಸೂಕರಿಯಲ್ತೆ: **ಪಂಪಭಾ**, ೧೧. ೭೩)

ಒಲೆಗಲ್ – [ನಾ] ಒಲೆಯ ಕಲ್ಲು (ಬೀಡಿಂಗೆ ಬೀಡುವಿಡಲ್ ನೆಲನುಂ ಆನೆಗಂಬಕ್ಕೆ ಒಲೆಗಲ್ಲಗ್ಗೆ ಬೆಟ್ಟುಗಳುಂ ಗುಡಿಯ ಗೂಂಟಕ್ಕೆ ಬಲ್ಲಡವಿಗಳುಂ: **ಪಂಪಭಾ**, ೯. ೧೦೪ ವ)

ಒಲ್ದನಿಲ್ಲ – [ನಾ] ಇಷ್ಟಪಟ್ಟವನಾಗಲಿಲ್ಲ, ಇಷ್ಟಪಡಲಿಲ್ಲ (ನಲ್ಲಳ ರತಿಶ್ರಮವಿಶ್ಲಥಕೇಶಪಾಶದೊಳ್ ಸವಸವನಾಗಿ ತೋಱಿದಪುದು ಎಂಬುದೆ ಕಾರಣದಿಂದಂ ಗುಣಾರ್ಣವಂ ಇಡಲ್ ಒಲ್ದನಿಲ್ಲ: **ಪಂಪಭಾ**, ೫. ೫೧)

ಒಲ್ಲಂ – [ಕ್ರಿ] (√ಒಲ್) ಪ್ರೀತಿಸನು (ಅಸಿಯಳಂ ಒಲ್ಲಂ ಒಲ್ಲಂ ಅಣಂ ಎನ್ನದೆ ರೂಪನೆ ನೋಡಿ ಕೂಡಲಾಟಿಸಿ ಪರಿದೆಯ್ದಿ: **ಪಂಪಭಾ**, ೫. ೧೩)

ಒಲ್ಲಣಿಗೆ – [ನಾ] ಒದ್ದೆಯಾದ ಬಟ್ಟೆ, ಸ್ನಾನವಸ್ತ್ರ (ಧರಾತಳಮಂ ಒಲ್ಲಣಿಗೆಯಂ ಪಿಟಿವಂತೆ ತಳಂ ಎಯ್ದೆ ಸುರುಳ್ವಿನಂ ಮುಯ್ಯೇಟು ಸೂಟಿಗ್ ಪಿಟಿದ ಸಾಹಸಮುಂ: **ಪಂಪಭಾ**, ೧೨. ೪೮ ವ)

ಒಲ್ಲದೆ – ಒಪ್ಪದೆ (ಒಲ್ಲದೆ ಉಟೆದು ಅಟ್ಟಿದೊಡೆ ಅಂದು ಕುಬೇರನಿತ್ತುದು: **ಪಂಪಭಾ**, ೪. ೮೬)

ಒಲ್ಲನುಲಿ – [ಕ್ರಿ] [ಒಲ್ಲನೆ+ಉಲಿ] ಕಿರಿಚಿಕೊ (ನೆಲನದಿರೆ ಬರ್ಪ ವಿಕ್ರಮಾರ್ಜುನನ ಬರವಿಂಗೆ ಕುರುಬಲಮೆಲ್ಲಂ ಮೆಲ್ಲನುಲಿದೋಡಿ ಸುರಾಪಗಾನಂದನನ ಮಱಿಯಂ ಪೊಕ್ಕಾಗಳ್: **ಪಂಪಭಾ,** ೧೧. ೧೨ ವ)

ಒಲ್ಲನೆ – [ಅ] ಒಪ್ಪನೆ, ಇಷ್ಟಪಡದೆ (ಒಂದೆ ಸರಲಿಂದಂ ಅವನೆರ್ದೆಯಂ ದೊಕ್ಕನೆ ತಿಣ್ಣಂ ಎಚ್ಚು ಕೊಲಲೊಲ್ಲನೆ: **ಪಂಪಭಾ,** ೧೧. ೯೬)

ಒವಜ – [ನಾ] [ಉಪಾಧ್ಯಾಯ] ಗುರು (ಈ ಕೂಸುಗಳ್ ಯೋಗ್ಯರಪ್ಪುದಂ ಇನ್ನೊಲ್ವೊಡೆ ಶಸ್ತ್ರವಿದ್ಯೆಗೆ ಒವಜಂ ನೀನಾಗು ಕುಂಭೋದ್ಭವಾ: **ಪಂಪಭಾ,** ೨. ೫೩)

ಒವಜುಗೆಯ್ – [ಕ್ರಿ] ಪಾಠ ಹೇಳಿಕೊಡು (ಬವರದೊಳೇಂ ಬಲ್ಲಂ ಕರಂ ಒವಜುಗೆಯಲ್ ಪೆಱರ್ಗೆ ಕರಮೆ ತನಗೆ ಅಱಿಯಂ ಅದೆಂತುವೊ ನುಡಿ ತಪ್ಪದು ಕಮ್ಮರಿಯೊವಜಂ ಬಿಲ್ಲೊವಜಂ ಎಂಬುದು ಮಾಡುವೆನೇ: **ಪಂಪಭಾ,** ೧೨. ೩)

ಒಸಗೆ – [ನಾ] ಉತ್ಸವ (ನಿಶಾವಸಾನಸಮಯದೊಳ್ ತತ್ಪುರ ಬಹಿರ್ಭಾಗಸ್ಥಿತ ಮನೋಹರೋದ್ಯಾನಾಸೀನ ಯಶೋಧರ ಗುರುಗಳ ಕೇವಳಜ್ಞಾನೋತ್ಪತ್ತಿಯೊಸಗೆಗೆ: **ಆದಿಪು,** ೩. ೨೧ ವ); [ನಾ] ಶುಭ, ಮಂಗಳಕಾರ್ಯ (ಖರಕರಸಮಪ್ರಭಂ ಚಕ್ರರತ್ನಮೊಡವುಟ್ಟೆ ಪುಟ್ಟಿದೆರಡು ಒಸಗೆಯೋಳಂ: **ಆದಿಪು,** ೩. ೨೭); [ನಾ] ಸತ್ಕಾರ ಸಮಾರಂಭ (ಆರಾಧ್ಯ ಗೃಹಸ್ಥರಾದರೊಳಮಿನ್ನಾರ್ ತಕ್ಕರ್ ಆರ್ಯೆವೆನೊಯ್ಯನೆ ಉಪಾಯಾಂತರದಿಂದಂ ಎಂದು ಒಸಗೆಯಂ ತದ್ವ್ಯಾಜದಿಂ ಮಾಡಿದಂ: **ಆದಿಪು,** ೧೫. ೬); [ನಾ] ಸಮಾರಂಭ, ಉತ್ಸವ (ಪಾಂಡುರಾಜಂಗೆ ಧೃತರಾಷ್ಟ್ರನಂಗಹೀನನೆಂದು ವಿವಾಹದೊಸಗೆಯೊಡನೆ ಪಟ್ಟಬಂಧದೊಸಗೆಯಂ ಮಾಡಿ ನೆಲನನಾಳಿಸೆ: **ಪಂಪಭಾ,** ೧. ೧೦೭ ವ); [ನಾ] ಸಂತೋಷ (ಮಕ್ಕಳ್ ಒಸಗೆಯಂ ಈವುದು ನಿನ್ನೆಸಕದ ಮಸಕಮನೆ ಪೋಲ್ವ ಮಗನಂ ಮಘವಾ: **ಪಂಪಭಾ,** ೧. ೧೩೯); [ನಾ] ಕಾಣಿಕೆ (ನಿನಗೆ ಒಸಗೆ ಇದೇನಂ ಕುಡುವುದೆಂದೊಡೆ ಎಂದಳ್ ಮಕ್ಕಳೊಸಗೆಯನೆನಗೀವುದು: **ಪಂಪಭಾ,** ೧. ೧೩೯); [ನಾ] ಶುಭ ಸಂದೇಶ (ಧನಂಜಯನ ಬರವಿನ ಸಂತಸದೊಸಗೆ ಪಡೆಮಾತಂ ಮುಂದುವರಿದಱಿಪುವಂತೆ: **ಪಂಪಭಾ,** ೪. ೩೨ ವ); [ನಾ] ಪ್ರೀತಿ (ದ್ರುಪದನಂದನಂಗೆ ಬಟೆಯನಟ್ಟಿ ಬರಿಸಿ ಪಿರಿದುಂ ಒಸಗೆವೆರಸು ತಾನೆ ವೀರಪಟ್ಟಮಂ ಕಟ್ಟಿ: **ಪಂಪಭಾ,** ೧೧. ೫ ವ)

ಒಸಗೆಮರುಳ್ಗೊಳ್ – [ಕ್ರಿ] ಸಂತೋಷದಿಂದ ಹುಚ್ಚೇರು (ಪರಿಜನಮುಂ ಪುರಜನಮುಂ ಒಸಗೆಮರುಳ್ಗೊಂಡು ನಿರ್ಭರಕ್ರೀಡಾ ರಸಪರವಶರಾದಾಗಳ್: **ಆದಿಪು,** ೭. ೧೧೨ ವ)

ಒಸಗೆವರ್ – [ಕ್ರಿ] ಮಂಗಳವುಂಟಾಗು (ಭುವನಕ್ಕೆಲ್ಲಂ ಒಸಗೆವರ್ಪಂತೆ: ಬಂದ ವಸಂತದೊಳ್: **ಪಂಪಭಾ,** ೫. ೩೫ ವ)

ಒಸಗೆವಾತು – [ನಾ] ಸಂತೋಷ ಸಮಾಚಾರ (ಪಾಂಡವರಂ ಇಕ್ಕಿದ ಒಸಗೆವಾತುಗಳಂ ಈಗಳೆ ಕೇಳಿಸುವೆಂ: **ಪಂಪಭಾ,** ೧೩. ೧೦೫ ವ)

ಒಸರ್ – [ಕ್ರಿ] ಜಿನುಗು (ಒಸರ್ದಪುದು ಅಮರ್ದೆನೆ ಪಾಲ್ಮಟೆ ಪಸರಿಸಿತೆನೆ ಜಗಮನೊಡನೆ ಕಪ್ಪುರದ ರಜಂ ಮುಸುಕಿದುದೆನೆ: **ಆದಿಪು,** ೧೨. ೧೧)

ಒಸೆ – [ಕ್ರಿ] ಹಿಗ್ಗು (ಸಹಜಭಕ್ತಿಯ ಭರದಿಂ ಸುರಪತಿಯ ಬೆಸೆದಿಂ ಒಸೆದಂ ಧನದಂ: **ಆದಿಪು,** ೭. ೩); [ಕ್ರಿ] ಸಂತೋಷಿಸು (ಕರಂ ಮೇಳಿಸಿದಪ್ಪುದೆನ್ನೆರ್ದೆಯಂ ಎಂದು ಬೊದಿಲ್ಲನೆ ಪಾಯ್ದು ನೀರೊಳಾ ಬಾಳನನಾದಮಾದರದೆ ಕಂಡೊಸೆದು ನಿಧಿಗಂಡನಂತೆವೋಲ್: **ಪಂಪಭಾ,** ೧. ೯೬); [ಕ್ರಿ] ಪ್ರೀತಿಯಿಂದ (ಪುಟ್ಟುವುದುಂ ಧರ್ಮಮೊಡವುಟ್ಟಿದುದು ಈತನೊಳೆ ಧರ್ಮನಂಶದೊಳ್ ಈತಂ ಪುಟ್ಟಿದನೆಂದಾ ಶಿಶುಗೊಸೆದಿಟ್ಟುದು ಮುನಿಸಮಿತಿ ಧರ್ಮಸುತನೆನೆ ಪೆಸರಂ: **ಪಂಪಭಾ,** ೧. ೧೨೨); [ಕ್ರಿ] ಪ್ರೀತಿಸು (ಬೆಸನೇಂ ಏಗೆಯ್ವುದೊ ನಿನಗೊಸೆದೇನಂ ಕುಡುವುದು ಎಂದೊಡೆ ಅವಳ್ ಮಕ್ಕಳ ಒಸಗೆಯನೆನಗೀವುದು ನಿನ್ನೆಸಕದ ಮಸಕಮನೆ ಪೋಲ್ವ ಮಗನಂ ಮಘವಾ: **ಪಂಪಭಾ,** ೧. ೧೩೯); [ಕ್ರಿ] ಇಷ್ಟಪಡು (ತುಂಬಿದ ರಕ್ತತೆಯಿಂ ನಿಜಬಿಂಬಂ ವಾರುಣಿಯನೊಸೆದು ಸೇವಿಸೆ ನಾಣ್ಗೆಟ್ಟಂಬೋಲ್ ತೇಜಂ ಮಸುಳ್ವಿನಂ ಅಂಬರಮಂ ಬಿಸುಟಂ ಆಗಳಂಬುಜಮಿತ್ರಂ: **ಪಂಪಭಾ,** ೩. ೨೩); [ಕ್ರಿ] ಅನುಗ್ರಹಿಸು (ಬೀರವಟ್ಟಮಂ ಆನಿರೆ ನೀಂ ಈ ಸೂತಸುತಂಗೆ ಎಡೆಗೊಂಡು ಕೈವಾರದಿಂದ ಒಸೆದು ಇತ್ತೊಡಂ ಏನಾಯ್ತು: **ಪಂಪಭಾ,** ೧೨. ೪೩); [ನಾ] ಅನುರಾಗ ತೋರು (ಜಯವಧು ಕೂರ್ತು ಒಸೆದಿರ್ಕುಂ ಮಾವ ನಿಮ್ಮ ದಯೆಯಿಂದೆಮ್ಮಂ: **ಪಂಪಭಾ,** ೧೨. ೯೦)

ಒಳಂ – ಇದೆ (ಪ್ರಿಯಸತಿಯಾನನೇಂದುವೊಳಂ ಇಂದುವೊಳಂ ಬಿದಿ ಮುನ್ನಂ ಆವುದಂ ನಯದೊಳೆ ನೋಡಿ ಮಾಡಿದಂ: **ಪಂಪಭಾ,** ೪. ೭೦)

ಒಳಕೊಂಡಿರ್ – [ಕ್ರಿ] ತನ್ನ ಪಾಡಿಗೆ ತಾನಿರು (ಏನನೆಂಬೆಂ ಅಂದೊಳಕೊಂಡಿರ್ಪುದಱಿಂದಂ ಆದುದೆನಗೀ ವಾಚಂಯಮಂ ಸಂಯಮಂ: **ಆದಿಪು,** ೩. ೪೧)

ಒಳಕೊಳ್ – [ಕ್ರಿ] ಸಹಿಸಿಕೊ (ಬಂದು ನಲ್ಲಂ ಮುನಿಸನೊಳಕೊಂಡು ಮುಖಮಂ ಮುಗುಳ್ನಗೆವೆರಸು ನುಡಿದು ಗೆಂಟಾದಂ: **ಆದಿಪು,** ೧೨. ೨೯ ವ); [ಕ್ರಿ] ಸೇರಿಸಿಕೊ (ಪತಾಕೆಯೊಂದು ವಿಭ್ರಮಮನೆ ಪೋಲೆ ಪುರ್ವಿನ ಪೊಡರ್ಪು ಒಳಕೊಂಡುದವಳ್ಗೆ ಗರ್ಭಚಿಹ್ನಮೆ ಗಳ ಗರ್ಭದರ್ಭಕನ ಸೂಚಿಪ ಮುಂದಣ ರಾಜ್ಯಚಿಹ್ನಮಂ: **ಪಂಪಭಾ,** ೧. ೧೨೦); [ಕ್ರಿ] ಒಗ್ಗೂಡು, ಸೇರು (ಪೊನಲ್ಗಳ ಕೆಂಪು ಪಸುರ್ಪು ಕರ್ಪು ಬೆಳ್ಪು ಒಳಕೊಳೆ ಶಕ್ರಕಾರ್ಮುಕವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ,** ೭. ೨೫); [ಕ್ರಿ] ಸ್ವೀಕರಿಸು (ನೀಂ ತಲೆವೀಸದೆ ಉರ್ವರಾತ್ರೀಯನಿದಾಗದೆನ್ನದೆ ಒಳಕೊಳ್: **ಪಂಪಭಾ,** ೧೪. ೧೭)

ಒಳಗಾಗು – [ಕ್ರಿ] ಪಕ್ಕಾಗು (ವಿತ್ರಸ್ತಕರ್ಮರಿಪುವ ಜಗತ್ತ್ರಯದೀಪನ ಕಾಣ್ಕೆಗೊಳಗಾದುದು ಲೋಕತ್ರಯಂ: **ಆದಿಪು,** ೧. ೪೭); [ಕ್ರಿ] ಸಿಕ್ಕಿಹಾಕಿಕೊ (ಅವಚಱದೊಂದೆ

ಪದ್ಮದೊಳೆ ನೇಲ್ದು ಒಳಗಾದ ಅಳಿಗೆ ಎಮ್ಮ ವೃತ್ತಿ ಸಂಭವಿಸದು: **ಆದಿಪು,** ೧೧. ೧೩೦)

ಒಳಗು – [ನಾ] ಒಳಗಿನದು, ತಿರುಳು (ಪೊಱಗಣ್ಗೆ ಸಯ್ದರೆನೆ ತಾವೊಳಗಂ ತವೆ ತೋಡಿ ತಿಂದು ರಕ್ಕಸಿಯರ ಕಂಡ ಕುಂಬಳದವೊಲಾಗಿರೆ: **ಪಂಪಭಾ,** ೯. ೪೮); [ನಾ] ಮರ್ಮ, ಮನಸ್ಸು (ಒಗೆದ ಸುತಶೋಕದಿಂದ ಆವಗೆಯಂತೆ ಒಳಗು ಉರಿಯೆ ಭೋಂಕನೆ ಎರ್ದೆ ತೆಱ್ಯಲ್: **ಪಂಪಭಾ,** ೧೨. ೨೮); [ನಾ] ರಹಸ್ಯ (ಒಳಗಱೆಯದೆ ಕೌರವಬಳಜಳನಿಧಿ ಬೊಬ್ಬಿಱೆದು ಮೇಲುದಂ ಬೀಸಿದೊಡೆ: **ಪಂಪಭಾ,** ೧೨. ೨೦೧)

ಒಳಗುಮಾಡು – [ಕ್ರಿ] ಸೇರಿಸಿಕೊ (ಸಲೆ ಪೂತ ಚೂತಲತೆಯಂ ಒಳಗುಮಾಡಿ ಬಳಸಿದ ಮಾಧವೀಲತೆಯ ಬಳ್ಳಿವಳ್ಳಿಯ ಬಳ್ಳಿಗಾವಣದ ಮುಂದೆ: **ಆದಿಪು,** ೧೧. ೬೩ ವ)

ಒಳನ್ – ಇದ್ದಾನೆ (ಕುಳಗಿರಿಯಂ ಸರೋಜನಿಲಯಂ ಮನುಜಾಕೃತಿಯಾಗೆ ಮಾಡಿದಂತು ಒಳನ್ ಎನಿಪಂತುಟಪ್ಪ ಪೊಸಬಣ್ಣದೊಳ್: **ಪಂಪಭಾ,** ೨. ೩೮)

ಒಳಪುಗು – ಒಳಹೊಗು (ಮುಗಿಲ ಬೆಳ್ಪೊಳಪೊಕ್ಕು ತಳ್ಪೊಯ್ಯೆ ಬಳ್ವಳ ನೀಳ್ದಿರ್ದ ದಿಶಾಳಿ: **ಪಂಪಭಾ,** ೬. ೬೧)

ಒಳಪೊಯ್ – [ಕ್ರಿ] ವಶಪಡಿಸಿಕೊ, ಒಳಗೆ ಹಾಕಿಕೊ (ಒಳಪೊಯ್ಯಲ್ ನಿನ್ನನಾ ಕನ್ನೆಯ ತುಱುಗೆಮೆಗಳ್ ಸುತ್ತಲುಂ ನಿನ್ನನಾ ಕೋಮಳೆಯಂದಂಬೆತ್ತ ಸುತ್ತುಂಗುರುಳ್ ಅಳವಡಿಸಲ್: **ಆದಿಪು,** ೪. ೨೧)

ಒಳರ್ – ಇದ್ದಾರೆ (ನೀನುಳ್ಳೊಡೆ ಎಲ್ಲರುಂ ಒಳರ್ ಎಮಗೆ ಏನುಂ ಅಟಿಲ್ ಮನದೊಳಿಲ್ಲ: **ಪಂಪಭಾ,** ೧೩. ೧೧)

ಒಳರೆನಿಸೆಂ – ಇದ್ದಾರೆ ಎನ್ನಿಸೆನು, ಎಂದರೆ ಉಳಿಸುವುದಿಲ್ಲ (ಮುಳಿದಿಂತು ಬೆಸಸೆ ನಿಮ್ಮಡಿಯೊಳೆ ಮಾರ್ಕೊಂಡು ಎಂತು ನುಡಿವೆಂ ಉಸಿರೆಂ ನಿಮ್ಮಂ ಮುಳಿಯಿಸಿದ ಸುರಾಸುರರುಮಂ ಒಳರೆನಿಸೆಂ: **ಪಂಪಭಾ,** ೧೨. ೧೩೧)

ಒಳರೇ – ಇದ್ದಾರೆಯೇ, ಇಲ್ಲ (ದಿವಿಜರ್ ವಾಯುಪಥದೊಳ್ ಶಿತಾಸ್ತ್ರಂಗಳಂ ಪೊಂಕಂಗಿಡಿಸೆ ಸುಗಿದಂ ಭಾರ್ಗವಂ ಇದೇಂ ಪ್ರತಿಜ್ಞಾಗಾಂಗೇಯಂಗೆ ಅದಿರದೆ ಇದಿರ್ ನಿಲ್ವನ್ನರೊಳರೇ: **ಪಂಪಭಾ,** ೧. ೮೦)

ಒಳವು – ಇವೆ, ಉಂಟು (ಸಕಳೋರ್ವಿಯೊಳ್ ಉರ್ವೀಧರಂಗಳ್ ಇನ್ನವುಂ ಒಳವೇ: **ಆದಿಪು,** ೯. ೧೨೧)

ಒಳವೊಗು – [ಕ್ರಿ] ಒಳಪೊಗು, ಸೇರಿಕೊಳ್ಳು (ಸುಯೋಧನಂ ಎನಗೆ ಒಳ್ಳಿಕೆಯ್ದು ಕೃತಮಂ ಪೆಱಗಿಕ್ಕಿ ನೆಗಟ್ತೆ ಮಾಸೆ ನಣ್ಪಿನ ನೆವದಿಂದೆ ಪಾಂಡವರಂ ಆಂ ಒಳವೊಕ್ಕಡೆ ನೀಮೆ ಪೇಸಿರೇ: **ಪಂಪಭಾ,** ೯. ೬೮)

ಒಳಸಾರ್ – [ಕ್ರಿ] ನುಸುಳಿಕೊಂಡು ಹೋಗು (ಆಕುಳವ್ಯಾಕುಳರಾಗಿ ನಾಣ್ಚೆ ಜಗುಟ್ದಿರ್ವರುಂ ಅಂದು ಒಳಸಾರ್ದು ಪೋಪುದುಂ: **ಆದಿಪು,** ೩. ೮೯)

ಒಳಸೋರ್ – [ಕ್ರಿ] ಎದೆಗುಂದು (ಎಂತು ಇದಿರಾಂತೆ ಅಂತೆ ಕಲಿಯಾಗು ಒಳಸೋರದಿರ್ ಎಂದು ಭೀಮಂ ಓರಂತೆ ಕನಲ್ದು ತಿಣ್ಣಂ ಇಸೆ: **ಪಂಪಭಾ,** ೧೦. ೯೮)

ಒಳರ್ – ಇದ್ದಾರೆ, ಇದ್ದ ಹಾಗೆಯೇ (ನೀನುಳ್ಳೊಡೆ ಎಲ್ಲರುಂ ಒಳರ್ ಎಮಗೆ ಏನುಂ ಅಟಿಲ್ ಮನದೊಳಿಲ್ಲ ಅದೆಂತೆನೆ ಮಗನೇ ಭಾನುವೇ ಸಾಲದೆ ಪಗಲೆನಿತಾನುಂ ದೀವಿಗೆಗಳ್ ಉರಿದೊಡೆಂ ನಂದಿದೊಡೇಂ: ===, ೧೩. ೧೧)

ಒಳಱು – [ಕ್ರಿ] ಊಳಿಡು (ಪ್ರತಿಮೆಗಳಟ್ಟು ಮೊಟಗಿದುದತಿರಭಸದೆ ಧಾತ್ರಿ ದೆಸೆಗಳುದುರಿದುವು ಭೂತಪ್ರತತಿಗಳಾಡಿದುವು ಒಳಱೆದವು ಅತಿ ರಮ್ಯಸ್ಥಾನದೊಳ್ ಶಿವಾನಿವಹಂಗಳ್: **ಪಂಪಭಾ,** ೧. ೧೩೩); [ಕ್ರಿ] ಕಿರಿಚು, ಅರಚು (ಉರಿ ಕೊಳೆ ದೆಸೆಗಾಣದೆ ದೆಸೆವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂಬೆರಸು ಒಳಱ್ ನೆಗೆದುದಾ ವನ ಕರಿ ಶರಭ ಕಿಶೋರಕಂಠಗರ್ಜನೆ ಬನದೊಳ್: **ಪಂಪಭಾ,** ೫. ೯೧)

ಒಳೆಂ – ಇದ್ದೇವೆ (ಇಱೆವೊಡೆ ನೆರವು ಒಳೆಂ ಇನಿಬರುಂ ಇಱೆ ಕಲಹಮಪಾಯಬಹುಳಂ ನಯದತ್ತೆಱುಗುವೊಡೆ ಸಂಧಿ ಹರಿಗನೆಳುಱುಗುಂ: **ಪಂಪಭಾ,** ೧೩. ೨೩)

ಒಳ್ಗಲಿ – [ನಾ] [ಒಳ್+ಕಲಿ] ಒಳ್ಳೆಯ ಶೂರ (ಕಲಿಯನೆ ಪಂದೆ ಮಾಟ್ಟಿ ಒಳ್ಗಲಿಯಂ ಕಡುವಂದೆ ಮಾಟ್ಟಿ ತಕ್ಕನಂ ಪೊಲೆಯನೆ ಮಾಟ್ಟಿ ಮುಂ ಪೊಲೆಯನಂ ನೆಱ್ ತಕ್ಕನೆ ಮಾಟ್ಟಿ: **ಪಂಪಭಾ,** ೧೨. ೯೨)

ಒಳ್ಗುಡಿ – [ನಾ] ಒಳ್ಳೆಯ ಬಾವುಟ (ಓಳಿದೋರಣಮಾಯ್ತು ಹಾರದ ಪಚ್ಚೆಸಾರದ ಮಾಲೆ ಸೌಧಾಳಿಯ ಒಳ್ಗುಡಿಯಾಯ್ತು ಚೀನದ ಸೂಯಿಯಾಣದ ಬಟ್ಟೆ: **ಪಂಪಭಾ,** ೧೪. ೧೫)

ಒಳ್ಗುರುಳ್ – ಮಟ್ಟಸವಾದ ಕೂದಲು (ಮಂದರೋಪವನಸಂಭವಂ ನಯದಿನಾಡಿಸಿತ್ತಾಗಳ್ ಅಪ್ಸರಃಪ್ರಕರದ ಒಳ್ಗುರುಳ್ಗಳನದೊಂದು ಮಂದಾನಿಳಂ: **ಪಂಪಭಾ,** ೧೪. ೧೫)

ಒಳ್ಗುಲ – [ನಾ] [ಒಳ್+ಕುಲ] ಸತ್ಕುಲ, ಒಳ್ಳೆಯ ವಂಶದಲ್ಲಿ ಹುಟ್ಟಿದ (ಶಂಖದೊಳ್ ಪಾಲೆಱ್ದಂತಿರೆ ಮಲಿನಮಿಲ್ಲದ ಒಳ್ಗುಲದ ಅರಸುಗಳಿರೆ ನೀನುಂ ಅಗ್ರಪೂಜೆಯಂ ಆಂಪಾ: **ಪಂಪಭಾ,** ೬. ೫೦)

ಒಳ್ದೊಡೆ – [ನಾ] ಒಳ ತೊಡೆ (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱ್ದ ನಿತಂಬ ಇಂಬುವಡೆದ ಒಳ್ದೊಡೆ ನೆಕ್ಕರವದ್ದೆ ತಾನೆ ಪೋ ಕಿಱುದೊಡೆ ಎಂದು ಧಾತ್ರಿ ಪೊಗಟ್ಗುಂ: **ಪಂಪಭಾ,** ೧. ೧೦೮)

ಒಳ್ನುಡಿ – [ನಾ] ಒಳ್ಳೆಯ ಮಾತು (ಒಳ್ನುಡಿಗೇಳ್ದೊಡಂ ಇಂಪನಾಳ್ದ ಗೇಯಂ ಕಿವಿವೊಕ್ಕೊಡಂ .. .. ನೆನೆವುದೆನ್ನ ಮನಂ ಬನವಾಸಿ ದೇಶಮಂ: **ಪಂಪಭಾ,** ೪. ೩೦)

ಒಳ್ಪನಾಳ್ – [ಕ್ರಿ] ಒಳ್ಳೆಯತನ ಅಥವಾ ಸೊಗಸನ್ನು ಹೊಂದು (ಅಪೂರ್ವ ಶುಭಲಕ್ಷಣ ದೇಹದೊಳ್ಪನಾಳ್ದು ಸಂದ ಅಹಿಕಟಕ ಪ್ರಸಾದದೆ ಮನೋಜನುಮಂ ಗೆಲೆವಂದನಾಗಳುಂ: **ಪಂಪಭಾ,** ೧. ೪)

ಒಳ್ಪು – [ನಾ] ಒಳ್ಳೆಯತನ, ಸಜ್ಜನಿಕೆ (ಗುಣಾರ್ಣವನೊಳ್ಪು ಮನ್ಮನೋವಾಸಮನೆಯ್ದೆ ಪೇಟ್ದಪೆನಲ್ಲದೆ ಗರ್ವಮೆ ದೋಷಮ್ ಅಟ್ತಿಗಂ ದೋಷಮೆ: **ಪಂಪಭಾ,** ೧. ೧೩); [ನಾ] ಚೆಲುವು (ಪಿಡಿದೆಡಗಯ್ಯ ಚಾಮರದದಕ್ಷಿಣಹಸ್ತದ ಪದ್ಮದ ಒಳ್ಪು ಒಡಂಬಡೆ: **ಪಂಪಭಾ,** ೩. ೯೯); [ನಾ] ಒಳಿತು (ಅವನೀನಾಥನ ಗೆಯ್ದ ಪೊಲ್ಲಮೆಗಂ ಎನ್ನ

ಒಳ್ವಿಂಗಂ ಇಂ ಸಕ್ಕಿಯಾಗಿ ಅವಂ ಈವಂತುಟಂ ಅದಂ ಬಲ್ಲಂತು ಕಾಲ್ಗುತ್ತಿ ನೋಡು: **ಪಂಪಭಾ,** ೯. ೨೬)

ಒಳ್ಪೊಗು – **[ಕ್ರಿ]** ಒಳಹೊಗು (ಮುಗಿಲ ಬೆಳ್ಪೊಳಪೊಕ್ಕು ತಳ್ಪೊಯ್ಯೆ ಬಳ್ವಳ ನೀಳ್ದಿರ್ದ ದಿಶಾಳಿ: **ಪಂಪಭಾ,** ೭. ೭೧)

ಒಳ್ಮೊಗ – **[ನಾ]** ಚೆಲುವಾದ ಮುಖ (ನಲ್ಲರ ಒಳ್ಮೊಗಂ ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಟಕ್ಪೊಡೆ: **ಪಂಪಭಾ,** ೪. ೨೮)

ಒಳ್ವರಕೆ – **[ನಾ]** [ಒಳ್+ಪರಕೆ] ಒಳ್ಳೆಯ ಆಶೀರ್ವಾದ (ರಜಂಬೊರೆದಳಿಮಾಲೆ ಮಾಲೆಯನೆ ಪೋಲೆ ಪಯೋಜಜ ಪಾರ್ವತೀಶರ ಒಳ್ವರಕೆಯನಾಂತು: **ಪಂಪಭಾ,** ೧೨. ೨೨೧)

ಒಳ್ವಾತು – **[ನಾ]** ಒಳ್ಳೆಯ ಮಾತು (ಅಕ್ಕರಗೊಟ್ಟಿಯುಂ ಚದುರರ ಒಳ್ವಾತುಂ ಕುಳಿರ್ ಕೋಟ್ಟ ಜೊಂಪಮುಂ ಏವೇಟ್ಟುದನುಳ್ಳ ಮೆಯ್ಸುಕಮುಂ: **ಪಂಪಭಾ,** ೪. ೩೧)

ಒಳ್ವೆಂಡಿರ್ – **[ನಾ]** ಸುಂದರ ಹೆಣ್ಣು (ಕುಡುಮಿಂಚಂ ಮಸೆದನ್ನರಪ್ಪ ಪಲರ್ ಒಳ್ವೆಂಡಿರ್ ಮನಂಗೊಂಡು ಬಂದೊಡಮಾ ರಾಜಕುಮಾರನೊಲ್ಲದೆ: **ಆದಿಪು,** ೩. ೧೨)

ಒಳ್ಸೆಸ – **[ನಾ]** ಚೆನ್ನಾದ ಸೇವೆ (ಪತ್ತಿದಂಗನೆಯರ ಒಳ್ಸೆಸಕೆಯ್ವ ಅಮರೇಂದ್ರ ರಾಗಸಂಪತ್ತು ಮನಂಗೊಳುತ್ತುಮಿರೆ: **ಆದಿಪು,** ೮. ೬೧)

ಒಳ್ಪೊಕ್ಕು ನಿಲ್ – **[ನಾ]** ಬಲವಾದ ಆಶ್ರಯ ಪಡೆದಿರು (ಇದಿರೊಳ್ ನಿಂದೊಡೆ ವಜ್ರಿ ಸೈರಿಸಂ ಇರಲ್ವೇಡ ಎಮ್ಮ ಒಳ್ಪೊಕ್ಕು ನಿಲ್ ನೀನೆಂದು ಕಡಂಗಿ ಕಾಲ್ವಿಡಿವವೋಲ್: **ಪಂಪಭಾ,** ೪. ೨೪)

ಒಳ್ಳನುರಿ – **[ಕ್ರಿ]** [ಗಾಯ] ಭಗಭಗ ಉರಿ (ಒಳ್ಳನುರಿವ ಪುಣ್ಗಳೊಳ್ ಕ್ಷಾರವಾರಿಗಳನೆಱೆದೊರಸಿ ಕರ್ಚುವರುಂ: **ಆದಿಪು,** ೫. ೮೫ ವ)

ಒಳ್ಳನೆ – **[ಅ]** ತಣ್ಣಗೆ, ಸುಮ್ಮನೆ (ಒಳ್ಳನುರಿವ ಪುಣ್ಗಳೊಳ್ ಕ್ಷಾರವಾರಿಗಳಂ ಎಱೆದೊರಸಿ ಕರ್ಚುವರುಂ: **ಆದಿಪು,** ೫. ೮೫ ವ)

ಒಳ್ಳಲಗು – **[ನಾ]** ಹರಿತವಾದ ತುದಿ (ಅಣ್ಮು ಅಣ್ಮು ಎಂದು ಒಳ್ಳಲಗಿನ ಶರತತಿಯಿಂ ಕೊಳ್ಳ ಕೊಳ ಎಂದು ಅಂಗರಾಜಂ ಅಸುರನಂ ಎಚ್ಚಂ: **ಪಂಪಭಾ,** ೧೨. ೧೨)

ಒಳ್ಳಾನೆ – **[ನಾ]** ಶ್ರೇಷ್ಠವಾದ ಆನೆ (ಪಟ್ಟಂಗಟ್ಟಿದ ಇಳಾಧಿನಾಥರೆ ಪಯಿಂಛಾಸಿರ್ವರ್ ಒಳ್ಳಾನೆಗಳ್ ಪಟ್ಟಂಗಟ್ಟಿದುವು ಒಂದು ಲಕ್ಕ ತುರಗಂ ಪತ್ತೆಂಟು ಲಕ್ಕಂ: **ಪಂಪಭಾ,** ೧೦. ೧೧೭)

ಒಳ್ಳಾಳ್ – **[ನಾ]** ಶ್ರೇಷ್ಠ ಯೋಧ (ಬೆಳ್ಳಾಳ್ಗೆ ಪೊಳೆಪುದೋಱುವುದು

ಒಳ್ಳಾಳ್ಗೆ ಪೊಡರ್ಪುದೋರ್ಪುದು ಇರದೆ ಅಣ್ಮು ಅಣ್ಮು ಎಂದು: **ಪಂಪಭಾ,** ೧೨. ೧೨)

ಒಳ್ಳಿಕೆಯ್ – **[ಕ್ರಿ]** ಒಳಿತನ್ನು ಮಾಡು (ಘೋರವೀರ ತಪಮೆಂಬಿನಂ ನೆಗಟ್ಟು ತತ್ಸಚಿವೋತ್ತಮಂ ಒಳ್ಳಿಕೆಯ್ದಂ: **ಆದಿಪು,** ೨. ೬೧)

ಒಳ್ಳೆ – **[ನಾ]** ವಿಷವಿಲ್ಲದ ಹಾವು, ನೀರು ಹಾವು (ಪಡೆವಳ್ಳಂ ಗಡಂ ಆ ಬಲಕ್ಕೆ ದಲೆ ದೃಷ್ಟದ್ಯುಮ್ನನೆಂಬ ಒಳ್ಳೆ ಆ ಪಡೆಯೊಳ್ ಗಂಡನುಂ ಆ ಮೊಲಂ ದ್ರುಪದನುಂ ಪೇರೊಟ್ಟೆ ಆ ಮತ್ಸ್ಯನುಂ ಗಡಂ: **ಪಂಪಭಾ,** ೧೦. ೪)

ಒಱಂಟ – **[ನಾ]** ಒರಟ, ಗಡುಸಾದವನು (ಕಣ್ಗಾಣದ ಇಂತಪ್ಪ ಏಕಗ್ರಾಹಿಗಂ ಒಱಂಟಂಗಂ ರಥಮಂ ಎಸಗೆಂ ಎಂದು ವರೂಥದಿಂದ ಇೞಿದು ಪೋಗೆ: **ಪಂಪಭಾ,** ೧೨. ೨೦೫ ವ)

ಒಱಂಟು – **[ನಾ]** ಮೊಂಡುತನ (ನೀನೆ ಜೆಟ್ಟಿಗನ್ನೆ ಮುನ್ನಿನ ಒಱಂಟುವೇಡ ಮಗನೇ ಕೈಕೊಳ್ ಧರಾಭಾರಮಂ: **ಪಂಪಭಾ,** ೧. ೮೧)

ಒಱಂಟುತನ – **[ನಾ]** ಒರಟುತನ, ಬಿರುಸು (ನಿನ್ನ ಒರಂಟುತನಂ ಕೈಗಟೆವಾಯ್ತು ಅದಪ್ಪೊಡೆ ಮಹಾಭಾರಾವತಾರಂ ರಣೋದ್ಯತನಾಗು ಎಂಬುದಂ ಎಮ್ಮಂ ಅನ್ಯರವೊಲೇಂ ನೀಂ ಪ್ರಾರ್ಥಿಸಲ್ವೇೞ್ಪುದೇ: **ಪಂಪಭಾ,** ೧೦. ೧೦)

ಒಱಗು – **[ಕ್ರಿ]** ಮಲಗು (ಅಗ್ನಿಹೋತ್ರಶಾಲೆಗೆ ವಂದು ದರ್ಭಶಯನದೊಳ್ ಒಱಗಿ ಬೆಳಗಪ್ಪ ಜಾವದೊಳ್: **ಪಂಪಭಾ,** ೧೩. ೩೨ ವ)

ಒಱಲ್ – **[ಕ್ರಿ]** ಪ್ರೀತಿಸು (ಇಂದ್ರನರೇಂದ್ರವಂದ್ಯನಂ ಒಱಲ್ದು ಎತ್ತಾನುಮೋರೊರ್ಮೆ ಚಿಂತಿಸಿದೊಂಗಂ ಪವಣಿಲ್ಲ ಪುಣ್ಯಂ: **ಆದಿಪು,** ೧. ೩೭); **[ಕ್ರಿ]** ಆಸೆಪಡು (ಪುಸಿಯ ಪರಾಂಗನಾರತದ ಮದ್ಯದ ಮಾಂಸದ ಮೆಯ್ಗೆ ಒಱಲ್ದ ದುರ್ವ್ಯಸನಿಯ ಮಾಡಿದೋದೆ ನಿಮಗಾಗಮಮಾಗಿರೆ ಅಸತ್ಯವಾದಮಂ ಪೊಸಯಿಸಿ: **ಆದಿಪು,** ೨. ೧೧); **[ನಾ]** ಆಸಕ್ತಿ ಹೊಂದು (ನೀಲಾಂಜನೆ ತನ್ನಾಟಮನೊಱಲ್ದು ನೋಡುವ ನೋಟಕರಂ ತವದ ಮಾಟಕ್ಕೆಯಿಂ ಮೋಹಿಸಿದಳ್: **ಆದಿಪು,** ೯. ೩೮); **[ಕ್ರಿ]** ಕಾಮಿಸು (ಒಱಲ್ದು ನಲ್ಲಳೊಳ್ ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋಗಿನ್ನೆನೆ ರೌದ್ರಶಾಪಪರಿತಾಪವಿಳಾಪದೊಳಾ ಮಹೀಶ್ವರಂ: **ಪಂಪಭಾ,** ೧. ೧೧೨)

ಒಱಲ್ಚು – **[ಕ್ರಿ]** ಧ್ವನಿಮಾಡು (ಮಣಿಕಂಠನಾದಂ ಒಱಲ್ಚೆ ಸೇಸೆಯಂ

ತಳಿದರ್ ಅನಂಗಜಂಗಮಲತಾಲಲಿತಾಂಗಿಯರ್: **ಪಂಪಭಾ,** ೪. ೫೯

ಒಱದಟ್ಟಿರ್ತು – **[ಗು]** ಮುದ್ದಿನಿಂದ (ಬಾಲಾರ್ಕನಂ ಪೋಲ್ತು ಭಾಸುರತೇಜೋಧಿಕನಪ್ಪ ಬಾಳನಂ ಒಱಲ್ದಟ್ಟಿರ್ತು ನೋಡುತ್ತುಂ: **ಆದಿಪು,** ೭. ೪೪)

ಒಱಲ್ – **[ಕ್ರಿ]** ಆಸೆಪಡು (ಪುಸಿಯ ಪರಾಂಗನಾರತದ ಮದ್ಯದ ಮಾಂಸದ ಮೆಯೊಱಲ್ದ ದುರ್ವ್ಯಸನಿಯ ಮಾಡಿದೋದೆ: **ಆದಿಪು,** ೨. ೧೧); **[ಕ್ರಿ]** ಪ್ರೀತಿಸು (ಲಲಿತವಧೂರಮ್ಯಸಂಗೀತದಿಂ ರಂಜಿಸೆ ಪೀರ್ದಂ ದಿವ್ಯಭೋಗಾಮೃತರಸಮಂ ಒಱಲ್ದು ಅಟ್ಟೆಯಿಂದಚ್ಯುತೇಂದ್ರಂ: **ಆದಿಪು,** ೬. ೧೮)

ಒಱವು – **[ನಾ]** ಊಟೆ, ಒರತೆ (ಮೇರುವ ಪೊಂ ಕಲ್ಪಾಂಘ್ರಿಪದ

ಆರವೆ ರಸದ ಒಱವು ಪರುಸವೇದಿಯ ಕಣಿ ಭಂಡಾರದೊಳ್

ಉಂಟೆನೆ ಕುಡುವ ಅನಿವಾರಿತ ದಾನಕ್ಕೆ ಪೋಲ್ವರಾರ್ ಬದ್ದೆಗನಂ: **ಪಂಪಭಾ,** ೧. ೨೮)

ಒಱಿ – **[ಕ್ರಿ]** ಸ್ರವಿಸು (ಸೋಂಕಿನೊಳ್ ಒಱೆವ ಇಂದುಕಾಂತ

ಮಣಿಪುತ್ರಿಕೆಯಂದದಿಂ ಒಪ್ಪಿ ತೋಱಿದಳ್: **ಆದಿಪು,** ೪. ೪೯); **[ಕ್ರಿ]** ಸುರಿ, ಜಿನುಗು (ಅತಿವಿಶದವಿಶಾಲ ಊರುಕ್ಷತದಿಂದೊಱಿದನಿತು ಜಡೆಯುಮಂ ನಾಂದಿ ಮನಃಕ್ಷತದೊಡನೆ ಎಚ್ಚರಿಸಿದುದು ಉತ್ಥಿತಮಾ ವಂದಸ್ರಮಿಶ್ರಗಂಧಂ ಮುನಿಯಂ: **ಪಂಪಭಾ,** ೧. ೧೦೫); **[ನಾ]** ಕತ್ತಿಯ ಕವಚ (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒಱೆ ಕರ್ಪಿಡಿದ ಪಣೆಕಟ್ಟು ಕೆಯ್ಪಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್: **ಪಂಪಭಾ,** ೧೦. ೭೧)

ಒಱೆದುರ್ಚು – **[ಕ್ರಿ]** ಒಱೆ, ಸ್ರವಿಸು (ಮಹೋರಗನೆಯ್ದೆ ಪಲ್ಗಳರ್ದೊಡೆ ಕಿಡಿವೀಱೆ ನೆತ್ತರ್ ಒಱೆದುರ್ಚುಗೆ ಕೊಂಡುದು ತತ್ತಪಸ್ವಿಯಂ: **ಆದಿಪು,** ೨. ೪೦)

ಒಟ್ಟು – **[ಕ್ರಿ]** ಪ್ರವಹಿಸು, ಹರಿದು ಹೋಗು (ಜಲಜಲನೆ ಒಟ್ಟುತಿರ್ಪ ಪರಿಕಾಲ್ ಪರಿಕಾಲೊಳ್ ಅಳುರ್ಕೆಗೊಂಡ ನೈದಿಲ ಪೂ .. .. ಸಿರಿ ನೋಡುಗುಮಾ ವನಾಂತರಾಳದೊಳ್: **ಪಂಪಭಾ,** ೧. ೫೨)

ಒಟ್ಟುಡಿ – **[ಕ್ರಿ]** ತುಂಬಿ ಹರಿ (ಕೊಡಗೂಸುತನದ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಡಿಯಲೊಡಗೂಡೆ ಗಂಗೆಯ ಮಡು ಕರೆಗಣ್ಮಿದುದು: **ಪಂಪಭಾ,** ೧. ೯೨);

ಒಟ್ಟುಡಿಯದ – **[ಗು]** ನಿಲ್ಲದ (ಬಿಡದೆ ಅೞಲ್ವ ಬಂಧುಜನದ ಒಟ್ಟುಡಿಯದ ಕಣ್ಣೀರ ಪೂರಂ ಆ ಪ್ರೇತಮಂ ಓಗಡಿಸದೆ ಸುಡುವುದು ಗಡಂ ಇನ್ನುಡುಗುವುದೀ ಶೋಕಮಂ ಸರೋಜದಳಾಯತಾಕ್ಷೀ: **ಪಂಪಭಾ,** ೨. ೨೮)

ಒಟ್ಟುಡಿವೋಗು – **[ಕ್ರಿ]** ಪ್ರವಾಹ ನಿಲ್ಲು (ಸಮಸಂದ ಅಟ್ಟಿಱ್ ಅಲಂಪನೀಯೆ ಶಯನಂ ಘರ್ಮಾಂಬುವಿಂ ನಾನೆ ಮುನ್ನಮೆ ನಾಣೊಟ್ಟುಡಿವೋಗಿ ಸೂಸುವ ಪದಂ ಗಂಗಾಂಬುವಂ ಪೋಲೆ: **ಪಂಪಭಾ,** ೪. ೧೦೯)

ಓ

ಓ – **[ಕ್ರಿ]** ಪ್ರೀತಿಸು (ಧರಾಭರಮನಶೇಷಮಂ ನಿಜತನೂಭವರ್ಗೆ ಓವದೆ ಪಚ್ಚುಕೊಟ್ಟು: **ಆದಿಪು,** ೯. ೭೫); **[ಕ್ರಿ]** ಸಲಹು (ಆವ ಅಲರುಂ ಪಣ್ಣುಂ ಬೀತು ಓವುವು ಗಡ ಬೀಯವಲ್ಲಿ ಮಲ್ಲಿಗೆಗಳುಂ ಇಮ್ಮಾವುಗಳುಂ ಎಂದೊಡೆ ಇಂ ಪೆಱತಾವುದು ಸಂಸಾರಸಾರಸರ್ವಸ್ವಫಲಂ: **ಪಂಪಭಾ,** ೧. ೫೫); **[ಕ್ರಿ]** ಗೌರವ (ಇವರೆಮ್ಮ ಆಚಾರ್ಯರೆಂದೋವದೆ ಏರ್ವೆಸನಂ ಮಾಣದೆ ಕೈದುಗೊಳ್: **ಪಂಪಭಾ,** ೧. ೭೮); **[ಕ್ರಿ]** ಕಾಮಿಸು (ಸನ್ನತದಿಂ ರತಕ್ಕೆಳಸಿ ನಲ್ಲಲೊಳೋತು ಒಡಗೂಡಿದೆನ್ನನಿಂತು ಅನ್ನೆಯಂ ಎಚ್ಚುದರ್ಕೆ ಪೆಱತಿಲ್ಲದು ದಂಡಂ: **ಪಂಪಭಾ,** ೧. ೧೧೨); **[ಕ್ರಿ]** ಕಾಪಾಡು (ಏರ್ದೆಯೊಳ್ ತಡಮಾಡೆ ಬೇಟದುದ್ದಾನಿಯನಾನೆ ಮನ್ಮಥಮಹೀಭುಜನೋವದೆ ತೋಱಿಕೊಟ್ಟುದೊಂದಾನೆಯೆ: **ಪಂಪಭಾ,** ೪. ೫೮); **[ಕ್ರಿ]** ಉಪಚರಿಸು (ಅೞಿಯೆ ನೊಂದ ತಮ್ಮ ಅಣುಗಾಳ್ಗಳ ಕೊಂಡಾಟದಾನೆಗಳ ನಚ್ಚಿನ ಕುದುರೆಗಳ ಪುಣ್ಗಳಂ ಉಡಿಯಲುಂ ಓವಲುಂ ಮರ್ದುಬೆಜ್ಜರುಮಂ ಅಟ್ಟುತ್ತುಂ: **ಪಂಪಭಾ,** ೧೧. ೨ ವ)

ಓ ಓ – **[ಅ]** ಕಾಪಾಡಿ ಕಾಪಾಡಿ (ಆವರಿಸಿತ್ತೊ ನಭೋಂತರ್ಭೂವಿವರಮಂ ಅಮರ್ದಿನೆಸಕಂ ಎನೆ ಬಿರಯಿಗಳ್ ಓ ಓ ಇದು ಮದನನ ಸೋದನದೀವಿಗೆಯೆನೆ ತೊಳಗಿ ಬೆಳಗಿದುದು ತುಹಿನಕರಂ: **ಪಂಪಭಾ,** ೪. ೫೨)

ಓಕುಳಿ – **[ನಾ]** ಬಣ್ಣದ ನೀರು (ಮುತ್ತಿನ ಪಚ್ಚೆ ಮಾಣಿಕದ ವಜ್ರದ ಕೇಱಿಯೊಳ್ ಒಂದಿ ಸಾಂದಿನೊಳ್ ಕತ್ತುರಿಯೊಂದು ಕೋಟೆಸಱಿೊಳ್ ಓಕುಳಿ ಚಂದನ ಗಂಧವಾರಿಯೊಳ್ ಸುತ್ತಲುಂ ಅಟ್ಟಿಱಿ ಪಡೆವ ಗೇಯದ ಪೆಂಪಿನ ಅಲಂಪಂ ಆರ್ಗಂ ಆರ್ತಿತ್ತುದು ಪಟ್ಟಬಂಧ ಮಹೋತ್ಸವಂ ಆ ಪಡೆಮೆಚ್ಚೆ ಗಂಡನಾ: **ಪಂಪಭಾ,** ೧೪. ೨೦)

ಓಗಂಬಾಡು – **[ನಾ]** ಸುಪ್ರಭಾತ ಹಾಡು (ನಿನಗೆ ಓಗಂಬಾಡುವ ಯುವತಿನಿಕಾಯದ ದನಿಗೆ ಸೆಣಸುವಂತೆವೋಲ್ .. .. ಮೊರೆವುವಳಿಗಳ ಬಳಗಂ: **ಆದಿಪು,** ೧೨. ೫೦)

ಓಗಡಿಸು – **[ಕ್ರಿ]** [ಓಗಡ+ಇಸು; ಓಗಡ<(ಪ್ರಾ) ಓಕ್ಕಡ್ಡ< (ಸಂ) ಅಪಕೃಷ್ಟ] ಹಾಳಾಗು (ಮೂರ್ಖಜಡಜನಾರಣ್ಯದೊಳ್ ಇಂಪು ಓಗಡಿಸಿದ ಕವಿಶಬ್ದಮದು ಏಗೆಯ್ದುದು ಅರಣ್ಯರುದಿತಂ ಬಗೆವಾಗಳ್: **ಆದಿಪು,** ೧. ೨೩); **[ಕ್ರಿ]** ಬೇಸರ ತೋರು (ಪೂಮಾಲೆಯಂ ಓಗಡಿಸದೆ ಕುಡುವಮರಿ ಕಲ್ಪಲತೆಯಂ ಪೋಲ್ತಳ್: **ಆದಿಪು,** ೭. ೧೧); **[ಕ್ರಿ]** ತಡೆದುಕೊ (ಅಗಲ್ವೆಡೆಯೊಳ್ ಇನ್ನಿರೆನೆಂದೊಡೆ ಕಣ್ಣ ನೀರ್ಗಳಂ ಓಗಡಿಸದೆ ಸೂಸೆ ಗಗ್ಗರಿಕೆಗೊಂಡುದನಾಂ ನೆನೆವೆಂ ಲತಾಂಗಿಯಾ: **ಆದಿಪು,** ೧೨. ೩೨); **[ಕ್ರಿ]** ಅಸಹ್ಯಪಡು (ಕಣ್ಣೀರ ಪೂರಂ ಆ ಪ್ರೇತಮಂ ಓಗಡಿಸದೆ ಸುಡುವುದು ಗಡಂ ಇನ್ನುಡುಗುವುದೀ ಶೋಕಮಂ: **ಪಂಪಭಾ,** ೨. ೨೮); **[ಕ್ರಿ]** ಹಿಂಜರಿದು ಹೋಗು (ಮುಗಿಲ್ಗಳ ಕರ್ಪು ಪೀನಂ ಓಗಡಿಸಿದುದು ಇಂದುಮಂಡಲದ ಕರ್ಪೆಸೆದತ್ತು: **ಪಂಪಭಾ,** ೭. ೬೯); **[ಕ್ರಿ]** ಹೋಗಲಾಡಿಸು, ಕೆಡಿಸು (ನಡೆದುದು ಬಾಳಕಾಲದೊಳೆ ತೊಟ್ಟು ಎನಗೆ ಅಂಕದ ಶೌಚವೀಗಳ್ ಓಗಡಿಪುದೆ: **ಪಂಪಭಾ,** ೧೧. ೪೬)

ಓಗರಗಂಪು – **[ನಾ]** ಬೆರಕೆ ಗಂಧ, ಸಮ್ಮಿಶ್ರಗಂಧ (ಜೊಂಪದಲರ್ವಾಸುಗಳೊಳ್ ನೆಲಸಿತ್ತು ಪೂತ ಗೊಜ್ಜಗೆಗಳ ಸಿಂದುರಂಗಳೊಳಗೆ ಓಗರಗಂಪನೆ ಬೀಱುತಿರ್ಪ: **ಪಂಪಭಾ,** ೫. ३೦)

ಓಗರವೂ – **[ನಾ]** ಬೆರಕೆ ಹೂ (ಓಗರವೂಗಳ ಬಂಡಂ ಎಯ್ದೆ ಪೀರುತ್ತ ಒಡವಂದುವು ಇಂದ್ರವನದಿಂ ಮಱಿದುಂಬಿಗಳ್; **ಪಂಪಭಾ,** ೧೧. ೮೧)

ಓಘ – **[ನಾ]** ಚಲಿಸುವ ಸಮೂಹ (ಪೌರಾಂಗನಾ ವಶೀಕರಣ ಚೂರ್ಣಮಾದುದು ಬಳೌಘಧೂಳೀಚಯಂ: **ಆದಿಪು,** ೧೧. ೧೫)

ಓಘಪ್ರತೀತ – **[ನಾ]** ಪರಂಪರೆಯಲ್ಲಿ ಪ್ರಸಿದ್ಧವಾದ (ಅತನುರಸೋಪೇತ ವಿಳಂಬಿತ ಮಧ್ಯ ದ್ರುತಲಯಂಗಳೊಳ್ ಲಕ್ಷಣಸಂಯುತ ತತ್ತ್ವಾನುಗತೌಘಪ್ರತೀತವಾದ್ಯಂಗಳೆಸೆದುವು: **ಆದಿಪು,** ೯. ೨೩)

ಓಘಮೇಘಮಾಗು – [ಕ್ರಿ] ಧಾರಾಕಾರ ಸುರಿ (ಮೇಘಮುಖರೆನಿಸಿ ಸಂದುರಗೌಘದಿನಂದು ಓಘಮೇಘಮಾದೊಡೆ ಮಱ್: **ಆದಿಪು,** ೧೪. ೭೧)

ಓಜ – [ನಾ] ಒವಜ [ಉಪಾಧ್ಯಾಯ] ಗುರು (ಮತ್ತುಱಿದ ವಿದ್ಯೆಗಳ್ ಓಜರೆ ಚಟ್ಟರ್ ಎಂಬಿನಂ ನೆರೆದುವು ಗಳ ತನ್ನೊಳಾರ್ ದೊರೆ ಗುಣಾರ್ಣವನಂತು ಕುಶಾಗ್ರಬುದ್ಧಿಗಳ್: **ಪಂಪಭಾ,** ೨. ३४)

ಓಜನ ಸಾಲೆ – [ನಾ] ವಾಜರಶಾಲೆ, ಕಮ್ಮಾರನ ಸಾಲೆ (ಆಗಳ್ ಆಱುಂ ಋತುಗಳ ಪೂಗಳಂ ಒಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದ ಓಜನ ಸಾಲೆಯಿರ್ಪಂತಿರ್ಪ ಪೂವಿನ ಸಂತೆಯೊಳ್: **ಪಂಪಭಾ,** ೪. ೮೦ ವ)

ಓಜೆ – [ನಾ] ಧಾಟಿ (ತಂದೆಯ ಚೆಲ್ವೆ ತಂದೆಯೊಂದಂದಮೆ ತಂದೆಯೊಂದು ನಿಡಿಯ ಓಜೆಯೆ ತನ್ನೊಳಮರ್ಕೆವೆತ್ತುದು: **ಆದಿಪು,** ೮. ೪३); [ನಾ] ಕ್ರಮ (ಯಥಾ ರಾಜಾ ತಥಾ ಪ್ರಜಾ ಎಂಬವೊಲ್ ಓಜೆಗೊಂಡು ಧರ್ಮಪ್ರಿಯರಾದರ್ ಪ್ರಜೆಗಳುಂ: **ಆದಿಪು,** ೧೬. ೪೦); [ನಾ] ರೀತಿ (ಒದವಿದ ನೂಲ ತೊಂಗಲುಲಿ ದೇಸೆಯನಾಂತು ವಿಳಾಸದಿಂದಿಱುಂಕಿದ ನಿಜೆ ಗಂಡರಳ್ಳೆರ್ದೆಗಳಂ ತುಱಿವೋಜೆಯನುಂಟುಮಾಡುವಂದದೆ: **ಪಂಪಭಾ,** ೪. ३೫)

ಓಜೆಗೊಳ್ – [ಕ್ರಿ] ಕ್ರಮ ಅನುಸರಿಸು (ಯಥಾ ರಾಜಾ ತಥಾ ಪ್ರಜಾ ಎಂಬವೊಲ್ ಓಜೆಗೊಂಡು ಧರ್ಮಪ್ರಿಯರಾದರ್ ಪ್ರಜೆಗಳುಂ ಸಮಸ್ತಾವನಿಯೊಳ್: **ಆದಿಪು,** ೧೬. ೪೦)

ಓಡ – [ನಾ] ತೆಪ್ಪ, ದೋಣಿ (ಸಾಸಿರ್ವರ್ ಏಱೆದೊಡಲ್ಲದೆ ಈ ಓಡಂ ನಡೆಯದು ಎಂಬುದುಂ ಆಂ ಅನಿಬರ ಬಿಣ್ಪುಮಪ್ಪಂ ಏಱೆಸೆಂದೊಡೆ ಗೆಯ್ವಂ ಎಂದೊಡಂ ಏಱೆಸಿ ನಡೆಯಿಸುವಲ್ಲಿ: **ಪಂಪಭಾ,** ೧. ೬೮ ವ)

ಓಡು – [ಕ್ರಿ] ಪರಿಹಾರವಾಗು (ಚಾಗಂ ಎಡಱೋಡುವಿನಂ ಪೊರೆದೊಳ್ಪೆಗಱ್ತೆಯೊಳ್ ತೊಡರ್ದಿರೆ ವೃದ್ಧರಾಜ್ಯಮುಂ ಅದೇನೆಸೆದತ್ತೊ ನಭಶ್ಚರೇಂದ್ರನಾ: **ಆದಿಪು,** ೨. ೨೪); [ನಾ] ತಲೆಯ ಚಿಪ್ಪು (ವಜ್ರಮುಷ್ಟಿಯ ಪೊಯ್ಗೊಳಂ ಬಾಳ ಕೋಳೊಳಮ್ ಉಚ್ಚಳಿಸಿದ ಕಪಾಲದ ಓಡುಗಳಂ ಗಂಗೆಗಟ್ಟುತ್ತುಂ: **ಪಂಪಭಾ,** ೧೧. ೨ ವ)

ಓದಱಿವರ್ – [ನಾ] ವಿದ್ಯಾವಂತರು, ಶಾಸ್ತ್ರಪಾರಂಗತರು (ನೋಂತುಂ ಓದಱಿವರ ಪೇೞ್ದ ನೋಂಪಿಗಳಂ ಒರ್ಮೆ ಪಲರ್ಮೆಯುಮಿಂತು ತಮ್ಮ ಮೆಯ್ಮಱಿವಿನಂ ಇರ್ವರುಂ ನಮೆದರ್ ಏನವರ್ಗಾದುದೊ ಪುತ್ರದೋಹಳಂ: **ಪಂಪಭಾ,** ೧. ೧३೫)

ಓದಿ ಓದಿ – [ಕ್ರಿ] ಮತ್ತೆ ಮತ್ತೆ ಉಚ್ಚರಿಸಿ (ಜ್ಞಾನದಿನಿರ್ದು ನಿಟ್ಟಿಪೊಡೆ ದಿವ್ಯಮುನೀಂದ್ರಂ ಕೊಟ್ಟ ಮಂತ್ರಸಂತಾನಮನೋದಿಯೋದಿ ಯಮರಾಜನನದ್ಭುತತೇಜನಂ ಸರೋಜಾನನೆ ಜಾನದಿಂ ಬರಿಸೆ: **ಪಂಪಭಾ,** ೧. ೧೧೯)

ಓದಿದರ್ – [ನಾ] ಓದಿದವರು (ಪೊಸವೇಟದ ಅಲಂಪುಗಳೆಲ್ಲ ಓದಿದರ್ಗೆ ಇದಱ ಅನುಯಾಯಿಗಳ್ಗೆ ಎಸೆವ ಉದಾರಗುಣಂ: **ಪಂಪಭಾ,** ೧೪. ೬३)

ಓದಿಸು – [ಕ್ರಿ] ವಿದ್ಯೆ ಕಲಿಸು (ನಡಪಿಯುಂ ಓದಿಸಿಯುಂ ಬಿಲ್ವಿಡಿಸಿಯುಂ: **ಪಂಪಭಾ,** ೨. ೯೬)

ಓದು – [ಕ್ರಿ] ಲೆಕ್ಕಹಾಕು (ಕರಣಂ ರೇಚಕಂ ಅಂಗಹಾರಂ ಇನಿತೆಂದು ಓದುತ್ತುಂ ಇರ್ಪ ಓದು ಅದತ್ತಿರಲಿ ಈ ನಾಟ್ಯರಸಂ ಸಮಸ್ತ ಸುರವೃಂದಾಧೀಶನಿಂದಂ ಪೊನಲ್ವರಿದತ್ತು: **ಆದಿಪು,** ೭. ೧೨೦); [ಕ್ರಿ] ಪಠಿಸು, ಹೇಳು (ಅಂತು ಕಂಡು ಮುನಿಕುಮಾರರೋದುವ ವೇದನಿನಾದದಿಂ ವಿಗತನಿದ್ರೆಯಾಗಿ ಪಾಂಡುರಾಜಂಗಂ ಅಲ್ಲಿಯ ಮುನಿಜನಂಗಳ್ಗಂ ಅಱಿಪಿದೊಡೆ ಅವರಾ ಕನಸುಗಳ್ಗೆ ಸಂತೋಷಂಬಟ್ಟು: **ಪಂಪಭಾ,** ೧. ೧೪೦ ವ); [ನಾ] ವಿದ್ಯೆ (ಉಳ್ಳ ಓದುಗಳೊಳಗೆ ಎನಿತಱಿವುಳ್ಳರ್ಗಂ ತಿಳಿಪಲರಿಯದೆನಿಪ ಎಡೆಗಳುಮಂ ತೆಳ್ಳಿಗಿರೆ ತಿಳಿಪುಗುಂ ಬೆಸಗೊಳ್ಳ ಗುಣಾರ್ಣವನ ಲೆಕ್ಕಮಂ ಪೊಕ್ಕಮುಮಂ: **ಪಂಪಭಾ,** ೨. ३೫); [ಕ್ರಿ] ವಿದ್ಯೆ ಕಲಿ (ನಾಮೆಲ್ಲಂ ಒಂದೆ ಗರಡಿಯೊಳ್ ಓದಿದ ಮಾನಸರೆವು: **ಪಂಪಭಾ,** ೯. ४८ ವ)

ಓಪ – [ನಾ] ಪ್ರಿಯಕರ, ಪ್ರಣಯಿ (ನಲ್ಮೆಯೊಳಟ್ಟಿ ಕಣ್ಣ ನೀರ್ಗಳ ಪೊನಲಿಂದೆ ಕರ್ಚಿ ಕಳೆದಂತಿರೆ ಪೋದುದು ಕೋಪಮೋಪನಾ: **ಆದಿಪು,**

ಓಪರ್ – ಪ್ರಿಯ–ಪ್ರೇಯಸಿಯರು (ಬಿಡದೆ ಪೊಗೆ ಸುತ್ತೆ ತೋಳಂ ಸಡಿಲಿಸದೆ ಆ ಪ್ರಾಣವಲ್ಲಭರ್ ಪ್ರಾಣಮಂ ಅಂದು ಒಡಗಳೆದರ್ ಓಪರ್ ಓಪರೊಳ್ ಒಡಸಾಯಲ್ ಪಡೆದರ್ ಇನ್ನವೇಂ ಸೈಪು ಒಳವೇ: **ಆದಿಪು,** ೫. ೨೪)

ಓಪಳ್ – [ನಾ] ನಲ್ಲೆ (ಅದಂ ಒಂದು ಕದಳೀಪತ್ರದೊಳ್ ಪುದಿದು ತನ್ನ ನಡಪಿದ ಗಿಳಿಯ ಕೈಯೊಳ್ ಓಪಳಲ್ಲಿಗೆ ಅಟ್ಟಿದೊಡೆ: **ಪಂಪಭಾ,** ೧. ೬೮ ವ)

ಓರಂತೆ – [ಅ] ತಕ್ಕನಾಗುವಂತೆ (ಕಾಮದೇವನಾಸ್ಥಾನಮೆನಿಸಲಿದು ಓರಂತೆ ನೆರೆದುದೆನೆ ಜನಸಮೂಹಂ: **ಆದಿಪು,** ೪. ३೦ ವ); [ಅ] ಒಂದೇ ಸಮನಾಗಿ (ಚಿಂತಾಶೋಕವಿಷಾದ ಭ್ರಾಂತಿಸಮುದ್ಭೂತ ದುಃಖದಿಂ ನರಕದೊಳ್ ಓರಂತೆ ವಲಂ ಮಾನಸಗತಿ: **ಆದಿಪು,** ೯. ४೯)

ಓರಡಿ – [ನಾ] ಒಂದು ಹೆಜ್ಜೆ (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏಱುತಿರೆ: **ಪಂಪಭಾ,** ३. ೯)

ಓರಣ – [ನಾ] ಕ್ರಮ (ತೆಗೆನೆಱೆದು ಎಚ್ಚೆಚ್ಚು ಓರಣದೊಳ್ ಚೇಕಿತ್ತನಂ ಆರುಂ ಅಗರ್ವಿಸೆ ಘಟೋದ್ಭವಂ ತಱಿದಾರ್ದಂ: **ಪಂಪಭಾ,** ೧೧. ೬೦)

ಓರನ್ನರ್ – [ನಾ] ಒಂದೇ ಬಗೆಯವರು, ಸಮಾನರು (ಎನ್ನನೆ ನಚ್ಚಿದಂ ಅನುವರಕೆ ಎನ್ನನೆ ಪೂಣಿಸಿದಂ ಎನಗೆ ಎರಟ್ಟಿಂಡಮುಂ ಓರನ್ನರೆ: **ಪಂಪಭಾ,** ೧೦. ೧೨)

ಓರನ್ನವು – [ನಾ] ಒಂದೇ ಪ್ರಮಾಣದವು (ವಾರಾಶಿಯೊಳಿನ್ನವು ಮುತ್ತೋರನ್ನವು ಪಡೆಯಲಾಗವತಿತರಳತರತ್ತಾರಾಹಾರಂ: **ಆದಿಪು,** ೧೨. ೧೧೮)

ಓರೊಂದು – [ನಾ] ಒಂದೊಂದು (ಪದಿನಾಲ್ಕುಮಂ ಓರೊಂದನೆ ತೋಱ್ ನಿಜಾದರದಿಂ ಭರತೇಶ್ವರಂಗೆ ದಿವಿಜಂ ಕೊಟ್ಟಂ: **ಆದಿಪು,** ೧३. ३೧)

ಓರೊರ್ಮೆ – [ಅ] ಒಂದೊಂದು ಬಾರಿ (ಪೆಸರ್ಗೊಂಡು ಇಂದ್ರನರೇಂದ್ರವಂದ್ಯನನೊಱಲ್ದೆತ್ತಾನುಂ ಓರೊರ್ಮೆ ಚಿಂತಿಸಿದೊಂಗಂ ಪವಣಿಲ್ಲ ಪುಣ್ಯಂ: **ಆದಿಪು,** ೧. ३೭)

ಓಲಗ – [ನಾ] [ಅವಲೋಕ] ರಾಜಸೇವೆ (ಈ ಭವಗೆಡಿಸುವ ಓಲಗಕ್ಕೆ ಅಭವ ಬೇಸಱಿಂ ಪೋಕೆ ಪೋ ಭವಂ ಭವದುಪಾಂತದಲ್ಲಿಯೆ ಮನೋಭವಧ್ವಂಸಕಾ: **ಆದಿಪು,** ೧೩. ೮೭); [ನಾ] ರಾಜಸಭೆ (ಅಂತು ಪಸೆದು ಅನ್ನವಾಸದ ಓಲಗದೊಳಿರ್ದನಾಗಳ್ ಹರಿಗಂ: **ಪಂಪಭಾ,** ೩. ೮೦)

ಓಲಗಂಗುಡು – [ಕ್ರಿ] ಸಮಾಲೋಚನೆ ನಡೆಸು (ವಿದ್ವಿಷ್ಟವಿದ್ರಾವಣನುಂ ಭೀಮ ಯುಧಿಷ್ಠಿರ ನಕುಳ ಸಹದೇವರುಮಯ್ವರುಂ ಬೆರಸು ಒಂದು ದಿವಸಂ ಓಲಗಂಗೊಟ್ಟಿರೆ: **ಪಂಪಭಾ,** ೬. ೨ ವ)

ಓಲಗಕಾಱ – [ನಾ] ಸೇವಕ (ಮೃಗದ ಒಲವರಮುಮಂ ಅರಸನ ಬಗೆಯುಮಂ ಅಱಿದು ಅಲಸದೆ ಎಳಸಿ ಓಲಗಿಸಲ್ ನೆಟ್ಟನೆ ಬಲ್ಲನುಳ್ಳೊಡೆ ಅವನಲ್ತೆ ಗುಣಾರ್ಣವ ಬೇಂಟೆಕಾಱಂ ಓಲಗಕಾಱಂ: **ಪಂಪಭಾ,** ೫. ೪೨)

ಓಲಗವುರುಡು – [ನಾ] ರಾಜಸಭೆಯಲ್ಲಿ ನಡೆಯುವ ಸ್ಪರ್ಧೆ (ಚಲದಿನೆನ್ನೊಳೆ ಪೊಂಗಿ ಪೊಡರ್ಪುದೋರ್ಪಂ ಓಲಗವುರುಡಿಲ್ಲ ಮೆಚ್ಚವಣಿಗಿಲ್ಲ ಕರಂ ಮುಳಿಸಿಲ್ಲ ಕಾಯ್ದು ಕೆಮ್ಮಗೆ ಬಟಿಸಂದು ಕೊಂದಪಂ: **ಆದಿಪು,** ೧೨. ೩೩)

ಓಲಗಶಾಲೆ – [ನಾ] ರಾಜಸಭಾಂಗಣ (ಬಳ್ವಳಬಳೆದೆಳದಳಿಸುವ ಪೊಸಗೆಂದಳಿರ ಗೊಂದಳದೊಳೆ ಸಂದಣಿಸಿದಶೋಕಲತೆಯ ಓಲಗಶಾಲೆಯೊಳಗಣ ಕಪ್ಪುರವಳುಕಿನ ಜಗುಲಿಯ: **ಆದಿಪು,** ೧೧. ೭೩ ವ)

ಓಲಗಿಸು – [ಕ್ರಿ] ಸೇವೆಮಾಡು (ಮಗಮಗಿಪ ಜಾದಿ ಪೊಂಗೇದಗೆ ಮಲ್ಲಿಗೆಯೆಂಬ ಪಲವು ಪೂಮಾಲೆಗಂ ಬಗೆಯಱಿದು ಓಲಗಿಪುದು: **ಆದಿಪು,** ೫. ೩೬); [ಕ್ರಿ] ಓಲೈಸು, ವಿನಯ ವ್ಯಕ್ತಪಡಿಸು (ತನ್ನ ಪವಡಿಸುವ ಮಾಡಕ್ಕೆ ಒಡನೊಡನೋಲಗಿಸುತ್ತುಂ ಬಂದ ಪಂಡಿತರ್ಕಳುಮಂ ಉಚಿತ ಪ್ರತಿಪತ್ತಿಗಳಿಂ ವಿಸರ್ಜಿಸಿ: **ಪಂಪಭಾ,** ೪. ೬೯ ವ)

ಓಲಾಡು – [ಕ್ರಿ] ದೇಹವನ್ನು ಬಳುಕಾಡಿಸು (ನಂದೆ ಅಪರನಂದೆ ಅಶ್ವಿನಿ ಮಹಾನಂದೆ ಎಂಬ ತೀರ್ಥಜಲಂಗಳೊಳ್ ಓಲಾಡುತ್ತುಂ ಉದ್ವೃತ್ತ ರಿಪು ನೃಪತಿಗಳಂ ಏಸಾಡುತ್ತುಂ ಅಲ್ಲಿಂ ತಳರ್ದು: **ಪಂಪಭಾ,** ೪. ೧೮ ವ)

ಓಲೆ – [ನಾ] ಸಂದೇಶ (ನಿನತೊಂದೋಲೆಗೆ ತೀರ್ವುದೊಂದು ಮನೆವಾರ್ತೆಗಿದೇನೆಂದರಸ ಬಳೆಯೆ ನುಡಿದಪೆ: **ಆದಿಪು,** ೧೪. ೩೦); ಕಿವಿಯ ಆಭರಣ (ನೀನೆನ್ನೋಲೆಯ ಕಡಗದಟಿವನೇಂ ನೋಡಿದಪಾ: **ಪಂಪಭಾ,** ೧೦೧ ೧೨೩)

ಓಲೆಯ ಕಡಗದ ಅಟಿವು – ಓಲೆ ಬಳೆಗಳ ನಾಶ, ಮುತ್ತೈದೆತನದ ನಾಶ (ಅಟಿಯಲ್ ನಿನ್ನಯ ಮಯ್ದುನನಂ ಅರ್ಜುನಂ ಪೂಣ್ದಂ .. .. ಎನ್ನ ಓಲೆಯ ಕಡಗದ ಅಟಿವನೇಂ ನೋಡಿದಪಾ: **ಪಂಪಭಾ,** ೧೧. ೧೨೩)

ಓಲೆವಾಗ್ಯ – [ನಾ] ಓಲೆಯ ಭಾಗ್ಯ, ಮುತ್ತೈದೆತನ (ನಾಳೆ ಮಗುಟ್ದು ಬಂದು ಎನ್ನೊಳ್ ನೆರೆವೆ ಎಂದು ಪೇೞ್ ನಿನಗಱಿವುಂಟೆ ಎಂದು ಕೇಳೆ ಎನ್ನ ಓಲಗೆವಾಗ್ಯಮುಂಟು ಎಂದಳ್: **ಪಂಪಭಾ,** ೧೦. ೪೪ ವ)

ಓವರಿ – [ನಾ] [ಅಪವರಕ] ಕೋಣೆ (ಪುರೋಚನನುಂ ಆ ಮನೆಯೊಳ್ ಒಂದು ಓವರಿಯೊಳ್ ಮಱಿಕೆಂದಿದಂ: **ಪಂಪಭಾ,** ೩. ೪ ವ)

ಓವು – [ಕ್ರಿ] [√ಓ] ಕಾಪಾಡು (ಬಡನೆನಿಸದೆ ಓವಿ ಜೀವಮನಡಕಂಬೆರಸು ಅಯ್ದುಸಮಿತಿಯೊಳ್ ಮುನಿ ನೆಗಟ್ದಂ: **ಆದಿಪು,** ೬. ೨೮)

ಓವೆನಲ್ – [ಓ+ಎನಲ್] ಓ ಎಂದು ಕೂಗಲೂ (ಆಜಿಯೊಳ್ ಭಯಂಕರತರಮಪ್ಪಿನಂ ಪಗೆವರೊಕ್ಕಲ್ ಓವೆನೆನಲ್ ಒರ್ವರಿಲ್ಲದಂತಿರೆ: **ಪಂಪಭಾ,** ೯. ೫೭)

ಓವೊಲವು – [ನಾ] ಒಲಿಯುವ ಪ್ರೇಮ (ನಾಟ್ನುಡಿಯೆನೆ ಕೇಳ್ದನಿನ್ನೆವರಂ ಓವೊಲವೆಂಬುದಿದಂತುಟಾಗದೇ: **ಆದಿಪು,** ೧೨. ೪೦)

ಓವೋ – [ಅ] ಆಶ್ಚರ್ಯ–ದುಃಖಸೂಚಕ ನಿಪಾತಾವ್ಯಯ (ಓವೋ ಲಂಪಳರ್ ಎಮ್ಮೊಂದಿಗರಂ ಬಗೆವಂದದೆಕೊಂದಿಕ್ಕವೆ ಸಕಳವಿಷಯವಿಷಮವಿಷಂಗಳ್: **ಆದಿಪು,** ೪. ೭೩);

ಓಷಧಿ – [ನಾ] ಸಸ್ಯ (ಆಯುಷ್ಯಾವಸಾನದೊಳ್ ಓಷಧಿಗಳಂತೆ ಫಳಪಾಕಾಂತದೊಳ್ ಕ್ಷುತವಿಜೃಂಭಣವ್ಯಾಜದಿಂ ಲೋಕಾಂತರಿತರಾಗಿ: **ಆದಿಪು,** ೫. ೬೯ ವ)

ಓಷಧಿದ್ರುಮ – [ನಾ] ಔಷಧವೃಕ್ಷ (ದಿವದಿನಿಟಿದೋಷಧಿದ್ರುಮಂ ಅವನೀತಳಮನುಜಮರಣಜನ್ಮಜರಾಸಂಭವಭಯಮಂ ಕಿಡಿಸಿ: **ಆದಿಪು,** ೧೬. ೪೨)

ಓಷ್ಠ – [ನಾ] ತುಟಿ (ಅಂದು ಅಪಗತ ತಾಲು ಓಷ್ಠಸ್ಪಂದನಂ ಅಸ್ಪೃಶ್ಯಕರಣವರ್ಣಂ ಜಗದಾನಂದಕರಂ ಜಳಧರರವ ಸೌಂದರಂ: **ಆದಿಪು,** ೧೦. ೬೩)

ಓಷ್ಠಪುಟಸಂದಂಶ – [ನಾ] ಹಲ್ಲುಮುಡಿ ಕಚ್ಚುವುದು (ಉದಾರ ವೀರಚರಿತನಿರತಕದನಕರ್ಕಶಕ್ಷತ್ರಿಯಂಗೆ .. .. ನಿರರ್ಥಕ ನಿಷ್ಠುರ ಓಷ್ಠಪುಟಸಂದಂಶಮುಂ .. .. ನಿರಾಲಂಬನವಾಗಾಡಂಬರಮುಂ ತಕ್ಕುದಲ್ತು: **ಆದಿಪು** ೧೪. ೮೧ ವ)

ಓಸರಿಸು – [ಕ್ರಿ] ಓರೆ ಮಾಡು, ಓರೆಯಾಗು (ಕರ್ಣಪೂರ ಪಾರಿಜಾತಸ್ತಬಕಮಂ ಓಸರಿಸುವ ವಿಳಾಸಮುಂ: **ಆದಿಪು,** ೪. ೯ ವ); [ಕ್ರಿ] ಸಿದ್ಧನಾಗು (ಓಸರಿಸಿದ ಜವನಿಕೆಯೊಡನೆ ಓಸರಿಸಿದಂ ಇಸಲೆ ಕಂತು ಪುಷ್ಪಾಂಜಳಿಯಂ ಸೂಸಿದ ಪದದೊಳೆ ಸಭೆಗಂ ಸೂಸಿದಂ ಒಡನೊಡನೆ ನನೆಯ ಮೊನೆಯಂಬುಗಳಂ: **ಆದಿಪು,** ೯. ೨೧); [ಕ್ರಿ] ಪಕ್ಕಕ್ಕೆ ತಳ್ಳು (ಮಿಳಿರ್ವ ಕುರುಳ್ಗಳೊಳ್ ತೊಡರ್ದು ದೇಶಿಯನಾವಗಮೀವ ಚೆನ್ನ ಪೂಗಳಂ ಅವನೊಯ್ಯನೋಸರಿಸುತುಂ: **ಪಂಪಭಾ,** ೨. ೧೭)

ಓಳಿ – [ನಾ] ಸಾಲು, ಸಮೂಹ (ಎರಡು ಓಳಿಯೊಳಂ ಮೊದಲೊಳ್ ಭರತೇಶ್ವರಬಾಹುಬಲಿಗಳಿರೆ ಮತ್ತಿನ ಪುತ್ರರು ಅವರ ಕೆಲದೊಳಿರೆ: **ಆದಿಪು,** ೯. ೩); [ನಾ] ಓರಣ, ಕ್ರಮ (ಕೌರವನಾಯಕನ ಊರುಭಂಗಮೊಂದಲ್ಲದೆ ಎಲ್ಲಮಂ ನೆಱಪಿದೆಂ ಗಡಂ ಓಳಿಯೆ ಕೇಳಿಮ್ ಎಲ್ಲರುಂ: **ಪಂಪಭಾ,** ೧೨. ೧೬೧)

ಓಳಿದೋರಣ – [ನಾ] ಸಾಲು ತೋರಣ (ಓಳಿದೋರಣಮಾಯ್ತು ಹಾರದ ಪಚ್ಚೆಸಾರದ ಮಾಲೆ ಸೌಧಾಳಿಯ ಒಳ್ಗುಡಿಯಾಯ್ತು ಚೀನದ ಸೂಯಿಯಾಣದ ಬಟ್ಟೆ: **ಪಂಪಭಾ,** ೧೪. ೧೫)

ಓಳಿವಡು – [ಕ್ರಿ] ಗುಂಪುಗೂಡು (ತೆರೆಗಳ ಬಂಬಲಂ ಮಿಳಿರ್ವ ಕೇತನರಾಜಿಗಳ ಓಳಿವಟ್ಟ ಬೆಳ್ನೊರೆಗಳ ಪಿಂಡನೆತ್ತಿಸಿದ

ಬೆಳ್ಗೊಡೆಗಳ್: **ಪಂಪಭಾ,** ೩. ೬೮); **[ಕ್ರಿ]** ಸಾಲಾಗಿ ಬರು (ಪದೆವೆರ್ದೆ ಬತ್ತೆ ಕೆತ್ತುವಧರಂ ದೆಸೆಗೆಟ್ಟು ಅಲರ್ಗಣ್ಣ ನೋಟಂ ಉಣ್ಮಿದ ಬೆಮರ್ ಓಳಿವಟ್ಟ ನಿಡುಸುಯ್ ತೊದಳಿಂಗೆಡೆಗೊಂಡ ಮಾತು: **ಪಂಪಭಾ,** ೪. ೬೦)

ಓಳಿವಡೆ – **[ಕ್ರಿ]** ಸಾಲುಗಟ್ಟು (ನೆಲೆಮಾಡಂಗಳೊಳ್ ಓಳಿವಟ್ಟ ಗುಡಿಗಳ್ ಗಂಧಾಬುವಿಂದಾದ ಪೂವಲಿಯಿಂ ಚೆಲ್ವೆಸೆದಿರ್ದ ಬೀದಿಗಳ್: **ಆದಿಪು,** ೭. ೧೧೩)

ಔ

ಔಂಕು – **[ಕ್ರಿ]** ಅಮುಕು (ಚಕ್ರರತ್ನಮಂ ಮುಂದಿಟ್ಟು ಮಧ್ಯಮಖಂಡಮುಮಂ ಔಂಕಿ ಪೂಟಿ ಪೊಕ್ಕವಷ್ಟಂಭಿಸಿ ನಿಂದಾಗಳ್: **ಆದಿಪು,** ೧೩. ೫೬ ವ)

ಔಘ – **[ನಾ]** ಗುಂಪು (ನೀರಂ ಕುಡಿದು ಪದ್ಮಪತ್ರೌಘಂಗಳಿಂ ತಮ್ಮಣ್ಣಂಗೆ ನೀರಂ ತೀವಿಕೊಂಡು ಸರೋವರದಿಂದ ಪೊಱಮಟ್ಟು: **ಪಂಪಭಾ,** ೮. ೩೯ ವ)

ಔದಾರಿಕವಪು – **[ನಾ]** ಅಭ್ಯುದಯಕ್ಕೂ ಮೋಕ್ಷಸುಖಕ್ಕೂ ಮೂಲಕಾರಣವಾದ ದೇಹ (ಭಗವದಂಗಸಂಗತ ಜಳಕಣಂಗಳಂ ದೇವಾಂಗವಸ್ತ್ರಂಗಳೊಳ್ ಒತ್ತಿ ಕಳೆದು ಸಹಜಸುರಭಿಗಂಧಬಂಧುರ ಔದಾರಿಕವಪುವಂ: **ಆದಿಪು,** ೭. ೧೦೬ ವ)

ಔಪರಿಷ್ಟಕ – **[ನಾ]** ಮೇಲ್ಭಾಗ (ಚಳದಳಿಕಾಳಿ ನಿನ್ನ ವದನಾಂಬುಜಮಂ ನಡೆ ನೋಡಲೀಯದೆ ಅವ್ವಳಿಸುವು ಔಪರಿಷ್ಟಕದೊಳೆನ್ನನಿವು ಎಂದು ಕನಲ್ದು: **ಆದಿಪು,** ೪. ೧೨); **[ನಾ]** ಒಂದು ಬಗೆಯ ರತಿಕ್ರೀಡೆ (ಮಧುರಸೀತ್ಕೃತನಾದದೊಳುಣ್ಮೆ ಪೊಣ್ಮೆ ಚೂಷಿತಕಮಂ ಔಪರಿಷ್ಟಕರತಂಗಳ ಭೇದದೊಳೊಂದಿದ ಆಮ್ರ ಚೂಷಿತಮಕನಾಮ್ರಪಕ್ವಫಲದೊಳ್: **ಆದಿಪು,** ೧೧. ೯೯)

ಔರ್ವಜ್ವಲನ – **[ನಾ]** ಸಮುದ್ರದ ಬೆಂಕಿ, ಬಡಬಾಗ್ನಿ (ಔರ್ವಜ್ವಲನ ಜ್ವಾಳಾಕಳಾಪೋದ್ಗಮಮನನುಗುಣಂ ಮಾಡುತುಂ .. .. ಬೆಳಗಿದುದು ದಿಶಾಚಕ್ರಮಂ ಚಕ್ರರತ್ನಂ: **ಆದಿಪು,** ೧೧. ೨)

ಔರ್ವವಹ್ನಿ – **[ನಾ]** ಬಡಬಾನಲ (ಕೌರವಬಲದ ಉರ್ಕನೊಂದಿನಿಸು ಮಾಣಿಸಿ ಪೋಪಂ ಇಳೇಶನಲ್ಲಿಗೆ ಎಂದು ಅವನತವೈರಿ ವೈರಿಬಲವಾರಿಧಿಯಂ ವಿಶಿಖ ಔರ್ವವಹ್ನಿಯಿಂ ತವಿಸಿ: **ಪಂಪಭಾ,** ೧೨. ೧೨೧)

ಔರ್ವಾನಳ – **[ನಾ]** ಬಡಬಾನಲ (ಪುದಿದು ಔರ್ವಾನಳಂ ಅಬ್ಧಿಯಂ ಸುಡುವವೋಲ್ ಶಸ್ತ್ರಾಗ್ನಿಯಿಂ ತೀವ್ರಕೋಪದಿಂ ಉದ್ವೃತ್ತಬಳಾಬ್ಧಿಯಂ ಸುಡೆ: **ಪಂಪಭಾ,** ೧೨. ೩೫)

ಔಷಧ – **[ನಾ]** ಮದ್ದು (ಮನಸಿಜನ ಅಂಗನಾಜನವಶೀಕರಣ ಔಷಧಂ ಅಂಗಜನ್ಮನಂಬಿನ ಮದಶಕ್ತಿ ಮೋಹನಯಂತ್ರಂ ಇದಪ್ಪುದು: **ಆದಿಪು,** ೪. ೪೧)

ಔಷಧಿ – **[ನಾ]** ಸಸ್ಯ[ಗಳ] ಸಾರ (ಪಂಚರತ್ನಗರ್ಭವಿವಿಧೌಷಧಿಸಂದರ್ಭ ಶಾತಕುಂಭಕುಂಭ ಸಂಭೃತ ಮಂಗಳಜಳಂಗಳಿಂದಂ: **ಆದಿಪು,** ೪. ೩೫ ವ); **[ನಾ]** ಸಸ್ಯ (ವಿರಳಫಳಂಗಳಾದುವು ಅಖಿಳೌಷಧಿಗಳ್ ರಸವೀರ್ಯಪಾಕಮುಂ ವಿರಳಮೆ ವೃಕ್ಷಜಾತಿಗಳ್: **ಆದಿಪು,** ೮. ೬೨)

ಕ

ಕಂಕಣವಾರ – **[ನಾ]** ಬಳೆಗಳ ಸಾಲು [ಕಂಕಣ+ಆರ=ಕಂಕಣ ಮತ್ತು ಹಾರ] (ಮೆಲ್ಲನೆ ವಕುಲ ಆಳವಾಳತಳದೊಳ್ ಸುರಿದ ಅಂಬುಜಸೂತ್ರದಿಂದೆ ಮತ್ತನಿತಱೊಳಂ ಮುಗುಳ್ಸರಿಗೆ ತೋಳ್ವಳೆ ಕಂಕಣವಾರಮೆಂದು ಬೇಟ್ವನಿತನೆ ಮಾಡಿ: **ಪಂಪಭಾ,** ೨. ೧೬)

ಕಂಕೇಲಿ – **[ನಾ]** ಕಂಕೆಲ್ಲಿ, ಅಶೋಕವೃಕ್ಷ (ಪುಣ್ಯಾಂಬು ಪೂರ್ಣಕುಂಭಾಗ್ರಮುಚಿತ ಕಂಕೇಲಿಪಲ್ಲವೋಲ್ಲಾಸರಚಿತ: **ಆದಿಪು,** ೪. ೩೦ ರಗಳೆ)

ಕಂಗನೆ – **[ಕ್ರಿವಿ]** ಬಹಳವಾಗಿ (ಮುನಿಸಿನೊಳ್ ಆದಂ ಏವಯಿಸಿ ಸೈರಿಸದೆ ಅದವಟಲೊಳ್ ಕನಲ್ದು ಕಂಗನೆ ಕನಲುತ್ತುಂ ಉಮ್ಮಳಿಸಿ: **ಪಂಪಭಾ,** ೪. ೧೦೬)

ಕಂಗು – **[ನಾ]** ನವಣೆ (ಕಳಮ ಷಷ್ಟಿಕಾ ವ್ರೀಹಿ ಯುವ ಯಾವನಾಳ ಗೋಧೂಮ ಕಂಗು .. .. ವಿವಿಧ ಧಾನ್ಯಭೇದಂಗಳುಂ: **ಆದಿಪು,** ೬. ೭೨ ವ)

ಕಂಚುಕಿ – **[ನಾ]** ಅಂತಃಪುರದ ಪಾರುಪತ್ತೇದಾರ (ಭರತರಾಜಂ ಅಯೋಧ್ಯೆಯೊಳ್ ಆಸ್ಥಾನಮಂಟಪದೊಳಿರೆ ತತ್ಪುರೋಹಿತ ಆಯುಧಾಧ್ಯಕ್ಷ ಅಂತಃಪುರವೃದ್ಧಕಂಚುಕಿಗಳ್ ಬಂದು: **ಆದಿಪು,** ೧೦. ೪೮ ವ)

ಕಂಚುಕಿತ – **[ಗು]** ಆಚ್ಛಾದಿತವಾದ, ಸುತ್ತುವರಿಯಲ್ಪಟ್ಟ (ಆಗಳ್ ಕದಂಬಸ್ತಬಕ ಕರ್ಣಪೂರಾಯಮಾಣ ರೋಮಾಂಚ ಕಂಚುಕಿತ ಕಪೋಳಮೂಳಸ್ಥಳನಿಶ್ವಾಸಕಲ್ಲೋಳಂ: **ಆದಿಪು,** ೪. ೧೫ ವ)

ಕಂಜ – **[ನಾ]** ಕಮಲ (ತೋಱೆತ್ತು ಕೊಳಂ ಪರಿವಿಕಸಿತ ಕನಕ ಕಂಜ ಪಿಂಜಲ್ಕಪುಂಜಪಿಂಜರಿತಜಳಂ: **ಪಂಪಭಾ,** ೮. ೩೮)

ಕಂಜಕಿಂಜಲ್ಕ – **[ನಾ]** ತಾವರೆಯ ಕೇಸರ (ಕಂಜ ಕಿಂಜಲ್ಕ ಪುಂಜಪಿಂಜರಿತಾಚ್ಛೋದಕಪರಿಪೂರ್ಣತಟಾಕ: **ಆದಿಪು,** ೧. ೫೮)

ಕಂಜಪ್ರಿಯ – **[ನಾ]** ಸೂರ್ಯ (ಮಂಜಿನ ಮಟಿಯೊಳ್ ಮಸುಳ್ದಿರೆ ಕಂಜಪ್ರಿಯಕುಮುದಬಂಧುಗಳ್: **ಆದಿಪು,** ೬. ೬೧)

ಕಂಜವಕ್ತ್ರೆ – **[ನಾ]** ತಾವರೆಯ ಮುಖದವಳು (ಅಟಲ್ದೆರೆದೊಂದಿದ ಲುಂದುಗಳ್ಗೆ ನೀರ್ಗುಡಿದವೊಲಾದುದುಚ್ಚಳಿಸಿ ಸೂಸುವ ಕಣ್ಬನಿ ಕಂಜವಕ್ತ್ರೆಯಾ: **ಆದಿಪು,** ೧೨. ೨೬)

ಕಂಜೋದರ – **[ನಾ]** [ಕಂಜ+ಉದರ] ಕೃಷ್ಣ (ಏದೊರೆಯಂ ಯಮನಂದನಂ ಏದೊರೆಯಂ ಭೀಮಸೇನಂ ಏದೊರೆಯಂ ಕಂಜೋದರನ ಮೈದುನಂ ತಾಮೇ ದೊರೆಯರ್ ಅಮಳ್ಗಳ್: **ಪಂಪಭಾ,** ೭. ೧೭)

ಕಂಟಕ – [ನಾ] ತೊಂದರೆ ಮಾಡುವವನು (ದಶಕಂಠನಂ ತ್ರಿದಶಕಂಟಕನಂ ಕೊಲಲೆಂದು ರಾಮನಾದಂದಿನ ಸಾಹಸಂ ಮನದೊಳ್ ಆವರಿಸಿತ್ತು ಅಕಳಂಕರಾಮನಾ: **ಪಂಪಭಾ,** ೪. ೧೯); [ನಾ] ಮುಳ್ಳು (ತತ್ಕಮಳಕಾನನಕಂಟಕಲಗ್ನಪಾದನಾದವೊಲ್ ಉಡುಗುತ್ತುಂ ಆತ್ಮಕರಮಂ ರವಿ ಪೊರ್ದಿದಂ ಅಸ್ತಶೈಲಮಂ: **ಪಂಪಭಾ,** ೪. ೪೭)

ಕಂಟಕಗುಲ್ಮ – [ನಾ] ಮುಳ್ಳುಪೊದೆ (ಕಂಟಕಗುಲ್ಮ ವಿಷವಲ್ಲೀಸಂಘಾತ ಭೀಷಣಂಗಳುಂ ಜಾನುಭಂಜಿನಿಶೂಲಪ್ರಕರ ಪರಿವೃತಂಗಳುಂ: **ಆದಿಪು,** ೧೩, ೫೭ ವ)

ಕಂಠಗ್ರಹಂಗೆಯ್ – [ಕ್ರಿ] ಕತ್ತು ಹಿಸುಕು (ಅಂತಕಂ ಕಡುಪಿಂ ಕಂಠಗ್ರಹಂಗೆಯ್ವುದೆ ಇಂ ತಡೆಯಂ: **ಆದಿಪು,** ೧. ೭೯)

ಕಂಠದಘ್ನ – [ನಾ] ಕಂಠ ಮುಳುಗುವುದು (ಆದಲೆ ನೀರ್ ಗುಂಡಿತ್ತು ಎಂದು ಈದಲೆಯೊಳೆ ನಿಂದು ಸತಿಗೆ ಹರಿಗಂ ತೋಱುತ್ತ ಆದರದೆ ಜಾನುದಘ್ನಂ ಉರೋದಘ್ನಂ ಕಂಠದಘ್ನಮೆಂಬ ಅಳ್ವಿಗಳಂ: **ಪಂಪಭಾ,** ೫. ೫೩)

ಕಂಠರವ – [ನಾ] ಧ್ವನಿ (ವಿಭ್ರಮಮಂ ಕಂಠರವಕ್ಕೆ ತಾಡನರವಂ ತಂದೀಯೆ ತತ್ಸೌಧದೊಳ್ ಸಮಸತ್ವಂಬಡೆವಂತಿರೆ ಆಯ್ತು ಸುರತಪ್ರಾರಂಭಕೋಳಾಹಳಂ: **ಪಂಪಭಾ,** ೪. ೧೦೯)

ಕಂಠಲುಂಠ – [ನಾ] ಕೊರಳ ಅಲುಗಾಟವುಳ್ಳವನು (ಭಾರ್ಗವಂಗೆ ತಾನೆ ಭಾರ್ಗವನಾಗಿ ಯುವರಾಜಕಂಠಿಕಾಪರಿಕಲಿತ ಕಂಠಲುಂಠನುಂ ಆಗಿ: **ಪಂಪಭಾ,** ೧. ೬೮ ವ)

ಕಂಠಿಕಾ – [ನಾ] ಹಾರ, ಸರ, ಏಕಾವಳಿ (ಲೋಕದ ಚೆಲ್ವೆಲ್ಲಮಂ ಒಳಕೊಂಡು ರೇಖೆಗೊಂಡ ಲಾಟೀಲಲಾಮನ ಪರಿಣದ್ಧ ಕಂಧರಂ ಯುವರಾಜ ಕಂಠಿಕಾಭರಣಮಂ ಕಟ್ಟುವುದರ್ಕೆ ನೋಂತು: **ಪಂಪಭಾ,** ೨. ೩೯ ವ)

ಕಂಠಿಕಾಪರಿಕಲಿತ – [ಗು] ಹಾರದಿಂದ ಕೂಡಿದ (ಭಾರ್ಗವಂಗೆ ತಾನೆ ಭಾರ್ಗವನಾಗಿ ಯುವರಾಜಕಂಠಿಕಾಪರಿಕಲಿತ ಕಂಠಲುಂಠನುಂ ಆಗಿ: **ಪಂಪಭಾ,** ೧. ೬೮ ವ)

ಕಂಠಿಕಾಬಂಧನ – [ನಾ] ಕೊರಳ ಆಭರಣವನ್ನು ತೊಡಿಸುವುದು (ಸಮ್ಯಗ್ದರ್ಶನಮೆಂಬ ಕಂಠಿಕೆಯಂ ಕಂಠಿಕಾಬಂಧನಮಂ ಮಾಡಿ : **ಆದಿಪು,** ೫. ೬೩ ವ)

ಕಂಠೀರವ – [ನಾ] ಒಂದು ವಾದ್ಯವಿಶೇಷ (ಭವನ ವನ ಜ್ಯೋತಿಃ ಕಲ್ಪವಾಸದೊಳ್ ಕ್ರಮದೆ ಶಂಖ ಭೇರಿ ಕಂಠೀರವ ಘಂಟಾಧ್ವನಿಗಳ್ ನೆಗೞ್ದುವು: **ಆದಿಪು,** ೭. ೪೦); [ನಾ] ಸಿಂಹ (ರಿಪುಕುರಂಗಕಂಠೀರವನ ಕೆಯ್ಯೊಳ್ ವೈಕರ್ತನಂ ಸಾಯಲೊಡಂ ಮೇಲುದಂ ಬೀಸಿ ಬೊಬ್ಬಿಱಿದಾರ್ವ ಪಾಂಡವಪತಾಕಿನಿಯೊಳ್: **ಪಂಪಭಾ,** ೧೨. ೨೧೮)

ಕಂಠೀರವಾಸಂದಿ – [ನಾ] [ಕಂಠೀರವ+ಆಸಂದಿ] ಸಿಂಹಾಸನ (ಸೌಂದರಾನೇಕಮಣಿ ರುಚಿಜಳಸ್ಯಂದಿಯಂ ಮಂದರೋತ್ತುಂಗ ಕಂಠೀರವಾಸಂದಿಯಂ: **ಆದಿಪು,** ೭. ೨೭ ರಗಳೆ)

ಕಂಡ – [ನಾ] [ಖಂಡ] ಮಾಂಸಖಂಡ (ವಿನತಾಪುತ್ರನ ವಜ್ರ ತುಂಡ ಹತಿಗಂ ಮೆಯ್ಯಾಂತು ಕಂಡಂಗಳುಳ್ಳಿನಂ ಅಂಗಂಗಳಂ ಒಡ್ಡಿ ಒಡ್ಡಿ ತನುವಂ ಕೊಟ್ಟಂತು: **ಪಂಪಭಾ,** ೪. ೨೬)

ಕಂಡರಿಸು – [ಕ್ರಿ] ಕೆತ್ತು, ಕಂಡರಣೆಗೆಯ್ (ಎಸಳ್ಗಳನೆಯ್ದೆ ಕಂಡರಿಸಿ ಮುತ್ತಿನೊಳಲ್ಲಿ ಸುವರ್ಣಚೂರ್ಣಮಂ ಪಸರಿಸಿ: **ಆದಿಪು,** ೧೧. ೧೧೬)

ಕಂಡವಡ – [ನಾ] [ಕಾಂಡಪಟ] ತೆರೆ (ತಳಿರ್ಗಳ ಕಂಡವಡಂಗಳೆ ತಳಿರ್ಗಳ ಪಾಸುಗಳೆ ತಳಿರ್ಗಳೋವರಿಗಳೆ: **ಆದಿಪು,** ೧೧. ೭೯)

ಕಂಡಱೆ – [ಕ್ರಿ] [ಕಂಡು+ಅಱೆ] ನೋಡಿ ತಿಳಿ (ಸ್ಯಂದನಬಂಧನವೆಂಬುದನಿದಂ ಇಂದೀ ವೃಷಸೇನನಿಂದಮಱೆದೆಂ ಇದಂ ಮುನ್ನೆಂದುಂ ಕಂಡಱೆಯೆಂ: **ಪಂಪಭಾ,** ೧೨. ೧೬೬)

ಕಂಡಿ – [ನಾ] ನುಸುಳುವ ರಂಧ್ರ, ಜಾಗ (ಮೃಗಮಂ ಗಾಳಿಯನಿರ್ಕೆಯಂ ಪಕ್ಕೆಯಂ ಗಣಿದಮಂ ಕಂಡಿಯಂ ಮಾರ್ಕಂಡಿಯಂ ಪುಗಿಲಂ ಪೋಗಂ: **ಪಂಪಭಾ,** ೫. ೪೩)

ಕಂಡುಗ – [ನಾ] ಖಂಡುಗ, ಒಂದು ದೊಡ್ಡ ಅಳತೆ ['ವ್ಯವಹಾರ ಗಣಿತ'ದ ಪ್ರಕಾರ ಇಪ್ಪತ್ತು ಕೊಳಗ] (ಎರಡೆಮ್ಮೆವೋಱೆಯೊಳ್ ಪೂಡಿದ ಪನ್ನಿರ್ಕಂಡುಗದಕ್ಕಿಯ ಕೂೞುಮಂ ಅದರ್ಕೆ ತಕ್ಕ ಪರಿಕರಮುಮಂ ಒರ್ವ ಮಾನಸಂ ಕೊಂಡು ಪೋಪಂ: **ಪಂಪಭಾ,** ೩. ೨೫ ವ)

ಕಂಡೂಯ – [ನಾ] ನವೆ, ತುರಿಕೆ (ದೋರ್ದಂಡಕಂಡೂಯ ದುರ್ದಮವೈರಿದ್ವಿರದೇಂದ್ರಕೇಸರಿರವಂ: **ಆದಿಪು,** ೧೧. ೧೦)

ಕಂಡೂಳ – [ನಾ] ನವೆ, ಕಜ್ಜಿ (ಮದಪಯಃಕಂಡೂಳಗಂಡಸ್ಥಳ ದ್ವಿರದೋದ್ಘೃಷ್ಟ ಘನಸ್ರವತ್ಸರಳಸಾರಾಮೋದಂ: **ಆದಿಪು,** ೧೩. ೯)

ಕಂತು – [ನಾ] ಮನ್ಮಥ (ಕಂತು ಪುಷ್ಪಾಂಜಳಿಯಂ ಸೂಸಿದ ಪದದೊಳೆ ಸಭೆಗಂ ಸೂಸಿದನೊಡನೊಡನೆ ನನೆಯ ಮೊನೆಯಂಬುಗಳಂ: **ಆದಿಪು,** ೯. ೨೧)

ಕಂತುಶರ – [ನಾ] ಮನ್ಮಥನ ಬಾಣ (ಅಂತು ಕಂತುಶರ ಪರವಶನಾಗಿ ಧೈರ್ಯಕ್ಷರಣೆಯುಂ ಇಂದ್ರಿಯಕ್ಷರಣೆಯುಂ ಒಡನೊಡನಾಗೆ: **ಪಂಪಭಾ,** ೨. ೪೨ ವ)

ಕಂದಮೂಲ – [ನಾ] ಗೆಡ್ಡೆ ಗೆಣಸು (ಈ ಬನದ ಕಂದಮೂಲ ಫಲಂಗಳಂ ತಿಂದುಂ ಅರವಿಂದಮಕರಂದ ಗರ್ಭ ಸಂದರ್ಭಸರೋವರಜಲಂಗಳಂ: **ಆದಿಪು,** ೯. ೯೨ ವ)

ಕಂದರ – [ನಾ] ಗುಹೆ (ಅಚ್ಯುತೇಂದ್ರಪೂಜಾವಿಳಾಸಮಂ ಮಂದರಕಂದರವಿಹಾರಮುಮಂ ಇಲ್ಲಿಯೇ ಕಾಣಲಾದಪುದು: **ಆದಿಪು,** ೪. ೯ ವ); [ನಾ] ಕಣಿವೆ (ತತ್ ಗಿರೀಂದ್ರ ಕಂದರ ಕನಕಾಚಳಂಗಳಂ ಇಂತುಟನಿತಂ ತವೆ ಹೇಮರೇಣುಗಳ್ವೆರಸು ಕಡಂಗಿ ಪೊತ್ತು ನಡೆದತ್ತು ಘಟೋತ್ಕಚರೌದ್ರಸಾಧನಂ: **ಪಂಪಭಾ,** ೬. ೩೨)

ಕಂದಲ್ – [ನಾ] ಮೊಳಕೆ, ಚಿಗುರು (ಬೇಟದ ಕಂದಲ್ಗಳಂತೆ ಚಿತ್ರಾಂಗದ ವಿಚಿತ್ರವೀರ್ಯರೆಂಬ ಮಕ್ಕಳ್ ಪುಟ್ಟಿ: **ಪಂಪಭಾ,** ೧. ೭೩ ವ)

ಕಂದಳಿ – [ನಾ] ಮೊಳಕೆ, ಚಿಗುರು (ವಿಷಮವಿಷದ್ರುಮ ಕಂದಳಿಯುಂ ಇಂದ್ರಿಯಲುಬ್ಧಕಸ್ವಚ್ಛಂದವಿಹಾರ ಗಹನಭೂಮಿಯುಂ: **ಆದಿಪು,** ೧೪. ೧೨೨ ವ)

ಕಂದು – [ನಾ] ಮಾಸುವಿಕೆ (ವನಭೃತ್ಕುಂತಳೆಯಾ ಶಿರೀಷ ಕುಸುಮಾಭಾಂಗಕ್ಕೆ ಕಂದಂ ಕನತ್‌ಕನಕಾಂಭೋಜನಿಭಾನನಕ್ಕೆ ಪಿರಿದುಂ ದೀನತ್ವಮಂ: **ಪಂಪಭಾ**, ೪. ೬೪)

ಕಂದುಕಕ್ರೀಡೆ – [ನಾ] ಕಂದುಕಕೇಳಿ, ಚೆಂಡಾಟ (ತನ್ನ ವಿಭವಮುಮಂ ವಿಳಾಸಮುಮಂ ಪಾಂಡವರ್ಗೆ ಮೆಱೆದು ಕಂದುಕಕ್ರೀಡಾದಿ ನಾನಾವಿನೋದಂಗಳಿಂ ಕೆಲವು ದಿವಸಮನಿರ್ದು: **ಪಂಪಭಾ**, ೬. ೬೯ ವ)

ಕಂಧರ – [ನಾ] ಕೊರಳು (ಲೋಕದ ಚೆಲ್ವೆಲ್ಲಮಂ ಒಳಕೊಂಡು ರೇಖೆಗೊಂಡ ಲಾಟೀಲಲಾಮನ ಪರಿಣದ್ಧ ಕಂಧರಂ ಯುವರಾಜಕಂಠಿಕಾಭರಣಮಂ ಕಟ್ಟುವುದರ್ಕೆ ನೋಂತು: **ಪಂಪಭಾ**, ೨. ೩೯ ವ)

ಕಂಧರಬಂಧ – [ನಾ] ಕತ್ತಿನ ಪಟ್ಟಿ (ಗಂಧೇಭ ಕಂಧರಬಂಧ ಪ್ರವಿಭಾಸಿಯಪ್ಪ ಅರಿಗನಂ ಕಾಣುತ್ತೆ ಕಣ್ಸೋಲ್ತು: **ಪಂಪಭಾ**, ೪. ೩೮)

ಕಂಧರಸಂಧಿ – [ನಾ] ಕೊರಳ ಕೀಲು (ಧಾತ್ರಿ ತಿಙ್ಘನೆ ತಿರಿವನ್ನೆಗಂ ತೆಗೆದು ಕಂಧರಸಂಧಿಯಂ ಎಯ್ದೆ ನೋಡಿ ತೊಟ್ಟನೆ ನರಂ ಎಚ್ಚೊಡೆ: **ಪಂಪಭಾ**, ೧೨. ೧೬೮)

ಕಂಪ – [ನಾ] ನಡುಗುವಿಕೆ (ಕಾಮಗ್ರಹಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭಕಂಪಸ್ವೇದವೈವರ್ಣ್ಯಸಂತಾಪನನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ**, ೪. ೫೯ ವ)

ಕಂಪಂಗೊಳ್ – [ಕ್ರಿ] ನಡುಗು (ಜಳದಾಕಾರದೊಳೆಯ್ದೆ ಪರ್ಬಿ ಸಕಳಾಶಾಚಕ್ರಮಂ ವ್ಯೋಮಮಂಡಳಮುಂ ಕರ್ಗಿ ಕಱಂಗಿ ತೋಱೆ ಸಿಡಿಲಿಂ ಮಿಂಚಿಂ ಘನಧ್ವಾನದಿಂದಿಳೆ ಕಂಪಂಗೊಳೆ: **ಆದಿಪು**, ೧೩. ೫೯)

ಕಂಪಣ – [ನಾ] ಒಂದು ಆಯುಧ (ಕಣೆಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ ವಿವಿಧಾಯುಧಂಗಳೊಳಿಟ್ಟುಂ ಇಱೆದುಂ ಅಗುರ್ವು ಅದ್ಭುತಮಾಗೆ ಕಾದುವಾಗಳ್: **ಪಂಪಭಾ**, ೧೨. ೧೧೮ ವ)

ಕಂಪನಾಳ್ – [ಕ್ರಿ] ಕಂಪನ್ನು ಹೊಂದು (ಮಗಮಗಿಸುತ್ತುಮಿರ್ಪ ಮೃಗನಾಭಿಯ ನೀರ್ದಳಿವಲ್ಲಿ ಕಂಪನಾಳ್ದು ಉಗುಟ್ಟಿಲರುತ್ತುಮಿರ್ಪ ಪದದೊಳ್: **ಪಂಪಭಾ**, ೭. ೮೭)

ಕಂಪು – [ನಾ] ಬಂಡು, ಮಕರಂದ (ಕಂಪಂ ಕೊಳಲ್ಬರ್ಪ ಭೃಂಗನಿಕಾಯಂ ಕವಿದಲ್ಲಿ ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ: **ಆದಿಪು**, ೧. ೬೨)

ಕಂಪುಗೊಳ್ – [ಕ್ರಿ] ಮೂಸಿನೋಡು (ಕಂಪುಗೊಳಲ್ಕೆ ಉಸಿರ್ದ ಉಸುರಿನಿಸಂ ಪೊಱಮಟ್ಟೆಸಟಿ ತುದಿಯನೆಯ್ದಲೊಡಂ: **ಆದಿಪು**, ೧೧. ೧೧೫)

ಕಂಪುನಾಱು – [ಕ್ರಿ] ಕಂಪಿನಿಂದ ಗಮಗಮಿಸು (ಸೊಡರ್ಗುಡಿ ಒಯ್ಯನಾಗೆ ಪೊಸಮಲ್ಲಿಗೆ ಕಂಪುನಾಱೆ ತಣ್ಪೆಡಿದ ಎಲರ್ ಊದೆ ಗಾವರದ ಮೆಲ್ಲುಲಿ ತುಂಬಿಯ ಗಾವರಂಂಗಳ ಗೆಡೆಗೊಳೆ: **ಪಂಪಭಾ**, ೪. ೧೧೦); [ನಾ] ದುರ್ನಾತ ಬೀರು (ಕೆಂಡಂಗಳೊಳ್ ಸುಟೆದು ಬೇವ ಪೆಣಂಗಳ್ ಕಂಪುನಾಱುವುದರ್ಕೆ ಸೈರಿಸಲಾರದೆ ಕೋಳ್ದಾಂಟಿನೊಳ್ ಕೊಳುಗುಳವಂ ಕಟೆದು ಪೋಗಿ: **ಪಂಪಭಾ**, ೧೩. ೭೧ ವ)

ಕಂಬುಕಮ್ರ – [ನಾ] ಶಂಖದಂತೆ ಸುಂದರವಾದ (ಬಿಂಬಾಧರೆಯ ಕಂಬುಕಮ್ರಶಿರೋಧರೆಯ ಬೆಡಂಗನಾರುಮೇನೆಯ್ದುವರೇ: **ಆದಿಪು**, ೪. ೪೬)

ಕಂಬುಲತಾ – [ನಾ] ಶಂಖದ ಬಳ್ಳಿ (ಕಂಬುಲತಾಸುಲಲಿತ ಲವಣಾಂಬುಧಿಪರಿಧಾನಮಾಗೆ ಚೆಲ್ವಂ ಪಡೆದೀ ಜಂಬೂದ್ವೀಪಪ್ರಭುಗೆ: **ಆದಿಪು**, ೭. ೬೨)

ಕಂಭ – [ನಾ] ಕಂಬ (ಕಂಭಂಗಳೊಳಂ ಕೇರ್ಗಳೊಳಂ ಆಸ್ಫೋಟಿಸಿ ತಾಟಿಸಿದಾಗಳ್: **ಪಂಪಭಾ**, ೮. ೭೬ ವ)

ಕಂಸಧ್ವಂಸಿ – [ನಾ] ಕಂಸನನ್ನು ಕೊಂದವನು, ಶ್ರೀಕೃಷ್ಣ (ವೀರನಂ ವೀರಶ್ರೀಯೊಳ್ ನೆರಪುವಂತೆ ಉತ್ತರೆಯೊಳ್ ನೆರಪಿ ಕಂಸಧ್ವಂಸಿಯಂ ದ್ವಾರಾವತಿಗೆ ಕಟಿಪಿ: **ಪಂಪಭಾ**, ೯. ೯ ವ)

ಕಂಸಾಂತಕ – [ನಾ] [ಕಂಸ+ಅಂತಕ] ಕಂಸನನ್ನು ಕೊಂದವನು, ಕೃಷ್ಣ (ಅಂತಪ್ಪದಟನಂ ಆಜಿಯೊಳ್ ಎಂತು ಇದಿರಾಂತು ಗೆಲ್ದಿರ್ ಎನೆ ನೃಪನಂ ಕಂಸಾಂತಕನೆಂದಂ: **ಪಂಪಭಾ**, ೧೨. ೧೨೬)

ಕಂಸಾರಿ – [ನಾ] ಕಂಸನ ಶತ್ರು, ಶ್ರೀಕೃಷ್ಣ (ನೀಂ ಬರೆ ಪೆಱತೇಂ ಕಂಸಾರೀ ಯುಷ್ಮತ್ ಪದಪಾಂಸುಗಳಿಂದೆ ಆಂ ಪವಿತ್ರಗಾತ್ರನೆಂ ಆದೆಂ: **ಪಂಪಭಾ**, ೯. ೩೨)

ಕಂಸಾರಿಸಖ – [ನಾ] ಕೃಷ್ಣನ ಗೆಳೆಯ, ಅರ್ಜುನ (ಕಂಸಾರಿಸಖಂ ಪರಿಧ್ವಂಸಿತರಿಪುನೃಪಸಮೂಹಂ ಒಡ್ಡಿದನಾಗಳ್ ಹಂಸವ್ಯೂಹಮಂ: **ಪಂಪಭಾ**, ೧. ೧೧೦)

ಕಃ ಕೇನಾರ್ಥಿ ಕೋ ದರಿದ್ರಃ – ಯಾರು ಏನನ್ನು ಬೇಡುತ್ತಾನೆ, ಯಾರು ಬಡವ (ಆ ದೀನಾನಾಥರ್ಗೆ ವೃದ್ಧದ್ವಿಜಮುನಿನಿಕರಕ್ಕೆ ಅಂದು ಎಡಱು ಪೋಪಿನಂ ಕಃ ಕೇನಾರ್ಥೀ ಕೋ ದರಿದ್ರಃ ಎನುತುಂ ಅನಿತುಮಂ ಧರ್ಮಜಂ ಸೂಱೆಗೊಟ್ಟಂ: **ಪಂಪಭಾ**, ೬. ೪೦)

ಕಕುದ – [ನಾ] ರಾಜಚಿಹ್ನ (ಸ್ನೇಹನಿಗಳದಿಂದಮೆ ತೊಡರ್ದು ಆ ಧವಳಾತಪವಾರಣ ಕಕುದವಿಭೂತಿಯನುಟಿದು ನೆಗಟ್ದು ಉಪಾಸಕನಾದಂ: **ಆದಿಪು**, ೬. ೬)

ಕಕುದ್ದೇಶ – [ನಾ] ಪರ್ವತಪ್ರದೇಶ (ತದ್ಗಿರೀಂದ್ರೋತ್ತರ ಕಕುದ್ದೇಶದ ಸ್ಫಟಿಕ ಅಂಜನ ಕಾಂಚನ ರಜತ ರುಚಕ ಕುಂಡಳ ರುಚಿರ ಸುದರ್ಶನಂಗಳೆಂಬ ಎಂಟು ಕೂಟಂಗಳೊಳ್: **ಆದಿಪು**, ೭. ೩ ವ)

ಕಕುಭ – [ನಾ] ಮತ್ತಿಯ ಗಿಡ (ಕಕುಭ ಅಶೋಕ ಕದಂಬ ಲುಂಗ ಲವಲೀಭೂಜ ಆರ್ಜುನ ಅನೋಕಹ ಪ್ರಕರಂ: **ಪಂಪಭಾ**, ೫. ೮೦)

ಕಕ್ಕಂಬು – [ನಾ] ಒಂದು ಬಗೆಯ ಬಾಣ, ಮುಳ್ಳಿನ ಬಾಣ (ನೆಱನರಿವ ಕಣೆ ಗೆಲೆಯಂಬು ಕಕ್ಕಂಬು ಕೆಲ್ಲಂಬು ಮೊನೆಯಂಬು ತೀವೆ ಕಣ್ಣಂ: **ಪಂಪಭಾ**, ೧೩. ೩೯)

ಕಕ್ಕಡೆ – [ನಾ] ಗರಗಸದಂತೆ ಬಾಯುಳ್ಳ ಒಂದು ಬಗೆಯ ಆಯುಧ (ನಡುವ ಸರಲ್ಗೆ ಮೆಯ್ಯೊಳ್ ಅಡಂಗುವ ಸಂಕುಗೆ ದಿಂಕುಗೊಳ್ವ ಕಕ್ಕಡೆಗೆ ಇದಿರ್ ಉರ್ಚುವ .. .. **ಪಂಪಭಾ**, ೧೦. ೯೪)

ಕಕ್ಕರ – [ನಾ] ಒಂದು ಬಗೆಯ ಮದ್ಯ (ಈ ಕಕ್ಕರಕ್ಕಿಂತುಟಪ್ಪುದು ಕಳ್ಳಪ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮಂ ಕಾಂತೆಯರ್: **ಪಂಪಭಾ,** ೪. ೮೮)

ಕಕ್ಕರಗೆಯ್ತು – [ನಾ] ಕಕ್ಕರವೆಂಬ ಮದ್ಯದ ಪ್ರಭಾವ, ಅಮಲಿನಿಂದ ಮಾಡುವ ಚೇಷ್ಟೆ (ಅಂತು ಕುಡಿಯೆ ಕಕ್ಕರಗೆಯ್ತದಿಂ ತುದಿನಾಲಗೆಯೊಳ್ ತೊದಳ್ವೆರಸು ನುಡಿದ ನುಡಿಗಳುಂ: **ಪಂಪಭಾ,** ೪. ೮೮ ವ)

ಕಕ್ಕರವಟಿಯಿಗೆ – [ನಾ] [ಕಕ್ಕರ+ಪಟಿಯಿಗೆ] ಮಾಸಲು ಬಣ್ಣದ ಬಟ್ಟೆ (ಕಾರೋಹಣದ ಕಕ್ಕರವಟಿಯಿಗೆಯ ಚಿತ್ರಾವಳಿಯ ಪರಿವೆಡೆಯ ತುಳಿವೆಡೆಯ ನೆಳಲಪಾಣಿಯ: **ಆದಿಪು,** ೪. ೩೪ ವ)

ಕಕ್ಕಸ – [ನಾ] [ಕರ್ಕಶ] ಕಠಿಣನಾದವನು (ಆಗಳೆ ಪೂಣಿಸಿ ಪೋಗವೇಟ್ಟು ಮಚ್ಚರದೊಳೆ ಮಾಣದೆ ಒಡ್ಡಿದಂ ಅಸುಂಗೊಳೆ ಕಕ್ಕಸರ್ ಅಂಜೆ ಸಂಜೆಯೊಳ್: **ಪಂಪಭಾ,** ೧೧. ೮೫)

ಕಕ್ಕುಂಬ – [ನಾ] ? ಈ ಶಬ್ದವನ್ನು ಮುಳಿಯ ತಿಮ್ಮಪ್ಪಯ್ಯನವರು **'ಕುಕ್ಕಂಬ'** ಎಂದು ತಿದ್ದಿ ಅದಕ್ಕೆ ಡೇರೆಯ ಕಿರುಗಂಬಗಳೆಂಬ ಅರ್ಥ ಹೇಳುತ್ತಾರೆ (ಮೂಡಿಗೆ ಕಕ್ಕುಂಬ ಸುಟಿಸಿ ಜೊಂಪಂ ಬೀಡುಬಿಡುವಿಂಬು: **ಪಂಪಭಾ,** ೫. ೪೧)

ಕಕ್ಷ – [ನಾ] ಪಾರ್ಶ್ವ, ಕಡೆ (ಆಗಳ್ ಮದಗಜಕಕ್ಷಧ್ವಜವಿರಾಜಿತಮಪ್ಪ ತನ್ನ ಪೊನ್ನ ರಥಮಂ ಮದ್ರರಾಜನಂ ಏಱಲ್ವೇಟ್ಟು: **ಪಂಪಭಾ,** ೧೨. ೧೦೯)

ಕಕ್ಷಾ – [ನಾ] ಅಂತಸ್ತು (ಧೃತದೇವೇಂದ್ರವಿಮಾನ ರುಂದ್ರಮಹಿಮಂ ಶ್ರೀಸಪ್ತಕಕ್ಷಾಸಮನ್ವಿತಂ: **ಆದಿಪು,** ೬. ೧೦೭)

ಕಚಗ್ರಹ – [ನಾ] ಕೂದಲನ್ನು ಹಿಡಿಯುವಿಕೆ (ಸಂಗ್ರಾಮಭೂಮಿಯ ನಡುವೆ ಧೃಷ್ಟದ್ಯುಮ್ನ ಕಚಗ್ರಹವಿಲುಳಿತಮೌಳಿಯುಂ ತದೀಯ ಕೌಕ್ಷೇಯಕ ಧಾರಾವಿದಾರಿತಶರೀರನುಂ ಆಗಿ ಬಿಟ್ಟಿರ್ದ ಶರಾಚಾರ್ಯರಂ ಕಂಡು: **ಪಂಪಭಾ,** ೧೩. ೫೫ ವ)

ಕಚ್ಚೆ – [ನಾ] ಪಂಚೆ ಅಥವಾ ಸೀರೆಯ ಚುಂಗು (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒಱ್ ಕರ್ಪಿಡಿದ ಪಣೆಕಟ್ಟು ಕೆಯ್ಪಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್: **ಪಂಪಭಾ,** ೧೦. ೭೧)

ಕಚ್ಚೆಯೊಳಿಡು – [ಕ್ರಿ] ಕಚ್ಚೆಯಲ್ಲಿ ಇಡು, ಅಂಕೆಯಲ್ಲಿಡು (ಆವ ಗಂಡರುಮಂ ಕಚ್ಚೆಯೊಳಿಟ್ಟು ಕಟ್ಟುವೆಂ ಎನುತಿರ್ಪಾಕೆ ಗಂಧೇಭಕಂಧರಬಂಧಪ್ರವಿಭಾಸಿಯಪ್ಪ ಅರಿಗನಂ ಕಾಣುತ್ತೆ: **ಪಂಪಭಾ,** ೪. ೩೮)

ಕಜ್ಜ – [ನಾ] ಕಾರ್ಯ (ಅವಸ್ತುಭೂತನೆಂದಾದಮೆ ಭೂತಳಂ ಪಟೆಯೆ ತೇಜಮೆ ಕೆಟ್ಟಪುದು ಇಂತಿದಕೆ ಪದ್ಮೋದರ ನೀನೆ ಪೇೞ್ ಬಗೆದು ಕಜ್ಜಮನೀಗಳೆ ದಿವ್ಯಚಿತ್ತದಿಂ: **ಪಂಪಭಾ,** ೯. ೧೮); [ನಾ] ಉಪಾಯ, ಪರಿಹಾರ (ಬಿದಿರ ಗಂಟುಗಳಂ ಕಳೆವಂತೆ ಮನ್ಮನಃಸ್ಖಲನೆಯಂ ಉಂಟುಮಾಡಿದಪುದು ಇಲ್ಲಿಗೆ ಕಜ್ಜಮದಾವುದು ಅಚ್ಯುತಾ: **ಪಂಪಭಾ,** ೧೨. ೧೦೩)

ಕಟ – [ನಾ] ಆನೆಯ ಗಂಡಸ್ಥಳ, ದವಡೆ (ಅಲ್ಪಘಾಟನುಂ ಉನ್ನತಶಿಖನುಂ ಪೀನಮಾಂಸಕಟಶ್ಲಿಷ್ಟನುಂ: **ಆದಿಪು,** ೧೨. ೫೬ ವ)

ಕಟಕ – [ನಾ] ಕಡಗ, ಕೈಬಳೆ (ವಿಜಯಶ್ರೀನಿವಾಸ ಬಾಹು ಬಾಹುಯುಗಳಕ್ಕೆ ಕೇಯೂರ ಹಾರ ಅಂಗದಕಟಕಾಳಂಕಾರಂ ಮಾಡಿ: **ಆದಿಪು,** ೭. ೧೦೬ ವ); [ನಾ] ಸೈನ್ಯ (ಇಭಖಡ್ಗಿ ವ್ರಾತಾನಾನಾಹರಿಮಯ ಕಟಕಭ್ರಾಜಿತಂ: **ಆದಿಪು,** ೧೩. ೪೬); [ನಾ] ತಪ್ಪಲು (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ)

ಕಟಕಟಘಾತ – [ನಾ] ಕಟಕಟವೆಂಬ ಹೊಡೆತ (ರುಧಿರಪ್ಲವಲಂಪಟಸಂಕಟೋತ್ಕಟಂ ಕಟಕಟಘಾತ ನಾಕತಟಸಂಕಟ ಸಂಗರರಂಗಭೂಮಿಯೊಳ್: **ಪಂಪಭಾ,** ೧೧. ೧೪೬)

ಕಟತಟ – [ನಾ] [ಆನೆಯ] ಕುಂಭಸ್ಥಲ, ಕಪೋಲ (ದಿಕ್ಕರಿ ಕಟತಟಕ್ಕೆ ಮದಲೇಖೆಯಿರ್ಪಂತೆ ಕೈಟಭಾರಾತಿಯ ವಿಶಾಲೋರುಸ್ಥಳಕ್ಕೆ ಕೌಸ್ತುಭಮಿರ್ಪಂತೆ ಸೊಗಯಿಸುತಿರ್ದುದು: **ಪಂಪಭಾ,** ೧. ೫೭ ವ)

ಕಟಾಕ್ಷ – ಕುಡಿನೋಟ (ಕಡುವೆಂಕೆಯಿಂ ಕಟಾಕ್ಷಂಬಿಡಿದಿಟಿವ ಲಲಾಟಕುಂಕುಮಸ್ವೇದಜಳಂ: **ಆದಿಪು,** ೧೧. ೫೪)

ಕಟಾಕ್ಷಮಾಲಾ – [ನಾ] ಕುಡಿನೋಟದ ಸಾಲು (ಏನೆಸೆದುದೊ ಕಟಾಕ್ಷಮಾಲಾಪ್ರಸರಂ ಭ್ರೂಲಾಸ್ಯಸೌಂದರಂ ನರ್ತಕಿಯಾ: **ಆದಿಪು,** ೯. ೩೪)

ಕಟಾಕ್ಷವಿಕ್ಷೇಪ – [ನಾ] ಕುಡಿನೋಟ, ಕಣ್ಣ ಸಂಜ್ಞೆ (ಕರಂ ಚೆಲ್ವೆನೆ ಮೆಱೆವ ಕುಮುದಕುವಳಯವನಂಗಳ್ ಆಕೆಯ ಕಟಾಕ್ಷವಿಕ್ಷೇಪಂಗಳ್: **ಆದಿಪು,** ೬. ೮೩)

ಕಟಾಕ್ಷೇಕ್ಷಣ – [ನಾ] [ಕಟಾಕ್ಷ+ಈಕ್ಷಣ] ಕಡೆಗಣ್ಣಿನ ನೋಟ (ಇದೆ ಮದನಭವನಂ ಇಂತಿದೆ ಮದನಾಮೃತಂ ಇದುವೆ ಮದನಸಾಯಕಂ ಪೋ ಮದನಮಹೋತ್ಸವಪದಂ ಎನಿಸಿದುದು ಕಟಾಕ್ಷೇಕ್ಷಣಂ ವಿಲೋಲೇಕ್ಷಣೆಯಾ: **ಪಂಪಭಾ,** ೮. ೬೧)

ಕಟಾಹ – [ನಾ] ಕಡಾಯಿ, ಕೊಪ್ಪರಿಗೆ (ಮುನ್ನೆ ಪೂಟ್ದಿ ಸುವರ್ಣಪೂರ್ಣ ಕಟಾಹಂಗಳಂ ತೋಜಿದಾಗಳ್: **ಆದಿಪು,** ೫. ೧೧ ವ)

ಕಟಿತಟ – [ನಾ] ಸೊಂಟ ಪ್ರದೇಶ (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಬುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ)

ಕಟಿಸೂತ್ರ – [ನಾ] ಕಟಿಬಂಧ, ಉಡಿದಾರ (ಪೋ ಬಿಡು ಕಟಿಸೂತ್ರಮಂ ತೊಡೆಯ ಬಿಣ್ಪು ಪದಾಂಬುರುಹಕ್ಕೆ ತಿಣ್ಣಂ ಎಂತು ಉಡಿಸುವುದಕ್ಕ ನೂಪುರಮಂ: **ಪಂಪಭಾ,** ೩. ೪೬)

ಕಟೀಸೂತ್ರ – [ನಾ] ಕಟಿಸೂತ್ರ (ಕರೆವೆರಸಿದ ಪೊಸದುಗುಲದ ತೆರಳ್ಕೆವೆತ್ತುಡೆ ಹಟತ್ಕಟೀಸೂತ್ರ ಪರಿಸ್ಫುರಿತದೊಳಂ ಕಟ್ಟಿದ ಪೊಂಜುರಿಗೆಯೊಳಂ: **ಆದಿಪು,** ೪. ೩೬)

ಕಟು – [ನಾ] ಹೆಂಡದ ಒಂದು ಪ್ರಭೇದ, ಕಾರವಾದುದು (ಮಧು ಸೀತುಂ ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ತುಬರ್ಪುದು: **ಪಂಪಭಾ,** ೪. ೮೮) [ಡಿಎಲ್‌ಎನ್ 'ಸೀತುಂ ಕಟು ಸೀಧು' ಎಂಬುದರ ಬದಲಾಗಿ 'ಸೀಧು ಕಟುಸೀಧು' ಎಂಬ ಪಾಠವನ್ನು ಅಂಗೀಕರಿಸುತ್ತಾರೆ]

ಕಟುಕಫಲ – [ನಾ] ಕಹಿಫಲ (ನಿನ್ನಂ ಘಾತಿಸಿ ಬಿಡದಲೆದು ಪಿಟೆದು ಪಿಂಡಿದ ದುಃಖವ್ರಾತಮಿದು ಮಗಳೆ ನಿನ್ನ ಪುರಾತನ ದುಷ್ಕರ್ಮ ವಿಟಪಿ ಕಟುಕಫಲಂಗಳ್: **ಆದಿಪು,** ೩. ೩೮)

ಕಟ್ಟಳೆ – [ನಾ] ಚಿನ್ನರತ್ನಗಳನ್ನು ತೂಗುವ ಒಂದು ಅಳತೆ (ಒಟ್ಟಿದ ಪೊನ್ನ ಬೆಟ್ಟುಗಳನೀವೆಡೆಗೇವುದೊ ತೂಕಮೆನ್ನ ಕೆಯ್ಗಟ್ಟಳೆ ಕೊಳ್ಗಿಂ: **ಪಂಪಭಾ,** ೬. ೩೯)

ಕಟ್ಟಾಯ – [ನಾ] ಮಹಾ ಪರಾಕ್ರಮ (ಇನ್ನಿಲ್ಲಿ ಪೆಂಪು ಎಱಕಂಬೆತ್ತಿರೆ ಕಾವೆನೆನ್ನ ನುಡಿಯಂ ಕೆಯ್ಕೊಂಡ ಕಟ್ಟಾಯಮಂ: **ಪಂಪಭಾ,** ೧೨. ೧೯೮)

ಕಟ್ಟಾಳ್ – [ನಾ] ಮಹಾ ಶೂರ (ಒಂದಕ್ಷೋಹಿಣಿಬಲಂ ಎರಡುಂ ದೆಸೆಯೊಳಂ ಉಟೆದುವು ಅಂತೆ ಭಾರತಂ ಎಮಗೆ ಇಂದು ಉಜ್ಜವಣೆ ದಲ್ ಎಂದು ಅದಟೊಂದುತ್ತರಮಾಗೆ ಕಾದಿದರ್ ಕಟ್ಟಾಳ್ಗಳ್: **ಪಂಪಭಾ,** ೧೩. ೩೬)

ಕಟ್ಟಿದಿರು – [ನಾ] ಕಣ್ಣಿನ ಮುಂದೆಯೇ (ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫)

ಕಟ್ಟಿದುದು – [ನಾ] ವಿಧಿಯ ಕಟ್ಟುವಿಕೆ (ಕಟ್ಟಿಸಿಕೊಂಡಂ ಶಲ್ಯಂ ಕಟ್ಟಿದುದಂ ಕಳೆಯಲಾರ್ಗಮೇಂ ತೀರ್ದಪುದೇ: **ಪಂಪಭಾ,** ೧೩. ೩೦)

ಕಟ್ಟಿದುದೆ ಸುರಿಗೆ ಮುಟ್ಟಿದುದೆ ಕಳಂ – ಕಟ್ಟಿಕೊಂಡದ್ದೇ ಕತ್ತಿ, ಮೆಟ್ಟಿದ್ದೇ ಯುದ್ಧರಂಗ, ಯುದ್ಧಕ್ಕೆ ಸದಾ ಸಿದ್ಧ ಎಂಬ ಅಭಿಪ್ರಾಯ (ನೀಮಿನಿತಂ ನುಡಿದಿರ್ ಮೂದಲಿಸಿದಿರಿ ಇಂ ತಡೆವೆನೆ ಕಟ್ಟಿದುದೆ ಸುರಿಗೆ ಮೆಟ್ಟಿದುದೆ ಕಳಂ: **ಆದಿಪು,** ೩. ೭೨)

ಕಟ್ಟಿಸಿಕೊ – [ಕ್ರಿ] ಬಂಧನಕ್ಕೊಳಗಾಗು (ಕಟ್ಟಿಸಿಕೊಂಡಂ ಶಲ್ಯಂ ಕಟ್ಟಿದುದಂ ಕಳೆಯಲಾರ್ಗಮೇಂ ತೀರ್ದಪುದೇ: **ಪಂಪಭಾ,** ೧೩. ೩೦)

ಕಟ್ಟಿಱುಂಪೆ – [ನಾ] ಕಟ್ಟಿರುವೆ, ಗೊದ್ದ (ಸುಡುವ ಉದರಾಗ್ನಿಯುಂ ಒಡಲಂ ಮಿಡುಕುವಿನಂ ಕಡಿವ ಕಟ್ಟಿಱುಂಪೆಗಳುಂ: **ಆದಿಪು,** ೫. ೧೩)

ಕಟ್ಟು – [ಕ್ರಿ] ಧರಿಸು (ಕಟ್ಟಿದುದೆ ಸುರಿಗೆ ಮೆಟ್ಟಿದುದೆ ಕಳಂ: **ಆದಿಪು,** ೩. ೭೨); [ಕ್ರಿ] ರಸವಾದಿಯು ಪಾದರಸವನ್ನು ಉಂಡೆ ಮಾಡುವುದು (ವ್ರಣವೈದ್ಯನಂತೆ ಕೊಡಸಾರಿಯಂ ಪಿಡಿದುಂ ಸೂಳೆಯಂತೆ ಕಟಿವು ಉಟಿವನಱಿದುಂ ರಸವಾದಿಯಂತೆ ಕಟ್ಟಿಯುಂ ಪೆರ್ಜೋಡೆಯಂತೆ ನುಣ್ಣಿತಂ ವೇಟ್ದು: **ಪಂಪಭಾ,** ೬. ೭೨ ವ); [ಕ್ರಿ] ಸೆರೆಹಿಡಿ (ನಾಳೆ ವಿಜಯಂ ಮಾರ್ಕೊಳ್ಗದಂದು ಉರ್ಕಿ ಪೊಕ್ಕನ ಆಂತು ಒರ್ವನಂ ಇಕ್ಕುವೆಂ ಕದನದೊಳ್ ಮೇಣ್ ಕಟ್ಟುವೆಂ ಧರ್ಮನಂದನನಂ: **ಪಂಪಭಾ,** ೧೧. ೮೪)

ಕಟ್ಟುಕಡೆ – [ಕ್ರಿ] ಸಹನೆ ಕಳೆದುಕೊ (ಅರಸನೊಂದೆ ಮೆಯ್ಯೊಳೆ ಪೋಗಿ ಬಾರದುದರ್ಕೆ ಕಟ್ಟುಕಡೆದು: **ಆದಿಪು,** ೧೨. ೧೨೪ ವ)

ಕಟ್ಟುವಡು – ಕಟ್ಟನಿಂದ ಬಿಗಿ (ಪಾಂಚಾಲರಾಜತನೂಜೆ ಪಗೆವರ ಕಟುವಟ್ಟಿರ್ದ ಏಳಿದಿಕ್ಕೆಗೆ ಸಂತಸಂಬಟ್ಟು ಸೈರಿಸಲಾಱದೆ ಇಂತೆಂದಳ್: **ಪಂಪಭಾ,** ೭. ೩೮ ವ)

ಕಟ್ಟುವರ್ – [ಕ್ರಿ] ಕಠಿಣವಾಗು (ಮುಳಿಸಂ ನೀನೆಂದಿಂಗಂ ಬಿಸುಡು ಈ ತಮ್ಮಂದಿರೊಡನೆ ಕಟ್ಟುವರ್ಪುದು ಪೆಂಪೇಂ: **ಆದಿಪು** ನರಸಿಂ, ೧೪. ೧೨೮)

ಕಟ್ಟೇಕಾಂತ – [ನಾ] [ಕಡಿದು ಏಕಾಂತ] ತುಂಬ ರಹಸ್ಯ (ಕರ್ಣನಂ ಕರೆದಾಳೋಚಿಸಿ ತಮ್ಮಯ್ಯನಲ್ಲಿಗೆ ಪೋಗಿ ಪೊಡೆಮಟ್ಟು ಕಟ್ಟೇಕಾಂತದೊಳ್ ಇಂತೆಂದಂ: **ಪಂಪಭಾ,** ೨. ೮೮ ವ)

ಕಠೋರ – [ಗು] ಬಿರುಸು, ಉಗ್ರ (ಕರಿಕಳಭ ಪ್ರಚಂಡ ಮೃಗರಾಜಕಿಶೋರ ಕಠೋರ ಘೋರ ಹೂಂಕರಣ: **ಪಂಪಭಾ,** ೯. ೪೨)

ಕಡಂಗಿಸು – [ಕ್ರಿ] ಉತ್ಸುಕಗೊಳಿಸು (ಕಾಣಲುಂ ಕಾಣಿಸಲುಂ ಕಡಂಗಲುಂ ಕಡಂಗಿಸಲುಂ ಅಡಂಗಲುಂ ಅಡಂಗಿಸಲುಂ ಒಡ್ಡಲುಂ ಒಡ್ಡಿಸಲುಂ ಪುಗಿಸಲುಂ ಮಿಗಿಸಲುಂ: **ಪಂಪಭಾ,** ೫. ೪೩ ವ)

ಕಡಂಗು – [ಕ್ರಿ] ಉತ್ಸುಕಗೊಳ್ಳು (ಪಗಲಿರುಳೆನ್ನದೆನ್ನೊಳೆ ಕಡಂಗುವನೆನ್ನೊಳೆ ಬಲ್ಪುದೋರ್ಪಂ: **ಆದಿಪು,** ೧೨. ೩೩); [ಕ್ರಿ] ಆವೇಶಗೊಳ್ಳು (ಪಿಂದೆ ಕಡಂಗಿ ತೇರಂ ಎಸಗು ಎಂಬವಂ ಅಂಬಿಗಂ ಆಜಿರಂಗದೊಳ್: **ಪಂಪಭಾ,** ೧೨. ೯೪)

ಕಡಕು – [ನಾ] ಚೂರು ಕಲ್ಲು (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏಟುತಿರೆ: **ಪಂಪಭಾ,** ೩. ೯)

ಕಡಲ್ – [ನಾ] ಸಮುದ್ರ (ಕಡಲ ತಡಿಯೆಯ್ದೆ ನೆಲನಂ ಪಡೆದರ್ ಭವದೀಯ ಪುತ್ರರ್: **ಆದಿಪು,** ೯. ೯೮)

ಕಡಲುರಿ – [ನಾ] ಸಮುದ್ರದ ಬೆಂಕಿ, ಬಡಬಾಗ್ನಿ (ಕಡಲುರಿಯಂತೆ ಅಕಾಲಘನಗರ್ಜನೆಯಂತೆ ಸಮಸ್ತದಿಕ್ತಟಂ ಪಿಡುಗುವಿನಂ ರಣಾನಕರವಂಗಳಸುಂಗೊಳೆ: **ಪಂಪಭಾ,** ೧೩. ೩೩)

ಕಡವು – [ನಾ] [ಕದಂಬ] ಕಡವಾಲದ ಮರ (ಕಡವಿನ ಕಂಪು ಅಡಂಗಿದುದು ಜಾದಿಯ ಕಂಪು ಒದವಿತ್ತು ಸೋಗೆಯ ಉರ್ಕು ಉಡುಗಿದುದು ಅಂಚೆಯುರ್ಕು ಪೊಸತಾಯ್ತು: **ಪಂಪಭಾ,** ೭. ೬೯); [ನಾ] ಒಂದು ಬಗೆಯ ಜಿಂಕೆ, ಸಾರಂಗ (ಅಡಂಗಿ ಪರಿವ ಪುಲಿಗಳುಮಂ ಸೋಂಕಿ ಪರಿವ ಎಯ್ಗಳುಮಂ ತಡಂಮೆಟ್ಟಿ ಪರಿವ ಕಡವಿನ ಕಾಡೆಮ್ಮೆಯ ಮರೆಯ ಪಿಂಡುಗಳುಮಂ: **ಪಂಪಭಾ,** ೫. ೪೮ ವ)

ಕಡಿ – [ಕ್ರಿ] ಕತ್ತರಿಸು (ಶರಮನಿದಂ ಕಡಿದುಡಿದು ಎರಡೆರಡಪ್ಪಂತು ತಱಿದು ರಿಪುಬಲಗಹನಾಂತರಮಂ ಸುಡಲೊಗೆವುದು ದುರ್ಧರ ಕೋಪಾಗ್ನಿ: **ಆದಿಪು,** ೧೨, ೧೦೨)

ಕಡಿತಮಿಕ್ಕು – [ಕ್ರಿ] ಕಡತದಲ್ಲಿ ಬರೆ (ಕಡಿತಮಿಕ್ಕಿದಂತಿರ್ದ ಸಮಚತುರಶ್ರಂ ನಾಲ್ವತ್ತೆಣ್ಗಾವುದು ಪರಿಪ್ರಮಾಣಮೆನಿಪ ಕುರುಕ್ಷೇತ್ರಮಂ ಎಯ್ದೆವಂದು: **ಪಂಪಭಾ,** ೯. ೧೦೪ ವ)

ಕಡಿತಲೆ – **[ನಾ]** ಕತ್ತಿ (ಎರಡುಂ ಬಲದ ಕಡಿತಲೆಯ ನಾಯಕರ್ ಕೆಯ್ಕೊಂಡು ಬಳ್ಳುಗೆಡೆದು ಎಕ್ಕೆವಾಜುವಾಜಿ ಪಲಗೆವಾಜಿ ಗೂಳಿಸೊರ್ಕಿ ಮಾರ್ಕೊಂಡು ಕಾದೆ: **ಪಂಪಭಾ**, ೧೦. ೮೦ ವ)

ಕಡಿದೀ – **[ಕ್ರಿ]** ಕತ್ತರಿಸಿ [ದಾನ] ಕೊಡು (ಸಿಡಿಲ್ವೊಡೆದವೊಲಟ್ಟಿ ಮುಟ್ಟಿ ಕಡಿದಿಕ್ಕಿದುದಾದುದೆಡಱಂ ನಿರಂತರಂ ಕಡಿಕಡಿದಿತ್ತ ಪೊನ್ನೆ ಬುಧಮಾಗಧವಂದಿಜನಕ್ಕೆ: **ಪಂಪಭಾ**, ೧. ೯೯)

ಕಡಿದೊಟ್ಟು – **[ಕ್ರಿ]** [ಕಡಿದು+ಒಟ್ಟು] ಕತ್ತರಿಸಿ ರಾಶಿಹಾಕು (ಈ ಪದದೊಳ್ ಕಡಿದೊಟ್ಟಿದಾಗಳ್ ಗೆಲಲಾಱೆ ಎಂದು ನುಡಿದ ಮುಕುಂದನ ನುಡಿಗೆ ಕೊಕ್ಕರಿಸಿ: **ಪಂಪಭಾ**, ೧೨. ೨೦೬ ವ)

ಕಡು – **[ಗು]** ಹೆಚ್ಚು (ಈಗಳ್ ನಿಂದಂ ಮನುಕುಲಲಾಮ ನೆಟ್ಟನೆ ಮನದೊಳ್ ಕಡುಸಾರೆಯಲ್ತೆ ಮುನ್ನಿಂದೀಗಳ್: **ಆದಿಪು**, ೧೬. ೫೬); **[ಗು]** ಹೆಚ್ಚಾಗಿ (ಪರೆದ ಉರಿಗೇಸಂ ಅವ್ವಳಿಪ ನಾಲಗೆ ಮಿಂಚುವ ದಾಡೆ ಬಿಟ್ಟ ಕಣ್ ತಿರುಪಿದ ಮೀಸೆ ಕೊಂಕಿದ ಸಟಂ ಕಡು ನೆಕ್ಕ ಕದಂಪು: **ಪಂಪಭಾ**, ೧೨. ೭)

ಕಡುಕೆಯ್ – **[ಕ್ರಿ]** ಶೌರ್ಯ ತೋರು (ಕಡುಕೆಯ್ದಾನಿರೆ ಚಕ್ರವರ್ತಿವರೆಗಂ ಮೇಘಾಮರರ್ ಬರ್ಪರೆಂದೊಡಿದರ್ಕಂ ಮಿಗಿಲುಂಟೆ: **ಆದಿಪು**, ೧೩. ೬೬); **[ಕ್ರಿ]** ರಭಸಗೊಳ್ಳು (ಬಿಡದೆ ಕಡುಕೆಯ್ದು ದಿವ್ಯದ ನುಡಿಗೆ ಕಿವುಡಿಕ್ಕೆಳ್ದು ಕುಡಿದು ನೀರಂ ಭೀಮಂ ಗದೆವೆರಸು ಭೋಂಕನೆ ಕೆಡದಂ: **ಪಂಪಭಾ**, ೮. ೪೨); **[ಕ್ರಿ]** ಬೇಗನೆ (ಜಳಪ್ರವೇಶಂ ಇಲ್ಲಿಗೆ ಪದನೆಂದು ನಿಶ್ಚಯಿಸಿ ವಾರಿಜನಾಥಂ ಅನಾಥನಾಗಿ ತೊಟ್ಟನೆ ಮುಱುಪಂತೆವೊಲ್ ಮುಱುಗಿದಂ ಕಡುಕೆಯ್ದು ಅಪರಾಂಬುರಾಶಿಯೊಳ್: **ಪಂಪಭಾ**, ೧೩. ೧೦೬)

ಕಡುಗಟ್ಟು – **[ನಾ]** ಕಡು ಕಷ್ಟ, ದೊಡ್ಡ ತೊಂದರೆ (ಪುಟ್ಟೆ ಮುಳಿಸು ಒಸಗೆಗಳೆ ಕಡುಗಟ್ಟುಂ ಮುಳಿಸು ಒಸಗೆಯೆಂಬ ನೃಪತನಯನವಂ ಮುಟ್ಟುಗಿಡೆ ಪಾರದರದೊಳ್ ಪುಟ್ಟಿದಂ: **ಪಂಪಭಾ**, ೧೨. ೧೩೩)

ಕಡುಗುದುರೆ – **[ನಾ]** ಬಿರುಗುದುರೆ (ಘೋಳಾಯ್ಲರ್ ಪೋಳೆಯಿಸೆ ಬಿಸಿಲ್ಗುದುರೆಗಳ್ ಪೋಳೆವಂತೆ ಪೋಳೆವ ಕಡುಗುದುರೆಗಳುಮಂ .. .. ಒಡ್ಡಿ ನಿಂದಾಗಳ್: **ಪಂಪಭಾ**, ೧೦. ೫೧ ವ)

ಕಡುಗೂರ್ಮೆ – **[ನಾ]** [ಕಡು+ಕೂರ್ಮೆ] ಆಳವಾದ ಪ್ರೀತಿ (ಇನ್ನುಂ ಈ ಒಡಲೊಳಿರ್ದುದು ನಾಣಿಲಿಜೀವಂ ಎಂದೊಡೆ ಆವೆಡೆಯೊಳೆ ನಿನ್ನೊಳೆನ್ನ ಕಡುಗೂರ್ಮೆಯುಂ ಅಟ್ಟಿಱುಂ ಅಂಗವಲ್ಲಭಾ: **ಪಂಪಭಾ**, ೧೩. ೪)

ಕಡುನನ್ನಿ – **[ನಾ]** ತೀರ ಸತ್ಯ (ಮುಂದೆ ಭಾರತದೊಳೊಡ್ಡುವುದಂ ಕಡುನನ್ನಿ ಮಾಟ್ಟಿವೋಲ್: **ಪಂಪಭಾ**, ೬. ೭೨); **[ನಾ]** ಸತ್ಯಕಠೋರತೆ (ಕರ್ಣನೊಳಾರ್ ದೊರೆ ಕರ್ಣನೇಱು ಕರ್ಣನ ಕಡುನನ್ನಿ ಕರ್ಣನ ಅಳವು ಅಂಕದ ಕರ್ಣನ ಚಾಗಂ: **ಪಂಪಭಾ**, ೧೨. ೨೧೭)

ಕಡುನಲ್ಲ – **[ನಾ]** ಗಾಢ ಪ್ರಣಯಿ (ಮತ್ತಮೊಂದೆಡೆಯೊಳ್ ಅಂದೆ ಪೊಸವೇಟಕಾಱರಪ್ಪ ಕಡುನಲ್ಲರುಮಿರ್ವರುಮಿರೆ: **ಆದಿಪು**, ೧೨. ೨೮)

ಕಡುನಳಿದಾಗು – **[ಕ್ರಿ]** ಅತಿಯಾಗಿ ಬಾಗು (ಅಭ್ರಮಂಡಲಂ ಕಡುನಳಿದಾದುದು ಈ ಬಲದ ಧೂಳಿಯೊಳೆಂಬಿನಂ: **ಆದಿಪು**, ೧೨. ೬೨)

ಕಡುನಾಣ ಪುತ್ತು – **[ನಾ]** ಹೆಚ್ಚಿನ ನಾಚಿಕೆಗೇಡಿನದು, ಲಜ್ಜಾಸ್ಪದ (ಇದು ಕಡುನಾಣ ಪುತ್ತು ವಲಂ ಇಂ ನೆನೆಯುತ್ತಿರಿಂ ಎಮ್ಮನೆಂಬುದು ಆವುದು ಗುಣಂ ಎಮ್ಮೊಳಾಗೆ ನೆನೆದಪ್ಪಿರಿ: **ಆದಿಪು**, ೧೧. ೧೩೧)

ಕಡುಪಗಲ್ – **[ನಾ]** ಏರಿದ ಹಗಲು (ಕಡುಪಗಲಾದುದು ಬೀಡಂ ಬಿಡಿಸುವುದು ಈ ಪುಣ್ಯನದಿಯ ತಡಿಯೊಳ್ ದೇವರ್ ನಡೆವುದು ವನಜಳಕೇಳಿಗೆ: **ಆದಿಪು**, ೧೧. ೬೯)

ಕಡುಪು – **[ನಾ]** ಪರಾಕ್ರಮ (ಕಡುಪಿದಱೊಳಪ್ಪೊಡೆ ಈಗಳೆ ಸುಡುವೆಂ ಬಾಣಾನಳಾರ್ಚಿಯಿಂ ಮಾಗಧನಂ: **ಆದಿಪು**, ೧೨. ೮೭); **[ನಾ]** ಉದ್ವೇಗ (ಕೋಪದ ಪೆರ್ಚಿನೊಳ್ ನಡುಗುವೂರುಯುಗಂ ಕಡುಪಿಂದರಲ್ವ ನಾಸಾಪುಟಂ: **ಪಂಪಭಾ**, ೭. ೬)

ಕಡುರಯ್ಯ – **[ನಾ]** ತುಂಬ ಸುಂದರ (ಬಂಧುಗಳ್ ಮನಂಬಡೆ ಕಡುರಯ್ಯಮಾಯ್ತು ಅಮಿತತೇಜನೊಳಂದು ವಿವಾಹಮಂಗಳಂ: **ಆದಿಪು**, ೪. ೫೩)

ಕಡುವಂದೆ – **[ನಾ]** [ಕಡು+ಪಂದೆ] ದೊಡ್ಡ ಹೇಡಿ (ಕಲಿಯನೆ ಪಂದೆ ಮಾಟ್ಟಿ ಕಡುವಂದೆಯಂ ಒಳ್ಗಲಿ ಮಾಟ್ಟಿ ತಕ್ಕನಂ ಪೊಲೆಯನೆ ಮಾಟ್ಟಿ: **ಪಂಪಭಾ**, ೧೨. ೯೨)

ಕಡುವಿಣ್ಣಿತ್ತು – **[ನಾ]** [ಕಡು+ಬಿಣ್ಣಿತ್ತು] ತುಂಬ ಭಾರ (ತುಡುಗೆಗಳೊಳ್ ಸರಿಗೆಯುಮಂ ಕಡುವಿಣ್ಣಿತ್ತೆನಿಸಿ ನಡೆದುಂ ಓರಡಿಯನಣಂ ನಡೆಯಲುಂ ಆಱದೆ ಕೆಮ್ಮನೆ ಬಿಡದಾರಯ್ವನಿತುಮಾಗೆ ಬಳೆದುದು ಗರ್ಭಂ: **ಪಂಪಭಾ**, ೧. ೧೪೪)

ಕಡುವಿಣ್ಪು – **[ನಾ]** [ಕಡು+ಬಿಣ್ಪು] ಅತಿಶಯವಾದ ಭಾರ (ಮುಡಿಯ ಕುಚಯುಗದ ಜಘನದ ಕಡುವಿಣ್ಪಿಂ ಮಣಲೊಳ್ ಅಟ್ಟುಬರೆ ಮೆಲ್ಲಡಿಗಳ್: **ಪಂಪಭಾ**, ೭. ೮೫)

ಕಡುವಿತ್ತೆಗ – **[ನಾ]** ಬಹು ನಿಪುಣ (ಕೆಂಗಜೆಯ ಮೊನೆಯಂಬುಗಳ್ ಕಣ್ದೆಱೆಯಿಸಿದುವು ಪೊಣರ್ವ ಬಿಲ್ಲ ಕಡುವಿತ್ತೆಗರಂ: **ಪಂಪಭಾ**, ೧೦. ೭೩)

ಕಡುವಿನ್ನವಾಗು – **[ಕ್ರಿ]** ನಿಶ್ಚೇಷ್ಟಿತವಾಗು (ಆ ಸರಸಿಜಬಾಂಧವನ ಪಿಂಬಡಿನೊಳ್ ಕಡುವಿನ್ನನಾದುವಿಂತೀ ಸರಸೀರುಹಂಗಳ್ ಅವನೀಪದದೊಳ್: **ಪಂಪಭಾ**, ೪. ೪೭); **[ಕ್ರಿ]** ಬಾಡು, ಖಿನ್ನಗೊಳ್ಳು (ನಾರದಂ ಮನದೊಳೆ ಪೇಸುಗುಂ ಸುರಪಂ ನಗುಗುಂ ಕಡುವಿನ್ನನಕ್ಕುಂ ಅಯ್ಯನ ಮುಖಂ: **ಪಂಪಭಾ**, ೬. ೨೪ ವ)

ಕಡುವಿಲ್ಲ – **[ನಾ]** ಗಟ್ಟಿಗನಾದ ಬಿಲ್ಲುಗಾರ (ಎರಡುಂ ಬಲದ ಕಡುವಿಲ್ಲರ್ ಭೋರ್ಗರೆದು ಇಸೆ ಕೂರ್ಗಣೆಯೊಳ್ ಪಂದರ್ ಇಕ್ಕಿದಂತಾಯ್ತು ಗಗನಮಂಡಲಮೆಲ್ಲಂ: **ಪಂಪಭಾ**, ೧–. ೭೨)

ಕಡುವೆಂಕೆ – **[ನಾ]** [ಕಡು+ಬೆಂಕೆ] ತೀವ್ರವಾದ ಶಾಖ (ಕಡುವೆಂಕೆಯಿಂ ಕಟಾಕ್ಷಂ ಬಿಡದಿಟಿವ ಲಲಾಟಕುಂಕುಮಸ್ವೇದಜಳಂ ಕಿಡಿಸಿದುದು ಕದಪಿನೊಳ್ ಪೊಟ್ಟಿಡೆ ಬರೆದರಸಿಯರ ಪತ್ರಲೇಖಾವಳಿಯಂ: **ಆದಿಪು**, ೧೧. ೫೪)

ಕಡುವೆರ್ಚು – [ನಾ] [ಕಡು+ಪೆರ್ಚು] ಅತಿಶಯ ಹೆಚ್ಚಳ, ಪರಾಕ್ರಮ (ಬಗೆಯದೆ ಮೆಯ್ಯೊಸಕಮಂ ಬಗೆ ಪಗೆವರ ಕಡುವರ್ಚಂ ಎನ್ನ ಪೂಣ್ಕೆಯಂ ಎರ್ದೆಯೊಳ್ ಬಗೆ ಮುನಿಯ ಮಂತ್ರಪದಮಂ: **ಪಂಪಭಾ,** ೭. ೬೭)

ಕಡುವೆಳ್ಪು – [ನಾ] [ಕಡು+ಬೆಳ್ಪು] ಅತಿಶಯವಾದ ಬಿಳಿ (ಆನನೇಂದುವ ಕಡುವೆಳ್ಪು ಕೂಸಿನ ನೆಗಟಿರ್ತ್ಯ ಬೆಳ್ಪುವೊಲಾಯ್ತು ಮುನ್ನೆ ಬಳ್ಕುವ ನಡು ತೋರ್ಪ ಮೆಯ್ಯನೊಳಕೊಂಡುದು: **ಪಂಪಭಾ,** ೧. ೧೨೫)

ಕಡುವೇಟಕಾಱ – [ನಾ] ಪ್ರಣಯಾತುರನಾದವನು (ನಲ್ಲಳಗಲ್ಕೆಯಿಂದಂ ಆದ ಅದವಟಲಚ್ಚಿಗಂ ಮಱುಕಮೆಂಬಿವಱೆಂದೆ ಕನಲ್ದು ಮುನ್ನೆ ಬೇಟದ ಸವಿಗಂಡನಲ್ಲದಱೆಯಂ ಶ್ರಮಮಂ ಕಡುವೇಟಕಾಱರಾ: **ಆದಿಪು,** ೧೨. ೨೨)

ಕಡುಸಿಗ್ಗುಮಾಡು – [ಕ್ರಿ] ತುಂಬ ಅವಮಾನಿಸು (ಕುಂಭಸಂಭವನಂ ಆ ದ್ರುಪದಂ ಕಡುಸಿಗ್ಗು ಮಾಡಿದಂ: **ಪಂಪಭಾ,** ೨. ೪೮)

ಕಡೆ – [ನಾ] ಕಾಲಾನಂತರ (ಆತನ ಕಡೆಯೊಳ್ ಉಚಿತ ಮನ್ವಂತರವ್ಯತಿಕ್ರಮದೊಳ್: **ಆದಿಪು,** ೬. ೬೩ ವ); [ನಾ] ರಂಗೋಲಿ (ಕಡೆಯೊಳ್ ತಗುಳ್ದ ರತ್ನದ ಬೆಡಂಗುವೆತ್ತೆಸೆವ ದೀಪ್ತಿವಳಯದ ಚೆಲ್ವಂ ಪಡೆದು: **ಆದಿಪು,** ೭. ೭೫); [ಕ್ರಿ] ಕಡೆಗೋಲಿಂದ ಮಥಿಸು (ಶ್ರೀರಮಣಿಯಂ ದ್ವಿಷದ್ಬಳ ಪಾರಾವಾರದೊಳುದಗ್ರ ಭುಜವಿಜಯ ಮಹಾಮೇರುವಿನೆ ಕಡೆದು ಪಡೆದಳವಾರುಮನಿಟೆಸಿದುದು ಉದಾತ್ತನಾರಾಯಣನಾ: **ಪಂಪಭಾ,** ೪. ೧); [ಕ್ರಿ] ತಿದ್ದು, ರೂಪಿಸು (ಅಮರ್ದಿಂದೆ ತೊಯ್ದು ಕಪ್ಪುರವಳುಕಿಂದಜಂ ಕಡೆದು ಕಂಡರಿಪಂ ವಲಂ ಎನ್ನ ನಲ್ಲಳಂ: **ಪಂಪಭಾ,** ೫. ೧೬); [ನಾ] ಅಂತ್ಯ, ಕೊನೆ (ಪರಪಿನ ನೀಳದ ಕಡೆಯಂ ಮರುಳಂ ತವೆ ನೋಡಲಾಱದೆ ಅಂಬರತಳಮಂ ಕರಿದೆಂಬಂತಿರೆ ನಿನ್ನಂ ನರನೆಂಬುದೆ: **ಪಂಪಭಾ,** ೬. ೨೦)

ಕಡೆಗಣ್ – [ನಾ] ಕಟಾಕ್ಷ, ಕುಡಿನೋಟ (ಅಂತು ನೋಡಿ ಕಡೆಗಣ್ಣ ಚೆಲ್ಲಂಬೆರಸು ಸೂಸುವ ವಾಸವಸ್ತ್ರೀಯರ ಮುಖಾಬ್ಜಾಸವ ಸಂಬಂಧಿಗಳಪ್ಪ ಶೇಷಾಕ್ಷತಂಗಳಂ ಈಶ್ವರನಂ ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ವಂತೆ ಸೇಸೆಗೊಳ್ಳುತ್ತುಂ: **ಪಂಪಭಾ,** ೮. ೨೭ ವ)

ಕಡೆಗಣಿಸು – [ಕ್ರಿ] ಅಲಕ್ಷ್ಯಮಾಡು (ನಿಮ್ಮಯ ಧರ್ಮದ ಮಕ್ಕಳೆವು ಎಮ್ಮಂ ಕಡೆಗಣಿಸಿ ನಿಮಗೆ ನೆಗಟ್ಟುದು ದೊರೆಯೇ: **ಪಂಪಭಾ,** ೧೧. ೧೨೮)

ಕಡೆಗಣ್ಚು – [ಕ್ರಿ] ಕಡೆಗಣಿಸು (ಸೀತೆ ಕಡಂಗಿ ಕಾಯ್ದು ಕಡೆಗಣ್ಚಿದಳಪ್ಪೊಡೆ ಧಾತ್ರನಿಂ ತೊದಳ್ವಾತಿನೊಳೇನೊ ಪಾಂಡವರ ಕೈಯೊಳೆ ನಿನ್ನ ನಿಸೇಕಮಾಗದೇ: **ಪಂಪಭಾ,** ೯. ೪೯)

ಕಡೆಗಾಣ್ – [ಕ್ರಿ] ಕೊನೆಯನ್ನು ಅಥವಾ ಪಾರವನ್ನು ಕಾಣು (ಕ್ಷಯಮಣಮಿಲ್ಲ ಕೇಳ್ದು ಕಡೆಗಂಡವಂ ಆವನುಮಿಲ್ಲ ಎನಲ್: **ಪಂಪಭಾ,** ೧.೫)

ಕಡೆಯಿಕ್ಕು – [ಕ್ರಿ] ರಂಗೋಲೆ ಹಾಕು, ಅಲಂಕರಿಸು (ಕಡೆಯಿಕ್ಕಿದ ಬಿಡುಮುತ್ತಿನ ಪೊಡರ್ದುಣ್ಮುವ ಬೆಳಗು: **ಆದಿಪು,** ೮. ೧೬)

ಕಡೆಯೆಯ್ದು – ಮುಗಿ, ಕೊನೆಗೊಳ್ಳು (ಇಂತಿರ್ವರುಂ ಪೂಣ್ದು ಅಲಂಪಿನೊಳುಂಡರ್ ಕಡೆಯೆಯ್ದೆ ಷೋಡಶ ನದೀನಾಥೋಪಮ ಆಯುಷ್ಯಮಂ: **ಆದಿಪು,** ೩. ೭೬)

ಕಡ್ಡ – ಮಾತ್ಸರ್ಯ, ದ್ವೇಷ (ಒರ್ವರೊರ್ವರೊಳ್ ಮೂಗುದುಱೆಸಲಾಗದ ಕಡ್ಡಂ ಅವರ್ಗೆಂತುಂ ಒಡಂಬಡಾಗದು: **ಪಂಪಭಾ,** ೧೨. ೧೦೩ ವ)

ಕಡ್ಡವಣೆ – [ನಾ] ಬರಸೆಳೆಯುವಿಕೆ (ಪುರುಡುವೆರೆಸಿದ ಕೊಂಕಿಂಗಂ ಕಡ್ಡವಣೆವೆರಸಿದ ಸೋಂಕಿಗಂ ಗಾಢವೆರಸಿದ ಹಾವಕ್ಕಂ ನಾಣ್ವೆರಸಿದ ಭಾವಕ್ಕಂ: **ಪಂಪಭಾ,** ೪. ೧೭ ವ)

ಕಡ್ಡುವರ್ – [ಕ್ರಿ] ಅಡ್ಡ ಬರು (ಅಂತು ಪೊಱಮಡುವ ಅರಾತಿ ಕಾಲಾನಲನಂ ಕಂಡು ಕಡ್ಡುವಂದ ದೊಡ್ಡರೆಲ್ಲಂ ಮುಸುಱೆ: **ಪಂಪಭಾ,** ೩. ೬೧ ವ); [ಕ್ರಿ] ಕಠಿಣವಾಗು (ಚಕ್ರೇಶ ಸಿಗ್ಗನುಟೆ ಮುಳಿಸಂ ನೀನೆಂದಿಗಂ ಬಿಸುಡು ಈ ತಮ್ಮಂದಿರೊಳಿಂತಿಂತು ಕಡ್ಡುವರ್ಪುದು ಪೆಂಪೇ: **ಆದಿಪು,** ೧೪. ೧೨೮) [ಎಲ್. ಬಸವರಾಜು 'ಕಡ್ಡುವರ್ಪುದು' ಎಂಬ ರೂಪದ ಬದಲು 'ಕಡ್ಡುದರ್ಪುದು' ಎಂಬ ಪಾಠವನ್ನು ಸ್ವೀಕರಿಸಿ, 'ಕಡ್ಡು' ಎಂಬುದಕ್ಕೆ ವೈಷಮ್ಯ, ವಿರಸ ಎಂಬರ್ಥ ನೀಡಿ, 'ಕಡ್ಡುದರ್' ಎಂದರೆ ವೈಮನಸ್ಯವುಂಟುಮಾಡು ಎಂದು ವಿವರಿಸುತ್ತಾರೆ; ನರಸಿಂಹಶಾಸ್ತ್ರಿಗಳು 'ಕಟ್ಟುವರ್ಪುದು' ಎಂಬ ಪಾಠ ಇಟ್ಟುಕೊಂಡು ನಿಗ್ರಹಬುದ್ಧಿಯನ್ನಿರಿಸುವುದು ಎಂದು ಅರ್ಥೈಸುತ್ತಾರೆ]

ಕಣ – [ನಾ] ಬಟ್ಟೆ (ಪರಿವೆಡೆಯ ತುಳಿವೆಡೆಯ ನೆಳಲಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂ ನೋಡದೆ ಸೂಸಿದಾಗಳ್: **ಆದಿಪು,** ೪. ೩೪ ವ)

ಕಣಂ ಮಾಡು – [ಕ್ರಿ] ತೆನೆ ತುಂಬಿದ ಪೈರನ್ನು ಕಣದಲ್ಲಿ ಹರವು (ಸ್ತಂಬಕರ್ಯಾದಿ ನಾನಾವಿಧ ಧಾನ್ಯಂಗಳಂ ಪದನಱೆದುಡುಗುವ ಕಣಂ ಮಾಡುವ ಒಕ್ಕುವ ಅಡುಕುವ ಬಯ್ತಿಡುವ ಅಕ್ಕಿ ಮಾಡುವ ವಿವಿಧ ಭಾಜನಂಗಳೊಳ್ ಅಡುವ: **ಆದಿಪು,** ೬. ೭೭ ವ)

ಕಣಕ್ – ಒಂದು ಅನುಕರಣ ಶಬ್ದ (ಪೆಱೆಯ ಮುಱೆಗಂ ಕಣಕನೆ ವೋಪಂಬು ಕವಲಂಬುವೆಂಬ ಅಂಕದ ಅಂಬು ಎತ್ತಲುಂ ತುಱುಗಿ: **ಪಂಪಭಾ,** ೧೩. ೩೯)

ಕಣಯ – [ನಾ] 'ಮುಷ್ಟಿ' ಎಂಬ ಆಯುಧ (ಮನೋವೇಗಮೆಂಬ ಕಣಯಮುಂ ಸೌನಂದಕಮೆಂಬ ಬಾಳುಂ: **ಆದಿಪು,** ೧೫. ೩ ವ)

ಕಣಿ – [ನಾ] [ಖನಿ] ಸಂಪತ್ತು, ಭಾಗ್ಯ (ಇನಿತುಮಿಲ್ಲದೆ ಗುಱುಗುಮ್ಮೆಂದು ಪಸಿದಿರ್ದು ಬೆದಬೆದ ಬೆಂದಿನಿಬರ್ ಕಟ್ಟಿಕೊಳ್ವ ಕಣಿಯೇಂ ಪೇಟೆಂ: **ಆದಿಪು,** ೯. ೯೦); [ನಾ] ಗಣಿ (ಕಣಿ ರತ್ನತ್ರಯಕ್ಕೆ ಇದೇಂ ಪಿಱೆದು ಎನಲ್ ರತ್ನಾಕರಂ ರತ್ನತೋರಣ ರತ್ನಾಸನರತ್ನವಿಭ್ರಮಣ **ಆದಿಪು,** ೧೬. ೪)

ಕಣೆ – [ನಾ] ಬಾಣ (ಎಡವಱದೊಳ್ ಎಱಗಿ ಬಱಸಿಡಿಲ್ ಇಡುಮುಡುಕನೆ ಪೊಡೆದುದೆನಿಸಿ ಪಾಂಡ್ಯನ ರಥದ ಅಚ್ಚು ಉಡಿದು ಅಟ್ಟಿಗೆಟಗ್ಗಿ ಕೊಂಡುವು ಕಡುಗೂರಿದುವೆನಿಪ ಗುರುತನೂಜನ ಕಣೆಗಳ್: **ಪಂಪಭಾ,** ೧೨. ೮೨)

ಕಣೆಕಾಲ್ – [ನಾ] ಕಾಲಿನ ಕೆಳಭಾಗ (ಅಡಿ ತೊಡೆ ಪೊರ್ಕುಟುಂ ತೆಗಲೆ ಕೈ ಕಣೆಕಾಲ್ ಕೊರಲ್ ಎಂಬಿವುಂ

ಬೆರಲ್ ನಡುವುರ ಬೆಂ ಬಸಿಱ್ ತೊಳಕು ಕರ್ಜಱ್ ಮುಯ್ಪು .. .. ಎಂಬೆಡೆಯನೆ ನಟ್ಟುರ್ಚಿದುವು: **ಪಂಪಭಾ,** ೧೧. ೧೩೬)

ಕಣೆಯ – [ನಾ] ಬಾಣ (ಕಣೆಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ ವಿವಿಧಾಯುಧಂಗಳೊಳಿಟ್ಟುಂ ಇಱಿದುಂ ಅಗುರ್ವು ಅದ್ಭುತಮಾಗೆ ಕಾದುವಾಗಳ್: **ಪಂಪಭಾ,** ೧೨. ೧೧೮ ವ)

ಕಣ್ಕೆತ್ತು – [ಕ್ರಿ] ಕಣ್ಣು ಸನ್ನೆ ಮಾಡು (ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ ಕಣ್ಕೆತ್ತಿ ಕಿಱುನಗುವ ಕೂರದರ ಮೊಗಮುಮಂ ತಮ್ಮಣ್ಣನ ಬಿನ್ನನಾದ ಮೊಗಮುಮಂ ಕಂಡು: **ಪಂಪಭಾ,** ೭. ೫ ವ)

ಕಣ್ಗಳ ಬಳಗಂ – [ನಾ] ಕಣ್ಣುಗಳ ಗುಂಪು, [ಇಂದ್ರನ] ಸಾವಿರ ಕಣ್ಣುಗಳು (ನೆನೆವ ಮನಂ ಪೆಱಗುಟಿದತ್ತೆನೆ ಬೆಳಗುವ ರತ್ನದೀಪ್ತಿ ಸುರಧನು ನೆಗೆದತ್ತೆನೆ ನೆಯ್ದಿಲ್ಗೊಳನಲರ್ದತ್ತೆನೆ ಕಣ್ಗಳ ಬಳಗಂ ಆಗಳ್ ಇಂದ್ರಂ ಬಂದಂ: **ಪಂಪಭಾ,** ೧೩೮)

ಕಣ್ಣಾಗಿಱು – [ಕ್ರಿ] ನೋಡು, ವಿವೇಕ ತೋರಿಸು (ಇಂತಪ್ಪ ಏಕಗ್ರಾಹಿಗಂ ಒಱಂಟಂಗಂ ರಥಮಂ ಎಸಗೆಂ ಎಂದು ವರೂಥದಿಂದ ಇೞಿದು ಪೋಗೆ: **ಪಂಪಭಾ,** ೧೨. ೨೦೫ ವ)

ಕಣ್ಣಾಪು – [ನಾ] ಕಣ್ಣರಕೆ, ಕಣ್ಣಿನ ಕಾವಲು (ಪುರೋಚನಂ ಪೆಱಗಣ ಕಾಪಂ ಕಣ್ಣಾಪಿನಲೆ ಕಾದಿರ್ಪನ್ನೆಗಂ: **ಪಂಪಭಾ,** ೩. ೪ ವ)

ಕಣ್ಗಿಡು – [ಕ್ರಿ] ಕಂಗೆಡು, ಗಾಬರಿಯಾಗು (ರಜಸ್ವಲೆಯಾಗಿರ್ದೆಂ ಮುಟ್ಟಲಾಗದು ಎನೆಯುಂ ಒತ್ತಂಬದಿಂದ ಒಳಗಂ ಪೊಕ್ಕು ಪಾಂಚಾಳಿಯಂ ಕಣ್ಗಿಡೆ ಜಡಿದು: **ಪಂಪಭಾ,** ೭. ೪ ವ)

ಕಣ್ಗೆಳಿದಾಗು – [ಕ್ರಿ] ಕಣ್ಣಿಗೆ ಅಹಿತವಾಗು (ಅಂಗರುಚಿ ಕಣ್ಗೆಳಿದಾಯ್ತು ವಿಭೂಷಣಂಗಳೊಳ್ ತೀಡುವ ರಶ್ಮಿಗಳ್ ಮಸುಳ್ದುವು: **ಆದಿಪು,** ೩. ೩)

ಕಣ್ಗೆಡಱು – [ಕ್ರಿ] ಕಣ್ಣ ನೋಟಕ್ಕೆ ಸಿಕ್ಕು (ನಸು ಮಾಸಿ ಪಾಡಟಿದ ರೂಪಿನೊಳ್ ಉಣ್ಮುವ ಗಾಡಿ ನಾಡೆ ಕಣ್ಗೆಡಱ್: **ಪಂಪಭಾ,** ೧೩. ೯೯)

ಕಣ್ಗೆಡು – [ಕ್ರಿ] ದೃಷ್ಟಿಶಕ್ತಿ ಕುಂದು (ಕಟ್ಟಿದ ಪಟ್ಟಮೆ ಸರವಿಗೆ ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಂಗೆಣೆ ಕಣ್ಗೆಟ್ಟ ಮುದುಪಂಗೆ: **ಪಂಪಭಾ,** ೧೦. ೧೭)

ಕಣ್ಗೆತ್ತು – [ಕ್ರಿ] ಕಣ್ಣು ಸಂಜ್ಞೆಮಾಡು, ಕಣ್ಣು ಮಿಟುಕಿಸು (ಮೆಲ್ಲಮೆಲ್ಲನೆ ಕೆಲಕ್ಕೆ ವಂದು ಕುಂಚದ ಅಡಪದ ಡವಕೆಯ ಪರಿಚಾರಿಕೆಯರೆಲ್ಲರುಮಂ ಕಣ್ಗೆತ್ತಿ ಕಳೆದು: **ಪಂಪಭಾ,** ೪. ೬೧ ವ)

ಕಣ್ಗೆವರ್ – [ಕ್ರಿ] ಚೆನ್ನಾಗಿ ಕಾಣು, ಆಕರ್ಷಿಸು (ನೆಗಟ್ದೀ ಕರ್ಪೂರ ಕಾಳಾಗರು ಮಳಯಮಹೀಜಂಗಳ್ ಏಳಾಲತಾಳೀ ಸ್ಥಗಿತಂಗಳ್ ಕಣ್ಗೆವಂದಿರ್ದುವಂ: **ಪಂಪಭಾ,** ೪. ೨೩)

ಕಣ್ಗೊಳ್ – [ಕ್ರಿ] ಕಣ್ಣು ಸೆಳೆ, ಸುಂದರವಾಗಿ ಕಾಣು (ಕಣ್ಗೊಂಡು ಮನಂಗೊಂಡುಂ ಇಂದ್ರನೆ ಖೇಚರೇಂದ್ರನೆ ದಲೀ ಭೂಪೇಂದ್ರನೆಂಬನ್ನೆಗಂ: **ಆದಿಪು,** ೧೧. ೧೫೭); [ಕ್ರಿ] ಕಾಣಿಸು (ಸುರುಳ್ದುರುಳ್ದ ತುರಗಂ ಸುರ್ಕಿರ್ದ ಸೂತಂ ಕಡಲ್ ಕಡಲಂ ಮುಟ್ಟಿ ತೆರಳ್ವ ನೆತ್ತರ ಪೊನಲ್ ಕಣ್ಗೊಂಡುದು ಉಗ್ರಾಜಿಯೊಳ್: **ಪಂಪಭಾ,** ೧೦. ೯೧)

ಕಣ್ಣ ಪಾಪೆ – [ನಾ] ಕಣ್ಣ ಬೊಂಬೆ, ಕಣ್ಣ ಗುಡ್ಡೆ (ಸುಭದ್ರೆಯ ರೂಪ ಕಣ್ಣ ಪಾಪೆಯಂತೆ ಕಣ್ಣೊಳೆ ತೊಟಲೆ: **ಪಂಪಭಾ,** ೪. ೬೯ ವ)

ಕಣ್ಣಱಿ – [ಕ್ರಿ] ಕಣ್ಣನ್ನು [ಅಭಿಪ್ರಾಯವನ್ನು] ತಿಳಿ (ಆ ರಮ್ಯನದಿಯ ಚೆಲ್ವಂ ಇಳಾರಮಣಂ ಅಟ್ಟಿಯಿಂ ನೋಡುವಿನಂ ಸಾರಥಿ ಕಣ್ಣಱಿದು: **ಆದಿಪು,** ೧೧. ೫೭)

ಕಣ್ಣಾರ್ – [ಕ್ರಿ] ಕಣ್ಣಿಗೆ ತೃಪ್ತಿಯಾಗು (ಉಸಿರೊತ್ತಿಂ ತಿದಿಯಂತಿರೊತ್ತಿರೆ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್ .. .. ಪುಡಿಯೊಳ್ ಪೊರಳ್ವ ಪಗೆಯಂ ಕಣ್ಣಾರ್ವಿನಂ ನೋಡಿದಳ್: **ಪಂಪಭಾ,** ೧೨. ೧೫)

ಕಣ್ಣೀರ್ಗಳನಿಕ್ಕು – [ಕ್ರಿ] ಕಣ್ಣೀರು ಸುರಿಸು (ನಿಷ್ಕಾರಣಂ ಕೆಯ್ದುವಿಕ್ಕುವ ಕಣ್ಣೀರ್ಗಳನಿಕ್ಕುವ ಈ ಎರಡುಮಂ ನಿಮ್ಮಯ್ಯನೊಳ್ ಕಲ್ತಿರೇ: **ಪಂಪಭಾ,** ೧೨. ೪೪)

ಕಣ್ಣುಳ್ಕು – [ಕ್ರಿ] ಕೋರೈಸು (ನೆರೆದುದಿರು ಕ್ಷಾತ್ರಂ ತೇಜಂ ಧರಾಧಿಪರೂಪದಿಂ ಧರೆಗೆನುತುಂ ಆ ದೂತಂ ಕಣ್ಣುಳ್ಕೆ ನೋಡಿ ಕುಮಾರನಂ: **ಆದಿಪು,** ೧೪. ೪೪)

ಕಣ್ಣೂಱು – [ಕ್ರಿ] ಗಮನ ನೀಡು (ಭವ್ಯಜನಮಂ ಕಣ್ಣೂಱಿ ಕಲ್ಪಿಪ್ಪ ಉಪಾಧ್ಯಾಯರ್ ಜ್ಯೋತಿಸುಗೆ ಎಮ್ಮ ಚಿತ್ತಗೃಹದೊಳ್ ರತ್ನತ್ರಯಜ್ಯೋತಿಯಂ: **ಆದಿಪು,** ೧. ೪)

ಕಣ್ಣೆಮೆ – [ನಾ] ಕಣ್ಣ ರೆಪ್ಪೆ (ಮನೆಯಾಣ್ಮನ ಕಣ್ಣೆಮೆಯ ಕಾಂಡಪಟಮಾಗೆಯುಂ ಬಗೆಯಾಣ್ಮನ ಕಣ್ಣೆಮೆಯ ದೂದವಿಯಾಗೆಯುಂ: **ಪಂಪಭಾ,** ೪. ೮೧ ವ)

ಕಣ್ದೆಱ್ – [ಕ್ರಿ] ಪ್ರಕಟವಾಗು (ಈ ದಂಪತಿಯ ಬಯಕೆ ಸಂಪೂರ್ಣಮಾಯ್ತು ಉತ್ಸವಂ ಕಣ್ದೆಱ್‌ದಂತಾಯ್ತೆನ್ನ ಸಾಮ್ರಾಜ್ಯದ ಫಲಂ: **ಆದಿಪು,** ೪. ೪೮); [ಕ್ರಿ] ಜೀವ ಬರು (ಧನುರ್ವಿದ್ಯೆಯ ಕಣ್ದೆಱ್‌ವಿನೆಗಂ ಕಲ್ಪ ನಿಮ್ಮ ಮಕ್ಕಳ ಮೆಯ್ಯೊಳ್ ಮೆಱ್‌ದಪ್ಪೆಂ: **ಪಂಪಭಾ,** ೨. ೬೫); [ಕ್ರಿ] ಕಣ್ಣು ತೆರೆ (ಕೆಂಗಱಿಯ ಮೊನೆಯಂಬುಗಳ್ ಕಣ್ದೆಱ್‌ಯಿಸಿದುವು ಪೊಣರ್ವ ಬಿಲ್ಲ ಕಡುವಿತ್ತೆಗರಂ: **ಪಂಪಭಾ,** ೧೦. ೭೩)

ಕಣ್ಪಿಂತೆ ಸಲ್ – [ಕ್ರಿ] ನೋಟ ಹಿಂದಕ್ಕೆ ಹೋಗು, ಸರಿಯಾಗಿ ನೋಡದಿರು (ಇನಿಯಂ ನೊಯ್ಗುಂ ಎಡಂಬಡಂ ನುಡಿದೊಡೆ ಎಂದಪ್ಪೊಡಂ ನಿನ್ನೊಳೆಳ್ದನಿತುಂ ದೋಷಮನುಂಟುಮಾಡದಿರೆಯುಂ ಕಣ್ಪಿಂತೆ ಸಂದಪ್ಪುದು: **ಪಂಪಭಾ,** ೪. ೯೩)

ಕಣ್ಬಡಿಗ – [ನಾ] ಮೋಸಗಾರ (ಈ ಮೊಗಂಗುಡದ ಇರವು ಇಂತು ಕಣ್ಬಡಿಗರಪ್ಪರೆ ಮಾನಸರಪ್ಪರ್: **ಪಂಪಭಾ,** ೮. ೭೬); [ನಾ] ಕಣ್ತಪ್ಪಿಸಿ ತಿರುಗುವವನು (ಅರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಂ ಮಗುಟ್ದುಂ ಬಿಱುತು ಓಡಿ ಬೇಡರೊಳ್ ನೆರೆದಿರಲ್ ಅಲ್ಲದೆ: **ಪಂಪಭಾ,** ೮. ೮೫)

ಕಣ್ಬೇಟ – [ನಾ] ಕಣ್ಣೊಲುಮೆ, ಮೊದಲ ನೋಟದ ಪ್ರೇಮ (ಪಸುರ್ವಂದರ್ ಪಸೆ ವೇದಪಾರಗರವಂ ಕಣ್ಬೇಟದ ಉದ್ದಾನಿಯಂ ಪಸರಂಗೆಯ್ದುವೊಲಪ್ಪು: **ಪಂಪಭಾ,** ೫. ೨೫)

ಕಣ್ಬೊಲ – [ನಾ] ಕಣ್ಣಿಗೆ ಕಾಣುವಷ್ಟು ದೂರ, ದೃಷ್ಟಿಪಥ (ಗಗನತಳಗಮನದೊಳಂದಾದ ಬೆಡಂಗಂ ನೋಡಿದರ್ ಆದರದಿಂ ತಮ್ಮ ಕಣ್ಬೊಲಂಗಟಿವಿನೆಗಂ: **ಆದಿಪು,** ೫. ೬೫)

ಕಣ್ಬೊಳೆಪು – [ನಾ] [ಕಣ್+ಪೊಳೆಪು] ಕಣ್ಣ ಕಾಂತಿ (ತನ್ನನೆ ನಿಳ್ಕಿ ನೋಟ್ಪಿರ ಕಣ್ಗೆ ಕಣ್ಬೊಳೆಪು ತನ್ನಯ ಮೆಯ್ಯ ಬೆಳ್ಪಿನೊಳ್ ಅಟ್ಟು ನಿಂದೊಡೆ: **ಪಂಪಭಾ**, ೬. ೭)

ಕಣ್ಮಲರ್ – [ನಾ] ಕಣ್ಣು ಎಂಬ ಹೂ (ಉಡಮೊಗಮೆಂಬ ತಾವರೆಯ ನೀಳ್ದೆಸಳೊಳ್ ಮಱೆದುಂಬಿ ಪಾಯ್ದು ಒಡಂಬಡನೊಳಕೊಂಡು ಕಣ್ಮಲರ ಬೆಳ್ಪುಗಳ್ ಆಲಿಯ ಕರ್ಪಿನೊಳ್ ಪೊದಳ್ದು; **ಪಂಪಭಾ**, ೫. ೭೮)

ಕಣ್ಮಲೆ – [ಕ್ರಿ] ಮನಸ್ಸಿಗೆ ಹೊಳೆ, ವೇದ್ಯವಾಗು (ನಂದನಂಗಳೊಳ್ ಸುೞಿವ ಬಿರಯಿಯಿಂ ಕಂಪು ಕಣ್ಮಲೆಯೆ ಪೂತ ಸುರಯಿಯಿಂ: **ಪಂಪಭಾ**, ೩. ೨೨); ಕಣ್ಣು ಕೆರಳಿಸು (ಬನ್ನಮುಂ ಮುನ್ನಮೆ ಸೋಂಕಿ ಕಣ್ಮಲೆವ ಮಾತುಗಳ್ ಎಲ್ಲರ ಪೇೞ್ವ ಮಾತುಗಳ್: **ಪಂಪಭಾ**, ೭. ೫೫)

ಕಣ್ಮುಚ್ಚು – [ಕ್ರಿ] ಕಣ್ಣು ಮುಚ್ಚು (ಸುಭದ್ರೆಯ ರೂಪು ಕಣ್ಣಪಾಪೆಯಂತೆ ಕಣ್ಣೊಳೆ ತೊೞಲೆ ಕಣ್ಮುಚ್ಚದೆ .. .. ಚಂದ್ರನಂ ನೋಡಿ: **ಪಂಪಭಾ,** ೪. ೬೯ ವ); [ಕ್ರಿ] ಮಲಗಿಕೊ, ನಿದ್ರಿಸು (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಮುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ**, ೩. ೩೧ ವ)

ಕಣ್ಸೋಲ್ – [ಕ್ರಿ] ಕಣ್ಣು ಸೋತುಹೋಗು, ಆಕರ್ಷಣೆಗೊಳ್ಳು (ಗಂದೇಭ ಕಂಧರಬಂಧಪ್ರವಿಭಾಸಿಯಪ್ಪ ಅರಿಗನಂ ಕಾಣುತ್ತೆ ಕಣ್ಸೋಲ್ತು ಕಾಮರಸಂ ಭೋಂಕನೆ ಸೂಸೆ: **ಪಂಪಭಾ**, ೪. ೩೮)

ಕಣ್ಸೋಲ – [ನಾ] ಮೋಹ, ಆಕರ್ಷಣೆ (ಮಱುಗುತ್ತಿರ್ಪಳ್ಗೆ ನೋಡಾದಟಲಂ ಎನಗೆ ಕಣ್ಸೋಲದಿಂ ಕೀಚಕಂ ಬಂದುಱಿದೆನ್ನಂ ಕಾಡಿ: **ಪಂಪಭಾ**, ೮. ೭೧)

ಕತಿಪಯ – [ಸ] ಕೆಲವು (ಕತಿಪಯತುರಂಗಬಲ ಪರಿವೃತನೊಳಪೊಕ್ಕು: **ಆದಿಪು**, ೧೩. ೩೫); ಕೆಲವು [ಕಾಲದ] (ದ್ರುಪಜೆಯನೊಡಗೊಂಡು ದ್ರುಪದದನಿರವೇಟ್ಟು ಕತಿಪಯ ಪ್ರಯಣಂಗಳಿಂ ಮದಗಜಪುರಮನೆಯ್ದಿ ವಂದು: **ಪಂಪಭಾ,** ೪. ೪ ವ)

ಕತೆ – [ನಾ] [ಕಥಾ] ನಿರೂಪಿತ ಘಟನೆ (ಕತೆ ಪಿರಿದಾದೊಡಂ ಕತೆಯ ಮೆಯ್ಗೆಡೆಯಲೀಯದೆ .. .. ಪೇೞ್ದೊಡೆ ಪಂಪನೆ ಪೇೞ್ಗುಂ: **ಪಂಪಭಾ**, ೧. ೧೧)

ಕತ್ತಿಗೆ – [ನಾ] [ಕರ್ತ್ರಿಕಾ] ಕೈ ಮಚ್ಚು, ಕತ್ತಿ (ಕೃತಾಂತನಂತಾಕಾರಮಾಗಿ ತಟತಟಿಸಿ ಪೊಳೆವ ಕತ್ತಿಗೆಯಂ ಬೆರಸು ಪೊಱಮಟ್ಟು ಕೀರ್ತಿಗೆಯೆಂಬ ಉಗ್ರದೇವತೆ: **ಪಂಪಭಾ**, ೮. ೪೨ ವ)

ಕತ್ತುರಿ – [ನಾ] ಕಸ್ತೂರಿಮಲ್ಲಿಗೆ (ಎಸಳಂ ಮುಟ್ಟಲೊಡಂ ತನ್ನ ಸೌರಂಭಂಗೆಟ್ಟು ನೆಗಟ್ದಿ ಕತ್ತುರಿ ಮಣ್ಣಂ ಮಸಿಗಂ ಎಣೆಯಪ್ಪುದೆನೆ: **ಆದಿಪು**, ೧೧. ೧೨೧) ['ಕತ್ತುರಿವಣ್ಣಂ' ಎಂಬ ಬದಲು **'**ಕತ್ತುರಿ ಮಣ್ಣಂ**"** ಎಂಬ ಪಾಠವನ್ನು ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳು ಸ್ವೀಕರಿಸುತ್ತಾರೆ], [ನಾ] ಒಂದು ಸುಗಂಧ ದ್ರವ್ಯ (ಕತ್ತುರಿಬಿಯಮಂ ಮೆಱೆದು ಕತ್ತುರಿಯೊಳ್ ಪೂಟ್ಟು ಕತ್ತುರಿಮಿಗದಂತಿರ್ಪ ಕತ್ತುರಿಬೊಜಂಗರುಂ: **ಪಂಪಭಾ**, ೪. ೮೭ ವ)

ಕತ್ತುರಿಬಿಯ – [ನಾ] ಕಸ್ತೂರಿಯ ವೆಚ್ಚ (ಚಿಕ್ಕ ಪೋರ್ಕುಳಿ ಬೊಜಂಗರುಂ ಕತ್ತುರಿಬಿಯಮಂ ಮೆಱೆದು ಕತ್ತುರಿಯೊಳ್ ಪೂಟ್ಟು ಕತ್ತುರಿಮಿಗದಂತಿರ್ಪ ಕತ್ತುರಿಬೊಜಂಗರುಮಂ: **ಪಂಪಭಾ,** ೪. ೮೭ ವ)

ಕತ್ತುರಿಬೊಜಂಗ – [ನಾ] ಗಾಢವಾಗಿ ಕಸ್ತೂರಿ ಲೇಪಿಸಿಕೊಂಡ ವಿಟ (ಚಿಕ್ಕ ಪೋರ್ಕುಳಿ ಬೊಜಂಗರುಂ ಕತ್ತುರಿಬಿಯಮಂ ಮೆಱೆದು ಕತ್ತುರಿಯೊಳ್ ಪೂಟ್ಟು ಕತ್ತುರಿಮಿಗದಂತಿರ್ಪ ಕತ್ತುರಿಬೊಜಂಗರುಮಂ: **ಪಂಪಭಾ,** ೪. ೮೭ ವ)

ಕತ್ತುರಿಮಿಗ – ಕಸ್ತೂರಿ ಮೃಗ (ಚಿಕ್ಕ ಪೋರ್ಕುಳಿ ಬೊಜಂಗರುಂ ಕತ್ತುರಿಬಿಯಮಂ ಮೆಱೆದು ಕತ್ತುರಿಯೊಳ್ ಪೂಟ್ಟು ಕತ್ತುರಿಮಿಗದಂತಿರ್ಪ ಕತ್ತುರಿಬೊಜಂಗರುಮಂ: **ಪಂಪಭಾ,** ೪. ೮೭ ವ)

ಕತ್ತುರಿಮೃಗಮದ – [ನಾ] ಕಸ್ತೂರಿ ಮೃಗದ ಮದ, ಪರಿಮಳ (ಉತ್ತಮಮದಕರಿಕಟಭಿತ್ತಿಗಳಿಂ ಸುರಿವ ಮದದ ಬಂಧುರಗಂಧಂ ಕತ್ತುರಿಮೃಗಮದದೊಳ್ ಪುದಿದು: **ಆದಿಪು**, ೯. ೧೨೦)

ಕತ್ತುರಿಯಲ್ – ಕಸ್ತೂರಿಯಲ್ಲಿ (ಕತ್ತುರಿಯಲ್ ಬರೆದಂತಪ್ಪ ವಿಕ್ರಾಂತತುಂಗನ ಮೀಸೆಗಳ್ ಆಥನ ತೀವ್ರಪ್ರತಾಪಾನಳ ಧೂಮಲೇಖೆಯಂತಾದುವು: **ಪಂಪಭಾ,** ೨. ೩೯ ವ)

ಕತ್ತುರಿವಣ್ – [ನಾ] ಕಸ್ತೂರಿ ಪರಿಮಳದಂತಹ ಮಣ್ಣು, ಕಪ್ಪು ಮಣ್ಣು? (ಎಸಳಂ ಮುಟ್ಟಲೊಡಂ ತನ್ನ ಸೌರಂಭಂಗೆಟ್ಟು ನೆಗಟ್ದಿ ಕತ್ತುರಿವಣ್ಣಂ ಮಸಿಗಂ ಎಣೆಯಪ್ಪುದೆನೆ ಬಣ್ಣಿಸುವ ಕೇದಗೆಯ ಕಂಪನೇವಣ್ಣಿಸುವೆಂ: **ಆದಿಪು**, ೧೧. ೧೨೧)

ಕಥಕ – [ನಾ] ಕತೆ ಹೇಳುವವನು (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾತಕ ವಿಪ್ರ ಉದ್ಘೂತರವಂ ಎಸೆಯೆ: **ಪಂಪಭಾ**, ೧೨. ೧೦೬)

ಕಥಾನಾಯಕ – [ನಾ] ಕತೆಯ ಮುಖ್ಯ ಪಾತ್ರ (ವೈರಿನರೇಂದ್ರೋದ್ದಾಮ ದರ್ಪೋದ್ದಳನನೆ ಕಥಾನಾಯಕಂ ಮಾಡಿ ಸಂದ ಅರ್ಜುನನೊಳ್ ಪೋಲ್ವೀ ಕಥಾಭಿತ್ತಿಯಂ ಅನುನಯದಿಂ ಪೇೞಲೆಂದೆತ್ತಿಕೊಂಡೆಂ: **ಪಂಪಭಾ,** ೧. ೫೧)

ಕಥಾಭಿತ್ತಿ – [ನಾ] ಕತೆಯ ಹಿನ್ನೆಲೆ, ಕತೆಯ ವಸ್ತು [ಭಿತ್ತಿ=ಗೋಡೆ, ಚಿತ್ರಕ್ಕೆ ಗೋಡೆ ಹಿನ್ನೆಲೆಯಾದಂತೆ] (ವೈರಿನರೇಂದ್ರೋದ್ದಾಮ ದರ್ಪೋದ್ದಳನನೆ ಕಥಾನಾಯಕಂ ಮಾಡಿ ಸಂದ ಅರ್ಜುನನೊಳ್ ಪೋಲ್ವೀ ಕಥಾಭಿತ್ತಿಯಂ ಅನುನಯದಿಂ ಪೇೞಲೆಂದೆತ್ತಿಕೊಂಡೆಂ: **ಪಂಪಭಾ,** ೧. ೫೧)

ಕಥಾಸಂಬಂಧ – [ನಾ] ಕಥಾಪ್ರಬಂಧ, ಕಾವ್ಯ (ಕರಮಟ್ಟಿರ್ತು ಸಮಸ್ತಭಾರತಕಥಾಸಂಬಂಧಮಂ ಬಾಜಿಸಲ್ ಬರೆಯಲ್ ಕೇಳಲ್ ಒಡರ್ಚುವಂಗಂ: **ಪಂಪಭಾ**, ೧೪. ೬೫)

ಕಥಿತ – [ಗು] ಹೇಳಲಾದ (ಅಶ್ವತ್ಥಾಮಂ ಕಂಡು ಮುಟ್ಟೆವರ್ಪನ್ನೆಗಂ ಶೋಣಾಶ್ವೋಪಲಕ್ಷಿತ ನಿಜಪಿತೃಸೂತಕೇತನ ಕಥಿತಮಾಗಿರ್ದ ರಥಮಂ ಉಪಲಕ್ಷಿಸಿ: **ಪಂಪಭಾ**, ೧೨. ೩೦ ವ)

ಕಥೆವೇೞ್ – [ಕ್ರಿ] ನಿರೂಪಣೆ ಮಾಡು (ನನ್ನಿಯಾದುದು ಸುತಂಗೆ ಕಥೆವೇೞ್ವೆರೆಂಬ ನಾಣ್ನುಡಿ ಜಗದೊಳ್: **ಆದಿಪು,** ೮. ೧೪)

ಕದಂಪು – [ನಾ] ಕೆನ್ನೆ, ಗಲ್ಲ (ಮೃಗೋದ್ಭವಪಂಕದೆ ಪತ್ರಭಂಗಮಂ ತೊಳಪ ಕದಂಪಿನೊಳ್ ಬರೆದುದಂ: **ಆದಿಪು**, ೪. ೧೨)

ಕದಂಬ – [ನಾ] ಸಮೂಹ (ಚತುರಶ್ರ ಅಧೋಭಾಗಪರಿವೃತ್ತ ಅಗ್ರಭಾಗಾಧ್ಯಾಸಿತ ಹಿರಣ್ಮಯ ಜಿನಬಿಂಬಕಂದಂಬಂಗಳುಂ: **ಆದಿಪು**, ೧೦. ೨೩ ವ); [ನಾ] ಈಚಲ ಮರ (ಕಕುಭ ಅಶೋಕ ಕದಂಬ ಲುಂಗ ಲವಲೀಭೂಜ ಆರ್ಜುನ ಅನೋಕಹ ಪ್ರಕರಂ: **ಪಂಪಭಾ**, ೫. ೮೦)

ಕದಂಬಕ – [ನಾ] ಗುಂಪು, ಸಮೂಹ (ಅತ್ಯಂತ ಸೌಂದರ ಶುದ್ಧಾಂತವಧೂಕದಂಬಕಮನೇಂ ಮೆಯ್ವೆರ್ಚಿಸಲ್ಕಾರ್ತುದೋ: **ಆದಿಪು**, ೧೧. ೪೨)

ಕದಂಬದಂಬುಲ – [ನಾ] ಮುದ್ದೆಯಾದ ಸುಗಂಧಭರಿತ ತಂಬುಲ (ನಿಡುಸುಯ್ದು ನಲ್ಲಳ ಮುಖಾಂಬುಜಸೌರಭದೊಳ್ ಪೊದಳ್ದು ಅದೇಂ ಮಗಮಗಿಸಿತ್ತೊ ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ: **ಪಂಪಭಾ**, ೪. ೧೦೭)

ಕದಕ್ಕದಿಸು – [ಕ್ರಿ] ಅಲುಗಾಡು (ತುಂಗಸ್ತನಂ ಕದಕ್ಕದಿಸೆ ಕಣ್ಮಲರ್ ಪೊಳೆಯೆ: **ಆದಿಪು**, ೧೨. ೧೩)

ಕದಡು – [ಕ್ರಿ] ಕಲಕು (ಭೋಂಕನೆ ಮನಮಂ ಕದಡಿ ಕಲಂಕಿದಪುದು ಬಿಡದೆ ಮನಮನೊಲಿಸಿದಪುದು ಆದಂ ಕೆಳದಿ ಪಾಣ್ಬರಂಕುಸನ ಅಂಕುಸದಾ ಪೊಳಪುಂ ಅವನ ಕಣ್ಗಳ ಬೆಳ್ಪುಂ: **ಪಂಪಭಾ**, ೪. ೬೭); [ನಾ] ಮಿಶ್ರಣ (ರಮಣೀಯ ರಮಣೀಜನಂ ಬೆರಸು ಪಂಚರತ್ನಂಗಳಿಂ ಕೆದಱಿಸಿ ಸಾಂದಿನ ಸೌಸವದ ಕುಂಕುಮದ ಕತ್ತುರಿಯ ಕದಡಂ ಕದಡಿ: **ಪಂಪಭಾ**, ೫. ೬೦ ವ)

ಕದಡೇಱ್ – [ಕ್ರಿ] ಬಗ್ಗಡವಾಗು (ಜಾತ್ಯಶ್ವ ರಥ ಆಶ್ವಸಂಕುಳಖಲೀನ ಉದ್ಧೂತ ಲಾಲಾಜಲಂ ಕದಡೆಟ್ಟು: **ಪಂಪಭಾ**, ೧೦. ೩೧)

ಕದನತ್ರಿಣೇತ್ರ – [ನಾ] ಯುದ್ಧದಲ್ಲಿ ರುದ್ರನಂತೆ ಪ್ರಚಂಡ (ತ್ರಿಣೇತ್ರನುಮಂ ಅಸುಂಗೊಳಿಸಿದ ಸಾಹಸದೊಳ್ ಕದನತ್ರಿಣೇತ್ರನುಂ: **ಪಂಪಭಾ**, ೧೪. ೩೭ ವ)

ಕದನಪ್ರಾರಂಭಶೌಂಡ – [ನಾ] ಯುದ್ಧೋದ್ಯೋಗದಲ್ಲಿ ಆಸಕ್ತ (ಕದನಪ್ರಾರಂಭಶೌಂಡಂ ರಿಪುನೃಪಬಲದಾವಾನಲಂ ವೈರಿಭೂಭೃತ್ ಮದವತ್ ಮಾತಂಗಕುಂಭಸ್ಥಳ ದಳನಖರೋಗ್ರಾಸಿಪಂಚಾಸ್ಯಧೈರ್ಯಂ: **ಪಂಪಭಾ**, ೬. ೭೭)

ಕದನಾನಕ – [ನಾ] ರಣಭೇರಿ (ದಿಗ್ಭಿತ್ತಿವಿಭೇದಿ ಪೆರ್ಚೆ ಕದನಾನಕ ರಾವಂ: **ಪಂಪಭಾ**, ೮. ೯೨)

ಕದಪಂ ಕರ್ಚು – [ನಾ] ಕೆನ್ನೆಗೆ ಮುತ್ತಿಡು (ಆಗಳಾ ಕುಂಭಸಂಭವಂ ಪರಾಕ್ರಮಧವಳನ ಪರಾಕ್ರಮಕ್ಕೆ ಮೆಚ್ಚಿ ಕದಪಂ ಕರ್ಚಿ ದ್ರುಪದನಂ ತನ್ನ ಮಂಚದ ಕಾಲೊಳ್ ಕಟ್ಟವೇಟ್ಟು ತಲೆಯ ಮೇಲೆ ಕಾಲನವಷ್ಟಂಭದಿಂ ನೀಡಿ: **ಪಂಪಭಾ**, ೨. ೬೨ ವ)

ಕದಪು – [ನಾ] ಕೆನ್ನೆ (ತೆಗೆದುತ್ಸಂಗದೊಳಿಟ್ಟು ಒಯ್ಯಗೆ ಮೊಗಮಂ ನೋಡಿ ಕರ್ಚಿ ಕದಪಂ ನುಡಿದಂ ಜಗದಧಿಪತಿ: **ಆದಿಪು**, ೮. ೫೭)

ಕದಲಿಕೆ – [ನಾ] ಬಾವುಟ (ಬಿಟ್ಟುಳಿಯ ಕುಕ್ಕಂಬಂ ತೊಡಂಬೆಯ ಮೂಡಿಗೆಯ ಕದಲಿಕೆಯ ಕಾಂಡಪಟಗಳುಮಂ ಪಲವುಂ ತೆಱದ ಪಲವುಂ ಪೊಱಸ್ಯಾಗಿ ಕಟ್ಟಿದ ಬಲೆಗಳುಮಂ: **ಪಂಪಭಾ**, ೫. ೪೭ ವ)

ಕದಳಿ – [ನಾ] ಬಾಳೆ ಗಿಡ (ಮೂಡಿಗೆ ಕುಕ್ಕಂಬಂ ಸುಱಿಸಿ ಜೊಂಪಂ ಬೀಡುಬಿಡುವ ಇಂಬು ಕದಳಿ ತೆಂಗಿನ ತಾಣಂ ಜಾಣಿಂ ನೀರ್ದಾಣಮೆಂದು ಎಡೆಯಱಿದುಂ: **ಪಂಪಭಾ**, ೫. ೪೧)

ಕದಳಿಕಾ – [ನಾ] ಕದಲಿಕೆ, ಬಾವುಟ (ಅಂತು ಬರ್ಪಾಗಳ್ ಅಂಗಜವಿಜಯಕದಳಿಕಾವಿಳಾಸಮಂ ತಾಳ್ದಿ: **ಆದಿಪು**, ೧೧. ೧೫ ವ)

ಕದಳೀಗರ್ಭಶ್ಯಾಮ – [ನಾ] ಬಾಳೆಯ ಮೋತೆಯ ಒಳಭಾಗದಂತೆ ನಸುಗಪ್ಪು ಬಣ್ಣದವನು (ಕದಳೀಗರ್ಭಶ್ಯಾಮಂ ಮೃದುಕುಟಿಲ ಶಿರೋರುಹಂ: **ಆದಿಪು**, ೧. ೨೯); [ನಾ] ನಸಗಪ್ಪು ಬಣ್ಣ (ಸಾಮಂತ ಚೂಡಾಮಣಿಯ ಮೆಯ್ಯ ಬಣ್ಣಂ .. .. ಕದಳೀಗರ್ಭಶ್ಯಾಮಮೆಂಬ ಬಣ್ಣದಂತಾದುದು: **ಪಂಪಭಾ**, ೨. ೩೯ ವ)

ಕದಳೀದಳ – [ನಾ] ಬಾಳೆಯ ಎಲೆ (ಕದಳೀದಳ ವ್ಯಜನ ಮಂದಮಾರುತಾಂದೋಳನದಿಂ ಎಂತಾನುಂ ಮೂರ್ಛೆಯಿಂದೆಚ್ಚಱಿಸಿ: **ಆದಿಪು**, ३. ೨३ ವ)

ಕದಳೀಪತ್ರ – [ನಾ] ಬಾಳೆಯ ಎಲೆ (ಅದಂ ಒಂದು ಕದಳೀಪತ್ರದೊಳ್ ಪುದಿದು ತನ್ನ ನಡಪಿದ ಗಿಳಿಯ ಕೈಯೊಳ್ ಓಪಳಲ್ಲಿಗೆ ಅಟ್ಟಿದೊಡೆ: **ಪಂಪಭಾ**, ೧. ೬೮ ವ)

ಕದಳೀವನ – [ನಾ] ಬಾಳೆಯ ತೋಟ (ಕನಕ ಕದಳೀವನದೊಳಗಣ ಮಣಿಮಯಭವನದೊಳಗೆ ಪರಿಮಿತಜನಸಹಿತಂ ಎನ್ನ ಮನಮೊಱಲ್ವಿನೆಗಂ ಎನ್ನ ಸೋಂಕಿನೊಳ್ ಕುಳ್ಳಿರ್ದು: **ಆದಿಪು**, ೪. ೯ ವ)

ಕದುಷ್ಣ – [ಗು] ಉಗುರು ಬೆಚ್ಚಗಿರುವ (ನಗೆಗಣ್ ಸೋರ್ವ ಕದುಷ್ಣವಾರಿಚಯದಿಂ ಬಿಂಬಾಧರಂ .. .. ನಾಡೆ ಬೆಡಂಗುಗೆಟ್ಟು: **ಪಂಪಭಾ**, ೪. ೬೮)

ಕನಕ – [ನಾ] ಚಿನ್ನ (ಎನೆಯೆನೆ ರತ್ನರಶ್ಮಿಜಟಿಳಂ ಮಕುಟಂ ಮಣಿಕುಂಡಳಂ ಕನತ್ ಕನಕ ಪಿಶಂಗ ದೇಹರುಚಿ .. .. ಇಳಾಮರಂ ಅಂದು ಅಮರೇಂದ್ರರೂಪಮಂ: **ಪಂಪಭಾ**, ೮. ೭)

ಕನಕಕಂಜ – [ನಾ] ಹೊಂದಾವರೆ (ಇದಿರೊಳ್ ತೋಱಿತ್ತು ಕೊಳಂ ಪರಿವಿಕಸಿತ ಕನಕಕಂಜಕಿಂಜಲ್ಕಪುಂಜ್ಕಂಜರಿತಜಳಂ: **ಪಂಪಭಾ**, ೮. ೩೮)

ಕನಕಕಮಳ – [ನಾ] ಚಿನ್ನದ ತಾವರೆ, ಸೌಗಂಧಿಕಾಪುಷ್ಪ (ಭೀಮಸೇನಂ ದ್ರೌಪದಿಯ ಬಯಕೆಗೆ ಧನದನ ಕೊಳದೊಳಗಣ ಕನಕಕಮಳಂಗಳಂ ತರಲೆಂದು ಪೋಗಿ: **ಪಂಪಭಾ**, ೮. ३೦ ವ)

ಕನಕಗಿರಿ – [ನಾ] ಚಿನ್ನದ ಬೆಟ್ಟ, ಮೇರು ಪರ್ವತ (ಇನ್ನೂಱು ಕನಕಗಿರಿಗಳಿಂದಂ ನಾಲ್ಕು ನಾಭಿನಗಂಗಳಿಂದಂ ಮೂವತ್ತನಾಲ್ಕು ವಿಜಯಾರ್ಧಪರ್ವತಂಗಳಿಂದಂ: **ಆದಿಪು**, ೧. ೪೮ ವ)

ಕನಕನ ಬೇಳ್ವೆ ತಗುಳ್ದುದು ಕನಕನಂ – ಕನಕನ ಮಾಟ ಕನಕನನ್ನೇ ಬೆನ್ನಟ್ಟಿತು (ಕನಕನ ಬೇಳ್ವೆ ತಗುಳ್ದುದು ಕನಕನಂ ಎಂಬೊಂದು ಮಾತು ಧರೆಗೆಸೆಯೆ: **ಪಂಪಭಾ**, ೮. ೪೪)

ಕನಕಪತ್ರಾಂಕಿತ – [ಗು] ಚಿನ್ನದ ರೇಕು ಹೊದಿಸಿದ (ಕನಕಪತ್ರಾಂಕಿತ ಕಾರ್ಮುಕಲತಾಲಂಬನಂಗಳುಂ ವಿಜಯೋತ್ಸವತೋರಣ ಸ್ತಂಭಂಗಳುಂ: **ಆದಿಪು,** ೧೪. ೪೬ ವ)

ಕನಕಪದ್ಮ – [ನಾ] ಹೊಂದಾವರೆ (ಸಂಚಳಿಸುವ ಚಾಮರಂ ಕನಕಪದ್ಮದ ಸೀಗುರಿ ತೊಟ್ಟ ಮಾಣಿಕಂಗಳ ಬೆಳಗು ಇಟ್ಟಳಂ ತನಗೊಡಂಬಡೆ: **ಪಂಪಭಾ,** ೪. ೪೦)

ಕನಕಪಾತ್ರ – [ನಾ] ಚಿನ್ನದ ಪಾತ್ರೆ (ಮಿಂದು ಕನಕಪಾತ್ರದೊಳ್ ತೆಕ್ಕನೆ ತೀವಿದ ಕನಕಕಮಳಂಗಳಿಂದ ಆದಿತ್ಯತೇಜಂ ಆದಿತ್ಯಂಗೆ ಅರ್ಘ್ಯಮೆತ್ತಿ: **ಪಂಪಭಾ,** ೯. ೭೨ ವ)

ಕನಕಪಿಂಗಳ – [ನಾ] ಹಳದಿ ಕೆಂಪು ಮಿಶ್ರ ಬಣ್ಣ (ಅಂತು ನೀಲಾಂಬುದಶ್ಯಾಮನುಂ ಕನಕಪಿಂಗಳ ಜಟಾಬಂಧ ಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣ ಮೃಗತ್ವಕ್ಪರಿಧಾನನುಮಾಗಿ: **ಪಂಪಭಾ,** ೧. ೬೯ ವ)

ಕನಕಪಿಶಂಗ – [ನಾ] ಹೊಂಬಣ್ಣ ಮತ್ತು ಕೆಂಬಣ್ಣಗಳ ಮಿಶ್ರಣ (ಕನಕ ಪಿಶಂಗತುಂಗಜಟಿಕಾವಳಯಂ ಕುಡುಮಿಂಚಿನೋಳಿಯಂ ನೆನೆಯಿಸೆ: **ಪಂಪಭಾ,** ೭. ೫೯)

ಕನಕಪೀಠ – [ನಾ] ಚಿನ್ನದ ಪೀಠ (ನಿನ್ನ ದಯೆಗೆಯ್ದ ವೀರವಟ್ಟಮೆಂಬುದು ಎನಗೆ ಎಣ್ಬೆರಲ ಪಟ್ಟಂ ಎಂಬುದುಂ ಬದ್ದವಣಂ ಬಾಜಿಸಿ ಕರ್ಣನಂ ಕನಕಪೀಠದೊಳ್ ಕುಳ್ಳಿರಿಸಿ: **ಪಂಪಭಾ,** ೧೨. ೫೧ ವ)

ಕನಕಭೃಂಗಾರ – [ನಾ] ಚಿನ್ನದ ಕಳಶ (ತುಂಗಕನಕಭೃಂಗಾರವಿರಾಜಿ ರಾಜನ್ಮರಕತಮಯ ಶುಕವಿರಾಜಿ: **ಆದಿಪು,** ೪. ೩೦ ರಗಳೆ)

ಕನಕಮಣಿಕಿಂಕಿಣಿ – [ನಾ] ಚಿನ್ನದ ಮಣಿಗಳ ಸಣ್ಣಗೆಜ್ಜೆ (ಕನಕಮಣಿಕಿಂಕಿಣೀಮೃದುನಿನದಂ ಕಟಿತಟದೊಳೆಸೆಯೆ: **ಆದಿಪು,** ೮. ೨)

ಕನಕಯೂಪ – [ನಾ] ಯಾಗದ ಚಿನ್ನದ ಕಂಬ, ಬಲಿಗಂಬ (ಇಕ್ಕಿದ ಆಹುತಿಗಳ ಗೊಂದಳದಿಂ ಒಡನೊಗೆದ ಪೊಗೆಗಳ್ ಬಳಸಿದುವೆಡೆವಿಡದೆ ಕನಕಯೂಪಮನಾಗಳ್: **ಪಂಪಭಾ,** ೬. ೩೫)

ಕನಕಯೋಗ – [ನಾ] ಚಿನ್ನದ ಕೆಲಸ ಮಾಡಿದ ಜೀನು (ಕನಕಯೋಗಾಳಂಕೃತಗಳಾಗಿ ಸೊಗಯಿಸುವ ಕರಿಯ ಪಿರಿಯ ಮೆಯ್ಯ: **ಆದಿಪು,** ೪. ೫೪ ವ)

ಕನಕರೇಣು – [ನಾ] ಚಿನ್ನದ ಪುಡಿ, ಕಣ (ಗಾಂಡೀವದ ಕೊಪ್ಪುಗಳೊಳ್ ಖಂಡಿಸಿ ತತ್ತಟದ ಕನಕರೇಣುವಂ ಅವನಾಖಂಡಲತನಯಂ ಅಸುಂಗೊಳೆ ಖಂಡಿಸಿದಂ: **ಪಂಪಭಾ,** ೬. ೩೧)

ಕನಕಶಾಳ – [ನಾ] ಚಿನ್ನದಿಂದ ಕೂಡಿದ ಕೋಟೆಯ ಗೋಡೆ (ಲವಣಜಲಧಿ ಬಳಸಿದಂತೆ ಬಳಸಿದಗಟಿ ನೀಳದಿಂದುದಗ್ರ ಕನಕಶಾಳದಿಂ: **ಪಂಪಭಾ,** ೧. ೫೮)

ಕನಕಾಂಭೋಜ – [ನಾ] ಹೊಂದಾವರೆ (ವನಭೃತ್ಕುಂತಳೆಯಾ ಶಿರೀಷಕುಸುಮಾಭಾಂಗಕ್ಕೆ ಕಂದಂ ಕನತ್‌ಕನಕಾಂಭೋಜ ನಿಭಾನನಕ್ಕೆ ಪಿರಿದುಂ ದೀನತ್ವಮಂ: **ಪಂಪಭಾ,** ೪. ೬೪)

ಕನಕಾಚಳ – [ನಾ] ಚಿನ್ನದ ಬೆಟ್ಟ (ತದ್ಗಿರೀಂದ್ರಕಂದರ ಕನಕಾಚಳಂಗಳ್ ಎನಿತುಂಟು ಅನಿತಂ ತವೆ ಹೇಮರೇಣುಗಳ್ವೆರಸು ಕಡಂಗಿ ಪೊತ್ತು ನಡೆದಿತ್ತು ಘಟೋತ್ಕಚ ರೌದ್ರಸಾಧನಂ: **ಪಂಪಭಾ,** ೬. ೩೨)

ಕನಕಾಬ್ಜಿನಿ – [ನಾ] ಹೊಂದಾವರೆ (ವನಸುಮಸ್ತಬಕದ ನೆಟಿಲಿನಿಸಚ್ಛಾಂಬುವಿನೊಳೆಸೆಯೆ ಮಧುಕರಮದು ಭೋಂಕೆನೆ ಪಾಯ್ದು ಎಱಂಕೆ ನಾಂದೊಡೆ ಜಿನುಂಗಿ ನೆಲಸಿದುದು ವಿಕಚಕನಕಾಬ್ಜಿನಿಯೊಳ್: **ಆದಿಪು,** ೧೧. ೬೨)

ಕನತ್ – [ಗು] ಹೊಳೆಯುವ (ಕನತ್ ಖಚಿತಮುಂ ಮೌಕ್ತಿಕಸ್ತಂಭಮುಮಪ್ಪ ಸರ್ವತೋಭದ್ರಂ ಎಂಬ ಸಿವಿಗೆಯನೇಱಿಸಿ: **ಪಂಪಭಾ,** ೩. ೪೮ ವ)

ಕನಲ್ – [ಕ್ರಿ] ಕ್ಷೋಭೆಗೊಳ್ಳು (ಪೊಳೆವಿನಕಿರಣಂ ಮೆಯ್ಗಳನಳುರೆ ಕನಲ್ದಗಿದು ಸೋಗೆಯಂ ಪರಪಿ ನೆಟಿಲ್ಗಳನಾಸೆವಡೆ ಶಿಖಾವಳಕುಳತಾಂಡವಮೆಸೆದುದು ಶರತ್ಸಮಯದೊಳ್: **ಆದಿಪು,** ೧೧. ೫೧); [ಕ್ರಿ] ರೇಗು (ಮುಳಿಸಱಿದು ಅಂಜಿ ಬಾಟಿಗ್ೆಯಱಿದಿತ್ತು ಮನಂಗೊಳೆಯುಂ ಕನಲ್ವುದರ್ಕಳವಿಯುಂ ಅಂತುಂ ಇಲ್ಲ : **ಪಂಪಭಾ,** ೪. ೯೮); [ಕ್ರಿ] ಸಿಟ್ಟುಗೊಳ್ಳು, ಕೋಪಿಸಿಕೊ (ಎಂತು ಇದಿರಾಂತೆ ಅಂತೆ ಕಲಿಯಾಗು ಒಳಸೋರದಿರ್ ಎಂದು ಭೀಮಂ ಓರಂತೆ ಕನಲ್ದು ತಿಣ್ಣಂ ಇಸೆ: **ಪಂಪಭಾ,** ೧೦. ೯೮); [ಕ್ರಿ] ನಿಗಿ ನಿಗಿ ಉರಿ (ನೋಡಿ ಕನಲ್ವ ಕೆಂಡದ ಮೇಲೆ ಪಟಿಯ ಬೇವಿನೆಣ್ಣೆಯೊಳ್ ತೊಯ್ದಿಕ್ಕಿದ ಬೆಳ್ಳುಳ್ಳಿಯ ಕಂಪಿನಂತೆ: **ಪಂಪಭಾ,** ೧೩. ೭೧ ವ)

ಕನಲಿಸು – [ಕ್ರಿ] ಕೆರಳಿಸು, ಸಿಟ್ಟಿಗೆಬ್ಬಿಸು (ಭೀಮಸೇನನ ನುಡಿಗಳ್ ತನ್ನ ಮನಮಂ ಒನಲಿಸೆಯುಂ ಎರ್ದೆಯಂ ಕನಲಿಸೆಯುಂ: **ಪಂಪಭಾ,** ೬. ೭೩ ವ)

ಕನ್ನಡಿಸು – [ಕ್ರಿ] ಪ್ರಕಟಪಡಿಸು (ಉನ್ನುಂ ಸೊಗಯಿಸುತಿರೆ ಸಿರಿಗನ್ನಡಿ ಕನ್ನಡಿಪುದಾದುದು ಇಂದುಶ್ರೀಯಂ: **ಆದಿಪು,** ೭. ೧೦); [ಕ್ರಿ] ಪ್ರತಿಫಲಿಸು (ಕನ್ನೆತನಂಗೆಯ್ಯಲ್ ಬಗೆಗುಂ ನಾಣ್ ಮಿಗೆ ಮನಮುಂ ಇಟ್ಟುವರಿಯಲ್ ಬಗೆಗುಂ ಕನ್ನಡಿಕುಂ ತನ್ನಳಿಪಂ ತನ್ನಲೆ ತಾನಿಂತು ಕನ್ನೆ ತಳವೆಳಗಾದಳ್: **ಪಂಪಭಾ,** ೪. ೫೫)

ಕನ್ನವಡ – [ನಾ] ಅಡ್ಡವಾದ ತೆರೆ (ಬಳಸಿದ ಪೊನ್ನ ಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತಾಣದೊಳ್ ಬಳಸಿದ ಪೊನ್ನ ಕನ್ನವಡದಂತಿರೆ: **ಆದಿಪು,** ೧. ೭೧)

ಕನ್ನಿಕೆ – [ನಾ] ಕನ್ಯೆ, ಮದುವೆಯಾಗದ ಹುಡುಗಿ (ಕೊಡಗೂಸುತನದ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಡಿಯಲೊಡಗೂಡೆ ಗಂಗೆಯ ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ: **ಪಂಪಭಾ,** ೧. ೯೨)

ಕನ್ನಿಕೆಯಾ ಕಾಲ – [ನಾ] ಕನ್ಯೆಯಾಗಿದ್ದ ಕಾಲದಲ್ಲಿ (ಎನ್ನ ಕನ್ನಿಕೆಯಾ ಕಾಲದೊಳ್ ನಾನೆನ್ನ ಮಾವಂ ಕೊಂತಿಭೋಜನ ಮನೆಯೊಳ್ ಬಳೆವಂದು ದುರ್ವಾಸಮಹಾಮುನಿಯರೆಮ್ಮ ಮನೆಗೆ ನಿಚ್ಚಕ್ಕಂ ಬರ್ಪವರ್: **ಪಂಪಭಾ,** ೧. ೧೧೮ ವ)

ಕನ್ನೆ – [ನಾ] ಕನ್ಯೆ, ಮದುವೆಯಾಗದ ಹುಡುಗಿ (ಮಂಗಳತೂರ್ಯ ನಾದಂ ಎಸೆಯುತ್ತಿರ್ಪನ್ನೆಗಂ ಚಕ್ರಿ ರಾಗಿಸಿ ಕೆಯ್ನೀರ್ ಎಱೆದಂ ಗುಣಾರ್ಣವ ಮಹೀಪಾಲಂಗಂ ಆ ಕನ್ನೆಯಂ: **ಪಂಪಭಾ,** ೫. ೨೫)

ಕನ್ನೆತನ – [ನಾ] ಕನ್ಯಾಭಾವ (ಕನ್ನೆತನಂಗೆಯ್ಯಲ್ ಬಗೆಗುಂ ನಾಣ್ ಮಿಗೆ ಮನಮುಂ ಇಱುದ್ದುವರಿಯಲ್ ಬಗೆಗುಂ ಕನ್ನಡಿಕುಂ ತನ್ನಳಿಪಂ ತನ್ನಲೆ ತಾನಿಂತು ಕನ್ನೆ ತಳವೆಳಗಾದಳ್: **ಪಂಪಭಾ**, ೪. ೫೫)

ಕನ್ನೆಮಾಡ – [ನಾ] ಕನ್ನಿಕೆಯರ ವಾಸಸ್ಥಾನ, ಅಂತಃಪುರ (ತನ್ನ ಚೆಂಬೊನ್ನ ಕನ್ನೆಮಾಡದ ಓವರಿಯೊಳಗೆ .. .. ಪವಡಿಸಿದ ನಿಶಾವಸಾನಸಮಯದೊಳ್: **ಆದಿಪು**, ३. ೨೧ ವ)

ಕನ್ನೆವೇಟ – [ನಾ] ಕನ್ಯೆಯ ಬೇಟ (ಎನ್ನ ಕಣ್ಗಳೊಳ್ ಸುಟೆದುವು ತಾಮೆ ಕನ್ನಡಿಸಿಪ್ಪುವು ಕನ್ನೆಯ ಕನ್ನೆವೇಟಮಂ: **ಪಂಪಭಾ**, ೪. ೬೧)

ಕನ್ಯಕೆ – [ನಾ] ಕನ್ಯೆ, ಮದುವೆಯಾಗದ ಹುಡುಗಿ (ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ: **ಪಂಪಭಾ**, ೧. ೭೦)

ಕನ್ಯಾ – [ನಾ] ಮದುವೆಯಾಗದ ಹುಡುಗಿ (ಕ್ರಿಯಾಮಂತ್ರಂಗಳಿಂದಂ ಆತ್ಮಸಮಾನ ಶ್ರಾವಕಾಗ್ರಣಿಗಳ್ಗೆ ಕನ್ಯಾ ಭೂಮಿ ಸುವರ್ಣ ಹಸ್ತಿ ಅಶ್ವ ರಥ ರತ್ನಾದಿಗಳಂ ಕುಡುವ ಸಮದತ್ತಿಯುಂ: **ಆದಿಪು**, ೧೫. ೧೩ ವ)

ಕನ್ಯಾಬ್ರತ – [ನಾ] ಕನ್ಯೆಯಾಗಿಯೇ ಉಳಿಯುವ ವ್ರತ (ಕೆಲಕೆಲವು ಅವಿನಾಣಂಗಳಂ ನಾಣ್ಚಿ ಬಂಚಿಸಿ ಪಿರಿದುಮನುರಾಗದಿಂದಂ ಎನ್ನ ಬರೆದ ಪಟಮನಿದನರ್ಚಿಸಿ ಕನ್ಯಾಬ್ರತದೊಳೆ ಕಾಲಮಂ ಕಟೆಪುವೆಂ: **ಆದಿಪು**, ३. ४३ ವ)

ಕನ್ಯಾಭಾವ – [ನಾ] ಕನ್ಯೆಯ ಸ್ಥಿತಿ (ಸತ್ಯವತಿಗೆ ಪುನಃ ಕನ್ಯಾಭಾವಮಂ ದಯೆಗೆಯ್ದು ಪರಾಶರಂ ಪೋದಂ: **ಪಂಪಭಾ**, ೧. ೬೯ ವ)

ಕಪಟಪ್ರಪಂಚ – [ನಾ] ತಂತ್ರಗಾರಿಕೆ (ಕಪಟಪ್ರಪಂಚದಿಂದೆ ಆತನುಮಂ ತನಗೆ ಮಾಡಿ ಬೀಡಿಂಗೆ ವಂದು: **ಪಂಪಭಾ**, ೯. ೬೦ ವ)

ಕಪಟೋಪದೇಶ – [ನಾ] [ಕಪಟ+ಉಪದೇಶ] ಮೋಸದ ಉಪದೇಶ (ಆಗಳ್ ಯುಧಿಷ್ಠಿರಂ ನಾರಾಯಣಂ ಪೇಟ್ದ ಕಪಟೋಪದೇಶದಿಂ ದ್ರೋಣನಂ ಕೆಯ್ಗೆ ಮಾಡಲೆಂದು: **ಪಂಪಭಾ**, ೧೨. ೨೫ ವ)

ಕಪಾಲ – [ನಾ] ತಲೆಬುರುಡೆ (ವಜ್ರಮುಷ್ಟಿಯ ಪೊಯ್ಗೊಳಂ ಬಾಳ ಕೋಳೊಳಮ್ ಉಚ್ಚಳಿಸಿದ ಕಪಾಲದ ಓಡುಗಳಂ ಗಂಗೆಗಟ್ಟುತ್ತುಂ: **ಪಂಪಭಾ**, ೧೧. ೨ ವ)

ಕಪಾಲಪಾಣಿ – [ನಾ] ಶಿವ (ಶೂಲಿ ಕಪಾಲಪಾಣಿ ದಯೆಯಿಂ ಬಂದಿರ್ದಂ: **ಪಂಪಭಾ**, ೧೦. ೧೨೦)

ಕಪಾಳ – [ನಾ] ಭಿಕ್ಷಾಪಾತ್ರೆ (ನೀಲಾಂಬುಜಶ್ಯಾಮನುಂ ಕನಕಪಿಂಗಳ ಜಟಾಬಂಧಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣಮೃಗತ್ವಕ್ ಪರಿಧಾನನುಂ ಆಗಿ: **ಪಂಪಭಾ**, ೧. ೬೯ ವ); [ನಾ] ತಲೆಬುರುಡೆ (ಅನೇಕ ನೃಪ ಶಿರಃ ಕಪಾಳ ಶಕಳ ಜರ್ಜರಿತಮುಂ ಪರಸ್ಪರ ಸಮರ ರಭಸ ಸಮುತ್ಸಾರಿತಮುಂ: **ಪಂಪಭಾ**, ೧३. ೫೧ ವ)

ಕಪಿಕೇತನ – [ನಾ] ಅರ್ಜುನ (ಹರಿ ನಿಜಯೋಗದಿಂದಜೆದು ತನ್ನಳಿಯಂ ಲಯಮಾದುದಂ ಭಯಂಕರ ಕಪಿಕೇತನಂಗೆ ಅಱೆಪಲೊಲ್ಲದೆ: **ಪಂಪಭಾ**, ೧೧. ೧೧೦)

ಕಪಿತ್ಥ – [ನಾ] ಬೇಲದ ಹಣ್ಣು (ನೀಹಾರಶಕಲ ಪರಿಣತ ಕಪಿತ್ಥಫಳಪರಿಮಳಮಧುರದಧಿಯುಮಂ: **ಆದಿಪು**, ೧೧. ೨೬ ವ)

ಕಪಿಧ್ವಜ – [ನಾ] ಅರ್ಜುನ (ಕಪಿಧ್ವಜಂ ವನದಂತಿಯಂತೆ ಧ್ವಾಂಕ್ಷಧ್ವಜಮನುಡಿದು ಕೆಡವಿನಮೆಚ್ಚಾಗರ್ಳ: **ಪಂಪಭಾ**, ೧೨. ೨೦೮ ವ)

ಕಪೋತ – [ನಾ] [ಜೈನ] ಜೀವದ ಮೇಲಾಗುವ ಒಂದು ಅಶುಭ ಪರಿಣಾಮ (ಕೃಷ್ಣ ನೀಲ ಕಪೋತ ಲೇಶ್ಯಾ ಬಹ್ವಾರಂಭ ಪರಿಗ್ರಹತ್ವ ಆದಿ ಅಶುಭ ಪರಿಣಾಮಂಗಳಿಂ ಜೀವಂ ನೆಲಸಿ: **ಆದಿಪು**, ೫. ೮३ ವ)

ಕಪೋತಿಕಾ[ಕೆ] – [ನಾ] ನಾಟ್ಯದಲ್ಲಿ ಒಂದು ಹಸ್ತವಿನ್ಯಾಸ (ನಾಂದೀ ಪ್ರರೋಚನಾ ಪ್ರಸ್ತಾವನಾ ಇತಿವೃತ್ತ ಸಂಧಿ ಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ: **ಪಂಪಭಾ**, ೨. ३೪ ವ)

ಕಪ್ಪ – [ನಾ] ರಾಜನಿಗೆ ಒಪ್ಪಿಸಬೇಕಾದ ಪೊಗದಿ (ಕುಬೇರನಿಂ ಕಪ್ಪಂಗೊಂಡು ಪೊನ್ನಂ ಜಕ್ಕರೆಕ್ಕೆಯಿಂ ಪೊತ್ತು ಬರೆ: **ಪಂಪಭಾ**, ೬. ३೨ ವ)

ಕಪ್ಪಂಗವಿ – [ಕ್ರಿ] [ಕಪ್ಪು+ಕವಿ] ಕತ್ತಲೆ ಕವಿ (ಅನ್ನೆಗಂ ಕಪ್ಪಂಗವಿಯಾಗಿ ಕವಿವ ದ್ರುಪದವಿಳಯಾನಿಳನಂ ದ್ರೋಣಂ ಮಹಾದ್ರೋಣ ಪುಷ್ಕಳಾವರ್ತಕಂಗಳೆಂಬ ವಿಳಯಕಾಳನೀಳ ಜಳಧರ ವರ್ಷಂಗಳಿಂ ನಂದಿಸೆಯುಂ: **ಪಂಪಭಾ**, ೧೨. ೨೦ ವ)

ಕಪ್ಪಂಗೊಳ್ – [ಕ್ರಿ] ಕಾಣಿಕೆ ವಸೂಲು ಮಾಡು (ವಿಕ್ರಮಾರ್ಜುನನಂ ಕುಬೇರನಿಂ ಕಪ್ಪಂಗೊಳಲ್ ಸಮರ್ಪಿಸುವಂತೆ ಉತ್ತರೋತ್ತರಮಾಗಲ್: **ಪಂಪಭಾ**, ೬. ೨೮ ವ)

ಕಪ್ಪುರ – [ನಾ] ಪಚ್ಚಕರ್ಪೂರ (ನಿಡುಸುಯ್ದು ನಲ್ಲಳ ಮುಖಾಂಬುಜ ಸೌರಭದೊಳ್ ಪೊದಳ್ದು ಅದೇಂ ಮಗಮಗಿಸಿತ್ತೊ ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ: **ಪಂಪಭಾ**, ೪. ೧೦೭)

ಕಪ್ಪುರವಳುಕು – [ನಾ] [ಕಪ್ಪುರ+ಪಳುಕು] ಕರ್ಪೂರದ ಹರಳು (ಪೊಳೆವಲರಮರ್ದಿನ ಕಪ್ಪುರವಳುಕಿನ ಕತ್ತುರಿಯ ಕೊಱತ ದೂರ್ವಾಭರಣಂ: **ಆದಿಪು**, ೧೧. ४३)

ಕಬಂಧ – [ನಾ] ಅಟ್ಟೆ, ತಲೆಯಿಲ್ಲದ ದೇಹ (ಸಂಗ್ರಾಮರಂಗದೊಳ್ ಅರಾತಿನಾಯಕರ ಕಬಂಧಪಾತ್ರಂಗಳಂ ಆಡಿಸುವುದಂ ಉದಾಹರಿಸುವಂತಿರ್ದಂ: **ಪಂಪಭಾ**, ೮. ೫೫ ವ)

ಕಬಂಧನಾಟಕರಂಗಂ – [ನಾ] ಅಟ್ಟೆಗಳು ಕುಣಿದಾಡುವ ರಂಗಸ್ಥಳ (ಸ್ಫುರಿತ ಶರನಿಕರಪಾತಿತ ನರೋತ್ತಮಾಗಂ ಕಬಂಧನಾಟಕ ರಂಗಂ .. .. ವೀರಭಟರಣರಂಗಂ: **ಪಂಪಭಾ**, ೧३. ३೭)

ಕಬರಿಕಾಬಂಧ – [ನಾ] ಕಟ್ಟಿದ ಮುಡಿ (ಮೃಗಭೂ ಖುದ್ದ ವಿಳಾಸಿನೀ ಕಬರಿಕಾಬಂಧಗಳಂ ಪೊತ್ತು ಮಲ್ಲಿಗೆಯೊಳ್ ಭಾವಿಸಿ .. .. ಪಳಂಚಿ ಸುಟಿದತ್ತು ಅಂದೊಂದು ಮಂದಾನಿಳಂ: **ಪಂಪಭಾ**, ೪. ೮೦)

ಕಬರೀಭರ – [ನಾ] ಭಾರವಾದ ಮುಡಿ (ಪೊದಲ್ದ ಕಬರೀಭರಂ ಪರೆದು ಪರ್ವೆ ತುಂಗಸ್ತನಂ ಕದಕ್ಕದಿಸೆ: **ಆದಿಪು,** ೧೨. ೧೩)

ಕಬರೀಭಾರ – [ನಾ] ಕೂದಲ ರಾಶಿ (ಅಂತು ಕೃಷ್ಣೆಯ ಕೃಷ್ಣಕಬರೀಭಾರಮಂ ಮೇಗಿಲ್ಲದೆ ಪಿಡಿದು ತೆಗೆದು ಕೃಷ್ಣೋರಗಮಂ ಪಿಡಿದ ಬೆಳ್ಳಾಳಂತೆ ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ: **ಪಂಪಭಾ,** ೭. ೫ ವ)

ಕಬರೀಭಾರೆ – [ನಾ] ಭಾರವಾದ ತುರುಬುಳ್ಳವಳು (ಮತ್ತೊರ್ವಳ್ ಕಸ್ತೂರಿಕಾಕದಂಬಚುಂಬಿತಕಬರೀಭಾರೆ: **ಆದಿಪು,** ೧೧. ೧೨೬ ವ)

ಕಬರೀವಿಸ್ತಾರ – [ನಾ] ಕೇಶರಾಶಿ (ಭ್ರೂಲಾಸ್ಯಮಂ ನೀಳ್ದಪಾಂಗದ ಬೆಳ್ದಿಂಗಳಂ ಎಡ್ಡಮಪ್ಪ ಕಬರೀವಿಸ್ತಾರಮಂ ತೋಱಿದಳ್: **ಆದಿಪು,** ೧೧. ೧೭)

ಕಬಳ – [ನಾ] ತುತ್ತು, ಆಹಾರ (ತಾರಾತರಳ ಮುಕ್ತಾಭರಣ ಕಿರಣಚಂದ್ರಿಕಾಚಂದ್ರ ಕಬಳವಿಳಸಿತ ದಿಗಂಗನಾಮುಖನುಂ ಆಗಿ: **ಆದಿಪು,** ೩. ೯೦ ವ)

ಕಬಳನ – [ನಾ] ತಿನ್ನುವಿಕೆ (ಸಕಳ ಕಳೋತ್ಕಳಿತ ಸರಸಸಹಕಾರ ಕೋರಕಕಬಳನಮದಮಧುರ ಕೋಕಿಳ ಕೋಳಾಹಳಾಕುಳಿತ ಕೃತಕಕೇಳೀಶೈಳಶಿಖರಂಗಳೇ: **ಆದಿಪು,** ೪. ೫೨ ವ)

ಕಬ್ಬ – [ನಾ] ಕಾವ್ಯ (ಮೃದುಪಾದಮಾದ ವಾಕ್ಶ್ರೀಸುಭಗಂ ಕಳಾಕಳಿತಮೆಂಬ ನೆಗಳ್ತೆಯನಾಳ್ದ ಕಬ್ಬಮಂ ಕೂಸುಮಂ ಈವುದು ಈವುದರಿಕೇಸರಿಗಲ್ಲದೆ ಅವಸ್ತುಗೀವುದೇ: **ಪಂಪಭಾ,** ೧ ೯)

ಕಮಂಡಲು – [ನಾ] ಯತಿಯ ನೀರಿನ ಪಾತ್ರೆ (ಮಹಾಋಷಿಯ ತಳಿದ ಕನಕ ಕಮಂಡಲುವಿನ ತೀರ್ಥೋದಕಂಗಳಿಂದ ಅಯ್ವರುಂ ಪವಿತ್ರೀಕೃತ ಮಸ್ತಕರಾಗಿರ್ದು: **ಪಂಪಭಾ,** ೬. ೧೧ ವ)

ಕಮನೀಯ – [ಗು] ಸುಂದರ (ಮಂಗಳಗೀತ ನೃತ್ಯೋನ್ಮಿಶ್ರಿತ ಅನೇಕಾನಕಲಯಾನುಗತ ಲೀಲಾಲಾಸ್ಯಪ್ರಸಕ್ತ ಕಾಮಿನೀ ಕಮನೀಯಮಾಗಿ: **ಆದಿಪು,** ೮. ೩೫ ವ)

ಕಮಲಾಭಿರಾಮ – [ನಾ] ತಾವರೆಯಂತೆ ಸಂತೋಷ ತರುವ ಸೊಬಗ (ದಿಗಿಭಂಗಳೆಂಟುಂ ಒಳ್ಪೊಡರಿಸಿ ಮಜ್ಜನಂಬುಗಿಸೆ ಕಂಡುದಱಿಂ ಕಮಲಾಭಿರಾಮನಂ .. .. ಮಗನಂ ನೀನಮೋಘಂ ಪಡೆವೆ: **ಪಂಪಭಾ,** ೧. ೧೪೧ ಮತ್ತು ೧. ೧೪೧ ವ)

ಕಮಲಾಸನ – [ನಾ] ತಾವರೆಯ ಪೀಠವುಳ್ಳವನು, ಬ್ರಹ್ಮ (ಎಂದು ಕಮಲಾಸನಂ ಆಸೆದೋಱೆ ನುಡಿದುಳ್ಳುದನೆ ನುಡಿದೊಡೆ ಅಂತೆ ಗೆಯ್ವೆನೆಂದು: **ಪಂಪಭಾ,** ೫. ೧೦೨ ವ)

ಕಮಲೈಕಬಾಂಧವಂ – [ನಾ] ಸೂರ್ಯ (ಗುಣಾರ್ಣವಭೂಭುಜಂಗೆ ಬಟ್ಟೆದೋಱುವವೊಲಂದು ಒಗೆದಂ ಕಮಲೈಕಬಾಂಧವಂ: **ಪಂಪಭಾ,** ೪. ೧೧೧)

ಕಮಲೋದ್ಭವ – [ನಾ] ಬ್ರಹ್ಮ (ಕಮಲೋದ್ಭವನ ಅಮಳಿನ ಹೃತ್ಕಮಲದೊಳ್ ಒಗೆದರ್ ಸುರೇಂದ್ರಧಾರಕರ್ ಆ ವಾಗಮಳರ್ ನೆಗೞ್ದಿರ್ದರ್ ಪುಲಹ ಮರೀಚಿ ಅತ್ರಿ ಅಂಗಿರಸ್ ಪುಳಸ್ತ್ಯ ಕ್ರತುಗಳ್: **ಪಂಪಭಾ,** ೧. ೬೦)

ಕಮಳಸಂಭವನಂದನ – [ನಾ] ತಾವರೆಯಲ್ಲಿ ಜನಿಸಿದ ಬ್ರಹ್ಮನ ಮಗ ನಾರದ (ಮುನೀಂದ್ರರೊಳ್ ಕಮಳಸಂಭವನಂದನಂ ಎಂದು ನೋಟಕರ್ ತಳವೆಳಗಾಗೆ ಸಾರೆವರೆ ನೀರದಮಾರ್ಗದಿನಂದು ನಾರದಂ: **ಪಂಪಭಾ,** ೬. ೬)

ಕಮಳಾಕರ – [ನಾ] [ಕಮಳ+ಆಕರ] ಕಮಲಗಳ [ನೆಲೆವನೆ] ಸರೋವರ ಆ ಕಮಳಾಕರಮಂ ಪೊಕ್ಕು ಆಕಾಶಧ್ವನಿಯಂ ಉಱದೆ ಕುಡಿದು ಅರಿಭೂಪಾನೀಕಭಯಂಕರನುಂ ಗಡಂ ಏಕೆಂದಱಿಯೆಂ ಬಟಲ್ದು ಜೋಲ್ದಂ ಧರೆಯೊಳ್: **ಪಂಪಭಾ,** ೮. ೪೧)

ಕಮಳಾಯತನೇತ್ರೆ – [ನಾ] ಕಮಲದಳದಂತೆ ವಿಶಾಲವಾದ ಕಣ್ಣುಗಳುಳ್ಳವಳು (ಚಿತ್ತದೊಳಾದ ಬೇಸಱಂ ನುಡಿವವೊಲಾಗೆ ಬರ್ಪ ಕಮಳಾಯತನೇತ್ರೆಯಂ ಇಂದುವಕ್ತ್ರೆಯಂ: **ಪಂಪಭಾ,** ೧೩. ೯೯)

ಕಮಳಾವಾಸ – [ನಾ] ತಾವರೆಯ ಕೊಳ (ಭೂಷಣಾಡಂಬರೋದ್ದ್ಯೋತಿಯಿಂ ಒಪ್ಪಿರ್ದ ಉದ್ವಿಳಾಸಂ ವಿಳಸಿತಕಮಳಾವಾಸಂ: **ಆದಿಪು,** ೧೧. ೪೫)

ಕಮಳಾಸನೆ – [ನಾ] ತಾವರೆಯ ಆಸನದವಳು, ಲಕ್ಷ್ಮಿ (ದುಗ್ಧಪಯೋಧಿಯಿಂದಮೀಗಳೆ ಪೊಱಮಟ್ಟು ಬಂದ ಕಮಳಾಸನೆ: **ಆದಿಪು,** ೭. ೨೭)

ಕಮಳೆ – [ನಾ] ಲಕ್ಷ್ಮಿ (ಕಮಳೆಯಂ ಅಶ್ವತ್ಥಾಮಂ ಮುಂದಿಟ್ಟು ಕುರುಕುಟುಂಬ ಘಟಚೇಟಿಕೆಯಂ ತರ್ಪಂತೆ ತಂದು: **ಪಂಪಭಾ,** ೧೩. ೧೦೨ ವ)

ಕಮಳೈಕಬಾಂಧವ – [ನಾ] ಸೂರ್ಯ (ಪೊಲಸುನಾಱುವ ಮೆಯ್ಯನೆ ಕರ್ಚಲೆಂದು ಚೆಚ್ಚರಂ ಅಪರಾಂಬುರಾಶಿಗೆ ಇೞಿವಂತೆ ಇೞಿದಂ ಕಮಳೈಕಬಾಂಧವಂ: **ಪಂಪಭಾ,** ೧೧. ೫೧)

ಕಮ್ಮನಪ್ಪ – [ಗು] ಗಮಗಮಿಸುವ, ಸುಗಂಧವುಳ್ಳ (ಕಮ್ಮನಪ್ಪ ತುಪ್ಪದ ಕೊಡದೊಳ್ ಸಮಂತು ಮಡಗಿಟ್ಟೊಡೆ: **ಪಂಪಭಾ,** ೧. ೧೩೧)

ಕಮ್ಮರಿಯೊವಜ – [ನಾ] ಕಮ್ಮರಿಯೋಜ, ಕೆಲಸ ಮಾಡದವನು (ಬವರದೊಳೇಂ ಬಲ್ಲಂ ಕರಂ ಒವಜುಗೆಯಲ್ ಪೆಱರ್ಗೆ ಕರಮೆ ತನಗೆ ಅಱಿಯಂ ಅದೆಂತುವೊ ನುಡಿ ತಪ್ಪದು ಕಮ್ಮರಿಯೊವಜಂ ಬಿಲ್ಲೊವಜಂ ಎಂಬುದು ಮಾಡುವನೇ: **ಪಂಪಭಾ,** ೧೨. ೩) [ಪರಿಷತ್ತು ಮುದ್ರಣದಲ್ಲಿನ 'ಱ' ಪ್ರಯೋಗ ತಪ್ಪೆಂದೂ, ಈ ಶಬ್ದವು **'ಕರ್ಮಾರಿ=ಕರ್ಮಕ್ಕೆ ಶತ್ರುವಾದವನು, ಕೆಲಸ ಮಾಡದವನು'** ಎಂಬ ಅರ್ಥವುಳ್ಳುದೆಂದೂ, ಹಾಗಾಗಿ **'ಕಮ್ಮರಿಯೊವಜ'** ಸರಿಯಾದ ರೂಪವೆಂದೂ ಡಿಎಲ್ಎನ್ ಹೇಳಿಕೆ – **ದೀಪಿಕೆ;** ಪು. ೪೩೬]

ಕಮ್ಮಱಿಯೋಜ – [ನಾ] ಕಮ್ಮಾರ ಕೆಲಸದ ಓಜ (ಅಂತುಟು ಪೇಟ್ಟು ಕೆಮ್ಮಗಿರೆ ಗಮ್ಮನೆ ಕಮ್ಮಱಿಯೋಜನಾಗನೇ: **ಆದಿಪು,** ೨. ೬೧) [ಟಿವಿವೆಂ **'ಕಮ್ಮಱಿಯೋಜ'** ಪಾಠವನ್ನು ಒಪ್ಪುತ್ತಾರೆ]

ಕಮ್ರ – [ಗು] ಸುಂದರವಾದ (ಉದ್ವಪಯೋಧರೆಯ ಮನೋಜರಾಗ ರಸಪೂರಿತ ಬಿಂಬಾಧರೆಯ ಕಂಬುಕಮ್ರ ಶಿರೋಧರೆಯ ಬೆಡಂಗಂ ಆರುಮೇನೆಯ್ದುವರೇ: **ಆದಿಪು,** ೪. ೪೬)

ಕಯ್ – [ನಾ] ಹಸ್ತ (ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ

ನಡೆಯಿಸಿ ಪುರ್ವದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್: **ಆದಿಪು**, ೯. ೩೨)

ಕಯ್ಯೇಱು – [ನಾ] ಆನೆಗಳ ಕಾಳಗ (ಪರಭಾಗಂಬಡೆದ ವಿದ್ರುಮಲತೆಗಳುಮಂ ಕರಿಮಕರಂಗಳ ಕಯ್ಯೇಱಿನೊಳ್ ಬಿಬ್ಬಿರಿಬಿರಿದೊಡೆದ ಮುಕ್ತಾಪುಟೋದರಂಗಳೊಳ್: **ಆದಿಪು**, ೧೨. ೭೯ ವ)

ಕಯ್ಕೊಳ್ – [ಕ್ರಿ] ಸ್ವೀಕರಿಸು (ಸಂಸರಣಾಂಭೋರಾಶಿಯಂ ದಾಂಟುವ ಬಗೆಯನೆ ಕಯ್ಕೊಂಡಂ ಎಂದಂದೆ ಮಾವಂ ಚರಿತಾರ್ಥಂ: **ಆದಿಪು**, ೪. ೮೯)

ಕಯ್ಗೂಡು – [ಕ್ರಿ] ಒಗ್ಗೂಡು, ಸೇರು (ಮಂದರಕ್ಷ್ಮಾಧರದೊಳ್ ಕಯ್ಗೂಡಿ ಗೋತ್ರಾದ್ರಿಗಳೆ ಘಟಾರೂಪದಿಂ ತಾಗೆಯುಂ: **ಆದಿಪು**, ನರಸಿಂ. ೧೪. ೯೧)

ಕಯ್ಗೆ ಮಾಡು – [ಕ್ರಿ] ವಶಪಡಿಸಿಕೊ (ಮಾಗಧ ವರತನು ಪ್ರಭಾಸಾಮರರಂ ಕರುಣಿಸಿ ಬಿಟ್ಟಂ ಕುಲಧನಪರಿಕರಮಂ ಕಯ್ಗೆ ಮಾಡಿ ಮನುಕುಲತಿಲಕಂ: **ಆದಿಪು**, ೧೪. ೫೫)

ಕಯ್ಗೆಯ್ – [ಕ್ರಿ] ಅಲಂಕರಿಸು (ಎಂದು ಬಗೆಗೆ ವಂದ ಪೂಗಳೊಳ್ ಪೂದುಡುಗೆಯ ಮಾಡಿ ವಸಂತಕಾಂತೆಯರಂತೆ ನೆಱಿಯೆ ಕಯ್ಗೆಯ್ದಾಗಳ್: **ಆದಿಪು**, ೧೧. ೧೨೮ ವ)

ಕಯ್ತುಬರ್ – [ಕ್ರಿ] ಕಹಿ ಬರು, ಕಹಿಯಾಗು (ಮಧು ಸೀತುಂ ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ತುಬರ್ಪುದು: **ಪಂಪಭಾ**, ೪. ೮೮)

ಕಯ್ಪೆಸರ – [ನಾ] [ಕಯ್ಪೆ+ಸರ] ಕಹಿಯಾದ ಧ್ವನಿ, ಕಠಿನೋಕ್ತಿ (ಏಱನೆ ಸೂಱೆಗೊಂಡು ನುಡಿವೀ ನುಡಿಯಲ್ಲದೆ ಮತ್ತಂ ಆಸನಂದೋಱುವ ಬಲ್ಪುದೋಱುವ ಎರ್ದೆದೋಱುವ ಕಯ್ಪೆಸರಂಗಳ್ ಎಮ್ಮಂ ಉಂತೆ ಏಱವು: **ಪಂಪಭಾ**, ೮. ೨೦)

ಕಯ್ಯದು – [ನಾ] ಕೈ ಇರುವುದು (ತಲ್ಲೋಕಸುಖಾನುಭವಾಪೇಕ್ಷೆಯಿಂ ಐಹಿಕಸುಖವಿಮುಖನಾಗಿ ಶರೀರಾರ್ಥವ್ಯಯಂ ಮಾಡುವಾತಂ ಕಯ್ಯದಂ ಬಿಟ್ಟು ಕಾಲದರ್ಕೆ ಎಱಗುವಾತನಂ ಪೋಲ್ಗುಂ: **ಆದಿಪು**, ೨. ೯ ವ)

ಕಯ್ಯೇಱು – [ನಾ] ಆನೆಯ ಸೊಂಡಿಲ ಹೊಡೆತ (ಕಯ್ಯೇಱಿನೊಳ್ ಬಿಬ್ಬಿರಿಬಿರಿದೊಡೆದ ಮುಕ್ತಾಪುಟಂಗಳೊಳ್: **ಆದಿಪು**, ೧೨. ೭೯ ವ)

ಕರ – [ನಾ] ಆನೆಯ ಸೊಂಡಿಲು (ಐರಾವತ ಕರಲೂನ ಸಲ್ಲಕೀ ಶಬಳಮುಂ ಅಪ್ಪ ಉದಯಗಿರಿಯಿಂ ಸೊಗಯಿಸುವ ಮೂಡಣ ದೆಸೆಗೆ ವಂದು: **ಪಂಪಭಾ**, ೪. ೧೮ ವ); [ನಾ] ಕಾಂತಿ, ಕಿರಣ (ಕರಂಗಳಡಂಗಿ ಕಿಲುಂಬುಗೊಂಡ ಕನ್ನಡಿಗೆಣೆಯಾಯ್ತು ಭಾನುವಳಯಂ: **ಪಂಪಭಾ**, ೬. ೩೬); [ನಾ] ಕೈ, ಹಸ್ತ (ಸಂಗ್ರಾಮರಂಗಕ್ಕೆ ನಡೆಯಲೆಂದಿರ್ದ ಕುರುಕುಳ ಚೂಡಾಮಣಿಯ ದಕ್ಷಿಣ ಕರಾಗ್ರಮಂ ಪಿಡಿದು ಸಂಜಯನಿಂತೆಂದಂ: **ಪಂಪಭಾ**, ೧೩. ೪೯ ವ)

ಕರಂ – [ಅ] ಹೆಚ್ಚಾಗಿ (ಎನ್ನಂ ಕರಂ ನಂಬಿದ ಅಂಬೆಯೊಳ್ ಎನ್ನಂಬ ವಲಂ ವಿವಾಹವಿಧಿಯಂ ಮಾಟ್ಪೆಂ ಪೆಱರ್ ಮಾಟ್ಪರೇ: **ಪಂಪಭಾ**, ೧. ೭೭); [ಅ] ವಿಶೇಷವಾಗಿ (ಕರಂ ಮೇಳಿಸಿದಪ್ಪುದೆನ್ನೆರ್ದೆಯಂ ಎಂದು ಬೊದಿಲ್ಲನೆ ಪಾಯ್ದು ನೀರೊಳಾ ಬಾಳನನಾದಮಾದರದೆ ಕಂಡೊಸೆದು ನಿಧಿಗಂಡನಂತೆವೋಲ್: **ಪಂಪಭಾ**, ೧. ೯೬); [ಅ] ಅತಿಶಯವಾಗಿ (ಸುಟೆಯದು ಗಾಳಿ ಮೃಗಂ ಕೆಯ್ವಟಿಗಳ ಮೇತದೊಳೆ ತಣಿದಪುವು ಪಂದಿಗಳುಂ ಪಟನವಿರ್ ಇಕ್ಕಿದುವು ಆದಂ ಪಟು ಪರಿದಾಡಲ್ ಕರಂ ಬೆಡಂಗವನಿಪತೀ: **ಪಂಪಭಾ**, ೫. ೩೮)

ಕರಂಕವಾಹಿನಿ – [ನಾ] ಭರಣಿಯನ್ನು ಹೊತ್ತ ಪರಿಚಾರಿಕೆ (ಕಾವನ ಅಂಬು ಅವಱ ಬಿಣ್ಪಿನೊಳ್ ಒಯ್ಯನೆ ಜೋಲ್ದವೋಲೆ ತಾಂಬೂಲ ಕರಂಕವಾಹಿನಿಯ ಮೇಲೆ ನೆಱಿಲ್ದಿರೆ ಬಾಲೆ ಲೀಲೆಯಿಂ: **ಪಂಪಭಾ**, ೪. ೪೩)

ಕರಂಗು – [ಕ್ರಿ] ಕರಗಿ ಹೋಗು, ನೀರಾಗು (ಎಂದು ತನ್ನ ನಾಣ್ಣಾಪನೆ ಬಗೆದು ಅತನುಪರಿತಾಪಿತ ಶರೀರನುಮಾಗಿ ಶಂತನು ಕರಂಗಿ ಎರ್ದೆಗಿಡೆ: **ಪಂಪಭಾ**, ೧. ೭೧ ವ)

ಕರಂಡಕ – [ನಾ] ಭರಣಿ (ತಮ್ಮ ತಂದ ಉಪಾಯನಂಬೆರಸು ರತ್ನಕರಂಡಕಮಂ ಮುಂದಿಟ್ಟಾಗಳ್: **ಆದಿಪು**, ೪. ೮೬ ವ)

ಕರಕಾಂಬು – [ನಾ] ಕಳಶದ ನೀರು (ಕಪ್ಪುರದ ರಜಂಬೊರೆದ ಕರಕಾಂಬುವ ತಳಿದು ದರವುರನೆಟ್ಟಿರಿಸೆ: **ಆದಿಪು**, ೪. ೧೭)

ಕರಗ – [ನಾ] ಗಡಿಗೆ, ಕಳಶ (ಸುತ್ತಿದ ಕರಗದ ನೀರುಮಂ ಎತ್ತಿದ ಬೋನಮುಮಂ ಇದಿರೊಳಿಟ್ಟು: **ಆದಿಪು**, ೯. ೧೨೬)

ಕರಚಂಡ – [ನಾ] ವಿಧ್ವಂಸಕ (ದುರ್ಧರ ಜಿನದೀಕ್ಷೆಯಂ ಅಘಕುಳಕರಚಂಡಂ ಮೂಱುಜಾವದೊಳ್ ಕೊಂಡಂ: **ಆದಿಪು**, ೯. ೭೯)

ಕರಚಕ್ರ – [ನಾ] ಕೈಯಲ್ಲಿನ ಚಕ್ರಾಯುಧ (ಒಂದು ದೆಸೆಯೊಳ್ ತಗುಳ್ವ ಮುಕುಂದನ ಕರಚಕ್ರಂ ಒಂದು ದೆಸೆಯೊಳ್ ನರನೆಚ್ಚ ಒಂದು ಶರಂ ಒಂದು ದೆಸೆಯೊಳ್ ಕುಂದದೆ ದಹನಾರ್ಚಿ ಸುತ್ತಿ ಮುತ್ತುವ ಪದದೊಳ್: **ಪಂಪಭಾ**, ೫. ೯೮)

ಕರಚರಣ – [ನಾ] ಕೈಕಾಲು (ಪರಾಕ್ರಮಧವಳಂ ಒಯ್ಯನೆ ಕೊಂಡು ಬಾಣಧಿಯೊಳಿಟ್ಟು ಪೋಗಿ ಪೂಗೊಳದೊಳ್ ಕರಚರಣಪ್ರಕ್ಷಾಳನಂಗೆಯ್ದು: **ಪಂಪಭಾ**, ೮. ೧೬ ವ)

ಕರಟತಟ – [ನಾ] ಆನೆಯ ಗಂಡಸ್ಥಳ (ಕರಟತಟಗಳಿತ ಮದ ರುಚಿರಮುಖತೇಜನಂ ಶರದಮಳಜಳದನಿಭ ಧವಳ ಗಜರಾಜನಂ: **ಆದಿಪು**, ೭. ೨೭ ರಗಳೆ)

ಕರಟಿ – [ನಾ] ಗಂಡಸ್ಥಳವುಳ್ಳದ್ದು, ಆನೆ (ಬಳವದ್ವಿದ್ವಿಷ್ಟವಿದ್ಯಾಧರ ಕರಟಿಶಿರಶ್ಶುಕ್ತಿಸಂಭೂತಮುಕ್ತಾವಳಿಯೊಳ್: **ಆದಿಪು**, ೧. ೭೬)

ಕರಟಿಕಟಷೀಕರಣ – [ಕ್ರಿ] ಆನೆಯ ಗಂಡಸ್ಥಳವನ್ನುಜ್ಜುವುದು (ಅಂತು ಪೊಱಮಟ್ಟು ಅನೇಕ ಕರಟಿಕಟಷೀಕರಣ ನಿಶ್ಶೇಷಿತಾರಾತಿವನದುರ್ಗನುಂ: **ಆದಿಪು**, ೧೪. ೫೨ ವ)

ಕರಟಿಘಟ – [ನಾ] ಆನೆಗಳ ಹಿಂಡು (ಗಿರಿರಾಜೋದಗ್ರಸಿಂದೂರಿತ ಕರಟಿಗಟಾಟೋಮಂ: **ಆದಿಪು**, ೧೧. ೨೪)

ಕರಣ – [ನಾ] ಇಂದ್ರಿಯ (ಈ ಮನುಜರ್ ಅಖಿಳಕರಣಗ್ರಾಮಮಂ ಒಂದೊಡಲೊಳ್ ಎಂತು ಒಡಂಬಡಿಸಿದರೋ: **ಆದಿಪು**, ೪. ೭೨); [ನಾ] ಕೆಲಸಗಾರ (ಅರಸನ ಕೋಷ್ಠಾಗಾರದ ಕರಣಂಗಳ ಕಾಪನೆಯ್ದೆ ಬಂಚಿಸಿ ಕಳ್ದುಂ: **ಆದಿಪು**, ೫. ೧೫); [ನಾ] ನಾಟ್ಯದ ಒಂದು ಭಂಗಿ (ಕರಣ ಅಂಗಹಾರ ಮೃದುಪದ ಪರಿಕ್ರಮಂಗಳ

ಬೆಡಂಗುಗಳ ಜತಿಯೊಳ್ ಅಳಂಕರಿಸಿದುದೆಂಬಿನಂ: **ಆದಿಪು,** ೭. ೧೮); **[ನಾ]** ನರ್ತನದಲ್ಲಿ ಕಾಲುಗಳನ್ನು ವಿವಿಧ ಭಂಗಿಗಗಳಲ್ಲಿ ಚಲಿಸುವುದು: (ಕರಣಂ ರೇಚಕಂ ಅಂಗಹಾರಂ ಇನಿತೆಂದು ಓದುತ್ತುಂ ಇರ್ಪ ಓದು ಅದತ್ತಿರಲಿ ಈ ನಾಟ್ಯರಸಂ ಸಮಸ್ತ ಸುರವೃಂದಾಧೀಶನಿಂದಂ ಪೊನಲ್ವರಿದತ್ತು: **ಆದಿಪು,** ೭. ೧೨೦); **[ನಾ]** ಮಾಡುವಿಕೆ (ಭವ್ಯರ್ಕಳಂ ಘೋರಸಂಸರಣಾಂಭೋನಿಧಿಪಾರಮಂ ಸಲಿಸಲುಂ ಸಾಲ್ಗುಂ ತ್ವದುದ್ಯೋಗಂ ಇನ್ನು ಇರವು ಏಂ ತ್ರೈಭುವನೋಪಕಾರಕರಣವ್ಯಾಪಾರಪಾರಾಯಣಾ: **ಆದಿಪು,** ೯. ೬೧); **[ನಾ]** ಮಲ್ಲಯುದ್ಧದಲ್ಲಿ ತೋರುವ ಚಾತುರ್ಯ (ಕರಣಂಗಳ ಗಾಯಂಗಳ ಪರಿಣತಿಯಂ ಮೆಱೆದು ಪೊಣರ್ದು: **ಆದಿಪು,** ೧೪. ೧೧೦); ಕೆಲಸ (ನಿನ್ನಂ ಆಳ್ವೆನೆಂದು ಬಾಣಸಿನ ಕರಣಕ್ಕೆ ನಿರೂಪಣಂಗೆಯ್ದಂ: **ಪಂಪಭಾ,** ೮. ೫೪ ವ)

ಕರಣಗಣ – **[ನಾ]** ಇಂದ್ರಿಯ ಸಮೂಹ (ಕರಣಗಣಂ ಕುಱುಂಗಿರೆ ಮನಂ ನೊಸಲಲ್ಲಿರೆ ಲೋಚನಂಗಳ್ ಉಳ್ಳರೆ ಮಗುಟ್ದಿಂಬುವೆತ್ತಿರೆ: **ಆದಿಪು,** ೧೦. ೧೪)

ಕರಣಗ್ರಾಮ – **[ನಾ]** ಕರಣಗಣ (ಈ ಮನುಜರ ಅಖಿಳ ಕರಣಗ್ರಾಮಮಂ ಒಂದೊಡಲೊಳ್ ಎಂತೊಡಂಬಡಿಸಿದರೋ: **ಆದಿಪು,** ೪. ೭೨)

ಕರಣೀಯ – **[ನಾ]** ಅನುಷ್ಠಾನಯೋಗ್ಯ (ತನುವನಿನ್ನೊಪ್ಪುಗೊಳ್ ಮುನ್ನಮಿನ್ನುಂ ಕರಣೀಯಂ ನಿನ್ನ ವಾಕ್ಯಂ: **ಆದಿಪು,** ೨. ೪೯)

ಕರತನ – **[ನಾ]** ತೀವ್ರತೆ (ನರಕದೊಳೆಯ್ದಿದ ದುಃಖದ ಕರತನಮದು ಬಗೆವೊಡೆ ಆರ್ಗಮಗುರ್ವಲ್ತೆ ಭಯಂಕರವಲ್ತೇ: **ಆದಿಪು,** ೯. ೪೭); **[ನಾ]** ತೀಕ್ಷ್ಣತೆ (ಖರಕಿರಣಂಗಳ ಕಾಯ್ಪಿನ ಕರತನದಿಂ ಚಂದ್ರಕಿರಣದುಜ್ಜಳಿಕೆಯಿಂ ಆ ಭರತನ ಮುಳಿಸೊಸಗೆಯಂ ಅನುಕರಿಸಿದುದು: **ಆದಿಪು,** ೧೧. ೭)

ಕರತಳ – **[ನಾ]** ಅಂಗೈ (ಕರತಳದ್ವಯಂ ಬಿರಿಯೆಚ್ಚು ಕೆಯ್ದುವಂ ಪಿಡಿವ ಅದಟೆಲ್ಲಮಂ ಕಿಡಿಸಿ ತಾಂ ಕೊಲಲೊಲ್ಲದೆ ಭೀಮಂ ಆತನಂ ಮಡಿಪುವಂ ಎಂದ ಪೂಣ್ಕೆ: **ಪಂಪಭಾ,** ೧೧. ೧೩೯)

ಕರತಳಾಮಲಕ – **[ನಾ]** [ಕರತಳ+ಆಮಲಕ] ಅಂಗೈಯ ನೆಲ್ಲಿಕಾಯಿ, ಸುಸ್ಪಷ್ಟವಾದುದು (ಪರಮಾತ್ಮನಂತೆ ಲೋಕಾಲೋಕದ ವಸ್ತುಗಳುಮಂ ಕರತಳಾಮಲಕಮಾಗೆ ಅಱಿವುದಱಿಂ ನೃಪಪರಮಾತ್ಮನುಂ: **ಪಂಪಭಾ,** ೧೪. ೩೭ ವ)

ಕರದಸಿ – **[ನಾ]** [ಕರದ ಅಸಿ] ಕೈಗತ್ತಿ (ಕರದಸಿಗಳ್ ಪಳಂಚೆ ಕಿಡಿವಿಟ್ಟೊಗೆಸಳ್ಗಿಡಿ ತಾರಕಾಳಿಯಂತಿರೆ ರಜಮೊಡ್ಡಿನಿಂದ ಮುಗಿಲಂತಿರೆ: **ಪಂಪಭಾ,** ೧೨, ೧೧೧)

ಕರಮೆ – **[ಅ]** ಹೆಚ್ಚಾಗಿ, ವಿಶೇಷವಾಗಿ (ಕೀಚಕಂ ಕಾಮದೇವಂ ಮಾಡಿದ ಯಾಚಕನಂತೆ ಕರಮೆ ನಾಣ್ಗೆಟ್ಟು ಮನಂಗಾಪು ಅೞಿದು ಅಳಿಪಿ ನೋಡಿ: **ಪಂಪಭಾ,** ೮. ೫೯ ವ)

ಕರರುಹರೇಖೆ – **[ನಾ]** ಉಗುರಿನ ಗುರುತು, ನಖಕ್ಷತ (ಮಿಳಿರ್ವಸಿಯ ಪಸಿಯ ಪೊಸಬಾಸುಟಿ ಕರರುಹರೇಖೆ ತುಱುಗಿ: **ಆದಿಪು,** ೧೨. ೧೫)

ಕರವಾಳ – **[ನಾ]** ಕತ್ತಿ (ಅರಿಕೇಸರಿಯೆಂಬ ಸುಂದರಾಂಗನತ್ಯಂತ ವಸ್ತುವಂ ಮದಕರಿಯಂ ಹರಿಯಂ ಪಡಿವಡೆಗುರ್ಚಿದ ಕರವಾಳನೆ ತೋಱೆ ನೃಪತಿ ಗೆಲ್ಲಂಗೊಂಡಂ: **ಪಂಪಭಾ,** ೧. ೧೮)

ಕರವಾಳಾಂಶು – **[ನಾ]** ಕತ್ತಿಯ ಹೊಳಪು (ಕರವಾಳಾಂಶುಚಯ ಅಂಜನಂಗಳೊಳ್ ಅರಿಕ್ಷ್ಮಾಭೃತ್ ಜಯಶ್ರೀವಶೀಕರಣಂ ಮಾಡಿ: **ಆದಿಪು,** ೯. ೬೪)

ಕರವಿನ್ಯಾಸ – **[ನಾ]** ಕೈಯ ಚಲನೆ, ಹಾವಭಾವ (ಆ ಸಭೆಯೊಳ್ ಹರಿ ಕರವಿನ್ಯಾಸಂಗಳ್ ನುಡಿಯಂ ಅಡಕುವಂತಿರೆ ನುಡಿದಂ: **ಪಂಪಭಾ,** ೯. ೩೪)

ಕರಸಾಣೆ – **[ನಾ]** ಖರಸಾಣೆ, ಮಸೆಗಲ್ಲು, ಸಾಣೆಗಲ್ಲು (ಮದನಾಸ್ತ್ರಂ ಖರಸಾಣೆಗಾಣಿಸಿದುದು ಎಂಬಂತಾಗೆ ನಿನ್ನೊಂದು ಕಂದಿದ ಮೆಯ್ ಎನ್ನಯ ತೋಳೊಳೊಂದೆ ಸಿರಿಯಂ ನೀನುಯ್ದು ತೊಟ್ಟಿತ್ತಾಳ್ದು ರಾಗದಿಂ ಎನ್ನೊಳ್ ಸುಕಮಿರ್ಪುದು: **ಪಂಪಭಾ** ಪರಿಷತ್ತು, ೮. ೬೬)

ಕರಸ್ಥಿತಾಮಳಕ – **[ನಾ]** ಅಂಗೈ ಮೇಲಿನ ನೆಲ್ಲಿ, ಬಹು ಸ್ಪಷ್ಟ (ಪೆಱರ್ ಚತುರ್ಗತಿಯ ಬಟ್ಟೆಯಂ ನೆಱೆಯೆ ಕಂಡರ್ ಎಂತುಂ ಕರಸ್ಥಿತಾಮಳಕಂ ಎಂಬರ್: **ಆದಿಪು,** ೧೩. ೮೫)

ಕರಾತಳ – **[ನಾ]** ಅಂಗೈ (ಅವನಿತಳಂ ಕರಾತಳದವೋಲ್ ತನಗಂ ಬೆಸಕೆಯ್ಯೆ ಕೆಯ್ಗೆ ಮಾಡುವ ನಯಂ ಆ ಬೃಹಸ್ಪತಿಯುಮಂ ಗೆಲೆವಂದುದು ಧಾರ್ತರಾಷ್ಟ್ರನಾ: **ಪಂಪಭಾ,** ೭. ೪೦)

ಕರಾಸ್ಫಾಳನ – **[ನಾ]** ಚಪ್ಪಾಳೆ, ಸೂಚನೆ (ತ್ರಿದಶಾನೇಕಾನಕಂಗಳ್ ಮೊಳಗಿದುವು ಕರಾಸ್ಫಾಳನಂ ದೇವರಿಂದಾಗದೆ ಮುಂ ಕಲ್ಪದ್ರುಮಂಗಳ್ ಪೊಸತಲರ್ದಲರಂ ತಾಮೆ ಸಾಲ್ವನ್ನೆಗಂ ಸೂಸಿದುವು: **ಆದಿಪು,** ೭. ३೯)

ಕರಾಹತಿ – **[ನಾ]** [ಕರ+ಆಹತಿ] ಕೈಯ ಹೊಡೆತ (ಅಂಭೋಧಿವೇಲೆ ಭೋರ್ಗರೆವವೊಲ್ ಒರ್ಮೊದಲೆಸೆದುವು ಘನಪಥದೊಳ್ ತ್ರಿದಶಕರಾಹತಿಯಿನೊಡನೆ ಸುರದುಂದುಭಿಗಳ್: **ಪಂಪಭಾ,** ೧. ೧೪೬)

ಕರಿ – **[ನಾ]** ಕಪ್ಪು ಬಣ್ಣ (ಕರಿಯ ಮುಗಿಲ್ಗಳಿಂ ಗಗನಮಂಡಳಮೊಪ್ಪಿರೆ ಸೋಗೆಯಿಂ ವನಾಂತರಂ ಎಸೆದು ಒಪ್ಪೆ: **ಪಂಪಭಾ,** ೭. ೨೩); **[ನಾ]** ನೀರಾನೆ ಮತ್ತು ಆನೆ (ಕರಿಮಕರಾಹತಿಯಿಂ ಬಿರಿದಳುವ ಛತ್ರದಂತೆ ವಿವಿಧಾಯುಧ ದಂತುರಿತಂಗಂಳಟೆದುವಾ ಸಂಗರಜಳನಿಧಿಯೊಳ್ ವರೂಥ ಕರಿ ನಿಕರಂಗಳ್: **ಪಂಪಭಾ,** ೧೩. ೩೫)

ಕರಿಂಕುವರಿ – ಕರಿಕಾಗು, ಕಪ್ಪಾಗು (ಪರವಾದಿಗಳ ಮೊಗಗಂಗಳ್ ಕರಿಂಕುವರಿದಂತೆ ಕಂದಿ ಕುಂದಿರೆ ಖಚರೇಶ್ವರನೀಯೆ ಪಡೆದಂ ಅತ್ಯಾದರದಿಂ ಜಯಪತ್ರಮಂ ಸ್ವಯಂಬುದ್ಧ ಬುಧಂ: **ಆದಿಪು,** ೨. ೨೩)

ಕರಿಂಕೇಟಿಸು – **[ಕ್ರಿ]** ಕರಿಕಾಗಿಸು (ಏಟುಂ ಮಾಳವನಮಂ ಪಾಱೆಟೆ ತಗುಳ್ದಿಱಿದು ನರಗನುರಿಪಿದೊಡೆ ಕರಿಂಕೇಟಿಸಿದಾತನ ತೇಜದ ಬೀಟಲಂ ಅನುಕರಿಪುವಾದುವು ಒಗೆದುರಿಗಳ್: **ಪಂಪಭಾ,** ೧. ೩೫)

ಕರಿಕ – **[ನಾ]** ಕಪ್ಪು ಮೈಬಣ್ಣದವನು (ದೊರೆಕೊಂಡ ಕೃಷ್ಣಲೇಶ್ಯಾ ಪರಿಣಾಮಮೆ ಕೃಷ್ಣವರ್ಣಮಂ ಪುಟ್ಟಿಸಿದಂತಿರೆ

ಕರಿಕರ್ ಪೇಡಿಗಳ್ ಅತಿ ಪರುಷ ಸ್ವರಪರುಷ ನಯನಪರುಷಶರೀರರ್: **ಆದಿಪು,** ೫. ೯೧)

ಕರಿಕರ್ಣತಾಳ – [ನಾ] ಆನೆಯ ಕಿವಿಯ ಅಲುಗಾಟ (ಕರ್ಣನ ಒಡಲಿಂದೆಂತುಂ ಪೋಗಲಜೆಯದೆ ಸಿರಿ ಕರಮಾಗಳ್ ಕರಿಕರ್ಣತಾಳಸಂಚಳೆಯಾದಳ್: **ಪಂಪಭಾ,** ೧೨. ೨೧೪)

ಕರಿಕದಳಿಕೆ – [ನಾ] ಗಜಪತಾಕೆ (ಅಂಬರದೊಳಮರ ವೃಂದಂಗಳ್ ಬಿತ್ತರಿಸುವ ಪತಾಕೆಗಳೆನಿಸುವ ಕರಿಕದಳಿಕೆಗಳುಮಂ: **ಆದಿಪು,** ೧೩. ೪೪ ವ)

ಕರಿಕಳಭ – [ನಾ] ಆನೆಯ ಮರಿ (ತಮ್ಮೊಡನೆ ನಲಿದಾಡುವ ಕಿಶೋರಕೇಸರಿಗಳಂ ತೆಗೆವ ಕರಿಕಳಭಂಗಳುಮಂ ಆ ಪಟವಂಗಳಿಂದೆ ಪಾಯ್ವ ಪುಲಿಗಳ ಮಜೆಗಳೊಳ್ ಪರಿದಾಡುವ ತರುಣ ಹರಿಣಂಗಳುಮಂ: **ಪಂಪಭಾ,** ೧. ೧೧೫ ವ)

ಕರಿಘಟೆ – [ನಾ] ಆನೆಯ ಸೈನ್ಯ (ಬೆಂಕೊಳೆ ಕಳಿಂಗರಾಜನ ನೂಂಕಿದ ಕರಿಘಟೆಯಂ ಉಡಿಯೆ ಬಡಿಬಡಿದೆತ್ತಂ ಕಿಂಕೊಟಿ್ ಮಾಡ್ಪುದುಂ ಉಜಿದೆಚ್ಚಂ ಕರ್ಣಂ ನಿಶಿತಶರದಿಂ ಎರಡುಂ ಕರಮಂ: **ಪಂಪಭಾ,** ೧೧. ೧೦೨)

ಕರಿತು – [ಕ್ರಿ] ಕಪ್ಪಗಾಗು ಅಥವಾ ಕರಿಕಾಗು (ಪೊಸವೇಟಕಾಜಿರ ಎರ್ದೆಗಳ್ ಪೊಸಕಾರ ಪೊಡರ್ಪುಗಂಡದೇಂ ಕರಿತುವು ಅದೇಂ ಕಲಂಕಿದುವು: **ಪಂಪಭಾ,** ೭. ೨೩)

ಕರಿದು – [ನಾ] ಕಪ್ಪಾದುದು (ಪರಪಿನ ನೀಳದ ಕಡೆಯಂ ಮರುಳಂ ತವೆ ನೋಡಲಾಜಿದೆ ಅಂಬರತಳಮಂ ಕರಿದೆಂಬಂತಿರೆ ನಿನ್ನಂ ನರನೆಂಬುದೆ: **ಪಂಪಭಾ,** ೬. ೨೦)

ಕರಿದು ಮಾಡು – [ಕ್ರಿ] ಕಪ್ಪಾಗಿ ಮಾಡು, ಕುಂದು ಮಾಡು (ವರದಿಗ್ವನಿತೆ೧೦೬ಗೆ ಮಾಟದ ಕುರುಳ್ ಆ ತ್ರೈಭುವನಕಾಂತೆಗಂ ದಲ್ ಕಂಠಾಭರಣಂ ಎನೆ ಪರೆದ ತನ್ನದ್ವರಧೂಮದೆ ಕರಿದು ಮಾಡಿದಂ ನಿಜಯಶಮಂ: **ಪಂಪಭಾ,** ೧೪. ೪೪) [**'ಕರಿದು ಮಾಡಿದಂ'** ಎಂಬುದರ ಬದಲು **'ಕರಮೆ ಮಾಡಿದಂ'** ಎಂದಿದ್ದಿರಬಹುದೇ ಎಂದು ಡಿಎಲ್ಎನ್ ಅನುಮಾನಿಸುತ್ತಾರೆ – **'ದೀಪಿಕೆ',** ಪು. ೫೭೧]

ಕರಿಪುಗಾಱು – [ಕ್ರಿ] [ಕರಿಪು+ಕಾಱು] ಕಪ್ಪನ್ನು ವಾಂತಿಮಾಡಿಕೊ, ಕಪ್ಪಾಗು (ಅಜನ ಪದ್ಮವಿಷ್ಟರದ ಎಸಳ್ ಅಂದು ಅರೆಸೀದುವು ಅಖಿಳ ದಿಗ್ದ್ವಿರದರದಂಗಳ್ ಕರಮೆ ಕರಿಪುಗಾಱಿದುವಾಗಳ್: **ಪಂಪಭಾ,** ೧೦. ೩೬)

ಕರಿಮಕರ – [ನಾ] ಆನೆಯಂಥ ಮೊಸಳೆ, ತಿಮಿಂಗಿಲ ? (ತರಳತರಂಗತುರಂಗಂ ಕರಿಮಕರಕರೀದ್ರಂ ಅಖಿಳಶಫರ ಪದಾತ್ಯುತ್ಕರಂ ಉಗ್ರಗ್ರಾಹರಥಂ ಭರತಂಗಿತ್ತುದು ಪಯೋಧಿಬಳವಿಳಸನಮಂ: **ಆದಿಪು,** ೧೨, ೭೮)

ಕರಿಮುರಿಕ – [ಗು] ಕರಿಕಲಾದ, ಸೀದು ಕಪ್ಪಾದ (ಉರಿಯಿಂ ಕರಿಮುರಿಕನಾದುವು ಉನ್ಮದ ಪರಭೃತ ಷಟ್ಚರಣ ರಾಜಕೀರಕುಲಂಗಳ್: **ಪಂಪಭಾ,** ೫. ೯೦)

ಕರಿಯೂಥಪತಿ – [ನಾ] ಸಲಗ (ಕರಿಯೂಥಪತಿಗಳೆರಡುಂ ಸರಸೀಜಳಮಂ ವಿಳಾಸದಿಂ ಪುಗುವವೊಲ್: **ಆದಿಪು,** ೧೪. ೧೦೬)

ಕರಿಸಂಘಾತ – [ನಾ] ಆನೆಗಳ ಹಿಂಡು (ಕರಿಸಂಘಾತಮುಮಂ ಹಯವ್ರಜಮುಮಂ ಪಿಂತಿಕ್ಕಿ: **ಆದಿಪು,** ೧೨. ೬೮)

ಕರುಮಾಡ – [ನಾ] ಉಪ್ಪರಿಗೆ (ಕರುಮಾಡದ ಕೆಲದ ಮಾಡದೊಳ್ ವಜ್ರಬಾಹುನೃಪನನಿರಿಸಿ: **ಆದಿಪು,** ೪. ೨೫ ವ)

ಕರುವಿಡು – [ಕ್ರಿ] ಎರಕ ಹೊಯ್, ಸ್ತಬ್ಧವಾಗು (ಮರುಳೇ ಗಾಂಡಿವಿ ಯಾರೆಂದು ಇಳಿಸಿ ನುಡಿವೈ ಗಂಧರ್ವರುಯ್ವಂದು ನಿನ್ನಂ ಕರುವಿಟ್ಟಂತಿರ್ದುದಿಲ್ಲಾ ನೆರದ ಕುರುಬಲಂ ತಂದವಂ ಪಾರ್ಥನಲ್ಲಾ: **ಪಂಪಭಾ,** ೯. ೫೫)

ಕರುಳ್ – [ನಾ] ಅಂತ್ರ (ಅವನ ಕರುಳ ಪಿಣಿಲಿಂದೆನ್ನಂ ಮುಡಿಯಿಸುಗೆ ಆ ಮುಡಿಯಂ: **ಪಂಪಭಾ,** ೭. ೧೦); ಅಂತಃಕರಣ, ಪ್ರೀತಿ (ಒದವಿದ ಅಲಂಪು ಕಣ್ಣೆವೆ ಕರುಳ್ ತನಗೆಂಬುದನುಂಟುಮಾಡೆ: **ಪಂಪಭಾ,** ೧೨. ೨೧೯)

ಕರೆ – [ನಾ] ಬಟ್ಟೆಯ ಅಂಚು (ಕರೆವೆರಸಿದ ಪೊಸದುಗುಲದ ತೆರಳ್ಕೆವೆತ್ತುಡೆ ಹಟತ್ಕಟೀಸೂತ್ರ ಪರಿಸ್ಫುರಿತದೊಳಂ ಕಟ್ಟಿದ ಪೊಂಜುರಿಗೆಯೊಳಂ: **ಆದಿಪು,** ೪. ೩೬); [ಕ್ರಿ] ಆಹ್ವಾನಿಸು (ತನಿವಣ್ಣಾಗಿರ್ದುದು ಇಮ್ಮಾವು ಕಟ್ಟಲಿಸಿದ'ತ್ತೆಳೆವಳ್ಳಿ ಕಾಯ್ತು ಕರೆವಂತಿರ್ದತ್ತು ಚೆಂದೆಂಗು: **ಆದಿಪು,** ೧೧. ೬೮); [ಕ್ರಿ] ಬರಹೇಳು, ಕೂಗು (ಮಗನಂ ಕರೆದು ಒಪ್ಪಿಸವೇಟ ಯುಧಿಷ್ಠಿರಂಗೆ ಮುನ್ ಗೆಲ್ದ ವಸ್ತುವಾಹನಚಯಮಂ: **ಪಂಪಭಾ,** ೬. ೭೬)

ಕರೆಗಣ್ಮು – [ಕರೆಗೆ+ಅಣ್ಮು] ದಡ ತೀಡಿ ಹರಿ, ತುಂಬಿ ತುಳುಕು, ಮೇರೆ ಮೀರು (ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಡಿಯಲ್ ಒಡಗೂಡೆ ಗಂಗೆಯ ಮಡು ಕರೆಗಣ್ಮಿದುದು: **ಪಂಪಭಾ,** ೧. ೯೨); ಉಕ್ಕಿ ಹರಿ (ಎಂತಾನುಂ ಮೂರ್ಛೆಯಿಂದೆಚ್ಚತ್ತು ಕರ್ಣನಂ ನೆನೆದು ಸ್ಮರಣಮಾತ್ರದೊಳೆ ಶೋಕಸಾಗರಂ ಕರೆಗಣ್ಮೆ: **ಪಂಪಭಾ,** ೧೩. ೨ ವ)

ಕರೇಣು – [ನಾ] ಹೆಣ್ಣಾನೆ, ಪಿಡಿ (ಪುರಜನಸಕಳಾಂತಃಪುರ ಪರಿಜನ ಮದಕರಿಕರೇಣುಪರಿವೃತದೊಳ್: **ಆದಿಪು,** ೧೦. ೫೨)

ಕರ್ಕಡೆ – [ನಾ] ಕಕ್ಕಡೆ, ಹಲ್ಲುಗಳಿರುವ ಒಂದು ಆಯುಧ (ಜವಮುಟಿದೊಂದು ಸೋಗೆನವಿಲ್ ಒಯ್ಯನೆ ಕರ್ಕಡೆಗಾಸಿಯಾಗಿ ಪಾಱುವುದುಂ: **ಪಂಪಭಾ,** ೫. ೫೧)

ಕರ್ಕೇತನ – [ನಾ] ಒಂದು ಬಗೆಯ ರತ್ನ (ಇಂದ್ರನೀಲದ ಭದ್ರದೊಳಂ ಕರ್ಕೇತನದ ಜಾಳರಿಗೆಯೊಳಂ ಪಳುಕಿನ ಚಿತ್ರಭಿತ್ತಿಯೊಳಂ ವಿವಾಹಗೇಹಮಂ ಸಮೆಯಿಸಿ: **ಪಂಪಭಾ,** ೩. ೩೪ ವ)

ಕರ್ಗನೆ ಕನಿ – [ಕ್ರಿ] ಕಪ್ಪಾಗಿ ಹೊಳೆ, ಹೊಳೆಯುವ ಕಪ್ಪು ಬಣ್ಣದಿಂದ ಕೂಡು (ಗಾಂಗೇಯನ ದಕ್ಷಿಣೋಪಾಂತದೊಳ್ ಕರ್ಗನೆ ಕನಿತ ಸಮದಗಜಘಟಾಟೋಪದ ನಡುವೆ: **ಪಂಪಭಾ,** ೧೦. ೫೫ ವ)

ಕರ್ಗು – [ಕ್ರಿ] ಕಪ್ಪಾಗು, ಕಪ್ಪಿಡು (ಸಕಳಾಶಾಚಕ್ರಮುಂ ವ್ಯೋಮಮಂಡಳಮುಂ ಕರ್ಗಿ ಕಱಂಗಿ ತೋಱಿ್: **ಆದಿಪು,** ೧೩. ೫೯)

ಕರ್ಚು – [ಕ್ರಿ] ತೊಳೆದುಕೊ (ಇನ್ನಱಿದು ಜಿನೇಂದ್ರಧರ್ಮಜಳದಿಂ ಕಳೆ ಕರ್ಚು ಕಳಂಕಮಂ: **ಆದಿಪು,** ೩. ೪೦); [ಕ್ರಿ] ಹಲ್ಲಿನಿಂದ ಕಚ್ಚು (ನನೆಯಂಬನೆ ಕರ್ಚಿ

ಪಾಜೆದಪುದೋ ಶೃಂಗಾರವಾರಾಶಿ ಭೋಂಕನೆ ಬೆಳ್ಳಂಗೆಡೆದತ್ತೊ ಕಾಮನ ಎಱ್ ಮೆಯ್ವೆರ್ಚಿತ್ತೊ ಪೇೞ್ ಈಕೆಗೆ ಎಂಬಿನಂ: **ಪಂಪಭಾ,** ೪. ೪೨)

ಕರ್ಚುಗೆ – ತೊಳೆದುಹೋಗಲಿ (ಪೆರ್ಚುಗೆ ಭರತಕುಲಂ ನೆಲೆವೆರ್ಚುಗೆ ನಿಮ್ಮೆರಡು ತಂಡಂ ಒದವಿದ ನಣ್ಪಿಂ ಕರ್ಚುಗೆ ಕಲುಷಂ: **ಪಂಪಭಾ,** ೧೩. ೬೭)

ಕರ್ಜಱ್ – [ನಾ] ದೇಹದ ಒಂದು ಭಾಗ (ಬೆರಲ್ ನಡುವುರ ಬೆಂ ಬಸಿಱ್ ತೊಳಕು ಕರ್ಜಱ್ ಮುಯ್ವು .. .. ಎಂಬೆಡೆಯನೆ ನಟ್ಟುರ್ಚಿದುವು .. .. ಪಾರ್ಥನಂಬುಗಳ್: **ಪಂಪಭಾ,** ೧೧. ೧೩೬)

ಕರ್ಣ – [ನಾ] ಮಹಾಭಾರತದ ಪ್ರಮುಖ ಪಾತ್ರಗಳಲ್ಲೊಂದು; ಇವನ ತಾಯಿ ಕನ್ಯೆಯಾಗಿದ್ದ ಕುಂತಿ, ಸಾಕು ತಂದೆ ತಾಯಿಯರು ಇವನಿಗಿಟ್ಟ ಹೆಸರು ವಸುಷೇಣ; ಆದರೆ ಇವನ ಪ್ರತಾಪದ ಕೀರ್ತಿ ಲೋಕದ ಎಲ್ಲರ ಕಿವಿಗೆ ಬಿದ್ದದ್ದರಿಂದ ಇವನಿಗೆ ಕರ್ಣ ಎಂಬ ಹೆಸರೂ ಬಂತು (ಅಂತು ವಸುಷೇಣನಾ ಲೋಕಾಂತಂಬರಮಳವಿ ಬಳೆಯೆ ಬಳೆದೆಸಕಮನೋರಂತೆ ಜನಂಗಳ ಕರ್ಣೋಪಾಂತದೊಳೊಗೆದೆಸೆಯೆ ಕರ್ಣನೆಂಬನುಮಾದಂ: **ಪಂಪಭಾ,** ೧. ೯೮); [ನಾ] ಕಿವಿ (ಎಂದು ನುಡಿದ ಗುರುವಿನ ಕರ್ಣಕಠೋರವಚನಂಗಳ್ಗೆ ಕರ್ಣಂ ಕಿನಿಸಿ: **ಪಂಪಭಾ,** ೧೦. ೨೦ ವ)

ಕರ್ಣಕುಂಡಲ – [ನಾ] ಕಿವಿಯ ಆಭರಣ (ಮಕುಟಂ ಕೇಯೂರಂ ಕರ್ಣಕುಂಡಲಂ ಕೊಪ್ಪು ಸರಿಗೆ ದುಸರಂ ಮಣಿಮುದ್ರಿಕೆ ತಿಸರಮೆಂಬ ಭೂಷಾನಿಕರಮಂ ಆ ಭೂಷಣಾಂಗತರು ಕುಡುತಿರ್ಕುಂ: **ಆದಿಪು,** ೫. ೩೪)

ಕರ್ಣತಾಳ – [ನಾ] ಕರ್ಣಚಾಲನ, ಕಿವಿ ಅಲ್ಲಾಡಿಸುವಿಕೆ (ಮದಾಮೋದ ಸುರಭಿಯುಂ ಮದಶೀಕರಾಸಾರ ಶಿಶಿರಮುಂ ಮದಾಮೋದಭರಮಂಥರಮುಂ ಅಪ್ಪ ಕರ್ಣತಾಳಾನಿಳನೆ: **ಆದಿಪು,** ೧೩. ೬ ವ)

ಕರ್ಣಧಾರ – [ನಾ] ಹಡಗನ್ನು ನಡೆಸುವವನು, ಮುಂದಾಳು (ಪರರಥಿನೀಜಳನಿಧಿಯ ಪಾರಮಂ ಸಲ್ವ ಜಗತ್ಪ್ರಥಿತ ಭುಜದರ್ಪದಿಂದತಿರಥಮಥನಂ ಕರ್ಣಧಾರನಲ್ಲನೆ ಕರ್ಣಂ: **ಪಂಪಭಾ,** ೧೨. ೫೦)

ಕರ್ಣಪರಂಪರೆ – [ನಾ] ಕಿವಿಯಿಂದ ಕಿವಿಗೆ ಬರುವ ರೀತಿ (ಎಂದು ಗಗ್ಗರಿಕೆಗೊಳ್ವ ಸರಮಂ ಕರ್ಣಪರಂಪರೆಯಿಂ ಕೇಳ್ದು ಸಿಂಹಬಲನ ಒಡವುಟ್ಟಿದರ್ ನೂರ್ವರ್ ಕೀಚಕರುಂ ಪರಿತಂದು ಮುಳಿಸಿನೊಳ್: **ಪಂಪಭಾ,** ೮. ೭೯ ವ)

ಕರ್ಣಪೂರ – [ನಾ] ಕಿವಿಯ ಆಭರಣ (ದಿಶಾಲಲನೆಯರ ವಕ್ತ್ರಮಂಡನ ವಿಲಾಸದೊಳ್ ನೆಗಟ್ದ ಕರ್ಣಪೂರಶ್ರೀಯಂ: **ಆದಿಪು,** ೭. ೯೫); [ನಾ] ಕಿವಿಗೆ ಸಿಕ್ಕಿಸಿಕೊಳ್ಳುವ ಹೂಗೊಂಚಲು (ಅಮರೀಮಧುರಗೀತನಿನಾದಕ್ಕಂ ಒಱಲ್ದಿರ್ದ ಶಿರಃಕಂಪನದೊಳನಿಸಾನುಂ ಎಱಗಿದ ರ್ಕಪೂರಪಾರಿಜಾತ ಸ್ತಬಕಮಂ: **ಆದಿಪು,** ೪. ೯ ವ)

ಕರ್ಣರಸಾಯನ – [ನಾ] ಕಿವಿಗೆ ಹಿತವಾಗಿರುವ, ಕರ್ಣನ ಕತೆಯಿಂದ ಹಿತವಾಗಿರುವ (ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ: **ಪಂಪಭಾ,** ೧೨. ೨೧೭)

ಕರ್ಣಿಕಾರ – [ನಾ] ಬೆಟ್ಟದಾವರೆ (ಆರ್ದ್ರಕೇಸರಂಬೆರಸಿದ ಚೆಲ್ವು ತಳ್ತೆಸಳ್ ಅದೇನೆಸೆದಿರ್ದುದೊ ಕರ್ಣಿಕಾರದಾ: **ಆದಿಪು,** ೧೧. ೧೧೭)

ಕರ್ಣಿಕೆ – [ನಾ] ಹೂವಿನ ಮಧ್ಯಭಾಗ, ಬೀಜಕೋಶ (ಲೋಕಂ ಅದೆಂತುಟೆಂದೊಡೆ .. .. ವಿಭುವಪ್ಪ ಆಕಾಶಪದ್ಮಕ್ಕೆ ತಾನೆ ವಲಂ ಕರ್ಣಿಕೆಯಂದಮಾಯ್ತು: **ಆದಿಪು,** ೧. ೪೩)

ಕರ್ಣೋಪಾಂತ – [ನಾ] ಕಿವಿಯ ಬಳಿ (ಅಂತು ವಸುಷೇಣನಾ ಲೋಕಾಂತಂಬರಮಳವಿ ಬಳೆಯೆ ಬಳೆದೆಸಕಮನೋರಂತೆ ಜನಂಗಳ ಕರ್ಣೋಪಾಂತದೊಳ್ ಒಗೆದೆಸೆಯೆ ಕರ್ಣನೆಂಬನುಮಾದಂ: **ಪಂಪಭಾ,** ೧. ೯೮)

ಕರ್ತವ್ಯ – [ನಾ] ಪ್ರಾಯಶ್ಚಿತ್ತ (ಇದರ್ಕೆ ಕರ್ತವ್ಯಮಾವುದೆಂದೊಡೆ ಹಿಮವತ್ಪರ್ವತದೊಳ್ ತಪಶ್ಚರಣಪರಾಯಣರಾಗಿಂ: **ಪಂಪಭಾ,** ೧೩. ೧೦೭ ವ)

ಕರ್ತ್ರನ್ವಯಕ್ರಿಯೆ – [ನಾ] [ಜೈನ] ಭವ್ಯಜೀವನಿಗೆ ಪ್ರಾಪ್ರವಾಗುವ ಏಳು ಕ್ರಿಯೆಗಳು (ಸಜ್ಜಾತಿ, ಸದ್ಗೃಹತ್ವ, ಪಾರಿವ್ರಾಜ್ಯ, ಸುರೇಂದ್ರತ್ವ, ಸಾಮ್ರಾಜ್ಯ, ಪರಮಾರ್ಹಂತ್ಯ, ಪರಿನಿರ್ವಾಣಮೆಂಬೇಟುಂ ಪರಮಸ್ಥಾನನಾಮಕರ್ತ್ರನ್ವಯ ಕ್ರಿಯೆಗಳಂ: **ಆದಿಪು,** ೧೫. ೧೬ ವ)

ಕರ್ದುಕು – [ಕ್ರಿ] ಕೊಕ್ಕಿನಿಂದ ಕುಟುಕು (ಪಸರಿಸಿದ ಪದ್ಮರಾಗದ ಪೊಸಗೆಂಪಂ ಮಾಂಸಮೆಂದು ಮುಂ ಕರ್ದುಕಲ್ಕೆ ಆಟಿಸಿಯುಂ: **ಆದಿಪು** ೧೨. ೧೨೨)

ಕರ್ನೆಯ್ದಿಲ್ – [ನಾ] ಕನ್ನೈದಿಲೆ (ಲತೆಯುಂ ಕರ್ನೆಯ್ದಿಲುಂ ಸೋಗೆಯುಮ್ ಅತನುತನುಧನುರ್ಲೇಖೆಯುಂ: **ಆದಿಪು,** ೪. ೨೦)

ಕರ್ಪಟ – [ನಾ] ಹರಿದ ಬಟ್ಟೆ (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಮುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ)

ಕರ್ಪಡರ್ – [ಕ್ರಿ] ಕಪ್ಪು ಹತ್ತು, ಮೆತ್ತಿಕೊ (ದಿವಿಜಾಪಗೆ ನೋಡೆ ನೋಡೆ ಕರ್ಪಡರ್ದೆಣೆಯಾದುದು ಆ ಯಮುನೆಗೆ ಅಗ್ಗದ ಯಾಗದ ಧೂಮದ ಏೞ್ಗೆಯೊಳ್: **ಪಂಪಭಾ,** ೬. ೩೬)

ಕರ್ಪಿಡಿ – [ಕ್ರಿ] ಕಪ್ಪಾಗು (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒಱ್ ಕರ್ಪಿಡಿದ ಪಣೆಕಟ್ಟು ಕೆಯ್ಪುಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್: **ಪಂಪಭಾ,** ೧೦. ೭೧)

ಕರ್ಪು – [ನಾ] ಕಪ್ಪು (ಪೊನಲ್ಗಳ ಕೆಂಪು ಪಸುರ್ಪು ಕರ್ಪು ಬೆಳ್ಪು ಒಳಕೊಳೆ ಶಕ್ರಕಾರ್ಮುಕವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ,** ೭. ೨೫); [ನಾ] ಭಂಗ (ಪಿರಿದುಂ ಬನ್ನದ ಕರ್ಪೆಸೆದುದು ತೊಱ್ಗಿನ್ನುಂ ಹರಗಳ ತಮಾಳನೀಳಚ್ಛವಿಯಿಂ: **ಪಂಪಭಾ,** ೫. ೫೪)

ಕರ್ಪೂರಪಾಂಸು – [ನಾ] ಅಚ್ಚಕರ್ಪೂರ (ಸುರೇಂದ್ರಸಮಿತಿ ಸುರತರುಪ್ರಸೂನ ಕರ್ಪೂರಪಾಂಸು ಗೋಶೀರ್ಷ ಚಂದನದ್ರವಪರಿಮಳಂ: **ಆದಿಪು** ೭. ೧೦೧ ವ)

ಕರ್ಪೂರಪಾಳಿ – [ನಾ] ಕರ್ಪೂರದ ಹಳುಕು (ಶ್ರುತಿಸೌಖ್ಯಾವಹ ವಲ್ಲಕೀಕ್ವಣದೊಳ್ ಕರ್ಪೂರಪಾಳೀ ವಿಮಿಶ್ರಿತ ತಾಂಬೂಲರಸೋತ್ಕಟಪ್ರಮದದೊಳ್: **ಆದಿಪು,** ೯. ೧೧೮)

ಕರ್ಬಸು – [ನಾ] ಕಪ್ಪು ಹಸು (ಅಗ್ಗದ ನಿಡುಗೋಡು ಮೇಡುವಂ ಅಮರುತ್ತುಂ ಇಱುಂಕಿದ ಕೆಚ್ಚಲ್ ಎತ್ತಮೆತ್ತಿದ ಕುಡಿವಾಲಮಂದೆಸೆಯೆ ಕರ್ಬಸುಗಳ್ ಪರಿಗೊಂಡುವಾಜಿಯೊಳ್: **ಪಂಪಭಾ,** ೮. ೧೦೪)

ಕರ್ಬಾಳ – [ನಾ] ಕಪ್ಪು ಬಾಳದ ಬೇರು, ಲಾವಂಚ (ಮದನರಾಗವರ್ಧನಕರಮೀ ಮರುವಂ ಕರ್ಬಾಳಮಮುಂ ಇರೆ ಮರುಳಲ್ಲವೆ ಕುಸುಮನಿಚಯದೊಳ್ ಪಾಯ್ವಳಿಗಳ್: **ಆದಿಪು,** ೧೧. ೧೨೭)

ಕರ್ಬೊನ್ – [ನಾ] [ಕರಿದು ಪೊನ್] ಕಬ್ಬಿಣ (ಕಾಯ್ದ ಕರ್ಬೊನ್ನ ಸೂಜಿಗಳಂ ಬೆರಲ್ಗಳೊಳ್ ಬೆಟ್ಟುವರುಂ: **ಆದಿಪು,** ೫. ೮೫ ವ)

ಕರ್ಮ – [ನಾ] [ಜೈನ] ಕರ್ಮಾಷ್ಟಕ: ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ, ಆಯುಃಕರ್ಮ, ಗೋತ್ರಕರ್ಮ, ವೇದನೀಯ ಕರ್ಮ ಎಂಬ ಎಂಟು ಕರ್ಮಗಳು (ಆ ಮುನಿರಾಜಂ ಕರ್ಮಂಗಳಂ ಗಾಳಿಸಿದಂ ಈ ರಾಜರಾಜಂ ಷಟ್ಖಂಡಮಂಡಳಮಂ ಬಾಯ್ಕೇಳಿಸಿದಂ: **ಆದಿಪು,** ೬. ೨೪ ವ)

ಕರ್ಮನಿರ್ಜರೆ – [ನಾ] [ಜೈನ] ಕರ್ಮಕ್ಷಯ (ತಚ್ಚರಿತಮಂ ಕಾವ್ಯಂಗಳೊಳ್ಕೂಡೆ ಬಣ್ಣಿಸಿ ಪೇೞ್ವಾತನ ಕರ್ಮನಿರ್ಜರೆಯನಂತಿತಿಂತೆನಲ್ ಬರ್ಕುಮೇ: **ಆದಿಪು,** ೧. ೩೭)

ಕರ್ಮಪಾಕ – [ನಾ] [ಜೈನ] ಪೂರ್ವಜನ್ಮದ ಕರ್ಮಗಳ ಫಲ (ಸ್ಥಾವರನಾಮ ಕರ್ಮಪಾಕಾಧೀನಂಗಳ್ ಸ್ಥಾವರಂಗಳ್: **ಆದಿಪು,** ೧೦. ೬೩ ವ)

ಕರ್ಮಫಳೋದಿತ – [ಗು] [ಕರ್ಮಫಳ+ಉದಿತ] ಕರ್ಮದ ಫಲದಿಂದ ಉಂಟಾದ (ಬಾದೇನ್ ಆ ಮದೀಯ ಕರ್ಮಫಳೋದಿತ ಸಂತಾಪರೂಪಪಾಪಕಳಾಪ ವಿಚ್ಛೇದನಕರಮಾಯ್ತು ಭವತ್ ಪಾದಪ್ರಕ್ಷಾಳನ ಉದಕದಿಂ ಮುನಿನಾಥಾ: **ಪಂಪಭಾ,** ೬. ೧೩)

ಕರ್ಮಭೂಮಿ – [ನಾ] [ಜೈನ] ಅವಸರ್ಪಿಣಿ ಕಾಲದ ಐದು–ಆರನೆಯ ವಿಭಾಗಗಳಿಗೆ ಸಂಬಂಧಿಸಿದ ಭೂಮಿ, ಭಾರತ ಮತ್ತು ಐರಾವತ ಕ್ಷೇತ್ರಗಳೊಳಗಿನ ಆರ್ಯಖಂಡ (ಇದು ಕರ್ಮಭೂಮಿಯಂದಂ ಪೊದಳ್ದು ತೋಱಿದುದು ಭೋಗಭೂಮಿಸ್ಥಿತಿ ಕುಂದಿದುದು: **ಆದಿಪು,** ೬. ೬೩)

ಕರ್ಮವಶಭ್ರಾಮ್ಯತ್ – [ಗು] ಕರ್ಮಕ್ಕೆ ಸಿಲುಕಿ ತೊಳಲುವ (ವಿಯನ್ಮಧ್ಯಸ್ಥಂ ಅಂತಸ್ಸ್ಥ ಕರ್ಮವಶಭ್ರಾಮ್ಯತ್ ಅನೇಕ ಜೀವನಿವಹಕ್ರೋಡೀಕೃತಾಭ್ಯಂತರಂ: **ಆದಿಪು,** ೧. ೪೩)

ಕರ್ಮಾಷ್ಟಕ – [ನಾ] [ಜೈನ] ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ, ಆಯುಃಕರ್ಮ, ನಾಮಕರ್ಮ, ಗೋತ್ರಕರ್ಮ, ವೇದನೀಯಕರ್ಮ ಎಂಬ ಜೀವದ ಎಂಟು ಕಿಲ್ಬಿಷಗಳು (ಖಳಕರ್ಮಾಷ್ಟಕಮಂ ಪಡಲ್ವಡಿಸಿ ಸಂಸಾರಾಬ್ಧಿಯಂ ದಾಂಟಿ ನಿಶ್ಚಲಸೌಖ್ಯಾಸ್ಪದಮಂ ತ್ವದೀಯಜನಕಂ ಕೈಕೊಂಡೊಡೆ: **ಆದಿಪು,** ೧೬. ೫೫)

ಕರ್ಮೇಂಧನ – [ನಾ] [ಕರ್ಮ+ಇಂಧನ] ಕರ್ಮವೆಂಬ ಉರುವಲು (ಅಪಗತಯೋಗಗುಣಸ್ಥಾನನುಂ ಚತುರ್ಥಧ್ಯಾನಾನಳದಗ್ಧ ಶೇಷಾಶೇಷ ಕರ್ಮೇಂಧನನುಮಾಗಿ: **ಆದಿಪು,** ೧೬. ೭೪ ವ)

ಕರ್ವು – [ನಾ] ಕಬ್ಬು (ಮತ್ತೊರ್ವಳ್ ಕರ್ವಿನ ಬಿಲ್ಲ ತಿರುವಿಂ ಬರ್ದುಂಕಿ ಬರ್ಪಲರಂಬು ಬರ್ಪಂತೆ ಬಂದು: **ಪಂಪಭಾ,** ೪. ೩೭ ವ)

ಕರ್ಶನ – [ನಾ] ಸೊರಗುವಿಕೆ (ಕರ್ಶನವಘಸಮಿತಿಗೆ ಸದ್ದರ್ಶನದಿಂದಪ್ಪುದಕ್ಕೆ ನಿಮಗಕ್ಕೆ ಪುನರ್ದರ್ಶನಂ: **ಆದಿಪು,** ೫. ೬೪)

ಕರ್ಷಣ – [ನಾ] ಉಜ್ಜುವಿಕೆ (ಅಂತನೇಕ ಮಕುಟಬದ್ಧ ಮಣಿಮಕುಟಮಣಿ ಕರ್ಷಣಮಸೃಣಿತಚರಣಂ ಆಪ್ತಾಧಿರಾಜ್ಯಂ: **ಆದಿಪು,** ೮. ೭೨ ವ); [ನಾ] ನಿವಾರಣೆ (ದುಸ್ಸ್ವಪ್ನದರ್ಶನಕರ್ಷಣಾರ್ಥಮಾಗಿ .. .. ಶಾಂತಿಕಕ್ರಿಯೆಗಳಂ ನೆಗೞ್ದು: **ಆದಿಪು,** ೧೫. ೪೮ ವ); [ನಾ] ಗದೆಯನ್ನು ಎಳೆಯುವುದು (ಸವ್ಯಾಪಸವ್ಯ ಭ್ರಾಂತೋದ್ಭ್ರಾಂತ ಕರ್ಷಣ ಮಂಡಳಾವರ್ತನಾದಿಗಳಪ್ಪ ಮೂವತ್ತೆರಡು ಗದಾವಿಕ್ಷೇಪದೊಳಂ: **ಪಂಪಭಾ,** ೧೩. ೯೨ ವ)

ಕಲ್ – [ನಾ] ಕಲಿ (ಮನದೊಳೊಗೆದ ಅನ್ಯಜನ್ಮದ ಮುನಿಸದು ಕಣ್ಣಿಂ ತುಳುಂಕೆ ಸೈರಿಸದವನುರ್ವಿನ ಕಲಿತನಕ್ಕೆ ದುರ್ಯೋಧನನುಂ ಭೀಮನೊಳೆ ಸೆಣಸಿ ಗದೆಯಂ ಕಲ್ತಂ: **ಪಂಪಭಾ,** ೨. ೫೯)

ಕಲಂಕು – [ಕ್ರಿ] ಕಲಕು, ಮಥನಮಾಡು (ಒದವಿ ತಗುಳ್ದ ಗಗ್ಗರಿಕೆ ಸೂಸುವ ಕಣ್ಬನಿ ಕಣ್ಗಳೊಳ್ ಕಲಂಕಿದ ಬೆಳರ್ಗೆಂಪು: **ಆದಿಪು,** ೧೨. ೨೫)

ಕಲಕಾಂಚೀದಾಮ – [ನಾ] ಡಾಬು (ನಿತಂಬಂ ಕಲಕಾಂಚೀದಾಮ ಶೂನ್ಯಂ ಚರಣಯುಗಳಮುಂ ನೂಪುರಾಳಾಪಶೂನ್ಯಂ: **ಆದಿಪು,** ೩. ೧೩)

ಕಲಧೌತ – [ನಾ] ಚಿನ್ನ (ಏಕೋದಗ್ರಕೂಟಂ ವಿರಾಜಿತ ಘಂಟಂ ಕಲಧೌತತುಂಗಕಳಶಂ ಚೆಲ್ವಾಯ್ತು ರಾಜಾಲಯಂ: **ಆದಿಪು,** ೬. ೧೦೭)

ಕಲಧೌತಸ್ಥಾಸಕ – [ನಾ] ಚಿನ್ನದ ಲೇಪ (ಅತ್ಯಂತಧೌತ ಕಲಧೌತಸ್ಥಾಸಕಾಳಂಕೃತನಕ್ಷತ್ರಮಾಳಾಪರಿಕಲಿತಕರೀಂದ್ರಗಳ್: **ಆದಿಪು,** ೧೩. ೬ ವ)

ಕಲಲ್ – [ಕ್ರಿ] ಕಲಿಯಲು (ಯಾದವವಂಶಜರುಂ ನಾನಾದೇಶ ನರೇಂದ್ರರುಂ ಘಟೋದ್ಭವನ ಧನುರ್ವೇದಮನೆ ಕಲಲ್ ಬಂದಾಳಾದರ್: **ಪಂಪಭಾ,** ೨. ೫೬)

ಕಲಶ – [ನಾ] ಚೆಂಬು (ಮತ್ಸ್ಯ ಮಕರ ಕುಲಿಶ ಕಲಶ ಕುಳೀರ ವರಾಹ ವಾನರ ಕಂಠೀರವ ಚಮೂರು ಮಯೂರ ಗರುಡ ಫಣಿರಾಜಚಿಹ್ನಂಗಳಪ್ಪ: **ಆದಿಪು,** ೧೧. ೨೮ ವ)

ಕಲಶಜ – [ನಾ] ದ್ರೋಣ (ಅಂತೆ ಗೆಯ್ವೆಂ ಎಂದು ಕಲಶಜಂ ಅನಿಬರ ಮೊಗಮಂ ನೋಡಿ: **ಪಂಪಭಾ,** ೨. ೫೩ ವ)

ಕಲಹ – [ನಾ] ಯುದ್ಧ (ಬಗೆವಾಗಳ್ ಈಗಳ್ ಈ ಕಲಹದೊಳ್ ಅಣ್ಣ ನಿಮ್ಮ ಕುಲ ಆಕುಲಮಂ ನಿಮಗುಂಟುಮಾಡುಗುಂ: **ಪಂಪಭಾ,** ೧೦. ೨೧)

ಕಲಿ – [ನಾ] ಶೂರ (ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊದನೀವೆನೆಂದನೆ ನೊಂದು ಅಃ ಎಂದನೆ ಸೆರಗಿಲ್ಲದೆ ಪಿಡಿಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ: **ಪಂಪಭಾ**, ೧. ೧೦೨)

ಕಲಿಕೆ – [ನಾ] ಮೊಳಕೆ (ಮಲ್ಲಿಗೆಯಲರ್ಗಳಂ ಪೂವಾಸಿ ಮೃಣಾಳನಾಳದೊಳ್ ಸಮೆದ ಸರಿಗೆಗಂಕಣಗಳುಮಂ ಯವಕಲಿಕೆಗಳೊಳ್ ಸಮೆದ ಕಟಿಸೂತ್ರಮಂ: **ಪಂಪಭಾ**, ೫. ೬ ವ); [ನಾ] ವಿದ್ಯೆ, ಚಾತುರ್ಯ (ಸಮರಭರಂ ಮನೋರಾಗಮಂ ಮಾಡೆಯುಂ ಮಮ್ಮಟಿಸಿ ಪಾಂಡವಕೌರವಬಲದ ಕಲಿಕೆಯ ಪ್ರಧಾನನಾಯಕರ್ಕಳ್: **ಪಂಪಭಾ**, ೧೩. ೩೭ ವ)

ಕಲಿಗಂಟು – [ನಾ] ವೀರಗಾಸೆ, ಮಲ್ಲನ ಕಚ್ಚೆ (ಬಾಹುಯುದ್ಧಸನ್ನದ್ಧನಾಗಿ ಕಲಿಗಂಟಿಕ್ಕಿ ಗಂಡುಡುಗೆಯನುಟ್ಟು ಮೇಲುದನಿಟೆಯೆ ಮುಸುಕಿಟ್ಟು: **ಪಂಪಭಾ**, ೮. ೭೩ ವ)

ಕಲಿತನ – [ನಾ] ಶೌರ್ಯ (ತನ್ನ ಸಹಜಕವಚಮಂ ನೆತ್ತರ್ ಪನಪನ ಪರಿಯೆ ತಿದಿಯುಗಿವಂತುಗಿದು ಕೊಟ್ಟೊಡೆ ಇಂದ್ರನಾತನ ಕಲಿತನಕೆ ಮೆಚ್ಚಿ: **ಪಂಪಭಾ,** ೧. ೧೦೨ ವ)

ಕಲಿಯುಗಾಭ್ಯರ್ಣ – [ನಾ] ಕಲಿಯುಗದ ಹತ್ತಿರ (ಕಲಿಯುಗಾಭ್ಯರ್ಣದೊಳ್ ದ್ರವ್ಯಲೋಭಾತುರರ್ ಉನ್ಮಾರ್ಗೋಪದೇಶೋದ್ಯತಮತಿಗಳ್ ಅತಿಕ್ರೂರರಪ್ಪರ್ ದ್ವಿಜನ್ಮರ್: **ಆದಿಪು**, ೧೫. ೨೬)

ಕಲಿಲ – [ಗು] ನಿಬಿಡವಾದ (ಕಲಿಲಘನಫೇನಬುದ್ಬುದಾದಿ ಪರಿಣತಿಯಿಂ ನವಮಾಸಾವಸಾಯಸಮಯದೊಳ್: **ಆದಿಪು**, ೫. ೪೧ ವ)

ಕಲುಷ – [ನಾ] ರೋಷ, ಕದಡು (ಕೋಪಾಗ್ನಿ ಕೆಯ್ಗಣ್ಮಿ ಕಣ್ಮಲರೊಳ್ ಬಂದಿರೆ ನೋಡಿದಂ ಕಲುಷದಿಂ ಗಾಂಡೀವಿ ಗಾಂಡೀವಮಂ: **ಪಂಪಭಾ**, ೭. ೭); [ನಾ] ವೈರ (ಮಚ್ಚರಮುಂ ಮೋಘಂ ಎಡಂಬಡುಂ ಕಲುಷಮುಂ ಮುನ್ನುಳ್ಳುದು .. .. ನಿಷ್ಕಾರಣಂ ಕಾಯ್ವರೇಂ: **ಪಂಪಭಾ**, ೭. ೩೫)

ಕಲ್ತುವಾಗದೇ – ಕಲಿತುವಲ್ಲವೇ (ಒಲ್ದು ಎಱಪಂತೆ ತಳ್ತ ಪೂವಿನ ಪೊಸಗೊಂಚಲಿಂ ಮರನಿದೇನೆಸೆದಿರ್ದುವೊ ಕಲ್ತುವಾಗದೇ ವಿನಯಮನೀ ತಪೋಧನರ ಕೈಯೊಳೆ ಶಾಖಿಗಳುಂ ನಗೇಂದ್ರದಾ: **ಪಂಪಭಾ,** ೧. ೧೧೬)

ಕಲ್ತೆಯಿಲ್ಲಾಗದೆ – ಕಲಿತವನಾಗಲಿಲ್ಲವಲ್ಲವೇ? (ನಾಲ್ಕುಂ ನೃಪವಿದ್ಯೆಯಂ ಆಡಲ್ ಕಲ್ತುಂ ನೆಱೆಯೆ ಕಲ್ತೆಯಿಲ್ಲಾಗದೆ ಸೋಲಲ್ಕೆ ದೊರೆಯೆ ನೆಲನಂ: **ಪಂಪಭಾ**, ೭. ೫೪)

ಕಲ್ಪ – [ನಾ] [ಜೈನ] ಹದಿನಾರು ಬಗೆಯ ಸ್ವರ್ಗಗಳು (ಉತ್ಕೃಷ್ಟ ಭೋಗಭೂಮಿಯೊಳಂ ಅನಾಕುಳ ಕಲ್ಪ ಅಮರ ಲೋಕಂಗಳೊಳಂ ಪುಟ್ಟಿಸುಗುಮಪ್ಪ ಕಾರಣದಿಂದಂ: **ಆದಿಪು**, ೧೦. ೧೦); [ನಾ] ಬ್ರಹ್ಮನ ಒಂದು ದಿವಸ ಅಥವಾ ಸಹಸ್ರಯುಗಗಳ ಕಾಲಾವಧಿ (ಅದಱೊಳ್ ಅನೇಕ ಕಲ್ಪ ಶತಕೋಟಿಗಳೊಳ್ ಸಲೆ ಸಂದ ಚಕ್ರಿವೃಂದದ ಚಲದ ಆಯತಿಯ ಬೀರದ ಚಾಗದ ಮಾತುಗಳ್: **ಆದಿಪು**, ೧೩. ೭೧)

ಕಲ್ಪಜ – [ನಾ] ಕಲ್ಪದಲ್ಲಿ ಹುಟ್ಟಿದವನು, ದೇವತೆ (ತತ್ಸತಿಯಿಂದಂ ನೆಟ್ಟನೆ ಸಾರಮಾದುದು ಗಡಂ ತತ್ಕಲ್ಪಜಂಗೆ ಎಂದೊಡೆ ಆ ಜಿತವಿದ್ಯುತ್ಪ್ರಭೆಯಂ ಸ್ವಯಂಪ್ರಭೆಯಂ ಇನ್ನೇವಣ್ಣಿಪಂ ಬಣ್ಣಿಪಂ: **ಆದಿಪು**, ೨. ೭೬)

ಕಲ್ಪತರು – [ನಾ] ಕಲ್ಪಕುಜ (ಆದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ ಮದನನ ಸೌಭಾಗ್ಯಮುಮಂ ಕಲ್ಪತರುವಿನ ಉದಾರಶಕ್ತಿಯುಮಂ .. .. ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ**, ೧. ೧೪೯ ವ); [ನಾ] ಕೇಳಿದ್ದನ್ನು ಕೊಡುವ ದಾನಿ (ಎಡಱು ಅಱೆದು ಈವ ಕಲ್ಪತರುವೆಂದು ವನೀಪಕಕೋಟಿ ಸಂತಸಂಬಡೆ ಪೊಡೆವ ಒಂದಕಾಳ ವಿಳಯಾಶನಿ ಎಂದು ವಿರೋಧಿಗಳ್ ಮನಂಗಿಡೆ: **ಪಂಪಭಾ**, ೨. ೯೮)

ಕಲ್ಪದ್ರುಮ – [ನಾ] ಕಲ್ಪವೃಕ್ಷ (ಪಯೋರುಹವಿಳಾಸಸ್ಥಾಪನೆಯಿಂ ಭೂವಧೂವರಂ ಅಬ್ಜೇಕ್ಷಣೆ ಕಲ್ಪವೃಕ್ಷದಿಂ ಇಳಾಲೋಕೈಕ ಕಲ್ಪದ್ರುಮಂ: **ಆದಿಪು**, ೮. ೨೭)

ಕಲ್ಪಪಾರ್ಥಿವ – [ನಾ] ಕಲ್ಪವೃಕ್ಷ (ಬೆಳ್ಕುತ್ತಿನಿಸಿರ್ದ ಪಾರ್ಥಿವರೊಳೇಂ ದೊರೆಯಾದುದೊ ಕಲ್ಪಪಾರ್ಥೀವಂ: **ಆದಿಪು**, ೭. ೪೯)

ಕಲ್ಪಮಹೀಜ – [ನಾ] ಕಲ್ಪವೃಕ್ಷ (ಕಲ್ಪಮಹೀಜದ ಪಕ್ಕದಿರ್ಕೆಲಂಬಿಡಿದು ಮಡಲ್ತು ತೋಱುವ ಲತಾವಳಿಗಳ್ಗೆಣೆಯಾಯ್ತು: **ಆದಿಪು**, ೨. ೪)

ಕಲ್ಪಲತೆ – [ನಾ] ಕಲ್ಪವಲ್ಲಿ (ಅಂತಾಕೆಗಳಿರ್ವರುಮೆರಡುಂ ಕೆಲದೊಳಿರೆ ಕಲ್ಪಲತೆಗಳೆರಡಱ ನಡುವಣ ಕಲ್ಪವೃಕ್ಷಮಿರ್ಪಂತಿರ್ದ ಪಾಂಡುರಾಜಂಗೆ: **ಪಂಪಭಾ**, ೧. ೧೦೭ ವ)

ಕಲ್ಪವೃಕ್ಷ – [ನಾ] [ಜೈನ] ಇದರಲ್ಲಿ ಹತ್ತು ವಿಧ: ಮದ್ಯಾಂಗ, ಭೂಷಣ, ವಸ್ತ್ರ, ತೂರ್ಯ, ಮಾಲ್ಯ, ಗೃಹ, ಭಾಜನ, ಭೋಜನ, ಜ್ಯೋತಿರ್, ದೀಪ (ಅಯೋಧ್ಯಾಪುರಮಂ ಪೊಕ್ಕು ದುಸ್ಸ್ವಪ್ನದರ್ಶನ ಕರ್ಷಣಾರ್ಥಮಾಗಿ ಕಲ್ಪವೃಕ್ಷ ಮಹಾಮಹಿಮಾಪುರಸ್ಸರಂ: **ಆದಿಪು,** ೧೫. ೪೮ ವ); [ನಾ] [ಜೈನ] ಚಕ್ರವರ್ತಿಗಳು ಮಾಡುವ ಒಂದು ಪೂಜೆ (ಚಕ್ರವರ್ತಿಗಳ್ ಮಾಟ್ಟಿ ಕಲ್ಪವೃಕ್ಷಮಂ ಮಹಾಮಂಡಳಿಕ ಪ್ರಮುಖ ಮಕುಟಬದ್ಧರ್ ಮಾಟ್ಟಿ ಚತುರ್ಮುಖಮುಮಂ: **ಆದಿಪು**, ೧೫. ೧೩ ವ); [ನಾ] ಕೇಳಿದ್ದನ್ನು ಕೊಡುವ ದೇವಲೋಕದ ಮರ (ಅಂತಾಕೆಗಳಿರ್ವರುಮೆರಡುಂ ಕೆಲದೊಳಿರೆ ಕಲ್ಪಲತೆಗಳೆರಡಱ ನಡುವಣ ಕಲ್ಪವೃಕ್ಷಮಿರ್ಪಂತಿರ್ದ ಪಾಂಡುರಾಜಂಗೆ: **ಪಂಪಭಾ**, ೧. ೧೦೭ ವ)

ಕಲ್ಪಾಂಘ್ರಿಪ – [ನಾ] ಕಲ್ಪಕುಜ (ಮೇರುವ ಪೊ ಕಲ್ಪಾಂಘ್ರಿಪದ ಆರವೆ ರಸದ ಒಱವು ಪರುಸವೇದಿಯ ಕಣಿ ಭಂಡಾರದೊಳ್ ಉಂಟೆನೆ ಕುಡುವ ಅನಿವಾರಿತದಾನಕ್ಕೆ ಪೋಲ್ವರಾರ್ ಬದ್ದೆಗನಂ: **ಪಂಪಭಾ**, ೧. ೨೮)

ಕಲ್ಪಾಂತರಸ್ಥಾಯಿ – [ನಾ] ಕಲ್ಪಾಂತರಗಳವರೆಗೆ ಇರುವ (ಪೂಣ್ದು ನಿಲ್ಲದಿಕೆಯಿಂ ಬಾಟ್ವಂತು ವಿಖ್ಯಾತ ಕೀರ್ತಿಯವ್ವೋಲ್ ಈ ಒಡಲ್ ಅಬ್ಬೆ ಪೇಟಿಮ್ ಎನಗೇಂ ಕಲ್ಪಾಂತರಸ್ಥಾಯಿಯೇ: **ಪಂಪಭಾ**, ೯. ೮೪)

ಕಲ್ಪಾನಲ – [ನಾ] [ಕಲ್ಪ+ಅನಲ] ಪ್ರಳಯಕಾಲದ ಬೆಂಕಿ (ಕಲ್ಪಾನಲ ವಿಳಯಾಂತಕರೂಪನಾದಂ ಅಶ್ವತ್ಥಾಮಂ: **ಪಂಪಭಾ,** ೧೨. ೭೫)

ಕಲ್ಪಾವನಿಜ – [ನಾ] [ಕಲ್ಪ+ಅವನಿಜ] ಕಲ್ಪವೃಕ್ಷ (ತೇಜೋಬಳ ಆಯುರಾರೋಗ್ಯಸಮೇತಮಂ ಅಮೃತಾನ್ನಮನೊಲ್ದೀಗುಂ ಆಗಳುಂ ಭೋಜನಾಂಗ ಕಲ್ಪಾವನಿಜಂ: **ಆದಿಪು,** ೫. ೩೯)

ಕಲ್ಪಿ – [ನಾ] ಕಲಿಯುವಿಕೆ (ದಾಯಿಗರತ್ತಣಿನಪ್ಪ ಅಪಾಯಕೋಟಿಗೆ ಪವಣಿಲ್ಲ ಕಲ್ಪಿಗೆ ಎಡೆಯಾವುದೊ ಪಾಟಿಯ ಬಟ್ಟೆದಪ್ಪಿ ಮುಂ ನೆಗಟ್ದಿಡೆಯಿಲ್ಲ ಪೋಗು ಜಯಮಕ್ಕೆ ಶುಭಂ ನಿಮಗಕ್ಕೆ ಮಂಗಳಂ: **ಪಂಪಭಾ,** ೭. ೨೧); [ನಾ] ಕಲಿಕೆ, ವಿದ್ಯೆ (ಇಱಿಯದ ಬೀರಂ ಇಲ್ಲದ ಕುಲಂ ತಮಗಲ್ಲದ ಚಾಗಂ ಓದದ ಓದು ಅಱಿಯದ ವಿದ್ದೆ ಸಲ್ಲದ ಚದುರ್ ನೆಱಿ ಕಲ್ಲದ ಕಲ್ಪಿ: **ಪಂಪಭಾ,** ೪. ೯೫)

ಕಲ್ಪಿಸು – [ಕ್ರಿ] ಕಲಿಸು, ತಿದ್ದು (ಅಱಿಯದೆ ಏನಾನುಂ ಎಂದಾಗಳುಂ ಮೆಲ್ಲಗೆ ನೀಂ ಕಲ್ಪಿಪ್ಪುದೆಮ್ಮಂ ನೆನೆದೆರ್ದೆಗಿಡದಂತಾಗೆ ಪಾಲಿಪ್ಪುದು: **ಆದಿಪು,** ೪. ೫೫)

ಕಲ್ಪೇಶ್ವರ – [ನಾ] ಸ್ವರ್ಗಲೋಕವನ್ನಾಳುವ ಇಂದ್ರ (ಕಲ್ಪೇಶ್ವರನನುರಾಗದಿನೊಡನೊಡನೆ ಸುರಿಯೆ ಪಾಲ್ಗಡಲೊಂದುಂಟಾಗದೆ ಮೇರುವ ತುದಿಯೊಳಂ; **ಆದಿಪು.** ೭. ೮೭)

ಕಲ್ಯಾಣಕ – [ಗು] ಹಿತಕರವಾದ (ಕೆಲಕೆಲ್ಲಂ ಭರತೇಶನಾರೋಗಿಸಿದಂ ಕಲ್ಯಾಣಕ ಆಹಾರಮಂ: **ಆದಿಪು,** ೧೧. ೨೭)

ಕಲ್ಯಾಣದ್ವಯ – [ನಾ] ಗರ್ಭಾವತರಣ ಮತ್ತು ಜನನಕಲ್ಯಾಣಗಳು (ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೀನದೀಕ್ಷೆಗೆ ಪೂಣ್ದು: **ಆದಿಪು,** ೩. ೮೦)

ಕಲ್ಯಾಣಪರಿಮಿತ – [ನಾ] ಮದುವೆಯ ನಿರ್ಬಂಧ (ಮುಕ್ತಿಸಾಮ್ರಾಜ್ಯದೊಳ್ ಅತಿಪ್ರಾಜ್ಯ ಸಂಜನಿತನಿಸ್ಪೃಹನಂ ಅನವರತ ಕಲ್ಯಾಣಪರಿಮಿತದೊಳ್ .. .. ನಿಱಿಸುವುದುಂ: **ಆದಿಪು,** ೮. ೮ ವ)

ಕಲ್ಲದ – [ಗು] ಕಲಿಯದ (ಇಱಿಯದ ಬೀರಂ ಇಲ್ಲದ ಕುಲಂ ತಮಗಲ್ಲದ ಚಾಗಂ ಓದದ ಓದು ಅಱಿಯದ ವಿದ್ದೆ ಸಲ್ಲದ ಚದುರ್ ನೆಱಿ ಕಲ್ಲದ ಕಲ್ಪಿ: **ಪಂಪಭಾ,** ೪. ೯೫)

ಕಲ್ಲಿಂ – [ಕ್ರಿ] ಕಲಿಯಿರಿ (ಮೆಯ್ಯೊಳ್ ಅತ್ತಂ ಇತ್ತಂ ತೆಱಿದಿರ್ದ ಪುಣ್ಗಳ್ ಎಸೆವ ಅಕ್ಕರದಂತಿರೆ ನೋಡಿ ಕಲ್ಲಿಂ ಎಂಬಂತೆವೊಲಿರ್ದಂ: **ಪಂಪಭಾ,** ೧೧. ೪೬)

ಕಲ್ಲುರಿಗ – [ನಾ] ಇಟ್ಟಿಗೆ ಸುಡುವವನು (ಸುಪ್ರತಿಷ್ಠಪುರದೊಳ್ ಅಪ್ರತ್ಯಾಖ್ಯಾನಲೋಭಾಭಿಭೂತಂ ದ್ರವ್ಯಲೋಲುಪನೆಂಬೊಂ ಕಲ್ಲುರಿಗನಾಗಿ: **ಆದಿಪು,** ೫. ೧೮ ವ)

ಕಲ್ಲೆ – [ನಾ] ಬೇಲಿ, ಎಲ್ಲೆ (ಆಕಾಶದ ಕವಿಯುಂ ನೆಲದ ಕಲ್ಲೆಯುಂ ಮುನ್ನಮೆ ಮೇರೆದಪ್ಪುವುದುಮಂ ತನ್ನೊಳ್ ಅಳವಡಿಸಿಕೊಂಡು ತಾಗಿದಾಗಳ್: **ಪಂಪಭಾ,** ೧೨. ೧೯ ವ)

ಕಲ್ಲೋಲ – [ನಾ] ಅಲೆ (ಅನವರತ ನಿಹತ ನರ ಕರಿ ತುರಗ ನಿಕುರುಂಬ ಕೀಲಾಲ ಕಲ್ಲೋಲ ಪ್ರವರ್ತನ ಅನೇಕ ನದ ನದೀ ಪ್ರವಾಹಬಾಹುಳ್ಯದುಸ್ತರಾವತರಣ ಮಾರ್ಗಮುಂ: **ಪಂಪಭಾ,** ೧೩. ೫೧ ವ)

ಕಲ್ಲೋಲನಾದ – [ನಾ] ಅಲೆಗಳ ದನಿ (ವಿಲಸತ್ ಕಲ್ಲೋಲನಾದಂ ನೆಗಟ್ದಿರೆ ನಿಜಕೂಟಾಗ್ರದೊಳ್ ಪಾಯ್ವ ಗಂಗಾಜಲದಿಂ ಮೂರ್ಧಾಭಿಷೇಕೋನ್ನತಿ ನಿಲೆ: **ಪಂಪಭಾ,** ೪. ೧೪)

ಕಲ್ಲೋಳ – [ನಾ] ಅಲೆ, ತೆರೆ (ಸ್ತ್ರೀಕುಚಕುಂಭ ಕುಂಕುಮರಜಃಕಲ್ಲೋಳದಿಂ ಬಣ್ಣವಣ್ಣದ ಚೆಲ್ವಂ ಗೆಡೆಗೊಂಡು: **ಆದಿಪು,** ೧೧. ೧೫೪)

ಕಲ್ವಟೆ – [ನಾ] [ಕಲ್+ಬಟೆ] ಕಲ್ಲುಗಳಿರುವ ದಾರಿ, ಕಲ್ಲಿನ ಪ್ರದೇಶ (ನೆತ್ತರ ತೆರೆಗಳ್ ಸುಟಿಸುಟಿದು ಒಡವರಿದುವು ಕಲ್ವಟೆಯೊಳ್ ಭೋರ್ಗರೆದು ಪರಿವ ತೊಱೆಗಳ ತೆಱದಿಂ: **ಪಂಪಭಾ,** ೧೧. ೩೬)

ಕಲ್ಹಾರ – [ನಾ] ಒಂದು ಹೂವಿನ ಹೆಸರು (ಕಲ್ಹಾರಸಾರಾಮೃತ ಶಶಿ ವಿಶದಾತ್ಮೀಯವಂಶಕ್ಕೆ ಚೂಡಾಮಣಿಯಂ: **ಪಂಪಭಾ,** ೭. ೯೫)

ಕವಚಹರ – [ನಾ] ಕೌಮಾರ್ಯವನ್ನು ಕಳೆದವನು, ಪ್ರಾಪ್ತವಯಸ್ಕ (ನಿಜಾಪ್ತವರ್ಗಮುಮಂ ಸಾಮಂತವರ್ಗಮುಮಂ ಬರಿಸಿ ಕವಚಹರನಾದ ನಿಜಸುತನತಿಬಳಕುಮಾರನಂ ರಾಜ್ಯಭಾರದೊಳ್ ನಿಱಿಸಿ: **ಆದಿಪು,** ೨. ೪೯ ವ)

ಕವರ್ – [ನಾ] ಸೂರೆ ಮಾಡು (ಇಳೆಯಂ ಘಾತಿಸಿ ತಕ್ಕರಂ ಕವರ್ದುಕೊಂಡು ಆದ ಅರ್ಥಮಂ ಪೂಟ್ದು: **ಆದಿಪು,** ೨. ೧೫); [ನಾ] ರಥದ ಒಂದು ಭಾಗ, ಕವಲು ಪಟ್ಟಿ (ಉಡಿದ ನೊಗಂ ಧ್ವಜಂ ಪಲಗೆ ಕೀಲ್ ಕವರ್ ಅಚ್ಚು ತುರಂಗಮಂ ರಥಂ ಕಿಡೆ ಕವರಿಂದಗುರ್ವಂ ಒಳಗೊಂಡಿರೆ ತಳ್ತಿಱಿದರ್ ಮಹಾರಥರ್: **ಪಂಪಭಾ,** ೧೧. ೩೮)

ಕವರ್ತೆ – [ನಾ] ಬಲಾತ್ಕಾರದಿಂದ ಕಿತ್ತುಕೊಳ್ಳುವುದು, ಲೂಟಿ (ಮನಮೆಲ್ಲಮಂ ಕವರ್ದಪಂ ತನುವಂ ಬಡಮಾಡಿ ಕಡಿ ದಂಡಿಸಿದಪಂ ಅಂಗಜನ್ಮನ ಕವರ್ತೆಯ ದಂಡದ ಪಾಂಗು ಇದೆಂತುಟೋ: **ಪಂಪಭಾ,** ೫. ೧೩)

ಕವರ್ತೆವೋಗು – [ಕ್ರಿ] ಕವರ್ತೆಪಡು, ಸುಲಿಗೆಗೆ ಒಳಗಾಗು (ಅರಸರ ದೆಸೆಯಿಂ ಮನೆಯುಂ ಕವರ್ತೆವೋಪುದುಂ: **ಆದಿಪು,** ೩. ೩೪ ವ)

ಕವರ್ದುಕೊಳ್ – [ಕ್ರಿ] ಬಲವಂತದಿಂದ ವಶಪಡಿಸಿಕೊ (ನಕುಳನುಂ ತೆಂಕಣ ದೆಸೆಯ ಮಲೆಪರಂ ಮಂಡಳಿಕರುಮಂ ಅಸಿಯರಾಗೆ ಕವರ್ದುಕೊಂಡು ಲಂಕೆಯ ಮೇಗೆ ನಡೆದು: **ಪಂಪಭಾ,** ೬. ೩೨ ವ)

ಕವಲ್ – [ಕ್ರಿ] ಬೇರ್ಪಡು (ಅದುವೆ ಸಮ್ಯಗ್ಜ್ಞಾನಕ್ಕವಕಾಶಮಕ್ಕುಂ ಅಂತದು ಕವಲ್ತು ಸಮ್ಯಕ್ಚರಿತ್ರಮಂ ಪ್ರಕಟಿಸುಗುಂ: **ಆದಿಪು,** ೫. ೫೯); [ಕ್ರಿ] ಕೊಂಬೆ ಒಡೆ (ತೊಟ್ಟನೆ ಬೇರೂಱಿದುವೋ ಕವಲ್ತುವೊ ಚಳದ್ವಿದ್ಯುಲ್ಲತಾದೀಪ್ತಿಯೆಂಬಿನಂ: **ಆದಿಪು,** ೭. ೨೪); [ನಾ] ಟಿಸಿಲು (ಆತ್ಮವಿಟತತ್ತ್ವಮಂ ಉಂಟೊಡೆತಾಗಿ ಮಾಡಿ ಬಾಂದೊಱಿಯನೆ ಪೊತ್ತು ಗೌರಿಗೆ ಕವಲ್ದೊಱಿಗೆಯ್ದಿದಂ ಈ ಪ್ರದೇಶದೊಳ್: **ಪಂಪಭಾ,** ೭. ೭೫)

ಕವಲಂಬು – [ನಾ] ಕವಲಾದ ಬಾಣ (ಪೆಱಿಯಮುಱಿಗಂ ಕಣಕೆನೆ ವೋಪಂಬು ಕವಲಂಬುವೆಂಬಂಕಂಬೆತ್ತಲುಂ: **ಪಂಪಭಾ,** ೧೩. ೩೯)

ಕವಲ್ದೊಱಿ – [ನಾ] [ಕವಲ್+ತೊಱಿ] ಕವಲಾದ ನದಿ (ಕಱಿಗೊರಲಾತಂ ಆತ್ಮವಿಟತತ್ತ್ವಮಂ ಉಂಟೊಡೆತಾಗಿ ಮಾಡಿ ಬಾಂದೊಱಿಯನೆ ಪೊತ್ತು ಗೌರಿಗೆ

ಕವಲ್ದೊಡಱಿಗೆಯ್ದಿದನೀ ಪ್ರದೇಶದೊಳ್: **ಪಂಪಭಾ,** ೭. ೭೫)

ಕವಾಟಕ್ರಿಯೆ – [ಜೈನ] ಕೇವಲಿಯ ಆತ್ಮವು ಮೂಲಶರೀರದಿಂದ ಮೂರರಷ್ಟು ದಪ್ಪವೂ ಏಳು ರಜ್ಜು ಅಗಲವಾಗಿಯೂ ವ್ಯಾಪಿಸುವುದು, ಇದೊಂದು ಸಮುದ್ಘಾತಕ್ರಿಯೆ (ದಂಡಕ್ರಿಯಾನಂತರಸಮಯದೊಳ್ ಪೂರ್ವೋಕ್ತ ಬಾಹುಲ್ಯದಿಂ ಲೋಕಾಕಾಶವ್ಯಾಪಕ ಕವಾಟಕ್ರಿಯೆಯಂ ನೆಱಪಿ: **ಆದಿಪು,** ೧೬. ೪೯ ವ)

ಕವಾಟಪುಟ – [ನಾ] ಬಾಗಿಲ ರೆಕ್ಕೆ, ಕದ (ಜತುಗೃಹ ಕವಾಟಪುಟಸಂಧಿಗಳೊಳ್ ಸುರಂಗಮಂ ಗಂಗೆಯೊಳ್ ಮೂಡುವಂತಾಗೆ ಸಮೆದು: **ಪಂಪಭಾ,** ೩. ೪ ವ)

ಕವಾಟಪುಟವಿಘಟನ – [ನಾ] ಬಾಗಿಲ ಕದವನ್ನು ಒಡೆಯುವಂಥದು (ಇದಱ ಪೆಸರ್ ದೇವದತ್ತಮೆಂಬುದು ನಿನಗೆ ಅಭ್ಯುದಯಕರಂ ಶಂಖಂ ರಿಪುಹೃದಯ ಕವಾಟಪುಟವಿಘಟನಂ ನೋಡರಿಗಾ: **ಪಂಪಭಾ,** ೬. ೪)

ಕವಿ – [ನಾ] ಕಬ್ಬಿಗ (ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗಟ್ದ ಸಬ್ಬವದವರೊಡನೆ ಅಂತು ಒಸೆದ ಅನ್ನವಾಸದೊಳ್ ಇರ್ದನಾಗಳ್ ಹರಿಗಂ: **ಪಂಪಭಾ,** ೩. ೮೦); **[ಕ್ರಿ]** ತುಂಬು, ದಟ್ಟವಾಗು (ಕವಿದ ಪುರ್ವುಂ ತೋರಮಾಗಿ ನಿರ್ಮಾಂಸಮಪ್ಪ ಕಾಲ್ಗಳುಂ: **ಪಂಪಭಾ,** ೫. ೪೬ ವ); **[ಕ್ರಿ]** ಧರಿಸು (ತನ್ನ ರತ್ನವಿಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿನಾಮಮಂ ಸರಸದಿಂ ಆಗಳುಚ್ಚರಿಸಿ ಸಾಹಸಮಂ ಪೊಗಟ್ದಂ ಸುರಾಧಿಪಂ: **ಪಂಪಭಾ,** ೫. ೧೦೩); **[ನಾ]** ಮುಚ್ಚಳ (ಆಕಾಶದ ಕವಿಯುಂ ನೆಲದ ಕಲ್ಲೆಯುಂ ಮುನ್ನಮೆ ಮೇರೆದಪ್ಪುವುದುಮಂ ತನ್ನೊಳ್ ಅಳವಡಿಸಿಕೊಂಡು ತಾಗಿದಾಗಳ್: **ಪಂಪಭಾ,** ೧೨. ೧೯ ವ)

ಕವಿತಾಗುಣಾರ್ಣವ – **[ನಾ]** ಕಾವ್ಯದ ಗುಣಗಳ ಸಮುದ್ರ, ಪಂಪ ತನ್ನನ್ನು ವರ್ಣಿಸಿಕೊಳ್ಳುವ ರೀತಿ (ಪರಮಜಿನೇಂದ್ರ ಮುಖಚಂದ್ರ ವಾಕ್ಚಂದ್ರಿಕಪ್ರಸಾದೋದೀರ್ಣ ಸೂಕ್ತಿಕಲ್ಲೋಲ ಮಾಲಾಕೀರ್ಣ ಕವಿತಾಗುಣಾರ್ಣವ ಪ್ರಣೀತಮಪ್ಪ: **ಆದಿಪು,** ೧೬ ಆಶ್ವಾಸಾಂತ್ಯ ಗದ್ಯ)

ಕವಿದುಪಡು – **[ಕ್ರಿ]** ದೊಪ್ಪನೆ ಬೀಳು (ಧರ್ಮಪುತ್ರಂ ನಿಜಾನುಜಸಹಿತಂ ಬಂದು ಬಲಗೊಂಡು ಕಾಲ ಮೇಲೆ ಕವಿದುಪಟ್ಟು: **ಪಂಪಭಾ,** ೧೧. ೪೭ ವ)

ಕವಿಲ್ – **[ನಾ]** [ಕಪಿಲ] ಮಾಸಲು ಕೆಂಪು (ಕವಿದ ಮದಾಳಿಯಿಂ ಮಸುಳನಾಗಿ ಪಯೋಜರಜಂಗಳೊಳ್ ಕವಿಲ್ಗವಿಲನುಮಾಗಿ ಬಂದ ಮಲಯಾನಿಲಂ: **ಪಂಪಭಾ,** ೨. ೧೪); **[ಕ್ರಿ]** ಮಾಸಲು ಕೆಂಪು ಬಣ್ಣವಾಗು (ಭೂತಾಂಗನಾನಿಕರಂ ಶೋಣಿತವಾರಿಯಂ ಕುಡಿದು ಅಗುರ್ವಪ್ಪನ್ನೆಗಂ ಸೂಸೆ ನೋಡ ಕವಿಲ್ತಿರ್ದುದು ಕೂಡೆ ಸಂಜೆಗವಿದಂತಾ ದ್ರೋಣನಿಂ ಕೊಳ್ಗುಳಂ: **ಪಂಪಭಾ,** ೧೨. ೨೫)

ಕವಿಲಾಗು – **[ಕ್ರಿ]** ಮಾಸಲು ಕೆಂಪು ಬಣ್ಣಕ್ಕೆ ತಿರುಗು (ಸುರಿವಜರಪ್ರಸೂನ ರಜದಿಂ ಕವಿಲಾದ ಶಿರೋರುಹಂ ರಜಂಬೊರೆದಳಿಮಾಲೆ: **ಪಂಪಭಾ,** ೧೨. ೨೨೧)

ಕವ್ವರೆಗೊಳ್ – [ಕ್ರಿ] ಸಡಗರಗೊಳ್ಳು (ಜನಂ ಕೂಡೆ ಕವ್ವರೆಗೊಂಡೆಯ್ತರೆ ನೋಡಲೆಂದು ಪರಿದಳ್ ಚಕ್ರೇಶಸೌಂದರ್ಯಮಂ: **ಆದಿಪು,** ೧೧. ೨೨)

ಕಷಣ – [ನಾ] ಉಜ್ಜುವಿಕೆ (ಮಾದ್ಯತ್ ಗಜಗಂಡಕಷಣ ಪ್ರೋದ್ಭೇದದಿಂ ಸಾರ್ದು ಬಂದು ಇದಿರೊಳ್ ಕೂಡುವುದಿಲ್ಲಿ ಚಂದನರಸಂ ಕೆಂಬೊನ್ನ ಟಂಕಂಗಳೊಳ್: **ಪಂಪಭಾ,** ೪. ೨೨)

ಕಷಾಯ – **[ನಾ]** [ಜೈನ] ಸುಖದುಃಖವನ್ನುಂಟು ಮಾಡುವ ಎಂಟು ದೋಷಗಳು: ಪ್ರತ್ಯಾಖ್ಯಾನಪೂರ್ವಕ ಮತ್ತು ಅಪ್ರತ್ಯಾಖ್ಯಾನಪೂರ್ವಕವಾದ ಕ್ರೋಧ ಮಾನ ಮಾಯಾ ಲೋಭ ಎಂಬಿವು (ಮತ್ತಮಂತರ್ಮುಹೂರ್ತದಿಂ ವಿಶುದ್ಧ ಪರಿಣಾಮಾತಿಶಯಪರವಶಂ ಅಪ್ರತ್ಯಾಖ್ಯಾನ ಕ್ರೋಧಮಾನ ಮಾಯಾ ಲೋಭಂಗಳೆಂಬ ಎಂಟು ಕಷಾಯಂಗಳಂ ಕಿಡಿಸಿ: **ಆದಿಪು,** ೧೦. ೧೪ ವ); **[ನಾ]** ಮಕರಂದ (ಕಮಳೋದ್ದಾಮ ಕಷಾಯಸೌರಭಮಿಳನ್ಮತ್ತಾಳಿನೀಗೀತ ಪಂಚಮಹಾಶಬ್ದ ವಿಜೃಂಭಿತಧ್ವನಿ ಲಸದ್ಗಾಂಧಾರನಾದಂ: **ಆದಿಪು,** ೧೨. ೪೮)

ಕಷಾಯಿತ – **[ಗು]** ಒಗರಾದ, ಕಹಿಯಾದ (ಅಂತು ಪುರೋಡಾಶಪವಿತ್ರೋದರನುಂ ಸೋಮಪಾನ ಕಷಾಯಿತ ಉದರನುಂ ಆಗಿ ಮೂವತ್ತೆರಡು ದಿವಸದೊಳ್ ಕ್ರತುವಂ ನಿರ್ವರ್ತಿಸಿ ಮಹಾದಾನಂಗೆಯ್ದು ದಕ್ಷಿಣಾಕಾಲದೊಳ್: **ಪಂಪಭಾ,** ೬. ೩೮ ವ)

ಕಸವರ – **[ನಾ]** [ಕಾರ್ತಸ್ವರ] ಚಿನ್ನ, ಸಂಪತ್ತು (ಕಸವರಮೆಲ್ಲಮಂ ಇಂದ್ರಪ್ರಸ್ಥಕ್ಕೆ ಕಟಿಪಿ ಕಾಶ್ಮೀರ ಹಿಮವಂತ ಹೇಮಕೂಟ ಕೈಳಾಸ ಪಾರಿಯಾತ್ರ ಶ್ವೇತಶೃಂಗ ಗಂಧಮಾದನಗಿರಿ ನಿಕಟವರ್ತಿಗಳಪ್ಪ: **ಪಂಪಭಾ,** ೬. ೩೦ ವ)

ಕಸವರಗಲಿತನ – **[ನಾ]** [ಕಸವರ+ಕಲಿತನ] ದಾನಶೂರತೆ (ಕಲಿತನದ ನೆಗಟ್ದ ಕಸವರಗಲಿತನದ ಪೊದಳ್ದ ಪರಮಕೋಟಿಗೆ ಪೆಱರಾರ್ ಸಲೆ ಕರ್ಣನಲ್ಲದೆ ಎನಿಸುವ ಕಲಿತನಮಂ ಹರಿಗೆ ಕವಚಮಿತ್ತುದೆ ಪೇಟ್ಗುಂ: **ಪಂಪಭಾ,** ೧೨. ೯೧)

ಕಸವಿನ ಲೆಕ್ಕ – **[ನಾ]** ಕಸವೆಂಬ ಭಾವನೆ (ವಿಸಸನದೊಳ್ ವಿರೋಧಿನೃಪರಂ ತಱಿದೊಟ್ಟಲುಂ ಅರ್ಥಿಗರ್ಥಮಂ ಕಸವಿನ ಲೆಕ್ಕಮೆಂದು ಕುಡಲುಂ: **ಪಂಪಭಾ,** ೧. ೧೧೭)

ಕಸವು – [ನಾ] ಕಸ (ವಿಸಸನದೊಳ್ ವಿರೋಧಿನೃಪರಂ ತಱಿದೊಟ್ಟಲುಂ ಅರ್ಥಿಗೆ ಅರ್ಥಮಂ ಕಸವಿನ ಲೆಕ್ಕಮೆಂದು ಕುಡಲುಂ: **ಪಂಪಭಾ,** ೧. ೧೧೭)

ಕಸೆ – [ನಾ] ಚಾವಟಿ (ಕಸೆಯಂ ಇನಿಸಱಿಪಿ ಕುಡೆ ಲಂಘಿಸಿದುದು ಪನ್ನೆರಡು ಯೋಜನಂಬರಂ: **ಆದಿಪು,** ೧೩. ೩೯)

ಕಸ್ತೂರಿಕಾಂಡಕ – **[ನಾ]** ಕಸ್ತೂರಿಮೃಗದ ಬೀಜಕೋಶ (ಕಸ್ತೂರಿಕಾಂಡಕಂ ವನಹಸ್ತಿರದಂ ಹಸ್ತಿಮಸ್ತಕೋದ್ಭವ ಮುಕ್ತಾವಿಸ್ತಾರಂ ಎಂದು: **ಆದಿಪು,** ೧೨. ೬೭)

ಕಹಕಹಧ್ವನಿ – [ನಾ] ಗೊರಗೊರಿಕೆಯ ಧ್ವನಿ (ನೀಳ್ದ ತಾಟ್ಕೃರದವೊಲಪ್ಪ ಒಡಲ್ ಕಹಕಹಧ್ವನಿ ಕೌಳಿಕನಾದಂ ಆದುದು ಆಸುರತರಮಾಗೆ ಬಂದು ಕವಿದತ್ತು ಘಟೋತ್ಕಚ ರೌದ್ರಸಾಧನಂ: **ಪಂಪಭಾ,** ೧೨. ೭)

ಕಳ್ – [ನಾ] ಮದ್ಯ, ಕಳ್ಳು (ಮಧು ಸೀಧು ಕಟು ಸೀಧು ಪೋ ಪುಳಿತ ಕಳ್ಗಳುತ್ತಂ ಕರಂ ಕಯ್ತು ಬರ್ಪುದು: **ಪಂಪಭಾ,** ೪. ೮೮) ['**ಮಧು ಸೀಧು**' ಡಿಎಲ್ಎನ್ ಒಪ್ಪಿದ ಪಾಠ]

ಕಳ – [ನಾ] ಯುದ್ಧರಂಗ (ಗುಣಾರ್ಣವನಂ ಸೆಜ್ಜೆಗೆ ಬಿಜಯಂಗೆಯ್ಯಿಂ ಎನೆ ಕಾಮಂ ಕಳನೇಱುವಂತೆ ಸೆಜ್ಜೆಯನೇಱಿ ಸೆಡೆದಿರ್ದ ನಲ್ಲಳಂ ನೋಡಿ: **ಪಂಪಭಾ,** ೩. ೮೧ ವ)

ಕಳಂಕಪಂಕ – [ನಾ] ಪಾಪವೆಂಬ ಕೆಸರು (ಮುನ್ನಿನ ಗೆಯ್ದ ದೋಷಮಿನ್ನಱಿದು ಜಿನೇಂದ್ರಧರ್ಮಜಳದಿಂ ಕಳೆ ಕರ್ಚಿ ಕಳಂಕಪಂಕಮಂ: **ಆದಿಪು,** ೩. ೪೦); [ನಾ] ಕರೆ ಎಂಬ ಕೆಸರು (ಆವುತಿಯ ಕಳಂಕಪಂಕದೊಳೆ ಪೆರ್ಚಿದ ಕಟ್ಟಲೆ ತೀವ್ರಶಸ್ತ್ರಸಂಹತಿಗಳ ದೀಪ್ತಿಯಿಂ ಬಿಸುಗೆಯಾಗೆ: **ಪಂಪಭಾ,** ೧೦. ೫೦)

ಕಳಂಚು – [ನಾ] ಮೋಸ (ಇಂಚೆಯ ಪಸವಿನ ಬಱಿದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡ ಊರ್ಗಳ್: **ಪಂಪಭಾ,** ೮. ೫೧)

ಕಳಂಬೇಟಿಸ್ – [ಕ್ರಿ] ಕಳವೇಟಿಸ್, ರಣರಂಗವನ್ನು ಗೊತ್ತುಪಡಿಸು (ಒರ್ವ ಗಂಧರ್ವನೊಳೆ ಚಿತ್ರಾಂಗದಂ ದ್ವಂದ್ವಯುದ್ಧಮಂ ಪೊಣರ್ಚಿ ಕುರುಕ್ಷೇತ್ರಮಂ ಕಳಂಬೇಟ್ಟು: **ಪಂಪಭಾ,** ೧. ೭೩ ವ)

ಕಳಕಂಠಗೀತಂ – [ನಾ] ನುಣ್ಗೊರಲ ಹಾಡು (ಕಳಕಂಠಗೀತಂ ಬಗೆಗೊಳೆಯುಂ ವೀಣಾಕ್ವಣಂ ಮನಂಗೊಳೆಯುಂ: **ಆದಿಪು,** ೧೧. ೨೮)

ಕಳಕಳ – [ನಾ] ಗದ್ದಲ (ಆಗಳಾ ಕಳಕಳಕ್ಕೆ ಮಱಲುಂದಿದರಯ್ವರುಂ ಎಟ್ಟಿತ್ತು ಇದೇನೆಂದು ಬೆಸಗೊಳೆ: **ಪಂಪಭಾ,** ೩. ೧೮ ವ); ಸದ್ದು (ಮಂಗಳಪಟಹಂಗಳುಂ ಮಂಗಳಗೀತಿಗಳುಂ ಎಸೆಯೆ ಕಳಕಳಾವರ್ತಮಾಗೆ ಜಾಗರಮಿರ್ದು: **ಪಂಪಭಾ,** ೧೪. ೧೭ ವ)

ಕಳಕಳಿಸು – [ನಾ] ಗದ್ದಲಮಾಡು (ಕಳಕಳಿಪಮರಿಯರಂ ಕಣ್ಣೊಳೆ ಬಗ್ಗಿಸುವಲ್ಲಿ ಕಾಮಕಾರ್ಮುಕಕರಸಂಚಳನಮನೆ ಪೋಲ್ತು ಕರಮೆರ್ದೆಗೊಳಿಸಿದುದಾಕೆಗಳ ವಿಭ್ರಮಭ್ರೂಭಂಗಂ: **ಆದಿಪು,** ೭. ೧೫)

ಕಳಕುಳಮಾಗು – [ನಾ] ಅಸ್ತವ್ಯಸ್ತವಾಗು (ತಳದಳಿಪ ಮುಗಿಲ್ಗಳ್ ಕಳಕುಳಮಪ್ಪಿನಂ ಅಳುರ್ದು ಜಯನ ಶರತತಿ ಕೊಳೆ: **ಆದಿಪು,** ೧೩. ೬೫)

ಕಳಕ್ವಣಿತ – [ನಾ] ಇಂಪಾದ ಧ್ವನಿ (ಮದನಡಿಂಡಿಮ ರವಾಡಂಬರಂ ಆಳೋಳತುಳಾಕೋಟಿಕಳಕ್ವಣಿತಮೆ ನಿಗಳಾಂದುಕಾರಮಾಗೆ: **ಆದಿಪು,** ೧೧. ೨೦ ವ)

ಕಳಗೀತ – [ನಾ] ಮಧುರಗೀತೆ (ಕಳಗೀತಂ ವಾದ್ಯಂ ನೃತ್ಯಲೀಳೆ ಪೆಱರ್ಗೊಪ್ಪದು ಈಕೆಗಲ್ಲದೆ: **ಆದಿಪು,** ೯. ೧೮)

ಕಳತ್ರ – [ನಾ] ಹೆಂಡತಿ (ಪೋಗು ಕೆಟ್ಟಪುದು ಮೋಹಮಯ ನಿಗಳಂ ಕಳತ್ರಮೆಂದಱಿಪದೆ ನಟ್ಟಿರುಳ್ ಮಱೆದು ಸಾರ್ಚಿದ ನಲ್ಲಳ ತಳ್ತ ತೋಳ್ಗಳಂ: **ಪಂಪಭಾ,** ೪. ೧೨)

ಕಳಧೌತ – [ನಾ] ಚಿನ್ನ (ಚತುರ್ದಶ ಮಹಾನದಿಗಳ ನೀರುಮಂ ತಟತಟ ತೊಳಗುವ ಕಳಧೌತಕಳಶಂಗಳೊಳ್ ತೆಕ್ಕನೆ ತೀವಿ ತಂದ ವಾರವನಿತಾ ಜನಕ್ಕಂ: **ಪಂಪಭಾ,** ೧೪. ೧೭ ವ)

ಕಳಧೌತಘಟ – [ನಾ] ಚಿನ್ನದ ಬಿಂದಿಗೆ (ಕಳಧೌತಘಟಂ ಮುಕ್ತಾಫಳಾಂಚಿತಗ್ರೀವಂ ಎಟಿಗೆದುಕೊಂಡುದು .. .. ನವಸಂಧ್ಯಾಜಳದದ ಗಾಡಿಯಂ: **ಆದಿಪು,** ೭. ೮೪)

ಕಳನೇಱು – [ಕ್ರಿ] ಯುದ್ಧಕ್ಕೆ ತೊಡಗು (ಗುಣಾರ್ಣವನಂ ಸೆಜ್ಜೆಗೆ ಬಿಜಯಂಗೆಯ್ಯಿಮೆನೆ ಕಾಮಂ ಕಳನೇಱುವಂತೆ ಸೆಜ್ಜೆಯನೇಱಿ ಸೆಡೆದಿರ್ದ ನಲ್ಲಳಂ ನೋಡಿ: **ಪಂಪಭಾ,** ೩. ೮೧ ವ)

ಕಳಭ – [ನಾ] ಆನೆಯ ಮರಿ (ಕಳಭಂ ವನಪಥಮಂ ಯೂಥಪತಿಗೆ ತೋರ್ಪಂತಕ್ಕುಂ: **ಆದಿಪು,** ೮. ೧೨)

ಕಳಭಾಷಿಣಿ – [ನಾ] ಇನಿದನಿಯವಳು (ಭೀಷಣರಮಣೀಯತೆ ಸುರಯೋಷಿನ್ನಿಕರಕ್ಕೆ ಕಿಟ್ಟಿ ಬಾಳಿಂ ಭೂಷಾವೇಷದಿನಮರ್ದತ್ತೆನೆ ಕಳಭಾಷಿಣಿಗಮರಿಯರೆ ಬಳಸಿ ಮೆಯ್ಗಾಪಾದರ್: **ಆದಿಪು,** ೭. ೧೩)

ಕಳಮ – [ನಾ] ಬತ್ತದ ಪೈರು (ಪೂರ್ಣಕಳಶ ಕಳಮಾವೃತಕರ ಪಲ್ಲವೆಯರಪ್ಪ ಪುರಂಧ್ರಿಯರಂ: **ಪಂಪಭಾ,** ೩. ೨ ವ)

ಕಳಮ ಧವಳಾಕ್ಷತ – [ನಾ] ಅಕ್ಕಿಯ ಬಿಳಿಯ ಅಕ್ಷತೆ (ಕಳಮಧವಳಾಕ್ಷತಂಗಳ ಪೊಳೆವಲರ್ಗಳ ಚಂದನ ದ್ರವೋನ್ಮಿಶ್ರಜಲಂಗಳ: **ಆದಿಪು,** ೭. ೮೦ ವ)

ಕಳವೇಟಿಸ್ – [ಕ್ರಿ] [ಕಳ+ಪೇಟಿಸ್>ಕಳನಂ ಪೇಟಿಸ್] ಯುದ್ಧರಂಗವನ್ನಾಗಿ ಮಾಡಿಕೊ (ಕೆಳರ್ದು ಅಂದುಗ್ರರಣಾಗ್ರಹಪ್ರಣಯದಿಂದಾಗಳ್ ಕುರುಕ್ಷೇತ್ರಮಂ ಕಳವೇಟ್ಟು ಇರ್ವರುಂ ಐಂದ್ರವಾರುಣದೆ ವಾಯವ್ಯಾದಿ ದಿವ್ಯಾಸ್ತ್ರಸಂಕುಳದಿಂದ ಒರ್ವರಂ ಒರ್ವರ್ ಎಚ್ಚು: **ಪಂಪಭಾ,** ೧. ೭೯)

ಕಳಶ – [ನಾ] ಕೊಡ (ಸ್ನಾನಾರ್ಥಂ ಒಂದು ಕಳಶಮಂ ನಿಯಮನಿಧಾನಂ ಎಟಲೆ ಪಿಡಿದು ಅಮಳಿನ ಗಂಗಾನದಿಗೆ ವಂದು ಸುರತನಿಧಾನಿ ಅಮರೇಂದ್ರಗಣಿಕೆಯಂ ಮುನಿ ಕಂಡಂ: **ಪಂಪಭಾ,** ೨. ೪೧)

ಕಳಶಕೇತನ – [ನಾ] ದ್ರೋಣ (ಆಸ್ಫೋಟಿಸಿ ನಿಶಿತಶರಕೋಟಿಯೊಳ್ ತಟಿಗೋಂಟೆಯನಿಕ್ಕಿ ವೀರರಸ ನಿಕೇತನನಾಗಿರ್ದ ಕಳಶಕೇತನನಂ ನೋಡಿ ದ್ರುಪದಂ ಸ್ಮೆರಿಸದೆ: **ಪಂಪಭಾ,** ೧೨. ೧೮ ವ)

ಕಳಶಜ – [ನಾ] ದ್ರೋಣ (ಸುರಸಿಂಧೂದ್ಭವನಿಂ ಬಟಿಕ್ಕೆ ಪೆಱರಾರ್ ಸೇನಾಧಿಪತ್ಯಕ್ಕೆ ತಕ್ಕರೆ ಲೋಕೈಕಧನುರ್ಧರಂ ಕಳಶಜಂ ತಕ್ಕಂ: **ಪಂಪಭಾ,** ೧೧. ೫೩)

ಕಳಶಭವ – [ನಾ] ದ್ರೋಣ (ನೆಗಟ್ದಿರೆ ಪುಣ್ಯಾಹಸ್ವರಂ ಒಗೆದಿರೆ ಪಟುಪಟಹಕಾಹಳರವವಾಗಳ್ ಪುಗವೇಟ್ದಂ ವಿವಿಧಾಸ್ತ್ರಪ್ರಗಲ್ಭರಂ ತನ್ನ ಚಟ್ಟರಂ ಕಳಶಭವಂ: **ಪಂಪಭಾ,** ೨. ೬೯)

ಕಳಶಯೋನಿ – [ನಾ] ದ್ರೋಣ (ಆತನ ಮೇಲೆ ಬಟ್ಟಿನಂಬಿನ ಬೆಳ್ಸರಿಯುಮಂ ಕೆಲ್ಲಂಬಿನ ತಂದಲುಮಂ ಪಾರೆಯಂಬಿನ ಸೋನೆಯುಮಂ ಸುರಿಯೆ ಕಳಶಯೋನಿ ಮುಳಿದು: **ಪಂಪಭಾ,** ೧೨. ೨೧ ವ)

ಕಳಾಂತರ – [ನಾ] [ಹದಿನಾರು] ಕಲೆಗಳು (ಸುರರ್ಗೆ ಅಮೃತಮಂ ಉಂತೆ ಕಳಾಂತರದಿಂದಿತ್ತು ಅಸಿಯನಾದ ಚಂದ್ರನವೋಲ್: **ಪಂಪಭಾ,** ೭. ೬೨)

ಕಳಾಕಳಿತ – [ಗು] ಕಲಾನ್ವಿತವಾದ (ಮೃದುಪಾದಮಾದ ವಾಕ್ತ್ರೀಸುಭಗಂ ಕಳಾಕಳಿತಮೆಂಬ ನೆಗೞ್ತೆಯನಾಳ್ದ ಕಬ್ಬಮಂ ಕೂಸುಮಂ ಈವುದು ಈವುದರಿಕೇಸರಿಗಲ್ಲದೆ ಅವಸ್ತುಗೀವುದೇ: **ಪಂಪಭಾ,** ೧. ೯)

ಕಳಾಪ – [ನಾ] ಸಮೂಹ (ಔರ್ವಜ್ವಳನ ಕಳಾಪೋದ್ಗಮಮಂ ಅನುಗುಣಂ ಮಾಡುತುಂ: **ಆದಿಪು,** ೧೧. ೨)

ಕಳಾಪ್ರವೀಣ – [ನಾ] ವಿದ್ಯೆಯಲ್ಲಿ ಪಾರಂಗತ (ಉಗ್ರವೈರಿ ಮದವನ್ಮಾತಂಗಕುಂಭ ಆರ್ದ್ರ ಮೌಕ್ತಿಕ ಲಗ್ನೋಜ್ಜ್ವಲಬಾಣನಂ ಪ್ರವಿಲಸತ್ ಗೀರ್ವಾಣ ದಾತವ್ಯ ಸಾಯಕ ಸಂಪೂರ್ಣಕಳಾಪ್ರವೀಣನಂ ಇಳಾಭಾರಕ್ಷಮ ಅಕ್ಷೂಣನಂ: **ಪಂಪಭಾ,** ೧. ೧೩೪)

ಕಳಿಂಚು – [ನಾ] ಮೋಸ, ವಂಚನೆ (ಇಂಚೆಯ ಪಸವಿನ ಬೞಿದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ವಿಡಿವೊಲಾದುವಾ ನಾಡ ಊರ್ಗಳ್: **ಪಂಪಭಾ,** ೮. ೫೧)

ಕಳಿಕಾ – [ನಾ] ಮೊಗ್ಗು, ಚಿಗುರು (ಸುತಮುಖನಿರೀಕ್ಷಣಸಮಯ ಸಮುಪಜನಿತ ಪುಳಕಕಳಿಕಾಕಳಿತ ಕಲ್ಪವೃಕ್ಷನಪ್ಪ ನಾಭಿರಾಮಹೀಜಂ: **ಆದಿಪು,** ೭. ೧೧೦ ವ)

ಕಳಿಕಾಂಕುರ – [ನಾ] [ಕಳಿಕಾ+ಅಂಕುರ] ಚಿಗುರು, ರೆಂಬೆಯ ಕುಡಿಗಳು (ಆತನ ಮೇಲ್ವಾಯೆ ರಾಗಿಸಿ ರೋಮಾಂಕುರಂ ಒಗೆದಂತೆ ಒಗೆದ ಕಳಿಕಾಂಕುರಂಗಳುಂ: **ಪಂಪಭಾ,** ೨. ೧೨ ವ)

ಕಳಿಕಾಕಳಿತ – ಮೊಗ್ಗು-ಹೂಗಳಿಂದ ಕೂಡಿದ (ಫಳಲಲಿತಂ ವಿನೂತಕಳಿಕಾಕಳಿತಂ ಕಡುರಯ್ಯಮಾಯ್ತು ಕೋಮಲ ಲತೆಯೆಂಬಿನಂ: **ಆದಿಪು,** ೮. ೪೫)

ಕಳಿಕೆ – [ನಾ] ಚಿಗುರು (ತೆಂಬೆಲರಲೆಪಿಂ ಕಳಿಕೆಯೊಳೆ ತುಱುಗಿ ತಳಿರೊಳೆ ತಳತಳಿಸಿದುದು: **ಆದಿಪು,** ೮. ೨೯); [ನಾ] ಕಾಯಿ ಮೊಗ್ಗು (ವನದೇವತೆಗಳ್ ಪುಗುವಂತೆ ತಳಿರ ಕಳಿಕೆಯ ಪೊಸಪೂವಿನ ಮೇಗೆ ದಿಟ್ಟಿಯಾಗಿರೆ: **ಆದಿಪು,** ೧೧. ೭೧)

ಕಳಿಕೆಗರ್ಚು – [ನಾ] ಚಿಗುರನ್ನು ಕಚ್ಚು (ಇಚ್ಚೆಯಿಂ ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ: **ಆದಿಪು,** ೨. ೯)

ಕಳಿತ – [ಗು] ಕೂಡಿದ (ಅಧಿಕಬಳನಳಕರತಳಗಳಿತ ಕುಳಶೈಲಸಹಸ್ರ ಸಂತಾನ ಕಳಿತ ಸೇತುಬಂಧುರಮಪ್ಪ ದಕ್ಷಿಣಸಮುದ್ರದ ತಡಿವಿಡಿದು ಬಂದು: **ಪಂಪಭಾ,** ೪. ೧೮ ವ)

ಕಳಿಪಂ – [ನಾ] ಕಳ್ಳತನ ಮಾಡಿಸುವವನು (ಕಳಿಪಂ ಕಳ್ವಂ ಅಗುರ್ವು ಪರ್ವೆ ಕೊಲಿಪಂ ಕೊಲ್ವಂ ಪರಸ್ತ್ರೀಯರಂ ಕೊಳಿಪಂ ಕೊಳ್ವಂ ಎನಿಪ್ಪ ಪಾಪಿಯುಂ: **ಆದಿಪು,** ೫. ೮೧)

ಕಳೆ – [ಕ್ರಿ] ಬಿಡು ಎಂಬ ತಿರಸ್ಕಾರ ಸೂಚಕ ಉದ್ಗಾರ (ಪೆಡೆಯಂ ಮುಡಿಯಲ್ಲಿ ತೋರ್ಪ ನಾಗಿಣಿಯರ ಕೆಯ್ತಮೇಂ ತೆ ಕಳೆ: **ಆದಿಪು,** ೪. ೪೭) ['ಕೆಯ್ತಮೇಂ ತೆ ಕಳೆ' ಎಂಬುದು ಎಲ್. ಬಸವರಾಜು ಸ್ವೀಕರಿಸಿರುವ ಪಾಠ]; [ನಾ] [ಕಲೆ] ವಿದ್ಯೆ (ಅಜೆವಿಂಗೆ ಗುಜೆಯುಂ ಕಳೆಗೆ ಕುಲಭವನಮುಂ ಪ್ರತಾಪಕ್ಕಡರ್ಪುಮಾಗಿ ಬಳೆವನ್ನೆಗಂ: **ಆದಿಪು,** ೬. ೨೨ ವ); [ಕ್ರಿ] ಗುಡಿಸಿ ಹಾಕು (ರಾಗದಿಂ ಇನರಶ್ಮಿಯೆಂಬ ಕಸಮಂ ಕಳೆದು ಅಂಬರಮೆಂಬ ಪಾಱಿಂ ಏಱೆದುದು ಅಸಿತಾಂಬುವಾಹಕುಳಮೆಂಬ ಕುಟುಂಬಕದಂಬಕೋತ್ಕರಂ: **ಆದಿಪು,** ೬. ೭೧); [ಕ್ರಿ] ಹೋಗಲಾಡಿಸು (ನಲ್ಮೆಯೊಳಟ್ಟ ಕಣ್ಣ ನೀರ್ಗಳ ಪೊನಲಿಂದೆ ಕರ್ಚಿ ಕಳೆದಂತಿರೆ ಪೋದುದು ಕೋಪಮೋಪನಾ: **ಆದಿಪು,** ೧೨. ೩೪); [ಕ್ರಿ] ಅಳಿಸಿಹಾಕು (ಬರೆಯಿಸಿದಂ ಪೂರ್ವಮಹೀಶ್ವರ ನಾಮಮಂ ಎಯ್ದೆ ಕಳೆದು ವೃಷಭಾಚಲದೊಳ್ ಭರತಂ ನಿಜನಾಮಮಂ: **ಆದಿಪು,** ೧೪. ೭೩); [ಕ್ರಿ] ಕಳುಹಿಸು (ಮೆಲ್ಲಮೆಲ್ಲನೆ ಕೆಲಕ್ಕೆ ವಂದು ಕುಂಚದ ಅಡಪದ ಡವಕೆಯ ಪರಿಚಾರಿಕೆಯರೆಲ್ಲರುಮಂ ಕಣ್ಗೆತ್ತಿ ಕಳೆದು: **ಪಂಪಭಾ,** ೪. ೬೧ ವ); [ಕ್ರಿ] ಕಳಚಿಕೊ (ಕಟ್ಟಿಸಿಕೊಂಡಂ ಶಲ್ಯಂ ಕಟ್ಟಿದುದಂ ಕಳೆಯಲಾರ್ಗಮೇಂ ತೀರ್ದಪುದೇ: **ಪಂಪಭಾ,** ೧೩. ೩೦)

ಕಳೆ ಕಳೆ – [ಅ] ತೆಗೆ ತೆಗೆ, ಬಿಡು ಬಿಡು ಎಂಬ ತಿರಸ್ಕಾರ ಸೂಚಕ ಉದ್ಗಾರ (ಮಹಾಪ್ರಳಯಜಳಧಿನಾದದಿಂ ಇರದೆ ಉಚ್ಚಳಿಸಿ ನುಡಿದಂ ತೆ ಕಳೆ ಕಳೆ ಗರಿಗೆತ್ತಿದ ಅನರ್ಘ್ಯದರ್ಘ್ಯಮಂ ಧರ್ಮಸುತಾ: **ಪಂಪಭಾ,** ೬. ೪೨)

ಕಳೆದಿಡು – [ಕ್ರಿ] ಬಿಟ್ಟುಬಿಡು, ತ್ಯಜಿಸು (ಕಳೆದಿಡುವುದೆ ಕಷ್ಟಂ ಭೂತಳರಾಜ್ಯವಿಮೋಹಂ ಅಚಿರರುಚಿರಸಂಚಳಂ: **ಆದಿಪು,** ೧೪. ೧೨೧)

ಕಳೇವರ – [ನಾ] ದೇಹ (ಧೃತರಾಷ್ಟ್ರನ ಬೆಸದೊಳ್ ವಾರಣಾವತಕ್ಕೆ ಪೋಗಿ ತದರ್ಧದಗ್ಧ ಕಳೇವರಂಗಳಂ ಸಂಸ್ಕರಿಸಿ ಜಳದಾನಾದಿ ಕ್ರಿಯೆಗಳಂ ಮಾಡಿ: **ಪಂಪಭಾ,** ೩. ೮ ವ); [ನಾ] ಹೆಣ (ಕರಿತುರಗನರಕಳೇವರಪರಿಚಿತರಣದಲ್ಲಿ ಮಹಿತಳಂ ಕಾದಲ್ಕೆ ಇಂತರಿದಪ್ಪುದು: **ಪಂಪಭಾ,** ೧೩. ೯೨)

ಕಳ್ಗುಡಿ – [ಕ್ರಿ] ಹೆಂಡ ಕುಡಿ (ಕಳ್ಗುಡಿದವರಂದಂ ಇಂತು ಸಿರಿ ಸಾರ್ತರೆ ಸಾರ್ವುದು: **ಪಂಪಭಾ,** ೨. ೪೯)

ಕಳ್ಗೆ ಚಕ್ಕಣ – [ನಾ] ಹೆಂಡಕ್ಕೆ ನಂಜಿಕೊಳ್ಳುವ ಪದಾರ್ಥ (ಲಯಕ್ಕೆ ಲಕ್ಕಲೆಕ್ಕದ ಜತಿ ನಾಟಕಾಭಿನಯಮಾಯ್ತೆನೆ ಗೇಯದೊಳೀಕೆ ಸೊರ್ಕನಿಕ್ಕಿದಳೆನೆ ಕಣ್ಗೆ ಚಕ್ಕಣಮೆನಿಪ್ಪುದು ಸಾಗೆನಿಸಲ್ಕೆ: **ಪಂಪಭಾ,** ೭. ೯೦)

ಕಳ್ವಂ – [ನಾ] ಕಳ್ಳತನ ಮಾಡುವವನು (ಕಳಿಪಂ ಕಳ್ವಂ ಅಗುರ್ವು ಪರ್ವೆ ಕೊಲಿಪಂ ಕೊಲ್ವಂ ಪರಸ್ತ್ರೀಯರಂ ಕೊಳಿಪಂ ಕೊಳ್ವಂ ಎನಿಪ್ಪ ಪಾಪಿಯುಂ: **ಆದಿಪು,** ೫. ೮೧)

ಕಳ್ಳಿ – [ನಾ] ಕಳ್ಳಿಗಿಡ (ಬಳ್ಳಿಗಳ್ ಇಮ್ಮಾವಿನ ಮರನುಳ್ಳೆಡೆಗಳನಱಿಸಿ ಪೋಪುವಲ್ಲವು ಕೆಲದೊಳ್ ಕಳ್ಳಿಯಿರಲ್ ಅಡರ್ವುವು: **ಆದಿಪು,** ೧೨. ೧೬)

ಕಳ್ಳುಣಿ – [ನಾ] ಹೆಂಡಗುಡುಕ (ಖಳನುಂ ಕಳ್ಳುಣಿಯುಂ ಘಳುಮ್ಮನಿಟಿಗುಂ ಶ್ವಭ್ರಾಂತಮಂ ತಾಪಿನಂ: **ಆದಿಪು,** ೫. ೮೧)

ಕಳ್ಳೊಡವುಟ್ಟು – [ಕ್ರಿ] [ಕಳ್+ಒಡವುಟ್ಟು] ಹೆಂಡದ ಜೊತೆಗೆ ಹುಟ್ಟು (ಕಳ್ಗುಡಿವರಂದಮಿಂತು ಸಿರಿ ಸಾರ್ತರೆ ಸಾರ್ವುದದರ್ಕೆ ಸಂದೆಯಂಬಡದೆ ಜಲಕ್ಕನೀಗಳಜೆದೆಂ ಸಿರಿ ಕಳ್ಳೊಡವುಟ್ಟಿತೆಂಬುದೇಂ: **ಪಂಪಭಾ,** ೨. ೪೯)

ಕಳ್ಳೊಳಮರ್ದಿನೊಳ್ ಪುಟ್ಟಿದ ಪೆಂಡಿರ್ – ಹೆಂಡದಲ್ಲೂ ಅಮೃತದಲ್ಲೂ ಹುಟ್ಟಿದ ಹೆಂಗಸರು, ಸುರಾದೇವಿ (ಒಂದೆಡೆಯೊಳ್ ಕಳ್ಳೊಳಮರ್ದಿನೊಳ್ ಪುಟ್ಟಿದ ಪೆಂಡಿರಂತೆ ಸೊಗಯಿಸುವ ಪಲರುಂ ಒಳ್ವೆಂಡಿರ್: **ಪಂಪಭಾ,** ೪. ೮೭ ವ)

ಕಱಂಗು – [ಕ್ರಿ] ಕಪ್ಪಾಗು (ಧೈರ್ಯಮಂ ಪದುಂಗೊಳಿಸಿ ಸುರುಳ್ದು ಕರ್ಗಿದ ಕಱಂಗಿದ ಖೇಚರನಂಗಮಂ ಮೃಗಂಗಳುಮಿರದೆಯ್ದೆ ವಂದು ನಡೆ ನೋಡಿ: **ಆದಿಪು,** ೨. ೫೯)

ಕಱು – [ನಾ] ಮಗು, ಕೂಸು, ಚಿಕ್ಕದು (ಪಗೆವಡೆಯೊಡ್ಡುಗಳಂ ಒಡೆಯಲ್ಕೆ ವೇಟ್ಟಿರ್ದ್ದೆ ಧಗಮೆನೆ ಸೈರಿಸುವ ಉಪಾಯಮಾವುದು ಕಱುವೇ: **ಪಂಪಭಾ,** ೧೧. ೯೧); [ಕ್ರಿ] ಕೋಪಗೊಳ್ಳು (ಮದವದ್ದಂತಿಗಳಂ ಕಱುತ್ತು ಅಸಗವೊಯ್ವೊಯ್ದು ಆಜಿಯೊಳ್ ಭೀಮಂ ಆರ್ದು ಒದೆದು ಈಡಾಡಿದೊಡೆ ಅತ್ತ ಅಜಾಂಡತಟಮಂ ತಾಪನ್ನೆಗಂ: **ಪಂಪಭಾ,** ೧೧. ೬೭)

ಕಱುಂಬ – [ನಾ] ಹೊಟ್ಟೆಕಿಚ್ಚಿನವನು (ಮಲೆಪರ್ ಮಂಡಳಿಕರ್ ಕಱುಂಬರ್ ಅದಟರ್ ವೀರರ್ಕಳುಂ: **ಪಂಪಭಾ,** ೯. ೧೦) [ಇದು ಸಣ್ಣಪುಟ್ಟ ರಾಜರು ಅಥವಾ ಕೋಟೆ ರಕ್ಷಕರು ಎಂಬರ್ಥದಲ್ಲಿ **'ಕುಱುಂಬರ್'** ಇರಬಹುದೇ ಎಂದು ಡಿಎಲ್‌ಎನ್ ಅನುಮಾನಿಸುತ್ತಾರೆ]

ಕಱುತ್ತು – [ಕ್ರಿವಿ] [√ಕಱು=ಕೆರಳು] ಕೆರಳಿ, ಕೋಪಿಸಿಕೊಂಡು (ತವೆ ಮಾಱಾಂತ ಬಲಂ ಕಱುತ್ತಿಱಿದು ತನ್ನಾಳ್ದಂ ಕರಂ ಮೆಚ್ಚೆ ಗೆಲ್ದವನಂ ಶ್ರೀವಧು ಪತ್ತುಗುಂ: **ಪಂಪಭಾ,** ೧೦. ೪೪)

ಕಱುಪು – [ನಾ] ಅಸಹನೆ, ಕೋಪ (ಕಱುಪುಂ ಕಾಯ್ಪುಮಂ ಉಂಟುಮಾಡಿ ನೆಲನಂ ದುರ್ಯೋಧನಂ ತಾಗಿ ತಳ್ತಿಱಿದಂದಲ್ಲದೆ ಕೂಡಂ: **ಪಂಪಭಾ,** ೯. ೯೨)

ಕಱೆ – [ನಾ] ಕಪ್ಪು ಕಲೆ (ಬಿನ್ನನೆ ಕುರುಳ ನೆಟಿಲ್ಗಳ್ ತನ್ನೊಳೆ ತಳ್ವೊಯ್ದು ನೆಗಟ್ದಿ ಕಱೆಯನೆ ಪೋಲ್ತು: **ಆದಿಪು,** ೭. ೧೦); ಸುರಿ (ಪೊಸಮಸೆಯಂಬು ಕಾರ ಮಟಿವೊಲ್ ಕಱೆಯುತ್ತಿರೆ: **ಪಂಪಭಾ,** ೧೧. ೧೩೫)

ಕಱೆಗೊರಲಾತ – [ನಾ] ಕಪ್ಪು ಕೊರಳನ್ನುಳ್ಳವನು, ನೀಲಕಂಠ, ಶಿವ (ಕಱೆಗೊರಲಾತಂ ಆತ್ಮವಿಟತತ್ತ್ವಮಂ ಉಂಟೊಡೆತಾಗಿ ಮಾಡಿ ಬಾಂದೊಱೆಯನೆ ಪೊತ್ತು ಗೌರಿಗೆ ಕವಲ್ದೊಱೆಗೆಯ್ದಿದನೀ ಪ್ರದೇಶದೊಳ್: **ಪಂಪಭಾ,** ೭. ೭೫)

ಕಟಕುಟಿ – [ನಾ] ಅಸ್ತವ್ಯಸ್ತತೆ, ದಿಗ್ಭ್ರಾಂತಿ, ಅಲ್ಲೋಲಕಲ್ಲೋಲ (ಅಂತು ಗುರುನಂದನಂ ಮರುನ್ನಂದನವಿರಚಿತ ನಿಶಾತವಿಶಿಖ ಪಂಜರಮನಱಿದು ಕಟಕುಟಿಂ ಮಾಡಿಯುಂ ಅನಿತಱೊಳ್ ಮಾಣದೆ: **ಪಂಪಭಾ,** ೧೨. ೬೮ ವ)

ಕಟಮೆ – [ನಾ] ಬತ್ತ (ಪೊಸ ಜಾದಿಯ ಬೆಳೆದೊಱಗಿದ ಪೊಸ ಕಟಮೆಯ ಪೊಸತರಲ್ದ ತಾವರೆಗಳ ಕಂಪಸದಳಮೆಸೆದಿರೆ: **ಆದಿಪು,** ೧೧. ೬)

ಕಟಲ್ – [ಕ್ರಿ] ಶಕ್ತಿಗುಂದು (ಕೋಟಿಕ್ಸಿಸಱ ಬಾವಿಯೊಳರ್ದೆ ಕಡಂಗಿ ಬಂದು ನೀನನಿಬರುಮಂ ಕರಂ ಕಟಲೆ ಬಗ್ಗಿಸಿ: **ಆದಿಪು,** ೨. ೪೩): [ಕ್ರಿ] ಸಡಿಲಗೊಳ್ಳು (ಅಲೆದುಂ ನೋಡಿಯೊಱಲ್ದುವಿಟ್ಟ ಪದಮುಂ ನೋಳ್ಪುಂ ಕಟಲ್ದುಂ ಪಳಂಚಲೆದುಂ ಮುಟ್ಟಿದ ಸೀಯನಪ್ಪ ದನಿಯುಂ: **ಆದಿಪು,** ೧೨. ೨೩); [ಕ್ರಿ] ಕೃಶವಾಗು (ಸುಯೋಧನನೊಡ್ಡುಗಳ್ ಕಟಲ್ದು ಅಲಱೆ ತೆರಳ್ದು ತೂಳ್ದು ಬಿಱುತೋಡೆ: **ಪಂಪಭಾ,** ೧೧. ೩೩); [ಕ್ರಿ] ಕಳಚಿಕೊ, ಬಿದ್ದು ಹೋಗು (ಎಂದು ಕುರುಕುಲಚೂಡಾಮಣಿ ಶಲ್ಯನ ಹೃಚ್ಛಲ್ಯಮೆಲ್ಲಮಂ ಕಟಲೆ ನುಡಿದೊಡೆ: **ಪಂಪಭಾ,** ೧೨. ೯೯ ವ); [ಕ್ರಿ] ಕಳಚು (ಮೆಟ್ಟಿದ ಸೂಟಿಮ್ಟುಗಳಿಂದೆ ಬೆಟ್ಟು ಕಟಲಲ್ ಅಳ್ಳಾಡೆ ಭೂಭಾಗಂ ಆದುದು ದುರ್ಯೋಧನ ಭೀಮಸೇನರ ಗದಾಯುದ್ಧಂ ಮಹಾಭೈರವಂ: **ಪಂಪಭಾ,** ೧೩. ೯೪)

ಕಟಲೆ ಬಗ್ಗಿಸು – [ಕ್ರಿ] ಗದರಿಸು, ಕಠಿಣವಾಗಿ ಮಾತಾಡು (ನೀನನಿಬರುಮಂ ಕರಂ ಕಟಲೆ ಬಗ್ಗಿಸಿ ತನ್ನನುಗ್ರಮಪ್ಪ ಕಾಂಚನಹರಿಪೀಠದೊಳ್ ಮಿಸಿಸುವಂದಮನೆರ್ದೊರಿ ನಂದುವಂದದಿಂ: **ಆದಿಪು,** ೨. ೪೩)

ಕಟಲ್ಚು – [ಕ್ರಿ] ಸಡಿಲಿಸು, ಬಿಚ್ಚು (ಬಿರುದರಂ ಒತ್ತಿ ಬೀರರಂ ಅಡಂಗಿಸಿ ಕೊಂಕಿಗರಂ ಕಟಲ್ಚಿ ಚೆನ್ನರಂ ಅಡಿಗೊತ್ತಿ ಮಂಡಳಿಕರಂ ಬೆಸಕಯ್ಸಿ .. .. ಮಾಡಿರೆ ರಾಜಸೂಯಮಂ: **ಪಂಪಭಾ,** ೭. ೧೮)

ಕಟಿ – [ಕ್ರಿ] ಸಾಯಿ (ಕಟಿದವರ್ಗೆ ಅಟ್ಟುವುದು ಅಟಿಸ್ತೊಡೆ ಅವರ್ ಏಟಿಸ್ವೊಡಂ ಅಂತವರಿಂ ಬಟಿಕ್ಕೆ ತಾಂ ಉಟಿವೊಡಂ: **ಪಂಪಭಾ,** ೨. ೨೭)

ಕಟಿಪು – [ಕ್ರಿ] [ಕಾಲ] ಕಳೆ, ನೂಕು (ಕೆಲಕೆಲವು ಅವಿನಾಣಂಗಳಂ ನಾಣ್ಚಿ ಬಂಚಿಸಿ ಪಿರಿದುಮನುರಾಗದಿಂದಂ ಎನ್ನ ಬರೆದ ಪಟಮನಿದನರ್ಚಿಸಿ ಕನ್ಯಾಬ್ರತದೊಳೆ ಕಾಲಮಂ ಕಟಿಪುವೆಂ: **ಆದಿಪು,** ೩. ೪೩ ವ); [ಕ್ರಿ] ಮುಗಿದುಹೋಗು (ನೋಡೆ ಬಿನ್ನನಿರ್ದುದು ಸುರಶೈಳಮದೊಂದು ಮದುವೆಗಟಿಪಿದ ಮನೆವೊಲ್: **ಆದಿಪು,** ೭. ೧೦೮); [ಕ್ರಿ] ಕೊಲ್ಲು (ಮುಂದಣ ಮಿಗಮಂ ಕಟಿಪದೆ ಸಂದಿಸಿ ಬಟಿಗೊಳ್ವ ಮಿಗಮುಮಂ ಕಟಿಪದೆ ತಾನೊಂದಳವಿದಪ್ಪದೆಚ್ಚು: **ಪಂಪಭಾ,** ೫. ೪೮)

ಕಟಿಯಲರ್ – [ನಾ] ಬಾಡಿದ ಹೂವು (ಕಟಿಯಲರಾದ ಸಂಪಗೆಯ ಬಣ್ಣದವೋಲ್ ಬೆಳರ್ತ ಬಣ್ಣದೊಳ್: **ಪಂಪಭಾ,** ೪. ೬೧)

ಕಟಿಯೆ ನೋ – [ಕ್ರಿ] ಸಾಯುವಂತೆ ನೋವನುಭವಿಸು (ಅಂತು ಕರ್ಣನಿಶಿತವಿಕರ್ಣಹತಿಯಿಂದಂ ಅಸುರಾಂತಕಂ ಕಟಿಯೆ ನೊಂದು: **ಪಂಪಭಾ,** ೧೨. ೨೧೦ ವ)

ಕಟಿವುಟಿವು – [ನಾ] [ಕಟಿವು+ಉಟಿವು] ಸಾಯುವುದು ಉಳಿಯುವುದು (ದೀವದ ಬೇಂಟೆಯಂ ಬಿನ್ನಪಂಗೆಯ್ವೊಡೆ ಗಾಳಿಯುಂ ಕಟಿವುಂ ಉಟಿವುಂ ಕಾಪುಂ ಮೇಪುಂ ತೋಡುಂ ಬೀಡುಂ: **ಪಂಪಭಾ,** ೫. ೪೩ ವ); [ನಾ] ಹೋದದ್ದು ಉಳಿದದ್ದು (ಸೂಳೆಯಂತೆ ಕಟಿವು ಉಟಿವನಱಿದುಂ ರಸವಾದಿಯಂತೆ ಕಟ್ಟಿಯುಂ ಪೆರ್ಜೋಡೆಯಂತೆ ನುಣ್ಣಿತಂ ವೇಟ್ದು: **ಪಂಪಭಾ,** ೬. ೭೨ ವ)

ಕಟಿವೂ – [ನಾ] ಬಾಡಿದ ಹೂ (ಎರಟ್ಟಿಡಿಯ ಪೂಮರದಿಂ ಕಟಿವೂಗಳತ್ತಮಿತ್ತ ಕವಿದಲ್ಲಿ ಮೆಲ್ಲನುಗೆ ತೆಂಕುವ ಪೂವಿನ ಸಂಕರಂಗಳಂ: **ಆದಿಪು,** ೧. ೬೧)

ಕಟ್ಗು – [ಕ್ರಿ] ಕಪ್ಪಾಗು, ಕಪ್ಪಿಡು (ಅಲ್ಲಿಯ ಮಹಾನಾಗಂಗಳ ವಿಷಂಬೆರಸು ಸುಯ್ವ ಸುಯ್ಯ ಪೊಗೆಯೊಳಂ ಕಱಂಗಿ ಕಟ್ಗಿದ ಮೆಯ್ಯುಮಂ: **ಪಂಪಭಾ,** ೫. ೧೦೩ ವ)

ಕಟ್ಟಿಲಿಸು – [ಕ್ರಿ] ಕತ್ತಲೆಯುಂಟುಮಾಡು, ಕತ್ತಲೆಯಾಗು (ಇಮ್ಮಾವು ಕಟ್ಟಿಲಿಸಿರ್ದತ್ತು ಎಲೆವಳ್ಳಿ ಕಾಯ್ತು ಕರೆವಂತಿರ್ದತ್ತು: **ಆದಿಪು,** ೧೧. ೬೮)

ಕಟಿತ್ತೆ – [ನಾ] ಹೆಸರಗತ್ತೆ (ಸಡಹುಡನಪ್ಪ ಕಟಿತ್ತೆ ಕೊಡೆ ಸಂತಸದಿಂ ಪೆಱಗೇಱೆ ಬರ್ಪ ಕನ್ನಡಿವಿಡಿದಾಕೆ ಚಿನ್ನದ ಸವಂಗಂ ಅಪೂರ್ವದ ಮೊಚ್ಚೆಯಂ: **ಪಂಪಭಾ,** ೯. ೧೦೩)

ಕಟ್ಟು – [ನಾ] ಕಪ್ಪು (ಚಂದ್ರಕಾಂತಘಟದೊಳ್ ತಂದಟ್ಟೆಯಿಂ ಪುಷ್ಪವಾಸನೆಗೆಂದಿಕ್ಕಿದ ನೀಳನೀರರುಹಮಂ ಪೋಲ್ದತ್ತು ಕಟ್ಟಿಂದುವಾ: **ಪಂಪಭಾ,** ೪. ೫೧)

ಕಟ್ಪೇಱು – [ಕ್ರಿ] ಕಪ್ಪುಬಣ್ಣವಾಗು (ಗಂಧೇಭಚರ್ಮಂಗಳಂ ಪಸರಂಗೆಯ್ದನೊ ಶಂಭುವೆಂಬ ಬಗೆಯಿಂ ತಳ್ಪೊಯ್ದು ಕಟ್ಪೇಱೆ ಸೂಚಿಸಲಾರ್ಗಂ ವಶಮಾಗದಂತು ಕವಿದತ್ತು ಉದ್ದಾಮಭೀಮಂ ತಮಂ: **ಪಂಪಭಾ,** ೪. ೪೯)

ಕಾ – [ಕ್ರಿ] ಮರೆಮಾಚು (ನೀನೆನಗಿಂತು ನಿನ್ನ ಬಗೆಯಂ ಕಾದು ಅಕ್ಕ ಪೇೞ್ ಆರೊಳಿಂ ನುಡಿವೋ ಬೇಸಱಂ: **ಆದಿಪು,** ೩. ೩೧); [ಕ್ರಿ] ಕಾಪಾಡು (ಏಮಾತೊ ತನ್ನನೆ ನಚ್ಚಿರ್ದುದು ಕಾಗುಂ ಎಂಬ ಬಗೆಯಿಂದಿಂತೀ ಮಹೀಮಂಡಲಂ: **ಆದಿಪು,** ೪. ೮೩); [ಕ್ರಿ] ಉಳಿಸಿಕೊ (ನಂಟರ್ ಈತನ ನಣ್ಪಂ ಬಿಸುಡೆಂದೊಡೆ ಆ *ನುಡಿಯಂ ಏಗೊಂಡೆನೇ ನಾಣನೆಳ್ಳನಿತುಂ ಕಾದೆನೆ* ಬೇಡಿದೊಂದು ಮುರುಳಂ ಮಾರ್ಕೊಂಡೆನೇ: **ಆದಿಪು,** ೧೨. ೩೬)

ಕಾಂಕ್ಷೆ – [ನಾ] ಅಪೇಕ್ಷೆ, ಆಸೆ (ಪ್ರಿಯವಿಷಯಕಾಂಕ್ಷೆಯಿಂದ ಇಂದ್ರಿಯಂಗಳ್ ಎಂತು ಎಯ್ದಿ ಮನಮಂ ಆಶ್ರಯಿಸುಗುಂ ಅಂತು ಅಯನಯಪರರ್ ಅಯ್ವರುಂ ಆಶ್ರಯಿಸಿರ್ದರ್ ವಿಷಯಕಾಂಕ್ಷೆಯಿಂ ಮುರರಿಪುವಂ: **ಪಂಪಭಾ,** ೯. ೧೩)

ಕಾಂಚನಕಮಳ – [ನಾ] ಹೊಂದಾವರೆ, ಸೌಗಂಧಿಕ ಪುಷ್ಪ (ಅಱುವತ್ತುಕೋಟಿ ಧನದಾನುಚರರಂ ಅತಿರೌದ್ರ ಭಯಾನಕಮಾಗೆ ಕೊಂದು ಸೌಗಂಧಿಕ ಕಾಂಚನಕಮಳಹರಣಪರಿಣತನಾದಂ: **ಪಂಪಭಾ,** ೮. ೩೧)

ಕಾಂಚನಗಿರಿ – [ನಾ] ಚಿನ್ನದ ಬೆಟ್ಟ, ಮೇರು (ಬೇಟ್ಟಿನ ಬೇಟ್ಟುವಸ್ತು ಕಾಂಚನಗಿರಿಯಿಂದ ಅಗ್ಗಳಂ ಎನಿಪ್ಪುದಾದೊಡಂ ಏನೊ: **ಪಂಪಭಾ,** ೫. ೭೭)

ಕಾಂಚನದ ದಂಡ – [ನಾ] ಚಿನ್ನದ ಹಿಡಿ (ಚೇಟಿಕೆ ಬೀಸುವ ಕುಂಚಂ ಎಯ್ದೆ ಮೆಯ್ದೋಱುವ ಗಾಡಿ ಕಾಂಚನದ ದಂಡದ ಸೀಗುರಿ ನೋೞ್ಪೊಡೆ ಆರುಮಂ ಮಾಱ್ ಮನೋಜನ ಒಡ್ಡು ಎನಿಸಿದರ್: **ಪಂಪಭಾ,** ೯. ೧೦೦)

ಕಾಂಚನದ್ವಾರ – [ನಾ] ಚಿನ್ನದ ಬಾಗಿಲು (ಅಂದು ಎಯ್ತಂದಂ ಅಸಂಚಳ ಕಾಂಚನದ್ವಾರ ಬಂಧುರಬಂಧಗೃಹ ಉದ್ಯತ್ ದ್ವಾರಾವತೀಪುರಮಂ ನರಂ: **ಪಂಪಭಾ,** ೪. ೩೨)

ಕಾಂಚನಪದ್ಮ – [ನಾ] ಹೊಂದಾವರೆ (ವಿಕಸತ್ ಕಾಂಚನಪದ್ಮಮಂ ವಿನಯದಿಂ ತಂದೊಂದಂ ಉದ್ಯಾನಪಾಳಕನಿತ್ತಲ್ಲಿ ತದಬ್ಜಮಂ ನೃಪವರಂ ವಕ್ತ್ರಾಬ್ಜದೊಳ್ ಸಾರ್ಚೆ: **ಆದಿಪು,** ೪. ೬೯)

ಕಾಂಚನರೇಣು – [ನಾ] ಚಿನ್ನದ ಕಣ (ಪೋಗಿ ಸುಪರ್ವಪರ್ವತದ ಕಾಂಚನರೇಣುಗಳಂ ಪರಾಕ್ರಮೋದ್ಯೋಗದಿಂ ಎತ್ತಿ ತಂದು ನಿನಗಿತ್ತ ಅದಟಂ: **ಪಂಪಭಾ,** ೭. ೪೭)

ಕಾಂಚೀಕಳಾಪ – [ನಾ] ಕಾಂಚಿ (ಬಳೆದ ನಿತಂಬದೆ ಕಾಂಚೀಕಳಾಪಮಂ ಕಟ್ಟಲಣಮೆ ನೆಱಿಯದು ಎಂದಗ್ಗಳಿಸಿ ಕುಳಿಕೆಗಳಿನೇಂ ಕಣ್ಗೊಳಿಸಿದುದೋ ಸುಭಗೆಯಾದ ಸುದತಿಯ ಗರ್ಭಂ: **ಪಂಪಭಾ,** ೧. ೧೪೩)

ಕಾಂಡ – [ನಾ] ಬಾಣ (ಎಂಬತ್ತುನಾಲ್ಕು ಲಕ್ಕ ಬಂಡಿಯೊಳ್ ತಡತಂಡದೆ ತೀವಿದ ಅಕಾಂಡಪ್ರಳಯಾನಳ ವಿಸ್ಫುಲಿಂಗೋಪಮಾನಂಗಳಪ್ಪ ನಿಶಿತಕಾಂಡಂಗಳಿಂದ ಒಡ್ಡಿದ ಚತುರ್ಬಲಂಗಳ ಮೆಯ್ಯೊಳ್: **ಪಂಪಭಾ,** ೧೧. ೧೯ ವ)

ಕಾಂಡಪಟ – [ನಾ] ಅವಕುಂಠನ (ಬಳಸಿದ ಪೊನ್ನ ಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತಾಣದೊಳ್ ಬಳಸಿದ ಕಾಂಡಪಟದಂತಿರೆ: **ಆದಿಪು** ನರಸಿಂ, ೧. ೭೧); [ನಾ] ತೆರೆ, ಪರದೆ (ತೊಡಂಬೆಯ ಮೂಡಿಗೆಯ ಕದಳಿಕೆಯ ಕಾಂಡಪಟಂಗಳುಮಂ: **ಪಂಪಭಾ,** ೫. ೪೭ ವ)

ಕಾಂಡಾಸನ – [ನಾ] ಬಿಲ್ಲು (ಷಟ್ಛತಕಾಂಡಾಸನೋತ್ಸೇಧಶರೀರನುಂ ಅಯುತಪ್ರಮಾಣಾಯುಷ್ಯನುಂ ಆಗಿ ಪನ್ನೊಂದನೆಯ ಕುಳಧರಂ ಪುಟ್ಟಿ: **ಆದಿಪು,** ೬. ೬೦ ವ)

ಕಾಂತ – [ನಾ] ಪ್ರಿಯವಾದ, ಆಕರ್ಷಕವಾದ (ಅಂತು ನಿಜಮನೋನಯನ ಕಾಂತ ಕಾಂತಾವದನರಸಸರಸಿಜ ಸೌರಭಮನಾಸ್ವಾದಿಸಿ: **ಆದಿಪು,** ೭. ೩೪ ವ)

ಕಾಂತಸಂಗ – [ನಾ] ಇನಿಯನ ಕೂಟ (ದೀಪ್ತಕಂದರ್ಪ ದರ್ಪಕ್ಷುಭಿತಗಳನಿನಾದಂ ಪ್ರಸ್ಫುರತ್ ಘರ್ಮವಾರಿ ಪ್ರಭವಂ ಎಸೆದುದಂತಾ ಕಾಂತೆಗೆ ಆ ಕಾಂತಸಂಗಂ: **ಪಂಪಭಾ,** ೫. ೨೮)

ಕಾಂತಾರ – [ನಾ] ಕಾಡು (ಶಾಂತರಸಂ ಪೊಂಪುೞಿವೋದುದಾ ಮುನಿಪನಿಂ ತತ್ ಕಾಂತಾರದೊಳ್: **ಆದಿಪು,** ೯. ೯೭)

ಕಾಂತಾರಚರ್ಯಾ – [ನಾ] [ಜೈನ] ಕಾಡಿನಲ್ಲಿ ಸಿಕ್ಕಿದುದನ್ನು ಮಾತ್ರ ತಿನ್ನುವ ವ್ರತವುಳ್ಳ ಯತಿಗಳು (ಧರ್ಮವರ ಸಾಗರಸೇನರೆಂಬ ಗಗನಚಾರಣರ್ ಕಾಂತಾರಚರ್ಯಾಮಾರ್ಗದೊಳ್ ತಮ್ಮ ವಾಸಕ್ಕೆ ಬರ್ಪರಂ ಶ್ರೀಮತಿಯುಂ ತಾನುಂ ಕಂಡು: **ಆದಿಪು,** ೪. ೯೫ ವ)

ಕಾಂತಿ – [ನಾ] ತೇಜಸ್ಸು (ಶ್ರೀಮಚ್ಚಳುಕ್ಯವಂಶ ವ್ಯೋಮಾಮೃತ ಕಿರಣನೆನಿಪ ಕಾಂತಿಯನೊಳಕೊಂಡೀ ಮಹಿಯೊಳಾತ್ಮ ವಂಶಶಿಖಾಮಣಿ ಜಸಮೆಸೆಯೆ ಯುದ್ಧಮಲ್ಲಂ ನೆಗೞ್ದಂ: **ಪಂಪಭಾ,** ೧. ೧೫)

ಕಾಂತೆ – [ನಾ] ಸ್ತ್ರೀ (ಸಂತಸದಿನಿರ್ದು ಮಕ್ಕಳಸಂತತಿಗೀ ದೊರೆಯರ್ ಇನ್ನುಮಾಗದೊಡೆ ಎಂತುಂ ಸಂತಸಮೆನಗಿಲ್ಲ ಎಂದಾ ಕಾಂತೆ ಸುತಭ್ರಾಂತೆ ಮುನ್ನಿನಂತೆವೊಲಿರ್ದಳ್: **ಪಂಪಭಾ,** ೧. ೧೨೩)

ಕಾಂಭೋಜಭೂಮಿಜ – [ನಾ] ಕಾಂಭೋಜ ದೇಶದಲ್ಲಿ ಹುಟ್ಟಿದ (ಅಂತು ಕಾಳಿಂಗಾಂಗಸಂಭವಂಗಳಪ್ಪ ಮದಾಂಧ ಗಂಧಸಿಂಧುರಂಗಳುಮಂ ಅಜಾನೇಯ ಕಾಂಭೋಜ ಭೂಮಿಜಂಗಳಪ್ಪ ಜಾತ್ಯಶ್ವಂಗಳುಮಂ: **ಪಂಪಭಾ,** ೬. ೭೨ ವ)

ಕಾಕಕುಳ – [ನಾ] ಕಾಗೆಯ ಬಳಗ (ಸಂಗರಾಜಿರದೊಳ್ ಕೌರವರೆಂಬ ಕಾಕಕುಳಕೆ ಎನ್ನೀಯೊಂದೆ ಬಿಲ್ ಸಾಲದೇ: **ಪಂಪಭಾ,** ೧೨. ೧೩೫)

ಕಾಕಳಿ – [ನಾ] ಇಂಪಾದ ದನಿ (ಜಿನುಗುವ ತುಂಬಿಯಿಂಚರಮೆ ಗಾಣರ ಕಾಕಳಿ ಕೂಡೆ: **ಆದಿಪು**, ೧೩. ೬)

ಕಾಕಿಣೀರತ್ನ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲೊಂದಾದ ರತ್ನ, ಶ್ರೀಗೃಹದಲ್ಲಿ ಹುಟ್ಟಿದ್ದು (ಮಹಾಗುಹಾಗಹ್ವರಾಂತರ ಸೂಚೀನಿರ್ಭೇದ್ಯ ತಮಸ್ತಮೋ ನಿರಸನ ಪ್ರಭಾಭೂತ ಗುಣೋಪೇತಮಪ್ಪ ಚಿಂತಾಜನನಿ ಎಂಬ ಕಾಕಿಣೀರತ್ನಮುಂ: **ಆದಿಪು**, ೧೧. ೩ ವ)

ಕಾಚಮೇಚಕ – **[ನಾ]** ಗಾಜಿನ ಕಪ್ಪುನೀಲಿ ಮಿಶ್ರಿತವಾದ ಬಣ್ಣ (ಕಾಚಮೇಚಕಚಯಚ್ಛಾಯಾಂಬುವಿಂ ಗುಣ್ಪಿನಿಂ ಪುದಿದಿರ್ದತ್ತು ಸರೋವರಂ ಬಕಬಲಾಕಾನೀಕ ರಾವಾಕುಳಂ: **ಪಂಪಭಾ**, ೧೩. ೭೨)

ಕಾಡಿಗೆ – **[ನಾ]** ಕಣ್ಣಿಗೆ ಹಚ್ಚುವ ಅಂಜನ (ನಗೆಮೊಗದೊಳ್ ಪರಕಲಿಸಿದ ಕಾಡಿಗೆವೆರಸಿ ಅರಿಕೇಸರಿ ತಾಯ ಮನಮಂ ಇಟ್ಟುಳಿಗೊಂಡಂ: **ಪಂಪಭಾ,** ೨. ೮)

ಕಾಡೆರ್ಮೆ – **[ನಾ]** ಕಾಡೆಮ್ಮೆ (ವನಲಕ್ಷ್ಮಿಯ ಗೋಮಂಡಲದಂತಿರ್ದ ಕಡವಿನ ಕಾಡೆರ್ಮೆಯ ಪಿಂಡುಗಳಿಂದಂ:: **ಪಂಪಭಾ**, ೭. ೨೯)

ಕಾಡೊಡಮೆ – **[ಕ್ರಿ]** ಕಾಡಿನ ವಸ್ತು (ಕಾಡೊಡಮೆ ವೇಳೆ ಸಲೆ ಕಯ್ಯೊಗ್ಗಿಡಿದುದು ಎನೆ: **ಪಂಪಭಾ**, ೫. ೪೦)

ಕಾಣ್ಕೆ – [ನಾ] ಕಾಣುವಿಕೆ, ನೋಟ (ವಿತ್ರಸ್ತಕರ್ಮರಿಪುವ ಜಗತ್ತ್ರಯದೀಪಕನ ಕಾಣ್ಕೆಗೊಳಗಾದುದು ಲೋಕತ್ರಯಂ: **ಆದಿಪು**, ೧. ೪೭)

ಕಾಣ್ಕೆಮಾಡು – **[ಕ್ರಿ]** ಕಾಣುವಂತೆ ಮಾಡು (ತಾಮರೆಗಂ ಚಂದ್ರಂಗಂ ತಾಮಸಮಂ ಕಳೆದು ಕಾಣ್ಕೆಮಾಟ್ಪಿಂತೆವೊಲ್: **ಆದಿಪು**, ೭. ೯)

ಕಾತರಕಾಪುರುಷ – **[ನಾ]** ಉತ್ಕಂಠಿತನಾದ ಕೀಳುಮನುಷ್ಯ (ಪಾತಕಿಯೊಳ್ ಲಕ್ಷ್ಮಿಯೊಳ್ ಅತಿ ಕಾತರ ಕಾಪುರುಷಗಣನೆಯೊಳ್ ನೆರೆಯಲ್ಕಿಂತೀತನೆ ಬಗೆಗೆ: **ಆದಿಪು**, ೧೪. ೧೨೩)

ಕಾದ – **[ಗು]** [ಕಾಯ್ದ] ಕಾಪಾಡಿದ (ಜೀಮೂತವಾಹನನೆಂಬ ಅಂಕದ ಚಾಗಿ ನಿಚ್ಚಟಿಕೆಯಿಂದೀ ಶೈಳದೊಳ್ ಶಂಖಚೂಡನಾನಂದದೆ ಕಾದ ಪೆಂಪೆಸೆಯೆ ನಾಗಾನಂದಮಂ ಮಾಡಿದಂ: **ಪಂಪಭಾ**, ೪. ೨೬)

ಕಾದಲ – [ನಾ] ಪ್ರಿಯ, ನಲ್ಲ, ಇನಿಯ (ಆನನಾಂಬುಜಮನೊಯ್ಯನೆ ಬಾಗಿರೆ ಕಾದಲಂಗೆ ಸಯ್ತಂತಿರು ನಾಣ್ಚದೆ ಎಂದು ಅಣುಗೆಯರ್ ಪಿಡಿದು ಅಟ್ಟಿಱೊಳ್ ಎತ್ತಿ ಬುದ್ಧಿವೇಟ್ಟಂತೆ: **ಪಂಪಭಾ**, ೩. ೭೮)

ಕಾದಲಳ್ – [ನಾ] ನಲ್ಲೆ (ಒಲವಿನೊಳಾದ ಕಾಯ್ಪು ಮಿಗೆ ಕಾದಲನಂ ಬಿಸುಟಂತೆ ಪೋಪ ಕಾದಲಳ್ ಅೞುತುಂ ತೆಱಂದಿರಿದು ನೋಡಿದ ನೋಟದೊಳ್: **ಪಂಪಭಾ**, ೪. ೧೦೮)

ಕಾದಲೆ – [ನಾ] ಪ್ರಿಯೆ, ನಲ್ಲೆ (ಅಲರ್ಗಣ್ಣೊಳ್ ಸ್ಮರನಿರ್ದಪನಕ್ಕುಂ ಎಡೆವೋಪಾ ಜೋಡೆ ಕಾಮಂಗೆ ಕಾದಲೆಯಕ್ಕುಂ: **ಪಂಪಭಾ**, ೪. ೮೪)

ಕಾದಿಗೆ – **[ನಾ]** [ಖಾತಿಕಾ] ಅಗಳು, ಕಂದಕ (ಸಾರವಸ್ತುಗಳಿಂ ನೆಱೆದ ಅಂಭೋರಾಶಿಯೆ ಕಾದಿಗೆ ಕಾವನುಂ ಸೀರಪಾಣಿ ವಿಳಾಸದಿನಾಳ್ದಂ ಚಕ್ರಧರಂ: **ಪಂಪಭಾ**, ೪. ೩೨)

ಕಾದಿಸು – [ಕ್ರಿ] ಹೋರಾಡುವಂತೆ ಮಾಡು (ಸೋದರರೊಳ್ ಸೋದರರಂ ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದುತ್ಪಾದಿಸುವುದು ಕೋಪಮಂ: **ಆದಿಪು**, ೧೪. ೧೨೨)

ಕಾದು – [ಕ್ರಿ] ಹೋರಾಡು (ಅಂತು ಕಿಱಿದು ಪೊೞ್ತು ಕೆಯ್ಗಾದು ಕಾದೆ ಸರಿತ್ಸುತನ ಸುರಿವ ಸರಲ ಮೞೆಯೊಳ್ ಅೞಿದ ನಿಜವರೂಥಿನಿಯ ಸಾವುಂ ನೋವುಂ ಏವಮಂ ಮಾಡೆ: **ಪಂಪಭಾ**, ೧೧. ೧೮ ವ)

ಕಾದುದು – [√ಕಾ] ರಕ್ಷಿಸಿತು (ಕಾದುದು ಸರಣ್ಗೆ ವಂದರಂ ಆದುದು ಕಾಲಾಗ್ನಿ ಬಲವತ್ ಅರಿನೃಪತಿಗೆ ಕಾಪಾದುದು ನೆಲಕ್ಕೆ ತೋಳ್ವಲಂ: **ಪಂಪಭಾ**, ೭. ೨)

ಕಾನನ – **[ನಾ]** ಕಾಡು, ಅಡವಿ (ಖೇಚರಿಯೋ ಭೂಚರಿಯೋ ನಿಶಾಚರಿಯೋ ರೂಪು ಬಣ್ಣಿಸಲ್ಕೆ ಅರ್ಗಂ ಅವಾಗ್ಗೋಚರಂ ಈ ಕಾನನಮುಂ ಅಗೋಚರಂ ಇವಳ್ ಇಲ್ಲಿಗೇಕೆ ಬಂದಳೊ ಪೇೞಿಂ: **ಪಂಪಭಾ**, ೩. ೧೪)

ಕಾನನಕಂಟಕಲಗ್ನಪಾದ – **[ನಾ]** ವನದ ಮುಳ್ಳುಗಳಲ್ಲಿ ಸಿಕ್ಕಿಕೊಂಡ ಪಾದ[ಕಿರಣ]ಗಳುಳ್ಳವನು (ತತ್ಕಮಳಕಾನನ ಕಂಟಕಲಗ್ನಪಾದನಾದವೊಲ್ ಉಡುಗುತ್ತುಂ ಆತ್ಮಕರಮಂ ರವಿ ಪೊರ್ದಿದಂ ಅಸ್ತಶೈಲಮಂ: **ಪಂಪಭಾ**, ೪. ೪೭)

ಕಾನೀನ – [ನಾ] ಕನ್ಯೆಯಲ್ಲಿ ಹುಟ್ಟಿದವನು, ಕರ್ಣ (ಆಂ ಏಱಿಪೆನೆಂದು ಕಾನೀನಂ ಬಂದೆತ್ತಿ ಬಿಲ್ಲನೇಱಿಸಿ ತೆಗೆಯಲ್ ತಾನಾರ್ತನಿಲ್ಲ : **ಪಂಪಭಾ**, ೩. ೬೦)

ಕಾನೀನಸೂನು – **[ನಾ]** ಕರ್ಣನ ಮಗ, ವೃಷಸೇನ (ಆಗಳ್ ಕಾನೀನಸೂನು ವೃಷಸೇನಂ ಏನುಂ ಮಾಣದೆ ಕಾದುತ್ತಿರ್ದಂ; **ಪಂಪಭಾ**, ೧೧. ೯೬ ವ)

ಕಾಪನಿಡು – **[ಕ್ರಿ]** ಕಾವಲಿಡು (ಮತ್ತೊರ್ವಂ ತನಗೆರಡಱಿಯದೆ ಒಲ್ದ ನಲ್ಲಳನೇತಱೊಳಪ್ಪೊಡಂ ಏವಮಂ ಮಾಡದೆ ಬೇಟಮಂ ಸಲಿಸುವುದರ್ಕೆ ಸಂತಸಂಬಟ್ಟು ಮುಂತಣ್ಗೆ ಕಾಪನಿಟ್ಟು: **ಪಂಪಭಾ**, ೪. ೯೨ ವ)

ಕಾಪಿನ ಬಂಟು – **[ನಾ]** ಕಾವಲು ಭಟ (ತುರಗಮುಂ ಒಂದು ಸತ್ತಿಗೆಯುಂ ಒಂದಿರೆ ಕಾಪಿನ ಬಂಟು ಸುತ್ತಲುಂ ಬರೆ: **ಆದಿಪು**, ೧೧. ೪೬)

ಕಾಪಿನಾಳ್ – **[ನಾ]** ಅಂಗರಕ್ಷಕ (ಸೀಗುರಿ ಕಾಪಿನಾಳ್ ಕುಣಿದು ಮೆಟ್ಟುವ ವಜ್ಜರಿಗಟ್ಟಿ ಬೀರಮಂ ಚಾಗದ ಪೆಂಪುಮಂ ಪೊಗಟ್ಟಿ ಸಂಗಡವರ್ಪವರ್: **ಪಂಪಭಾ**, ೪. ೮೭)

ಕಾಪಿಳಸಿದ್ಧಾಂತ – **[ನಾ]** ಕಪಿಲಮುನಿಯಿಂದ ಪ್ರಣೀತವಾದ ಸಿದ್ಧಾಂತ, ಸಾಂಖ್ಯತತ್ವ (ನಿಜೋಪನ್ಯಸ್ತಮಪ್ಪ ಕಾಪಿಳಸಿದ್ಧಾಂತಮುಮಂ ಯೋಗಶಾಸ್ತ್ರಮುಮಂ ತೋಱಿ ಲೋಕಮಂ ಸಮ್ಯಕ್‌ಜ್ಞಾನಪರಾಙ್ಮುಖಂ ಮಾಡಿರೆ: **ಆದಿಪು,** ೯. ೯೩ ವ)

ಕಾಪು – [ನಾ] ರಕ್ಷಣೆ, ಕಾವಲು (ಅರಸನ ಕೋಷ್ಠಾಗಾರದ ಕರಣಂಗಳ ಕಾಪನೆಯ್ದೆ ಬಂಚಿಸಿ ಕಳ್ದಂ: **ಆದಿಪು**, ೫. ೧೫); ಪ್ರಾಕಾರ (ಸುಮನಶ್ರೀಪರಿಪೂರ್ಣಂ ಅನಂಗನ ಕಾಪೆನೆ ಸೊಗಯಿಪುದು ಬಳಸಿದುದ್ಯಾನವನಂ: **ಆದಿಪು**, ೬. ೯೧)

ಕಾಪುರುಷ – **[ನಾ]** ಅಲ್ಪವ್ಯಕ್ತಿ (ಕಿನ್ನರರ್ ಇನ್ನಾರ ಮಱೆಯಂ ಪುಗುವಮೆನೆಯುಂ ಕಿಂಪುರುಷರ್ ಕಾಪುರುಷರಂತೆ ಬಾಯಂಬಿಡೆಯುಂ: **ಪಂಪಭಾ**, ೫. ೮೮ ವ)

ಕಾಪುವೇಟಿಲ್ – [ಕ್ರಿ] ಕಾವಲಿಗೆ ನೇಮಿಸು (ಮಱುದಿವಸಂ ನೇಸರ್ಮೂಡೆ ಮಂಗಳಾಳಂಕರಣಾಳಂಕೃತನಾಗಿ ಪಡೆವಳ್ಳನಂ ಪಡೆಗೆ ಕಾಪುವೇಟ್ಟು: **ಆದಿಪು,** ೧೨. ೭೪ ವ)

ಕಾಮ – [ನಾ] ಮನ್ಮಥ (ಆ ರತಿ ಪಾಪಮುಂ ಪಡಣಮುಂ ಪೋಪಂತೆ ಕಾಮಂಗೆ ಮಜ್ಜನಕೆ ಎಂದೆತ್ತಿದ ಚಂದ್ರಕಾಂತ ಘಟದೊಳ್ ತಂದು ಅಟ್ಟೆಯಿಂ ಪುಷ್ಪವಾಸನೆಗೆಂದಿಕ್ಕಿದ ನೀಳನೀರರುಹಮಂ ಪೋಲ್ದತ್ತು ಕಟ್ಟೆಂದುವಾ: **ಪಂಪಭಾ** ಪರಿಷತ್ತು, ೪. ೫೧)

ಕಾಮಕಾಂತೆ – [ನಾ] ರತಿದೇವಿ (ಕಾಮಕಾಂತೆ ಬಟೆಯಂ ತನ್ನಿಚ್ಚೆಯಿಂ ಮೆಚ್ಚಿ ಬಣ್ಣವುರಂ ತೀವಿದ ಮಾಟಿಕ್ಕೆಯಾಯ್ತು .. .. ಮಹೀಮಂಡಲಂ: **ಪಂಪಭಾ,** ೭. ೨೪);

ಕಾಮಕಾರ್ಮುಕ – [ನಾ] ಮನ್ಮಥನ ಬಿಲ್ಲು (ಕಳಕಳಿಪಮರಿಯರಂ ಕಣ್ಣೊಳೆ ಬಗ್ಗಿಸುವಲ್ಲಿ ಕಾಮಕಾರ್ಮುಕಕರಸಂ ಚಳನಮನೆ ಪೋಲ್ತು: **ಆದಿಪು,** ೭. ೧೫)

ಕಾಮಕೃತ – [ನಾ] ಕಾಮದ ಗಂಡಾಂತರ (ಎನ್ನ ಗೆಯ್ದ ಕಾಮಾಕ್ರಾಂತಕ್ಕೆ ಕಾಮಕೃತಮೇಂ ಪಿರಿದಲ್ತು: **ಪಂಪಭಾ,** ೧. ೧೧೨ ವ)

ಕಾಮಚಾರಿ – [ನಾ] ಬೇಕಾದ ಕಡೆ ಹೋಗಬಲ್ಲವನು (ಕಾಮರೂಪಿಯುಂ ಕಾಮಚಾರಿಯುಮಪ್ಪ ವಿಜಯಪರ್ವತಮೆಂಬ ಯಾಗಹಸ್ತಿರತ್ನಮುಂ: **ಆದಿಪು,** ೧೧. ೩ ವ)

ಕಾಮತಂತ್ರ – [ನಾ] ಕಾಮಶಾಸ್ತ್ರ (ಬಾಹುಬಲಗೆ ಕಾಮತಂತ್ರ ಸಾಮುದ್ರಿಕ ಆಯುರ್ವೇದ ಧನುರ್ವೇದ ಹಸ್ತ್ಯಶ್ವತಂತ್ರ ರತ್ನಪರೀಕ್ಷೆಗಳುಮಂ: **ಆದಿಪು,** ೮. ೬೦ ವ)

ಕಾಮತತ್ತ್ವವಿದ – [ನಾ] ಕಾಮಶಾಸ್ತ್ರವನ್ನು ಬಲ್ಲವನು (ಎಂದು ಬೇಟಮನೆ ವಸ್ತುಮಾಡಿಯೆ ವಸ್ತುಕವಿತ್ವ ವರ್ಣಕವಿತ್ವ ಕಾಮತತ್ತ್ವವಿದನೆನಿಸಿದ ಅತಿವಿದಗ್ಧಂ ಒರ್ವನಿಂತೆಂದಂ: **ಆದಿಪು,** ೧೨. ೨೨ ವ)

ಕಾಮದೇವ – [ನಾ] ಮನ್ಮಥ (ಆಗಳ್ ಆಱುಂ ಋತುಗಳ ಪೂಗಳಂ ಒಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದ ಓಜನ ಸಾಲೆಯಿರ್ಪಂತಿರ್ಪ ಪೂವಿನ ಸಂತೆಯೊಳ್: **ಪಂಪಭಾ,** ೪. ೮೦ ವ)

ಕಾಮಧೇನು – [ನಾ] ದೇವತೆಗಳ ಹಸು (ಸುರಕುಜದ ನೆಟಿಲೊಳಂಗಣದೊಳೇನುಮಲಪಿಲ್ಲದೆ ಕಟ್ಟಿರೆ ಕಾಮಧೇನು: **ಪಂಪಭಾ,** ೪. ೧೦)

ಕಾಮನಂಬು – [ನಾ] ಮನ್ಮಥನ ಬಾಣ (ಮಜ್ಜನಂಬುಗದೆ ಆರೋಗಿಸಲೊಲ್ಲದೆ ಇರ್ಪ ಇರವಿದೇಂ ನಾಣಳ್ಕು ಇದೇಂ ಕಾಮನಂಬುಗಳ್ ಅತ್ತಿತ್ತೆಡೆಯಾಡೆ ಸೋಂಕವೆ ವಲಂ ನಿನ್ನಂ ಸರೋಜಾನನೇ: **ಪಂಪಭಾ,** ೪. ೬೮)

ಕಾಮನ ಕಾರ್ಮುಕ – [ನಾ] ಕಾಮನಬಿಲ್ಲು ಅಂದರೆ ಕಬ್ಬು (ಶಕ್ರಕಾರ್ಮುಕವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ,** ೭. ೨೫)

ಕಾಮರೂಪಿ – [ನಾ] ಬೇಕಾದ ರೂಪ ಧರಿಸಬಲ್ಲವನು (ಕಾಮರೂಪಿಯುಂ ಕಾಮಾಚಾರಿಯುಂ ಅಪ್ಪ ವಿಜಯಪರ್ವತಮೆಂಬ ಯಾಗ ಹಸ್ತಿರತ್ನಮಮಂ: **ಆದಿಪು,** ೧೧. ೩ ವ)

ಕಾಮರೂಪೆ – [ನಾ] ಬೇಕಾದ ರೂಪ ಧರಿಸಬಲ್ಲವಳು (ಅಂತು ಒಂದಂಬುವೀಡಿನೆಡೆಯೊಳ್ ಕಾಮನ ಅಂಬುವೀಡಿಂಗೊಳಗಾಗಿ ತಾಂ ಕಾಮರೂಪೆಯಪ್ಪುದಜೆಂ ದಿವ್ಯಕನ್ಯಕಾಸ್ವರೂಪಮಂ ಕೆಯ್ಕೊಂಡು: **ಪಂಪಭಾ,** ೩. ೧೩ ವ)

ಕಾಮವೃಷ್ಟಿ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಜೀವರತ್ನಗಳಲ್ಲೊಂದಾದ ಗೃಹಪತಿರತ್ನದ ಹೆಸರು (ನಾಮಗ್ರಹಣಮಾತ್ರದಿಂದಮೆ ಸಮಸ್ತವಸ್ತು ವಿಸ್ತಾರಾಂತರ್ನಿಹಿತ ವಸ್ತುಸಮರ್ಪಣ ಪರಾಯಣನಪ್ಪ ಕಾಮವೃಷ್ಟಿಯೆಂಬ ಗೃಹಪತಿರತ್ನಮುಂ: **ಆದಿಪು,** ೧೧. ೩ ವ)

ಕಾಮಾಂಗ – [ನಾ] ಕಾಮ ಕೆರಳಿಸುವ ಮದ್ಯ (ಈ ಕಕ್ಕರಕ್ಕಿಂತುಟಪ್ಪುದು ಕಳ್ಳಪ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮಂ ಕಾಂತೆಯರ್: **ಪಂಪಭಾ,** ೪. ೮೮)

ಕಾಮಾಕ್ರಾಂತ – [ನಾ] [ಕಾಮ+ಆಕ್ರಾಂತ] ಕಾಮಕ್ರೀಡೆಯ ಮೇಲಿನ ಆಕ್ರಮಣ (ಎನ್ನ ಗೆಯ್ದ ಕಾಮಾಕ್ರಾಂತಕ್ಕೆ ಕಾಮಕೃತಮೇಂ ಪಿರಿದಲ್ತು: **ಪಂಪಭಾ,** ೧. ೧೧೨ ವ)

ಕಾಮಾಗ್ನಿ – [ನಾ] ಕಾಮವೆಂಬ ಬೆಂಕಿ (ಬಳವತ್ ಕಾಮಾಗ್ನಿ ಹೋಮಾಗ್ನಿ ಚಂದನ ಕರ್ಪೂರ ಮೃಣಾಳನಾಳಮೆ ಪೊದಳ್ದ ಇಧ್ಮಂಗಳ್ ಇಂತಾಗೆ ತಾನಿನಿತುಂ ಕಾಮನ ಬೇಳ್ವೆಯೆಂದು ಸುಗಿದಳ್ ತನ್ವಂಗಿ ಬೆಳ್ದಿಂಗಳೊಳ್; **ಪಂಪಭಾ,** ೪. ೫೯)

ಕಾಮಾತುರ – [ನಾ] ಕಾಮಪೀಡಿತ (ಮನಂ ಆರಾಧಿತ ಹೋಮಭೂಮಿ ಪಶುಗಳ್ ಕಾಮಾತುರರ್ ಬಂದ ಮಾವನಿತುಂ ಸ್ಥಾಪಿತಯೂಪಕೋಟಿ: **ಪಂಪಭಾ,** ೪. ೫೯)

ಕಾಮಾನುರಾಗ – [ನಾ] ಕಾಮದ ವಾಂಛೆ (ತಪೋವನದ ಮುನಿಜನದ ಪರಮಾನುರಾಗಮಂ ಪೆರ್ಚಿಸಿ ಕಾಮಾನುರಾಗಮಂ ಬೆರ್ಚಿಸಿ ತದಾಶ್ರಮದೊಳ್ ಆಶ್ರಮಕ್ಕೆ ಗುರುವಾಗಿ ಪಾಂಡುರಾಜನಿರ್ಪನ್ನೆಗಂ: **ಪಂಪಭಾ,** ೧. ೧೧೬ ವ)

ಕಾಯ್ – [ಕ್ರಿ] ಕಾಯಿಬಿಡು (ಇಡಿದಡರೆ ಕಾಯ್ತ ಚೂತಮನಡಸಿ ಸಿಡಿಲ್ ಪೊಯ್ದುದೆನಿಸೆ: **ಆದಿಪು,** ೩. ೩೪); [ಕ್ರಿ] ಕೋಪಿಸಿಕೊ (ಸಾಧುಸಂಕುಳಮಂ ಕಂಡೊಡೆ ಕಾಯ್ವನುಂ ಪಟಿವನುಂ ಧರ್ಮಕೃತಿದ್ರೋಹನುಂ: **ಆದಿಪು,** ೫. ೮೧); [ಕ್ರಿ] ಹೊಂಚು ಹಾಕು, ಸಮಯಕ್ಕಾಗಿ ಕಾಯಿ (ಆಕೆಯಂ ಎನ್ನಂ ಓವೋ ಕಾಯ್ದಿಜೆಯೆ ವಿಧಾತ್ರನೇಂ ಪಡೆದನೋ ಬಿಸವಂದಮನೊಂದವಿಂದಮಂ: **ಆದಿಪು,** ೧೨. ೨೯); [ಕ್ರಿ] ಕಾಪಾಡು (ಕಾಯ್ವ ಅಟಲ್ ಉಱೆ ಜತುಗೃಹದೊಳಗೆ ಅಯ್ವರುಮಂ ಮಂತ್ರಬಲದೆ ಸುಟ್ಟೊಡಂ ಅವರಂ ದೆಯ್ವಬಲಮೊಂದೆ ಕಾದುದು ದೆಯ್ವಮಂ ಆರಯ್ಯೆ ಮೀಱೆ ಬಾಟಿಲ್ ನೆಱೆವರ್: **ಪಂಪಭಾ,** ೪. ೩); [ಕಾಮ] ಕೆರಳು [ಕ್ರಿ] (ಕಾಯ್ದು ಕೈವೀಸುವ ಕಾವನಂದದಿಂ ಇವಳೇಂ ಕುಲನಾರಿಯೋ ವಾರನಾರಿಯೋ: **ಪಂಪಭಾ,** ೮. ೬೨); [ಕ್ರಿ] ಕಾವಲಿರು (ಈ ನಾಲ್ವರ್ಕಳ ಅಸುವಂ ಅವರ್ಗಳ ಮೆಯ್ಯಿಂ ತೊಲಗಿಸಿ ಮುನ್ನಮೆ ಕಾದಿರ್ದ ಅಲಂಘ್ಯಬಲನೆನಿಸಿದ ಎನಗೆ ನೀನಗ್ಗಳಮೇ: **ಪಂಪಭಾ,** ೮.

೪೩); [ಕ್ರಿ] ಬಿಸಿಯಾಗು (ಕಾಯ್ದ ಬೆನ್ನೀರ್ ಮನೆ ಸುಡದು ಎಂಬೊಂದು ನುಡಿಯವೋಲ್: **ಪಂಪಭಾ,** ೯. ೩೮)

ಕಾಯಕಂಪನ – [ನಾ] [ಕೋಪದಿಂದ] ದೇಹ ನಡುಗುವುದು (ನಿಷ್ಕಾರಣ ಕಾಯಕಂಪನಮುಂ ನಿರಾಲಂಬನ ವಾಗಾಡಂಬರಮುಂ ತಕ್ಕುದಲ್ತು: **ಆದಿಪು** ೧೪. ೮೧ ವ)

ಕಾಯಕ್ಲೇಶ – [ನಾ] [ಜೈನ] ದೇಹದಂಡನೆಯನ್ನುಳ್ಳ ಬಾಹ್ಯತಪಸ್ಸುಗಳಲ್ಲಿ ಆರನೆಯದು (ಕಾಯಕ್ಲೇಶಮೆಂಬ ಆಱನೆಯ ತಪಮನೆತ್ತಿಕೊಂಡು: **ಆದಿಪು,** ೬. ೩೦ ವ)

ಕಾಯಪ್ರವೀಚಾರ – [ನಾ] [ಜೈನ] ಈಶಾನಕಲ್ಪದವರೆಗೆ ಅಮರರು ದೇಹಸಂಬಂಧದಿಂದ ಮೈಥುನ ಸುಖವನ್ನನುಭವಿಸುವರು, ಆ ಮೇಲಣ ಲೋಕಗಳವರು ಮನಃಪ್ರವೀಚಾರ – ಮನಸ್ಸಿನಿಂದ ಮೈಥುನಸುಖ – ಅನುಭವಿಸುವರು (ಅರ್ಧಮಾಸನಿರ್ಯತ್ ಸುರಭಿನಿಶ್ವಾಸನುಂ ಕಾಯಪ್ರವೀಚಾರನುಂ .. .. ಆಗಿ: **ಆದಿಪು,** ೨. ೬೯ ವ)

ಕಾಯಮಾನ – [ನಾ] ಚಪ್ಪರ, ಮಂಟಪ (ವಿಳಾಸಿನೀವಾಟದೊಳ್ ಒಂದೆಡೆಯೊಳ್ ಒಂದು ಕಮನೀಯ ಕಾಯಮಾನ ಅಭ್ಯಂತರ ಚಂಚತ್ ಕಾಂಚನಮಂಚೋಪಶೋಭಿತ ಮೃದುತಳ್ಪದೊಳ್: **ಆದಿಪು,** ೧೨. ೧೨ ವ)

ಕಾಯಾಕಾರ – [ನಾ] ದೇಹಾಕೃತಿ (ನಿಮ್ಮ ಮುನ್ನೆ ನುಡಿದ ಕಾಯಾಕಾಪರಿಣತಭೂತಸ್ವಭಾವಮೆ ಚೈತನ್ಯಂ: **ಆದಿಪು,** ೨. ೧೦ ವ)

ಕಾಯೋತ್ಸರ್ಗ – [ನಾ] [ಜೈನ] ಕೈ ಇಳಿಬಿಟ್ಟುಕೊಂಡು ನೇರವಾಗಿ ಮತ್ತು ನಿಶ್ಚಲವಾಗಿ ನಿಂತಿರುವುದು (ಭರತಂ ಕಾಯೋತ್ಸರ್ಗದೊಳಿರೆ ಚಿತ್ತನಿರೋಧದಿಂ ಸಡಿಲ್ದೊಡೆ ತನು: **ಆದಿಪು,** ೧೬. ೩೭)

ಕಾಯ್ಗೊಂಡ – [ನಾ] ನೀರು ಕಾಯಿಸುವ ಹಂಡೆ (ಸರೋವರಜಲಮೋರಂತಿರೆ ಕಾಯ್ಗೊಂಡದ ನೀರಂತಿರೆ ಕುದಿದತ್ತು: **ಆದಿಪು,** ೧೧. ೪೮)

ಕಾಯ್ದ ಪುಡಿ – [ನಾ] ಕಾದ ಮಣ್ಣು (ಅಂತಾ ಬಾಲೆ ಕಾಯ್ದ ಪುಡಿಯೊಳಗೆ ಬಿಸುಟ್ಟ ಎಳವಾಳೆಯಂತೆ ಸುರತ ಮಕರಧ್ವಜನೊಳಾದ ಬೇಟದೊಳ್ ಮಮ್ಮಲ ಮಱುಗುತಿರ್ದಳ್: **ಪಂಪಭಾ,** ೫. ೧೦ ವ)

ಕಾಯ್ದ ಬೆನ್ನೀರ್ ಮನೆಸುಡದು – ಕುದಿಯುವ ನೀರು ಮನೆಯನ್ನು ಸುಡಲಾರದು ಎಂಬ ಗಾದೆ (ನಿಮಗಂ ತಮಗಂ ಮುನಿಸುಂಟೆ ಕಾಯ್ದ ಬೆನ್ನೀರ್ ಮನೆಸುಡದು ಎಂಬೊಂದು ನುಡಿಯವೋಲ್ ಕುರುರಾಜಾ: **ಪಂಪಭಾ,** ೯. ೩೮)

ಕಾಯ್ಪಾಱು – [ಕ್ರಿ] [ಕಾಯ್ಪು+ಆಱು] ಕಾವು [ಕೋಪ] ಕಡಿಮೆಯಾಗು (ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱಿ ನಭಕ್ಕೆ ಪಾಱಿದುದು: **ಪಂಪಭಾ,** ೧. ೧೨೯)

ಕಾಯ್ಪು – ಕೋಪ, ಉಗ್ರತೆ (ಪಿರಿದುಂ ಕಾಯ್ಪಿನೊಳ್ ಎಯ್ದೆ ಕಾಯ್ವ ಸಮಕಟ್ಟಿಂ ದೋಷಮಲ್ತೆ ಅಕ್ಕ ಮಚ್ಚರಮುಂ ಮೋಘಂ: **ಪಂಪಭಾ,** ೭. ೩೫); [ನಾ] ಕಾವು, ತಾಪ (ಮದನನ ಕಾಯ್ಪು ಮಾಣ್ಗೆ ಸರಸೀರುಹಜನ್ಮನ ಮೆಚ್ಚು ತೀರ್ಗೆ ಕೋಳ್ಗುದಿ ಮನದಿಂದಂ ಇಂದು ಪೋಱಮಾಱುಗೆ: **ಪಂಪಭಾ** ಪರಿಷತ್ತು, ೫. ೧೮)

ಕಾಯ್ಪುಗೊಳ್ – [ಕ್ರಿ] ಗಾಬರಿಗೊಳ್ಳು (ಅಳಿನಿವಹದ ಝುಂಕರಣಕ್ಕೆ ಕಾಯ್ಪುಗೊಂಡು ಎಟ್ಟು ಅರಸ ತೋಟಿಲ್ದಪುವು ನಿನ್ನ ವಿಜಯಗಜಂಗಳ್: **ಆದಿಪು,** ೧೨. ೫೧)

ಕಾಯ್ವಂ – [ನಾ] ಕೋಪಿಸಿಕೊಳ್ಳುವವನು (ಪಾಪಿಯುಂ ಅತಿಕ್ರೂರಾತ್ಮನುಂ ಸಾಧುಸಂಕುಳಮಂ ಕಂಡೊಡೆ ಕಾಯ್ವನುಂ ಪಟಿವನುಂ ಧರ್ಮಕೃತಿದ್ರೋಹನುಂ: **ಆದಿಪು,** ೫. ೮೧)

ಕಾರ್ – [ನಾ] ಮಳೆಗಾಲ (ಕಾಮಕಾಂತೆ ಬಟೆಯಂ ತನ್ನಿಚ್ಚೆಯಿಂ ಮೆಚ್ಚಿ ಬಣ್ಣವುರಂ ತೀವಿದ ಮಾಟಕ್ಕೆಯಾಯ್ತು ನವಿಲಿಂ ಕುಂದಂಗಳಿಂ ಇಂದ್ರಗೋಪವಿಳಾಸಂಗಳಿಂ ಆಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ: **ಪಂಪಭಾ,** ೭. ೨೪)

ಕಾರಕ – [ನಾ] ಉಂಟುಮಾಡುವಂಥದ್ದು (ಮಗನೆ ನೆಗಟ್ಟೆ ಕಾರ್ಯಂ ಮಿತ್ರಾರಿಕಾರಕಂ ಎಂಬುದಂ: **ಪಂಪಭಾ,** ೧೩. ೧೦)

ಕಾರಣ – [ನಾ] ಆವಶ್ಯಕತೆ (ಕಾರಣಮಿಲ್ಲ ಜಗದ್ವ್ಯಾಪಾರಂ ಪರಮಂಗೆ ನಿಮ್ಮ ಕಿತ್ತನಿವಮಿದೇಂ: **ಆದಿಪು,** ೯. ೧೦೨)

ಕಾರಣಾಂತರ – [ನಾ] ನಾನಾ ಕಾರಣ, ಬೇರೆ ಕಾರಣ (ನಿನಗೆ ವಧಾರ್ಥಮಾಗಿ ಪುಟ್ಟುವೆನಕ್ಕೆಂದು ಕೋಪಾಗ್ನಿಯಿಂದಂ ಅಗ್ನಿಶರೀರೆಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟಿ ಕಾರಣಾಂತರದೊಳ್ ಶಿಖಂಡಿಯಾಗಿರ್ದಳ್: **ಪಂಪಭಾ,** ೧. ೮೦ ವ)

ಕಾರಿರುಳ್ – [ನಾ] ಕತ್ತಲೆ ತುಂಬಿದ ರಾತ್ರಿ (ಕಾರಿರುಳ ತಿರುಳ ಬಣ್ಣ ಕೂರಿದುವೆನೆ ತೊಳಪ ದಾಡೆ ಮಿಳಿರ್ವ ಉರಿಗೇಸಂ ಪೇರೊಡಲ್ ಎಸೆದಿರೆ ಪುಟ್ಟಿದಂ ಆರುಂ ಅಗುರ್ವಿಸೆ ಮಗಂ ಘಟೋತ್ಕಚನೆಂಬಂ: **ಪಂಪಭಾ,** ೩. ೨೦)

ಕಾರಿರುಳ ತಿರುಳ್ – [ನಾ] ಮಳೆಗಾಲದ ಕತ್ತಲೆಯ ಸಾರ (ಕಾರಿರುಳ ತಿರುಳ ಬಣ್ಣಂ ಕೂರಿದುವೆನೆ ತೊಳಪ ದಾಡೆ: **ಪಂಪಭಾ,** ೩. ೨೦)

ಕಾರಿವ – [ನಾ] ಸುಳ್ಳು, ಕೃತಕ (ಕಾಣ್ಬುದಾವುದು ಒಡಲಲ್ತು ಕಾರಿವಂ: **ಆದಿಪು,** ನರಸಿಂ, ೧೨. ೩೫)

ಕಾರು – [ನಾ] ಕರ್ಮಕ, ಕೆಲಸ ಮಾಡುವವನು (ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾನಿಯೋಗಂಗಳುಮಂ .. .. ಉಪದೇಶಂಗೆಯ್ದು: **ಆದಿಪು,** ೮. ೬೪ ವ)

ಕಾರುಣ್ಯ – [ನಾ] ಕರುಣಾಭಾವ, ದಯೆ (ಜಗತ್ಕಾಯಸ್ವಭಾವ ಭಾವನಾಪರಂ ಸಕಳಶರೀರಗುಣಾಧಿಕ ದುಃಖಾರ್ದಿತ ಅವಿನೀತರೊಳ್ ಮೈತ್ರಿ ಪ್ರಮೋದ ಕಾರುಣ್ಯ ಮಾಧ್ಯಸ್ಥವೃತ್ತಿಗಳಂ ಭಾವಿಸುತ್ತುಂ: **ಆದಿಪು,** ೯. ೧೨೯ ವ)

ಕಾರೋಹಣ – [ನಾ] ಈ ಹೆಸರಿನ ಊರಿನಲ್ಲಿ ತಯಾರಾದ ವಸ್ತ್ರ (ಕಾರೋಹಣದ ಕಕ್ಕರವಳಯಿಗೆಯ ಚಿತ್ರಾವಳಿಯ .. .. ಜವಳಿಗಳನೆ ಮೊಗಂ ನೋಡದೆ ಸೂಸಿದಾಗಳ್: **ಆದಿಪು,** ೪. ೩೪ ವ)

ಕಾರ್ಗಾಲ – [ನಾ] ಮಳೆಗಾಲ (ಕಾರ್ಗಾಲದ ಬರವಂ ಚಾದಗೆ ಪಾರ್ವಂತೆ: **ಪಂಪಭಾ,** ೮. ೩೬ ವ)

ಕಾರ್ತಸ್ವರ – [ನಾ] ಚಿನ್ನ (ಅಲ್ಲಿಂದತ್ತ ಕಾರ್ತಸ್ವರ ವೇದಿಕಾ ವಿಭೂಷಣಂಗಳುಂ ನಾಗದೌವಾರಿಕಾ ಅಭಿರಾಮಂಗಳುಂ: **ಆದಿಪು**, ೧೦. ೩೪ ವ)

ಕಾರ್ತಸ್ವರಗಿರಿ – [ನಾ] ಮೇರುಪರ್ವತ (ದೂರಾಂತರದೊಳೆ ಕಂಡಂ ಕಾರ್ತಸ್ವರಗಿರಿಯಂ ಪೋಲ್ತು ನಿಂದ ನಿಶ್ಚಳತನುವಂ: **ಆದಿಪು**, ೯. ೧೦೦)

ಕಾರ್ತಿಕೇಯ – [ನಾ] ಷಣ್ಮುಖ, ಕುಮಾರಸ್ವಾಮಿ, ಸ್ಕಂದ (ಎಂದು ಬಿನ್ನಪಂಗೆಯ್ದು ಬೇಂಟೆಯಾತಂಗೆ ಮೃಗವ್ಯಾಯಾಮ ಕಾರ್ತಿಕೇಯಂ ಮೆಚ್ಚಿ ಮೆಚ್ಚುಗೊಟ್ಟು: **ಪಂಪಭಾ**, ೫. ४೭ ವ)

ಕಾರ್ಪಾಸ – [ನಾ] ಹತ್ತಿ (ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧ ಧಾನ್ಯಭೇದಂಗಳುಂ: **ಆದಿಪು**, ೬. ೭೨ ವ)

ಕಾರ್ಮುಕ – [ನಾ] ಬಿಲ್ಲು (ಕನಕಪತ್ರಾಂಕಿತ ಕಾರ್ಮುಕಲತಾ ಲಂಬನಂಗಳುಂ: **ಆದಿಪು**, ೧೪. ४೬ ವ); [ನಾ] [<ಕಾರ್+ಮುಖ] ಮಳೆಗಾಲದ ಆರಂಭ (ಶಕ್ರಕಾರ್ಮುಕ ವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ**, ೭. ೨೫)

ಕಾರ್ಮುಕಗುಣ – [ನಾ] ಬಿಲ್ಲಿನ ಹಗ್ಗ (ಇದಱ ದನಿ ಮದವದಳಿಕುಳ ಮೃದುನಿನಾದದೊಳಂ ಮನೋಜಗುಣ ಕಾರ್ಮುಕ ಗುಣನಾದದೊಳಂ ಸೆಣಸುವುದೆನೆ: **ಆದಿಪು**, ೭. ೨೦)

ಕಾರ್ಮುಕಯಷ್ಟಿ – [ನಾ] ಬಿಲ್ಲಿನ ಕಾಂಡ (ಆ ಕಾಮಕಾರ್ಮುಕಯಷ್ಟಿ ಮುಷ್ಟಿಸಮಾಯತ ಜಘನೆಯರೊಳ್ ಆ ರಾಜಕಂಠೀರವಮಧ್ಯಂ: **ಆದಿಪು**, ೮. ೨೩ ವ)

ಕಾರ್ಮುಕವಿದ್ಯೆ – [ನಾ] ಬಿಲ್ವಿದ್ಯೆ (ಅದಟುಂ ಕಾರ್ಮುಕವಿದ್ಯೆಯುಂ ಭುಜಬಳಾವಷ್ಟಂಭಮುಂ ಸಂದು ನಿಂದುದು ಶಲ್ಯನೊಳ್: **ಪಂಪಭಾ**, ೧೩. ೩೧)

ಕಾರ್ಮುಕಾಚಾರ್ಯ – [ನಾ] [ಕಾರ್ಮುಕ+ಆಚಾರ್ಯ] ಬಿಲ್ಲೋಜ, ಧನುರ್ವಿದ್ಯೆಯ ಗುರು, ದ್ರೋಣ (ಎನಗಲ್ತು ಆರ್ಗಂ ಅಸಾಧ್ಯನಲ್ತೆ ವಿಜಯಂ ನೀಂ ಆತನಂ ಗೆಲ್ವ ಮಾತಂ ಅಮೋಘಂ ಬಿಸುಡಿಂದೆ: **ಪಂಪಭಾ**, ೧೧. ೮४)

ಕಾರ್ಮುಗಿಲ್ – [ನಾ] ಮಳೆಗಾಲದ ಮೋಡ, ಕಪ್ಪು ಮೋಡ (ಪೊಳೆವ ಅಮರೇಂದ್ರಗೋಪದ ಪಸುರ್ತೆಳವುಲ್ಗಳ ತಳ್ತ ಕಾರ್ಮುಗಿಲ್ಗಳ ಕಿಱುಗೊಂಕುಗೊಂಕಿದ ಪೊನಲ್ಗಳ್: **ಪಂಪಭಾ**, ೭. ೨೫)

ಕಾರ್ಯಗತಿ – [ನಾ] ಕಾರ್ಯಕಲಾಪ (ಏಂ ಮಹೀಪಾಳರೊಳಾದ ಕಾರ್ಯಗತಿಗಳ್ ಬಗೆಯಲ್ಕೆ ಬಹುಪ್ರಕಾರಮೋ: **ಪಂಪಭಾ**, ೯. ೬)

ಕಾರ್ಯವಶ – [ನಾ] ಸ್ವಕಾರ್ಯಸಾಧನೆ (ಕಾರ್ಯವಶದಿಂ ಕೂರ್ಪಂತೆವೋಲ್ ನಿನ್ನನಾಂ ನೆಱೆ ಕೊಂದೆಂ: **ಪಂಪಭಾ**, ೧೩. ೫)

ಕಾಲಕುಶಲ – [ನಾ] ಯಾವಾವ ಕಾಲದಲ್ಲಿ ಏನಾಗುವುದೆಂಬುದನ್ನು ಊಹಿಸಬಲ್ಲ ಕುಶಲತೆಯುಳ್ಳವನು (ಚಕ್ರಿ ಕಾಲಕುಶಲನಪ್ಪುದಱಿಂ ಅಶ್ವತ್ಥಾಮನಿಂ ಅಪ್ಪ ಅನಾಗತ ಬಾಧಾವಿಘಾತಮಂ ಮಾಡಲೆಂದು: **ಪಂಪಭಾ**, ೧೩. ೯೮ ವ)

ಕಾಲದಂಡ – [ನಾ] ಯಮದಂಡ (ಎಂದು ನುಡಿದು ಗಜಱಿ ಗರ್ಜಿಸಿ ಕಾಲದಂಡಮಂ ಪೋಲ್ವ ತನ್ನ ಗದಾದಂಡಮಂ ಕೊಂಡು: **ಪಂಪಭಾ**, ೧೨. ೧೬೧ ವ)

ಕಾಲದಂತಕ – [ನಾ] ಪ್ರಳಯ ಕಾಲದ ಯಮ (ಚಾರಿಸಿ ಬಾಳಾಗಮಮಂ ಅವತಾರಂಗೆಯ್ದಂತೆ ಕಾಲದಂತಕನನೆ ಪೋಲ್ತು ಆರುತ್ತುಂ ಕವಿವ ಅದಟರಂ ಓರೊಂದೋರೊಂದೆ ಪೊಯ್ದು ಕೊಂದರ್ ಪಲರಂ: **ಪಂಪಭಾ**, ೧೦. ೮೩)

ಕಾಲದು – [ನಾ] ಕಾಲಿರುವುದು (ತಲ್ಲೋಕಸುಖಾನುಭವಾಪೇಕ್ಷೆಯಿಂ ಐಹಿಕಸುಖವಿಮುಖನಾಗಿ ಶರೀರಾರ್ಥವ್ಯಯಂ ಮಾಡುವಾತಂ ಕಯ್ಯದಂ ಬಿಟ್ಟು ಕಾಲದರ್ಕೆ ಎಱಗುವಾತನಂ ಪೋಲ್ಗುಂ: **ಆದಿಪು**, ೨. ೯ ವ)

ಕಾಲಮೇಘಸಮೂಹ – [ನಾ] ಕಪ್ಪು ಮೋಡಗಳ ರಾಶಿ (ಮಸಿಯಿಂದಂ ಜಗಮೆಲ್ಲಮಂ ದಿತಿಸುತಂ ಮುಂ ಪೂಟ್ದನೋ ಕಾಲಮೇಘಸಮೂಹಂ ದೆಸೆಯೆಲ್ಲಮಂ ಕವಿದುದೋ: **ಪಂಪಭಾ**, ४. ४೯)

ಕಾಲರಾಜ – [ನಾ] ಕಾಲಪುರುಷ (ಕಾಲರಾಜನ ಜಗದ್ಗೃಹಪ್ರವೇಶಕ್ಕೆ ನಿಜಿಸಿದ ಕನಕ ಕಳಶಯುಗಳಮುಮಂ ಪೌರ್ಣಮಾಸೀ ಸೌಂದರಿಯ ಸಿಂದೂರಾರುಣ ಕ್ರೀಡಾಗೋಳಕಂಗಳುಮಂ ಪೋಲ್ತು: **ಆದಿಪು**, ೬. ೫೧ ವ)

ಕಾಲರೂಪ – [ನಾ] ವಿನಾಶದ ಆಕೃತಿ, ಯಮಸ್ವರೂಪಿ (ಜಗತ್ತ್ರಯಮನೊರ್ಮೆಯೆ ನುಂಗುವ ಕಾಲರೂಪಮಂ ತೋಱಿದಂ ಅಂತೆ ರೌದ್ರರೂಪಮಂ: **ಪಂಪಭಾ**, ೯. ೬೦)

ಕಾಲಲಬ್ಧಿ – [ನಾ] [ಜೈನ] ಲಬ್ಧಿಪಂಚಕಗಳಲ್ಲಿ ಒಂದು; ಆಧ್ಯಾತ್ಮಿಕ ಜೀವನದ ಆರಂಭಕ್ಕೆ ಪಕ್ವವಾದ ಕಾಲ ಬರುವುದು (ನಿಮ್ಮ ಮನದಿಂ ಮಿಥ್ಯಾಕಳಂಕಂ ತೆರಳ್ದಿನಿತುಂ ಪೋಗದು ಕಾಲಲಬ್ಧಿ ದೊರೆಕೊಂಡಂದಲ್ಲದೇಂ ಪೋಕುಮೇ: **ಆದಿಪು**, ೨. ೨೨)

ಕಾಲವಂಚನೆ – [ನಾ] ಕಾಲವನ್ನು ನೂಕು ಅಥವಾ ಸಾವಿನಿಂದ ತಪ್ಪಿಸಿಕೊ (ಅಮರನದೀನಂದನ ಉಪದೇಶದಿಂದಾತಂ ಕೊಳನಂ ಪೊಕ್ಕು ಕಾಲವಂಚನೆಗೆಯ್ಯಲಿರ್ದನಕ್ಕುಂ: **ಪಂಪಭಾ**, ೧೩. ೭೬ ವ)

ಕಾಲಾಂತಕ – [ನಾ] ಕಾಲಸಂಹರ (ಆಗಳ್ ಕುರುಧ್ವಜಿನಿಯುಂ ಅನೇಕ ಶಂಖ ಕಾಹಳ ಭೇರೀ ಪಣವ ಝಲ್ಲರೀ ಮೃದಂಗ ತೂರ್ಯಂಗಳ್ ಅಂತಕಾಲಾಂತಕ ವಿಕಟಾಟ್ಟಹಾಸಂಗಳ್ ಎಂಬಂತೆ ಮೊೞಗೆ: **ಪಂಪಭಾ**, ೧೧. ೩೩ ವ)

ಕಾಲಾಗ್ನಿ – [ನಾ] ಪ್ರಳಯಕಾಲದ ಬೆಂಕಿ (ಕಾಲಾಗ್ನಿಯಂ ಕೀಡಿ ಸುತ್ತುವಂತೆ ಕರ್ಣನಂ ಸುತ್ತಿ ಮುತ್ತಿಕೊಂಡು ಕಣೆಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ ವಿವಿಧ ಆಯುಧಂಗಳೊಳಿಟ್ಟುಂ ಇಱಿದುಂ: **ಪಂಪಭಾ**, ೧೨. ೧೧೮ ವ)

ಕಾಲಾಗ್ನಿರುದ್ರ – [ನಾ] ಪ್ರಳಯಕಾಲದ ಬೆಂಕಿಯುಗುಳುವ ರುದ್ರ (ರಸೆಯೊಳ್ ಕಾಲಾಗ್ನಿರುದ್ರಂ ಜಲಶಯನದೊಳ್ ಅಂಭೋಜನಾಭಂ ಪೊದಳ್ದು ಆಗಸದಿಂ ಸುತ್ತಿರ್ದ ಅಜಾಂಡೋದರದೊಳ್ ಅಜಂ ಅಡಂಗಿರ್ಪವೋಲ್: **ಪಂಪಭಾ**, ೮. ೮೬)

ಕಾಲಾನಲ – [ನಾ] ಪ್ರಳಯಕಾಲದ ಬೆಂಕಿ (ಅಂತು ಪೊಱಮಡುವ ಅರಾತಿ ಕಾಲಾನಲನಂ ಕಂಡು ಕಡ್ಡುವಂದ ದೊಡ್ಡರೆಲ್ಲಂ ಮುಸುಱೆ: **ಪಂಪಭಾ,** ೩. ೬೧ ವ)

ಕಾಲಾನುಭಾವ – [ನಾ] ಕಾಲದ ಪ್ರಭಾವ (ಎಲ್ಲಿಯುಂ ನಿಲ್ಲದೆ ಬಂದು ಕಾಲಾನುಭಾವದಿಂ ಯುಗಾರಂಭದ ವರ್ಷಾರಂಭದೊಳಂ: **ಆದಿಪು,** ೧೨. ೬೮ ವ)

ಕಾಲಾವಧಿ – [ನಾ] ಕಾಲದ ಗಡುವು (ಕೃತಶಾಸ್ತ್ರರ್ ಧೃತಶಸ್ತ್ರರ್ ಅತಿಪ್ರಾಗಲಭ್ಯರೀಗಳ್ ಪೃಥಾಸುತರುದ್ಯೋಗಮನೆತ್ತಿಕೊಳ್ವ ದೆವಸಂ ಸಾರ್ಚಿತ್ತು ಕಾಲಾವಧಿಸ್ಥಿತಿಯುಂ ಬಂದುದು: **ಪಂಪಭಾ,** ೮. ೮೭)

ಕಾಲಾಳ್ – [ನಾ] ಪದಾತಿ (ಕಾಲಾಳೊಳಂ ಕುದುರೆಯೊಳಂ ಒಳಗಂ ಬರಲಾನೆ ಬಲ್ಲೆಂ: **ಪಂಪಭಾ,** ೫. ೪೩ ವ)

ಕಾಲೂರ್ – [ನಾ] ಚಿಕ್ಕ ಹಳ್ಳಿ, ಕುಗ್ರಾಮ (ಕಾಲೂರ್ಗಳ ಗಂಡರ ಪೆಂಡಿರ ನಡೆಯ ಉಡೆಯ ನುಡಿಯ ಮುಡಿಯ ಗಾಂಪಿಂಗೆ ಮುಗುಳ್ನಗೆ ನಗುತ್ತುಂ ಅಲ್ಲಿಗಲ್ಲಿಗೆ ಒಡೆದ ಕೆಱೆಗಂ ಅೞಿದ ಆಯತನಕ್ಕಂ ಧನಮನಿತ್ತು ಜೀರ್ಣೋದ್ಧಾರಂಗಳಂ ಮಾಡಿಸುತ್ತುಂ: **ಪಂಪಭಾ,** ೨. ೯೭ ವ)

ಕಾಲ್ಗಳ ಮೊದಲ್ – [ನಾ] ಪಾದತಳ (ಬಳಗಂ ಬೆರಸರೆಬರ್ ಕಾಲ್ಗಳ ಮೊದಲೊಳ್ ಉದಶ್ರುಲೋಚನರ್: **ಆದಿಪು,** ೯. ೧೨೯)

ಕಾಲ್ಗಾಪು – [ನಾ] ಪದಾತಿ, ಕಾಲಾಳು (ಕಾಲ್ಗಾಪು ಕಾಲ್ಗಾಪಿನೊಳ್ ಜೋದರ್ ಜೋದರೊಳ್ ಆನೆ ಆನೆಯೊಳ್ ಅಗುರ್ವಪ್ಪನ್ನೆಗಂ ಕಾದೆ ಕಣ್ಗೆ ಆದಂ ಚೆಲ್ವೆಸೆದತ್ತು ಮೂಱು ನೆಲೆಯಿಂ ಮಾದ್ಯದ್ಗಜೇಂದ್ರಾಹವಂ: **ಪಂಪಭಾ,** ೧೦. ೯೩)

ಕಾಲ್ಗುತ್ತು – [ಕ್ರಿ] ಕಾಲಿನಿಂದ ಕುಕ್ಕು, ಬೆದಕಿ ಪರೀಕ್ಷಿಸು (ಅವನೀನಾಥನ ಗೆಯ್ದ ಪೊಲ್ಲಮೆಗಂ ಎನ್ನ ಒಳ್ಪಿಂಗಂ ಇಂ ಸಕ್ಕಿಯಾಗಿ ಅವಂ ಈವಂತುಟಂ ಅದಂ ಬಲ್ಲಂತು ಕಾಲ್ಗುತ್ತಿ ನೋಡು: **ಪಂಪಭಾ,** ೯. ೨೬)

ಕಾಲ್ಗೆಱಗು – [ಕ್ರಿ] [ಕಾಲ್ಗೆ+ಎಱಗು] ಕಾಲಿಗೆ ಬೀಳು, ನಮಸ್ಕರಿಸು (ತಂದಿತ್ತು ಕೆಯ್ಸೆಱೆಯಂ ಕೊಟ್ಟು ಅಳವಟ್ಟ ಸಾರಧನಮಂ ಮೂವಿಟ್ಟಿಗಂ ಪೂಣ್ದು ಕಾಲ್ಗೆಱಗಿತ್ತರಿಗಂಗೆ ಬೆರ್ಚಿ ಭಯದಿಂ ಗ್ರಾಮಂ ಕುಳಂ ರಾಜಕಂ: **ಪಂಪಭಾ,** ೬. ೩೦)

ಕಾಲ್ವಿಡಿ – [ಕ್ರಿ] ಕಾಲುಹಿಡಿ, ಬೇಡಿಕೊ (ಇದಿರೊಳ್ ನಿಂದೊಡೆ ವಜ್ರಿ ಸೈರಿಸಂ ಇರಲ್ವೇಡ ಎಮ್ಮೊಳೊಳ್ವೊಕ್ಕು ನಿಲ್ವುದು ನೀಂ ಎಂದು ಕಡಂಗಿ ಕಾಲ್ವಿಡಿವವೋಲ್ ತನ್ನೂರ್ಮಿಗಳ್ ಬಂದುವು: **ಪಂಪಭಾ,** ೪. ೨೪)

ಕಾವ – [ನಾ] [ಕಾಮ] ಮನ್ಮಥ (ಕಾವನ ಅಂಬು ಅವಱ ಬಿಣ್ಪಿನೊಳ್ ಒಯ್ಯನೆ ಜೋಲ್ದವೋಲೆ ತಾಂಬೂಲ ಕರಂಕವಾಹಿನಿಯ ಮೇಲೆ ನೆಱಲ್ದಿರೆ ಬಾಲೆ ಲೀಲೆಯಿಂ: **ಪಂಪಭಾ,** ೪. ೪೩)

ಕಾವಣ – [ನಾ] [ಕಾಯಮಾನ] ಚಪ್ಪರ, ಹಂದರ (ಪೊಸದಳಿರ ಕಾವಣದೊಳಗೆ ನೃಪೇಶ್ವರನ ಘರ್ಮಜಳಕಣಗಣಮಂ ಕಳೆದುದು .. .. ಜಳಾರ್ದ್ರಸಮೀರಂ: **ಆದಿಪು,** ೧೧. ೭೪)

ಕಾವನಂಬು – [ನಾ] ಕಾಮಬಾಣ (ಕಾವನಂಬವಱ ಬಿಣ್ಪಿನೊಳೊಯ್ಯನೆ ಜೋಲ್ದವೊಲೆ ತಾಂಬೂಲಕರಂಕ ವಾಹಿನಿಯ ಮೇಲೆ ನೆಱಲ್ದಿರೆ ಬಾಲೆ ಲೀಲೆಯಿಂ: **ಪಂಪಭಾ,** ೪. ೪೩)

ಕಾವರ್ ಕಣೆಗೊಣ್ಡವೊಲ್ – ಕಾಪಾಡುವವರೇ ಬಾಣ [ಆಯುಧ] ಹಿಡಿದ ಹಾಗೆ ಎಂಬ ಗಾದೆ (ಪತಿ ನುಡಿದಂ ದೇವರ್ ಕಲುಷಂಗೊಣ್ಡಾಗಳ್ ಕಾವರ್ ಕಣೆಗೊಣ್ಡವೊಲ್ ಎಂದೆಂಬ ಮಾತಿನಂತಾಗದೇ: **ಪಂಪಭಾ,** ೧೧. ೨೮)

ಕಾವು – [ನಾ] ದಂಟು, ದೇಟು (ಮಡಿದು ತಂದಿಟ್ಟ ಪೊಸನೆಯ್ದಿಲ ಕಾವಂ ಆಗಳುಂ ಗೆಲ್ದ ರತ್ನಕುಂಡಲಗಳ ಪೊಳಪಂ ಒಳಕೊಂಡಂತೆ: **ಪಂಪಭಾ,** ೨. ೩೯ ವ); [ನಾ] ಹಿಡಿಕೆ (ಬಿಳಿಯ ತಾವರೆಯೆಸಳೊಳ್ ಮಾಡಿದ ಬೆಳ್ಗೊಡೆ ರಯ್ಯಮಾಗೆ ಎಡದ ಕೆಯ್ಯೊಳ್ ಪೊಳೆಪ ಚೆಂಬೊನ್ನ ಕಾವಿನ ಚಾಮರಂ ಅಮರ್ದಿರೆ: **ಪಂಪಭಾ,** ೧೩. ೧೦೮)

ಕಾವ್ಯಧರ್ಮ – [ನಾ] ಕಾವ್ಯದ ರೀತಿ, ಅನುಭವದ ಮೂಲಕ ಬದುಕಿನ ಶೋಧನೆ (ನೆಗಟ್ದ ಆದಿಪುರಾಣದೊಳ್ ಅಱಿವುದು ಕಾವ್ಯಧರ್ಮಮಂ ಧರ್ಮಮುಮಂ: **ಆದಿಪು,** ೧. ೩೮)

ಕಾವ್ಯಬಂಧ – [ನಾ] ಕಾವ್ಯರಚನೆ (ಬಗೆ ಪೊಸತಪ್ಪುದಾಗೆ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊಪ್ಪುಗುಂ: **ಪಂಪಭಾ,** ೧.೮)

ಕಾಶ್ಮೀರ – [ನಾ] ಕುಂಕುಮ ಕೇಸರಿ (ಬಣ್ಣದಿಂ ಕಂಪಿಂದೆ ಏನಲೆದುದೊ ಬೈತುಗದಂತಿರೆ ತಲೆಗೇಱುವ ಕುಸುಮನಿಚಯಂ ಕಾಶ್ಮೀರಂ: **ಆದಿಪು**. ನರಸಿಂ, ೧೧. ೧೨೬)

ಕಾಶ್ಮೀರರಾಗ – [ನಾ] ಕುಂಕುಮಕೇಸರಿಯ ಬಣ್ಣ (ಆ ಪ್ರಸ್ತಾವದೊಳ್ ಅಂತಃಪುರದ ಪೂಸಿದ ಕಾಶ್ಮೀರರಾಗಮುಂ ಉಟ್ಟ ಕೌಸುಂಭಾಂಬರರುಚಿಯುಂ: **ಆದಿಪು,** ೧೨. ೧ ವ)

ಕಾಶ್ಯ – [ನಾ] ಪ್ರಕಾಶ, ತೇಜಸ್ಸು (ತೇಜೋವಾಚಕಮಪ್ಪ ಕಾಶ್ಯಮಂ ಪಾಲಿಸುವುದಱಿಂ ಕಾಶ್ಯಪನುಂ: **ಆದಿಪು,** ೮. ೭೫ ವ)

ಕಾಶ್ಯಪ – [ನಾ] ಆದಿದೇವನ ಒಂದು ಹೆಸರು, ಪ್ರಕಾಶಮಾನನಾದವನು (ತೇಜೋವಾಚಕಮಪ್ಪ ಕಾಶ್ಯಮಂ ಪಾಲಿಸುವುದಱಿಂ ಕಾಶ್ಯಪನುಂ: **ಆದಿಪು,** ೮. ೭೫ ವ)

ಕಾಷ್ಠ – [ನಾ] ಕಟ್ಟಿಗೆ (ಹರಿಚಂದನಕರ್ಪೂರ ಕಾಳಾಗರು ಕಾಷ್ಠಂಗಳಿಂದಂ ಯಥೋಕ್ತವಿಧಿಯಿಂ ಸಂಸ್ಕಾರಿಸಿ ಕರ್ಣಂಗೆ ಕರ್ಣಸ್ಥಳಿಯೆಂಬ ತೀರ್ಥಮಂ ಮಾಡಿ: **ಪಂಪಭಾ,** ೧೪. ೧೦ ವ)

ಕಾಸಟ – [ನಾ] [ಕಾರ್ಪಾಸಪಟ] ಹತ್ತಿಯ ಬಟ್ಟೆ (ಸಾಸಿರ ಪೊಂಗೆಯ್ದುಂ ಚಿಃ ಕಾಸಟಮೆಂದು ಒಂದು ಲಕ್ಕಗೆಯ್ವುದಿದರ್ಕಂ ಮಾಸರಂ ಉಡಲೆಂದು ಅಧಿಕ ವಿಳಾಸದಿಂದ ಉಡಲಿಕ್ಕಿ ನೆಱೆಯೆ ಬಿಯಮಂ ಮೆಱೆದಂ: **ಪಂಪಭಾ,** ೩. ೪೪)

ಕಾಹಳ – [ನಾ] ದೊಡ್ಡ ಭೇರಿ, ನಗಾರಿ (ಆಗಳ್ ಕುರುಧ್ವಜಿನಿಯುಂ ಅನೇಕ ಶಂಖ ಕಾಹಳ ಭೇರೀ ಪಣವ ಝುಲ್ಲರೀ ಮೃದಂಗ ತೂರ್ಯಂಗಳ್ ಅಂತ ಕಾಲಾಂತಕ ವಿಕಟಾಟ್ಟಹಾಸಂಗಳ್ ಎಂಬಂತೆ ಮೊೞಗೆ: **ಪಂಪಭಾ,** ೧೧. ೩೩ ವ)

ಕಾಹಳೌಘ – [ನಾ] ಕಹಳೆಗಳ ಸಮೂಹ (ಕಿವಿಯಂ ಮುಟ್ಟಿತ್ತು ವಿವಿಧಗತಿಪ್ರೋಚ್ಚಳತ್ ಕಾಹಳೌಘಂ: **ಆದಿಪು,** ೧೪. ೯೪)

ಕಾಳಕೂಟ – [ನಾ] ಕಡು ವಿಷ (ಅಮರ್ದಂ ಕುಡಿವಂತೆ ಲುಂದಿನಿಂಪು ಅಮರ್ದೊಡಮೇನಗಲ್ಕೆ ಮುಳಿಸೆಂಬೆರಡುಂ ಗಡ ಕಾಳಕೂಟಂ: **ಆದಿಪು,** ೧೨. ೨೭)

ಕಾಳರಕ್ಕಸ – [ನಾ] ಕಪ್ಪುಬಣ್ಣದ ರಾಕ್ಷಸ (ಕಾರೋ ಮೇಣ್ ಕಾಳರಕ್ಕಸನೋ ಪೇಟ್ಟಿನೆ ಬಂದು ತಾಗೆ: **ಪಂಪಭಾ,** ೭. ೨೭)

ಕಾಳಭಾಗ – [ನಾ] ಆನೆಯ ಜಘನಭಾಗ (ಅಂಸಳ ಕಾಳಭಗನುಂ .. .. ಸಪ್ತದ್ವಾಸ್ಥಿತನುವುಮಪ್ಪ ವಿಜಯಪರ್ವತಗಜೇಂದ್ರಂ: **ಆದಿಪು,** ೧೨. ೫೬ ವ)

ಕಾಳರಾಜ – [ನಾ] ಸಾವು (ಜರೆ ಬಂದೊಟ್ಟೈಸೆ ಮಾಣ್ದಿರ್ದಳಿಪೆನಗಿದೆ ಮುಂ ಸಾಲದೇ ಕಾಳರಾಜಂ ಬರೆಯುಂ ಮಾಣ್ದಿರ್ಪನೇ: **ಆದಿಪು,** ೨. ೪೯)

ಕಾಳವಟ್ಟ – [ನಾ] [ಕಾಲಪೃಷ್ಠ] ಕರ್ಣನ ಬಿಲ್ಲಿನ ಹೆಸರು (ದಿವ್ಯಾಸ್ತ್ರಂಗಳ ದೋಣೆಗಳಂ ಎರಡುಂ ದೆಸೆಯೊಳಂ ಬಿಗಿದು ಕಾಳವಟ್ಟದ ಬಿಲ್ಲಂ ಕೆಂದಳದೊಳ್ ಅಮರೆ ಪಿಡಿದು ನೀವಿ ಜೇವೊಡೆದಾಗಳ್: **ಪಂಪಭಾ,** ೧೨. ೧೩೫ ವ)

ಕಾಳಸೆ – [ನಾ] ಗಾಢತ್ವ (ಮಿಱುಗುವ ತಾರಹಾರಮುಮಂ ಅಪ್ಪಿನ ಕಾಳಸೆಗೆ ಅಡ್ಡಮೆಂಬ ಬೇಸಱೆನೊಳೆ: **ಪಂಪಭಾ,** ೪. ೧೦೫)

ಕಾಳಸೆಗೊಳ್ – [ಕ್ರಿ] ಸೇರು, ಬೆಸೆದುಕೊ (ಅನಿಲಪಥಂ ಧಾರಿಣೀಚಕ್ರದೊಳ್ ಕಾಳಸೆಗೊಂಡಿತ್ತೆಂಬಿನಂ ಮಂದಯಿಸಿ: **ಆದಿಪು,** ೧೪. ೯೫); [ಕ್ರಿ] ಸರಪಳಿಯಂತೆ ಸೇರಿಕೊ (ನೀಳಂ ಆಗಸದೊಳ್ ಕಾಳಸೆಗೊಂಡುದೆಂಬಿನೆಗಂ ಅದ್ರೀಂದ್ರಂಗಳಂ ತಂದು ಕೀಲಿಸಿದಂ ನಿಶ್ಚಳಮಪ್ಪಿನಂ: **ಆದಿಪು,** ೧೫. ೫೦)

ಕಾಳಸ್ವರೂಪ – [ನಾ] ಯಮನಂತಹ ರೂಪ (ಅಯ್ವರುಂ ಪ್ರಚಂಡಕೋದಂಡಹಸ್ತರ್ ಕಾಳಕಾಳಸ್ವರೂಪಮಂ ಕೆಯ್ಕೊಂಡು: **ಪಂಪಭಾ,** ೮. ೩೭ ವ)

ಕಾಳಾಂತ – [ನಾ] ಪ್ರಳಯ (ಕಾಳಾಂತ ಪವನಹತಿ ಕಲ್ಲೋಳವಿಳ ಜಳಧಿನಿನದಮೋ ನಿರ್ಘಾತಾಭೀಳತರರಭಸಮೋ ಲಯಕಾಳಾಂಬುದಘೋಷಮೋ ನೆಲಂ ಮೊಱಗಿದುದೋ: **ಆದಿಪು,** ೧೨. ೯೧)

ಕಾಳಾಗರು – [ನಾ] ಕರಿಯ ಅಗಿಲು (ಅತಿಬಹುಳ ಕಾಳಾಗರುಧೂಪ ಧೂಮಾಮೋದದೊಳ್ ಅತಿವಿಶದಮಣಿ ಪ್ರದೀಪಿಕೋದ್ದ್ಯೋತ ದೂರೀಕೃತತಮಸ್ತಮದೊಳ್: **ಆದಿಪು,** ೫. ೨೨ ವ)

ಕಾಳಾನಳ – [ನಾ] ಪ್ರಳಯಕಾಲದ ಬೆಂಕಿ (ಕೆಳೆಯುಂ ಗುಱೆಯುಂ ಗೊಟ್ಟಿಯುಂ ಅಳವಿಗೆ ಪಿರಿದಾಗೆ ತನಗೆ ದುರ್ಯೋಧನನೊಳ್ ಮುಳಿಸುಂ ನೋವುಂ ಕಲುಷಮುಂ ಅಳುಂಬಂ ಎನೆ ತನಗೆ ಅರಾತಿಕಾಳಾನಳನೊಳ್; **ಪಂಪಭಾ,** ೨. ೫೮)

ಕಾಳಾಯಸವಳಯ – [ನಾ] ಕಬ್ಬಿಣದ ಬಳೆ (ಉಪನಿಟಿಲಘಟಿತ ಕುಟಿಲಜೂಟಬಂಧಮುಂ ಆಕೂರ್ಪರರಚಿತ ಕಾಳಾಯಸ ವಳಯ ಭಯಂಕರಕರದ್ವಯಮುಂ: **ಆದಿಪು,** ೧೩. ೪೫ ವ)

ಕಾಳಾಹಿಮಥನ – [ನಾ] ಕಾಳಿಂಗಸರ್ಪವನ್ನು ಕೊಂದವನು, ಶ್ರೀಕೃಷ್ಣ (ತನ್ನ ಬಾಳ ನೀರಂತೆ ಕಱಂಗಿ ಕರ್ಗಿದ ನೀರಂ ನೋಡಿ ವಿಕ್ರಮಾರ್ಜುನಂ ಕಾಳಾಹಿಮಥನನ ಮೊಗಮಂ ನೋಡಿ: **ಪಂಪಭಾ,** ೫. ೫೩ ವ)

ಕಾಳಿಂಗಾಂಗಸಂಭವ – [ನಾ] ಕಳಿಂಗ ಮತ್ತು ಅಂಗದೇಶಗಳಲ್ಲಿ ಹುಟ್ಟಿದ (ಅಂತು ಕಾಳಿಂಗಾಂಗಸಂಭವಂಗಳಪ್ಪ ಮದಾಂಧಗಂಧ ಸಿಂಧುರಂಗಳುಮಂ ಅಜಾನೇಯ ಕಾಂಭೋಜ ಭೂಮಿಜಂಗಳಪ್ಪ ಜಾತ್ಯಶ್ವಂಗಳುಮಂ: **ಪಂಪಭಾ,** ೬. ೭೨ ವ)

ಕಾಳಿಂದೀ – [ನಾ] ಯಮುನಾ ನದಿ (ಅಂತು ಕಾಳಿಂದೀಜಲಶಿಶಿರಶೀಕರ ವಾರಿಚಾರಿಯುಂ ಮೃಗಯಾಪರಿಭ್ರಮಶ್ರಮೋತ್ಥಿತ ಸ್ವೇದಜಲ ಲವಹಾರಿಯುಂ ಆಗಿ ಬಂದ ಮಂದಾನಿಲಕ್ಕೆ: **ಪಂಪಭಾ,** ೫. ೫೩ ವ)

ಕಾಳಿಕೆ – [ನಾ] ದೋಷ (ಪವನಹತಂಗಳ್ ಮುನಿಪುಂಗವನ ಜಟಾಜಾಳಲತಿಕೆಗಳ್ ನಿಮಿರ್ದುವು ಅನುಪ್ರವಿಶದ್ಧ್ಯಾನಾನಲ ದಗ್ಧ ವಿಸ್ಫುರಜ್ಜೀವಕ ಕನಕಕಾಳಿಕೆಗಳವೋಲ್: **ಆದಿಪು,** ೯. ೯೫)

ಕಾಳಿಯ ನಾಗ – [ನಾ] ಕೃಷ್ಣಸರ್ಪ (ವಿಷಂ ಒಳ್ಳೆಗುಳ್ಳೊಡಂ ಅದು ಒಳ್ಳೆಯೆ ಕಾಳಿಯ ನಾಗನಾಗದು: **ಪಂಪಭಾ,** ೧೨. ೪೧)

ಕಾಱ್ – [ಕ್ರಿ] ಕಕ್ಕು, ವಾಂತಿ ಮಾಡು (ಏಱೆಪೆವೆಂಬವರ್ ನೆಲದಿನೆತ್ತಲುಮಾಱದೆ ಬಿಟ್ಟು ನೆತ್ತರಂ ಕಾಱೆಯುಂ: **ಪಂಪಭಾ,** ೩. ೫೮)

ಕಾಟ್ – [ನಾ] ಕೆಟ್ಟದ್ದು (ಕಾಟಾದ ವಾಟಿಗ್ತೊಂಡೊಡೆ ಪಾಟಾದುದು ಮನಮುಂ ಎರ್ದೆಯುಂ ಏನಂ ಪೇಟ್ವೆಂ: **ಪಂಪಭಾ,** ೪. ೬೬)

ಕಾಟ್ಟುಱು – [ನಾ] ಕಾಡು ದನ (ಕಾಟ್ಟುಱು ಮಸಗಿದಂತೆ .. .. ಓಜೆಯೊಳೆರಡುಂ ಪಡೆಗಳ ಪಡೆವಳರ್ಕಳ್ ಕುರುಕ್ಷೇತ್ರದೊಳ್ ಚಿತ್ರಿಸಿದಂತೆ ಒಡ್ಡಿ ನಿಂದಾಗಳ್: **ಪಂಪಭಾ,** ೧೦. ೫೧ ವ)

ಕಾಟ್ಟುರ – [ನಾ] ಕಾಡಿನ ತೊರೆ, ಪ್ರವಾಹ (ಕೆಲರ್ ಕುದುಕುಳಿ ರಕ್ಕಸರ್ ಬಿಸುಗೆಗಳ್ವೆರಸು ಉಗ್ರ ಮಹಾಗಜಂಗಳಂ ಚಿದುರ್ಗಿಡೆ ನುಂಗಿ ಬಿಕ್ಕಿ ಕುಡಿದರ್ ಬಿಸುನೆತ್ತರ ಕಾಟ್ಟುರಂಗಳಂ: **ಪಂಪಭಾ,** ೧೨. ೮)

ಕಿಂಕರಭಾವ – [ನಾ] ಸೇವಕನಂತೆ ಇರುವುದು (ಈತನೊಳ್ ತೊಟ್ಟ ಕಿಂಕರಭಾವಂ ಎಮಗಕ್ಕಿಗೊಟ್ಟು ಮಡಗೂಟುಣ್ಬಂದಮಂ ಪೋಲದೇ: **ಆದಿಪು,** ೧೪. ೩೨)

ಕಿಂಕಿಣೀದಾಮ – [ನಾ] ಕಿರುಗೆಜ್ಜೆಗಳುಳ್ಳ ನಡುಕಟ್ಟು (ಕಟಿತಟದೊಳ್ ಮಾಣಿಕ್ಯಮಣಿ ಕಿಂಕಿಣೀದಾಮಮಂ ತಗುಳ್ಚಿ: **ಆದಿಪು,** ೭. ೧೦೫ ವ)

ಕಿಂಕಿರಾತಶೇಖರ – [ನಾ] ಕೆಂಪು ಗೋರಂಟಿಯ ಹೂದಂಡೆ (ಪುರಜನಮತ್ತೆಯಿಂ ಮುಡಿವ ಕೂಡೆ ತುಱುಂಬುವ ಕಿಂಕಿರಾತಶೇಖರರಜದಿಂದೆ: **ಆದಿಪು,** ೭. ೧೧೪)

ಕಿಂಕಿರಿವೋಗು – [ಕ್ರಿ] ಕಿರಿಕಿರಿಗೊಳ್ಳು, ಸಿಡಿಮಿಡಿಗೊಳ್ಳು (ಅತ್ತ ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ಕೇಳ್ದು ತನ್ನ ಗರ್ಭಂ ತಡೆದುದರ್ಕೆ ಕಿನಿಸಿ ಕಿಂಕಿರಿವೋಗಿ: **ಪಂಪಭಾ,** ೧. ೧೨೮ ವ)

ಕಿಂಕೊಟಿ – [ನಾ] ಕೆಸರು, ರಾಡಿ (ಬೆಂಕೊಳೆ ಕಳಿಂಗರಾಜನ ನೂಂಕಿದ ಕರಿಘಟೆಯಂ ಉಡಿಯೆ ಬಡಿಬಡಿದೆತ್ತಂ ಕಿಂಕೊಟಿ ಮಾಱ್ಪುದುಂ: **ಪಂಪಭಾ**, ೧೧. ೧೦೨); [ನಾ] ಧ್ವಂಸ (ಕೆಡೆದ ರಥಂಗಳ್ ಇಟ್ಟೆಡೆಯೊಳ್ ಕಿಂಕೊಟಿಯಾಗಿ ಪೆತ್ತ ಕೆನ್ನೆತ್ತರೊಳ್ ಮೆತ್ತಿ ರೂಪಱೆಯಲಾಗದಂತಿರ್ದ ವೀರಭಟರಗುರ್ವಂ ಪಡೆಯೆ: **ಪಂಪಭಾ,** ೧೨. ೬೦ ವ)

ಕಿಂಚ – [ಅ] ಮತ್ತು (ಕಿಂಚ ಆಕಸ್ಮಿಕ ಪಾಂಸುಪಲ್ಲವ ಜಳಸ್ಯಂದೀ ಅದಾಸಿಂದುರ್ ಅಪ್ರಾಗೇಯಂ ಪ್ರಿಯಗಳ್ಳಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ,** ೯. ೯೭)

ಕಿಂಜಲ್ಕ – [ನಾ] ಕೇಸರ, ಹೂವಿನ ಕುಸುರು (ತೋಱೆತ್ತು ಕೊಳಂ ಪರಿವಿಕಸಿತ ಕನಕಕಂಜ ಕಿಂಜಲ್ಕಪುಂಜ ಪಿಂಜರಿತಜಳಂ: **ಪಂಪಭಾ**, ೮. ೩೮)

ಕಿಂಪಾಕ – [ನಾ] ಒಂದು ವಿಷದಹಣ್ಣಿನ ಮರ, ಕಾರಸ್ಕರ ವೃಕ್ಷ (ಪಾಕದೊಳತಿವಿಷಮಂ ಕಿಂಪಾಕಫಳಪ್ರತಿಮಂ ಅಖಿಳವಿಷಯ ಸುಖಂ: **ಆದಿಪು**, ೪. ೭೪)

ಕಿಂಪುರುಷ – [ನಾ] ಕುದುರೆಯ ತಲೆ ಮತ್ತು ಮನುಷ್ಯನ ದೇಹದ ದೇವತೆ, ಕಿನ್ನರ (ಕಿನ್ನರರ್ ಇನ್ನಾರ ಮಱಿಯಂ ಪುಗುವಮೆನೆಯುಂ ಕಿಂಪುರುಷರ್ ಕಾಪುರುಷರಂತೆ ಬಾಯಂಬಿಡೆಯುಂ: **ಪಂಪಭಾ**, ೫. ೮೮ ವ)

ಕಿಕ್ಕಿಱಿಗಿಱಿ – [ಕ್ರಿ] ದಟ್ಟೈಸು (ಸಿಡಿಲ್ದ ಬಾಳ ಮೊನೆಯಂಬಿನ ತಿಂತಿಣಿಯೊಳ್ ತಗುಳ್ದು ಕಿಕ್ಕಿಱಿಗಿಱಿದಿರ್ದ ಕೊಳ್ಗುಳದೊಳಂ ನಡೆವೀ ನಡೆಗೆಂತು ನೋಂತೆಯೋ: **ಪಂಪಭಾ**, ೧೩. ೫೨)

ಕಿಚ್ಚಂ ಕೊಳಿಸು – [ಕ್ರಿ] ಬೆಂಕಿ ಹೊತ್ತಿಸು (ಕೊಂತಿವೆಸರಯ್ವರುಮಂ ಮುನ್ನಮೊಯ್ಯನೊಯ್ಯನೆ ಸುರಂಗದಿಂ ಪೊಱಮಡಿಸಿ ಭೀಮಸೇನಂ ಪುರೋಚನಂ ಮಱಿಕೆಂದಿರ್ದ ಓವರಿಯೊಳ್ ಕಿಚ್ಚಂ ಕೊಳಿಸಲೊಡಂ: **ಪಂಪಭಾ**, ೩. ೪ ವ)

ಕಿಚ್ಚಂ ದಯೆಗೆಯ್ವುದು – ಅಗ್ನಿಪ್ರವೇಶ ಮಾಡಲು ಬೇಂಕಿಯನ್ನು ಕರುಣಿಸು (ಆತನೆನ್ನಂ ಪಾಣಿಗ್ರಹಣಂಗೆಯ್ವಂತು ಮಾಡಲಾಱದೊಡೆ ಕಿಚ್ಚಂ ದಯೆಗೆಯ್ವುದು: **ಪಂಪಭಾ,** ೧. ೭೬ ವ)

ಕಿಚ್ಚು – [ನಾ] ಬೆಂಕಿ (ಕೀಲೊಳೆ ಕಿಚ್ಚು ಪುಟ್ಟಿ ಭೋರ್ಗರೆದು ಉರಿದಂತೆ ನಿನ್ನ ಮಗನಿಂದುರಿದತ್ತು ಇದನಾರೊ ಬಾರಿಪರ್: **ಪಂಪಭಾ,** ೭. ೧೬)

ಕಿಚ್ಚುಂ ಕಿಡಿಯುಮಾಗು – [ಕ್ರಿ] ಬೆಂಕಿ ಕಿಡಿಯಂತೆ ಕೋಪಗೊಳ್ಳು (ಅಂತೆಚ್ಚು ಕಿಚ್ಚುಂ ಕಿಡಿಯುಮಾಗಿ ಪೆರ್ಚಿದ ಉಮ್ಮಚ್ಚದಿಂದ ಅಚ್ಚರಿಯಾಗೆ ಕಾದೆ: **ಪಂಪಭಾ**, ೧೧. ೧೫೦ ವ)

ಕಿಡದ ಗುಣಂ – [ನಾ] ನಾಶವಾಗದ ಎಂಟು ಗುಣಗಳು: ಸಂವೇಗ, ನಿರ್ವೇಗ, ನಿಂದಾ, ಗರ್ಹಾ, ಉಪಶಮ, ಭಕ್ತಿ, ಅನುಕಂಪಾ, ವಾತ್ಸಲ್ಯ ಎಂಬ ಎಂಟು ಗುಣಗಳು (ಪೆಣೆದೆಂಟುಂ ಕಿಲ್ಬಿಷಂಗಳ್ ಕಿಡೆ ಕಿಡದ ಗುಣಂ ಪೊರ್ದೆ ಬಂದು ಎಂಟುಂ: **ಆದಿಪು**, ೧. ೨)

ಕಿಡಿಗುಟ್ಟು – [ನಾ] ಕಿಡಿ ಹಾರಿಸು (ಎರಡುಂ ಕಿಡಿಗುಟ್ಟಿ ಸಿಡಿಲ್ ಸಿಡಿಯೆ ಪೋರ್ದುವು: **ಪಂಪಭಾ,** ೧೧. ೨೨)

ಕಿಡಿಸು – [ನಾ] ಲಯಮಾಡು (ಮಾಡುವ ಕಿಡಿಸುವ ಗಸಣಿಗೆ ನಾಡೆಯುಮದು ಪೊಱಗು ಸಹಜನಿಯತಸ್ಥಿತಿ ನಾಡಾಡಿಯ ನರರ್ಗದು ಬಗೆಯಲ್ ಕೂಡದು: **ಆದಿಪು**, ೧. ೪೬); [ನಾ] ನಿವಾರಿಸು (ಜಗದ ಬಡತನಮಂ ಒರ್ಮೆಯೆ ಬಗೆದಂತಿರೆ ಕಿಡಿಪ ಚಕ್ರಿ: **ಆದಿಪು**, ೮. ೩೧); [ಕ್ರಿ] ಕೆಡಿಸು, ಹಾಳು ಮಾಡು (ಎಗ್ಗರೆಯ್ದೆ ಕಣ್ದೆಱಿವಿನಂ ಆರ್ ವಟೆಯದೇಂ ಎಳೆಯಂ ಕಿಡಿಸಲ್ಕೆ ಬಲ್ಲರೋ: **ಪಂಪಭಾ,** ೪. ೯೫); [ಕ್ರಿ] ಹೋಗಲಾಡಿಸು (ಮದಮನಾಳ್ದ ಅವಿವೇಕತೆಯಿಂದಮಲ್ತೆ ತೊಟ್ಟಿನ ಮೊಲೆವಾಲನುಂಡ ಗುಣಂ ಇಂತಿವನಾರ್ ಕಿಡಿಪರ್ ನರೇಂದ್ರರೊಳ್: **ಪಂಪಭಾ**, ೧೨. ೯೩)

ಕಿಡು – [ಕ್ರಿ] ನಾಶವಾಗು (ಕರಿಪತಿಯನೇಱೆ ಕೋಡಗಮಿರೆ ಕಂಡುದಱೆಂದಂ ಆದಿಭೂಪರ್ ಕಿಡೆ ಬೇಡರುಂ ಅಕುಲೀನರುಂ ಅತಿದುಶ್ಚರಿತ್ರರುಂ ಭೂಪರಪ್ಪರ್: **ಆದಿಪು,** ೧೫. ೩೭); [ಕ್ರಿ] ನಿಂತುಹೋಗು (ಹಿರಣ್ಯಗರ್ಭಬ್ರಹ್ಮರಿಂ ತಗುಳ್ದು ಅವ್ಯವಚ್ಛಿನ್ನಮಾಗಿ ಬಂದ ಸೋಮವಂಶಂ ಈಗಳ್ ಎಮ್ಮ ಕುಲಸಂತತಿಗಂ ಆರುಮಿಲ್ಲದೆ ಎಡವಱೆದು ಕಿಡುವಂತಾಗಿರ್ದುದು: **ಪಂಪಭಾ**, ೧. ೮೪ ವ)

ಕಿಡುಗುಮೆ – ಕೆಟ್ಟೇ ಕೆಡುತ್ತದೆ, ಎಂದರೆ ಅಶಾಶ್ವತ (ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಟಿಸ್ತೆ ನನ್ನಿಯ ನುಡಿಯಂ ಕಿಡೆ ನೆಗಟಿ ನಾನುಮೆರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ: **ಪಂಪಭಾ**, ೧. ೮೨)

ಕಿಡೆ ನುಡಿ – [ಕ್ರಿ] [ಕೆಲಸ] ಕೆಡಿಸುವ ಮಾತಾಡು (ಕುಡುವಂ ಗುರು ಪಡೆವರ್ ಪೆಱರ್ ಎಡೆಯೊಳ್ ನೀಮಾರ್ಗೆ ಇದೇಕೆ ಕಿಡೆನುಡಿದಪಿರ್: **ಆದಿಪು**, ೯. ೧೦೭); [ಕ್ರಿ] ಹೋಗಲಾಡಿಸುವಂತೆ ಮಾತಾಡು (ಆಗಳಾದಿತ್ಯನಾಕೆಯ ಮನದ ಶಂಕೆಯುಮಂ ನಡುಗುವ ಮೆಯ್ಯ ನಡುಕಮಂ ಕಿಡೆ ನುಡಿದು: **ಪಂಪಭಾ,** ೧. ೯೨ ವ); [ಕ್ರಿ] ತಿರಸ್ಕರಿಸಿ ಮಾತಾಡು (ಭೂನಾಥಂ ತನ್ನ ಅಳವನಱೆದುಂ ಅಱೆಯದೆ ಕಿಡೆನುಡಿದು ತಪೋವನದೊಳಲ್ಲದೆ ನೀಗೆಂ ಎಂದೆಟ್ಟು ನಿಂದಿರ್ದನಂ: **ಪಂಪಭಾ**, ೧೨. ೧೩೪ ವ)

ಕಿಡೆನೆಗಟು – [ಕ್ರಿ] ಕೆಡುವಂತೆ ಮಾಡು (ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಟಿಸ್ತೆ ನನ್ನಿಯ ನುಡಿಯಂ ಕಿಡೆ ನೆಗಟಿ ನಾನುಮೆರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ: **ಪಂಪಭಾ**, ೧. ೮೨)

ಕಿಡೆವರ್ – [ಕ್ರಿ] ಕೆಡಲು ಬಂದವು, ನಾಶವಾಗತೊಡಗು (ತ್ರಿವಳಿಗಳುಂ ವಿರೋಧಿನೃಪರುತ್ಸವಮುಂ ಕಿಡೆವಂದುವು ಆನನೇಂದುವ ಕಡುವೆಳ್ಪು ಕೂಸಿನ ನೆಗಟ್ತೆಯ ಬೆಳ್ಪುವೊಲಾಯ್ತು: **ಪಂಪಭಾ,** ೧. ೧೨೫)

ಕಿಣೀಕೃತ – [ಗು] ತೀಡಲ್ಪಟ್ಟ (ನಂಟರ್ ನಿಮಗೆಮ್ಮಿಂದಗ್ಗಳಮಾರ್ ಸಮಸ್ತಸುರಮಕುಟಮಣಿ ಕಿಣೀಕೃತಚರಣಾ: **ಆದಿಪು**, ೯. ೯೯)

ಕಿತ್ತಂಬು – [ನಾ] [ಕಿಱಿದು ಅಂಬು] ಕಿರಿದಾದ ಬಾಣ (ಅಂಬರಮೆಲ್ಲಂ ಅಂಬಿನೊಳೆ ಪೂಟಿ ಮಹೀಭುಜರ್ ಎತ್ತಂ ಎಚ್ಚ ಕಿತ್ತಂಬುಗಳ್ ಎತ್ತಂ ಅವ್ವಳಿಸೆ: **ಪಂಪಭಾ,** ೧೧. ೪೨)

ಕಿತ್ತನ್ – [ನಾ] [ಕಿಱಿದು+ಅನ್] ಚಿಕ್ಕವನು, ಸಣ್ಣವನು (ಮನೆಯನಿವಂ ಮನೋಭವನಿವಂ ಪೊಸಸುಗ್ಗಿಯೊಳ್ ಆದ ಅದೊಂದು ಕಿತ್ತನ್ ಇವಂ: **ಪಂಪಭಾ**, ೪. ೯೭)

ಕಿತ್ತನಿವ – [ನಾ] ಕಿರುಕುಳ, ಪೀಡೆ (ಕಾರಣಮಿಲ್ಲ ಜಗದ್ವ್ಯಾಪಾರಂ ಪರಮಂಗೆ ನಿಮ್ಮ ಕಿತ್ತನಿವಮನಿದೇಂ ದೂರಂ ಯುಕ್ತಾಯುಕ್ತವಿಚಾರಂ ವಿಷಯಾರ್ಥಿಗೆಂಬುದಂ ಮಾಡುವಿರೇ: **ಆದಿಪು,** ೯. ೧೦೨)

ಕಿನಿಸು – [ಕ್ರಿ] ಕೋಪಿಸಿಕೊ (ಬೆಸಕಯ್ ನಿಜವಲ್ಲಭಂ ಏನನೆಂದೊಡಂ ಕಿನಿಸದಿರ್ ಒಂದಿದ ಅಗ್ರಮಹಿಷೀ ಪದದಲ್ಲಿ ಪದಸ್ಥೆಯಾಗು: **ಆದಿಪು**, ೪. ೫೬)

ಕಿನ್ನರ – [ನಾ] ಕುದುರೆಯಂತೆ ಮುಖ ಹಾಗೂ ಮನುಷ್ಯನಂತೆ ಶರೀರವುಳ್ಳ ಒಂದು ಅತಿಮಾನುವ ಜೀವಿ (ಕಿನ್ನರರ್ ಇನ್ನಾರ ಮಱಿಯಂ ಪುಗುವಮೆನೆಯುಂ ಕಿಂಪುರುಷರ್ ಕಾಪುರುಷರಂತೆ ಬಾಯಂಬಿಡೆಯುಂ: **ಪಂಪಭಾ**, ೫. ೮೮ ವ)

ಕಿನ್ನರೀಜನ – [ನಾ] ಕಿನ್ನರ ಸ್ತ್ರೀಯರು (ಉಪವಾದಕ ಪರಿವಾದಕ ವಾದ್ಯಂಗಳೊಳ್ ಕಿನ್ನರೀಜನ ಮಧುರಗೀತಾನುಗತಂಗಳಂ ಅನುಕ್ರಮದೊಳ್ ನೆಗೞ್: **ಆದಿಪು**, ೭. ೧೧೮ ವ)

ಕಿಮ್ಮೀರ – [ನಾ] ಭೀಮನಿಂದ ಸತ್ತ ಒಬ್ಬ ರಾಕ್ಷಸ (ತದ್ವನಾಧಿಪತಿಯಪ್ಪ ದೈತ್ಯಂ ಕಿಮ್ಮೀರಂ: **ಪಂಪಭಾ**, ೭. ೨೬ ವ)

ಕಿಮ್ಮೀರವೈರಿ – [ನಾ] ಭೀಮ (ಮೂರ್ಛಾಗತನಾಗಿರ್ದ ಕುರುಕುಳ ಚೂಡಾಮಣಿಯಂ ಏನುಂ ಮಾಣದೆ ಕಿಮ್ಮೀರವೈರಿ ಮುಟ್ಟೆವಂದಾಗಳ್: **ಪಂಪಭಾ**, ೧೩. ೯೭ ವ)

ಕಿರಣ – [ನಾ] ಬೆಳಕಿನ ಕಾಂತಿ (ಪಸರಿಪ ಇನಕಿರಣಂಗಳ್: **ಪಂಪಭಾ,** ೧೨. ೧೦೮)

ಕಿರಣದ್ಯೋತಿತ ಪಾದಂ: [ನಾ] ಕಾಂತಿಯಿಂದ ಬೆಳಗಿಸಲ್ಪಟ್ಟ ಪಾದಗಳುಳ್ಳವನು (ಆತಂ ನಿಜವಿಜಯಖ್ಯಾತಿಯನಾಳ್ದು ಆಳ್ದನಧಿಕಬಲನವನಿಪತಿವ್ರಾತ ಮಣಿ ಮಕುಟ ಕಿರಣದ್ಯೋತಿತ ಪಾದಂ ಸಪಾದ ಲಕ್ಷಕ್ಷಿತಿಯಂ: **ಪಂಪಭಾ,** ೧. ೧೬)

ಕಿರಣಾಪಾಳಿತ – [ನಾ] ಕಾಂತಿಯಿಂದ ಪೋಷಿತವಾದ (ಶ್ರೀಪತಿಗೆ ಯುದ್ಧಮಲ್ಲ ಮಹೀಪತಿಗೆ ನೆಗೞ್ತೆ ಪುಟ್ಟೆ ಪುಟ್ಟಿದಂ ಅಖಿಳ ಕ್ಷ್ಮಾಪಾಲಮೌಳಿ ಮಣಿರಂಜಿತ ಕಿರಣಾಪಾಳಿತ ನಖಮಯೂಖರಂಜಿತ ಚರಣಂ: **ಪಂಪಭಾ,** ೧. ೧೮)

ಕಿರಾತ – [ನಾ] ಬೇಡ (ವೃಕೋದರನಟ್ಟಿದ ಕಿರಾತಂ ವಿಂಧ್ಯಕನೆಂಬಂ ಬಂದು ದುರ್ಯೋಧನನಂ ಎಲ್ಲಿಯುಂ ಅಱಸಿ ಕಾಣದೆ: **ಪಂಪಭಾ**, ೧೩. ೭೬ ವ)

ಕಿರಾತಬಲ – [ನಾ] ಬೇಡಪಡೆ (ವನಚರನಾಗಿ ಶಂಭು ಗಿರಿಜಾತೆಯಂ ಓತು ಪುಳಿಂದಿ ಮಾಡಿ ನಚ್ಚಿನ ಗುಹನಂ ಕಿರಾತಬಲನಾಯಕನಾಗಿರೆ ಮಾಡಿ: **ಪಂಪಭಾ**, ೮. ೧೪)

ಕಿರೀಟ – [ನಾ] ರಾಜರ ತಲೆಯ ರತ್ನಖಚಿತ ಟೊಪ್ಪಿಗೆ (ತನ್ನ ರತ್ನವಿಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿನಾಮಮಂ ಸರಸದಿಂ ಆಗಳುಚ್ಚರಿಸಿ ಸಾಹಸಮಂ ಪೊಗಟ್ಟಿಂ ಸುರಾಧಿಪಂ: **ಪಂಪಭಾ**, ೫. ೧೦೩)

ಕಿರೀಟಿ – [ನಾ] ಅರ್ಜುನ (ತನ್ನ ರತ್ನವಿಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿನಾಮಮಂ ಸರಸದಿಂ ಆಗಳುಚ್ಚರಿಸಿ ಸಾಹಸಮಂ ಪೊಗಟ್ಟಿಂ ಸುರಾಧಿಪಂ: **ಪಂಪಭಾ**, ೫. ೧೦೩)

ಕಿರ್ಚು – [ನಾ] ಬೆಂಕಿ, ಸಂಸ್ಕಾರ ಮಾಡು (ಕೊಟ್ಟೈ ಕಿರ್ಚಂ ಉದಗ್ರ ಶೋಕಶಿಖಿಯಿಂ ಕಣ್ಣೀರ್ಗಳಿಂದೆಯ್ದೆ ನೀರ್ಗೊಟ್ಟೈ: **ಪಂಪಭಾ**, ೧೩. ೬೧)

ಕಿರ್ಚೆಟ್ – [ಕ್ರಿ] ಕಿಚ್ಚೇಳು, ಕೋಪದ ಬೆಂಕಿಯಾಗು (ಅವಂ ಕಂಡು ಕಿನಿಸಿ ಕಿರ್ಚೆಟ್ಟು ಅವೆಲ್ಲವಂ ಪೊಱಗೆ ಬಿಸುಟು ಬನ್ನಿಂ ಎಂಬುದುಂ ವ್ಯಾಸಭಟ್ಟಾರಕಂ ಬಂದು ಗಾಂಧಾರಿಯಂ ಬಗ್ಗಿಸಿ; **ಪಂಪಭಾ,** ೧. ೧೩೦ ವ)

ಕಿಲುಂಬುಗೊಳ್ – [ಕ್ರಿ] ಕಿಲುಬುಗಟ್ಟು (ಕರಂಗಳಡಂಗಿ ಕಿಲುಂಬುಗೊಂಡ ಕನ್ನಡಿಗೆಣೆಯಾಯ್ತು ಭಾನುವಳಯಂ: **ಪಂಪಭಾ**, ೬. ೩೬)

ಕಿಲ್ಬಿಷ – [ನಾ] [ಜೈನ] ಒಂದು ದೇವತಾವರ್ಗ (ಸಾಮಾನಿಕ ತ್ರಾಯಸ್ತ್ರಿಂಶತ್ಪಾರಿಷದ ಆತ್ಮರಕ್ಷ ಲೋಕಪಾಳ ಅಭಿಯೋಗ್ಯ ಕಿಲ್ಬಿಷರೊಡನೆ: **ಆದಿಪು**, ೭. ೪೨ ವ) ['ತ್ರಾಯಸ್ತ್ರಿಂಶತ್' ನರಸಿಂಹಶಾಸ್ತ್ರಿಗಳು ಅನುಮೋದಿಸಿರುವ ಪಾಠ]

ಕಿವಿವೊಗು – [ಕ್ರಿ] [ಕಿವಿ+ಪೊಗು] ಕಿವಿಯನ್ನು ಪ್ರವೇಶಿಸು, ಕೇಳಿಸು (ತೆಂಕಣಗಾಳಿ ಸೋಂಕಿದೊಡಂ ಒಳ್ನುಡಿಗೇಳ್ದೊಡಂ ಇಂಪನಾಳ್ದ ಗೇಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಂ: **ಪಂಪಭಾ,** ೪. ೩೦)

ಕಿವಿ ಸದ್ದಂಗಿಡು – [ಕ್ರಿ] ಕಿವಿ ಶಬ್ದ[ಸಾಮರ್ಥ್ಯವನ್ನು] ಕಳೆದುಕೊ (ಬದ್ದವಣದ ಪಱಿಗಳ್ ಕಿವಿ ಸದ್ದಂಗಿಡೆ ಮೊೞಗೆ ದೇವದುಂದುಭಿರವದೊಂದುದ್ದಾನಿ ನೆಗೞ್: **ಪಂಪಭಾ,** ೧೨. ೨೧೮)

ಕಿವುಚಿದುಚಿ – [ಕ್ರಿ] [ಕಿಮುಚ್>ಕಿವುಚ್=ಕಿವಿಚು] ಅಜ್ಜುಬಜ್ಜಾಗುವಂತೆ ತುಳಿ (ಅನ್ನೆಗಂ ಅತ್ತ ಸಂಸಪ್ತಕಬಲಮೆಲ್ಲಮಂ ಅಳಱಿ ಪೆಳಱಿ ಕಿವುಚಿದುಚಿದು ಕೊಲ್ವಲ್ಲಿ ವಿಕ್ರಮಾರ್ಜುನಂ ಮುರಾಂತಕನೊಳ್ ಇಂತೆಂದಂ: **ಪಂಪಭಾ**, ೧೧. ೧೦ ವ)

ಕಿವುಡ್ಕೇಳ್ – [ಕ್ರಿ] ಕಿವುಡುಗೇಳು, ಕೇಳಿದರೂ ಕೇಳಿಸದಂತಿರು (ಬಿಡದೆ ಕಡುಕೆಯ್ದು ದಿವ್ಯದ ನುಡಿಗೆ ಕಿವುಡ್ಕೇಳ್ದು ಕುಡಿದು ನೀರಂ ಭೀಮಂ ಗದೆವೆರಸು ಭೋಂಕನೆ ಕೆಡದಂ ಗಿರಿ ಶಿಖರದೊಡನೆ ಕೆಡೆವಂತಾಗಳ್: **ಪಂಪಭಾ**, ೮. ೪೨)

ಕಿಶೋರಕೇಸರಿ – [ನಾ] ಸಿಂಹದ ಮರಿ (ತಮ್ಮೊಡನೆ ನಲಿದಾಡುವ ಕಿಶೋರಕೇಸರಿಗಳಂ ತೆಗೆವ ಕರಿಕಳಭಂಗಳುಮಂ ಆ ಪೞುವಂಗಳಿಂದೆ ಪಾಯ್ವ ಪುಲಿಗಳ ಮಱಿಗಳೊಳ್ ಪರಿದಾಡುವ ತರುಣ ಹರಿಣಂಗಳುಮಂ: **ಪಂಪಭಾ**, ೧. ೧೧೫ ವ)

ಕಿಶೋರಹರಿ – [ನಾ] ಸಿಂಹದ ಮರಿ (ಕಿಶೋರಹರಿಯಂ ನವಕೇಸರಾಜಿ ಮಿಕ್ಕ ದಿಕ್ಕರಿಯಂ ಅನೂನ ದಾನಪರಿಶೋಭೆ ಮನಂಗೊಳೆ ಪೊರ್ದುವಂತೆ: **ಪಂಪಭಾ**, ೨. ೩೯)

ಕಿಸಲಯ – [ನಾ] ಚಿಗುರು (ನಳಿತೋಳಿಂ ಸೆಳೆಗೊಂಬಂ ತೆಗೆದೊರ್ವಳ್ ವಿಳಾಸವತಿ ತಿಱಿದಳ್ ಆಮ್ರನವಕಿಸಲಯಮಂ: **ಆದಿಪು**, ೧೧. ೧೦೫)

ಕಿಸುಗಣ್ಚು – [ಕ್ರಿ] ಕಣ್ಣು ಕೆಂಪಾಗಿಸಿಕೊ, ಕೋಪಿಸಿಕೊ (ನೀಳ್ಪಂ ಬೆಳ್ಪುಮಂ ತಾಳ್ದಿ ಪರವನಿತೆಯರ ದೆಸೆಗೆ ಕಿಸುಗಣ್ಚಿದಂತೆ

ಕಿಸುಸೆರೆವರಿದು ಸೊಗಯಿಸುವ ಶೌಚಾಂಜನೇಯನ ಕಣ್ಗಳ್: **ಪಂಪಭಾ**, ೨. ೩೯ ವ)

ಕಿಸುಗಲ್ – [ನಾ] ಕೆಂಪು ಕಲ್ಲು, ಮಾಣಿಕ್ಯ (ರಸರಸದ ಬಾವಿ ಮನೆಮನೆಗೆ ಬೇಱೆ ಕಿಸುಗಲ್ಗಳ ರಜದ ಕಣಿವೆರಸು ತೋಱೆ: **ಪಂಪಭಾ**, ೪. ೧೦)

ಕಿಸುಗಾಡು – [ನಾ] ಕೆಂಪು ಕಾಡು, ಕೆಂಪು ಮಣ್ಣಿನ ಭೂಮಿ (ಕಿಸುಗಾಡ ನೆಲಂಗಳ್ ಎಳದಳಿರ ಬಣ್ಣಮಂ ಕೆಯ್ಕೊಂಡು ವಿರಹಿಗಳ ಮನಮನೊಲಿಸುವಂತೆ ಜಲಜಲನೆ ಪರಿವ ಜರಿವೊನಲ್ಗಳುಮಂ: **ಪಂಪಭಾ**, ೭. ೨೫ ವ)

ಕಿಸುರ್ – [ನಾ] ಹಿಂಸಾಕಾರ್ಯ (ಎಮ್ಮ ಕಿಸುರ್ ಪಿಂಗುಗೆ ಅಗಲ್ವೆಡೆಯೊಳ್ ಕೆಳೆ ಸಂಗಳಿಸುಗೆ: **ಆದಿಪು**, ೧೧. ೧೩೩); ವಿರೋಧ (ಆನೆ ಪೂಣ್ದ ಇಡುವಗೆಗೆ ಎನ್ನೊಳಾದ ಕಿಸುರ್ ಎನ್ನೊಡವೋಪುದು ಒಳ್ಳಿತು ಎನ್ನ ಪಿಂಬಡಿನೊಳೆ: **ಪಂಪಭಾ**, ೧೩. ೧೮)

ಕಿಸುವೊನ್ – [ನಾ] [ಕೆಚ್ಚನೆಯ ಪೊನ್=ಕೆಂಪಾದ ಲೋಹ] ತಾಮ್ರ (ಮಿಟ್ಟು ಪಲ್ಮೊರೆವಂತೆ ಮೊರೆದು ಪರಿವ ತನ್ನ ಕಿಸುವೊನ್ನ ರಥಮುಂ ಭಯಂಕರಾಕಾರಮಾಗೆ: **ಪಂಪಭಾ**, ೧೦. ೯೭ ವ)

ಕಿಸುಸಂಜೆ – [ನಾ] ಕೆಂಪಾದ ಸಂಜೆ (ಕಿಸುಸಂಜೆವೆರಸು ಕಟ್ಟಿಲೆ ಪಸರಿಸಿದಪುದೆನಿಸಿ ಕಣ್ಣ ಕೆಂಪುಂ ಭ್ರುಕುಟಿ ಪ್ರಸಾರಾಂಧಕಾರಮುಂ ದೆಸೆದೆಸೆಗೆಸೆದುವು: **ಆದಿಪು**, ೧೪. ೮೩)

ಕಿಸುಸೆರೆ – [ನಾ] ಕೆಂಪಾದ ನರ (ಯಶಃಪ್ರಸರದೊಡನೆ ನೀಳ್ಪಂ ಬೆಳ್ಪುಮಂ ಒಳಕೊಂಡು ಕಿಸುಸೆರೆವರಿದ ಕಣ್ಗಳುಂ: **ಆದಿಪು**, ೩. ೯ ವ)

ಕಿಸುಱ್ – [ನಾ] ಅಸಹನೆ (ನಿನಗಪ್ಪ ಅರಸಂ ದುರ್ಯೋಧನನ ಒಲವಂ ಮುಂದುಗೆಯ್ದು ಬೆಸಕೆಯ್ವರೆ ನಿನ್ನನುಜರ್ ಎರಟಿರ್ದೆಸೆಗಂ ಕಿಸುಱೆನಿಸಾಗದು ಮಗನೆ: **ಪಂಪಭಾ**, ೯. ೮೩)

ಕಿಳಕಿಂಚಿತ – [ನಾ] ಶೃಂಗಾರಚೇಷ್ಟೆ (ಅಂತಃಪುರೀಜನಂಗಳ ಲೀಲಾ ಕಿಳಕಿಂಚಿತ ಲಲಿತವಿಹೃದ್ವಿಳಾಸ ವಿಚ್ಛಿತ್ತಿ ವಿಭ್ರಮಾದಿಗುಣಂಗಳ್: **ಆದಿಪು**: ೧೧. ೧೪೨)

ಕಿಱಿಕಿಱಿದನೆಱೆ – [ಕ್ರಿ] ಸ್ವಲ್ಪಸ್ವಲ್ಪವಾಗಿ ಸುರಿ (ಪೊನ್ ಬೆಳ್ಳಿಯ ಸಿಪ್ಪುಗಳೊಳ್ ಕಿಱಿಕಿಱಿದನೆಱೆದು .. .. ಚಕ್ಕಣಮಂ ಸವಿಸವಿದು: **ಪಂಪಭಾ**, ೪. ೮೭ ವ)

ಕಿಱಿದಾನುಂ ಬೇಗ – [ನಾ] ಕೊಂಚವೇ ಹೊತ್ತು (ಪವಡಿಸಿ ಕಿಱಿದಾನುಂ ಬೇಗದೊಳ್ ಸುಭದ್ರೆಯಂ ಕನಸಿನೊಳ್ ಕಂಡು ನೆನಸೆಂದು ಭಾವಿಸಿ ಬಗೆದು ಮಂಗಳಪಾಠಕರವಂಗಳೊಳ್ ಭೋಂಕನೆಚ್ಚಿತ್ತುಂ: **ಪಂಪಭಾ**, ೪. ೧೧೦ ವ)

ಕಿಱಿದು – [ನಾ] ಸ್ವಲ್ಪವೂ (ಕುಂಜರಂ ಮಡಿದುದೆಂದು ಮಹೀಭುಜಂ ಉಳ್ಳ ಮಾಟಕ್ಕೆಯಿಂ ಪುಸಿಯದೆ ಪೇೞ್ದೊಡಂ ಕಿಱಿದು ನಂಬದೆಯುಂ: **ಪಂಪಭಾ**, ೧೨. ೨೯)

ಕಿಱಿದು ಬೇಗ – [ನಾ] ಕೊಂಚ ಹೊತ್ತು (ಆಗಳ್ ಸುರತಮಕರಧ್ವಜಂ ಅನಂಗಾಮೃತಪಯೋಧಿಯೊಳ್ ಮೂಡಿ ಮುೞುಂಗಾಡಿದರಂತೆ ಕಿಱಿದು ಬೇಗಮನಿರ್ದು: **ಪಂಪಭಾ**, ೫. ೧೫ ವ)

ಕಿಱಿದು ಪೊೞ್ತು – [ನಾ] ಸ್ವಲ್ಪ ಹೊತ್ತು (ಪೊನ್ನ ಪಡಿಗಂಗಳೊಳಮಿಕ್ಕಿದ ಪಱಿಯ ಸುಖಾಸನಂಗಳೊಳಂ ಕಟ್ಟಿದ ಚಿನ್ನದ ಬೊಂದರಿಗೆಯೊಳಂ ಕಿಱಿದು ಪೊೞ್ತು ಕುಳ್ಳಿರ್ದು: **ಪಂಪಭಾ**, ೪. ೪೩ ವ)

ಕಿಱು – [ಕ್ರಿ] ಮುಚ್ಚು, ಆವರಿಸು (ತೆಱೆಯವೆ ಮುನ್ನ ಕೆತ್ತ [√ಕಿಱು] ಪಡಿಗಳ್ ನವಸೌರಭಮುಣ್ಮೆ ಮೊಕ್ಕಳಂ ತೆಱೆದುವು ರತ್ನತೋರಣಗಣಂಗಳ್: **ಆದಿಪು**, ೨. ೬೩)

ಕಿಱುಕುಣಿಕೆ – [ನಾ] ಕಿರುಬೆರಳು (ಅಂತೊರ್ವರೊರ್ವರ ಕಿಱುಕುಣಿಕೆಗಳಂ ಪಿಡಿದು ರತಿಯುಂ ಕಾಮದೇವನುಂ ಬರ್ಪಂತೆ ಬೇಳ್ವೆಯ ಕೊಂಡದ ಮೊದಲ್ಗೆ ವಂದು: **ಪಂಪಭಾ**, ೭೫ ವ)

ಕಿಱುಕುಳಬೊಜಂಗ – [ನಾ] ಸಾಮಾನ್ಯನಾದ ವಿಟ, ಅಲ್ಪ ವಿಟ, ಕ್ಷುಲ್ಲಕನಾದ ವಿಟ (ಮತ್ತಮಲ್ಲಿ ಕೋಟಿ ಪೊಂಗೆ ಘಂಟೆಯಲುಗುವ ಕಿಱುಕುಳಬೊಜಂಗರುಮಂ: **ಪಂಪಭಾ**, ೪. ೮೭ ವ)

ಕಿಱುಗೊಂಕುಗೊಂಕು – [ನಾ] ಸಣ್ಣ ಸಣ್ಣ ಡೊಂಕು (ಕಿಱುಗೊಂಕುಗೊಂಕಿದ ಪೊನಲ್ಗಳ ಕೆಂಪು ಪಸುರ್ಪು ಕರ್ಪು: **ಪಂಪಭಾ**, ೭. ೨೫)

ಕಿಱುದೊಡೆ – [ನಾ] ಚಿಕ್ಕ ತೊಡೆ (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱೆದ ನಿತಂಬ ಇಂಬುವಡೆದ ಒಳ್ದೊಡೆ ನೆಕ್ಕರವದ್ದೆ ತಾನೆ ಪೋ ಕಿಱುದೊಡೆ ಎಂದು ಧಾತ್ರಿ ಪೊಗೞ್ಗುಂ ಪೊಗೞ್ವಿನ್ನರೆ ಕುಂತಿ ಮಾದ್ರಿಗಳ್: **ಪಂಪಭಾ,** ೧. ೧೦೮)

ಕಿಱುನಗು – [ಕ್ರಿ] ಕೊಂಚ ನಗು, ಬಾಯ ಕೊನೆಯಲ್ಲಿಯೇ ನಗು (ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ ಕಣ್ಕೆತ್ತಿ ಕಿಱುನಗುವ ಕೂರದರ ಮೊಗಮುಮಂ ತಮ್ಮಣ್ಣನ ಬಿನ್ನನಾದ ಮೊಗಮುಮಂ ಕಂಡು: **ಪಂಪಭಾ**, ೭. ೫ ವ)

ಕಿಱುಮಿಡಿ – [ನಾ] ಸಣ್ಣ ಹೀಚು, ಕಸಗಟ್ಟೆ ಕಾಯಿ (ಅವಿರಳ ಕುಸುಮಾವಳಿ ಕಂಪುವೇಱೆ ಸೊಗಯಿಪ ಕಿಱುಮಿಡಿಗಳೊಳೊಪ್ಪಿ ತೋಱೆ: **ಪಂಪಭಾ**, ೪. ೧೦)

ಕಿಱುವಕ್ಕಿ – [ನಾ] [ಕಿಱಿದು ಪಕ್ಕಿ] ಪುಟ್ಟ ಹಕ್ಕಿ (ಕೆಂಗಱಿಗಳ ಪಾರೆಯಂಬುಗಳೊಳ್ ಊಱಿ ಕಱುತ್ತು ಇಸೆ ಬಿೞ್ದರ್ ಎಯ್ದೆ ಪರ್ದು ಎಱಗೆ ಸುರುಳ್ದು ಬೀೞ್ವ ಕಿಱುವಕ್ಕಿವೊಲ್ ಉದ್ಗರವಿರೋಧಿನಾಯಕರ್: **ಪಂಪಭಾ**, ೧೨. ೧೧೨)

ಕಿಱುವೀೞ್ – [ಕ್ರಿ] ಸ್ವಲ್ಪ ಜಾರು, ತಪ್ಪಿಸಿಕೊ (ಅನ್ನೆಗಂ ಇತ್ತ ಸಂಸಪ್ತಕ ನಿಕುರುಂಬದೊಳಗೆ ಒರ್ವರುಮಂ ಕಿಱುವೀೞಲೀಯದೆ ರಸಮಂ ಕೊಲ್ವಂತೆ ಎಂತಾನುಂ ಕೊಂದು: **ಪಂಪಭಾ**, ೧೨. ೧೨೦ ವ)

ಕಿಱುವೇಂಟೆ – [ನಾ] ಸಣ್ಣ ಬೇಟೆ (ಮತ್ತಂ ಕಿಱುವೇಂಟೆಯ ನಾಯಂ ಕೊಂಡುಂ ಬಾರಿಯುಂ ನೆಲನುಂ ಪೊೞ್ತುಂ ಪೊಲಮನಱಿದು: **ಪಂಪಭಾ**, ೫. ೪೬ ವ)

ಕಿಟ್ಟಿಗಣ್ – [ನಾ] ಕಿಕ್ಕಣ್ಣು, ಕಿಗ್ಗಣ್ಣು, ಕೆಳಗೆ ನೋಡುವ ಕಣ್ಣು, ಕೀಳಾಗಿ ನೋಡುವುದು (ನಿನ್ನನೆ ಕಿಟ್ಟಿಗಣ್ಣೊಳೆ ನೋಡುತಿರ್ಪನವಂ ಚೇರಮ್ಮಂ ಆದಿತ್ಯತೇಜನವಂ ನೋಡು ಕಳಿಂಗದೇಶದರಸಂ ಪಂಕೇಜವಕ್ತ್ರೇಕ್ಷಣೇ: **ಪಂಪಭಾ,** ೩. ೫೪)

ಕೀಡಿ – [ನಾ] ಕೀಟ, ಹುಳು (ಕಾಲಾಗ್ನಿಯಂ ಕೀಡಿ ಸುತ್ತುವಂತೆ ಕರ್ಣನಂ ಸುತ್ತಿ ಮುತ್ತಿಕೊಂಡು ಕಣೆಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ

ವಿವಿಧ ಆಯುಧಂಗಳೊಳಿಟ್ಟುಂ ಇಱಿದುಂ: **ಪಂಪಭಾ,** ೧೨. ೧೧೮ ವ)

ಕೀರ್ಣ – **[ಗು]** ಎರಚಿದ, ಚೆಲ್ಲಿದ (ದಿಶಾಯುವತಿಕೇಳಿಕೀರ್ಣ ಪಟವಾಸಚೂರ್ಣಂ: **ಆದಿಪು,** ೧೧. ೧೫)

ಕೀರ್ತಿ – **[ನಾ]** ಜಿನಜನನಿಯನ್ನು ಅಲಂಕರಿಸಲು ಸೌಧರ್ಮೇಂದ್ರನು ನಿಯೋಜಿಸಿದ ಒಬ್ಬ ದೇವತೆ (ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಅಱುವರುಮಂ ಆತ್ಮೀಯ ಗುಣಗಣಮಣಿವಿಭೂಷಣಂಗಳಿಂ ಜಿನಜನನಿಯಂ ಅಲಂಕರಿಸಲುಂ ... ಸೌಧರ್ಮೇಂದ್ರಂ ಬೆಸಸುವುದುಂ: **ಆದಿಪು,** ೭. ೩ ವ)

ಕೀರ್ತಿಗೆ – **[ನಾ]** ಒಬ್ಬ ಕ್ಷುದ್ರ ದೇವತೆಯ ಹೆಸರು (ಕೃತಾಂತನಂತಾಕಾರಮಾಗಿ ತಟತಟಿಸಿ ಪೊಳೆವ ಕತ್ತಿಗೆಯಂ ಬೆರಸು ಪೊಱಮಟ್ಟು ಕೀರ್ತಿಗೆಯೆಂಬ ಉಗ್ರದೇವತೆ: **ಪಂಪಭಾ,** ೮. ೪೨ ವ)

ಕೀರ್ತಿಮತಿ – **[ನಾ]** ರುಚಿಕಾಚಳದಲ್ಲಿ ವಿಹರಿಸುವ ಎಂಟು ಮಂದಿ ದಿಗಂಗನೆಯರಲ್ಲಿ ಒಬ್ಬಳು (ಕೂಟಾಷ್ಟಕಂಗಳೊಳ್ ರಮಿಯಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬೆಣ್ಬರುಂ ದಿಗಂಗನೆಯರಂ: **ಆದಿಪು,** ೭. ೩ ವ)

ಕೀರ್ತಿಮುಖ – **[ನಾ]** ಕೀರ್ತಿವೆತ್ತ ಮುಖ ಮತ್ತು ಆನೆಯ ಕೊಂಬಿನ ಗೊಣಸು, ಒಂದು ಆಭರಣ (ನಿನ್ನ ಕೀರ್ತಿಮುಖಂ ಕೀರ್ತಿಮುಖಂಬೊಲೇಂ ಎಸೆದುದೋ ದಿಗ್ದಂತಿ ದಂತಂಗಳೊಳ್: **ಪಂಪಭಾ,** ೬. ೬೬)

ಕೀರ್ತಿಶ್ರೀ – **[ನಾ]** ಯಶೋಲಕ್ಷ್ಮಿ (ಎನಗೆ ವೀರಶ್ರೀಯುಂ ಕೀರ್ತಿಶ್ರೀಯುಂ ಅಲ್ಲದೆ ಉೞಿದ ಪೆಂಡಿರ್ ಮೊಱೆಯಲ್ಲ ನೀವಿದನೇಕಾಗ್ರಹಂಗೆಯ್ವಿರಿ: **ಪಂಪಭಾ,** ೧. ೭೮ ವ)

ಕೀರ್ತಿಸು – **[ಕ್ರಿ]** ಹೊಗಳು, ಸ್ತುತಿ ಮಾಡು (ಅರಸುಗಳೆಲ್ಲಂ ಬಾಯ್ಕೇಳ್ದರೆಂದು .. .. ಧರಣಿತಳಂ ಕೀರ್ತಿಸೆ: **ಆದಿಪು,** ೧೪. ೪೯)

ಕೀಲ್ – **[ನಾ]** [ಕೀಲ] ಕಡಾಣಿ (ಉಡಿದ ನೊಗಂ ಧ್ವಜಂ ಪಲಗೆ ಕೀಲ್ ಕವರ್ ಅಚ್ಚು ತುರಂಗಮಂ ರಥಂ ಕಿಡೆ ಕವರಿಂದಗುರ್ವಂ ಒಳಗೊಂಡಿರೆ ತಳ್ತಿಱಿದರ್ ಮಹಾರಥರ್: **ಪಂಪಭಾ,** ೧೧. ೩೮)

ಕೀಲಾಲ – **[ನಾ]** ರಕ್ತ (ಅನವರತ ನಿಹತ ನರ ಕರಿ ತುರಗ ನಿಕುರುಂಬ ಕೀಲಾಲ ಕಲ್ಲೋಲಪ್ರವರ್ತನ ಅನೇಕ ನದ ನದೀ ಪ್ರವಾಹಬಾಹುಳ್ಯದುಸ್ತರಾವತರಣ ಮಾರ್ಗಮುಂ: **ಪಂಪಭಾ,** ೧೩. ೫೧ ವ)

ಕೀಲಿಸು – **[ಕ್ರಿ]** ಬೆಸೆದಂತಾಗು (ಬಾಲಮಂ ಸಲೆ ಮುರಿದು ಎತ್ತಲಾಟಿಸೆ ಧರಿತ್ರಿಗೆ ಕೀಲಿಸಿದಂತುಟಾಗೆ: **ಪಂಪಭಾ,** ೮. ૩೨); **[ಕ್ರಿ]** ಮೊಳೆ ಹೊಡೆದಂತೆ ಸ್ತಬ್ಧವಾಗು (ಇಸೆ ಮಸಗಿ ಭೀಮಂ ಈರಯ್ದು ಶಿತಾಸ್ತ್ರದಿಂ ಉರುಳೆ ಸೂತಂ ಉಡಿಯೆ ರಥಂ ಕೀಲಿಸೆ ಕುದುರೆ ಮುಱಿಯೆ ಪಟವಿಗೆ ಮುಸಕದಿಂ ಎಚ್ಚೆಚ್ಚಂ ಒಂದೆ ಸರಲೊಳ್ ನೊಸಲಂ: **ಪಂಪಭಾ,** ೧೦. ೯೯)

ಕೀಱಿ ಕಾಣ್ – **[ಕ್ರಿ]** [ಒರೆದು] ಸ್ಪಷ್ಟವಾಗಿ ತಿಳಿದುಕೊ (ಅತೀಂದ್ರಿಯಸುಖಾಮೃತಾಂಬುನಿಧಿ ನಿವಾಸಮೊಂದೊಂದಂ ಆತ್ಮತತ್ತ್ವವಿದ ಮುಕ್ತಿಮಾರ್ಗಮನೆ ಕೀಱಿ ಕಂಡೈ: **ಆದಿಪು,** ೧೩. ೮೫)

ಕೀಱು – **[ಕ್ರಿ]** ಘೋಷಿಸು (ಅತೀಂದ್ರಿಯ ಸುಖಾಮೃತಾಂಬುಧಿ ನಿವಾಸದೊಂದನಾತ್ಮತತ್ವವಿದ ಮುಕ್ತಿಮಾರ್ಗಮನೆ ಕೀಱಿ ಕಂಡೈ ಪೆಱರ್ ಚತುರ್ಗತಿಯ ಬಟ್ಟೆಯಂ ನೆಱೆಯೆ ಕಂಡರ್: **ಆದಿಪು,** ೧೩. ೮೫); **[ಕ್ರಿ]** ಸಿಟ್ಟಾಗು (ಕೀಱಿ ನೆತ್ತಿಯೊಳ್ ಬಾಳಂ ನಿರ್ನೆರಮೂಱಿ ಚಲದಿನೆಱಗಿಸಲಿರೆ ಭರತಂಗೆಱಗುವೆಱಕಂ ಅಂಜಮೆಯಲ್ತೆ: **ಆದಿಪು,** ೧೪. ೭೫); **[ಕ್ರಿ]** ಕಿರಿಚು (ಮನೋಜನ ಪೂವಿನಂಬು ತೀವಿದ ದೊಣೆ ಕೀಱಿ ತನ್ನನಿಸೆ: **ಪಂಪಭಾ,** ೪. ೪೧); **[ಕ್ರಿ]** ಗಟ್ಟಿಯಾಗಿ ಕೂಗು (ಇತ್ತುಂ ತೆತ್ತುಂ ಬಾಟ್ವ ಮಂಡಲಮಲ್ಲದೆ ಕೀಱೆಯುಂ ಮೀಱೆಯುಂ ನೆಗಟ್ವ ಮಂಡಲಮಿಲ್ಲ: **ಪಂಪಭಾ,** ೬. ೬೭ ವ)

ಕೀಟಿ್ – **[ನಾ]** ಕಿಟಿ್, ಕುದುರೆ ಬಾಯ ಕಬ್ಬಿಣದ ತುಂಡು, ಕಡಿವಾಣ (ಕೀಟಿಂ ಕರ್ಚಿ ಪುಡಿಯೊಳ್ ಪೊರಳ್ದುವು ನಚ್ಚಿನ ಕಾಂಭೋಜವಾಜಿಗಳ್ ಕೆಲವಾಗಳ್: **ಪಂಪಭಾ,** ೮. ೯೪); **[ಕ್ರಿ]** [√ಕೀಟಿ್] ಹೊರತೆಗೆ, ಕಿತ್ತು ಹಾಕು (ಉನ್ನತ ಮಸ್ತಕಸ್ಥಳದೊಳ್ ಅಂಬುಗಳ್ ಅೞ್ದುಡಿದಿರ್ದೊಡಂ ಅತ್ತಮಿತ್ತನೆಟಿತಂದು ಬಲ್ಲಡಿಗರ್ ಇೞ್ಕುಟಿನೊಳ್ ಕಿಟಿ ನೊಂದೆಂ ಎನ್ನದೆ: **ಪಂಪಭಾ,** ೧೧. ೩)

ಕೀಟಿಲ್ – **[ನಾ]** ಕೀಳಾದ ಮನೆ, ದಾಸಿಯರು ವಾಸಿಸುವ ಹಿತ್ತಿಲ ಮನೆ (ಪೆಱರ ಕೀಟಿಲೊಳ್ ಎಮ್ಮಬ್ಬೆಯುಂ ಮುತ್ತಬ್ಬೆಯುಂ ಸಾರ್ದು ಬದಗುಗೆಯ್ದುಣೆ ನವಮಾಸಂ ನೆಱೆದು ಆಂ ಪುಟ್ಟುವುದುಂ: **ಆದಿಪು,** ೩೪ ವ)

ಕೀಟ್ಮಣಿ – **[ಕ್ರಿ]** ಕೆಳಕ್ಕೆ ಬಾಗು, ಶರಣಾಗು (ಚಿಳಾವರ್ತರಳ್ಕುತ್ತೆ ಕೀಟ್ಮಣಿದು ಇನ್ನೆಂದುದಂ ಎಂಬೆವು ಎಂದೆಱಗಿದರ್: **ಆದಿಪು,** ೧೩. ೬೭)

ಕೀಟಿಗ್ಮೊನೆ – **[ನಾ]** ಕೆಳತುದಿ (ಎಱಗಿದರಂ ತಳ್ತು ಬಾಳ ಕೀಟಿಗ್ಮೊನೆಯಿಂ ತಳ್ತಱದಱಿದುಬ್ಬರಮೆಂಬಿವನಱಿದಿಱಿದರ್ ಪೆಣಬಣಂಬೆಗಳ್ ನೆಗೆವಿನೆಗಂ: **ಪಂಪಭಾ,** ೧೦. ೮೨)

ಕುಂಚ – **[ನಾ]** ಗೊಂಚಲು, ನವಿಲುಗರಿಯ ಸಣ್ಣ ಚಾಮರ (ಸಿವಿಗೆ ತಟಿದುಱುಗೊಡನಿಕ್ಕುವ ಕುಂಚಂ: **ಆದಿಪು,** ೧೧. ೩೯)

ಕುಂಜ – **[ನಾ]** ಸಮೂಹ (ಧ್ವನತ್ತೂರ್ಯಸಂತತಿ ನಾದಪ್ರತಿಪೂರಿತ ಅಖಿಳಕುಳಕ್ಷೋಣೀಧ್ರಕುಂಜಂ: **ಆದಿಪು,** ೭. ೩೮)

ಕುಂಜರ – **[ನಾ]** ಆನೆ (ನಿಜವಿಜಯಕುಂಜರಂಗಳಂ ವಿಹಾರಿಸಿ ಬಂದು ಸಿಂಧುದ್ವಾರದೊಳ್ ಸಮುದ್ರಕಲ್ಲೋಲ ಲೀಲಾಂದೋಳಿತ ವನದೇವತಾನುಕಾರಿ ತಾಂಬೂಲಲತಿಕಾ ಕ್ರಮುಕಮುಂ: **ಆದಿಪು,** ೧೩. ೩ ವ)

ಕುಂಜರಕುಂಭೀರ – **[ನಾ]** ಆನೆಯಂಥ ಮೊಸಳೆ (ಮತ್ತಕುಂಜರ ಕುಂಭೀರಕುಳಂ ಚಳತ್ಕದಳಿಕಾಮಾಳಂ: **ಆದಿಪು,** ೧೪. ೯೨)

ಕುಂಟಣಿ – **[ನಾ]** [ಕುಟ್ಟನೀ] ತಲೆಹಿಡುಕಿ (ಮತ್ತಂ ಒಂದೆಡೆಯೊಳ್ ಕುಂಟಣಿಯ ಉಪರೋಧಕ್ಕೆ ಪಿರಿದೀವ

ಮುದುಪನಂ ಉಱೆಯಲಂಜಿ ತನ್ನ ಬೇಸಱಂ ತನ್ನ ಸಬ್ಬವದಾಕೆಗೆ ಇಂತೆಂದಳ್: **ಪಂಪಭಾ,** ೪. ೯೯ ವ)

ಕುಂಡ – [ನಾ] ಕಂದಕ (ದ್ವಾದಶಗೋಪುರವಿರಾಜಿತ ಸಾಲತ್ರಯಪರೀತ ಕುಂಡದ್ವಯಸಮೇತ ನಂದನಾದಿಷೋಡಶ ಸರೋವರ ಪರಿವೇಷ್ಟಿತ: **ಆದಿಪು,** ೧೦. ೨೩ ವ)

ಕುಂಡಳ – [ನಾ] ಕಿವಿಯ ಆಭರಣ (ಆಗಳೆ ಕೈಗೂಡಿದ ವಟುವಾಕೃತಿಯೊಳೆ ಬೇಡಿದನಾ ಸಹಜಕವಚಮಂ ಕುಂಡಳಮಂ; **ಪಂಪಭಾ,** ೧. ೧೦೦)

ಕುಂತಶಸ್ತ್ರ – [ನಾ] ಭರ್ಜಿ ಎಂಬ ಆಯುಧ (ನಕುಲಂ ಕುಂತಶಸ್ತ್ರದೊಳತಿಪ್ರವೀಣನಾಗಿ ಅಶ್ವವಿದ್ಯೆಯೊಳಾರಿಂದಂ ಪಿರಿಯನಾದಂ: **ಪಂಪಭಾ,** ೨. ೩೬ ವ)

ಕುಂತಹಸ್ತ – [ನಾ] ಕುಂತವನ್ನು ಹಿಡಿದವನು (ಸರಲ ಕುಂತಹಸ್ತಮಹಾಹಯಾರೋಹಂ .. .. ಇದು ಲಾಟಬಲಂ: **ಆದಿಪು,** ೧೩. ೪೫ ವ)

ಕುಂತಳ – [ನಾ] ಮುಂಗುರುಳು (ಬಳಸಿರ್ದ ಮದಾಳಿಸಂಕುಲಂ ವಿಷಯಾಂಗನಾಲುಳಿತ ಕುಂತಳದಂತೆವೊಲ್ ಒಪ್ಪಿ ತೋಱುಗುಂ: **ಪಂಪಭಾ,** ೧. ೫೩)

ಕುಂತಳಿಕೆ – [ನಾ] ಒಂದು ಜಾತಿಯ ಪಕ್ಷಿ (ಗಿಳಿಯ ಕೋಗಿಲೆಯ ಕೊಂಚೆಯ ಅಂಚೆಯ ಕುಂತಳಿಕೆಯ ಮಾಟಕ್ಕಿಯ ಸಿಪ್ಪುಗಳೊಳ್ ತೀವಿ: **ಪಂಪಭಾ,** ೪. ೮೭ ವ)

ಕುಂತಿ – [ನಾ] ಪಾಂಡವರ ತಾಯಿ, ಶೂರರಾಜನ ಮಗಳು (ಮತ್ತಿತ್ತ ನೆಗೞ್ತೆಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆಯೆನೆ ಕುಂತಿ: **ಪಂಪಭಾ,** ೧. ೮೮)

ಕುಂತಿಭೋಜ – [ನಾ] ಯಾದವ ದೊರೆ, ಕುಂತಿಯ ಸಾಕುತಂದೆ (ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆಯೆನೆ ಕುಂತಿ ಕುಂತಿಭೋಜನ ಮನೆಯೊಳ್ ಬಳೆಯುತ್ತಿರ್ಪನ್ನೆಗಂ: **ಪಂಪಭಾ,** ೧. ೮೮ ಮತ್ತು ೧. ೮೯)

ಕುಂದ – [ನಾ] ಒಂದು ಬಗೆಯ ಹೂ (ಬಣ್ಣವುರಂ ತೀವಿದ ಮಾಟಕ್ಕಿಯಾಯ್ತು ನವಿಲಿಂ ಕುಂದಂಗಳಿಂದೆ ಇಂದ್ರಗೋಪವಿಳಾಸಂಗಳಿಂ ಆಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ: **ಪಂಪಭಾ,** ೭. ೨೪)

ಕುಂದಕುಟ್ಮಲರದನೆ – [ನಾ] ಕುಂದಪುಷ್ಪದ ಮೊಗ್ಗಿನಂತಹ ಹಲ್ಲುಳ್ಳವಳು (ಎನೆ ಮತ್ತೊರ್ವಳ್ ಕುಂದಕುಟ್ಮಲರದನೆ: **ಆದಿಪು,** ೧೧. ೧೧೩ ವ)

ಕುಂದು – [ನಾ] ನಷ್ಟ, ಕಡಿಮೆ ಪ್ರಮಾಣ (ಎನಿತು ಪರಿಗ್ರಹದ ತೊಡರ್ಪು ಅನಿತೆ ಮನೋದುಃಖಂ ಅದಱ ಕುಂದೆನಿತು ಮನಕ್ಕನಿತೆ ಸುಖಂ: **ಆದಿಪು,** ೩. ೬೨); [ಕ್ರಿ] ಕುಗ್ಗು (ಅಲ್ಲಿ ಉತ್ಕೃಷ್ಟನಿಕೃಷ್ಟಕಾಲಸ್ಥಿತಿಯೊಳ್ ಅಯ್ನೂಱು ಬಿಲ್ಲಿಂದಂ ಏೞುಮೊೞದೇಹಪ್ರಮಾಣದೊಳ್: **ಆದಿಪು,** ೯. ೧೨೧ ವ); [ನಾ] ದೈನ್ಯ (ಒಯ್ಯನೆೞೆಪೆ ನೆಲದೊಳ್ ದುಂದುಭಿರವದೊಡನೆ ವಿಜಯಘೋಷಣೆ ನೆಗೞ್ದತ್ತಂದು ಭುಜಬಲಿಯ ಬಲದೊಳ್ ಕುಂದುಂ ಕರಂ ಪಿರಿದುಮಾಯ್ತು ಭರತನ ಬಲದೊಳ್: **ಆದಿಪು,** ೧೪. ೧೧೩)

ಕುಂದೇಂದುಯಶ – [ನಾ] ಕುಂದಪುಷ್ಪದ ಹಾಗೆ ಮತ್ತು ಬೆಳ್ಳಗಿರುವ ಚಂದ್ರನಂತಹ ಕೀರ್ತಿ (ಕುಂದೇಂದುಯಶಂ ರಥದಿಂದಿೞಿತಂದು ಎಱಗಿದಂ ಅಗ್ರಜನ್ಮಪದಸರಸಿಜದೊಳ್: **ಪಂಪಭಾ,** ೯. ೨)

ಕುಂಭ – [ನಾ] ಕಳಶ (ಪಂಚರತ್ನಗರ್ಭವಿವಿಧೌಷಧಿಸಂದರ್ಭ ಶಾತಕುಂಭಕುಂಭಸಂಭೃತ ಮಂಗಳಜಳಂಗಳಿಂದಂ: **ಆದಿಪು,** ೪. ೩೫ ವ); [ನಾ] ಆನೆಯ ಹಣೆಯ ಮೇಲ್ಭಾಗದಲ್ಲಿ ಎದ್ದು ಕಾಣುವ ಉಬ್ಬು (ಉತ್ಕರ್ಷಪರಿಪೂರ್ಣಮುಖನುಂ ಮಾನೋನ್ನತ ಅವನತಕುಂಭನುಂ: **ಆದಿಪು,** ೧೨. ೫೬ ವ)

ಕುಂಭಪ್ರೋದ್ಭವ – [ನಾ] ದ್ರೋಣ (ಪರಶುರಾಮನನಂಜಿಸಿ ಬೀರಕ್ಕಾಗರಮಾದ ನದೀಜಂ ಏದೊರೆಯಂ ಗಳ ಕುಂಭಪ್ರೋದ್ಭವಂ: **ಪಂಪಭಾ,** ೭. ೬೫)

ಕುಂಭಸಂಭವ – [ನಾ] ದ್ರೋಣ (ದಿವಿಜ ಅಶ್ವ ತ್ಥಾಮದೊಳ್ ಈ ಭುವನಂಗಳ್ ನಡುಗೆ ಶಿಶು ನಕ್ಕು ಸರಂಗೆಯ್ದೊಡೆ ಕುಂಭಸಂಭವಂ ಇವಂ ಅಶ್ವತ್ಥಾಮನೆಂದು ಪೆಸರಿಡೆ ನೆಗೞ್ದಂ: **ಪಂಪಭಾ,** ೨. ೪೪)

ಕುಂಭಸ್ಥಳದಳನ – [ಗು] ಕುಂಭ ಪ್ರದೇಶವನ್ನು [ತಲೆ] ಸೀಳುವ (ಕದನಪ್ರಾರಂಭಶೌಂಡಂ ರಿಪುನೃಪಬಲ ದಾವಾನಲಂ ವೈರಿಭೂಭೃತ್ ಮದವತ್ ಮಾತಂಗ ಕುಂಭಸ್ಥಳದಳನ ಖರ ಉಗ್ರ ಅಸಿ ಪಂಚಾಸ್ಯಧೈರ್ಯಂ: **ಪಂಪಭಾ,** ೬. ೭೭)

ಕುಂಭಜ – [ನಾ] ದ್ರೋಣ (ಮಿಡುಕದೆ ಭೀಷ್ಮ ನೋಡುತಿರು ಕುಂಭಜ ಸುರ್ಕಿರು ಕರ್ಣ ಮಿಕ್ಕು ಮಾರ್ನುಡಿಯದೆ ಮೂಗುವಟ್ಟಿರು: **ಪಂಪಭಾ,** ೭. ೩೩)

ಕುಂಭಾಂಭೋದ – [ನಾ] [ಕುಂಭ+ಅಂಭೋದ] ಕುಂಭಾಕಾರದ ಮೋಡ (ಅಂಭೋಭಾರ ವಿಜೃಂಭಿತ ಕುಭಾಂಭೋದಂಗಳಂದದಿಂ ಸುರಿಯೆ ಚತುಃಕುಂಭಂಗಳ್: **ಆದಿಪು,** ೮. ೭೧)

ಕುಂಭಭಿತ್ತಿಪರಿಕ್ಷಿಪ್ತ – [ನಾ] ಆನೆಯ ಕುಂಭಸ್ಥಳದಿಂದ ಜಾರಿದ (ಸಮದ ವಿಜಯಗಜವಿಶಾಲಕುಂಭಭಿತ್ತಿಪರಿಕ್ಷಿಪ್ತ ಸಾಂದ್ರ ಸಿಂದೂರ ರಜಮುಂ ನೆಱಂಬಡೆದು: **ಆದಿಪು,** ೧೧. ೩೫ ವ)

ಕುಂಭೀರ – [ನಾ] ಮೊಸಳೆ (ಪ್ರಾಂಖದಸಂಖ್ಯವಾಜಿ ವಿಳಸದ್ವೀಚೀಚಯಂ ಮತ್ತಕುಂಜರಕುಂಭೀರಕುಳಂ: **ಆದಿಪು,** ೧೪. ೯೨)

ಕುಂಭೋದ್ಭವ – [ನಾ] ದ್ರೋಣ (ಈ ಕೂಸುಗಳ್ ಯೋಗ್ಯರಪ್ಪುದಂ ಇನ್ನೊಲ್ವೊಡೆ ಶಸ್ತ್ರವಿದ್ಯೆಗೆ ಒವಜಂ ನೀನಾಗು ಕುಂಭೋದ್ಭವಾ: **ಪಂಪಭಾ,** ೨. ೫೩)

ಕುಕಿಲ್ – [ನಾ] ಕೋಗಿಲೆಯ ಕೂಜನ (ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರ ಒಳ್ಮೊಗಂ ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ: **ಪಂಪಭಾ,** ೪. ೨೮); [ಕ್ರಿ] ಕೂಗು (ಕೂಡೆ ಕೂಕಿಡುವ ಕುಕಿಲ್ವ ಬಿಕ್ಕುಳಿಪ ತೇಗುವ ತನ್ನ ತೊಡಂಕದೆಯ್ದೆ ನೂರ್ಮಡಿ ಮನದೊಳ್ ಪಳಂಚಲೆಯೆ: **ಪಂಪಭಾ,** ೪. ೯೦)

ಕುಕ್ಕು – [ನಾ] ಕೊಕ್ಕರೆ (ತ್ರಿದಶಶರಾಸನಂ ತಳಿರ ತೋರಣಮಾಗಿರೆ ಕುಕ್ಕಿನೋಳಿ ಚೆಲ್ವಿದಿರ್ಗೊಳೆ ಬರ್ಪ ಸೊನ್ನಲಿಗೆಯಾಗೆ ನಿಜಧ್ವನಿ: **ಆದಿಪು,** ೬. ೭೧)

ಕುಕ್ಕುಟಿಗುದಿ – [ಕ್ರಿ] ತಳಮಳಪಡು (ಸುಟೆಯೊಳಗಿರ್ದು ಬೆಟ್ಟು ಪೊಱಪೊಣ್ಮುವಿನಂ ಲವಣಾಂಬುರಾಶಿ ಕುಕ್ಕುಟಿಗುದಿವಲ್ಲಿ ಕೂಟ್ಟುಗ್ದಿಯ ಮೇಗೆ ಸಿಡಿಲ್ದಗುಳಂತೆ ಕೂಡೆ: **ಪಂಪಭಾ,** ೧೧. ೧೫೩)

ಕುಕ್ಷಿವಾಸ – [ನಾ] ರತ್ನವಿಕ್ರಯಸ್ಥಾನ (ಪ್ರತ್ಯಂತವಾಸಿಗಳಪ್ಪ ಏಟ್ಟೂಱು ಕುಕ್ಷಿವಾಸಂಗಳುಂ: **ಆದಿಪು,** ೧೫. ೩ ವ) [ವೆಂಕಟಾಚಲಶಾಸ್ತ್ರಿಗಳು ಈ ಶಬ್ದದ ಸ್ಥಳದಲ್ಲಿ 'ಕುಕ್ಷಿನಿವಾಸಿ' ಎಂಬ ಪಾಠ ಸ್ವೀಕರಿಸುತ್ತಾರೆ]

ಕುಚಚೂಚುಕ – ಮೊಲೆಯ ತೊಟ್ಟು (ಬಸಿಱ ತಳ್ಪಟೆದತ್ತೆ ಮೊಗಂ ಬೆಳ್ಪೇಱೆದುದೇ ಕುಚಚೂಚುಕಂ ಮಸುಳ್ದುವೇ ತ್ರಿವಳಿರುಚಿಯುಂ ಮೇಣ್ಕುಂದಿತೇ: **ಆದಿಪು,** ೭. ೩೧)

ಕುಚಸಿಚಯಾಂಚಳ – [ನಾ] ಎದೆಯ ಮೇಲಿನ ಸೀರೆಯ ಸೆರಗು (ಅತಿಚಕಿತ ಅರಾತಿ ಶುದ್ಧಾಂತಕಾಂತಾತ್ಯಂತ ಚಿಂತಾಶ್ವಾಸಾನಿಲ ಆಂದೋಳಿತ ಕುಚಸಿಚಯಾಂಚಳನುಂ: **ಆದಿಪು,** ೧೨ ೬೧ ವ)

ಕುಜ – [ನಾ] ಮರ (ಉರಿ ಕೊಳೆ ದೆಸೆಗಾಣದೆ ದೆಸೆವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂಬೆರಸು ಒಳಱ್ ನೆಗೆದುದಾ ವನ ಕರಿ ಶರಭ ಕಿಶೋರಕಂಠಗರ್ಜನೆ ಬನದೊಳ್: **ಪಂಪಭಾ,** ೫. ೯೧)

ಕುಜಾತ – [ನಾ] ಮರ (ಶತಮಖನರಸಿಗೆ ಕರ್ಣಾವತಂಸಮಾಗಲ್ಕೆ ನೋಂತ ಪಲ್ಲವಪುಷ್ಪ ಪ್ರತತಿಯನೆ ಮೆಱೆದು ಚೆಲ್ವೆಡೆಗೆ ಅತಿಶಯಮೆನಿಸಿದುದು ಪಾರಿಜಾತಕುಜಾತಂ: **ಆದಿಪು,** ೬. ೯೯)

ಕುಟೀರಕ – [ನಾ] ಸಣ್ಣ ಗುಡಿಸಲು (ಎಱಗಿರ್ದುವು ಷಟ್ಪದಂಗಳ್ ಉತ್ಕೇಸರಕೋಟಿ ಸಂಕಟ ಕುಶೇಶಯ ಕೋಶ ಕುಟೀರಕಂಗಳೊಳ್: **ಪಂಪಭಾ,** ೪. ೪೭)

ಕುಟುಂಬಕದಂಬಕ – [ನಾ] ರೈತರ ಒಕ್ಕಲು (ಇನರಶ್ಮಿಯೆಂಬ ಕಸಮಂ ಕಳೆದು ಅಂಬರಮೆಂಬ ಪಾಟಿನೇಱೆಸಿದುದು ಅಸಿತಾಂಬುವಾಹಕುಳಮೆಂಬ ಕುಟುಂಬಕದಂಬಕೋತ್ಕರಂ: **ಆದಿಪು,** ೬. ౭೧)

ಕುಟುಂಬಿಕುಲ – [ನಾ] ರೈತ ಒಕ್ಕಲು (ಕ್ರೋಶದ್ವಿಕ್ರೋಶಸೀಮಾಭಾಗ ಯೋಜನ ಪಂಚಶತ ಕುಟುಂಬಿಕುಲಾವಿರ್ಭಾವಿತ ಅಧಮೋತ್ತಮಭೇದಂಗಳುಮಂ: **ಆದಿಪು,** ೮. ೬೩ ವ)

ಕುಟುಂಬಿನಿ – [ನಾ] ಹೆಂಡತಿ (ದೇವಿಲನೆಂಬ ಗ್ರಾಮಕೂಟಂಗಂ ಆತನ ಕುಟುಂಬಿನಿ ವಸುಮತಿಗಂ ಧನಶ್ರೀಯೆಂಬ ಮಗಳಾಗಿ ಪುಟ್ಟಿ: **ಆದಿಪು,** ೩. ೩೮ ವ)

ಕುಟ್ಟಿಮ – [ನಾ] ನೆಲಗಟ್ಟು (ಇಂದ್ರನೀಲಮಣಿಕುಟ್ಟಿಮ ಸಂಕ್ರಾಂತ ಮೌಕ್ತಿಕದಾಮಾಭಿರಾಮದೊಳ್: **ಆದಿಪು,** ೮. ೬೭ ವ)

ಕುಟ್ಮಲ – [ನಾ] ಮೊಗ್ಗು (ಆಕೆ ನೀಲೋತ್ಪಳದಳನಯನೆಯುಂ ಕುಂದಕುಟ್ಮಲದಶನೆಯುಂ ಶಿರೀಷದಾಮ ಕೋಮಳಬಾಹು ಯುಗಳೆಯುಂ: **ಆದಿಪು,** ೪. ೨೧ ವ)

ಕುಟ್ಮಲರದನೆ – [ನಾ] ಮೊಗ್ಗುಗಳಂತೆ ಹಲ್ಲುಳ್ಳವಳು (ಎನೆ ಮತ್ತೊರ್ವಳ್ ಕುಂದಕುಟ್ಮಲರದನೆ: **ಆದಿಪು,** ೧೧. ೧೧೩ ವ)

ಕುಡಲಾದ ಕೂಸು – [ನಾ] ಕೊಡಗೂಸು, ಕನ್ಯಾದಾನಕ್ಕೆ ಯೋಗ್ಯಳಾದ ಹುಡುಗಿ (ಅಱ್ ಕುಡಲಾದ ಕೂಸು ನೆಲದೊಳ್ ಪೊರಳುತ್ತಿರೆ ಧರ್ಮಪತ್ನಿ ಬಾಯಟೆದು ಕೊರಲ್ಗೆ ಪಾಯ್ದು ಪರಿದಾಡುವ ಬಾಲಕನಾದ ಶೋಕದಿಂ ಗಟಿಗಟಿ ಕಣ್ಣ ನೀರ್ ಸುರಿಯೆ: **ಪಂಪಭಾ,** ೩. ೨೫)

ಕುಡಲಿರ್ದ ಕೂಸು – [ನಾ] ಕೊಡಗೂಸು, [ಮದುವೆಯಲ್ಲಿ] ಕೊಡಲಿದ್ದ ಹುಡುಗಿಯನ್ನು (ಉಱದೆನ್ನಂ ಕುಡಲಿರ್ದ ಕೂಸಂ ಒಡಗೊಂಡು ಉಯ್ವಾತನಂ ತಾಗಿ ತಳ್ತಿಱೆಯಲ್ ಕೋಡಗಗಟ್ಟುಗಟ್ಟಿ ತರಲ್: **ಪಂಪಭಾ,** ೫. ೨೧)

ಕುಡವೇಟ್ವಂ – [ನಾ] ಕೊಡು ಎಂದು ಹೇಳುವವನು (ಕುಡವೇಟ್ವನ ಕುಡುವನ ಕುಡೆ ಪಡೆವನ ಪೆಂಪೇಂ ನೆಗಟ್ತೆವಡೆಗುಮೊ: **ಪಂಪಭಾ,** ೬. ೪೯)

ಕುಡಿ – [ನಾ] ಚಿಗುರು (ನಿಮಿರ್ದ ಕುಡಿಯೊಳ್ ಗಿಳಿ ಪಾಯ್ದತ್ತೆನಿಸಿ ಸತಿಗೆ ತಂಬುಲಮಿತ್ತಳ್: **ಆದಿಪು,** ೭. ೧೨); [ಕ್ರಿ] ಸೇವಿಸು (ಕುಡಿವೆಂ ದುಶ್ಶಾಸನೋರಸ್ಥಳಮನಗಲೆ ಪೋಟ್ದಾರ್ದು ಕೆನ್ನೆತ್ತರಂ: **ಪಂಪಭಾ,** ೭. ೧೨)

ಕುಡಿತೆ – [ನಾ] ಅಂಗೈಯ ಬಟ್ಟಲು (ಕುಡಿತೆಯ ನೀರಂತುಗಲುಂ ಕುಡಿಯಲ್ಕೆ ಉಂಟೆನಗೆ ಲವಣವಾರ್ಧಿಯ ನೀರಂ: **ಆದಿಪು,** ೧೨. ೮೭)

ಕುಡಿಬಿದಿರ ಕುಡಿ – [ನಾ] ಎಳೆಯ ಬಿದಿರ ಕಳಲೆ (ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮಾರುಡಿನ ಮೆಣಸುಗಡಲೆಯ ಪುಡಿಯೊಳಡಸಿದದಲ್ಲದ ಅಲ್ಲಣಿಗೆಯ ಚಕ್ಕಣಮಂ ಸವಿಸವಿದು: **ಪಂಪಭಾ,** ೪. ೮೭ ವ)

ಕುಡಿವಾಲ – [ನಾ] ಬಾಲದ ತುದಿ (ನಿಡುಗೋಡು ಮೇಡುವಂ ಅಮರುತ್ತುಂ ಇಱುಂಕಿದ ಕೆಚ್ಚಲ್ ಎತ್ತಮೆತ್ತಿದ ಕುಡಿವಾಲಮಂದೆಸೆಯೆ ಕರ್ಬುಸುಗಳ್ ಪರಿಗೊಂಡುವು ಆಜಿಯೊಳ್: **ಪಂಪಭಾ,** ೮. ೧೦೪)

ಕುಡಿಸು – [ಕ್ರಿ] ಕೊಡುವಂತೆ ಮಾಡು (ಎಲ್ಲ ಮಾಟಕ್ಕೆಯಿಂ ಬಿದಿ ಸಮಕಟ್ಟಿ ಕೊಟ್ಟೊಡೆ ಎಡೆಯೊಳ್ ಕಿಡಿಸಲ್ ಕುಡಿಸಲ್ ಸಮರ್ಥರಾರ್: **ಪಂಪಭಾ,** ೧೨. ೧೮೨)

ಕುಡು – [ಕ್ರಿ] ಹೊಡೆ (ಕೊಸೆಯನಿನಿಸಱೆಪಿ ಕುಡೆ ಲಂಘಿಸಿದುದು ಪನ್ನೆರಡುಯೋಜನಮಂಬರಂ ಇನ್ನೇವೆಸಗೊಳ್ವುದೊ ಕಡುವೇಗದಿಂ ಅಸಕಟೆದುದು ಮನಮುಮಂ ತುರಂಗಮರತ್ನಂ: **ಆದಿಪು,** ೧೩. ೩೯); [ಕ್ರಿ] ದಾನಮಾಡು (ಧುರದೊಳ್ ಮೂಱುಂ ಲೋಕಂ ನೆರೆದಿರೆಯುಂ ಕುಡುವ ಪೊಟ್ತಿಱೊಳ್ ಮೇರುವೆ ಮುಂದಿರೆಯುಂ ಬೀರದ ಬಿಯದಂತರಕ್ಕೆ ಕಿಱಿದೆಂದು ಚಿಂತಿಪಂ ಪ್ರಿಯಗಳ್ಳಂ: **ಪಂಪಭಾ,** ೧. ೪೮); [ಕ್ರಿ] ಕೊಡು, ನೀಡು (ಎಲ್ಲ ಮಾಟಕ್ಕೆಯಿಂ ಬಿದಿ ಸಮಕಟ್ಟಿ ಕೊಟ್ಟೊಡೆ ಎಡೆಯೊಳ್ ಕಿಡಿಸಲ್ ಕುಡಿಸಲ್ ಸಮರ್ಥರಾರ್: **ಪಂಪಭಾ,** ೧೨. ೧೮೨)

ಕುಡುಗುರುಳ್ – [ನಾ] ಮುಂಗುರುಳು (ಕುಡುಗುರುಳೆಂಬ ತೆಂಬೆಲರ ಬೆಂಬಿಡಿದು ಪೊಸವೇಟಮೆಂಬ ಚಿಲ್ವಿಡಿದು: **ಆದಿಪು,** ೧೨. ೨೮)

ಕುಡುಗೆಮ – ಕೊಡಲಿ (ಕುಡುವೇಟಗೆಮ ಕುಡುವಣ್ಣಂ ಕುಡುಗೆಮ ಕುಡೆ ಕೊಳ್ವ ಕಲಿಯನಱೆಯಲ್ಕಕ್ಕುಂ: **ಪಂಪಭಾ,** ೬. ೪೯)

ಕುಡುದಾಡೆ – [ನಾ] ಕೋರೆ ಹಲ್ಲು (ಪೊಳೆದು ಉಳ್ಕುವ ಕುಡುದಾಡೆಯ ಪೊಳಪು ನೊಸಲ್ಗಡರ್ದು ಪೊಡರ್ವ ಪುರ್ವಸೆವಿನಂ ಅವ್ವಳಿಸುವ ಮುಳಿಸಿನ ದಳ್ಳುರಿಗಳಂ

ಉಗುಟ್ಟುವೊಲ್ ಉಗುಟ್ಟಿಂ ಅಸುರಂ ಉರಿವ ಪಟಿಗಳಂ; **ಪಂಪಭಾ,** ೬. ೫೯)

ಕುಡುಪು – [ನಾ] ವಾದ್ಯದಂಡ (ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ ನಡೆಯಿಸಿ ಪುರ್ವದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್: **ಆದಿಪು,** ೯. ೩೨)

ಕುಡುಮಿಂಚು – [ನಾ] ಕೊಂಕಾದ ಮಿಂಚು (ಕುಡುಮಿಂಚು ಮಸೆದನ್ನರಪ್ಪ ಪಲರೊಳ್ವೆಂಡಿರ್ ಮನಂಗೊಂಡು ಬಂದೊಡಂ: **ಆದಿಪು,** ೩. ೧೨)

ಕುಡುವಂ – [ನಾ] ಕೊಡುವವನು (ಕುಡವೇಟ್ಟನ ಕುಡುವನ ಕುಡೆ ಪಡೆವನ ಪೆಂಪೇಂ ನೆಗಟ್ಟೆವಡೆಗುಮೊ: **ಪಂಪಭಾ,** ೬. ೪೯)

ಕುಡುವಾ – ಕೊಡುತ್ತೀಯೇನು? (ಸಕಳಾವನಿತಳದ ಅದಟರಂ ಪಡಲ್ವಡಿಸಿದ ಶೌರ್ಯಾವಷ್ಟಂಭದೊಳ್ ಆನಿರೆ ಗೋವಳಿಗಂಗೆ ಅಗ್ರಪೂಜೆಯಂ ನೀನು ಕುಡುವಾ: **ಪಂಪಭಾ,** ೬. ೪೭)

ಕುಡುವುದು – [ನಾ] [ದಾನ] ಕೊಡುವ ವಸ್ತು (ಕುಡುವೊಂ ಕುಡುವುದು ಪಾತ್ರಂ ಕುಡೆ ಪಡೆವುದತಿವಿಪುಳ ಫಲಮೆನಲ್ ನಾಲ್ಕು ತೆಱಂ ಗಡ ದಾನಂ: **ಆದಿಪು,** ೧೦. ೯)

ಕುಡುವೇಟ್ಗೆಮ – ಕೊಡುವಂತೆ ಹೇಳಲಿ (ಕುಡುವೇಟ್ಗೆಮ ಕುಡುವಣ್ಣಂ ಕುಡುಗೆಮ ಕುಡೆ ಕೊಳ್ವ ಕಲಿಯನಜೆಯಲ್ಕಕ್ಕುಂ: **ಪಂಪಭಾ,** ೬. ೪೯)

ಕುಡುವೊಂ – [ನಾ] [ದಾನ] ಕೊಡುವವನು (ಕುಡುವೊಂ ಕುಡುವುದು ಪಾತ್ರಂ ಕುಡೆ ಪಡೆವುದತಿವಿಪುಳಫಲಮೆನಲ್ ನಾಲ್ಕು ತೆಱಂ ಗಡ ದಾನಂ: **ಆದಿಪು,** ೧೦. ೯)

ಕುಡ್ಯ – [ನಾ] ಗೋಡೆ (ನೀಳಗೋಪುರಚತುಷ್ಟಯವಿರಾಜಮಾನ ಗಗನಸ್ಫಟಿಕಪ್ರಾಕಾರವೇದಿಕಾ ಕುಡ್ಯದ್ವಯೋಪಶೋಭಿತಮುಂ: **ಆದಿಪು,** ೧೦. ೩೫ವ)

ಕುಣಿದು ಮೆಟ್ಟು – [ಕ್ರಿ] ಕುಣಿತದ ಹೆಜ್ಜೆ ಹಾಕು (ಸೀಗುರಿ ಕಾಪಿನಾಳ್ ಕುಣಿದು ಮೆಟ್ಟುವ ವಜ್ಜರಿಗಟ್ಟಿ: **ಪಂಪಭಾ,** ೪. ೮೭)

ಕುತಪಿ – [ನಾ] ವಾದ್ಯಗಾರ (ಸಂಗೀತಮಂ ತೋಱೆ ಮೆಚ್ಚಿಸಲ್ ಓರಂತೆ ಸಮಸ್ತದೇವಕುತುಪಿವ್ಯೂಹಂ ತೆರಳ್ಚಿರ್ದುದು: **ಆದಿಪು,** ೯. ೧೨೦)

ಕುತ್ಕೀಲಕೂಟ – [ನಾ] ಗಿರಿಶಿಖರ (ಪ್ರಿಯಹಂಸೀಯುತ ಹಂಸನಾದೆಯ ಮಹಾಕುತ್ಕೀಲಕೂಟಪ್ರಭೇದೆಯ ತೀರಸ್ಥಲವಂಗಚೂತಲವಲೀ ಪುಷ್ಪಾಸವಾ ಸ್ವಾದಿತೋದಯುತೋನ್ಮಾದೆಯ: **ಆದಿಪು,** ೧. ೫೪)

ಕುತ್ಕೀಳ – [ನಾ] ಕುತ್ಕೀಲ, ಬೆಟ್ಟ (ವೇಳಾವನಂಗಳುಂ ಕುತ್ಕೀಳಗಳುಂ ಆವ ನೃಪನ ಪಡೆ ನಡೆವೆಡೆ ನಿರ್ಮೂಳಂಗಳಾದುವು: **ಆದಿಪು,** ೧೩. ೭೫)

ಕುತ್ತು – [ಕ್ರಿ] ಚಾಚು (ಮಡಗಿಡಲೆಂದು ಪುತ್ತಿನೊಳಗೊಯ್ಯನೆ ಕುತ್ತಿದ ಕಯ್ಯಂ ... .. ಭೋಂಕೆನಪಗೆತೆರ್ಪ ಮಹೋರಗನೆಯ್ದೆ .. .. ಕೊಂಡುದು: **ಆದಿಪು,** ೨. ೪೦); [ಕ್ರಿ] ಬಾಗು, ಕುಸಿ (ಪೊಳೆದು ಪರಿವ ಪೊಳೆವುಲ್ಲೆಗಳುಮಂ ತಲೆಯಂ ಕುತ್ತಿ ವಿಶಾಲಂಬರಿವ ಕರಡಿಗಳುಮಂ: **ಪಂಪಭಾ,** ೫. ೪೮ ವ)

ಕುತ್ಸಿತಾಚಾರ – [ನಾ] ದುರಾಚಾರ (ಮತ್ತಮಲ್ಲಿ ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ: **ಆದಿಪು,** ೫. ೪೧ ವ)

ಕುದಿ – [ಕ್ರಿ] ಅಸೂಯೆಗೊಳ್ಳು (ಪೆಟ್ಟುವೆರ್ಚೆ ಕುದಿದಿತ್ತೊಡಂ ಈ ಧರಣೀತಳಕ್ಕೆ ಅವಿವೇಕಿಯ ಮರವಾನಸನಿತ್ತ ಚಾಗಮೇನಿರ್ದಪುದೇ: **ಆದಿಪು,** ೬. ೫೦); [ಕ್ರಿ] ಬೇಯು (ಸರೋವರಜಲಮೋರಂತಿರೆ ಕಾಯ್ದೊಂಡದ ನೀರಂತಿರೆ ಕುದಿದತ್ತು ಪೊಳೆಯೆ ಜಲಚರನಿಕರಂ: **ಆದಿಪು,** ೧೧. ೪೮); [ಕ್ರಿ] ಮರಳುವಿಕೆ (ತತ್ತಟಗುದಿಯುತ್ತುಮಿರ್ಪ ಕುದಿಯೊಳ್ ಸಿಡಿದಲ್ಲಿಯ ಮುತ್ತುಗಳ್ ಛಳಿಲ್ ಛಳಿಲೆನೆ ಕೊಂಡುವೊರ್ಮೊದಲೆ ರುಂದ್ರಸುರೇಂದ್ರವಿಮಾನಪಙ್ತಿಯಾ: **ಪಂಪಭಾ,** ೧೧. ೧೫೩)

ಕುದಿಪ – [ನಾ] ಕುದಿಯುವಿಕೆ, ಅಂತಃಸ್ತಾಪ (ಆಸತ್ತು ತಿರಿದ ಅರಣ್ಯಾವಾಸದ ಪರಿಭವದ ಕುದಿಪಮಂ ನೀಗಿ ಸುಖಾವಾಸಮಂ ಎಯ್ದಿಸಿದುದು ದುಶ್ಶಾಸನನಿರ್ದಿರವು ಮನದೊಳಾ ದ್ರೌಪದಿಯಾ: **ಪಂಪಭಾ,** ೧೨. ೧೫೨)

ಕುದುಕುಳಿ – [ನಾ] ಕುದಿಯುವ ಸ್ವಭಾವದವನು, ಆತುರಪಡುವವನು (ಕೆಲರ್ ಕುದುಕುಳಿ ರಕ್ಕಸರ್ ಬಿಸುಗೆಗಳ್ವೆರಸು ಉಗ್ರ ಮಹಾಗಜಂಗಳಂ ಚದುರ್ಗಿಡೆ ನುಂಗಿ ಬಿಕ್ಕಿ ಕುಡಿದರ್ ಬಿಸುನೆತ್ತರ ಕಾಬ್ಬುರಂಗಳಂ: **ಪಂಪಭಾ,** ೧೨. ೮)

ಕುದೃಷ್ಟಾಂತ – [ನಾ] ಕೆಟ್ಟ ದೃಷ್ಟಾಂತ, ಸರಿಯಲ್ಲದ ನಿದರ್ಶನ (ತದುಪನ್ಯಸ್ತಕುಹೇತು ಕುದೃಷ್ಟಾಂತಾನರ್ಥಕ ವಚನರಚನಾ ಪ್ರಳಾಪಮಂ: **ಆದಿಪು,** ೨. ೯ ವ)

ಕುದೃಷ್ಟಿ – [ನಾ] ಮಿಥ್ಯಾಜ್ಞಾನ (ಒಳ್ಳಿತ್ತು ಪೊಲ್ಲದೆಂಬುದಂ ಎಳ್ಳನಿತುಂ ತಿಳಿಯದಾ ಕುದೃಷ್ಟಿಯೆ ಕಷ್ಟಂ: **ಸಮಯಪ,** ೪. ೧೫೨); ದೋಷಯುಕ್ತ ವಿಚಾರದವನು (ಕುಶೀಲ ಕುತ್ಸಿತಾಚಾರ ಕುವೇಷಕುದೃಷ್ಟಿಗಳುಂ: **ಆದಿಪು,** ೫. ೪೧ ವ)

ಕುನುಂಗು – [ಕ್ರಿ] ಸುರುಟು (ಕರಣಗಣಂ ಕುನುಂಗಿರೆ ಮನಂ ನೊಸಲಲ್ಲಿರೆ ಲೋಚನಂಗಳ್ ಉಳ್ಳರೆಮುಗುಟ್ದಿಂಬುವೆತ್ತಿರೆ: **ಆದಿಪು,** ೧೦. ೧೪); [ಕ್ರಿ] ಬಾಗು (ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱೆ ನಭಕ್ಕೆ ಪಾಱೆದುದು: **ಪಂಪಭಾ,** ೧. ೧೦೯)

ಕುನ್ನಗೆಯ್ – [ನಾ] ಮುರಿದ ಕೈ, ಕತ್ತರಿಸಿದ ಕೈ (ಆತುರದಿಂದಂ ತನ್ನ ಕುನ್ನಗೆಯ್ಯೊಳೆ ಕೊಂಡು ಉದ್ಧುರಚಕ್ರದಿಂ ಇಟ್ಟಂ ತಿರಿಪಿ ನರಪ್ರಿಯತನೂಜನ ಅಕ್ಷೋಹಿಣಿಯಂ: **ಪಂಪಭಾ,** ೧೧. ೧೦೩)

ಕುಪ್ಪಸ – [ನಾ] (ಕೂರ್ಪಾಸ) ಕಂಚುಕ, ಒಂದು ಉಡುಪು (ಸುವರ್ಣಪಾರಿವದ ಕುಪ್ಪಸಮೊಪ್ಪೆ ಬೆಡಂಗನಾಳ್ದು .. .. ವಿಳಾಸದ ಸೂಳೆಯರೊಪ್ಪಿ ತೋಱೆದರ್: **ಪಂಪಭಾ,** ೯. ೧೦೩)

ಕುಪ್ಪೆ – [ನಾ] ಕಸದ ರಾಶಿ, ತಿಪ್ಪೆ (ನೊಳವಿಂಗೆ ಕುಪ್ಪೆವರಮೆಂಬವೊಲ್ ಅಂಬರಮುಂಟೆ ನಿನ್ನದೊಂದಳವು: **ಪಂಪಭಾ,** ೨. ೫೦)

ಕುಪ್ಯಸಾರ – [ನಾ] ಲೋಹದ [ಚಿನ್ನದ] ನಾಣ್ಯ (ಅತಿಭಯಂ ತಮಗೆ ಚಮೂಪತಿ ಮಾಡಿದೊಡೆ ಅಳ್ಕಿ ಕುಪ್ಯಸಾರಾದಿ ಧನಪ್ರತತಿಯಂ ಇತ್ತೆಂ: **ಆದಿಪು,** ೧೨. ೬೬)

ಕುಬೇರಕಾಂತ – [ನಾ] [ಜೈನ] ಚಕ್ರವರ್ತಿಯ ಬಳಿಯ ಅಕ್ಷಯ ಭಂಡಾರ (ಕುಬೇರಕಾಂತಮೆಂಬ ತವದ ಭಂಡಾರಮುಮಂ ವಸುಧಾರಕಮೆಂಬ ಕೋಶಾಗಾರಮುಂ: **ಆದಿಪು,** ೧೫. ೩ ವ)

ಕುಬ್ಜಕುಸುಮ – [ನಾ] ಗೊಜ್ಜಗೆ ಹೂ (ಮತ್ತೊರ್ವಳ್ ಶತಪತ್ರಿಕಾ ಕುಬ್ಜಕುಸುಮಮಾಲಾಕೋಮಳೆ: **ಆದಿಪು** ೧೧. ೧೨೨ ವ)

ಕುಬ್ಜವಾಮನ – [ನಾ] ಗೂನ ಮತ್ತು ಕುಳ್ಳ (ಪ್ರಿಯಕುಬ್ಜವಾಮನ ಗಣಾಲಾಪಂಗಳ್ ಅತ್ಯಂತಸೌಂದರ ಶುದ್ಧಾಂತ ವಧೂಕದಂಬಕಮನೇಂ ಮೆಯ್ವೆರ್ಚಿಸಲ್ಕಾರ್ತುದೋ: **ಆದಿಪು,** ೧೧. ೪೨ ವ)

ಕುಮತಿ – [ನಾ] ದುಷ್ಟ ಭಾವನೆ ಮತ್ತು ಅನ್ಯಮತದವನು (ಆ ವರ್ಣಚತುಷ್ಕಮಂ ಕುಮತಿಗಳ್ ತತ್‌ಸ್ಥಾನದೊಳ್ ಮುನ್ನ ಪುಟ್ಟಿದುವೆಂಬರ್: **ಆದಿಪು,** ೪. ೭೩)

ಕುಮಾನುಷತ್ವ – ಕೆಟ್ಟ ಮನುಷ್ಯ ಜನ್ಮ (ತಿರ್ಯಗ್ಜಾತಿತ್ವಮುಮಂ ಅಂತರ್ದ್ವೀಪಂಗಳೊಳ್ ಕುಮಾನುಷತ್ವಮುಮಂ ಮಾಡುಗುಂ: **ಆದಿಪು,** ೧೦. ೧೦ ವ)

ಕುಮಾರಕಾಲ – [ನಾ] ಕೌಮಾರ್ಯ, ಹುಡುಗುತನ (ಅಂತು ಬಾಲ್ಯಮಂ ಬಾಲಕೇಳೀಲೀಲೆಯಿಂ ಕಟಿಪಿ ಕುಮಾರಕಾಲದೊಳ್ ಸುಕುಮಾರಪರಿವೃತಂ: **ಆದಿಪು,** ೮. ೩ ವ)

ಕುಮಾರಭೃತ್ಯ – [ನಾ] ಮಕ್ಕಳನ್ನು ನೋಡಿಕೊಳ್ಳುವ ಆಳು (ಕುಮಾರಭೃತ್ಯಕುಶಲ ಭಿಷಕ್ಪರಿಷತ್ಸಂಪಾದಿತ ಕಲ್ಯಾಣಾಮೃತಾಹಾರಂಗಳಿರ್ದಂತೆ: **ಆದಿಪು,** ೮. ೩೨ ವ)

ಕುಮಾರಸ್ವಾಮಿ – [ನಾ] ರಾಜಕುಮಾರ ಸ್ವಾಮಿ ಅಥವಾ ಷಣ್ಮುಖ (ಪಣಮುಡಿದರಂತೆ ಅಡ್ಡಂ ಮಾಡಲುಂ ಎಸೆದ ದೆಸೆಗಳ್ಗೋಡಿಸಲುಂ ಕುಮಾರಸ್ವಾಮಿಯ ನಿಮ್ಮಡಿಯ ಕೆಲದೊಳಾನೆ ಬಲ್ಲೆಂ: **ಪಂಪಭಾ,** ೫. ೪೩ ವ)

ಕುಮುದಬಂಧು – [ನಾ] ಚಂದ್ರ (ಮಂಜಿನ ಮಟಿಗೆಯೊಳ್ ಮಸುಳ್ದಿರೆ ಕಂಜಪ್ರಿಯಕುಮುದಬಂಧುಗಳ್: **ಆದಿಪು,** ೬. ೬೧)

ಕುಮುದಾಂಗ – [ನಾ] [ಜೈನ] ಒಂದು ಕಾಲಗಣನೆ (ಅನೇಕ ಸಂವತ್ಸರಸಹಸ್ರ ಅತಿಕ್ರಮದೊಳ್ ಪಂಚವಿಂಶತ್ಯಧಿಕ ಧನುರುತ್ಸೇಧನುಂ ಕುಮುದಾಂಗಸಂಖ್ಯಾತ ವರ್ಷಾಯುಷ್ಯನುಮಾಗಿ: **ಆದಿಪು,** ೬. ೬೦ ವ)

ಕುಮುದಿನಿ – [ನಾ] ನೈದಿಲೆ (ಆಗಳಮೃತಕಿರಣನಮೃತಜಲಂಗಳಿಂ ಕುಮುದಿನಿಗಳಂ ತಳಿವಂತೆ: **ಆದಿಪು,** ೧೧. ೧೪೭ ವ)

ಕುಮ್ಮರಿಗಡಿ – [ಕ್ರಿ] ಬೇಸಾಯಕ್ಕಾಗಿ ಕಾಡನ್ನು ಕಡಿ (ಪರಶುಶರನಿಕರದಿಂ ಕುಮ್ಮರಿಗಡಿದವೊಲ್ ಒಡನೆ ಕಡಿಯೆ ರಥಿಗಳ್ ರಥದಿಂ ಧರೆಗೀಡಿದು: **ಪಂಪಭಾ,** ೧೦. ೮೮)

ಕುಮ್ಮು – [ಕ್ರಿ] ಕುಕ್ಕರಿಸಿ ಬೀಳು (ಮದಾಕೃತಿಯಂ ಮಾಸಿಸಿ ಮುಪ್ಪು ಚಪ್ಪರಿಸೆಯುಂ ಚಿಃ ಕೆಮ್ಮಿನೊಳ್ ಕುಮ್ಮಿ ಸಂಸ್ಕೃತಿಯೊಳ್ ಮತ್ತೆ ಗಡಂ ಕಡಂಗಿ ತೊಡರ್ದುರ್: **ಆದಿಪು,** ೧. ೮೧); [ಕ್ರಿ] ಕುಕ್ಕರಿಸು (ಕೊರೆವೊಡೆ ಬೆಟ್ಟುಗಳ್ ಬಿರಿವುವು ಉಣ್ಬುವ ಲಾಳೆಯ ಲೋಳೆಗಳ್ ಪೊನಲ್ವರಿವುವು ಕೆಮ್ಮಿ ಕುಮ್ಮಿದೊಡೆ ತೋಳೊಳೆ ಜೀವವಿಯೋಗಮಪ್ಪುದು: **ಪಂಪಭಾ,** ೪. ೧೦೦)

ಕುಯೋನಿ – [ನಾ] ಪಶು ಪಕ್ಷಿ ಮೊದಲಾದ ಕೆಳವರ್ಗದ ಜನ್ಮ (ನೀನತಿಲೋಭದೊಳಿಲ್ಲಿ ಕುಯೋನಿಯೊಳ್ ಅಜಗರನೆಯಾದೆ ಆ ಮೋಹಂ ಅದೇನಂ ಮಾಡದೊ: **ಆದಿಪು,** ೨. ೧೬)

ಕುರಂಗ – [ನಾ] ಜಿಂಕೆ, ಚಿಗರೆ (ಕರಶಾರ್ದೂಲಕುಳಂ ಕುರಂಗಕುಲದೊಳ್ ತಳ್ವೊಯ್ದು ಬಂದಾಡೆ: **ಆದಿಪು,** ೯. ೯೭)

ಕುರರ – [ನಾ] ಕುರವಕ್ಕಿ, ಒಂದು ನೀರ ಹಕ್ಕಿ (ಬಕ ಕುರರ ಪಕ್ಷವಿಕ್ಷಿಪ್ತ ಕಂಜ ಕಿಂಜಲ್ಕ ಪುಂಜಪಿಂಜರಿತ ಅಚ್ಛೋದಕಪರಿಪೂರ್ಣ: **ಆದಿಪು,** ೧. ೫೮)

ಕುರವಕ – [ನಾ] ಗೋರಂಟಿ (ಉನ್ನತಕುಚತಟಾಘಾತದೊಳೆ ಕುರವಕಂಗಳಂ ಪುಷ್ಪಿತಂಗಳಂ ಮಾಡಿಯುಂ: **ಆದಿಪು,** ೧೧. ೧೩೦ ವ)

ಕುರುಕುಟುಂಬ – [ನಾ] ಕೌರವರ ಸಂಸಾರ, ಮನೆ (ಕಮಳೆಯಂ ಅಶ್ವತ್ಥಾಮಂ ಮುಂದಿಟ್ಟು ಕುರುಕುಟುಂಬ ಘಟಚೇಟಿಕೆಯಂ ತರ್ಪಂತೆ ತಂದು: **ಪಂಪಭಾ,** ೧೩. ೧೦೨ ವ)

ಕುರುಕುಳ – [ನಾ] ಕುರುಕುಲ (ಕುರುಕುಳ ಚೂಡಾಮಣಿಯನೇನುಂ ಮಾರದೆ: **ಪಂಪಭಾ,** ೧೩. ೯೭ ವ)

ಕುರುಕ್ಷೇತ್ರ – [ನಾ] ಪಾಂಡವ–ಕೌರವರು ನಡೆಸಿದ ಯುದ್ಧದ ಜಾಗ (ಕಾಟ್ಟುಱು ಮಸಗಿದಂತೆ ಮಸಗಿದ ದುರ್ಧರ ಧನುರ್ಧರಬಲಮುಮಂ ಶ್ವೇತ ಭೀಷ್ಮರ ಪೇಟ್ದಿ ಓಜೆಯೊಳೆರಡುಂ ಪಡೆಗಳ ಪಡೆವಳರ್ಕಳ್ ಕುರುಕ್ಷೇತ್ರದೊಳ್ ಚಿತ್ರಿಸಿದಂತೆ ಒಡ್ಡಿ ನಿಂದಾಗಳ್: **ಪಂಪಭಾ,** ೧೦. ೫೧ ವ)

ಕುರುಕ್ಷ್ಮಾಪಾಳ – [ನಾ] ಕುರುರಾಜ, ದುರ್ಯೋಧನ (ನಡೆ ಕುರುಕ್ಷ್ಮಾಪಾಳನಿರ್ದಲ್ಲಿಗೆ ಎಂದು ಅರವಿಂದಾಲಯೆಯಂ ಮಗುಟ್ಚಿದಂ ಆದೇನಾ ದ್ರೌಣಿ ಶೌರ್ಯಾರ್ಥಿಯೋ: **ಪಂಪಭಾ,** ೧೩. ೧೦೨)

ಕುರುಡಂ ಕಣ್ಬೆಱು – [ಕ್ರಿ] ಕುರುಡನಿಗೆ ದೃಷ್ಟಿ ಬರು (ಕುರುಡಂ ಕಣ್ಬೆತ್ತವೋಲ್ ರಾಗದಿಂದೊಡೆಯಂ ತಾಂ ಬಗೆದು ಉಳ್ಳ ಸಾರಧನಮಂ ಮುಂದಿಟ್ಟು: **ಪಂಪಭಾ,** ೯. ೫)

ಕುರುಧ್ವಜ – [ನಾ] ಕುರುಶ್ರೇಷ್ಠ (ಪೆರ್ಚಿದಾದರದೊಳೆ ತನ್ನನಿಂತು ಬೆಸಗೊಂಡೊಡೆ ಸಂತಸದಿಂ ಕುರುಧ್ವಜಂ ಇಂತೆಂದು ಪೇಟ್ದಂ: **ಆದಿಪು,** ೧೦. ೮)

ಕುರುಧ್ವಜಿನಿ – [ನಾ] ಕೌರವಸೈನ್ಯ (ಬಿಡೆ ಪಿಣಿಲಂ ಕುರುಧ್ವಜಿನಿ ತೊಟ್ಟನೆ ಬಾಯನೆ ಬಿಟ್ಟುದು: **ಪಂಪಭಾ,** ೮. ೧೦೧)

ಕುರುಪಿತಾಮಹ – [ನಾ] ಕುರುಕುಲದ ಅಜ್ಜ, ಭೀಷ್ಮ (ಅವಿವೇಕಿಗಳಂತೆ ದೇವರ್ ನೆಗಟಲಾಗದು ಏನಂ ನೆಗಟಲ್ವೇಡಂ ಕುರುಪಿತಾಮಹನೊಳಾಲೋಚಿಸಿ ನೆಗಟ್ವುದು: **ಪಂಪಭಾ,** ೧೩. ೫೧ ವ)

ಕುರುಪ್ರಧಾನ – [ನಾ] ಕೌರವಮುಖ್ಯ, ದುರ್ಯೋಧನ (ಕುರುಪ್ರಧಾನನೊಳ್ ಕಱುಪನೆ ನಿಚ್ಚಟಂ ಬಿಸುಟು ನಿನ್ನಯ ಪೇಟ್ವುದು ಗೆಯ್ದು: **ಪಂಪಭಾ,** ೧೪. ೧೦)

ಕುರುರಾಜ – [ನಾ] ಶ್ರೇಯಾಂಸನ ಅಣ್ಣನಾದ ಸೋಮಪ್ರಭನ ಮಗ, ಜಯಕುಮಾರ (ತಮ್ಮ ನಣ್ಪುಮಂ ಬಗೆದು

ಕುರುರಾಜಾದಿ ಮೂರ್ಧಾಭಿಷಿಕ್ತಪಾರ್ಥಿವರ್ ಸನ್ನದ್ಧಬಲಪರಿವೃತರಾಗಿ: **ಆದಿಪು,** ೧೩. ೨೦ ವ)

ಕುರುರಾಜಾನ್ವಯ – [ನಾ] ಕೌರವ ರಾಜವಂಶ (ಇದಱಿಶೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ ಪುದಿದಟಿಸ್ಕಾಡಿತ್ತು ಅಡಂಗಿತ್ತಿದಱಿಶೊಳೆ ಕುರುರಾಜಾನ್ವಯಂ: **ಪಂಪಭಾ,** ೧೨. ೧೫೬)

ಕುರುಳ್ – [ನಾ] ಕೂದಲು, ಮುಂಗೂದಲು (ಮೃಗಭೂ ಖುದ್ಧ ವಿಳಾಸಿನೀ ಕಬರಿಕಾಬಂಧಗಳಂ ಪೊತ್ತು ಮಲ್ಲಿಗೆಯೊಳ್ ಭಾವಿಸಿ ಧೂಪದೊಳ್ ಪೊರೆದು ತತ್ಕಾಂತಾ ರತಿಸ್ವೇದಬಿಂದುಗಳೊಳ್ ನಾಂದು ಕುರುಳ್ಗಳೊಳ್ ಸುಟಿದು ಮುಂದೊಂದಿರ್ದ ಸೌಭಾಗ್ಯಘಂಟೆಗಳೊಂದಿ ಇಂಚರದೊಳ್ ಪಳಂಚಿ ಸುಟಿದತ್ತು ಅಂದೊಂದು ಮಂದಾನಿಳಂ: **ಪಂಪಭಾ,** ೪. ೮೦)

ಕುಲ – [ನಾ] ಜಾತಿ (ಕುಲಮೆಂಬುದುಂಟೆ ಬೀರಮೆ ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀಂ ಒಲಿದಲ್ಲಿ ಪುಟ್ಟಿ ಬಳೆದಿರೊ ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ: **ಪಂಪಭಾ,** ೨. ೮೩)

ಕುಲಕರ – [ನಾ] [ಜೈನ] ಒಬ್ಬ ಮನುವಿನ ಹೆಸರು (ಕುಳಧರನುಂ ಕುಲಕರನುಂ ಕುಳತಿಳಕಮೆನಿಪ ನಾಭಿರಾಜಂಗೆ ಲತಾಲಳಿತೆ ದಳಿತಾಂಬುಜಾನನೆ ವಿಳಾಸಲಾವಣ್ಯಕಾಂಯಿಯುತೆ ಸತಿ: **ಆದಿಪು,** ೬. ೭೯)

ಕುಲಗಿರಿ – [ನಾ] ಕುಲಪರ್ವತ (ಆಕೆಯ ಬಗೆದ ಬಗೆಯೊಳೊಡಂಬಡುವಂತೆ ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ .. .. ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ,** ೧. ೧೩೯ ವ), ನೋಡಿ, **'ಕುಲಶೈಲ'**

ಕುಲಚರ್ಯಾ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಕುಲಾಚಾರ (ಕುಲಚರ್ಯಾ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಕುಲಜ – [ನಾ] ಸತ್ಕುಲದಲ್ಲಿ ಹುಟ್ಟಿದವನು (ಕುಲಜರಂ ಉದ್ಧತರಂ ಭುಜಬಲಯುತರಂ ಹಿತರಂ ಈ ಸಭಾಮಧ್ಯದೊಳ್ ಅಗ್ಗಲಿಸಿದ ಮದದಿಂ ನಾಲಗೆ ಕುಲಮಂ ತುಬ್ಬುವವೊಲ್ ಉಱದೆ ನೀಂ ಕೆಡೆನುಡಿವೈ: **ಪಂಪಭಾ,** ೧೦. ೨೦)

ಕುಲಜಾತಿಸಾಧಿತವಿದ್ಯೆ – [ನಾ] [ಜೈನ] ಕುಲ ಮತ್ತು ಜಾತಿಗಳಿಗೆ ಅನುಗುಣವಾಗಿ ಸಾಧಿಸಿಕೊಳ್ಳಬೇಕಾದ ವಿದ್ಯೆ (ಅವರ್ಗೆ ಪ್ರಜ್ಞಪ್ತಿವಿದ್ಯೆ ಮೊದಲಾಗಿ ಕುಲಜಾತಿಸಾಧಿತವಿದ್ಯೆಗಳ್ ಪಲವುಂ ಬೆಸಕೆಯ್ವುವು: **ಆದಿಪು,** ೯. ೧೨೧ ವ)

ಕುಲಟಾ – [ನಾ] ಹಾದರಗಿತ್ತಿ (ಮಾಂಸಮಧುಮದ್ಯಸೇವನೆ ಹಿಂಸಾರುಚಿ ಪರಮಜಿನಮತಾರುಚಿ ಕುಲಟಾಸಂಸರ್ಗಂ ಎಂಬಿವಲ್ಲದೆ ಸಂಸಾರಭ್ರಮಣಕಾರಣಂ ಪೆಱವೊಳವೇ: **ಆದಿಪು,** ೫. ೮೦)

ಕುಲಧನ – [ನಾ] ಕುಲವೆಂಬ ಐಶ್ವರ್ಯ (ಬಗೆಗೊಂಡ ಕುಲಧನಂ ಸಮದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ಬಂ ಪಗೆವಂಗೆ ಕೊಟ್ಟು ಚಿಃ ಕೆಮ್ಮಗೆ ಬೆಸೆವವಂ ಅರಸದೆಂತೊ ಪಗರಣದರಸಂ: **ಆದಿಪು,** ೧೨. ೯೮); [ನಾ] ಕುಟುಂಬದ ಆಸ್ತಿ, ಪಿತ್ರಾರ್ಜಿತ ಆಸ್ತಿ (ಧರ್ಮಪುತ್ರನುಂ ಕುಲಧನಸಂಕುಲಗಳನೆ ತಂದಿಡೆ ಇಟ್ಟವಂ ಆಡಿ ಸೋಲ್ತಂ: **ಪಂಪಭಾ,** ೬. ೭೨)

ಕುಲಧರ – [ನಾ] ಆದಿದೇವನ ಒಂದು ಹೆಸರು, ತನ್ನ ಕುಲವನ್ನು ಉದ್ಧರಿಸಿದವನು (ನಿಜಕುಲೋದ್ಧರಣದಿಂ ಕುಲಧರನುಂ ತೇಜೋವಾಚಕಮಪ್ಪ ಕಾಶ್ಯಮಂ ಪಾಲಿಸುವುದಱಿಂ ಕಾಶ್ಯಪನುಂ: **ಆದಿಪು,** ೮. ೭೫ ವ)

ಕುಲಧರಕುಲ – [ನಾ] ಮನುಗಳ ವಂಶ (ತಿರಿತಿರಿದು ಮಾಡಿದಂ ಕುಲಧರಕುಲದೊಳ್ ಪಿರಿದು ಮಹಿಮೆಯಂ ನಿಮ್ಮರಸಂ: **ಆದಿಪು,** ೧೪. ೬೯)

ಕುಲಧ್ವಜ – [ನಾ] ಕುಲಶ್ರೇಷ್ಠ (ನಿಜಮಕುಟಮಣಿಮರೀಚಿಯಿಂ ಅಜನ ಪದಾಂಬುಜದ ಕೆಂಪನಿರ್ಮಡಿಸಿ ಕುಲಧ್ವಜ ಬೆಸಸು ನಿನ್ನವೊಲೀ ಪ್ರಜಾಪತಿತ್ವಕ್ಕೆ ಮುನ್ನ ನೋಂತರುಮೊಳರೇ: **ಆದಿಪು,** ೮. ೬೩)

ಕುಲಪತಿ – [ನಾ] ಒಡೆಯ, ಮುಂದಾಳು (ನೀಂ ಆಳ್ದಳಿರ್ ಆನೆ ನಿಮ್ಮ ಕುಲಪತಿಯೆನಗೆ ಮಲೆವರುಮೊಳರೇ: **ಆದಿಪು,** ೧೨. ೯೫)

ಕುಲಪಾಂಸುಲ – [ನಾ] ಕುಲಕ್ಕೆ ದೂಳಾದ, ಕುಲಕಳಂಕ (ಮಲೆಮಲೆದುರ್ಕಿ ಸೊರ್ಕಿ ಸಭೆಯೊಳ್ ಕುಲಪಾಂಸುಲಂ ಈ ಶಿರೀಷಕೋಮಲೆಯ ವಿಲೋಲ ನೀಲ ಕಬರೀಭರಮಂ ತೆಗೆವಾಗಳ್: **ಪಂಪಭಾ,** ೭. ೫೭)

ಕುಲನಗ – [ನಾ] ಕುಲಶೈಲ (ಅಂತು ಪುಗುವೇಟ್ವುದುಂ ದಿಗ್ದಂತಿಗಳುಂ ಕುಲನಗಂಗಳುಂ ಗಡಣಂಗೊಂಡೆಂತು ಕವಿತರ್ಕುಂ ಅಂತೆ ನೆಲಂ ತಳರ್ವಿನೆಗಂ ಪ್ರಚಂಡಕೋದಂಡಧರರ್: **ಪಂಪಭಾ,** ೨. ೭೦)

ಕುಲಭವನ – [ನಾ] ವಾಸಸ್ಥಾನ (ಅಱಿವಿಂಗೆ ಗುಱಿಯುಂ ಕಳೆಗೆ ಕುಲಭವನಮುಂ ಪ್ರತಾಪಕ್ಕಡರ್ಪುಮಾಗಿ ಬಳೆವನ್ನೆಗಂ: **ಆದಿಪು,** ೬. ೨೨ ವ)

ಕುಲಲನೆ – [ನಾ] ಕುಲಸತಿ, ಧರ್ಮಪತ್ನಿ (ಅಮಿತಮತಿಗಂ ಆತನ ಕುಲಲಲನೆ ಸತ್ಯಭಾವೆಗಂ ಪ್ರಹಸಿತನೆಂಬ ಮಗನಾದಂ: **ಆದಿಪು,** ೩. ೭೩ ವ)

ಕುಲಶೈಲ – [ನಾ] ಲಪರ್ವತ (ಉತ್ತಮಕುಲಶೈಲಂ ಉನ್ನತಿಯಂ ಏಳಿದವಾಗೆ ಬಿಸಟಿಸ್ಟೊಡಂ ಬಿಸುಟಿಸ್ಕೆಮ ಬಿಸುಡೆಂ ಮದೀಯ ಪುರುಷವ್ರತಮೊಂದುಮಂ: **ಪಂಪಭಾ,** ೧. ೮೩) [ಇವು ಏಳು ಅಥವಾ ಎಂಟು; ಮಹಾಭಾರತದ ಪ್ರಕಾರ, ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷವಾನ್, ವಿಂಧ್ಯ ಹಾಗೂ ಪಾರಿಯಾತ್ರಗಳು ಸಪ್ತ ಕುಲಪರ್ವತಗಳು]

ಕುಲಾಂಗನೆ – [ನಾ] ಕುಲಸ್ತ್ರೀ (ಪರಸುವ ಪೌರವೃದ್ಧರ ಕುಲಾಂಗನೆಯರ್ಕಳ ಸಾಧುವಾದದೊಳ್ ಬೆರಸಿ ಸಮಂತು ಸೂಸುವ ಜಲಾರ್ದ್ರಲಸದ್ಧವಳಾಕ್ಷತಂಗಳೊಳ್: **ಪಂಪಭಾ,** ೨. ೯೫)

ಕುಲಾದ್ರಿ – [ನಾ] ಕುಲಪರ್ವತ (ತಗುಳ್ದಡರ್ವುದಱಿಂ ಕುಲಾದ್ರಿ ಪರಿವೇಷ್ಟಿತನಂ .. .. ಮಗನಂ ನೀನಮೋಘಂ ಪಡೆವೆ: **ಪಂಪಭಾ,** ೧. ೧೪೧ ಮತ್ತು ೧. ೧೪೧ ವ)

ಕುಲಾಲ – [ನಾ] ಕುಂಬಾರ (ಕುಲಾಲ ಕರನಿರ್ಭರ ಭ್ರಮಿತ ಚಕ್ರ ಲೀಲಾಯಿತಂ: **ಪಂಪಭಾ,** ೪. ೨೭)

ಕುಲಾಲಚಕ್ರ – [ನಾ] ಕುಂಬಾರನ ಚಕ್ರ, ತಿಗುರಿ (ಧರೆಯೊಳ್ ಕುಲಾಲಚಕ್ರಂ ತಿರಿವಂತಿರೆ ತಿರಿಯೆ ಚಕ್ರಮದಱಿಯೆ

ಬಟೆಯಿಂ ತಿರಿತಿರಿದು ಮಾಡಿದಂ ಕುಲಧರಕುಲದೊಳ್ ಪಿರಿದು ಮಹಿಮೆಯಂ ನಿಮ್ಮರಸಂ: **ಆದಿಪು**, ೧೪. ೬೯)

ಕುಲಿಂಗಿ – [ನಾ] [ಜೈನ] ಕೆಟ್ಟ ಚಿಹ್ನೆಗಳುಳ್ಳವನು, ಧರ್ಮಕ್ಕೆ ಹೊರಗಿನವನು, ಮಿಥ್ಯಾತ್ವವಾದಿ (ಪರಮಜಿನತೀರ್ಥದೊಳ್ ಪಲಬರುಮಾಗಿಯುಂ ಏಂ ಕುಲಿಂಗಿಗಳ್ ವಿಕೃತಿಗಳಿಂ ವಿರಹಿತರಪ್ಪರ್: **ಆದಿಪು**, ೧೫. ೩೦)

ಕುಲಿಶ – [ನಾ] ವಜ್ರಾಯುಧ (ಕುಲಿಶನಿಭಶಿಲಾಭೇದಿಬಾಣಂಗಳುಂ ಭೇದಿಸವೆಂಬಂತಾಯ್ತು: **ಆದಿಪು**, ೧೪. ೯೫)

ಕುಲಿಶಾಯುಧ – [ನಾ] ಸಿಡಿಲ ಆಯುಧವನ್ನು ಹೊಂದಿದವನು, ಇಂದ್ರ (ಕುಲಿಶಾಯುಧನಿತ್ತ ಶಕ್ತಿಯಿಂದೆ ಆತನ ಉರಸ್ಥಲಮನಿಡೆ ವಜ್ರಹತಿಯಿಂ ಕುಲಗಿರಿ ಕೆಡೆವಂತೆ ಕೆಡೆದನಾ ದನುತನಯಂ: **ಪಂಪಭಾ**, ೧೨. ೧೪)

ಕುಲಿಶಾಸ್ತ್ರ – [ನಾ] ದೇವೇಂದ್ರ (ಸಿಂಹಾಸಂದಿಯೊಳ್ ಬಾಲನಂ ಕುಳಿಶಾಸ್ತ್ರಂ ಪಿರಿದುಂ ವಿಭೂತಿವೆರಸಿಟ್ಟೇಂ ಸಂತಸಂಬಟ್ಟನೋ: **ಆದಿಪು,** ೭. ೧೧೦)

ಕುಲ್ಯಾ – [ನಾ] ಹಳ್ಳ, ಕಾಲುವೆ (ಗಜಮದ ಗಂಧಾಂಬು ಕುಲ್ಯಾಪ್ರವಾಹದೊಳ್: **ಆದಿಪು**, ೧೨. ೬೧ ವ)

ಕುವಲಯ – [ನಾ] ಕನ್ನೈದಿಲೆ (ಆಕೆಯ ಕಣ್ಣ ಬೆಳ್ಪುಗಳ್ ಪಸರಿಸೆ ತುಂಬಿಗಳ್ ಕುವಲಯಂಗಳ್ ಅರಲ್ದುವೆ ಗೆತ್ತು ಮತ್ತೆಯುಂ ಮುಸುಱುವುದುಂ: **ಪಂಪಭಾ**, ೫. ೬೩)

ಕುವಳಯ – [ನಾ] ಭೂಮಂಡಲ ಹಾಗೂ ನೆಯ್ದಿಲೆ ಹೂ (ಕುವಳಯಬಾಂಧವನೆಸೆವನೆ ಕುವಳಯಂ ಬೆಳಗಿ ಕುವಳಯಂ ಪೊಱಗೆನೆ ಪಾಂಡವರೆ ಪೊಱಗಾಗೆ ನಿನಗೀ ಕುವಳಯಪತಿಯೆಂಬ ಪೆಂಪೊಡಂಬಡೆ ನೃಪತೀ: **ಪಂಪಭಾ**, ೯. ೩೭)

ಕುವಳಯದಳನಯನೆ – [ನಾ] ನೈದಿಲೆಯ ಹೂವಿನ ಪಕಳೆಯಂತಹ ಕಣ್ಣುಳ್ಳವಳು (ಸೊಗಯಿಸುವ ಕುವಳಯದಳನಯನೆಯ ನೋಟಂ ತನ್ನ ಮನದೊಳ್ ಅಳ್ಳಾಟಮಮ ಪಡೆಯೆ: **ಪಂಪಭಾ**, ೪. ೪೧ ವ)

ಕುವಳಯಪತಿ – [ನಾ] ಚಂದ್ರ, ಭೂಮಂಡಲದ ಅಧಿಪತಿ (ಕುವಳಯಬಾಂಧವನೆಸೆವನೆ ಕುವಳಯಂ ಬೆಳಗಿ ಕುವಳಯಂ ಪೊಱಗೆನೆ ಪಾಂಡವರೆ ಪೊಱಗಾಗೆ ನಿನಗೀ ಕುವಳಯಪತಿಯೆಂಬ ಪೆಂಪೊಡಂಬಡೆ ನೃಪತೀ: **ಪಂಪಭಾ**, ೯. ೩೭)

ಕುವಳಯಬಾಂಧವ – [ನಾ] ನೈದಿಲೆಯ ನಂಟ, ಚಂದ್ರ (ಕುವಳಯಬಾಂಧವನೆಸೆವನೆ ಕುವಳಯಂ ಬೆಳಗಿ ಕುವಳಯಂ ಪೊಱಗೆನೆ ಪಾಂಡವರೆ ಪೊಱಗಾಗೆ ನಿನಗೀ ಕುವಳಯಪತಿಯೆಂಬ ಪೆಂಪೊಡಂಬಡೆ ನೃಪತೀ: **ಪಂಪಭಾ**, ೯. ೩೭)

ಕುವೇಷ – [ನಾ] ಸಲ್ಲದ ವೇಷ (ಮತ್ತಮಲ್ಲಿ ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ: **ಆದಿಪು**, ೫. ೪೧ ವ)

ಕುಶಾಗ್ರಬುದ್ಧಿ – [ನಾ] [ಹುಲ್ಲಿನ ಅಲಗಿನಂತೆ] ಹರಿತವಾದ ಬುದ್ಧಿಯುಳ್ಳವನು (ಮತ್ತುಱೆದ ವಿದ್ಯೆಗಳ್ ಓಜರೆ ಚಟ್ಟರ್ ಎಂಬಿನಂ ನೆರೆದುವು ಗಳ ತನ್ನೊಳಾರ್ ದೊರೆ ಗುಣಾರ್ಣವನಂತು ಕುಶಾಗ್ರಬುದ್ಧಿಗಳ್: **ಪಂಪಭಾ**, ೨. ೩೪)

ಕುಶೀಲ – [ನಾ] ಕೆಟ್ಟ ನಡವಳಿಕೆ (ಮತ್ತಮಲ್ಲಿ ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ: **ಆದಿಪು**, ೫. ೪೧ ವ)

ಕುಶೇಶಯ – [ನಾ] ನೀರಿನಲ್ಲಿರುವುದು, ತಾವರೆ (ಶಶಿವಿಶದಯಶಂ ನಿಜಕುಲವಿಶೇಷಕಂ ಕರುಣಿ ಪಂಚಗರ್ವಾಧಿಕಪಂ ಚಶಶರಾಸನತನು ಬುಧಕುಶೇಶಯೋದ್ಬೋಧಕರ ಲಸತ್ತಿಗ್ಮಕರಂ: **ಆದಿಪು**, ೧೪. ೧೩೭ ವ)

ಕುಶೇಶಯಕುಟ್ಮಲ – [ನಾ] ತಾವರೆಮೊಗ್ಗು (ನೀಲತಟಘಟಿತ ಕರಕುಶೇಶಯಕುಟ್ಮಲನಾಗಿ: **ಆದಿಪು**, ೧೪. ೧೩೭ ವ)

ಕುಶೇಶಯಕೋಶ – [ನಾ] ತಾವರೆಯ ಕೋಶ, ಎಂದರೆ ತಾವರೆಯ ಮೊಗ್ಗು (ಈ ಸರಸೀರುಹಂಗಳ ಅವನೀಪದದೊಳ್ ಬಿಸುಟೆಂತು ಪೋಪೆವೆಂಬೀ ಸಮಕಟ್ಟಿನೊಳ್ ನೆಲಸಿದಂತೆರಗಿರ್ದುವು ಷಟ್ಪದಂಗಳ್ ಉತ್ಕೇಸರಕೋಟಿ ಸಂಕಟ ಕುಶೇಶಯ ಕೋಶಕುಟೀರಕಂಗಳೊಳ್: **ಪಂಪಭಾ**, ೪. ೪೭)

ಕುಶೇಶಯವಿಲಾಸಿನೀ – [ನಾ] ಕಮಲಾಸನೆ, ಲಕ್ಷ್ಮೀ (ಜಗತ್ ಕುಶೇಶಯವಿಲಾಸಿನೀಪ್ರಮದಮುಷ್ಟಿಪಿಷ್ಟಾತಕಂ: **ಆದಿಪು**, ೧೧. ೧೫)

ಕುಸಿ – [ಕ್ರಿ] ಕೀಳು, ಹಿಡಿದೆಳೆ (ಪುಸಿ ಬಸನಮೆಂದು ಕೆಲಬರ್ ಕುಸಿವರ್ ನಾಲಗೆಯನಿಕ್ಕುಟಿಗೊಳ್: **ಆದಿಪು**, ೫. ೮೭); [ಕ್ರಿ] ಅದುಮು (ಆಗಳುಂ ಕುದಿದಪತೃಷ್ಣೆಯಂ ಕುಸಿದು ಮಾಣಿಸುವ: **ಆದಿಪು**, ೬. ೭); [ಕ್ರಿ] ನಿರೋಧಿಸು (ಪರಿವ ಕಟಾಕ್ಷಂಗಳಿನೋಸರಿಸುತ್ತುಂ ನಿಮಿರ್ವ ಸುಯ್ಗಳಂ ಕುಸಿಯುತ್ತಂ: **ಆದಿಪು**, ೮. ೫೧); [ಕ್ರಿ] ಶಕ್ತಿಗುಂದು, ಕುಗ್ಗು (ಕಣ್ ತುಮುಬ್ಬು ಉಸಿರ್ ಕುಸಿದು .. .. ಜೋಲ್ದನಭಿಮನ್ಯು: **ಪಂಪಭಾ,** ೧೧. ೧೦೯)

ಕುಸುಂಭ – [ನಾ] ಕುಸುಮೆ (ರಾಜಮಾಷ ಆಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧ ಧಾನ್ಯಭೇಧಂಗಳುಂ: **ಆದಿಪು,** ೬. ೭೨ ವ)

ಕುಸುಮದಾಮ – [ನಾ] ಹೂವಿನ ಹಾರ (ಕಿಱೆದು ಪೊಟ್ಟು ಕುಳ್ಳಿರ್ದು ಮಜ್ಜನಭೋಜನತಾಂಬೂಲ ಅನುಲೇಪನ ವಿಭೂಷಣ ಸುರಭಿಕುಸುಮದಾಮಾದಿಗಳಿಂ ಸಂತಸಂಬಡಿಸಿ: **ಪಂಪಭಾ**, ೪. ೪೩ ವ)

ಕುಸುಮಶೇಖರ – [ನಾ] ಹೂ ಮುಡಿದವನು (ಸಿತಕುಸುಮಶೇಖರಂ ಚರ್ಚಿತಚಂದನಂ ಅತಿವಿಳಾಸವಿಧೃತದುಕೂಲಂ: **ಆದಿಪು**, ೧೩. ೧೨)

ಕುಸುಮಾಪಚಯ – [ನಾ] ಹೂ ಬಿಡಿಸುವುದು (ಕುಸುಮಾಪಚಯ ವ್ಯಸನಾವಸಕ್ತಸುರಯುವತಿ ಪಾಣಿಪಲ್ಲವರಾಗಂ: **ಆದಿಪು**, ೬. ೯೬)

ಕುಸುಮಾಭ – [ಗು] ಹೂವಿನಂತಹ (ವನಭೃತ್ಕುಂತಳೆಯಾ ಶಿರೀಷಕುಸುಮಾಭ ಅಂಗಕ್ಕೆ ಕಂದಂ ಕನತ್‌ಕನಕಾಂಭೋಜ ನಿಭಾನನಕ್ಕೆ ಪಿರಿದುಂ ದೀನತ್ವಮಂ: **ಪಂಪಭಾ**, ೪. ೬೪)

ಕುಸುಮಾಸ್ತ್ರ – [ನಾ] ಹೂಬಾಣ[ಗಳುಳ್ಳ] ಮನ್ಮಥ (ಬಾಯ್ಗೊಡಿದುದಾ ಕುಸುಮಾಸ್ತ್ರನ ಚಕ್ರಮಿದೆಂಬೆಸಕಮನಾಳ್ದತ್ತು ಪಸದನಂ ದ್ರೌಪದಿಯಾ: **ಪಂಪಭಾ**, ೩. ೪೭)

ಕುಸುಮಿಸು – [ಕ್ರಿ] ಹೂಬಿಡು, ಹೂಬಿಡುವಂತೆ ಮಾಡು (ಚಂಪಕದಳದಾಮ ಕೋಮಳನಿಜಭುಜಲತೆಗಳಂ ಅನೇಕ

ಮೌಕ್ತಿಕಮಣಿ ವಿಭೂಷಣಂಗಳಿಂ ಕುಸುಮಿಸಿ: **ಆದಿಪು,** ೪. ೪೧ ವ)

ಕುಸುಮೋಪಹಾರ – [ನಾ] ಹೂಗಳ ಕಾಣಿಕೆ, ಹೂ ಚೆಲ್ಲುವುದು (ಮೃಗಮದಜಳಚ್ಛಟಾಸಿಕ್ತಪ್ರಾಂಗಣಮುಂ ಮಧುಕರನಿಕರ ಝುಂಕಾರಹಾರಿ ಕುಸುಮೋಪಹಾರಮುಂ: **ಆದಿಪು,** ೮. ೩೫ ವ)

ಕುಸುರಿ – [ನಾ] ಹೂವಿನ ಮೃದುವಾದ ಭಾಗ (ಕುಸುರಿಯ ರೂಪನೆಯ್ದೆ ಪೊಗಟಲ್ಕಜೆಯೆಂ ನಡು ಪುರ್ವು ಬಾಸೆ ಕಣ್ಗೊಸಗೆಯಂ ಉಂಟುಮಾಡ್ವ ಜಘನಂ ಬೆಳರ್ವಾಯ್ .. .. ಅಂಬುಜಾಕ್ಷಿಯಾ: **ಪಂಪಭಾ,** ೪. ೭೨); [ನಾ] ಸೂಕ್ಷ್ಮ ಕೆಲಸ (ಪುಸಿ ನಸುವಂಚನೆ ನೋರ್ಪು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ ಕುಸುರಿ ನುಸುಳೆಂಬ ಕೇಣದ ಕುಸುರಿಯಂ ಅಜೆದು ಇಜೆದು ಮೆಱೆದು ಉಱೆದೆ ಅರೆಬರ್: **ಪಂಪಭಾ,** ೧೦. ೮೧); [ನಾ] ಚಾತುರ್ಯ (ಪಸಿದುಣವೇಡಿದಂ ಬಡವಂ ಆಂ ಉಣಲಿತ್ತೆಂ ಅಲ್ಲದಿಲ್ಲಿ ದಲ್ ಕುಸುರಿಯ ಮಾತುಗಾಣೆಂ: **ಪಂಪಭಾ,** ೫. ೭೨)

ಕುಹರ – [ನಾ] ಬಿಲ, ಗುಹೆ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ)

ಕುಳ – [ನಾ] [ಕುಲ] ಸಮೂಹ (ಕುಡಿವುದಂ ಏಟುಮಂಬುಧಿಯುಮಂ ಕುಲಶೈಲಕುಳಂಗಳುಂ ತಗುಳ್ದಡರ್ವುದಂ **ಪಂಪಭಾ,** ೧. ೧೪೦)

ಕುಳಧರ – [ನಾ] [ಜೈನ] ಕುಲಧರ, ಮನುಗಳು: ಪ್ರತಿಶ್ರುತಿ, ಸನ್ಮತಿ, ಕ್ಷೇಮಂಕರ, ಕ್ಷೇಮಂಧರ, ಸೀಮಂಕರ, ಸೀಮಂಧರ, ವಿಮಲವಾಹನ, ಚಕ್ಷುಷ್ಮಂತ, ಯಶಸ್ವಿ, ಅಭಿಚಂದ್ರ, ಚಂದ್ರಾಭ, ಮರುದ್ದೇವ, ಪ್ರಸೇನಜಿತ್ ಮತ್ತು ನಾಭಿರಾಜ (ಪಶ್ಚಿಮ ಕುಳಧರನೆನೆ ನೆಗಟ್ದ ನಾಭಿಯಲ್ಲಿಗೆ ವಂದರ್: **ಆದಿಪು,** ೬. ೭೩)

ಕುಳಂ – [ನಾ] ಕುಲವ್ಯವಸ್ಥೆಯುಳ್ಳವರು (ತಂದಿತ್ತು ಕೆಯ್ಸೆಱೆಯಂ ಕೊಟ್ಟಳವಟ್ಟ ಸಾರಧನಮಂ ಮೂವಿಟ್ಟಿಗಂ ಪೂಣ್ದು ಕಾಲ್ಗೆ ಎಱಗಿತ್ತು ಅಂತು ಅರಿಗಂಗೆ ಬೆರ್ಚಿ ಭಯದಿಂ ಗ್ರಾಮಂ ಕುಳಂ ರಾಜಕಂ: **ಪಂಪಭಾ,** ೬. ೩೦)

ಕುಳಮಂದಿರ – [ನಾ] ತವರುಮನೆ (ಬಳೆದುವು ತೋಳ್ಗಳ್ ಎಕ್ಕೆಯಿಂ ಅಮಳ್ಗಳ್ ಬಳೆವಂತಿರೆ ಮುಯ್ಯುಗಳ್ ಕುಳಾಚಳಶಿಖರಂಗಳಂ ಮಸುಳೆವಂದುವು ಪರ್ವಿದ ವಕ್ಷಮೀ ಕ್ಷಮಾತಳ ಕುಳಲಕ್ಷ್ಮಿಗಾಯ್ತು ಕುಳಮಂದಿರಂ: **ಪಂಪಭಾ,** ೨. ೩೭)

ಕುಳಾಚಳ – [ನಾ] ಕುಲಗಿರಿ (ಬಳೆದುವು ತೋಳ್ಗಳ್ ಎಕ್ಕೆಯಿಂ ಅಮಳ್ ಬಳೆವಂತಿರೆ ಮುಯ್ಯುಗಳ್ ಕುಳಾಚಳಶಿಖರಂಗಳಂ ಮಸುಳೆವಂದುವು ಪರ್ವಿದ ವಕ್ಷಮೀ ಕ್ಷಮಾತಳ ಕುಳಲಕ್ಷ್ಮಿಗಾಯ್ತು ಕುಳಮಂದಿರಂ: **ಪಂಪಭಾ,** ೨. ೩೭)

ಕುಳಿಕ – [ನಾ] ವಿಷಸರ್ಪ (ದುರ್ಯೋಧನಂ ದಾಡೆಗಳಿದ ಕುಳಿಕನಂತೆಯುಂ ಕೋಡುಡಿದ ಮದಹಸ್ತಿಯಂತೆಯುಂ ನಖಮುಡಿದ ಸಿಂಹದಂತೆಯುಂ ಗಳಿತಗರ್ವನಾಗಿ: **ಪಂಪಭಾ,** ೭. ೩೯ ವ)

ಕುಳಿಕೆ – [ನಾ] (ಬಳೆದ ನಿತಂಬದೆ ಕಾಂಚೀಕಳಾಪಮಂ ಕಟ್ಟಲಣಮೆ ನೆಱೆಯದು ಎಂದಗ್ಗಳಿಸಿ ಕುಳಿಕೆಗಳಿನೇಂ ಕಣ್ಗೊಳಿಸಿದುದೋ ಸುಭಗೆಯಾದ ಸುದತಿಯ ಗರ್ಭಂ: **ಪಂಪಭಾ,** ೧. ೧೪೩)

ಕುಳಿತ್ಥ – [ನಾ] ಹುರುಳಿ (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರ ತಿಳ ಅತಸಿ ಮಸೂರಿಕಾ ಕುಳಿತ್ಥ: **ಆದಿಪು,** ೬. ೭೨ ವ)

ಕುಳಿರ್ – [ಕ್ರಿ] ತಂಪಾಗು (ಕುಳಿರ್ವ ತಿಳಿನೀರಂ ಉಡುಗದೆ ತಳಿ ತಳಿರಂ ಪಾಸು ಜಳದೆಯಿಂ ಬೀಸು ಎಂದು ಉಮ್ಮಳಿಸಿ ಕಳವಳಿಸಿ: **ಆದಿಪು,** ೨. ೧೪)

ಕುಳಿರ್ಕೋಡು – [ಕ್ರಿ] ತಣ್ಣಗೆ ಕೊರೆ (ಕುಳಿರ್ಕೋರ್ಟ್ಟ ನಂದನಕಂ ಚಂದನಕಂ ಪಸುರ್ಪೆಸೆವ ಬಾಟಿಗ್ಲೊಂಪಕ್ಕಂ: **ಆದಿಪು,** ೧. ೭೫)

ಕುಳಿರ್ವ – [ಗು] ತಣ್ಣಗಿರುವ (ಕುಳಿರ್ವ ಆಲಿನೀರ್ಗಳಿಂ ತುರಿಪದೆ ಸೂಸುತುಂ ಕೆಳದಿಯರ್ ನದಿಪುತ್ತುಮಿರೆ: **ಪಂಪಭಾ,** ೫. ೮)

ಕುಳಿಶ – [ನಾ] ಕುಲಿಶ, ವಜ್ರಾಯುಧ (ಕೊಳದ ತಡಿಯೊಳ್ ಹಳಿಕುಳಿಶಶಂಖಚಕ್ರಲಾಂಛಿತಮಪ್ಪ ಅಡಿವಜ್ಜೆಯಂ ಕಂಡು: **ಪಂಪಭಾ,** ೧೩. ೭೬ ವ);

ಕುಳಿಶಾಯುಧ – [ನಾ] ಇಂದ್ರ (ದೀಪಪ್ರದೀಪಧೂಫಫಲಂಗಳ್ ಕುಳಿಶಾಯುಧಂ ಅರ್ಚಿಸೆ ತೊಳತೊಳಗಿದುವೆಳಸಿ ಬಳಸಿ ಜಿನಡಿದಳಿರೊಳ್: **ಆದಿಪು,** ೭. ೧೦೫)

ಕುಳಿಶಾಸ್ತ್ರ – [ನಾ] ಇಂದ್ರ (ಸಿಂಹಾಸಂದಿಯೊಳ್ ಬಾಲನಂ ಕುಳಿಶಾಸ್ತ್ರಂ ಪಿರಿದುಂ ವಿಭೂತಿವೆರಸಿ ಇಟ್ಟೇಂ ಸಂತಸಂಬಟ್ಟನೋ: **ಆದಿಪು,** ೭. ೧೧೦)

ಕುಳೀರ – [ನಾ] ಏಡಿ, ನಳ್ಳಿ (ಮತ್ಸ್ಯ ಮಕರ ಕುಲಿಶ ಕುಳೀರ ವರಾಹ ವಾನರ ಕಂಠೀರವ ಚಮೂರು ಮಯೂರ: **ಆದಿಪು,** ೧೧. ೨೮ ವ)

ಕುಳು – [ಕ್ರಿ] ಕುಳಿತುಕೊ (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏಟುತಿರೆ: **ಪಂಪಭಾ,** ೩. ೯)

ಕುಳುಂಪೆ – [ನಾ] ನೀರು ನಿಂತ ಗುಂಡಿ, ಕುಂಟೆ (ಸುರಭೂರುಹಮಿರೆ ಮತ್ತಿನ ಮರನಂ ಜಳರಾಸಿಯಿರೆ ಕುಳುಂಪೆಯ ನೀರಂ ಎರೆವಮೆ: **ಆದಿಪು,** ೯. ೧೦೮)

ಕುಳ್ಳಿರಿರಪ್ಪೊಡೆ – [ಕುಳ್ಳಿರಿರ್+ಅಪ್ಪೊಡೆ] ಕುಳಿತುಕೊಳ್ಳದೆ ಇರುವಿರಾದರೆ (ಅಂತೆ ಕುಳ್ಳಿರಿರಪ್ಪೊಡೆ ಇಂ ನಿಮಗಾಣೆ ಎಂದು ಇರವೇಟ್ದು ಇಳಾಕಾಂತನುಂ ತೊಡೆಸೋಂಕಿ ಕುಳ್ಳಿರೆ: **ಪಂಪಭಾ,** ೧೨. ೪೯)

ಕುಜಿ – [ಕ್ರಿ] ನಿಶ್ಚೈಸು (ನಿಜಾಭಿಖ್ಯಾತಿಯಂ ಇಳೆಯೊಳ್ ನಿಜೆಸಲ್ಕೀ ತೆಜದ ಇತಿಹಾಸಕಥೆಯಂ ಒಪ್ಪಿಸೆ ಕುಜಿತಂ: **ಪಂಪಭಾ,** ೧೪. ೫೧)

ಕುಜಿದಜಿದಜಿ – [ಕ್ರಿ] ಕುರಿಯನ್ನು ಮಾಡಿದಂತೆ ಸಣ್ಣದಾಗಿ ಕತ್ತರಿಸು (ವಿಷಪನ್ನಗನಂ ಪನ್ನತನನೆಡೆಯೊಳ್ ಅರಿಗಂ ತನ್ನಯ ಗರುಡಾಸ್ತ್ರದಿಂದೆ ಕುಜಿದಜಿದಜಿದಂ: **ಪಂಪಭಾ,** ೧೨. ೨೦೫)

ಕುೞಿಪ – [ನಾ] ಮನಸ್ಸಿನ ಗುರಿ (ಎಂದು ಮನದ ಮಱುಕಮುಮಂ ಎರ್ದೆಯ ಕುದಿಪಮುಮಂ ಬಗೆಯ ಕುೞಿಪಮುಮಂ ಮೆಯ್ಯ ಬಡತನಮುಮಂ ಅಱಿಯೆ ತೋಱಿ ನುಡಿದೊಡೆ: **ಪಂಪಭಾ,** ೪. ೬೮ ವ)

ಕುೞಿಪು – [ನಾ] ವರ್ಣನೆಯ ಪರಮಾವಧಿ (ಇಂದ್ರನ ಬೆಸದಿಂ ಬಂದುವೆಂದೊಡೆ ಉಪವನಮಂ ಬಣ್ಣಿಸಲ್ಕೆನಗೆ ನಾಡೆಯುಂ ಕುೞಿಪಲ್ತೇ: **ಆದಿಪು,** ೬. ೯೨); ಸಂಕೇತಸ್ಥಳ (ಕುೞಿಪಂ ಪೂರ್ವಿನ ಜರ್ವೆ ತೋಱುಗೆ ಬಗೆಯಂ ಕಣ್ಗಳ್ ಪೇೞ್ಗೆ; **ಪಂಪಭಾ,** ೪. ೮೨)

ಕುಱುಂಬ – [ನಾ] ದ್ವೀಪ (ನಾಲ್ವತ್ತೆಣ್ಗಾವುದದ ನೀಳದ ಮೂವತ್ತಾಱು ಗಾವುದದಗಲದ ಬೀಡಿಂಗೆ ವಾಸ್ತುವಿಭಾಗಕ್ಕೆಡೆಯಿಲ್ಲದೆ ಕುಱುಂಬಂಗಳೊಳ್ ಬೀಡಂ ಬಿಡಿಸಿದಾಗಳ್: **ಆದಿಪು,** ೧೨. ೬೮ ವ)

ಕುಱುಂಬು – [ನಾ] ಸಣ್ಣ ಪಾಳೆಯ ಪಟ್ಟು (ಮಲೆ ತಲೆದೋಱದೆಂದುದನೆ ಕೊಟ್ಟುದು ಡಂಗಮಡಂಗಿ ಬಂದುದು ಒಕ್ಕಲಿಗವೆಸರ್ಗೆ ಪೂಣ್ದುದು ಕುಱುಂಬು ತಱುಂಬದೆ ಮಿಕ್ಕ ಶತ್ರುಮಂಡಳಿಕರೆ ಮಿತ್ರಮಂಡಳಿಕರಾದರ್: **ಪಂಪಭಾ,** ೨. ೯೦)

ಕುಱುಪು – [ನಾ] ಕುೞಿಪು, ಗುರುತು (ಕುದುರೆಯ ಬಣ್ಣದಿಂ ರಥದ ತೋರ್ಕೆಯಿಂ ಎತ್ತಿದ ಚಿತ್ರಕೇತುವೃಂದದ ಕುಱುಪಿಂದೆ ಉದಗ್ರ ರಥಚೋದಕಚಿಹ್ನದಿಂ ಈತನೆಂಬುದಂ ಅಱಿದು: **ಪಂಪಭಾ,** ೧೦. ೮೭)

ಕುಱುವಡಿ – [ನಾ] {ಕುಱು+ಮಡಿ] ಸಣ್ಣ ಮಡಿಬಟ್ಟೆ (ಆಗಳ್ ಕೊಳದಿಂ ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆಱೆದುದು ಅವರ ನಾಣ್ಗಳ ತೆಱಪಂ: **ಪಂಪಭಾ,** ೫, ೬೭)

ಕುೞಿ – [ನಾ] ಗುಂಡಿ, ಹಳ್ಳ (ಅಗುಟ್ಟಿದಿರಲ್ ಆ ಕುೞಿಯೊಳ್ ತೊಟ್ಟಗೆ ನಿಧಿಗಂಡಂತೆ ವಸುಧೆಗೆ ಅಸದಳಮಾಯ್ತು ಆ ಮಗನ ಅಂದಂ: **ಪಂಪಭಾ,** ೧. ೯೭)

ಕುೞಿಗೊಳ್ – [ಕ್ರಿ] ಕುಗ್ಗು (ಪೊಸವೇಟಕಾಱರ ಎರ್ದೆಗಳ್ ಪೊಸಕಾರ ಪೊಡರ್ಪುಗಂಡದೇಂ ಕರಿತುವು ಅದೇಂ ಕಲಂಕಿದುವು ಅದೇಂ ಕುೞಿಗೊಂಡುವು ಅದೇಂ ಕನಲ್ದುವೋ: **ಪಂಪಭಾ,** ೭. ೨೩)

ಕೂಂಕು – [ಕ್ರಿ] ನೆಗೆ, ಹಾರು (ಸುರಭಿಗಳ ಮೊಲೆಗಳನುಣ್ಬ ಅವಱ ಮಱಿಗಳಂ ಪೋಗೆ ನೂಂಕಿ ಕೂಂಕಿ ಮೊಲೆಗಳನುಣ್ಬ ಕಿಶೋರಕೇಸರಿಗಳುಮಂ: **ಪಂಪಭಾ,** ೧. ೧೧೫ ವ)

ಕೂಕಿಡು – [ಕ್ರಿ] ಮೇಲಕ್ಕೆ ನೆಗೆ (ಕೂಕಿಡುವ ಕುಕಿಲ್ವ ಬಿಕ್ಕುಳಿಪ ತೇಗುವ: **ಪಂಪಭಾ,** ೪. ೯೦)

ಕೂಕಿೞಿ – [ಕ್ರಿ] ಕುಕ್ಕಿೞಿ, ಆರ್ಭಟಿಸು (ಕೆನ್ನೆತ್ತರೊಳ್ ಒರ್ವರೊರ್ವರಂ ತಳ್ಕಿೞಿದುಂ ಬೊಬ್ಬಿೞಿದುಂ ತ್ರಿಪುಂಡ್ರಮಿಟ್ಟುಂ ಕೂಕಿೞಿದುಂ ತೇಗಿಯುಂ ಸಸಿನೆವರಿದುಂ: **ಪಂಪಭಾ,** ೧೨. ೧೫೮ ವ)

ಕೂಜತ್ – [ಗು] ಶಬ್ದಮಾಡುವ (ಅಂತೆ ಗೆಯ್ವೆನೆಂದು ಕೂಜಜ್ಜಳಚರಕುಳ ಕಳರವದೊಳಂ ಕಮಳಕುವಳಯ ರಜಃಕಷಾಯಪರಿಮಳದ ಅಳಿಪಟಳಜಟಿಳಮಾಗಿ: **ಪಂಪಭಾ,** ೮. ೩೭ ವ)

ಕೂಟ – [ನಾ] ಶಿಖರ, ತುದಿ (ಕಳಧೌತೋಜ್ಜ್ವಳ ಕೂಟಕೋಟಿಘಟಿತ ಶ್ರೀಗೇಹದಿಂ ಮುಂದೆ: **ಆದಿಪು,** ೭. ೧೧೦)

ಕೂಟಕುಳ – [ನಾ] ಶಿಖರಸಮೂಹ[ವನ್ನುಳ್ಳ] (ಇಂತಿದುವೆ ಬಂಧುರ ಕೂಟಕುಳಂ ಹಿಮಾಚಳಂ: **ಪಂಪಭಾ,** ೪. ೧೩)

ಕೂಟಕುಳಿಗಳ್ – [ನಾ] ಗುಂಪು ಸೇರಿ ಕಾಲ ಕಳೆಯುವ ಜನ (ಜನಮೆಲ್ಲಂ ನೆರೆದು ಅಕ್ಕಟ ಅಣ್ಣರಿವರ್ ಏವಂದರ್ ಏವೋದರ್ ಎಂಬಿನಂ ಏಂ ಪೋಪಮೆ ನಾಡ ಕೂಟಕುಳಿಗಳ್ಗೆ ಏ ದೋಸಂ ಏಂ ಬನ್ನಂ: **ಪಂಪಭಾ,** ೩. ೬೫)

ಕೂಟಪ್ರಭೇದೆ – [ನಾ] ಶಿಖರಗಳನ್ನು ಕೊರೆಯುವ[ವವಳು] (ಪ್ರಿಯಹಂಸೀಯುತ ಹಂಸನಾದೆಯ ಮಹಾಕುಕ್ಷೀಲ ಕೂಟಪ್ರಭೇದೆಯ ತೀರಸ್ಥ : **ಆದಿಪು,** ೧. ೫೪)

ಕೂಟಶಾಲ್ಮಲಿ – [ಕ್ರಿ] ಕೃತಕವಾದ ಬೂರುಗದ ಮರ (ಕೂಟಶಾಲ್ಮಲಿಗಳಂ ಅಡರವೇಟ್ಟು ಇದಿರಂ ಬೞಿಯಂ ಉರ್ಚುವರುಂ: **ಆದಿಪು,** ೫. ೮೫ ವ)

ಕೂಟಾಗ್ರ – [ನಾ] ಶಿಖರದ ತುದಿ (ವಿಲಸತ್ ಕಲ್ಲೋಲನಾದಂ ನೆಗೆೞ್ದಿರೆ ನಿಜಕೂಟಾಗ್ರದೊಳ್ ಪಾಯ್ವ ಗಂಗಾಜಲದಿಂ ಮೂರ್ಧಾಭಿಷೇಕೋನ್ನತಿ ನಿಲೆ: **ಪಂಪಭಾ,** ೪. ೧೪)

ಕೂಟಾಷ್ಟಕ – [ನಾ] [ಜೈನ] ರುಚಿಕಾಚಳದ ದಕ್ಷಿಣಭಾಗದ ಅಮೋಘ ಸುಪ್ರಬುದ್ಧ ಮಂದಿರ ವಿಮಳ ರುಚಕ ರುಚಕೋತ್ತರ ಚಂದ್ರ ಸುಪ್ರತಿಷ್ಠ ಎಂಬ ಶಿಖರಗಳು (ತತ್ಕುಳದ ಅರಿಷ್ಟ ಪ್ರಾಗ್ದಿಗ್ದೇಶದ .. .. ಎಂಬ ಕೂಟಾಷ್ಟಕಂಗಳೊಳ್: **ಆದಿಪು,** ೭. ೩ ವ)

ಕೂಡು – [ಕ್ರಿ] ಸಾಧ್ಯವಾಗು (ಎಲ್ಲಿರ್ದೊಡಂ ಕೂಡದಾಗಳಣಂ ಕೂಡದು ಬಾೞ್ವ ಮಾತೆನಗೆ: **ಆದಿಪು,** ೩. ೪೧); [ಕ್ರಿ] ಸಂಭೋಗಿಸು (ಇನಿಯಳನಟ್ಟೆಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ ಸೋಲ್ತಲಂಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ: **ಪಂಪಭಾ,** ೧. ೧೧೧); [ಕ್ರಿ] ಒಂದಾಗು (ಮಾದ್ಯತ್ ಗಜಗಂಡಭಿತ್ತಿ ಕಷಣ ಪ್ರೋದ್ಭೇದದಿಂ ಸಾರ್ದು ಬಂದು ಇದಿರೊಳ್ ಕೂಡುವುದಿಲ್ಲಿ ಚಂದನರಸಂ ಕೆಂಬೊನ್ನ ಟಂಕಂಗಳೊಳ್: **ಪಂಪಭಾ,** ೪. ೨೨); [ಕ್ರಿ] ಸೇರಿಸು, ಒಂದುಮಾಡು (ಪದ್ಮಾಸನಂ ತಾನೆ ನೇರ್ಪಡಿಸಲ್ ಕೂಡಿದಂ ಇರ್ಪುದಲ್ತು ನಯಂ ಇನ್ನೀ ಪೊಱೆಗ್ ಪೊಱಗ್ಗಾಗೆ: **ಪಂಪಭಾ,** ೫. ೨೦)

ಕೂಡುಗೆ – ಸಿದ್ಧಿಸಲಿ (ಬಗೆ ಪಗೆವರ ಕಡುವೆರ್ಚಂ ಎನ್ನ ಪೂಣ್ಕೆಯುಂ ಎರ್ದೆಯೊಳ್ ಬಗೆ ಮುನಿಯ ಮಂತ್ರಪದಮಂ ಬಗೆ ಕೂಡುಗೆ ನಿನ್ನ ಬಗೆದ ಬಗೆಯೊಳ್ ಪಾರ್ಥಾ: **ಪಂಪಭಾ,** ೭. ೬೭)

ಕೂಡುವೆಡೆ – [ನಾ] ಸಮಾಗಮದ ಸಮಯ (ಅಟ್ಟಱನೀಯೆ ಕೂಡುವೆಡೆಯೊಳ್ ಜ್ಞಾನಸ್ವರೂಪಂ ಮಹಾಮುನಿಪಂ ಪುಟ್ಟಿದಂ; **ಪಂಪಭಾ,** ೧. ೬೯)

ಕೂಡೆ – [ಅ] ಕೂಡಲೆ (ಮೆಯ್ಗೊಂಡ ಒಲವಿಂದೆ ಅಗಲ್ಕೆಗೆ ಅಣಂ ಆಱದೆ ಪಕ್ಕಿಗಳೆಲ್ಲಮಂ ಮರುಳ್ಗೊಂಡವೊಲ್ ಊಳ್ದು ಕೂಡೆ ಬೆಸಗೊಂಡು ಬೞಲ್ದುವು ಜಕ್ಕವಕ್ಕಿಗಳ್: **ಪಂಪಭಾ,** ೪. ೪೮)

ಕೂಪ – [ನಾ] ಹಳ್ಳ, ಗುಂಡಿ (ನೆರೆದಿಸುತಿರೆ ತೋಲ್ವುಲ್ಲೆಯಂ ಇರದೆ ಅದು ಬಿೞಿಸ್ದೊಡೆ ಪುರಾಣಕೂಪದೊಳ್ ಅದಂ ಇನ್ನು ಅರಿದು ತೆಗೆವಂದಂ ಎಂದವರಿರೆ ಬಳಸಿಯುಮಲ್ಲಿ

ಕಂಡು ನಕ್ಕಂ ದ್ರೋಣಂ: **ಪಂಪಭಾ,** ೨. ೫೧); [ನಾ] ಬಾವಿ (ಇದು ದಲ್ ಘೋರಾಂಧಕಾರಕ್ಕೆ ಮಾಡಿದ ಕೂಪಂ: **ಪಂಪಭಾ,** ೧೩. ೭೨)

ಕೂಪಾರ – [ನಾ] ಸಮುದ್ರ (ಆ ಪೂರ್ವ ದಕ್ಷಿಣಾಪರ ಕೂಪಾರದ ರಜತಗಿರಿಗುಹಾದ್ವಯದೆಡೆಯೊಳ್: **ಆದಿಪು,** ೧೪. ೮)

ಕೂರ್ – [ಕ್ರಿ] ಪ್ರೀತಿಸು (ನಿನ್ನ ಕೆಳೆಯಂ ಬಂದಪ್ಪಂ ಆತಂಗೆ ಬೆಂಬಲಂ ಇಂ ನೀನ್ ನಿನಗೆ ಆತಂ ಆತನಂ ಇಳಾವಿಖ್ಯಾತನಂ ಕೂರ್ತು ನೋಡಲುಂ ಅಟ್ಟಿರ್ತು ಅಮರ್ದಪ್ಪಲುಂ: **ಪಂಪಭಾ,** ೩. ೩೩)

ಕೂರಂಕುಸ – [ನಾ] ಹರಿತವಾದ ಅಂಕುಶ (ಮಿಂಚಿಂ ಪುದಿದಿರ್ತೆಂಬಂತೆ ಕೂರಂಕುಸದ ಪೊಳಪನಾ ತೋಱುವಂ ವಜ್ರಜಂಘಂ: **ಆದಿಪು,** ೪. ೨೫)

ಕೂರಂಬು – [ನಾ] ಹರಿತವಾದ ಬಾಣ (ಅಂಬರದಿಂ ಸೂಸುವ ಧಾರಾಂಬುಗಳುಮನೊಡನೆ ಸುರಿವ ಪಲವಂದದ ಕೂರಂಬುಗಳುಮಂ ಒಡನಳುರ್ದುವು: **ಆದಿಪು,** ೧೩. ೬೪)

ಕೂರಕಮ್ಮ – [ನಾ] [ಕ್ರೂರ ಕರ್ಮ] ಕೆಟ್ಟ ಕೆಲಸ (ಓವದೆ ಕಾಯದೆ ಕೂರಕಮ್ಮದಿಂ ಸೊನೆ ಸುರಿವನ್ನೆಗಂ ಪಱಿದು ನೋಯಿಸಿ ಕಾಡಿದೆವು: **ಆದಿಪು,** ೧೧. ೧೩೨)

ಕೂರದ – [ನಾ] ಪ್ರೀತಿಸದವನು, ಹಗೆ (ಕೂರದನಿಂ ಒಡ್ಡಿದಂ ಪಗೆಗೆ ಸಂತಸಮಾಗಿರೆ ಮಾರಿ ಸುಯ್ಯುಗ್ಮೇ: **ಪಂಪಭಾ,** ೩. ೪)

ಕೂರಸಿ – [ನಾ] ಹರಿತವಾದ ಕತ್ತಿ (ಮಿಕ್ಕಸುರರ ಮೆಯ್ಯೊಳಾದ ವಿರಹಾಗ್ನಿಯಂ ಆಱಿಸುತಿಂತೆ ತನ್ನ ಕೂರಸಿಯೊಳ್ ಅಡರ್ತು ಕೊಂದಸಿಯಳ್ ಇರ್ಕೆ ಅಸಿಯೊಳ್ ಪಡೆಮೆಚ್ಚೆ ಗಂಡನಾ: **ಪಂಪಭಾ,** ೧. ೬)

ಕೂರಿತು – [ಗು] ಹರಿತ, ಬಲಿಷ್ಠ (ಬಲ್ಲಿತ್ತಱ ಕೋಡು ಕೂರಿತು ಅದಂ ಅಂತು ಇಂತು ಉಂತು ಎನಲ್ ಬರ್ಕುಮೇ: **ಆದಿಪು,** ೧. ೨೫)

ಕೂರಿದುದು – [ಗು] ಹರಿತವಾದುದು (ಕೂರಿದುವಪ್ಪ ಕಣ್ಮಲರ್ಗಳ್ ಅಳ್ಳೆರ್ದೆಯೊಳ್ ತಡಮಾಡೆ ತಾಮೆ ಕಣ್ ಪೇರಿಸೆ ಪುರ್ವು ನಾಲಗೆವೊಲಾಗೆ ಮನಂಬುಗಿಸಲ್ಕೆ: **ಪಂಪಭಾ,** ೪. ೮೩)

ಕೂರಿಸು – [ಕ್ರಿ] ಪ್ರೀತಿಸು (ಕೂರಿಸೆ ಗುರುಶುಶ್ರೂಷೆಯೊಳ್ ಆ ರಾಮನಂ ಉಗ್ರ ಪರಶುಪಾಟಿತರಿಪುವಂಶಾರಾಮನಂ ಇಷುವಿದ್ಯಾಪಾರಗನೆನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ,** ೧. ೧೦೪); ಒಲಿಸು (ಸಲೆ ಮೆಲ್ಪು ಬಲ್ಪನಟೆಗುಂ ಕೈವಾರಮುಂ ಕೂಡೆ ಕೂರಿಸುಗುಂ ನಿಕ್ಕುವಂ: **ಪಂಪಭಾ,** ೯. ೧೯)

ಕೂರ್ಗಣೆ – [ನಾ] ಹರಿತವಾದ ಬಾಣ (ಎರಡುಂ ಬಲದ ಕಡುವಿಲ್ಲರ್ ಭೋರ್ಗರೆದು ಇಸೆ ಕೂರ್ಗಣೆಯೊಳ್ ಪಂದರ್ ಇಕ್ಕಿದಂತಾಯ್ತು ಗಗನಮಂಡಲಮೆಲ್ಲಂ: **ಪಂಪಭಾ,** ೧–. ೭೨)

ಕೂರ್ಚಕಳಾಪ – [ನಾ] ಗಡ್ಡ ಉಳ್ಳವನು (ನಾಭಿಕೂಪಾವಲಂಬಿ ಕೂರ್ಚಕಳಾಪಂ ಲಲಾಟನಿಹಿತಕೌಸುಂಭಾಂಶುಪಟ್ಟಕಪ್ರಾಂತ: **ಆದಿಪು,** ೧೩. ೪೫ ವ)

ಕೂರ್ಚಾಳ – [ನಾ] ಗಡ್ಡಮೀಸೆ ಇರುವ (ಕೂರ್ಚಾಳತುಂದಿಳ ಜರತ್ಸಾಮಂತಸಂದೋಹಕ್ಕಪ್ಪಯಿಸಿ: **ಆದಿಪು,** ೪. ೯೧ ವ)

ಕೂರ್ತಂ – [ನಾ] ಪ್ರೀತಿಸಿದವನು (ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷದ್ಬಲಮಂ ಸುಟ್ಟಂ ಉದಾತ್ತಪುಣ್ಯನವನಂ ಚೈತಾಗ್ನಿಯಿಂ ಸುಟ್ಟೆನಿಲ್ಲ ಒಲವಿಂದ ಇಂದಿಂತು ಎರ್ದೆಮುಟ್ಟೆ ಕೂರ್ತನೊಳನೇ ಕರ್ಣಂಗೆ ದುರ್ಯೋಧನಂ: **ಪಂಪಭಾ,** ೧೩. ೬೦)

ಕೂರ್ಪು – [ನಾ] ಹರಿತತೆ ಮತ್ತು ಕಲಿತನ (ಸೂಜಿಯ ಕೂರ್ಪು ಕುಂಬಳದೊಳ್ ಅಡಗುವಂತೆ ನಿನ್ನೊಂದೆ ಮೆಯ್ಯೊಳಾದ ಕೂರ್ಪು ಪಗೆವರ ದರ್ಪಮನದಿರ್ಪದಲ್ತೆ: **ಪಂಪಭಾ,** ೧೩. ೬೫ ವ)

ಕೂರ್ಮ – [ನಾ] ಆಮೆ (ವಿಷಮ ಕಠೋರ ಕೂರ್ಮ ಘರ್ಮನಿರ್ಭರರೋಚ್ಛಾಸ ಭರದ್ವೈಧೀಭವದಂಭಃಪ್ರಕಟಿತ ಅಗಾಧ ರಂಧ್ರಾವರ್ತಮಾನ ಜಳಚರ ಸಂಚರಣ ವಿಸ್ಮಯನೀಯ ಭಯಾನಕೆಯುಂ: **ಆದಿಪು,** ೫. ೮೭ ವ); [ನಾ] ಭೂಮಿಯನ್ನು ಹೊತ್ತಿರುವುದೆಂದು ಹೇಳಲಾದ ಆಮೆ (ಎಳೆ ಬೊದಿಲ್ಲೆನೆ ಬಿಟ್ಟಿತ್ತು ಅಡಿಗಿಡೆ ಕೂರ್ಮನ ಬೆನ್ನು ಅಂದೊಡೆದು ಸಿಡಿಲ್ದು ಒಡನೆ ನುಚ್ಚುನೂಱಪ್ಪಿನೆಗಂ: **ಪಂಪಭಾ,** ೧೦. ೭೦)

ಕೂರ್ಮೆ – [ನಾ] ಪ್ರೀತಿ (ಇನಿವಿರಿದೊಂದು ಮೇಳಮುಂ ಒಡಂಬುವ ಅಟ್ಟಱುಂ ಎನ್ನ ನಿನ್ನ ಮುನ್ನಿನ ಭವದೊಂದು ಕೂರ್ಮೆಯೊಳೆ ಕೂಡಿದುದು: **ಅದಿಪು,** ೪. ೫೨)

ಕೂಸಂ ಬೇಡು – [ಕ್ರಿ] ಮದುವೆ ಮಾಡಿಕೊಡಲು ಹೆಣ್ಣು ಕೇಳು (ಶಂತನು ಪೊಱಲ್ಗೆ ಮಗುಳ್ದು ವಂದು ಅವರಯ್ಯನಪ್ಪ ದಾಶರಾಜನಲ್ಲಿಗೆ ಕೂಸಂ ಬೇಡೆ ಪೆರ್ಗಡೆಗಳಂ ಅಟ್ಟಿದೊಡೆ: **ಪಂಪಭಾ,** ೧. ೭೦ ವ)

ಕೂಸಾಟ – [ನಾ] ಮಕ್ಕಳ ಆಟ (ಕಿವಿಗಿಂಪಂ ತೊದಲೊಳ್ ಪೊದಳ್ದ ನುಡಿಗಳ್ ಕಣ್ಗಟ್ಟಱಂ ರಾಗದಾಡುವ ಕೂಸಾಟದ ಚೆಲ್ವುಗಳ್ ಕುಡೆ ಪಿತೃದ್ವಂದ್ವಕ್ಕೆ ನಿಚ್ಚಂ: **ಆದಿಪು.** ೭. ೧೨೯)

ಕೂಸು – [ನಾ] ಹೆಣ್ಣುಮಗು, ಕನ್ಯೆ (ಎಮ್ಮ ಪಟಂ ಎಮ್ಮಯ ಕೂಸಿನ ಚಿತ್ರಂ ಎಯ್ದೆ ಪೇಟಿಗ್ಗಾಕೆಯ ತನ್ನ ಬಯ್ಕೆಯವಿನಾಣಮಂ: **ಆದಿಪು,** ೩. ೮೯); ಮಗು (ಅಂತು ನಡನಡನಡುಗಿ ಜಲದೇವತೆಗಳಪ್ಪೊಡಂ ಮನಂಗಾಣ್ಬರೆಂದು ನಿಧಾನಮಂ ಈಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳ್: **ಪಂಪಭಾ,** ೧. ೯೫ ವ); ಹುಡುಗ (ಅಯ್ವರ್ ಕೂಸುಗಳುಂ ಏಟಿಗ್ಗೆವಾಡಿವದ ಚಂದ್ರನಂತೆ ಉತ್ತರಾಭಿವೃದ್ಧಿಯೊಳ್ ಸೊಗಯಿಸಿ ಬಳೆಯೆ: **ಪಂಪಭಾ,** ೨. ೩)

ಕೂಸುತನ – [ನಾ] ಎಳೆತನ (ನೀಂ ಬೇಱಿ ಎಮಗೆ ಸುಯೋಧನನೇಂ ಬೇಱಿಯೆ ಕೂಸುತನದೊಳಾದೊಡಂ: **ಪಂಪಭಾ,** ೭. ೬೩)

ಕೂಟ್ – [ನಾ] ಅನ್ನ (ನೀನುಂ ಮೆಟ್ಟಿಟ್ಟು ವಿದುರನೆಂಬೀ ತೊಟ್ಟುಟ್ಟಿಯ ಮನೆಯ ಕೂಟ್ ನುಡಿಯಿಸೆ ನುಡಿದೈ: **ಪಂಪಭಾ,** ೯. ೫೮)

ಕೂಟ್ಗುದಿ – [ಕ್ರಿ] ಕುದಿಯುವ ಅನ್ನ (ಸುಟೆಯೊಳಗಿರ್ದು ಬೆಟ್ಟು ಪೊಱಪೊಣ್ಮುವಿನಂ ಲವಣಾಂಬುರಾಶಿ ಕುಕ್ಕುಟಗುದಿವಲ್ಲಿ ಕೂಟ್ಗುದಿಯೆ ಮೇಗೆ ಸಿಡಿಲ್ದುಗುಳಂತೆ ಕೂಡೆ: **ಪಂಪಭಾ,** ೧೧. ೧೫೩)

ಕೂಟ್ಟುದಿಗೊಳ್ – **[ಕ್ರಿ]** ಅನ್ನ ಕುದಿಯುವಂತೆ ಕುದಿಯನ್ನು ಹೊಂದು (ದುರ್ಧರ ಹಯಂ ಅಟ್ಟೆ ಸಂದಣಿಸಿ ಸಂದಣಿ ಕೂಟ್ಟುದಿಗೊಂಡು: **ಪಂಪಭಾ**, ೩. ೭೦)

ಕೃತ – **[ನಾ]** ಕೃತಜ್ಞತೆ (ಎನಗಿನಿವಿರಿದು ಸುಖಂ ಮಜ್ಜನನೀಚರನಿಂದಮಾಯ್ತೆಂದು ಕೃತಂ ಮನದೊಳ್ ಪುದಿದು: **ಆದಿಪು**, ೩. ೫೮); **[ನಾ]** ಕೆಲಸ, ಕಾರ್ಯ (ಆವುದು ಗುಣಂ ಎಮ್ಮೊಳಾಗೆ ನೆನೆದಪ್ಪಿರಿ ಅಶೋಕಮೆ ವಾಮಪಾದದಿಂದೊದೆದುದೊ ಕೇಸರದ್ರುಮಮೆ ನಿನ್ನುಮನಾಸವಸೀಧುವಿಂದೆ ಪೂಟ್ಟುದೊ ಕೃತಮಾವುದು: **ಆದಿಪು**, ೧೧. ೧೩೧); **[ನಾ]** ಉಪಕಾರ (ಸುಯೋಧನಂ ಎನಗೆ ಒಳ್ಳಿಕೆಯ್ದು ಕೃತಮಂ ಪೆಱಗಿಕ್ಕಿ ನೆಗಟ್ಟೆ ಮಾಸೆ ನಣ್ಪಿನ ನೆವದಿಂದೆ ಪಾಂಡವರಂ ಆಂ ಒಳವೊಕ್ಕಡೆ ನೀಮೆ ಪೇಸಿರೇ: **ಪಂಪಭಾ**, ೯. ೬೮)

ಕೃತಕ – **[ಗು]** ಕೃತ್ರಿಮವಾದ (ಸಕಳ ಕಳೋತ್ಕಳಿತ ಸರಸಸಹಕಾರ ಕೋರಕಕಬಳನಮದಮಧುರ ಕೋಕಿಳ ಕೋಳಾಹಳಾಕುಳಿತ ಕೃತಕ ಕೇಳೀಶೈಳಶಿಖರಂಗಳೇ: **ಆದಿಪು**, ೪. ೫೨ ವ)

ಕೃತಕಗಿರಿ – **[ನಾ]** ಕ್ರೀಡೆಗಾಗಿ ಮಾಡಿಕೊಂಡ ಬೆಟ್ಟ (ಅದರ ಪೊಱವೊಟಲ ವಿಶಾಲ ಕನಕ ಕೃತಕ ಗಿರಿಗಳಿಂ ಫಲಪ್ರಕೀರ್ಣ ತರುಗಳಿಂ: **ಪಂಪಭಾ**, ೧. ೫೮)

ಕೃತಕಶೋಕ – **[ನಾ]** ಕಪಟ ದುಃಖ (ಮನದೊಳ್ ತ್ರೈಭುವನಮಂ ಆಳ್ದನಿತುವರಂ ತನಗೆ ಸಂತಸಂ ಪೆರ್ಚಿಯುಂ ಅಂದು ಇನಿಸು ಅಂಧನೃಪಂ ತನ್ನಯ ಜನದೊಳ್ ಕೆಲನಱಿಯೆ ಕೃತಕಶೋಕಂಗೆಯ್ದಂ: **ಪಂಪಭಾ**, ೩. ೮)

ಕೃತಕಾಚಳ – **[ನಾ]** ಆಟದ ಕೃತಕ ಬೆಟ್ಟ (ಸುರಪನ್ನಗಕಿನ್ನರ ಸೈನ್ಯಮೆಲ್ಲಂ ಅಂಬಿನಮೊನೆಯೊಳ್ ಪಡಲ್ವಡೆ ಲತಾಭವನಂ ಕೃತಕಾಚಳಂಗಳ್ ಎಂಬಿನಿತುಂ ಅವು ಅಟ್ಟೆ ತಟಗ್: **ಪಂಪಭಾ**, ೫. ೧೦೪)

ಕೃತಯುಗ – **[ನಾ]** ಆದಿದೇವನು ಸೃಷ್ಟಿಸಿದ ಕಾರಣದಿಂದ ಇದಕ್ಕೆ ಈ ಹೆಸರು ಬಂತು, ವೈದಿಕ ಪುರಾಣಗಳ ಪ್ರಕಾರ ಚತುರ್ಯುಗಗಳಲ್ಲಿ ಮೊದಲನೆಯದಾದ ಇದರ ಕಾಲವ್ಯಾಪ್ತಿ ಮಾನವರ ಹದಿನೇಳು ಲಕ್ಷ ಇಪ್ಪತ್ತೆಂಟು ಸಾವಿರ ವರುಷಗಳು (ವಿತತಾಷಾಢದ ಬಹುಳ ಪ್ರತಿಪದ್ದಿನದಂದು ಕೀರ್ತಿ ನೆಗಟ್ದಿರೆ ಭಗವತ್ಕೃತಯುಗಮಾದುದರಿಂದಂ ಕೃತಯುಗಮೆಂಬರ್ ಪುರಾಣವಿದರಿದನೀಗಳ್: **ಆದಿಪು**, ೮. ೬೬)

ಕೃತಶಾಸ್ತ್ರ – **[ನಾ]** ಕಲಿತಶಾಸ್ತ್ರವುಳ್ಳವನು, ಶಾಸ್ತ್ರ ಕಲಿತವನು (ಕೃತಶಾಸ್ತ್ರರ್ ಧೃತಶಸ್ತ್ರರ್ ಅಪ್ರತಿಹತಪ್ರಾಗಲ್ಭ್ಯರ್ ಈಗಳ್ ಪೃಥಾಸುತರ್ ಉದ್ಯೋಗಮಂ ಎತ್ತಿಕೊಳ್ವ ದೆವಸಂ ಸಾರ್ಚಿತ್ತು: **ಪಂಪಭಾ**, ೮. ೮೭)

ಕೃತಾಂತ – **[ನಾ]** ಯಮ (ಕಡುಕೆಯ್ದು ಕೃತಾಂತನಿಂತು ನಿರ್ನೆರಮೆಟ್ದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ: **ಆದಿಪು**, ೩. ೪)

ಕೃತಾಂತನಂದನ – **[ನಾ]** ಯುಧಿಷ್ಠಿರ (ಅನ್ನೆಗಂ ಇತ್ತ ಕೃತಾಂತನಂದನನಂ ತನ್ನ ನಾಲ್ವರ್ ತಮ್ಮಂದಿರುಂ ಬಾರದೆ ತಡೆದುದರ್ಕೆ ಚಿಂತಾಕ್ರಾಂತನಾಗಿ: **ಪಂಪಭಾ**, ೮. ೪೪ ವ)

ಕೃತಾಂತನಿವಾಸ – **[ನಾ]** ಯಮನ ಮನೆ, ಸಾವು (ಅಂತಾತಂ ಕೃತಾಂತನಿವಾಸಮನೆಯ್ದುವುದುಂ: **ಪಂಪಭಾ**, ೧೨. ೮೭ ವ)

ಕೃತಾನುಕರಂ – **[ನಾ]** [ಕೃತ+ಅನುಕರಣ] ಮಾಡಿದುದನ್ನು ಅನುಕರಿಸುವುದು (ತಾನುಂ ಆನಂದನಾಟಕಮನಾಡಲ್ಬಗೆದು ಕೃತಾನುಕರಣಮೆ ನಾಟಕಮಪ್ಪುದಱಿಂ: **ಆದಿಪು**, ೭. ೧೧೫ ವ)

ಕೃತಾಸ್ತ್ರ – **[ನಾ]** ಅಸ್ತ್ರವಿದ್ಯಾಪಾರಂಗತ (ನಾಲ್ಕಱಿಂ ಸೂತನಂ ಒಂದು ಅಱಿಕೆಯ ಸರಲೊಳ್ ಮಾಣದೆ ತಱಿದಂ ಪಟಿವಿಗೆಯಂ ಏಂ ಕೃತಾಸ್ತ್ರನೋ ಶಲ್ಯಂ: **ಪಂಪಭಾ**, ೧೦. ೧೦೮)

ಕೃತಿ – **[ನಾ]** ಕಾರ್ಯ (ಪಾಪಿಯುಂ ಅತಿಕ್ರೂರಾತ್ಮನುಂ ಸಾಧುಸಂಕುಳಮಂ ಕಂಡೊಡೆ ಕಾಯ್ವನುಂ ಪಟಿವನುಂ ಧರ್ಮಕೃತಿದ್ರೋಹನುಂ: **ಆದಿಪು**, ೫. ೮೧); **[ನಾ]** ಕಾವ್ಯ, ರಚನೆ (ಸಿತಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲನಕ್ಷತ್ರದೊಳ್ ಅನ್ವಿತಮಾಗೆ ನೆಗಟ್ದುದೀ ಮತ್ ಕೃತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯಂ: **ಆದಿಪು**, ೧೬. ೭೮)

ಕೃತಿಬಂಧ – **[ನಾ]** ಕಾವ್ಯರಚನೆ (ಲಲಿತಪದಂ ಪ್ರಸನ್ನ ಕವಿತಾಗುಣಮಿಲ್ಲದೆ ಪೂಣ್ದು ಪೇಟ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೇಡು: **ಪಂಪಭಾ**, ೧. ೧೨)

ಕೃತಿಬಂಧನ – **[ನಾ]** ಕಾವ್ಯಪ್ರಬಂಧ (ಪೇಟಿಸಿದಂ ಜಗಕ್ಕೆ ನಚ್ಚಿನ ಕವಿತಾಗುಣಾರ್ಣವನಿಂ ಈ ಕೃತಿಬಂಧನಮಂ ಗುಣಾರ್ಣವಂ: **ಪಂಪಭಾ**, ೧೪. ೫೪)

ಕೃತೇಚ್ಛ – **[ನಾ]** ಇಚ್ಛೆಯನ್ನು ಪೂರೈಸಿಕೊಂಡವನು (ಅಂಬುಜನಿಳಯೆ ಪದ್ಮವಿಷ್ಟರಮಂ ಕುಂದೇಂದು ಧವಳಾತಪತ್ರಮಂ ಅಂದು ಕೃತೇಚ್ಛಂಗೆ ಪಡೆದು ಪದೆಪಂ ಪಡೆದಳ್: **ಆದಿಪು**, ೯. ೮೫)

ಕೃತೋಪಕಾರ – **[ನಾ]** ಮಾಡಿದ ಸಹಾಯ (ಸಾಮಂತ ಚೂಡಾಮಣಿಯ ಕೃತೋಪಕಾರಮಂ ನೆನೆದು ಅಂಗದರ್ಪಣನೆಂಬ ಗಂಧರ್ವಂ: **ಪಂಪಭಾ**, ೯. ೯೫ ವ)

ಕೃತ್ರಿಮ – **[ನಾ]** ಕೃತಕ, ಕಪಟ (ವಿನಯಂ ಸಹಜಂ ಕೃತ್ರಿಮಮೆನಿಸಿದುವವು ಬೇಱವೇಱ ವಿದ್ವಜ್ಜನಮಂ ಮನದೆಗೊಳಿಸುವುವಿವೆರಡುಂ: **ಆದಿಪು**, ೧೪. ೬೩)

ಕೃಪ – **[ನಾ]** ಶಂತನು ಕೃಪೆಯಿಂದ ಸಲಹಿದ ಮಗು (ಆತನುಂ ಶಿಶುದ್ವಯಮಂ ಕೃಪೆಯಿಂ .. .. ಕೃಪೆಯಿಂ ನಡಪಿದನಪ್ಪುದಱಿಂ ಕೃಪನುಂ ಕೃಪೆಯುಮೆಂದು ಪೆಸರಿಟ್ಟು: **ಪಂಪಭಾ**, ೨. ೩೩ ವ)

ಕೃಪಾಣ – **[ನಾ]** ಕತ್ತಿ (ಕೃಪಾಣಖೇಟಕಪಾಣಿಗಳ್ ಬಂದು .. .. **ಆದಿಪು**ರುಷನ ಪದಪಯೋಜಂಗಳನರ್ಚಿಸಿ: **ಆದಿಪು**, ೯. ೯೭ ವ)

ಕೃಶ – **[ಗು]** ತೆಳ್ಳಗಿರುವ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ**, ೧೩. ೨೧)

ಕೃಶಾನು – [ನಾ] ಅಗ್ನಿ (ತಾನಿರ್ದುಂ ತಾಯ ಗರ್ಭದೊಳ್ ಪೀಡೆಯನಂತೇನಂ ಮಾಡಿದನಿಲ್ಲ ಕೃಶಾನುವ ನೆಟಿಲ್ ಅಳುರದಂತೆವೊಲ್ ಕನ್ನಡಿಯಂ: **ಆದಿಪು,** ೭. ೩೨)

ಕೃಷಿ – [ನಾ] ಬೇಸಾಯ (ಸೇವಾಧರ್ಮೋಚಿತಮೆನಿಸುವ ಅಸಿಕರ್ಮಮುಮಂ ಅನೇಕ ಲಿಪಿವಿಧಾನಂಗಳಪ್ಪ ಮಷಿಯುಮಂ ಕೃಷೀವಲ ಕುಲೋಚಿತಮಪ್ಪ ಕೃಷಿಯುಮಂ: **ಆದಿಪು,** ೮. ೬೪ ವ)

ಕೃಷೀವಲ – [ನಾ] ಕೃಷಿಕ, ರೈತ (ಕೃಷೀವಲ ಕುಲೋಚಿತಮಪ್ಪ ಕೃಷಿಯುಮಂ: **ಆದಿಪು,** ೮. ೬೪ ವ)

ಕೃಷ್ಟಿ – [ನಾ] [ಜೈನ] ನರಕದುಃಖವನ್ನುಂಟುಮಾಡುವ ಕ್ರಿಯೆ (ಕ್ರಮಕ್ರಮದಿಂದಂ ಕ್ರೋಧ ಮಾನ ಮಾಯಾ ಲೋಭಸಂಜ್ವಲನಂಗಳಂ ಮೂಱುಂ ತೆಱದ ಕೃಷ್ಟಿಗಳಂ ಬೇಱೆ ಬೇಱೆ ಕಿಡಿಸಿ: **ಆದಿಪು,** ೧೦. ೧೪ ವ)

ಕೃಷ್ಣ – [ನಾ] [ಜೈನ] ಜೀವದ ಮೇಲಾಗುವ ಒಂದು ಅಶುಭ ಪರಿಣಾಮ (ಕೃಷ್ಣ ನೀಲ ಕಪೋತ ಲೇಶ್ಯಾ ಬಹ್ವಾರಂಭ ಪರಿಗ್ರಹತ್ವ ಆದಿ ಅಶುಭ ಪರಿಣಾಮಂಗಳಿಂ ಜೀವಂ ನೆಲಸಿ: **ಆದಿಪು,** ೫. ೮೩ ವ); [ನಾ] ಕಪ್ಪು (ಅಂತು ಕೃಷ್ಣೆಯ ಕೃಷ್ಣಕಬರಿಭಾರಮಂ ಮೇಗಿಲ್ಲದೆ ಪಿಡಿದು ತೆಗೆದು ಕೃಷ್ಣೋರಗಮಂ ಪಿಡಿದ ಬೆಳ್ಳಾಳಂತೆ ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ: **ಪಂಪಭಾ,** ೭. ೫ ವ)

ಕೃಷ್ಣದ್ವೈಪಾಯನ – [ನಾ] ವ್ಯಾಸ ಮಹರ್ಷಿ (ಗಾಂಗೇಯನಂ ಏಗೆಯ್ದುಂ ಒಡಂಬಡಿಸಲಾಱದೆ ಸತ್ಯವತಿ ತಾನುಂ ಆತನುಂ ಆಲೋಚಿಸಿ ನಿಶ್ಚಿತಮಂತ್ರರಾಗಿ ಕೃಷ್ಣದ್ವೈಪಾಯನನಂ ನೆನೆದು: **ಪಂಪಭಾ,** ೧. ೮೫)

ಕೃಷ್ಣಮೃಗ – [ನಾ] ಕಪ್ಪು ಬಣ್ಣದ ಜಿಂಕೆ (ಕನಕಪಿಂಗಳ ಜಟಾಬಂಧಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣಮೃಗತ್ವಕ್ ಪರಿಧಾನನುಂ ಆಗಿ: **ಪಂಪಭಾ,** ೧. ೬೯ ವ)

ಕೃಷ್ಣಮೃಗತ್ವಕ್ – [ನಾ] ಕೃಷ್ಣಮೃಗದ ಚರ್ಮ, ಕೃಷ್ಣಾಜಿನ (ಅಂತು ನೀಲಾಂಬುದಶ್ಯಾಮನುಂ ಕನಕಪಿಂಗಳ ಜಟಾಬಂಧಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣ ಮೃಗತ್ವಕ್ಪರಿಧಾನನುಮಾಗಿ: **ಪಂಪಭಾ,** ೧. ೬೯ ವ)

ಕೃಷ್ಣಲೇಶ್ಯಾ – [ನಾ] [ಜೈನ] ಆರು ವಿಧವಾದ ಲೇಶ್ಯೆಗಳಲ್ಲೊಂದು; ಕ್ರೋಧ, ವೈರ, ಜಗಳ, ಅಧರ್ಮ, ಹಾಗೂ ಕ್ರೌರ್ಯ ಇವುಗಳಿಂದ ಕೂಡಿರುವುದು (ದೊರೆಕೊಂಡ ಕೃಷ್ಣಲೇಶ್ಯಾ ಪರಿಣಾಮಮೆ ಕೃಷ್ಣವರ್ಣಮಂ ಪುಟ್ಟಿಸಿದಂತಿರೆ: **ಆದಿಪು,** ೫. ೯೧)

ಕೃಷ್ಣಾಜಿನ – [ನಾ] ಕೃಷ್ಣಮೃಗದ ಚರ್ಮ (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಮುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ)

ಕೃಷ್ಣೆ – [ನಾ] ದ್ರೌಪದಿ (ಕೃಷ್ಣೆಗಿಂದು ಧಮ್ಮಿಲ್ಲಮಂ ಇಂಬಿನಿಂ ಮುಡಿಸಿ ಕೌರವನಾಯಕನ ಊರುಭಂಗಮೊಂದಲ್ಲದೆ ಎಲ್ಲಮಂ ನೆಱಪಿದೆಂ ಗಡಂ ಓಳಿಯೆ ಕೇಳಿಮ್ ಎಲ್ಲರುಂ: **ಪಂಪಭಾ,** ೧೨. ೧೬೦)

ಕೃಷ್ಣೋರಗ – [ನಾ] ಕಾಳಿಂಗಸರ್ಪ (ಅಂತು ಕೃಷ್ಣೆಯ ಕೃಣಕಬರಿಭಾರಮಂ ಮೇಗಿಲ್ಲದೆ ಪಿಡಿದು ತೆಗೆದು ಕೃಷ್ಣೋರಗಮಂ ಪಿಡಿದ ಬೆಳ್ಳಾಳಂತೆ ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ: **ಪಂಪಭಾ,** ೭. ೫ ವ)

ಕೆಂಕ – [ನಾ] ಕೆಂಬಣ್ಣ (ಅಭಿಮನ್ಯು ಮರಣವಾರ್ತಾಪ್ರಭೂತ ಶೋಕಾಗ್ನಿ ಧರ್ಮತನಯನಂ ಇರದಂದು ಅಭಿಭವಿಸಿ ತನ್ನಂ ಅಳುರ್ದಂತೆ ಭಾಸ್ಕರಂ ಕೆಂಕಮಾದಂ ಅಸ್ತಾಚಲದೊಳ್: **ಪಂಪಭಾ,** ೧೧. ೧೦೬)

ಕೆಂಕಮಾಗು – [ಕ್ರಿ] ಕೆಂಪಗಾಗು (ಕುಂಕುಮದ ಕದಡಿನೊಳ್ ಕೆಂಕಮಾಗಿರ್ದ ನೀರಂ ತಳಿದಂ ಶುದ್ಧಾಂತಕಾಂತಾಲತಿಕೆಗಳಂ ಅತಿಪ್ರೀತಿಯಿಂ ರಾಜರಾಜಂ: **ಆದಿಪು,** ೧೧. ೧೪೮)

ಕೆಂಗಲೆ – [ನಾ] ಕೆಂಪು ಗುರುತು (ಬೆರಲೊಳ್ ಬೀಣೆಯ ತಂತಿಗಳ್ ಒರಸಿದ ಕೆಂಗಲೆಗಳ್ ಅಕ್ಷಮಾಲೆಯೊಳ್ ಎಸೆದಂತಿರೆ ಪೊಸೆಯೆ ಮುತ್ತು ಪವಳಂ ಬೆರಸಿದವೊಲಾಯ್ತು ಚೆನ್ನ ತಪಸಿಯ ಕೆಯ್ಯೊಳ್: **ಪಂಪಭಾ,** ೬. ೧೦) [ಡಿಎಲ್ಎನ್ **'ಕೆಂಗಡೆ'** ರೂಪವಿರಿಸಿಕೊಳ್ಳುತ್ತಾರೆ]

ಕೆಂಗಱಿ – [ನಾ] [ಬಾಣದ ಹಿಂಭಾಗದಲ್ಲಿ ಕಟ್ಟಿರುತ್ತಿದ್ದ] ಕೆಂಪು ಗರಿ (ಕೆಂಗಱಿಯ ಮೊನೆಯಂಬುಗಳ್ ಕಣ್ದೆಱೆಯಿಸಿದುವು ಪೊಣರ್ವ ಬಿಲ್ಲ ಕಡುವಿತ್ತೆಗರಂ: **ಪಂಪಭಾ,** ೧೦. ೭೩)

ಕೆಂಗುಡಿ – [ನಾ] ಕೆಂಪು ಧ್ವಜ (ಸಿಂಗಂ ಮಸಗಿದವೋಲ್ ನರಸಿಂಗಂ ತಳ್ತಿಱಿಯೆ ನೆಗೆದ ನೆತ್ತರ್ ನಭದೊಳ್ ಕೆಂಗುಡಿ ಕವಿದಂತಾದುದು ಇದೇಂ ಗರ್ವದ ಪೆಂಪೊ ಸಕಲಲೋಕಾಶ್ರಯನಾ: **ಪಂಪಭಾ,** ೧. ೩೪)

ಕೆಂಗೊಲೆ – [ನಾ] ಕೆಂಪು ಗೊಂಚಲು (ಪೊಸ ನೆಯ್ದಿಲ ಕಂಪನೆ ಬೀಱೆ ಕಾಯ್ತ ಕೆಂಗೊಲೆಯೊಳೆ ಜೋಲ್ವ ಶಾಳಿ ನವಶಾಳಿಗೆ ಪಾಯ್ವ ಶುಕಾಳಿ: **ಪಂಪಭಾ,** ೧. ೫೨)

ಕೆಂದಳ – [ನಾ] ಕೆಂಪಾದ ಅಂಗೈ (ಇನಿಯನ ಕೆಂದಳಂ ತಳಮಂ ಒಯ್ಯನೆ ಸೋಂಕೆ ಪೊದಳ್ದ ನಾಣ ಪೆಂಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ: **ಆದಿಪು,** ೪. ೪೯)

ಕೆಂದಳಿರ್ – [ನಾ] ಕೆಂಪು ಚಿಗುರು (ತಿಸುಳದೊಳ್ ಉಚ್ಚಳಿಪ್ಪ ಪೊಸನೆತ್ತರೆ ಕೆಂದಳಿರಾಗೆ: **ಪಂಪಭಾ,** ೧. ೬)

ಕೆಂದಳಿರ್ವಾಸು – [ನಾ] ಕೆಂಪು ಚಿಗುರಿನ ಹಾಸಿಗೆ (ಕೆಂದಳಿರ್ವಾಸೆ ಸೇಕದ ತೊವಲ್ಗೆಣೆಯಾಯ್ತು ಮೃಣಾಳನಾಳವೊಂದೆಡೆವೊತ್ತಿ ಪತ್ತಿದುವು: **ಪಂಪಭಾ,** ೫. ೭)

ಕೆಂದಾಮರೆ – [ನಾ] ಕೆಂಪು ತಾವರೆ (ವಾಮಂ ಕರತಳಮದು ಕೆಂದಾಮರೆಯರಲೆನಿಪುದು: **ಅದಿಪು,** ೫. ೬೯)

ಕೆಂದು – [ನಾ] ಅನುರಾಗ, ರತಿಕ್ರೀಡೆ (ಅಂತು ಆ ಇರುಳ ನಾಲ್ಕು ಜಾವಮುಮಂ ಕಾಮನ ಜಾಗರದಂತೆ ಅವರ್ಗೆ ಕೆಂದಿನೊಳೆ ಬೆಳಗಾಗೆ: **ಪಂಪಭಾ,** ೩. ೮೩ ವ); [ನಾ] ನಿದ್ದೆ (ಬಿರಿದ ಮಲ್ಲಿಗೆಗಂಡೊಡಂ ಆದ ಕೆಂದು ಅಲಂಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಂ: **ಪಂಪಭಾ,** ೪. ೩೦); [ನಾ] ಪ್ರೇಮರತಿ (ಕೆಂದನೀಕೆ ಕನ್ನಡಿಪಳೊ ಪಾಡಿದೀ ನೆವದಿಂ ಎಂಬಿನಂ ದನಿಯಿಂಪು ಬೀಣೆಯ ಮಿಡಿದವೊಲಾಗೆ: **ಪಂಪಭಾ,** ೭. ೮೯); [ಕ್ರಿ] ನಿದ್ರಿಸು (ಅರೆಮುಚ್ಚಿ ಕಣ್ಗಳಂ ನಿಶ್ಚಳಿತಂ ತಾನಿರ್ದು ಮಱೆದು ಕೆಂದಿದ ಮೀನಂ ತಳ್ತಾಡದಿರ್ದ ಮಡುವಂ ಪೋಲ್ತಂ: **ಪಂಪಭಾ,** ೮. ೧೩)

ಕೆಂಪು – [ನಾ] ಕೆಂಪು ಬಣ್ಣ (ಪೊನಲ್ಗಳ ಕೆಂಪು ಪಸುರ್ಪು ಕರ್ಪು ಬೆಳ್ಪು ಒಳಕೊಳೆ ಶಕ್ರಕಾರ್ಮುಕವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ,** ೭. ೨೫)

ಕೆಂಪುವಾಸು – [ಕ್ರಿ] ಕೆಂಬಣ್ಣವನ್ನು ಎರಚು, ಹರಡು (ವಿಯೋಗಿಯಳ್ಪೆರ್ದೆಯಂ ಆಯ್ದು ಅದಂ ಆಟರಲ್ ಎಂದೆ ಮನ್ಮಥಂ ಘಟೆಯಿಸಿ ಕೆಂಪುವಾಸಿದವೋಲ್ ಇರ್ದುವು ಮಾಮರಗಳ್ ಬಸಂತದೊಳ್: **ಪಂಪಭಾ,** ೫. ೩೨)

ಕೆಂಪೆಸೆ – [ಕ್ರಿ] ಕೆಂಪಾದ, ಕೆಂಪು ಬಣ್ಣಕ್ಕೆ ತಿರುಗು (ಪರವಧು ದುರ್ವ್ಯಸನಂ ನಿನಗೆಂದಮರ್ದಪ್ಪಿಸುವರ್ ಕೆಂಪೆಸೆಯೆ ಕಾಯ್ದ ಅಯಃಪುತ್ರಿಕೆಯಂ: **ಆದಿಪು,** ೫. ೮೭)

ಕೆಂಬೊನ್ – [ನಾ] ಚಿನ್ನ (ಮಾದ್ಯತ್ ಗಜಗಂಡಕಷಣ ಪ್ರೋದ್ಭೇದದಿಂ ಸಾರ್ದು ಬಂದು ಇದಿರೊಳ್ ಕೂಡುವುದಿಲ್ಲಿ ಚಂದನರಸಂ ಕೆಂಬೊನ್ನ ಟಂಕಂಗಳೊಳ್: **ಪಂಪಭಾ,** ೪. ೨೨)

ಕೆಚ್ಚನಾಗು – [ಕ್ರಿ] ಕೆಂಪಾಗು (ಬಳೆದ ಮುನಿಸಿನೊಳ್ ಕೆಚ್ಚನಾದ ಕಣ್ ದೆಸೆಗೆ ಕೆಂಪನೊದವಿಸಿದುದು ದಿಗ್ವನಿತೆಯರ್ಗೆ ರಕ್ತಬಲಿಯಂ ಮನಕ್ಕೆ ವರೆ ಬಳೆದ ಮುನಿಸೆ ಕುಡುವಂತಾಗಳ್: **ಆದಿಪು,** ೧೪. ೨೩)

ಕೆಚ್ಚಲ್ – [ನಾ] ಹಸುವಿನ ಮೊಲೆ, ಕೆಚ್ಚಲು (ಹರಿಪೋತಮಂ ಬೆದಱುತುಂ ಕರಿಪೋತಂ ಅವುಂಡುಗರ್ಚೆ ಕೇಸರಿಣಿಯಂ ಕೆಚ್ಚಲಂ ತುಡುಕುತಂ ಪರಿದತ್ತು: **ಪಂಪಭಾ,** ೭. ೮೦)

ಕೆಚ್ಚುವೀಟಿ – ಬಲಿತ, ಮಾಗಿದ (ಎಂದು ಕೆಚ್ಚುವಿರ್ದ ಮಚ್ಚುಮಂ ಉರ್ಚಿಪೋದ ಮೇಳಮುಮಂ ಅಳವಿಗಟೆದಲಂಪುಮಂ: **ಆದಿಪು,** ೪. ೫೨ ವ); **[ಗು]** ಗಾಢವಾದ (ನಡಪಿಯುಂ ಓದಿಸಿಯುಂ ಬಿಲ್ವಿಡಿಸಿಯುಂ ಕೆಚ್ಚುವಿರ್ದ ಕೂರ್ಮೆಗಳೆರ್ದೆಯಂ ನಡೆ: **ಪಂಪಭಾ,** ೨. ೯೬)

ಕೆಡು – [ಕ್ರಿ] ಹಾಳಾಗು, ಹೊರಟುಹೋಗು (ಆಕೆಯ ನಡುವಿನ ಬಡತನಮುಂ ಪಗೆವರ ಸಿರಿಯುಂ ಒಡನೊಡನೆ ಕೆಟ್ಟುವು: **ಪಂಪಭಾ,** ೧. ೧೪೧ ವ)

ಕೆಡೆ – [ಕ್ರಿ] ಬೀಳು (ದಿವ್ಯವಚನಮಂ ಅದಂ ಅಂತೇನುಂ ಬಗೆಯದೆ ಕುಡಿದು ಅಜ್ಞಾನತೆಯಿಂ ನಂಜುಗುಡಿದರಂತಿರೆ ಕೆಡೆದಂ: **ಪಂಪಭಾ,** ೮. ೪೦)

ಕೆಡೆನುಡಿ – [ಕ್ರಿ] ಕೆಟ್ಟ ಮಾತಾಡು (ಕುಲಜರಂ ಉದ್ಧತರಂ ಭುಜಬಲಯುತರಂ ಹಿತರಂ ಈ ಸಭಾಮಧ್ಯದೊಳ್ ಅಗ್ಗಲಿಸಿದ ಮದದಿಂ ನಾಲಗೆ ಕುಲಮಂ ತುಬ್ಬುವವೋಲ್ ಉಱದೆ ನೀಂ ಕೆಡೆನುಡಿವೈ: **ಪಂಪಭಾ,** ೧೦. ೨೦)

ಕೆತ್ತ – [ಗು] [√ಕಿಱು=ಮುಚ್ಚು] ಮುಚ್ಚಿದ್ದ (ತೆಱೆಯವೆ ಮುನ್ನ ಕೆತ್ತ ಪಡಿಗಳ್ ನವಸೌರಭಮುಣ್ಮೆ ಮೊಕ್ಕಳಂ ತೆಱೆದುವುರತ್ನತೋರಣಂಗಳ್: **ಆದಿಪು,** ೨. ೬೩)

ಕೆತ್ತು – [ಕ್ರಿ] ಅದುರು, ಮಿಡುಕು (ಇಳಾವಿಖ್ಯಾತನಂ ಕೂರ್ತು ನೋಡಲುಂ ಅಟ್ಟಿಕೆರ್ತು ಅಮರ್ದು ಅಪ್ಪಲುಂ ಪಡೆವೆ ಇಂದು ಎಂಬಂತೆ ಕೆತ್ತಿತ್ತು ದಲ್ ಬಲಗಣ್ಣುಂ ಬಲದೋಳುಂ ಆ ಬಲಿಬಲಪ್ರಧ್ವಂಸಿಗೆ ಅಂದು ಇಟ್ಟಳಂ: **ಪಂಪಭಾ,** ೪. ೩೩)

ಕೆದಱಿಸು – [ಕ್ರಿ] ಚೆದುರಿಸು, ಹರಡು (ರಮಣೀಯ ರಮಣೀಜನಂ ಬೆರಸು ಪಂಚರತ್ನಂಗಳಿಂ ಕೆದಱಿಸಿ ಸಾಂದಿನ ಸೌಸವದ ಕುಂಕುಮದ ಕತ್ತುರಿಯ ಕದಡಂ ಕದಡಿ: **ಪಂಪಭಾ,** ೫. ೬೦ ವ)

ಕೆದಱು – [ಕ್ರಿ] ಹರಡು (ಮುಗುಳ್ಗಗೆ ನಗುವಂತೆ ಪುಳಕಮನೊಳಕೊಂಡಂತೆ ನಗೆಗಣ್ಗಳ ಪೊಳೆಪಂ ಕೆದಱಿದಂತೆ ಚಿನ್ನಪೂಗಳಂ ಮೆಱೆವಂತೆ: **ಆದಿಪು,** ೭. ೩೬ ವ)

ಕೆನ್ನಂ – [ಗು] ವಿಶೇಷವಾಗಿ (ಮಧ್ಯಸ್ಥಂಗಳಾಗಿರ್ದುವರ್ಕಲೆಯಲ್ ತಕ್ಕುದೆ ಕೆನ್ನಂ ಆ ತ್ರಿವಳಿಗಳ್ಗೆನ್ನಂ ಸರೋಜಾಕ್ಷಿಯಾ: **ಪಂಪಭಾ,** ೪. ೭೪)

ಕೆನ್ನೆತ್ತರ್ – [ನಾ] ಕೆಂಪು ರಕ್ತ (ಕೆನ್ನೆತ್ತರೊಳ್ ಒರ್ವರೊರ್ವರಂ ತಳ್ಕಿಱಿದುಂ ಬೊಬ್ಬಿಱಿದುಂ ತ್ರಿಪುಂಡ್ರಮಿಟ್ಟುಂ ಕೂಕಿಱಿದುಂ ತೇಗಿಯುಂ: **ಪಂಪಭಾ,** ೧೨. ೧೫೮ ವ)

ಕೆಮ್ಮಗೆ – [ಅ] ಸುಮ್ಮನೆ, ಮೌನವಾಗಿ (ಇನ್ನಂತುಟು ಪೇಟ್ದು ಕೆಮ್ಮಗಿರೆ ಗಮ್ಮನೆ ಕಮ್ಮಱಿಯೋಜನಾಗನೇ: **ಆದಿಪು,** ೨. ೬೧); [ಅ] ದೈನ್ಯದಿಂದ (ಬಗೆಗೊಂಡ ಕುಲಧನಂ ಸಮದಗಜಂ ಜಾತ್ಯಶ್ವಮೆಂಬಿವಂ ಮತ್ತೂರ್ಬಂ ಪಗೆವಂಗೆ ಕೊಟ್ಟು ಚಿಃ ಕೆಮ್ಮಗೆ ಬೆಸೆವವಂ ಅರಸದೆಂತೊ ಪಗರಣದರಸಂ: **ಆದಿಪು,** ೧೨. ೯೮)

ಕೆಮ್ಮನೆ – [ಅ] ಕೆಮ್ಮಗೆ, ಸುಮ್ಮನೆ (ಕೃತಾಂತನಿಂತು ನಿರ್ನೆರಮೆಟಿದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪರೇ: **ಆದಿಪು,** ೩. ೪); [ಅ] ಅಕಾರಣವಾಗಿ (ಚಕ್ರಂ ಪುಟ್ಟಿದೊಡೀಗಳ್ ಚಕ್ರೇಶ್ವರನೆಂಬ ಪೆಸರುಮಾಯ್ತಕ್ಕೆಮ ತಾಂ ಚಕ್ರೇಶನಾದೊಡಂ ತನ್ನಾಕ್ರಮಣಮಂ ಎನ್ನೊಳೇಕೆ ಕೆಮ್ಮನೆ ತೋರ್ಪಂ: **ಆದಿಪು,** ೧೪. ೭೯); [ಅ] ವಿಚಾರ ಮಾಡದೆ (ಒದವುಗೆ ನಿನ್ನ ಸಂತತಿಗೆ ನೂರ್ವರ್ ಉದಗ್ರ ಸುತರ್ಕಳ್ ಒಂದೆ ಗರ್ಭದೊಳ್ ಎನೆ ಕೆಮ್ಮನಿಂತು ಪೊಸೆದಿಕ್ಕಿದೆ ಪೊಲ್ಲದುಗೆಯ್ದೆ: **ಪಂಪಭಾ,** ೧, ೧೩೧); [ಅ] ಸಲೀಸಾಗಿ (ಗಾಳು ಗೊರವಂ ತಗುಳ್ಚಿ ಪಳಾಳಮಂ ಏನೊಂದನಪ್ಪೊಡಂ ಗಟಿಪಿದೊಡೆ ಆ ಬೇಳುನುಡಿ ಕೇಳ್ದು ಕೆಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ: **ಪಂಪಭಾ,** ೬. ೨೪)

ಕೆಮ್ಮುಗಿಲ್ – [ನಾ] ಕೆಂಪಾದ ಮೋಡ (ಆಗಳ್ ನಾರಾಯಣನ ತಂಗೆ ಸುಭದ್ರೆಯೆಂಬ ಕನ್ನೆ ಕೆಮ್ಮುಗಿಲ ತೆರೆಯ ಪೊರೆಯೊಳ್ ನೆಗೆದು ಪೊಱಮಡುವ ವಿದ್ಯಾಧರಿಯಂತೆ: **ಪಂಪಭಾ,** ೪. ೩೯ ವ)

ಕೆಯ್ – [ನಾ] ಹಸ್ತ (ಕೆಯ್ಯಂ ನೇಣುಮನಳವಿಯೊಳ್ ಕೂಡಿ ನಡೆಯಲ್ವೇಟ್ದು: **ಪಂಪಭಾ,** ೫. ೪೭ ವ); [ನಾ] ಸೊಂಡಿಲು (ತಳರ್ದುದು ಕರ್ಣತಾಳ ಪವನ ಆಹತಿಯಿಂ ಜಳರಾಶಿ ಕೆಯ್ಯ ಬಳ್ವಳಿಕೆಗೆ ದಿಗ್ಗಜಂ ದೆಸೆಯಿನತ್ತ ತೆರಳ್ದುವು ಕಾಯ್ಪಿನಿಂ: **ಪಂಪಭಾ,** ೧೧. ೭೧)

ಕೆಯ್ಯುಸುರಿ – [ನಾ] ಕೈಚಳಕ (ಪುಸಿ ನಸುವಂಚನೆ ನೋರ್ಪು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ಯುಸುರಿ ನುಸುಳೆಂಬ ಕೇಣದ ಕುಸುರಿಯಂ ಅಱಿದು ಇಱಿದು ಮೆಱೆದು ಉಱೆದೆ ಅರೆಬರ್: **ಪಂಪಭಾ,** ೧೦. ೮೧)

ಕೆಯ್ಕೊಳ್ – [ಕ್ರಿ] ತನ್ನದಾಗಿಸಿಕೊ (ಇನ್ನಿಲ್ಲಿ ಪೆಂಪು ಎಱಕಂಬೆತ್ತಿರೆ ಕಾವೆನೆನ್ನ ನುಡಿಯಂ ಕೆಯ್ಕೊಂಡ

ಕಟ್ಟಾಯಮಂ: **ಪಂಪಭಾ,** ೧೨. ೧೯೮); ಸ್ವೀಕರಿಸು, ಬೆಂಬಲಿಸು (ಎಮ್ಮಂ ಕೆಯ್ಕೊಂಡು ಗೆಲಿಸಲ್ವೇಳ್ಕುಮೆಂದು ಬಂದೆವು ಎನೆ: **ಪಂಪಭಾ,** ೯. ೧೧ ವ)

ಕೆಯ್ಗಟ್ಟಳೆ – [ನಾ] ಕೈಯ ಅಳತೆ, ಕೈ ಹಿಡಿಯುವಷ್ಟು (ಒಟ್ಟಿದ ಪೊನ್ನ ಬೆಟ್ಟುಗಳಂ ಈರೆಡೆಗೇವುದೊ ತೂಕಮೆನ್ನ ಕೆಯ್ಗಟ್ಟಳೆ ಕೊಳ್ಗಿಂ: **ಪಂಪಭಾ,** ೬. ೩೯)

ಕೆಯ್ಗಟ್ಟಿ – [ನಾ] ಕೈಗಟ್ಟಿ, ತೆಯ್ದ ಗಂಧ, ಕೈಗೆ ಹಚ್ಚಿಕೊಳ್ಳುವ ಗಂಧ (ದಿವ್ಯಾಹಾರಂಗಳಂ ಆರೋಗಿಸಿ ಕೆಯ್ಗಟ್ಟಿಗೊಂಡು ತಂಬುಲಂಗೊಂಡು ಇಂ ಬಟಿಯಂ ಅಚ್ಯುತಂ ವಿಕ್ರಮಾರ್ಜುನನ ಕೆಯ್ಯಂ ಪಿಡಿದುಕೊಂಡು: **ಪಂಪಭಾ,** ೫. ೬೭ ವ)

ಕೆಯ್ಗಣ್ಮು – [ಕ್ರಿ] ಮಿತಿಮೀರು, ಕೈಮೀರು (ಕೋಪಾಗ್ನಿ ಕೆಯ್ಗಣ್ಮಿ ಕಣ್ಮಲರೊಳ್ ಬಂದಿರೆ ನೋಡಿದಂ ಕಲುಷದಿಂ ಗಾಂಡೀವಿ ಗಾಂಡೀವಮಂ: **ಪಂಪಭಾ,** ೭. ೭)

ಕೆಯ್ಗಯ್ – [ಕ್ರಿ] ಅಲಂಕರಿಸು (ಮತ್ತೊರ್ವ ಮಗನಂ ಬೇಡೆಂದಂಬಿಕೆಗೆ ಪೇಟಿಸ್ದೊಡಾಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂಳೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡೆ: **ಪಂಪಭಾ,** ೧. ೮೫ ವ); [ಕ್ರಿ] ಅಲಂಕರಿಸಿಕೊ (ಪಾಂಚಾಳ ಮಹೀಪಾಳಂ ಅಖಿಳ ಭೂಭೃತ್ ನಿಕರಕ್ಕೆ ಓಳಿಯೆ ಸಾಜೆದೊಡೆ ಅವನೀಪಾಲರ್ ಕೆಯ್ಗಯ್ಯಲೆಂದು ಪಜೆಮಜೆಯಾದರ್: **ಪಂಪಭಾ,** ೩. ೪೨)

ಕೆಯ್ಗಟಿ – [ಕ್ರಿ] ಕೈಮೀರು (ಭೀಮಸೇನನ ಮಹಾಪ್ರತಿಜ್ಞೆಯುಮಂ ಆರ್ಗಂ ಬಾರಿಸಲ್ಬಾರದು ಕೆಯ್ಗಟಿದ ಮನೆವಾಟಿಸ್ತೆ ಬುದ್ಧಿವೇಟಲೆಡೆಯಿಲ್ಲ: **ಪಂಪಭಾ,** ೭. ೧೬ ವ); [ನಾ] ಅತಿಶಯ (ಕೆಟಗಣ ಕೆಂದಳಿರ್ ಪುದಿದ ಮೇಗಣ ಪಂದಳಿರ್ ಒಂದಿದೊಂದು ಕೆಯ್ಗಟಿದ ಪಸುರ್ಪುಮಂ ಪೋಲೆವ ಕೆಂಪುಮಂ ಆಳ್ದಿರೆ: **ಪಂಪಭಾ,** ೫. ೩೨)

ಕೆಯ್ಗಾ – [ಕ್ರಿ] ಕೈಗಾಯ್, ನಿಧಾನಿಸು (ಅಂತು ಕಿಜೆದು ಪೊಟ್ತು ಕೆಯ್ಗಾದು ಕಾದೆ ಸರಿತ್ಸುತನ ಸುರಿವ ಸರಲಮಟಿಯೊಳ್ ಅಟಿದ ನಿಜವರೂಥಿನಿಯ ಸಾವುಂ ನೋವುಂ ಏವಮಂ ಮಾಡೆ: **ಪಂಪಭಾ,** ೧೧. ೧೮ ವ)

ಕೆಯ್ಗೂಡು – [ಕ್ರಿ] ಕೈಗೂಡು, ಒದಗು, ದೊರಕು (ಕಾಡೊಡಮೆ ವೇಳೆ ಸಲೆ ಕೆಯ್ಗೂಡಿದುದೆನೆ: **ಪಂಪಭಾ,** ೫. ೪೦); [ಕ್ರಿ] ಸ್ವಾಧೀನವಾಗು (ಇಟ್ಟಳಮಾಯ್ತು ದೇಸಿ ಕೆಯ್ಗೂಡಿದುದಿಲ್ಲ ಮಾರ್ಗಂ ಎನೆ ವಿಸ್ಮಯಮಾಗಿರೆ ತನ್ನ ಮುಂದೆ ಆಡಿದಳಾ ತಿಳೋತ್ತಮೆಯಂ ಒಲ್ದನುಮಿಲ್ಲ ನರೇಂದ್ರತಾಪಸಂ: **ಪಂಪಭಾ,** ೭. ೯೧)

ಕೆಯ್ಗೆ ಮಾಡು – [ಕ್ರಿ] ವಶಪಡಿಸಿಕೊ (ಅವನಿತಳಂ ಕರಾತಳದವೋಲ್ ತನಗಂ ಬೆಸಕೆಯ್ಯೆ ಕೆಯ್ಗೆಮಾಡುವ ನಯಂ ಆ ಬೃಹಸ್ಪತಿಯುಮಂ ಗೆಲೆವಂದುದು: **ಪಂಪಭಾ,** ೭. ೪೦)

ಕೆಯ್ಗೆಯ್ – [ಕ್ರಿ] ಅಲಂಕರಿಸಿಕೊ (ಮಂಗಳಜಳಂಗಳಿಂದಂ ಮಿಸಿಸೆ ಮಿಂದು ಅಳಂಕಾರಮಂದಿರಕ್ಕೆ ವಂದು ನೆಱೆಯೆ ಕೆಯ್ಗೆಯ್ಯೆ: **ಆದಿಪು,** ೪. ೩೫ ವ)

ಕೆಯ್ಗೆಯ್ಸು – [ಕ್ರಿ] ಅಲಂಕರಿಸು (ಕೂಸಂ ನೆಱೆಯೆ ಕೆಯ್ಗೆಯ್ಸಿಂ ಎಂದು ಮುನ್ನಂ ಕೆಯ್ಗೆಯ್ಸುತಿರ್ದ ತಱಿದ ಗುಱಿಗೆಯರಪ್ಪ ಅಂತಃಪುರ ಪುರಂಧ್ರಿಯರಂ ಕರೆದು ಪೇಟ್ವುದುಂ: **ಪಂಪಭಾ,** ೩. ೪೪ ವ)

ಕೆಯ್ಗೆವರ್ – [ಕ್ರಿ] ಕೈವಶವಾಗು (ಪಾಂಡವರ್ ಮುನ್ನಮೆ ನಿನ್ನ ಕೆಯ್ಗೆವಂದರ್ ಎನಗಂ ಆ ಬೆಸಂ ತಪ್ಪಿದುದು: **ಪಂಪಭಾ,** ೮. ೪೩ ವ)

ಕೆಯ್ತ – [ನಾ] ವರ್ತನೆ (ಗಾಡಿಯೊಳ್ ಪೆಣೆದು ವಿಳಾದೊಳ್ ತೊಡರ್ದು ಕೆಯ್ತಮಲಂಪನೆ ಮಾಡೆ: **ಆದಿಪು,** ೨. ೭೦); [ನಾ] ವೈಖರಿ (ತಳರ್ವ ಚಿನ್ನಪೂಗಳಂ ಅವಯವದೊಳೆ ಸಯ್ತುಮಾಡುವ ಕೆಯ್ತಮುಮಂ: **ಆದಿಪು,** ೪. ೯ ವ); [ನಾ] ಮಾಟ (ಸುರ ನರ ಕಿನ್ನರ ಉರಗ ನಭಶ್ಚರಕಾಂತೆಯರ್ ಏವರ್ ಎಂದು ಮಾಂಕರಿಸುವ ಕೆಯ್ತದಂದದ ಮುರಾರಿಯ ತಂಗೆಯನಪ್ಪುಕೆಯ್ದು: **ಪಂಪಭಾ,** ೪. ೩೪)

ಕೆಯ್ತೀವು – [ಕ್ರಿ] ಕೈಯಲ್ಲಿ ತುಂಬಿಕೊ (ಗಾಂಡೀವಮನೇಜೆಸಿ ನೀವಿ ಜೇವೊಡೆದು ದಿವ್ಯಾಸ್ತ್ರಂಗಳಂ ಪಿಡಿದು ಕೆಯ್ತೀವಿಕೊಂಡು: **ಪಂಪಭಾ,** ೫. ೮೪ ವ)

ಕೆಯ್ದರ್ – [ಕ್ರಿ] [ಕೆಯ್+ತರ್] ಕೈಯನ್ನು ತಾ, ಕೈಹಾಕು (ಬಯ್ದು ಎನಿತಾನುಂ ತೆಱದಿಂದಂ ಉಟ್ಟುದುವರಂ ಕೆಯ್ದಂದು ದುಶ್ಶಾಸನಂ ತನಗಂ ಮೆಲ್ಲನೆ ಮೃತ್ಯು ಸಾರೆ ತೆಗೆದಂ ಧಮ್ಮಿಲ್ಲಮಂ ಕೃಷ್ಣೆಯಾ: **ಪಂಪಭಾ,** ೭. ೫)

ಕೆಯ್ದೀವಿಗೆ – [ನಾ] ಕೈದೀವಿಗೆ, ಕೈ ದೀಪ (ಹಸ್ತಿಯ ಬೆಂಗೆ ವಂದು ಸುತ್ತಿಜೆದು ಪಗಲಂ ತಡವಿಕ್ಕಿದಂತೆ ಬೆಳಗುವ ಕೆಯ್ದೀವಿಗೆಗಳ ಬೆಳಗೆ ಬೆಳಗಾಗೆ: **ಪಂಪಭಾ,** ೧೨. ೫೨ ವ)

ಕೆಯ್ದು – [ನಾ] ಕೈದು, ಆಯುಧ (ಗಂಗಾಸುತನ ವಾಮಭಾಗದೊಳ್ ಅಂಬರಭಾಗಂ ಆ ತಟ್ಟಿ ಮೆಡಜೆದಂತಾಗಿ ತನ್ನ ರಥದೊಳೊಟ್ಟಿದ ಕೆಯ್ದುಗಳ ಬೆಳಗೆ ಬೆಳಗಾಗೆ: **ಪಂಪಭಾ,** ೧೦. ೫೬)

ಕೆಯ್ದುವಿಕ್ಕು – [ಕ್ರಿ] ಆಯುಧವನ್ನು ಬಿಸಾಡು (ನಿಷ್ಕಾರಣಂ ಕೆಯ್ದುವಿಕ್ಕುವ ಕಣ್ಣೀರ್ಗಳನಿಕ್ಕುವ ಈ ಎರಡುಮಂ ನಿಮ್ಮಯ್ಯನೊಳ್ ಕಲ್ತಿರೇ: **ಪಂಪಭಾ,** ೧೨. ೪೪)

ಕೆಯ್ನೀರ್ – [ನಾ] ಕೈನೀರ್, ಕೈಗೆ ಸುರಿವ ನೀರು, ಧಾರೆಯ ನೀರು (ಮಂಗಳತೂರ್ಯನಾದಂ ಎಸೆಯುತ್ತಿರ್ಪನ್ನೆಗಂ ಚಕ್ರಿ ರಾಗಿಸಿ ಕೆಯ್ನೀರ್ ಎಱೆದಂ ಗುಣಾರ್ಣವ ಮಹೀಪಾಲಂಗಂ ಆ ಕನ್ನೆಯಂ: **ಪಂಪಭಾ,** ೫. ೨೫)

ಕೆಯ್ಪಿಡಿ – [ನಾ] ಕೈಪಿಡಿ, ಕನ್ನಡಿ (ಇಂಚೆಯ ಪಸವಿನ ಬಱಿದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುದು ನಾಡ ಊರ್ಗಳ್: **ಪಂಪಭಾ,** ೮. ೫೧)

ಕೆಯ್ಪೊಡೆ – [ನಾ] ಬಿಲ್ಲಿನ ಹೆದೆ ತಾಗದಂತೆ ಮುಂಗೈಗೆ ಹಾಕುವ ಗೌಸು (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒಱೆ ಕರ್ಪಿಡಿದ ಪಣೆಕಟ್ಟು ಕೆಯ್ಪೊಡೆ ಬೆಡಂಗನೊಳಕೊಳೆ: **ಪಂಪಭಾ,** ೧೦. ೭೧)

ಕೆಯ್ಬಗೆ – [ನಾ] ಕೈಸಂಚಲನದ ರೀತಿಗಳು (ಪುಸಿ ನಸುವಂಚನೆ ನೋರ್ಪು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ಕುಸುರಿ ನುಸುಳೆಂಬ ಕೇಣದ ಕುಸುರಿಯಂ ಅಜೆದು ಇಜೆದು ಮೆಱೆದು ಉಱೆದೆ ಅರೆಬರ್: **ಪಂಪಭಾ,** ೧೦. ೮೧)

ಕೆಯ್ಯದು – [ಗು] ನಲ್ಲಿರುವುದು, ಕೈಯಲ್ಲಿರುವ ವಸ್ತು (ತತ್ ಗೃಹಾಂತರೋದ್ಯಾನ ಸರಸ್ಸರೋಜರುಚಿಯೆಂಬುದಿದಾಕೆಯ ಕೆಯ್ಯದೆನ್ನಿರೇ: **ಪಂಪಭಾ,** ೪. ೭೧)

ಕೆಯ್ಮಿಗು – [ಕ್ರಿ] ಮಿತಿಮೀರು (ಭೀಮಾರ್ಜುನರ್ ಕಾಯ್ಪು ಕೆಯ್ಮಿಗೆ ಬೆನ್ನ ಪರಿದು ಎತ್ತ ಪೋಪೆಯೆಲವೋ ಪೋ ಪೋಗಲ್ ಎಂದೆಯ್ದಿದರ್: **ಪಂಪಭಾ,** ೭. ೩೧)

ಕೆಯ್ಯೆಡೆ – [ನಾ] ಕೈಯೆಡೆ, ಒತ್ತೆ, ಕೈಗೆ ಕೊಟ್ಟದ್ದು (ಪಡೆದರ್ ತಾಯುಂ ತಂದೆಯುಂ ಒಡಲಂ ಪ್ರಾಣಮುಮಂ ಅವು ಅವರವು ಕೆಯ್ಯೆಡೆಯಂ ಕುಡುವುದು ಅರಿದಾಯ್ತೆ: **ಪಂಪಭಾ,** ೯. ೮೧)

ಕೆಯ್ವಟೆ – [ನಾ] [ಕೆಯ್+ಬಟೆ] ಕೈವಟೆ, ಹೊಲದ ದಾರಿ (ಸುಟೆಯದು ಗಾಳಿ ಮೃಗಂ ಕೆಯ್ವಟೆಗಳ ಮೇತದೊಳ್ ತಣಿದಪುವು ಪಂದಿಗಳುಂ ಪಟಿನವಿರಿದುಕ್ಕಿದುವು ಆಳಂ ಪಟು ಪರಿದಾಡಲ್ ಕರಂ ಬೆಡಂಗವನಿಪತೀ: **ಪಂಪಭಾ,** ೫. ೩೮)

ಕೆಯ್ವೀಸು – ಕೈವೀಸು, ಯುದ್ಧಾರಂಭಕ್ಕೆ ಕೈ ಬೀಸಿ ಸನ್ನೆ ಮಾಡು, ಹಸ್ತಸೂಚನೆ (ಉಭಯಬಲದರಸುಗಳ್ .. .. ಕೆಯ್ವೀಸೆ ಲಯಕ್ಷುಭಿತ ಜಲನಿಧಿನಿನಾದಮಂ ಅಭಿನಯಿಸಿದುದು ಒಗೆದು ನೆಗೆದ ಸಮರ ಆರಾವಂ: **ಪಂಪಭಾ,** ೧೧. ೩೪)

ಕೆಯ್ವೀಟ್ – [ಕ್ರಿ] ಕೈಗೆ ಬೀಳು, ವಶವಾಗು (ನಿಮ್ಮೊಂದು ಕೆಯ್ವಿಟ್ಟ ಭೂತಳಮಂ ಮತ್ತೆ ತರಲ್ ವಿಶುದ್ಧನಿಯಮ ಪ್ರಾರಂಭದಿಂದಾನುಂ ಈ ಕೊಳನಂ ಪೊಕ್ಕುದುಂ ಆವ ದೋಷಂ: **ಪಂಪಭಾ,** ೧೩. ೮೪)

ಕೆಯ್ವೊಡ್ಡು – [ಕ್ರಿ] ಬೇಡಿಕೊ (ಸೌದರ್ಯದಿಂದೊಳ್ಪಿತೇ ವಸುಧಾಮಂಡಳಂ ಇಂಬುಕೆಯ್ವುದಿದಂ ಆಂ ಕೆಯ್ವೊಡ್ಡಿದೆಂ ಬೇಡಿದೆಂ: **ಪಂಪಭಾ,** ೧೩. ೮೫)

ಕೆಯ್ವೊಯ್ – [ಕ್ರಿ] [ಕೆಯ್+ಪೊಯ್] ಕೈ ತಟ್ಟು, ಭುಜ ತಟ್ಟು, ಯುದ್ಧಾರಂಭದ ಸೂಚನೆ (ಈಗಳ್ ಆನಾದೆಂ ಮೇಣ್ ಇವನಾದಂ ಏಕೆ ತಡೆವಿರ್ ಕೆಯ್ವೊಯ್ದೆವು: **ಪಂಪಭಾ,** ೧೩. ೮೮)

ಕೆಯ್ವೊಲ – [ನಾ] ಗದ್ದೆ (ಬೆಳೆದೆಱಗಿರ್ದ ಕೆಯ್ವೊಲನೆ ಕೆಯ್ವೊಲನಂ ಬಳಸಿರ್ದ ಪೂತ ಪೂಗೊಳಗಳೆ ಪೂತ ಪೂಗೊಳಗಳಂ ಬಳಸಿರ್ದ ವಿಚಿತ್ರನಂದನಾವಳಿಗಳೆ: **ಪಂಪಭಾ,** ೧. ೫೩)

ಕೆಯ್ಸಾರ್ – [ಕ್ರಿ] ಕೈಸಾರ್, ಈಡೇರು (ರಥದಿಂ ಧಾತ್ರಿಗೆ ಪಾಯ್ದು ಕೊಂಡು ಗದೆಯಂ ಕೆಯ್ಸಾರ್ದುದು ಅಸ್ಮತ್ ಮನೋರಥಂ ಇಂದು ಎಂದು ಕಡಂಗಿ: **ಪಂಪಭಾ,** ೧೧. ೬೬); [ಕ್ರಿ] ಕೈಗೆ ಬರು (ಸೋರ್ವ ವಸುಧಾರೆಯಂ ಕೆಯ್ಸಾರ್ವ ನಿಧಾನಮುಮಂ ಇಟೆಸಿ ತನ್ನೀವಳವಿಂ ಪಾರ್ವಂಗಂ ಅಳಿಪಿ ಬೇಡಿದ ಪಾರ್ವಂಗಂ ಪಿರಿದನಿತ್ತಂ: **ಪಂಪಭಾ,** ೯. ೭೨)

ಕೆಯ್ಸೆಱ – [ನಾ] ಸೆರೆಯಾಳು (ತಂದಿತ್ತು ಕೆಯ್ಸೆಱೆಯಂ ಕೊಟ್ಟಳವಟ್ಟ ಸಾರಧನಮಂ ಮೂವಿಟ್ಟಿಗಂ ಪೂಣ್ದು ಕಾಲ್ಗೆ ಎಱಗಿತ್ತು ಅಂತು ಅರಿಗಂಗೆ ಬೆರ್ಚಿ ಭಯದಿಂ ಗ್ರಾಮಂ ಕುಳಂ ರಾಜಕಂ: **ಪಂಪಭಾ,** ೬. ೩೦)

ಕೆಯ್ಸೆಱಗೊಳ್ – [ಕ್ರಿ] ಸೆರೆಹಿಡಿ, ಬಂಧಿಸು (ತೆಱಪುವಡೆದು ಅಂಗಜಂ ಕೆಯ್ಸೆಱಗೊಳೆ ನೋಟಕರ ಮನಮನಾಗಳ್ ಕೊಳದಿಂ ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆಱೆದುದು ಅವರ ನಾಣ್ಗಳ ತೆಱಪಂ: **ಪಂಪಭಾ,** ೫, ೬೭)

ಕೆಲ – [ನಾ] ಪಕ್ಕ, ಬದಿ (ಅಂತಾಕೆಗಳಿರ್ವರುಮೆರಡುಂ ಕೆಲದೊಳಿರೆ ಕಲ್ಪಲತೆಗಳೆರಡಱ ನಡುವಣ ಕಲ್ಪವೃಕ್ಷಮಿರ್ಪಂತಿರ್ದ ಪಾಂಡುರಾಜಂಗೆ: **ಪಂಪಭಾ,** ೧. ೧೦೭ ವ)

ಕೆಲಗೆಲ – [ನಾ] [ಕೆಲ+ಕೆಲ] ಅಕ್ಕಪಕ್ಕ (ಸುರರಾಜಂ ತನ್ನ ಗಂದೇಭದ ಕೆಲಗೆಲದೊಳ್ ಸಿಂಧುರಾರೂಢರೆತ್ತಂ ಬರೆ: **ಆದಿಪು,** ೯. ೯)

ಕೆಲಜಂಕೆ – [ನಾ] ಮಗ್ಗುಲನ್ನು ಹೆದರಿಸುವುದು, ಕಾಳಗದ ಒಂದು ವರಸೆ (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ ಪರ್ವಿದ ಏರ್ವಸನದೊಳಾದ ಬಲ್ಮೆಯೊಳ್ ಒಡಂಬಡೆ ತಳ್ತಿಱೆವಲ್ಲಿ ಮಿಂಚಿನೊಳ್ ಮುಸುಕಿದ ಮಾಟಕ್ಕೆಯಾಯ್ತು ಸಮರಾಂಗಣಂ ಉಳ್ಕುವ ಬಾಳ್ಗಳ ಉಳ್ಕದಿಂ: **ಪಂಪಭಾ,** ೧೦. ೭೮)

ಕೆಲದರ್ – [ನಾ] ಪಕ್ಕದಲ್ಲಿರುವವರು (ಸಿಪ್ಪುಗಳೊಳ್ ತೀವಿ ಮಧುಮಂತ್ರಂಗಳಂ ಮಂತ್ರಿಸಿ ನೆಲದೊಳೆಱೆದು ತಲೆಯೊಳ್ ತಳಿದು ಕಳ್ಳೊಳ್ ಬೊಟ್ಟನಿಟ್ಟುಕೊಂಡು ಕೆಲದರ್ಗೆಲ್ಲಂ ಬೊಟ್ಟನಿಟ್ಟು: **ಪಂಪಭಾ,** ೪. ೯೭ ವ)

ಕೆಲನ್ – [ನಾ] ಪಕ್ಕದಲ್ಲಿರುವವನು (ಮನದೊಳ್ ತ್ರೈಭುವನಮಂ ಆಳ್ದನಿತುವರಂ ತನಗೆ ಸಂತಸಂ ಪೆರ್ಚಿಯುಂ ಅಂದು ಇನಿಸು ಅಂಧನೃಪಂ ತನ್ನಯ ಜನದೊಳ್ ಕೆಲನಱಿಯೆ ಕೃತಕಶೋಕಂಗೆಯ್ದಂ: **ಪಂಪಭಾ,** ೩. ೮)

ಕೆಲೆ – [ಕ್ರಿ] ಗುಟುರು ಹಾಕು (ತರುಣವೃಷಂ ಕೆಲೆದು ತೊಟಲ್ತರೆ ಕಂಡುದಱಿಂದೆ ಜೈನದೀಕ್ಷೆಗೆ ಮೆಯ್ಯಂ ತರುಣಜನಂಗಳೆ ತರ್ಪರ್: **ಆದಿಪು,** ೧೫. ೪೪)

ಕೆಲ್ಲಂಬು – [ನಾ] ಈಟಿಯಂತಹ ಬಾಣ (ಒಂದೆ ಕೆಲ್ಲಂಬಿನಿಂ ಮೆಲ್ಲಗೆ ಪಾರ್ದು ಆರ್ದು ಎಚ್ಚಂ ಏಸಿಂ ತಲೆ ಪಱಿದು ಸಿಡಿಲ್ದತ್ತ ಬೀೞ್ವನ್ನಮಾಗಳ್: **ಪಂಪಭಾ,** ೧೨. ೧೮)

ಕೆಳದಿ – [ನಾ] ಸಖಿ, ಗೆಳತಿ (ಅತ್ತ ಸುಭದ್ರೆಯುಂ ಒಡಲುರಿಯುತ್ತಿರೆ ಮರವಟ್ಟು ವಿಜಯನಿರ್ದತ್ತಲೆ ನೋಡುತ್ತಿರೆ ಸುಸಾಳಭಂಜಿಕೆಗೆತ್ತುದು ಕೆಳದಿಯರ ತಂಡಮಾಕೆಯ ರೂಪಂ: **ಪಂಪಭಾ,** ೪. ೫೪)

ಕೆಳರ್ – [ಕ್ರಿ] ಕೋಪಿಸಿಕೋ (ಕೆಳರ್ದು ಅಂದುಗ್ರರಣಾಗ್ರಹ ಪ್ರಣಯದಿಂದಾಗಳ್ ಕುರುಕ್ಷೇತ್ರಮಂ ಕಳವೇಟ್ದು ಇರ್ವರುಂ ಐಂದ್ರವಾರುಣದೆ ವಾಯವ್ಯಾದಿ ದಿವ್ಯಾಸ್ತ್ರಸಂಕುಳದಿಂದೆ ಒರ್ವರಂ ಒರ್ವರ್ ಎಚ್ಚು: **ಪಂಪಭಾ,** ೧. ೭೯)

ಕೆಳಿ – [ನಾ] ಒಂದು ಸುಗಂಧದ್ರವ್ಯ ? (ಮಣಿಮಯಭಾಜನಂಗಳೊಳ್ ತೆಕ್ಕನೆ ತೀವಿದ ಪಂಚರತ್ನದ ಕೆಳಿಯ ಕತ್ತುರಿಯ ಕೊಟಚದ ಕಪ್ಪುರದ ಪಳಿಕಿನ ಬಾಯಿನಂಗಳಂ: **ಆದಿಪು,** ೪. ೩೪ ವ)

ಕೆಳೆ – [ನಾ] ಸ್ನೇಹ, ಗೆಳೆತನ (ಕೆಳೆಯುಂ ಗುಱೆಯುಂ ಗೊಟ್ಟಿಯುಂ ಅಳವಿಗೆ ಪಿರಿದಾಗೆ ತನಗೆ ದುರ್ಯೋಧನನೊಳ್: **ಪಂಪಭಾ,** ೨. ೫೮)

ಕೆಳೆಯ – [ನಾ] ಗೆಳೆಯ, ಸ್ನೇಹಿತ (ಅಂತೆಂಬಂ ಆರ್ಗೆ ಪಿರಿದುಂ ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇೞಿಂತೆನಗೆ ಕೆಳೆಯನೇ: **ಪಂಪಭಾ,** ೨. ೪೭)

ಕೆಟಿಗಿವಿಗೆಯ್ – [ಕ್ರಿ] ಅಲಕ್ಷಿಸು, ಅನಾದರ ತೋರು (ಕೌಳಾಧೀಶರಂ ಸಾಧಿಸಿ ಕಿಂಪುರುಷರಂ ಕಾಪುರುಷರ್ ಮಾಡಿ ಬಾಹ್ಲಿಕರಂ ಅನನೀಕರ್ ಎನಿಸಿ ಮಾಳವಿಗರಂ ಕೆಟಿಗಿವಿಗೆಯ್ಯಲ್ ಈಯದೆ: **ಪಂಪಭಾ,** ೬. ೨೯ ವ)

ಕೇಕಿ – [ನಾ] ನವಿಲು (ಘನಪಥಮಂ ಪಳಂಚಲೆವ ಸೌಧಚಯಂಗಳಿಂ ಆಡುತಿರ್ಪ ಕೇತನತತಿಯಿಂ ಕರೀಂದ್ರ ಗಳಗರ್ಜನೆಯಿಂ ಪಟಹಪ್ರಣಾದಮಂ ಘನರವಮೆಂದೆ ನರ್ತಿಸುವ ಕೇಕಿಗಳಿಂ: **ಪಂಪಭಾ,** ೪. ೫)

ಕೇಕಿತಾಂಡವ – [ನಾ] ನವಿಲ ನೃತ್ಯ (ಕುವಲಯ ಪಾಂಡುರಂ ಕನಕಪಂಕಜಷಂಡವಿರಾಜಿ ಕೇಕಿ ತಾಂಡವರಮಣೀಯ ಕಲ್ಪಲತಿಕಾವನಂ: **ಆದಿಪು,** ೧೩. ೭೦)

ಕೇಡು – [ನಾ] ಹಾನಿ (ಲಲಿತಪದಂ ಪ್ರಸನ್ನ ಕವಿತಾಗುಣಮಿಲ್ಲದೆ ಪೂಣ್ದು ಪೇೞ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೇಡು: **ಪಂಪಭಾ,** ೧. ೧೨); [ನಾ] ಚೆಲ್ಲುವಿಕೆ (ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ ಏವಮಿಲ್ಲದೆ ಇವಂ ಆಯ್ದುದೊ ತಪ್ಪದೆ ಪೇೞಿಂ ಎಂಬ ಭೂಪೋತ್ತಮನಂ ಬಿಸುಟ್ಟು ಇರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ: **ಪಂಪಭಾ,** ೯. ೬೯); [ನಾ] ವಿನಾಶ (ತನ್ನ ನಾಲ್ವರ್ ತಮ್ಮಂದಿರ ಮುನಿದ ಮೊಗಮಂ ಕಂಡು ತನ್ನ ನುಡಿದ ನನ್ನಿಯ ಕೇಡಂ ಬಗೆದರೆಂದು ಕಟಾಕ್ಷವಿಕ್ಷೇಪದಿಂ ಬಾರಿಸೆ: **ಪಂಪಭಾ,** ೭. ೮ ವ)

ಕೇಣ – [ನಾ] ಮಾತ್ಸರ್ಯ (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ: **ಪಂಪಭಾ,** ೧೦. ೭೭); [ನಾ] ರೋಷ (ಪುಸಿ ನಸುವಂಚನೆ ನೋರ್ಪು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ಕುಸುರಿ ನುಸುಳೆಂಬ ಕೇಣದ ಕುಸುರಿಯಂ ಅಱಿದು ಇಱಿದು ಮೆಱೆದು ಉಱದೆ ಅರೆಬರ್: **ಪಂಪಭಾ,** ೧೦. ೮೧)

ಕೇಣಿ – [ನಾ] ಸಾಲು (ಕುದುರೆಯ ಬಿಲ್ಲ ಬಲ್ಲಣಿಯ ಕೇಣಿಯನಲ್ಲಿ ಕೆಲರ್ ನಿಶಾಟರುಣ್ಮಿದ ನೆತ್ತರೊಳ್ ಮಿದಿದು: **ಪಂಪಭಾ,** ೧೨. ೮)

ಕೇಣಿಕಾವಾಸ – [ನಾ] ಡೇರೆಯ ವಾಸ (ಕಾರಭವನಂಗಳೊಳಂ ಎಳಲತೆಯ ಕೇಣಿಕಾವಾಸಂಗಳೊಳಮಿಂಬಱಿದು ಬೀಡಂ ಬಿಡಿಸಿದಾಗಳ್: **ಆದಿಪು,** ೪. ೯೨ ವ)

ಕೇಣಿಗೊಳ್ – [ಕ್ರಿ] ಸಾಲುಗಟ್ಟು (ಸಕಳಭುವನಂ ಒಂದೊಂದಱೊಳ್ ಕೇಣಿಗೊಂಡು ಉಚ್ಚಳಿಸಲ್ ಸೂಸಲ್ ಪಳಂಚಲ್ ಪಿಡಿದು ಒಡೆದು ಅಳಱಲ್ ಪಾಱೆ ಜೀಱಿೇಟಿಲ್: **ಪಂಪಭಾ,** ೧೦. ೬೫)

ಕೇತಕೀ – [ನಾ] ಕೇದಗೆ ಹೂ (ಉದಾರ ಕದಂಬ ಕೇತಕೀಪ್ರಸರ ರಜಸ್ಸರ ಪ್ರಕಟ ಪಾಂಸುಳಮಾದುದು ಮೇಘಕಾಲದೊಳ್: **ಪಂಪಭಾ,** ೭. ೨೨)

ಕೇತನ – [ನಾ] ಧ್ವಜ (ದಿವಮಂ ಏಳಿಪಂತು ಮಿಳಿರ್ವ ವಿವಿಧಕೇತನಂಗಳಿಂ ಸದಾನಿಕೇತನಂಗಳಿಂ: **ಪಂಪಭಾ,** ೧. ೫೮)

ಕೇತು – [ನಾ] ನವಗ್ರಹಗಳಲ್ಲಿ ಒಂದು, ಹಾಳುಮಾಡುವ ಗ್ರಹ (ಈತನೆ ನಮ್ಮ ಕುಲಕ್ಕಂ ಕೇತು ದಲ್ ಆನಱಿವೆಂ ಅಲ್ಲದೆ ಏಕಿಂತು ಉತ್ಪಾತಂ ತೋರ್ಪುವು ಬಿಸುಡುವುದೀತನ ಪೆಱಗುಟಿದ ಸುತರೆ ಸಂತತಿಗಪ್ಪರ್: **ಪಂಪಭಾ,** ೧. ೧೩೩); [ನಾ] ಬಾವುಟ (ಚಚ್ಚರಂ ಒಳಪೊಯ್ದು ನೀಂ ನಿನಗೆ ಮಾಡುವುದೆಂದು ಅಮರೇಂದ್ರಪುತ್ರನಂ ಕರೆವವೊಲಾದುವು ಆ ಪುರದ ವಾತವಿಧೂತವಿನೂತನಕೇತುಗಳ್: **ಪಂಪಭಾ,** ೪. ೩೪)

ಕೇಯೂರ – [ನಾ] ಕಡಗ, ತೋಳುಬಂದಿ (ವಿಜಯಶ್ರೀನಿವಾಸ ಬಾಹುಬಾಹುಯುಗಳಕ್ಕೆ ಕೇಯೂರ ಹಾರ ಅಂಗದಕಟಕಾಳಂಕಾರಂ ಮಾಡಿ: **ಆದಿಪು,** ೭. ೧೦೬ ವ)

ಕೇರ್ – [ನಾ] ಗೋಡೆ (ನೋಟಕ್ಕೆ ಎರಡನೆಯ ನಾಕಲೋಕದ ವಿರಚನೆಯನೆ ಪಡೆವುದದಱ ರನ್ನದ ಕೇರ್ಗಳ್: **ಆದಿಪು,** ೬. ೩೭)

ಕೇರಳಿ – [ನಾ] ಕೇರಳದ ಹೆಂಗಸು (ಕರ್ಣಾಟೀಕರ್ಣಪೂರಂ ಕೇರಳೀಕೇಳೀಕಂದರ್ಪಂ ಸಂಸಾರಸಾರೋದಯಂ: **ಪಂಪಭಾ,** ೧. ೧೪೮ ವ)

ಕೇವಲಬೋಧ – [ನಾ] [ಜೈನ] ಅನಂತವಸ್ತುಪ್ರಕಾಶಿಯಾದ ಜ್ಞಾನ (ಇನಿಸಾನುಂ ನಿಂದುದೊಂದು ಮಾನಕಷಾಯಂ ಮುನಿಪತಿಗೆ ಪೋಗೆ ಪುಟ್ಟಿದುದು ಅನಂತವಸ್ತುಪ್ರಕಾಶಿ ಕೇವಳಬೋಧಂ: **ಆದಿಪು,** ೧೪. ೧೪೫); [ನಾ] ಜ್ಞಾನಿ (ಕುಲಹೀನನೆ ಅಪ್ಪೊಡೆ ಕೇವಲಬೋಧಂ ಪರಶುರಾಮಂ ಏನೀಗುಮೆ ನಿರ್ಮಲಿನಕುಲಂಗಲ್ಲದೆ ಪಿಡಿಯಲಲ್ಲದೆ ಅಂತಪ್ಪ ದಿವ್ಯಬಾಣಾವಳಿಯಂ: **ಪಂಪಭಾ,** ೧೨. ೯೭)

ಕೇವಳಜ್ಞಾನ – [ನಾ] [ಜೈನ] ಲೋಕಾಲೋಕಗಳಲ್ಲಿಯ ತ್ರಿಕಾಲಗಳಲ್ಲಿಯ ಸರ್ವವಸ್ತುಗಳ ಸಮಗ್ರ ಜ್ಞಾನ (ನಿಶಾವಸಾನಸಮಯದೊಳ್ ತತ್ಪುರ ಬಹಿರ್ಭಾಗಸ್ಥಿತ ಮನೋಹರೋದ್ಯಾನಾಸೀನ ಯಶೋಧರ ಗುರುಗಳ ಕೇವಳಜ್ಞಾನೋತ್ಪತ್ತಿಯೊಸಗೆಗೆ: **ಆದಿಪು,** ೩. ೨೧ ವ)

ಕೇವಳಜ್ಞಾನಿ – [ನಾ] [ಜೈನ] ಕೇವಲಜ್ಞಾನವುಳ್ಳವನು (ಒಂಬೈಸಾಸಿರ್ವರವಧಿಜ್ಞಾನಿಗಳುಂ ಇರ್ಪತ್ತುಸಾಸಿರ್ವರ್ಕೇವಳಜ್ಞಾನಿಗಳುಂ: **ಆದಿಪು,** ೧೬. ೧೪ ವ)

ಕೇಶಕಳಾಪ – [ನಾ] ಕೇಶರಾಶಿ (ಆ ಪುರಲಲನೆಯ ಕೇಶಕಳಾಪದವೊಲ್ ಮಧುಪನಿಕರನಿಳಯಂ ಸುಮನಶ್ರೀ ಪರಿಪೂರ್ಣಮಂ ಅನಂಗನ ಕಾಪೆನೆ: **ಆದಿಪು,** ೬. ೯೧)

ಕೇಶಹಸ್ತ – [ನಾ] ಕೇಶರಾಶಿ (ಆ ಮನುವಂಶ ಭವ್ಯ ಕುಮುದಾಕರಬಾಂಧವನ ಮನೋಲತಾಂತಮಾಲೆಯಂ ತಮ್ಮ ಕೇಶಹಸ್ತದಿಂ ಕೈಕೊಂಡುಂ: **ಆದಿಪು,** ೮. ೨೪ ವ)

ಕೇಶಪಾಶಪ್ರಪಂಚ – [ನಾ] ಸಮೃದ್ಧ ತಲೆಗೂದಲು (ಪೇೞ ಸಾಮಾನ್ಯಮೇ ಬಗೆಯೆ ಭವತ್ ಕೇಶಪಾಶಪ್ರಪಂಚಂ: **ಪಂಪಭಾ,** ೧೨. ೧೫೬)

ಕೇಶಾವಾಪ – [ನಾ] [ಜೈನ] ಐವತ್ಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ಚೌಲ (ಕೇಶಾವಾಪ .. ..

ಎಂಬ ಅಯ್ವತ್ತಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಅಯ್ವತ್ತಮೂಱು ಗರ್ಭಾನ್ವಯಕ್ರಿಯೆಗಳಂ: **ಆದಿಪು**, ೧೫. ೧೫ ವ)

ಕೇಸರ – [ನಾ] ಪರಾಗ (ಅಂತಲ್ತು ಅಪ್ಪಂದು ಆ ಕಾಂತೆಯಂ ವಿಧಾತ್ರಂ ಮಾಡುವಂದು ಕೊಸಗಿನ ಕೇಸರಂಗಳಂ ಅಮೃತರಸದೊಳಂ ಶೃಂಗಾರರಸದೊಳಂ ಭಾವಿಸಿ: **ಪಂಪಭಾ**, ೪. ೭೫ ವ)

ಕೇಸರದ್ರುಮ – [ನಾ] ಬಕುಳದ ಮರ (ಕೇಸರದ್ರುಮಮೆ ನಿನ್ನುಮನಾಸವಸೀಧುವಿಂದೆ ಘೂೞ್ದುದೊ ಕೈತಮಾವುದಿಂ ಮಱೆವುದು: **ಆದಿಪು**, ೧೧. ೧೨೯)

ಕೇಸರರಾಜಿ – [ನಾ] ಸಿಂಹದ ಕೊರಳ ಮೇಲಿನ ಕೆಂಗೂದಲು (ಶರದದ ಚಂದ್ರನಂ ವಿಮಲಚಂದ್ರಿಕೆ ಬಾಳದಿನೇಶನಂ ತಮೋಹರಕಿರಣಂ ಕಿಶೋರಹರಿಯಂ ನವಕೇಸರರಾಜಿ ಮಿಕ್ಕ ದಿಕ್ಕರಿಯಂ ಅನೂನ ದಾನಪರಿಶೋಭೆ ಮನಂಗೊಳೆ ಪೊರ್ದುವಂತೆ: **ಪಂಪಭಾ**, ೨. ೩೯)

ಕೇಸರಿ – [ನಾ] ಕೇಸರವನ್ನುಳ್ಳುದು, ಸಿಂಹ (ಪವನತನೂಜನ ಕೇಸರಿಕೇತನಮಪ್ಪ ಪೞಿಯಿಗೆಯಂ ಕಂಡು ಮುಟ್ಟೆವರ್ಪನ್ನೆಗಂ: **ಪಂಪಭಾ**, ೧೨. ೧೨೦ ವ)

ಕೇಸರಿಕೇತನ – [ನಾ] ಸಿಂಹದ ಚಿಹ್ನೆಯ ಧ್ವಜ[ವುಳ್ಳವನು] ಭೀಮ (ಪವನತನೂಜನ ಕೇಸರಿಕೇತನಮಪ್ಪ ಪೞಿಯಿಗೆಯಂ ಕಂಡು ಮುಟ್ಟೆವರ್ಪನ್ನೆಗಂ: **ಪಂಪಭಾ**, ೧೨. ೧೨೦ ವ)

ಕೇಸರಿಣಿ – [ನಾ] ಹೆಣ್ಣು ಸಿಂಹ (ಹರಿಪೋತಮಂ ಬೆದಱುತುಂ ಕರಿಪೋತಂ ಅವುಂಡುಗರ್ಚೆ ಕೇಸರಿಣಿಯಂ ಕೆಚ್ಚಲಂ ತುಡುಕುತಂ ಪರಿದತ್ತು: **ಪಂಪಭಾ**, ೭. ೮೦)

ಕೇಸರಿಪೀಠ – [ನಾ] ಸಿಂಹಾಸನ (ಮೆಯ್ಯಲಸಿದಂತೆ ಎಂತಾನುಂ ಎೞ್ದಿರ್ದು ಕೇಸರಿಪೀಠಾಗ್ರದಿಂ ಅಪ್ಪಿಕೊಂಡು: **ಪಂಪಭಾ**, ೯. ೩೧)

ಕೇಸರಿರವ – [ನಾ] ಸಿಂಹಗರ್ಜನೆ (ದೋರ್ದಂಡಕಂಡೂಯ ದುರ್ದಮವ್ಯೆರಿದ್ವಿರದೇಂದ್ರಕೇಸರಿರವಂ: **ಆದಿಪು**, ೧೧. ೧೦)

ಕೇಸರಿವಿಷ್ಟರ – [ನಾ] ಸಿಂಹಾಸನ (ಅಯ್ವರುಂ ಅನೇಕ ಮಂಗಳಾಭರಣ ಅಳಂಕೃತಶರೀರರ್ ಅರಿಕೇಸರಿಯಂ ಕೇಸರಿವಿಷ್ಟರದೊಳ್ ಕುಳ್ಳಿರಿಸಿ: **ಪಂಪಭಾ**, ೧೪. ೧೮ ವ)

ಕೇಸುರಿ – [ನಾ] ಕೆಂಪಾದ ಉರಿ (ಅರಿಗನ ಬೇಟದೊಂದೆ ಪೊಸಬೇಟದ ಕೇಸುರಿಯಿಂದಂ ಎಯ್ದೆ ದಳ್ಳುರಿ ನೆಗೆದಂದು ಕೆಂದಳಿರ ಪಾಸುಗಳಿಂ; **ಪಂಪಭಾ**, ೫. ೮)

ಕೇಳಿ – [ನಾ] ರತಿಕ್ರೀಡೆ (ಬಸನಿಯೆ ಗೆಲ್ಲಕಾಱನ ನೆಗೞ್ತೆಗೆ ಕೇಳಿಗೆ ನಾಡೆ ಗೆಂಟದಂ ಬೆಸಗೊಳವೇಡ: **ಆದಿಪು**, ೧೨. ೧೭); [ನಾ] ಆಟ (ವ್ಯಾಳಗಜಂಗಳಂ ಅಗ್ಗದ ಸೂಳೆಯರ ಒಕ್ಕಲಂ ಅನರ್ಘ್ಯವಸ್ತುಗಳಂ ಇಳಾಪಾಲಂ ಸೋಲ್ತೊಡೆ ಜೂದಿನ ಕೇಳಿಯಂ ಆ ಕೇಳಿಯನಿತಱೊಳ್ ಮಾಣಿಸಿದರ್: **ಪಂಪಭಾ**, ೭. ೩)

ಕೇಳಿಕೆ – [ನಾ] ಆಟ (ಸಹಜದ ಚೆಲ್ವಿನೊಳ್ ರತಿಯ ಸೋಲದ ಕೇಳಿಕೆಯೊಳ್ ಪೊದಳ್ದು ಸನ್ನಿಹಿತವೆನಿಪ್ಪ ಅಪೂರ್ವ ಶುಭಲಕ್ಷಣದೇಹದೊಳ್: **ಪಂಪಭಾ**, ೧. ೪)

ಕೇಳಿಸು – [ಕ್ರಿ] ಕೇಳುವಂತೆ ಮಾಡು (ಪಾಂಡವರನಿಕ್ಕಿದ ಒಸಗೆವಾತುಗಳಂ ಈಗಳ್ ಕೇಳಿಸುವೆಂ: **ಪಂಪಭಾ**, ೧೬. ೧೦೫ ವ)

ಕೇಳೀದೋಹಳ – [ನಾ] ಆಟದ ಬಯಕೆಯುಳ್ಳವನು (ಸುಭಟಸಂಘಟ್ಟದೋರ್ಗರ್ವ ವಿಧ್ವಂಸನಕೇಳೀದೋಹಳ: **ಆದಿಪು**, ೧೪. ೧೯)

ಕೇಳೀವನ – [ನಾ] ವಿಹಾರೋದ್ಯಾನ (ಭವದ್ಬಾಳಪ್ರವಾಳೋಲ್ಲಸತ್ ಮೃದುಪುಷ್ಪಸ್ತಬಕಂಗಳಂ ಪಱಿದೆವು ಇನ್ನಾ ದೋಷಮಂ ಕೊಳ್ಳದಿರ್ಪುದು ಕೇಳೀಪಾದಪಂಗಳಿರ: **ಆದಿಪು**, ೧೧. ೧೩೪)

ಕೇಳೀಶೈಳ – [ನಾ] ಆಟಕ್ಕಾಗಿ ಮಾಡಿಕೊಂಡಿರುವ ಬೆಟ್ಟ (ಸಕಳ ಕಳೋತ್ಕಳಿತ ಸರಸಸಹಕಾರ ಕೋರಕಕಬಳನಮದಮಧುರ ಕೋಕಿಳ ಕೋಳಾಹಳಾಕುಳಿತ ಕೃತಕಕೇಳೀಶೈಳಶಿಖರಂಗಳೇ: **ಆದಿಪು**, ೪. ೫೨ ವ)

ಕೇಳ್ದೆನಿಲ್ಲನಾಗದೇ – ಕೇಳಿದವನಾಗಲಿಲ್ಲವೇ ಅಂದರೆ ಕೇಳಿದೆ (ಮನದೊಳ್ ನಿಷ್ಕಾರಣಂ ಕಾಯ್ವರೇಂ ಪರಚಿಂತಾಕರ ಏಹಿ ಎಂಬ ನುಡಿಯಂ ಮುಂ ಕೇಳ್ದೆನಿಲ್ಲಾಗದೇ: **ಪಂಪಭಾ**, ೭. ೩೫)

ಕೇಳ್ವೌ – [ಕ್ರಿ] ಕೇಳುತ್ತೀಯೆ (ಪಂಡಿತೆಯುಂ ಆ ವೃತ್ತಾಂತದೊಳ್ ಪುಟ್ಟಿದುತ್ಸವಮಂ ಮಾಣದೆ ಕೊಂಡು ಬರ್ಕುಂ ಅದುವಂ ಕೇಳ್ವೌ ಮಹೋತ್ಸಾಹದಿಂ: **ಆದಿಪು**, ೩. ೮೪)

ಕೇೞಿ – [ನಾ] ಸಾಲು, ಪಂಕ್ತಿ (ಮುತ್ತಿನ ಪಚ್ಚೆ ಮಾಣಿಕದ ವಜ್ರದ ಕೇೞಿಯೊಳ್ ಒಂದಿ ಸಾಂದಿನೊಳ್ ಕತ್ತುರಿಯೊಂದು ಕೋೞ್ಗೆಸಱೊಳ್: **ಪಂಪಭಾ**, ೧೪. ೨೦)

ಕೈಕೊಳ್ – [ಕ್ರಿ] ಆಶ್ರಯಿಸು (ಲಕ್ಷ್ಮೀಮತಿ ಮಹಾದೇವಿಯುಂ ಅನುಂದರಿವೆರಸು ಚಕ್ರವಲ್ಲಭವ್ಯಪಾಯದೊಳ್ ಪುಂಡರೀಕನಂ ಕೈಕೊಂಡಿರೆ: **ಆದಿಪು**, ೪. ೮೧ ವ); [ಕ್ರಿ] ಸ್ವೀಕರಿಸು (ದಂಡನಾಯಕಂ ತೋಱಿದನೇಕ ಕ್ಷತ್ರಿಯಪುತ್ರಕುಲಧನಂಗಳಂ ಕೈಕೊಂಡು ಕೋಶಾಧ್ಯಕ್ಷಹಸ್ತನ್ಯಸ್ತಂಗಳ್ಮಾಡಿ: **ಆದಿಪು**, ೧೩. ೮೦ ವ); [ಕ್ರಿ] ಸಂಪಾದಿಸು (ಜಯಮಂ ಕೈಕೊಳ್ವುದು ದೃಷ್ಟಿಯುದ್ಧ ಜಳಯುದ್ಧ ಮಲ್ಲಯುದ್ಧದೊಳೆ ಜನಕ್ಷಯಕರಣದೊಳೇಂ ಪಾಪಮುಂ ಅಯಶಮುಂ ಅಪ್ಪನಿತೆ ದೇವ: **ಆದಿಪು**, ೧೪. ೧೦೧); [ಕ್ರಿ] ಅಳವಡಿಸಿಕೊ, ತಾಳು (ಈ ಜಗದ್ಗುರು ಬಂದಿರ್ದುವಱಿಂದೆ ಶಾಂತರಸಮಂ ಕೈಕೊಂಡುದೀ ಪರ್ವತಂ: **ಆದಿಪು**, ೧೩. ೮೨); [ಕ್ರಿ] ಮದುವೆಯಾಗು (ಈ ಕನ್ನೆಯಂ ಪಸುರ್ವಂದರ್ ಪಸೆಯೆಂಬಿವಂ ಸಮೆದು ನೀಂ ಕೈಕೊಳ್: **ಪಂಪಭಾ**, ೧. ೭೮); [ಕ್ರಿ] ವಹಿಸಿಕೊ (ನೀನೆ ಜೆಟ್ಟಿಗನ್ನೆ ಮುನ್ನಿನೊಱಂಟು ವೇಡ ಮಗನೆ ಕೈಕೊಳ್ ಧರಾಭಾರಮಂ: **ಪಂಪಭಾ**, ೧. ೮೧)

ಕೈಕೊಳಿಸು – [ಕ್ರಿ] ಕೈಕೊಳ್ಳುವಂತೆ ಮಾಡು (ಆರ್ಯಷಟ್ಕರ್ಮಂಗಳಂ ನಿಮಗಿವು ಕುಲಾಚಾರಂಗಳೆಂದು ಅಱಿಯೆ ಪೇೞ್ದು ಕೈಕೊಳಿಸಿ: **ಆದಿಪು**, ೧೫. ೧೩ ವ)

ಕೈಕೊಳವೇೞ್ಕುಂ – ಮದುವೆಯಾಗಿ ಸ್ವೀಕರಿಸಬೇಕು (ತನಗೆ ಕಿಱಿಯಂದುಂಗುರವಿಟ್ಟ ಸಾಲ್ವಲನೆಂಬರಸನಲ್ಲಿಗೆ ಪೋಗಿ ನೀನೆನ್ನಂ ಕೈಕೊಳವೇೞ್ಕುಂ ಎಂದೊಡೆ: **ಪಂಪಭಾ**, ೧. ೭೫ ವ)

ಕೈಗಣ್ಮು – [ಕ್ರಿ] ಉಂಟಾಗು (ಇದಿರೊಳ್ ಮಂಗಳತೂರ್ಯನಿನದಂ ಕೈಗಣ್ಮೆ ಮಾಂಗಲ್ಯವೇಷದ ಕಾಂತಾತತಿ ಮಂಗಳೋಪಕರಣ ದ್ರವ್ಯಂಗಳಿಂದೊಪ್ಪೆ: **ಆದಿಪು**, ೯. ೧೩೩); [ಕ್ರಿ] ತುಂಬಿಕೊ

(ಇನಿತೆಂದು ಇನ್ನವೆಂದುಂ ಈ ವಿಧದವೆಂದು ಆರ್ ಬಣ್ಣಿಸಲ್ಬಲ್ಲರೆಂಬಿನೆಗಂ ನಿರ್ಭರಭಕ್ತಿ ತಮ್ಮ ಮನದೊಳ್ ಕೈಗಣ್ಮೆ: **ಆದಿಪು**, ೧೦. ೪೬)

ಕೈಗಟಿವು – [ನಾ] ಕೈ ಮೀರಿಕೆ, ಅತಿಶಯ (ನಿನ್ನ ಒರಂಟುತನಂ ಕೈಗಟಿವಾಯ್ತು ಅದಪ್ಪೊಡೆ ಮಹಾಭಾರಾವತಾರಂ ರಣೋದ್ಯತನಾಗು ಎಂಬುದಂ ಎಮ್ಮಂ ಅನ್ಯರವೊಲೇಂ ನೀಂ ಪ್ರಾರ್ಥಿಸಲ್ವೇಟ್ಟುದೇ: **ಪಂಪಭಾ,** ೧೦. ೧೦)

ಕೈಗಾ – **[ಕ್ರಿ]** ರಕ್ಷಿಸು (ಕುಪಿತ ಅನೇಕಪ ದಂದಶೂಕ ದವ ದೈತ್ಯ ಅರಾತಿ ಚೋರ ಅಂಧಕಾರ ಪತದ್ವಜ ವಿಷ ಅಭಿಚಾರಿಕ ಜರಾತಂಕಾದಿ ಭೇದಂಗಳಪ್ಪ ಉಪಸರ್ಗಂಗಳಂ ಆವೆಡೆಯೊಳಂ ಕೈಗಾವ: **ಆದಿಪು.** ೧೬. ೯)

ಕೈಗೂಡು – [ಕ್ರಿ] ಸಿದ್ಧವಾಗು (ಆಗಳೆ ಕೈಗೂಡಿದ ವಟುವಾಕೃತಿಯೊಳೆ ಬೇಡಿದನಾ ಸಹಜಕವಚಮಂ ಕುಂಡಳಮಂ; **ಪಂಪಭಾ,** ೧. ೧೦೦); **[ಕ್ರಿ]** ಸೇರು, ಮಿಳಿತವಾಗು (ದೇವಾನೀಕಿನೀ ದುಂದುಭಿರವಂ ಅಮರೀವೃಂದ ಮಾಂಗಲ್ಯಗೇಯಸ್ವರದೊಳ್ ಕೈಗೂಡಿ ಪೊಣ್ಮುತ್ತಿರೆ: **ಆದಿಪು**, ೧೪. ೧೧೮)

ಕೈಗೆಯ್ – **[ಕ್ರಿ]** ಅಲಂಕರಿಸಿಕೊ (ಬಳಸಿದ ಪೊನ್ನ ಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತಾಣದೊಳ್ ಬಳಸಿದ ಪೊನ್ನ ಕನ್ನವಡದಂತಿರೆ: **ಆದಿಪು**, ೧. ೭೧)

ಕೈಗೆಯ್ದಿಸು – **[ಕ್ರಿ]** ತಲುಪಿಸು, ನೀಡು (ಅಯ್ದನೆಯ ಜಲಧಿವರಂ ಇರದೆಯ್ದುವ ಮೊಗೆವಂತೆ ಮೊಗೆದುಂ ಓರೊರ್ಬರ ಕೈಗೆಯ್ದಿಸುವ ಬೇಗಮಂ: **ಆದಿಪು**, ೭. ೮೩)

ಕೈಗೆಲ್ – [ಕ್ರಿ] ಹೊಡೆ (ನೋಡಾದಟಲಂ ಎನಗೆ ಕಣ್ಸೋಲದಿಂ ಕೀಚಕಂ ಬಂದುಱದೆನ್ನಂ ಕಾಡಿ ಕೈಗೆಲ್ದು ಉಗಿದಂ: **ಪಂಪಭಾ**, ೮. ೭೧)

ಕೈಘಟ್ಟಿ – [ನಾ] ಪರಿಮಳ, ಸುಗಂಧಲೇಪ (ಉತ್ಪಳಿಕೆಯಂ ಕೈಘಟ್ಟಿ ನೀಡ'ಲುಂ ಮಂದಾರಿಕೆಯಂ ಮಂದಾರಮಾಲಿಕೆಯನೆತ್ತಲುಂ: **ಆದಿಪು**, ೭. ೨೧ ವ)

ಕೈಟಭಾರಾತಿ – [ನಾ] ಕೈಟಭನ ಶತ್ರು, ವಿಷ್ಣು (ಹರಜಟಾಜೂಟಕ್ಕೆ ಚಂದ್ರಲೇಖೆಯಿರ್ಪಂತೆ ದಿಕ್ಕರಿಕಟತಟಕ್ಕೆ ಮದಲೇಖೆಯಿರ್ಪಂತೆ ಕೈಟಭಾರಾತಿಯ ವಿಶಾಲೋರುಸ್ಥಳಕ್ಕೆ ಕೌಸ್ತುಭಮಿರ್ಪಂತೆ ಸೊಗಯಿಸುತಿರ್ದುದು: **ಪಂಪಭಾ**, ೧. ೫೭ ವ)

ಕೈತ – **[ನಾ]** ಮಾಟ, ರಚನೆ (ಪುದಿದ ಜಸಂ ಪೊದಳ್ದ ಚಳಂ ಒಂದಿದ ಅಳಂಕೃತಿ ಕೈತ ದೇಸಿ ಎಂಬುದಂ ಎನೆ ವಸ್ತುವಿದ್ಯೆಯೆನೆ: **ಪಂಪಭಾ**, ೧೪. ೫೯)

ಕೈತವ – **[ನಾ]** ಕಪಟ (ನುಡಿವೊಡೆ ಲಲ್ಲೆಯೆಂಗುಂ ಎರ್ದೆವೇಟಿಸ್ದೊಡೆ ಕೈತವಮೆಂಗುಂ ಆಸೆಯಿಂ ಪಿಡಿದೊಡೆ ಸೇದೆಯೆಂಗುಂ: **ಆದಿಪು**, ೧೨. ೭೨)

ಕೈದವ – **[ನಾ]** [ಕೈತವ] ಕಪಟ (ಎಂದು ಕೈದವಮಿಲ್ಲದ ನಲ್ಮೆಯಂ ನಾಲಗೆಯ ತುದಿಗೆ ತಂದು ನುಡಿದಳ್: **ಪಂಪಭಾ**, ೧೦. ೪೫ ವ)

ಕೈದು – **[ನಾ]** ಆಯುಧ (ತೆರೆಗಳ ಬಂಬಲಂ .. .. ಕರಿಗಳ್ ತೆಱಂಬೊಳೆವ ಮೀಂಗಳಂ ಉಳ್ಕುವ ಕೈದುಗಳ್ ನಿರಾಕರಿಸಿರೆ ಮೇರೆದಪ್ಪಿ ಕವಿದತ್ತು ನರಾಧಿಪಸೈನ್ಯಸಾಗರಂ: **ಪಂಪಭಾ**, ೩. ೬೮)

ಕೈದುಗೊಳ್ – [ಕ್ರಿ] ಶಸ್ತ್ರವನ್ನು ಹಿಡಿ, ಯುದ್ಧಮಾಡು (ಇವರೆಮ್ಮ ಆಚಾರ್ಯರೆಂದೋವದೆ ಏರ್ವೆಸನಂ ಮಾಣದೆ ಕೈದುಗೊಳ್: **ಪಂಪಭಾ,** ೧. ೭೮)

ಕೈದುವಿಡಿ – [ಕ್ರಿ] ಶಸ್ತ್ರವನ್ನು ಹಿಡಿ (ವದನಂ ತೋಳ್ ತೊಡೆ ಪಾದಮೆಂಬಿವನಿವರ್ ಶುಶ್ರೂಷೆಗೆಯ್ಯಲ್ಕೆ ಲಾಭದಲಂಪಿಂ ನಡೆಯಲ್ಕು ಕೈದುವಿಡಿಯಲ್ಕೆ ಓದಲ್ಕೆ ಅಜಂ ಬೇಱ್ ತೋಱಿದೊಡೆ: **ಆದಿಪು**, ೮. ೭೩)

ಕೈನೀರ್ – **[ನಾ]** ಕೈಧಾರೆ (ಕನಕಕಳಶಮಂ ತಾನೆ ಬಂದೆತ್ತಿ ಕೈನೀರೆಱೆದಂ ಶ್ರೀವಜ್ರದಂತಕ್ಷಿತಿಪತಿ: **ಆದಿಪು**, ೪. ೪೮)

ಕೈಪಿಡಿ – [ನಾ] ಕನ್ನಡಿ (ಅದು ಅಂಗಜಚಕ್ರವರ್ತಿ ಎತ್ತಿದ ಪೊಸವಟ್ಟಂ ಅಂತದು ಮನೋಜನ ಕೈಪಿಡಿ: **ಆದಿಪು**, ೨. ೭೪)

ಕೈಪೊಡೆ – **[ನಾ]** ಬಾಣದ ಗರಿ (ಮದನನ ಕೈದುವೆಲ್ಲಿದಂ ಅನಂಗನ ಕೈಪೊಡೆಯೆಲ್ಲಿದಂ ವಿಳಾಸದ ಕಣಿಯೆಲ್ಲಿದಂ: **ಆದಿಪು**, ೩. ೧೫)

ಕೈಬರ್ದುಕು – **[ಕ್ರಿ]** ಕೈಯಿಂದ ಜಾರು, ತಪ್ಪಿಸಿಕೊ (ಸ್ಮರನ ಅರಲಂಬು ಕೈಬರ್ದುಕಿ ಬರ್ಪವೊಲ್ ಒಯ್ಯನೆ ಬಂದು ನಿಂದ ಸುಂದರಿಯಂ: **ಪಂಪಭಾ**, ೮. ೬೪)

ಕೈಮಿಗು – **[ಕ್ರಿ]** ಅತಿಶಯವಾಗು (ಕೈಮಿಕ್ಕಿರ್ದ ರಾಗಂಬೆರಸು ಸುರಿಯೆ ತದ್ವಾರಿಧಾರಾಸಹಸ್ರಪ್ರಸರಂಬೆತ್ತತ್ತಮಿತ್ತಂ ಪುದಿದೊದವಿರೆ: **ಆದಿಪು**, ೮. ೬೯)

ಕೈಯೆಡೆ – [ನಾ] ನ್ಯಾಸ, ಒತ್ತೆ (ಕೈಯೆಡೆ ನಿಮಗೆಂದೊಡಂಬಡಿಪ ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ ಮಿಡಿವ: **ಆದಿಪು**, ೪. ೫೭)

ಕೈಯೆಡೆಗುಡು – [ಕ್ರಿ] ಒತ್ತೆಯಾಗಿರಿಸು (ಈ ಪಟಮಂ ಪ್ರಾಣಮನೆ ಕೈಯೆಡೆಗುಡುವಂತೆ ಎನ್ನ ಕೈಯೊಳಿಟ್ಟು: **ಆದಿಪು**, ೪. ೨೧ ವ)

ಕೈಯೊಡ್ಡಿ ಬೇಡು – **[ಕ್ರಿ]** ಕೈಚಾಚಿ ಬೇಡಿಕೊ, ದೀನತೆಯಿಂದ ಕೇಳಿಕೊ (ನಿನ್ನನಾನಿನಿತಂ ಕೈಯೊಡ್ಡಿ ಬೇಡಿದೆನೆಂದ ಸತ್ಯವತಿಗೆ ಅಮರಾಪಗಾನಂದನನಿಂತೆಂದಂ: **ಪಂಪಭಾ,** ೧. ೮೧ ವ)

ಕೈಯೊಳ್ – **[ಅ]** ಕೈಯಿಂದಲೇ (ಒಲ್ದು ಎಱಪಂತೆ ತಳ್ತ ಪೂವಿನ ಪೊಸಗೊಂಚಲಿಂ ಮರನಿದೇನೆಸೆದಿರ್ದುವೊ ಕಲ್ತುವಾಗದೇ ವಿನಯಮನೀ ತಪೋಧನರ ಕೈಯೊಳೆ ಶಾಖಿಗಳುಂ ನಗೇಂದ್ರದಾ: **ಪಂಪಭಾ,** ೧. ೧೧೬)

ಕೈಲಾಸವಾಸಿ – [ನಾ] ಶಿವ (ಆರೂಢ ಸಮರರಸನುಂ ಉಪಾರೂಢ ಕನಕರಥನುಂ ಆಗಿ ಕೈಲಾಸವಾಸಿಗೆ ಪೊಡೆವಟ್ಟು ಬಿಲ್ಲಂ ಕೊಂಡು ಗಂಗಾಸುತಂಗೆ ಅದಿರದೆ ಇದಿರ್ಚಿ ನಿಂದಾಗಳ್: **ಪಂಪಭಾ**, ೧೦. ೫೨ ವ)

ಕೈವಲ್ಯಬೋಧ – **[ನಾ]** ಕೇವಲಜ್ಞಾನ (ಯುಗಂಧರದೇವಂ ನೆಗಟ್ದಿಪಂ ಈಗಳ್ ಭುವನಕ್ಕಗಾಧ ಕೈವಲ್ಯಬೋಧ ಬೋಧಿತಭವ್ಯಂ: **ಆದಿಪು**, ೩. ೮೧)

ಕೈವಾರ – [ನಾ] ಸ್ತೋತ್ರ, ಹೊಗಳಿಕೆ (ಬೀರವಟ್ಟಮಂ ಆನಿರೆ ನೀಂ ಈ ಸೂತಸುತಂಗೆ ಎಡೆಗೊಂಡು ಕೈವಾರದಿಂದ ಒಸೆದು ಇತ್ತೊಡಂ ಏನಾಯ್ತು: **ಪಂಪಭಾ**, ೧೨. ೪೩)

ಕೈವಾರಮುಂ ಕೂಡೆ ಕೂರಿಸುಗುಂ – ಹೊಗಳಿಕೆಯು ಕೂಡಲೆ ಒಲಿಸುತ್ತದೆ (ಸಲೆ ಮೆಲ್ಪು ಬಲ್ಪನಟಿಗುಂ ಕೈವಾರಮುಂ ಕೂಡೆ ಕೂರಿಸುಗುಂ ನಿಕ್ಕುವಂ: **ಪಂಪಭಾ**, ೯. ೧೯)

ಕೈವೀಸು – [ಕ್ರಿ] ಕೈ ಬೀಸು, ಆಹ್ವಾನಿಸು (ಕಾಯ್ದು ಕೈವೀಸುವ ಕಾವನಂದದಿಂ ಇವಳೇಂ ಕುಲನಾರಿಯೋ ವಾರನಾರಿಯೋ: **ಪಂಪಭಾ,** ೮. ೬೨)

ಕೈಶಿಕಿ – [ನಾ] ನಾಟ್ಯದ ವೃತ್ತಿಗಳಲ್ಲಿ ಒಂದು, ಶೃಂಗಾರರಸಪ್ರತಿಪಾದಕ ನಾಟ್ಯಾಭಿನಯ (ಭಾರತಿ ಸಾತ್ವತಿ ಕೈಶಿಕಿ ಆರಭಟಿಯುಮೆಂಬ ವೃತ್ತಿಯೊಳ್ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು: **ಆದಿಪು,** ೯. ೨೬)

ಕೈಸೆಱೆ – [ನಾ] ಬಂದಿ (ಲತಾಲಲಿತೆ ಕೀಚಕನಲ್ಲಿಗೆ ಕಾಮನೊಂದು ಕೈಸೆಱೆಯೆನಿಪ ಅಂಗರಾಗಮಂ ಇಳೇಶ್ವರವಲ್ಲಭೆಯಟ್ಟಲ್ ಉಯ್ದೊಡೆ: **ಪಂಪಭಾ,** ೮. ೭೩)

ಕೊಂಕಿಗ – [ನಾ] ವಕ್ರವಾದ ಸ್ವಭಾವವುಳ್ಳವನು (ಬಿರುದರಂ ಒತ್ತಿ ಬೀರರಂ ಅಡಂಗಿಸಿ ಕೊಂಕಿಗರಂ ಕೞಲ್ಚಿ ಚೆನ್ನರಂ ಅಡಿಗೊತ್ತಿ ಮಂಡಳಿಕರಂ ಬೆಸಕಯ್ಸಿ .. .. ಮಾಡಿರೆ ರಾಜಸೂಯಮಂ: **ಪಂಪಭಾ,** ೭. ೧೮)

ಕೊಂಕು – [ನಾ] ಕಪಟ, ಡೊಂಕು (ಪರವನಿತೆಯರೆರ್ದೆಗೆ ಕೊಂಕಿಲ್ಲದೆಯುಂ ಸೊಗಯಿಸುವ ಸುರತಮಕರಧ್ವಜನ ಪುರ್ವುಗಳ್ ಕಾಮದೇವನ ವಿಜಯವೈಜಯಂತಿಗಾಳದುವು: **ಪಂಪಭಾ,** ೨. ೩೯ ವ); [ಕ್ರಿ] ವಕ್ರವಾಗು (ಪುರುಡುವೆರೆಸಿದ ಕೊಂಕಿಂಗಂ ಕಡ್ಡವಣೆವೆರಸಿದ ಸೋಂಕಿಗಂ ಗಾಡಿವೆರಸಿದ ಹಾವಕ್ಕಂ ನಾಣ್ವೆರಸಿದ ಭಾವಕ್ಕಂ: **ಪಂಪಭಾ,** ೪. ೧೭ ವ); [ನಾ] ಗುಂಗುರು (ಬೆರಲಚ್ಚುಗಳ್ ಅಚ್ಚಱಿದಂತೆ ಕೊಂಕುಗಳ್ ತಲೆನವಿರೊಂದಿ ಮೂದಲಿಸಿದಂತೆವೊಲಿರ್ದುವು ನಮ್ಮ ವೀರಮಂ: **ಪಂಪಭಾ,** ೭. ೫೭); [ನಾ] ವಕ್ರತೆ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಳ್ ಎೞೆದಿಕ್ಕಿದಂತೆ ಸುತಿಯೊಳ್ ಸಮವಾಗಿರೆ: **ಪಂಪಭಾ,** ೭. ೮೮)

ಕೊಂಕುವೆತ್ತ ಪೊಸನುಡಿ – [ನಾ] ವಕ್ರೋಕ್ತಿ, ಸುಂದರವಾದ ಮಾತು (ಕಿವಿಯಿಂ ಬಗೆವುಗುವೊಡೆ ಕೊಂಕುವೆತ್ತ ಪೊಸನುಡಿಯೆ ಪುಗುಗುಂ ಉೞಿದುದು ಸಱುಸೈತವಚಱನೆ ಮಾಡಿ ಸಱುಸೈತುವೋಕುಂ: **ಆದಿಪು,** ೧. ೧೮)

ಕೊಂಗ – [ನಾ] ಒಂದು ದೇಶದ ಹೆಸರು (ಅಂಗ ವಂಗ ಕಳಿಂಗ ಕೊಂಗ .. .. ದೇಶಾಧೀಶ್ವರರುಂ: **ಪಂಪಭಾ,** ೯. ೯೫ ವ)

ಕೊಂಚೆ – [ನಾ] [ಕ್ರೌಂಚ] ಒಂದು ಬಗೆಯ ಹಕ್ಕಿ (ಪೊನ್ನ ಬೆಳ್ಳಿಯ ಪದ್ಮರಾಗದ ಪಚ್ಚೆಯ ಗಿಳಿಯ ಕೋಗಿಲೆಯ ಕೊಂಚೆಯ ಅಂಚೆಯ ಕುಂತಳಿಕೆಯ ಮಾೞ್ಕೆಯ ಸಿಪ್ಪುಗಳೊಳ್ ತೀವಿ: **ಪಂಪಭಾ,** ೪. ೮೭ ವ)

ಕೊಂಚೆಯ – [ನಾ] ಚಪ್ಪರ, ಬಳ್ಳಿಮಾಡ (ತಮಾಳಲತೆಯ ಕೊಂಚೆಯಂಗಳೊಳಂ ತಾಂಬೂಲಲತೆಯ ಅಳಂಕಾರ ಭವನಂಗಳೊಳಂ: **ಆದಿಪು,** ೯೨ ವ)

ಕೊಂಡ – [ನಾ] ಅಗ್ನಿಕುಂಡ (ಅಂತು ಒರ್ವರೊರ್ವರ ಕಿಱುಕುಣಿಕೆಗಳಂ ಪಿಡಿದು ರತಿಯುಂ ಕಾಮದೇವನುಂ ಬರ್ಪಂತೆ ಬೇಳ್ವೆಯ ಕೊಂಡದ ಮೊದಲ್ಗೆ ವಂದು: **ಪಂಪಭಾ,** ೩. ೭೫ ವ)

ಕೊಂಡಾಟ – [ನಾ] ಗೌರವ (ಪಿರಿಯಣ್ಣನೇಂ ಜನಕನೇಂ ಎಂಬೊಂದು ಕೊಂಡಾಟದಿಂ ವಿನಯಂ ಸಲ್ವುದು: **ಆದಿಪು,** ೧೪. ೩೧); ಮುದ್ದಾಟ (ಪಂಡಿತೆಯೆಬ ನೆಗೞ್ತೆಯ ಕೊಂಡಾಟದ ದಾದಿ ತನ್ನನೋದಿಸುತಿರೆ: **ಆದಿಪು,** ೩. ೨೧)

ಕೊಂಡಾಡು – ಮೆಚ್ಚು, ಗೌರವಿಸು (ಅದಟಂ ಕೊಂಡಾಡದೆ ಬೇಡಿದರ್ಗೀಯದೆ ಮಱೆಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದ ಅಧಮಂ ಅದೇತರ್ಕೆ ಬಾರ್ತೆ ಜೀವನ್ಮೃತಕಂ: **ಆದಿಪು,** ೧೨. ೯೭); [ಕ್ರಿ] ಅಚರಿಸು (ಮನಂಗೊಂಡೆತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡೆ ರಾಗಿಸಿ ಸುತನ ಸೂತಕಮಂ ಕೊಂಡಾಡೆ ಅಗುೞ್ದಿರಲ್: **ಪಂಪಭಾ, ೧. ೯೬ ವ ಮತ್ತು ೧. ೯೭**)

ಕೊಂಡುಕೊನೆ – [ಕ್ರಿ] ಹೊಗಳು (ಅಂಬಿಕೆ ಸರಸ್ವತಿ ಮತ್ ಮುಖಪದ್ಮರಂಗದ ಏೞ್ಗೆಯಂ ಎಡೆಗೊಂಡು ಕೊಂಡುಕೊನೆದು ಈಗೆ ಅರಿಗಂಗೆ ವಿಶುದ್ಧಬುದ್ಧಿಯಂ: **ಪಂಪಭಾ,** ೧. ೫)

ಕೊಂಡುಯ್ – [ಕ್ರಿ] ಅಪಹರಿಸಿಕೊಂಡು ಹೋಗು (ಬಂಡಣದೊಳೆನ್ನನೋಡಿಸಿ ಕೊಂಡುಯ್ದಂ ನಿನ್ನನಾ ಸರಿತ್ಸುತಂ ಆನುಂ ಪೆಂಡತಿಯೆನಾದೆಂ: **ಪಂಪಭಾ,** ೧. ೭೬); [ಕ್ರಿ] ತೆಗೆದುಕೊಂಡು ಹೋಗು (ಎನ್ನ ಮಾತಿಂಗೆ ಎಲೆ ಕೌಂತೇಯ ಮಱುಮಾತನಿತ್ತು ಮದೀಯ ಸರೋವರದ ತೋಯಮಂ ಕುಡಿ ಕೊಂಡುಯ್: **ಪಂಪಭಾ,** ೮. ೩೯)

ಕೊಂತಿ – [ನಾ] ಕುಂತಿ (ಅಂತು ಕೊಟ್ಟ ಅಯ್ದು ಮಂತ್ರಂಗಳಂ ಆಹ್ವಾನಂಗೆಯ್ದು ನಿನ್ನ ಬಗೆಗೆ ಬಂದ ಪೋಲ್ವೆಯ ಮಕ್ಕಳಂ ಪಡೆವೆ ಎಂದು ಬೆಸಸಿದೊಡೆ ಒದು ದಿವಸಂ ಕೊಂತಿ: **ಪಂಪಭಾ,** ೧. ೮೯ ವ)

ಕೊಂತಿಭೋಜ – [ನಾ] ಕುಂತಿಯ ಸೋದರಮಾವನಾದ ಕುಂತಿಭೋಜ (ಎನ್ನ ಕನ್ನಿಕೆಯಾ ಕಾಲದೊಳ್ ನಾನೆನ್ನ ಮಾವಂ ಕೊಂತಿಭೋಜನ ಮನೆಯೊಳ್ ಬಳೆವಂದು ದುರ್ವಾಸ ಮಹಾಮುನಿಯರೆಮ್ಮ ಮನೆಗೆ ನಿಚ್ಚಕ್ಕಂ ಬರ್ಪವರ್: **ಪಂಪಭಾ,** ೧. ೧೧೮ ವ)

ಕೊಂದಸಿಯಳ್ – [ನಾ] ಕೊಂದ ಕೃಶಾಂಗಿ, ದುರ್ಗಿ (ತನ್ನ ಕೂರಸಿಯೊಳ್ ಅಡರ್ತು ಕೊಂದಸಿಯಳ್ ಇರ್ಕೆ ಅಸಿಯೊಳ್ ಪಡೆಮೆಚ್ಚೆ ಗಂಡನಾ: **ಪಂಪಭಾ,** ೧. ೬)

ಕೊಂಬು – [ನಾ] ಸಂಕೇತಸ್ಥಾನ (ಮೂಱುಕೊಂಬುಮಂ ಆಱು ನಾಣ್ಪೋಗುಮಂ ಎರಟ್ಬಜ್ಜೆಯುಮಂ ಮೂಱು ಪೊೞ್ತುಮಂ ಮೃಗದ ಮೂಱೆರವುಮಂ.. .. ಬಲ್ಲನಾಗಿ: **ಪಂಪಭಾ,** ೫. ೪೩ ವ); [ನಾ] [ಮರದ] ಕೊಂಬೆ (ಪುಗಲಿಲ್ಲ ಈ ಬನಂ ಆರ್ಗಂ ಇಂಬು ನೆಲಸಲ್ ನಾರುಂಟು ಉಡಲ್ ಮೆಲ್ಲೆ ಕೊಂಬುಗಳೊಳ್ ಪಣ್ಬಲಮುಂಟು: **ಪಂಪಭಾ,** ೭. ೩೦ ವ)

ಕೊಂಬುಗೊಳ್ – [ಕ್ರಿ] ಆಶ್ರಯ ಪಡೆ, ಸಂಕೇತಸ್ಥಾನವನ್ನಾಗಿ ಮಾಡಿಕೊ (ಕಣ್ಗೆವಂದಿರ್ದುವಂ ಇವನೆ ವಲಂ ಕೊಂಬುಗೊಂಡ ಅಂಗಜಂ .. .. ಎಚ್ಚು ಮೆಚ್ಚಂ ಸಲಿಸುವಂ: **ಪಂಪಭಾ,** ೪. ೨೩)

ಕೊಕ್ಕರಿಕೆ – [ನಾ] ಜಿಗುಪ್ಸೆ, ಹೇಸಿಕೆ (ಇನಿತಂ ನಿಮ್ಮ ಮನಕ್ಕೆ ಕೊಕ್ಕರಿಕೆಯಂ ಮಾಡಿರ್ದ ಸಾಮ್ರಾಜ್ಯಂ ಎಂತೆನಗೊಳ್ಪಂ ಪಡೆದಪ್ಪುದು: **ಆದಿಪು,** ೪. ೭೯); [ನಾ] ಬೇಸರ (ಅರಸನ ಪುಟ್ಟಿದಿಂಬೞಿಯಮೀ ದಿವಿಜಾಳಿಗೆ ಮಾಣ್ದುದಿಲ್ಲ

ಪೋಬರವು ಇವರುಯ್ವರುಂ ಮಗುೞ್ ತರ್ಪರುಮಪ್ಪುದಱಿಂದಮಿಲ್ಲಿ ಕೊಕ್ಕರಿಕೆಗೆ ಪೇೞಿಮಾವುದೆಡೆ: **ಆದಿಪು**, ೯. ೭೪)

ಕೊಕ್ಕರಿಕ್ಕೆ – [ನಾ] ಕೊಕ್ಕರಿಕೆ (ಅಲ್ಲಿರ್ದು ನಿಮ್ಮ ಮನಕ್ಕೆ ಕೊಕ್ಕರಿಕ್ಕೆಯಾಗಿಯುಂ ಪಾೞಿಗೆ ಗೆಂಟಾಗಿಯುಂ ನೆಗೞ್ವಂ ಎಂದು ಪೊಡೆವಟ್ಟು: **ಪಂಪಭಾ**, ೭. ೨೧ ವ)

ಕೊಕ್ಕರಿಸು – [ಕ್ರಿ] ಅಸಹ್ಯಪಡು (ಇವು ದೂರಫಲಂಗಳ್ ಸ್ವಪ್ನವಿಷಯಂಗಳ್ ತನೂಜ ಕೊಕ್ಕರಿಸದಿರು: **ಆದಿಪು**, ೧೫. ೪೭); [ಕ್ರಿ] ಹಿಂಜರಿ (ಎನ್ನನೆ ನಚ್ಚಿ ಮುಂ ಪೊರೆದಂ ಇದಿರ್ಚಿ ಕಾದುವರುಂ ಎನ್ನಯ ಸೋದರರ್ ಎಂತು ನೋಡಿ ಕೊಕ್ಕರಿಸದೆ ಕೊಲ್ವೆಂ: **ಪಂಪಭಾ**, ೯. ೭೦)

ಕೊಗ್ಗಿ – [ನಾ] ಒಂದು ಔಷಧಿಸಸ್ಯ (ತೀವಿದ ಕೊಗ್ಗಿಯ ಕತ್ತುರಿಯುಂ ಕತ್ತುರಿಯೊಳಂಟಪರಿಚೆಯಂ ಪರಿಚೆಯೊಳ್ ಪರಿಚಯಂಬಡೆದ ಮದವಟ್ಟೆಯಂ: **ಆದಿಪು**, ೪. ೪೧ ವ)

ಕೊಟ್ಟಸು – [ನಾ] ಸುಟ್ಟ ಮಾಂಸ (ಕೊಟ್ಟಸುಗಟ್ಟುಗಳಿಂದಂ ತೊಟ್ಟನೆ ಪೞಿಪಟ್ಟು ಬೀೞ್ವವೋಲ್ ಬಿರ್ದು: **ಆದಿಪು**, ೫. ೮೪)

ಕೊಡ – [ನಾ] ಗಡಿಗೆ, ಬಿಂದಿಗೆ (ಕುಲಮೆಂಬುದುಂಟೆ ಬೀರಮೆ ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀಂ ಒಲಿದಲ್ಲಿ ಪುಟ್ಟಿ ಬಳೆದಿರೊ ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ: **ಪಂಪಭಾ**, ೨. ೮೩)

ಕೊಡಂತಿ – [ನಾ] ಕೊಡತಿ, ಮರಗೆಲಸದ ಸಾಧನ (ಕರ್ಣನ ಎರಡುಂ ತೊಡೆಯುಮಂ ಉಳಿಯಂ ಊಱಿ ಕೊಡಂತಿಯೊಳ್ ಬೆಟ್ಟಿದಂತೆ ಅತ್ತಂ ಇತ್ತಂ ಉರ್ಚಿಪೋಗೆಯುಂ: **ಪಂಪಭಾ**, ೧. ೧೦೪ ವ)

ಕೊಡಗೂಸು – [ನಾ] [ಮದುವೆ ಮಾಡಿ ಕೊಡಬೇಕಾದ] ಎಳೆಯ ಹುಡುಗಿ, ಕನ್ಯೆ (ಮಗಳಂ ಈವೆನಪ್ಪೊಡೆ ಕೊಡಗೂಸೆಂಬುದು ಪೆಱರೊಡವೆ ಮಗನಂ ಈವೆನಪ್ಪೊಡೆ ಸಂತತಿಚ್ಛೇದಮುಂ ಪಿಂಡಚ್ಛೇದಮುಂ ಅಕ್ಕುಂ: **ಪಂಪಭಾ**, ೩. ೨೫ ವ)

ಕೊಡಗೂಸುತನ – [ನಾ] ಕನ್ಯೆಗೆ ಸಹಜವಾದ ಭಾವ (ಕೊಡಗೂಸುತನದ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಡಿಯಲೊಡಗೂಡೆ ಗಂಗೆಯ ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ: **ಪಂಪಭಾ,** ೧. ೯೨)

ಕೊಡಸಾರಿ – [ನಾ] ಒಂದು ಮೂಲಿಕೆ, ಎದುರು ಪಕ್ಷಕ್ಕೆ ಆಟದಲ್ಲಿ ಕೊಡದಿರುವ ಪಗಡೆಕಾಯಿ (ದುರ್ಯೋಧನಂ ಬಂದಿಕಾಱನಂತೆ ಸೆಱಿಗೆಯ್ದುಂ ವ್ರಣವೈದ್ಯನಂತೆ ಕೊಡಸಾರಿಯಂ ಪಿಡಿದುಂ ಸೂಳೆಯಂತೆ ಕಟಿವುಟಿವನಱಿದುಂ ರಸವಾದಿಯಂತೆ ಕಟ್ಟಿಯುಂ ಪೆರ್ಜೋಡೆಯಂತೆ ನುಣ್ಣಿತಂ ವೇೞ್ದು: **ಪಂಪಭಾ**, ೬. ೭೨ ವ)

ಕೊಡೆಯೆಲೆ – [ನಾ] ಕೊಡೆಯಂತಹ ವಿಶಾಲವಾದ ಎಲೆ (ಕೊಡೆಯೆಲೆಗಳ ತಿಂತಿಣಿಯಿಟ್ಟೆಡೆಗಳ ಕಟ್ಟಿಲೆಯನಿರುಳೆ ಗೆತ್ತು ಆತ್ಮೇಶಂ ತಡೆದೊಡೆ ನರೇಂದ್ರ ನೋಡೀ ನಡುವಗಲೊಳ್ ಚಕ್ರವಾಕವಧು ವಿರಹಿಸುವಳ್: **ಆದಿಪು**, ೧೧. ೬೩)

ಕೊದಳ್ – [ನಾ] ಮಂಜುಳನಾದ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಳ್ ಎೞೆದಿಕ್ಕಿದಂತೆ ಸುತಿಯೊಳ್ ಸಮವಾಗಿರೆ: **ಪಂಪಭಾ**, ೭. ೮೮)

ಕೊನರ್ – [ನಾ] ಚಿಗುರು, ಕುಡಿ (ತೋರ್ಪಾಯೆಲೆ ನೋಟಬೇಟದ ಕೊನರ್ ತಲೆದೋರ್ಪವೊಲಾಗೆ: **ಪಂಪಭಾ**, ೪. ೩೭); ಕುಡಿಯೊಡೆ (ಮನದೊಳ್ ಅಲಂಪನಾಳ್ದು ಇನಿಯನಟ್ಟಿದ ದೂದರ ಸೀಯನಪ್ಪ ಮಾತಿನ ರಸದೊಳ್ ಕೊನರ್ವುದು ತಳಿರ್ವುದು ಪೂವುದು ಕಾಯ್ವುದು: **ಪಂಪಭಾ**, ೪. ೧೦೨)

ಕೊನರ್ತರ್ – [ಕ್ರಿ] ಚಿಗುರು (ಈ ಗದೆಯುಂ ಈ ಭುಜದಂಡಮುಂ ಉಳ್ಳಿನಂ ಕೊನರ್ತತಪ್ಪುದೆ ಪೇೞಿಂ: **ಪಂಪಭಾ**, ೧೩. ೧೯)

ಕೊನೆ – [ನಾ] ಎಳೆರೆಂಬೆ (ಅಂತು ನನೆಯ ಕೊನೆಯ ತಳಿರ ನಿಱಿದಳಿರ ಮುಗುಳ ಬಿರಿಮುಗುಳ ಮಿಡಿಯ ಕಿಱುಮಿಡಿಯ ಬಳ್ಮಿಡಿಗಳೊಳ್ ಎಱಗಿ: **ಪಂಪಭಾ**, ೫. ೫ ವ)

ಕೊನೆಕೊನೆಗೊಳ್ – [ಕ್ರಿ] ತುತ್ತ ತುದಿಯನ್ನು ಆಕ್ರಮಿಸು (ಬನಮನಿತುಂ ಶಿಖೆಗಳಲುರೆ ಬೆಂಕೆಯ ಪೊಯ್ದು ಉರ್ವಿನೊಳೆ ಕೊರಗಿರ್ದ ಲತೆಗಳ ನನೆಕೊನೆಯನೆ ದಹನಂ ಅಳುರ್ದು ಕೊನೆಗೊನೆಗೊಂಡಂ: **ಪಂಪಭಾ,** ೫. ೮೭)

ಕೊಪ್ಪು – [ನಾ] ಜಡೆಬಿಲ್ಲೆ (ಕರ್ಣಕುಂಡಲಂ ಕೊಪ್ಪು ಸರಿಗೆ .. .. ಎಂಬ ಭೂಷಾನಿಕರಮಂ: **ಆದಿಪು,** ೫. ೩೩); [ನಾ] ಬಿಲ್ಲಿನ ತುದಿ (ಆಗಳ್ ವಿಕ್ರಾಂತತುಂಗಂ ಬಿಲ್ಲ ಕೊಪ್ಪಿನ ಮೇಲೆ ಕೆಯ್ಯನೂಱಿ ಮುಗುಳ್ನಗೆ ನಗುತ್ತುಂ ಪಾಂಚಾಳರಾಜತನೂಜೆಗಿಂತೆಂದಂ: **ಪಂಪಭಾ**, ೩. ೭೨ ವ)

ಕೊರಗು – [ಕ್ರಿ] ಕೃಶವಾಗು (ಉರಿಯಳುರ್ವಂತೆ ಅತಿದಾಹಜ್ವರಮಳುರೆ ಪೊರಳ್ದು ನಾಡೆಯುಂ ಕೊರಗಿದನಂದು ಅರವಿಂದಂ: **ಆದಿಪು**, ೨. ೧೨); [ಕ್ರಿ] ದುಃಖಪಡು (ಸಿರಿಯ ಶರೀರದ ರೂಪಿನ ನರರೈಶ್ವರ್ಯದ ಪೊದಳ್ಕೆಗಳ್ ಕರಗುವವೊಲ್ ಶರದಂಬುಧರಂ ಭೋಂಕೆನೆ ಕರಗಿದೊಡೆ ಎರ್ದೆ ಕರಗಿ ಕೊರಗಿದಂ ಧರಣೀಶಂ: **ಆದಿಪು**, ೪. ೬೪); [ಕ್ರಿ] ಕಾಂತಿಹೀನವಾಗು (ಘರ್ಮಬಿಂದುಗಳಿಂ ನಾಂದು ಪುಚ್ಚಟಿದರೆವೊರಕನಾದ ಕುಂಕುಮಪತ್ರಭಂಗದ ಕೊರಗಿದ ನಗೆಮೊಗಂಗಳುಂ: **ಆದಿಪು**, ೧೧. ೭೦ ವ); [ಕ್ರಿ] ಬಾಡು (ಬನಮನಿತುಂ ಶಿಖೆಗಳಲುರೆ ಬೆಂಕೆಯ ಪೊಯ್ದು ಉರ್ವಿನೊಳೆ ಕೊರಗಿರ್ದ ಲತೆಗಳ ನನೆಕೊನೆಯನೆ ದಹನಂ ಅಳುರ್ದು ಕೊನೆಗೊನೆಗೊಂಡಂ: **ಪಂಪಭಾ,** ೫. ೮೭)

ಕೊರಲೊಳ್ ಕಟ್ಟಿದ ದೇವಿ – ಕತ್ತಲ್ಲಿ ಕಟ್ಟಿಕೊಂಡ ದೇವತೆಯ ಪದಕ, ತಾಯಿತ (ಕೊರಲೊಳ್ ಕಟ್ಟಿದ ದೇವಿಯಂತೆ ಉರದೊಳ್ ಶ್ರೀ ತೊಟ್ಟಿಲೊಳ್ ತೊಟ್ಟು ಅನಂತರಂ ಎನ್ನೊಳ್ ನೆಲಸಿತ್ತು: **ಪಂಪಭಾ**, ೧೦. ೯)

ಕೊರಲ್ಗೆ ಪಾಯ್ – [ಕ್ರಿ] ಕೊರಳನ್ನು ತಬ್ಬಿಕೊ (ಕೊರಲ್ಗೆ ಪಾಯ್ದು ಪರಿದಾಡುವ ಬಾಲಕನಾದ ಶೋಕದಿಂ ಗಟಗಟ ಕಣ್ಣ ನೀರ್ ಸುರಿಯೆ: **ಪಂಪಭಾ**, ೩. ೨೫)

ಕೊರೆ – [ಕ್ರಿ] ಗೊರಕೆ ಹೊಡೆ (ಕೊರೆವೊಡೆ ಬೆಟ್ಟುಗಳ್ ಬಿರಿವುವು ಉಣ್ಮುವ ಲಾಳೆಯ ಲೋಳೆಗಳ್ ಪೊನಲ್ವರಿವುವು ಕೆಮ್ಮಿ ಕುಮ್ಮಿದೊಡೆ ತೋಳೊಳೆ ಜೀವವಿಯೋಗಮಪ್ಪುದು: **ಪಂಪಭಾ**, ೪. ೧೦೦)

ಕೊರ್ಬು – [ನಾ] ಗರ್ವ (ತ್ರಿದಶಸ್ತ್ರೀಜನದೊಳಮೃತದೊಳಂ ಅಣಂ ಮಟ್ಟಿದುರಿವ ಮದನಾಗ್ನಿಯ ಕೊರ್ಬು ಉದರಾಗ್ನಿಯ ಪೆರ್ಚಿಂ ಮಟ್ಟಿದಪುದೆ ಲಲನೆಯೊಳಶನದೊಳ್ ಮಾನವರಾ: **ಆದಿಪು**, ೯. ೫೬)

ಕೊಲ್ – [ಕ್ರಿ] ಮರ್ದಿಸು (ಅನ್ನೆಗಂ ಇತ್ತ ಸಂಸಪ್ತಕ ನಿಕುರುಂಬದೊಳಗೆ ಒರ್ವರುಮಂ ಕಿಱುವೀಟಲೀಯದೆ ರಸಮಂ ಕೊಲ್ವಂತೆ ಎಂತಾನುಂ ಕೊಂದು: **ಪಂಪಭಾ**, ೧೨. ೧೨೦ ವ)

ಕೊಲಿಪಂ – [ನಾ] ಕೊಲ್ಲಿಸುವವನು, ಕೊಲೆ ಮಾಡಿಸುವವನು (ಕಳಿಪಂ ಕಳ್ವಂ ಅಗುರ್ವು ಪರ್ವೆ ಕೊಲಿಪಂ ಕೊಲ್ವಂ ಪರಸ್ತ್ರೀಯರಂ ಕೊಳಿಪಂ ಕೊಳ್ವಂ ಎನಿಪ್ಪ ಪಾಪಿಯುಂ: **ಆದಿಪು**, ೫. ೮೧)

ಕೊಲೆಗೆಯ್ದು – [ಕ್ರಿ] ಕೊಲೆಗೊಳ್ಳು (ಕೊಲೆಗೆಯ್ದವೆಂತುಂ ಎಂಬೀ ಬಲಂ ಉರ್ಕುಂ ಅವಂದಿರಂ ಪಳಂಚಲೆದಪುದು ಇಂ ಕೊಲೆಗೆಯ್ದದೊಡೆ ಏನೆಯ್ದರೆ ಕಲಹದೊಳೆನ್ನಿಂ ಪರಾಭವಂಗಳನವರ್ಗಳ್: **ಆದಿಪು**, ೧೪. ೨೭)

ಕೊಲ್ವಂ – [ನಾ] ಕೊಲ್ಲುವವನು (ಕಳಿಪಂ ಕಳ್ವಂ ಅಗುರ್ವು ಪರ್ವೆ ಕೊಲಿಪಂ ಕೊಲ್ವಂ ಪರಸ್ತ್ರೀಯರಂ ಕೊಳಿಪಂ ಕೊಳ್ವಂ ಎನಿಪ್ಪ ಪಾಪಿಯುಂ: **ಆದಿಪು**, ೫. ೮೧)

ಕೊಸಗು – [ನಾ] ಬೆಟ್ಟದಾವರೆ, ಕರ್ಣಿಕಾರ (ಪೊಸತಲರ್ದ ಕೊಸಗು ತಳಿರ್ವೊದ ಅಸುಗೆ ಪಸುರ್ನನೆಯೊಳಿಡಿದ ಮಲ್ಲಿಗೆ: **ಆದಿಪು**, ೧೧. ೮೫)

ಕೊಸೆ – [ನಾ] ಲಗಾಮು (ಕೊಸೆಯನಿನಿಸಜೆಪಿ ಕುಡೆ ಲಂಘಿಸಿದುದು ಪನ್ನೆರಡು ಯೋಜನಂಬರಂ: **ಆದಿಪು**, ೧೩. ೩೯); [ನಾ] ಪ್ರಾಣಿಗಳ ಬೆದೆ (ಕಟೆವುಂ ಉಟೆವುಂ ಕಾಪುಂ ಮೇಪುಂ ತೋಡುಂ ಬೀಡುಂ ದೆಸೆಯುಂ ಕೊಸೆಯುಂ: **ಪಂಪಭಾ**, ೫. ೪೩ ವ); [ನಾ] ಕುದುರೆ ಸವಾರಿಯ ಒಂದು ಬಗೆ (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ: **ಪಂಪಭಾ**, ೧೦. ೭೮)

ಕೊಸೆಗೊಳ್ – [ಕ್ರಿ] ಕಡಿವಾಣ ಹಿಡಿದು ನಿಲ್ಲಿಸು (ಸಾರಥಿ ಕಣ್ಣಜಿದು ಒಯ್ಯನೆ ತೇರಂ ಕೊಸೆಗೊಂಡು ಚಕ್ರಿಯಂ ಬಿನ್ನವಿಕುಂ: **ಆದಿಪು**, ೧೧. ೫೭)

ಕೊಳ್ – [ಕ್ರಿ] [ಹಾವು] ಕಚ್ಚು (ಮಹೋರಗನೆಯ್ದೆ ಪಲ್ಗಳರ್ದೊಡೆ ಕಿಡಿವೀಟಿ ನೆತ್ತರೊಱಿದುರ್ಚುಗೆ ಕೊಂಡುದು ತತ್ತಪಸ್ವಿಯುಂ: **ಆದಿಪು**, ೨. ೪೦); [ಕ್ರಿ] [ಮಳೆ] ಸುರಿ (ಮೊರೆದೆಱಗಿ ಕೊಳ್ವ ಮೞೆ ಭೋರ್ಗರೆದೂದುವ ಗಾಳಿ ಸಿಡಿದು ಪೊಯ್ವ ಸಿಡಿಲ್: **ಆದಿಪು**, ೬. ೩೨); [ಕ್ರಿ] ಸ್ವೀಕರಿಸು (ಎಮೆಯಿಕ್ಕದೆ ನೋಡುವ ನರರಮರರ ಕಣ್ಗಳೊಳನಂಗರಾಜನ ಬಯ್ತಿಟ್ಟ ಅಮರ್ದಂ ಕೊಳೆ ತಳಿದುದು ನಾಭಿಮೂಳಮುಂ ಬಾಹುಮೂಳಮುಂ ಸುರವಧುವಾ: **ಆದಿಪು**, ೯. ೩೫); [ಅ] ಕೊಳ್ ಎಂಬ ಒಂದು ಅನುಕರಣ ಶಬ್ದ (ಅಂಬುಧಿಯುಳ್ಳೋಳಂ ನೆಗಟೆ ಕವಿದು ನರ್ತಿಸಿ ನಡೆದತ್ತಳ್ಳಾಡೆ ನೆಲಂ ಬಲಮದು ಕೊಳ್ ಎಂದು ಮಹಾರವಂ ಪೊದಳ್ದೆಸೆವಿನೆಗಂ: **ಆದಿಪು**, ೧೩. ೫೩); [ಕ್ರಿ] ತಾಗು (ಪೂವಿನೊಳ್ ಪೊರೆದ ಪೊಣ್ಮಿದ ಕಂಪು ಮೊಗಂಗಳಂ ಚಳಿಲ್ಲನೆ ಕೊಳೆ: **ಪಂಪಭಾ**, ೫. ೩೪); [ಕ್ರಿ] ಎದುರಿಸು (ಜಗದೊಳ್ ಅವಧ್ಯನಂ ಗೆಲಲ್ ಬಾರದು ಆದೊಡಮೇಂ ಶಿಖಂಡಿ ತೊಟ್ಟಗೆ ಕೊಳೆ ಬಂದು ಮುಂದೆ ನಿಲೆ ಸಾವೆನಗಪ್ಪುದು: **ಪಂಪಭಾ**, ೧೧. ೩೨); [ಕ್ರಿ] ಬಲಿ ತೆಗೆದುಕೊ (ನಿಶತ ಶರಾಳಿಗಳಿಗೆಯ್ದೆ ಚಕುಚಕ್ಕನೆ ಕೊಳೆ ಮೊಕ್ಕುಮೊಕ್ಕನೆ ಶಿರಂಗಳುರುಳ್ದುವು ವೈರಿಭೂಪರಾ: **ಪಂಪಭಾ**, ೧೨. ೧೧೯)

ಕೊಳಂಗೊಳ್ – [ಕ್ರಿ] ಮಡುಗಟ್ಟು (ಕದಪಿನೊಳ್ ಪೊಂಪುಟೆವೋಗಿಯುಂ ಭ್ರೂವಿಭ್ರಮದೊಳ್ ಪೊನಲ್ವರಿದುಂ ಅರುಣಾಧರದೊಳ್ ಕೊಳಂಗೊಂಡುಂ: **ಆದಿಪು**, ೭. ೧೨೬ ವ)

ಕೊಳಗುಳ – [ನಾ] ಯುದ್ಧರಂಗ (ಕೆಂಡಂಗಳೊಳ್ ಸುಟೆದು ಬೇವ ಪೆಣಂಗಳ್ ಕಂಪುನಾಱುವುದರ್ಕೆ ಸೈರಿಸಲಾರದೆ ಕೋಳ್ವಾಂಟಿನೊಳ್ ಕೊಳುಗುಳವಂ ಕಟೆದು ಪೋಗಿ: **ಪಂಪಭಾ**, ೧೩. ೭೧ ವ)

ಕೊಳಗೊಳ್ – [ಕ್ರಿ] ಮಡುಗಟ್ಟು (ಸೋರ್ದುದು ಕೊಳಗೊಂಡ ಗರ್ವರಸಮಾ ಭರತೇಶ್ವರಚಕ್ರವರ್ತಿಯಾ: **ಆದಿಪು**, ೧೩. ೭೧); [ಕ್ರಿ] ಸಂಗ್ರಹವಾಗು (ತನುವಂ ಅಟ್ಟಿಟೆವೋಪಿನಂ ಎಚ್ಚು ನೆತ್ತರುಚ್ಚಳಿಸಿ ರಥಂಗಳೊಳ್ ಕೊಳಗೊಳುತ್ತಿರೆ: **ಪಂಪಭಾ**, ೧೨. ೭೬)

ಕೊಳತ – [ನಾ] ಒಂದು ಪರಿಮಳದ್ರವ್ಯ ? (ಮಣಿಮಯ ಭಾಜನಂಗಳೊಳ್ ತೆಕ್ಕನೆ ತೀವಿದ ಪಂಚರತ್ನದ ಕೆಳಿಯ ಕತ್ತುರಿಯ ಕೊಳತದ ಕಪ್ಪುರದ ಪಳಿಕಿನ ಬಾಯಿನಂಗಳಂ: **ಆದಿಪು**, ೪. ೩೪ ವ)

ಕೊಳಿಸು – [ನಾ] ಸೇರುವಂತೆ ಮಾಡು (ಕಳಿಪಂ ಕಳ್ವಂ ಅಗುರ್ವು ಪರ್ವೆ ಕೊಲಿಪಂ ಕೊಲ್ವಂ ಪರಸ್ತ್ರೀಯರಂ ಕೊಳಿಪಂ ಕೊಳ್ವಂ ಎನಿಪ್ಪ ಪಾಪಿಯುಂ: **ಆದಿಪು**, ೫. ೮೧); [ಕ್ರಿ] ಕಚ್ಚುವಂತೆ ಮಾಡು (ಪಾವುಗಳಂ ಕೊಳಿಸಿ ಮಹಾಗ್ರಾವಮಂ ಉಱದೆ ಅಡಸಿ ಕಟ್ಟಿ ಕೊರಲೊಳ್ ಗಂಗಾದೇವಿಯ ಮಡುವಿನೊಳ್ ಅಟ್ಟಿದರ್: **ಪಂಪಭಾ**, ೨. ೩೨); [ಕ್ರಿ] ಹಿಡಿಸು (ನಾಲ್ಸಾಸಿರ ರಥಂಬೆರಸು ದಕ್ಷಿಣದಿಶಾಭಾಗಕ್ಕೆ ವೇಟ್ಟು ತುಱುವಂ ಕೊಳಿಸಿದಾಗಳ್: **ಪಂಪಭಾ**, ೮. ೮೯ ವ)

ಕೊಳುಕ್ – [ಅ] ಕಳಕ್ ಎನ್ನುವ ಅನುಕರಣ ಶಬ್ದ (ಭೋಂಕನೆ ಕೇಳ್ದು ಎರ್ದೆ ಕದಡಿ ಕಲಂಕಿದ ಬಗೆವೆರಸು ನೆಗೆದು ನಾಲ್ಕುಂ ದೆಸೆಯಂ ಶಂಕಾಕುಳಿತಂ ನೋಡಿ ಮನಂ ಕೊಳುಕ್ ಎನೆ: **ಪಂಪಭಾ**, ೧೧. ೧೧೨)

ಕೊಳೆ – [ಕೊಳ್+ಎ] ಆಕ್ರಮಿಸಲು (ಕೂಡೆ ಬಂದ ಮಾವಿನ ಪೊಸಪೂವಿನೊಳ್ ಪೊರೆದು ಪೊಣ್ಮಿದ ಕಂಪು ಮೊಗಂಗಳಂ ಚಳಿಲ್ಲೆನೆ ಕೊಳೆ: **ಪಂಪಭಾ**, ೫. ೩೪)

ಕೊಳ್ಕೊಡೆ – [ನಾ] [ಹೆಣ್ಣು] ಕೊಡುವುದು ತರುವುದು, ಮದುವೆ (ಯಥಾಯೋಗ್ಯಮುಪದೇಶಂಗೆಯ್ದು ವರ್ಣಸಂಕರಂ ಆಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ: **ಆದಿಪು**, ೮. ೬೪ ವ)

ಕೊಳ್ಗುಳ – [ನಾ] ಯುದ್ಧರಂಗ (ಭೂತಾಂಗನಾನಿಕರಂ ಶೋಣಿತವಾರಿಯಂ ಕುಡಿದು ಅಗುರ್ವಪ್ಪನ್ನೆಗಂ ಸೂಸೆ ನೋಡ ಕವಿಲ್ತಿರ್ದುದು ಕೂಡೆ ಸಂಜೆಗವಿದಂತಾ ದ್ರೋಣನಿಂ ಕೊಳ್ಗುಳಂ; **ಪಂಪಭಾ**, ೧೨. ೨೫)

ಕೊಳ್ವಂ – [ನಾ] ಸೇರುವವನು (ಕಳಿಪಂ ಕಳ್ವಂ ಅಗುರ್ವು ಪರ್ವೆ ಕೊಲಿಪಂ ಕೊಲ್ವಂ ಪರಸ್ತ್ರೀಯರಂ ಕೊಳಿಪಂ ಕೊಳ್ವಂ ಎನಿಪ್ಪ ಪಾಪಿಯುಂ: **ಆದಿಪು**, ೫. ೮೧)

ಕೊಳ್ಳ ಕೊಳ – [ಕ್ರಿ] ಕೋ ಕೋ, ತೆಗೆದುಕೋ (ಅಣ್ಮು ಅಣ್ಮು ಎಂದು ಒಳ್ಳಲಗಿನ ಶರತತಿಯಿಂ ಕೊಳ್ಳ ಕೊಳ ಎಂದು ಅಂಗರಾಜಂ ಅಸುರನಂ ಎಚ್ಚಂ: **ಪಂಪಭಾ**, ೧೨. ೧೨)

ಕೊಳ್ಳಿವೀಸಿಸು – [ಕ್ರಿ] ಯುದ್ಧಾರಂಭವಾಗಲು ಕೊಳ್ಳಿಯನ್ನು ಬೀಸಲು ಸೂಚಿಸುವುದು (ಆಜಿಗೆ ಜೆಟ್ಟಿಗರಾಗಿ ಕೊಳ್ಳಿವೀಸಿಸುಗೆ ನಿರಂತರಂ ರವಳಿ ಘೋಷಿಸುಗೆ: **ಪಂಪಭಾ**, ೧೦. ೩೨)

ಕೊಳ್ಳೀ – [ಕ್ರಿ] [ಕೊಳ್+ಈ} ತೆಗೆದುಕೊ ಎಂದು ಕೊಡು (ಪೂರ್ವಪುಣ್ಯಾರ್ಜಿತಂ ಕೊಳ್ಳೀಯಲ್ಬಂದತ್ತು ಇದೊಂದಕ್ಷಯ ನಿಧಿಯೆನುತುಂ: **ಆದಿಪು**, ೯. ೧೩೨)

ಕೊಱಚಾಡು – [ಕ್ರಿ] ಕಡೆಗಣಿಸಿ ಮಾತಾಡು, ಚುಚ್ಚು ಮಾತಾಡು (ಎಂದು ಆತನಂ ಆಕೆಗಳ್ ಕಾಡಿ ಕೊಱಚಾಡಿ ಕಳೆದರ್: **ಪಂಪಭಾ**, ೪. ೯೬ ವ)

ಕೊಱ್ – [ಕ್ರಿ] ಕತ್ತರಿಸು (ನಡುಕೋಲ್ವರಂ ನಟ್ಟ ಕೂರ್ಗಣೆಗಳಂ ಗಜಿವೆರಸು ಕೊಱ್ದು ಕಳೆದು: **ಪಂಪಭಾ**, ೧೨. ೭೪ ವ)

ಕೊಟಿತ – [ಗು] ಹೊಸತಾದ, ಎಳೆಯದಾದ (ಪೊಳೆವಲರಮರ್ದಿನ ಕಪ್ಪುರವಳುಕಿನ ಕತ್ತುರಿಯ ಕೊಟಿತ ದೂರ್ವಾಭರಣಂಗಳ: **ಆದಿಪು**, ೧೧. ೪೩)

ಕೊಟ್‌ನಾಱು – [ಕ್ರಿ] ಕೊಳೆತು ದುರ್ಗಂಧ ಬೀರು (ಮೂವರುಂ ಅಮಾತ್ಯರರಸುಂಗೊಳೆ ಕಟ್ಟಿ ತಂದು ಅಗುರ್ವಿನ ಕೊಟ್‌ನಾರ್ಪ ಕೋಟ್ಕಸಱ ಬಾವಿಯೊಳರ್ದೆ: **ಆದಿಪು**, ೨. ೪೩)

ಕೋ – [ಕ್ರಿ] ಪೋಣಿಸು (ಬೂದಿ ಜೆಡೆ ಲಕ್ಕಣಂ ತಪಕೆ ಆದುವು ಎರಟಿಗ್‌ದೊಣೆ ಶರಾಸನಂ ಕವಚಂ ಇದೆಂತಾದುವೋ ಮುತ್ತುಂ ಮೆಟಸುಂ ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ: **ಪಂಪಭಾ**, ೭. ೯೨); [ಕ್ರಿ] ಸಿಕ್ಕಿಸು (ರಥದ ಕೋಲ್ ಮುಱಿದಾಗಳೆ ಕೈಯನಲ್ಲಿ ಕೋದೆಸಗುವ ಸೂತರ್: **ಪಂಪಭಾ**, ೧೧. ೬೫); [ಕ್ರಿ] ನೇತುಹಾಕು (ಎತ್ತಿ ಕಟ್ಟಿದ ಜಡೆ ತೊಟ್ಟ ರತ್ನಕವಚಂ ಕೊರಲೊಳ್ ಸಲೆ ಕೋದ ಬಿಲ್ ಪ್ರಯತ್ನದೆ ಬಿಗಿದಿರ್ದಿರೆ ಎರಟಿಗ್ದೊಣೆ: **ಪಂಪಭಾ**, ೭. ೭೯)

ಕೋಕ – [ನಾ] ಕೋಗಿಲೆ (ಗಗನತಳಮೆ ಪಱಿದು ಬಿಲ್ದುದೆನಿಪ ಬಹುತಟಾಕದಿಂ ಕುಕಿಲ್ವ ನಲಿವ ಕೋಕದಿಂ: **ಪಂಪಭಾ**, ೧. ೫೮); [ನಾ] ತೋಳ (ಎಂತಾನುಂ ಬಂಚಿಸಿ ಬಲೆಪಱಿದ ಕೋಕನಂತೆ ಒರ್ವ ವನಪಾಲಕಂ ಪೋಗಿ ದೇವೇಂದ್ರನಂ ಕಂಡು: **ಪಂಪಭಾ**, ೫. ೯೩ ವ); [ನಾ] ಚಕ್ರವಾಕ (ಘನೋತ್ತುಂಗಸ್ತನದ್ವಂದ್ವದ ಇಟ್ಟೆಡೆಯಂ ಕೋಕಮೆಗೆತ್ತು ಕೋಕಂ: **ಪಂಪಭಾ**, ೭. ೮೬)

ಕೋಕನದ – [ನಾ] ಕೆಂದಾವರೆ (ಬಟಿಕ್ಕಾಲೋಕಿಪುದಾಯ್ತದಂ ಉತ್ಪಳ ಕೋಕನದಾಕರಮೆ ಗೆತ್ತು ವಿಸ್ಮಯದಿಂದಂ: **ಆದಿಪು**, ೭. ೬೦)

ಕೋಕನದಗರ್ಭ – [ನಾ] ತಾವರೆಯಲ್ಲಿ ಹುಟ್ಟಿದವನು, ಬ್ರಹ್ಮ (ಕೋಕನದಗರ್ಭನಿಂ .. .. ಸಂದತ್ತೀ ಲೋಕಕ್ಕೆ ನಾನ್ಯಷಿಃ ಕುರುತೇ ಕಾವ್ಯಂ ಎನಿಪ್ಪ ಮಹಿಮೆ: **ಜಗನ್ನಾವಿ**, ೧. ೭)

ಕೋಕನದಬಾಂಧವ – [ನಾ] ತಾವರೆಗಳ ಬಂಧು, ಸೂರ್ಯ (ಎಂದು ನುಡಿಯುತ್ತಿರ್ಪನ್ನೆಗಂ ಕೋಕನದಬಾಂಧವಂ ಉದಯಾಚಳ ಶಿಖರಶೇಖರನಾದಂ: **ಪಂಪಭಾ**, ३. ೧೧ ವ)

ಕೋಗಿಲೆ – [ನಾ] ಕೋಕಿಲ (ಮಾವಿನಂಕುರಮನೆ ಕರ್ಚಿ ಬಿಚ್ಚಟಿಪ ಕೋಗಿಲೆ: **ಪಂಪಭಾ**, ೫. ೧೧)

ಕೋಗಿಲೆವೆಣ್ – [ನಾ] ಹೆಣ್ಣು ಕೋಗಿಲೆ (ಮದೋತ್ಸವದೆ ಕೋಗಿಲೆವೆಣ್ ನೆಗಟ್ಟುವಂತೇ; **ಜಗನ್ನಾವಿ**, ೧೬. ೧೧೭)

ಕೋಟಲೆಗೊಳ್ – [ಕ್ರಿ] ಯಾತನೆ ಅನುಭವಿಸು (ಕೋಟಲೆಗೊಳ್ವ ರತ್ನಮಕುಟದ್ಯೋತೋತ್ತಮಾಂಗಂ ವಿರಾಜಿಸುವನ್ನಂ ಪೊರಳ್ವ ಪಗೆಯಂ ಕರ್ಣಾರ್ವಿನಂ ನೋಡಿದಳ್: **ಪಂಪಭಾ**, ೧೨. ೧೫೧)

ಕೋಟಿ – ಅಸಂಖ್ಯ, ಅಪಾರ (ಉದಾತ್ತನಾರಾಯಣನಾದ ದೇವಂ ಎಮಗೀಗೆ ಅರಿಕೇಸರಿ ಸೌಖ್ಯಕೋಟಿಯಂ: **ಪಂಪಭಾ**, ೧. ೧); [ನಾ] ಕೋಟಿ ಸೈನ್ಯ (ಆವನಿಟಿಕುಂ ಭ್ರೂಕೋಟಿಯಿಂ ಕೋಟಿಯಂ: **ಪಂಪಭಾ**, ೧. ೨೭); [ನಾ] ತುದಿ, ಮೊನೆ (ಮುನಿಜನಂಗಳ ಬೇಳ್ವೆಗೆ ಉಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತಶರ ಕೋಟಿಯಿಂದಂ ಉಚ್ಚಾಟಿಸಿ: **ಪಂಪಭಾ**, ೪. ೧೫ ವ); [ನಾ] ತುತ್ತತುದಿ, ಗರಿಷ್ಠತೆ (ನೋಡೀಕೆಗಳ ಭ್ರೂಕುಟಿಯೇ ಪರಮಸುಖದ ಕೋಟಿಯನೀಗುಂ: **ಪಂಪಭಾ**, ೭. ೯೪)

ಕೋಡಂ ಕಾಣಿಸು – [ಕ್ರಿ] ತಿವಿ (ಕೋಡಂ ಕಾಣಿಸಿ ಪಿಡಿದೀಡಾಡುವುದೆಂಬಿನೆಗಂ ಆಡಿ ರಂಜಿಸಿದಳ್ ಅವಳ್: **ಆದಿಪು**, ೯. ३೭)

ಕೋಡಗ – [ನಾ] ಕೋತಿ (ಕರಿಪತಿಯನೇಱಿ ಕೋಡಗಮಿರೆ ಕಂಡಿದಱಿಂದಂ ಆಧಿಭೂಪರ್ ಕಿಡೆ ಬೇಡರುಂ ಅಕುಲೀನರುಂ ಅತಿದುಶ್ಚರಿತ್ರರುಂ ಭೂಪರಪ್ಪರ್ ಅನ್ಯಾಯಪರರ್: **ಆದಿಪು**, ೧೫. ३೭)

ಕೋಡಗಗಟ್ಟುಗಟ್ಟು – [ಕ್ರಿ] ಹೆಡಮುರಿಗೆ ಕಟ್ಟು (ಉಱಿದೆ ಎನ್ನಂ ಕುಡಲಿರ್ದ ಕೂಸಂ ಒಡಗೊಂಡು ಉಯ್ವಾತನಂ ತಾಗಿ ತಳ್ತಿಱಿಯಲ್ ಕೋಡುಗಗಟ್ಟುಗಟ್ಟಿ ತರಲ್: **ಪಂಪಭಾ**, ೫. ೨೧)

ಕೋಡಮೊದಲ್ – [ನಾ] ದಂತದ ಬುಡ (ಒಡನೆ ದಿಗಂತದಂತಿಗಳ ಕೋಡ ಮೊದಲ್ಗಳೊಳೆಯ್ದೆ ಪೊಕ್ಕು ಸಿಪ್ಪಡಿಸಿದ ಮಾಟಿಕ್ಕೆಯಾದುವು ಕರಂಗಳ್: **ಪಂಪಭಾ**, ೬. ३೬)

ಕೋಡು – [ನಾ] ಆನೆಯ ದಂತ (ಆ ಮೊಗಮೊಂದೊಂದಱೊಳ್ ಎಂಟು ಕೋಡು ಅವಱೊಳ್ ಅಂತೊಂದೊಂದಱೊಳ್ ಪೂಗೊಳಂ: **ಆದಿಪು**, ೭. ೫३); [ನಾ] ತಣ್ಣಗಿರುವ (ಕುಳಿರ್ವ ಪುಳಿನಂಗಳೊಳಂ ಕೋಡುವ ಧಾರಾಗೃಹಂಗಳೊಳಂ ವಿಶ್ರಮಿಸಿ: **ಆದಿಪು**, ೧೧. ೭೪ ವ); [ನಾ] ದಾನ, ಕೊಡುವಿಕೆ (ನಿರಂತರಂ ಕಡಿಕಡಿದಿತ್ತ ಪೊನ್ನೆ ಬುಧ ಮಾಗಧ ವಂದಿಜನಕ್ಕೆ ಕೊಟ್ಟ ಕೋಡೆ ಎಡಱದೆ ಬೇಡಿಂ ಓಡಿಂ ಇದು ಚಾಗದ ಬೀರದ ಮಾತು ಕರ್ಣನಾ:

ಪಂಪಭಾ, ೧. ೯೯); [ನಾ] ಮರದ ಕೊಂಬೆ (ಮಾವಿನ ಬಂದ ಕೋಡೆ ಕೋಡಾಗಿರೆ ಕೋಡುಗೊಂಡು ಪರಿದತ್ತು ವಸಂತಗಜಂ ವಿಯೋಗಿಯಂ: **ಪಂಪಭಾ,** ೨. ೧೫); [ಕ್ರಿ] ತಣ್ಣಗಾಗು (ಇನಿಯಂ ಮಱಸೊಂದಿದನೋ ಬಟಲ್ದನೋ ಎಂದು ಪಱಪಟ್ಟ ಸುಯ್ಯುಮಂ ಕೋಡುವ ಮೆಯ್ಯುಮಂ ಕಂಡು ಪರಲೋಕಪ್ರಾಪ್ತನಾದುದನಱೆತು: **ಪಂಪಭಾ,** ೨. ೧೯ ಮತ್ತು ೨. ೧೯ ವ); [ನಾ] ಬೆಟ್ಟದ ಶಿಖರ (ರಥವ್ರಜಮಯಮುಂ ಪದಾತಿಮಯಮುಂ ನೆಱಯಾದುದು ಕಾಡು ಕೋಡುಂ:: **ಪಂಪಭಾ,** ೯. ೯೮); [ನಾ] ಕೊಂಬು (ಹರವೃಷಭದ ಕೋಡ ಮಣ್ಣುಮಂ ಆಕಾಶಗಂಗೆಯ ನೀರುಮಂ ನಮೇರು ಮಂದಾರ ಪಾರಿಜಾತದ ಪೂಮಾಲೆಗಳುಮಂ: **ಪಂಪಭಾ,** ೧೪. ೧೭ ವ)

ಕೋಡುಗೊಳ್ – [ಕ್ರಿ] ದಂತದಿಂದ ತಿವಿ (ಮಾವಿನ ಬಂದ ಕೋಡೆ ಕೋಡಾಗಿರೆ ಕೋಡುಗೊಂಡು ಪರಿದತ್ತು ವಸಂತಗಜಂ ವಿಯೋಗಿಯಂ: **ಪಂಪಭಾ,** ೨. ೧೫)

ಕೋಡುಸೇಡುಗೊಳ್ – [ಕ್ರಿ] ಶೈತ್ಯದ ಸೆಡೆತಕ್ಕೊಳಗಾಗು (ತಳರ್ಚಿ ತಣ್ಮಲೆವಲರೀ ಅಲೆದಪುದು ಎಮ್ಮಂತಃಪುರ ಲಲನೆಯರಂ ಕೋಡುಸೇಡುಗೊಳ್ವಿನಮೀಗಳ್: **ಆದಿಪು,** ೧೧. ೯೦)

ಕೋಡೇಱು – [ನಾ] [ಕೋಡ ಏಱು] ಕೋಡಿನ ತಿವಿತದ ಗಾಯ (ತಮೋಗಜದ ಕೋಡೇಱೆಂದಮೇಂ ನೊಂದುದೋ ಹರಿಣಂ: **ಆದಿಪು,** ೧೨. ೬)

ಕೋದಂಡ – [ನಾ] ಬಿಲ್ಲು (ಆ ದೂರ್ವಾಂಕುರವರ್ಣದೊಳಾದಂ ಒಡಂಬಟ್ಟ ಕನಕಕವಚಂ ರಾಜತ್ ಕೋದಂಡಂ ಅಮರ್ದ ದೊಣೆ ಕಣ್ಗೆ ಆದಮೆ ಬರೆ ಬಂದು ಮುಂದೆ ನಿಂದಂ ಹರಿಗಂ: **ಪಂಪಭಾ,** ೨. ೭೪)

ಕೋ ದರಿದ್ರ: – ಯಾರು ಬಡವ (ಆ ದೀನಾನಾಥರ್ಗೆ ವೃದ್ಧದ್ವಿಜಮುನಿನಿಕರಕ್ಕೆ ಅಂದು ಎಡಱು ಪೋಪಿನಂ ಕಃ ಕೇನಾರ್ಥೀ ಕೋ ದರಿದ್ರಃ ಎನುತುಂ ಅನಿತುಮಂ ಧರ್ಮಜಂ ಸೂಱೆಗೊಟ್ಟಂ: **ಪಂಪಭಾ,** ೬. ೪೦)

ಕೋದ್ರವ – [ನಾ] ಹಾರಕ ಎಂಬ ಧಾನ್ಯ (ಯಾವನಾಳ ಕಂಗು ಕೋದ್ರವಾದಿ ಸರ್ವೌಷಧಿಗಳುಂ: **ಆದಿಪು,** ೮. ೬೧ ವ)

ಕೋಪಗರ್ಭಸ್ಮಿತ – [ನಾ] ಕೋಪವನ್ನು ಒಳಗಿಟ್ಟುಕೊಂಡು ತೋರುವ ಮುಗುಳ್ನಗು (ಮದಜಳಚ್ಛಟಾಟೋಪಭೀಷಣಾರುಣ ಗಂಡಸ್ಥಲಮುಮಪ್ಪ ಗಂಧಸಿಂಧುರೇಂದ್ರಮನನುಕರಿಸಿ ಕೋಪಗರ್ಭಸ್ಮಿತಂ ಬೆರಸು: **ಆದಿಪು,** ೧೪. ೬೩ ವ)

ಕೋಪಪಾವಕ – [ನಾ] ಕೋಪಮೆಂಬ ಬೆಂಕಿ (ಆಱದ ಕೋಪಪಾವಕನಿಂ ಅಣ್ಣನ ನನ್ನಿಯನಿಲ್ಲಿ ಮೀಱುವೆಂ: **ಪಂಪಭಾ,** ೭. ೧೧)

ಕೋಪರಸ – [ನಾ] ರೌದ್ರರಸ (ಪೆರ್ಚಿದ ಶೋಕರಸಮಂ ಕೋಪರಸದ ಮೇಲಿಕ್ಕಿ: **ಪಂಪಭಾ,** ೧೩. ೬೧ ವ)

ಕೋಮಳ – [ನಾ] ಲಲಿತವಾದ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ಕೋಮಳವಂಶ – [ನಾ] ಎಳೆಯ ಬಿದಿರು (ಪಕ್ವಬಿಂಬಾಧರಂ ಕೋಮಳವಂಶಶ್ಯಾಮಂ ಅಂಬೋಧರರವನಳಿನೀಕುಂತಲಂ: **ಆದಿಪು,** ೮. ೫೧)

ಕೋರಕ – [ನಾ] ಮೊಗ್ಗು (ಸಕಳ ಕಳೋತ್ಕಳಿತ ಸರಸಸಹಕಾರ ಕೋರಕಕಬಳನಮದಮಧುರ ಕೋಕಿಳ ಕೋಳಾಹಳಾಕುಳಿತ ಕೃತಕಕೇಳೀಶೈಳಶಿಖರಂಗಳೇ: **ಆದಿಪು,** ೪. ೫೨ ವ)

ಕೋರಕಿತ – [ಗು] ಮೊಗ್ಗು ಬಿಟ್ಟಿರುವ (ಕೋರಕಿತ ಅಂಕುರಿತ ಪಲ್ಲವಿತ ಮುಕುಳಿತ ವಿಸ್ಫಾರಿತ ರಮ್ಯಾಶೋಕ ಮಹೀರುಹಮುಮಂ: **ಆದಿಪು,** ೧೦. ೪೧)

ಕೋರೈಸು – ತಲ್ಲಣಿಸು (ಶರತ್ತಪನತಾಪದಿಂ ಕೊರಗಿ ಕೂಡೆ ಕೋರೈಸಿದಾ ನರೇಶ್ವರವಧೂಕದಂಬಕಮಂ ಆಱೆಸಲ್ಕೆ: **ಆದಿಪು,** ೧೧. ೫೫)

ಕೋಲ್ – [ನಾ] ಬಾಣ (ಅಂತೆರಡು ಬಲದ ದಳಂಗಳ್ ಕೋಲಾಟಮಾಡುವಂತೆ ಕಿಱೆದಾನುಂ ಬೇಗಂ ತಟ್ಟುಪೊಟ್ವೆಂದು ಕೋಲ್ಲುಟ್ಟಿ: **ಪಂಪಭಾ,** ೧೦. ೮೦ ವ)

ಕೋಲ್ಲುಟ್ಟು – [ಕ್ರಿ] ಬಾಣಗಳಿಂದ ಹೊಡೆ (ಎರಡುಂ ಬಲದ ದಟಂಗಳ್ ಕೋಲಾಟಮಾಡುವಂತೆ ಕಿಱೆದಾನುಂ ಬೇಗಂ ತಟ್ಟುಪೊಟ್ವೆಂದು ಕೋಲ್ಲುಟ್ಟಿ: **ಪಂಪಭಾ,** ೧೦. ೮೦ ವ)

ಕೋವಣ – [ನಾ] [ಕೌಪೀನ] ಲಂಗೋಟಿ (ಸರಿಗೆಯೊಳ್ ಸಮೆದ ಅಕ್ಷಮಾಲಿಕೆ ಪೊನ್ನ ಮುಂಜಿ ತೊಳಪ್ಪ ಕಪ್ಪುರದ ಭಸ್ಮರಜಃ ತ್ರಿಪುಂಡ್ರಕಂ ಒಪ್ಪೆ ಪಿಂಗಜಟಾಳಿ ತಾವರೆಯ ಸೂತ್ರದೊಳಾದ ಜನ್ನವಿರಂ ದುಕೂಲದ ಕೋವಣಂ ಕರಂ ಒಡಂಬಡೆ ನೋಟಕರ್ಕಳಂ ಆ ತಪಸ್ವಿ ಮರುಳ್ಚಿದಂ: **ಪಂಪಭಾ,** ೬. ೮)

ಕೋಶ – [ನಾ] ಮದಸಂಗ್ರಹಸ್ಥಾನ (ಕಾರ್ಮುಗಿಲ ನೀರ್ವೊಲ್ ಕೋಶದಿಂದಂ ಮದಂ ಸುರಿಯುತ್ತಿರ್ಪುದುಂ: **ಆದಿಪು,** ೧೨. ೫೮)

ಕೋಶಾಧ್ಯಕ್ಷ – [ನಾ] ರಾಜ ಬೊಕ್ಕಸದ ಮುಖ್ಯಸ್ಥ (ದಂಡನಾಯಕಂ ತೋಱೆದನೇಕ ಕ್ಷತ್ರಿಯಪುತ್ರಕುಲಧನಂಗಳಂ ಕೈಕೊಂಡು ಕೋಶಾಧ್ಯಕ್ಷ ಹಸ್ತನ್ಯಸ್ತಂಗಳ್ಮಾಡಿ: **ಆದಿಪು,** ೧೩. ೮೦ ವ)

ಕೋಷ್ಠ – [ನಾ] ಒಳಕೊಠಡಿ (ಪದಿನಾಱುಂ ಭಿತ್ತಿಗಳೊಳ್ ನಾಲ್ಕು ವೀಧಿಗಳುಱೆಯೆ ನೆಗಟ್ದ ಪನ್ನೆರಡು ಕೋಷ್ಠಂಗಳೊಳ್: **ಆದಿಪು,** ೧೦. ೩೫ ವ)

ಕೋಷ್ಠಾಗಾರ – [ನಾ] ಉಗ್ರಾಣದ ಮನೆ (ಅರಸನ ಕೋಷ್ಠಾಗಾರದ ಕರಣಂಗಳ ಕಾಪನೆಯ್ದೆ ಬಂಚಿಸಿ ಕಳ್ದುಂ ಕರೆದುಂ ಒಳಗೊಳಗೆ ಸುಱೆಯುತ್ತಿರೆ: **ಆದಿಪು,** ೫. ೧೫)

ಕೋಳ್ – [ನಾ] ಹೊಡೆತ (ರಾಜಪುತ್ರಸ್ಮಿತ ಮಧುರ ಮಧುರಾಪಾಂಗಜಾಸ್ತ್ರಂಗಳ ಕೋಳಂ ನೂತನಪ್ರೇಮದೆ ನಿಮಿರ್ವೆಡೆಯೊಳ್: **ಆದಿಪು,** ೪. ೫೧); [ನಾ] ಹಿಡಿತ (ಮನಂಬುಗೆ ನಳಿತೋಳ ಕೋಳೆಸೆಯೆ ಘಟ್ಟಿಮುಗುಟ್ಟುವ ಘಟ್ಟವಟ್ಟಿಯಂ ಭೋಂಕನೆ ಕಂಡು ಕೀಚಕಂ: **ಪಂಪಭಾ,** ೮. ೫೯ ಮತ್ತು ೫೯ ವ); [ನಾ] ಪ್ರದೇಶ, ಕಡೆ (ವಿರಾಟಂ ಶ್ವೇತನುತ್ತರಂ ಶಂಖನೆಂಬ ಮೂವರ್ ಮಕ್ಕಳುಂ ಶತಾನೀಕ ಶತದ್ಯುಮ್ನ ಶತಚಂದ್ರಂ ಮೊದಲಾಗಿ ಪನ್ನೊರ್ವರ್ ತಮ್ಮಂದಿರುಂ ಬೆರಸು ನೆಲನದಿರೆ ಮುಂ+ಕೋಳೊಳ್ ನಡೆಯೆ: **ಪಂಪಭಾ,** ೯. ೯೫ ವ); [ನಾ] ತಿವಿತ (ದಿಂಕುಗೊಳ್ವ ಕಕ್ಕಡೆಗೆ ಇದಿರ್ ಉರ್ಚುವ ಇಟ್ಟಿಗೆ ಇದಿರಾಳಿಯ ಕೋಟ್ಗಳ ಕೋಳ್ಗೆ ನೊಂದು ಬಾಯ್ವಿಡದೆ **ಪಂಪಭಾ,** ೧೦. ೯೪)

ಕೋಳಂಪಡು – [ಕ್ರಿ] ಸುಲಿಗೆಗೊಳಗಾಗು (ಸೂಳೆಯಂತೆ ಕೋಳಂಪಟ್ಟು ಅಟ್ಟಿಸದೆ ತಕ್ಕನಂತೆ ನಂಬಿಸಿಯುಂ ಒತ್ತರದಂತೆ ಒತ್ತಿಯುಂ: **ಪಂಪಭಾ,** ೫. ೪ ವ)

ಕೋಳಾಹಳ – [ನಾ] ಒಂದು ಪರ್ವತದ ಹೆಸರು, ಅದರ ಮಗಳೇ ಉಪರಿಚರವಸುವಿನ ಹೆಂಡತಿ ಗಿರಿಜೆ (ಉಪರಿಚರವಸುವೆಂಬರಸಂ ಮುಕ್ತಾವತಿಯೆಂಬ ತೊಱೆಯೊಳ್ ವಿಶ್ರಮಿಸಿರ್ದೊಡೆ ಕೋಳಾಹಳಮೆಂಬ ಪರ್ವತಕ್ಕೆ ಪುಟ್ಟಿದ ಗಿರಿಜೆಯೆಂಬ ಕನ್ನೆಯನಾತಂ ಕಂಡು: **ಪಂಪಭಾ,** ೧. ೬೮ ವ); [ನಾ] ಅಬ್ಬರ (ವಿಭ್ರಮಮಂ ಕಂಠರವಕ್ಕೆ ತಾಡನರವಂ ತಂದೀಯೆ ತತ್ಸೌಧದೊಳ್ ಸಮಸತ್ವಂಬಡೆವಂತಿರೆ ಆಯ್ತು ಸುರತಪ್ರಾರಂಭಕೋಳಾಹಳಂ: **ಪಂಪಭಾ,** ೪. ೧೧೯); [ನಾ] ಗೊಂದಲ (ವಿದ್ವಿಷ್ಟವಿದ್ರಾವಣನ ಮೊನೆಯಂಬಿನ ಏಱೆಂಗೆ ಅಳ್ಕಿ ಹತವಿಹತ ಕೋಳಾಹಳರಾಗಿ: **ಪಂಪಭಾ,** ೫. ೮೮ ವ)

ಕೋಳಾಹಳಾಕುಳೀಕೃತ – [ಗು] ಗದ್ದಲವೆಬ್ಬಿಸಲ್ಪಟ್ಟ (ಅನಂಗಮತಂಗಜ ಕೋಳಾಹಳಾಕುಳೀಕೃತ ಅಂತರಂಗನಾಗಿ: **ಪಂಪಭಾ,** ೪. ೭೪ ವ)

ಕೋಳಿಕಾಳಿಕಾಱ – [ನಾ] ವಾಮಾಚಾರದ ಶಾಕ್ತೇಯ ಮತದ ವಂಚಕ (ಜಾತ್ಯಶ್ವದಂತೆ ಬೇಗಮಾಗಿ ಕೋಳಿಕಾಳಿಕಾಱನಂತೆ ಬಟೆವಟೆವಿಡಿದು ತುಂಬಿನ ನೀರಂ ಉರ್ಚಿದಾಗಳಂತೆ ಪರಿದು ಅಳುರ್ದುಕೊಳ್ವುದಿದು ಪಂದಿವೇಂಟೆಯ ನಾಯ್: **ಪಂಪಭಾ,** ೫. ೪೬ ವ) [ಇದು **'ಕೌಳಿಕಾಳಿಕಾಱ'** – ಕೌಳಿಕಾ+ಆಳಿಕಾಱ' – ಇರಬಹುದು ಎಂದು ಡಿಎಲ್ಎನ್]

ಕೋಳು – [ನಾ] ಆಕ್ರಮಣ (ಕಾವ ನಾರಾಯಣನ ಸುದರ್ಶನಮೆಂಬ ಚಕ್ರದ ಕೋಳುಮಂ ವಿಕ್ರಮಾರ್ಜುನನ ದಿವ್ಯಾಸ್ತ್ರಂಗಳ ಕೋಳುಮಂ ಅಗ್ನಿದೇವನ ಶಿಖಾಕಳಾಪದ ಕೋಳುಮಂ: **ಪಂಪಭಾ,** ೫. ೯೩ ವ)

ಕೋಳ್ಗುದಿ – [ನಾ] ಪ್ರೇಮಾಕ್ರಮಣದ ಕುದಿತ (ಮದನನ ಕಾಯ್ಪು ಮಾಣ್ಗೆ ಸರಸೀರುಹಜನ್ಮನ ಮೆಚ್ಚು ತೀರ್ಗೆ ಕೋಳ್ಗುದಿ ಮನದಿಂದಂ ಇಂದು ಪೊಱಮಾಱುಗೆ: **ಪಂಪಭಾ** ಪರಿಷತ್ತು, ೫. ೧೮); [ನಾ] ತಿವಿತದ ಸಂಕಟ (ಸರಳ ಪೊದಲ್ದ ಬಲ್ಸರಿಯ ಕೋಳ್ಗಿರಲಾಱದೆ ತೆರಳ್ದು ದುರ್ಧರ ಹಯಂ ಅಟ್ಟೆ ಸಂದಣಿಸಿ ಸಂದಣಿ ಕೋಳ್ಗುದಿಗೊಂಡು: **ಪಂಪಭಾ** ಪರಿಷತ್ತು, ೩. ೭೦)

ಕೋಳ್ದಾಂಟು – [ಕ್ರಿ] ದಾಪುಗಾಲು ಹಾಕಿ ದಾಟು (ಪೆಣಂಗಳ ಕಂಪು ನಾಱುವುದರ್ಕೆ ಸೈರಿಸಲಾಱದೆ ಕೋಳ್ದಾಂಟಿನೊಳ್ ಕೊಳುಗುಳವಂ ಕಟಿದುಪೋಗಿ: **ಪಂಪಭಾ,** ೧೩. ೭೧ ವ) (ಈ ಶಬ್ದಕ್ಕೆ ಡಿಎಲ್ಎನ್ **"**ನಾತ ಎಲ್ಲಿಯವರೆಗೆ ವ್ಯಾಪಿಸಬಲ್ಲುದೋ ಅಲ್ಲಿಂದ ಆಚೆಗೆ**"** ಎಂದು ಅರ್ಥ ಕೊಡುತ್ತಾರೆ – **'ದೀಪಿಕೆ',** ಪು. ೫೩೮)

ಕೋಳ್ಪಡು – [ಕ್ರಿ] ಸೂರೆಯಾಗು (ಶ್ರೀದಿವ್ಯಕಾಂತಾಜನಂ ತೊಡವು ಎಂಬೊಂದುಮಂ ಆ ಸುರಾಸುರರಿಂ ಆ ಗೋವಿಂದನಿಂ ಮುನ್ನೆ ಕೋಳ್ಪಡದ ಅಂಭೋನಿಧಿಯಂತೆ ಬಂದು ನೆಗಟ್ದು ಇಂದ್ರಪ್ರಸ್ಥಮಂ ಧರ್ಮಜಂ: **ಪಂಪಭಾ,** ೪. ೯); [ಕ್ರಿ] ಒತ್ತೆಯಿಡು (ಎಳೆಯುಂ ಕೋಳ್ಪಟ್ಟುಂ ಮುಂಬಳೆದೊಟ್ಟುಂ ಮುಟ್ಟುಗೆಟ್ಟುಂ ಇರ್ದು ಈಗಳ್ ಬಳ್ವಳನೆ ನುಡಿದಪುದೆ: **ಪಂಪಭಾ,** ೧೨. ೧೭೭)

ಕೋಳ್ವಾಂಗ – [ನಾ] ಬೇಟೆ ವಶವಾಗುವ ರೀತಿ (ಬರವಂ ಕಾಡಂ ಬೇಗೆಗೆ ಕರಮಱಿದು ಎರಡುಂ ಮೃಗಂಗಳುಂ ತಣ್ಬುಟಿಲೊಳ್ ನೆರೆದು ಒಡವಂದುವು ತಪ್ಪದೆ ಇದ ಅರಿಕೇಸರಿ ಕಂಡು ಮೆಚ್ಚುವೈ ಕೋಳ್ವಾಂಗಂ: **ಪಂಪಭಾ,** ೫. ೩೯) [ಇದಕ್ಕೆ ಎಲ್. ಬಸವರಾಜು **"**ಕೊಂಬುಗಳ ವಿವಿಧಾಕಾರ**"** ಎಂದು ಅರ್ಥವಿಸುತ್ತಾರೆ: **'ಪಂಪನ ಸಮಸ್ತ ಭಾರತ ಕಥಾಮೃತ'** – ಪು. ೯೭]

ಕೋಳ್ಪೋಗು – [ಕ್ರಿ] ಸೂರೆ ಹೋಗು (ಚಾಗದ ಕಂಬಮಂ ನಿಱಿಸಿ ಬೀರದ ಶಾಸನಮಂ ನೆಗಟ್ಚಿ ಕೋಳ್ಪೋಗದ ಮಂಡಲಂಗಳನೆ ಕೊಂಡು ಜಗತ್ತ್ರಿತಯಂಗಳೊಳ್ ಜಸಕ್ಕೆ ಆಗರಮಾದ ಬದ್ದೆಗನಿಂ ಆ ನರಸಿಂಹನಿಂ ಅತ್ತಲ್ನಾಲ್ವೆರಲ್ ಮೇಗು ಪೊದಲ್ದ ಚಾಗದೊಳಂ ಒಂದಿದ ಬೀರದೊಳಂ ಗುಣಾರ್ಣವಂ: **ಪಂಪಭಾ,** ೧. ೫೦)

ಕೋಳ್ಮಸಗು – [ಕ್ರಿ] ಸೆರೆ ಸಿಕ್ಕು (ಕೋಳ್ಮಸಗಿದ ಪುಲಿಯ ಪಿಂಡುಗಳುಮಂ ಅನುಕರಿಸಿ ನಡೆವಣಿಯ ಸಂದಣಿಯುಮಂ ಕಾಱುಱು ಮಸಗಿದಂತೆ ಮಸಗಿದ ದುರ್ಧರಧನುರ್ಧರ ಬಲಮುಮಂ: **ಪಂಪಭಾ,** ೧೦. ೫೧ ವ)

ಕೋಳ್ಮಿಗ – [ನಾ] ಹಿಂಸ್ರಜಂತು [ಕೋಳ್=ಬೇಟೆಯಾಡಿ ಪ್ರಾಣಿಗಳನ್ನು ಕೊಲ್ಲುವುದು] (ಅಲ್ಲಿ ಕೋಳ್ಮಿಗದ ವನೇಚರಾಧಿಪರ ದಾಯಿಗರತ್ತಣಿಂ ಅಪ್ಪ ಅಪಾಯಕೋಟಿಗೆ ಪವಣಿಲ್ಲ: **ಪಂಪಭಾ,** ೭. ೨೧)

ಕೋಟ್ – ಸಮಾಸದಲ್ಲಿ ಕೋಡು ಎಂಬ ಶಬ್ದಕ್ಕೆ ಬರುವ ಆದೇಶ ರೂಪ (ಭಾರ್ಗವರ್ ಸುರಿಗಿಱಿವಂತಿಱಿಯೆ ಸೂಸುವ ಕೆನ್ನೆತ್ತರ್ ಕಟಲ್ದುದಿರ್ವ ಸಕ್ಕದ ಸಿಪ್ಪುಗಳು ಸಿಡಿಲ್ದು ಜೀಱೆಟ್ವ ಕೋಟ್ಕಳುಂ ಅಗುರ್ವಂ ಪಡೆಯೆ: **ಪಂಪಭಾ,** ೧೦. ೯೩ ವ) [ಕೋಡುಗಳು ಎಂಬ ಅರ್ಥದಲ್ಲಿ **'ಕೋಟ್ಕಳ್'** ಪ್ರಯೋಗವಾಗಿದೆ]

ಕೋಟ್ಕೆಸಱ್ – [ನಾ] ಕೆಸರು, ಕೊಚ್ಚೆ (ಅಗುರ್ವಿನ ಕೊಟ್ನಾರ್ಪ ಕೋಟ್ಕೆಸಱ ಬಾವಿಯೊಳರ್ದೆ: **ಆದಿಪು,** ೨. ೪೩)

ಕೋಟ್ಗೆಸಱ್ – [ನಾ] ತಂಪಾದ ಗಟ್ಟಿ ಕೆಸರು, ತಂಪಾದ ಲೇಪನ (ಸಾಂದಿನೊಳ್ ಕತ್ತುರಿಯೊಂದು ಕೋಟ್ಗೆಸಱೊಳ್ ಓಕುಳಿ ಚಂದನ ಗಂಧವಾರಿಯೊಳ್ **ಪಂಪಭಾ,** ೧೪. ೨೦)

ಕೋಟ್ಮಸಗು – [ಕ್ರಿ] ವಿಪರೀತ ಕೆರಳು, ಹಿಂಸೆ ನೀಡು (ಎಳಸಿ ಬಳಸಿರ್ಪ ಮೃಗಸಂಕುಳಂದನಿತುಂ ಒಡನೆ ಕೋಟ್ಮಸಗಿದೊಡೆ: **ಅದಿಪು,** ೬. ೫೬)

ಕೋಟ್ಮೊಗಗೊಳ್ – [ಕ್ರಿ] [ಕೋಡು ಹುಟ್ಟಿದ ತಲೆ ಕಾಣಿಸಿಕೊಳ್ಳು] ಸಂತೋಷದ ಮುಖ ಹೊಂದು (ಮಗನಾದನಾಗಿ ಚಾಗದ ನೆಗಟ್ತೆಯೊಳ್ ಬೀರದ ಏಟ್ಗೆಯೊಳ್ ನೆಗಟ್ ಮಗಂ ಮಗನೆನೆ ಪುಟ್ಟಲೊಡಂ ಕೋಟ್ಮೊಗಗೊಂಡುದು ಭುವನಭವನಂ ಅರಿಕೇಸರಿಯೊಳ್: **ಪಂಪಭಾ,** ೧. ೪೨)

ಕೌಂಗು – [ನಾ] [ಕ್ರಮುಕ] ಅಡಕೆ (ತೂಗಿ ಪಣ್ಗೊಲೆಯಿ ಬಳ್ಕುವ ಕೌಂಗು ಕಾಯ್ದುಱುಗಲಂ ಪೇಱೆರ್ದ ಚೆಂದೆಂಗು: **ಆದಿಪು,** ೧. ೬೭)

ಕೌಂತೇಯ – [ನಾ] ಕುಂತಿಯ ಮಗ, ಪಾಂಡವರಲ್ಲಿ ಯಾರಾದರೊಬ್ಬ (ಎನ್ನ ಮಾತಿಂಗೆ ಎಲೆ ಕೌಂತೇಯ ಮಱುಮಾತನಿತ್ತು ಮದೀಯ ಸರೋವರದ ತೋಯಮಂ ಕುಡಿ ಕೊಂಡುಯ್: **ಪಂಪಭಾ**, ೮. ೩೯)

ಕೌಕ್ಷೇಯಕ – [ನಾ] ಕತ್ತಿ (ಧೃಷ್ಟದ್ಯುಮ್ನ ಕಚಗ್ರಹವಿಲುಳಿತ ಮೌಳಿಯುಂ ತದೀಯ ಕೌಕ್ಷೇಯಕ ಧಾರಾವಿದಾರಿತ ಶರೀರನುಂ ಆಗಿ ಬಿಟ್ಟಿರ್ದ ಶರಾಚಾರ್ಯರಂ ಕಂಡು: **ಪಂಪಭಾ**, ೧೩. ೫೫ ವ)

ಕೌತುಕ – [ನಾ] ಕುತೂಹಲ (ನೆರವಿ ವಿಸ್ಮಯಂಬಟ್ಟು ಇದೇನಂ ನೋಡಿದಪ್ಪುದು ಏನಾನುಮೊಂದು ಕೌತುಕಮಾಗಲ್ವೇಟ್ಕುಂ: **ಆದಿಪು**, ೪. ೩ ವ)

ಕೌತೂಹಳ – [ನಾ] ಕುತೂಹಲ (ಪೂರ್ವಭವದೊಳ್ ಬಂಧುತ್ವಮುಂಟಕ್ಕುಂ ಇಂತಿನಿತೊಂದಿಲ್ಲದೊಡಾಗಲಾಯ್ತು ಎನಗಿದಂ ಕೇಳ್ವೊಂದು ಕೌತೂಹಳಂ: **ಆದಿಪು**, ೫. ೪೭)

ಕೌಪೀನ – [ನಾ] ಲಂಗೋಟಿ (ವಲ್ಕಲವಸನರುಂ ಕೌಪೀನ ಧಾರಿಗಳುಂ ಭಸ್ಮೋದ್ಧೂಳಿತಾಂಗರುಂ .. .. ಆಗಿ ತಮಗೆ ತಾವೇ ವನಪ್ರವೇಶಮಂ ಮಾಡಿ: **ಆದಿಪು**, ೯. ೯೩ ವ)

ಕೌಪೀನಧಾರಿ – [ನಾ] ಕೌಪೀನ ಧರಿಸಿದವನು, ಸನ್ಯಾಸಿ (ವಲ್ಕಲವಸನರುಂ ಕೌಪೀನಧಾರಿಗಳುಂ .. .. ಪರಿವ್ರಾಜಕರುಂ ಆಗಿ: **ಆದಿಪು**, ೯. ೯೩ ವ)

ಕೌಮುದೀಮಹೋತ್ಸವ – [ನಾ] ಬೆಳದಿಂಗಳ ಒಂದು ಹಬ್ಬ, ಆಚರಣೆ (ನಾಗರಿಕ ರಮಣರಮಣೀಜನಂಗಳ್ ಕೌಮುದೀಮಹೋತ್ಸವ ಉತ್ಸುಕರಾಗಿ ನೆರದಲ್ಲಿ: **ಆದಿಪು**, ೧೨. ೧೧ ವ)

ಕೌರವನಾಯಕ – [ನಾ] ಕೌರವರ ಹಿರಿಯ, ದುರ್ಯೋಧನ (ಕೃಷ್ಣೆಗಿಂದು ಧಮ್ಮಿಲ್ಲಮಂ ಇಂಬಿನಿಂ ಮುಡಿಸಿ ಕೌರವನಾಯಕನ ಊರುಭಂಗಮೊಂದಲ್ಲದೆ ಎಲ್ಲಮಂ ನೆಱಿಪಿದೆಂ ಗಡಂ ಓಳಿಯೆ ಕೇಳಿಮ್ ಎಲ್ಲರುಂ: **ಪಂಪಭಾ**, ೧೨. ೧೬೦) [ಕೌರವರು: ದುರ್ಯೋಧನ, ಯುಯುತ್ಸು, ದುಶ್ಶಾಸನ, ದುಃಸಹ, ದುಃಶಲ, ಜಲಸಂಧ, ಸಮ, ಸಹ, ವಿಂದ, ಅನುವಿಂದ, ದುರ್ಧರ್ಷ, ಸುಬಾಹು, ದುಷ್ಪಧರ್ಷಣ, ದುರ್ಮರ್ಷಣ, ದುರ್ಮುಖ, ದುಷ್ಕರ್ಣ, ಕರ್ಣ, ವಿವಿಂಶತಿ, ವಿಕರ್ಣ, ಸುಲೋಚನ, ಚಿತ್ರ, ಉಪಚಿತ್ರ, ಚಿತ್ರಾಕ್ಷ, ಚಾರುಚಿತ್ರ, ಶರಾಸನ, ದುರ್ಮದ, ದುಷ್ಪ್ರಗಾಹ, ವಿವಿತ್ಸು, ವಿಕಟ, ಊರ್ಣನಾಭ, ಸುನಾಭ, ನಂದ, ಉಪನಂದಕ, ಸೇನಾಪತಿ, ಸುಷೇಣ, ಕುಂಡೋದರ, ಮಹೋದರ, ಚಿತ್ರಬಾಣ, ಚಿತ್ರವರ್ಮಾ, ಸುವರ್ಮಾ, ದುರ್ವಿಮೋಚನ, ಅಯೋಬಾಹು, ಮಹಾಬಾಹು, ಚಿತ್ರಾಂಗ, ಚಿತ್ರಕುಂಡಲ, ಭೀಮವೇಗ, ಭೀಮಬಲ, ಬಲಾಕೀ, ಬಲವರ್ಧನ, ಉಗ್ರಾಯುಧ, ಭೀಮಕರ್ಮಾ, ಕನಕಾಯು, ದೃಢಾಯುಧ, ದೃಢವರ್ಮಾ, ದೃಢಕ್ಷತ್ರ, ಸೋಮಕೀರ್ತಿ, ಅನೂದರ, ದೃಢಸಂಧ, ಜರಾಸಂಧ, ಸತ್ಯಸಂಧ, ಸದಃಸುವಾಕ್, ಉಗ್ರಶ್ರವಾ, ಅಶ್ವಸೇನ, ಸೇನಾನೀ, ದುಷ್ಕರಾಜಯ, ಅಪರಾಜಿತ, ಪಂಡಿತಕ, ವಿಶಾಲಾಕ್ಷ, ದುರಾವರ, ದೃಢಹಸ್ತ, ಸುಹಸ್ತ, ವಾತವೇಗ, ಸುವರ್ಚಸ್, ಆದಿತ್ಯಕೇತು, ಬಹ್ವಾಶೀ, ನಾಗದಂತ, ಉಗ್ರಯಾಯೀ, ಕವಚೀ, ನಿಷಂಗೀ, ಪಾಶೀ, ದಂಡಧಾರ, ಧನುರ್ಗ್ರಹ, ಉಗ, ಭೀಮರಥ, ವೀರ, ವೀರಬಾಹು, ಅಲೋಲುಪ, ಅಭಯ, ರೌದ್ರಕರ್ಮಾ, ದೃಢರಥ, ಅನಾಧೃಷ್ಯ, ಕುಂಡಭೇದೀ, ವಿರಾವೀ, ದೀರ್ಘಲೋಚನ, ದೀರ್ಘಬಾಹು, ಮಹಾಬಾಹು, ವ್ಯೂಢೋರು, ಕನಕಧ್ವಜ, ಕುಂಡಾಶೀ, ವಿರಜಾ, ದುಃಶಲಾ {ಮಗಳು} – ಪುಣೆಯ ಅಧಿಕೃತಪರಿಷ್ಕರಣದ ಪ್ರಕಾರ]

ಕೌರವ್ಯ – [ಗು] ಕೌರವರಿಗೆ ಸಂಬಂಧಿಸಿದ (ಘೋರ್ಗರೆದಾರ್ದ ಪಾಂಡವ ಪತಾಕಿನಿಯುಮಂ ಒಂದು ತಲೆಯಾಗೋಡುವ ಕೌರವ್ಯ ಧ್ವಜಿನಿಯುಮಂ: **ಪಂಪಭಾ**, ೧೨. ೩೦ ವ)

ಕೌಶೇಯ – [ನಾ] ರೇಷ್ಮೆ ಬಟ್ಟೆ (ಗಂಗಾಜಳಪವಿತ್ರೀಕೃತಗಾತ್ರನುಂ ಕೌಶೇಯಪರಿಧಾನನುಂ ಆಗಿರ್ದ ಮಾನನಿಧಾನನಂ ತಂದು: **ಪಂಪಭಾ**, ೧೪. ೧೭ ವ)

ಕೌಸುಂಭರಾಗ – [ನಾ] ಕುಸುಬೆ ಹೂವಿನ ಕೆಂಪು ಬಣ್ಣ (ಕಿರೀಟರಾಗಪ್ರಭೆಗಳ್ ಪರೆವಂತೆ ಪರೆದು ಕೌಸುಂಭರಾಗ ರಮಣಿಯಮಾಯ್ತು ಸಂಧ್ಯಾರಾಗಂ: **ಆದಿಪು**, ೧೨. ೪)

ಕೌಸುಂಭಾಂಬರ – [ನಾ] ಕುಸುಬೆ ಹೂವಿನ ಬಣ್ಣದ ಬಟ್ಟೆ (ಉಟ್ಟ ಕೌಸುಂಭಾಂಬರರುಚಿಯುಂ ತೊಟ್ಟ ಪದ್ಮರಾಗಾಭರಣ ಕಿರಣಂಗಳುಂ: **ಆದಿಪು**, ೧೨. ೧ ವ)

ಕೌಸ್ತುಭ – [ನಾ] ವಿಷ್ಣುವಿನ ಎದೆಯ ಮೇಲಿರುವ ರತ್ನ (ಹರಜಟಾಜೂಟಕ್ಕೆ ಚಂದ್ರಲೇಖೆಯಿರ್ಪಂತೆ ದಿಕ್ಕರಿಕಟತಟಕ್ಕೆ ಮದಲೇಖೆಯಿರ್ಪಂತೆ ಕೈಟಭಾರಾತಿಯ ವಿಶಾಲೋರುಸ್ಥಳಕ್ಕೆ ಕೌಸ್ತುಭಮಿರ್ಪಂತೆ ಸೊಗಯಿಸುತಿರ್ದುದು: **ಪಂಪಭಾ**, ೧. ೫೭ ವ)

ಕೌಳಿಕನಾದ – [ನಾ] ಕುಲಸಂಬಂಧದ ಧ್ವನಿ, ಸಾಮೂಹಿಕ ಶಬ್ದ (ಪರೆದ ಉರಿಗೇಸಂ ಅವ್ವಳಿಪ ನಾಲಗೆ ಮಿಂಚುವ ದಾಡೆ ಬಿಟ್ಟ ಕಣ್ ತಿರುಪಿದ ಮೀಸೆ ಕೊಂಕಿದ ಸಟಂ ಕಡು ನೆಕ್ಕ ಕದಂಪು ನೀಳ್ದ ತಾಟ್ಮರದವೊಲಪ್ಪ ಒಡಲ್ ಕಹಕಹಧ್ವನಿ ಕೌಳಿಕನಾದಂ ಆದುದು ಆಸುರತರಮಾಗೆ ಬಂದು ಕವಿದತ್ತು ಘಟೋತ್ಕಚರೌದ್ರಸಾಧನಂ: **ಪಂಪಭಾ**, ೧೨. ೭)

ಕ್ರಂದತ್ – [ಗು] ಶಬ್ದ ಮಾಡುತ್ತಿರುವ (ಕ್ರಂದತ್ ಸ್ಯಂದನ ಜಾತ ನಿರ್ಗತ ಶಿಖಿಜ್ವಾಳಾಸಹಸ್ರಂಗಳ್ ಆಟಂದೆತ್ತಂ ಕವಿದೆಟ್ಟಿ ಬೇವ ಶವಸಂಘಾತಂಗಳಂ: **ಪಂಪಭಾ**, ೧೩. ೭೧)

ಕ್ರಕಚ – [ನಾ] ಗರಗಸ (ಭಯಂಕರಶಿಂಶುಮಾರ ವಿಕಟದಂಷ್ಟ್ರಾ ಕ್ರಕಚ ಪಾಟ್ಯಮಾನ ನಾರಕನಿಕರ ರುಧಿರಚ್ಛಟಾ ಅಚ್ಛಾರುಣಿಸಲಿಲ ಹರಿಕಾನಿಕರಕರಾಳೆಯುಂ: **ಆದಿಪು**, ೫. ೮೭ ವ)

ಕ್ರಮ – [ನಾ] ಸ್ವಭಾವ (ಹಿಮಕರಂ ಆತ್ಮಶಶೀತರುಚಿಯಂ ದಿನನಾಯಕಂ ಉಷ್ಣದೀಧಿತಿಕ್ರಮಮಂ ಅಗಾಧವಾರಿಧಿಯೆ ಗುಣ್ಪಂ ಇಳಾವಧು ತನ್ನ ತಿಣ್ಪಂ ಉತ್ತಮಕುಲಶೈಲಮುನ್ನತಿಯನೇಳಿದಮಾಗೆ ಬಿಸುಟೀಪ್ಪಿಡಂ ವಿಸುಟೀಮ: **ಪಂಪಭಾ,** ೧. ೮೩); [ನಾ] ಪಾದ (ನಿಮ್ಮೀ ಕ್ರಮಕಮಲಕ್ಕೆ ಎಱಗದೆ ವಕ್ರಿಸಿ ಭೂಚಕ್ರದೊಳಗೆ ಬಾಳ್ವರುಂ ಒಳರೇ: **ಪಂಪಭಾ**, ೧೧. ೩೦); [ನಾ] ಪಾರಂಪರ್ಯದ ರಾಜ್ಯ (ಕ್ರಮಮಂ ಕೆಯ್ಕೊಳಲೆಂದು ಪುಟ್ಟಿ ರಣದೊಳ್ ಸಾವನ್ನೆಗಂ ಮಾಣ್ದೊಡೆ ಅಕ್ರಮಮಕ್ಕುಂ ಕ್ರಮಮಕ್ಕುಮೇ: **ಪಂಪಭಾ** ೧೧. ೯೨); [ನಾ] ಹಿರಿತನದ ಶ್ರೇಣಿ (ಕ್ರಮಮಂ ಕೆಯ್ಕೊಳಲೆಂದು ಪುಟ್ಟಿದೀ ರಣದೊಳ್ ಸಾವನ್ನೆಗಂ ಮಾಣ್ದೊಡೆ ಅಕ್ರಮಮಕ್ಕುಂ: **ಪಂಪಭಾ**, ೧೧. ೯೨); [ನಾ] ಪಾದಸೇವೆ (ಆಂ ವಿಕ್ರಮದಾತನೆಂ ಕ್ರಮದ ಮಾತಂತಿರ್ಕೆ ಮಾಣ್ದಿರ್ದೊಡೆ ಆಂ ಕ್ರಮಕೆಂದಿರ್ದೆನೆ: **ಪಂಪಭಾ**, ೧೧.

೯೨); [ನಾ] ರೀತಿ (ಅನುಪಮವಿಕ್ರಮಕ್ರಮಂ ಉದಾರಗುಣಂ ಋತವಾಕ್ಯಂ ಎಂಬ ಪೆಂಪೆನಲಿವು ಮೂಱ್ ನಾಲ್ಕೆ ಗುಣಂ: **ಪಂಪಭಾ,** ೧೨. ೯೩)

ಕ್ರಮಕಮಳ – [ನಾ] ಪಾದಕಮಲ (ಭವತ್ ಕ್ರಮಕಮಳ ಸೇವೆಯಿಂದೆಂತುಂ ಅನಂತಂ ಗೀತವಾದಿತಂ ಫಲಮಲ್ತೇ: **ಆದಿಪು,** ೯. ೧೧)

ಕ್ರಮ ಕ್ರಮಾರ್ಹ – [ನಾ] ಕ್ರಮವಾಗಿ ಬರುವ ಹಕ್ಕುದಾರಿಕೆಗೆ ಅರ್ಹ (ಗಾಂಗೇಯಂ ದೊರೆಯ ಪಿರಿಯ ಮಗಂ ಕ್ರಮ ಕ್ರಮಾರ್ಹನುಮಿರ್ದು ಅಂತೆನ್ನ ಮಗಳಂ ಕುಡೆವು: **ಪಂಪಭಾ,** ೧, ೭೦ ವ)

ಕ್ರಮುಕ – [ನಾ] ಅಡಿಕೆ (ತಾಂಬೂಲಲತಿಕಾಲಂಬಕ್ರಮುಕಮುಂ ಆಕಂಪಿತ ಮಧುಕರನಿಕರಾನುಕಾರಿ ಲತಾಗೃಹ ಪ್ರದೀಪಚಂಪಕಮುಂ: **ಆದಿಪು,** ೧೩. ೩ ವ)

ಕ್ರಿಯಾಮಂತ್ರ – [ನಾ] [ಜೈನ] ಐದು ಬಗೆಯ ಮಂತ್ರಗಳಲ್ಲಿ ಒಂದು (ಕ್ರಿಯಾಮಂತ್ರಂಗಳಿಂದಂ ಆತ್ಮಸಮಾನ ಶ್ರಾವಕಾಗ್ರಣಿಗಳ್ಗೆ ಕನ್ಯಾ ಭೂಮಿ ಸುವರ್ಣ ಹಸ್ತಿ ಅಶ್ವ ರಥ ರತ್ನಾದಿಗಳಂ ಕುಡುವ ಸಮದತ್ತಿಯುಂ: **ಆದಿಪು,** ೧೫. ೧೩ ವ)

ಕ್ರೀಡಾನುಶೀಲೆ – [ನಾ] ಆಟದಲ್ಲಿ ಆಸಕ್ತಳಾದವಳು (ಅಂತು ಬಂದ ಬಸಂತದೊಳ್ ಮಾದ್ರಿ ತಾಂ ಗರ್ವವ್ಯಾಲೆಯುಂ ಕ್ರೀಡಾನುಶೀಲೆಯುಂ ಅಪ್ಪುದಱಿಂ ವನಕ್ರೀಡಾನಿಮಿತ್ತದಿಂ ಪೋಗಿ: **ಪಂಪಭಾ,** ೨. ೧೫ ವ)

ಕ್ರೀಡಾಗೋಳಕ – [ನಾ] ಆಟದ ಚೆಂಡು (ಕನಕಕಳಶ ಯುಗಳಮುಮಂ ಪೌರ್ಣಮಾಸೀಸುಂದರಿಯ ಸಿಂದೂರಾರುಣ ಕ್ರೀಡಾಗೋಳಕಂಗಳುಮಂ ಪೋಲ್ತು: **ಆದಿಪು,** ೬. ೫೧ ವ)

ಕ್ರೀಡಾಚಳ – [ನಾ] ಆಟಕ್ಕಾಗಿ ಮಾಡಿದ ಬೆಟ್ಟ (ನಿಸರ್ಗಸಂದರ ಕ್ರೀಡಾಚಳಕೇಳಿಸಮಭಿರಾಮಮುಮಾಗಿ: **ಆದಿಪು,** ೧೦. ೨೫ ವ)

ಕ್ರೀಡಾರಸ – [ನಾ] ಆಟದಿಂದಾಗುವ ಸಂತೋಷ (ಪರಿಜನಮುಂ ಪುರಜನಮುಂ ಒಸಗೆ ಮರುಳ್ಗೊಂಡು ನಿರ್ಭರ ಕ್ರೀಡಾರಸಪರವಶರಾದರ್: **ಆದಿಪು,** ೭. ೧೧೧ ವ)

ಕ್ರೇಂಕಾರ – [ನಾ] ಹಂಸಪಕ್ಷಿಗಳ ಕೂಗು (ಪರಿಪಠನ ನಟನ ಮೃದುಕೂಜಿತ ರಸಿತ ದರಹಸಿತ ಕ್ರೇಂಕಾರ ಆರೋಹಣಾದಿ ಯೋಧನಾದಿ ನಾನಾ ವಿನೋದಂಗಳೊಳ್: **ಆದಿಪು,** ೮. ೩ ವ)

ಕ್ರೋಡೀಕೃತ – [ಗು] ಒಟ್ಟುಗೂಡಿಸಿದ, ತುಂಬಿಹೋದ (ವಿಯನ್ ಮಧ್ಯಸ್ಥಂ ಅಂತಸ್ಥಂ ಕರ್ಮವಶಭ್ರಾಮ್ಯದನೇಕ ಜೀವನಿವಹ ಕ್ರೋಡೀಕೃತಾಭ್ಯಂತರಂ: **ಆದಿಪು,** ೧. ೪೩)

ಕ್ರೋದವ – [ನಾ] ಬರಗು (ತಿಳಾತಸೀಕುಸುಂಭಾದಿ ದೀಪ್ರೌಷಧಿಗಳುಂ ಯಾವನಾಳಕಂಗುಕೋದ್ರಾವಾದಿ ಸರ್ವೌಷಧಿಗಳುಂ: **ಆದಿಪು,** ೮. ೬೧ ವ)

ಕ್ರೋಧ – [ನಾ] ಕೋಪಾತಿರೇಕ (ಅನಂತಾನುಬಂಧಿ ಕ್ರೋಧಮಾನ ಮಾಯಾಲೋಭಂಗಳಂ ವಿಸಂಯೋಜಿಸಿ: **ಆದಿಪು,** ೧೦. ೧೪ ವ)

ಕ್ರೋಧನ – [ನಾ] ಕೋಪವುಳ್ಳವನು (ಸೌದರ್ಯಮಂ ಕಾದ ಪೆಂಪೀ ವನಧಿದ್ವೀಪಾಂತರಾಳಕ್ಷಿತಿಯೊಳೆಸೆಗುಂ ಆಕ್ಷೇಪಮಂ ಮಾಣ ನೀಂ ಕ್ರೋಧನನಾಗಲ್ ನಿನ್ನ ತಮ್ಮಂ ನಿನಗೆಱಗಂ: **ಆದಿಪು,** ೧೪. ೮೪)

ಕ್ರೋಧಾನಲ – [ನಾ] ಕೋಪವೆಂಬ ಬೆಂಕಿ (ಎಂಬುದುಂ ಸುಯೋಧನಂ ಕ್ರೋಧಾನಲ ಉದ್ದೀಪಿತಹೃದಯನಾಗಿ ಶೌರ್ಯ ಮದ ಆಡಂಬರದೊಳ್ ಅಂಬರಂಬರಂ ಸಿಡಿಲ್ದು: **ಪಂಪಭಾ,** ೯. ೪೩)

ಕ್ರೋಶ – [ನಾ] ಒಂದು ಹರದಾರಿ (ಕ್ರೋಶ ದ್ವಿಕ್ರೋಶ ಸೀಮಾಭಾಗಯೋಜನ ಪಂಚಶತಕುಟುಂಬಕುಲ ಆವಿರ್ಭಾವಿತ ಅಧಮೋತ್ತಮ ಭೇದಂಗಳುಮಂ: **ಆದಿಪು,** ೮. ೬೩ ವ)

ಕ್ರೌಂಚ – [ನಾ] ಒಂದು ಹಕ್ಕಿ, ಕೊಂಚೆ (ಶುಕ ಶಿಖಂಡಿ ಹಂಸ ಸಾರಸ ಕ್ರೌಂಚ ಕರಿ ಕಳಭ ಮಲ್ಲಾದ್ಯನೇಕ ಅನೇಕಾಕಾರ ವಿಕ್ರತಾಮರಕುಮಾರ: **ಆದಿಪು,** ೮. ೩ ವ)

ಕ್ವಣ – [ನಾ] ಆಭರಣ ಅಥವಾ ವಾದ್ಯದ ಧ್ವನಿ (ಕಳಕಂಠಗೀತಂ ಬಗೆಗೊಳೆಯುಂ ವೀಣಾಕ್ವಣಂ ಮನಂಗೊಳೆಯುಂ: **ಆದಿಪು,** ೧೧. ೨೮)

ಕ್ವಣತ್ – [ಗು] ಶಬ್ದಮಾಡುವ (ಉನ್ಮತ್ತ ಹಂಸೀಕ್ವಣನ್ನೂಪುರೆಯರ್ ಮಾಣಿಕ್ಯಕಾಂಚೀರುಚಿ ವರಾರೋಹೆಯರ್: **ಆದಿಪು,** ೮. ೫೬)

ಕ್ವಣಿತ – [ನಾ] ನಾದ, ಧ್ವನಿ (ಬಕ ಕಲಹಂಸ ಬಲಾಕ ಪ್ರಕರ ಮೃದುಕ್ವಣಿತರಮ್ಯಮಿದಿರೊಳ್ ತೋಱೆತ್ತು ಕೊಳಂ ಪರಿವಿಕಸಿತ ಕನಕ ಕಂಜಕಿಂಜಲ್ಕಪುಂಜಪಿಂಜರಿತಜಳಂ: **ಪಂಪಭಾ,** ೮. ೩೮)

ಕ್ಷತ – [ನಾ] ಗಾಯ (ಅತಿವಿಶದವಿಶಾಲೋರುಕ್ಷತದಿಂದೊಱೆದನಿತು ಜಡೆಯುಮಂ ನಾಂದಿ ಮನಃಕ್ಷತದೊಡನೆ ಎಟ್ಟರಿಸಿದುದು ಉತ್ಥಿತಂ ಆ ವಂದಸ್ರಮಿಶ್ರಗಂಧಂ ಮುನಿಯಂ: **ಪಂಪಭಾ,** ೧. ೧೦೫)

ಕ್ಷತ್ರ – [ನಾ] ಕ್ಷತ್ರಿಯ ಗುಣಗಳಾದ ಶೌರ್ಯಪ್ರತಾಪ ಮುಂತಾದವು (ಕ್ಷತ್ರಂ ತೇಜೋಗುಣಂ ಆ ಕ್ಷತ್ರಿಯರೊಳ್ ನೆಲಸಿ ನಿಂದುದು: **ಪಂಪಭಾ,** ೧. ೨೧)

ಕ್ಷತ್ರಚಕ್ರ – [ನಾ] ಕ್ಷತ್ರಿಯರ ಗುಂಪು (ಹತವೈರಿ ಕ್ಷತ್ರಚಕ್ರಂ ಭಯಚಕಿತ ಜಗದ್ವೀರಚಕ್ರಂ: **ಆದಿಪು,** ೧೪. ೩)

ಕ್ಷತ್ರತ್ರಾಣ – [ನಾ] ಪೆಟ್ಟಿನಿಂದ ರಕ್ಷಿಸಬಲ್ಲ (ತನ್ನ ಪಡೆದ ಕ್ಷತ್ರಿಯವಣಿಕ್ಶೂದ್ರರೆಂಬ ಮೂಱುವರ್ಣಂಗಳೊಳಗೆ ಕ್ಷತ್ರತ್ರಾಣಾದಿ ಗುಣೋಪೇತಮಪ್ಪ ಅಖಿಳಕ್ಷತ್ರಿಯಸಮೂಹಕ್ಕೆ ಶಸ್ತ್ರಕರ್ಮಮುಮಂ: **ಆದಿಪು,** ೮. ೬೪ ವ)

ಕ್ಷತ್ರನಂದನೆ – [ನಾ] ಕ್ಷತ್ರಿಯ ಕುಮಾರಿ (ಅಂತಾ ಜಗತ್ಪವಿತ್ರಚರಿತ್ರ ಕ್ಷತ್ರನಂದನೆಯರೊಳ್ ಆ ನಾಭಿರಾಜನಂದನಂ: **ಆದಿಪು,** ೮. ೨೩ ವ)

ಕ್ಷತ್ರವೃತ್ತಿ – [ನಾ] ಕ್ಷತ್ರಿಯನ ಕರ್ತವ್ಯ (ಆ ಮುನೀಶಂ ಮುಮುಕ್ಷುವೃತ್ತಿಯೊಳ್ ನೆರೆದಂ ಈ ಕ್ಷಿತೀಶಂ ಕ್ಷತ್ರವೃತ್ತಿಯೊಳ್ ನೆಗಟ್ದಂ: **ಆದಿಪು,** ೬. ೨೪ ವ)

ಕ್ಷತ್ರಿಯ – [ನಾ] ಆದಿದೇವನು ವಿಭಾಗ ಮಾಡಿದ ಮೂರು ವರ್ಣಗಳಲ್ಲಿ ಮೊದಲನೆಯದು (ತನ್ನ ಪಡೆದ ಕ್ಷತ್ರಿಯವಣಿಕ್ಶೂದ್ರರೆಂಬ ಮೂಱುವರ್ಣಂಗಳೊಳಗೆ ಕ್ಷತ್ರತ್ರಾಣಾದಿ ಗುಣೋಪೇತಮಪ್ಪ ಅಖಿಳಕ್ಷತ್ರಿಯಸಮೂಹಕ್ಕೆ ಶಸ್ತ್ರಕರ್ಮಮುಮಂ: **ಆದಿಪು,** ೮. ೬೪ ವ); [ನಾ]

ಚತುರ್ವರ್ಣಗಳಲ್ಲಿ ಎರಡನೆಯದು (ಕ್ಷತ್ರಂ ತೇಜೋಗುಣಂ ಆ ಕ್ಷತ್ರಿಯರೊಳ್ ನೆಲಸಿ ನಿಂದುದು: **ಪಂಪಭಾ**, ೧. ೨೧)

ಕ್ಷತ್ರಿಯಜಾತಿ – [ನಾ] ಕ್ಷತ್ರಿಯವರ್ಣ (ಕ್ಷತ್ರಿಯಜಾತಿಗೆ ಸತ್ಯ ತ್ಯಾಗ ಪ್ರಜಾಪಾಲನ ಶರಣಾಗತರಕ್ಷಣ ಪ್ರಹರಣಕ್ಷಮಾದಿ ಗುಣಾಚರಣಮುಮಂ: **ಆದಿಪು**, ೮. ೭೩ ವ)

ಕ್ಷಪಕ – [ನಾ] [ಜೈನ] [ಸಂಸಾರವನ್ನು] ಕ್ಷೀಣಗೊಳಿಸಿಕೊಳ್ಳುವವನು, ನಿವಾರಿಸಿಕೊಳ್ಳುವವನು (ಆಯುರವಸಾನದೊಳೆ ಸಂಸಾರ ಕ್ಷಪಕನಾಗಿ ಸಮಾಧಾನಪುರಸ್ಸರಂ ಸನ್ಯಸನವಿಧಿಯಿಂ ಪರಿತ್ಯಕ್ತಜೀವಿತಂ: **ಆದಿಪು**, ೨. ೧೯ ವ)

ಕ್ಷಮ – [ನಾ] ಸಮರ್ಥವಾದ (ನಿಜಪರಿರಕ್ಷಣಕ್ಷಮ ಕ್ಷಮಾವಲ್ಲಭ ಲಾಭಪ್ರಮುದಿತ ಮೇದಿನೀಹೃದಯದಂತೆ: **ಆದಿಪು**, ೭. ೩೬ ವ)

ಕ್ಷಮಾ – [ನಾ] [ಜೈನ] ಹತ್ತು ಕುಲಧರ್ಮಗಳಲ್ಲಿ ಒಂದು, ಉತ್ತಮಕ್ಷಮೆ (ಎಂಬಿನಮುತ್ತಮಕ್ಷಮಾಮಾರ್ದವಾರ್ಜವ ಸತ್ಯಶೌಚಸಂಯಮತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯ ಪರ್ಯಾಯಪರ್ಯಾಪ್ತ ದಶಧರ್ಮ್ಮಂಗಳುಮಂ ಕೈಕೊಂಡು: **ಆದಿಪು,** ೬. ೩೦ ವ)

ಕ್ಷಮಾತಳ – [ನಾ] ಭೂಮಂಡಲ (ಬಳೆದುವು ತೋಳ್ಗಳ್ ಎಕ್ಕೆಯಿಂ ಅಮಳ್ ಬಳೆವಂತಿರೆ ಮುಯ್ವುಗಳ್ ಕುಳಾಚಳಶಿಖರಂಗಳಂ ಮಸುಳೆವಂದುವು ಪರ್ವಿದ ವಕ್ಷಮೀ ಕ್ಷಮಾತಳ ಕುಳಲಕ್ಷ್ಮಿಗಾಯ್ತು ಕುಳಮಂದಿರಂ: **ಪಂಪಭಾ**, ೨. ೩೭)

ಕ್ಷಮಾಭರ – [ನಾ] ಭೂಭಾರ (ಹಿಮಾದ್ರಿವಾರಿಧಿನಿರುದ್ಧೈಕ ಆತಪತ್ರಕ್ಷಮಾಭರಮಂ ಭೂರಿಭುಜಾಗ್ರದೊಳ್ ನಿಜೆಸಿ: **ಆದಿಪು**, ೯. ೬೪)

ಕ್ಷಮಾವಲ್ಲಭ – [ನಾ] ಕ್ಷಮಾಪ, ರಾಜ (ನಿಜಪರಿರಕ್ಷಣಕ್ಷಮ ಕ್ಷಮಾವಲ್ಲಭಲಾಭ ಪ್ರಮುದಿತ ಮೇದಿನೀಹೃದಯದಂತೆ: **ಆದಿಪು**, ೭. ೩೬ ವ)

ಕ್ಷಯ – [ನಾ] ನಾಶ (ಕ್ಷಯಮಣಮಿಲ್ಲ ಕೇಳ್ದು ಕಡೆಗಂಡವಂ ಆವನುಮಿಲ್ಲ ಎನಲ್: **ಪಂಪಭಾ**, ೧.೫)

ಕ್ಷರಣೆ – [ನಾ] ಸೋರುವಿಕೆ (ಅಂತು ಕಂತುಶರಪರವಶನಾಗಿ ಧೈರ್ಯಕ್ಷರಣೆಯುಂ ಇಂದ್ರಿಯಕ್ಷರಣೆಯುಂ ಒಡನೊಡನಾಗೆ: **ಪಂಪಭಾ**, ೨. ೪೨ ವ)

ಕ್ಷಾಯಿಕಸಮ್ಯಗ್ದೃಷ್ಟಿ – [ನಾ] [ಜೈನ] ಕ್ಷಾಯಿಕಸಮ್ಯಕ್ತ್ವ, ದರ್ಶನಮೋಹನೀಯಕರ್ಮವು ಕ್ಷೀಣವಾದ ಮೇಲೆ ಉಂಟಾಗುವ ನಿರ್ಮಲಶ್ರದ್ಧೆ (ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿಯೆಂಬ ದರ್ಶನಮೋಹನೀಯತ್ರಿಕದ ನಿರ್ಮೂಲನದಿಂ ಕ್ಷಾಯಿಕಸಮ್ಯಗ್ದೃಷ್ಟಿಯಾಗಿ: **ಆದಿಪು**, ೧೦. ೧೪ ವ)

ಕ್ಷಾರವಾರಿ – [ನಾ] ಉಪ್ಪು ನೀರು (ಒಳ್ಳನುರಿವ ಪುಣ್ಗಳೊಳ್ ಕ್ಷಾರವಾರಿಗಳಂ ಎಱೆದೊರಸಿ ಕರ್ಚುವರುಂ: **ಆದಿಪು**, ೫. ೮೫ ವ)

ಕ್ಷಿತಿ – [ನಾ] ಭೂಮಿ (ದಿವ್ಯಾಪ್ಸರೋವೃಂದಂ ಈ ಕ್ಷಿತಿಗೇಂ ಇಂದ್ರನ ಶಾಪದಿಂದ ಇೞಿದುವೋ ಪೇೞೆಂಬ ಶಂಕಾಂತರಂ ಮತಿಗಂ ಪುಟ್ಟುವಿನೆಗಂ: **ಪಂಪಭಾ**, ೪. ೩೯); [ನಾ] [ಕನ್ನಡ] ಜಗತ್ತು (ಕ್ಷಿತಿಗೆ ಸಮಸ್ತಭಾರತಮುಂ ಆದಿಪುರಾಣಮುಂ ಈಗಳ್ ಒಂದು ಅಳಂಕೃತಿಯವೊಲಿರ್ದುವು: **ಪಂಪಭಾ**, ೧೪. ೬೧)

ಕ್ಷಿತಿಚಕ್ರ – [ನಾ] ಭೂಮಂಡಲ (ಹತವೈರಿಕ್ಷತ್ರಚಕ್ರಂ .. .. ವಿನಮ್ರಕ್ಷಿತಿಚಕ್ರಂ: **ಆದಿಪು,** ೧೪. ೩)

ಕ್ಷಿತಿಧರ – [ನಾ] ಭೂಮಿಗೆ ಆಧಾರವಾದದ್ದು, ಬೆಟ್ಟ (ತಮಿಸ್ರಗುಹೆಯ ವಜ್ರದ ಪಡಿ ತತ್ ಕ್ಷಿತಿಧರದೆರ್ದೆಯಂತೆ ಚಮೂಪತಿಯಿಂ ತೆಱೆದತ್ತು: **ಆದಿಪು**, ೧೪. ೫೭)

ಕ್ಷಿತಿಪ – [ನಾ] ಭೂಮಿಯ ಒಡೆಯ, ರಾಜ (ವೀರವೈರಿಕ್ಷಿತಿಪ ಗಜಘಟಾಟೋಪ ಕುಂಭಸ್ಥಳೀಭೇದನಂ ಉದಗ್ರ ಉದ್ಘ ಅಸಿ ಭಾಸ್ವತ್ ಭುಜಪರಿಘನಂ ಆರೂಢಸರ್ವಜ್ಞನಂ: **ಪಂಪಭಾ**, ೧. ೫೧)

ಕ್ಷಿತಿಪತಿ – [ನಾ] ರಾಜ (ಕ್ಷಿತಿಪತಿ ಬೇಱೆರಿಸಿ ಮಾನ್ಯರಂ ಮನ್ನಿಸೆ ತದ್ವ್ರತಹೀನರುಂ ಅಂದು ಅಖಿಳಬ್ರತಮಂ ಕೈಕೊಳ್ವ ಬಗೆಗೆ ಬಗೆಯಂ ತಂದರ್; **ಆದಿಪು**, ೧೫. ೧೩)

ಕ್ಷಿತಿರುಹ – [ನಾ] ಮರ, ವೃಕ್ಷ (ಕಲ್ಪವ್ರತತೀಸಂಯುಕ್ತ ಕಲ್ಪಕ್ಷಿತಿರುಹಮನೆ ಪೋಲ್ತಿರ್ದಂ ಆ ಕಾಂತೆಯರ್ ತಮ್ಮತಿರಾಗಂ ಪೆರ್ಚಿ ತನ್ನಿರ್ಕೆಲದೊಳಿರೆ: **ಆದಿಪು**, ೮. ೨೩)

ಕ್ಷಿತಿವಲಯ – [ನಾ] ಭೂಮಂಡಲ (ಶೈಲೇಳಾಕಲ್ಪಕಾಳಂ ಕ್ಷಿತಿವಲಯಮಿದಂ ಪಾತು ವಿಕ್ರಾಂತತುಂಗಃ: **ಪಂಪಭಾ,** ೧೪. ೨೭)

ಕ್ಷೀರ – [ನಾ] ಹಾಲು (ಘೃತ ಲವಣ ತೈಲ ಕ್ಷೀರ ದಧಿ ವ್ಯಂಜನಂಗಳೊಳ್ ಸಂಸ್ಕಾರಂ ಮಾಡುವ: **ಆದಿಪು**, ೬, ೭೭ ವ)

ಕ್ಷೀರಗೌರಕ್ಷತಜ – [ನಾ] [ಜೈನ] ಹಾಲಿನಂತೆ ಬಿಳುಪಾದ ರಕ್ತವುಳ್ಳವನು (ಅಂತು ನಿಸ್ವೇದ ನಿರ್ಮಲ ಕ್ಷೀರಗೌರಕ್ತತಜ ಸಮಚತುರಸ್ರ ಸಂಸ್ಥಾನ ವಜ್ರವೃಷಭನಾರಾಚಸಂಹನನುಂ: **ಆದಿಪು**, ೮. ೪ ವ) [ನರಸಿಂಹಶಾಸ್ತ್ರಿ ಮತ್ತು ಬಸವರಾಜು ಅವರ ಆವೃತ್ತಿಗಳಲ್ಲಿ]

ಕ್ಷೀರನೀರನ್ಯಾಯ – [ನಾ] ಹಾಲು ಮತ್ತು ನೀರು ಬೆರೆಯುವ ರೀತಿ (ಕರ್ಮದ ಜೀವನ ಕ್ಷೀರನೀರನ್ಯಾಯಸಂಬಂಧಂ ಬಂಧಮೆಂಬುದು: **ಆದಿಪು**, ೧೦. ೬೩ ವ)

ಕ್ಷೀರೋದವಾರಿ – [ನಾ] ಹಾಲುಗಡಲ ನೀರು (ಕ್ಷೀರೋದವಾರಿ ಧಾರಾಪೂರದ ಚೆಲ್ವಿಂಗೆ ಸೆಣಸುವಂತೆ: **ಆದಿಪು**, ೭. ೭೪)

ಕ್ಷುತ್ – [ನಾ] ಹಸಿವು (ಕ್ಷುತ್ಪಿಪಾಸಾಶೀತಾತಪಪ್ರಮುಖ ಪರೀಷಹಂಗಳಂ ಸೈರಿಸಲಾಱದೆ: **ಆದಿಪು**, ೯. ೮೮ ವ)

ಕ್ಷುತ – ಸೀನು (ಫಳಾಪಾಕಾಂತದೊಳ್ ಕ್ಷುತವಿಜೃಂಭಣವ್ಯಾಜದಿಂ ಲೋಕಾಂತರಿತರಾಗಿ: **ಆದಿಪು**, ೫. ೬೯ ವ)

ಕ್ಷುದ್ರವಿದ್ಯಾ – [ನಾ] ಕುವಿದ್ಯೆ, ಕೆಟ್ಟ ವಿದ್ಯೆ (ವಾಸವದುರ್ದಂತರೆಂಬರ್ ಅನೇಕಕ್ಷುದ್ರವಿದ್ಯಾಗರ್ವ ದುರ್ವಿದಗ್ಧರುಂ ಅಳೀಕವಿಚಕ್ಷಣರುಂ ಅಪ್ಪುದಱಿಂದಂ: **ಆದಿಪು**, ೩. ೮೭ ವ)

ಕ್ಷುಭಿತ – [ಗು] ಕಲಕಿದ (ಬಧಿರಿತ ಸಮಸ್ತ ದಿಕ್ತಟಂ ಅಧಿರಿತ ಸರ್ವ ಇಭ್ಯಗರ್ವಿತಂ ಕ್ಷುಭಿತಾಂಭೋಸಲಿಲಂ ಪರೆದುದು ಧುರವಿಧಾನ ಪಟುಪಟಹ ಕಹಳ ಭೇರೀರಭಸಂ: **ಪಂಪಭಾ**, ೧೨. ೧೭೧)

ಕ್ಷುಭಿತಯಾ – ಕದಡಲ್ಪಟ್ಟಿದೆಯೋ (ಪ್ರಚಂಡಲಯತಾಂಡವ ಕ್ಷುಭಿತಯಾ ಯಸ್ಯಾನಯಾ: **ಪಂಪಭಾ,** ೪. ೨೭)

ಕ್ಷೇತ್ರ – **[ನಾ]** ಜಾಗ, ಭೂಮಿ (ಸಮಸ್ತಭವ್ಯಜನನಿರ್ವರ್ತ್ಯಮಾನ ಅಷ್ಟಾಹ್ನಿಕಮುಂ ಚೈತ್ಯಾಲಯನಿರ್ಮಾಣನಿರ್ಮಾಪಣ ಶಾಸನಾರೋಪಿತ ಗ್ರಾಮಕ್ಷೇತ್ರವಿತರಣಮುಂ: : **ಆದಿಪು,** ೧೫. ೧೩ ವ); **[ನಾ]** ಮಕ್ಕಳನ್ನು ಪಡೆಯುವ ಗರ್ಭ, ಹೆಂಡತಿ (ನಿಮ್ಮ ತಮ್ಮಂ ವಿಚಿತ್ರವೀರ್ಯನ ಕ್ಷೇತ್ರದೊಳ್ ಅಂಬಿಕೆಗಮಂಬಾಲಿಕೆಗಂ ಪುತ್ರರಪ್ಪಂತು ವರಪ್ರಸಾದಮಂ ದಯೆಗೆಯ್ವುದೆನೆ ಅಂತೆಗೆಯ್ವೆನೆಂದು: **ಪಂಪಭಾ,** ೧. ೮೪ ವ)

ಕ್ಷೇಮಂಕರ – **[ನಾ]** [ಜೈನ] ಹದಿನಾಲ್ಕು ಮಂದಿ ಮನುಗಳಲ್ಲಿ ಮೂರನೆಯವನು; ಸುತ್ತಲೂ ತುಂಬಿಕೊಂಡಿದ್ದ ಪ್ರಾಣಿಸಮೂಹವು ಒಟ್ಟಿಗೇ ಹಿಂಸಿಸತೊಡಗಿದಾಗ ಭಯಗ್ರಸ್ತರಾದ ಆರ್ಯಜನರಿಗೆ ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ರೀತಿಯನ್ನು ಆ ಮಹಾತ್ಮನು ಹೇಳಿಕೊಟ್ಟದ್ದರಿಂದ ಅವನಿಗೆ ಈ ಹೆಸರು (ಎಳಸಿ ಬಳಸಿರ್ಪ ಮೃಗಸಂಕುಳಗಳಂದನಿತುಮೊಡನೆ ಕೋಳ್ಮಸಗಿದೊಡಾಕುಳರಾದಾರ್ಯ ಜನಕ್ಕವನಳವಡಿಸುವ ಬಗೆಯನಾ ಮಹಾತ್ಮಂ ಪೇೞ್ದಂ; ಅದಱಿಂದಾತನಂ ಕ್ಷೇಮಂಕರನೆಂದು ಪೆಸರನಿಟ್ಟರ್; **ಆದಿಪು.** ೬ ೫೬ ಮತ್ತು ವ)

ಕ್ಷೋಣಿ – **[ನಾ]** ನೆಲ, ಭೂಮಿ (ಬಟಿಕ್ಕಾಹವರಾಗೋತ್ಸಾಹ ಚಂಚದ್ಭಟಚಯಚರಣಾಸ್ಫಾಲಿತಂ ಕ್ಷೋಣಿಘೋಷಂ: **ಆದಿಪು,** ೧೪. ೯೩ ವ)

ಕ್ಷೋಣೀಧ್ರ – **[ನಾ]** ಪರ್ವತ, ಬೆಟ್ಟ (ಧ್ವನತ್ತೂರ್ತ್ಯಸಂತತಿ ನಾದಪ್ರತಿಪೂರಿತ ಅಖಿಳಕುಳಕ್ಷೋಣೀಧ್ರಕುಂಜಂ: **ಆದಿಪು,** ೭. ೩೮)

ಕ್ಷೋದ – **[ನಾ]** ಪುಡಿ, ಚೂರ್ಣ (ಕಾಳಾಗರುಕಾಶ್ಮೀರ ಕಸ್ತೂರಿ ಕರ್ಪೂರ ಯಕ್ಷಕರ್ದಮಕ್ಷೋದದೊಳಂ ನದೀತರಂಗಂಗಳಂ ವಿಚಿತ್ರವರ್ಣಂ ಮಾಡಿ: **ಆದಿಪು,** ೧೧. ೧೩೯ ವ); ತಿಕ್ಕಾಟ, ಉಜ್ಜುವಿಕೆ (ಪಾಠೀನಚಕ್ರಕ್ಷೋದಪ್ರಕ್ಷೋಭಿತಂ ವಾರಿಧಿಯೆ ಗಗನಮಂ ಮುಟ್ಟಿ ನಿಂದಂತೆ: **ಆದಿಪು,** ೧೪. ೯೭)

ಕ್ಷೋದನೀಯ – **[ಗು]** ನುರಿಯುವ (ಅತ್ಯಂತಕೋಮಳತಾಳುತಳ ಸಂಘಟ್ಟಮಾತ್ರ ಕ್ಷೋಧನೀಯ ಮೋದಕಮುಂ: **ಆದಿಪು,** ೧೧. ೨೬ ವ)

ಕ್ಷೋಭ – **[ನಾ]** ಅಲ್ಲಾಡುವಿಕೆ (ನಿಮಿರ್ದಲ್ಲಾಡುವ ಕಾಂತಾಕುಂತಳಂ ತುಂಗಸ್ತನಕ್ಷೋಭವಿಭ್ರಮಂ ಉತ್ಕಂಪ ದರಿದ್ರಮಧ್ಯಂ: **ಆದಿಪು,** ೮. ೭೦); ಕದಡುವಿಕೆ (ಅಂತು ಸಮುದ್ರಕ್ಷೋಭಮುಂ ತ್ರೈಲೋಕ್ಯಕ್ಷೋಭಮುಂ ಒಡನೊಡನಾಗೆ: **ಪಂಪಭಾ,** ೧೧. ೧೫೩ ವ)

ಕ್ಷೌಮದುಕೂಲ – **[ನಾ]** ನಾರುವಸ್ತ್ರ (ಅನೇಕಧಾನ್ಯಸದನಂಗಳುಂ ಕ್ಷೌಮದುಕೂಲಾದಿ ದಿವ್ಯವಸನ ವಿವಿಧ ಪ್ರಾವರಣ ವಿಶೇಷಂಗಳುಂ: **ಆದಿಪು,** ೧೫. ೩ ವ)

ಕ್ಷ್ಮಾಜ – **[ನಾ]** ಮರ (ಏಂ ಮತಮಱಿದು ಓಲಗಿಪುದೊ ದಂಪತಿಗೆಂದುಮವಾರ್ಯವೀರ್ಯತೂರ್ಯಕ್ಷ್ಮಾಜಂ: **ಆದಿಪು,** ೫. ೩೫)

ಕ್ಷ್ಮಾಪ – **[ನಾ]** ದೊರೆ (ಸಕಳಕ್ಷ್ಮಾಪಶಿರೋರತ್ನಾಂಶುವ್ಯಾಪಿತ ಚರಣಂ ಸರಸ್ವತೀಮಣಿಹಾರಂ: **ಆದಿಪು,** ೧೧. ೧)

ಕ್ಷ್ಮಾಪಾಲ – **[ನಾ]** ರಾಜ (ಶ್ರೀಪತಿಗೆ ಯುದ್ಧಮಲ್ಲ ಮಹೀಪತಿಗೆ ನೆಗೞ್ತೆ ಪುಟ್ಟೆ ಪುಟ್ಟಿದಂ ಅಖಿಳ ಕ್ಷ್ಮಾಪಾಲಮೌಳಿಮಣಿಕಿರಣ ಆಪಾಳಿತ ನಖಮಯೂಖ ರಂಜಿತಚರಣಂ: **ಪಂಪಭಾ,** ೧. ೧೮)

ಕ್ಷ್ಮಾಭೃತ್– **[ನಾ]** ರಾಜ (ಕರಕಮಳಾಂಶುಚಯಾಂಜನಗಳೊಳ್ ಅರಿಕ್ಷ್ಮಾಭೃತ್ ಜಯಶ್ರೀವಶೀಕರಣಂ ಮಾಡಿ: **ಆದಿಪು,** ೬೪)

ಕ್ಷ್ವೇಡಿತ – **[ನಾ]** ಕೂಗಾಟ (ಉದಗ್ರಕುಂಜರ ಕುಂಭಜರ್ಜರಣ ಜನಿತೋತ್ಕಂಠ ಕಂಠೀರವರವೋದ್ಭಟಭೂರವಂಗಳಪ್ಪ ಸುಭಟ ಪಟುಕ್ಷ್ವೇಡಿತಂಗಳಿಂದಂ ಸಂದಣಿಸಿ: **ಆದಿಪು,** ೧೩. ೪೨ ವ)

ಖ

ಖಂಡ – **[ನಾ]** ಗುಂಪು, ಸಮೂಹ (ನಾಗರ ಖಂಡಂಗಳಂ ಆ ನಾಗರ ಖಂಡದೊಳೆ ತೊಡರೆ ನರಂ ಇಸುವುದುಂ ನಾಗರ ಖಂಡಂಗಳುಮಂ ನಾಗರ ಖಂಡಮುಮಂ ಅಳುರ್ದುಕೊಂಡಂ ದಹನಂ: **ಪಂಪಭಾ,** ೮೯); **[ನಾ]** ಮಾಂಸಖಂಡ (ನಾಟಕಶಾಲೆಯೊಳ್ ಎಯ್ದೆ ರಕ್ತಪುಷ್ಪಾಂಜಳಿಗೆಯ್ದು ಮಾಟಿಸ್ಕೆಯವೊಲಿರ್ದುದು ಸೂಸಿದ ಖಂಡದಿಂಡೆಗಳ್: **ಪಂಪಭಾ,** ೮. ೭೮)

ಖಂಡನೀಯ – **[ಗು]** ಮುರಿಯುವ (ಅಲ್ಪದಶನಮಾತ್ರ ಖಂಡನೀಯ ಮಂಡಕಮುಮಂ: **ಆದಿಪು,** ೧೧. ೨೬ ವ)

ಖಂಡಾತ್ – [ಭರತ] ಖಂಡದಿಂದ (ಆಸೇತೋ ರಾಮಚಾಪ ಅಟನಿತಟಯುಗ ಟಂಕ ಅಂಕಿತ ಆಖಂಡಖಂಡಾತ್: **ಪಂಪಭಾ,** ೧೪. ೨೭)

ಖಚರ – **[ನಾ]** ಆಕಾಶಗಾಮಿನಿ ವಿದ್ಯೆಯನ್ನು ಬಲ್ಲ ವಿಜಯಾರ್ಧಪರ್ವತದ ವಿದ್ಯಾಧರರು (ಅಖಿಳಖಚರಪತಿಮಕುಟಮಣಿಗಣಕಿರಣ ರಾಗರಂಜಿತಚರಣನಳಿನಯುಗಳಂ: **ಆದಿಪು,** ೧. ೭೧ ವ)

ಖಡ್ಗಧೇನುಕ – **[ನಾ]** ಕಿರುಗತ್ತಿ, ಸುರಗಿ (ಗುಪ್ತಗುಲ್ಮಾಂತರಪ್ರಾಪ್ತ ಖಡ್ಗಧೇನುಕಮಾಂಧ್ರದಾನುಷ್ಕಬಳಂ: **ಆದಿಪು,** ೧೩. ೪೫ ವ)

ಖಡ್ಗರತ್ನ – **[ನಾ]** [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲಿ ಒಂದು (ಆ ನೆಗೞ್ದ ಸಮರಕಳಕಳಮಂ ಕೇಳ್ದಿದೇನೆಂದು ಭರತೇಶ್ವರಚಕ್ರವರ್ತಿ ಖಡ್ಗರತ್ನಕ್ಕೆ ಕೈಯಂ ನೀಡಿದಾಗಳ್: **ಆದಿಪು,** ೧೩. ೬೬ ವ)

ಖಡ್ಗಿ – **[ನಾ]** ಖಡ್ಗಧಾರಿ (ತುರಂಗಸೈನ್ಯಂ ಉರ್ಕುಡುಗದೆ ಬರ್ಪ ನಾಯಕಬಲಂ ರಥಸಂತತಿ ಖಡ್ಗಿವೃಂದಂ: **ಆದಿಪು,**

೪. ೯೨); **[ನಾ]** ಖಡ್ಗಮೃಗ (ಇಭಖಡ್ಗಿವ್ರಾತ ನಾನಾ ಹರಿಮಯ ಕಟಕಭ್ರಾಂಜಿತ ತುಂಗವಂಶಪ್ರಭವಂ: **ಆದಿಪು**, ೧೩. ೪೬)

ಖದಿರಗುಳಿಕಾ – **[ನಾ]** ಕಾಚಿನ ಗುಳಿಗೆ (ಮೃಗಮದಖದಿರಗುಳಿಕಾ ಬಹಳಕರ್ಪೂರಪಾಳೀಸಂಮಿಶ್ರ ತಾಂಬೂಲದ್ವಿಗುಣಿತ ವದನಾರವಿಂದಾಮೋದನುಮಾಗಿ: **ಆದಿಪು**, ೧೧. ೨೭ ವ)

ಖದ್ಯೋತ – **[ನಾ]** ಮಿಣುಕು ಹುಳು (ಸಮಸ್ತ ಉರ್ವೀಧರ ಅಶೇಷ ಶೇಷ ಮಹಾನಾಗಫಣಾಮಣಿ ದ್ಯುತಿಯನೇಂ ಖದ್ಯೋತದೊಳ್ ಕಾಣ್ಬರೇ: **ಪಂಪಭಾ**, ೫. ೭೬)

ಖರ – **[ನಾ]** ಕತ್ತೆ (ವಾನರ ವಾರಣ ಉಷ್ಟ್ರ ಖರ ಮತ್ಸ್ಯ ಕಳೇವರ ಪೂತಿಗಂಧಮೇನೇನೊಳವುಳ್ಳುವೊಂದೆಡೆಗೆ ಬಂದುಂ ಅವಂದಿರ ಮೆಯ್ಯ ಗಂಧದುದ್ದಾನಿಗೆ ವಾರದು: **ಆದಿಪು**, ೫. ೯೦); **[ಗು]** ತೀಕ್ಷ್ಣವಾದ (ಭರತನ ಮುಖದೊಳ್ ಪರ್ವಿದ ಖರಕೋಪಾನಳನನೆಯ್ದೆ ನಂದಿಸುವವೊಲ್: **ಆದಿಪು**, ೧೪. ೧೦೭); **[ಗು]** ಬಲವಾದ (ಸುಭಟಾರೂಢತುರಂಗಮ ವೇಗಬಲಪತಿತ ಖರಖುರಟಂಕ ಪರಿಸ್ಖಲನಕಳಿತ ವಿಷಮಸಮರಭೇರೀನಿಸ್ವನಮುಂ: **ಪಂಪಭಾ**, ೧೩. ೫೧ ವ)

ಖರಕರ – **[ನಾ]** ತೀಕ್ಷ್ಣಕಿರಣ[ಗಳುಳ್ಳವನು] ಸೂರ್ಯ (ಖರಕರಸಮಪ್ರಭಂ ಚಕ್ರರತ್ನಂ ಒಡವುಟ್ಟೆ ಪುಟ್ಟಿದೆರಡೊಸಗೆಯೊಳಂ: **ಆದಿಪು**, ೩. ೨೭)

ಖರಕರಬಿಂಬ – **[ನಾ]** ಸೂರ್ಯಮಂಡಲ (ಖರಕರಬಿಂಬದಿಂ ಕಿರಣಸಂತತಿಗಳ್ ಪೊಱಪೊಣ್ಮಿದಪ್ಪುವು ಎಂಬರ ನುಡಿ ಪೋಲ್ವೆವೆತ್ತುದು ಎನೆ: **ಪಂಪಭಾ**, ೧೨. ೭೩)

ಖರಕಿರಣ – **[ನಾ]** ಸೂರ್ಯ (ಖರಕಿರಣಸ್ಫುರಿತಕ್ಕಿದಿರುರಿವಂತಿರೆ ಸಾಮದಿಂದಳವಡಿಸಿ ನೋಡುವೆಂ: **ಆದಿಪು**, ೧೪. ೪೨)

ಖರತನ – **[ನಾ]** ತೀಕ್ಷ್ಣತೆ, ಉಗ್ರತೆ (ಖರಕಿರಣಂಗಳ ಕಾಯ್ಪಿನ ಖರತನದಿಂ ಚಂದ್ರಕಿರಣದುಜ್ಜಳಿಕೆಯಿಂ: **ಆದಿಪು**, ೧೧. ೭)

ಖರಪರುಷ – **[ನಾ]** ಕತ್ತೆಯ ದನಿಯಂತೆ ಕರ್ಕಶವಾದ (ಖರಪರುಷನಿನಾದರ್ ನಾರಕರ್ ಬರ್ದುತಿರ್ಪರ್: **ಆದಿಪು**, ೫. ೮೯)

ಖರಸಾಣೆಗಾಣಿಸು – **[ನಾ]** ಸಾಣೆ ಹಿಡಿ (ಮದನಾಸ್ತ್ರಂ ಖರಸಾಣೆಗಾಣಿಸಿದುದು ಎಂಬಂತಾಗೆ ನಿನ್ನೊಂದು ಕಂದಿದ ಮೆಯ್ ಎನ್ನಯ ತೋಳೊಳೊಂದೆ ಸಿರಿಯಂ ನೀನುಯ್ದು ತೊಱ್ತಾಳ್ದು ರಾಗದಿಂ ಎನ್ನೊಳ್ ಸುಕಮಿರ್ಪುದು: **ಪಂಪಭಾ**, ೮. ೬೬)

ಖರಾಂಶು – **[ನಾ]** ಖರಕರ (ಬೇಸಱ್ ಲೋಕಮಂ ತಗುಳ್ದು ಸುಟ್ಟ ಅೞಲಿಂದೆ ಖರಾಂಶು ನಾರಕಾವಾಸದೊಳ್ ಆೞ್ವವೋಲ್ ಅಪರವಾರ್ಧಿಯೊಳ್ ಆೞ್ವುದುಂ: **ಪಂಪಭಾ**, ೩. ೮೧)

ಖರ್ವಡ – **[ನಾ]** ಖರ್ವಟ, ನಗರ–ಹಳ್ಳಿಗಳ ನಡುವಣ ಸ್ಥಿತಿಯ ಮತ್ತು ಬೆಟ್ಟಗಳ ನಡುವಿರುವ ಊರು (ಉರ್ವೀಧರನಿರುದ್ಧಂಗಳಪ್ಪ ಖರ್ವಡಂಗಳುಮಂ: **ಆದಿಪು**, ೮. ೬೩ ವ)

ಖರ್ವಡನಿವಾಸಿ – **[ನಾ]** ಬೆಟ್ಟದೂರುಗಳಲ್ಲಿ ವಾಸಿಸುವವರು (ಸರ್ವಸ್ವಮುಮಂ ಕುಡದಿರಲುರ್ವೀಪತಿ ಬಂದೊಡೆ ಆಗದು ಎಂದು ಅತಿಭಕ್ತರ್ ಖರ್ವಡನಿವಾಸಿಗಳ್: **ಆದಿಪು**, ೯. ೧೨೮);

ಖರ್ವಿತ – **[ಗು]** ನೆಗ್ಗಿದ, ಅಗೆದ (ಮತ್ತ ಮಾತಂಗ ಪದನಖ ಖರ್ವಿತ ಉರ್ವೀತಳಮುಂ ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಧೃತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ**, ೧೩. ೫೧)

ಖಲೀನ – **[ನಾ]** ಕಡಿವಾಣ (ಖಣಖಣಾಯಿತ ಖಲೀನಸಂಘಟ್ಟ ಸ್ಕಂದಮಾನ ಫೇನ ಸಲಿಲಸ್ರೋತಶ್ಶತಂಗಳಿಂದಂ: **ಆದಿಪು**, ೧೪. ೯೫ ವ)

ಖಳ – **[ನಾ]** ದುಷ್ಟ, ಕೆಟ್ಟ (ನಿನಗೀ ಖಳಸಂಸೃತಿಯೆಂಬುದೊಂದು ಱಾಟಣದೊಳಗಮ್ಮ ನೀಂ ಮೊಗಪೆಯಾಗದೆ ತಾಳ್ದಪವರ್ಗಮಾರ್ಗಮಂ: **ಆದಿಪು**, ೩. ೭೧)

ಖಳಕರ್ಮಾಷ್ಟಕ – **[ನಾ]** [ಜೈನ] ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ, ಆಯುಃ, ನಾಮ, ಗೋತ್ರ, ವೇದನೀಯ ಎಂಬ ಎಂಟು ಬಗೆಯ ದುಷ್ಟಕರ್ಮಗಳು (ಖಳಕರ್ಮಾಷ್ಟಕಮಂ ಪಡಲ್ವಡಿಸಿ: **ಆದಿಪು,** ೧೬. ೫೫)

ಖಳ್ಗ – **[ನಾ]** ಖಡ್ಗ, ಕತ್ತಿ (ಒಣಗಿದುದೊಂದು ಪೆರ್ವಿದಿರ ಪೆರ್ವೊದಱಿಂ ಮೊರೆದು ಉರ್ವುವ ಆಶುಶುಕ್ಷಣಿಯವೊಲ್ ಆಂತ ಖಳ್ಗನಿವಹಕ್ಕೆ .. .. ಉರ್ಚಿಮುಕ್ಕಲುಂ ಇದೇಂ ನೆಱಿ ಕಲ್ತುವೊ: **ಪಂಪಭಾ**, ೧೧. ೯೪)

ಖಳ್ಗಿ – **[ನಾ]** ಖಡ್ಗಧಾರಿ (ಮುಳಿಸಿಂ ಮಾಱಾನಲೆಂದಿರ್ದ ಖಳ್ಗಿ ಸಮಂತೊರ್ಮೆಯೆ ನೂಂಕಲಿರ್ದ ಘಟೆ ನೋಟಕ್ಕೇನಗುರ್ವಾದುದೋ: **ಆದಿಪು**, ೧೪. ೧೦೦)

ಖಾಂಡವ – **[ನಾ]** ಕುರುಕ್ಷೇತ್ರದ ಒಂದು ವನ (ಪಾವಕನಟ್ಟಿ ಖಾಂಡವವನಮನುಂಡಪಂ ಅರ್ಜುನಂ ಊಡಿದಪ್ಪಂ ಐರಾವತವಾಹನಂ ನೆಱಿದು ಸಾಧನಸಂಯುತನಾಂಪಂ: **ಪಂಪಭಾ**, ೫. ೭೮)

ಖಾತ್ವಾಸಮೀಕರಣ – **[ನಾ]** 'ಅಗೆದು ಮುಚ್ಚುವುದು', ನಿರರ್ಥಕತೆಯನ್ನು ಸೂಚಿಸುವ ಒಂದು ಲೌಕಿಕನ್ಯಾಯ (ತಲೆಗೋದಿರ್ದುಂ ಬೞಿಕ್ಕೆಂತುಮೀ ಈ ಧರಣೀಭಾರಮನಾಂ ಬಿಸುಟಿಲ್ದೊಡದು ಚಿಃ ಲೋಕಕ್ಕೆ ಖಾತ್ವಾಸಮೀಕರಣಂ: **ಆದಿಪು**, ೪. ೮೧)

ಖುರ – **[ನಾ]** ಗೊರಸು (ಕುದುರೆಯ ಖುರಂಗಳನಿಸಾಱದೆಯುಂ ಚಕ್ರಂಗಳರ್ದು ಬಾರದೆಯುಂ ಚಕ್ರದ ಚೀತ್ಕಾರರವಂ ಕುಂದದೆಯುಂ ರಥಮಿಂತು ಪರಿದುದು ಅಂಭೋನಿಧಿಯೊಳ್: **ಆದಿಪು**, ೧೨. ೮೨)

ಖೇಚರ – **[ನಾ]** ಒಂದು ದೇವತಾವರ್ಗ (ವಿಯತ್ತಳದೊಳ್ ಅನೇಕ ಕಿಂಪುರುಷಕಿನ್ನರ ಖೇಚರ ಸಿದ್ಧಬೃಂದಂ ಅವ್ವಳಿಸಿರೆ: **ಪಂಪಭಾ**, ೩. ೫೩)

ಖೇಚರಿ – **[ನಾ]** ದೇವತಾ ಸ್ತ್ರೀ (ಖೇಚರಿಯೋ ಭೂಚರಿಯೋ ನಿಶಾಚರಿಯೋ ರೂಪು ಬಣ್ಣಿಸಲ್ಕೆ ಆರ್ಗಂ ಅವಾಗ್ಗೋಚರಂ ಈ ಕಾನನಮುಂ ಅಗೋಚರಂ ಇವಳ್ ಇಲ್ಲಿಗೇಕೆ ಬಂದಳೊ ಪೇೞಿಂ: **ಪಂಪಭಾ**, ೩. ೧೪)

ಖೇಟಕ – [ನಾ] ಖೇಟ, ಗುರಾಣಿ (ಎರಟಿಗ್ಗೊಡೆ ಮಿಸುಪ್ಪ ಅಸಿ ಖೇಟಕಂ ಇಂತಿವು ಒಂದುಗುಂದದೆ ನಿಲೆ ನೋಟ್ಟಿ ನೋಟಕರ್ಗೆ ಸೌಮ್ಯಭಯಂಕರನಾದಂ ಅರ್ಜುನಂ: **ಪಂಪಭಾ**, ೭. ೭೯)

ಖೇಡ – [ನಾ] ಒಂದು ಬಗೆಯ ಊರು, ನದಿ ಬೆಟ್ಟ ಕಾಡುಗಳಿರುವಂಥದು (ಸರಿತ್ ಗಿರಿ ದರಿ ಭೂರುಹ ಸೇತು ವನ ಸೀಮೋಪಲಕ್ಷಿತಂಗಳಪ್ಪ ಖೇಡಂಗಳುಮಂ: **ಆದಿಪು**, ೮. ೬೩ ವ)

ಗ

ಗಂಗಾಂಗನೆ – [ನಾ] ಗಂಗಾದೇವಿ (ಅಂದು ಭೋಂಕನೆ ಕಂಡಂ ಗಂಗಾಂಗನೆಯಂ ಕಾಣ್ಬವೊಲ್ ಅಂಗನೃಪಂ ಮುಂದೆ ನಿಂದ ಕೊಂತಿಯನಾಗಳ್: **ಪಂಪಭಾ**, ೯. ೭೩)

ಗಂಗಾಜಾತ – [ನಾ] ಭೀಷ್ಮ (ಶ್ವೇತನ ಗಂಗಾಜಾತನ ಮಾತನೆ ಪಾರ್ದು ಎರಡು ಒಡ್ಡಣಂ ಕಾದಲ್ಕೆಂದೀ ತೆಱದಿನೊಡ್ಡಿ ನಿಂದುವು ಭೂತಳಮಳ್ಳಾಡೆ ಕೆಸಱ ಕಡಿತದ ತೆಱದಿಂ: **ಪಂಪಭಾ**, ೧೦. ೫೩)

ಗಂಗಾತ್ಮಜನ್ಮ – [ನಾ] ಗಂಗೆಯ ಮಗ, ಭೀಷ್ಮ (ಭುಜ ವೀರ್ಯ ವಿಕ್ರಮಯುತಂ ಗಂಗಾತ್ಮಜನ್ಮಂ ಜಯಶ್ರೀಲೋಲಂ ಜಮದಗ್ನಿ ರಾಮಮುನಿಯೊಳ್ ಕಲ್ತಂ ಧನುರ್ವಿದ್ಯೆಯಂ: **ಪಂಪಭಾ**, ೧. ೬೮)

ಗಂಗಾವಾರಿ – [ನಾ] ಗಂಗೆಯ ನೀರು (ಅಂತು ಚಾಗಂಗೆಯ್ದು ಜಗನ್ಮಂಗಳಗಂಗಾವಾರಿಯೊಳ್ ಅನಿವಾರಿತಪರಾಕ್ರಮಂ ಅಘಮರ್ಷಣಪೂರ್ವಕಂ ಮಿಂದು: **ಪಂಪಭಾ**, ೯. ೭೨ ವ)

ಗಂಗಾಸುತ – [ನಾ] ಗಂಗೆಯ ಮಗ, ಭೀಷ್ಮ (ಆರೂಢ ಸಮರರಸನುಂ ಉಪಾರೂಢಕನಕರಥನುಂ ಆಗಿ ಕೈಲಾಸವಾಸಿಗೆ ಪೊಡೆವಟ್ಟು ಬಿಲ್ಲಂ ಕೊಂಡು ಗಂಗಾಸುತಂಗೆ ಅದಿರದೆ ಇದಿರ್ಚಿ ನಿಂದಾಗಳ್: **ಪಂಪಭಾ**, ೧೦. ೫೨ ವ)

ಗಂಗೆಗಟ್ಟು – [ಕ್ರಿ] [ಗಂಗೆಗೆ+ಅಟ್ಟು] ವಿಸರ್ಜನೆಮಾಡಲು ಗಂಗಾನದಿಗೆ ಕಳಿಸು (ನಟ್ಟುಡಿದ ಬಾಳ ಕಕ್ಕಕಡೆಯುಡಿಗಳುಮಂ ಅಯಸ್ಕಾಂತಮಂ ತೋಱಿ ತೆಗೆಯಿಸುತ್ತುಂ ವಜ್ರಮುಷ್ಟಿಯ ಪೊಯ್ಲೊಳಂ ಬಾಳ ಕೋಳೊಳಮುಚ್ಚಳಿಸಿದ ಕಪಾಲದೋಡುಗಳಂ ಗಂಗೆಗಟ್ಟುತ್ತುಂ: **ಪಂಪಭಾ**, ೧೧. ೨ ವ)

ಗಂಗೆಯ ಪೆರ್ಮಗ – [ನಾ] ಭೀಷ್ಮ (ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗೆ ಅಸಾಧ್ಯನೊಳ್ ಆ ಗಾಂಡಿವಿಯೊಳ್ ಕಱುತ್ತಿಜೆವರಾರ್: **ಪಂಪಭಾ**, ೧೩. ೯)

ಗಂಟು – [ನಾ] [ಗ್ರಂಥಿ] ಕಬ್ಬು, ಬಿದಿರು ಮುಂತಾದವುಗಳ ಗೆಣ್ಣು (ಬಿದಿರ ಗಂಟುಗಳಂ ಕಳೆವಂತೆ ಮನ್ಮನಃಸ್ಥಲನೆಯಂ ಉಂಟುಮಾಡುಗುಂ: **ಪಂಪಭಾ**, ೧೨. ೧೦೩); [ನಾ] ಕಟ್ಟಿದುದು (ಪರಾಕ್ರಮಧವಳನ ಶರಪರಿಣತಿಯಂ ಕಂಡು ದುರ್ಯೋಧನನ ಮೊಗಂ ತಲೆನವಿರ ಗಂಟಿಂ ಕಿಱಿದಾಗೆ: **ಪಂಪಭಾ**, ೨. ೭೭ ವ)

ಗಂಟೆ – [ಘಂಟಾ] ಶಬ್ದ ಉಂಟುಮಾಡುವ ಸಾಧನ (ಗಗನಗಜಕ್ಕಿಕ್ಕಿದ ಪೊನ್ನ ಗಂಟೆಯೆರಡೆನಲು: **ಆದಿಪು**, ೬. ೫೨)

ಗಂಡ – [ನಾ] ಗಂಡುಸು (ಕುಲಮುಂ ಚಲಮುಂ ದೊರೆಯುಂ ಕಿಡೆ ಬಾಟ್ವಿಂ ಗಂಡರೂಪಿನೊಳ್ ಗಂಡನಲ್ತು ಪೆಂಡತಿಯೆ ವಲಂ: **ಆದಿಪು**, ೧೨. ೯೬); [ನಾ] ಆನೆಯ ಕುಂಭಸ್ಥಳ (ಮಾದ್ಯತ್ ಗಜ ಗಂಡಕಷಣಪ್ರೋದ್ಭೇದದಿಂ ಸಾರ್ದು ಬಂದು ಇದಿರೊಳ್ ಕೂಡುವುದಿಲ್ಲಿ ಚಂದನರಸಂ ಕೆಂಬೊನ್ನ ಟಂಕಂಗಳೊಳ್: **ಪಂಪಭಾ**, ೪. ೨೨); [ನಾ] ಶೂರ (ಶ್ರೀಯುವತಿಯಂ ಆ ವೀರಶ್ರೀಯುವತಿಗೆ ಸವತಿ ಮಾಟ್ಪೆನೆಂದು ಅರಿನೃಪರಂ ಉಳ್ಳಾಯವೆರಸು ಎಟೆದುಕೊಂಡು ಧರಾಯುವತಿಗೆ ನೆಗಟ್ದಿ ಹರಿಗನೊರ್ವನೆ ಗಂಡಂ: **ಪಂಪಭಾ**, ೧೧. ೧)

ಗಂಡಗುಣ – [ನಾ] ಪರಾಕ್ರಮದ ಗುಣ (ಎನಿತಳವುಳ್ಳೊಡಂ ದ್ವಿಜನ ಗಂಡಗುಣಕ್ಕೆ ಅಗಿವನ್ನರಾರೊ: **ಪಂಪಭಾ**, ೧೨. ೪೧)

ಗಂಡಗರ್ವ – [ನಾ] ಪೌರುಷದ ಹೆಮ್ಮೆ (ತ್ರಿಣೇತ್ರನೊಳ್ ಕಾದಿ ಪಾಶುಪತಾಸ್ತ್ರಮಂ ಪಡೆದ ಕದನತ್ರಿಣೇತ್ರನ ಗಂಡಗರ್ವಮುಮಂ: **ಪಂಪಭಾ**, ೯. ೫೨ ವ)

ಗಂಡಗಾಡಿ – [ನಾ] ಪೌರುಷದ ಸೊಬಗು (ಪಡೆಮೆಚ್ಚೆ ಗಂಡನ ಗಂಡಗಾಡಿಯಂ ಕಂಡು ಫಣೀಂದ್ರನ ಕನ್ನೆ ಕನಕಲತೆಯೆಂಬ ನಾಗಕನ್ನೆ ಕಣ್ಬೇಟಗೊಂಡು: **ಪಂಪಭಾ**, ೪. ೧೫ ವ)

ಗಂಡಭಿತ್ತಿ – [ನಾ] ಕೆನ್ನೆಯೆಂಬ ಗೋಡೆ (ಮಾದ್ಯತ್ ಗಜಗಂಡಭಿತ್ತಿ ಕಷಣ ಪ್ರೋದ್ಭೇದದಿಂ ಸಾರ್ದು ಬಂದು ಇದಿರೊಳ್ ಕೂಡುವುದಿಲ್ಲಿ ಚಂದನರಸಂ ಕೆಂಬೊನ್ನ ಟಂಕಂಗಳೊಳ್: **ಪಂಪಭಾ**, ೪. ೨೨)

ಗಂಡಮಚ್ಚರ – [ನಾ] ಪರಾಕ್ರಮಿಯ ಅಸೂಯೆ (ಅಂತು ಮುಳಿಸಿನ ಮೋಪಿನ ಗಂಡಮಚ್ಚರದ ಮೆಚ್ಚುವಣಿಗೆಯ ಅಂಕಕಾಱರ್ ಎಕ್ಕತುಳಕ್ಕೆ ಎಕ್ಕೆಯಿಂ ಸೂಟೆಱಿಱಿವಂತೆ ಒರ್ವರ್ ಒರ್ವರೊಳ್ ಕಾದೆ: **ಪಂಪಭಾ**, ೧೨. ೭೬ ವ)

ಗಂಡರೂಪು – [ನಾ] ಗಂಡಸಿನ ಆಕೃತಿ, ಗಂಡಿನ ವೇಷ (ಕುಲುಂ ಚಲಮುಂ ದೊರೆಯುಂ ಕಿಡೆ ಬಾಟ್ವಿಂ ಗಂಡರೂಪಿನೊಳ್ ಗಂಡನಲ್ತು ಪೆಂಡತಿಯೆ ವಲಂ: **ಆದಿಪು**, ೧೨. ೯೬);

ಗಂಡವಳ್ತಿ – [ನಾ] ಗಂಡುಬೀರಿ (ವಿವಿಧಗಂಧಂಗಳಂ ಆಂ ಅವಯವದೊಳ್ ಮಾಡುವ ಘಟ್ಟಿವಳ್ತಿಯೆಂ ದೇವಿ ಗಂಡವಳ್ತಿಯೆಂ ಅಲ್ಲೆಂ: **ಪಂಪಭಾ**, ೮. ೫೬)

ಗಂಡವಾತು – [ನಾ] ಶೌರ್ಯದ ಮಾತು (ನಿನಗಪ್ಪುದು ಈ ಅಟೆನುಡಿ ಬರ್ಕೆ ನಿನ್ನ ಪಿರಿಯಣ್ಣನೆ ಪಣ್ಣನೆ ನೋಟ್ಪಿಂ ಆತನ ಒಡ್ಡಟೆಯದ ಗಂಡವಾತಂ: **ಪಂಪಭಾ**, ೩. ೧೬)

ಗಂಡಶೈಳ – [ನಾ] ಕಲ್ಗುಂಡು (ಗಂಡಶೈಳಾಭೀಳ ಶಿಳಾಯಂತ್ರ ಭಯಂಕರಂಗಳುಂ ಪ್ರಳಯಕಾಳಾನಳವರ್ಷಶಂಕಾಕಾರಿ ಹುತವಹವರ್ಷಾಗ್ನಿಯಂತ್ರಭಯಾನಕಂಗಳುಂ: **ಆದಿಪು**, ೧೩. ೫೭ ವ)

ಗಂಡಸ್ಥ – [ನಾ] ದವಡೆ, ಕಪೋಲ ಪ್ರದೇಶ (ದಿವ್ಯಸಂಭವಂಗಳಪ್ಪ ಶ್ವೇತಾಶ್ವಂಗಳೊಳ್ ಪೂಡಿದ ದಿವ್ಯರಥಮುಮಂ ದಧೀಚಿಗಂಡಸ್ಥಮಪ್ಪ ಗಾಂಡೀವಮೆಂಬ ಬಿಲ್ಲುಮಂ .. .. ಕೆಯ್ಕೊಂಡು: **ಪಂಪಭಾ,** ೫. ೭೭ ವ)

ಗಂಡಸ್ಥಳ – [ನಾ] ಕಪೋಲಸ್ಥಳ (ಮೃಗಮದಕರ್ದಮಸಂಪಾದಿತ ಮದಲೇಖಾಮಂಡಿತ ಗಂಡಸ್ಥಳನುಂ: **ಆದಿಪು,** ೮. ೪೧ ವ)

ಗಂಡು – [ನಾ] ಪೌರುಷ (ಭೋಂಕನೆ ಎರ್ದೆ ತೆಱೆಯಲ್ ಹಾ ಮಗನೇ ಎಂದು ಅಶ್ರುಜಲಾರ್ದ್ರಗಂಡಂ ಆ ಗಂಡಿನೊಡನೆ ಬಿಸುಟಂ ಬಿಲ್ಲಂ: **ಪಂಪಭಾ,** ೧೨. ೨೮); [ನಾ] ಧೈರ್ಯ (ಚಲದೊಳ್ ದುರ್ಯೋಧನಂ ನನ್ನಿಯೊಳ್ ಇನತನಯಂ ಗಂಡಿನೊಳ್ ಭೀಮಸೇನಂ ಬಲದೊಳ್ ಮದ್ರೇಶಂ: **ಪಂಪಭಾ,** ೧೪. ೬೪)

ಗಂಡುಗೆಡು – [ಕ್ರಿ] ಧೈರ್ಯಗುಂದು (ಬಿಡೆ ಪಿಣಿಲಂ ಕುರುಧ್ವಜಿನಿ ತೊಟ್ಟನೆ ಬಾಯನೆ ಬಿಟ್ಟುದು ಅಂದು ಗಂಡುಡೆಯುಡೆ ಗಂಡುಗೆಟ್ಟುದು: **ಪಂಪಭಾ,** ೮. ೧೦೧)

ಗಂಡೂಷ – [ನಾ] ಬಾಯಿ ಮುಕ್ಕುಳಿಸುವಿಕೆ (ವಿರಹಿಜನ ನಿಚಯ ನಿಚಿತ ಮಾನಸ ಉನ್ಮತ್ತ ಕಾಮಿನೀ ಗಂಡೂಷ ಸೀಧು ಸೇಕ ಪುಳಕಿತ: **ಪಂಪಭಾ,** ೫. ೧೦ ವ)

ಗಂಧ – [ನಾ] ವಾಸನೆ (ಅಂತು ಪರಮಾತಿಶಯ ರೂಪ ರಸ ಗಂಧ ಸ್ಪರ್ಶ ಗುಣವತ್ ಪರಮಾಣುಪರಿನಿರ್ವೃತ ಮೂರ್ತಿಯಪ್ಪ ಪರಮನ: **ಆದಿಪು,** ೮. ೬ ವ); [ನಾ] ಪರಿಮಳ (ವಿವಿಧಗಂಧಂಗಳಂ ಆಂ ಅವಯವದೊಳ್ ಮಾಡುವ ಘಟ್ಟವಳ್ತಿಯೆಂ ದೇವಿ ಗಂಡವಳ್ತಿಯೆಂ ಅಲ್ಲೆಂ: **ಪಂಪಭಾ,** ೮. ೫೬)

ಗಂಧಕುಟಿ – [ನಾ] [ಜೈನ] ಶ್ರೀಗಂಧದ ಕುಟೀರ, ಸಮವಸರಣದಲ್ಲಿ ಅರ್ಹಂತನು ಕುಳಿತುಕೊಳ್ಳುವ ಮಂಟಪ (ಜಿನತನುಗಂಧಮೆ ಗೆಲ್ದಿರೆ ನಿರ್ಭರಗಂಧಂ ಗಂಧಕುಟಿ ಕರಂ ಸೊಗಯಿಸುಗುಂ: **ಆದಿಪು,** ೧೦. ೩೭)

ಗಂಧಗಜ – [ನಾ] ಮದೋದಕವನ್ನು ಸುರಿಸುವ ಆನೆ (ತಪೋವನಮಂ ಗಂಧಗಜಂ ವನಂಬುಗುವವೊಲ್ ಪೊಕ್ಕು: **ಆದಿಪು,** ೮. ೭)

ಗಂಧತೋಯ – [ನಾ] ಪರಿಮಳಯುಕ್ತ ನೀರು (ದೇವೇಂದ್ರಲೋಕಕ್ಕಂ ಅತ್ಯಾದರಮಂ ಮಾಡುತ್ತುಂ ಏನಾಜೆಸಿದುದೊ ದಿವಿಜವ್ರಾತಮಂ ಗಂಧತೋಯಂ: **ಆದಿಪು,** ೭. ೧೦೨)

ಗಂಧರ್ವ ವಿವಾಹ – [ನಾ] ಗಂಡು ಹೆಣ್ಣು ಪರಸ್ಪರ ಒಪ್ಪಿಗೆಯಿಂದ ಮಾಡಿಕೊಳ್ಳುವ ಮದುವೆ (ಈಕೆಯಂ ಕೆಯ್ಕೊಳ್ವುದೆ ಕಜ್ಜಂ ಎಂದು ಆಕೆಗಂ ಭೀಮಸೇನಂಗಂ ಗಂಧರ್ವ ವಿವಾಹಂ ಮಾಡಿದೊಡೆ: **ಪಂಪಭಾ,** ೩. ೧೮ ವ)

ಗಂಧಲಂಪಟತೆ – [ನಾ] ಸುಗಂಧದಲ್ಲಿ ಅತಿ ಆಸಕ್ತಿ (ರಟತ್ ಅಳಿಸಂದೋಹಂ ಎಂತೆಱಗುಗುಂ ದಳಿತಾಂಬುರುಹಕ್ಕೆ ಗಂಧಲಂಪಟತೆಯಿಂ: **ಆದಿಪು,** ೩. ೯೦)

ಗಂಧವಹ – [ನಾ] ಗಾಳಿ (ಮೃಗಮದದ ಅಗರುವ ಕಪ್ಪುರದ ಕಂಪುಮಂ ಸೂಡಿದ ಬಾಸಿಗದ ಪೊಸಗಂಪಂನಿಂಬಾಗೊಗೆದಿರೆ ಮಾಡಿದುದು ಚಮರರುಹಗಂಧವಹಂ: **ಪಂಪಭಾ,** ೧೪. ೨೫)

ಗಂಧವಾರಿ – [ನಾ] ಶ್ರೀಗಂಧದ ಪರಿಮಳದ ನೀರು (ಸಾಂದಿನೊಳ್ ಕತ್ತುರಿಯೊಂದು ಕೋಟಿಗ್ಗಿಸಱಿಂಳ್ ಓಕುಳಿ ಚಂದನ ಗಂಧವಾರಿಯೊಳ್ **ಪಂಪಭಾ,** ೧೪. ೨೦)

ಗಂಧವಾಹ – [ನಾ] ಗಾಳಿ ಗಂಧವಹ (ಆಮೋದದಿಂ ಎತ್ತಂ ಗಂಧವಾಹಂ ಮಗಮಗಿಸೆ ಬೆಡಂಗೀ ನಗೇಂದ್ರೋಪಕಂಠಂ: **ಆದಿಪು,** ೧೩. ೬೮)

ಗಂಧಶಾಳಿ – [ನಾ] ಸುಗಂಧಯುಕ್ತ ಬತ್ತ, ಕಮ್ಮಗಡಲೆ ಬತ್ತ (ದೇವಮಾತೃಕಮೆನಿಪ್ಪ ಪೊಲಂ ನವಗಂಧಶಾಳಿಯಿಂ ಬೆಳೆವುದು ರಮ್ಯ ನಂದನ ವನಾಳಿ ವಿಯೋಗಿಜನಕ್ಕೆ ಬೇಟಮಂ ಬಳೆವುದು: **ಪಂಪಭಾ,** ೧. ೫೪)

ಗಂಧಶಾಳಿವನ – [ನಾ] ಗಂಧಶಾಲಿಯ ಗದ್ದೆ (ಪೊಂಬಣ್ಣದ ಕೆಂಪಿಡಿದಿರೆ ಸೊಗಯಿಪುವು ಗಂಧಶಾಳಿವನಂಗಳ್: **ಆದಿಪು,** ೧. ೬೦)

ಗಂಧಸಿಂಧುರ – [ನಾ] ಗಂಧಗಜ (ವಜ್ರದಂತ ಚಕ್ರವರ್ತಿ ಆ ಸಾಮಂತಾಂತಃಪುರ ಪರಿಮಿತಪರಿವಾರಪರಿವೃತನುಂ ಬಂಧುರ ಗಂಧಸಿಂಧುರಾರೂಢನುಂ ಆಗಿ: **ಆದಿಪು,** ೪. ೨೩ ವ)

ಗಂಧಾಂಧ – [ಗು] ಸುಗಂಧದಿಂದ ಸೊಕ್ಕಿದ (ಶಾಳಿವನಗಧಾಂಧ ದ್ವಿರೇಫಾಳಿ ಕಣ್ಗೊಳಿಸಿತ್ತೊರ್ಮೆಯೆ ಬಂದುದಂದು ಶರದಂ: **ಪಂಪಭಾ,** ೭. ೭೧)

ಗಂಧೇಭ – [ನಾ] ಮದ್ದಾನೆ (ರಿಪುಜನದ ಪೆರ್ಚಿಗಂ ಪರಾಂಗನಾಜನದ ಮೆಚ್ಚಿಂಗಂ ಮೂಗಿಜೆವಂತೆ ಸೊಗಯಿಸುವ ಗಂಧೇಭವಿದ್ಯಾಧರನ ಮೂಗು: **ಪಂಪಭಾ,** ೨. ೩೯ ವ)

ಗಂಧೋದಕ – [ನಾ] ಸುಗಂಧದ ನೀರು, ಪನ್ನೀರು (ಘೃತ ಕ್ಷೀರ ದಧಿ ನಾಳೀಕೇರತೋಯ ಆಮ್ರರಸ ಇಕ್ಷುರಸ ಗಂಧಧೋದಕಾದಿಗಳಿಂ ಮಾಡುವ ಸವನಮುಂ: **ಆದಿಪು,** ೧೫. ೧೩ ವ)

ಗಂಭೀರ – [ಗು] ಗಹನವಾದ, ಘನವಾದ (ಅಂಭೋಧಿಯಂತೆ ಗಂಭೀರಾಶಯರುಂ ಆದಿತ್ಯನಂತೆ ನಿರ್ಧೂತತಮಸ್ತಮರುಂ ಚಂದ್ರನಂತೆ ಸರ್ವಸತ್ತ್ವಸೌಮ್ಯರುಂ: **ಆದಿಪು,** ೪. ೯೫ ವ); [ಗು] ಆಳವಾದ (ಕಣ್ಗೊಪ್ಪಿ ತೋರ್ಪುದಿದು ಉತ್ತ್ರೇಂಖತ್ ಅಸಂಖ್ಯ ಶಂಖಧವಳಂ ಗಂಭೀರನೀರಾಕರಂ: **ಪಂಪಭಾ,** ೪. ೨೪)

ಗಗನ – [ನಾ] ಆಕಾಶ (ಗೋಕರ್ಣನಾಥನಂ ಗೌರೀನಾಥನಂ ಅವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ ಮೂರ್ತಿಯಂ ತ್ರೈಲೋಕ್ಯಸಂಗೀತಕೀರ್ತಿಯಂ ಕಂಡು: **ಪಂಪಭಾ,** ೪. ೨೬ ವ)

ಗಗನಗಂಗಾ – [ನಾ] ಆಕಾಶಗಂಗೆ, ದೇವನದಿ (ಗಗನಗಂಗಾ ಶೀಕರನಿಕರಂಗಳಿಂದಂ ಆನಂದನಯನಜಲಂಗಳಂ ಸೂಸುವಂತೆ ದಿವ್ಯಾನಿಳಂ ತೀಡೆ: **ಆದಿಪು,** ೭. ೩೬ ವ)

ಗಗನಗಜ – [ನಾ] ಆಕಾಶದ ಆನೆ, ಐರಾವತ (ಗಗನಗಜಕ್ಕಿಕ್ಕಿದ ಪೊನ್ನ ಗಂಟೆಯೆರಡೆನಲುಂ ಅಂಬರಾಂಭೋನಿಧಿಯೊಳ್ ನೆಗೆದುರಿವೌರ್ವಾನಳನುರ್ಬುಗಳೆನಲುಂ: **ಆದಿಪು,** ೬. ೫೨)

ಗಗನಗಮನಜನಿತಶ್ರಮ – [ನಾ] ಆಕಾಶಪ್ರಯಾಣದಿಂದಾದ ಆಯಾಸ (ಬಳ್ಳಿಗಾವಣಂಗಳೊಳಂ ನನೆಯ

ಜೊಂಪಗಳೊಳಂ ಗಗನಗಮನಜನಿತಶ್ರಮಮಂ ಆಱಿಸಿ: **ಪಂಪಭಾ,** ೭. ೮೧ ವ)

ಗಗನಗಾಮಿನೀವಿದ್ಯೆ – [ನಾ] ಆಕಾಶದಲ್ಲಿ ಹಾರುವ ವಿದ್ಯೆ (ನೀನೆನ್ನಂ ನಿನ್ನ ಗಗನಗಾಮಿನೀವಿದ್ಯೆಯಿಂ ಉತ್ತರ ಕುರುವನೆಯ್ದಿಸು: **ಆದಿಪು,** ೨. ೧೪ ವ)

ಗಗನಚಾರಣ – [ನಾ] [ಜೈನ] ಆಕಾಶದಲ್ಲಿ ಸಂಚರಿಸುವ ಋಷಿದ್ವಯ (ಧರ್ಮವರ ಸಾಗರಸೇನರೆಂಬ ಗಗನಚಾರಣರ್ ಕಾಂತಾರಚರ್ಯಾ ಮಾರ್ಗದೊಳ್ ತಮ್ಮ ವಾಸಕ್ಕೆ ಬರ್ಪರಂ ಶ್ರೀಮತಿಯುಂ ತಾನುಂ ಕಂಡು: **ಆದಿಪು,** ೪. ೯೫ ವ)

ಗಗನತಳ – [ನಾ] ಬಾಂದಳ, ಅಂತರಿಕ್ಷ (ಗಗನತಳಮೆ ಪಱಿದು ಬಿೞ್ದುದೆನಿಪ ಬಹುತಟಾಕದಿಂ ಕುಕಿಲ್ವ ನಲಿವ ಕೋಕದಿಂ: **ಪಂಪಭಾ,** ೧. ೫೮)

ಗಗನಪ್ರಚಾರ – [ನಾ] [ಜೈನ] ಆಕಾಶ ಸಂಚಾರ (ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ ಅಪಕ್ಷ್ಮತಾಸಂ ಆಯತಗಗನಪ್ರಚಾರಂ ಅಪಜೀವವಧಂ ಪರಿವೀತ ದೇಹಬಿಂಬತೆ: **ಆದಿಪು,** ೧೦. ೪೩)

ಗಗನಮಂಡಲ – [ನಾ] ಆಕಾಶ ಪ್ರದೇಶ (ಎರಡುಂ ಬಲದ ಕಡುವಿಲ್ಲರ್ ಭೋರ್ಗರೆದು ಇಸೆ ಕೂರ್ಗಣೆಯೊಳ್ ಪಂದರ್ ಇಕ್ಕಿದಂತಾಯ್ತು ಗಗನಮಂಡಲಮೆಲ್ಲಂ: **ಪಂಪಭಾ,** ೧. ೭೨)

ಗಗನಾಭೋಗ – [ನಾ] ಆಕಾಶದ ವಿಸ್ತಾರ (ಗಗನಾಭೋಗಮಂ ಎಯ್ದೆ ನೀಳ್ದ ಮಣಿಕೂಟಾಟೋಪಮೆಂಬಂತೆ ದಿಟ್ಟಿಗೆ ಮುನ್ನಂ ಬರೆ: **ಆದಿಪು,** ೧೩. ೧೦)

ಗಗ್ಗರಿಕೆ – [ನಾ] ಗದ್ಗದ ಸ್ವರ (ಒದವಿ ತಗುಳ್ದ ಗಗ್ಗರಿಕೆ ಸೂಸುವ ಕಣ್ಬನಿ ಕಣ್ಗಳೊಳ್ ಕಲಂಕಿದ ಬೆಳರ್ಗಂಪು ಕಣ್ಗೆ ವರೆ: **ಆದಿಪು,** ೧೨. ೨೫)

ಗಗ್ಗರಿಕೆಗೊಳ್ – [ಕ್ರಿ] ಗದ್ಗದಗೊಳ್ಳು (ಎಂದು ಗಗ್ಗರಿಕೆಗೊಳ್ವ ಸರಮಂ ಕರ್ಣಪರಂಪರೆಯಿಂ ಕೇಳ್ದು ಸಿಂಹಬಲನ ಒಡವುಟ್ಟಿದರ್ ನೂರ್ವರ್ ಕೀಚಕರುಂ ಪರಿತಂದು ಮುಳಿಸಿನೊಳ್: **ಪಂಪಭಾ,** ೮. ೭೯ ವ)

ಗಜಘಟಾವಿಘಟನ – [ನಾ] ಆನೆಗಳ ಸೈನ್ಯವನ್ನು ಮರ್ದಿಸುವವನು (ಅಂಕಕಾಱನಂ ಒಂದೆ ಮದಾಂಧಗಂಧಸಿಂಧುರದೊಳ್ ಓಡಿಸಿದ ವೈರಿಗಜಘಟಾವಿಘಟನನ ಅದಟುಮಂ: **ಪಂಪಭಾ,** ೯. ೫೨ ವ)

ಗಜಪುರ – [ನಾ] ಹಸ್ತಿನಾವತಿ (ಶಿಶುದ್ವಯಮಂ ನಿಜ ಗಜಪುರಕ್ಕೆ ಉಯ್ದು ಕೃಪೆಯಿಂ ಮಡಪಿದಂ: **ಪಂಪಭಾ,** ೨. ೩೩ ವ)

ಗಜರತ್ನ – [ನಾ] [ಜೈನ] ವಿಜಯಾರ್ಧಪರ್ವತದಲ್ಲಿ ಹುಟ್ಟಿದ ವಿಜಯಾರ್ಧಪರ್ವತದಲ್ಲಿ ಹುಟ್ಟಿದ್ದು ಚಕ್ರವರ್ತಿಯ ಹದಿನಾಲ್ಕು ರತ್ನಗಳಲ್ಲಿ ಒಂದು, (ವಿಜಯಾರ್ಧಪರ್ವತದೊಳ್ ಪುಟ್ಟಿದ ಗಜಾಶ್ವಸ್ತ್ರೀರತ್ನಂಗಳುಂ ಸಾಕೇತನಗರದೊಳ್ ಪುಟ್ಟಿದ ಸೇನಾನಾಯಕಪುರೋಹಿತಗೃಹಪತಿತಕ್ಷಕರತ್ನಂಗಳುಂ: **ಆದಿಪು,** ೧೫. ೩ ವ)

ಗಜವ್ರಜ – [ನಾ] ಆನೆಯ ಹಿಂಡು (ಅಂಬಿನ ಬಂಬಲೊಳಂ ಜೋಡಾಗಿ ಕೋಡನೂಱಿ ಕೆಡೆದ ಗಜವ್ರಜಂಗಳ ಡೋಣೆವುಗಳಿಂದ ಒಱೆತು ಪರಿವ ನೆತ್ತರ ಕಡಲ್ಗಳೊಳ್ ಮಿಳಿರ್ವ: **ಪಂಪಭಾ,** ೧೦. ೧೧೬ ವ)

ಗಜಱು – [ಕ್ರಿ] ಗದರು (ದೆಸೆಗೆತ್ತಂ ಗಜಱುತ್ತುಮಿರ್ಪ ಪುಲಿಯಿಂ ನೀಳಾಭ್ರಮಂ ದಂತಿಗೆತ್ತು ಸಿಡಿಲ್ದು ಆಗಸಕೆ ಎಯ್ದೆ ಪಾಯ್ವ ಪಲವುಂ ಸಿಂಗಂಗಳಿಂದೆತ್ತಗುರ್ವಿಸಿ: **ಪಂಪಭಾ,** ೭. ೨೬); ಗದರಿಕೆ

ಗಜಾಗಮಜ್ಞ – [ನಾ] ಆನೆಗಳ ಬಗೆಗಿನ ಶಾಸ್ತ್ರವನ್ನು ಬಲ್ಲವನು (ಗಜಾಗಮಜ್ಞ ರಾಜಪುತ್ರ ಗೌತಮ ವಾದ್ವಾಕಿ ಪಾಳಕಾಪ್ಯ ಸುಪತಿ ಶ್ರೀಹರ್ಷಾದಿ ಪುರಾಣಪುರುಷವಿರಚಿತಂಗಳಪ್ಪ ಹಸ್ತಿಶಾಸ್ತ್ರಂಗಳೊಳಂ: **ಪಂಪಭಾ,** ೨. ૩೪ ವ)

ಗಜೆ – [ನಾ] ಗದೆ (ಗಜೆಗೊಳೆ ಭೀಮಸೇನಂ ಇದಿರಾಂತು ಬರ್ದುಂಕುವ ವೈರಿಭೂಭುಜದ್ವಜಿನಿಗಳಿಲ್ಲ: **ಪಂಪಭಾ,** ೯. ೫೨)

ಗಟ್ಟಿಸು – [ಕ್ರಿ] ದಮ್ಮಸ್ಸು ಮಾಡು (ಗಟ್ಟಿಸಿ ಸೆಂದುರದೊಳ್ ನೆಲಗಟ್ಟಿಸಿ ಚೆಂಬೊನ್ನ ನೆಲೆಯ ಚೌಪಳಿಗೆಗಳೊಳ್ ಕಟ್ಟಿಸಿ ಪಟಯಿಗೆಗಳಂ: **ಪಂಪಭಾ,** ೨. ೬೬)

ಗಡಣ – [ನಾ] ಸಮೂಹ (ತಾನೆ ತನ್ನನೆ ಚಲಮಂ ಪಿಡಿದು ಅೞಿದಂ ಎಂದು ದೇವರ ಪಡೆ ಗಡಣದೆ ಪೊಗೞ್ದುದು ಇನತನೂಜನ ಗಂಡಂ: **ಪಂಪಭಾ,** ೧೨. ೨೧೬)

ಗಡಣಂಗೊಳ್ – [ಕ್ರಿ] ಗುಂಪಾಗಿ (ಅಂತು ಪುಗುವೇೞ್ವುದುಂ ದಿಗ್ದಂತಿಗಳುಂ ಕುಲನಗಂಗಳುಂ ಗಡಣಂಗೊಂಡೆಂತು ಕವಿತರ್ಕುಂ ಅಂತೆ ನೆಲಂ ತಳರ್ವಿನೆಗಂ ಪ್ರಚಂಡ ಕೋದಂಡಧರರ್: **ಪಂಪಭಾ,** ೨. ೭೦)

ಗಡಣೆ – [ನಾ] ಮೇಳ, ಗಾನಗೋಷ್ಠಿ (ಕನಕಗೋಪುರಂಗಳೊಳಗಣೆರಡು ದೆಸೆಯ ಗುಣಣೆಯಿಂ ವಿಳಾಸನಿಯರ ಗಡಣೆಯಿಂ: **ಪಂಪಭಾ,** ೧. ೫೮)

ಗಡಿಂ – [ಅ] ದಿಟವಾಗಿಯೂ (ಇದಂ ಪುಗಲಿಂ ಗಡಿಂ ಎಂದು ಬೇಟಕಾಱಿರಂ ಇರದೆ ಊಱಿ ಸಾಱಿ ಜಡಿವಂತೆ ಎಸೆಗುಂ ಸಹಕಾರಕೋಮಳ ಅಂಕುರಪರಿತುಷ್ಟ ಪರಪುಷ್ಟಗಳ ಧ್ವನಿ ನಂದನಂಗಳೊಳ್: **ಪಂಪಭಾ,** ೨. ೧೩); [ಅ] ಅಲ್ಲವೇ? (ಮುಟ್ಟಿ ನಾಂ ನೆಲನಂ ಏಕೆ ಅದು ಪೆಣ್ಗಡಿಂ ಎಂದು ಮೆಯ್ಯೊಳ್ ಅಟ್ಟು ಇಡಿದ ವಿಕರ್ಣಕೋಟಿಯೊಳ್ ಅಣಂ ನೆಲಮುಟ್ಟದೆ ನೋಡೆ ಬಿಟ್ಟು ಒಡಂಬಡಿಸಿದಂ: **ಪಂಪಭಾ,** ೧೧. ೪೭)

ಗಣಕ – [ನಾ] ಜೋಯಿಸ, ಮುಹೂರ್ತ ನಿಶ್ಚೈಸುವವನು (ಶಾರದಶ್ರೀಯನಿದಿರ್ಗೊಂಡು ಅನೇಕ ಗಣಕಗಣಗಣಿತ ಶುಭದಿನನಕ್ಷತ್ರಮುಹೂರ್ತದೊಳ್: **ಆದಿಪು,** ೧೧. ೯ ವ)

ಗಣಗ್ರಹಣ – [ನಾ] [ಜೈನ] ನಲವತ್ತೆಂಟು ದೀಕ್ಷಾನ್ವಯಕ್ರಿಯೆಗಳಲ್ಲಿ ಒಂದು (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ)

ಗಣಧರ – [ನಾ] [ಜೈನ] ಶ್ರೇಷ್ಠ ಜ್ಞಾನ ದರ್ಶನ ಧರ್ಮಗಳನ್ನು ಹೊಂದಿದವನು, ತೀರ್ಥಂಕರನ ಶಿಷ್ಯರ ಗುಂಪಿನ ಮುಂದಾಳು (ಇರ್ಪತ್ತೆರಡು ಪರೀಷಹಂಗಳಂ ಗೆಲ್ದು ಗಣಧರಗಣಮಂ ಬಿಟ್ಟು ಏಕವಿಹಾರಿಯಾಗಿ: **ಆದಿಪು,** ೭. ೩೩ ವ)

ಗಣಧರದೇವ – [ನಾ] [ಜೈನ] ತೀರ್ಥಂಕರನ ಮುಖ್ಯ ಶಿಷ್ಯರಲ್ಲಿ ಒಬ್ಬ (ಎಣ್ಬತ್ತುನಾಲ್ವರ್ ಗಣಧರದೇವರುಂ ನಾಲ್ಸಾಸಿರದೇೞ್ನೂಱಯ್ವದಿಂಬರ್ ಸಕಳಪೂರ್ವದೇವರುಂ: **ಆದಿಪು**, ೧೬. ೪೦ ವ)

ಗಣನಾತೀತ – [ಗು] ಎಣಿಕೆಗೆ ಮೀರಿದ (ಗಣನಾತೀತಾಜ್ಯಾಹುತಿ ಗಣದಿಂದಂ ತಣಿಯೆ ಜಾತವೇದಂ: **ಪಂಪಭಾ**, ೬. ೩೭)

ಗಣನಾಯಕ – [ನಾ] ಗಣಧರ (ನೆಱವಂ ತಾಳ್ದಿದಪಾಸ್ತ ದುರ್ನಯ ತಮೋಬಂಧಂ ಶ್ರುತಸ್ಕಂಧವಾದ ಅಜೆವಿಂದಂ ಗಣನಾಯಕರ್ಸಮಱ್‌ ಭವ್ಯಶ್ರೇಣಿಗೆ ಅವ್ಯಾಜದಿಂದೆ: **ಆದಿಪು**, ೧. ३೯)

ಗಣಭೃತ್ – [ನಾ] ಗಣಧರ (ಪುರುದೇವಾದಿಜಿನೇಂದ್ರಮಾಳೆ ಗಣಭೃತ್ಸಂತಾನಮೆಂದೀ ಪರಂಪರೆಯಿಂ ವಿಶ್ರುತ ವೀರಸೇನಾಚಾರ್ಯಪರ್ಯಂತಮಾಗಿರೆ: **ಆದಿಪು**, ೧. ೩೫)

ಗಣಾಗ್ರಣಿ – [ನಾ] ಗಣಧರರಲ್ಲಿ ಮೊದಲಿಗನಾದ ವೃಷಭಸ್ವಾಮಿ (ಆ ವೃಷಭಗಣಾಗ್ರಣಿ ಪೇೞ್ದುದಂ ಸವಿಸ್ತರದೊಳೆ ವರ್ಧಮಾನಜಿನಸನ್ನಿಧಿಯೊಳ್ ವಿಪುಳಾದ್ರಿಯೊಳ್: **ಆದಿಪು**, ೧. ೪೧)

ಗಣಾಧಿಪ – [ನಾ] ಗಣಧರ, ತೀರ್ಥಂಕರನ ಶಿಷ್ಯರ ಗುಂಪಿನ ಮುಂದಾಳು (ಕೇಳ್ದವಾವಿದಂ ತಿಳಿಯೆ ಗಣಾಧಿಪರ್ ಬೆಸಸೆ ರುಂದ್ರಜಿನೇಂದ್ರ ಸಭಾಂತರಾಳದೊಳ್: **ಆದಿಪು**, ೧೫. ೧೧)

ಗಣಿಕೆ – [ನಾ] ಸೂಳೆ (ಸ್ನಾನಾರ್ಥಂ ಒಂದು ಕಳಶಮಂ ನಿಯಮನಿಧಾನಂ ಎಟಲೆ ಪಿಡಿದು ಅಮಳಿನ ಗಂಗಾನದಿಗೆ ವಂದು ಸುರತನಿಧಾನಿ ಅಮರೇಂದ್ರಗಣಿಕೆಯಂ ಮುನಿ ಕಂಡಂ: **ಪಂಪಭಾ**, ೨. ४೧)

ಗಣಿತ – [ಗು] ಲೆಕ್ಕಾಚಾರ ಮಾಡಿದ (ಶಾರದಶ್ರೀಯನಿದಿರ್ಗೊಂಡು ಅನೇಕ ಗಣಕಗಣಗಣಿತ ಶುಭದಿನನಕ್ಷತ್ರಮುಹೂರ್ತದೊಳ್: **ಆದಿಪು**, ೧೧. ೯ ವ); ಲೆಕ್ಕ (ಉತ್ಕೋಪದಹನದೊಡನೆ ಪೃಷತ್ಕಂಗಳ್ ಕೋಟಿಗಣಿತದಿಂದ ಉಱುವಿನಂ ಆರ್ದ ಉತ್ಕಚದಿಂ ಉಱದೆ ಘಟೋತ್ಕಚನಂ ಬಿಟ್ಟು ಮೂರ್ಛೆವೋಪಿನಂ ಎಚ್ಚಂ: **ಪಂಪಭಾ**, ೧೧. ೮)

ಗಣಿದ – [ನಾ] [ಗಣಿತ] ಎಣಿಕೆ, ಲೆಕ್ಕ (ಗಣಿದಮಿದೊಂದುಮಿಲ್ಲ ನಿನಗೆ ಈ ಖಳಸಂಸ್ಕೃತಿಯೆಂಬುದೊಂದು ಱಾಟಣದೊಳಗೆ: **ಆದಿಪು**, ೩. ೭೧); [ನಾ] ಲೆಕ್ಕಚಾರ (ಎನ್ನಣುಗಿನ ಅಳಿಯಂಗೆ ಎನ್ನಿಂ ಮೇಗಿಲ್ಲ ಕೂರ್ಪವರ್ ಇಂತಿದೇಂ ಗಣಿದದ ಎಡೆಯೇ: **ಆದಿಪು**, ೪. ೯೦); [ನಾ] [ಬೇಟೆಯಾಡಬೇಕಾದ ಪ್ರಾಣಿಗಳ] ಸಂಖ್ಯೆ (ಮೃಗಮಂ ಗಾಳಿಯಂ ಇರ್ಕೆಯಂ ಪಕ್ಕೆಯಂ ಗಣಿದಮಂ ಕಂಡಿಯಂ ಮಾರ್ಕಂಡಿಯಂ ಪುಗಿಲಂ ಪೋಗಂ: **ಪಂಪಭಾ**, ೫. ४३)

ಗಣಿನೀ – [ನಾ] ಬ್ರಹ್ಮಚಾರಿಣಿ, ಆರ್ಯಿಕೆ (ಸುಪ್ರಭೆಯುಂ ಸುದರ್ಶನ ನಾಮ ಗಣಿನೀಸಮಕ್ಷದೊಳ್ ರತ್ನಾವಳಿಯಂ ನೋಂತು ಅಚ್ಯುತಕಲ್ಪದೊಳ್ ದೇವನಾಗಿ ಪುಟ್ಟಿದಳ್: **ಆದಿಪು**, ೩. ೬೫ ವ)

ಗಣೋಪಗ್ರಹಣ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಗಣವನ್ನು ಸೇರುವುದು (ಗಣೋಪಗ್ರಹಣ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು**, ೧೫. ೧೫ ವ)

ಗತಜೀವಿತನಾಗು – [ಕ್ರಿ] ಸಾಯು, ಮರಣಿಸು (ಅತಿಬಳಕೃಷ್ಣಂ ಗತಜೀವಿತನಾಗೆ ಮಹಾಬಳಂ ಮಹಾವ್ರತದಿಂದನ್ವಿತಮತಿ ಸಮಾಧಿಗುಪ್ತವ್ರತಿಯುಪದೇಶದೊಳೆ ಪುಟ್ಟಿದಂ ಪ್ರಾಣತದೊಳ್: **ಆದಿಪು**, ३. ೭೭)

ಗತಪ್ರಾಣನಾಗು – [ಕ್ರಿ] ಪ್ರಾಣ ಕಳೆದುಕೊ, ಸಾಯು (ಪದ್ಮಪತ್ರೌಘಂಗಳಿಂ ತಮ್ಮಣ್ಣಂಗೆ ನೀರಂ ತೀವಿಕೊಂಡು ಸರೋವರದಿಂದ ಪೊಱಮಟ್ಟು ಒಂದೆರಡಡಿಯನಿಡುತೆ ಗತಪ್ರಾಣನಾಗಿ ಬಿೞ್ದಿರ್ದಂ: **ಪಂಪಭಾ**, ೮. ३೯ ವ)

ಗತವಿವೇಕ – [ನಾ] ವಿವೇಕರಹಿತ (ಇನ್ನಾವ ಸಂತಸಂ ಗತವಿವೇಕ ಪೇೞ್ ನಿನಗೆ ಅಸಾರಸಂಸಾರದೊಳ್: **ಆದಿಪು**, ३. ೬೦)

ಗತಿಚತುಷ್ಟಯ – [ನಾ] [ಜೈನ] ಜೀವದ ನಾಲ್ಕು ಸ್ವರೂಪಗಳು: ನಾರಕ, ತಿರ್ಯಕ್, ಮಾನುಷ, ದೇವ (ಕಷ್ಟಂ ದುಃಖಾನಳಸಂಪ್ಲುಷ್ಟಂ ಚಿಃ ಗತಿಚತುಷ್ಟಯಂ ಪ್ರಾಣಿಗೆ: **ಆದಿಪು**, ೯. ೫೧)

ಗತಿಸ್ಖಲಿತ – [ನಾ] ನಡೆಯುವಾಗ ಮುಗ್ಗರಿಸುವುದು (ಆತನ ಲಲಿತ ಉತ್ತಾನಶಯಿತ ದರಹಸಿತ ತರಂಗಿತ ಗತಿಸ್ಖಲಿತ ಮುಗ್ಧಜಲ್ಪಿತಾದಿ ಬಾಲ್ಯವಿಳಾಸಂಗಳಿಂದಂ: **ಆದಿಪು**, ೮. ೫೦ ವ)

ಗದಾಘಾತ – [ನಾ] ಗದೆಯ ಹೊಡೆತ (ಪೊಕ್ಕು ಉಡಿವೆಂ ಪಿಂಗಾಕ್ಷನ ಊರುದ್ವಯಮಂ ಉರು ಗದಾಘಾತದಿಂ ನುಚ್ಚು ನೂಱಾಗೆ ಒಡೆವೆಂ ತದ್ರತ್ನರಶ್ಮಿಪ್ರಕಟಮಕುಟಮಂ: **ಪಂಪಭಾ**, ೭. ೧೩)

ಗದಾವಿಕ್ಷೇಪ – [ನಾ] ಗದಾಯುದ್ಧದ ವರಸೆ (ಸವ್ಯಾಪಸವ್ಯ ಭ್ರಾಂತೋದ್ಭ್ರಾಂತ ಕರ್ಷಣ ಮಂಡಳಾವರ್ತನಾದಿಗಳಪ್ಪ ಮೂವತ್ತೆರಡು ಗದಾವಿಕ್ಷೇಪದೊಳಂ: **ಪಂಪಭಾ**, ೧३. ೯೨ ವ)

ಗದಾಹತಿ – [ನಾ] ಗದೆಯ ಹೊಡೆತ (ಮಹಾಪ್ರಳಯ ಉಲ್ಕೋಪಮ ಮತ್ ಗದಾಹತಿಯಿಂ ಅತ್ಯುಗ್ರ ಆಜಿಯೊಳ್ ಮುನ್ನಂ ಈ ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ: **ಪಂಪಭಾ**, ೭. ೧೨)

ಗದಿತ – [ಗು] ಹೇಳಿದ, ನುಡಿದ (ಪರಮಜಿನಗದಿತ ಗುಣಪರಿಕರದೊಳ್ ಕೂಡಿದುದೆ ನಿರುಪಮಂ ಸಮ್ಯಕ್ತ್ವಂ: **ಆದಿಪು**, ೫. ೫೫)

ಗದ್ಗದ – [ನಾ] ಕಂಠ ಬಿಗಿಯುವುದು ಪರಿತಪಿಸುವುದು (ಕಾಮಗ್ರಹಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭ ಕಂಪ ಸ್ವೇದ ವೈವರ್ಣ್ಯಸಂತಾಪನನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ**, ४. ३೯ ವ)

ಗದ್ಯಣ – [ನಾ] ಒಂದು ಚಿನ್ನದ ನಾಣ್ಯ (ಪಲಗೆಗೆ ಪತ್ತು ಸಾಯಿರಮೆ ಗದ್ಯಣಂ ಎಂದಿರದೆ ಒಡ್ಡಿ ತಾಮ್ ಎರೞ್ವಲಗೆಯಂ ಆಡಿ ಸೋಲ್ತೊಡೆ: **ಪಂಪಭಾ**, ೬. ೭೨)

ಗದ್ಯಾಣ – [ನಾ] ಗದ್ಯಣ (ಒಡ್ಡಮಂ ಪೇೞಿಂ ಎನೆ ಪೊಟ್ಟುಪೋಗಿಂಗಂ ಅಟ್ಟೆಗಂ ಆಡುವ ತಮ್ಮುತಿರ್ವರ

ಪಲಗೆಗೆ ಸಾಯಿರ ಗದ್ಯಾಣದ ಪೊನ್ನೆ ಸಾಲ್ಗುಂ ಅಗ್ಗಳಂ ಬೇಡ: **ಪಂಪಭಾ,** ೬, ೭೧ ವ)

ಗಭೀರ – **[ಗು]** ಆಳವಾದ (ಅರಸಂ ತುಂಗತರಂಗಭಂಗುರ ಗಭೀರಾಂಭೋಧಿಯಂ ಪೊಕ್ಕನೊಂದೆ ರಥಂ ಸಾರಥಿಯೊರ್ವಂ ಆರುಮೊಡನಿಲ್ಲ: **ಆದಿಪು,** ೧೨. ೧೨೫)

ಗಭೀರನಿನದ – [ನಾ] ಗಭೀರಧ್ವನಿ (ದುಂದುಭಿ ಗಭೀರನಿನದಂ ದುಂದುಭಿ ಸಂವತ್ಸರೋದ್ಭವಂ: **ಆದಿಪು,** ೧. ೩೩)

ಗಮಕ – [ನಾ] ಸಂಗೀತ ಸ್ವರ ವಿಶೇಷ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಲ್ ಎೞಿದಿಕ್ಕಿದಂತೆ ಸುತಿಯೊಳ್ ಸಮವಾಗಿರೆ .. .. ಮೇನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್: **ಪಂಪಭಾ,** ೭. ೮೮)

ಗಮಕಿ – [ನಾ] ಕಾವ್ಯ ವಾಚಿಸುವವನು (ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗೞ್ದ ಸಬ್ಬವದವರೊಡನೆ ಅಂತು ಒಸೆದ ಅನ್ನವಾಸದೊಳ್ ಇರ್ದನಾಗಳ್ ಹರಿಗಂ: **ಪಂಪಭಾ,** ೩. ೮೦)

ಗಮನ – [ನಾ] ನಡೆಯುವಿಕೆ (ಮಹೀಪತಿನಿವೇದನ ಸಂಭ್ರಮಗಮನಸ್ಖಲಿತ ವೃದ್ಧಕಂಚುಕಿನಿಕರಮುಂ: **ಆದಿಪು,** ೮. ೩೫ ವ)

ಗಮ್ಮನೆ – [ಅ] ಬೇಗನೆ, ಶೀಘ್ರವಾಗಿ (ತತ್ ಸಚಿವೋತ್ತಮಂ ಒಳ್ಳಿಕೆಯ್ದಂ ಇನ್ನಂತುಟು ಪೇೞ್ದು ಕೆಮ್ಮಗಿರೆ ಗಮ್ಮನೆ ಕಮ್ಮರಿಯೋಜನಾಗನೇ: **ಆದಿಪು,** ೨. ೬೧)

ಗರ – [ನಾ] ಗ್ರಹ, ದುಷ್ಟ ಶಕ್ತಿ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩)

ಗರಮುಟ್ಟು – [ಕ್ರಿ] ಗ್ರಹವು ತಾಗುವ ಹಾಗೆ ಅಥವಾ ಗ್ರಹಗಳವರೆಗೂ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩)

ಗರಳ – [ನಾ] ವಿಷ (ಭಯಾನಕೋಭಯತಟ ಗುಹಾಗಹ್ವರನಿರ್ಜಜ್ಜರತ್ ಅಜಗರ ಗಳಗಳಿತ ಗರಳಶಬಳಿತಸಲಿಲ ಪ್ರವಾಹೆಯುಂ: **ಆದಿಪು,** ೫. ೮೭ ವ)

ಗರುಡ – [ನಾ] ಗರುಡ ಪಕ್ಷಿ (ಮತ್ಸ್ಯ ಮಕರ ಕುಲಿಶ ಕಲಶ ಕುಳೀರ ವರಾಹ ವಾನರ ಕಂಠೀರವ ಚಮೂರು ಮಯೂರ ಗರುಡ ಫಣಿರಾಜಚಿಹ್ನಂಗಳಪ್ಪ: **ಆದಿಪು,** ೧೧. ೨೮ ವ)

ಗರುಡಿ – [ನಾ] ವ್ಯಾಯಾಮಶಾಲೆ (ನಾವೆಲ್ಲಮೊಂದೆ ಗರುಡಿಯೊಳೋದಿದ ಮಾನಸರೆಂ: **ಪಂಪಭಾ,** ೯. ೪೮ ವ)

ಗರುತ್ಮ – [ನಾ] ಗರುಡ (ವನನಿಧಿಯಿಂದಂ ಚಂದ್ರಂ ವಿನತಾ ಉದರದಿಂ ಗರುತ್ಮಂ ಉದಯಾಚಳದಿಂ ದಿನಪಂ ಒಗೆವಂತೆ ಪುಟ್ಟಿದಂ ಅನಿವಾರ್ಯ ಸುತೇಜಂ ಎನಿಪಂ ಇನಜನ ತನಯಂ: **ಪಂಪಭಾ,** ೧. ೧೨೧)

ಗರ್ಜತ್ – [ಗು] ಗರ್ಜಿಸುವ (ಮೃಗಪತಿಪ್ರಧ್ವಾನಗರ್ಜದ್ಗುಹಂ ಮದಿರೋನ್ಮತ್ತ ನಿಳಿಂಪ ಕಿಂಪುರುಷಕಾಂತಾರಬ್ಧಸಂಗೀತಂ ಒಪ್ಪಿದುದು: **ಪಂಪಭಾ,** ೭. ೭೨)

ಗರ್ತ – [ನಾ] ನೀರಿನ ಸುಳಿ (ಸಂಸಾರವಾರಾಶಿ ಮಧ್ಯಾಸ್ಪದ ಸರ್ವಗ್ರಾಸಿ ಭೀಮಾಂತಕ ವದನಮಹಾಗರ್ತದೊಳ್ ಮಗ್ನರಾದರ್: **ಆದಿಪು,** ೯. ೫೮)

ಗರ್ಬ – [ನಾ] ಗರ್ವ (ಮಲ್ಲರನೆ ಪೋರಿಸಲುಂ ಪಿರಿದೊಂದು ದೋಹಳಂ ನೆಗೞ್ದುದು ಗರ್ಭದರ್ಭಕನ ದೋರ್ಬಲಗರ್ಬಮನಂದು ಪೇೞ್ವವೊಲ್: **ಆದಿಪು,** ೮. ೪೮)

ಗರ್ಭಂ – [ನಾ] ಸೇರಿದ, ಬೆರೆಸಿದ (ಚಾಗಬೀರದ ಪಟ್ಟಿಯಿಗೆಯನೆತ್ತಿಸಿ ಪಂಚರತ್ನಗರ್ಭಂಗಳಪ್ಪ ಮಂಗಳಜಳಂಗಳಂ ಮಿಂದು: **ಪಂಪಭಾ,** ೧೨. ೧೦೮ ವ)

ಗರ್ಭಗೃಹ – [ನಾ] ಒಳಕೋಣೆ, ಗರ್ಭವೆಂಬ ಮನೆ (ಗರ್ಭಗೃಹದಿಂದಂ ಮೇಣ್ಪೊಱಮಟ್ಟವೊಲಾ ಗುಹೆಯಿಂ ಪೊಱಮಟ್ಟುದು ಸೈನ್ಯಮಂಬುಧಿಧ್ವನಿಯಿಂದಂ: **ಆದಿಪು,** ೧೩. ೫೪)

ಗರ್ಭಚಿಹ್ನ – [ನಾ] ಗರ್ಭದ ಲಕ್ಷಣಗಳು (ಗರ್ಭಚಿಹ್ನಮೆ ಗಳ ಗರ್ಭದರ್ಭಕನ ಸೂಚಿಪ ಮುಂದಣ ರಾಜ್ಯಚಿಹ್ನಮಂ: **ಪಂಪಭಾ,** ೧. ೧೨೦)

ಗರ್ಭದರ್ಭಕ – [ನಾ] ಬಸಿರಿನಲ್ಲಿನ ಮಗು (ಹಿಮಧವಳ ಆತಪತ್ರಮನೆ ಪೋಲೆ ಮುಖೇಂದುವ ಬೆಳ್ಪು ಪೂರ್ಣಕುಂಭಮನೆ ನಿರಂತರಂ ಗೆಲೆ ಕುಚಂಗಳ ತೋರ್ಪು ಪತಾಕೆಯೊಂದು ವಿಭ್ರಮಮನೆ ಪೋಲೆ ಪುರ್ವಿನ ಪೊಡರ್ಪೊಳಕೊಂಡುದವಳ್ಗೆ ಗರ್ಭಚಿಹ್ನಮೆ ಗಳ ಗರ್ಭದರ್ಭಕನ ಸೂಚಿಪ ಮುಂದಣ ರಾಜ್ಯಚಿಹ್ನಮಂ: **ಪಂಪಭಾ,** ೧. ೧೨೦)

ಗರ್ಭದೋಹಳ – [ನಾ] ಬಸಿರಿಯ ಬಯಕೆ (ಇಂತಾದೊಡೆಮಗೆ ಬಾಹುಬಲಿಯ ಸಮರಸಂಘಟ್ಟದೋಹಳಮಿದು ದರಿದ್ರಗೇಹಿನೀ ಗರ್ಭದೋಹಳದಂತಾದುದು: **ಆದಿಪು,** ೧೪. ೧೦೨ ವ)

ಗರ್ಭನಿರ್ಭರಪ್ರದೇಶ – [ನಾ] ಬಸಿರು ತುಂಬಿದ ಜಾಗ (ಅಂತು ಗರ್ಭನಿರ್ಭರಪ್ರದೇಶದೊಳ್ ಅರಾತಿಗಳ್ಗೆ ಅಂತಕಾಲಂ ದೊರೆಕೊಳ್ವಂತೆ ಪ್ರಸೂತಿಕಾಲಂ ದೊರೆಕೊಳೆ: **ಪಂಪಭಾ,** ೧. ೧೨೬ ವ)

ಗರ್ಭಭಾರ – [ನಾ] ಬಸಿರಿನ ತೂಕ (ಅಂತು ಕೊಂತಿಯ ಗರ್ಭಭಾರಮುಂ ತಾಪಸಾಶ್ರಮದ ಅನುರಾಗಮುಂ ಒಡನೊಡನೆ ಬಳೆಯೆ ಬಂಧುಜನದ ಮನೋರಥಂಗಳುಂ ಒಂಬತ್ತನೆಯ ತಿಂಗಳುಂ ನೆಱೆಯೆ: **ಪಂಪಭಾ,** ೧. ೧೨೦ ವ)

ಗರ್ಭಶೋಧನ – [ನಾ] [ಜೈನ] ಇಂದ್ರನು ಕಳುಹಿಸುವ ದೇವವನಿತೆಯರು ಹುಟ್ಟಲಿರುವ ತೀರ್ಥಂಕರನಿಗೆ ಕರ್ಮಮಲಗಳ ಲೇಪವಾಗದಂತೆ ಮಾಡುವ ಜಿನಮಾತೆಯ ಗರ್ಭ ಶುದ್ಧೀಕರಣ (ಮನವೊಲ್ದಿಂದ್ರನಿವಾಸಸಂಭವ ಶುಚಿದ್ರವ್ಯಂಗಳಿಂ ಗರ್ಭಶೋಧನಮಂ ದೇವಿಯರಿರ್ದು ಮಾಡೆ: **ಆದಿಪು,** ೭. ೨೩)

ಗರ್ಭಷಷ್ಠಿ – [ನಾ] ಅರವತ್ತು ದಿನಗಳಲ್ಲಿ ತೆನೆ ಬರುವ (ಆ ಪ್ರಸ್ತಾವದೊಳ್ ಫಳಪಾಕವಿರಾಮಂಗಳಪ್ಪ ಗರ್ಭಷಷ್ಠಿವ್ರೀಹಿ ಯವ ಗೋಧೂಮಾದಿ ಮಹೌಷಧಂಗಳುಮಂ: **ಆದಿಪು,** ೮. ೬೧ ವ)

ಗರ್ಭಸರೋವರ – [ನಾ] ಬಸಿರು ಎಂಬ ಕೊಳ ಸೈನ್ಯ (ಇತ್ತೆನೆಂದು ವಿಯತ್ತಳಕ್ಕೊಗೆದೊಡೆ ಆತನಂಶಮಾಕೆಯ ಗರ್ಭಸರೋವರದೊಳಗೆ ಚಂದ್ರಬಿಂಬದಂತೆ ಸೊಗಯಿಸೆ: **ಪಂಪಭಾ**, ೧. ೧೨೪ ವ)

ಗರ್ಭಸ್ಥಿತ – **[ಗು]** ಗರ್ಭದಲ್ಲಿರುವ (ಗರ್ಭಸ್ಥಿತಾರ್ಭಕನ ವದನಚಂದ್ರನಿರ್ಗತಾಚ್ಛಜಳಚಂದ್ರಿಕೆಯೊಳ್ ಒದವಿದಂತೆ: **ಆದಿಪು**, ೭. ೩೦ ವ)

ಗರ್ಭಾನ್ವಯಕ್ರಿಯೆ – [ನಾ] [ಜೈನ] ತೀರ್ಥಂಕರನು ಭೂಮಿಯಲ್ಲಿ ಅವತರಿಸುವುದರಿಂದ ಹಿಡಿದು ನಿರ್ವಾಣಪರ್ಯಂತ ಮಾಡುವ ಐವತ್ತೂರು ಕ್ರಿಯೆಗಳು: ದಾನ, ಆಧಾನ, ಪ್ರೀತಿ, ಸುಪ್ರೀತಿ, ಧೃತಿ, ಮೋದ, ಪ್ರಿಯೋದ್ಭವ, ನಾಮಕರ್ಮ, ಬಹಿರ್ಯಾನ, ನಿಷದ್ಯಾ, ಅನ್ನಪ್ರಾಶನ, ವ್ಯುಷ್ಟಿ, ಕೇಶವಾಪ, ಲಿಪಿ ಸಂಖ್ಯಾನ ಸಂಗ್ರಹ, ಉಪನಯನ, ವ್ರತಚರ್ಯಾ, ವ್ರತಾವತರಣ, ವಿವಾಹ, ವರ್ಣಲಾಭ, ಕುಲಚರ್ಯಾ, ಗೃಹೀಶಿತ್ವ, ಪ್ರಶಾಂತಿ, ಗೃಹತ್ಯಾಗ, ದೀಕ್ಷಾದ್ಯ, ಜಿನರೂಪತಾ, ಮೌನಾಧ್ಯಯನವೃತ್ತಿ, ತೀರ್ಥಕರತ್ವಭಾವನಾ, ಗುರುಸ್ಥಾನಾಭ್ಯುಪಗಮ, ಗಣೋಪಗ್ರಹಣ, ಸ್ವಗುರುಸ್ಥಾನ ಸಂಕ್ರಾಂತಿ, ನಿಸ್ಸಂಗತ್ವಭಾವನಾ, ಯೋಗನಿರ್ವಾಣಸಂಪ್ರಾಪ್ತಿ, ಯೋಗನಿರ್ವಾಣಸಾಧನ, ಇಂದ್ರೋಪಪಾದ, ಅಭಿಷೇಕ, ವಿಧಿದಾನ, ಸುಖೋದಯ, ಇಂದ್ರತ್ಯಾಗ, ಅವತಾರ, ಹಿರಣ್ಯಗರ್ಭೋತ್ಕೃಷ್ಟಜನ್ಮತಾ, ಮಂದರಾದ್ರೀಂದ್ರಾಭಿಷೇಕ, ಗುರುಪೂಜೋಪಲಂಭನ, ಯೌವರಾಜ್ಯ, ಸ್ವರಾಜ್ಯ, ಚಕ್ರಲಾಭ, ದಿಗ್ವಿಜಯ, ಚಕ್ರಾಭಿಷೇಕ, ಸಾಮ್ರಾಜ್ಯ, ಪರಿನಿಷ್ಕ್ರಮಣ, ಯೋಗಸಮ್ಮಹ, ಆರ್ಹಂತ್ಯ, ವಿಹಾರಯೋಗತ್ಯಾಗ, ಅಗ್ರನಿರ್ವೃತಿ (ಅಯ್ವತ್ತಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಗರ್ಭಾವಾಸ – [ನಾ] ಬಸಿರೆಂಬ ಮನೆ (ಅಹಮಿಂದ್ರಂ ಬಂದು ಯಶಸ್ವತಿ ಮಹಾದೇವಿಯ ಗರ್ಭಾವಾಸದೊಳ್ ಶುಕ್ತಿಪುಟೋದರವರ್ತಿಯಪ್ಪ ನಿರ್ಮಳೋದಕಬಿಂದುವಿನಂತೆ: **ಆದಿಪು**, ೮. ೨೯ ವ)

ಗರ್ಭೇಶ್ವರ – [ನಾ] ಆಗರ್ಭ ಶ್ರೀಮಂತ (ಮತ್ತೊಂದೆಡೆಯೊಳ್ ಒರ್ವಂ ಗರ್ಭೇಶ್ವರಂ ತನ್ನ ಹೃದಯೇಶ್ವರಿಯಂ ಅಗಲ್ದು ಬಂದು ಪೆಱರಾರುಮಂ ಮೆಚ್ಚದೆ ಆಕೆಯಂ ನೆನೆದು: **ಪಂಪಭಾ**, ೪. ೧೦೪ ವ)

ಗರ್ಭೇಶ್ವರಿ – [ನಾ] ಸಂತತಿಯ ಒಡತಿ, ಪಟ್ಟದ ರಾಣಿ (ಅಂತಾ ಗರ್ಭೇಶ್ವರಿಯರ್ ಆ ಪುರುಪರಮೇಶ್ವರನ ಮನಸ್ಸರೋವರದೊಳ್ ತಮ್ಮ ಪಾದಪದ್ಮಂಗಳಂ ನೆಲೆಗೊಳಿಸಿಯುಂ: **ಆದಿಪು**, ೮. ೨೪ ವ)

ಗರ್ಭೋದಯಾದ್ರಿ – [ನಾ] [ಗರ್ಭ+ಉದಯಾದ್ರಿ] ಗರ್ಭವೆಂಬ ಉದಯಾಚಲ (ಭರತಕುಲಗಗನದಿನಕರಂ ಅರಾತಿಕುಳಕಮಳ ಹಿಮಕರಂ ಶಿಶು ತೇಜೋವಿರಚನೆಯುಂ ಕಾಂತಿಯುಂ ಆವರಿಸಿರೆ ಗರ್ಭೋದಯಾದ್ರಿಯಿಂದ ಉದಯಿಸಿದಂ: **ಪಂಪಭಾ**, ೧. ೧೪೫)

ಗರ್ಭೋದರ – [ನಾ] ಬಸಿರಿನ ಒಳಗು (ಕೊಂತಿಯ ದಿವ್ಯಗರ್ಭೋದರಮೆಂಬ ಶುಕ್ತಿಪುಟೋದರದೊಳ್ ತನ್ನ ದಿವ್ಯಾಂಶಮೆಂಬ ಮುಕ್ತಾಫಲೋದ ಬಿಂದುವಂ ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ**, ೧. ೧೩೯ ವ)

ಗರ್ವ – [ನಾ] ಅಹಂಕಾರ (ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ: **ಪಂಪಭಾ,** ೧. ೧೩); [ನಾ] ಉಷ್ಣತೆ (ಬಿಗಿಯಪ್ಪಿದಪ್ಪುಗಳ್ ಕಳೆದುವು ನಾಣುಮಂ ಕಿಱಿದು ಜಾಣುಮನಟ್ಟಿಱಿನೀವ ಚುಂಬನಂ ಕಳೆದುವು ಗರ್ವಮಂ ಕಳೆದುದಂತಿರ್ವರ ಮನ್ಮಥದ್ರವಂ: **ಪಂಪಭಾ**, ೫. ೨೭)

ಗರ್ವವ್ಯಾಲೆ – [ನಾ] ಗರ್ವದಿಂದ ಸೊಕ್ಕಿದವಳು (ಅಂತು ಬಂದ ಬಸಂತದೊಳ್ ಮದ್ರಿ ತಾಂ ಗರ್ವವ್ಯಾಲೆಯುಂ ಕ್ರೀಡಾನುಶೀಲೆಯುಂ ಅಪ್ಪುದಱಿಂ ವನಕ್ರೀಡಾನಿಮಿತ್ತದಿಂ ಪೋಗಿ: **ಪಂಪಭಾ**, ೨. ೧೫ ವ)

ಗವಾಕ್ಷ – [ನಾ] ಬೆಳಕಿಂಡಿ (ರಾಜಹಂಸ ಪಾರಾವತ ಮಿಥುನಂಗಳ್ ಉತ್ತುಂಗ ಪ್ರಾಸಾದಶಿಖರ ಮಣಿಗವಾಕ್ಷ ಅಂತರಾಳ ವಿವಿಧ ಗೃಹಾಂತರಗತಂಗಳಾದುವು: **ಪಂಪಭಾ** ಪರಿಷತ್ತು, ೪. ೪೯ ವ)

ಗವೇಷಣ – [ನಾ] ಹುಡುಕುವುದು (ಸಭೆಯೊಳ್ ಮಾಷಮುಖದಂತೆ ದೋಷಗವೇಷಣಪರರಪ್ಪರೆಂದೊಡದು ತೆಗಟಲ್ತೇ: **ಆದಿಪು**, ೧. ೨೧)

ಗವ್ಯೂತಿ – [ನಾ] ಎರಡು ಕ್ರೋಶ ದೂರ, ಒಂದು ಗಾವುದ (ಮತ್ತಂ ಘಾತಿಗಳ ಕೇಡಿನೊಳ್ ಗವ್ಯೂತಿಚತುಷ್ಟಯ ಸುಭಿಕ್ಷತೆ ಮೊದಲಾಗೆ: **ಆದಿಪು**, ೧೦. ೪೨ ವ)

ಗಸಣಿ – [ನಾ] ಗೊಡವೆ (ಮಾಡುವ ಕಿಡಿಸುವ ಗಸಣಿಗೆ ನಾಡೆಯುಮದು ಪೊಱಗು ಸಹಜನಿಯತಸ್ಥಿತಿ ನಾಡಾಡಿಯ ನರರ್ಗದು ಬಗೆಯಲ್ ಕೂಡದು: **ಆದಿಪು**, ೧. ೪೬)

ಗಹನ – [ನಾ] ಕಾಡು (ಎನ್ನ ಪಾಪದ ಫಲಮಂ ಸವಿನೋಡೆ ಪೊಕ್ಕೆನೊಡನೊಗೆದ ವಿಚಾರಣಚರಿತಮೆಂಬ ಗಹನಾಂತರಮಂ: **ಆದಿಪು**, ೩. ೩೫); [ನಾ] ದಟ್ಟತೆ (ಅಂತು ಆ ವನಗಹನಮೆಲ್ಲಂ ದಹನಮಯಮಾದ ಪ್ರಸ್ತಾವದೊಳ್ ವಿಸ್ಮಯಮಾಗೆ: **ಪಂಪಭಾ**, ೫. ೯೭ ವ); ಅತಿಶಯ (ಖಾಂಡವವನದಹನಪ್ರಪಂಚದಿಂ ಬಟೆಯಂ ಅರಾತಿವನದಹನ ತೀವ್ರಪ್ರತಾಪಗಹನಕ್ಕೆ ಮುನ್ನಂ ಅಳ್ಕಿ ಪರಮಂಡಳಿಕರ್ ಇತ್ತುಂ ತೆತ್ತುಂ ಬೆಸಕೆಯ್ಯೆ: **ಪಂಪಭಾ,** ೬. ೧. ವ); [ಗು] ಆಳವಾದ (ಗುಹಾಗಹನಗಹ್ವರ ಉದರ ವಿಶೀರ್ಣಂ ಆದಂದು ಅದೇಂ ಮುಹುಃಪ್ರಕಟಮಾದುದು ರವಿತನೂಭವಜ್ಯಾರವಂ: **ಪಂಪಭಾ**, ೧೨. ೧೩೬)

ಗಹನಭೂಮಿ – [ನಾ] ಅರಣ್ಯಪ್ರದೇಶ (ಇಂದ್ರಿಯಲುಬ್ಧಕಸ್ವಚ್ಛಂದವಿಹಾರ ಗಹನಭೂಮಿಯುಂ ದುರ್ಯಶಃಪಾಂಶುಪ್ರಸರ ಮಹಾವಾತ್ಯೆಯುಂ ಅಪ್ಪ: **ಆದಿಪು**, ೧೪. ೧೨೨ ವ)

ಗಹನಾಂತರ – [ನಾ] ಗಗನಭೂಮಿ (ಪಾಪದ ಫಲಮಂ ಸವಿನೋಡೆ ಪೊಕ್ಕೆಂ ಒಡನೊಗೆದ ವಿಚಾರಣಚರಿತಮೆಂಬ ಗಹನಾಂತರಮಂ: **ಆದಿಪು**, ೩. ೩೫)

ಗಹ್ವರ – [ನಾ] ದೊಗರು, ಬಿಲ, ಗವಿ (ತತ್ ವನಗಹ್ವರದಿಂ ಬಿಸುನೆತ್ತರ್ ಉಣ್ಮೆ ಭೋರ್ಭೋರೆನೆ ಕೊಂದಂ ಅಂಕದ ಬಳಾಧಿಕನಂ ಬಕನಂ ವೃಕೋದರಂ: **ಪಂಪಭಾ,** ೩. ೩೧); [ನಾ] ಕಣಿವೆ (ಗುಹಾಗಹನಗಹ್ವರ ಉದರ ವಿಶೀರ್ಣಂ

ಆದಂದು ಅದೇಂ ಮುಹುಃಪ್ರಕಟಮಾದುದು ರವಿತನೂಭವಜ್ವಾರವಂ: **ಪಂಪಭಾ,** ೧೨. ೧೩೬)

ಗಳ – [ಅ] ಆಶ್ಚರ್ಯಸೂಚಕ ಉದ್ಗಾರ (ಪುರ್ವಿನ ಪೊಡರ್ಪೊಳಕೊಂಡುದವಳ್ಗೆ ಗರ್ಭಚಿಹ್ನಮೆ ಗಳ ಗರ್ಭದರ್ಭಕನ ಸೂಚಿಪ ಮುಂದಣ ರಾಜ್ಯಚಿಹ್ನಮಂ: **ಪಂಪಭಾ,** ೧. ೧೨೦); [ನಾ] ಕೊರಳು (ಕರೀಂದ್ರ ಗಳ ಗರ್ಜನೆಯಿಂ ಪಟಹಪ್ರಣಾದಮಂ ಘನರವಮೆಂದೆ ನರ್ತಿಸುವ ಕೇಕಿಗಳಿಂ: **ಪಂಪಭಾ,** ೪. ೫)

ಗಳಗರ್ಜನೆ – [ನಾ] ಕೊರಳ ಗರ್ಜನೆ, ಹೂಂಕಾರ (ಕರೀಂದ್ರ ಗಳಗರ್ಜನೆಯಿಂ ಪಟಹಪ್ರಣಾದಮಂ ಘನರವಮೆಂದೆ ನರ್ತಿಸುವ ಕೇಕಿಗಳಿಂ: **ಪಂಪಭಾ,** ೪. ೫)

ಗಳಗಳಿತ – [ಗು] ಕೊರಳಿಂದ ಹೊಮ್ಮಿದ (ಭಯಾನಕೋಭಯತಟ ಗುಹಾಗಹ್ವರನಿರ್ಜಜ್ಜರದಜಗರ ಗಳಗಳಿತ ಗರಳಶಬಳಿತ ಸಲಿಲಪ್ರವಾಹೆಯಂ: **ಆದಿಪು,** ೫. ೮೭ ವ)

ಗಳತ್ – [ಗು] ಸುರಿಯುವ (ಅನವರತ ಗಳತ್ ಮದದುರ್ದಿನಾನನಂ ವರ್ಷಜಳಸಮನ್ವಿತಂ ಅಂಭೋದನಿನಾದಂ: **ಆದಿಪು,** ೧೧. ೨೯)

ಗಳನಿನಾದ – [ನಾ] ಕೊರಳ ಧ್ವನಿ (ದೀಪ್ತಕಂದರ್ಪದರ್ಪ ಕ್ಷುಭಿತ ಗಳನಿನಾದಂ ಪ್ರಸ್ಫುರದ್ಧರ್ಮವಾರಿ ಪ್ರಭವಂ: **ಪಂಪಭಾ,** ೫. ೨೮)

ಗಳಿತ – [ಗು] ಬಿಟ್ಟುಹೋದ (ಅಂತು ಗಳಿತಗರ್ವನಾಗಿ ಸಿಗ್ಗಾಗಿ ಪೂರ್ವಾವನಿಪಾಳ ಪ್ರಶಸ್ತಿಯೊಳೊಂದಂ ದಂಡರತ್ನದಿಂ ಸೀಂಟಿ ಕಳೆದು: **ಆದಿಪು,** ೧೩. ೭೧ ವ); [ಗು] ಜಾರಿದ (ಅಧಿಕಬಳ ನಳ ಕರತಳಗಳಿತ ಕುಳಶೈಲಸಹಸ್ರಸಂತಾನಕಳಿತ ಸೇತುಬಂಧುರಮುಂ: **ಪಂಪಭಾ,** ೪. ೧೮ ವ); [ಗು] ಸುರಿದ (ಗಂಡಗುಣಕ್ಕಾಧಾರಮಾಗಿ ಮದಗಳಿತ ಗಂಡಪ್ರಚಂಡ ಮದವೇತಂಡಮಮಂ ಅಣೆದು ಬಿಟ್ಟಾಗಳ್: **ಪಂಪಭಾ,** ೧೨. ೮೬ ವ)

ಗಳಿತಗರ್ವ – [ನಾ] ಸೋರಿಹೋದ ಗರ್ವವುಳ್ಳವನು (ದುರ್ಯೋಧನಂ ದಾಡೆಗಳಿದ ಕುಳಿಕನಂತೆಯುಂ ಕೋಡುಡಿದ ಮದಹಸ್ತಿಯಂತೆಯುಂ ನಖಮುಡಿದ ಸಿಂಹದಂತೆಯುಂ ಗಳಿತಗರ್ವನಾಗಿ: **ಪಂಪಭಾ,** ೭. ೩೯ ವ)

ಗಳಿಯಿಸು – [ಕ್ರಿ] ಸೋರಿಹೋಗು (ಮಾಗಧಕಿರೀಟರತ್ನಾಂಶುಗಣಂ ಗಳಿಯಿಸಿದುವು ಅವನ ಗರ್ವಮೆ ಗಳಿಯಿಸುವಂತಿರೆ ನೃಪೇಂದ್ರಪದಸರಸಿಜದೊಳ್: **ಆದಿಪು,** ೧೨. ೧೧೨)

ಗಱೆಸನ್ನೆಗೆಯ್ – [ಕ್ರಿ] ಯುದ್ಧಾರಂಭದ ಸೂಚನೆಯಾಗಿ ಬಾಣದ ಗರಿಯಿಂದ ಸನ್ನೆ ಮಾಡು (ಗಱೆಸನ್ನೆಗೆಯ್ದು ತೆಗೆನೆಱೆದು ಎಱಗಿ ಪರಂಕಲಿಸಿ ಪರ್ವಿ ಕೂಕಿಱಿದು ಇಸೆ ಕೆಂಗಱೆಯ ಮೊನೆಯಂಬುಗಳ್ ಕಣ್ದೆಱೆಯಿಸಿದುವು ಪೊಣರ್ವ ಬಿಲ್ಲ ಕಡುವಿತ್ತೆಗರಂ; **ಪಂಪಭಾ,** ೧೦. ೭೩)

ಗಟಿಪು – [ಕ್ರಿ] ಹರಟು (ಎಳಸುವ ಪುರುಳಿಯ ಗಟಿಪುವ ಗಿಳಿಯ ತೆಱಂದಿರಿದು ಮೊರೆವ ಪೆಣ್ದುಂಬಿಯ ಬಿಚ್ಚಳಿಪ ಪರಭೃತದ: **ಆದಿಪು,** ೬. ೯೪); [ಕ್ರಿ] ಸಂಭಾಷಿಸು (ಗಿಳಿಗಳೊಳೆ ಗಟಿಪಿ ಮೊಱೆವಳಿಕುಳದೊಡನಾಳ್ಕೈಸಿ ಪುರುಳಿಯೊಡನೆಳಸಿ ನವಿಲ್ಗಳ ಬಳಗದೊಡನೆ ನರ್ತಿಸಿ: **ಆದಿಪು,** ೧೧. ೮೨)

ಗಟಿಪು – [ಕ್ರಿ] ಗಳಿಸು, ಸಂಪಾದಿಸು (ಅಟಿಪದೆ ಪದಗಟಿಪದೆ ಪೊಂಪುಟಿವೋಗೆ ಯಶಃಪ್ರಕಾಶಂ ಈಗಳೆ ಧರೆಯಂ ಪಟಿಕೆಯ್ದು: **ಆದಿಪು,** ೪. ೮೭)

ಗಟಿಯಿಸು – [ಕ್ರಿ] ಸಂಪಾದಿಸು (ಕಟಿದವರ್ಗೆ ಅಟ್ಟುವುದು ಅಟಿಸ್ತೊಡೆ ಅವರ್ ಏಟಿಸ್ವೊಡಂ ಅಂತವರಿಂ ಬಟಿಕ್ಕೆ ತಾಂ ಉಟಿವೊಡಂ ಏಟಿರ್ ಅಂತು ಅವರ್ ಅಣಂ ತಮಗಂ ಬರ್ದುಕಿಲ್ಲ ಧರ್ಮಮಂ ಗಟಿಯಿಸಿಕೊಳ್ವುದೊಂದೆ ಚದುರ್: **ಪಂಪಭಾ,** ೨. ೨೭); [ಕ್ರಿ] ಉಂಟಾಗು (ಕಟಿಯಲರಾದ ಸಂಪಗೆಯ ಬಣ್ಣದವೋಲೆ ಬೆಳರ್ತ ಬಣ್ಣದೊಳ್ ಗಟಿಯಿಸೆ ಕೆಂಪು ಕಣ್ಗಳ ಮೊದಲ್ಗಳೊಳ್: **ಪಂಪಭಾ,** ೪. ೬೧); [ಕ್ರಿ] ಏರ್ಪಡಿಸು, ಉಂಟು ಮಾಡು (ಪಟವಾಡಯ್ದನೆ ಬೇಡೆಯುಂ ಕುಡದ ನಾನೇನೆಂದು ಸಂಧಾನಮಂ ಗಟಿಯಿಪ್ಪೆಂ: **ಪಂಪಭಾ,** ೧೩. ೨೪)

ಗಟಿಸ್ವಟಿಯ ಪಾವು – [ನಾ] [ಗಟಿಸ್+ಬಟಿ] ಬಿದಿರ ಗಣೆಯ ಮೇಲೆ ಬರುವ ಹಾವು, ತೆಕ್ಕೆಹಾಕಿಕೊಂಡ ಹಾವು (ಅನ್ನೆಗಂ ಇತ್ತ ನರನಂದನನ ಬಟಿವಟಿಯಂ ತಗುಳ್ದು ಗಟಿಸ್ವಟಿಯ ಪಾವಿನಂತೆ ಚಕ್ರವ್ಯೂಹಮಂ ಪುಗಲ್ ಎಂದು ಬರ್ಪ ದ್ರುಪದ .. .. ಘಟೋತ್ಕಚಾದಿಗಳೊಡನೆ ಮಲ್ಲಾಮಲ್ಲಿಯಾಗಿ ಕಾದುವ ಕುಂಭಸಂಭವನಲ್ಲಿಗೆ ದುರ್ಯೋಧನಂ ಬಂದು: **ಪಂಪಭಾ,** ೧೧. ೯೬ ವ)

ಗಟ್ಟನೆ ಕೊಳ್ – [ಕ್ರಿ] ಗಕ್ಕನೆ ಕುಡಿ (ಗಟ್ಟನೆ ಕೊಳೆ ಕಡುಗೆಂಪಿನೊಳ್ ಅಟ್ಟಿಮೆಗೊಳಗಪ್ಪವೆಂದು ಮಧುಪಂಗಳ್ ತಮ್ಮಟ್ಟಿಮೆಯ ಚೌತಮಾಗಿರೆ: **ಆದಿಪು,** ೧೧. ೧೧೯)

ಗಾಂಗೇಯ – [ನಾ] ಗಂಗೆಯ ಮಗ, ಭೀಷ್ಮ (ಕೌರವಬಲದ ಸೇನಾನಾಯಕಂ ಗಾಂಗೇಯನಡ್ಡಮಾಗೆ: **ಪಂಪಭಾ,** ೧೦. ೫೨ ವ)

ಗಾಂಗೇಯನಂ – ಭೀಷ್ಮನನ್ನು ಕುರಿತು, ಭೀಷ್ಮನಿಗೆ (ಆ ಮಾತಿಗೆ ಮೆಚ್ಚಿ ಜಗದೇಕಮಲ್ಲನಂ ತೊಡೆಯನೇಱೆಸಿಕೊಂಡು ಕುಂಭಸಂಭವಂ ಗಾಂಗೇಯನಂ ಇಂತೆಂದಂ: **ಪಂಪಭಾ,** ೨. ೫೪ ವ)

ಗಾಂಡೀವ – [ನಾ] ಅರ್ಜುನನ ಬಿಲ್ಲು (ಕೋಪಾಗ್ನಿ ಕೆಯ್ಗಣ್ಮಿ ಕಣ್ಮಲರೊಳ್ ಬಂದಿರೆ ನೋಡಿದಂ ಕಲುಷದಿಂ ಗಾಂಡೀವಿ ಗಾಂಡೀವಮಂ: **ಪಂಪಭಾ,** ೭. ೭)

ಗಾಂಡಿವಿ – [ನಾ] ಅರ್ಜುನ (ಪವನಜನಂತು ಪೂಣ್ದು ಯುವರಾಜನ ನೆತ್ತರನಾರ್ದು ಪೀರ್ದಂ ಇಂತು ಅವಗಡದಿಂ ದಿನೇಶಜನಂ ಅಂಕದ ಗಾಂಡಿವಿ ಕೊಂದಂ: **ಪಂಪಭಾ,** ೧೩. ೮)

ಗಾಂಡೀವಧನ್ವಂ – [ನಾ] ಅರ್ಜುನ (ಅಳಿನೀಳೋಜ್ವಳಸಹಸ್ರ ಕುಂತಳಂಗಳ್ ಪರಕಲಿಸಿ ಬಂದು ಪೊಱಮುಯ್ವಂ ಅಳ್ಳಿಱೆಯೆ ಪಚ್ಚುಗಂಟಿಕ್ಕಿ ಗಾಂಡೀವಧನ್ವಂ ಸನ್ನದ್ಧನಾಗಿರ್ಪನ್ನೆಗಂ: **ಪಂಪಭಾ,** ೧೨. ೨೦೨ ವ)

ಗಾಂಡೀವಿ – [ನಾ] ಅರ್ಜುನ (ಕೋಪಾಗ್ನಿ ಕೆಯ್ಗಣ್ಮಿ ಕಣ್ಮಲರೊಳ್ ಬಂದಿರೆ ನೋಡಿದಂ ಕಲುಷದಿಂ ಗಾಂಡೀವಿ ಗಾಂಡೀವಮಂ: **ಪಂಪಭಾ,** ೭. ೭)

ಗಾಂಧರ್ವವಿದ್ಯೆ – [ನಾ] ಸಂಗೀತವಿದ್ಯೆ (ನಾರದಾದಿ ಪ್ರಣೀತ ಗಾಂಧರ್ವವಿದ್ಯಾವಿಶೇಷಂಗಳೊಳಂ ಭರತಪ್ರಣೀತ

ನೃತ್ಯಶಾಸ್ತ್ರದೊಳಂ .. .. ಅತಿಪ್ರವೀಣನುಂ: **ಪಂಪಭಾ,** ೨. ೩೪ ವ)

ಗಾಂಧರ್ವಶಾಸ್ತ್ರ – [ನಾ] ಗಾಂಧರ್ವವಿದ್ಯೆ (ವೃಷಭಸೇನಂಗೆ ಗೀತವಾದ್ಯಾರ್ಥಸಂಗ್ರಹಮಪ್ಪ ಗಾಂಧರ್ವಶಾಸ್ತ್ರಮುಮಂ ಅನಂತವೀರ್ಯಂಗೆ ವಿಚಿತ್ರ ಚಿತ್ರಕಳೆಯುಮಂ ವಾಸ್ತುವಿದ್ಯೆಯುಮಂ: **ಆದಿಪು,** ೮. ೬೦ ವ)

ಗಾಂಧಾರ – [ನಾ] ಸಂಗೀತ (ದಕ್ಷಿಣೋತ್ತರಶ್ರೇಣಿಗಳಂ ನಮಿವಿನಮಿಗಳ್ಗೆ ಕೊಟ್ಟು ಗಾಂಧಾರಪನ್ನಗವಿದ್ಯೆಗಳನವರ್ಗೆ ವಿಧಿಪೂರ್ವಕಮಿತ್ತು: **ಆದಿಪು,** ೯. ೧೨೧ ವ)

ಗಾಂಧಾರನಾದ – [ನಾ] ಸಂಗೀತಧ್ವನಿ (ಮತ್ತಾಳಿನೀಗೀತ ಪಂಚಮಹಾಶಬ್ದವಿಜೃಂಭಿತಧ್ವನಿ ಲಸತ್ ಗಾಂಧಾರನಾದಂ: **ಆದಿಪು,** ೧೨. ೪೮)

ಗಾಂಪು – [ನಾ] ದಡ್ಡತನ (ಪರಿಜನದಿಂದಪ್ಪುದುಂ ಏನೊಂದುಮಿಲ್ಲ ಅಚ್ಚಿಗಮೊಂದುಂಟು ಅಲ್ಲಿ ಗಾಂಪಿಂ ತೊಡರ್ವನೆ: **ಆದಿಪು,** ೬. ೨೬)

ಗಾಡಿ – [ನಾ] ಚೆಲುವು, ಬೆಡಗು (ಒಲಿಸುವ ರೂಪು ಗಾಡಿಯೊಳೊಡಂಬಡೆ ಗಾಡಿ ವಿಳಾಸದೇಟ್ಗೆಯೊಳ್ ನೆಲಸೆ: **ಆದಿಪು,** ೧. ೭೨)

ಗಾಡಿಕಾರ್ತಿ – [ನಾ] ಸೊಗಸುಗಾತಿ (ಒಲ್ದು ನೋಡುವ ಗಾಡಿಕಾರ್ತಿಯರ ಕಣ್ಗೆ ಕಾಮನ ಅಡ್ಡಣದಂತೆ ದೊಡ್ಡಿತ್ತಾಗಿ ಮೀಱುವ ಉದ್ದೃತ್ತವೃತ್ತತೆಯಂ ಈಟ್ಟುಕೊಂಡಂತೆ ಉದ್ದೃತ್ತಂಗಳಾದುವು: **ಪಂಪಭಾ,** ೨ ೩೯ ವ)

ಗಾಡಿವೆಱು – [ಕ್ರಿ] ಸೊಬಗೇರು (ಕಪೋಲದೊಳ್ ನವಧೂಮಲೇಖೆ ಚೆಲ್ವಿದಿರ್ಗೊಳೆ ಗಾಡಿವೆತ್ತು ಅಡರ್ದು ಕತ್ತುರಿಯೊಳ್ ಮದವಟ್ಟೆಯಂ ವಿಳಾಸದೆ ತೆಗೆದಂತೆ: **ಪಂಪಭಾ,** ೩. ೭೬)

ಗಾಣ – [ನಾ] ಗಾಯಕ (ಜಿನುಗುವ ತುಂಬಿಯಿಂಚರಮೆ ಗಾಣರ ಕಾಕಳಿ ಕೂಡೆ ಸೋರ್ವ ಮಾವಿನ ಸೊನೆ ಗಂಧಸಿಂಧುರಮದಂ: **ಆದಿಪು,** ೧೩. ೬)

ಗಾಣಿಕ್ಯ – [ನಾ] ಸೂಳೆಯರ ಗುಂಪು (ಸಕಳಕ್ಷ್ಮಾಚರ ಖೇಚರಾಂಚಿತ ಮಹಾಮಾಣಿಕ್ಯಗಾಣಿಕ್ಯ ಹಾಸ್ತಿಕ ರತ್ನೋರ್ಜಿತ ಚಕ್ರವರ್ತಿವಿಭವಂ: **ಆದಿಪು,** ೧೬. ೮)

ಗಾತ್ರ – [ನಾ] ಆನೆಯ ಮುಂಗಾಲು (ಹ್ರಸ್ವಚೂಚುಕನುಂ ಸಯವೃತ್ತಾಪಸ್ಕಾರನುಂ ಸುಸಂಚಿತ ಪ್ರೋಹಪಳಿಹಸ್ತ ಗಾತ್ರನುಂ: **ಆದಿಪು,** ೧೨, ೫೬ ವ); [ನಾ] ದೇಹ (ನೀಂ ಬರೆ ಪೆಱತೇಂ ಕಂಸಾರೀ ಯುಷ್ಮತ್ ಪದಪಾಂಸುಗಳಿಂದೆ ಆಂ ಪವಿತ್ರಗಾತ್ರನೆಂ ಆದೆಂ: **ಪಂಪಭಾ,** ೯. ೩೨)

ಗಾತ್ರಾಪರ – [ನಾ] ಆನೆಯ ಮುಂಗಾಲು ಮತ್ತು ಹಿಂಗಾಲು (ಅರ್ಧಚಂದ್ರಾಕಾರವಿಂಶತಿನಖನುಂ ಅಪೂರ್ವೋಚಿತ ಮಾಂಸಸ್ಫೀತನೋಪದಿಗ್ಧ ಗಾತ್ರಾಪರನುಂ: **ಆದಿಪು,** ೧೨. ೫೬ ವ)

ಗಾದಿಗೆ – [ನಾ] [ಖಾತಿಕಾ] ಕಂದಕ (ಮಧುರಾಪುರಮಂ ಬಿಸುಟ್ಟು ಪೋಗಿ ದ್ವಾರಾವತಿಯಂ ಸಮುದ್ರಮೆ ನೀರ್ಗಾದಿಗೆಯಾಗಿ ಮಾಡಿದೆಂ: **ಪಂಪಭಾ,** ೬. ೨೬ ವ)

ಗಾನಪಾತ್ಯ – [ನಾ] ಹಾಡಲು ಬಳಸುವ ಪಠ್ಯ, ಹಾಡಿನ ಸಾಹಿತ್ಯ ಥವಾ ಹಢುಗಾರಿಕೆ ಮತ್ತು ಸಂಭಾಷಣೆ ? (ಗಾನಪಾತ್ಯದೊಳ್ ವಾಚಕಮಂ ತುಂಗಕುಚೆ ಮೆಱೆದಳ್ ಆ ದಿವಿಜಾಂಗನೆಗೆ ಆಹಾರ್ಯ ಸಾತ್ವಿಕಂ ನಿಜಮೆ ವಲಂ: **ಆದಿಪು,** ೯. ೨೮)

ಗಾಯ – [ನಾ] ಮಲ್ಲಯುದ್ಧದ ಪಟ್ಟು (ಕರಣಂಗಳ ಗಾಯಂಗಳ ಪರಿಣತಿಯಂ ಮೆಱೆದು ಪೊಣರ್ದು: **ಆದಿಪು,** ೧೪. ೧೧೦)

ಗಾರ್ಹಪತ್ಯ – [ನಾ] ತ್ರೇತಾಗ್ನಿಗಳಲ್ಲಿ ಒಂದು (ಶರೀರ ಸಂಸ್ಕಾರಾದಿ ಗಾರ್ಹಪತ್ಯ ದಕ್ಷಿಣಾಗ್ನಿ ಆಹವನೀಯವೆಂಬ ಪೆಸರಂ ಪಡೆದ ಅಗ್ನಿತ್ರಯಂಗಳೊಳ್: **ಆದಿಪು,** ೧೫. ಅ೬ ವ)

ಗಾವರ – [ನಾ] ಧ್ವನಿ (ಉಣ್ಮುವ ಉಯ್ಯಲ ಪೊಸ ಗಾವರಂ ಪುಗಿಲೊಳ್ ಏಂ ಎಸೆದತ್ತೋ ಬಸಂತಮಾಸದೊಳ್: **ಪಂಪಭಾ,** ೨. ೧೨); [ನಾ] ದುಂಬಿಯ ಝೇಂಕಾರ (ತುಂಬಿಯ ಗಾವರಂಗಳಂ ಗೆಡೆಗೊಳೆ ಚಂದ್ರಿಕಾಪ್ರಭೆ ಮೊದಲ್ಗಿಡೆ ನಾಡೆ ವಿತರ್ಕದಿಂ ಬೆರಲ್ಮಿಡಿದು ಗುಣಾರ್ಣವಂ ನೆಱೆಯೆ ನಿಟ್ಟಿಸಿದಂ ಬೆಳಗಪ್ಪ ಜಾವಮಂ **ಪಂಪಭಾ,** ೪. ೧೧೦)

ಗಾವರಿಸು – [ನಾ] ಝೇಂಕರಿಸು (ಸೊವಡೊಳ್ ಕಡುಸೊರ್ಕುಸೊರ್ಕಿ ಗಾವರಿಸುವ ತುಂಬಿ: **ಆದಿಪು,** ೨.೫)

ಗಾವಿಲ – [ನಾ] [ಗ್ರಾಮೀಣ] ಹೆಡ್ಡ (ಏಂ ಗಾವಿಲನಯೊ ನಿನ್ನಂ ನುಂಗುವುದರ್ಕೆ ಇವರಂ ಎತ್ತವೇಟ್ಕುಮೇ: **ಪಂಪಭಾ,** ೩. ೧೭)

ಗಾವುದು – [ನಾ] [ಗವ್ಯೂತ] ಗಾವುದ, ಎರಡು ಹರಿದಾರಿಗಳಷ್ಟು ದೂರ (ನರರಥಂ ತೂಳ್ದು ಆ ಕುರುಕ್ಷೇತ್ರದಿಂ ಪಡುವು ಎಣ್ಗಾವುದು ಪೋಗೆ ಪೋ ಗಡ ಇಸುವೆಂ: **ಪಂಪಭಾ,** ೧೦. ೨೫)

ಗಾವುಳಿ – [ನಾ] ಸಮೂಹ (ಬಳಸಿ ತನ್ನೊಡನೆ ಒಯ್ಯನೊಯ್ಯನೆ ಬರ್ಪ ದೇವರದೊಂದು ಗಾವುಳಿಯಂ ಇನ್ನಿರಿಂ ಎಂದು ತನ್ನನೆ ನಿಳ್ಕಿ ನೋಟ್ಪರ ಕಣ್ಗೆ: **ಪಂಪಭಾ,** ೬. ೭)

ಗಾಳಿ – [ನಾ] ಗಾಳಿ ಬೀಸುವ ದಿಕ್ಕು, ಕಿಗ್ಗಾಳಿ ಮೇಗಾಳಿಗಳು (ಮೃಗಮಂ ಗಾಳಿಯಂ ಇರ್ಕೆಯಂ ಪಕ್ಕೆಯಂ ಗಣಿದಮಂ ಕಂಡಿಯಂ ಮಾರ್ಕಂಡಿಯಂ: **ಪಂಪಭಾ,** ೫. ೪೩)

ಗಾಳಿಸು – [ಕ್ರಿ] ನಿವಾರಿಸು (ಆ ಮುನಿರಾಜಂ ಕರ್ಮಂಗಳಂ ಗಾಳಿಸಿದಂ ಈ ರಾಜರಾಜಂ ಷಟ್ಖಂಡಮಂಡಳಮಂ ಬಾಯ್ಕೇಳಿಸಿದಂ: **ಆದಿಪು,** ೬. ೨೪ ವ)

ಗಾಳುಗೊರವ – [ನಾ] ಕ್ಷುದ್ರ ಜೋಗಿ (ಗಾಳು ಗೊರವಂ ತಗುಳ್ಚಿ ಪಳಾಳಮಂ ಏನೊಂದನಪ್ಪೊಡಂ ಗಟಪಿದೊಡೆ ಆ ಬೇಳುನುಡಿ ಕೇಳ್ದು ಕೆಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ: **ಪಂಪಭಾ,** ೬. ೨೪)

ಗಾಳುಮಿರ್ – [ಕ್ರಿ] ಒರಟಾಗಿರು (ಮನೋಭವಂ ಗಾಳುಮಿರ್ಪವೊಲಿರ್ದ ಅತಿರಕ್ತಾಶೋಕದ ಸುತ್ತಿನೊಳಿರ್ದ ರೂಕ್ಷಾಳಕಂಗಳಂ ಓಸರಿಸುತ್ತುಂ: **ಆದಿಪು,** ೩. ೩೦)

ಗಾಳ್ತೊಟ್ಟು – [ನಾ] [ಗಾಳ್+ತೊಟ್ಟು] ತುಂಟತೊತ್ತು, ಗಣನೆಗೆ ಬಾರದ ದಾಸಿ (ಒಂದೆಡೆಯೊಳ್ ನಾಲ್ವರಯ್ವರ್ ಗಾಳ್ತೊಟ್ಟಿರ್ ಇರ್ದಲ್ಲಿಗೆ ಒರ್ವಂ ಎಗ್ಗಂ ಗೊಟ್ಟಿಗೆ ವಂದು: **ಪಂಪಭಾ,** ೪. ೯೫ ವ)

ಗಿಜಿಗಿಜಿಯಾಗು – [ಕ್ರಿ] ಅಜ್ಜಿಬಜ್ಜಿಯಾಗು (ಧ್ವಜಮುಂ ಬಿಸುಗೆಯುಂ ಏಱಿರ್ದ ಜೋದರುಂ ಬೆರಸು ಗಜೆಯಿನರಿಗಜಘಟೆಯಂ ಗಿಜಿಗಿಜಿಯಾಗಿರೆ ಪೊಯ್ದೊಡೆ: **ಪಂಪಭಾ,** ೧೦. ೧೦೬)

ಗಿಜಿಬಿಜಿಮಾಡು – [ಕ್ರಿ] ನಜ್ಜುಗುಜ್ಜುಮಾಡು (ಭವತ್ ಊರುಯುಗಂಗಳಂ ಆಜಿರಂಗದೊಳ್ ಗಿಜಿಬಿಜಿಮಾಡಲೆಂದು ಅವನ ಪೂಣ್ದುದು ನಿಕ್ಕುವಂ ಆಗದಿರ್ಕುಮೇ: **ಪಂಪಭಾ,** ೯. ೫೨)

ಗಿಡಿ – [ಕ್ರಿ] ತುರುಕು (ಅಡಗಿನ ಬಸನಿಗನ್ನೈ ತಿಂ ಪಿಡಿಯೆಂದವನಡಗಂ ಅವನ ಬಾಯೊಳ್ ಗಿಡಿವರ್: **ಆದಿಪು,** ೫. ೮೬)

ಗಿಡಿಗೆ – [ನಾ] [ಕೀಟಿಕಾ] ಡೇರೆ (ಸ್ಥಪತಿರತ್ನವಿರಚಿತ ಅಂಬರಗೋಚರ ರಥನಿಕರಂಗಳುಂ ವಜ್ರದ ಗಿಡಿಗೆಗಳುಂ: **ಆದಿಪು,** ೧೩. ೬೦ ವ)

ಗಿರಿಜಾತೆ – [ನಾ] ಪಾರ್ವತಿ (ವನಚರನಾಗಿ ಶಂಭು ಗಿರಿಜಾತೆಯಂ ಓತು ಪುಳಿಂದಿ ಮಾಡಿ ನಚ್ಚಿನ ಗುಹನಂ ಕಿರಾತಬಲನಾಯಕನಾಗಿರೆ ಮಾಡಿ: **ಪಂಪಭಾ,** ೮. ೧೪)

ಗಿರಿದುರ್ಗ – [ನಾ] ಪರ್ವತಗಳ ನಡುವೆ ಕಟ್ಟಿದ ಕೋಟೆ (ಅಭ್ರಂಕಷಶಿಖರಿಶಿಖರದುರ್ಲ್ಲಂಘ್ಯಮಪ್ಪ ಗಿರಿದುರ್ಗದ ಪೆಂಪುಮಂ: **ಆದಿಪು,** ೧೩. ೫೭ ವ)

ಗಿಳಿವಿಂಡು – [ನಾ] [ಗಿಳಿ+ಪಿಂಡು] ಗಿಳಿಗಳ ಬಳಗ (ಇಂತಿದು ಪತ್ತಳೆ ಎಂದು ಸಾಱುವಂದಂ ಮಿಗೆ ಕರ್ಚಿ ಪಾಱೆದುವು ಕೆಂದಳಿರಂ ಗಿಳಿವಿಂಡಿನೋಳಿಗಳ್: **ಪಂಪಭಾ,** ೫. ೩೧)

ಗಿಱ್ಱನೆ – [ಅ] ಗಿರ್ರೆಂದು (ಒಡಲುರಿಗುಂ ಮನಂ ಮಱುಗುಗುಂ ಕಿವಿ ಗಿಱ್ಱನೆವೋಕುಂ ಅತ್ತ ಕಣ್ಪಿಡುಗುಗುಂ: **ಆದಿಪು,** ೧೨. ೪೦)

ಗೀರ್ವಾಣ – [ನಾ] ದೇವತೆ (ಪ್ರವಿಮಲಸದ್ಗೀರ್ವಾಣದಾತವ್ಯ ಸಾಯಕ ಸಂಪೂರ್ಣ ಕಳಾಪ್ರವೀಣನಂ .. .. ಅಪ್ಪ ಮಗನಂ ಅಮೋಘಂ ಪಡೆವೆಂ: **ಪಂಪಭಾ,** ೧. ೧೩೪ ಮತ್ತು ೧೩೪ ವ)

ಗೀರ್ವಾಣನಾಥ – [ನಾ] ಇಂದ್ರ (ಏಕಪಾದತಪದೊಳ್ ನಿಲೆ ಗೀರ್ವಾಣನಾಥಾತ್ಮಜನಲ್ಲಿಗೆ ಗುಹನಂ ಅಹಿಭೂಷಣನ ಅಂಬಂ ಬೇಡಿ ಅಟ್ಟಿದೊಡೆ: **ಪಂಪಭಾ,** ೮. ೧೬ ವ)

ಗೀರ್ವಾಣಾರಿ – [ನಾ] [ಗೀರ್ವಾಣ+ಅರಿ] ದೇವತೆಗಳ ಶತ್ರು, ರಾಕ್ಷಸ (ಎಂದು ಅನಿತಱೊಳ್ ಮಾಣದೆ ಗೀರ್ವಾಣಾರಿ ಅಸುರಾರಿಯಂ ಇಂತೆಂದಂ; **ಪಂಪಭಾ,** ೬. ೪೯ ವ)

ಗೀರ್ವಾಣಾವಾಸ – [ನಾ] [ಗೀರ್ವಾಣ+ಆವಾಸ] ಸ್ವರ್ಗ (ಶೋಣಾಶ್ವಂಗಳ್ ರಜತರಥಮಂ ಪೂಡೆ ಕುಂಭಧ್ವಜಂ ಗೀರ್ವಾಣಾವಾಸಂಬರಂ ಅಡರೆ ಮಾಱೊಡ್ಡೆ ದಲ್ ಸಾಲದು ಎನ್ನೀ ಬಾಣಾವಾಸಕ್ಕೆ ಎನುತುಂ: **ಪಂಪಭಾ,** ೧೧. ೫೬)

ಗುಂಜತ್ – [ನಾ] ಮೆಲುದನಿ ಮಾಡುವ (ಸುರಗಣಿಕಾ ಗುಂಜನ್ಮಣಿ ರಶನಾಮಣಿ ಮಂಜೀರ ಮಂಜುಶಿಂಜಿತಂ ರಂಜಿಸುಗುಂ: **ಆದಿಪು,** ೮. ೧೮)

ಗುಂಡಿಗೆವೊಗು – [ಕ್ರಿ] ಎದೆ ಸೇರು (ಕೊಂದೆನ್ನ ಮಗನಂ ಇಂ ಭಯದಿಂದಂ ರಸೆವೊಕ್ಕುಂ ಅಜನ ಗುಂಡಿಗೆವೊಕ್ಕುಂ ಮಂದರಧರನ ಈ ಪೊರ್ಕುಟಿ ಪೊಂದಾವರೆವೊಕ್ಕು ಮೇಣವಂ ಬರ್ದುಂಕುವನೇ: **ಪಂಪಭಾ,** ೧೧. ೧೨೧)

ಗುಂಡಿತ್ತು – [ನಾ] ಆಳ (ಆದಲೆ ಗುಂಡಿತ್ತೆಂದು ಈದಲೆಯೊಳೆ ನಿಂದು ಸತಿಗೆ ಹರಿಗಂ ತೋಱುತ್ತ ಆದರದೆ ಜಾನುದಘ್ನಂ ಉರೋದಘ್ನಂ ಕಂಠದಘ್ನಂ ಎಂಬ ಅಳವಿಗಳಂ: **ಪಂಪಭಾ.** ೫. ೬೨)

ಗುಂಡು – [ನಾ] ಸಮೂಹ, ಗುಂಪು (ಇದಿರೊಳ್ ಕಂಡಂ ನೆರೆದು ನಿಗುಂಬಿಸಿ ತಂಡಂಗೊಂಡಿರ್ದ ನರರ ಖಚರರ ಗುಂಡಂ: **ಆದಿಪು,** ೪. ೩)

ಗುಂಡುದೀವು – [ನಾ] ಕಲ್ಲುಗಳಿಂದ ತುಂಬು (ಅದೇಂ ನೆಱೆ ಪೋಲ್ತುದೊ ಚಂಡಹುಂಡಸಂಸ್ಥಾನದೆ ಗುಂಡುದೀವಿದ ತಡಂಗಮಂ: **ಆದಿಪು,** ೫. ೯೦)

ಗುಚ್ಛ – [ನಾ] ಮೂವತ್ತೆರಡು ಎಳೆಗಳುಳ್ಳ ಹಾರ (ವಿಜಯಚ್ಛಂದಹಾರ ದೇವಚ್ಛಂದ ಅರ್ಧಹಾರ ರಶ್ಮಿಕಳಾಪ ಗುಚ್ಛ ನಕ್ಷತ್ರಮಾಳಾ ಅರ್ಧಗುಚ್ಛ: **ಆದಿಪು.** ೮. ೫೪ ವ)

ಗುಜುಗುಜುಗೊಳ್ – [ಕ್ರಿ] ಪಿಸುಮಾತನಾಡಿಕೊ (ಎಂದು ಪೊಟಿಲ ಜನಂಗಳ್ ಗುಜುಗುಜುಗೊಂಡು ಕೀಚಕನ ಪಡೆಮಾತನೆ ನುಡಿಯೆ: **ಪಂಪಭಾ,** ೮. ೮೨ ವ)

ಗುಜ್ಜರಿಗಟಿ್ – [ನಾ] ಗುರ್ಜರದೇಶದ ಕತ್ತೆ (ಸೀಗುರಿ ಕಾಪಿನಾಳ್ ಕುಣಿದು ಮೆಟ್ಟುವ ಗುಜ್ಜರಿಗಟಿ್: **ಪಂಪಭಾ,** ೪. ೮೭) [ಪರಿಷತ್ತಿನ ಆವೃತ್ತಿ]

ಗುಜ್ಜು – [ನಾ] ಅಂತಃಪುರದ ಸೇವಕನಾದ ಕುಳ್ಳ (ಬಳಸಿದ ಗುಜ್ಜುಗಳ್ ನೆರೆದ ಮೇಳದ ಕನ್ನೆಯರ್: **ಪಂಪಭಾ,** ೪. ೪೦)

ಗುಡ – [ನಾ] ಬೆಲ್ಲ (ಪಿಷ್ಟ ಉದಕ ಗುಡ ಧಾತಕೀ ಸಂಯೋಗದಿಂದಂ ಎಂದು ಮದವಿಕಾರಮೆಸೆದಿಪ್ಪುದು: **ಆದಿಪು,** ೨. ೯)

ಗುಡಿ – [ನಾ] ಬಾವುಟ (ನೆಲೆಮಾಡಂಗಳೊಳ್ ಓಳಿವಟ್ಟ ಗುಡಿಗಳ್ ಗಂಧಾಂಬುವಿಂದಾದ ಪೂವಲಿಯಿಂ ಚೆಲ್ವೆಸೆದಿರ್ದ ಬೀದಿಗಳ್: **ಆದಿಪು,** ೭. ೧೧೩); [ನಾ] [ಕುಟೀ] ಗುಡಾರ, ಡೇರೆ (ಬೀಡಿಂಗೆ ಬೀಡುವಿಡಲ್ ನೆಲನುಂ .. .. ಗುಡಿಯ ಗೂಂಟಕ್ಕೆ ಬಲ್ಲಡವಿಗಳುಂ: **ಪಂಪಭಾ,** ೯. ೧೦೪ ವ); [ನಾ] ಧ್ವಜಾರೋಹಣ, ಬಾವುಟ ಹಾರಿಸು (ಗುಡಿಗಂ ಬದ್ದವಣಕ್ಕಂ ಅಪ್ಪ ಪಡೆಮಾತಿದಂ ಲೇಽಲ್ಡೊಡೆ ಈಗಡೆ ಮೆಚ್ಚೀಯಲೆವೇಟ್ಟುದು: **ಪಂಪಭಾ,** ೮. ೮೩)

ಗುಡಿಗಟ್ಟು – [ಕ್ರಿ] ಉತ್ಸಾಹ ಹೊಂದು, ರೋಮಾಂಚನಗೊಳ್ಳು (ಕೋಗಿಲೆಯಕ್ಕೆ ಎಲರಕ್ಕೆ ತುಂಬಿಯಕ್ಕೆ ಅರಗಿಳಿಯಕ್ಕೆ ಬಂದೊಡಂ ಒಱಲ್ದೊಡಂ ಎರ್ದೆಯಾಱುವರೆಂದೊಡೆ ಓತ ದೂತರೆ ತರೆ ಬಂದ ಸಬ್ಬವದ ಮಾತುಗಳಂ ಗುಡಿಗಟ್ಟಿ ಕೇಳರೇ: **ಪಂಪಭಾ,** ೪. ೧೦೧); [ಕ್ರಿ] ಧ್ವಜಗಳನ್ನು ಕಟ್ಟು (ನೀರದಪಥದೊಳ್ ತಗುಳ್ದು ಅರಿಗನಂ ಪೊಗೞ್ದಾಡಿದಂ ಅಂದು ದಂಡಕಾಷ್ಠದ ತುದಿಯೊಳ್ ಪಳಂಚಲೆಯೆ ಕೋವಣವಂ ಗುಡಿಗಟ್ಟಿ ನಾರದಂ: **ಪಂಪಭಾ,** ೧೨. ೨೧೯)

ಗುಣ – [ನಾ] [ಜೈನ] ಕ್ಷಾಯಿಕ ಸಮ್ಯಕ್ತ್ವ, ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖ, ಸೂಕ್ಷ್ಮತ್ವ, ಅಗುರುಲಘುತ್ವ, ಅವ್ಯಾಬಾಧತ್ವ ಎಂಬ ಸಿದ್ಧರ ಎಂಟು ಗುಣಗಳು (ಆ ಮಹಾಯೋಗಿ ಗುಣಂಗಳಂ ಪಾಲಿಸಿದಂ ಈ ಮಹಾಭೋಗಿ ನೆಲನಂ ಪರಿಪಾಲಿಸಿದಂ : **ಆದಿಪು,** ೬. ೨೪ ವ); [ನಾ] ಪಟ್ಟು (ಜಿನತನುವಿಂ ದ್ವಾದಶಗುಣಂ ಎನಿಕುಂ ಪ್ರಾಕಾರವೇದಿಕಾನಿಕರಮದು ಈಶನ ತನುಗೆ ಚತುರ್ಗುಣಮಂತನಿಕುಂ ತೋರಣಮುಂ: **ಆದಿಪು,** ೧೦.

೪೫); [ನಾ] ಬಿಲ್ಲಿನ ಹಗ್ಗ (ವಿಜಯಶರಾಸನ ಗುಣಘಾತ ಕಾಳಿಕೆಯನೆತ್ತಮಗ್ಗಳಿಸಿದುದಾ ಭುಜಬಲಿಯ ಭುಜದ್ವಯದೊಳ್ ಭುಜಂಗನಿಶ್ವಾಸ ಧೂಮವೇಣೀನಿಕರಂ: **ಆದಿಪು,** ೧೪. ೧೪೧); [ನಾ] ಬಿಲ್ಲಿನ ಹೆದೆ (ವಿಜಯಶರಾಸನ ಗುಣಘಾತಜಾತಕಾಳಿಕೆಯಂ ಎತ್ತಮಗ್ಗಳಿಸಿದುದು ಆ ಭುಜಬಲಿಯ ಭುಜದ್ವಯದೊಳ್ ಭುಜಂಗನಿಶ್ವಾಸ ಧೂಮವೇಣೀನಿಕರಂ: **ಆದಿಪು,** ೧೪. ೧೪೧); [ನಾ] ಸ್ವಭಾವ (ವಿಪುಳ ಯಶೋವಿತಾನ ಗುಣಮಿಲ್ಲದನಂ ಪ್ರಭುಮಾಡಿ ಪೂರ್ವಭೂಮಿಪರ ಪದಗಳಂ ಪುಗಿಸಿ: **ಪಂಪಭಾ,** ೧. ೧೪); [ನಾ] ಕಾವ್ಯಗುಣ ಮತ್ತು ಸದ್ಗುಣ (ಆ ಸಕಳಾರ್ಥ ಸಂಯುತಂ ಅಳಂಕೃತಿಯುಕ್ತಂ ಉದಾತ್ತವೃತ್ತಿವಿನ್ಯಾಸಂ ಅನೇಕಲಕ್ಷಣ ಗುಣಪ್ರಭವಂ .. .. ನೆಗಟ್ತೆಯನಾಳ್ದ .. .. ಕೂಸುಮಂ: **ಪಂಪಭಾ,** ೧. ೯)

ಗುಣಕಱುಗೊಳ್ – [ಕ್ರಿ] ಪ್ರೀತಿ ಹೊಂದು (ಅಣುಗಿನೊಳ್ ಎನ್ನ ಚಟ್ಟರೊಳಗೆ ಈತನೆ ಜೆಟ್ಟಿಗನೆಂದು ವಿದ್ಯೆಯಂ ಗುಣಕಱುಗೊಂಡು ಕೊಟ್ಟು: **ಪಂಪಭಾ,** ೨. ೬೧)

ಗುಣಣೆ – [ನಾ] ನೃತ್ಯಶಾಲೆ, ಸಂಗೀತಶಾಲೆ (ಕನಕಗೋಪುರಂಗಳೊಳಗಣೆರಡು ದೆಸೆಯ ಗುಣಣೆಯಿಂ ವಿಳಾಸನಿಯರ ಗಡಣೆಯಿಂ: **ಪಂಪಭಾ,** ೧. ೫೮)

ಗುಣಘಾತಜಾತಕಾಳಿಕೆ – [ನಾ] ಬಿಲ್ಲಿನ ಹೆದೆಯ ಹೊಡೆತದಿಂದಾದ ಕಪ್ಪು ಕಲೆ (ವಿಜಯಶರಾಸನ ಗುಣಘಾತಜಾತಕಾಳಿಕೆಯಂ ಎತ್ತಮಗ್ಗಳಿಸಿದುದು ಆ ಭುಜಬಲಿಯ ಭುಜದ್ವಯದೊಳ್ ಭುಜಂಗನಿಶ್ವಾಸಧೂಮವೇಣೀನಿಕರಂ: **ಆದಿಪು,** ೧೪. ೧೪೧)

ಗುಣನಾದ – [ನಾ] [ಬಿಲ್ಲಿನ ಹೆದೆಯ] ಠೇಂಕಾರ (ಇದಱ ದನಿ ಮದವಳಿಕುಳಮೃದುನಿನದದೊಳಂ ಮನೋಜಕಾರ್ಮುಕ ಗುಣನಾದದೊಳಂ ಸೆಣಸುವುದೆನೆ ಸುರಸುದತಿ ಪೆಱಳ್ ಮೆಱೆದು ಬೀಣೆಯಂ ಬಾಜಿಸಿದಳ್: **ಆದಿಪು,** ೭. ೨೦)

ಗುಣಮೇೞು – [ನಾ] [ಜೈನ] ದಾತೃವಿನ ಏಳು ಗುಣಗಳು: ಶ್ರದ್ಧೆ ಶಕ್ತಿ ಭಕ್ತಿ ವಿಜ್ಞಾನ ಅಲುಬ್ಧತಾ ಕ್ಷಮಾ ತ್ಯಾಗ (ನೆಱೆದತ್ತಿ ಭಕ್ತಿ ದಯೆ ಪುದಿದ ಅಱಿವು ಔದಾರ್ಯಂ ಕ್ಷಮಾಗುಣಂ ಶಕ್ತಿಯುಂ ಎಂಬ ಅಱೆಕೆಯ ಗುಣಮೇೞಱೊಳಂ ನೆಱೆದು ಇತ್ತರ್ ಮುನಿಯುಗಕ್ಕೆ ದಾನಮನವರ್ಗಳ್: **ಆದಿಪು,** ೪. ೯೭)

ಗುಣವತ್ – [ಗು] ಗುಣಗಳಿಂದ ಕೂಡಿದ (ಅಂತು ಪರಮಾತಿಶಯ ರೂಪ ರಸ ಗಂಧ ಸ್ಪರ್ಶ ಗುಣವತ್ ಪರಮಾಣುಪರಿನಿರ್ವೃತಮೂರ್ತಿಯಪ್ಪ ಪರಮನ: **ಆದಿಪು,** ೮. ೬ ವ)

ಗುಣವದ್ವ್ರತಚಿಹ್ನ – [ನಾ] [ಗುಣವತ್+ವ್ರತಚಿಹ್ನ] ಗುಣವ್ರತಗಳಿಗೆ ಚಿಹ್ನವಾದ (ಒಂದಾದಿಯಾಗೆ ಪನ್ನೊಂದುವರಂ ಗುಣವದ್ವ್ರತಚಿಹ್ನಂ ಗುಣಮಣಿಭೂಷಣ ಸೂತ್ರಂ ಅಮರ್ದುವವರ್ಗೆನ್ನಿಂದಂ: **ಆದಿಪು,** ೧೫. ೨೪)

ಗುಣವ್ರತ – [ನಾ] [ಜೈನ] ಶೀಲವ್ರತ, ಶ್ರಾವಕರು ಆಚರಿಸಬೇಕಾದ ಮೂರು ವ್ರತಗಳು: ದಿಗ್ವ್ರತ, ದೇಶವ್ರತ ಮತ್ತು ಅನರ್ಥದಂಡವ್ರತ (ದೆಸೆಗಳ ಮೇರೆಯಂ ನಿಱಿಸಿ ಪೋಪುದುಂ ಆಭರಣ ಪ್ರಸೂನ ಸದ್ವಸನ ವಿಲೇಪನಾದಿಗಳೊಳಂ ಕೆಲವಂ ಗುಱಿಮಾಡಿಕೊಂಡು ಸೇವಿಸುವುದು ಅಸ್ತ್ರ ದಂಡ ವಿಷ ಪಾಶವಿಶೇಷಮಂ ಈಯದಿರ್ಪುದು .. .. ಎಂದು ಮೂಱು ತೆಱದಿಂ ನೆಗೞ್ದಿರ್ದ ಗುಣವ್ರತಂಗಳಂ: **ಆದಿಪು,** ೬. ೮)

ಗುಣಶ್ರೇಣಿ – [ನಾ] [ಜೈನ] ಗುಣಗಳ ನಿಚ್ಚಣಿಗೆ (ಗುಣಶ್ರೇಣಿಯನೇಱುವುದಂ ಅಭ್ಯಾಸಂಗೆಯ್ವಂತೆ ಸುದರ್ಶನಮೆಂಬ ಶಿಬಿಕೆಯನೇಱಿದಾಗಳ್: **ಆದಿಪು,** ೯. ೭೨ ವ)

ಗುಣಶ್ರೇಣಿನಿರ್ಜರೆ – [ನಾ] [ಜೈನ]ಕರ್ಮಗಳನ್ನು ನಾಶಪಡಿಸುವ ವಿಧಿಗಳಲ್ಲಿ ಒಂದು; (ಮತ್ತಿನುೞಿದ ಕರ್ಮಂಗಳಂ ಸ್ಥಿತ್ಯನುಭಾಗಕಾಂಡಕಘಾತಪ್ರದೇಶಗುಣ ಶ್ರೇಣಿನಿರ್ಜರಾದಿ ವಿಧಿಯಿನನುಕ್ರಮಂ ಕಿಡಿಸುತ್ತುಂ: **ಆದಿಪು,** ೧೦. ೧೪ ವ)

ಗುಣಾಧಿಕ – [ನಾ] ಒಳ್ಳೆಯ ಗುಣದಿಂದ ಶ್ರೇಷ್ಠನಾದವನು (ಜಗತ್ಕಾಯಸ್ವಭಾವಭಾವನಾಪರಂ ಸಕಳಶರೀರಗುಣಾಧಿಕ ದುಃಖಾರ್ದಿತಾವಿನೀತರೊಳ್ ಮೈತ್ರಿ ಪ್ರಮೋದ ಕಾರುಣ್ಯ ಮಾಧ್ಯಸ್ಥವೃತ್ತಿಗಳಂ ಭಾವಿಸುತ್ತುಂ: **ಆದಿಪು,** ೯. ೧೩೦ ವ)

ಗುಣಾರ್ಣವ – [ನಾ] [ಗುಣ+ಅರ್ಣವ] ಗುಣಸಾಗರ (ಸತ್ಕವಿಗಳ ಷೋಡಶಾವನಿಪರೋಳಿಯೊಳಂ ಕವಿತಾ ಗುಣಾರ್ಣವಂ ಕವಿತೆಯೊಳಗ್ಗಳಂ ಗುಣದೊಳಗ್ಗಳಮೆಲ್ಲಿಯುಮೀ ಗುಣಾರ್ಣವಂ: **ಪಂಪಭಾ,** ೧. ೧೦); [ನಾ] 'ಗುಣಾರ್ಣವ' ಎಂಬುದು ಮೂರನೆಯ ಅರಿಕೇಸರಿ, ಎಂದರೆ ತನ್ನ ಆಶ್ರಯದಾತನಿಗೆ ಪಂಪನಿತ್ತ ಹೆಸರು; ಅರ್ಜುನ (ಗುಣಾರ್ಣವಂಗೆ ಕುಡು ಗೆಲ್ಲಮಂ ಇಂತಿದೆ ಕಜ್ಜದ ಉಜ್ಜುಗಂ : **ಪಂಪಭಾ,** ೫. ೧೦೨)

ಗುಣೋಪೇತ – [ನಾ] [ಗುಣ+ಉಪೇತ] ಗುಣದಿಂದ ಕೂಡಿದ (ತನ್ನ ಪಡೆದ ಕ್ಷತ್ರಿಯವಣಿಕ್ಶೂದ್ರರೆಂಬ ಮೂಱುವರ್ಣಂಗಳೊಳಗೆ ಕ್ಷತ್ರತ್ರಾಣಾದಿ ಗುಣೋಪೇತಮಪ್ಪ ಅಖಿಳಕ್ಷತ್ರಿಯಸಮೂಹಕ್ಕೆ ಶಸ್ತ್ರಕರ್ಮಮುಮಂ: **ಆದಿಪು,** ೮. ೬೪ ವ)

ಗುಣ್ಪು – [ನಾ] ಆಳ (ಮೇರುವಿನುನ್ನತಿ ಜಳನಿಧಿಯ ಗುಣ್ಪು ನಭದ ವಿಭುತ್ವಂ ನಿನ್ನ ಗುಣೋನ್ನತಿ: **ಆದಿಪು,** ೧೦. ೫೬)

ಗುಣ್ಪುವೆಱು – [ಕ್ರಿ] ಗಾಂಭೀರ್ಯ ಹೊಂದು (ಜಿನಸೇನಾಚಾರ್ಯ ಪರ್ಯಂತಮಾಗಿರೆ ಬಂದೀ ಕಥೆ ಗುಣ್ಪುವೆತ್ತುದು: **ಆದಿಪು,** ೧. ೩೫)

ಗುಪ್ತಿ – [ನಾ] [ಜೈನ] ತ್ರಿವಿಧಗುಪ್ತಿ, ಮನೋವಾಕ್ಕಾಯಗಳನ್ನು ನಿಗ್ರಹಿಸುವುದು (ಗುಪ್ತಿಯೆ ತನಗಿಲ್ಲೆ ಕರ್ಮರಿಪುಗೆ ಮುನಿವುದು ಮೊಗ್ಗೇ: **ಆದಿಪು,** ೬. ೨೯)

ಗುಪ್ತಿಗುಪ್ತ – [ನಾ] [ಜೈನ] ತ್ರಿವಿಧಗುಪ್ತಿಗಳಿಂದ ರಕ್ಷಿತನಾದವನು (ಮನಮಂ ನುಡಿಯಂ ಮೆಯ್ಯಂ ತನಗೆ ವಶಂ ಮಾಡಿ ಗುಪ್ತಿಗುಪ್ತಂ ಮುನಿಯೆಂಬಿನೆಗಂ ನೆಗೞ್ದಂ: **ಆದಿಪು,** ೬. ೨೯)

ಗುರು – [ನಾ] ಉಪಾಧ್ಯಾಯ (ಗುರುವಿನ ಶೋಕದಿಂದೆ ರಥಮಧ್ಯದೊಳೊಯ್ಯನೆ ಜೋಲ್ದು ಬಿಟ್ಟನಂ ಗುರುಸುತನಂ ಕೃಪಂ ಕೃಪೆಯಿಂ ಆತ್ಮವಿಳಾಸದೊಳ್ ಆಱೆಸುತ್ತುಂ: **ಪಂಪಭಾ,** ೧೨. ೩೪); [ನಾ] ಅಧಿಕ (ಆ

ಗುರುವಿಯೋಗಭರಂ ಗುರುವಾಗದಿರ್ಕುಮೇ: **ಪಂಪಭಾ,** ೧೨. ೩೪)

ಗುರುಜನ – [ನಾ] ದೊಡ್ಡವರು, ಹಿರಿಯರು (ಗುರುಜನಮಂ ನೆಱೆ ಮನ್ನಿಸಿದುದು ಪಿರಿಯ ಸಿರಿಯೊಳೇಂ ಸುಜನತೆಯೋ: **ಪಂಪಭಾ,** ೯. ೩೬)

ಗುರುತನೂಜ – [ನಾ] ದ್ರೋಣನ ಮಗ, ಅಶ್ವತ್ಥಾಮ (ಎಡವಱದೊಳ್ ಎಱಗಿ ಬಱಸಿಡಿಲ್ ಇಡುಮುಡುಕನೆ ಪೊಡೆದುದೆನಿಸಿ ಪಾಂಡ್ಯನ ರಥದ ಅಚ್ಚು ಉಡಿದು ಅಟ್ಟೆಗೆಟ್ಟಿಗೆ ಕೊಂಡುವು ಕಡುಗೂರಿದುವೆನಿಪ ಗುರುತನೂಜನ ಕಣೆಗಳ್: **ಪಂಪಭಾ,** ೧೨. ೮೨)

ಗುರುನಂದನ – [ನಾ] ದ್ರೋಣನ ಮಗ, ಅಶ್ವತ್ಥಾಮ (ಅಂತು ಗುರುನಂದನಂ ಮರುನ್ನಂದನವಿರಚಿತ ನಿಶಾತವಿಶಿಖ ಪಂಜರಮನಟೆದು ಕಟಿಕುಟಿಂ ಮಾಡಿಯುಂ ಅನಿತಱೊಳ್ ಮಾಣದೆ: **ಪಂಪಭಾ,** ೧೨. ೬೮ ವ)

ಗುರುಪಂಚಕ – [ನಾ] ಪಂಚಪರಮೇಷ್ಠಿಗಳು: ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧು (ಸಮಾಸನ್ನನಿಜಾಯುವಂತೆ ಗುರುಪಂಚಕಮಂ ನೆನೆಯುತ್ತೆ ಭೋಂಕೆನುತ ಉತ್ಸನ್ನಶರೀರೆಯಾಗಿ ದಿವದಿಂದಿಳಿದಳ್: **ಆದಿಪು,** ೩. ೧೭)

ಗುರುಪೂಜೋಪಲಂಭನ – [ನಾ] [ಜೈನ] ಐವತ್ತಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; ದೇವತೆಗಳಿಂದ ಪೂಜೆಗೊಳ್ಳುವಿಕೆ (ಕುಲಚರ್ಯಾ ಗೃಹೀಶಿತ್ವ ಪ್ರಶಾಂತಿ ಗೃಹತ್ಯಾಗ .. .. ಗುರುಪೂಜೋಪಲಂಭನ ಯೌರಾಜ್ಯ ಸ್ವರಾಜ್ಯ ಚಕ್ರಲಾಭ .. .. ಎಂಬ ಅಯ್ವತ್ತಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಗುರುವಚನ – [ನಾ] ಹಿರಿಯರ ಮಾತು (ಕರೆದೊಡೆ ಜೂದಿಂಗಂ ಧುರಭರಕೆ ಆಖೇಟಕ್ಕೆ ಭೂಭುಜಂಗೆ ಆಗದು ಮೆಯ್ಗರೆದಿರಲ್ ಆಗದು ಎಂಬ ಪುರಾತನ ಗುರುವಚನಂ ತನಗೆ ನಿಟ್ಟೆಪಟ್ಟುದಱಿಂ: **ಪಂಪಭಾ,** ೬. ೭೧)

ಗುರುಶುಶ್ರೂಷೆ – [ನಾ] ಗುರುವಿನ ಸೇವೆ (ಕೂರಿಸೆ ಗುರುಶುಶ್ರೂಷೆಯೊಳ್ ಆ ರಾಮನಂ ಉಗ್ರ ಪರಶುಪಾಟಿತರಿಪುವಂಶಾರಾಮನಂ ಇಷುವಿದ್ಯಾಪಾರಗಂ ಎನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ,** ೧. ೧೦೪)

ಗುರುಸುತ – [ನಾ] ದ್ರೋಣನ ಮಗ, ಅಶ್ವತ್ಥಾಮ (ಶೋಕದಿಂದೆ ರಥಮಧ್ಯದೊಳೊಯ್ಯನೆ ಜೋಲ್ದು ಬಿಟ್ದಿನಂ ಗುರುಸುತನಂ ಕೃಪಂ ಕೃಪೆಯಿಂ ಆತ್ಮವಿಳಾಸದೊಳ್ ಆಱೆಸುತ್ತುಂ: **ಪಂಪಭಾ,** ೧೨. ೩೪)

ಗುರುಸ್ಥಾನಾಭ್ಯುಪಗಮ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಗುರುವಿನ ಬಳಿ ಹೋಗುವುದು (ಗುರುಸ್ಥಾನಾಭ್ಯುಪಗಮ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಗುರೂಪರೋಧ – [ನಾ] [ಗುರು+ಉಪರೋಧ] ಗುರುಗಳ ಒತ್ತಾಯ (ಮನೋರಮೆಯ ಮದುವೆಗಂ ರಾಜ್ಯದ ಪತ್ತುಗೆಗಂ ಗುರೂಪರೋಧಕ್ಕಗಿದು ಮನದಂದಂ: **ಆದಿಪು,** ೬. ೨)

ಗುಲ್ಫ – [ನಾ] ಪಾದದ ಗಂಟು (ಗೂಢ ಗುಲ್ಫ ಪಾರ್ಷ್ಣಿಗಳನೊಳಕೊಂಡ ಮನುಜಮಾಂಧಾತನ ಪೊಱ ಅಡಿಗಳ್ ವಿರೋಧಿ ಭೂಪಾಳರ ಅಡಿಗೆಱಗಿಸಿದ ಸಂತೋಷದೊಳ್: **ಪಂಪಭಾ,** ೨. ೩೯ ವ)

ಗುಲ್ಫಾಂತರಪ್ರಾಪ್ತ – [ನಾ] ಕಾಲಿನ ಗೆಣ್ಣಿನವರೆಗೆ ಬರುವ (ಅನೇಕವರ್ಣಾಕೀರ್ಣ ತ್ರಿಸರವೇಣಿಕಾಗಾಢಗ್ರಥಿತ ತ್ರಪುಕೋಶಗುಪ್ತ ಗುಲ್ಫಾಂತರಪ್ರಾಪ್ತ ಖಡ್ಗಧೇನುಕಂ: **ಆದಿಪು,** ೧೩. ೪೫ ವ)

ಗುಲ್ಮ – [ನಾ] ಪೊದರು (ಕಂಟಕ ಗುಲ್ಮ ವಿಷವಲ್ಲೀ ಸಂಘಾತಭೀಷಣಂಗಳುಂ: **ಆದಿಪು,** ೧೩. ೫೭ ವ)

ಗುಹ – [ನಾ] ಷಣ್ಮುಖ (ಏಕಪಾದತಪದೊಳ್ ನಿಲೆ ಗೀರ್ವಾಣನಾಥಾತ್ಮಜನಲ್ಲಿಗೆ ಗುಹನಂ ಅಹಿಭೂಷಣನ ಅಂಬಂ ಬೇಡಿ ಅಟ್ಟಿದೊಡೆ: **ಪಂಪಭಾ,** ೮. ೧೬ ವ)

ಗುಹೋತ್ಸಂಗ – [ನಾ] ಗುಹೆಯ ಒಳಭಾಗ (ಗುಹೋತ್ಸಂಗಮಂ ತಾನೊರ್ಬನೆಯ್ದೆವಂದು ತುರಂಗರತ್ನನೇಱೆ: **ಆದಿಪು,** ೧೩. ೩೫ ವ)

ಗುಳಿಗೆ – [ನಾ] ಉಂಡೆ, ಮಾತ್ರೆ (ಪ್ರಳಯದುರಿ ಕಾಳಕೂಟದ ಗುಳಿಗೆ ಪುರಾಂತಕ ಲಲಾಟನೇತ್ರಾನಳನೊಂದು ಅಳವಿಗಂ ಅಗ್ಗಳಂ ಅವರ್ಗಳ ಮುಳಿಸುಗಳುಂ: **ಪಂಪಭಾ,** ೭. ೬೬)

ಗುಳ್ಳೆಗೊಟ್ಟಿ – [ನಾ] ಗುಳ್ಳೆಗೋಷ್ಠಿ, ಒಂದು ಆಟ, ಅಟ್ಟಗುಳಿಯಾಟ (ಒಡನಾಡಿಯುಂ ಒಡನೋದಿಯುಂ ಒಡವಳೆದುಂ ಗುಳ್ಳೆಗೊಟ್ಟಿ ಬಟ್ಟು ಉಳಿಸೆಂಡುಂ ಪೊಡೆಸೆಂಡು ಇವಂ ಆಡುತ್ತ ಒಡವಳೆದರ್ ತಮ್ಮೊಳಳಸೆ ತಂತಂಗೆಡೆಗಳ್: **ಪಂಪಭಾ,** ೨. ೩೦)

ಗುಳ್ಳೆ – [ನಾ] ಗುಂಡಾಗಿರುವುದು, ಉಬ್ಬಿರುವುದು (ಬಿಸುನೆತ್ತರ್ ನೆಣಂ ಅಡಗು ಎಲ್ವು ಸಮಸ್ತಂ ಸುರಿಯೆ ಕೈಗೆ ತೊವಲ್ ಉಟೆಯಲ್ ಅಗುರ್ವಿಸಿದುದು ತೀವಿದ ಗುಳ್ಳೆಯ ಪಸುಂಬೆಯಂ ಸೋರ್ಚಿದಂತೆ ತನು ಕೀಚಕನಾ: **ಪಂಪಭಾ,** ೮. ೭೭)

ಗುಱಿ – [ನಾ] ಲಕ್ಷ್ಯ, ಉದ್ದೇಶ (ಕೆಳೆಯುಂ ಗುಱಿಯುಂ ಗೊಟ್ಟಿಯುಂ ಅಳವಿಗೆ ಪಿರಿದಾಗೆ ತನಗೆ ದುರ್ಯೋಧನನೊಳ್ ಮುಳಿಸುಂ ನೋವುಂ ಕಲುಷಮುಂ ಅಳುಂಬಂ ಎನೆ ತನಗೆ ಅರಾತಿಕಾಳಾನಳನೊಳ್; **ಪಂಪಭಾ,** ೨. ೫೮)

ಗುಱಿಯಾಗು – [ಕ್ರಿ] ಈಡಾಗು (ಮನ್ಮಥಕ್ರೀಡೆಗೆ ನೋಡೆ ನಾಡೆ ಗುಱಿಯಪ್ಪುವು ದಂಪತಿ ಭೋಗಭೂಮಿಯೊಳ್: **ಆದಿಪು,** ೫. ೪೧)

ಗುಱುಗುಮ್ಮೆಂದು – [ಕ್ರಿ] ಏನನ್ನೂ ಮಾಡದೆ ತೆಪ್ಪಗಿರು (ಇನಿತುಮಿಲ್ಲದೆ ಗುಱುಗುಮ್ಮೆಂದು ಪಸಿದಿರ್ದು ಬೆದಬೆದ ಬೆಂದಿನಿಬರ್ ಕಟ್ಟಿಕೊಳ್ವ ಕಣೆಯೇಂ ಪೇೞಿಂ: **ಆದಿಪು,** ೯. ೯೦)

ಗುಱುಗೆ – [ನಾ] ಸೇವಕಿ, ಅಲಂಕರಿಸುವವಳು? (ಕೂಸಂ ನೆಱೆಯೆ ಕೆಯ್ಗೆಯ್ಸಿಂ ಎಂದು ಮುನ್ನಂ ಕೆಯ್ಗೆಯ್ಸುತಿರ್ದ ತಱಿದ ಗುಱುಗೆಯರಪ್ಪ ಅಂತಃಪುರ ಪುರಂಧ್ರಿಯರಂ ಕರೆದು ಪೇೞ್ವುದುಂ: **ಪಂಪಭಾ,** ೩. ೪೪ ವ)

ಗೂಡುಗೊಳ್ – [ನಾ] ಗೂಡಿನ ಒಳಸೇರು, ಆಶ್ರಯ ಪಡೆ (ಕೊಡೆಯ ಚರ್ಮದ ಮಱೆಯೊಳ್ ಗೂಡುಗೊಳುತಿರ್ದ

ಶೌರ್ಯಕ್ರೀಡೆಯ ದಿಗ್ವಿಜಯಮೆಸೆದುದು ಎಮ್ಮಗ್ರಜನಾ: **ಆದಿಪು,** ೧೪. ೭೨)

ಗೂಡುವಾಯ್ – [ಕ್ರಿ] ಎದೆ ಬಡಿದುಕೊ (ಗೂಡುವಾಯ್ವ ಎರ್ದೆಯನೊತ್ತಿ ನಿಷ್ಕಪಪಕ್ಷ್ಮಮನಾಂತು ತರಳಾಕ್ಷಿ ವಿಸ್ಮಯದೆ ಚಕ್ರಿಯಂ ನೋಡಿದಳ್: **ಆದಿಪು,** ೧೧. ೨೦)

ಗೂಢ – [ಗು] ಕಾಣದಿರುವ, ಅಡಗಿರುವ (ಗೂಢ ಗುಲ್ಫ ಪಾರ್ಷ್ಣಿಗಳನೊಳಕೊಂಡ ಮನುಜಮಾಂಧಾತನ ಪೊಱ ಅಡಿಗಳ್ ವಿರೋಧಿ ಭೂಪಾಳರ ಅಡಿಗೆಱಗಿಸಿದ ಸಂತೋಷದೊಳ್: **ಪಂಪಭಾ,** ೨. ೩೯ ವ)

ಗೂಢಪ್ರಣಿಧಿ – [ನಾ] ಗೂಢಚಾರ (ಇತ್ತ ದುರ್ಯೋಧನನ ಗೂಢಪ್ರಣಿಧಿಗಳ್ ಆ ಮಾತಂ ಜಲಕ್ಕನಱಿದು ನಾಗಪುರಕ್ಕೆ ವಂದು: **ಪಂಪಭಾ,** ೮. ೮೨ ವ)

ಗೂಳಿಸೊರ್ಕು – [ನಾ] ಗೂಳಿಯಂತೆ ಸೊಕ್ಕಿರು (ಎರಡುಂ ಬಲದ ಕಡಿತಲೆಯ ನಾಯಕರ್ ಕೆಯ್ಕೊಂಡು ಬಳ್ಳುಗೆಡೆದು ಎಕ್ಕೆವಾಱುವಾಜಿ ಪಲಗೆವಾಜಿ ಗೂಳಿಸೊರ್ಕಿ ಮಾರ್ಕೊಂಡು ಕಾದೆ: **ಪಂಪಭಾ,** ೧೦. ೮೦ ವ)

ಗೃಧ್ರ – [ನಾ] ಹದ್ದು (ಆ ರಥದೊಳ್ ಒಡಂಬಡೆ ಪೂಡಿದ ನಾಲ್ನೂಱು ಗೊಂಕುಱುಗಟ್ಟಿಯುಂ ಅಂಬರಸ್ಥಲಮನಡರ್ವ ಗೃಧ್ರಧ್ವಜಮುಂ ಅಂಜನಪುಂಜದಂತಾಗಿ: **ಪಂಪಭಾ,** ೧೨. ೭ ವ)

ಗೃಹಕೋಕಿಳ – [ನಾ] ಮನೆಯ ಕೋಗಿಲೆ, ಹಲ್ಲಿ? (ಅನ್ನೆಗಂ ಪರಸ್ಪರಕಲಹಕಲುಷಿತ ಗೃಹಕೋಕಿಳಂಗಳ್ ಒಂದೊಂದಂ ತಿನೆ: **ಆದಿಪು,** ೨. ೧೪ ವ)

ಗೃಹತ್ಯಾಗ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಆತ್ಮಕಲ್ಯಾಣಕ್ಕಾಗಿ ತನ್ನ ಮನೆಯನ್ನು ತೊರೆಯುವುದು (ಗೃಹತ್ಯಾಗ .. .. ಎಂಬ ಅಯ್ವತ್ತಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಗೃಹಪತಿ – [ನಾ] [ಜೈನ] ಗೃಹಪತಿರತ್ನನಾದ ಕಾಮವೃಷ್ಟಿ (ನರಸಮಿತಿಗೆ ಬೇಡಿದುದಂ ಕೊಟ್ಟು ಕಲ್ಪವೃಕ್ಷಂ ಪೋಗಲ್ ಸುರಲೋಕಕ್ಕುದ್ಯತಮಾಗಿರೆ ಕಂಡಂ ಸ್ವಪ್ನಸಮಯದೊಳ್ ಗೃಹಪತಿಯುಂ: **ಆದಿಪು,** ೧೬. ೪೩)

ಗೃಹಪತಿರತ್ನ – [ನಾ] [ಜೈನ] ಚಕ್ರವರ್ತಿಗೆ ತಾವಾಗಿ ದೊರೆಯುವ ಜೀವರತ್ನಗಳಲ್ಲಿ ಒಂದು (ಕಾಮವೃಷ್ಟಿಯೆಂಬ ಗೃಹಪತಿರತ್ನಮುಂ: **ಆದಿಪು,** ೧೧. ೩ ವ)

ಗೃಹಪ್ರವೇಶ – [ನಾ] ಹೊಸ ಮನೆಯನ್ನು ಹೊಗುವ ಸಮಾರಂಭ (ಕಾಲರಾಜನ ಜಗದ್ಗೃಹಪ್ರವೇಶಕ್ಕೆ ನಿಱಿಸಿದ ಕನಕ ಕಳಶಯುಗಳಮುಮಂ ಪೌರ್ಣಮಾಸೀ ಸೌಂದರಿಯ ಸಿಂದೂರಾರುಣ ಕ್ರೀಡಾಗೋಳಕಂಗಳುಮಂ ಪೋಲ್ತು: **ಆದಿಪು,** ೬. ೫೧ ವ)

ಗೃಹಮಯೂರ – [ನಾ] ಮನೆಯಲ್ಲಿ ಸಾಕಿದ ನವಿಲು (ಮಯೂರಿಕೆಯಂ ಧಾರಾಗೃಹಕ್ಕೆ ಗೃಹಮಯೂರಂಗಳಂ ನಡೆಯಿಸಲುಂ: **ಆದಿಪು,** ೭. ೨೧ ವ)

ಗೃಹಮಹಿಜಾತ – [ನಾ] [ಜೈನ] ಹತ್ತು ಕಲ್ಪಕುಜಗಳಲ್ಲಿ ಒಂದು, ಬೇಕಾದ ಮನೆಯನ್ನು ನೀಡುವ ವೃಕ್ಷ (ಹಾಟಕಭಿತ್ತಿಸಮನ್ವಿತ ನಾಟಕಶಾಲೆಗಳ ವಿವಿಧಸೌಧಂಗಳ ಕೊಂಡಾಟಮನೆ ಮೆಱೆದು ಮೆಚ್ಚಂ ಪಾಟಿಸುವುವು ಮಿಥುನತತಿಗೆ ಗೃಹಮಹಿಜಾತಂ: **ಆದಿಪು,** ೫. ೩೭)

ಗೃಹಸ್ಥ – [ನಾ] ಸಂಸಾರಸ್ಥ (ಕಿಱಿಯಂ ಮುತ್ತಂ ಧನದಂ ಬಱುವಂ ತೊಱೆದಂ ಗೃಹಸ್ಥನೆನ್ನದೆ ಮುಂಬಿಟ್ಟಱಸಿ ಕೊಲುತಿರ್ಪ ಜವನೆಂಬಱಕೆಯ ಪಗೆವಂಗೆ ಅದೆಂತು ಪಂಗಿಗನಪ್ಪೆಂ: **ಆದಿಪು,** ೪. ೭೭)

ಗೃಹಾಂಗಣ – [ನಾ] ಮನೆಯ ಅಂಗಳ (ವೇದಿಯಂ ಆತ್ಮ ಗೃಹಾಂಗಣ ವೇದಿಕೆಯೊಳೆಣೆಯಾಗೆ ಬಗೆದು: **ಆದಿಪು,** ೧೨. ೭೫)

ಗೃಹಾಂತರ – [ನಾ] ಮನೆಯೊಳಗಿನ (ತತ್ ಗೃಹಾಂತರೋದ್ಯಾನ ಸರಸ್ಸರೋಜರುಚಿಯೆಂಬುದಿದಾಕೆಯ ಕೆಯ್ಯದೆನ್ನಿರೇ: **ಪಂಪಭಾ,** ೪. ೭೧)

ಗೃಹಾಭ್ಯಂತರ – [ನಾ] ಗೃಹಾಂತರಾಳ (ಆತ್ಮೀಯ ಗೃಹಾಭ್ಯಂತರ ಪ್ರಶಸ್ತಪ್ರದೇಶಂಗಳೊಳಂ .. .. ಅರ್ಹತ್ ಪ್ರತಿಮೆಗಳನಿಱಿಸಿ: **ಆದಿಪು,** ೧೨. ೧೬ ವ)

ಗೃಹೀತ – [ಗು] ಕೈಕೊಂಡ (ಪೂಜಿತಕುಲದೇವತೆ ರಾಜ್ಯಾಧಿದೇವತೆಯಂತೆ ಗೃಹೀತಮಂಗಳಪ್ರಸಾಧನೆಯುಂ: **ಆದಿಪು,** ೮. ೨೬ ವ)

ಗೃಹೀತವ್ರತಪರಿಚ್ಯುತ – [ನಾ] ತೊಟ್ಟ ವ್ರತವನ್ನು ತೊರೆಯುವವನು (ಮತ್ತಮಲ್ಲಿ ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ ಮಾಯಾಚಾರಪರಿಣತರಪ್ಪ ಅಪಾತ್ರದಾನಿಗಳುಂ: **ಆದಿಪು,** ೫. ೪೧ ವ)

ಗೃಹೀಶಿತ್ವ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ತನ್ನ ಜ್ಞಾನದಿಂದ ಆರ್ಹ ಎನ್ನಿಸಿಕೊಳ್ಳುವುದು (ಗೃಹೀಶಿತ್ವ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಗೆಂಟಱು – [ನಾ] ದೂರ (ಬರ್ಪಳ ದಿಟ್ಟಿಗಳಾಗಳೆ ಪತ್ತಿದುವು ಗೆಂಟಱಿಂಳ್ ಮಾರುತಿಯಂ: **ಪಂಪಭಾ,** ೩. ೧೩)

ಗೆಂಟಾಗು – [ಕ್ರಿ] ದೂರವಾಗು (ವ್ಯಕ್ತಿಯನಱಿಯಲಣಂ ಬಾರದಾಯ್ತು ಅತ್ತಣಂ ಕಾಣ್ಬೆಡೆಗಂ ಗೆಂಟಾದುದು ಎಂಬಂತಿರೆ ಗಗನತಳೋದ್ಗಾಮಿಯಾಯ್ತಿಂದ್ರಸೈನ್ಯಂ: **ಆದಿಪು,** ೭. ೫೭)

ಗೆಂಟಿದ – [ನಾ] ದೂರದಲ್ಲಿರುವವನು (ಇದು ಚಕ್ರವ್ಯೂಹಂ ಈ ವ್ಯೂಹಮಂ ಒಡೆವ ಅದಟಂ ಪಾರ್ಥನಂತೆ ಆತನುಂ ಗೆಂಟಿದಂ ಎಮ್ಮೀ ನಾಲ್ವರುಂ ಭೇದಿಸಲಱಿಯೆವು ಇದಂ: **ಪಂಪಭಾ,** ೧೧. ೮೭)

ಗೆಂಟು – [ನಾ] ದೂರ (ಎಳೆಯೊಳ್ ತೋಱಿದ ರೂಪನಾಗಳೆ ನಭೋಭಾಗಾಗ್ರದೊಳ್ ತೋರ್ಪಂ ಆಗಳೆ ಗೆಂಟು ಆಗಳೆ ಸಾರೆಯಾಗಿ ಪೊಳೆವಂ: **ಆದಿಪು,** ೭. ೧೨೨)

ಗೆಡೆ – [ನಾ] ಸ್ನೇಹ (ಒಡನಾಡಿಯುಂ ಒಡನೋದಿಯುಂ ಒಡವಳೆದುಂ ಗುಳ್ಳೆಗೊಟ್ಟಿ ಬಟ್ಟು ಉಳಿಸೆಂಡುಂ ಪೊಡೆಸೆಂಡು ಇವಂ ಆಡುತ್ತ ಒಡವಳೆದರ್ ತಮ್ಮೊಳೆಳಸೆ ತಂತಂಗೆಡೆಗಳ್: **ಪಂಪಭಾ,** ೨. ೩೦); [ನಾ] ಜೋಡಿ (ಗೆಡೆವೆಚ್ಚರ್ವರ್ ಮನಗೊಂಡು ಒಡನೊಡನೋರಂತು ಮೋದಲೆಂದಿರ್ದೆಡೆಯೊಳ್ ಗುರು ತನ್ನ ಮಗನಂ ಎಡೆವುಗವೇಟ್ಟಿಂ: **ಪಂಪಭಾ,** ೨. ೭೩)

ಗೆಡೆಗೊಳ್ – [ಕ್ರಿ] ಇಂಬು ನೀಡು (ರಸವತ್ಕಾಂತಿಯನಾಂತು ನಿಂದುದೆಸೆವೀ ನಿಮ್ನೋನ್ನತಂಗಳ್ ವಿರಾಜಿಸಿ ಚೆಲ್ವಂ

ಗೆಡೆಗೊಂಡುವು: **ಆದಿಪು,** ೪. ೪); [ಕ್ರಿ] ಹೊಂದು (ಸ್ತ್ರೀಕುಚಕುಂಭಕುಂಕುಮ ರಜಃಕಲ್ಲೋಳದಿಂ ಬಣ್ಣವಣ್ಣದ ಚೆಲ್ವಂ ಗೆಡೆಗೊಂಡು: **ಆದಿಪು,** ೧೧. ೧೫೪); [ಕ್ರಿ] ಜೊತೆಗೂಡು (ಆದ ಕೆಂದು ಅಲಂಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಂ : **ಪಂಪಭಾ,** ೪. ೩೦); [ಕ್ರಿ] ಒಂದುಗೂಡು (ಸೊಡರ್ಗುಡಿ ಒಯ್ಯನಾಗೆ ಪೊಸಮಲ್ಲಿಗೆ ಕಂಪುನಾಱೆ ತಣ್ಪಿಡಿದ ಎಲರ್ ಊದೆ ಗಾವರದ ಮೆಲ್ಲುಲಿ ತುಂಬಿಯ ಗಾವರಂಗಳಂ ಗೆಡೆಗೊಳೆ: **ಪಂಪಭಾ,** ೪. ೧೧೦); [ಕ್ರಿ] ಸ್ನೇಹಮಾಡಿಕೊ (ಪೊಂಗುವ ಮಲೆಪರ ಮಲೆಗಳ ಡಂಗಂಗಳ್ ಮಲೆವ ಮಂಡಲಂಗಳ್ ಪ್ರತ್ಯಂತಗಳ್ ಎನಲ್ ಒಳವೆ ಪಾಂಡವರಂ ಗೆಡೆಗೊಳೆ ನಿನಗೆ ಕುರುಕುಳಾಂಬರಭಾನೂ: **ಪಂಪಭಾ,** ೯. ೩೯)

ಗೆಡೆವಕ್ಕಿ – [ನಾ] ಜೋಡಿಹಕ್ಕಿ, ಚಕ್ರವಾಕ (ಪಲವು ಕಾಲದಿಂದನುಬಂಧಂಗಿಡದೆ ಒಡಲೆರಡು ಅಸುವೊಂದು ಎನೆ ಗೆಡೆವಕ್ಕಿಗಳಂತೆ ಕೂಡಿ ನಲಿಯುತ್ತಿರ್ದರ್: **ಪಂಪರಾ,** ೪. ೬)

ಗೆಡೆವಚ್ಚು – [ಕ್ರಿ] [ಗೆಡೆ+ಪಚ್ಚು<ಪರ್ಚು] ಜೊತೆಯನ್ನು ಬಿಡು (ಗೆಡೆವಚ್ಚಿರ್ವರ್ ಮನಗೊಂಡು ಒಡನೊಡನೆ ಓರಂತು ತಗುಳ್ದು ಝೇಂಕರಿಸಿದೊಡೆ ಎಲ್ಲಡಗಾಗೆ ಮೋದಲೆಂದಿರ್ದ ಎಡೆಯೊಳ್ ಗುರು ತನ್ನ ಮಗನಂ ಎಡೆವುಗವೇೞ್ದಂ: **ಪಂಪಭಾ,** ೨. ೭೩) [ಈ ಶಬ್ದವು **'ಗೆಡೆವೆಚ್ಚು'** ಎಂದಿರಬಹುದೇ ಎಂದು ಡಿ.ಎಲ್.ಎನ್ ಅನುಮಾನಿಸುತ್ತಾರೆ]

ಗೆತ್ತು – [ಕ್ರಿ] [√ಗಿಱು=ಭಾವಿಸು] ಭಾವಿಸಿ (ಪೂತ ಕಲ್ಪಲತೆಯಂ ಲಲಿತಾಂಗಿಯೆ ಗೆತ್ತು ಅಲಂಪಿನಿಂದೆಱಗುವುದುಂ; **ಆದಿಪು,** ೪. ೧೩); ಭಾವಿಸು (ಅತ್ತ ಸುಭದ್ರೆಯುಂ ಒಡಲುರಿಯುತ್ತಿರೆ ಮರವಟ್ಟು ವಿಜಯನಿರ್ದತ್ತಲೆ ನೋಡುತ್ತಿರೆ ಸುಸಾಳಭಂಜಿಕೆಗೆತ್ತುದು ಕೆಳದಿಯರ ತಂಡಮಾಕೆಯ ರೂಪಂ: **ಪಂಪಭಾ,** ೪. ೫೪)

ಗೆಲ್ – [ಕ್ರಿ] ಮೀರು (ಮನದ ಮೆಯ್ಯ ಸಂತಾಪದೊಳ್ ಬಿಸುಯ್ದು ಬಿಸುಪಿನೊಳ್ ಅನಿತುಮಂ ಗೆಲ್ದು: **ಪಂಪಭಾ,** ೫. ೬ ವ)

ಗೆಲಿಸು – [ಕ್ರಿ] ಗೆಲ್ಲುವಂತೆ ಮಾಡು (ಪುಸಿಯೆನೆ ರಥಮಂ ಹರಿ ಚೋದಿಸುವಂತೆವೊಲ್ ಇರ್ದು ಅದೆಂತು ನರನಂ ಗೆಲಿಪಂ ವಿಸಸನದೊಳ್ ಅಂತೆ ನೀಮುಂ ಪೆಸರಂ ಕರ್ಣಂಗೆ ಮಾಡಿ ಗೆಲ್ಲಂಗೊಳ್ಳಿಂ: **ಪಂಪಭಾ,** ೧೨. ೯೧)

ಗೆಲೆಯಂಬು – [ನಾ] ಒಂದು ಬಗೆಯ ಬಾಣ (ನೆಱನರಿವ ಕಣೆ ಗೆಲೆಯಂಬು ಕಕ್ಕಂಬು ಕೆಲ್ಲಂಬು ಮೊನೆಯಂಬು ತೀವೆ ಕಣ್ಣಂ: **ಪಂಪಭಾ,** ೧೩. ೩೯)

ಗೆಲೆವರ್ – [ಕ್ರಿ] ಜಯಿಸು, ಗೆಲ್ಲು (ಗೆಲೆವಂದಂ ಎನ್ನಂ ನಿಜೋನ್ನತಿಯಿಂದಂ ಈ ಪತಿಯೆಂದು ಮೆಚ್ಚಿ ವಿನಾಯಕಂ ತಾಂ ನಿಮಿರ್ಚುಗೆ ಕಬ್ಬಮಂ ನಯದಿಂ ಗುಣಾರ್ಣವ ಭೂಪನಾ: **ಪಂಪಭಾ,** ೧. ೭)

ಗೆಲ್ದುಕೊಳ್ವಂ – ಗೆದ್ದುಕೊಳ್ಳೋಣ (ಯಮನಂದನನಲ್ತೆ ನೆತ್ತದೊ ಬಸನಿಗಂ ಆತನಂ ಬರಿಸಿ ನೆತ್ತಮನಾಡಿ ಗೆಲ್ದುಕೊಳ್ವಂ ಈ ವಸುಮತಿಯಂ: **ಪಂಪಭಾ,** ೬. ೬೮)

ಗೆಲ್ಲ – [ನಾ] ಗೆಲವು (ಗುಣಾರ್ಣವಂಗೆ ಕುಡು ಗೆಲ್ಲಮಂ ಇಂತಿದೆ ಕಜ್ಜದ ಉಜ್ಜುಗಂ: **ಪಂಪಭಾ,** ೫. ೧೦೨)

ಗೆಲ್ಲಂ – [ನಾ] ಗೆಲವು (ಅಹೀಂದ್ರಕೇತನನ ಜೂದಿನ ಗೆಲ್ಲಮದೆಂತುಟೆನ್ನ ನಂಜಿನ ಸವಿಯಂತುಟೆಂದೊಡೆ: **ಪಂಪಭಾ,** ೬. ೭೫)

ಗೆಲ್ಲಂಗೊಳ್ – [ಕ್ರಿ] ಲಾಭವಾಗಿ ಪಡೆ (ಅರಿಕೇಸರಿಯೆಂಬ ಸುಂದರಾಂಗನತ್ಯಂತ ವಸ್ತುವಂ ಮದಕರಿಯಂ ಹರಿಯಂ ಪಡಿವಡೆಗುರ್ಚಿದ ಕರವಾಳನೆ ತೋಜೆ ನೃಪತಿ ಗೆಲ್ಲಂಗೊಂಡಂ: **ಪಂಪಭಾ,** ೧. ೧೮); [ಕ್ರಿ] ಗೆಲವನ್ನು ಪಡೆ (ಪುಸಿಯೆನೆ ರಥಮಂ ಹರಿ ಚೋದಿಸುವಂತೆವೊಲ್ ಇರ್ದು ಅದೆಂತು ನರನಂ ಗೆಲಿಪಂ ವಿಸಸನದೊಳ್ ಅಂತೆ ನೀಮುಂ ಪೆಸರಂ ಕರ್ಣಂಗೆ ಮಾಡಿ ಗೆಲ್ಲಂಗೊಳ್ಳಿಂ: **ಪಂಪಭಾ,** ೧೨. ೯೧)

ಗೆಲ್ಲಕಾಱ – [ನಾ] ಜಯಶಾಲಿ (ಬಸನಿಯೆ ಗೆಲ್ಲಕಾಱನ ನೆಗಟ್ಟೆಗೆ ಕೇಳಿಗೆ ನಾಡೆ ಗೆಂಟು ಅದಂ ಬೆಸಗೊಳವೇಡ: **ಆದಿಪು,** ೧೨. ೧೭)

ಗೆಲ್ಲಸೋಲಮಪ್ಪಂತು – ಗೆಲವು ಸೋಲು ನಿರ್ಧಾರವಾಗುವ ಹಾಗೆ (ಒಂದೆ ಪಲಗೆಯೊಳೆ ಗೆಲ್ಲಸೋಲಮಪ್ಪಂತು ನನ್ನಿನುಡಿದು ನೆಲನಂ ಒತ್ತೆಯಿಟ್ಟಾಡಿ: **ಪಂಪಭಾ,** ೭. ೩ ವ)

ಗೇಣು – [ನಾ] ಕಿರುಬೆರಳು ಹೆಬ್ಬೆರಳುಗಳನ್ನು ಚಾಚಿದರೆ ಆಗುವುದು ಗೇಣು, ಅಷ್ಟು ಉದ್ದ (ಮಡದೆಡೆ ನಾಲ್ವೆರಲ್ ಅಂಗುಟದೆಡೆಯೊಳ್ ಗೇಣಾಗೆ ನಿಲ್ವುದಿಚ್ಚಾಗತಂ ಅಂದೆಡೆಯೊಳ್ ವಾಚಂಯಮತೆಯೊಳ್ ಒಡಂಬಡಂ ಪಡೆದು ನಿಂದನಾದಿಬ್ರಹ್ಮಂ: **ಆದಿಪು,** ೯. ೮೪)

ಗೇಯ – [ನಾ] ಸಂಗೀತ, ಹಾಡಿಕೆ (ಸುತ್ತಲುಂ ಅಟ್ಟಿಱಂ ಪಡೆವ ಗೇಯದ ಪೆಂಪಿನ ಅಲಂಪಂ ಆರ್ಗಂ ಆರ್ತಿತ್ತುದು ಪಟ್ಟಬಂಧ ಮಹೋತ್ಸವಂ ಆ ಪಡೆಮೆಚ್ಚೆ ಗಂಡನಾ: **ಪಂಪಭಾ,** ೧೪. ೨೦)

ಗೇಹಿನಿ – [ನಾ] ಕುಟುಂಬಿನಿ, ಗೃಹಸ್ಥೆ (ಇಂತಾದೊಡೆಮಗೆ ಬಾಹುಬಲಿಯ ಸಮರಸಂಘಟ್ಟದೋಹಳಮಿದು ದರಿದ್ರಗೇಹಿನೀ ಗರ್ಭದೋಹಳದಂತಾದುದು: **ಆದಿಪು,** ೧೪. ೧೦೨ ವ)

ಗೊಂಕುಱುಗಟ್ಟೆ – [ನಾ] ಹೇಸರಗತ್ತೆ (ಆ ರಥದೊಳ್ ಒಡಂಬಡೆ ಪೂಡಿದ ನಾಲ್ನೂಱು ಗೊಂಕುಱುಗಟ್ಟೆಯುಂ ಅಂಬರಸ್ಥಲಮನಡರ್ವ ಗೃಧ್ರಧ್ವಜಮುಂ ಅಂಜನಪುಂಜದಂತಾಗಿ: **ಪಂಪಭಾ,** ೧೨. ೭ ವ)

ಗೊಂಕುವೆಸ – [ನಾ] ಶೈತ್ಯೋಪಚಾರ (ಅಲಂಪಿನ ದಂಪತಿಯಿರ್ಪ ಜೊಂಪಮಂ ತಳಿತಳಿದಲ್ಲಿ ಗೊಂಕೆವೆಸಗೆಯ್ವುದು ತೀರವನಾಂತರಾಳದೊಳ್: **ಆದಿಪು,** ೧೧. ೬೬) [ಈ ಶಬ್ದದ ಸ್ಥಾನದಲ್ಲಿ ಟಿ.ವಿ. ವೆಂ. ಆವೃತ್ತಿಯಲ್ಲಿರುವುದು 'ತಣ್ಪುವೆಸ']

ಗೊಂದಣ – [ನಾ] ಸಮೂಹ (ಬೆಳಗುವ ಕೈದೀವಿಗೆಗಳ ಬೆಳಗುಂ ತರತರದಿನೊಗೆವ ತಾರಗೆಗಳ ಗೊಂದಳಮುಂ ಇಳಾತಳದ ವಿಯತ್ತಳದ ವಿಳಾಸಮನದೇನೊಡಂಬಡಿಸಿದುದೋ: **ಆದಿಪು,** ೧೨. ೩)

ಗೊಂದಣಮಾಡು – [ಕ್ರಿ] ಗೊಂದಣಂಗುಣಿ, ಮೇಳನೃತ್ಯವಾಡು (ಸುರೇಂದ್ರತಾರಹಾರ ಮುಕ್ತಾಫಳಪ್ರತಿಬಿಂಬಿತತನುಗಳಿಂ ವಿದ್ಯಾಧಿದೇವತೆಗಳೆನಿಸಿ ದಿವಿಜಸೌಂದರಿಯರ್ ಗೊಂದಣಮಾಡುವಲ್ಲಿ: **ಆದಿಪು,** ೭. ೧೨೬ ವ)

ಗೊಂದಣಿಸು – [ಕ್ರಿ] ಗುಂಪಾಗು (ಗೊಂದಣಿಸಿ ಸಂದಣಿಸಿ ನಿಂದ ಅಣೀಯಂ ಎರಡುಂ ಬಲದ ಕಡಿತಲೆಯ ನಾಯಕರ್ ಕೆಯ್ಕೊಂಡು: **ಪಂಪಭಾ,** ೧೦. ೮೦ ವ)

ಗೊಂದಳ – [ನಾ] ಗೊಂಚಲು (ಬಳ್ವಳಬಳೆದೆಳದಳಿಸುವ ಪೊಸಗೆಂದಳಿರ ಗೊಂದಳದೊಳೆ ಸಂದಣಿಸಿದ ಅಶೋಕಲತೆಯ ಓಲಗಶಾಲೆಯೊಳಗಣ ಕಪ್ಪುರವಳುಕಿನ ಜಗುಲಿಯ: **ಆದಿಪು,** ೧೧. ೭೩ ವ); ಸಮೂಹ (ಬೆಳಗುವ ಕೈದೀವಿಗೆಗಳ ಬೆಳಗಂ ತರತರದಿನೊಗೆವ ತಾರಗೆಗಳ ಗೊಂದಳಮುಂ: **ಆದಿಪು,** ೧೨. ೩)

ಗೊಂದಳಿಸು – [ಕ್ರಿ] ಒಟ್ಟುಗೂಡು, ಗುಂಪಾಗು (ದೇವನೊಳಾವಗಮಾದ ತಮ್ಮಾದರದಿಂ ಮಾಲೆಗಟ್ಟಿ ದುಗ್ಧವಾರಿಪೂರಿತ ಕನಕಕಳಶಂಗಳಂ ತಂದು ಗೊಂದಳಿಸಿ ಸಂದಣಿಸಿ ನೀಡಿದಾಗಳ್: **ಆದಿಪು,** ೭. ೮೫ ವ)

ಗೊಜ್ಜ – [ನಾ] ಶ್ರೇಷ್ಠ, ಹಿರಿಯ (ಎಸಳ ಮೆಲ್ಪಿನಿಂದೊಪ್ಪುವುದು ಉಣ್ಮಿದ ತಣ್ಗಂಪಿಂದೊಪ್ಪುವುದು ಅದಱಿಂದಲರೊಳಗೆ ಗೊಜ್ಜ ಗೊಜ್ಜಗೆಯೆ ವಲಂ: **ಆದಿಪು,** ೧೧. ೧೨೬)

ಗೊಜ್ಜಗೆ – [ನಾ] ಇರುವಂತಿಗೆ (ಪೂತ ಗೊಜ್ಜಗೆಗಳ ಸಿಂದುರಂಗಳೊಳಗೆ ಓಗರಗಂಪನೆ ಬೀಱುತಿರ್ಪ ಮಲ್ಲಿಗೆಯೊಳರಲ್ದ ಸಂಪಗೆಯೊಳಗ್ಗಲಿಸಿತ್ತು ಬಸಂತಮಾಸದೊಳ್: ಪಂಪಭಾ, ೫. ೩೦)

ಗೊಟ್ಟಿ – [ನಾ] [ಗೋಷ್ಠಿ] ಮೇಳ (ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಇಂಪುಗಳ್ಗೆ ಆಗರಮಾದ ಮಾನಸರೆ ಮಾನಸರ್: **ಪಂಪಭಾ,** ೪. ೨೯); [ನಾ] ಸಹವಾಸ (ಕೆಳೆಯುಂ ಗುಜೆಯುಂ ಗೊಟ್ಟಿಯುಂ ಅಳವಿಗೆ ಪಿರಿದಾಗೆ ತನಗೆ ದುರ್ಯೋಧನನೊಳ್ ಮುಳಿಸುಂ ನೋವುಂ ಕಲುಷಮುಂ ಅಳುಂಬಂ ಎನೆ ತನಗೆ ಅರಾತಿಕಾಳಾನಳನೊಳ್; **ಪಂಪಭಾ,** ೨. ೫೮)

ಗೊಟ್ಟಿಗೆವರ್ – [ಕ್ರಿ] ಜೊತೆಗಾಗಿ ಬರು (ಒಂದೆಡೆಯೊಳ್ ನಾಲ್ವರಯ್ವರ್ ಗಾಟಿಗ್ಗೊಟ್ಟಿರ್ದು ಅಲ್ಲಿಗೊರ್ವನೆಗ್ಗಂ ಗೊಟ್ಟಿಗೆ ವಂದು ಕಣ್ಣಱಿಯದೆ ಸೋಂಕೆಯುಂ: **ಪಂಪಭಾ,** ೪. ೯೫ ವ)

ಗೊಟ್ಟಿಗಾಣರ್ – [ನಾ] ಗುಂಪಾಗಿ ಹಾಡುವವರು (ಗೊಟ್ಟಿಗಾಣರಂತಿರೆ ಮಱಿದುಂಬಿ ಮೇಳದವರಂತಿರೆ ಸಾರಿಕೆ ರಾಜಗೇಹದಂತಿರೆ ಕೊಳಂ ಅಲ್ಲಿ ತಾಂ ಅರಸರಂತಿರೆ ತಾಮರಸಂಗಳೊಪ್ಪುಗುಂ: **ಪಂಪಭಾ,** ೫. ೫೮)

ಗೊಟ್ಟಿರ್ – [ಕ್ರಿ] ಗೋಷ್ಠಿಯಲ್ಲಿ ಭಾಗಿಯಾಗು, ಜೊತೆಯಲ್ಲಿರು (ನೆರೆದೆಮ್ಮೊಳಿಂತು ಸದ್ಭಾವದೆ ಗೊಟ್ಟಿರಲ್ ಬಯಸಿ ಬಂದೆ: **ಪಂಪಭಾ,** ೪. ೯೬)

ಗೊಡ್ಡ – [ನಾ] [ಪ್ರಾ: ಕೋಡ್ಡ] ಚೇಷ್ಟೆ (ಅದು ಈಕೆಯೊಳ್ ಈಗಳಾದುದು ಇಂತಿದು ಕುಸುಮಾಸ್ತ್ರನೆಂಬ ಅದಟನಿಕ್ಕಿದ ಸೊರ್ಕಿನ ಗೊಡ್ಡಮಾಗದೇ: **ಪಂಪಭಾ,** ೪. ೬೦); ತೊಂದರೆ, ಬಾಧೆ (ಇದು ನಮ್ಮಂ ಆರಯಲೆ ವೈರಿಯ ಮಾಡಿದ ಗೊಡ್ಡಂ ಇಲ್ಲಿ ಮಾಣ್ದಿರಲಾಗ: **ಪಂಪಭಾ,** ೮. ೯೦)

ಗೊಡ್ಡಮಾಡು – [ಕ್ರಿ] ಗೊಡ್ಡಂ+ಆಡು] ಚೇಷ್ಟೆ ಮಾಡು (ಧರಿತ್ರಿಗೆ ಗುರುವೆಂದು ವಜ್ರದೊಳ್ ಉರುಳ್ಚದೆ ಮಾಣ್ಬೆನೆ ಚಕ್ರಿಯಂ ಕರಂ ಬಗೆಯದೆ ಗೊಡ್ಡಮಾಡಿದರ್ಗೆ ತಕ್ಕುದನೆ ಮಾಟಿಪ್ಪೆಂ: **ಪಂಪಭಾ,** ೫. ೧೦೧)

ಗೊಡ್ಡಾಟ – [ನಾ] ಉಪಟಳ, ತುಂಟಾಟ (ಯುಧಿಷ್ಠಿರಂ ಕೊಟ್ಟ ನನ್ನಿಯ ಬಲದೊಳ್ ತನಗೆ ಲಯಮಿಲ್ಲದುದಂ ಅಱಿದು ಮೇಗಿಲ್ಲದ ಗೊಡ್ಡಾಟಮಾಡಲ್ ಬಗೆದು: **ಪಂಪಭಾ,** ೭. ೪ ವ)

ಗೊಣೆಯ – [ನಾ] ಬಿಲ್ಲಿನ ಹೆದೆ (ಪೊಳೆವ ಕಣ್ಗಳ ಬೆಳ್ಪು ಪಳಂಚಿ ಚಿನ್ನಪೂಗಣೆಗೆಣೆಯಾಗೆ ಪುರ್ವುಂ ಎಮೆಗಳ್ ಬಿಡದಳ್ಕಿಱಿದ ಇಕ್ಷುಚಾಪದೊಳ್ ಖಳ ಕುಸುಮಾಸ್ತ್ರಮನಿಟ್ಟ ಗೊಣೆಯಕ್ಕೆಣೆಯಾಗಿರೆ: **ಪಂಪಭಾ,** ೪. ೩೬)

ಗೊರವ – [ನಾ] [ಗುರವಃ] ಶೈವ ತಪಸ್ವಿ (ಗೊರವರೆ ಬೂದಿಯುಂ ಜಡೆಯುಮಕ್ಕೆ ತಪಕ್ಕೆ ತನುತ್ರಂ: **ಪಂಪಭಾ,** ೮. ೧೭)

ಗೊಲೆ – [ನಾ] ಗೊನೆ, ಗೊಂಚಲು (ಗೊಲೆಯೊಳ್ ಪಣ್ತುದು ಮೈಂದವಾಟಿ ಪಥಿಕರ್ಬರ್ಕೆಂದು ಭೃಂಗಂಗಳಿಂದುಲಿವಂತಿರ್ದುದು: **ಆದಿಪು,** ೧೧. ೬೮); [ನಾ] ಬಿಲ್ಲಿನ ತುದಿ (ದಿವ್ಯಚಾಪಕ್ಕೆ ಪೊಡೆವಟ್ಟು ಅದಂ ಅವಯವದಿಂ ಎಡಗೈಯ್ಯೊಳೆತ್ತಿಕೊಂಡು ತನ್ನ ಬಗೆದ ಕಜ್ಜಮಂ ಗೊಲೆಗೊಳಿಸುವಂತೆ ಆ ಬಿಲ್ಲ ಗೊಲೆಯಂ ಏಱಿ ನೂಂಕಿ: **ಪಂಪಭಾ,** ೩. ೬೨ ವ)

ಗೊಲೆಗೊಳ್ – [ಕ್ರಿ] [ಹಣ್ಣಿನ] ಗೊನೆ ಬಿಡು (ಎಯ್ದೆ ಮಡಲ್ತ ತಳ್ತ ಮೆಯ್ಗಳೊಳ್ ಅಡರ್ದು ಓತ ದೂತವಚನಾಮೃತದೊಳ್ ಗೊಲೆಗೊಂಡ ಬೇಟವೆಂಬ ಎಳಲತೆ ಕೂಟದೊಳ್ ಪದೆದು ಪಣ್ತು ಎರ್ದೆಗಿಂಪನಲಂಪನೀಯದೇ: **ಆದಿಪು,** ೧೨. ೨೦)

ಗೊಲೆಗೊಳಿಸು – [ಕ್ರಿ] ತುದಿ ಮುಟ್ಟಿಸು (ದಿವ್ಯಚಾಪಕ್ಕೆ ಪೊಡೆವಟ್ಟು ಅದಂ ಅವಯವದಿಂ ಎಡಗೈಯ್ಯೊಳೆತ್ತಿಕೊಂಡು ತನ್ನ ಬಗೆದ ಕಜ್ಜಮಂ ಗೊಲೆಗೊಳಿಸುವಂತೆ ಆ ಬಿಲ್ಲ ಗೊಲೆಯಂ ಏಱಿ ನೂಂಕಿ: **ಪಂಪಭಾ,** ೩. ೬೨ ವ)

ಗೋಗ್ರಹ – [ನಾ] ದನಗಳನ್ನು ಹಿಡಿಯುವುದು, ಕದಿಯುವುದು (ಉತ್ತರಗೋಗ್ರಹಂ ಪಿರಿದುಂ ಆಗ್ರಹಮಂ ಮನದೊಳ್ ತಗುಳ್ಚಿ ದಿಗ್ಭಿತ್ತಿಭೇದಿ ಪೆರ್ಚೆ: **ಪಂಪಭಾ,** ೮. ೯೨)

ಗೋಗ್ರಹಣ – [ನಾ] ದನಗಳ ಕದಿಯುವಿಕೆ, ಹಿಡಿಯುವಿಕೆ (ಪಿರಿದುಂ ಆಗ್ರಹಂಬೆರಸು ಗೋಗ್ರಹಣಪ್ರಪಂಚಮನೆ ನಿಶ್ಚಯಿಸಿ ವಿರಾಟನ ದಾಯಿಗಂ ತ್ರಿಗರ್ತಾಧೀಶಂ: **ಪಂಪಭಾ,** ೮೯ ವ)

ಗೋಚರ – [ನಾ] ಮಾನವ (ನಿಜತನೂಜರೊಡನೆ ಖೇಚರ ಗೋಚರ ವಿಭವಮನನುಭವಿಸಿ: **ಆದಿಪು,** ೨. ೧೧ ವ)

ಗೋಣ್ಮುರಿಗೊಳ್ – [ಕ್ರಿ] ಕತ್ತನ್ನು ತಿರಿಚು (ಆ ಸೈನ್ಯಮಂ ಪರ್ವಿ ಗೋಣ್ಮುರಿಗೊಂಡು ಉರ್ವಿದುವಾ ರಸಾತಳಮುಮಂ ಗಾಂಗೇಯನ ಅಸ್ತ್ರಾಳಿಗಳ್: **ಪಂಪಭಾ,** ೧೧. ೪೦)

ಗೋತ್ರ – [ನಾ] ಸಂಕುಲ, ವಂಶ (ಮನುಗೋತ್ರಾಂಬೋಧಿಚಂದ್ರಂ ಮನುಕುಸರಸೀವಿಭ್ರಮೋತ್ತಂಸಹಂಸಂ: **ಆದಿಪು,** ೮. ೩೪); ಬೆಟ್ಟ (ಭವಂ ಭವನ ಗೋತ್ರದಿಂದ ಅಜಂ ಅಜಾಂಡದಿಂ ಭಾನು ಭಾನುವೀಥಿಯಿಂ ಇಳಾತಳಂ ತಳದಿನೆಯ್ದೆ ಕಿಟ್ಟಿಟ್ಟುದು: **ಪಂಪಭಾ,** ೧೧. ೧೩೩)

ಗೋತ್ರನಗ – [ನಾ] ಕುಲಪರ್ವತ (ಗೋತ್ರನಗಂಗಳ್ ಶಿಖರಂಗಳೊಳ್ ನಿಜೆಸಿ ಸಿಂಧುಬ್ರಾತಮಂ ಪೆಂಪಿನುರ್ಬಿನೊಳಂ ಬೀಗುವುದು: **ಆದಿಪು,** ೯. ೧೧೪)

ಗೋತ್ರಸ್ಖಲನೆ – [ನಾ] ಬಾಯಿತಪ್ಪಿ ಬೇರೊಬ್ಬರ ಹೆಸರಿನಿಂದ ಕರೆಯುವುದು (ಗೋತ್ರಸ್ಖಲನೆ ನೆಗಟಿ ಪಕ್ಕಾಗಿ ಪೂಮಾಲೆಯಿಂ ಮೋದುವೆತ್ತೆಂ: **ಆದಿಪು,** ೪. ೯)

ಗೋತ್ರಾದ್ರಿ – [ನಾ] ಗೋತ್ರನಗ (ಮಂದರಕ್ಷ್ಮಾಧರದೊಳ್ ಕೆಯ್ಗೂಡಿ ಗೋತ್ರಾದ್ರಿಗಳೆ ಗಜಘಟಾರೂಪದಿಂ ತಾಗೆಯುಂ: **ಆದಿಪು,** ೧೪. ೯೧)

ಗೋದೋಹಪ್ಲವ – [ನಾ] ಹಸುವಿನ ಹಾಲಿನ ಧಾರೆ (ಆಹಾರವಿತರಣ ಗೋದೋಹಪ್ಲವ ಅವನೀತಳ ಸಂತರ್ಪಣಾದಿ ಶಾಂತಿಕ್ರಿಯೆಗಳಂ ನೆಗಟ್ದು: **ಆದಿಪು,** ೧೫. ೪೮ ವ)

ಗೋಧ – [ನಾ] ಸ್ನಾಯು (ಗೋಧೋತ್ರಿಷ್ಟನುಂ ಮೋಹಜಘನಾಪರನುಂ ಅನಿಮ್ನನಾಭಿಯುಂ ಹ್ರಸ್ವಚೂಚುಕನುಂ: **ಆದಿಪು,** ೧೨. ೫೬ ವ); [ನಾ] ಉಡು (ಬದ್ಧ ಗೋಧಾಂಗುಳಿತ್ರಾಣ ಯೋಧಸಿಂಧುರಘಟಾ ಸಂಘಟ್ಟಮುಂ ನಿಬಿಡನಿಪೀಡಿತ ಪ್ರಾಸಮುಷ್ಟಿದುರ್ಧರ ಅಶ್ವಾರೋಹ ತುರಂಗಬಲಾವಗಾಢಮುಂ: **ಆದಿಪು,** ೧೪. ೯೩ ವ)

ಗೋಧೂಮ – [ನಾ] ಜವೆ ಗೋಧಿ (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರತಿಳ ಅತಸಿ ಮಸೂರಿಕಾ: **ಆದಿಪು,** ೬. ೭೨ ವ)

ಗೋಪಕುಮಾರ – [ನಾ] ದನಕಾಯುವ ಹುಡುಗ (ಆತನ ಕೆಲದೊಳ್ ಜಾಳಪಟಂ ತೂಂತಿಟ್ಟಂತೆ ಸಂದಣಿಸಿ ನಿಂದ ಗೋಪಕುಮಾರರ ಅಣಿಯ ನಡುವೆ: **ಪಂಪಭಾ,** ೧೦. ೫೭ ವ)

ಗೋಪುರ – [ನಾ] ಪುರದ್ವಾರ (ಪರಿಖಾವಪ್ರಪ್ರಾಕಾರ ಗೋಪುರ ಅಟ್ಟಾಳಕ ಅಳಂಕೃತಂಗಳಪ್ಪ ರಾಜಧಾನಿಗಳುಮಂ: **ಆದಿಪು,** ೮. ೬೩ ವ)

ಗೋಮಂಡಲ – [ನಾ] ದನದ ಮಂದೆ, ಕೊಟ್ಟಿಗೆ (ವನಲಕ್ಷ್ಮಿಯ ಗೋಮಂಡಲದಂತಿರ್ದ ಕಡವಿನ ಕಾಡೆರ್ಮೆಯ ಪಿಂಡುಗಳಿಂದಂ: **ಪಂಪಭಾ,** ೭. ೨೯)

ಗೋಮೂತ್ರ – [ನಾ] ಹಸುವಿನ ಗಂಜಳ (ಹರಿಗೆ ಅರ್ಘ್ಯಮೆತ್ತಿ ನಿಂದಿರ್ದ ಯಜ್ಞಮದು ಮೊದಲೊಳ್ ತಾನಮರ್ದುಂ ಅದಿರದೆ ತಣಿಯುಂಡು ಅಮರ್ದಂ ಗೋಮೂತ್ರದಿಂದೆ ಬಾಯ್ಗೊಪ್ಪಿಸಿದವೋಲ್: **ಪಂಪಭಾ,** ೬. ೪೮)

ಗೋರಿ – [ನಾ] ಬೇಟೆಯಾಡುವ ಪ್ರಾಣಿಯನ್ನು ಆಕರ್ಷಿಸಲು ಹಾಡುವ ಹಾಡು (ಎರಲೆಗೆ ಪಾಡುವ ಗೋರಿಯಂ ಅರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ: **ಆದಿಪು,** ೧೪. ೮೦)

ಗೋರೋಚನ – [ನಾ] ಗೋವಿನ ಪಿತ್ತರಸದಿಂದ ಉತ್ಪತ್ತಿಯಾಗುವ ಹಳದಿ ಬಣ್ಣದ ಸುಗಂಧದ್ರವ್ಯ (ಮುನ್ನಮೆ ಸಮೆದಿರ್ದ ಪುರೋಚನಂ ಗೋರೋಚನಾಸಿದ್ಧಾರ್ಥ ದೂರ್ವಾಂಕುರ ಮಾತುಳುಂಗ ಶೃಂಗಾರದರ್ಪಣ ಪೂರ್ಣಕಳಶ ಕಳಮಾವೃತಕರಪಲ್ಲವೆಯರಪ್ಪ ಪುರಂಧ್ರಿಯರುಮಂ: **ಪಂಪಭಾ,** ೩. ೨ ವ)

ಗೋಲಾಂಗೂಲ – [ನಾ] ಒಂದು ಬಗೆಯ ಕೋತಿ (ಶಾರ್ದೂಲ ವರಾಹ ಗೋಲಾಂಗೂಲ ನಕುಳಂಗಳಂ ನೋಡುತ್ತುಂ: **ಆದಿಪು,** ೫. ೨ ವ)

ಗೋವ – [ನಾ] ಗೋಪ, ದನ ಕಾಯುವವನು (ಮಚ್ಚರದಿಂ ಒರ್ವರನೊರ್ವರಂ ಉಚ್ಚಳಿಸಿ ತಗುಳ್ದು ಗೋವರ್ ಆರ್ದು ಇಸೆ ಕೀಟಿಂ ಕರ್ಚೆ ಪುಡಿಯೊಳ್ ಪೊರಳ್ದುವು ನಚ್ಚಿನ ಕಾಂಭೋಜವಾಜಿಗಳ್ ಕೆಲವಾಗಳ್: **ಪಂಪಭಾ,** ೮. ೯೪)

ಗೋವಳಿಗ – ಗೋಪಾಳಕ, ದನ ಕಾಯುವವನು (ಸಕಳ ಅವನಿತಳದ ಅದಟರಂ ಪಡಲ್ವಡಿಸಿದ ಶೌರ್ಯಾವಷ್ಟಂಭದೊಳ್ ಆನಿರೆ ಗೋವಳಿಗಂಗೆ ಅಗ್ರಪೂಜೆಯಂ ನೀಂ ಕುಡುವಾ: **ಪಂಪಭಾ,** ೬. ೫೭)

ಗೋವಿಕೆ – [ನಾ] ದನ ಕಾಯುವವನ ಸ್ವಭಾವ (ತೊಲಗದೆ ಗೋವುಗಾದ ಕಿಜೆಯಂದಿನ ಗೋವಿಕೆ ನಿನ್ನ ಚಿತ್ತದೊಳ್ ನೆಲಸಿದುದಕ್ಕುಂ: **ಪಂಪಭಾ,** ೯. ೪೪)

ಗೋವುಗಾ – [ಕ್ರಿ] [ಗೋವು+ಕಾ] ದನ ಕಾಯಿ (ನೀನ್ ಜರಾಸಂಧಂಗಂ ಬಿಱುತೋಡಿದುದು ಭೂತಳಮಜೆಯದೆ ನೆನೆಯೆಲವೊ ಗೋವುಗಾದುದು ಪುಸಿಯೇ: **ಪಂಪಭಾ,** ೬. ೫೬)

ಗೋವುಳಿಗ – [ನಾ] ಗೋಪಾಲಕ (ವಿಜಿಗೀಷುತ್ವದೊಳ್ ಒಂದಿ ಗೋವುಳಿಗನಪ್ಪಂ ಮರ್ತ್ಯನಾಳಾಗಿಕೊಳ್ಳದಿರ್ಪರೆ ವಾರಿಜನಾಭಂ ಹರಿಯೆಂಬ ದೊಡ್ಡಿವೆಸರಂ ಪೊತ್ತಿರ್ದ ನೀಂ ಮಂತ್ರಿಯಾಗೆ: **ಪಂಪಭಾ,** ೯. ೪೭)

ಗೋವ್ರಜ – [ನಾ] ಗೊಲ್ಲರ ಹಟ್ಟಿ (ಘೋಷಾಕರಸಂಗ್ರಹಾಕರ ಗೋವ್ರಜಂಗಳುಮಂ: **ಆದಿಪು,** ೮. ೬೩ ವ)

ಗೋಶೀರ್ಷ – [ನಾ] ಗೋರೋಚನ (ಕರ್ಪೂರ ಪಾಂಸು ಗೋಶೀರ್ಷ ಚಂದನದ್ರವ ಪರಿಮಳ ಸುಗಂಧಿಸಂಭೃತ ಹಾಟಕಘಟಿತ ಘಟಕೋಟಿಗಳಂ ಎತ್ತಿಕೊಂಡು ಸುರಿದಾಗಳ್: **ಆದಿಪು,** ೭. ೧೦೧ ವ)

ಗೋಷ್ಠಿ – [ನಾ] ಸಭೆ (ಛಂದೋವಿದ್ಯಾಳಂಕಾರ ಪದವಿಚಾರ ಕಾವ್ಯ ಗೀತ ನೃತ್ಯ ಆತೋದ್ಯಾದಿ ಗೋಷ್ಠಿಗಳೊಳಂ: **ಆದಿಪು,** ೮. ೩ ವ); ಜೊತೆ (ತಾಮುಂ ಆಮುಂ ಕೆಲವು ದೆವಸಂ ಗೋಷ್ಠಿಯೊಳಿರ್ಪಂ ಬರ್ಕೆ ಎಂದು ಬಟಿಯನಟ್ಟಿದೊಡೆ: **ಪಂಪಭಾ,** ೬. ೬೮ ವ)

ಗೋಷ್ಪದ – [ನಾ] ಹಸುವಿನ ಹೆಜ್ಜೆ (ಎನಗೆ ಪೊಸಂತಿಲೀ ನೆಗಟ್ದ ವಜ್ರದ ವೇದಿಕೆ ಗೋಷ್ಪದಂ ದಲ್ ಈ ವನನಿಧಿ: **ಆದಿಪು,** ೧೨. ೭೧)

ಗೋಸಣೆಯಿಡು – [ಕ್ರಿ] ಸಾರಿಸು, ಪ್ರಚಾರ ಮಾಡು (ಪೊನ್ನರಾಶಿಗಳಂ ಅರ್ಥಿಜನಕ್ಕೆ ಗೋಸಣೆಯಿಟ್ಟು ಕುಡವೇಟ್ದು: **ಪಂಪಭಾ,** ೧೨. ೫೨ ವ)

ಗೋಸನೆ – [ನಾ] [ಘೋಷಣಾ] ಸಾರಿ ಹೇಳುವುದು (ಭುವನದೊಳಿಂತು ನಿನ್ನೆಸೆವ ಗೋಸನೆ ಸಂದುದು ಪಟ್ಟಬಂಧದುತ್ಸವಮಿದು ದೇವ: **ಆದಿಪು,** ೧೧. ೧೦೮)

ಗೋಸನೆವಿಡಿಸು – [ಕ್ರಿ] ಘೋಷಣೆ ಹೊರಡಿಸು, ಡಂಗೂರ ಹೊಡೆಸು (ದಿವಿಜಕರೋನ್ಮುಕ್ತಮುಕ್ತಾದಿರತ್ನಂಗಳಂ ಪೊಟಲ್ಗೆಲ್ಲಂ ಗೋಸನೆವಿಡಿಸಿ ನೆಗಟ್ದ ದಾನಾತಿಶಯಕ್ಕೆ ವಿಸ್ಮಯಂಬಟ್ಟು: **ಆದಿಪು** ೧೦. ೭ ವ)

ಗೋಳಾಂಗೂಳ – [ನಾ] ಕೋತಿ (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ

ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ,** ೧. ೧೧೫ ವ)

ಗೋಟುಂಡೆಗೊಳ್ – [ಕ್ರಿ] ಅಳುವೆಂಬ ಉಂಡೆಯನ್ನು ನುಂಗು ಅಂದರೆ ಅತಿ ದುಃಖಿತನಾಗು (ಪ್ರತಾಪಕ್ಕೆ ಅಗುರ್ವಿಸೆ ಗೋಟುಂಡೆಗೊಳುತ್ತುಂ ಇರ್ದುದು ದಿಶಾಚಕ್ರಂ ಪೊದಳ್ದ ಆಜ್ಞೆಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ: **ಪಂಪಭಾ,** ೧. ೧೧೦)

ಗೋಟ್ಟುರಿಗೊಳ್ – [ಕ್ರಿ] ಕತ್ತು ತಿರುಗಿಸು (ಆ ಸೈನ್ಯಮಂ ಪರ್ವಿ ಗೋಟ್ಟುರಿಗೊಂಡು ಉರ್ವಿದುವಾ ರಸಾತಳಮುಮಂ ಗಾಂಗೇಯನಸ್ತ್ರಾಳಿಗಳ್: **ಪಂಪಭಾ,** ೧೧. ೪೦)

ಗೌರ – [ಗು] ಧವಳ, ಬಿಳಿಯ (ಏಂ ಹಿಮಗೌರಹಾರಮೆಸೆದುದೊ ಹಿಮಶೈಲಶಿಲಾವಿಶಾಲವಕ್ಷಸ್ಸ್ಥಳದೊಳ್: **ಆದಿಪು,** ೪. ೩೮)

ಗ್ರಥಿತ – [ಗು] ಕ್ರಮವಾಗಿ ಜೋಡಿಸಿದ (ಸುರತರುಪ್ರಸೂನ ಗ್ರಥಿತ ಸುರಭಿದಾಮ ದುಕೂಲಾಂಬರ ವಿಚಿತ್ರಭೂಷಣ ಸುರಭಿವಿಲೇಪನ ಪ್ರಮುಖ ಭೋಗೋಪಭೋಗಂಗಳೊಳಂ: **ಆದಿಪು,** ೯. ೩ ವ)

ಗ್ರಸನ – [ನಾ] ನುಂಗುವಿಕೆ (ಅತ್ಯಂತ ದುಷ್ಟಬಳವಜ್ಜನ ಗ್ರಸನದಿಂ ದುರ್ಬಳಜನಂಗಳೊಳ್ ಮತ್ಸ್ಯನ್ಯಾಯಂ ಪ್ರವರ್ತಿಸುಗುಂ: **ಆದಿಪು,** ೮. ೭೪ ವ)

ಗ್ರಸ್ತ – [ಗು] ಹಿಡಿಯಲ್ಪಟ್ಟವನು, ಕಚ್ಚಲ್ಪಟ್ಟವನು (ನಿರ್ಭರಪೂರಮಾಗಿಯುಂ ಸ್ನಿಗ್ಧಾಶ್ರುಜಳಧಾರಾಜಳಪ್ಲವಮುಂ ಬಾರಿಸಲೆಂತುಂ ಆಱದು ವಲಂ ಕಾಳೋರಗಗ್ರಸ್ತನಂ: **ಆದಿಪು,** ೩. ೫೪)

ಗ್ರಹಗಣಿತ – [ನಾ] ಗ್ರಹಚಾರದ ಲೆಕ್ಕಾಚಾರ (ಚಿತ್ರಕರ್ಮ ಪತ್ರಚ್ಛೇದ ಗ್ರಹಗಣಿತ ರತ್ನಪರೀಕ್ಷೆಗಳೊಳಂ: **ಪಂಪಭಾ,** ೨. ೩೪ ವ)

ಗ್ರಹಗ್ರಸ್ತ – [ಗು] ಗ್ರಹದ ಹಿಡಿತಕ್ಕೊಳಗಾದವನು (ಮತ್ತೋರ್ವಂ ಅತ್ಯುಗ್ರಮಂಡಲಾಗ್ರಮಂ ಅನುಗೆಯ್ದು ವೀರಗ್ರಹಗ್ರಸ್ತನಾಗಿ: **ಪಂಪಭಾ,** ಪರಿಷತ್ತು ೧೦. ೪೧ ವ)

ಗ್ರಹಸ್ತೋಭನಾಕ್ಷರ – [ನಾ] ಗ್ರಹಗಳನ್ನು ನಿಷ್ಕ್ರಿಯಗೊಳಿಸುವ ಮಂತ್ರ (ವಿಪಕ್ಷವಿಶಿಖಮೋಕ್ಷ ಹೂಂಕಾರಮನೆ ನಿಜವಿಜಯಲಕ್ಷ್ಮಿಯುದಗ್ರವೀರ ಗ್ರಹಸ್ತೋಭನಾಕ್ಷರಮೆಂದುಂ: **ಆದಿಪು,** ೧೪. ೮೪ ವ)

ಗ್ರಹಾಗ್ರಹ – [ನಾ] ಗ್ರಹಕ್ಕೆ ವಶವಾಗುವುದು (ಕಂತುಶರಭವನನಾ ಪ್ರಿಯಕಾಂತಾ ಭ್ರೂವಿಭ್ರಮ ಗ್ರಹಾಗ್ರಹ ವಶದಿಂ: **ಪಂಪಭಾ,** ೧. ೬೬)

ಗ್ರಹಗ್ರಹೀತೆ – [ಗು] ಗ್ರಹದಿಂದ ಹಿಡಿಯಲ್ಪಟ್ಟವಳು (ಕಾಮಗ್ರಹ ಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭಕಂಪಸ್ವೇದವೈವರ್ಣ್ಯಸಂತಾಪನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ,** ೪. ೫೯ ವ)

ಗ್ರಾಮ – [ನಾ] ಗುಂಪು, ಸಮೂಹ (ಈ ಮನುಜರ್ ಅಖಿಳಕರಣ ಗ್ರಾಮಮಂ ಒಂದೊಡಲೊಳ್ ಎಂತು ಒಡಂಬಡಿಸಿದರೋ: **ಆದಿಪು,** ೪. ೭೨); [ನಾ] ಹಳ್ಳಿ (ತಂದಿತ್ತು ಕೆಯ್ಸೆಱೆಯಂ ಕೊಟ್ಟಳವಟ್ಟ ಸಾರಧನಮಂ ಮೂವಿಟ್ಟಿಗಂ ಪೂಣ್ದು ಕಾಲ್ಗೆ ಎಱಗಿತ್ತು ಅಂತು ಅರಿಗಂಗೆ ಬೆರ್ಚಿ ಭಯದಿಂ ಗ್ರಾಮಂ ಕುಳಂ ರಾಜಕಂ: **ಪಂಪಭಾ,** ೬. ೩೦)

ಗ್ರಾಮಕೂಟ – [ನಾ] ಹಳ್ಳಿಯ ಮುಖ್ಯಸ್ಥ, ಗೌಡ (ಈ ವಿಷಯದ ಪಳಾಪಳಕೂಟಗ್ರಾಮದೊಳ್ ದೇವಿಲನೆಂಬ ಗ್ರಾಮಕೂಟಂಗಂ ಆತನ ಕುಟುಂಬಿನಿ ವಸುಮತಿಗಂ ಧನಶ್ರೀಯೆಂಬ ಮಗಳಾಗಿ ಪುಟ್ಟಿ: **ಆದಿಪು,** ೩. ೩೮ ವ)

ಗ್ರಾಮಗೃಹಾದಿಭೇದ – [ನಾ] ಹಳ್ಳಿ ಮನೆಗಳ [ಕರ್ತವ್ಯಗಳ] ವಿಂಗಡಣೆ (ಪೂರ್ವಾಪರವಿದೇಹಸ್ಥಿತಿ ಸಮಾನಮಾಗೆ ಷಟ್ಕರ್ಮಂಗಳುಮಂ ವರ್ಣಾಶ್ರಮವಿಭಾಗಂಗಳುಮಂ ಗ್ರಾಮಗೃಹಾದಿಭೇದಂಗಳುಮಂ: **ಆದಿಪು,** ೮. ೬೨ ವ)

ಗ್ರಾವ – [ನಾ] ಬಂಡೆಗಲ್ಲು (ಪಾವುಗಳಂ ಕೊಳಿಸಿ ಮಹಾ ಗ್ರಾವಮಂ ಉಱದೆ ಅಡಸಿ ಕಟ್ಟಿ ಕೊರಲೊಳ್ ಗಂಗಾದೇವಿಯ ಮಡುವಿನೊಳ್ ಅಟ್ಟಿದರ್: **ಪಂಪಭಾ,** ೨. ೩೨)

ಗ್ರಾವಸ್ಥಳ – [ನಾ] ಕಲ್ಲುಗಳ ನೆಲ (ವಾಜಿಖುರಾಹತಿ ಸ್ಫುಟಿತ ಗ್ರಾವಸ್ಥಳಂ ಸೈನ್ಯದಂತಿಕರೋಚ್ಚಾಟಿತ ಸಲ್ಲಕೀಕಿಸಲಯಂ: **ಆದಿಪು,** ೧೩. ೫೫)

ಗ್ರಾಹ – [ನಾ] ಮೊಸಳೆ (ವರ್ಧಮಾನನೆಂಬ ಋಷಿಯ ಶಾಪದೊಳ್ ಉಗ್ರ ಗ್ರಾಹಸ್ವರೂಪದೊಳಿರ್ದ ಅಚ್ಚರಸೆಯರುಮಂ ವಿಶಾಪೆಯರ್ ಮಾಡಿ: **ಪಂಪಭಾ,** ೪. ೨೦ ವ)

ಗ್ರೀವ – [ನಾ] [ಬಿಂದಿಗೆಯ] ಕಂಠ (ಕಳಧೌತಘಟಂ ಮುಕ್ತಾಫಳಾಂಚಿತ ಗ್ರೀವಂ ಎಟಿೞದುಕೊಂಡುದು ತಾರಾವಳಿಪರಿವೃತ ನವಸಂಧ್ಯಾಜಳದದ ಗಾಡಿಯಂ: **ಆದಿಪು,** ೭. ೮೪); [ನಾ] ಕೊರಳು (ಹಂಸಗ್ರೀವನಿಹಿತ ಏಕಪಾದಂ ಇಳಾವಂದ್ಯಂ ಅನಿಂದ್ಯಂ ಅಬ್ಜಗರ್ಭಂ ಬಂದಂ: **ಪಂಪಭಾ,** ೧೨. ೧೩೮)

ಗ್ರೀಷ್ಮ – [ನಾ] ಬೇಸಗೆ (ಮರುಸ್ಥಳದ ಮಾಳದೊಳ್ ನಡುಪಗಲ್ವರಂ ಗ್ರೀಷ್ಮದೊಳ್ ಸುರುಳ್ದಿನೆಗಮಟಿಪ್ವಿ ಬೇವವರ್ಗೆ ಜೊಂಪಂ ಇಮ್ಮಾವು ನಿರ್ಝರಾಂಬು ದೊರೆಕೊಳ್ವವೊಲ್: **ಆದಿಪು,** ೧೩. ೮೬)

ಗ್ರೀಷ್ಮಾಂಶುಮಾಲಿ – [ನಾ] ಬೇಸಗೆಯ ಸೂರ್ಯ (ಅಶೇಷ ವಿದ್ಯಾನದೀ ಶೋಷಣಗ್ರೀಷ್ಮಾಂಶುಮಾಲಿ ಮಯೂಖಮಾಲೆಯುಂ: **ಆದಿಪು**: ೧೪. ೧೨೨ ವ)

ಗ್ರೈವೇಯಕ – [ನಾ] ಹದಿನಾರು ಸ್ವರ್ಗಗಳ ಮೇಲೆ ಇರುವ ಸುದರ್ಶನ, ಅಮೋಘ, ಸುಪ್ರಬುದ್ಧ, ಯಶೋಧರ, ಸುಭದ್ರ, ಸುವಿಶಾಳ, ಸುಮನಸ, ಸೌಮನಸ ಮತ್ತು ಪ್ರೀತಿಂಕರ ಎಂಬ ಒಂಬತ್ತು ಕಲ್ಪಾತೀತವಾದ ಸ್ವರ್ಗಗಳು (ಜೀವಿತವ್ಯಪಾಯದೊಳಧೋ ಗ್ರೈವೇಯಕದೊಳಹಮಿಂದ್ರಪದವಿಯಂ ತಾಳ್ದಿದರ್; **ಆದಿಪು,** ೫. ೨೭ ವ)

ಗ್ಲಪನ – [ನಾ] ಬಾಡುವಿಕೆ (ಅನಿತೊಂದುರ್ಕಿನೊಳ್ ಉರ್ಕಿ ಕೌರವಖಳರ್ ಪಾಂಚಾಳರಾಜಾತ್ಮಜಾನನಪದ್ಮ ಗ್ಲಪನೈಕಕಾರಣಪರರ್ ತಾಮಾಗೆಯುಂ: **ಪಂಪಭಾ,** ೭. ೯)

ಗ್ಲಪಿತಮನ – [ನಾ] ಬಾಡಿದ ಮನಸ್ಸು (ಸಾರ್ದತ್ತು ಜಕ್ಕವಕ್ಕಿಯ ಪೊಣರುಂ ಗ್ಲಪಿತಮನಮ್ ಆಗಳುಂ ಉದ್ದಂಡ ಪುಂಡರೀಕೋಜ್ಜ್ವಳಾತಪತ್ರದ ನೆಟಿಲಂ: **ಆದಿಪು,** ೧೧. ೫೦)

ಘ

ಘಂಟೆಯಲುಗು – [ಕ್ರಿ] [ಸೂಳೆಯ] ಮನೆಯ ಮುಂದಿನ ಗಂಟೆಯನ್ನು ಶಬ್ದಮಾಡು (ಮತ್ತಮಲ್ಲಿ ಕೋಟಿ ಪೊಂಗೆ ಘಂಟೆಯಲುಗುವ ಕಿಱುಕುಳಬೊಜಂಗರುಮಂ: **ಪಂಪಭಾ,** ೪. ೮೭ ವ)

ಘಟ – [ನಾ] ಗಡಿಗೆ (ಕಾಮಂಗೆ ಮಜ್ಜನಕೆ ಎಂದೆತ್ತಿದ ಚಂದ್ರಕಾಂತ ಘಟದೊಳ್ ತಂದು ಅಟ್ಟೆಯಿಂ ಪುಷ್ಪವಾಸನೆಗೆಂದಿಕ್ಕಿದ ನೀಳನೀರರುಹಮಂ ಪೋಲ್ದತ್ತು ಕಟ್ಟಿಂದುವಾ: **ಪಂಪಭಾ,** ೪. ೫೧)

ಘಟಚೇಟಿಕೆ – [ನಾ] ನೀರು ತರುವ ದಾಸಿ (ಕಮಳೆಯಂ ಅಶ್ವತ್ಥಾಮಂ ಮುಂದಿಟ್ಟು ಕುರುಕುಟುಂಬ ಘಟಚೇಟಿಕೆಯಂ ತರ್ಪಂತೆ ತಂದು: **ಪಂಪಭಾ,** ೧೩. ೧೦೨ ವ)

ಘಟಪ್ರೋದ್ಭೂತ – [ನಾ] ದ್ರೋಣ (ಶರಶಯ್ಯಾಗ್ರದೊಳ್ ಇಂತು ನೀಮಿರೆ ಘಟಪ್ರೋದ್ಭೂತಂ ಅಂತಾಗೆ ವಾಸರನಾಥಾತ್ಮಜಂ ಅಂತು ಸಾಯೆ: **ಪಂಪಭಾ,** ೧೩. ೬೯)

ಘಟಸಂಭವ – [ನಾ] ದ್ರೋಣ (ಈ ಅಟೆವು ಇನ್ನೆನಗೆ ಆಜಿರಂಗದೊಳ್ ಗಟೆಯಿಸುಗೆ ಎಂಬಿದಂ ನುಡಿಯುತುಂ ಘಟಸಂಭವನೊಳ್ ಸುಯೋಧನಂ: **ಪಂಪಭಾ,** ೧೧. ೧೧೯)

ಘಟಸಂಭೂತ – [ನಾ] ದ್ರೋಣ ಘಟಸಂಭೂತಂಗೆ ಕರ್ಣಂಗೆ ಅಸಾಧ್ಯನೊಳ್ ಆ ಗಾಂಡಿವಿಯೊಳ್ ಕಱುತ್ತಿಜೆವರಾರ್: **ಪಂಪಭಾ,** ೧೩. ೯)

ಘಟಾಘಟಿತ – [ಗು] ಆನೆಯ ಸಮೂಹದಿಂದ ಕೂಡಿದ, ಉಂಟಾಗುವ (ನಾಳೆ ವಿರೋಧಿಸಾಧನ ಘಟಾಘಟಿತ ಆಹವದಲ್ಲಿ ನಿನ್ನ ಕಟ್ಟಾಳಿರೆ ಮುಂಚಿ ತಾಗದೊಡಂ ಅಳ್ಕುಱಿ್ ತಾಗಿ ವಿರೋಧಿಸೈನ್ಯಭೂಪಾಳರಂ ಒಂದೆ ಪೊಯ್ಯದೊಡಂ: **ಪಂಪಭಾ,** ೧೦. ೩೯)

ಘಟಾಳಿ – [ನಾ] ಆನೆಯ ದಂಡು (ಬಾಯ್ಬಿಡೆ ಘಟಾಳಿ ಗುಣಾರ್ಣವನಂಬು ಲಕ್ಕಲೆಕ್ಕದೆ ಕೊಳೆ: **ಪಂಪಭಾ,** ೮. ೨೧)

ಘಟಿತ – [ಗು] ಕೂಡಿದ, ಸೇರಿಸಿದ (ಜಟಮಟಿಸಿಕೊಂಡು ನಿಮ್ಮೀ ಘಟಿಯಿಸುವ ಈ ಸಂಧಿ ಕೌರವರ್ಕಳೊಳ್ ಎನ್ನಿಂ ಘಟಿತ ಜರಾಸಂಧ ಉರಸ್ಥಟ ಸಂಧಿವೊಲ್ ಒಂದೆ ಪೊಟ್ಟಱಿ್‌ಳ್ ವಿಘಟಿಸದೇ: **ಪಂಪಭಾ,** ೯. ೨೩)

ಘಟಿಯಿಸು – [ಕ್ರಿ] ಆಗು, ಸಂಭವಿಸು (ದಿಟ್ಟಿ ಮನಮೆಂಬಿವು ತೊಟ್ಟನೆ ನಟ್ಟು ನಟ್ಟವೊಲ್ ಘಟಿಯಿಸೆ ಸೋಲ್ತೊಱಲ್ದು: **ಆದಿಪು,** ३. ೯೦); **[ಗು]** ಉಂಟಾಗಲಿರುವ (ಜಟಮಟಿಸಿಕೊಂಡು ನಿಮ್ಮೀ ಘಟಿಯಿಸುವ ಈ ಸಂಧಿ ಕೌರವರ್ಕಳೊಳ್ ಎನ್ನಿಂ ಘಟಿತ ಜರಾಸಂಧ ಉರಸ್ಥಟ ಸಂಧಿವೊಲ್ ಒಂದೆ ಪೊಟ್ಟಱಿ್‌ಳ್ ವಿಘಟಿಸದೇ: **ಪಂಪಭಾ,** ೯. ೨೩)

ಘಟೋದ್ಭವ – [ನಾ] ದ್ರೋಣ (ಯಾದವವಂಶಜರುಂ ನಾನಾದೇಶ ನರೇಂದ್ರರುಂ ಘಟೋದ್ಭವನ ಧನುರ್ವೇದಮನೆ ಕಲಲ್ ಬಂದಾಳಾದರ್: **ಪಂಪಭಾ,** ೨. ೫೬)

ಘಟ್ಟಣೆ – [ನಾ] ತಾಗುವಿಕೆ, ಘರ್ಷಣೆ (ಬಾಳ್ವಾಳ್ಗಳ ಘಟ್ಟಣೆಯೊಳ್ ಬಳ್ವಳ ಬಳೆದೊಗೆದು ನೆಗೆದ ಕಿಡಿಗಳ ಬಂಬಲ್ಗಳ್ವೆರಸು ಪೊಳೆದು ನೆಗೆದುದು ಬಾಳ್ವೊಗೆ: **ಪಂಪಭಾ,** ೧೦. ೮೪)

ಘಟ್ಟನ – [ನಾ] ಹೊಡೆತ (ಚಟುಳಿತ ಚಕ್ರನೇಮಿ ಪರಿವರ್ತನ ಘಟ್ಟನಘಾತನಿರ್ಭರ ಸ್ಫುಟಿತ ಧರಾತಳಂ: **ಪಂಪಭಾ,** ೧೧. ೧೪೭)

ಘಟ್ಟಿಮಗುಟ್ಟು – [ಕ್ರಿ] ಅರೆಯುವಾಗ ಅದನ್ನು ತಿರುಗಿಸು (ಮನಂಬುಗೆ ನಳಿತೋಳ ಕೋಳೆಸೆಯೆ ಘಟ್ಟಿಮಗುಟ್ಟುವ ಘಟ್ಟಿವಟ್ಟಿಯಂ ಭೋಂಕನೆ ಕಂಡು ಕೀಚಕಂ: **ಪಂಪಭಾ,** ೮. ೫೯ ಮತ್ತು ೫೯ ವ)

ಘಟ್ಟಿವಳ್ತಿ – [ನಾ] ಗಂಧ ತೇಯುವವಳು (ವಿವಿಧಗಂಧಂಗಳಂ ಆಂ ಅವಯವದೊಳ್ ಮಾಡುವ ಘಟ್ಟಿವಳ್ತಿಯೆಂ ದೇವಿ ಗಂಡವಳ್ತಿಯೆಂ ಅಲ್ಲೆಂ: **ಪಂಪಭಾ,** ೮. ೫೬)

ಘಟ್ಟಿಸು – [ನಾ] ಧಮ್ಮಸ್ಸು ಮಾಡು (ರತ್ನದಿಂ ಬೆರಸಿದ ಬಣ್ಣದೊಳ್ ಮೆಱಿ್ಯೆ ಕಟ್ಟಿಸಿ ಘಟ್ಟಿಸಿ ರಂಗಭೂಮಿಯಂ: **ಪಂಪಭಾ,** ೩. ४೦); ಅಪ್ಪಳಿಸು (ಚಾತುರ್ವಲಂಗಳ್ ಮೊದಲ ಸಮಕಟ್ಟುಗೆಟ್ಟು ತಡವರಿಸಿ ತಟ್ಟುಪೊಟ್ಟೆಂದು ಎಚ್ಚು ಮಿಟ್ಟುಂ ಇಱಿದು ತಱಿದು ಘಟ್ಟಿಸೆಯುಂ: **ಪಂಪಭಾ,** ೧೦. ೭೦ ವ)

ಘನ – [ನಾ] ಮೋಡ (ಘನದ ಕರಗಿದುದುನರಱಿದು ಅಪಘನದ ವಿಳಾಸಮನದೆಂತು ನಂಬುವುದೊ: **ಆದಿಪು,** ೪. ೬೫); ಘನವಾದುದು, ದೃಢವಾದುದು (ಘನಾಘನದಿಂದಂ ಅಱಿಯಲಾದುದು ಘನಾಘನಂ ಜವನ ದಾಟೆಗಿಲ್ಲೆಂಬಿನಿತಂ: **ಆದಿಪು,** ೪. ೬೫); **[ನಾ]** ತಾಳ, ಗಂಟೆ, ಗೆಜ್ಜೆ ಮುಂತಾದ ತಾಳವಾದ್ಯ (ಅತಿಮೃದುರವದಾಯಿಗಳಂ ತತ ಘನ ಸುಷಿರ ಅವನದ್ಧವಾದ್ಯಂಗಳನೇಂ ಮತಮಱಿದು ಓಲಗಿಪುದೊ ದಂಪತಿಗೆಂದುಂ ಅವಾರ್ಯತೂರ್ಯಕ್ಷ್ಮಾಜಂ: **ಆದಿಪು,** ೫. ३೫); **[ನಾ]** ದಪ್ಪನಾದ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ಘನಗರ್ಜನೆ – [ನಾ] ಮೋಡದ ಗರ್ಜನೆ, ಗುಡುಗು (ಕಡಲುರಿಯಂತೆ ಅಕಾಲಘನಗರ್ಜನೆಯಂತೆ ಸಮಸ್ತದಿಕ್ತಟಂ ಪಿಡುಗುವಿನಂ ರಣಾನಕರವಂಗಳಸುಂಗೊಳೆ: **ಪಂಪಭಾ,** ೧೩. ३३)

ಘನಘಟಾಟೋಪ – [ನಾ] [ಘನಘಟಾ+ಆಟೋಪ] ಮೋಡದ ರಾಸಿಯ ಅಬ್ಬರ, ಗುಡುಗು (ಸಮುದ್ಯತ್ ರಜತಗಿರಿ ತಟ ಸ್ಪಷ್ಟ ಸಂಶ್ಲಿಷ್ಟ ಮೌರ್ವೀನಿನದಂ ಪರ್ವಿತ್ತು ಅಕಾಂಡಪ್ರಳಯ ಘನಘಟಾಟೋಪ ಗಂಭೀರನಾದಂ: **ಪಂಪಭಾ,** ೧೨. ೧३೭)

ಘನಘಟೆ – [ನಾ] ಮೋಡದ ರಾಶಿ (ಘನಘಟೆ ನಭದಿಂದಂ ಧಾತ್ರಿಗೆತ್ತೆತ್ತ ಬಂದತ್ತೆನಿಸಿ ತಳರ್ದುದೆತ್ತಂ .. .. ಆಶಾಚಕ್ರಗಂಧೇಭಚಕ್ರಂ: **ಆದಿಪು,** ೧೧. ೫೦)

ಘನದ – [ನಾ] ಮೋಡ (ಘನದ ಕರಗಿದುದನಱಿದು ಅಪಘನದ ವಿಳಾಸಮನದೆಂತು ನಂಬುವುದೊ: **ಆದಿಪು,** ೪. ೬೫)

ಘನಪಥ – [ನಾ] ಆಕಾಶ (ಅಂಭೋಧಿವೇಲೆ ಭೋರ್ಗರೆವವೊಲ್ ಒರ್ಮೊಲೆಸೆದವು ಘನಪಥದೊಳ್ ತ್ರಿದಶಕರ ಆಹತಿಯಿಂ ಒಡನೆ ಸುರದುಂದುಭಿಗಳ್: **ಪಂಪಭಾ,** ೧. ೧೪೬)

ಘನಮಾರ್ಗ – [ನಾ] ಘನಪಥ (ಘನಮಾರ್ಗವ್ಯಾಪಿ ಚೈತ್ರಧ್ವಜ ವಿಜಯಗಜಾರೂಢಂ .. .. ಭರತನೃಪಂ ನೂಂಕಲುದ್ಯುಕ್ತನಾದಂ: **ಆದಿಪು,** ೧೪. ೯೮)

ಘನರವ – [ನಾ] ಗುಡುಗು (ಘನಪಥಮಂ ಪಳಂಚಲೆವ ಸೌಧಚಯಂಗಳಿಂ ಆಡುತಿರ್ಪ ಕೇತನತತಿಯಿಂ ಕರೀಂದ್ರ ಗಳಗರ್ಜನೆಯಿಂ ಪಟಹಪ್ರಣಾದಮಂ ಘನರವಮೆಂದೆ ನರ್ತಿಸುವ ಕೇಕಿಗಳಿಂ: **ಪಂಪಭಾ,** ೪. ೫)

ಘನಸಾರ – [ನಾ] ಪಚ್ಚಕರ್ಪೂರ (ಘನಸಾರ ಸರಳ ಚಂದನವನ ಮೃದುಪಲ್ಲವಮಂ ಅಗ್ರಹಸ್ತದೆ ಕೊಂಡು: **ಆದಿಪು,** ೭. ೭೨)

ಘನಾಗಮ – [ನಾ] ಮಳೆಗಾಲ (ಘನಾಗಮಂ ಮೊದಲ್ಗಿಡೆ ಶರದಾಗಮಂ ನೆಱೆಯೆ ಪರ್ಬೆ ಸಮಸ್ತಮಹೀವಿಭಾಗಮಂ: **ಪಂಪಭಾ,** ೭. ೬೯)

ಘನಾಘನ – [ನಾ] ಮೋಡ ಹಾಗೂ [ಘನ+ಅಘನ] ದೃಢತೆ ಮತ್ತು ಅದೃಢತೆ (ಘನಾಘನದಿಂದಮಱೆಯಲಾದುದು ಘನಾಘನಂ ಜವನ ದಾಟೆಗಿಲ್ಲೆಂಬಿನಿತಂ: **ಆದಿಪು,** ೪. ೬೫)

ಘನಾಘನನಿನಾದ – [ನಾ] ಗುಡುಗು (ಘನಾಘನನಿನಾದದಿಂ ಬೃಂಹಿತಂಗೆಯ್ವ ವಿಜಯಗಜಮಂ ನೆಲನಂ ಪೊಕ್ಕಡಂಗಿದ ಪಗೆವರಂ ಅಗುಟ್ದು ಕೊಲ್ವುದಂ ಉದಾಹರಿಸುವಂತೆ: **ಪಂಪಭಾ,** ೯. ೯೫ ವ)

ಘರವಟ್ಟಿಸು – [ಕ್ರಿ] ಬೀಸು, ತಿರುಗಿಸು (ಕರವಾಳಂ ಘರವಟ್ಟಿಸಿ ಶಿರೋಜಮಂ ಪಿಡಿದು ತೆಗೆದು ಗುರುವಂ ಪಚ್ಚಂತಿರೆ ಪಿರಿದು ಪೊಯ್ದಂ: **ಪಂಪಭಾ,** ೧೨. ೩೦)

ಘರ್ಮ – [ನಾ] ಉಷ್ಣತೆ (ಮೇಗಣ ನಾಲ್ಕಱೊಳ್ ಐದಱ ಮೇಗಣ ಭಾಗದೊಳ್ ಅಗುರ್ವು ಘರ್ಮಂ: **ಆದಿಪು,** ೫. ೮೨)

ಘರ್ಮಕಿರಣ – [ನಾ] ಬಿಸಿಯ ಕಿರಣಗಳುಳ್ಳವನು, ಸೂರ್ಯ (ಘರ್ಮಕಿರಣಸಂತಾಪತಾಪಿತಶರೀರರ್ ಒಂದು ಆಲದ ಮರದ ಕೆಳಗೆ ವಿಶ್ರಮಿಸೆ: **ಪಂಪಭಾ,** ೮. ೩೭ ವ)

ಘರ್ಮಜಲ – [ನಾ] ಬೆವರು (ತೋಳ್ಗಳ್ ಆಸೆಯೊಳ್ ತೊಡರ್ದಿರೆ ಪೊಣ್ಮೆ ಘರ್ಮಜಲಂ ಉಣ್ಮೆ ಭಯಂ ಕಿಡೆ ನಾಣ್ .. .. ಗುಣಾರ್ಣವನಂ ಸತಿ ಮಾಲೆ ಸೂಡಿದಳ್: **ಪಂಪಭಾ,** ೩. ೬೪)

ಘರ್ಮವಾರಿ – [ನಾ] ಬೆವರು (ದೀಪ್ತಕಂದರ್ಪದರ್ಪ ಕ್ಷುಭಿತಗಳನಿನಾದಂ ಪ್ರಸ್ಫುರತ್ ಘರ್ಮವಾರಿ ಪ್ರಭವಂ: **ಪಂಪಭಾ,** ೫. ೨೮)

ಘರ್ಮಾಂಬು – [ನಾ] ಬೆವರು (ಸಮಸಂದ ಅಟ್ಟಱ್ ಅಲಂಪನೀಯೆ ಶಯನಂ ಘರ್ಮಾಂಬುವಿಂ ನಾನೆ ಮುನ್ನಮೆ ನಾಣೊಟ್ಟುಗಿಡಿವೋಗಿ ಸೂಸುವ ಪದಂ ಗಂಗಾಂಬುವಂ ಪೋಲೆ: **ಪಂಪಭಾ,** ೪. ೧೮೯)

ಘಸಣಿ – [ನಾ] ಕೋಟಲೆ, ತೊಂದರೆ (ಧರಾವನಿತೆಯ ಭಾರಾವತಾರದೊಳ್ ಎನಿತಾನುಂ ಘಸಣಿ ಪೋದುದು ಅದು ಕಾರಣದಿಂ ರಾಜಸೂಯದ ಮಾತಂ ಕೇಳ್ದಲ್ಲಿಯೆ ಮಱೆವುದು: **ಪಂಪಭಾ,** ೬. ೨೪ ವ)

ಘಸೃಣ – [ನಾ] ಕುಂಕುಮ ಕೇಸರಿ (ಅತಿ ಮಸೃಣಘಸೃಣ ಗೋಶೀರ್ಷ ಚಂದನ ಅಗರು ಕರ್ಪೂರಸಂಮಿಶ್ರಿತ ಸುರಭಿ ಗಂಧಂಗಳಿಂದಂ: **ಆದಿಪು,** ೨. ३೨ ವ)

ಘಳಿಲನೆ – [ಅ] ಬೇಗನೆ (ಪೊಲಂ ಉಡುಗಿ ಬಂದುದು ಉಡಿದುದು ಪುಲ್ ಕಾಡುಂ ದಲ್ ಎಲೆಯಿಕ್ಕಿ ಘಳಿಲೆನೆ ನಿಂದುವು ತಣಿದುವು ಮೃಗಂಗಳ್ ಎತ್ತಲುಮೀಗಳ್: **ಪಂಪಭಾ,** ೫. ३೭)

ಘಳುಮ್ಮನೆ – [ಅ] ದಢಕ್ಕನೆ ಎಂಬರ್ಥದ ಅನುಕರಣಾವ್ಯಯ (ಖಳನುಂ ಕಳ್ಳುಣಿಯುಂ ಘಳುಮ್ಮನಿಟೆಗುಂ ಶ್ವಭ್ರಾಂತಮಂ ತಾಪಿನಂ: **ಆದಿಪು,** ೫. ೮೧)

ಘಟೆಯಿಸು – [ಕ್ರಿ] [ಗಳಿಯಿಸು] ಸಂಪಾದಿಸು (ಧರ್ಮಮಂ ಘಳಿಯಿಸಿಕೊಳ್ವುದೊಂದೆ ಚದುರ್ ಇಂತುಟು ಸಂಸೃತಿಧರ್ಮಮೇಕೆ: **ಆದಿಪು,** ೩. ೫३); [ಘಟಿಯಿಸು] ಸೇರಿಸು (ವಿಯೋಗಿಯಳ್ಪೆರ್ದೆಯಂ ಆಯ್ದು ಅದಂ ಆಟರಲ್ ಎಂದೆ ಮನ್ಮಥಂ ಘಟೆಯಿಸಿ ಕೆಂಪುವಾಸಿದವೊಲ್: **ಪಂಪಭಾ,** ೫. ३೨)

ಘಟಿಲನೆ – [ಅ] ಕೂಡಲೆ, ತಟ್ಟನೆ (ಉಟೆವುದು ಭುಜಬಲದಳವಂ ಘಟಿಲನೆ ಕೊಳೆ ಹೀನಬಲನಧಿಕಬಲಂ ತೊತ್ತಟಿದುಟೆದನೆಂಬ ಲೋಕದ ಪಟೆ ಪೊರ್ದದೆ ಮಾಣೆ ಧರ್ಮಯುದ್ಧದೊಳೆಸಗಿಂ: **ಆದಿಪು,** ೧೪. ೧೦೨)

ಘಾಟ – [ನಾ] [ಆನೆಯ] ಹೆಕ್ಕತ್ತು (ಅಲ್ಪಘಾಟನುಂ ಉನ್ನತಶಿಖನುಂ ಪೀನಮಾಂಸಕಟಶ್ಲಿಷ್ಟನುಂ ಅತಿದೀರ್ಘಸ್ನಿಗ್ಧಕೃಷ್ಣವದನನುಂ: **ಆದಿಪು,** ೧೨. ೫೬ ವ)

ಘಾತ – [ನಾ] ಹೊಡೆತದ ಪರಿ (ಪಾತಂ ಲಕ್ಷ್ಯಂ ಶೀಘ್ರಂ ಘಾತಂ ಬಹುವೇಗಂ ಎಂಬಿವಯ್ದೇಸಿನೊಳಂ ಅಂತು ಈತನ ದೊರೆಯಲ್ಲ: **ಪಂಪಭಾ,** ೧೨. ೧೮೫)

ಘಾತಿ – [ನಾ] [ಜೈನ] ಘಾತಿಕರ್ಮ, ಆತ್ಮನ ಗುಣಕ್ಕೆ ಘಾತಕವಾದ ಕರ್ಮ; ಸತ್ಕಾರ್ಯ ಪ್ರವೃತ್ತಿ ಮುಂತಾದ ಉತ್ತಮಗುಣಗಳನ್ನು ಹಾಳುಮಾಡಿ ಆತ್ಮನ ಪರಿಪೂರ್ಣತೆಗೆ ಬಂಧಕವಾದ ಜ್ಞಾನಾವರಣೀಯವೇ ಮೊದಲಾದ ನಾಲ್ಕು ಬಗೆಯ ಕರ್ಮ (ಅಕ್ಷಯಪುಣ್ಯಂ ಉಗ್ರತಪಮೆಂಬುಗ್ರಾಸಿಯಿಂ ಕೂಡೆ ಘಾತಿಗಳಂ ಘಾತಿಸಿ: **ಆದಿಪು,** ३. ८೦)

ಘಾತಿಚತುಷ್ಟಯ – [ನಾ] [ಜೈನ] ಘಾತಿಚತುಷ್ಕ. ಜ್ಞಾನಾವರಣೀಯ ದರ್ಶನಾವರಣೀಯ ಮೋಹನೀಯ ಮತ್ತು ಅಂತರಾಯ ಎಂಬ ನಾಲ್ಕು ಘಾತಿ ಕರ್ಮಗಳ ಸಮೂಹ (ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ ಮಹಾಷ್ಟಾಪದಶೈಲದೊಳ್ವಿಜಿತನಘಾತಿಚತುಷ್ಟಯನ್:... ಇರೆ: **ಆದಿಪು,** ೧. ೪೦)

ಘಾತಿಸು – [ಕ್ರಿ] ನಾಶಮಾಡು (ಅಕ್ಷಯಪುಣ್ಯಂ ಉಗ್ರತಪಮೆಂಬುಗ್ರಾಸಿಯಿಂ ಕೂಡೆ ಘಾತಿಗಳಂ ಘಾತಿಸಿ: **ಆದಿಪು,** ३. ८೦)

ಘುಮ್ಮೆಂಬಡವಿ – [ನಾ] ಘುಮ್ ಎಂಬ ಅಡವಿ, ಬಿಗಿದುಕೊಂಡ ಕಾಡು (ನಿನ್ನಿರವಂ ನೀಂ ಮರುಳೆ

ಬಗೆಯದಂತುಂ ಘುಮ್ಮೆಂಬಡವಿಯೊಳಡಂಗಿ ಚಿಂತಿಸುತಿರ್ಪಾ: **ಪಂಪಭಾ,** ೭. ೫೦)

ಘುಳುಮ್ಮನೆ – [ಅ] [ಅನುಕರಣ ಪದ] ದುಡುಂ ಎಂದು (ಧರ್ಮಕೃತಿದ್ರೋಹನುಂ ಖಳನುಂ ಕಳ್ಳುಣಿಯುಂ ಘುಳುಮ್ಮನಿಟಿವಂ ಶ್ವಭ್ರಾಂತಮಂ ತಾಪಿನಂ: **ಆದಿಪು,** ೫. ೮೧)

ಘೂರ್ಜರ – [ನಾ] ಗುಜ್ಜರ ದೇಶ (ವಿಜಯಾರಂಭ ಪುರಸ್ಸರ ವಿಜಯ ಗಜಂಗಳನೆ ಪಿಡಿದು ಘೂರ್ಜರ ರಾಜಧ್ವಜಿನಿಯನಿಱಿದೋಡಿಸಿ ಭುಜವಿಜಯದೆ ವಿಜಯಮನಿಳಿಸಿದಂ ನರಸಿಂಹಂ: **ಪಂಪಭಾ,** ೧. ೩೬

ಘೂರ್ಣಮಾನ – [ಗು] ಮೊರೆಯುವ (ಘೂರ್ಣಮಾನ ಅರ್ಣವಘೋಷಮಂ ಗೆಲ್ದು ಹರ್ಷದಿಂ ಪೆರ್ಚುವಂತೆ ಪೆರ್ಚೆ: **ಆದಿಪು,** ೧೩. ೪೨ ವ)

ಘೂರ್ಣಿಸು – [ಕ್ರಿ] [ಕ್ಷೋಭೆಯಿಂದ] ಭೋರ್ಗರೆ (ಬಾಹುಮಂದರದಿಂ ವೈರಿಬಲಾಬ್ಧಿ ಘೂರ್ಣಿಸೆ ಬಿಗುರ್ತೀ ಕೌರವರ್ ಕೂಡೆ ನೂರ್ವರುಮಂ ಕೊಲ್ವೆಂ ಇದೆನ್ನ ಪೂಣ್ಕೆ: **ಪಂಪಭಾ,** ೭. ೧೫); **[ಕ್ರಿ]** ಶಬ್ದಮಾಡು (ವನಧಿಪ್ರಧ್ವಾನದಿಂ ಮಂಗಳಪಟಹರವಂ ಪೆರ್ಚೆ ಮಾಂಗಲ್ಯಗೇಯಧ್ವನಿಯಿಂದೆ ಆಶಾಂತರಂ ಘೂರ್ಣಿಸಿ ಸೊಗಯಿಸೆ: **ಪಂಪಭಾ,** ೧೪. ೧೮)

ಘೃತ – [ನಾ] ತುಪ್ಪ (ಅರಗು ಮೊದಲಾಗೆ ಘೃತ ಸಜ್ಜರಸಂ ಬೆಲ್ಲಂ ಸಣಂಬಿವೆಂಬಿವಱಿಂ ವಿಸ್ತರಿಸಿ ಸಮೆದ ಇಂದ್ರಭವನಮೆ ಧರೆಗವತರಿಸಿರ್ದುದೆನಿಸುವ ಅರಗಿನ ಮನೆಯಂ: **ಪಂಪಭಾ,** ೩. ೩)

ಘೃತಘಟವಿಘಟನ – [ನಾ] ತುಪ್ಪದ ಕೊಡವನ್ನು ಒಡೆದುಕೊಂಡು ಬಂದವನಾಗಿ (ಅಂತು ನೂರ್ವರೊಳ್ ಒರ್ವನ ಅಗುರ್ಬು ಪರ್ಬಿ ಪರಕಲಿಸೆ ಸಂಪೂರ್ಣ ವಯಸ್ಕನಾಗಿ ಘೃತಘಟವಿಘಟನನುಮಾಗಿ ಪುಟ್ಟುವುದುಂ: **ಪಂಪಭಾ,** ೧. ೧೩೧ ವ)

ಘೃತಪೂರ – [ನಾ] ತುಪ್ಪದ ಪೂರಿ (ಮೃದುರಸನಾ ಸಮ್ಮರ್ದನಮಾತ್ರ ದ್ರಾವಣಿಯ ಘೃತಪೂರಮುಮಂ: **ಆದಿಪು,** ೧೧. ೨೬ ವ)

ಘೋಷಾಕರ – [ನಾ] ಕಣಜ (ಘೋಷಾಕರ ಸಂಗ್ರಹಾಕರ ಗೋವ್ರಜಂಗಳುಮಂ: **ಅದಿಪು,** ೮. ೬೩ ವ)

ಘೋಷಿಸು – **[ಕ್ರಿ]** ಸಾರಿ ಹೇಳು (ಆನಂದಭೇರಿಯಂ ಪೊಯ್ಸಿ ಘೋಷಿಸಲ್ವೇೞ್ದು: **ಆದಿಪು,** ೧೪. ೧೦೪ ವ)

ಘೋಟಿಯಿಲ – [ನಾ] ಕುದುರೆ ಸವಾರ, ರಾವುತ (ಘೋಟಿಯಿಲರ್ ತಗುಳ್ದು ತತ್ತಱ ತಱಿದಿಕ್ಕಿ ದೇಗುಲಕೆ ಪೆರ್ಮರನಂ ಕಡಿವಂತೆ ಮಾಡಿದರ್: **ಪಂಪಭಾ,** ೮. ೯೫)

ಘೋಟಾಯ್ಲ – [ನಾ] ಕುದುರೆ ಸವಾರ (ಘೋಟಾಯ್ಲರ್ ಪೊಳೆಯಿಸೆ ಬಿಸಿಲ್ಗುದುರೆಗಳ್ ಪೊಳೆವಂತೆ ಪೊಳೆವ ಕಡುಗುದುರೆಗಳುಮಂ .. .. ಒಡ್ಡಿ ನಿಂದಾಗಳ್: **ಪಂಪಭಾ,** ೧೦. ೫೧ ವ)

ಚ

ಚಂಚತ್ – [ಗು] ಚಲಿಸುವ (ನಡೆಯೆ ತುರಗಂ ಪೊನ್ನ ಆಯೋಗಂಗಳಿಂ ಅಮರ್ದು ಅಟ್ಟೆಯಿಂ ಪಡೆಯೆ ನೆಳಲಿಂ ಚಂಚತ್ ಪಿಂಛಾತಪತ್ರಮೆ ಕೂಡೆ ತಮ್ಮೊಡನೆ ಬರೆ: **ಪಂಪಭಾ,** ೯. ೧೦೨)

ಚಂಡ – [ಗು] ವೇಗವಾದ, ಬಿರುಸಾದ (ವಾತ್ಯಾದುರ್ಧರ ಗಂಧಸಿಂಧುರ ಕಟಸ್ರೋತಃ ಸಮುದ್ಯತ್ ಮದವ್ರಾತ ಇಂದಿಂದಿರ ಚಂಡ ತಾಂಡವ ಕಲ ಸ್ವಾಭಾವಿಕಶ್ರೇಯಸಃ: **ಪಂಪಭಾ,** ೯. ೯೭)

ಚಂಡಮರೀಚಿ – [ನಾ] ಸೂರ್ಯ (ಚಂಡಮರೀಚಿಗೆ ಅಸ್ತಮಯಮಿಲ್ಲದುದು ಒಂದೆಡೆ ನಿಮ್ಮ ಕೇಳ್ದುದುಂ ಕಂಡುದುಂ ಉಳ್ಳೊಡೆ ಇಂ ಬೆಸಸಿಂ ಆಂ ಇರದೆ ಅಲ್ಲಿಗೆ ಪೋಪೆವು: **ಪಂಪಭಾ,** ೪. ೪೮)

ಚಂಡರೋಚಿ – [ನಾ] ಪ್ರಖರ ಕಿರಣಗಳುಳ್ಳವನು, ಸೂರ್ಯ (ಪತ್ತಿ ಶಸ್ತ್ರ ದ್ಯುತಿಪರಿಕರ ಸಾಂದ್ರೀಭವಚ್ಚಂಡರೋಚಿಃಕಿರಣೌಘಂ: **ಆದಿಪು,** ೪. ೨೪)

ಚಂಡವೇಗ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲೊಂದಾದ ದಂಡರತ್ನದ ಹೆಸರು (ವಿಜಯಾರ್ಧಾಚಳ ಮಹಾಗುಹಾಗಹ್ವರಮುಖ ವಜ್ರಕವಾಟಪುಟ ವಿಘಟಪಟುವಪ್ಪ ಚಂಡವೇಗಮೆಂಬ ದಂಡರತ್ನಮುಂ: **ಆದಿಪು,** ೧೧. ೩. ವ)

ಚಂಡಾಂಶು – [ನಾ] ಚಂಡರುಚಿ, ಸೂರ್ಯ (ದೀಪ್ಯಮಾನ ಪ್ರತಾಪಸ್ಥಗಿತಾಶಾಚಕ್ರಚಂಡಾಂಶುವಂ ಅಮರಮನೋಹಾರಿ ಹೇಮಾದ್ರಿಯಂ: **ಆದಿಪು,** ೮. ೨೬)

ಚಂದನಗಂಧವಾರಿ – [ನಾ] ಶ್ರೀಗಂಧದ ಪರಿಮಳದ ನೀರು (ಚಂದನ ಗಂಧವಾರಿಯೊಳ್ ಸುತ್ತಲುಂ ಅಟ್ಟಿಱಿಂ ಪಡೆವ ಗೇಯದ ಪೆಂಪಿನ ಅಲಂಪಂ ಆರ್ಗಂ ಆರ್ತಿತ್ತುದು ಪಟ್ಟಬಂಧ ಮಹೋತ್ಸವಂ ಆ ಪಡೆಮೆಚ್ಚೆ ಗಂಡನಾ: **ಪಂಪಭಾ,** ೧೪. ೨೦)

ಚಂದನರಸ – [ನಾ] ಶ್ರೀಗಂಧದ ಮರದ ರಸ (ಅಂಗಲತಾಲಾಲಿತ ಸಾಂದ್ರಚಂದನರಸಂ ಬೆಳ್ದಿಂಗಳ್ ಎಂಬೊಂದು ಪಂಬಲ ಬಂಬಲ್ಗೆಡೆಯಾಗೆ ಬೆಳ್ಪಸದನಂ ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೭); ಪರಿಮಳದ್ರವ (ಮಾದ್ಯತ್ ಗಜಗಂಡಭಿತ್ತಿ ಕಷಣ ಪ್ರೋದ್ಭೇದದಿಂ ಸಾರ್ದು ಬಂದು ಇದಿರೊಳ್ ಕೂಡುವುದಿಲ್ಲಿ ಚಂದನರಸಂ ಕೆಂಬೊನ್ನ ಟಂಕಂಗಳೊಳ್: **ಪಂಪಭಾ,** ೪. ೨೨)

ಚಂದನಸಾರ – ಶ್ರೀಗಂಧದ ರಸ (ಘನಸಾರ ಚಂದನಸಾರ ಪ್ರಮೃಷ್ಟಕರತಳನುಂ: **ಆದಿಪು,** ೧೧. ೨೭ ವ)

ಚಂದ್ರಕ – [ನಾ] ನವಿಲುಗರಿ (ಪಲವುಂ ರಾಜಚಿಹ್ನಂಗಳಂ ಬೆಳ್ಗೊಡೆಗಳ್ ತಳ್ತೊಯ್ದು ಅದೇಂ ಕಣ್ಗೊಳಿಸಿದುದೊ ಚಳತ್ ಚಂದ್ರಕಚ್ಛತ್ರಪಿಂಡಂ: **ಪಂಪಭಾ,** ೧೩. ೩೮)

ಚಂದ್ರಕಚ್ಛತ್ರ – [ನಾ] ನವಿಲುಗರಿಯ ಕೊಡೆ (ನಿರಂತರೋಚ್ಛ್ರಿತ ಚಂದ್ರಕಚ್ಛತ್ರಚ್ಛಾಯಾನಿರಾಕೃತಾತಪನುಂ: **ಆದಿಪು,** ೩. ೯೦ ವ)

ಚಂದ್ರಕಬಳ – [ನಾ] ಕೆಂಪು ಬಣ್ಣದ ಒಂದು ಬಗೆಯ ಪರಿಮಳದ್ರವ್ಯ (ಚಿನ್ನ ಪೂಗಳಂ ಮೆಱೆವಂತೆ ಚಂದ್ರಕಬಳಮಂ ತೊಡೆವಂತೆ ಮಹೀಕಾಂತೆ ಸೊಗಯಿಸೆ: **ಆದಿಪ,** ೭. ೩೬ ವ)

ಚಂದ್ರಕವಳ – [ನಾ] ಪರಿಮಳದ್ರವ್ಯ (ಮನ್ಮಥೋತ್ಸವ ಅಭಿಮುಖ ಚಂದ್ರನುಂ ಚಂದ್ರಕವಳದಿಂ ತೊಡೆದು ಓರೊಂದೆ ವಜ್ರದ ಪಂಚಲೋಹಮುಮಂ: **ಆದಿಪು,** ೪. ೪೧ ವ)

ಚಂದ್ರಕಾಂತ – [ನಾ] ಬೆಳುದಿಂಗಳಿನಿಂದ ಆರ್ದ್ರಗೊಳ್ಳುವ ಬಿಳಿಯ ಕಲ್ಲು (ಆ ರತಿ ಪಾಪಮುಂ ಪಡಣಮುಂ ಪೋಪಂತೆ ಕಾಮಂಗೆ ಮಜ್ಜನಕೆ ಎಂದೆತ್ತಿದ ಚಂದ್ರಕಾಂತ ಘಟದೊಳ್ ತಂದು: **ಪಂಪಭಾ** ಪರಿಷತ್ತು, ೪. ೫೧)

ಚಂದ್ರಕಾಂತಘಟ – [ನಾ] ಬಿಳಿಗಲ್ಲಿನ ಕೊಡ (ರತಿ ಪಾಪಮುಂ ಪಡಣಮುಂ ಪೋಪಂತೆ ಕಾಮಂಗೆ ಮಜ್ಜನಕ್ಕೆಂದೆತ್ತಿದ ಚಂದ್ರಕಾಂತಘಟದೊಳ್: **ಪಂಪಭಾ,** ೪. ೫೧)

ಚಂದ್ರಕಿ – [ನಾ] ನವಿಲು (ಸಮದಾರಾತಿಮರಾಳನೀರದರವಂ ಸಂಕ್ರುದ್ಧವೈವಸ್ವತೋಪಮವಿದ್ವಿಷ್ಟ ಫಣೀಂದ್ರ ಚಂದ್ರಕಿರವಂ: **ಆದಿಪು,** ೧೧. ೧೦)

ಚಂದ್ರಕಿರವ – [ನಾ] ನವಿಲಿನ ಕೇಗು (ಸಮದಾರಾತಿ ಮರಾಳನೀರದರವಂ ಸಂಕ್ರುದ್ಧವೈವಸ್ವತೋಪಮ ವಿದ್ವಿಷ್ಟ ಚಂದ್ರಕಿರವಂ: **ಆದಿಪು,** ೧೧. ೧೦)

ಚಂದ್ರಗತಿ – [ನಾ] ಎಲ್ಲ ನಕ್ಷತ್ರಗಳನ್ನೂ ಪ್ರವೇಶಿಸಿ ಚಂದ್ರನು ಮೆಲ್ಲಗೆ ಹೋಗುವುದು (ನಗರಾರಣ್ಯನಿರ್ವಿಶೇಷಂ ಉತ್ತಮ ಮಧ್ಯಮ ಜಘನ್ಯಾಗಾರಂಗಳೊಳ್ ಚಂದ್ರಗತಿಯಿಂ ಸಲುತ್ತುಂ: **ಆದಿಪು,** ೯. ೧೩೦ ವ)

ಚಂದ್ರಚರಿತ – [ನಾ] ಚಂದ್ರಗತಿ, ಚಂದ್ರನ ನಡವಳಿಕೆ [ಕುಮುದಗಳನ್ನು ಅರಳಿಸುವ ಕಾರ್ಯ] (ಶರದದ ಚಂದ್ರಮನೊಳ್ ಮಚ್ಚರಿಪಂತಿರೆ ಚಂದ್ರಚರಿತಮಂ ಕೈಕೊಂಡಂ: **ಆದಿಪು,** ೧೨. ೪೬)

ಚಂದ್ರಧವಳ – [ನಾ] ಚಂದ್ರನಂತೆ ಬೆಳ್ಳಗಿರುವ (ಧರ್ಮಜನಿಕ್ಕಿದಂ ಗುರುವಂ ಇಂ ನೀನಾತನಂ ಬೇಗಂ ಇಕ್ಕದೆ ಕಣ್ಣೀರ್ಗಳನಿಕ್ಕೆ ಚಂದ್ರಧವಳಂ ನಿನ್ನನ್ವಯಂ ಮಾಸದೇ: **ಪಂಪಭಾ,** ೧೨. ೩೫)

ಚಂದ್ರಬಿಂಬ – [ನಾ] ಚಂದ್ರನ ಆಕೃತಿ (ಇತ್ತೆನೆಂದು ವಿಯತ್ತಳಕ್ಕೊಗೆದೊಡೆ ಆತನಂಶಮಾಕೆಯ ಗರ್ಭಸರೋವರದೊಳಗೆ ಚಂದ್ರಬಿಂಬದಂತೆ ಸೊಗಯಿಸೆ: **ಪಂಪಭಾ,** ೧. ೧೨೪ ವ)

ಚಂದ್ರಾಂಶು – [ನಾ] ಚಂದ್ರನ ಕಿರಣ, ಬೆಳುದಿಂಗಳು (ವಾರಿಜ ಮಳಯಜ ಮಳಯಸಮೀರಣ ಚಂದ್ರಾಂಶು ಚಂದ್ರಕಾಂತದ್ರವ ಕರ್ಪೂರ ಮೃಣಾಳಾದಿಗಳುಂ: **ಆದಿಪು,** ೨. ೧೩)

ಚಂದ್ರಾತಪ – [ನಾ] [ಚಂದ್ರ+ಆತಪ] ಬೆಳುದಿಂಗಳು (ಚಂದ್ರಾತಪ ಪಾಂಡುರ ಹರಿಚಂದನಾನುಲಿಪ್ತಗಾತ್ರನುಂ ಅಭಿನವ ವಿಳಸಿತ ಮಾಳತೀಮಾಳಾಪರಿಷ್ಕೃತಮಕುಟನುಂ: **ಆದಿಪು,** ೧೧. ೧೦)

ಚಂದ್ರಿಕಾಪ್ರಭೆ – [ನಾ] ಬೆಳುದಿಂಗಳ ಕಾಂತಿ (ತುಂಬಿಯ ಗಾವರಂಗಳಂ ಗೆಡೆಗೊಳೆ ಚಂದ್ರಿಕಾಪ್ರಭೆ ಮೊದಲ್ಗಿಡೆ ನಾಡೆ ವಿತರ್ಕದಿಂ ಬೆರಲ್ಮಿಡಿದು ಗುಣಾರ್ಣವಂ ನೆಱಿಯೆ ನಿಟ್ಟಿಸಿದಂ ಬೆಳಗಪ್ಪ ಜಾವಮಂ **ಪಂಪಭಾ,** ೪. ೧೧೦)

ಚಂದ್ರಿಕೆ – [ನಾ] ಬೆಳುದಿಂಗಳು (ಮದೀಯ ಮನೋಗತ ಕಾಮಸಾಗರದ ಒದವಿಂಗೆ ನಲ್ಲಳ ವಿಲೋಚನ ಚಂದ್ರಿಕೆಯೊಂದೆ ಸಾಲದೇ: **ಪಂಪಭಾ,** ೫. ೧೧)

ಚಂಪಕ – [ನಾ] ಸಂಪಿಗೆ (ಕಟ್ಟಿಲೆಯನಲೆವ ಸೊಡರ್ಗುಡಿಗಳನೀ ಅಳ್ಳಿಜೆದಲೆವುವು ಬನದೊಳಗುಳ್ಳಲರ್ದುಜ್ಜ್ವಳಿಪ ಚಂಪಕ ಪ್ರಸವಂಗಳ್: **ಆದಿಪು,** ೧. ೬೭)

ಚಂಪಕಮಾಲೆ – [ನಾ] ಕೊರಳ ಆಭರಣ (ಪಿರಿದೊಂದುತ್ಸುಕ ಭಾವದಿಂ ಸರಿಗೆಯಂ ಕಾಲೊಳ್ ಕಟೀಸೂತ್ರಮಂ ಕೊರಲೊಳ್ ಚಂಪಕಮಾಲೆಯಂ: **ಆದಿಪು,** ೧೧. ೨೨)

ಚಕ್ಕಣ – [ನಾ] ಚಾಕಣ, ಮದ್ಯಪಾನದಲ್ಲಿ ನಂಜಿಕೊಳ್ಳುವ [ಖಾರವಾದ] ತಿಂಡಿ (ಗೇಯದೊಳ್ ಈಕೆ ಸೊರ್ಕನಿಕ್ಕಿದಳೆನೆ ಕಳ್ಗೆ ಚಕ್ಕಣಮೆನಿಪ್ಪುದು: **ಪಂಪಭಾ,** ೭. ೯೦)

ಚಕ್ಕುಚಕ್ಕನೆ – [ಅ] ಚಕ್ ಚಕ್ ಎಂದು (ನಿಶಾತಶರಾಳಿಗಳ್ ಎಯ್ದೆ ಚಕ್ಕುಚಕ್ಕನೆ ಕೊಳೆ ಮೊಕ್ಕುಮೊಕ್ಕೆನೆ ಶಿರಂಗಳುರುಳ್ದುವು ವೈರಿಭೂಪರಾ: **ಪಂಪಭಾ,** ೧೨. ೧೧೯)

ಚಕ್ಕುಮೊಕ್ – [ಅ] ಚಕ್ ಮೊಕ್ ಎಂದು (ಬೇವ ಶವಸಂಘಾತಂಗಳಂ ಚಕ್ಕುಮೊಕ್ಕೆಂದು ಆಗಳ್ ಕಡಿದು ಉಗ್ರಭೂತನಿಕರಂ ಕೆಯ್ ಬೇಯೆ ಬಾಯ್ ಬೇಯೆ ತಿಂಬಂದಂ: **ಪಂಪಭಾ,** ೧೩. ೭೧)

ಚಕ್ರ – [ನಾ] ಸೈನ್ಯ (ಚತುರಂಗ ಚಕ್ರಪಾಂಸುಪಟಲದಿಂದಂ ದಿಙ್ಮುಖಂಗಳುಂ ವಿರೋಧಿನರಪಾಳಯ ಪ್ರಿಯಸಖೀ ಮುಖಂಗಳುಂ ವಿಚ್ಛಾಯಂಗಳಾಗೆಯುಂ: **ಆದಿಪು,** ೧೩. ೭೭ ವ); [ನಾ] ಚಕ್ರವರ್ತಿಯ ಚಕ್ರ (ಹತವೈರಿಕ್ಷತ್ರಚಕ್ರಂ ಭಯಚಕಿತ ಜಗದ್ವೀರಚಕ್ರಂ ವಿನಮ್ರಕ್ಷಿತಿಚಕ್ರಂ: **ಆದಿಪು,** ೧೪. ೩); [ನಾ] ಒಂದು ಆಯುಧ (ಅನೇಕಾಕ್ಷರಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಣ ಶಕ್ತಿ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳಂ: **ಪಂಪಭಾ,** ೨. ೩೪ ವ); [ನಾ] ಸುದರ್ಶನಚಕ್ರ (ಪಿಡಿಯೆಂ ಚಕ್ರಮನೆಂಬ ಚಕ್ರಿಯಂ ಇಳಾಚಕ್ರಂ ಭಯಂಗೊಳ್ವಿನಂ ಪಿಡಿಯಿಪ್ಪೆಂ ಕರಚಕ್ರಮಂ: **ಪಂಪಭಾ,** ೧೦. ೨೫); [ನಾ] ಸಮೂಹ (ತದ್ರಾಜಚಕ್ರಂ ಪೊದಳ್ದರ್ಬಿಸಿದತ್ತು ಉದ್ದಾಮ ಮೌರ್ವೀರವಮುಖರ ಮಹಾಚಾಪ ಚಕ್ರಾಂಧಕಾರಂ: **ಪಂಪಭಾ,** ೧೨. ೨೦); [ನಾ] ಗಾಲಿ (ಭೀಕರ ರಥಚಕ್ರಮಂ ಪಿಡಿದು ನುಂಗಿದಳೊರ್ಮೆಯೆ ಧಾತ್ರಿ ಕೋಪದಿಂ: **ಪಂಪಭಾ,** ೧೨. ೨೦೬)

ಚಕ್ರಧರ – [ನಾ] ಚಕ್ರವನ್ನು ಧರಿಸಿದವನು, ಶ್ರೀಕೃಷ್ಣ (ಸಾರವಸ್ತುಗಳಿಂ ನೆಱಿದ ಅಂಭೋರಾಶಿಯೆ ಕಾದಿಗೆ ಕಾವನುಂ ಸೀರಪಾಣಿ ವಿಳಾಸದಿನಾಳ್ದಂ ಚಕ್ರಧರಂ: **ಪಂಪಭಾ,** ೪. ೩೨); [ನಾ] ಚಕ್ರವರ್ತಿ (ಚಕ್ರಧರನಧರಕಿಸಲಯದ ಮೇಲೆ ದಂತಕಾಂತಿ ಲತಾಂತಪ್ರಭೆಗಳ್ ಪಸರಿಸೆ: **ಆದಿಪು,** ೪. ೨೬ ವ)

ಚಕ್ರನೇಮಿ – [ನಾ] ಚಕ್ರದ ಸುತ್ತುಪಟ್ಟೆ (ಚಟುಳಿತ ಚಕ್ರನೇಮಿ ಪರಿವರ್ತನಘಟ್ಟನಘಾತನಿರ್ಭರ ಸ್ಫುಟಿತ ಧರಾತಳಂ: **ಪಂಪಭಾ,** ೧೧. ೧೪೭)

ಚಕ್ರಪಾಣಿ – [ನಾ] ಕೈಯಲ್ಲಿ ಚಕ್ರವನ್ನುಳ್ಳವನು, ಶ್ರೀ ಕೃಷ್ಣ (ತನ್ನಿಱಿದು ಗೆಲ್ದ ಕೊಳುಗುಳವಂ ನೋಡಲ್ ಚಕ್ರಪಾಣಿಯುಂ ತನ್ನ ಸಹೋತ್ಪನ್ನರುಂ ಒಡವರೆ: **ಪಂಪಭಾ,** ೧೪. ೨)

ಚಕ್ರರಕ್ಷಕ – [ನಾ] ರಥದ ಚಕ್ರದ ಉಸ್ತುವಾರಿ ಹೊತ್ತವನು (ಮದ್ರರಾಜಂ ಪನ್ನಿರ್ಭಾಸಿರ ಆನೆವೆರಸು ನೃಪನ ಚಕ್ರರಕ್ಷಕಂ ನೀಳಂ ಎಡೆಗೊಂಡು ತಾಗಿದನಾಗಳ್: **ಪಂಪಭಾ,** ೧೦. ೧೦೮ ವ)

ಚಕ್ರರತ್ನ – [ನಾ] [ಜೈನ] ಚಕ್ರವರ್ತಿಯಾಗುವವನ ಆಯುಧಾಗಾರದಲ್ಲಿ ಹುಟ್ಟುವ ಚಕ್ರಾಯುಧ (ನೆಲನಾಕಾಶಂ ದಿಶಾಮಂಡಲಮೆನಿತನಿತುಂ .. .. ಪೂರ್ವವುದನಿದುವೆ ಪೇೞ್ವುದೆಂಬಂತೆ .. .. ಬೆಳಗಿದುದು ದಿಶಾಚಕ್ರಮಂ ಚಕ್ರರತ್ನಂ: **ಆದಿಪು,** ೧೧. ೨)

ಚಕ್ರಲಾಭ – [ನಾ] [ಜೈನ] ಐವತ್ತಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ಚಕ್ರರತ್ನವು ದೊರೆಯುವುದು (ಚಕ್ರಲಾಭ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಚಕ್ರವಾಕ – [ನಾ] ಸದಾ ಜೊತೆಯಾಗಿರುವ [ರಾತ್ರಿಯಲ್ಲಿ ಬೇರೆಯಾಗಿ ವಿರಹ ಅನುಭವಿಸುವ] ಕಲ್ಪನೆಯ ಜೋಡಿಹಕ್ಕಿ (ಚೆಲ್ವುವೆತ್ತಿದು ಉದಯಂ ಅಂದು ಪದ್ಮಿನೀಚಕ್ರವಾಳ ಚಕ್ರವಾಕಚಕ್ರ ಚಕ್ರವರ್ತಿಯಾ: **ಆದಿಪು,** ೧೨. ೫೫)

ಚಕ್ರವಾಕವಧು – [ನಾ] ಹೆಣ್ಣು ಚಕ್ರವಾಕ (ಕೊಡೆಯೆಲೆಗಳ ತಿಂತಿಣಿಯಿಟ್ಟೆಡೆಗಳ ಕಟ್ಟಿಲೆಯನಿರುಳೆ ಗೆತ್ತು ಆತ್ಮೇಶಂ ತಡೆದೊಡೆ ನರೇಂದ್ರ ನೋಡೀ ನಡುವಗಲೊಳ್ ಚಕ್ರವಾಕವಧು ವಿರಹಿಸುವಳ್: **ಆದಿಪು,** ೧೧. ೬೩)

ಚಕ್ರವಾಳ – [ನಾ] ಮಂಡಲ, ಸುತ್ತುವಲಯ (ಚೆಲ್ವುವೆತ್ತುದು ಉದಯಮಂದು ಪದ್ಮಿನೀಚಕ್ರವಾಳ ಚಕ್ರವಾಕಚಕ್ರವರ್ತಿಯಾ: **ಆದಿಪು,** ೧೨. ೫೫;

ಚಕ್ರವಾಳರುಚಿ – [ನಾ] ಸಮೂಹ ಕಾಂತಿ (ಸಂಚಾರಿತಮೇಚಕಾಚಳ ಚಕ್ರವಾಳರುಚಿ ಹರಿಕರಟಿಘಟಾಪ್ರಪಂಚರಾಗಕೇತನ ಚಂಚಳಾಂಚಳನಿಚಯದಿಂದಂ: **ಆದಿಪು,** ೧೩. ೭೭ ವ)

ಚಕ್ರವಾಕಚಕ್ರವರ್ತಿ – [ನಾ] ಚಕ್ರವಾಕಗಳ ದೊರೆ, ಸೂರ್ಯ (ಚೆಲ್ವುವೆತ್ತುದು ಉದಯಮಂದು ಪದ್ಮಿನೀಚಕ್ರವಾಳ ಚಕ್ರವಾಕಚಕ್ರವರ್ತಿಯಾ: **ಆದಿಪು,** ೧೨. ೫೫)

ಚಕ್ರವ್ಯೂಹ – [ನಾ] ಒಂದು ಬಗೆಯ ಸೇನಾವ್ಯೂಹ (ಇದು ಚಕ್ರವ್ಯೂಹಂ ಈ ವ್ಯೂಹಮಂ ಒಡೆವ ಅದಟಂ ಪಾರ್ಥನಂತೆ ಆತನುಂ ಗೆಂಟಿದಂ ಎಮ್ಮೀ ನಾಲ್ವರುಂ ಭೇದಿಸಲಱಿಯೆವು ಇದಂ: **ಪಂಪಭಾ,** ೧೧. ೮೭)

ಚಕ್ರಾಭಿಷೇಕ – [ನಾ] [ಜೈನ] ಐವತ್ತಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ಎಲ್ಲ ರಾಜರಿಂದ ಪೂಜಿತನಾಗಿ ಪುನಃ ಚಕ್ರದ ಅಭಿಷೇಕ ಮಾಡುವುದು (ಚಕ್ರಾಭಿಷೇಕ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಚಕ್ರಾಹ್ವ – [ನಾ] ಚಕ್ರವಾಕಗಳ ಜೋಡಿ (ಇಂದ್ರಿಯಸುಖಾರ್ಥಿ ಸಂಸಾರಗುಹಾಗಹ್ವರದೊಳಗೆ ಇರುಳಿನ ಚಕ್ರಾಹ್ವದವೊಲ್ ಮಱುಗದೇಂ ಸುಖಂಬಡೆದಪನೇ: **ಆದಿಪು,** ೩. ೬೮)

ಚಕ್ರಿ – [ನಾ] ಚಕ್ರವರ್ತಿ (ಜಗದ ಬಡತನಮನೊರ್ಮೆಯೆ ಬಗೆದಂತಿರೆ ಕಿಡಿಪ ಚಕ್ರಿ ತನ್ನಿರ್ದೆಡೆಯೊಳ್ ನೆಗಟ್ದಿ ಬಡತನಮನದೇಕೆ ಗಡಂ ಸೈರಿಸುವನೆನೆ ಪೊದಳ್ದುದು ಮಧ್ಯಂ: **ಆದಿಪು,** ೮. ೩೧); [ನಾ] ಕೃಷ್ಣ (ಚಕ್ರಿ ಚಕ್ರಿಕಾವರ್ತಿಯಪ್ಪುದಱಿಂದಾ ವನಾಂತರಾಳಕ್ಕೊರ್ವನೆ ಬಂದು ಮಾಧವೀಮಂಟಪಮಂ ಪೊಕ್ಕು: **ಪಂಪಭಾ,** ೫. ೧೯ ವ);

ಚಕ್ರಿಕಾವರ್ತಿ – [ನಾ] ಚಕ್ರದಂತೆ ಸುತ್ತುವ ಶೀಲವುಳ್ಳವನು, ಕೃತ್ರಿಮೋಪಾಯವುಳ್ಳವನು (ಚಕ್ರಿ ಚಕ್ರಿಕಾವರ್ತಿಯಪ್ಪುದಱಿಂದ ಆ ವನಾಂತರಾಳಕ್ಕೆ ಒರ್ವನೆ ಬಂದು ಮಾಧವೀಮಂಟಪಮಂ ಪೊಕ್ಕು ಅವರಿರ್ವರ ನಾಣುಮಂ ನಡುಕಮಂ ಪತ್ತುವಿಟ್ಟು ನುಡಿದು: **ಪಂಪಭಾ,** ೫. ೧೯ ವ)

ಚಕ್ರಿಚಕ್ರ – [ನಾ] ಚಕ್ರವರ್ತಿಯ ಚಕ್ರರತ್ನ (ಪ್ರಭಾಪ್ರಜ್ವಳಿತದಶದಿಶಾಚಕ್ರಂ ಉಗ್ರಪ್ರತಾಪೋರ್ಜಿತ ತೇಜಶ್ಚಕ್ರಂ ಇರ್ದತ್ತೊಳಪುಗದೆ ಪುರೋಪಾಂತದೊಳ್ ಚಕ್ರಿಚಕ್ರಂ: **ಆದಿಪು,** ೧೪. ೩)

ಚಕ್ರೇಶ – [ನಾ] ಚಕ್ರರತ್ನದ ಒಡೆಯ, ಚಕ್ರವರ್ತಿ (ತಾಂ ಚಕ್ರೇಶನಾದೊಡಂ ತನ್ನಾಕ್ರಮಣಮನೆನ್ನೊಳೇಕೆ ಕೆಮ್ಮನೆ ತೋರ್ಪಂ: **ಆದಿಪು,** ೧೪. ೭೯)

ಚಕ್ರೇಶತ್ವ – [ನಾ] ಚಕ್ರವರ್ತಿ ಪದವಿ (ನಿಜಕೂಟಾಗ್ರದೊಳ್ ಪಾಯ್ವ ಗಂಗಾಜಲದಿಂ ಮೂರ್ಧಾಭಿಷೇಕೋನ್ನತಿ ನಿಲೆ .. .. ಚಕ್ರೇಶತ್ವಮಂ ತಾಳ್ದಿದಂ ಅಖಿಳಧರಾರಮ್ಯ ಹೈಮಾಚಳೇಂದ್ರಂ: **ಪಂಪಭಾ,** ೪. ೧೪)

ಚಕ್ರೇಶ್ವರ – [ನಾ] [ಜೈನ] ಚಕ್ರರತ್ನದ ಒಡೆಯ (ಚಕ್ರಂ ಪುಟ್ಟಿದೊಡೀಗಳ್ ಚಕ್ರೇಶ್ವರನೆಂಬ ಪೆಸರುಮಾಯ್ತು: **ಆದಿಪು,** ೧೪. ೭೯)

ಚಕ್ರೇಶ್ವರಿ – [ನಾ] [ಜೈನ] ಒಬ್ಬ ಯಕ್ಷಿ (ಗರುಡಂ ವಾಹನಮಾಗಿರ್ಪ ಚಕ್ರೇಶ್ವರಿ ಭಾಸ್ವದ್ಧರ್ಮಚಕ್ರಾಕ್ರಮಿಗಳಂ ಅಲೆದಾಟಿಕ್ಕೆ ವಿಕ್ರಾಂತದಿಂದಂ: **ಆದಿಪು,** ೧. ೭)

ಚಕ್ರೋದ್ಭವ – [ನಾ] [ಜೈನ] ಚಕ್ರವರ್ತಿಯ ಆಯುಧಾಗಾರದಲ್ಲಿ ಚಕ್ರರತ್ನದ ಉದಯ (ಪುರುದೇವಂಗಾದ ಕೈವಲ್ಯದ ಮಹಿಮೆಯಂ ಉಗ್ರಾಯುಧಾಗಾರದೊಳ್ ಭಾಸ್ಕರ ಚಕ್ರೋದ್ಭಾಸಿ ಚಕ್ರೋದ್ಭವದ ಪಿರಿದುಮಾಶ್ಚರ್ಯಮಂ: **ಆದಿಪು,** ೧೦. ೪೯)

ಚಕ್ಷುಸಿ – [ನಾ] [ಬೇಕಾದುದನ್ನು ಕಾಣಬಲ್ಲ] ಒಂದು ವಿದ್ಯೆ (ಹಿಮವಂತದಲ್ಲಿ ರಾಕ್ಷಸಿ ಕೊಟ್ಟ ಚಕ್ಷುಸಿಯೆಂಬ ವಿದ್ಯೆಯಿಂ ಕಣ್ಣನಭಿಮಂತ್ರಿಸಿಕೊಂಡು: **ಪಂಪಭಾ,** ೭. ೩೭ ವ)

ಚಚ್ಚರಂ – [ಅ] ಬೇಗನೆ (ಚಚ್ಚರಂ ಒಳಪೊಯ್ದು ನೀಂ ನಿನಗೆ ಮಾಡುವುದೆಂದು ಅಮರೇಂದ್ರಪುತ್ರನಂ ಕರೆವವೊಲಾದುವು ಆ ಪುರದ ವಾತವಿಧೂತವಿನೂತನಕೇತುಗಳ್: **ಪಂಪಭಾ,** ೪. ೩೪)

ಚಚ್ಚರಿಕೆ – [ನಾ] ಚಟುವಟಿಕೆ, ತೀವ್ರತೆ (ಚಯ್‌ಚಯ್ಯೆಂಬಾಗಳ್ ಮೆಯ್ ಮೆಯ್ ಚಲದಿಂ ಮುಟ್ಟಿ ಪೊಣರ್ದು ತಳ್ತಿಱಿವ ಉರ್ಕಿಂ ಕೆಯ್ ಚೆಚ್ಚರಿಕೆಯ ಚಲದಿಂ ಕೆಯ್ ಚಳಿವಿನೆಗಂ ಇಱಿದರ್ ಎರಡು ಬಲದೊಳಂ ಅದಟರ್: **ಪಂಪಭಾ,** ೧೩. ೩೪)

ಚಚ್ಚಾರವ – [ನಾ] ಪುಂಗಿಯ ನಾದ (ಮಾಗಧಾಮರಂ ವಿನಮಿತಸರ್ವಾಂಗಂ ಚಚ್ಚಾರವಕೆ ಭುಜಂಗನ ಕೊರಲಂತೆ ಬಾಗಿದಂ ಮೂಱ್ಡೆಯೊಳ್: **ಆದಿಪು,** ೧೨. ೧೧೧)

ಚಟಾಚ್ಚಾಟನ – **[ನಾ]** ಜುಟ್ಟಿನ ಮಿಡಿತ (ನಿಶಿತ ಅಸಿಪತ್ರಪತಿತ ಪ್ರಚಂಡ ಸುಭಟ ಮಸ್ತಕೋಚ್ಚಳಿತ ಚಟಾಚ್ಚಾಟನ ದುರ್ನಿರೀಕ್ಷ್ಯ: **ಪಂಪಭಾ**, ೧೩. ೫೧ ವ)

ಚಟುಳ – **[ಗು]** ತ್ವರಿತವಾದ (ಪ್ರಕುಪಿತ ಸೂತಹೂಂಕಾರ ಕಾತರಿತ ತರಳತರ ತುರಂಗ ದ್ರುತವೇಗಾಕೃಷ್ಟ ಧನಂಜಯರಥ ಚಟುಳಚಕ್ರ ನೇಮಿಧಾರಾಪರಿವೃತ: **ಪಂಪಭಾ**, ೧೩. ೫೧ ವ)

ಚಟುಳಿತ – [ಗು] ಚಲಿಸುವ (ಲಯಘನಘಟೆಗಳ ಮೊಟಗೆನಿಸೆ ಪೊಟ್ಟಗೆ ಒಡೆದತ್ತು ರಟತ್ ಪಟು ಪಟಹ ಶಂಖ ಭೇರಿಯ ಚಟುಳಿತದಿಂದ ಅತಳಪಟಂ ಅಂಬರಪಟಳಂ: **ಪಂಪಭಾ**, ೧೦. ೬೭)

ಚಟ್ಟ – **[ನಾ]** [ಛಾತ್ರ] ಶಿಷ್ಯ (ನಿನ್ನಂ ಅನಾಕುಳಂ ಎನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ: **ಪಂಪಭಾ**, ೨. ೫೦)

ಚಣಕ – **[ನಾ]** ಕಡಲೆ (ರಾಜಮಾಷ ಆಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧ ಧಾನ್ಯಭೇಧಂಗಳುಂ: **ಆದಿಪು,** ೬. ೭೨ ವ)

ಚತುರಂಗ – **[ನಾ]** ಆನೆ, ಕುದುರೆ, ರಥ, ಪದಾತಿಗಳಿಂದ ಕೂಡಿದ ಸೈನ್ಯ (ಚತುರಂಗಂ ಚತುರಂಗಸೈನ್ಯದೊಳಡರ್ತುಂ ತಿಱ್ಱನೆಯ್ತಂದು ತಾಗಿ: **ಪಂಪಭಾ,** ೧೧. ೭); **[ನಾ]** [ಚತುರ್+ಅಂಗ] ನಾಲ್ಕು ಭಾಗಗಳುಳ್ಳ (ಅಂತು ದ್ರೋಣಚಾರ್ಯಂ ಆಚಾರ್ಯಪದವಿಯಂ ಕೈಕೊಂಡು ಪಾಂಡವಕೌರವರ್ಗೆ ಚತುರಂಗ ಧನುರ್ವೇದಮುಮಂ ದಿವ್ಯಾಸ್ತ್ರಂಗಳಂ .. .. ಉಪದೇಶಂಗೆಯ್ಯುತ್ತಿರೆ: **ಪಂಪಭಾ,** ೨. ೫೫ ವ)

ಚತುರಯುತ – **[ನಾ]** ನಲವತ್ತು ಸಾವಿರ (ಚತುರಯುತಮಿತಾಂಗರಕ್ಷಕ ಪರಿವೃತನುಂ ಲೋಕಪಾಲ ಚತುಷ್ಟಯಾಧಿಷ್ಠಿತನುಂ: **ಆದಿಪು**, ೬. ೧೩ ವ)

ಚತುರರ್ಣವಪರೀತ – **[ಗು]** ನಾಲ್ಕು ಸಮುದ್ರಗಳಿಂದ ಸುತ್ತುವರಿಯಲ್ಪಟ್ಟ (ಚತುರರ್ಣವಪರೀತ ಮಹೀತಳಮೆಲ್ಲಮಂ ಧರಾಮರರ್ಕಳ್ಗೆ ದಕ್ಷಿಣೆಗೊಟ್ಟನಪ್ಪುದಱಿಂ: **ಪಂಪಭಾ**, ೬. ೧೭ ವ)

ಚತುರಶೀತಿ – **[ನಾ]** ಎಂಬತ್ತನಾಲ್ಕು (ಮತ್ತಂ ಚತುರಶೀತಿಸಹಸ್ರ ಗುಣಮಣಿಭೂಷಣವಿಭೂಷಿತನುಂ ಅಷ್ಟಾದಶಸಹಸ್ರ ಶೀಲ ರತ್ನಾಕರನುಂ ಆಗಿ ಪಂಚದಶಪ್ರಮಾದಂಗಳಂ ಬಂಚಿಸಿ: **ಆದಿಪು**, ೬. ೨೯ ವ)

ಚತುರಶ್ರ – **[ನಾ]** ನಾಲ್ಕು ಮೂಲೆಗಳುಳ್ಳದ್ದು, ಚಚ್ಚೌಕ (ಚತುರಶ್ರಂ ಮೂಱುಂ ಯೋಜನದಳವಿಯ ಸಭಾಮಂಟಪಮಂ ಒಂದು ಲಕ್ಕ ರಕ್ಕಸವಡೆಯಿಂ ಪೊತ್ತು ತರಿಸಿ: **ಪಂಪಭಾ**, ೬. ೨ ವ)

ಚತುರಂತಕ್ಷಿತಿ – [ನಾ] ನಾಲ್ಕು ದಿಕ್ಕುಗಳ ನಡುವಣ ಭೂಮಿ (ಚತುರಂತಕ್ಷಿತಿ ಗರ್ಭಸ್ಥಿತನದು ಗಡಿಮೆಂದು ಮುದ್ರಿಪಂತಾಯ್ತು ಯಶಸ್ವತಿಯ ಪದನ್ಯಾಸಂ: **ಆದಿಪು**, ೮. ೩೨)

ಚತುರಾಂತರ – [ನಾ] ಚಚ್ಚೌಕದ ನಡುವೆ, ಹಸೆಯ ಜಗುಲಿ (ವಿವಾಹಗೇಹಮಂ ಸಮೆಯಿಸಿ ಅದಱ ನಡುವಣ ಆರ್ದ್ರಮೃತ್ತಿಕಾ ವಿರಚಿತಮಪ್ಪ ಚತುರಾಂತರದೊಳ್: **ಪಂಪಭಾ**, ೩. ೭೪ ವ)

ಚತುರಾನನತ್ವ – **[ನಾ]** [ಜೈನ] ನಾಲ್ಕು ಮುಖಗಳಿಂದ ಕೂಡಿರುವುದು (ಮಿತನಖಕೇಶಶೋಭಿತ ತನುತ್ವಂ ಅಭುಕ್ತ್ಯುಪಸರ್ಗಭಾವಂ ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ: **ಆದಿಪು**, ೧೦. ೪೩)

ಚತುರಿಂದ್ರಿಯ – [ನಾ] ಪಂಚೇಂದ್ರಿಯಗಳಲ್ಲಿ ಕಿವಿಯ ಹೊರತು ಉಳಿದ ನಾಲ್ಕು ಇಂದ್ರಿಯಗಳಿರುವ ಜೀವಿ, ಕೀಟ (ಸ್ಪರ್ಶನ ರಸನ ಘ್ರಾಣ ಚಕ್ಷುರಿಂದ್ರಿಯಸಮನ್ವಿತಂಗಳಪ್ಪ ಮಧುಕರಾದಿ ಚತುರಿಂದ್ರಿಯಂಗಳ್: **ಆದಿಪು**, ೧೦. ೬೩ ವ)

ಚತುರುತ್ತರಾಶೀತಿ – **[ನಾ]** ಎಂಬತ್ತನಾಲ್ಕು (ಚತುರುತ್ತರಾಶೀತಿ ಪೂರ್ವಲಕ್ಷೋಪಲಕ್ಷಿತ ಅನಪವರ್ತ್ಯ ಆಯುಷ್ಯನುಂ ಆಗಿ: **ಆದಿಪು**, ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]

ಚತುರ್ಗತಿ – [ನಾ] [ಜೈನ] ದೇವ, ಮಾನವ, ತಿರ್ಯಕ್, ನಾರಕ ಎಂಬ ನಾಲ್ಕು ವಿಧವಾದ ಜನ್ಮಗಳು (ಚತುರ್ಗತಿಸ್ವರೂನಿರೂಪಣಂ ತಪೋದಾನವಿಧಾನ ವರ್ಣನಂ .. .. ಎಂದಿಂತು ಅವಯವಂಗಳೆಂಟಕ್ಕುಂ: **ಆದಿಪು**, ೧. ೪೨ ವ)

ಚತುರ್ಜ್ಞಾನ – **[ನಾ]** [ಜೈನ] ಪಂಚವಿಧಜ್ಞಾನಗಳಲ್ಲಿ ನಾಲ್ಕನೆಯದು, ಮನಃಪರ್ಯಯಜ್ಞಾನ (ನೆಗಟ್ದುದು ದೀಕ್ಷಾನಂತರಂ ಅಗಣಿತಪುಣ್ಯೋದಯಂ ಮನಃಪರ್ಯಯಂ ಅಂತೊಗೆದಾ ಚತುರ್ಜ್ಞಾನದೊಳಾವಗಮೆಸೆದಂ ಜ್ಞಾನರೂಪನಾದಿಬ್ರಹ್ಮಂ: **ಆದಿಪು**, ೯. ೮೮)

ಚತುರ್ಥಧ್ಯಾನ – [ನಾ] [ಜೈನ] ಆರ್ತ, ರೌದ್ರ, ಧರ್ಮ, ಶುಕ್ಲ ಎಂಬ ನಾಲ್ಕು ಬಗೆಯ ಧ್ಯಾನಗಳಲ್ಲಿ ಕೊನೆಯದು (ಅಪಗತಯೋಗಗುಣಸ್ಥಾನನುಂ ಚತುರ್ಥಧ್ಯಾನಾನಳದಗ್ಧ ಶೇಷಾಶೇಷ ಕರ್ಮೇಂಧನನುಮಾಗಿ: **ಆದಿಪು**, ೧೬. ೭೪ ವ)

ಚತುರ್ಥಸ್ನಾನ – [ನಾ] ಮುಟ್ಟಾದವಳು ನಾಲ್ಕನೆಯ ದಿನ ಮಾಡುವ ಸ್ನಾನ (ಮರುದೇವಿ ಮಹಾದೇವಿ ಚತುರ್ಥಸ್ನಾನದೊಳ್ ಕಲ್ಪದ್ರುಮ ದುಕೂಲವಸನೆಯುಂ ಊರ್ಜಿತ ದಶನಮಯೂಖ ಜಳಪ್ರಕ್ಷಾಳಿತದಶನವಸನೆಯುಂ .. .. ಆಗಿ **(ಆದಿಪು,** ೭. ೨೬)

ಚತುರ್ದಶ – [ನಾ] ಹದಿನಾಲ್ಕು (ಚತುರ್ದಶ ಮಹಾನದಿಗಳ ನೀರುಮಂ ತಟತಟ ತೊಳಗುವ ಕಳಧೌತಕಳಶಂಗಳೊಳ್ ತೆಕ್ಕನೆ ತೀವಿ ತಂದ ವಾರವನಿತಾ ಜನಕ್ಕಂ: **ಪಂಪಭಾ,** ೧೪. ೧೭ ವ)

ಚತುರ್ದಶಗುಣಸ್ಥಾನ – **[ನಾ]** [ಜೈನ] ಮೋಹ ಹಾಗೂ ಯೋಗಗಳ ನಿಮಿತ್ತದಿಂದ ಆತ್ಮನ ದರ್ಶನ ಮತ್ತು ಚಾರಿತ್ರ ರೂಪ ಗುಣಗಳ ಕ್ರಮವಿಕಾಸ ರೂಪ ಅವಸ್ಥೆಗಳು; ಮಿಥ್ಯಾದೃಷ್ಟಿ, ಸಾಸಾದನ, ಮಿಶ್ರ, ಅಸಂಯತ ಸಮ್ಯಗ್ದೃಷ್ಟಿ, ಸಂಯತಾಸಂಯತ, ಪ್ರಮತ್ತಸಂಯತ, ಅಪ್ರಮತ್ತಸಂಯತ, ಅಪೂರ್ವಕರಣ, ಅನಿವೃತ್ತಿಕರಣ, ಸೂಕ್ಷ್ಮಲೋಭ, ಉಪಶಾಂತ ಕಷಾಯ, ಕ್ಷೀಣಕಷಾಯ, ಸಯೋಗಕೇವಲಿ, ಅಯೋಗಕೇವಲಿ (ಚತುರ್ದಶಗುಣಸ್ಥಾನಂಗಳಂ ನಂಬಿ ಪೊರ್ದಿದವರ್ ಪೊರ್ದಿದರಲ್ತೆ ಮುಕ್ತಿವನಿತಾ ಕಾಂಚೀಗುಣಸ್ಥಾನಮಂ: **ಆದಿಪು**, ೧೫. ೧೯)

ಚತುರ್ದಶಪೂರ್ವ – [ನಾ] [ಜೈನ] ಉತ್ಪಾದ, ಆಗ್ರಾಯಣೀಯ, ವೀರ್ಯಪ್ರವಾದ, ಅಸ್ತಿನಾಸ್ತಿಪ್ರವಾದ, ಜ್ಞಾನಪ್ರವಾದ, ಸತ್ಯಪ್ರವಾದ, ಆತ್ಮಪ್ರವಾದ, ಕರ್ಮಪ್ರವಾದ, ಪ್ರತ್ಯಾಖ್ಯಾನ, ವಿದ್ಯಾನುವಾದ, ಕಲ್ಯಾಣ, ಪ್ರಾಣಾವಾಯ, ಕ್ರಿಯಾವಿಶಾಲ, ಲೋಕಬಿಂದುಸಾರ (ಅಂತು ಜೈನದೀಕ್ಷೆಯಂ ಕೈಕೊಂಡು ಗುರುವಿನನುಮತದಿಂ ದ್ವಾದಶಾಂಗ ಚತುರ್ದಶಪೂರ್ವಂಗಳಂ ಕಲ್ತು: **ಆದಿಪು**, ೧೪. ೧೩೯ ವ)

ಚತುರ್ದಶ ಮಹಾನದಿ – [ನಾ] ಹದಿನಾಲ್ಕು (ಚತುರ್ದಶ ಮಹಾನದಿಗಳ ನೀರುಮಂ ತಟತಟ ತೊಳಗುವ ಕಳಧೌತಕಳಶಂಗಳೊಳ್ ತೆಕ್ಕನೆ ತೀವಿ ತಂದ ವಾರವನಿತಾಜನಕ್ಕಂ: **ಪಂಪಭಾ**, ೧೪. ೧೭ ವ) [ಮಹಾನದಿಗಳು: ಸರಸ್ವತೀ, ಭಾಗೀರಥೀ, ಯಮುನಾ, ಗೋದಾವರೀ, ಕೃಷ್ಣವೇಣೀ, ತಾಮ್ರಪರ್ಣಿ, ಸುವರ್ಣಮುಖೀ, ನರ್ಮದಾ, ತುಂಗಭದ್ರಾ, ಚಂದ್ರಭಾಗಾ, ಚರ್ಮಣ್ವತೀ, ಕುಮುದ್ವತೀ, ಸರಯೂ, ಫಲ್ಗುನೀ]

ಚತುರ್ನಿಕಾಯಾಮರ – [ನಾ] [ಜೈನ] ಭವನವಾಸಿ, ವ್ಯಂತರ, ಜ್ಯೋತಿಷ ಮತ್ತು ಕಲ್ಪವಾಸಿಗಳೆಂಬ ನಾಲ್ಕು ಪ್ರಕಾರದ ದೇವತೆಗಳು (ಅಂತು ಪೊಡೆವಟ್ಟು ಜನ್ಮಾಭಿಷೇಕೋದ್ಯುಕ್ತ ಚಿತ್ತನಾದಾಗಳ್ ಚತುರ್ನಿಕಾಯಾಮರೇಂದ್ರಸಮುದಯಂ: **ಆದಿಪು**, ೭. ೪೨ ವ)

ಚತುರ್ಬಲ – [ನಾ] ಚತುರಂಗಬಲ (ಘೂರ್ಣಿತ ಅರ್ಣವಮಂ ಒತ್ತರಿಸಿತ್ತು ಚತುರ್ಬಲ ಆರ್ಣವಂ: **ಪಂಪಭಾ**, ೧೦. ೨೮)

ಚತುರ್ಭುಜ – [ನಾ] ನಾಲ್ಕು ತೋಳುಗಳುಳ್ಳವನು, ವೃಷಭಯಕ್ಷ (ಪರಶು ಫಳ ಅಕ್ಷ ಸೂತ್ರ ವರದೋಚಿತಚಿಹ್ನಚತುರ್ಭುಜಂ ಮನೋಹರ ವೃಷಲಾಂಛನಂ: **ಆದಿಪು**, ೧. ೮); [ನಾ] ಶ್ರೀಕೃಷ್ಣ (ಬಟಿಯನಟ್ಟಿ ಬರಿಸಿ ಪೇಟಿಗ್ಗೊಡೆ ನಿಶಾಟರಾಜಕೋಟಿತಾಟಿತ ಭುಜಂ ಚತುರ್ಭುಜಂ ಇಂತೆಂದಂ: **ಪಂಪಭಾ**, ೧೩. ೩೦ ವ)

ಚತುರ್ಮುಖ – [ನಾ] [ಜೈನ] ಹತ್ತು ವಿಧವಾದ ಪೂಜೆಗಳಲ್ಲಿ ಒಂದು; ಮಹಾಸಾಮಂತರು ಮಾಡುವ ಜಿನಪೂಜೆ (ಮಹಾಮಂಂಡಳಿಕ ಪ್ರಮುಖ ಮಕುಟಬದ್ಧರ್ ಮಾಳ್ಪ ಚತುರ್ಮುಖಮುಂ ಅರ್ಧಮಂಡಳಕರ್ ಮಾಳ್ಪ ಸರ್ವತೋಭದ್ರಮೆಂಬ ಪೆಸರನೊಡೆಯ ಮಹಾಮಹಮಂ: **ಆದಿಪು**, ೧೫. ೧೩ ವ)

ಚತುರ್ವಲ – [ನಾ] ಚತುರಂಗಬಲ (ನೆರೆದು ಚತುರ್ವಲಂಬೆರಸು ಬಂದುಜಿದೊಡ್ಡಿದ ಗಂಡರಾರುಂ ಎನ್ನಜಿಯದ ಗಂಡರೇ: **ಪಂಪಭಾ**, ೧೧. ೮೯)

ಚತುರ್ವಾರ್ಧಿ – [ನಾ] ನಾಲ್ಕು ಸಾಗರ (ದಾಂಟೆ ಕೀರ್ತಿ ಚತುರ್ವಾರ್ಧಿಯನಿರ್ದನಂದು ಸುಖದಿಂ ವಿದ್ವಿಷ್ಟವಿದ್ರಾವಣಂ: **ಪಂಪಭಾ**, ೩. ೮೫)

ಚತುರ್ವಿಂಶತ್ – [ನಾ] ಇಪ್ಪತ್ತನಾಲ್ಕು (ಚತುರ್ವಿಂಶತಿ ಅರ್ಹತ್ ಪ್ರತಿಮಾವಿರಾಜಮಾನ: **ಆದಿಪು**, ೧೬. ೩೭ ವ)

ಚತುರ್ವಿಧ – [ನಾ] [ಜೈನ] [ದಾನದ] ನಾಲ್ಕು ಬಗೆ: ಆಹಾರ, ಅಭಯ, ಔಷಧ ಮತ್ತು ಶಾಸ್ತ್ರ (ಕುಡುವುದುಂ ಆಹಾರ ಅಭಯ ಭೈಷಜ್ಯ ಶಾಸ್ತ್ರದಾನದಿಂ ಚತುರ್ವಿಧಮಕ್ಕುಂ: **ಆದಿಪು**, ೧೦. ೯ ವ)

ಚತುರ್ವಿಧದೇವನಿಕಾಯ – [ನಾ] [ಜೈನ] ಭವನವಾಸಿ, ವ್ಯಂತರ, ಜ್ಯೋತಿಷ್ಯ ಮತ್ತು ಕಲ್ಪವಾಸಿಗಳೆಂಬ ನಾಲ್ಕು ಪ್ರಕಾರದ ದೇವತೆಗಳ ಸಮೂಹ (ಮೂಜುಲಕ್ಕೆ ದೃಢಬ್ರತಾದಿ ಶ್ರಾವಕರುಂ ಅಯ್ದುಲಕ್ಕೆ ಸುವ್ರತೆ ಮೊದಲಾಗೆ ಪರಮಶ್ರಾವಕಿಯರುಂ: **ಆದಿಪು**, ೧೬. ೪೦ ವ)

ಚತುರ್ವಿಧಶುಕ್ಲಧ್ಯಾನ – [ನಾ] [ಜೈನ] ಪೃಥಕ್ತ್ವವಿತರ್ಕವಿಚಾರ, ಏಕತ್ವವಿತರ್ಕವಿಚಾರ, ಸೂಕ್ಷ್ಮಕ್ರಿಯಾ ಪ್ರತಿಪಾತಿ, ವ್ಯುಪರತ ಕ್ರಿಯಾನಿವೃತ್ತಿ ಎಂಬ ನಾಲ್ಕು ಬಗೆಯ ಶುಕ್ಲಧ್ಯಾನಗಳು (ಚತುರ್ವಿಧಶುಕ್ಲಧ್ಯಾನದೊಳ್ ಪೂರ್ವಾಪರವಿಷಯ ವಿವಿಕ್ತಾರ್ಥವ್ಯಂಜನವೀರ್ಯ ವಿಧಿವ್ಯಂಜನಯೋಗ ಸಂಕ್ರಮಣಲಕ್ಷಣಲಕ್ಷಿತಮಪ್ಪ ಪೃಥಕ್ತ್ವವಿತರ್ಕವಿಚಾರಮೆಂಬ ಮೊದಲ ಶುಕ್ಲಧ್ಯಾನದೊಳ್: **ಆದಿಪು**, ೬. ೩೪ ವ)

ಚತುರ್ವಿಧಾಹಾರ – [ನಾ] [ಜೈನ] ಲೇಪ್ಯ, ಓಜ, ಕಬಳ, ಮಾನಸ ಎಂಬ ಆಹಾರಗಳು (ಮಹಾಬಳನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರ ಶರೀರಪ್ರತ್ಯಾಖ್ಯಾನಮಂ ಕೊಟ್ಟು: **ಆದಿಪು**, ೨. ೫೧ ವ)

ಚತುರ್ವಿಧಾಹಾರಶರೀರಪ್ರತ್ಯಾಖ್ಯಾನ – [ನಾ] ನಾಲ್ಕು ಬಗೆಯ ಆಹಾರಗಳನ್ನೂ ಶರೀರದ ಅಭಿಮಾನವನ್ನೂ ತೊರೆಯುವುದು (ಮಹಾಬಳನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರಶರೀರಪ್ರತ್ಯಾಖ್ಯಾನಮಂ ಕೊಟ್ಟು: **ಆದಿಪು**, ೨. ೫೧ ವ)

ಚತುರ್ವೇದಪಾರಗ – [ನಾ] ಋಕ್, ಯಜುರ್, ಸಾಮ, ಅಥರ್ವಣ ಎಂಬ ನಾಲ್ಕು ವೇದಗಳಲ್ಲಿ ಪರಿಣತ (ಚತುರ್ವೇದಪಾರಗರ ಮನೆಯ ಮುಂದಣ ಚತುಶ್ಶಾಲೆಯೊಳ್ ಬೀಡಂ ಬಿಟ್ಟು: **ಪಂಪಭಾ**, ೩. ೨೨ ವ)

ಚತುಶ್ಶಾಲೆ – [ನಾ] ನಾಲ್ಕು ಕಡೆ ಕೈಸಾಲೆಯಿರುವ ಅಂಗಳ (ಚತುರ್ವೇದಪಾರಗರ ಮನೆಯ ಮುಂದಣ ಚತುಶ್ಶಾಲೆಯೊಳ್ ಬೀಡಂ ಬಿಟ್ಟು: **ಪಂಪಭಾ**, ೩. ೨೨ ವ)

ಚತುಷ್ಕ – [ನಾ] ನಾಲ್ಕರ ಗುಂಪು (ಶುದ್ಧಾಕ್ಷರಂಗಳುಮಂ ಯೋಗವಾಹಚಯುಷ್ಕಮುಂ ಸಂಯೋಗಾಕ್ಷರಂಗಳುಮಂ ಬ್ರಹ್ಮಿಗೆ ದಕ್ಷಿಣಹಸ್ತದೊಳ್ ಉಪದೇಶಂಗೆಯ್ದು: **ಆದಿಪು**, ೮. ೫೯ ವ)

ಚತುಷ್ಕಶೃಂಗಾಟವೇದಿಕೆ – [ನಾ] ಶೃಂಗಾಟಕ ಮರದಿಂದ ಮಾಡಿದ ಚೌಕಾಕಾರದ ವೇದಿಕೆ (ನಾನಾಮಣಿಮಯ ಪ್ರಾಸಾದಂಗಳೊಳಂ ವಿವಿಧ ವೀಥೀಸನಾಥ ಚತುಷ್ಕಶೃಂಗಾಟವೇದಿಕೆಗಳೊಳಂ: **ಆದಿಪು**, ೬. ೧೦೬)

ಚತುಷ್ಟಯ – [ನಾ] ನಾಲ್ವರ ಗುಂಪು (ಲೋಕಪಾಲಚತುಷ್ಟಯ ಅಧಿಷ್ಠಿತನುಂ: **ಆದಿಪು**, ೬. ೧೩ ವ)

ಚತುಷ್ಪದ – [ನಾ] ನಾಲ್ಕು ಕಾಲುಗಳುಳ್ಳ ಪ್ರಾಣಿ (ಪಕ್ಷಿ ಚತುಷ್ಪದ ಸರೀಸೃಪಾದಿ ತಿರ್ಯಗ್ಜಾತಿಗಳುಂ ಬೆರಸು: **ಆದಿಪು**, ೧೬. ೪೦ ವ)

ಚತುಷ್ಷಷ್ಟಿ – [ನಾ] ಅರವತ್ತನಾಲ್ಕು (ಯಕ್ಷಕುಮಾರರ್ ನೆರೆದಿಕ್ಕೆ ಚತುಷ್ಷಷ್ಟಿ ಚಮರರುಹದ ಪೊದಳ್ದ ಪೊಳೆಪು ದೆಸೆದೆಸೆಗೆಸೆದಿರ್ಕುಂ: **ಆದಿಪು**, ೧೦. ೪೨)

ಚತುಷ್ಷಷ್ಟಿಲಕ್ಷಣ – [ನಾ] [ಜೈನ] ಪುರುಷನ ಅರುವತ್ತನಾಲ್ಕು ಶುಭಚಿಹ್ನಗಳು (ಸ್ವಸ್ತಿಕ ನಂದ್ಯಾವರ್ತಾದಿ ಚತುಷ್ಷಷ್ಟಿಲಕ್ಷಣ ಧರನುಂ ತಿಳಮಸೂರಿಕಾದ್ಯನೇಕ ವ್ಯಂಜನನಿಧಿಯುಂ ಅಪಾರವೀರ್ಯನುಂ: **ಆದಿಪು**, ೧೫. ೩ ವ)

ಚತುಸ್ತ್ರಿಂಶದತಿಶಯ – [ನಾ] [ಜೈನ] ಅರ್ಹಂತನಿಗೆ ಒದಗುವ ಮೂವತ್ತನಾಲ್ಕು ಅತಿಶಯಗಳು ಅಥವಾ ವಿಶೇಷಗಳು: ನಿಸ್ವೇದತೆ, ನಿರ್ಮಲ ಶರೀರ, ಹಾಲಿನಂತೆ ಬಿಳಿರಕ್ತ,

ವಜ್ರವೃಷಭ ನಾರಾಚನಸಂಹನನ, ಸಮಚತುರಸ್ರ ಶರೀರಸಂಸ್ಥಾನ, ಅನುಪಮರೂಪ, ಸುಗಂಧದ ಉಸಿರು, ಸಾವಿರದೆಂಟು ಉತ್ತಮ ಲಕ್ಷಣಗಳು, ಅನಂತಬಲ ಹಾಗೂ ಹಿತಮಿತಮಧುರಭಾಷಣ ಎಂಬ ಹುಟ್ಟಿನ ಹತ್ತು ವಿಶೇಷಗಳು; ಸುತ್ತ ನೂರು ಯೋಜನ ಸುಭಿಕ್ಷೆ, ಹಿಂಸೆಯ ಅಭಾವ, ಆಕಾಶಗಮನ, ಭೋಜನರಾಹಿತ್ಯ, ಉಪಸರ್ಗರಾಹಿತ್ಯ, ಚತುರ್ದಿಕ್ಕುಗಳಲ್ಲಿ ಅಭಿಮುಖತೆ, ನೆರಳಿಲ್ಲದ ದೇಹ, ರೆಪ್ಪೆ ಮಿಟುಕಿಸದ ಕಣ್ಣು, ಸರ್ವವಿದ್ಯಾ ಪ್ರಭುತ್ವ, ನಖರೋಮಗಳ ಸಮಾನತೆ ಹಾಗೂ ಸರ್ವಭಾಷಾಮಯವಾದ ದಿವ್ಯಧ್ವನಿ ಎಂಬ ಕೇವಲಜ್ಞಾನದಿಂದ ಬರುವ ಹನ್ನೊಂದು ವಿಶೇಷಗಳು; ಸುತ್ತಲೂ ಹೂಹಣ್ಣು ಸಮೃದ್ಧಿ, ಸುಖದಾಯಕವಾದ ಗಾಳಿ, ಪ್ರಾಣಿಗಳ ಮೈತ್ರಿ, ಸ್ವಚ್ಛವಾದ ಕನ್ನಡಿಯಂತಹ ಭೂಮಿ, ಸುಗಂಧಜಲವೃಷ್ಟಿ, ಸಮೃದ್ಧ ಸಸ್ಯಗಳ ಸೃಷ್ಟಿ, ಸಕಲಜೀವರ ನಿತ್ಯ ಆನಂದ, ತಂಗಾಳಿ, ಜಲಸಮೃದ್ಧಿ, ನಿರ್ಮಲ ಆಕಾಶ, ಸಮಸ್ತಜೀವರ ರೋಗಮುಕ್ತಿ, ಸಮಸ್ತಜೀವ ರೋಗರಾಹಿತ್ಯ ಮತ್ತು ಯಕ್ಷೇಂದ್ರನ ಧರ್ಮಚಕ್ರಗಳು ಎಲ್ಲರಿಗೂ ಕಾಣುವುದು ಎಂಬ ಹದಿಮೂರು ದೇವಕೃತ ವಿಶೇಷಗಳು (ಪರಮಜಿನಪತಿ ಪರಿಭಾಷಿತಮಪ್ಪ ಸಕಳಶ್ರಾವಕವ್ರತಂಗಳಂ ಷೋಡಶ ತೀರ್ಥಕರಭಾವನೆಗಳಂ ಚತುಸ್ತ್ರಿಂಶದತಿಶಯಂಗಳುಮಂ ಅಷ್ಟಮಹಾಪ್ರಾತಿಹಾರ್ಯಂಗಳುಮಂ: **ಆದಿಪು**, ೩. ೪೦ ವ)

ಚತುಸ್ಸಂಜ್ವಲನ – [ನಾ] [ಜೈನ] (ಕ್ರೋಧ, ಮಾನ, ಮಾಯಾ, ಲೋಭಗಳೆಂಬ ನಾಲ್ಕು ಕಷಾಯಗಳಿರುವ ಸ್ಥಿತಿ (ಮತ್ತಂ ಕಿಱೆಕಿಱಿದು ಬೇಗದಿಂ ತನ್ನ ಪರಿಣಾಮವಿಶೇಷದಿಂ ಚತುಸ್ಸಂಜ್ವಲನ ನವನೋಕಷಾಯಂಗಳೆಂಬ ಪದಿಮೂಱು ಪ್ರಕೃತಿಗಳುಮಂ ಅಂತರಕರಣಂ ಮಾಡಿ: **ಆದಿಪು**, ೧೦. ೧೪ ವ)

ಚತುಸ್ಸಹಸ್ರ – [ನಾ] ನಾಲ್ಕು ಸಾವಿರ (ಮೂರ್ಧಾಭಿಷಿಕ್ತ ಮಂಡಳಿಕರಂ ಚತುಸ್ಸಹಸ್ರ ಮಕುಟಬದ್ಧಪರಿವೃತರಂ ಸೋಮಪ್ರಭ ಹರಿ ಅಕಂಪನ ಕಾಶ್ಯಪರಂ ಬರಿಸಿ: **ಆದಿಪು**, ೮. ೭೪ ವ)

ಚತ್ವಾರಿಂಶತ್ – [ನಾ] ನಲವತ್ತು (ಪೂರ್ವೋಕ್ತ ಉಪನಯನಾದಿ ಚತ್ವಾರಿಂಶತ್ ಕ್ರಿಯೆಗಳೊಡನೆ ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು**, ೧೫. ೧೬ ವ)

ಚತ್ವಾರ್ಯೇವ ತತ್ವಾನಿ – [ನಾ] ಪೃಥ್ವಿ, ಅಪ್ ತೇಜಸ್ಸು ಮತ್ತು ವಾಯು ಎಂಬ ನಾಲ್ಕು ತತ್ವ [ಭೂತ]ಗಳು (ಶರೀರರೂಪಪರಿಣತ ಅವನಿ ಪವನಸಖ ಪವನಂಗಳ್ಗೆ ಭೇದಮಿಲ್ಲ ಅವರ್ಕಂ ಏಕತ್ವಮಾಗಿ 'ಚತ್ವಾರ್ಯೇವ' ತತ್ವಾನಿ' ಎಂಬ ನಿನ್ನ ಮಾತು ವಿಘಟಿಸುಗುಂ: **ಆದಿಪು**, ೨. ೧೦ ವ)

ಚದುರ್ – [ನಾ] ಚಾತುರ್ಯ (ಧರ್ಮಮಂ ಘಟಿಯಿಸಿಕೊಳ್ವುದೊಂದೆ ಚದುರ್ ಇಂತುಟು ಸಂಸೃತಿಧರ್ಮಮೇಕೆ ಬಾಯಟಿವುದಿದೇಕೆ: **ಆದಿಪು**, ೩. ೫೩); [ನಾ] ವಿವೇಕ, ಬುದ್ಧಿವಂತಿಕೆ (ತಮಗಂ ಬರ್ದುಕಿಲ್ಲ ಧರ್ಮಮಂ ಗಟಿಯಿಸಿಕೊಳ್ವುದೊಂದೆ ಚದುರ್: **ಪಂಪಭಾ**, ೨. ೨೭); [ನಾ] ಜಾಣತನ (ಇಱಿಯದ ಬೀರಂ ಇಲ್ಲದ ಕುಲಂ ತಮಗಲ್ಲದ ಚಾಗಂ ಓದದ ಓದು ಅಱಿಯದ ವಿದ್ದೆ ಸಲ್ಲದ ಚದುರ್ ನೆಱಿ ಕಲ್ಲದ ಕಲ್ಪಿ: **ಪಂಪಭಾ**, ೪. ೯೫); [ನಾ] ವಿವೇಕ (ಕೆಲರ್ ಕುದುಕುಳಿರಕ್ಕಸರ್ ಬಿಸುಗೆಗಳ್ವೆರಸು ಉಗ್ರಮಹಾಗಜಂಗಳಂ ಚದುರ್ಗಿಡೆ ನುಂಗಿ ಬಿಕ್ಕಿ ಕುಡಿದರ್ ಬಿಸುನೆತ್ತರ ಕಾಟ್ಟುರಂಗಳಂ: **ಪಂಪಭಾ**, ೧೨. ೮); [ನಾ] ಕೌಶಲ (ಉದಾರಗುಣಂ ಸಕಳಾವನೀಶ್ವರರ್ಗೆ ಅದಟರಳುರ್ಕೆ ಭೃತ್ಯನಿವಹಕ್ಕೆ ಚದುರ್ ಗಣಿಕಾಜನಕ್ಕೆ ಕುಂದದೆ ನೆಲಸಿರ್ಕೆ ಮದೀಯ ಕೃತಿಬಂಧದಿಂ: **ಪಂಪಭಾ**, ೧೪. ೬೩)

ಚದುರ – [ನಾ] [ಚತುರ] ಬುದ್ಧಿವಂತ, ಜಾಣ (ಅಕ್ಕರಗೊಟ್ಟಿಯುಂ ಚದುರರ ಒಳ್ವಾತುಂ ಕುಳಿರ್ ಕೋಟ್ಟಿ ಜೊಂಪಮುಂ ಏವೇಟ್ಟುದನುಳ್ಳ ಮೆಯ್ಸುಕಮುಂ: **ಪಂಪಭಾ**, ೪. ೩೧)

ಚದುರಂಗದ ಮಣೆ – [ನಾ] ಚದುರಂಗದಾಟದ ಹಾಸುಮಣೆ (ಚತುರಂಗಮುಂ ಒರ್ಮೊದಲೆ ನಡುಗಿದುದು ಕೂಡಿದ ಚದುರಂಗದ ಮಣೆಯಂ ಅಲ್ಗಿದಂತಪ್ಪಿನೆಗಂ: **ಪಂಪಭಾ**, ೧೧. ೭೦)

ಚಪಳಂಗಳಾಗು – [ಕ್ರಿ] ಚಂಚಲವಾಗು (ಅಲರ್ಗಣ್ಗಳ್ ಚಪಳಂಗಳಾಗಿ ಜಘನಂ ಕಾಂಚೀಕಲಾಪಪ್ರಭೋಜ್ಜ್ವಲಂ ಉದ್ವೃತ್ತಮುಂ ಆಗಿ ತಾಂ ಅಲೆಗೆ: **ಪಂಪಭಾ**, ೪. ೭೪)

ಚಪಳಕಪಿ – [ನಾ] ಚಟುವಟಿಕೆಯ ಕೋಡಗ (ಮುತ್ತ ತವಸಿಗಳ ಕೈಯಂ ಪಿಡಿದುಯ್ದು ಅವರ ಗುಹೆಗಳಂ ಪುಗಿಪ ಪೊಱಮಡಿಪ ಚಪಳಕಪಿಗಳುಮಂ: **ಪಂಪಭಾ,** ೧. ೧೧೫ ವ)

ಚಪೇಟಚರಣಾಘಾತ – [ನಾ] ಅಂಗೇಯ ಏಟು ಮತ್ತು ಕಾಲಿನ ಒದೆತ (ಘಾತಿಸೆ ಚಪೇಟಚರಣಾಘಾತದೊಳಟಿದಿಲ್ಲಿ ಬಂದು ಅತಿಕ್ರೋಧನನಿಂತೀ ಪುಲಿಯಾದಂ: **ಆದಿಪು**, ೫. ೧೬)

ಚಪ್ಪರಿಸು – [ಕ್ರಿ] ತಿಂದು ನಾಲಿಗೆಯಾಡಿಸು (ಮದಾಕೃತಿಯಂ ಮಾಸಿಸಿ ಮುಪ್ಪು ಚಪ್ಪರಿಸೆಯುಂ: **ಆದಿಪು**, ೧. ೮೧); [ಕ್ರಿ] ಗರ್ವಿಸು (ಕಂಡು ಕಪ್ಪಮೀಯದೆ ಚಪ್ಪರಿಸುವ ಮಂಡಳಿಕರುಮಂ ಅಡಂಗದಾಟವಿಕರುಮಂ: **ಆದಿಪು**, ೪. ೮೨ ವ)

ಚಮರಜ – [ನಾ] ಚಾಮರ (ವಾಜಿರಾಜಿಶ್ರವಣ ಚಮರಜಶ್ರೇಣಿ ಸಂವೀಜಿತ ಆಶಾಂಬರಭಾಗಂ: **ಆದಿಪು**, ೪. ೨೪)

ಚಮರೀ – [ನಾ] ಚಾಮರ (ಸುರವಧೂಲೀಲಾವಧೂತ ಪ್ರತಿಕ್ಷಣ ಚಂಚಚ್ಚಮರೀರುಹಂ ಪಟುನಟಪ್ರಾರಬ್ಧಸಂಗೀತಕಂ ತಣಿದಂ ಸಂತತಂ: **ಆದಿಪು**, ೨. ೭೯); [ನಾ] ಚಮರೀ ಮೃಗ (ಚಮರೀ ಲೋಲ ಲಾಂಗೂಲ ಮಾಲಾವಲಿ ವಿಕ್ಷೇಪಂಗಳಿಂ ತತ್ ಚಮರರುಹ ಮಹಾಶೋಭೆ ಕೈಗಣ್ಮೆ: **ಪಂಪಭಾ**, ೪. ೧೪)

ಚಮರೀಜ – [ನಾ] ಚಾಮರ (ಮದಕಳಹಂಸೆಯಂ ಪಿಂಡಿದೆ ಪೊದಳ್ದ ಚಮರೀಜಮಾಗೆ ಜಳದೇವತೆಗೆತ್ತಿದ ಪಚ್ಚೆಯ ಸತ್ತಿಗೆಗಳ ಪುದುವೆನಿಪುದು; **ಆದಿಪು**, ೧೧. ೬೫)

ಚಮರೀಜಾತ – [ನಾ] ಚಾಮರ (ಇವು ಚಮರೀಜಾತಂ ದುಗ್ಧವಾರ್ಧಿ ಫೇನೋಪಮಾನಮಿವು ನಿನಗೆಯೆ ತಕ್ಕುವು: **ಆದಿಪು**, ೧೩. ೧೮)

ಚಮರೀರುಹ – [ನಾ] ಚಾಮರ (ಸುರವಧೂಲೀಲಾವತಿಧೂತ ಪ್ರತಿಕ್ಷಣ ಚಂಚಚ್ಚಮರೀರುಹಂ ಪಟುನಟಪ್ರಾರಬ್ಧ ಸಂಗೀತಕಂ ತಣಿದಂ: **ಆದಿಪು**, ೨. ೭೯)

ಚಮೂ – [ನಾ] ಸೇನೆ (ಪ್ರಿಯಗಳ್ಳಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ**, ೯. ೯೭)

ಚಮೂಪತಿ – [ನಾ] ದಂಡಾಧಿಪತಿ (ತಮಿಸ್ರಗುಹೆಯ ವಜ್ರದ ಪಡಿ ತತ್ಕ್ಷಿತಿಧರದರ್ದೆಯಂತೆ ಚಮೂಪತಿಯಿಂ ತೆಱೆದತ್ತು: **ಆದಿಪು**, ೧೪. ೫೭)

ಚಮೂರು – [ನಾ] ಜಿಂಕೆ (ಮತ್ಸ್ಯ ಮಕರ ಕುಲಿಶ ಕಲಶ ಕುಳೀರ ವರಾಹ ವಾನರ ಕಂಠೀರವ ಚಮೂರು ಮಯೂರ ಗರುಡ ಫಣಿರಾಜಚಿಹ್ನಂಗಳಪ್ಪ: **ಆದಿಪು**, ೧೧. ೨೮ ವ)

ಚಮ್ಮಟಿಗೆ – [ನಾ] [ಚರ್ಮಪಟ್ಟಿಕಾ] ಚಾವಟಿ, ಚಾಟಿ (ಅನ್ನೆಗಂ ನಕುಳನುಂ ಅಂಕವಣೆಯುಂ ಬಾಳುಂ ಬಾರುಂ ಚಮ್ಮಟಿಗೆಯುಮಂ ಒರ್ವ ಕೀಟಕಾಳಿಂ ಪಿಡಿಯಿಸಿಕೊಂಡು ಬಂದು: **ಪಂಪಭಾ**, ೮. ೫೪ ವ)

ಚಯ್ ಚಯ್ – [ಅ] ಅನುಕರಣ ಶಬ್ದ, ಹೀಗೆ ಘರ್ಷಿಸುವುದು (ಚಯ್ ಚಯ್ಯೆಂಬಾಗಳ್ ಮೆಯ್ ಮೆಯ್ ಚಲದಿಂ ಮುಟ್ಟಿ ಪೊಣರ್ದು ತಳ್ತಿಱಿವ ಉರ್ಕಿಂ ಕೆಯ್ ಚೆಚ್ಚರಿಕೆಯ ಚಲದಿಂ ಕೆಯ್ ಚಳಿವಿನಂ ಇಱಿದರ್: **ಪಂಪಭಾ**, ೧೩. ೩೪)

ಚಯ – [ನಾ] ಸಮೂಹ (ದಿಗಂಬರ ತಟಂಬರಂ ಕೀರ್ತಿವಲ್ಲೀಚಯಂ ದಿಗಂಬರವಿಳಾಸಮಂ ಬಯಕೆ ತೀರ್ವಿನಂ ತಾಳ್ದಿದಂ: **ಆದಿಪು**, ೩. ೫೭); ರಾಶಿ (ಶರಶಾಳಿಯೆಂ ಎಂಬುದಂ ಈ ಶರದಿಂದೆಮಗಱಿಪಲೆಚ್ಚು ಕುಲಧನಚಯಮಂ ತರಿಸಿ ಕೊಳಲ್ಬಗೆದ ಅದಟನ: **ಆದಿಪು**, ೧೨. ೯೯)

ಚರ – [ನಾ] ಜನ್ಮ, ರೂಪ (ಆ ವಿಷಯದೊಳ್ ಶಾರ್ದೂಲಚರನಪ್ಪ ಚಿತ್ರಾಂಗದೇವಂ ದೇವಲೋಕದಿಂದವತರಿಸೆ:ಬಂದು ಸಮಾನ ಪುಣ್ಯತ್ವಂ ಕಾರಣಮಾಗಿ .. .. ವರದತ್ತನೆಂಬೊಂ ಮಗನಾದಂ: **ಆದಿಪು**, ೬. ೩ ವ)

ಚರಣ – [ನಾ] ಮಾಡುವಿಕೆ (ಅವರೊಳಗೆ ದೇವಾಪಿ ನವಯೌವನಪ್ರಾರಂಭದೊಳೆ ತಪಃ ಚರಣ ಪರಾಯಣನಾದಂ; **ಪಂಪಭಾ**, ೧. ೬೫ ವ)

ಚರಣಪ್ರಹರಣ – [ನಾ] ಪಾದಗಳ ಒದೆತ (ವೃಕೋದರ ಗದಾಸಂಚೂರ್ಣಿತ ಊರುಯುಗಳನುಂ ಭೀಮಸೇನಚರಣ ಪ್ರಹರಣಗಳಿತ ಶೋಣಿತಾರ್ದ್ರ ಮೌಳಿಯುಂ ಆಗಿ: **ಪಂಪಭಾ**, ೧೩. ೧೦೨ ವ)

ಚರಣಾಘಾತ – [ನಾ] ಕಾಲ ಒದೆತ (ಘಾತಿಸೆ ಚಪೇಟ ಚರಣಾಘಾತದೊಳಟೆದಿಲ್ಲಿ ಬಂದತಿಕ್ರೋಧನನಿಂತೀ ಪುಲಿಯಾದಂ: **ಆದಿಪು**, ೫. ೧೬)

ಚರಮತನು – [ನಾ] [ಜೈನ] ಮೋಕ್ಷಕ್ಕೆ ಹೋಗುವವನು (ಅಮೂರ್ತರ್ ಚರಮತನುಸಮಾಕಾರರ್ ಉದ್ಧೂತಲೇಪರ್ ಪ್ರಣುತರ್ .. .. ಸ್ವಕೀಯಪ್ರಭುತೆಯನೆಮಗಂ ಮಾಟಕ್ಕೆ ಅತಿಪ್ರೀತಿಯಿಂದಂ: **ಆದಿಪು**, ೧. ೨)

ಚರಮದೇಹಧಾರಿ – [ನಾ] [ಜೈನ] ಚರಮತನು (ಇವರಿರ್ವರ್ ಅರಸುಗಳಪ್ಪೊಡೆ ಚರಮದೇಹಧಾರಿಗಳ್: **ಆದಿಪು**, ೧೪. ೧೦೦ ವ)

ಚರಮಾಂಗ – [ನಾ] ಕೊನೆಯ ಜನ್ಮದವನು (ಪುರುಪರಮೇಶ್ವರಪುತ್ರಂ ಚರಮಾಂಗಂ ಚಕ್ರವರ್ತಿಯೆಂದೊಡೆ ಪೇೞಲ್ ದೊರೆ ಪೆಱರಾರ್ ಭರತನೊಳ್: **ಆದಿಪು**, ೧೨. ೧೧೯)

ಚರಿಗೆ – [ನಾ] [ಜೈನ] ಮುನಿಗಳ ಭಿಕ್ಷೆ (ಮಿಂದುಂಡಿೞಿಗಳೆ ಬಿಜಯಂಗೆಯ್ಯೆಂದಿರೆ ಕುಳಾದ್ರಿಧೈರ್ಯಂಗೆ ಚರಿಗೆ ಮಾಣ್ದತ್ತಿನಿಸುಂ: **ಆದಿಪು**, ೯. ೧೨೯)

ಚರಿಗೆವರ್ – [ಕ್ರಿ] [ಜೈನ] ಮುನಿಗಳು ಭಿಕ್ಷೆಗೆ ಬರುವುದು (ಅನುರಾಗದಿಂ ಆ ಪ್ರೀತಿವರ್ಧನಂ ಮುನಿವರರೆಂತೀ ಗಿರಿಗೆ ಚರಿಗೆವರ್ಪರನಾಗತಮತಿ ಬಗೆಯ ನೀನುಪಾಯಾಂತರಮಂ: **ಆದಿಪು**, ೫. ೭)

ಚರಿಗೆವೊಗು – [ಕ್ರಿ] [ಜೈನ] ಮುನಿಗಳು ಭಿಕ್ಷೆಗಾಗಿ ಮನೆಯನ್ನು ಹೊಗು (ನಿಯಮದಿಂ ನಿರ್ಮಳಚರಿತಂ ಚರಿಗೆವೊಕ್ಕಂ ಅರಸನ ಬೀಡಂ: **ಆದಿಪು**, ೫. ೧೦)

ಚರಿತ – [ನಾ] ಆಚಾರ (ಬಗೆಯೊಳ್ಪೊಣ್ಮೆ ದಯಾರಸಂ ಚರಿತದೊಳ್ಕೈಗಣ್ಮೆ ಚಾರಿತ್ರಂ: **ಆದಿಪು**, ೧. ೫)

ಚರಿತಂ – [ಅ] ತ್ವರಿತವಾಗಿ (ಚರಿತಂ ಬಂದರ್ ಕಣ್ಗೊಪ್ಪಿರಲ್ ವರಭೋಗಿಯರ್: **ಪಂಪಭಾ**, ೯. ೧೦೨)

ಚರಿತಾರ್ಥ – [ನಾ] ಧನ್ಯ, ಸಾರ್ಥಕಜೀವಿ (ಸಂಸರಣಾಂಭೋರಾಶಿಯಂ ದಾಂಟುವ ಬಗೆಯನೆ ಕಯ್ಕೊಂಡಂ ಎಂದಂದೆ ಮಾವಂ ಚರಿತಾರ್ಥಂ: **ಆದಿಪು**, ೪. ೮೯)

ಚರು – [ನಾ] ಹವಿಸ್ಸು, ದೇವತೆಗಳಿಗೆ ಅರ್ಪಿಸುವ ನೈವೇದ್ಯ (ಜಳಗಂಧಾಕ್ಷತೆ ಪುಷ್ಪಾವಳಿ ಚರು ದೀಪಪ್ರದೀಪ ಧೂಪಫಲಂಗಳ್ ಕುಳಿಶಾಯುಧನರ್ಚಿಸೆ ತೊಳತೊಳಗಿದವು: **ಆದಿಪು**, ೭. ೧೦೫)

ಚರುಕ – [ನಾ] ಅಷ್ಟವಿಧ ಅರ್ಚನೆಗಳ ಪದಾರ್ಥಗಳಲ್ಲಿ ಒಂದು, ನೈವೇದ್ಯ (ಕುಸುಮದಾಮಂಗಳಿಂದಂ ಅನೇಕ ಭಕ್ಷೋಪದಂಶರಸಪ್ರಚುರ ಚಾರುಚರುಕಂಗಳಿಂದಂ; **ಆದಿಪು**, ೨. ೩೨ ವ)

ಚರ್ಚನ – [ನಾ] ಗಂಧ ಬಳಿಯುವುದು (ವಿಜಯಾಂಗನಾ ಚರ್ಚನೋಚಿತ ಮೃಗಮದಮುಂ ನಿಜಭುಜವಿಜಯಲಕ್ಷ್ಮೀ ಪರಿರಂಭಪ್ರಕಟನ ದಕ್ಷದಕ್ಷಿಣವಿಷಾಣವಿನ್ಯಸ್ತ ಹಸ್ತಮುಂ: **ಆದಿಪು**, ೧೪. ೯೦ ವ)

ಚರ್ಚರಪೂಜಾ – [ನಾ] ನೃತ್ಯ ಸಂಗೀತಸಹಿತ ಮಾಡುವ ಪೂಜೆ (ಪೂರ್ವರಂಗಪ್ರಸಂಗದೊಳ್ ಚರ್ಚರಪೂಜಾಮಂಗಳ ಪದೋಚ್ಚಾರಣ ಪುಷ್ಪಾಂಜಲಿವಿಕ್ಷೇಪಣಾದಿ ನಾಂದಿವಿಧಿಯಂ ನಿರ್ವರ್ತಿಸಿ: **ಆದಿಪು**, ೭. ೧೧೫ ವ)

ಚರ್ಚಿತ – [ಗು] ಲೇಪನಗೊಂಡ (ಸಿತಕುಸುಮಶೇಖರಂ ಚರ್ಚಿತಚಂದನಂ ಅತಿವಿಳಾಸವಿಧೃತದುಕೂಲಂ ಧೃತರತ್ನಾರ್ಘ್ಯಂ ಬಂದಂ: **ಆದಿಪು**, ೧೩. ೧೨)

ಚರ್ಮರತ್ನ – [ನಾ] [ಜೈನ] ಶ್ರೀಗೃಹದಲ್ಲಿ ಹುಟ್ಟಿದ ಚಕ್ರವರ್ತಿಯ ರತ್ನಗಳಲ್ಲಿ ಒಂದು (ಶ್ರೀಗೃಹದೊಳ್ ಪುಟ್ಟಿದ ನಿಧಿ ಮಣಿ ಚರ್ಮ ಕಾಕಿಣೀರತ್ನಂಗಳುಂ: **ಆದಿಪು**, ೧೫. ೩ ವ)

ಚರ್ಯಾಪರ್ಯಟನ – [ನಾ] [ಜೈನ] ಚರ್ಯೆಗಾಗಿ ಮಾಡುವ ತಿರುಗಾಟ (ಆ ಮುನೀಶ್ವರಂಗೆ ನಿಖಿಳಜಗಜ್ಜನಾಶ್ಚರ್ಯ

ಚರ್ಯಾಪರ್ಯಟನದೊಳ್ ಮತ್ತಮಱುದಿಂಗಳ್ ಪೋಗೆ: **ಆದಿಪು**, ೯. ೧೨೯ ವ)

ಚರ್ಯಾಮಾರ್ಗ – [ನಾ] [ಜೈನ] ಚರಿಗೆಗಾಗಿ ಹೋಗುವ ಉದ್ದೇಶ (ಚರ್ಯಾಮಾರ್ಗದೊಂದಂದಮಂ ಧರೆಯೊಳ್ ಮಾರ್ಗವಿಬೋಧನಾರ್ಥಂ ಅಱೆಯಲ್ಕೆಂದೆತ್ತಿ ಕೆಯ್ಯಂ: **ಆದಿಪು**, ೯. ೧೨೪)

ಚರ್ವಿತ – [ಗು] ಅಗಿಯಲ್ಪಟ್ಟ (ಕರಾಳನಕ್ರಚರ್ವಿತ ನಿಕೀರ್ಣ ನಿರಯಜನಿಕುರುಂಬ ಶಲ್ಯಶಕಲಪರಿಪೂರಿತ ಧವಳಪ್ಲವ ದುರ್ನಿರೀಕ್ಷಣವಿಷಮೆಯುಂ: **ಆದಿಪು**, ೫. ೮೭ ವ)

ಚರ್ವಿತಚರ್ವಣ – [ನಾ] ಅಗಿದದ್ದನ್ನೇ ಅಗಿಯುವುದು, ಪುನರುಕ್ತಿ (ನಿಚ್ಚಂ ನಿಚ್ಚಮೀ ಪಿಷ್ಟಪೇಷಣ ಚರ್ವಿತಚರ್ವಣಂ ಸುಖಮಿದೇಂ ನಿನ್ನಂ ಮರುಳ್ಮಾಡಿತೋ: **ಆದಿಪು**, ೩. ೬೯)

ಚಲ – [ನಾ] ಅಂತಸ್ತು (ಒಡೆಯಂ ಕೂಸಿಂಗದೊಂದು ಕುಲದ ಚಲದ ಪೆಂಪೊಂದೆ ಚೆಲ್ವೊಂದೆ ಸಂದೊಳ್ನುಡಿಯೊಂದೇ: **ಆದಿಪು**, ೪. ೨೭); **[ನಾ]** ಹಟ (ಚಲಚಲದಿಂ ಉಱದೆ ಪಗೆವರ ತಲೆಗಳಂ ಅಱೆದಂದು ಬಂದು ಪಾಂಡುತನೂಜರ್ ತಲೆದೋಱಿರೆ: **ಪಂಪಭಾ**, ೯. ೪); **[ನಾ]** [ರಾಜನ] ಸ್ವಾಭಿಮಾನಸ್ಥಿರತೆ (ಚಲದೊಳ್ ದುರ್ಯೋಧನಂ ನನ್ನಿಯೊಳ್ ಇನತನಯಂ ಗಂಡಿನೊಳ್ ಭೀಮಸೇನಂ ಬಲದೊಳ್ ಮದ್ರೇಶಂ: **ಪಂಪಭಾ**, ೧೪. ೬೪)

ಚಲತ್ – [ಗು] ಬೀಳುವ (ಸದ್ಯಃ ಸಂತಾಪಿತ ಲೋಹಪುತ್ರಿಕಾ ಪರಿರಂಭಸಂಭೃತ ಪ್ಲೋಷಚಲಜ್ಜಾಂಗಳ ಗಳತ್ ರುಧಿರ: **ಆದಿಪು**, ೫. ೮೭ ವ)

ಚಲಲ್ಲುಳಿತ – [ಗು] [ಚಲತ್+ಉಳಿತ] ಹರಡಿಕೊಂಡು ಅಲುಗಾಡುವ (ಈ ಬರೆದ ಕಲ್ಪಂ ಈಶಾನಂ ಈ ಚಲಲ್ಲುಳಿತಕೇತನಂ ಸುರವಿಮಾನಂ ಆ ಶ್ರೀಪ್ರಭಂ: **ಆದಿಪು**, ೪. ೬)

ಚಲಾಚಲ – [ನಾ] ಮಿಂಚಿನಂತೆ ಚಂಚಲ (ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿಯಪ್ಪ ಚಲಾಚಲ ರಾಜ್ಯಲಕ್ಷ್ಮಿ: **ಆದಿಪು**, ೧೪. ೧೩೦) [ಈ ಪದದ ಸ್ಥಾನದಲ್ಲಿ ಟಿವಿವೆಂ ಆವೃತ್ತಿಯಲ್ಲಿರುವುದು **'ಮನೋಹರಿ'** ಎಂಬ ಶಬ್ದ]

ಚಲ್ಲಣ – [ನಾ] ಚೆಡ್ಡಿ, ಅರ್ಧೋರುಕ (ಪಾಲ್ಗಡಲ ತೆರೆಯ ನೊರೆಯ ದೊರೆಯ ದುಕೂಲಾಂಬರದೊಳ್ ಇಂಬಾಗಿ ಚಲ್ಲಣಮನುಟ್ಟು ಪುಡಿಗತ್ತುರಿಯಂ ತಲೆಯೊಳ್ ತೀವೆ ಪೊಯ್ದು: **ಪಂಪಭಾ**, ೧೨. ೧೦೮ ವ)

ಚಲ್ಲವಾಡು – [ಕ್ರಿ] ಸರಸವಾಡು (ಚಲ್ಲವಾಡಿ ಪೂವೆತ್ತುವ ಮಾಲೆಗಾರ್ತಿಯರಂ ಅಂದು ಅರಿಕೇಸರಿ ನಿಂದು ನೋಡಿದಂ: **ಪಂಪಭಾ**, ೪. ೮೧)

ಚಲ್ಲವೊತ್ತ – [ನಾ] ಒಳ್ಳೆಯ ಮಾತಾಡಿ ನಂಬಿಸಿ ಹೊಟ್ಟೆ ಹೊರೆಯುವವನು (ನಾಡ ಚಲ್ಲವೊತ್ತರ ನುಡಿಗೊಳ್ಳದಿರ್ ನಿನಗೆ ಪಾಂಡವರಪ್ಪುದಂ ಆರುಂ ಅಪ್ಪರೇ: **ಪಂಪಭಾ**, ೯. ೪೨)

ಚಲ್ಲಿ – [ನಾ] ಚಲನೆ, ನೃತ್ಯದ ಒಂದು ಗತಿ (ಚರಣದ ಚಾರಿಯ ಚಲ್ಲಿಯ ಪರಿಕ್ರಮಕ್ರಮದ ಚಿತ್ತಮುಮಂ ನೆಗಟ್ಟೆಡೆಯೊಳ್ ರಂಜಿಸಿದುದು: **ಆದಿಪು**, ೯. ೩೯)

ಚಳಣ – [ನಾ] ಕಾಲು, ಪಾದ (ಬಳಮೆರಡುಂ ತನ್ನನೆ ಮಿಳಮಿಳ ನೋಡೆ ನರೇಂದ್ರಂ ಒಂದೆ ರಥಧಿಂದ ಅಸುಹೃದ್ಬಳಮಂ ಇರದೆಯ್ದಿ ಭೀಷ್ಮರ ಚಳಣಯುಗಕ್ಕೆಱಗೆ ನಿನಗೆ ಜಯಮಕ್ಕೆ ಎಂದಂ: **ಪಂಪಭಾ**, ೧೦. ೬೦)

ಚಳತ್ – [ಗು] ಚಲಿಸುತ್ತಿರುವ (ಪಲವುಂ ರಾಜಚಿಹ್ನಂಗಳಂ ಬೆಳ್ಗೊಡೆಗಳ್ ತಳ್ಪೊಯ್ದು ಅದೇಂ ಕಣ್ಗೊಳಿಸಿದುದೊ ಚಳತ್ ಚಂದ್ರಕಚ್ಛತ್ರಪಿಂಡಂ: **ಪಂಪಭಾ**, ೧೩. ೩೮)

ಚಳದಳಕೆ – [ನಾ] [ಚಲತ್+ಅಲಕೆ] ಅಲುಗುವ ಮುಂಗುರುಳುಳ್ಳವಳು (ಪುಳಿನದ ಲೋಹಾಸನಂಗಳೊಳ್ ನೆಮ್ಮಿರ್ದುಂ ಚಳದಳಕೆಯರರೆಬರ್ ಅದೇಂ ಕಳೆದರೊ ಶರದಾತಪಪ್ರಭೂತಶ್ರಮಮಂ: **ಆದಿಪು**, ೧೧. ೭೬)

ಚಳಮತಿ – [ನಾ] ಚಂಚಲ (ಫಳದಿಂ ಕಲ್ಪದ್ರುಮಮಂ ಜಳದಿಂ ಜಳನಿಧಿಯಂ ಉಕ್ತಿಯಿಂ ಸುರಗುರುವಂ ಬೆಳಗಿಂ ದಿನಪನಂ ಅರ್ಚಿಪ ಚಳಮತಿಗಳ ತೆಱನನಾಮುಮನುಕರಿಸಿರೆವೇ: **ಆದಿಪು**, ೧೪. ೧೧)

ಚಳಿತು – [ಕ್ರಿ] [√ಚಳಿ] ದಣಿದು (ಕಾದಿ ಚಳಿತು ಎಯ್ದಿ ಬೞಲ್ದು ಅಪರಾಂಬುರಾಶಿಯೊಳ್ ಮುೞುಗುವ ತೀವ್ರದೀಧಿತಿವೊಲ್ ಆ ಕೊಳದೊಳ್ ಫಣಿರಾಜಕೇತನಂ ಮುೞುಗಿದಂ: **ಪಂಪಭಾ**, ೧೩. ೭೪)

ಚಳಿಯಿಸು – [ಕ್ರಿ] [√ಚಳಿ] ಚಲ್ಲಾಪಿಲ್ಲಿಮಾಡು (ಕಳೆದುದು ಪತ್ರಭಂಗದ ಬೆಡಂಗುಗಳಂ ಕುಟಿಲಾಲಕಂಗಳಂ ಬಳೆಯಿಸಿದತ್ತು ಕಣ್ಗೆಸೆವ ರಾಗಮನೆಯ್ದಿದಿಸಿ ಕೇಶಹಸ್ತಮಂ ಚಳಿಯಿಸಿದತ್ತು: **ಆದಿಪು**, ೧೧. ೧೫೦); **[ಕ್ರಿ]** ದಣಿಸು, ಆಯಾಸಗೊಳಿಸು (ಈ ಮದದಂತಿಯ ಎಟ್ಟಿರವುಂ ಈತನ ಶೌರ್ಯಮಿಂ ಈ ಮಹೋಗ್ರಸಂಗ್ರಾಮದೊಳ್ ಎನ್ನುಮಂ ಚಳಿಯಿಸಲ್ ಬಗೆದಪುದು: **ಪಂಪಭಾ**, ೧೨. ೮೪)

ಚಳಿಲ್ – [ಅ] ಒಂದು ಅನುಕರಣ ಶಬ್ದ (ಪೊಸಪೂವಿನೊಳ್ ಪೊರೆದು ಪೊಣ್ಮಿದ ಕಂಪು ಮೊಗಂಗಳಂ ಚಳಿಲ್ಲನೆ ಕೊಳೆ ಪೊಯ್ಯೆ ತೀಡಿದುದು ತೆಂಕಣ ಗಾಳಿ ವಸಂತಮಾಸದೊಳ್: **ಪಂಪಭಾ**, ೫. ೩೪)

ಚಳಿವಿನಂ – ದಣಿಯುವವರೆಗೂ (ಚಯ್‌ಚಯ್ಯೆಂಬಾಗಳ್ ಮೆಯ್ ಮೆಯ್ ಚಲದಿಂ ಮುಟ್ಟಿ ಪೊಣರ್ದು ತಳ್ತಿಱೆವ ಉರ್ಕಿಂ ಕೆಯ್ ಚೆಚ್ಚರಿಕೆಯ ಚಲದಿಂ ಕೆಯ್ ಚಳಿವಿನೆಗಂ ಇಱೆದರ್ ಎರಡು ಬಲದೊಳಂ ಅದಟರ್: **ಪಂಪಭಾ**, ೧೩. ೩೪)

ಚಾಗ – [ನಾ] [ತ್ಯಾಗ] ದಾನ (ನಿರಂತರಂ ಕಡಿಕಡಿದಿತ್ತ ಪೊನ್ನೆ ಬುಧಮಾಗಧವಂದಿಜನಕ್ಕೆ ಕೊಟ್ಟ ಕೋಡೆ ಎಡಱದೆ ಬೇಡಿಂ ಓಡಿಂ ಇದು ಚಾಗದ ಬೀರದ ಮಾತು ಕರ್ಣನಾ: **ಪಂಪಭಾ**, ೧. ೯೯)

ಚಾಗಂಗೆಯ್ – [ಕ್ರಿ] ದಾನಮಾಡು (ನಿಜರಥತುರಗ ದಿವ್ಯಾಸ್ತ್ರಂಗಳುೞಿಯೆ ಪಸುರ್ಮಣಿಯನಪ್ಪೊಡಂ ಉೞಿಯದಂತು ಚಾಗಂಗೆಯ್ದು: **ಪಂಪಭಾ**, ೧೨. ೧೦೮ ವ)

ಚಾಗದ ಕಂಬ – [ನಾ] ದಾನದ ಶಿಲಾಸ್ತಂಭ (ಚಾಗದ ಕಂಬಮಂ ನಿಱಿಸಿ ಬೀರದ ಶಾಸನಮಂ ನೆಗಟ್ಟೆ ಕೋಳ್ಪೋಗದ ಮಂಡಲಂಗಳನೆ ಕೊಂಡು ಜಗತ್ತ್ರಿತಯಂಗಳೊಳ್ ಜಸಕ್ಕೆ ಆಗರಮಾದ ಬದ್ದೆಗನಿಂ ಆ ನರಸಿಂಹನಿಂ ಅತ್ತಲ್ನಾಲ್ವೆರಲ್ ಮೇಗು ಪೊದಳ್ದ ಚಾಗದೊಳಂ ಒಂದಿದ ಬೀರದೊಳಂ ಗುಣಾರ್ಣವಂ: **ಪಂಪಭಾ**, ೧. ೫೦)

ಚಾಣೂರಾರಿ – [ನಾ] ಚಾಣೂರ ಎಂಬ ರಾಕ್ಷಸನ ಶತ್ರು, ಶ್ರೀಕೃಷ್ಣ (ಚಾಣೂರಾರಿಯಂ ಸುಭದ್ರೆಯುಮನಭಿಮನ್ಯುವುಮಂ ಒಡಗೊಂಡು ಬರ್ಪುದೆಂದು ಬಟಿಯನಟ್ಟಿ: **ಪಂಪಭಾ,** ೯. ೭ ವ)

ಚಾತುರಂಗ – [ನಾ] ಚತುರಂಗ ಸೈನ್ಯ (ಅದಿರದಿದಿರ್ಚಿ ತಳ್ತಿಜೆಯಲ್ ಈ ಮಲೆದೊಡ್ಡಿದ ಚಾತುರಂಗ ಬಲಮೆಂಬುದು ನಿನಗೊಡ್ಡಿ ನಿಂದುದು: **ಪಂಪಭಾ,** ೧೦. ೬೪)

ಚಾತುರ್ದಂತ – [ನಾ] ಚತುರಂಗಬಲ (ಅಂತು ಚಾತುರ್ದಂತಂ ಒಂದೊಂದಱೊಳ್ ಓರಂತೆ ನಡುವಗಲ್ವರಂ ಕಾದುವುದುಂ: **ಪಂಪಭಾ,** ೧೧. ೩೬ ವ)

ಚಾತುರ್ಯಾಮ – [ನಾ] ನಾಲ್ಕು ಜಾವಗಳು (ಆಗಳ್ ಉಭಯಬಲಂಗಳೊಳಂ ಚಾತುರ್ಯಾಮಾವಸಾನ ಘಟಿತ ಘಂಟಿಕಾಧ್ವನಿಗಳುಂ .. .. ನೆಗಟ್ದುವು: **ಪಂಪಭಾ,** ೧೦. ೩೫ ವ)

ಚಾತುರ್ವರ್ಣ – [ನಾ] ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು (ಸಮಯಿಗಳುಂ ಚಾತುರ್ವರ್ಣಮುಂ ಉಚಿತಚರಿತ್ರಮುಂ ಬಿಸುಟ್ಟು ಆದಂ ಪೊಲ್ಲಮೆಯೊಳ್ ಸಲೆ ನಡೆವರ್: **ಆದಿಪು,** ೧೫. ೩೩)

ಚಾತುರ್ಬಲ – [ನಾ] ಚತುರಂಗಬಲ (ಚಾತುರ್ಬಲಂಗಳ್ ಮೊದಲ ಸಮಕಟ್ಟುಗೆಟ್ಟು ತಡವರಿಸಿ ತಟ್ಟುಪೊಟ್ಟೆಂದು ಎಚ್ಚು ಮಿಟ್ಟುಂ ಇಱಿದು ತಱಿದು ಘಟ್ಟಿಸೆಯುಂ: **ಪಂಪಭಾ,** ೧೦. ೭೦ ವ)

ಚಾದಗೆ – [ನಾ] ಚಾತಕ ಪಕ್ಷಿ (ಕಾರ್ಗಾಲದ ಬರವಂ ಚಾದಗೆ ಪಾರ್ವಂತೆ ಧರ್ಮಪುತ್ರನ ಮರುತ್ಸುತನ ಪಾದಕಮಲಂಗಳಂ .. .. ಅರ್ಚಿಸಿ: **ಪಂಪಭಾ,** ೮. ೩೬ ವ)

ಚಾದಗೆವಕ್ಕಿ – [ನಾ] ಚಾದಗೆ (ಕಾರ್ಗಾಲಮಂ ಸೋಗೆ ಮುಂಬನಿಯಂ ಚಾದಗೆವಕ್ಕಿ ಹಂಸೆ ಕೊಳನಂ ಪದ್ಮಂಗಳಾದಿತ್ಯಮಂ ನೆನವಂತೆ: **ಆದಿಪು,** ೧೨. ೩೧)

ಚಾಪ – [ನಾ] ಬಿಲ್ಲು (ಅನೇಕಾಕ್ಷರಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಣ ಶಕ್ತಿ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳಂ: **ಪಂಪಭಾ,** ೨. ೩೪ ವ)

ಚಾಪದಂಡ – [ನಾ] ಹೆದೆಯೇರಿಸದ ಬಿಲ್ಲು (ದವದಹನಧೂಮಾಧಿಕ ಶ್ಯಾಮಳಿತೋತ್ತಾಳತಾಳಕಾಯಂ ಅತಿವಿಚಿತ್ರತ್ರಪುಮಯ ಪತ್ರಖಚಿತೋಚ್ಚಂಡತಾಳ ಚಾಪದಂಡಂ: **ಆದಿಪು,** ೧೩. ೪೫ ವ)

ಚಾಪವಿದ್ಯಾಬಲ – [ನಾ] ಧನುರ್ವಿದ್ಯಾ ಕೌಶಲ (ಚಾಪವಿದ್ಯಾಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್: **ಪಂಪಭಾ,** ೧೪. ೬೪)

ಚಾಪಾಗಮ – [ನಾ] [ಚಾಪ+ಆಗಮ] ಬಿಲ್ವಿದ್ಯೆ (ನಿಮ್ಮಂ ಅದಿರ್ಪವಲ್ಲಿ ಚಾಪಾಗಮಮಂ ಏವುದು ಅಂತೆನಗೆ ಬಿಲ್ವರಂ ಆಜಿಯೊಳಾಂಪ ಗಂಡರಾರ್: **ಪಂಪಭಾ,** ೧೦. ೧೨೩)

ಚಾಮರ – [ನಾ] ಚಮರೀಮೃಗ (ಸಿಂಹಾಸನಶ್ರೀಸಮುಚಿತಂ ಅಮೃತಾಂಭೋಧಿಕಲ್ಲೋಲಮಾಳಾನಿಭ ಲೀಲಾಸಂಚಳತ್ ಚಾಮರರುಚಿರಂ: **ಆದಿಪು,** ೧೩. ೪೬); [ನಾ] ಚಮರೀಮೃಗದ ಕೂದಲಿಂದ ಮಾಡಿದ ಬೀಸುವ ಕುಚ್ಚು (ಗಂಗಾತರಂಗೋಪಮಾನ ಚಳಚ್ಚಾಮರವಾತಪೀತ ನಿಜಘರ್ಮಾಂಭಃಕಣಂ ದ್ರೌಪದೀಕಚಕುಂಭಾರ್ಪಿತ ಕುಂಕುಮದ್ರವವಿಲಿಪ್ತೋರಸ್ಸ್ಥಳಂ: **ಪಂಪಭಾ,** ೩. ೮೫)

ಚಾರಚಕ್ಷು – [ನಾ] ಸಂಚರಿಸುವ ಕಣ್ಣು, ಅಂದರೆ ಗೂಢಚಾರ (ಅನ್ನೆಗಮಿತ್ತ ಸಂಚಳಿತ ಚಾರಚಕ್ಷುಗಳಿಂದಂ ಧರ್ಮಪುತ್ರಂ ಅಱಿದು: **ಪಂಪಭಾ,** ೧೩. ೩೦ ವ)

ಚಾರಣ – [ನಾ] [ಜೈನ] ಗಗನಗಾಮಿಯಾದ ಮುನಿ (ಒಂದು ದಿವಸಂ ಮಣಿಮಾಳಿ ರತಿಚಾರಣರೆಂಬ ಚಾರಣರನವಧಿಜ್ಞಾನಿಗಳಂ ಕಂಡಜಗರವೃತ್ತಾಂತಮಂ ಬೆಸಗೊಂಡು: **ಆದಿಪು,** ೨. ೧೫ ವ)

ಚಾರಣಗಣ – [ನಾ] [ಜೈನ] ಗಗನಗಾಮಿ ಸಂಚಾರಿಯಾಗಿ ಧರ್ಮೋಪದೇಶ ಮಾಡುವ ಅವಧಿಜ್ಞಾನವುಳ್ಳ ಮುನಿಗಳ ಸಮೂಹ (ದಾನಪ್ರಮೋದ ವಾಚಾಳಷಟ್ಚರಣ ಚಾರಣ ಗಣೋಚ್ಚಾರ ಝುಂಕಾರಜಯಾಶೀರ್ಘೋಷಮುಮಪ್ಪ ವಿಜಯಗಜದ ಬೆಂಗೆ ವಂದು: **ಆದಿಪು,** ೧೪. ೯೦ ವ)

ಚಾರಣಯುಗಳ – [ನಾ] [ಜೈನ] ಗಗನಗಾಮಿ ಮುನಿಗಳ ಜೋಡಿ (ಚಾರಣಯುಗಳಚರಣಯುಗಳಕ್ಕೆ ಕರಕಮಳಯುಗಳಮಂ ಮುಗಿದು ಬೀಳ್ಕೊಂಡು ತ್ವರಿತಗತಿಯಿಂ ಬರುತ್ತುಂ: **ಆದಿಪು,** ೨. ೪೪ ವ)

ಚಾರಿ – [ನಾ] ನಾಟ್ಯದಲ್ಲಿನ ಹೆಜ್ಜೆಯ ಒಂದು ಗತಿ (ಚರಣದ ಚಾರಿಯ ಚಲ್ಲಿಯ ಪರಿಕ್ರಮಕ್ರಮದ ಭಂಗಿಗಳ್ ನೆಗಟ್ವೆಡೆಯೊಳ್: **ಆದಿಪು,** ೯. ೩೯); ಸಂಕೋಲೆ (ವಿಟಜನಕ್ಕೆ ತೊಡರ್ವ ಚಾರಿಯೆನಿಪ ಸೂಳೆಗೇರಿಯಿಂ ವಿದಗ್ಧಹೃದಯಹಾರಿಯಿಂ: **ಪಂಪಭಾ,** ೧. ೫೮)

ಚಾರಿತ್ರ – [ನಾ] ನಡವಳಿಕೆ (ಮಣಿಕುಂಡಲಂ ಕವಚಂ ಮಣಿಯದ ಚಾರಿತ್ರಂ ಉಗ್ರತೇಜಮುಂ ಈ ಒಳ್ಗುಣಮುಂ ಕಲಿತನಮುಂ: **ಪಂಪಭಾ,** ೧೨. ೯೮)

ಚಾರಿತ್ರಶುದ್ಧ – [ನಾ] ಪರಿಶುದ್ಧ ನಡತೆಯುಳ್ಳವನು (ಪರಮಬ್ರಹ್ಮ ತನೂಭವರ್ ದ್ವಿಜವರರ್ ವರ್ಣೋತ್ತಮರ್ ಲೋಕಪೂಜ್ಯರ್ ಇಳಾವಲ್ಲಭಮಾನ್ಯರ್ ಉನ್ನತಗುಣರ್ ಚಾರಿತ್ರಶುದ್ಧರ್ ಧರಾಮರರ್ ಈ ಬ್ರಾಹ್ಮಣರ್: **ಆದಿಪು,** ೧೫. ೨೦)

ಚಾರಿಸು – [ಕ್ರಿ] [ಕತ್ತಿಯನ್ನು] ಝಳಪಿಸು, ಬಳಸಿಕೊ (ಚಾರಿಸಿ ಬಾಳಾಗಮಮಂ ಅವತಾರಂಗೆಯ್ದಂತೆ ಕಾಲದಂತಕನನೆ ಪೋಲ್ತು ಆರುತ್ತುಂ ಕವಿವ ಅದಟರಂ ಓರೊಂದೋರೊಂದೆ ಪೊಯ್ದು ಕೊಂದರ್ ಪಲರಂ: **ಪಂಪಭಾ,** ೧೦. ೮೩); [ಕ್ರಿ] ಚತುರತೆಯಿಂದ ನಡೆಸು (ಚಾರಿಸಿ ಬಾಳಾಗಮಮವತಾರಂಗೆಯ್ದು ಅಂತಕಾಲದಂತಕನನೆ ಪೋಲ್ತಾರುತ್ತುಂ ಕವಿವದಟರನೋರೊಂದೋರಂದೆ ಪೊಯ್ದು ಕೊಂದರ್ ಪಲರಂ: **ಪಂಪಭಾ,** ೧೦. ೮೩)

ಚಾರು – [ನಾ] ಸುಂದರವಾದ (ಚಾರು ವಿವಿಧಾಗ್ನಿಕಾರ್ಯ ಮಹಾದ್ವಿಜನ್ಮಘೋಷದಿಂ ಅಂಹೋದೂರಮುಮಂ ಅವನಿತಳಾಳಂಕಾರಂ ಸಂಸಾರಸಾರಂ ಗಂಗಾದ್ವಾರಂ: **ಪಂಪಭಾ,** ೪. ೧೫)

ಚಾರುತರ – [ಗು] ರಮಣೀಯವಾದ (ಚಾರುತರ ಯಜ್ಞವಿದ್ಯಾ ಪಾರಗರ ರವಂಗಳಿಂ ಸ್ವಧಾಕಾರ ವಷಟ್ಕಾರ ಸ್ವಾಹಾಕಾರ

ಓಂಕಾರಧ್ವನಿ ನೆಗೞ್ ನೆಗೞ್ದುದಾಹುತಿಧೂಮಂ: **ಪಂಪಭಾ,** ೬. ೩೪)

ಚಾಳಿಸು – [ಕ್ರಿ] ನಡುಗಿಸು, ಸೋಲಿಸು (ಅರಿನೃಪರಂ ಭೇದಿಸಿ ಪಾಂಚಾಳರಂ ಚಾಳಿಸಿ ಗಾಂಧರ್ವರಂ ವಿರಥರ್ಮಾಡಿ ಕೌಳಾಧೀಶರಂ ಸಾಧಿಸಿ ಕಿಂಪುರುಷರಂ ಕಾಪುರುಷರ್ಮಾಡಿ: **ಪಂಪಭಾ,** ೬. ೨೯ ವ)

ಚಿಂತಾಂತರ – [ನಾ] [ಚಿಂತಾ+ಅಂತರ] ಬೇರೆ ಚಿಂತೆ (ಶೋಕಾಗ್ನಿ ಪೊಂಪುಳಿವೋಗುತ್ತಿರೆ ಕರ್ಣನೆಂದಂ ಅನಿತೇಂ ಪೇೞಬ್ಬೆ ಚಿಂತಾಂತರಂ: **ಪಂಪಭಾ,** ೯. ೮೬)

ಚಿಂತಾಂತರಾಯ – [ನಾ] [ಚಿಂತಾ+ಅಂತರಾಯ] ಚಿಂತೆಯೆಂಬ ವಿಘ್ನ (ತಂತ್ರವಾಪ ಚಿಂತಾಂತರಾಯಪ್ರಾಯ ಸುಖಲವದೊಳೀ ಮಹೀತಳರಾಜ್ಯದೊಳ್ ನಿಜೆಸುವುದುಂ: **ಆದಿಪು,** ೮. ೮ ವ)

ಚಿಂತಾಕ್ರಾಂತೆ – [ನಾ] ಚಿಂತೆಗೆ ವಶವಾಗಿದ್ದವಳು (ಎಂದು ಚಿಂತಾಕ್ರಾಂತೆಯಾಗಿದ್ದ ಕುಂತಿಯಂ ಕಂಡು ಪಾಂಡುರಾಜಂ ಏಕಾಂತದೊಳಿಂತೆಂದಂ: **ಪಂಪಭಾ,** ೧. ೧೧೭ ವ)

ಚಿಂತಾಜನನಿ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲೊಂದಾದ ಕಾಕಿಣೀರತ್ನದ ಹೆಸರು (ಮಹಾಗುಹಾಗಹ್ವರಾಂತರ ಸೂಚೀನಿರ್ಭೇದ್ಯ ತಮಸ್ತಮೋ ನಿರಸನ ಪ್ರಭಾಭೂತ ಗುಣೋಪೇತಮಪ್ಪ ಚಿಂತಾಜನನಿ ಎಂಬ ಕಾಕಿಣೀರತ್ನಮುಂ: **ಆದಿಪು,** ೧೧. ೩ ವ)

ಚಿಂತಾಮಣಿ – [ನಾ] ಕೇಳಿದ್ದನ್ನು ಕೊಡುವ ದೇವಲೋಕದ ಮಣಿ (ಚಂದ್ರನಂತೆ ಸರ್ವಸತ್ತ್ವಸೌಮ್ಯರುಂ ಅನಿಲನಂತೆ ನಿಸ್ಸಂಗರುಂ ಚಿಂತಾಮಣಿಯಂತೆ ಭವ್ಯಜನಮನೋಭಿಲಷಿತ ಫಲಪ್ರದರುಂ: **ಆದಿಪು,** ೪. ೯೫ ವ); [ನಾ] ಒಂದು ಮದ್ಯದ ಹೆಸರು (ಮಾರೀಚಿ ತೊಡರ್ಪುಳಿಂದೆ ಸರದಿಂ ಕಂಪಿಲ್ಲ ಚಿಂತಾಮಣಿಗೇವುದಕ್ಕ ದಳಮಿಲ್ಲ ಈ ಕಕ್ಕರಕ್ಕಿಂತುಟಪ್ಪುದು ಕಳ್ಳಪ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮಂ ಕಾಂತೆಯರ್: **ಪಂಪಭಾ,** ೪. ೮೮)

ಚಿಂತಿಸುತ್ತುಂ – ಆಲೋಚನೆ ಮಾಡುತ್ತ (ಎಂದು ಚಿಂತಿಸುತ್ತುಂ ಪೊೞಲ್ಗೆ ಮಗುೞ್ದು ವಂದು ಗಾಂಗೇಯ ಧೃತರಾಷ್ಟ್ರ ವಿದುರರ್ಕಳ್ಗೆ ತದ್ವೃತ್ತಾಂತಮೆಲ್ಲಮಂ ಪೇೞ್ದು: **ಪಂಪಭಾ,** ೧. ೧೧೩ ವ)

ಚೀಃ – [ಅ] ಥೂ ಎಂಬ ತಿರಸ್ಕಾರಸೂಚಕ ಉದ್ಗಾರ (ಬಗೆಗೊಂಡ ಕುಲಧನಂ ಸಮದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ಬಂ ಪಗೆವಂಗೆ ಕೊಟ್ಟು ಚೀಃ ಕೆಮ್ಮಗೆ ಬೆಸೆವವಂ ಅರಸದೆಂತೊ ಪಗರಣದರಸಂ: **ಆದಿಪು,** ೧೨. ೯೮)

ಚಿಚ್ಚೆ – [ನಾ] ದಟ್ಟಣೆ (ಈ ಧರಾಭರಮನಶೇಷಮಂ ನಿಜತನೂಭವರ್ಗೀವದೆ ಪಚ್ಚುಕೊಟ್ಟು ಭೋಂಕರಿಸುವ ದೇವಕೋಟಿಗಳ ಚಿಚ್ಚೆಗಳೊಳ್ ತೊಡರ್ದೇಕೆ ಪೋಪಂ: **ಆದಿಪು,** ೯. ೭೫) (ಟಿಪಿವೆಂ ಅವರ ಆವೃತ್ತಿಯಲ್ಲಿ **'ಚಿಚ್ಚೆಗಳೊಳ್'** ಬದಲು **'ಬಿಜ್ಜೆಗಳೊಳ್'** ಎಂಬ ರೂಪ]

ಚಿಟ್ಟೆ – [ನಾ] ಮಿಡಿತೆ (ಕೊಳ್ ಕೊಳ್ಳೆಂದು ಎಚ್ಚೊಡೆ ವಿಳಯ ಉಳ್ಕದ ತೆಱದಿಂದೆ ಮುಸುಱೆ ದಿವ್ಯಾಸ್ತ್ರಚಯಂಗಳ್ ಕೊಳೆ ಗಾಂಧರ್ವಬಲಂಗಳ್ ಕೆಡೆದುವು ನಿಟ್ಟೆಗೊಂಡ ಚಿಟ್ಟೆಯ ತೆಱದಿಂ: **ಪಂಪಭಾ,** ೭. ೩೮)

ಚಿತಾನಳ – [ನಾ] ಚಿತೆಯ ಬೆಂಕಿ (ಆ ಜಯದ್ರಥನ ಚಿತಾನಳನಿಂದಂ ಒಗೆದ ಪೊಗೆಗಳ್ ಕೊಳೆ ಸುರಿವೊಡೆ ಸುರಿವುವು ಎನ್ನ ನಯನಜಲಂಗಳ್: **ಪಂಪಭಾ,** ೧೧. ೧೧೯)

ಚಿತ್ತಂಗೊಳ್ – [ಕ್ರಿ] ಮನಸ್ಸಿಡು (ಕೇಳೀವನಪಾದಪಂಗಳಿರ ಚಿತ್ತಂಗೊಂಡು ಬೀೞ್ಕೊಂಡು ರಾಗದೆ ನಿಮ್ಮಂ ಬಲಗೊಂಡು ಪೋಪ ಗುಣಮಮಂ ಕೊಳ್ಳಿಂ ಮನಃಪ್ರೀತಿಯಿಂ: **ಆದಿಪು,** ೧೧. ೧೩೪)

ಚಿತ್ತಜ – [ನಾ] [ಜೈನ] ಬಾಹುಬಲಿಯ ಅನೇಕ ಹೆಸರುಗಳಲ್ಲಿ ಒಂದು (ಚಿತ್ತಜಂ ಚಿತ್ತಭವಂ .. .. ನೆಗೞ್ದುವು ಬಾಹುಬಲಿಗೆ ಪಲವುಂ ಪೆಸರ್ಗಳ್: **ಆದಿಪು,** ೮. ೫೩)

ಚಿತ್ತಭವ – [ನಾ] ಬಾಹುಬಲಿಯ ಒಂದು ಹೆಸರು (ಚಿತ್ತಭವಂ .. .. ಅಂಗಜನೆನೆ ನೆಗೞ್ದುವು ಬಾಹುಬಲಿಗೆ ಪಲವುಂ ಪೆಸರ್ಗಳ್: **ಆದಿಪು,** ೮. ೫೩)

ಚಿತ್ತಭೂ – [ನಾ] ಮನ್ಮಥ (ಚಿತ್ತಭೂವಶೆಯೊರ್ಬಳ್ ಮನುವಂಶಚಂದ್ರ ಮುಖಚಂದ್ರಾಲೋಕದಿಂ ಚಂದ್ರಕಾಂತಾಶಿಲಾಪುತ್ರಿಕೆಯಂತೆ ಒಸರ್ತುಂ: **ಆದಿಪು,** ೧೧. ೧೮)

ಚಿತ್ತವಿಕಾರಕಾರಿ – [ನಾ] ಮನಸ್ಸನ್ನು ವಿಕಾರಗೊಳಿಸುವಂತಹ (ವನಿತಾಚಿತ್ತವಿಕಾರಕಾರಿ ನೆಱೆದತ್ತೀಗಳ್ ಕುಮಾರಂಗೆ ಯೌವನಂ: **ಆದಿಪು,** ೮. ೭)

ಚಿತ್ತವೃತ್ತಿ – [ನಾ] ಮನೋಭಾವ (ಆದಿಭಟ್ಟಾರಕನ ಚಿತ್ತವೃತ್ತಿಯಂ ಆ ಮಹಾತ್ಮನಾವ ಮಾೞ್ಕೆಯೊಳ್ ಅಱೆದನೆಂದು: **ಆದಿಪು,** ೧೦. ೭ ವ)

ಚಿತ್ತಶಯಾಕ್ರೀಡ – [ನಾ] ರತಿಕ್ರೀಡೆ (ಕೊಳಗೊಂಡಾ ನೀರೊಳರ್ದಿರ್ದು ಚಿತ್ತಶಯಾಕ್ರೀಡಸರೋವತೀರ್ಣ ರತಿಯೊಂದಾಕಾರಮಂ ತಾಳ್ದಿದಳ್: **ಆದಿಪು,** ೧೧. ೧೮)

ಚಿತ್ತಸ್ಖಲನೆ – [ನಾ] ಮನಸ್ಸಿನ ಸ್ಥಿರತೆ ಸಡಿಲಗೊಳ್ಳುವುದು (ರಾಜರಾಜಂ ಸೈರಿಸದೆ ಚಿತ್ತಸ್ಖಲನೆಯಾಗೆ ಜಳಸ್ತಂಭಮಂತ್ರಮೆಲ್ಲಂ ಮಾಯಾಮಂತ್ರಮಾಗೆ: **ಪಂಪಭಾ,** ೧೩. ೮೦ ವ)

ಚಿತ್ತಾರಿ – [ನಾ] [ಚಿತ್ರಕಾರಿ] ಚಿತ್ರಕಾರ (ಸೊಗಯಿಸುವ ಸಾಮಂತ ಚೂಡಾಮಣಿಯ ಮೆಯ್ಯ ಬಣ್ಣಂ ವಿಧಾತ್ರನೆಂಬ ಚಿತ್ತಾರಿಯ ವರ್ಣಕ್ರಮಂಗೆಯ್ದ ಕದಳೀಗರ್ಭಶ್ಯಾಮಮೆಂಬ ಬಣ್ಣದಂತಾದುದು: **ಪಂಪಭಾ,** ೨. ೩೯ ವ)

ಚಿತ್ತೆಯ ಸರಿ – [ನಾ] ಚಿತ್ರಾ ನಕ್ಷತ್ರದಲ್ಲಿ ಬರುವ ಮಳೆ (ಪುಷ್ಪವರ್ಷಮೊರ್ಮೆಯೆ ಸಕಲೋರ್ವಿಯನೆಯ್ದೆ ಪರ್ವುತಿರೆ ಚಿತ್ತೆಯ ಸರಿಯಂತೆರಗಿ ಪೋದುದಮರಸಮಾಜಂ: **ಆದಿಪು,** ೧೪. ೧೪೭)

ಚಿತ್ರ – [ನಾ] ಆಕರ್ಷಕವಾದ (ಅದೇನಚ್ಚರಿಯೋ ಚಿತ್ರದ ರೂಪು ರೂಪವಿಭವಂ ಮುಕ್ತ್ಯಾಂಗನಾಕಾಂತನಾ: **ಆದಿಪು,** ೮. ೫)

ಚಿತ್ರಕ – [ನಾ] ವರ್ಣಚಿತ್ರಗಾರ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ಚಿತ್ರಕರ್ಮ – [ನಾ] ಚಿತ್ರಕಲೆ (ಚಿತ್ರಕರ್ಮ ಪತ್ರಚ್ಛೇದ ಗ್ರಹಗಣಿತ ರತ್ನಪರೀಕ್ಷೆಗಳೊಳಂ: **ಪಂಪಭಾ,** ೨. ೩೪ ವ)

ಚಿತ್ರಕಳಾಪ – [ನಾ] ಚಿತ್ರರಚನೆ (ಹಸ್ತಕೌಶಲಕಳಿತಮಪ್ಪ ಚಿತ್ರಕಳಾಪ ಪರಿಚ್ಛೇದ್ಯಾದಿ ಸಮನ್ವಿತಮಪ್ಪ ಶಿಲ್ಪಮುಮಂ: **ಆದಿಪು**, ೮. ೬೪ ವ)

ಚಿತ್ರಕಳೆ – [ನಾ] ಚಿತ್ರಗಳನ್ನು ರಚಿಸುವ ವಿದ್ಯೆ (ವೃಷಭಸೇನಂಗೆ ಗೀತವಾದ್ಯಾರ್ಥಸಂಗ್ರಹಮಪ್ಪ ಗಾಂಧರ್ವಶಾಸ್ತ್ರಮುಮಂ ಅನಂತವೀರ್ಯಂಗೆ ವಿಚಿತ್ರ ಚಿತ್ರಕಳೆಯುಮಂ ವಾಸ್ತುವಿದ್ಯೆಯುಮಂ: **ಆದಿಪು**, ೮. ೬೦ ವ)

ಚಿತ್ರಕೇತುವೃಂದ – [ನಾ] ಬಣ್ಣ ಬಣ್ಣದ ಧ್ವಜಗಳ ಸಮೂಹ (ಕುದುರೆಯ ಬಣ್ಣದಿಂ ರಥದ ತೋರ್ಕೆಯಿಂ ಎತ್ತಿದ ಚಿತ್ರಕೇತುವೃಂದದ ಕುಱುಪಿಂದ ಉದಗ್ರ ರಥಚೋದಕಚಿಹ್ನದಿಂ ಈತನೆಂಬುದಂ ಅಱಿದು: **ಪಂಪಭಾ**, ೧೦. ೮೭)

ಚಿತ್ರಭಿತ್ತಿ – [ನಾ] ಚಿತ್ರಗಳಿರುವ ಗೋಡೆ (ಇಂದ್ರನೀಲದ ಭದ್ರದೊಳಂ ಕರ್ಕೇತನದ ಜಾಳರಿಗೆಯೊಳಂ ಪಳುಕಿನ ಚಿತ್ರಭಿತ್ತಿಯೊಳಂ ವಿವಾಹಗೇಹಮಂ ಸಮೆಯಿಸಿ: **ಪಂಪಭಾ**, ೩. ೩೪ ವ)

ಚಿತ್ರರತ – [ನಾ] ಅಸಹಜ ರತಿ (ಕಣ್ಗೊಳೆ ಸವಿಯಂ ಪುದುಂಗೊಳಿಪ ಚಿತ್ರರತಂಗಳ ಭಂಗಿಗಳ್: **ಆದಿಪು**, ೨. ೭೧)

ಚಿತ್ರವೇತ್ರ – [ನಾ] ಬಣ್ಣಬಣ್ಣದ ಕೋಲು (ಎಡೆಗೋದಿರದಿರಿಂ ಉದ್ದಂ ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಮಿರ್ಪೆಡೆಯೊಳಿರಿಂ ನೀಮಱಿವಿರ್ ಮಿಡುಕಿದೊಡೆ ಎನೆ ಚಿತ್ರವೇತ್ರದಂಡಧರರ್ಕಳ್: **ಆದಿಪು**, ೯. ೬)

ಚಿತ್ರಾಂಗದವಿಮಾನ – [ನಾ] [ಜೈನ] ಸ್ವರ್ಗಲೋಕದ ಒಂದು ಸ್ಥಳದ ಹೆಸರು (ಶಾರ್ದೂಲಾರ್ಯನುಂ ಚಿತ್ರಾಂಗದ ವಿಮಾನದೊಳ್ ಚಿತ್ರಾಂಗದಾಮರನಾದಂ;: **ಆದಿಪು**, ೫. ೭೦ ವ)

ಚಿತ್ರಾವಳಿ – ಬಣ್ಣಬಣ್ಣದ ಬಟ್ಟೆ (ಪಟಿ ಚಿತ್ರಾವಳಿ ಜೋನೆಗವಟಿಯಂ ದೇವಾಂಗಮೆಂಬ ವಸನಂಗಳನೇಂ: **ಆದಿಪು**, ೫. ೩೪)

ಚಿತ್ರಿಸು – [ಕ್ರಿ] ಚಿತ್ರವನ್ನು ರಚಿಸು (ಕಾಲ್ತುಱು ಮಸಗಿದಂತೆ ಮಸಗಿದ ದುರ್ಧರ ಧನುರ್ಧರಬಲಮುಮಂ ಶ್ವೇತ ಭೀಷ್ಮರ ಪೇಲ್ದಿ ಓಜೆಯೊಳೆರಡುಂ ಪಡೆಗಳ ಪಡೆವಳರ್ಕಳ್ ಕುರುಕ್ಷೇತ್ರದೊಳ್ ಚಿತ್ರಿಸಿದಂತೆ ಒಡ್ಡಿ ನಿಂದಾಗಳ್: **ಪಂಪಭಾ**, ೧೦. ೫೧ ವ)

ಚಿತ್ರೆ – [ನಾ] [ಜೈನ] ಒಬ್ಬ ದೇವತಾಸಿ, ರುಚಿಕಾಚಳದಲ್ಲಿ ವಿಹರಿಸುವ ಎಂಟು ಮಂದಿ ದಿಗಂಗನೆಯರಲ್ಲಿ ಒಬ್ಬಳು (ಕೂಟಾಷ್ಟಕಂಗಳೊಳ್ ರಮಿಯಿಸುವ ಸುಪ್ರತಿಷ್ಟಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬೆಣ್ಬರುಂ ದಿಗಂಗನೆಯರಂ: **ಆದಿಪು**, ೭. ೩ ವ)

ಚಿನ್ನ – [ನಾ] ಹೊನ್ನು (ಚಿನ್ನದ ಸವಂಗಂ ಅಪೂರ್ವದ ಮೊಚ್ಚೆಯಂ .. .. ಒಪ್ಪೆ: **ಪಂಪಭಾ**, ೯. ೧೦೩)

ಚಿನ್ನಪೂ – [ನಾ] ಹೂವಿನಾಕಾರದ ಚಿನ್ನದ ಆಭರಣ (ಕೆನ್ನೆಗಳನೊಯ್ಯನೆ ನೀವುವ ಚಿನ್ನಪೂವನೋಸರಿಸುವ ಹಾರಮಂ ಪಿಡಿದು ನೋಡುವ: **ಪಂಪಭಾ**, ೩. ೭೭)

ಚಿರಂ – [ಅ] ಸ್ಥಿರ (ಪೊಸನನೆಯೊಳ್ ಪಸುರ್ಪು ಅಲರೊಳಂ ಚಿರಮಲ್ಲದ ಬೆಳ್ಪು ಪಲ್ಲವಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು: **ಆದಿಪು**, ೧. ೬೬)

ಚಿರಾತ್ – ಬಹುಕಾಲಾನಂತರ (ಮಹಾಕ್ಷಮಾಶೌರ್ಯಯೋಃ ಚಿರಾತ್ ಪ್ರಥಮಸಂಗಮೋ ಹರಿಗಭೂಪತೌ ದೃಶ್ಯತೇ: **ಪಂಪಭಾ**, ೧೪. ೩೦)

ಚಿವುಳಿದುಟಿ – [ಕ್ರಿ] ಚಿಗುಳಿಯನ್ನು ತುಳಿ (ಸುಪ್ರತೀಕಂ ಕೆಯ್ಯ ಕಾಲ ಕೋಡ ಏಱಿನೊಳ್ ಬಲಮನೆಲ್ಲಂ ಜವನೆ ಚಿವುಳಿದುಟಿವಂತೆ ತೊಟ್ಟುಟಿದುಟಿದು: **ಪಂಪಭಾ**, ೧೧. ೭೨ ವ)

ಚಿಹ್ನಿತ – [ಗು] ಗುರುತುಳ್ಳ (ಅರಿನೃಪಾಲಮೌಳಿಮಣಿಯೊಳ್ ನೆಲೆಗೊಂಡುದು ಶಂಖಚಕ್ರಚಾಮರಹಳಚಿಹ್ನಿತಪದಾಕೃತಿ: **ಪಂಪಭಾ**, ೬. ೨೯)

ಚೀತ್ಕಾರ – [ನಾ] ಕಿರುಗುಟ್ಟುವಿಕೆ (ಮಾರುತಘಾತ ಸಂಚಳಿತ ಕೇತುಸಮೂಹಂ ಉದಗ್ರ ಚಕ್ರಚೀತ್ಕಾರಂ ಉದಾರ ವೀರಭಟಸಿಂಹನಾದವಿಮಿಶ್ರಿತ ಉತ್ಕಟಜ್ಯಾರವಂ: **ಪಂಪಭಾ**, ೧೦. ೮೫)

ಚೀನ – [ನಾ] ರೇಷ್ಮೆಯ ಬಟ್ಟೆ (ಸಾಹಿಯಾಣದ ಚೀಣದ ಧವಳವಟ್ಟದ ಧರ್ಮದ ಜೊಂಗದ ದೇವಾಂಗದ ಸಕಳವಟ್ಟೆಗಳುಮಂ: **ಆದಿಪು**, ೪. ೩೪ ವ)

ಚೀನಾಂಶುಕ – [ನಾ] ಚೀನಾಂಬರ (ಚೀನಾಂಶುಕ ರುಚಿರಂಗಳಂ .. .. ಉತ್ಕಳಖೇಟಮಂ ಪುಗುವಾಗಳ್: **ಆದಿಪು**, ೪. ೫೮ ವ)

ಚುಂಬಿಸು – [ಕ್ರಿ] ಮುತ್ತಿಡು (ತಾವರೆಯೆ ಗೆತ್ತು ಮುಖಾಬ್ಜಮನೊಂದು ತುಂಬಿ ಚುಂಬಿಸೆ: **ಪಂಪಭಾ**, ೫. ೬೩)

ಚುನ್ನಕ – [ನಾ] ನಿಂದಕ (ನಿನ್ನ ಸಂಪದ ನೋಡಲಾಱದೆ ಚಿನ್ನಭಿನ್ನವ ಮಾಡಿ ಕೆಡಿಸುವ ಚುನ್ನಕರ ನುಡಿವಿಡಿಯದೆ: **ಆದಿಪು**, ೧೦. ೫)

ಚುರ್ಚು – [ಕ್ರಿ] ತಿವಿ (ಉರಿವ ಕೈದೀವಿಗೆಗಳೊಳ್ ಮೊಗಮಂ ಚುರ್ಚುವರುಂ: **ಆದಿಪು**, ೫. ೮೫ ವ)

ಚುಳುಕಪಾನ – [ನಾ] ಆಪೋಶನ (ಸಂತಪ್ತಜಲ ಪ್ರತ್ಯೇಕ ಚುಳುಕಪಾನಮಾತ್ರ ಜಾನುದಘ್ನ ಜಲದುರ್ಗನುಮಾಗಿ ನಡೆದು: **ಆದಿಪು**, ೧೪. ೫೨. ವ)

ಚೂಚುಕ – [ನಾ] ಮೊಲೆತೊಟ್ಟು (ಪೊಂಗೊಡನಂ ತಮಾಳಪಲ್ಲವದೊಳೆ ಮುಚ್ಚಿದಂದದೊಳೆ ಚೂಚುಕಮಾಂತುದು ಕರ್ಪನಾಕೆಯಾ: **ಪಂಪಭಾ**, ೧. ೧೨೫)

ಚೂಡಾಮಣಿ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲೊಂದಾದ ಮಣಿರತ್ನದ ಹೆಸರು (ಚಕ್ರವರ್ತಿಯ ಮಣಿಮಕುಟಶಿಖರಾಯಮಾನಮಪ್ಪ ಚೂಡಾಮಣಿಯೆಂಬ ಮಣಿರತ್ನಮುಂ: **ಆದಿಪು**, ೧೧. ೩ ವ)

ಚೂತಕುಜಾತ – [ನಾ] ಮಾವಿನ ಮರ (ಎಳೆವಿಸಿಲೀಗಳೀಗಳೆ ಮುದಿರ್ದುದು ಚೂತಕುಜಾತಮೀಗಳೀಗಳೆ ನನೆದೋಱಿತು: **ಆದಿಪು**, ೧೩. ೫)

ಚೂತಪಲ್ಲವ – [ನಾ] ಮಾವಿನ ಚಿಗುರು (ಮಲಯಾನಿಲನೂಡೆ ತೆರಳ್ವ ಚೂತಪಲ್ಲವದ ತೆರಳ್ಕೆ ತದ್ವನವಿಲಾಸಿನಿಯುಟ್ಟ ದುಕೂಲದೊಂದು ಪಲ್ಲವದ ತೆರಳ್ಕೆ: **ಪಂಪಭಾ,** ೨. ೧೪)

ಚೂತಭೂಜಾರಾಮ – [ನಾ] [ಚೂತಭೂಜ+ಆರಾಮ] ಮಾವಿನ ತೋಪು (ಸಕಲದಿಕ್ತ್ರಚಳಿತ ರಾಜಪುತ್ರಮಯೂರಾತಪತ್ರ ನಿಚಯಮೆ ಸಂಚಾರೀಭೂತ ಚೂತಭೂಜಾರಾಮಮಾಗೆ: **ಆದಿಪು,** ೧೩. ೬ ವ)

ಚೂತಲತಿಕೆ – [ನಾ] ಮಾವಿನ ಎಳಗೊಂಬೆ (ಅಂಕುರ ಪಲ್ಲವ ಕುಸುಮಾಳಂಕಾರದ ಚೂತಲತಿಕೆ ನರ್ತಕಿವೋಲ್ ತನ್ನಂಕುರದಿಂ ಶಾಖೆಯಿಂ ಏನಂಕುರಶಾಖಾಭಿನಯಮಂ ಅಭಿನಯಿಸಿದುದೋ: **ಆದಿಪು,** ೧೧. ೯೪)

ಚೂತಲತೆ – [ನಾ] ಮಾವಿನ [ಬಳ್ಳಿ] ಎಳೆಗೊಂಬೆ (ಎಲ್ಲಿಯುಂ ಮೆಯ್ಯನಾಜಿಸಲಾಱದೆ ಪೂತ ಚೂತಲತೆಗಳೊಳ್ ತಳ್ವೊಯ್ದು ಪೊಸಮುತ್ತಿನ ಬಾಸಣಿಗೆಯೊಳ್ ಬಾಸಣಿಸಿದ ಬಿರಿಮುಗುಳ್ಗಳೊಳ್ ತುಱುಗಿದ: **ಪಂಪಭಾ,** ೫. ೫ ವ)

ಚೂರ್ಣನೀಯ – [ಗು] ಪುಡಿಯಾಗುವ (ಅನಿಷ್ಠುರೋಷ್ಠಪುಟಮಧ್ಯ ಸಂಧಾರಣಮಾತ್ರ ಚೂರ್ಣನೀಯ ಶಾಕವರ್ತಿಕಮುಮಂ: **ಆದಿಪು,** ೧೧. ೨೬ ವ)

ಚೂಷಿತಕ – [ನಾ] ಚೀಪಿ ಚಪ್ಪರಿಸುವುದು (ಮಧುರ ಸೀತ್ಕೃತ'ನಾದದೊಳುಣ್ಮೆ ಪೊಣ್ಮೆ ಚೂಷಿತಕಮಂ ಔಪ'ರಿಷ್ಟಕರತಂಗಳ ಭೇದದೊಳ್: **ಆದಿಪು,** ೧೧. ೯೯)

ಚೂಳಿಕಾ – [ನಾ] ಕೇಶ, ತಲೆ (ಚೂಳಿಕಾಭಾಗದಾದಿಯೊಳ್ ನಿಂದಪುದು ಊರ್ಧ್ವಲೋಕಂ ಎನೆ ಮೂಲೋಕಕ್ಕೆ ಪೆಂಪಿಂದಂ ಅಗುಂದಲೆಯಾಗಿರ್ದುದು: **ಆದಿಪು,** ೧. ೫೦); ಆನೆಯ ಕಿವಿಯ ತಳ (ಉತ್ಕೃಷ್ಟಾವಿಪುಳ ಚೂಳಿಕಾ ದುಂದುಭಿನಿರ್ಘೋಷ ಕರ್ಣನುಂ: **ಆದಿಪು,** ೧೨. ೫೬ ವ)

ಚೂಳಿಕಾವರ್ಧನ – [ನಾ] ಸೀಮಂತ (ಚೂಳಿಕಾವರ್ಧನ ಮಾಂಗಲ್ಯಂ ಬಳಾಕಕ್ಕೆಸೆಯೆ .. .. ಘೂರ್ಣಿಸಿದುದು ಅಭಿನವಾಂಭೋದ ಗಂಭೀರನಾದಂ: **ಪಂಪರಾ,** ೭. ೧೫೦)

ಚೂಳಿಕಾಭಾಗ – [ನಾ] ತುದಿ, ಮೇಲ್ಭಾಗ (ಚೂಳಿಕಾಭಾಗದೊಳ್ ನಿಂದಪುದು ಊರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದಗುಂದಲೆಯಾಗಿರ್ದುದು: **ಆದಿಪು,** ೧. ೫೦)

ಚೂಳಿಕೆ – [ನಾ] [ಜೈನ] ಜಲಗತ, ಸ್ಥಲಗತ, ಮಾಯಾಗತ, ರೂಪಗತ ಮತ್ತು ಗಗನಗತ ಎಂಬ ಐದು ಸೂತ್ರಗಳು (ಪದಿನಾಲ್ಕು ಪೂರ್ವಂಗಳುಮಂ ಅಯ್ದು ಚೂಳಿಕೆಯುಮಂ ಆಱವಧಿಯುಮಂ ಪೆಸರ್ಗೊಂಡು: **ಆದಿಪು,** ೩. ೪೦ ವ)

ಚೆಂದೆಂಗು – [ನಾ] ಕೆಂಪು ಕಾಯಿಗಳ ತೆಂಗು (ತೂಗಿ ಪಣ್ಗೊಲೆಯಿಂ ಬಳ್ಕುವ ಕೌಂಗು ಕಾಯ್ದುಱುಗಲಂ ಪೇಱಿರ್ದ ಚೆಂದೆಂಗು: **ಆದಿಪು,** ೧. ೬೭)

ಚೆಂಬೊನ್ – [ನಾ] ಚಿನ್ನ (ಗಟ್ಟಿಸಿ ಸೆಂದುರದೊಳ್ ನೆಲಗಟ್ಟಿಸಿ ಚೆಂಬೊನ್ನ ನೆಲೆಯ ಚೌಪಳಿಗೆಗಳೊಳ್ ಕಟ್ಟಿಸಿ ಪಟಯಿಗೆಗಳಂ ಅಳವಟ್ಟಿರೆ ಬಿಯಂ ಅಲ್ಲಿ ಮೊಟಗೆ ಪಲವುಂ ಪಱೆಗಳ್: **ಪಂಪಭಾ,** ೨. ೬೬)

ಚೆಚ್ಚರಂ – [ಅ] ಥಟ್ಟನೆ (ಪೊಲಸುನಾಱುವ ಮೆಯ್ಯನೆ ಕರ್ಚಲೆಂದು ಚೆಚ್ಚರಂ ಅಪರಾಂಬುರಾಶಿಗೆ ಇಱಿವಂತೆ ಇೞಿದಂ ಕಮಳೈಕಬಾಂಧವಂ: **ಪಂಪಭಾ,** ೧೧. ೫೧)

ಚೆಚ್ಚರಿಕೆ – [ನಾ] ಛಕ, ಚಟುವಟಿಕೆ (ಚಯ್‌ಚಯ್ಯೆಂಬಾಗಳ್ ಮೆಯ್ ಮೆಯ್ ಚಲದಿಂ ಮುಟ್ಟಿ ಪೊಣರ್ದು ತಳ್ತಿಱಿವ ಉರ್ಕಿಂ ಕೆಯ್ ಚೆಚ್ಚರಿಕೆಯ ಚಲದಿಂ ಕೆಯ್ ಚಳಿವಿನೆಗಂ ಇಱಿದರ್ ಎರಡು ಬಲದೊಳಂ ಅದಟರ್: **ಪಂಪಭಾ,** ೧೩. ೩೪)

ಚೆನ್ನ – [ನಾ] ಶೂರ (ಬಿರುದರಂ ಒತ್ತಿ ಬೀರರಂ ಅಡಂಗಿಸಿ ಕೊಂಕಿಗರಂ ಕಟಲ್ಚಿ ಚೆನ್ನರಂ ಅಡಿಗೊತ್ತಿ ಮಂಡಳಿಕರಂ ಬೆಸಕಯ್ಸಿ .. .. ಮಾಡಿರೆ ರಾಜಸೂಯಮಂ: **ಪಂಪಭಾ,** ೭. ೧೮); [ನಾ] ಚೆಲುವ (ಬೆರಲೊಳ್ ಬೀಣೆಯ ತಂತಿಗಳ್ ಒರಸಿದ ಕೆಂಗಲೆಗಳ್ ಅಕ್ಷಮಾಲೆಯೊಳ್ ಎಸೆದಂತಿರೆ ಪೊಸೆಯೆ ಮುತ್ತು ಪವಳಂ ಬೆರಸಿದವೊಲಾಯ್ತು ಚೆನ್ನ ತಪಸಿಯ ಕೆಯ್ಯೊಳ್: **ಪಂಪಭಾ,** ೬. ೧೦)

ಚೆನ್ನಗನ್ನಡಿ – [ನಾ] ಚೆಲುವಾದ ಕನ್ನಡಿ (ಚೇಟಿಕೆ ಬೀಸುವ ಕುಂಚಮೆಯ್ದೆ ಮೆಯ್ದೋಱುವ ಗಾಡಿ ಕಾಂಚನದ ದಂಡದ ಸೀಗುರಿ ನೋಟಕ್ಕೊಡೆ ಆರುಮಂ ಮಾಱಿ: **ಪಂಪಭಾ,** ೯. ೧೦೦)

ಚೆನ್ನಪೂ – [ನಾ] ಸುಂದರವಾದ ಹೂ (ದೇಸಿಯನಾವಗಮೀವ ಚೆನ್ನಪೂಗಳನೆ ಅವನೊಯ್ಯನೋಸರಿಸುತುಂ: **ಪಂಪಭಾ,** ೨. ೧೭)

ಚೆನ್ನಪೊಂಗ – [ನಾ] ವೀರ (ಅದಟರ ಚೆನ್ನಪೊಂಗರ ಸಬಂಗಳ ತೊಟ್ಟುಚಿಯೊಳ್ ತೊಡಂಕಿ ನಿಲ್ಲದೆ ಪೊಱಮಟ್ಟ ತಮ್ಮ ಮನದೊಳ್ ಮಿಗೆ ಬೆಚ್ಚಿಸಿದಂತೆ ತೋಱುವ: **ಪಂಪಭಾ,** ೮. ೧೦೪)

ಚೆನ್ನಿಗ – [ನಾ] ಚೆಲುವ (ಬಂದ ಚೆನ್ನಿಗರುಮಂ ಆಸೆಕಾಱರುಮಂ ಒಲ್ಲದೆ ಚೆಲ್ವಿಡಿದಿರ್ದ ರೂಪು ದೃಷ್ಟಿಗೆ ವರೆ ಪಾಂಡುರಾಜನನೆ ಕುಂತಿ ಮನಂಬುಗೆ ಮಾಲೆಸೂಡಿದಳ್: **ಪಂಪಭಾ,** ೧. ೧೦೬)

ಚೆನ್ನೆಯ್ದಿಲ್ – [ನಾ] ಕೆಂಪು ನೈದಿಲೆ (ಉಳ್ಳಲರ್ದ ಚೆನ್ನೆಯ್ದಿಲ್ಗೊಳಂ ತೂಗಿ ಪಣ್ಗೊಲೆಯಿಂ ಬಳ್ಕುವ ಕೌಂಗು: **ಆದಿಪು,** ೧. ೬೭)

ಚೆಲ್ಲಂಬೆರಸು – [ಕ್ರಿ] ಚೆಲ್ಲಾಟದಿಂದ ಕೂಡು (ಅಂತು ನೋಡಿ ಕಡೆಗಣ್ಣ ಚೆಲ್ಲಂಬೆರಸು ಸೂಸುವ ವಾಸವಸ್ತ್ರೀಯರ ಮುಖಾಬ್ಜಾಸವ ಸಂಬಂಧಿಗಳಪ್ಪ ಶೇಷಾಕ್ಷತಂಗಳಂ ಈಶ್ವರನಂ ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ವಂತೆ ಸೇಸೆಗೊಳ್ಳುತ್ತುಂ: **ಪಂಪಭಾ,** ೮. ೨೭ ವ)

ಚೆಲ್ವನಾಗು – [ಕ್ರಿ] ಚೆಲುವಾಗು (ಬಿಯಂ ಆರೆರ್ದೆಗಂ ಬರೆ ಬರ್ಪ ಪಾಂಗು ಅಗುರ್ವಾಗಿರೆ ಚೆಲ್ವನಾಯ್ತು ಅರಬೊಜಂಗರ ಲೀಲೆ ಸುರೇಂದ್ರಲೀಲೆಯಿಂ; **ಪಂಪಭಾ,** ೪. ೮೭)

ಚೆಲ್ವಿಡಿದಿರ್ – [ಕ್ರಿ] ಸೊಗಸು ತುಂಬಿಕೊಳ್ಳು (ಬಂದ ಚೆನ್ನಿಗರುಮಂ ಆಸೆಕಾಱರುಮನೊಲ್ಲದೆ ಚೆಲ್ವಿಡಿದಿರ್ದ ರೂಪು ದೃಷ್ಟಿಗೆ ವರೆ ಪಾಂಡುರಾಜನನೆ ಕುಂತಿ ಮನಂಬುಗೆ ಮಾಲೆಸೂಡಿದಳ್: **ಪಂಪಭಾ,** ೧. ೧೦೬)

ಚೆಲ್ವೋಡು – [ಕ್ರಿ] ಸುಕ್ಕಾಗು, ಅಂದಗೆಡು (ಬಾಡದ ಬಾಸಿಗಂ ಉಡೆ ಚೆಲ್ವೋಡದ ದಿವ್ಯಾಂಬರಮಂ ಮನಂಗೊಳೆ: **ಆದಿಪು,** ೬. ೪೦)

ಚೇಟಿಕೆ – [ನಾ] ದಾಸಿ (ಚೇಟಿಕೆ ಬೀಸುವ ಕುಂಚಂ ಎಯ್ದೆ ಮೆಯ್ದೋಱುವ ಗಾಡಿ ಕಾಂಚನದ ದಂಡದ ಸೀಗುರಿ ನೋಟಕ್ಕೊಡೆ ಆರುಮಂ ಮಾಱಿ ಮನೋಜನ ಒಡ್ಡು ಎನಿಸಿದರ್: **ಪಂಪಭಾ**, ೯. ೧೦೦)

ಚೇತೋಜವಹರಿ – [ಗು] ಮನೋವೇಗದಲ್ಲಿ ಸಾಗುವ (ಪ್ರವೀರಪುರುಷ ಪ್ರತಿಷ್ಠಿತಂಗಳ್ ಚೇತೋಜವಹರಿ ಯೋಗ್ಯಂಗಳ್ ತಳರ್ದುವಾಗಳ್ ಎಂಬತ್ತುನಾಲ್ಕು ಲಕ್ಕೆ ರಥಂಗಳ್: **ಆದಿಪು**, ೧೧. ೩೨)

ಚೇಷ್ಟಿತ – [ನಾ] ಚೇಷ್ಟೆ, ಕಾರ್ಯ (ನಿಮ್ಮನಾಸವಮಧುವಿಂದೆ ಪೂಣ್ದುದೊ ಕೃತಮಾವುದಿಂ ಮಱೆವುದೆಮ್ಮ ಮದೋತ್ಕಟಚೇಷ್ಟಿತಂಗಳಂ: **ಆದಿಪು**, ೧೧. ೧೩೧)

ಚೇಳಾಂಚಳ – [ನಾ] ವಸ್ತ್ರದ ಸೆರಗು, ತುದಿ (ಮಹೀತಳಾಶ್ಲಿಷ್ಟ ಜಾನುಲಲಾಟಪಟ್ಟರ್ ಪ್ರಣಾಮಾರ್ಪಣಪುರಸ್ಸರಂ ಶಿರೋವೇಷ್ಟನ ಪ್ರಲಂಬ ಚೇಳಾಂಚಳ ಪಿಹಿತವದನರಾಗಿ: **ಆದಿಪು**, ೧೦. ೪೮ ವ)

ಚೈತನ್ಯ – [ನಾ] ಜೀವ (ಕಾಯಾಕಾರ ಪರಿಣತಭೂತ ಚೈತನ್ಯಂಗಳ್ ಬಹಿರಂತರ್ಮುಖಭಾಸಿಗಳ್: **ಆದಿಪು**, ೨. ೧೦ ವ)

ಚೈತಾಗ್ನಿ – [ನಾ] ಚಿತೆಯ ಬೆಂಕಿ (ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷದ್ಬಲಮಂ ಸುಟ್ಟಂ ಉದಾತ್ತಪುಣ್ಯನವಂ ಚೈತಾಗ್ನಿಯಿಂ ಸುಟ್ಟೆನಿಲ್ಲ: **ಪಂಪಭಾ**, ೧೩. ೬೦)

ಚೈತ್ಯ – [ನಾ] ಬಸದಿ (ದಿವಿಜೇಂದ್ರರುಂದ್ರಲೋಕದೊಳಮಿದೊಂದೆ ಸಾರಮಿದು ಜೈನಪದಾಬ್ಜವರಪ್ರಸಾದದಾದುದು ನಿನಗಪ್ಪ ಕಾರಣದಿನೀಗಳೆ ಪೂಜಿಸು ಚೈತ್ಯರಾಜಿಯಂ: **ಆದಿಪು**, ೨. ೬೯)

ಚೈತ್ಯದ್ರುಮ – [ನಾ] ಅರಳಿಮರ, ಅಶ್ವತ್ಥವೃಕ್ಷ (ತ್ರಿಶಾಲ ತ್ರಿಪೀಠೋಪಸ್ಥಿತ ಅರ್ಹತ್ಪ್ರತಿಮೋಪೇತ ಚೈತ್ಯದ್ರುಮೋಪೇತ ಮಧ್ಯಪ್ರದೇಶ ಅಶೋಕ ಸಪ್ತಚ್ಛದಚಂಪಕ : **ಆದಿಪು**, ೧೦. ೩೧ ವ)

ಚೈತ್ಯಾಲಯ – [ನಾ] ಜಿನಾಲಯ (ಅಂತು ಹರ್ಮ್ಯಚೈತ್ಯಾಲಯಾವನಿಯೆಂಬುದು ಅದಱ ವಿಸ್ತಾರಂ ಅರ್ಧಯೋಜನಂ: **ಆದಿಪು**, ೧೦. ೨೫ ವ)

ಚೊಚ್ಚಿಲ ಮಗ – [ನಾ] ಮೊದಲ ಮಗ (ನೀಮುಂ ನಿಮ್ಮ ಚೊಚ್ಚಿಲ ಮಗನಪ್ಪ ಸೂರ್ಯಸೂನುವಂ ಸೂರ್ಯದಿನದಂದು ಕಂಡು ಕಾರ್ಯಸಿದ್ಧಿಯಂ ಮಾಡಿಬನ್ನಿಂ: **ಪಂಪಭಾ**, ೯. ೬೩ ವ)

ಚೋದನ ಕ್ರಮ – [ನಾ] [ರಥ] ನಡೆಸುವ ರೀತಿ (ಪಿಂದೆ ಕಡಂಗಿ ತೇರಂ ಎಸಗು ಎಂಬವಂ ಅಂಬಿಗಂ ಆಜಿರಂಗದೊಳ್ ಮುಂದೆ ಸಮಾನನಾಗಿ ಬೆಸದೆ ಇರ್ಪವನುಂ ತುಱುಕಾಱನಾಗೆ ಮತ್ ಸ್ಯಂದನಚೋದನಕ್ರಮಮದುಂ ಪೊಲೆಯಂಗೆ ಅಮರ್ದು ಇರ್ಕುಂ: **ಪಂಪಭಾ**, ೧೨. ೯೪)

ಚೋದಿಸು – [ನಾ] ರಥ ಮುಂತಾದವನ್ನು ನಡೆಸು (ಪುಸಿಯೆನೆ ರಥಮಂ ಹರಿ ಚೋದಿಸುವಂತೆವೊಲಿರ್ದು ಅದೆಂತು ನರನಂ ಗೆಲಿಪಂ ವಿಸಸನದೊಳ್ ಅಂತೆ ನೀಮುಂ ಪೆಸರಂ ಕರ್ಣಂಗೆ ಮಾಡಿ ಗೆಲ್ಲಂಗೊಳ್ಳಿಂ: **ಪಂಪಭಾ**, ೧೨. ೯೧)

ಚೋದ್ಯ – [ನಾ] ಅಚ್ಚರಿ (ಕಮ್ಮನಪ್ಪ ತುಪ್ಪದ ಕೊಡದೊಳ್ ಸಮಂತು ಮಡಗಿಟ್ಟೊಡ ಸೃಷ್ಟಿಗೆ ಚೋದ್ಯಮಪ್ಪಿನಂ: **ಪಂಪಭಾ**, ೧. ೧೩೧)

ಚೋದ್ಯಂಬಡು – ೩ ಸೋಜಿಗಗೊಳ್ಳು (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ**, ೧. ೧೧೫ ವ)

ಚೋದ್ಯಾವಹ – [ನಾ] ಆಶ್ಚರ್ಯಕರವಾದ (ಜಗಕ್ಕತಿ ಚೋದ್ಯಾವಹಮಾಗೆ ಪೆಂಪುವಡೆದತ್ತಂತಾತ್ಮಜನ್ಮೋತ್ಸವಂ: **ಆದಿಪು**, ೭. ೩೭)

ಚೋರ – [ನಾ] ಕಳ್ಳ (ಕುಪಿತ ಅನೇಕಪ ದಂದಶೂಕ ದವ ದೈತ್ಯ ಅರಾತಿ ಚೋರ ಅಂಧಕಾರ ಪತದ್ವಜ ವಿಷ ಅಭಿಚಾರಿಕ ಜರಾತಂಕಾದಿ ಭೇದಂಗಳಪ್ಪ: **ಆದಿಪು**. ೧೬. ೯)

ಚೌತ – [ನಾ] ಚತುರಸ] ನಿಶ್ಚಿತ (ಮಧುಪಂಗಳ್ ತಮ್ಮಟ್ಟಿಮೆಯ ಚೌತಮಾಗಿರೆ ನೀಟ್ಟರಿಸಿದುವು ಉಂತೆ ಚಂಪಕಕ್ಕೆಱಗದುವೇ: **ಆದಿಪು**, ೧೧. ೧೧೯) [ಎಲ್. ಬಸವರಾಜು ಈ ಶಬ್ದಕ್ಕೆ 'ಉಪವಾಸವ್ರತ ?' ಎಂದು ಅರ್ಥ ಕೊಡುತ್ತಾರೆ]

ಚೌಪಳಿಗೆ – [ನಾ] ಹಜಾರ (ಗಟ್ಟಿಸಿ ಸೆಂದುರದೊಳ್ ನೆಲಗಟ್ಟಿಸಿ ಚೆಂಬೊನ್ನ ನೆಲೆಯ ಚೌಪಳಿಗೆಗಳೊಳ್ ಕಟ್ಟಿಸಿ ಪಟಿಯಿಗೆಗಳಂ ಅಳವಟ್ಟಿರೆ ಬಿಯಂ ಅಲ್ಲಿ ಮೊಟಿಗೆ ಪಲವುಂ ಪಱೆಗಳ್: **ಪಂಪಭಾ**, ೨. ೬೬)

ಚೌಲ – [ನಾ] ಮಗುವಿನ ಕೂದಲು ಬಿಡಿಸುವುದು (ಅಂತವರ್ಗೆ ಜಾತಕರ್ಮ ನಾಮಕರಣಾನ್ನಪ್ರಾಶನಚೌಲೋಪನಯನಾದಿ ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ: **ಪಂಪಭಾ**, ೧, ೮೭, ವ)

ಛ

ಛಂದೋವಿಚಿತಿ – [ನಾ] ಛಂದಶ್ಶಾಸ್ತ್ರ (ಸ್ವಯಂಭುವ ಆಭಿಧಾನ ಪದವಿದ್ಯಾ ಛಂದೋವಿಚಿತಿ ಅಲಂಕಾರಗಳೆಂಬ ಮೂಱಿಂ ಪೆಸರ್ವಡೆದ ವಾಙ್ಮಯಮುಮಂ: **ಆದಿಪು**, ೮. ೬೦ ವ); [ನಾ] ವೃತ್ತಭೇದಗಳನ್ನು ವಿವರಿಸುವ ಶಾಸ್ತ್ರ (ಅಂತು ಪಂಚಾಂಗವ್ಯಾಕರಣದೊಳಂ ವೃತ್ತಭೇದಮಪ್ಪ ಛಂದೋವಿಚಿತಿಯೊಳಂ ಶಬ್ದಾಲಂಕಾರ ನಿಷ್ಠಿತಮಪ್ಪ ಅಲಂಕಾರದೊಳಂ: **ಪಂಪಭಾ**, ೨. ೩೪ ವ)

ಛಂದೋವಿದ್ಯಾ – [ನಾ] ಛಂದಶ್ಶಾಸ್ತ್ರ (ಛಂದೋವಿದ್ಯಾಳಂಕಾರ ಪದವಿಚಾರ ಕಾವ್ಯ ಗೀತ ನೃತ್ಯ ಆತೋದ್ಯಾದಿ ಗೋಷ್ಠಿಗಳೊಳಂ: **ಆದಿಪು**, ೮. ೩ ವ)

ಛಟಾ – [ನಾ] ರಾಶಿ (ಕಾಶ್ಮೀರಮೃಗಮದಚ್ಛಟಾಸಿಕ್ತಾಂಗಣಮುಂ ಅಂಗಣರಚಿತ ಮೌಕ್ತಿಕರಂಗಬಲಿಯುಂ: **ಆದಿಪು**, ೪. ೫೮ ವ)

ಛತ್ರರತ್ನ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲಿ ಒಂದು (ಅಡಿಯೊಳ್ ಪಾಸಿದ ಚರ್ಮರತ್ನಪಟಮಂ ತಚ್ಛತ್ರರತ್ನಂ ಬೆಡಂಗಿಡಿದೋರಂತಿರೆ ಮುಟ್ಟಿ ಪೊರ್ದ ತೆಱದಿಂಬಾಗೆ: **ಆದಿಪು**, ೧೩. ೬೦)

ಛದ್ಮಸ್ಥಗುಣಸ್ಥಾನ – [ನಾ] [ಜೈನ] ಜ್ಞಾನಾವರಣ ಮತ್ತು ದರ್ಶನಾವರಣಗಳು ಛದ್ಮ, ಅದರಲ್ಲಿರುವವರು ಛದ್ಮಸ್ಥ; ೪ ರಿಂದ ೧೦ ಗುಣಸ್ಥಾನವರೆಗಿನವರು ಸರಾಗಛದ್ಮಸ್ಥರು, ೧೦ ರಿಂದ ೧೨ ರವರೆಗಿನವರು ವೀತರಾಗಛದ್ಮಸ್ಥರು (ವೀತರಾಗಛದ್ಮಸ್ಥಗುಣಸ್ಥಾನಂ ಏಕತ್ವವಿತರ್ಕವಿಚಾರಾಭಿಧಾನ ಪರಿಣತಂ ಅಪರಿಮಿತಪ್ರದೇಶನಿರ್ಜರಾದಿ ಕ್ರಿಯಾಕಳಾಪಂ: **ಆದಿಪು,** ೧೦. ೧೪ ವ)

ಛನ್ನ – [ಗು] ಆವರಿಸಿದ (ಉನ್ನತ ಧವಳಚ್ಛತ್ರಚ್ಛನ್ನ ವಿಯತ್ತಳನಂ ಇಂದುಕುಳತಿಳಕನಂ ಇಂತು ಅನ್ನೆಯದಿಂದ ಈ ಪಟುವಿನೊಳ್ ಎನ್ನರಸನಂ ಇಂತು ಬಿದಿಯೆ ತಂದಿಕ್ಕುವುದೇ: **ಪಂಪಭಾ,** ೨. ೨೨)

ಛವಿ – [ನಾ] ಚರ್ಮ (ಅಪ್ರಿಣಾಕ ಭಾವಿಳಶ್ಲಿಷ್ಟಿತಚಳನುಂ ಶ್ಲಕ್ಷ್ಣ ಸ್ನಿಗ್ಧ ಮೃದು ಬಹಳಚ್ಛವಿಯುಂ ಬಂಧು ಜೀವ ಶಾಕ ಪುಷ್ಪ ಸಪದ್ಮಮಹಾರಜಶಂಖಾಸತಳವೆಂಬ ಸಪ್ತದ್ವಾಸ್ಥಿತನುಂ: **ಆದಿಪು,** ೧೨. ೫೬ ವ); [ನಾ] ಕಾಂತಿ (ತನ್ನೊಳಗಣ ಪನ್ನಗನಂ ಮುಂ ನೀಂ ಪಿಡಿದು ಒಗೆಯೆ ಕಾಯಲಾಱದೆ ಪಿರಿದುಂ ಬನ್ನದ ಕರ್ಪಸೆದುದು ತೊಱೆಗೆ ಇನ್ನುಂ ಹರಗಳ ತಮಾಳ ನೀಳಚ್ಛವಿಯಿಂ: **ಪಂಪಭಾ,** ೫. ೫೪)

ಛಾಯ – [ನಾ] ಕಾಂತಿ (ತಪ್ತತಪನೀಯಚ್ಛಾಯನುಂ ಸಪ್ತಹಸ್ತೋಚ್ಛ್ರಯನುಂ ನಿದ್ರಾಲಸ ಅಕ್ಷಿನಿಮೇಷ ಜರಾ ಶೋಕ ವಿಷಾದ ವಿರಹಿತನುಂ: **ಆದಿಪು,** ೬. ೬೯ ವ)

ಛಾಯಾಟೋಪ – [ನಾ] ಬಣ್ಣದ ವೈಭವ (ದಳಿತ ಕಮಲಚ್ಛಾಯಾಟೋಪಂ ಮನೋಜರಸ ಪ್ರಭಾವಳಯ ನಿಳಯಂ ಪ್ರೋದ್ಯತ್ ಭ್ರೂವಿಭ್ರಮಂ: **ಪಂಪಭಾ,** ೪. ೭೭)

ಛಾಯಾಲಕ್ಷ್ಯ – [ನಾ] ಪ್ರತಿಬಿಂಬವನ್ನು ನೋಡಿ ಹೊಡೆಯಬೇಕಾದ ಗುರಿ (ಛಾಯಾಲಕ್ಷ್ಯಮನೊಡ್ಡಿಯುಂ ಆಯದ ನೀರೊಳಗೆ ತನ್ನನಡಸಿದ ನೆಗಟಿಂ ಬಾಯಟಿವಿನಂ ಇಸಿಸಿಯುಂ ಅರೆ ಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗೞ್ **ಪಂಪಭಾ,** ೨. ೬೦)

ಛಾಯೆ – [ನಾ] ಕಾಂತಿ (ಉನ್ಮಿಷತ್ ರತ್ನ ಹಟಚ್ಛಾಯೆಯೊಳೆ ಮುಸುಕಿ ದೇಹಚ್ಛಾಯೆಯುಮಂ ಪುದಿಯೆ ರತ್ನತರುವನೆ ಪೋಲ್ತಂ: **ಆದಿಪು,** ೪. ೪೦)

ಛಿದ್ರ – [ನಾ] ತೂತು, ರಂಧ್ರ (ದಿವ್ಯಾಸ್ತ್ರಂಗಳಿಂ ನೂಱುಯೋಜನದ ಅಳವಿಯ ಖಾಂಡವವನಮೆಲ್ಲಮಂ ತಟ್ಟಿ ಮೆಡಱಿ ಮಶಕಮಾತ್ರಮಪ್ಪೊಡಂ ಮಿಸುಕಲ್ ಛಿದ್ರಮಿಲ್ಲದಂತಾಗೆ: **ಪಂಪಭಾ,** ೫. ೯೬ ವ)

ಛಿದ್ರಿಸು – [ಕ್ರಿ] ನಾಶಮಾಡು (ರಸದಾನಾದಿಗಳೊಳ್ ಛಿದ್ರಿಸುವಮಪ್ಪೊಡೆ ಅವರ್ ಆಪ್ತವಂತರುಂ ಬುದ್ಧಿವಂತರುಂ ಆಗಿ ನೆಗಟ್ದರ್ ಇನ್ನಾವ ಮಾಟಿಕ್ಕೆಯೊಳ್ ಪಗೆಯಂ ಕೆಯ್ಗೆ ಮಾಡುವುದು ಪೇೞಿಂ: **ಪಂಪಭಾ,** ೬. ೬೭ ವ); [ರಹಸ್ಯ] [ಕ್ರಿ] ಭೇದಿಸು (ಒಂದು ದಿವಸಂ ದುರ್ಯೋಧನನ ಮಯ್ದುನಂ ಸಿಂಧುದೇಶಾಧೀಶ್ವರಂ ಸೈಂಧವಂ ಅವರಂ ಛಿದ್ರಿಸಲೆಂದು ಮೆಯ್ಗರೆದು ಬಂದು: **ಪಂಪಭಾ,** ೭. ೩೦ ವ)

ಛುರಿತ – [ಗು] ಬೆರೆತ, ಸೇರಿದ (ಪರಿವಿರಚಿತ ಚಿತ್ರಾಂಬರವಿತಾನ ಚ್ಛಾಯಾಚ್ಛುರಿತರಂಗಭೂಮಿಯೊಳ್: **ಆದಿಪು,** ೮. ೬೭ ವ)

ಛೇದ – [ನಾ] ಕತ್ತರಿಸುವುದು (ಧರ್ಮದ್ರುಚ್ಛೇದಪರಶುಧಾರೆಯುಂ ವಿಷಯವಿಷದ್ರುಮಕಂದಳಿಯುಂ: **ಆದಿಪು,** ೧೪. ೧೨೨ ವ)

ಜ

ಜಂಗಮ – [ಗು] ನಡೆದಾಡುವ (ಬಲದೇವಂ ದುರ್ಯೋಧನಂಗಾಯು ಬರ್ಪಂತೆ ಪೆಗಲೊಳ್ ಹಲಾಯುಧಮನಿಟ್ಟುಕೊಂಡು ಜಂಗಮಪರ್ವತಮೆ ಬರ್ಪಂತೆ ಬಂದು: **ಪಂಪಭಾ,** ೧೩. ೮೮ ವ)

ಜಂಗಮಕಲ್ಪವೃಕ್ಷ – [ನಾ] ನಡೆದಾಡುವ ಕಲ್ಪವೃಕ್ಷ, ಮಹಾ ಉದಾರಿ (ಇವಂ ಜಂಗಮಕಲ್ಪವೃಕ್ಷಮೆನೆ ಕೊಟ್ಟು ಈ ಮಾಟಿಕ್ಕೆಯಿಂ ಭಾಜನಾಂಗದ ವಸ್ತ್ರಾಂಗದ ಭೂಷಣಾಂಗದ ಅಳವಂ ಚಕ್ರೇಶ್ವರಂ ತಾಳ್ದಿದಂ: **ಆದಿಪು,** ೪. ೩೫)

ಜಂಗಮರೂಪ – [ನಾ] ಸಂಚರಿಸುವ ಆಕಾರ (ಲತೆಗಳ್ ಜಂಗಮರೂಪದಿಂದೆ ನೆರದುವೋ ದಿವ್ಯಾಪ್ಸರೋವೃಂದಂ ಈ ಕ್ಷಿತಿಗೇಂ ಇಂದ್ರನ ಶಾಪದಿಂದ ಇೞಿದುವೋ ಪೇೞೆಂಬ ಶಂಕಾಂತರಂ ಮತಿಗಂ ಪುಟ್ಟುವಿನೆಗಂ: **ಪಂಪಭಾ,** ೪. ೩೯)

ಜಂಘಾ – [ನಾ] ತೊಡೆ (ಆ ಕನಕಕದಳೀಸ್ತಂಬ ವಿಭ್ರಮ ಜಂಘಾಯುಗಳೆಯರೊಳ್ ಆ ಭುವನಭರಣೋತ್ತರಣ ಸ್ತಂಭರಮಣೀಯಜಂಘಾಯುಗಳಂ: **ಆದಿಪು,** ೮. ೨೩ ವ)

ಜಂಘಾಳ – [ನಾ] ವೇಗವಾಗಿ ಓಡುವವನು (ಚಂಡಾಜಿವಿಕ್ರಾಂತ ಮರ್ತ್ಯನಿಳಾಕ್ರಾಂತಹಯೌಘಮೂರ್ಜಿತ ಜಯಪ್ರಖ್ಯಾತ ಜಂಘಾಳ ಪತ್ತಿ ನಿಕಾಯಂ: **ಆದಿಪು,** ೪. ೯೧)

ಜಂತ್ರ – [ನಾ] ಯಂತ್ರ (ಆ ಸರಲ್ಗಳಿಂದಾತನ ಮನೆಯ ಮುಂದೆ ನಭದೊಳ್ ನಲಿನಲಿದಾಡುವ ಜಂತ್ರದ ಮೀನೆಚ್ಚನುಮಾಕೆಗೆ ಗಂಡನಕ್ಕುಂ: **ಪಂಪಭಾ,** ೩. ೩೨ ವ)

ಜಂಬುದೀವಿ – [ನಾ] ಜಂಬೂದ್ವೀಪ (ಸಮುನ್ಮಿಷದ್ವಿವಿಧ ರತ್ನಮಾಲಾ ಪ್ರಭಾಭಿದಾರುಣ ಜಲಪ್ಲವಾವಿಳ ವಿಲೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ ಜಂಬುದೀವಿಯೊಳಗುಂಟು: **ಪಂಪಭಾ,** ೧. ೫೧*) [ಇದನ್ನು ಪೃಥ್ವೀ ವೃತ್ತವೆಂದು ಗುರುತಿಸಿ ಪರಿಷತ್ತಿನ ಮುದ್ರಣದಲ್ಲಿ ಅಡಿಟಿಪ್ಪಣಿಯಾಗಿ ನೀಡಿದ್ದಾರೆ]

ಜಂಬೂವೃಕ್ಷ – [ನಾ] ನೇರಿಳೆ ಮರ (ಮೇರುಪರ್ವತದ ತೆಂಕಣ ತ'ಟಿಲೊಳ್ ದ್ವಾದಶಯೋಜನ ಪ್ರಮಾಣಮಪ್ಪ ಜಂಬೂವೃಕ್ಷದ ಕೆಲದೊಳ್: **ಪಂಪಭಾ,** ೬. ೩೦ ವ)

ಜಕ್ಕ – [ನಾ] ಯಕ್ಷ (ಕುಬೇರನಿಂ ಕಪ್ಪಂಗೊಂಡು ಪೊನ್ನಂ ಜಕ್ಕರೆಕ್ಕೆಯಿಂ ಪೊತ್ತು ಬರೆ: **ಪಂಪಭಾ,** ೬. ೩೨ ವ)

ಜಕ್ಕರೆಕ್ಕೆ – [ನಾ] [ಜಕ್ಕರ್+ಎಕ್ಕೆ} ಯಕ್ಷರು ಒಟ್ಟಾಗಿ (ಕೈಳಾಸದ ಮೇಗಣ್ಗೆ ವಂದು ಕುಬೇರನಿಂ ಕಪ್ಪಂಗೊಂಡು ಜಕ್ಕರ್ ಎಕ್ಕೆಯಿಂ ಪೊತ್ತು ಬರೆ: **ಪಂಪಭಾ,** ೬. ೪೨ ವ)

ಜಕ್ಕವಕ್ಕಿ – [ನಾ] ಚಕ್ರವಾಕ ಪಕ್ಷಿ (ಬನಮಂ ಕೋಗಿಲೆ ಜಕ್ಕವಕ್ಕಿ ಪಗಲಂ ಪೂಗೊಂಚಲಂ ತುಂಬಿ ಚಂದ್ರನನಂಭೋನಿಧಿ: **ಆದಿಪು,** ೧೨. ೩೧)

ಜಗ – [ನಾ] ಜಗತ್ತು (ಜಗಮಂ ಮಾಡಿದ ಪದ್ಮಜಂ ಪಡೆದನಿಲ್ಲೀ ಕನ್ನೆಯಂ ಮಾಡುವಲ್ಲಿಗೆ .. .. ಅಂಗಜನೆಂಬಜಂ ಪಡೆದನಂತಾ ಕಾಂತೆಗೀ ಕಾಂತಿಯಂ: **ಪಂಪಭಾ,** ೪. ೭೫)

ಜಗತೀತಳ – [ನಾ] ಜಗಲಿ (ಷೋಡಶಸೋಪಾನೋಪಶೋಭಿತ ಜಗತೀತಳಮಧ್ಯದೊಳ್ ಅನುಕ್ರಮದೊಳ್ ಎಂಟು ನಾಲ್ಕುನಾಲ್ಕುಂ ಬಿಲ್ನಿಡಿಯವಾಗಿ: **ಆದಿಪು,** ೧೦. ೨೩ ವ)

ಜಗತೀತ್ರಯ – [ನಾ] ಮೂರು ಲೋಕಗಳು (ಬಸಿಱೊಳ್ ಜಗತೀತ್ರಯಮಂ ಒಸೆದಿಟ್ಟು ಓರಂತೆ ಕಾದ ಪೆಂಪಿನ ನಿಮ್ಮೀ ಬಸಿಱಂ ಪೊಕ್ಕ ಅಯ್ವರಂ ಅಸುರಕುಳಾಂತಕ ಕಡಂಗಿ ಕಾವುದು ಪಿರಿದೇ: **ಪಂಪಭಾ,** ೯. ೧೬)

ಜಗತೀರಾಜ್ಯ – [ನಾ] ಭೂರಾಜ್ಯ, ಐಹಿಕರಾಜ್ಯ (ನೆಗೞ್ದ ತಪೋರಾಜ್ಯದ ಬಗೆ ಮಿಗೆ ನಿಂದಂ ವೃಷಭನಾಥಂ ಅತ್ತೊಂದೆಡೆಯೊಳ್ ಜಗತೀರಾಜ್ಯದ ಬಗೆ ಕೈಮಿಗೆ ನಿಂದಂ ಭರತರಾಜನಿತ್ತೊಂದೆಡೆಯೊಳ್: **ಆದಿಪು,** ೯. ೬೭)

ಜಗತೀಸಂತತಿ – [ನಾ] ಜಗತ್ತಿನ ಸಂತತಿ (ಗೃಹಸ್ಥಧರ್ಮದಿಂದಂ ನೀನೆಂತಂತೆ ಸಲೆ ನೆಗೞ್ ಜಗತೀಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಕುಂ: **ಆದಿಪು,** ೮. ೧೩)

ಜಗತ್ಕುಸುಮ – ರುಚಕಪರ್ವತದ ಪೂರ್ವದಿಕ್ಕಿನ ಎಂಟು ಶಿಖರಗಳಲ್ಲಿ ಒಂದು (ತನ್ಮಹೀಧರವರುಣಾಶಾ ವಿಶೇಷಕಮಾಗಿರ್ದ ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ: **ಆದಿಪು,** ೭. ೩ ವ)

ಜಗತ್ತ್ರಯ – [ನಾ] ಮೂರು ಲೋಕಗಳು: ಸ್ವರ್ಗ, ಮರ್ತ್ಯ, ಪಾತಾಳ (ಸಿಂಹಾಸನಮಸ್ತಕದೊಳಿರ್ದ ಜಗತ್ತ್ರಿತಯತಿಳಕನ ಪಾದಪದ್ಮಂಗಳ್ಗೆ .. .. ವಿಹಿತೋಪಹಾರನಾಗಿ: **ಆದಿಪು,** ೧೩. ೮೩ ವ)

ಜಗತ್ತ್ರಯಗುರು – [ನಾ] [ಜೈನ] ಮೂರುಲೋಕಗಳ ಗುರು, ಆದಿದೇವ (ಎಱಗಿ ಜಗತ್ತ್ರಯಗುರುಗೆರ್ದೆಯೆಱಕದೆ ಪೊಗೞ್ದು ಅಖಿಳ ಭುವನಜನನಿಯನಾಗಳ್ ಮಱೆಯಿಸಿ ಮಾಯಾನಿದ್ರೆಯಿಂ: **ಆದಿಪು,** ೭. ೪೫)

ಜಗತ್ತ್ರಿತಯ – [ನಾ] ಜಗತ್ತ್ರಯ (ಜಗತ್ತ್ರಿತಯಂಗಳೊಳ್ ಜಸಕ್ಕೆ ಆಗರಮಾದ ಬದ್ದೆಗನಿಂ ಆ ನರಸಿಂಹನಿಂ ಅತ್ತಲ್ ನಾಲ್ವೆರಲ್ ಮೇಗು ಪೊದಳ್ದ ಚಾಗದೊಳಂ ಒಂದಿದ ಬೀರದೊಳಂ ಗುಣಾರ್ಣವಂ: **ಪಂಪಭಾ,** ೧. ೫೦)

ಜಗತ್ಪ್ರಕಟ – [ನಾ] ಜಗತ್ತಿನಲ್ಲಿ ಪ್ರಸಿದ್ಧವಾದ (ಶಕವರ್ಷಮೆಂಟುನೂಱಕ್ಕೆ ಕಡೆಯೊಳಱುವತ್ತಮೂಱು ಸಂದಂದು ಜಗತ್ಪ್ರಕಟ ಪ್ಲವಸಂವತ್ಸರದ ಕಾರ್ತಿಕಂ ಮುದಮನೀಯೆ : **ಆದಿಪು,** ೧೬. ೭೭)

ಜಗತ್ಪ್ರತೀತ – [ನಾ] ಜಗತ್ಪ್ರಸಿದ್ಧ (ಲಲಿತವಾಗ್ವಿಳಾಸಮೆ ದಲ್ ಅಲಂಕೃತಿಯವೊಲೆಸೆದಪುದು ಜಗತ್ಪ್ರತೀತನೀತನೆ ಸರಸ್ವತೀಮಣಿಹಾರಂ: **ಆದಿಪು,** ೧. ೨೮)

ಜಗತ್ಪ್ರಥಿತ – [ನಾ] ಲೋಕಪ್ರಸಿದ್ಧವಾದ (ಪರರಥಿನೀಜಳನಿಧಿಯ ಪಾರಮಂ ಸಲ್ವ ಜಗತ್ಪ್ರಥಿತ ಭುಜದರ್ಪದಿಂದತಿರಥಮಥನಂ ಕರ್ಣಧಾರನಲ್ಲನೆ ಕರ್ಣಂ: **ಪಂಪಭಾ,** ೧೨. ೫೦)

ಜಗತ್ಸ್ವಾಮಿ – [ನಾ] ಜಗತ್ತಿಗೆ ಒಡೆಯನಾದವನು, ಆದಿಜಿನ (ಶ್ರೀ ದೇವೇಂದ್ರಮುನೀಂದ್ರವಂದಿತಗುಣವ್ರಾತಂ ಜಗತ್ಸ್ವಾಮಿ ಸಂದ ಆದಿಬ್ರಹ್ಮಂ ಅಗಾಧಬೋಧನಿಳಯಂ: **ಆದಿಪು,** ೧. ೧)

ಜಗದೇಕಮಲ್ಲ – [ನಾ] ಲೋಕಕ್ಕೆ ಒಬ್ಬನೇ ಜಟ್ಟಿ (ಆ ಮಾತಿಗೆ ಮೆಚ್ಚಿ ಜಗದೇಕಮಲ್ಲನಂ ತೊಡೆಯನೇಱಿಸಿಕೊಂಡು ಕುಂಭಸಂಭವಂ ಗಾಂಗೇಯನಂ ಇಂತೆಂದಂ: **ಪಂಪಭಾ,** ೨. ೫೪ ವ)

ಜಗದ್ಗುರು – [ನಾ] [ಜೈನ] ಆದಿ ತೀರ್ಥಂಕರ (ತ್ರಿದಶಾಸನಂಗಳ್ ಅಲ್ಲಾಡಿದುವು ಜಗದ್ಗುರುಗೆ ಬೇಗಂ ಉಚ್ಚಾಸನದಿಂದಿರೇೞಿಂ ಎಂದು ಪೇೞ್ವವೊಲ್: **ಆದಿಪು,** ೭. ೪೧)

ಜಗನ – [ನಾ] [ಜಘನ] ಸೊಂಟ (ಈ ಜಗನಮಿದೇಕೆ ಹೇಮರಶನಾಧ್ವನಿಯಿಲ್ಲದೆ ಮೂಗುವಟ್ಟುದು ಈ ಬಗೆಯೋಲ್ ಅಲಕ್ತಕದ್ರವದೊಳೊಂದದೆ ನಿಂದುವು ಪಾದಪಂಕಜಂ: **ಪಂಪಭಾ,** ೪. ೬೨)

ಜಗನ್ಮಂಗಳ – [ನಾ] [ಜಗತ್+ಮಂಗಳ] ಲೋಕಕ್ಕೇ ಮಂಗಳಕಾರಿಯಾದ (ಅಂತು ಚಾಗಂಗೆಯ್ದು ಜಗನ್ಮಂಗಳಗಂಗಾವಾರಿಯೊಳ್ ಅನಿವಾರಿತಪರಾಕ್ರಮಂ ಅಘಮರ್ಷಣಪೂರ್ವಕಂ ಮಿಂದು: **ಪಂಪಭಾ,** ೯. ೭೨ ವ)

ಜಗೞ – [ನಾ] ಕಲಹ (ನುಡಿದ ಜಗೞಮದಿನಿಸಾನುಂ ತ್ರಿಪುರಹರನ ಕಿವಿಗೆಯ್ದುವುದುಂ: **ಪಂಪಭಾ,** ೧೨. ೧೪೨)

ಜಗುನೆ – [ನಾ] ಯಮುನಾನದಿ (ದ್ವೈತವನಮಂ ಪೊಱಮಟ್ಟು ಜಗುನೆಯಂ ಪಾಯ್ದು ಮೂಡಮೊಗದೆ ಪಯಣಂಬೋಗಿ: **ಪಂಪಭಾ,** ೮. ೫೦ ವ)

ಜಗುಲಿ – [ನಾ] ವೇದಿಕೆ (ಪೊಸಗೆಂದಳಿರ ಗೊಂದಳದೊಳೆ ಸಂದಣಿಸಿದಶೋಕಲತೆಯ ಓಲಗಶಾಲೆಯೊಳಗಣ ಕಪ್ಪುರವಳುಕಿನ ಜಗುಲಿಯ ಮೇಗಣ ಕುಸುಮದೆಸಳ: **ಆದಿಪು,** ೧೧. ೭೩ ವ)

ಜಗುೞ್ – [ನಾ] ನುಣುಚಿಕೊ, ಜಾರಿ ಹೋಗು (ನಾಣ್ಚಿ ಜಗುೞ್ದು ಇರ್ವರುಂ ಅಂದು ಒಳಸಾರ್ದು ಪೋಪುದುಂ: **ಆದಿಪು,** ೩. ೮೯)

ಜಘನ – [ನಾ] ಪಿರ್ರೆ (ಕುಸುರಿಯ ರೂಪನೆಯ್ದೆ ಪೊಗೞಲ್ಕರಿಯೆಂ ನಡು ಪುರ್ವು ಬಾಸೆ ಕಣ್ಗೊಸಗೆಯನುಂಟುಮಾೞ್ಪ ಜಘನಂ ಬೆಳರ್ವಾಯ್ ಮೊಲೆಗಳ್: **ಪಂಪಭಾ,** ೪. ೭೨)

ಜಘನ್ಯ – [ನಾ] ಕನಿಷ್ಠ (ನಗರಾರಣ್ಯನಿರ್ವಿಶೇಷಂ ಉತ್ತಮ ಮಧ್ಯಮ ಜಘನ್ಯಾಗಾರಂಗಳೊಳ್ ಚಂದ್ರಗತಿಯಿಂ ಸಲುತ್ತುಂ: **ಆದಿಪು,** ೯. ೧೩೦ ವ)

ಜಘನ್ಯಪಾತ್ರ – [ನಾ] [ಜೈನ] ದಾನಸ್ವೀಕಾರಕ್ಕೆ ಅರ್ಹರಾದವರಲ್ಲಿ ಕನಿಷ್ಠನಾದವನು (ದರ್ಶನವಿಶುದ್ಧನಾಗಿಯುಂ ಶೀಲವ್ರತಭಾವನಾರಹಿತಂ ಅಸಂಯುತಂ ಜಘನ್ಯಪಾತ್ರಂ: **ಆದಿಪು,** ೧೦. ೯ ವ)

ಜಟಮಟಿಕ – [ನಾ] ವಂಚಕ (ಪಟಮಿದೆ ಸಾಲ್ಗುಂ ಅನ್ಯಭವವಲ್ಲಭನಂ ಪಟವಿದ್ಯೆಯೆತ್ತಲುಂ ಜಟಮಟಿಕರ್ಕಳಂ ತೊಡರೆ ಸುತ್ತಲುಂ ಅಪ್ಪುದಱಿಂ: **ಆದಿಪು,** ೩. ೪೫)

ಜಟಮಟಿಸು – [ಕ್ರಿ] ಮೋಸಗೊಳಿಸು (ಜಟಮಟಿಸಿಕೊಂಡು ನಿಮ್ಮೀ ಘಟಿಯಿಸುವ ಈ ಸಂಧಿ ಕೌರವರ್ಕಳೊಳ್ ಎನ್ನಿಂ ಘಟಿತ ಜರಾಸಂಧ ಉರಸ್ತಟ ಸಂಧಿವೊಲ್ ಒಂದೆ ಪೊಟ್ಟಿಱಿಸೊಳ್ ವಿಘಟಿಸದೇ: **ಪಂಪಭಾ,** ೯. ೭೩)

ಜಟಾಕಲಾಪ – [ನಾ] ಜಡೆಯ ಸಮೂಹವುಳ್ಳವನು (ಅಂತು ವಲ್ಕಲಾವೃತ ಕಟಿತಟನುಮಾಗಿರ್ದ ಜಟಾಕಲಾಪನುಂ ಆಗಿ ತಪೋವನಕ್ಕೆ ಪೋಪ ಭಾರ್ಗವಂ: **ಪಂಪಭಾ,** ೨. ೪೫ ವ)

ಜಟಾಜೂಟ – [ನಾ] ಜಟೆಗಟ್ಟಿದ ಕೂದಲು (ಹರಜಟಾಜೂಟಕ್ಕೆ ಚಂದ್ರಲೇಖೆಯಿರ್ಪಂತೆ ದಿಕ್ಕರಿಕಟತಟಕ್ಕೆ ಮದಲೇಖೆಯಿರ್ಪಂತೆ: **ಪಂಪಭಾ,** ೧. ೫೭ ವ)

ಜಟಾಟವಿ – [ನಾ] ಜಡೆಗಳ ಸಮೂಹವೆಂಬ ಅರಣ್ಯ (ಆತಂಗೆ ಅಮರಾಪಗೆ ಮೆಚ್ಚಿ ಪಾಯ್ವುದುಂ ಗಗನದಿಂ ಅಂಧಕ'ದ್ವಿಷಜಟಾಟವಿಯೊಳ್ ಬಱಿಕಾದ ಶೈಳದೊಳ್ ಸೊಗಯಿಸೆ ಪಾಯ್ದುದು: **ಪಂಪಭಾ,** ೪. ೧೩)

ಜಟಾಧರ – [ನಾ] ಜಟೆಯನ್ನು ಧರಿಸಿದವನು (ವಲ್ಕಲವಸನರುಂ ಕೌಪೀನಧಾರಿಗಳುಂ ಭಸ್ಮೋದ್ಧೂಳಿತಾಂಗರುಂ ಜಟಾಧರರುಂ .. .. ಆಗಿ ತಮಗೆ ತಾವೇ ವನಪ್ರವೇಶಮಂ ಮಾಡಿ: **ಆದಿಪು,** ೯. ೯೩ ವ)

ಜಟಾಬಂಧ – [ನಾ] ಜಡೆಗಳ ಸಮೂಹ (ಅಂತು ನೀಲಾಂಬುದಶ್ಯಾಮನುಂ ಕನಕಪಿಂಗಳ ಜಟಾಬಂಧ ಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣಮೃಗತ್ವಕ್ ಪರಿಧಾನನುಮಾಗಿ: **ಪಂಪಭಾ,** ೧. ೬೯ ವ)

ಜಟಾಳಿ – [ನಾ] ಜಟೆಯ ಸಾಲು (ತ್ರಿಪುಂಡ್ರಕಂ ಒಪ್ಪೆ ಪಿಂಗಜಟಾಳಿ ತಾವರೆಯ ಸೂತ್ರದೊಳಾದ ಜನ್ನವಿರಂ ದುಕೂಲದ ಕೋವಣಂ ಕರಂ ಒಡಂಬಡೆ ನೋಟಕರ್ಕಳಂ ಆ ತಪಸ್ವಿ ಮರುಳ್ಚಿದಂ: **ಪಂಪಭಾ,** ೬. ೮)

ಜಟಿಕಾವಳಯ – [ನಾ] ಜಟೆಗಳ ಸಮೂಹ (ಕನಕ ಪಿಶಂಗ ತುಂಗ ಜಟಿಕಾವಳಯಂ ಕುಡುಮಿಂಚಿನೋಳಿಯಂ ನೆನೆಯಿಸೆ: **ಪಂಪಭಾ,** ೭. ೫೯)

ಜಟಿಳ – [ಗು] ಗಂಟುಗಂಟು, ತೊಡಕು; ಹೆಣೆದುಕೊಂಡಿರುವ (ಎನೆಯೆನೆ ರತ್ನರಶ್ಮಿಜಟಿಳಂ ಮಕುಟಂ ಮಣಿಕುಂಡಳಂ ಕನತ್ ಕನಕ ಪಿಶಂಗ ದೇಹರುಚಿ .. .. ಇಳಾಮರಂ ಅಂದು ಅಮರೇಂದ್ರರೂಪಮಂ: **ಪಂಪಭಾ,** ೮. ೭)

ಜಟಿಳಿತ – [ಗು] ಜಡೆಗಟ್ಟಿದಂತೆ ಗಂಟುಗಂಟಾದ (ದೆಸೆಯೆಲ್ಲಂ ಪಂಚರತ್ನದ್ಯುತಿಜಟಿಳಿತ ನಾನಾವಿಮಾನಂಗಳೊಳ್ ರಂಜಿಸೆ: **ಆದಿಪು,** ೬. ೧೮)

ಜಟ್ಟಿಗ – [ನಾ] ಶೂರ (ನಿಜಪ್ರತಾಪದಳವಂ ತೋಱಲ್ಕೆ ಮಾಱಾಂಪ ಜಟ್ಟಿಗರಾರಪ್ಪೊಡಂ ಇಲ್ಲದಂದು ಸಕಳಾಶಾಚಕ್ರಮಂ ಗೆಲಲ್ಸಾಲ್ದಿರೆ ದಿಗ್ಜಯಕ್ಕೆ ಪೋಱಮಟ್ಟಾ ಪೆಂಪು ಸಾಮಾನ್ಯಮೇ: **ಆದಿಪು,** ೧೪. ೫೨)

ಜಠರಾನಳ – [ನಾ] ಹೊಟ್ಟೆಯ ಬೆಂಕಿ, ಹಸಿವು (ಸಂತಪ್ತ ಕನಕವರ್ಣಮುಂ ಉರಿಯೊಂದುರುಳಿಯವೊಲಿರೆ ಜಠರಾನಳನುರಿವಿನಂ ಅಂತೊರ್ವಂ ಉರಿಯ ಬಣ್ಣದ ಪಾರ್ವಂ : **ಪಂಪಭಾ,** ೫. ೬೯)

ಜಡಧಿ – [ನಾ] ಸಮುದ್ರ ಮತ್ತು ಮೂರ್ಖರ ಆಶ್ರಯಸ್ಥಾನ (ಆ ಜಡಧಿಸಂಗತಿಯಿಂ ಜಡಬುದ್ಧಿ ಬುದ್ಧಿಯಂ ತೊಲಗಿಸಿತಕ್ಕುಂ ಅಲ್ಲದೊಡೆ ನೀನಿನಿತಂ ನುಡಿವೈ ಪಳಾಳಮಂ: **ಪಂಪಭಾ,** ೯. ೪೪)

ಜಡಬುದ್ಧಿ – [ನಾ] ಮಂದಬುದ್ಧಿ (ಆ ಜಡಧಿಸಂಗತಿಯಿಂ ಜಡಬುದ್ಧಿ ಬುದ್ಧಿಯಂ ತೊಲಗಿಸಿತಕ್ಕುಂ ಅಲ್ಲದೊಡೆ ನೀನಿನಿತಂ ನುಡಿವೈ ಪಳಾಳಮಂ: **ಪಂಪಭಾ,** ೯. ೪೪)

ಜಡಮತಿ – [ನಾ] ದಡ್ಡ, ಮೂರ್ಖ (ಆಡುವ ಮರುಳ್ಗಳಂ ನಡೆನೋಡಿದುದಜೆನಿಂತು ಕನಸಿನೊಳ್ ಮಕ್ಕಳ್ಗಂ ಕೂಡೆ ಪೆಸರಿಟ್ಟು ಸಲೆ ಕೊಂಡಾಡಿದಪರ್ ವ್ಯಂತರರ್ಕಳಂ ಜಡಮತಿಗಳ್: **ಆದಿಪು,** ೧೫. ೩೯)

ಜಡಿ – [ನಾ] ಗದರಿಸು (ಅಡಿಗೆಱಗಿಂ ಎಂದು ಭರತಂ ಜಡಿವಂ ನಿನಗೆಱಗಿ ಪೆಱರ್ಗೆಱಗುವವೇ: **ಆದಿಪು,** ೧೪. ೩೬); ಎಳೆ, ಸೆಳೆ, ಬಲಾತ್ಕರಿಸು (ನಾಣ್ಚಿ ಪೋಗಲೆಂದೆಟ್ಟಿ ಕನ್ನೆಯಂ ಚೂತಲತಿಕೆಯೆಂಬ ಕೆಳದಿ ಜಡಿದು ಕುಳ್ಳಿರಿಸಿ : **ಪಂಪಭಾ,** ೫. ೧೭. ವ)

ಜತಿ – [ನಾ] [ಯತಿ] ಜತಿಸ್ವರ, ನಾಟ್ಯಕ್ಕಾಗಿ ಆಯೋಜಿಸಿದ ಸ್ವರಜೋಡಣೆ (ಕರಣ ಅಂಗಹಾರ ಮೃದುಪದ ಪರಿಕ್ರಮಂಗಳ ಬೆಡಂಗುಗಳ ಜತಿಯೊಳ್ ಅಳಂಕರಿಸಿದುದೆಂಬಿನಂ: **ಆದಿಪು,** ೭. ೧೮)

ಜತಿಗೆ ಮೆಟ್ಟು – [ಕ್ರಿ] ತಾಳಕ್ಕೆ ಸರಿಯಾಗಿ ಕುಣಿ (ಬಾಯ ಕಂಪಿಂಗೆ ಸಾರ್ವ ಅಳಿಪ್ರಕರಂ ಅಂದು ಸೀಗುರಿವೊಲಾಗೆ ನಾಣ್ಗೆಟ್ಟು ಮೊಕ್ಕಳಂ ಜತಿಗೆ ಮೆಟ್ಟುವಳ್ ಪಿಡಿದು ಮೆಟ್ಟುವಳ್ ನೋಟ್ಟಿರಂ: **ಪಂಪಭಾ,** ೪. ೮೯)

ಜತುಗೃಹ – [ನಾ] ಅರಗಿನ ಮನೆ (ಕಾಯ್ವ ಅಱಲ್ ಉಱಿ ಜತುಗೃಹದೊಳಗೆ ಅಯ್ವರುಮಂ ಮಂತ್ರಬಲದೆ ಸುಟ್ಟೊಡಂ ಅವರಂ ದೆಯ್ವಬಲಮೊಂದೆ ಕಾದುದು ದೆಯ್ವಮಂ ಆರಯ್ಯೆ ಮೀಱಿ ಬಾಱಲ್ ನೆಱೆವರ್: **ಪಂಪಭಾ,** ೪. ೩)

ಜತ್ತವಟ್ಟ – [ನಾ] ಬೊಂಬೆಗಳನ್ನು ಕುಣಿಸುವ ಗುಂಡಗಿನ ಹಲಗೆಯ ಯಂತ್ರ (ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ ಜತ್ತವಟ್ಟದ ಮಣೆಯಂತದೇಂ ಪದುಳಮಾದುದೋ ದಿವ್ಯವಧೂ ಕದಂಬಕಂ: **ಆದಿಪು,** ೭. ೧೨೫)

ಜನಕ – [ನಾ] ತಂದೆ (ಪಿರಿಯಣ್ಣನೇಂ ಜನಕನೇಂ ಎಂಬೊಂದು ಕೊಂಡಾಟದಿಂ ವಿನಯಂ ಸಲ್ವುದು: **ಆದಿಪು,** ೧೪. ೩೧)

ಜನಕ್ಷಯಕರಣ – [ನಾ] ಜನರ ನಾಶವನ್ನು ಮಾಡುವಂಥದ್ದು (ಜಯಮಂ ಕೈಕೊಳ್ವುದು ದೃಷ್ಟಿಯುದ್ಧ ಜಳಯುದ್ಧ ಮಲ್ಲಯುದ್ಧದೊಳೆ ಜನಕ್ಷಯಕರಣದೊಳೇಂ ಪಾಪಮುಂ ಅಯಶಮುಂ ಅಪ್ಪನಿತೆ ದೇವ: **ಆದಿಪು,** ೧೪. ೧೦೧)

ಜನಜನಿತ – [ಗು] ಜನರಲ್ಲಿ ಹರಡಿರುವ, ಪ್ರಸಿದ್ಧವಾದ (ಲೋಕಗುರು ಶಂಖಚಕ್ರಗದಾಕರಂ ಅತಿಶಯ ಚತುರ್ಭುಜಂ ಜನಜನಿತ ವ್ಯಾಕುಳದೆ ಬಂದಂ: **ಪಂಪಭಾ,** ೯. ೩೦)

ಜನನಾಥ – [ನಾ] ರಾಜ (ತತ್ವಯೋಜದೊಳ್ ಮಡಿದಳಿ ತೊಟ್ಟನೆ ಬೀಱೆ ತೂಗಿ ತಲೆಯಂ ಜನನಾಥಂ ವಿಸ್ಮಯಸ್ಮಿತಂಬೆರಸಿನಿಸುಂ: **ಆದಿಪು,** ೪. ೭೧)

ಜನನಿ – [ನಾ] ತಾಯಿ (ತನ್ನ ಬಾಲಂಬೆರಸು ಉರಿಯೊಳ್ ಮಿಡುಕುತಿರ್ದ ಜನನಿಯಂ ಕಂಡು ಪಾವುಗಳುಳ್ಳ ಪಗೆಯಂ ಮಱೆಯವೆಂಬುದಂ ನನ್ನಿಮಾಡಿ: **ಪಂಪಭಾ,** ೫. ೯ ವ)

ಜನನೀಚರ – [ನಾ] [ಜೈನ] ಹಿಂದಿನ ಜನ್ಮದಲ್ಲಿ ತಾಯಿಯಾಗಿದ್ದ[ವನು] (ಇನಗಿನಿವಿರಿದು ಸುಖಂ ಮತ್ ಜನನೀಚರ ದಿವಿಜನಿಂದಮಾಯ್ತು: **ಆದಿಪು**, ೩. ೫೮)

ಜನನುತೆ – [ನಾ] ಜನರ ಸ್ತುತಿಗೆ ಪಾತ್ರಳಾದವಳು, ಗಂಗೆ (ಮೆಯ್ಯಂಕುರಿಸೆ ಸುರಿವ ಅಶ್ರುಜಲಂ ಉಬ್ಬರಿಸಿ ಪೊನಲ್ ಪೊನಲನಟ್ಟೆ ಜನನುತೆಗಾಗಳ್: **ಪಂಪಭಾ**, ೯. ೭೪)

ಜನಪದ – [ನಾ] ದೇಶ (ಜನಪದಂಗಳನೆಯ್ದೆ ಮಾಡಿ ಪುರಂಗಳಂ ಸಮಕಟ್ಟಿ ಮೂಱನಿಸಿ ವರ್ಣಮನಿಂತು ಮುಂ ಸಮಕಟ್ಟಿಯುಂ: **ಆದಿಪು**, ೮. ೬೫)

ಜನಪದಸಮಭಿಜಾತ – [ನಾ] ದೇಶ ಬಲ್ಲವನು (ಆತಂ ಜನಪದಸಮಭಿಜಾತನುಂ ಅನ್ವಯಾಗತನುಂ ಅಭಿರೂಪನುಂ ಪ್ರತ್ಯುತ್ಪನ್ನಮತಿಪ್ರತಿಭನುಂ: **ಆದಿಪು**, ೧೪. ೪೩ ವ)

ಜನವಡೆ – [ನಾ] ಜನರ ಗುಂಪು (ಈ ಜನವಡೆಯೊಳಾರಾನುಂ ಈ ಬಿಲ್ಲನೇಱಿಸಲಾರ್ಪೊಡೆ ಬನ್ನಿಂ: **ಪಂಪಭಾ**, ೩. ೬೦ ವ)

ಜನಿತ – [ಗು] ಉಂಟಾದ (ಗೀತವಾದಿತರವಂ ಏವೇಟ್ಟುದೋ ಸಭೆಯಂ ರಸದೊಳ್ ಪೂಟ್ಟಿವೊಳ್ ಎಸೆದತ್ತು ದಿವಿಜಪೇಟಕಜನಿತಂ: **ಆದಿಪು**, ೯. ೧೪)

ಜನಿಷ್ಯಮಾಣ – ಹುಟ್ಟಲಿರುವ (ಜನಿಷ್ಯಮಾಣ ವೃಷಭ ಜಿನಾವತರಣ ಮಂಗಳನಿಹಿತ ಕಳಶದರ್ಪಣದಂತೆ: **ಆದಿಪು**, ೬.. ೧೦೬ ವ)

ಜನ್ನವಿರ – [ನಾ] ಜನಿವಾರ (ಪಿಂಗಜಟಾಳಿ ತಾವರೆಯ ಸೂತ್ರದೊಳಾದ ಜನ್ನವಿರಂ ದುಕೂಲದ ಕೋವಣಂ ಕರಂ ಒಡಂಬಡೆ ನೋಟಕರ್ಕಳಂ ಆ ತಪಸ್ವಿ ಮರುಳ್ಚಿದಂ: **ಪಂಪಭಾ**, ೬. ೮)

ಜನ್ಮಭೂಮಿ – [ನಾ] ಹುಟ್ಟು ನೆಲ (ಈಗಳೀ ವನಾಂತರದೊಳೆ ಕಾಣಲಕ್ಕುಮೊ ಮದೀಯ ಮನೋರಥಜನ್ಮಭೂಮಿಯಂ: **ಪಂಪಭಾ**, ೫. ೧೪)

ಜನ್ಮಸ್ನಪನ – [ನಾ] ಜಿನನ ಜನನಕಲ್ಯಾಣ (ಇದು ಜನ್ಮಸ್ನಪನಕ್ಕೆ ನೂರ್ಮಡಿ ಮಿಗಿಲ್ ಕಲ್ಯಾಣಂ ಎಂದಟ್ಟಿರಿಂ ತ್ರಿದಶೇಂದ್ರಂ ತ್ರಿದಶಾಪುರುಷಪರಿವೃತಂ ಬಂದು: **ಆದಿಪು**, ೮. ೨೨)

ಜನ್ಮಾಭಿಷವಣ – [ನಾ] [ಜೈನ] ಜಿನನ ಜನ್ಮಾಭಿಷೇಕ ಕಲ್ಯಾಣ (ಶೇಷಾಶೇಷ ದೇವನಿಕಾಯಮಂ ಉಚಿತಸ್ಥಾನದೊಳ್ ನಿಱಿಸಿ ಜನ್ಮಾಭಿಷವಣಪರಿಣತಾಂತಃಕರಣನಾದಾಗಳ್: **ಆದಿಪು**, ೭. ೭೭ ವ)

ಜನ್ಮಾಭಿಷೇಕ – ಜನ್ಮಸವನ (ಅಮರೇಂದ್ರಾವಳಿ ಯಿಂದಮಿಂದ್ರಗಿರಿಯೊಳ್ ಜನ್ಮಾಭಿಷೇಕಕ್ಕೆ ನೋಂತು: **ಆದಿಪು**, ೬. ೨೦)

ಜನ್ಮಾಳಿ – [ನಾ] ಭವಾವಳಿ, ಹುಟ್ಟುಗಳ ಸಾಲು (ಕಥಾನಾಯಕಂ ಪುರುದೇವಂ ಕಥೆಯುಂ ತದಾದಿಪುರುಷಪ್ರಸ್ತುತ್ಯ ಜನ್ಮಾಳಿಬಂಧುರಂ: **ಆದಿಪು**, ೧. ೨೫)

ಜನ್ಮೋತ್ಸವ – [ನಾ] ಹುಟ್ಟಿದ ಹಬ್ಬ (ಪಾಂಡುರಾಜನುಮಂ ಕುಂತಿಯುಮಂ ಪರಸಿ ಕೂಸಿಂಗೆ ಜನ್ಮೋತ್ಸವಮಂ ಮಾಡಿ: **ಪಂಪಭಾ**, ೧. ೧೪೭ ವ)

ಜಪಾಪ್ರಸವ – [ನಾ] ದಾಸವಾಳದ ಹೂ (ಜಪಾಪ್ರಸವ ರಕ್ತಾಶೋಕ ಬಂಧೂಕಶೋಣಮಣಿಜ್ಯೋತಿಗಳಿಕ್ಕೆಯಿಂ ಕುಡೆ ಜಯಂ ಭದ್ರಂ ಶುಭಂ ಮಂಗಳಂ: **ಆದಿಪು**, ೧೬. ೩)

ಜಪಾಪ್ರಸೂನ – [ನಾ] ದಾಸವಾಳದ ಹೂ (ಅದೊಂದಿನಿಸು ಬೇಗದಿಂ ನವಜಪಾಪ್ರಸೂನಾಭಮಾಯ್ತು ಅದೊಂದಿನಿಸು ಬೇಗದಿಂ ಕನಕಕುಂಭದಂತಾಯ್ತು: **ಆದಿಪು**, ೧೨. ೭)

ಜಮದಗ್ನಿ – [ನಾ] ಯಜ್ಞದ ಅಗ್ನಿಯನ್ನು ನಿರಂತರವಾಗಿ ಉರಿಸುವವನು (ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ ಉದ್ಗಾತೃ ನೇತೃ ಹೋತೃ ಜಮದಗ್ನಿ ಆದಿಗಳಪ್ಪ ಷೋಡಶರ್ ಋತ್ವಿಜರ್ಕಳಿಂ: **ಪಂಪಭಾ**, ೬. ೩೩ ವ)

ಜಯಗಜ – [ನಾ] ರಾಜನ ಯುದ್ಧದ ಆನೆ (ದಾನಧಾರಾಸಾರಂ ಕೈಗಣ್ಮೆ ಕಣ್ಗೊಪ್ಪುವ ಜಯಗಜಮಂ ಲೀಲೆಯಿಂದೇಱಿ: **ಆದಿಪು**, ೧೩. ೪೩)

ಜಯಧ್ವಾನ – [ನಾ] ಜಯಘೋಷ (ಜಯಪ್ರಾರಂಭಮಂ ಸಾಱುವಂತೆ ಎಸೆದತ್ತು ಅಚ್ಚರಿಯಪ್ಪಿನಂ ಜಯಜಯಧ್ವಾನಂ ದಿಗಂತದೊಳ್: **ಪಂಪಭಾ**, ೯. ೮೬)

ಜಯಪತ್ರ – [ನಾ] [ತರ್ಕದಲ್ಲಿ] ಗೆದ್ದವನಿಗೆ ಕೊಡುವ ಪ್ರಶಸ್ತಿಪತ್ರ (ಖಚರೇಶ್ವರನೀಯೆ ಪಡೆದಂ ಅತ್ಯಾದರದಿಂ ಜಯಪತ್ರಮಂ ಸ್ವಯಂಬುದ್ಧಬುಧಂ: **ಆದಿಪು**, ೨. ೨೩)

ಜಯವನಿತೆ – [ನಾ] ಜಯಲಕ್ಷ್ಮಿ, ಗೆಲವೆಂಬ ಸ್ತ್ರೀ (ಪವನಾತ್ಮಜಂ ದ್ರುಪದಾತ್ಮಜೆಗೆ ಬಟೆಯನಟ್ಟುವುದುಂ ಆ ವನಿತೆ ಜಯವನಿತೆ ಬರ್ಪಂತೆ ಬಂದು: **ಪಂಪಭಾ**, ೧೨. ೧೫೦ ವ)

ಜಯಾಶೀರ್ಘೋಷ – [ನಾ] ಜಯವಾಗಲೆಂದು ಮಾಡುವ ಆಶೀರ್ವಾದ (ಗಣೋಚ್ಚಾರ ಝಂಕಾರ ಜಯಾಶೀರ್ಘೋಷಮಪ್ಪ ವಿಜಯಗಜದ ಬೆಂಗೆ ವಂದು: **ಆದಿಪು**, ೧೪. ೯೦ ವ)

ಜಯಾಸ್ತ್ರ – [ನಾ] ವಿನಾಯಕನು ಅರ್ಜುನನಿಗೆ ದಯಪಾಲಿಸಿದ ಅಸ್ತ್ರದ ಹೆಸರು (ತನಗೆ ವಿನಾಯಕಂ ದಯೆಯಿನಿತ್ತ ಜಯಾಸ್ತ್ರಮಂ ಉರ್ಚಿಕೊಂಡು ಭೋಂಕೆನೆ ಶರಾಸನದೊಳಾಂತು ಅದನಾಗಡೆ ಪೂಡಿ .. .. ಎಚ್ಚೊಡೆ: **ಪಂಪಭಾ**, ೧೨. ೧೬೮)

ಜರಠ – [ಗು] ಗಡುಸಾದ [ಅರಳದ] (ಅತಿಜರಠಕರ್ಣಿಕಾರಮುಕುಳ ಸ್ಥೂಳತ್ರಿಚತುರಸುವರ್ಣಮಣಿಬದ್ಧೋದ್ದುರಕಂಧರಂ: **ಆದಿಪು**, ೧೩. ೪೫ ವ)

ಜರತ್ – [ಗು] ಮುದಿಯಾದ (ಕಟಕಮಂ ಮೆಲ್ಲಮೆಲ್ಲನೊಡಗೊಂಡು ಬರ್ಪಂತು ಕೂರ್ಚಾಳ ತುಂದಿಳ ಜರತ್ ಸಾಮಂತ ಸಂದೋಹಕ್ಕಪ್ಪಯಿಸಿ: **ಆದಿಪು**, ೪. ೯೧ ವ)

ಜರತ್ತೃಣ – [ಜರತ್+ತೃಣ] ಒಣಹುಲ್ಲು (ಚಕ್ರವರ್ತಿಪದಮುಂ ತನಗಾವಗಮಾದೊಡಾ ಮಹಾಪುರುಷನದಂ ಜರತ್ತೃಣ ಕಣಾನುಗುಣಂ ವಲಮೆಂದೆ ಪೇಸಿದಂ: **ಆದಿಪು**, ೩. ೭೮)

ಜರತ್ಸಾಮಂತ – [ನಾ] ಮುದಿ ಸಾಮಂತ (ಕೂರ್ಚಾಳತುಂದಿಳ ಜರತ್ಸಾಮಂತ ಸಂದೋಹಕ್ಕಪ್ಪಯಿಸಿ ಶುಭದಿನ ಮುಹೂರ್ತದೊಳ್ ಪ್ರಯಾಣಭೇರಿಯಂ ಪೊಯಿಸಿ: **ಆದಿಪು**, ೪. ೯೧ ವ)

ಜರಾ – [ನಾ] ಮುಪ್ಪು (ತಪ್ತತಪನೀಯಚ್ಛಾಯನುಂ ಸಪ್ತಹಸ್ತೋಚ್ಛ್ರಯನುಂ ನಿದ್ರಾಲಸ ಅಕ್ಷಿನಿಮೇಷ ಜರಾ ಶೋಕ ವಿಷಾದ ವಿರಹಿತನುಂ: **ಆದಿಪು**, ೬. ೬೯ ವ)

ಜರಾಯುಪಟಲ – [ನಾ] ಗರ್ಭಕೋಶದ ಪೊರೆ (ಪಸರಿಸೆ ಜರಾಯುಪಟಲಂ ಪಸುಗೂಸುಗಳೊಡಲೊಳ್ ಅವನಗಲ್ಚುವ ಮತಿಯಂ ವಸುಮತಿಗಱಿಪಿ: **ಆದಿಪು**, ೬. ೬೫)

ಜರಿವೊನಲ್ – [ನಾ] ಬೆಟ್ಟದಿಂದ ಇಳಿದು ಬರುವ ಜಲಧಾರೆ (ಕಿಸುಗಾಡ ನೆಲಂಗಳ್ ಎಳದಳಿರ ಬಣ್ಣಮಂ ಕೆಯ್ಕೊಂಡು ವಿರಹಿಗಳ ಮನಮನೊಲಿಸುವಂತೆ ಜಲಜಲನೆ ಪರಿವ ಜರಿವೊನಲ್ಗಳುಮಂ .. .. ಪಯಣಂ ಬಂದು: **ಪಂಪಭಾ**, ೭. ೨೫ ವ)

ಜರ್ಜರಿತ – [ಗು] ಛಿದ್ರಗೊಂಡ (ಅನೇಕ ನೃಪ ಶಿರಃ ಕಪಾಳ ಶಕಳ ಜರ್ಜರಿತಮುಂ ಪರಸ್ಪರ ಸಮರ ರಭಸಸಮುತ್ಸಾರಿತಮುಂ: **ಪಂಪಭಾ**, ೧೩. ೫೧ ವ)

ಜರ್ಬು – [ನಾ] ಠೀವಿ, ದರ್ಪ (ಜರ್ವಿದ ಕಡೆಗಣ್ಣ ಜರ್ಬುಗಳೊ ಮೋದಿದ ನೀಳ ಸರೋಜಮಾಳೆಯಿಂದುದಿರ್ದು: **ಆದಿಪು**, ೪. ೧೦)

ಜರ್ವು – [ನಾ] [ಹುಬ್ಬು] ಹಾರಿಸುವಿಕೆ, [ಹುಬ್ಬು] ಹಾರಿಸು, (ಕುಱಿಪಂ ಪುರ್ವಿನ ಜರ್ವೆ ತೋಱಿ ಬಗೆಯಂ ಕಣ್ಸನ್ನೆಗಳ್ ಪೇೞಿ ತನ್ನೆಱಕಂ ತನ್ನ ಮನಕ್ಕೆ ಕೂಡೆ: **ಪಂಪಭಾ**, ೪. ೮೨)

ಜಲಕನೆ – [ಅ] ತಕ್ಷಣವೇ (ದೇವನ ದರಹಸಿತಾನನದೊಳ್ ತನಗೆ ಇಂಬುಕೆಯ್ದ ಬಗೆಯಂ ಪದಿನಾಲ್ಕನೆಯ ಮನು ಜಲಕನಱಿದು: **ಆದಿಪು**, ೮. ೧೫)

ಜಲಕ್ಕಗೆ ಮಾಡು – [ಕ್ರಿ] ನಿರ್ಮಲವಾಗಿಸು, ಸ್ಫಟಿಕದಂತೆ ಶುಭ್ರವಾಗಿಸು (ಈ ಧರ್ಮಮಂ ನೀಂ ಜಲಕ್ಕಗೆ ಮಾಡಲ್ಬಗೆದರ್ಪುದೆಂದು ನಯದಿಂ ಸಾಕೇತಂ ಉತ್ಕೇತುಬಾಹುಗಳಿಂದಂ ಕರೆವಂತೆ: **ಆದಿಪು**, ೭. ೨)

ಜಲಕ್ಕನೆ – [ಅ] ಸ್ಪಷ್ಟವಾಗಿ (ಸಿರಿ ಸಾರ್ತರೆ ಸಾರ್ವುದು ಅದರ್ಕೆ ಸಂದೆಯಂಬಡದೆ ಜಲಕ್ಕನೆ ಈಗಳ್ ಅಱಿದೆಂ ಸಿರಿ ಕಳ್ಕೊಡವುಟ್ಟಿತೆಂಬುದಂ: **ಪಂಪಭಾ**, ೨. ೪೯); [ಅ] ವಿಶದವಾಗಿ, ವಿವರವಾಗಿ (ಇತ್ತ ದುರ್ಯೋಧನನ ಗೂಢಪ್ರಣಿಧಿಗಳ್ ಆ ಮಾತಂ ಜಲಕ್ಕನಱಿದು ನಾಗಪುರಕ್ಕೆ ವಂದು: **ಪಂಪಭಾ**, ೮. ೮೨ ವ); [ಅ] ಶುಚಿಯಾಗಿ (ಅನಂತನುಂ ತಾನುಂ ಜಲಕ್ಕನಿರೆ ಪಲ್ಲಂ ಸುಲಿದು ಅಗಣ್ಯಪುಣ್ಯ ತೀರ್ಥೋದಕಂಗಳಂ ಮಿಂದು ಮಂಗಳವಸದನಂಗೊಂಡು: **ಪಂಪಭಾ**, ೧೦. ೪೬ ವ)

ಜಲಕ್ರೀಡೆ – [ನಾ] ನೀರಾಟ, ಈಜುವುದು (ಬೇಂಟೆಯನಾಡಿ ಬೞಲ್ದು ಬೇಸಗೆಯ ನಡುವಗಲೊಳ್ ವನಕ್ರೀಡೆಗಂ ಜಲಕ್ರೀಡೆಗಂ ಆಸಕ್ತರಾಗಿ ಯಮುನಾನದೀತಟ ನಿಕಟವರ್ತಿಗಳಾದರ್: **ಪಂಪಭಾ**, ೫. ೫೧ ವ)

ಜಲದುರ್ಗ – [ನಾ] ನೀರಿನ ನಡುವೆ ರಚಿತವಾದ ಕೋಟೆ (ಉಗ್ರ ಮದಾಂಧಸಿಂಧುರಪ್ರತಿಗಜಶಂಕಾಸ್ಫಾಲಿತಗಂಡಶೈಲ ವಿಘಟಿತ ಗಿರಿದುರ್ಗನುಂ .. .. ಜಾನುದಘ್ನಜಲದುರ್ಗನುಮಾಗಿ ನಡೆದುಂ: **ಆದಿಪು**, ೧೪. ೫೨ ವ)

ಜಲದೇವತೆ – [ನಾ] ನೀರಿನಲ್ಲಿ ನೆಲಸಿರುವ ದೇವತೆ (ಅಂತು ನಡನಡನಡುಗಿ ಜಲದೇವತೆಗಳಪ್ಪೊಡಂ ಮನಂಗಾಣ್ಬರೆಂದು ನಿಧಾನಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳ್: **ಪಂಪಭಾ**, ೧. ೯೫ ವ)

ಜಲನಿಧಿ – [ನಾ] ಸಮುದ್ರ (ಉಭಯಬಲದರಸುಗಳ್ .. .. ಕೆಯ್ವೀಸೆ ಲಯಕ್ಷುಭಿತ ಜಲನಿಧಿನಿನಾದಮಂ ಅಭಿನಯಿಸಿದುದು ಒಗೆದು ನೆಗೆದ ಸಮರ ಆರಾವಂ: **ಪಂಪಭಾ**, ೧೧. ೩೪)

ಜಲಪ್ಲವ – [ನಾ] ನೀರಿನ ಪ್ರವಾಹ (ಸಮುನ್ಮಿಷದ್ವಿವಿಧ ರತ್ನಮಾಲಾ ಪ್ರಭಾಭಿದಾರುಣ ಜಲಪ್ಲವಾವಿಳ ವಿಳೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ: **ಪಂಪಭಾ**, ೧. ೫೧*)

ಜಲಭೃಚ್ಚಾಪ – [ನಾ] [ಜಲಭೃತ್+ಚಾಪ] ಮಳೆಬಿಲ್ಲು ಕಾಮನಬಿಲ್ಲು (ಆ ಪುರದ ರತ್ನಭವನ ಕಳಾಪದ್ಯುತಿ ನೆಗೞೆ ಗಗನತಳದೊಳ್ ಜಲಭೃಚ್ಚಾಪರುಚಿಗೆತ್ತು: **ಆದಿಪು**, ೨. ೧೭)

ಜಲಲವ – [ನಾ] ನೀರ ಹನಿ (ಪೊಳೆದುವು ಅವನೀಶ್ವರಕಾಂತಾವದನಂಗಳ್ ಸ್ವೇದಜಲಾವಳಿಯಿಂ ಸಜಲಲವಸರೋಜಂಗಳವೋಲ್: **ಆದಿಪು**, ೧೧. ೫೩)

ಜಲಶಯನ – [ನಾ] ನೀರಹಾಸಿಗೆ (ರಸೆಯೊಳ್ ಕಾಲಾಗ್ನಿರುದ್ರಂ ಜಲಶಯನದೊಳ್ ಅಂಭೋಜನಾಭಂ ಪೊದಳ್ದು ಆಗಸದಿಂ ಸುತ್ತಿರ್ದ ಅಜಾಂಡೋದರದೊಳ್ ಅಜಂ ಅಡಂಗಿರ್ಪವೋಲ್: **ಪಂಪಭಾ**, ೮. ೮೬); [ನಾ] ವಿಷ್ಣು (ಜಲಶಯನೋದರಾಂತರದಿನೀ ತ್ರಿಜಗಂ ಪೊಱಮಟ್ಟುದೀಗಳ್ ಎಂಬುಲಿ ಸಲೆ: **ಪಂಪಭಾ**, ೧೦. ೫೨)

ಜಲಸ್ತಂಭ – [ನಾ] ಪ್ರವಾಹವನ್ನು ತಡೆಯುವ ವಿದ್ಯೆ (ಪತಿಯ ಜಳಸ್ತಂಭದ ಪರಿಣತಿ ದಲಿದಲ್ಲದೊಡೆ ಜಳಪಥಂ ಸ್ಥಳಪಥದಂತೆ ಅತಿಸುಗಮಮಾಗದು: **ಆದಿಪು**, ೧೨. ೮೩)

ಜಲಾರ್ದ್ರ – [ಗು] ನೀರಲ್ಲಿ ತೋಯಿಸಿದ (ಪರಸುವ ಪೌರವೃದ್ಧರ ಕುಲಾಂಗನೆಯರ್ಕಳ ಸಾಧುವಾದದೊಳ್ ಬೆರಸಿ ಸಮಂತು ಸೂಸುವ ಜಲಾರ್ದ್ರಲಸದ್ಧವಳಾಕ್ಷತಂಗಳೊಳ್: **ಪಂಪಭಾ**, ೨. ೯೫)

ಜಲ್ಲಳಿ – [ನಾ] ಜರಡಿ (ತಳದಳಿಪ ಮುಗಿಲ್ಗಳ್ ಕಳಕುಳಮಪ್ಪಿನಂ ಅಳುರ್ದು ಜಯನ ಶರತತಿ ಕೊಳೆ ಜಲ್ಲಳಿಯ ಮಱೆವೊಕ್ಕವೊಲ್ ಕಳಕುಳಮಾದರ್ ನಾಗರಾಜರ್: **ಆದಿಪು**, ೧೩. ೬೫)

ಜವ – [ನಾ] [ಯಮ] ಮೃತ್ಯುದೇವತೆ (ಈಶ್ವರನ ಪ್ರಭುಶಕ್ತಿಯುಮಂ ಜವನ ಬಲ್ಲಾಳ್ತನಮುಮಂ ಸಿಂಹದ ಕಲಿತನಮುಮಂ ಅವರವರ ದೆಸೆಗಳಿಂ ತೆಗೆದೊಂದುಮಾಡಿ: **ಪಂಪಭಾ**, ೧. ೧೩೯ ವ); [ನಾ] ವೇಗ (ಜವಂ ಉೞಿದೊಂದು ಸೋಗೆನವಿಲ್ ಒಯ್ಯನೆ ಕರ್ಕಡೆಗಾಸಿಯಾಗಿ ಪಾಱುವುದುಂ: **ಪಂಪಭಾ**, ೫. ೫೧)

ಜವಂಗಿಡು – [ಕ್ರಿ] ಶಕ್ತಿಗುಂದು, ವೇಗ ಕುಂದು (ಜವಂಗಿಡದೆ ಮುಟ್ಟೆ ಬರ್ಪ ಜವನಂ ಜವಂಗುಂದಿಸಲ್ ಜವಂಗೆ ಜವನಾಗಲ್ ಇಂ ಪೆಱರ್ಗೆ ತೀರ್ಗುಮೆ: **ಆದಿಪು**, ೧೩. ೮೮)

ಜವಂಗುಂದಿಸು – [ಕ್ರಿ] ಜವಂಗಿಡಿಸು (ಜವಂಗಿಡದೆ ಮುಟ್ಟೆ ಬರ್ಪ ಜವನಂ ಜವಂಗುಂದಿಸಲ್ ಜವಂಗೆ ಜವನಾಗಲ್ ಇಂ ಪೆಱರ್ಗೆ ತೀರ್ಗುಮೆ: **ಆದಿಪು**, ೧೩. ೮೮)

ಜವಂಜವ – [ನಾ] ಹುಟ್ಟುಸಾವುಗಳ ಪರಂಪರೆ, ಸಂಸಾರ (ಆ ಮಹಾನುಭಾವಂ ಆ ಜವಂಜವವಿಭಾವಕ್ಕೆ ಏವಯಿಸಿ: **ಆದಿಪು**, ೪. ೬೭ ವ)

ಜವಜವಾಗು – [ಕ್ರಿ] ದುರ್ಬಲಗೊಳ್ಳು (ಜವಂ ಜವಜವಾಗಿ ಮುಟ್ಟುಗಿಡುವನ್ನಮಿನ್ನಾ ಜವಂ ಜವವ್ಯಸನಪುಂಜಮಂ ಕಿಡಿಪುದು: **ಆದಿಪು**, ೧೩. ೮೮)

ಜವನಿಕೆ – [ನಾ] [ಯವನಿಕಾ] ತೆರೆ (ನಿಲ್ತು ಜವನಿಕೆಯ ಮಱೆಯೊಳ್ ಪೋಲ್ತಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯಂ: **ಆದಿಪು**, ೯. ೨೦)

ಜವಮುಟಿ – [ಕ್ರಿ] ವೇಗವನ್ನು ಬಿಡು (ಜವಮುಟಿದೊಂದು ಸೋಗೆನವಿಲ್ ಒಯ್ಯನೆ ಕರ್ಕಡೆಗಾಸಿಯಾಗಿ ಪಾಱುವುದುಂ: **ಪಂಪಭಾ**, ೫. ೫೧)

ಜವ್ವನ – [ನಾ] ಯೌವನ (ಮದುವೆಯಂ ನಿಲಲೊಲ್ಲದಟ್ಟಿ ಕಳೆದೊಡೆನ್ನ ದೆವಸಮುಂ ಜವ್ವನಮುಂ ಅಡವಿಯೊಳಗೆ ಪೂತ ಪೂವಿನಂತೆ ಕಿಡಲೀಯದೆ: **ಪಂಪಭಾ**, ೧. ೭೬ ವ)

ಜವ್ವನಮತ್ತೆ – [ನಾ] ಪ್ರಾಯದ ಮತ್ತಿನಿಂದ ಕೂಡಿದವಳು (ಅವಳುಮಪ್ಪೊಡೆ ಜವ್ವನಮತ್ತೆ ನಾಣ ಕಾಪದು ಪಿರಿದು ಓತು ಮಾತಡಕಲ್ ಒಂದಿದ ದೂದವರಿಲ್ಲ: **ಪಂಪಭಾ**, ೪. ೭೯)

ಜಸ – [ನಾ] ಯಶಸ್ಸು, ಕೀರ್ತಿ (ಜಗತ್ತ್ರಿತಯಂಗಳೊಳ್ ಜಸಕ್ಕೆ ಆಗರಮಾದ ಬದ್ದೆಗನಿಂ ಆ ನರಸಿಂಹನಿಂ ಅತ್ತಲ್ನಾಲ್ವೆರಲ್ ಮೇಗು ಪೊದಳ್ದ ಚಾಗದೊಳಂ ಒಂದಿದ ಬೀರದೊಳಂ ಗುಣಾರ್ಣವಂ: **ಪಂಪಭಾ**, ೧. ೫೦)

ಜಸಕ್ಕೆ ನೋನ್ – [ಕ್ರಿ] ಹಂಬಲಿಸು, ವ್ರತಹಿಡಿ (ಇನಂ ಮಂತಣದಿಂದೆ ಬಾರಿಸೆಯುಂ ಎಂದುದನೆನ್ನದೆ ಮೀಱಿ ಕೊಟ್ಟಂ ಓರಂತು ಜಸಕ್ಕೆ ನೋಂತು ನೆರ್ದೊಡಲೊಳ್ ತೊಡರ್ದಾ ತನುತ್ರಮಂ: **ಪಂಪಭಾ**, ೯. ೬೨)

ಜಳಜ – [ನಾ] ಕಮಲ (ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿಪರಿಮಳಮಿಳಿತ ಉಲ್ಲುಳಿತ ಅಳಿ ಜಲಜಮಾಯ್ತು ಆ ಜಳಜದೊಳಗೆ ಒಗೆದಂ ಹಿರಣ್ಯಗರ್ಭಂ: **ಪಂಪಭಾ**, ೧. ೫೯)

ಜಳದ – [ನಾ] ಮೋಡ (ಕವಿದುವು ಕಾಳನೀಳ ಜಳದಾವಳಿ ವಾರಿಧಿಗಳ್ ಧರಿತ್ರಿಯಂ ಕವಿದುವು: **ಪಂಪಭಾ**, ೨. ೭೭)

ಜಳದಸಮಯ – [ನಾ] ಮಳೆಗಾಲ (ಪರಿಪಕ್ವರಾಜಜಂಬೂದ್ರುಮ ವಿಸ್ತಾರಂ ಶಿಖಂಡಿತಾಂಡವಸಾರಂ ನವಜಳದಸಮಯಂ ಏನೆಸೆದಪುದೋ: **ಆದಿಪು**, ೧೧. ೮೮)

ಜಳದಾನ – [ನಾ] ತರ್ಪಣ (ವಾರಣಾವತಕ್ಕೆ ಪೋಗಿ ತದರ್ಧ ದಗ್ಧ ಕಳೇವರಂಗಳಂ ಸಂಸ್ಕರಿಸಿ ಜಳದಾನಾದಿ ಕ್ರಿಯೆಗಳಂ ಮಾಡಿ: **ಪಂಪಭಾ**, ೩. ೮ ವ)

ಜಳದೆ – [ನಾ] ಬಾಳದ ಬೇರಿನ ಬೀಸಣಿಗೆ (ಕುಳಿರ್ವ ತಿಳಿನೀರಂ ಉಡುಗದೆ ತಳಿ ತಳಿರಂ ಪಾಸು ಜಳದೆಯಿಂ ಬೀಸು: **ಆದಿಪು**, ೨. ೧೪)

ಜಳಧರ – [ನಾ] ಮೋಡ (ಅನ್ನೆಗಂ ಕಪ್ಪಂಗವಿಯಾಗಿ ಕವಿವ ದ್ರುಪದವಿಳಯಾನಿಳನಂ ದ್ರೋಣಂ ಮಹಾದ್ರೋಣ ಪುಷ್ಕಳಾವರ್ತಕಂಗಳೆಂಬ ವಿಳಯಕಾಳನೀಳ ಜಳಧರ ವರ್ಷಂಗಳಿಂ ನಂದಿಸೆಯುಂ: **ಪಂಪಭಾ**, ೧೨. ೨೦ ವ)

ಜಳಧರಧ್ವನಿ – [ನಾ] ಮೋಡದ ಸದ್ದು, ಗುಡುಗು (ಎಂಬುದುಂ ಜಳಧರಧ್ವನಿಯಿಂ ಅಶ್ವತ್ಥಾಮನಿಂತೆಂದಂ: **ಪಂಪಭಾ**, ೧೩. ೨೪ ವ)

ಜಳಧರನಿನಾದ – [ನಾ] ಮೋಡದ ಸದ್ದು, ಗುಡುಗು (ಎಂದು ವಿಳಯಕಾಳಜಳಧರನಿನಾದದಿಂ ಗಿರಿ ತಾಟಿಸಿದಂತಾನುಂ ನೆಲಂ ಮೊಟಗಿದಂತೆ: **ಪಂಪಭಾ**, ೭. ೧೫ ವ)

ಜಳಧರರೂಪ – [ನಾ] ಮೋಡದ ಆಕಾರ (ಅಂತು ನೋಡೆ ನೋಡೆ ಶರತ್ಸಮಯಸಮುದಿತ ಜಳಧರರೂಪದಿಂದ ಅದೃಶ್ಯರೂಪನಾಗಿ: **ಆದಿಪು**, ೩. ೮ ವ)

ಜಳಧರಸಮಯ – [ನಾ] ಮಳೆಗಾಲ (ಜಳಧರಸಮಯನಿಶಾ ಸಂಚಲಿತ ವಿದ್ಯುತ್ ಪಿಂಗಳಾಕ್ಷಪಾತಂಗಳಿಂ ದೆಸೆಗಳಂ ನುಂಗುವಂತೆ ಮುಳಿದು ನೋಡಿ: **ಪಂಪಭಾ**, ೧೩. ೭೫ ವ)

ಜಳಧಿನಾದ – [ನಾ] ಸಮುದ್ರಘೋಷ (ಮಹಾಪ್ರಳಯಜಳಧಿ ನಾದದಿಂ ಇರದೆ ಉಚ್ಚಳಿಸಿ ನುಡಿದಂ ತೆ ಕಳೆ ಕಳೆ ಗರಿಗೆತ್ತಿದ ಅನರ್ಘ್ಯದರ್ಘ್ಯಮಂ ಧರ್ಮಸುತಾ: **ಪಂಪಭಾ**, ೬. ೪೨)

ಜಳಧಿನಿನದ – [ನಾ] ಸಮುದ್ರದ ಭೋರ್ಗರೆತ (ಕಾಳಾಂತ ಪವನಹತಿ ಕಲ್ಲೋಳವಿಳ ಜಳಧಿನಿನದಮೋ ನಿರ್ಘಾತಾಭೀಳತರ ರಭಸಮೋ ಲಯಕಾಳಾಂಬುದಘೋಷಮೋ ನೆಲಂ ಮೊಟಗಿದುದೋ: **ಆದಿಪು**, ೧೨. ೯೧)

ಜಳಧಿಯೊಳಾಗು – [ಕ್ರಿ] ಸಮುದ್ರದಲ್ಲಿ ಹುಟ್ಟು (ಜಳಧಿಯೊಳಾದ ಮುತ್ತುಗಳವೇಂ ಪೊಸತಾದುವೆ: **ಪಂಪಭಾ**, ೧೦. ೪೬)

ಜಳನಿಧಿ – [ನಾ] ಸಮುದ್ರ (ಅಂತು ವಿಳಯಕಾಲಜಳನಿಧಿಗಳಂತೆ ಮೇರೆದಪ್ಪಲ್ ಬಗೆದ ತನ್ನ ನಾಲ್ವರ್ ತಮ್ಮಂದಿರ ಮುನಿದ ಮೊಗಮಂ ಕಂಡು: **ಪಂಪಭಾ**, ೭. ೮ ವ)

ಜಳನಿಧಿನಿನದ – [ನಾ] ಸಮುದ್ರಘೋಷ (ಬೆಡಂಗೊದವಿರೆ ತೋಱಿದರ್ ಅವರೊರ್ಮೊದಲೆ ಜನಂ ಪೊಗಟ್ ನಗಟ್ ಜನಿಧಿನಿನದಂ: **ಪಂಪಭಾ**, ೨. ೭೧)

ಜಳಪಥ – [ನಾ] ನೀರ ಮೇಲಿನ ದಾರಿ, ಸಮುದ್ರದ ದಾರಿ (ಪತಿಯ ಜಳಸ್ತಂಭದ ಪರಿಣತಿ ದಲಿಲ್ಲದೊಡೆ ಜಳಪಥಂ ಸ್ಥಳಪಥದಂತೆ ಅತಿ ಸುಗಮಮಾಗದು: **ಆದಿಪು**, ೧೨. ೮೩)

ಜಳಪ್ರವೇಶ – [ನಾ] ನೀರಲ್ಲಿ ಹೊಗುವುದು (ಜಳಪ್ರವೇಶಂ ಇಲ್ಲಿಗೆ ಪದನೆಂದು ನಿಶ್ಚಯಿಸಿ ವಾರಿಜನಾಥಂ ಅನಾಥನಾಗಿ ತೊಟ್ಟನೆ ಮುಟುಪಂತೆವೊಲ್ ಮುಟುಗಿದಂ: **ಪಂಪಭಾ**, ೧೩. ೧೦೬)

ಜಳಬುದ್ಬುದ – [ನಾ] ನೀರಿನ ಗುಳ್ಳೆ ನೀರಿನ ಗುಳ್ಳೆ (ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿಪರಿಮಳಮಿಳಿತ ಉಲ್ಲುಳಿತ ಅಳಿ ಜಲಜಮಾಯ್ತು ಆ ಜಳಜದೊಳಗೆ ಒಗೆದಂ ಹಿರಣ್ಯಗರ್ಭಂ: **ಪಂಪಭಾ**, ೧. ೫೯)

ಜಳಮಂತ್ರ – [ನಾ] ಜಲಸ್ತಂಭನವಿದ್ಯೆ (ಎನ್ನ ಪೇೞ್ದ ಜಳಮಂತ್ರೋಪದೇಶಮಂ ಕೆಯ್ಕೊಂಡು: **ಪಂಪಭಾ**, ೧೩. ೭೦ ವ)

ಜಳರಾಶಿ – [ನಾ] ಸಮುದ್ರ (ಉದಗ್ರ ವಿರೋಧಿಮದೇಭಮಸ್ತಕಸ್ಥಳ ಜಳರಾಶಿಯೊಳ್ ಬಳೆದ ನಿರ್ಮಳನಿರ್ವ್ರಣವೃತ್ತ ಮೌಕ್ತಿಕಾವಳಿಯನೆ ತರ್ಪುದು: **ಪಂಪಭಾ**, ೧೦. ೪೬)

ಜಳರುಹನಾಭ – [ನಾ] ತಾವರೆಯನ್ನು ನಾಭಿಯಲ್ಲಿ ಪಡೆದವನು, ವಿಷ್ಣು (ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿಪರಿಮಳಮಿಳಿತ ಉಲ್ಲುಳಿತ ಅಳಿ ಜಲಜಮಾಯ್ತು ಆ ಜಳಜದೊಳಗೆ ಒಗೆದಂ ಹಿರಣ್ಯಗರ್ಭಂ: **ಪಂಪಭಾ**, ೧. ೫೯)

ಜಳವಿಹಂಗಮ – [ನಾ] ನೀರು ಹಕ್ಕಿ (ಜಳವಿಹಂಗಮ ಭೃಂಗನಿನಾದವ್ಯಾಪ್ತ ಸರೋವರಸಂಕುಳಂಗಳೊಳೆ ಪೂತ ಅದಿರ್ಮುತ್ತೆಯ: **ಆದಿಪು**, ೪. ೫೮)

ಜಳವಿಹಗ – [ನಾ] ನೀರು ಹಕ್ಕಿ (ಬಳಸಿ ಜಳವಿಹಗ ಜಳಚರ ಜಳಜೋತ್ಪಳಕಳಿತಂ ಅಮಳಜಳಕೇಳೀವಿಳಸನ ವಿದಗ್ಧಖೇಚರ ನಿಳಿಂಪದಂಪತಿಯಿನಂಬುಖಾತಿಕೆ ರಯ್ಯಂ: **ಆದಿಪು**, ೧೦. ೨೬)

ಜಳಸ್ತಂಭ – [ನಾ] ತೊಂದರೆಯಾಗದಂತೆ ನೀರನ್ನು ತಡೆಯುವ ವಿದ್ಯೆ (ಪತಿಯ ಜಳಸ್ತಂಭದ ಪರಿಣತಿ ದಲಿಲ್ಲದೊಡೆ ಜಳಪಥಂ ಸ್ಥಳಪಥದಂತೆ ಅತಿ ಸುಗಮಮಾಗದು: **ಆದಿಪು**, ೧೨. ೮೩)

ಜಳಸ್ತಂಭನಮಂತ್ರ – [ನಾ] ನೀರಲ್ಲಿದ್ದೂ ತೊಂದರೆಯಾಗದಂತೆ ತಡೆಯುವ ವಿದ್ಯೆ (ರಾಜರಾಜಂ ಸೈರಿಸದೆ ಚಿತ್ತಸ್ಖಲನೆಯಾಗೆ ಜಳಸ್ತಂಭನಮಂತ್ರಮೆಲ್ಲಂ ಮಾಯಾಮಂತ್ರಮಾಗೆ: **ಪಂಪಭಾ**, ೧೩. ೮೦ ವ)

ಜಳಸ್ಥಳಯಾತ್ರಾ – [ನಾ] ನೀರಲ್ಲಿ ಮತ್ತು ನೆಲದ ಮೇಲಿನ ಪ್ರಯಾಣ ವೈಶ್ಯವರ್ಣ (ವಣಿಗ್ವಂಶಕ್ಕೆ ಜಳಸ್ಥಳಯಾತ್ರಾಸಂವೃತಮರ್ಥ ಪ್ರವರ್ತನಮುಮಂ: **ಆದಿಪು**, ೮ ೭೩ ವ)

ಜಳಸ್ಥಳಾವಿಳಂಬಿ – [ಗು] ನೀರು ನೆಲಗಳಲ್ಲಿ ವೇಗವಾಗಿ ಚಲಿಸುವ (ದಿವ್ಯಾಸ್ತ್ರಂಗಳಂ ತೆಕ್ಕನೆ ತೀವಿ ಜಳಸ್ಥಳಾವಿಳಂಬಿಗಳಪ್ಪ ಗಿಳಿಯ ಬಣ್ಣದ ಕುದುರೆಗಳೊಳ್ ಪೂಡಿದ ಅಜಿತಂಜಯಮೆಂಬ ರಥಮನೇಱೆ: **ಆದಿಪು**, ೧೨. ೭೪ ವ)

ಜಳಸ್ಯಂದೀ – [ಗು] ನೀರಿನ ಸುರಿತದಿಂದ (ಕಂಚ ಆಕಸ್ಮಿಕ ಪಾಂಸುಪಲ್ಲವ ಜಳಸ್ಯಂದೀ ಸದಾಸಿಂಧುರ್ ಅಪ್ರಾಗೇಯಂ ಪ್ರಿಯಗಳ್ಳಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ**, ೯. ೯೭)

ಜಳಾಂಜಳಿ – [ನಾ] ತರ್ಪಣ (ನೆಲನಂ ಕೊಟ್ಟಂ ಇನಾತ್ಮಜಾತಂ ಎನಗೆ ಆಂ ತಕ್ಕೂರ್ಮೆಯಿಂದಂ ಜಳಾಂಜಳಿಯುಮಂ ಕೊಟ್ಟೆನುಮಿಲ್ಲ: **ಪಂಪಭಾ**, ೧೩. ೬೦)

ಜಳಾವಗಾಹ – [ನಾ] ನೀರಲ್ಲಿ ಮುಳುಗು, ಸ್ನಾನಮಾಡು (ಬಂದು ಶಮಂತಪಂಚಕಂಬರಂ ಇಟೆದು ಅಲ್ಲಿ ಸಂಗರಪರಿಶ್ರಮಮಂ ಕಳೆಯೆಂದು ಮಯ್ಯುನಂಬೆರಸು ಜಳಾವಗಾಹದೊಳಿರುತ್ತೆ: **ಪಂಪಭಾ**, ೧೧. ೧೧೦)

ಜಱುಚು – [ಕ್ರಿ] ವ್ಯರ್ಥವಾದ ಮಾತುಗಳಾಡು (ನೆಲನಂ ದುರ್ಯೋಧನಂ ತಾಗಿ ತಳ್ತಿಱಿದಲ್ಲದೆ ಕೂಡಂ ಆಜಿಭರಮುಂ ಸಾರ್ಚಿತ್ತು ಅದೇನೆಂದು ಮುನ್ನಱುದಿಂಗಳ್ ಜಱುಚುತ್ತುಮಿರ್ಪುದೆ: **ಪಂಪಭಾ**, ೯. ೯೨)

ಜಾಂಗಳ – [ನಾ] [ಜಾಂಗಲ] ಮಾಂಸ (ಸದ್ಯಃ ಸಂತಾಪಿತ ಲೋಹಪುತ್ರಿಕಾಪರಿರಂಭಸಂಭೃತ ಪ್ಲೋಷಚಲಜ್ಜಾಂಗಳ ಗಳತ್ ರುಧಿರ: **ಆದಿಪು**, ೫. ೮೭ ವ); [ನಾ] ಬರಡುಭೂಮಿ (ಬಟಿಕಂ ದೇವಮಾತೃಕ ಸಾಧಾರಣ ಅನೂಪ ಜಾಂಗಳ ಭೇದಂಗಳುಮಂ ಅಂತಪಾಳ ಪಾಳಿತದುರ್ಗ ಪರಿವೃತಾಂತಂಗಳುಂ: **ಆದಿಪು**, ೮. ೫೪ ವ)

ಜಾಂಗಳಿವಿದ್ಯಾ – [ನಾ] ವಿಷವೈದ್ಯ (ಭೋಜನಭೂಮಿಗೆ ರಾಜಹಂಸವಿಳಾಸದಿಂ ಬಿಜಯಂಗೆಯ್ದು ಜಾಂಗಳೀವಿದ್ಯಾ ಪ್ರವೀಣ ಪ್ರಾಣಚಾರ್ಯ ಪರಿವೃತನ್: **ಆದಿಪು**, ೧೧. ೨೬ ವ) [ಎಲ್. ಬಸವರಾಜು ಅವರ ಆವೃತ್ತಿ]

ಜಾಂಬೂನದ – [ನಾ] ಚಿನ್ನ (ಅತಿಸುರಭಿಸುರಸಸುರುಚಿ ಫಲನಿಚಯಂಗಳಿಂದಂ ಮತ್ತಂ ಉತ್ತಪ್ತ ಜಾಂಬೂನದ ಕುಸುಮದಾಮಂಗಳಿಂದಂ: **ಆದಿಪು**, ೨. ೩೨ ವ)

ಜಾಗ – [ನಾ] ಶುಭಕಾರ್ಯದಲ್ಲಿ ಅಂಕುರಾರ್ಪಣದ ಅಂಗವಾಗಿ ಪಾತ್ರೆಯಲ್ಲಿ ಬೆಳೆಯುವ ಪೈರು (ಪಚ್ಚೆಯ ಪಸಲೆಯ ಪಸುರಂ ಅಸಕಟೆದು ನಿಮಿರ್ದ ನೆಲವಡಲಿಗೆಯ ಜಾಗಂಗಳುಮಂ: **ಆದಿಪು**, ೮. ೧೫ ವ)

ಜಾಗಂಬೊಯ್ – [ಕ್ರಿ] ಜಾಗದ[ಲ್ಲಿ] ಪೈರು ಬೆಳೆಸು (ರತ್ನದ ಕೇರ್ಗಳ್ ಜಾಗಂಬೊಯ್ದಂತಿರೆ ಪರಭಾಗಂಬಡೆದುವು ವಿವಾಹಗೇಹಾಂತರದೊಳ್: **ಆದಿಪು**, ೪. ૩೧)

ಜಾಗರ – [ನಾ] ಎಚ್ಚರ (ಅಂತು ಆ ಇರುಳ ನಾಲ್ಕು ಜಾವಮುಮಂ ಕಾಮನ ಜಾಗರದಂತೆ ಅವರ್ಗೆ ಕೆಂದಿನೊಳೆ ಬೆಳಗಾಗೆ: **ಪಂಪಭಾ**, ೩. ೮೩ ವ)

ಜಾಜು – [ನಾ] [ಧಾತು] ಕೆಂಪಾದ ಕಲ್ಲು, ಕಾವಿ ಕಲ್ಲು (ಕರಿಘಟೆಗಳ್ ಒಂದೊಂದಱೊಳ್ ತಾಗಿ ತಟ್ಟಿಱಿಯೆ ಬಿಸುನೆತ್ತರ ಅರ್ಬಿಗಳ್ ಉರ್ವಿ ಪಾಯೆ ಪೇರರ್ವಿಗಳ್ವೆರಸು ಜಾಜಿನ ಪರ್ವತಂಗಳಂತೆ ಕೆಡೆದಟ್ಟೆತಟ್ಗೆದಾಗಳ್: **ಪಂಪಭಾ**, ೧೦. ೯೬ ವ)

ಜಾತ – [ಗು] ಉಂಟಾದ, ಹುಟ್ಟಿದ (ಕ್ರಂದತ್ ಸ್ಯಂದನ ಜಾತ ನಿರ್ಗತ ಶಿಖಿಜ್ವಾಳಾಸಹಸ್ರಂಗಳ್ ಆಟಂದೆತ್ತಂ ಕವಿದೇಟ್ವ ಬೇವ ಶವಸಂಘಾತಂಗಳಂ: **ಪಂಪಭಾ**, ೧೩. ೭೧)

ಜಾತಕರ್ಮ – [ನಾ] ಹುಟ್ಟಿದಾಗ ಮಾಡುವ ಸಂಸ್ಕಾರ (ಅಂತವರ್ಗೆ ಜಾತಕರ್ಮ ನಾಮಕರಣಾನ್ನಪ್ರಾಶನಚೌಲೋಪನಯನಾದಿ ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ: **ಪಂಪಭಾ**, ೧, ೮೭, ವ)

ಜಾತದಯ – [ನಾ] ದಯಾವಂತ (ಎಲ್ಲಂದದಿಂ ಸೂಚಿತಾಭ್ಯುದಯಂ ಜಾತದಯಂ ಮನಂಗೊಳಿಸಿದಂ ಸಂಸಾರಸಾರೋದಯಂ: **ಆದಿಪು**, ೩. ೯೨)

ಜಾತರೂಪ – [ನಾ] ಚಿನ್ನ (ಮಾನುಷೋತ್ತರ ಪರ್ವತಮನಿಳಿಸುವ ಜಾತರೂಪಮಯವಿಶಾಲವಳಯದೊಳಗೆ: **ಆದಿಪು**, ೧೦. ೩೩ ವ); [ನಾ] ಬೆತ್ತಲೆ, ದಿಗಂಬರ ಜೈನರ ಸನ್ಯಾಸ (ತದ್ಗುರುವಿನ ಮತಮಂ ಭಕ್ತಿಯ ಭರದಿಂದಂ ಜಾತರೂಪಮಮಂ ಕೈಕೊಂಡರ್: **ಆದಿಪು**, ೯. ೮೧)

ಜಾತರೂಪಧರ – [ನಾ] ದಿಗಂಬರ ಸನ್ಯಾಸಿ (ವೀರಸಂಸ್ಥಾನಾರೂಢನಂ ಮಹಾಬಳನಂ ಜಾತರೂಪಧರನಂ ಮಾಡಿ: **ಆದಿಪು**, ೨. ೫೧ ವ)

ಜಾತವೇದ – [ನಾ] ಅಗ್ನಿ (ಗಣನಾತೀತ ಆಜ್ಯಾಹುತಿಗಣದಿಂದಂ ತಣಿಯೆ ಜಾತವೇದನುಂ ಆ ಬ್ರಾಹ್ಮಣಸಮಿತಿ ಬೇಳೆ ದೇವರ್ ತಣಿಯುಂಡರ್ ನೆರೆದು ದಿವ್ಯ ಹವ್ಯಾಮೃತಮಂ: **ಪಂಪಭಾ**, ೬. ૩೭)

ಜಾತಾನಂದ – [ನಾ] ಆನಂದವುಂಟಾದವನು (ಬಿನ್ನಪಂಗೆಯ್ದಿರೆ ಜಾತಾನಂದಂ ಈ ಮೂಱುಸೊಸಗೆಗಳೊಳಂ ಇನ್ನಾವುದಂ ಮುನ್ನ ಮಾಟ್ಪೆಂ: **ಆದಿಪು**, ೧೦. ೪೯)

ಜಾತಿ – [ನಾ] ಸಮೂಹ (ಮದೇಭಗಣಕ್ಕೆ ಮಂಡನಾಯೋಗಮುಮಾದುವಾ ಕೊಳದ ಕೋಮಳನೀರಜ ಪುಷ್ಪಜಾತಿಗಳ್: **ಆದಿಪು**, ೪. ೯೪); [ನಾ] ಜಾತಿಯ ಜನ (ಯಥಾಯೋಗ್ಯಮುಪದೇಶಂಗೆಯ್ದು ವರ್ಣಸಂಕರಂ ಆಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ: **ಆದಿಪು,** ೮. ೬೪ ವ); [ನಾ] ಜಾಜಿಯ ಗಿಡ (ಸೊಗಯಿಸಿ ಬಂದ ಮಾಮರನೆ ತಳ್ತ ಎಲೆವಳ್ಳಿಯೆ ಪೂತ ಜಾತಿಸಂಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರ ಒಳ್ಮೊಗಂ ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಟಪ್ಪೊಡೆ: **ಪಂಪಭಾ**, ೪. ೨೮); [ನಾ] ವಿಧ, ಬಗೆ (ಮುನೂಱುವತ್ತು ಜಾತಿಯ ಕಳ್ಗಳಂ ಮುಂದಿಟ್ಟು ಮಧುಮಂತ್ರದಿಂ ಮಧುದೇವತೆಗಳನರ್ಚಿಸಿ: **ಪಂಪಭಾ**, ೪. ೮೭ ವ); [ನಾ] ಕುಲ (ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ಪೇಟಲೇಮಾತೊ: **ಪಂಪಭಾ,** ೧೪. ೪೮)

ಜಾತಿದೇವತೆ – [ನಾ] ಶ್ರೇಷ್ಠವರ್ಗದ ದೇವತೆ (ಅದಲ್ಲದೆಯುಂ ನೀನೆ ಜಾತಿದೇವತೆಯಪ್ಪೊಡೆ ಎನ್ನೆಂಜಲನೆಂತು ತಿಂಬೆ: **ಪಂಪಭಾ**, ೮. ೪૩ ವ)

ಜಾತಿಬೆಳ್ – [ನಾ] ಹುಟ್ಟು ದಡ್ಡ (ಸಂಧಿಯಂ ಮಾಡಲೊಲ್ಲದೆ ಸುಹೃದ್ಬಲಮೆಲ್ಲಮನಿಕ್ಕಿ ಯುದ್ಧಮಂ ಮಾಡಿದ ಜಾತಿಬೆಳ್ ನಿನಗೆ ಅದೇವಿರಿದು ಈ ಎಡಱು: **ಪಂಪಭಾ**, ೧૩. ೫೪)

ಜಾತಿಸಂಪಗೆ – [ನಾ] ಉತ್ಕೃಷ್ಟವಾದ ಸಂಪಗೆ ಅಥವಾ ಜಾಜಿ ಮತ್ತು ಸಂಪಗೆ (ಸೊಗಯಿಸಿ ಬಂದ ಮಾಮರನೆ ತಳ್ತ ಎಲೆವಳ್ಳಿಯೆ ಪೂತ ಜಾತಿಸಂಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ: **ಪಂಪಭಾ**, ೪. ೨೮)

ಜಾತಿಸ್ಮರ – [ನಾ] [ಜೈನ] ಹಿಂದಿನ ಜನ್ಮದ ನೆನಪುಳ್ಳವನು (ಜಾತಿಸ್ಮರರೆನೆ ನೆರೆದೋರೊರ್ವರೊಳ್ ಮತ್ತಂ ಅತ್ಯುತ್ಸವದಿಂದಂ ಮರ್ತ್ಯಭೋಗಂಗಳಂ ಅನುಭವಿಸಲ್ ನೋಂತರ್: **ಆದಿಪು**, ೪. ೬೧)

ಜಾತ್ಯಂಧ – [ನಾ] [ಜಾತಿ+ಅಂಧ] ಹುಟ್ಟು ಕುರುಡ (ವರಪ್ರಸಾದ ಕಾಲದೊಳೆನ್ನಂ ಕಂಡಂಬಿಕೆ ಕಣ್ಣಂ ಮುಚ್ಚಿದಳಪ್ಪುದಱಿಂದಾಕೆಗೆ ಧೃತರಾಷ್ಟ್ರನೆಂಬ ಮಗನತ್ಯಂತಸುಂದರನಾಗಿಯುಂ ಜಾತ್ಯಂಧನಕ್ಕುಂ: **ಪಂಪಭಾ,** ೧. ೮೫ ವ)

ಜಾತ್ಯಶ್ವ – [ನಾ] [ಜಾತಿ+ಅಶ್ವ] [ಸ್ವ]ಜಾತಿ ಎಂಬ ಕುದುರೆ (ಬಗೆಗೊಂಡ ಕುಲಧನಂ ಸಮದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ಬಂ ಪಗೆವಂಗೆ ಕೊಟ್ಟು ಚಿಃ ಕೆಮ್ಮಗೆ ಬೆಸೆವವಂ ಅರಸದೆಂತೊ ಪಗರಣದರಸಂ: **ಆದಿಪು**, ೧೨. ೯೮); [ನಾ] ಒಳ್ಳೆ ತಳಿಯ ಕುದುರೆ (ಅಂತು ತಮ್ಮ ಮನದೊಳೊಡಂಬಟ್ಟಂತೆ ಮನಮಂ ಎಡಗಲಿಸಿ ಪರಿವ ಜಾತ್ಯಶ್ವಂಗಳೆಲ್ಲಂ ಅಟಿಗಾಳೆಗದೊಳ್ ಸತ್ತೊಡೆ: **ಪಂಪಭಾ,** ೮. ೯೪ ವ)

ಜಾದಿ – [ನಾ] [ಜಾತಿ] ಜಾಜಿ (ಸೊಡರ ಬೆಳಗಿನೊಳ್ ಕೊರಗುವ ಜಾದಿಯಂ ತುಂಬಿಯೊಳ್ಪಗೆಗೊಂಡ ಸಂಪಗೆಯಂ: **ಆದಿಪು**, ೧೧. ೧೧೯)

ಜಾನ – [ನಾ] [ಧ್ಯಾನ] ಚಿಂತನೆ, ಪ್ರಾರ್ಥನೆ (ಯಮರಾಜನಂ ಅದ್ಭುತ ತೇಜನಂ ಸರೋಜಾನನೆ ಜಾನದಿಂ ಬರಿಸೆ: **ಪಂಪಭಾ**, ೧. ೧೧೯)

ಜಾನಪದ – [ನಾ] ಸ್ಥಳೀಯ (ಮಹಾಸಂಧಿವಿಗ್ರಹಿಗೆ ಬೆಸಸಿದೊಡೆ ಆತಂ ಜಾನಪದನುಂ ಅಭಿಜಾತ್ಯನುಂ ಅನ್ವಯಾಗತನುಂ ಅಭಿರೂಪನುಂ: **ಆದಿಪು**, ೧೪. ೪૩ ವ) [ಇದು ಎಲ್. ಬಸವರಾಜು ಅವರು ಸ್ವೀಕರಿಸಿರುವ ಪಾಠ]

ಜಾನು – [ನಾ] ಳಕಾಲು (ಮಹೀತಳಾಶ್ಲಿಷ್ಟಜಾನುಲಲಾಟಪಟ್ಟರ್ ಪ್ರಣಾಮಾರ್ಪಣಪುರಸ್ಸರಂ ಶಿರೋವೇಷ್ಟನ ಪ್ರಲಂಬ ಚೇಳಾಂಚಳ ಪಿಹಿತವದನರಾಗಿ: **ಆದಿಪು**, ೧೦. ೪೮ ವ)

ಜಾನುದಘ್ನ – [ಗು] ಮೊಳಕಾಲು ಮುಟ್ಟುವ (ಚುಳುಕಪಾನಮಾತ್ರ ಜಾನುದಘ್ನ ಜಲದುರ್ಗನುಮಾಗಿ ನಡೆದು: **ಆದಿಪು**, ೧೪. ೫૩ ವ)

ಜಾನುಭಂಜಿನಿ – [ಗು] ಮೊಳಕಾಲು ಮುರಿಯುವಂತಹ (ಕಂಟಕ ಗುಲ್ಮ ವಿಷವಲ್ಲೀಸಂಘಾತಭೀಷಣಂಗಳುಂ ಜಾನುಭಂಜಿನಿ ಶೂಲಪ್ರಕರಪರಿವೃತಂಗಳುಂ: **ಆದಿಪು**, ೧૩. ೫೭ ವ)

ಜಾನುಲಂಬಿತ – [ಗು] ಮೊಣಕಾಲಿನವರೆಗಿನ (ತಾರಾತರಳಫಳಕಲಿತ ಜಾನುಲಂಬಿತಬ್ರಹ್ಮಸೂತ್ರನುಂ: **ಆದಿಪು**, ೧೧. ೧೦ ವ)

ಜಾಯಿಲ – [ನಾ] [ಯಾಯಿಲ] ಜಾತಿ ಕುದುರೆ (ಜಾಯಿಲಮೊಂದೆರಡೆಂದು ತೋಱಿ ನೆಟ್ಟನೆ ಪದಿನೆಂಟು ಕೋಟಿವರೆಗಂ ತಳರ್ದತ್ತು ತುರಂಗಸಾಧನಂ: **ಆದಿಪು,** ೧೧. ૩೧)

ಜಾಲ – [ನಾ] ಬಲೆ (ಒಂದು ದಿವಸ ಆ ಮೀನಂ ಒರ್ವ ಜಾಲಗಾಱಂ ಜಾಲದೊಳ್ ಪಿಡಿದು ಅಲ್ಲಿಗೆ ಅರಸಪ್ಪ ದಾಶನಲ್ಲಿಗೆ ಉಯ್ದು ತೋಱಿದೊಡೆ: **ಪಂಪಭಾ**, ೧. ೬೮ ವ)

ಜಾಲಗಾಱ – [ನಾ] ಬೆಸ್ತ (ಒಂದು ದಿವಸ ಆ ಮೀನಂ ಒರ್ವ ಜಾಲಗಾಱಂ ಜಾಲದೊಳ್ ಪಿಡಿದು ಅಲ್ಲಿಗೆ ಅರಸಪ್ಪ ದಾಶನಲ್ಲಿಗೆ ಉಯ್ದು ತೋಱಿದೊಡೆ: **ಪಂಪಭಾ**, ೧. ೬೮ ವ)

ಜಾವ – [ನಾ] [ಯಾಮ] ಕಾವಲು (ವಿಶಾಳವಟವಿಟಪಿಯನೆಯ್ತಂದು ಅದಱ ಕೆಳಗೆ ಅಯ್ವರುಮನಿಳಿಪಿದೊಡೆ ಅಧ್ವಾನಪದಪರಿಶ್ರಮ ಶ್ರಾಂತರ್ ನಿದ್ರಾಭರಪರವಶರಾಗಿರೆ ಭೀಮಂ ಜಾವಮಿರ್ದು: **ಪಂಪಭಾ**, ૩. ೧೦ ವ); [ನಾ] ಮೂರು ಗಂಟೆಯ ಅವಧಿ (ಅಂತು ಆ ಇರುಳ ನಾಲ್ಕು ಜಾವಮುಮಂ ಕಾಮನ ಜಾಗರದಂತೆ ಅವರ್ಗೆ ಕೆಂದಿನೊಳೆ ಬೆಳಗಾಗೆ: **ಪಂಪಭಾ,** ૩. ೮૩ ವ)

ಜಾಳಪಟ – [ನಾ] ಬಲೆಯ ಹಾಳೆ, ಬೀಸುಬಲೆಯ ಬಟ್ಟೆ (ಆತನ ಕೆಲದೊಳ್ ಜಾಳಪಟಂ ತೂಂತಿಟ್ಟಂತೆ ಸಂದಣಿಸಿ ನಿಂದ ಗೋಪಕುಮಾರರಣಿಯ ನಡುವೆ: **ಪಂಪಭಾ,** ೧೦. ೫೭ ವ)

ಜಾಳಮಾರ್ಗ – [ನಾ] ಕಿಟಕಿ, ಗವಾಕ್ಷ (ಗಣಿಕೆಯರ ವಿಳಾಸಾಗರದೊಳ್ ಜಾಳಮಾರ್ಗಪ್ರಣಯಿನಿಯರ ಅಪಾಂಗಶ್ರೇಣಿಗಳ್ ಮೂಱು ಬಣ್ಣಂ ಪೆಣೆದೊದವೆ: **ಆದಿಪು,** ೧೧. ೨೩)

ಜಾಳರಿಗೆ – [ನಾ] ಜಾಲರಿಯಿರುವ ಕಿಟಕಿ (ಇಂದ್ರನೀಲದ ಭದ್ರದೊಳಂ ಕರ್ಕೇತನದ ಜಾಳರಿಗೆಯೊಳಂ ಪಳುಕಿನ ಚಿತ್ರಭಿತ್ತಿಯೊಳಂ ವಿವಾಹಗೇಹಮಂ ಸಮೆಯಿಸಿ: **ಪಂಪಭಾ,** ೩. ೩೪ ವ); ಬೆಳ್ಳಿ

ಜಾಱು – [ನಾ] ಹಿಮ್ಮೆಟ್ಟುವಿಕೆ (ಪಾಱುವ ಪಾಱುಂಬಳೆ ಕೋಳೆ ಜೀಱಿಟ್ಟಂಬರಕೆ ತಲೆ ಸಿಡಿಲ್ದೊಡಂ ಆ ಕಾಯ್ವಾಱದೆ ಹರಣಂಗೆಯ್ದುವು ಜಾಱಲ್ಲದೆ ಜೋದರ ಅಟ್ಟೆಗಳ್ ಕೆಲವಾಗಳ್: **ಪಂಪಭಾ,** ೧೦. ೯೫)

ಜಾಱಿವರಿ – ಆಯತಪ್ಪು (ವಾಪೀಸೋಪಾನಮನಡರುತ್ತುಂ ಜಾಱಿವರಿದು ಕೆಡೆದುರದೊಳ್ ನಟ್ಟ ಸುರಿಗೆ ಬೆನ್ನೊಳ್ಮೂಡೆ: **ಆದಿಪು,** ೨. ೧೪ ವ)

ಜಿಂಜಿಣಿ – [ನಾ] ಅಂಟು (ಚಂದ್ರಕರಂಗಳಿಂದು ತಣ್ಣಿದುವರ್ದೆಗಕ್ಕೆ ಕೆಂದಳಿರ ಸೆಜ್ಜೆಯ ಜಿಂಜಿಣಿ ಪೋಕೆ ನಿನ್ನ ಕೂಟದೊಳ್: **ಪಂಪಭಾ,** ೫. ೧೮)

ಜಿಗಿಲ್ – [ಕ್ರಿ] ಅಂಟಿಕೊಳ್ಳು (ಸಂತಸದಂತನೆಯ್ದಿ ಸುರತಾಮಮೃತದೊಳ್ ತಣಿದಟ್ಟಿಜೆಂ ಜಿಗಿಲ್ತಂತಿರೆ ಪತ್ತಿ ಮೆಯ್ಗಳೆರಡಾದೊಡಮೇನಸುವೊಂದೆ ನೋಟ್ಟಿಡೆಂಬಂತಿರೆ ಕೂಡಿ: **ಆದಿಪು,** ೩. ೫)

ಜಿಗೀಷು – [ನಾ] ಗೆಲ್ಲುವ ಛಲದವನು (ನಮ್ಮೀ ಬೃಹತ್ ಧ್ವಜಿನೀಸಂಕುಳಮೀ ಜಿಗೀಷುವನಿದೇಂ ಸಂಗ್ರಾಮದೊಳ್ ಗೆಲ್ಗುಮೇ: **ಆದಿಪು,** ೧೩. ೫೭)

ಜಿಗುಳೆ – [ನಾ] ಜಿಗಣೆ (ಉಡೆವಣಿ ಪಱೆಯದ ಮುನ್ನಮೆ ತೊಡಗಿ ಚಲಂ ನೆಗಟಿ ರಿಪುಬಲಂಗಳನೆ ಪಡಲ್ವಡಿಸಿ ಪರಬಲದ ನೆತ್ತರ ಕಡಲೊಳಗಣ ಜಿಗುಳೆ ಬಳೆವ ತೆಱದೊಳೆ ಬಳೆದಂ; **ಪಂಪಭಾ,** ೧. ೪೬)

ಜಿತನೀಹಾರ – [ನಾ] ಮಂಜನ್ನು ಮೀರಿಸಿದ (ವಾರಾಶಿಯೊಳಿನ್ನವು ಮುತ್ತೋರನ್ನವು ಪಡೆಯಲಾಗವತಿತರಳತರತ್ತಾರಾಹಾರಂ ಜಿತನೀಹಾರಂ ತ್ರೈಲೋಕ್ಯಸಾರಂ ಇಂತಿದು ಹಾರಂ: **ಆದಿಪು,** ೧೨. ೧೧೮)

ಜಿತಾತ್ಮ – [ನಾ] [ಜಿತ+ಆತ್ಮ] ತನ್ನನ್ನು ಗೆದ್ದವನು (ಮದುವೆಗಂ ರಾಜ್ಯದ ಪತ್ತುಗೆಗಂ ಗುರೂಪದೇಶಕ್ಕಗಿದು ಮನಂದಂದಂ ಏಂ ಜಿತಾತ್ಮನೋ ಪುರುಷಂ: **ಆದಿಪು,** ೬. ೨)

ಜಿನಕಲ್ಪಿತ – [ನಾ] [ಜೈನ] ಜಿನನು ಕಲ್ಪಿಸಿಕೊಂಡದ್ದು, ಒಂದು ಆಚರಣೆಯ ಹೆಸರು (ಅನ್ನೆಗಮಿತ್ತ ವೃಷಭಯೋಗೀಂದ್ರನುಂ ಸಕಳ ಸಾವದ್ಯಾತಿದೂರಮಪ್ಪ ಜಿನಕಲ್ಪಿತಮೆಂಬ ಆಚರಣಮಂ ಕೈಕೊಂಡು: **ಆದಿಪು,** ೧೦. ೧೩ ವ)

ಜಿನಗುಣಸಂಪತ್ತಿ – [ನಾ] ೧೬ ಭಾವನೆಗಳು, ೫ ಕಲ್ಯಾಣಗಳು, ೮ ಪ್ರಾತಿಹಾರ್ಯಗಳು, ಹಾಗೂ ೩೪ ಅತಿಶಯಗಲು – ಹೀಗೆ ೬೩ ಗುಣಗಳಿಗೆ ೬೩ ದಿನಗಳು ಮಾಡುವ ಉಪವಾಸವ್ರತ (ಷೋಡಶತೀರ್ಥಕರಭಾವನೆಗಳಂ ಚತುಸ್ತ್ರಿಂಶತ್ ಅತಿಶಯಂಗಳುಮಂ ಅಷ್ಟಮಹಾಪ್ರಾತಿಹಾರ್ಯಂಗಳುಮಂ ಪಂಚಕಲ್ಯಾಣಂಗಳುಮಂ ನಾಮೋದ್ದೇಶಂಗೆಯ್ದು .. .. ಜಿನಗುಣಸಂಪತ್ತಿಯಂ: **ಆದಿಪು,** ೩. ೪೦ ವ)

ಜಿನಧರ್ಮ – ಜೈನಧರ್ಮ (ನಿಮಗಮೆಗಮಾಮ್ನಾಯದಿಂ ಬಂದುದಿಂತೀ ಜಿನಧರ್ಮಂ: **ಆದಿಪು,** ೨. ೨೦)

ಜಿನನಿಕೇತ – [ನಾ] [ಜೈನ] ಜಿನಾಲಯ (ರತ್ನಚ್ಛವಿಯಿಂ ದಿಗ್ಭಿತ್ತಿಯಂ ಚಿತ್ರಿಸುವ ಜಿನನಿಕೇತಂಗಳಂ ಮಾಡಿಸುತ್ತುಂ: **ಆದಿಪು,** ೧೫. ೪೯)

ಜಿನಪತಿ – ತೀರ್ಥಂಕರ (ಬಗೆಗೊಂಡು ಜಿನಪತಿಯಂ ಪೂಜಿಸು ಪಡೆವೆಯಿನಿಯನಂ ಮಱುಭವದೊಳ್: **ಆದಿಪು,** ೩. ೧೬)

ಜಿನಮತ – [ನಾ] ಜೈನಧರ್ಮ (ಜಿನಮತಪದಾರ್ಥ ಶಂಕಾಪನಯನಮುಂ ಭೋಗಾಕಾಂಕ್ಷೆಯೊಳ್ ವಿಮುಖತೆಯುಂ: **ಆದಿಪು,** ೫. ೫೭)

ಜಿನಮತಾರುಚಿ – [ನಾ] [ಜಿನಮತ+ಅರುಚಿ] ಜೈನಮತದ ಬಗೆಗಿದ ದ್ವೇಷ (ಮಾಂಸಮಧುಮದ್ಯಸೇವನೆ ಹಿಂಸಾರುಚಿ ಪರಮಜಿನಮತಾರುಚಿ ಕುಲಟಾಸಂಸರ್ಗಂ ಎಂಬಿವಲ್ಲದೆ ಸಂಸಾರಭ್ರಮಣಕಾರಣಂ ಪೆಱವೊಳವೇ: **ಆದಿಪು,** ೫. ೮೦)

ಜಿನರೂಪತಾ – [ನಾ] [ಜೈನ] ಐವತ್ತಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ದಿಗಂಬರನಾಗುವುದು (ಗೃಹತ್ಯಾಗ ದೀಕ್ಷಾಜಿನರೂಪತಾ .. .. ಎಂಬ ಅಯ್ವತ್ತುಮೂಱು .. .. ಗರ್ಭಾನ್ವಯಕ್ರಿಯೆಗಳಿಂ: **ಆದಿಪು,** ೧೫. ೧೫ ವ)

ಜಿನಸಪರ್ಯೆ – [ನಾ] ಜಿನಪೂಜೆ (ಪುಣ್ಯಬಂಧಮನಾವರಿಸುವ ಜಿನಸಪರ್ಯೆ ತೊಡರ್ದುದು ಬಗೆಯೊಳ್: **ಆದಿಪು,** ೩. ೨೮)

ಜಿನಸವನ – [ನಾ] [ಜೈನ] ಜಿನನ ಅಭಿಷೇಕ (ಜಿನಸವನಮಂಗಳಕ್ಕಾನೆ ನೋಂತೆನೆಂಬಂತೆ ಶಿಖರಿ ನಿಜಶಿಖರದ ಪೆಂಪನೆ ಮೆಱೆದು: **ಆದಿಪು,** ೭. ೬೫)

ಜಿನುಂಗು – [ಕ್ರಿ] ಝೇಂಕರಿಸು (ಮಧುಕರಮದು ಭೋಂಕನೆ ಪಾಯ್ದೆಱಂಕೆ ನಾಂದೊಡೆ ಜಿನುಂಗಿ ನೆಲಸಿದುದು ವಿಚಕನಕಾಬ್ಜಿನಿಯೊಳ್: **ಆದಿಪು,** ೧೧. ೬೨)

ಜಿನುಗು – [ಕ್ರಿ] ಝೇಂಕರಿಸು (ಜಿನುಗುವ ದುಂಬಿಯಿಂಚರಮೆ ಗಾಣರ ಕಾಕಳಿ ಕೂಡೆ ಸೋರ್ವ ಮಾವಿನ ಸೋನೆ ಗಂಧಸಿಂಧುರಮದಂ: **ಆದಿಪು,** ೧೩. ೬)

ಜಿನೇಂದ್ರಬಿಂಬ – [ನಾ] [ಯುದ್ಧವೀರರು ಯುದ್ಧಕ್ಕೆ ಮುಂಚೆ ಪೂಜಿಸುವ] ಜಿನನ ಪ್ರತಿಮೆ (ದರ್ಭಶಯ್ಯೆ ಪೂಜಿಸುವ ಜಿನೆಂದ್ರಬಿಂಬಂ ಎಸೆವ ಉಗ್ರ ರಣಾನಕರೌದ್ರಘೋಷಂ ಏರ್ವಸನಮನುಂಟುಮಾಡಿದುದು ಪಂದೆಗಂ: **ಆದಿಪು,** ೧೪. ೯೦)

ಜಿನೇಶ್ವರರೂಪ – [ನಾ] [ಜೈನ] ಜಿನರೂಪ (ಅಂತು ದಶಸಹಸ್ರ ಧರಣೀಶ್ವರರೊಡನೆ ಜಿನೇಶ್ವರರೂಪಮಂ ತಾಳ್ದಿ: **ಆದಿಪು,** ೩. ೫೬ ವ)

ಜಿವುಳಿದುಱಿ – [ಕ್ರಿ] ಚಿಗುಳಿಯನ್ನು ತುಳಿದ ಹಾಗೆ ತುಳಿ (ಕೆಯ್ಯ್ ಕಾಲ ಕೋಡೇಱಿನೊಳ್ ಬಲಮೆಲ್ಲಂ ಜವನೆ ಜಿವುಳಿದುಱಿದಂತೆ ತೊಟ್ಟುಱಿದುಱಿದು: **ಪಂಪಭಾ** ಪರಿಷತ್ತು, ೧೧. ೭೨ ವ)

ಜೀಮೂತ – [ನಾ] ಮೋಡ (ಅಭಿನವ ಜೀಮೂತವಾಹನನ ದಿವ್ಯಾಸ್ತ್ರದ ಕೋಳ್ಗಿರಲಾಱದೆ ಜೀಮೂತಂಗಳೆಲ್ಲಂ ತೆರಳ್ದೋಡಿದೊಡೆ: **ಪಂಪಭಾ,** ೫. ೯೬ ವ)

ಜೀಯ – [ನಾ] ಒಡೆಯ (ಧರಿತ್ರಿಯಂ ಜೀಯ ಎನೆ ಬೇಡಿ ಕೊಳ್ಳದೆ ವಿರೋಧಿನರೇಂದ್ರರಂ ಒತ್ತಿ ಕೊಂಡುಂ: **ಪಂಪಭಾ,** ೧. ೧)

ಜೀರಕ – [ನಾ] ಜೀರಿಗೆ (ರಾಜಮಾಷ ಆಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧ ಧಾನ್ಯಭೇದಂಗಳುಂ: **ಆದಿಪು,** ೬. ೭೨ ವ)

ಜೀರಗೆಯೊಕ್ಕಲ್ಮಾಡು – [ಕ್ರಿ] ಜೀರಿಗೆಯನ್ನು ಗಿಡದಿಂದ ಬೇರ್ಪಡಿಸಲು ಬಡಿಯುವಂತೆ ಸದೆಬಡಿ (ಅಂತು ಕುರುಬಲಮೆಲ್ಲಮಂ ಜೀರಗೆಯೊಕ್ಕಲ್ಮಾಡಿ ತುಱಿದು ಕೊಲೆ ರಾಜರಾಜನ ಬೆಸದೊಳ್ ಅಂಗರಾಜಂ ಬಂದು ತಾಗೆ: **ಪಂಪಭಾ,** ೧೨. ೯. ವ)

ಜೀರ್ಗರೆ – [ಕ್ರಿ] ಜೀರ್ ಎಂದು ಸದ್ದುಮಾಡು (ಅರರೀಪುಟಮೆರಡುಂ ಜೀರ್ಗರೆದು ಮರಲ್ವಂದಮೆಂತುಟಾಯ್ತು .. .. ಗಿರಿ ನೊಂದು ನರಳ್ವ ಮಾಟಕ್ಕಿಯಂತೆ: **ಆದಿಪು,** ೧೩. ೩೭)

ಜೀರ್ಣ – [ಗು] ಜರ್ಜರಿತಗೊಂಡ (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಮುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ)

ಜೀರ್ಣಕರ್ಪಟ – [ನಾ] ಹರಿದ ಬಟ್ಟೆ (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣಕರ್ಪಟಾವೃತಕಟಿತನುಮಾಗಿ ಬಂದು ಕಣ್ಮುಚ್ಚಲೆಡೆವೇಡೆ: **ಪಂಪಭಾ,** ೩. ೩೧ ವ)

ಜೀರ್ಣಶೀರ್ಣಚೀರ – [ನಾ] ಹಳೆಯ ಹರಿದ ಬಟ್ಟೆ (ಪರೇತವನ ಭೂಮಿಯೊಳ್ ಜೀರ್ಣಶೀರ್ಣಚೀರಂಗಳಿಂದಂ ಪುದಿದಿರಿಸಿ ಪೋಗಿ: **ಆದಿಪು,** ೩. ೩೪ ವ)

ಜೀರ್ಣೋದ್ಧಾರ – [ನಾ] ಬಿದ್ದವುಗಳನ್ನು ಸರಿಪಡಿಸುವುದು (ಅಲ್ಲಿಗಲ್ಲಿಗೆ ಒಡೆದ ಕೆಱೆಗಂ ಅಱಿದ ಆಯತನಕ್ಕಂ ಧನಮನಿತ್ತು ಜೀರ್ಣೋದ್ಧಾರಂಗಳಂ ಮಾಡಿಸುತ್ತುಂ: **ಪಂಪಭಾ,** ೨. ೯೭ ವ)

ಜೀವಕಕನಕ – [ನಾ] ಜೀವವೆಂಬ ಚಿನ್ನ (ಪವನಹತಂಗಳ್ ಮುನಿಪುಂಗವನ ಜಟಾಜಾಳಲತಿಕೆಗಳ್ ನಿಮಿರ್ದುವು ಅನುಪ್ರವಿಶದ್ಧ್ಯಾನಾನಲದಗ್ಧ ವಿಸ್ಫುರಜ್ಜೀವಕ ಕನಕ ಕಾಳಿಕೆಗಳವೋಲ್: **ಆದಿಪು,** ೯. ೯೫)

ಜೀವತತ್ತ್ವ– [ನಾ] [ಜೈನ] ಏಳು ತತ್ವಗಳಲ್ಲಿ ಮೊದಲನೆಯದು [ಜೈನ] ರುಜುವಾತು (ಪ್ರಮಾಣ ನಯ ನಿಕ್ಷೇಪ ಅನುಯೋಗ ಸದಾದಿಗಳಿಂ ನಿಶ್ಚಯಿಸಿದ ಸಪ್ತತತ್ತ್ವಂಗಳೊಳಗೆ ಚೇತನಾಲಕ್ಷಣಮಪ್ಪುದು ಜೀವತತ್ತ್ವಂ: **ಆದಿಪು,** ೧೦. ೬೩ ವ)

ಜೀವಧನ – [ನಾ] ಪಶುಸಂಪತ್ತು (ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ ರಾಗಂಗಿಡದೆ ಕೊಂಡಾಡಿದಂ: **ಪಂಪಭಾ,** ೧೪. ೫೫)

ಜೀವನ್ಮೃತಕ – [ನಾ] [ಜೀವತ್+ಮೃತಕ] ಜೀವಿಸಿದ್ದರೂ ಸತ್ತಂತಿರುವವನು (ಅದಟಂ ಕೊಂಡಾಡದೆ ಬೇಡಿದರ್ಗೀಯದೆ ಮಱಿಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದ ಅಧಮಂ ಅದೇತರ್ಕೆ ಬಾರ್ತೆ ಜೀವನ್ಮೃತಕಂ: **ಆದಿಪು,** ೧೨. ೯೭)

ಜೀವಮುಳ್ಳಿನಂ – [ನಾ] ಜೀವವಿರುವವರೆಗೂ (ಜೀವಮುಳ್ಳಿನಂ ಇಱಿದು ಅರ್ಥಮುಳ್ಳಿನೆಗಂ ಇತ್ತು ನೆಗೞ್ತೆಯನಾಂಪುದೆಂಬ ಪೆಂಪಿನ ಸಮಕಟ್ಟು: **ಪಂಪಭಾ,** ೫. ೭೭)

ಜೀವವಿಯೋಗ – [ನಾ] ಪ್ರಾಣ ಹೋಗುವುದು (ಕೊರೆವೊಡೆ ಬೆಟ್ಟುಗಳ್ ಬಿರಿವುವು ಉಣ್ಮುವ ಲಾಳೆಯ ಲೋಳೆಗಳ್ ಪೊನಲ್ವರಿವುವು ಕೆಮ್ಮಿ ಕುಮ್ಮಿದೊಡೆ ತೋಳೊಳೆ ಜೀವವಿಯೋಗಮಪ್ಪುದು: **ಪಂಪಭಾ,** ೪. ೧೦೦)

ಜೀವಸಿದ್ಧಿ – [ನಾ] [ಜೈನ] ಜೀವನ ಅಸ್ತಿತ್ವವನ್ನು ಸಾಧಾರವಾಗಿ ಪ್ರತಿಪಾದಿಸುವುದು (ಅನುಭೂತ ಶ್ರುತದೃಷ್ಟ ಖೇಚರ ಕಥಾನಕಂಗಳಿಂ ಯುಕ್ತಿಯಿಂದಿನಿತಂ ಸಾಧಿಸಿ ಜೀವಸಿದ್ಧಿಯನಿದಂ ನಿಶ್ಚೈಸಿ: **ಆದಿಪು,** ೨. ೨೨)

ಜೀವಾಜೀವರತ್ನ – [ನಾ] [ಜೈನ] ೭ ಅಜೀವರತ್ನಗಳು ಹಾಗೂ ೭ ಜೀವರತ್ನಗಳು – ಒಟ್ಟು ೧೪ ರತ್ನಗಳು (ಚಕ್ರ .. .. ಛತ್ರ .. .. ಖಡ್ಗ .. .. ದಂಡ .. .. ಚರ್ಮ .. .. ಮಣಿ .. .. ಕಾಕಿಣೀ .. .. ಗೃಹಪತಿ .. .. ಸೇನಾನಿ .. .. ತಕ್ಷಕ .. .. ಪುರೋಹಿತ .. .. ಯಾಗಹಸ್ತಿ .. .. ತುರಗ .. .. ಸ್ತ್ರೀ .. .. ಎಂದಿಂತು ಜೀವಾಜೀವರತ್ನಂ: **ಆದಿಪು,** ೧೧. ೩ ವ)

ಜೀವಾಭಾವ – [ನಾ] ಜೀವವಿಲ್ಲ ಎಂಬ ವಾದ (ಮಹಾಮತಿ ಸಂಭಿನ್ನಮತಿ ಶತಮತಿಗಳ್ ಲೋಕಾಯತಿಕ ಯೋಗಾಚಾರ ಮಾಧ್ಯಮಿಕ ಮತವಿತಥಾಭಿಧಾಯಿಗಳ್ ಜೀವಾಭಾವಮನೆ ಪಿಡಿಯಚ್ಚುವಿಡಿದು: **ಆದಿಪು,** ೨. ೭ ವ)

ಜೀವಿತ – [ನಾ] ಪೊಗದಿ, ಜೀವನನಿರ್ವಹಣೆಗೆ ಕೊಡುವ ಭತ್ಯೆ (ವಿವಿಧ ಕಳಿಂಗ ವಂಗ ಖಸ ಘೂರ್ಜರ ಮಾಳವ ಚೋಳ ಪಾಂಡ್ಯ ಪಲ್ಲವ ನೃಪಮಂಡಲಂಗಳೊಳಿವು ಜೀವಿತಮೆಂದು ಕೊಟ್ಟು: **ಆದಿಪು,** ೮. ೪೨)

ಜೀವಿತವ್ಯಪಾಯ – [ನಾ] ಆಯುಷ್ಯದ ಮುಗಿತಾಯ (ತಪೋಭರದೊಳ್ ನಾಲ್ವರುಂ ನಿಂದು ಜೀವಿತವ್ಯಪಾಯದೊಳ್ ಅಧೋಗ್ರೈವೇಯಕದೊಳ್ ಅಹಮಿಂದ್ರಪದವಿಯಂ ತಾಳ್ದಿದರ್: **ಆದಿಪು,** ೫. ೨೭ ವ)

ಜೀವಿತಾಶಯ – [ನಾ] ಜೀವನನಿರ್ವಹಣೆಯ ನೆಲೆವನೆ (ಜೀವಿತಾಶಯದಂತೆ ಅತ್ಯಾಯಾಮಮುಂ ಮುಕ್ತಜ್ವರದಂತೆ ನಿರ್ಮುಕ್ತೋಷ್ಮಮುಂ ಮೂರ್ಛಾಪ್ರಾಪ್ತನಂತೆ ತಮೋಮಯಮುಮಪ್ಪ ತಮಿಸ್ರಗುಹೆಯಂ: **ಆದಿಪು,** ೧೩. ೪೬ ವ)

ಜೀಱಿಟ್ – [ಕ್ರಿ] ಸಶಬ್ದವಾಗಿ ಮೇಲೇಳು (ಉಡಿದಿರ್ದ ಅಚ್ಚು ಅಱಿದ ಈಸು ತಟ್ಟಿದ ನೊಗಂ ಜೀಱಿಟ್ಟ ಚಕ್ರಂ .. .. ನೆತ್ತರ ಪೊನಲ್ ಕಣ್ಗೊಂಡುದುಗ್ರಾಜಿಯೊಳ್: **ಪಂಪಭಾ,** ೧೦. ೯೧)

ಜೀಱೀಟಿಸ್ – [ಕ್ರಿ] ಜೀರೆಂದು ಶಬ್ದಮಾಡು (ಉಚ್ಚಳಿಸಲ್ ಸೂಸಲ್ ಪಳಂಚಲ್ ಸಿಡಿದು ಒಡೆದು ಅಳಱಲ್ ಪಾಜಿ ಜೀಱೀಟಿಲ್: **ಪಂಪಭಾ,** ೧೦. ೬೫)

ಜುಗುಪ್ಸಾ – ಚಾರಿತ್ರಮೋಹನೀಯಕರ್ಮದ ಉತ್ತರೋತ್ತರ ಪ್ರಕೃತಿಗಳಲ್ಲಿ ಒಂದಾದ ಒಂಬತ್ತು ನೋಕಷಾಯಗಳಲ್ಲಿ ಒಂದು, ಅಸಹ್ಯವನ್ನು ಉಂಟುಮಾಡುವುದು (ಕ್ರಮಕ್ರಮದೊಳೆ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ ಪುರಾತನ ಸತ್‌ಕರ್ಮದೊಡನೆ ಹಾಸ್ಯರತ್ಯರತಿಶೋಕಭಯಜುಗುಪ್ಸಾಭಿಧಾನ ನೋಕಷಾಯ ಷಟ್ಕಮುಮಂ ಘಾತಿಸಿ: **ಆದಿಪು,** ೧೦. ೧೪ ವ)

ಜೂಟಬಂಧ – [ನಾ] ಜಡೆಗಳ ಕಟ್ಟು (ಉಪನಿಟಿಲ ಕುಟಿಲ ಘಟಿತ ಜೂಟಬಂಧಮುಂ: **ಆದಿಪು,** ೧೩. ೪೫ ವ)

ಜೂದನಿಕ್ಕು – [ಕ್ರಿ] ಜೂಜಾಟವನ್ನು ಹೂಡು (ಎನಿತಾನುಮಂದದಿಂ ಜೂದನಿಕ್ಕೆಯುಂ ದ್ರುಪದಸುತೆಯಂ ಎೞೆದುಯ್ಯೆಯುಂ ಇಂತಿನಿತೊಂದಾದುದು ದುಶ್ಶಾಸನನಿಂದಂ ಶಕುನಿಯೆಂಬ ಬೆಳ್ವೊಱಸಿಂದಂ: **ಪಂಪಭಾ,** ೭. ೨೦)

ಜೂದಾಡು – [ಕ್ರಿ] ಜೂಜಾಡು (ಜೂದಾಡಿ ಸೋಲ್ತು ನನ್ನಿಗೆ ಮೇದಿನಿಯಂ ಕೊಟ್ಟು ಪಾಂಡುನಂದನರ್ ಈಗಳ್ ಪೋದೊಡಮೇಂ: **ಪಂಪಭಾ,** ೭. ೧೮)

ಜೂದು – [ನಾ] [ದ್ಯೂತ] ಜೂಜು (ಕರೆದೊಡೆ ಜೂದಿಂಗಂ ಧುರಭರಕೆ ಆಖೇಟಕ್ಕೆ ಭೂಭುಜಂಗೆ ಆಗದು ಮೆಯ್ಗರೆದಿರಲಿ ಎಂಬ ಪುರಾತನ ಗುರುವಚನಂ ತನಗೆ ನಿಟ್ಟೆಪಟ್ಟುದಱಿಂ: **ಪಂಪಭಾ,** ೬. ೭೧)

ಜೃಂಭಿತ – [ಗು] ಅಧಿಕವಾದ (ದುಃಖಾಂಭೋಧಿಯ ಕಡೆಗಾಣದೆ ಜೃಂಭಿತದುಷ್ಕರ್ಮದಿಂದೆ ನಮೆದಪರಿನ್ನುಂ: **ಆದಿಪು,** ೫. ೭೬)

ಜೆಟ್ಟಿಗ – [ನಾ] ಶೂರ (ನೀನೆ ಜೆಟ್ಟಿಗನ್ನೆ ಮುನ್ನಿನೊಱಂಟು ವೇಡ ಮಗನೆ ಕೈಕೊಳ್ ಧರಾಭಾರಮಂ: **ಪಂಪಭಾ,** ೧. ೮೧)

ಜೇನ್ – ಜೇನುತುಪ್ಪ (ಜೇನ ಮೞೆಗೊಂಡು ಅಮರ್ದಿನ ಸೋನೆಯೆ ಸುರಿದತ್ತು: **ಆದಿಪು,** ೭. ೧೭)

ಜೇನಪುಟ್ಟಿ – [ನಾ] ಜೇನುಗೂಡು (ಮುಗಿಲ್ಗಳ ಇಟ್ಟೆಡೆಗಳೊಳ್ ತಲೆಗಳ್ ತೊಡರ್ದಿರ್ದು ಜೇನ ಪುಟ್ಟಿಗಳನೆ ಪೋಲ್ತುವು ಏಂ ಕಲಹಂ ಅಚ್ಚರಿಯಾಯ್ತೊ ತುರಂಗಸೈನ್ಯದೊಳ್: **ಪಂಪಭಾ,** ೧೦. ೮೦)

ಜೇವೊಡೆ – [ಕ್ರಿ] ಬಿಲ್ಲಿನ ಠೇಂಕಾರ ಮಾಡು (ವಜ್ರಕಾಂಡವೆಂಬ ನಿಜವಿಜಯಕಾರ್ಮುಕಕ್ಕೆ .. .. ನಿಜಭುಜಾದಂಡಮಂ ನೀಡಿ ನೀಡಿಲ್ಲದೆಱೆಸಿ ನೀವಿ ಜೇವೊಡೆದಾಗಳ್: **ಆದಿಪು,** ೧೨. ೮೭ ವ)

ಜೈತ್ರ – [ನಾ] ಜಯಶಾಲಿ (ರಾಜಪುತ್ರಿಸ್ಮಿತ ಮಧುಮಧುರಾಪಾಂಗ ಜೈತ್ರಾಂಗಜಾಸ್ತ್ರಂಗಳ ಕೋಳಂ ನೂತನಪ್ರೇಮದೆ ನಿಮಿರ್ವೆಡೆಯೊಳ್ ಕಾವನಾವಂ: **ಆದಿಪು,** ೪. ೫೧)

ಜೈತ್ರಧ್ವಜ – [ನಾ] ಗೆಲವಿನ ಸಂಕೇತವಾದ ಬಾವುಟ (ತೋರ್ಕೆಗೆತ್ತದ ಜೈತ್ರಧ್ವಜಮೆಂದು ತೋರ್ಪ ತೆಱದಿಂ ಭ್ರೂಲಾಸ್ಯಮಂ: **ಆದಿಪು,** ೧೧. ೧೭) ['ಜೈತ್ರಧ್ವಜ' ಎಲ್. ಬಸವರಾಜು ಸ್ವೀಕರಿಸಿರುವ ಪಾಠ]

ಜೈತ್ರಯಾತ್ರೋತ್ಸವ – [ನಾ] ದಿಗ್ವಿಜಯಯಾತ್ರೆ (ಪುಷ್ಪೋತ್ಕರಬಳ ವಿಜಯೋದ್ದರ್ಪ ಕಂದರ್ಪಲೀಲಾಕರನಾದಂ ಜೈತ್ರಯಾತ್ರೋತ್ಸವದೊಳ್ ಅಖಿಲ ಷಟ್ಖಂಡಭೂಮಂಡಲೇಶಂ : **ಆದಿಪು,** ೧೩. ೭)

ಜೈತ್ರಾಸ್ತ್ರ – [ನಾ] ಗೆಲವನ್ನು ಸಾಧಿಸುವ ಅಸ್ತ್ರ[ವುಳ್ಳವನು] (ಜೈತ್ರಾಸ್ತ್ರಂ ನಿನಗೀ ಚಕ್ರರತ್ನದಿಂ ಪೆಱತುಂಟೇ: **ಆದಿಪು,** ೧೪. ೧೨)

ಜೈನಗೃಹ – ಜಿನ ದೇವಾಲಯ (ವಸುಧೆಗಾ ಕಲ್ಪಾಂತಮೆಂಬನ್ನೆಗಂ ಮಾಡಿಸಿದಂ ಜೈನಗೃಹಂಗಳಂ: **ಆದಿಪು,** ೧೫. ೪೭)

ಜೈನದೀಕ್ಷೆ – [ನಾ] ಜಿನದೀಕ್ಷೆ (ಕಿಡುವೊಡಲ ಕಿಡುವ ರಾಜ್ಯದ ಪಡೆಮಾತುಗೊಳಲ್ಕಮೆನ್ನ ಮೈಯ್ಯಗಿದಪುದು ಈಗಡೆ ಜೈನದೀಕ್ಷೆಯಂ ಕೊಂಡಡಿಗೆಱಗಿಸುವೆಂ ಸಮಸ್ತಸುರ ಸಮುದಯಮಂ: **ಆದಿಪು,** ೧೪. ೧೨೭)

ಜೈನಶಾಸನ – [ನಾ] ಜೈನಧರ್ಮ (ವಿಪುಳಗುಣ ವತ್ಸಳತ್ವಮುಂ ಅಪಗತಮಳ ಜೈನಶಾಸನ ಉದ್ಭಾಸನಮುಂ: **ಆದಿಪು,** ೫. ೫೮)

ಜೈನಸ್ತವ – ಅರ್ಹಂತನ ಸ್ತುತಿ (ದೇವತೂರ್ಯನಗದೇವೀಗೀತ ಜೈನಸ್ತವ ಸಮುಪಹಿತಾತ್ಮೀಯಚಿತ್ತಂ ವಿಲಾಸಂ ಮಿಗೆ ... ಮಹೋತ್ಸಾಹದಿಂ ಬಂದನಾಗಳ್; **ಆದಿಪು,** ೮. ೪೩)

ಜೈನಾಗಮ – ಜೈನಸಿದ್ಧಾಂತ (ಸೂಕ್ತಂ ಭವ್ಯಜನಪ್ರವ್ಯಕ್ತಂ ಜೈನಾಗಮೋಕ್ತಮಿಂ ನಿನಗೆ ಮದೀಯೋಕ್ತಮಿದೆರ್ದೆಯೊಳ್ ನೆಲಸುಗೆ: **ಆದಿಪು,** ೫. ೭೧)

ಜೈನಾಗಮವಿದ – ಜೈನಸಿದ್ಧಾಂತವನ್ನು ತಿಳಿದವನು (ಜೈನಾಗಮವಿದರಂ ಸಾರದೆ ಪೋಗಿ ಕುಲಿಂಗಿಗಳನೀ ಜನಂ ಸೇವಿಸುಗುಂ: **ಆದಿಪು,** ೧೫. ೩೫)

ಜೈನಾಭಿಪ್ರಾಯ – [ನಾ] ಜೈನ ಮತದ ಕ್ರಮ (ಪರಮಾಯುಷ್ಯಾಂತಂಬರಂ ನಿರಾಕುಳಮಾಗಿರ್ಪ ಆಯಿರವಿನ ಜೈನಾಭಿಪ್ರಾಯಂ ಪ್ರಾಯೋಪಗಮನದಿಂ ತೊರೆಯಿಸಿದಂ: **ಆದಿಪು,** ೨. ೫೩)

ಜೊಂಗ – [ನಾ] ಒಂದು ಬಗೆಯ ರೇಷ್ಮೆ ಬಟ್ಟೆ (ಸಾಹಿಯಾಣದ ಚೀನದ ಧವಳವಟ್ಟದ ಭರ್ಮದ ಜೊಂಗದ ದೇವಾಂಗದ ಸಕಳವಟ್ಟೆಗಳುಮಂ: **ಆದಿಪು,** ೪. ೩೪ ವ)

ಜೊಂಪ – [ನಾ] ಗೊಂಚಲು (ಅಲ್ಲಿಯ ಸುರತರುಗಳ ತಣ್ಣೆೞಲ್ಗಳೊಳಂ ಕಲ್ಪಲತೆಯ ಜೊಂಪಂಗಳೊಳಂ: **ಆದಿಪು,** ೨. ೧೪ ವ); [ನಾ] ನೆರಳು (ಮರುಸ್ಥಳದ ಮಾಳದೊಳ್ ನಡುಪಗಲ್ವರಂ ಗ್ರೀಷ್ಮದೊಳ್ ಸುರುಳ್ವಿನೆಗಮಟ್ಟಿ ಬೇವವರ್ಗೆ ಜೊಂಪಂ ಇಮ್ಮಾವು ನಿರ್ಝರಾಂಬು ದೊರೆಕೊಳ್ವವೊಲ್: **ಆದಿಪು,** ೧೩. ೮೬); [ನಾ] ಮಂಟಪ, ಕುಂಜ (ಮೂಡಿಗೆ ಕಕ್ಕುಂಬ ಸುೞೆಸಿ ಜೊಂಪಂ ಬೀಡುಬಿಡುವಿಂಬು: **ಪಂಪಭಾ,** ೫. ೪೧)

ಜೊತ್ತಿಸು – [ಕ್ರಿ] ಮರುಳು ಮಾಡು (ಒತ್ತಿದ ತಳ್ಕು ಎತ್ತಿದ ತಟಿ ಮುತ್ತಿನ ಪೊಸದುಡುಗೆ ತಳಿರ ಸೋರ್ಮುಡಿ ಮನಮಂ ಪತ್ತಿಸಿ ಜೊತ್ತಿಸೆ ಮದನೋನ್ಮತ್ತೆಯರ್ ಅವಯವದೆ ಬಂದರ್ ಅರಸಿಯರ್ ಅರೆಬರ್: **ಪಂಪಭಾ,** ೫. ೫೯)

ಜೊಮ್ಮನೆ ಪೋಗು – [ಕ್ರಿ] ಜೋಮು ಹಿಡಿದು ಹೋಗು (ಮೆಯ್ ಪಸಿದು ಜೊಮ್ಮನೆ ಪೋದಪುದು ಎನ್ನ ವೇಟ್ಟುವದಂ ತಣಿಯಲೀವೊಡೆ ಈವುದು: **ಪಂಪಭಾ,** ೫. ೭೧)

ಜೋಡಾಗು – [ಕ್ರಿ] ಜೊತೆಗೂಡು (ಅಂಬಿನ ಬಂಬಲೊಳಂ ಜೋಡಾಗಿ ಕೋಡನೂಱಿ ಕೆಡೆದ ಗಜವ್ರಜಂಗಳ ಡೊಣೆವುಗಳಿಂದ ಒಱಿತು ಪಱಿವ ನೆತ್ತರ ಕಡಲ್ಗಳುಂ: **ಪಂಪಭಾ,** ೧೦. ೧೧೬ ವ)

ಜೋಡುಮಾಡು – [ಕ್ರಿ] ಜೋಡಿಯಾಗಿಸು, ಕೂಡಿಸು (ಪೂಣ್ದೆನಗಂತೆ ಸಂತಸಂ ಮಾಡದೆ ಸಂಧಿಮಾಡಿ ಕುರುಪುತ್ರರೊಳೆನ್ನನೆ ಜೋಡುಮಾಟ್ಪಿರೇ: **ಪಂಪಭಾ,** ೯. ೨೪)

ಜೋಡೆ – [ನಾ] ಹಾದರಗಿತ್ತಿ, ವೇಶ್ಯೆ (ಅಲರ್ಗಣ್ಣೊಳ್ ಸ್ಮರನಿರ್ದಪನಕ್ಕುಂ ಎಡೆವೋಪಾ ಜೋಡೆ ಕಾಮಂಗೆ ಕಾದಲೆಯಕ್ಕುಂ: **ಪಂಪಭಾ,** ೪. ೮೪)

ಜೋಡೆಗೆಯ್ತ – [ನಾ] ವೇಶ್ಯೆಯರ ಶೃಂಗಾರಚೇಷ್ಟೆ (ನೋಡಿ ನಾಡಾಡಿಯಲ್ಲದ ಆಕೆಗಳ ಜೋಡೆಗೆಯ್ತಂಗಳಂ ಕಂಡು ಇದು ಮನೆಯಾಣ್ಮನಂ ಮಾಱುವಂದಮಲ್ಲದೆ ಪೂಮಾಱುವಂದಂ ಅಲ್ತು ಎಂದು ಮುಗುಳ್ನಗೆ ನಗುತುಂ: **ಪಂಪಭಾ,** ೪. ೮೧ ವ)

ಜೋದ – [ನಾ] [ಯೋಧ] ಸೈನಿಕ (ಪಾಱುವ ಪಾಱುಂಬಳೆ ಕೊಳೆ ಜೀಱಿಟ್ಟಿಂಬರಕೆ ತಲೆ ಸಿಡಿಲ್ದೊಡಂ ಆ ಕಾಯ್ಪಾಱದೆ ಹರಣಂಗೆಯ್ದುವು ಜಾಱಿಲ್ಲದೆ ಜೋದರ ಅಟ್ಟೆಗಳ್ ಕೆಲವಾಗಳ್: **ಪಂಪಭಾ,** ೧೦. ೯೫); [ನಾ] ಮಾವತಿಗ (ಆದಿತ್ಯಂ ಮಸುಳ್ವನ್ನೆಗಂ ಧ್ವಜಘಟಾಟೋಪಂಗಳಿಂದಂ ಲಯಾಂಭೋದಂಗಳ್ ಕವಿವಂತೆವೋಲ್ ಕವಿವುದುಂ ಕಾಲ್ಗಾಪು ಕಾಲ್ಗಾಪಿನೊಳ್ ಜೋದರ್ ಜೋದರೊಳ್ .. .. ಅಗುರ್ವಪ್ಪನ್ನೆಗಂ: **ಪಂಪಭಾ,** ೧೦. ೯೩);

ಜೋನೆಗವಟೆ – [ನಾ] ಯವನರಿಂದ ತಯಾರಾದ ಬಟ್ಟೆ (ಪಟೆ ಚಿತ್ರಾವಳಿ ಜೋನೆಗವಟೆ ದೇವಾಂಗಮೆಂಬ ವಸನಂಗಳನೇಂ: **ಆದಿಪು,** ೫. ೩೪)

ಜೋಲ್ – [ಕ್ರಿ] ಕುಗ್ಗಿಹೋಗು (ಮೀಱುವೆವೆಂಬ ಮಾಂಡಳಿಕರ್ ಈಯದರೆಂಬ ಅದಟರ್ ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱಿ ನಭಕ್ಕೆ ಪಾಱಿದುದು **ಪಂಪಭಾ,** ೧. ೧೧೯); [ಕ್ರಿ] ಜೋತುಬೀಳು (ಜೋಲ್ವ ಪುರ್ಬನೆತ್ತಿ ಕಟ್ಟಿದ ಲಲಾಟಪಟ್ಟದೊಳ್ ಇಟ್ಟಣಮೊಪ್ಪುವ ಬೀರವಟ್ಟಮುಂ: **ಪಂಪಭಾ,** ೧೦. ೫೨ ವ)

ಜೋಳ – [ನಾ] ಅನ್ನದ ಋಣ (ಒಂದೆರಟ್ಟುದುರೆಯಟ್ಟೆಯುಂ ಒಂದೆರಡು ಆನೆಯಟ್ಟೆಯುಂ ತೊಡರ್ದೊಡನಾಡೆ ತಳ್ತಿಱಿಯದಿರ್ದೊಡೆ ಜೋಳಮನೆಂತು ನೀಗುವೆಂ: **ಪಂಪಭಾ,** ೧೦ ೪೨)

ಜೋಳಕ್ಕೆ ತಪ್ಪು – [ನಾ] ಅನ್ನದ ಋಣ ತೀರಿಸದಿರು (ಜೋಳಕ್ಕೆ ತಪ್ಪಿಯುಂ ಇಂ ಬಾಟ್ಟುದೆ ಪೂಣ್ದು ನಿಲ್ಲದಿಕೆಯಿಂ ಬಾಟ್ವಂತು ವಿಖ್ಯಾತ ಕೀರ್ತಿಯವೊಲ್ ಈ ಒಡಲ್ ಅಟ್ಟೆ ಪೇಱಿಂ ಎನಗೇಂ ಕಲ್ಪಾಂತರಸ್ಥಾಯಿಯೇ: **ಪಂಪಭಾ,** ೯. ೮೪)

ಜೋಳದ ಪಾಟೆ – [ನಾ] ಅನ್ನದ ಋಣ, ಕರ್ತವ್ಯ (ರಣದೊಳ್ ಗೆಲ್ದು ಆಜಿಯಂ ತಳ್ತು ಸಂಗರದೊಳ್ ಜೋಳದ ಪಾಟಿಯಂ ನೆರಪಿದಂ ಗಂಡಂ ಪೆಱಂ ಗಂಡನೇ: **ಪಂಪಭಾ,** ೧೦ ೪೩)

ಜ್ಞಾನ – [ನಾ] [ಜೈನ] ಸಮ್ಯಕ್‌ಜ್ಞಾನ, ಸಿದ್ಧಪರಮೇಷ್ಠಿಗಳ ಎಂಟು ಗುಣಗಳಲ್ಲಿ, ಒಂದು ಜೀವಾದಿಪದಾರ್ಥಗಳ ಸ್ವರೂಪವನ್ನು ಸ್ವಲ್ಪವೂ ಸಂಶಯವುಳಿಯದಂತೆ ತಿಳಿದುಕೊಳ್ಳುವುದು (ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ನೆನೆಯುತ್ತುಂ: **ಆದಿಪು,** ೧೦. ೧೪ ವ); [ನಾ] ಅರಿವು (ಜ್ಞಾನದಿನಿರ್ದು ನಿಟ್ಟಿಪೊಡೆ ದಿವ್ಯಮುನೀಂದ್ರನ ಕೊಟ್ಟ ಮಂತ್ರಂಗಳಂ ಓದಿಯೋದಿ .. .. ಯಮರಾಜನಂ .. .. ಬರಿಸೆ: **ಪಂಪಭಾ,** ೧. ೧೧೯)

ಜ್ಞಾನಚತುಷ್ಟಯ – [ನಾ] [ಜೈನ] ಮತಿ, ಶ್ರುತ, ಅವಧಿ ಮತ್ತು ಅನಃಪರ್ಯಾಯ ಎಂಬ ಜ್ಞಾನಗಳು (ಅಂತು ದೀಕ್ಷಾಗ್ರಹಣಾನಂತರಸಮಯಸಮುತ್ಪನ್ನ ಸಪ್ತರ್ಧಿ ಜ್ಞಾನಚತುಷ್ಟಯಂ ಪ್ರಮಥಗಣಧ್ಯನಾದಂ: **ಆದಿಪು,** ೧೦. ೪೮ ವ)

ಜ್ಞಾನಧರ – [ನಾ] [ಜೈನ] ಮತಿ, ಶ್ರುತಿ ಮತ್ತು ಅವಧಿ ಎಂಬ ಜ್ಞಾನತ್ರಯಗಳನ್ನು ಹೊಂದಿದವನು, ಪುರುದೇವ (ಶ್ರೀನಿಳಯಮಿದುವೆ ನಾಭಿಸ್ಥಾನಮೆನಲ್ ನೆಱೆದ ಅಯೋಧ್ಯೆಗವತರಿಸಲ್ ಶ್ರೀ ಜ್ಞಾನಧರಂ ಬಗೆದಂ: **ಆದಿಪು,** ೭. ೧)

ಜ್ಞಾನಭೇದ – [ನಾ] [ಜೈನ] ಐದು ಬಗೆಯ ಜ್ಞಾನಗಳು (ಅದು ಮತಿ ಶ್ರುತ ಅವಧಿ ಮನಃಪರ್ಯಾಯ ಕೇವಲ ಜ್ಞಾನಭೇದದಿಂ ಪಂಚವಿಧಂ: **ಆದಿಪು,** ೧೦. ೬೩ ವ)

ಜ್ಞಾನರ್ಧಿ – [ನಾ] ಜ್ಞಾನದ ಅಥವಾ ತಿಳಿವಳಿಕೆಯ ಹೆಚ್ಚಳ (ಈ ಕಥೆ ಗುಣ್ಪುವೆತ್ತುದು ಅವರುಂ ಜ್ಞಾನರ್ಧಿಸಂಪನ್ನರ್ ಎಂದಿರದೆ ಆಂ ಧೃಷ್ಟನೆಂ ಈ ಕಥಾಬ್ಧಿಯುಮಂ ಏನೀಸಲ್ ಮನಂದಂದೆನೋ: **ಆದಿಪು,** ೧. ೩೫)

ಜ್ಞಾನಾವರಣ – ಜೈನಧರ್ಮಕ್ಕೆ ಪ್ರತಿಬಂಧಕವಾದ ಕರ್ಮ (ಮಿಥ್ಯಾದರ್ಶನಾವಿರತಿಪ್ರಮಾದಕಷಾಯ ಯೋಗೋಪಾರ್ಜಿತ ಜ್ಞಾನಾವರಣಾದಿ ಕರ್ಮಂಗಳ್ ಸಂಸಾರಕಾರಣಂಗಳ್: **ಆದಿಪು,** ೧೦. ೬೧ ವ)

ಜ್ಞಾನಾವರಣಪಂಚಕ – [ನಾ] [ಜೈನ] ಮತಿ ಶ್ರುತ ಅವಧಿ ಮನಃಪರ್ಯಾಯ ಮತ್ತ ಕೇವಲ ಎಂಬ ಐದು ಜ್ಞಾನಾವರಣಗಳು (ಮತಿ ಶ್ರುತ ಅವಧಿ ಮನಃಪರ್ಯಯ ಕೇವಳಬೋಧ ವಿಷಯಜ್ಞಾನಾವರಣಪಂಚಕಮುಮಂ: **ಆದಿಪು,** ೧೦. ೧೪ ವ)

ಜ್ಯಾಘಾತ – [ನಾ] ಬಿಲ್ಲಿನ ಹೆದೆಯ ಏಟು (ಬೃಹಂದಳೆಯಾಗಿ ಗಾಂಡೀವಜ್ಯಾಘಾತದೊಳ್ ಇಂದ್ರನೀಲಂಗಳನಡಸಿದಂತಿರ್ದ ಎರಡುಂ ಮುಂಗೆಯ್ಗಳ ಕರ್ಪಂ ತೀವೆ ತೊಟ್ಟ ಬಳೆಗಳ್: **ಪಂಪಭಾ,** ೮. ೫೫ ವ)

ಜ್ಯಾರವ – [ನಾ] ಬಿಲ್ಲಿನ ಹೆದೆಯ ಠೇಂಕಾರ (ನವಚೂತಾಂಕುರ ಸುರಭಿದ್ರವಮಂ ಸವಿದನಿತಱಿಂದೆ ಮದನಧನುರ್ಜ್ಯಾರವ ಸನ್ನಿಕಾಶಮೀಗಳ್ ಕಿವಿಯಂ ಮುಟ್ಟಿದುದು ಪಿಕದ ಪಂಚಮನಿನದಂ: **ಆದಿಪು**, ೧೧. ೮೬)

ಜ್ಯೋತಿರಂಗ – [ನಾ] [ಜೈನ] ದಶವಿಧ ಕಲ್ಪವೃಕ್ಷಗಳಲ್ಲಿ ಒಂದು; ಬೆಳಕನ್ನು ನೀಡುವ ಕಲ್ಪವೃಕ್ಷ (ಸೊಗಯಿಸುವುದು ದೀಪಾಂಗ ಜ್ಯೋತಿರಂಗ ಕಲ್ಪಕುಜಂಗಳ್: **ಆದಿಪು,** ೫. ೪೦)

ಜ್ಯೋತಿರಿಂಗಣ – [ನಾ] ಮಿಣುಕುಹುಳು (ತಮಂ ಪಿಂಗೆ ದಿನಪತಿಯ ಬೆಳಪ ನಭೋಂಗಣಮಂ ಜ್ಯೋತಿರಿಂಗಣಂ ಬೆಳಗುಗುಮೇ: **ಆದಿಪು**, ೮. ೧೦)

ಜ್ಯೋತಿರ್ಜ್ಞಾನ – [ನಾ] ಖಗೋಳ ವಿಜ್ಞಾನ (ನಕುಲಂ ಕುಂತಶಸ್ತ್ರದೊಳತಿಪ್ರವೀಣನುಮಾಗಿ ಅಶ್ವವಿದ್ಯೆಯೊಳಾರಿಂದಂ ಪಿರಿಯನಾದಂ ಸಹದೇವಂ ಜ್ಯೋತಿರ್ಜ್ಞಾನದೊಳ್ ಅತಿಪರಿಣತನಾಗಿ: **ಪಂಪಭಾ,** ೨. ೩೬ ವ)

ಜ್ಯೋತಿರ್ಭೂಜಾತ – [ನಾ] [ಜೈನ] ಜ್ಯೋತಿರ್ವೃಕ್ಷ (ಜ್ಯೋತಿರ್ಭೂಜಾತತೇಜಂ ಪಸರಿಸುವುದಱಿಂದಿನ್ನೆಗಂ ಕಂಡುದಿಲ್ಲ ಇಂತೀ ತೇಜೋರೂಪಮಾಗಿರ್ದಪುವು ಇನಶಶಿಬಿಂಬಂಗಳ್: **ಆದಿಪು**, ೬. ೫೩)

ಜ್ಯೋತಿಷ್ಕದೇವಿ – [ನಾ] [ಜೈನ] ಜ್ಯೋತಿಷ್ಕವರ್ಗಕ್ಕೆ ಸೇರಿದ ದೇವತಾಸ್ತ್ರೀ (ಮುನಿನಾಥರ್ ಕಲ್ಪಕಾಂತಾಜನತತಿ ಗಣಿನೀಶ್ರಾವಿಕಾಸಂಕುಳಂ ಭಕ್ತಿನಮಜ್ಜ್ಯೋತಿಷ್ಕದೇವೀಪ್ರತತಿ: **ಆದಿಪು**, ೧೦. ೩೬)

ಜ್ಯೋತಿಸು – [ಕ್ರಿ] ಬೆಳಗಿಸು (ಭವ್ಯಜನಮಂ ಕಣ್ಣೊಱೆ ಕಲ್ಪಿಪ್ಪ ಉಪಾಧ್ಯಾಯರ್ ಜ್ಯೋತಿಸುಗೆ ಎಮ್ಮ ಚಿತ್ತಗೃಹದೊಳ್ ರತ್ನತ್ರಯಜ್ಯೋತಿಯಂ: **ಆದಿಪು**, ೧. ೪)

ಜ್ವಳತ್ – [ಗು] ಪ್ರಕಾಶಿಸುವ (ಜ್ವಳತ್ ಅನಳಾಸ್ತ್ರದಿಂದಂ ಇಸೆ ಕಟ್ಟಿಲೆ ತೂಳ್ದು ತೆರಳ್ದಾಗಳ್ ಉಮ್ಮಳಿಸಿ ಮಹಾರಥರ್ ಪೆಳಱಿ: **ಪಂಪಭಾ**, ೧೧. ೧೪೯)

ಜ್ವಳನ – [ನಾ] ಬೆಂಕಿ (ಮತ್ತ ಮಾತಂಗ ಪದನಖ ಖರ್ವಿತ ಉರ್ವೀತಳಮುಂ ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಯತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ,** ೧೩. ೫೧)

ಜ್ವಳನಪತತ್ರಿ – [ನಾ] ಬೆಂಕಿಯ ಬಾಣ, ಆಗ್ನೇಯಾಸ್ತ್ರ (ಜ್ವಳನಪತತ್ರಿಯಂ ಕಡಿದು ವಾರುಣಪತ್ರಿಯಿಂ ಐಂದ್ರಬಾಣಮಂ ಕಳೆದು ಸಮೀರಣಾಸ್ತ್ರದಿಂ ಭೂಭುಜರೆಲ್ಲರಂ ಭಯಂಗೊಳಿಸಿ: **ಪಂಪಭಾ**, ೧೧. ೪೩)

ಝ

ಝಂಕರಣ – [ನಾ] ಝೇಂಕಾರ (ಸರಸಿಜವನಂಗಳಲರ್ವಿನಂ ಇರಲಾಱದೆ ಬೇಗಮೆಱಗುವಳಿನೀನಿವಹದ ಝಂಕರಣಕ್ಕೆ ಕಾಯ್ಪುಗೊಂಡು ಎಟ್ಟಿ ತೊಟಲ್ದಪುವು ನಿನ್ನ ವಿಜಯಗಜಂಗಳ್: **ಆದಿಪು**, ೧೨. ೫೧)

ಝಣಝಣಾಯಮಾನ – [ಗು] ಝಣಝಣ ಎನ್ನುವ (ಆತ್ಮೀಯ ಘನಜಘನದ ನುಣ್ಪಿನೊಳ್ ನುಣ್ಪುಮೆಗೆತ್ತು ಝಣಝಣಾಯಮಾನ ಮಣಿಕಿಂಕಿಣೀವಿರಾಜಿತ: **ಆದಿಪು,** ೪. ೪೧ ವ)

ಝಲ್ಲರಿ – [ನಾ] ಒಂದು ಚರ್ಮವಾದ್ಯ (ಆಗಳ್ ಕುರುಧ್ವಜಿನಿಯುಂ ಅನೇಕ ಶಂಖ ಕಾಹಳ ಭೇರೀ ಪಣವ ಝಲ್ಲರೀ ಮೃದಂಗ ತೂರ್ಯಂಗಳ್ ಅಂತ ಕಾಲಾಂತಕ ವಿಕಟಾಟ್ಟಹಾಸಂಗಳ್ ಎಂಬಂತೆ ಮೊಱಗೆ: **ಪಂಪಭಾ,** ೧೧. ೩೩ ವ)

ಝಷ – [ನಾ] ಮೀನು (ಚಳತ್ಕದಳಿಕಾಮಾಳಂ ಝಷಾನೀಕಂ ಅಚ್ಚರಿಯಂ ಬಾಹುಬಲೀಶ್ವರಂಗೆ ಪಡೆದತ್ತು ಆತ್ಮೀಯ ಸೈನ್ಯಾರ್ಣವಂ: **ಆದಿಪು**, ೧೪. ೯೨)

ಝೇಂಕರಿಸು – [ಕ್ರಿ] ಶಬ್ದ ಮಾಡು, ಆರ್ಭಟಿಸು (ಓರಂತು ತಗುಳ್ದು ಝೇಂಕರಿಸಿದೊಡೆ ಎಲ್ವಡಗಾಗೆ ಮೋದಲೆಂದಿರ್ದ ಎಡೆಯೊಳ್ ಗುರು ತನ್ನ ಮಗನಂ ಎಡೆವುಗವೇಱ್ದಿಂ: **ಪಂಪಭಾ**, ೨. ೭೩)

ಟ

ಟಂಕ – [ನಾ] ಕಲ್ಲು ಕೆತ್ತುವ ಚಾಣ, ಉಳಿ (ಆಕರ್ಣಾಕೃಷ್ಟ ಉತ್ಸೃಷ್ಟ ನಿಜ ವಿಕೀರ್ಣಟಂಕಂಗಳಿಂದಂ ತತ್ಪತಾಕಿನೀಕುಂಜರ ಶಿರಶ್ಶಿಳಾ ಪಟ್ಟಕಂಗಳಂ ಇರ್ಬಗಿಮಾಡಲ್ಪಡದೆಯುಂ: **ಆದಿಪು**, ೧೪. ೧೦೩ ವ); [ನಾ] ಬೆಟ್ಟದ ಇಳಿಜಾರು (ಮಾದ್ಯತ್ ಗಜಗಂಡಕಷಣಪ್ರೋದ್ಭೇದದಿಂ ಸಾರ್ದು ಬಂದು ಇದಿರೊಳ್ ಕೂಡುವುದಿಲ್ಲಿ ಚಂದನರಸಂ ಕೆಂಬೊನ್ನ ಟಂಕಂಗಳೊಳ್: **ಪಂಪಭಾ**, ೪. ೨೨); [ನಾ] ಲಾಳ (ಸುಭಟಾರೂಢತುರಂಗಮ ವೇಗಬಲಪತಿತ ಖುರಖುರಟಂಕ ಪರಿಸ್ಖಲನಕಳಿತ ವಿಷಮಸಮರಭೇರೀನಿಸ್ವನಮುಂ: **ಪಂಪಭಾ**, ೧೩. ೫೧ ವ)

ಟಂಕಾರ – [ನಾ] ಬಿಲ್ಲಿನ ಠೇಂಕಾರ (ಆತೋದ್ಯಪ್ರಗೀತಧ್ವನಿಗಳಿರೆ ಧನುರ್ದಂಡಟಂಕಾರಮಂ ಕೇಳಲುಂ: **ಆದಿಪು**, ೮. ೩೩)

ಟಂಕೋತ್ಕೀರ್ಣ – [ನಾ] ಚಾಣದಿಂದ ಕೆತ್ತಿದುದು (ಅಪ್ರತಿಹತ ದಿಗ್ವಿಜಯಪ್ರಶಸ್ತಿಯಂ ಟಂಕೋತ್ಕೀರ್ಣಂ ಮಾಡಿ ಗಂಗಾದೇವಿಯೋಲಗಿಸಿದ ಅನರ್ಘ್ಯರತ್ನಂಗಳಂ ಕೈಗೆ ಮಾಡಿ: **ಆದಿಪು**, ೧೪. ೫೯ ವ)

ಟಕ್ಕುವಗೆ – [ನಾ] [ಟಕ್ಕು+ಬಗೆ] ಮೋಸದ ಬುದ್ಧಿ (ಆ ಲಾಕ್ಷಾಗೃಹದಾಹಮೊಂದೆ ವಿಷಸಂಯುಕ್ತಾನ್ನಂ ಅಂತೊಂದೆ ಪಾಂಚಾಲೀನಿಗ್ರಹಂ ಒಂದೆ ಟಕ್ಕುವಗೆಯಿಂ ಗೆಲ್ದಿರ್ದ ಜೂದೊಂದೆ: **ಪಂಪಭಾ,** ೯. ೨೨)

ಟಮಾಳ – [ನಾ] ಮೋಸ (ದುರ್ವಿಮಂತ್ರಮಂ ಪರೆಪ ಟಮಾಳಮಂ ಪಿರಿದಂ ಓದಿದೊಡೆ ಅಪ್ಪ ಪದಾರ್ಥಮಾವುದೋ: **ಪಂಪಭಾ**, ೧೩. ೬೬)

ಟಾತಡಾಢಣ – ಟವರ್ಗದ ಅಕ್ಷರಗಳು; ಅವುಗಳಂತೆ ನಿಶ್ಚಿತ, ನಿಷ್ಠುರ (ಮೇಣ್ ಎನ್ನ ನುಡಿ ಟಾತಡಾಢಣಂ ಎನ್ನಂ ಬೆಸಸುವುದು ರಾಜಸೂಯಂ ಬೇಳಲ್: **ಪಂಪಭಾ**, ೬. ೨೬)

ಟೀಕು – [ನಾ] ವ್ಯಾಖ್ಯಾನ (ಲೋಕಕ್ಕಿದು ಅರ್ಥಶಾಸ್ತ್ರದ ಟೀಕೆನಿಸಿದ ತನ್ನ ನುಡಿ ಮನಂಗೊಳಿಸೆ: **ಪಂಪಭಾ,** ೯. ೧೪)

ಠ

ಠಾಣಾಂತರ – [ನಾ] ಠಾಣಾಂತರ, ಪಾಳೆಯ (ತಂತಮ್ಮ ಠಾಣಾಂತರಂಗಳೊಳಿರ್ದ ಅಂಗಜತಂತ್ರದಂತೆಸೆವಿನಂ ಚೆಲ್ವಾದುವಿಮ್ಮಾವುಗಳ್: **ಆದಿಪು,** ೧೧. ೯೬)

ಡ

ಡಂಗ – [ನಾ] ಸುಂಕವಸೂಲಿಗಾಗಿರುವ ಕಾವಲು ಕಟ್ಟೆ (ಪೊಂಗುವ ಮಲೆಪರ ಮಲೆಗಳ ಡಂಗಂಗಳ್ ಮಲೆವ ಮಂಡಲಂಗಳ್ ಪ್ರತ್ಯಂತಗಳ್ ಎನಲ್ ಒಳವೆ ಪಾಂಡವರಂ ಗೆಡೆಗೊಳೆ ನಿನಗೆ ಕುರುಕುಳಾಂಬರಭಾನೂ: **ಪಂಪಭಾ,** ೯. ೩೯)

ಡಂಬ – [ನಾ] ತೋರಿಕೆ, ಮೋಸ (ಸತ್ತನೆ ಮತ್ತೆ ಪುಟ್ಟುವಂ ಗಡ ಪುಸಿ ಕಾಣ ಡಂಬವಿದು ಖೇಚರ ನೀನಿದನೆಂತು ನಂಬಿದೋ: **ಆದಿಪು,** ೨. ೮); ಕಪಟ, ಮರೆಮಾಚುವಿಕೆ (ಹಿಡಿಂಬೆ ಡಂಬಮಿಲ್ಲದೆ ಭೀಮಸೇನನೊಳಪ್ಪ ಒಡಂಬಡಂ ನುಡಿಯೆ: **ಪಂಪಭಾ,** ೩. ೧೮ ವ)

ಡಕ್ಕೆ – [ನಾ] ಒಂದು ವಾದ್ಯ (ತನ್ನ ತೊಡಂಕದು ಎಯ್ದೆ ನೂರ್ಮಡಿ ಮನದೊಳ್ ಪಳಂಚಲೆಯೆ ಡಕ್ಕೆಯೊಳ್ ಅಟ್ಟಜವಾಗೆ ಆಡಿದಳ್: **ಪಂಪಭಾ,** ೪. ೯೦)

ಡವಕೆ – [ನಾ] ಪೀಕದಾನಿ (ಚಾಮರದ ಅಡಪದ ಡವಕೆಯ ಕನ್ನಡಿಯ ಪರಿಚಾರಿಕೆಯುರುಂ ಒಡನಾಡಿ ಬೆಳೆದ ಕೆಳದಿಯರುಂ: **ಆದಿಪು,** ೩. ೨೩ ವ)

ಡವಕೆಯ ಪರಿಚಾರಿಕೆ – [ನಾ] ಪೀಕದಾನಿ ಅಥವಾ ಕಾಳಾಂಜಿ ನೀಡುವ ಸೇವಕಿ (ನೂಱಿಂಟುಂ ಕರಣಮುಮಂ ಅವಳ ಡವಕೆಯ ಪರಿಚಾರಿಕೆಯಱೆಗುಂ ಆಕೆಗವು ತೊಡರ್ವಡೆಯೇ: **ಆದಿಪು,** ೯. ೨೯)

ಡವಕೆವಿಡಿ – [ಕ್ರಿ] ಪೀಕದಾನಿಯನ್ನು ಒಡ್ಡು (ಲೋಕಂ ಪೊಗಟ್ಟುದು ಕನಕಾಬ್ಜಾಕಾರದ ಡವಕೆವಿಡಿದ ಸುರಸೌಂದರಿಯಂ : **ಆದಿಪು,** ೭. ೭)

ಡಾಕಿನೀ – [ನಾ] ಪಿಶಾಚಿ (ಆಮಂತ್ರಿತ ಡಾಕಿನೀ ದಶನಘಟ್ಟನಜಾತವಿಭೀಷಣಂ ಮದೇಭ ಅಂತ್ರನಿಯಂತ್ರಿತ ಅಶ್ವಶವಮಾಂಸರಸಾಸವಮತ್ತಯೋಗಿನೀತಂತ್ರಂ: **ಪಂಪಭಾ,** ೧೨. ೧೨೦)

ಡಾಮರ – [ನಾ] ಹಿಂಸೆ, ದಾಳಿ (ಆ ಮಾಧವೀಮಂಟಪಮಂ ಕಾಮನ ಡಾಮರಕ್ಕೆ ಅಳ್ಕಿ ವನದುರ್ಗಂಬುಗುವಂತೆ ಪೊಕ್ಕು: **ಪಂಪಭಾ,** ೫. ೬ ವ)

ಡಾವರ – [ನಾ] ಕ್ಷೋಭೆ (ಇಂಚೆಯ ಪಸವಿನ ಬಱಿದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡೂರ್ಗಳ್: **ಪಂಪಭಾ,** ೮. ೫೧)

ಡೊಂಬರ ಕೋಡಗ – [ನಾ] ಕೊಲ್ಲಟಿಗರು ಆಟಕ್ಕಾಗಿ ಬಳಸುವ ಕೋತಿ, ಇತರರು ಹೇಳಿದಂತೆ ಕೇಳುವವನು (ಡೊಂಬರ ಕೋಡಗದಂತಾಡಿ ಗೆಲ್ದಾಗಳ್ ತಮ್ಮಣ್ಣನ ಸೋಲಮಂ ಕಂಡಾಗಳ್ ಭೀಮಸೇನನಿಂತೆಂದಂ: **ಪಂಪಭಾ,** ೬. ೭೨ ವ)

ಡೊಂಬವಿದ್ದೆ – [ನಾ] ದೊಂಬರ ವಿದ್ಯೆ, ಯಕ್ಷಿಣಿ, ವಂಚನೆ (ಮಿೞಂ ಆವೆ ಪಂದಿ ಎಂದು ಎನಿತಾನುಂ ತೆಱನಾಗಿ ಡೊಂಬವಿದ್ದೆಯನಾಡಲ್ ನೀನಱೆವೆ: **ಪಂಪಭಾ,** ೭. ೫೭)

ಡೊಕ್ಕನೆ – [ಅ] ಡೊಕ್ ಎಂದು (ಡೊಕ್ಕನೆ ಸುರಿಗೆಯೊಳ್ ಉರಮಂ ಬಿಕ್ಕನೆ ಬಿರಿಯಿಱೆದು ಬರಿಯಗಲನೊತ್ತಿ ಮನಂ ಕೊಕ್ಕರಿಸದೆ ಬೆಲಗಸೆಯಿಂ ಅಳುರ್ಕೆಯೆ ಮೊಗೆಮೊಗೆದು ನೆತ್ತರಂ: **ಪಂಪಭಾ,** ೧೨. ೧೫೩)

ಡೊಕ್ಕರಂಗೊಳ್ – [ಕ್ರಿ] ಮಲ್ಲಯುದ್ಧದಲ್ಲಿ ಡೊಕ್ಕರವೆಂಬ ಪಟ್ಟು ಹಾಕು (ಅಂತು ಎಱಗಿದೊಡೆ ಕೋಡ ಕೆಯ್ದು ಕಾಲೆಡೆಗಳೊಳ್ ಬಿಣ್ಪುಮಂ ಪೊಳೆವಂದದಿಂದೇರ್ದು ಡೊಕ್ಕರಂಗೊಂಡು ಕುರುಕ್ಷೇತ್ರದಿಂದ ಅತ್ತ ಪನ್ನೆರಡು ಯೋಜನಂಬರಂ ಒತ್ತುವುದುಂ: **ಪಂಪಭಾ,** ೧೧. ೭೪ ವ) [**"**ಕೊರಳ ಹಿಂಭಾಗವನ್ನು ಒಂದು ಭುಜದ ಕಂಕುಳಲ್ಲಿ ಇರಿಕಿಸಿಕೊಂಡು, ಗಲ್ಲವನ್ನು ಅಂಗೈಯಲ್ಲಿ ಪೀಡಿಸುತ್ತ ಇನ್ನೊಂದು ಕೈಯಿಂದ ಕೀಲುಗಳನ್ನು ಹಿಡಿದುಕೊಂಡು, ಎರಡು ತೊಡೆಗಳಿಂದ ಹೊಟ್ಟೆಯನ್ನು ಬಲವಾಗಿ ಪೀಡಿಸುತ್ತ ಇರುವುದಕ್ಕೆ ಡೊಕ್ಕರವೆಂದು ಹೆಸರು**"** – **'ದೀಪಿಕೆ'**]

ಡೋಣೆವು – [ನಾ] ಗಾಯದ ಡೊಗರು (ಅಂಬಿನ ಬಂಬಲೊಳಂ ಜೋಡಾಗಿ ಕೋಡನೂಱೆ ಕೆಡೆದ ಗಜವ್ರಜಂಗಳ ಡೋಣೆವುಗಳಿಂದ ಒಱಿತು ಪರಿವ ನೆತ್ತರ ಕಡಲ್ಗಳೊಳ್ ಮಿಳಿರ್ವ: **ಪಂಪಭಾ,** ೧೦. ೧೧೬ ವ)

ಡೊಳ್ಳು – [ನಾ] ದೊಡ್ಡ ಹೊಟ್ಟೆ (ತೀವಿದ ನರೆಯುಂ ಡೊಳ್ಳುಂ ದೇವವ್ರತನೆನಿಸಿ ನೆಗೞ್ದ ಯಶಮಂ ಬೆರಸಿನ್ನೀವುದು ಹರಿಗೆ ಅರ್ಘ್ಯಮಂ ಎಂದು ಆವನುಂ ಈ ಭೀಷ್ಮರಂತು ನುಡಿದರುಂ ಒಳರೇ: **ಪಂಪಭಾ,** ೬. ೪೩)

ತ

ತಂಡ – [ನಾ] ಗುಂಪು (ಕಣ್ಗಳಿಂ ಕೆಂಡದ ತಂಡಂಗಳುಂ ಉರಿಯ ತಂಡಂಗಳುಂ ಸೂಸೆ: **ಪಂಪಭಾ,** ೩. ೧೬ ವ); ಪಕ್ಷ (ಪೆರ್ಚುಗೆ ಭರತಕುಲಂ ನೆಲೆವೆರ್ಚುಗೆ ನಿಮ್ಮೆರಡು ತಂಡಂ ಒದವಿದ ನಣ್ಪಿಂ ಕರ್ಚುಗೆ ಕಲುಷಂ: **ಪಂಪಭಾ,** ೧೩. ೬೭)

ತಂಡಂಗೊಳ್ – [ಕ್ರಿ] ಗುಂಪುಗೂಡು (ಪೊಱಮಟ್ಟದಿರೊಳ್ ಕಂಡಂ ನೆರೆದು ನಿಗುಂಬಿಸಿ ತಂಡಂಗೊಂಡಿರ್ದ ನರರ ಖಚರರ ಗುಂಡಂ: **ಆದಿಪು,** ೪. ೩)

ತಂಡುಳ – [ನಾ] ಅಕ್ಕಿಯ ಕಾಳು (ವಾರ್ಧಿಭೂತಳನಾಥಂಗೆ ಅನುರಾಗಮಂ ಬಳೆಯಿಸಲ್ಕೆ ಅರ್ಘ್ಯಕ್ರಿಯಾ

ತಂಡುಲಂಗಳಿವೆಂದು ಆದರದಿಂದೆ ಕೊಂಡನವಱಿಸೊಳ್ ಪತ್ತೆಂಟು ರತ್ನಂಗಳಂ: **ಆದಿಪು**, ೧೨. ೧೨೦)

ತಂತನ್ಯಸ್ಮಾನ – **[ಗು]** ಮಾರ್ಪೊಳೆ, ಪ್ರತಿಬಿಂಬಿಸು (ತಂತನ್ಯಮಾನದೀಪ್ತಿ ಸಂತಾನಾಮೃತ ನಾನಾನೀರಜ ರಜಃಪಿಂಜರಿತ ಜಳಜಳಾಶಯಂಗಳೊಳಂ: **ಆದಿಪು**, ೬. ೧೦೧ ವ)

ತಂತಿ – **[ನಾ]** ಲೋಹದ ತೆಳುವಾದ ಎಳೆ (ಬೆರಲೊಳ್ ಬೀಣೆಯ ತಂತಿಗಳೊರಸಿದ ಕೆಂಗಲೆಗಳ್: **ಪಂಪಭಾ**, ೬. ೧೦)

ತಂತ್ರ – **[ನಾ]** ವ್ಯೂಹ (ತಮ್ಮ ಬೆಸದಿಂ ತಂತಮ್ಮ ಠಾಣಾಂತರಂಗಳೊಳ್ ಇರ್ದ ಅಂಗಜತಂತ್ರದಂತೆಸೆವಿನಂ ಚೆಲ್ವಾದುವಿಮ್ಮಾವಿನೊಳ್: **ಆದಿಪು**, ೧೧. ೯೬); ಸೈನ್ಯ (ವಾಯುದೇವಂ ಬಂದು ಏಂ ಮಂತ್ರಂ ಪೇೞ್ಗೆನೆ ಕುಡು ರಿಪುತಂತ್ರಕ್ಷಯಕರನಂ ಎನಗೆ ಹಿತನಂ ಸುತನಂ: **ಪಂಪಭಾ**, ೧. ೧೨೪)

ತಂತ್ರಂಗಳ್ – **[ನಾ]** ವಿವಿಧ ಬಗೆಯ ಸೈನ್ಯಗಳು (ಮೌಲ, ಭೃತ್ಯ ಸುಹೃತ್ ಶ್ರೇಣಿ ಮಿತ್ರ ಆಟವಿಕ ತಂತ್ರಂಗಳ್ ಪಣ್ಣಿದ ಜಂತ್ರಂಗಳಂತೆ ಕಟಕುಟಮಾದುವು: **ಪಂಪಭಾ**, ೧೩. ೨೧ ವ) [ಇವು ಕ್ರಮವಾಗಿ ಪಾರಂಪರಿಕ ಸೈನಿಕರು, ಸಂಬಳ ತೆಗೆದುಕೊಳ್ಳುವ ಸೈನಿಕರು, ಸ್ನೇಹಿತ ರಾಜರ ಕಡೆಯವರು, ಯುದ್ಧಸಮಯದಲ್ಲಿನ ತಾತ್ಕಾಲಿಕ ಸೈನಿಕರು, ಶತ್ರುಗಳ ವಿರೋಧಿ ಬಣದ ಸೈನಿಕರು, ಕಾಡುಜನರಾದ ಸೈನಿಕರು]

ತಂತ್ರಾವಾಪ – **[ನಾ]** [ತಂತ್ರ+ಆವಾಪ] ತಂತ್ರಗಳನ್ನು ಹೂಡವುದು (ನಿರಂತರಂ ತಂತ್ರಾವಾಪ ಚಿಂತಾಂತರಾಯಪ್ರಾಯ ಸುಖಲವದೊಳ್ ಈ ಮಹೀರಾಜ್ಯದೊಳ್ ನಿಜೆಸುವುದುಂ: **ಆದಿಪು**, ೮. ೮ ವ)

ತಂತ್ರಿ – **[ನಾ]** ತಂತಿ (ಕಿನ್ನರೀಕರಕಿಸಲಯಚಳನಸಮುತ್ಪನ್ನ ಕಾಕಳೀಕಳರವಮಿಳಿತ ಮಧುಕರತಂತ್ರೀಸಮಂಚಿತವಿಪಂಚೀ ಮಂದ್ರತಾರಮಧುರಮೂರ್ಚ್ಛನಾಸನಾಥಪ್ರಯೋಗಂಗಳುಮಂ: **ಆದಿಪು**, ೧೧. ೭೪ ವ)

ತಂತ್ರೀನಾದ – **[ನಾ]** ತಂತಿವಾದ್ಯದ ದನಿ (ಸುರಯುವತಿ ತಂತ್ರೀನಾದಂ ಕೊಳೆ ಬೀಣೆಯ ದಂಡಿಗೆಯುಂ ತಳಿರ್ತುದೆಂಬೊಂದು ಶಂಕೆಯಂ ಪುಟ್ಟಿಸಿದಳ್: **ಆದಿಪು**, ೭. ೨೧)

ತಂದಂ – **[ಕ್ರಿ]** [√ತರ್] ತಂದುಕೊಂಡನು (ಮೆಲ್ಲನೆ ಮೃಗಮೆಂದು ಸಾರ್ದು ನೆಱನಂ ನಡೆ ನೋಡಿ ನರೇಂದ್ರನೆಚ್ಚು ಭೋಂಕನೆ ಮೃಗಚಾರಿಯಂ ತನಗೆ ಮಾಣದೆ ತಂದನದೊಂದು ಮಾರಿಯಂ: **ಪಂಪಭಾ**, ೧. ೧೧೧)

ತಂದಲ್ – **[ನಾ]** ತುಂತುರು, ಸೋನೆ (ಸೋನೆಯಿಂ ಸರಿಗಳಿಂ ತಂದಲ್ಗಳಿಂದಂದು ಭೂತಳಮೇಕಾರ್ಣವಮಾಗೆ ಚಕ್ರಿಯ ಬಲಕ್ಕಾತಂಕಮಂ ಮಾಡಿದರ್: **ಆದಿಪು**, ೧೩. ೫೯)

ತಂದಿಕ್ಕು – **[ಕ್ರಿ]** ಎಸೆ, ಬಿಸಾಕು (ಭರತಾವನೀಶ್ವರಂ ಗುರು ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರಂ ಈ ದೊರೆಯನುಂ ಅಳವಟೆಯೆ ವಸುಂಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ: **ಆದಿಪು**, ೧೪. ೧೧೨)

ತಂದುಕೊಳ್ – **[ಕ್ರಿ]** ಮದುವೆಮಾಡುವುದು (ಮದುವೆಯಂ ಮಾಡಲೆಂದು ಧೃತರಾಷ್ಟ್ರಂಗೆ ಗಾಂಧಾರರಾಜ ಸೌಬಲನ ಮಗಳಪ್ಪ ಗಾಂಧಾರಿಯಂ ಶಕುನಿಯೊಡವುಟ್ಟಿದಳಂ ತಂದುಕೊಟ್ಟು: **ಪಂಪಭಾ**, ೧, ೮೭, ವ)

ತಂದೆ – **[ನಾ]** ಜನಕ (ತಂದೆಯ ರೂಪೆ ತಂದೆವಿಳಾಸಮೆ ತಂದೆಯ ಚೆಲ್ವೆ: **ಆದಿಪು**, ೮. ೪೩)

ತಂಬುಲ – **[ನಾ]** ತಾಂಬೂಲ (ಕಪ್ಪುರದ ಬಂಬಲ್ ತಂಬುಲಂ ರಾಗಮಂ ಪಡೆಗೆಲ್ಲಂ ಪಡೆವನ್ನೆಗಂ ನಡೆದರಂದೆತ್ತಂ ಕೆಲರ್ ನಾಯಕರ್: **ಪಂಪಭಾ**, ೯. ೧೦೪)

ತಂಬೆಲರ್ – **[ನಾ]** ತಂಗಾಳಿ (ಮನಮಾಱಿ ತೀಡಿದುದು ತೆಂಕಣ ತಂಬೆಲರ್ ಅಪ್ಪಿಕೊಳ್ವವೋಲ್: **ಪಂಪಭಾ**, ೧೪. ೧೨)

ತಕ್ಕ – **[ನಾ]** ಉಳ್ಳವನು (ಇಳೇಯಂ ಘಾತಿಸಿ ತಕ್ಕರಂ ಕವರ್ದುಕೊಂಡು ಅರ್ಥಮಂ ಪೂಟ್ಟು ನೋಡುತ್ತುಂ ಉಗ್ರಲೋಭವಶದಿಂ: **ಆದಿಪು**, ೨. ೧೫); **[ನಾ]** ತಕ್ಕದ್ದು, ಶ್ರೇಷ್ಠ [√ತಗು] (ಕ್ಷೀರಾಬ್ಧಿಯ ನೀರಲ್ಲದೆ ಧೀರನ ಮಜ್ಜನಕೆ ಪೆಱವು ನೀರ್ ತಗವು ಎಂದು ವಾರಾಶಿವರಂ ಸುರಜನದಾರಿ ಮನೋಹಾರಿ ನೀಳ್ದುವೆರಡುಂ ಕೆಲದೊಳ್: **ಆದಿಪು**, ೭. ೮೨); **[ನಾ]** ದಾನಾರ್ಹ (ಜಿನಪೂಜೋತ್ಸವಮಂ ಮಹಾಮಹಮುಮಂ ತಾಂ ಮಾಡಿ ಸಲ್ವನ್ನೆಗಂ ಧನಮಂ ತಕ್ಕವರ್ಗೀಯವೇೞ್ಪುದು: **ಆದಿಪು**, ೧೫. ೬); **[ನಾ]** ಗುಣಶಾಲಿ (ಕಲಿಯನೆ ಪಂದೆ ಮಾಟ್ಟಿ ಒಳ್ಗಲಿಯಂ ಕಡುವಂದೆ ಮಾಟ್ಟಿ ತಕ್ಕನಂ ಪೊಲೆಯನೆ ಮಾಟ್ಟಿ ಮುಂ ಪೊಲೆಯನಂ ನೆಱ ತಕ್ಕನೆ ಮಾಟ್ಟಿ: **ಪಂಪಭಾ**, ೧೨. ೯೨)

ತಕ್ಕು – **[ನಾ]** ಆತ್ಮವಿಶ್ವಾಸ, ಸ್ವಾಭಿಮಾನ (ದರ್ಪಿತದುರಿತಮಲ್ಲನುಮಂ ಉಡಿವ ತಕ್ಕಿನಿಂ ಸಭೆಗೆ ನಡೆದಂ ಇಂದ್ರಾರ್ಚಿತನಾ: **ಆದಿಪು**, ೧೪. ೧೩೪); **[ನಾ]** ಶ್ರೇಷ್ಠ (ಮದಮಂ ಮುಕ್ಕುಳಿಸಿರ್ದ ಇಭಂಗಳಂ ಉದಗ್ರಾಶ್ವಂಗಳಂ ತಕ್ಕಿನಗ್ಗದ ಬಾಡಂಗಳಂ ಆಯ್ದು ಕೊಟ್ಟು: **ಪಂಪಭಾ**, ೨. ೫೩); **[ನಾ]** ಆಧಿಕ್ಯ, ಹೆಚ್ಚಿಕೆ (ಎರಡುಂ ಬಲಂ ಎನ್ನೆ ನೋಡೆ ತಕ್ಕಿನ ಎನ್ನ ಅದಟುಮಂ ಎನ್ನ ವೀರಮುಮಂ ಆಜಿಯೊಳ್ ಎನ್ನರಸಂಗೆ ತೋಱುವೆಂ: **ಪಂಪಭಾ** ಪರಿಷತ್ತು, ೧೦. ೪೧)

ತಕ್ಕುದೆ – **[ನಾ]** ಯೋಗ್ಯವಾದುದೇ (ಮಧ್ಯಸ್ಥಂಗಳಾಗಿರ್ದುವರ್ಕಲೆಯಲ್ ತಕ್ಕುದೆ ಕೆನ್ನಂ ಆ ತ್ರಿವಳಿಗಳ್ಗೆನ್ನಂ ಸರೋಜಾಕ್ಷಿಯಾ: **ಪಂಪಭಾ**, ೪. ೭೪)

ತಕ್ಕೂರ್ಮೆ – **[ನಾ]** (ತಕ್ಕು+ಊರ್ಮೆ] ಯೋಗ್ಯತೆ (ಈ ನುಡಿಯೆ ನಿನ್ನ ಕೂರ್ಮೆಗಂ ತಕ್ಕೂರ್ಮೆಗಂ ದೊರೆಯಪ್ಪುದಾದೊಡಂ ಅರಾತಿಸೈನ್ಯಮಂ ತವೆ ಕೊಂದಲ್ಲದೆ ನಿನ್ನ ಮೊಗಮಂ ನೋಡೆಂ: **ಪಂಪಭಾ**, ೧೩. ೨೮ ವ)

ತಕ್ಷಕಪತಿ – **[ನಾ]** ಮಹಾ ಶಿಲ್ಪಿ (ಭದ್ರಮುಖನೆಂಬ ತಕ್ಷಕಪತಿಯುಂ .. .. ಆತ್ಮೀಯ ಸಾಮ್ರಾಜ್ಯಪರಿಚ್ಛೇದಮಾಗೆ: **ಆದಿಪು**, ೧೫. ೩ ವ)

ತಕ್ಷಕರತ್ನ – **[ನಾ]** [ಜೈನ] ಜೀವರತ್ನಗಳಲ್ಲಿ ಒಂದಾದ ಸ್ಥಪತಿ, ವಾಸ್ತುಶಿಲ್ಪಿ (ಪ್ರಾಸಾದಪ್ರಕರಣನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ: **ಆದಿಪು**, ೧೧. ೩ ವ)

ತಗರ್ – [ಕ್ರಿ] ಅಡ್ಡಗಟ್ಟು (ರಥಮಂ ಬಂದೇಱೆ ಪೋ ಪೋಗಲೆಂದೊದಱುತ್ತುಂ ಪರಿತಂದು ತಾಗಿ ತಗರ್ದಂ ಗಂಗಾಸುತಂ ಭೀಮನಂ: **ಪಂಪಭಾ,** ೧೧. ೧೦)

ತಗರ್ತಲೆಯ – [ನಾ] ಒಂದು ಬಾಣ (ನೆಱ್ದು ನಿರ್ವಾಯಂ ನರುವಾಯಂ ಮುಂಮೊನೆ ನೆರಕೆ ನಾರಾಚಂ ತಗರ್ತಲೆಯಂ: **ಪಂಪಭಾ,** ೧೩. ೩೯)

ತಗವು – ಯೋಗ್ಯವಾಗವು (ಕ್ಷೀರಾಬ್ಧಿಯ ನೀರಲ್ಲದೆ ಧೀರನ ಮಜ್ಜನಕೆ ಪೆಱವು ನೀರ್ ತಗವು ಎಂದು ಆ ವಾರಾಶಿವರಂ: **ಆದಿಪು,** ೭. ೮೨)

ತಗುಳ್ – [ಕ್ರಿ] ಸೇರು (ಬಗೆಯೊಳ್ವೊಣ್ಮೆ ದಯಾರಸಂ ಚರಿತದೊಳ್ಕೈಗಣ್ಮೆ ಚಾರಿತ್ರಂ ಆವಗಮಾವಶ್ಯಕದೊಳ್ ತಗುಳ್ದು ಪಲವುಂ ಶೀಲಂಗಳಂ ತಾಳ್ದಿ: **ಆದಿಪು,** ೧. ೫); [ಕ್ರಿ] ಆರಂಭಿಸು, ತೊಡಗು (ಆ ಮಹಾಬಳಂ ಬಾಲಕಾಲದಿಂ ತಗುಳ್ದು ಅಭ್ಯಸ್ತಸಮಸ್ತವಿದ್ಯಾಧರವಿದ್ಯಾಪಾರಗನುಂ: .. .. ಆಗಿ: **ಆದಿಪು,** ೧. ೭೩ ವ); [ಕ್ರಿ] ಆಚರಿಸು (ಭೋಗಿಪೆನೆನ್ನ ಜವ್ವನಮುಂ ಈ ಧನಮುಂ ತವುವನ್ನೆಗಂ ಕುಚಾಗ್ರಭರಾನತಾಂಗಿಯರೊಳ್ ಅನ್ನೆಗಂ ಅತ್ತ ಅಱನಂ ತಗುಳ್ವೆಂ: **ಆದಿಪು,** ೩. ೬೩); [ಕ್ರಿ] ಅಂಟು, ಹಿಡಿ (ವನದಹನಂ ವನಾಂತರಮನೊರ್ಬುಳಸಾಗಿರೆ ಮುತ್ತಿ ಸುತ್ತಿನ ನಡುವಿರ್ದುಂ ಆ ಮರನಂ ಅಟ್ಟಿದುದು ಈ ಮರನಂ ತಗುಳ್ದುದು: **ಆದಿಪು,** ೯. ೫೯); [ಕ್ರಿ] ತಡೆ, ಅಡ್ಡಿಪಡಿಸು (ಶುಭಾಶುಭಪರಿಣಾಮ ಪ್ರಣಾಳಿಕೆಯಿಂ ಬರ್ಪ ಕರ್ಮಮಂ ಬರಲೀಯದೆ ಗುಪ್ತ್ಯಾದಿಗಳಿಂ ತಗುಳ್ವುದು ಸಂವರೆಯೆಂಬುದು: **ಆದಿಪು,** ೧೦. ೬೩ ವ); [ಕ್ರಿ] ಉಂಟಾಗು (ಕಾಲಾನುಭಾವದಿಂ ಯುಗಾರಂಭದ ವರ್ಷಾರಂಭದೊಳಂ ತಗುಳ್ದೀ ದ್ವೀಪದೊಳಗಣ ನದೀನದಂಗಳ ಜಲಂಗಳನೊಳಗೊಂಡ ಅಲಂಘ್ಯತ್ವದೊಳಂ: **ಆದಿಪು,** ೧೨. ೬೮ ವ); [ಕ್ರಿವಿ] ಮೇಲಿಂದ ಮೇಲೆ, ಒಂದೇ ಸಮನೆ (ವರ್ಣಕಂ ಕತೆಯೊಳಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಮೆಂದು ಪಂಡಿತರೆ ತಗುಳ್ದು ಬಿಚ್ಚಳಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ: **ಪಂಪಭಾ,** ೧. ೧೧); [ಕ್ರಿ] ಆರಂಭಗೊಳ್ಳು (ಹಿರಣ್ಯಗರ್ಭಬ್ರಹ್ಮರಿಂ ತಗುಳ್ದು ಅವ್ಯವಚ್ಛಿನ್ನಮಾಗಿ ಬಂದ ಸೋಮವಂಶಂ ಈಗಳ್ ಎಮ್ಮ ಕುಲಸಂತತಿಗಂ ಆರುಮಿಲ್ಲದೆ ಎಡವಱೆದು ಕಿಡುವಂತಾಗಿರ್ದುದು: **ಪಂಪಭಾ,** ೧. ೮೪ ವ); [ಕ್ರಿ] ಬೆನ್ನ ಹಿಂದೆಯೇ ಹೋಗು (ಗೆಡೆವಚ್ಚಿರ್ವರ್ ಮನಗೊಂಡು ಒಡನೊಡನೆ ಓರಂತು ತಗುಳ್ದು ಝೇಂಕರಿಸಿದೊಡೆ ಎಲ್ಲಡಗಾಗೆ ಮೋದಲೆಂದಿರ್ದ ಎಡೆಯೊಳ್ ಗುರು ತನ್ನ ಮಗನಂ ಎಡೆವುಗವೇೞ್ದಂ: **ಪಂಪಭಾ,** ೨. ೭೩); [ಕ್ರಿ] ಅನುಸರಿಸು, ಮಾಡು (ಏಂ ತಗುಳ್ದೆ ಇನ್ನುಸಿರದಿರ್ ಈವ ಮಾತಂ ಇವನುಣ್ಬುದು ಖಾಂಡವಂ ಈತಂ ಅಗ್ನಿ: **ಪಂಪಭಾ,** ೫. ೭೨)

ತಗುಳೆವರ್ – [ನಾ] ಅಟ್ಟಿಸಿಕೊಂಡು ಹೋಗು, ಎಂದರೆ ಸೋಲಿಸು (ಈತನುದಾತ್ತ ಪೂರ್ವ ಭೂಮಿಪರನೊಳ್ಪಿನೊಳ್ ತಗುಳೆವಂದೊಡೆ ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟ್ಟಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್: **ಪಂಪಭಾ,** ೧. ೧೪)

ತಗುಳ್ಚು – [ಕ್ರಿ] ತಗುಲಿಸು, ಸೇರಿಸು (ಚಿನ್ನಪೂಗಳಂ ಅವಱೊಳ್ ತಗುಳ್ಚದೆ ಮೃಗೋದ್ಭವಪಂಕದೆ ಪತ್ರಭಂಗಮಂ ತೊಳಪ: **ಆದಿಪು,** ೪. ೧೨); [ಕ್ರಿ] ಕೂಡಿಸು, ಸಮೀಕರಿಸು (ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟ್ಟಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್: **ಪಂಪಭಾ,** ೧. ೧೪); [ಕ್ರಿ] ಮುಡಿದುಕೊ (ಪೂತಚೂತಮಂ ನೆರ್ಮಿದ ಅಶೋಕವಲ್ಲರಿಯ ಪಲ್ಲವಮೊಂದನೆ ಕೊಯ್ದು ರಾಗದಿಂ ಸೋರ್ಮುಡಿಯೊಳ್ ತಗುಳ್ಚಿದೊಡೆ: **ಪಂಪಭಾ,** ೫. ೮೨)

ತಗುಳ್ಪು – [ನಾ] ಜೋಡಣೆ, ಬೆಸುಗೆ (ವಜ್ರಲೇಪದ ತಗುಳ್ಪಂ ಪೋಲ್ವಿನಂ ವಜ್ರನಾಭಿಗತಿಪ್ರೀತಿಯನುಂಟುಮಾಡಿದರ್ ಅವರ್ ಜನ್ಮಾಂತರಸ್ನೇಹದಿಂ: **ಆದಿಪು,** ೬. ೨೨); [ಕ್ರಿವಿ] ಅನುಸರಿಸಿ (ಕುಡಿವುದಂ ಏೞುಮಂಬುಧಿಯುಮಂ ಕುಲಶೈಲಕುಳಂಗಳುಂ ತಗುಳ್ದಡರ್ವುದನೊಂದಿ ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊಡರ್ವುದಂ: **ಪಂಪಭಾ,** ೧. ೧೪೦)

ತಗೆ – [ಕ್ರಿ] ನಿಲ್ಲಿಸು, ಅಡ್ಡಿಪಡಿಸು (ಪೋಗದಿರು ಈಶ್ವರನಾಣೆ ಎಂದು ಪುಲ್ಮರುಳ್ ಇನಿಸಾನುಮಂ ತಗೆದು ಕಾಡಿದುದಲ್ಲಿ ಫಣೀಂದ್ರಕೇತುವಂ: **ಪಂಪಭಾ,** ೧೩. ೫೫)

ತಟ – [ನಾ] ದಡ (ಬೇಂಟೆಯನಾಡಿ ಬೞಲ್ದು ಬೇಸಗೆಯ ನಡುವಗಲೊಳ್ ವನಕ್ರೀಡೆಗಂ ಜಲಕ್ರೀಡೆಗಂ ಆಸಕ್ತರಾಗಿ ಯಮುನಾನದೀತಟನಿಕಟವರ್ತಿಗಳಾದರ್: **ಪಂಪಭಾ,** ೫. ೫೧ ವ); [ನಾ] ಬೆಟ್ಟದ ತಪ್ಪಲು (ಸಮುದ್ಯತ್ ರಜತಗಿರಿ ತಟ ಸ್ಪಷ್ಟ ಸಂಶ್ಲಿಷ್ಟ ಮೌರ್ವೀನಿನದಂ ಪರ್ವಿತ್ತು ಅಕಾಂಡಪ್ರಳಯ ಘನಘಟಾಟೋಪ ಗಂಭೀರನಾದಂ: **ಪಂಪಭಾ,** ೧೨. ೧೩೭)

ತಟಾಂತರ – [ನಾ] ದಡದ ಪ್ರದೇಶ (ಎರೆದನ ಪೆಂಪುವೇೞ್ವೊಡೆ ಅನಲಂ ಪೊಣರ್ವಾತನ ಪೆಂಪುವೇೞ್ವೊಡೆ ಆ ಸುರಪತಿ ಕೊಟ್ಟ ತಾಣದೆಡೆವೇೞ್ವೊಡೆ ಯಮುನಾನದೀತಟಾಂತರಂ: **ಪಂಪಭಾ,** ೫. ೭೩)

ತಟಾಕ – [ನಾ] ಕೆರೆ (ಗಗನತಳಮೆ ಪಱಿದು ಬಿೞ್ದುದೆನಿಪ ಬಹುತಟಾಕದಿಂ ಕುಕಿಲ್ವ ನಲಿವ ಕೋಕದಿಂ: **ಪಂಪಭಾ,** ೧. ೫೮)

ತಟಿದ್ದ್ಯುತಿ – [ನಾ] (ತಟಿತ್+ದ್ಯುತಿ) ಮಿಂಚಿನ ಕಾಂತಿ (ತಟಿದ್ದ್ಯುತಿಚಂಚಲೆಯೆಬುದೊಂದು ಭಾವನೆಯೊಳೆ ರಾಜ್ಯಲಕ್ಷ್ಮಿಯೊಳ್ ಅನಾದರಮಾಯ್ತು ಮನಂ ಚಿದಾತ್ಮನಾ: **ಆದಿಪು,** ೮. ೬)

ತಟಿದ್ವಳಯ – [ನಾ] ವಿದ್ಯುದ್ವಲಯ, ಮಿಂಚಿನ ಪ್ರದೇಶ (ತಟಿದ್ವಳಯವಿಳಸಿತಂಗಳಾಗಿ ನಿಜಪ್ರಕೋಷ್ಠನಿಷ್ಠಿತಂಗಳಪ್ಪ ವೀರಾಂಗದಂಗಳೆಂಬ ಕಟಕಗಳುಂ: **ಆದಿಪು,** ೧೫. ೩ ವ)

ತಟ್ಟಿ – [ನಾ] ದಡ್ಡಿ, ತಡಿಕೆ (ದಿವ್ಯಾಸ್ತ್ರಂಗಳಿಂ ನೂಱುಯೋಜನದಳವಿಯ ಖಾಂಡವವನಮೆಲ್ಲಮಂ ತಟ್ಟಿ ಮೆಡಱೆ ಮಶಕಮಾತ್ರಮಪ್ಪೊಡಂ ಮಿಸುಕಲ್ ಛಿದ್ರಮಿಲ್ಲದಂತಾಗೆ: **ಪಂಪಭಾ,** ೫. ೯೬ ವ)

ತಟ್ಟಿಱೆ – [ಕ್ರಿ] ಅಪ್ಪಳಿಸು (ಎರಡುಂ ಬಲದ ಕರಿಘಟೆಗಳ್ ಒಂದೊಂದಱೊಳ್ ತಾಗಿ ತಟ್ಟಿಱೆಯೆ ಬಿಸುನೆತ್ತರ ಅರ್ಬಿಗಳ್ ಉರ್ವಿ ಪಾಯೆ: **ಪಂಪಭಾ,** ೧೦. ೯೬ ವ)

ತಟ್ಟುಪೊಟ್ಟು – [ಅ] ಥಟ್ ಪಟ್ ಎಂದು (ಚಾತುರ್ವಲಂಗಳ್ ಮೊದಲ ಸಮಕಟ್ಟುಗೆಟ್ಟು ತಡವರಿಸಿ ತಟ್ಟುಪೊಟ್ಟೆಂದು ಎಚ್ಚುಂ ಇಟ್ಟುಂ ಇಱಿದು ತಱಿದು ಘಟ್ಟಿಸೆಯುಂ: **ಪಂಪಭಾ,** ೧೦. ೭೦ ವ)

ತಡ – [ಗು] ಮೆಲ್ಲಗೆ, ನಿಧಾನವಾಗಿ (ಸೊಗಯಿಸೆ ತೊಟ್ಟ ಪೂದುಡುಗೆ ಮೆಲ್ಲರ್ದೆಯೊಳ್ ತಡಂ ಆಡೆ ಗಾಡಿ ದಿಟ್ಟಿಗಳೊಳ್ ಅನಂಗರಾಗರಸಮುಣ್ಮುವಿನಂ ನಡೆ ನೋಡಿ ನೋಡಿ: **ಪಂಪಭಾ,** ೨. ೧೮)

ತಡಂಗ – [ನಾ] ತಟಾಕ (ಅದೇಂ ನೆಱೆ ಪೋಲ್ತುದೊ ಚಂಡ ಹುಂಡಸಂಸ್ಥಾನದ ದಗುಂತಿದೀವಿದ ತಡಂಗಮದಂಗದ ಪಾಂಗವಂದಿರಾ: **ಆದಿಪು,** ೫. ೯೦) [ಪದ್ಯದ ಕೊನೆಯ ಸಾಲು ಎಲ್. ಬಸವರಾಜು ಅವರ ಆವೃತ್ತಿಯದು]

ತಡಂಗಾಲ್ – [ನಾ] ತೊಡರುಗಾಲು (ತೊಡರೆ ತಡಂಗಾಲ್ ಪೊಯ್ದೊಡೆ ಕೆಡೆದುಂ ತಿವಿದೊಡೆ ಸುರುಳ್ದು ಮೋದಿದೊಡೆ ಇರದೆ ಎಲ್ವಡಗಾಗಿ ಮಡಿದು ಬಿಟ್ಟುವು ಗಡಣದೆ ಕರಿಘಟೆಗಳೇಂ ಬಲಸ್ಥನೋ ಭೀಮಂ: **ಪಂಪಭಾ,** ೧೧. ೬೮)

ತಡಂಬೊಯ್ – [ಕ್ರಿ] ಅಪ್ಪಳಿಸು (ಎತ್ತಿಕೊಂಡು ಅಸಗವೊಯ್ವೊಯ್ಲೊಳ್ ತಡಂಬೊಯ್ದುಂ ಉಳ್ಳ ಅಡಗಂ ನೆತ್ತರುಂ ಎಲ್ವುಂ ಎಲ್ಲ ದೆಸೆಗಂ ಜೀಱೆಟ್ಟು ಪಾಱೇಟೆ: **ಪಂಪಭಾ,** ೧೦. ೧೦೪)

ತಡಂಮೆಟ್ಟು – [ಕ್ರಿ] ಮೆಟ್ಟಿಂಗಾಲಿಡು, ಮೆಲ್ಲಗೆ ನಡೆ (ಅಡಂಗಿ ಪರಿವ ಪುಲಿಗಳುಮಂ ಸೋಂಕಿ ಪರಿವ ಎಯ್ಗಳುಮಂ ತಡಂಮೆಟ್ಟಿ .. .. ಪಲವನೆಚ್ಚು: **ಪಂಪಭಾ,** ೫. ೪೮ ವ)

ತಡತಡವರ್ – [ಕ್ರಿ] ತೊದಲು, ತೊಡರು (ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಿಂ ತೊಡರದೆ ನಡೆಯಿಸಿ: **ಆದಿಪು,** ೯. ೩೨); ನಿಂತು ನಿಂತು ಬರು (ಬಾಡಿದ ಪೂಮಾಲೆಯೊಡನೆ ಬೞಲ್ದ ಸೋರ್ಮುಡಿಯುಂ ಅಡಿಗಡಿಗೆ ತಡತಡವಪ್ಪ ನಡೆಗಳುಂ ಬೆರಸು: **ಆದಿಪು,** ೧೧. ೭೦ ವ)

ತಡತಡಾಗು – [ಕ್ರಿ] ತಡವರಿಸು (ಅದು ತಡತಡಾದೊಡೆ ಅರ್ಹತ್ವದಮಂ ನಾಲಗೆಗೆ ತರ್ಪುದು ಅದು ಬಾರದೊಡೆ ಇರ್ಪುದು ಅಕಾರದೊಂದಱೊಳ್: **ಆದಿಪು,** ೨. ೫೬)

ತಡವಡವು – [ನಾ] ತಡವರಿಸುವಿಕೆ (ಬಾಡಿದ ಪೂಮಾಲೆಯೊಡನೆ ಬಳಲ್ದ ಸೋರ್ಮುಡಿಯುಂ ಅಡಿಗಡಿಗೆ ತಡವಡವಪ್ಪ ನಡೆಗಳುಂ ಬೆರಸು: **ಆದಿಪು,** ೧೧. ೭೦ ವ)

ತಡತಡಿಸು – [ಕ್ರಿವಿ] ಧಾವಂತದಿಂದ, ದಡದಡನೆ (ಆಕ್ರಂದತ್ ಸ್ವರಪರಿಗತರ್ ಸೈರಿಸಲಾರದೆ ತಡತಡಿಸಿ ಪರಿತಂದು: **ಆದಿಪು,** ೧೫. ೮೭ ವ)

ತಡದಡಿಸು – [ಕ್ರಿ] ಮುನ್ನುಗ್ಗು (ಅಸಿಧೇನುವಂ ಕಿಟ್ಟಿ ನಡನಡನಡುಗಿ ತಡವಡಿಸುತ್ತುಮಿಱಿಯಲ್: **ಆದಿಪು,** ೨. ೧೪ ವ)

ತಡಮಾಗು – [ಕ್ರಿ] ಸಮಾನವಾಗು (ಕರದಸಿಗಳ್ ಪಳಂಚೆ ಕಿಡಿವಿಟ್ಟೊಗೆದ ಅಳ್ಗಿಡಿ ತಾರಕಾಳಿಯಂತಿರೆ ರಜಂ ಒಡ್ಡಿನಿಂದ ಮುಗಿಲಂತಿರೆ ಬಾಳುಡಿ ಪಾಱುವ ಉಳ್ಕದಂತಿರೆ ತಡಮಾದುದು ಅಂಬರದೊಳ್ ಅಂಬರಂ: **ಪಂಪಭಾ,** ೧೨. ೧೧೧)

ತಡಮಾಡು – [ಕ್ರಿ] ಒಂದುಗೂಡಿಸು (ಮನಂ ವಿನೋದರಸದೊಳ್ ತಡಮಾಡೆ ಮಗುಟ್ದು ಮನ್ಮಥಕ್ರೀಡೆಗೆ ನೋಡೆ ನಾಡೆ ಗುಱಿಯಪ್ಪುವು: **ಆದಿಪು,** ೫. ೪೧); [ಕ್ರಿ] ಉತ್ಸಾಹಗೊಳಿಸು (ಸುಖದೊಳ್ ಮೂಡುವ ಮುಟ್ಟಾಡುವ ತಡಮಾಡುವ ಬಗೆಯಲ್ಲದಲ್ಲಿ ಬಗೆ ಪೆಱತುಂಟೇ: **ಆದಿಪು,** ೬. ೪೦); [ಕ್ರಿ] [ತಡಂ+ಆಡು] ನಿಧಾನವಾಗಿ ಚಲಿಸು (ಕೂರಿದುವಪ್ಪ ಕಣ್ಮಲರ್ಗಳ್ ಅಳ್ಕೆರ್ದೆಯೊಳ್ ತಡಮಾಡೆ ತಾಮೆ ಕಣ್ ಪೇರಿಸೆ ಪುರ್ವು ನಾಲಗೆವೊಲಾಗೆ ಮನಂಬುಗಿಸಲ್ಕೆ: **ಪಂಪಭಾ,** ೪. ೮೩)

ತಡವಪ್ಪು – [ಕ್ರಿ] ತೊದಲಾಗು, ತೊದಲು (ನುಡಿ ತಡವಪ್ಪುದೊಂದು ಮೊಗದೊಳ್ ಮಱುಕಂ ದೊರೆಕೊಳ್ವುದೊಂದು ನಾಣ್ಗೆಡೆಗುಡದಿರ್ಪುದೊಂದು: **ಪಂಪಭಾ,** ೨. ೪೯)

ತಡವರ್ – [ಕ್ರಿ] ತೊದಲು (ಅಳ್ಕೆರ್ದೆ ನೊಂದು ಕುಂದುಗುಂ ನುಡಿ ತಡವಕ್ಕುಂ ಇಚ್ಚೆಗೆಡುಗುಂ: **ಆದಿಪು,** ೧೨. ೪೦)

ತಡವರಿಸು – [ಕ್ರಿ] ಮುಟ್ಟು (ದೆಸೆಗಳಂ ತಡವರಿಸಿಕೊಳ್ವಂತೆ ಬಳ್ವಳ ಬಳೆದು ಸೊಗಯಿಸುವ ಪೆರ್ಮರಂಗಳಿಂದಂ: **ಪಂಪಭಾ,** ೭. ೨೯)

ತಡವಿಕ್ಕು – [ಕ್ರಿ] ಹಿರಿದುಮಾಡು, ಹೆಚ್ಚಿಸು (ಹಸ್ತಿಯ ಬೆಂಗೆ ವಂದು ಸುತ್ತಿಱಿದು ಪಗಲಂ ತಡವಿಕ್ಕಿದಂತೆ ಬೆಳಗುವ ಕೆಯ್ದೀವಿಗೆಗಳ ಬೆಳಗೆ ಬೆಳಗಾಗೆ: **ಪಂಪಭಾ,** ೧೨. ೫೨ ವ)

ತಡವು – [ಕ್ರಿ] ತಡವರಿಸು (ಬಾಯ್ಬಿಡದೆ ಬತ್ತುಗುಂ ಅಳ್ಕೆರ್ದೆ ನೊಂದು ಕುಂದುಗುಂ ನುಡಿ ತಡವಕ್ಕುಂ ಇಚ್ಚೆಗೆಡುಗುಂ ಗಡ ನಲ್ಲರಗಲ್ಕೆಗೆ: **ಆದಿಪು,** ೧೨. ೪೦); [ನಾ] ಅಡ್ಡಿ, ತೊಂದರೆ (ಎಳೆಯಂ ದುರ್ಯೋಧನಂ ತಳ್ತಿಱಿಯದೆ ಕುಡೆಂ ಎಂದಟ್ಟಿ ಕಾದಲ್ಕಂ ಈಗಳ್ ಕಳನಂ ಪೇೞ್ದುಂ ಕುರುಕ್ಷೇತ್ರಮಂ ಎನೆ ತಡವಿನ್ನಾವುದು: **ಪಂಪಭಾ,** ೯. ೯೩)

ತಡಿ – [ನಾ] ನದಿಯ ದಡಪ್ರದೇಶ (ಆನೀ ಭವಕ್ಕೆ ಮೂಱನೆಯ ಭವದೊಳ್ ಈ ಧಾತಕೀಷಂಡದ ಮೂಡಣ ಮಂದರಪರವಿದೇಹದ ಸೀತಾನದಿಯ ಬಡಗಣ ತಡಿಯ: **ಆದಿಪು,** ೩. ೩೩ ವ); [ನಾ] ದಂಡೆ (ಕೊಳದ ತಡಿಯೊಳ್ ಹಳಿ ಕುಳಿಶ ಶಂಖ ಚಕ್ರ ಲಾಂಛಿತಮಪ್ಪ ಅಡಿವಜ್ಜೆಯಂ ಕಂಡು: **ಪಂಪಭಾ,** ೧೩. ೭೬ ವ)

ತಡಿಗಾಣ್ – [ಕ್ರಿ] ದಡಕಾಣು, ಮುಕ್ತಾಯ ಕಾಣು (ಈ ಸಂಸಾರಾಂಭೋಧಿಯನೀಸುವ ನಿನಗಿದುವೆ ನಾವೆ ತಡಿಗಾಣ್ಬೆ ಅನಾಯಾಸದೊಳ್: **ಆದಿಪು,** ೫. ೬೦)

ತಡಿವಿಡಿ – [ಕ್ರಿ] [ತಡಿ+ಪಿಡಿ] ದಡದ ಗುಂಟ (ಅಧಿಕಬಳನಳಕರತಳಗಳಿತ ಕುಳಶೈಲಸಹಸ್ರ ಸಂತಾನ ಕಳಿತ ಸೇತುಬಂಧುರಮಪ್ಪ ದಕ್ಷಿಣಸಮುದ್ರದ ತಡಿವಿಡಿದು ಬಂದು: **ಪಂಪಭಾ,** ೪. ೧೮ ವ)

ತಡೆ – [ಕ್ರಿ] ನಿಧಾನಿಸು (ಇದಿರ್ದಟ್ಟಾಳಿಕೆಗಳಲ್ಲಿ ನಾಡೆಯುಂ ಆಲೋಚಂಬೆರಸು ತಡೆದು ನಡೆದಂ ದಿನಪಂ: **ಆದಿಪು,** ೬. ೧೦೫); [ಕ್ರಿ] ಬೀಡುಬಿಡು (ತಡೆವಂ ಗಂಗಾದ್ವಾರದಿಂ ಎಡೆಯೊಳ್ ಬೀಡಿಲ್ಲ: **ಆದಿಪು,** ೧೨. ೬೩); [ಕ್ರಿ] ಅಡ್ಡಗಟ್ಟು (ಅಡರ್ವುದೆ ವಿಜಯಾರ್ಧ ಗಿರಿಯನಿಂತೀಗಳೆ ಪೊಣ್ದೆಡೆಗಿಡುವುದೆ ಸಿಂಧುವನಿಂ ತಡೆವಂದಂ ಇದಾವುದು ಎಮ್ಮನೆಮ್ಮನೆ ಬೆಸಸಾ: **ಆದಿಪು,** ೧೩. ೨೧); [ಕ್ರಿ]

ತಡವಾಗು (ಅತ್ತ ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ಕೇಳ್ದು ತನ್ನ ಗರ್ಭಂ ತಡೆದುದರ್ಕೆ ಕಿನಿಸಿ ಕಿಂಕಿರಿವೋಗಿ: **ಪಂಪಭಾ,** ೧. ೧೨೮ ವ); **[ಕ್ರಿ]** ತಡಮಾಡು (ಈ ಪೊಟಿಸ್ತೆ ಪೊಟಿಸ್ತಾಗೆ ನೀನೊಡಗೊಂಡು ಉಯ್ವುದು ಕನ್ನೆಯಂ ತಡೆಯದಿರ್ ವಿದ್ವಿಷ್ಟವಿದ್ರಾವಣಾ: **ಪಂಪಭಾ,** ೫. ೨೦)

ತಡೆದಿರ್ – **[ಕ್ರಿ]** ತಡಮಾಡಿ ಬಾ (ಪವನತನಯಂಗೆ ಅಂತಕತನಯನ ಸಮಾವಸ್ಥೆಯಂ ಪೇೞ್ದು ಇಂದಿನ ಅನುವರಮೆಲ್ಲಮಂ ನಿಮ್ಮೊರ್ವರ ಮೇಲಿಕ್ಕಿ ಪಿರಿದುಂ ಪೊೞ್ತು ತಡೆದಿರ್ಪವು ಎನೆ: **ಪಂಪಭಾ,** ೧೨. ೧೩೪ ವ)

ತಣಿ – [ಕ್ರಿ] ತೃಪ್ತಿ ಪಡೆ (ಸುೞಿಯದು ಗಾಳಿ ಮೃಗಂ ಕೆಯ್ವೞಿಗಳ ಮೇತದೊಳೆ ತಣಿದಪುವು ಪಂದಿಗಳುಂ ಪೞಿನವಿರ್ ಇಕ್ಕಿದುವು ಆದಂ ಪೞು ಪರಿದಾಡಲ್ ಕರಂ ಬೆಡಂಗವನಿಪತೀ: **ಪಂಪಭಾ,** ೫. ೩೮)

ತಣಿಯನೆ – [ತಣಿಯನ್+ಎ] ತೃಪ್ತಿ ಹೊಂದಲಿಲ್ಲ (ಊರ್ಜಿತಪುಣ್ಯಂ ಪೂಜಿಸುತ್ತುಂ ತಣಿಯನೆ ಭವತ್ಪಾದೋಪಕಂಠಕ್ಷಿತಿಯಂ ಚಕ್ರಾಧಿನಾಥಂ: **ಆದಿಪು,** ೧೩. ೯೧)

ತಣಿಯಲೀ – **[ಕ್ರಿ]** [ತಣಿಯಲ್+ಈ] ತೃಪ್ತಿಯಾಗುವಂತೆ ನೀಡು (ಎನ್ನ ವೇೞ್ಪುದಂ ತಣಿಯಲೀವುದು ಎನೆ ಪಾರ್ಥಂ ಅದೇವಿರಿದು ಇತ್ತೆಂ: **ಪಂಪಭಾ,** ೫. ೭೧)

ತಣಿಯುಣ್ – [ಕ್ರಿ] ತೃಪ್ತಿಯಾಗುವಂತೆ ತಿನ್ನು (ಆ ಬ್ರಾಹ್ಮಣಸಮಿತಿ ಬೇಳೆ ದೇವರ್ ತಣಿಯುಂಡರ್ ನೆರೆದು ದಿವ್ಯ ಹವ್ಯಾಮೃತಮಂ: **ಪಂಪಭಾ,** ೬. ೩೭)

ತಣ್ಣನೆ – [ಅ] ಹಾಯಾಗಿ (ನೆರೆದು ಅವರೊಳ್ ಮುನ್ನಿನ ಭವದ ಪುಣ್ಯಕಲ್ಪಾವನಿಜದ ತನಿವಣ್ಣ ರಸದೆ ತಣ್ಣನೆ ತಣಿವಂ: **ಆದಿಪು,** ೬. ೪೮)

ತಣ್ಣಸ – [ನಾ] ತಂಪು (ನನೆಯೆಳಗಂಪನೆತ್ತಿಯುಂ ಅಣಂ ನನೆನಾಱದೆ ಅರಲ್ದು ಅನೇಕ ಕೋಕನದವನಂಗಳೊಳ್ ಸುೞಿದು ತಣ್ಣಸಮಾಗದೆ: **ಪಂಪಭಾ,** ೫. ೩೪)

ತಣ್ಣಿದು – **[ನಾ]** ತಂಪಾದುದು (ಚಂದ್ರಕರಂಗಳಿಂದು ತಣ್ಣಿದುವೆರ್ದೆಗಕ್ಕೆ ಕೆಂದಳಿರ ಸೆಜ್ಜೆಯ ಜಿಂಜಿಣಿ ಪೋಕೆ ನಿನ್ನ ಕೂಟದೊಳ್: **ಪಂಪಭಾ,** ೫. ೧೮)

ತಣ್ಣಿದೆ – [ನಾ] ಪಾದವನು (ಎಮ್ಮ ಅನ್ವಯಕ್ಕೆ ನೀಂ ತಣ್ಣಿದೆಯಾಗು ಎಂದು ಬೇಡುವುದುಂ ತದಸ್ತು ಎಂದಂ: **ಪಂಪಭಾ,** ೫. ೧೦೦ ವ)

ತಣ್ಣೆಲರ್ – **[ನಾ]** [ತಣ್ಣನೆಯ ಎಲರ್] ತಂಗಾಳಿ (ಸುಭದ್ರೆ ಪಲುಂಬಿ ಮನಂಬಸದೆ ತನುವಂ ಆಱಿಸಲ್ ಅಲರಿಂ ತುಂಬಿಗಳಿಂ ತಣ್ಣೆಲರಿಂ ತುಂಬಿದ ತಿಳಿಗೊಳದ ಬನಮಂ ಪೊಕ್ಕಳ್: **ಪಂಪಭಾ,** ೫. ೨)

ತಣ್ಣೆೞಲ್ – **[ನಾ]** [ತಣ್ಣನೆಯ ನೆೞಲ್] ತಂಪಾದ ನೆರಳು (ಸರೋಜನಿಳಯೆ ಎನ್ನ ಬರ್ಪನ್ನಂ ಅರಸನಂ ಅಗಲದೆ ವಿಕಸಿತಶತಪತ್ರಾತಪತ್ರದ ತಣ್ಣೆೞಲುಮಂ ಕುಂದಲೀಯದಿರು ಎಂದು ನಿಯಮಿಸಿ: **ಪಂಪಭಾ,** ೧೩. ೧೦೫ ವ)

ತಣ್ಪಿಡಿ – [ಕ್ರಿ] ತಂಪಿನಿಂದ ಕೂಡು (ಸೊಡರ್ಗುಡಿ ಒಯ್ಯನಾಗೆ ಪೊಸಮಲ್ಲಿಗೆ ಕಂಪುನಾಱಿ ತಣ್ಪಿಡಿದ ಎಲರ್ ಊದೆ ಗಾವರದ ಮೆಲ್ಲುಲಿ ತುಂಬಿಯ ಗಾವರಂಗಳ ಗೆಡೆಗೊಳೆ: **ಪಂಪಭಾ,** ೪. ೧೧೦)

ತಣ್ಪುಗೆಯ್ – **[ಕ್ರಿ]** ತಂಪಾಗಿ ಮಾಡು (ಕರಿಯ ಕರ್ಬಿನ ಕಾವಿನ ಎಳ ಮೈಂದವಾಟಿಸಯ ಎಲೆಯ ಬಿಜ್ಜಣಿಗೆಗಳಿಂ ಬೀಸಲ್ವೇೞ್ದು ತಣ್ಪುಗೆಯ್ಯೆ: **ಪಂಪಭಾ,** ೫. ೬ ವ)

ತಣ್ಪುವೆಸಕೆಯ್ – **[ಕ್ರಿ]** ಶೈತ್ಯೋಪಚಾರ ಮಾಡು (ಮಲಯಸಮೀರಣ .. .. ವಾರಿಯಂ ಪುದುಂಗೊಳಿಸಿ .. .. ತಣ್ಪುವೆಸಕೆಯ್ವುದು ತೀರವನಾಂತರಾಳದೊಳ್: **ಆದಿಪು,** ೧೧. ೬೬)

ತಣ್ಬುೞಲ್ – [ನಾ] ತಂಪಾದ ತೋಪು (ಬರವಂ ಕಾಡಂ ಬೇಗೆಗೆ ಕರಮಱಿದು ಎರಡುಂ ಮೃಗಂಗಳುಂ ತಣ್ಬುೞಲೊಳ್ ನೆರೆದು ಒಡವಂದುವು ತಪ್ಪದೆ ಇದ ಅರಿಕೇಸರಿ ಕಂಡು ಮೆಚ್ಚುವೈ ಕೋಳ್ಪಾಂಗಂ: **ಪಂಪಭಾ,** ೫. ೩೯)

ತಣ್ಮಲೆ – **[ನಾ]** ದಟ್ಟವಾಗು, ಗಾಢವಾಗು (ಮಲದಲರ್ದ ನಾಗಸಂಪಗೆಯಲರ್ಗಳೊಳ್ ಅಗ್ಗಲಿಸಿ ಬಿರಿವ ಪೊಂಬಾಟಿಸಯ ತಣ್ಮಲೆವ ಪೊಸಗಂಪಿನೊಳ್: **ಆದಿಪು,** ೧. ೬೮); **[ಕ್ರಿ]** ದೃಢವಾಗಿ ನಿಲ್ಲು (ತಮ್ಮ ಮನದೊಳ್ ಅವರುಪದೇಶಪರಾನುಗ್ರಹಬುದ್ಧಿಯುಂ ಸನ್ಮಾರ್ಗದರ್ಶನ ಕೌಶಲಮುಂ ನಿಸರ್ಗಸ್ನೇಹಸಂಬಂಧಮುಂ ಅಂತರಂಗದೊಳ್ ತಣ್ಮಲೆಯೆ: **ಆದಿಪು,** ೫. ೬೫ ವ); **[ಕ್ರಿ]** ಭಾವೋದ್ವೇಗರಹಿತತೆ, ನಿಶ್ಚಿತತೆ (ಪಡೆವೆಂ ಶಾಶ್ವತಶ್ರೀಯಂ ಎಂಬುಜ್ಜುಗದೊಳ್ ಚಿತ್ತಂ ಕರಂ ತಣ್ಮಲೆಯೆ ನೆಱೆಯೆ ನಿಶ್ಚೈಸಿದಂ ಸಾರ್ವಭೌಮಂ; **ಆದಿಪು,** ೬. ೨೬); **[ಕ್ರಿ]** ಗುಂಗು ಹಿಡಿಸು (ಕನಸಿನೊಳಮಾ ಕುಮಾರನೆ ಮನಮಂ ತಣ್ಮಲೆಯೆ ಚಿತ್ತಜಂ ಚಿತ್ತಭವಂ ಮನಸಿಜಂ ಅನಂಗಂ ಅಂಗಜಂ ಎನೆ ನೆಗೞ್ದುವು ಬಾಹುಬಲಿಗೆ ಪಲವುಂ ಪೆಸರ್ಗಳ್: **ಆದಿಪು,** ೮. ೫೩)

ತತ್ – **[ಸ]** ಆ, ಅದು (ಚಮರೀ ಲೋಲ ಲಾಂಗೂಲ ಮಾಲಾವಲಿ ವಿಕ್ಷೇಪಂಗಳಿಂ ತತ್ ಚಮರರುಹ ಮಹಾಶೋಭೆ ಕೈಗಣ್ಮೆ: **ಪಂಪಭಾ,** ೪. ೧೪)

ತತ – **[ನಾ]** ವೀಣೆ ಮುಂತಾದ ತಂತಿ ವಾದ್ಯ (ಅತಿಮೃದು ರವದಾಯಿಗಳಂ ತತ ಘನ ಸುಷಿರ ಅವನದ್ಧವಾದ್ಯಂಗಳನೇಂ ಮತಮಱಿದು ಓಲಗಿಪುದೊ ದಂಪತಿಗೆಂದುಂ ಅವಾರ್ಯತೂರ್ಯಕ್ಷ್ಮಾಜಂ: **ಆದಿಪು,** ೫. ೩೫)

ತತ್ತಟ – **[ನಾ]** ತತ್+ತಟ] ಆ [ನದಿಯ] ದಡ (ಗಾಂಡೀವದ ಕೊಪ್ಪುಗಳೊಳ್ ಖಂಡಿಸಿ ತತ್ತಟದ ಕನಕರೇಣುವಂ ಅವಂ ಆಖಂಡಲತನಯಂ ಅಸುಂಗೊಳೆ ಖಂಡಿಸಿದಂ: **ಪಂಪಭಾ,** ೬. ೩೧)

ತತ್ತಱ ತಱಿ – [ಕ್ರಿ] ಚೂರುಚೂರಾಗಿ ಕತ್ತರಿಸು (ಘೋಟಯಿಲರ್ ತಗುಳ್ದು ತತ್ತಱ ತಱಿದಿಕ್ಕಿ ದೇಗುಲಕೆ ಪೆರ್ಮರನಂ ಕಡಿವಂತೆ ಮಾಡಿದರ್: **ಪಂಪಭಾ,** ೮. ೯೫)

ತತ್ತಱದಱಿ – [ಕ್ರಿ] ಕೊಚ್ಚಿಹಾಕು (ಉಱದೆ ಇದಿರಾಂತು ನಿಂದ ರಿಪುಸೈನ್ಯಮಂ ಆಹವರಂಗದಲ್ಲಿ ತತ್ತಱದಱಿದು ಇಕ್ಕಲ್ ಆಂ ನೆಱೆವೆಂ ಇನ್ನಿರವೇಡ ಒಡಗೊಂಡು ಪೋಗು: **ಪಂಪಭಾ,** ೧೧. ೯೭)

ತತ್ತಱಗುದಿ – [ಕ್ರಿ] ತಳತಳ ಕುದಿ, ಜೋರಾಗಿ ಕುದಿ (ಕೂಡೆ ತತ್ತಱಗುದಿಯುತ್ತುಮಿರ್ಪ ಕುದಿಯೊಳ್ ಸಿಡಿದು ಅಲ್ಲಿಯ ಮುತ್ತುಗಳ್ ಛಳಿಲ್ ಛಳಿಲನೆ ಕೊಂಡುವು ಒರ್ಮೊದಲೆ

ರುಂದ್ರಸುರೇಂದ್ರವಿಮಾನಪಜ್ತೆಯಂ: **ಪಂಪಭಾ,** ೧೧. ೧೫೩)

ತತ್ತಿ – [ನಾ] ಮೊಟ್ಟೆ (ಅಜಾಂಡಂ ಸಿಡಿಲ್ದು ಸಿಡಿಲ್ದೊಯ್ದು ಒಡೆದ ಒಂದು ತತ್ತಿಯವೊಲಾಯ್ತು: **ಪಂಪಭಾ,** ೯. ೯೪)

ತತ್ತ್ವ – [ನಾ] ಜೈನ] [ತತ್+ತ್ವ] ವಸ್ತುಸ್ವರೂಪ, ವಸ್ತುವಿನ ಭಾವ; ಇದು ಎರಡು ಬಗೆ ಹಾಗೂ ಏಳು ವಿಧವಾದವು (ನಿನ್ನ ಬೆಸಗೊಂಡ ತತ್ತ್ವಮುಂ ಹೇಯೋಪಾದೇಯರೂಪದಿಂ ದ್ವಿವಿಧಮಕ್ಕುಂ: **ಆದಿಪು,** ೧೦. ೬೩ ವ)

ತತ್ತ್ವಾನುಗತ – [ಗು] ತತ್ತ್ವಕ್ಕನುಸಾರಿಯಾದ, ಶಾಸ್ತ್ರಕ್ಕನುಗುಣವಾದ (ಅತನುರಸೋಪೇತ ವಿಳಂಬಿತ ಮಧ್ಯ ದ್ರುತಲಯಂಗಳೊಳ್ ಲಕ್ಷಣಸಂಯುತ ತತ್ತ್ವಾನುಗತಗತೌಘಪ್ರತೀತ ವಾದ್ಯಂಗಳೆಸೆದುವು: **ಆದಿಪು,** ೯. ೨೩)

ತತ್ಪ್ರಕಟ – [ಗು] [ತತ್+ಪ್ರಕಟ] ಅದರಿಂದ ದೊರೆಯುವ (ತ್ರಿಕರಣಶುದ್ಧಿಯೊಳಾ ರಾಜಕುಮಾರಂ ಮಾರಮಥನನಂ ಸ್ತುತಿಯಿಸಿ ತತ್ಪ್ರಕಟಫಲಪ್ರಾಪ್ತಿಗೆ ಸಂಚಕರಂಗೊಳ್ವಂತೆ: **ಆದಿಪು,** ೪. ೨)

ತತ್ಸಮೀಪ – [ನಾ] ಅದಕ್ಕೆ ಹತ್ತಿರ, ಅಲ್ಲೇ ಹತ್ತಿರ (ನೀನುಂ ತಾನುಂ ಒರ್ಮೆ ಗಂಗಾನದೀತೀರದೊಳ್ ಬೇಂಟೆಯಾಡುವಲ್ಲಿ ತತ್ಸಮೀಪದ ತಾಪಸಾಶ್ರಮದೊಳ್: **ಪಂಪಭಾ,** ೯. ೬೬ ವ)

ತತ್ಸ್ಥಾನ – [ನಾ] ಆಯಾ ಜಾಗಗಳು (ಕುಮತಿಗಳ್ ತತ್ಸ್ಥಾನದೊಳ್ ಮುನ್ನ ಪುಟ್ಟಿದುವೆಂಬರ್ ಪುಸಿ ನನ್ನಿಯಜೆಯದೇಂ ಲೋಕಂ ಮರುಳ್ಗೊಂಡುದೋ: **ಆದಿಪು,** ೮. ೭೩)

ತಥಾಸ್ತು – [ತಥಾ+ಅಸ್ತು] ಹಾಗೆಯೇ ಆಗಲಿ (ಎನಗೀವುದು ನಿನ್ನನೆ ಪೋಲ್ವ ಪುತ್ರನಂ ಎಂಬುದುಂ ತಥಾಸ್ತುವೆಂದು ತನ್ನಂಶಮನಾಕೆಯ ಗರ್ಭದೊಳವತರಿಸಿ ಯಮಭಟ್ಟಾರಕಂ ಅಂತರ್ಧಾನಕ್ಕೆ ಸಂದಂ : **ಪಂಪಭಾ,** ೧. ೧೧೯)

ತಥ್ಯ – [ನಾ] ನಿಶ್ಚಯ (ಹರಿಯೆಂದ ಅಂದಂ ಅದು ಅಂತೆ ಪಾಂಡುತನಯರ್ ನಿರ್ದೋಷಿಗಳ್ ತಥ್ಯಂ ಇಂತು ರಣಸ್ಥಾನದೊಳ್ ಇನ್ನೆರಟ್ಟುಡಿವೆನೇ: **ಪಂಪಭಾ,** ೧೩. ೯೦)

ತದರ್ಧಪ್ರಮಿತ – [ನಾ] ಅದರ ಅರ್ಧದಷ್ಟು ಅಳತೆಯ (ಅದು ಯೋಜನಶತಮೂಲ ವಿಸ್ತೃತಮುಂ .. .. ತದರ್ಧಪ್ರಮಿತೋಪರಿಮತಳವಿಸ್ತಾರಮುಂ: **ಆದಿಪು,** ೧೩. ೬೯ ವ)

ತದಸ್ತು – [ತತ್+ಅಸ್ತು] ಅದು ಆಗಲಿ, (ಎಮ್ಮನ್ವಯಕ್ಕೆ ನೀನ್ ತಣ್ಣೆದೆಯಾಗು ಎಂದು ಬೇಡುವುದುಂ ತದಸ್ತುವೆಂದಂ: **ಪಂಪಭಾ,** ೫. ೧೦೦ ವ)

ತದಾಶ್ರಮ – [ನಾ] [ತತ್+ಆಶ್ರಮ] ಆ ಆಶ್ರಮ (ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ ಪಣ್ತೆಜಿಗಿದ ತದಾಶ್ರಮದ ತರುಗಳ ಮೇಗಿರ್ದು ಪುಗಿಲ್ ಪುಗಿಲೆಂದಿತ್ತ ಬನ್ನಿಮಿರಿಮೆಂಬ ಪೊಂಬಣ್ಣದ ಕೋಗಿಲೆಗಳುಮಂ: **ಪಂಪಭಾ,** ೧. ೧೧೫ ವ)

ತದೀಯ – [ಗು] ಅವರ (ಕೊಂತಿಯ ಧರ್ಮಪುತ್ರಭೀಮಸೇನಾದಿಗಳ ಪಾದಪದ್ಮಂಗಳಂ ತನ್ನ ಕರಕಮಲಂಗಳಿಂದರ್ಚಿಸಿ ತದೀಯ ಆಶೀರ್ವಚನಂಗಳನಾಂತು: **ಪಂಪಭಾ,** ೫. ೨೨ ವ)

ತದುಕ್ತಕ್ರಿಯೆ – [ನಾ] ಅದಕ್ಕಾಗಿ ವಿಧಿಸಿದ ಕಾರ್ಯ (ಆಕೆಯುಂ ತದುಕ್ತಕ್ರಿಯೆಯೊಳಂ ನಿಯಮನಿಯಮಿತೆಯಾಗಿ: **ಪಂಪಭಾ,** ೨. ೨ ವ)

ತನಗೆ ಮಾಡು – [ಕ್ರಿ] ತನ್ನ ಕಡೆ ಸೇರಿಸಿಕೊ (ಕಪಟಪ್ರಪಂಚದಿಂದ ಆತನುಮಂ ತನಗೆ ಮಾಡಿ ಬೀಡಿಂಗೆ ವಂದು: **ಪಂಪಭಾ,** ೯. ೬೦ ವ)

ತನತು – [ಗು] ತನ್ನ (ಇದು ನಿನ್ನೀ ಅಗಲ್ದುದರೊಳ್ ಪೊದಳ್ದು ತನತೊಂದು ಜನ್ಮಮಂ ಸಫಳಂ ಮಾಟ್ಟುದು: **ಆದಿಪು,** ೧೨. ೧೧೯)

ತನಯ – [ನಾ] ಮಗ (ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ ಅಹಮಿಂದ್ರಂ ಬಂದು ವೃಷಭಸೇನನೆಂಬೊಂ ತನಯನಾದಂ: **ಆದಿಪು,** ೮. ೪೪ ವ)

ತನಿಗಂಪು – [ನಾ] ನವಿರಾದ ಪರಿಮಳ (ಅಲರ್ದರೆಗಟಿಗೆಯೆ ಜಾದಿಯ ಮಲೆಪುಂ ಮಲ್ಲಿಗೆಯ ಪೊಂಕಮುಂ ಬಟಿಕವಂ ಆರ್ ತಲೆಯೊಳ್ ತಾಳ್ದುವರ್ ಎಂದೇನಲೆದುದೊ ಸಿಂದುರವೆ ತವದ ತನಿಗಂಪಿಂದಂ: **ಆದಿಪು,** ೧೧. ೧೨೨)

ತನಿಗರ್ವು – [ನಾ] [ತನಿ+ಕರ್ವು] ಬಲಿತು ಸಿಹಿಯಾದ ಕಬ್ಬು (ಮಿಡಿದೊಡೆ ತನಿಗರ್ವು ರಸಂ ಬಿಡುವುವು: **ಪಂಪಭಾ,** ೧. ೫೫)

ತನಿಗೆತ್ತು – [ನಾ] ತೀವ್ರವಾದ ಬಯಕೆ, ಮಿಡಿತ (ಪದಪು ಮನಕ್ಕೆ ಸೊರ್ಕು ನಯನಕ್ಕೆಸೆಯುತಿರೆ ಚುಂಬನಾಭಿಲಾಷದ ತನಿಗೆತ್ತು ಬಾಯ್ಗೆ .. .. ಪುದಿದಿರೆ: **ಆದಿಪು,** ೪. ೧೫); [ನಾ] ಹೊಸ ಅದಿರಾಟ (ತಮ್ಮ ಕೆಂಪಂ ಕಣ್ಗಳ್ಗೆ ಕೊಟ್ಟು ಕಣ್ಗಳ ಬೆಳ್ಪಂ ತಮಗೆ ಮಾಱುಗೊಂಡಂತೆ ತನಿಗೆತ್ತುವೆರಸು ಬತ್ತಿ ಸೊಗಯಿಸುವ ಬೆಳರ್ವಾಯ್ಗಳೊಳ್ ಇಂಪಂ ತಾಳ್ದಿ: **ಪಂಪಭಾ,** ೪. ೮೮ ವ)

ತನಿವಣ್ – [ನಾ] ಸಿಹಿಯಾದ ಹಣ್ಣು (ನೆರೆದು ಅವರೊಳ್ ಮುನ್ನಿನ ಭವದ ಪುಣ್ಯಕಲ್ಪಾವನಿಜದ ತನಿವಣ್ಣ ರಸದೆ ತಣ್ಣನೆ ತಣಿವಂ: **ಆದಿಪು,** ೬. ೪೮)

ತನಿಸೋಂಕು – [ನಾ] ಹಿತಕರ ಸ್ಪರ್ಶ (ಪೊದಳ್ದ ಬಲ್ಮುಗುಳ್ಗಳ ತಂದಲಂದು ಕವಿತಂದುದು ಅದಂ ತನಿಸೋಂಕು ಸೋಂಕಿ ಮೆಲ್ಲಗೆ ಮಲಯಾನಿಲಂ ಸುಟಿದೊಡೆ ಅಂದು ಜಗಂ ಪೊಸತಾದುದು: **ಪಂಪಭಾ,** ೧೪. ೧೯)

ತನು – [ಗು] ಕೃಶವಾದ (ತನುವಿಧುವೊಂದನುಳ್ಳ ನಭದೊಳ್ ಶಿಶುಕೇಸರಿಯೊಂದನುಳ್ಳ ಕಾನನದೊಳ್ ಅದೊಂದು ಕುಟ್ಮಲಮನುಳ್ಳ ಸರೋವರದೊಳ್ ಪೊಣರ್ಚಿ: **ಆದಿಪು,** ೪. ೮೨); [ನಾ] ದೇಹ (ಬಿಸುನೆತ್ತರ್ ನೆಣಂ ಅಡಗು ಎಲ್ವು ಸಮಸ್ತಂ ಸುರಿಯೆ ಕೈಗೆ ತೊವಲ್ ಉಟಿಯಲ್ ಅಗುರ್ವಿಸಿದುದು ತೀವಿದ ಗುಳ್ಳೆಯ ಪಸುಂಬೆಯಂ ಸೋರ್ಚಿದಂತೆ ತನು ಕೀಚಕನಾ: **ಪಂಪಭಾ,** ೮. ೭೭)

ತನುಚ್ಛದ – [ನಾ] ದೇಹಕವಚ (ಪರಿತ್ಯಕ್ತ ತನುಚ್ಛದಂ ಉತ್ತಪ್ತ ರಜತಾವದಾತ ಲೋಹಪುತ್ರಿಕಾನದ್ಧ ಹಿಂಗುಲಿಕಪಾಟಫಲಕಂ: **ಆದಿಪು,** ೧೩. ೪೫ ವ)

ತನುಚ್ಛವಿ – [ನಾ] ದೇಹಕಾಂತಿ (ನೀಲನೀರದತನುಚ್ಛವಿ ಭಸ್ಮರಜೋವಿಲಿಪ್ತಂ ಅಂಜನಗಿರಿಯಂ ಶರಜ್ಜಳಧರಂ ಕವಿದಂತಿರೆ: **ಪಂಪಭಾ,** ೭. ೫೯)

ತನುಜಾತ – [ನಾ] ಮಗ (ಪ್ರೀತಿಂಕರನೆಂಬೊಂ ತನುದೇವಜಾತನೆನಾಂ ಪ್ರೀತಿದೇವಂ ಎನ್ನಿಂ ಕಿಱಿಯಂ ಖ್ಯಾತಯಶಂ ಈ ತಪೋಧನಂ: **ಆದಿಪು,** ೫. ೪೯)

ತನುತ್ರ – [ನಾ] ದೇಹದ ಕವಚ (ಅಸ್ತ್ರಶಸ್ತ್ರ ತನುತ್ರೋತ್ಕರರಹಿತಂಗೆ ಅಸಹಾಯಂಗೆ ಅತಿಬಳಜಯಮಂ ಅಳವು ದೊರೆಕೊಳಿಸುವೊಲ್: **ಆದಿಪು,** ೧೫. ೧೭)

ತನುತ್ವ – [ನಾ] ದೇಹವಿರುವಿಕೆ (ಮಿತನಖಕೇಶಶೋಭಿತ ತನುತ್ವಂ ಅಭುಕ್ತ್ಯುಪಸರ್ಗಭಾವಂ ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ: **ಆದಿಪು,** ೧೦. ೪೩)

ತನುಭೃದ್ಗಣ – [ನಾ] [ತನುಭೃತ್+ಗಣ] ಜೀವಸಮುದಾಯ (ಧವಳಪುಂಡರೀಕನಿಕಾಶಪ್ರಭೆ ದೊರೆಕೊಂಡುದು ಪರಿಣಾಮಭೇದಮೇಂ ಚಿತ್ರವಿಧಮೋ ತನುಭೃದ್ಗಣದಾ: **ಆದಿಪು,** ೬. ४೨)

ತನುರೇಖೆಗೊಳ್ – [ಕ್ರಿ] ಸೂಕ್ಷ್ಮ ಗೆರೆಗಳಿಂದ ಕೂಡು (ತುಱುಗೆಮೆ ನೀಳ್ದ ಪುರ್ವು ನಿಡುಗಣ್ ಪೊಱೆಯಲ್ಲದೆ ಬಟ್ಟಿತಪ್ಪ ಬಾಯ್ದೆಱೆ ತನುರೇಖೆಗೊಂಡ ಕೊರಲ್ .. .. ಎಂದು ಧಾತ್ರಿ ಪೊಗಟ್ಟುಂ: **ಪಂಪಭಾ,** ೧. ೧೦೮)

ತನುವಿಧು – [ನಾ] ರೇಖಾರೂಪದ ಚಂದ್ರ, ಬಾಲಚಂದ್ರ (ತನುವಿಧುವೊಂದನುಳ್ಳ ನಭದೊಳ್ ಶಿಶುಕೇಸರಿಯೊಂದನುಳ್ಳ ಕಾನನದೊಳ್ ಕುಟ್ಮಳನುಳ್ಳ ಸರೋವರದೊಳ್: **ಆದಿಪು,** ೪. ೮೨)

ತನುವ್ಯಕ್ತಿ – [ನಾ] ದೇಹದ ಸ್ಪಷ್ಟವಾದ ಆಕಾರ (ನಡೆಗೊಂಡಾಗಳ್ ತನುವ್ಯಕ್ತಿಯನಱಿಯಲಣಂ ಬಾರದಾಯ್ತುತ್ತಣಂ ಕಾಣ್ಬಡೆಗಂ ಗೆಂಟಾದುದು: **ಆದಿಪು,** ೭. ೫೭)

ತನೂಜ – [ನಾ] (ಅಂತು ಭರದ್ವಾಜಂ ಆತ್ಮತನೂಜಂಗೆ ಪೆಸರನಿಟ್ಟು ತನ್ನ ಕೆಳೆಯ ಪಾಂಚಾಳದೇಶದರಸು ಪೃಷಪತನೆಂಬಾತನ ಮಗಂ ದ್ರುಪದನುಮಂ ದ್ರೋಣನುಮಂ ಒಡಗೂಡಿ: **ಪಂಪಭಾ,** ೨. ४೩ ವ)

ತನೂದರ – [ನಾ] ತೆಳುವಾದ ಹೊಟ್ಟೆ (ಒದವಿದ ಕರ್ಪನೆಯ್ದೆ ಪರಿವೃತ್ತಪಯೋಧರಕ್ಕೆ ಮಾಡದೆ ವಳಿಭಂಗಮಂ ಕಟಿಯೆ ತೋರ್ಪುದನಂತೆ ತನೂದರಕ್ಕೆ ಮಾಡದೆ: **ಆದಿಪು,** ೮ ४೭)

ತನೂಭವ – [ನಾ] ತನೂಜ (ದಿವ್ಯಮುನಿಪುಂಗವರಂ ಬಗೆದೀರ್ಪಿನಂ ನಿಜಾತ್ಯಂತಪತಿವ್ರತಾಗುಣದಿನರ್ಚಿಸಿ ಮೆಚ್ಚಿಸು ನೀಂ ದಿಗಂತವಿಶ್ರಾಂತಯಶರ್ಕಳಂ ವರತನೂಭವರಂ ಪಡೆ ನೀಂ ತಳೋದರೀ: **ಪಂಪಭಾ,** ೧. ೧೧೮)

ತನೆವಂದಿ – [ನಾ] ಗಬ್ಬ ಧರಿಸಿದ ಹಂದಿ (ಪಿಡಿವಂದೀ ತನೆವಂದಿ ಕುರುಡು ಕುಂಟೆಂದಲಸದಱಿದಿಂತು ಬಲ್ಮೆಗೆ ಬೆರಲೆತ್ತಿ ಪಜ್ಜೆಯಂ ನೆಲೆಗಳಂ ಕಿಡಲೀಯದೆ .. .. ನಿಱಿಸುವೆಂ ಪಂದಿಯಂ: **ಪಂಪಭಾ,** ೫. ४೬)

ತನ್ನಂಕ – [ನಾ] ತನ್ನ ಹೆಸರು (ತನ್ನಂಕದೊಂದುಗ್ರಸಾಯಕದಿಂ ನಾಯಕರಂ ಪಡಲ್ವಡಿಸುತುಂ ತಾಂ ತಂದನಂದು ಅಂಬೆಯಂಬಿಕೆಯಂಬಾಲೆಯರೆಂಬ ಬಾಲೆಯರಂ: **ಪಂಪಭಾ,** ೧. ೭४)

ತನ್ನಂಶ – [ನಾ] ತನ್ನ ಭಾಗ (ಎನಗೀವುದು ನಿನ್ನನೆ ಪೋಲ್ವ ಪುತ್ರನಂ ಎಂಬುದುಂ ತಥಾಸ್ತುವೆಂದು ತನ್ನಂಶಮನಾಕೆಯ ಗರ್ಭದೊಳವತರಿಸಿ ಯಮಭಟ್ಟಾರಕಂ ಅಂತರ್ಧಾನಕ್ಕೆ ಸಂದಂ : **ಪಂಪಭಾ,** ೧. ೧೧೯)

ತನ್ನವೊಲೆ – ತನ್ನಂತೆಯೇ (ಮತ್ತೊರ್ವ ಮಗನಂ ಬೇಡೆಂದಂಬಿಕೆಗೆ ಪೇಟಿಸ್ದೊಡಾಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂಳೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡೆ: **ಪಂಪಭಾ,** ೧. ೮೫ ವ)

ತನ್ನಱಿಪು – [ಕ್ರಿ] ತಾನಾರೆಂದು ತಿಳಿಸು (ಕಿರೀಟಿ ತನ್ನಱಿಪುತ್ತೆ ಶಮೀದ್ರುಮದಲ್ಲಿಗೆ ಆತನಂ ನೀಡಿರದೆ ಉಯ್ದು ನೀಡಿಸಿದಂ ಆತನಿಂ ಅಲ್ಲಿಯ ಕೈದುವೆಲ್ಲಮಂ: **ಪಂಪಭಾ,** ೮. ೧೦೦)

ತನ್ನಿಕ್ಕಿದ ತತ್ತಿಯನೆ ಪಾವು ನೊಣೆವಂತೆ – ಇಆನಿಟ್ಟ ಮೊಟ್ಟೆಯನ್ನು ತಾನೇ ನುಂಗಿದಂತೆ (ರಣದೊಳ್ ಮಕ್ಕಳಂ ಆಂ ಕೊಂದೊಡೆ ತನ್ನಿಕ್ಕಿದ ತತ್ತಿಯನೆ ಪಾವು ನೊಣೆವಂತಕ್ಕುಂ: **ಪಂಪಭಾ,** ೧೦. ೧೩)

ತನ್ನೀವಳವು – [ನಾ] [ತನ್ನೀವ+ಅಳವು] ತಾನು ನೀಡುವ ಅಳತೆ, ಸಾಮರ್ಥ್ಯ (ಸೋರ್ವ ವಸುಧಾರೆಯಂ ಕೆಯ್ಸಾರ್ವ ನಿಧಾನಮುಮಂ ಇಟಿಸಿ ತನ್ನೀವಳವಿಂ ಪಾರ್ವಂಗಂ ಅಳಿಪಿ ಬೇಡಿದ ಪಾರ್ವಂಗಂ ಪಿರಿದನಿತ್ತಂ: **ಪಂಪಭಾ,** ೯. ೭೨)

ತನ್ನೆಚ್ಚ – [ಗು] ತಾನು ಪ್ರಯೋಗಿಸಿದ [ಬಾಣ] (ಆಗಳ್ ಪ್ರಳಯದುಳ್ಕಮುಳ್ಕುವಂತೆ ತನ್ನೆಚ್ಚಂಬು ಮುನಿಕುಮಾರನ ಕಣ್ನೊಳಮೆರ್ದೆಯೊಳಂ ಉಳ್ಕೆ: **ಪಂಪಭಾ,** ೧. ೧೧೧ ವ)

ತನ್ಮುನಿಶಾಪ – [ನಾ] [ತತ್+ಮುನಿಶಾಪ] ಆ ಮುನಿಯ ಶಾಪ, ಈ ಸಂದರ್ಭದಲ್ಲಿ ಕಿಂದಮ ಎಂಬ ಋಷಿ ಕಾಮಾಕ್ರಾಂತಕ್ಕಾಗಿ ಪಾಂಡುವಿಗೆ ಕೊಟ್ಟ ಶಾಪ (ಅದಿನ್ನೆನಗೆ ತಪ್ಪುದು ತನ್ಮುನಿಶಾಪದಿಂದಂ ಇನ್ನಾರುಮಿದರ್ಕೆ ವಕ್ರಿಸದಿರಿಂ ವನವಾಸದೊಳಿರ್ಪೆಂ: **ಪಂಪಭಾ,** ೧. ೧೧४)

ತನ್ವಂಗಿ – [ನಾ] ಕೃಶವಾದ ದೇಹದವಳು (ಬಳವತ್ ಕಾಮಾಗ್ನಿ ಹೋಮಾಗ್ನಿ ಚಂದನ ಕರ್ಪೂರ ಮೃಣಾಳನಾಳಮೆ ಪೊದಳ್ದ ಇಧ್ಮಂಗಳ್ ಇಂತಾಗೆ ತಾನಿನಿತುಂ ಕಾಮನ ಬೇಳ್ವೆಯೆಂದು ಸುಗಿದಳ್ ತನ್ವಂಗಿ ಬೆಳ್ದಿಂಗಳೊಳ್; **ಪಂಪಭಾ,** ४. ೫೯)

ತನ್ವಿ – [ನಾ] ತನ್ವಂಗಿ (ನಿನ್ನನಾ ತನ್ವಿಯೆತ್ತಂ ಬಳೆದುತ್ತುಂಗಸ್ತನಂ ಮಾಣ್ದಿರದೆ ಬಳಸಲ್ ಇಂ ನಿನ್ನನಾ ಕಾಂತೆಯಂತಾ ನಳಿತೋಳ್ಗಳ್: **ಆದಿಪು,** ४. ೨೧)

ತಪ – [ಗು] ಸುಡುವ (ಅಂತು ನೃಪಂ ನಡೆಯೆ ಲಲಾಟಂ ತಪತಪನಾಂಶುವಿಂ ಸರೋವರಜಲಂ ಓರಂತಿರೆ ಕಾಯ್ದೊಂಡದ ನೀರಂತಿರೆ: **ಆದಿಪು,** ೧೧. ४೮); ತಪಸ್ಸು (ಬೂದಿ ಜೆಡೆ ಲಕ್ಕಣಂ ತಪಕೆ ಆದುವು ಎರಟಿಸ್ದೊಣೆ ಶರಾಸನಂ ಕವಚಂ ಇದೆಂತಾದುವೋ ಮುತ್ತುಂ ಮೆಟಿಸುಂ ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ: **ಪಂಪಭಾ,** ೭. ೯೨)

ತಪಃಪೋತ – [ನಾ] ತಪಸ್ಸಿನ ಹಡಗು (ಪೆಂಪುವೆತ್ತ ತಪಃಪೋತದಿನಣ್ಣ ನೀಂ ತಡಿಯನೆಯ್ದು ಅಂತಲ್ಲದಿಂತೀ

ಚತುರ್ಗತಿ ಸಂಸಾರಪಯೋಧಿಯಂ ಪೋಜಿಮಡಲ್ ಮತ್ತಿಲ್ಲ ನೀನಾರ್ತಪೈ: **ಆದಿಪು,** ೩. ೫೬)

ತಪಃಪ್ರಭಾವ – [ನಾ] ತಪಸ್ಸಿನ ಪರಿಣಾಮಕಾರಿಕತೆ (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ,** ೧. ೧೧೫ ವ)

ತಪನ – [ನಾ] ಸೂರ್ಯ (ಅಂತು ಪರಾಶರನಂದನನ ಉಪದೇಶದೊಳ್ ತಪನಪ್ರಭಂ ತಪಂಗೆಯ್ಯಲ್ ತಗುಳ್ದೊಡೆ: **ಪಂಪಭಾ,** ೭. ೭೯ ವ)

ತಪನಕರ – [ನಾ] ಬಿಸಿಲು, ಸೂರ್ಯ (ತಪನಕರಂ ತನುಗಳನುರ್ಚಿ ಪೋಗೆ ಸಾರ್ದತ್ತು ಜಕ್ಕವಕ್ಕಿಯ ಪೊಣರುಂ: **ಆದಿಪು,** ೧೧. ೫೦)

ತಪನಕಿರಣಾಳಿ – [ನಾ] ಬಿಸಿಲು (ಸುತ್ತುಲುಮುರಿಮಾಲೆಗಳೆನೆ ಪೊತ್ತಿಸಿದವೊಲಲುರೆ ತಪನಕಿರಣಾಳಿ ಮುನೀಂದ್ರೋತ್ತಮ ಗುರು ಕಲ್ಲೆನೆ ನಿಂದೆತ್ತಿದ ಬೆಳ್ಗೊಡೆಯ ನೆೞಲೊಳಿರ್ಪಂತಿರ್ದಂ: **ಆದಿಪು,** ೬. ೩೧)

ತಪನತಪ್ತ – [ಗು] ಬಿಸಿಲಿನಲ್ಲಿ ಕಾದ (ನಿಂದ ಶಿಲೆ ತಪನತಪ್ತಮಿದೆಂದು ಅಂಬುಜನಿಳಯೆ ಪದ್ಮವಿಷ್ಟರಮಂ .. .. ಕೃತೇಚ್ಛಂಗೆ ಪಡೆದು: **ಅದಿಪು,** ೯. ೮೫)

ತಪನಾಂಶು – [ನಾ] [ತಪನ+ಅಂಶು] ಬಿಸಿಲು (ಅಂತು ನೃಪಂ ನಡೆಯೆ ಲಲಾಟಂ ತಪತಪನಾಂಶುವಿಂ ಸರೋವರಜಲಂ ಓರಂತಿರೆ ಕಾಯ್ಗೊಂಡದ ನೀರಂತಿರೆ: **ಆದಿಪು,** ೧೧. ೪೮)

ತಪನೀಯ – [ನಾ] ಚಿನ್ನ (ಏಱು ಜನಪದಂಗಳಿಂದಂ ಪೂರ್ವಾಪರ ಆಯತಂಗಳುಂ ಹೇಮ ಅರ್ಜುನ ತಪನೀಯ ವೈಡೂರ್ಯ ವಜ್ರ ರಜತ ಹೇಮಮಯಂಗಳುಂ; **ಆದಿಪು,** ೧. ೪೮ ವ)

ತಪನೀಯಸೂತ್ರ – [ನಾ] ಚಿನ್ನದ ಎಳೆ (ತಪನೀಯಸೂತ್ರದೊಳ್ ಏಕಾದ್ಯೇಕೋತ್ತರದಶಾಂತಂಬರಂ ಅವರವರ ನೆಲೆಗಳೊಳ್ ಬ್ರಹ್ಮಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ: **ಆದಿಪು,** ೧೫. ೧೧ ವ)

ತಪನೋದಯ – [ನಾ] ಸೂರ್ಯೋದಯ (ರಾಮಭುಜಪ್ರತಾಪ ತಪನೋದಯ ಶೈಲಮುಪಾಂತ ಪರ್ವತಸ್ತೋಮಸಮನ್ವಿತಂ: **ಪಂಪರಾ,** ೧೧. ೧೬೦)

ತಪಶ್ಚರಣ – [ನಾ] ತಪಸ್ಸನ್ನು ಮಾಡುವುದು (ಇದರ್ಕೆ ಕರ್ತವ್ಯಮಾವುದೆಂದೊಡೆ ಹಿಮವತ್ಪರ್ವತದೊಳ್ ತಪಶ್ಚರಣಪರಾಯಣರಾಗಿಂ: **ಪಂಪಭಾ,** ೧೩. ೧೦೭ ವ)

ತಪಷ್ಷಟ್ಕ – [ನಾ] [ಜೈನ] ತನ್ನೊಳಗಿಗೆ ಸಂಬಂಧಿಸಿದ ಆರು ಬಗೆಯ ತಪಸ್ಸುಗಳು (ಮತ್ತಂ ಅಭ್ಯಂತರ ತಪಷ್ಷಟ್ಕದೊಳಂ ಪ್ರಾಯಶ್ಚಿತ್ತ ವಿನಯ ವೈಯಾಪೃತ್ಯ ಸ್ವಾಧ್ಯಾಯ ಧ್ಯಾನ ವ್ಯುತ್ಸರ್ಗಂಗಳಂ ಕೈಕೊಂಡು: **ಆದಿಪು,** ೬. ೩೩ ವ)

ತಪಸ್ – ಹತ್ತು ಕುಲಧರ್ಮಗಳಲ್ಲಿ ಒಂದು, ತಪೋನುಷ್ಠಾನ (ಉತ್ತಮಕ್ಷಮಾಮಾರ್ದವಾರ್ಜವಸತ್ಯಶೌಚಸಂಯಮತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಪರ್ಯಾಯಪರ್ಯಾಪ್ತದ ’ಶ ಧರ್ಮ್ಮಂಗಳುಮಂ ಕೈಕೊಂಡು: **ಆದಿಪು,** ೬. ೩೦ ವ)

ತಪಸಿ – [ನಾ] ತಪಸ್ವಿ (ಎತ್ತ ವನಂ ಎತ್ತ ಮೃಗಯಾವೃತ್ತಕಂ ಈ ತಪಸಿಯೆತ್ತ ಮೃಗಂ ಎಂದು ಎಂತು ಆನೆತ್ತಚ್ಚೆನ್ ಆತ್ಮಕರ್ಮಾಯತ್ತಂ ಪೆಱತಲ್ತಿದು ಎಲ್ಲಂ ಅಘಟಿತಘಟಿತಂ: **ಪಂಪಭಾ,** ೧. ೧೧೩)

ತಪಸ್ತಪನ – [ನಾ] [ತಪಃ+ತಪನ] ತಪಸ್ಸೆಂಬ ಸೂರ್ಯ (ಅಂತು ಉಗ್ರೋಗ್ರತಪಂಗೆಯ್ಯೆ ತತ್ ತಪಸ್ತಪನವಿಪುಳಮರೀಚಿಗಳ್ ತಮಗೆ ತಪೋವಿಘಾತಮಂ ಮಾಡುವುದುಂ: **ಪಂಪಭಾ,** ೮. ೧೦ ವ)

ತಪಸ್ವಿ – [ನಾ] ತಪಸಿ (ಸರಿಗೆಯೊಳ್ ಸಮೆದ ಅಕ್ಷಮಾಲಿಕೆ ಪೊನ್ನ ಮುಂಜಿ ತೊಳಪ್ಪ ಕಪ್ಪುರದ ಭಸ್ಮರಜಃ ತ್ರಿಪುಂಡ್ರಕಂ ಒಪ್ಪೆ ಪಿಂಗಜಟಾಳಿ ತಾವರೆಯ ಸೂತ್ರದೊಳಾದ ಜನ್ನವಿರಂ ದುಕೂಲದ ಕೋವಣಂ ಕರಂ ಒಡಂಬಡೆ ನೋಟಕರ್ಕಳಂ ಆ ತಪಸ್ವಿ ಮರುಳ್ಚಿದಂ: **ಪಂಪಭಾ,** ೬. ೮)

ತಪೋಧನ – [ನಾ] ತಪಸ್ಸನ್ನೇ ಧನವಾಗುಳ್ಳ ಋಷಿ (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ,** ೧. ೧೧೫ ವ)

ತಪೋನಿಯೋಗ – [ನಾ] ತಪ್ಪಸ್ಸಿನ ಕಾರ್ಯ (ಭಗೀರಥಂ ನೆಗೞ್ ತಪೋನಿಯೋಗದೊಳ್ ಅವಂಗೆ ಅಮರಾಪಗೆ ಮೆಚ್ಚಿ ಪಾಯ್ವುದುಂ: **ಪಂಪಭಾ,** ೪. ೧೩)

ತಪೋಪಳ – [ನಾ] ತಪಸ್ಸೆಂಬ ಕಲ್ಲು [?] (ತನ್ನೂರ್ಮಿಗಳ್ ಬಂದುವು ಅಂದು ಇದಱಿಂ ಪೋದ ತಪೋಪಳಂ ಗಗನಮಂ ಮಾರ್ಪೊಯ್ಯೆ ಕಣ್ಗೊಪ್ಪಿ ತೋರ್ಪುದು: **ಪಂಪಭಾ,** ೪. ೨೪)

ತಪೋಮಯಾನಳ – [ನಾ] [ತಪೋಮಯ+ಅನಳ] ತಪಸ್ಸೆಂಬ ಬೆಂಕಿ (ಸ್ಫುರಿತತಪೋಮಯಾನಳನಿಂ ಈಯೊಡಲಂ ನೆಗೞ್ದೀ ಗಿರೀಂದ್ರಕಂದರದೊಳಗಿಂತೆ ದಲ್ ಕರಗಿಪೆಂ: **ಪಂಪಭಾ,** ೮. ೬)

ತಪೋಮಯೂಖ – [ನಾ] ತಪಸ್ಸಿನ ಕಾಂತಿ (ಇರುಳ್ ಶಶಿರುಚಿಯಂ ಪರಿಭವಿಸಿ ನಭಮನಡರ್ದುವು ನರೇಂದ್ರತಾಪಸ ತಪೋಮಯೂಖಾವಳಿಗಳ್: **ಪಂಪಭಾ,** ೮. ೧೦)

ತಪೋವನ – [ನಾ] ತಪಸ್ಸನ್ನು ಮಾಡುವ ಜಾಗ (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ,** ೧. ೧೧೫ ವ)

ತಪೋವಲ್ಲಿ – [ನಾ] ತಪಸ್ಸೆಂಬ ಬಳ್ಳಿ (ತಪೋವಲ್ಲಿಯೊಳಪ್ಪ ಅನಲ್ಪಸುಖಮೆಲ್ಲಮಂ ಅಲ್ಪಸುಖಕ್ಕೆ ಮಾಱಿ ಬಂದಿಲ್ಲಿ .. .. ಮಹಾಬಳನಾಗಿ ಪುಟ್ಟಿದಂ: **ಆದಿಪು,** ೨. ೪೨)

ತಪೋವಿಘಾತ – [ನಾ] ತಪ್ಪಸ್ಸಿಗೆ ವಿಘ್ನ, ಅಡ್ಡಿ (ನರೇಂದ್ರತಾಪಸಂ ತನ್ನಿಂದ್ರತ್ವಮಂ ಕೊಳಳೆಂದು ತಪಂಗೆಯ್ದಪಂ ಎಂಬ ಸಂಕೆಯೊಳ್ ತಪೋವಿಘಾತಂ ಮಾಡಿಂ ಎಂದು: **ಪಂಪಭಾ,** ೭. ೮೦ ವ)

ತಪೋವೃದ್ಧ – [ನಾ] ಹಿರಿಯ ತಾಪಸಿ (ಕುಂತಿ ಶೋಕಾಕ್ರಾಂತೆಯಾಗಿರೆ ತಪೋವನದ ತಪೋವೃದ್ಧರಾ

ಕಾಂತೆಯನಿಂತೆಂದು ಸಂತೈಸಿದರ್: **ಪಂಪಭಾ,** ೨. ೨೬ ವ)

ತಪ್ತ – **[ಗು]** ಸುಡಲ್ಪಟ್ಟ (ವಿಚಿತ್ರವೀರ್ಯನುಮವಾರ್ಯವೀರ್ಯನಾಗಿ ಕೆಲವು ಕಾಲಂ ರಾಜ್ಯಲಕ್ಷ್ಮಿಯಂ ತಾಳ್ದಿ ರಾಜಯಕ್ಷ್ಮತಪ್ತ ಶರೀರನಾತ್ಮಜವಿಗತಜೀವಿಯಾಗಿ ಪರಲೋಕಪ್ರಾಪ್ತನಾದೊಡೆ: **ಪಂಪಭಾ,** ೧. ೮೦ ವ)

ತಪ್ತತಪನೀಯಚ್ಛಾಯ – [ನಾ] ಪುಟವಿಟ್ಟ ಚಿನ್ನದ ಮಿರುಗು (ಚೈತ್ಯಾಲಯಂಗಳಂ ಅರ್ಚಿಸಿ ತಪ್ತತಪನೀಯಚ್ಛಾಯನುಂ ಸಪ್ತಹಸ್ತೋಚ್ಛ್ರಯನುಂ ನಿದ್ರಾಲಸಾಕ್ಷಿನಿಮೇಷಜರಾಶೋಕ ವಿಷಾದವಿರಹಿತನುಂ: **ಆದಿಪು,** ೨. ೬೯ ವ)

ತಪ್ಪ – [ಗು] [√ತವು; ತವು+ವ] ನಾಶಮಾಡುವ (ಎಲ್ಲರುಂ ಮಡಿದೊಡಂ ಉರ್ಕುಗುಂದದೆ ಉಗುರಂತೆ ಎರಡುಂ ಕಡೆ ತಪ್ಪ ಕೂರ್ಪನೋಗಡಿಸದೆ: **ಪಂಪಭಾ,** ೧೩. ೮೩)

ತಪ್ಪಲೆ – [ಅ] ತಪ್ಪಲ್ಲವೇ (ಬೇಡಂ ಈ ಬಿನದಂ ತಪ್ಪಲೆ ಕಲ್ಪಿತಂ ಪರಿಯದಾತಂಗೆಂದು ನಿನ್ನೀ ಮನಂ ನಿನಗಾತಂ ದೊರೆ ನೆಟ್ಟನಾದಿಪುರುಷಂಗೇಕಕ್ಕ ನೀನ್ನಾಣ್ಚುವೈ: **ಪಂಪಭಾ,** ೪. ೬೯)

ತಪ್ಪಿದನಿಲ್ಲ – ತಪ್ಪಿದವನಾಲಿಲ್ಲ (ತನ್ನ ನುಡಿದ ಪ್ರತಿಜ್ಞೆಯಂ ಏಗೆಯ್ದುಂ ತಪ್ಪಿದನಿಲ್ಲ: **ಪಂಪಭಾ,** ೧, ೮೩ ವ)

ತಪ್ಪಿರ್ – [ಕ್ರಿ] ತಪ್ಪು ಮಾಡು ಮತ್ತು ಮಾತಿಗೆ ತಪ್ಪು (ನಿನಗೆ ಅಹಿತರ್ ಎಯ್ದೆ ತಪ್ಪಿರ್ದರ್ ಅವರ್ ತಪ್ಪಿದ ಬಟೆಕ್ಕೆ ತಪ್ಪಿದ ತಪ್ಪೇಂ ಗಳ ನನ್ನಿಗೊಪ್ಪಮಲ್ಲದೆ ತಪ್ಪೇ: **ಪಂಪಭಾ,** ೭. ೫೨)

ತಪ್ಪು – [ಕ್ರಿ] ಮೀರು (ನಿಜಾಂಘ್ರಿನಖದರ್ಪಣಚುಂಬಿತ ದೃಜ್ಞಿಜಾನನೇಂದುವನವಲೋಕಿಸುತ್ತ ಅವಧಿ ತಪ್ಪಿದುದು ಆಱನೆ ಪತ್ತು ತಿಂಗಳಾದುವು: **ಆದಿಪು,** ೧೨. ೪೨); **[ಕ್ರಿ]** ತಪ್ಪುಮಾಡು (ನೆಲನಂ ಒಪ್ಪಿಸಿ ತಪ್ಪದೆ ಬಾಟಿಸ್ವೆಂ ಎನ್ನದೆ ಈ ಉರ್ಕಿನೊಳೆಂತು ನಿಂದು ಸೆಣಸಲ್ ಬಗೆ ಬಂದುದು: **ಪಂಪಭಾ,** ೯. ೫೦); **[ಕ್ರಿ]** [ನಿಷೈ] ತಪ್ಪು (ಅಜೆದೆಂ ಸೋದರರೆಂದು ಪಾಂಡವರಂ ಇನ್ನೆಂತು ಎನ್ನರಂ ಕೊಲ್ವೆಂ ಅಟ್ಟಿಱಿಸೊಳ್ ಎನ್ನಂ ಪೊರೆದು ಎಯ್ದೆ ನಂಬಿದ ನೃಪಂಗೆಂತು ಆಜಿಯೊಳ್ ತಪ್ಪುವೆಂ: **ಪಂಪಭಾ,** ೯. ೭೧); **[ಕ್ರಿ]** ಮುಗಿದುಹೋಗು (ತನ್ನ ದೋಣೆಯಂಬುಗಳ್ ತವುವನ್ನೆಗಂ ಎಚ್ಚು ಅಂಬು ತಪ್ಪೊಡೆ ಅಭಿವಾದನಯೆನಲ್ಕೆ ಇನ್ನೆನಗೆ ಪದಂ ಇದು ಎಂದು ಕರಂ ನಗೆ ಸುರರ್: **ಪಂಪಭಾ,** ೧೩. ೪೦); **[ನಾ]** ಅನುಮಾನ, ಶಂಕೆ (ಶಂಖಚಕ್ರಹಳಕುಳಿಶ ಲಾಂಛಿತಮಾಗಿರ್ದ ಅಡಿವಜ್ಜೆಯಂ ನೋಡಿ ದುರ್ಯೋಧನನ ಪಜ್ಜೆಯಪ್ಪುದು ಏನುಂ ತಪ್ಪಿಲ್ಲ: **ಪಂಪಭಾ,** ೧೩. ೭೬ ವ)

ತಪ್ಪುದು – [ಕ್ರಿ] [√ತವು] ವ್ಯರ್ಥವಾಯಿತು (ತಕ್ಕರಂ ಕವರ್ದುಕೊಂಡಾದ ಅರ್ಥಮಂ ಪೂಟ್ದು ಮಿಳ್ಕೆಳ ನೋಡುತ್ತುಂ ಉದಗ್ರ ಲೋಭವಶದಿಂ ತನ್ನುಂಡುದಂ ತಪ್ಪುದು ಎಂದು: **ಆದಿಪು,** ೨. ೧೫); **[ಕ್ರಿ]** [ಸಂಸಾರಸಾರವು] ನಾಶವಾಯಿತು (ಅದಿನ್ನೆನಗೆ ತಪ್ಪುದು ತನ್ಮುನಿಶಾಪದಿಂದಂ ಇನ್ನಾರುಮಿದರ್ಕೆ ವಕ್ರಿಸದಿರಿಂ ವನವಾಸದೊಳಿರ್ಪೆಂ: **ಪಂಪಭಾ,** ೧. ೧೧೪); **[ಕ್ರಿ]** ಕೃಶವಾಗುತ್ತದೆ (ತಪ್ಪುದೆನ್ನ ತನು ಬೇಟದ ಕಾಟದೊಳಿಂತು ಕಂಡುಂ ಇನ್ನಪ್ಪೊಡಂ ಆಸೆವಾತಂ ಎನಗೆ ಓಪನೆ ನೀಂ ದಯೆಗೆಯ್ಯಲಾಗದೇ: **ಪಂಪಭಾ,** ೪. ೯೯)

ತಪ್ಪು ನೋಡು – [ಕ್ರಿ] ಜಾರು ನೋಟದಿಂದ ನೋಡು (ಪಡಿದೆಱದಂದದಿಂದಂ ತೆಱದತ್ತು ಪೊದಳ್ದ ಸಂಕೆಯಿಂ ನಡುಕಂ .. .. ಕಣ್ ನಡೆ ನೋಡಿ ತಪ್ಪುನೋಡಿ ನಾಣೆಡೆಯೊಳ್ ಆದುದು: **ಪಂಪಭಾ,** ೫. ೧೫)

ತಪ್ಪುವರೇ – ತಪ್ಪುತ್ತಾರೆಯೇ, ಇಲ್ಲ (ರಂಗತ್ತರಂಗವಾರ್ಧಿ ಚಯಂಗಳ್ ತಂತಮ್ಮ ಮೇರೆಯಂ ದಾಂಟುವೊಡಂ ಗಾಂಗೇಯನುಂ ಪ್ರತಿಜ್ಞಾಗಾಂಗೇಯನುಮೊರ್ಮೆ ನುಡಿದುದಂ ತಪ್ಪುವರೇ: **ಪಂಪಭಾ,** ೧. ೮೪)

ತಪ್ಪುವಿಡಿ – **[ಕ್ರಿ]** ತಪ್ಪುಗಳನ್ನು ಗುರುತಿಸು (ಮುನಿಕುಮಾರರೋದುವ ವೇದವೇದಾಂಗಂಗಳಂ ತಪ್ಪುವಿಡಿದು ಜಡಿದು ಬಗ್ಗಿಸುವ ಪದುಮರಾಗದ ಬಣ್ಣದರಗಿಳಿಗಳುಮಂ: **ಪಂಪಭಾ,** ೧. ೧೧೫ ವ)

ತಪ್ಪೊಡಂ – [ತವು+ದ+ಒಡೆ] ಮುಗಿದರೆ, ಕೊನೆಗೊಂಡರೆ (ನುಡಿಯಿಸಿ ಕೇಳ್ಗುಂ ಹರಿಗನ ಪಡೆಮಾತನೆ ಮಾತು ತಪ್ಪೊಡಂ ಮತ್ತಮದಂ ನುಡಿಯಿಸುಗುಂ ಮೊದಲಿಂದಾ ನುಡಿ ಪಚಿಪಡೆ ಮುಳಿದು ನೋಡುಗುಂ ಕೆಳದಿಯರಂ: **ಪಂಪಭಾ,** ೪. ೫೬)

ತಮ – **[ನಾ]** ಕತ್ತಲು (ಗಂಧೇಭಚರ್ಮಂಗಳಂ ಪಸರಂಗೆಯ್ದನೊ ಶಂಭುವೆಂಬ ಬಗೆಯಿಂದ ತಳ್ಪೊಯ್ದು ಕಟ್ಟೇಜಿ ಸೂಚಿಸಲಾರ್ಗಂ ವಶಮಾಗದಂತು ಕವಿದತ್ತು ಉದ್ದಾಮಭೀಮಂ ತಮಂ: **ಪಂಪಭಾ,** ೪. ೪೯); **[ನಾ]** ಕಪ್ಪುಬಣ್ಣ ಮತ್ತು ತಮೋಗುಣ (ಸಂತಸಮಂ ಮಱುಕಕ್ಕೆ ಮಾಣ್ದೊಡೆ ಈ ನಡೆಗಿಡೆ ಸತ್ವಮಂ ತಮಮುಮಂ ಕಡೆಗಣ್ಣೊಳೆ ಕಂಡೆನೋಪಳಾ: **ಪಂಪಭಾ,** ೪. ೭೮)

ತಮಸ್ತಮ – [ನಾ] ಗಾಢ ಕತ್ತಲೆ (ಮಿಥ್ಯಾತ್ವ ತಮಸ್ತಮಮಂ ಅಕಳಂಕದೇವ ಪ್ರಮಾಣರತ್ನಪ್ರದೀಪರಶ್ಮಿಕಳಾಪಂ: **ಆದಿಪು,** ೧. ೧೬)

ತಮಾಳ – [ನಾ] ಹೊಂಗೆ (ಪಿರಿದುಂ ಬನ್ನದ ಕರ್ಪೆಸೆದುದು ತೊಱಗಿನ್ನುಂ ಹರಗಳ ತಮಾಳ ನೀಳಚ್ಛವಿಯಂ: **ಪಂಪಭಾ,** ೫. ೫೪)

ತಮಾಳಪಲ್ಲವ – [ನಾ] ಹೊಂಗೆಯ ಚಿಗುರು (ಪೊಂಗೊಡನಂ ತಮಾಳಪಲ್ಲವದೊಳೆ ಮುಚ್ಚಿದಂದದೊಳೆ ಚೂಚುಕಮಾಂತುದು ಕರ್ಪನಾಕೆಯಾ: **ಪಂಪಭಾ,** ೧. ೧೨೫)

ತಮಾಳವಿನೀಳ – [ನಾ] ಹೊಂಗೆಯಂತೆ ಕಪ್ಪಗಿರುವ (ಅಳಿನೀಳ ನೀಳಗಳಕಂಠ ತಮಾಳವಿನೀಳ ನೀರದಪ್ರಸರ ವಿಭಾಸಿಯಾದುದು ಸಮೀರಂ: **ಪಂಪಭಾ,** ೭. ೨೨)

ತಮಿಸ್ರ – **[ನಾ]** ಕತ್ತಲೆ (ವಿಸ್ರಸ್ತಬಹಳದೋಷತಮಿಸ್ರರಂ ಅಖಿಳರ್ಧಿಗುಣ ವಿಭೂಷಣರಂ ಪುಣ್ಯಾಸ್ರವಕಾರಣರಂ ಪಿಹಿತಾಸ್ರವ ಮುನಿಪತಿಗಳಂ ಮನಂ ಬಿಡೆ ಕಂಡೆಂ **ಆದಿಪು,** ೩. ೩೬)

ತಮಿಸ್ರಗುಹೆ – [ನಾ] [ಜೈನ] ಕತ್ತಲ ಗುಹೆ (ತಮಿಸ್ರಗುಹೆಯ ವಜ್ರದ ಪಡಿ ತತ್ ಕ್ಷಿತಿಧರದರ್ದೆಯಂತೆ ಚಮೂಪತಿಯಿಂ ತೆಱದತ್ತು: **ಆದಿಪು,** ೧೪. ೫೭)

ತಮೋಗಜ – [ನಾ] ಕತ್ತಲೆಯೆಂಬ ಆನೆ (ತಮೋಗಜದ ಕೋಡೇಱಿಂದಮೇಂ ನೊಂದುದೊ ಹರಿಣಂ; **ಪಂಪಭಾ,** ೪. ೫೦)

ತಮೋಬಳ – [ನಾ] ಕತ್ತಲ ಸೈನ್ಯ (ಓಡೆ ತಮೋಬಳಂ ಅಗಿದಳ್ಕಾಡೆ ನಿಶಾಚರಬಲಂ ರಥಾಂಗಯುಗಂಗಳ್ ಕೂಡೆ ತಟತಟನೆ ನೇಸಱ್ ಮೂಡಿದುದು: **ಪಂಪಭಾ,** ೩. ೭೨)

ತಮೋಮಯ – [ಗು] ಕತ್ತಲಿಂದ ತುಂಬಿದ, ಪ್ರಜ್ಞೆಯಿಲ್ಲದಂತೆ (ಮುಕ್ತಜ್ವರದಂತೆ ನಿರ್ಮುಕ್ತೋಷ್ಮಮುಂ ಮೂರ್ಛಾಪ್ರಾಪ್ತನಂತೆ ತಮೋಮಯಮುಮಪ್ಪ ತಮಿಸ್ರಗುಹೆಯನೆಯ್ದಿದಾಗಳ್: **ಆದಿಪು,** ೧೩. ೪೬ ವ)

ತಮೋರಾಜಕಂ – [ನಾ] ಕತ್ತಲೆಯೆಂಬ ಅರಸು (ಕನಕಪ್ರಾಸಾದ ಪಜ್ಜೆಗಳ ಪಟಪಟನೆ ಬೆಳಗುವ ಸೊಡರ್ಗಳಂ ಆದಿತ್ಯನ ನಂಟರೆಂದು ತಮೋರಾಜಕಂ ಮುಳಿದು ಸೆಱೆಗೆಯ್ದ ಬೆಳಗಿನ ಸೆಱೆಯ ಮನೆಗಳನ್ನವಾದುವು: **ಪಂಪಭಾ,** ೪. ೪೯ ವ)

ತಮೋಹರ – [ನಾ] ಕತ್ತಲ [ಅಜ್ಞಾನದ] ನಿವಾರಣೆ (ಶರದದ ಚಂದ್ರನಂ ವಿಮಲಚಂದ್ರಿಕೆ ಬಾಳದಿನೇಶನಂ ತಮೋಹರಕಿರಣಂ ಕಿಶೋರಹರಿಯಂ ನವಕೇಸರರಾಜಿ .. .. ಪೊರ್ದೆ: **ಪಂಪಭಾ,** ೭. ೩೯)

ತಮ್ಮಂ ನಗುವರ್ – [ನಾ] ತಮ್ಮನ್ನು ನೋಡಿ ನಗುವವರು (ಬೀರಕ್ಕೆ ಮುಯ್ವಾಂತುಂ ಒಂದು ವೀಸವನಪ್ಪೊಡಂ ಆರ್ಗಮಿತ್ತಱಿಯದೆ ಚಾಗಕ್ಕೆ ಮುಯ್ವಾಂತುಂ ತಮ್ಮಂ ನಗುವರಂ ಅಱಿಯದೆ: **ಪಂಪಭಾ,** ೪. ೯೪ ವ)

ತಮ್ಮುತಿರ್ವರುಂ – [ನಾ] ತಾವಿಬ್ಬರೂ (ನೋಡುವುದಱೊಳ್ ಏಂ ಅಟ್ಟಿಯೊಳ್ ಆಡುತ್ತಿರಲಾಗ ತಮ್ಮುತಿರ್ವರುಂ: **ಪಂಪಭಾ,** ೬. ೨೦)

ತಮ್ಮುತೆರಡುಂ – [ನಾ] ತಾವೆರಡೂ, ಆ ಎರಡೂ (ಭಯಮುಂ ಲೋಭಮುಂ ಎಂಬ ತಮ್ಮುತೆರಡುಂ ಪಾಪಕ್ಕೆ ಪಕ್ಕಾಗೆ: **ಪಂಪಭಾ,** ೯. ೮೪)

ತರಂಗ – [ನಾ] ಅಲೆ (ರಂಗತ್ತರಂಗವಾರ್ಧಿಚಯಂಗಳ್ ತಂತಮ್ಮ ಮೇರೆಯಂ ದಾಂಟುವೊಡಂ ಗಾಂಗೇಯನುಂ ಪ್ರತಿಜ್ಞಾಗಾಂಗೇಯನುಮೊರ್ಮೆ ನುಡಿದುದಂ ತಪ್ಪುವರೇ: **ಪಂಪಭಾ,** ೧. ೮೪); [ನಾ] ಮೈಯ ಸುಕ್ಕು (ಸಂಗತತರಂಗಯುತೆಯಂ ಮಂಗಳಲಕ್ಷಣೆಯಂ ಅಂದು ಭೋಂಕನೆ ಕಂಡಂ ಗಂಗಾಂಗನೆಯಂ ಕಾಣ್ಬವೊಲ್ ಅಂಗನೃಪಂ ಮುಂದೆ ನಿಂದ ಕೊಂತಿಯನಾಗಳ್: **ಪಂಪಭಾ,** ೯. ೨೩)

ತರಂತರ – [ಕ್ರಿವಿ] ಮೇಲಿಂದ ಮೇಲೆ (ತರಂತರದೊಳೆ ಪಾಯ್ದ ಕೂರ್ಗಣೆಗಳಂ ತಱಿದೊಟ್ಟಿ ತೆರಳ್ಚಿ ತೂಳ್ದಿಕೊಂಡು ಎರೆದು ಮಗುಚ್ಚಿ ಸಣ್ಣಿಸಿದಂ ಆಂತ ಚತುರ್ವಲಮಂ ಗುಣಾರ್ಣವಂ: **ಪಂಪಭಾ,** ೧೧. ೧೪೨)

ತರಣ – [ನಾ] ದಾಟುವಿಕೆ, ಹಾಯ್ದು ಹೋಗುವಿಕೆ (ಈ ಉಪದೇಶದಿನಾದುದು ಉದಗ್ರಸಂಸರಣ ಮಹಾಸಮುದ್ರ ತರಣಂ: **ಆದಿಪು,** ೫. ೬೬)

ತರಣಿ – [ನಾ] ನದಿ (ಪ್ರವಾಹಾತ್ಯುಷ್ಮತಾಪ ಹಸಿತ ಪ್ರಳಯಕಾಲ ಪ್ರೌಢತರ ತರಣಿಯಂ ವೈತರಣಿಯಂ ಪೊಕ್ಕಾಗಳ್: **ಆದಿಪು,** ೫. ೮೨ ವ); [ನಾ] ಸೂರ್ಯ (ಗೋಕರ್ಣನಾಥನಂ ಗೌರೀನಾಥನಂ ಅವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ ಮೂರ್ತಿಯಂ ತ್ರೈಲೋಕ್ಯಸಂಗೀತ ಕೀರ್ತಿಯಂ ಕಂಡು: **ಪಂಪಭಾ,** ೪. ೭೬ ವ)

ತರತ್ – [ಗು] ಮಿಣುಕುವ, ಹೊಳೆಯುವ (ನವಮೇಘಧ್ವನಿ ಪುಷ್ಕರಧ್ವನಿ ತರತ್ತಾರಾಳಿ ಪುಷ್ಪೋಪಹಾರವಿಳಾಸಂ ರುಚಿರಾಂಬುದಂ ಯವನಿಕಾವಿನ್ಯಾಸಂ: **ಆದಿಪು,** ೬ ೨೭)

ತರತರ – [ನಾ] ಸಾಲು ಸಾಲು (ಓಗಡಿಸದೆ ನಡೆದುದು ಬಲಸಾಗರಂ ಆ ಸಾಗರಂಬರಂ ತರತರದಿಂ: **ಆದಿಪು,** ೧೭. ೬೪)

ತರತ್ತರಂಗೆ – [ನಾ] ಚಲಿಸುವ ಅಲೆಗಳುಳ್ಳ [ನದಿ] (ಪುಚ್ಚವಣಂ ನೋಡುವೆನೆನ್ನೆಚ್ಚೆಯೊಳೀ ಮುನಿಯ ವರದ ಮಹಿಮೆಯಂ ಎನುತ ಅಂದು ಉಚ್ಚಸ್ತನಿ ಗಂಗೆಗೆ ಶಫರ ಉಚ್ಚಳಿತ ತರತ್ತರಂಗೆಗೆ ಒರ್ವಳೆ ಬಂದಳ್: **ಪಂಪಭಾ,** ೧. ೯೦)

ತರತ್ತರಳ – [ಗು] ಚಲಿಸುವ, ಚಂಚಲ (ಸುಲಿಪಲ್ ಮಿಂಚಿನ ಗೊಂಚಲುಟ್ಟ ದುಗುಲಂ ಗಂಗಾನದೀಫೇನಂ ಉಜ್ಜ್ವಲ ಮುಕ್ತಾಭರಣಂ ತರತ್ತರಳ ತಾರೋದಾರ ಭಾ ಭಾರಂ .. .. ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೨)

ತರಳ – [ಗು] ಉಜ್ವಲ (ತಾರಾತರಳಮುಕ್ತಾಫಳ ಲಂಬಲಂಬೂಷ ಭೂಷಿತಮುಂ: **ಆದಿಪು,** ೨. ೨೬ ವ)

ತರಳತರ – [ಗು] ಹೆಚ್ಚು ಕಾಂತಿಯುಕ್ತವಾದ (ತರಳತರ ವೃತ್ತಮೌಕ್ತಿಕಪರಿಕರಂ ಏಕಾಂತಕಾಂತಂ ಎಕ್ಕಾವಳಿ ಕಂಧರದೊಳ್ ಅಮರ್ದೆಸೆಯೆ: **ಆದಿಪು,** ೪. ೩೨)

ತರಳತರ – [ಗು] ತುಂಬ ಉಜ್ವಲವಾದ (ತರಳತರವೃತ್ತಮೌಕ್ತಿಕ ಪರಿಕರಂ ಏಕಾಂತಕಾಂತಮೆಕ್ಕಾವಳಿ ಕಂಧರದೊಳ್ ಅಮರ್ದೆಸೆಯೆ: **ಆದಿಪು,** ೪. ೩೨); ತುಂಬ ಚಂಚಲವಾದ (ಪ್ರಕುಪಿತ ಸೂತಹೂಂಕಾರ ಕಾತರಿತ ತರಳತರ ತುರಂಗ ದ್ರುತವೇಗಾಕೃಷ್ಟ ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ: **ಪಂಪಭಾ,** ೧೩. ೫೧ ವ)

ತರಳತರಬಂಧ – [ನಾ] ಹೆಚ್ಚು ಉಜ್ಜ್ವಲವಾದ ಹಾರ (ಪ್ರತ್ಯೇಕ ಶೀರ್ಷಕ ಅವಘಾಟಕ ಪ್ರಕಾಂಡ ತರಳತರ ಬಂಧ ಉಪಪದಪಂಚಕ ಸಮೇತಂಗಳಾಗಿ: **ಆದಿಪು,** ೮. ೫೪ ವ)

ತರಳಲೋಚನೆ – [ನಾ] ಚಂಚಲವಾದ ಕಣ್ಣುಳ್ಳವಳು (ಓಪನಂ ಮಿಡುಕಲೀಯದೆ ಕಾಲ್ವಿಡಿದಟ್ಟು ತೋರ ಕಣ್ಬನಿಗಳನಿಕ್ಕಿದಳ್ ತರಳಲೋಚನೆ ಸಂಕಲೆಯಿಕ್ಕಿದಂತೆವೋಲ್: **ಪಂಪಭಾ,** ೪. ೯೨)

ತರಳತೆ – [ನಾ] ಚಾಂಚಲ್ಯ (ಮತ್ತಿನ ಮಿಥ್ಯಾಜ್ಞಾನಿವೋಲ್ ನೀಂ ತರಳತೆವೆರಸಿಂತೇಕೆ ವಿಭ್ರಾಂತನಪ್ಪೈ: **ಆದಿಪು,** ೩. ೨)

ತರಳಾಯತೇಕ್ಷಣೆ – [ನಾ] ಚಂಚಲವಾದ ವಿಶಾಲ ನೇತ್ರವುಳ್ಳವಳು (ಇಟ್ಟುಳಿಗೊಂಡ ಅಲಂಪುಗಳ್ ಕನಸಿನೊಳಂ ಪಲಂಚಲೆವುವು ಎನ್ನೆರ್ದೆಯೊಳ್ ತರಳಾಯತೇಕ್ಷಣೇ: **ಪಂಪಭಾ,** ೪. ೧೦೬)

ತರಳಿತ – [ಗು] ಅದುರುತ್ತಿರುವ (ಚಳತ್ ಭ್ರೂಲತಾಗ್ರ ವಿಭಾಗೋತ್ಕಟತರ್ಜನಂ ತರಳಿತ ಆತಾಮ್ರಾಧರಂ ಚಕ್ರಿಗಿತ್ತುವಲಂಪಂ: **ಆದಿಪು,** ೧೭. ೪೨)

ತರು – [ನಾ] ಮರ (ಪಣ್ತೆಱಗಿದ ತದಾಶ್ರಮದ ತರುಗಳ ಮೇಗಿರ್ದು ಪುಗಿಲ್ ಪುಗಿಲೆಂದಿತ್ತ ಬನ್ನಿಮಿರಿಮೆಂಬ

ಪೊಂಬಣ್ಣದ ಕೋಗಿಲೆಗಳುಮಂ: **ಪಂಪಭಾ,** ೧. ೧೧೫ ವ)

ತರುಣ – [ಗು] ಎಳೆಯದಾದ (ತಮ್ಮೊಡನೆ ನಲಿದಾಡುವ ಕಿಶೋರಕೇಸರಿಗಳಂ ತೆಗೆವ ಕರಿಕಳಭಂಗಳುಮಂ ಆ ಪಟಿವಂಗಳಿಂದೆ ಪಾಯ್ವ ಪುಲಿಗಳ ಮಱಿಗಳೊಳ್ ಪರಿದಾಡುವ ತರುಣ ಹರಿಣಂಗಳುಮಂ: **ಪಂಪಭಾ,** ೧. ೧೧೫ ವ)

ತರುಣವೃಷ – [ನಾ] ಪ್ರಾಯದ ಹೋರಿ, ಹೋರಿಗರು (ತರುಣವೃಷಂ ಕೆಲೆದು ತೊಟಿಲ್ತರೆ ಕಂಡುದಱಿಂದೆ ಜೈನದೀಕ್ಷೆಗೆ ಮೆಯ್ಯಂ ತರುಣಜನಂಗಳೆ ತರ್ಪರ್: **ಆದಿಪು,** ೧೫. ೪೪)

ತರುಣಹರಿಣ – [ನಾ] ಎಳೆಯ ಜಿಂಕೆ, ಜಿಂಕೆಯ ಮರಿ (ತಮ್ಮೊಡನೆ ನಲಿದಾಡುವ ಕಿಶೋರಕೇಸರಿಗಳಂ ತೆಗೆವ ಕರಿಕಳಭಂಗಳುಮಂ ಆ ಪಟಿವಂಗಳಿಂದೆ ಪಾಯ್ವ ಪುಲಿಗಳ ಮಱಿಗಳೊಳ್ ಪರಿದಾಡುವ ತರುಣ ಹರಿಣಂಗಳುಮಂ: **ಪಂಪಭಾ,** ೧. ೧೧೫ ವ)

ತರುಣಾರ್ಕ – [ನಾ] [ತರುಣ+ಅರ್ಕ] ಎಳೆಯ ಸೂರ್ಯ (ತರುಣಾರ್ಕನಟ್ಟಿಱಿಂ ಪೊಡರ್ವುದಱಿಂದಂ ಎಂದುಂ ಉದಿತೋದಿತನಂ .. .. ಮಗನಂ ನೀನಮೋಘಂ ಪಡೆವೆ: **ಪಂಪಭಾ,** ೧. ೧೪೧ ಮತ್ತು ೧೪೧ ವ)

ತರುಣಿ – [ನಾ] ಹುಡುಗಿ (ಬರಿಸಿದ ಕಾರಣಮಾವುದೊ ತರುಣಿ ಮುನೀಶ್ವರನ ಮಂತ್ರಮೇದೊರೆಯೆಂದಾಂ ಮರುಳಿಯೆನೆ ಅಱಿದುಮಱಿಯದೆ ಬರಿಸಿದೆನಿನ್ನೇಟಿಮೆಂದೊಡಾಗದು ಪೋಗಲ್: **ಪಂಪಭಾ,** ೧. ೯೩)

ತರುವಲಿ – ಹುಡುಗ ಮತ್ತು ತಬ್ಬಲಿ (ಕರುಣದಿಂ ಎಮ್ಮಂ ತಾಯ್ವೊಲ್ ತರುವಲಿಗಳಂ ಎಯ್ದೆ ನಡೆಪಿದಜ್ಜರ್ ನೀಮಿಂತಿರೆಯುಂ ನೋಡಿದೆವು ಏನೆಮಗರಸಿಕೆಯೋ ಪೇಟಿಮೆಂದು ಶೋಂಕಂಗೆಯ್ದರ್: **ಪಂಪಭಾ,** ೧೧. ೪೮)

ತರ್ಕೈಸು – [ಕ್ರಿ] ತಕ್ಕೈಸು, ಅಪ್ಪಿಕೊ (ಅನೇಕಭೋಗಭಾಗಿಯಾಗೆಂದು ಪರಸಿ ಪಿರಿದುಂ ಅಟ್ಕಱಿನೊಳ್ ತರ್ಕೈಸಿಕೊಂಡು: **ಆದಿಪು,** ೪. ೨೪ ವ)

ತರ್ಜನ – [ನಾ] ನಿಂದನೆ (ಚಳತ್ ಭ್ರೂಲತಾಗ್ರವಿಭಾಗೋತ್ಕಟ ತರ್ಜನಂ ತರಳಿತಾತಾಮ್ರಾಧರಂ ಚಕ್ರಿಗಿತ್ತುವು ಅಲಂಪಂ ಪ್ರಣಯಪ್ರಕೋಪ ಸುರತಪ್ರಾರಂಭದೊಳ್ ಕಾಂತೆಯಾ: **ಆದಿಪು,** ೧೨. ೪೭)

ತರ್ಜನಿ – [ನಾ] ತೋರುಬೆರಳು (ಅತಿಲಲಿತ ತರ್ಜನೀತರ್ಜಿತ ಪರಿಜನೆಯರ್ ವಿಚಿತ್ರವೇತ್ರಲತಾಶೋಭಿತತಳಕಮಳೆಯರ್: **ಆದಿಪು,** ೭. ೧೪)

ತರ್ಜಿತ – [ಗು] ಬೆದರಿಸು (ಅತಿಲಲಿತ ತರ್ಜನೀತರ್ಜಿತ ಪರಿಜನೆಯರ್ ವಿಚಿತ್ರವೇತ್ರಲತಾಶೋಭಿತ ತಳಕಮಳೆಯರ್: **ಆದಿಪು,** ೭. ೧೪)

ತಲೆ – [ನಾ] (ಚೂಳಿಕಾಭಾಗದ ಆ ತಲೆಯೊಳ್ ನಿಂದಪುದು ಊರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದೆ: **ಆದಿಪು,** ೧. ೫೦); **[ನಾ]** ಪೀಳಿಗೆ (ಸಲೆ ಸಂದ ಇರ್ಪತ್ತೊಂದು ತಲೆವರೆಗಂ ನಮಗೆ ಪರಿಭವಂ ಕೃಷ್ಣೆಯ ಮುಂದಲೆಯಂ ಪಿಡಿದು ಪಿಡಿದೆಟಿವಲ್ಲಿಯೆ: **ಪಂಪಭಾ,** ೫. ೫೬)

ತಲೆಗರೆ – [ಕ್ರಿ] ಅಡಗಿಕೊ (ಮಂತ್ರಪದಕ್ಕೆ ಉರಗಂ ಸುಗಿವಂತೆವೊಲ್ ಅಗಿದು ಸುಗಿದು ತಲೆಗರೆದಿರ್ಪಂ: **ಪಂಪಭಾ,** ೭. ೪೩)

ತಲೆಗವಿ – [ಕ್ರಿ] ತಲೆಯನ್ನು ಮರೆಮಾಡು, ತಲೆ ತಪ್ಪಿಸಿಕೊ ಮತ್ತು ತಲೆಯನ್ನು ಅಡಗಿಸಿಕೊ (ಯುಧಿಷ್ಠಿರಂ ತಲೆಗವಿವನಲ್ಲದೆಯುಂ ಏವದೊಳ್ ತಲೆಗವಿದು ಸಿಗ್ಗಂ ಕೊಂಡಾಡಿ ನೆತ್ತಮನಾಡಿ: **ಪಂಪಭಾ,** ೭. ೨ ವ)

ತಲೆಗುತ್ತು – [ಕ್ರಿ] ತಲೆಬಾಗು (ಎಡೆಯೊಳ್ ದೂಂಟಿಂದೆ ದೂಂಟಿಂಗೆ ಪೆರ್ವಱಿಯಂ ಪೊಯ್ಸಿ ಕೆಲಕ್ಕೆ ನಾಣ್ಚಿ ತಲೆಗುತ್ತಿರ್ಪ ಆಕೆಯೇಂ ಜೋಡೆಯೇ: **ಪಂಪಭಾ** ಪರಿಷತ್ತು, ೪. ೮೨)

ತಲೆಗೋ – [ಕ್ರಿ] [ತಲೆ+ಕೋ] ತಲೆಯ ಮೇಲೆ ಭಾರ ಹೊರಿಸು, ಹೊಣೆ ಹೊರಿಸು (ದೇವರೆನ್ನಂ ಧರಾಭರದೊಳ್ ತಂದು ತೊಡರ್ಚಿ ಪೂಣ್ದು ತಲೆಗೋದಿರ್ದುಂ ಬಟಿಕ್ಕೆ: **ಆದಿಪು,** ೪. ೮೧)

ತಲೆದುಡುಗೆ – [ನಾ] [ತಲೆ+ತುಡುಗೆ] ತಲೆಗೆ ಧರಿಸುವ ಆಭರಣ (ಚಿನ್ನಪೂಗಳೆಡೆಯೆಡೆಯೊಳ್ ನಿಮಿರ್ದು ಮಿಱುಮಿಱುಗುವ ತಲೆದುಡುಗೆಯುಂ: **ಆದಿಪು,** ೪. ೪೧ ವ)

ತಲೆದೋಱು – [ಕ್ರಿ] ಕಾಣಿಸಿಕೊ (ಆಗಳುಂ ಇಂದುಸೂರ್ಯರ್ ಅಣಂ ಇಲ್ಲ ಕಟ್ಟಲೆಯೆಂಬುದಿಲ್ಲ ತದ್ಯೋಗಿಘಣಾದ್ಯುತಿಯೆ ಕಟ್ಟಲೆಯಂ ತಲೆದೋಱಲೀಯದು: **ಪಂಪಭಾ,** ೪. ೧೬)

ತಲೆನವಿರ್ – [ನಾ] ತಲೆಗೂದಲು (ನಿಱಿನಿಱಿಗೊಂಡ ಗುಣಾರ್ಣವನ ತಲೆನವಿರ್ಗಳ್ ಲಾವಣ್ಯರಸಮನಿಡಿದಿಡಿದು: **ಪಂಪಭಾ,** ೨. ೩೯ ವ)

ತಲೆಬಟಿವಟಿ – [ನಾ] ದೊಡ್ಡ ಬಳುವಳಿ ಅಥವಾ ತಲೆಗಳ [ಅಂದರೆ ಸೈನ್ಯದ] ಬಳುವಳಿ (ಅಂತು ಮಾಡಿದ ಪರಿಸಂಖ್ಯೆಯೊಳ್ ಒಂದಕ್ಷೋಹಿಣಿ ಬಲಂ ಬೆರಸು ತಲೆಬಟಿವಟಿಯೆಂದು ಅಭಿಮನ್ಯುಗೆ ಕೂಸಂ ಕೊಟ್ಟ ಜೆಟ್ಟಿಗಂ ವಿರಾಟಂ: **ಪಂಪಭಾ,** ೯. ೯೫ ವ)

ತಲೆಮಡು – [ಕ್ರಿ] ತಲೆಗೆ ತಾಗು, ಸಮ್ಮುಖವಾಗು (ಅಂತು ಎರಡುಂ ಪಡೆಯ ನಾಯಕರ್ ಒರ್ವರೊರ್ವರೊಳ್ ತಲೆಮಟ್ಟು ಕಾದುವಾಗಳ್: **ಪಂಪಭಾ,** ೧೦. ೧೧೪ ವ)

ತಲೆಯುರ್ಚು – [ಕ್ರಿ] ಅಡಗಿಕೊ (ಅದುವೆ ಕಾರಣಮಾಗುಳಿದಿರ್ದಂ ಅಂಧರಾಣ್ನಂದನಂ ಅಲ್ಲದೆ ಉಂತೆ ತಲೆಯುರ್ಚುಗುಮೇ ರಣರಂಗಭೂಮಿಯೊಳ್: **ಪಂಪಭಾ,** ೧೩. ೭೫)

ತಲೆವರಿ – [ಕ್ರಿ] [ತಲೆ+ಪರಿ] ಮುಂದೆ ಹೋಗು (ವಾರವಿಳಾಸಿನಿಯರೆರಡುಂ ಕೆಲದೊಳ್ ಸುತ್ತಿಱಿದು ಬರೆ ತಲೆವರಿದ ಓಜೆಯ ಪಿಡಿಯನೇಱಿ: **ಪಂಪಭಾ,** ೩. ೪೮ ವ)

ತಲೆವಱಿ – [ಕ್ರಿ] [ತಲೆ+ಪಱಿ] ಲೋಚುಮಾಡು (ತಲೆವಱಿದು ಉಟ್ಟುದಿಕ್ಕಿ ಸುರಲೋಕಸುಖಂಗಳನುಣ್ಬೆವೆಂಬ ಬತ್ತಲಿಗರ ಮಾತುಗೇಳದಿರು: **ಆದಿಪು,** ೨. ೯); ಅಲಂಕರಿಸು (ತಲೆವಱಿದ ಓಜೆಯ ಪಿಡಿಯನೇಱಿ ಪೆಂಡವಾಸದೊಳ್ವೆಂಡಿರ್ ಬಳಸಿ ಬರೆ: **ಪಂಪಭಾ,** ೩. ೪೮ ವ)

ತಲೆವಿಡಿ – [ಕ್ರಿ] [ತಲೆ+ಪಿಡಿ] ಸೆರೆಮಾಡು (ಕೃಷ್ಣೆಯ ಮುಂದಲೆಯಂ ಪಿಡಿದು ಪಿಡಿದೆಟಿವಲ್ಲಿಯೆ ತಲೆವಿಡಿದರ್ ನಮ್ಮ ಬೀರಮಂ ಕೌರವರುಂ: **ಪಂಪಭಾ,** ೫. ೫೬)

ತಲೆವೀಸು – [ಕ್ರಿ] ಒಪ್ಪದಿರು, ಬೇಡವೆಂದು ಹೇಳು (ನೀ ತಲೆವೀಸದೆ ಉರ್ವರಾಶ್ರೀಯಂ ಇದಾಗದೆನ್ನದೆ ಒಳಕೊಳ್ ಪರಮೋತ್ಸವದಿಂ ಗುಣಾರ್ಣವಾ: **ಪಂಪಭಾ**, ೧೪. ೧೭)

ತಲೆವೇಸಱ್ – [ನಾ] ತಲೆಬೇಜಾರು (ಒಳ್ದುಂ ಒಲ್ಲದನ್ನೊಳೆ ಗಡ ಸೂಳೆಯೆಂದೊಡೆ ಇನಿತಂ ತಲೆವೇಸ'ಱನೆಂತು ನೀಗುವೆಂ: **ಪಂಪಭಾ**, ೪. ೯೮)

ತವದೊಣೆ – [ನಾ] ಅಕ್ಷಯವಾದ ಬತ್ತಳಿಕೆ (ಗಾಂಡೀವಮೆಂಬ ಬಿಲ್ಲುಮಂ ದಿವ್ಯಶರಂಗಳೊಳ್ ತೆಕ್ಕನೆ ತೀವಿದ ತವದೊಣೆಗಳುಮಂ ತಂದು .. .. ಬೃಹಂದಳನೆಂಬ ಸಾರಥಿವೆರಸು ರಥಮಂ ಏಱಲೊಡಂ: **ಪಂಪಭಾ**, ೫. ೭೭ ವ)

ತವಸಿ – [ನಾ] [ತಪಸ್ವಿ] ಋಷಿ (ಮುತ್ತ ತವಸಿಗಳ ಕೈಯಂ ಪಿಡಿದುಯ್ದು ಅವರ ಗುಹೆಗಳಂ ಪುಗಿಪ ಪೋಱಮಡಿಪ ಚಪಳಕಪಿಗಳುಮಂ: **ಪಂಪಭಾ**, ೧. ೧೧೫ ವ)

ತವಿಪೆಂ – ನಾಶಪಡಿಸಿಕೊಳ್ಳುತ್ತೇನೆ, ಬಲಿದಾನಗೈಯುತ್ತೇನೆ (ಎಂತು ನೋಡಿ ಕೊಕ್ಕರಿಸದೆ ಕೊಲ್ವೆಂ ಎನ್ನೊಡಲನಾಂ ತವಿಪೆಂ ರಣರಂಗಭೂಮಿಯೊಳ್: **ಪಂಪಭಾ**, ೯. ೭೦)

ತವಿಸು – [ಕ್ರಿ] ಕ್ಷಯಿಸು (ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ಮೊದಲ್ಗಿಡೆ ಮುನ್ನಂ ಏಕವಿಂಶತಿ ಪರಿಸಂಖ್ಯೆಯಿಂ ತವಿಸಿ ಸರ್ವನಿವೇದಕಮೆಂಬ ಯಜ್ಞದೊಳ್: **ಪಂಪಭಾ**, ೨. ೪೫); [ಕ್ರಿ] ಅಡಗಿಸು, ನಾಶಪಡಿಸು (ನೋಡಲ್ ಅಱುಂಬಂ ಎಂದೊಡೆ ಇದಂ ಆಂತು ಇಱಿದಾರ್ ತವಿಪನ್ನರ್ ಎಂದು ನಾಣೋಡೆ; **ಪಂಪಭಾ**, ೮. ೧೦೦)

ತವು – [ಕ್ರಿ] ಕುಂದು (ನೀಲಾಂಜನೆ ತನ್ನಾಟಮನೊಱಲ್ದು ನೋಡುವ ನೋಟಕರಂ ತವದ ಮಾಟಕ್ಕೆಯಿಂ ಮೋಹಿಸಿದಳ್: **ಆದಿಪು**, ೯. ೩೮); [ಕ್ರಿ] ಕ್ಷಯಿಸು (ಭವಂ ತವೆ ಭವತ್ಪದಾಂಬುರುಹ ಸೇವೆಗೆಯ್ವಾರುಮಂ ಭವಂಗಿಡಿಪೆಯೇಂ: **ಆದಿಪು**, ೧೩. ೮೭); [ಕ್ರಿ] ಮುಗಿದುಹೋಗು (ನೆಲನೆಲ್ಲಂ ಬಂದು ಕೊಳ್ವೊಡಂ ತವದ ಕನಕರಾಶಿಯುಂ: **ಆದಿಪು**, ೧೫. ೩ ವ); [ಕ್ರಿ] ಸ್ವಲ್ಪವೂ ಇರದಂತೆ ನಾಶವಾಗು (ನೀನಿನಿಸಿರ್ದೆಯಪ್ಪೊಡೆ ಏತೊದಲೊ ಸರೋವರಾಂಬುವನಿತಂ ತವೆ ತುಳ್ಕಿ ರಸಾತಳಂಬರಂ ಬೆದಕಿ: **ಪಂಪಭಾ**, ೧೩. ೮೦)

ತವುತರ್ – [ಕ್ರಿ] ಬರಿದಾಗು (ಅವನೋದುವನಿತು ಬುದ್ಧಿಯೆ ತವುತಂದೊಡೆ ಪಂಚಪದದ ನಾಮಾಕ್ಷರಮಂ ಧ್ರುವಮೋದುವುದು: **ಆದಿಪು**, ೨. ೫೫)

ತವುದಲೆ – [ನಾ] [ತವು+ತಲೆ] ಮುಗಿತಾಯ, ಕೊನೆ (ಜೂದಾಡಿ ಸೋಲ್ತು ನನ್ನಿಗೆ ಮೇದಿನಿಯಂ ಕೊಟ್ಟು ಪಾಂಡುನಂದನರ್ ಈಗಳ್ ಪೋದೊಡಮೇಂ ತಿಱುಕಾಗದೆ ಪೋದಪುದೇ ನಮ್ಮ ನೃಪತಿಗವು ತವುದಲೆಯೊಳ್: **ಪಂಪಭಾ**, ೭. ೧೮)

ತವೆ – [ಅ] ಪೂರ್ತಿ (ಮುನಿದು ಈಶಂ ತವೆ ಸುಟ್ಟು ಮುಂ ಕರುಣದಿಂದಿತ್ತಂ ಪುನರ್ಜನ್ಮಮಂ ನಿನಗೆ: **ಪಂಪಭಾ**, ೪. ೫೧); [ಕ್ರಿ] (√ತವು+ಎ) ಮುಗಿದುಹೋಗು (ಸರೋವರಾಂಬು ಅನಿತಂ ತವೆ ತುಳ್ಕಿ ರಸಾತಳಂಬರಂ ಬೆದಕಿಯುಂ ಎಂತುಂ ಅಪ್ಪಳಿಸಿ ಕೊಂದಪೆಂ: **ಪಂಪಭಾ**, ೧೩. ೮೦)

ತಸ್ಯ – ಅವನ (ತಸ್ಯಾಯಂ ಪುನರುಕ್ತ ಏವ ಸಮರಶ್ಲಾಘ್ಯಪ್ರಶಸ್ತಿಕ್ರಮಃ: **ಪಂಪಭಾ**, ೧೪. ೨೮)

ತಳ್ – [ಕ್ರಿ] ವ್ಯಾಪಿಸು (ಏನೋದಾವಂ ತಳ್ತಟ್ವದಂತೋಸರಿಸಿ ಕಳೆಗೆ ಸಂಸಾರಕಾಂತಾರದಿಂದಂ: **ಆದಿಪು**, ೧. ೩); [ಕ್ರಿ] ದಟ್ಟವಾಗು (ಕೊಂಕಿದ ಕೊಂಕು ತದ್ವಿಷಯಕಾಂತೆಯ ಪುರ್ವಿನ ಕೊಂಕಿನಂತೆ ಚೆಲ್ವಂ ಕುಡೆ ತಳ್ತೆರಟ್ಟಿಡಿಯ ಪೂಮರದಿಂ ಕಟಿವೂಗಳ್: **ಆದಿಪು**, ೧. ೬೧); [ಕ್ರಿ] ಎದುರಿಸು, ತಳೆ (ತಮ್ಮ ಮನದೊಳ್ ತಳ್ವೊಯ್ದು ತಳ್ತಾ ತಗುಳ್ಪುಗಳೊಳ್ ಪೊಕ್ಕುವು: **ಆದಿಪು**, ೬. ೨೨); [ಕ್ರಿ] ಒಡಗೂಡು (ಕೇಸರಂ ಬೆರಸಿದ ಪೊನ್ನ ಬಾಯಿನದ ಬಟ್ಟಲಿವೆಂಬಿನಂ ಆರ್ದ್ರಕೇಸರಂ ಬೆರಸಿದ ಚೆಲ್ವು ತಳ್ತೆಸಳ್ ಅದೇನೆಸೆದಿರ್ದುದೊ ಕರ್ಣಿಕಾರದಾ: **ಆದಿಪು**, ೧೧. ೧೧೭); [ಕ್ರಿ] ಹಬ್ಬು ಒಡಗೂಡು (ಈರೆಲೆವೋದ ಲುಂದಿನೊಳ್ ಬಳೆದ ವಿಯೋಗದೊಳ್ ಪೊರೆದ ಚಿಂತೆಯೊಳ್ ಎಯ್ದೆ ಮಡಲ್ತ ತಳ್ತ ಮೆಯ್ಗಳೊಳ್: **ಆದಿಪು**, ೧೨. ೨೦); [ಕ್ರಿ] ದೂಡು, ತಳ್ಳು ಸಿಡಿಲಂ ಸಿಡಿಲಟ್ಟುವುದೆನೆ ಕುಡುಮಿಂಚಂ ಮಿಂಚು ತಳ್ತುದೆನೆ ಗಗನಮಂ ಏನಡರ್ದುವೊ ಜಯನ ಶರಂಗಳ್: **ಆದಿಪು**, ೧೩. ೬೩)

ತಳ – [ನಾ] ಅಂಗೈ (ಇನಿಯನ ಕೆಂದಳಂ ತಳಮನೊಯ್ಯನೆ ಸೋಂಕೆ ಪೊದಳ್ದ ನಾಣ ಪೆಂಪಿನೊಳೊಗೆತರ್ಪ ವಿಳಾಸಂ: **ಆದಿಪು**, ೪, ೪೬); [ನಾ] ಅಂಗಾಲು (ನವಕಮಳದಳಂಗಳ್ ಭೀಕರಂ ಬಲ್ಪುಮಾಗಿರ್ಪುವೆ ತಳಕೆ ತಳಂಗಳ್ ನೋಯವೇ ಮೆಟ್ಟಿದಂದು: **ಆದಿಪು**, ೭. ೫೬); [ನಾ] ಕಾಲಂದುಗೆ (ಮದನಡಿಂಡಿಮರವ ಆಡಂಬರು ಆಳೋಳತುಳಾಕೋಟಿ ಕಳಕ್ವಣಿತಮೆ ನಿಗಳಾಂದುಕಾರವಮಾಗೆ: **ಆದಿಪು**, ೧೧. ೨೦ ವ)

ತಳತಳಿಸು – [ಕ್ರಿ] ಮಿಗಿಲಾಗಿ ಹೊಳೆ (ತೆಂಬೆಲರಲೆಪಿಂ ಕಳಿಕೆಯೊಳೆ ತುಱುಗಿ ತಳಿರೊಳೆ ತಳತಳಿಸಿದುದೊಂದಶೋಕಲತೆಯನೆ ಪೋಲ್ತಳ್: **ಆದಿಪು**, ೮. ೨೯)

ತಳದಳಿಸು – [ಕ್ರಿ] ತಳತಳಿಸು (ತಳದಳಿಪ ಮುಗಿಲ್ಗಳ್ಕಳಕುಳಮಪ್ಪಿನಮಳುರ್ದು ಜಯನ ಶರತತಿ ಕೊಳೆ ಜಲ್ಲಳಿಯ ಮಱಿವೊಕ್ಕವೊಲ್ ಕಳಕುಳಮಾದರ್ ನಾಗರಾಜರಪಗತತೇಜರ್: **ಆದಿಪು**, ೧೩. ೬೫)

ತಳಮಳಗು – [ನಾ] ತಳಮಳ (ತಳಮಳಗುತ್ತೆಱಗುವುದುಂ ವಿಳಾಸನ್ಮಾಗಧಕಿರೀಟರತ್ನಾಂಶುಗಣಂ ಗಳಿಯಿಸಿದುವು ಅವನ ಗರ್ವಮೆ ಗಳಿಯಿಸುವಂತಿರೆ: **ಆದಿಪು**, ೧೨. ೧೧೨)

ತಳಮಳಿಸು – [ಕ್ರಿ] ಕಳವಳಗೊಳ್ಳು (ಮುಳಿದು ತಳಮಳಿಸಿ ತಳರದೆ ತೊಳಗುವ ಕರವಾಳಂ ಉರ್ಚಿ ಮೆಯ್ವೆರ್ಚಿ ಪೊದಳ್ದ ಅಳವು ಅಮರೆ ಪಿಡಿದು ರಥದಿಂದೆ ಇಳೆಗೆ ಇೞಿದು ಅವಂ ಅವನಿಪತಿಯಂ ಅಣುಗಿಱಿ ಪೊಯ್ದಂ: **ಪಂಪಭಾ**, ೧೩. ೪೭)

ತಳರ್ – [ಕ್ರಿ] ಹೆದರು (ಇನಿಸು ಪೊಟ್ತುಂ ತನ್ನಂ ಮಱಿದಿರಲಕ್ಕುಮೆ ತಳರದೆ ತಜಿಸಲದೆ ಇನ್ನೆಱಿದುಂ ಮಱಿದುಂ ಇರ್ಪುದೆ ಚದುರಂ: **ಆದಿಪು**, ೪. ೭೬); [ಕ್ರಿ] ಚಲಿಸು (ಜೀವಂ ತನುವಿಂ ತಳರಲೊಡಂ ವಿಚ್ಛಾಯತೆಗೊಳಗಾದುವು ತೊಳಗುವವರ

ಸೌಂದರತನುಗಳ್: **ಆದಿಪು**, ೫. ೨೭); **[ಕ್ರಿ]** ತೊಡರು, ಎಡವುವಿಕೆ (ನುಡಿಯ ತೊದಳ್ ನಡೆಯ ತಳರ್ ಜೆಡೆಗಳ ಕರ್ಪು ಅಲರ್ದ ಮೊಗದ ಕಿಱುನಗೆ: **ಆದಿಪು**, ೮. ३೯); **[ಕ್ರಿ]** ಕಡಿಮೆಯಾಗು (ಮುಳಿದು ಮನಃಪ್ರಿಯಂ ಪೆಱುಗುಗೆಯ್ದಿರೆ ಬೆಂಬೆಡಿದಪ್ಪಿಕೊಂಡ ನಲ್ಲಳ ಮೊಲೆಯೊತ್ತಿನೊಳ್ ತಳರ್ದುದು .. .. ಕೋಪಮೋಪನಾ: **ಆದಿಪು**, ೧೨. ೩೪); **[ಕ್ರಿ]** ಹೊರಡು (ವಕ್ರಿಸದಿರಿಂ ವನವಾಸದೊಳಿರ್ಪೆಂ ಎಂದು ದುರ್ವಾರಪರಾಕ್ರಮಂ ತಳರೆ ಬಾರಿಸಿ ವಾರಿಸಿ ಕುಂತಿಮಾದ್ರಿಯರ್: **ಪಂಪಭಾ,** ೧. ೧೧೪); **[ಕ್ರಿ]** ಅಲುಗಾಡು (ಅಂತು ಪುಗುವೇೞ್ವುದುಂ ದಿಗ್ದಂತಿಗಳುಂ ಕುಲನಗಂಗಳುಂ ಗಡಣಂಗೊಂಡಂತು ಕವಿತರ್ಕುಂ ಅಂತೆ ನೆಲಂ ತಳರ್ವಿನೆಗಂ ಪ್ರಚಂಡಕೋದಂಡಧರರ್: **ಪಂಪಭಾ**, ೨. ೭೦); **[ಕ್ರಿ]** ಮುಂದೆ ಸಾಗು (ನಂದೆ ಅಪರನಂದೆ ಅಶ್ವಿನಿ ಮಹಾನಂದೆ ಎಂಬ ತೀರ್ಥಜಲಂಗಳೊಳ್ ಓಲಾಡುತ್ತುಂ ಉದ್ವೃತ್ತ ರಿಪು ನೃಪತಿಗಳಂ ಏಸಾಡುತ್ತುಂ ಅಲ್ಲಿಂ ತಳರ್ದು: **ಪಂಪಭಾ,** ೪. ೧೮ ವ)

ತಳರ್ನಡೆ – **[ನಾ]** ದಟ್ಟ ಹೆಜ್ಜೆ, ಮಂದಗಮನ (ದಾದಿಯರೊಡವಂದಿನಿಸಂ ನಡೆಯಿಸೆ ಲಲಿತೇಂದ್ರನೀಲ ಮಣಿಭೂಮಿಯೊಳ್ ತಳರ್ನಡೆನಡೆದಂ: **ಆದಿಪು**, ೮. ೨)

ತಳರ್ಪು – **[ನಾ]** ಚಲನೆ (ತನ್ನ ಜಸದಂತೆ ಪಸರಿಸಿದ ಅಚ್ಚವೆಳ್ದಿಂಗಳಂ ಆಕೆಯ ಕಣ್ಗಳ ಬೆಳ್ಪಿನ ತಳರ್ಪು ಎನುತ್ತುಂ ಪೆಳ್ಪಳಿಸಿ ಚಂದ್ರನಂ ನೋಡಿ: **ಪಂಪಭಾ,** ೪. ೬೯ ವ)

ತಳವೆಳಗಾಗು – **[ಕ್ರಿ]** ಗಾಬರಿಗೊಳ್ಳು (ಈ ಸಭಾವಳಯದೊಳ್ ಎನ್ನನೇಳಿಸಿದ ನಿನ್ನಂ ಅನಾಕುಳಮೆನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತನೇ: **ಪಂಪಭಾ,** ೨. ೫೦); **[ಕ್ರಿ]** ಭ್ರಾಂತಿಗೊಳ್ಳು (ಓಲಗಕ್ಕೆ ಪುಗುವ ಪೊಱಮಡುವ ವಾರವಿಳಾಸಿನಿಯರ ನೂಪುರಂಗಳ ರವಂಗಳೊಳ್ ನೃಪಭವನೋಪವನ ದೀರ್ಘಿಕಾಹಂಸಕುಳಂಗಳ್ ತಳವೆಳಗಾದುವು: **ಪಂಪಭಾ,** ೪. ೪೯ ವ)

ತಳಿ – **[ಕ್ರಿ]** ಚಿಮುಕಿಸಿಕೊ (ಸಿಪ್ಪುಗಳೊಳ್ ತೀವಿ ಮಧುಮಂತ್ರಂಗಳಂ ಮಂತ್ರಿಸಿ ನೆಲದೊಳೆಱೆದು ತಲೆಯೊಳ್ ತಳಿದು ಕಳ್ಳೊಳ್ ಬೊಟ್ಟನಿಟ್ಟುಕೊಂಡು ಕೆಲದರ್ಗೆಲ್ಲಂ ಬೊಟ್ಟನಿಟ್ಟು: **ಪಂಪಭಾ,** ೪. ೯೭ ವ); **[ಕ್ರಿ]** ಚಿಮುಕಿಸು (ಮಹಾಋಷಿಯ ತಳಿದ ಕನಕಕಮಂಡಲುವಿನ ತೀರ್ಥೋದಕಂಗಳಿಂದ ಅಯ್ವರುಂ ಪವಿತ್ರೀಕೃತ ಮಸ್ತಕರಾಗಿರ್ದು: **ಪಂಪಭಾ,** ೬. ೧೧ ವ)

ತಳಿಗೆ – **[ನಾ]** ತಟ್ಟೆ (ಚೆಂಬೊನ್ನ ತಳಿಗೆಗಳೊಳ್ ತೆಕ್ಕನೆ ತೀವಿದ ಬಿಡುಮುತ್ತಿನ ಸೇಸೆಗಳುಂ: **ಆದಿಪು**, ೨. ೬೭ ವ)

ತಳಿದ – **[ಗು]** ತೊಯ್ದ, ನೆಂದ (ಇಮ್ಮಾವಿನ ಸೊನೆಯ ಸೋನೆಯೊಳ್ ತಳಿದ ಎಳದಳಿರ ಜೊಂಪಂಗಳೊಳಂ ಕುಳಿರ್ವ ಪುಳಿನಂಗಳೊಳಂ ಕೋಡುವ ಧಾರಾಗೃಹಂಗಳೊಳಂ ವಿಶ್ರಮಿಸಿ: **ಆದಿಪು**, ೧೧. ೭೪ ವ)

ತಳಿಯಿಸು – **[ಕ್ರಿ]** ಚಿಮುಕಿಸು (ಪೊೞಲ ಬೀದಿಗಳೊಳೆಲ್ಲಂ ಗಂಧೋದಕ ಪಂಚಗವ್ಯಂಗಳಿಂ ತಳಿಯಿಸಿ: **ಪಂಪಭಾ,** ೪. ೫ ವ)

ತಳಿರ್ – **[ನಾ]** ಚಿಗುರು (ಪಾರಿಜಾತಂ ಅಗ್ಗಳಮೆಸೆದೊಪ್ಪುವಂತೆ ತಳಿರಿಂ ಮುಗುಳಿಂ ನವಯೌವನಂ ಮನಂಗೊಳೆ ಕರಮೊಪ್ಪಿದಂ ದಶಸಹಸ್ರಮದೇಭಬಳಂ ವೃಕೋದರಂ: **ಪಂಪಭಾ**, ೨. ३೮); **[ಕ್ರಿ]** ಚಿಗುರೊಡೆ (ಮನದೊಳ್ ಅಲಂಪನಾಳ್ದು ಇನಿಯನಟ್ಟಿದ ದೂದರ ಸೀಯನಪ್ಪ ಮಾತಿನ ರಸದೊಳ್ ಕೊನರ್ವುದು ತಳಿರ್ವುದು ಪೂವುದು ಕಾಯ್ವುದು: **ಪಂಪಭಾ**, ೪. ೧೦೨)

ತಳಿರಿಡಿ – **[ಕ್ರಿ]** ಚಿಗುರು ಬಿಡು (ತಳಿರಿಡಿದು ಪೂತಲತೆಗಳಂ ಒಡನೊಡನೆ ಎಲರಲೆಯೆ ಬಿಡದೆ ಸುರಿವ ಅಲರ್ಗಳಂ: **ಪಂಪಭಾ**, ೫. ೫೫) ['ತಡಿವಿಡಿದು' ಬದಲು ಡಿಎಲ್ಎನ್ 'ತಳಿರಿಡಿದು' ಎಂದು ಪರಿಷ್ಕರಿಸಿಕೊಂಡಿದ್ದಾರೆ]

ತಳಿರ್ಗಳಸ – **[ನಾ]** [ತಳಿರ್+ಕಳಸ] [ಮಾವಿನ] ಚಿಗುರುಗಳನ್ನಿಟ್ಟಿರುವ ಕಳಶ (ತಳಿರ್ಗಳಸಂ ಮುಕುಂದ ರವಂ ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಙ್ಕ್ತಿ ಪಸುರ್ವಂದಲೊಳ್ ಒಲ್ದು ಎಡೆಯಾಡುವ ಎಯ್ದೆಯರ್: **ಪಂಪಭಾ**, ೧. ೧೦೭)

ತಳಿರ್ವಾಸು – **[ನಾ]** [ತಳಿರ್+ಪಾಸು] ಚಿಗುರಿನ ಹಾಸಿಗೆ (ಇನಿಯನಗಲ್ದು ಪೋಗಿ ಪರದೇಶದೊಳಿರ್ದಪಂ ಆನುಂ ಇಲ್ಲಿ ಮಾವಿನ ತಳಿರ್ವಾಸಿನೊಳ್ ಪೊರಳುತಿರ್ದಪೆಂ ಆಗಳುಂ: **ಆದಿಪು**, ೧೨. ४೧)

ತಳೆ – **[ಕ್ರಿ]** ತಾಳು, ಹೊಂದು (ನುಡಿಗಳೊಳ್ ಆಸೆಯುಂಟೆನಲೊಡಂ ತಳೆದಂತಿರೆ ನಿಲ್ವುದು ಎಂತುಂ ಆವೆಡೆಯೊಳಂ ಆಸೆಗಾಣನೆನೆ ತೊಟ್ಟನೆ ಪೋಪುವು ನಲ್ಲರಿರ್ವರೊಡಲೊಳಗಿರ್ಪ ಜೀವಂ: **ಪಂಪಭಾ,** ೪. ೧೦೪)

ತಳೋದರಿ – **[ನಾ]** ತೆಳುನಡುವಿನ ಹೆಂಗಸು (ಅರ್ಜಿಸಿ ಮೆಚ್ಚಿಸು ನೀಂ ದಿಗಂತವಿಶ್ರಾಂತಯಶರ್ಕಳಂ ವರತನೂಭವರಂ ಪಡೆ ನೀಂ ತಳೋದರೀ: **ಪಂಪಭಾ,** ೧. ೧೧೮)

ತಳ್ಕಿಱೆ – **[ಕ್ರಿ]** ಲೇಪಿಸು, ಬಳಿ (ಕೆನ್ನೆತ್ತರೊಳ್ ಒರ್ವರೊರ್ವರಂ ತಳ್ಕಿಱಿದುಂ ಬೊಬ್ಬಿಱಿದುಂ ತ್ರಿಪುಂಡ್ರಮಿಟ್ಟುಂ ಕೂಕಿಱಿದುಂ: **ಪಂಪಭಾ,** ೧೨. ೧೫೮ ವ) [ಡಿಎಲ್ಎನ್ ಒಪ್ಪಿದ ಪಾಠ]

ತಳ್ಕು – **[ನಾ]** ತೆಕ್ಕೆ (ತನ್ಮನುಜದಂಪತಿ ದಂಪತಿಯಾಗೆ ತೋಳ ತಳ್ಕು ಅಗಲದಲಂಪಿನಿಂಪು ತವದಟ್ಟಿಱುಕೆ ನಿಮಿರ್ಕೆಗುಂದದೆ ಆವಗಂ ಅತಿಸೌಖ್ಯಮಂ ಪಡೆವುದು: **ಆದಿಪು**, ೫. ४३) [ಎಲ್. ಬಸವರಾಜು ಅವರ ಪಾಠ]; ಲೇಪನ (ಒತ್ತಿದ ತಳ್ಕು ಎತ್ತಿದ ತಟಿ ಮುತ್ತಿನ ಪೊಸದುಡುಗೆ ತಳಿರ ಸೋರ್ಮುಡಿ ಮನಮಂ ಪೊತ್ತಿಸೆ: **ಪಂಪಭಾ**, ೫. ೫೮ ವ)

ತಳ್ತ – **[ಗು]** [√ತಳ್] ಚಿಗುರಿದ (ಸೊಗಯಿಸಿ ಬಂದ ಮಾಮರನೆ ತಳ್ತ ಎಲೆವಳ್ಳಿಯೆ ಪೂತ ಜಾತಿಸಂಪಗೆಯೆ ಕುಕಿಲ್ವ ಕೋಗಿಲೆಯೆ: **ಪಂಪಭಾ,** ४. ೨೮)

ತಳ್ತ ತೋಳ್ – **[ನಾ]** ತಬ್ಬಿದ ತೋಳು (ಮಱಿದು ಸಾರ್ಚಿದ ನಲ್ಲಳ ತಳ್ತ ತೋಳ್ಗಳಂ ಮೆಲ್ಲಮೆಲ್ಲನೆ ಪತ್ತುವಿಡಿಸಿ: **ಪಂಪಭಾ,** ೪. ೧೨ ಮತ್ತು ೧೨ ವ)

ತಳ್ತಳಿಸು – **[ಕ್ರಿ]** ಪ್ರಕಾಶಿಸು (ನಾನಾವಿಮಾನಂಗಳೊಳ್ ಭಾಸುರರತ್ನಜ್ಯೋತಿಗಳ್ ತಳ್ತಳಿಸಿರೆ: **ಆದಿಪು**, ೮. ೬೭)

ತಳ್ತಱದಱ – **[ಕ್ರಿ]** [ತಳ್ತಱ+ತಱ] ಚಿಕ್ಕಚಿಕ್ಕದಾಗಿ ಕತ್ತರಿಸು (ಬಱಸಿಡಿಲ್ ಎಱಪಂತಿರೆ ಬಂದೆಱಗಿದರಂ ತಳ್ತು ಬಾಳ ಕೀೞ್ಮೊನೆಯಿಂ ತಳ್ತಱದಱದು: **ಪಂಪಭಾ,** ೧೦. ೮೨)

ತಳ್ತಿರ್ – **[ಕ್ರಿ]** ಸೇರಿರು, ಜೊತೆಯಿರು (ತಪೋಧನರೆಲ್ಲಂ ನೆರೆದು ಬಂದು ಕೈಲಾಸದೊಳ್ ವಿಳಾಸಂಬೆರಸು ಗಿರಿಜೆಯೊಳ್ ತಳ್ತಿರ್ದ ಬಾಳೇಂದುಚೂಡಾಮಣಿಗೆ: **ಪಂಪಭಾ,** ೮. ೧೦ ವ)

ತಳ್ತಿಱ – **[ಕ್ರಿ]** ಎದುರಿಸಿ ಇರಿ (ಅದಿರದಿದಿರ್ಚಿ ತಳ್ತಿಱಯಲ್ ಈ ಮಲೆದೊಡ್ಡಿದ ಚಾತುರಂಗಬಲಮೆಂಬುದು ನಿನಗೊಡ್ಡಿ ನಿಂದುದು: **ಪಂಪಭಾ,** ೧೦. ೬೪)

ತಳ್ತು ಕಟ್ಟಿದ ಕಿವಿ – ನೇರವಾದ ಕಿವಿ (ಅಸಿಯ ನಡುವುಂ ಅಗಲುರಮುಂ ತಳ್ತು ಕಟ್ಟಿದ ಕಿವಿಯುಂ ಕವಿವ ಪುರ್ವುಂ ತೋರಮಾಗಿ ನಿಮಾರ್ಂಸಮಪ್ಪ ಕಾಲ್ಗಳುಂ: **ಪಂಪಭಾ,** ೫. ೪೬ ವ)

ತಳ್ತು ಕಟ್ಟು – **[ಕ್ರಿ]** ಸೇರಿಸಿ ಕಟ್ಟು (ತಳ್ತು ಕಟ್ಟಿದ ಗುಡಿ ರಂಗವಲ್ಲಿಗಳೆ ದಾಂಗುಡಿಯಂತಿರೆ ಸೂಸೆ ಸೇಸೆಯಂ ಸುದತಿಯರಿಕ್ಕೆ ಚಾಮರಮಂ: **ಪಂಪಭಾ,** ೫. ೧೦೫)

ತಳ್ತೆಮೆ – **[ನಾ]** [ತಳ್ತ+ಎಮೆ] ಮುಚ್ಚಿದ ರೆಪ್ಪೆ (ಮದನ ದವಾನಲಾರ್ಚಿ ತನುವಂ ಸುಡೆ ತಳ್ತೆಮೆಯೊಳ್ ಪಳಂಚಿ ಬೀಗಿದ ಬೆಳರ್ವಾಯೊಳ್ ಉಚ್ಚಳಿಸಿ: **ಪಂಪಭಾ,** ೫. ೯)

ತಳ್ಪೊಯ್ – **[ಕ್ರಿ]** ಬೆಸೆದುಕೊ (ಪೊಸತಾಗೆ ತಮ್ಮ ಮನದೊಳ್ ತಳ್ಪೊಯ್ದು ತಳ್ತು ಆ ತಗುಳ್ಪುಗಳೊಳ್ ಪೊಕ್ಕುವು: **ಆದಿಪು,** ೬. ೨೨); **[ಕ್ರಿ]** ಒತ್ತಾಗಿ ಸೇರು (ಬಿನ್ನನೆ ಕುರುಳ ನೆೞಲ್ಗಳ್ ತನ್ನೊಳೆ ತಳ್ಪೊಯ್ದು ನೆಗಟ್ಟಿ ಕಱೆಯೆನೆ ಪೋಲ್ತು: **ಆದಿಪು,** ೭. ೧೦); **[ಕ್ರಿ]** ತಾಕಲಾಡು (ಕರಂ ಪರಕೆಗಳಂ ತಳ್ಪೊಯ್ಯೆ ಸೇಸಿಕ್ಕಿತು ಇಂದ್ರತನೂಜಂಗಿದಿರ್ವಂದು ಷೋಡಶ ಸಹಸ್ರಾಂತಃಪುರಂ ಕೃಷ್ಣನಾ: **ಪಂಪಭಾ,** ೪. ೩೯); **[ಕ್ರಿ]** ನೂಕು (ಪಲವುಂ ರಾಜಚಿಹ್ನಂಗಳಂ ಬೆಳ್ಗೊಡೆಗಳ್ ತಳ್ಪೊಯ್ದು ಅದೇಂ ಕಣ್ಗೊಳಿಸಿದುದೊ ಚಳತ್ ಚಂದ್ರಕಚ್ಛತ್ರಪಿಂಡಂ: **ಪಂಪಭಾ,** ೧೩. ೩೮)

ತಳ್ವು – **[ಕ್ರಿ]** [√ತಳ್=ಧರಿಸು] ಸೇರಿ ಹೊಂದಿಕೊ (ಬಗೆ ಪೊಸತಪ್ಪುದಾಗೆ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು: **ಪಂಪಭಾ,** ೧.೮); **[ನಾ]** ವಿಳಂಬ, ತಡ (ಎನಗೆ ಇಂ ಮಾಣ್ಬುದು ಸೂೞ್ ಖಾಂಡವಮಂ ಆಂ ತಳ್ವಿಲ್ಲದೆ ಇಂದೂಡುವೆಂ: **ಪಂಪಭಾ,** ೫. ೭೪); **[ಕ್ರಿ]** ವಿಳಂಬ ಮಾಡು (ವಿರಾಟನಿರ್ಪ ಅಱಕೆಯ ಪಟ್ಟಣಂ ನಮಗೆ ಇದೇ ಪಿರಿದಪ್ಪುದು ತಳ್ವದೆ ಎಯ್ದಿ ನಾಂ ತುಱುವನೆ ಕೊಳ್ವಂ ಅಂತು ತುಱುಗೊಂಡೊಡೆ ಪಾಂಡವರಿರ್ಪ ಗಂಡರೇ: **ಪಂಪಭಾ,** ೮. ೮೯);

ತಳ್ಳಂಕಗುಟ್ಟು – **[ಕ್ರಿ]** ತುಂಬಿ ತುಳುಕು (ಸುರವಿರಚಿತಮಂದಾನಿಳ ಆಂದೋಳದಿಂದಂ ಸುರವಂದಿಸ್ತೋತ್ರದಿಂದಂ ದೆಸೆ ಗಗನತಳಂ ತೀವಿ ತಳ್ಳಂಕಗುಟ್ಟುತ್ತಿರೆ: **ಆದಿಪು,** ೧೦. ೧೮)

ತಱಗೆಲೆ – **[ನಾ]** ಒಣಗಿದ ಎಲೆ (ಪೊಸನಾರೆ ದೇವಾಂಗವಸ್ತ್ರಮಾಗೆ ಪರೆದ ತಱಗೆಲೆಯೆ ಪರಿಯಣಮಾಗೆ ಪಣ್ಪಲಮೆತ್ತಿದ ಬೋನಮಾಗೆ: **ಪಂಪಭಾ,** ೭. ೨೮)

ತಱತಱ – **[ನಾ]** ಅಸ್ತವ್ಯಸ್ತ (ತಱತಱಾಗಿರ್ದ ಕುಂಕುಮದ ನಿಜವದನಮಂ ತೆಱೆದ ಕಣ್ಗಳೊಳೆ ಧವಳಿಸಿದ ನಿಜವದನಮಂ: **ಆದಿಪು,** ೭. ೨೭ ರಗಳೆ)

ತಱ – **[ಕ್ರಿ]** ಕತ್ತರಿಸು (ದಾವಶಿಖಿಯನಿೞಿಪುದಿದಾವ ಸರಲ್ ಪೇೞಿಮೆನಿಪ ಸರಲಿಂ ತಱದಂ ದೇವರ ಪಡೆ ರಾಗಿಸೆ ಮನದ ಏವದಿಂ ಅವಯವದೆ ಶಕುನಿಯಂ ಸಹದೇವಂ **ಪಂಪಭಾ,** ೧೩. ೪೧)

ತಱದೊಟ್ಟು – **[ಕ್ರಿ]** [ತಱದು+ಒಟ್ಟು] ಕತ್ತರಿಸಿ ರಾಶಿ ಹಾಕು (ವಿಶ್ವನರೇಂದ್ರವೃಂದದೊಳ್ ತೊಡರ್ದ ಪರಾಭವಂ ದ್ರುಪದನಂ ತಱದೊಟ್ಟದೆ ಕೆಮ್ಮಗಾನಿದಂ ಕಡೆಗಣಿಸಿದೊಡೆ: **ಪಂಪಭಾ,** ೩. ೬೬)

ತಱಸಲ್ – **[ಕ್ರಿ]** ನಿರ್ಧರಿಸು (ತಾನುಂ ತಱಸಂದು ಉಗ್ರತಪಮಂ ತಡವಿಲ್ಲದೆ ಕೊಂಡು: **ಆದಿಪು,** ೨. ೬೧); **[ಕ್ರಿ]** ಪಟ್ಟುಹಿಡಿ (ತಱಸಂದು ಲಾೞದೊಳ್ ತಳ್ತಿಱದೇಱಂ ಪೇೞ್ ಕೇಳ್ದು ಮಂಡಲಮಿನ್ನುಂ ತಿಱುನೀರಿಕ್ಕುವುದೆನಿಸಿದ ತಱಸಲವಿನ ಚಲದ ಬಲದ ಕಲಿ ನರಸಿಂಹಂ: **ಪಂಪಭಾ,** ೧. ೩೩)

ತಱಸಲವು – **[ನಾ]** ನಿರ್ಧಾರ, ನಿರ್ಣಯ (ಕೇಳ್ದಿರೆ ಪಾಂಡುಸುತರ ಮುನಿಸಿನ ತಱಸಲವಿನ ಚಲದ ಬಲದ ಕಲಿತನದಳವಂ: **ಪಂಪಭಾ,** ೧೦. ೨)

ತಱುಂಬಿ ನಿಲ್ – **[ಕ್ರಿ]** ಸ್ತಂಭನಗೊಳ್ಳು (ಚಕ್ರರತ್ನಂ ಅಯೋಧ್ಯಾಪುರಮಂ ಮುಗದೆ ತಱುಂಬಿ ನಿಂದುದಂ ಕಂಡುಂ: **ಆದಿಪು,** ೧೪. ೩ ವ)

ತಱುಂಬು – **[ಕ್ರಿ]** ಅಡ್ಡಗಟ್ಟಿ ನಿಲ್ಲು (ವನಷಂಡಂಗಳೊಳ್ ತಱುಂಬಿಯುಂ ಸರೋಜಷಂಡಂಗಳೊಳ್ ತುಂಬಿಯುಂ ಪರಿದು ತತ್ ಪ್ರವಾಹಂ ಜ್ಯೋತಿರ್ಲೋಕಮನೆಯ್ದಿ ವಂದಾಗಳ್: **ಆದಿಪು,** ೭. ೯೭ ವ); **[ಕ್ರಿ]** ನೂಕು, ಅಟ್ಟು (ವಿಕಚಾಂಬುಜ ಸೌರಭಮನೊಸೆದು ಸೇವಿಸುವಾ ಪೆಣ್ದುಂಬಿಗಳ ಸರಮನೆತ್ತಿ ತಱುಂಬುತ್ತುಂ ಬಂದುದಾ ಪ್ರಭಾತಸಮೀರಂ: **ಪಂಪಭಾ,** ೧೨. ೧೦೫)

ತೞ್ – **[ಕ್ರಿ]** ಸೇರು (ಪಸರಿಸಿ ನೀಟ್ಟಿ ತನ್ನ ಜಸದೊಳ್ ಪೆಱನೊರ್ವನ ಕೀರ್ತಿ ತಟ್ಟು ರಂಜಿಸೆ: **ಪಂಪಭಾ,** ೧೪. ೩೯)

ತೞತೞ – **[ಅ]** ಥಳಥಳ (ತೇರಂ ಕುದುರೆಯಂ ಎಸಗುವ ಸಾರಥಿಯ ಪೊಡರ್ಪಂ ಅಯ್ದುಬಾಣದೊಳುಪಸಂಹಾರಿಸಿ ತೞತೞ ತೊಳಗುವ ನಾರಾಚದಿಂ ಎಚ್ಚಂ ಊಱ ಭೀಮನ ನೊಸಲಂ: **ಪಂಪಭಾ,** ೧೨. ೬೯)

ತೞತೞನೆ – **[ಅ]** ಸರಸರನೆ (ತೞತೞನೆ ನೇಸಱ್ಮೂಡುವಾಗಳ್ ಎಯ್ದೆವಂದು ದುರ್ಯೋಧನನಂ ಕಂಡು ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಂ ಎಂದು: **ಪಂಪಭಾ,** ೧೩. ೧೦೬ ವ)

ತೞತೞಿಸು – **[ಕ್ರಿ]** ಹೊಳೆಯುತ್ತಿರು (ತಮ್ಮಯ ಬೆಳಗು ಅಗ್ಗಳಿಸಿ ತೞತೞಿಸಿ ವಿದ್ಯುತ್ ವಿಳಸಿತಮೆನಿಸಿದುವು ನರನ ದಿವ್ಯಾಸ್ತ್ರಂಗಳ್: **ಪಂಪಭಾ,** ೧೦. ೪೭)

ತೞತ್ತೞಿಸು – **[ಕ್ರಿ]** ತೞತೞಿಸು (ಬೆಳಗುವ ಸೊಡರ್ಗಳ ಬೆಳಗುಮಂ ಇಳಿಸಿ ತೞತ್ತೞಿಸಿ ಪೊಳೆಯೆ ತಮ್ಮಯ ಬೆಳಗು: **ಪಂಪಭಾ,** ೧೦. ೪೭)

ತೞಿಗೋಂಟೆ – **[ನಾ]** ತಳಿಗೋಂಟೆ, ಬೇಲಿ, ಮರದ ಕೋಟೆ (ಅರಿನೃಪಕೋಟಿಯಂ ಆಟರಲೆಂದು ಆಸ್ಫೋಟಿಸಿ

ನಿಶಿತಶರಕೋಟಿಯೊಳ್ ತಱಿಗೋಂಟೆಯನಿಕ್ಕಿ ವೀರರಸ ನಿಕೇತನನಾಗಿರ್ದ ಕಳಶಕೇತನನಂ ನೋಡಿ ದ್ರುಪದಂ ಸೈರಿಸದೆ: **ಪಂಪಭಾ,** ೧೨. ೧೮ ವ)

ತಱಿ – [ನಾ] ಛತ್ರಿ (ಕೊಡೆ ತಱಿ ತಳ್ತ ಸೀಗುರಿ ಕರೀಂದ್ರಘಟಾಳಿ ತುರಂಗಸೈನ್ಯಂ ಉರ್ಕುಡುಗದೆ ಬರ್ಪ ನಾಯಕಬಲಂ: **ಆದಿಪು,** ೪. ೯೨)

ತಱಿದುಱುಗಲ್ – [ನಾ] ಛತ್ರಿಗಳ ಸಮೂಹ (ಆ ರುದ್ರಾವತಾರನ ಕೆಲದೊಳ್ ಕಿಕ್ಕಿಱಿಗಿಱಿದ ತಱಿದುಱುಗಲ ನಡುವೆ ಪೊನ್ನ ರಥಮನೇಱಿ ನಿಂದಂ: **ಪಂಪಭಾ,** ೧೦. ೫೭ ವ)

ತಱಿಕೈಸು – [ಕ್ರಿ] ಆಲಂಗಿಸು, ಅಪ್ಪಿಕೋ (ಅಟ್ಟಿರ್ತು ನೋಟಂ ಬೆರಸು ಪರಸಿ ತಱಿಕೈಸಿಕೊಂಡು ಅಮ್ಮ ನೀಂ ಮಮ್ಮನೆಯಪ್ಪೈ ನೋಡು ನಣ್ಪಿಂ: **ಆದಿಪು,** ೨. ೨೦)

ತಱ್ಗು – [ಕ್ರಿ] ತಗ್ಗು, ಕ್ಷೀಣಿಸು (ತಱ್ಗಿದ ನೊಗಂ ಜೀಱಿಟ್ಟ ಚಕ್ರಂ ಸಿಡಿಲ್ ಪೊಡೆದಂತೆ ಒರ್ಮೆಯೆ ಸೂಸಿ ಪಾಱಿದ ಮಡಂ: **ಪಂಪಭಾ,** ೧೦. ೯೧)

ತಪ್ಪಿಲ್ – [ನಾ] [ಬೆಟ್ಟದ] ತಪ್ಪಲು (ಮೇರುಪರ್ವತದ ತೆಂಕಣ ತ'ಪ್ಪಿಲೊಳ್ ದ್ವಾದಶಯೋಜನ ಪ್ರಮಾಣಮಪ್ಪ ಜಂಬೂವೃಕ್ಷದ ಕೆಲದೊಳ್: **ಪಂಪಭಾ,** ೬. ३೦ ವ)

ತಱಿಪ್ಪೊಯ್ – [ಕ್ರಿ] ಮೆತ್ತಿಕೊ (ನೆತ್ತರ ಪೊನಲೊಳ್ ನಾಂದು ನನೆದ ಮೆಯ್ಯುಮಂ ತೊಯ್ದು ತಱಿಪ್ಪೊಯ್ದು ಜಡೆಯುಂ: **ಪಂಪಭಾ,** ೧. ೧೦೫ ವ)

ತಾಂ – [ಸ] ತಾವು (ಅಲರ್ಗಣ್ಗಳ್ ಚಪಳಂಗಳಾಗಿ ಜಘನಂ ಕಾಂಚೀಕಲಾಪಪ್ರಭೋಜ್ಜ್ವಲಂ ಉದ್ವೃತ್ತಮುಂ ಆಗಿ ತಾಂ ಅಲೆಗೆ: **ಪಂಪಭಾ,** ४. ೭४)

ತಾಂಗಾಗು – [ಕ್ರಿ] ದಿಕೆಯಾಗು (ಬೆಳಗುವ ಮಣಿಮುಕುರಂಗಳುಂ ಅವರ್ಕೆ ತಾಂಗಾಗಿ ಪಚ್ಚೆಯ ಪಸಲೆಯ ಪಸುರನಸಕಱಿದು ನಿಮಿರ್ದ ನೆಲೆವಡಲಿಗೆಯ ಜಾಗಂಗಳುಂ: **ಆದಿಪು,** ೮. ೧೫ ವ)

ತಾಂಗು – [ನಾ] ಆಶ್ರಯ, ನೆಲೆ (ಮಣಿವಿತಾನ ನಾನಾಮಯೂಖಂಗಳೊಳ್ ಸೆಣಸಿ ಬೆಳಗುವ ಮಣಿಮುಕುರಂಗಳುಂ ಅವರ್ಕೆ ತಾಂಗಾಗಿ ಪಚ್ಚೆಯ ಪಸಲೆಯ ಪಸುರನಸಕಱಿದು: ಆದಿಪು, ೮. ೧೫ ವ); **[ಕ್ರಿ]** ಕಾರ್ಯೋನ್ಮಗ್ನವಾಗು (ವಿವಿಧಾತೋದ್ಯಲಯ ಅನುಬಂಧಿ ವಿಳಸಲ್ಲಾಸ್ಯಂ ತಗುಳ್ದಲ್ಲಿ ನಾಟ್ಯವಿದರ್ ತಾಂಗೆಯುಂ: **ಆದಿಪು,** ೧೧. ೧೯); **[ಕ್ರಿ]** ಆಕ್ರಮಿಸು, ದಾಳೀ ಮಾಡು (ಎಂದು ತನ್ನ ನಿರ್ಭರಪ್ರಣಯನಿಗಳದೊಳೆ ತೊಡರ್ಚಿ ತಾಂಗಿದಳ್: **ಆದಿಪು,** ೧೨. ३५ ವ); **[ಕ್ರಿ]** ತಾಗು, ಮೇಲೆ ಬೀಳು (ಧವಳಹಯಂ ಧವಳರಥಂ ಧವಳ ಉಷ್ಣೀಷಂ ಶಶಾಂಕಸಂಕಾಶ ಯಶೋಧವಳಿತ ಭುವನಂ ತಾಗಿದಂ ಅವಯವದಿಂ ಬಂದು ಧರ್ಮತನಯನ ಬಲದೊಳ್: **ಪಂಪಭಾ,** ೧೧. ३೯); **[ನಾ]** ತಡೆ, ಮಾಡದೆ ಬಿಡು (ಕೊಲ್ಲದೆ ತಾಂಗಿದಂ ಅಂಬಿಕೆಗೆ ನುಡಿದ ನುಡಿ ನಿಲೆ ಮನದೊಳ್: **ಪಂಪಭಾ,** ೧೧. ೧४४)

ತಾಂಡವ – [ನಾ] ಕುಣಿತ, ನರ್ತನ (ಉತ್ಕಶಿಖಂಡಿ ತಾಂಡವ ಮನೋಹರಂ ಉಜ್ಜ್ವಳರತ್ನರಾಜತ್ಕಟಂ: ಸರಃಕನಕಪದ್ಮಪರಾಗ ಪಿಶಂಗಿತಾಂಗ: **ಆದಿಪು,** ೧. ೬३); ಶಿವನ ತಾಂಡವನೃತ್ಯ (ಪ್ರಚಂಡಲಯ ತಾಂಡವಕ್ಷುಭಿತಯಾ ಯಸ್ಯಾನಯಾ: **ಪಂಪಭಾ,** ४. ೨೭)

ತಾಂಬೂಲ – [ನಾ] ವೀಳೆಯದೆಲೆ ಅಡಕೆ ಮತ್ತು ಸುಣ್ಣಗಳ ಮಿಶ್ರಣ (ಶ್ರುತಿಸೌಖ್ಯಾವಹ ವಲ್ಲಕೀಕ್ವಣಿತದೊಳ್ ಕರ್ಪೂರಪಾಳೀ ವಿಮಿಶ್ರಿತ ತಾಂಬೂಳರಸೋತ್ಕಟ ಪ್ರಮದದೊಳ್: **ಆದಿಪು,** ೯. ೧೧೮)

ತಾಂಬೂಲಲತೆ – [ನಾ] ವೀಳೆಯದೆಲೆಯ ಬಳ್ಳಿ (ಬಾಲಸಹಕಾರತರು ನವಮಾಲಿಕೆಗೆ ಅತಿಲಲಿತ ಪೂಗಭೂಜಾತಂ ತಾಂಬೂಲಲತೆಗೆ ಎಂಬವೊಲ್ ಸ್ಮರಲೀಲಂ ನಿಜತನಯಂ ಎನ್ನ ತನುಜೆಗೆ ತಕ್ಕಂ: **ಆದಿಪು,** ४. ೨೮)

ತಾಂಬೂಲವಲ್ಲಿ – [ನಾ] ತಾಂಬೂಲಲತೆ (ಚಂದನ ಪನಸ ನಾಳಿಕೇರ ತಾಂಬೂಲವಲ್ಲೀ ಪ್ರಚುರಪ್ರದೇಶಂಗಳೊಳ್ ನಿಜವಿಜಯ ಕುಂಜರಂಗಳಂ ವಿಹಾರಿಸಿ ಬಂದು: **ಆದಿಪು,** ೧३. ३ ವ)

ತಾಗು – [ಕ್ರಿ] ಆವರಿಸು (ಪುಳಕಪ್ರೋದ್ಭೇದ ಘರ್ಮೋದಕವಿಸರಂ ಒತ್ತಂಬದಿಂ ತಾಗೆಯುಂ ನಿಶ್ಚಳಧೈರ್ಯವ್ಯಾಜತಿರ್ಯಗ್ವಳಂ ಅತರಳಿತಂ: **ಆದಿಪು,** ४. ५२); **[ಕ್ರಿ]** ಯುದ್ಧಮಾಡು (ಆಕಾಶದ ಕವಿಯುಂ ನೆಲದ ಕಲ್ಲೆಯುಂ ಮುನ್ನಮೆ ಮೇರೆದಪ್ಪುವುದುಮಂ ತನ್ನೊಳ್ ಅಳವಡಿಸಿಕೊಂಡು ತಾಗಿದಾಗಳ್: **ಪಂಪಭಾ,** ೧೨. ೧೯ ವ)

ತಾಟಿಸು – [ಕ್ರಿ] ಘಟ್ಟಿಸು, ಬಡಿ (ಭರದಿಂದಂ ದಂಡದೊಳ್ ತಾಟಿಸಿದೊಡೆ ವಿಜಯಾರ್ಧಾಚಳಂ ತೊಟ್ಟನಾಗಳ್ ಬಿರಿದತ್ತು ಎಂಬಂತುಂ: **ಆದಿಪು,** ೧३. ३೬)

ತಾಡನ – [ನಾ] ಹೊಡೆತ (ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾರವಝುಂಕಾರಿತ ಚಾರು ವಾಮಚರಣಾಘಾತಂ; **ಆದಿಪು,** ೧೨. ४೭)

ತಾಡನರವ – [ನಾ] ಹೊಡೆತದ ಸದ್ದು (ವಿಭ್ರಮಮಂ ಕಂಠರವಕ್ಕೆ ತಾಡನರವಂ ತಂದೀಯೆ ತತ್ಸೌಧದೊಳ್ ಸಮಸತ್ವಂಬಡೆವಂತಿರೆ ಆಯ್ತು ಸುರತಪ್ರಾರಂಭಕೋಳಾಹಳಂ: **ಪಂಪಭಾ,** ४. ೧೦೯)

ತಾಡಿಸು – [ಕ್ರಿ] ಹೊಡೆ (ಶಂಖಂಗಳಂ ಪೂರಿಸಿಯುಂ ಭೇರಿಯಂ ತಾಡಿಸಿಯುಂ ಏಗೆಯ್ದುಂ ಪೋಱಮಡದಿರೆ: **ಪಂಪಭಾ,** ೧३. ೭೬ ವ)

ತಾಣ – [ನಾ] [ಸ್ಥಾನ] ಎಡೆ (ಮೂಡಿಗೆ ಕುಕ್ಕಂಬಂ ಸುಱಿಸಿ ಜೊಂಪಂ ಬೀಡುಬಿಡುವ ಇಂಬು ಕದಳಿ ತೆಂಗಿನ ತಾಣಂ ಜಾಣಿಂ ನೀರ್ದಾಣಮೆಂದು ಎಡೆಯಱಿದುಂ: **ಪಂಪಭಾ,** ५. ४೧)

ತಾನಟ್ಟೆಯಿಂ – [ತನ್ನಟ್ಟೆಯಿಂ] ತನ್ನ ಇಷ್ಟದಿಂದ (ಈ ಕನ್ನೆಯಂ ಮಾಡುವಲ್ಲಿಗೆ ಚಂದ್ರಂ ಮಳಯಾನಿಳಂ ಮಳಯಜಂ ನೀರೇಜಂ ಇಮ್ಮಾವು ಮಲ್ಲಿಗೆ ಎಂದಿಂತಿವಂ ಅಟ್ಟಿಱಿಂದ ಅಮರ್ದಿನೊಳ್ ತಾನಟ್ಟೆಯಿಂ ತೊಯ್ದು ಮೆಲ್ಲಗೆ ಸಂದಂಗಜನೆಂಬಜಂ ಪಡೆದಂ: **ಪಂಪಭಾ,** ४. ೭೫)

ತಾಪ – [$\sqrt{}$ತಾಂಗು ಎಂಬುದರ ಭವಿಷ್ಯತ್ ಕೃದಂತ] ಎದುರಿಸುವ, ತಾಗುವ (ಅತಿಚಿತ್ರಂ ಚಿತ್ರನ ವಿಶ್ರುತಶೌರ್ಯಮಿದೆನಿಸಿ ತಾಪ ಚಿತ್ರನಂ ಅಂತಾ ಪ್ರತಿವಿಂಧ್ಯಂ ವಿಂಧ್ಯಾಚಲದವೊಲ್ ಅವಿಚಳಿತನಾತಂ ಬಂದಾಂತಂ: **ಪಂಪಭಾ,** ೧೨. ೬೨)

ತಾಪನ್ನೆಗಂ – [√ತಾಂಗು] ತಾಗುವ ಹಾಗೆ (ಮದವದ್ದಂತಿಗಳಂ ಕಱುತ್ತು ಅಸಗವೊಯ್ವೊಯ್ದು ಆಜಿಯೊಳ್ ಭೀಮಂ ಆರ್ದು ಒದೆದು ಈಡಾಡಿದೊಡೆ ಅತ್ತ ಅಜಾಂಡತಟಮಂ ತಾಪನ್ನೆಗಂ: **ಪಂಪಭಾ,** ೧೧. ೬೭)

ತಾಪಸ – [ನಾ] ತಪಸ್ವಿ (ತಾಪಸನ ಶಾಸನಮೆಂಬುದುಪಾಪದ ರೂಪಱಿತುಂ ಅಱಿಯದಂತೆ: **ಪಂಪಭಾ,** ೨. ೨೦)

ತಾಪಸಕನ್ಯೆ – [ನಾ] ಋಷಿಕುಮಾರಿ (ಆ ಪರ್ವತದ ವಿಪುಳವನ ಉಪಕಂಠತಂಗಳೊಳ್ ತಾಪಸಕನ್ಯೆಯರ್ ನಡಪಿದೆಳಲತೆಗಳೊಳೆಱಗಿ ತುಱುಗಿ ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ: **ಪಂಪಭಾ,** ೧. ೧೧೫ ವ)

ತಾಪಸವ್ಯಾಜ – [ನಾ] ತಪಸ್ವಿಯ ವೇಷ (ಯುಧಿಷ್ಠಿರನಟ್ಟಿದ್ದ ಕಿರಾತದೂತಂ ತಾಪಸವ್ಯಾಜನಾಗಿ ಪೋಗಿ ಸುಯೋಧನನ ವಾರ್ತೆಯೆಲ್ಲಮನಱಿದು: **ಪಂಪಭಾ,** ೭. ೩೯ ವ)

ತಾಪಸಾಶ್ರಮ – [ನಾ] [ತಾಪಸ+ಆಶ್ರಮ] ತಪೋವನ (ಅಂತು ಕೊಂತಿಯ ಗರ್ಭಭಾರಮುಂ ತಾಪಸಾಶ್ರಮದ ಅನುರಾಗಮುಂ ಒಡನೊಡನೆ ಬಳೆಯೆ: **ಪಂಪಭಾ,** ೧. ೧೨೦ ವ)

ತಾಪು – [ಕ್ರಿ] ತಾಗು, ತಲುಪು (ಧರ್ಮಕೃತಿದ್ರೋಹನುಂ ಖಳನುಂ ಕಳ್ಕುಣಿಯುಂ ಘಳುಮ್ಮನಿಟೆಗುಂ ಶ್ವಭ್ರಾಂತಮಂ ತಾಪಿನಂ: **ಆದಿಪು,** ೫. ೮೧); [ಕ್ರಿ] ಎರಗು (ಕಲಿ ಮಾರ್ಕೊಳ್ಳದೆ ಕೊಟ್ಟು ಮೆಯ್ಯೊಳೆ ಸಿಡಿಲ್ ತಾಪಂತೆವೋಲ್ ತಾಗೆ: **ಪಂಪಭಾ,** ೬. ೨೭); [ಕ್ರಿ] ಭೇದಿಸು, ಸೀಳು (ಭೀಮಂ ಆರ್ದು ಒದೆದು ಈಡಾಡಿದೊಡೆ ಅತ್ತ ಅಜಾಂಡತಟಮಂ ತಾಪನ್ನೆಗಂ ಪಾಱಿ ತಾಱಿದ ಪೇರಾನೆಯ ಒಡಲ್ಗಳ್: **ಪಂಪಭಾ,** ೧೧. ೬೭)

ತಾಮರಸ – [ನಾ] ತಾವರೆ (ಗೊಟ್ಟಿಗಾಣರಂತಿರೆ ಮಱಿದುಂಬಿ ಮೇಳದವರಂತಿರೆ ಸಾರಿಕೆ ರಾಜಗೇಹದಂತಿರೆ ಕೊಳಂ ಅಲ್ಲಿ ತಾಂ ಅರಸರಂತಿರೆ ತಾಮರಸಂಗಳೊಪ್ಪುಗುಂ: **ಪಂಪಭಾ,** ೫. ೫೮)

ತಾಮರಸನಿಭಾಸ್ಯೆ – [ನಾ] ತಾವರೆಯಂತಹ ಮುಖವುಳ್ಳವಳು (ಆ ತಾಮರನಿಭಾಸ್ಯೆಗೆ ಸುರಕಾಮಿನಿ ಕಟ್ಟಿದಿರಿರೊಳೆಸೆಯೆ ಕನ್ನಡಿವಿಡಿದಳ್: **ಆದಿಪು,** ೭. ೯)

ತಾಮರಸಾಮೋದ – [ನಾ] ತಾವರೆಯ ಮಕರಂದ (ಶ್ರೀಮದಮರಾಂಗನಾನನ ತಾಮರಸಾಮೋದಮತ್ತ ಮಧುಕರಂ ಕಲ್ಪಾಮರನೊಸೆದಂ: **ಆದಿಪು,** ೩. ೧)

ತಾಮರೆ – [ನಾ] ತಾವರೆ (ತಾಮರೆಗಂ ಚಂದ್ರಂಗಂ ತಾಮಸಮಂ ಕಳೆದು ಕಾಣ್ಕೆ ಮಾಳ್ಪಂತೆವೋಲ್: **ಆದಿಪು,** ೭. ೯)

ತಾಮಸ – [ನಾ] ದ್ವೇಷ (ತಾಮರೆಗಂ ಚಂದ್ರಂಗಂ ತಾಮಸಮಂ ಕಳೆದು ಕಾಣ್ಕೆ ಮಾಳ್ಪಂತೆವೋಲ್: **ಆದಿಪು,** ೭. ೯)

ತಾಮುಂ ತಾಮುಂ – ತಾವು ತಾವೇ (ಕೆಯ್ಗಟಿದ ಮನೆವಾಟಿಗ್ತಿ ಬುದ್ಧವೇಟಿಡೆಯಿಲ್ಲ ತಾಮುಂ ತಾಮುಂ ಅಱಿವರ್ ಬನ್ನಿಂ: **ಪಂಪಭಾ,** ೭. ೧೬ ವ)

ತಾಮೆ – ತಾವೇ, ಇವೆಲ್ಲ (ಮೆಯ್ವಿಡಿದೆನ್ನ ಕಣ್ಗಳೊಳ್ ಸುಟಿದುವು ತಾಮೆ ಕನ್ನಡಿಸಿದಪ್ಪುದವು ಕನ್ನೆಯ ಕನ್ನೆವೇಟಮಂ: **ಪಂಪಭಾ,** ೪. ೬೧)

ತಾರ – [ನಾ] ಬೆಳ್ಳಿ (ತಾರಮಯ ಚತುರ್ಗೋಪುರವಿಭ್ರಾಜಿತ ಹಿರಣ್ಮಯವೇದಿಕಾವಳಯಿತಮುಂ: **ಆದಿಪು,** ೧೦. ೨೬ ವ); [ನಾ] ಎತ್ತರದ ಧ್ವನಿ (ಕಿನ್ನರೀಕರಕಿಸಲಯಚಳನಸಮುತ್ಪನ್ನ ಕಾಕಳೀಕಳರವಮಿಳಿತ ಮಧುಕರತಂತ್ರೀಸಮಂಚಿತವಿಪಂಚೀ ಮಂದ್ರ ತಾರ ಮಧುರ ಮೂರ್ಛನಾಸನಾಥ ಪ್ರಯೋಗಂಗಳುಮಂ: **ಆದಿಪು,** ೧೧. ೭೪ ವ); [ನಾ] ಮುತ್ತಿನ ಹಾರ (ಸುಲಿಪಲ್ ಮಿಂಚಿನ ಗೊಂಚಲುಟ್ಟ ದುಗುಲಂ ಗಂಗಾನದೀಫೇನಂ ಉಜ್ಜ್ವಲಮುಕ್ತಾಭರಣಂ ತರತ್ತರಳ ತಾರೋದಾರ ಭಾ ಭಾರಂ: **ಪಂಪಭಾ,** ೧. ೧೩೭)

ತಾರಕ – [ನಾ] ಕಣ್ಣ ಗುಡ್ಡೆ (ಲಲಿತಮುಖಸರಸಿಜಂ ನಿಶ್ಚಳಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕಣ್ಗೊಳೆ ತವೆ ಪೀರ್ವವೊಲೇ ನಿಶ್ಚಳತನು ನಡೆ ನೋಡೆ ಭರತರಾಜಂ ಸೋಲ್ತಂ: **ಆದಿಪು,** ೧೪. ೧೦೫); [ನಾ] ನಕ್ಷತ್ರ (ಕರದಸಿಗಳ್ ಪಳಂಚೆ ಕಿಡಿವಿಟ್ಟೊಗೆಸಳ್ಗಿಡಿ ತಾರಕಾಳಿಯಂತಿರೆ ರಜಮೊಡ್ಡಿ ನಿಂದ ಮುಗಿಲಂತಿರೆ: **ಪಂಪಭಾ,** ೧೨, ೧೧೧)

ತಾರಕಾಕಾರ – [ನಾ] ನಕ್ಷತ್ರದ ಆಕಾರವನ್ನುಳ್ಳ (ಅನವರತಸ್ಫುರಿತ ತಾರಕಾಕಾರಮುಕ್ತಾಭರಣಕಿರಣನಿಕರ ವಿಳಸಿತ ವಿಶಾಲ ಉರಸ್ಥಳನುಂ: **ಪಂಪಭಾ,** ೯. ೨೮ ವ)

ತಾರಕಿತ – [ಗು] ನಕ್ಷತ್ರಗಳಿಂದ ಕೂಡಿದಂಥದು (ಅದು ನೀಲಮಯ ಮಹೀತಳಂ ಅದು ನವಪುಷ್ಪೋಪಹಾರ ತಾರಕಿತಂ: **ಆದಿಪು,** ೬. ೩೬)

ತಾರಗೆ – [ನಾ] ನಕ್ಷತ್ರ (ಕೈದೀವಿಗೆಗಳ ಬೆಳಗುಂ ತರತರದಿನೊಗೆವ ತಾರಗೆಗಳ ಗೊಂದಳಮುಂ ಇಳಾತಳದ ವಿಯತ್ತಳದ ವಿಳಾಸಮನದೇನೊಡಂಬಡಿಸಿದುದೋ: **ಆದಿಪು,** ೧೨. ೩)

ತಾರಹಾರ – [ನಾ] ಮುತ್ತಿನ ಹಾರ (ಅವು ಅತಿತರಳತರತ್ ತಾರಾಹಾರಂ ಜಿನನೀಹಾರಂ ತ್ರೈಲೋಕ್ಯಸಾರಂ ಇಂತಿದು ಹಾರಂ: **ಆದಿಪು,** ೧೨. ೧೧೮)

ತಾರಹಾರಮುಕ್ತಾಫಳ – [ನಾ] ಮುತ್ತಿನ ಹಾರದ ಮುತ್ತು (ಸುರೇಂದ್ರ ತಾರಾಹಾರಮುಕ್ತಾಫಳ ಪ್ರತಿಬಿಂಬಿತ ತನುಗಳಿಂ ವಿದ್ಯಾದೇವತೆಗಳೆನಿಸಿ: **ಆದಿಪು,** ೭. ೧೨೬ ವ)

ತಾರಾಗಣ – [ನಾ] ನಕ್ಷತ್ರಸಮೂಹ (ತಾರಾಗಣಂಗಳ್ ನಿಂದ ನೆಲೆಯಿಂ ದೆಸೆಯಂ ಪೊಟ್ಟುಮನಱಿದು: **ಪಂಪಭಾ,** ೩. ೮ ವ)

ತಾರಾಗಣಂಗಳ್ ನಿಂದ ನೆಲೆ – ನಕ್ಷತ್ರಸಮೂಹದ ಸ್ಥಾನದಿಂದ (ತಾರಾಗಣಂಗಳ್ ನಿಂದ ನೆಲೆಯಿಂ ದೆಸೆಯಂ ಪೊಟ್ಟುಮನಱಿದು ತೆಂಕಮೊಗದೆ ಪಯಣಂಬೋಗಿ: **ಪಂಪಭಾ,** ೩. ೮ ವ)

ತಾರಾಪತಿ – [ನಾ] ತಾರಾಧೀಶ (ತಾರಾನಿಕರಾವೇಷ್ಟಿತ ತಾರಾಪತಿಯಾ ಸಮಸ್ತಸುರಲೋಕಮುಮಂ ನೇರಿತ್ತು ಬೆಳಗಿ ಪೋಪುದಂ ಆ ರಾತ್ರಿಯೊಳ್ ಅನಂತವೀರ್ಯಂ ಕಂಡಂ: **ಆದಿಪು,** ೧೬. ೪೬)

ತಾಲು – [ನಾ] ಅಂಗುಳು (ಅಂದು ಅಪಗತ ತಾಲು ಓಷ್ಠಸ್ಪಂದನಂ ಅಸ್ಪೃಶ್ಯಕರಣವರ್ಣಂ ಜಗದಾನಂದಕರಂ ಜಳಧರರವ ಸೌಂದರಂ: **ಆದಿಪು,** ೧೦. ೬೩)

ತಾವಡಿಗೊಳ್ – [ಕ್ರಿ] ಧಾವಂತಗೊಳ್ಳು (ಆವಡವಿಗಳೊಳ್ ಪಣ್ಪಲಂ ಆವಗಂ ಒಳವು ಅಲ್ಲಿಗಱಿಸಿ ಪರಿಪರಿದು ಕರಂ

ತಾವಡಿಗೊಳ್ವ ಈ ಭೀಮನ ಬೇವಸಮಿದು ನಿನ್ನ ಮನಮಂ ಒನಲಿಸಿತಿಲ್ಲಾ: **ಪಂಪಭಾ,** ೭. ೪೬)

ತಾವತ್ – ಅಷ್ಟೇ, ಅದೇ ಪ್ರಮಾಣದ (ಅದು ಯೋಜನಶತ ಮೂಲವಿಸ್ತೃತಮುಂ ತಾವತ್ ಪ್ರಮಾಣೋತ್ಸೇಧಮುಂ: **ಆದಿಪು,** ೧೩. ೬೯ ವ)

ತಾಳ – [ನಾ] ತಾಳೆಯ ಮರ (ಸರಳ ತಮಾಳ ತಾಳ ಹರಿಚಂದನ ನಂದನ ಭೂಜರಾಜಿಯಿಂ ಸುರಿವ ಅಲರೋಳಿ ತದ್ವನಲತಾಂಗಿಯ ಸೂಸುವ ಸೇಸೆಯಾಯ್ತು: **ಪಂಪಭಾ,** ೫. ೫೨)

ತಾಳಧ್ವಜ – [ನಾ] ತಾಳೆಯ ಮರದ ಚಿಹ್ನೆಯನ್ನು ತನ್ನ ಬಾವುಟದಲ್ಲಿ ಹೊಂದಿದವನು, ಭೀಷ್ಮ (ಸೋಲ್ತು ತನ್ನ ಬಲಮಂ ಅಳುಂಬಮಾದ ವಿಕ್ರಮಾರ್ಜುನನ ಭುಜಬಲಮುಮಂ ಕಂಡು ಕನಕ ತಾಳಧ್ವಜಂಗೆ ಪನ್ನಗಧ್ವಜನಿಂತೆಂದಂ: **ಪಂಪಭಾ,** ೧೧. ೧೩ ವ)

ತಾಳಪತ್ರ – [ನಾ] ತಾಳೆಯ ಮರ (ತಾಳಪತ್ರ ಶೃಂಗಾಟಕನಿಚಿತಂಗಳುಂ ಶ್ವದಂಷ್ಟ್ರಾರ್ಗಳೋಪರಿಮ ಸಂಛನ್ನಂಗಳುಂ: **ಆದಿಪು,** ೧೩. ೫೭ ವ)

ತಾಳಿಕ – [ನಾ] ತಾಳೆಯ ಮರ (ಪ್ರೇಂಖೋಳಿತ ಮನಸಿಜ ವಿಜಯಪ್ರಶಸ್ತಿಲೇಖನೋಚಿತಚ್ಛೆಧ ಶ್ರೀ ತಾಳಿಕಮುಮಪ್ಪ ವೇಳಾವನದೊಳ್: **ಆದಿಪು,** ೧೩. ೩ ವ)

ತಾಳಿಸು – [ಕ್ರಿ] ಎಣ್ಣೆಯೊಡನೆ ಹುರಿ (ಕಾಯ್ದ ಕಾವಲಿಗಳೊಳ್ ಮೊರ್ಮುರನಾಗೆ ತಾಳಿಸುವವರುಂ: **ಆದಿಪು,** ೫. ೮೫ ವ)

ತಾಳೀ – ತಾಳೆಯ ಮರ (ಫಳಕರ್ಪೂರ ಲವಂಗ ಲುಂಗ ಲವಳೀ ಹಿಂತಾಳ ತಾಳೀ ತಮಾಳ ಲತಾಸುಂದರನಂದನಕ್ಕಳುರೆ ಮುಂ ತನ್ನರ್ಚಿಗಳ್: **ಪಂಪಭಾ,** ೫. ೮೬)

ತಾಳುಗೆ – [ನಾ] ಗಂಟಲು (ಪುಗೆ ಪಲವುಂ ತೊಱೆಗಳ ನೀರು ಅಗಾಧಜಳರಾಶಿ ಕುಡಿದು ತಣಿಯದೆ ಪಾತಾಳಗಣಂಗಳಿವೆತ್ತಂ ತಾಳುಗೆವರಂ ತೆಱೆದ ಬಾಯನನುಕರಿಸಿರ್ಕುಂ: **ಆದಿಪು,** ೧೨. ೭೯)

ತಾಳುತಳ – [ನಾ] ಅಂಗುಳ ತಳಭಾಗ (ಅತ್ಯಂತ ಕೋಮಳ ತಾಳುತಳ ಸಂಘಟ್ಟಮಾತ್ರಕ್ಷೋಧನೀಯ ಮೋದಕಮುಂ: **ಆದಿಪು,** ೧೧. ೨೬ ವ)

ತಾಳ್ದಿರವಾಗು – ತಾಳಿಕೊಂಡಿರದಂಥವಾಗು (ಮೃಗಪದ ಪತ್ರಲೇಖೆಗಳಂ ಏಕೆಗೆ ತಾಳ್ದಿರದಾದುವು ಈ ಕದಂಪುಗಳ್ ಉರಮೇಕೆ ಹಾರಮಣಿಮಂಜರಿಯಿಲ್ಲದೆ ಬಿನ್ನಗಿರ್ದುದು: **ಪಂಪಭಾ,** ೪. ೬೨)

ತಾಳ್ದು – [ಕ್ರಿ] [√ತಾಳ್] [ನೀನು] ಧರಿಸು ಎಂಬ ವಿಧ್ಯರ್ಥರೂಪ (ನಿನಗೀ ಖಳಸಂಸ್ಕೃತಿಯೆಂಬುದೊಂದು ಱಾಟಣದೊಳಗಮ್ಮ ನೀಂ ಮೊಗಪೆಯಾಗದೆ ತಾಳ್ದಪವರ್ಗಮಾರ್ಗಮಂ: **ಆದಿಪು,** ೩. ೭೧); **[ಕ್ರಿ]** ಧರಿಸು (ತದಾಜ್ಞೆಯಂ ನಿಜ ಕಿರೀಟದೊಳ್ ತಾಳ್ದಿದಂದದಿಂ ಸೊಗಯಿಸಿದರ್: **ಆದಿಪು,** ೧೩. ೭೯; **[ಕ್ರಿ]** ಹೊರು (ವರಂಬಡೆದ ಸಂತಸಂ ಮನದೊಳಾಗಲ್ ಒಂದು ಉತ್ತರೋತ್ತರಂ ಬಳೆವ ಮಾಟಿಕ್ಕೆಯಿಂ ಬಳೆದ ಗರ್ಭಮಂ ತಾಳ್ದಿ: **ಪಂಪಭಾ,** ೧. ೮೬)

ತಾಱಲ್ – [ನಾ] ಒಣಕಲು (ಎಮಗೆ ನಿತ್ತರಿಸಲ್ ನೆಱವಿಲ್ಲ ತಾಱಲ್ ಆದುವು ತನು ಕೂಟಿ ನೀರ ದೆಸೆಯಿಲ್ಲದೊಡೆ ಒಡಲ್ಗಳನೆಂತು ತಾಳ್ದುವೆಂ: **ಆದಿಪು,** ೯. ೮೯)

ತಾಱು – [ಕ್ರಿ] ಒಣಗು (ಭೀಮಂ ಆರ್ದು ಒದೆದು ಈಡಾಡಿದೊಡೆ ಅತ್ತ ಅಜಾಂಡತಟಮಂ ತಾಪನ್ನೆಗಂ ಪಾಱೆ ತಾಱಿದ ಪೇರಾನೆಯ ಒಡಲ್ಗಳ್: **ಪಂಪಭಾ,** ೧೧. ೬೭)

ತಾಟ್ – [ನಾ] ತಾಳೆಯ ಮರ (ನೀಳ್ದ ತಾಟ್ ಮರದವೊಲಪ್ಪ ಒಡಲ್ ಕಹಕಹಧ್ವನಿ ಕೌಳಿಕನಾದಂ ಆದುದು ಆಸುರತರಮಾಗೆ ಬಂದು ಕವಿದತ್ತು ಘಟೋತ್ಕಚ ರೌದ್ರಸಾಧನಂ: **ಪಂಪಭಾ,** ೧೨. ೭)

ತಾಟಪಣ್ – [ನಾ] ತಾಳೆಯ ಹಣ್ಣು (ಸಂದ ಚೆನ್ನಪೊಂಗರ ತಲೆ ತಾಟಪಣ್ ಕೆದಱಿದಂತೆ ನಿರಂತರಂ ಆಜಿರಂಗದೊಳ್ ಪರೆದಿರೆ: **ಪಂಪಭಾ,** ೮. ೧೦೬)

ತಿಂತಿಣಿ – [ನಾ] ಸಮೂಹ, ಗುಂಪು (ಸಿಡಿಲ್ದ ಬಾಳ ಮೊನೆಯಂಬಿನ ತಿಂತಿಣಿಯೊಳ್ ತಗುಳ್ದು ಕಿಕ್ಕಿಱಿಗಿಱಿದಿರ್ದ ಕೊಳ್ಗುಳದೊಳಂ ನಡೆವೀ ನಡೆಗೆಂತು ನೋಂತೆಯೋ: **ಪಂಪಭಾ,** ೧೩. ೫೨)

ತಿಂತಿಣಿಯಾಗು – [ಕ್ರಿ] ತುಂಬಿಹೋಗು, ಭರ್ತಿಯಾಗು (ಉತ್ತುಂಗ ಕಿರೀಟರಶ್ಮಿರಚಿತ ಅನೇಕ ಇಂದ್ರಚಾಪಂಗಳಿಂ ಗಗನಂ ತಿಂತಿಣಿಯಾದುದಾಗಳ್: **ಆದಿಪು,** ೧೦. ೨೧)

ತಿಂಬು – [ಕ್ರಿ] ಕಚ್ಚು (ಬಿಸಿಲ್ ಐಕಿಲ್ ಪಸಿವು ಉಗ್ರದಂಶಮಶಕ ವ್ಯಾಬಾಧೆ ನೀರಟಿಕ್ಕೆ ಪೊಯ್ವ ಸಿಡಿಲ್ ತಿಂಬರವಾವು ಪಾಯ್ವ ಪುಲಿ: **ಆದಿಪು,** ೬. ೩೪); **[ಕ್ರಿ]** ತುಂಬು (ಕೆಂಬಣ್ಣದ ಕುದುರೆಗಳೊಳ್ ಒಡಂಬಡೆ ನಿಜರಜತರಥಂ ಅಗುರ್ವು ಉರ್ವರೆಯಂ ತಿಂಬೆ: **ಪಂಪಭಾ,** ೧೦. ೫೪)

ತಿಗ್ಮಕರ – [ನಾ] ಪ್ರಖರ ಕಿರಣಗಳುಳ್ಳವನು, ಸೂರ್ಯ (ಭವ್ಯಪದ್ಮಾಕರಬೋಧಾದಾಯಿಯಂ ತಿಗ್ಮಕರನುದಯದೊಳ್ ಪುತ್ರನಂ ಪೆತ್ತಳಾಗಳ್: **ಆದಿಪು,** ೭. ೩೬)

ತಿಗ್ಮರೋಚಿ – [ನಾ] ಸೂರ್ಯ (ನಿಜತನೂಜನ ವಚನತಿಗ್ಮರೋಚಿ ರುಚಿನಿಚಯದಿಂ ಆತ್ಮೀಯ ಚೇತೋನಿಚಿತಮೋಹಾಂಧ ತಮಸ್ತೋಮಮಂ ಕಳೆದು: **ಆದಿಪು,** ೨. ೧೭ ವ)

ತಿಗ್ಮಾಂಶು – [ನಾ] ಸೂರ್ಯ (ಪರಿಪೂರ್ಣೇಂದುವಿಂ ಅನ್ವಯಾಭ್ರತಿಳಕಂ ತಿಗ್ಮಾಂಶುವಿಂ ತೀವ್ರಭಾಸುರತೇಜಂ ಸುರಶೈಲದಿಂ ಸಕಳಭೂಭೃನ್ಮುಖ್ಯಂ: **ಆದಿಪು,** ೮. ೨೭)

ತಿಟ್ಟಮಿಡು – [ಕ್ರಿ] ಚಿತ್ರ ಬರೆಯಲಾರಂಭಿಸು (ಬರೆಯಲೆಂದು ಬಟ್ಟಿಗೆವಲೆಗೆಯಂ ತರಿಸಿ ತಿಟ್ಟಮಿಟ್ಟು ಬರೆವನ್ನೆಗಂ: **ಆದಿಪು,** ೪. ೬೩ ವ)

ತಿಣಿಕು – [ನಾ] ಕಷ್ಟ, ಪೇಚು (ಉತ್ತರಭರತದೊಳಾದ ಆಪತ್ತಂ ನೀನಱಿಯೆಯಕ್ಕುಂ ಅನಿತುಂ ಬಲಮಂ ಮುತ್ತಿ ಚಿಲಾತಾವರ್ತರ್ ಸುತ್ತಲುಂ ಏಸಾಡಿ ಪಿರಿದು ತಿಣಿಕಂ ತಂದರ್: **ಆದಿಪು,** ೧೪. ೭೦)

ತಿಣುಕು – [ನಾ] ಹೆಣಗಾಟ (ಜೂದಾಡಿ ಸೋಲ್ತು ನನ್ನಿಗೆ ಮೇದಿನಿಯಂ ಕೊಟ್ಟು ಪಾಂಡುನಂದನರ್ ಈಗಳ್ ಪೋದೊಡಮೇಂ ತಿಣುಕಾಗದೆ ಪೋದಪುದೇ ನಮ್ಮ ನೃಪತಿಗವು ತವುದಲೆಯೊಳ್: **ಪಂಪಭಾ,** ೭. ೧೮); **[ಕ್ರಿ]**

ಮುಲುಕು (ಧಾತ್ರಿಯ ಬಿಣ್ಪೆನಗೆಂದಿನಂದವಲ್ತು ಅಣಕಮಿದೆಂದು ಕಣ್ ತುಮುಬಿ ಪೆರ್ಬೆಡೆಯಿಂ ಮಣಿ ಸೂಸೆ ಬೇಸಱಿಂ ತಿಣುಕಿದಂ ಆನಲ್ ಉಮ್ಮಳಿಸಿ ಶೇಷನಶೇಷಮಹೀವಿಭಾಗಮಂ: **ಪಂಪಭಾ,** ೯. ೯೯)

ತಿಣ್ಣಂ – [ಅ] ಅಧಿಕ, ತೀಕ್ಷ್ಣ (ನಿನಗೆ ಜಯವರ್ಮನಾದಂದಿನ ಭವದಿಂದಿತ್ತ ಭೋಗಕಾಂಕ್ಷೆಯೆ ತಿಣ್ಣಂ: **ಆದಿಪು,** ೫. ೫೧); ತೀಕ್ಷ್ಣವಾಗಿ, ನಿಬಿಡವಾಗಿ (ನಿಜವಿಜಯಸಿಂಧುರಮಂ ತಿಣ್ಣಂ ನೂಂಕಲವುಂಕಲುಂ ಬೆಸಸಿ: **ಆದಿಪು,** ೧೪. ೯೮ ವ)

ತಿಣ್ಣಮಿಡು – [ಕ್ರಿ] ಬಲವಾಗಿ ಹೊಡೆ (ಅವನ ವರೂಥಮನೆ ತಿಣ್ಣಮಿಟ್ಟೊಡೆ ಗದೆಗೊಂಡವನೆಯ್ತರೆ ರಥದಿಂದಿೞಿದು ಅವನಿಯೊಳ್ ಅವನುಮನುರುಳ್ಚಿದಂ ಪವನಸುತಂ: **ಪಂಪಭಾ,** ೧೨. ೧೪೯)

ತಿಣ್ಣಮಿರಿಸು – [ಕ್ರಿ] ಅಧಿಕ ಸಂಖ್ಯೆಯಲ್ಲಿರಿಸು (ಕುದುರೆಯುಂ ಕಾಲಾಳುಂ ನಾಯ್ಗಳುಮಂ ತಿಣ್ಣಮಿರಿಸಿ: **ಪಂಪಭಾ,** ೫. ೪೭ ವ)

ತಿಣ್ಣಮಿಸು – [ಕ್ರಿ] ತಿಣ್ಣಂ+ಇಸು] ಬಲವಾಗಿ ಬಾಣಪ್ರಯೋಗಿಸು (ಎಂತು ಇದಿರಾಂತೆ ಅಂತೆ ಕಲಿಯಾಗು ಒಳಸೋರದಿರ್ ಎಂದು ಭೀಮಂ ಓರಂತೆ ಕನಲ್ದು ತಿಣ್ಣಮಿಸೆ: **ಪಂಪಭಾ,** ೧೦. ೯೮)

ತಿಣ್ಪು – [ನಾ] ಭಾರ (ಹಿಮಕರಂ ಆತ್ಮ ಶೀತರುಚಿಯಂ ದಿನನಾಯಕಂ ಉಷ್ಣದೀಧಿತಿಕ್ರಮಮಂ ಅಗಾಧವಾರಿಧಿಯೆ ಗುಣ್ಪಂ ಇಳಾವಧು ತನ್ನ ತಿಣ್ಪಂ ಬಿಸುಟಿರ್ಪ್ಪುದಂ: **ಪಂಪಭಾ,** ೧. ೮೩)

ತಿಥಿ – [ನಾ] ಚಾಂದ್ರಮಾನದ ಒಂದು ದಿವಸ (ಶುಭತಿಥಿ ಶುಭನಕ್ಷತ್ರಂ ಶುಭವಾರಂ ಶುಭಮುಹೂರ್ತಮೆನೆ ಗಣಕಂ ಇಳಾಪ್ರಭುವೊಗೆದಂ ಉದಿತಕಾಯಪ್ರಭೆಯೊಗೆದಿರೆ ದಳಿತಶತ್ರುಗೋತ್ರಂ ಪುತ್ರಂ: **ಪಂಪಭಾ,** ೧. ೧೨೭)

ತಿದಿ – [ನಾ] ಬೆಂಕಿಗೆ ಗಾಳಿಯೂದುವ ಕಮ್ಮಾರನ ಸಾಧನ, ಚರ್ಮದ ಚೀಲ (ಉಸಿರೊತ್ತಿಂ ತಿದಿಯಂತಿರೊತ್ತಿರೆ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್ .. .. ಪುಡಿಯೊಳ್ ಪೊರಳ್ವ ಪಗೆಯಂ ಕಣ್ಣಾರ್ವಿನಂ ನೋಡಿದಳ್: **ಪಂಪಭಾ,** ೧೨. ೧೫೧)

ತಿದಿಯುಗಿ – [ಕ್ರಿ] ಚರ್ಮವನ್ನು ಸುಲಿ (ಸಹಜಕವಚ ರತ್ನಕುಂಡಲಂಗಳಂ ನೆತ್ತರ್ ಪನಪನ ಪನಿಯೆ ತಿದಿಯುಗಿವಂತೆ ಉಗಿದುಕೊಟ್ಟುದರ್ಕೆ ಮೆಚ್ಚಿ ದೇವೇಂದ್ರಂ ಆತಂಗೆ ಅಮೋಘಶಕ್ತಿಯನಿತ್ತಂ: **ಪಂಪಭಾ,** ೯. ೬೩ ವ)

ತಿಮಿರ್ – [ಕ್ರಿ] ತಿಕ್ಕು, ಲೇಪಿಸು (ಬಿಟಿಯಂ ಯಕ್ಷಕರ್ದಮದ ಕೆಯ್ಗುಟ್ಟಿಯೊಳ್ ಕೆಯ್ಯಂ ತಿಮಿರ್ದು ತಂಬುಲಮಂ ಕೊಂಡು: **ಪಂಪಭಾ,** ೩. ೭೯ ವ)

ತಿರ – **ಗು**] [ಸ್ಥಿರ] ಗಟ್ಟಿ, ಸಡಿಲಗೊಳ್ಳದ್ದು (ಅದೇಂ ತಿರವೋ ಪೂಣಿಸಿದ ಮುಷ್ಟಿ ಭೂರಿಶ್ರವನಾ: **ಪಂಪಭಾ,** ೧೧. ೧೪೧)

ತಿರಿ – [ಕ್ರಿ] ಸುತ್ತು, ತಿರುಗಿಸು (ತಿರಿವ ಎಸಳ್ಗಳ್ ಮುಸುಱುವ ಮಧುಕರಂಗಳಂ ಸೋಅಯೆ: **ಆದಿಪು,** ೪. ೭೦); [ಕ್ರಿ] ಅಲೆದಾಡು, ಚಲಿಸು (ಇನ್ನೆಗಂ ಓರಂತೆ ತೊಟಲ್ದೆಂ ಇಂ ತಿರಿಯಲಾರೆಂ ಭವಾಂಬೋಧಿಯೊಳ್: **ಆದಿಪು,** ೯. ೬೦); [ಕ್ರಿ] ಭಿಕ್ಷೆ ಬೇಡು (ತಾವಿರ್ಬರುಂ ತಿರಿದು ತಂದಿಕ್ಕಿದೆಂಜಲೆವುಟುಮಂ ತಿಂದು: **ಆದಿಪು** ೩. ೩೪ ವ)

ತಿರಿಕ – [ನಾ] ತಿರ್ಯಕ್ ಗತಿ [ಪಶುಜನ್ಮ] (ವಜ್ರಜಂಘಂಗಂ ಶ್ರೀಮತಿಗಮಾ ತಿರಿಕಂಗಳ್ಗಂ ಉತ್ತಮಪಾತ್ರದಾನಾನುಮೋದದ ಪುಣ್ಯಫಲದಿಂದಂ .. .. ಉತ್ತಮ ಭೋಗಭೂಮಿಯೆ ಜನ್ಮಭೂಮಿಯಾದುದು: **ಆದಿಪು,** ೫. ೨೭ ವ)

ತಿರಿತರ್ – [ಕ್ರಿ] ಭಿಕ್ಷೆ ಎತ್ತಿ ತಾ (ಮುಂದಿಟ್ಟು ಚಕ್ರಮಂ ತಿರಿತಂದುದುಮಂ ಪೂಣಿದಿರ್ದು ಬಯ್ತಂಗೊಳ್ವೊಂದಂದದೆ ಕೊಂಡುದುಮಂ ಅದೇನೆಂದುನ್ನತಿಮಾಡಿ ಪೊಗೞ್ವೆಯೊಳಗಱಿಯದುದೇ: **ಆದಿಪು,** ೧೪. ೬೭) ['ಪೂಣಿದಿರ್ದು ಬಯ್ತಂಗೊಳ್ವೊಂದಂದದೆ' ಎಂಬುದರ ಬದಲು ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳು **'ಪಾಳಮಿರ್ದು ಬೈಕಂಗೊಳ್ವೊಂದಂದದೆ'** ಎಂಬ ಪಾಠವನ್ನು ಸ್ವೀಕರಿಸುತ್ತಾರೆ]; ತಿರುಗು (ವಲಲಂ ತಳಮಂ ಮಾರ್ಪೊಸೆದು ತಳ್ತು ಕಣ್ ತಿರಿತರ್ಪಿನೆಗಂ ಅವುಂಕಿ ಸಿಂಹನಾದದಿನಾರ್ದಂ: **ಪಂಪಭಾ,** ೮. ೫೮); **[ಕ್ರಿ]** ಅಲೆದಾಡು (ಅರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಂ ಮಗುಟ್ದುಂ ಬಿಱುತೋಡಿ ಬೇಡರೊಳ್ ನೆರೆದಿರಲ್: **ಪಂಪಭಾ,** ೮. ೮೫)

ತಿರಿಪು – [ಕ್ರಿ] ತಿರುಗಿಸು (ತಿರಿಪಿದೊಡನೆ ಎಳೆ ತಿಱ್ಱನೆ ತಿರಿದುದು ತಿರುವಾಯೊಳಿಡೆ ಸುರರ್ ಮೊಱೆಯಿಟ್ಟರ್ ಭರದೆ ತೆಗೆನೆಱೆಯೆ ಮೆಯ್ದೆಗೆದರ್ ಅರವಿಂದೋದ್ಭವನಿಂ ಒಗೆದುದು ಆ ಬ್ರಹ್ಮಾಂಡಂ: **ಪಂಪಭಾ,** ೧೨. ೧೯೨)

ತಿರಿವು – [ನಾ] ತಿರುಗಾಟ, ಭ್ರಮಣ (ಕರ್ಮಮೆ ಕಡುಬಲ್ಲಿತ್ತು ಅದಱ ತಿರಿವು ಅದೇಂ ಬಹುವಿಧಮೋ: **ಆದಿಪು,** ೫. ೯೭)

ತಿರುವಾಯ್ – [ನಾ] ಹೆದೆಯ ಮಧ್ಯ (ದೊಣೆಗಳಿಂ ಉರ್ಚುವ ತಿರುವಾಯ್ ಒಣರ್ಚಿ ತೆಗೆನೆಱೆವ ಬೇಗಮಂ ಕೂರ್ಗಣೆಗಳ ಪಂದರನೆ ನಭೋಂಗಣದೊಳ್ ಕಂಡತ್ತು ದೇವಗಣಂ ಇನಸುತನಾ: **ಪಂಪಭಾ,** ೧೨. ೧೮೪)

ತಿರುವು – [ನಾ] ಬಿಲ್ಲಿನ ಹೆದೆ (ಮತ್ತೊರ್ವಳ್ ಕರ್ವಿನ ಬಿಲ್ಲ ತಿರುವಿಂ ಬರ್ದುಂಕಿ ಬರ್ಪಲರಂಬು ಬರ್ಪಂತೆ ಬಂದು: **ಪಂಪಭಾ,** ೪. ೩೭ ವ)

ತಿರುಳ ಕನ್ನಡ – [ನಾ] ಸಾರವತ್ತಾದ ಕನ್ನಡ (ರಾಜದ್ರಾಜಕಮೆನಿಸಿದ ಸಾಜದ ಪುಲಿಗೆಱೆಯ ತಿರುಳ ಕನ್ನಡದೊಳ್: **ಪಂಪಭಾ,** ೧೪. ೫೮)

ತಿರೋಹಿತ – ಗು] ಮರೆಯಾದ, ಅದೃಶ್ಯ (ಶುಚಿಶಚಿಮಹಾದೇವಿ ತಿರೋಹಿತಶರೀರೆಯಾಗಿ: **ಆದಿಪು,** ೭. ೪೩ ವ)

ತಿರೋಹಿತನಾಗು – [ಕ್ರಿ] ಮರೆಯಾಗು, ಅದೃಶ್ಯನಾಗು (ಎಂದು ತಿರೋಹಿತನಾಗಿ ಪುರಂದರನುಂ ಪೋದಂ: **ಪಂಪಭಾ,** ೮. ೯)

ತಿರ್ಯಗ್ಜಾತಿ – [ನಾ] ಪ್ರಾಣಿಸಂಕುಲ (ಅಲ್ಲಿಯೆ ವಿಗತಜೀವಿತಂಗಳಾದ ತಿರ್ಯಗ್ಜಾತಿಗಳುಮಂ ಸಂಸ್ಕರಿಸಿ: **ಆದಿಪು,** ೫. ೨೭ ವ)

ತಿರ್ಯಗ್ಜಾತಿತ್ವ – [ನಾ] ಪ್ರಾಣಿಸಂಕುಲದ ಸ್ಥಿತಿ (ಭೋಗಭೂಮಿ ಪ್ರವಿಭಾಗ ದ್ವೀಪಂಗಳೊಳಂ ತಿರ್ಯಗ್ಜಾತಿತ್ವಮುಮಂ ಅಂತರ್ದ್ವೀಪಂಗಳೊಳ್ ಕುಮಾನುಷತ್ವಮುಮಂ ಮಾಡುಗುಂ: **ಆದಿಪು,** ೧೦. ೧೦ ವ)

ತಿರ್ದು – **[ಕ್ರಿ]** ಶುಭ ಸೂಚಿಸು (ಬಿಡೆ ತಿರ್ದಿದ ಶಕುನದ ನಯದಡಿವಿಡಿದು ಪುರೋಹಿತಂ ನೃಪಂಗೀ ನುಡಿಯಂ ನುಡಿದಂ: **ಆದಿಪು**, ೫. ೬); **[ಕ್ರಿ]** ಪಳಗಿಸು (ಎಂತಪ್ಪ ದುಷ್ಟಾಶ್ವಂಗಳುಮಂ ಏಱಲುಂ ತಿರ್ದಲುಂ ಬಲ್ಲೆನೆಂದು ಪೇೞ್ದು ಆಳಾಗಿ ತಂತ್ರಪಾಳವೆಸರೊಳ್ ಮಾಸಾದಿಯಾಗಿರ್ದಂ: **ಪಂಪಭಾ**, ೮. ೫೪ ವ)

ತಿರ್ಯಗ್ಗತಿ – **[ನಾ]** [ತಿರ್ಯಕ್+ಗತಿ] ಪ್ರಾಣಿಗಳ [ಜನ್ಮಾಂತರದ] ತಿರುಗಾಟ (ಭಯಂಕರಮಲ್ತೇ ತಿರ್ಯಗ್ಗತಿ ದುರಂತ ದುಃಖಪ್ರತಾನಮಂ ಬಗೆವಾಗಳ್: **ಆದಿಪು**, ೯. ೪೭)

ತಿರ್ಯಗ್ಜಾತಿತ್ವ – **[ನಾ]** [ತಿರ್ಯಕ್+ಜಾತಿತ್ವ] ಪಶುಪ್ರಾಣಿಗಳ ಜನ್ಮ (ತಿರ್ಯಗಜಾತಿತ್ವಮಂ ಪೊರ್ದಿದ ಮಿಥುನಂಗಳಾಗಿ ಪುಟ್ಟಿ ಪರಸ್ಪರವೈರಂಗಳಿಲ್ಲದೆ: **ಆದಿಪು**, ೫. ೪೧ ವ)

ತಿರ್ಯಗ್ಲೋಕ – **[ನಾ]** [ತಿರ್ಯಕ್+ಲೋಕ] ಜೀವಿಗಳಿರುವ ಮಧ್ಯಮಲೋಕ (ಏಕರಜ್ಜುಪ್ರಮಾಣಂ ತಿರ್ಯಗ್ಲೋಕಂ ಸ್ವಯಂಭೂರಮಣಜಲಧಿಪರ್ಯಂತಮಂ ತಾಗುವನ್ನಂ: **ಆದಿಪು**, ೧. ೪೮)

ತಿರ್ಯಗ್ವಳನ – **[ಕ್ರಿ]** ಅಡ್ಡಲಾಗಿ ತಿರುಗು (ಪುಳಕಪ್ರೋದ್ಭೇದ ಘರ್ಮೋದಕವಿಸರಮನೊತ್ತಂಬದಿಂ ತಾಗೆಯುಂ ನಿಶ್ಚಳಧೈರ್ಯವ್ಯಾಜ ತಿರ್ಯಗ್ವಳನತರಳಿತಂ ದೃಷ್ಟಿ: **ಆದಿಪು**, ೪. ೫೧)

ತಿಸರ – **[ನಾ]** [ತ್ರಿಸರ] ಮೂರೆಳೆಯ ಸರ (ಸರಿಗೆ ದುಸರಂ ಮಣಿಮುದ್ರಿಕೆ ತ್ರಿಸರಮೆಂಬ ಭೂಷಾನಿಕರಮಂ: **ಆದಿಪು**, ೫. ೩೩)

ತಿಸುಳ – **[ನಾ]** ತ್ರಿಶೂಲ (ತಿಸುಳದೊಳ್ ಉಚ್ಚಳಿಪ್ಪ ಪೊಸನೆತ್ತರೆ ಕೆಂದಳಿರಾಗೆ ಕಣ್ಗೆ ಅಗುರ್ವಿಸುವಿನಂ ಒಕ್ಕ ನೇಲ್ವ ಕರುಳೋಳಿಯೆ ಬಾಳಮೃಣಾಳಮಾಗೆ: **ಪಂಪಭಾ**, ೧. ೬)

ತಿಳ – **[ನಾ]** [ತಿಲ] ಎಳ್ಳು (ಗರ್ಭ ಷಷ್ಟಿ ವ್ರೀಹಿ ಯವ ಗೋಧೂಮಾದಿಮಹೌಷಧಂಗಳುಂ ತಿಳ ಅತಸೀ ಕುಸುಂಭಾದಿ ದೀಪ್ರೌಷಧಿಗಳುಂ: **ಆದಿಪು**, ೮. ೬೧ ವ)

ತಿಳಕ – **[ನಾ]** ವಶೀಕರಣದ ಬೊಟ್ಟು (ತಿಳಕಂ ವಶ್ಯಮೆ ಜಡಜನಮೊಳಗಱಿಯದು ಸಕಳಭವ್ಯತಿಳಕಂಗೆ: **ಆದಿಪು**, ೧೦. ೬೦)

ತಿಳಿ – **[ಕ್ರಿ]** [ಮೂರ್ಛೆಯಿಂದ] ಎಚ್ಚರಗೊಳ್ಳು (ಕಪ್ಪುರದ ರಜಂಬೊರೆದ ಕರಕಾಂಬುವ ತಳಿದು ದರವುರಂ ಎಟ್ಟಿರಿಸೆ ಮೂರ್ಛೆ ತಿಳಿದು ಕುಮಾರಂ: **ಆದಿಪು**, ೪. ೧೭); **[ಕ್ರಿ]** ಶಾಂತವಾಗು (ಅಗರುವ ಧೂಪಧೂಮದೊಳ್ ಸೊರ್ಕಿದ ಸೊರ್ಕುಗಳ್ ಆಗಳಲ್ಲಿ ತೊಟ್ಟಗೆ ತಿಳಿದಂತೆ: **ಆದಿಪು**, ೫. ೪೨); **ಗು]** ಬಗ್ಗಡವಿಲ್ಲದೆ ಸ್ವಚ್ಛವಾಗಿರು (ಚೆಲ್ವನಿತ್ತತ್ತು ಅಂಭೋದಮಾರ್ಗಂ ತಿಳಿದ ಕೊಳದವೋಲ್ ದೇವಸಂದೋಹದಿಂದಂ: **ಆದಿಪು**, ೧೦. ೧೯); **[ಕ್ರಿ]** ಕೋಪವು ತಿಳಿಗೊಳ್ಳು (ಮುನಿಸಿನೊಳಾದಮೇವಯಿಸಿ .. .. ಬಯ್ದನುವಿಸಿ ಕಾಡಿ ನೋಡಿ ತಿಳಿದು ಅಟ್ಟಿಜೆಂ ಇಟ್ಟುಳಿಗೊಂಡು: **ಪಂಪಭಾ**, ೪. ೧೦೬)

ತಿಳಿದ ಕೊಳ – **[ನಾ]** ಸ್ವಚ್ಛವಾದ ಕೊಳ (ಚೆಲ್ವನಿತ್ತತ್ತು ಓರಂತಂಭೋದಮಾರ್ಗಂ ತಿಳಿದ ಕೊಳದವೋಲ್ ದೇವಸಂದೋಹದಿಂದಂ: **ಆದಿಪು**, ೧೦. ೧೯)

ತಿಳಿಪು – **[ಕ್ರಿ]** ತಿಳಿಗೊಳಿಸು, ಸಮಾಧಾನಪಡಿಸು (ತತ್ಕೋಮಳೆ ಮುಳಿದಿರೆ ತಿಳಿಪಲ್ಕೆ ಈ ಮಕುಟಮೆ ಸಾಲ್ಗುಂ ಎನಿಸಲಾರ್ತುದು ಮಕುಟಂ: **ಆದಿಪು**, ೪. ೩೯)

ತಿಱಿ – **[ಕ್ರಿ]** ಹೂ ಕೊಯ್ಯಿ (ನೂಪುರನಿನದ'ಂ ಪುದಿದಿದೊ ಮೊರೆವಳಿಗಳನೆನಿಸಿದಶೋಕೆಯ ತಳಿರನೊರ್ವಳಟ್ಟಿಯೆ ತಿಱಿದಳ್: **ಆದಿಪು**, ೧೧. ೧೦೪)

ತಿಱಿದ ತೆಱದೆ – ಕತ್ತರಿಸಿದ ರೀತಿಯಲ್ಲಿ (ತನಗರ್ಘ್ಯಮೆತ್ತಿದ ತಳಿಗೆಯೊಳಿಡೆ ತಿಱಿದ ತೆಱದೆ ತಲೆ ಪರಿದಾಗಳ್ ಕಳಕಳಿಸಿ ನಗುತುಮಿರ್ದುದು: **ಪಂಪಭಾ**, ೬. ೬೪)

ತಿಱಿದಿಕ್ಕು – **[ಕ್ರಿ]** [ತಿಱಿದು+ಇಕ್ಕು] ಚಿಮ್ಮಿ ಎಸೆ (ಪೇರಾಳ್ ತಿಱಿದಿಕ್ಕಿದಂತೆ ತಲೆಯಂ ಪೋಗೆಚ್ಚನಾ ಶ್ವೇತನಾ: **ಪಂಪಭಾ**, ೧೦. ೧೨೩)

ತಿಱುನೀರಿಕ್ಕು – **[ಕ್ರಿ]** ತರ್ಪಣದ ನೀರನ್ನು ಕೊಡು (ತಱಿಸಂದು ಲಾಟರೊಳ್ ತಳ್ತಿಱಿದು ಏಱಿಂ ಪೇಟಿ ಕೇಳ್ದು ಮಂಡಲಮಿನ್ನುಂ ತಿಱುನೀರಿಕ್ಕುವುದು ಎನಿಸಿದ ತಱಿಸಲವಿನ ಚಲದ ಬಲದ ಕಲಿ ನರಸಿಂಹಂ: **ಪಂಪಭಾ**, ೧. ೩೩)

ತಿಲ್ಲನೆ – **[ಅ]** ಗಿರ್ರನೆ, ಸುತ್ತುವುದನ್ನು ಸೂಚಿಸುವ ಒಂದು ಅನುಕರಣ ಶಬ್ದ (ಧಾತ್ರಿ ತಿಲ್ಲನೆ ತಿರಿವನ್ನೆಗಂ ತೆಗೆದು ಕಂಧರಸಂಧಿಯಂ ಎಯ್ದೆ ನೋಡಿ ತೊಟ್ಟನೆ ನರಂ ಎಚ್ಚೊಡೆ: **ಪಂಪಭಾ**, ೧೨. ೧೬೮)

ತೀಟ – **[ನಾ]** ಸ್ಪರ್ಶ (ಅಲರ್ದಲರ್ಗಣ್ಗಳ ನೋಟದೆ ಸುಲಲಿತತನು ಶಿಶುವ ಮೆಯ್ಯ ತೀಟದೆ ತನಗಗ್ಗಲಿಸದಲಂಪಂ ಕುಡೆ: **ಆದಿಪು**, ೭. ೪೭)

ತೀಡು – **[ಕ್ರಿ]** ಬೀಸು (ಪೊಸಪೂವಿನೊಳ್ ಪೊರೆದು ಪೊಣ್ಮಿದ ಕಂಪು ಮೊಗಂಗಳಂ ಚಳಿಲ್ಲನೆ ಕೊಳೆ ಪೊಯ್ಯೆ ತೀಡಿದುದು ತೆಂಕಣ ಗಾಳಿ ವಸಂತಮಾಸದೊಳ್: **ಪಂಪಭಾ**, ೫. ೩೪)

ತೀನ್ – **[ನಾ]** ನವೆ, ಕಡಿತ, ತಿನಿಸು (ನರಮಾತಂಗತುರಂಗಸೈನ್ಯಂ ಇದಿರಾಂತು ಈರೆಂಟು ಲಕ್ಕಂಬರಂ ಕರಗಿತ್ತು ಎನ್ನ ನಿಶಾತಹೇತಿಹತಿಯಿಂ ಮತ್ತಂತು ಈ ತೋಳ ತೀನ್ ಕರಗಲ್ಕೆ ಆರ್ತಪುದಿಲ್ಲ: **ಪಂಪಭಾ**, ೧೨. ೧೩೫)

ತೀರ್ – **[ಕ್ರಿ]** ಶಕ್ಯವಾಗು (ಜವಂಗಿಡದೆ ಮುಟ್ಟಿ ಬರ್ಪ ಜವನಂ ಜವಂಗುಂದಿಸಲ್ ಜವಂಗೆ ಜವನಾಗಲಿಂ ಪೆಱರ್ಗೆ ತೀರ್ಗುಮೋ: **ಆದಿಪು**, ೧೩. ೮೮); **[ಕ್ರಿ]** [ಆಸೆ] ಪೂರೈಸು (ಉಸಿರ್ದೊಡೆ ಬಗೆ ತೀರ್ಗುಂ ಬಿಸಿದುಂ ಬೆಟ್ಟಿತ್ತುಂ ಉಸಿರ್ ಅದೇಂ ತೀರ್ದಪುದೇ: **ಪಂಪಭಾ**, ೪. ೬೫); **[ಕ್ರಿ]** ಮುಗಿತಾಯಗೊಳ್ಳು (ಮದನನ ಕಾಯ್ಪು ಮಾಣ್ಗೆ ಸರಸೀರುಹಜನ್ಮನ ಮೆಚ್ಚು ತೀರ್ಗೆ ಕೋಳ್ಗುದಿ ಮನದಿಂದಂ ಇಂದು ಪೋಱಮಾಱುಗೆ: **ಪಂಪಭಾ** ಪರಿಷತ್ತು, ೫. ೧೮)

ತೀರಂಬಿಡಿ – **[ಕ್ರಿ]** ದಡವನ್ನು ಅನುಸರಿಸು (ಅಂತಾ ಪ್ರಭಾಸಾಮರನಂ ನಿಜವಿಜಯಯಶಃಪ್ರಭಾಸಮೂಹದಿಂದಂ ಸಿಂಧುನದೀ ತೀರಂಬಿಡಿದು ಬರ್ಪಲ್ಲಿ: **ಆದಿಪು**, ೧೩. ೪ ವ)

ತೀರಸ್ಥ – ಗು] ದಡದಲ್ಲಿರುವ (ತೀರಸ್ಥ ಲವಂಗ ಚೂತ ಲವಲೀ ಪುಷ್ಪಾವಾಸ್ವಾದಿತೋದಯುತೋನ್ಮಾದೆಯ: **ಆದಿಪು**, ೧. ೫೪)

ತೀರ್ಗುಮೇ – ಸಾಧ್ಯವಾಗುತ್ತದೆಯೇ? ಇಲ್ಲ (ಬಲಿದುಪವಾಸದೊಳ್ ನಮೆದು ನೋಂಪಿಗಳೊಳ್

ನಿಯಮಕ್ರಮಂಗಳಂ ಸಲಿಸಿದರಿಂತು ನೋನದೆ ಗುರ್ಣಾವನಂ ಪಡೆಯಲ್ಕೆ ತೀರ್ಗುಮೇ: **ಪಂಪಭಾ,** ೧. ೧೩೬)

ತೀರ್ಗುಮೋ – ಸಾಧ್ಯವಾಗುತ್ತದೆಯೇ (ಅರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಂ ಮಗುಳ್ದುಂ ಬಿಱುತು ಓಡಿ ಬೇಡರೊಳ್ ನೆರೆದಿರಲ್ ಒಡ್ಡಯಿಸಿ ರಾಜ್ಯದೊಳೇಂ ನೆರೆಯಲ್ಕೆ ತೀರ್ಗುಮೋ: **ಪಂಪಭಾ,** ೮. ೮೫)

ತೀರ್ಥಕರ – **[ನಾ]** ತೀರ್ಥಂಕರ (ತೀರ್ಥಕರ ಪ್ರತಿಕೃತಿಗಳಂ ಪಂಚರತ್ನಮಯಂಗಳಂ ಮಾಡಿಸಿ: **ಆದಿಪು,** ೧೬. ೧ ವ)

ತೀರ್ಥಕರತ್ವ – **[ನಾ]** [ಜೈನ] ತೀರ್ಥಂಕರನ ಸ್ಥಿತಿ (ವಾಸವಂಗಾಸನಕಂಪಮಂ ಪಡೆದು ತೀರ್ಥಕರತ್ವಮನಿತ್ತು ಅನಶ್ವರಾವಾಸಮನೆಯ್ದಿಸಲ್ಕೆ ಇದುವೆ ಷೋಡಶಭಾವನೆಯಿಂದೆ ಷೋಡಶಶ್ವಾಸಮನೆಯ್ದೆ ಭಾವಿಸುಗೆ: **ಆದಿಪು,** ೧೬. ೮೧)

ತೀರ್ಥಕರಭಾವನೆ – **[ನಾ]** ತೀರ್ಥಂಕರನಾಗಲು ಕಾರಣವಾಗುವ ಹದಿನಾರು ಮನೋವೃತ್ತಿಗಳು (ಪರಮಜಿನಪತಿ ಪರಿಭಾಷಿತಮಪ್ಪ ಸಕಳಶ್ರಾವಕವ್ರತಂಗಳಂ ಷೋಡಶ ತೀರ್ಥಕರಭಾವನೆಗಳಂ ಚತುಸ್ತ್ರಿಂಶದತಿಶಯಂಗಳುಮಂ ಅಷ್ಟಮಹಾಪ್ರಾತಿಹಾರ್ಯಂಗಳುಮಂ: **ಆದಿಪು,** ೩. ೪೦ ವ)

ತೀರ್ಥಕೃದ್ಭಾವನಾ – **[ನಾ]** [ಜೈನ] ಒಂದು ಗರ್ಭಾನ್ವಯಕ್ರಿಯೆ (ತೀರ್ಥಕೃದ್ಭಾವನಾ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ತೀರ್ಥಜಲ – **[ನಾ]** ನದಿ (ಅದಱ ನೆಲೆಯೊಳಿರ್ದ ಅಕೃತ್ರಿಮ ಚೈತ್ಯಾಲಯಂಗಳಂ ಅಖಿಳ ಜಗತ್ಪಾವನಕರ ಸರಸ್ ಸರಸೀ ಸರಿನ್ನಾಥ ತೀರ್ಥಜಲಂಗಳಿಂದಂ: **ಆದಿಪು,** ೨. ೩೨ ವ); **[ನಾ]** ಪವಿತ್ರವಾದ ನೀರು (ಅಂತೆಗೆಯ್ವೆನೆಂದು ತೀರ್ಥಜಲಂಗಳಂ ಮಿಂದು ದಳಿಂಬವನುಟ್ಟು ಮುತ್ತಿನ ತೊಡಿಗೆಗಳಂ ತೊಟ್ಟು ದರ್ಭಶಯನದೊಳಿರ್ದು: **ಪಂಪಭಾ,** ೧. ೧೧೮ ವ)

ತೀರ್ಥಪ್ರವರ್ತಕ – ತೀರ್ಥಂಕರ, ಅರ್ಹಂತ (ಈ ಭವಕ್ಕೆಂಟನೆಯ ಭವದೊಳ್ ಭರತದೊಳ್ ನೀನಾದಿತೀರ್ಥಪ್ರವರ್ತಕನಾದಂದೀ ಶ್ರೀಮತಿ ದಾನತೀರ್ಥಪ್ರವರ್ತಕಂ ಶ್ರೇಯಾಂಸನಕ್ಕುಂ; **ಆದಿಪು,** ೫. ೧೩ ವ)

ತೀರ್ಥೋದಕ – **[ನಾ]** ತೀರ್ಥಜಲ (ಅನಂತನುಂ ತಾನುಂ ಜಲಕ್ಕನಿರೆ ಪಲ್ಲಂ ಸುಲಿದು ಅಗಣ್ಯಪುಣ್ಯ ತೀರ್ಥೋದಕಂಗಳಂ ಮಿಂದು ಮಂಗಳವಸದನಂಗೊಂಡು: **ಪಂಪಭಾ,** ೧೦. ೪೬ ವ)

ತೀವಿಕೊಳ್ – **[ಕ್ರಿ]** ತುಂಬಿಕೊ (ನೀರಂ ಕುಡಿದು ಪದ್ಮಪತ್ರೌಘಂಗಳಿಂ ತಮ್ಮಣ್ಣಂಗೆ ನೀರಂ ತೀವಿಕೊಂಡು ಸರೋವರದಿಂದ ಪೊಱಮಟ್ಟು: **ಪಂಪಭಾ,** ೮. ೩೯ ವ)

ತೀವು – ತುಂಬು (ಏನಂ ಪೇೞ್ವುದೊ ಸಿರಿಯುದ್ದಾನಿಯಂ ಎಣ್ಣೆಯೊಳ್ ತೀವಿ ದೀರ್ಘಿಕೆಗಳಂ ಅಂತಾ ನೃಪತಿ ನಿಚ್ಚಲ್ ಅಯ್ನೂಱ್ ಆನೆಯಂ ಅವಗಾಹಮಿರಿಸುವಂ ಬೋದನದೊಳ್: **ಪಂಪಭಾ,** ೧. ೧೭); **[ಕ್ರಿ]** ಮುಚ್ಚು, ಕವಿ (ಕಾಮಕಾಂತೆ ಬಿಟೆಯಂ ತನ್ನಿಚ್ಚೆಯಿಂ ಮೆಚ್ಚಿ ಬಣ್ಣವುರಂ ತೀವಿದ ಮಾಟಕ್ಕೆಯಾಯ್ತು .. .. ಮಹೀಮಂಡಲಂ: **ಪಂಪಭಾ,** ೭. ೨೪)

ತೀವ್ರ – ಗು] ಹರಿತವಾದ (ಭಯಂಕರಮಾಗೆ ಬೀಸುವ ಆವುತಿಯ ಕಳಂಕಪಂಕದೊಳೆ ಪೆರ್ಚಿದ ಕಟ್ಟಿಲೆ ತೀವ್ರಶಸ್ತ್ರಸಂಹತಿಗಳ ದೀಪ್ತಿಯಿಂ ಬಿಸುಗೆಯಾಗೆ: **ಪಂಪಭಾ,** ೧೦. ೫೦); **ಗು]** ಗಾಢವಾದ (ಮತ್ತ ಮಾತಂಗ ಪದನಖ ಖರ್ವಿತ ಉರ್ವೀತಳಮುಂ ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಯತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ,** ೧೩. ೫೧)

ತೀವ್ರಕರ – **[ನಾ]** ಸೂರ್ಯ (ಬೊಬ್ಬುಳಿಕೆಗಳಂತೆ ತೋಱಿದುವು ತೀವ್ರಕರಂ ಕರಮೆಯ್ದೆ ಕಾಯ್ದು ಪಜ್ಜಳಿಸುವ ಲೋಹಪಿಂಡಮನೆ ಭೋಂಕೆನೆ ನೀರೊಳಗರ್ದಿದಂತೆವೊಲ್: **ಆದಿಪು,** ೭. ೯೮)

ತೀವ್ರದೀಧಿತಿ – **[ನಾ]** ತೀವ್ರಕಿರಣ, ಸೂರ್ಯ (ಕಾದಿ ಚಳಿತು ಎಯ್ದಿ ಬೞಲ್ದು ಅಪರಾಂಬುರಾಶಿಯೊಳ್ ಮುೞುಗುವ ತೀವ್ರದೀಧಿತಿವೊಲ್ ಆ ಕೊಳದೊಳ್ ಫಣಿರಾಜಕೇತನಂ ಮುೞುಗಿದಂ: **ಪಂಪಭಾ,** ೧೩. ೭೪)

ತೀವ್ರಾಂಶು – **[ನಾ]** ಸೂರ್ಯ (ದೀಪದೀಪ್ತಿಪ್ರತಿಹತದಿನಕೃಚ್ಚಕ್ರ ತೀವ್ರಾಂಶು ಚಕ್ರಂ: **ಆದಿಪು,** ೧೪. ೩)

ತೀವ್ರಾಸ್ತ್ರ – **[ನಾ]** ತೀಕ್ಷ್ಣವಾದ ಬಾಣ (ಬಿಲ್ಲಾಳ್ತನಂ ಪೇೞ್ವೊಡೆ ಉಜ್ವಲತೀವ್ರಾಸ್ತ್ರನಿಘಾತಪಾತಿತ ರಿಪುವ್ಯೂಹಂ: **ಪಂಪಭಾ,** ೫. ೨೨)

ತುಂಗ – **[ನಾ]** ಶ್ರೇಷ್ಠವಾದ (ತುಂಗ ಭವದ್ಬೋಧದ ಬೆಳಗಿಂಗೆ ಒಳಗಪ್ಪನಿತನೆನ್ನ ಬಗೆ ಪುಗದು ತಮಂ ಪಿಂಗೆ ದಿನಪತಿಯ ಬೆಳಪ ನಭೋಂಗಣಮಂ ಜ್ಯೋತಿರಿಂಗಣಂ ಬೆಳಗುಗುಮೇ: **ಆದಿಪು,** ೮. ೧೦); **[ಗು]** ಎತ್ತರವಾದ, ದೊಡ್ಡದಾದ (ತುಂಗವನ್ಯಮತಂಗಜದಂತೆ ಆಘಾತ ನಿಪಾತಿತ ಸಲ್ಲಕೀಭಂಗಮಂ: **ಪಂಪಭಾ,** ೧. ೧೧೫)

ತುಂಗವಂಶ – **[ನಾ]** ಶ್ರೇಷ್ಠ ವಂಶ (ತುಂಗವಂಶಪ್ರಭವಂ .. .. ಚಕ್ರಾಧೀಶನೊಳ್ ಮಚ್ಚರಿಪವೊಲ್ ಎಸೆದಿರ್ದತ್ತು ರೌಪ್ಯಾಚಲೇಂದ್ರಂ: **ಆದಿಪು,** ೧೩. ೪೬)

ತುಂಡ – **[ನಾ]** ಕೊಕ್ಕು (ವಿನತಾಪುತ್ರನ ವಜ್ರ ತುಂಡ ಹತಿಗಂ ಮೆಯ್ಯಾಂತು ಕಂಡಂಗಳುಳ್ಳಿನಂ ಅಂಗಂಗಳಂ ಒಡ್ಡಿ ಒಡ್ಡಿ ತನುವಂ ಕೊಟ್ಟಂತು: **ಪಂಪಭಾ,** ೪. ೨೬)

ತುಂದಿಳ – **[ನಾ]** ಬೊಜ್ಜು (ಕಟಕಮಂ ಮೆಲ್ಲಮೆಲ್ಲನೊಡಗೊಂಡು ಬರ್ಪಂತು ಕೂರ್ಚಾಳ ತುಂದಿಳ ಜರತ್ ಸಾಮಂತಸಂದೋಹಕ್ಕಪ್ಪಯಿಸಿ: **ಆದಿಪು,** ೪. ೯೧ ವ)

ತುಂಬಕಿ – **[ನಾ]** ಕೆನ್ನೆಯೂದಿಸಿಕೊಂಡು ಹಾಡುವ ದೋಷ (ತುಂಬುಕೀರಹಿತಂ ಗಾಯಕಗಣಕಂಠರವಂ ಶ್ರಾವಕಮಧುರ ಸ್ನಿಗ್ಧಮೆಸೆದುದು ಆಸ್ಥಾಯಿಕೆಯೊಳ್: **ಆದಿಪು,** ೫. ೧೧)

ತುಂಬಿ – **[ನಾ]** ದುಂಬಿ, ಭ್ರಮರ (ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರ ಒಳ್ನೊಗಂ ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ: **ಪಂಪಭಾ,** ೪. ೨೮)

ತುಂಬು – **[ನಾ]** ಕೆರೆಯ ತೂಬು (ತುಂಬಿನ ನೀರಂ ಉರ್ಚಿದಾಗಳಂತೆ ಪರಿದು ಅಳುರ್ದುಕೊಳ್ವುದಿದು ಪಂದಿವೇಂಟೆಯ ನಾಯ್: **ಪಂಪಭಾ,** ೫. ೪೬ ವ); **[ಕ್ರಿ]**

ಆವೃತವಾಗು (ಎಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಲ್ದು ತುಂಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ: **ಪಂಪಭಾ**, ೧. ೮)

ತುಂಬುರಕೊಳ್ಳಿ – [ನಾ] ತೂಬರೆ ಮರದ ಸೌದೆಯ ಕೊಳ್ಳಿ (ಎಂಬುದುಂ ಹಿಡಿಂಬಂ ಆಡಂಬರಂಗೆಯ್ದು ತುಂಬುರುಕೊಳ್ಳಿಯಂತೆ ಅಂಬರಂಬರಂ ಸಡಿಲ್ದು: **ಪಂಪಭಾ**, ೩. ೧೭ ವ)

ತುಟಿತ – [ನಾ] [ಜೈನ] ಬಹು ದೊಡ್ಡ ಕಾಲಪ್ರಮಾಣ (ತುಟಿತಾಬ್ಧಪ್ರಮಿತಜೀವಿತನುಮಾಗಿ ನಾಲ್ಕನೆಯ ಕುಳಧರಂ ಪುಟ್ಟಿ: **ಆದಿಪು**, ೬. ೫೬ ವ)

ತುಡನೆ – [ತುಡನ್+ಎ] ಧರಿಸನೆ, ತೊಡಲೇ ಇಲ್ಲ (ಎನಗೆ .. .. ಮಱೆಯಿಂ ಆಸೆವಡಲ್ ಎಂದು ಅದಟಂ ಅಣಂ ಕುಡನೆ ಕವಚಮಂ ರಾಧೇಯಂ: **ಪಂಪಭಾ**, ೧೨. ೧೧೯)

ತುಡು – [ಕ್ರಿ] ಧರಿಸು, ಹಾಕಿಕೊ (ಇವು ರತ್ನಕುಂಡಲಂ ಜಿತರವಿಮಂಡಳಮಿವು ತುಡಲ್ಕೆ ಯೋಗ್ಯಂ ನಿನಗಲ್ಲವು ಪೆಱರ್ಗೆ: **ಆದಿಪು**, ೧೨. ೧೧೭); ಹಿಡಿ (ಭೀಕರ ಬಾಣಮಂ ಆದ ವಿವೇಕದಿಂ ಉರದೆಡೆಗೆ ತುಡದೆ ತಲೆಗೆಯೆ ತುಡುವಾ: **ಪಂಪಭಾ**, ೧೨. ೧೯೪)

ತುಡುಕು – [ಕ್ರಿ] ಹಿಡಿದುಕೋ (ಹರಿಪೋತಮಂ ಬೆದಱುತುಂ ಕರಿಪೋತಂ ಅವುಂಡುಗರ್ಚಿ ಕೇಸರಿಣಿಯಂ ಕೆಚ್ಚಲಂ ತುಡುಕುತಂ ಪರಿದತ್ತು: **ಪಂಪಭಾ**, ೭. ೮೦)

ತುಡುಗೆ – [ನಾ] ಆಭರಣ (ಒಂದೊಂದಜೆನೀ ತುಡುಗೆಗಳ್ ಒಂದೊಂದಗ್ಗಳಮಿವೆಂದು ಪದಿನಾಲ್ಕುಮಂ ಓರೊಂದನೆ ತೋಱಿ: **ಆದಿಪು**, ೧೩. ೩೧)

ತುಡುವ ಬಿಡುವ – [ಬಾಣವನ್ನು] ಬಿಲ್ಲಿನಲ್ಲಿ ಹೂಡುವ ಎಸೆಯುವ ಅಥವಾ ಪ್ರಯೋಗಿಸುವ (ಅಂಬರಂ ಬಾಣದಿಂದಂ ಮುಸುಕಿಟ್ಟಂತಾಗೆ ಬೇಗಂ ತುಡುವ ಬಿಡುವ ಸೂಟಿಗ್ಗಿಯ್ಯ ಬೇಗಂಗಳಂ: **ಪಂಪಭಾ**, ೧೨. ೨೦)

ತುಡುವಾ – ತೊಡುತ್ತೀಯೇನು? ಹೂಡುವೆಯಾ? (ಆಕರ್ಣಾಂತಂ ತೆಗೆನೆಱೆದಾ ಕರ್ಣಂ ಇಸಲ್ಕೆ ಬಗೆದೊಡೆ ಉಡುಗು ಉಡುಗು ಇಸಲ್ ಈ ಭೀಕರಬಾಣಮಂ ಆದ ವಿವೇಕದಿಂ ಉರದೆಡೆಗೆ ತುಡದೆ ತಲೆಗೆಯೆ ತುಡುವಾ: **ಪಂಪಭಾ**, ೧೨. ೧೯೪)

ತುತ್ತು – [ನಾ] ಬಾಯಿ ತುಂಬುವಷ್ಟು ಪ್ರಮಾಣ ಹಾಗೂ ನುಂಗು (ಬಂಡಿಯ ಕೂಟಿಲ್ಲಮಂ ಪತ್ತೆಂಟು ತುತ್ತಿನೊಳೆ ಸಮೆಯೆ ತುತ್ತುವುದುಂ: **ಪಂಪಭಾ**, ೩. ೨೯ ವ)

ತುದಿ – [ನಾ] ಕೊನೆ, ಆನಂತರ (ಪದಿನಾಱು ತಿಂಗಳಿಂದಂ ತುದಿಯೊಳ್ ಪದಿನೈದು ದಿವಸಮಾದೊಡೆ ಸುಯ್ವಂ: **ಆದಿಪು**, ೬. ೪೩)

ತುದಿಗೆಯ್ದು – [ಕ್ರಿ] ತುದಿಯವರೆಗೂ (ಪೋರ್ದು ನೆಯ್ದಿಲ ಕಾವಂ ತುದಿಗೆಯ್ದೆ ಸೀಳ್ವ ತೆಱದಿಂ ಸೀಳ್ದಂ ಜರಾಸಂಧನಂ: **ಪಂಪಭಾ**, ೬. ೨೭)

ತುದಿಯೆಯ್ದು – [ಕ್ರಿ] ಕೊನೆಗೊಳ್ಳು, ನೆರವೇರು (ತುದಿಯೆಯ್ದಿತ್ತೆನಗೆ ಎನ್ನ ಪೂಣ್ಕೆ ನಿನಗಂ ಪುಣ್ಯೋದಯಂ ಸಾರ್ಚಿ ಬಂದುದು: **ಆದಿಪು**, ೪. ೧೮)

ತುಬ್ಬು – [ಕ್ರಿ] ಸೂಚಿಸು (ಕುಲಜರಂ ಉದ್ಧತರಂ ಭುಜಬಲಯುತರಂ ಹಿತರಂ ಈ ಸಭಾಮಧ್ಯದೊಳ್ ಅಗ್ಗಲಿಸಿದ ಮದದಿಂ ನಾಲಗೆ ಕುಲಮಂ ತುಬ್ಬುವವೊಲ್ ಉಱದೆ ನೀಂ ಕೆಡೆನುಡಿವೈ: **ಪಂಪಭಾ**, ೧೦. ೨೦)

ತುಮುಟಿಕ್ – [ಕ್ರಿ] ತೇಲುಗಣ್ಣು ಮೇಲುಗಣ್ಣಾಗು (ಕಣ್ ತುಮುಟಿಕೆ ಪೆರ್ಬೆಡೆಯಿಂ ಮಣಿ ಸೂಸೆ ಬೇಸಱಿಂ ತಿಣುಕಿದಂ ಆನಲ್ ಉಮ್ಮಳಿಸಿ ಶೇಷನಶೇಷ ಮಹೀವಿಭಾಗಮಂ: **ಪಂಪಭಾ**, ೯. ೯೯); [ಕ್ರಿ] ನಿರ್ನಾಮವಾಗು (ಅಂತು ಮುಂಬಗಲ್ವರಂ ತುಮುಟಿಕೆ ಕಾದುವ ಸಮರಭರಂ ಮನೋರಾಗಮಂ ಮಾಡೆಯುಂ: **ಪಂಪಭಾ**, ೧೩. ೩೭ ವ)

ತುರಂಗದಟಿ – [ನಾ] ಚತುರಂಗದಳದಲ್ಲಿ ಒಂದು, ಕುದುರೆ ಸೈನ್ಯ (ತುರಗಂ ನೂಱನಿತುಂ ತುರಂಗದಟಿಮೊಂದೊಂದರ್ಕೆ ನೂಱಾಳ್ ತಗುಳ್ದಿರೆ ಬಲ್ಲರ್ ನಡೆ ನೋಡಿ ಕೂಡ ಪಡೆದತ್ತಕ್ಷೋಹಿಣೀಸಂಖ್ಯೆಯಂ: **ಪಂಪಭಾ,** ೯. ೯೫)

ತುರಂಗಮ – [ನಾ] ಕುದುರೆ (ಮದಗಜ ಬೃಂಹಿತಧ್ವನಿ ತುರಂಗಮ ಹೇಷಿತಘೋಷಂ ಆದಂ ಒರ್ಮೊದಲೆ ಪಯೋಧಿಮಂಥನ ಮಹಾರವಮಂ ಗೆಲೆ: **ಪಂಪಭಾ**, ೩. ೩೮)

ತುರಂಗಸಾಧನ – [ನಾ] ಅಶ್ವಸೇನೆ (ನೆಟ್ಟನೆ ಪದಿನೆಂಟು ಕೋಟಿವರೆಗಂ ತಳರ್ದತ್ತು ತುರಂಗಸಾಧನಂ: **ಆದಿಪು,** ೧೧. ೩೧)

ತುರಂಗಸೈನ್ಯ – [ನಾ] ಕುದುರೆದಳ (ಮುಗಿಲ್ಗಳ್ ಇಟ್ಟೆಡೆಗಳೊಳ್ ತಲೆಗಳ್ ತೊಡರ್ದಿರ್ದು ಜೇನ ಪುಟ್ಟಿಗಳೆನೆ ಪೋಲ್ತುವು ಏಂ ಕಲಹಂ ಅಚ್ಚರಿಯಾಯ್ತೊ ತುರಂಗಸೈನ್ಯದೊಳ್: **ಪಂಪಭಾ**, ೧೦. ೮೦)

ತುರಗ – [ನಾ] ಕುದುರೆ, ಕುದುರೆಯ ದಳ (ಗದಾದಿ ವಿವಿಧಾಯುಧಂಗಳುಮಂ ಗಜ ರಥ ತುರಗ ಪದಾತಿ ಯುದ್ಧಂಗಳುಮಂ ಉಪದೇಶಂಗೆಯ್ಯುತ್ತುಮಿರೆ: **ಪಂಪಭಾ**, ೨. ೫೫ ವ)

ತುರಗರತ್ನ – [ನಾ] [ಜೈನ] ಚಕ್ರವರ್ತಿಯ ಏಳು ಜೀವರತ್ನಗಳಲ್ಲಿ ಒಂದು (ಪವನಂಜಯಮೆಂಬ ತುರಗರತ್ನಮುಂ: **ಆದಿಪು,** ೧೧. ೩ ವ)

ತುರಿಪ – [ನಾ] ವೇಗ (ಪರಿಜನಮನಿತುಂ ತುರಿಪದೆ ಪರಿತಂದು ಇನ್ನೇವೆವೆಂದು ಕಪ್ಪುರದ ರಜಂಬೊರೆದ ಕರಕಾಂಬುವ ತಳಿದು: **ಆದಿಪು**, ೪. ೧೭)

ತುರುಷ್ಕ ತುರಂಗ – [ನಾ] ಅರಬ್ಬೀ ಠಾಕಣ, ತುರುಷ್ಕ ದೇಶದ ಕುದುರೆ (ಒಂದು ಲಕ್ಕ ಮದದಾನೆಯುಮಂ ಮೂಱು ಲಕ್ಕ ರಥಮುಮಂ ಒಂದು ಕೋಟಿ ತುರುಷ್ಕತುರಂಗಗಳುಮಂ ಪದಿನೆಂಟು ಕೋಟಿ ಪದಾತಿಯುಮಂ ಅಲಸದೆ ಪೇಸೇಟಿಕೆ ಕೊಂದು: **ಪಂಪಭಾ**, ೧೧. ೧೯ ವ)

ತುಲಾದಂಡ – [ನಾ] ತಕ್ಕಡಿಯ ಕೋಲು (ಧರೆಯಱೆಯಲೊಡಂ ತೂಗಲ್ ಧರೆಗೆ ತುಲಾದಂಡಮಲ್ತೆ ಮದ್ಭುಜದಂಡಂ: **ಆದಿಪು**, ೧೪. ೮೧)

ತುಷಾರ – [ಗು] ತಂಪಾದ (ನೃಪಾಂಗನಾ ಅಳಕಚಯಂಗಳಂ ಆಡಿಪುದಾಯ್ತು ಸಂತತೋಚ್ಚಳಿತ ತರಂಗಶೀಕರತುಷಾರಜಳಂ ಸರಸೀಸಮೀರಣಂ: **ಆದಿಪು**, ೪. ೯೫)

ತುಷಿತ – [ನಾ] [ಜೈನ] ಲೋಕಾಂತಿಕ ದೇವತೆಗಳಲ್ಲಿ ಒಂದು ಗುಂಪು (ಸಾರಸ್ವತ ಆದಿತ್ಯ ವಹ್ನಿ ಅರುಣ ಗರ್ವತೋಯ ತುಷಿತ ವ್ಯಾಬಾಧ ಅರಿಷ್ಟರೆಂಬ ಎಣ್ಬರುಂ ಲೋಕಾಂತಿಕದೇವರ್ ಬಂದು: **ಆದಿಪು**, ೯. ೬೦ ವ)

ತುಷ್ಟಿ – [ನಾ] ತೃಪ್ತಿ (ತನ್ನಿಷ್ಟವನ್ನಂ ಉತ್ತರಮಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಾಂಗನಾ ಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ; **ಪಂಪಭಾ**, ೧೪. ೬೫)

ತುಹಿನಹರ – [ನಾ] ಚಂದ್ರ (ಗೋಕರ್ಣನಾಥನಂ ಗೌರೀನಾಥನಂ ಅವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ ಮೂರ್ತಿಯಂ ತ್ರೈಲೋಕ್ಯಸಂಗೀತಕೀರ್ತಿಯಂ ಕಂಡು ಕೆಯ್ಗಳಂ ಮುಗಿದು: **ಪಂಪಭಾ**, ೪. ೨೬ ವ)

ತುಳಾಕೋಟಿ – [ನಾ] ಕಾಲಂದುಗೆ, ನೂಪುರ (ಮದನ ಡಿಂಡಿಮರವಾಡಂಬರಮಾಳೋಳ ತುಳಾಕೋಟಿಕ್ವಣಿತಮೆ ನಿಗಳಾಂದುಕಾರವಮಾಗೆ: **ಆದಿಪು**, ೧೧. ೨೦ ವ)

ತುಳಾಪುರುಷ – [ನಾ] ತುಲಾಭಾರ, ತನ್ನ ತೂಕದ ಚಿನ್ನವನ್ನು ದೇವರಿಗೆ ಅರ್ಪಿಸುವ ವ್ರತ (ಪುರುಷೋತ್ತಮನ ತಂಗೆಯುಂ ತಾನುಂ ತುಳಾಪುರುಷಮನಿರ್ದು ಲೋಕಕ್ಕೆಲ್ಲಂ ಬಿಯಮಂ ಮೆಱೆದು: **ಪಂಪಭಾ**, ೧೪. ೨೦ ವ)

ತುಳಿವೆಡೆ – [ನಾ] ಒಂದು ಬಗೆಯ ಬಟ್ಟೆ (ಕಾರೋಹಣದ ಕಕ್ಕರವಟಿಯಿಗೆಯ ಚಿತ್ರಾವಳಿಯ ಪರಿವೆಡೆಯ ತುಳಿವೆಡೆಯ ನೆಳಲಪಾಣಿಯ: **ಆದಿಪು**, ೪. ೩೪ ವ)

ತುಳುಂಕು – [ಕ್ರಿ] ಹೊರಚೆಲ್ಲು (ಕಡೆಗಣ್ಣೊಳ್ ತುಳುಂಕಿಯುಂ ಕದಪಿನೊಳ್ ಪೊಂಪುಟಿವೋಗಿಯುಂ ಭ್ರೂವಿಭ್ರಮದೊಳ್ ಪೊನಲ್ವರಿದುಂ: **ಆದಿಪು**, ೭. ೧೨೬ ವ)

ತುಳುಂಕುಗುಟ್ಟು – [ಕ್ರಿ] ಹೆಚ್ಚಾಗಿ ತುಳುಕಾಡು (ಆಕೆಗಳಂಗೋಪಾಂಗದೊಳಿಂತು ನಾಟ್ಯರಸಮೆ ತೀವಿ ತುಳುಂಕುಗುಟ್ಟೆ: **ಆದಿಪು**, ೭. ೧೨೬ ವ)

ತುಳ್ಕು – [ಕ್ರಿ] ಹೊರಚೆಲ್ಲು (ಅಂತು ಬೆಳರ್ತಧರಂ ಕಣ್ಣಿಂ ತುಳ್ಕುವ ಕೆಂಪು ಸರದ ನಡುಕಂ: **ಆದಿಪು**, ೧೧. ೧೫೧); [ಕ್ರಿ] ತುಳುಕಾಡುವಂತೆ ಮಾಡು (ಏತೊದಳೊ ಸರೋವರಾಂಬುವನಿತಂ ತವೆ ತುಳ್ಕಿ ರಸಾತಳಂಬರಂ ಬೆದಕಿಯುಂ ಎಂತುಂ ಅಪ್ಪಳಿಸಿ ಕೊಂದಪೆಂ: **ಪಂಪಭಾ**, ೧೩. ೮೦)

ತುಱು – [ನಾ] ಹಸು (ತುಱು ಪರಿವಾಗಳ್ ಎಮ್ಮ ಪೆಣನಂ ತುಟಿದುಂ ಪರಿಗುಂ ದಲ್ ಎಂದು ಚಿಃ ತುಱುಗೊಳೆ ಬಾಟಿಂ ಎಂದು ತುಱಗೋಳೊಳೆ ಸಾವುದು ಸೈಪು ಎಂದು: **ಪಂಪಭಾ**, ೮. ೯೫)

ತುಱುಂಗಲ್ – [ನಾ] ಗುಂಪು (ಆತಂಗೆ ತುಱುಂಗಲುಂ ಬಂಬಲುಮಾಗೆ ಬೀಸುವ ಚಾಮರದ ಪೊಳೆಪುಗಳೆ ದೆಸೆದೆಸೆಗೆಸೆವಂತೆ: **ಆದಿಪು**, ೧೧. ೫ ವ)

ತುಱುಂಬು – [ಕ್ರಿ] [ಮುಡಿಗೆ] ಸಿಕ್ಕಿಸಿಕೊ (ಪುರಜನಮಟ್ಟೆಯಿಂ ಮುಡಿವ ಕೂಡೆ ತುಱುಂಬುವ ಕಿಂಕಿರಾತಶೇಖರರಜದಿಂದೆ: **ಆದಿಪು**, ೭. ೧೧೪); [ಕ್ರಿ] ದಟ್ಟವಾಗಿರು (ಉದಿರ್ದೊಪ್ಪುವುದು ಎಯ್ದೆ ತುಱುಂಬಿದೊಡೊಪ್ಪುವುದು ಎಸಳ ಮೆಲ್ಪಿನಿಂದೊಪ್ಪುವುದು ಉಣ್ಮಿದ ತಣ್ಗಂಪಿಂದೊಪ್ಪುವುದು: **ಆದಿಪು**, ೧೧. ೧೨೬); [ನಾ] ಕೂದಲ ಮುಡಿ (ತೋರಮಲ್ಲಿಗೆಯ ತುಱುಂಬು ರಾಹು ತವೆ ನುಂಗಿದ ಚಂದ್ರನಂ ಒಯ್ಯನೊಯ್ಯನೆ ಅಂದುಗುಟ್ಟಿವೊಳ್ ಒಪ್ಪಿರಲ್: **ಪಂಪಭಾ**, ೭. ೮೮)

ತುಱುಕಾರ – [ನಾ] ದನ ಕಾಯುವವನು (ಪಿಂದೆ ಕಡಂಗಿ ತೇರಂ ಎಸಗು ಎಂಬವಂ ಅಂಬಿಗಂ ಆಜಿರಂಗದೊಳ್ ಮುಂದೆ ಸಮಾನನಾಗಿ ಬೆಸದೆ ಇರ್ಪವನುಂ ತುಱುಕಾಱನಾಗೆ ಮತ್ ಸ್ಯಂದನಚೋದನಕ್ರಮಮದುಂ ಪೊಲೆಯಂಗೆ ಅಮರ್ದು ಇರ್ಕುಂ: **ಪಂಪಭಾ**, ೧೨. ೯೪)

ತುಱುಗಲ್ – [ನಾ] ಗೊಂಚಲು (ಪಣ್ಗೊಲೆಯಿಂ ಬಳ್ಕುವ ಕೌಂಗು ಕಾಯ್ದುಱುಗಲಂ ಪೇಱಿರ್ದ ಚೆಂದೆಂಗು: **ಆದಿಪು**, ೧. ೬೭); [ನಾ] ಗುಂಪು (ಪೊಸಸಂಜೆಮುಗಿಲ ತುಱುಗಲ್ ಮುಸುಕಿದುದು ಪಯಃಪಯೋಧಿಯೆಲ್ಲಮಂ: **ಆದಿಪು**, ೭. ೮೭); [ನಾ] ದಟ್ಟಣೆ (ಪದವಿನ್ಯಾಸದ ತುಱುಗಲ್ ಪೊದಳೆ ಲಯಂಬೆರಸು ರಂಗಮಂ ಬಳಸಿದನಾ ತ್ರಿದಶನಾಥಂ ಅಳೆವವೊಳ್ ಉದನ್ವದಾವೇಷ್ಟಿತಾಖಿಳಾವನಿತಳಮಂ: **ಆದಿಪು**, ೭. ೧೧೯)

ತುಱುಗಾರ – [ನಾ] ಹಸು ಕಾಯುವವನು (ಒರ್ವರಿಂ ಒರ್ವರೆ ಮಿಕ್ಕು ಪಾರ್ದು ಸಾರ್ದು ಇಸೆ ತುಱುಗಾಱರ್ ಅಂದು ಇನಿಸು ಬಳ್ವಳನಾದುದು ಅದೊಂದು ಕಾಳಗಂ: **ಪಂಪಭಾ**, ೮. ೯೩)

ತುಱುಗಾರ್ತಿ – [ನಾ] ದನಕಾಯುವವಳು (ಮನೆ ನಿನಗೆ ನಂದಗೋಪನ ಮನೆ ತುಱುಗಾರ್ತಿ ನಿನಗೆ ಮನೆವೆಂಡತಿ: **ಪಂಪಭಾ**, ೬. ೫೨)

ತುಱುಗು – [[ಕ್ರಿ] ದಟ್ಟೈಸು, ಗುಂಪಾಗು (ತೆಂಬೆಲರಲೆಪಿಂ ಕಳಿಕೆಯೊಳೆ ತುಱುಗಿ ತಳಿರೊಳೆ ತಳತಳಿಸಿದುದೊಂದಶೋಕ ಲತೆಯನೆ ಪೋಲ್ತಳ್: **ಆದಿಪು**, ೮. ೨೯); [ಕ್ರಿ] ತುಂಬು (ದೀಪದೊಳ್ ಪನ್ನಗಪತಿಯ ಫಣಾರತ್ನದೀಪಂ ವಿತಾನಾವಳಿಯೊಳ್ ದಿವ್ಯಂ ವಿತಾನಂ ತುಱುಗಿದ ಅಮರೇಂದ್ರಾರ್ಚನಕ್ಕೆ: **ಆದಿಪು**, ೧೬. ೨); [ಕ್ರಿ] ಒಟ್ಟಾಗು (ಆ ಪರ್ವತದ ವಿಪುಳವನ ಉಪಕಂಠಂಗಳೊಳ್ ತಾಪಸಕನ್ಯೆಯರ್ ನಡೆಪಿದೆಳಲತೆಗಳೊಳೆಱಗಿ ತುಱುಗಿ ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ: **ಪಂಪಭಾ**, ೧. ೧೧೫ ವ)

ತುಱುಗೆಮೆ – [ನಾ] ಒತ್ತಾದ ರೆಪ್ಪೆಗೂದಲು (ಒಳಪೊಯ್ಯಲ್ ನಿನ್ನಂ ಆ ಕನ್ನೆಯ ತುಱುಗೆಮೆಗಳ್ ಸುತ್ತಲುಂ ನಿನ್ನಂ ಆ ಕೋಮಳೆಯಂದಂಬೆತ್ತ ಸುತ್ತುಂಗುರುಳಳವಡಿಸಲ್ ನಿನ್ನಂ: **ಆದಿಪು**, ೪. ೨೧)

ತುಱುಗೊಳ್ – [ಕ್ರಿ] ದನಗಳನ್ನು ಹಿಡಿ (ವಿರಾಟನಿರ್ಪ ಅಱಿಕೆಯ ಪಟ್ಟಣಂ ನಮಗೆ ಇದೇ ಪಿರಿದಪ್ಪುದು ತಳ್ವದೆ ಎಯ್ದಿ ನಾಂ ತುಱುವನೆ ಕೊಳ್ವಂ ಅಂತು ತುಱುಗೊಂಡೊಡೆ ಪಾಂಡವರಿರ್ಪ ಗಂಡರೇ: **ಪಂಪಭಾ**, ೮. ೮೯)

ತುಱುಗೋಳ್ – [ನಾ] ಗೋಗ್ರಹಣ, ದನಗಳನ್ನು ಕದ್ದೊಯ್ಯುವಾಗ ಮಾಡುವ ಹೋರಾಟ (ಚಿಃ ತುಱುಗೊಳೆ ಬಾಟಿಂ ಎಂದು ತುಱಗೋಳೊಳೆ ಸಾವುದು ಸೈಪಿದೆಂದು ಪಾಯ್ದು ಅಱಿಕೆಯ ಗೋವರ್ ಅಣ್ಮಿ ಬರೆ: **ಪಂಪಭಾ**, ೮. ೯೫)

ತುಱುಬು – [ಕ್ರಿ] ಮುಡಿದುಕೊ (ರತಿಗೆ ಮುಡಿಯಲ್ಕೆ ಮದನಂಗೆ ತುಱುಬಲ್ಕಿರ್ದುದೆಂದು ಮಧು ಸುಟಿವ ಮಧುವ್ರತಮುಮಂ: **ಆದಿಪು**, ೧೧. ೧೧೧);

ತುಟಿ – [ಕ್ರಿ] ನೋಯಿಸು (ವಿಳಾಸದಿಂದಿಱುಂಕಿದ ನಿಜೆ ಗಂಡರಳ್ಳೆರ್ದೆಗಳಂ ತುಟಿವೋಜೆಯನುಂಟುಮಾಡುವಂದದೆ: ಪಂಪಭಾ, ೪. ೩೫); ಕಾಲಿಂದ ಮೆಟ್ಟು (ತುಱು ಪರಿವಾಗಳೆಮ್ಮ ಪೆಣನಂ ತುಟಿದುಂ ಪರಗುಂ ದಲ್ ಎಂದು ಚೀ ತುಱುಗೊಳೆ ಬಾಟಿಂ ಎಂದು: **ಪಂಪಭಾ,** ೮. ೯೫); [ಕ್ರಿ] ನಾಶಪಡಿಸು (ರಿಪುಸೇನೆಯಂ ತುಟಿದು ತೊಟ್ಟುಟಿ ಮಾಡುವೆಂ: **ಪಂಪಭಾ,** ೧೩. ೪೪)

ತುಟಿಲ್ – [ನಾ] ನಮಸ್ಕಾರ (ಬ್ರಹ್ಮಋಷಿಯರೆಲ್ಲರುಮಂ ಬರಿಸಿ ತುಟಿಲ ಪರಕೆಯ ಸಮಾನ ಪ್ರತಿಪತ್ತಿಯಿಂ ಕಿಟಿವಿರಿಯರಟಿದು ಪೊಡೆವಟ್ಟು: **ಪಂಪಭಾ**, ೬. ೩೩ ವ)

ತುಟಿಲಸಂದಂ – [ನಾ] ಯುದ್ಧಕ್ಕೆ ತೊಡಗಿದವರು, ಯುದ್ಧವೀರರು (ನೀಮುಂ ಇಂತು ಎರ್ದೆಗೆಟ್ಟರಿಂ ತುಟಿಲ ಸಂದರಂ ಆರುಮಂ ಎಂತು ನಂಬುವರ್: **ಪಂಪಭಾ**, ೧೦. ೧೧೯)

ತುಟಿವು – [ನಾ] ತುಳಿಯುವಿಕೆ (ಜವನಾಣೆಗಂ ಆಜ್ಞೆಗಂ ಉಂಟೆ ವಕ್ರಂ ಆ ಖಳನ ತುಟಿವುಮಂ ಸೋಂಕುಮಂ ಆರವಧರಿಪರ್: **ಆದಿಪು**, ೪. ೬೭)

ತೂಂತಿಡು – [ಕ್ರಿ] ತೂತು ಮಾಡು (ಆತನ ಕೆಲದೊಳ್ ಜಾಳಪಟಂ ತೂಂತಿಟ್ಟಂತೆ ಸಂದಣಿಸಿ ನಿಂದ ಗೋಪಕುಮಾರರ ಅಣಿಯ ನಡುವೆ: **ಪಂಪಭಾ**, ೧೦. ೫೭ ವ

ತೂಂತು – [ನಾ] ತೂತು (ರತ್ನೋಜ್ಜ್ವಳಗಿರಿಕುಳದಿಂ ತೂಂತುನಿಟ್ಟಂತೆ ನೀಳಾಂಭೋದಂಗಳೊಳ್ ಕೂಡೆ ವಿದ್ಯುದ್ವಳಯಮಂ ಒಳಕೊಂಡಂತೆ: **ಆದಿಪು**, ೧೪. ೯೭)

ತೂಗಿ ತೊನೆ – [ಕ್ರಿ] ತೂಗಾಡು (ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮಂ ಮರಸರಿಗೆವಿಡಿದು ಬಿಲ್ವಿಡಿದಾಡುವ ಬೂತಾಟಂಗಳುಮಂ ನೋಡಿ ಗಂಧೇಭವಿದ್ಯಾಧರಂ ಇಂತೆಂದಂ: **ಪಂಪಭಾ**, ೪. ೯೦ ವ)

ತೂಗು – [ಕ್ರಿ] ತೂಕಮಾಡು (ಇಂತಿದು ಇಲ್ಲಿ ತೂಗಿದೊಡೆ ಅಱಿಯಲ್ಕೆ ಬಾರದು ಅದು ಕಾರಣದಿಂ ರಿಪುಭೂಪದಂತಿದಂತದ ತೊಲೆಯೊಳ್ ಪರಾಕ್ರಮದಿಂ ಎನ್ನನೆ ತೂಗಿ ತೋಱಿನೇ: **ಪಂಪಭಾ**, ೧೦. ೪೦)

ತೂಗುಂಗೊಂಬು – [ಕ್ರಿ] ತೂಗಾಡುವ ಕೊಂಬೆ (ತುಱುಗಿರ್ದ ಬಲ್ಮಿಡಿಯ ತೂಗುಂಗೊಂಬಿನೊಳ್ವಾಯ್ದು ಮಂಡಳಿಸುತ್ತಿರ್ಪ ಶುಕಾಳಿ: **ಆದಿಪು**, ೧೧. ೯೬)

ತೂರ್ಯ – [ನಾ] ವಾದ್ಯ (ನಿಜಧ್ವನಿ ತೂರ್ಯಮಾಗೆ ರಾಗದಿನಿನರಶ್ಮಿಯೆಂಬ ಕಸಮಂ ಕಳೆದು: **ಆದಿಪು**, ೬. ೭೧)

ತೂರ್ಯಕ್ಷ್ಮಾಜ – [ನಾ] [ಜೈನ] ದಿವ್ಯವಾದ್ಯಗಳನ್ನು ನೀಡುವ ಕಲ್ಪವೃಕ್ಷ (ಓಲಗಿಪುದೊ ದಂಪತಿಗೆಂದುಮವಾರ್ಯವೀರ್ಯ ತೂರ್ಯಕ್ಷ್ಮಾಜಂ: **ಆದಿಪು,** ೫. ೩೫)

ತೂಳ್ – [ಕ್ರಿ] ಚೆದುರಿ ಹೋಗು (ತರಂಗಂಗಳ್ ತೂಳ್ದು ಅಲಱುಗುಂ ಅವಱ ಅಳ್ಳೇಱಿನೊಳ್ ಅಲಱುಗುಂ ಎರ್ದೆತೆರೆಗಳಳಱಿ ತೂಳ್ವುದು ಪಿರಿದೇ: **ಆದಿಪು**, ೧೧. ೧೪೬); [ಕ್ರಿ] ಕೊಚ್ಚಿಹೋಗು (ಮನದೊಳ್ ಮುಂ ಪುದಿದಿರ್ದ ಕೋಪಮನಿತುಂ ತೂಳ್ದಾಗಳ್ ಎತ್ತೆತ್ತ ಗೆಯ್ದೆನಿದಂ ತಮ್ಮನೊಳ್ ಎಂಬುದೊಂದು ಉಪಶಮಂ ಕೈಗಣ್ಮೆ: **ಆದಿಪು**, ೧೪. ೧೩೨); [ಕ್ರಿ] ನೂಕು, ತಳ್ಳು (ವಿಪ್ರರ್ ತೆರಳ್ದೋಡೆ ತಾಪಸರಂ ಬೆರ್ಚಿಸಿ ತೂಳ್ದಿ ಬೇಳ್ವ ಅರಣಿಯಂ ಕೊಂಡು: **ಪಂಪಭಾ**, ೮. ೩೭); [ಕ್ರಿ] ಹಿಮ್ಮೆಟ್ಟು (ನರರಥಂ ತೂಳ್ದು ಆ ಕುರುಕ್ಷೇತ್ರದಿಂ ಪಡುವು ಎಣ್ಗಾಗವುದು ಪೋಗೆ ಪೋ ಗಡ ಇಸುವೆಂ: **ಪಂಪಭಾ**, ೧೦. ೨೫)

ತೂಟಿಕೊಳ್ – [ಕ್ರಿ] ಜಳ್ಳನ್ನು ಗಟ್ಟಿಕಾಳುಗಳಿಂದ ಬೇರ್ಪಡಿಸು, ಗಾಳಿಯಲ್ಲಿ ತೂರಿಕೊಳ್ಳು (ವಿರೋಧಿಸೈನ್ಯಮಂ ಮಾರಿ ಪೊಕ್ಕಂತೆ ಪೆಣಮಯಂ ಮಾಡಿ ತೂಟಿಕೊಂಡ ಜೋಳದಂತಿರೆ: **ಪಂಪಭಾ,** ೧೧. ೯೩ ವ)

ತೃಣ – [ನಾ] ಹುಲ್ಲು (ತೃಣಶಿಖರ ಅಧ್ಯುಷಿತಾಂಭಃಕಣಸಂಚಳಂ ಅಮರಚಾಪಚಪಳಂ ವಿದ್ಯುತ್ ಕ್ಷಣಿಕಂ: **ಆದಿಪು,** ೪. ೭೫)

ತೃಷ್ಣೆ – [ನಾ] [ವಿಷಯಸುಖದ] ಬಾಯಾರಿಕೆ (ಎನಿತಾನುಂ ಅಂಬುನಿಧಿಗಳಂ ಅನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತಿಲ್ಲೆನಗೆ ನರಭೋಗಮೆಂಬೀ ಪನಿಪುಲ್ಲಂ ನಕ್ಕೆ ತೃಷ್ಣೆ ಪೇಟಿ ಪೋದಪುದೇ: **ಆದಿಪು**, ೯. ೫೭)

ತೆ – [ಅ] ತಿರಸ್ಕಾರ ಸೂಚಕ ಅವ್ಯಯ, ಛೆ (ಪೆಡೆಯಂ ಮುಡಿಯಲ್ಲಿ ತೋರ್ಪ ನಾಗಿಣಿಯರ ಕೆಯ್ತುಮೇಂ ತೆ ಕಳೆ: **ಆದಿಪು**, ೪. ೪೭) [**'ಕೆಯ್ತುಮೇಂ ತೆ ಕಳೆ'** ಎಂಬುದು ಎಲ್. ಬಸವರಾಜು ಸ್ವೀಕರಿಸಿರುವ ಪಾಠ]; ಛೀ (ಗುರುವ ಕೇಶಕಳಾಪಮಂ ತೆಗೆದಂ ತೆ ಗಂಡನುಮಾದಂ ಈ ಪರಿಭವಕ್ಕೆ ಅನುರೂಪಮಿಂ ಪೆಱತೊಂದುಮಿಲ್ಲ ಅಹಿಕೇತನಾ: **ಪಂಪಭಾ**, ೧೨. ೩೭)

ತೆಂಕಣ್ – [ನಾ] ದಕ್ಷಿಣ (ನಕುಳನುಂ ತೆಂಕಣ ದೆಸೆಯ ಮಲೆಪರಂ ಮಂಡಳಿಕರುಮಂ ಅಸಿಯರಾಗೆ ಕವರ್ದುಕೊಂಡು ಲಂಕೆಯ ಮೇಗೆ ನಡೆದು: **ಪಂಪಭಾ**, ೬. ೩೨ ವ)

ತೆಂಕಣ ಗಾಳಿ – [ನಾ] ದಕ್ಷಿಣದಿಂದ ಬೀಸುವ ಗಾಳಿ, ತಂಪಾದ ಗಾಳಿ (ಪೊಸಪೂವಿನೊಳ್ ಪೊರೆದು ಪೊಣ್ಮಿದ ಕಂಪು ಮೊಗಂಗಳಂ ಚಳಿಲ್ಲನೆ ಕೊಳೆ ಪೊಯ್ಯೆ ತೀಡಿದುದು ತೆಂಕಣ ಗಾಳಿ ವಸಂತಮಾಸದೊಳ್: **ಪಂಪಭಾ**, ೫. ೩೪)

ತೆಂಕಣೆಲರ್ – [ನಾ] ತೆಂಕಣ ಗಾಳಿ (ಅಧೀಶವಚನಕದಂಬಕಂ ಎಂಬೊಂದು ತೆಂಕಣೆಲರೊಳ್ ನನೆವೋಯ್ತೆಂಬಿನಂ ಆಕೆಯ ತನುಲತೆ ತುಂಬಿದುದು ಅತಿಬಹಳಪುಳಕವಿಪುಳಶ್ರೀಯಂ: **ಆದಿಪು**, ೭. ೩೦)

ತೆಂಕನಾಡು – [ನಾ] ದಕ್ಷಿಣದೇಶ (ಇಂತೆನ್ನಂ ಕರಂ ನೋಡಿ ನಾಡೆ ಮನಂಗೊಂಡಿರೆ ತೆಂಕನಾಡ ಮಱಿಯಲ್ಕಿನ್ನೇಂ ಮನಂ ಬರ್ಕುಮೇ: **ಪಂಪಭಾ**, ೪. ೩೧)

ತೆಂಕಮೊಗ – [ನಾ] ದಕ್ಷಿಣಾಭಿಮುಖ (ತಾರಾಗಣಂಗಳ್ ನಿಂದ ನೆಲೆಯಿಂ ದೆಸೆಯಂ ಪೊಟ್ಟುಮನಱಿದು ತೆಂಕಮೊಗದೆ ಪಯಣಂಬೋಗಿ: **ಪಂಪಭಾ**, ೩. ೮ ವ)

ತೆಂಬೆರಲ್ – [ನಾ] ತೆಂಕಣ ಗಾಳಿ (ಪೊರೆದೋಱಿ ತೆಂಬೆರಲ್ ಪೊರೆವೊರೆಯಂ ಸಡಿಲ್ಚೆ: **ಪಂಪಭಾ**, ೫. ೩೩)

ತೆಂಬೆಲರ್ – [ನಾ] ತೆಂಕಣ ಗಾಳಿ (ಅಲರ್ವ ಪದಕ್ಕೆ ಬಂದಲೆವ ತೆಂಬೆಲರಿಲ್ಲದೆ ಮಾಣ್ದ ಮಲ್ಲಿಕೋಜ್ಜ್ವಲಮುಕುಳಕ್ಕಂ: **ಆದಿಪು**, ೩. ೧೯)

ತೆಕ್ಕನೆ ತೀವು – [ಕ್ರಿ] ಭರ್ತಿಯಾಗಿ ತುಂಬು (ಚತುರ್ದಶ ಮಹಾನದಿಗಳ ನೀರುಮಂ ತಟತಟ ತೊಳಗುವ ಕಳಧೌತಕಳಶಂಗಳೊಳ್ ತೆಕ್ಕನೆ ತೀವಿ ತಂದ ವಾರವನಿತಾಜನಕ್ಕಂ: **ಪಂಪಭಾ,** ೧೪. ೧೭ ವ)

ತೆಗಲೆ – [ನಾ] ಹೆಕ್ಕತ್ತು, ಹೆಗಲು (ಅಡಿ ತೊಡೆ ಪೊರ್ಕುಳುಂ ತೆಗಲೆ ಕೈ ಕಣೆಕಾಲ್ ಕೊರಲ್ ಎಂಬಿವುಂ ಬೆರಲ್ ನಡುವುರ ಬೆಂ ಬಸಿಱ್ ತೋಳಕು ಕರ್ಜಱ್ ಮುಯ್ವು .. .. ಎಂಬೆಡೆಯನೆ ನಟ್ಟುರ್ಚಿದುವು .. .. ಪಾರ್ಥನಂಬುಗಳ್: **ಪಂಪಭಾ,** ೧೧. ೧೩೬)

ತೆಗಳಿಗೆ – [ನಾ] ಪದರ (ದಿವ್ಯತಳ್ಪತಳದ ಪೊರೆಯೊಳಗೆ ನೆಗೆದ ಕೆಮ್ಮುಗಿಲ ತೆಗಳಿಗೆಯ ಪೊರೆಯೊಳ್ ಪೊರೆವೊರೆಯಲ್ಲದೆ ತೊಳತೊಳ ತೊಳಗಿ: **ಆದಿಪು,** ೨. ೬೧ ವ)

ತೆಗಟ್ – [ನಾ] ನಿಂದೆ, ಹೀನಾಯ (ಸಭೆಯೊಳ್ ಮಾಷಮುಖದಂತೆ ದೋಷಗವೇಷಣಪರರಪ್ಪರ್ ಎಂದೊಡದು ತೆಗಟಲ್ತೇ: **ಆದಿಪು,** ೧. ೨೧)

ತೆಗಟೆನವರ್ – [ನಾ] ನಿಂದಿಸುವವರು (ತಮ್ಮೊಡನಾಡಿಗಳಪ್ಪ ಮೇಳದ ಸಬ್ಬವದ ನಗೆಯ ತೆಗಟೆನವರಂ ಎಮ್ಮ ಬಟೆಯಟ್ಟಿದಂದು ಬನ್ನಿಂ: **ಪಂಪಭಾ,** ೨. ೯೫ ವ)

ತೆಗೆ – [ಕ್ರಿ] ಹೊರಗೆ ತಾ (ಆನೇಜೆಪೆನೆಂದು ಆ ಕಾನೀನಂ ಬಂದೆತ್ತಿ ಬಿಲ್ಲಂ ಏಜೆಸಿ ತೆಗೆಯಲ್: **ಪಂಪಭಾ,** ೩. ೬೦); [ನಾ] [ಪ್ರಾಣಿಯ] ಹಿಂದೆಗೆತ (ನಿಲ್ವೆಡೆಯಂ ಬಗೆಯಂ ತೆಗೆಯಂ ಅಲ್ಲಾಟಮಂ ಕಾಟಮಂ ನೋವುದಂ ಸಾವುದಂ ಎಲ್ಲಂದದಿಂ ಬಗೆದಾಗಳ್: **ಪಂಪಭಾ,** ೫. ೪೩); [ನಾ] ಹಿಡಿದು ಎಳೆ (ಬಯ್ದು ಎನಿತಾನುಂ ತೆಱದಿಂದಂ ಉಟ್ಟುದುವರಂ ಕೆಯ್ದಂದು ದುಶ್ಶಾಸನಂ ತನಗಂ ಮೆಲ್ಲನೆ ಮೃತ್ತು ಸಾರೆ ತೆಗೆದಂ ಧಮ್ಮಿಲ್ಲಮಂ ಕೃಷ್ಣೆಯಾ: **ಪಂಪಭಾ,** ೭. ೫)

ತೆಗೆದಪ್ಪು – [ಕ್ರಿ] ಬಲವಾಗಿ ತಬ್ಬಿಕೊ, ಬರಸೆಳೆ (ದಿಕ್ಕರಿಕರಾನುಕಾರಿಗಳಪ್ಪ ಬಾಹುಗಳಿಂದಂ ಓರೊರ್ವರಂ ತೆಗೆದಪ್ಪಿ ನಿಬಿಡಾಲಿಂಗನಂಗೆಯ್ದು: **ಪಂಪಭಾ,** ೪. ೩೩ ವ)

ತೆಗೆದಿಸು – [ಕ್ರಿ] ಜೋರಾಗಿ [ಬಾಣ] ಪ್ರಯೋಗಿಸು (ನನೆಯಂಬಂ ತೆಗೆದೆಚ್ಚಂ ಅಂಗಜನ ತಪ್ಪು ಏನಾನುಮಂ ತೋಱ್ ಕಾಣ್ಬನಿತಂ ಮಾಡದೆ ಪದ್ಮಜಂ ಮದನನಂ ಬೈದಂತುಟೇ: **ಪಂಪಭಾ,** ೪. ೬೯)

ತೆಗೆದುಯ್ – [ಕ್ರಿ] ದೂರ ಕರೆದೊಯ್ಯಿ (ನಾಳೆ ನರನಂ ತೆಗೆದುಯ್ವುದು ಧರ್ಮಪುತ್ರನಂ ಗುರು ಪಿಡಿದಪ್ಪಂ; **ಪಂಪಭಾ,** ೧೧. ೮೫)

ತೆಗೆನೆಱ್ – [ಕ್ರಿ] ಪೂರ್ತಿ ಎಳೆ (ಗಜೆಸನ್ನೆಗೆಯ್ದು ತೆಗೆನೆಱ್ದು ಎಱಗಿ ಪರಂಕಲಿಸಿ ಪರ್ವಿ ಕೂಕಿಜೆದು ಇಸೆ ಕೆಂಗಜೆಯ ಮೊನೆಯಂಬುಗಳ್ ಕಣ್ದೆಱ್‌ಯಿಸಿದುವು ಪೊಣರ್ವ ಬಿಲ್ಲ ಕಡುವಿತ್ತೆಗರಂ; **ಪಂಪಭಾ,** ೧೦. ೭೩)

ತೆತ್ತಿಸು – [ಕ್ರಿ] ಅಂಟಿಸು, ತನ್ಮಯಗೊಳಿಸು (ಹರನೊಳೆ ಪತ್ತಿ ತೆತ್ತಿಸಿದ ಚಿತ್ತಮಂ ಇರ್ಬಗಿಯಾಗಿ ಮೋಹಮೊತ್ತರಿಸೆ ಸುಯೋಧನಂಗೆ: **ಪಂಪಭಾ,** ೧೩. ೬೩)

ತೆಪ್ಪಱು – [ಕ್ರಿ] [ತೆರ್ಪಱು] ಚೇತರಿಸಿಕೊ (ಆಗಳ್ ತೆಪ್ಪತ್ತುಂ ಎಲ್ಲಿದಂ ಎತ್ತಣಂ ಎಂದು ಕರ್ಣನ ಕಳೇವರಮಂ ನೋಡಿ ನೋಡಲಾಱದೆ ಕಣ್ಗಳಂ ಮುಚ್ಚಿ: **ಪಂಪಭಾ,** ೧೩. ೫೮ ವ)

ತೆಬ್ಬರಿಸು – [ಕ್ರಿ] ಮೇಲಕ್ಕೆತ್ತು (ಇರ್ವರುಂ ಪರಸಿ ತಡವರಿಸಿಯುಂ ತೆಬ್ಬರಿಸಿಯುಂ ಅಟ್ಟಿಜಿಸೊಳ್ ಅಪ್ಪಿಕೊಂಡು: **ಪಂಪಭಾ,** ೧೩. ೮ ವ)

ತೆಮಳ್ – [ಕ್ರಿ] ತೆವಳು, ಅಂಬೆಗಾಲಿಡು (ಪೆಱಗೇಱುದಿವಸದೊಳ್ ತೆಮಳ್ದುಂ ಪೆಱವೇಱುದಿವಸಕ್ಕೆ ತಳರ್ನಡೆನಡೆದುಂ: **ಆದಿಪು,** ೫. ೪೧ ವ); [ಕ್ರಿ] ಜಾರಿಹೋಗು (ಅಮಳರುಂ ಈ ಬೇಳ್ವೆಯ ಮಾತಂ ತೆಮಳೆ ನುಡಿದೊಡೆ ಎಮ್ಮ ಗಂಡವಾತುಂ ಅಳುಂಬಂ ಭೃತಮಕ್ಕುಂ: **ಪಂಪಭಾ,** ೬. ೨೬ ವ)

ತೆಮಳ್ದಿಕೊ – [ಕ್ರಿ] ಕೂಡಿಹಾಕು (ಅಂತು ಜಾತರೂಪಧರನಾಗಿ ತನ್ನ ಪಱೆದು ಬಿಸುಟ ಸಹಸ್ರಕುಂತಳಂಗಳಂ ತನ್ನ ತಳದೊಳ್ ತೆಮಳ್ದಿಕೊಂಡು: **ಆದಿಪು,** ೨. ೩೯ ವ)

ತೆರಳ್ – [ಕ್ರಿ] ಸುಕ್ಕಾಗು (ಮುಸುಮುತ್ತಂತೆ ತೆರಳ್ದ ತನ್ನ ಮೊಗಮಂ ಕಂಡಳ್ಕನೋ ಕೂಡೆ ಜೋಲ್ದು ಸಡಿಲ್ದಿರ್ದ ಒಡಲೊಳ್ ಅಳ್ಳೆಜೊಳ್ಳೆತನಮಂ ಮೇಣ್ಕಾಣನೋ: **ಆದಿಪು,** ೨. ೪೫); [ಕ್ರಿ] ಒಗ್ಗೂಡಿಸು (ತೆರಳ್ದು ಸುರಭೂರುಹ ಪ್ರಸವಧೂಳಿಯಂ ಮೊಕ್ಕಳಂ ಸುರುಳ್ದು ಸರಸೀಸರೋರುಹದಳಂಗಳಂ: **ಆದಿಪು,** ೭. ೬೭); [ಕ್ರಿ] ಒಟ್ಟಾಗು, ಗುಂಪಾಗು (ವಿಪ್ರರ್ ತೆರಳ್ದೊಡೆ ತಾಪಸರಂ ಬೆರ್ಚಿಸಿ ತೂಳ್ದಿ ಬೇಳ್ವ ಅರಣಿಯಂ ಕೊಂಡು: **ಪಂಪಭಾ,** ೮. ೩೭); [ಕ್ರಿ] ಉಂಡೆಯಾಗು (ನಟ್ಟ ಕೋಲ ಬಟೆವಿಡಿದು ಎತ್ತಂ ಸುರಿದುವು ಅವಂದಿರ ಮುಳಿಸಿನ ತೆರಳ್ದ ದಳ್ಳುರಿಯನಿಟೆಸಿ ನವರುಧಿರಂಗಳ್: **ಪಂಪಭಾ,** ೧೨. ೧೪೮)

ತೆರಳ್ಕೆ – [ನಾ] ಸುರಿಯುವಿಕೆ (ಎಂತು ಸೈರಿಸುವೆವಯ್ಯ ವಿಯೋಗಮನೆಂದು ಸೋರ್ವ ಕಣ್ಬನಿಯ ತೆರಳ್ಕೆ ಗದ್ಗದಿಕೆಗೊಳ್ವ ಸರಂ: **ಆದಿಪು,** ೯. ೭೬); [ನಾ] ಅಲುಗಾಟ (ಮಲಯಾನಿಲನೂದೆ ತೆರಳ್ವ ಚೂತಪಲ್ಲವದ ತೆರಳ್ಕೆ ತದ್ವನವಿಲಾಸಿನಿಯುಟ್ಟ ದುಕೂಲದೊಂದು ಪಲ್ಲವದ ತೆರಳ್ಕೆ: **ಪಂಪಭಾ,** ೨. ೧೪)

ತೆರಳ್ಕೆವೆಱು – [ಕ್ರಿ] [ತೆರಳ್ಕೆ+ಪೆಱು] ನಿರಿಹಿಡಿ, ನಿರಿಗೆಯನ್ನು ಮಾಡು (ಕರೆವೆರಸಿದ ಪೊಸದುಗುಲದ ತೆರಳ್ಕೆವೆತ್ತುಡೆ ಹಟತ್ಕಟೀಸೂತ್ರ ಪರಿಸ್ಫುರಿತದೊಳಂ ಕಟ್ಟಿದ ಪೊಂಜುರಿಗೆಯೊಳಂ: **ಆದಿಪು,** ೪. ೩೬);

ತೆರಳ್ಚು – [ಕ್ರಿ] ಒಟ್ಟಾಗಿಸು (ಕೆದಱೆ ಮನುಷ್ಯದಂಪತಿಗಳಿರ್ದುವಂ ಒಂದೆಡೆಯೊಳ್ ತೆರಳ್ಚಿ: **ಆದಿಪು,** ೬. ೮೯); [ಕ್ರಿ] ಹರಡು (ಆ ಗುಹೆಯೊಳಗಣ ಶರದದೊಳಾಗಳೆ ಬಸವಳಿದ ಬಲಮನಾಜೆಸುವವೊಲಾಯ್ತಾ ಗಿರಿಯ ಕೊಳದ ಮರಗಳ ಪೂಗಳ ಕಂಪನೆ ತೆರಳ್ಚಿ ಬೀಸುವ ಪವನಂ: **ಆದಿಪು,** ೧೩. ೫೬); [ಕ್ರಿ] ಹಿಂದಕ್ಕೆ ಹೋಗುವಂತೆ ಮಾಡು (ಈತನ ಕಟಕಕ್ಕೆ ನಿತ್ಯ ಕ್ಷಯ ವ್ಯಯ ಪ್ರತ್ಯವಾಯಂಗಳಂ ಮಾಡಿ ಬೇಸಜೆಸಿ ನೆಲದಿಂ ತೆರಳ್ಚುವಂ: **ಆದಿಪು,** ೧೩. ೫೮ ವ); [ಕ್ರಿ] ಸಂಗ್ರಹಮಾಡು, ಕೂಡಿಹಾಕು (ಎಂತು ಧನಂಗಳಂ ಪ್ರಯೋಗಾಂತರದಿಂ ತೆರಳ್ಚಿದಪಿರಿ ಆಗದು ಇದಾದೊಡಂ ಎಂತು ರಾಜಸೂಯಾಂತಂ: **ಪಂಪಭಾ,** ೬. ೨೩); [ಕ್ರಿ] ಬಾಚು, (ಅಂತು ರಕ್ಕಸವಡೆ ತನ್ನ ಪಡೆಯೆಲ್ಲಮಂ ತೆರಳ್ಚಿ ತೇರಯಿಸಿ ನುಂಗಿದೊಡೆ: **ಪಂಪಭಾ,** ೧೨. ೮ ವ)

ತೆರಳ್ದು ತೂಳ್ – **[ಕ್ರಿ]** ಒಗ್ಗೂಡಿಸಿ ಒಗೆ (ಬಿಸಿಲಂ ಬೆಳ್ದಿಂಗಳುಮಂ ಪಸರಿಸೆ ಕಟ್ಟಿಲೆ ತೆರಳ್ದು ತೂಳ್ದೊಡೆ: **ಆದಿಪು**, ೧೩. ೫೦); **[ಕ್ರಿ]** ಹಿಮ್ಮೆಟ್ಟಿ ನುಗ್ಗು (ಸುಯೋಧನನೊಡ್ಡುಗಳ್ ಕಟಲ್ದು ಅಲಱಿ ತೆರಳ್ದು ತೂಳ್ದು ಬಿಱುತೋಡೆ: **ಪಂಪಭಾ**, ೧೧. ೩೩)

ತೆರೆ – **[ನಾ]** ಅಲೆ (ಇತ್ತ ಗಂಗಾದೇವಿಯುಂ ಆ ಕೂಸಂ ಮುಱುಗಲೀಯದೆ ತನ್ನ ತೆರೆಗಳೆಂಬ ನಳಿತೋಳ್ಗಳಿಂ ಒಯ್ಯನೊಯ್ಯನೆ ತಟಿಕ್ಕೈಸಿ ತರೆ: **ಪಂಪಭಾ,** ೧. ೯೫ ವ)

ತೆಲ್ಲಂಟಿ – **[ನಾ]** ಕಾಣಿಕೆ, ಬಳುವಳಿ (ಎನಗೆನ್ನೋಪನ ಬಂದುದರ್ಕಿದುವೆ ದಲ್ ತೆಲ್ಲಂಟಿ ನೀಂ ನಿನ್ನ ಕಂಪನುಗುಳ್ ಮಲ್ಲಿಗೆ ಚಂದ್ರ ನಿನ್ನ ಪೊಳೆಪಂ ನೀಂ ತೋಱು: **ಆದಿಪು,** ೧೨. ೪೩)

ತೆವರ್ – **[ನಾ]** ದಿಣ್ಣೆ (ಮುಗಿಲಿಂದೆಱಗುವ ಮಱಿ ಕದಡಿ ಬರ್ಪ ತೊಱೆ ಬೆಟ್ಟು ತೆವರ್ ಮೊಱಡು ಉಪಜಲಧಿಗಳೆನೆ ಜನಮಱಿಯಱಿಯೆ: **ಆದಿಪು,** ೬. ೬೨)

ತೆಳ್ಪು – **[ನಾ]** ತಿಳಿಯಾಗಿರುವುದು, ಪರಿಶುದ್ಧತೆ (ತಳ್ತುರ್ವಿ ಪರ್ವಿದೊಡೆ ಆ ಮುನ್ನಿನ ತೆಳ್ಪುಗೆಟ್ಟು ಕೆಸಱಾಯ್ತು ಆಕಾಶಗಂಗಾಜಲಂ: **ಪಂಪಭಾ**, ೧೦. ೨೯)

ತೆಳ್ಪುಗೆಡು – **[ಕ್ರಿ]** ಶುದ್ಧತೆ ನಾಶವಾಗು, ಬಗ್ಗಡವಾಗು (ತಳ್ತುರ್ವಿ ಪರ್ವಿದೊಡೆ ಮುನ್ನಿನಾ ತೆಳ್ಪುಗೆಟ್ಟು ಕೆಸಱಾಯ್ತು ಆಕಾಶಗಂಗಾಜಲಂ: **ಪಂಪಭಾ**, ೧೦. ೨೯)

ತೆಳ್ವಸಿಱ್ – **[ನಾ]** [ತೆಳ್+ಬಸಿಱ್] ತೆಳುವಾದ ಹೊಟ್ಟೆ (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱೆದ ನಿತಂಬ ಇಂಬುವಡೆದ ಒಳ್ತೊಡೆ ನೆಕ್ಕರವದ್ದೆ ತಾನೆ ಪೋ ಕಿಱುದೊಡೆ ಎಂದು ಧಾತ್ರಿ ಪೊಗಟ್ಟುಂ: **ಪಂಪಭಾ,** ೧. ೧೦೮)

ತೆಳ್ಳಗಿರು – **[ಕ್ರಿ]** ಸ್ಪಷ್ಟವಾಗು (ಉಳ್ಳ ಓದುಗಳೊಳಗೆ ಎನಿತಱಿವುಳ್ಳರ್ಗಂ ತಿಳಿಪಲರಿಯದೆನಿಪ ಎಡೆಗಳುಮಂ ತೆಳ್ಳಗಿರೆ ತಿಳಿಪುಗುಂ ಬೆಸಗೊಳ್ಳ ಗುಣಾರ್ಣವನ ಲೆಕ್ಕಮಂ ಪೊಕ್ಕಮುಮಂ: **ಪಂಪಭಾ,** ೨. ೩೫)

ತೆಳ್ಳಿದುವು – **[ನಾ]** ತೆಳ್ಳಗಿರುವುವು (ಮೊಕ್ಕಳಮದಾರ್ ನಡೆ ನೋಟಕ್ಕೊಡಮಿಂತುಂ ಮೂಱಿಸಿಯವು ಮೂಱು ದೊಡ್ಡಿದುವು ಮೂಱಿಡೆ ತೆಳ್ಳಿದುವಂಬುಜಾಕ್ಷಿಯಾ: **ಪಂಪಭಾ,** ೪. ೭೨)

ತೆಱ – **[ನಾ]** ವಿಧಾನ (ಪುಂಡ್ರೇಕ್ಷುದಂಡಂಗಳಂ ಕಡಿಕಡಿದು ಯಂತ್ರಪೀಡನೆಯಿಂ ರಸಂಗೊಳ್ವ ತೆಱನುಮಂ ಅಱಿಯೆ ಪೇೞ್ದು: **ಆದಿಪು,** ೬. ೭೭ ವ); **[ನಾ]** ರೀತಿ (ಎಂದು ಎನಿತಾನುಂ ತೆಱದೊಳ್ ಅಳಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳಂ ನುಡಿದುಂ ಕಾಲ್ವಿಡಿದುಂ ಅಚಳಿತಧೈರ್ಯನ ಮನಮಂ ಚಲಿಯಿಸಲಾಱದೆ: **ಪಂಪಭಾ,** ೭. ೯೪ ವ)

ತೆಱಂದಿರಿ – **[ಕ್ರಿ]** [ತೆಱಂ+ತಿರಿ] ಗಿರಗಿರ ಸುತ್ತು (ಪೀರ್ದು ಪೀರ್ದವಚಱದೇಂ ತೆಱಂದಿರಿದು ಪಾಯ್ದುವೊ ಕೇತಕಿಯೊಳ್ ಮದಾಳಿಗಳ್: **ಆದಿಪು**, ೧೧. ೧೨೦); **[ಕ್ರಿ]** ಅಲೆದಾಡು (ಪಂಬಲ ಬಂಬಲೊಳ್ ತೆಱಂಬಿರಿದುದು ಚಿತ್ತಂ ಆ ದೊರೆಯ ಯೋಗಿಗಂ ಇಂತುಟೆ ಮೋಹಮಾಗದೇ: **ಪಂಪಭಾ**, ೧೩. ೬೩)

ತೆಱಂಬಿಡಿ – **[ಕ್ರಿ]** ನಾನಾ ತೆರನಾಗಿ ಹಿಡಿದುಕೊ (ಇಡಿದಿರೆ ರೋಮಕೂಪದೊಳಗೆ ಉರ್ಚಿದ ಸಾಲ ಸರಲ್ಗಳುಂ ತೆಱಂಬಿಡಿದಿರೆ: **ಪಂಪಭಾ**, ೧೩. ೬೨)

ತೆಱಂಬೊಳೆ – **[ಕ್ರಿ]** [ತೆಱಂ+ಪೊಳೆ] ತೆರತೆರನಾಗಿ ಹೊಳೆ (ಪೊಱಪೊಣ್ಮುವ ಕಣ್ಣ ಬೆಳ್ಪುಂ ಓಪರ ಮನದೊಳ್ ತೆಱಂಬೊಳೆವ ಬಾಳೆಗಳಂತಿರೆ: **ಆದಿಪು**, ೧೧. ೪೬)

ತೆಱಪು – **[ನಾ]** ಸಮಯಾವಕಾಶ (ತೆಱಪನೆ ಪಾಯ್ದಿರ್ಪಂ ಮಾಯ್ದಱುಗುಲಿ ಜವಂ ಅದಱೆನಿನಿಸು ಪೊೞ್ತುಂ ಮಱೆದಿರಲಕ್ಕುಮೆ: **ಆದಿಪು**, ೪. ೭೬); **[ನಾ]** ಜಾಗ (ಕೊಳದಿಂ ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆಱೆದುದು ಅವರ ನಾಣ್ಗಳ ತೆಱಪಂ: **ಪಂಪಭಾ**, ೫, ೬೭)

ತೆಱಪಾಗು – **[ಕ್ರಿ]** ಕ್ರಮವಾಗಿ ಓರೆಯಾಗು ಮತ್ತು ತೆರೆದಿರು (ಆದೆಲರ ಸೋಂಕಿನೊಳ್ ತೆಱಪಾದೊಡೆ ಬೆಳ್ಪೆಸೆಯೆ ಮಸೆದ ಮದನನ ಬಾಳಂತಾದುವು ಪೊಳೆವೊಳ್ದೊಡೆ ತೆಱಪಾದೆರ್ದೆಯಂ ನಟ್ಟುವಂದು ತನ್ಮುನಿಪತಿಯಾ: **ಪಂಪಭಾ,** ೨. ೪೨)

ತೆಱಪುವಡೆ – **[ಕ್ರಿ]** ಎಡೆ ಹೊಂದು, ಅವಕಾಶವನ್ನು ಪಡೆ (ತೆಱಪುವಡೆದು ಅಂಗಜಂ ಕೆಯ್ಸಱೆಗೊಳೆ ನೋಟಕರ ಮನಮನಾಗಳ್ ಕೊಳದಿಂ ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆಱೆದುದು ಅವರ ನಾಣ್ಗಳ ತೆಱಪಂ: **ಪಂಪಭಾ**, ೫, ೬೭)

ತೆಱವು – **[ನಾ]** ಕಪ್ಪ (ಕರಮೊಸೆದಾ ದ್ರುಪದಜೆಯೊಳ್ ನೆರೆದೊಸಗೆ ತಮ್ಮ ಬೀರಮಂ ಬಿಂಕಮುಮಂ ತೆಱವುಂ ತೆಲ್ಲಂಟಿಯುಂ ಎಂದು ಅರಿಕೇಸರಿಗೆ ಆಗಳ್ ಈವವೋಲ್ ಬೆನ್ನಿತ್ತರ್: **ಪಂಪಭಾ**, ೩. ೭೨)

ತೆಱೆ – **[ಕ್ರಿ]** ತೆಗೆ (ತೆಱೆಯದ ಮುನ್ನ ಕೆತ್ತ ಪಡಿಗಳ್ ನವಸೌರಭಮುಣ್ಮೆ ಮೊಕ್ಕಳಂ ತೆಱೆದುವು: **ಆದಿಪು,** ೨. ೬೩); **[ಕ್ರಿ]** ಬಿರಿ, ಸೀಳು (ಒಗೆದ ಸುತಶೋಕದಿಂದ ಆವಗೆಯಂತೆ ಒಳಗು ಉರಿಯೆ ಭೋಂಕನೆ ಎರ್ದೆ ತೆಱೆಯಲ್ ಹಾ ಮಗನೇ ಎಂದು ಅಶ್ರುಜಲಾರ್ದ್ರಗಂಡಂ ಆ ಗಂಡಿನೊಡನೆ ಬಿಸುಟಂ ಬಿಲ್ಲಂ: **ಪಂಪಭಾ**, ೧೨. ೨೮)

ತೆಱೆಗೊಳ್ – **[ನಾ]** ಕಂದಾಯ ವಸೂಲುಮಾಡು (ಅವನಾಳ್ವ ತೆಱೆಗೊಳ್ವ ಬಿಟ್ಟಿಬೆಸಕಯಿಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ: **ಆದಿಪು**, ೮. ೬೩ ವ)

ತೇಂಕು – **[ಕ್ರಿ]** ತೇಲಾಡು (ಶೋಣಿತ ಧಾರಾಳಿಗಳ್ ಉರ್ಚಿ ಪೆರ್ಚಿ ಸಿಡಿಯಲ್ ತೇಂಕಲ್ ವಿಮಾನಂಗಳ್ ಅಳ್ಕಿ ತಗುಳ್ದು: **ಪಂಪಭಾ**, ೧೧. ೭)

ತೇಜ – **[ನಾ]** ಕ್ಷಾತ್ರತೇಜಸ್ಸು (ಗಂಡರ ನೆತ್ತಿಯೊಳೊತ್ತಿ ಬಾಳಂ ಇನ್ನೂಱುಗುಂ ಎಂದೊಡೆ ಏಂ ಪಿರಿದೋ ತೇಜದ ದಳ್ಳುರಿ ಪಾಂಡುರಾಜನಾ: **ಪಂಪಭಾ**, ೧. ೧೧೯); **[ನಾ]** ತೇಜಸ್ಸು (ಆಕೆಯ ಬಗೆದ ಬಗೆಯೊಳೊಡಂಬಡುವಂತೆ ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ ಆದಿತ್ಯನ ತೇಜದಗುಂತಿಯುಮಮಂ ಚಂದ್ರನ ಕಾಂತಿಯುಮಮಂ: **ಪಂಪಭಾ**, ೧. ೧೩೪ ವ)

ತೇಜಶ್ಚಕ್ರ – **[ನಾ]** [ತೇಜಸ್+ಚಕ್ರ] ಪರಾಕ್ರಮದ ಚಕ್ರ (ಚಕ್ರದೊಳೇಂ ಮತ್ತೇಜಶ್ಚಕ್ರಮೆ ಮುಂದಕ್ಕೆ ದಂಡರತ್ನಂಬರಂ

ಆರ್ ವಕ್ರಮೆನಗೆ ಅಖಿಳ ಧರಣೀಚಕ್ರದೊಳ್: **ಆದಿಪು,** ೧೨. ೭೨)

ತೇಜೋಗುಣ – [ನಾ] ಕ್ಷಾತ್ರ, ತೇಜಸ್ಸು (ಕ್ಷತ್ರಂ ತೇಜೋಗುಣಂ ಆ ಕ್ಷತ್ರಿಯರೊಳ್ ನೆಲಸಿ ನಿಂದುದು: **ಪಂಪಭಾ,** ೧. ೨೧)

ತೇಜೋಗ್ನಿ – [ನಾ] ತೇಜಸ್ಸು ಎಂಬ ಬೆಂಕಿ (ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷದ್ಬಲಮಂ ಸುಟ್ಟಂ ಉದಾತ್ತಪುಣ್ಯನವಂ ಚೈತಾಗ್ನಿಯಿಂ ಸುಟ್ಟನಿಲ್ಲ ಒಲವಿಂದೆ: **ಪಂಪಭಾ,** ೧೩. ೬೦)

ತೇಜೋರೂಪ – [ನಾ] ಬೆಳಕಿನ ರೂಪ (ಕರ್ಣನೊಡಲಿಂದಾಗಳ್ ನಡೆ ನೋಡೆ ನೋಡೆ ದಿನಪನೊಳಗೂಡಿದುದು ಒಂದು ಮೂರ್ತಿ ತೇಜೋರೂಪಂ: **ಪಂಪಭಾ,** ೧೨. ೨೧೫)

ತೇರ್ – [ನಾ] ಬಂಡಿ, ರಥ (ಪಿಂದೆ ಕಡಂಗಿ ತೇರಂ ಎಸಗು ಎಂಬವಂ ಅಂಬಿಗಂ ಆಜಿರಂಗದೊಳ್ ಮುಂದೆ ಸಮಾನನಾಗಿ ಬೆಸದೆ ಇರ್ಪವನುಂ ತುಱುಕಾಱನಾಗೆ: **ಪಂಪಭಾ,** ೧೨. ೯೪)

ತೇರಯಿಸು – [ಕ್ರಿ] ಗುಡ್ಡೆ ಮಾಡು (ಅಂತು ರಕ್ಕಸವಡೆ ತನ್ನ ಪಡೆಯೆಲ್ಲಮಂ ತೆರಳ್ಚಿ ತೇರಯಿಸಿ ನುಂಗಿದೊಡೆ: **ಪಂಪಭಾ,** ೧೨. ೮ ವ)

ತೇರೈಸು – [ಕ್ರಿ] ತವಕಪಡು (ಅನ್ನೆಗಂ ವೃಕೋದರಂ ಚತುರ್ದಶ ಭುವನಂಗಳೆಲ್ಲಮಂ ತೆರಳ್ಚಿ ತೇರೈಸಿ ನುಂಗುವಂತು ಮಸಕದಿಂ ಭಗದತ್ತನಂ ಮಾರ್ಕೊಂಡು: **ಪಂಪಭಾ,** ೧೧. ೮)

ತೈಲ – [ನಾ] ಎಣ್ಣೆ (ಘೃತ ಲವಣ ತೈಲ ಕ್ಷೀರ ದಧಿ ವ್ಯಂಜನಂಗಳೊಳ್ ಸಂಸ್ಕಾರಂ ಮಾಡುವ: **ಆದಿಪು,** ೬, ೭೭ ವ)

ತೈಲಪಾಕ – [ನಾ] ಎಣ್ಣೆಯಲ್ಲಿ ಕುದಿಸುವುದು (ಅನವರತ ಪ್ರಮುಚ್ಯಮಾನ ಪ್ರಚುರ ನಿಜನಾರಾಚರಾಜಿಯಿಂದಂ ಅವಿರಳಮದಜಳ ತೈಲಪಾಕ ದುರಾಲೋಕಂಗಳಪ್ಪ ತದ್ಬಲ ಕರಟಿಕಟಕಟಾಹಂಗಳಂ ಅಪತುಚ್ಚಚ್ಚಿದ್ರಂಗಳ್ಮಾಡಲ್ಪಡದೆಯುಂ: **ಆದಿಪು,** ೧೪. ೧೦೩ ವ)

ತೊಂಗಲ್ – [ನಾ] ಕುಚ್ಚು, ಗೊಂಚಲು (ದೇವಾಂಗವಸ್ತ್ರದುಳ್ಳುಡೆಯೊಳ್ ಉಲಿವ ಸೂಸಕದ ತೊಂಗಲ್ವೆರಸು ಎಟಲ್ವ ಮುಂದಣ ಸೋಗೆ ಕಾರ್ಗಾಲದ ಸೋಗೆಯಂತೆ ಸೊಗಯಿಸೆ: **ಪಂಪಭಾ,** ೨. ೪೧ ವ)

ತೊಂಗಲ್ಗುರುಳ್ – [ನಾ] ಇಳಿಬಿದ್ದ ಮುಂಗುರುಳು (ನೊಸಲಂ ತೊಂಗಲ್ಗುರುಳ್ ಮೇಲುದನೊಗೆವ ಕುಚಂ ಬೆನ್ನನಾ ನೀಳಕೇಶಪ್ರಸರಂ .. .. ಪಸರಂಬೆತ್ತು: **ಆದಿಪು,** ೧೧. ೧೬)

ತೊಂಡು – [ನಾ] ಸ್ವೇಚ್ಛಾವೃತ್ತಿ, ತುಡುಗುತನ (ತೊಂಡಿನೊಳ್ ಉರ್ಕಿ ಕೆಟ್ಟ ದಶಕಂಠನಂ ಅಕ್ಕಟ ಕೊಂಡ ಪೆರ್ಮರುಳ್ ಕೊಂಡುದೆ ತನ್ನುಮಂ: **ಪಂಪಭಾ,** ೬. ೩೩); [ಗು] ದುಷ್ಟ (ಸುಭಟರ ಅಟ್ಟೆಗಳಂ ಎಟ್ಟಿಟ್ಟಿ ಕುಟ್ಟುವ ತೊಂಡು ಮರುಳ್ಗಳುಂ: **ಪಂಪಭಾ,** ೧೦. ೧೧೬ ವ)

ತೊಂಡುವೆಣ್ಬುರುಳಿ – [ನಾ] [ತೊಂಡ+ಪೆಣ್+ಪುರುಳಿ] ತುಂಟ ಹೆಣ್ಣು ಗಿಳಿ (ಪಾಡುವ ತುಂಬಿ ಕೋಡುವ ಪುಟಿಲ್ ನಡಪಾಡುವ ರಾಜಹಂಸೆ ಬಂದಾಡುವ ತೊಂಡುವೆಣ್ಬುರುಳಿ .. .. ಅನುರಾಗಮಂ ಮಾಡೆ ಮನಕ್ಕೆ: **ಪಂಪಭಾ,** ೩. ೩೭)

ತೊಂಬತ್ತೊಂಬೈ – [ನಾ] ತೊಂಬತ್ತೊಂಬತ್ತು (ಸಾಸಿರಯೋಜನಂ ಅಮರ್ದು ಸುರಾಸುರಸಂಸೇವ್ಯಮಾಗಿ ತೊಂಬತ್ತೊಂಬೈಸಾಸಿರ ಯೋಜನಮಂ ನೆಗೆದೀ ಸುರಗಿರಿ: **ಆದಿಪು,** ೭. ೬೪)

ತೊಂಬಯ್ಸಾಸಿರ್ವರ್ – [ನಾ] ತೊಂಬತ್ತು ಸಾವಿರ ಮಂದಿ (ತೊಂಬಯ್ಸಾಸಿರ್ವರ್ ನಿಮ್ಮಂಬಿನ ಬಂಬಲೊಳೆ ಮಕುಟಬದ್ಧರ್ ಮಡಿದರ್: **ಪಂಪಭಾ,** ೧೧. ೨೯)

ತೊಂಬೆ – [ನಾ] ಕುಚ್ಚು, ಗೊಂಚಲು (ತಳ್ತ ಬಣ್ಣವಣ್ಣದ ಗುಡಿ ತೊಂಬೆಗೊಂಚಲ್ ಎಲೆಯಿಕ್ಕಿದ ಕಾವಣಮೆಲ್ಲಿಯುಂ ಪೊದಲ್ದೊದವಿರೆ ಕಣ್ಗೆ ಕಂಡುವು ಅಖಿಳಾವನಿಪಾಳರ ಬಿಟ್ಟ ಬೀಡುಗಳ್: **ಪಂಪಭಾ,** ೩. ೩೮)

ತೊಟ್ಟ – [ಗು] (√ತುಡು) ಹೊದಿದ, ತಾಳಿದ' (ಈತನೊಳ್ ತೊಟ್ಟ ಕಿಂಕರಭಾವಂ ನಮಗಕ್ಕಿಗೊಟ್ಟು ಮಡಗೂಟುಣ್ಬಂದಮಂ ಪೋಲದೇ: **ಆದಿಪು,** ೧೪. ೩೨); **ಗು]** [ಬಾಣ] ಹೂಡಿದ (ಮುಂ ತೊಟ್ಟಂಬನಗಿಗನುಗಿದು ಕುಂದಿಸಿದಂ ಭಯದಿಂ ಕರ್ಣನೆಂದು ಲೋಕಂ ನಗದೇ: ಪಂಪಭಾ, ೧೨. ೧೯೯)

ತೊಟ್ಟಗೆ – [ಅ] ಇದ್ದಕ್ಕಿದ್ದಂತೆ, ಬೇಗನೆ (ಅಗುಟ್ದಿರಲ್ ಆ ಕುಟಿಯೊಳ್ ತೊಟ್ಟಗೆ ನಿಧಿಗಂಡಂತೆ ವಸುಧೆಗೆ ಅಸದಳಮಾಯ್ತು ಆ ಮಗನ ಅಂದಂ: **ಪಂಪಭಾ,** ೧. ೯೭); [ಅ] ತಕ್ಷಣವೇ (ಒಗೆದ ಶರಸ್ತಂಬದೊಳ್ ಇರ್ಬಗಿಯಾಗಿ ಮನೋಜರಾಗರಸಂ ಉಗುತರೆ ತೊಟ್ಟಗೆ ಬಿಸುಟು ಬಿಲ್ಲಂ ಅಂಬುಮಂ ಅಗಲ್ದಂ ಆಶ್ರಮದಿಂ ಉದಿತಲಜ್ಜಾವಶಂ: **ಪಂಪಭಾ,** ೨. ೩೩)

ತೊಟ್ಟಗೆ ಕೊಳ್ – [ಕ್ರಿ] ಬೇಗನೆ ಆವರಿಸು (ತಳೋದರಿಯ ಸುಯ್ಗಳ ಬೆಂಕೆಯೊಳ್ ಇಚ್ಚೆಗೆಟ್ಟು ತೊಟ್ಟಗೆ ಕೊಳೆ: **ಪಂಪಭಾ,** ೫. ೧೦)

ತೊಟ್ಟನೆ – [ಅ] (ಭವಪ್ರತ್ಯಯಜ್ಞಾನಂ ತೊಟ್ಟನೆ ಪುಟ್ಟೆ ಪೂರ್ವಭವದೊಳ್ ತೊಟ್ಟೊಂದು ವೃತ್ತಾಂತಮಂ: **ಆದಿಪು,** ೨. ೬೬); ತಕ್ಷಣ (ಧಾತ್ರಿ ತಿಱ್ಱನೆ ತಿರಿವನ್ನೆಗಂ ತೆಗೆದು ಕಂಧರಸಂಧಿಯಂ ಎಯ್ದೆ ನೋಡಿ ತೊಟ್ಟನೆ ನರಂ ಎಚ್ಚೊಡೆ: **ಪಂಪಭಾ,** ೧೨. ೧೬೮)

ತೊಟ್ಟಿಲಿಗ – [ನಾ] ತೊಟ್ಟಿಲಲ್ಲಿ ಮಲಗುವ ಹಸುಗೂಸು (ಬಾಳಕಾಲದೊಳೆ ತೊಟ್ಟಿಲಿಗಂ ಗಜಪ್ರಿಯನಪ್ಪುದಂ ಸಲೆ ತೋಱಿದಂ: **ಪಂಪಭಾ,** ೧. ೪೩)

ತೊಟ್ಟು – [ಅ] [√ತುಡು] ಆರಂಭವಾಗಿ (ನಡೆದುದು ಬಾಳಕಾಲದೊಳೆ ತೊಟ್ಟು ಎನಗೆ ಅಂಕದ ಶೌಚಂ ಈಗಳ್ ಓಗಡಿಪುದೇ ಮುಟ್ಟಿ ನಾಂ ನೆಲನಂ ಏಕೆ ಅದು ಪೆಣ್ಗಡಿಂ: **ಪಂಪಭಾ,** ೧೧. ೪೭)

ತೊಡಂಕು – [ನಾ] ಗೋಜಲು, ಸಿಕ್ಕು (ಕೂಕಿಡುವ ಕುಕಿಲ್ವ ಬಿಕ್ಕುಳಿಪ ತೇಗುವ ತನ್ನ ತೊಡಂಕದೆಯ್ದೆ ನೂರ್ಮಡಿ ಮನದೊಳ್ ಪಳಂಚಲೆಯೆ ಡಕ್ಕೆಯೊಳಟ್ಟಜವಾಡಿದಳ್: **ಪಂಪಭಾ,** ೪. ೯೦); [ಕ್ರಿ] ತೊಡಕಿಕೊ, ಸಿಕ್ಕಿಕೊ (ಜಯದ್ರಥನಂ ಇಕ್ಕು ಉಟಿದಾರೊಳಂ ತೊಡಂಕವೇಡ ಎನಿತುಂ ಅಜಂ ಮರುಜ್ಜವದೆ ಚೋದಿಸೆ: **ಪಂಪಭಾ,** ೧೧. ೧೪೫)

ತೊಡಂಬೆ – [ನಾ] ಹಣ್ಣುಹೂಗಳ ಗೊಂಚಲು (ಬಿಟ್ಟುಳಿಯ ಕುಕ್ಕಂಬಂ ತೊಡಂಬೆಯ ಮೂಡಿಗೆಯ ಕದಲಿಕೆಯ ಕಾಂಡಪಟಗಳುಮಂ: **ಪಂಪಭಾ**, ೫. ೪೭ ವ)

ತೊಡರ್ – [ಕ್ರಿ] ಸಿಲುಕಿಕೊ (ತೊಡರ್ದೀ ಪುತ್ರಕಳತ್ರಮೋಹದೊಳ್ ಇದೇಕಟ್ಟಿರ್ಪೆ ನಿನ್ನ ಮೆಟ್ಟಿಡಿದೇಕಾರಣಂ: **ಆದಿಪು**, ೧. ೭೯); [ಕ್ರಿ] ನಿವಾರಿಸಿಕೊ (ಪಟಮಿದೆ ಸಾಲ್ಗುಂ ಅನ್ಯಭವವಲ್ಲಭನಂ ಪಟವಿದ್ಯೆಯೆತ್ತಲುಂ ಜಟಮಟಿಕರ್ಕಳಂ ತೊಡರೆ ಸುತ್ತಲುಂ ಅಪ್ಪುದಜೆಂ: **ಆದಿಪು**, ೩. ೪೫); [ನಾ] ತೊಡಕು, ಗೋಜಲು (ಅರ್ಥಿಸಂತತಿಗೀಯಲ್ ಬಿಡುವೊನ್ನುಮಂ ಆಳ್ಗೆ ಅಟ್ಟುವ ತೊಡರೊಳ್ ತೊಡರ್ದಿರ್ದರ್ ಅರಸುಮಕ್ಕಳ್ ಕೆಲರ್: **ಪಂಪಭಾ**, ೧೦. ೩೮)

ತೊಡರಿಕ್ಕು – [ಕ್ರಿ] ತೊಡರುಗಳನ್ನು ಒಡ್ಡು (ಎನಿತಾನುಂ ಉಪದ್ರವಂಗಳೊಳ್ ತೊಡರಿಕ್ಕಿಯುಂ ಗೆಲಲಾಱದೆ: **ಪಂಪಭಾ**, ೨. ೩೨ ವ)

ತೊಡರ್ದಮರ್ – [ಕ್ರಿ] ಚೆನ್ನಾಗಿ ಸೇರಿಕೊ (ತೊಡರ್ದಮರ್ದ ಬಾಳವಣ್ಣದ ತುಡುಗೆ ಪಂಚಜಡೆ ನೊಸಲೊಳೊಡಂಬಡುವ ಅರಳೆಲೆ ಇವಜೆಂ ಚೆಲ್ವಿಡಿದಿರ್ದುದು ಬಾಳಕೇಳಿ ಧರ್ಮಾತ್ಮಜನಾ: **ಪಂಪಭಾ,** ೨. ೪)

ತೊಡರ್ಚು – [ಕ್ರಿ] ಕಟ್ಟಿಹಾಕು (ಆ ಸಕಳಕಳಾನಿಳಯನ ಮನೋಮೃಗಮಂ ತಮ್ಮ ಮೃದುಮೃಣಾಳಕೋಮಳ ಬಾಹುಪಾಶಂಗಳೊಳ್ ತೊಡರ್ಚಿಯುಂ: **ಆದಿಪು**, ೮. ೨೪ ವ)

ತೊಡರ್ದಿರ್ – [ಕ್ರಿ] [ತೊಡರ್ದು+ಇರೆ] ತೊಡರಿಕೊಂಡಿರು (ಒಡವುಟ್ಟಿದ ಮಣಿಕುಂಡಲಂ ಒಡವುಟ್ಟಿದ ಸಹಜಕವಚಂ ಅಮರ್ದಿರೆ ತನ್ನೊಳ್ ತೊಡರ್ದಿರೆಯುಂ ಬಂದಾಕೆಯ ನಡುಕಮಂ ಒಡರಿಸಿದನಾಗಳ್: **ಪಂಪಭಾ,** ೧. ೯೫)

ತೊಡರ್ಪು – [ನಾ] ಸಿಕ್ಕು, ತೊಡಕು (ಇದುವು ಪಿರಿದು ತೊಡರ್ಪಾದುದು ಇನ್ನೆತ್ತವೋಪ್ಪೈ: **ಆದಿಪು**, ೪. ೨೧); ಬಂಧನ (ಎನ್ನ ನಿನ್ನ ಪತ್ತುಗೆಯ ತೊಡರ್ಪದಿಂದು ಪಜೆದತ್ತು ಮನಂ: **ಆದಿಪು**, ೧೨. ೩೬); [ನಾ] ಬಂಧನ (ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಟಿಕ್ತೆ ನನ್ನಿಯ ನುಡಿಯಂ ಕಿಡೆ ನೆಗಟಿ: **ಪಂಪಭಾ**, ೧. ೮೨); [ನಾ] ಬೆರೆಯುವಿಕೆ (ನಿನ್ನೆಂದಂತುಟೆ ಮೋಕ್ಷಕ್ಕೆನ್ನಿರ್ಪಿರವು ಅಘಟಮಾನವೈಹಿಕದ ತೊಡರ್ಪು ಎನ್ನಿರವಿನೊಳುಂಟು: **ಪಂಪಭಾ**. ೮. ೪)

ತೊಡರ್ಪುಳ್ – [ನಾ] ಒಂದು ಬಗೆಯ ಹೆಂಡ (ಮಧು ಸೀಧು ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ಯುಬರ್ಪುದು ಮಾರೀಚಿ ತೊಡರ್ಪುಳಿಂದೆ ಸರದಿಂ ಕಂಪಿಲ್ಲ: **ಪಂಪಭಾ**, ೪. ೮೮)

ತೊಡರ್ವಡೆ – [ನಾ] ತಪ್ಪುವ ಜಾಗ (ನೆಗಟ್ಟಂಗಹಾರಂ ನೂಱೆಂಟುಂ ಕರಣಮುಮನವಳ ಡವಕೆಯ ಪರಿಚಾರಿಗೆಯಜೆಗುಂ ಆಕೆಗವು ತೊಡರ್ವಡೆಯೇ: **ಆದಿಪು**, ೯. ೨೯)

ತೊಡವು – [ನಾ] ಒಡವೆ, ಆಭರಣ (ಪೋ ಬಿಡು ಕಟಿಸೂತ್ರಮಂ ತೊಡೆಯ ಬಿಣ್ಪು ಪದಾಂಬುರುಹಕ್ಕೆ ತಿಣ್ಣಂ ಎಂತು ಉಡಿಸುವುದಕ್ಕ ನೂಪುರಮಂ ಈ ತೊಡವು ಏವುದೋ ರೂಪೆ ಸಾಲದೇ: **ಪಂಪಭಾ**, ೩. ೪೬)

ತೊಡಿಗೆ – [ನಾ] ಆಭರಣ (ಮುತ್ತಿನ ತೊಡಿಗೆಗಳಂ ತೊಟ್ಟು ದರ್ಭಶಯನದೊಳಿರ್ದು: **ಪಂಪಭಾ,** ೧. ೧೧೮ ವ)

ತೊಡು – [ಕ್ರಿ] [√ತುಡು] ಅನುಭವಿಸು (ಭವಪ್ರತ್ಯಯಜ್ಞಾನಂ ತೊಟ್ಟನೆ ಪುಟ್ಟೆ ಪೂರ್ವಭವದೊಳ್ ತೊಟ್ಟೊಂದು ವೃತ್ತಾಂತಮಂ: **ಆದಿಪು**, ೨. ೬೬); [ಕ್ರಿ] ಧರಿಸು (ಅಂತೆಗೆಯ್ವೆನೆಂದು ತೀರ್ಥಜಲಂಗಳಂ ಮಿಂದು ದಳಿಂಬವನುಟ್ಟು ಮುತ್ತಿನ ತೊಡಿಗೆಗಳಂ ತೊಟ್ಟು ದರ್ಭಶಯನದೊಳಿರ್ದು: **ಪಂಪಭಾ,** ೧. ೧೧೮ ವ); [ಕ್ರಿ] ಆರಂಭವಾಗು, ಆರಂಭಿಸು (ಕೊರಲೊಳ್ ಕಟ್ಟಿದ ದೇವಿಯಂತೆ ಉರದೊಳ್ ಶ್ರೀ ತೊಟ್ಟಿಲೊಳ್ ತೊಟ್ಟು ಅನಂತರಂ ಎನ್ನೊಳ್ ನೆಲಸಿತ್ತು: **ಪಂಪಭಾ**, ೧೦. ೯); [ಕ್ರಿ] [ಬಾಣ] ಹೂಡು (ಇಟ್ಟೊಡೆ ತನಗಸುರಾರಿಯ ಕೊಟ್ಟ ಮಹಾವೈಷ್ಣವಾಸ್ತ್ರಮಂ ಗಾಂಗೇಯಂ ತೊಟ್ಟು ಇಸುವುದುಂ: **ಪಂಪಭಾ**, ೧೧. ೨೨)

ತೊಡೆ – [ನಾ] ಊರು, ದೇಹದ ಭಾಗ (ಮೊಗಂ ಉತ್ಫುಲ್ಲ ಸರೋಜಹಾಸಿ ನಯನಂ ನಿಲಾಂಬುಜಸ್ಪರ್ಧಿ ಬಾಹುಗಳ್ ಆಜಾನುವಿಳಂಬಿಗಳ್ ತೊಡೆಗಳುಂ ರಂಭಾಮೃದುಸ್ತಂಭ ಶೋಭೆಗಳಂ ಗೆಲ್ದುವು: **ಆದಿಪು**, ೧. ೭೪); [ಕ್ರಿ] ಲೇಪಿಸು (ಮುಖಚಂದ್ರನಂ ಚಂದ್ರಕವಳದಿಂ ತೊಡೆದು: **ಆದಿಪು,** ೪. ೪೧ ವ); [ಕ್ರಿ] ಒರೆಸು (ಭಕ್ತಿಭರಾನತನಿಪತತ್ ಕರ್ಣಪೂರ ಪಲ್ಲವಂ ತದೀಯ ಪಾದಪಲ್ಲವಂಗಳಂ ಆನಂದಾಶ್ರುಮಿಶ್ರಿತ ಜಳಂಗಳೊಳ್ ತೊಳೆದುಂ: **ಆದಿಪು**, ೫. ೪೬ ವ)

ತೊಡೆಸಕ್ಕಿ – [ನಾ] ಪ್ರತ್ಯಕ್ಷ ಸಾಕ್ಷಿ (ವಜ್ರವೇದಿಕೆಯಂ ತಾಂ ತೊಡೆಸಕ್ಕಿವೊಯ್ವವೋಲ್ ಪೊಯ್ದೊಡನೊಡನುಚ್ಚಳಿಪುವಿದೞ ತುಂಗತರಂಗಂ: **ಆದಿಪು**, ೧೨. ೧೨೪)

ತೊಡೆಸೋಂಕು – [ನಾ] ತೊಡೆ ಸೋಕುವಷ್ಟು ಹತ್ತಿರ (ಅಂತೆ ಕುಳ್ಳಿರಿರಪ್ಪೊಡೆ ಇಂ ನಿಮಗಾಣೆಯೆಂದಿರವೇಟ್ಟು ಇಳಾಕಾಂತನಂ ತೊಡೆಸೋಂಕಿ ಕುಳ್ಳಿರೆ: **ಪಂಪಭಾ,** ೧೨. ೮೯)

ತೊಣೆ – [ನಾ] ಸಮ (ಕರ್ಣನ ಎಣೆಗಂ ತೊಣೆಗಂ ನೃಪರಾರುಮಿಲ್ಲ ಬೆಳ್ಕುಱಿ ರಿಪುಸೇನೆ ತೇರನೊಸೆದು ಆನೆಸಗುತ್ತಿರೆ ಕರ್ಣನಂ ಗೆಲಲ್ ನೆಱೆವರೆ: **ಪಂಪಭಾ,** ೧೨. ೧೦೦)

ತೊಣೆವೆಱು – [ಕ್ರಿ] [ತೊಣೆ+ಪೆಱು] ಸಮಾನವಾಗು (ಪೊಣರ್ದೊಡಂ ಅನುವರಂ ಇವನೊಳ್ ತೊಣೆವೆತ್ತಪುದು ಎನಗೆ ನರನೊಳ್ ಎಂದು: **ಪಂಪಭಾ**, ೧೨. ೧೬೪)

ತೊತ್ತೞದುೞಿ – [ಕ್ರಿ] ಗಿಜಿಗಿಜಿ ತುಳಿ (ಹೀನಬಲನಂ ಅಧಿಕಬಲಂ ತೊತ್ತೞದುೞಿದಂ ಎಂಬ ಲೋಕದ ಪೞಿ ಪೊರ್ದದೆ ಮಾಣೆ ಧರ್ಮಯುದ್ಧದೊಳೆಸೆಗಿಂ: **ಆದಿಪು,** ೧೪. ೧೦೨)

ತೊದಳ್ – [ಕ್ರಿ] ಮುದ್ದುಮಾತಾಡು (ಕಿವಿಗಿಂಪಂ ತೊದಳೊಳ್ ಪೊದಳ್ದ ನುಡಿಗಳ್ ಕಣ್ಗಟ್ಟಿಱಿಂ ರಾಗದಾಡುವ ಕೂಸಾಟದ ಚೆಲ್ವುಗಳ್ ಕುಡೆ: **ಆದಿಪು**, ೭. ೧೨೯); [ನಾ] ತಡವರಿಸುವಿಕೆ, ಹಿಂದೆ ಮುಂದೆ ನೋಡುವುದು (ಏನಭಿಮತಮವರ್ಗೆ ಅವರ್ಗದನೇನುಂ ತೊದಳಿಲ್ಲದಿತ್ತು ಮನ್ನಿಸಿದಂ ಸನ್ಮಾನಪುರಸ್ಸರಂ: **ಆದಿಪು**, ೧೫. ೧೨); [ಕ್ರಿ] ಹಿಂಜರಿ (ಷೋಡಶ ಋತ್ವಿಜರ್ಗೆ ಇತ್ತುದಕ್ಕೆ ಬಾಯ್ಬಿಟ್ಟಿರೆ

ವಿಪ್ರಕೋಟಿ ಮಡಗಲ್ಕೆಡೆಯಿಲ್ಲದೆ ಪೊನ್ನ ರಾಶಿಯಂ ಬಟ್ಟನೆ ಬಂದು ಕಾಯೆ ಏಂ ತೊದಳಿಲ್ಲದಿತ್ತನೋ: **ಪಂಪಭಾ,** ೬. ೩೯)

ತೊದಳ್ನುಡಿ – [ನಾ] ಮೃದು ಮಾತು (ಒಂದು ಭಂಗಿಗೆ ನೆಗಟಳ್ವೊಂದು ಮೆಲ್ಪಿನ ತೊದಳ್ನುಡಿಗಪ್ಪೊಡಂ ಎಯ್ದೆ ವಾರವೇನೊಗಸುಗಂ ಎಂದು ತಳ್ತಗಲನಾಕೆಯನಾ ಲಲಿತಾಂಗವಲ್ಲಭಂ: **ಆದಿಪು,** ೨. ೭೫); **[ನಾ]** ಮಕ್ಕಳ ಮಾತು (ಮುಖಸರಸಿಜದೊಳ್ ದರಹಸಿತಂ ನೆಗಟ್ವಿನಂ ತೊದಳ್ನುಡಿ ನುಡಿದ: **ಆದಿಪು,** ೮. ೩); **[ಕ್ರಿ]** ಏನೇನೋ ಹರಟು (ತೊದಳ್‌ನುಡಿಯದೆ ಪೋಗೆಂದೊಡೆ ಒಂದಬ್ದದೊಳೆ ಬೃಹಂದಳೆಯಾಗೆಂದು ಮುನಿದು ಶಾಪವನಿತ್ತಳ್: **ಪಂಪಭಾ,** ೮. ೨೯)

ತೊದಳ್ವಾತು – **[ನಾ]** ತೊದಲು ಮಾತು (ಸೀತೆ ಕಡಂಗಿ ಕಾಯ್ದು ಕಡೆಗಣ್ಚಿದಳಪ್ಪೊಡೆ ಧಾತ್ರನಿಂ ತೊದಳ್ವಾತಿನೊಳೇನೊ ಪಾಂಡವರ ಕೈಯೊಳೆ ನಿನ್ನ ನಿಸೇಕಮಾಗದೇ: **ಪಂಪಭಾ,** ೯. ೪೯)

ತೊನೆ – **[ಕ್ರಿ]** ತೂಗಾಡು, ನೇತಾಡು (ಅರಿವ ನಡುವ ಉಡಿವ ನೇರ್ಗೋಲ್ಪರಿದು ಉರ್ಚುವ ನಟ್ಟು ತೊನೆವ ಕಣೆಗಳ್ಗೆ ಮೊಗಂದಿರಿಯದೆ: **ಪಂಪಭಾ,** ೧೦. ೭೪

ತೊನೆಪ – [ನಾ] ತೂಗಾಡುವಿಕೆ (ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮಂ ಮರಸರಿಗೆವಿಡಿದು ಬಿಲ್ವಿಡಿದಾಡುವ ಬೂತಾಟಂಗಳುಮಂ ನೋಡಿ ಗಂಧೇಭವಿದ್ಯಾಧರಂ ಇಂತೆಂದಂ: **ಪಂಪಭಾ,** ೪. ೯೦ ವ)

ತೊರೆ – [ಕ್ರಿ] ಸೂರೆ ಬಿಡು (ತೊರೆದುದು ಕಾಮಧೇನು ತುಱುಗಲ್ಗೊನೆವಣ್ಣುದು ಕಲ್ಪವೃಕ್ಷಂ: **ಪಂಪಭಾ,** ೧೪. ೨೧)

ತೊಲಗಿಸು – [ಕ್ರಿ] ತೆಗೆದುಹಾಕು (ವಸ್ತ್ರಾಭರಣಮಾಲ್ಯಾದಿಗಳಂ ಮೆಯ್ಯಿಂ ತೊಲಗಿಸಿ ಪೂರ್ವಾಭಿಮುಖನುಂ ನಿಬಿಡಬದ್ಧ ಪಲ್ಯಂಕಾಸನನುಂ ಆಗಿ: **ಆದಿಪು,** ೯. ೭೬ ವ)

ತೊಲಗು – [ಕ್ರಿ] ಜಾರು (ಮನಸಿಜನೃಪಲೀಲಾಲಾಂಛನಂ ಸ್ವಸ್ತಿಕಂ ಸ್ತ್ರೀಜನದೊಳೆಸೆದು ನಿಂದತ್ತು ಉತ್ತರೀಯಾಂತರೀಯಂ ತೊನೆಯೆ ತೊಲಗಿ: **ಆದಿಪು,** ೧೧. ೧೫೨); **[ಕ್ರಿ]** ಬಿಟ್ಟು ಹೋಗು (ಪ್ರಾಣಂ ಒಡಲಿಂದಂ ತೊಲಗೆಯುಂ ತೊಲಗದ ನನ್ನಿಯಂ ಉದಾಹರಿಸುವಂತೆ ಪತ್ತೆಂಟು ಕೋಲನೆಚ್ಚು: **ಪಂಪಭಾ,** ೧೨. ೨೧೩ ವ)

ತೊಲೆ – [ನಾ] [ತುಲಾ] ತಕ್ಕಡಿ (ತೊಲೆಯಂ ಜನರಂಜನೆಗೇಱೆ ರಾಗಮಂ ಭೂವಲಯಕ್ಕೆ ಬೀಱೆದಂ ಅದೇಂ ಪ್ರಭುಮಾಡಿದ ಮಾಯರೆ ಸಲ್ಲದೇ: **ಪಂಪರಾ,** ೭. ೧೬೬)

ತೊವರ್ಗಂಪು – [ನಾ] ಒಗರಿನಿಂದ ಕೂಡಿದ ಸುವಾಸನೆ (ವನಜವನಂಗಳ ತೊವರ್ಗಂಪನಾಂಪ ಬಗೆ ಬಳೆಯೆ ಮೊರೆವುವಳಿಗಳ ಬಳಗಂ: **ಆದಿಪು,** ೧೨. ೫೦)

ತೊವಲ್ – [ನಾ] ಚಿಗುರು, ಚಿಗುರೆಲೆ (ಕೆಂದಳಿರ್ವಾಸು ಸೇಕದ ತೊವಲ್ಗೆಣೆಯಾಯ್ತು ಮೃಣಾಳನಾಳವೊಂದೊಂದದೆವೊತ್ತಿ ಪತ್ತಿದುವು: **ಪಂಪಭಾ,** ೫. ೭); **[ನಾ]** ತೊಗಲು, ಚರ್ಮ (ಬೇಂಟೆಯಾತಂಗೆ ಮೃಗವ್ಯಾಯಾಮ ಕಾರ್ತಿಕೇಯಂ ಮೆಚ್ಚಿ ಮೆಚ್ಚುಗೊಟ್ಟು ತೊವಲನಿಕ್ಕೆಂದು ಮುಂದೆ ಪೇೞ್ದಟ್ಟಿ: **ಪಂಪಭಾ,** ೫. ೪೭ ವ); **[ನಾ]** ಚಿಗುರು, ಚಿಗುರು ಬಿಡು (ಪಯೋಧರಕಾಲದೊಳ್ ಎರಡು ತಡಿಯುಮಂ ಪೊಯ್ದು ಪರಿವ ತೊಱೆಗಳುಮಂ ತೊವಲ್ತು ಸೊಗಯಿಸುವ ಅಡವಿಗಳುಮಂ: **ಪಂಪಭಾ,** ೭. ೨೫ ವ)

ತೊವಲನಿಕ್ಕು – [ಕ್ರಿ] [ಬೇಟೆಗಾಗಿ] ಚಿಗುರನ್ನು ಹಾಕು (ಮೆಚ್ಚುಗೊಟ್ಟು ತೊವಲನಿಕ್ಕೆಂದು ಮುಂದೆ ಪೇೞ್ದಟ್ಟಿ ನಾರಾಯಣನುಂ ತಾನುಂ ಪರಿವಾರಂ ಬೆರಸು ಬೇಂಟೆಗೆ ಪೊಱಮಟ್ಟು: **ಪಂಪಭಾ,** ೫. ೪೭ ವ)

ತೊವಲಿಕ್ಕು – [ಕ್ರಿ] ಚಿಗುರು ಬಿಡು, ಚಿಗುರಿನಿಂದ [ಎಲೆಗಳಿಂದ] ಮುಚ್ಚು (ಆಡಲಾಡಿಸಲ್ ಪಾಱೆಯಂ ನಿಱಿಸಲುಂ ಪರಿಗೊಳಲ್ ತೊವಲಿಕ್ಕಲೊಳಗಂ ಬರಲ್ ಕಾಡ ಬೇಲಿಯಂ ಮಾರ್ಕಾಡನಱೆಯಲುಂ .. .. ಮಾಡಲ್ ಮಾಡಿಸಲ್ .. .. ನೀನೆ ಬಲ್ಲೆ: **ಪಂಪಭಾ,** ೫. ೪೧)

ತೊವಲ್ಗೊಳ್ – [ಕ್ರಿ] [ತೊವಲ್+ಕೊಳ್] ಶರ್ಣಾಗತಿಯ ಸಂಕೇತವಾಗಿ ಚಿಗುರನ್ನು ಹಿಡಿದುಕೊ (ನಿನ್ನಂಗನೆಯರ್ ತೊವಲ್ಗೊಳೆ ಭಯಂಗೊಳೆ ಕೋಡಗಗಟ್ಟುಗಟ್ಟಿ ಚಿತ್ರಾಂಗದನುಯ್ಯೆ: **ಪಂಪಭಾ,** ೯. ೫೪)

ತೊವಲ್ನಾರು – [ನಾ] ತೊಗಟೆ ಮತ್ತು ನಾರು (ಇಂತಾದರಮೆ ತೊವಲ್ನಾರುಮಂ ಆದರದೇಂ ನಿನ್ನ ಮನಕೆ ಚಿಂಂತೆಯುಮಿಲ್ಲ: **ಪಂಪಭಾ,** ೭. ೪೯)

ತೊವಲ್ವಿಡಿ – [ಕ್ರಿ] [ತೊವಲ್+ಪಿಡಿ] ಚಿಗುರನ್ನು ಹಿಡಿ [ಹೇಡಿತನದ ಸೂಚಕ] (ನಾಳೆ ದಿನೇಶಂ ಅಸ್ತದತ್ತ ಉಡುಗದ ಮುನ್ನ ಸೈಂಧವನಗುರ್ವಿಸೆ ಕೊಲ್ಲದೊಡೇನೊ ಗಾಂಡಿವಂಬಿಡಿದು ಎನೆ ಚಿಃ ತೊವಲ್ವಿಡಿದನಲ್ಲನೆ ವೈರಿಗೆ ಯುದ್ಧರಂಗದೊಳ್: **ಪಂಪಭಾ,** ೧೧. ೧೨೨)

ತೊಳಕು – [ನಾ] ದೇಹದ ನಡುವಣ ಭಾಗ (ಬಸಿಱ್ ತೊಳಕು ಕರ್ಜಱಿ ಮುಯ್ಯು ಮುಸುಂಬು ಮೂಗು ಪೆರ್ದೊಡೆ ಕಟಿ ಮುಮ್ಮಡಂ ಪರಡು ಸಂದಿ ನೊಸಲ್ ಪಣೆ ಕದಂಪು ಎಂಬೆಡೆಯನೆ ನಟ್ಟುರ್ಚಿದುವು: **ಪಂಪಭಾ,** ೧೧. ೧೩೬)

ತೊಳಗಿ ಬೆಳಗು – [ಕ್ರಿ] ಹೊಳೆದು ಪ್ರಕಾಶಿಸು (ಆವರಿಸಿತ್ತೊ ನಭೋಂತರ್ಭೂವಿವರಮಂ ಅಮರ್ದಿನೆಸಕಂ ಎನೆ ಬಿರಯಿಗಳ್ ಓ ಓ ಇದು ಮದನನ ಸೋದನದೀವಿಗೆಯೆನೆ ತೊಳಗಿ ಬೆಳಗಿದುದು ತುಹಿನಕರಂ: **ಪಂಪಭಾ,** ೪. ೫೨)

ತೊಳಗು – [ಕ್ರಿ] ಪ್ರಕಾಶಿಸು (ಕಾರಿರುಳ ತಿರುಳ ಬಣ್ಣ ಕೂರಿದುವೆನೆ ತೊಳಪ ದಾಡೆ ಮಿಳಿರ್ವ ಉರಿಗೇಸಂ ಪೇರೊಡಲ್ ಎಸೆದಿರೆ ಪುಟ್ಟಿದಂ ಆರುಂ ಅಗುರ್ವಿಸೆ ಮಗಂ ಘಟೋತ್ಕಚನೆಂಬಂ: **ಪಂಪಭಾ,** ೩. ೨೦)

ತೊಳಪ್ಪ – [ಗು] ಹೊಳೆಯುವ (ಸರಿಗೆಯೊಳ್ ಸಮೆದ ಅಕ್ಷಮಾಲಿಕೆ ಪೊನ್ನ ಮುಂಜಿ ತೊಳಪ್ಪ ಕಪ್ಪುರದ ಭಸ್ಮರಜಃ ತ್ರಿಪುಂಡ್ರಕಂ ಒಪ್ಪೆ ಪಿಂಗಜಟಾಳಿ ತಾವರೆಯ ಸೂತ್ರದೊಳಾದ ಜನ್ನವಿರಂ ದುಕೂಲದ ಕೋವಣಂ ಕರಂ ಒಡಂಬಡೆ ನೋಟಕರ್ಕಳಂ ಆ ತಪಸ್ವಿ ಮರುಳ್ಚಿದಂ: **ಪಂಪಭಾ,** ೬. ೮)

ತೊಳೆ – [ಕ್ರಿ] ಶುದ್ಧಮಾಡು (ಪಳುಕಿನ ಪಾಪೆಯನಮರ್ದಿಂ ತೊಳೆದಂತೆ ಒರ್ಮೊಟದ ದಿವ್ಯವಪು ಮಣಿಮಯಕುಂಡಳ ಮಕುಟ ಕಟಕ ಭೂಷಣವಿಳಾಸದಿಂದೇಂ ವಿಳಾಸಮಂ ತಾಳ್ದಿದುದೋ: **ಆದಿಪು,** ೬. ೩೯)

ತೊಱೆ – [ನಾ] ನದಿ (ತನ್ನೊಳಗಣ ಪನ್ನಗನಂ ಮುಂ ನೀಂ ಪಿಡಿದು ಒಗೆಯೆ ಕಾಯಲಾಱದೆ ಪಿರಿದುಂ ಬನ್ನದ ಕರ್ಪೆಸೆದುದು ತೊಱೆಗೆ ಇನ್ನುಂ ಹರಗಳ ತಮಾಳನೀಳಚ್ಛವಿಯಿಂ: **ಪಂಪಭಾ,** ೫. ೫೪); **[ಕ್ರಿ]**

ಬಿಟ್ಟುಬಿಡು (ತೊಱೆ ತೊಱೆಯೆಂಬ ಮಾತಂ ಅನಿತಿಲ್ಲದೊಡೆ ಆಂ ತೊಱೆವೆಂ ದಲ್ ಎಂದೊಡೆ: **ಪಂಪಭಾ,** ೭. ೭೫)

ತೊಱೆಕೊಳ್ – [ಕ್ರಿ] ನದಿಯಂತೆ ಕೊಚ್ಚಿಕೊಂಡು ಹೋಗು (ಎಯ್ತಂದರಂ ತೊಱೆಕೊಳ್ವಂತಿರೆ ಕೊಂಡುವು ಅಂದು ಅರಿಗನೆಚ್ಚು ಉಗ್ರೇಷುಧಾರಾಜಳಂ: **ಪಂಪಭಾ,** ೫. ೨೧)

ತೊಱೆದ – [ಗು] [ಎಲ್ಲವನ್ನೂ] ಬಿಟ್ಟವನು, ಸನ್ಯಾಸಿ (ಕಿಱೆಯಂ ಮುತ್ತಂ ಧನದಂ ಬಱುವಂ ತೊಱೆದಂ ಗೃಹಸ್ಥನೆನ್ನದೆ ಮುಂಬಿಟ್ಟಱಿಸಿ ಕೊಲುತಿರ್ಪ ಜವನಂ: **ಆದಿಪು,** ೪. ೭೬)

ತೊಱೆಯಿಸು – [ಕ್ರಿ] [ಐಹಿಕ ಬಂಧನಗಳನ್ನು] ಬಿಡಿಸು (ಆಯಿರ್ದ ಮಾಟಕ್ಕೆಯೊಳ್ ಪರಮಾಯುಷ್ಯಂತಂಬರಂ ನಿರಾಕುಳಮಾಗಿರ್ಪಾಯಿರವಿನ ಜೈನಾಭಿಪ್ರಾಯಂ ಪ್ರಾಯೋಪಗಮನದಿಂ ತೊಱೆಯಿಸಿದಂ: **ಆದಿಪು,** ೨. ೫೩)

ತೊಟಿಲ್ – [ಕ್ರಿ] ಅಲೆದಾಡು (ವೇಳಾವನ ಲತಾಗೃಹೋದರ ಪುಳಿನಸ್ಥಳಪ್ರದೇಶದೊಳ್ ತೊಟಿಲಲುಂ ಅಟ್ಟೆಯಾಗೆ: **ಪಂಪಭಾ,** ೧. ೧೪೨ ವ); [ಕ್ರಿ] ಸುತ್ತಾಡು (ಆನೆಯನೇಱೆ ಸೌಷ್ಠವದೆ ಬರ್ಪ ಅರಿಕೇಸರಿಯ ಒಂದು ಗಾಡಿಯ ಉದ್ದಾನಿ ತಗುಳ್ದು ಕಣ್ಣೊಳೆ ತೊಟಿಲ್ದು: **ಪಂಪಭಾ,** ೪. ೫೮)

ತೊಟಿಲ್ತರ್ – [ಕ್ರಿ] ಸುತ್ತಾಡಿಕೊಂಡು ಬಾ (ತರುಣವೃಷಂ ಕೆಲೆದು ತೊಟಿಲ್ತರೆ ಕಂಡುದಱೆಂದೆ ಜೈನದೀಕ್ಷೆಗೆ ಮೆಯ್ಯಂ ತರುಣಜನಂಗಳೆ ತರ್ಪರ್: **ಆದಿಪು,** ೧೫. ೪೪)

ತೊಟಿಲ್ತಾಳ್ – [ಕ್ರಿ] ತೊತ್ತನ್ನಾಗಿಸಿಕೊ (ಎನ್ನಯ ತೋಳೊಳೊಂದೆ ಸಿರಿಯಂ ನೀನುಯ್ದು ತೊಟಿಲ್ತಾಳ್ದು ರಾಗದಿಂ ಎನ್ನೊಳ್ ಸುಕಮಿರ್ಪುದು: **ಪಂಪಭಾ,** ೮. ೬೬)

ತೊಟ್ಟು – [ನಾ] ದಾಸಿ, ತೊತ್ತು (ಓವೋ ಸಗ್ಗಂಗಳೊಳಿರ್ಪ ದೇವಡಿತಿ ತೊಟ್ಟಿರೊಳ್ ಅಟ್ಟೆಯನಾಗಲೀವನೇ: **ಪಂಪಭಾ,** ೧೦. ೪೫)

ತೊಟ್ಟುವೆಸ – [ನಾ] ತೊತ್ತಿನ ಕೆಲಸ (ಕೆಯ್ಯೆಡೆಯಂ ಕುಡುವುದು ಅರಿದಾಯ್ತೆ ನೀಂ ಎನಗೆ ಎಡೆಮಡಗದೆ ಬೆಸಪ ತೊಟ್ಟುವೆಸನಂ ಬೆಸಸಿಂ: **ಪಂಪಭಾ,** ೯. ೮೧)

ತೊಟ್ಟುವೆಸನಂಗೆಯ್ಸು – [ಕ್ರಿ] ತೊತ್ತಿನ ಕೆಲಸವನ್ನು ಮಾಡಿಸು (ಸೊನೆಯ ಸೋನೆಗಳುಮನೊಳಕೊಂಡು ತದಾಶ್ರಮದ ನಂದನವನಂಗಳ್ ಜನಂಗಳಂ ಅನಂಗಂಗೆ ತೊಟ್ಟುವೆಸಂಗೆಯ್ಸಿದುವು: **ಪಂಪಭಾ,** ೨. ೧೨ ವ)

ತೊಟ್ಟುಟಿ – [ನಾ] ತೊತ್ತಳ, ತುಳಿದಾಟ (ಅದಟರ ಚೆನ್ನಪೊಂಗರ ಸಬಂಗಳ ತೊಟ್ಟುಟಿಯೊಳ್ ತೊಡಂಕಿ ನಿಲ್ಲದೆ ಪೊಱಮಟ್ಟು ತಮ್ಮ ಮನದೊಳ್ ಮಿಗೆ ಬೆಚ್ಚಿಸಿದಂತೆ ತೋಱುವ: **ಪಂಪಭಾ,** ೮. ೧೦೪)

ತೊಟ್ಟುಟಿದುಟಿ – [ಕ್ರಿ] ತುಳಿ ತುಳಿ ತುಳಿ (ಸುಪ್ರತೀಕಂ ಕೆಯ್ಯ ಕಾಲ ಕೋಡ ಏಱೆನೊಳ್ ಬಲಮನೆಲ್ಲಂ ಜವನೆ ಚಿವುಳಿದುಟಿವಂತೆ ತೊಟ್ಟುಟಿದುಟಿದು: **ಪಂಪಭಾ,** ೧೧. ೭೨ ವ)

ತೊಟ್ಟುಟ್ಟಿ – [ನಾ] ತೊತ್ತಿಗೆ ಹುಟ್ಟಿದವನು (ನೀನುಂ ಮೆಟ್ಟಿಟ್ಟು ವಿದುರನೆಂಬೀ ತೊಟ್ಟುಟ್ಟಿಯ ಮನೆಯ ಕೂಟ ನುಡಿಯಿಸೆ ನುಡಿದೈ: **ಪಂಪಭಾ,** ೯. ೫೮)

ತೋಟಿ – [ನಾ] ಜಗಳ (ಮತ್ತಮೊಂದೆಡೆಯೊಳ್ ಪಟುವಟಿಯ ಬೇಟದ ತೋಟಿಯಂ ತೊಡರ್ದು: **ಆದಿಪು,** ೧೨. ೨೮ ವ); [ನಾ] ಯುದ್ಧ (ಎರಡು ರಥಂ ಒಳವು ನೋಟಕ್ಕೆ ಎರಡಱೊಳವನೊಂದು ರಥಮೆ ತೋಟಿಗೆ ಪಲವಾಗಿರೆ ಪರಿದು: **ಪಂಪಭಾ,** ೫. ೯೫)

ತೋಡಾಗು – [ಕ್ರಿ] ಜೋಡಿಯಾಗು (ಮುಗಿದಿರ್ದಂಭೋಜಂ ಓರೊಂದಲರ್ದುದು ಬಿಸುಸುಯ್ದತ್ತು ಅಗಲ್ದಿರ್ದ ನೀರ್ವಕ್ಕಿಗಳಾಗಳ್ ಕೂಡಿ ತೋಡಾದುವು: **ಆದಿಪು,** ೧೨. ೯)

ತೋಡು – [ನಾ] ಜೋಡಿ (ಅಗಲಿರ್ದ ನೀರ್ವಕ್ಕಿಗಳಾಗಳ್ ಕೂಡಿ ತೋಡಾದುವು: **ಆದಿಪು,** ೧೨. ೯); [ಕ್ರಿ] ಅಗೆ, ಬಗಿ (ತೋಡುವೆಂ ಒರ್ವನ ಒಳ್ಗರುಳಂ ಉರ್ವಿಗೆ ನೆತ್ತರನೆತ್ತಿ ಪೀರ್ದು ವಿರ್ದಾಡುವೆಂ ಒರ್ವನ ಊರುಗಳಂ ಎನ್ನ ಗದಾಶನಿಘಾತದಿಂದೆ ನುರ್ಗಾಡುವೆಂ: **ಪಂಪಭಾ,** ೯. ೨೪)

ತೋಡುಂ ಬೀಡುಂ – [ಬಾಣ] ತೊಡುವುದೂ ಬಿಡುವುದೂ (ಕಟಿವುಂ ಉಟಿವುಂ ಕಾಪುಂ ಮೇಪುಂ ತೋಡುಂ ಬೀಡುಂ ದೆಸೆಯುಂ ಕೊಸೆಯುಂ: **ಪಂಪಭಾ,** ೫. ೪೩ ವ)

ತೋಪಿನ ಬೇಂಟೆ – [ನಾ] ತೋಹಿನ ಬೇಟೆ, ಮರಗಳ ಗುಂಪಿನಲ್ಲಿ ಆಡುವ ಬೇಟೆ (ಪಾಂಡುರಾಜಂ .. .. ಒಂದು ದಿವಸಂ ತೋಪಿನ ಬೇಂಟೆಯನಾಡಲಟ್ಟೆಯಿಂ ಪೋಗಿ: **ಪಂಪಭಾ,** ೧. ೧೧೦ ವ)

ತೋಮರ – [ನಾ] ಒಂದು ಆಯುಧ, ಭರ್ಜಿ (ಕಣೆಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ ವಿವಿಧಾಯುಧಂಗಳೊಳಿಟ್ಟುಂ ಇಱೆದುಂ ಅಗುರ್ವು ಅದ್ಭುತಮಾಗೆ ಕಾದುವಾಗಳ್: **ಪಂಪಭಾ,** ೧೨. ೧೧೮ ವ)

ತೋಯ – [ನಾ] ನೀರು (ಎನ್ನ ಮಾತಿಂಗೆ ಎಲೆ ಕೌಂತೇಯ ಮಱುಮಾತನಿತ್ತು ಮದೀಯ ಸರೋವರದ ತೋಯಮಂ ಕುಡಿ ಕೊಂಡುಯ್: **ಪಂಪಭಾ,** ೮. ೩೯)

ತೋಯಜಷಂಡ – [ನಾ] ತಾವರೆಗಳ ಸಮೂಹ[ವಿರುವ] ಸರೋವರ, ಕೊಳ (ತೋಯಜಷಂಡಮನಿದಂ ಆಂ ಆಯತಿಯಿಂ ಕಾವೆಂ ಎನ್ನ ಮಾತಿಂಗೆ ಎಲೆ ಕೌಂತೇಯ ಮಱುಮಾತನಿತ್ತು: **ಪಂಪಭಾ,** ೮. ೩೯)

ತೋಯರಾಶಿ – [ನಾ] ಸಮುದ್ರ (ಪತಿಯ ಜಳಸ್ತಂಭದ ಪರಿಣತಿ ದಲಿಲ್ಲದೊಡೆ ಜಳಪಥಂ ಸ್ಥಳಪಥದಂತೆ ಅತಿ ಸುಗಮಮಾಗದು ಎನೆ ಪರಿದು ತೋಯರಾಶಿಯೊಳದೇಂ ರಥಂ ಸೊಗಯಿಸಿತೋ: **ಆದಿಪು,** ೧೨. ೮೩)

ತೋಯಾಕರ – [ನಾ] ನೀರಿನ ಆವಾಸ, ಕೊಳ (ಸ್ವಚ್ಛಸಂಪನ್ನ ತೋಯಾಕರದೊಳ್ .. .. ಸೌಂದರಕೇಲೀಹಂಸನಾದಂ; **ಆದಿಪು,** ೧೬. ೭೫)

ತೋಯಾಶಯ – [ನಾ] ಜಲಾಶಯ, ಸರೋವರ (ನೂತನ ಲಾವಣ್ಯಚ್ಛತೋಯಾಶಯದೊಳೆ ಮೆಱೆಯಲ್ ನರ್ತನಕ್ರೀಡೆಯಂ ನಚ್ಚಿನ ಭಾವರತ್ನರ್ ಅತ್ಯುತ್ಸವದೊಳೆ ಪಡೆಯಲ್: **ಆದಿಪು,** ೧. ೮೩)

ತೋರ – [ಗು] [ಸ್ಥೂಲ] ದಪ್ಪ (ಓಪನಂ ಮಿಡುಕಲೀಯದೆ ಕಾಲ್ವಿಡಿದಟ್ಟು ತೋರ ಕಣ್ಬನಿಗಳನಿಕ್ಕಿದಲ್ ತರಳಲೋಚನೆ ಸಂಕಲೆಯಿಕ್ಕಿದಂತೆವೋಲ್: **ಪಂಪಭಾ,** ೪. ೯೭); **[ಗು]**

ದೊಡ್ಡ (ಓರೊರ್ವರೊಳ್ ಬೀರಮುಮಂ ಬಿಂಕಮುಮಂ ಮೆಱೆದು ದಾಸವಣದಂಡೆಯಂ ತೋರದ ಇಂಡೆಯಾಡಿದಂತೆ: **ಪಂಪಭಾ,** ೧೧. ೧೪೦ ವ)

ತೋರಗಿಡಿ – [ನಾ] [ತೋರ+ಕಿಡಿ] ದಪ್ಪ ಕಿಡಿ (ಅಂಬನಂಬಟ್ಟಿ ಪಳಂಚುತ್ತೆ ಸಿಡಿಲ್ದ ತೋರಗಿಡಿಯಿಂ ಒಂದೊಂದಱೊಳ್ ಬೇವುದುಂ: **ಪಂಪಭಾ,** ೧೧. ೧೭)

ತೋರಣೀಕೃತ – [ಕ್ರಿ] ತೋರಣವಾಗಿ ಮಾಡಲ್ಪಟ್ಟ (ದಿಕ್ಕರಿ ಕರಾನುಕಾರಿ ಕರಪರಿಘೋತ್ತಂಸಿತ ತೋರಣೀಕೃತ ರೌದ್ರ ಗದಾದಂಡನುಂ ಪ್ರಚಂಡನುಂ: **ಪಂಪಭಾ,** ೧೩. ೮೨ ವ)

ತೋರಮಲ್ಲಿಗೆ – [ನಾ] ದುಂಡು ಮಲ್ಲಿಗೆ (ಉಳ್ಳಲರ್ದ ಚೆಲ್ವಿಂಗೆ ಮುಡಿಗವಿದಂತೆ ತೋಱುವ ತೋರಮಲ್ಲಿಗೆಯ ಮುಡಿಯುಮೆಸೆಯೆ: **ಆದಿಪು,** ೪. ೪೧ ವ)

ತೋರವನಿ – [ನಾ] ದಪ್ಪ ಹನಿ (ಎಳವಿಸಿಲೊಳ್ ಬೆಳ್ಸರಿ ತೋರವನಿಯ ಪುದುವಿನೊಳರಲ್ದ ತಿಳಿಗೊಳನೆ ನಭದೊಳಿಟಿದಂತಿರ್ಕುಂ: **ಆದಿಪು,** ೧೧. ೮)

ತೋರಿದು – [ನಾ] ದಪ್ಪನಾಗಿರುವುದು (ಪಾದರಿ ಪೂತುವು ತೋರಿದುವಾದುವು ಮಲ್ಲಿಗೆಗಳೆಯ್ದೆ ಪಣ್ತುವು ಮಾವು ಇಂಬಾದುದು ನಿದಾಘ: **ಆದಿಪು,** ೧೧. ೮೭)

ತೋರ್ಕೆ – [ನಾ] ತೋರಿಕೆ, ಆಕಾರ (ಕುದುರೆಯ ಬಣ್ಣದಿಂ ರಥದ ತೋರ್ಕೆಯಿಂ ಎತ್ತಿದ ಚಿತ್ರಕೇತುವೃಂದದ ಕುಱುಪಿಂದ ಉದಗ್ರ ರಥಚೋದಕಚಿಹ್ನದಿಂ ಈತನೆಂಬುದಂ ಅಱೆದು: **ಪಂಪಭಾ,** ೧೦. ೮೭)

ತೋರ್ಪ – [ಗು] ಸ್ಥೂಲವಾದ (ತ್ರಿವಳಿಗಳುಂ ವಿರೋಧಿನೃಪರುತ್ಸವಮುಂ ಕಿಡೆವಂದುವು ಆನನೇಂದುವ ಕಡುವೆಳ್ಪು ಕೂಸಿನ ನೆಗಟ್ತೆಯ ಬೆಳ್ಪುವೊಲಾಯ್ತು ಮುನ್ನೆ ಬಳ್ಕುವ ನಡು ತೋರ್ಪ ಮೆಯ್ಯನೊಳಕೊಂಡುದು: **ಪಂಪಭಾ,** ೧. ೧೨೫)

ತೋರ್ಪು – [ನಾ] ಗಾತ್ರ (ಕುಚಂಗಳ ತೋರ್ಪು ಪತಾಕೆಯೊಂದು ವಿಭ್ರಮಮನೆ ಪೋಲೆ ಪುರ್ವಿನ ಪೊಡರ್ಪೊಳಕೊಂಡುದವಳ್ಗೆ ಗರ್ಭಚಿಹ್ನಮೆ ಗಳ ಗರ್ಭದರ್ಭಕನ ಸೂಚಿಪ ಮುಂದಣ ರಾಜ್ಯಚಿಹ್ನಮಂ: **ಪಂಪಭಾ,** ೧. ೧೨೦)

ತೋಲ್ – [ನಾ] ಚರ್ಮ (ಸಿಡಿಲಂತೊರ್ಮೆಯೆ ಪೊಯ್ಯೆ ಪೊಯ್ದು ಭರದಿಂದೊಂದಾನೆ ತೋಲ್ ನೆತ್ತರ್ ಎಲ್ವು ಅಡಗು ಒಂದೊಂದಱೊಳ್ ಒಂದುಮೊಂದದೆ: **ಪಂಪಭಾ,** ೧೦. ೧೦೫)

ತೋಲ್ವುಲ್ಲೆ – [ನಾ] ತೊಗಲಿನಿಂದ ಮಾಡಿದ ಜಿಂಕೆ (ನೆರೆದಿಸುತಿರೆ ತೋಲ್ವುಲ್ಲೆಯಂ ಇರದೆ ಅದು ಬಿಟಿಲ್ಗೊಡೆ ಪುರಾಣಕೂಪದೊಳ್ ಅದಂ ಇನ್ನು ಅರಿದು ತೆಗೆವಂದಂ ಎಂದವರಿರೆ ಬಳಸಿಯುಮಲ್ಲಿ ಕಂಡು ನಕ್ಕಂ ದ್ರೋಣಂ: **ಪಂಪಭಾ,** ೨. ೫೧)

ತೋಳ ತೀನ್ – [ನಾ] ತೋಳತೀಟೆ, [ಯುದ್ಧಮಾಡಲು] ತೋಳಿನ ತವಕ (ತೋಳ ತೀನ್ ಕಿಡೆ ನಲಿದು ಒಂದೆರಟ್ಟುದುರೆಯಟ್ಟೆಯುಂ ಒಂದೆರಡಾನೆಯಟ್ಟೆಯುಂ ತೊಡರ್ದು: **ಪಂಪಭಾ,** ೧೦. ೪೨)

ತೋಳ್ದುಱುಗಲ್ – [ನಾ] ತೋಳುಗಳ ಸಮೂಹ (ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಱುಗಲೊಳ್ ಪಳಂಚದೆ ಗಗನಂಬರಂ ನೆಗೆದು ಸೂಸುವ ಬಾಹುಪರಿಭ್ರಮಂಗಳೊಳ್: **ಆದಿಪು,** ೭. ೧೨೫)

ತೋಳ್ವಲ – [ನಾ] ಬಾಹುಬಲ (ನಿಜೇಶನ ನಚ್ಚು ಮಿಕ್ಕ ತೋರ್ಬಲದ ಪೊಡರ್ಪುಕರ್ಣ ನಿನಗುಳ್ಳನಿತೇಂ ಎನಗುಂಟೆ: **ಪಂಪಭಾ,** ೧೦. ೨೩)

ತೋಳ್ವಲೆ – [ನಾ] ತೋಳೆಂಬ ಬಲೆ (ಬಾಟ್ವ ಪಂಬಲದೇನಿಂ ನಿನಗುಂಟೆ ನಿನ್ನನುಜರಂ ಕಂಡುಂ ಎಂತುಂ ಏನೆನ್ನ ತೋಳ್ವಲೆಯೊಳ್ ಸಿಲ್ಕಿದೆ: **ಪಂಪಭಾ,** ೧೨. ೧೪೬)

ತೋಱು – [ಕ್ರಿ] ಕಾಣಿಸು (ರಮ್ಯರಜತಾಚಳತಿಳಕೋಪಮಾನಮೆನೆ ಸಂದ ಅಳಕಾಪುರಮೊಪ್ಪಿ ತೋಱುಗುಂ: **ಆದಿಪು,** ೧. ೭೧); [ಕ್ರಿ] ಪ್ರದರ್ಶಿಸು (ವನರಾಜಿಕ್ರೀಡೆಯಂ ಯೌವನದೊಳೆ ತೋಱಿಲ್ ಜಲಕ್ರೀಡೆಯಂ ನೂತನಲಾವಣ್ಯಾಚ್ಛತೋಯಾಶಯದೊಳೆ ಮೆಱೆಯಲ್: **ಆದಿಪು,** ೧. ೮೩); [ಕ್ರಿ] ಚೆಲುವಾಗಿರು (ನಯಂ ನಯಂಬಡೆಯೆ ಕಲ್ಪಮಹೀಜದ ಪಕ್ಕದಿರ್ಕೆಲಂಬಿಡಿದು ಮಡಲ್ತು ತೋಱುವ ಲತಾವಳಿಗಳ್ಗೆಣೆಯಾಗಿ: **ಆದಿಪು,** ೨. ೪)

ತೋಱಿಕುಡು – [ಕ್ರಿ] ಛೂ ಬಿಡು (ಪೆಱಗಿಡುವ ದಂತಿಯಂ ಕಲಿ ನಿಱಿಸಿ ಚಲ ನೆಲಸೆ ತೋಱಿಕುಡುವುದುಂ: **ಪಂಪಭಾ,** ೧೦. ೧೧೦)

ತೋಱಿಕೊಡು – [ಕ್ರಿ] ತೋರಿಸಿ ಬಿಡು, ಛೂ ಬಿಡು (ಮನ್ಮಥಮಹೀಭುಜನೋವದೆ ತೋಱಿಕೊಟ್ಟುದೊಂದಾನೆಯೆ ತನ್ನನಾನೆಗೊಲೆಗೊಂದಪುದೆಂದು ಲತಾಂಗಿ ಬೆರ್ಚಿದಳ್: **ಪಂಪಭಾ,** ೪. ೫೮)

ತ್ಥಾಮ – [ನಾ] ಕೆನೆತ (ದಿವಿಜ ಅಶ್ವ ತ್ಥಾಮದೊಳ್ ಈ ಭುವನಂಗಳ್ ನಡುಗೆ ಶಿಶು ನಕ್ಕು ಸರಂಗೆಯ್ದೊಡೆ ಕುಂಭಸಂಭವಂ ಇವಂ ಅಶ್ವತ್ಥಾಮನೆಂದು ಪೆಸರಿಡೆ ನೆಗಟ್ದಂ: **ಪಂಪಭಾ,** ೨. ೪೪)

ತ್ಯಾಗ – [ನಾ] ಹತ್ತು ಕುಲಧರ್ಮಗಳಲ್ಲಿ ಒಂದು, ನೀಡುವ ಪ್ರವೃತ್ತಿ (ಎಂಬಿನಮುತ್ತಮಕ್ಷಮಾ ಮಾರ್ದವಾರ್ಜವ ಸತ್ಯ ಶೌಚ ಸಂಯಮ ತಪಸ್ತ್ಯಾಗಾಕಿಂಚನ್ಯ ಬ್ರಹ್ಮಚರ್ಯ ಪರ್ಯಾಯಪರ್ಯಾಪ್ತ ದಶಧರ್ಮಂಗಳುಮಂ ಕೈಕೊಂಡು: **ಆದಿಪು,** ೬. ೩೦ ವ)

ತ್ರಪು – [ನಾ] ಸೀಸ ಎಂಬ ಲೋಹ (ವಿಚಿತ್ರ ತ್ರಪುಮಯಪತ್ರ ಖಚಿತೋಚ್ಚಂಡಾತಾಳ ಚಾಪದಂಡಂ: **ಆದಿಪು,** ೧೩. ೪೫ ವ)

ತ್ರಪುಷಕೋಶ – [ನಾ] ಕತ್ತಿಯ ಒರೆ (ಅನೇಕ ವರ್ಣಾಕೀರ್ಣ ತ್ರಿಸರವೇಣಿಕಾ ಗಾಢಗ್ರಥಿತ ತ್ರಪುಷಕೋಶ ಗುಪ್ತಗುಲ್ಫಾಂತರಪ್ರಾಪ್ತ ಖಡ್ಗಧೇನುಕಂ ಆಂಧ್ರಧಾನುಷ್ಕ ಬಳಂ: **ಆದಿಪು,** ೧೩. ೪೫ ವ)

ತ್ರಯಸ್ತ್ರಿಂಶತ್ – [ನಾ] ಮೂವತ್ತಮೂರು (ತ್ರಯಸ್ತ್ರಿಂಶತ್ ಪರಿಮಿತ ತ್ರಯಸ್ತ್ರಿಂಶಾಮರಪರಿವೃತನುಂ: **ಆದಿಪು,** ೬. ೧೩ ವ)

ತ್ರಸ – [ನಾ] [ಜೈನ] ಸಂಸಾರಿಜೀವಗಳ ಎರಡು ಬಗೆಗಳಲ್ಲಿ ಒಂದು, ಕರ್ಮದ ಉದಯದಿಂದ ಉಂಟಾಗುವ ಎರಡರಿಂದ ಐದು ಇಂದ್ರಿಯಗಳನ್ನು ಪಡೆದ ಜೀವ (ಸಂಸಾರಿಜೀವಂ ತ್ರಸ ಸ್ಥಾವರ ವಿಕಲ್ಪದಿಂ ಇರ್ತೆಱನಕ್ಕುಂ: **ಆದಿಪು.** ೧೦. ೬೩ ವ)

ತ್ರಸಕಾಯ – [ನಾ] [ಜೈನ] ಚಲಿಸುವ ದೇಹವುಳ್ಳ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಮತ್ತು ಪಂಚೇಂದ್ರಿಯ ಪ್ರಾಣಿಗಳು (ಅಲ್ಲಿಯುಂ ತ್ರಸನಾಮ ಕರ್ಮೋದಯ ವಶಂಗಳ್ ತ್ರಸಕಾಯಂಗಳ್: **ಆದಿಪು,** ೧೦. ೬೧ ವ)

ತ್ರಸಜೀವ – [ನಾ] [ಜೈನ] ತ್ರಸಕಾಯ (ತ್ರಸಜೀವಂಗಳ್ ಚತುರ್ವಿಧಮಕ್ಕುಂ: **ಆದಿಪು,** ೧೦. ೬೩ ವ))

ತ್ರಸನಾಮ – [ನಾ] [ಜೈನ] ಹದಿಮೂರು ಪ್ರಕೃತಿಗಳಲ್ಲಿ ಒಂದು, ತ್ರಸಜೀವವನ್ನು ಪಡೆಯುವಂತೆ ಮಾಡುವ ಕರ್ಮ (ಅಲ್ಲಿಯುಂ ತ್ರಸನಾಮ ಕರ್ಮೋದಯವಶಂಗಳ್ ತ್ರಸಕಾಯಂಗಳ್: **ಆದಿಪು,** ೧೦. ೬೧ ವ)

ತ್ರಸ್ತ – ಗು] ಭಯಗೊಂಡ (ಭವದೀಯ ಬಳವಿಜೃಂಭಿತರವದಿಂ ತ್ರಸ್ತನೆಂ ಅಧೀಶ ಬಂದೆಂ ಕಾಣಲ್ ಭವದಂಘ್ರಿಸರೋಜಮಂ: **ಆದಿಪು,** ೧೩. ೨೮)

ತ್ರಾಯಸ್ತ್ರಿಂಶ – [ನಾ] [ಜೈನ] ಒಂದು ದೇವತಾವರ್ಗ (ಸಾಮಾನಿಕ ತ್ರಾಯಸ್ತ್ರಿಂಶತ್ಪಾರಿಷದ ಆತ್ಮರಕ್ಷ ಲೋಕಪಾಳ ಅಭಿಯೋಗ್ಯ ಕಿಲ್ಬಿಷರೊಡನೆ: **ಆದಿಪು,** ೭. ೪೨ ವ) ['**ತ್ರಾಯಸ್ತ್ರಿಂಶ**' ನರಸಿಂಹಶಾಸ್ತ್ರಿಗಳು ಅನುಮೋದಿಸಿರುವ ಪಾಠ]

ತ್ರಾಸಂಗೊಳ್ – [ಕ್ರಿ] ಭಯಗೊಳ್ಳು (ವಸುಧಾತಳಪತಿಗಿತ್ತಂ ತ್ರಾಸಂಗೊಳುತುಂ ಸರ್ವಸ್ವಮಂ ಪ್ರಭಾಸಾಮರನುಂ: **ಆದಿಪು,** ೧೩. ೪)

ತ್ರಿಃಪದಕ್ಷಿಣ – [ನಾ] ಮೂರು ಬಾರಿ ಪ್ರದಕ್ಷಿಣೆ, ಬಲಭಾಗದಿಂದ ಸುತ್ತು ಬರು (ಆದಿತ್ಯಂಗೆ ಅರ್ಘ್ಯಮೆತ್ತಿ ಸೂರ್ಯಜಂ ಸೂರ್ಯಮಂತ್ರಂಗಳನೋದಿ ನೀರಂ ಸೂಸಿ ತ್ರಿಃಪ್ರದಕ್ಷಿಣಂಗೆಯ್ವಾಗಳ್: **ಪಂಪಭಾ,** ೯. ೭೨ ವ)

ತ್ರಿಕ – [ನಾ] ಮೂರು, ಮೂರರ ಸಮುದಾಯ (ತ್ರಿವಿಧಕರಣ ಪರಿಣಾಮಪರಿಣತಂ ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿ ಎಂಬ ದರ್ಶನಮೋಹನೀಯತ್ರಿಕದ ನಿರ್ಮೂಲನದಿಂ: **ಆದಿಪು,** ೧೦. ೧೪ ವ)

ತ್ರಿಕರಣಶುದ್ಧಿ – [ನಾ] [ಜೈನ] ಅಧಃಪ್ರವೃತ್ತಿ, ಅಪೂರ್ವ ಮತ್ತು ಅನಿವೃತ್ತಿಗಳ ಪರಿಶುದ್ಧತೆ (ತ್ರಿಕರಣಶುದ್ಧಿಯೊಳಾ ರಾಜಕುಮಾರಂ ಮಾರಮಥನನಂ ಸ್ತುತಿಯಿಸಿ ತತ್ಪ್ರಕಟಫಲಪ್ರಾಪ್ತಿಗೆ ಸಂಚಕರಂಗೊಳ್ವಂತೆ: **ಆದಿಪು,** ೪. ೨)

ತ್ರಿಕಳಿಂಗ – [ನಾ] ಮೂರು ಕಳಿಂಗ ದೇಶಗಳು (ನಿರುಪಮ ದೇವನ ರಾಜ್ಯದೊಳ್ ಅರಿಕೇಸರಿ ವೆಂಗಿ ವಿಷಯಮಂ ತ್ರಿಕಳಿಂಗಬೆರಸೊತ್ತಿ ಕೊಂಡು ಗರ್ವದೆ ಬರೆಯಿಸಿದಂ ಪೆಸರನಖಿಳ ದಿಗ್ಭಿತ್ತಿಗಳೊಳ್: **ಪಂಪಭಾ,** ೧. ೨೦)

ತ್ರಿಗುಪ್ತಿ – [ನಾ] [ಜೈನ] ಕರ್ಮನಿರೋಧಕ್ಕೆ ಅಥವಾ ಸಂವರಸಾಧನಕ್ಕೆ ಅಗತ್ಯವಾದ ಆಚರಣೆಗಳು, ಮನವಚನಕಾಯಗಳನ್ನು ಬಾಹ್ಯಪ್ರವರ್ತನಕ್ಕೆ ಬಿಡದೆ ತಡೆಯುವುದು; ಇವು ಕ್ರಮವಾಗಿ ಮನೋಗುಪ್ತಿ, ವಚನಗುಪ್ತಿ ಮತ್ತು ಕಾಯಗುಪ್ತಿ (ತ್ರಿಗುಪ್ತಿಗುಪ್ತ ಸಮಾಧಿಗುಪ್ತರೆಂಬ ಯತಿಪತಿಗಳಧ್ಯಯನಂ ನಿನಗನಿಷ್ಟಮಪ್ಪುದಱಿಂ ಅಧ್ಯಯನಾಂತರಾಯಮಂ ಮಾಡಲೆಂದು: **ಆದಿಪು,** ೩. ೩೮ ವ)

ತ್ರಿಜಗ – [ನಾ] ಮೂರು ಲೋಕಗಳು: ಸ್ವರ್ಗ ಮರ್ತ್ಯ ಪಾತಾಳಗಳು (ಆದಿಕ್ಷತ್ರಿಯರೊಳಂ ಇಲ್ಲೆನಿಸಿದುದು ಈ ತ್ರಿಜಗದೊಳೆಗಿಸದೆಸಕಮರಿಕೇಸರಿಯಾ: **ಪಂಪಭಾ,** ೧. ೨೧)

ತ್ರಿಜ್ಞಾನಧರ – ತ್ರಿಜ್ಞಾನಗಳನ್ನು ಹೊಂದಿದವನು (ಶ್ರೀನಿಳಯಮಿದುವೆ ನಾಭಿಸ್ಥಾನಮೆನಲ್ ನೆಱೆದಯೋಧ್ಯೆಗವತರಿಸಲ್ ತ್ರಿಜ್ಞಾನಧರಂ ಬಗೆದಂ ಭವ್ಯಾನಂದಕರಂ ಸರಸ್ವತೀಮಣಿಹಾರಂ: **ಆದಿಪು,** ೭. ೧)

ತ್ರಿಣೇತ್ರ – [ನಾ] ತ್ರಿನಯನ, ಶಿವ (ತ್ರಿಣೇತ್ರನುಮಂ ಅಸುಂಗೊಳಿಸಿದ ಸಾಹಸದೊಳ್ ಕದನತ್ರಿಣೇತ್ರನುಂ: **ಪಂಪಭಾ,** ೧೪. ೩೭ ವ)

ತ್ರಿತಯ – [ನಾ] ಮೂರರ ಗುಂಪು (ಉಜ್ಜ್ವಲಮಣಿದರ್ಪಣ ದೀಪ್ತಿರಮ್ಯಂ ಆವೇಷ್ಟಿತ ಸೂತ್ರತ್ರಿತಯಸೌಮ್ಯಂ: **ಆದಿಪು,** ೪. ೩೦ ರಗಳೆ)

ತ್ರಿದಂಡಿ – [ನಾ] ಶಿಖೆ ಮತ್ತು ಯಜ್ಞೋಪವೀತಗಳನ್ನು ತ್ಯಜಿಸಿ ಮೂರು ದಂಡಗಳನ್ನು ಹಿಡಿದು ಕಾಯ, ಮನೋ, ವಾಕ್‌ಗಳ ಮೇಲೆ ನಿಯಂತ್ರಣ ಸಾಧಿಸಿದ ಯತಿ (ಏಕದಂಡಿ ತ್ರಿದಂಡಿಗಳಪ್ಪ ಪರಿವ್ರಾಜಕರುಮಾಗಿ ತಮಗೆ ತಾವೇ ವನಪ್ರವೇಶಮಂ ಮಾಡಿ: **ಆದಿಪು,** ೯. ೯೩ ವ)

ತ್ರಿದಶ – [ನಾ] ಸದಾ ಬಾಲ್ಯ, ಕೌಮಾರ್ಯ, ಯೌವನಗಳೆಂಬ ಮೂರು ಅವಸ್ಥೆಗಳನ್ನು ಮಾತ್ರ ಉಳ್ಳವನು, ದೇವತೆ (ತ್ರಿದಶ ನರ ಅಸುರ ಉರಗ ಗಣಪ್ರಭು ನಿಶ್ಚಿತತತ್ತ್ವಯೋಗಿ ಯೋಗದ ಬಲಮುಣ್ಮೆ ಪೊಣ್ಮೆ ನಿಲೆ: **ಪಂಪಭಾ,** ೧. ೮೫)

ತ್ರಿದಶಕಂಟಕ – [ನಾ] ದೇವತೆಗಳಿಗೆ ಪೀಡೆಯಾದವನು (ಕಾಯ್ವಿಂ ದಶಕಂಠನಂ ತ್ರಿದಶಕಂಟಕನಂ ಕೊಲಲೆಂದು ರಾಮನಾದಂದಿನ ಸಾಹಸಂ: **ಪಂಪಭಾ,** ೪. ೧೯)

ತ್ರಿದಶಗಣ – [ನಾ] ದೇವತೆಗಳ ಸಮೂಹ (ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಜುಗಲ್ಗಳೊಳ್ ಪಳಂಚದೆ: **ಆದಿಪು,** ೭. ೧೨೫)

ತ್ರಿದಶಗಣಾಧಿನಾಯಕ – [ನಾ] ದೇವತೆಗಳ ಅಧಿಪತಿ, ದೇವೇಂದ್ರ (ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಜುಗಲ್ಗಳೊಳ್: **ಆದಿಪು,** ೭. ೧೨೪)

ತ್ರಿದಶನರಾಸುರೋರಗಗಣಪ್ರಭು – [ನಾ] ದೇವತೆಗಳು ಮನುಷ್ಯರು ರಾಕ್ಷಸರು ನಾಗರು ಮತ್ತು ಮಿಕ್ಕ ಗಣಗಳಿಗೆ ಒಡೆಯ, ವ್ಯಾಸ (ತ್ರಿದಶನರಾಸುರೋರಗಗಣಪ್ರಭು ನಿಶ್ಚಿತತತ್ತ್ವಯೋಗಿ ಯೋಗದ ಬಲಮುಣ್ಮೆ ಪೊಣ್ಮೆ ನಿಲೆ ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫)

ತ್ರಿದಶಪತಿ – [ನಾ] ದೇವೇಂದ್ರ (ಅಂತು ಬಂದು ಜಗತ್ತ್ರಿತಯಪತಿಯಂ ತ್ರಿದಶಪತಿಯ ನೀಡಿದ ಕೇಯೂರರಶ್ಮಿರಂಜಿತ ಭುಜಯುಗಕ್ಕೆ ನೀಡಿದಾಗಳ್: **ಆದಿಪು,** ೭. ೪೮ ವ)

ತ್ರಿದಶಲೋಕ – [ನಾ] ಸ್ವರ್ಗಲೋಕ (ಆಯುರಬ್ಧಿಯೊಳ್ ಅನುಕ್ರಮದಿಂ ಪಳಿತೋಪಮಂಗಳ್ ಅಯ್ದುಟಿವಿನಂ ಉಂಡನಾ ತ್ರಿದಶಲೋಕಸುಖಾಮೃತಮಂ ಸುರೋತ್ತಮಂ: **ಆದಿಪು**, ೨. ೭೨)

ತ್ರಿದಶನೇಕಾನಕ – [ನಾ] [ತ್ರಿದಶ+ಅನೇಕ+ಆನಕ] ದೇವತೆಗಳ ಅನೇಕ ದುಂದುಭಿಗಳು (ತ್ರಿದಶಾನೇಕಾನಕಂಗಳ್ ಮೊಳಗಿದುವು: **ಆದಿಪು**, ೭. ೩೯)

ತ್ರಿದಶಶರಾಸನ – [ನಾ] ಕಾಮನಬಿಲ್ಲು (ತ್ರಿದಶಶರಾಸನಂ ತಳಿರ ತೋರಣಮಾಗಿರೆ ಕುಕ್ಕಿನೋಳಿ ಚೆಲ್ವಿದಿರ್ಗೊಳೆ ಬರ್ಪ ಸೊನ್ನಲಿಗೆಯಾಗೆ: **ಆದಿಪು**, ೬. ೭೧)

ತ್ರಿದಶಸ್ತ್ರೀ – [ನಾ] ದೇವವನಿತೆ (ತ್ರಿದಶಸ್ತ್ರೀಜನದೊಳಂ ಅಮೃತದೊಳಂ ಅಣಂ ಮಟ್ಟಿದುರಿವ ಮದನಾಗ್ನಿಯ ಕೊರ್ಬು: **ಆದಿಪು**, ೯. ೫೬)

ತ್ರಿದಶಾಸನ – [ನಾ] ದೇವತೆಗಳ ಪೀಠ (ತ್ರಿದಶಾಸನಂಗಳ್ ಅಲ್ಲಾಡಿದುವು ಕ್ರಮದೆ ಶಂಖಭೇರೀಕಂಠೀರವ ಘಂಟಾಧ್ವನಿಗಳ್ ನೆಗಟ್ಟುವು: **ಆದಿಪು**, ೭. ೪೧)

ತ್ರಿದಶೇಂದ್ರ – [ನಾ] ದೇವೇಂದ್ರ (ತ್ರಿದಶೇಂದ್ರಂಗೆ ಯುಧಿಷ್ಠಿರಾಧ್ವರದ ಮಾಸಾಮರ್ಥ್ಯಂ ಸೂಟುಸೂಟದೆ ಪೇಟಲ್ ಪರಿವಂತೆ ಪೊಣ್ಮೆ ಪಲವುಂ ಧೂಮಂಗಳ್: **ಪಂಪಭಾ**, ೬. ೩೮)

ತ್ರಿದಶೇಭ – [ನಾ] ಐರಾವತ (ತ್ರಿದಶೇಭಕ್ಕೆಸೆದಾದುವಂದು ವದನಂ ಮೂತ್ತೆರಟ್ ಕೂಡೆ ತದ್ವದನವ್ರಾತದೊಳ್ ಆದುವು ಉದ್ಧರದನಂ: **ಕರ್ಣನೇಮಿ**, ೮. ೧೨೩)

ತ್ರಿದೋಷ – [ನಾ] ರೋಗಕ್ಕೆ ಕಾರಣವಾಗುವ ವಾತಪಿತ್ತಶ್ಲೇಷ್ಮಗಳೆಂಬ ದೋಷಗಳು (ಶಸ್ತ್ರ ಪಾಷಾಣ ಆತಪ ವರ್ಷ ವಿಷ ಅಗ್ನಿ ಕಾಷ್ಠ ಕಂಟಕ ತ್ರಿದೋಷಸಂಭವಾಮಯ ಜರಾದಿ ಬಾಧಾವಿದೂರನುಂ: **ಆದಿಪು**, ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]

ತ್ರಿಪತಾಕೆ – [ನಾ] ಹಣೆಯ ಮೇಲಿನ ಮೂರು ಮಡಿಕೆಗಳು (ಅಳೀಕಭ್ರುಕುಟಿಯುಂ ಅನರ್ಥಕ ಲಲಾಟತ್ರಿಪತಾಕೆಯುಂ ಅಪಾರ್ಥವಿಲೋಹಿತ ವಿಲೋಚನ ರುಚಿಯುಂ: **ಆದಿಪು**, ೧೪. ೮೧ ವ)

ತ್ರಿಪಲ್ಯೋಪಮ – [ಗು] [ಜೈನ] ವ್ಯವಹಾರ, ಉದ್ಧಾರ, ಅದ್ಧಾ ಎಂಬ ಮೂರು ಪಲ್ಯಗಳಷ್ಟು ಅವಧಿ (ಬದರೀಫಲ ಮಾತ್ರಾಹಾರಿಗಳುಂ ಆರೋಗ್ಯ ಶರೀರಂಗಳುಂ ಸೌಂದರಾಕಾರಂಗಳುಂ ಆಗಿ: **ಆದಿಪು**, ೫. ೪೧ ವ)

ತ್ರಿಪುಂಡ್ರ – [ನಾ] ಹಣೆಯ ಮೇಲಿನ ಮೂರು ವಿಭೂತಿ ಪಟ್ಟೆಗಳು (ಮನೋಜಾತಮಹೋತ್ಸಾಹರ್ ತದ್ಭೂತಿಯಿನಿಟ್ಟರ್ ತ್ರಿಪುಂಡ್ರಮಂ ದಿವಿಜೇಂದ್ರರ್: **ಆದಿಪು**, ೧೬. ೫೩)

ತ್ರಿಪುಂಡ್ರಕ – [ನಾ] ತ್ರಿಪುಂಡ್ರ (ಸರಿಗೆಯೊಳ್ ಸಮೆದ ಅಕ್ಷಮಾಲಿಕೆ ಪೊನ್ನ ಮುಂಜಿ ತೊಳಪ್ಪ ಕಪ್ಪುರದ ಭಸ್ಮರಜಃ ತ್ರಿಪುಂಡ್ರಕಂ ಒಪ್ಪೆ .. .. ಆ ತಪಸ್ವಿ ಮರುಳ್ಚಿದಂ: **ಪಂಪಭಾ**, ೬. ೮)

ತ್ರಿಪುರ – [ನಾ] ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಎಂಬ ಮಕ್ಕಳಿಗೆ ಕ್ರಮವಾಗಿ ಸೇರಿದ ಒಂದರ ಕೆಳಗೊಂದಿರುವ ಚಿನ್ನ, ಬೆಳ್ಳಿ, ಕಬ್ಬಿಣಗಳಿಂದಾದ ಪಟ್ಟಣಗಳು (ತ್ರಿಪುರಂಬೊತ್ತಸಿದಂತೆ ಪೊತ್ತಿ ಪೊಗೆದತ್ತೆತ್ತಂ ವಿಯನ್ಮಂಡಲಂ: **ಪಂಪಭಾ**, ೧೧. ೧೭)

ತ್ರಿಪುರಹರ – [ನಾ] ಶಿವ (ಇಕ್ಕಿದಂ ಅಭವಂ ಪಾರ್ಥನಂ ಇಕ್ಕಿದನಾ ತ್ರಿಪುರಹರನಂ ಅರ್ಜುನಂ: **ಪಂಪಭಾ**, ೮. ೨೨)

ತ್ರಿಪುರಾಂತಕ – [ನಾ] ಶಿವ (ಇನ್ನಾವ ಶೈಲದೊಳಿರ್ಪವು ಇರ್ಪೆಡೆವೇಟ ನೀಂ ತ್ರಿಪುರಾಂತಕಾ: **ಪಂಪಭಾ**, ೮. ೧೧)

ತ್ರಿಪುರಾರಿ – [ನಾ] ಶಿವ (ಆರಂದಲ್ಲವಂ ತ್ರಿಪುರಾರೀ ಕೇಳ್ ತ್ರಿಪುರಂ ಇಸುವ ನಿನ್ನನೆ ಪೋಲ್ವಂ: **ಪಂಪಭಾ**, ೮. ೧೨)

ತ್ರಿಭುವನ – [ನಾ] ಮೂರು ಲೋಕಗಳು (ನಿನ್ನಿಂದಂ ತ್ರಿಭುವನ ರಾಜ್ಯೋನ್ನತಿ ಬಂದೆನಗೆ ಸಾರ್ಗುಮಪ್ಪೊಡಂ ಒಲ್ಲೆಂ: **ಪಂಪಭಾ**, ೧೩. ೨೭)

ತ್ರಿಭುವನಗುರು – [ನಾ] ಮೂರೂ ಲೋಕಗಳಿಗೆ ಗುರು, ಆದಿದೇವ (ತ್ರಿಭುವನಗುರು ಪರಿನಿಷ್ಕ್ರಮಣಕಲ್ಯಾಣ ಶಾರದಾಗಮ ಪ್ರತೀಕ್ಷಣದಿವ್ಯಹಂಸರುಂ: **ಆದಿಪು**, ೯. ೬೦ ವ)

ತ್ರಿಮೂಢತಾನಿರಸನ – [ನಾ] [ಜೈನ] ಲೋಕಮೂಢತೆ, ದೇವಮೂಢತೆ, ಪಾಖಂಡಿಮೂಢತೆ ಎಂಬ ಮೂರು ಬಗೆಯ ಮೌಢ್ಯಗಳನ್ನು ತೊರೆಯುವುದು; ಇದು ಸಮ್ಯಗ್ದರ್ಶನದ ಒಂದು ಅಂಗ (ಮುನಿಜನ ತನುಮಳವಿಚಿಕಿತ್ಸವರ್ಜನಮುಂ ತ್ರಿಮೂಢತಾ ನಿರಶನಮುಂ ಉಪಗೂಹನಮುಂ: **ಆದಿಪು**, ೫. ೫೭)

ತ್ರಿಯಾಮಾಂತ್ಯ – [ನಾ] ಮೂರುಜಾವಗಳ ಕೊನೆ, ಬೆಳಗಿನ ಜಾವ (ಪೂರ್ವದಿಗ್ರಮಣೀವಕ್ತ್ರಸರೋಜ ರಾಗಮಾಯ್ತೆತ್ತಂ ತ್ರಿಯಾಮಾಂತ್ಯದೊಳ್: **ಆದಿಪು**, ೧೨. ೪೮)

ತ್ರಿಯಾಮಾವಿರಾಮ – [ನಾ] ತ್ರಿಯಾಮಾಂತ್ಯ (ಒಂದು ದಿವಸಂ ತ್ರಿಯಾಮವಿರಾಮದೊಳ್ ಆಶ್ಚರ್ಯಭೂತಂಗಳುಂ ದೂರಾರಿಷ್ಟಫಲಸೂಚಕಂಗಳುಮಪ್ಪ ಸ್ವಪ್ನಂಗಳಂ ಕಂಡು: **ಆದಿಪು**, ೧೫. ೨೧ ವ)

ತ್ರಿರಾತ್ರ – [ನಾ] ಮೂರು ರಾತ್ರಿಗಳು (ಅಧಿವಾಸಿತ ಜೈತ್ರಾಸ್ತ್ರಂ ವಿಧುವಿಶದ ದುಕೂಲವಸನಶೋಭಂ ನಾನಾವಿಧ ಮಂತ್ರಾನುಷ್ಠಾನ ಪ್ರಧಾನಂ ಉಪವಾಸದಿಂ ತ್ರಿರಾತ್ರಮಿರ್ದಂ: **ಆದಿಪು**, ೧೨. ೭೪)

ತ್ರಿವರ್ಗ – [ನಾ] [ಜೈನ] ಧರ್ಮ, ಅರ್ಥ, ಕಾಮ (ತನ್ನೃತ್ಯಫಲಂ ತ್ರಿವರ್ಗವಿಭವಂ ತಾನೆಂದೊಡೇಮಾತೊ ಸಾಸಿರಮುಂ ನಾಲಗೆಯುಳ್ಳ ವಾಸುಕಿಯುಂ ಇನ್ನೇನೆಂದದಂ ಬಣ್ಣಿಪಂ: **ಆದಿಪು**, ೭. ೧೨೭)

ತ್ರಿವಳಿ – [ನಾ] ಹೆಣ್ಣಿನ ಹೊಕ್ಕುಳ ಮೇಲಿನ ಮೂರು ಮಡಿಕೆಗಳು (ತ್ರಿವಳಿಗಳುಂ ವಿರೋಧಿನೃಪರುತ್ಸವಮುಂ ಕಿಡೆವಂದುವು ಆನನೇಂದುವ ಕಡುವೆಳ್ಪು ಕೂಸಿನ ನೆಗಟ್ಗೆಯ ಬೆಳ್ಪುವೊಲಾಯ್ತು: **ಪಂಪಭಾ**, ೧. ೧೨೩)

ತ್ರಿವಳೀರುಚಿ – [ನಾ] ಹೊಟ್ಟೆಯ ಮೇಲಿನ ಮೂರು ಮಡಿಕೆಗಳ ಚೆಲುವು (ಬಸಿಱ ತೆಳ್ಪಟೆದತ್ತೆ ಮೊಗಂ ಬೆಳ್ಪೇಱೆದುದೇ ಕುಚಚೂಚುಕಂ ಮಸುಳ್ದುವೇ ತ್ರಿವಳೀರುಚಿಯುಂ ಮೇಣ್ಕುಂದಿತೆ: **ಆದಿಪು**, ೭. ೩೧)

ತ್ರಿವಿಧಕರಣ – [ನಾ] [ಜೈನ] ಅಧಃಪ್ರವೃತ್ತಿಕರಣ, ಅಪೂರ್ವಕರಣ ಮತ್ತು ಅನಿವೃತ್ತಿಕರಣಗಳು (ಅಂತರ್ಮುಹೂರ್ತಮಂ ವಿಶ್ರಮಿಸಿ ಮಗುಟ್ದುಂ ತ್ರಿವಿಧಕರಣಪರಿಣಾಮಪರಿಣತಂ ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ

ಸಮ್ಯಕ್ತ್ವಪ್ರಕೃತಿ ಎಂಬ ದರ್ಶನಮೋಹನೀಯ ತ್ರಿಕದ ನಿರ್ಮೂಲನದಿಂ: **ಆದಿಪು,** ೧೦. ೧೪ ವ)

ತ್ರಿಶತಯುತಸಹಸ್ರ – [ನಾ] ಒಂದು ಸಾವಿರದ ಮುನ್ನೂರು (ತತ್ ಪ್ರಸ್ತಾವದೊಳ್ ತ್ರಿಶತಯುತಸಹಸ್ರದಂಡೋಚ್ಛ್ರಿತ ಶರೀರನುಂ: **ಆದಿಪು,** ೬. ೫೩ ವ)

ತ್ರಿಶಾಲ – [ನಾ] ಮೂರು ಸ್ತರಗಳಿಂದ ಕೂಡಿದ (ತತ್ ಕನಕ ಶಾಲಾಭ್ಯಂತರದೊಳ್ ತ್ರಿಶಾಲ ತ್ರಿಪೀಠೋಪಸ್ಥಿತ ಅರ್ಹತ್ರತಿಮೋಪೇತ .. .. ಶೋಭಿತಮುಂ: **ಆದಿಪು,** ೧೦)

ತ್ರಿಶುದ್ಧಿ – [ನಾ] ಕಾಯ ವಾಚಾ ಮನಸಾ ಎಂಬ ತ್ರಿಕರಣಶುದ್ಧಿ (ತ್ರಿಶುದ್ಧಿಯಿನನುಕಂಪೆವೆರಸು ಸಮಸ್ತ ಪ್ರಾಣಿಗಳ್ಗೆ ಅಭಯಂಗುಡುವ ದಯಾದತ್ತಿಯುಂ: **ಆದಿಪು,** ೧೫. ೧೩ ವ)

ತ್ರಿಶೂಲೋಪಮ – ಗು] [ತ್ರಿಶೂಲ+ಉಪಮ] ತ್ರಿಶೂಲದಂತಹ (ಪೊದಳ್ದ ಲಯಾಂತಕ ತ್ರಿಶೂಲೋಪಮ ಭೀಷಣಭ್ರುಕುಟಿ ಮುನ್ನಮೆ ರೌದ್ರ ಗದಾಯುಧಂಬರಂ ಪೋಪ ಭುಜಾರ್ಗಳಂ ರಿಪುಗಳ ಗ್ರಹಮಾದುದು ಭೀಮಸೇನನಾ: **ಪಂಪಭಾ,** ೭. ೬)

ತ್ರಿಷಷ್ಟಿ – [ನಾ] ಅರವತ್ಮೂರು (ತ್ರಿಷಷ್ಟಿಸಂಖ್ಯಾತ ವಲ್ಲಭಿಕಾ ವಿಭ್ರಮಭ್ರೂಲತಾ ತ್ರಿಭಾಗಭಾಜನನುಂ: **ಆದಿಪು,** ೬. ೧೩ ವ)

ತ್ರಿಸಂಧ್ಯಾಸೇವೆ – [ನಾ] [ಜೈನ] ಬೆಳಿಗ್ಗೆ, ಮಧ್ಯಾಹ್ನ, ಸಂಜೆಗಳಲ್ಲಿ ಮಾಡುವ ಸೇವೆ (ತ್ರಿಸಂಧ್ಯಾಸೇವೆಯುಮೆಂದೆಂಟುಂ ತೆಱದ ಪೂಜೆಯುಮಮ ಅರ್ಕಪೂಜೆಯುಮಮ ಮನ್ನಿಸಿ: **ಆದಿಪು,** ೧೫. ೧೩ ವ)

ತ್ರಿಸರವೇಣಿಕಾ – [ನಾ] ಮೂರೆಳೆಯ ಹುರಿ (ಅನೇಕ ವರ್ಣಾಕೀರ್ಣ ತ್ರಿಸರವೇಣಿಕಾ ಗಾಢಗ್ರಥಿತ ತ್ರಪುಷಕೋಶ ಗುಪ್ತಗುಲ್ಫಾಂತರಪ್ರಾಪ್ತ ಖಡ್ಗಧೇನುಕಂ ಆಂಧ್ರಧಾನುಷ್ಕ ಬಳಂ: **ಆದಿಪು,** ೧೩. ೪೫ ವ)

ತ್ರಿಸಾಕ್ಷಿಕ – [ನಾ] [ಜೈನ] ಆತ್ಮ, ಇಂದ್ರ, ಸಿದ್ಧರೆಂಬ ತ್ರಿಸಾಕ್ಷಿಗಳುಳ್ಳವನು (ಬಾಹ್ಯಾಭ್ಯಂತರಪರಿಗ್ರಹಪರಿತ್ಯಾಗೋನ್ಮುಖ ಮಾನಸಂ ತ್ರಿಸಾಕ್ಷಿಕನಾಗಿ ವಸ್ತ್ರಾಭರಣಮಾಲ್ಯಾದಿಗಳಂ ಮೆಯ್ಯಿಂ ತೊಲಗಿಸಿ: **ಆದಿಪು,** ೯. ೭೬ ವ)

ತ್ರೀಂದ್ರಿಯ – [ನಾ] ಸ್ಪರ್ಶ, ರಸನ, ಘ್ರಾಣ ಎಂಬ ಮೂರು ಇಂದ್ರಿಯಗಳನ್ನುಳ್ಳ ಜೀವ, ಕ್ರಿಮಿಕೀಟಗಳು (ಸ್ಪರ್ಶನ ರಸನ ಘ್ರಾಣೇಂದ್ರಿಯಸಮನ್ವಿತಂಗಳಪ್ಪ ಪಿಪೀಲಿಕಾದಿ ತ್ರೀಂದ್ರಿಯಂಗಳ್: **ಆದಿಪು,** ೧೦. ೬೩ ವ)

ತ್ರೇತಾಗ್ನಿ – [ನಾ] ಗಾರ್ಹಪತ್ಯ, ದಕ್ಷಿಣ, ಆಹವನೀಯ ಎಂಬ ಮೂರು ಅಗ್ನಿಗಳು (ತೀರ್ಥಕರಗಣಧರಾನಗಾರ ಕೇವಳಿಗಳ್ ಪರಿನಿರ್ವಾಣಕ್ಷೇತ್ರದೊಳ್ ಶರೀರಸಂಸ್ಕಾರಾದಿ ಗಾರ್ಹಪತ್ಯ ದಕ್ಷಿಣಾಗ್ನಿ ಆಹವನೀಯಮೆಂಬ ಪೆಸರಂ ಪಡದಂ: **ಆದಿಪು,** ೧೫. ೧೬ ವ)

ತ್ರೈಭುವನ – [ನಾ] ಮೂರು ಲೋಕಗಳು (ಮನದೊಳ್ ತ್ರೈಭುವನಮಂ ಆಳ್ದನಿತುವರಂ ತನಗೆ ಸಂತಸಂ ಪೆರ್ಚಿಯುಂ ಅಂದು ಇನಿಸು ಅಂಧನೃಪಂ ತನ್ನಯ ಜನದೊಳ್ ಕೆಲನಱೆಯೆ ಕೃತಕಶೋಕಂಗೆಯ್ದಂ: **ಪಂಪಭಾ,** ೩. ೮)

ತ್ರೈಭುವನಮನಾಳ್ದನಿತುವರಂ – [ಗು] ಮೂರು ಲೋಕಗಳನ್ನೂ ಆಳಿದಂತೆ ಎನ್ನುವಷ್ಟರಮಟ್ಟಿಗೆ (ಮನದೊಳ್ ತ್ರೈಭುವನಮನಾಳ್ದನಿತುವರಂ ತನಗೆ ಸಂತಸಂ ಪೆರ್ಚಿಯುಂ ಅಂದು ಇನಿಸು ಅಂಧನೃಪಂ ತನ್ನಯ ಜನದೊಳ್ ಕೆಲನಱೆಯೆ ಕೃತಕಶೋಕಂಗೆಯ್ದಂ: **ಪಂಪಭಾ,** ೩. ೮)

ತ್ರೈಭೂಭುವನ – [ನಾ] ಮೂರು ಲೋಕಗಳು (ದುರ್ಯೋಧನಂಗೆ ಇಂ ಪುಗಲ್ಕೆಡೆ ತ್ರೈಭೂಭುವನಂಗಳಿಂ ಪೊಱಗೆ ಮತ್ತೆಲ್ಲಿತ್ತೊ ಬಾಣಾಂತಕಾ: **ಪಂಪಭಾ,** ೧೩. ೭೬)

ತ್ರೈಲೋಕ್ಯ – [ನಾ] ಮೂರು ಲೋಕಗಳು (ಒರ್ವರಂ ಒರ್ವರ್ ಎಚ್ಚು ನಿಜಪೀಠಾಂಭೋಜದಿಂ ಬ್ರಹ್ಮನುಚ್ಚಳಿಪನ್ನಂ ಪಿರಿದೊಂದು ಸಂಕಟಮನೀ ತ್ರೈಲೋಕ್ಯದೊಳ್ ಮಾಡಿದರ್: **ಪಂಪಭಾ,** ೧. ೭೯); **ಗು]** ತ್ರಿಲೋಕಗಳಿಗೆ ಸಂಬಂಧಿಸಿದ, ಮೂರುಲೋಕಗಳ (ಅಂತು ಸಮುದ್ರಕ್ಷೋಭಮುಂ ತ್ರೈಲೋಕ್ಯಕ್ಷೋಭಮುಂ ಒಡನೊಡನಾಗೆ: **ಪಂಪಭಾ,** ೧೧. ೧೫೩ ವ)

ತ್ರೈಲೋಕ್ಯಗುರು – [ನಾ] ಮೂರು ಲೋಕಗಳಿಗೂ ಗುರುವಾದವನು, ಶ್ರೀಕೃಷ್ಣ (ಮುನ್ನಿನಂತೆ ಮನುಷ್ಯದೇಹಮಂ ಕೆಯ್ಕೊಂಡು ತ್ರೈಲೋಕ್ಯಗುರು ಗುರುತನೂಜನ ಕೆಯ್ಯಂ ಪಿಡಿದು ಅರಮನೆಯಂ ಪೊಱಮಟ್ಟು: **ಪಂಪಭಾ,** ೯. ೬೦ ವ)

ತ್ರೈಲೋಕ್ಯಸಂಗೀತಕೀರ್ತಿ – [ನಾ] ಮೂರು ಲೋಕಗಳಲ್ಲಿಯೂ ಚೆನ್ನಾಗಿ ಹೊಗಳಲ್ಪಡುವಂತಹ ಕೀರ್ತಿಯುಳ್ಳವನು (ಗೋಕರ್ಣನಾಥನಂ ಗೌರೀನಾಥನಂ ಅವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ ಮೂರ್ತಿಯಂ ತ್ರೈಲೋಕ್ಯಸಂಗೀತಕೀರ್ತಿಯಂ ಕಂಡು ಕೆಯ್ಗಳಂ ಮುಗಿದು: **ಪಂಪಭಾ,** ೪. ೨೬ ವ)

ತ್ರೈಲೋಕ್ಯಸಾರ – [ನಾ] ಮೂರು ಲೋಕದ ಸಾರ (ವಾರಾಶಿಯೊಳಿನ್ನವು ಮುತ್ತೋರನ್ನವು ಪಡೆಯಲಾಗವತಿತರಳತರತ್ತಾರಾಹಾರಂ ಜಿತನೀಹಾರಂ ತ್ರೈಲೋಕ್ಯಸಾರಂ ಇಂತಿದು ಹಾರಂ: **ಆದಿಪು,** ೧೨. ೧೧೮)

ತ್ವಗಸ್ಥಿಭೂತಸರ್ವಾಂಗ – [ನಾ] ದೇಹದಲ್ಲಿ ಚರ್ಮ–ಮೂಳೆಗಳು ಮಾತ್ರ ಉಳಿದಿರುವಷ್ಟು ಕೃಶವಾದ (ಪ್ರಾಯೋಪಗಮನವಿಧಿಯಿಂ ತ್ವಗಸ್ಥಿಭೂತಸರ್ವಾಗಂ ದೈರ್ಯಮನೆ ಮನದೊಳ್ ಅವಲಂಬಿಸಿ: **ಆದಿಪು,** ೬. ೩೩ ವ)

ತ್ವತ್ – [ಗು] ನಿನ್ನ (ತ್ವಚ್ಚಂಡದೋರ್ದಂಡಂ ಉಗ್ರಕುರುಕ್ಷ್ಮಾಪ ಮಹೀರುಹಪ್ರಕರಮಂ ಮತ್ತೇಭವಿಕ್ರೀಡಿತಕ್ಕೆ ಕರಂ ಪೋಲ್ವೆಗೆ ವಂದುದು: **ಪಂಪಭಾ,** ೯. ೨೫)

ತ್ವದೀಯ – [ಗು] ನಿನ್ನ (ಪಿಂಗಿದುದೀಗಳ್ ಎನ್ನ ಬೆಸಗೊಡ ಎಡೆಯೊಂದು ತಮಂ ತ್ವದೀಯವಾಕ್ಯಂಗಳಿಂ: **ಆದಿಪು,** ೫. ೧೪)

ತ್ವದುದ್ಯೋಗ – [ನಾ] [ತ್ವತ್+ಉದ್ಯೋಗ] ನಿನ್ನ ಕಾರ್ಯ, ಪ್ರಯತ್ನ (ದೇವ ಭೀಕರಕರ್ಮದ್ವಿಷರಂ ಪಡಲ್ವಡಿಸಲುಂ ಭವ್ಯರ್ಕಳಂ ಘೋರಸಂಸರಣಾಂಭೋನಿಧಿಪಾರಮಂ ಸಲಿಸಲುಂ ಸಾಲ್ಗುಂ ತ್ವದುದ್ಯೋಗಂ: **ಆದಿಪು,** ೯. ೬೧)

ದ

ದಂಟು – [ನಾ] ತಾವರೆ ಮುಂತಾದುದರ ನಾಳ (ಕಟ್ಟಿದ ಪಟ್ಟಿಮೆ ಸರವಿಗೆ ನೆಟ್ಟನೆದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕಣ್ಗೆಟ್ಟ ಮುದುಪಂಗೆ: **ಪಂಪಭಾ,** ೧೦. ೧೭)

ದಂಡ – [ನಾ] ಒಂದು ಉದ್ದಳತೆ (ಅದು ಭೂಭಾಗದಿಂದಂ ಐಸಾಸಿರದಂಡಂ ಮೇಗೆ ನೆಗೆದಲ್ಲಿ ಪನ್ನೆರಡು ಯೋಜನ ಸಮವೃತ್ತಮುಂ: **ಆದಿಪು,** ೧೦. ೨೨ ವ); ಜುಲ್ಮಾನೆ (ಪಾರ್ವನೆಂದೆನ್ನೊಳ್ ಪುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಮವಸಾನಕಾಲದೊಳ್ ಬೆಸಕೆಯ್ಯದಿರ್ಕೆ: **ಪಂಪಭಾ,** ೧. ೧೦೫ ವ); [ನಾ] ಹಿಡಿಕೆ (ಚೇಟಿಕೆ ಬೀಸುವ ಕುಂಚಮೆಯ್ದೆ ಮೆಯ್ದೋಱುವ ಗಾಡಿ ಕಾಂಚನದ ದಂಡದ ಸೀಗುರಿ ನೋಟಕ್ಕೊಡೆ ಆರುಮಂ ಮಾಱಿ: **ಪಂಪಭಾ,** ೯. ೧೦೦)

ದಂಡಕಪಾಳಹಸ್ತ – [ನಾ] ಕೈಯಲ್ಲಿ ಯೋಗದಂಡ ಮತ್ತು ಭಿಕ್ಷಾಪಾತ್ರೆಯುಳ್ಳವನು (ಅಂತು ನೀಲಾಂಬುದಶ್ಯಾಮನುಂ ಕನಕಪಿಂಗಳ ಜಟಾಬಂಧಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣ ಮೃಗತ್ವಕ್ಪರಿಧಾನನುಮಾಗಿ: **ಪಂಪಭಾ,** ೧. ೬೯ ವ)

ದಂಡಕಾಷ್ಠ – [ನಾ] ದಂಡಗೋಲು (ಅಱಿಗನಂ ಪೊಗಟ್ಟಾಡಿದಂ ಅಂದು ದಂಡಕಾಷ್ಠದ ತುದಿಯೊಳ್ ಪಳಂಚಲೆಯೆ ಕೋವಣವಂ ಗುಡಿಗಟ್ಟಿ ನಾರದಂ: **ಪಂಪಭಾ,** ೧೨. ೨೧೯)

ದಂಡಕ್ರಿಯಾ – [ನಾ] [ಜೈನ] ಕೇವಲಿಯ ಆತ್ಮವು ಮೂಲಶರೀರದಿಂದ ಮೂರರಷ್ಟು ದಪ್ಪವಾಗಿಯೂ ಲೋಕಾಕಾರದಷ್ಟು ಉದ್ದವಾಗಿಯೂ ವ್ಯಾಪಿಸುವುದು (ದಂಡಕ್ರಿಯಾಕರಣಾನಂತರ ಸಮಯದೊಳ್ ಪೂರ್ವೋಕ್ತಬಾಹುಲ್ಯದಿಂ ಲೋಕಾಕಾಶ ವ್ಯಾಪಕಕವಾಟಕ್ರಿಯೆಯಂ ನೆಱಪಿ: **ಆದಿಪು,** ೧೬. ೪೯ ವ); [ನಾ] [ಜೈನ] ದಂಡ, ಕವಾಟ, ಪ್ರತರ, ಲೋಕಪೂರಣ ಎಂಬ ಸಮುದ್ಘಾತಕ್ರಿಯೆಗಳಲ್ಲಿ ಒಂದು (ಚತುರ್ದಶ ರಜ್ಜ್ವಾಯಾಮಾತ್ಮತ್ರಿಗುಣ ಪ್ರಮಾಣಾತ್ಮಪ್ರದೇಶ ವಿಸರ್ಪಣದಿಂ ದಂಡಕ್ರಿಯಾಕರಣನಂತರಸಮಯದೊಳ್: **ಆದಿಪು,** ೧೬. ೪೯ ವ)

ದಂಡಧರ – [ನಾ] ದಂಡ ನೀಡುವ ಅಧಿಕಾರವಿರುವವನು; (ಮತ್ತಂ ದಂಡಧರರಿಲ್ಲದಂದು ತಂತಮ್ಮ ವೃತ್ತಿಗಳಂ ಪ್ರಜೆಗಳತಿಕ್ರಮಿಸಿ ನಡೆಗುಂ ಎಂದು: **ಆದಿಪು,** ೮. ೭೪ ವ); ದಂಡವನ್ನು ಹಿಡಿದಿರುವವನು, ದಂಡಧಾರಿ (ನೃಪತಿ ನುಡಿಯೆ ನುಡಿಯಿಂ ನೀಪಿರ್ಮಡಿಯೊಳಿರಿಂ ನೀಮೆಚಿವಿರ್ ಮಿಡುಕಿದೊಡನೆ ಚಿತ್ರವೇತ್ರದಂಡಧರರ್ಕಳ್: **ಪಂಪಭಾ,** ೧೪. ೨೨)

ದಂಡನಾಯಕ – [ನಾ] ಸೇನಾಪತಿ (ತಪೋವಿಘಾತಂ ಮಾಡಿಂ ಎಂದು ತನ್ನ ನೆಚ್ಚಿನ ಅಚ್ಚರಸೆಯರುಮಂ ಆಱುಂ ಋತುಗಳುಮಂ ಗಂಧರ್ವರುಮಂ ಕಾಮದೇವನಂ ದಂಡನಾಯಕಂ ಮಾಡಿ ಪೇಟ್ಟಾಗಳ್: **ಪಂಪಭಾ,** ೭. ೮೦ ವ)

ದಂಡನೀತಿ – [ನಾ] ರಾಜನೀತಿ (ನಿನ್ನ ದಂಡನೀತಿಯ ಪುದುವೆ ವಲಂ ದಂಡರತ್ನಮೆಂಬುದು ಪೆಱತೇ: **ಆದಿಪು,** ೧೩. ೨೭)

ದಂಡರತ್ನ – [ನಾ] [ಜೈನ] ಚಕ್ರವರ್ತಿಗಳಿಗೆ ದೊರಕುವ ಹದಿನಾಲ್ಕು ರತ್ನಗಳಲ್ಲಿ ಒಂದು (ನಿನ್ನ ದಂಡನೀತಿಯ ಪುದುವೆ ವಲಂ ದಂಡರತ್ನಮೆಂಬುದು ಪೆಱತೇ: **ಆದಿಪು,** ೧೩. ೨೭)

ದಂಡಿಗೆ – [ನಾ] ವೀಣೆಯ ತಂತಿಗಳ ಆಧಾರವಾದ ಮರದ ಭಾಗ (ಸುರಯುವತಿ ತಂತ್ರೀನಾದಂ ಕೊಳೆ ಬೀಣೆಯ ದಂಡಿಗೆಯುಂ ತಳಿರ್ತುದೆಂಬೊಂದು ಶಂಕೆಯಂ ಪುಟ್ಟಿಸಿದಳ್: **ಆದಿಪು,** ೭. ೨೧); [ನಾ] ಪಲ್ಲಕ್ಕಿ (ಗುಡಿಯ ಗೂಂಟಕ್ಕೆ ಬಲ್ಲಡವಿಗಳುಂ ದಂಡಿಗೆಗೆ ವೇಣುವನಂಗಳುಂ ಆನೆಗಂಬಕ್ಕೆ ಪೆರ್ಮರಂಗಳುಮಂ ಆ ಪಡೆಗೆ ನೆಱೆಯವೆನಿಸಿ: **ಪಂಪಭಾ,** ೯. ೧೦೪ ವ)

ದಂಡುಱುಂಬೆ – [ನಾ] ಗಯ್ಯಾಳಿ, ದಿಟ್ಟೆ (ಅಂಬೆಯೆಂಬ ದಂಡುರುಂಬೆ ನಿನಗೆ ವಧಾರ್ಥಮಾಗಿ ಪುಟ್ಟುವೆನಕ್ಕೆಂದು ಕೋಪಾಗ್ನಿಯಿಂದಮಗ್ನಿಶರೀರೆಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟಿ: **ಪಂಪಭಾ,** ೧. ೮೦ ವ)

ದಂಡೋಪನತ – [ನಾ] [ದಂಡ+ಉಪನತ] ದಂಡಕ್ಕೆ ಹೆದರಿ ಸಾಷ್ಟಾಂಗ ನಮಸ್ಕಾರ ಮಾಡಿದವನು (ಅನೇಕ ತುರಗಮಣಿಪ್ರತತಿಗಳಂ ಮುಂದಿಟ್ಟು ಅವನತರಾದರ್ ಚಕ್ರಿಗಳ್ಕಿ ದಂಡೋಪನತರ್: **ಆದಿಪು,** ೧೨. ೬೫)

ದಂತ – [ನಾ] ಆನೆಯ ಕೋರೆ (ನಿನ್ನ ಕೀರ್ತಿಮುಖಂ ಕೀರ್ತಿಮುಖಂಬೊಲೇಂ ಎಸೆದುದೋ ದಿಗ್ದಂತಿ ದಂತಂಗಳೊಳ್: **ಪಂಪಭಾ,** ೬. ೬೬)

ದಂತಚಯ – [ನಾ] ಹಲ್ಲು ಸಾಲು (ಕರದ್ವಯಪಲ್ಲವಂ ಅಂಕದೊಳ್ ಮರಲ್ದಿರೆ ತನು ನಿಷ್ಕಂಪಮಿರೆ ದಂತಚಯ ಸಮನಾಗಿ ತನ್ನೊಳೊಂದಿರೆ: **ಆದಿಪು,** ೧೦. ೧೪)

ದಂತಚ್ಛದ – [ನಾ] ತುಟಿ (ಕೋಮಲತನು ಅಲರ್ಗಣ್ ನೀಳ್ದ ಧಮ್ಮಿಲ್ಲಂ ಉದ್ಭೂಲತೆ ಸದ್ದಂತಚ್ಛದಂ ದಂತರುಚಿ ರುಚಿರಶೋಭಾಕರಂ: **ಆದಿಪು,** ೪. ೨೦)

ದಂತಪಂಙ್ಕ್ತಿ – [ನಾ] ಹಲ್ಲುಗಳ ಸಾಲು (ರಸದಾಡಿಮದ ಬಿತ್ತುಮಂ ಪೊಸಮುತ್ತುಮಂ ಮುಕ್ಕುಳಿಸಿದಂತಪ್ಪ .. .. ದಂತಪಂಙ್ಕ್ತಿ: **ಪಂಪಭಾ,** ೨. ೩೯ ವ)

ದಂತಾಂತರ – [ನಾ] ದವಡೆ (ಎನ್ನೊಡವುಟ್ಟಿದರುಂ ತಂದೆಯುಂ ಅಡಗಿರ್ದರ್ ಖಳಕೃತಾಂತ ದಂತಾಂತರಮಂ: **ಆದಿಪು,** ३. ३४)

ದಂತಾಹತಿ – [ನಾ] ಆನೆಯ ದಂತದ ಹೊಡೆತ (ದಂತಾಹತಿವಿದಳಿತ ಗೋಶೀರ್ಷಸಾರದ್ರವಾಮೋದದಿನೆತ್ತಂ ಗಂಧವಾಹಂ ಮಗಮಗಸೆ: **ಆದಿಪು,** ೧೩. ೬೮)

ದಂತಿ – [ನಾ] ಆನೆ (ಶಲ್ಯನಂ ಅಂದು ಅಶಲ್ಯನಂ ಬಗೆವವೊಲ್ ಏಳಿದಂಬಗೆದು ದಂತಿಯಂ ಆಗಡೆ ತೋಱಿಕೊಟ್ಟು: **ಪಂಪಭಾ** ಪರಿಷತ್ತು, ೧೦. ೧೧೧)

ದಂತುರಿತ – **ಗು]** ತುಂಬಿದ (ಕರಿಮಕರಾಹತಿಯಿಂ ಬಿರಿದಳಱುವ ಭೈತ್ರದಂತೆ ವಿವಿಧಾಯುಧ ದಂತುರಿತಂಗಂಳಟಿದುವಾ ಸಂಗರಜಳನಿಧಿಯೊಳ್ ವರೂಥ ಕರಿ ನಿಕರಂಗಳ್: **ಪಂಪಭಾ,** ೧೩. ३५)

ದಂದಶೂಕ – [ನಾ] ಹಾವು (ಕುಪಿತ ಅನೇಕಪ ದಂದಶೂಕ ದವ ದೈತ್ಯ ಅರಾತಿ ಚೋರ ಅಂಧಕಾರ ಪತದ್ವಜ ವಿಷ ಅಭಿಚಾರಿಕ ಜರಾತಂಕಾದಿ ಭೇದಂಗಳಪ್ಪ: **ಆದಿಪು.** ೧೬. ೯)

ದಂದುಗ – [ನಾ] ವ್ಯಥೆ, ತೊಂದರೆ (ಪಲವುಂ ಶೀಲಂಗಳಂ ತಾಳ್ದಿ ದಂದುಗವೆಂದುಂ ತಮಗಾಗದಂತೆಸಗುವರ್ ಸರ್ವೋತ್ತಮರ್ ಸರ್ವಸಾಧುಗಳ್: **ಆದಿಪು,** ೧. ೫); [ನಾ] ಗೊಡವೆ (ಮುನ್ನಾ ವಿಧಾತ್ರಂ ಕುಡಲಿರ್ದಂ ಕನ್ನೆಯಂ ಪೇೞ್ ನಿನಗಮೆನಗಮೇಂ ದಂದುಗಂ ವಜ್ರಬಾಹೂ: **ಆದಿಪು,** ೪. ೨೭); [ನಾ] ಕಾರ್ಯ (ಅತ್ತಲಿತ್ತಲೆಡೆಯಾಡುವ ದಂದುಗದಾಗಳೇಂ ಪೊದಳ್ದೆಸೆದುದೊ ಚಾರುದೇವಗಣಿಕಾ ಮಣಿನೂಪುರ ಮಂಜುಶಿಂಜಿತಂ: **ಆದಿಪು,** ೭. ೨೨)

ದಂಪತಿ – [ನಾ] ಗಂಡಹೆಂಡಿರು (ಮನ್ಮಥಕ್ರೀಡೆಗೆ ನೋಡೆ ನಾಡೆ ಗುಜ್ಜೆಯಪ್ಪುವು ದಂಪತಿ ಭೋಗಭೂಮಿಯೊಳ್: **ಆದಿಪು,** ೫. ೪೧)

ದಂಶ – [ನಾ] ನೊಣ (ಬಿಸಿಲ್ ಐಕಿಲ್ ಪಸಿವು ಉಗ್ರ ದಂಶಮಶಕವ್ಯಾಬಾಧೆ ನೀರಟ್ಕೆ ಪೊಯ್ದು ಸಿಡಿಲ್ ತಿಂಬರವಾವು ಪಾಯ್ದು ಪುಲಿಯೆಂಬೀ ಬಾಧೆಯೊಳ್: **ಆದಿಪು,** ೬. ३४)

ದಂಷ್ಟ್ರ – [ನಾ] ಕೋರೆ ಹಲ್ಲು (ಅಂತು ಅಜಾತಶತ್ರು ಶತ್ರುಪಕ್ಷಕ್ಷಯಕರಕರವಾಳದಂಷ್ಟ್ರಾಭೀಳ ಭುಜಂಗಮೂರ್ತಿ .. .. ಅಪ್ಪ ಅರಿಕೇಸರಿಯ ತೋಳ್ವಲದೊಳ್: **ಪಂಪಭಾ,** ೪. ೧೦ ವ)

ದಕ್ಕು – [ನಾ] ದಸಿ, ಮುಳ್ಳಿನಂಥ ಕತ್ತಿ (ಪುಸಿ ನಸುವಂಚನೆ ನೋರ್ಪು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬುಗೆ ಕೆಯ್ ಕುಸುರಿ ನುಸುಳೆಂಬ ಕೇಣದ ಕುಸುರಿಯಂ ಅಱಿದು ಇಱಿದು ಮೆಱೆದು ಉಱಿದೆ ಅರೆಬರ್: **ಪಂಪಭಾ,** ೧೦. ೮೧)

ದಕ್ಷಾಧ್ವರಧ್ವಂಸಕ – [ನಾ] ದಕ್ಷನ ಯಜ್ಞವನ್ನು ಹಾಳುಮಾಡಿದವನು, ಶಿವ (ಇದು ಕೈಲಾಸಂ ಭವಾನೀಧವನ ನೆಲೆ ಮನೋಜಾತನಂ ಬೂದಿಮಾಡಿತ್ತಿದಱೊಳ್ ದಕ್ಷಾಧ್ವರಧ್ವಂಸಕನ ನೊಸಲ ಕಣ್: **ಪಂಪಭಾ,** ೭. ೭೪)

ದಕ್ಷಿಣ – [ಗು] ಬಲಭಾಗದ (ದಕ್ಷಿಣಚರಣದೊಳ್ ನೆಲನಂ ಪರಡಿ ಗಂಭೀರನಿನಾದದಿಂ ಹೇಷಿತಂಗೆಯ್ವ ವಿಜಯಹಯಮುಮಂ: **ಪಂಪಭಾ,** ೯. ೯೫ ವ)

ದಕ್ಷಿಣದಿಕ್ಪಾಲ – [ನಾ] ದಕ್ಷಿಣದ ಅಧಿಪತಿ, ಯಮ (ಅನ್ಯದುರ್ಧರ ನಿಜಧನುರ್ದಂಡಮಂ ತದ್ಧ್ವಜಿನಿಗೆ ಕೋಪಕುಟಿಲ ದಕ್ಷಿಣದಿಕ್ಪಾಲ ಭ್ರುಕುಟೀವಿಭ್ರಮಮಂ ಮಾಡಲ್ವಡದೆಯುಂ: **ಆದಿಪು,** ೧೪. ೧೦೩ ವ)

ದಕ್ಷಿಣವಿಷಾಣ – [ನಾ] ಬಲಭಾಗದ ದಂತ (ನಿಜಭುಜವಿಜಯಲಕ್ಷ್ಮೀ ಪರಿರಂಭಣಪ್ರಕಟನದಕ್ಷದಕ್ಷಿಣ ವಿಷಾಣವಿನ್ಯಸ್ತಹಸ್ತನುಂ: **ಆದಿಪು,** ೧೪. ೯೦ ವ)

ದಕ್ಷಿಣಹಸ್ತ – [ನಾ] ಬಲಗೈ (ಅಂತಕಾರಾದಿ ಹಕಾರಾಂತ ಸ್ವರವ್ಯಂಜನ ಭೇದಭಿನ್ನ ಶುದ್ಧಾಕ್ಷರಂಗಳುಮಂ ಆಯೋಗವಾಹಕ ಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಹ್ಮಿಗೆ ದಕ್ಷಿಣಹಸ್ತದೊಳ್ ಉಪದೇಶಂಗೆಯ್ದು: **ಆದಿಪು,** ೮. ೫೯ ವ)

ದಕ್ಷಿಣಾಕಾಲ – [ನಾ] ದಾನ ಕೊಡುವ ವೇಳೆ (ಮೂವತ್ತೆರಡು ದಿವಸದೊಳ್ ಕ್ರತುವಂ ನಿರ್ವರ್ತಿಸಿ ಮಹಾದಾನಂಗೆಯ್ದು ದಕ್ಷಿಣಾಕಾಲದೊಳ್: **ಪಂಪಭಾ,** ೬. ३೮ ವ)

ದಕ್ಷಿಣಾಕ್ಷಿಸ್ಪಂದ – [ನಾ] ಬಲಗಣ್ಣ ಅದುರುವಿಕೆ (ಅರಿಮಕುಟರತ್ನಮಂ ನಿಜಚರಣಕ್ಕರ್ಘ್ಯ ಪ್ರದೀಪಮಾಗಿರ್ಪುದನಾ ಭರತೇಶ್ವರಂಗೆ ಸೂಚಿಸಿದತ್ತು ದಕ್ಷಿಣಾಕ್ಷಿಸ್ಪಂದಂ: **ಆದಿಪು,** ೧೧. ೧೨)

ದಕ್ಷಿಣಾಕ್ಷಿಸ್ಪಂದನ – [ನಾ] ಬಲಗಣ್ಣ ಅದುರುವಿಕೆ (ಅಂತು ದಕ್ಷಿಣಾಕ್ಷಿಸ್ಪಂದನದೊಳಂ ಸೂಚಿಸುವ ಶುಭಸೂಚನೆಯೊಳಂ ನಾರಾಯಣಂ ಉದಾತ್ತನಾರಾಯಣನ ಬರವನಱಿದು: **ಪಂಪಭಾ,** ३. ३३ ವ)

ದಕ್ಷಿಣಾಗ್ನಿ – [ನಾ] [ಜೈನ] ಜೈನ ಬ್ರಾಹ್ಮಣರ ಮನೆಗಳಲ್ಲಿ ಅರ್ಹಂತನ ಪೂಜೆಗಾಗಿ ಸ್ಥಾಪಿಸುವ ಮೂರು ಬಗೆಯ ಅಗ್ನಿಗಳಲ್ಲಿ ಒಂದು (ತೀರ್ಥಕರಗಣಧರಾನಗಾರ ಕೇವಳಿಗಳ್ ಪರಿನಿರ್ವಾಣಕ್ಷೇತ್ರದೊಳ್ ಶರೀರಸಂಸ್ಕಾರಾದಿ ಗಾರ್ಹಪತ್ಯ ದಕ್ಷಿಣಾಗ್ನಿ ಆಹವನೀಯಮೆಂಬ ಪೆಸರಂ ಪಡದಂ: **ಆದಿಪು,** ೧೫. ೧೬ ವ)

ದಕ್ಷಿಣಾಭಿಮುಖ – [ನಾ] [ದಕ್ಷಿಣ+ಅಭಿಮುಖ] ದಕ್ಷಿಣಕ್ಕೆ ಎದುರಾದ (ದಕ್ಷಿಣಾಭಿಮುಖನಾಗಿ ನಿತ್ಯಪ್ರಯಾಣಂಗಳಿಂ ಬಂದು: **ಆದಿಪು,** ೧३. ೭೭ ವ)

ದಕ್ಷಿಣಾವರ್ತ – [ನಾ] [ದಕ್ಷಿಣ+ಆವರ್ತ] ಬಲಗಡೆ ಸುತ್ತುವ (ವಿಜಯಗಜಮನೇಱೆ ವಿದ್ಯೋತಮಾಗಿ ದಕ್ಷಿಣಾವರ್ತಮಪ್ಪ ಹೋಮಾಗ್ನಿಯಂ ಬಲಂಗೊಂಡು: **ಪಂಪಭಾ,** ೯. ೯೫ ವ)

ದಕ್ಷಿಣಾಶಾಲೆ – [ನಾ] ಬಲಗಡೆಯ ಹಜಾರ (ಯಜ್ಞದ್ರವ್ಯಂಗಳೆಲ್ಲಮಂ ನೆರಪಿ ಮಹಾವಿಭವದೊಳ್ ಶಮೀಪಾರ್ಶ್ವತಳ ದಕ್ಷಿಣಾಶಾಲೆಯೊಳ್ ಹಿರಣ್ಯದಾನಂ ಮಾಡಿ: **ಪಂಪಭಾ,** ೬. ३३ ವ)

ದಕ್ಷಿಣೋಪಾಂತ – [ನಾ] [ದಕ್ಷಿಣ+ಉಪಾಂತ] ಬಲಮಗ್ಗುಲು (ಗಾಂಗೇಯನ ದಕ್ಷಿಣೋಪಾಂತದೊಳ್ ಕರ್ಣನೆ ಕನಿತ ಸಮದಗಜಘಟಾಟೋಪದ ನಡುವೆ: **ಪಂಪಭಾ,** ೧೦. ೫೫ ವ)

ದಗುಂತಿ – [ನಾ] ಆಧಿಕ್ಯ (ದಿಶಾಕಾಂತೆಯ ಬೆಳ್ಪಸದನದ ದಗುಂತಿಯನೇಂ ತನಗೆ ನಾಡೆಯುಂ ಮಾಡಿದುದೋ: **ಆದಿಪು,** ೧೧. ೯)

ದಗ್ಧ – ಗು] ಸುಟ್ಟ (ವಿದುರಂ .. .. ಧೃತರಾಷ್ಟ್ರನ ಬೆಸದೊಳ್ ವಾರಣಾವತಕ್ಕೆ ಪೋಗಿ ತದರ್ಧ ದಗ್ಧ ಕಳೇವರಂಗಳಂ ಸಂಸ್ಕರಿಸಿ ಜಳದಾನಾದಿ ಕ್ರಿಯೆಗಳಂ ಮಾಡಿ ಮಗುೞ್ ವಂದಂ: **ಪಂಪಭಾ,** ३. ೮ ವ)

ದಡಿಗ – [ನಾ] ದಾಂಡಿಗ (ದಡಿಗನ ಮಿಟ್ಟುವಂ ಮಿದಿದೊಡಲ್ಲದೆ ಮಾಣೆಂ ಅಮೋಘಂ ಎಂದು ಕೂರ್ಪುಡುಗದೆ ಬಂದು ತಾಗೆ: **ಪಂಪಭಾ,** ೧೨. ೧೬೨)

ದತ್ತಕರ್ಣ – [ನಾ] ಕಿವಿಗೊಟ್ಟವನು, ಕೇಳುತ್ತಿರುವವನು (ಪುರೋಹಿತ ಉಚ್ಚಾರ್ಯಮಾಣ ಪುಣ್ಯಾಶೀರ್ವಚನನಿರ್ಘೋಷದತ್ತಕರ್ಣನುಂ ಆಗಿರ್ದಾಗಳ್: **ಆದಿಪು,** ೧೧. ೧೦ ವ)

ದಧಿ – [ನಾ] ಮೊಸರು (ಘೃತ ಲವಣ ತೈಲ ಕ್ಷೀರ ದಧಿ ವ್ಯಂಜನಂಗಳೊಳ್ ಸಂಸ್ಕಾರಂ ಮಾಡುವ: **ಆದಿಪು**, ೬, ೭೭ ವ)

ದನುಜ – [ನಾ] ದನು ಎಂಬುವವನ ವಂಶದ ರಾಕ್ಷಸ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು: **ಪಂಪಭಾ**, ೧. ೧೦೩)

ದನುಜಾರಿ – [ನಾ] [ದನುಜ+ಅರಿ] ರಾಕ್ಷಸರ ಶತ್ರು, ಶ್ರೀಕೃಷ್ಣ (ದನುಜಾರೀ ದಿವಿಜೇಂದ್ರ ಶಾಶ್ವತಗುಣಾ ನಿನ್ನ ಅಳ್ಕು ಅದೇಂ ಬೇಡು: ಪಂಪಭಾ, ೫. ೭೪)

ದನುಜೋದೀರಿತ – [ನಾ] [ಜೈನ] ರಾಕ್ಷಸರಿಂದ ಉಂಟಾದ ದುಃಖ (ಶಾರೀರ ಮಾನಸ ಕ್ಷೇತ್ರಜ ಪರಸ್ಪರೋದೀರಿತ ದನುಜೋದೀರಿತಗಳೆಂಬ ಅಯ್ದುಂ ತೆಱದ ದುಃಖಂಗಳೊಳಿರ್ದು: **ಆದಿಪು**, ೫. ೮೮ ವ)

ದನುತನಯ – [ನಾ] ರಾಕ್ಷಸಪುತ್ರ (ತಲೆಯ ನೆಲೆಗೆ ಲೋಕಾಂತರಕೆ ಎಡೆಯಿಲ್ಲ ಎನಿಸೆ ಪೆರ್ಚಿದಂ ದನುತನಯಂ: **ಪಂಪಭಾ**, ೧೨. ೧೧)

ದಯಾದತ್ತಿ – [ನಾ] [ಜೈನ] ಎಲ್ಲ ಪ್ರಾಣಿಗಳಲ್ಲಿ ದಯೆ ತೋರಿಸುವುದು (ತ್ರಿಶುದ್ಧಿಯಿನನುಕಂಪೆವೆರಸು ಸಮಸ್ತ ಪ್ರಾಣಿಗಳ್ಗೆ ಅಭಯಂಗುಡುವ ದಯಾದತ್ತಿಯುಂ: **ಆದಿಪು**, ೧೫. ೧೩ ವ)

ದಯೆಗೆಯ್ವೋ – ದಯಮಾಡಲಾರೆಯಾ, ದಯವಿಟ್ಟು ಕೊಡಲಾರೆಯಾ (ಕರಮೆ ಮಱುಗಿ ಮೆಯ್ವಿಡಿದು ಉರಿವ ಎನ್ನೀ ಎರ್ದೆಯನಾಜೆಸಲ್ ನೀಂ ಬಾಯೊಳ್ ತಂಬುಲಮನಪ್ಪೊಡಂ ದೆಗೆಯ್ವೋ: **ಪಂಪಭಾ**, ೮. ೬೯)

ದರದಳಿತ – [ಗು] ನಸುಬಿರಿದ (ದರದಳಿತ ಕಮಳವನಗಳಿತ ಮಧುರಮದಮದಿರಾಮೋದಮುದಿತ ಮಧುನಿಕರನಿನಾದ ಉಪವೀಣಿತಕ್ರೀಡಾ ಸರೋವರಂಗಳೇ: **ಆದಿಪು**, ೪. ೫೨ ವ)

ದರವುರ – [ನಾ] ಸ್ವಲ್ಪ ಮಟ್ಟಿಗೆ, ಮೆಲ್ಲಗೆ (ಕಪ್ಪುರದ ರಜಂಬೊರೆದ ಕರಕಾಂಬುವ ತಳಿದು ದರವುರಂ ಎಟ್ಟಿರಿಸೆ ಮೂರ್ಛೆ ತಿಳಿದು ಕುಮಾರಂ: **ಆದಿಪು**, ೪. ೧೭)

ದರವುರಂಗಾಣ್ – [ಕ್ರಿ] ಆಕಸ್ಮಿಕವಾಗಿ ನೋಡು (ಮನಮೊಲ್ದಾತನ ಗಾಡಿಯಂ ದರವುರಂಗಂಡಾಕೆಗಳ್ ಪೂವಿನಂಬಿನ ಕೋಳ್ಗಂ ತಳಿವಾಲಿನೀರ್ಗಂ ಅಲರ್ವಾಸಿಂಗಂ .. .. ಪಕ್ಕಾಗದೇಂ ಪೋಪರೇ: **ಆದಿಪು**, ೧. ೭೫)

ದರಹಸಿತ – [ಗು] ಮುಗುಳ್ನಗೆಯಿಂದ ಕೂಡಿದ (ಆತನ ಲಲಿತೋತ್ತಾನಶಯಿತ ದರಹಸಿತ ತರಂಗಿತ ಗತಿಸ್ಖಲಿತ ಮುಗ್ಧಜಲ್ಪಿತಾದಿ ಬಾಲ್ಯವಿಳಾಸಂಗಳಿಂದಂ: **ಆದಿಪು**, ೮. ೫೦ ವ)

ದರಹಾಸ – [ನಾ] ಮುಗುಳ್ನಗೆ (ಎಟಲಿಕ್ಕಿದ ಮುಕ್ತಾದಾಮಶೋಭೆ ಲಕ್ಷ್ಮೀಲಲನಾ ದರಹಾಸಶೋಭೆ: **ಆದಿಪು**, ೪. ೩೦ ರಗಳೆ)

ದರಿ – [ನಾ] ಕೊಳ್ಳ, ತಗ್ಗುಭೂಮಿ (ಸರಿತ್ ಗಿರಿ ದರಿ ಭೂರುಹ ಸೇತು ವನ ಸೀಮೋಪಲಕ್ಷಿತಂಗಳಪ್ಪ ಖೇಡಂಗಳುಮಂ: **ಆದಿಪು**, ೮. ೬೩ ವ)

ದರಿದ್ರಗೇಹಿನೀಗರ್ಭದೋಹಳ – [ನಾ] ಬಡವೆಯಾದ ಗೃಹಿಣಿಯ ಬಸಿರಿ ಬಯಕೆ (ಬಾಹುಬಲಿಯ ಸಮರಸಂಘಟ್ಟ ದೋಹಳಂ ಇದು ದರಿದ್ರಗೇಹಿನೀಗರ್ಭದೋಹಳದಂತಾದುದು: **ಆದಿಪು**, ೧೪. ೧೦೨ ವ)

ದರಿದ್ರಮಧ್ಯ – [ನಾ] ಬಡನಡು (ನಿಮಿರ್ದಲ್ಲಾಡುವ ಕಾಂತಾಕುಂತಳಂ ತುಂಗಸ್ತನಕ್ಷೋಭವಿಭ್ರಮಂ ಉತ್ಕಂಪದರಿದ್ರಮಧ್ಯಂ: **ಆದಿಪು**, ೮. ೭೦)

ದರ್ಪಣ – [ನಾ] ಕನ್ನಡಿ (ಗೋರೋಚನ ಸಿದ್ಧಾರ್ಥ ದೂರ್ವಾಂಕುರ ಮಾತುಳುಂಗ ಶೃಂಗಾರದರ್ಪಣ ಪೂರ್ಣಕಳಶ ಕಳಮಾವೃತಕರಪಲ್ಲವೆಯರಪ್ಪ ಪುರಂಧ್ರಿಯರುಮಂ: **ಪಂಪಭಾ**, ೩. ೨ ವ)

ದರ್ಪಣಸಮತಳ – [ಗು] ಕನ್ನಡಿಯಂತೆ ಸಮತಟ್ಟಾದ (ದರ್ಪಣಸಮತಳಮೆನೆ ಸಂಸರ್ಪತ್ ರತ್ನಾಂಶುಜಾಳ ಜಟಿಳಿತಮೆನೆ ಕಂದರ್ಪಸುಖನಿಳಯಮೆನೆ: **ಆದಿಪು**, ೫. ೨೮)

ದರ್ಪಿತ – [ಗು] ಅಹಂಕಾರದಿಂದ ಕೂಡಿದ (ದರ್ಪಿತ ದುರಿತಮಲ್ಲನುಮಂ ಉಡಿವ ತಕ್ಕಿನಿಂ ಸಭೆಗೆ ನಡೆದಂ ಇಂದ್ರಾರ್ಚಿತನಾ: **ಆದಿಪು**, ೧೪. ೧೩೪)

ದರ್ಪೋದ್ದಳನ – [ನಾ] ದರ್ಪವನ್ನು ಅಡಗಿಸುವ (ವೈರಿ ನರೇಂದ್ರ ದರ್ಪೋದ್ದಳನನೆ ಕಥಾನಾಯಂ ಮಾಡಿ ಸಂದರ್ಜುನನೊಳ್ ಪೊಲ್ವೀ ಕಥಾಭಿತ್ತಿಯನನುನಯದಿಂ ಪೇೞಲೆಂದೆತ್ತಿಕೊಂಡೆಂ: **ಪಂಪಭಾ**, ೧. ೫೧)

ದರ್ಭಶಯನ – [ನಾ] ದರ್ಭೆ [ಹುಲ್ಲು] ಹಾಸಿಗೆ (ಅಂತೆಗೆಯ್ವನೆಂದು ತೀರ್ಥಜಲಂಗಳಂ ಮಿಂದು ದಳಿಂಬವನುಟ್ಟು ಮುತ್ತಿನ ತೊಡಿಗೆಗಳಂ ತೊಟ್ಟು ದರ್ಭಶಯನದೊಳಿರ್ದು: **ಪಂಪಭಾ**, ೧. ೧೧೮ ವ); [ನಾ] ಹುಲ್ಲು ಹಾಸಿಗೆಯ ಮೇಲೆ ಮಲಗುವುದು (ಎರಡುಂ ಬಲಂಗಳುಂ ತಂತಮ್ಮ ವೀರಮಂ ಚಾಗಮಂ ಮೆಱೆದು ಕೆಯ್ದುಗಳನರ್ಚಿಸಿ ದರ್ಭಶಯನಂ ಮಾಡಿ: **ಪಂಪಭಾ**, ೧೦. ೪೪ ವ)

ದರ್ಭಶಯ್ಯೆ – [ನಾ] ದರ್ಭಶಯನ (ಎಸೆವ ಉಗ್ರ ರಣಾನಕ ರೌದ್ರಘೋಷಂ ಏರ್ವಸನಮನುಂಟುಮಾಡಿದುದು ಪಂದೆಗಂ ಅಂದಿನ ವೀರಗೋಷ್ಠಿಯೊಳ್ : **ಆದಿಪು**, ೧೪. ೯೦)

ದರ್ಭಾಸ್ತರಣ – [ನಾ] ಹುಲ್ಲಿನ ಹಾಸಿಗೆ (ನಿಜವಿಜಯತುರಗರಥಂಗಳಂ ಅರ್ಚಿಸಿ ಪೊಡೆವಟ್ಟು ದರ್ಭಾಸ್ತರಣದಿಳ್ ಆ ಇರುಳಂ ಕಳೆದು: **ಪಂಪಭಾ**, ೧೨. ೫೨ ವ)

ದರ್ಶನ – [ನಾ] [ಜೈನ] ಸಮ್ಯಕ್‌ದರ್ಶನ, ಜೈನತತ್ತ್ವಗಳ ತಿಳಿವಳಿಕೆ ಮತ್ತವುಗಳಲ್ಲಿನ ನಂಬಿಕೆ, ಸಿದ್ಧಪರಮೇಷ್ಠಿಗಳ ಅಷ್ಟಗುಣಗಳಲ್ಲಿ ಒಂದು (ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ನೆನೆಯುತ್ತುಂ: **ಆದಿಪು**, ೧೦. ೧೪ ವ); [ನಾ] [ಜೈನ] ಕನಸು (ಭರತಂ ದರ್ಶನದೊಳ್ ಮಂದರಮಾ ಪ್ರಾಗ್ಭಾರಭೂತಳಂಬರೆಗಂ ನೀಳ್ದಿರೆ ಕಂಡು ವಿಸ್ಮಿತಾಂತಃಕರಣಂ: **ಆದಿಪು**, ೧೬. ೪೧)

ದರ್ಶನಮೋಹನೀಯತ್ರಿಕ – [ನಾ] [ಜೈನ] ಆತ್ಮನ ಸಮ್ಯಗ್ದರ್ಶನಕ್ಕೆ ಅಡ್ಡಿಮಾಡುವಂತಹ ಮೂರು ಮೋಹನೀಯಗಳಲ್ಲಿ ಒಂದು (ಅಂತರ್ಮುಹೂರ್ತಮಂ ವಿಶ್ರಮಿಸಿ ಮಗುಟ್ದುಂ ತ್ರಿವಿಧಕರಣಪರಿಣಾಮಪರಿಣತಂ ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿ ಎಂಬ ದರ್ಶನಮೋಹನೀಯತ್ರಿಕದ ನಿರ್ಮೂಲನದಿಂ: **ಆದಿಪು,** ೧೦. ೧೪ ವ)

ದರ್ಶನರತ್ನ – [ನಾ] [ಜೈನ] ರತ್ನತ್ರಯಗಳಲ್ಲಿ ಒಂದಾದ ಸಮ್ಯಕ್ದರ್ಶನ ಎಂಬ ರತ್ನ (ಮೂಢತ್ರಯದೊಳ್ ಭಾವಮನೆ ಬಿಸುಡು ಬೆಳಗುಗುಂ ಈ ವಿಧದಿಂ ನೆಗಟಿ ನಿನ್ನ ದರ್ಶನರತ್ನಂ: **ಆದಿಪು,** ೫. ೫೬)

ದರ್ಶನವಿಶುದ್ಧ – ನಿರ್ಮಲವಾದ ಸಮ್ಯಕ್‌ದರ್ಶನವುಳ್ಳವನು (ಪಾತ್ರಮುತ್ತಮಮಧ್ಯಮಜಘನ್ಯಭೇದದಿಂ ತ್ರಿವಿಧಮಕ್ಕು ಮಲ್ಲಿ ದರ್ಶನವಿಶುದ್ಧನುಂ ಶೀಲಸಂಪನ್ನನುಮಪ್ಪ ಸಂಯತನುತ್ತಮಪಾತ್ರಂ: **ಆದಿಪು,** ೧೦. ೯ ವ)

ದರ್ಶನಾವರಣ ಚತುಷ್ಕ – [ನಾ] [ಜೈನ] ನಾಲ್ಕು ದರ್ಶನಾವರಣಗಳು (ಚಕ್ಷು ಅಚಕ್ಷು ಅವಧಿ ಕೇವಲದರ್ಶನಾವರಣೀಯ ಚತುಷ್ಕಮುಮಂ ದಾನ ಲಾಭ ಭೋಗ ಉಪಭೋಗ ವೀರ್ಯಾಂತರಾಯಪಂಚಕಮುಮಂ ನಿರ್ಮೂಳಮಪ್ಪಂತೆ: **ಆದಿಪು,** ೧೦. ೧೪ ವ)

ದಲ್ – [ಅ] ಅಲ್ಲವೇ ಎಂಬ ಅವಧಾರಣಸೂಚಕ ಶಬ್ದ (ನೀನರಸನೆ ಎನ್ನ ರಾಜ್ಯವಿಭವಕ್ಕೆ ಎಲೆ ನೀನೆ ದಲ್ ಎಂದು ಮಾಮರನನೆ ಮೂಱು ಸೂಟಿ್ ಪಿರಿದುಮಟ್ಟಿಜೆನಿಂ ಬಲವಂದನಗಜಂ: **ಆದಿಪು,** ೧೧. ೧೦೦); [ಅ] ನಿಶ್ಚಯವಾಗಿ (ಸುರನದಿಯ ನೀರೊಳ್ ಮಿಂದು ಇನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆ ಎಂದಾಹ್ವಾನಂಗೆಯ್ಯಲೊಡಂ ದಲ್ ಧರೆಗೀಟಿದನಂದು ದಶಶತಕಿರಣಂ: **ಪಂಪಭಾ,** ೧. ೯೧)

ದವ – [ನಾ] ಕಾಡು (ಈ ಮರನಂ ತಗುಳ್ದುದೆಂಬನೊಳ್ ಎಣೆಯಾಗೆ ಸತ್ತರೆನೆ ಸಾಯದಂತೆಣಿಸುತ್ತುಮಿರ್ಪ ಬೆಳ್ತನದನಿತಲ್ಲದಾ ಮರನನಾ ದವದಗ್ನಿ ಬರ್ದುಂಕಲೀಗಮೇ: **ಆದಿಪು,** ೯. ೫೯); [ನಾ] ಕಾಡುಗಿಚ್ಚು (ಕುಪಿತ ಅನೇಕಪ ದಂದಶೂಕ ದವ ದೈತ್ಯ ಅರಾತಿ ಚೋರ ಅಂಧಕಾರ ಪತದ್ವಜ ವಿಷ ಅಭಿಚಾರಿಕ ಜರಾತಂಕಾದಿ ಭೇದಂಗಳಪ್ಪ: **ಆದಿಪು.** ೧೬. ೯)

ದವದಹನ – [ನಾ] ಕಾಡುಗಿಚ್ಚು (ಸೈರಿಸಿ ನೂಱಿಂಬನಿತುವರಂ ಮನ್ನಿಸಿ ನಸುಕಿನಿಸದೆ ಮಿಗೆ ಕಿನಿಸಿ ದಿತಿಜಕುಳದವದಹನಂ: **ಪಂಪಭಾ,** ೬. ೬೩)

ದವಾನಲ – [ನಾ] ಕಾಡುಗಿಚ್ಚು (ಮದನ ದವಾನಲಾರ್ಚಿ ತನುವಂ ಸುಡೆ ತಳ್ತ ಎಮೆಯೊಳ್ ಪಳಂಚಿ ಬೀಗಿದ ಬೆಳರ್ವಾಯೊಳ್ ಉಚ್ಚಳಿಸಿ .. .. ಎಯ್ದಿದುವು ನೇತ್ರಜಲಬಿಂದುಗಳ್ ಆಕೆಯ ನಿಮ್ನನಾಭಿಯಂ: **ಪಂಪಭಾ,** ೫. ೯)

ದಶಕಂಠ – [ನಾ] ಹತ್ತು ತಲೆಗಳುಳ್ಳವನು, ರಾವಣ (ತೊಂಡಿನೊಳ್ ಉರ್ಕಿ ಕೆಟ್ಟ ದಶಕಂಠನಂ ಅಕ್ಕಟ ಕೊಂಡ ಪೆರ್ಮರುಳ್ ಕೊಂಡುದೆ ತನ್ನುಮಂ: **ಪಂಪಭಾ,** ೬. ೩೩)

ದಶಕಂಧರ – [ನಾ] ರಾವಣ (ನೆಟ್ಟನೆ ಬೂತುಗೊಳ್ವ ತೆಱದಿಂ ದಶಕಂಧರನಾಡಿ ಪಾಡಿ ನಾಣ್ಗೆಟ್ಟಿರೆ ಕೊಂಡನಲ್ಲದೆ ಬರಂಗಳಂ: **ಪಂಪಭಾ,** ೯. ೫೩)

ದಶದಿಶಾಮಂಡಲ – [ನಾ] ಹತ್ತೂ ದಿಕ್ಕುಗಳ ಪ್ರದೇಶ (ಇದಱಿೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ ಪುದಿದಟಿ್ಕಾಡಿತ್ತು ಅಡಂಗಿತ್ತಿದಱಿೊಳೆ ಕುರುರಾಜಾನ್ವಯಂ: **ಪಂಪಭಾ,** ೧೨. ೧೫೬)

ದಶಧರ್ಮ – [ನಾ] [ಜೈನ] ದಶಕುಲಧರ್ಮ: ಭೈಷ, ಅಸ್ತೇಯ, ಶೌಚ, ಅಪ್ರಮಾದ, ಅವ್ಯವಾಯ, ಭೂತದಯೆ, ಕ್ಷಮಾ, ಅಕ್ರೋಧ, ಗುರುಶುಶ್ರೂಷೆ, ಸತ್ಯ ಅಥವಾ ಉತ್ತಮಕ್ಷಮಾ, ಆರ್ದವ, ಸತ್ಯ, ಶೌಚ, ಸಂಯಮ, ತಪಸ್ಸು, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯಾ, ಪರ್ಯಾಪ್ತ (ಏಕಧನುರ್ಧರನಾದಂ ಇಳಾಕಾಂತೆಯನೊಲಿಸುವಂದು ದಶಧರ್ಮಾಕಳಿತ ಕರಾಗ್ರನಾದೆಂ: **ಆದಿಪು,** ೬. ೩೦)

ದಶನ – [ನಾ] ಹಲ್ಲು (ಕುಂದಧವಳನೃಪದಶನೇಂದು ಜ್ಯೋತ್ಸ್ನಾಮೃತಾಚ್ಛಜಳ ಪರಿಷೇಕಂ ಮಾಂದಿಸುವಂತಾದುದು ನೃಪನಂದನನೆಯ ಎರ್ದೆಯೊಳಗೆ ಬಳೆದ ಶೋಕಾನಳನಂ: **ಆದಿಪು,** ೩. ೪೯)

ದಶನಘಟ್ಟನ – [ನಾ] ಹಲ್ಲು ಕಡಿಯುವುದು (ಆಮಂತ್ರಿತ ಡಾಕಿನೀ ದಶನಘಟ್ಟನ ಜಾತವಿಭೀಷಣಂ: **ಪಂಪಭಾ,** ೧೨. ೧೨೦)

ದಶನಚ್ಛದ – [ನಾ] ಹಲ್ಲುಗಳನ್ನು ಮುಚ್ಚಿರುವುದು, ತುಟಿ (ದಶನಾಂಶುಗಳಂ ಮೆಲ್ಲನೆ ದಶನಚ್ಛದಮೃದುಪಲ್ಲವದಿಂ ಮಱಸಿ ಮಾಣೆ ದೂತಂ ನುಡಿದಂ: **ಆದಿಪು,** ೧೪. ೫೦)

ದಶನದಂಶ – [ನಾ] ಹಲ್ಲಿನಿಂದ ಕಚ್ಚುವುದು (ಅಲ್ಪ ದಶನದಂಶಮಾತ್ರ ಖಂಡನೀಯ ಮಂಡಕಮುಮಂ: **ಆದಿಪು,** ೧೧. ೨೬ ವ)

ದಶನನಿಪೀಡಿತದಶನವಸನ – [ನಾ] ಹಲ್ಲುಗಳಿಂದ ತುಟಿಯನ್ನು ಕಚ್ಚುವುದು (ಮುಳಿದು ಘೂರ್ಣಮಾನ ಲೋಹಿತಲೋಚನಂ ದಶನನಿಪೀಡಿತ ದಶನವಸನಂ ಅಸಿಧೇನುವಂ ಕಿಟ್ಟು: **ಆದಿಪು,** ೨. ೧೪ ವ)

ದಶಶತಕರ – [ನಾ] ಸೂರ್ಯ (ಆ ಬದ್ದೆಗಂಗೆ ವೈರಿತಮೋಬಳ ದಶಶತಕರಂ ವಿರಾಜಿತ ವಿಜಯಶ್ರೀ ಬಾಹು ಯುದ್ಧಮಲ್ಲನಿಳಾಬಹುವಿಧ ರಕ್ಷಣ ಪ್ರವೀಣಕೃಪಾಣಂ: **ಪಂಪಭಾ,** ೧. ೩೦)

ದಶಶತಕಿರಣ – [ನಾ] ಸೂರ್ಯ (ಸುರನದಿಯ ನೀರೊಳ್ ಮಿಂದು ಇನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆ ಎಂದಾಹ್ವಾನಂಗೆಯ್ಯಲೊಡಂ ದಲ್ ಧರೆಗೀಟಿದನಂದು ದಶಶತಕಿರಣಂ: **ಪಂಪಭಾ,** ೧. ೯೧)

ದಶಸಹಸ್ರಮದೇಭಬಳಂ – [ನಾ] ಹತ್ತು ಸಾವಿರ ಮದ್ದಾನೆಗಳ ಬಲವುಳ್ಳವನು (ಪಾರಿಜಾತಂ ಅಗ್ಗಳಮೆಸೆದೊಪ್ಪುವಂತೆ ತಳಿರಿಂ ಮುಗುಳಿಂ ನವಯೌವನಂ ಮನಂಗೊಳೆ ಕರಮೊಪ್ಪಿದಂ ದಶಸಹಸ್ರಮದೇಭಬಳಂ ವೃಕೋದರಂ: **ಪಂಪಭಾ,** ೨. ೩೮)

ದಶಾಂಗ – [ನಾ] ಧೂಪ (ಕುರುಭೂಮಿಗಳೊಪ್ಪಿದುವು ಅರ್ಧಚಂದ್ರನಾಕಾರದಿಂ ಉಚಿತ ದಶಾಂಗ ಕಲ್ಪಕುಜ ನಿಳಯಂಗಳ್: **ಆದಿಪು,** ೨. ೨೬): [ನಾ] [ಜೈನ] ಹತ್ತು ಪದಾರ್ಥಗಳು (ಮದ್ಯ ವಿಭೂಷಣ ವಸ್ತ್ರ ಆತೋದ್ಯ ಅಸ್ರಕ್ ಭವನ ಭಾಜನ ಅಶನ ದೀಪ ಪ್ರೋದ್ಯಜ್ಜ್ಯೋತಿಸ್ಥಿತಿಯೊಳಂ

ಉದ್ಯೋತಿಸೆ ತುದಿಯೊಳ್ ಅಂಗಮಿಂತು ದಶಾಂಗಂ: **ಆದಿಪು,** ೪. ೩೧); **[ನಾ]** ಚಕ್ರವರ್ತಿಯ ಹತ್ತು ಭೋಗಾಂಗಗಳು (ಪುರ ನಿಧಿ ಶಯ್ಯಾ ಆಸನ ರಾಜ್ಯ ರತ್ನ ವಾಹನ ವರೂಥಿನೀ ನಾಟ್ಯಸಭಾ ಪರಿಕರಸಹಿತಂ ಭರತೇಶ್ವರಂಗೆ ಸಮಸಂದುದೀ ದಶಾಂಗಂ ಭೋಗಂ: **ಆದಿಪು,** ೧೫. ೫)

ದಶಾಂಗಕಲ್ಪಕುಜ – [ನಾ] [ಜೈನ] ಭೋಗಭೂಮಿಯ ಮಧ್ಯ, ಭೂಷಣ, ವಸ್ತ್ರ, ಆತೋದ್ಯ, ಸ್ರಗ್ಭವನ, ಭಾಜನ, ಅಶನ, ದೀಪ, ಪ್ರೋದ್ಯತ್, ಜ್ಯೋತಿಸ್ಥಿತಿ ಎಂಬ ಹತ್ತುಕಲ್ಪವೃಕ್ಷಗಳು (ಇದು ಶಾಲ್ಮಲೀಪಾದಪಂ ಇಂತಿದು ಜಂಬೂವೃಕ್ಷಂ ಇದುವೆ ಕುರುಭೂಮಿಗಳೊಪ್ಪಿದುವು ಅರ್ಧಚಂದ್ರನಾಕಾರದಿಂ ಉಚಿತದಶಾಂಗಕಲ್ಪಕುಜನಿಳಯಂಗಳ್; **ಆದಿಪು,** ೨. ೨೬)

ದಶಾಂಗಭೋಗ – [ನಾ] ಚಕ್ರವರ್ತಿಗಳಿಗೆ ದೊರಕುವ ದಿವ್ಯನಗರ, ಚತುರ್ದಶರತ್ನಗಳು, ನವನಿಧಿ, ಸೈನ್ಯ, ಭೋಜನ, ಭಾಜನ, ಶಯ್ಯಾ, ಆಸನ, ವಾಹನ, ನಾಟ್ಯ ಎಂಬ ಹತ್ತು ಭೋಗಗಳು (ಆ ಭವ್ಯರತ್ನಾಕರಂ ಚತುಸ್ತ್ರಿಂಶದತಿಶಯಭೋಗದೊಳ್ ಕೂಡಿದಂ ಈ ಪುರುಷ ರತ್ನಾಕರಂ ದಶಾಂಗಭೋಗದೊಳ್ ಕೂಡಿದಂ: **ಆದಿಪು,** ೬. ೨೪ ವ)

ದಶಾವತಾರ – **[ನಾ]** [ಜೈನ] ಆದಿಜಿನನ ಹತ್ತು ಅವತಾರಗಳು: ಮಹಾಬಲ, ಲಲಿತಾಂಗ, ವಜ್ರಜಂಘ, ವಜ್ರಜಂಘಾರ್ಯ, ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ, ಅಹಮಿಂದ್ರ ಮತ್ತು ಆದಿನಾಥ (ಭಗವಜ್ಜನ್ಮಾಭಿಷೇಕ ಸಂಬಂಧಿಯಾಗೆ ತನ್ನ ಪೊಸತೆ ಸಮೆದ ಸಮವಕಾರ ರೂಪಕಮುಂ ದಶಾವತಾರರೂಪಗರ್ಭ ಸಂದರ್ಭಂಗಳಪ್ಪ ಶೇಷಾಶೇಷ ರೂಪಕಂಗಳುಮಂ: **ಆದಿಪು,** ೭. ೧೧೫ ವ)

ದಸಿಕು – **[ನಾ]** ಮೊಳೆ (ದಸಿಕೊಂದಕ್ಕುಂ ಬೇಡಂಗೆ ಇಸಲ್ಕೆ ದೊರೆ ಮೃಗಮನೀ ಜಗಂಗಳನಳ್ಳಾಡಿಸುವ ಮದೀಯ ಉಗ್ರಾಸ್ತ್ರಂ ಪೆಸರ್ಗೊಳಲೇಂ ತನಗೆ ದೊರೆಯೆ: **ಪಂಪಭಾ,** ೮. ೧೯)

ದಹನ – **[ನಾ]** ಅಗ್ನಿ (ನಾಗರ ಖಂಡಂಗಳಂ ಆ ನಾಗರ ಖಂಡದೊಳೆ ತೊಡರೆ ನರಂ ಇಸುವುದುಂ ನಾಗರ ಖಂಡಂಗಳುಮಂ ನಾಗರ ಖಂಡಮುಮಂ ಅಳುರ್ದುಕೊಂಡಂ ದಹನಂ: **ಪಂಪಭಾ,** ೮೯)

ದಹನಶಿಖೆ – [ನಾ] ಬೆಂಕಿಯ ಜ್ವಾಲೆ (ಹರಿಚಕ್ರಂ ಕೊಳ್ಳದೆ ನರಶರಂ ಉರ್ಚದೆ ದಹನಶಿಖೆಗಳ್ ಅಳುರದೆ ಅವನಂ: **ಪಂಪಭಾ,** ೫. ೯೯)

ದಹನಾರ್ಚಿ – [ನಾ] ಬೆಂಕಿಯ ಜ್ವಾಲೆ (ಒಂದು ದೆಸೆಯೊಳ್ ತಗುಳ್ವ ಮುಕುಂದನ ಕರಚಕ್ರಂ ಒಂದು ದೆಸೆಯೊಳ್ ನರನೆಚ್ಚ ಒಂದು ಶರಂ ಒಂದು ದೆಸೆಯೊಳ್ ಕುಂದದೆ ದಹನಾರ್ಚಿ ಸುತ್ತಿ ಮುತ್ತುವ ಪದದೊಳ್: **ಪಂಪಭಾ,** ೫. ೯೮)

ದಹ್ಯಮಾನ – [ಗು] ಸುಡಲ್ಪಟ್ಟ (ಪರಲೋಕಪ್ರಾಪ್ತನಾದೊಡೆ ಗಾಂಗೇಯನುಂ ಸತ್ಯವತಿಯುಮತ್ಯಂತಶೋಕಾನಲದಹ್ಯಮಾನ ಮಾನಸರ್ಕಳಾಗಿ: **ಪಂಪಭಾ,** ೧. ೮೦ ವ)

ದಳ – [ನಾ] ಆಸರೆ (ವಜ್ರನಾಭಿ ಚೆಲ್ವಿಂಗೆ ನಾಭಿಯುಂ ವಿಳಾಸಕ್ಕಾವಾಸಮುಂ ಅಳವಿಂಗೆ ದಳಮುಂ ಅಱಿವಿಂಗೆ ಗುಱಿಯುಂ .. .. ಆಗಿ ಬಳೆವನ್ನೆಗಂ: **ಆದಿಪು,** ೬. ೨೨ ವ)

ದಳಂ – **[ನಾ]** ಅಡಕೆ (ಮಾರೀಚಿ ತೊಡರ್ಪುಳಿಂದೆ ಸರದಿಂ ಕಂಪಿಲ್ಲ ಚಿಂತಾಮಣಿಗೇವುದಕ್ಕ ದಳಂ ಇಲ್ಲ ಈ ಕಕ್ಕರಕ್ಕಿಂತುಟಪ್ಪುದು ಕಳ್ಳಪ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮಂ ಕಾಂತೆಯರ್: **ಪಂಪಭಾ,** ೪. ೮೮)

ದಳಂಬಡೆ – [ನಾ] ಅಧಿಕವಾಗು (ಕಾಮದೇವನೆಂಬ ಬಳಮರ್ದುಕಾಱನ ಮಾಡಿದ ಮರ್ದಿನಂತೆ ಬಳೆದು ದಳಂಬಡೆದು: **ಪಂಪಭಾ,** ೪. ೮೭ ವ)

ದಳತ್ಕೋಕನದಜಠರ – **[ನಾ]** [ದಳತ್+ಕೋಕನದ+ಜಠರ] ತಾವರೆಯನ್ನು ಹೊಕ್ಕುಳಲ್ಲಿ ಉಳ್ಳವನು, ವಿಷ್ಣು, ಕೃಷ್ಣ (ಜಳತ್ಕೋಕಕನದಜಠರನಂ ನಿರ್ವ್ಯಾಕುಳಂ ಇಂತೆಂದು ಧರ್ಮತನಯಂ ನುಡಿದಂ: **ಪಂಪಭಾ,** ೯. ೧೪)

ದಳನ – [ನಾ] ಸೀಳುವಿಕೆ (ರಿಪುನೃಪಬಲದಾವಾನಲಂ ವೈರಿಭೂಭೃತ್ ಮದವತ್ ಮಾತಂಗಕುಂಭಸ್ಥಳ ದಳನಖರೋಗ್ರಾಸಿ ಪಂಚಾಸ್ಯಧೈರ್ಯಂ: **ಪಂಪಭಾ,** ೬. ೭೭)

ದಳಿಂಬ – [ನಾ] ದಡಿಬ, ಮಡಿ ಬಟ್ಟೆ (ಹಾಟಕಪೀಠದ ಮೇಲೆ ಪಾಸಿದ ದುಗುಲದ ದಳಿಂಬದೊಳಿರಿಸಿದಾಗಳ್: **ಆದಿಪು,** ೪. ೪೮ ವ)

ದಳಿತ – [ಗು] ಸೀಳಲ್ಪಟ್ಟ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ); **[ಗು]** ಅರಳಿದ (ದಳಿತಕಮಲಚ್ಛಾಯಾಟೋಪಂ ಮನೋಜರಸ ಪ್ರಭಾವಳಯನಿಳಯಂ ಪ್ರೋದ್ಯತ್ ಭ್ರೂವಿಭ್ರಮಂ: **ಪಂಪಭಾ,** ೪. ೭೭)

ದಳಿತಶತ್ರುಗೋತ್ರ – [ನಾ] ಶತ್ರುವಂಶಸಂಹಾರಕ (ಶುಭತಿಥಿ ಶುಭನಕ್ಷತ್ರಂ ಶುಭವಾರಂ ಶುಭಮುಹೂರ್ತಮೆನೆ ಗಣಕಂ ಇಳಾಪ್ರಭುವೊಗೆದಂ ಉದಿತಕಾಯಪ್ರಭೆಯೊಗೆದಿರೆ ದಳಿತಶತ್ರುಗೋತ್ರಂ ಪುತ್ರಂ: **ಪಂಪಭಾ,** ೧. ೧೨೭)

ದಳಿವ – **[ನಾ]** ಮೇಲು ಹೊದಿಕೆ (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱಿ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ ದಳಿವದ ತೊಟ್ಟ ಅಂಗಿಗೆ ತನ್ನೊಳ್ ಅಮರೆ ಬೇಂಟೆಯನೊರ್ವಂ; **ಪಂಪಭಾ,** ೫. ೩೬)

ದಳಿವಿಡಿ – [ಕ್ರಿ] ಕೂಡಿಸು, ಕುಂದಣವಿಡು (ಮಾಣಿಕ್ಯಚಟ್ಟಂ ನೀರಂಜಿಸಿ ದಳಿವಿಡಿದ ಮಹಾರತ್ನದ ದೊರೆಗೆ ವಂದುದಾ ಸ್ತ್ರೀರತ್ನಂ: **ಆದಿಪು,** ೪. ೪೨)

ದಳ್ಳಿಸಿ ಕುಕಿಲ್ – [ಕ್ರಿ] ಭೋರೆಂದು ಶಬ್ದಮಾಡು (ದಳ್ಳಿಸಿ ಕುಕಿಲುತ್ತಂಬುಧಿಯ ಉಳ್ಕೋಳಂ ನೆಗಱ್ ಕವಿದು ನರ್ತಿಸಿ ನಡೆದತ್ತು: **ಆದಿಪು,** ೧೩. ೫೩)

ದಳ್ಳಿಸು – [ಕ್ರಿ] ಸಂಭ್ರಮಪಡು (ಗಿಳಿಗಳೊಳೆ ಗೞಪಿ ಮೊಱೆವಳಿಕುಳದೊಡನಾಳ್ಕೆಸಿ ಪುರುಳಿಯೊಡನೆಳಸಿ ನವಿಲ್ಗಳ ಬಳಗದೊಡನೆ ನರ್ತಿಸಿ ವಿಳಾಸಿನೀನಿವಹಂ ಆಗಳದೇಂ ದಳ್ಳಸಿತೋ: **ಆದಿಪು,** ೧೧. ೮೨); **[ಕ್ರಿ]** ಪ್ರಜ್ವಲಿಸು (ಅಱವಱಗಾದ ಕಾಡನಳುರ್ವ ಬೇಗೆಯ ದಳ್ಳುರಿ ದಳ್ಳಿಸಿಕೊಳ್ಳೆಂದರಾತಿ ಬಲಮನಳುರೆ: **ಪಂಪಭಾ,** ೧೨. ೭ ವ)

ದಳ್ಳುರಿ – [ನಾ] ದೊಡ್ಡ ಉರಿ (ಮುಳಿಸಿನ ದಳ್ಳುರಿಗಳನುಗುೞುತ್ತುಂ ಚಕ್ರರತ್ನಂ ಬಗೆದು ಬೆಸೆಸಿದಂ

ಭರತೇಶಂ: **ಆದಿಪು,** ೧೪. ೧೧೫); **[ನಾ]** ಪ್ರಜ್ವಲಿಸುವ ಬೆಂಕಿ (ಗಂಡರ ನೆತ್ತಿಯೊಳೊತ್ತಿ ಬಾಳಂ ಇನ್ನೂಱುಗುಂ ಎಂದೊಡೆ ಏಂ ಪಿರಿದೋ ತೇಜದ ದಳ್ಳುರಿ ಪಾಂಡುರಾಜನಾ: **ಪಂಪಭಾ,** ೧. ೧೦೯)

ದಾಂಗುಡಿ – [ನಾ] [ದಾವು+ಕುಡಿ] ಹಗ್ಗದಂತೆ ಉದ್ದವಾಗಿರುವ ಕುಡಿ, ಹಬ್ಬುವ ಕುಡಿ (ತಳ್ತು ಕಟ್ಟಿದ ಗುಡಿ ರಂಗವಲ್ಲಿಗಳೆ ದಾಂಗುಡಿಯಂತಿರೆ ಸೂಸೆ ಸೇಸೆಯಂ ಸುದತಿಯರಿಕ್ಕೆ ಚಾಮರಮಂ: **ಪಂಪಭಾ,** ೫. ೧೦೫)

ದಾಂಗುಡಿವಿಡಿ – [ಕ್ರಿ] ಉದ್ದವಾಗಿರುವ ಕುಡಿಯನ್ನು ಚಾಚು (ಮಕ್ಕಳಂ ಪಡೆದಬಳಾಜನಂ ನೆರೆದ ಮಕ್ಕಳ ಮಕ್ಕಳ ನೀಳ್ದದೊಂದು ದಾಂಗುಡಿವಿಡಿದೀವ ಚಾಗಮೆಡಱಿೞೋಡುವಿನಂ: **ಆದಿಪು,** ೨. ೨೪)

ದಾಂಟು – [ಕ್ರಿ] ಮೀರು, ಉಲ್ಲಂಘಿಸು (ಕೊಟ್ಟೈ ಕಿರ್ಚಂ ಉದಗ್ರ ಶೋಕಶಿಖಿಯಿಂ ಕಣ್ಣೀರ್ಗಳಿಂದೆಯ್ದೆ ನೀರ್ಗೊಟ್ಟೈ ಲೌಕಿಕಮನೇಂ ಇಂ ದಾಂಟಿದೈ: **ಪಂಪಭಾ,** ೧೩. ೬೧)

ದಾಡಿಮ – [ನಾ] ದಾಳಿಂಬೆ (ರಸದಾಡಿಮದ ಬಿತ್ತುಮಂ ಪೊಸಮುತ್ತುಮಂ ಮುಕ್ಕುಳಿಸಿದಂತಪ್ಪ .. .. ದಂತಪಂಙ್ಕ್ತಿ: **ಪಂಪಭಾ,** ೨. ೩೯ ವ)

ದಾಡೆ – [ನಾ] ಕೋರೆಹಲ್ಲು (ಕಾರಿರುಳ ತಿರುಳ ಬಣ್ಣ ಕೂರಿದುವೆನೆ ತೊಳಪ ದಾಡೆ ಮಿಳಿರ್ವ ಉರಿಗೇಸಂ ಪೇರೊಡಲ್ ಎಸೆದಿರೆ ಪುಟ್ಟಿದಂ ಆರುಂ ಅಗುರ್ವಿಸೆ ಮ್ಗಂ ಘಟೋತ್ಕಚನೆಂಬಂ: **ಪಂಪಭಾ,** ೩. ೨೦)

ದಾತವ್ಯ – [ಗು] ಕೊಡಲು ಅರ್ಹವಾದ (ಪ್ರವಿಮಲಸದ್ಗೀರ್ವಾಣ ದಾತವ್ಯ ಸಾಯಕ ಸಂಪೂರ್ಣ ಕಳಾಪ್ರವೀಣನಂ ಇಳಾಭಾರಕ್ಷಮ ಅಕ್ಷೂಣನಂ .. .. ಸರ್ವಲಕ್ಷಣಸಂಪೂರ್ಣಂ ಅಪ್ಪ ಮಗನಂ ಅಮೋಘಂ ಪಡೆವೆಂ: **ಪಂಪಭಾ,** ೧. ೧೩೪ ಮತ್ತು ೧೩೪ ವ)

ದಾದಿ – [ನಾ] [ಧಾತ್ರೀ] ಸಾಕಿದವಳು (ಆಂ ತನಗೆ ಪರಮವಿಶ್ವಾಸಭೂಮಿಯೆನಾಗಿ ಕಿಱಿಯಂದಿಂದಿತ್ತ ನಡೆಪಿದ ಓದಿಸಿದ ದಾದಿಯೆನಪ್ಪುದಱಿಂ: **ಆದಿಪು,** ೪. ೨೧ ವ)

ದಾನ – **[ನಾ]** [ಜೈನ] ಕೊಡುವುದು, ಇದರಲ್ಲಿ ಕೊಡುವವನು, ಕೊಡುವ ವಸ್ತು, ದಾನ ಸ್ವೀಕರಿಸುವವನು ಮತ್ತು ದಾನದ ಫಲ ಎಂಬ ನಾಲ್ಕು ಭಾಗಗಳು (ಕುಡುವೊಂ ಕುಡುವುದು ಪಾತ್ರಂ ಕುಡೆ ಪಡೆವುದತಿವಿಪುಳಫಲಮೆನಲ್ ನಾಲ್ಕು ತೆಱಂ ಗಡ ದಾನಂ: **ಆದಿಪು,** ೧೦. ೯); **[ನಾ]** ಮದದ ನೀರು (ಎನ್ನ ದಾನಮಿದಾಗಳುಂ ಮಧುಪಾಶ್ರಯಂ: **ಪಂಪಭಾ,** ೧. ೭); ನೀಡುವಿಕೆ (ಎನ್ನ ದಾನಮಿದಾಗಳುಂ ಮಧುಪಾಶ್ರಯಂ ಧರೆಗವ್ಯವಚ್ಛಿನ್ನ ದಾನಂ ವಿಬುಧಾಶ್ರಯಂ: **ಪಂಪಭಾ,** ೧. ೭)

ದಾನತೀರ್ಥಪ್ರವರ್ತಕ – ಚರಿಗೆಗೆ ಬಂದ ಮುನಿಗೆ ವಿಧಿಪೂರ್ವಕವಾಗಿ ಆಹಾರದಾನವನ್ನು ನೀಡುವವನು**;** ಶ್ರೇಯಾಂಸನು ಆದಿನಾಥನಿಗೆ ಆಹಾರದಾನವಿತ್ತು ಆದಿದಾನತೀರ್ಥಪಪ್ರವರ್ತಕ ಎನ್ನಿಸಿದ (ಆದಿತೀರ್ಥ ಕರ್ತಾರನಂ ಶ್ರದ್ಧಾದಿಸಪ್ತಗುಣಸಂಪನ್ನನುಂ ಪ್ರತಿಗ್ರಹಾದಿ ನವವಿಧಪುಣ್ಯಪುರಸ್ಸರನುಮಾಗಿ ನಿಱಿಸಿ ಕರ್ಮಭೂಮಿಯ ಮೊದಲೊಳಾದಿದಾನ ತೀರ್ಥಪ್ರವರ್ತಕಂ: **ಆದಿಪು,** ೧೦. ೧ ವ)

ದಾನಪ್ರಮೋದ – [ನಾ] ದಾನ [ಮದಜಲ] ದಿಂದ ಸಂತೋಷಗೊಳ್ಳುವ (ನಿಜಭುಜವಿಜಯಲಕ್ಷ್ಮೀಪರಿರಂಭಣ ಪ್ರಕಟನ ದಕ್ಷಿಣವಿಷಾಣ ವನ್ಯಸ್ತಹಸ್ತನುಂ ದಾನಪ್ರಮೋದ ವಾಚಾಳಷಟ್ಚರಣ ಚಾರಣಗಣೋಚ್ಚಾರ ಝಂಕಾರ ಜಯಾಶೀರ್ಘೋಷಮುಂ: **ಆದಿಪು,** ೧೪. ೯೦ ವ)

ದಾನವ – [ನಾ] ದನುವಿನ ಮಗ, ರಾಕ್ಷಸ (ಮಯನೆಂಬ ದಾನವ ವಿಶ್ವಕರ್ಮಂ ನೆಗೆದುರಿವ ಉರಿಮಾಲೆಗಳಂ ಗದೆಯೊಳ್ ಬೀಸುತ್ತುಂ ಪೊಱಮಡೆ: **ಪಂಪಭಾ,** ೫. ೯೭ ವ)

ದಾನಾಂಭಃ – ಮದೋದಕ[ವನ್ನುಳ್ಳ] (ದಾನಾಂಭಃಪೀನ ಗಂಡಸ್ಥಳಕರಿನಿಕರಂ ಬಾಟಿೞ್ತಿಯೋ ಮೆಚ್ಚುವೇಟಿೞ್ ಆಜಾನೇಯ ಅಶ್ವೋತ್ಕರಂ ಬಾಟಿೞ್ತಿಯೋ: **ಪಂಪಭಾ,** ೬. ೪೦)

ದಾನಾನುಮೋದ – [ನಾ] [ಜೈನ] ದಾನ ನೀಡಲು ಒಪ್ಪಿಗೆ (ಪೇಟಿೞೇನಂ ಸುಖಮಂ ಮಾಡದೊ ದಾನದ ದಾನಾನುಮೋದದ ಅನುಪಮಪುಣ್ಯಂ: **ಆದಿಪು,** ೫. ೪೪)

ದಾಮ – [ನಾ] ದಂಡೆ, ಮಾಲೆ (ವಕುಳಮುಕುಳ ಸುರಭಿನಿಶ್ವಾಸೆಯುಂ ಚಂಪಕದಳದಾಮಾವದಾತೆಯುಂ ಕುಸುಮಸುಕುಮಾರ ತನುವಪ್ಪುದ’ಱಿಂದೆ: **ಆದಿಪು,** ೪. ೨೧ ವ)

ದಾಯ – [ನಾ] ಕುಸ್ತಿಯ ಪಟ್ಟು (ಕರಣಂಗಳ ದಾಯಂಗಳ ಪರಿಣತಿಯಂ ಮೆಱಿೞದು ಪೊಣರ್ದು ಸಂದೊಂದೆಡೆಯೊಳ್ ಭರತನನವಯವದೊಳೆ .. .. ದೆಸೆಗೆ ಬೀಸಿದಂ: **ಆದಿಪು,** ೧೪. ೧೧೦) [ನರಸಿಂಃಶಸ್ತ್ರಿಗಳು ಸ್ವೀಕರಿಸಿರುವ ಪಾಠ]

ದಾಯಂಬಡೆ – [ಕ್ರಿ] [ಬೇಕಾದ] ಗರ ಪಡೆದುಕೊ (ಅಣುಗಾಳಂತೆ ದಾಯಂಬಡೆದುಂ ಮೇಳದಂಕದಂತೆ ಸುಟೆಯಱಿದುಂ ಡೊಂಬರ ಕೋಡಗದಂತಾಡಿ ಗೆಲ್ದಾಗಳ್: **ಪಂಪಭಾ,** ೬. ೭೨ ವ)

ದಾಯಮನಾಡು – [ಕ್ರಿ] ಗರ ಹಾಕು (ದುರ್ಯೋಧನಂ ಒಕ್ಕಲಂ ಪುಡಿಯೊಳ್ ಪೊರಳ್ಚುವಂತೆ ಪಾಸಂಗೆಯಂ ಪೊರಳ್ಚಿ ಮುನ್ನಂ ನೆತ್ತಮನಱಿಯದನಂತೆ ಅವರ ದಾಯಮನಾಡೆ: **ಪಂಪಭಾ,** ೬. ೭೧ ವ)

ದಾಯಾದ – [ನಾ] ಜ್ಞಾತಿ, ಪಾಲು ಪಡೆಯಲು ಅರ್ಹನಾದವನು (ಎಮ್ಮ ದಾಯಾದನುಂ ಕೋಪದಿನೆನ್ನೊಳ್ ಕದಲೆಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂ ಮಾಣ್ಬುದು ಸೂಟಿಲ್ತು: **ಆದಿಪು,** ೧೪. ೮೫)

ದಾಯಿ – [ನಾ] ಕೊಡುವ (ಅತಿಮೃದುರವದಾಯಿಗಳಂ ತತ ಘನ ಸುಷಿರ ಅವನದ್ಧ ವಾದ್ಯಂಗಳನೇಂ ಮತಮಱಿಯದೋಲಗಿಪುದೊ ದಂಪತಿಗೆ: **ಆದಿಪು,** ೫. ೩೫)

ದಾಯಿಗ – [ನಾ] ದಾಯಾದಿ (ದಾಯಿಗರತ್ತಣಿನಪ್ಪ ಅಪಾಯಕೋಟಿಗೆ ಪವಣಿಲ್ಲ ಕಲ್ಪಿಗೆ ಎಡೆಯಾವುದೊ ಪಾಟಿಯ ಬಟ್ಟೆದಪ್ಪಿ ಮುಂ ನೆಗಟಿೞ್ದೆಯಿಲ್ಲ: **ಪಂಪಭಾ,** ೭. ೨೧)

ದಾಯಿಗರೆಂ – ದಾಯಾದಿಗಳಾಗಿದ್ದೇವೆ (ದಾಯಿಗರೆಂ ಎನ್ನರ್ ಅಂತಲ್ತು ಇಂತಲ್ತು ಎನ್ನರ್ ಕರುಣಿಸಿ ದಯೆಯಿಂದಿನ್ನಿತ್ತುದೆ ಸಾಲ್ಗುಂ ಎಂಬರ್: **ಪಂಪಭಾ,** ೯. ೪೧)

ದಾರಕ – [ನಾ] ಮಗ, ಹುಡುಗ (ಶ್ರೀಪತಿ ಸುರದಾರಕರೊಡನಾಪೊತ್ತುಂ ನೆರೆದು ರತ್ನಧೂಳೀಪಟಲವ್ಯಾಪಿತತನು ಮೃದುಮುಗ್ಧಾಳಾಪಂ ಬಳೆದಂ: **ಆದಿಪು,** ೮. ೧)

ದಾರುಕರ್ಮ – [ನಾ] ಮರಗೆಲಸ (ರತ್ನಪರೀಕ್ಷೆಗಳೊಳಂ ದಾರುಕರ್ಮ ವಾಸ್ತುವಿದ್ಯಾಪೂರ್ವಯಂತ್ರಪ್ರಯೋಗ ವಿಷಾಪಹರಣ .. .. ಗದಾದಿ ವಿವಿಧಾಯುಧಂಗಳೊಳಂ ಅತಿಪ್ರವೀಣನುಂ: **ಪಂಪಭಾ,** ೨. ೩೪ ವ)

ದಾವದಗ್ಧ – [ಗು] ಕಾಡುಗಿಚ್ಚಲ್ಲಿ ಸುಟ್ಟುಹೋದ (ಎನೆ ದಾವದಗ್ಧಗಿರಿ ನೂತನ ಜಳದಜಳಂಗಳಿಂದಮಾಱುವವೋಲ್ ಭೋಂಕನೆ ಭರತನನಾಜಿಸಿದಂ ಮುನಿವಿನುತ ಗಣಾಧಿನಾಥ ವಚನಾಮೃತದಿಂ: **ಆದಿಪು,** ೧೬. ೬೦)

ದಾವಪಾವಕ – [ನಾ] ಕಾಡುಗಿಚ್ಚು (ದಾವಪಾವಕಂ ಬಳಸೆ ಸುರುಳ್ದ ಬಾಳಸಹಕಾರಮಹೀರುಹಮೆಂಬ ಶಂಕೆಯಿಂ: **ಆದಿಪು,** ೨. ೫೯)

ದಾವಶಿಖಿ – [ನಾ] ಕಾಡುಗಿಚ್ಚು (ಉಗ್ರಾರಿವಂಶಲತಾವಲ್ಲರಿಗಳ್ಗೆ ದಾವಶಿಖಿವೊಲ್ ಮೆಯ್ದೋಱೆ ತದ್ದ್ರೌಪದೀಲಲನಾವ್ಯಾಜದಿಂ: **ಪಂಪಭಾ,** ೩. ೩೩)

ದಾವಾನಲ – [ನಾ] ದಾವದಹನ (ಎಂದು ತನಗೆ ಕೊಟ್ಟ ಕೋಡಿಂಗೆ ಒಡಂಬಟ್ಟ ದಿತಿಜಕುಲ ದಾವಾನಲನನುಮಂ ಅರಾತಿಕುಲಾನಲನುಮಂ ಅನಲಂ ಇಷ್ಟಾರ್ಥಸಿದ್ಧಿಯಕ್ಕುಂ ಎಂದು ಪರಸಿ: **ಪಂಪಭಾ,** ೫. ೭೭ ವ

ದಾಶ – [ನಾ] ಬೆಸ್ತ (ಆ ಮೀನನೊರ್ವಂ ಜಾಲಗಾಱಂ ಜಾಲದೊಳ್ ಪಿಡಿದು ಅಲ್ಲಿಗರಸನಪ್ಪ ದಾಶನಲ್ಲಿಗುಯ್ದು ತೋಱಿದೊಡೆ: **ಪಂಪಭಾ,** ೧. ೬೮ ವ)

ದಾಸವಣ – [ನಾ] ದಾಸವಾಳ (ಓರೊರ್ವರೊಳ್ ಬೀರಮುಮಂ ಬಿಂಕಮುಮಂ ಮೆಱೆದು ದಾಸವಣದಂಡೆಯಂ ತೋರದ ಇಂಡೆಯಾಡಿದಂತೆ: **ಪಂಪಭಾ,** ೧೧. ೧೪೦ ವ)

ದಾಸೇರಕ – [ನಾ] ದಾಸಿಯ ಮಗ (ದಶೈಕಾದಶವರ್ಷ ದೇಶೀಯನುಂ ಅಂತಃಪುರದಾಸೇರಕನಂ ಏಱೆ: **ಆದಿಪು,** ೮. ೪೧ ವ)

ದಾಹ – [ನಾ] [ದುಃಖದ] ಉರಿ (ಕುಳಿರ್ವ ಆಲಿನೀರ್ಗಳಿಂ ತುರಿಪದೆ ಸೂಸುತುಂ ಕೆಳದಿಯರ್ ನದಿಪುತ್ತುಮಿರೆ ನೋಡೆ ದಾಹಂ ಒತ್ತರಿಸಿದುದು: **ಪಂಪಭಾ,** ೫. ೮); [ನಾ] ತಾಪ, ಸುಡುವುದು (ಆ ಲಾಕ್ಷಾಗೃಹದಾಹಮೊಂದೆ ವಿಷಸಂಯುಕ್ತಾನ್ನಂ ಅಂತೊಂದೆ ಪಾಂಚಾಲೀನಿಗ್ರಹಂ ಒಂದೆ ಟಕ್ಕುವಗೆಯಿಂ ಗೆಲ್ದಿರ್ದ ಜೂದೊಂದೆ: **ಪಂಪಭಾ,** ೯. ೨೨)

ದಾಹೋತ್ತರ – [ನಾ] ಶುದ್ಧಿಗಾಗಿ ಬೆಂಕಿಯಲ್ಲಿ ಹಾಕುವುದು (ಪಾಂಡುರಾಜನೊಡನೆ ದಾಹೋತ್ತರದಂತೆ ಕಿರ್ಚಂ ಪುಗೆ: **ಪಂಪಭಾ,** ೨. ೨೬ ವ)

ದಾಳಿವೂ – [ನಾ] ಒಂದು ಬಗೆಯ ಹೂ (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ,** ೧. ೧೧೫ ವ)

ದಿಂಕುಗೊಳ್ – [ಕ್ರಿ] ಚಿಮ್ಮು, ಹಾರು, ಕುಪ್ಪಳಿಸು (ನಡುವ ಸರಲ್ಗೆ ಮೆಯ್ಯೊಳ್ ಅಡಂಗುವ ಸಂಕುಗೆ ದಿಂಕುಗೊಳ್ವ ಕಕ್ಕಡೆಗೆ ಇದಿರ್ ಉರ್ಚುವ: **ಪಂಪಭಾ,** ೧೦. ೯೪)

ದಿಂಡುಮಗುಟ್ – [ಕ್ರಿ] ಕುಸಿದು ಬೀಳು (ಕೀಟಂ ಕರ್ಚಿ ದಿಂಡುಮಗುಟ್ಟು ಕೆಡೆದ ಜಾತ್ಯಶ್ವಂಗಳುಂ: **ಪಂಪಭಾ,** ೧೦. ೧೧೬ ವ)

ದಿಕ್ಕನ್ಯೆ – [ನಾ] [ಜೈನ] ರುಚಕಾಚಳದ ಉತ್ತರದ ಶಿಖರಗಳ ದೇವಿಯರು (ತದ್ಗಿರೀಂದ್ರೋತ್ತರ ಕಕುದ್ದೇಶದ .. .. ಎಂಟು ಕೂಟಂಗಳೊಳಿರ್ಪ ಲಂಬೂಷೆ ಚಿತ್ರರೇಖೆ ಪುಂಡರೀಕಿಣಿ ವಾರುಣಿ ಆದರ್ಶೆ ಶ್ರೀ ಹ್ರೀ ಧೃತಿ ಎಂಬ ಎಣ್ಬರುಂ ದಿಕ್ಕನ್ಯೆಯರಂ: **ಆದಿಪು,** ೭. ೩ ವ)

ದಿಕ್ಕರಿ – [ನಾ] [ಅಷ್ಟ] ದಿಗ್ಗಜ (ಕುಡಿವುದಂ ಏಬುಮಂಬುಧಿಯುಮಂ ಕುಲಶೈಲಕುಳಂಗಳುಂ ತಗುಳ್ದಡರ್ವುದನೊಂದಿ ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊಡರ್ವುದಂ ಅಂತೆ ದಿಕ್ಕರಿಗಳ್ ಅಂಬುಜಪತ್ರಾಂಬುವಿಂ ಬೆಡಂಗಡಸಿರೆ ಮಜ್ಜನಂಬುಗಿಪುದಂ ಸತಿ ಕಂಡೊಸೆದಳ್ ನಿಶಾಂತದೊಳ್: **ಪಂಪಭಾ,** ೧. ೧೪೦) [ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ ಮತ್ತು ಸುಪ್ರತೀಕ]

ದಿಕ್ಕರಿಕರಾನುಕಾರಿ – [ನಾ] ದಿಕ್ಕರಿಯ ಸೊಂಡಿಲನ್ನು ಹೋಲುವ (ದಿಕ್ಕರಿಕರಾನುಕಾರಿಗಳಪ್ಪ ಬಾಹುಗಳಿಂದಂ ಓರೊರ್ವರಂ ತೆಗೆದಪ್ಪಿ ನಿಬಿಡಾಲಿಂಗನಂಗೆಯ್ದು: **ಪಂಪಭಾ,** ೪. ೩೩ ವ)

ದಿಕ್ಕುಮಾರಿಕಾ ಮಹತ್ತರಿಕೆ – [ನಾ] [ಜೈನ] ಜಿನಜನನಿಯ ಗರ್ಭಶೋಧನಕ್ಕೆ ನಿಯೋಜಿತರಾದ ದೇವತೆಯರು (ವೈಡೂರ್ಯ ರುಚಕ ಮಣಿಪ್ರಭ ರುಚಿಕೋತ್ತರಂಗಳೆಂಬ ವಿಕಟಕೂಟಾಧೀಶೆಯರಪ್ಪ ರುಚಿಕೆ ರುಚಿಕಾಸ್ಯೆ ರುಚಿಕಾಂತೆ ರುಚಕಪ್ರಭೆಯೆಂಬ ನಾಲ್ವರುಂ ದಿಕ್ಕುಮಾರಿಕಾ ಮಹತ್ತರಿಕೆಯರುಮಂ: **ಆದಿಪು,** ೭. ೩ ವ)

ದಿಕ್ಚಕ್ರ – [ನಾ] ದಿಙ್ಮಂಡಲ (ಆಡುವಲ್ಲಿ ಮಕುಟವ್ಯಾಲಗ್ನರತ್ನಪ್ರಭಾ ಪರಿವೇಷಂ ಲಲಿತೇಂದ್ರಚಾಪರುಚಿಯಂ ಮಾಡಿತ್ತು ದಿಕ್ಚಕ್ರದೊಳ್: **ಆದಿಪು,** ೭. ೧೨೦)

ದಿಕ್ತಟ – [ನಾ] ದಿಕ್ಕಿನ ಕೊನೆ (ಬಧಿರಿತ ಸಮಸ್ತ ದಿಕ್ತಟಂ ಅಧಿರಿತ ಸರ್ವ ಇಭ್ಯಗರ್ವಿತಂ ಕ್ಷುಭಿತಾಂಭೋಸಲಿಲಂ ಪರೆದುದು ಧುರವಿಧಾನ ಪಟುಪಟಹ ಕಹಳ ಭೇರೀರಭಸಂ: **ಪಂಪಭಾ,** ೧೨. ೧೭೧)

ದಿಗಂಗನೆ – [ನಾ] [ಜೈನ] ಕೂಟಾಷ್ಟಕದಲ್ಲಿ ರಮಿಸುವ ಎಂಟು ಮಂದಿ ದೇವಿಯರು (ಕೂಟಾಷ್ಟಕಂಗಳೊಳ್ ರಮಿಯಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆ ಎಂಬ ಎಣ್ಬರುಂ ದಿಗಂಗನೆಯರಂ: **ಆದಿಪು,** ೭. ೩ ವ)

ದಿಗಂತ – [ನಾ] ದಿಕ್ಕಿನ ಕೊನೆ (ದಿವ್ಯಮುನಿಪುಂಗವರಂ ಬಗೆದಿರ್ಪಿನಂ ನಿಜಾತ್ಯಂತಪತಿವ್ರತಾಗುಣದಿನರ್ಚಿಸಿ ಮೆಚ್ಚಿಸು ನೀಂ ದಿಗಂತವಿಶ್ರಾಂತಯಶರ್ಕಳಂ ವರತನೂಭವರಂ ಪಡೆ ನೀಂ ತಳೋದರೀ: **ಪಂಪಭಾ,** ೧. ೧೧೮)

ದಿಗಂತದಂತಿ – [ನಾ] ದಿಕ್ಕರಿ (ಒಡನೆ ದಿಗಂತದಂತಿಗಳ ಕೋಡ ಮೊದಲ್ಗಳೊಳೆಯ್ದೆ ಪೊಕ್ಕು ಸಿಪ್ಪಡಿಸಿದ ಮಾಟಿಕ್ಕೆಯಾದುವು: **ಪಂಪಭಾ,** ೬. ೩೬)

ದಿಗಂತವಿಶ್ರಾಂತಯಶಸ್ಕರ್ಕಳ್ – ದಿಗಂತದವರೆಗೂ ಕೀರ್ತಿಯುಳ್ಳವರು (ದಿವ್ಯಮುನಿಪುಂಗವರಂ ಬಗೆದಿರ್ಪಿನಂ ನಿಜಾತ್ಯಂತಪತಿವ್ರತಾಗುಣದಿನರ್ಚಿಸಿ ಮೆಚ್ಚಿಸು ನೀಂ ದಿಗಂತವಿಶ್ರಾಂತಯಶರ್ಕಳಂ ವರತನೂಭವರಂ ಪಡೆ ನೀಂ ತಳೋದರೀ: **ಪಂಪಭಾ,** ೧. ೧೧೮)

ದಿಗಂಬರಾಂಬರವಿಳಾಸ – [ನಾ] ದಿಗಂಬರ ಸನ್ಯಾಸ (ರಾಜಾಧಿರಾಜಂ ದಿಗಂಬರಾಂಬರವಿಳಾಸದಿಂ ತ್ರಿಲೋಕಶಿಖರಿ ಶೇಖರನಾದಂ: **ಆದಿಪು,** ೪. ೮೧ ವ)

ದಿಗಿಭ – [ನಾ] ದಿಕ್ಕರಿ, ದಿಗ್ಗಜ (ದಿಗಿಭಂಗಳೆಂಟುಂ ಒಳ್ಪೊಡರಿಸಿ ಮಜ್ಜನಂಬುಗಿಸೆ ಕಂಡುದಜೆಂ ಕಮಲಾಭಿರಾಮನಂ .. .. ಮಗನಂ ನೀನಮೋಘಂ ಪಡೆವೆ: **ಪಂಪಭಾ,** ೧. ೧೪೧ ಮತ್ತು ೧. ೧೪೧ ವ)

ದಿಗ್ದಂತಿ – [ನಾ] ದಿಕ್ಕರಿ (ನಿನ್ನ ಕೀರ್ತಿಮುಖಂ ಕೀರ್ತಿಮುಖಂಬೊಲೇಂ ಎಸೆದುದೋ ದಿಗ್ದಂತಿ ದಂತಂಗಳೊಳ್: **ಪಂಪಭಾ,** ೬. ೬೬)

ದಿಗ್ದಾಹ – [ನಾ] ದಿಕ್ಕಿನಲ್ಲಿ ಕಾಣಿಸಿಕೊಳ್ಳುವ ಬೆಂಕಿ [ಅಪಶಕುನ] (ಪರುಷವಾತಾಹತಿಪ್ರೋಚ್ಚಳತ್ ಸಾಮಜಸೇನಾಕುಂಭ ಸಿಂಧೂರಮುಮೊದವಿದ ದಿಗ್ದಾಹಮುಂ ಕೂಡೆ: **ಆದಿಪು,** ೧೪. ೮೯)

ದಿಗ್ದ್ವಿರದ – [ನಾ] [ದಿಕ್+ದ್ವಿರದ} ದಿಕ್ಕರಿ (ಅಜನ ಪದ್ಮವಿಷ್ಟರದ ಎಸಳ್ ಅಂದು ಅರೆಸೀದುವು ಅಖಿಳ ದಿಗ್ದ್ವಿರದರದಂಗಳ್ ಕರಮೆ ಕರಿಪುಗಾಜೆದುವಾಗಳ್: **ಪಂಪಭಾ,** ೧೦. ೩೬)

ದಿಗ್ಭಿತ್ತಿ – [ನಾ] ದಿಕ್ಕು ಎಂಬ ಗೋಡೆ (ನಿರುಪಮ ದೇವನ ರಾಜ್ಯದೊಳ್ ಅರಿಕೇಸರಿ ವೆಂಗಿ ವಿಷಯಮಂ ತ್ರಿಕಳಿಂಗಬೆರಸೊತ್ತಿ ಕೊಂಡು ಗರ್ವದೆ ಬರೆಯಿಸಿದಂ ಪೆಸರನಖಿಳ ದಿಗ್ಭಿತ್ತಿಗಳೊಳ್: **ಪಂಪಭಾ,** ೧. ೨೦)

ದಿಗ್ಲತಿಕ – [ನಾ] [ದಿಕ್+ಲತಿಕ] ದಿಕ್ಕುಗಳವರೆಗೂ ಹಬ್ಬಿದ ಕೀತೀಯೆಂಬ] ಬಳ್ಳಿ[ಯುಳ್ಳವನು] (ನಮ್ರಮೌಳಿಶೇಖರ ವಿಗಳತ್ ಕುಸುಮೋತ್ಕರಂ ಅರ್ಘ್ಯಯಶಃಕುಸುಮ ದಿಗ್ಲತಿಕನೆಱಗಿದಂ ಭರತೇಶಂ: **ಆದಿಪು,** ೧೫. ೪೮)

ದಿಗ್ವನಿತೆ – [ನಾ] [ಜೈನ] ದಿಗಂಗನೆಯರು, ಎಂಟು ಮಂದಿ: ವಿಜಯೆ ವೈಜಯಂತೆ ಜಯಂತೆ ಅಪರಾಜಿತೆ ನಂದೆ ನಂದೋತ್ತರೆ ಆನಂದೆ ನಂದಿವರ್ಧನೆ (ಎಂಟುಂ ಕೂಟಂಗಳೊಳ್ ರಮಿಯಿಸುವ .. .. ಎಣ್ಬರುಂ ದಿಗ್ವನಿತೆಯರುಂ: **ಆದಿಪು,** ೭. ೩ ವ)

ದಿಗ್ವಾಸ – [ನಾ] [ಜೈನ] [ದಿಕ್+ವಾಸ] ದಿಕ್ಕನ್ನೇ ಬಟ್ಟೆಯಾಗುಳ್ಳವನು, ದಿಗಂಬರ (ಸೀಮಂಧರಜಿನೇಶ ಪದಕುಶೇಶಯ ಅಭ್ಯಸನದೊಳ್ ದಿಗ್ವಾಸನಾಗಿ ಷೋಡಶಭಾವನೆಗಳಂ ಭಾವಿಸಿ: **ಆದಿಪು,** ೩. ೭೮ ವ)

ದಿಗ್ವಿಜಯ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಎಲ್ಲ ದಿಕ್ಕುಗಳ ರಾಜರುಗಳನ್ನೂ ಗೆಲ್ಲುವುದು (ದಿಗ್ವಿಜಯ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ದಿಗ್ವ್ಯಾಪಕ – [ನಾ] ಎಲ್ಲ ದಿಕ್ಕುಗಳನ್ನೂ ಆವರಿಸಿದವನು (ಸೂಕ್ಷ್ಮಾಂಗನಾಗಿರ್ಪಂ ಆಗಳೆ ದಿಗ್ವ್ಯಾಪಕನಪ್ಪಂ ಇಂತು ಪಲವುಂ ಚೋದ್ಯಂಗಳಂ ವಿಕ್ರಿಯಾಬಳದಿಂದಾಡಿ: **ಆದಿಪು,** ೭. ೧೨೨)

ದಿಙ್ಮಂಡಲ – [ನಾ] ದಿಕ್ಕುಗಳ [ನಡುವಣ] ಪ್ರದೇಶ (ಮರ್ತ್ಯ ವಿದ್ಯಾಧರ ವ್ಯಂತರಾಧೀಶ್ವರ ಕರಸರಸಿಜಂಗಳಂ ವಕ್ತ್ರಚಂದ್ರಸ್ಫುರಿತ ಉದ್ಯತ್ಕಾಂತಿ ನಿಚ್ಚಂ ಮುಗಿಯಿಸೆ ಜಿತದಿಙ್ಮಂಡಲಂ ಬಂದು: **ಆದಿಪು,** ೩. ೪೬)

ದಿಙ್ಮಾತ್ರ – [ನಾ] ಸೂಚಿಸುವಂತೆ ಮಾತ್ರ (ಭವದಗ್ರಜ ದಿಗ್ವಿಜಯೋತ್ಸವಂ ಅಧಿಕಮಹೋತ್ಸವಂ ವಲಂ ನಿನಗಾದಂ ಶ್ರವಣಸುಖಮೆಂದೆ ದಿಙ್ಮಾತ್ರವರ್ಣನಂಗೆಯ್ವೆಂ: **ಆದಿಪು,** ೧೪. ೫೧)

ದಿಟ್ಟಿ – [ನಾ] [ದೃಷ್ಟಿ] ನೋಟ (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ ಪರ್ವಿದ ಏರ್ವೆಸನದೊಳಾದ ಬಲ್ಮೆಯೊಳ್: **ಪಂಪಭಾ,** ೧೦. ೭೮)

ದಿತಿಜಕುಲ – [ನಾ] ರಾಕ್ಷಸ ಕುಲ (ಎಂದು ತನಗೆ ಕೊಟ್ಟ ಕೋಡಿಂಗೆ ಒಡಂಬಟ್ಟ ದಿತಿಜಕುಲ ದಾವಾನಲನನುಮಂ ಅರಾತಿಕುಲಾನಲನುಮಂ ಅನಲಂ ಇಷ್ಟಾರ್ಥಸಿದ್ಧಿಯಕ್ಕುಂ ಎಂದು ಪರಸಿ: **ಪಂಪಭಾ,** ೫. ೭೭ ವ)

ದಿತಿಸುತ – [ನಾ] ರಾಕ್ಷಸ (ಮಸಿಯಿಂದಂ ಜಗಮೆಲ್ಲಮಂ ದಿತಿಸುತಂ ಮುಂ ಪೂಜ್ದನೋ ಕಾಲಮೇಘಸಮೂಹಂ ದೆಸೆಯೆಲ್ಲಮಂ ಕವಿದುದೋ: **ಪಂಪಭಾ,** ೪. ೮೯)

ದಿನಕರ – [ನಾ] ಸೂರ್ಯ (ಭರತಕುಲಗಗನದಿನಕರಂ ಅರಾತಿಕುಳಕಮಳಹಿಮಕರಂ ಶಿಶು ತೇಜೋವಿರಚನೆಯುಂ ಕಾಂತಿಯುಂ ಆವರಿಸಿರೆ ಗರ್ಭೋದಯಾದ್ರಿಯಿಂದ ಉದಯಿಸಿದಂ: **ಪಂಪಭಾ,** ೧. ೧೪೫)

ದಿನಕರಸುತ – [ನಾ] ಕರ್ಣ (ನೇಸಱೆಂದೊಳಗೆ ಆಂ ದಿನಕರಸುತನಂ ಇಕ್ಕಿ ಬಂದಲ್ಲದೆ ಕಾಣ್ಂ ದಲ್ ಭವತ್ ಪದಾಬ್ಜಮಂ ಎಂದು ಎಟ್ಟಿಂ ಉದಶ್ರುಜಳಲವಾರ್ದ್ರ ಕಪೋಳಂ: **ಪಂಪಭಾ,** ೧೨. ೧೩೪)

ದಿನಕೃಚ್ಚಕ್ರ – [ನಾ] [ದಿನಕೃತ್+ಚಕ್ರ] ಸೂರ್ಯಮಂಡಲ (ದೀಪದೀಪ್ತಿಪ್ರತಿಹತ ದಿನಕೃಚ್ಚಕ್ರ ತೀವ್ರಾಂಶುಚಕ್ರಂ ಜಿತದಿಕ್ಚಕ್ರಂ ಪ್ರಭಾಪ್ರಜ್ವಳಿತದಶದಿಶಾಚಕ್ರಂ: **ಆದಿಪು,** ೧೪. ೩)

ದಿನತ್ರಯ – [ನಾ] ಮೂರು ದಿನ (ದಿನತ್ರಯದೊಳ್ ಬದರೀಫಳಮಾತ್ರ ಆಹಾರಿಗಳುಂ ಆರೋಗ್ಯಶರೀರಂಗಳುಂ ಸೌಂದರಾಕಾರಂಗಳುಂ ತ್ರಿಪಲ್ಯೋಪಮಜೀವಿಗಳುಂ ಆಗಿ: **ಆದಿಪು,** ೫. ೪೧ ವ)

ದಿನನಾಥ – [ನಾ] ಸೂರ್ಯ (ಬೆಳ್ಕುತ್ತಿರ್ದೆನಪ್ಪೊಡೆ ಏ ತೊದಳ್ ಇತ್ತಣ ದಿನನಾಥಂ ಇತ್ತ ಮೂಡುಗುಮಲ್ತೇ: **ಪಂಪಭಾ,** ೧೨. ೧೭೯)

ದಿನನಾಯಕ – [ನಾ] ದಿನನಾಥ (ಹಿಮಕರಂ ಆತ್ಮ ಶೀತರುಚಿಯಂ ದಿನನಾಯಕಂ ಉಷ್ಣದೀಧಿತಿಕ್ರಮಮಂ ಅಗಾಧವಾರಿಧಿಯೆ ಗುಣ್ಪಂ ಇಳಾವಧು ತನ್ನ ತಿಣ್ಪಂ ಬಿಸುಟಿಸ್ಕೊಡಂ; **ಪಂಪಭಾ,** ೧. ೮೩)

ದಿನಪ – [ನಾ] ದಿನನಾಥ, ಸೂರ್ಯ (ವನನಿಧಿಯಿಂದಂ ಚಂದ್ರಂ ವಿನತೋದರದಿಂ ಗರುತ್ಮನುದಯಾಚಳದಿಂ

ದಿನಪನೊಗೆವಂತೆ ಪುಟ್ಟಿದಂ ಅನಿವಾರ್ಯಸುತೇಜನೆನಿಪನಿನಜನ ತನಯಂ: **ಪಂಪಭಾ,** ೧. ೧೨೧)

ದಿನಪತಿವಾರ – [ನಾ] ಭಾನುವಾರ (ಸಿತಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲನಕ್ಷತ್ರದೊಳ್ ಅನ್ವಿತಮಾಗೆ ನೆಗಟ್ಟುದೀ ಮತ್ತ್ಯತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯಂ: **ಆದಿಪು,** ೧೬. ೭೮)

ದಿನಾಧಿಪ – [ನಾ] ಸೂರ್ಯ (ನೊಸಲ ಕಣ್ಬೆತ್ತವೊಲ್ ಅಂತಾಗಡೆ ರಾಗಕ್ಕಾಗರಮಾಗೆ ದಿನಾಧಿಪತನೂಜಂ ಒಸೆದಿರ್ಪಿನೆಗಂ: **ಪಂಪಭಾ,** ೯. ೭೫)

ದಿನೇಶ – [ನಾ] [ದಿನ+ಈಶ] ದಿನಕ್ಕೆ ಒಡೆಯನಾದವನು ಸೂರ್ಯ (ನಿನ್ನ ಉತ್ಪತ್ತಿಯಂ ಇಂತೆಂದು ಎನ್ನರುಂ ಅಣಂ ಅಱಿಯರ್ ಅಱಿವೆನಾಂ ಸಹದೇವಂ ಪನ್ನಗಕೇತು ದಿನೇಶಂ ನಿನ್ನಂಬಿಕೆ ಕೊಂತಿ ಇಂತಿವರ್ ನೆಱಿ ಬಲ್ಲರ್: **ಪಂಪಭಾ,** ೯. ೬೬)

ದಿನೇಶಜ – [ನಾ] ಸೂರ್ಯನ ಮಗ, ಕರ್ಣ (ಪವನಜನಂತು ಪೂಣ್ದು ಯುವರಾಜನ ನೆತ್ತರನಾರ್ದು ಪೀರ್ದಂ ಇಂತು ಅವಗಡದಿಂ ದಿನೇಶಜನಂ ಅಂಕದ ಗಾಂಡಿವಿ ಕೊಂದಂ: **ಪಂಪಭಾ,** ೧೩. ೮)

ದಿನೇಶತನಯ – [ನಾ] ಸೂರ್ಯನ ಮಗ ಕರ್ಣ (ನುಡಿ ನಿನಗಂ ದಿನೇಶತನಯಂಗಂ ಅದೆನ್ನಯ ಪಕ್ಕದೆ ಆದೊಡಂ ಮಿಡುಕದೆ ಕೇಳ್ವೆಂ ಅಲ್ಲಿ ಸಮಂ ಇರ್ವರುಂ: **ಪಂಪಭಾ,** ೧೩. ೨೮)

ದಿನೇಶಪುತ್ರ – [ನಾ] ಕರ್ಣ (ಇನತನಯಂಗೆ ಸಾವುಂ ತನಗೆ ಇನಿತೊಂದು ಅಟಲುಂ ದಿನೇಶಪುತ್ರನೆ ನಿನಗೆ ಇಂಬುಕೆಯ್ಯದುದಱಿಂ: **ಪಂಪಭಾ,** ೧೩. ೨೯)

ದಿನೇಶಬಿಂಬ – [ನಾ] ಸೂರ್ಯಬಿಂಬ (ಚೆಲ್ವೆಸೆದತ್ತು ಕೇವಲಜ್ಞಾನ ದಿನೇಶಬಿಂಬದ ಪೊದಳ್ದುದಯಂ ವೃಷಭೋದಯಾದ್ರಿಯೊಳ್: **ಆದಿಪು,** ೧೦. ೧೭)

ದಿಬ್ಯಂಬಿಡಿ – [ಕ್ರಿ] ದಿವ್ಯದ ವಸ್ತು ಹಿಡಿದು ಪ್ರಮಾಣಮಾಡು (ಸೋಲ್ತು ಕಂಡೊಲ್ದು ನಲ್ಮೆಗೆ ದಿಬ್ಯಂಬಿಡಿದಂತೆವೋಲ್ ಪಿಡಿದು: **ಪಂಪಭಾ,** ೧. ೭೦)

ದಿವ – [ನಾ] ಸ್ವರ್ಗ (ದಿವದಿನಿಟಿದೋಷಧಿದ್ರುಮಂ ಅವನೀತಳ ಮನುಜ ಮರಣಜನ್ಮಜರಾಸಂಭವಭಯಮಂ ಕಿಡಿಸಿ: **ಆದಿಪು,** ೧೬. ೪೨); [ನಾ] ಆಕಾಶ (ದಿವಮಂ ಏಳಿಪಂತು ಮಿಳಿರ್ವ ವಿವಿಧಕೇತನಂಗಳಿಂ ಸದಾನಿಕೇತನಂಗಳಿಂ: **ಪಂಪಭಾ,** ೧. ೫೮)

ದಿವಸ – [ನಾ] [ಜೈನ] ಒಂದು ಹಗಲು ಮತ್ತು ಒಂದು ರಾತ್ರಿಯಷ್ಟು ಅವಧಿಯ ಕಾಲಪರಿಮಾಣ, ಮೂವತ್ತು ಮುಹೂರ್ತಗಳು ಸೇರಿದರೆ ಒಂದು ದಿವಸ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ)

ದಿವಾಕರ – [ನಾ] ಸೂರ್ಯ (ಮುಗುಳೊಳ್ ಮಱಸುಂದಿದ ತುಂಬಿ ಪಾಱಿ ಕೋಕನದಕುಲಂಗಳುಳ್ಳಲರ್ದುವೆಂಬಿನಂ ಅಂದೊಗೆದಂ ದಿವಾಕರಂ: **ಪಂಪಭಾ,** ೩. ೮೪)

ದಿವಿಜ – [ನಾ] ದೇವತೆ (ದಿವಿಜರ್ ವಾಯುಪಥದೊಳ್ ಶಿತಾಸ್ತ್ರಂಗಳಂ ಪೊಂಕಂಗಿಡಿಸೆ ಸುಗಿದಂ ಭಾರ್ಗವಂ ಇದೇಂ ಪ್ರತಿಜ್ಞಾಗಾಂಗೇಯಂಗೆ ಅದಿರದಿದಿರ್ ನಿಲ್ವನ್ನರೊಳರೇ: **ಪಂಪಭಾ,** ೧. ೮೦)

ದಿವಿಜಕುಜ – [ನಾ] ಕಲ್ಪವೃಕ್ಷ (ದಿವಿಜಕುಜಜನಿತ ವಸನಪ್ರಸವ ವಿಲೇಪನಾಭರಣಂಗಳಿಂ ಪೂಜಿಸಿ: **ಆದಿಪು,** ೬. ೧೦೭ ವ)

ದಿವಿಜಗೋಪ – [ನಾ] ಇಂದ್ರಗೋಪ, ಮಿಂಚುಹುಳು (ಉಗ್ರ ವಿಲೋಚನಂ ದಿವಿಜಗೋಪಂ ಕಾರೊ ಮೇಣ್ ಕಾಳರಕ್ಕಸನೋ: **ಪಂಪಭಾ,** ೭. ೨೭)

ದಿವಿಜಪೇಟಕ – [ನಾ] ದೇವತೆಗಳ ಸಮೂಹ (ಅಧಿಕಭಕ್ತಿಯೆ ತರೆ ಬಂದುದು ದಿವಿಜಪೇಟಕಮನಿತುಂ: **ಆದಿಪು,** ೯. ೧೦)

ದಿವಿಜಯುಗಳ – [ನಾ] ದೇವದಂಪತಿ (ಬಿಚ್ಚಳಿಪ ಪರಭೃತದ ಕಳಕಳದೊಳೆ ಮಸುಳ್ದುದು ದಿವಿಜಯುಗಳಕಳಕಳನಿನದಂ: **ಆದಿಪು,** ೬. ೯೪)

ದಿವಿಜಾಪಗೆ – [ನಾ] [ದಿವಿಜ+ಆಪಗಾ] ದೇವಗಂಗೆ (ದಿವಿಜಾಪಗೆ ನೋಡೆ ನೋಡೆ ಕರ್ಪಡರ್ದೆಣೆಯಾದುದು ಆ ಯಮುನೆಗೆ ಅಗ್ಗದ ಯಾಗದ ಧೂಮದ ಏಟಿಗ್ಗೆಯೊಳ್: **ಪಂಪಭಾ,** ೬. ೩೬)

ದಿವಿಜಾಶ್ವತ್ಥಾಮ – [ನಾ] ದೇವಲೋಕದ ಕುದುರೆಯಾದ ಉಚ್ಚೈಶ್ರವಸ್ಸಿನ ಕೆನೆತ (ದಿವಿಜ ಅಶ್ವ ತ್ಥಾಮದೊಳ್ ಈ ಭುವನಂಗಳ್ ನಡುಗೆ ಶಿಶು ನಕ್ಕು ಸರಂಗೆಯ್ದೊಡೆ ಕುಂಭಸಂಭವಂ ಇವಂ ಅಶ್ವತ್ಥಾಮನೆಂದು ಪೆಸರಿಡೆ ನೆಗಟ್ದಂ: **ಪಂಪಭಾ,** ೨. ೪೪)

ದಿವಿಜೇಂದ್ರ – [ನಾ] ದೇವೇಂದ್ರ (ಪುನಃಪುನರಾಲಿಂಗನಂಗೆಯ್ದು ಮುಹುರ್ಮುಮುರ್ ಆಳೋಕನಂಗೆಯ್ಯುತ್ತುಂ ಬಂದು ದಿವಿಜೇಂದ್ರವಿಳಾಸದಿಂ ಪೊಟಲಂ ಪುಗೆ: **ಪಂಪಭಾ,** ೫. ೨೨ ವ)

ದಿವ್ಯ – [ಗು] ಸ್ವರ್ಗೀಯ (ಮರಕತನಗಂ ದಿವ್ಯಂ ಮರ್ತ್ಯೋತ್ತಮಾಕೃತಿಯೆಂಬಿನಂ ವಿರಚಿಸಿದಂ ಅಂತು ಆದಿಬ್ರಹ್ಮಂ: **ಆದಿಪು** ೧೪. ೪೪); [ನಾ] ದೇವತೆ (ಎನ್ನ ತಮ್ಮಂದಿರ್ಗಿನಿತಂ ಮಾಡಿದ ದಿವ್ಯಂ ಈ ದೈವಮಕ್ಕುಂ: **ಪಂಪಭಾ,** ೮. ೪೭); [ನಾ] ಪ್ರಮಾಣಮಾಡಲು ಹಿಡಿಯುವ ದಿವ್ಯ (ಸೋಲ್ತು ಕಂಡೊಲ್ದು ನಲ್ಮೆಗೆ ದಿವ್ಯಂಬಿಡಿವಂತೆವೋಲ್ ಪಿಡಿದು: **ಪಂಪಭಾ,** ೧. ೭೦) ['**ದಿವ್ಯ**' ಎಂದರೆ ಆರೋಪವನ್ನು ಅಥವಾ ನಿರಪರಾಧಿತ್ವವನ್ನು ಸಾಬೀತುಮಾಡಲು ಆಚರಿಸುವ ನಾನಾ ಬಗೆಯ ಪರೀಕ್ಷೆಗಳು; ಇವು ಐದರಿಂದ ಒಂಬತ್ತು ಬಗೆ ಎಂದು ಸ್ಮೃತಿಕಾರರು ಹೇಳುತ್ತಾರೆ. ಕನ್ನಡ ನಾಡಿನಲ್ಲಿ ಹಿಂದೆ ಸಾಮಾನ್ಯವಾಗಿ ಪ್ರಚಲಿತವಾಗಿದ್ದ ದಿವ್ಯಗಳು ಏಳು: ಕೋಶ, ರವಿ, ತಂಡುಲ, ಅಗ್ನಿ, ತಪ್ತಮಾಷ, ಜಲ ಮತ್ತು ವಿಷ]

ದಿವ್ಯದ ನುಡಿ – [ನಾ] ದೇವತೆಯ ಮಾತು (ಬಿಡದೆ ಕಡುಕೆಯ್ದು ದಿವ್ಯದ ನುಡಿಗೆ ಕಿವುಟಿಕ್ಕೋಳ್ದು ಕುಡಿದು ನೀರಂ ಭೀಮಂ: **ಪಂಪಭಾ,** ೮. ೪೨)

ದಿವ್ಯದೃಷ್ಟಿಮಂತ್ರ – [ನಾ] ದಿವ್ಯವಾದ ನೋಟ ಎಂಬ ಮಂತ್ರ ಅಥವಾ ದಿವ್ಯದೃಷ್ಟಿ ಮತ್ತು ಮಂತ್ರ (ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ

ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫)

ದಿವ್ಯಧ್ವನಿ – [ನಾ] [ಜೈನ] ಸಮವಸರಣಸಮಯದಲ್ಲಿ ಅರ್ಹಂತನಿಗೆ ಪ್ರಾಪ್ತವಾಗುವ ಅಸಾಧಾರಣ ಶಕ್ತಿಯ ಧ್ವನಿ, ಅರ್ಧಮಾಗಧಿಯಲ್ಲಿದ್ದರೂ ಬರಬರುತ್ತ ಅನೇಕಭಾಷಾಮಯಿಯಾಗುವ ಅರ್ಹಂತನ ಉಪದೇಶ (ಆ ತ್ರಿಲೋಕತಿಲಕಂಗೆ ದಿವ್ಯಧ್ವನಿ ನೆಗಟ್ಟುದು ಈ ಕುಲತಿಲಕಂಗೆ ದಿಗ್ವಿಜಯದುಂದುಭಿಧ್ವನಿ ನೆಗಟ್ಟುದು: **ಆದಿಪು**, ೬. ೨೪ ವ)

ದಿವ್ಯಬಾಣ – [ನಾ] ದಿವ್ಯಾಸ್ತ್ರ (ಕುಲಹೀನನೆ ಅಪ್ಪೊಡೆ ಕೇವಲಬೋಧಂ ಪರಶುರಾಮಂ ಏನೀಗುಮೆ ನಿರ್ಮಲಿನಕುಲಂಗಲ್ಲದೆ ಪಿಡಿಯಲಲ್ಲದೆ ಅಂತಪ್ಪ ದಿವ್ಯಬಾಣಾವಳಿಯಂ: **ಪಂಪಭಾ**, ೧೨. ೯೭)

ದಿವ್ಯಮಂತ್ರ – [ನಾ] ಮಹಿಮೆಯುಳ್ಳ ಮಂತ್ರ (ಅಂತು ಕಾಮದೇವನೆಂಬ ಮಂತ್ರವಾದಿಯ ದಿವ್ಯಮಂತ್ರದಿಂ ಸ್ತೋಭಂಗೊಂಡ ದಿವ್ಯಗ್ರಹದಂತೆ: **ಪಂಪಭಾ**, ೪. ೫೯ ವ)

ದಿವ್ಯಮುನಿ – [ನಾ] ಶ್ರೇಷ್ಠ ಮುನಿ (ಇನಿಯಳನಟ್ಟೆಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ ಸೋಲ್ತಲಂಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ: **ಪಂಪಭಾ,** ೧. ೧೧೧)

ದಿವ್ಯಮೂರ್ತಿ – [ನಾ] ಶ್ರೇಷ್ಠವಾದ ಅಥವಾ ಸುಂದರವಾದ ಆಕಾರ ಆಕಾರ (ಗಂಗಾದೇವಿಯುಂ ದಿವ್ಯಮೂರ್ತಿಯಂ ಕೆಯ್ಕೊಂಡು ಬಂದು: **ಪಂಪಭಾ**, ೯. ೭೫ ವ)

ದಿವ್ಯಶರಧಿ – [ನಾ] ದಿವ್ಯಾಸ್ತ್ರಗಳುಳ್ಳ ಬತ್ತಳಿಕೆ (ದಿವ್ಯಾಭರಣಂಗಳೆಲ್ಲಮಂ ಕಳೆದು ದಿವ್ಯಶರಧಿಗಳಂ ಬಿಗಿದುಕೊಂಡು ದಿವ್ಯಚಾಪಮಂ ಪಿಡಿದು: **ಪಂಪಭಾ**, ೪. ೧೨ ವ)

ದಿವ್ಯಶರಾಳಿ – [ನಾ] ಶ್ರೇಷ್ಠವಾದ ಮಂತ್ರಾಸ್ತ್ರಗಳ ಸಮೂಹ (ಎನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದು ಇಲ್ಲ ಒಡಮೆ ಸಮಂತು ಪೇಟಿವಱಿಗೊಳಾವುದನೀವುದೊ ಕುಂಭಸಂಭವಾ: **ಪಂಪಭಾ**, ೨. ೪೬)

ದಿವ್ಯಸಂಯೋಗ – [ನಾ] ದಿವ್ಯವಾದ ಸೇರುವಿಕೆ, ಕೂಡುವಿಕೆ (ಅಂತು ದಿವ್ಯಸಂಯೋಗದೊಳಿರ್ವರುಂ ಗರ್ಭಮಂ ತಾಳ್ದರ್: **ಪಂಪಭಾ,** ೧. ೮೫ ವ)

ದಿವ್ಯಸಂಭವ – [ನಾ] ದೈವಾಂಶಸಂಭೂತ, ಸ್ವರ್ಗದಲ್ಲಿ ಹುಟ್ಟಿದ (ದಿವ್ಯಸಂಭವಂಗಳಪ್ಪ ಶ್ವೇತಾಶ್ವಂಗಳೊಳ್ ಪೂಡಿದ ದಿವ್ಯರಥಮುಮಂ ದಧೀಚಿಗಂಡಸ್ಥಮಪ್ಪ ಗಾಂಡೀವಮೆಂಬ ಬಿಲ್ಲುಮಂ .. .. ಕೆಯ್ಕೊಂಡು: **ಪಂಪಭಾ**, ೫. ೭೭ ವ)

ದಿವ್ಯಸಿಂಧುನಂದನ – [ನಾ] ದೇವಗಂಗೆಯ ಮಗ, ಭೀಷ್ಮ (ಇಂದ್ರನಂದನಂ ಅಳುರ್ಕೆಯಿಂ ಆರ್ದೊಡೆ ದಿವ್ಯಸಿಂಧುನಂದನಂ ಇರದೆ ಏಱೆ ಬೇರೆ ರಥಮಂ: **ಪಂಪಭಾ**, ೧೧. ೧೯)

ದಿವ್ಯಸ್ವರೂಪ – [ನಾ] ವಿಶ್ವರೂಪದರ್ಶನ (ವಿಕ್ರಮಾರ್ಜುನನ ಮನದೊಳಾದ ವ್ಯಾಮೋಹಮಂ ಕಳೆಯಲೆಂದು ಮುಕುಂದಂ ದಿವ್ಯಸ್ವರೂಪಮಂ ತೋಱೆ: **ಪಂಪಭಾ**, ೧೦. ೬೩ ವ)

ದಿವ್ಯಾಸ್ತ್ರ – [ನಾ] ದೇವತೆ ದಯಪಾಲಿಸಿರುವ ಅಸ್ತ್ರ (ಪಾರ್ವನೆಂದೆನ್ನೊಳ್ ಪುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಮವಸಾನಕಾಲದೊಳ್ ಬೆಸಕೆಯ್ಯದಿರ್ಕೆ: **ಪಂಪಭಾ,** ೧. ೧೦೫ ವ)

ದಿವ್ಯೇಷು – [ನಾ] [ದಿವ್ಯ+ಇಷು] ದಿವ್ಯಾಸ್ತ್ರ (ಪ್ರಳಯದುರಿ ಕಾಳಕೂಟದ ಗುಳಿಗೆ ಪುರಾಂತಕ ಲಲಾಟನೇತ್ರಾನಳನೊಂದು ಅಳವಿಗಂ ಅಗ್ಗಳಂ ಅವರ್ಗಳ ಮುಳಿಸುಗಳುಂ ಮುಳಿದು ತುಡುವ ದಿವ್ಯೇಷುಗಳುಂ: **ಪಂಪಭಾ,** ೭. ೬೬)

ದಿಶಾಚಕ್ರ – [ನಾ] ದಿಕ್ಚಕ್ರ, ದಿಕ್ಕುಗಳ ವಲಯ, ಎಂದರೆ ಎಲ್ಲ ದಿಕ್ಕುಗಳಲ್ಲಿರುವ ರಾಜರು (ಪ್ರತಾಪಕ್ಕೆ ಅಗುರ್ವಿಸೆ ಗೋಟಿುಂಡೆಗೊಳುತ್ತುಂ ಇರ್ದುದು ದಿಶಾಚಕ್ರಂ ಪೊದಳ್ದ ಆಜ್ಞೆಗ್ಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ: **ಪಂಪಭಾ,** ೧. ೧೧೦)

ದಿಶಾವನಿತೆ – [ನಾ] ದಿಕ್ಕೆಂಬ ಸ್ತ್ರೀ ಅಥವಾ ದಿಕ್ಕಿನ ದೇವತೆ (ಆಗಳಾ ತಾರಾಗಣಂಗಳ್ ದಿಶಾವನಿತೆಯರ ಮಕುಟಮಾಣಿಕಂಗಳಂತೆ ಎನಿತು ಬೆಳಗಿಯುಂ ಕಟ್ಟಿಲೆಯಂ ಅಲೆಯಲಾಱವಾದುವು: **ಪಂಪಭಾ**, ೪. ೪೯ ವ)

ದಿಶಾಳೀ – [ನಾ] ದಿಕ್ಕುಗಳ ಸಮೂಹ (ಮುಗಿಲ ಬೆಳ್ಪೊಳಪೊಕ್ಕು ತಳ್ಪೊಯ್ಯೆ ಬಳ್ವಳ ನೀಳ್ದಿರ್ದ ದಿಶಾಳಿ: **ಪಂಪಭಾ**, ೭. ೭೧)

ದೀಕ್ಷಾದ್ಯ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಸನ್ಯಾಸ ಸ್ವೀಕಾರ (ದೀಕ್ಷಾದ್ಯ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ದೀಕ್ಷಾನ್ವಯ ಕ್ರಿಯೆ – [ನಾ] [ಜೈನ] ಜೈನ ದೀಕ್ಷೆ ಕೊಡುವ ಕ್ರಿಯೆ [ಜೈನ] ನಲವತ್ತೆಂಟು ದೀಕ್ಷಾನ್ವಯಕ್ರಿಯೆಗಳಲ್ಲಿ ಒಂದು (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ)

ದೀನತ್ವ – [ನಾ] ಬಾಡುವಿಕೆ (ಕನತ್ಕನಕಾಂಭೋಜನಿಧಾಮಕ್ಕೆ ಪಿರಿದುಂ ದೀನತ್ವಮಂ .. .. ನಿನಗಂ ಸಂತಾಪಮಂ ಮಾಡಿದಂ: **ಪಂಪಭಾ**, ೪. ೬೪)

ದೀನಾನಾಥಜನ – [ನಾ] ದೀನರೂ ಅನಾಥರೂ ಆದ ಜನಗಳು (ಸಮಸ್ತವಸ್ತುಗಳಂ ದೀನಾನಾಥಜನಕ್ಕೆ ಸೂಱೆಗೊಟ್ಟು ನಿಜಪರಿವಾರಮಂ ಬರಿಸಿ: **ಪಂಪಭಾ**, ೧. ೧೧೩ ವ)

ದೀಪಾಂಗ – [ನಾ] [ಜೈನ] ದೀಪಗಳನ್ನು ನೀಡುವ ಒಂದು ಕಲ್ಪವೃಕ್ಷ, (ಸೊಗಯಿಸುವುವು ದೀಪಾಂಗ ಜ್ಯೋತಿರಂಗ ಕಲ್ಪಕುಜಂಗಳ್: **ಆದಿಪು,** ೫. ೪೦), ನೋಡಿ, ಕಲ್ಪವೃಕ್ಷ

ದೀಪಿಕಾಂಕುರ – [ನಾ] [ದೀಪಿಕಾ+ಅಂಕುರ] ದೀಪದ ಕುಡಿ (ಅವರ ಸುಯ್ಗಳ ಗಾಳಿಯೊಳೊಯ್ಯನಳ್ಕಾಡುವುದಾಯ್ತು ತತ್ಸುರತಮಂದಿರದ ಉಜ್ಜ್ವಳ ದೀಪಿಕಾಂಕುರಂ: **ಪಂಪಭಾ**, ೩. ೮೩)

ದೀಪ್ತ – [ಗು] ಉದ್ರಿಕ್ತಗೊಂಡ (ದೀಪ್ತಕಂದರ್ಪದರ್ಪಕ್ಷುಭಿತ ಗಳನಿನಾದಂ ಪ್ರಸ್ಫುರದ್ಧರ್ಮವಾರಿ ಪ್ರಭವಂ: **ಪಂಪಭಾ**, ೫. ೨೮)

ದೀಪ್ರ – [ಗು] ಜಾಜ್ವಲ್ಯಮಾನವಾದ (ಭಾಭಾಸುರಮೊಪ್ಪಿ ತೋಱುಗುಂ ಪಂಚರತ್ನಪಾಂಶೂಚ್ಚದೀಪ್ತಿದೀಪ್ರಂ ವಪ್ರಂ: **ಆದಿಪು**, ೬. ೧೦೩)

ದೀಪ್ರೌಷಧಿ – [ನಾ] ಎಣ್ಣೆಕಾಳು (ತಿಳಾತಸೀಕುಸುಂಭಾದಿ ದೀಪ್ರೌಷಧಿಗಳುಂ ಯಾವನಾಳ ಕಂಗು ಕೋದ್ರಾವಾದಿ ಸರ್ವೌಷಧಿಗಳುಂ: **ಆದಿಪು**, ೮. ೬೧ ವ)

ದೀರ್ಘಿಕೆ – [ನಾ] ಸರೋವರ, ಬಾವಿ, ಕೊಳ (ಎಣ್ಣೆಯೊಳ್ ತೀವಿ ದೀರ್ಘಿಕೆಗಳಂ ಅಂತಾ ನೃಪತಿ ನಿಚ್ಚಲ್ ಅಯ್ಯೂಱ್ ಆನೆಯಂ ಅವಗಾಹಮಿರಿಸುವಂ ಬೋದನದೊಳ್: **ಪಂಪಭಾ**, ೧. ೧೭)

ದೀವಗಾಱ – [ನಾ] ದೀವದ ಬೇಟೆಯಾಡುವವನು, ದೀವಕ್ಕಾಗಿ ಮೃಗಪಕ್ಷಿಗಳನ್ನು ಸಾಕುವವನು (ಮನೋಜನೆಂಬ ದೀವಗಾಱನ ಪುಲ್ಲೆಗಳಂತೆ .. .. ನೆರೆದಿರ್ದ ಪೆಂಡವಾಸದೊಳ್ವೆಂಡಿರಂ ಕಂಡು: **ಪಂಪಭಾ,** ೪. ೮೪ ವ)

ದೀವದ – [ಗು] ಸಾಕಿದ (ಲೀಲಾಲಸಗಮನಮಂ ಗಜಗಮನೆಯರ್ಗೆ ಉಪದೇಶಂಗೆಯ್ವ ದೀವದ ರಾಜಹಂಸೆಗಳುಮಂ: **ಆದಿಪು**, ೪. ೫೪ ವ)

ದೀವದ ಬೇಂಟೆ – [ನಾ] [ದೀಪಕ>ದೀವ] ಆಕರ್ಷಣೆ ಒಡ್ಡಿ ಆಡುವ ಬೇಟೆ (ದೀವದ ಬೇಂಟೆಯಂ ಬಿನ್ನಪಂಗೆಯ್ವೊಡೆ ಗಾಳಿಯುಂ ಕಟಿವುಂ ಉಟಿವುಂ ಕಾಪುಂ ಮೇಪುಂ ತೋಡುಂ ಬೀಡುಂ: **ಪಂಪಭಾ**, ೫. ೪೩ ವ)

ದೀವಳಿಗೆಯಂ ಮಾನಾಮಿಯಂ ಮಾಡು – ದೀಪಾವಳಿ ಮಹಾನವಮಿ ಹಬ್ಬಗಳನ್ನು ಮಾಡು, ತಕ್ಕಶಾಸ್ತಿ ಮಾಡು ಎಂಬುದಕ್ಕೆ ವ್ಯಂಗ್ಯನುಡಿ (ನೀನೇನಾನುಮೊಂದು ಏವಮಂ ಮನದೊಳ್ ಮಾಡಿದೊಡೆ ಅಂದೆ ದೀವಳಿಗೆಯಂ ಮಾನಾಮಿಯಂ ಮಾಡೆನೇ: **ಪಂಪಭಾ**, ೪. ೯೩)

ದೀವಿಗೆ – [ನಾ] ಸೊಡರು (ದೀವಿಗೆಗಳೊಳ್ ಜಲಕ್ಕನೆಕ್ಕೆಕ್ಕೆಯನಿಟ್ಟಳಂ ಬೆಳಗುತಿರ್ದುವೆರಟಿಂ್ದಸೆಯೊಡ್ಡಣಂಗಳೊಳ್: **ಪಂಪಭಾ,** ೧೨. ೫)

ದೀಹ – [ನಾ] ಬೇಟೆಯಾಡಲು ಆಕರ್ಷಣೆಯಾಗಿ ಒಡ್ಡುವ ಸಾಕುಪ್ರಾಣಿ, ಆಮಿಷ (ಎನ್ನ ಪಸರಿಸಿದ ಚಿತ್ರಪಟಮೆಂಬ ದೀಹಕ್ಕೆ ಖೇಚರಭೂಚರಯುವಮೃಗಗಂಗಳೆಳಸಿ ಬಂದು: **ಆದಿಪು**, ೩. ೮೬ ವ)

ದುಂದುಭಿ – [ನಾ] ಅರವತ್ತು ಸಂವತ್ಸರಗಳಲ್ಲಿ ಒಂದು (ದುಂದುಭಿ ಗಭೀರನಿನದಂ ದುಂದುಭಿ ಸಂವತ್ಸರೋದ್ಭವಂ: **ಆದಿಪು,** ೧. ೩೩)

ದುಂದುಭಿಗಭೀರನಿನದ – [ನಾ] ದುಂದುಭಿಯ ಗಾಢ ಧ್ವನಿ (ದುಂದುಭಿ ಗಭೀರನಿನದಂ ದುಂದುಭಿ ಸಂವತ್ಸರೋದ್ಭವಂ: **ಆದಿಪು,** ೧. ೩೩)

ದುಃಖ – [ನಾ] [ಜೈನ] ಐದು ಬಗೆಯ ಕ್ಲೇಶಗಳು: ದೇಹ, ಮನಸ್ಸು, ಸ್ಥಲಗಳಿಂದಾಗುವ, ಪರಸ್ಪರರಿಂದ ಉಂಟಾಗುವ ಹಾಗೂ ರಾಕ್ಷಸರಿಂದಾಗುವಂಥವು (ಅಂತು ಶಾರೀರ ಮಾನಸ ಕ್ಷೇತ್ರಜ ಪರಸ್ಪರೋದೀರಿತ ದನುಜೋದೀರೀತಂಗಳೆಂ ಅಯ್ದುಂ ತೆಱದ ದುಃಖಂಗಳೊಳ್ ಒಳರ್ದು: **ಆದಿಪು**, ೫. ೮೮ ವ)

ದುಃಖಾರ್ದಿತ – [ನಾ] ದುಃಖಗೊಂಡವನು (ಜಗತ್ಕಾಯಸ್ವಭಾವ ಭಾವನಾಪರಂ ಸಕಳಶರೀರ ಗುಣಾಧಿಕ ದುಃಖಾರ್ದಿತ ಅವಿನೀತರೊಳ್: **ಆದಿಪು**, ೯. ೧೨೯ ವ)

ದುಕೂಲ – [ನಾ] ರೇಷ್ಮೆ ಬಟ್ಟೆ (ದುಕೂಲದ ಕೋವಣಂ ಕರಂ ಒಡಂಬಡೆ ನೋಟಕರ್ಕಳಂ ಆ ತಪಸ್ವಿ ಮರುಳ್ಚಿದಂ: **ಪಂಪಭಾ**, ೬. ೮)

ದುಕೂಲಾಂಬರ – [ನಾ] ದುಕೂಲ (ಪೊಸಮುತ್ತಿನ ತುಡುಗೆ ಪೊದಳ್ದೆಸೆಯೆ ದುಕೂಲಾಂಬರಂ ನಿಜಾಂಗದೊಳಂ ಸಂದೆಸೆದಿರೆ ಬೆಳ್ಮುಗಿಲಿಂದಂ ಮುಸುಕಿದ ನೀಲಾದ್ರಿ ಬರ್ಪ ತೆಱದೊಳ್ ಬಂದಂ: **ಪಂಪಭಾ**, ೨. ೬೮)

ದುಗುಲ – [ನಾ] [ದುಕೂಲ] ರೇಷ್ಮೆ ಬಟ್ಟೆ (ಸುಲಿಪಲ್ ಮಿಂಚಿನ ಗೊಂಚಲುಟ್ಟ ದುಗುಲಂ ಗಂಗಾನದೀಫೇನಂ ಉಜ್ಜ್ವಲಮುಕ್ತಾಭರಣಂ ತರತ್ತರಳ ತಾರೋದಾರ ಭಾ ಭಾರಂ .. .. ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ**, ೧. ೧೩೭)

ದುಗ್ಧ – [ನಾ] ಹಾಲು (ಅತಿದೂರೋಚ್ಛ್ವಾಸವಿಕಾಸ ನಾಸಾಂಜಲಿಪುಟ ಪೀಯಮಾನ ದುಗ್ಧ ಹೈಯಂಗವೀನಮುಮಂ: **ಆದಿಪು**, ೧೧. ೨೬ ವ)

ದುಗ್ಧಚ್ಛಟ – [ನಾ] ಹಾಲಿನ ಕಾಂತಿ (ಲಟಹಯುತಂಗಳ್ ದುಗ್ಧಚ್ಛಟೋಜ್ಜ್ವಲಂಗಳ್ ತದಮರಚಮರರುಹಂಗಳ್: **ಆದಿಪು**, ೭. ೫೧)

ದುಗ್ಧಪಯೋಧಿ – [ನಾ] ಹಾಲಿನ ಸಮುದ್ರ (ಬೇಗದೊಳಾ ಕಟಕಂಗಳೆಯ್ದೆ ಕೆಯ್ಕೊಂಡುವು ಮಂದರಕ್ಷುಭಿತ ದುಗ್ಧಪಯೋಧಿ ಗಂಭೀರನಾದಮಂ; **ಪಂಪಭಾ**, ೧೦. ೪೯)

ದುಗ್ಧಪ್ಲವ – [ನಾ] ಹಾಲಿನ ಹೊನಲು (ಆ ಪೀಯೂಷಾಬ್ಧಿ ದುಗ್ಧಪ್ಲವ ಧವಳ ಕನತ್ ಕಂದರಾತ್ ಮಂದರಾದ್ರೇಃ: **ಪಂಪಭಾ**, ೧೪. ೨೭)

ದುಗ್ಧಲವ – [ನಾ] ಹಾಲಿನ ಹನಿ (ಮನೋಹರಮಾದುದು ಅಮರಕಾಂತೆಯರ ಉರದೊಳ್ ಕುರುಳೊಳ್ ತಗುಳ್ದ ದುಗ್ಧಲವಂಗಳ್: **ಆದಿಪು**, ೭. ೯೩)

ದುಗ್ಧವಾರ್ಧಿ – [ನಾ] ಹಾಲ್ಗಡಲು (ಯುವತಿಜನಶಂಕೆಯುಂ ಮುನ್ನವಯವದೊಳೆ ಪೊಕ್ಕು ಕಳೆದು ಸುರಸರಿತ್ ಅಂಭಃಪ್ಲವದೊಳೆ ಚಕ್ರಧರಂ ದುಗ್ಧವಾರ್ಧಿಯೊಳ್ ನಿಂದ ಕನಕಗಿರಿಯನೆ ಪೋಲ್ತಂ: **ಆದಿಪು,** ೧೧. ೧೪೦)

ದುಗ್ಧಸಿಂಧುಪ್ಲವ – [ನಾ] ಹಾಲ್ಗಡಲ ಹೊನಲು (ಸಮಸ್ತಸುರಕೋಟಿ ಹೇಮಘಟಕೋಟಿಯಿಂ ತೀವಿ ತಂದಮೇಯ ಭುಜಕೋಟಿಯಿಂ ಮಿಸಿಸೆ ದುಗ್ಧಸಿಂಧುಪ್ಲವಂ ಶ್ರಮಾಂಬುಲವಮೊಂದುಮಂ ನಿನಗೆ ಪುಟ್ಟಿಸಲ್ಕಾರ್ತುದಿಲ್ಲ: **ಆದಿಪು**, ೧೩. ೮೩)

ದುಗ್ಧಾಬ್ಧಿ – [ನಾ] ಹಾಲ್ಗಡಲು (ಕುಂದ ಇಂದು ದುಗ್ಧಾಬ್ಧಿಪಾಂಡುರ ಕೈಲಾಸನಗೇಂದ್ರದೊಳ್ ನೆಲಸಿದಂ ಸಂಸಾರಸಾರೋದಯಂ: **ಆದಿಪು**, ೧೦. ೬೯)

ದುಗ್ಧಾಬ್ಧಿಧವಳ – [ನಾ] ಹಾಲ್ಗಡಲಿನಂತೆ ಬೆಳ್ಳಗಿರುವ (ಮನಃಪವನ ವೇಗದಿಂ ದ್ವಾರಾವತಿಯನೆಯ್ದಿ ದುಗ್ಧಾಬ್ಧಿಧವಳ ಶಯ್ಯಾತಳದೊಳ್ ಮಱಿದೊಱಗಿದ ಮಧುಮಥನನಂ ಎತ್ತಲಣ್ಮದೆ: **ಪಂಪಭಾ**, ೯. ೧೦ ವ)

ದುಗ್ಧಾರ್ಣವ – [ನಾ] ಕ್ಷೀರಸಾಗರ, ಹಾಲ್ಗಡಲು (ಆಗಳ್ ಅನಂತಂ ಅನಂತಫಣಾಗಣಮಣಿಕಿರಣಂ ಎಸೆಯೆ ದುಗ್ಧಾರ್ಣವದೊಳ್ ರಾಗದಿನಿರ್ಪಂತಿರ್ದಂ ಭೋಗಿ ತಟತ್ತಟಿಸೆ ಬೆಳಗೆ ಕೆಯ್ದೀವಿಗೆಗಳ್: **ಪಂಪಭಾ**, ೪. ೫೩)

ದುರ್ಜ್ಯೋದನ – [ನಾ] ದುರ್ಯೋಧನ (ಜೂದಿನ ಗೆಲ್ಲದೊಳಾದೀ ಮೇದಿನಿಯಂ ಕಂಡು ಕಜ್ಜಮಂ ಕಾಣದೆ ದುರ್ಜ್ಯೋದನಂ ಅದೇನದೇಂ ಮರುಳಾದನೊ: **ಪಂಪಭಾ,** ೭. ೧೯)

ದುರಂತ – [ಗು] ಕೊನೆಯಿಲ್ಲದ (ಘೋರ ದುರ್ಗತಿಯಂ ಪೊಕ್ಕು ದುರಂತದುಃಖಮನುಣಲ್ವೇಡ: **ಆದಿಪು,** ೩. ೫೬)

ದುರಂಧರ – [ನಾ] ಸಮರ್ಥ (ವಿಚಿತ್ರವೀರ್ಯನಂ ಗಾಂಗೇಯಂ ಧರಾಭಾರ ದುರಂಧರನಂ ಮಾಡಿ: **ಪಂಪಭಾ,** ೧. ೭೩ ವ)

ದುರಾತ್ಮ – [ನಾ] ದುಷ್ಟ (ಯಜ್ಞದೊಳ್ ಈ ಮನುಜಾಧೀಶ್ವರಸಭೆಯೊಳ್ ನೆನೆಯಲುಂ ಆಗದು ದುರಾತ್ಮನಂ ಬೆಸಗೊಳ್ವಾ: **ಪಂಪಭಾ,** ೬. ೪೫)

ದುರಿತಮಲ್ಲ – [ನಾ] ಪಾಪವೆಂಬ ಜಟ್ಟಿ (ದರ್ಪಿತ ದುರಿತಮಲ್ಲನುಮಂ ಉಡಿವ ತಕ್ಕಿನಿಂ ಸಭೆಗೆ ನಡೆದಂ ಇಂದ್ರಾರ್ಚಿತನಾ: **ಆದಿಪು,** ೧೪. ೧೩೪)

ದುರಿತಹರ – [ನಾ] ಪಾಪವಿನಾಶಕ (ಇನ್ನುಂ ತನುವಂ ಬಾಧಿಸು ನೀಂ ತಪೋಗ್ನಿಯಿಂದ ಆರಾಧಿಸು ನೀಂ ಮಗನೆ ದುರಿತಹರನಂ ಹರನಂ: **ಪಂಪಭಾ,** ೮. ೮)

ದುರ್ಗಪರಿವೃತಾಂತ – [ನಾ] ದುರ್ಗಗಳಿಂದ ಸುತ್ತುವರಿದ ಭೂಮಿ (ಬಟಿಕಂ ದೇವಮಾತೃಕ ಸಾಧಾರಣ ಅನೂಪಜಾಂಗಳ ಭೇದಂಗಳುಮಂ ಅಂತಪಾಳಪಾಳಿತ ದುರ್ಗ ಪರಿವೃತಾಂತಂಗಳುಂ: **ಆದಿಪು,** ೮. ೫೪ ವ)

ದುರ್ಗಾಟವಿ – [ನಾ] ದುರ್ಗಗಳಿರುವ ಕಾಡು ? (ಎಪ್ಪತ್ತಿರ್ಛಾಸಿರ ದುರ್ಗಾಟವಿಗಳುಂ ಪದಿನೆಣ್ಛಾಸಿರ ಮ್ಲೇಚ್ಛರಾಜರುಂ: **ಆದಿಪು,** ೧೫. ೩ ವ)

ದುರ್ಣಯ – [ನಾ] ದುರ್ನೀತಿ (ಅಂತಲ್ಲ ದುರ್ಣಯಮಂ ನಚ್ಚುವೊಡೆನ್ನನುಗ್ರರಣದೊಳ್ ಮೇಣ್ ಮೀಱಿ ಮಾರ್ಕೊಂಡಂ: **ಪಂಪಭಾ,** ೧. ೭೭)

ದುರ್ದಮ – ಗು] ಅಡಗಿಸಲು ಕಷ್ಟಕರವಾದ (ದೋರ್ದಂಡಕಂಡೂಯ ದುರ್ದಮವೈರಿದ್ವಿರದೇಂದ್ರ ಕೇಸರಿರವಂ: **ಆದಿಪು,** ೧೧. ೧೦)

ದುರ್ದಿನ – [ನಾ] ಸೂರ್ಯ ಕಾಣದಂತೆ ಮೋಡ ಮುಸುಕಿದ ದಿನ (ಅನವರತ ಗಳತ್ ಮದದುರ್ದಿನಾನನಂ ವರ್ಷಜಳ ಸಮನ್ವಿತಂ ಅಂಭೋದನಿನಾದಂ: **ಆದಿಪು,** ೧೧. ೨೯)

ದುರ್ಧರ – [ಗು] ಸಹಿಸಲು ಅಥವಾ ಎದುರಿಸಲು ಕಷ್ಟಕರವಾದ (ಕಾಟ್ಟುಱು ಮಸಗಿದಂತೆ ಮಸಗಿದ ದುರ್ಧರ ಧನುರ್ಧರಬಲಮುಮಂ ಶ್ವೇತ ಭೀಷ್ಮರ ಪೇಟ್ದ ಓಜೆಯೊಳೆರಡುಂ ಪಡೆಗಳ ಪಡೆವಳರ್ಕಳ್: **ಪಂಪಭಾ,** ೧೦. ೫೧ ವ)

ದುರ್ನಯ – [ನಾ] ದುರ್ನೀತಿ (ನೆಱವಂ ತಾಳ್ದಿದಪಾಸ್ತ ದುರ್ನಯತಮೋಬಂಧಂ ಶ್ರುತಸ್ಕಂಧಮಾದಜೆವಿಂದಂ: **ಆದಿಪು,** ೧. ೩೯)

ದುರ್ನಿರೀಕ್ಷಣ – [ಗು] ನೋಡಲಾಗದಂತಹ (ಕರಾಳನಕ್ರಚರ್ವಿತ ನಿಕೀರ್ಣನಿರಯಜನಿಕುರುಂಬ ಶಲ್ಯಶಕಲಪರಿಪೂರಿತ ಧವಳಪ್ಲವದುರ್ನಿರೀಕ್ಷಣವಿಷಮೆಯುಂ: **ಆದಿಪು,** ೫. ೮೭ ವ)

ದುರ್ನಿರೀಕ್ಷ್ಯ – [ಗು] ನೋಡಲಸಾಧ್ಯವಾದ (ಕಲ್ಪಾಂತ ದಿನಕರ ದುರ್ನಿರೀಕ್ಷ್ಯನುಂ ಉತ್ಪಾತ ಮಾರುತನಂತೆ ಸಕಲ ಭೂಭೃತ್ಕಂಪಕಾರಿಯುಂ .. .. ಭೈರವಾಕಾರನುಂ ಆಗಿ: **ಪಂಪಭಾ,** ೧೧. ೧೧೭ ವ)

ದುರ್ಭಗ – [ನಾ] [ಜೈನ] ಇತರರ ಮನಸ್ಸಿನಲ್ಲಿ ಅಸಹ್ಯವನ್ನು ಉಂಟುಮಾಡುವ ಸ್ಥಿತಿ, ಒಂದು ಬಗೆಯ ನಾಮಪ್ರಕೃತಿ (ಸ್ಥಿರಾಸ್ಥಿರ ಶುಭಾಶುಭ ಸುಸ್ವರ ದುಸ್ವರ ಸುಭಗ ದುರ್ಭಗ ಪ್ರತ್ಯೇಕಶರೀರ ಅಯಶಸ್ಕೀರ್ತಿರನಾದೇಯ ನಿರ್ಮಾಣ ಪರ್ಯಾಪ್ತನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ: **ಆದಿಪು,** ೧೬. ೪೯ ವ)

ದುರ್ಮೋಹ – [ನಾ] ಭ್ರಾಂತಿ (ದಂದುಗವೆಂದುಂ ತಮಗಾಗದಂತೆಸಗುವರ್ ಸರ್ವೋತ್ತಮರ್ ಸರ್ವಸಾಧುಗಳ್ ಓರಂತೆ ಕಟಿಲ್ಚುಗೆ ಎಮ್ಮ ಮನದಿಂ ದುರ್ಮೋಹ ಸಂದೋಹಮಂ: **ಆದಿಪು,** ೧. ೫)

ದುರ್ಯೋಧನ – [ನಾ] ಅಸಾಧ್ಯನಾದ ವೀರ (ಈ ಮಾತಂ ಇನ್ನುಟಿ ದುರ್ಯೋಧನನಲ್ಲನೇ ಕಳದೊಳಂ ಕಾಣ್ಬಂತು ಕೌಂತೇಯರಂ: **ಪಂಪಭಾ,** ೧೩. ೨೪)

ದುರ್ಲಕ್ಷ – [ಗು] ನೋಡಲಾಗದ (ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ ಸಂಘಟ್ಟನ ಸಮುಚ್ಚಳಿತ ಪಾಂಸುಪಟಳ ಅಂಧಕಾರದುರ್ಲಕ್ಷ್ಯಾಂತರಿಕ್ಷ ಕ್ಷಿತಿದಿಗಂತರಾಳಾಂತರಮುಂ: **ಪಂಪಭಾ,** ೧೩. ೫೧ ವ)

ದುರ್ಲಲಿತಚರಿತ – [ನಾ] ಶೌರ್ಯದ ನಡವಳಿಕೆ (ದುರ್ಲಲಿತಚರಿತ ಸಂಕೇತಗೋಷ್ಠೀನಿಕೇತಂ: **ಆದಿಪು,** ೧೪ ೧೯)

ದುರ್ವಾರ – [ಗು] ನಿವಾರಿಸಲಸಾಧ್ಯವಾದ (ಅಗಾಧಬೋಧನಿಳಯಂ ದುರ್ವಾರಸಂಸಾರ ವಿಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ: **ಆದಿಪು,** ೧. ೧)

ದುರ್ವಾರಪರಾಕ್ರಮ – [ನಾ] ಎದುರಿಸಲು ಸಾಧ್ಯವಿಲ್ಲದಂತಹ ಪರಾಕ್ರಮಿ (ವಕ್ರಿಸದಿರಿಂ ವನವಾಸದೊಳಿರ್ಪೆಂ ಎಂದು ದುರ್ವಾರಪರಾಕ್ರಮಂ ತಳರೆ ಬಾರಿಸಿ ವಾರಿಸಿ ಕುಂತಿಮಾದ್ರಿಯರ್: **ಪಂಪಭಾ,** ೧. ೧೧೪)

ದುರ್ವಾಸ – [ನಾ] ಒಬ್ಬ ಋಷಿ, ಅತ್ರಿ ಮಹರ್ಷಿಯಿಂದ ಅನಸೂಯೆಯಲ್ಲಿ ಶಂಕರನ ಅಂಶದಿಂದ ಹುಟ್ಟಿದವನು (ಆ ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂಗೊಳೆ ಕೊಟ್ಟಂ ದುರ್ವಾಸಂ ವಿಳಸಿತ ಮಂತ್ರಾಕ್ಷರಂಗಳಂ ದಯೆಯಿಂದಂ: **ಪಂಪಭಾ,** ೧. ೮೮ ಮತ್ತು ೧. ೮೯)

ದುರ್ವಿದಗ್ಧ – [ನಾ] ತಿಳಿಗೇಡಿ (ವಾಸವದುರ್ದಂತರೆಂಬರ್ ಅನೇಕಕ್ಷುದ್ರವಿದ್ಯಾಗರ್ವದುರ್ವಿದಗ್ಧರುಂ ಅಳೀಕವಿಚಕ್ಷಣರುಂ ಅಪ್ಪುದಱಿಂದಂ: **ಆದಿಪು,** ೩. ೮೭ ವ)

ದುರ್ವಿಮಂತ್ರ – [ನಾ] ದುಷ್ಟ ಪರ್ಯಾಲೋಚನೆ (ದುರ್ವಿಮಂತ್ರಮಂ ಪರೆಪ ಟಮಾಳಮಂ ಪಿರಿದಂ ಓದಿದೊಡೆ ಅಪ್ಪ ಪದಾರ್ಥಮಾವುದೋ: **ಪಂಪಭಾ,** ೧೩. ೬೬)

ದುರ್ವಿಳಸನ – [ನಾ] ದುರ್ನಡತೆ (ಅಸದಾಗ್ರಹಮಂ ಬಿಸುಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ: **ಆದಿಪು,** ೧೪. ೧೩೧)

ದುಶ್ಚರ – [ನಾ] ದುಸ್ಸಾಧ್ಯ (ಯಮಧರಮುನಿಗಳ ಪಾದಮೂಲದೊಳ್ ದುಶ್ಚರತಪಶ್ಚರಣಪರಾಯಣಂ ಜೀವಿತಾಂತ್ಯದೊಳ್ ಸಮಾಹಿತಚಿತ್ತನಾಗಿ: **ಆದಿಪು,** ೫. ೯೬ ವ)

ದುಷ್ಕವಿ – [ನಾ] ಕ್ಷುದ್ರ ಕವಿ (ಬೀಗಿ ಪೊಟ್ಟಳಿಸಿ ನೆಗಟಿಗ್ಗಾಟಿಸುವ ದುಷ್ಕವಿಯುಂ ಕವಿಯೆಂಬ ಲೆಕ್ಕಮೇ: **ಪಂಪಭಾ,** ೧. ೧೨)

ದುಷ್ಟಚತುಷ್ಟಯ – [ನಾ] ಮಹಾಭಾರತದಲ್ಲಿನ ನಾಲ್ವರು ಕೆಡುಕರು; ದುರ್ಯೋಧನ, ದುಶ್ಶಾಸನ, ಕರ್ಣ, ಶಕುನಿ (ದುಶ್ಶಾಸನ ಕರ್ಣ ಶಕುನಿ ಸೈಂಧವರೆಂ ದುಷ್ಟಚತುಷ್ಟಯದೊಳ್ ಮಂತಣಮಿರ್ದು: **ಪಂಪಭಾ,** ೬. ೬೭ ವ)

ದುಷ್ಷಮ – ಕೆಟ್ಟ ಕಾಲ (ಉತ್ಸರ್ಪಿಣಿಯವಸರ್ಪಿಣಿ ನಾಮಮಂ ಪಡೆದುದದೊಂದು ಪತ್ತುಕೋಟಿಕೋಟಿ ಸಾಗರೋಪಮಸಂಖ್ಯೆಯಂ ತಾಳ್ದಿ ಸುಷಮಸುಷಮಂ ಸುಷಮಂ ಸುಷಮದುಷ್ಷಮಂ ದುಷ್ಷಮಸುಷಮಂ ದುಷ್ಷಮಂ ಅತಿದುಷ್ಷಮಂ ಎಂದು ಒಂದೊಂದುಂ ಷಡ್ಭೇದಭಿನ್ನಮಾದುವು; **ಆದಿಪು,** ೬. ೪೮ ವ)

ದುಷ್ಷಮಕಾಲ – [ನಾ] [ಜೈನ] ಕೆಟ್ಟ ಕಾಲ (ಎಸೆಯದು ದುಷ್ಷಮಕಾಲದೊಳ್ ಅಸದೃಶ ಕೈವಲ್ಯಬೋಧದಿನಕರಬಿಂಬಂ: **ಆದಿಪು,** ೧೫. ೩೦)

ದುಷ್ಷಮಯತಿ – [ನಾ] [ಜೈನ] ದುಷ್ಷಮವೆಂಬ ಐದನೆಯ ಕಾಲದಲ್ಲಿ ಅಥವಾ ಕೆಟ್ಟ ಕಾಲದಲ್ಲಿ ಹುಟ್ಟಿದ ಯತಿಗಳು (ಅಧಿಕಬಲಮುನಿಪಧೃತಾತುಳಗುಣಭಾರಮಂ ಆಂಪನಿತು ಅಳವಿಲ್ಲದೆ ಕಿಡುವರಲ್ತೆ ದುಷ್ಷಮಯತಿಗಳ್: **ಆದಿಪು,** ೧೫. ೩೧)

ದುಸರ – [ನಾ] ಎರಡೆಳೆ ಹಾರ (ಮಕುಟಂ ಕೆಯೂರಂ ಕರ್ಣಕುಂಡಲಂ ಕೊಪ್ಪು ಸರಿಗೆ ದುಸರಂ ಮಣಿಮುದ್ರಿಕೆ ತಿಸರಮೆಂಬ ಭೂಷಾನಿಕರಮಂ: **ಆದಿಪು,** ೫. ೩೩)

ದುಸ್ತಮಶ್ಚಂದ್ರ – [ನಾ] ಕರಾಳ ಕತ್ತಲೆಗೆ ಚಂದ್ರ (ಅರಿ ಭೂಪಾವಳೀ ದುಸ್ತಮಶ್ಚಂದ್ರಂಗೆ ಈಗೆ ಅರಿಗಂಗೆ ಮಂಗಳಮಹಾಶ್ರೀಯಂ ಜಯಶ್ರೀಯುಮಂ: **ಪಂಪಭಾ,** ೩. ೭೯)

ದುಸ್ತರ – [ನಾ] ಕಷ್ಟಸಾಧ್ಯ (ಅನವರತ ನಿಹತ ನರ ಕರಿ ತುರಗ ನಿಕುರುಂಬ ಕೀಲಾಲ ಕಲ್ಲೋಲ ಪ್ರವರ್ತನ ಅನೇಕ ನದ ನದೀ ಪ್ರವಾಹಬಾಹುಳ್ಯದುಸ್ತರಾವತರಣ ಮಾರ್ಗಮುಂ: **ಪಂಪಭಾ,** ೧೩. ೫೧ ವ)

ದುಸ್ತಿಮಿ – [ನಾ] ದುಷ್ಟ ಮೀನು (ಅಸಂಜ್ಞಿಯುಂ ಸರಿಸೃಪಾಳಿಯುಂ ವಿಹಗಾಳಿಯುಂ ಭುಜಂಗಮತತಿಯುಂ ಮೃಗಾರಿಗಣಮುಂ ಲಲನಾಜನಮುಂ ಮನುಷ್ಯದುಸ್ತಿಮಿಕುಳಂ: **ಆದಿಪು,** ೫. ೯೩)

ದುಸ್ವರ – [ನಾ] [ಜೈನ] ದುಷ್ಟಸ್ವರಕ್ಕೆ ಕಾರಣವಾದ [ಎಪ್ಪತ್ತೆರಡು ಬಗೆಯ] ನಾಮಕರ್ಮಪ್ರಕೃತಿಗಳಲ್ಲಿ ಒಂದು (ಸುಸ್ವರ ದುಸ್ವರ ಸುಭಗ ದುರ್ಭಗ .. .. ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿ ಪ್ರಕೃತಿಗಳಂ ನಿರವಶೇಷಂ ಕಿಡಿಸಿ: **ಆದಿಪು,** ೧೬. ೪೪ ವ)

ದೂಂಟಿಂದೆ ದೂಂಟಿಂಗೆ – ಹೆಜ್ಜೆ ಹೆಜ್ಜೆಗೂ (ಎಡೆಯೊಳ್ ದೂಂಟಿಂದೆ ದೂಂಟಿಂಗೆ ಪೆರ್ವಱಿಯಂ ಪೊಯ್ಸಿ ಕೆಲಕ್ಕೆ ನಾಣ್ಚಿ ತಲೆಗುತ್ತಿರ್ಪ ಆಕೆಯೇಂ ಜೋಡೆಯೇ: **ಪಂಪಭಾ** ಪರಿಷತ್ತು, ೪. ೮೨)

ದೂಂಟು – [ಕ್ರಿ] ಹಾರು (ಕಂಪನಲಂಪಿನೊಳೀಂಟಿ ದೂಂಟುವಾಡುವ ಮಱಿದುಂಬಿಮಾಲೆ: ಅನಂತಪು, ೭. ೯); ಹೆಜ್ಜೆ (ಎಡೆಯೊಳ್ ದೂಂಟಿಂದೆ ದೂಂಟಿಂಗೆ ಪೆರ್ವಱಿಯಂ ಪೊಯ್ಸಿ ಕೆಲಕ್ಕೆ ನಾಣ್ಚಿ ತಲೆಗುತ್ತಿರ್ಪ ಆಕೆಯೇಂ ಜೋಡೆಯೇ: **ಪಂಪಭಾ** ಪರಿಷತ್ತು, ೪. ೮೨) ['ದೂಂಟಿದೆ ದೂಂಟಿಂಗೆ'ಗೆ ಎಂಬ ಪಾಠಕ್ಕೆ ಬದಲಾಗಿ ವೆಂಕಟಾಚಲಶಾಸ್ತ್ರಿಗಳು 'ದೂತಟ್ಟಿ ದೂಱಿಂಗೆ' ಎಂದು ಪರಿಷ್ಕರಣ ಮಾಡುತ್ತಾರೆ]

ದೂತ – [ನಾ] ಆಳು, ಸಂದೇಶವಾಹಕ (ಭಾವಿತೀರ್ಥಕರ ಪುಣ್ಯದೂತಾಹೂತಂ ಪುರುಹೂತಂ ಬಂದು: **ಆದಿಪು,** ೬. ೮೮ ವ)

ದೂದ – [ನಾ] [ದೂತ] ಸಂದೇಶವಾಹಕ (ಇನಿಯನಟ್ಟಿದ ದೂದರ ಸೀಯನಪ್ಪ ಮಾತಿನ ರಸದೊಳ್ ಕೊನರ್ವುದು ತಳಿರ್ವುದು .. .. ನಲ್ಮೆಯೆಂಬ ನಂದನವನಂ ಓಪರೊಳ್: **ಪಂಪಭಾ,** ೪. ೧೦೨)

ದೂದವಿ – [ನಾ] ದೂತಿ (ಮನೆಯಾಣ್ಮನ ಕಣ್ಣೆಮೆಯ ಕಾಂಡಪಟಮಾಗೆಯುಂ ಬಗೆಯಾಣ್ಮನ ಕಣ್ಣೆಮೆಯ ದೂದವಿಯಾಗೆಯುಂ: **ಪಂಪಭಾ,** ೪. ೮೧ ವ)

ದೂದುವೋಗು – [ಕ್ರಿ] ಸಂದೇಶ ಹೊತ್ತು ಹೋಗು (ಒರ್ವಳ್ ತನ್ನ ನಲ್ಲನಲ್ಲಿಗೆ ದೂದುವೋಗಿ ಬಂದ ದೂದವಿಗೆ ಏಗೆಯ್ವ ತೆಱನುಮಱಿಯದೆ ಪದೆದು ಪಡೆಮಾತಂ ಬೆಸಗೊಳ್ವಳಂ ಕಂಡು: **ಪಂಪಭಾ,** ೪, ೧೦೦ ವ)

ದೂರಭವ್ಯ – [ನಾ] ಹೆಚ್ಚು ಕಾಲ ತೆಗೆದುಕೊಂಡು ಮನಃಪರಿಪಾಕವನ್ನು ಹೊಂದುವವನು (ಆತಂ ಅತ್ಯುನ್ನತಬೋಧ ನೀಂ ಬೆಸಸು ಅಭವ್ಯನೋ ಭವ್ಯನೋ ದೂರಭವ್ಯನೋ: **ಆದಿಪು,** ೨. ೩೪)

ದೂರಿಸು – [ಕ್ರಿ] ಆಕ್ಷೇಪಿಸು (ಆಕೆಯ ದೂರಿಸಿ ಸುಯ್ದು ಸುಯ್ಯೊಳುಚ್ಚಳಿಸಿದುದಾ ಸರೋಜದಳನೇತ್ರೆಯ ನಲ್ಮೆಯೋಳಟ್ಟಿ ಕಣ್ಣ ನೀರ್: **ಆದಿಪು,** ೧೨. ೩೪) [ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳಲ್ಲಿ]

ದೂರೋತ್ಸಾರಿತಂ ಮಾಡು – [ಗು] ದೂರದಲ್ಲಿ ನಿಲ್ಲಿಸಿದ (ಶಿಬಿಕೆಯನಿರಿಸಿ ಸುರಾಸುರಸಭೆಯಂ ದೂರೋತ್ಸಾರಿತಂ ಮಾಡಿ: **ಆದಿಪು,** ೯. ೭೬ ವ)

ದೂರೋತ್ಸಾರಿತಾಭಿಮಾನಿ – [ನಾ] ಸ್ವಾಭಿಮಾನವನ್ನು ಬಿಟ್ಟವನು (ಕ್ಷುತ್ಪಿಪಾಸಾಶೀತಾತಪಪ್ರಮುಖ ಪರೀಷಹಂಗಳಂ ಸೈರಿಸಲಾಱದೆ ಭಗ್ನೋತ್ಸಾಹರುಂ ದೂರೋತ್ಸಾರಿತ ಅಭಿಮಾನಿಗಳುಂ ಆಗಿ: **ಆದಿಪು,** ೯. ೮೮ ವ)

ದೂರ್ವಾಂಕುರ – [ನಾ] ಎಳೆಗರುಕೆ (ಆ ದೂರ್ವಾಂಕುರ ವರ್ಣದೊಳಾದಂ ಒಡಂಬಟ್ಟ ಕನಕಕವಚಂ ರಾಜತ್ ಕೋದಂಡಂ ಅಮರ್ದ ದೊಣೆ ಕಣ್ಗೆ ಆದಮೆ ಬರೆ: **ಪಂಪಭಾ,** ೨. ೭೪)

ದೂರ್ವಾಪ್ರವಾಳ – [ನಾ] ದೂರ್ವಾಂಕುರ (ಅಪೂರ್ವ ದೂರ್ವಾಪ್ರವಾಳಾಳಂಕೃತ ಕರ್ಣಪೂರನುಂ: **ಆದಿಪು,** ೧೧. ೧೦ ವ)

ದೂವೆ – [ನಾ] ಗರುಕೆ (ಬನಮಂ ಕೋಗಿಲೆ ಜಕ್ಕವಕ್ಕಿ ಪಗಲಂ ಪೂಗೊಂಚಲಂ ತುಂಬಿ ಚಂದ್ರನನಂಭೋನಿಧಿ ಬಂದ ದೂವೆ ಮಲೆಯಂ: **ಆದಿಪು**, ೧೨. ೩೧)

ದೂಷ್ಯಕುಟಿ – [ನಾ] ಡೇರೆ (ಅವತಂಸಿಕೆಯೆಂಬ ರತ್ನಮಾಲಿಕೆಯುಂ ದೇವರಮ್ಯಮೆಂಬ ದೂಷ್ಯಕುಟಿಯುಂ: **ಆದಿಪು**, ೧೫. ೩ ವ) [ಎಲ್ ಬಸವರಾಜು ಅವರ ಆವೃತ್ತಿಯ ಪಾಠ]

ದೂಸಱ್ – [ನಾ] ಕಾರಣ, ನಿಮಿತ್ತ (ರತ್ನಾಳಿಗಳಂ ಕಂಡ ದೂಸಱಿಂದಂ ಧರಣೀಪಾಳಕಮುನಿಪರ್ ಪಂಚಮಕಾಳದೊಳ್ ಅಣಮಾಗರಲ್ತೆ ಋದ್ಧಿಪ್ರಾಪ್ತರ್: **ಆದಿಪು**, ೧೫. ೪೧)

ದೂಱಿಸು – [ಕ್ರಿ] ನಿಂದಿಸು (ಅಕ್ಷಯಕಲ್ಪವೃಕ್ಷನಂದನವನರಮ್ಯಮಂ ನೆನೆದು ದೂಱಿಸಿದಂ ಸುರಲೋಕಸೌಖ್ಯಮಂ: **ಆದಿಪು**, ೩. ೧೧); [ಕ್ರಿ] ಚಿಂತಿಸು (ಬೆಂಬಿಡಿದಪ್ಪಿಕೊಂಡ ನಲ್ಲಳ ಮೊಲೆಯೊತ್ತಿನೊಳ್ ತಳರ್ದುದಾಕೆಯ ದೂಱಿಸಿ ಸುಯ್ದು ಸುಯ್ಯೊಳ್ ಉಚ್ಚಳಿಸಿದುದು .. .. ಕೋಪಮೋಪನಾ: **ಆದಿಪು**, ೧೨. ೩೪)

ದೂಱು – [ನಾ] ಅಪವಾದ, ನಿಂದೆ (ಕಾಮಾಂಧಂ ಕೀಚಕಂ ಆಟಿಸಿ ಗಂಧರ್ವರಿಂ ಅಟಿದಂ ಎನಗೆ ದೂಱಪ್ಪಿನೆಗಂ: **ಪಂಪಭಾ**, ೮. ೭೯)

ದೃಕ್ – [ನಾ] ಕಣ್ಣು (ನಿಜಾಂಘ್ರಿನಖದರ್ಪಣಚುಂಬಿತ ದೃಙ್ನಿಜಾನನೇಂದುವನವಲೋಕಿಸುತ್ತ ಅವಧಿ ತಪ್ಪಿದುದು ಆಱನೆ ಪತ್ತು ತಿಂಗಳಾದುವು: **ಆದಿಪು**, ೧೨. ೪೨)

ದೃಢಚರ್ಯ – [ನಾ] [ಜೈನ] ನಲವತ್ತೆಂಟು ದೀಕ್ಷಾನ್ವಯಕ್ರಿಯೆಗಳಲ್ಲಿ ಒಂದು (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ)

ದೃಢಸೂತ್ರ – [ನಾ] ನಾಟಕ ಪ್ರಯೋಗದ ಒಂದು ಭಾಗ ? (ದೃಶ್ಯಶ್ರವ್ಯ ದೃಢಸೂತ್ರಾದಿ ಪ್ರಯೋಗಂಗಳೊಳಂ ನಾನಾವಿಧ ವಾದ್ಯಂಗಳೊಳಂ: **ಆದಿಪು**, ೭. ೧೧೫ ವ)

ದೃಶ್ಯ – [ನಾ] ನಾಟಕ ಪ್ರಯೋಗದ ಒಂದು ಭಾಗ ? (ದೃಶ್ಯಶ್ರವ್ಯ ದೃಢಸೂತ್ರಾದಿ ಪ್ರಯೋಗಂಗಳೊಳಂ ನಾನಾವಿಧ ವಾದ್ಯಂಗಳೊಳಂ: **ಆದಿಪು**, ೭. ೧೧೫ ವ)

ದೃಶ್ಯತೇ – ಕಾಣಲ್ಪಡುತ್ತದೆ (ಮಹಾಕ್ಷಮಾಶೌರ್ಯಯೋಃ ಚಿರಾತ್ ಪ್ರಥಮಸಂಗಮೋ ಹರಿಗಭೂಪತೌ ದೃಶ್ಯತೇ: **ಪಂಪಭಾ**, ೧೪. ೩೦)

ದೃಷದಾಸಾರ – [ನಾ] [ದೃಷತ್+ಆಸಾರ] ಕಲ್ಲಿನ ಮಳೆ (ಉರ್ಕುಳ್ಳ ಸಾಮಂತನಿಕಾಯಂ ಯಂತ್ರಮುಕ್ತ ಅನಳ ಶರ ದೃಷದಾಸಾರವಿಧ್ವಂಸಮಕ್ಕುಂ: **ಆದಿಪು**, ೧೩. ೫೮)

ದೃಷ್ಟ – [ಗು] ಕಂಡ (ಅವರನೆ ತಿಳಿಪುವ ಬಗೆಯಿಂ ದೃಷ್ಟ ಶ್ರುತ ಅನುಭೂತಕಥೆಗಳಂ ತದನ್ವಯಸಂಬಂಧಿತಂಗಳಂ ಇಂತೆಂದು ಪೇೞಲ್ ತಗುಳ್ದಂ: **ಆದಿಪು**, ೨. ೧೧ ವ)

ದೃಷ್ಟಪರಂಪರರ್ – [ನಾ] [ಆಗುವ] ಪರಿಣಾಮಗಳನ್ನು ತಿಳಿದವರು (ಎಂದು ನುಡಿವನಿತುಮಂ ನುಡಿದು ಮಾಣ್ದ ಮಗಧಾಮರನಂ ದೃಷ್ಟಪರಂಪರರಪ್ಪ ಕುಲವೃದ್ಧರೆಯ್ದೆವಂದು: **ಆದಿಪು**, ೧೨. ೧೦೨ ವ);

ದೃಷ್ಟಿಗೆ ವರ್ – [ಕ್ರಿ] ಕಣ್ಣಿಗೆ ಒಪ್ಪಿಗೆಯಾಗು (ಬಂದ ಚೆನ್ನಿಗರುಮಂ ಆಸೆಕಾಱರುಮನೊಲ್ಲದೆ ಚೆಲ್ವಿಡಿರ್ದ ರೂಪು ದೃಷ್ಟಿಗೆ ವರೆ ಪಾಂಡುರಾಜನನೆ ಕುಂತಿ ಮನಂಬುಗೆ ಮಾಲೆಸೂಡಿದಳ್: **ಪಂಪಭಾ**, ೧. ೧೦೬)

ದೃಷ್ಟಿಮೋಹ – [ನಾ] [ಜೈನ] ಸಮ್ಯಗ್ದರ್ಶನವನ್ನು ಹಾಳುಮಾಡುವ ಕರ್ಮ (ಘನ ಮಿಥ್ಯಾತ್ವ ದವಾನಳಪಿನದ್ಧಜೀವಕ್ಕೆ ದೃಷ್ಟಿಮೋಹನಪ್ರವಿನಾಶನಮಿಲ್ಲದಂದು ಪುಟ್ಟದು ಮನದೊಳ್ ಸ್ವರ್ಮೋಕ್ಷಸಾಧನಂ ಸಮ್ಯಕ್ತ್ವಂ: **ಆದಿಪು**, ೫. ೫೨)

ದೆವಸ – [ನಾ] ದಿನ, ಕಾಲ (ಮದುವೆಯಂ ನಿಲಲೊಲ್ಲದಟ್ಟಿ ಕಳೆದೊಡೆನ್ನ ದೆವಸಮುಂ ಜವ್ವನಮುಂ ಅಡವಿಯೊಳಗೆ ಪೂತ ಪೂವಿನಂತೆ ಕಿಡಲೀಯದೆ: **ಪಂಪಭಾ**, ೧. ೭೬ ವ)

ದೆವಸವಳ – [ನಾ] ದಿನದ ಕಟ್ಟಳೆ (ನಿತ್ಯದಾನಕ್ಕೆ ದೆವಸವಳದ ಪದಿನೆಂಟುಕೋಟಿ ಪೊನ್ನುಮನಿತ್ತು ನೀನೆನಗೊಂದಂ ಈಯಲ್ವೇೞ್ಕುಂ ಎಂದು ಬೇಡಿಕೊಂಡು: **ಪಂಪಭಾ**, ೨. ೮೪ ವ)

ದೆಸೆ – [ನಾ] ಕಾರಣ, ಪ್ರಯತ್ನದಿಂದ (ಅದಱಿಂದಂ ಎನ್ನ ಬಯಸಿದ ಬಯಕೆಯಪ್ಪುದು ವಂಧ್ಯಾಸ್ತನಂಧಯ ಸಮಾಗಮಸಮಾನಂ ಮಾನಸರ ದೆಸೆಯೊಳ್ ತೀರ್ವುದಲ್ತು: **ಆದಿಪು**, ೩. ೪೩ ವ); [ನಾ] ಕಡೆ, ಆಕರ (ಅವರವರ ದೆಸೆಗಳಿಂ ತೆಗೆದೊಂದುಮಾಡಿ .. .. ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ **ಪಂಪಭಾ**, ೧. ೧೩೯ ವ); [ನಾ] ಸ್ಥಿತಿ (ನೀಂ ನಿನ್ನ ತಾಯಿ ತಂದೆಯ ದೆಸೆಯಂ ಭಾವಿಸದೆ ಕರ್ಣ ನುಡಿವಂತೆ ಆವುದು ಸಮಕಟ್ಟು ನಿನಗಂ ಅರಿಕೇಸರಿಗಂ: **ಪಂಪಭಾ**, ೨. ೮೨); [ನಾ] ದಿಕ್ಕು (ಮಸಿಯಿಂದಂ ಜಗಮೆಲ್ಲಮಂ ದಿತಿಸುತಂ ಮುಂ ಪೊಟ್ಟಿನೋ ಕಾಲಮೇಘಸಮೂಹಂ ದೆಸೆಯೆಲ್ಲಮಂ ಕವಿದುದೋ: **ಪಂಪಭಾ**, ೪. ೪೯)

ದೆಸೆಗಾಣ್ – [ಕ್ರಿ] ದಿಕ್ಕು ಕಾಣು (ಉರಿ ಕೊಳೆ ದೆಸೆಗಾಣದೆ ದೆಸೆವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂಬೆರಸು ಒಳಱಿ ನೆಗೆದುದಾ ವನ ಕರಿ ಶರಭ ಕಿಶೋರಕಂಠಗರ್ಜನೆ ಬನದೊಳ್: **ಪಂಪಭಾ**, ೫. ೯೧)

ದೆಸೆಗೆತ್ತಂ – [ಅ] ಎಲ್ಲೆಲ್ಲಿಯೂ (ದೆಸೆಗೆತ್ತಂ ಗಜಱುತ್ತುಮಿರ್ಪ ಪುಲಿಯಿಂ ನೀಳಾಭ್ರಮಂ ದಂತಿಗೆತ್ತು ಸಿಡಿಲ್ದು ಆಗಸಕೆ ಎಯ್ದೆ ಪಾಯ್ವ ಪಲವುಂ ಸಿಂಗಂಗಳಿಂದೆತ್ತಗುರ್ವಿಸಿ: **ಪಂಪಭಾ**, ೭. ೨೬)

ದೆಸೆದೇವತೆ – [ನಾ] ದಿಗ್ದೇವತೆ, ದಿಕ್ಕನ್ನು ಕಾಯುವ ದೇವತೆ (ಬಾಳೊಳೆ ಬಾಳ್ ಪಳಂಚಿ ಮಾರ್ಕಿಡಿವಿಡೆ ನೋಡಲಂಜಿ ದೆಸೆದೇವತೆಗಳ್ ಪೆಱಪಿಂಗೆ: **ಪಂಪಭಾ**, ೧೦. ೪೨)

ದೆಸೆವರಿವರಿ – [ನಾ] ದಿಕ್ಕು ದಿಕ್ಕಿಗೆ ಓಡು (ಉರಿ ಕೊಳೆ ದೆಸೆಗಾಣದೆ ದೆಸೆವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂಬೆರಸು ಒಳಱಿ ನೆಗೆದುದಾ ವನ ಕರಿ ಶರಭ ಕಿಶೋರಕಂಠಗರ್ಜನೆ ಬನದೊಳ್: **ಪಂಪಭಾ**, ೫. ೯೧)

ದೆಸೆವಲಿಗೆಯ್ – [ನಾ] ದಿಕ್ಕಿಗೆ ಬಲಿಕೊಡು (ಎನಿತಾನುಂ ತೆಱನಾಗಿ ಡೊಂಬವಿದ್ದೆಯನಾಡಲ್ ನೀನಱಿವೆ ಉಱದೆ ಇದಿರ್ಚಿದೊಡೆ ಆನಱಿವೆಂ ನಿನ್ನನಿಲ್ಲಿ ದೆಸೆವಲಿಗೆಯ್ಯಲ್: **ಪಂಪಭಾ**, ೬. ೫೭)

ದೇಗುಲ – [ನಾ] ದೇವಾಲಯ (ಘೋಟಿಯಿಲರ್ ತಗುಳ್ದು ತತ್ತಱ ತಱದಿಕ್ಕಿ ದೇಗುಲಕೆ ಪೆರ್ಮರನಂ ಕಡಿವಂತೆ ಮಾಡಿದರ್: **ಪಂಪಭಾ,** ೮. ೯೫)

ದೇಯ – [ನಾ] ಕೊಡಲ್ಪಟ್ಟುದು, ದಾನವಸ್ತು (ಎಸೆದುದು ಅಹೋ ದಾನಿ ಅಹೋ ಪಾತ್ರಂ ಅಹೋ ದಾನಂ ಅಹೋ ದೇಯಮೆಂಬ ದಿವ್ಯಧ್ವನಿಗಳ್: **ಆದಿಪು,** ೧೦. ೪)

ದೇವಕೀನಂದನ – [ನಾ] ದೇವಕಿಯ ಮಗ, ಶ್ರೀ ಕೃಷ್ಣ (ಇತ್ತ ಧರ್ಮನಂದನಂ ದೇವಕೀತನಯನಂ ಇಂತೆಂದಂ: **ಪಂಪಭಾ,** ೧೪. ೧೦ ವ)

ದೇವಗೃಹ – [ನಾ] ದೇವಸ್ಥಾನ (ವಿವಿಧ ದೇವಗೃಹದಾಟಪಾಟದಿಂ ಮಱುಗಿ ಬಟ್ಟೆಯರ ನೋಟ್ಟ ನೋಟದಿಂ: **ಪಂಪಭಾ,** ೩. ೨೨)

ದೇವಚಾಪ – [ನಾ] ಕಾಮನಬಿಲ್ಲು (ರತ್ನದ ಬೆಡಂಗುವೆತ್ತೆಸೆವ ದೀಪ್ತಿವಳಯದ ಚೆಲ್ವಂ ಪಡೆದು ಸಲೆ ದೇವಚಾಪದ ನಡುವಣ ಲಲಿತಾರ್ಧಚಂದ್ರನಿರ್ಪಂತಿರ್ಕುಂ: **ಆದಿಪು,** ೭. ೭೫)

ದೇವಚ್ಛಂದ – [ನಾ] ನೂರು [ಕೆಲವರ ಪ್ರಕಾರ, ಎಂಬತ್ತೊಂದು] ಎಳೆಗಳ ಮುತ್ತಿನ ಹಾರ (ಸಾಸಿರದೆಂಟು ತೋರಮುತ್ತಿನ ಸರದಿಂದ್ರಚ್ಛಂದಂ ಮೊದಲಾಗೆ ವಿಜಯಚ್ಛಂದಂಹಾರ ದೇವಚ್ಛಂದಾರ್ಧಹಾರ: **ಆದಿಪು,** ೮. ೫೪ ವ)

ದೇವಡಿತಿ – [ನಾ] ದೇವತಾಸ್ತ್ರೀ (ಓವೋ ಸಗ್ಗಂಗಳೊಳಿರ್ಪ ದೇವಡಿತಿ ತೊಟ್ಟಿರೊಳ್ ಅಟ್ಟೆಯನಾಗಲೀವೆನೇ: **ಪಂಪಭಾ,** ೧೦. ೪೫)

ದೇವದತ್ತ – [ನಾ] ಅರ್ಜುನನಿಗೆ ಇಂದ್ರ ಕೊಟ್ಟ ಶಂಖದ ಹೆಸರು (ಇದಱ ಪೆಸರ್ ದೇವದತ್ತಮೆಂಬುದು ನಿನಗೆ ಅಭ್ಯುದಯಕರಂ ಶಂಖಂ ರಿಪುಹೃದಯ ಕವಾಟಪುಟವಿಘಟನಂ ನೋಡರಿಗಾ: **ಪಂಪಭಾ,** ೬. ೪)

ದೇವದುಂದುಭಿ – [ನಾ] ಸ್ವರ್ಗದ ನಗಾರಿ (ಬದ್ದವಣದ ಪಱೆಗಳ್ ಕಿವಿ ಸದ್ದಂ ಗಿಡೆ ಮೊಟಿಗೆ ದೇವದುಂದುಭಿರವಂ ಒಂದು ಉದ್ದಾನಿ ನೆಗೞ್ ಮುಗುಳ ಅಲರ ಒದ್ದೆ ಕರಂ ಸಿದ್ಧಮಾದುದು ಅಂಬರತಲದೊಳ್: **ಪಂಪಭಾ,** ೧೨. ೨೧೮)

ದೇವದ್ವಿರದ – [ನಾ] ದೇವಲೋಕದ ಆನೆ (ಕರ್ಪೇಱೆತ್ತು ದೇವದ್ವಿರದದ ಘಟೆಯಿಂದಂ ನಭೋಭಾಗದೊಂದೊಂದೆಡೆ: **ಆದಿಪು,** ೭. ೫೮)

ದೇವನದೀಸುತಂ – [ನಾ] ದೇವಗಂಗೆಯ ಮಗ, ಭೀಷ್ಮ (ದೇವನದೀಸುತಂ ಆತ್ಮಚಿತ್ತದೊಳ್ ಬಗೆದಂ ಇದೇನಖಂಡಿತಮೊ ಶೌರ್ಯಗುಣೋನ್ನತಿ ರಾಜರಾಜನಾ: **ಪಂಪಭಾ,** ೧೩. ೬೫)

ದೇವಮಾತೃಕ – [ನಾ] ಮಳೆಯ ನೀರಿನಿಂದ ಕೃಷಿಗೊಳ್ಳುವ ಪ್ರದೇಶ (ಬೞಕಂ ದೇವಮಾತೃಕ ಸಾಧಾರಣ ಅನೂಪ ಜಾಂಗಳ ಭೇದಂಗಳುಮಂ ಅಂತಪಾಳ ಪಾಳಿತದುರ್ಗ ಪರಿವೃತಾಂತಂಗಳುಂ: **ಆದಿಪು,** ೮. ೫೪ ವ)

ದೇವರ ಪಡೆ – [ನಾ] ದೇವತಾಸಮೂಹ (ಎಂದೆರಡು ಪಡೆಗಳುಂ ದೇವರ ಪಡೆಗಳುಂ ಕರ್ಣನನೆ ಪೊಗೞ್: **ಪಂಪಭಾ,** ೧೨. ೧೫ ವ)

ದೇವಲೋಕಕ್ಕೆ ಸಲ್ – [ನಾ] ಸ್ವರ್ಗಸ್ಥನಾಗು, ಸಾಯಿ (ದುರ್ಯೋಧನನ ತನಯರಂ ನೂರ್ವರಂ ಕೊಂದು ತತ್ಸಂಗರದೊಳ್ ಕಾದು ಎಮ್ಮಂ ಇಂತು ಆರ್ದು ಇಱದು ನಿಜಸುತಂ ದೇವಲೋಕಕ್ಕೆ ಸಂದಂ: **ಪಂಪಭಾ,** ೧೧. ೧೧೬)

ದೇವವಾರಣ – [ನಾ] ಇಂದ್ರನ ಆನೆ, ಐರಾವತ (ದೇವ ವಾರಣವೇಟೞ್ ಉಂಟವು ಪೋದೊಡಾ ಖರಕರಂಗರಿದೆಂದೆ ಮಾಣ್ದಿರೆ: **ಪಂಪಭಾ,** ೧. ೨೯)

ದೇವವ್ರತ – [ನಾ] ಬ್ರಹ್ಮಚರ್ಯೆ ಪಾಲಿಸಿದವನು, ಭೀಷ್ಮ (ತೀವಿದ ನರೆಯುಂ ಡೊಳ್ಳುಂ ದೇವವ್ರತನೆನಿಸಿ ನೆಗೞ್ದ ಯಶಮಂ ಬೆರಸಿನ್ನೀವುದು ಹರಿಗೆ ಆರ್ಘ್ಯಮಂ ಎಂದು ಆವನುಂ ಈ ಭೀಷ್ಮರಂತು ನುಡಿದರುಂ ಒಳರೇ: **ಪಂಪಭಾ,** ೬. ೪೩)

ದೇವಾಂಗ – [ನಾ] ರೇಷ್ಮೆ ಬಟ್ಟೆ (ಪಟೆ ಚಿತ್ರಾವಳಿ ಜೋನೆಗವಟೆಯಂ ದೇವಾಂಗಮೆಂಬ ವಸನಂಗಳನೇಂ: **ಆದಿಪು,** ೫. ೩೪)

ದೇವಾಂಗವಸ್ತ್ರ – [ನಾ] ರೇಷ್ಮೆಯ ಬಟ್ಟೆ (ಇಂದ್ರಾಣಿ ಭವತ್ ಅಂಗಸಂಗತಜಳಕಣಂಗಳಂ ದೇವಾಂಗವಸ್ತ್ರಂಗಳೊಳ್ ಒತ್ತಿ ಕಳೆದು: **ಆದಿಪು,** ೭. ೧೦೬ ವ)

ದೇವಾಂಗವಿತಾನ – [ನಾ] ರೇಷ್ಮೆಯ ಮೇಲುಕಟ್ಟು (ದೇವಾಂಗವಿತಾನಂಗಳ ತುಱುಗಲ್ ಬೆಡಂಗುವಡೆದತ್ತದಱೊಳ್: **ಆದಿಪು,** ೮. ೧೭)

ದೇವಾಧಿಪಕಾಂತೆ – [ನಾ] ಇಂದ್ರನ ರಾಣಿ, ಶಚಿ (ದೇವಾಂಗನಾನ್ವಿತ ದೇವಾಧಿಪಕಾಂತೆ ಕನ್ನಡಿ ಸೊಡರ್ ಪೂಮಾಲೆ ಭೃಂಗಾರಂ ಅಕ್ಷತಮೆಂಬ: **ಆದಿಪು,** ೭. ೮೧)

ದೇವೋತ್ತರಕುರು – [ನಾ] [ಜೈನ] ವಿದೇಹಕ್ಷೇತ್ರದಲ್ಲಿ ಮೇರುಪರ್ವತಕ್ಕೆ ದಕ್ಷಿಣದಲ್ಲಿ ಮತ್ತು ನಿಷಧಕ್ಕೆ ಉತ್ತರದಲ್ಲಿ ಇರುವ ಭೋಗಭೂಮಿ (ದೇವೋತ್ತರಕುರುಗಳೆ ನಾನಾವಿಧ ಕಲ್ಪಾಂಘ್ರಿಪಂಗಳಿಂದಂ ಪತಿಯಂ ತೀವಿ ಬಳಸಿರ್ದುವೆನೆ ಕಲ್ಪಾವನಿರುಹ ಭೂಮಿಭಾಗಂ ಅತಿರಮಣಿಯಂ: **ಆದಿಪು,** ೧೦. ೩೪)

ದೇಶನಿವೇಶೋಪದೇಶ – [ನಾ] [ಜೈನ] ಜೈನಪುರಾಣಗಳ ಎಂಟು ಅಂಗಗಳಲ್ಲಿ ಒಂದು, ದೇಶದ ವಿನ್ಯಾಸ, ವಿಸ್ತೀರ್ಣ, ರೀತಿ ಮುಂತಾದವನ್ನು ತಿಳಿಸುವುದು (ಆ ಪುರಾಣಕ್ಕಂ ಲೋಕಾಕಾರಕಥನಮುಂ ದೇಶನಿವೇಶೋಪದೇಶಮುಂ ನಗರಸಂತ್ಸರಿವರ್ಣನಮುಂ ರಾಜ್ಯರಾಮಣಿಕಾಖ್ಯಾನಮುಂ ತೀರ್ಥಮಹಿಮಾಸಮರ್ಥನಮುಂ ಚತುರ್ಗತಿಸ್ವರೂಪ ನಿರೂಪಣಮುಂ ತಪೋದಾನವ್ಯಾವರ್ಣನಮುಂ ತತ್ಫಲಪ್ರಾಪ್ತಿಪ್ರಕಟಮುಂ ಎಂದಿಂತು ಅವಯವಂಗಳ್ ಎಂಟಕ್ಕುಂ: **ಆದಿಪು,** ೧. ೪೨)

ದೇಶಭಾಷ – [ನಾ] ವಿವಿಧ ದೇಶಗಳ ಭಾಷೆಗಳನ್ನು ತಿಳಿದವನು (ಆಧೇಯವಚನನುಂ ಉದ್ಧತವೇಷನುಂ ಪರಿಚಿತಾಶೇಷ ದೇಶಭಾಷನುಂ: **ಆದಿಪು,** ೧೪. ೪೩ ವ)

ದೇಸಿ – [ನಾ] ಜನಪದದ ಸ್ವಂತಿಕೆ, ಕನ್ನಡತನ (ಬಗೆ ಪೊಸತಪ್ಪುದಾಗಿ ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು: **ಪಂಪಭಾ,** ೧. ೮); ಚೆಲುವು, ಸೊಬಗು (ಮಿಳಿರ್ವ ಕುರುಳ್ಗಳೊಳ್ ತೊಡರ್ದು

ದೇಸಿಯನಾವಗಮೀವ ಚೆನ್ನ ಪೂಗಳಂ ಅವನೊಯ್ಯನೋಸರಿಸುತುಂ: **ಪಂಪಭಾ,** ೨. ೧೭)

ದೇಶಿಗ – [ನಾ] ನಾಡಾಡಿ (ಉಣ್ಮೆ ಪೊಣ್ಮುವ ಈ ದೇಸಿಗರಂತೆ ನಾಡೊವಜನಾದನೊ ಪೇೞ್ ಕವಿತಾಗುಣಾರ್ಣವಂ: **ಪಂಪಭಾ,** ೧೪. ೬೨)

ದೇಸಿಗೆ – [ನಾ] ನಾಡಾಡಿ ಹೆಂಗಸು (ರಾಹು ತವೆ ನುಂಗಿದ ಚಂದ್ರನಂ ಒಯ್ಯನೊಯ್ಯನೆ ಅಂದು ಉಗುಳ್ವವೊಲ್ ಒಪ್ಪಿರಲ್ ಬಲದೊಳುರ್ವಸಿ ದೇಸಿಗೆ ದೇಸಿಯಾಡಿದಳ್: **ಪಂಪಭಾ,** ೭. ೮೮)

ದೇಸೆ – [ನಾ] ಸಹಜ ಚೆಲುವು (ಈಕೆಯೊಂದು ದೇಸೆಗೆ ನಿಮಿರ್ವೊಂದು ಪುರ್ವಿನ ನಯಕ್ಕೆ ಅಮರ್ವೊಂದು ಅಗುಂತಿಗೆ .. .. ವಾರವೇನೊಗಸುಗಂ: **ಆದಿಪು,** ೨. ೭೫)

ದೇಸೆಕಾರ್ತಿ – [ನಾ] ಸುಂದರಿ (ಲಲಿತಾಂಗನಂ ಮನಂಗೊಳಿಸುವರಿಚ್ಚೆಕಾರ್ತನದ ಲಲ್ಲೆಯ ಸಗ್ಗದ ದೇಸೆಕಾರ್ತಿಯರ್: **ಆದಿಪು,** ೨. ೭೧)

ದೇಸೆಯನಾನ್ – [ಕ್ರಿ] ಚೆಲುವನ್ನು ಪಡೆ (ಒದವಿದ ನೂಲ ತೊಂಗಲುಲಿ ದೇಸೆಯನಾಂತು ವಿಳಾಸದಿಂದಿಱುಂಕಿದ ನಿಱಿ ಗಂಡರಳ್ಳಿರ್ದೆಗಳಂ ತುಟಿವೋಜೆಯನುಂಟುಮಾಡುವಂದದೆ: **ಪಂಪಭಾ,** ೪. ೩೫)

ದೇಹರುಚಿ – [ನಾ] ಮೈಕಾಂತಿ (ಎನೆಯೆನೆ ರತ್ನರಶ್ಮಿಜಟಿಳಂ ಮಕುಟಂ ಮಣಿಕುಂಡಳಂ ಕನತ್ ಕನಕ ಪಿಶಂಗ ದೇಹರುಚಿ .. .. ಇಳಾಮರಂ ಅಂದು ಅಮರೇಂದ್ರರೂಪಮಂ: **ಪಂಪಭಾ,** ೮. ೭)

ದೇಹಾದ್ರಿ – [ನಾ] ಶರೀರವೆಂಬ ಬೆಟ್ಟ (ನಿನ್ನೀ ಬೆಸಸಿದ ಚಕ್ರಮದೆನ್ನೀ ದೇಹಾದ್ರಿಯಂ ಗೆಲಲ್ ನೆಱಿಯದು: **ಆದಿಪು,** ೧೪. ೧೨೯)

ದೈತ್ಯ – [ನಾ] ರಾಕ್ಷಸ (ಕುಪಿತ ಅನೇಕಪ ದಂದಶೂಕ ದವ ದೈತ್ಯ ಅರಾತಿ ಚೋರ ಅಂಧಕಾರ ಪತದ್ವಜ ವಿಷ ಅಭಿಚಾರಿಕ ಜರಾತಂಕಾದಿ ಭೇದಂಗಳಪ್ಪ: **ಆದಿಪು.** ೧೬. ೯)

ದೊಂಡೆಗರುಳ್ – ಹೆಣೆದುಕೊಂಡ ಕರುಳು (ಕೆನ್ನೆತ್ತರಂ ಕೆನೆಗೊಂಡಾಱಿದ ಪಾಲ್ಗೆ ದೊಂಡೆಗರುಳಂ ಕರ್ಬಿಂಗೆ ಲೆಕ್ಕಕ್ಕೆ ತಂದು: **ಪಂಪಭಾ,** ೧೨. ೧೬೦) [ದೊಂಡೆ ಎಂಬ ಶಬ್ದಕ್ಕೆ ಶ್ಲೇಷ್ಮ ಎಂರ್ಥವೆಂದು ಡಿಎಲ್ಎನ್ – **ದೀಪಿಕೆ:** ಪು ೪೯೦]

ದೊಂಬದಡ್ಡಿಸ – [ನಾ] ದೊಂಬರ ಡೋಲು (ಪೆಸರ್ ನಿನಗೆ ಕೇಳ್ ಮೊಸರ್ ನಿನ್ನ ಮೆಯ್ ದೊಂಬದಡ್ಡಿಸಕ್ಕೆ ಗುಜಿಯಪ್ಪುದು: **ಆದಿಪು,** ೩. ೬೦)

ದೊಕ್ಕನೆ – [ಅ] ಅನುಕರಣ ಶಬ್ದ, ದೊಕ್ ಎಂದು (ಒಂದೆ ಸರಲಿಂದಂ ಅವನೆರ್ದೆಯಂ ದೊಕ್ಕನೆ ತಿಣ್ಣಂ ಎಚ್ಚು ಕೊಲಲೊಲ್ಲನೆ: **ಪಂಪಭಾ,** ೧೧. ೯೬)

ದೊಡ್ಡರು – [ನಾ] ವೃದ್ಧರು, ಹಿರಿಯರು (ಅಂತು ಪೊಱಮಡುವ ಅರಾತಿ ಕಾಲಾನಲನಂ ಕಂಡು ಕಡ್ಡುವಂದ ದೊಡ್ಡರೆಲ್ಲಂ ಮುಸುಱಿ: **ಪಂಪಭಾ,** ೩. ೬೧ ವ)

ದೊಡ್ಡಿತ್ತು – [ನಾ] ದಪ್ಪನಾದ (ಒಲ್ದು ನೋಡುವ ಗಾಡಿಕಾರ್ತಿಯರ ಕಣ್ಗೆ ಕಾಮನ ಅಡ್ಡಣದಂತೆ ದೊಡ್ಡಿತ್ತಾಗಿ ಮೀಱುವ ಉದ್ವೃತ್ತವೃತ್ತೆಯಂ ಈಟ್ಟುಕೊಂಡಂತೆ ಉದ್ವೃತ್ತಂಗಳಾದುವು: **ಪಂಪಭಾ,** ೨ ೩೯ ವ)

ದೊಡ್ಡಿದುವು – [ನಾ] ದಪ್ಪವಾದವು (ಮೊಕ್ಕಳಮದಾರ್ ನಡೆ ನೋಟಿಪ್ಪೊಡಮಿಂತುಂ ಮೂಱಿಸಿಯವು ಮೂಱು ದೊಡ್ಡಿದುವು ಮೂಱಿಡೆ ತೆಳ್ಳಿದುವಂಬುಜಾಕ್ಷಿಯಾ: **ಪಂಪಭಾ,** ೪. ೭೨)

ದೊಡ್ಡಿವೆಸರ್ – [ನಾ] ದೊಡ್ಡ ಹೆಸರು ಮತ್ತು [ದನದ] ದೊಡ್ಡಿಗೆ ತಕ್ಕುನಾದ ಹೆಸರು (ವಿಜಿಗೀಷುತ್ವದೊಳ್ ಒಂದಿ ಗೋವುಳಿಗನಪ್ಪಂ ಮರ್ತ್ಯನಾಳಾಗಿ ವಾರಿಜನಾಭಂ ಹರಿಯೆಂಬ ದೊಡ್ಡಿವೆಸರಂ ಪೊತ್ತಿರ್ದ ನೀಂ ಮಂತ್ರಿಯಾಗೆ: **ಪಂಪಭಾ,** ೯. ೪೭)

ದೊಣೆ – [ನಾ] ಬತ್ತಳಿಕೆ (ದಿವ್ಯಾಸ್ತ್ರಂಗಳ ದೊಣೆಗಳಂ ಎರಡುಂ ದೆಸೆಯೊಳಂ ಬಿಗಿದು ಕಾಳವಟ್ಟದ ಬಿಲ್ಲಂ ಕೆಂದಳದೊಳ್ ಅಮರೆ ಪಿಡಿದು ನೀವಿ ಜೇವೊಡೆದಾಗಳ್: **ಪಂಪಭಾ,** ೧೨. ೧೩೫ ವ)

ದೊಮ್ಮಳಿಸು – [ಕ್ರಿ] ಸಂಭ್ರಮಿಸು, ಸಡಗರದಿಂದ ಕೂಡು (ನಿಶಾತಹೇತಿಗರ್ಭಂಗಳುಂ ಅನೇಕಪ್ರಕಾರ ಕೇತನವಾಜಿರಾಜಿಗಳುಂ ಆಗಿ ದೊಮ್ಮಳಿಸಿ ನಡೆವ ರಥಂಗಳುಂ: **ಪಂಪಭಾ,** ೧೦. ೫೧ ವ)

ದೊರೆ – [ನಾ] ಸದೃಶ, ಅಂತಹುದೇ (ರಸಭಂಗಭಯದಿನಿಂದ್ರಂ ಪೊಸತೊಂದು ಆ ದೊರೆಯ ಪಾತ್ರಮಂ ತಂದನುಸಂಧಿಸುವುದುಂ: **ಆದಿಪು,** ೯. ೪೨); **[ನಾ]** ಬಲಿಷ್ಠ, ಯೋಗ್ಯ (ದೊರೆಯಲ್ಲದಂಗೆ ನುಡಿವುದು ಪುರುಳಿಲ್ಲದ ಮಾತಂ ಎಮ್ಮೊಳಂ ನುಡಿವುದೆ ಪೇೞ್: **ಆದಿಪು,** ೧೪. ೮೦); **[ನಾ]** ಸಮಂಜಸ (ಕವಿಗಳ ನಾಮಧಾರಕ ನರಾಧಿಪರೋಳಿಯೊಳೀತನೊಳ್ಳಿದಂ ಕವಿ ನೃಪನೀತನೊಳ್ಳಿದನೆನಲ್ ದೊರೆಯಲ್ತು: **ಪಂಪಭಾ,** ೧. ೧೦); **[ನಾ]** ರಾಜ (ಗಾಂಗೇಯಂ ದೊರೆಯ ಪಿರಿಯ ಮಗನುಂ ಕ್ರಮಕ್ರಮಾರ್ಹನುಂ ಇರ್ದಂತೆ ಎನ್ನ ಮಗಳಂ ಕುಡೆವು: **ಪಂಪಭಾ,** ೧. ೭೦ ವ); **[ನಾ]** ತಕ್ಕ[ವನು] (ಬೇಡಂ ಈ ಬಿನದಂ ತಪ್ಪಲೆ ಕಲ್ಪಿತಂ ಪರಿಯದಾತಂಗೆಂದು ನಿನ್ನೀ ಮನಂ ನಿನಗಾತಂ ದೊರೆ ನೆಟ್ಟನಾದಿಪುರುಷಂಗೇಕಕ್ಕ ನೀನ್ನಾಣ್ಚುವೈ: **ಪಂಪಭಾ,** ೪. ೬೯); **[ನಾ]** ಯೋಗ್ಯ (ನಿಮ್ಮಯ ಧರ್ಮದ ಮಕ್ಕಳೆವು ಎಮ್ಮಂ ಕಡೆಗಣಿಸಿ ನಿಮಗೆ ನೆಗಟ್ವುದು ದೊರೆಯೇ: **ಪಂಪಭಾ,** ೧೧. ೧೨೮);

ದೊರೆಕೊಳ್ – [ಕ್ರಿ] ನೆನಪಿಗೆ ಬರು (ಈಗಳೆನ್ನ ಪುಣ್ಯದಿಂ ದೊರೆಕೊಂಡುದು ಒಳ್ಳಿತ್ತೆಂಬುದುಂ: **ಪಂಪಭಾ,** ೧. ೧೧೮ ವ); ಉಂಟಾಗು (ಅಂತು ಗರ್ಭನಿರ್ಭರಪ್ರದೇಶದೊಳ್ ಅರಾತಿಗಳ್ಗೆ ಅಂತಕಾಲಂ ದೊರೆಕೊಳ್ವಂತೆ ಪ್ರಸೂತಿಕಾಲಂ ದೊರೆಕೊಳೆ: **ಪಂಪಭಾ,** ೧. ೧೨೬ ವ)

ದೊರೆಕೊಳಿಸು – [ಕ್ರಿ] ಆಚರಿಸು (ಅಮರನಾಯಕರೆಲ್ಲಂ ನೆರೆದು ವಿವಾಹಮನಾಕೆಗೆ ದೊರೆಕೊಳಿಸಿದರ್: **ಆದಿಪು,** ೬. ೮೬)

ದೊರೆಗಿಡಿಸು – [ಕ್ರಿ] [ದೊರೆ+ಕಿಡಿಸು] ಅಯೋಗ್ಯವಾಗಿಸು (ಕುರುವೃದ್ಧಂ ಕುಲವೃದ್ಧಂ ಸರಿತ್ಸುತಂ ತಕ್ಕನೆಂದು ನಂಬಿದ ಸಭೆಯೊಳ್ ದೊರೆಗಿಡಿಸಿ ನುಡಿದೊಡೆ ಏನೊಲವರಮೆನ್ನದೆ ನೀನುಮದನೆ ಕೊಂಡೆಸಗುವುದೇ: **ಪಂಪಭಾ,** ೬. ೪೪)

ದೊರೆಗಿಡು – [ಕ್ರಿ] ಅಸಮರ್ಥವಾಗು (ಮತ್ ಕರಯುಗಂ ದೊರೆಗಿಡೆ ಪೆಱಿಂಗೆ ಮುಗಿವುದೆ ಕಿರೀಟಮಿದು ಪೆಂಪುಗಿಡೆ ಪೆಱಿಂಗೆಱಗುವುದೇ: **ಆದಿಪು,** ೧೨. ೧೦೦)

ದೊರೆಗೆವರ್ – [ಕ್ರಿ] ಹೋಲಿಕೆಗೆ ಬರು, ಹೋಲಿಸು (ಪುರುತನಯರ್ ಭುಜಬಲಿಯುಂ ಭರತನುಮೆನೆ ದೊರೆಗೆವಂದೊಡೆ ಆರ ಅಳವುಮಂ ಈ ಧರೆಯಱಿಯಲೊಡಂ ತೂಗಲ್ ತುಲಾದಂಡಮಲ್ತೆ ಮದ್ಭುಜದಂಡಂ: **ಆದಿಪು**, ೧೪. ೮೧)

ದೊರೆತು – [ನಾ] ಸಮ, ಯೋಗ್ಯ (ಮುನ್ನಾಲೋಚಿಸದಾವುದು ಮನ್ನೆಗಟಲ್ಲಾಗದು ಎಂಬುದು ಏ ದೊರೆತು: **ಆದಿಪು**, ೧೨. ೧೦೫)

ದೊರೆಯ – [ನಾ] ಯೋಗ್ಯತೆಯುಳ್ಳವನು (ಈ ದೊರೆಯುಮಂ ಅಳವಟಿಯೆ ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ: **ಆದಿಪು**, ೧೪. ೧೧೨)

ದೊರೆಯಕ್ಕುಮೆ – ತಕ್ಕುದಾಗುತ್ತದೆಯೇ (ದೊರೆಯಕ್ಕುಮೆ ನಿನಗೆ ಯುಧಿಷ್ಠಿರಂ ಅರ್ಘ್ಯಮನೆತ್ತೆ: **ಪಂಪಭಾ**, ೬. ೫೦)

ದೊರೆಯನೆ – [ನಾ] ಸಮಾನನಾದ, ಹೋಲುವ (ಸುರನದಿಯ ನೀರೊಳ್ ಮಿಂದು ಇನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆ ಎಂದಾಹ್ವಾನಂಗೆಯ್ಯಲೊಡಂ ದಲ್ ಧರೆಗಿಟಿದನಂದು ದಶಶತಕಿರಣಂ: **ಪಂಪಭಾ**, ೧. ೯೧)

ದೊರೆವೆಱು – [ನಾ] [ದೊರೆ+ಪೆಱು] ಹಿರಿದಾಗು (ಇರದುಟಿದಾವ ಮಂಡಲದೊಳಂ ನೃಪ ನೀಂ ದಯೆಯಿಂ ಇಲ್ಲಿ ಬಂದಿರೆ ದೊರೆವೆತ್ತುದು ಎನ್ನ ಆಳ್ವೆಸನಂ: **ಪಂಪಭಾ**, ೯. ೭)

ದೋರ್ – [ನಾ] ಬಾಹು, ಭುಜ (ಧೋರ್ದರ್ಪಯುಕ್ತಂ ಭಗದತ್ತಂ ಸುಪ್ರತೀಕದ್ವಿಪಮಂ ಉಪಚಿತೋತ್ಸಾಹದಿಂ ತೋಱಿಕೊಟ್ಟಂ: **ಪಂಪಭಾ**, ೧೧. ೬೯)

ದೋರ್ದಂಡ – [ನಾ] ಭುಜದಂಡ (ಆ ಬಲ್ಲಿದಂ ಸುರಂ ಆ ಮಾಗಧನಲ್ಲಿ ಭೂಭುಜನ ದೋರ್ದಂಡಕ್ಕೆ ಪುಣ್ಯೋದಯಂ ನೆರಮಕ್ಕೆ: **ಆದಿಪು**, ೧೨. ೧೨೫); [ನಾ] ಪರಾಕ್ರಮ (ಮತ್ತ ಮಾತಂಗ ಪದನಖ ಖರ್ವಿತ ಉರ್ವೀತಳಮುಂ ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಯತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ**, ೧೩. ೫೧)

ದೋರ್ವಲ – [ನಾ] ಬಾಹುಬಲ (ಎಂದು ಕೈದವಮಿಲ್ಲದ ನಲ್ಮೆಯಂ ನಾಲಗೆಯ ತುದಿಗೆ ತಂದು ನುಡಿದಳ್ ಮತ್ತೊರ್ವಳ್ ತನ್ನ ಆಣ್ಮನ ದೋರ್ವಲದ ಅಗುರ್ವಂ ನಚ್ಚಿ: **ಪಂಪಭಾ**, ೧೦. ४೫ ವ)

ದೋಶ್ಚಕ್ರ – [ನಾ] [ದೋಃ+ಚಕ್ರ] ಕೈವಶವಾದ ಚಕ್ರಾಯುಧ (ಚಕ್ರರತ್ನಮೊಂದೆಯಲ್ತು ಚಕ್ರಿಗಾನುಮಲ್ತೆ ದೋಶ್ಚಕ್ರಂ ಎಂದು ಮುಂದೆ ಬಂದು ನಿಲ್ವ ಮಾಟಿಕ್ಕೆಯಿಂ: **ಆದಿಪು**, ೧೨. ೫೫)

ದೋಷ – [ನಾ] ತಪ್ಪು (ಅದಾವುದು ದೋಷಂ ಅವರ್ಗೆಲ್ಲಂ ಸಂಸ್ಕಾರವಿಧಿಯಂ ನಾನೆ ಪಕ್ಕದೊಳಿರ್ದು ಮಾಡಿಸುವೆಂ: **ಪಂಪಭಾ**, ೧೪. ೮ ವ)

ದೋಷಗವೇಷಣಪರ – [ನಾ] ತಪ್ಪು ಹುಡುಕುವವನು (ಸಭೆಯೊಳ್ ಮಾಷಮುಖದಂತೆ ದೋಷಗವೇಷಣಪರರಪ್ಪರೆಂದೊಡದು ತೆಗಟಲ್ತೇ: **ಆದಿಪು**, ೧. ೨೧)

ದೋಷಾಮಿಷ – [ನಾ] ತಪ್ಪುಗಳೆಂಬ ಆಕರ್ಷಣೆ, ಎರೆ (ಮಾತ್ಸರ್ಯಮಹಾವಿಷಮಮತಿಯಿಂದೆ ದೋಷಾಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂಗಳ್: **ಆದಿಪು**, ೧. ೨೨)

ದೋಷಿಗ – [ನಾ] ತಪ್ಪು ಮಾಡಿದವನು, ದೋಷವುಳ್ಳವನು (ಪಗೆವನ ರುಧಿರಾಚ್ಛೋದಮನೆ ಕುಡಿದು ಮಾಣ್ದ ವೃಕೋದರನೇಂ ಆವ ತೆಱದೊಳಂ ದೋಷಿಗನೇ: **ಪಂಪಭಾ**, ೧೨. ೧೫೯)

ದೋಸ – [ನಾ] ದೋಷ, ತಪ್ಪು (ಈಕೆಯುಂ ಎನಗೆ ಎರಡಣಿಯದ ನಲ್ಲಮನಂದೋಱುವುದು ಸಲ್ಗೆದೋಱುವುದುಂ ಆವುದು ದೋಸಂ: **ಪಂಪಭಾ**, ೫. ೧೭ ವ)

ದೋಹಳ – [ನಾ] ಬಸಿರಿಯ ಬಯಕೆ (ಅಂತು ಚಕ್ರವರ್ತಿ ಜನ್ಮೋತ್ಸವಸೂಚಕಮಪ್ಪ ಅನೇಕದೋಹಳಸಂದೋಹಂ ನೆಗಟಿ: **ಆದಿಪು**, ೮. ೩೩ ವ); ಆಸೆ (ಬಾಹುಬಲಿಯ ಸಮರಸಂಘಟ್ಟ ದೋಹಳಮಿದು ದರಿದ್ರಗೇಹಿನೀ ಗರ್ಭದೋಹಳದಂತಾದುದು: **ಆದಿಪು**, ೧೪. ೧೦೨ ವ)

ದೌವಾರಿಕ – [ನಾ] [ದ್ವಾರಪಾಲಕ] ಬಾಗಿಲು ಕಾಯುವವನು (ಮಕರತೋರಣಾಳಂಕೃತ ಜ್ಯೋತಿರಮರ ದೌವಾರಿಕ ಪರಿಪಾಳಿತ ಬಹಿರಂತರ್ಜಗತೀದ್ವಯನಿಹಿತ: **ಆದಿಪು**, ೧೦. ೨೩ ವ)

ದೌಹೃದ – [ನಾ] ಬಸಿರಿಯ ಬಯಕೆ (ನೆಗಟ್ಟುವು ಗರ್ಭಸ್ಥನುತ್ಸಾಹಮಂ ತೋಳ್ವಲಮಂ ಸಾಮ್ರಾಜ್ಯಮಂ ಸೂಚಿಸುವಂತೆವೊಲ್ ಅತಿಚೋದ್ಯಂಗಳ್ ದೌಹೃದಂಗಳ್; **ಆದಿಪು**, ೮. ೩೩)

ದ್ಯುಮಣಿ – [ನಾ] ಸೂರ್ಯ (ತೀವ್ರಪ್ರತಾಪದ್ಯುಮಣಿಯಂ ಎರೆದು ಅರ್ಥಿವ್ರಜಂಗಳ್ಗೆ ಚಿಂತಾಮಣಿಯಂ: **ಪಂಪಭಾ**, ೭. ೯೫)

ದ್ಯುಮಣಿಮಯೂಖ – [ನಾ] ಸೂರ್ಯನ ಕಾಂತಿ, ಬಿಸಿಲು (ತಮಮಂ ದ್ಯುಮಣಿಮಯೂಖೋದ್ಗಮಮಲೆವೊಲೆಲಗೆ ಜಗದ ಮಿಥ್ಯಾತ್ವತಮಸ್ತಮಮಂ ಅಕಳಂಕದೇವ ಪ್ರಮಾಣರತ್ನಪ್ರದೀಪರಶ್ಮಿ ಕಳಾಪಂ: **ಆದಿಪು**, ೧. ೧೬)

ದ್ಯೋತ – [ಗು] ಪ್ರಕಾಶಗೊಂಡ (ಭೂಭಾಗದೊಳ್ ತಂದು ತಾಟಿಸುತುಂ ಕೋಟಲೆಗೊಳ್ವ ರತ್ನಮಕುಟ ದ್ಯೋತ ಉತ್ತಮಾಂಗಂ ವಿರಾಜಿಸುವನ್ನಂ ಪೊರಳ್ವ ಪಗೆಯಂ ಕರ್ಣಾರ್ವಿನಂ ನೋಡಿದಳ್: **ಪಂಪಭಾ**, ೧೨. ೧೫೧)

ದ್ರವಿಣ – [ನಾ] ಹಣ (ಉಪಾದ್ರಿಯೊಳ್ ದ್ರವಿಣಮಂ ಬಯ್ತುದ್ಧತಂ ತನ್ನುಸಿರ್ ತವೆ ಪಂಕಪ್ರಭೆಯೊಳ್ .. .. ಬೆಂದು: **ಆದಿಪು**, ೫. ೪)

ದ್ರವ್ಯ – [ನಾ] [ಜೈನ] ಐದು ಬಗೆಯ ಸಂಸಾರಗಳಲ್ಲಿ ಒಂದು (ದ್ರವ್ಯ ಕ್ಷೇತ್ರ ಕಾಲ ಭವ ಭಾವ ಭೇದದಿಂ ಪಂಚವಿಧಂ ಸಂಸಾರಂ: **ಆದಿಪು**, ೧೦. ೬೩ ವ)

ದ್ರವ್ಯಲಿಂಗಿ – [ನಾ] ಚಿತ್ತಶುದ್ಧಿಯಿಲ್ಲದೆ ಬಾಹ್ಯಚಿಹ್ನೆಯನ್ನು ಧರಿಸಿದವನು (ಒಲವಿಂದೆ ಕೇವಲಂ ದ್ರವ್ಯಲಿಂಗಿಗಳ್ ತನ್ನನಂದು ಬಳಸಿಯುಮಿರೆ: **ಆದಿಪು**, ೯. ೮೨)

ದ್ರಾವಣೀಯ – ಗು] (ಅತಿಮೃದುರಸನಾಸಮ್ಮರ್ದನಮಾತ್ರ ದ್ರಾವಣೀಯ ಘೃತಪೂರಮುಮಂ: **ಆದಿಪು**, ೧೧. ೨೬ ವ)

ದ್ರುತ – [ನಾ] ವೇಗ (ಸ್ಯೆರಿಸಲಾಱದೆ ತಡತಡಿಸಿ ಪರಿತಂದ ಅತಿದ್ರುತ ಪ್ರವಾಹಮಾನ ಆರುಷ್ಕರದ್ರವಾವರ್ತಗರ್ತ

ಗಂಭೀರೆಯುಂ: **ಆದಿಪು**, ೫. ೮೭ ವ); **[ನಾ]** ಸಂಗೀತನೃತ್ಯಗಳಲ್ಲಿ ವೇಗದ ಲಯ (ಅತನುರಸೋಪೇತ ವಿಳಂಬಿತ ಮಧ್ಯ ದ್ರುತಲಯಂಗಳೊಳ್ ಲಕ್ಷಣಸಂಯುತ ತತ್ತ್ವಾನುಗತೌಘ ಪ್ರತೀತವಾದ್ಯಂಗಳೆಸೆದುವು: **ಆದಿಪು**, ೯. ೨೩); **[ನಾ]** ಓಟ (ಪ್ರಕುಪಿತ ಸೂತಹೂಂಕಾರ ಕಾತರಿತ ತರಳತರ ತುರಂಗ ದ್ರುತವೇಗಾಕೃಷ್ಟ ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ: **ಪಂಪಭಾ**, ೧೩. ೫೧ ವ)

ದ್ರುಪದಜೆ – **[ನಾ]** ದ್ರುಪದನ ಮಗಳು, ದ್ರೌಪದಿ (ಕರಮೊಸೆದಾ ದ್ರುಪದಜೆಯೊಳ್ ನೆರೆದೊಸಗೆಗೆ ತಮ್ಮ ಬೀರಮಂ ಬಿಂಕಮುಮಂ ತೆಱವುಂ ತೆಲ್ಲಂಟಿಯುಂ ಎಂದು ಅರಿಕೇಸರಿಗಾಗಳೀವವೋಲ್ ಬೆನ್ನಿತ್ತರ್: **ಪಂಪಭಾ**, ೩. ೭೨)

ದ್ರುಪದಾತ್ಮಜೆ – **[ನಾ]** ದ್ರುಪದನ ಮಗಳು, ದ್ರೌಪದಿ (ಪವನಾತ್ಮಜಂ ದ್ರುಪದಾತ್ಮಜೆಗೆ ಬಿಱಿಯನಟ್ಟುವುದುಂ ಆ ವನಿತೆ ಜಯವನಿತೆ ಬರ್ಪಂತೆ ಬಂದು: **ಪಂಪಭಾ**, ೧೨. ೧೫೦ ವ)

ದ್ರುಪದರಾಜಸುತಾ[ತೆ] – **[ನಾ]** ದ್ರುಪದ ರಾಜನ ಮಗಳು, ದ್ರೌಪದಿ (ಮರುಳ್ಗೆ ಧೂಪಮಂ ತೋಱಿದ ಮಾಱ್ಕೆಯಿಂ ದ್ರುಪದರಾಜಸುತಾವಚನಂಗಳಲ್ಲಿ ಮೆಯ್ದೋಱಿ ಮರುತ್ಸುತಂ ನುಡಿದಂ ಆ ಸಭೆಯೊಳ್ ನವಮೇಘನಾದದಿಂ: **ಪಂಪಭಾ**, ೭. ೧೧)

ದ್ರುಮ – ಮರ (ಕಿರೀಟಿ ತನ್ನಱಿಪುತ್ತೆ ಶಮೀದ್ರುಮದಲ್ಲಿಗೆ ಆತನಂ ನೀಡಿರದೆ ಉಯ್ದು ನೀಡಿಸಿದಂ ಆತನಿಂ ಅಲ್ಲಿಯ ಕೈದುವೆಲ್ಲಮಂ: **ಪಂಪಭಾ**, ೮. ೧೦೦)

ದ್ರೋಣ – **[ನಾ]** ದೊನ್ನೆ (ದ್ರೋಣದೊಳ್ ಪುಟ್ಟಿದೀತಂ ದ್ರೋಣನೆ ಪೋಗೆಂದು ಪೆಸರನಿಟ್ಟಂ: **ಪಂಪಭಾ,** ೨. ೪೩); ಪ್ರಳಯಕಾಲದ ಒಂದು ಮೋಡದ ಹೆಸರು (ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸಂವರ್ತಕಗಳೆಂಬ ಮುಗಿಲ್ಗಳಂ ಬೆಸಸಿದಾಗಳ್: **ಪಂಪಭಾ**, ೫. ೯೫ ವ)

ದ್ರೋಣಾಮುಖ – **[ನಾ]** ಜಲಸ್ಥಲಮಾರ್ಗಗಳುಳ್ಳ ಪಟ್ಟಣ (ನಿಮ್ನಗಾ ತಟನಿಕಟವರ್ತಿಗಳಪ್ಪ ಮಹಾದ್ರೋಣಾಮುಖಂಗಳುಮಂ: **ಆದಿಪು**, ೮. ೬೩ ವ)

ದ್ರೋಣಿ – **[ನಾ]** ದೋಣಿ (ದ್ರೋಣಿಯಾನಪಾತ್ರಾದಿಗಳೊಳ್ ಜಲದುರ್ಗೋತ್ತರಣಮನುಪದೇಶಂಗೆಯ್ದು: **ಆದಿಪು**, ೬. ೬೨ ವ)

ದ್ರೌಣಿ – **[ನಾ]** ದ್ರೋಣನ ಮಗ, ಅಶ್ವತ್ಥಾಮ (ನಡೆ ಕುರುಕ್ಷ್ಮಾಪಾಳನಿರ್ದಲ್ಲಿಗೆ ಎಂದು ಅರವಿಂದಾಲಯೆಯಂ ಮಗುಳ್ಚಿದಂ ಆದೇನಾ ದ್ರೌಣಿ ಶೌರ್ಯಾರ್ಥಿಯೋ: **ಪಂಪಭಾ**, ೧೩. ೧೦೨)

ದ್ವಂದ್ವ – **[ನಾ]** ಜೋಡಿ, ಜೊತೆ (ಅಂತವತರಿಸಿದ ಚಾರಣದ್ವಂದ್ವಕ್ಕೆ ಆ ದ್ವಂದ್ವಂ ಇದಿರ್ವಂದು: **ಆದಿಪು**, ೫. ೪೬ ವ)

ದ್ವಂದ್ವಯುದ್ಧ – **[ನಾ]** ಇಬ್ಬರ ನಡುವಣ ಯುದ್ಧ, ಮಲ್ಲಯುದ್ಧ (ಒರ್ವ ಗಂಧರ್ವನೊಳೆ ಚಿತ್ರಾಂಗದಂ ದ್ವಂದ್ವಯುದ್ಧಮಂ ಪೊಣರ್ಚಿ ಕುರುಕ್ಷೇತ್ರಮಂ ಕಳಂಬೇೞ್ದು: **ಪಂಪಭಾ**, ೧. ೭೩ ವ)

ದ್ವಯ – **[ನಾ]** ಜೋಡಿ (ಕಳಹಂಸೀಲೀಲೆ ನೀಲೋತ್ಪಳರುಚಿ ಕನಕಾಂಭೋಜಿನೀಲಕ್ಷ್ಮಿ ಭೃಂಗೀವಳಯಂ ಶ್ರೀಚಕ್ರವಾಕದ್ವಯ ವಿಳಸನಂ: **ಆದಿಪು**, ೧೧. ೧೪೧)

ದ್ವಾತ್ರಿಂಶತ್ – **[ನಾ]** ಮೂವತ್ತೆರಡು (ದ್ವಾತ್ರಿಂಶತ್ ಚಾರುಚಾಮರಂಗಳಂ ಮಾಡಿ ಪಿಡಿಸಿಯುಂ: **ಆದಿಪು,** ೮. ೪೧ ವ)

ದ್ವಾದಶ – **[ನಾ]** ಹನ್ನೆರಡು (ಮೇರುಪರ್ವತದ ತೆಂಕಣ ತ‍ಪ್ಪಲೊಳ್ ದ್ವಾದಶಯೋಜನ ಪ್ರಮಾಣಮಪ್ಪ ಜಂಬೂವೃಕ್ಷದ ಕೆಲದೊಳ್: **ಪಂಪಭಾ**, ೬. ೩೦ ವ)

ದ್ವಾದಶರಾಜಕ – **[ನಾ]** ಅರಿ, ಮಿತ್ರ, ಅರಿಯ ಮಿತ್ರ, ಮಿತ್ರನ ಮಿತ್ರ, ಅರಿಯ ಮಿತ್ರನ ಮಿತ್ರ, ಪಾರ್ಷ್ಣಿಗ್ರಾಹ, ಆಕ್ರಂದ, ಪಾರ್ಷ್ಣಿಗ್ರಾಹಸಾರ, ಆಕ್ರಂದಾಸಾರ, ಮಧ್ಯಮ, ಉದಾಸೀನ, ವಿಜಿಗೀಷು ಎಂಬ ಹನ್ನೆರಡು ಬಗೆಯ ರಾಜರು (ದ್ವಾದಶರಾಜಕಮೆಂಬುದನೋದುಗಳೊಳ್ ಕೇಳಲ್ಕಾದುದಲ್ಲದೆ ಕಾಣಲ್ಕಾದುದೆ: **ಆದಿಪು**, ೧೪. ೧೪)

ದ್ವಾದಶಾಂಗ – **[ನಾ]** [ಜೈನ] ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ, ಸಮವಾಯಾಂಗ, ವ್ಯಾಖ್ಯಾಪ್ರಜ್ಞಪ್ತಿ, ಜ್ಞಾತೃಕ ಧರ್ಮಕಥಾಂಗ, ಉಪಾಸಕಾಧ್ಯಯನಾಂಗ, ಅಂತಕೃದ್ದಶಾಂಗ, ಅನುತ್ತರೋಪಪಾದಿಕದಶಾಂಗ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರಾಂಗ ಮತ್ತು ದೃಷ್ಟಿವಾದಾಂಗ (ಅಂತು ಜೈನದೀಕ್ಷೆಯಂ ಕೈಕೊಂಡು ಗುರುವಿನನುಮತದಿಂ ದ್ವಾದಶಾಂಗ ಚತುರ್ದಶಪೂರ್ವಂಗಳಂ ಕಲ್ತು: **ಆದಿಪು**, ೧೪. ೧೩೯ ವ)

ದ್ವಾದಶಾದಿತ್ಯ – **[ನಾ]** ಹನ್ನೆರಡು ಮಂದಿ ಆದಿತ್ಯರು: ಧಾತಾ, ಮಿತ್ರ, ಆರ್ಯಮಾ, ಶಕ್ರ, ವರುಣ, ಅಂಶ, ಭಗ, ವಿವಸ್ವಾನ್, ಪೂಷಾ, ಸವಿತಾ, ತ್ವಷ್ಟಾ, ವಿಷ್ಣು (ಏಕಾದಶರುದ್ರರುಂ ದ್ವಾದಶಾದಿತ್ಯರುಂ ಅಷ್ಟವಸುಗಳುಂ ಅಶ್ವಿನೀದೇವರುಂ ಮೊದಲಾಗೆ ಮೂವತ್ತಮೂದೇವರುಂ ಇಂದ್ರಂಬೆರಸು ವೈಮಾನಿಕದೇವರುಂ ನೆರೆದು: **ಪಂಪಭಾ**, ೧. ೧೪೭ ವ)

ದ್ವಾದಶಾನುಪ್ರೇಕ್ಷೆ – **[ನಾ]** [ಜೈನ] ಮುನಿಗಳು ಧ್ಯಾನಮಾಡಬೇಕಾದ ಅನಿತ್ಯ, ಅಶರಣ, ಸಂಸಾರ, ಏಕತಾ, ಅಶುಚಿತ್ವ, ಆಸ್ರವ, ಸಂವರ, ನಿರ್ಜರಾ, ಲೋಕ, ಬೋಧಿದುರ್ಲಭ ಮತ್ತು ಧರ್ಮ ಎಂಬ ಹನ್ನೆರಡು ತತ್ವಗಳು (ಅಂತಿರ್ದು ಅನಿತ್ಯಾದಿ ದ್ವಾದಶಾನುಪ್ರೇಕ್ಷಾನುಸ್ಮರಣಪರಿಣತಾಂತಃಕರಣನಾಗಿ: **ಆದಿಪು**, ೬. ೩೪ ವ)

ದ್ವಾದಶಾಬ್ದ – **[ನಾ]** ಹನ್ನೆರಡು ವರ್ಷ (ಅಜ್ಞಾತವಾಸಮೆಂದು ಒಂದು ವರುಷದೊಳ್ ಆರಾನುಂ ಅಱಿದರಪ್ಪೊಡೆ ಮತ್ತಂ ದ್ವಾದಶಾಬ್ದವರಂ ನಾಡ ದೆಸೆಯಂ ನೋಡದಂತಾಗೆ: **ಪಂಪಭಾ**, ೭. ೩ ವ)

ದ್ವಾದಶಾರ್ಕ – **[ನಾ]** ಧಾತಾ, ಮಿತ್ರ, ಆರ್ಯಮಾ, ಶಕ್ರ, ವರುಣ, ಅಂಶ, ಭಗ, ವಿವಸ್ವಾನ್, ಪೂಷಾ, ಸವಿತಾ, ತ್ವಷ್ಟಾ, ವಿಷ್ಣು ಎಂಬ ಹನ್ನೆರಡು ಮಂದಿ ವೈದಿಕ ಪರಿಕಲ್ಪನೆಯ ಆದಿತ್ಯರು (ದ್ವಾದಶಾರ್ಕೋಜ್ಜ್ವಲ ತೇಜಶ್ಚಕ್ರರೂಪಂ ಬೆಳಗಿದುದು ದಿಶಾಚಕ್ರಮಂ ಚಕ್ರರತ್ನಂ: **ಆದಿಪು**, ೧೧. ೨)

ದ್ವಾರಬಂಧ – [ನಾ] ಬಾಗಿಲ ಚೌಕಟ್ಟು (ವಿಚಿತ್ರಮಣಿಮಯೂಖಚಿತ್ರಿತ ದ್ವಾರಬಂಧ ಬಂಧುರಮುಂ: **ಆದಿಪು**, ೧೩. ೪೬ ವ)

ದ್ವಾವಿಂಶತಿ – [ನಾ] ಇಪ್ಪತ್ತೆರಡು (ಜೀವಿತಾಂತ್ಯದೊಳ್ ದ್ವಾವಿಂಶತಿ ಪಾರಾವಾರಪರಮಾಯುಷ್ಯನೆಂ ಅಚ್ಯುತೇಂದ್ರನೆಂ ಆಗಿ: **ಆದಿಪು**, ೩. ೫೭ ವ)

ದ್ವಿಗುಣ – [ನಾ] ಎರಡು ಪಟ್ಟು (ಏಟುವರಂ ತ'ದ್ದ್ವಿಗುಣಂ ಸೂಟಿಸೊಳ್ ನಾರಕರ ಕಠಿನದೇಹೋತ್ಸೇಧಂ: **ಆದಿಪು**, ೫. ೯೨)

ದ್ವಿಗುಣ ಚತುಃಕೂಟ – [ನಾ] [ಜೈನ] ರುಚಕಾಚಳದ ಪಶ್ಚಿಮದಿಕ್ಕಿನ ಎಂಟು ಶಿಖರಗಳು (ತನ್ಮಹೀಧರ ವರುಣಾಶಾ ವಿಶೇಷಕಮಾಗಿರ್ದ ಲೋಹಿತಾಕ್ಷ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ: **ಆದಿಪು**, ೭. ೩ ವ)

ದ್ವಿಚರಮಸಮಯ – [ನಾ] ನಿರ್ವಾಣಕ್ಕಿಂತ ಮುಂಚಿನ ಎರಡು ಕ್ಷಣಗಳು (ನಿಜ ದ್ವಿಚರಮಸಮಯದಿಳ್ ಅನ್ಯತರವೇದನೀಯ ದೇವಗತಿತತ್ಪ್ರಾಯೋಗ್ಯಾನುಪೂರ್ವ ಶರೀರಬಂಧನ ಸಂಘಾತವರ್ಣ: **ಆದಿಪು**, ೧೬. ೪೯ ವ)

ದ್ವಿಜಕುಲ – [ನಾ] ಬ್ರಾಹ್ಮಣ ಜಾತಿಯವನು (ಕುಡುವೊಡೆ ನಿಸ್ತ್ರಪಂ ಕುಡುವುದು ಏಜೆಸಿದಂ ಬೆಸೆಕೋಲನೆಂದು ಪೇಟಿಜ್ ಕುಡುವುದೆ ಕನ್ನೆಯಂ ದ್ವಿಜಕುಲಂಗೆ: **ಪಂಪಭಾ**, ೩. ೬೬)

ದ್ವಿಜಗಣ – [ನಾ] ಹದ್ದುಗಳ ಸಮೂಹ (ಪೋಟ್ಟು ಸೀಳ್ದೊಟ್ಟಿಂ ವೈರಿಯನೊಡ್ಡಿ ತತ್ ಪಿಶಿತದಿಂದಾತಂಗೆ ನೀಂ ಕೂರ್ಪೊಡೆ ಏಗೆಟ್ಟಿತ್ತು ಇನ್ನಡೆ ಮಾಡು ತದ್ದ್ವಿಜಗಣಕ್ಕೆ ಆಹಾರಮಂ ಭೂಪತೀ: **ಪಂಪಭಾ**, ೧೩. ೬೧)

ದ್ವಿಜನ್ಮ – [ನಾ] ಬ್ರಾಹ್ಮಣ (ಮಚ್ಚರಿಸಿ ಕಲಿಯಗಾಭ್ಯರ್ಣದೊಳ್ ದ್ರವ್ಯಲೋಭಾತುರರ್ ಉನ್ಮಾರ್ಗೋಪದೇಶೋದ್ಯತಮತಿಗಳ್ ಅತಿಕ್ರೂರರಪ್ಪರ್ ದ್ವಿಜನ್ಮರ್: **ಆದಿಪು**, ೧೫. ೨೬)

ದ್ವಿಜನ್ಮಘೋಷ – [ನಾ] ಬ್ರಾಹ್ಮಣರ [ವೇದ] ಘೋಷ (ಚಾರು ವಿವಿಧಾಗ್ನಿಕಾರ್ಯ ಮಹಾದ್ವಿಜನ್ಮಘೋಷದಿಂ ಅಂಹೋದೂರಮುಮಂ ಅವನಿತಳಾಳಂಕಾರಂ ಸಂಸಾರಸಾರಂ ಗಂಗಾದ್ವಾರಂ: **ಪಂಪಭಾ**, ೪. ೧೫)

ದ್ವಿಜನ್ಮವರ್ಣ – [ನಾ] ಬ್ರಾಹ್ಮಣವರ್ಣ (ಅಂತು ಭವಿಷ್ಯತ್ ದ್ವಿಜನ್ಮವರ್ಣಕೆ ಅಧ್ಯಯನಧ್ಯಾಪನ ದಾನಪ್ರತಿಗ್ರಹ ಯಜನ ಯಾಜನ ಶಿಷ್ಟವೃತ್ತಿಯುಮಂ: **ಆದಿಪು**, ೮. ೭೩ ವ)

ದ್ವಿಜನ್ಮಸಭೆ – [ನಾ] ಬ್ರಾಹಣರ ಸಮೂಹ (ದ್ವಿಜನ್ಮಸಭೆಯಿಂ ಪೊಱಮಟ್ಟೊಡೆ ಮಾಸಿದಂದಮುಂ ಪಸದನದಂತೆ ಕಣ್ಗೆಸೆದು ತೋಱೆದುದಾ ಕದನತ್ರಿಣೇತ್ರನಾ: **ಪಂಪಭಾ**, ೩. ೬೧)

ದ್ವಿಜನ್ಮಾನ್ವಯ – [ನಾ] ಬ್ರಾಹ್ಮಣಕುಲ (ಷಟ್ಖಂಡಭೂಮಂಡಲೇಶ್ವರರಂ ಓರಂತೆ ನೆಗಟ್ಚೆ ಕೂಡೆ ನೆಗಟ್ದುದೆತ್ತಂ ದ್ವಿಜನಮಾನ್ವಯಂ: **ಆದಿಪು**, ೧೫. ೨೦)

ದ್ವಿಜಮುಖ್ಯ – [ನಾ] ಬ್ರಾಹ್ಮಣಶ್ರೇಷ್ಠ (ತಣಿವರ್ ದ್ವಿಜಮುಖ್ಯರ್ ಅಪ್ಪುದು ಅಗ್ಗಳಿಕೆ ಪೊದಲ್ದು ಪರ್ವುವುದು ಕೀರ್ತಿ ಪುರಾಕೃತಪುಣ್ಯದಿಂದೆ ಸಂಗಳಿಸುವುದು: **ಪಂಪಭಾ**, ೬. ೧೯)

ದ್ವಿಪ – [ನಾ] ಎರಡು ಹಂತದಲ್ಲಿ ನೀರು ಕುಡಿಯುವುದು, ಆನೆ (ಧೂಳೀಪಟಲಪಿಹಿತಕೇತು ದ್ವಿಪಾನೀಕ ಘಂಟಾನಿವಹ ವ್ಯಾಪಾರಮಲ್ಲಿಂ: **ಆದಿಪು**, ೧೪. ೯೪)

ದ್ವಿರದ – [ನಾ] ಎರಡು ಕೋರೆ[ದಂತ]ಗಳನ್ನುಳ್ಳುದು, ಆನೆ (ದಿಗಿಭನಿಭಂಗಳಪ್ಪ ಸಮರ ದ್ವಿರದಂಗಳ ಯುದ್ಧಕೇಳಿಯಂ ಬಗೆಗೊಳೆ ನೋಡಲುಂ: **ಆದಿಪು**, ೮. ೪೮)

ದ್ವಿರದ ಕದಳಿಕಾ – [ನಾ] ಆನೆಯ ಮೇಲೆ ನಿಲ್ಲಿಸುವ ಪತಾಕೆ (ಉದ್ಯಾನಕೇಳೀ ಚಳತ್ಪತ್ರಿಳಶಾಖಾಕಾರಜೈತ್ರ ದ್ವಿರದ ಕದಳಿಕಾಡಂಬರಂ: **ಆದಿಪು**, ೧೩. ೮)

ದ್ವಿರೇಫ – [ನಾ] ದುಂಬಿ (ಶಾಳಿವನಗಧಾಂಧ ದ್ವಿರೇಫಾಳಿ ಕಣ್ಗೊಳಿಸಿತ್ತೊರ್ಮೆಯೆ ಬಂದುದಂದು ಶರದಂ: **ಪಂಪಭಾ**, ೭. ೭೧)

ದ್ವಿವಿಧ – [ನಾ] ಎರಡು ಬಗೆ (ವಸ್ತುಸ್ವರೂಪ (ನಿನ್ನ ಬೆಸಗೊಂಡ ತತ್ತ್ವಮುಂ ಹೇಯೋಪಾದೇಯರೂಪದಿಂ ದ್ವಿವಿಧಮಕ್ಕುಂ: **ಆದಿಪು**, ೧೦. ೬೩ ವ)

ದ್ವಿಷ – [ನಾ] ಶತ್ರು (ದೇವ ಭೀಕರಕರ್ಮದ್ವಿಷರಂ ಪಡಲ್ವಡಿಸಲುಂ ಭವ್ಯರ್ಕಳಂ ಘೋರಸಂಸರಣಾಂಭೋನಿಧಿಪಾರಮಂ ಸಲಿಸಲುಂ ಸಾಲ್ಗುಂ ತ್ವದುದ್ಯೋಗಂ: **ಆದಿಪು**, ೯. ೬೧)

ದ್ವಿಸಪ್ತ – [ನಾ] ಏಳೆರಡಲ, ಹದಿನಾಲ್ಕು (ಅದು ಮರುತ್ತ್ರಿಕಾವೇಷ್ಟಿತಂ ಅಂತದು ಸುಪ್ರತಿಷ್ಠಕೋಪಮಂ ಅದು ಜಿನಮತದೊಳ್ ದ್ವಿಸಪ್ತರಜ್ವೋತ್ಸೇಧಂ: **ಆದಿಪು**, ೧. ೪೪)

ದ್ವಿಷದ್ಬಲ – [ನಾ] [ದ್ವಿಷತ್+ಬಲ] ಶತ್ರು ಸೈನ್ಯ (ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷದ್ಬಲಮಂ ಸುಟ್ಟಂ ಉದಾತ್ತಪುಣ್ಯನವಂ ಚೈತಾಗ್ನಿಯಿಂ ಸುಟ್ಟೆನಿಲ್ಲ ಒಲವಿಂದೆ: **ಪಂಪಭಾ**, ೧೩. ೬೦)

ದ್ವಿಸಪ್ತತಿಪ್ರಕೃತಿ – [ನಾ] [ಜೈನ] ಅನುದಯವೆಂಬ ಅಸಾತಾವೇದನೀಯ, ದೇವಗತಿ, ದೇವಗತಿಪ್ರಯೋಗ್ಯಾನುಪೂರ್ವ್ಯ, ಐದು ಶರೀರ, ಐದು ಬಂಧನ, ಐದು ಸಂಘಾತ, ಐದು ವರ್ಣ, ಐದು ರಸ, ಆರು ಸಂಸ್ಥಾನ, ಆರು ಸಂಹನನ, ಮೂರು ಅಂಗೋಪಾಂಗ, ಎರಡು ಗಂಧ, ಎಂಟು ಸ್ಪರ್ಶ, ಅಗುರುಲಘುತ್ವ, ಎರಡು ವಿಹಾಯೋಗತಿ [ಪ್ರಶಸ್ತ+ಅಪ್ರಶಸ್ತ], ಸ್ಥಿರ, ಅಸ್ಥಿರ, ಶುಭ, ಅಶುಭ, ಸುಸ್ವರ, ದುಸ್ವರ, ಸುಭಗ, ದುರ್ಭಗ, ಪ್ರತ್ಯೇಕಶರೀರ, ಅಯಸ್ಕೀರ್ತಿ, ಅನಾದೇಯ, ನಿರ್ಮಾಣ, ಅಪರ್ಯಾಪ್ತ, ನೀಚೈರ್ಗೋತ್ರ ಎಂಬ ಎಪ್ಪತ್ತೆರಡು ಪ್ರಕೃತಿಗಳು (ನೀಚೈರ್ಗೋತ್ರವೆಂವ ದ್ವಿಸಪ್ತಕಪ್ರಕೃತಿಗಳಂ ನಿರವಶೇಷಂ ಕಿಡಿಸಿ: **ಆದಿಪು**, ೧೬. ೪೯ ವ)

ದ್ವೀಂದ್ರಿಯ – [ನಾ] [ಜೈನ] ಚರ್ಮ, ನಾಲಗೆ ಎಂಬ ಎರಡು ಇಂದ್ರಿಯಗಳು ಮಾತ್ರ ಇರುವ ಜಂತು (ಸ್ಪರ್ಶನ ರಸನೇಂದ್ರಿಯೋಪೇತಂಗಳಪ್ಪ ಶಂಖಾದಿ ದ್ವೀಂದ್ರಿಯಂಗಳ್: **ಆದಿಪು**, ೧೦. ೬೩ ವ)

ದ್ವೈಧೀಭವತ್ – [ಗು] ಎರಡಾಗಿ ಸೀಳಿದ (ವಿಷಮ ಕಠೋರ ಕೂರ್ಮ ಘರ್ಮನಿರ್ಭರೋಚ್ಚಾಸ ಭರದ್ವೈಧೀಭವತ್ ಅಂಭಃಪ್ರಕಟಿತ ಅಗಾಧ ರಂಧ್ರಾವರ್ತಮಾನ ಜಳಚರ ಸಂಚರಣ ವಿಸ್ಮಯನೀಯ ಭಯಾನಕೆಯುಂ: **ಆದಿಪು**, ೫. ೮೭ ವ)

ಧ

ಧಗಂ – [ಅ] ಧಸಕ್ ಎನ್ನುವಂತೆ ಅನುಕರಣ ಪದ (ನಿನ್ನನೊರ್ವನಂ ಪಗೆವಡೆಯೊಡ್ಡುಗಳಂ ಒಡೆಯಲ್ಕೆ ಪೇೞ್ದು ಎರ್ದೆ ಧಗಂ ಎನೆ ಸೈರಿಸುವ ಉಪಾಯಮಾವುದು ಕೞುವೇ: **ಪಂಪಭಾ,** ೧೧. ೯೧)

ಧಗದ್ಧಗಿತರವ – [ನಾ] ಧಗಧಗ ಎಂಬ ಶಬ್ದ (ಧೃತಧಗದ್ಧಗಿತರವನಿರ್ಮಳಶಿಖಾಳಿಯಂ ಸತತಗತಿ ಪಥಮನಡರ್ವುಜ್ಜ್ವಳಜ್ವಾಳೆಯಂ: **ಆದಿಪು,** ೭. ೨೭ ವ)

ಧನ – [ನಾ] ಸಂಪತ್ತು (ತನು ರೂಪ ವಿಭವ ಯೌವನ ಧನ ಸೌಭಾಗ್ಯ ಆಯುರಾದಿಗಳ್ಗೆಣೆ ಕುಡುಮಿಂಚಿನ ಪೊಳೆಪು ಮುಗಿಲ ನೆೞಲ್ ಇಂದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ: **ಆದಿಪು,** ೯. ೯. ೪೬)

ಧನಂಜಯ – [ನಾ] ಅರ್ಜುನ (ಅನ್ನೆಗಂ ತನ್ನ ಮಯ್ದುನನಪ್ಪ ಅಮೋಘಾಸ್ತ್ರಧನಂಜಯನ ಬರವಿನ ಸಂತಸದೊಸಗೆ ಪಡೆಮಾತಂ ಮುಂದುವರಿದಱಿಪುವಂತೆ: **ಪಂಪಭಾ,** ೪. ೩೨ ವ)

ಧನದ – [ನಾ] ಕುಬೇರ (ಧನದಂ ಕಾಂಚನಪಂಚರತ್ನಮಯಂ ರೈವೃಷ್ಟಿಯಂ ಮಾಡುವಲ್ಲಿ: **ಆದಿಪು,** ೭. ೨೪)

ಧನದಾನುಚರ – [ನಾ] ಕುಬೇರನ ಹಿಂಬಾಲಕ (ಅಱುವತ್ತುಕೋಟಿ ಧನದಾನುಚರರಂ ಅತಿರೌದ್ರಭಯಾನಕಮಾಗೆ ಕೊಂದು ಸೌಗಂಧಿಕ ಕಾಂಚನಕಮಳಹರಣಪರಿಣತನಾದಂ: **ಪಂಪಭಾ,** ೮. ೩೧)

ಧನಸಂಕುಲ – [ನಾ] ಸಂಪತ್ತೆಲ್ಲ (ಧರ್ಮಪುತ್ರನುಂ ಕುಲಧನಸಂಕುಲಗಳನೆ ತಂದಿಡೆ ಇಟ್ಟು ಅವನಾಡಿ ಸೋಲ್ತುಂ ಆಕುಲಮತಿ ಮುಂದೆ ಭಾರತದೊಳೊಡ್ಡುವುದಂ ಕಡುನನ್ನಿ ಮಾಟ್ಟಿವೊಲ್: **ಪಂಪಭಾ,** ೬. ೭೨)

ಧನು – [ನಾ] [ಜೈನ] ಬಿಲ್ಲು, ಎತ್ತರದ ಒಂದು ಅಳತೆ (ಏೞ್ ಧನು ಮೂಱು ಮೊೞನಿಂ ಪೇೞ್ ಷಡಂಗುಲಮೆ ಮೊದಲ ನಾರಕರ ಒಡಲ್: **ಆದಿಪು,** ೫. ೯೨)

ಧನುರಾಗಮ – [ನಾ] ಧನುರ್ವಿದ್ಯೆ (ಇನಿಬರೊಳಗೀತನೊರ್ವನೆ ಧನುರಾಗಮದೆಡೆಗೆ ಕುಶಲನಕ್ಕುಂ ಅದರ್ಕೆಂ ಕಿನಿಸದಿರಿಂ ಮುನ್ನಱಿಪಿದೆಂ ಎನೆ ಭೀಷ್ಮನಲಂಪು ಮಿಗೆ ಮುಗುಳ್ನಗೆ ನಕ್ಕಂ: **ಪಂಪಭಾ,** ೨. ೫೫)

ಧನುರ್ಗುಣಲತಾನಿನಾದ – [ನಾ] ಬಿಲ್ಲಿನ ಬಳ್ಳಿಯಂತಿರುವ ಹಗ್ಗದ ಠೇಂಕಾರ (ಮನಂಪೆರ್ಚಿ ಧನುರ್ಲತಾಗುಣನಿನಾದಮನಾಲಿಸಿ ಕೇಳಲುಂ: **ಪಂಪಭಾ,** ೧. ೧೪೨)

ಧನುರ್ದಂಡ – [ನಾ] ಧನುಸ್ಸು, ಬಿಲ್ಲು (ಆತೋದ್ಯಪ್ರಗೀತಧ್ವನಿಗಳಿರೆ ಧನುರ್ದಂಡಟಂಕಾರಮಂ ಕೇಳಲುಂ: **ಆದಿಪು,** ೮. ೩೩)

ಧನುರ್ಧರ – [ನಾ] ಬಿಲ್ಲನ್ನು ಹಿಡಿದವನು (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒೞ್ ಕರ್ಪಿಡಿದ ಪಣೆಕಟ್ಟು ಕೆಯ್ಪಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್: **ಪಂಪಭಾ,** ೧೦. ೭೧)

ಧನುರ್ಧರಬಲ – [ನಾ] ಬಿಲ್ಗಾರರ ಸೈನ್ಯ (ಕಾೞ್ತುಱು ಮಸಗಿದಂತೆ ಮಸಗಿದ ದುರ್ಧರ ಧನುರ್ಧರಬಲಮುಮಂ ಶ್ವೇತ ಭೀಷ್ಮರ ಪೇೞ್ದ ಓಜೆಯೊಳೆರಡುಂ ಪಡೆಗಳ ಪಡೆವಳರ್ಕಳ್ ಕುರುಕ್ಷೇತ್ರದೊಳ್ ಚಿತ್ರಿಸಿದಂತೆ ಒಡ್ಡಿ ನಿಂದಾಗಳ್: **ಪಂಪಭಾ,** ೧೦. ೫೧ ವ)

ಧನುರ್ಧರಾಗ್ರಗಣ್ಯ – [ನಾ] ಶ್ರೇಷ್ಠ ಬಿಲ್ವಿದ್ಯೆಗಾರ (ಅಂತು ಧನುರ್ಧರಾಗ್ರಗಣ್ಯನಾಗಿರ್ದೊಂದು ದಿವಸಂ ತನ್ನ ತೊಡೆಯ ಮೇಲೆ ತಲೆಯನಿಟ್ಟು ಪರಶುರಾಮಂ ಮಱಿದೊಱಗಿದಾ ಪ್ರಸ್ತಾವದೊಳ್: **ಪಂಪಭಾ,** ೧. ೧೦೪ ವ)

ಧನುರ್ವೇದ – [ನಾ] ಅಸ್ತ್ರಶಾಸ್ತ್ರ, ಒಂದು ಉಪವೇದ (ಧನುರ್ವೇದ ಹಸ್ತಿ ಅಶ್ವ ತಂತ್ರ ರತ್ನಪರೀಕ್ಷೆಗಳುಮಂ .. .. ಉಪದೇಶಂಗೆಯ್ದು: **ಆದಿಪು,** ೮. ೬೦ ವ)

ಧಮ್ಮಿಲ್ಲ – [ನಾ] ತುರುಬು (ಮೊಗಮಂ ತಾವರೆ ಕಣ್ಣನುತ್ಪಳದಳಂ ಧಮ್ಮಿಲ್ಲಮಂ ಸೋಗೆ .. .. ಪೋಲ್ತುವು: **ಆದಿಪು,** ೬. ೮೫)

ಧರ – [ನಾ] ಬೆಟ್ಟ (ಸುರಸಭೆಯಂತೆ ವಜ್ರಿಲಸಿತಂ ಧರನಂತೆ ಉರುಬಾಣಸಂಭೃತಂ: **ತ್ರಿಷಷ್ಟಿಪು,** ೨೭. ೧೫)

ಧರಣಿ – [ನಾ] ಭೂಮಿ, ರಾಜ್ಯ (ಲಾಕ್ಷಾಗೃಹಮಂ ಪುಗಿಸಲುಂ ಅಕ್ಷಕ್ರೀಡೆಯೊಳೆ ಧರಣಿಯಂ ಕೊಳಲುಂ ಪಿಂಗಾಕ್ಷಂಗೆ ವೇೞ್ದು ಸೈರಿಸದೆ ಆಕ್ಷೇಪದಿಂ ಎಮ್ಮನಿಲ್ಲಿ ಛಿದ್ರಿಸ ಬಂದೈ: **ಪಂಪಭಾ,** ೭. ೩೨)

ಧರಣೇಂದ್ರ – [ನಾ] [ಜೈನ] ಪಾರ್ಶ್ವನಾಥ ತೀರ್ಥಂಕರನ ಯಕ್ಷ; ಭವನವಾಸಿ ದೇವನಾದ ನಾಗೇಂದ್ರ (ಧರಣೇಂದ್ರನಱಿದು ಭೋಂಕನೆ ಧರಾತಳಂ ಬಿರಿಯೆ ನೆಗೆದು ಬರ್ಪಂ: **ಆದಿಪು,** ೯. ೧೦೦); ಸರ್ಪರಾಜ (ತಿಸರಮಿದಾವುದಕ್ಕ ಧರಣೇಂದ್ರನ ಕೊಟ್ಟುದು ವಜ್ರದಾಳಿ ಕಣ್ಗೆಸೆವುವುದಿದಾವುದು: **ಪಂಪಭಾ,** ೪. ೮೬)

ಧರಣೀವಿಭಾಗ – [ನಾ] ಭೂಪ್ರದೇಶ (ಕರಿಯ ಮುಗಿಲ್ಗಳಿಂ ಗಗನಮಂಡಳಮೊಪ್ಪಿರೆ ಸೋಗೆಯಿಂ ವನಾಂತರಂ ಎಸೆದು ಒಪ್ಪೆ ತೋರ್ಪ ಮೊಳೆವುಲ್ಗಳಿನೀ ಧರಣೀವಿಭಾಗಂ ಒಪ್ಪಿರೆ: **ಪಂಪಭಾ,** ೭. ೨೩)

ಧರಣೀಶ – [ನಾ] ಮಹಾರಾಜ (ನರರ ಐಶ್ವರ್ಯದ ಪೊದಳ್ಕೆಗಳ್ ಕರಗುವವೋಲ್ ಶರದಂಬುಧರಂ ಭೋಂಕನೆ ಕರಗಿದೊಡೆ ಎರ್ದೆ ಕರಗಿ ಕೊರಗಿದಂ ಧರಣೀಶಂ: **ಆದಿಪು,** ೪. ೬೪)

ಧರಣೀಸುತ – [ನಾ] ಭಗದತ್ತ (ಧರಣೀಸುತನಟೆದಂ ದಿಕ್ಕರಿ ಕೆಡೆದುದು ನರಶರಂಗಳಿಂ: **ಪಂಪಭಾ,** ೧೧. ೮೨)

ಧರಣೇಂದ್ರ – [ನಾ] [ಧರಣ+ಇಂದ್ರ] ನಾಗರಾಜ (ಅಂಬರಭೂಷಣ ಮಾಲಾಡಂಬರದ ಬೆಡಂಗನಮರನರ್ತಕಿ ಗಡಂ ಏನೆಂಬುದೊ ಧರಣೇಂದ್ರಂಗಂ ಅಳುಂಬಳಂ ಪೊಗೞಲ್ಕೆ ರೂಪು ನೀಳಾಂಜನೆಯಾ: **ಆದಿಪು,** ೯. ೧೭) ['ಧರಣೇಂದ್ರ' ಎಂಬುದು ನರಸಿಂಹಶಾಸ್ತ್ರಿಗಳು ಒಪ್ಪಿದ ರೂಪ]

ಧರಾಚಕ್ರ – [ನಾ] ಭೂಮಂಡಲ (ಬೆಸಕೆಯ್ದತ್ತು ಸಮುದ್ರಮುದ್ರಿತ ಧರಾಚಕ್ರಂ .. .. ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳಾರಾ ಪಾಂಡುರಾಜಂಬರಂ: **ಪಂಪಭಾ,** ೧. ೧೧೦)

ಧರಾತಳ – [ನಾ] ಭೂಮಿ (ಆಕೆಯ ಬಗೆದ ಬಗೆಯೊಳೊಡಂಬಡುವಂತೆ ಕುಲಗಿರಿಗಳ ಬಿಣ್ಪುಮಂ

ಧರಾತಳದ ತಿಣ್ಪುಮಂ .. .. ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ,** ೧. ೧೩೯ ವ)

ಧರಾತಳನಿಷ್ಟಲಲಾಟಪಟ್ಟ – [ನಾ] ಭೂಮಿಗೆ ತಾಕಿದ ಹಣೆಯ ಪ್ರದೇಶವುಳ್ಳವನು, ಸಾಷ್ಟಾಂಗವೆರಗಿದವನು (ನಿಜಾನುಜಸಹಿತಂ ಇದಿರ್ವಂದು ಧರಾತಳನಿಷ್ಟಲಲಾಟಪಟ್ಟಂ ಸಾಷ್ಟಾಂಗವೆಱಗಿ ಪೊಡಮಟ್ಟು: **ಪಂಪಭಾ,** ೭. ೫೯ ವ)

ಧರಾಭಾರ – [ನಾ] ರಾಜ್ಯಭಾರ (ನೀನೆ ಜೆಟ್ಟಿಗನೈ ಮುನ್ನಿನ ಒಱಂಟು ವೇಡ ಮಗನೇ ಕೈಕೊಳ್ ಧರಾಭಾರಮಂ: **ಪಂಪಭಾ,** ೧. ೮೧)

ಧರಾಮರ – [ನಾ] [ಧರಾ+ಅಮರ] ಭೂಸುರ, ಬ್ರಾಹ್ಮಣ (ಧರಾಮರವೇಷದೊಳ್ ಒಂದು ವರುಷಮಿರ್ಪನ್ನೆಗಂ ಒಂದು ದಿವಸಂ: **ಪಂಪಭಾ,** ೩. ೨೨ ವ)

ಧರಾಯುವತೀಶ – [ನಾ] [ಧರಾಯುವತಿ+ಈಶ] ಭೂಮಿ ಎಂಬ ಹೆಣ್ಣಿನ ಒಡೆಯ (ಅವಿಕಳನಿಯಮಶ್ರೀಯನಳವಡಿಸಿ ನಿಂದ ಧರಾಯುವತೀಶನಂ ಉದಾತ್ತನಾರಾಯಣನಂ ಕಂಡು: **ಪಂಪಭಾ,** ೮. ೧)

ಧರಾಲಲನಾಧೀಶ – [ನಾ] ಭೂಮಿ ಎಂಬ ಹೆಣ್ಣಿನ ಒಡೆಯ, ರಾಜ (ಭೂತಲಪತಿ ಬಟಿಯಟ್ಟಿ ಬರಿಸೆ ಪೆಱತೊಂದೆಡೆಯೊಳ್ ಮಲರಹಿತರ್ ಬಂದು ಧರಾಲಲನಾಧೀಶಂಗೆ ವಿನತಮಸ್ತಕರಾದರ್: **ಆದಿಪು,** ೧೫. ೧೦)

ಧರಾವಿಭಾಗ – [ನಾ] ಭೂಭಾಗ (ಪನ್ನಗಕೇತಂಗೆ ಧರಾವಿಭಾಗಮನಿತ್ತು ಸಂಪನ್ನಯೋಗನಿಯೋಗದಿಂದಂ ಅರಣ್ಯದೊಳ್ ನೆಲೆಸಿರ್ದು: **ಪಂಪಭಾ,** ೯. ೧೭)

ಧರಿತ್ರಿ – [ನಾ] ಲೋಕ (ಮಗನೆಂಬಂತು ಧರಿತ್ರಿ ನಿನ್ನನುಜರಂ ಕೈಕೊಂಡು ಮುಂ ಪೂಣ್ದ ನನ್ನಿಗೆ ಬನ್ನಂ ಬರಲೀಯದೆ: **ಪಂಪಭಾ,** ೧. ೮೧); [ನಾ] ಭೂಮಿ (ಕವಿದುವು ಕಾಳ ನೀಳ ಜಳದಾವಳಿ ವಾರಿಧಿಗಳ್ ಧರಿತ್ರಿಯಂ ಕವಿದುವು ಗಾಳಿಗಳ್ ಪ್ರಳಯಕಾಲಮನಾಗಿಸಲೆಂದೆ ಲೋಕಮಂ ಕವಿದುವು: **ಪಂಪಭಾ,** ೨. ೭೭)

ಧರೆ – [ನಾ] ಭೂಮಿ (ಏಂ ಗಾವಿಲನಯೊ ನಿನ್ನಂ ನುಂಗುವುದರ್ಕೆ ಇವರಂ ಎತ್ತವೇಟ್ಕುಮೇ ನೆರಮಂ ಸಂಗಳಿಸಲ್ವೇಟ್ಕುಮೇ ಮಾತಂಗವಿರೋಧಿಗೆ ಕುರಂಗಸಂಗರ ಧರೆಯೊಳ್: **ಪಂಪಭಾ,** ೩. ೧೭); [ನಾ] ನೆಲ (ಆ ಕಮಳಾಕರಮಂ ಪೊಕ್ಕು ಆಕಾಶಧ್ವನಿಯಂ ಉಱದೆ ಕುಡಿದು ಅರಿಭೂಪಾನೀಕ ಭಯಂಕರನುಂ ಗಡಂ ಏಕೆಂದಜೆಯೆಂ ಬಟಿಲ್ದು ಜೋಲ್ದಂ ಧರೆಯೊಳ್: **ಪಂಪಭಾ,** ೮. ೪೧)

ಧರೆಗಿಳಿ – [ಕ್ರಿ] ಭೂಮಿಗೆ ಅವತರಿಸು (ಸುರನದಿಯ ನೀರೊಳ್ ಮಿಂದು ಇನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆ ಎಂದಾಹ್ವಾನಂಗೆಯ್ಯಲೊಡಂ ದಲ್ ಧರೆಗಿಟಿದನಂದು ದಶಶತಕಿರಣಂ: **ಪಂಪಭಾ,** ೧. ೯೧)

ಧರ್ಮ – [ನಾ] ವೈಯಕ್ತಿಕ ಬದುಕಿನ ಸಾರ್ಥಕ್ಯದ ನೆಲೆ (ನೆಗಟ್ದ ಆದಿಪುರಾಣದೊಳ್ ಅಜೆವುದು ಕಾವ್ಯಧರ್ಮಮಂ ಧರ್ಮಮುಮಂ: **ಆದಿಪು,** ೧. ೩೮); [ನಾ] ನಂಬಿಕೆ–ಆಚರಣೆಗಳ ಕಟ್ಟಳೆ (ಈ ಸಂಸ್ಕೃತಿಯೊಳ್ ಧರ್ಮಾಧರ್ಮಸ್ಥಿತಿಯೆ ವಲಂ ಸ್ವರ್ಗನರಕಸುಖದುಃಖಕರಂ: **ಆದಿಪು,** ೭. ೭೭); [ನಾ] ಯಮ (ಪುಟ್ಟುವುದುಂ ಧರ್ಮಮೊಡವುಟ್ಟಿದುದು ಈತನೊಳೆ ಧರ್ಮನಂಶದೊಳ್ ಈತಂ ಪುಟ್ಟಿದನೆಂದಾ ಶಿಶುಗೊಸೆದಿಟ್ಟುದು ಮುನಿಸಮಿತಿ ಧರ್ಮಸುತನೆನೆ ಪೆಸರಂ: **ಪಂಪಭಾ,** ೧. ೧೨೨); [ನಾ] ಕರುಣೆ, ಕೃಪೆ (ನಿಮ್ಮಯ ಧರ್ಮದ ಮಕ್ಕಳೆವು ಎಮ್ಮಂ ಕಡೆಗಣಿಸಿ ನಿಮಗೆ ನೆಗಟ್ವುದು ದೊರೆಯೇ: **ಪಂಪಭಾ,** ೧೧. ೧೨೮)

ಧರ್ಮಗಳ್ – [ನಾ] {ಧರ್ಮ+ಕಳ್] ಬಿಟ್ಟಿ ಹೆಂಡ (ಕಿಜೆಯರ್ ಪಿಜೆಯರಜೆದು ಪೊಡೆವಟ್ಟು ಧರ್ಮಗಳ್ಗುಡಿವರ್ಗೆಲ್ಲಂ ಮೀಸಲ್ಗಳ್ಳನೆಱಿದು: **ಪಂಪಭಾ,** ೪. ೮೭ ವ)

ಧರ್ಮಜ – [ನಾ] ಯಮನ ಮಗ, ಯುಧಿಷ್ಠಿರ (ಶ್ರೀದಿವ್ಯಕಾಂತಾಜನಂ ತೊಡವು ಎಂಬೊಂದುಮಂ ಆ ಸುರಾಸುರರಿಂ ಆ ಗೋವಿಂದನಿಂ ಮುನ್ನೆ ಕೋಳ್ಪಡೆದು ಅಂಭೋನಿಧಿಯಂತೆ ಬಂದು ನೆಗಟ್ದು ಇಂದ್ರಪ್ರಸ್ಥಮಂ ಧರ್ಮಜಂ: **ಪಂಪಭಾ,** ೪. ೯)

ಧರ್ಮತನಯ – [ನಾ] ಧರ್ಮಜ (ಧವಳಹಯಂ ಧವಳರಥಂ ಧವಳ ಉಷ್ಣೀಷಂ ಶಶಾಂಕಸಂಕಾಶ ಯಶೋಧವಳಿತ ಭುವನಂ ತಾಗಿದಂ ಅವಯವದಿಂ ಬಂದು ಧರ್ಮತನಯನ ಬಲದೊಳ್: **ಪಂಪಭಾ,** ೧೧. ೩೯)

ಧರ್ಮತನೂಜ – [ನಾ] [ಯಮ]ಧರ್ಮನ ಮಗ, ಯುಧಿಷ್ಠಿರ (ಧರ್ಮತನೂಜಂಗೆ ವಿರಾಟಂ ಅವನತಮಣಿಮಕುಟಂ ಇಂತೆಂದು ಬಿನ್ನಪಂಗೆಯ್ದಂ: **ಪಂಪಭಾ,** ೯. ೬ ವ)

ಧರ್ಮಧ್ಯಾನ – [ನಾ] [ಜೈನ] ಧರ್ಮದ ವಿಷಯಗಳನ್ನು ಕುರಿತು ಸದಾ ಚಿಂತಿಸುವುದು; ಧ್ಯಾನಚತುಷ್ಟಯಗಳಲ್ಲಿ ಒಂದು, (ಆಜ್ಞಾವಿಚಯಂ ಅಪಾಯವಿಚಯ ವಿಪಾಕವಿಚಯ ಸಂಸ್ಥಾನವಿಚಯಮೆಂಬ ನಾಲ್ಕುಂ ಧರ್ಮಧ್ಯಾನಮಂ ಧ್ಯಾನಿಸುತ್ತುಂ: **ಆದಿಪು,** ೧೦. ೧೪ ವ)

ಧರ್ಮಪತ್ನಿ – [ನಾ] ಧಾರ್ಮಿಕವಾಗಿ ಮದುವೆಯಾದ ಹೆಂಡತಿ (ನಾಳಿನ ಬಾರಿಯೆಮ್ಮ ಮೇಲೆ ಬಂದುದೆಮ್ಮ ಮನೆಯೊಳ್ ಆನುಂ ಎಮ್ಮ ಧರ್ಮಪತ್ನಿಯುಂ ಮಗನುಂ ಮಗಳುಂ ಇಂತೀ ನಾಲ್ವರೆ ಮಾನಸರ್: **ಪಂಪಭಾ,** ೩. ೨೫ ವ)

ಧರ್ಮಪುತ್ರ – [ನಾ] ಧರ್ಮನಂದನ (ಧರ್ಮಪುತ್ರನುಂ ಕುಲಧನಸಂಕುಲಗಳನೆ ತಂದಿಡೆ ಇಟ್ಟವಂ ಆಡಿ ಸೋಲ್ತಂ: **ಪಂಪಭಾ,** ೬. ೭೨)

ಧರ್ಮಪೋತ – [ನಾ] ಧರ್ಮವೆಂಬ ಹಡಗು (ವಿಷಯಭೋಗಾಸವ ಅತ್ಯಂತಸೇವಾಮದದಿಂದಂ ಧರ್ಮಪೋತಚ್ಯುತರ್: **ಆದಿಪು,** ೯. ೫೮)

ಧರ್ಮಭಂಡಾರ – [ನಾ] ದಾನಕಾರ್ಯಗಳಿಗೆ ಮೀಸಲಾದ ಕೋಶ (ಹರಿಗನ ಧರ್ಮಭಂಡಾರದಂತೆ ಸಾರಮಾದುದು ಬಿಟ್ಟಗ್ರಹಾರಂ ಆ ಸಬ್ಬಿಸಾಸಿರದೊಳಂ ಧರ್ಮಪುರಂ: **ಪಂಪಭಾ,** ೧೪. ೫೬)

ಧರ್ಮಶಾಸ್ತ್ರ – [ನಾ] ಮನು, ಬೃಹಸ್ಪತಿ, ದಕ್ಷ, ಗೌತಮ, ಯಮ, ಅಂಗೀರಸ, ಯೋಗೀಶ್ವರ, ಪ್ರಚೇತಾ, ಶಾತಾತಪ, ಪರಾಶರ, ಸಂವರ್ತ, ಉಶನಸ, ಶಂಖ, ಲಿಖಿತ, ಅತ್ರಿ, ವಿಷ್ಣು, ಆಪಸ್ತಂಬ, ಹಾರೀತ ಎಂಬುವವರ ಹದಿನೆಂಟು ಸ್ಮೃತಿಗಳು (ಪದಿನೆಂಟು ಧರ್ಮಶಾಸ್ತ್ರಂಗಳೊಳಂ, ನಾಲ್ಕುವೇದಂಗಳೊಳಂ ಆಱಂಗದೊಳಂ: **ಪಂಪಭಾ,** ೨. ೩೪ ವ)

ಧರ್ಮಶ್ರವಣ – [ನಾ] ಧರ್ಮದ ಪ್ರವಚನ (ಪಜೆವಿಡಲಣಮೀಯದವರಂ ಅವರ್ಗಳ ಬಾಟಿಶೊಳ್

ನಿಜೆಸಲ್ ಬಗೆದೈ ಕರಮೆನೆ ಉಱದೆ ಇರ್ಕುಮೆ ನಿನ್ನ ಪೇೞ್ದ ಧರ್ಮಶ್ರವಣಂ: **ಪಂಪಭಾ**, ೯. ೪೫)

ಧರ್ಮಸಂತತಿ – [ನಾ] ಧರ್ಮದ ಮುಂದುವರಿಕೆ (ಗೃಹಸ್ಥಧರ್ಮದಿಂದಂ ನೀನೆಂತಂತೆ ಸಲೆ ನೆಗೞ್ಗೆ ಜಗತೀಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಕುಂ: **ಆದಿಪು**, ೮. ೧೩)

ಧರ್ಮಸುತ – [ನಾ] ಯುಧಿಷ್ಠಿರ (ಪುಟ್ಟುವುದುಂ ಧರ್ಮಂ ಒಡವುಟ್ಟಿದುದು ಈತನೊಳೆ ಧರ್ಮನಂಶದೊಳ್ ಈತಂ ಪುಟ್ಟಿದನೆಂದಾ ಶಿಶುಗೊಸೆದಿಟ್ಟುದು ಮುನಿಸಮಿತಿ ಧರ್ಮಸುತನೆನೆ ಪೆಸರಂ: **ಪಂಪಭಾ**, ೧. ೧೨೨)

ಧರ್ಮಾತ್ಮಜ – [ನಾ] ಧರ್ಮರಾಯ, ಯುಧಿಷ್ಠಿರ (ಧರ್ಮಾತ್ಮಜಂ ಕೇಳ್ದು ಆ ಹರಿ ಪೇೞ್ದುದೊಂದು ನಯದಿಂದಾ ರಾತ್ರಿಯೊಳ್ ಪೋಗಿ ಕುಂಭಜನಂ ಕಂಡು: **ಪಂಪಭಾ**, ೧೧. ೧೨೬)

ಧವಳ್ – [ಗು] ಬಿಳಿಯ (ಧವಳಹಯಂ ಧವಳರಥಂ ಧವಳ ಉಷ್ಣೀಷಂ ಶಶಾಂಕಸಂಕಾಶ ಯಶೋಧವಳಿತ ಭುವನಂ ತಾಗಿದಂ ಅವಯವದಿಂ ಬಂದು ಧರ್ಮತನಯನ ಬಲದೊಳ್: **ಪಂಪಭಾ**, ೧೧. ೩೯)

ಧವಳಚ್ಛತ್ರಚ್ಛನ್ನ – [ಗು] [ಧವಳಚ್ಛತ್ರತ್+ಛನ್ನ] ಬೆಳ್ಗೊಡೆಯಿಂದ ಮುಚ್ಚಿದ (ಉನ್ನತ ಧವಳಚ್ಛತ್ರಚ್ಛನ್ನ ವಿಯತ್ತಳನಂ ಇಂದುಕುಳತಿಳಕನಂ ಇಂತು ಅನ್ನೆಯದಿಂದ ಈ ಪಟುವಿನೊಳ್ ಎನ್ನರಸನಂ ಇಂತು ಬಿದಿಯೆ ತಂದಿಕ್ಕುವುದೇ: **ಪಂಪಭಾ**, ೨. ೨೨)

ಧವಳವಟ್ಟ – [ನಾ] ಬಿಳಿಯ ಬಟ್ಟೆ (ಸಾಹಿಯಾಣದ ಚೀನದ ಧವಳವಟ್ಟದ ಜೊಂಗದ ದೇವಾಂಗದ ಸಕಳವಟ್ಟೆಗಳುಮಂ: **ಆದಿಪು**, ೪. ೩೪ ವ)

ಧವಳಯಶಂ – [ನಾ] ನಿರ್ಮಲ ಕೀರ್ತಿಯುಳ್ಳವನು (ನರಸಿಂಗಂಗತಿ ಧವಳಯಶಂ ಯುದ್ಧಮಲ್ಲನಗ್ರಸುತಂ ತದ್ಭುವನ ಪ್ರದೀಪನಾಗಿರ್ದವಾರ್ಯ ವೀರ್ಯಂಗೆ ಬದ್ದೆಗಂ ಪಿರಿಯ ಮಗಂ: **ಪಂಪಭಾ**, ೧. ೨೩)

ಧವಳಾಕ್ಷತ – [ನಾ] ಬಿಳಿಯ ಅಕ್ಷತೆಕಾಳು (ಪರಸುವ ಪೌರವೃದ್ಧರ ಕುಲಾಂಗನೆಯರ್ಕಳ ಸಾಧುವಾದದೊಳ್ ಬೆರಸಿ ಸಮಂತು ಸೂಸುವ ಜಲಾರ್ದ್ರಲಸದ್ಧವಳಾಕ್ಷತಂಗಳೊಳ್: **ಪಂಪಭಾ**, ೨. ೯೫)

ಧವಳಾಕ್ಷಿ – [ನಾ] ಬೆಳ್ಳಗೆ ಹೊಳೆಯುವ ಕಣ್ಣುಳ್ಳವಳು (ಕಣ್ಣೞಿಯದ ಬೆಳ್ಳಂ ಅಲ್ಲೆಂ ಅೞಿದೆಂ ಧವಳಾಕ್ಷಿಯ ನೋಟದಂದದಮಂ: **ಪಂಪಭಾ**, ೪. ೭೬)

ಧವಳಾತಪತ್ರೇಶ್ವರ – [ನಾ] ಬೆಳ್ಗೊಡೆಯ ಒಡೆಯ, ಮಹಾರಾಜ (ನಿಮಗೆ ಮಗನುಚಿತ ಧವಳಾತಪತ್ರೇಶ್ವರಂ ದಿವದಿನವತರಿಪಂ ಅಮಿತಪುಣ್ಯೋದಯಂ: **ಆದಿಪು**, ೭. ೨೭ ರಗಳೆ)

ಧವಳಾತಪವಾರಣ – [ನಾ] ಬೆಳ್ಗೊಡೆ (ಧವಳಾತಪವಾರಣ ವಿಭೂತಿಯನುಟಿದು ನೆಗೞ್ದುಪಾಸಕನಾದಂ: **ಆದಿಪು**, ೬. ೬)

ಧವಳಿಸು – [ಕ್ರಿ] ಬೆಳ್ಳಗಾಗು, ಕಾಂತಿಯುಕ್ತವಾಗು (ತಱತಱಾಗಿರ್ದ ಕುಂಕುಮದ ನಿಜವದನಮಂ ತೆಱೆದ ಕಣ್ಗಳೊಳೆ ಧವಳಿಸಿದ ನಿಜವದನಮಂ: **ಆದಿಪು**, ೭. ೨೭ ರಗಳೆ)

ಧಾತಕೀ – [ನಾ] ಅರೆಹೂ, ಮರಾಟಿಮೊಗ್ಗು (ಪಿಷ್ಟೋದಕ ಧಾತಕೀ ಗುಡ ಸಮಯೋಗದಿಂದಂ ಎಂತು ಮದವಿಕಾರಮೆಸೆದಪ್ಪುದು ಅಂತೆ: **ಆದಿಪು**, ೨. ೯ ವ)

ಧಾತಕೀಷಂಡ – [ನಾ] ಪುಷ್ಕರದ್ವೀಪದ ಒಂದುಭಾಗ; ಧಾತಕೀವೃಕ್ಷವು ಹೇರಳವಾಗಿರುವ ಪ್ರದೇಶ: (ಈ ಧಾತಕೀಷಂಡದ ಮೂಡಣ ಮಂದರದಪರವಿದೇಹದ ಸೀತಾನದಿಯ ಬಡಗಣ ತಡಿಯ ಗಂಧಿಳವಿಷಯದ ಪಾಟಳಿಗ್ರಾಮದೊಳ್: **ಆದಿಪು**, ೩. ೩೩ ವ)

ಧಾತುಮಳ – [ನಾ] [ಜೈನ] ಇಂದ್ರಿಯಗಳಿಂದ ಹುಟ್ಟುವ ಕೊಳೆ, ಬೆವರು ಮುಂತಾದವು (ಧಾತುಮಳದೋಷರಹಿತಂ ವೀತನಖ ಶ್ಮಶ್ರು ಕೇಶ ಲೋಮಂ ಶೋಭಾನ್ವಿತಪರಿಪೂರ್ಣಯೌವನಂ: **ಆದಿಪು**, ೬. ೩೮)

ಧಾತ್ರ – [ನಾ] ಬ್ರಹ್ಮ (ಏಂ ಜಾಣನೋ ಧಾತ್ರಂ ರೂಪನಿಷ್ಪಾದನವಿಧಿಯೊಳಿವಂ ಮುನ್ನಮೇಂ ನೋಂಪಿಯಂ ನೋಂತನೊ: **ಆದಿಪು**, ೩. ೯೧); [ನಾ] ವಿಧಿ (ಸೀತೆ ಕಡಂಗಿ ಕಾಯ್ದು ಕಡೆಗಣ್ಚಿದಳಪ್ಪೊಡೆ ಧಾತ್ರನಿಂ ತೊದಳ್ವಾತಿನೊಳೇನೋ ಪಾಂಡವರ ಕೆಯ್ಯೊಳೆ ನಿನ್ನ ನಿಸೇಕಮಾಗದೇ: **ಪಂಪಭಾ**, ೯. ೪೯)

ಧಾತ್ರಿ – [ನಾ] ಭೂಮಿ (ಪ್ರತಿಮೆಗಳಟ್ಟು ಮೊಟಗಿದುದತಿರಭಸದೆ ಧಾತ್ರಿ ದೆಸೆಗಳುರಿದುವು ಭೂತಪ್ರತತಿಗಳಾಡಿದುವು ಒಳಜಿದವು ಅ'ತಿ ರಮ್ಯಸ್ಥಾನದೊಳ್ ಶಿವಾನಿವಹಂಗಳ್: **ಪಂಪಭಾ**, ೧. ೧೩೩)

ಧಾನುಷ್ಕಬಳ – [ನಾ] ಬಿಲ್ಗಾರರ ಪಡೆ (ಅನೇಕ ವರ್ಣಾಕೀರ್ಣ ತ್ರಿಸರವೇಣಿಕಾ ಗಾಢಗ್ರಥಿತ ತ್ರಪುಷಕೋಶ ಗುಪ್ತಗುಲ್ಫಾಂತರ ಪ್ರಾಪ್ತ ಖಡ್ಗಧೇನುಕಂ ಆಂಧ್ರಧಾನುಷ್ಕ ಬಳಂ: **ಆದಿಪು**, ೧೩. ೪೫ ವ)

ಧಾನ್ಯಕ – [ನಾ] ಕೊತ್ತುಂಬರಿ (ರಾಜಮಾಷ ಆಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧ ಧಾನ್ಯಭೇಧಂಗಳುಂ: **ಆದಿಪು**, ೬. ೭೨ ವ)

ಧಾನ್ಯಸಂಚಯ – [ನಾ] ದವಸದ ದಾಸ್ತಾನು (ಶಿರೋವ್ಯೂಢ ಧಾನ್ಯಸಂಚಯೋಪಭೋಗಿ ಜನ ನಿವಾಸಿಗಳಪ್ಪ ಸಂವಾಹಂಗಳುಮಂ: **ಆದಿಪು**, ೮. ೬೩ ವ)

ಧಾನ್ಯಸಮಿತಿ – [ನಾ] ದವಸದ ರಾಶಿ (ಪುದಿದ ತಱಗೆಲೆಗಳಂ ಕಂಡುದಱಿಂದಂ ಧಾನ್ಯಸಮಿತಿ ನೀರಸಮಕ್ಕುಂ: **ಆದಿಪು**, ೧೫. ೪೬)

ಧಾಮ – [ನಾ] ತೇಜಸ್ಸು ಮತ್ತು ವಾಸಸ್ಥಾನ (ವಿಪುಳಯಶಃಪಿಂಡಂ ಪುಣ್ಯಪುಂಜಂ ಕ್ಷತ್ರಧಾಮಧಾಮಂ ತಾನಾ ನೃಪಸುತಂ: **ಆದಿಪು**, ೮. ೪೪)

ಧಾರಾ – [ನಾ] ಸುರಿದ [ನೀರು] (ದುರ್ಯೋಧನಂ ಅತಿಸಂಭ್ರಮಾಕುಳಿತ ಪರೀತಜನ ಉಪನೀತ ಚಂದನಕರ್ಪೂರಮಿಶ್ರಿತ ಹಿಮಶಿಶಿರ ಧಾರಾಪರಿಷೇಕದಿಂದ ಎಂತಾನುಂ ಮೂರ್ಛೆಯಿಂದೆೞ್ಚತ್ತು: **ಪಂಪಭಾ**, ೧೩. ೨ ವ); [ನಾ] ಅಲಗು (ತದೀಯ ಕೌಕ್ಷೇಯಕ ಧಾರಾವಿದಾರಿತಶರೀರನುಂ ಆಗಿ ಬಿೞ್ದಿರ್ದ ಶರಾಚಾರ್ಯರಂ ಕಂಡು: **ಪಂಪಭಾ**, ೧೩. ೫೫ ವ)

ಧಾರಾಗೃಹ – [ನಾ] ತಂಪಾಗಿರಲು ನೀರು ಎರಚುವ ಏರ್ಪಾಟಿರುವ ಮನೆ (ಪಲವುಂ ಧಾರಾಗೃಹಂಗಳ್

ಅತನುವಿಕಾರಮಂ ಒದವಿಪುದು ದೇವದಂಪತಿಗದಱ್ಗೊಳ್: **ಆದಿಪು**, ೬. ೯೫)

ಧಾರಾಜಳಂ – **[ನಾ]** [ಮಳೆಯಂತೆ] ಸುರಿಯುವ ನೀರು (ಎಯ್ತಂದರಂ ತೊಱಗೊಳ್ವಂತಿರೆ ಕೊಂಡುವು ಅಂದು ಅರಿಗನೆಚ್ಚ ಉಗ್ರೇಷುಧಾರಾಜಳಂ: **ಪಂಪಭಾ**, ೫. ೨೧)

ಧಾರಾಸಾರ – **[ನಾ]** ಧಾರಾಕಾರವಾದ ಮಳೆ (ತದಂಘ್ರಿಪದ ದಳಂ ನವಕುಸುಮಾಳಿಗಳೆನಿಸಿದುವು ಅವಿರಳತರ ರತ್ನಪುಷ್ಪ ಧಾರಾಸಾರಂ: **ಆದಿಪು**, ೧೦. ೩)

ಧಾರೆ – **[ನಾ]** ಆಯುಧಧ ಅಲಗು (ಇರ್ಪತ್ತೊಂದು ಸೂೞ್ವರಂ ಪೇೞ್ ಪೆಸರಿಲ್ಲದಂತು ಕೊಂದು ತಂದೆಯ ಪಗೆಗೆಂದಲ್ಲಿಯೆ ತಂದು ನಿಜನಿಶಿತಪರಶುಧಾರೆಗಳಿಂ ನೆತ್ತರ್ ಸೂಸಿ ಪಾಯೆ ಕಡಿದು: **ಪಂಪಭಾ**, ೯. ೧೦೪ ವ); **[ನಾ]** ಪ್ರವಾಹ (ಅವರ ನೆತ್ತರ ಧಾರೆಯೊಳ್ ತೀವಿ ತನ್ನ ತಾಯಂ ನೀರಿೞಿಪಲುಂ ತಾನುಂ ಮಿಂದು ತಂದೆಗೆ ನೀರ್ಗುಡಲುಂ ಎಂದು ಮಾಡಿದ: **ಪಂಪಭಾ**, ೯. ೧೦೪ ವ)

ಧಾರ್ತರಾಷ್ಟ್ರ – **[ನಾ]** ಧೃತರಾಷ್ಟ್ರನ ಮಗ, ದುರ್ಯೋಧನ (ಊರುಯುಗ್ಮಂ ಮುಱಿದೆತ್ತಂ ನುಚ್ಚುನೂಱಾಗೆ ಕೆಡೆದಂ ಇಳಾಭಾಗದೊಳ್ ಧಾರ್ತರಾಷ್ಟ್ರಂ: **ಪಂಪಭಾ**, ೧೩. ೯೬)

ಧಿಷಣ – **[ನಾ]** ಪ್ರತಿಭಾವಂತ (ಧಿಷಣರ ಕೃತಿಗಳೊಳೆಸೆವ ಅಭಿಲಷಿತಗುಣಂಗಳನೆ ಬಿಸುಟು ಮಾತ್ಸರ್ಯ ಮಹಾವಿಷಮಮತಿಯಿಂದೆ ದೋಷಾಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂಗಳ್: **ಆದಿಪು**, ೧. ೨೨)

ಧುರ – **[ನಾ]** ಯುದ್ಧ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ**, ೧. ೧೦೩)

ಧುರಂಧರ – **[ನಾ]** ಹೊಣೆಗಾರ, ಭಾರ ಹೊತ್ತವನು (ಬಲದೇವ ವಾಸುದೇವರಾಗಿ ಪುಟ್ಟಿ ನಿಜಗುರುಪರೋಕ್ಷದೊಳ್ ಧರಾಭಾರಧುರಂಧರರಾಗಿರೆ: **ಆದಿಪು**, ೩. ೭೬ ವ)

ಧುರಭರ – **[ನಾ]** ಯುದ್ಧಕಾರ್ಯ (ಕರೆದೊಡೆ ಜೂದಿಂಗಂ ಧುರಭರಕೆ ಆಖೇಟಕ್ಕೆ ಭೂಭುಜಂಗೆ ಆಗದು ಮೆಯ್ಗರೆದಿರಲೆಂಬ ಪುರಾತನ ಗುರುವಚನಂ ತನಗೆ ನಿಟ್ಟೆಪಟ್ಟುದಱಿಂದಂ: **ಪಂಪಭಾ**, ೬. ೭೧)

ಧೂಪ – **[ನಾ]** ಸುವಾಸನೆ (ಧೂಪದ ಸುಯ್ಯುಮಂ ರತಿಯ ಸೌಭಾಗ್ಯಮುಮಂ ಮನೋಮಥನ ಮದನ ಮೋಹನ ಸಂತಾಪನ ವಶೀಕರಣಂಗಳೆಂಬ ಕಾಮದೇವಂ ಅಯ್ದು ಅರಲಂಬಿಂ ಶಕ್ತಿಗಳುಮಂ ಒಂದುಮಾಡಿ ಲೋಕಮೆಲ್ಲಮಂ ಮರುಳ್ಮಾಡಲೆಂದು ಪೆಣ್ಮಾಡಿದಿನಕ್ಕುಂ: **ಪಂಪಭಾ**, ೪. ೭೫ ವ)

ಧೂಪಗುಂಡಿಗೆ – **[ನಾ]** ಧೂಪದ ಪಾತ್ರೆ (ಸೂರ್ಯಕಾಂತದ ಧೂಪಗುಂಡಿಗೆಯೊಳಳವಱಿಯದೆ ಸೆಜ್ಜೆವಳನಿಕ್ಕಿದ ಕೇಶಸಂಸ್ಕಾರಕಾಳಾಗರುಧೂಪಂ: **ಆದಿಪು**, ೫. ೨೨ ವ)

ಧೂಪೋದ್ಧಾರ – **[ನಾ]** ಧೂಪ ಸಮರ್ಪಣೆ (ಮೂಱುಂ ಪೊತ್ತುಂ ಅರ್ಚನಾಪುರಸ್ಸರಂ ಧೂಪೋದ್ಧಾರಂಗೆಯ್ಯೆ: **ಆದಿಪು**, ೫. ೨೩)

ಧೂಮ – **[ನಾ]** ಹೊಗೆ (ಕರಂಗಳಡಂಗಿ ಕಿಲುಂಬುಗೊಂಡ ಕನ್ನಡಿಗೆಣೆಯಾಯ್ತು ಭಾನುವಳಯಂ ದಿವಿಜಾಪಗೆ ನೋಡೆ ನೋಡೆ ಕರ್ಪಡರ್ದೆಣೆಯಾದುದು ಆ ಯಮುನೆಗೆ ಅಗ್ಗದ ಯಾಗದ ಧೂಮದ ಏೞ್ಗೆಯೊಳ್: **ಪಂಪಭಾ**, ೬. ೩೬)

ಧೂಮವೇಣಿ – **[ನಾ]** ಹೊಗೆಯ ಎಳೆ (ಎತ್ತಮಗ್ಗಳಿಸಿದುದು ಆ ಭುಜಬಲಿಯ ಭುಜದ್ವಯದೊಳ್ ಭುಜಂಗನಿಶ್ವಾಸ ಧೂಮವೇಣೀನಿಕರಂ: **ಆದಿಪು**, ೧೪. ೧೪೧)

ಧೂಮವೇಣಿಕಾ – **[ನಾ]** ಧೂಮವೇಣಿ (ಮಿಳಿರ್ದುವು ಮುನಿಪಧ್ಯಾನಾನಳನಿರ್ಯತ್ ಧೂಮವೇಣಿಕಾನಿಕರದವೋಲ್; **ಆದಿಪು**, ೧೪. ೧೪೨)

ಧೂಸರ – **[ನಾ]** ದೂಳು (ಸರಯೂತರಂಗಶೀಕರ ಪರಿಚಿತಂ ಏಳಾಲವಂಗಕುಸುಮರಜೋಧೂಸರಂ: **ಆದಿಪು**, ೬. ೧೦೧)

ಧೂಸರಿತ – **[ಗು]** ಧೂಳಿನ ಬಣ್ಣದಿಂದ ಕೂಡಿದ (ಅವಿರಳ ನವಧೂಮಧೂಸರಿತ ನಭೋವಿವರಂ ವಿವಿಧಮಣಿಪ್ರಕರ ವಿರಾಜಿತ ಧೂಪಧೂಮಘಟಂ ಎಸೆದಿರ್ಕುಂ: **ಆದಿಪು**, ೧೦. ೩೦)

ಧೂಳೀಶಾಲ – **[ನಾ]** [ಜೈನ] ಸಮವಸರಣ ಮಂಟಪದ ಮೊದಲನೆಯ ಪ್ರಾಕಾರ (ಕೈಳಾಸಾಚಲಮನೇಱಿ ಧೂಳೀಶಾಲದಿಂ ತಗುಳ್ದು ಪೂರ್ವೋಕ್ತವರ್ಣನ ಉಪೇತಮಪ್ಪ ವೃಷಭಾಸ್ಥಾನ ಮಂಟಪಮಂ ನೋಡುತ್ತುಂ: **ಆದಿಪು**, ೧೩. ೮೨ ವ)

ಧೂಳೀಶಾಳ – **[ನಾ]** [ಜೈನ] ಧೂಳೀಶಾಲ (ಬೆಳಗಿಂದಂ ಬೆಳಪುದಲ್ಲಿ ಧೂಳೀಶಾಳಂ: **ಆದಿಪು**, ೧೦. ೨೩)

ಧೃತ – **[ಗು]** ತಾಳಿದ (ವಸನಾಳಂಕಾರ ಮಂದಾರಶೇಖರರಮ್ಯಂ ಧೃತಯೌವನಂ: **ಆದಿಪು**, ೮. ೫); ತಳೆದ, ಎತ್ತಿ ಹಿಡಿದ (ಚರ್ಚಿತಚಂದನಂ ಅತಿವಿಳಾಸವಿಧೃತದುಕೂಲಂ ಧೃತರತ್ನಾರ್ಘ್ಯಂ ಬಂದಂ: **ಆದಿಪು**, ೧೩. ೧೨)

ಧೃತಧವಳವಸನ – **[ನಾ]** ಧರಿಸಿದ ಬಿಳಿ ಬಟ್ಟೆಯುಳ್ಳ[ವನು], ಬಿಳಿ ಬಟ್ಟೆ ತೊಟ್ಟವನು (ಧೃತಧವಳವಸನರ್ ಆರಾಧಿತಶಿವರ್ ಅರ್ಚಿತಸಮಸ್ತಶಸ್ತ್ರರ್ ನೀರಾಜಿತತುರಗರ್ ಒಪ್ಪಿದರ್ ಕೆಲರ್ ಅತಿರಥ ಸಮರಥ ಮಹಾರಥ ಅರ್ಧರಥರ್ಕಳ್: **ಪಂಪಭಾ**, ೧೦. ೩೭)

ಧೃತಶಸ್ತ್ರ – **[ನಾ]** ಹಿಡಿಯಲ್ಪಟ್ಟ ಶಸ್ತ್ರವುಳ್ಳವನು, ಶಸ್ತ್ರ ಹಿಡಿದವನು (ಕೃತಶಾಸ್ತ್ರರ್ ಧೃತಶಸ್ತ್ರರ್ ಅಪ್ರತಿಹತಪ್ರಾಗಲ್ಭ್ಯರ್ ಈಗಳ್ ಪೃಥಾಸುತರ್ ಉದ್ಯೋಗಮಂ ಎತ್ತಿಕೊಳ್ವ ದೆವಸಂ ಸಾರ್ಚಿತ್ತು: **ಪಂಪಭಾ**, ೮. ೮೭)

ಧೃತಿ – **[ನಾ]** [ಜೈನ] ಒಂದು ಗರ್ಭಾನ್ವಯಕ್ರಿಯೆ – [ಜೈನ] ಒಂದು ಗರ್ಭಾನ್ವಯಕ್ರಿಯೆ (ಧೃತಿ ಮೋದ .. .. ಆಗ್ರನಿರ್ವೃತಿಯೆಂಬಯ್ವತ್ಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು**, ೧೫. ೧೫ ವ); **[ನಾ]** ಧೈರ್ಯ (ಇದಱ್ಗೊಳ್ ತನ್ನಿಷ್ಟವಪ್ಪನ್ನಂ ಉತ್ತರಂ ಅಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಾಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ: **ಪಂಪಭಾ**, ೧೪. ೬೫)

ಧೃಷ್ಟ – **[ನಾ]** ಉದ್ಧತ (ಈ ಕಥೆ ಗುಣ್ಪುವೆತ್ತುದು ಅವರುಂ ಜ್ಞಾನರ್ಧಿಸಂಪನ್ನರ್ ಎಂದಿರದೆ ಆಂ ಧೃಷ್ಟನೆಂ ಈ ಕಥಾಬ್ಧಿಯುಮಂ ಏನೀಸಲ್ ಮನಂದಂದೆನೋ: **ಆದಿಪು**, ೧. ೩೫)

ಧೈರ್ಯಕ್ಷರಣೆ – [ನಾ] ಮನಸ್ಸಿನ ಅಸ್ಥಿರತೆ (ಅಂತು ಕಂತುಶರ ಪರವಶನಾಗಿ ಧೈರ್ಯಕ್ಷರಣೆಯುಂ ಇಂದ್ರಿಯಕ್ಷರಣೆಯುಂ ಒಡನೊಡನಾಗೆ: **ಪಂಪಭಾ,** ೨. ೪೨ ವ)

ಧೋಧೂಯಮಾನ – **ಗು]** ಬೀಸುತ್ತಿರುವ (ಧೋಧೂಯಮಾನ ಧವಳಚಾಮರಸಹಸ್ರಸಂಛಾದಿತ ಸಹಸ್ರಕರಪ್ರಭಾಪ್ರಸರ ರಥಮನೇಜೆ: **ಆದಿಪು,** ೧೧. ೧೪ ವ)

ಧೌತ – [ಗು] ಪರಿಶುದ್ಧವಾದ (ಮತ್ತಂ ಅತ್ಯಂತ ಧೌತಕಲಧೌತಸ್ಥಾಸಕಾಳಂಕೃತ ನಕ್ಷತ್ರಮಾಳಾ ಪರಿಕಲಿತ ಕರೀಂದ್ರಂಗಳೆ: **ಆದಿಪು,** ೧೩. ೬ ವ)

ಧೌತಾಸಿನಿಭ – [ನಾ] ತೊಳೆದ ಕತ್ತಿಯಂತಿರುವ (ಧೌತಾಸಿನಿಭ ನಭೋಮಂಡಳನುಂ ಜನಿತಜಗಜ್ಜನ ಆನಂದನುಂ: **ಆದಿಪು,** ೧೦. ೬೭ ವ)

ಧ್ಯಾನ – [ನಾ] ಚಿಂತನೆ (ಧ್ಯಾನದೊಳಭವಂ ನೆಱೆದಿನಿಸಾನುಮನರೆಮುಚ್ಚಿ ಕಣ್ಗಳಂ: **ಪಂಪಭಾ,** ೮. ೧೩)

ಧ್ಯಾನಚಕ್ರ – [ನಾ] [ಜೈನ] ಚಿಂತನೆಯಿಂದ ಹುಟ್ಟುವ ಚಕ್ರ (ಆ ಮುನಿಯ ಮನೋಗಾರದೊಳ್ ಧ್ಯಾನಚಕ್ರಂ ಪುಟ್ಟತ್ತು ಆ ರಾಜ್ಯಾಶ್ರಮಮುನಿಯ ಆಯುಧಾಗಾರದೊಳ್ ಚಕ್ರರತ್ನಂ ಪುಟ್ಟಿತ್ತು: **ಆದಿಪು,** ೬. ೨೪ ವ)

ಧ್ರುವಂ – [ನಾ] ಸದಾ ಕಾಲ (ಅವನೋದುವನಿತು ಬುದ್ಧಿಯೆ ತವುತಂದೊಡೆ ಪಂಚಪದದ ನಾಮಾಕ್ಷರಮಂ ಧ್ರುವಂ ಓದುವುದವು ತೊಡರ್ವುದುಮವಶ್ಯಂ ಓದಲಸದವಱ ಮೊದಲಕ್ಕರಮಂ: **ಆದಿಪು,** ೨. ೫೫)

ಧ್ವಜ – [ನಾ] ಪತಾಕೆ (ಆದಿತ್ಯಂ ಮಸುಳ್ವನ್ನೆಗಂ ಧ್ವಜಘಟಾಟೋಪಂಗಳಿಂದಂ ಲಯಾಂಭೋದಂಗಳ್ ಕವಿವಂತೆವೋಲ್ ಕವಿವುದುಂ ಕಾಲ್ಗಾಪು ಕಾಲ್ಗಾಪಿನೊಳ್ ಜೋದರ್ ಜೋದರೊಳ್ .. .. ಅಗುರ್ವಪ್ಪನ್ನೆಗಂ: **ಪಂಪಭಾ,** ೧೦. ೯೩)

ಧ್ವಜಪಟ – [ನಾ] ಬಾವುಟದ ಬಟ್ಟೆ (ಅಂತು ವರ ಶಶಿವಿಶದ ಯಶಃಪಟಂಗಳಂ ನನ್ನಿಪಟಂಗೊಳ್ವಂತೆ ವಿವಿಧ ಧ್ವಜಪಟಂಗಳಂ ಕೊಂಡು: **ಪಂಪಭಾ,** ೮. ೧೧೯ ವ)

ಧ್ವಜಮಹೀತಳ – [ನಾ] ಬಾವುಟಗಳ ಜಾಗ (ಗಜ ವೃಷಭ ಅಂಕುಶ ಚಕ್ರ ಅಂಬುಜ ಹಂಸ ಮಯೂರ ಮತ್ಸ್ಯ ಫಣಿವೈರಿ ಮತಂಗಜರಿಪು ಚಿಹ್ನ ವಿಶಾಲಧ್ವಜಂಗಳಿಂ ಧ್ವಜಮಹೀತಳಂ ಸೊಗಯಿಸುಗುಂ: **ಆದಿಪು,** ೧೦. ೩೩)

ಧ್ವಜಿನಿ – [ನಾ] ಧ್ವಜವನ್ನು ಪಡೆದಿರುವಂಥದು, ಸೈನ್ಯ (ಬಿಡೆ ಪಿಣಿಲಂ ಕುರುಧ್ವಜಿನಿ ತೊಟ್ಟನೆ ಬಾಯನೆ ಬಿಟ್ಟುದು ಅಂದು ಗಂಡುಡೆಯುಡೆ ಗಂಡುಗೆಟ್ಟುದು: **ಪಂಪಭಾ,** ೮. ೧೦೧)

ಧ್ವಜಿನೀಪತಿ – [ನಾ] ಸೇನಾಧಿಪತಿ (ಅಖಂಡಪ್ರತಾಪಧ್ವಜನಂದು ತನ್ನ ಧ್ವಜಿನೀಪತಿಯನಟ್ಟಿ ಬಾಯ್ಕೇಳಿಸಿ: **ಆದಿಪು,** ೧೩. ೫೬ ವ)

ಧ್ವಜಿನೀಸಂಕ್ಷೋಭ – [ನಾ] ಸೇನೆಯ ಕೋಲಾಹಲ (ಭೂರಿ ಧ್ವಜಿನೀಸಂಕ್ಷೋಭಮಾಕಂಪಮುಂ ಅಶುಭಮಹೀಕಂಪಮುಂ ತನ್ನೊಳೊಂದಾಗೆ: **ಆದಿಪು,** ೧೪. ೮೯)

ಧ್ವನತ್ – [ಗು] ಮೊಳಗುವ, ಧ್ವನಿಸುವ (ಧ್ವನತ್ತೂರ್ಯಸಂತತಿ ನಾದಪ್ರತಿಪೂರಿತ ಅಖಿಳಕುಳಕ್ಷೋಣೀಧ್ರಕುಂಜಂ: **ಆದಿಪು,** ೭. ೩೮); [ಗು] ಝೇಂಕರಿಸುವ (ಧ್ವನದಳಿಕುಳಾಕುಳೀಕೃತ ವನಂಗಳಿಂದೆಸೆವ ಪದ್ಮಷಂಡಂಗಳ ಚೆಲ್ವಿನೊಳಂ ಕಣ್ಣ ಮನಮಂ ಅನುವಿಸುವ ವಿರಾಟಪುರಮನೆಯ್ದಿದರ್ ಅವರ್ಗಳ್: **ಪಂಪಭಾ,** ೮. ೫೨)

ಧ್ವಾಂಕ್ಷಧ್ವಜ – [ನಾ] ಕಾಗೆಯ ಗುರುತಿನ ಧ್ವಜ, ಅಂಥ ಧ್ವಜವುಳ್ಳ ಕರ್ಣ (ಅಂತು ಯುಗಾಂತವಾತಾಹತಕುಲಗಿರಿಯೆ ನೆಲೆಯಿಂ ತಳರ್ವಂತೆ ತಳರ್ದು ಧ್ವಾಂಕ್ಷಧ್ವಜಂ ಅಂಬರತಳದೊಳ್ ಮಿಳಿರೆ ತನಗಿದಿರಂ ಬರ್ಪ ಕರ್ಣನ ರಥಕ್ಕೆ: **ಪಂಪಭಾ,** ೧೨. ೧೩೬ ವ)

ಧ್ವಾನೋತ್ಕರ – [ನಾ] [ಧ್ವಾನ+ಉತ್ಕರ] ಸದ್ದುಗಳ ಸಮೂಹ (ಪುಷ್ಪಿತ ಹೇಮಪಂಕಜ ರಜಸ್ಸಂಸಕ್ತಭೃಂಗಾಂಗನಾನಿಕರಂ ಸಾರಸ ಹಂಸ ಕೋಕಿಳಕುಳಧ್ವಾನೋತ್ಕರಂ ಚೆಲ್ವನಾಯ್ತು ಕರಂ ಸಕ್ತನಿಳಿಂಪದಂಪತಿಗಳಿಂದಾ ನಂದನಂ ನಂದನಂ: **ಪಂಪಭಾ,** ೫. ೮೦)

ಧ್ವಾನ್ತ – [ನಾ] ಕತ್ತಲೆ (ಬಲನಿವಹರಜಸ್ಸಂತತಿಧ್ವಾನ್ತದೊಳ್ ಭೂತಳನಾಥಾನೀಕ ವರ್ಮೋತ್ಕರ ಖಚಿತಮಣಿಶ್ರೇಣಿರತ್ನಪ್ರದೀಪಾವಳಿ ದೀಪ್ತಿವ್ರಾತದಿಂದಂ: **ಆದಿಪು,** ೧೪. ೯೬)

ನ

ನಂಜು – [ನಾ] ವಿಷ (ಮನದೊಲವರದಿಂದ ಈ ಯಮತನಯನ ಕುಡುವಗ್ರಪೂಜೆ ಮತ್ಸನ್ನಿಧಿಯೊಳ್ ನಿನಗೆ ಅಶನಿಯ ಮಿಟ್ಟುವ ನಂಜಿನ ದೊರೆಯೆಂದೊಣರ ನಂದಗೋಪಾಲಸುತಾ: **ಪಂಪಭಾ,** ೬. ೫೧)

ನಂಜುಗುಡಿ – [ನಂಜು+ಕುಡಿ] ವಿಷ ಕುಡಿ (ದಿವ್ಯವಚನಮಂ ಅದಂ ಅಂತೇನುಂ ಬಗೆಯದೆ ಕುಡಿದು ಅಜ್ಞಾನತೆಯಿಂ ನಂಜುಗುಡಿದರಂತಿರೆ ಕೆಡೆದಂ: **ಪಂಪಭಾ,** ೮. ೪೦)

ನಂಜುನೀರ್ – [ನಾ] ವಿಷಯುಕ್ತ ನೀರು (ನಂಜುನೀರ್ ಪಿಡಿದು ನುಂಗುವುದಲ್ಲಿಯ ಮೀಂಗಳ್: **ಆದಿಪು,** ೫. ೮೮)

ನಂದ – ಸಂತೋಷಗೊಳ್ಳಲಿ (ಅತಿಮಧುರಂ ಒರ್ಮೊದಲೊಗೆದುದು ಜಯ ಜೀಯ ನಂದ ವರ್ಧಸ್ವ ರವಂ: **ಆದಿಪು,** ೨. ೬೪)

ನಂದಗೋಪಾಲಸುತ – [ನಾ] ನಂದಗೋಪಾಲನ ಮಗ, ಶ್ರೀ ಕೃಷ್ಣ (ಮನದೊಲವರದಿಂದ ಈ ಯಮತನಯನ ಕುಡುವಗ್ರಪೂಜೆ ಮತ್ಸನ್ನಿಧಿಯೊಳ್ ನಿನಗೆ ಅಶನಿಯ ಮಿಟ್ಟುವ ನಂಜಿನ ದೊರೆ ಎಂದು ಒಣರ ನಂದಗೋಪಾಲಸುತಾ: **ಪಂಪಭಾ,** ೬. ೫೧)

ನಂದನ – [ನಾ] ಮಗ (ರಾಜ್ಯಮಂ ತೃಣದಿಂದಂ ಲಘುವಾಗೆ ಬಗೆದು ಬಗೆದರ್ ತಾಮುಂ ತಂದೆಯ ಬಗೆದುದನೆ ಎಂದೊಡೆ ಅಗುಂದಲೆ ಪೊಗಟಲ್ಕೆ ಚಕ್ರಿನಂದನರಳವಂ: **ಆದಿಪು,** ೪. ೮೮); [ನಾ] ಉದ್ಯಾನವನ (ಇದಂ ಪುಗಲಿಂ ಗಡಿಂ ಎಂದು ಬೇಟಕಾಱರಂ ಇರದೆ ಊಜೆ ಸಾಜೆ ಜಡಿವಂತೆ ಎಸೆಗುಂ ಸಹಕಾರಕೋಮಳ ಅಂಕುರಪರಿತುಷ್ಟ ಪರಪುಷ್ಟಗಳ ಧ್ವನಿ ನಂದನಂಗಳೊಳ್: **ಪಂಪಭಾ,** ೨. ೧೩)

ನಂದನವನ – [ನಾ] [ಜೈನ] ಮೇರುಪರ್ವತದ ಮೇಲಿರುವ ನಾಲ್ಕು ವನಗಳಲ್ಲಿ ಒಂದು, ಉಳಿದ ಮೂರು: ಭದ್ರಶಾಲ, ಸೌಮನಸ ಮತ್ತು ಪಾಂಡುಕ (ಇದು ಭದ್ರಶಾಲನಂದನಂ ಅದು ನನ್ದನವನಂ ಅದಲ್ತೆ ಸೌಮನಸಂ ಅದೇಂ ತುದಿಯೊಳ್ ಪಾಂಡುಕವೆಸೆದಿರ್ಪದೊ: **ಆದಿಪು,** ೨. ೨೯)

ನಂದನವನಪ್ರಸ್ಥ – **ಗು]** ಉದ್ಯಾನವನ್ನೊಳಗೊಂಡ (ಅನೇಕ ಸಹಕಾರ ಅಶೋಕ ಆನೋಕಹ ನಂದನವನಪ್ರಸ್ಥಮಂ ಇಂದ್ರಪ್ರಸ್ಥಮಂ ಎಯ್ದೆವಂದು: **ಪಂಪಭಾ,** ೫. ೨೨ ವ)

ನಂದನವಿಮಾನ – ಸ್ವರ್ಗಲೋಕದಲ್ಲಿರುವ ಒಂದು ಸ್ಥಳದ ಹೆಸರು (ವರಾಹಾರ್ಯನುಂ ನಂದನವಿಮಾನದೊಳ್ ಮಣಿಮಮಕುಟಕೇಯೂರಮಣಿಕುಂಡಲವಿಭೂಷಣನ ಾಗಿ ಮಣಿಕುಂಡಲನೆಂಬೊಂ ದಿವಿಜನಾದಂ: **ಆದಿಪು,** ೫. ೭೦ ವ)

ನಂದಲೀ – [ಕ್ರಿ] [ನಂದಲು+ಈ] ಆರಲು ಅವಕಾಶ ನೀಡು (ಹೋಮಾಗ್ನಿಯಂ ಎಱಂಕೆಯ ಗಾಳಿಯಿಂ ನಂದಲೀಯದುರಿಪುವ ರಾಜಹಂಸೆಗಳುಮಂ .. .. ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ,** ೧. ೧೧೫ ವ)

ನಂದಿಸು – [ಕ್ರಿ] ಆರಿಸು (ಅನ್ನೆಗಂ ಕಪ್ಪಂಗವಿಯಾಗಿ ಕವಿವ ದ್ರುಪದವಿಳಯಾನಿಳನಂ ದ್ರೋಣಂ ಮಹಾದ್ರೋಣ ಪುಷ್ಕಲಳಾವರ್ತಕಂಗಳೆಂಬ ವಿಳಯಕಾಳ ನೀಳಜಳಧರ ವರ್ಷಂಗಳಿಂ ನಂದಿಸೆಯುಂ: **ಪಂಪಭಾ,** ೧೨. ೨೦ ವ); [ಕ್ರಿ] ಪ್ರಾಣ ತೆಗೆ (ಪತಿ ಮುಚ್ಚೆಯೊಳಿಚ್ಚೆಯೆ ಕೆಟ್ಟು ಜೋಲ್ದೊಡೆ ಆದಮೆ ನಸುನೊಂದು ನಂದಿಸದೆ ತನ್ನನೆ ನಿಂದಿಸಿದಂ ದಿನೇಶಜಂ: **ಪಂಪಭಾ,** ೧೨. ೧೧೭)

ನಂದೀಶ್ವರ – [ನಾ] [ಜೈನ] ನಂದೀಶ್ವರದಲ್ಲಿ ಸೌಧರ್ಮಾದಿ ಇಂದ್ರರ ಸಾನ್ನಿಧ್ಯದಲ್ಲಿ ಮಾಡುವ ಪೂಜೆ (ಆಕೆವೆರಸೊರ್ಮೆ ನಂದೀಶ್ವರಮಹಾಮಹಿಮೆಗಂ ಪಂಚಕಲ್ಯಾಣೊತ್ಸವಕ್ಕಂ ಅಚ್ಯುತೇಂದ್ರನೊಡನೆ ನಿಜಪೂಜಾವಿಳಾಸಮಂ ಮೆಱೆಯಲೆಂದು: **ಆದಿಪು,** ೨. ೭೭ ವ) [ಇಲ್ಲಿನ **'**ಮಹಾಮಹಿಮೆ**'** ಎಂಬುದು **'**ಮಹಾಮಹೆ**'**ಯಾಗಿರಬಹುದು; ಹಾಗಂದರೆ **'**ಮಹಾಮಹ**'** = ಉತ್ಸವ ಎಂಬುದು ನರಸಿಂಹಶಾಸ್ತ್ರಿಗಳ ಅಭಿಪ್ರಾಯ]

ನಂದು – [ಕ್ರಿ] ಆರಿಹೋಗು (ಭಾನುವೆ ಸಾಲದೆ ಪಗಲ್ ಎನಿತಾನುಂ ದೀವಿಗೆಗಳ್ ಉರಿದೊಡೆಂ ನಂದಿದೊಡೇಂ: **ಪಂಪಭಾ,** ೧೩. ೧೧)

ನಂದ್ಯಾವರ್ತ – [ನಾ] ನಂದಿಬಟ್ಟಲು ಹೂ ಮತ್ತು ನಂದಿಬಟ್ಟಲ ಹೂವಿನ ಆಕಾರದ ಮನೆ (ನಾಭಿರಾಜಾಂಗಸಂಗತಮಪ್ಪ ನಂದ್ಯಾವರ್ತದಂತೆ ಸೊಗಯಿಸುವ ನಂದ್ಯಾವರ್ತದೊಳಂ: **ಆದಿಪು,** ೬. ೧೦೬ ವ)

ನಂದ್ಯಾವರ್ತವಿಮಾನ – [ನಾ] [ಜೈನ] ಒಂದು ಸ್ವರ್ಗದ ಹೆಸರು (ವಾನರಾರ್ಯನುಂ ನಂದ್ಯಾವರ್ತವಿಮಾನದೊಳ್ ಮನೋರಥಾವಾಪ್ತದಿವ್ಯಭೋಗಂ ಮನೋರಥನೆಂಬಂ ಕಲ್ಪಜನಾದಂ: **ಆದಿಪು,** ೫. ೭೦ ವ)

ನಂಬದ ಬರವು – [ನಾ] [ಬೇಟೆಯಲ್ಲಿ ಪ್ರಾಣಿಗಳು] ಅಪಾಯದ ಸಂದೇಹದಿಂದ ಬರುವುದು (ನಂಬಿದ ಬರವುಂ ನಂಬದ ಬರವುಮಂ ಅಱಿದು ಮಲೆಯದುದಂ ಮಲೆಯಿಸಲುಂ ಮಲೆದುದಂ ತೊಲಗಿಸಲುಂ: **ಪಂಪಭಾ,** ೫. ೪೩ ವ)

ನಂಬಲಿಂ – ನಂಬದಿರಿ (ತೊಂಬಯ್ಸಾಸಿರ್ವರ್ ನಿಮ್ಮಂಬಿನ ಬಂಬಲೊಳೆ ಮಕುಟಬದ್ಧರ್ ಮಡಿದರ್ ನಂಬಿಂ ನಂಬಲಿಂ ಇಂದಿಂಗೊಂಬತ್ತು ದಿನಂ ದಲ್ ಎಮ್ಮ ಬೆನ್ನಲೆ ನಿಂದಿರ್: **ಪಂಪಭಾ,** ೧೧. ೨೯)

ನಂಬಿದ ಬರವು – [ನಾ] [ಬೇಟೆಯಲ್ಲಿ ಪ್ರಾಣಿಗಳು] ಆತಂಕವಿಲ್ಲದೆ ಬರುವುದು (ನಂಬಿದ ಬರವುಂ ನಂಬದ ಬರವುಮಂ ಅಱಿದು ಮಲೆಯದುದಂ ಮಲೆಯಿಸಲುಂ ಮಲೆದುದಂ ತೊಲಗಿಸಲುಂ: **ಪಂಪಭಾ,** ೫. ೪೩ ವ)

ನಃ – ನಮ್ಮನ್ನು (ಸ ಸರ್ವಜಗತಾಂ ಗುರುರ್ಗಿರಿಸುತಾಪತಿಃ ಪಾತು ನಃ: ೪. ೨೭)

ನಕುಲ – [ನಾ] ಪಂಚಪಾಂಡವರಲ್ಲೊಬ್ಬ (ನಕುಲಂ ಕುಂತಶಸ್ತ್ರದೊಳತಿಪ್ರವೀಣನುಮಾಗಿ: **ಪಂಪಭಾ,** ೨. ೩೬ ವ)

ನಕುಳ – [ನಾ] ನಕುಲ, ಮುಂಗುಸಿ (ಶಾರ್ದೂಲ ವರಾಹ ಗೋಲಾಂಗೂಲ ನಕುಳಂಗಳಂ ನೋಡುತ್ತಮವರ್ಕೆ ಭಕ್ಷ್ಯಾಪೂಪಗಳಂ ತಿರಿಸಿ ನೀಡುತ್ತಮಿರ್ದ: **ಆದಿಪು,** ೫. ೨ ವ)

ನಕ್ಕು – [ಕ್ರಿ] ನೆಕ್ಕು, ನಾಲಗೆಯಿಂದ ರುಚಿನೋಡು (ಎನಿತಾನುಂ ಅಂಬುನಿಧಿಗಳಂ ಅನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತಿಲ್ಲೆನಗೆ ನರಭೋಗಮೆಂಬೀ ಪನಿಪುಲ್ಲಂ ನಕ್ಕೆ ತೃಷ್ಣೆ ಪೇಟಿಲ್ ಪೋದಪುದೇ: **ಆದಿಪು,** ೯. ೫೭)

ನಕ್ರ – [ನಾ] ಮೊಸಳೆ (ಕರಾಳನಕ್ರಚರ್ವಿತ ನಿಕೀರ್ಣನಿರಯಜನಿಕುರುಂಬ ಶಲ್ಯಶಕಲಪರಿಪೂರಿತ ಧವಳಪ್ಲವದುರ್ನಿರೀಕ್ಷಣವಿಷಮೆಯುಂ: **ಆದಿಪು,** ೫. ೮೭ ವ)

ನಕ್ಷತ್ರ – [ನಾ] ಹುಟ್ಟಿದ ನಕ್ಷತ್ರ (ಶುಭತಿಥಿ ಶುಭನಕ್ಷತ್ರಂ ಶುಭವಾರಂ ಶುಭಮುಹೂರ್ತಮೆನೆ ಗಣಕಂ ಇಳಾಪ್ರಭುವೊಗೆದಂ ಉದಿತಕಾಯಪ್ರಭೆಯೊಗೆದಿರೆ ದಳಿತಶತ್ರುಗೋತ್ರಂ ಪುತ್ರಂ: **ಪಂಪಭಾ,** ೧. ೧೨೭)

ನಕ್ಷತ್ರಮಾಳಾ – [ನಾ] ಇಪ್ಪತ್ತೇಳು ಎಳೆಗಳ ಮುತ್ತಿನ ಕಂಠೀಹಾರ (ಅರ್ಧಹಾರ ರಶ್ಮಿಕಳಾಪ ನಕ್ಷತ್ರಮಾಳಾ ಅರ್ಧಗುಚ್ಛ ಮಾಣವಕ ಅರ್ಧಮಾಣವಕಗಳೆಂಬ ಪನ್ನೊಂದು ನಾನಾರತ್ನದ ಸುವರ್ಣಪದಕವಿರಚನಾದಿ ಭೇದದಿಂ: **ಆದಿಪು,** ೮. ೫೪ ವ)

ನಖಮಯೂಖ – [ನಾ] ಉಗುರಿನ ಕಾಂತಿ (ಪುಟ್ಟಿದಂ ಅಖಿಳ ಕ್ಷ್ಮಾಪಾಲಮೌಳಿ ಮಣಿರಂಜಿತ ಕಿರಣಾಪಾಳಿತ ನಖಮಯೂಖರಂಜಿತ ಚರಣಂ: **ಪಂಪಭಾ,** ೧. ೧೮)

ನಖಮಾಂಸ ಪ್ರೀತಿ – [ನಾ] ಉಗುರು ಮಾಂಸಗಳ ನಡುವಿರುವಂತಹ ಎಂದರೆ ಅನ್ಯೋನ್ಯ ಪ್ರೀತಿ (ಆತನೊಡವೋಯ್ತು ಪಗೆ ನಿಮಗೆ ಆತನಿಂ ಅಗ್ಗಳದ ಮಗನೆನಾಂ ನಖಮಾಂಸಪ್ರೀತಿಯೊಳೆ ನೆಗೆಟ್ಟಿಂ: **ಪಂಪಭಾ,** ೧೪. ೭)

ನಖರ – [ನಾ] ಉಗುರು (ಮೃಗರಾಜನಖರ ಬಾಣಾವಳಿಗಳಿಂ ತೆಗೆನೆಱೆದು ಶಲ್ಯಂ ಉಱದೆ ಇಸೆ ಬಿದುವಂ ಮೃಗರಾಜಂಗಳೆ ಪೋಟ್ಟಿವೊಲ್: **ಪಂಪಭಾ,** ೧೦. ೧೦೯)

ನಗ – [ನಾ] ಪರ್ವತ, ಬೆಟ್ಟ (ಪ್ರೀತಿವರ್ಧನಂ ರಿಪುನೃಪರಂ ಚಲದಲೆದು ಬಂದು ಚಾತುರ್ಬಲಯುತಂ ಆ ನಗದೆ ಬಳಸಿ ಬೀಡಂ ಬಿಟ್ಟಂ: **ಆದಿಪು,** ೫. ೫)

ನಗಕೂಟಾರೋಹಣ – [ನಾ] ಬೆಟ್ಟದ ಶಿಖರವನ್ನೇರುವುದು (ವಿಪಿನೋಲ್ಲಂಘನ ಸಿಂಧುಯಾನ ನಗಕೂಟಾರೋಹಣ ಕ್ಲೇಶಮಂತ್ರಪದಧ್ಯಾನ ಬಿಳಪ್ರವೇಶ ರಸವಾದ ಆಯಾಸದೊಳ್: **ಆದಿಪು,** ೧೬. ೭)

ನಗತಟ – [ನಾ] ಬೆಟ್ಟದ ತಪ್ಪಲು (ಸಿದ್ಧದಂಪತಿಗಳ್ ಕ್ರೀಡಿಸುತಿರ್ಪರೀ ನಗತಟಶ್ರೀಖಂಡಷಂಡಂಗಳೊಳ್: **ಆದಿಪು,** ೯. ೧೧೮)

ನಗರ – [ನಾ] ಪಟ್ಟಣ (ಅನುಕ್ರಮದಿಂ ಗ್ರಾಮ ನಗರ ಖೇಡ ಖರ್ವಡ ಮಡಂಬಂಗಳೊಳ್ ಎಡಂಬಡಿಲ್ಲದೆ ಚರ್ಯಾಮಾರ್ಗದೊಳ್ ನಡೆವಲ್ಲಿ: **ಆದಿಪು,** ೯. ೧೨೪ ವ)

ನಗಿಸು – [ಕ್ರಿ] ನಗುವಂತೆ ಮಾಡು (ಕಾರುಣ್ಯನಿನಾದಂ ನಿನ್ನಾದಂ ನಗಿಸುಗುಂ: **ಆದಿಪು,** ೩. ೬)

ನಗು – [ಕ್ರಿ] ಅಪಹಾಸ್ಯಮಾಡು (ಪಂದಲೆಯೊಳಾದ ಮುಗುಳ್ನಗೆ ಭೀತರಾದರೆಲ್ಲರುಮಂ ಅಳುರ್ಕೆಯಿಂ ನಗುವವೋಲ್: **ಪಂಪಭಾ,** ೧೩. ೫೮)

ನಗೇಂದ್ರ – [ನಾ] ಪರ್ವತಶ್ರೇಷ್ಠ, ಶ್ರೇಷ್ಠ ಪರ್ವತ (ಗುಹ್ಯಕನೆಂಬನಂ ಸ್ಮರಣಮಾತ್ರದೊಳ್ ಬರಿಸಿ ಸಾಹಸಾಭರಣನಂ ಇಂದ್ರಕೀಲ ನಗೇಂದ್ರಮಂ ಎಯ್ದಿಸಿ ಬರ್ಪುದೆಂದು ಪೇೞ್ವುದುಂ: **ಪಂಪಭಾ,** ೭. ೬೬ ವ)

ನಗೋಪತ್ಯಕ – [ನಾ] ಬೆಟ್ಟದ ತಪ್ಪಲು (ಓರಂತೊಱಗಿರ್ದ ಶಾಳಿವನದಿಂ ಸೇವ್ಯಂ ನಗೋಪತ್ಯಕಂ: **ಆದಿಪು,** ೧. ೬೪)

ನಚ್ಚಿನಚ್ಚು – [ನಾ] [ನಚ್ಚಿನ+ಅಚ್ಚು] ನಂಬಿಕೆ ಅಥವಾ ಆತ್ಮವಿಶ್ವಾಸದ ಮುದ್ರೆ (ನಚ್ಚಿನಚ್ಚು ಉಡಿವಿನಂ ಎಚ್ಚೊಡೆ ಎಚ್ಚೆಡೆಯಿಂ ಎಚ್ಚ ಅರುಣಾಂಬು ಕಲಂಕಿ ಪಾಯೆ: **ಪಂಪಭಾ,** ೧೧. ೧೪೨)

ನಚ್ಚು – [ಕ್ರಿ] ನಂಬು (ಎಂದು ಕೈದವಮಿಲ್ಲದ ನಲ್ಮೆಯಂ ನಾಲಗೆಯ ತುದಿಗೆ ತಂದು ನುಡಿದಲ್ ಮತ್ತೋರ್ವಲ್ ತನ್ನ ಆಣ್ಮನ ದೋರ್ವಲದ ಅಗುರ್ವಂ ನಚ್ಚಿ: **ಪಂಪಭಾ,** ೧೦. ೪೫ ವ); [ನಾ] ಆತ್ಮವಿಶ್ವಾಸ (ದನುತನೂಜನೆಚ್ಚ ವಾರ್ಧಿಗೆ ಅನಲಬಾಣದಿಂದೆಚ್ಚು ನಚ್ಚುಗಿಡಿಸೆ ಕೊಂಡು ಶೂಲಮಂ ಘಟೋತ್ಕಚಂ: **ಪಂಪಭಾ,** ೧೨. ೧೩)

ನಚ್ಚುವೋಗು – [ಕ್ರಿ] ನಂಬಿಕೆಗೆ ಪಾತ್ರವಾಗು (ದನುಜಾಂತಕನೆಂಬೀ ನಿನ್ನ ನಚ್ಚುವೋದಂಕಮೆಲವೊ ಮುನ್ನೆನ್ನನ್ನಂ ದನುಜಂ ಪುಟ್ಟದೆ ಸಂದುದು ನಿನಗೀ ಪೆಸರ್: **ಪಂಪಭಾ,** ೬. ೫೪)

ನಟ – [ನಾ] ಶಿವ (ಅಪಗತಕಪಟದೆ ನಟಂ ಅದಂ ಉಪದೇಶಂಗೆಯ್ದು ಪರಸಿ ಪೋಗೆನೆ: **ಪಂಪಭಾ,** ೧೧. ೧೩೧); [ನಾ] ನರ್ತಕ, ಅಭಿನಯಿಸುವವನು (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರ ಉದ್ಭೂತರವಂ ಎಸೆಯೆ: **ಪಂಪಭಾ,** ೧೨. ೧೦೬)

ನಟನ – [ನಾ] ನರ್ತನ, ಕುಣಿತ (ಪರಿಪಠನ ನಟನ ಮೃದುಕೂಜಿತ ರಸಿತ ದರಹಸಿತ ಕ್ರೇಂಕಾರ ಆರೋಹಣಾದಿ ಯೋಧನಾದಿ ನಾನಾ ವಿನೋದಂಗಳೊಳ್: **ಆದಿಪು,** ೮. ೩ ವ)

ನಟ್ಟು ನಡು – [ಕ್ರಿ] ಆನಿಕೆ ಕೊಡು, ಅವಲಂಬನೆ ನೀಡು (ದಿಟ್ಟಿ ಮನಮೆಂಬಿವು ತೊಟ್ಟನೆ ನಟ್ಟು ನಟ್ಟವೋಲ್ ಘಟಿಯಿಸೆ ಸೋಲ್ತೊಱಲ್ದು ನಡೆ ನೋೞ್ಪೆಡೆಯೊಳ್: **ಆದಿಪು,** ೩. ೯೦)

ನಟ್ಟಿರುಳ್ – [ನಾ] ನಡುರಾತ್ರಿ (ಪೋಗು ಕೆಟ್ಟಪುದು ಮೋಹಮಯ ನಿಗಳಂ ಕಳತ್ರಮೆಂದಱಿಪದೆ ನಟ್ಟಿರುಳ್ ಮಱೆದು ಸಾರ್ಚಿದ ನಲ್ಲಳ ತಳ್ತ ತೋಳ್ಗಳಂ: **ಪಂಪಭಾ,** ೪. ೧೨)

ನಟ್ಟುವ – [ನಾ] ನಟರನ್ನು ಆಡಿಸುವವನು (ವಿಚಿತ್ರಾಕಾರ ರಸಾಂತರಂಗದೊಳ್ ಪುದಿದಿರೆ ಮಾಣದಾಡಿಸಿದಂ ಆತನಂ ಅಂಗಜನೆಂಬ ನಟ್ಟುವಂ: **ಆದಿಪು,** ೪. ೧೫)

ನಡನಡನಡುಗು – [ಕ್ರಿ] ಕೋಪದಿಂದ ಕಂಪಿಸು (ದಶನಪೀಡಿತ ದಶನವಸನಂ ಅಸಿಧೇನುವಂ ಕಿೞ್ತು ನಡನಡನಡುಗಿ: **ಆದಿಪು,** ೨. ೧೪ ವ)

ನಡಪು – [ಕ್ರಿ] ಸಾಕು, ರಕ್ಷಿಸು (ಆಕೆಯಂ ನೆನೆದು ಇಂದ್ರಿಯಕ್ಷರಣೆಯಾದೊಡೆ ಅದನೊಂದು ಕದಳಿಪತ್ರದೊಳ್ ಪುದಿದು ತನ್ನನಡಪಿದ ಗಿಳಿಯ ಕೈಯೊಳೋಪಳಲ್ಲಿಗಟ್ಟಿದೊಡೆ: **ಪಂಪಭಾ,** ೧. ೬೮ ವ); [ಕ್ರಿ] ಸಾಕಿ ಬೆಳಸು (ಆ ಪರ್ವತದ ವಿಪುಳವನ ಉಪಕಂಠಂಗಳೊಳ್ ತಾಪಸಕನ್ಯೆಯರ್ ನಡೆಪಿದೆಳಲತೆಗಳೊಳೆಱಗಿ ತುಱುಗಿ ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ: **ಪಂಪಭಾ,** ೧. ೧೧೫ ವ)

ನಡು – [ಕ್ರಿ] ಚುಚ್ಚು (ಉರದೊಳ್ ನಟ್ಟ ಸುರಿಗೆ ಬೆನ್ನೊಳ್ಮೂಡೆ: **ಆದಿಪು,** ೨. ೧೪ ವ); ಸೊಂಟ (ತ್ರಿವಳಿಗಳುಂ ವಿರೋಧಿನೃಪರುತ್ಸವಮುಂ ಕಿಡೆವಂದುವು ಆನನೇಂದುವ ಕಡುವೆಳ್ಪು ಕೂಸಿನ ನೆಗೞ್ತೆಯ ಬೆಳ್ಪುವೊಲಾಯ್ತು ಮುನ್ನೆ ಬಳ್ಕುವ ನಡು ತೋರ್ಪ ಮೆಯ್ಯನೊಳಕೊಂಡುದು: **ಪಂಪಭಾ,** ೧. ೭೨೫); [ಕ್ರಿ] ನಾಟಿಕೊ (ಗಂಡರಳ್ಳೆರ್ದೆಗಳಂ ತುಟಿವೋಜೆಯನುಂಟುಮಾಡುವಂದದೆ ನಿಡುಗಣ್ಣಗೊಳ್ ನಡೆ: **ಪಂಪಭಾ,** ೪. ೩೫)

ನಡುಕ – [ನಾ] ಕಂಪನ (ಮನದ ಶಂಕೆಯುಮಂ ನಡುಗುವ ಮೆಯ್ಯ ನಡುಕಮುಂ ಕಿಡೆ ನುಡಿದಿಂತೆಂದಂ: **ಪಂಪಭಾ,** ೧. ೯೨ ವ)

ನಡುನಾಡು – [ನಾ] ನಾಡ ನಡುಭಾಗ (ನಡುನಾಡೊಳ್ ಅಱಿಂ ನೆಲಸದೆ ಕಡೆಯೊಳ್ ನೆಲೆಗೊಳ್ಗಂ: **ಆದಿಪು,** ೧೫. ೪೦)

ನಡುಪು – [ಕ್ರಿ] ನಡುಗು (ಘರ್ಮಜಲದಿಂ ನಡುಪ ಆಕೆಯ ಪಾಣಿಪಲ್ಲವಂಬಿಡಿದು: **ಪಂಪಭಾ,** ೩. ೭೫)

ನಡುವಗಲ್ – [ನಾ] [ನಡು+ಪಗಲ್] ಹಗಲಿನ ನಡುವಣಭಾಗ, ಮಧ್ಯಾಹ್ನ (ಅಂತು ಚಾತುರ್ದಂತಂ ಒಂದೊಂದಱೊಳ್ ಓರಂತೆ ನಡುವಗಲ್ವರಂ ಕಾದುವುದುಂ: **ಪಂಪಭಾ,** ೧೧. ೩೬ ವ)

ನಡೆ – [ಅ] ಚೆನ್ನಾಗಿ (ತನ್ನನೆ ನಡೆ ನೋಡಿಸುತ್ತುಮಿರೆ ಜಾಯಿಲಮೊಂದೆರಡೆಂದು ತೋಱಿ ನೆಟ್ಟನೆ ಪದಿನೆಂಟು ಕೋಟಿವರೆಗಂ ತಳರ್ದತ್ತು ತುರಂಗಸಾಧನಂ: **ಆದಿಪು,** ೧೧. ೩೧); [ಕ್ರಿ] ಯುದ್ಧಕ್ಕೆ ಹೋಗು (ನಿನಗುತ್ತರಾರ್ಧಂ ಒಂದರ್ಧನಿಮೇಷ ಮುಹೂರ್ತಮಾತ್ರದಿಂ ಬಾರದೆ ಕೈಗೆ ಇನಿತುವರಂ ದೇವರ್ ನಡೆವನಿತುಂ ಮಾಣ್ಬನಿತುಂ ಅಂತದಾವುದು ಗಹನಂ: **ಆದಿಪು,** ೧೩. ೨೨)

ನಡೆಗಿಡು – [ಕ್ರಿ] ನಡೆ ನಿಂತುಹೋಗು (ಸಂತಸಮಂ ಮಱುಕಕ್ಕೆ ಮಾಣ್ದೊಡೆ ಈ ನಡೆಗಿಡೆ ಸತ್ವಮಂ ತಮಮುಮಂ ಕಡೆಗಣ್ಣೊಳೆ ಕಂಡೆನೋಪಳಾ: **ಪಂಪಭಾ,** ೪. ೭೮)

ನಡೆಗೊಳ್ – [ಕ್ರಿ] ಹೋಗು (ಆಗಳ್ ಅಶ್ವತ್ಥಾಮನುಂ ಕೃಪನುಂ ಸಿಗ್ಗಾಗಿ ಹಿಮವತ್ಪರ್ವತಕ್ಕೆ ನಡೆಗೊಂಡರ್: **ಪಂಪಭಾ,** ೧೩. ೧೦೭ ವ)

ನಡೆನೋಡು – [ಕ್ರಿ] ಗುರಿಯಿಟ್ಟು ನೋಡು (ಮೆಲ್ಲನೆ ಮೃಗಮೆಂದು ಸಾರ್ದು ನೆಱನಂ ನಡೆ ನೋಡಿ ನರೇಂದ್ರನೆಚ್ಚು ಭೋಂಕನೆ ಮೃಗಚಾರಿಯಂ ತನಗೆ ಮಾಣದೆ ತಂದನದೊಂದು ಮಾರಿಯಂ: **ಪಂಪಭಾ,** ೧. ೧೧೧); [ಕ್ರಿ] ವಿಚಾರಿಸು, ಲೆಕ್ಕ ಹಾಕು (ತಗುಳ್ದಿರೆ ಬಲ್ಲರ್ ನಡೆ ನೋಡಿ ಕೂಡೆ ಪಡೆದತ್ತು ಅಕ್ಷೋಹಿಣೀಸಂಖ್ಯೆಯಂ: **ಪಂಪಭಾ,** ೯. ೯೫); [ಕ್ರಿ] ಸುಮ್ಮನೆ ನೋಡು (ಅಧರ್ಮಯುದ್ಧದೆ ನರಂ ಕೊಲ್ವಲ್ಲಿ ಕಂಡಿಂತುಪೇಕ್ಷಿಸಿ ನೀಮುಂ ನಡೆ ನೋಡುತಿರ್ದಿರಿ ಎನೆ ಮತ್ತಿನ್ನಾರನಾಂ ನಂಬುವೆಂ: **ಪಂಪಭಾ,** ೧೧. ೮೩)

ನಡೆಪಾಡು – [ಕ್ರಿ] ಸಂಚರಿಸು (ಪಾಡುವ ತುಂಬಿ ಕೋಡುವ ಪುಟೆಲ್ ನಡೆಪಾಡುವ ರಾಜಹಂಸೆ ಬಂದಾಡುವ ತೊಂಡುವೆಣ್ಬುರುಳಿ .. .. ಅನುರಾಗಮಂ ಮಾಡೆ ಮನಕ್ಕೆ: **ಪಂಪಭಾ,** ೩. ೩೭)

ನಡೆಯಿಸು – [ಕ್ರಿ] ನಿರ್ವಹಿಸು (ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ ನಡೆಯಿಸಿ ಪುರ್ವದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್: **ಆದಿಪು,** ೯. ೩೨)

ನಡೆವಣಿ – [ನಾ] [ನಡೆವ+ಅಣಿ] ನಡೆಯುವ ಸೈನ್ಯದ ಸಾಲು (ಕೋಳ್ಮಸಗಿದ ಪುಲಿಯ ಪಿಂಡುಗಳುಮಂ ಅನುಕರಿಸಿ ನಡೆವಣಿಯ ಸಂದಣಿಯುಮಂ ಕಾಟ್ಟುಱು ಮಸಗಿದಂತೆ ಮಸಗಿದ ದುರ್ಧರರಥನುರ್ಧರಬಲಮುಮಂ: **ಪಂಪಭಾ,** ೧೦. ೫೧ ವ)

ನಣ್ಪಿನಯ್ಯ – [ನಾ] ಪ್ರೀತಿಯ ತಂದೆ[ಯೇ] (ನಣ್ಪಿನಯ್ಯ ನಿಮಗಂ ಮಗನಲ್ಲನೆ ಧರ್ಮನಂದನಂ: **ಪಂಪಭಾ,** ೧೩. ೧೮)

ನಣ್ಪು – [ನಾ] ಬಾಂಧವ್ಯ, ನಂಟಸ್ತಿಕೆ (ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ: **ಆದಿಪು,** ೮. ೬೪ ವ)

ನದ – [ನಾ] [ರಭಸವಾಗಿ ಹರಿಯುವ] ಗಂಡುತೊರೆ (ಅನವರತ ನಿಹತ ನರ ಕರಿ ತುರಗ ನಿಕುರುಂಬ ಕೀಲಾಲ ಕಲ್ಲೋಲ ಪ್ರವರ್ತನ ಅನೇಕ ನದ ನದೀ ಪ್ರವಾಹಬಾಹುಳ್ಯದುಸ್ತರಾವತರಣ ಮಾರ್ಗಮುಂ: **ಪಂಪಭಾ,** ೧೩. ೫೧ ವ)

ನದಕೂಳ – [ನಾ] ನದತಟ (ಆಶ್ರಿತಾದ್ರಿ ನದಕೂಳಮಂ ಅತ್ಯಧರೀಕೃತ ಅನ್ಯಕುತ್ಕೀಳಂ ಇಂದುಕಾಂತಸುನೀಳಮಂ ಎಯ್ದಿದಂ ಇಂದ್ರಕೀಳಮಂ: **ಪಂಪಭಾ,** ೭. ೭೬)

ನದತ್ – [ಗು] ಸದ್ದುಮಾಡುವ, ಮೊಳಗುವ (ವನಧಿಧ್ವಾನಮನೊಡ್ಡಿಸುತ್ತಿರೆ ನದದ್ಗಂಭೀರಭೇರೀಬೃಹದ್ಧ್ವನಿ: **ಆದಿಪು,** ೧೪. ೧೪೯)

ನದಿ – [ನಾ] ಹೊಳೆ (ಅನವರತ ನಿಹತ ನರ ಕರಿ ತುರಗ ನಿಕುರುಂಬ ಕೀಲಾಲ ಕಲ್ಲೋಲಪ್ರವರ್ತನ ಅನೇಕ ನದ ನದೀ ಪ್ರವಾಹಬಾಹುಳ್ಯದುಸ್ತರಾವತರಣ ಮಾರ್ಗಮುಂ: **ಪಂಪಭಾ,** ೧೩. ೫೧ ವ)

ನದಿಪು – [ಕ್ರಿ] ಆರಿಸು, ನಂದಿಸು (ಕುಳಿರ್ವ ಆಲಿನೀರ್ಗಳಿಂ ತುರಿಪದೆ ಸೂಸುತುಂ ಕೆಳದಿಯರ್ ನದಿಪುತ್ತುಮಿರೆ: **ಪಂಪಭಾ,** ೫. ೮)

ನದೀಜ – [ನಾ] ಭೀಷ್ಮ (ಪರಶುರಾಮನನಂಜಿಸಿ ಬೀರಕ್ಕಾಗರಮಾದ ನದೀಜಂ ಏದೊರೆಯಂ ಗಳ ಕುಂಭಪ್ರೋದ್ಭವಂ: **ಪಂಪಭಾ,** ೭. ೬೫)

ನದೀತನೂಜ – [ನಾ] ಭೀಷ್ಮ (ಅನಿಬರುಂ ಚೋದ್ಯಂಬಟ್ಟು ಗಾಂಗೇಯ ಧೃತರಾಷ್ಟ್ರರ್ಗಱಿಪಿದೊಡೆ ನದೀತನೂಜಂ ಭಾರದ್ವಾಜಂಗೆ ಬಟೆಯನಟ್ಟಿ ಬರಿಸಿ: **ಪಂಪಭಾ,** ೨. ೫೨ ವ)

ನದೀನಾಥ – [ನಾ] [ಜೈನ] ಸಾಗರ, ಒಂದು ದೀರ್ಘಾವಧಿ (ಇಂತಿರ್ವರುಂ ಪೂಣ್ದು ಅಲಂಪಿನೊಳುಂಡರ್ ಕಡೆಯೆಯ್ದೆ ಷೋಡಶನದೀನಾಥೋಪಮ ಆಯುಷ್ಯಮಂ: **ಆದಿಪು,** ೩. ೭೬)

ನದೀಸುತ – [ನಾ] ಭೀಷ್ಮ (ಗುರು ಗುರುಪುತ್ರ ಶಲ್ಯ ಭಗದತ್ತ ನದೀಸುತರೆಂಬ ಸಂದ ಬೀರರೆ ಮಱುವಕ್ಕಂ ಅಣ್ಣನೊಡನೆ ಇರ್ವರೆ ಕೂಸುಗಳ್: **ಪಂಪಭಾ,** ೧೧. ೧೨)

ನ ದೇವಚರಿತಂ ಚರೇತ್ – ದೇವರ ನಡೆಯಂತೆ ನಡೆದುಕೊಳ್ಳಲಾಗದು (ನ ದೇವಚರಿತಂ ಚರೇತ್ ಎನಿಸಿದೈ ತ್ರಿಲೋಕೇಶ್ವರಾ: **ಆದಿಪು,** ೧೩. ೮೪)

ನದ್ಧ – [ಗು] ಲಗತ್ತಿಸಿದ (ಕರಿಸೇನಾಸಾರಿನದ್ಧ ಉತ್ತರಳಕದಳಿಕಾ ಕಾನನೋಚ್ಚುಂಬ್ಯಮಾನಾಂಬರಚಕ್ರಂ: **ಆದಿಪು,** ೪. ೨೪)

ನದ್ಯುತ್ತರಣ – [ನಾ] [ನದಿ+ಉತ್ತರಣ] ನದಿಯ ದಾಟುವಿಕೆ (ಅಂತುಭಯ ನದಿಯ ವೈಷಮ್ಯಮಂ ಆಶ್ಚರ್ಯಂಬಟ್ಟು ನೋಡಿ ನದ್ಯುತ್ತರಣುಪಾಯಮಾವುದೆಂದು ಬಗೆದು: **ಆದಿಪು,** ೧೩. ೫೧ ವ)

ನನೆ – [ನಾ] ಮೊಗ್ಗು (ಬನದ ತಳಿರ್ ಕಳಿಕೆ ಮುಗುಳ್ ನನೆ ಬಿರಿಮುಗುಳ್ ಅಲರ ಗೊಂಚಲೆಂಬಿವು: **ಆದಿಪು,** ೧೧. ೧೨೯)

ನನೆಕೊನೆ – [ನಾ] ಮೊಳಕೆ (ನನೆಕೊನೆಯ ತಳಿರಪೂವಿನ ಬನಮನಿತುಂ ಶಿಖೆಗಳಲುರೆ ಬೆಂಕೆಯ ಪೊಯ್ದುರ್ವಿನೊಳೆ ಕೊರಗಿರ್ದ ಲತೆಗಳ ನನೆಕೊನೆಯನೆ ದಹನನಳುರ್ದು ಕೊನೆಗೊನೆಗೊಂಡಂ: **ಪಂಪಭಾ,** ೫. ೮೭)

ನನೆದೋಱು – [ಕ್ರಿ] ಹೂಬಿಡಲು ತೊಡಗು (ಚೂತಕುಲ ಜಾತಮೀಗಳೀಗಳೆ ನನೆದೋಱಿತು: **ಆದಿಪು,** ೧೩. ೫)

ನನೆನಾಱು – [ಕ್ರಿ] ನರುಗಂಪಿನಿಂದ ತುಂಬು (ನನೆಯೆಳಗಂಪನೆತ್ತಿಯುಂ ಅಣಂ ನನೆನಾಱದೆ ಅರಲ್ದು ಅನೇಕ ಕೋಕನದವನಂಗಳೊಳ್ ಸುಟೆದು ತಣ್ಣಸಮಾಗದೆ: **ಪಂಪಭಾ,** ೫. ೩೪)

ನನೆಯಂಬು – [ನಾ] ಹೂಬಾಣ (ನನೆಯಂಬನೆ ಕರ್ಚಿ ಪಾಱಿದಪುದೋ ಶೃಂಗಾರವಾರಾಶಿ ಭೋಂಕನೆ ಬೆಳ್ಪಂಗೆಡೆದತ್ತೊ ಕಾಮನ ಎಱಿ ಮೆಯ್ವೆರ್ಚಿತ್ತೊ ಪೇಟ್ ಈಕೆಗೆ ಎಂಬಿನಂ: **ಪಂಪಭಾ,** ೪. ೪೨)

ನನೆವೋಗು – [ನಾ] ಮೊಗ್ಗು ಬಿಡು (ಅಧೀಶವಚನಕದಂಬ ಎಂಬೊಂದು ತೆಂಕಣೆಲರೊಳ್ ನನೆವೋಯ್ತೆಂಬಿನಂ: **ಆದಿಪು,** ೭. ೩೦)

ನನ್ನಿ – [ನಾ] ಸತ್ಯವಾಕ್ಯ (ಜೂದಾಡಿ ಸೋಲ್ತು ನನ್ನಿಗೆ ಮೇದಿನಿಯಂ ಕೊಟ್ಟು ಪಾಂಡುನಂದನರ್ ಈಗಳ್ ಪೋದೊಡಮೇಂ: **ಪಂಪಭಾ,** ೭. ೧೮); [ನಾ] ಸತ್ಯವಾಕ್ಯ ಪಾಲನೆ (ಪದ್ಮಾಕರಾಳಿಯೊಳ್ ತಣ್ಪುಗಳುಂಟು ಹೇಮಲತಿಕಾ ಕುಂಜಂಗಳೊಳ್ ನಮ್ಮ ನನ್ನಿಗೆ ಬನ್ನಂ ಬರಲೀಯದು: **ಪಂಪಭಾ,** ೭. ೩೦); [ನಾ] [ಯಜಮಾನನಿಗೆ ಜೀವ ಮುಡಿಪಾಗಿಡುವ] ಬದ್ಧತೆ (ಚಲದೊಳ್ ದುರ್ಯೋಧನಂ ನನ್ನಿಯೊಳ್ ಇನತನಯಂ ಗಂಡಿನೊಳ್ ಭೀಮಸೇನಂ ಬಲದೊಳ್ ಮದ್ರೇಶಂ: **ಪಂಪಭಾ,** ೧೪. ೬೪)

ನನ್ನಿಕಾಱ – [ನಾ] ಸತ್ಯವಂತ (ಈ ಯಮಳರಾವ ತೆಱದಿಂ ನೋಯಿಸರಯ್ ನಿನ್ನ ನನ್ನಿಕಾಱನ ಮನಮಂ: **ಪಂಪಭಾ,** ೭. ೪೮)

ನನ್ನಿಪಟ – [ನಾ] ರುಜುವಾತಿನ ಚೀಟಿ (ಅಂತು ವರ ಶಶಿವಿಶದಯಶಃಪಟಂಗಳಂ ನನ್ನಿಪಟಂಗೊಳ್ವಂತೆ ವಿವಿಧ ಧ್ವಜಪಟಂಗಳಂ ಕೊಂಡು: **ಪಂಪಭಾ,** ೮. ೧೦೯ ವ)

ನನ್ನಿಮಾಡು – [ಕ್ರಿ] ನಿಜವಾಗಿಸು (ರಾಜ್ಯಲಕ್ಷ್ಮೀಲೀಲಾಕರನಪ್ಪುದಂ ನನ್ನಿಮಾಡುತ್ತುಂ: **ಆದಿಪು,** ೮. ೩೭ ವ)

ನನ್ನಿವಾತು – [ನಾ] ಪ್ರತಿಜ್ಞೆ (ಪಡೆಮೆಚ್ಚೆಗಂಡನ ಗಂಡವಾತುಮಂ ನನ್ನಿವಾತುಮಂ ಮುರಾಂತಕಂ ಮೆಚ್ಚಿ: **ಪಂಪಭಾ,** ೫. ೭೫ ವ)

ನಪುಂಸಕವೇದ – [ನಾ] [ಜೈನ] ಒಂದು ಬಗೆಯ ನೋಕಷಾಯ; ಇದರಿಂದ ಗಂಡಹೆಣ್ಣುಗಳೆರಡರಲ್ಲೂ ಕಾಮವುಂಟಾಗುತ್ತದೆ (ಕ್ರಮಕ್ರಮದೊಳೆ ನಪುಂಸಕವೇದಮುಂ ಸ್ತ್ರೀವೇದಮುಂ ಪುಂವೇದಮುಂ ಪುರಾತನ ಸತ್‌ಕರ್ಮದೊಡನೆ ಹಾಸ್ಯ ರತಿ ಅರತಿ ಶೋಕ ಭಯ ಜುಗುಪ್ಸಾ ಅಭಿಧಾನ ನವನೋಕಷಾಯಷಟ್ಕಮುಮಂ ಘಾತಿಸಿ: **ಆದಿಪು,** ೧೦. ೧೪ ವ)

ನಭ – [ನಾ] ಆಕಾಶ (ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱಿ ನಭಕ್ಕೆ ಪಾಱಿದುದು: **ಪಂಪಭಾ,** ೧. ೧೦೯)

ನಭಶ್ಚರ – [ನಾ] ಆಗಸದಲ್ಲಿ ಚರಿಸುವವನು, ಖೇಚರ (ಸುರ ನರ ಕಿನ್ನರ ಉರಗ ನಭಶ್ಚರಕಾಂತೆಯರ್ ಏವರ್ ಎಂದು ಮಾಂಕರಿಸುವ ಕೆಯ್ತದಂದದ ಮುರಾರಿಯ ತಂಗೆಯನಪ್ಪುಕೆಯ್ದು: **ಪಂಪಭಾ,** ೪. ೩೪)

ನಭೋಂಗಣ – [ನಾ] [ನಭಃ+ಅಂಗಣ] ಗಗನತಳ (ದೊಣೆಗಳಿಂ ಉರ್ಚುವ ತಿರುವಾಯ್ ಒಣರ್ಚಿ ತೆಗೆನೆಱೆವ ಬೇಗಮಂ ಕೂರ್ಗಣೆಗಳ ಪಂದರನೆ ನಭೋಂಗಣದೊಳ್ ಕಂಡತ್ತು ದೇವಗಣಂ ಇನಸುತನಾ: **ಪಂಪಭಾ,** ೧೨. ೧೮೪)

ನಭೋಂತರ್ಭೂವಿವರ – [ನಾ] ಆಕಾಶದ ಭೂಮಿಯ ನಡುವಣ ಪ್ರದೇಶ (ಆವರಿಸಿತ್ತೊ ನಭೋಂತರ್ಭೂವಿವರಮಂ ಅಮರ್ದಿನೆಸಕಂ ಎನೆ ಬಿರಯಿಗಳ್ ಓ ಓ ಇದು ಮದನನ ಸೋದನದೀವಿಗೆಯೆನೆ ತೊಳಗಿ ಬೆಳಗಿದುದು ತುಹಿನಕರಂ: **ಪಂಪಭಾ,** ೪. ೫೨)

ನಭೋಭಾಗ – [ನಾ] ನಭಸ್ಥಲ (ನಭೋಭಾಗದಿಂ ಭೂಮಿಭಾಗಕ್ಕಿೞಿದು ತನ್ನ ಮುಂದೆ ನಿಂದ ಅರವಿಂದಬಾಂಧವನಂ ನೋಡಿ ನೋಡಿ: **ಪಂಪಭಾ,** ೧. ೯೧ ವ);

ನಭೋವಿವರ – [ನಾ] ಆಕಾಶದ ರಂಧ್ರ, ಆಕಾಶಪ್ರದೇಶ (ಜಯಶ್ರೀಗೆ ಭುಜಶಿಖರಮಂ ನೆಲೆಯಾಗಿಸಿ ನೀಂ ನೆಲಸು ನೇಸಱುಳ್ಳಿನೆಗಂ ಅರಿಗಾ ಎಂಬ ಪರಕೆಗಳ ರವದೊಳ್ ತುಂಬೆ ನಭೋವಿವರಂ: **ಪಂಪಭಾ,** ೨. ೧ ಮತ್ತು ೨. ೨)

ನಮಗೆ ಮಾಡು – [ಕ್ರಿ] ನಮ್ಮ ಪರವಾಗಿರುವಂತೆ ಓಲೈಸು (ದುರ್ಯೋಧನನಪ್ಪೊಡೆ ಶ್ವೇತಕೃಷ್ಣಕಾರಕಂ ಕೃಷ್ಣನಂ ತನಗೆ ಮಾಡದನ್ನೆಗಂ ಮುನ್ನಮೆ ಪನ್ನಗಶಯನನಂ ನಮಗೆ ಮಾಡುವುದು ಉತ್ತಮಪಕ್ಷಂ: **ಪಂಪಭಾ,** ೯. ೧೦ ವ)

ನಮತ್ – ಗು] ನಮಸ್ಕರಿಸುವ (ಶ್ರೀಪತಿ ಪುರುಪರಮೇಶ್ವರಂ ಆಪೂರ್ಣಮನೋರಥಂ ನಮನ್ನೃಪಮಕುಟಾಟೋಪಂ: **ಆದಿಪು,** ೯. ೧)

ನಮಸ್ಕಾರಮಂತ್ರ – [ನಾ] ಪಂಚನಮಸ್ಕಾರಗಳ ಮಂತ್ರಗಳು (ಜಿನನ ನಮಸ್ಕಾರಮಂತ್ರಂಗಳೊಳ್ ಭಾವನೆಯಂ ತಾಳ್ದು ಅೞ್ತಿಯಿಂ ಜಿನಮಹಿಮೆಗಳಂ ಮಾಡು: **ಆದಿಪು,** ೩. ೭)

ನಮಸ್ಸಿದ್ಧೇಭ್ಯಃ – [ನಾ] [ಜೈನ] ಸಿದ್ಧರಿಗೆ ನಮಸ್ಕಾರ (ಮನದ ಪರಿಚ್ಛೇದದಿನಂದು ನಮಸ್ಸಿದ್ಧೇಭ್ಯಃ ಎಂದು ಕರ್ಮಂಗಳ ಬೇರನೆ ಪಱಿವ ತೆಱದೆ ಪಱಿದಂ ಮನಸ್ವಿ ಚಳದಳಿವಿನೀಳಕೇಶಾವಳಿಯಂ: **ಆದಿಪು,** ೯. ೭೭)

ನಮಿತ – [ಗು] ಬಾಗಿದ (ಪೊದಱ್ದ ನಾಣ ಪೆಂಪಿನೊಳ್ ಒಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ ಬೆಚ್ಚನೆ ಬಸಿವ ಇಂದುಕಾಂತಕರಸಂಕುಳಂ: **ಆದಿಪು,** ೪. ೪೯)

ನಮೆ – [ಕ್ರಿ] ಬಡವಾಗು (ನೀನೊಂದಿದ ನಾರೀರೂಪದ ದಂದುಗದೊಳ್ ತೊಡರ್ದು ಬಿಡದೆ ನಮೆಯುತ್ತಿರ್ಪ್ಪೆ: **ಆದಿಪು,** ೫. ೬೨); [ನಾ] ನವೆ, ಕೃಶವಾಗು (ನೋಂತುಂ ಓದಱಿವರ ಪೇೞ್ದ ನೋಂಪಿಗಳಂ ಒರ್ಮೆ ಪಲರ್ಮೆಯುಮಿಂತು ತಮ್ಮ ಮೆಯ್ಮಱೆವಿನಂ ಇರ್ವರುಂ ನಮೆದರ್ ಏನವರ್ಗಾದುದೊ ಪುತ್ರದೋಹಳಂ: **ಪಂಪಭಾ,** ೧. ೧೩೫)

ನಮೇರು – [ನಾ] ಸುರಹೊನ್ನೆ, ಸುಗಿ ಹೂ (ಹರವೃಷಭದ ಕೋಡ ಮಣ್ಣುಮಂ ಆಕಾಶಗಂಗೆಯ ನೀರುಮಂ ನಮೇರು ಮಂದಾರ ಪಾರಿಜಾತದ ಪೂಮಾಲೆಗಳುಮಂ: **ಪಂಪಭಾ,** ೧೪. ೧೭ ವ)

ನಮ್ರಾಟನೀನಾದ – [ನಾ] [ನಮ್ರ+ಅಟನೀನಾದ] ಬಾಗಿಸಿ ಕಟ್ಟಿದ ಹೆದೆಯ ಶಬ್ದ (ಬಾಹುಬಲೀಶನೇಱಿಸಿದನಾ ನಮ್ರಾಟನೀನಾದ ಸಂಜನಿತ ಅರಾತಿಕುಲಾಂಗನಾ ಜನಮನಸ್ಸಂತಾಪಮಂ ಚಾಪಮಂ: **ಆದಿಪು,** ೧೪. ೯)

ನಯ – [ನಾ] ಲಯಬದ್ಧವಾದ ಗತಿ (ರಸಭಾವಾಭಿನಯಂಗಳ್ ಪೊಸವೆ .. .. ನಯಂ ಪೊಸವೆ ಕರಣಂಗಳಂ ನಿಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ: **ಆದಿಪು,** ೯. ೨೫); [ನಾ] [ಜೈನ] ತಿಳಿಯುವವನ ಅಭಿಪ್ರಾಯಕ್ಕೆ ವಿಷಯವಾದ ಏಕದೇಶಜ್ಞಾನ (ಪ್ರಮಾಣ ನಯ ನಿಕ್ಷೇಪ ಅನುಯೋಗ ಸದಾದಿಗಳಿಂ ನಿಶ್ಚಯಿಸಿದ ಸಪ್ತತತ್ತ್ವಂಗಳೊಳಗೆ ಚೇತನಾಲಕ್ಷಣಮಪ್ಪುದು ಜೀವತತ್ತ್ವಂ: **ಆದಿಪು,** ೧೦. ೬೩ ವ); [ನಾ] ಮುತ್ಸದ್ದಿತನ (ನೀನಾದಿರಾಜನ್ಯೆ ನೀನಾ ನಾಲ್ಕುಂ ರಾಜವಿದ್ಯೆ ಪುಟ್ಟಿದುವು ಅದಱಿಂ ನೀನೆ ಬೆಸಸುವುದು

ನಯಮಮಂ: **ಆದಿಪು,** ೧೪. ೧೦); **[ನಾ]** ನ್ಯಾಯ, ನೀತಿ (ನಯಮಂ ನಂಬುವೊಡೆ ಎನ್ನ ಪೇಟ್ವ ಸತಿಯಂ ಕೈಕೊಂಡಂ: **ಪಂಪಭಾ,** ೧. ೭೭); **[ನಾ]** ಸಂಗೀತದಲ್ಲಿ ಒಂದು ಸ್ವರಶ್ರೇಣಿಯಲ್ಲಿರುವ ರಾಗಭಾವಕ್ಕೆ ಮುಂದಿನ ಸ್ವರಶ್ರೇಣಿಯಲ್ಲಿರುವ ರಾಗಭಾವಕ್ಕೆ ಒಯ್ಯುವ ಕ್ರಮ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಳ್ ಎಱಿದಿಕ್ಕಿದಂತೆ ಸುತಿಯೊಳ್ ಸಮವಾಗಿರೆ: **ಪಂಪಭಾ,** ೭. ೮೮); **[ನಾ]** ರೀತಿ, ಬಗೆ (ಆ ಹರಿ ಪೇೞ್ದುದೊಂದು ನಯದಿಂದಾ ರಾತ್ರಿಯೊಳ್ ಪೋಗಿ ಕುಂಭಜನಂ ಕಂಡು: **ಪಂಪಭಾ,** ೧೧. ೧೨೬)

ನಯದೆ ನೋಡು – **[ಕ್ರಿ]** ಮೃದುವಾಗಿ ನೋಡು (ಪುತ್ರವರಾರ್ಥಿಗಳಾಗಿ ತನ್ನ ಕಟ್ಟೆದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫)

ನಯನಜಲ – **[ನಾ]** ಕಣ್ಣೀರು (ಆ ಜಯದ್ರಥನ ಚಿತಾನಳನಿಂದಂ ಒಗೆದ ಪೊಗೆಗಳ್ ಕೊಳೆ ಸುರಿವೊಡೆ ಸುರಿವುವು ಎನ್ನ ನಯನಜಲಂಗಳ್: **ಪಂಪಭಾ,** ೧೧. ೧೧೯)

ನಯನಪರುಷ – **[ನಾ]** ಕ್ರೂರ ಕಣ್ಣುಳ್ಳವನು (ದೊರೆಕೊಂಡ ಕೃಷ್ಣಲೇಶ್ಯಾ ಪರಿಣಾಮಮೆ ಕೃಷ್ಣವರ್ಣಮಂ ಪುಟ್ಟಿಸಿದಂತಿರೆ ಕರಿಕರ್ ಪೇಡಿಗಳ್ ಅತಿ ಪರುಷ ಸ್ವರಪರುಷ ನಯನಪರುಷಶರೀರರ್: **ಆದಿಪು,** ೫. ೯೧)

ನಯನಪ್ರಸರ – **[ನಾ]** ಕಣ್ಣ ಹರಹು, ನೋಟದ ಹರಹು (ರಸಭಾವ ಆಲಸ ನಯನಪ್ರಸರಂಗಳ ಪೊಳೆವ ಪೊಳೆಪುಗಳ್ ಬಳ್ವಳ ನೀಳ್ದೆಸೆದುವು ರಂಗದೊಳ್: **ಆದಿಪು,** ೭. ೧೧೮)

ನಯನೋದಬಿಂದು – **[ನಾ]** (ನಯನ+ಉದಬಿಂದು] ಕಣ್ಣೀರ ಹನಿ (ತುಱುಗಿದ ಹಿಮಬಿಂದುಗಳಿಂದೆ ಎಱಗಿದ ನವವನಜವನದವೋಲ್ ಶೋಕದಿಂ ಅಂದೊಱೆವ ನಯನೋದಬಿಂದುವಿಂ ಎಱಗಿದುದೊರ್ಮೊದಲೆ ಬಂಧುಮುಖವನಜವನಂ: **ಪಂಪಭಾ,** ೨. ೨೯)

ನರ – **[ನಾ]** ಮನುಷ್ಯ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩); **[ನಾ]** ಅರ್ಜುನನ ಒಂದು ಹೆಸರು (ತನ್ನ ರತ್ನವಿಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿನಾಮಮಂ ಸರಸದಿಂ ಆಗಳುಚ್ಚರಿಸಿ ಸಾಹಸಮಂ ಪೊಗೞ್ದಂ ಸುರಾಧಿಪಂ: **ಪಂಪಭಾ,** ೫. ೧೦೩); **[ನಾ]** ಮನುಷ್ಯಮಾತ್ರ (ಪರಪಿನ ನೀಳದ ಕಡೆಯಂ ಮರುಳಂ ತವೆ ನೋಡಲಾಱದೆ ಅಂಬರತಳಮಂ ಕರಿದೆಂಬಂತಿರೆ ನಿನ್ನಂ ನರನೆಂಬುದೆ: **ಪಂಪಭಾ,** ೬. ೨೦)

ನರಕ – **[ನಾ]** ಪಾಪ ಮಾಡಿದವರು ಸತ್ತ ಬಳಿಕ ಸೇರುವರೆನ್ನಲಾದ ಲೋಕ, ಏಳು ಬಗೆಯ ನರಕಗಳು: ರತ್ನಪ್ರಭಾ ಶರ್ಕರಾಪ್ರಭಾ, ವಾಳುಕಾಪ್ರಭಾ, ಪಂಕಪ್ರಭಾ, ಧೂಮಪ್ರಭಾ, ತಮೋಪ್ರಭಾ ಮತ್ತು ಮಹಾತಮಃಪ್ರಭಾ (ಆ ನರಕಂಗಳುಂ ರತ್ನ ಶರ್ಕರಾ ವಾಳುಕಾ ಪಂಕ ಧೂಮ ತಮೋ ಮಹಾತಮಃಪ್ರಭಾ ನಾಮದಿಂ ತಾಳ್ದಿದುವು: **ಆದಿಪು,** ೫. ೮೧ ವ)

ನರಕಗತಿ – **[ನಾ]** [ಜೈನ] ಹದಿನಾರು ಕರ್ಮಪ್ರಕೃತಿಗಳಲ್ಲಿ ಒಂದು, ಇದರಿಂದ ನಾರಕೀಯ ಅವಸ್ಥೆ ಉಂಟಾಗುತ್ತದೆ (ಅಂತರ್ಮುಹೂರ್ತದಿಂ .. .. ನರಕಗತಿ .. .. ತಿರ್ಯಗ್ಗತಿ .. .. ಎಂಬ ಪದಿನಾಱುಂ ಕರ್ಮಪ್ರಕೃತಿಗಳಿಂ ನಿರವಶೇಷಂ ಕಿಡಿಸಿ: **ಆದಿಪು,** ೧೦. ೧೪ ವ)

ನರಕಬಿಲ – **[ನಾ]** ನರಕದಲ್ಲಿನ ಸಣ್ಣ ರಂಧ್ರ (ಮೂವತ್ತಿರ್ಪತ್ತೈದು ಅಂತು ಆವಗೆ ಪದಿನೈದು ಮತ್ತಂ ಆಱು ಅಯ್ದು ಊನಂ ಭಾವಿಪೊಡೆ ಇಂತಿವು ಲಕ್ಕೆಗಳ್: **ಆದಿಪು,** ೫. ೮೩)

ನರಕಾಂತಕ – **[ನಾ]** ನರಕನೆಂಬ ರಾಕ್ಷಸನನ್ನು ಕೊಂದವನು, ವಿಷ್ಣು (ಆ ನರಕಾಂತಕನೀಕೆಗಂಡು ತೊಟ್ಟನೆ ನಿಜಲಕ್ಷ್ಮಿಯಂ ಮಱೆದಂ: **ಪಂಪಭಾ,** ೪. ೮೫)

ನರಗ – **[ನಾ]** ನರಸಿಂಹ ಎಂಬ ಹೆಸರಿನ ರಾಜ (ಸಿಡಿಲವೋಲ್ ಎಱಗುವ ನರಗನ ಪಡೆಗೆ ಅಗಿದು ಉಮ್ಮಳದಿಂ ಉಂಡೆಡೆಯೊಳ್ ಉಣ್ಣದೆಯುಂ ಕೆಡೆದೆಡೆಯೊಳ್ ಕೆಡೆಯದೆಯು ನಿಂದೆಡೆಯೊಳ್ ನಿಲ್ಲದೆಯುಂ ಓಡಿದಂ ಮಹೀಪಾಲಂ: **ಪಂಪಭಾ,** ೧. ೩೭)

ನರನಂದನ – **[ನಾ]** ಅರ್ಜುನನ ಮಗ, ಅಭಿಮನ್ಯು (ಅನಿತಣ್ಮಿ ಸತ್ತ ನರನಂದನನಂಗೆ ಕಣ್ ಸೋಲ್ತು ಬಗೆಯದೆ ಅಮರೇಂದ್ರನಂ ಇನ್ನೆನಗೆ ತನಗೆಂಬ ದೇವಾಂಗನೆಯರ ಕಳಕಳಮೆ ಪಿರಿದುಂ ಆಯ್ತು ಅಂಬರದೊಳ್: **ಪಂಪಭಾ,** ೧೧. ೧೦೫)

ನರಪ್ರಿಯತನೂಜ – **[ನಾ]** ಅರ್ಜುನನ ಪ್ರೀತಿಯ ಮಗ, ಅಭಿಮನ್ಯು (ಕರಮೆರಡುಂ ಪಱಿವುದುಂ ಆತುರದಿಂದಂ ತನ್ನ ಕುನ್ನಗೆಯ್ಯೊಳೆ ಕೊಂಡು ಉದ್ದುರಚಕ್ರದಿಂ ಇಟ್ಟಂ ತಿರಿಪಿ ನರಪ್ರಿಯತನೂಜನ ಅಕ್ಷೋಹಿಣಿಯಂ: **ಪಂಪಭಾ,** ೧೧. ೧೦೩)

ನರಭೋಗ – **[ನಾ]** ಮನುಷ್ಯಸುಖ (ಎನಿತಾನುಂ ಅಂಬುನಿಧಿಗಳಂ ಅನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತಿಲ್ಲೆನಗೆ ನರಭೋಗಮೆಂಬೀ ಪನಿಪುಲ್ಲಂ ನಕ್ಕೆ ತೃಷ್ಣೆ ಪೇೞ್ ಪೋದಪುದೇ: **ಆದಿಪು,** ೯. ೫೭)

ನರವು – **[ನಾ]** ಸ್ನಾಯುರಜ್ಜು, ಸ್ನಾಯುವನ್ನು ಮೂಳೆಗೆ ಸೇರಿಸುವ ಅಂಗಾಂಶ, ನರ (ನರವುಮಂ ಬರಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ ತಾನೆ ಸೋದು: **ಪಂಪಭಾ,** ೧೩. ೫೬ ವ)

ನರಶಿಲ್ಪಿ – **[ನಾ]** ಮನುಷ್ಯಶಿಲ್ಪಿ (ನರಶಿಲ್ಪಿಗಳಿಂ ಮಂಡಪವಿರಚನೆ ನೆಗೞುತ್ತಮಿರ್ದುದಿತ್ತೊಂದೆಡೆಯೊಳ್: **ಆದಿಪು,** ೯. ೬೮)

ನರಸಿಂಹ – **[ನಾ]** ಮನುಷ್ಯ ದೇಹ ಹಾಗೂ ಸಿಂಹದ ಮುಖವುಳ್ಳ ವಿಷ್ಣುವಿನ ನಾಲ್ಕನೆಯ ಅವತಾರ (ನರಸಿಂಹಾಕಾರದಿಂ ದೈತ್ಯನಂ ಚಲದಿಂ ಸೀಳ್ದವನಬ್ಧಿಮಥನಪ್ರಾರಂಭದೊಳ್ ಮಂದರಾಚಲಮಂ ತಂದನಾವಂ: **ಪಂಪಭಾ,** ೬. ೪೧); **[ನಾ]** ಮೊದಲನೆಯ ಅರಿಕೇಸರಿಯ ಇಬ್ಬರು ಮಕ್ಕಳಲ್ಲಿ ಮೊದಲನೆಯವನು; ಮೊದಲನೆಯ ನರಸಿಂಹ (ಅರಿಕೇಸರಿಗೆ ಆತ್ಮಜರ್ ಅರಿನೃಪಶಿರೋದಳನ ಪರಿಣತೋಗ್ರಾಸಿ ಭಯಂಕರರ್ ಆ ಇರ್ವರೊಳ್ ಆರ್ ದೊರೆಯೆನೆ ನರಸಿಂಹ ಭದ್ರದೇವರ್ ನೆಗೞ್ದರ್: **ಪಂಪಭಾ,** ೧. ೨೨)

ನರಾಧಿಪ – [ನಾ] ರಾಜ, ಅರಸ (ಕವಿಗಳ ನಾಮಧಾರಕ ನರಾಧಿಪರೋಳಿಯೊಳೀತನೊಳ್ಪಿದಂ ಕವಿ ನೃಪನೀತನೊಳ್ಪಿದಂ: **ಪಂಪಭಾ,** ೧. ೧೦)

ನರಿ – [ನಾ] ಜಂಬುಕ (ನೆತ್ತರಂ ಪಡೆಯದೆ ಆಕಾಶಕ್ಕೆ ಬಾಯಂ ತೆಱೆದು ಊಳ್ವ ಬಳ್ಳುಗಳುಮಂ ನರವುಮಂ ಬರಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ ತಾನೆ ಸೋದು: **ಪಂಪಭಾ,** ೧೩. ೫೬ ವ)

ನರುವಾಯ – [ನಾ] ಒಂದು ಬಗೆಯ ಬಾಣ (ನೆಱೆದು ನಿರ್ವಾಯಂ ನರುವಾಯಂ ಮುಂಮೊನೆ ನೆರಕೆ ನಾರಾಚಂ ತಗರ್ತಲೆಯಂ: **ಪಂಪಭಾ,** ೧೩. ೩೯)

ನರೆ – [ನಾ] ಬಿಳಿಗೂದಲು (ಭರತಂ ಕಂಡಂ ಕೆನ್ನೆಯ ನರೆಯಂ ತಳದಳಿಸಿ ಪೊಳೆವ ಮಣಿದರ್ಪಣದೊಳ್: **ಆದಿಪು,** ೧೬. ೬೧); [ನಾ] ಮುಪ್ಪು (ತೀವಿದ ನರೆಯುಂ ಡೊಳ್ಳುಂ ದೇವವ್ರತನೆನಿಸಿ ನೆಗಟ್ಟಿ ಯಶಮಂ ಬೆರಸಿನ್ನೀವುದು ಹರಿಗೆ ಅರ್ಘ್ಯಮಂ ಎಂದು ಆವನುಂ ಈ ಭೀಷ್ಮರಂತು ನುಡಿದರುಂ ಒಳರೇ: **ಪಂಪಭಾ,** ೬. ೪೩)

ನರೆಗಳಾಗು – [ಕ್ರಿ] [ಕೂದಲು] ಬಿಳಿಯಾಗು (ಎನ್ನ ಅಟ್ಟ ಅಡುಗೆಯಂ ಉಂಡೊಡೆ ಬಿನ್ನಣಂ ಏನರಸ ನರೆಗಳಾಗವು: **ಪಂಪಭಾ,** ೮. ೫೪)

ನರೆಂದ್ರ – [ಕ್ರಿ] ರಾಜ (ಏಂ ತಗುಳ್ದೆ ಇನ್ನುಸಿರದಿರ್ ಈವ ಮಾತಂ ಇವನುಣ್ಬುದು ಖಾಂಡವಂ ಈತಂ ಅಗ್ನಿ ಮುಂ ಪುಸಿದು ಇವನಿಂತೆ ಪಾಯಿಸಿದಂ ಇಂದ್ರನೊಳ್ ಆದಿ ನರೇಂದ್ರೆಲ್ಲರಂ: **ಪಂಪಭಾ,** ೫. ೭೨)

ನರೇಂದ್ರಕಾಂತೆ – [ನಾ] ರಾಜಸ್ತ್ರೀ (ನೋಟಿಸ್ಪೊಡೆ ಆರುಮಂ ಮಾಱಿ ಮನೋಜನ ಒಡ್ಡು ಎನಿಸಿದರ್ ನಡೆತಂದ ನರೇಂದ್ರಕಾಂತೆಯರ್: **ಪಂಪಭಾ,** ೯. ೧೦೦)

ನರೇಂದ್ರಗೇಹ – [ನಾ] ಅರಮನೆ (ಬೆಳ್ಗೊಡೆ ನೋಡೆ ನೋಡೆ ನಿಂದುರಿದುವು ಸಾಲಭಂಜಿಕೆಗಳಟ್ಟುವು ವೈರಿನರೇಂದ್ರ ಗೇಹದೊಳ್: **ಪಂಪಭಾ,** ೬. ೨೯)

ನರೇಂದ್ರತಾಪಸ – [ನಾ] ರಾಜರ್ಷಿ (ದೇವೇಂದ್ರಂ ತನಗಾದ ಹೃತ್ಕಂಪದೊಳಂ ಆಸನಕಂಪದೊಳಂ ನರೇಂದ್ರತಾಪಸಂ ತನ್ನಿಂದ್ರತ್ವಮಂ ಕೊಳಲೆಂದು ತಪಂಗೆಯ್ದಪಂ ಎಂಬ ಸಂಕೆಯೊಳ್: **ಪಂಪಭಾ,** ೭. ೮೦ ವ)

ನರ್ತಕ – [ನಾ] ನೃತ್ಯಗಾರ (ಧರೆ ರಂಗಂ ಗಗನಂ ಮನೋಹರತರಂ ನಾಟ್ಯಾಲಯಂ ನರ್ತಕಂ ಸುರರಾಜಂ: **ಆದಿಪು,** ೭. ೧೨೭); [ನಾ] ನರ್ತನಗುರು (ಅಳಿನಿನದದ ಮದಕೋಕಿಳ ಕಳನಿನದದ ಜತಿಯೊಳಭಿನಯಮಂ ನೆಗಟ್ವೆನೆಗಂ ಲಳಿತಮನೇನಾಡಿಸಿದನೊ ಮಳಯಾನಿಳನರ್ತಕಂ ಲತಾನರ್ತಕಿಯಂ: **ಆದಿಪು,** ೧೧. ೯೩)

ನರ್ತಕಿ – [ನಾ] ನೃತ್ಯಗಾತಿ (ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ ನಡೆಯಿಸಿ ಪುರ್ವದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್: **ಆದಿಪು,** ೯. ೩೨)

ನರ್ತಿತ – [ಗು] ಅಲುಗಾಡಿಸಲ್ಪಟ್ಟ (ಅದು ನಿರ್ಝರ ಉಚ್ಚಳಿತ ಶೀಕರಶೀತಳವಾತನರ್ತಿತ ಉನ್ಮದ ಶಬರೀಜನ ಅಳಕಂ: **ಪಂಪಭಾ,** ೩. ೧೦)

ನರ್ತಿಸು – [ಕ್ರಿ] ಕುಣಿ, ನೃತ್ಯಮಾಡು (ಕುಡುಮಿಂಚಂತೆ ಮೇಗೊಗೆದು ನಾರದಂ ನರ್ತಿಸಿದಂ: **ಪಂಪಭಾ,** ೧೨. ೧೮೯)

ನಲಿ – [ಕ್ರಿ] ಕುಣಿ (ಗಗನತಳಮೆ ಪಱಿದು ಬಿೞ್ದುದೆನಿಪ ಬಹುತಟಾಕದಿಂ ಕುಕಿಲ್ವ ನಲಿವ ಕೋಕದಿಂ: **ಪಂಪಭಾ,** ೧. ೫೮)

ನಲ್ಮೆ – [ನಾ] ಪ್ರೀತಿ (ಸೋಲ್ತು ಕಂಡೊಲ್ದು ನಲ್ಮೆಗೆ ದಿವ್ಯಂಬಿಡಿವಂತೆವೋಲ್ ಪಿಡಿದು: **ಪಂಪಭಾ,** ೧. ೭೦)

ನಲ್ಲಂಬು – [ನಾ] ಪ್ರಿಯವಾದ ಬಾಣ, ಒಳ್ಳೆಯ ಬಾಣ (ತನ್ನ ನಲ್ಲಂಬುಗಳಿಂದಂ ಆರ್ದಿರದಡುರ್ತಿಸೆ ಭೂಭುಜರೆಲ್ಲಮಲ್ಲಿ ಬಿಲ್ಲುಂಬೆಱಗಾಗೆ: **ಪಂಪಭಾ,** ೧೧. ೪೨)

ನಲ್ಲಮನ – [ನಾ] ಪ್ರೀತಿಯ ಮನಸ್ಸು, ಒಳ್ಳೆಯ ಮನಸ್ಸು (ಈಕೆಯುಂ ಎನಗೆ ಎರಡಱೆಯದ ನಲ್ಲಮನಂದೋಱುವುದು ಸಲ್ಗೆದೋಱುವುದುಂ ಆವುದು ದೋಸಂ: **ಪಂಪಭಾ,** ೫. ೧೭ ವ)

ನಲ್ಲಳ್ – [ನಾ] ಪ್ರಿಯೆ (ಮದೀಯ ಮನೋಗತ ಕಾಮಸಾಗರದ ಒದವಿಂಗೆ ನಲ್ಲಳ ವಿಲೋಚನ ಚಂದ್ರಿಕೆಯೊಂದೆ ಸಾಲದೇ: **ಪಂಪಭಾ,** ೫. ೧೧); (ಅಂತು ಕಂಡು ಮನಂಗೊಂಡೆತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡೆ ರಾಗಿಸಿ ಸುತನ ಸೂತಕಮಂ ಕೊಂಡಾಡೆ ಅಗುಟ್ದಿರಲ್: **ಪಂಪಭಾ, ೧. ೯೬ ವ ಮತ್ತು ೧. ೯೭)**

ನಲ್ವರಕೆ – [ನಾ] [ನಲ್+ಪರಕೆ] ಒಳ್ಳೆಯ ಹರಕೆ (ಅನುನಯದಿಂ ಎಱಗಿದಮಳರುಮಂ ಅೞ್ಕಱೆಂ ಒಱಲ್ದು ತೆಗೆದಪ್ಪಿ ಪರಸೆ ನಲ್ವರಕೆಗಳಿಂ: **ಪಂಪಭಾ,** ೯. ೩)

ನವಗರ್ಭವಿಭ್ರಮ – [ನಾ] ಹೊಸದಾದ ಬಸಿರಿನ ಚೆಲುವು (ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫)

ನವಗ್ರೈವೇಯಕ – [ನಾ] [ಜೈನ] ಹದಿನಾರು ಸ್ವರ್ಗಗಳ ಮೇಲೆ ಇರುವ ಕಲ್ಪಾತೀತವಾದ ಒಂಬತ್ತು ಸ್ವರ್ಗಗಳು (ನಿಜಜೀವಿತಾವಸಾನದೊಳ್ ಸೌಮನಸವೆಂಬ ಊರ್ಧ್ವಮಧ್ಯಮದ ನವಗ್ರೈವೇಯಕದೊಳ್ ಅಹಮಿಂದ್ರನಾಗಿ: **ಆದಿಪು,** ೩. ೭೮ ವ)

ನವಟ – [ನಾ] ಒಂದು ಬಗೆಯ ವಸ್ತ್ರ (ಸಾಹಿಯಾಣದ ಚೀನದ ನವಟದ ಚರ್ಮದ ಜೊಂಗದ ದೇವಾಂಗದ ಸಕಳವಟ್ಟೆಗಳುಮಂ: **ಆದಿಪು,** ೪. ೩೪ ವ) [ಟಿವಿವೆಂ ಅವರ ಆವೃತ್ತಿಯಲ್ಲಿ ಈ ಸಾಲು **'**ಸಾಹಿಯಾಣದ ಚೀನದ ಧವಳವಟ್ಟದ ಭರ್ಮದ ಜೊಂಗದ ದೇವಾಂಗದ ಸಕಳವಟ್ಟೆಗಳುಮಂ**'** ಎಂದಿದೆ]

ನವನವತಿ – [ನಾ] ತೊಂಬತ್ತೊಂಬತ್ತು (ಆ ಜಂಬೂದ್ವೀಪದ ನಟ್ಟನಡುವೆ ನವನವತಿಯೋಜನಸಹಸ್ರ ಉತ್ಸೇಧಮುಂ ಯೋಜನಸಹಸ್ರ ಅವಗಾಹಮುಂ: **ಆದಿಪು,** ೧. ೪೯ ವ)

ನವನಿಧಿ – [ನಾ] [ಜೈನ] ಮಹಾಪದ್ಮ, ಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ ನೀಲ, ವರ ಎಂಬ ಕುಬೇರನ ಒಂಬತ್ತು ನಿಧಿಗಳು (ರತ್ನಾಭರಣ ತೋರಣ ಘಂಟಾಜಾಳ ಮುಕ್ತಾಲಂಬನ ಪುಷ್ಪದಾಮ ಅಷ್ಟಮಂಗಳ

ನವನಿಧಿಪ್ರಧಾನಂಗಳುಂ: **ಆದಿಪು**, ೧೦. ೩೨ ವ); [ನಾ] [ಜೈನ] ಚಕ್ರವರ್ತಿಯ ಒಂಬತ್ತು ರತ್ನಗಳು: ಶ್ರೀಗೃಹದಲ್ಲಿ ಹುಟ್ಟಿದ ಕಾಳ, ಮಹಾಕಾಳ, ನೈಸರ್ಪ, ಪಾಂಡುಕ, ಪದ್ಮ, ಪಿಂಗಳ, ಮಾಣವಕ, ಶಂಖ, ಸರ್ವರತ್ನ (ಭುವನವಿಶೇಷಕಂ ಇಕ್ಷ್ವಾಕುವಂಶಗಗನೇಂದು ಚಕ್ರಾಧೀಶಂ ನವನಿಧಿವಲ್ಲಭಂ ಆನತ ದಿವಿಜಗಣಂ: **ಆದಿಪು**, ೧೩. ೭೩)

ನವನೋಕಷಾಯ – [ನಾ] [ಜೈನ] ಮೋಹನೀಯ ಕರ್ಮಭೇದ, ಕಿಂಚಿತ್ ಕಷಾಯ, ಇದು ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀವೇದ, ಪುಂವೇದ ಮತ್ತು ನಪುಂಸಕವೇದವೆಂದು ಒಂಬತ್ತು ಬಗೆ (ತನ್ನ ಪರಿಣಾಮ ವಿಶೇಷದಿಂ ಚತುಸ್ಸಂಜ್ವಲನ ನವನೋಕಷಾಯಂಗಳೆಂಬ ಪದಿಮೂಱುಪ್ರಕೃತಿಗಳುಮಂ ಅಂತರಕರಣಂ ಮಾಡಿ: **ಆದಿಪು**, ೧೦. ೧೪ ವ)

ನವಪಂಚಾಶದಧಿಕಶತ – [ನಾ] ನೂರ್ಯೆವತ್ತೊಂಬತ್ತು (ನವಪಂಚಾಶದಧಿಕಶತ ವಿಮಾನಾಧೀಶನುಂ ತ್ರಯಸ್ತ್ರಿಂಶತ್ಪರಿಮಿತ ತ್ರಯಸ್ತ್ರಿಂಶಾಮರಪರಿವೃತನುಂ: **ಆದಿಪು**, ೬. ೧೩ ವ)

ನವಪದಾರ್ಥ – [ನಾ] [ಜೈನ] ಜೀವ ಅಜೀವ ಆಸ್ರವ ಬಂಧ ಸಂವರ ನಿರ್ಜರ ಮೋಕ್ಷ ಪುಣ್ಯ ಪಾಪ ಎಂಬ ಒಂಬತ್ತು ತತ್ವಗಳು (ಜೀವಾದಿ ನವಪದಾರ್ಥದೊಳ್ ಆವಗಂ ಅೞ್ತಿಯನೆ ಮಾಡು ಮೂಢತ್ರಯದೊಳ್ ಭಾವಮನೆ ಬಿಸುಡು: **ಆದಿಪು**, ೫. ೫೬)

ನವಬಂಧ – [ನಾ] [ಜೈನ] ನವನೋಕಷಾಯಗಳು (ಪುಂವೇದಾದಿ ನವಬಂಧಮುಮಂ ಮತ್ತಂ ಪ್ರತಿಸಮಯಪ್ರವರ್ತಮಾನ ಸಂಜ್ವಲನ ಚತುಃಕಷಾಯ ಘಾತಿತಾಶೇಷ ಅನುಭಾಗ ಅಶ್ವಕರ್ಣ ಕರಣಾಪೂರ್ವಕರಣ ಸ್ಪರ್ಧಕಾಭಿಘಾತದಿಂ ಅನಂತರ್ಮುಹೂರ್ತಕಾಲದಿಂ ಕಿಡಿಸಿ: **ಆದಿಪು**, ೧೦. ೧೪ ವ)

ನವಮಾಲಿಕೆ – [ನಾ] ಜಾಜಿ ಹೂ (ಬಾಲಸಹಕಾರತರು ನವಮಾಲಿಕೆಗೆ ಅತಿಲಲಿತಪೂಗಭೂಜಾತಂ ತಾಂಬೂಲಲತೆಗೆಂಬವೊಲ್: **ಆದಿಪು**, ೪. ೨೮)

ನವವಿಧಪುಣ್ಯ – [ನಾ] [ಜೈನ] ಚರಿಗೆ ನೀಡುವಾಗ ಅನುಸರಿಸಬೇಕಾದ ಒಂಬತ್ತು ಕ್ರಮಗಳು: ತ್ರಿಪ್ರದಕ್ಷಿಣೆ, ಉಚ್ಚಾಸನ ಸಮರ್ಪಣೆ, ಪಾದಪೂಜೆ, ಅರ್ಚನೆ, ಪ್ರಣಾಮ, ವಚನಶುದ್ಧಿ, ಕಾಯಶುದ್ಧಿ, ಮನಶ್ಶುದ್ಧಿ, ಏಷಣಾಶುದ್ಧಿ (ಇದಿರ್ಗೊಳ್ವುದು ಕಾಲ್ಗರ್ಚುವುದು ಉದಾತ್ತಮಪ್ಪೆಡೆಯೊಳ್ ಇರಿಪುದು ಎಱಗಿರ್ಪುದು ಕರಣಶುದ್ಧಿವಡೆವುದು ಪದೆದು ಅನ್ನವನೀವುದು ಎಂಬ ನವವಿಧಪುಣ್ಯಂ: **ಆದಿಪು**, ೪. ೯೬)

ನವಶತ – [ನಾ] ಒಂಬೈನೂರು (ತಿಲ ಮಸೂರಿಕಾ ಪ್ರಭೃತಿ ನವಶತ ವ್ಯಂಜನರಂಜಿತ ತಪ್ತತಪನೀಯ ನಿಕಾಶವರ್ಣ ಸಂಪೂರ್ಣಶರೀರನುಂ: **ಆದಿಪು**, ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]

ನವಾಂಕುರ – [ನಾ] ಹೊಸ ಕುಡಿ (ಕುಡುಗುರುಳೆಂಬ ತೆಂಬೆಲರ ಬೆಂಬಿಡಿದು ಪೊಸವೇಟಮೆಂಬ ಚಿಲ್ವಿಡಿದು ಎಳಮಾಮರಂ ಪುಳಕಮೆಂಬ ನವಾಂಕುರದಿಂ: **ಆದಿಪು**, ೧೨. ೨೮)

ನವಿರ್ – [ನಾ] ಕೂದಲು (ಪಸಿಯ ನೇತ್ರದ ಅಸಿಯ ಪಾಳೆಯೊಳ್ ತಲೆನವಿರಂ ಪಚ್ಚುಗಂಟಿಕ್ಕಿ ಮಣಿಮಯಮಕುಟಮಂ ಕವಿದು: **ಪಂಪಭಾ**, ೧೨. ೧೦೮ ವ)

ನವುತ – [ನಾ] ನವೋತ್ತರಶತ, ನೂರ ಒಂಬತ್ತು (ಪಂಚಸಪ್ತತ್ಯುತ್ತರ ಪಂಚಶತ ಪೃಷತ್ಕಾಸನೋತ್ಸೇಧಸಂಹನನುಂ ನವುತಾಂಗಾಯುಷ್ಯನುಮಾಗಿ: **ಆದಿಪು**, ೬. ೬೧ ವ) [ಎಲ್. ಬಸವರಾಜು ಆವೃತ್ತಿ]

ನಷ್ಟರಾಜ – [ನಾ] ರಾಜ ಇಲ್ಲವಾಗುವುದು (ಪರಲೋಕಪ್ರಾಪ್ತನಾದೊಡೆ ಗಾಂಗೇಯನುಂ ಸತ್ಯವತಿಯುಮತ್ಯಂತಶೋಕಾನಲದಹ್ಯಮಾನ ಮಾನಸರ್ಕಳಾಗಿ ಆತಂಗೆ ಪರಲೋಕಕ್ರಿಯೆಗಳಂ ಮಾಡಿ ರಾಜ್ಯಂ ನಷ್ಟರಾಜಮಾದುದರ್ಕೆ ಮಮ್ಮಲ ಮಱುಗಿ: **ಪಂಪಭಾ**, ೧. ೮೦ ವ)

ನಸುತೇಂಕುದೇಂಕು – [ಕ್ರಿ] ಸ್ವಲ್ಪ ತೇಲಾಡು (ಬೆಳಗುವ ತಾರಹಾರನಿಕರಂ ಆ ಕಡಲೊಳ್ ನಸುತೇಂಕುದೇಂಕಿ ಬೊಬ್ಬುಳಿಕೆಗಳಂತೆ ತೋಱಿದುವು: **ಆದಿಪು**, ೭. ೯೮)

ನಳಿತೋಳ್ – [ನಾ] ಕೋಮಲವಾದ ತೋಳು (ಇತ್ತ ಗಂಗಾದೇವಿಯುಂ ಆ ಕೂಸಂ ಮುಟ್ಟುಗಲೀಯದೆ ತನ್ನ ತೆರೆಗಳೆಂಬ ನಳಿತೋಳ್ಗಳಿನೊಯ್ಯನೊಯ್ಯನೆ ತಟಿಕ್ಕೈಸಿ ತರೆ ಗಂಗಾತೀರದೊಳಿರ್ಪ ಸೂತನೆಂಬವಂ ಕಂಡು: **ಪಂಪಭಾ**, ೧. ೯೫ ವ)

ನಳಿದಾಗು – [ಕ್ರಿ] ಬಾಗಿಹೋಗು, ಜಗ್ಗಿಹೋಗು (ಅಭ್ರಮಂಡಲಂ ಕಡುನಳಿದಾದುದೀ ಬಲದ ಧೂಳಿಯೊಳೆಂಬಿನಂ: **ಆದಿಪು**, ೧೨. ೬೨)

ನಸುಮಸುಳ್ – [ಕ್ರಿ] ಸ್ವಲ್ಪ ಕಾಂತಿಹೀನವಾಗು (ತಾವರೆಯೆಸಟ್ಟಳ ನಡುವಿರ್ಪ ಸಿರಿಯುಮಾಕೆಯ ಕೆಲದೊಳ್ ನಸುಮಸುಳ್ದು ತೋರ್ಪಳ್: **ಪಂಪಭಾ**, ೧. ೪೦)

ನಸುಮಾಸು – [ಕ್ರಿ] ನಸುಮಸುಳ್ (ನಸುಮಾಸಿ ಪಾಡಟಿದ ರೂಪಿನೊಳ್ ಉಣ್ಮುವ ಗಾಡಿ ನಾಡೆ ಕಣ್ಗೆಡರೆ: **ಪಂಪಭಾ**, ೧೩. ೯೯)

ನಸುವಂಚನೆ – [ನಾ] ಸ್ವಲ್ಪ ಮೋಸ (ಪುಸಿ ನಸುವಂಚನೆ ನೋರ್ಪ ಅನುವು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ಕುಸುರಿ ನುಸುಳ್ ಎಂಬ ಕೇಣದ ಕುಸುರಿಯಂ ಅಱಿದಿಱಿದು ಮೆಱೆದು ನೆಱೆದೆ ಉರಱಿದೆ ಅರೆಬರ್: **ಪಂಪಭಾ**, ೧೦. ೮೧)

ನಳಿದೋಳ್ – [ನಾ] ನೀಳವಾದ ತೆಳ್ಳನೆಯ ತೋಳು (ನಳಿತೋಳೊಳ್ ತೊಡರ್ದೊಂದು ತೋಳ ಮಣಿವೋಲ್: **ಆದಿಪು**, ೧೨. ೩೯)

ನಳಿನ – ರುಚಕಪರ್ವತದ ಪೂರ್ವದಿಕ್ಕಿನ ಎಂಟು ಶಿಖರಗಳಲ್ಲಿ ಒಂದು (ತನ್ಮಹೀಧರವರುಣಾಶಾವಿಶೇಷಕ ಮಾಗಿರ್ದ ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ: **ಆದಿಪು**, ೭. ೩ ವ)

ನಳಿನಳಿ – [ಕ್ರಿ] ಬಾಗಿ ಬಾಗಿ, ಕುಗ್ಗಿ (ನಳಿನಳಿದು ನಡೆವ ಹಯದಟೆಯಳವಂ ಕಂಡುದಱಿಂ ಅಧಿಕಬಲ ಮುನಿಪ ಧೃತಾತುಳ ಗುಣಭಾರಮನಾಂಪನಿತಳವಿಲ್ಲದೆ ಕಿಡುವರಲ್ತೆ ದುಷ್ಷಮಯತಿಗಳ್: **ಆದಿಪು,** ೧೫. ೩೧)

ನಳಿನಾಸ್ಯೆ – [ನಾ] [ನಳಿನ+ಆಸ್ಯೆ] ಕಮಲದಂತೆ ಮುಖವುಳ್ಳ ಸುಂದರಿ (ಆ ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂಗೊಳೆ ಕೊಟ್ಟಂ ದುರ್ವಾಸಂ ವಿಳಸಿತ ಮಂತ್ರಾಕ್ಷರಂಗಳಂ ದಯೆಯಿಂದಂ: **ಪಂಪಭಾ,** ೧. ೮೮ ಮತ್ತು ೧. ೮೯)

ನಳಿನೀಕುಂಜರ – [ನಾ] ಕಮಲಗಳಿಗೆ ಆನೆಯಂತಿರುವವನು (ಬಂದನೀತಂ ಪೆಱನಲ್ಲಂ ದುರ್ಜಯಂ ಕೌರವಕುಳ ನಳಿನೀಕುಂಜರಂ ಭೀಮಸೇನಂ: **ಪಂಪಭಾ,** ೧೩. ೭೭)

ನಳಿನೀಪತ್ರಪುಟ – [ನಾ] ತಾವರೆ ಎಲೆಯ ದೊನ್ನೆ (ಪೌರರ್ ಮಾಡಿದ ನಳೀನೀಪತ್ರಪುಟಪ್ರಸಾದಿತ ಸಾರವಜಳ ಪಾದಾಭಿಷೇಚನದೊಳಂ: **ಆದಿಪು,** ೮. ೬೯ ವ)

ನಳಿಮೊಗ – [ನಾ] ಬಾಗಿದ ಮುಖ (ಪೊದಳ್ದೆಳಸುವ ಬಾಯ್ ಬಳಸುವ ಕಣ್ ಮಿಳಿರ್ವ ಕುರುಳ್ ನಳಿಮೊಗಮೆನೆ ಸೊಬಗಿವಳ್ಗೆ ನಾಟ್ಯವರ್ತನಮೇ: **ಆದಿಪು,** ೪. ೪೪)

ನಾಂದಿ – [ನಾ] ಶುಭಕಾರ್ಯದ ಆರಂಭ, ನಾಟಕದ ಆರಂಭ, ದೇವತಾಸ್ತುತಿ (ನಾಂದೀ ಪ್ರರೋಚನಾ ಪ್ರಸ್ತಾವನಾ ಇತಿವೃತ್ತ ಸಂಧಿ ಪ್ರವೇಶ ನಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ: **ಪಂಪಭಾ,** ೨. ೩೪ ವ)

ನಾಂದೀಮುಖ – [ನಾ] ಪಿತೃಗಳ ಆವಾಹನೆ (ನಾಂದೀಮುಖಮಂ ನಿರ್ವರ್ತಿಸಿ ಶುಭಲಕ್ಷಣಲಕ್ಷಿತನುಂ ಸನ್ನಾಹಕರ್ಮ ನಿರ್ಮಿತನುಂ ವಿಜಯಗಜಮುಮಂ .. .. ಅರ್ಚಿಸಿ: **ಪಂಪಭಾ,** ೧೦. ೪೬ ವ)

ನಾಂದೀವಿಧಿ – [ನಾ] ನಾಂದಿ (ಪುಷ್ಪಾಂಜಲಿವಿಕ್ಷೇಪಣಾದಿ ನಾಂದೀವಿಧಿಯಂ ನಿರ್ವರ್ತಿಸಿ: **ಆದಿಪು,** ೭. ೧೧೪ ವ)

ನಾಂದೀಸಮಯ – [ನಾ] ನಾಂದಿಯ ಸಂದರ್ಭ (ವಿಜಯಪ್ರಸ್ಥಾನ ನಾಂದೀಸಮಯ ನಿನದಾನಂದಿತ ದಿಕ್ಪಾಳಚಕ್ರನುಂ: **ಆದಿಪು,** ೧೪. ೯೧ ವ)

ನಾಂದು – [ಕ್ರಿ] ತೋಯಿಸು, ನೆನೆಸು (ಅತಿವಿಶದವಿಶಾಲ ಊರುಕ್ಷತದಿಂದೊಱಿದನಿತು ಜಡೆಯುಮಂ ನಾಂದಿ ಮನಃಕ್ಷತದೊಡನೆ ಎಟ್ಟರಿಸಿದುದು ಉತ್ಥಿತಮಾ ವಂದಸ್ರಮಿಶ್ರಗಂಧಂ ಮುನಿಯಂ: **ಪಂಪಭಾ,** ೧. ೧೦೫)

ನಾಂಬು – [ಕ್ರಿ] ಒದ್ದೆಯಾಗು (ನೋಟದೊಳೆಯ್ದೆ ತಳ್ತ ಪೆರ್ಮೊಲೆ ಪೊಱಮುಯ್ವು ಬೆನ್ನಿನಿತುಂ ಒರ್ಮೆಯೆ ನಾಂಬಿನಂ ಉಣ್ಮೆ ಪೊಣ್ಮೆ ಕಣ್ಮಲರ್ಗಳಿನೆಚ್ಚು ಪಾಯ್ದುವು ಅರಲಂಬುಗಳಂತೆ ವಿಲೋಚನಾಂಬುಗಳ್: **ಪಂಪಭಾ,** ೪. ೧೦೮)

ನಾಕಜನಾಥ – [ನಾ] ದೇವೇಂದ್ರ (ಸ್ಫಟಿಕಕಳಶಮಂ ತೀವಿ ದಿವ್ಯಾಂಬುವಿಂ ನಾಕಜನಾಥಂ ಮಜ್ಜನಕೆ ಎಂದೆತ್ತಿದ ತೆಱದೆ ಸುಧಾಸೂತಿ ಕಣ್ಗೆಡ್ಡಮಾದಂ: **ಆದಿಪು,** ೧೨. ೮)

ನಾಕಸ್ತ್ರೀ – [ನಾ] ದೇವಕನ್ನಿಕೆ (ಜೇನ ಮಱಿ ಕೊಂಡುದು ಅಮರ್ದಿನ ಸೋನೆಯೆ ಸುರಿದತ್ತು ರಸದ ತೊಱಿ ಪರಿದತ್ತು ಎಂಬೀ ನುಡಿಯನೆ ನುಡಿಯಿಸಿದತ್ತಾ ನಾಕಸ್ತ್ರೀಯ ಗೇಯಂ: **ಆದಿಪು,** ೭. ೧೭)

ನಾಕಿ – [ನಾ] ದೇವಲೋಕವಾಸಿ (ನಾಕಿನಿಕಾಯಂ ಜ್ಯೋತಿರ್ಲೋಕಮಂ ಅವಯವದಿನುಱಿಯೆ ಪೋಗೆ ಬಱಿಕ್ಕಾಳೋಕಿಪುದಾಯ್ತು: **ಆದಿಪು,** ೭. ೬೦)

ನಾಗ – [ನಾ] ನಾಗಪುಷ್ಪ (ಅದಱೊಳಗೆ ಪುದಿದ ಸಪ್ತಚ್ಛದ ಚಂಪಕ ನಾಗ ಪೂಗ ಪುನ್ನಾಗವನಂ ಪುದಿದ ಪೊಸಗಂಪಿನೊಳ್: **ಆದಿಪು,** ೧೩. ೧೧); ನಾಗರ ಹಾವು (ನಾಗರ ಖಂಡಂಗಳಂ ಆ ನಾಗರ ಖಂಡದೊಳೆ ತೊಡರೆ ನರಂ ಇಸುವುದುಂ ನಾಗರ ಖಂಡಂಗಳುಮಂ ನಾಗರ ಖಂಡಮುಮಂ ಅಳುರ್ದುಕೊಂಡಂ ದಹನಂ: **ಪಂಪಭಾ,** ೮೯)

ನಾಗಜಾಲ – [ನಾ] ವೀಳೆಯದೆಲೆಯ ಬಳ್ಳಿ (ನಾಗವಿಭೂಷಣಪ್ರತತಿ ನಾಗರಖಂಡಂ ಅಪೂರ್ವಮಪ್ಪ ಪುನ್ನಾಗದ ಬಾಸಿಗಂ ಬಗೆದ ಬಣ್ಣದ ಪುಟ್ಟಿಗೆ ನಾಗಜಾಲಂ: **ಪಂಪಭಾ,** ೪. ೧೭)

ನಾಗಧ್ವಜ – [ನಾ] ಸರ್ಪಧ್ವಜ, ದುರ್ಯೋಧನ (ಏಗೆಯ್ದುಂ ಎನ್ನ ಧರೆಯ ಒರ್ವಾಗಮುಮಂ ನೀಮೆ ಬೆಸಸೆಯುಂ ಕುಡದೆ ಇನಿತಂ ಮೇಗಿಲ್ಲದೆ ನೆಗೞ್ದು ಅೞಿದಂ ನಾಗಧ್ವಜಂ: **ಪಂಪಭಾ,** ೧೪. ೬)

ನಾಗಪುರ – [ನಾ] ಹಸ್ತಿನಾವತಿ (ಎಂದು ನಾಗಪುರಕ್ಕೆ ವರ್ಪ ಪರಶುರಾಮನ ಬರವಂ ಗಾಂಗೇಯಂ ಕೇಳ್ದು: **ಪಂಪಭಾ,** ೧. ೭೭ ವ); **[ನಾ]** ನಾಗಲೋಕ, ಪಾತಾಳ (ಅಂತು ನಾಗಪುರಮನಿಱಿಸುವ ನಾಗಪುರಮಂ ಆ ನಾಗಶಯನಂ ಪೊಕ್ಕು: **ಪಂಪಭಾ,** ೯. ೨೭ ವ)

ನಾಗಬಂಧ – [ನಾ] ಬಿಗಿಯಾದ ಅಪ್ಪುಗೆ (ನಾಗಶಯ್ಯೆಯೊಳ್ ನಾಗಿಣಿ ನಾಗಬಂಧದೊಳೆ ತಳ್ತು ಗುಣಾರ್ಣವನಂ ಮರುಳ್ಚಿದಳ್: **ಪಂಪಭಾ,** ೪. ೧೭)

ನಾಗರಖಂಡ – [ನಾ] [ಕ್ರಮವಾಗಿ] ಹಸಿಶುಂಠಿ ಮತ್ತು ಟಿಂ]ವಿನ ಚೂರು (ನಾಗರ ಖಂಡಂಗಳಂ ಆ ನಾಗರ ಖಂಡದೊಳೆ ತೊಡರೆ ನರಂ ಇಸುವುದುಂ ನಾಗರ ಖಂಡಂಗಳುಮಂ ನಾಗರ ಖಂಡಮುಮಂ ಅಳುರ್ದುಕೊಂಡಂ ದಹನಂ: **ಪಂಪಭಾ,** ೫. ೮೯); **[ನಾ]** ಒಂದು ಪ್ರದೇಶ (ನಾಗವಿಭೂಷಣಪ್ರತತಿ ನಾಗರಖಂಡಂ ಅಪೂರ್ವಮಪ್ಪ ಪುನ್ನಾಗದ ಬಾಸಿಗಂ: **ಪಂಪಭಾ,** ೪. ೧೭)

ನಾಗರಿಕ – [ನಾ] ಚತುರ ಪೌರ (ಮೇಳದ ನಾಗರಿಕ ವಿಟ ವಿದೂಷಕ ಪೀಠಮರ್ದಕರ್ಕಳ್ವೆರಸು ಕಾಮದೇವನೋಲಗಕ್ಕೆ ಬರ್ಪಂತೆ: **ಪಂಪಭಾ,** ೪. ೭೯ ವ)

ನಾಗವಿಭೂಷಣ – [ನಾ] ಸರ್ಪಾಕಾರದ ಒಂದು ಆಭರಣ (ನಾಗವಿಭೂಷಣಪ್ರತತಿ ನಾಗಖಂಡಮಪೂರ್ವಮಪ್ಪ ಪುನ್ನಾಗದ ಬಾಸಿಗಂ: **ಪಂಪಭಾ,** ೪. ೧೭)

ನಾಗವಿಮಾನ – [ನಾ] ನಾಗಕನ್ನಿಕೆಯರ ಉಪ್ಪರಿಗೆ (ನಾಗಕನ್ನೆ ನಾಗಲೋಕದ ವಿಳಾಸಂಗಳಂ ತೋಱುತ್ತುಂ ತನ್ ಕೆಟಿಗಣ ನಾಗವಿಮಾನಕ್ಕೆ ವಂದು: **ಪಂಪಭಾ,** ೪. ೧೬ ವ)

ನಾಗಶಯನ – [ನಾ] ಹಾವಿನ ಮೇಲೆ ಮಲಗಿದವನು, ವಿಷ್ಣು (ಅಂತು ನಾಗಪುರಮನಿಱಿಸುವ ನಾಗಪುರಮಂ ಆ ನಾಗಶಯನಂ ಪೊಕ್ಕು: **ಪಂಪಭಾ,** ೯. ೨೭ ವ)

ನಾಗಶಯ್ಯೆ – [ನಾ] ನಾಗರ ಹಾಸಿಗೆ (ನಾಗಶಯ್ಯೆಯೊಳ್ ನಾಗಿಣಿ ನಾಗಬಂಧದೊಳೆ ತಳ್ತು ಗುಣಾರ್ಣವನಂ ಮರುಳ್ಚಿದಳ್: **ಪಂಪಭಾ,** ೪. ೧೭)

ನಾಗಾನಂದ – [ನಾ] ನಾಗ[ಸರ್ಪ]ರಿಗೆ ಆನಂದ (ಜೀಮೂತವಾಹನನೆಂಬ ಅಂಕದ ಚಾಗಿ ನಿಚ್ಚಟಿಕೆಯಿಂದೀ ಶೈಳದೊಳ್ ಶಂಖಚೂಡನನಾನಂದದೆ ಕಾದ ಪೆಂಪೆಸೆಯೆ ನಾಗಾನಂದಮಂ ಮಾಡಿದಂ: **ಪಂಪಭಾ,** ೪. ೨೬)

ನಾಗಿಣಿ – [ನಾ] ನಾಗಸ್ತ್ರೀ (ನಾಗಶಯ್ಯೆಯೊಳ್ ನಾಗಿಣಿ ನಾಗಬಂಧದೊಳೆ ತಳ್ತು ಗುಣಾರ್ಣವನಂ ಮರುಳ್ಚಿದಳ್: **ಪಂಪಭಾ,** ೪. ೧೭)

ನಾಟಕ – [ನಾ] ರೂಪಕ ಹಾಗೂ ನೃತ್ಯ ಅಭಿನಯ ಪ್ರದರ್ಶನ ಮತ್ತು ತೋರಿಕೆ (ಕೋಟಿತೆಱದಿಂದಮೆಸೆವ ನಾಟಕಮಂ ತೋಱಿ ಮಾಣ್ದಳಿಲ್ಲಳ್ ಬಗೆಯೊಳ್ ನಾಟುವಿನಮಮರಿ ಸಂಸ್ಕೃತಿನಾಟಕಮುಮಂ ಎನಗೆ ನೆಱೆಯೆ ತೋಱಿದಳ್: **ಆದಿಪು,** ೯. ೪೫)

ನಾಟಕಶಾಲೆ – [ನಾ] ನಾಟಕ[ನೃತ್ಯ]ವಾಡುವ ರಂಗಮಂದಿರ (ಹಾಟಕಭಿತ್ತಿಸಮನ್ವಿತ ನಾಟಕಶಾಲೆಗಳ ವಿವಿಧಸೌಧಂಗಳ ಕೊಂಡಾಟಮನೆ ಮೆಱೆದು: **ಆದಿಪು,** ೫. ೩೭)

ನಾಟಕಾಭಿನಯ – [ನಾ] ನೃತ್ಯದ ಅಭಿನಯ (ಲಯಕ್ಕೆ ಲಕ್ಕಲೆಕ್ಕದ ಜತಿ ನಾಟಕಾಭಿನಯಮಾಯ್ತೆನೆ ಗೇಯದೊಳೀಕೆ ಸೊರ್ಕನಿಕ್ಕಿದಳೆನೆ ಕಣ್ಗೆ ಚಕ್ಕಣಮೆನಿಪ್ಪುದು ಸಾಗೆನಿಸಲ್ಕೆ: **ಪಂಪಭಾ,** ೭. ೯೦)

ನಾಟು – [ಕ್ರಿ] ಆಳವಾಗಿ ಸಿಲುಕು (ಕೋಟಿತೆಱದಿಂದಮೆಸೆವ ನಾಟಕಮಂ ತೋಱಿ ಮಾಣ್ದಳಿಲ್ಲಳ್ ಬಗೆಯೊಳ್ ನಾಟುವಿನಮಮರಿ ಸಂಸ್ಕೃತಿನಾಟಕಮುಮಂ ಎನಗೆ ನೆಱೆಯೆ ತೋಱಿದಳ್: **ಆದಿಪು,** ೯. ೪೫)

ನಾಟ್ಯವಿದ – [ನಾ] ನಟ, ಅಭಿನಯಕರ್ತ (ನಾಟ್ಯವಿದರ್ ತಾಂಗೆಯುಂ ಏಱಿ ನೃತ್ಯಗೃಹಮಂ ಚಕ್ರೇಶ್ವರೋದ್ದಾಮರೂಪ ವಿಳೋಕಾಮೃತತೃಪ್ತಲೋಚನ: **ಆದಿಪು,** ೧೧. ೧೯)

ನಾಟ್ಯವಿದ್ಯಾಚಾರ್ಯ – [ನಾ] ನಾಟ್ಯವನ್ನು ಕಲಿಸುವ ಗುರು (ಮಂಗಳಾಲಂಕೃತನಾಗಿ ನಾಟ್ಯವಿದ್ಯಾಚಾರ್ಯನಂ ಪೋಲ್ತು ರಂಗಂಬೊಕ್ಕು: **ಆದಿಪು,** ೭. ೧೫ ವ)

ನಾಟ್ಯವೇದಾವತಾರ – [ನಾ] ನಾಟ್ಯಶಾಸ್ತ್ರದ ಸಾಕಾರ (ಮಂಗಳಾಲಂಕೃತನಾಗಿ ನಾಟ್ಯವೇದಾವತಾರಮನೆ ಪೋಲ್ತು ರಂಗಂಬೊಕ್ಕು: **ಆದಿಪು,** ೭. ೧೧೫ ವ) [**'**ನಾಟ್ಯವೇದಾವತಾರ**'** – ಎಲ್. ಬಸವರಾಜು ಆವೃತ್ತಿ; **'**ನಾಟ್ಯವಿದ್ಯಾಚಾರ್ಯ**'** ಟಿವಿವೆಂ ಆವೃತ್ತಿ]

ನಾಟ್ಯಾಗಮ – [ನಾ] ನಾಟ್ಯವಿದ್ಯೆ, ನಾಟ್ಯಶಾಸ್ತ್ರ (ನಯಂ ಒಸವೆ ಕರಣಂಗಳುಮಂ ನಿಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ: **ಆದಿಪು,** ೯. ೨೫)

ನಾಟ್ಯಾಲಯ – [ನಾ] ನಾಟ್ಯಗೃಹ, ನರ್ತನಶಾಲೆ (ಧರೆ ರಂಗಂ ಗಗನಂ ಮನೋಹರತರಂ ನಾಟ್ಯಾಲಯಂ ನರ್ತಕಂ ಸುರರಾಜಂ: **ಆದಿಪು,** ೭. ೧೨೭)

ನಾಡ – [ನಾ] ಸುಳ್ಳುಬುರುಕ, ಸುಳ್ಳುಗಾರ (ಕೆಮ್ಮಗೆ ನಾಡ ಚಲ್ಲವೊತ್ತರ ನುಡಿಗೊಳ್ಳದಿರ್ ನಿನಗೆ ಪಾಂಡವರಪ್ಪುದಂ ಆರುಂ ಅಪ್ಪರೇ: **ಪಂಪಭಾ,** ೯. ೪೨)

ನಾಡಾಡಿ – ಸಾಮಾನ್ಯ [ಮನುಷ್ಯ] (ನಾಡಾಡಿಯ ನರರ್ಗದು ಬಗೆಯಲ್ ಕೂಡದಭಸ್ತಿರ್ಯಗೂರ್ಧ್ವಭೇದವಿಭಿನ್ನಂ: **ಆದಿಪು,** ೧. ೪೬)

ನಾಡಾಡಿಯಲ್ಲದೆ – [ಗು] ಅಸಾಮಾನ್ಯವಾಗಿ (ಕುಂತಿ ನೆಲದೊಳ್ ಮೆಯ್ಯನೀಡಾಡಿ ನಾಡಾಡಿಯಲ್ಲದೆ ಪಳಯಿಸಿ: **ಪಂಪಭಾ,** ೨. ೨೪ ವ)

ನಾಡಿಕಾ – [ನಾ] ಒಂದು ಗಳಿಗೆ, ಇಪ್ಪತ್ತನಾಲ್ಕು ನಿಮಿಷ (ಸಮಯಾವಳಿಕೋಚ್ಛ್ವಾಸ ಸ್ತೋಕ ನಿಮೇಷ ನಾಡಿಕಾ ಮುಹೂರ್ತ .. .. ಗಣನಾನುಕ್ರಮದಿಂ ಪೆರ್ಚಿದೆಣಿಕೆಯೊಳ್: **ಆದಿಪು,** ೬. ೪೮ ವ)

ನಾಡು – [ಕ್ರಿ] ನಾಟಿಕೊ (ಮೆಟ್ಟುವ ಮೆಟ್ಟಿನೊಳ್ಪು ಜನತಾನೇತ್ರಂಗಳಂ ನಾಡೆ ಚೆಲ್ವೆಸೆದತ್ತು ಇಂದ್ರನ ನೀಳ್ದ ತೋಳ್ದುಱುಗಲೊಳ್ ದೇವಾಂಗನಾನರ್ತನಂ: **ಆದಿಪು,** ೭. ೧೨೩)

ನಾಡೆ – [ಅ] ಆಳವಾಗಿ, ಗಾಢವಾಗಿ (ಮಂದರಮಾ ಪ್ರಗ್ಭಾರಭೂತಳಂಬರೆಗಂ ನೀಳ್ದಿರೆ ಕಂಡು ವಿಸ್ಮಿತಾಂತಃಕರಣನದರ್ಕಗಿದು ನಾಡೆಯುಂ ಚಿಂತಿಸಿದಂ: **ಆದಿಪು,** ೧೬. ೪೧); [ಅ] ಬಹಳವಾಗಿ (ಮಕ್ಕಳನೀಯದೆ ನೋಡೆ ನಾಡೆ ನೋಯಿಸಿದಪುದು ಇಕ್ಷುಪುಷ್ಪದವೊಲ್ ಎನ್ನಯ ಪುಷ್ಪದರ್ಶನಂ: **ಪಂಪಭಾ,** ೧. ೧೧೭)

ನಾಡೆಯುಂ ಪೊಟ್ತು – [ನಾ] ತುಂಬ ಹೊತ್ತು (ವೀರಭಟರ ಪಂದಲೆಗಳುಂ ಅಗುರ್ವುಂ ಅದ್ಭುತ ಭಯಾನಕ ವೀರ ಬೀಭತ್ಸ ರೌದ್ರರಸಂಗಳಂ ಪುದುಂಗೊಳಿಸೆ ಗಾಂಗೇಯಂ ನಾಡೆಯುಂ ಪೊಟ್ತು ಕಾದೆ: **ಪಂಪಭಾ,** ೧೦. ೧೧೬ ವ)

ನಾಡೊವಜ – [ನಾ] ನಾಡ ಗುರು ಪುರಾಣಕವಿಯುಂ ಧರೆಗಾಗಿರೆ ಉಣ್ಮಿ ಪೊಣ್ಮುವೀ ದೇಸಿಗಳುಂತೆ ನಾಡೊವಜನಾದನೊ ಪೇೞ್ ಕವಿತಾಗುಣಾರ್ಣವಂ: **ಪಂಪಭಾ,** ೧೪. ೬೨)

ನಾಡೋಜ – [ನಾ] ನಾಡೊವಜ (ರಾಜ್ಯಲಕ್ಷ್ಮಿ ಬಳೆದ ಸಂತೋಷದಂತಮನೆಯ್ದೆ ಪತ್ತಿದಳ್ ಸಹಜಮನೋಜನಂ ನಾಡೋಜನಂ: **ಪಂಪಭಾ,** ೧೩. ೧೦೮)

ನಾಣ್ – [ನಾ] ಲಜ್ಜೆ (ಅಟ್ಟಿಱಳುರ್ಕೆ ತೋಳ್ಗೆ ವಂದೊದವಿರೆ ನಾಣನೊಕ್ಕೆರ್ದೆ ವಿಚಿತ್ರವಿಕಾರರಸಾಂತರಂಗದೊಳ್ ಪುದಿದಿರೆ: **ಆದಿಪು,** ೪. ೧೫); [ನಾ] ಅಭಿಮಾನ (ಆ ನುಡಿಯಂ ಆನೇಗೊಂಡೆನೇ ನಾಣನೆಳ್ಳನಿತುಂ ಕಾದೆನೆ ಬೇಡಿದೊಂದು ಪುರುಳಂ ಮಾರ್ಕೊಂಡೆನೇ: **ಆದಿಪು,** ೧೨. ೩೬); [ನಾ] ನಾಚಿಕೆಯ ಜಾಗ, ಗುಹ್ಯೇಂದ್ರಿಯ (ತೆಱಪುವಡೆದು ಅಂಗಜಂ ಕೆಯ್ಸಱೆಗೊಳೆ ನೋಟಕರ ಮನಮನಾಗಳ್ ಕೊಳದಿಂ ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆಱೆದುದು ಅವರ ನಾಣ್ಗಳ ತೆಱಪಂ: **ಪಂಪಭಾ,** ೫, ೬೭)

ನಾಣ ಪುತ್ತು – [ನಾ] ನಾಚಿಕೆಯ ಹುತ್ತ (ಇದು ಕಡು ನಾಣ ಪುತ್ತು ವಲಂ ಇಂ ನೆನೆಯುತ್ತಿರಿಂ ಎಮ್ಮಂ ಎಂಬುದಾವುದು ಗುಣವೆಮ್ಮೊಳಾಗೆ ನೆನೆದಪ್ಪಿರಿ: **ಆದಿಪು,** ೧೧. ೩೧)

ನಾಣ ಪೆಂಪು – [ನಾ] ನಾಚಿಕೆಯ ಹಿರಿಮೆ (ಕೊಡಗೂಸುತನದ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಡಿಯಲ್ ಒಡಗೂಡೆ ಗಂಗೆಯ ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ: **ಪಂಪಭಾ,** ೧. ೯೨)

ನಾಣಳ್ಕು – [ನಾ] ನಾಚಿಕೆಯಿಂದಾದ ಭಯ (ಮಜ್ಜನಂಬುಗದೆ ಆರೋಗಿಸಲೊಲ್ಲದೆ ಇರ್ಪ ಇರವಿದೇಂ ನಾಣಳ್ಕು ಇದೇಂ

ಕಾಮನಂಬುಗಳ್ ಅತ್ತಿತ್ತೆಡೆಯಾಡೆ ಸೋಂಕವೆ ವಲಂ ನಿನ್ನಂ ಸರೋಜಾನನೇ: **ಪಂಪಭಾ,** ೪. ೬೮)

ನಾಣಿಲಿ – [ನಾ] ನಾಚಿಕೆಗೇಡಿ (ಅಂತುಂ ಆಡಿದುದಲ್ಲದೆ ಈ ನಾಣಿಲಿಪಾರ್ವನಂ ಎಱೆದು ಕಳೆಯಿಂ ಎಂಬುದುಂ: **ಪಂಪಭಾ,** ೨. ೪೮ ವ)

ನಾಣಿಲಿಗ – [ನಾ] ನಾಚಿಕೆಗೇಡಿಯಾದವನು (ಮಹೀಪತಿಗಂ ದ್ವಿಜವಂಶಂಗಂ ಏತಱ ಕೆಳೆಯಿಂತು ನಾಣಿಲಿಗರಪ್ಪರೆ ಮಾನಸರ್: **ಪಂಪಭಾ,** ೨. ೪೮)

ನಾಣು – [ನಾ] ಲಜ್ಜೆ (ಭಯಂ ಬೆರಸಿದ ನಾಣುಮಂ ಕ್ರಮದೆ ಪಿಂಗಿಸು ಬೇಸಱದಿರ್ ಗುಣಾರ್ಣವಾ: **ಪಂಪಭಾ,** ૩. ೭೭)

ನಾಣೆಡೆ – [ನಾ] ನಾಚಿಕೆಯ ಜಾಗ (ಪಡಿದೆಱೆದಂದದಿಂದಂ ತೆಱೆದತ್ತು ಪೊದಳ್ದ ಸಂಕೆಯಿಂ ನಡುಕಂ .. .. ಕಣ್ ನಡೆ ನೋಡಿ ತಪ್ಪುನೋಡಿ ನಾಣೆಡೆಯೊಳ್ ಆದುದು: **ಪಂಪಭಾ,** ೫. ೧೫)

ನಾಣೋಡು – [ಕ್ರಿ] ನಾಚಿಕೆಗೆಡು (ನೋಡಲ್ ಅಱುಂಬಂ ಎಂದೊಡೆ ಇದಂ ಆಂತು ಇಱೆದಾರ್ ತವಿಪನ್ನರ್ ಎಂದು ನಾಣೋಡೆ; **ಪಂಪಭಾ,** ೮. ೧೦೦)

ನಾಣ್ಗಳ ತೆಱಪು – [ನಾ] ಲಜ್ಜಾಕರವಾದ ಜಾಗ (ತೆಱಪುವಡೆದು ಅಂಗಜಂ ಕೆಯ್ಸಱೆಗೊಳೆ ನೋಟಕರ ಮನಮನಾಗಳ್ ಕೊಳದಿಂ ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆಱೆದುದು ಅವರ ನಾಣ್ಗಳ ತೆಱಪಂ: **ಪಂಪಭಾ,** ೫, ೬೭)

ನಾಣ್ಗಾಪು – [ನಾ] ಮಾನರಕ್ಷಣೆ (ಎಂದು ತನ್ನ ನಾಣ್ಗಾಪನೆ ಬಗೆದು ಅತನುಪರಿತಾಪಿತ ಶರೀರನುಮಾಗಿ ಶಂತನು ಕರಂಗಿ ಎರ್ದೆಗಿಡೆ: **ಪಂಪಭಾ,** ೧. ೭೧ ವ)

ನಾಣ್ಗಿಡಿಸು – [ಕ್ರಿ] ಮರ್ಯಾದೆ ಹಾಳುಮಾಡು (ಕುಡಿದೊಡೆ ಸೊರ್ಕಿಸದವು ನಾಣ್ಗಿಡಿಸದವು ಮನಕ್ಕಲಂಪನೀವವು ರತಮಂ ನಡೆಯಿಪುವು ಎನಿಪ ಮಧುಗಳಂ: **ಆದಿಪು,** ೫. ೩೨)

ನಾಣ್ಗೆಟ್ಟಂ – [ನಾ] ನಾಚಿಕೆ ಬಿಟ್ಟವನು (ತುಂಬಿದ ರಕ್ತತೆಯಿಂ ನಿಜಬಿಂಬಂ ವಾರುಣಿಯನೊಸೆದು ಸೇವಿಸೆ ನಾಣ್ಗೆಟ್ಟಂಬೋಲ್ ತೇಜಂ ಮಸುಳ್ವಿನಂ ಅಂಬರಮಂ ಬಿಸುಟಂ ಆಗಳಂಬುಜಮಿತ್ರಂ: **ಪಂಪಭಾ,** ૩. ೨૩)

ನಾಣ್ಗೆಡು – [ಕ್ರಿ] ನಾಚಿಕೆಯನ್ನು ತೊರೆ (ಕೀಚಕಂ ಕಾಮದೇವಂ ಮಾಡಿದ ಯಾಚಕನಂತೆ ಕರಮೆ ನಾಣ್ಗೆಟ್ಟು ಮನಂಗಾಪು ಅಟೆದು ಅಳಿಪಿ ನೋಡಿ: **ಪಂಪಭಾ,** ೮. ೫೯ ವ)

ನಾಣ್ಚು – [ಕ್ರಿ] ನಾಚಿಕೆಪಡು (ತನಗಲ್ಲದುದಂ ಮಾಡಿದನಿನಿಸಂ ಚಕ್ರೇಶನೆಂಬ ಕುಲವೃದ್ಧರ ಭೂವನಿತಾಧೀಶರ ನುಡಿಗಳ್ಗೆ ನಾಣ್ಚಿದಂ ಭರತರಾಜಂ: **ಆದಿಪು,** ೧೪. ೧೧೯); [ಕ್ರಿ] ಲಜ್ಜೆಗೊಳ್ಳು (ಎಡೆಯೊಳ್ ದೂಂಟಿಂದೆ ದೂಂಟಿಂಗೆ ಪೆರ್ವಱೆಯಂ ಪೊಯ್ಸಿ ಕೆಲಕ್ಕೆ ನಾಣ್ಚಿ ತಲೆಗುತ್ತಿರ್ಪ ಆಕೆಯೇಂ ಜೋಡೆಯೇ: **ಪಂಪಭಾ,** ೪. ೮೨)

ನಾಣ್ಪೋಗು – [ನಾ] [ಪ್ರಾಣಿ] ಕಾಮಕ್ರೀಡೆ (ಮೂಱುಕೊಂಬುಮಂ ಆಱು ನಾಣ್ಪೋಗುಮಂ ಎರಟ್ಟಜ್ಜೆಯುಮಂ ಮೂಱು ಪೊಟ್ಟುಮಂ ಮೃಗದ ಮೂಜೆರವುಮಂ ಆಱು ಆಱಯ್ಕೆಯುಮಂ .. .. ಬಲ್ಲನಾಗಿ: **ಪಂಪಭಾ,** ೫. ೪૩ ವ)

ನಾತ – [ನಾ] ಗಬ್ಬು ವಾಸನೆ (ಆ ಮುದುಪಂ ಬಿಡೆ ಬಂದು ಪೊಂಗಳಂ ಸುರಿವೊಡಂ ಆರೊ ಸೈರಿಸುವರ್ ಆತನ ಪಲ್ಲಿಲಿವಾಯ ನಾತಮಂ: **ಪಂಪಭಾ,** ೪. ೧೦೦)

ನಾದುನಿ – [ನಾ] ನಾದಿನಿ (ಸೀರ್ಕರಡಿಯನ್ನಳೆ ನಾದುನಿಯೊಲ್ದುಮೊಲ್ಲದನ್ನಳೆ ಗಡ ಸೂಳೆಯೆಂದೊಡೆ ಇಂತುತಲೆವೇಸಱನೆಂತು ನೀಗುವೆಂ: **ಪಂಪಭಾ,** ೪. ೯೮)

ನಾನ್ – [ಕ್ರಿ] (ಆ ಸತಿಯಿಕ್ಕಿದ ಕಣ್ಣ ನೀರ ಧಾರೆಗಳೊಳೆ ನಾಂದು ಎಲರ್ಚಿ ಪೊದಳ್ದು ಒರ್ಮೆಯೆ ಪಾಱೆದುವು ಉನ್ಮದಾಳಿಗಳ್: **ಪಂಪಭಾ,** ೫. ೧೦)

ನಾಭಿ – [ನಾ] ಕೇಂದ್ರ (ಅಂತು ವಜ್ರನಾಭಿ ಚೆಲ್ವಿಂಗೆ ನಾಭಿಯುಂ ವಿಳಾಸಕ್ಕಾವಾಸಮುಂ ಅಳವಿಂಗೆ ದಳಮುಂ: **ಆದಿಪು,** ೬. ೨೨ ವ)

ನಾಭಿಕೂಪಾವಲಂಬಿ – [ನಾ] ಹೊಕ್ಕುಳ ಕುಳಿಯವರೆಗಿನ (ಸೃಕ್ವೋಪಾಂತಪ್ರರೂಢ ಶ್ಮಶ್ರುಜಾಳಂ ಆಹವ ಮಹಾಹುಂಕಾರ ಕಾಳಕೂಟವಿಟಪಿಪ್ರರೋಹ ಶಂಕಾವಹ ನಾಭಿಕೂಪಾವಲಂಬಿ ಕೂರ್ಚಕಳಾಪಂ: **ಆದಿಪು,** ೧૩. ೪೫ ವ)

ನಾಭಿನಗ – [ನಾ] [ಜೈನ] ಮೇರುಪರ್ವತ (ನಾಲ್ಕು ನಾಭಿನಗಂಗಳಿಂದಂ .. .. ಚತುರ್ದಶಮಹಾವಾಹಿನಿಗಳಿಂದಂ ಎಸೆದು: **ಆದಿಪು,** ೧. ೪೮ ವ)

ನಾಭಿನಾಳ – [ನಾ] ಹೊಕ್ಕುಳ ಬಳ್ಳಿ (ನಾಭಿನಾಮಮುಮಾಯ್ತು ಅರ್ಭಕನಿಕರ ನಾಭಿನಾಳಪ್ರಕರನಿಕರ್ತನಮಱೆಯೆ ಪೇೞ್ದುದಱೆಂದಂ: **ಆದಿಪು,** ೬. ೬೭)

ನಾಭಿಮೂಳ – [ನಾ] ಹೊಕ್ಕುಳ ಕುಳಿ (ಎಮೆಯಿಕ್ಕದೆ ನೋಡುವ ನರರಮಮರರ ಕಣ್ಗಳೊಳನಂಗರಾಜನ ಬಯ್ತಿಟ್ಟ ಅಮರ್ದಂ ಕೊಳೆ ತಳಿದುದು ನಾಭಿಮೂಳಮುಂ ಬಾಹುಮೂಳಮುಂ ಸುರವಧುವಾ: **ಆದಿಪು,** ೯. ૩೫)

ನಾಭಿವಿಲಂಬಮಾನ – [ಗು] ಹೊಕ್ಕುಳವರೆಗೆ ಜೋತುಬಿದ್ದ (ನಾಭಿವಿಲಂಬಮಾನ ಲಂಬಸ್ತನವಿಸ್ರಸ್ತ ಅಂತರೀಯ ಉತ್ತರೀಯ ವೃದ್ಧಧಾತ್ರೀನರ್ತನ ನಿರೀಕ್ಷಣ ಜನತಾಜನಿತ ಹಾಸನಿವಾಸಮುಂ: **ಆದಿಪು,** ೮. ૩೫ ವ)

ನಾಭಿಸ್ಥಾನ – [ನಾ] ಕೇಂದ್ರಸ್ಥಾನ (ಶ್ರೀನಿಳಯಮಿದುವೆ ನಾಭಿಸ್ಥಾನಮೆನಲ್ ನೆಱೆದಯೋಧ್ಯೆಗವತರಿಸಲ್ ಜ್ಞಾನಧರಂ: **ಆದಿಪು,** ೭. ೧)

ನಾಭೇಯ – [ನಾ] ನಾಭಿರಾಜನ ಮಗ (ಆ ತನೂದರಿಯರ್ ಆ ನಾಭೇಯನ ಮನಸ್ಸರಸ್ತಟಮಂ ತಮ್ಮ ವಳಿತ್ರಯ ತರಂಗಂಗಳಿಂದಂ ಅಳ್ಳಿಱೆಸಿಯುಂ: **ಆದಿಪು,** ೮. ೨೪ ವ) [ಈ ಭಾಗ ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳ ಆವೃತ್ತಿಗಳಲ್ಲಿ ಮಾತ್ರವಿದೆ]

ನಾಮಕರಣ – [ನಾ] ಮಗುವಿಗೆ ಹೆಸರಿಡುವ ಸಂಸ್ಕಾರ (ಅಂತವರ್ಗೆ ಜಾತಕರ್ಮ ನಾಮಕರಣಾನ್ನಪ್ರಾಶನಚೌಲೋಪನಯನಾದಿ ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ: **ಪಂಪಭಾ,** ೧, ೮೭, ವ)

ನಾಮಕರ್ಮ – [ನಾ] ಜೈನ] ಒಂದು ಗರ್ಭಾನ್ವಯಕ್ರಿಯೆ, ಮಗುವಿಗೆ ಹೆಸರಿಡುವ ಕ್ರಿಯೆ (ನಾಮಕರ್ಮ .. .. ಆಗ್ರನಿರ್ವೃತಿಯೆಂಬಯ್ವತ್ತೂಱು ಗರ್ಭಾದಿನಿರ್ವಾಣ

ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು**, ೧೫. ೧೫ ವ)

ನಾಮಧಾರಕ – [ನಾ] ಹೆಸರು ಮಾತ್ರ ಹೊಂದಿರುವ (ಉಚಿತಸತ್ಕ್ರಿಯಾವಿರಹಿತನಾತಂ ನಾಮಧಾರಕಂ ದ್ವಿಜನಲ್ಲಂ: **ಆದಿಪು**, ೧೫. ೧೫)

ನಾಮಾಕ್ಷರಮಾಳಿಕೆ – [ನಾ] ಹೆಸರನ್ನು ಸೂಚಿಸುವ ಅಕ್ಷರಗಳ ಸಾಲು (ನಾಮಾಕ್ಷರಮಾಳಿಕೆಗಳ್ ತಾಮೞಿಪವೆ ಚಕ್ರವರ್ತಿಯೆಂಬುದನಾತಂ: **ಆದಿಪು**, ೧೨. ೧೦೬)

ನಾರ್ – [ನಾ] ನಾರುಮಡಿ, ನಾರಿನಿಂದ ಮಾಡಿದ ಬಟ್ಟೆ (ಪುಗಲಿಲ್ಲ ಈ ಬನಂ ಆರ್ಗಂ ಇಂಬು ನೆಲಸಲ್ ನಾರುಂಟು ಉಡಲ್ ಮೆಲ್ಲೆ ಕೊಂಬುಗಳೊಳ್ ಪಣ್ಪಲಮುಂಟು: **ಪಂಪಭಾ**, ೭. ೩೦ ವ)

ನಾರಂಗ – [ನಾ] ಕಿತ್ತಿಳೆ (ಕಟ್ಟಿಲಿಸಿರ್ಪ ಎಲೆವಳ್ಳಿ ಪಣ್ತೊಲೆವ ನಾರಂಗಂ ಫಲವ್ರಾತದಿಂ ನೆಲನಂ ಮೋದುವ ಮಾತುಳುಂಗಂ: **ಆದಿಪು**, ೧. ೬೭)

ನಾರಕ – [ನಾ] ನರಕವಾಸಿ (ಭಯಂಕರಶಿಂಶುಮಾರ ವಿಕಟದಂಷ್ಟ್ರಾ ಕ್ರಕಚಪಾಟ್ಯಮಾನ ನಾರಕನಿಕರ ರುಧಿರಚ್ಛಟ ಅಚ್ಛಾರುಣಿಸಲಿಲ ಪರಿಕಾನಿಕರಕರಾಳೆಯುಂ: **ಆದಿಪು**, ೫. ೮೭ ವ)

ನಾರಕಾವಾಸ – [ನಾ] ನರಕಲೋಕ (ಬೇಸಱಿ ಲೋಕಮಂ ತಗುಳ್ದು ಸುಟ್ಟ ಅೞಲಿಂದೆ ಖರಾಂಶು ನಾರಕಾವಾಸದೊಳ್ ಆಟ್ಟಿವೋಲ್ ಅಪರವಾರ್ಧಿಯೊಳ್ ಆೞ್ದುದುಂ: **ಪಂಪಭಾ**, ೩. ೮೧)

ನಾರಾಚ – [ನಾ] ಬಾಣ (ತೇರಂ ಕುದುರೆಯಂ ಎಸಗುವ ಸಾರಥಿಯ ಪೊಡರ್ಪಂ ಅಯ್ದುಬಾಣದೊಳುಪಸಂಹಾರಿಸಿ ತಟತಟ ತೊಳಗುವ ನಾರಾಚದಿಂ ಎಚ್ಚಂ ಊಱೆ ಭೀಮನ ನೊಸಲಂ: **ಪಂಪಭಾ**, ೧೨. ೬೯)

ನಾರಾಯಣ – [ನಾ] ಕೃಷ್ಣ (ನಾರಾಯಣನುಂ ತಾನುಂ ಅಂತಃಪುರ ಪರಿವಾರಂ ಬೆರಸು ಬೇಂಟೆಗೆ ಪೊಱಮಟ್ಟು: **ಪಂಪಭಾ**, ೫. ೪೭ ವ)

ನಾಲಗೆ ಕುಲಮಂ ತುಬ್ಬುವವೊಲ್ – ನಾಲಗೆ ಹುಟ್ಟನ್ನು [ಸ್ವಭಾವವನ್ನು] ಸೂಚಿಸುವಂತೆ ಎಂಬ ಗಾದೆಮಾತು (ಕುಲಜರಂ ಉದ್ಧತರಂ ಭುಜಬಲಯುತರಂ ಹಿತರಂ ಈ ಸಭಾಮಧ್ಯದೊಳ್ ಅಗ್ಗಲಿಸಿದ ಮದದಿಂ ನಾಲಗೆ ಕುಲಮಂ ತುಬ್ಬುವವೊಲ್ ಉಱದೆ ನೀಂ ಕೆಡೆನುಡಿವೈ: **ಪಂಪಭಾ**, ೧೦. ೨೦)

ನಾಲ್ಕು – [ನಾ] ಸಾಮ ದಾನ ಭೇದ ದಂಡಗಳೆಂಬ ಉಪಾಯಗಳು (ಪರಿಕಿಪುದು ಒಂದೞಿಂದೆ ಎರಡಂ ಓತುಕೊಳ್ವುದು ಮೂಱ್ಱಿಂದೆ ನಾಲ್ಕರಿದಱಿದು ಅಯ್ದಱಿಂದೆ ನೆಱೆ ಕಲ್ವುದು ನಿರ್ಣಯಂ ಆಱ್ಱೊಳ್ ಪರಿಣತನಪ್ಪುದು ಏೞಱೊಳಂ ಒಂದದೆ ನಿಲ್ವುದು: **ಪಂಪಭಾ**, ೧೩. ೬೬)

ನಾಲ್ಕುಂ ನೃಪವಿದ್ಯೆ – [ನಾ] ನಾಲ್ಕು ರಾಜವಿದ್ಯೆಗಳು: ಸಾಮ, ದಾನ ಭೇದ ಮತ್ತು ದಂಡ (ನಾಲ್ಕುಂ ನೃಪವಿದ್ಯೆಯಂ ಆಡಲ್ ಕಲ್ತುಂ ನೆಱೆಯೆ ಕಲ್ತೆಯಿಲ್ಲಾಗದೆ ಸೋಲಲ್ಕೆ ದೊರೆಯೆ ನೆಲನಂ: **ಪಂಪಭಾ**, ೭. ೫೪)

ನಾಲ್ಕು ವೇದ – [ನಾ] ಋಕ್, ಯಜುರ್, ಸಾಮ ಮತ್ತು ಅಥರ್ವ ಎಂಬ ವೇದಗಳು (ಪದಿನೆಂಟು ಧರ್ಮಶಾಸ್ತ್ರಂಗಳೊಳಂ ನಾಲ್ಕುವೇದಂಗಳೊಳಂ ಆಱಂಗದೊಳಂ: **ಪಂಪಭಾ**, ೨. ೩೪ ವ)

ನಾಲ್ಛಾಸಿರ – [ನಾ] [ನಾಲ್+ಸಾಸಿರ] ನಾಲ್ಕು ಸಾವಿರ (ಸುಶರ್ಮನುಮಂ ನಾಲ್ಛಾಸಿರ ರಥಂಬೆರಸು ದಕ್ಷಿಣದಿಶಾಭಾಗಕ್ಕೆ ವೇೞ್ದು ತುಱುವಂ ಕೊಳಿಸಿದಾಗಳ್: **ಪಂಪಭಾ**, ೮. ೮೯ ವ)

ನಾಲ್ವೆರಲ್ ಮೇಗು – ನಾಲ್ಕು ಬೆರಳು ಹೆಚ್ಚು ಎತ್ತರ (ಜಗತ್ತಿತ್ರಯಂಗಳೊಳ್ ಜಸಕ್ಕೆ ಆಗರಮಾದ ಬದ್ದೆಗನಿಂ ಆ ನರಸಿಂಹನಿಂ ಅತ್ತ ನಾಲ್ವೆರಲ್ ಮೇಗು ಪೊದಳ್ದ ಚಾಗದೊಳಂ ಒಂದಿದ ಬೀರದೊಳಂ ಗುಣಾರ್ಣವಂ: **ಪಂಪಭಾ**, ೧. ೫೦)

ನಾಲ್ಸಾಸಿರದೇೞ್ನೂಱಯ್ವದಿಂಬರ್ – [ನಾ] ನಾಲ್ಕು ಸಾವಿರದ ಏಳುನೂರೈವತ್ತು ಮಂದಿ (ನಾಲ್ಸಾಸಿರದೇೞ್ನೂಱಯ್ವದಿಂಬರ್ ಸಕಳಪೂರ್ವದೇವರುಂ ನಾಲ್ಸಾಸಿರದೈನೂಱಯ್ವದಿಂಬರ್ ಶಿಕ್ಷಕರುಂ: **ಆದಿಪು**, ೧೬. ೪೦ ವ)

ನಾಲ್ಸಾಸಿರದೈನೂಱಯ್ವದಿಂಬರ್ – [ನಾ] ನಾಲ್ಕು ಸಾವಿರದ ಐನೂರೈವತ್ತು ಮಂದಿ (ನಾಲ್ಸಾಸಿರದೇೞ್ನೂಱಯ್ವದಿಂಬರ್ ಸಕಳಪೂರ್ವದೇವರುಂ ನಾಲ್ಸಾಸಿರದೈನೂಱಯ್ವದಿಂಬರ್ ಶಿಕ್ಷಕರುಂ: **ಆದಿಪು**, ೧೬. ೪೦ ವ)

ನಾವೆ – [ನಾ] ದೋಣಿ, ಹಡಗು (ಈ ಸಂಸಾರಾಂಭೋಧಿಯಂ ಈಸುವ ನಿನಗಿದುವೆ ನಾವೆ ತಡಿಗಾಣ್ಬೆಯನಾಯಾಸದೊಳೆ: **ಆದಿಪು**, ೫. ೬೦)

ನಾಸಾಪುಟ – [ನಾ] ಮೂಗಿನ ಹೊಳ್ಳೆ (ವಿಕಸಿತನಾಸಾಪುಟಂ ಅತಿವಿಕಂಪಿತಾತಾಮ್ರದಶನವಸನಂ: **ಆದಿಪು**, ೧೪. ೨೪)

ನಾಸಾವಂಶೆ – [ನಾ] [ನಾಸಾವಂಶ=ಮೂಗಿನ ನಡುಮೂಳೆ] ಚಾಚಿದ ಮೂಗುಳ್ಳವಳು (ಆ ಚಂಪಕಮುಕುಳವಿಳಾಶ ನಾಸಾವಂಶೆಯರ್ ಆ ವಿಶ್ವೇಶ್ವರನ ಮನೋಮಧುಕರಮಂ ತಮ್ಮ ಮುಖಾರವೊಂದದೊಳ್ ನಲಿಯಿಸಿಯುಂ: **ಆದಿಪು**, ೮. ೨೪ ವ)

ನಾಸಿಕಾವಂಶೆ – [ನಾ] ನಾಸಾವಂಶೆ (ಆ ಚಂಪಕಕಳಿಕಾವಿಳಾಸ ನಾಸಿಕಾವಂಶೆಯರೊಳ್: **ಆದಿಪು**, ೮. ೨೩ ವ)

ನಾಳಿಕಾ – [ನಾ] [ಜೈನ] ನಾಡಿ, ಮೂವತ್ತೆಂಟೂವರೆ ಲವಗಳು ಅಥವಾ ನಿಮೇಷಗಳು, ಇಪ್ಪತ್ತನಾಲ್ಕು ನಿಮಿಷಗಳ ಕಾಲ, ಒಂದು ಗಳಿಗೆ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು**, ೬. ೬೮ ವ)

ನಾಳಿಕೇರ – [ನಾ] ನಾರಿಕೇಳ, ತೆಂಗು (ಚಂದನ ಪನಸ ನಾಳಿಕೇರ ತಾಂಬೂಲವಲ್ಲೀ ಪ್ರಚುರಪ್ರದೇಶಂಗಳೊಳ್ ನಿಜವಿಜಯ ಕುಂಜರಂಗಳಂ ವಿಹಾರಿಸಿ ಬಂದು: **ಆದಿಪು**, ೧೩. ೩ ವ)

ನಾಳಿಕೇರತೋಯ – [ನಾ] ಎಳನೀರು (ಘೃತ ಕ್ಷೀರ ದಧಿ ನಾಳೀಕೇರತೋಯ ಆಮ್ರರಸ ಇಕ್ಷುರಸ ಗಂಧಧೋದಕಾದಿಗಳಿಂ ಮಾಡುವ ಸವನಮುಂ: **ಆದಿಪು**, ೧೫. ೧೩ ವ)

ನಾಳೆ ನಾಡಿದು – [ನಾ] ಸ್ವಲ್ಪ ದಿವಸ (ಕೂಡುವೈ ಬಗೆಗೊಳೆ ನಾಳೆ ನಾಡಿದು ಮಹೋತ್ಸವದಿಂ ನಿಜಜೀವಿತೇಶನೊಳ್: **ಆದಿಪು**, ೩. ೫೦)

ನಾಟಿವಾಸಗೆ – [ನಾ] [ನಾಟಿ+ಪಾಸಗೆ] ಮೋಸದ ದಾಳ (ನಾಟಿವಾಸಗೆಗಳಂ ಅರಸಾಳಂತೆ ಕಣ್ಣಱಿದು ಮೆಟ್ಟಿ ಮಟ್ಟಮಱಿದು ಇಕ್ಕುವಾಗಳ್ ಒಡ್ಡಮಂ ಪೇೞಿಮೆನೆ: **ಪಂಪಭಾ,** ೬. ೭೧ ವ)

ನಾಟ್ಕಿಡೆಗಟಿ – [ಕ್ರಿ] ಶಭ್ರಷ್ಟನಾಗಿಸು (ನಾಟ್ಕಿಡಿಗಟಿದೊಡೆ ಮದೀಯ ನಾಥಂ ಬೇರಂ ಬಿಟಿಕ್ಕೆಯನೆ ತಿಂದ ದೇವಸದೊಳಟ್ಟಾಡಿದ ಬೀರಮೀಗಳೇಂ ಪೊಸತಾಯ್ತೇ: **ಪಂಪಭಾ,** ೧೨. ೧೭೮) [ನಾಟ್ಕಿಡೆ ಎಂಬುದನ್ನು ನಾಡ ಕಡೆ ಎಂದರೆ **'ನಾಡ ಪ್ರದೇಶ'** ಎಂದು ಎಂದು ಟಿವಿವೆಂ ಅರ್ಥವಿಸಿದರೆ, ಡಿಎಲ್‌ಎನ್ ನಾಟ್ಕಿಡಿ ಎಂಬ ಪಾಠವನ್ನೇ ಒಪ್ಪಿ ಅದಕ್ಕೆ **'ನಾಡ ಗಡಿ'** ಎಂದು ಅರ್ಥವಿಸುತ್ತಾರೆ]

ನಾಟ್ಕಿಳ್ – [ನಾ] ನಾಡು ಎಂಬುದರ ಬಹುವವನ ರೂಪ, ನಾಡುಗಳು (ಆ ಸೀತಾನದಿಯ ತೆಂಕಣ ಬಡಗಣ ತಡಿವಿಡಿದುರ್ದಂ ಎಂಟು ನಾಟ್ಕಿಳ್: **ಆದಿಪು,** ೧. ೫೫ ವ)

ನಾಟ್ನುಡಿ – [ನಾ] ನಾಣ್ನುಡಿ, ಜನರ ಮಾತು (ನುಡಿ ತಡವಕ್ಕುಂ ಇಚ್ಚೆಗೆಡುಗುಂ ಗಡ ನಲ್ಲರಗಲ್ಕೆಗೆಂಬ ನಾಟ್ನುಡಿಯನೆ ಕೇಳ್ದೆನಿನ್ನೆವರಂ ಓವೋ ಒಲವೆಂಬುದಿಂತುಟಾಗದೇ: **ಆದಿಪು,** ೧೨. ೪೦)

ನಾಟ್ವರ್ತನ – [ನಾ] ಅನಾಗರಿಕ ವರ್ತನೆ (ಎಳೆವಿದಿರ ಬಣ್ಣಂ ಒಳ್ಳೆಡು ಕಳಶಮನವ್ವಳಿಪ ಮೊಲೆ ಪೊದಳ್ದೆಳಸುವ ಬಾಯ್ ಬಳಸುವ ಕಣ್ ಮಿಳಿರ್ವ ಕುರುಳ್ ನಳಿಮೊಗಮೆನೆ ಸೊಬಗಿವಳ್ಗೆ ನಾಟ್ವರ್ತನಮೇ: **ಆದಿಪು,** ೪. ೪೪)

ನಾಟ್ವಿಳಾಸ – [ನಾ] ನಾಡ ವಿಲಾಸ, ದೇಸೀ ಸೊಬಗು (ನಾಟ್ವಿಳಾಸದೊಳ್ ಪೊರೆದಿರೆ ಬಂದುದಂದೊಡನೆ ಸಜ್ಜನವೆಂಡಿರ ತಂಡಮೋಳಿಯೊಳ್: **ಆದಿಪು,** ೧೧. ೪೬)

ನಿಃಪ್ರವೀಚಾರ – [ನಾ] [ಜೈನ] ಮೈಥುನೇಚ್ಛೆಯಿಲ್ಲದಿರುವುದು (ತೊದಳುಂಟೆ ನಿಃಪ್ರವೀಚಾರದಿಂದಂ ಅಹಮಿಂದ್ರಂ ಅಖಿಳಸುಖಮಂ ಪಡೆವಂ: **ಆದಿಪು,** ೬. ೪೩)

ನಿಕಟಮಂ ಸಾರ್ – [ಕ್ರಿ] ಹತ್ತಿರ ಹೋಗು (ಶ್ರೀಮತಿವೆರಸು ಆಗಳ್ ಅತಿಪ್ರೇಮದೆ ಮುನಿಯುಗಳನಿಕಟಮಂ ಸಾರ್ದು: **ಆದಿಪು,** ೫. ೧)

ನಿಕಟವರ್ತಿ – [ಕ್ರಿ] ಹತ್ತಿರ ಇರುವವನು (ಹಿಮವದ್ಗಿರೀಂದ್ರತಟ ನಿಕಟವರ್ತಿಗಳಪ್ಪ ಅಗಸ್ತ್ಯವಟಮುಂ ವಸಿಷ್ಠಪರ್ವತಂಗಳೆಂಬ ತೀರ್ಥಂಗಳೊಳ್: **ಪಂಪಭಾ,** ೪. ೧೮ ವ)

ನಿಕರ – [ನಾ] ಸಮೂಹ (ಭೂತಾಂಗನಾ ನಿಕರಂ ಶೋಣಿತವಾರಿಯಂ ಕುಡಿದು ಅಗುರ್ವಪ್ಪನ್ನೆಗಂ ಸೂಸೆ ನೋಡ ಕವಿಲ್ತಿರ್ದುದು ಕೂಡೆ ಸಂಜೆಗವಿದಂತಾ ದ್ರೋಣನಿಂ: **ಪಂಪಭಾ,** ೧೨. ೨೫)

ನಿಕರ್ತನ – [ನಾ] ಕತ್ತರಿಸುವುದು (ನಾಭಿನಾಮಮುಮಾಯ್ತು ಅರ್ಭಕರನಿಕರ ನಾಭಿಪ್ರಕರ ನಿಕರ್ತನಮಱಿಯೆ ಪೇೞ್ದುದಱಿಂದಂ: **ಆದಿಪು,** ೬. ೬೭)

ನಿಕಷ – [ನಾ] ಒರೆಗಲ್ಲು (ಭಾಷಾವಿದರ್ ಕವಿತ್ವವಿಶೇಷಜ್ಞನಿಕಷರಪ್ಪೊಡೆ ಅಪ್ಪುದು ಸಭೆಯೊಳ್ ಮಾಷಮುಖದಂತೆ: **ಆದಿಪು,** ೧. ೨೨)

ನಿಕಷಣ – [ನಾ] ಉಜ್ಜುವಿಕೆ (ಶ್ರೀವಿಜಯಾರ್ಧಾಚಳ ಖಚರಾವಳಿ ಮಣಿಮುಕುಟ ಮಕರಿಕಾನಿಕಷಣ ಲೇಖಾವಿಳಸಿತಪದಕಮಳಂ: **ಆದಿಪು,** ೨. ೧)

ನಿಕಾಮಕಮನೀಯ – [ನಾ] ಅತ್ಯಂತ ಮನೋಹರವಾದ (ಹರಿನೀಲ ಗವಾಕ್ಷಜಾಲದೊಳ್ ಅವಿರಳಮುಕ್ತಾದಾಮ ನಿಕಾಮಕಮನೀಯ ವಿತಾನದೊಳ್: **ಆದಿಪು,** ೭. ೨೭ ವ)

ನಿಕಾಮಕೋಮಲ – [ಗು] ಅತ್ಯಂತ ಮೃದು (ಚಲದ ಅಭಿಮಾದ ಉನ್ನತಿಯ ಪೆಂಪನೆ ತಾಳ್ದಿದುವೀ ನಿಕಾಮಕೋಮಲ ಭವದುಕ್ತಿಗಳ್: **ಆದಿಪು,** ೧೨. ೧೦೩)

ನಿಕಾಯ – [ನಾ] ಸಮೂಹ (ಅಂತು ದೇವನಿಕಾಯಂ ಬೆರಸು ಯುದ್ಧಸನ್ನದ್ಧನಾಗಿ ಪರಸೈನ್ಯಭೈರವನೊಳಿಱಿವೆನೆಂಬ ಪಟುವಗೆಯೊಳ್ ಭೈರವಂಬಾಯ್ವಂತೆ ಬಂದು: **ಪಂಪಭಾ,** ೫. ೧೦೧ ವ)

ನಿಕಾಶ – [ಗು] ಸದೃಶ (ಚಂಪಕಮುಕುಳನಿಕಾಶ ನಾಸಾವಂಶೆಯರ್: **ಆದಿಪು,** ೧೧. ೯೫ ವ)

ನಿಕೀರ್ಣ – [ಗು] ಚೆಲ್ಲಿದ, ಉಗುಳಿದ (ಕರಾಳನಕ್ರಚರ್ವಿತ ನಿಕೀರ್ಣನಿರಯಜನಿಕುರುಂಬ ಶಲ್ಯಶಕಲಪರಿಪೂರಿತ ಧವಳಪ್ಲವದುರ್ನಿರೀಕ್ಷಣವಿಷಮೆಯುಂ: **ಆದಿಪು,** ೫. ೮೭ ವ); [ಕ್ರಿ] ತುಂಬಿದ (ದಿವ್ಯಸೌಂದರೀನಿವಹನಿಕೀರ್ಣ ಚಂಪಕವನಂ ಕರಮೊಪ್ಪುಗುಂ: **ಆದಿಪು,** ೧೩. ೭೦)

ನಿಕುಂಜ – ಬಳ್ಳಿಮಾಡ (ನನೆಯ ಕೊನೆಯ ಮುಗುಳ ವನಲತಾ ನಿಕುಂಜದಿಂ ಪ್ರಸೂನರಜದ ಪುಂಜದಿಂ: **ಪಂಪಭಾ,** ೧. ೫೮)

ನಿಕುರುಂಬ – [ನಾ] ಗುಂಪು, ಸಮೂಹ (ನೆರೆದ ಸಮಸ್ತದೇವ ನಿಕುರುಂಬದ ಯಾನವಿಮಾನಕಿಂಕಿಣೀವಿರುತಿಯ: **ಆದಿಪು,** ೩. ೨೨)

ನಿಕೃತನಿದ್ರಾ – [ನಾ] ಮಾಯಾ ನಿದ್ರೆ (ಇಂದ್ರಾಣೀವದನ ಚಂದ್ರಚಂದ್ರಿಕಾವಿಘಟಿತ ನಿಕೃತನಿದ್ರಾಮುದ್ರಿತನಯನ ನೀಳೋತ್ಪಳೆಯಪ್ಪ ಜಗದ್ಗುರುಜನನಿಯುಂ ಬಂದು: **ಆದಿಪು,** ೭. ೧೧೦ ವ) [ಇದಕ್ಕೆ ಎಲ್. ಬಸವರಾಜು ಅವರು ಸ್ವೀಕರಿಸಿರುವ ಪಾಠ **'**ವಿಕೃತನಿದ್ರಾ**'**]

ನಿಕೃಷ್ಟ – [ಗು] ಕನಿಷ್ಠ (ಅಲ್ಲಿ ಉತ್ಕೃಷ್ಟನಿಕೃಷ್ಟಕಾಲಸ್ಥಿತಿಯೊಳ್ ಅಯ್ನೂಱು ಬಿಲ್ಲಿಂದಂ ಏಟುಮೊಟಿದೇಹಪ್ರಮಾಣದೊಳ್: **ಆದಿಪು,** ೯. ೧೨೧ ವ)

ನಿಕೇತ – [ನಾ] ಆಶ್ರಯ (ದುರ್ಲಲಿತಚರಿತ ಸಂಕೇತಗೋಷ್ಠೀನಿಕೇತಂ: **ಆದಿಪು,** ೧೪ ೧೯)

ನಿಕೇತನ – ಮನೆ, ನೆಲೆ (ಅರಾತಿನಿಕರಕ್ಕೆ ಅಯೋಧ್ಯೆಯಪ್ಪುದಱಿಂದೆ ಅಯೋಧ್ಯೆಯುಂ ಅನೇಕ ನಿಕೇತನಸಮನ್ವಿತಮಪ್ಪುದಱಿಂ ಸಾಕೇತಮುಂ: **ಆದಿಪು,** ೬. ೧೦೭ ವ)

ನಿಕ್ಕುವ – [ನಾ] ನಿಶ್ಚಯ (ಭವತ್ ಊರುಯುಗಂಗಳಂ ಆಜಿರಂಗದೊಳ್ ಗಿಜಿಬಿಜಿಮಾಡಲೆಂದು ಅವನ ಪೂಣ್ದುದು ನಿಕ್ಕುವಂ ಆಗದಿರ್ಕುಮೇ: **ಪಂಪಭಾ,** ೯. ೫೨); [ನಾ] ನಿಜ, ಸರಿ (ಸೆಟ್ಟಿಯ ಬಳ್ಳಂ ಕಿಱಿದು ಎಂಬುದೊಂದು ನುಡಿಯಂ ನೀಂ ನಿಕ್ಕುವಂ ಮಾಡಿದೈ: **ಪಂಪಭಾ,** ೧೨. ೧೭೫)

ನಿಕ್ಷೇಪ – [ನಾ] [ಜೈನ] ಅಪ್ರಕೃತವಾದುದನ್ನು ನಿರಾಕರಿಸುವುದರ ಮೂಲಕ ಪ್ರಕೃತವಾದುದನ್ನು ನಿರೂಪಿಸುವುದು (ಪ್ರಮಾಣ ನಯ ನಿಕ್ಷೇಪ ಅನುಯೋಗ ಸದಾದಿಗಳಿಂ ನಿಶ್ಚಯಿಸಿದ ಸಪ್ತತತ್ತ್ವಂಗಳೊಳಗೆ ಚೇತನಾಲಕ್ಷಣಮಪ್ಪುದು ಜೀವತತ್ತ್ವಂ: **ಆದಿಪು,** ೧೦. ೬೩ ವ)

ನಿಖಂಡಿತ – [ನಾ] ಕತ್ತರಿಸಲ್ಪಟ್ಟ (ಆರ್ದ್ರ ಚಂದನಾನ್ವಿತಮುಂ ಅಶಿಶಿರಕರ ರಥತುರಗ ಖುರಶಿಖರನಿಖಂಡಿತ ಲವಂಗಪಲ್ಲವಮುಂ: **ಪಂಪಭಾ,** ೪. ೧೮ ವ)

ನಿಗಳ – [ನಾ] ಸಂಕೋಲೆ (ಪೋಗು ಕೆಟ್ಟಪುದು ಮೋಹಮಯ ನಿಗಳಂ ಕಳತ್ರಮೆಂದಱಿಪದೆ ನಟ್ಟಿರುಳ್ ಮಱಿದು ಸಾರ್ಚಿದ ನಲ್ಲಳ ತಳ್ತ ತೋಳ್ಗಳಂ: **ಪಂಪಭಾ,** ೪. ೧೨)

ನಿಗಳಾಂದುಕಾ – [ನಾ] ಕಾಲಿನ ಸರಪಳಿ (ಮದನಡಿಂಡಿಮರವ ಆಡಂಬರಮಾಲೋಳತುಳಾಕೋಟಿಕ್ವಣಿತಮೆ ನಿಗಳಾಂದುಕಾ ರವಮಾಗೆ: **ಆದಿಪು,** ೧೧. ೨೦ ವ)

ನಿಗುಂಬಿಸು – [ಕ್ರಿ] ಒಟ್ಟಾಗು (ಇದಿರೊಳ್ ಕಂಡಂ ನೆರೆದು ನಿಗುಂಬಿಸಿ ತಂಡಂಗೊಂಡಂತಿರ್ದ ನರರ ಖಚರರ ಗುಂಡಂ: **ಆದಿಪು,** ೪. ೩)

ನಿಗೂಢ – [ಗು] ಅಡಗಿಸಿದ (ಅಂತರ್ನಿಗೂಢ ಶೋಕೋದ್ರೇಕ ಮೂಕೆಯುಮಾಗಿರ್ದ ನಿಜತನೂಜೆಗೆ ಬೞಿಯನಟ್ಟಿದಾಗಳ್: **ಆದಿಪು,** . ೪೬ ವ)

ನಿಗೂಢತರ – [ಗು] ಅತಿರಹಸ್ಯವಾದ (ಪರಮನೊಳಗೊಳಗೊಂದಂ ಪರಿಜಪನಂಗೆಯ್ಯೆಯುಂ ನೆಗೞ್ದವ್ಯಕ್ತಾಕ್ಷರದಿಂ ನಿಗೂಢತರ ನಿರ್ಝರರವ ಗುಂಜದ್ಗುಹಾತಳಕ್ಕೆಣೆಯಾದಂ: **ಆದಿಪು,** ೯. ೮೬)

ನಿಗೋದ – [ನಾ] ನರಕ, ಅನಂತಜೀವಗಳಿಗೆ ಒಂದೇ ನಿವಾಸವನ್ನು ನೀಡುವುದು ನಿಗೋದ, ಒಂದೇ ವಿಧವಾದ ಕರ್ಮವನ್ನು ಮಾಡಿರುವ ಅನೇಕ ಜೀವಗಳಿಗೆಲ್ಲ ಒಂದೇ ಶರೀರವಿರುತ್ತದೆ; ಬದುಕಿನ ಎಲ್ಲ ಅನುಭವಗಳೂ ಸಮಾನರೂಪವಿರುತ್ತದೆ ಒಂದು ಜೀವ ಯಾತನೆಯನ್ನು ಅನುಭವಿಸಿದರೆ ಎಲ್ಲ ಜೀವಗಳೂ ಯಾತನೆಯನ್ನನುಭವಿಸಬೇಕು ಏಳು ನರಕಭೂಮಿಗಳ ಕೆಳಗೆ ಒಂದು ರಜ್ಜುಪ್ರಮಾಣಕ್ಷೇತ್ರದಲ್ಲಿ ತಮೋಮಯವಾದ ಶೂನ್ಯದಲ್ಲಿ ಈ ನಿಗೋದಶರೀರವಿರುತ್ತದೆ (ಸಂಭಿನ್ನ ಮಹಾಮತಿಗಳ್ ಗಂಭೀರ ನಿಗೋದದೊಳ್ ತಮೋಮಯದೊಳ್ ದುಃಖಾಂಬೋಧಿಯ ಕಡೆಗಾಣದೆ ಜೃಂಭಿತ ದುಷ್ಕರ್ಮದಿಂದೆ ನಮೆದಪರಿನ್ನುಃ **ಆದಿಪು,** ೫. ೭೬)

ನಿಘಾತಪಾತಿತ – [ಗು] ಹೊಡೆತದಿಂದ ಕೆಡವಲ್ಪಟ್ಟ (ಬಿಲ್ಲಾಳ್ತನಂ ಪೇೞಿಸ್ವೊಡೆ ಉಜ್ವಲತೀವ್ರಾಸ್ತ್ರನಿಘಾತಪಾತಿತ ರಿಪುವ್ಯೂಹಂ: **ಪಂಪಭಾ,** ೫. ೨೨)

ನಿಚಯ – [ನಾ] ಸಮೂಹ (ವಿರಹಿಜನ ನಿಚಯ ನಿಚಿತ ಮಾನಸ ಉನ್ಮತ್ತ ಕಾಮಿನೀ ಗಂಡೂಷ ಸೀಧು ಸೇಕ ಪುಳಕಿತ: **ಪಂಪಭಾ,** ೫. ೧೦ ವ); **[ನಾ] ರಾಶಿ** (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ)

ನಿಚಿತ – [ಗು] ಒಳಗೊಂಡ (ಆತ್ಮೀಯಚೇತೋನಿಚಿತ ಮೋಹಾಂಧಕಾರಸ್ತೋಮಮಂ ಕಳೆದು: **ಆದಿಪು,** ೨. ೧೭ ವ); ತುಂಬಿಕೊಂಡ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ)

ನಿಚ್ಚ – [ಗು] ಪ್ರತಿದಿನವೂ (ಏನಂ ಪೇೞ್ವುದೊ ಸಿರಿಯುದ್ದಾನಿಯಂ ಎಣ್ಣೆಯೊಳ್ ತೀವಿ ದೀರ್ಘಿಕೆಗಳಂ ಅಂತಾ ನೃಪತಿ ನಿಚ್ಚಲ್ ಅಯ್ನೂಱ್ ಆನೆಯಂ ಅವಗಾಹಮಿರಿಸುವಂ ಬೋದನದೊಳ್: **ಪಂಪಭಾ,** ೧. ೧೭); ನಿತ್ಯ, ಯಾವಾಗಲೂ (ಇದು ನಿಚ್ಚಂ ಪೊಸತು ಅರ್ಣವಂಬೊಲತಿಗಂಭೀರಂ ಕವಿತ್ವಂ: **ಆದಿಪು,** ೧. ೨೭)

ನಿಚ್ಚಕ್ಕಂ – [ನಾ] ಪ್ರತಿನಿತ್ಯ (ಎನ್ನ ಕನ್ನಿಕೆಯಾ ಕಾಲದೊಳ್ ನಾನೆನ್ನ ಮಾವಂ ಕೊಂತಿಭೋಜನ ಮನೆಯೊಳ್ ಬಳೆವಂದು ದುರ್ವಾಸಮಹಾಮುನಿಯರೆಮ್ಮ ಮನೆಗೆ ನಿಚ್ಚಕ್ಕಂ ಬರ್ಪವರ್: **ಪಂಪಭಾ,** ೧. ೧೧೮ ವ)

ನಿಚ್ಚಟ – [ನಾ] ಸ್ಥಿರನಾದ [ಶೂರ] (ಅಂಬುಕೊಳೆ ಸೂತರು ಉರುಳ್ದುಂ ಇಳಾತಳಕ್ಕೆ ಪಾಯ್ದು ಅಸಿಯೊಳೆ ತಾಗಿ ತಳ್ತಿಱಿವ ನಿಚ್ಚಟರೊಪ್ಪಿದರ್ ಆಜಿರಂಗದೊಳ್: **ಪಂಪಭಾ,** ೧೧. ೬೫);

ನಿಚ್ಚಟಂ– [ಅ] ಖಂಡಿತವಾಗಿ, ಸಂಪೂರ್ಣವಾಗಿ (ಕುರುಪ್ರಧಾನನೊಳ್ ಕಱುಪನೆ ನಿಚ್ಚಟಂ ಬಿಸುಟು ನಿನ್ನಯ ಪೇೞ್ದುದು ಗೆಯ್ದು: **ಪಂಪಭಾ,** ೧೪. ೧೦)

ನಿಚ್ಚಟಿಕೆ – [ನಾ] ನಿಶ್ಚಲತೆ (ಜೀಮೂತವಾಹನೆಂಬಂಕದ ಚಾಗಿ ನಿಚ್ಚಟಿಕೆಯಿಂದೀ ಶೈಳದೊಳ್ ಶಂಖಚೂಡನಾನಂದದೆ ಕಾದ ಪೆಂಪೆಸೆಯೆ ನಾಗಾನಂದಮಂ ಮಾಡಿದಂ: **ಪಂಪಭಾ,** ೪. ೨೬)

ನಿಚ್ಚಟಿಕ್ಕೆ – [ನಾ] ನಿಶ್ಚಲತೆ, ಸ್ಥಿರತೆ (ಪಾಂಡ್ಯನನ್ನಂ ಇನ್ನೀ ಮಹಿಯೊಳ್ ಪೆಱಂ ಕಲಿಯೆ ನೆಟ್ಟನಿದಿರ್ಚುವ ನಿಚ್ಚಟಿಕ್ಕೆಯೊಳ್: **ಪಂಪಭಾ,** ೧೨. ೮೪)

ನಿಚ್ಚಣಿಗೆ – [ನಾ] [ನಿಃಶ್ರೇಣಿ] ಏಣಿ (ಸಗ್ಗಕ್ಕಿದು ನಿಚ್ಚಣಿಗಿಪ್ಪವೊಲಿರ್ದುದಲ್ತೆ ಜಿನಸವನಜಳಪವಿತ್ರಿತಕಟಕಂ: **ಆದಿಪು,** ೨. ೩೧)

ನಿಜನಾಮಾಂಕಿತ – [ನಾ] ತನ್ನ ಹೆಸರಿನ ಗುರುತುಳ್ಳ (ಮಾಳವಿಗರಂ ಕೆಳಗಿವಿಗೆಯ್ಯಲೀಯದೆ ಆಟಂದು ನಿಜನಾಮಾಂಕಿತ ಸಾಯಕಂಗಳಿಂದೆಚ್ಚು ನಚ್ಚಂ ಕಿಡಿಸಿ: **ಪಂಪಭಾ,** ೬. ೨೯ ವ)

ನಿಜನಿವಾಸ – [ನಾ] ತನ್ನ ನೆಲೆ (ಕೊಂತಿಯ ದಿವ್ಯಗರ್ಭೋದರಮೆಂಬ ಶುಕ್ತಿಪುಟೋದರದೊಳ್ ತನ್ನ ದಿವ್ಯಾಂಶಮೆಂಬ ಮುಕ್ತಾಫಲೋದ ಬಿಂದುವಂ ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ,** ೧. ೧೩೯ ವ)

ನಿಜಪರಿವಾರ – [ನಾ] ತನ್ನ ಕುಟುಂಬದವರು (ಸಮಸ್ತವಸ್ತುಗಳಂ ದೀನಾನಾಥಜನಕ್ಕೆ ಸೂಱಿಗೊಟ್ಟು ನಿಜಪರಿವಾರಮಂ ಬರಿಸಿ: **ಪಂಪಭಾ,** ೧. ೧೧೩ ವ)

ನಿಜವಿಜಯಖ್ಯಾತಿ – [ನಾ] ತನ್ನ ಬಾಹುಬಲದ ಕೀರ್ತಿ (ಆತಂ ನಿಜವಿಜಯಖ್ಯಾತಿಯನಾಳ್ದು ಆಳ್ದನಧಿಕಬಲನವನಿಪತಿವ್ರಾತ ಮಣಿ ಮಕುಟ ಕಿರಣದ್ಯೋತಿತ ಪಾದಂ ಸಪಾದ ಲಕ್ಷಕ್ಷಿತಿಯಂ: **ಪಂಪಭಾ,** ೧. ೧೬)

ನಿಜವಿರೋಧಿ – [ನಾ] ತನ್ನ ಶತ್ರು (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ

ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩)

ನಿಜಾಂಸಯುಗ – **[ನಾ]** [ನಿಜ+ಅಂಸಯುಗ] ತನ್ನ ಎರಡೂ ಹೆಗಲು (ಇನ್ನೇಟೆಂ ಎಂದು ಒಡನಂದಯ್ವರುಮಂ ನಿಜಾಂಸಯುಗದೊಳ್ ಪೊತ್ತು: **ಪಂಪಭಾ,** ೩. ೯)

ನಿಜಾತ್ಯಂತ – **[ಗು]** ನಿನ್ನ ಅತಿಶಯವಾದ (ದಿವ್ಯಮುನಿಪುಂಗವರಂ ಬಗೆದಿರ್ಪಿನಂ ನಿಜಾತ್ಯಂತ ಪತಿವ್ರತಾಗುಣದಿನರ್ಚಿಸಿ ಮೆಚ್ಚಿಸು ನೀಂ ದಿಗಂತವಿಶ್ರಾಂತಯಶರ್ಕಳಂ ವರತನೂಭವರಂ ಪಡೆ ನೀಂ ತಳೋದರೀ: **ಪಂಪಭಾ,** ೧. ೧೧೮)

ನಿಟಿಲ – **[ನಾ]** ಹಣೆ (ಉಪನಿಟಿಲತಟಕುಟಿಲ ಜೂಟಬಂಧಮುಂ ಆಕೂರ್ಪರರಚಿತ ಕಾಳಾಯಸವಳಯಭಯಂಕರರ್: **ಆದಿಪು,** ೧೩. ೪೫ ವ)

ನಿಟ್ಟಾಯು – **[ನಾ]** ದೀರ್ಘಾಯುಸ್ಸು ಪೆಂಪಿವು ಪೆಂಪುವೆತ್ತು ನಿಟ್ಟಾಯುಗಳಾಗಿ ನಿನ್ನೊಳ್ ಅಮರ್ದಿರ್ದುವು: **ಪಂಪಭಾ,** ೧೪. ೧೭)

ನಿಟ್ಟಾಲಿಗೊಳ್ – **[ಕ್ರಿ]** ಕಣ್ಣರಳಿಸು (ಪೆಸರಟೆಕೆಯ ನಾಯಕರಂ ಅಱುವತ್ತುಸಾಸಿರ್ವರಂ ಒರ್ವನಂ ಕೊಲ್ವಂತೆ ಕೊಂದು ನಿಟ್ಟಾಲಿಗೊಂಡು ಯುಧಿಷ್ಠಿರನಂ ಮುಟ್ಟೆವಂದಾಗಳ್: **ಪಂಪಭಾ,** ೧೨. ೧೧೬ ವ)

ನಿಟ್ಟಾಲಿಯಾಗು – **[ಕ್ರಿ]** ಸೂಕ್ಷ್ಮವಾಗಿ ನೋಡು (ಹಸ್ತಿನಪುರದೊಳ್ ಪಾಂಡವರಿರ್ದರೆಗೆತ್ತುಂ ಅಲ್ಲಿಗೆ ಪೋಗಿ ನಿಟ್ಟಾಲಿಯಾಗಿ ದಾಟಿಯನಿಟ್ಟು ಬಾಯ್ಮಾಡಿ: **ಪಂಪಭಾ,** ೧೩. ೧೦೬ ವ)

ನಿಟ್ಟಿಸು – **[ಕ್ರಿ]** ದೃಷ್ಟಿಸಿ ನೋಡು (ಜ್ಞಾನದಿನಿರ್ದು ನಿಟ್ಟಿಪೊಡೆ ದಿವ್ಯಮುನೀಂದ್ರಂ ಕೊಟ್ಟ ಮಂತ್ರಸಂತಾನಮನೋದಿಯೋದಿ ಯಮರಾಜನನದ್ಭುತತೇಜನಂ ಸರೋಜಾನನೆ ಜಾನದಿಂ ಬರಿಸೆ: **ಪಂಪಭಾ,** ೧. ೧೧೯)

ನಿಟ್ಟುವಡು – **[ಕ್ರಿ]** ಪಳಗಿಸು (ವ್ಯೂಹದೊಳ್ ನಿಟ್ಟೆವಟ್ಟು ಮಣಿಮಯ ಮಂಡನಾಯೋಗದೊಳೊಡಂಬಟ್ಟ ಪಿಡಿಗಳುಮಂ: **ಆದಿಪು,** ೪. ೫೪ ವ)

ನಿಟ್ಟೆ – **[ನಾ]** ನಿಶ್ಚಯವಾಗಿ (ವಿದ್ಯುತ್ ಕ್ಷಣಿಕಂ ನಿಟ್ಟೆಯೆ ತನುಭೃದ್ಗಣಯೌವನರೂಪವಿಭವಭೋಗಾಭೋಗಂ: **ಆದಿಪು,** ೪. ೭೫)

ನಿಟ್ಟೆಪಡು – **[ಕ್ರಿ]** ನಿಷ್ಠೆಯಾಗಿಬಿಡು, ನಿಷ್ಠೆಯನ್ನು ಹೊಂದು (ಕರೆದೊಡೆ ಜೂದಿಂಗಂ ಧುರಭರಕೆ ಆಖೇಟಕ್ಕೆ ಭೂಭುಜಂಗೆ ಆಗದು ಮೆಯ್ಗರೆದಿರಲಿ ಎಂಬ ಪುರಾತನ ಗುರುವಚನಂ ತನಗೆ ನಿಟ್ಟೆಪಟ್ಟುದಱಿಂ: **ಪಂಪಭಾ,** ೬. ೭೧)

ನಿಟ್ಟೆಲ್ವು – **[ನಾ]** [ನಿಡಿದು ಎಲ್ವು] ನೀಳವಾದ ಮೂಳೆ, ಬೆನ್ನ ಮೂಳೆ (ಪಗೆವರ ನಿಟ್ಟೆಲ್ವಂ ಮುಱಿವೊಡೆ ಎನಗೆ ಪಟ್ಟಂಗಟ್ಟಾ: **ಪಂಪಭಾ,** ೧೦. ೧೭)

ನಿಡಿಯ – **[ನಾ]** ದೊಡ್ಡವನು (ಭುವನಾಂತರದೊಳ್ ನಿಡಿಯರ್ಗಂ ನಿಡಿಯರೊಳರ್ ಇದೇಂ ವಿಸ್ಮಯಮೇ: **ಆದಿಪು,** ೧೨. ೧೦೪); **[ನಾ]** ನೀಳವಾಗಿರುವವನು, ನೀಳವಾದ (ನಿಡಿಯರ್ ಬಲ್ಲಾಯದ ಬಲ್ದಡಿಗರ್ ವಂದಿರ್ದರಯ್ವರ್: **ಪಂಪಭಾ,** ೩. ೧೨)

ನಿಡಿಯಸಿ – **[ನಾ]** [ನಿಡಿದು ಅಸಿ] ಉದ್ದ ಕತ್ತಿ (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒಱೆ ಕರ್ಪಿಡಿದ ಪಣೆಕಟ್ಟು ಕೆಯ್ಪಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್: **ಪಂಪಭಾ,** ೧೦. ೭೧)

ನಿಡುಗಣ್ – **[ನಾ]** ಅಗಲವಾದ ಕಣ್ಣು (ತುಱುಗೆಮೆ ನೀಳ್ದ ಪುರ್ವು ನಿಡುಗಣ್ ಪೊಱೆಯಲ್ಲದೆ ಬಟ್ಟಿತಪ್ಪ ಬಾಯ್ದೆಱೆ ತನುರೇಖೆಗೊಂಡ ಕೊರಲ್ .. .. ಎಂದು ಧಾತ್ರಿ ಪೊಗಟ್ಟುಂ ಪೊಗಟ್ವನ್ನರೆ ಕುಂತಿ ಮಾದ್ರಿಗಳ್: **ಪಂಪಭಾ,** ೧. ೧೦೮)

ನಿಡುಗೋಡು – **[ನಾ]** ಉದ್ದನಾದ ಕೊಂಬು (ಅಗ್ಗದ ನಿಡುಗೋಡು ಮೇಡುವಂ ಅಮರುತ್ತುಂ ಇಱುಂಕಿದ ಕೆಚ್ಚಲ್ ಎತ್ತಮೆತ್ತಿದ ಕುಡಿವಾಲಮಂದೆಸೆಯೆ ಕರ್ಬಸುಗಳ್ ಪರಿಗೊಂಡುವಾಜಿಯೊಳ್: **ಪಂಪಭಾ,** ೮. ೧೦೪)

ನಿಡುಜಾಗರ – **[ನಾ]** ಹೆಚ್ಚು ಜಾಗರಣೆ (ನಿಡುಜಾಗರದೊಳ್ ತೊಡರ್ದು ಏಕಪಾದದೊಳ್ ಬಲಿದುಪವಾಸದೊಳ್ ನಮೆದು ನೋಂಪಿಗಳೊಳ್ ನಿಯಮಕ್ರಮಂಗಳಂ ಸಲಿಸಿದರಿಂತು ನೋನದೆ ಗೂರ್ಣಾವನಂ ಪಡೆಯಲ್ಕೆ ತೀರ್ಗುಮೇ: **ಪಂಪಭಾ,** ೧. ೧೩೬)

ನಿಡುವಗೆ – **[ನಾ]** [ನಿಡು+ಪಗೆ] ದೀರ್ಘಕಾಲದ ಶತ್ರು (ನಿಡುವಗೆ ಸೈಪಿನಿಂದೆ ದೊರೆಕೊಂಡುದು ಇವರ್ ಗಜೆಗೊಂಡೆನಪ್ಪೊಡೆ ಈಗಡೆ ಪರೆದಪ್ಪರ್: **ಪಂಪಭಾ,** ೧೧. ೧೪೨)

ನಿಡುವುರ್ಪು – **[ನಾ]** ನೀಳ ಹುಬ್ಬು (ನಿಜದ ಚೆಲ್ವಮರೆ ನಿಡುವುರ್ಪುಗಳ್ ನಿಮಿರ್ಪಿನಂ: **ಆದಿಪು,** ೭. ೨೭ ರಗಳೆ)

ನಿಡುಸುಯ್ – **[ನಾ]** ನೀಳವಾದ ಉಸಿರು [ಬಿಡು] (ನಿಡುಸುಯ್ದ ನಲ್ಲಳ ಮುಖಾಂಬುಜಸೌರಭದೊಳ್ ಪೊದಳ್ದು ಅದೇಂ ಮಗಮಗಿಸಿತ್ತೊ ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ: **ಪಂಪಭಾ,** ೪. ೧೦೭)

ನಿತಂಬ – **[ನಾ]** ಪಿರ್ರೆ (ಬಳೆದ ನಿತಂಬದೆ ಕಾಂಚೀಕಳಾಪಮಂ ಕಟ್ಟಲಣಮೆ ನೆಱೆಯದು ಎಂದಗ್ಗಳಿಸಿ ಕುಳಿಕೆಗಳಿನೇಂ ಕಣ್ಗೊಳಿಸಿದುದೋ ಸುಭಗೆಯಾದ ಸುದತಿಯ ಗರ್ಭಂ: **ಪಂಪಭಾ,** ೧. ೧೪೩)

ನಿತಂಬದ್ವಯಸ – **[ನಾ]** ಪಿರ್ರೆಯವರೆಗಿನಷ್ಟು ಆಳ (ಆ ಜಳದೇವಿ ಬೆಸಸೆ ಗಂಗಾಜಳಮಾಯ್ತು ನಿತಂಬಿನೀನಿತಂಬದ್ವಯಸಂ: **ಆದಿಪು,** ೧೧. ೧೪೪)

ನಿತಂಬಿನೀ – **[ನಾ]** ಹೆಂಗಸು (ಆ ಜಳದೇವಿ ಬೆಸಸೆ ಗಂಗಾಜಳಮಾಯ್ತು ನಿತಂಬಿನೀ ನಿತಂಬದ್ವಯಸಂ: **ಆದಿಪು,** ೧೧. ೧೪೪)

ನಿತಂಬೋದ್ದೇಶ – **[ನಾ]** ನಿತಂಬ ಪ್ರದೇಶ (ಸಮುನ್ನತ ನಿತಂಬೋದ್ದೇಶದೊಳ್ ಪರ್ವಿ ಪಜ್ಜಳಿಸುತ್ತುಂ ಉಜ್ಜ್ವಳಕಾಂತಿವೋಲ್: **ಆದಿಪು,** ೧೨. ೩೯)

ನಿತ್ತರಿಸು – **[ಕ್ರಿ]** ಸಹಿಸು (ಇನ್ನೆಮಗೆ ನಿಲಲುಂ ನಿತ್ತರಿಸಲುಂ ಬಾರದು ಬಿಸುಟು ಪೋಪೊಡಂ ಭರತನ ದೆಸೆಯೊಳ್ ಅಪಮಾನಂ: **ಆದಿಪು,** ೯. ೯೨ ವ); **[ಕ್ರಿ]** ದಾಟಿ ಬಾ (ಕಂಪನವುಂಕಿ ಪೊತ್ತು ನಿತ್ತರಿಪ ಎರಲ್ ಎಂಬಿವು ಏವುವೋ: **ಪಂಪಭಾ,** ೫. ೧೧); ಮುಂದುವರಿ, ಅಭಿವೃದ್ಧಿಗೊಳ್ಳು (ಇನ್ನೆಗಂ ಪರಿವಿಡಿಯಿಂದೆ ಬಂದ

ಶಶಿವಂಶಂ ಅದೀಗಳ್ ಇವಂದಿರಿಂದೆ ನಿತ್ತರಿಸುವುದಕ್ಕುಂ ಎಂದೆ ಬಗೆದಿರ್ದೊಡೆ: **ಪಂಪಭಾ,** ೭. ೧೬); **[ಕ್ರಿ]** ನಿಭಾಯಿಸು (ಪಾಂಡವಸೈನ್ಯಮುಂ ಇಂದು ಭೀಷ್ಮರೊರ್ವರೊಳ್ ಇರದೆ ಆಂತು ಕಾದಲ್ ಅವರಂ ಪೆಱಗಿಕ್ಕಿ ಕಡಂಗಿ ಕಾದಿ ನಿತ್ತರಿಸುವೆಂ: **ಪಂಪಭಾ,** ೧೧. ೩೭)

ನಿತ್ಯ – [ನಾ] ಶಾಶ್ವತ[ನಾದವನು] (ಅಮೂರ್ತರ್ ಚರಮತನು ಸಮಾಕಾರರ್ ಉದ್ಧೂತಲೇಪರ್ ಪ್ರಣುತರ್ ನಿತ್ಯರ್ .. .. ಸ್ವಕೀಯಪ್ರಭುತೆಯನೆಮಗಂ ಮಾಟಕ್ಕೆ ಅತಿಪ್ರೀತಿಯಿಂದಂ: **ಆದಿಪು,** ೧. ೨)

ನಿತ್ಯನಿಯಮ – [ನಾ] ಪ್ರತಿದಿನದ ಕೆಲಸ (ಉನ್ಮೀಲಿತನಯನರಾಗಿ ನಿತ್ಯನಿಯಮಂಗಳಂ ನಿರ್ವರ್ತಿಸಿ ಮಂಗಳವಸದನಂಗೊಂಡು; **ಪಂಪಭಾ,** ೨. ೯೩ ವ)

ನಿತ್ಯಮಹ – [ನಾ] [ಜೈನ] ಪ್ರತಿದಿನದ ಪೂಜೆ (ಜಿನಗೃಹಜನಸತತ ಉಪನೀಯಮಾನ ಪಾದ್ಯ ಗಂಧ ಅಕ್ಷತ ಕುಸುಮ ಚರು ಧೂಪ ದೀಪ ಫಲ ಆದಿ ಅರ್ಚನಾತ್ಮಕಮಪ್ಪ ನಿತ್ಯಮಹಮುಂ: **ಆದಿಪು,** ೧೫. ೧೩ ವ)

ನಿದಾಘಮಧು – [ನಾ] ಗ್ರೀಷ್ಮ ಋತು (ಎಯ್ದೆ ಪಣ್ತುವು ಮಾವು ಇಂಬಾದುದು ನಿದಾಘಮಧುವಿನ ಭೇದಮದೀ ಬನದೊಳಾತಪ್ಪಕ್ಕೆಡೆಯುಂಟೇ: **ಆದಿಪು,** ೧೧. ೮೭)

ನಿದಾನ – [ನಾ] ಕಾರಣ (ಅನಲ್ಪಸುಖಮೆಲ್ಲಮಂ ಅಲ್ಪಸುಖಕ್ಕೆ ಮಾಱಿ ಬಂದಿಲ್ಲಿ ನಿದಾನದಿಂದತಿಬಳಂಗೆ ಮಹಾಬಳನಾಗಿ ಪುಟ್ಟಿದಂ: **ಆದಿಪು,** ೨. ४೨)

ನಿದ್ರಾಭಿಘಾತ – [ನಾ] [ನಿದ್ರಾ+ಅಭಿಘಾತ] ನಿದ್ದೆಗೆ ಭಂಗ (ವಜ್ರಕೀಟಂಗಳ್ ಕರ್ಣನೆರಡುಂ ತೊಡೆಯುಮಂ .. .. ಉರ್ಚಿಪೋಗೆಯುಂ ಅದನಱಿಯದಂತೆ ಗುರುಗೆ ನಿದ್ರಾಭಿಘಾತಮಕ್ಕುಮೆಂದು ತಲೆಯನುಗುರಿಸುತ್ತುಮಿರೆಯಿರೆ: **ಪಂಪಭಾ,** ೧. ೧೦೪ ವ)

ನಿಧನಂಮಾಡು – [ಕ್ರಿ] ಸವೆಸು, ಹಾಳುಮಾಡು (ಅದಱಿಂ ಪರಲೋಕಸುಖಾರ್ಥಂ ಆತ್ಮಾಸ್ತಿತ್ವ ಅಭಿನಿವೇಶದಿಂ ತನುಧನನಿಧನಂ ಮಾಡಿ ಸೇದೆಗಿಡಲ್ವೇಡ: **ಆದಿಪು,** ೨. ೯ ವ)

ನಿಧಾನ – [ನಾ] ಬೈತಿಟ್ಟ ಹಣ, ಐಶ್ವರ್ಯ (ಅನ್ನೆಗಮಿತ್ತ ನಿಧಾನಮಂ ತೋಱಿ ಕಣ್ಣಂ ಕಳೆವಂತೆ: **ಆದಿಪು,** ೩. ೫೧ ವ); ನೆಲೆ, ಆಗರ (ಪರಮಶ್ರೇಯೋನಿಧಾನಂ ಶ್ರೇಯಾಂಸನೆಂಬೊಂ ಪ್ರಿಯಾನುಜನಾಗಿರ್ದಾತಂ ಬಂದು: **ಆದಿಪು,** ೧೨೯ ವ); **[ನಾ]** ನಿಧಿ (ಅಂತು ನಡನಡನಡುಗಿ ಜಲದೇವತೆಗಳಪ್ಪೊಡಂ ಮನಂಗಾಣ್ಬರೆಂದು ನಿಧಾನಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳ್: **ಪಂಪಭಾ,** ೧. ೯೫ ವ)

ನಿಧಾನಂ ತೋಱಿ ಕಣ್ಣಂ ಕಳೆ – ಆಸೆ ಹುಟ್ಟಿಸಿ ನಿರಾಸೆ ಮಾಡು ಎಂಬ ಗಾದೆ (ಅನ್ನೆಗಮಿತ್ತ ನಿಧಾನಮಂ ತೋಱಿ ಕಣ್ಣ ಕಳೆವಂತೆ: **ಆದಿಪು,** ೩. ೫೧ ವ)

ನಿಧಿ – [ನಾ] ಸಂಪತ್ತು (ಪಡೆಯಲ್ಕಾಗದ ನಿಧಿಯಂ ಬಡವಂ ಪಡೆದಂತೆ: **ಆದಿಪು,** ೭. ४೬)

ನಿಧಿಗಂಡನಂತೆವೋಲ್ – ನಿಧಿಯನ್ನು ನೋಡಿದವನಂತೆ (ಕರಂ ಮೇಳಿಸಿದಪ್ಪುದೆನ್ನೆರ್ದೆಯಂ ಎಂದು ಬೊದಿಲ್ಲನೆ ಪಾಯ್ದು ನೀರೊಳಾ ಬಾಳನನಾದಮಾದರದೆ ಕಂಡೊಸೆದು ನಿಧಿಗಂಡನಂತೆವೋಲ್: **ಪಂಪಭಾ,** ೧. ೯೬)

ನಿಧಿಗಾಣ್ – [ಕ್ರಿ] ನಿಧಿಯನ್ನು ನೋಡು (ಅಗುಟ್ದಿರಲ್ ಆ ಕುಟಿಯೊಳ್ ತೊಟ್ಟಗೆ ನಿಧಿಗಂಡಂತೆ ವಸುಧೆಗೆ ಅಸದಳಮಾಯ್ತು ಆ ಮಗನ ಅಂದಂ: **ಪಂಪಭಾ,** ೧. ೯೭)

ನಿಧೀಶ – [ನಾ] [ಜೈನ] ನವನಿಧಿಗಳ ಒಡೆಯ, ಚಕ್ರವರ್ತಿ (ಬಾಹುಬಲಿ ತನ್ನಿಂದಂ ನಿಧೀಶಂಗೆ ವಂಶಜರಾಜ್ಯಾಭಿಷವೋತ್ಸವಮಂ ನೆಗಟ್ದುದೆಂದಾಶಂಕೆಯಂ ಮಾಡಿದಂ: **ಆದಿಪು,** ೧४. ೧೩೩)

ನಿಧುವನ – [ನಾ] ಸಂಭೋಗ (ಅನೇಕವಿಧ ನಿಧುವನಸುಖ ಸುಧಾರಸಾಧೀನಚಿತ್ತರುಂ **ಆದಿಪು,** ४. ೫೨ ವ)

ನಿನಗೆ ಮಾಡುವುದು – ನಿನ್ನವಳನ್ನಾಗಿಮಾಡಿಕೊ (ಚಚ್ಚರಂ ಒಳಪೊಯ್ದು ನೀಂ ನಿನಗೆ ಮಾಡುವುದೆಂದು ಅಮರೇಂದ್ರಪುತ್ರನಂ ಕರೆವವೊಲಾದುವು ಆ ಪುರದ ವಾತವಿಧೂತವಿನೂತನಕೇತುಗಳ್: **ಪಂಪಭಾ,** ४. ೩४)

ನಿನತು – [ಗು] ನಿನ್ನ (ನಿನತೊಂದೋಲೆಗೆ ತೀರ್ವುದೊಂದು ಮನೆವಾರ್ತೆಗಿದೇನೆಂದರಸ ಬಳೆಯೆ ನುಡಿದಪೆ: **ಆದಿಪು,** ೧४. ೩೦); **[ನಾ]** ನಿನ್ನದು (ಪೆಱತೇಂ ಪಡೆಮಾತೊ ನಿನ್ನದೀ ಮೇದಿನಿ ಪಟ್ಟಮುಂ ನಿನತೆ ನೀನಿರೆ ಪೆಱರ್ ನರೇಂದ್ರರೇ: **ಪಂಪಭಾ,** ೯. ೬४)

ನಿನದ – [ನಾ] ಶಬ್ದ (ಕನಕಕಾಂಚೀನಿನದಪ್ರಗಣಿತಮಗಲ್ದ ನಲ್ಲಳ ಜಗಮಿದೆನ್ನೆರ್ದೆಯನೆಂತು ಪೊಕ್ಕಳಿಪುದಪು: **ಪಂಪಭಾ,** ४. ೭೩)

ನಿನಾದ – [ನಾ] ಶಬ್ದ (ಚಕ್ರಿಗುಂಟುಮಾಡಿದುದು ಪೊಟಿಲ್ ಸುರಾದ್ರಿಮಥಿತ ಅಂಬುಧಿಜಾತನಿನಾದಶಂಕೆಯಂ: **ಪಂಪಭಾ,** ೯.೨೭)

ನಿನ್ನೆಂದಂತುಟೆ – ನೀನು ಹೇಳಿದ ಹಾಗೆಯೇ, ನೀನು ಹೇಳಿದ್ದು ಸರಿ (ನಿನ್ನೆಂದಂತುಟೆ ಮೋಕ್ಷಕ್ಕೆ ಎನ್ನಿರ್ಪಿರವು ಅಘಟಮಾನವೈಹಿಕದ ತೊಡರ್ಪು ಎನ್ನಿರವಿನೊಳುಂಟು: **ಪಂಪಭಾ.** ೮. ४)

ನಿಪತತ್ – [ಕ್ರಿ] ಮುಸುರು (ಕುಮುದವನವನಧಿಮಧುರರಸ ನಿಪತತ್ ಅಳಿಮಾಳೆಯುಂ: **ಆದಿಪು,** ೭. ೨೭ ರಗಳೆ); **[ಕ್ರಿ]** ಬಾಗು (ಭಕ್ತಿಭರಾನತನಿಪತತ್ ಕರ್ಣಪೂರಪಲ್ಲವಂ ತದೀಯ ಪಾದಪಲ್ಲವಂಗಳಂ ಆನಂದಾಶ್ರುಮಿಶ್ರಿತಜಳಂಗಳೊಳ್ ತೊಳೆದುಂ: **ಆದಿಪು,** ೫. ४೬ ವ); **[ಕ್ರಿ]** ಬೀಳು, ದುಮುಕು (ನದ್ಯುತ್ತರಣೋಪಾಯಮಾವುದೆಂದು ಬಗೆದು ಬೇಗಂ ಸ್ಥಪತಿರತ್ನಮಂ ಕರೆದು ತನ್ನಿಪತತ್ ಉದಕೋಭಯ ಸರಿತ್ಸ್ವರೂಪಮಂ ತೋಱಿದೊಡೆ: **ಆದಿಪು,** ೧೩. ೫೧ ವ)

ನಿಪತಿತ – [ಗು] ಬಿದ್ದ (ಗಂಭೀರ ನಾರಕ ಭೀಷಣ ಮಕರಮುಖಕುಹರನಿಪತಿತ ಆಕ್ರಂದತ್ ಆರ್ತಪರುಷಸ್ವರ ವಿರಸಭಯಂಕರೆಯುಂ: **ಆದಿಪು,** ೫. ೮೭ ವ); **[ಗು]** ಹೊಡೆಯಲ್ಪಟ್ಟ (ಆಕರ್ಣಕೃಷ್ಟ ವಿಕ್ರಮಾರ್ಜುನ ಕಾರ್ಮುಕವಿಮುಕ್ತ ನಿಶಿತಸಾಯಕಸಂಕುಳ ಶಲ್ಯನಿಪತಿತ ಅನೇಕ ಕಳಕಳಾಕಳಿತಮುಂ: **ಪಂಪಭಾ,** ೧೩. ೫೧ ವ)

ನಿಪಾತನ – [ನಾ] ಬೀಳುವಿಕೆ (ಕರ್ಣಾರ್ಜುನಯುದ್ಧಂ ಕರ್ಣಲೋಕಪ್ರಾಪ್ತಿ ಶಲ್ಯಾಭಿಷೇಕಂ ಶಲ್ಯನಿಪಾತನಂ: **ಪಂಪಭಾ,** ೧४. ೫೨ ವ)

ನಿಪಾತಿತ – **[ಗು]** ಉರುಳಿಸಲ್ಪಟ್ಟ (ತುಂಗವನ್ಯಮತಂಗಜದಂತೆ ಆಘಾತನಿಪಾತಿತಸಲ್ಲಕೀಭಂಗಮಂ .. .. ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ,** ೧. ೧೧೫)

ನಿಷ್ಪುಟಂ – **[ಗು]** ಅಧಿಕವಾಗಿ, ಪೂರ್ತಿಯಾಗಿ (ಒಡಲ್ ಪಸಿವಾರ್ದಳುರ್ದಟಿಪ್ಪೆ ನಿಷ್ಪುಟಂ ಕರಗಿದುದು: **ಆದಿಪು,** ೮. ೬೨)

ನಿಷ್ಪೊಸತು – **[ನಾ]** ಹೊಚ್ಚ ಹೊಸತು (ಯುಗಮಂ ನಿಷ್ಪೊಸತಪ್ಪಿನಂ ಕೃತಯುಗಂ ಮಾಡಲ್ ಸುರೇಂದ್ರಾಳಿಗಾವಗಂ ಉತ್ಸಾಹಂ ಉಂಟುಮಾಡಲ್ ಎಡೆಗೊಟ್ಟೀ ಧರ್ಮಮಂ: **ಆದಿಪು,** ೭. ೨)

ನಿಬಿಡನಿಪೀಡಿತ – **[ಗು]** ಗಟ್ಟಿಯಾಗಿ ಹಿಡಿದ (ನಿಬಿಡನಿಪೀಡಿತ ಪ್ರಾಸಮುಷ್ಟಿದುರ್ಧರ ಅಶ್ವಾರೋಹ ತುರಂಗಬಲಾವಗಾಢಮುಂ: **ಆದಿಪು,** ೧೪. ೯೩ ವ)

ನಿಬಿಡಾಲಿಂಗನ – **[ನಾ]** ಗಾಢವಾದ ಅಪ್ಪುಗೆ (ದಿಕ್ಕರಿಕರಾನುಕಾರಿಗಳಪ್ಪ ಬಾಹುಗಳಿಂದಂ ಓರೊರ್ವರಂ ತೆಗೆದಪ್ಪಿ ನಿಬಿಡಾಲಿಂಗನಂಗೆಯ್ದು: **ಪಂಪಭಾ,** ೪. ೩೩ ವ)

ನಿಭ – **[ಗು]** ಸಮಾನವಾದ (ವನಭೃತ್ಕುಂತಳೆಯಾ ಶಿರೀಷಕುಸುಮಾಭಾಂಗಕ್ಕೆ ಕಂದಂ ಕನತ್‌ಕನಕಾಂಭೋಜನಿಭ ಆನನಕ್ಕೆ ಪಿರಿದುಂ ದೀನತ್ವಮಂ: **ಪಂಪಭಾ,** ೪. ೬೪)

ನಿಭೃತ – **[ಗು]** ಕೂಡಿದ, ಯುಕ್ತವಾದ (ಚಳಿತಜಳವಿಹಗರವ ರಮ್ಯದಿಗ್ವಳಯಮಂ ಜಳಜಕುಳನಿಭೃತ ಜಳಪದ್ಮಿನೀ ನಿಳಯಮಂ: **ಆದಿಪು,** ೭. ೨೭ ರಗಳೆ)

ನಿಮತು – **[ಗು]** ನಿಮ್ಮ (ಸಾವೆ ನಿಮತು ಇಚ್ಚೆಯೆನೆ ಪೊಣರ್ದು ಆವಂ ತಳ್ತಿಱಿದು ಗೆಲ್ವಂ ಎಮಗದಱಿಂದಂ ಸಾವು ದಿಟಂ: **ಪಂಪಭಾ,** ೧೧. ೩೧)

ನಿಮಿತ್ತ – **[ನಾ]** ಕಾರಣ (ಆದೇಂ ಸುಖಾವಾಸನಿಮಿತ್ತವಾಯ್ತೊ ವನವಾಸನಿವಾಸಮೆ ಪಾಂಡುಪುತ್ರರಾ: **ಪಂಪಭಾ,** ೭. ೨೯)

ನಿಮಿರ್ – **[ಗು]** ವಿವರವಾಗಿ (ಪಂಚ'ಧನುಶ್ಶತಂ ಪವಣ್ಣೆಲೆ ನರರ್ಗೆಂದೊಡೆ ಇನ್ ನಿಮಿರೆ ಬಣ್ಣಿಸಲಾನಱಿಯೆಂ ವಿದೇಹಮಂ: **ಆದಿಪು,** ೧. ೫೨); **[ಕ್ರಿ]** ಅತಿಶಯವಾಗು (ರಾಜಪುತ್ರಿಸ್ಮಿತ ಮಧುಮಧುರಾಪಾಂಗ ಜೈತ್ರಾಂಗಜಾಸ್ತ್ರಂಗಳ ಕೋಳಂ ನೂತನಪ್ರೇಮದೆ ನಿಮಿರ್ವೆಡೆಯೊಳ್ ಕಾವನಾವಂ: **ಆದಿಪು,** ೪. ೫೧); **[ಕ್ರಿ]** ವಿಸ್ತರಿಸು (ಆವನ ತೋಳಿಂ ನಿಮಿರ್ದತ್ತು ಜಳಧಿವರಮವನಿತಳಂ: **ಆದಿಪು,** ೧೩. ೭೫); **[ಕ್ರಿ]** ಹಬ್ಬು (ಅಡಿವಿಡಿದಿಟ್ಟ ಪುತ್ತುಗಳ ನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗಳ್ವಿಡಿದು ವಿಷೋರಗಪ್ರತತಿ ನೋಟಿಪ್ಪೊಡಗುರ್ವಿಸೆ: **ಆದಿಪು,** ೧೪. ೧೪೦)

ನಿಮಿರ್ಕೆಗುಂದು – **[ಕ್ರಿ]** ಅತಿಶಯತೆ ಕುಂದು (ಅಲಂಪಿನಿಂಪು ತವದೆ ಅಟ್ಟಿಱಿಳುರ್ಕೆ ನಿಮಿರ್ಕೆಗುಂದದೆ ಆವಗಂ ಅತಿಸೌಖ್ಯಮಂ ಪಡೆವುದು; **ಆದಿಪು,** ೫. ೪೩)

ನಿಮಿರ್ಚು – **[ಕ್ರಿ]** ಹರಡು, ಹರವು (ಉದಾರರಾಗೋದಯಂ ನಿಮಿರ್ಚಿದುದು ಕಣ್ಗೆ ವಿಯತ್ತಳಚಾರಣೋದಯಂ: **ಆದಿಪು,** ೫. ೪೬); **[ಕ್ರಿ]** ನೇರಗೊಳ್ಳು (ಗೆಲೆವಂದಂ ಎನ್ನಂ ನಿಜೋನ್ನತಿಯಿಂದಂ ಈ ಪತಿಯೆಂದು ಮೆಚ್ಚಿ ವಿನಾಯಕಂ ತಾಂ ನಿಮಿರ್ಚುಗೆ ಕಬ್ಬಮಂ ನಯದಿಂ ಗುಣಾರ್ಣವ ಭೂಪನಾ: **ಪಂಪಭಾ,** ೧. ೭); **[ಕ್ರಿ]** ವಿಸ್ತರಿಸು (ಸಂದ ವೈರಿಗಳನೆ ಕೊಂದು ವಾರಿಧಿಪರೀತ ಮಹೀತಳಮಂ ನಿಮಿರ್ಚೆ: **ಪಂಪಭಾ,** ೧೩. ೧೦೩)

ನಿಮೀಳತ್ – **[ಗು]** ಮುಚ್ಚಿದ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ)

ನಿಮೇಷ – **[ನಾ]** [ಜೈನ] ಒಂದು ಕಾಲ ಪರಿಮಾಣ, ಇದಕ್ಕೆ ಲವ ಎಂತಲೂ ಹೆಸರಿದೆ, ಏಳು ಸ್ತೋಕಗಳಷ್ಟು ಕಾಲ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ); **[ನಾ]** ರೆಪ್ಪೆ ಮಿಟುಕಿಸುವಷ್ಟು ಕಾಲ (ನಿನಗುತ್ತರಾರ್ಧಂ ಒಂದರ್ಧನಿಮೇಷ ಮುಹೂರ್ತ ಮಾತ್ರದಿಂ ಬಾರದೆ ಕೈಗೆ: **ಆದಿಪು,** ೧೩. ೨೨)

ನಿಮ್ನ – **[ನಾ]** ಆಳವಾದ [ಜಾಗ] (ಎಸೆವೀ ನಿಮ್ನೋತ್ತುಂಗಳ್ ವಿರಾಜಿಸಿ ಚೆಲ್ವಿಂಗೆಡೆಗೊಂಡುವು: **ಆದಿಪು,** ೪. ೪); ತಗ್ಗಾದ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ನಿಮ್ನಗಾ – **[ನಾ]** [ನಿಮ್ನಗೆ] ನದಿ (ನಿಮಗ್ನಾತಟ ನಿಕಟವರ್ತಿಗಳಪ್ಪ ಮಹಾ ದ್ರೋಣಾಮುಖಂಗಳುಮಂ; **ಆದಿಪು,** ೮. ೬೩ ವ)

ನಿಮ್ನನಾಭಿ – **[ನಾ]** ಆಳವಾದ ಹೊಕ್ಕುಳು (ಮದನ ದವಾನಲಾರ್ಚಿ ತನುವಂ ಸುಡೆ .. .. ಎಯ್ದಿದುವು ನೇತ್ರಜಲಬಿಂದುಗಳ್ ಆಕೆಯ ನಿಮ್ನನಾಭಿಯಂ: **ಪಂಪಭಾ,** ೫. ೯)

ನಿಮ್ನೋನ್ನತ – **[ನಾ]** [ಚಿತ್ರದ] ತಗ್ಗು ಏರುಗಳು (ಕೋಮಳತೆಯಂ ತಾಳ್ದಿತ್ತು ವರ್ಣಕ್ರಮಂ ರಸವತ್ಕಾಂತಿಯನಾಂತು ನಿಂದುದೆಸೆವೀ ನಿಮ್ನೋನ್ನತಂಗಳ್: **ಆದಿಪು,** ೪. ೪)

ನಿಮ್ಮಂದಿಗ – **[ನಾ]** ನಿಮ್ಮಂತಹವನು (ಏಂ ಮೊಗ್ಗೇ ಕರ್ಣಂ ಇಂತೀ ನಿಮ್ಮಂದಿಗರಿಱಿಯೆ ಸಾವನೇ ಸುಖಮಿರಿಂ ಇಂ ಅಮ್ಮ ಸುಯೋಧನನೊಳ್: **ಪಂಪಭಾ,** ೧೨. ೧೩೦)

ನಿಮ್ಮಡಿ – **[ನಾ]** ನಿಮ್ಮ ಪಾದ, ತಮ್ಮ ದಯೆ (ಮಹಾಪ್ರಸಾದಂ ಪೆಱತೇನುಮನೊಲ್ಲೆಂ ಎನಗೆ ನಿಮ್ಮಡಿ ಪಾಶುಪತಾಸ್ತ್ರಮಂ ದಯೆಗೆಯ್ವುದು: **ಪಂಪಭಾ,** ೮. ೨೫ ವ); ನಿಮ್ಮ ದಮ್ಮಯ್ಯ (ಕೆಮ್ಮಗೆ ನಿಮ್ಮಡಿ ಬಟಲಿಸಲ್ವೇಡ ಬಂದ ಬಟ್ಟೆಯಿನೆ ಬಿಜಯಂಗೆಯ್ಯಿಂ: **ಪಂಪಭಾ,** ೯. ೪೮ ವ)

ನಿಯಂತ್ರಿತ – **[ಗು]** ಕಟ್ಟಲ್ಪಟ್ಟ (ಆಮಂತ್ರಿತ ಡಾಕಿನೀ ದಶನಘಟ್ಟನಜಾತ ವಿಭೀಷಣಂ ಮದೇಭ ಅಂತ್ರನಿಯಂತ್ರಿತ ಅಶ್ವಶವಮಾಂಸ ರಸಾಸವಮತ್ತಯೋಗಿನೀತಂತ್ರಂ: **ಪಂಪಭಾ,** ೧೨. ೧೨೦)

ನಿಯತಿಃ ಕೇನ ಲಂಘ್ಯತೇ – ವಿಧಿಯನ್ನು ಯಾರಿಂದ ಮೀರುವುದಕ್ಕೆ ಆದೀತು (ಶಕುನಂಗಳ ಕ್ರಮಮಂ ಬಗೆಯದೆ

ನಿಯತಿಃ ಕೇನ ಲಂಘ್ಯತೇ ಎಂಬ ನುಡಿಯಂ ನನ್ನಿಮಾಡಿ: **ಪಂಪಭಾ,** ೬. ೬೮ ವ)

ನಿಯಮ – **[ನಾ]** ವ್ರತ (ನಿಮ್ಮೊಂದು ಕೆಯ್ವಿಟ್ಟ ಭೂತಳಮಂ ಮತ್ತೆ ತರಲ್ ವಿಶುದ್ಧನಿಯಮ ಪ್ರಾರಂಭದಿಂದಾನುಂ ಈ ಕೊಳನಂ ಪೊಕ್ಕುದುಂ ಆವ ದೋಷಂ: **ಪಂಪಭಾ,** ೧೩. ೮೪)

ನಿಯಮನಿಧಾನ – **[ನಾ]** [ನಿಯಮ] ತಪವನ್ನೇ ನಿಧಿಯಾಗುಳ್ಳವನು, ತಪಸ್ವಿ (ಸ್ನಾನಾರ್ಥಂ ಒಂದು ಕಳಶಮಂ ನಿಯಮನಿಧಾನಂ ಎಟಲೆ ಪಿಡಿದು ಅಮಳಿನ ಗಂಗಾನದಿಗೆ ವಂದು ಸುರತನಿಧಾನಿ ಅಮರೇಂದ್ರಗಣಿಕೆಯಂ ಮುನಿ ಕಂಡಂ: **ಪಂಪಭಾ,** ೨. ೪೧)

ನಿಯಮಸ್ಥ – **[ನಾ]** ವ್ರತದಲ್ಲಿ ತೊಡಗಿದವನು (ಹಿಮವನ್ಮಧ್ಯಕೂಟಾಭಿಮುಖ ಪ್ರದೇಶದೊಳ್ ಬೀಡಂ ಬಿಟ್ಟು ನಿಯಮಸ್ಥನಾಗಿ: **ಆದಿಪು,** ೧೩. ೬೭ ವ)

ನಿಯಮಿಸು – **[ಕ್ರಿ]** ಅಪ್ಪಣೆಗೈ (ಎನ್ನ ಬರ್ಪನ್ನಂ ಅರಸನಂ ಅಗಲದೆ ವಿಕಸಿತಶತಪತ್ರಾತಪತ್ರದ ತಣ್ಣೆಟಲುಮಂ ಕುಂದಲೀಯದಿರು ಎಂದು ನಿಯಮಿಸಿ: **ಪಂಪಭಾ,** ೧೩. ೧೦೫ ವ)

ನಿಯುಕ್ತ – **[ಗು]** ಯೋಗ್ಯವೆನಿಸಿದ (ಜಗತ್ಸ್ವಾಮಿ ಸಂದ ಆದಿಬ್ರಹ್ಮಂ ಅಗಾಧಬೋಧನಿಳಯಂ ದುರ್ವಾರಸಂಸಾರ ವಿಚ್ಛೇದೋಪಾಯ ನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ: **ಆದಿಪು,** ೧. ೧)

ನಿಯುದ್ಧ – **[ನಾ]** ದ್ವಂದ್ವಗಾಳಗ, ಕುಸ್ತಿ (ಮಲ್ಲಮೇಷೋದ್ಧತ ರಾಜಧಾರಕನಿಯುದ್ಧದಿಂದಂ ಆನಂದಿತಹೃದಯನಾಗಿ: **ಆದಿಪು,** ೮. ೫೦ ವ)

ನಿಯೋಗ – **[ನಾ]** ಹೊಂದಿರುವವನು (ಜನ್ಮಾಂತರಾಭ್ಯಾಸಜನಿತ ಅವಧಿಬೋಧೋದಯ ವಿದಿತಕಾಲನಿಯೋಗನುಂ: **ಆದಿಪು,** ೬. ೨ ವ); **[ನಾ]** ಸೇವೆ, ಪರಿಚರ್ಯೆ (ಅಮರಕಾಮಿನೀ ಮಹತ್ತರಿಕಾನಿಯಮಿತ ಆತ್ಮೀಯನಿಯೋಗದಿಂ ಜಿನಜನನಿಯ ಮನಮನಱಿದು ಓಲಗಿಸುವಲ್ಲಿ: **ಆದಿಪು,** ೭. ೪ ವ); **[ನಾ]** ಅಧಿಕಾರವರ್ಗ (ಅವನಾಳ್ವ ತೆಱಗೊಳ್ವ ಬಿಟ್ಟಿಬೆಸಕೆಯ್ಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ: **ಆದಿಪು,** ೮. ೬೩ ವ); **[ನಾ]** ನಿಯಮ (ಪ್ರಥಮಮೇಖಳಾಸ್ಥಿತ ಉಭಯಶ್ರೇಣಿಯೊಳ್ ಕರ್ಮಭೂಮಿಯ ನಿಯೋಗಮೆ ನಿಯೋಗಂ: **ಆದಿಪು,** ೯. ೧೨೧ ವ); **[ನಾ]** ದಿನಚರ್ಯೆ (ಆಗಳ್ ಪ್ರಭಾತಕಾಲ ನಿಯೋಗಮನಾ ಚಕ್ರವರ್ತಿ ನಿರ್ವರ್ತಿಸಿ ಪೋಪೋಗಲ್ವೇಟಿ ಪಯಣಮನೆಂದಾಗಳ್: **ಆದಿಪು,** ೧೨. ೫೬); **[ನಾ]** ಕಾರ್ಯ (ಮೊದಲೊಳ್ ಮಾಟ್ಟ ನಿಯೋಗಮಿಂತಿದೆನಗೆ ಎಂದಾನಂದದಿಂ ತಾನೆ ಮಾಡಿದನಾ ಚಕ್ರಿಗೆ .. .. ಪುಣ್ಯೋದಕಸ್ನಾನಮಂ: **ಆದಿಪು,** ೧೩. ೧೬)

ನಿಯೋಗಿ – **[ನಾ]** ರಾಜಪ್ರತಿನಿಧಿ, ಅಧಿಕಾರಿ (ಬರ್ಪ ನಿಯೋಗಿಗಳಾದ ಚೆಲ್ವಂ ಆವೆಡೆಯೊಳಂ ಈಯೆ ಕಣ್ಗೊಸಗೆಯಂ ಪಡೆದತ್ತು ಸಮಸ್ತಸಾಧನಂ: **ಆದಿಪು,** ೪. ೯೨)

ನಿಯೋಜಿತ – **[ಗು]** ಉಂಟಾದ (ಅಲ್ಲಿ ಪುಟ್ಟುವ ಜೀವಂಗಳ್ ನಾರೀಪುರುಷಸಂಯೋಗನಿಯೋಜಿತ ಶುಕ್ಲಾರ್ತವಂಗಳೊಳ್ ಜೀವಯುಗಳಂಗಳಾಗಿ ನೆಲಸಿ: **ಆದಿಪು,** ೫. ೪೧ ವ)

ನಿಯೋಜಿಸು – **[ಕ್ರಿ]** ಒಪ್ಪಿಸು, ವ್ಯವಸ್ಥೆಮಾಡು (ತಮ್ಮತಮ್ಮ ಪುತ್ರರಂ ಅಭಿಯೋಗದಿಂದತಿಬಳಂಗೆ ನಿಯೋಜಿಸಿ: **ಆದಿಪು,** ೨. ೫೧); **[ಕ್ರಿ]** ಕಟ್ಟಳೆ ಮಾಡು, ಆಜ್ಞಾಪಿಸು (ಯಥಾಯೋಗ್ಯಂ ಉಪದೇಶಂಗೆಯ್ದು ವರ್ಣಸಂಕರಂ ಆಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ: **ಆದಿಪು,** ೮. ೬೪ ವ)

ನಿರಂತರಂ – **[ಅ]** ಎಡೆಬಿಡದೆ (ಸಿಡಿಲ್ವೊಡೆದವೊಲಟ್ಟಿ ಮುಟ್ಟಿ ಕಡಿದಿಕ್ಕಿದುದಾದೆಡೞಂ ನಿರಂತರಂ ಕಡಿಕಡಿದಿತ್ತ ಪೊನ್ನೆ ಬುಧಮಾಗಧವಂದಿಜನಕ್ಕೆ ಕೊಟ್ಟ ಕೋಡೆಡೞದೆ ಬೇಡಿಮೋಡಿದುದು ಚಾಗದ ಬೀರದ ಮಾತು ಕರ್ಣನಾ: **ಪಂಪಭಾ,** ೧. ೯೯)

ನಿರತಿಶಯ – **[ಗು]** ಉತ್ಕೃಷ್ಟವಾದ (ಇರುಳ್ ಕಂಡ ಕನಸಂ ಮಱುದೆವಸಂ ನೆನೆವಂತೆ ನಿರತಿಶಯಸುರಲೋಕ ಸಮುದ್ಭವಸುಖಮಂ ಆಗಳೇ ನೆನೆದು: **ಆದಿಪು,** ೪. ೫ ವ)

ನಿರಯಜ – **[ನಾ]** ನರಕವಾಸಿ, ನಾರಕಿ (ಕರಾಳನಕ್ರಚರ್ವಿತ ನಿಕೀರ್ಣನಿರಯಜನಿಕುರುಂಬ ಶಲ್ಯಶಕಲಪರಿಪೂರಿತ ಧವಳಪ್ಲವದುರ್ನಿರೀಕ್ಷಣವಿಷಮೆಯುಂ: **ಆದಿಪು,** ೫. ೮೭ ವ)

ನಿರರ್ಗಳ – **[ನಾ]** ಸಲೀಸು (ವಸುಂಧರಾರಾಜ್ಯಮೋಹಮೆಂಬ ವಜ್ರಲೋಹನಿಗಳಮಂ ಪಱಿಯೆ ಪೊಯ್ವ ರಾಜಕುಂಜರಂಗೆ ನಿನಗಪವರ್ಗಮಾರ್ಗಂ ನಿರರ್ಗಳಮೆ ವಲಮಾದೊಡಂ: **ಆದಿಪು,** ೯. ೬೨ ವ)

ನಿರವಕಾಶ – **[ನಾ]** ಎಡೆಯಿರದಂತೆ ತುಂಬಿಕೊ (ರಾಗಕೇತನ ಚಂಚಳಾಂಚಳನಿಚಯದಿಂದಂ ಅಂಭೋಧಪಥಮುಂ ಅತಿಚಕಿತವಿದ್ವಿಷ್ಟದೃಷ್ಟಿಪಥಮುಂ ನಿರವಕಾಶಮಾಗೆಯುಂ: **ಆದಿಪು,** ೧೩. ೭೭ ವ)

ನಿರವದ್ಯ – **[ನಾ]** ಶ್ರೇಷ್ಠವಾದ (ಪರಮತಪಶ್ಚರಣನಿರತ ಯತಿಸಮಿತಿಗೆಲ್ಲಂ ಪ್ರತಿಗ್ರಹಾದಿಪುರಸ್ಸರಂ ನಿರವದ್ಯಾಹಾರಾದಿ ವಿತರಣರೂಪ ಪಾತ್ರದತ್ತಿಯುಂ: **ಆದಿಪು,** ೧೫. ೧೩ ವ)

ನಿರವಶೇಷ – **[ನಾ]** ಸ್ವಲ್ಪವೂ ಉಳಿಯದಂತೆ (ನಿರವಶೇಷ ಮೋಹೋಪಶಮೋದ್ಭೂತ ಯಥಾಖ್ಯಾತಚಾರಿತ್ರ ಸಂಪನ್ನಂ ಅಂತರ್ಮುಹೂರ್ತದಿಂ ಸ್ವಸ್ಥಾನಸ್ಥಿತನಾಗಿ: **ಆದಿಪು,** ೬. ೩೩ ವ)

ನಿರಸನ – **[ಗು]** ಹೋಗಲಾಡಿಸುವ (ಮಹಾಗುಹಾಗಹ್ವರಾಂತರ ಸೂಚೀನಿರ್ಭೇದ್ಯ ತಮಸ್ತಮೋನಿರಸನ ಪ್ರಭಾಭೂತ ಗುಣೋಪೇತಮಪ್ಪ ಚಿಂತಾಜನನಿಯೆಂಬ ಕಾಕಿಣೀರತ್ನಮುಂ: **ಆದಿಪು,** ೧೧. ೩ ವ)

ನಿರಸ್ತವಿವೇಕ – **[ನಾ]** ಕಳೆದುಕೊಂಡ ವಿವೇಕದವನು, ಅವಿವೇಕಿ (ನಿರಸ್ತವಿವೇಕಂಬೊಲದೇಕೆ ಮೋಹಿಸಿದಪ್ಪೆ ನಿರ್ವಾಣಸಕ್ತಂಗೆ: **ಆದಿಪು,** ೧೬. ೫೯)

ನಿರಾಕುಳ – **[ನಾ]** [ನಿರ್+ಆಕುಳ] ತೊಂದರೆ ಇಲ್ಲದೆ (ವೀರಲತಾಂಗಿಯ ಸೋಂಕು ಮೆಯ್ಯೊಳಂಕುರಿಸೆ

ನಿರಾಕುಳಂ ಕಳೆದಂ ಆಜಿಪರಿಶ್ರಮಮಮಂ ಗುಣಾರ್ಣವಂ: **ಪಂಪಭಾ,** ೧೧. ೧೫೫)

ನಿರಾದರ – [ನಾ] ಆದರವಿಲ್ಲದವನು, (ವಸುಮತೀಸಾಮ್ರಾಜ್ಯದೊಳ್ ನೀಂ ನಿರಾದರನಾಗಿರ್ದುದೆ ತತ್ಸುಖಾನುಗುಣಮಂ ಪೇೞ್ಗುಂ ಗುಣಾಂಭೋನಿಧೀ: **ಆದಿಪು,** ೯. ೬೨)

ನಿರಾಪೇಕ – **[ಗು]** [ನಿರಾಕ್ಷೇಪ] ಆಕ್ಷೇಪವಿಲ್ಲದೆ, ಷರತ್ತಿಲ್ಲದೆ (ಧರ್ಮಸುತನನಾಂ ನಿನಗೆ ನಿರಾಪೇಕಂ ಒಡಂಬಡಿಸುವೆಂ ಇಂತೀ ಕಜ್ಜಂ ಕೂರ್ಪೊಡೆನಗೆ ಕೆಯ್ಯೊಳ್ ಮಗನೇ: **ಪಂಪಭಾ,** ೧೩. ೧೩)

ನಿರಾಲಂಬನ – **[ಗು]** ಅಸಮರ್ಥನೀಯ (ನಿಷ್ಕಾರಣ ಕಾಯಕಂಪನಮುಂ ನಿರಾಲಂಬನ ವಾಗಾಡಂಬರಮುಂ ತಕ್ಕುದಲ್ತು: **ಆದಿಪು** ೧೪. ೮೧ ವ)

ನಿರೀಕ್ಷಣ – [ನಾ] ನೋಡುವಿಕೆ (ಈಗಳ್ ಏನಾಗದೊ ಪೇೞ್ ಭವತ್ ಚರಣಪದ್ಮನಿರೀಕ್ಷಣದಿಂ ಮುನೀಶ್ವರಾ: **ಪಂಪಭಾ,** ೭. ೬೦)

ನಿರುದ್ಧ – **[ಗು]** ಪರ್ಯಂತವಾದ (ಹಿಮಾದ್ರಿವಾರಿಧಿನಿರುದ್ಧೈಕ ಆತಪತ್ರಕ್ಷಮಾಭರಮಂ ಭೂರಿಭುಜಾಗ್ರದೊಳ್ ನಿಜೆಸಿ: **ಆದಿಪು,** ೯. ೬೪)

ನಿರುದ್ಧೋಚ್ಛ್ವಾಸ – [ನಾ] [ನಿರುದ್ಧ+ಉಚ್ಛ್ವಾಸ] ಕಟ್ಟಿಹೋದ ಉಸಿರು (ನಿರುದ್ಧೋಚ್ಛ್ವಾಸಮಪ್ಪನ್ನೆಗಂ ಪುದಿದಾ ದಂಪತಿಯಂ ಲೋಕಾಶ್ಚರ್ಯಮಂ ಮಾಡಿ ಕೊಂದುದು ಕೃಷ್ಣಾಗರುಧೂಪ ಧೂಮನಿವಹಂ: **ಆದಿಪು,** ೫. ೨೩)

ನಿರುದ್ಯೋಗಿ – [ನಾ] ಕೆಲಸವಿಲ್ಲದವನು (ಗುಣಮುಂಟೆಂದು ಉಂಡು ಪಟ್ಟಿರ್ಪನಂ ಅಣಮೆ ನಿರುದ್ಯೋಗಿಯಂ ಭೂಪನೆಂಬರ್: **ಪಂಪಭಾ,** ೪. ೧೧)

ನಿರುಪಮ – [ನಾ] ಒಬ್ಬ ರಾಷ್ಟ್ರಕೂಟ ರಾಜನ ಹೆಸರು; ಈ ನಿರುಪಮನಿಗೆ ಧ್ರುವಧಾರಾವರ್ಷವೆಂಬ ಹೆಸರೂ ಇತ್ತು. ಇವನ ಕಾಲ ಸುಮಾರು ಕ್ರಿ.ಶ. ೭೮೦ (ನಿರುಪಮ ದೇವನ ರಾಜ್ಯದೊಳ್ ಅರಿಕೇಸರಿ ವೆಂಗಿ ವಿಷಯಮಂ ತ್ರಿಕಳಿಂಗಬೆರಸೊತ್ತಿ ಕೊಂಡು ಗರ್ವದೆ ಬರೆಯಿಸಿದಂ ಪೆಸರನಖಿಳ ದಿಗ್ಭಿತ್ತಿಗಳೊಳ್: **ಪಂಪಭಾ,** ೧. ೨೦)

ನಿರೂಪಣಂಗೆಯ್ – [ಕ್ರಿ] ನೇಮಕಮಾಡು (ನಿನ್ನಂ ಆಳ್ವೆಂ ಎಂದು ಬಾಣಸಿನ ಕರಣಕ್ಕೆ ನಿರೂಪಣಂಗೆಯ್ದಂ: **ಪಂಪಭಾ,** ೮. ೫೪ ವ)

ನಿರೂಪಿತ – **[ಗು]** ಸೂಚಿತವಾದ (ಮಱುದಿವಸಂ ಪ್ರಶಸ್ತ ಮೌಹೂರ್ತಿಕನಿರೂಪಿತ ಶುಭಲಗ್ನೋದಯದಿಂದೆ: **ಪಂಪಭಾ,** ೧೪. ೧೭ ವ)

ನಿರೋಗ – [ನಾ] ಆರೋಗ್ಯವಂತ (ಅಭಯರ್ ನಿರೋಗರುಂ ಶ್ರುತವಿಭವಸಮನ್ವಿತರಪ್ಪರೆಂಬುದು ಪಿರಿದಲ್ತು: **ಆದಿಪು,** ೧೦. ೧೧)

ನಿರ್ಗತ – [ನಾ] ಈಚೆಗೆ ಹೊರಟ (ಕ್ರಂದತ್ ಸ್ಯಂದನ ಜಾತ ನಿರ್ಗತ ಶಿಖಿಜ್ವಾಳಾಸಹಸ್ರಂಗಳ್ ಆಟಂದೆತ್ತಂ ಕವಿದೇೞ್ವಿ ಬೇವ ಶವಸಂಘಾತಂಗಳಂ: **ಪಂಪಭಾ,** ೧೩. ೭೧)

ನಿರ್ಗ್ರಂಥರೂಪು – [ನಾ] ದಿಗಂಬರತ್ವ, ಬತ್ತಲೆ (ವಜ್ರನಾಭಿ ನಿಜದ ರೂಪುಮಂ ನಿರ್ಗ್ರಂಥರೂಪುಮಂ ಕೈಗೊಂಡು ನೆಗೞ್ದಂ: **ಆದಿಪು,** ೬. ೨೭)

ನಿರ್ಘಾತ – [ನಾ] ಸಿಡಿಲು (ನಿರ್ಘಾತಾಭೀಳತರರಭಸಮೋ ಲಯಕಾಳಾಂಬುದಘೋಷಮೋ ನೆಲಂ ಮೊಱಗಿದುದೋ: **ಆದಿಪು,** ೧೨. ೯೧)

ನಿರ್ಘೋಷ – [ನಾ] ದೊಡ್ಡ ದನಿ (ಪುರೋಹಿತ ಉಚ್ಚಾರ್ಯಮಾಣ ಪುಣ್ಯಾಶೀರ್ವಚನನಿರ್ಘೋಷದತ್ತಕರ್ಣನುಂ ಆಗಿರ್ದಾಗಳ್: **ಆದಿಪು,** ೧೧. ೧೦ ವ); [ನಾ] ಟಂಕಾರ (ನಾಳೆಯೆ ಕೇಳದಿರ್ಪಿರೇ ಮಹಾಗಾಂಡೀವನಿರ್ಘೋಷಮಂ: **ಪಂಪಭಾ,** ೮. ೫೬)

ನಿರ್ಜಂತುಕ – [ನಾ] ಯಾವುದೇ ಬಗೆಯ ಜೀವಿಗಳಿಲ್ಲದ (ವಟವಿಟಪಿಯ ಕೆಳಗೆ ವಿಶಾಳ ನಿರಾಕುಳ ನಿರ್ಜಂತುಕ ನಿರ್ಮಲ ಶಿಲಾಪಟ್ಟದ ಮೇಲೆ: **ಆದಿಪು,** ೧೦. ೧೩ ವ)

ನಿರ್ಜ್ಜರತ್ – **[ಗು]** ಹೊರಬಿದ್ದ (ಭಯಾನಕೋಭಯತಟ ಗುಹಾಗಹ್ವರ ನಿರ್ಜ್ಜರತ್ ಅಜಗರ ಗಳಗಳಿತ ಗರಳಶಬಳಿತಸಲಿಲ ಪ್ರವಾಹೆಯುಂ: **ಆದಿಪು,** ೫. ೮೭ ವ)

ನಿರ್ಜರಣ – [ನಾ] ತೊಡೆದುಹಾಕು, ನಾಶಪಡಿಸು (ಯಥಾ ಕಾಲಾನುಭವನ ತಪೋನಿಮಿತ್ತಮಾಗಿ ಸವಿಪಾಕ ಅವಿಪಾಕರೂಪದಿಂ ಪೂರ್ವಾರ್ಜಿತಕರ್ಮ ನಿರ್ಜರಣಂ ನಿರ್ಜರೆಯೆಂಬುದು: **ಆದಿಪು,** ೧೦. ೬೩ ವ)

ನಿರ್ಜರೆ – [ನಾ] [ಜೈನ] ಕಾಲಾನುಗುಣವಾಗಿ ಅನುಭವಿಸುವುದಕ್ಕೂ ತಪೋನಿಮಿತ್ತಕ್ಕೂ ಸವಿಪಾಕ ಅವಿಪಾಕರೂಪದಿಂದ ಪೂರ್ವಾರ್ಜಿತ ಕರ್ಮವನ್ನು ತೊಡೆದುಹಾಕುವಂಥದು (ಯಥಾ ಕಾಲಾನುಭವನ ತಪೋನಿಮಿತ್ತಮಾಗಿ ಸವಿಪಾಕ ಅವಿಪಾಕರೂಪದಿ ಪೂರ್ವಾರ್ಜಿತಕರ್ಮ ನಿರ್ಜರಣಂ ನಿರ್ಜರೆಯೆಂಬುದು: **ಆದಿಪು,** ೧೦. ೬೩ ವ)

ನಿರ್ಜಿತಕಂತು – [ನಾ] ಮನ್ಮಥನನ್ನು ಗೆದ್ದವನು, ಮನ್ಮಥನನ್ನು ಮೀರಿಸಿದವನು (ವಸಿಷ್ಠನ ಶಾಪಭ್ರಾಂತಿಯೊಳೆ ಬಂದು ನಿರ್ಜಿತಕಂತುವೆನಲ್ಕಂತು ಪುಟ್ಟಿದಂ ಗಾಂಗೇಯಂ: **ಪಂಪಭಾ,** ೧. ೬೭)

ನಿರ್ಝರ – [ನಾ] ಗಿರಿನದಿ (ಮಣಿಮಕುಟ ಶಿಖರಂ ಲಂಬಣಿಗೆತ ಪೊಸಮುತ್ತು ನಿರ್ಝರಂ ಮಣಿಕಟಕಂ ಮಣಿಕಟಕಮಾಗೆ: **ಆದಿಪು,** ೧೩. ೧೩)

ನಿರ್ಝರರವ – [ನಾ] ನದಿ ಹರಿಯುವ ಶಬ್ದ (ಪರಮನೊಳಗೊಳಗೊಂದಂ ಪರಿಜಪನಂಗೆಯ್ಯೆಯುಂ ನೆಗೞ್ದವ್ಯಕ್ತಾಕ್ಷರದಿಂ ನಿಗೂಢತರ ನಿರ್ಝರರವ ಗುಂಜದ್ಗುಹಾತಳಕ್ಕೆಣೆಯಾದಂ: **ಆದಿಪು,** ೯. ೮೬)

ನಿರ್ಣಯ – [ನಾ] ನಿಶ್ಚಿತ, ಖಚಿತ (ಕರ್ಣಂ ತನಗೆಂತುಂ ಒಡಂಬಡದುದಂ ನಿರ್ಣಯಮಾಗಱಿದು ಮಗುೞ್ವೇೞ್ದು ನಾರಾಯಣಂ ಪೋದಂ: **ಪಂಪಭಾ,** ೯. ೬೯ ವ)

ನಿರ್ದಾಯಾದ್ಯ – [ನಾ] ದಾಯಾದಿಗಳಿಲ್ಲದಂತೆ (ಅರಿಯರ್ ವೇಮಾಱಿರ್ ಇನ್ನಾರೊ ಬೇರನೆ ಕಿೞ್ತಿಕ್ಕಿದೆಂ ಈಗಳಾಯ್ತು ಧರೆ ನಿರ್ದಾಯಾದ್ಯಂ: **ಪಂಪಭಾ,** ೩. ೩೨)

ನಿರ್ದ್ವೈತ – **[ಗು]** ಎರಡಿಲ್ಲದ, ಭಿನ್ನಾಭಿಪ್ರಾಯವಿಲ್ಲದ (ಸುಷ್ಠು ಈತಂ ಕಾವೊಡೆ ಕರ್ಣನಕ್ಕುಂ ಅದಱಿಂ ನಾಮೆಲ್ಲಂ ಆತಂಗೆ ನಿರ್ದ್ವೈತಂ ಬೀರದ ಬೀರವಟ್ಟಮನಿದಂ ನಿರ್ವ್ಯಾಜದಿಂ ಕಟ್ಟುವಂ: **ಪಂಪಭಾ,** ೧೧. ೫೨)

ನಿರ್ಧೂತ – **[ಗು]** ಹೊಡೆದೋಡಿಸು (ಅಂಭೋಧಿಯಂತೆ ಗಂಭೀರಾಶಯರುಂ ಆದಿತ್ಯನಂತೆ ನಿರ್ಧೂತತಮಸ್ತಮರುಂ ಚಂದ್ರನಂತೆ ಸರ್ವಸತ್ತ್ವಸೌಮ್ಯರುಂ: **ಆದಿಪು**, ೪. ೯೫ ವ)

ನಿರ್ನಾಮಿಕೆ – **[ನಾ]** ಹೆಸರಿಲ್ಲದವಳು (ಎಂಜಲೆವುಟುಮಂ ತಿಂಬ ಪೆಸರುಮಿಲ್ಲದ ನಿರ್ನಾಮಿಕೆಯೆಂದು ಪೆಸರಾಗಿ: **ಆದಿಪು**, ೩. ೩೪ ವ)

ನಿರ್ನೆರಂ – **[ಅ]** ಆಧಾರರಹಿತ, ಅಕಾರಣ (ನೆತ್ತಿಯೊಳ್ ಬಾಳಂ ನಿರ್ನೆರಮೂಱಿ ಚಲದಿನೆಱಗಿಸಲಿರೆ ಭರತಂಗೆ ಎಱಗುವೆಱಕಂ ಅಂಜುಮೆಯಲ್ತೇ: **ಆದಿಪು**, ೧೪. ೭೫); ನಿಷ್ಕಾರಣವಾಗಿ (ಸಾಹಸದ ನಿಮ್ಮಯ್ವರುಂ ಮಕ್ಕಳಾಗಿರೆಯುಂ ನಿಚ್ಚಲುಂ ಇಂದ್ರನೋಲಗದೊಳ್ ಅಂತಾ ಪಾಂಡುರಾಜಂಗೆ ನಿರ್ನೆರಮಪ್ಪ ಒಂದಪಮಾನದಿಂದಂ ಇನಿತೊಂದು ಊನತ್ವಮಪ್ಪಂತುಟೇ: **ಪಂಪಭಾ**, ೬. ೧೭)

ನಿರ್ಬೇಗ – **[ನಾ]** [ನಿರ್ವೇಗ] ವೈರಾಗ್ಯ (ಉಸಿರ್ದೆ ನೀಂ ನಿನ್ನ ನಿರ್ಬೇಗಮಂ ಅಱಿದೆನಿದಂ ಶಕ್ತಿಯೊಳ್ ಮುಕ್ತಿಯಂ ಸಾಧಿಸಲಕ್ಕುಂ: **ಆದಿಪು**, ೩. ೪೪)

ನಿರ್ಭರ – **[ಗು]** ತುಂಬಿದ (ಆಕೆಯ ನಿರ್ಭರಾನಂದಸಾಂದ್ರ ಲಾವಣ್ಯದ್ರವಮೆ ದೆಸೆದೆಸೆಗೆ ಪಸರಿಸಿದಂತೆ: **ಆದಿಪು**, ೭. ೩೭ ವ)

ನಿರ್ಭರಪೂರ – **[ಕ್ರಿ]** ತುಂಬು ಪ್ರವಾಹ (ನಿರ್ಭರಪೂರಮಾಗಿಯುಂ ಸ್ನಿಗ್ಧಾಶ್ರುಜಳಧಾರಾಜಳಪ್ಲವಮುಂ ಬಾರಿಸಲೆಂತುಂ ಆಱದು ವಲಂ ಕಾಳೋರಗಗ್ರಸ್ತನಂ: **ಆದಿಪು**, ೩. ೫೪)

ನಿರ್ಭರಭ್ರಮಿತ – **[ಗು]** ವೇಗವಾಗಿ ತಿರುಗಿಸಲ್ಪಟ್ಟ (ಕುಲಾಲಕರ ನಿರ್ಭರಭ್ರಮಿತ ಚಕ್ರ ಲೀಲಾಯಿತಂ: **ಪಂಪಭಾ**, ೪. ೨೭)

ನಿರ್ಭರಹತಿ – **[ನಾ]** ಬಲವಾದ ಪೆಟ್ಟು (ಸುರಕರ ನಿರ್ಭರಹತಿಯಿಂ ಸುರದುಂದುಭಿನಿನದಂ ಅಮರವನಿತಾ ವದನಾಂಬುರುಹದಿಂ: **ಆದಿಪು**, ೭. ೭೮)

ನಿರ್ಭರ್ತ್ಸಿತ – **[ಗು]** ತಿರಸ್ಕೃತವಾದ (ನಿಜತೇಜೋನಿರ್ಭರನಿರ್ಭರ್ತ್ಸಿತ ರವಿಗ್ರಹನುಂ ಜನ್ಮಾಂತರಾಭ್ಯಾಸಜನಿತಾವಧಿ ಬೋಧೋದಯ ವಿದಿತಕಾಲನಿಯೋಗಮಂ .. .. ಪ್ರತಿಶ್ರುತಿಯೆಂಬಂ: **ಆದಿಪು,** ೬. ೫೨ ವ)

ನಿರ್ಭೇದಿಸು –**[ಕ್ರಿ]** ಸೀಳು (ಪರವಾದಿ ತಮಸ್ತಮಮನೊಡೆವ ಬಿಡೆ ಬೆದಱಿಪ ನಿರ್ಭೇದಿಪೆಡೆಗಳಶನಿ ಹರಿ ದಿನಪೋದಯಂ ಎನಿಸಿದುದು ವಿದ್ಯೆಯ ಒಂದು ಉರ್ಕು ಅವರಾ: **ಆದಿಪು**, ೩. ೭೫)

ನಿರ್ಮಲಚಿತ್ತ – **[ನಾ]** ದ್ವೇಷರಹತ ಮನಸ್ಸು (ಚಾಪವಿದ್ಯಾಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್: **ಪಂಪಭಾ**, ೧೪. ೬೪)

ನಿರ್ಮಲಿನ – **[ಗು]** ಪರಿಶುದ್ಧವಾದ (ಕೇವಲಬೋಧಂ ಪರಶುರಾಮಂ ಏನೀಗುಮೆ ನಿರ್ಮಲಿನಕುಲಂಗಲ್ಲದೆ ಪಿಡಿಯಲಲ್ಲದೆ ಅಂತಪ್ಪ ದಿವ್ಯಬಾಣಾವಳಿಯಂ: **ಪಂಪಭಾ**, ೧೨. ೯೭)

ನಿರ್ಮಾಂಸ – **[ಗು]** ಸವಿಲ್ಲದ, ಸಪೂರವಾದ (ಅಸಿಯ ನಡುವುಂ ಅಗಲುರಮುಂ ತಳ್ತು ಕಟ್ಟಿದ ಕಿವಿಯುಂ ಕವಿವ ಪುರ್ವುಂ ತೋರಮಾಗಿ ನಿರ್ಮಾಂಸಮಪ್ಪ ಕಾಲ್ಗಳುಂ: **ಪಂಪಭಾ**, ೫. ೪೬)

ನಿರ್ಮಾಣ – ಒಂದು ಬಗೆಯ ನಾಮಕರ್ಮ, ಯಾವುದರಿಂದ ಶರೀರದ ಅಂಗೋಪಾಂಗಗಳು ನಿಯಮಿತ ಸ್ಥಳದಲ್ಲಿ ರಚನೆಯಾಗಲು ಕಾರಣವಾಗುವಂಥದು (ಅಗುರುಲಘುತ್ವ ಚತುಷ್ಕ ವಿಹಾಯೋಗತಿದ್ವಿಕಸ್ಥಿರಾಸ್ಥಿರಶುಭಾಶುಭ ಸುಸ್ವರದುಸ್ವರ ಸುಭಗದುರ್ಭಗ ಪ್ರತ್ಯೇಕಶರೀರಾಯಶಸ್ಕೀರ್ತಿ ರನಾದೇಯನಿರ್ಮಾಣ ಪರ್ಯಾಪ್ತನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ; **ಆದಿಪು,** ೧೬. ೨೩ ವ)

ನಿರ್ಯಾಪಕಾಚಾರ್ಯ – ಸಲ್ಲೇಖನ ವ್ರತವನ್ನು ಉಪದೇಶಿಸುವ ಗುರು (ಆಗಳ್ ಆ ಸ್ವಯಂಬುದ್ಧಂ ನಿರ್ಯಾಪಕಾಚಾರ್ಯನಾಗಿ ಪಂಚಗುರುಸಮಕ್ಷದೊಳ್ ... ಮಹಾಬಳನಂ ಜಾತರೂಪಧರನಂ ಮಾಡಿ: **ಆದಿಪು**, ೨. ೫೧ ವ)

ನಿರ್ಮಾಪಣ – **[ನಾ]** ನಿರ್ಮಾಣಗೊಳಿಸುವುದು (ಸಮಸ್ತಭವ್ಯಜನ ನಿರ್ವರ್ತ್ಯಮಾನ ಅಷ್ಟಾಹ್ನಿಕಮುಂ ಚೈತ್ಯಾಲಯ ನಿರ್ಮಾಣ ನಿರ್ಮಾಪಣ ಶಾಸನಾರೋಪಿತ ಗ್ರಾಮಕ್ಷೇತ್ರ ವಿತರಣಮುಂ: : **ಆದಿಪು,** ೧೫. ೧೩ ವ)

ನಿರ್ಮುಕ್ತೋಷ್ಮ – **[ನಾ]** [ನಿರ್ಮುಕ್ತ+ಊಷ್ಮ] ಬಿಸಿಯಿಲ್ಲದ (ಜೀವಿತಾಶಯದಂತೆ ಅತ್ಯಾಯಾಮಮುಂ ಮುಕ್ತಜ್ವರದಂತೆ ನಿರ್ಮುಕ್ತೋಷ್ಮನುಂ: **ಆದಿಪು**, ೧೩. ೪೬ ವ)

ನಿರ್ಯತ್ – **[ಗು]** ಹೊರಬರುವ (ವರ್ಷಸಹಸ್ರಸಂಕಲ್ಪಕಲ್ಪಿತ ಅಮೃತಾಹಾರನುಂ ಅರ್ಧಮಾಸ ನಿರ್ಯತ್ ಸುರಭಿನಿಶ್ವಾಸನುಂ: **ಆದಿಪು**, ೨. ೬೯ ವ)

ನಿರ್ಯಾಣ – **[ನಾ]** ಆನೆಯ ಕುಡಿನೋಟ (ನಿರ್ಯಾಣೋನ್ನತ ಅವಗ್ರಾಹ ವಿಭಕ್ತವಿದುವಿಧಾನಶರೀರನುಂ ಅಲ್ಪಘಾಟನುಂ ಉನ್ನತಶಿಖನುಂ: **ಆದಿಪು**, ೧೨. ೫೬ ವ)

ನಿರ್ಯಾಪಕಾಚಾರ್ಯ – **[ನಾ]** [ಜೈನ] ಸಲ್ಲೇಖನ ವ್ರತವನ್ನು ಉಪದೇಶಿಸುವ ಗುರು (ಆ ಸ್ವಯಂಬುದ್ಧಂ ನಿರ್ಯಾಪಕಾಚಾರ್ಯನಾಗಿ ಪಂಚಗುರುಸಮಕ್ಷದೊಳ್ ವೀರಸಂಸ್ಥಾನಾರೂಢನಂ ಮಹಾಬಳನಂ ಜಾತರೂಪಧರನಂ ಮಾಡಿ: **ಆದಿಪು**, ೨. ೫೧ ವ)

ನಿರ್ಲೇಪ – **[ನಾ]** ಯಾವುದಕ್ಕೂ ಅಂಟಿಕೊಳ್ಳದವನು (ಇತ್ತಲ್ ಆದಿತೀರ್ಥಕರ್ತಾರಂ ಅಮರಗಿರಿಯಂತೆ ಅಚಳನುಂ ಪಾರಾವಾರದಂತೆ ಅಕಲುಷಿತನುಂ ಅನಿಲನಂತೆ ನಿಸ್ಸಂಗನುಂ ಅಂಬರದಂತೆ ನಿರ್ಲೇಪನುಂ ಆಗಿ ನಿಲೆ: **ಆದಿಪು**, ೯. ೯೩ ವ)

ನಿರ್ವಂದ – **[ನಾ]** ನಿರ್ಬಂಧ, ಜೋರಾಗಿ (ಕಾಳಕಾಳಸ್ವರೂಪಮಂ ಕೆಯ್ಕೊಂಡು ಮದಾಂಧಗಂಧಸಿಂಧುರದ ಬಟೆಯಂ ನಿರ್ವದದಿಂ ತಗುಳ್ವುದುಂ: **ಪಂಪಭಾ**, ೮. ೩೭ ವ)

ನಿರ್ವರ್ತನ – **[ನಾ]** ಆಚರಣೆ (ಅಂತು ಭರತೇಶ್ವರಚಕ್ರವರ್ತಿ ಚಕ್ರಪೂಜಾಗ್ರ ತನೂಜ ಜಾತಕರ್ಮೋತ್ಸವ ನಿರ್ವರ್ತನ

ಅತಿಪ್ರೀಣಿತ ಅಂತಃಕರಣನಾಗಿರ್ಪನ್ನೆಗಂ: **ಆದಿಪು**, ೧೧. ೫ ವ)

ನಿರ್ವರ್ತಿತ – [ಗು] ನೆರವೇರಿಸಿದ (ಅಂತು ನಿರ್ವರ್ತಿತ ಜನ್ಮಾಭಿಷೇಕಂ ಅನೇಕ ದುಂದುಭಿಬಧಿರಿತಸಕಳದಿಙ್ಮಂಡಲಂ: **ಆದಿಪು**, ೭. ೧೦೭ ವ)

ನಿರ್ವರ್ತಿಸು – **[ಕ್ರಿ]** ಆಚರಿಸು, ಮಾಡು (ಪಾಂಡುರಾಜಂಗೆ ಜಳದಾನಾದಿ ಕ್ರಿಯೆಗಳಂ ನಿರ್ವರ್ತಿಸಿ ತದನಂತರದೊಳ್ ಇದುವೆ ನಿರ್ವೇಗಮಾಗೆ: **ಪಂಪಭಾ,** ೨. ೨೯ ವ); **[ಕ್ರಿ]** ನೆರವೇರಿಸು (ಮೂವತ್ತೆರಡು ದಿವಸದೊಳ್ ಕ್ರತುವಂ ನಿರ್ವರ್ತಿಸಿ ಮಹಾದಾನಂಗೆಯ್ದು ದಕ್ಷಿಣಾಕಾಲದೊಳ್: **ಪಂಪಭಾ,** ೬. ೩೮ ವ); **[ಕ್ರಿ]** ಮುಗಿಸು (ಯಾಗವಿಧಿಯಂ ನಿರ್ವರ್ತಿಸಿ ನೆರೆದ ರಾಜಕುಲಮೆಲ್ಲಮಂ ಪೂಜಿಸಿ ವಿಸರ್ಜಿಸಿದಾಗಳ್ ಮುರಾಂತಕಂ ಅಂತಕನಂದನನಂ ಇಂತೆಂದಂ: **ಪಂಪಭಾ**, ೬. ೬೫ ವ)

ನಿರ್ವರ್ತ್ಯಮಾನ – [ಗು] ನೆರವೇರಿಸಲ್ಪಡುವ (ಇಂದ್ರರ್ ಮಾಟ್ಟಿ ಇಂದ್ರಧ್ವಜಮುಂ ಸಮಸ್ತಭವ್ಯಜನ ನಿರ್ವರ್ತ್ಯಮಾನ ಅಷ್ಟಾಹ್ನಿಕಮುಂ: **ಆದಿಪು,** ೧೫. ೧೩ ವ)

ನಿರ್ವಾಣಭೂಮಿ – ನಿರ್ವಾಣಕ್ಷೇತ್ರ (ನಿರ್ವಾಣಭೂಮಿಯನನೇಕ ಸುರಭಿ ಸುರತರುಕುಸುಮ ಗಂಧಾಕ್ಷತಂಗಳಿಂದಮರ್ಚಿಸಿ: **ಆದಿಪು**, ೧೬. ೨೫ ವ)

ನಿರ್ವಾಯ – [ನಾ] ಒಂದು ಬಗೆಯ ಬಾಣ (ನೆಱದು ನಿರ್ವಾಯಂ ನರುವಾಯಂ ಮುಂಮೊನೆ ನೆರಕೆ ನಾರಾಚಂ ತಗರ್ತಲೆಯಂ: **ಪಂಪಭಾ**, ೧೩. ೩೯)

ನಿರ್ವಿಶೇಷ – **[ನಾ]** ಒಂದೇ ಬಗೆಯಾದ ದೃಷ್ಟಿಯವನು (ನಗರಾರಣ್ಯ ನಿರ್ವಿಶೇಷಂ ಉತ್ತಮ ಮಧ್ಯಮ ಜಘನ್ಯಾಗಾರಂಗಳೊಳ್ ಚಂದ್ರಗತಿಯಿಂ ಸಲುತ್ತುಂ: **ಆದಿಪು,** ೯. ೧೩೦ ವ)

ನಿರ್ವೇಗ – **[ನಾ]** ವಿರಕ್ತಿಯ ಕಾರಣ (ಬಂಧುಜನನಿರೀಕ್ಷಣದಿಂ ಶೋಕಂ ಮಱುಕಣಿಸೆ ಬಾಯಟಿದು ಪಳಯಿಸುವ ಕುಂತಿಯುಮಂ: **ಪಂಪಭಾ**, ೨. ೨೯ ವ)

ನಿರ್ವೇಗರಸ – **[ನಾ]** ವೈರಾಗ್ಯಭಾವನೆ (ಮುನ್ನಾವ ಶೋಕರಸಮೆಲ್ಲಂ ಪೋಗಿ ನಿರ್ವೇಗರಸಂ ಪುಟ್ಟಿ ಸಿದ್ಧರಸಮಂ ಮುಟ್ಟಿದ ಲೋಹದಂತೆ ಶುದ್ಧಾಂತರಂಗನಾಗಿ: **ಆದಿಪು,** ೩. ೫೬ ವ); ವಿರಕ್ತಿಯ ಭಾವ[ವುಳ್ಳವನು] (ಅದಂ ಕಂಡು ಅಪಗತಮೋಹರಸನುಂ ಉಪಗತನಿರ್ವೇಗರಸನುಂ ಆಗಿ: **ಆದಿಪು,** ೧೬. ೬೧ ವ)

ನಿರ್ವ್ರಣ – **[ಗು]** ಗಾಯವಿಲ್ಲದ, ಮುಕ್ಕಾಗದ (ಉದಗ್ರ ವಿರೋಧಿಮದೇಭ ಮಸ್ತಕಸ್ಥಳ ಜಳರಾಶಿಯೊಳ್ ಬಳೆದ ನಿರ್ಮಳನಿರ್ವ್ರಣವೃತ್ತ ಮೌಕ್ತಿಕಾವಳಿಯನೆ ತರ್ಪುದು: **ಪಂಪಭಾ**, ೧೦. ೪೬)

ನಿರ್ವ್ಯಾಜ – **[ನಾ]** ನಿಷ್ಕಪಟತೆ (ಎಂದು ಧರ್ಮರಾಜಂ ರಾಜರಾಜನಲ್ಲಿಗೆ ನಿರ್ವ್ಯಾಜದಿಂ ದಿತಿಜಕುಳವಿಜಯಪ್ರಜಿತನನೆ ದೂತಕಾರ್ಯಕ್ಕಟ್ಟಿದೊಡೆ: **ಪಂಪಭಾ,** ೯. ೨೬ ವ); **[ನಾ]** ನೆಪವಿಲ್ಲದೆ, ಕಾರಣ ಹೇಳದೆ (ಸುಷ್ಠು ಈತಂ ಕಾವೊಡೆ ಕರ್ಣನಕ್ಕುಂ ಅದಱಿಂ ನಾಮೆಲ್ಲಂ ಆತಂಗೆ ನಿರ್ದ್ವೈತಂ ಬೀರದ ಬೀರವಟ್ಟಮನಿದಂ ನಿರ್ವ್ಯಾಜದಿಂ ಕಟ್ಟುವಂ: **ಪಂಪಭಾ**, ೧೧. ೫೨); **[ನಾ]** [ತಿಳಿಯುವ] ಅವಕಾಶವಿರದ ಕಾರಣ (ಅಱಿಯಂ ಸೋದರನೆಂದು ಧರ್ಮತನಯಂ ನಿರ್ವ್ಯಾಜದಿಂ ನಿನ್ನಂ: **ಪಂಪಭಾ**, ೧೩. ೫); **[ನಾ]** ಪ್ರಾಮಾಣಿಕತೆ (ಪುಲಿಗೆಱೆಯ ತಿರುಳ ಕನ್ನಡದೊಳ್ ನಿರ್ವ್ಯಾಜದ ಎಸಕದೊಳೆ ಪುದಿದೊಂದೋಜೆಯ ಬಲದಿನಿಯ ಕವಿತೆ ಪಂಪನ ಕವಿತೆ: **ಪಂಪಭಾ**, ೧೪. ೫೮)

ನಿಲ್ – **[ಕ್ರಿ]** ಇರು (ಎಸೆದಿರ್ದಾ ಚೂಳಿಕಾಭಾಗಾದಲೆಯೊಳ್ ನಿಂದಪುದು ಊರ್ಧ್ವಲೋಕಂ: **ಆದಿಪು**, ೧. ೫೦); **[ಕ್ರಿ]** ನೆಲೆಗೊಳ್ಳು (ನೀಮುಂ ಈಗಳ್ ವನಸಿಂಹನ್ಯಾಯದಿಂ ದುರ್ಗದೊಳೆ ಬಲಿದು ನಿಂದಲ್ಲಿ ಬಂದೊತ್ತಿ ಚಕ್ರೇಶನ ತಂತ್ರಂ ನಿಲ್ಕುಂ: **ಆದಿಪು**, ೧೩. ೫೮)

ನಿಲುಂಬು – **[ಕ್ರಿ]** ಗುಂಪಾಗು (ಬಂದು ಕಾಲ್ಗೆಱಗೆ ಲೀಲಾಲಂಬಿ ಲಂಬಾಳಕಾಳಿ ನಿಲುಂಬಿರ್ದುವು ಚಕ್ರವರ್ತಿಯ ಪದಾಂಭೋಜಂಗಳೊಳ್ ಕನ್ನೆಯಾ: **ಆದಿಪು**, ೩. ೪೭)

ನಿಲೆನುಡಿ – **[ಕ್ರಿ]** ದೃಢವಾಗಿ ಹೇಳು (ಆ ಮಾತಂ ನಿಲೆನುಡಿದುದರ್ಕೆ ಮೆಚ್ಚಿ: **ಪಂಪಭಾ,** ೬. ೧೯ ವ)

ನಿಲ್ಲದಿಕೆ – [ನಾ] ನಿಲ್ಲದಿರುವುದು (ಪೂಣ್ದು ನಿಲ್ಲದಿಕೆಯಿಂ ಬಾಟ್ವಂತು ವಿಖ್ಯಾತ ಕೀರ್ತಿಯವೋಲ್ ಈ ಒಡಲ್ ಅಬ್ಬೆ ಪೇಱೆಮ್ ಎನಗೇಂ ಕಲ್ಪಾಂತರಸ್ಥಾಯಿಯೇ: **ಪಂಪಭಾ**, ೯. ೮೪)

ನಿಲ್ಲದಿಕ್ಕೆ – [ನಾ] ಅಸ್ಥಿರತೆ (ಅನುವಿಸೆ ಬೇಟಕಾಱನೊಲವು ಇರ್ಮಡಿಯಪ್ಪುದು ಬಯ್ಕೆ ಬೇಟಕಾಱನ ಬಗೆ ನಿಲ್ಲದಿಕ್ಕೆಗೊಳಗಪ್ಪುದು: **ಪಂಪಭಾ**, ೪. ೧೦೨)

ನಿವರ್ತನ – [ನಾ] ಕುದುರೆ ಸವಾರಿಯ ಒಂದು ಬಗೆ, ಕುದುರೆ ಹಿಂದಕ್ಕೆ ಮುಂದಕ್ಕೆ ಬರುವಂತೆ ಮಾಡುವುದು (ಪವನವೇಗ ನಿವರ್ತನನಿಪುಣಮುಂ ದ್ವಾದಶಯೋಜನೋಲ್ಲಂಘನ'ಹೋ ನಿವಾಸಭೂಮಿಯುಮಪ್ಪ ಪವನಂಜಯಮೆಂಬ ತುರಗರತ್ನಮುಂ : **ಆದಿಪು**, ೧೧. ೩ ವ); [ನಾ] ಅಭ್ಯಾಸ (ಮತ್ತಂ ಲೌಕಿಕ ಶಾಸ್ತ್ರನಿವರ್ತನಂ ಬೆರಸು ಪಲವುಂ ಪಱೆಗಳುಂ ಷಟ್ಕರ್ಮಸಾಧನದ್ರವ್ಯಂಗಳುಂ: **ಆದಿಪು**, ೧೫. ೩ ವ)

ನಿವರ್ತನೆ – [ನಾ] ವಾಪಸಾಗುವುದು (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ ಪರ್ವಿದ ಏರ್ವೆಸನದೊಳಾದ ಬಲ್ಮೆಯೊಳ್: **ಪಂಪಭಾ**, ೧೦. ೭೮)

ನಿವಸನ – [ನಾ] ಬಟ್ಟೆ (ಶಿಲಾಸ್ತಂಭ ವಿಭ್ರಮರಮಾ ನಿತಂಬಶಿಖರಿತ ತರಂಗಿತ ಚತುರಂಗಳಾಗ್ರಪಲ್ಲವ ನಿವಸನಂ: **ಆದಿಪು**, ೧೩. ೪೫ ವ)

ನಿವಹ – [ನಾ] ಗುಂಪು, ಹಿಂಡು (ಧಾತ್ರಿ ದೆಸೆಗಳುದುರಿದುವು ಭೂತಪ್ರತತಿಗಳಾಡಿದುವು ಒಳಱಿದವು ಅ'ತಿ ರಮ್ಯಸ್ಥಾನದೊಳ್ ಶಿವಾನಿವಹಂಗಳ್: **ಪಂಪಭಾ**, ೧. ೧೩೩)

ನಿವಿಷ್ಟ – [ನಾ] ಕುಳಿತುಕೊಂಡ[ವನು] (ಮೃಗರಾಜವಿಷ್ಟರದೊಳ್ ಬಾಳಕನಂ ಪೂರ್ವಾಭಿಮುಖನಿವಿಷ್ಟನಂ ಮಾಡುವುದುಂ: **ಆದಿಪು**, ೭. ೭೬ ವ)

ನಿವಿಷ್ಟನಂ ಮಾಡು – **[ಕ್ರಿ]** ಕುಳಿತುಕೊಳ್ಳುವಂತೆ ಮಾಡು, ಕುಳ್ಳಿರಿಸು (ಶ್ರೀಮಂಟಪಮಂ ವಿರಚಿಸಿ

ಮೃಗರಾಜವಿಷ್ಟರದೊಳ್ ನಿವಿಷ್ಟನಂ ಮಾಡುವುದುಂ: **ಆದಿಪು**, ೭. ೭೬ ವ)

ನಿವೇಶಿತ – **[ಗು]** ಇಡಲ್ಪಟ್ಟ (ಪರ್ಯಂತನಿವೇಶಿತ ವಿವಿಧಮಂಗಳದ್ರವ್ಯ ಪರಿಕರಪರಿಪೂರ್ಣದೊಳ್: **ಆದಿಪು**, ೯. ೭೬ ವ)

ನಿಶಾ – **[ನಾ]** ರಾತ್ರಿ (ಜಳಧರಸಮಯನಿಶಾಸಂಚಲಿತ ವಿದ್ಯುತ್ ಪಿಂಗಳಾಕ್ಷಪಾತಂಗಳಿಂ ದೆಸೆಗಳಂ ನುಂಗುವಂತೆ ಮುಳಿದು ನೋಡಿ: **ಪಂಪಭಾ**, ೧೩. ೭೫ ವ)

ನಿಶಾಂತ – **[ನಾ]** [ನಿಶಾ+ಅಂತ] ರಾತ್ರಿಯ ಕೊನೆ, ಬೆಳಗಿನ ಜಾವ (ಭಾವಿ ಜಿನಜನನಿ ಸತಿ ಪವಡಿಸಿ ನಿಶಾಂತದೊಳ್: **ಆದಿಪು**, ೭. ೨೭ ರಗಳೆ)

ನಿಶಾಕರ – **[ನಾ]** ರಾತ್ರಿಯನ್ನುಂಟುಮಾಡುವವನು, ಚಂದ್ರ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ**, ೪. ೪೯ ವ)

ನಿಶಾಚರಬಲ – **[ನಾ]** ರಾಕ್ಷಸಸೈನ್ಯ (ಇರುಳ್ ಬಲಂ ನಿಶಾಚರಬಲಕುಂಟು ಮಾಣದೆ ಘಟೋತ್ಕಚನಂ ಬೆಸವೇೞ್ವುದು: **ಪಂಪಭಾ**, ೧೨. ೬)

ನಿಶಾಚರಿ – **[ನಾ]** ರಾಕ್ಷಸಿ, ಪಿಶಾಚಿನಿ (ಖೇಚರಿಯೋ ಭೂಚರಿಯೋ ನಿಶಾಚರಿಯೋ ರೂಪು ಬಣ್ಣಿಸಲ್ಕೆ ಆರ್ಗಂ ಅವಾಗ್ಗೋಚರಂ ಈ ಕಾನನಮುಂ ಅಗೋಚರಂ ಇವಳ್ ಇಲ್ಲಿಗೇಕೆ ಬಂದಳೊ ಪೇೞಿಂ: **ಪಂಪಭಾ**, ೩. ೧೪)

ನಿಶಾಟ – **[ನಾ]** ರಾಕ್ಷಸ (ಕುದುರೆಯ ಬಿಲ್ಲ ಬಲ್ಲಣೆಯ ಕೇಣಿಯನಲ್ಲಿ ಕೆಲರ್ ನಿಶಾಟರ್ ಉಣ್ಮಿದ ಬಿಸುನೆತ್ತರೊಳ್ ಮಿದಿದು ನುಣ್ಣನೆ ನುಂಗಿದರ್: **ಪಂಪಭಾ**, ೧೨. ೮)

ನಿಶಾಟಕೋಟಿ – **[ನಾ]** ಅಸಂಖ್ಯಾತ ರಾಕ್ಷಸರು (ಬೇಳ್ವೆಗಳ್ಗೆ ಉಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತ ಶರಕೋಟಿಯಿಂದಂ ಉಚ್ಚಾಟಿಸಿ ಕೆಲವು ದಿವಸಮಿರ್ದು: **ಪಂಪಭಾ**, ೪. ೧೫ ವ)

ನಿಶಾತ – **[ಗು]** ಹರಿತಗೊಂಡ (ಅಂತು ಗುರುನಂದನಂ ಮರುನ್ನಂದನವಿರಚಿತ ನಿಶಾತ ವಿಶಿಖಪಂಜರಮನಱಿದು ಕಟಿಕುಟಿಂ ಮಾಡಿಯುಂ ಅನಿತಱೊಳ್ ಮಾಣದೆ: **ಪಂಪಭಾ**, ೧೨. ೬೮ ವ)

ನಿಶಾವಸಾನ – **[ನಾ]** ರಾತ್ರಿಯ ಕೊನೆ, ಬೆಳಗು ಜಾವ (ಧವಳದುಕೂಲ ಪ್ರಚ್ಛದಾಚ್ಛಾದಿತ ಮೃದುತಳ್ಪತಳದೊಳ್ ಪವಡಿಸಿರೆ ನಿಶಾವಸಾನಸಮಯದೊಳ್: **ಆದಿಪು**, ೩. ೨೧ ವ)

ನಿಶಿತ – **[ಗು]** ಹರಿತವಾದ (ನಿಶಿತವಿಶಿಖಂಗಳಿಂದೊಂದಂದಶನಿಯೆ ಗಿರಿಕುಲಮನಳಱುವಂತೆ ಮದೇಭಪ್ರಸರಸಹಸ್ರಂ ಕೆಡೆದುವು ವಿಸಸನದೊಳ್: **ಪಂಪಭಾ**, ೧೨. ೨೬)

ನಿಶ್ಚಲಪಕ್ಷ್ಮ – **[ನಾ]** ಮಿಟುಕಿಸದ ರೆಪ್ಪೆಯವನು (ಲಲಿತಮುಖಸರಸಿಜಂ ನಿಶ್ಚಳಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕಣ್ಗೊಳೆ ತವೆ ಪೀರ್ವವೊಲೇ ನಿಶ್ಚಳತನು ನಡೆ ನೋಡೆ ಭರತರಾಜಂ ಸೋಲ್ತಂ: **ಆದಿಪು**, ೧೪. ೧೦೫)

ನಿಶ್ಚಳ – **[ಗು]** ಶಾಶ್ವತವಾಗಿ (ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋತ್ಪನವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ: **ಆದಿಪು**, ೧೪. ೧೩೦)

ನಿಶ್ಚಿತ – **[ಗು]** ನಿರ್ಣಯಗೊಂಡ (ಗಾಂಗೇಯನಂ ಏಗೆಯ್ದುಂ ಒಡಂಬಡಿಸಲಾಱದೆ ಸತ್ಯವತಿ ತಾನುಂ ಆತನುಂ ಆಳೋಚಿಸಿ ನಿಶ್ಚಿತ ಮಂತ್ರರಾಗಿ ಕೃಷ್ಣದ್ವೈಪಾಯನನಂ ನೆನೆದು: **ಪಂಪಭಾ**, ೧. ೮೫)

ನಿಶ್ಚಿತತತ್ತ್ವಯೋಗಿ – **[ನಾ]** ನಿರ್ಣೀತ ತತ್ತ್ವವನ್ನು ತಿಳಿದ ಯೋಗಿ (ತ್ರಿದಶನರಾಸುರೋರಗಗಣಪ್ರಭು ನಿಶ್ಚಿತತತ್ತ್ವಯೋಗಿ ಯೋಗದ ಬಲಮುಣ್ಮಿ ಪೊಣ್ಮಿ ನಿಲೆ: **ಪಂಪಭಾ**, ೧. ೮೫)

ನಿಶ್ಚಿತಮಂತ್ರರ್ – **[ನಾ]** ಆಲೋಚಿಸಿ ಮಾಡಿದವನು ನಿಶ್ಚಯಸುವುಳ್ಳವರು (ಸತ್ಯವತಿ ತಾನುಂ ಆತನುಂ ಆಳೋಚಿಸಿ ನಿಶ್ಚಿತಮಂತ್ರರಾಗಿ ಕೃಷ್ಣದ್ವೈಪಾಯನನಂ ನೆನೆದು ಬರಿಸಿದೊಡೆ: **ಪಂಪಭಾ**, ೧. ೮೪ ವ)

ನಿಶ್ರೇಣೀಭೂತ – **[ಗು]** ಮೆಟ್ಟಿಲಾದ (ಮೋಕ್ಷಪ್ರಾಸಾದಾರೋಹಣ ನಿಶ್ರೇಣೀಭೂತ ಕ್ಷಪಕಶ್ರೇಣಿ ಪ್ರಾಯೋಗ್ಯ ಅಧಃಪ್ರವೃತ್ತಿಕರಣ ಪರಿಣತಂ ಅಪೂರ್ವಕರಣಕ್ಷಪಕಂ ಪ್ರಥಮಶುಕ್ಲಧ್ಯಾನ ಪರಿಣತನಾಗಿರ್ದ: **ಆದಿಪು**, ೧೦. ೧೪ ವ)

ನಿಶ್ಶಲ್ಯಂ – **[ಗು]** ಮುಳ್ಳುಗಳಿಲ್ಲದ ಹಾಗೆ (ಅದಱಿಂ ನಿಶ್ಶಲ್ಯಮಪ್ಪಂತು ನಿನ್ನ ಒದವಿಂ ಮಾೞ್ಪುದು ಅಗಾಧಸಾಗರಪರೀತ ಅಶೇಷಭೂಭಾಗಮಂ: **ಪಂಪಭಾ**, ೧೩. ೩೧)

ನಿಶ್ಶೇಷ – **[ನಾ]** ಪೂರ್ತಿ, ಎಲ್ಲ (ಜಯಸಮಾರಂಭನಿಶ್ಶೇಷ ದಿಕ್ಸಂಚರಣ ಅಕ್ಷುಣ್ಣಾವಗಾಹಾಗತ ಕರಟೀಶಿರಃಪೀಠಸಿಂದೂರ ಪಾಂಸೂತ್ಕರದಿಂ: **ಆದಿಪು**, ೧೧. ೧೫೫)

ನಿಶ್ಶೇಷಪೀತರುಧಿರ – **[ನಾ]** ರಕ್ತವಿಲ್ಲದಂತೆ ಕುಡಿಯಲ್ಪಟ್ಟ (ವೃಕೋದರನಿಂ ನಿಶ್ಶೇಷಪೀತರುಧಿರನಪ್ಪ ದುಶ್ಶಾಸನನಂ ಕಂಡು: **ಪಂಪಭಾ**, ೧೩. ೫೬ ವ)

ನಿಷದ್ಯ – **[ನಾ]** [ಜೈನ] ಐವತ್ತೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು; ತೀರ್ಥಂಕರ ಶಿಶುವಿಗೆ ವಿವಿಧ ಬಗೆಯ ಅರ್ಚನೆಗಳನ್ನು ಮಾಡುವುದು (ನಿಷದ್ಯ .. .. ಆಗ್ರನಿರ್ವೃತಿಯೆಂಬಯ್ವತ್ತೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು**, ೧೫. ೧೫ ವ)

ನಿಷಾದಿ – **[ನಾ]** ಮಾವತಿಗ (ವಿರೋಧಿಸಾಧನಘಟಾಳಿಯಂ ಓಡಿಸಲ್ ಆಗಳ್ ಆರ್ದು ಬಿಟ್ಟಿಕ್ಕಿದರ್ ಉಗ್ರಸಿಂಧುರಘಟಾಳಿಯಂ ಮುಳಿಸಿಂ ನಿಷಾದಿಗಳ್: **ಪಂಪಭಾ**, ೧೦. ೯೨)

ನಿಷೇಕ – **[ನಾ]** ಪ್ರಸ್ತ (ಗಾಂಧರ್ವರಿಂದ ಇಂದು ನಿಮ್ಮ ನಿಷೇಕಂ ನೆರೆದತ್ತು ಸತ್ತಿರ್ ಎನುತುಂ ಪೊಕ್ಕಾರ್ದು: **ಪಂಪಭಾ**, ೮. ೮೦)

ನಿಷೇವಿತ – **[ಗು]** ಪೂಜೆಗೊಳ್ಳುವಂಥದು (ಈ ರೂಪೆಂಬುದು ಭುವನಜನಾರಾಧ್ಯಂ ಚಕ್ರಜನನಿಷೇವಿತಂ ಇದಱೊಳ್ ಸಾರದಳಿಪೆಂದು ಪೆಳ್ಳನೆ ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್: **ಆದಿಪು**, ೯. ೯೩)

ನಿಷ್ಕಂಟಕ – **[ನಾ]** ಮುಳ್ಳಿಲ್ಲದ, ಪೀಡಾರಹಿತ (ಜರಾಸಂಧಂ ಮುನ್ನಂ ಮಡಿದೊಡೆ ಇಳೆ ನಿಷ್ಕಂಟಕಂ: **ಪಂಪಭಾ,** ೬. ೨೮)

ನಿಷ್ಕಂಪ – **[ನಾ]** ನಿಶ್ಚಲವಾಗಿ (ಲೋಚನಗಣಂ ಉಳ್ಳರೆಮುಗುಳ್ದಿಂಬಾಗಿರೆ ಕರದ್ವಯಪಲ್ಲವಂ ಅಂಕದೊಳ್ ಮರಲ್ದಿರೆ ತನು ನಿಷ್ಕಂಪಮಿರೆ: **ಆದಿಪು,** ೧೦. ೧೪); ನಡುಗದ[ವನು], ಧೈರ್ಯಶಾಲಿ (ಪಂಪಂ ಧಾತ್ರೀವಳಯನಿಳಿಂಪಂ ಚತುರಂಗಭಯ ಭಯಂಕರಣಂ ನಿಷ್ಕಂಪಂ ಲಲಿತಾಲಂಕರಣಂ: **ಪಂಪಭಾ,** ೧೪. ೪೯)

ನಿಷ್ಕಂಪಪಕ್ಷ್ಮ – **[ನಾ]** ಅಲುಗಾಡದ ರೆಪ್ಪೆ (ನಿಷ್ಕಂಪಪಕ್ಷ್ಮಮಾಂತು ತರಳಾಕ್ಷಿ ವಿಸ್ಮಯದೆ ಚಕ್ರಿಯಂ ನೋಡಿದಳ್: **ಆದಿಪು,** ೧೧. ೨೦)

ನಿಷ್ಟಪ್ತ – **[ಗು]** ಕಾಸಿದ (ವಜ್ರವೃಷಭನಾರಾಚ ಶರೀರಸಂಹನನ ಸೌಮ್ಯನುಂ ಸಮಚತುರಸ್ರಸಂಸ್ಥಾನನುಂ ನಿಷ್ಟಪ್ತಕನಕ ವರ್ಣನುಂ: **ಆದಿಪು,** ೧೫. ೩ ವ)

ನಿಷ್ಠಿತ – **[ಗು]** ಧರಿಸಲ್ಪಟ್ಟ (ತಟಿದ್ವಳಯವಿಳಸಿತಂಗಳಾಗಿ ನಿಜಪ್ರಕೋಷ್ಠ ನಿಷ್ಠಿತಂಗಳಪ್ಪ ವೀರಾಂಗದಂಗಳೆಂಬ ಕಟಕಂಗಳುಂ: **ಆದಿಪು,** ೧೫. ೩ ವ); **[ಗು]** ಜವಾಬ್ದಾರಿ ಹೊತ್ತ (ಅಂತು ಯುಧಿಷ್ಠಿರಂ ನಿಷ್ಠಿತಾಹವವ್ಯಾಪಾರನಾಗಿ ಮಧುಕೈಟಭಾರಾತಿಯಂ ಬೀಡಿಂಗೆ ಪೋಗಲ್ವೇಳ್ಟು: **ಪಂಪಭಾ,** ೧೨. ೩೨ ವ)

ನಿಷ್ಠಿತಕಾರ್ಯ – **[ನಾ]** ಮಾಡಬೇಕಾದ ಕೆಲಸ (ಎಂದು ಯುಧಿಷ್ಠಿರಂ ನಿಷ್ಠಿತಕಾರ್ಯಮನನುಷ್ಠಿಸೆ ನಿಜಪರಿವಾರಜನಮೆಲ್ಲಮಂ .. .. ಪೋಗಲ್ವೇಳ್ಟು: **ಪಂಪಭಾ,** ೮. ೫೦ ವ)

ನಿಷ್ಪಂದ – **[ನಾ]** ನಿಶ್ಚಲ (ಇಂದಿಂಗಱುದಿಂಗಳ್ ನೆಱೆದಂದಲ್ಲದೆ ಕಯ್ಯನೆತ್ತೆನೆಂದು ಅನಶನದಿಂ ನಿಂದಂ ಯೋಗದೊಳ್ ನಿಷ್ಪಂದಂ ಮಂದರನಗಂಬೊಲ್: **ಆದಿಪು,** ೯. ೮೩)

ನಿಷ್ಪನ್ನ – **[ಗು]** ಮಾಡಿದ (ಅಂತು ನಿಷ್ಪನ್ನಮಜ್ಜನಂ ವಿನಿಹಿತನೀರಾಜನನುಮಾಗಿ ಸುರರಾಜನ ಸಮರ್ಪಿತ ಸಂತಾನಕುಸುಮದಾಮಾಂಬರಭೂಷಣಪ್ರಸಾಧಿತಂ: **ಆದಿಪು,** ೮. ೭೧ ವ)

ನಿಷ್ಪಾದಿತ – **[ಗು]** ಉಂಟಾದ (ಅನುಸ್ಮರಣಮಾತ್ರ ನಿಷ್ಪಾದಿತ ಸಪ್ತತಳಾದಿ ಪ್ರಾಸಾದಪ್ರಕರಣನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ: **ಆದಿಪು,** ೧೧. ೩ ವ)

ನಿಷ್ಪಾವ – **[ನಾ]** ಅವರೆಕಾಳು (ರಾಜಮಾಷ ಆಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧ ಧಾನ್ಯಭೇಧಂಗಳುಂ: **ಆದಿಪು,** ೬. ೭೨ ವ)

ನಿಷ್ಪೀಡಿತ – **[ಗು]** ಒತ್ತಿದ, ಹಿಸುಕಿದ (ಏಂ ನಲಿದನೋ ಸಂಭೋಗಸಮ್ಮರ್ದ ನಿರ್ದಯನಿಷ್ಪೀಡಿತ ದೇವವಾರವನಿತಾ ಬಿಂಬಾಧರಂ ಶ್ರೀಧರಂ: **ಆದಿಪು,** ೫. ೭೧)

ನಿಷ್ಪ್ರಕಂಪ – **[ಗು]** ಚಲಿಸದ (ಜಗಕ್ಕಿದು ಬೇಱೊಂದತಿನಿಷ್ಪ್ರಕಂಪಸಲಿಲಂ ಗಂಭೀರಕೂಪಾರಂ: **ಆದಿಪು,** ೯. ೧೨೩)

ನಿಷ್ಫಲ – **[ಗು]** ಫಲವಿಲ್ಲದ, ವ್ಯರ್ಥ (ವಿಪುಳಾಯತಿಯಂ ದಿಗಂತದೊಳ್ ಪಸರಿಸಲುಂ ಕರಂ ನೆಱೆವ ಮಕ್ಕಳನೀಯದೆ ನೋಡೆ ನಾಡೆ ನೋಯಿಸಿದಪುದು ಇಕ್ಷುಪುಷ್ಪದವೊಲ್ ಎನ್ನಯ ನಿಷ್ಫಲ ಪುಷ್ಪದರ್ಶನಂ: **ಪಂಪಭಾ,** ೧. ೧೧೭)

ನಿಸದ – **[ನಾ]** ನಿಶ್ಚಯವಾಗಿ (ಮೃಗದ ಮೆಯ್ಯೊಳ್ ನಿಸದಂ ಎಸೆವುದಂ ಬಿಲ್ಲಾಳ ಬಿಲ್ಬಲ್ಮೆ ತನ್ನೊಳಮಿಸುತೆ ಲೇಸಪ್ಪುದು ಬಸನಂ ಏಳಿಸುವರ್ ಬೇಂಟೆಯಂ: **ಪಂಪಭಾ,** ೫. ೪೭)

ನಿಸೇಕ – **[ನಾ]** [ನಿಷೇಕ] ಆಲಂಕಾರಿಕ ಅರ್ಥದಲ್ಲಿ ಶಾಸ್ತಿ (ಸೀತೆ ಕಡಂಗಿ ಕಾಯ್ದು ಕಡೆಗಣ್ಚಿದಳಪ್ಪೊಡೆ ಧಾತ್ರನಿಂ ತೊದಳ್ವಾತಿನೊಳೇನೊ ಪಾಂಡವರ ಕೈಯೊಳೆ ನಿನ್ನ ನಿಸೇಕಮಾಗದೇ: **ಪಂಪಭಾ,** ೯. ೪೯)

ನಿಸ್ತ್ರಪ – **[ಗು]** ಸಂಕೋಚವಿಲ್ಲದೆ (ಕುಡುವೊಡೆ ನಿಸ್ತ್ರಪಂ ಕುಡುವುದು ಏಟೆಸಿದಂ ಬೆಸೆಕೋಲನೆಂದು ಪೇಟಿ್ ಕುಡುವುದೆ ಕನ್ನೆಯಂ: **ಪಂಪಭಾ,** ೩. ೬೬)

ನಿಸ್ತ್ರಿಂಶ – **[ನಾ]** ಕತ್ತಿ, ಖಡ್ಗ (ತ್ರಿಜಗತ್ ಸಾಶ್ಚರ್ಯ ದಂಡಸ್ಥಪತಿ ಗೃಹಪತಿ ಛತ್ರಿ ಯೋಷಿತ್ ಪುರೋಧ ಗಜ ನಿಸ್ತ್ರಿಂಶ ಅಶ್ವ ಕಾಕಿಣಿ ಅಜಿನ ಮಣಿ ಚಮೂನಾಥಚಕ್ರಾಧಿನಾಥಂಗೆ: **ಆದಿಪು,** ೧೨. ೮)

ನಿಸ್ತ್ರಿಂಶಕರ್ಮ – **[ನಾ]** ಕ್ರೂರಕರ್ಮ (ಮೃಗಂಗಳಿರ್ದೆಡೆಯನಜೆದು ನಿಷ್ಕರುಣನವಱರುಣಜಳದೊಳೆನಗೆ ಲೀಲಾಸರೋವರಮಂ ಮಾಡೆಂದು ಪೇಟಿಸ್ಗೊಡವನಾ ನಿಸ್ತ್ರಿಂಶಕರ್ಮಕ್ಕೆ ಕೊಕ್ಕರಿಸಿ: **ಆದಿಪು** ೨. ೧೪ ವ);

ನಿಸ್ಪೃಹತೆ – **[ನಾ]** ಆಸೆಯಿಲ್ಲದಿರುವಿಕೆ, ವೈರಾಗ್ಯ (ಸಂಸ್ಕೃತಿಭೋಗಮೆಯ್ದೆ ನಿಸ್ಪೃಹತೆಯನಾ ಮಹೀಪತಿಗೆ ತಂದುದು: **ಆದಿಪು,** ೬. ೨೫)

ನಿಸ್ವೇದ – **[ನಾ]** [ಜೈನ] ಬೆವರು ಉಂಟಾಗದವನು (ಅಂತು ನಿಸ್ವೇದ ನಿರ್ಮಲ ಕ್ಷೀರಗೌರಕ್ತಜ ಸಮಚತುರಸ್ರಸಂಸ್ಥಾನ ವಜ್ರವೃಷಭನಾರಾಚಸಂಹನನುಂ: **ಆದಿಪು,** ೮. ೪ ವ) [ನರಸಿಂಹಶಾಸ್ತ್ರಿ ಮತ್ತು ಬಸವರಾಜು ಅವರ ಆವೃತ್ತಿಗಳಲ್ಲಿ]

ನಿಸ್ಸಂಗ – **[ನಾ]** ಒಡನಾಟವಿಲ್ಲದವನು, ನಿರ್ಲಿಪ್ತ (ಇತ್ತಲ್ ಆದಿತೀರ್ಥಕರ್ತಾರಂ ಅಮರಗಿರಿಯಂತೆ ಅಚಳನುಂ ಪಾರಾವಾರದಂತೆ ಅಕಲುಷಿತನುಂ ಅನಿಲನಂತೆ ನಿಸ್ಸಂಗನುಂ ಅಂಬರದಂತೆ ನಿರ್ಲೇಪನುಂ ಆಗಿ ನಿಲೆ: **ಆದಿಪು,** ೯. ೯೩ ವ)

ನಿಸ್ಸಂಗತ್ವಾತ್ಮಭಾವನೆ – **[ನಾ]** [ಜೈನ] ಒಂದು ಗರ್ಭಾನ್ವಯಕ್ರಿಯೆ; ಎಲ್ಲ ಸಂಗದಿಂದ ತಾನು ಬಿಡುಗಡೆಗೊಂಡಿದ್ದೇನೆಂಬ ಭಾವನೆ ತಳೆಯುವುದು (ನಿಸ್ಸಂಗತ್ವಾತ್ಮಭಾವನಾ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ: **ಆದಿಪು,** ೧೫. ೧೫ ವ)

ನಿಸ್ಸಹ – **[ಗು]** ಸಹಿಸಲಸಮರ್ಥವಾದ (ಸಮರಭರನಿರ್ಭರ ಭೀಮಸೇನ ಘನಗದಾಪ್ರಹರಣ ನಿಸ್ಸಹಮದವದನೇಕ ಮತ್ತಮಾತಂಗ ಪದನಖಖರ್ವಿತ ಉರ್ವೀತಳಮುಂ; **ಪಂಪಭಾ,** ೧೩. ೫೧ ವ)

ನಿಹತ – **[ಗು]** ಹೊಡೆಯಲ್ಪಟ್ಟ (ಅನವರತ ನಿಹತ ನರ ಕರಿ ತುರಗ ನಿಕುರುಂಬ ಕೀಲಾಲ ಕಲ್ಲೋಲ ಪ್ರವರ್ತನ ಅನೇಕ ನದ ನದೀ ಪ್ರವಾಹಬಾಹುಳ್ಯದುಸ್ತರಾವತರಣ ಮಾರ್ಗಮುಂ: **ಪಂಪಭಾ,** ೧೩. ೫೧ ವ)

ನಿಹಿತ – [ಗು] ಇರಿಸಲ್ಪಟ್ಟ, ರಚಿತವಾದ (ಹಿರಣ್ಯದಾನಂ ಮಾಡಿ ವೇದಿನಿಹಿತಂಗಳಪ್ಪ ಆಹವನೀಯ ದಕ್ಷಿಣ ಗಾರ್ಹಪತ್ಯಂಗಳೆಂಬ ಮೂಱುಂ ಕೊಂಡಂಗಳೊಳ್: **ಪಂಪಭಾ**, ೬. ೩೩ ವ)

ನಿಳಿಂಪ – [ನಾ] ದೇವತೆ (ಜಳಕೇಳೀವಿಳಸನವಿದಗ್ಧ ಖೇಚರ ನಿಳಿಂಪದಂಪತಿಯಿನಂಬುಖಾತಿಕೆ ರಯ್ಯಂ: **ಆದಿಪು**, ೧೦. ೨೬)

ನಿಳ್ಕು – [ಕ್ರಿ] ಮೆಟ್ಟಂಗಾಲಲ್ಲಿ ನಿಲ್ಲು (ಬಳಸಿ ತನ್ನೊಡನೆ ಒಯ್ಯನೊಯ್ಯನೆ ಬರ್ಪ ದೇವರದೊಂದು ಗಾವುಳಿಯಂ ಇನ್ನಿರಿಂ ಎಂದು ತನ್ನನೆ ನಿಳ್ಕಿ ನೋಟ್ಪರ ಕಣ್ಗೆ: **ಪಂಪಭಾ**, ೬. ೭)

ನಿಱಿ – [ಕ್ರಿ] ಅಂಜಲಿಬದ್ಧವಾಗು (ಎಱಗುವ ಮಕುಟಂಗಳ್ ಚೋದ್ಯಮೆಂದತ್ತಮಿತ್ತಂ ನಿಱಿವ ಕರಯುಗಂಗಳ್: **ಆದಿಪು**, ೭. ೫೨); [ನಾ] (ರೆಯ) ನೆರಿಗೆ (ತಾಳದ ಲಯಮಂ ನಿಱಿ ನೀಳಾಳಕಮಾರದ ಪೊದಳ್ದ ಮತ್ತೆಂಬಿವು: **ಆದಿಪು**, ೯. ೨೪)

ನಿಱಿಗ – [ನಾ] ಸಿಹಿಮಾವು, ಇಮ್ಮಾವು (ವನವನಿತೆಯ ಕಯ್ನಿಱಿಯೆನೆ ನಿಱಿಗೊಂಡಿರೆ ನಿಱಿ ನಿಱಿಗನ ನಿಱಿದಳಿರ ನಿಱಿಯನಱಿಇಯೆಂ ಪೊಗಟಲ್: **ಆದಿಪು**, ೬. ೯೮)

ನಿಱಿಗೊಳ್ – – [ಕ್ರಿ] ಜೋಡಿಸು (ಕಿಱುನಿಱಿಯೊಳ್ ಕಿಱಿದೆಲೆಗಳ ತುಱುಗಿದ ಚೆಲ್ವೆಳಸಿ ಬಳಸಿ ವನವನಿತೆಯ ಕಯ್ನಿಱಿಯೆನೆ ನಿಱಿಗೊಂಡಿರೆ ನಿಱಿನಿಱಿಗನ ನಿಱಿದಳಿರ ನಿಱಿಯನಱಿಯೆಂ ಪೊಗಟಲ್: **ಆದಿಪು**, ೬. ೯೮);

ನಿಱಿದಳಿರ್ – [ನಾ] [ನಿಱಿ+ತಳಿರ್] ಸುರುಳಿಯಾದ ಚಿಗುರು (ಅಂತು ನನೆಯ ಕೊನೆಯ ತಳಿರ ನಿಱಿದಳಿರ ಮುಗುಳ ಬಿರಿಮುಗುಳ ಮಿಡಿಯ ಕಿಱುಮಿಡಿಯ ಬಲ್ಮಿಡಿಗಳೊಳ್ ಎಱಗಿ ತುಱುಗಿದ ಬನಮಂ ಪೊಕ್ಕು: **ಪಂಪಭಾ**, ೫. ೫ ವ)

ನಿಱಿನಿಱಿಗ – [ನಾ] ಸಿಹಿಮಾವು (ವನವನಿತೆಯ ಕಯ್ನಿಱಿಯೆನೆ ನಿಱಿಗೊಂಡಿರೆ ನಿಱಿನಿಱಿಗನ ನಿಱಿದಳಿರ ನಿಱಿಯನಱಿಯೆಂ ಪೊಗಟಲ್: **ಆದಿಪು**, ೬. ೯೮)

ನಿಱಿನಿಱಿಗೊಳ್ – [ಕ್ರಿ] ಗುಂಗುರುಗುಂಗುರಾಗು (ನಿಱಿನಿಱಿಗೊಂಡ ಗುಣಾರ್ಣವನ ತಲೆನವಿರ್ಗಳ್ ಲಾವಣ್ಯರಸಮನಿಡಿದಿಡಿದು: **ಪಂಪಭಾ**, ೨. ೩೯ ವ)

ನಿಱಿವಿಡಿದುಡು – [ಕ್ರಿ] [ನಿಱಿ+ಪಿಡಿದು+ಉಡು] ನೆರಿಗೆ ಹಿಡಿದು ಉಡು (ಜಲದೇವತೆಗಳ್ ನಿಱಿವಿಡಿಯಲ್ ನಿಮಿರ್ಚಿದ ಕುಱುವಡಿಯ ತರಂಗದಂತೆ ಬಂಬಲ್ದೆರೆಗಳ್: **ಪಂಪಭಾ**, ೫. ೫೭)

ನಿಱಿಸು – [ಕ್ರಿ] ಸ್ಥಾಪಿಸು, ನಿಲ್ಲಿಸು (ನೃಪನಿದಿರಂ ಬಂದಾವಗಮಟ್ಟೆಯೊಳಱಿದು ನಿಱಿಸೆ ದಾನೋನ್ನತಿಯೊಳ್ ಗಗನತಳದಿಂದೊರ್ಮೆಯೆ ನೆಗೆದತ್ತು ಆಶ್ಚರ್ಯಮಾಗೆ ಪಂಚಾಶ್ಚರ್ಯಂ: **ಆದಿಪು**, ೫. ೧೧); [ಕ್ರಿ] ತಡೆಗಟ್ಟು (ಪೆಱಗಿಡುವ ದಂತಿಯಂ ಕಲಿ ನಿಱಿಸಿ ಚಲ ನೆಲಸೆ ತೋಱಿಕುಡುವುದುಂ: **ಪಂಪಭಾ**, ೧೦. ೧೧೦)

ನಿಱುಗೆ – [ನಾ] ನಿಂತೆಡೆ, ನಿಂತ ಜಾಗ (ನೆಲನಂ ನಿಱುಗೆಯಂ ನಡೆವೊಂದು ಪದಮುಮಂ ಸೋವಳಿ ಮೇವಳಿ ಬಿಸುವಳಿಯಂ; **ಪಂಪಭಾ**, ೫. ೪೬)

ನೀಂಬರೆಗಂ – ನೀನು ಬರುವವರೆಗೂ, ನಿನ್ನ ಪ್ರವೇಶ ಆವಶ್ಯಕವಾಗುವಷ್ಟು (ನೀಂಬರೆಗಂ ಏನ್ ಕೌರವರ್ ಗಂಡರೇ: **ಪಂಪಭಾ**, ೮. ೩೫)

ನೀಕಾರ – [ನಾ] ಧಿಕ್ಕರಿಸುವವನು (ಆಜ್ಞಾನತಮೋನೀಕಾರಂ ಭೀಮನಾಮಧೇಯಂ ತನಯಂ: **ಪಂಪಭಾ**, ೧೪. ೪೭)

ನೀಗು – [ಕ್ರಿ] ಹೋಗಲಾಡಿಸು (ಬರಲಾತನಾಱದೊಡೆ ಸಾಯಲುಮಾಱ್ನೆ ಸತ್ತು ನೀಗೆನೇ: **ಆದಿಪು**, ೧೨. ೪೨); [ಕ್ರಿ] ಕಳೆದುಕೊ (ದಾನವಮಾನವ ಸುರೇಂದ್ರ ಮಣಿಮಕುಟತಟಾಪ್ಯಾನಪದಂಗೆ ಆ ನೆಗಱ್ದುದಂ ಆನೇತಱ್ೊಳ್ ಎಂತುಂ ನೀಗುವೆಂ: **ಪಂಪಭಾ**, ೮. ೨೫)

ನೀಗೆಮೇ – ಕಳೆಯಲಾರೆವೇ, ಕಳೆಯಬಹುದು (ರೂಪಪರಾವರ್ತನದಿಂ ವಿರಾಟಪುರಮಂ ಪೊಕ್ಕಿರ್ದು ಅದಂ ನೀಗೆಮೇ: **ಪಂಪಭಾ**, ೮. ೫೦)

ನೀಡ – [ನಾ] ಹಕ್ಕಿಯ ಗೂಡು, ಆಶ್ರಯ (ವಿವಿಧವಿದಗ್ಧ ವಿದ್ಯಾಧರಜನ ಕ್ರೀಡಾನೀಡಂಗಳಾಗಿ: **ಆದಿಪು**, ೧. ೬೨ ವ); ಮನೆ, ಹಾಸಿಗೆ (ಸುರತ ಸುಖದ ಬಳ್ಳವಳ್ಳಿಯೆನಿಪ ಬಳ್ಳಿಮಾಡದಿಂ ಮಹಾವಿನೋದ ನೀಡದಿಂ; **ಪಂಪಭಾ**, ೧. ೫೮)

ನೀಡಿರದೆ – [ಗು] ತಡವಿಲ್ಲದೆ, ಅಂದರೆ ಎಲ್ಲರಿಗಿಂತ ಮುಂಚಿತವಾಗಿ (ನೀಡಿರದೆ ಇಂದ್ರನೋಲಗಕೆ ಪೋಪುದುಂ ಆಗಳುಮಂತೆ ಪೋಗಿಯುಂ ಷೋಡಶರಾಜರಿಂ ಕಡೆಯೊಳಿರ್ಪುದು: **ಪಂಪಭಾ**, ೬. ೧೬)

ನೀಡಿಲ್ಲದೆ – [ಗು] ವಿಳಂಬಿಸದೆ (ಸುರಕರಿಕರಾನುಕಾರಿಯಪ್ಪ ನಿಜಾಭುಜಾದಂಡಮಂ ನೀಡಿ ನೀಡಿಲ್ಲದೆ ಏಱಿಸಿ ನೀವಿ ಜೇವೊಡೆದಾಗಳ್: **ಆದಿಪು**, ೧೨. ೮೭ ವ)

ನೀಡು – [ನಾ] ವಿಳಂಬ (ನೀಡಿರದೆ ನಿಜ ತನೂಜೆಯನೀ ವಧುಗಾದ ಪುತ್ರರೊಳ್ ಕೂಡುಗೆ ರಾಜ್ಯಲಕ್ಷ್ಮಿ: **ಪಂಪಭಾ**, ೧. ೭೩); ಕೊಡು (ನೀಡಲ್ಕೆ ಅರ್ಘ್ಯಮನೀವಂತೆವೊಲಾದುದು ಅದ್ರಿ ಹರಿಗಂಗೆ ಇಷ್ಟಾರ್ಥಸಂಸಿದ್ಧಿಯಂ: **ಪಂಪಭಾ**, ೭. ೭೭)

ನೀಡುಂ – [ಅ] ವಿಶೇಷವಾಗಿ (ಲಾಕ್ಷಾದ್ರವಾದಿಕಾರಿತ ಮಾಯಾರುಣಜಲ ಪರಿಪೂರ್ಣವಾಪಿಯಂ ಸಮೆಯಿಸಿದೊಡೆ: ಆದಿಪು, ೨. ೧೪ ವ); (ವಿಚಿತ್ರಚಿತ್ರವಿದ್ಯಾ ಕೌಶಲಮನ್ ಅತಿಕುತೂಹಳೋತ್ತಾರಿತ ಲೋಚನನಾಗಿ ನೀಡುಂ ಭಾವಿಸಿ ನೋಡಿ: **ಆದಿಪು**, ೪. ೪ ವ)

ನೀತಿ – [ನಾ] ರಾಜನೀತಿ, ರಾಜ ನಿರ್ವಹಿಸಬೇಕಾದ ಭೃತ್ಯಪೋಷಣ, ಪ್ರಜಾಪಾಳನ, ಧರ್ಮರಕ್ಷಣ ಮತ್ತು ಆತ್ಮಪ್ರಯತ್ನ ಎಂಬ ಕರ್ತವ್ಯಗಳು (ಪುದಿದೊದವಿದ ಮೆಯ್ಯಾಪ್ಪಿಲ್ಲದೆ ಅರಣ್ಯದೊಳಿರ್ಪುದಾವ ನೀತಿಗಳೊಳಗೋ: **ಆದಿಪು**, ೯. ೯೧)

ನೀಮಾರ್ಗೆ – [ನೀಂ+ಆರ್ಗೆ} ನೀವು ಯಾರವರು? ನೀವು ಯಾರು? (ಕುಡುವಂ ಗುರು ಪಡೆವರ್ ಪೆಱರ್ ಎಡೆಯೊಳ್ ನೀಮಾರ್ಗೆ: **ಆದಿಪು**, ೯. ೧೦೭)

ನೀರ್ – [ನಾ] ಕಾಂತಿ (ಆ ಪುಣ್ಯನದಿಯನೆಯ್ದೆವಂದು ತನ್ನ ಬಾಳ ನೀರಂತೆ ಕಱಂಗಿ ಕರ್ಗಿದ ನೀರಂ ನೋಡಿ: **ಪಂಪಭಾ**, ೫. ೫೩ ವ)

ನೀರಂಜಿಸು – [ಕ್ರಿ] ಹೊಳಪು ಕೊಡು (ನೀರಂಜಿಸಿ ದಳಿವಿಡಿದ ಮಹಾರತ್ನದ ದೊರೆಗೆ ವಂದುದಾ ಸ್ತ್ರೀರತ್ನಂ: **ಆದಿಪು,** ೪. ೪೨)

ನೀರಂಧ್ರ – [ಗು] ಒತ್ತಾಗಿರುವ, ಗಾಢವಾದ (ಆಂಧ್ರೀ ನೀರಂಧ್ರ ಬಂಧುರಸ್ತನಕಾರಂ ಉದಾರ ಸರಸ್ವತೀ ಮಣಿಹಾರಂ: **ಆದಿಪು,** ೧. ೩೨)

ನೀರಂ ಸೂಸು – [ಕ್ರಿ] ನೀರನ್ನು ಚೆಲ್ಲು, ಅರ್ಘ್ಯವನ್ನು ಅರ್ಪಿಸು (ಆದಿತ್ಯಂಗೆ ಅರ್ಘ್ಯಮೆತ್ತಿ ಸೂರ್ಯಜಂ ಸೂರ್ಯಮಂತ್ರಂಗಳನೋದಿ ನೀರಂ ಸೂಸಿ ತ್ರಿಃಪ್ರದಕ್ಷಿಣಂಗೆಯ್ವಾಗಳ್: **ಪಂಪಭಾ,** ೯. ೭೨ ವ)

ನೀರಜ – [ನಾ] [ನೀರ+ಜ] ನೀರಲ್ಲಿ ಹುಟ್ಟಿದುದು, ತಾವರೆ (ನಾನಾ ನೀರಜ ರಜಃಪಿಂಜರಿತಜಳಜಳಾಶಯಂಗಳೊಳಂ ನೆಱೆದು ಸೊಗಯಿಸುವ ಉದ್ಯಾನವನದ: **ಆದಿಪು,** ೬. ೧೦೧ ವ); **[ಗು]** [ನೀ+ರಜ] ರಜೋಗುಣರಹಿತ, ಕಶ್ಮಲವಿಲ್ಲದಂತೆ (ತಳರ್ದಂ ಈರ್ಯಾಗೋಚರಂ ಶುದ್ಧಿ ತಳ್ತಿರೆ ತನ್ನೊಳ್ ಧರೆಯಂ ಪದಾಂಬುಜರಜಂಗಳ್ ನೀರಜಂ ಮಾಟ್ಪಿನಂ: **ಆದಿಪು,** ೯. ೧೨೪)

ನೀರಡಕು – [ಕ್ರಿ] ನೀರು ತುಂಬು (ನೀನೆಂದಂತು ತೊಱೆಗೆ ನೀರಡಕಲುಮಾದಿತ್ಯಂಗೆ ಸೊಡರಿಡಲುಂ ಇಂದ್ರಂಗೆ ದೇವಲೋಕಮಂ ಬಣ್ಣಿಸುವಂತೆಯುಂ ನೆಗೇನೆಂದು ಕಜ್ಜಂಬೇಟ್ಟುದು: **ಪಂಪಭಾ,** ೯. ೧೮ ವ)

ನೀರಡಿಸು – [ಕ್ರಿ] ಬಾಯಾರು, ದಾಹಗೊಳ್ಳು (ಸರೋವರಮಂ ಕಂಡು ತಾನುಂ ನೀರಡಿಸಿದನಪ್ಪುದಱಿಂದೆ ಅದಱ ಕೆಲದ ಲತೆಯ ಮೆಳೆಯೊಳ್ ಬಿಲ್ಲುಮಂಬುಮಂ ಸಾರ್ಚಿ: **ಪಂಪಭಾ,** ೮. ೩೮ ವ)

ನೀರದ – [ನಾ] ಮೋಡ (ಗಗನಾಂಬುರಾಶಿ ನವಫೇನಸಮಾನಮಂ ಉದ್ಧೃಕೂಟಸೌಂದರಮನೊಂದು ನೀರದಮನಟ್ಟಿಯೆ ನೋಡಿ: **ಆದಿಪು,** ೪. ೬೩)

ನೀರದಪಥ – [ನಾ] ನೀರದ[ಮೋಡ]ಗಳ ಹಾದಿ, ಆಕಾಶ (ನೀರದಪಥದೊಳ್ ತಗುಳ್ದು ಅರಿಗನಂ ಪೊಗಟ್ಟಾಡಿದಂ ಅಂದು ದಂಡಕಾಷ್ಠದ ತುದಿಯೊಳ್ ಪಳಂಚಲೆಯೆ ಕೋವಣವಂ ಗುಡಿಗಟ್ಟಿ ನಾರದಂ: **ಪಂಪಭಾ,** ೧೨. ೨೧೯)

ನೀರದಪ್ರಸರ – [ನಾ] ಮೋಡಗಳ ಸಮೂಹ (ಅಳಿನೀಳ ನೀಳಗಳಕಂಠ ತಮಾಳ ವಿನೀಳನೀರದಪ್ರಸರ ವಿಭಾಸಿಯಾದುದು ಸಮೀರಂ: **ಪಂಪಭಾ,** ೭. ೨೨)

ನೀರದಮಾರ್ಗ – [ನಾ] ನೀರದಪಥ (ಮುನೀಂದ್ರರೊಳ್ ಕಮಳಸಂಭವನಂದನನೆಂದು ನೋಟಕರ್ ತಳವೆಳಗಾಗೆ ಸಾರೆವರೆ ನೀರದಮಾರ್ಗದಿನಂದು ನಾರದಂ: **ಪಂಪಭಾ,** ೬. ೬)

ನೀರದರವ – [ನಾ] ಮೋಡದ ದನಿ, ಗುಡುಗು (ಸಮದಾರಾತಿ ಮರಾಳನೀರದರವಂ ಸಂಕ್ರುದ್ಧವೈವಸ್ವತೋಪಮ ವಿದ್ವಿಷ್ಟಫಣೀಂದ್ರ ಚಂದ್ರಕಿರವಂ: **ಆದಿಪು,** ೧೧. ೧೦)

ನೀರದಾವಳೀ – [ನಾ] ಮೋಡಗಳ ಸಾಲು (ಮುಸುಕಿದ ನೀರದಾವಳಿಗಳಂ ಕಿರಣಂಗಳೊತ್ತಿ ತೇಜಮರ್ವಿಸುವಿನಂ ಒರ್ಮೊದಲೆ ಮೂಡುವ ಬಾಳದಿನೇಶಬಿಂಬದೊಂದೆಸಕದಿಂ: **ಪಂಪಭಾ,** ೬೧)

ನೀರರುಹ – [ನಾ] ನೀರಲ್ಲಿ ಹುಟ್ಟಿದುದು, ತಾವರೆ (ಆ ರತಿ .. .. ಚಂದ್ರಕಾಂತಘಟದೊಳ್ ತಂದು ಅಟ್ಟಿಯಿಂ ಪುಷ್ಪವಾಸನೆಗೆಂದಿಕ್ಕಿದ ನೀಳ ನೀರರುಹಮಂ ಪೋಲ್ದತ್ತು ಕಟ್ಟಿಂದುವಾ: **ಪಂಪಭಾ,** ೪. ೫೧)

ನೀರಟಿಕೆ – [ನಾ] ನೀರಡಿಕೆ, ಬಾಯಾರಿಕೆ (ಆ ದಿವ್ಯವಚನಮಂ ಉಲ್ಲಂಘಿಸಿ ನೀರಟಿಕೆ ಪೋಪಿನಂ ನೀರಂ ಕುಡಿದು: **ಪಂಪಭಾ,** ೮. ೩೯ ವ)

ನೀರಾಕರ – [ನಾ] ಸಮುದ್ರ (ಕಣ್ಗೊಪ್ಪಿ ತೋರ್ಪುದಿದು ಉತ್ತ್ರೇಂಖತ್ ಅಸಂಖ್ಯ ಶಂಖಧವಳಂ ಗಂಭೀರನೀರಾಕರಂ: **ಪಂಪಭಾ,** ೪. ೨೪)

ನೀರಾಜನ – [ನಾ] ಆರತಿ (ಅಂತು ನಿಷ್ಪನ್ನಮಜ್ಜನಂ ವಿನಿಹಿತನೀರಾಜನನುಮಾಗಿ ಸುರರಾಜನ ಸಮರ್ಪಿತ ಸಂತಾನಕುಸುಮದಾಮಾಂಬರಭೂಷಣಪ್ರಸಾಧಿತಂ: **ಆದಿಪು,** ೮. ೭೧ ವ)

ನೀರಾಜನಂಗೆಯ್ – [ಕ್ರಿ] ಆರತಿಯೆತ್ತು (ಕರ್ಮಭೂತಳೋಪಸರ್ಗ ವಿಧ್ವಂಸನನಿಮಿತ್ತವಾಗಿ ನೀರಾಜನಂಗೆಯ್ವಂತೆ: **ಆದಿಪು,** ೭. ೩೬ ವ)

ನೀರಾಜಿತತುರಗ – [ನಾ] ಆರತಿಯೆತ್ತಲ್ಪಟ್ಟ ಕುದುರೆ, ಕುದುರೆಗಳಿಗೆ ಆರತಿ ಎತ್ತಿದ[ವನು] (ಧೃತಧವಳವಸನರ್ ಆರಾಧಿತಶಿವರ್ ಅರ್ಚಿತಸಮಸ್ತಶಸ್ತ್ರರ್ ನೀರಾಜಿತತುರಗರ್ ಒಪ್ಪಿದರ್ ಕೆಲರ್ ಅತಿರಥ ಸಮರಥ ಮಹಾರಥ ಅರ್ಧರಥರ್ಕಳ್: **ಪಂಪಭಾ,** ೧೦. ೩೭)

ನೀರಾಟ – [ನಾ] ನೀರಿನಲ್ಲಿ ಆಡುವುದು, ಈಜುವುದು (ಅಂತು ಚಕ್ರಧರನ ಜಲಕ್ರೀಡಾಪ್ರಾರಂಭಮಂ ಕಂಡು ನೀರಾಟಕ್ಕೆ ತಕ್ಕ ಪಸದನಂಗೊಂಡು ತಂಡತಂದಿಂ ಪುಗುವಾಗಳ್: **ಆದಿಪು,** ೧೧. ೧೪೦ ವ)

ನೀರಿಟೆ – [ಕ್ರಿ] ಸೂತಕಸ್ನಾನಕ್ಕಾಗಿ ನೀರಿಗೆ ಇಳಿ (ಸುತಶೋಕದ ಪೊಂಪುಟೆಯೊಳ್ ಮೆಯ್ಯಱಿಯದೆ ನೀರಿಟೆವಂತೆವೊಲ್ ಇೞಿದಂ ಅಪರಜಳಧಿಗೆ ದಿನಪಂ: **ಪಂಪಭಾ,** ೧೨. ೨೨೦)

ನೀರೇಜ – [ನಾ] ತಾವರೆ (ಜಗಮಂ ಮಾಡಿದ ಪದ್ಮಜಂ ಪಡೆದನಿಲ್ಲ ಈ ಕನ್ನೆಯಂ ಮಾಡುವಲ್ಲಿಗೆ ಚಂದ್ರಂ ಮಳಯಾನಿಳಂ ಮಳಯಜಂ ನೀರೇಜಂ ಇಮ್ಮಾವು ಮಲ್ಲಿಗೆ ಎಂದಿಂತಿವಂ ಅಟ್ಟಿಱಿಂದ ಅಮರ್ದಿನೊಳ್ ತಾನಟ್ಟಿಯಿಂ ತೊಯ್ದು ಮೆಲ್ಲಗೆ ಸಂದಂಗಜನೆಂಬಜಂ ಪಡೆದಂ: **ಪಂಪಭಾ,** ೪. ೭೫)

ನೀರೇಭ – [ನಾ] [ನೀರ+ಇಭ] ನೀರಾನೆ (ಅದು ನೀರೇಭಕರಾಭಿಘಾತ ವಿಷಳತ್ ವಾರಾಶಿಯೊಳ್ ಪೋಗಿ ಕೂಡಿದೊಡೆ: **ಆದಿಪು,** ೧. ೫೫)

ನೀರೇಜಿಸು – [ಕ್ರಿ] ರಸವನ್ನುಕ್ಕಿಸು, ಹರ್ಷವನ್ನುಂಟುಮಾಡು (ಏಱೆಯೆ ನಂದಿಯಂ ಆ ಪೆಱಗೇಱಿದ ಗಿರಿಸುತೆಯ ಮೊಲೆಗಳ ಅಳ್ಳೇಱಿಂ ನೀರೇಜಿಸುತಿರೆ ಕರ್ಣಾರ್ಜುನರ ಏಱಂ ನೋಡಲ್ಕೆ ಬಂದಂ ಭೂನಾಥಂ: **ಪಂಪಭಾ,** ೧೨. ೧೩೯)

ನೀರೊಳಿಕ್ಕು – [ಕ್ರಿ] ಸ್ನಾನಮಾಡಿಸು (ಬೞಲ್ದ ಕುದುರೆಗಳಂ ನೀರೊಳಿಕ್ಕಲೆಂದು ದೇವಖಾತಮೆಂಬ ಮಡುವಿಂಗೆ ಬರ್ಪುದುಂ: **ಪಂಪಭಾ,** ೧೧. ೧೩೬ ವ)

ನೀರೋಗ – [ನಾ] ರೋಗವಿಲ್ಲದ[ವನು] (ಖಟ್ವಾಂಗನೆಂಬ ಅರಸನ ಯಜ್ಞದೊಳ್ ಆತನ ತಂದ ಘೃತಸಮುದ್ರಮಂ

ಕುಡಿದೊಡೆ ಆದ ರೋಗಂ ಇಂದು ಪೋದುದೆಂದು ನೀರೋಗನಾಗಿ ಮಹಾನುರಾಗಂ ಬೆರಸು ಪರಸಿ ಪೋದಂ: **ಪಂಪಭಾ**, ೫. ೧೦೪ ವ)

ನೀರ್ಗಾದಿಗೆ – **[ನಾ]** ನೀರು ತುಂಬಿದ ಕಂದಕ (ಮಧುರಾಪುರಮಂ ಬಿಸುಟ್ಟು ಪೋಗಿ ದ್ವಾರಾವತಿಯಂ ಸಮುದ್ರಮೆ ನೀರ್ಗಾದಿಗೆಯಾಗಿ ಮಾಡಿದೆಂ: **ಪಂಪಭಾ**, ೬. ೨೬ ವ)

ನೀರ್ಗುಡಿ – **[ಕ್ರಿ]** ನೀರೆರೆ, ಪೋಷಿಸು (ಅಟಲ್ದೆರೆದೊಂದಿದ ಲುಂದುಗಳ್ಗೆ ನೀರ್ಗುಡಿದವೊಲಾದುದುಚ್ಚಳಿಸಿ ಸೂಸುವ ಕಣ್ಬನಿ ಕಂಜವಕ್ತ್ರೆಯಾ: **ಆದಿಪು**, ೧೨. ೨೬)

ನೀರ್ಗುಡು – **[ಕ್ರಿ]** ತರ್ಪಣ ಕೊಡು (ಕೊಟ್ಟೈ ಕಿರ್ಚಂ ಉದಗ್ರ ಶೋಕಶಿಖಿಯಿಂ ಕಣ್ಣೀರ್ಗಳಿಂದೆಯ್ದೆ ನೀರ್ಗೊಟ್ಟೈ: **ಪಂಪಭಾ**, ೧೩. ೬೧)

ನೀರ್ದಾಣ – **[ನಾ]** ೀರಿರುವ ಜಾಗ (ಮೂಡಿಗೆ ಕುಕ್ಕಂಬಂ ಸುಟೆಸಿ ಜೊಂಪಂ ಬೀಡುಬಿಡುವ ಇಂಬು ಕದಳಿ ತೆಂಗಿನ ತಾಣಂ ಜಾಣಿಂ ನೀರ್ದಾಣಮೆಂದು ಎಡೆಯಱಿದುಂ: **ಪಂಪಭಾ**, ೫. ೪೧)

ನೀರ್ಪೋರ್ಕುಳಿ – **[ನಾ]** ನೀರೆರೆಚಾಟದ ಸ್ಪರ್ಧೆ (ನೀರ್ಪೋರ್ಕುಳಿಯೊಳ್ ಜೋಲ್ದುಳ್ಳುಡೆ ಸಾರ್ಕೆಯೊಳೇಂ ನೃಪನ ಮನಮನಳವಡಿಸಿದುದೋ: **ಆದಿಪು**, ೧೧. ೧೪೯)

ನೀರ್ಮಾನಿಸ – **[ನಾ]** ನೀರಿಗೆ ಸಂಬಂಧಿಸಿದ ವ್ಯಕ್ತಿ (ನೀರ್ಮಾನಿಸಂ ನದೀಜಂ ನೀರ್ಮಾನಿಸಂ ಅಬ್ಧಿಶಯನನಂ ಅಕಾರಣದಿಂ .. .. ಕೊಂಡು ಕೊನೆದುದು: **ಜಗನ್ನಾವಿ**, ೧೭. ೧೮)

ನೀರ್ವಕ್ಕಿ – **[ನಾ]** ನೀರು ಹಕ್ಕಿ, ಚಕೋರ (ಬಿಸುಸುಯ್ದುತ್ತಗಲ್ದಿರ್ದ ನೀರ್ವಕ್ಕಿಗಳಾಗಳ್ ಕೂಡಿ ತೋಡಾದುವು: **ಆದಿಪು**, ೧೨. ೯)

ನೀರ್ವರಿ – **[ನಾ]** ಕಾಲುವೆ (ಜಳಧಿಯುಮಂ ಲಕ್ಷ್ಮೀದಯಿತಂ ನೀರ್ವರಿಯಿಂದಾದಮೆ ಕಿಱಿದೆಂದು ಬಗೆದು ನೋಡಿದನಾಗಳ್: **ಆದಿಪು**, ೧೨. ೭೫)

ನೀಲ – **[ನಾ]** [ಜೈನ] ಜೀವದ ಮೇಲಾಗುವ ಒಂದು ಅಶುಭ ಪರಿಣಾಮ (ಕೃಷ್ಣ ನೀಲ ಕಪೋತ ಲೇಶ್ಯಾ ಬಹ್ವಾರಂಭ ಪರಿಗ್ರಹತ್ವ ಆದಿ ಅಶುಭ ಪರಿಣಾಮಂಗಳಿಂ ಜೀವಂ ನೆಲಸಿ: **ಆದಿಪು**, ೫. ೮೩ ವ); **[ನಾ]** ಗಾಢ ನೀಲಿ ಅಥವಾ ಕಪ್ಪು ಬಣ್ಣ (ನೀಲದ ಬೆಳ್ಳಿಯ ಗಾಡಿಯುಂ ಈ ಲಲಿತಾಂಗಿಯರ ಕಣ್ಗೆ ಪೋಲ್ತುಂ ನಾಂ ಕಣ್ಗೇಳಿದಮಾಗಿರೆವೆ ಎಂದೆಳವಾಳೆಗಳ್ ಓಡಿದುವು ಬಾಲೆಯರ್ ಪುಗುವಾಗಳ್: **ಪಂಪಭಾ**, ೫. ೬೧)

ನೀಲನೀರದ – **[ನಾ]** ನೀಲಮೇಘ, ಕಪ್ಪು ಮೋಡ (ನೀಲನೀರದ ತನುಚ್ಛವಿ ಭಸ್ಮರಜೋವಿಲಿಪ್ತಂ ಅಂಜನಗಿರಿಯಂ ಶರಜ್ಜಳಧರಂ ಕವಿದಂತಿರೆ: **ಪಂಪಭಾ**, ೭. ೫೯)

ನೀಲಲೇಶ್ಯೆ – **[ನಾ]** [ಜೈನ] ಆರು ಬಗೆಯ ಲೇಶ್ಯೆಗಳಲ್ಲಿ ಒಂದು; ಆಲಸ್ಯಕ್ಕೆ ಕಾರಣವಾದ ಕರ್ಮ (ಕೃಷ್ಣ ನೀಲ ಕಪೋತ ಲೇಶ್ಯಾಬಹ್ವಾರಂಭಪರಿಗ್ರಹತ್ವಾದ್ಯುಭಪರಿಣಮಂಗಳಿಂ ಜೀವಂ ನೆಲಸಿ: **ಆದಿಪು**, ೫. ೮೩ ವ)

ನೀಲಾಂಬುದ – **[ನಾ]** ಕಪ್ಪು ಮೋಡ (ಅಂತು ನೀಲಾಂಬುದಶ್ಯಾಮನುಂ ಕನಕಪಿಂಗಳ ಜಟಾಬಂಧಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣ ಮೃಗತ್ವಕ್ಪರಿಧಾನನುಮಾಗಿ: **ಪಂಪಭಾ,** ೧. ೬೯ ವ)

ನೀಲಾದ್ರಿ – **[ನಾ]** ನೀಲಪರ್ವತ (ಪೊಸಮುತ್ತಿನ ತುಡುಗೆ ಪೊದಳ್ದೆಸೆಯೆ ದುಕೂಲಾಂಬರಂ ನಿಜಾಂಗದೊಳಂ ಸಂದೆಸೆದಿರೆ ಬೆಳ್ಮುಗಿಲಿಂದಂ ಮುಸುಕಿದ ನೀಲಾದ್ರಿ ಬರ್ಪ ತೆಱದೊಳ್ ಬಂದಂ: **ಪಂಪಭಾ**, ೨. ೬೮)

ನೀಲಾಲಕ – **[ನಾ]** ಕಪ್ಪು ಕೂದಲು (ನಯನಾನಂದವಿಳಾಸರೂಪಂ ಅಮರೀನೀಲಾಲಕಾಲೀಢಪಾದಯುಗಂ: **ಆದಿಪು**, ೫. ೭೧)

ನೀವಾರ – **[ನಾ]** ಬರಗು ಎಂಬ ಧಾನ್ಯ (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರ ತಿಳ ಅತಸಿ ಮಸೂರಿಕಾ: **ಆದಿಪು,** ೬. ೭೨ ವ)

ನೀವಿ – **[ನಾ]** ಬಿಲ್ಲಿನ ಹೆದೆ (ನಿಜಭುಜಾದಂಡಮಮಂ ನೀಡಿ ನೀಡಿಲ್ಲದೆ ಏಱೆಸಿ ನೀವಿ ಜೇವೊಡೆದಾಗಳ್: **ಆದಿಪು**, ೧೨. ೮೭ ವ)

ನೀವೀಬಂಧನ – **[ನಾ]** ಸೀರೆಯ ಸೊಂಟದ ಗಂಟು (ಅಳಕೋತ್ಸಾರಿತ ಕೇಶಸಂಯಮನ ನೀವೀಬಂಧನಾವಿಷ್ಕೃತಸ್ಖಳಿತಂ ವಿಸ್ಮೃತಿ ಪಕ್ಷಪಾತಂ: **ಆದಿಪು**, ೪. ೬೦)

ನೀವು – **[ಕ್ರಿ]** ಸವರು (ಶಲ್ಯನಂ ರಥಮಂ ಎಸಗಲ್ವೇಟ್ಟು ದಿವ್ಯಾಸ್ತ್ರಂಗಳ ದೊಣೆಗಳಂ ಎರಡುಂ ದೆಸೆಯೊಳಂ ಬಿಗಿದು ಕಾಳವಟ್ಟದ ಬಿಲ್ಲಂ ಕೆಂದಳದೊಳ್ ಅಮರೆ ಪಿಡಿದು ನೀವಿ ಜೇವೊಡೆದಾಗಳ್: **ಪಂಪಭಾ**, ೧೨. ೧೩೫ ವ)

ನೀಹಾರ – ಹಿಮ (ಅಭಿನವನೀಹಾರದ ಬೆಳ್ಪನೆ ಬಾರಿಸಿ ಬಾರಿಸಿ ಪಾಂಡುಕಶಿಳಾತಳಂ ಸೊಗಯಿಸುಗುಂ: **ಆದಿಪು**, ೭. ೭೪)

ನೀಹಾರವರ್ಷ – **[ನಾ]** ಮಂಜಿನ ಮಳೆ (ಅಪರಿಮಿತ ಸ್ತಂಬೇರಮಾನೀಕ ಶೀಕರನೀಹಾರವರ್ಷದಿಂದಂ: **ಆದಿಪು**, ೧೩. ೭೭ ವ)

ನೀಳ್ – **[ಕ್ರಿ]** ಉದ್ದವಾಗು (ಮಡಗಿಡಲೆಂದು ಪುತ್ತಿನೊಳಗೊಯ್ಯನೆ ಕುತ್ತಿದ ಕಯ್ಯನಾಗಡೆ ಪಸಿವಟ್ಟಿ ನೀಳ್ದ ಪೊಗೆಯುಂ: **ಆದಿಪು**, ೨. ೪೦); **[ಕ್ರಿ]** ಘನತೆಯುಂಟುಮಾಡು (ಅದಟಂ ಕೊಂಡಾಡದೆ ಬೇಡಿದರ್ಗೀಯದೆ ಮಱೆಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದ ಅಧಮಂ ಅದೇತರ್ಕೆ ಬಾರ್ತೆ ಜೀವನ್ಮೃತಕಂ: **ಆದಿಪು**, ೧೨. ೯೭)

ನೀಳ – **[ಗು]** ದೀರ್ಘವಾಗಿರುವುದು (ತೋಳ ನೀಳದ ಕೆಂದಳಿರಿಂದಂ ಸಂದಣಿಸಿರ್ದ ಮದಾಳಿಯಿಂದೋಳದಿಂ: **ಪಂಪಭಾ**, ೧. ೫೮ ರಗಳೆ); ನೀಲಮಣಿ (ತುಂಗವನ್ಯಮತಂಗಜದಂತೆ ಆಘಾತನಿಪಾತಿ ಸಲ್ಲಕೀಭಂಗಮಂ ಮಣಿಮೌಕ್ತಿಕ ನೀಳಸ್ಥೂಳ ಶಿಲಾಪ್ರವಿಭಾಸಿತ ಉತ್ತುಂಗಮಂ: **ಪಂಪಭಾ**, ೧. ೧೧೫); **[ನಾ]** ಉದ್ದ (ನೂಱು ಯೋಜನದಗಲದೊಳಂ ಅನಿತೆ ನೀಳದೊಳಂ ನೆಱೆದು: **ಪಂಪಭಾ**, ೫. ೭೯ ವ); **[ಗು]** ನೀಲಿಯಾದ (ಪರಪಿನ ನೀಳದ ಕಡೆಯಂ ಮರುಳಂ ತವೆ ನೋಡಲಾಱದೆ ಅಂಬರತಳಮಂ ಕರಿದೆಂಬಂತಿರೆ ನಿನ್ನಂ ನರನೆಂಬುದೆ: **ಪಂಪಭಾ**, ೬. ೨೦)

ನೀಳಂ – [ಅ] ಉದ್ದವಾಗಿ, ದೀರ್ಘವಾಗಿ (ದೆಸೆಗಳ್ ಪೆರ್ಚದೆ ಮೊಟ್ಟನಾದುವು ಅಗಲಕ್ಕೆಂಬನ್ನೆಗಂ ನೀಳಮಾಗಸದೊಳ್ ಕಾಳಸೆಗೊಂಡುದೆಂಬಿನಂ: **ಆದಿಪು,** ೧೫. ೫೦)

ನೀಳಕಂಠ – [ನಾ] ಶಿವ (ತನ್ನ ದೋರ್ಗರ್ವದ ಅಗುರ್ವಂ ಪ್ರಾಕಟಂ ಮಾಡುವ ಬಗೆಯೊಳಿದಂ ಪತ್ತಿ ಕಿಟಿಕ್ತೊತ್ತಿ ಪೊತ್ತು ಎತ್ತಿದೊಡೆ ಇತ್ತಂ ಮೆಚ್ಚಿ ಲಂಕಾಧಿಪತಿಗೆ ಬರವಂ ರಾಗದಿಂ ನೀಳಕಂಠಂ: **ಪಂಪಭಾ,** ೭. ೭೪)

ನೀಳಕುತ್ಕೀಳ – [ನಾ] ನೀಲಾಚಲ, ನೀಲಗಿರಿ (ಕೈಳಾಸಂ ನಿಷಧಾಧಿಪಾಂಗ ನಿಕಟಕ್ಷೋಣೀಧರಂ ನೀಳಕುತ್ಕೀಳಂ ಕಂದ ಮಹೀಧರಂ: **ಪಂಪಭಾ,** ೧೪. ೩೩)

ನೀಳಗಳ – [ನಾ] ನೀಲಕಂಠ, ಶಿವ (ಅಳಿನೀಳ ನೀಳಗಳಕಂಠ ತಮಾಳವಿನೀಳ ನೀರದಪ್ರಸರ ವಿಭಾಸಿಯಾದುದು ಸಮೀರಂ: **ಪಂಪಭಾ,** ೭. ೨೨)

ನೀಳಚ್ಛವಿ – [ನಾ] ಕರಿದು ಕಾಂತಿ, ಮಿರುಗುವ ಕಪ್ಪು (ಪಿರಿದುಂ ಬನ್ನದ ಕರ್ಪೆಸೆದುದು ತೊಱೆಗಿನ್ನುಂ ಹರಗಳ ತಮಾಳನೀಳಚ್ಛವಿಯಿಂ: **ಪಂಪಭಾ,** ೫. ೫೪)

ನೀಳನೀರಜ – [ನಾ] ನೀಲಿಯ ಕನ್ನೈದಿಲೆ (ನೀಳನೀರಜವನಂಗಳ ಚೆಲ್ವುಗಳೆಂಬುವಾ ಲತಾಂಗಿಯ ಕಡೆಗಣ್ಣ ಬೆಳ್ಪುಗಳ ಸಿಲ್ಕಿದ ಸಿಲ್ಕಿವಲ್ಲವೆ: **ಪಂಪಭಾ,** ೪. ೭೦)

ನೀಳಮೇಘಘಟೆ – [ನಾ] ಕಪ್ಪು ಮೋಡದ ರಾಶಿ (ಕರಿಘಟೆ ನೀಳಮೇಘಘಟೆಯಂತೆ ತುರಂಗದಟಂ ಸಮುದ್ರದೊಳ್ ತರತರದಿಂದಮೇಟ್ಟು ತೆರೆಯಂತೆ: **ಪಂಪಭಾ,** ೮. ೯೯)

ನೀಳಾಂಭೋಧರ – [ನಾ] ಕಪ್ಪು ಮೋಡ (ಮಸಿಯಂ ಪುಂಜಿಸಿದಂತುಟಪ್ಪ ತನು ನೀಳಾಂಭೋಧರಂ ದಾಡೆಗಳ್ ಪೊಸಮಿಂಚು ಉಗ್ರ ವಿಲೋಚನಂ: **ಪಂಪಭಾ,** ೭. ೨೭)

ನೀಳಾಭ್ರ – [ನಾ] [ನೀಳ+ಅಭ್ರ] ಕಪ್ಪು ಮೋಡಗಳು (ದೆಸೆಗೆತ್ತಂ ಗಜಱುತ್ತುಮಿರ್ಪ ಪುಲಿಯಿಂ ನೀಳಾಭ್ರಮಂ ದಂತಿಗೆತ್ತು ಸಿಡಿಲ್ದು ಆಗಸಕೆ ಎಯ್ದೆ ಪಾಯ್ವ ಪಲವುಂ ಸಿಂಗಂಗಳಿಂದೆತ್ತುಗುರ್ವಿಸಿ: **ಪಂಪಭಾ,** ೭. ೨೬)

ನೀಳಾಳಕ – [ನಾ] ಕಪ್ಪು ಕೂದಲು (ತಾಳದ ಲಯಮಂ ನಿಜೆ ನೀಳಾಳಮಾರದ ಪೊದಳ್ದ ಮುತ್ತೆಂಬಿವು ಮುಂ ಮೇಳಿಸಿ: **ಆದಿಪು,** ೯. ೨೪)

ನೀಳಾಳಕೆ – [ನಾ] ಕಪ್ಪು ಕೂದಲಿನವಳು (ಆ ನರಸಿಂಹ ಮಹೀಶ ಮನೋನಯನಪ್ರಿಯೆ ವಿಳೋಳ ನೀಳಾಳಕೆ ಚಂದ್ರಾನನೆ ಜಾಕವ್ವೆ ದಲಾ ಜಾನಕಿಗಗ್ಗಳಮೆ ಕುಲದೊಳಂ ಶೀಲದೊಳಂ: **ಪಂಪಭಾ,** ೧. ೩೯)

ನೀಳೀಮವನಜ – [ನಾ] ಕನ್ನೈದಿಲೆ (ಓಳಿಕೊಳೆ ಪೊಳೆವ ಕಣ್ಗಳ್ ನೀಳಿಮವನಜಂಗಳೋಳಿಕೊಳ್ಳದುವುಂ ತಾಂ ಓಳಿಕೊಳಲ್: **ಪಂಪಭಾ,** ೧೪. ೨೩)

ನೀಳೇಂದೀವರ – [ನಾ] ಕನ್ನೈದಿಲೆ (ವೀರಲಕ್ಷ್ಮೀಕರ್ಣಪೂರ ನೀಳೇಂದೀವರಶ್ಯಾಮಳಮುಮಪ್ಪ ಸೌನಂದಕಮೆಂಬ ಖಡ್ಗರತ್ನಮುಂ: **ಆದಿಪು,** ೧೧. ೩ ವ)

ನೀಳೋತ್ಪಳ – [ನಾ] ಕನ್ನೈದಿಲೆ (ನಗೆಗಣ್ಗಳ ಬೆಡಂಗನೆ ಕಿಱುನಗೆ ನಗುವಂತೆ ಮೆಲ್ಲಮೆಲ್ಲನುಳ್ಳಲರ್ದ ಮಹೋತ್ಪಳ ನೀಳೋತ್ಪಳಂಗಳುಂ: **ಆದಿಪು,** ೧೧. ೫ ವ)

ನೀಳ್ದ ಪುರ್ವು – [ನಾ] ಉದ್ದವಾದ ಹುಬ್ಬು (ತುಱುಗೆಮೆ ನೀಳ್ದ ಪುರ್ವು ನಿಡುಗಣ್ ಪೊಱೆಯಲ್ಲದೆ ಬಟ್ಟಿತಪ್ಪ ಬಾಯ್ದೆಱೆ .. .. ಧಾತ್ರಿ ಪೊಗಟ್ಟುಂ ಪೊಗಟ್ಟನ್ನರೆ ಕುಂತಿ ಮಾದ್ರಿಗಳ್: **ಪಂಪಭಾ,** ೧. ೧೦೮)

ನೀಳ್ಪು – [ನಾ] ಉದ್ದ, ಎತ್ತರ (ಕುರುಳ ಬಂಬಲಂ ಪುಷ್ಪವಿಭ್ರಮಂ ನಯನಲೀಲೆಯಂ ನೀಳ್ಪು ತೋಳ್ಗೊಂಗಲಂದಮಂ ನೆಱೆಯೆ: **ಆದಿಪು,** ೧೦. ೨೭); [ನಾ] ವಿಸ್ತಾರ (ನೀಳ್ಪಂ ಬೆಳ್ಪುಮಂ ತಾಳ್ದಿ ಪರವನಿತೆಯರ ದೆಸೆಗೆ ಕಿಸುಗಣ್ಚಿದಂತೆ ಕಿಸುಸೆರೆವರಿದು ಸೊಗಯಿಸುವ ಶೌಚಾಂಜನೇಯನ ಕಣ್ಗಳ್: **ಪಂಪಭಾ,** ೨. ೩೯ ವ)

ನೀಱ – [ನಾ] ಚೆಲುವ (ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್ ನೀಂ ನೀಱನೈ ಪುಷ್ಪಸಂಕುಳದೊಳ್ ನೀನೆ ವಿಳಾಸಿಯೈ: **ಆದಿಪು,** ೧೧. ೯೮)

ನೀಟ್ಟರಿಸು – [ಕ್ರಿ] ತಿರಸ್ಕರಿಸು (ಮಧುಪಂಗಳ್ ತಮ್ಮಟ್ಟಮೆಯೆ ಚೌತಮಾಗಿರೆ ನೀಟ್ಟರಿಸಿದುವು ಉಂತೆ ಚಂಪಕಕ್ಕೆಱಗುವುದೇ: **ಆದಿಪು,** ೧೧. ೧೧೯)

ನುಂಗಲೆ – ನುಂಗಲು, ನುಂಗುವುದಕ್ಕಾಗಿ (ಶಿರಂ ಪರಿದು ಅತ್ತ ವಿಯತ್ತಳಂಬರಂ ನೆಗೆದೊಡೆ ರಾಹು ಬಾಯ್ದೆಱೆದು ನುಂಗಲೆ ಬಂದಪುದೆಂಬ ಶಂಕೆಯಿಂ: **ಪಂಪಭಾ,** ೧೧. ೧೫೪)

ನುಂಗು – [ಕ್ರಿ] ಹೂಳು, ಆಳಕ್ಕಿಳಿಸು (ಭೀಕರರಥಚಕ್ರಮಂ ಪಿಡಿದು ನುಂಗಿದಳ್ ಒರ್ಮೆಯೆ ಧಾತ್ರಿ ಕೋಪದಿಂ: **ಪಂಪಭಾ,** ೧೨. ೨೦೬)

ನುಗುಳ್ – [ಕ್ರಿ] ಅಡಿಯಲ್ಲಿ ಹೋಗು (ಆಮೋದಕುಸುಮದಾಮ ನಿಕಾಮಕಮನೀಯಂಗಳುಂ ಅಪ್ಪ ತೋರಣಂಗಳನೆ ನುಗುಳುತ್ತುಂ: **ಆದಿಪು,** ೪. ೫೮ ವ); [ಕ್ರಿ] ನುಸುಳು (ಗಂಗಾವೈಜಯಂತೀ ಸಿಂಧುದ್ವಾರಂಗಳಂ ನಿಜವಿಜಯವರೂಥಮೊಂದಱೊಳೆ ನುಗುಳ್ದು ಲವಣಜಲಧಿಯಂ ಪೊಕ್ಕು: **ಆದಿಪು,** ೧೪. ೫೩ ವ)

ನುಚ್ಚುನೂಱು – [ನಾ] ಪುಡಿಪುಡಿ (ಪೊಕ್ಕು ಉಡಿವೆಂ ಪಿಂಗಾಕ್ಷನ ಊರುದ್ವಯಮಂ ಉರು ಗದಾಘಾತದಿಂ ನುಚ್ಚು ನೂಱಾಗೆ ಒಡೆವೆಂ ತದ್ರತ್ನರಶ್ಮಿಪ್ರಕಟಮಕುಟಮಂ: **ಪಂಪಭಾ,** ೭. ೧೩)

ನುಡಿ – [ನಾ] ಮಾತು (ಕಣ್ ಪಿಡುಗುಗುಂ ಎಯ್ದೆ ಬಾಯ್ಬಿಡದೆ ಬತ್ತುಗುಂ ಅಳ್ಳೆರ್ದೆ ನೊಂದು ಕುಂದುಗುಂ ನುಡಿ ತಡವಕ್ಕುಂ ಇಚ್ಚೆಗೆಡುಗುಂ: **ಆದಿಪು,** ೧೨. ೪೦); [ನಾ] ಪ್ರತಿಜ್ಞೆ, ಶಪಥ (ಮುಳಿಸಿಂದಂ ನುಡಿದೊಂದು ನುಡಿ ಸಲ್ಗೆ ಆರ್ ಆಗದೆಂಬರ್: **ಪಂಪಭಾ,** ೭. ೧೨); [ಕ್ರಿ] ಮಾತಾಡು (ವಿದುರನೆಂಬೀ ತೊಟ್ಟುಟ್ಟಿಯ ಮನೆಯ ಕೂಟಿ ನುಡಿಯಿಸೆ ನುಡಿದೈ: **ಪಂಪಭಾ,** ೯. ೫೮); [ನಾ] ಗಾದೆ (ಸೆಟ್ಟಿಯ ಬಳ್ಳಂ ಕಿಱಿದು ಎಂಬುದೊಂದು ನುಡಿಯಂ ನೀಂ ನಿಕ್ಕುವಂ ಮಾಡಿದೈ: **ಪಂಪಭಾ,** ೧೨. ೧೭೫); [ಕ್ರಿ] ಹೀಯಾಳಿಸು (ನೀಂ ನುಡಿದು ಬದುಕಿದೈ ಪೆಱರೆನ್ನಿದಿರೊಳ್ ನುಡಿದು ಕರ್ಣನಂ ಬರ್ದುಕುವರೇ: **ಪಂಪಭಾ,** ೧೩. ೨೭); **[ನಾ] ,** ಜಗಳ (ನುಡಿ ನಿನಗಂ ದಿನೇಶತನಯಂಗಂ ಅದೆನ್ನಯ ಪಕ್ಕದೆ ಆದೊಡಂ ಮಿಡುಕದೆ ಕೇಳ್ವೆಂ ಅಲ್ಲಿ ಸಮಂ ಇರ್ವರುಂ: **ಪಂಪಭಾ,** ೧೩. ೨೮)

ನುಡಿಗೊಳ್ – [ಕ್ರಿ] ಮಾತು ಕೇಳು (ನಾಡ ಚಲ್ಲವೊತ್ತರ ನುಡಿಗೊಳ್ಳದಿರ್ ನಿನಗೆ ಪಾಂಡವರಪ್ಪುದಂ ಆರುಂ ಅಪ್ಪರೇ: **ಪಂಪಭಾ,** ೯. ೪೨)

ನುಡಿನುಡಿ – [ಕ್ರಿ] ಪ್ರತಿಜ್ಞೆ ಮಾಡು (ಮುಡಿಯಂ ಪಿಡಿದೆೞೆದವನಂ ಮಡಿಯಿಸಿ ಮತ್ತವನ ಕರುಳ ಪಿಣಿಲಿಂದ ಎನ್ನಂ ಮುಡಿಯಿಸುವಿನೆಗಂ ಮುಡಿಯಂ ಮುಡಿಯೆಂ ಗಡ ಕೇಳಿಂ ಈಗಳ್ ಆನ್ ನುಡಿನುಡಿದೆಂ: **ಪಂಪಭಾ,** ೭. ೧೦)

ನುಡಿಯಿಸು – [ಕ್ರಿ] ಹೇಳಿಸು (ನುಡಿಯಿಸಿ ಕೇಳ್ಗುಂ ಹರಿಗನ ಪಡೆಮಾತನೆ ಮಾತು ತಪ್ಪೊಡಂ ಮತ್ತಮದಂ ನುಡಿಯಿಸುಗುಂ ಮೊದಲಿಂದಾ ನುಡಿ ಪಱಿಪಡೆ ಮುಳಿದು ನೋಡುಗುಂ ಕೆಳದಿಯರಂ: **ಪಂಪಭಾ,** ೪. ೫೬)

ನುಡಿವಳಿ – [ನಾ] ಕೊಟ್ಟ ಮಾತು, ವಾಗ್ದಾನ, ಪ್ರತಿಜ್ಞೆ (ನುಡಿವಳಿಗೆ ನರನ ರಥಮಂ ಪಡುವು ಎಣ್ಗಾವುದುವರಂ ಸಿಡಿಲ್ವಿನಂ ಎಚ್ಚು ಅಚ್ಚುಡಿಯೆ: **ಪಂಪಭಾ,** ೧೧. ೨೦)

ನುಣ್ಣನಪ್ಪ – [ಗು] ನಯವಾಗಿರುವ (ಲಲಿತಪದಂ ಪ್ರಸನ್ನ ಕವಿತಾಗುಣಮಿಲ್ಲದೆ ಪೂಣ್ದು ಪೇೞ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೇಡು ನುಣ್ಣನಪ್ಪಳಕದ ಕೇಡು: **ಪಂಪಭಾ,** ೧. ೧೨)

ನುಣ್ಣಿತಂವೇೞ್ – [ಕ್ರಿ] ನಯವಾಗಿ ಮಾತಾಡು (ಪೆರ್ಜೋಡೆಯಂತೆ ನುಣ್ಣಿತಂ ವೇೞ್ದುವಣುಗಾಳಂತೆ ದಾಯಂಬಡೆದುಂ ಮೇಳದಂಕದಂತೆ ಸುಟಿಯಲಾದುಂ: **ಪಂಪಭಾ,** ೬. ೭೨ ವ)

ನುಣ್ಣಿತು – [ನಾ] ಮೃದು [ಮಾತು] (ದುರ್ಯೋಧನಂ ಬಂದಿಕಾಱನಂತೆ ಸೆಱೆಗೆಯ್ದುಂ ವ್ರಣವೈದ್ಯನಂತೆ ಕೊಡಸಾರಿಯಂ ಪಿಡಿದುಂ ಸೂಳೆಯಂತೆ ಕಟಿವು ಉಟಿವನಱಿದುಂ ರಸವಾದಿಯಂತೆ ಕಟ್ಟಿಯುಂ ಪೆರ್ಜೋಡೆಯಂತೆ ನುಣ್ಣಿತಂ ವೇೞ್ದು: **ಪಂಪಭಾ,** ೬. ೭೨ ವ)

ನುಣ್ಪುಮೆ – [ನಾ] ನುಣುಪು (ಪಾಲ್ಗಡಲನೊರೆಯ ದೊರೆಯ ದುಕೂಲಾಂಬರವನುಟ್ಟು ಆತ್ಮೀಯಜಘನದ ನುಣ್ಪಿನೊಳ್ ನುಣ್ಪುಮೆಗೆತ್ತು : **ಆದಿಪು,** ೪. ೪೧ ವ)

ನುಣ್ಬರಲ್ – [ನಾ] ನಯವಾದ ಹರಳು (ಕರ್ಣಿಕೆಯಂದಮಾಗೆ ಕೀಲಿಸಿ ಪೊಸತಪ್ಪ ಮಾಣಿಕದ ನುಣ್ಬರಲಂ ಮಧು ಮನ್ಮಥಂಗೆ ಬಣ್ಣಿಸಿ ಸಮೆದಂತೆ ತೋಱುವುದು: **ಆದಿಪು,** ೧೧. ೧೧೬)

ನುರ್ಗಾಡು – [ಕ್ರಿ] ನುಗ್ಗಾಡು, ಚೂರುಮಾಡು (ತೋಡುವೆಂ ಒರ್ವನ ಒಳ್ಗರುಳಂ ಉರ್ವಿಗೆ ನೆತ್ತರನೆತ್ತಿ ಪೀರ್ದು ವಿರ್ದಾಡುವೆಂ ಒರ್ವನ ಊರುಗಳಂ ಎನ್ನ ಗದಾಶನಿಘಾತದಿಂದೆ ನುರ್ಗಾಡುವೆಂ: **ಪಂಪಭಾ,** ೯. ೨೪)

ನುರ್ಚುನೂಱು – [ನಾ] ನುಚ್ಚುನೂರು, ಪುಡಿಪುಡಿ (ಬಳೆಯ ಪೇಱಂ ಆನೆ ಮೆಟ್ಟಿದಂತೆ ನುರ್ಚುನೂಱಪ್ಪಿನಂ ಅವುಂಕಿ ಪಿಡಿದಡಸಿ ಅಗುರ್ವು ಪರ್ವೆ ಬೀಸಿ: **ಪಂಪಭಾ,** ೮. ೭೬ ವ)

ನುಲಿ – [ನಾ] ಹಗ್ಗ (ಆತನ ತಪೋಮಯಶಿಖಿಗಳಿಂ ಬೆಂದು ಬೆಂದ ನುಲಿಯಂತೆ ಏತರ್ಕಂ ಮುಟ್ಟಲ್ಲದೆ ಮುಟ್ಟುಗಿಡೆ: **ಪಂಪಭಾ,** ೭. ೮೦ ವ)

ನುಸುಳ್ – [ಕ್ರಿ] ನುಣುಚಿಕೊ (ಪುಸಿ ನಸುವಂಚನೆ ನೋರ್ಪು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ಯುಸುರಿ ನುಸುಳೆಂಬ ಕೇಣದ ಕುಸುರಿಯಂ ಅಱಿದು ಇಱಿದು ಮೆಱೆದು ಉಱೆದೆ ಅರೆಬರ್: **ಪಂಪಭಾ,** ೧೦. ೮೧)

ನೂಂಕು – [ಕ್ರಿ] ತಳ್ಳು (ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ ನೂಂಕುವ ಊರ್ಮಿಮಾಳಿನಿಯ ತುಂಗತ್ತರಳ ಊರ್ಮಿಮಾಲೆಗಳ್: **ಆದಿಪು,** ೧. ೬೧); [ಕ್ರಿ] ಮುನ್ನುಗ್ಗು (ರಾಜಕಂಠೀರವಂ ತಾನೆನೆ ವೀರಕ್ಷತ್ರಚೂಡಾಮಣಿ ಭರತನೃಪಂ ನೂಂಕಲುದ್ಯುಕ್ತನಾದಂ: **ಆದಿಪು,** ೧೪. ೯೮)

ನೂಕೆ ಪಾಸು – [ಪುಣ್ಯವಂತನಿಗೆ] ನೂಕಿದಲ್ಲಿ ಹಾಸಿಗೆ [ಎಂಬ ಗಾದೆಮಾತಿನಂತೆ] (ಅಂತು ಪುಣ್ಯಭಾಜನಂಗೆ ನೂಕೆ ಪಾಸೆಂಬಂತೆ: **ಆದಿಪು,** ३. ೭೯ ವ)

ನೂತ – [ಗು] ಪ್ರಶಂಸಾರ್ಹವಾದ (ಲಲಿತಲತಾಂಗಿ ನೂತವಿಪರೀತ ರತಕ್ಕಡಿಯಿಟ್ಟಳೆನ್ನ ಕಣ್ಗಳ ಪಸವೋಡೆ: **ಆದಿಪು,** ೧೨. ३೦)

ನೂತನಪ್ರಸ್ತುತ – [ಗು] ಆಗತಾನೇ ಕರೆದ (ಅನಿಮೇಷರ್ ನೂತನಪ್ರಸ್ತುತ ಸುರಭಿಸುಧಾಕ್ಷೀರಧಾರಾಭಿಷೇಕಾರ್ಚನೆಯಂ: **ಆದಿಪು,** ೧೪. ೧೧೬)

ನೂಪುರ – [ನಾ] ಲ್ಕಡಗ (ಪೋ ಬಿಡು ಕಟಿಸೂತ್ರಮಂ ತೊಡೆಯ ಬಿಣ್ಪು ಪದಾಂಬುರುಹಕ್ಕೆ ತಿಣ್ಣಂ ಎಂತು ಉಡಿಸುವುದಕ್ಕ ನೂಪುರಮಂ ಈ ತೊಡವು ಏವುದೋ ರೂಪೆ ಸಾಲದೇ: **ಪಂಪಭಾ,** ३. ४೬)

ನೂರ್ಮಡಿ – [ನಾ] ನೂರುಪಟ್ಟು (ತನ್ನ ತೊಡಂಕದು ಎಯ್ದೆ ನೂರ್ಮಡಿ ಮನದೊಳ್ ಪಳಂಚಲೆಯೆ ಡಕ್ಕೆಯೊಳ್ ಅಟ್ಟಜವಾಗೆ ಆಡಿದಳ್: **ಪಂಪಭಾ,** ೪. ೯೦)

ನೂಲ್ – [ನಾ] ದಾರ (ಬಿಳಿಯ ತಾವರೆಯೆಳಗಾವಿನಸಿಯ ನೂಲೊಳ್ ಕೋದ ತೋರಮಲ್ಲಿಗೆಯ ಬಿರಿಮುಗುಳ ಸರಿಗೆಯುಮಂ: **ಪಂಪಭಾ,** ೫. ೬ ವ)

ನೂಲತೊಂಗಲ್ – [ನಾ] ನೂಲ್ತೊಂಗಲ್, ಗೆಜ್ಜೆಗಳಿರುವ ಕಟಿಸೂತ್ರ (ಒದವಿದ ನೂಲ ತೊಂಗಲುಲಿಯಿಲ್ಲದೆ ಪೀನನಿತಂಬಮಾರಮಿಲ್ಲದೆ ಕುಚಮಂಡಲಂ ಪಲವುಮಂದದ ಚೆಂದದ ಚಿನ್ನಪೂಗಳಿಲ್ಲದೆ: **ಆದಿಪು,** ३. ೪೮)

ನೂಲತೋಡಾಗು – [ಕ್ರಿ] ಹಾಸುಹೊಕ್ಕುಗಳಂತೆ ಒಂದಾಗು, ಹರಿದ ನೂಲು ಸೇರಿಕೊಳ್ಳುವುದು (ಎನಗೆ ಎಕ್ಕಬಾಗೆ ನೋಡೀಗಳ್ ಈ ಇಳಾಲತಾಂಗಿ ಪುದುವಲ್ಲಳ್ ಅದೆಂತೆನೆ ಮುನ್ನ ನೂಲ ತೋಡಾಗದೆ ಕೆಟ್ಟು ಪೋದವರಂ ಇಂ ಮಗುಟ್ದುಂ ನಿಱಿಪಂತು ಬೆಳ್ಪನೇ: **ಪಂಪಭಾ,** ೯. ४೬)

ನೂಸೆ ಪಾಸು – 'ನೂಕಿದಲ್ಲಿ ಹಾಸಿಗೆ' (ಮನೆಯಿಂದಂ ಮನಗೆಂದು ಪೋಪ ತೆಱದಿಂ ಮೇಣ್ ನೂಸೆ ಪಾಸೆಂಬ ಪಾಂಗಿಂದನಿತುಂ ಯುಗಂ ತಳರ್ದು: **ಆದಿಪು,** ೫. ೭೦)

ನೂಱುವರಂ – ನೂರರವರೆಗೂ (ಈ ಕಿಱಿಯವಂ ಅಱಿಯದೆ ಕೆಡೆನುಡಿದನಪ್ಪೊಡಂ ನೂಱುವರಂ ಎಲೆ ಸಲಿಸುವುದು: **ಪಂಪಭಾ,** ೬. ೬೧)

ನೃತ್ತ – [ನಾ] ನರ್ತನ (ವಾರನಾರೀರಮಣೀಯನೃತ್ತಂ ಅಮರುತ್ತಿರೆ ಸಂದ ವಿರಾಟಂ ಅಂದು ಕೆಯ್ನೀರೆಱೆದೀಯೆ ಗೆಯ್ದರ್ ಅಭಿಮನ್ಯುಗಂ ಉತ್ತರೆಗಂ ವಿವಾಹಮಂ: **ಪಂಪಭಾ,** ೯. ೯)

ನೃತ್ಯ – [ನಾ] ಅಭಿನಯಸಹಿತವಾದ ನರ್ತನ (ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ ಜತ್ತವಟ್ಟದ ಮಣಿಯಂತಿದೇಂ ಪದುಳಮಾದುದೊ ದಿವ್ಯವರೂಥಕದಂಬಕಂ: **ಆದಿಪು,** ೭. ೧೨೫)

ನೃಪ – [ನಾ] ಪ್ರಜಾಪಾಲಕ, ರಾಜ (ಮಂತ್ರಪೂತಾಂಗಮಂ ನೃಪನೆಯ್ದಿದಂ ಉದ್ಯಚ್ಛೃಂಗಮಂ ಆ ಶತಶೃಂಗಮಂ: **ಪಂಪಭಾ,** ೧. ೧೧೫)

ನೃಪತನಯ – [ನಾ] ರಾಜನ ಮಗ, ರಾಜಕುಮಾರ (ಪುಟ್ಟೆ ಮುಳಿಸು ಒಸಗೆಗೆಳೆ ಕಡುಗಟ್ಟಂ ಮುಳಿಸು ಒಸಗೆಯೆಂಬ ನೃಪತನಯನವಂ ಮುಟ್ಟುಗಿಡೆ ಪಾರದರದೊಳ್ ಪುಟ್ಟಿದಂ: **ಪಂಪಭಾ,** ೧೨. ೧೩೩)

ನೃಪತಿ – [ನಾ] ರಾಜ (ಅರಿಕೇಸರಿಯೆಂಬ ಸುಂದರಾಂಗನತ್ಯಂತ ವಸ್ತುವಂ ಮದಕರಿಯಂ ಹರಿಯಂ ಪಡಿವಡೆಗುರ್ಚಿದ ಕರವಾಳನೆ ತೋಱೆ ನೃಪತಿ ಗೆಲ್ಲಂಗೊಂಡಂ: **ಪಂಪಭಾ,** ೧. ೧೮)

ನೃಪಭವನ – [ನಾ] ಅರಮನೆ (ಓಲಗಕ್ಕೆ ಪುಗುವ ಪೊಱಮಡುವ ವಾರವಿಳಾಸಿನಿಯರ ನೂಪುರಂಗಳ ರವಂಗಳೊಳ್ ನೃಪಭವನೋಪವನ ದೀರ್ಘಿಕಾಹಂಸಕುಳಂಗಳ್ ತಳವೆಳಗಾದುವು: **ಪಂಪಭಾ,** ೪. ೪೯ ವ)

ನೃಪಾಮ್ನಾಯ – [ನಾ] [ನೃಪ+ಆಮ್ನಾಯ] ರಾಜವಂಶ (ಮನುನೃಪಾಮ್ನಾಯ ದುರ್ಗಾದ್ರಿಸಿಂಹಂ ಮನುಭೂಪಾಳ ಅನ್ವಯಶ್ರೀಭವನಕಳಶಂ ಎಂಬಂತು: **ಆದಿಪು,** ೮. ೩೪)

ನೆಕ್ಕನೆ – [ಅ] [ನೆಕ್+ಎನೆ] ನೆಕ್ ಎಂದು, ಚಕ್ ಎಂದು (ಮುನಿದೆರಡು ಅಂಬಿನೊಳ್ ರಥಮುಮಂ ಪದವಿಲ್ಲುಮಂ ಎಯ್ದೆ ಪಾರ್ದು ನೆಕ್ಕನೆ ಕಡಿದು: **ಪಂಪಭಾ,** ೧೧. ೧೯)

ನೆಕ್ಕರವದ್ದೆ – [ನಾ] {ನೆಕ್ಕ+ಅರವದ್ದೆ] ಒಳಹೋದ ಕಿಬ್ಬೊಟ್ಟೆ (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱಿದ ನಿತಂಬ ಇಂಬುವಡೆದ ಒಳ್ತೊಡೆ ನೆಕ್ಕರವದ್ದೆ ತಾನೆ ಪೋ ಕಿಱುದೊಡೆ ಎಂದು ಧಾತ್ರಿ ಪೊಗಟ್ಟುಂ: **ಪಂಪಭಾ,** ೧. ೧೦೮)

ನೆಕ್ಕು – [ಕ್ರಿ] ಒಳಗೆ ಹೋಗು (ಕೊಂಕಿದ ಸಟಂ ಕಡು ನೆಕ್ಕ ಕದಂಪು ನೀಳ್ದ ತಾಟ್ಮೆರದವೊಲಪ್ಪ ಒಡಲ್ ಕಹಕಹಧ್ವನಿ ಕೌಳಿಕನಾದಂ ಆದುದು ಆಸುರತರಮಾಗೆ ಬಂದು ಕವಿದತ್ತು ಘಟೋತ್ಕಚರೌದ್ರಸಾಧನಂ: **ಪಂಪಭಾ,** ೧೨. ೭)

ನೆಗಪು – [ಕ್ರಿ] ತುಂಬಿಕೊ, ಸುರಿಸು (ಅಮರ್ದಪ್ಪಿಕೊಂಡು ತತ್ತನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ: **ಆದಿಪು,** ೪. ೫೬)

ನೆಗಟ್ – [ಕ್ರಿ] ನಡೆದುಕೊ, ಅನುಸರಿಸು (ಮೂಢತ್ರಯದೊಳ್ ಭಾವಮನೆ ಬಿಸುಡು ಬೆಳಗುಗುಂ ಈ ವಿಧದಿಂ ನೆಗಟ್ ನಿನ್ನ ದರ್ಶನರತ್ನಂ: **ಆದಿಪು,** ೫. ೫೬); [ಕ್ರಿ] ಮೂಡು, ಉಂಟಾಗು (ಮುಖಸರಸಿಜದೊಳ್ ದರಹಸಿತಂ ನೆಗಟ್ವಿನಂ ತೊದಳ್ನುಡುನುಡಿದಂ: **ಆದಿಪು,** ೮. ೩); [ಕ್ರಿ] ಪ್ರತಿಬಿಂಬಿಸು (ನೆಗಟ್ ನಿಜಪ್ರತಿಬಿಂಬಂ ನೆಗಟ್ದಿರಸುಗಳ ಉರದೊಳೆಸೆವ ಹಾರಮಣಿಜ್ಯೋತಿಗಳೊಳ್: **ಆದಿಪು,** ೯. ೨೨); [ಕ್ರಿ] ಮಾಡು (ಮುನ್ನಾಲೋಚಿಸದೆ ಆವುದುಮಂ ನೆಗಟಲ್ಕಾಗದು ಏದೊರೆತಿದು ಇದನೆಚ್ಚ ಉನ್ನತಯಶನಾವಂ ಅದಂ ಮುನ್ನಂ ತಿಳಿದಱಿದು ನೆಗಟಿ ನೆಗಟ್ವುದನೀಗಳ್: **ಆದಿಪು,** ೧೨. ೧೦೫); [ಕ್ರಿ] ತೋರಿಸು (ಅವಧರಿಸದೆ ನಿನ್ನೊಳ್ ಪಿರಿದೊಂದವಿನಯಮಂ ನೆಗಟ್ದಿ ದೋಷಮಂ ತಪದೊಳ್ ನೀಗುವೆಂ: **ಆದಿಪು,** ೧೪. ೧೩೧); [ಕ್ರಿ] ಕಾಣಿಸಿಕೊಳ್ಳು (ಷಟ್ಖಂಡಭೂಮಂಡಲೇಶ್ವರನೋರಂತೆ ನೆಗಟ್ಚಿ ನೆಗಟ್ದಿತ್ತೆತ್ತಂ ದ್ವಿಜನ್ಮಾನ್ವಯಂ: **ಆದಿಪು,** ೧೫. ೨೦); [ಕ್ರಿ] ಪ್ರಸಿದ್ಧನಾಗು (ಶ್ರೀಮಚ್ಚಳುಕ್ಯವಂಶ ವ್ಯೋಮಾಮೃತಕಿರಣನೆನಿಪ ಕಾಂತಿಯನೊಳಕೊಂಡೀ ಮಹಿಯೊಳಾತ್ಮ ವಂಶಶಿಖಾಮಣಿ ಜಸಮೆಸೆಯೆ ಯುದ್ಧಮಲ್ಲಂ ನೆಗಟ್ದಂ: **ಪಂಪಭಾ,** ೧. ೧೫); [ನಾ] ಮೊಸಳೆ (ಛಾಯಾಲಕ್ಷ್ಯಮನೊಡ್ಡಿಯುಂ ಆಯದ ನೀರೊಳಗೆ ತನ್ನನಡಸಿದ ನೆಗಟಿಂ ಬಾಯಟಿವಿನಂ ಇಸಿಸಿಯುಂ ಅರೆ ಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗಟ್ **ಪಂಪಭಾ,** ೨. ೬೦); [ಕ್ರಿ] ಕೈಗೊಳ್ಳು (ಇತ್ತುಂ ತೆತ್ತುಂ ಬಾಟ್ವಿ ಮಂಡಲಮಲ್ಲದೆ ಕೀಱಿಯುಂ ಮೀಱಿಯುಂ ನೆಗಟ್ವಿ ಮಂಡಲಮಿಲ್ಲ: **ಪಂಪಭಾ,** ೬. ೬೭ ವ)

ನೆಗಟ್‌ನುಡಿ – [ಕ್ರಿ] ಶಪಥಮಾಡು (ಕಾದುವೆನೆಂದು ನೆಗಟ್ ನುಡಿವ ನುಡಿಯುಮಂ ಪಿಡಿದ ಚಲಮುಮಂ ಬಗೆದು: **ಪಂಪಭಾ,** ೧೦. ೨೬ ವ)

ನೆಗಟ್ಚು – [ಕ್ರಿ] ಕೈಗೊಳ್ಳು (ಧರಾಮರರೀ ಬ್ರಾಹ್ಮಣರೆಂದು ಕೊಂಡುಕೊನೆದಾ ಷಟ್ಖಂಡಭೂಮಂಡಲೇಶ್ವರನೋರಂತೆ ನೆಗಟ್ಚಿ: **ಆದಿಪು,** ೧೫. ೨೦)

ನೆಗಟ್ತೆ – [ನಾ] ಖ್ಯಾತಿ (ಕವಿತೆಯೋಳಸೆಗೆಯ್ವ ಫಲಮಾವುದೊ ಪೂಜೆ ನೆಗಟ್ತೆ ಲಾಭಂ ಎಂಬಿವೆ ವಲಂ: **ಆದಿಪು,** ೧. ೩೬)

ನೆಗಟ್ತೆಯನಾಳ್ – [ಕ್ರಿ] ಪ್ರಸಿದ್ಧಿಯನ್ನು ಪಡೆ (ಮೃದುಪಾದಮಾದ ವಾಕ್ಶ್ರೀಸುಭಗಂ ಕಳಾಕಳಿತಮೆಂಬ ನೆಗಟ್ತೆಯನಾಳ್ದ ಕಬ್ಬಮಂ ಕೂಸುಮಂ ಈವುದು ಈವುದರಿಕೇಸರಿಗಲ್ಲದೆ ಅವಸ್ತುಗೀವುದೇ: **ಪಂಪಭಾ,** ೧. ೯)

ನೆಗಟ್ತೆವಡೆ – [ಕ್ರಿ] [ನೆಗಟ್ತೆ+ಪಡೆ} ಯಶಸ್ಸನ್ನು ಹೊಂದು (ಕುಡವೇಟ್ವನ ಕುಡುವನ ಕುಡೆ ಪಡೆವನ ಪೆಂಪೇಂ ನೆಗಟ್ತೆವಡೆಗುಮೊ: **ಪಂಪಭಾ,** ೬. ೪೯)

ನೆಗಟ್ತೆವೆಱು – [ಕ್ರಿ] ಖ್ಯಾತಿ ಹೊಂದು (ಪದ್ಮೆಯೆಂಬ ಕೊಳದಿಂದಂ ಗಂಗೆಯುಂ ಸಿಂಧುವುಂ ಮೊದಲೊಳ್ ಪುಟ್ಟಿ ನೆಗಟ್ತೆವೆತ್ತುವು: **ಆದಿಪು,** ೧೩. ೬೯)

ನೆಗಟ್ದಿ – [ಗು] ಪ್ರಸಿದ್ಧವಾದ (ಭೂಪೋತ್ತಮನಿರ್ದನೆ ಸುಖದಿಂ ಉದಾತ್ತಯಶಂ ನೆಗಟ್ ನೆಗಟ್ದಿಯೋಧ್ಯಾಪುರದೊಳ್: **ಆದಿಪು,** ೧೪. ೪೭)

ನೆಗಟ್ವಮಲ್ಲ – ಮಾಡುವವರಲ್ಲ[ವಾಗಿದ್ದೇವೆ] (ನಿಮ್ಮ ಮನಕ್ಕೆ ಕೊಕ್ಕರಿಕ್ಕೆಯಾಗೆಯುಂ ಪಾಟಿಗೆ ಗೆಂಟಾಗಿಯುಂ ನೆಗಟ್ವಮಲ್ಲ ಎಂದು ಪೊಡೆಮಟ್ಟು: **ಪಂಪಭಾ,** ೭. ೨೧ ವ)

ನೆಗೆ – [ಕ್ರಿ] ಹೊಮ್ಮು (ಪೊಸತಳಿರ್ಗಳ ಬಿಜ್ಜಣಿಗೆಯಿನೆಸೆಪಲರ್ಗಳ್ ನೆಗೆವ ಘರ್ಮಜಲಮಂ ಪೀರ್ದಾಱಿಸಿದವು: **ಆದಿಪು,** ೧೧. ೭೭); [ಕ್ರಿ] ಪುಟಿ (ಒಂದರ ನೀರ್ಮೞಲ್ ಒಂದೊಂದರ್ಕೊಂದಿಸುತುಂ ಮೇಗೆ ಕೊಂಡು ನೆಗೆವುದಿದೇಂ: **ಆದಿಪು,** ೧೩. ೫೧); [ಕ್ರಿ] ಮೇಲೇಳು, ಉಂಟಾಗು (ಉಬ್ಬರಮೆಂಬಿವನಱಿದು ಇಱಿದರ್ ಪೆಣಬಣಂಬೆಗಳ್ ನೆಗೆವಿನೆಗಂ: **ಪಂಪಭಾ,** ೧೦. ೮೨) [ಈ ಶಬ್ದ 'ನೆಗಟ್' ಇದ್ದಿರಬಹುದೇ ಎಂದು ಡಿಎಲ್ಎನ್]

ನೆಚ್ಚು – [ನಾ] ನಂಬಿಕೆ (ತಪೋವಿಘಾತಂ ಮಾಡಿಂ ಎಂದು ತನ್ನ ನೆಚ್ಚಿನ ಅಚ್ಚರಸೆಯರುಮಂ ಆಱುಂ ಋತುಗಳುಮಂ

ಗಂಧರ್ವರುಮಂ ಕಾಮದೇವನಂ ದಂಡನಾಯಕಂ ಮಾಡಿ ಪೇೞ್ದಾಗಳ್: **ಪಂಪಭಾ,** ೭. ೮೦ ವ)

ನೆಟ್ಟನೆ – [ಅ] ನಿಜವಾಗಿ (ಅನ್ವಿತಸುಕವಿಜನಂ ಮೆಚ್ಚೆ ನಿಚ್ಚಂ ಮನಂಗೊಳ್ವುದಱಿಂದಂ ನೆಟ್ಟನೀತಂ ಸುಕವಿಜನಮನೋಮಾನಸೋತ್ತಂಸಹಂಸಂ: **ಆದಿಪು,** ೧. ೨೬); [ಅ] ನೇರಾಗಿ (ಅೞಿದೆಂ ನೆಟ್ಟನೆ ಬೆಟ್ಟನೆ ಇಂತು ನುಡಿವೈ ನೀಂ ಕಂದ ಪೋಗು ಇಂದೆ ಕೆಟ್ಟು ಅೞಿದತ್ತಾಗದೆ ಸೋಮವಂಶಂ: **ಪಂಪಭಾ,** ೯. ೮೬)

ನೆಣ – [ನಾ] ಕೊಬ್ಬು (ಬಿಸುನೆತ್ತರ್ ನೆಣಂ ಅಡಗು ಎಲ್ವು ಸಮಸ್ತಂ ಸುರಿಯೆ ಕೈಗೆ ತೊವಲ್ ಉೞಿಯಲ್ ಅಗುರ್ವಿಸಿದುದು ತೀವಿದ ಗುಳ್ಳೆಯ ಪಸುಂಬೆಯಂ ಸೋರ್ಚಿದಂತೆ ತನು ಕೀಚಕನಾ: **ಪಂಪಭಾ,** ೮. ೭೭)

ನೆತ್ತ – [ನಾ] ಲೆತ್ತ, ಪಗಡೆಯಾಟ (ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ ಲಂಬಣಂ ಪಱಿಯೆ: **ಪಂಪಭಾ,** ೯. ೬೯)

ನೆತ್ತರ್ – [ನಾ] ರಕ್ತ (ಮಹೋರಗನೆಯ್ದೆ ಪಲ್ಗಳರ್ದೊಡೆ ಕಿಡಿವೀೞ್ ನೆತ್ತರೊಱ್ದುರ್ಚುಗೆ ಕೊಂಡುದು ತತ್ತಪಸ್ವಿಯಂ: **ಆದಿಪು,** ೨. ೪೦)

ನೆತ್ತಿಯೊಳಾನ್ – [ಕ್ರಿ] ಶಿರಸಾವಹಿಸು, ಶ್ರದ್ಧೆಯಿಂದ ಪಾಲಿಸು (ಈಶ ಶಾಸನಮಂ ನೆತ್ತಿಯೊಳಾಂತು ಬನ್ನಿಂ ಎಱಗಿಂ ಚಕ್ರೇಶ ಪಾದಾಬ್ಜದೊಳ್: **ಆದಿಪು,** ೧೪. ೩೧)

ನೆತ್ತಿಯೊಳೊತ್ತು – [ಕ್ರಿ] ಹಣೆಯಲ್ಲಿ ಊರು (ನಭಕ್ಕೆ ಪಾಱಿದುದು ಗಂಡರ ನೆತ್ತಿಯೊಳೊತ್ತಿ ಬಾಳಂ ಇನ್ನೂಱಿಗುಂ ಎಂದೊಡೆ ಏಂ ಪಿರಿದೋ ತೇಜದ ದಳ್ಳುರಿ ಪಾಂಡುರಾಜನಾ: **ಪಂಪಭಾ,** ೧. ೧೦೯)

ನೆನೆ – [ಕ್ರಿ] ಸ್ಮರಿಸು (ನೆನೆದಾಗಳ್ ನಿಜನಂದನೋಪಕೃತಮಂ ತದ್ದೇವನೆಯ್ತಂದು ದೇವನಿಕಾಯಂ ಬೆರಸಪ್ಪಿಕೊಂಡು: **ಆದಿಪು,** ೨. ೧೮)

ನೆನೆವೋ – ನೆನಪಿದೆಯೇ (ನೆನೆವೋ ರಾಗದಿನಾ ಯುಗಂಧರ ಜಿನೋಪಾಖ್ಯಾನಮಂ ಪೇಳ್ದುದಂ: **ಆದಿಪು,** ೩. ೭೩)

ನೆಪ್ಪು – [ನಾ] [ನೇರ್+ಪು, √ನೇರ್=ಕೊಲ್ಲು] ಕೊಲೆ (ನೆಪ್ಪಿಂಗೆ ನೆಪ್ಪುಗೊಳ್ಳದೆ ಮಾಣೇಂ ಎಂಬಂತೆ ಬಕಾಸುರನ ಮಗಂ ಅಳಂಭೂಷಂ ಅರ್ಜುನನ ಮಗಂ ಇಳಾವಂತನಂ ಅಂತಕಲೋಕಮನೆಯ್ದಿಸುವುದುಂ: **ಪಂಪಭಾ,** ೧೧. ೭ ವ)

ನೆಯ್ದಿಲ್ಗೊಳ – [ನಾ] ನೆಯ್ದಿಲೆಯ ಕೊಳ (ನೆನೆವ ಮನಂ ಪೆಱಗುೞಿದತ್ತೆನೆ ಬೆಳಗುವ ರತ್ನದೀಪ್ತಿ ಸುರಧನು ನೆಗೆದತ್ತೆನೆ ನೆಯ್ದಿಲ್ಗೊಳನಲರ್ದತ್ತೆನೆ ಕಣ್ಗಳ ಬಳಗಂ ಆಗಳ್ ಇಂದ್ರಂ ಬಂದಂ: **ಪಂಪಭಾ,** ೧೩೮)

ನೆರ – [ನಾ] ಆಧಾರ (ಎನ್ನ ಬಿಲ್ಲೆ ನೆರಂ ಎಂದು ವರೂಥಂಗಳಂ ತುರಿಪದೆ ತಾನೆ ಚೋದಿಸುತುಂ: **ಪಂಪಭಾ,** ೧. ೨೦೬) ನೆರವು, ಸಹಾಯ (ನೆರದೊಳ್ ಕೊಲ್ವಂತೆ ಎನಗೇಂ ಅರಿಯನೆ ಗಾಂಡೀವಧನ್ವಂ: **ಪಂಪಭಾ,** ೧೨. ೨೦೪)

ನೆರಂಬಡೆ – [ಕ್ರಿ] ಜೊತೆಗೂಡು (ಸಮದವಿಜಯಗಜ ವಿಶಾಲಕುಂಭ ಭಿತ್ತಿಪರಿಕ್ಷಿಪ್ತ ಸಾಂದ್ರಸಿಂದೂರರಜಮುಂ ನೆರಂಬಡೆಯೆ: **ಆದಿಪು,** ೧೧. ೩೫ ವ); [ಕ್ರಿ] ಜೊತೆಗೂಡಿಸಿಕೊ (ಮಹೇಂದ್ರನೀಲಮರಕತ ಮಣಿಭವನಂಗಳ ವಿಜಯಕಟಕ ಸಮದಗಜಸಮಜಂಗಳ ಕರ್ಪುಗಳೆಲ್ಲಮಂ ನೆರಂಬಡೆದು: **ಆದಿಪು,** ೧೨. ೪ ವ)

ನೆರಂಬೇೞ್ – [ಕ್ರಿ] ಸಹಾಯಕ್ಕಾಗಿ ನೇಮಿಸು (ವಾರಣಾವತಮನೊಂದೆ ದಿವಸದೊಳೆಯ್ದುವಂತಾಗೆ ರಥಮಂ ಸಮಕಟ್ಟಿ ನಾಲ್ಕುಲಕ್ಕ ಬಲಮಂ ನೆರಂಬೇೞ್ದು ಕೞಿಪಿದನಾಗಳ್: **ಪಂಪಭಾ,** ೨. ೯೨ ವ)

ನೆರಕೆ – [ನಾ] ಒಂದು ಬಗೆಯ ಬಾಣ (ನೆಱ್ದು ನಿರ್ವಾಯಂ ನರುವಾಯಂ ಮುಂಮೊನೆ ನೆರಕೆ ನಾರಾಚಂ ತಗರ್ತಲೆಯಂ: **ಪಂಪಭಾ,** ೧೩. ೩೯)

ನೆರಪು – [ಕ್ರಿ] ಒಂದು ಮಾಡು (ನಿಜತನೂಜೆಯಂ ಉತ್ಸವಮಂಗಳಾನಕಧ್ವನಿ ದೆಸೆಯಂ ಪಳಂಚಲೆವಿನಂ ನೆರಪೀಗಳೆ ವಜ್ರಜಂಘನೊಳ್: **ಆದಿಪು,** ೪. ೨೬); [ಕ್ರಿ] ಒಟ್ಟಾಗಿಸು (ಯುವತಿರೂಪಸರ್ವಸ್ವಮಂ ಆದರದೆ ಬಿದಿ ನೆರಪಿ ಲಲನಾಸ್ವರೂಪದಿಂ ನಿಱಿಸಿತು: **ಆದಿಪು,** ೬. ೮೦)

ನೆರಮಕ್ಕೆ – ನೆರವಾಗಲಿ (ಭೂಭುಜನ ದೋರ್ದಂಡಕ್ಕೆ ಪುಣ್ಯೋದಯಂ ನೆರಮಕ್ಕೆಂದು ಪಲುಂಬಿ ಪಂಬಲಿಪುದಾಯ್ತು ಅಂತಾಕುಳವ್ಯಾಕುಳಂ: **ಆದಿಪು,** ೧೨. ೧೨೫)

ನೆರಮಾಗು – [ಕ್ರಿ] ಬೆಂಬಲವಾಗು (ಭೂಭುಜನ ದೋರ್ದಂಡಕ್ಕೆ ಪುಣ್ಯೋದಯಂ ನೆರಮಕ್ಕೆ ಎಂದು ಪಂಬಲಿಸಿ ಪಲುಂಬಿ ಪಂಬಲಿಪುದಾಯ್ತಂತಾಕುಳವ್ಯಾಕುಳಂ: **ಆದಿಪು,** ೧೨. ೧೨೫)

ನೆರವಿ – [ನಾ] ಜನರ ಗುಂಪು (ನೆರದ ನೆರವಿ ವಿಸ್ಮಯಂಬಟ್ಟಿದೇಂ ನೋಡಿದಪ್ಪುದೇನಾನುಮೊಂದು ಕೌತುಕಮಾಗಲೆವೇಟ್ಟುಂ ಎಂದು: **ಆದಿಪು,** ೪. ೩ ವ); ಸಭೆ (ಆನಿರ್ದ ಸಭೆಯೊಳ್ ಅರ್ಘ್ಯಮಂ ಆನಲ್ಕೆ ಆೞಿಸಿದ ನಿನ್ನ ಬಿಸುನೆತ್ತರಂ ಇಂತು ಈ ನೆರವಿ ನೋಡೆ ಕುಡಿಯದೊಡೇನೋ ಶಿಶುಪಾಲನೆಂಬ ಪೆಸರೆಸೆದಪುದೇ: **ಪಂಪಭಾ,** ೬. ೫೫)

ನೆರವು – ಸಹಾಯ, ಬೆಂಬಲ (ಬೂತುತಪಂಗಳ್ ಎಮ್ಮ ಪುರ್ವಿನ ಕಡೆಯೊಂದು ಜರ್ವಿನೊಳೆ ತೀರ್ವುವು ಅವಲ್ಲದೆ ದೇವಬೆಂಬಲಂ ಮನಸಿಜನ ಈಗಳಾಱು ಋತುವುಂ ನೆರವೆಂದೊಡೆ ಸೋಲದಿರ್ಪರಾರ್: **ಪಂಪಭಾ,** ೭. ೮೧)

ನೆರೆ – [ಕ್ರಿ] ಜೊತೆಗೂಡು (ಮುನ್ನೊಡನೆ ದಿವಿಜಭೋಗಂಗಳಂ ಭೋಗಿಸಿರ್ದು ಈ ಭವದೊಳ್ ಬಂದಿಲ್ಲಿ ಜಾತಿಸ್ಮರರೆನೆ ನೆರೆದು: **ಆದಿಪು,** ೪. ೬೧); [ಕ್ರಿ] ಒಗ್ಗೂಡು (ಧನದೇವನುಂ ಎಣ್ಬರ್ ತನ್ನನುಜರುಂ ಅಹಮಿಂದ್ರರಾಗೆ ನೆರೆದು ಮುನ್ನಿನ ಭವದ ಪುಣ್ಯಕಲ್ಪಾವನಿಜದ ತನಿವಣ್ಣ ರಸದೆ ತಣ್ಣನೆ ತಣಿವಂ: **ಆದಿಪು,** ೬. ೪೮); [ಕ್ರಿ] ಗುಂಪಾಗು (ಪರಿಣಯನೋತ್ಸವಂ ರತಿಗನಂಗನೊಳಾಗೆ ವಸಂತಕಾಂತೆಯರ್ ನೆರೆದು ದಿಗಂಗನಾಸಮಿತಿಗೆ ಅಟ್ಟಿಱಿನೊಳ್ ಕುಡುವಲ್ಲಿ: **ಆದಿಪು,** ೧೧. ೧೧೭); [ಕ್ರಿ] ಕೂಡು, ಸಂಭೋಗಿಸು (ಇನಿಯಳನಟ್ಟೆಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ ಸೋಲ್ತಲಂಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ: **ಪಂಪಭಾ,** ೧. ೧೧೧); [ಕ್ರಿ] ಕೂಡು, ಸಂಭೋಗಿಸು (ಇನಿಯಳನಟ್ಟೆಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ ಸೋಲ್ತಲಂಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ: **ಪಂಪಭಾ,** ೧. ೧೧೧); [ಕ್ರಿ] ಸಿಕ್ಕು, ದೊರಕು (ಮತ್ತುೞಿದ ವಿದ್ಯೆಗಳ್ ಓಜರೆ ಚಟ್ಟರ್ ಎಂಬಿನಂ ನೆರೆದುವು ಗಳ ತನ್ನೊಳಾರ್ ದೊರೆ ಗುಣಾರ್ಣವನಂತು

ಕುಶಾಗ್ರಬುದ್ಧಿಗಳ್: **ಪಂಪಭಾ**, ೨. ३೪); **[ಕ್ರಿ]** ಸೇರಿಕೊ (ಅರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಂ ಮಗುಳ್ದುಂ ಬಿಱುತು ಓಡಿ ಬೇಡರೊಳ್ ನೆರೆದಿರಲ್ ಒಡ್ಡಯಿಸಿ ರಾಜ್ಯದೊಳೇಂ ನೆರೆಯಲ್ಕೆ ತೀರ್ಗುಮೋ: **ಪಂಪಭಾ**, ೮. ೮೫)

ನೆರೆಮನೆ – [ನಾ] ಪಕ್ಕದ ಮನೆ (ಅದು ಅಭ್ಯುದಯಸುಖನಿಳಯಂ ಅದು ಮೋಕ್ಷದ ನೆರೆಮನೆ ಲಂಬಮಾನಮುಕ್ತಾದಾಮಂ: **ಆದಿಪು**, ೬. ३೬)

ನೆರೆಯಲರ್ – **[ಕ್ರಿ]** ಪೂರ್ಣವಾಗಿ ಅರಳು (ನೆರೆಯಲರ್ದ ಅಂಭೋರುಹದ ಅಲರ್ದುಱುಗಲಂ ಅಲೆದೊಗೆದುವು ಎಸೆಯೆ ಜಲದೇವತೆಗಳ್ ನಿಜೆವಿಡಿಯಲ್ ನಿಮಿರ್ಚಿದ ಕುಱುವಡಿಯ ತರಂಗದಂತೆ ಬಂಬಲ್ದೆರೆಗಳ್: **ಪಂಪಭಾ**, ೫. ೫೭)

ನೆರ್ಮ – [ನಾ] ಆಸರೆ, ಆಧಾರ (ಧರ್ಮಾಧರ್ಮಕ್ರಿಯೆಗಳೆ ನೆರ್ಮಂ ಜೀವಕ್ಕೆ ಮನುಜಗತಿಯೊಳ್ ಮಾಟ್ಕುಂ: **ಆದಿಪು**, ೫. ೭೮)

ನೆರ್ಮು – [ನಾ] ಆಸರೆ, ಆಶ್ರಯ (ಧರ್ಮಾರ್ಥಕಾಮಮೆಂಬಿವು ಧರ್ಮಾರ್ಥಿಜನಕ್ಕೆ ನೆಱಿದ ನೆರ್ಮು: **ಆದಿಪು**, ೧೦. ೫೦); **[ಕ್ರಿ]** ಒರಗಿಕೊ (ಪೂತಚೂತಮಂ ನೆರ್ಮಿದ ಅಶೋಕವಲ್ಲರಿಯ ಪಲ್ಲವಮೊಂದನೆ ಕೊಯ್ದು ರಾಗದಿಂ ಸೋರ್ಮುಡಿಯೊಳ್ ತಗುಳ್ಚಿದೊಡೆ: **ಪಂಪಭಾ**, ೫. ೮೨)

ನೆಲ – [ನಾ] ಭೂಮಿ (ಫಲವ್ರಾತದಿಂ ನೆಲನಂ ಮೋದುವ ಮಾತುಳುಂಗಮೆಸೆಗುಂ ವಿದ್ಯಾಧರೋದ್ಯಾನದೊಳ್: **ಆದಿಪು**, ೧. ೬೭); [ನಾ] ಆಕ್ರಮಿಸಿಕೊಂಡ ಭೂಭಾಗ (ಈತನ ಕಟಕಕ್ಕೆ ನಿತ್ಯಕ್ಷಯವ್ಯಯಪ್ರತ್ಯವಾಯಂಗಳಂ ಮಾಡಿ ಬೇಸಱಿಸಿ ನೆಲದಿಂ ತೆರಳ್ಚುವಂ: **ಆದಿಪು**, ೧३. ೫೮ ವ); [ನಾ] ಭೂಮಿಯ ಜನ (ಚಕ್ರವರ್ತಿಯಾಜ್ಞೆಯಿಂದಂ ನೆಲನೆಲ್ಲಂ ಬಂದು ಕೊಳ್ವೊಡಂ ವದ ಕನಕರಾಶಿಯುಂ: **ಆದಿಪು**, ೧೫. ३ ವ); [ನಾ] ಭೂಮಿಯಲ್ಲಿನ ರಾಜ್ಯಗಳು (ಸಾಗರಾಂತಂ ನೆಲಂ ಎನಿತು ಅನಿತುಮಂ ಚಕ್ರದಿಂ ಬೆಸಕೈಸಿ ವಜ್ರನಾಭಿಯಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿ: **ಆದಿಪು**, ೧೬. ೫೮)

ನೆಲದ ಕಲ್ಲೆ – [ನಾ] ನೆಲದ ಬೇಲಿ ಎಂದರೆ ಸಮುದ್ರ (ಆಕಾಶದ ಕವಿಯುಂ ನೆಲದ ಕಲ್ಲೆಯುಂ ಮುನ್ನಮೆ ಮೇರೆದಪ್ಪುವುದುಮಂ ತನ್ನೊಳ್ ಅಳವಡಿಸಿಕೊಂಡು ತಾಗಿದಾಗಳ್: **ಪಂಪಭಾ**, ೧೨. ೧೯ ವ)

ನೆಲಗಟ್ಟಿಸು – **[ಕ್ರಿ]** ನೆಲಗಟ್ಟು ರಚನೆಮಾಡು (ಗಟ್ಟಿಸಿ ಸೆಂದುರದೊಳ್ ನೆಲಗಟ್ಟಿಸಿ ಚೆಂಬೊನ್ನ ನೆಲೆಯ ಚೌಪಳಿಗೆಗಳೊಳ್ ಕಟ್ಟಿಸಿ ಪಟಿಯಿಗೆಗಳಂ ಅಳವಟ್ಟಿರೆ ಬಿಯಂ ಅಲ್ಲಿ ಮೊಟಿಗೆ ಪಲವುಂ ಪಱಿಗಳ್: **ಪಂಪಭಾ**, ೨. ೬೬)

ನೆಲಗಟ್ಟು – [ನಾ] ಧಮ್ಮಸ್ಸುಮಾಡಿದ ಸಮತಟ್ಟಾದ ನೆಲ (ಪಚ್ಚೆಯ ನೆಲಗಟ್ಟಿನೊಳಂ ರಾಜಾವರ್ತದ ಕಂಬದೊಳಂ: **ಪಂಪಭಾ**, ३. ೭೪ ವ)

ನೆಲದಾಕಾಶದೆಡೆ – [ನಾ] ನೆಲ ಆಕಾಶಗಳ ನಡುವಣ ಜಾಗ (ನೋಯಲೀಯದೆ ನೆಲದಾಕಾಶದೆಡೆಯೊಳ್ ಅಂಬುಗಳಂ ತರತರದಿಂದೆಚ್ಚು ಸೋಪಾನಂ ಮಾಡಿ: **ಪಂಪಭಾ**, ೭. ३೮ ವ)

ನೆಲನಂ ಬರೆ – **[ಕ್ರಿ]** ನಾಚಿಕೆಯಿಂದಾಗಿ ಕಾಲ ಬೆರಳಿನಿಂದ ನೆಲದ ಮೇಲೆ ಗೀಚು (ನಾಣ್ಚಿ ತಲೆಯಂ ಬಾಗಿ ನೆಲನಂ ಬರೆಯುತ್ತುಂ ನೀರೊಳ್ ಮುಱುಗಿದರಂತೆ ಉಮ್ಮನೆ ಬೆಮರುತ್ತುಂ ಉಮ್ಮಳಿಕೆವಂದು ಬೆಚ್ಚನೆ ಸುಯ್ದೊಡೆ: **ಪಂಪಭಾ**, ೪. ೬೪ ವ)

ನೆಲಸು – **[ಕ್ರಿ]** ಇರು (ನೆಲಸಿರ್ದಪ್ಪುದು ಅಧಸ್ಸ್ಥಳಂಬಿಡಿದು ಅಧೋಲೋಕಂ: **ಆದಿಪು**, ೧. ೫೦); **[ಕ್ರಿ]** ಸ್ಥಿರವಾಗಿರು (ಒಲಿಸುವ ರೂಪು ಗಾಡಿಯೊಳೊಡಂಬಡೆ ಗಾಡಿ ವಿಳಾಸದೇಟಗ್ಗಿಯೊಳ್ ನೆಲಸೆ: **ಆದಿಪು**, ೧. ೭೨); **[ಕ್ರಿ]** ನೆಲೆಗೊಳ್ಳು (ನೆಲಸುಗೆ ನಿನ್ನ ವಕ್ಷದೊಳೆ ಭಟಖಡ್ಗಮಂಡಲೋತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ: **ಆದಿಪು**, ೧೪. ೧३೦)

ನೆಲೆ – [ನಾ] [ಜೈನ] ಗುಣನಿಲಯ, ಗೃಹಸ್ಥ ಶ್ರಾವಕರ ದಾರ್ಶನಿಕ, ವ್ರತಿಕ, ಸಾಮಯಿಕ, ಪ್ರೋಷಧೋಪವಾಸ, ಸಚ್ಚಿತ್ತವಿರತ, ರಾತ್ರಿಭಕ್ತ, ಬ್ರಹ್ಮಚಾರಿ, ಆರಂಭನಿವೃತ್ತ, ಪರಿಗ್ರಹವಿರತ, ಅನುಮತಿವಿರತ ಮತ್ತು ಉದ್ದಿಷ್ಟವಿರತ ಎಂಬ ಹನ್ನೊಂದು ನೆಲೆಗಳು (ತಪನೀಯಸೂತ್ರದೊಳ್ ಏಕಾದ್ಯೇಕೋತ್ತರ ದಶಾಂತಂಬರಂ ಅವರವರ ನೆಲೆಗಳೊಳ್ ಬ್ರಹ್ಮಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ: **ಆದಿಪು**, ೧೫. ೧೧ ವ); [ನಾ] ಗಂತವ್ಯ, ಸೇರಬೇಕಾದುದು (ಅಖಿಳಮಲವಿಲೇಪನದಿಂದಂ ಪುರುಪರಮೇಶ್ವರಂ ಐದಿದ ಪರಮಪದಂ ನಮಗದುವೆ ನೆಲೆ ಪೆಱತುಂಟೇ: **ಆದಿಪು**, ೧೬. ೫೭); [ನಾ] ಮಾಡ (ಗಟ್ಟಿಸಿ ಸೆಂದುರದೊಳ್ ನೆಲಗಟ್ಟಿಸಿ ಚೆಂಬೊನ್ನ ನೆಲೆಯ ಚೌಪಳಿಗೆಗಳೊಳ್ ಕಟ್ಟಿಸಿ: **ಪಂಪಭಾ**, ೨. ೬೬); [ನಾ] ಮಹಡಿ (ಸುಧಾಧವಳಿತ ಉತ್ತುಂಗ ರಮ್ಯಹರ್ಮ್ಯದೆರಡನೆಯ ನೆಲೆಯ ಚೌಪಳಿಗೆಯ ಮುಂದಣ ರಮ್ಯಹರ್ಮ್ಯಾಗ್ರದೊಳೆ: **ಪಂಪಭಾ**, ೪. ೫೨ ವ); [ನಾ] ಆಶ್ರಯ, ಆವಾಸ (ತಳತಳಿಸಿ ಪೊಳೆವ ಮಾವಿನ ತಳಿರ್ಗಳಶೋಕೆಗಳ ಮಿಸುಪ ಲತೆಗಳ ನೆಲೆ ಬಳ್ವಳ ಬಳೆದ ಬೇಟದುರುಳಿಯ ಬಳಗಂ: **ಪಂಪಭಾ**, ೫. ३); [ನಾ] ವಾಸಸ್ಥಾನ (ಅಲಸದೆ ಅಱಿದು ಇಂತು ಬಲ್ಮೆಗೆ ಬೆರಲೆತ್ತಿ ಪಚ್ಚೆಯಂ ನೆಲೆಗಳಂ ಕಿಡಲೀಯದೆ: **ಪಂಪಭಾ**, ೫. ೪೬); **[ಕ್ರಿ]** ಸೇರು (ಆ ಬ್ರಾಹ್ಮಣಸಮಿತಿ ಬೇಳೆ ದೇವರ್ ತಣಿಯುಂಡರ್ ನೆರೆದು ದಿವ್ಯ ಹವ್ಯಾಮೃತಮಂ: **ಪಂಪಭಾ**, ೬. ३೭); [ನಾ] ಇರುವ ಜಾಗ, ಮಟ್ಟ (ತಲೆಯ ನೆಲೆಗೆ ಲೋಕಾಂತರಕೆ ಎಡೆಯಿಲ್ಲ ಎನಿಸೆ ಪೆರ್ಚಿದಂ ದನುತನಯಂ: **ಪಂಪಭಾ**, ೧೨. ೧೧)

ನೆಲೆಗಾಣ್ – **[ಕ್ರಿ]** ಸ್ವರೂಪವನ್ನು ಕಾಣು (ಪೇಸಿದೆಂ ನೆಲೆಗಂಡು ಅಂತೆ ನೆಲಕ್ಕೆ ಗೆಲ್ದೊಡಂ ಅದಂ ಚಿಃ ಮತ್ತಮಾನಾಳ್ವೆನೇ: **ಪಂಪಭಾ**, ೧३. ೧೭)

ನೆಲೆಗೊಳ್ – ವಾಸಿಸು (ಕಡೆವಿಡಿದು ಬಳಸಿ ನೀರಿರೆ ನಡುಬತ್ತಿದ ಕೆಱಿಯಂ ಕಂಡುದಱಿಂದಂ ನಡುನಾಡೊಳ್ ಅಱಂ ನೆಲಸದೆ ಕಡೆಯೊಳ್ ನೆಲೆಗೊಳ್ಗುಂ: **ಆದಿಪು**, ೧೫. ೪೦)

ನೆಲೆಮಾಡ – [ನಾ] ಪ್ಪರಿಗೆ (ನೆಲೆಮಾಡಂಗಳೊಳೋಳಿವಟ್ಟ ಗುಡಿಗಳ್ ಗಂಧಾಂಬುವಿಂದಾದ ಪೂವಲಿಯಿಂ ಚೆಲ್ವೆಸೆದಿರ್ದ ಬೀದಿಗಳ್: **ಆದಿಪು**, ೭. ೧೧३)

ನೆಲೆಮಾಡು – [ಕ್ರಿ] ತಳಕ್ಕೆ ಹೋಗು (ಆತನ ವಿಜಯಾರ್ಧಸೈನ್ಯಕ್ಕೆ ತಡೆಯದೆ ಪಾಯಲ್ಕೆ ವೇಟ್ಕುಮೆಂಬಂತೆ ನೆಲೆಮಾಡಿದ ಮಹಾನದೀನದಂಗಳುಂ: **ಆದಿಪು**, ೧೧. ೫ ವ)

ನೆಲೆಮೊಲೆ – [ನಾ] ಸ್ಥಿರ ಮೊಲೆ (ಅಲಘುನಿತಂಬದ ಪೊಯ್ಲೊಳ್ ನೆಲೆಮೊಲೆಯಳ್ಳೇಱೆನೊಳ್ ತೂಳ್ದಲಱುಗುಂ: **ಆದಿಪು**, ೧೧. ೧೪೬)

ನೆಲೆವಡಲಗೆ – [ನಾ] [ನೆಲೆ+ಪಡಲಗೆ] ಅಗಲವಾದ ಬೋಗುಣಿ (ಪಚ್ಚೆಯ ಪಸಲೆಯ ಪಸುರನಸಕಟೆದು ನಿಮಿರ್ದ ನೆಲವಡಲಗೆಯ ಜಾಗಂಗಳುಮಂ: **ಆದಿಪು**, ೮. ೧೫ ವ)

ನೆಲೆವೀಡು – [ನಾ] ನೆಲಸಿರುವ ಬೀಡು, ಬಿಡಾರ (ನೆಲೆವೀಡಂ ಬೀಡುಮಾಡಲ್ ಕೆಲವು ದಿವಸಮಂ ಮಾಱ್ಪುದಿನ್ನಿಲ್ಲಿ ರೂಪ್ಯಾಚಲಮಂ: **ಆದಿಪು**, ೧೩. ೨೦)

ನೆಲೆವೆರ್ಚಿಸು – [ಕ್ರಿ] ಉಕ್ಕಿಸು (ಅಂತು ಕಾಮರಾಗರಸಸಾಗರಮಂ ನೆಲೆವೆರ್ಚಿಸುವ ಶರಚ್ಚಂದ್ರಾತಪದೊಳ್ ಪಗಲಿನ ಶರದಾತಪಪರಿಶ್ರಮಮನಾಱಿಸಿ: **ಆದಿಪು**, ೧೨. ೧೧ ವ)

ನೆಲೆವೆರ್ಚು – [ಕ್ರಿ] ಏಳಿಗೆಯಾಗು (ಪೆರ್ಚುಗೆ ಭರತಕುಲಂ ನೆಲೆವೆರ್ಚುಗೆ ನಿಮ್ಮೆರಡು ತಂಡಂ ಒದವಿದ ನಣ್ಪಿಂ ಕರ್ಚುಗೆ ಕಲುಷಂ: **ಪಂಪಭಾ**, ೧೩. ೬೭)

ನೆಲೆವೊಟ್ಟು – [ನಾ] [ನೆಲೆ+ಬೊಟ್ಟು] ಸುಂದರ ತಿಲಕ (ಪುರ್ಬೆಂಬ ಕರ್ಬಿನ ಬಿಲ್ಲಿಂ ಬರ್ದುಂಕಿದ ಮದನನ ಅಲರೆಂಬಿನಂ ಇಂಬಾಗಿರ್ದ ನೆಲೆವೊಟ್ಟುಂ: **ಆದಿಪು**, ೪. ೪೧ ವ)

ನೆವ – [ನಾ] ನೆಪ, ಕಾರಣ (ಸುಯೋಧನಂ ಎನಗೆ ಒಳ್ಳಿಕೆಯ್ದ ಕೃತಮಂ ಪೆಱಗಿಕ್ಕಿ ನೆಗೞ್ತೆ ಮಾಸೆ ನಣ್ಪಿನ ನೆವದಿಂದೆ ಪಾಂಡವರಂ ಆಂ ಒಳವೊಕ್ಕಡೆ ನೀಮೆ ಪೇಸಿರೇ: **ಪಂಪಭಾ**, ೯. ೬೮)

ನೆಳಲಪಾಣಿ – [ನಾ] ಒಂದು ಬಗೆಯ ಬಟ್ಟೆ (ನೆಳಲಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ: **ಆದಿಪು**, ೪. ೩೪ ವ)

ನೆಱ – [ನಾ] ಸತ್ವ (ಶನಿ ನಿಲ್ವವೊಲಿಲ್ಲಿ ಪಾಟೆಗಿನ್ನೆವರಂ ಇರ್ದವು ಇನ್ನೆಮಗೆ ನಿತ್ತರಿಸಲ್ ನೆಱವಿಲ್ಲ: **ಆದಿಪು**, ೯. ೮೯); [ನಾ] ಇರುವಿಕೆ (ವನತರುಪತ್ರಂಗಳಂ ಒಯ್ಯನೆ ನೆಲೆಯಿಂ ಪತ್ತುವಿಡಿಸಿ ಕಳಿಕೆಗಮುತ್ಪತ್ತಿನಿಮಿತ್ತಮಾಗಿ ಶಿಶಿರಂ ಇನಿಸಿನಿಸನೆ ತನ್ನ ನೆಱನನಱಿಪಿದುದೀಗಳ್: **ಆದಿಪು**, ೧೧. ೯೧)

ನೆಱಗೊಳ್ – [ಕ್ರಿ] ಮನಸ್ಸನ್ನು ಗೆಲ್ಲು (ಕೊಳಲ್ವಾದಕರ್ ಬಂದಿರೆ ಗೀತಾರಾವದಿಂದಂ ನೆಱೆಯೆ ನೆಱಗೊಳಲ್ ರಕ್ತಕಂಠೀಜನಂ ಬಂದಿರೆ: **ಆದಿಪು**, ೨. ೩)

ನೆಱನ್ – [ನಾ] ಮರ್ಮ (ಎನ್ನ ಅಱೆಯಮಿಕೆಗೆ ಸೈರಿಸು ಎಂದು ನೀನ್ ಸಭೆಯೊಳ್ ಕಾಲ್ಗೆಱಗು ಕೊಲ್ಲೆಂ ಎಂದು ಎರ್ದೆತೆಱೆವಿನೆಗಂ ಹರಿಯ ನೆಱನಂ ಅಸುರಂ ನುಡಿದಂ: **ಪಂಪಭಾ**, ೬. ೫೮); [ನಾ] ದೌರ್ಬಲ್ಯದ ಜಾಗ (ಅಂಬುಜೋದರಂ ಬಿಚ್ಚಳಿಸುವ ನೆವದೊಳ್ ಎಮ್ಮಮ್ಮಂಗಕ್ಕುಂ ಎಂದು ಎಂದು ತೊಡೆಯಂ ಪೊಯ್ದು ಆರ್ವುದುಂ ದುರ್ಯೋಧನನ ನೆಱನ್ ಎಂದಱೆದು: **ಪಂಪಭಾ**, ೧೩. ೯೫ ವ)

ನೆಱಪು – [ಕ್ರಿ] ಮಾಡು, ನೆರವೇರಿಸು (ಪೂರ್ವೋಕ್ತ ಬಾಹುಲ್ಯದಿಂ ಲೋಕಾಕಾಶ ವ್ಯಾಪಕಕವಾಟಕ್ರಿಯೆಯಂ ನೆಱೆಪಿ: **ಆದಿಪು**, ೧೬. ೪೯ ವ); [ಕ್ರಿ] ಪೂರ್ತಿಗೊಳಿಸು (ನಿನ್ನೊಡನೆ ವಂದು ದಿವದೊಳ್ ನಿನ್ನ ಮನೋರಥಮನರಸ ನೆಱಪದೆ ಮಾಣೆಂ; **ಪಂಪಭಾ**, ೨. ೨೧); [ಕ್ರಿ] ತೀರಿಸು (ವೃಕೋದರಂ ತನ್ನ ತಳೋದರಿಯ ಮುಖಮಂ ನೋಡಿ ನಿನ್ನೆನ್ನ ಪ್ರತಿಜ್ಞೆಯಂ ನೆಱಪುವಂ ಬಾ ಎಂದು ಕೆಲದೊಳ್ ಕುಳ್ಳಿರಿಸಿ: **ಪಂಪಭಾ**, ೧೨. ೧೫೨ ವ)

ನೆಱಲ್ – [ಕ್ರಿ] ಒರಗು (ಕಾವನ ಅಂಬು ಅವಱ ಬಿಣ್ಪಿನೊಳ್ ಒಯ್ಯನೆ ಜೋಲ್ದವೋಲೆ ತಾಂಬೂಲ ಕರಂಕವಾಹಿನಿಯ ಮೇಲೆ ನೆಱಲ್ದಿರೆ ಬಾಲೆ ಲೀಲೆಯಿಂ: **ಪಂಪಭಾ**, ೪. ೪೩); [ನಾ] ಒಪ್ಪ, ಓರಣ (ಸಾಲ್ವ ಸಗ್ಗದ ಪೊಸದೇಸಿಯೋಳಿಗಳಿಂ ಒರ್ವಳ್ ಒಱಲ್ದು ನೆಱಲ್ದು ಪಾಡಿದಳ್: **ಪಂಪಭಾ**, ೭. ೯೦); [ಕ್ರಿ] ನಿಶ್ಶೇಷವಾಗು (ಶಲ್ಯನಾಗಳೆ ರಣದೊಳ್ ನೆಱಲ್ದೊಡೆ ಅವನಂ ಪೆಱಗಿಕ್ಕಿ ಸುರಾಪಗಾತ್ಮಜಂ: **ಪಂಪಭಾ**, ೧೦. ೧೧೫)

ನೆಱಲ್ದಿರು – [ಕ್ರಿ] ನಿಶ್ಶೇಷಿತವಾಗಿರು (ಇಡಿದಿರೆ ರೋಮಕೂಪದೊಳಗೆ ಉರ್ಚಿದ ಸಾಲ ಸರಲ್ಗಳುಂ ತೆಱಂಬಿಡಿದಿರೆ ಬೆಟ್ಟು ಒಗ್ಗುಡಿಸಿದಂತೆ ನೆಱಲ್ದಿರೆ .. .. ಬಿಟ್ಟಂ ಏನೆಸೆದನೋ ಶರಶಯ್ಯೆಯೊಳ್ ಅಂದು ಸಿಂಧುಜಂ: **ಪಂಪಭಾ**, ೧೩, ೬೨)

ನೆಱವು – [ನಾ] ಪುಷ್ಟಿ (ನೆಱವಂ ತಾಳ್ದಿದಪಾಸ್ತದುರ್ನಯ ತಮೋಬಂಧಂ ಶ್ರುತಸ್ಕಂಧಮಾದಱೆವಿಂದಂ ಗಣನಾಯಕರ್ ಸಮಱೆ: **ಆದಿಪು**, ೧. ೩೯): [ನಾ] ಸಾಧನ ಸಂಪತ್ತು (ಅಱೆವುಂ ನೆಱವುಂ ತನ್ನೊಳ್ ನೆಱೆದಂದಱೆದಱೆಳ್ ಎಸೆಪುದು: **ಆದಿಪು**, ೩. ೬೭); [ನಾ] ಸಂಚಯನ (ಮುಱುಕದ ಮೆಲ್ಪಿನ ಭಂಗಿಯ ನೆಱವಿನೊಳಿವೆ ಮಿಗಿಲ್ ಅವರ್ಕಂ: **ಆದಿಪು**, ೧೧. ೯೫)

ನೆಱೆ – [ಕ್ರಿ] ನೆರವೇರು (ನೆಱೆದತ್ತೆತ್ತಾನುಂ ಈ ದಂಪತಿಯ ಬಯಕೆ ಸಂಪೂರ್ಣಮಾಯ್ತುತ್ಸವಂ: **ಆದಿಪು**, ೪. ೪೮); [ಕ್ರಿ] ಪುಷ್ಟಗೊಳ್ಳು (ಉಜ್ಜ್ವಳ ಪಂಚರತ್ನ ಭಾಸ್ವದಸದನಂಗಳಿಂ ನೆಱೆದುದಂ ಸಮೆದಂ ಪುರಮಂ ಪುರಂದರಂ: **ಆದಿಪು**, ೬. ೮೯); [ಗು] ಸಂಪೂರ್ಣವಾಗಿ (ಎಂದವರ ದೇಶನಾಮಕುಲಗೋತ್ರಂಗಳಂ ನೆಱೆಯೆ ತಿಳಿಯೆ: **ಆದಿಪು**, ೧೩. ೪೧ ವ); [ಗು] ಸಮಾನಶಕ್ತವಾಗು (ಮೃಗವ್ರಜದೊಡ್ಡೇಂ ಮೃಗರಾಜನಂ ನೆಱೆವುದೇ: **ಆದಿಪು**, ೧೩. ೫೭); ಸಮರ್ಥವಾಗು (ನಿನ್ನೀ ಬೆಸಸಿದ ಚಕ್ರಮದೆನ್ನೀ ದೇಹಾದ್ರಿಯಂ ಗೆಲಲ್ ನೆಱೆಯದು: **ಆದಿಪು**, ೧೪. ೧೨೯); [ಕ್ರಿ] ಸೇರು (ಅಂತು ಸ್ವಯಂಬರದೊಳ್ ನೆಱೆದರಸುಮಕ್ಕಳೊಳ್ ಅಪ್ಪುಕೆಯ್ದ ಕುಂತಿಯೊಡನೆ ಮದ್ರರಾಜನ ಮಗಳ್ ಶಲ್ಯನೊಡವುಟ್ಟಿದ ಮಾದ್ರಿಯುಮನೊಂದೆ ಪಸೆಯೊಳಿರಿಸಿ: **ಪಂಪಭಾ**, ೧. ೧೦೬ ವ); [ಕ್ರಿ] ತುಂಬಿಕೊಳ್ಳು (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱೆದ ನಿತಂಬ ಇಂಬುವಡೆದ ಒಳ್ತೊಡೆ ನೆಕ್ಕರವದ್ದೆ ತಾನೆ ಪೋ ಕಿಱುದೊಡೆ : **ಪಂಪಭಾ**, ೧. ೧೦೮); [ಕ್ರಿ] ತುಂಬು (ಅಂತು ಕೊಂತಿಯ ಗರ್ಭಭಾರಮುಂ ತಾಪಸಾಶ್ರಮದ ಅನುರಾಗಮುಂ ಒಡನೊಡನೆ ಬಳೆಯೆ ಬಂಧುಜನದ ಮನೋರಥಂಗಳುಂ ಒಂಬತ್ತನೆಯ ತಿಂಗಳುಂ ನೆಱೆಯೆ: **ಪಂಪಭಾ**, ೧. ೧೨೦

ವ); [ನಾ] ಸಾಕಾಗು (ಚಾಗಕ್ಕೆ ಬೂತುಂ ಭೋಗಕ್ಕೆ ಪೊೞ್ತುಂ ನೆಱೆಯದೆನಿಸಿ: **ಪಂಪಭಾ,** ೪. ೧ ವ); [ಕ್ರಿ] ಪೂರ್ತಿಯಾಗು (ಪನ್ನೆರಡು ವರುಷದವಧಿಯುಂ ಇಂ ನೆಱೆಯಲ್ ಬಂದುದು ಅಹಿತಂ ಇಳೆಯಂ ಕುಡಂ ಆಸನ್ನಂ ಕಾಳೆಗಂ: **ಪಂಪಭಾ,** ೭. ೬೪); [ಕ್ರಿ] ಚೆನ್ನಾಗಿ (ಮತ್ತವಾರಣನಿವಹಕ್ಕೆ ತಕ್ಕಿನ ಅಭಿಮನ್ಯುವ ಕೂರ್ಗಣೆ ಪಾಯ್ದು ನುಂಗಲುಂ ನೊಣೆಯಲುಂ ಉರ್ಚಿಮುಕ್ಕಲುಂ ಇದೇಂ ನೆಱೆ ಕಲ್ತುವೊ ಯುದ್ಧರಂಗದೊಳ್: **ಪಂಪಭಾ,** ೧೧. ೯೪); [ಕ್ರಿ] ಸಜ್ಜುಗೊಳ್ (ಎನ್ನ ವರೂಥಕೇತನಕವಚಂಗಳಿಂ ನೆಱೆದು ತಳ್ತಿಱಿ ನೀಂ ಜಗದೇಕಮಲ್ಲನೊಳ್: **ಪಂಪಭಾ,** ೧೧. ೧೩೮); [ಕ್ರಿ] ಸಮರ್ಥವಾಗು (ನೆಱೆದು ನಿರ್ವಾಯಂ ನರುವಾಯಂ ಮುಂಮೊನೆ ನೆರಕಿ ನಾರಾಚಂ ತಗರ್ತಲೆಯುಂ: **ಪಂಪಭಾ,** ೧೩. ೩೯)

ನೆಱೆಗೊಳ್ – [ಕ್ರಿ] [ನೆಱೆ+ಕೊಳ್] ಸಂಪೂರ್ಣವಾಗಿ ಮನಸೆಳೆ (ನೆಱೆಗೊಳೆ ಗಾಡಿ ನೋಟ್ಟಿ ಬಗೆ ಬರ್ಪುದುಂ: **ಪಂಪಭಾ,** ೪. ೭೬)

ನೆಱೇದಿಸು – [ಕ್ರಿ] ರಭಸವಾಗಿ [ಬಾಣ] ಪ್ರಯೋಗಿಸು (ಇನ್ನಿವನಂ ಪಡಲ್ವಡಿಪೆಂ ಎಂದಿರದಾಗಳೆ ಭಾರ್ಗವಾಸ್ತ್ರದಿಂದಂ ನೆಱೆದೆಚ್ಚಂ ದ್ರುಪದರಾಜಶಿರೋಂಬುಜಮಂ ಘಟೋದ್ಭವಂ: **ಪಂಪಭಾ,** ೧೨. ೨೩)

ನೆಱೆಯೆ – [ಗು] ಚೆನ್ನಾಗಿ (ಕೂಸಂ ನೆಱೆಯೆ ಕೆಯ್ಗೆಯ್ಸಿಂ ಎಂದು ಮುನ್ನಂ ಕೆಯ್ಗೆಯ್ಯುತಿರ್ದ ತಱದ ಗುಱಗೆಯರಪ್ಪ ಅಂತಃಪುರ ಪುರಂಧ್ರಿಯರಂ ಕರೆದು ಪೇೞ್ವುದುಂ: **ಪಂಪಭಾ,** ೩. ೪೪ ವ)

ನೆಱೆವೆಂ – ಸಮರ್ಥನಾಗಿದ್ದೇನೆ (ಉಱದೆ ಇದಿರಾಂತು ನಿಂದ ರಿಪುಸೈನ್ಯಮಂ ಆಹವರಂಗದಲ್ಲಿ ತತ್ತಱದಱಿದು ಇಕ್ಕಲ್ ಆಂ ನೆಱೆವೆಂ ಇನ್ನಿರವೇಡ ಒಡಗೊಂಡು ಪೋಗು: **ಪಂಪಭಾ,** ೧೧. ೯೭)

ನೆಟಿಲ್ – [ನಾ] ಪ್ರತಿಬಿಂಬ (ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂದ್ರಾಳಯದಿಂದಮುರ್ಚಿದ ಫಣಾಮಣಿಮಂಗಳರಶ್ಮಿಯೋ: **ಪಂಪಭಾ,** ೧. ೯೬); [ನಾ] ನೆರಳು (ಸುರಕುಜದ ನೆಟಿಲೊಳ್ ಅಂಗಣದೊಳೇನುಂ ಅಲಪಿಲ್ಲದೆ ಕಟ್ಟಿರೆ ಕಾಮಧೇನು: **ಪಂಪಭಾ,** ೪. ೧೦)

ನೇತೃ – [ನಾ] ಯಜ್ಞಕರ್ಮ ಮಾಡಿಸುವ ಮುಖ್ಯ ಪುರೋಹಿತ (ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ ಉದ್ಗಾತೃ ನೇತೃ ಹೋತೃ ಜಮದಗ್ನಿ ಆದಿಗಳಪ್ಪ ಷೋಡಶರ್ ಋತ್ವಿಜರ್ಕಳಿಂ: **ಪಂಪಭಾ,** ೬. ೩೩ ವ)

ನೇತ್ರ – [ನಾ] ರೇಷ್ಮೆ ಬಟ್ಟೆ (ಪಯಃಪಯೋಧಿ ಫೇನಸಂಕಾಶ ದುಕೂಲೋಪಪ್ರಚ್ಛತ್ ಆಚ್ಛಾದಿತ ವಿಚಿತ್ರ ನೇತ್ರ ಉಭಯೋಪಧಾನ ಶಯ್ಯಾತಳದೊಳ್: **ಆದಿಪು,** ೫. ೨೨ ವ); [ನಾ] ಕಣ್ಣು (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ)

ನೇತ್ರಜಲಬಿಂದು – [ನಾ] ಕಣ್ಣೀರ ಹನಿ (ಒಯ್ಯನೊಯ್ಯನೆ ಎಯ್ದಿದುವು ವಿಲೋಲನೇತ್ರಜಲಬಿಂದುಗಳ್ ಆಕೆಯ ನಿಮ್ನನಾಭಿಯಂ: **ಪಂಪಭಾ,** ೫. ೯)

ನೇತ್ರತ್ರಿಭಾಗ – [ನಾ] ಕಡೆಗಣ್ಣು (ಬಂದೆಱಗಿದ ರಾಜಚಕ್ರಮಂ ಅನುಕ್ರಮದೊಳೆ ನೇತ್ರತ್ರಿಭಾಗ ಕಟಾಕ್ಷ ಸಮಗ್ರೇಕ್ಷಣಭ್ರೂವಿಭ್ರಮ ದರಹಸಿತಾಳಾಪ: **ಆದಿಪು,** ೧೧. ೨೫ ವ)

ನೇತ್ರಪಟ್ಟಿಕಾ – [ನಾ] ಕಣ್ಣುಪಟ್ಟಿ (ಉಗ್ರಪುಂಖಪ್ರೇಖೋಳಾನೇಕ ನೇತ್ರಪಟ್ಟಿಕಾಸಟಾಳ ಸರಳಕುಂತಹಸ್ತಂ: **ಆದಿಪು,** ೧೩. ೪೫ ವ)

ನೇತ್ರಾಂಬರ – [ನಾ] ನೇತ್ರಪಟೆ (ಚಿತ್ರ ನೇತ್ರಾಂಬರ ನಾನಾಹೇತಿ ಹಸ್ತೋದ್ಭಟ ಭಟಪೃತನಾಜಾಳಮಂ: **ಆದಿಪು,** ೧೧. ೨೪)

ನೇತ್ರಾಂಬು – [ನಾ] ಕಣ್ಣೀರು (ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವಗ್ರಜನ ಅತ್ಯುನ್ನತಮಪ್ಪ ಮಸ್ತಕದ ಮೇಗೆ: **ಆದಿಪು,** ೧೪. ೧೩೩)

ನೇಮಿಧಾರಾ – [ನಾ] ರಥದ ಗಾಲಿಯ ಪಟ್ಟಿ (ಪ್ರಕುಪಿತ ಸೂತಹೂಂಕಾರ ಕಾತರಿತ ತರಳತರ ತುರಂಗ ದ್ರುತವೇಗಾಕೃಷ್ಟ ಧನಂಜಯರಥ ಚಟುಳಚಕ್ರ ನೇಮಿಧಾರಾಪರಿವೃತ: **ಪಂಪಭಾ,** ೧೩. ೫೧ ವ)

ನೇರ್ – [ಕ್ರಿ] ಕತ್ತರಿಸು (ಬರ್ದರೊಳ್ ಆನೆ ಬರ್ದಂ ಎನುತುಂ ನೇರ್ವಲ್ಲಿ ಕೆನ್ನೆತ್ತರುಂ ಬಿರಿಕಂಡಂಗಳೆ ಬೀಟಲುಣ್ಮೆ ಮನದೊಂದಣ್ಮು ಇಟ್ಟಳಂ ಪೊಣ್ಮೆ: **ಪಂಪಭಾ,** ೯. ೬೩)

ನೇರಿತ್ತು – [ಗು] ಚೆನ್ನಾಗಿ, ಉಜ್ವಲವಾಗಿ (ತಾರಾಪತಿಯಾ ಸಮಸ್ತ ಸುರಲೋಕಮುಮಂ ನೇರಿತ್ತು ಬೆಳಗಿ ಪೋಪುದಂ: **ಆದಿಪು,** ೧೬. ೪೬)

ನೇರಿದ – [ನಾ] ಕಲಿತವನು, ಸಮರ್ಥ, ಪರಿಣತ (ಸುರಸಿಂಧುಪುತ್ರ ಗುರು ಕರ್ಣ ಕೃಪ ಪ್ರಮುಖರ್ಕಳಿಂತು ನೇರಿದರೆ ಶರಾಸನಾಗಮದೊಳ್ ಎಂಬಿನಂ: **ಪಂಪಭಾ,** ೧೨. ೬೭)

ನೇರಿದುದು – [ನಾ] ನೇರವಾದುದು, ದೃಢವಾದುದು (ಕೂರಿದುವುಂ ನೇರಿದುವುಂ ಅಪ್ಪ ಅಯ್ದು ಅಮೋಘಾಸ್ತ್ರಂಗಳಂ ಬಾಣಧಿಯಿಂದುರ್ಚಿಕೊಂಡು ತನ್ನ ಮನದೊಳೆ ಸಮಕಟ್ಟಿಕೊಂಡು: **ಪಂಪಭಾ,** ೧೨. ೮೫ ವ)

ನೇರ್ಗಿಱಿದು – [ನಾ] [ನೇಱ್+ಕಿಱಿದು] ಕೊಂಚ ಚಿಕ್ಕದು (ಪೆಂಪಿಂದಮುರ್ಬಿದ ಗುಣ್ಪಿಂದಂ ಇದು ಅಬ್ಧಿಗಗ್ಗಳಮೆನಲ್ ಕುಂದೊಂದು ಕಣ್ಗೆತ್ತಿದಂತಿದು ದಲ್ ನೇರ್ಗಿಱಿದು: **ಆದಿಪು,** ೧. ೫೫)

ನೇರ್ಗಿಱಿಯ – [ನಾ] ಕೊಂಚ ಚಿಕ್ಕವನು (ಮತ್ತಮಾ ಕುಮಾರನಿಂ ನೇರ್ಗಿಱಿಯನಾಗಿ ಮುನ್ನ ಪೇೞ್ದ ಪುರೋಹಿತನಾನಂದನುಂ: **ಆದಿಪು,** ೮. ೪೪ ವ)

ನೇರ್ಗಿಱಿಯಳ್ – [ನಾ] ಕೊಂಚ ಚಿಕ್ಕವಳು (ಅನುಂದರಿಯೆ ಕತಿಪಯಭವಪರಿಭ್ರಮಣದಿಂ ಬಂದು ಬಾಹುಬಲಿ ಕುಮಾರನಿಂ ನೇರ್ಗಿಱಿಯಳಾಗಿ: **ಆದಿಪು,** ೮. ೫೩ ವ)

ನೇರ್ಗೋಲ್ವರಿ – [ಕ್ರಿ] ನೇರವಾಗಿ ಬಾಣ ಸಾಗು (ಅರಿನ ನಡುವುಡಿವ ನೇರ್ಗೋಲ್ವರಿದು ಉರ್ಚುವ ನಟ್ಟು ತೊನೆವ ಕಣೆಗಳ್ಗೆ ಮೊಗಂದಿರಿಯದೆ: **ಪಂಪಭಾ,** ೧೦. ೭೪)

ನೇರ್ಪಡು – [ಕ್ರಿ] ಹೊಂದು, ಅಳವಡು (ಸನ್ಯಾಸಮಂ ಮಾಟ್ಟುದೆಂಬಿವು ನೇರ್ಪಟ್ಟಿಸೆವನ್ನೆಗಂ ನೆಗಟ್ಟು: **ಆದಿಪು**, ೬. ೯); [ಕ್ರಿ] ನೆರವೇರು (ಮುಂ ಪಿಡಿದುದಂ ಪಿಡಿದಂ ಸಲೆ ಪೂಣ್ದು ಪೂಣ್ಕೆ ನೇರ್ಪಡೆ ನಡೆವನ್ನಂ ನಡೆದಂ: **ಪಂಪಭಾ,** ೧೩. ೯೭)

ನೇಲ್ – [ಕ್ರಿ] ನೇತಾಡು (ತಿಸುಳದೊಳ್ ಉಚ್ಚಳಿಪ್ಪ ಪೊಸನೆತ್ತರೆ ಕೆಂದಳಿರಾಗೆ ಕಣ್ಗೆ ಅಗುರ್ವಿಸುವಿನಂ ಒಕ್ಕು ನೇಲ್ವ ಕರುಳೋಳಿಯೆ ಬಾಳಮೃಣಾಳಮಾಗೆ: **ಪಂಪಭಾ,** ೧. ೬)

ನೇಸಱ್ – [ನಾ] ಹಗಲು (ನೇಸಱೆಂದೊಳಗೆ ಆಂ ದಿನಕರಸುತನಂ ಇಕ್ಕಿ ಬಂದಲ್ಲದೆ ಕಾಣ್ಂ ದಲ್ ಭವತ್ ಪದಾಬ್ಜಮಂ ಎಂದು ಎಬ್ದಿಂ ಉದಶ್ರುಜಳಲವಾರ್ದ್ರ ಕಪೋಳಂ: **ಪಂಪಭಾ,** ೧೨. ೧೩೪)

ನೇಸಱ್ಮೂಡು – [ಕ್ರಿ] ಬೆಳಗಾಗು (ತಱತಱನೆ ನೇಸಱ್ಮೂಡುವಾಗಳ್ ಎಯ್ದೆವಂದು ದುರ್ಯೋಧನನಂ ಕಂಡು ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಂ ಎಂದು: **ಪಂಪಭಾ,** ೧೩. ೧೦೬ ವ)

ನೇಱು – [ಕ್ರಿ] ಜೋತುಹಾಕು (ಜನಸಮ್ಮೋಹನತಮಃಪಟಮಂ ವಿಚಿತ್ರಚಿತ್ರಪಟಮಂ ಆ ಚೈತ್ಯಾಲಯದ ಕೆಲದ ಪಟ್ಟಸಾಲೆಯ ಮುಂತೆ ನೇಱಿ: **ಆದಿಪು,** ೩. ೪೫ ವ)

ನೈದಿಲ ಪೂ – [ನಾ] ನೈದಿಲ್ (ಜಲಜಲನೆ ಒಬ್ಬುತಿರ್ಪ ಪರಿಕಾಲ್ ಪರಿಕಾಲೊಳ್ ಅಳುರ್ಕೆಗೊಂಡ ನೈದಿಲ ಪೂ .. .. ಸಿರಿ ನೋಡುಗುಮಾ ವನಾಂತರಾಳದೊಳ್: **ಪಂಪಭಾ,** ೧. ೫೨)

ನೈಷ್ಠಿಕ – [ನಾ] ದೇವೇಂದ್ರನು ಅರ್ಜುನನಿಗಿತ್ತ ಒಂದು ಆಯುಧ, ಕೈಯಲ್ಲಿ ಹಿಡಿಯುವ ಮಂತ್ರಾಸ್ತ್ರ? (ತನಗೆ ದೇವೇಂದ್ರನಿತ್ತ ಐಂದ್ರಮೆಂಬ ದಿವ್ಯಾಸ್ತ್ರಮುಮಂ ನೈಷ್ಠಿಕಮೆಂಬ ಮುಷ್ಟಿಯುಮಂ ಕೆಯ್ಕೊಂಡು: **ಪಂಪಭಾ,** ೮. ೩೬ ವ)

ನೊಣೆ – [ಕ್ರಿ] ನುಂಗು, ನಾಶಗೈ (ಮತ್ತವಾರಣನಿವಹಕ್ಕೆ ತಕ್ಕಿನ ಅಭಿಮನ್ಯುವ ಕೂರ್ಗಣೆ ಪಾಯ್ದು ನುಂಗಲುಂ ನೊಣೆಯಲುಂ ಉರ್ಚಿಮುಕ್ಕಲುಂ ಇದೇಂ ನೆಱೆ ಕಲ್ತುವೊ ಯುದ್ಧರಂಗದೊಳ್: **ಪಂಪಭಾ,** ೧೧. ೯೪)

ನೊಸಲ್ – [ನಾ] ಹಣೆಯ ಭಾಗ (ಉರುಳೆ ಸೂತಂ ಉಡಿಯೆ ರಥಂ ಕೀಲಿಸೆ ಕುದುರೆ ಮುಱಿಯೆ ಪಱವಿಗೆ ಮಸಕದಿಂ ಎಚ್ಚೆಚ್ಚಂ ಒಂದೆ ಸರಲೊಳ್ ನೊಸಲಂ: **ಪಂಪಭಾ,** ೧೦. ೯೯)

ನೊಳವು – [ನಾ] ನೊಣ (ನೊಳವಿಂಗೆ ಕುಪ್ಪೆವರಮೆಂಬವೊಲ್ ಅಂಬರಮುಂಟೆ ನಿನ್ನದೊಂದಳವು: **ಪಂಪಭಾ,** ೨. ೫೦)

ನೋಂಪಿ – [ನಾ] ವ್ರತ (ಓದಱಿವರ ಪೇಟ್ದ ನೋಂಪಿಗಳಂ ಒರ್ಮೆ ಪಲರ್ಮೆಯುಮಿಂತು ತಮ್ಮ ಮೆಯ್ಮಱೆವಿನಂ ಇರ್ವರುಂ ನಮೆದರ್ ಏನವರ್ಗಾದುದೊ ಪುತ್ರದೋಹಳಂ: **ಪಂಪಭಾ,** ೧. ೧೩೫)

ನೋಕಷಾಯ – [ನಾ] [ಜೈನ] ಚಾರಿತ್ರಮೋಹನೀಯದಲ್ಲಿ ಒಂದು ಬಗೆ, ಕಿಂಚಿತ್ ಕಷಾಯ; ಇದು ಒಂಬತ್ತು ವಿಧ – ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀವೇದ, ಪುಂವೇದ ಮತ್ತು ನಪುಂಸಕವೇದ (ಕಿಱಿಕಿಱಿದು ಬೇಗದಿಂ ತನ್ನ ಪರಿಣಾಮವಿಶೇಷದಿಂ ಚತುಸ್ಸಂಜ್ವಲನ ನವನೋಕಷಾಯಂಗಳೆಂಬ ಪದಿಮೂಱು ಪ್ರಕೃತಿಗಳುಮಂ ಅಂತರಕರಣಂ ಮಾಡಿ: **ಆದಿಪು,** ೧೦. ೧೪ ವ)

ನೋಕಷಾಯಷಟ್ಕ – ಹಾಸ್ಯ ರತಿ ಅರತಿ ಶೋಕ ಭಯ ಜುಗುಪ್ಸೆ ಎಂಬ ಆರು ಬಗೆಯ ನೋಕಷಾಯಗಳು (ಕ್ರಮಕ್ರಮದೊಳೆ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ ಪುರಾತನ ಸತ್‌ಕರ್ಮದೊಡನೆ ಹಾಸ್ಯರತ್ಯರತಿಶೋಕಭಯಜುಗುಪ್ಸಾಭಿಧಾನ ನೋಕಷಾಯಷಟ್ಕಮುಮಂ ಘಾತಿಸಿ: **ಆದಿಪು,** ೧೦. ೧೪ ವ)

ನೋಟ – [ನಾ] ದೃಷ್ಟಿ (ನುಡಿ ಮೊಗರಾಗಮಂ ಪಡೆಯೆ ನೋಟಂ ಅನಂಗನ ಬಿಲ್ಲ ಬಲ್ಮೆಯಂ ಪಡೆಯೆ: **ಆದಿಪು,** ೨. ೪)

ನೋಟಕ – [ನಾ] ನೋಡಿವವನು, ಪ್ರೇಕ್ಷಕ (ತೆಱಪುವಡೆದು ಅಂಗಜಂ ಕೆಯ್ಸಱಿಗೊಳೆ ನೋಟಕರ ಮನಮನಾಗಳ್ ಕೊಳದಿಂ ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆಱೆದುದು ಅವರ ನಾಣ್ಗಳ ತೆಱಪಂ: **ಪಂಪಭಾ,** ೫, ೬೭)

ನೋಟಬೇಟೆ – [ನಾ] ಕಣ್ಬೇಟ, ಕಣ್ಣನಲ್ಲಿ ತೋರ್ಪಡಿಸುವ ಪ್ರೀತಿ (ತೋರ್ಪಾಯೆಲೆ ನೋಟಬೇಟದ ಕೊನರ್ ತಲೆದೋರ್ಪವೊಲಾಗೆ: **ಪಂಪಭಾ,** ೪. ೩೭)

ನೋಡಿ ನೋಡು – [ಕ್ರಿ] ಕಣ್ತುಂಬ ಕಾಣು (ನಭೋಭಾಗದಿಂ ಭೂಮಿಭಾಗಕ್ಕಿೞಿದು ತನ್ನ ಮುಂದೆ ನಿಂದ ಅರವಿಂದ ಬಾಂಧವನಂ ನೋಡಿ ನೋಡಿ: **ಪಂಪಭಾ,** ೧. ೯೧ ವ)

ನೋಡಿದಪಾ – ನೋಡುವೆಯಾ (ಅಱಿಯಲ್ ನಿನ್ನಯ ಮಯ್ದುನನಂ ಅರ್ಜುನಂ ಪೂಣ್ದಂ .. .. ಎನ್ನ ಓಲೆಯ ಕಡಗದ ಅಱಿವನೇಂ ನೋಡಿದಪಾ: **ಪಂಪಭಾ,** ೧೧. ೧೨೩)

ನೋಡು – [ಕ್ರಿ] ಅವಲೋಕಿಸು (ಸಮಂತಾವಂಗಂ ಎತ್ತೆತ್ತ ನೋಡುವೊಡಂ ನೋಡಲ್ ಅನಂತಮಪ್ಪ ವಿಭುವಪ್ಪಾಕಾಶಪದ್ಮಕ್ಕೆ ತಾನೆ ವಲಂ ಕರ್ಣಿಕೆ: **ಆದಿಪು,** ೧. ೪೩); [ಕ್ರಿ] ಪರೀಕ್ಷೆಮಾಡು (ಶಲ್ಯನ ಮನಮಂ ನೋಡಲೆಂದು ಬೆಸಗೊಂಡೊಡೆ: **ಪಂಪಭಾ,** ೧೨. ೧೧೭ ವ)

ನೋಡೆ ನೋಡೆ – ನೋಡುತ್ತಿರುವಂತೆಯೇ (ನಾರೀರೂಪದ ಯಂತ್ರಂ ಚಾರುತರಂ ನೋಡೆ ನೋಡೆ ಕರಗಿದುದು ಈ ಸಂಸಾರದನಿತ್ಯತೆ ಮನದೊಳ್ ಬೇರೂಱಿದುದು: **ಆದಿಪು,** ೯. ೪೪)

ನೋನ್ – [ಕ್ರಿ] ವ್ರತ ಮಾಡು (ರಾಜ್ಯಲಕ್ಷ್ಮಿಗನ್ಯಭವದೊಳಪ್ಪೊಡಂ ನೆಱಿಯೆ ನೋಂಪೆಂ: **ಆದಿಪು,** ೨. ೩೯); [ಕ್ರಿ] ಅರ್ಪಿಸಿಕೊ, ಬದ್ಧವಾಗು (ನಿಜಮಕುಟಮಣಿಮರೀಚಿಯಿಂ ಅಜನ ಪದಾಂಬುಜದ ಕೆಂಪನಿರ್ಮಡಿಸಿ ಕುಲಧ್ವಜ ಬೆಸಸು ನಿನ್ನವೊಲೀ ಪ್ರಜಾಪತಿತ್ವಕ್ಕೆ ಮುನ್ನ ನೋಂತರುಮೊಳರೇ: **ಆದಿಪು,** ೮. ೬೩); [ಕ್ರಿ] ವ್ರತ ತೊಡು (ನೋಂತುಂ ಓದಱಿವರ ಪೇಟ್ದ ನೋಂಪಿಗಳಂ ಒರ್ಮೆ ಪಲರ್ಮೆಯುಮಿಂತು ತಮ್ಮ ಮೆಯ್ಮಱೆವಿನಂ ಇರ್ವರುಂ ನಮೆದರ್ ಏನವರ್ಗಾದುದೊ ಪುತ್ರದೋಹಳಂ: **ಪಂಪಭಾ,** ೧. ೧೩೫)

ನೋನಿಸು – [ಕ್ರಿ] ವ್ರತತೊಡುವಂತೆ ಮಾಡು (ಈಗಳ್ ನೀನಿರ್ದು ನೋನಿಸೆ ನೋಂತ ಮಹಾಬಳಂ ಲಲಿತಾಂಗಂ ವಜ್ರಜಂಘಂ: **ಆದಿಪು**, ೨. ೪೪)

ನೋಯಿಸು – [ಕ್ರಿ] ನೋವನ್ನುಂಟುಮಾಡು (ವಿಪುಳಾಯತಿಯಂ ದಿಗಂತದೊಳ್ ಪಸರಿಸಲುಂ ಕರಂ ನೆಱೆವ ಮಕ್ಕಳನೀಯದೆ ನೋಡೆ ನಾಡೆ ನೋಯಿಸಿದಪುದು ಇಕ್ಷುಪುಷ್ಪದವೊಲ್ ಎನ್ನಯ ಪುಷ್ಪದರ್ಶನಂ: **ಪಂಪಭಾ**, ೧. ೧೧೭)

ನೋರ್ಪು – [ನಾ] ಗಮನ, ನೋಡುವಿಕೆ (ಪುಸಿ ನಸುವಂಚನೆ ನೋರ್ಪ ಅನುವು ಅಸಿದು ಅಗಲಿತು ತಕ್ಕು ದಕ್ಕು ಪಗೆ ಕೆಯ್ಬಗೆ ಕೆಯ್ಸುರಿ ನುಸುಳ್ ಎಂಬ ಕೇಣದ ಕುಸುರಿಯಂ ಅಜೆದಿಜೆದು ಮೆಱೆದು ನೆಱೆದೆ ಉರಱದೆ ಅರೆಬರ್: **ಪಂಪಭಾ**, ೧೦. ೮೧)

ನೋಳ್ – [ಕ್ರಿ] ಮುಂದೆ ನುಗ್ಗು (ಅಲೆದುಂ ನೋಡಿಯೊಱಲ್ದುವಿಟ್ಟ ಪದಮುಂ ನೋಳ್ಪುಂ ಕಟಿಲ್ದುಂ ಪಳಂಚಲೆದುಂ ಮುಟ್ಟಿದ ಸೀಯನಪ್ಪ ದನಿಯುಂ: **ಆದಿಪು**, ೧೨. ೨೩)

ನೌ – [ನಾ] ಹಡಗು (ಮಹಾನದಾವಗಾಹನಸಮಯ ನೌ ದ್ರೋಣಿ ಸಂಕ್ರಮಾದಿವಿಧಾನಪ್ರಾಗಲ್ಭ್ಯನುಂ: **ಆದಿಪು**, ೧೧. ೩ ವ)

ಪ

ಪಂಕಜವಕ್ತ್ರ – [ನಾ] ತಾವರೆಯಂತಹ ಮುಖ[ವುಳ್ಳವನು] (ಸಾಲಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಸ್ಥಳಂ: **ಪಂಪಭಾ**, ೧. ೬೮)

ಪಂಕಜವಿಷ್ಟರ – [ನಾ] ಕಮಲದ ಆಸನವುಳ್ಳವನು, ಬ್ರಹ್ಮ (ಸ್ಫುರಿತೋದ್ಯತ್ಕನಕ ಪ್ರಭಾಪ್ರಸರದಿಂ ಪೀತಾಂಬರಂ ಪದ್ಮವಿಷ್ಟರದಿಂ ಪಂಕಜವಿಷ್ಟರಂ ನತವಿನೇಯವ್ರಾತ ಚೇತಸ್ತಮೋಹರನಾಗಿರ್ದುದಜೆಂ ಹರಂ: **ಆದಿಪು**, ೧೬. ೬)

ಪಂಕಪ್ರಭೆ – [ನಾ] [ಜೈನ] ಏಳು ನರಕಗಳಲ್ಲಿ ನಾಲ್ಕನೆಯದು, (ಪಂಕಪ್ರಭೆಯೊಳ್ ದಶಬ್ಧ್ಯುಪಮೆಯಿಂ ದುಃಖಾಗ್ನಿಯೊಳ್ ಬೆಂದು: **ಆದಿಪು**, ೫. ೪)

ಪಂಕೇಜಗರ್ಭಾತ್ಮಜ – [ನಾ] [ಪಂಕೇಜಗರ್ಭ+ಆತ್ಮಜ = ಬ್ರಹ್ಮನ ಮಗ] ನಾರದ (ಎಮ್ಮನ್ವಯಕ್ಷ್ಮಾಪರ್ ಆವ ವಿಳಾಸಂಗೊಳ್ ಇರ್ಪರ್ ಏದೊರೆತು ತಾಂ ಎಮ್ಮಯ್ಯನೈಶ್ವರ್ಯಂ ಇಂತು ಇವನೆಲ್ಲಂ ತಿಳಿವಂತುಟಾಗಿ ಬೆಸಸಿಂ ಪಂಕೇಜಗರ್ಭಾತ್ಮಜಾ: **ಪಂಪಭಾ**, ೬. ೧೫)

ಪಂಕೇಜಪತ್ರಾಂಬು – [ನಾ] [ಪಂಕೇಜ+ಪತ್ರ+ಅಂಬು] ತಾವರೆಯ ಎಲೆಯ ಮೇಲಿನ ನೀರು (ಅರ್ಕಂ ಅಳುರ್ಕೆಗೆಟ್ಟು ನಭದಿಂ ತೂಳ್ದಂ ಸುರುಳ್ದಪ್ಪಿದಳ್ ಮೃಡನಂ ಗೌರಿ ಸಮಸ್ತಂ ಈ ತ್ರಿಭುವನಂ ಪಂಕೇಜಪತ್ರಾಂಬುವೋಲ್ ನಡುಗಿತ್ತು: **ಪಂಪಭಾ**, ೧೦. ೨೬)

ಪಂಕೇಜಪತ್ರೇಕ್ಷಣೆ – [ನಾ] ತಾವರೆಯ ದಳದಂತೆ ಕಣ್ಣುಳ್ಳವಳು (ಅತ್ಯುಗ್ರ ಆಜಿಯೊಳ್ ಮುನ್ನಂ ಈ ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ ಬಂಬಲ್ಗರುಳ್ಗಳಿಂ ಆನಲ್ತೆ ವಿಳಾಸದಿಂ ಮುಡಿಯಿಪೆಂ ಪಂಕೇಜಪತ್ರೇಕ್ಷಣೇ: **ಪಂಪಭಾ**, ೭. ೧೨)

ಪಂಕೇಜವಕ್ತ್ರೆ – [ನಾ] ಕಮಲಮುಖಿ (ಅಂತೆ ಬಂದು ಪಂಕೇಜವಕ್ತ್ರೆ ಮತ್ಸ್ಯಸುತನಂ ನುಡಿದಳ್: **ಪಂಪಭಾ**, ೮. ೯೭)

ಪಂಕೇರುಹನಾಭ – [ನಾ] ಬ್ರಹ್ಮ (ದ್ವಾರಾವತೀಪುರಕ್ಕೆ ಚರರಂ ತಡವಿಲ್ಲದೆ ಬೇಗಮಟ್ಟಿ ಪಂಕೇರುಹನಾಭನಂ ಬರಿಸಿ: **ಪಂಪಭಾ**, ೬. ೨೧)

ಪಂಗಿಗ – [ನಾ] ಹಂಗಿಗೊಳಗಾದವನು (ಮುಂಬಟ್ಟಿಸಿ ಕೊಲುತಿರ್ಪ ಜವನೆಂಬಱಕೆಯ ಪಗೆವಂಗದೆಂತು ಪಂಗಿಗನಪ್ಪೆಂ: **ಆದಿಪು**, ೪. ೭೭)

ಪಂಚಕಲ್ಯಾಣೋತ್ಸವ – [ನಾ] ತೀರ್ಥಂಕರರಿಗೆ ಸಂಬಂಧಿಸಿದ ಗರ್ಭಾವತರಣ, ಜನ್ಮ, ಪರಿನಿಷ್ಕ್ರಮಣ, ಕೇವಲಜ್ಞಾನ ಮತ್ತು ಪರಿನಿರ್ವಾಣವೆಂಬ ಐದು ಕಲ್ಯಾಣಗಳ ಆಚರಣೆಗಾಗಿ ಇಂದ್ರಾದಿಗಳು ನಡೆಸುವ ಉತ್ಸವ (ಆಕೆವೆರಸೊರ್ಮೆ ನಂದೀಶ್ವರಮಹಾಮಹಿಮೆಗಂ ಪಂಚಕಲ್ಯಾಣೊತ್ಸವಕ್ಕಂ ಅಚ್ಯುತೇಂದ್ರನೊಡನೆ ನಿಜಪೂಜಾವಿಳಾಸಮಂ ಮೆಱೆಯಲೆಂದು: **ಆದಿಪು**, ೨. ೭೭ ವ)

ಪಂಚಗವ್ಯ – [ನಾ] ಗೋವಿನ ಐದು ಉತ್ಪನ್ನಗಳಾದ ಹಾಲು ಮೊಸರು, ಬೆಣ್ಣೆ, ಗಂಜಳ ಮತ್ತು ಸೆಗಣಿ (ಬೀದಿಗಳೊಳೆಲ್ಲಂ ಗಂಧೋದಕ ಪಂಚಗವ್ಯಂಗಳಿಂ ತಳಿಯಿಸಿ: **ಪಂಪಭಾ**, ೪. ೫ ವ)

ಪಂಚಗುರು – [ನಾ] ಪಂಚಪರಮೇಷ್ಠಿಗಳು: ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧುಗಳು (ಪಂಚಗುರುಸಮಕ್ಷದೊಳ್ ಬಾಹ್ಯಾಂಭ್ಯಂತರಪರಿಗ್ರಹ ಪರಿತ್ಯಾಗಪುರಸ್ಸರಂ ವೀರಸಂಸ್ಥಾನಾರೂಢನಂ ಮಹಾಬಳನಂ ಜಾತರೂಧರನಂ ಮಾಡಿ: **ಆದಿಪು**, ೨. ೫೧ ವ)

ಪಂಚತ್ವ – [ನಾ] ಪಂಚತೆ, ಸಾವು (ಖಳಂ ಪಂಚತ್ವಮನೈದಿ ಮರುಚ್ಚಂಚಳಮನನೀಗಳಲ್ತೆ ವಾನರನಾದಂ: **ಆದಿಪು**, ೫. ೧೮)

ಪಂಚದಶ – [ನಾ] ಹದಿನೈದು (ಮತ್ತಂ ಚತುರಶೀತಿಸಹಸ್ರ ಗುಣಮಣಿಭೂಷಣವಿಭೂಷಿತನುಂ ಅಷ್ಟಾದಶಸಹಸ್ರ ಶೀಲರತ್ನಾಕರನುಂ ಆಗಿ ಪಂಚದಶಪ್ರಮಾದಂಗಳಂ ಬಂಚಿಸಿ: **ಆದಿಪು**, ೬. ೨೯ ವ)

ಪಂಚಧನುಶ್ಶತ – [ನಾ] [ಜೈನ] ಐನೂರು ಧನುಸ್ಸು (ಪಂಚಧನುಶ್ಶತಂ ಪವಣ್ಣೆಲೆ ನರರ್ಗಂದೊಡೆ ಇನ್ನಿಮಿರೆ ಬಣ್ಣಿಸಲಾನಜೆಯೆಂ ವಿದೇಹಮಂ: **ಆದಿಪು**, ೧. ೫೨)

ಪಂಚನಮಸ್ಕೃತಿ – [ನಾ] [ಜೈನ] ಪಂಚನಮಸ್ಕಾರಗಳು: ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಅಯಾರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಏ ಸಬ್ಬಸಾಹೂಣಂ ಎಂಬ ಐದು ಮಂತ್ರಗಳು (ಮುನಿವೃಂದೋಚ್ಚಾರಿತ ಪಂಚನಮಸ್ಕೃತಿಗಾಂತು ಕಿವಿಯನರ್ಹತ್ಪದಮಂ ನೆನೆಯುತ್ತುಂ: **ಆದಿಪು**, ೨. ೫೭)

ಪಂಚಪಂಚಾಶತ್ – [ನಾ] ಐವತ್ತೈದು (ಪ್ರತ್ಯೇಕ ಶೀರ್ಷಕ ಅವಘಾಟಕ ಪ್ರಕಾಂಡ ತರಳತರ ಬಂಧ ಉಪಪದಪಂಚಕ ಸಮೇತಂಗಳಾಗಿ ಪಂಚಪಂಚಾಶತ್ಪ್ರಮಾಣಂಗಳೊಳಾದ ಹಾರಂಗಳುಮಂ: **ಆದಿಪು,** ೮. ೫೪ ವ)

ಪಂಚಪದಂಗಳ್ – [ನಾ] [ಜೈನ] ಪಂಚನಮಸ್ಕಾರ (ಮಂಗಳಕಾರಣ ಪಂಚಪದಂಗಳಂ ಅಪವರ್ಗಮಾರ್ಗವಿರಚಿತ ಸೋಪಾನಂಗಳಂ ಅಕ್ಷಯಮಂತ್ರೋದಂಗಳಂ: **ಆದಿಪು,** ೨. ೫೪)

ಪಂಚಪಾಂಡವರು – [ನಾ] ದ್ರೌಪದಿಯಲ್ಲಿ ಪಾಂಡವರು ಧರ್ಮರಾಯನೇ ಮೊದಲಾಗಿ ಕ್ರಮವಾಗಿ ಪಡೆದ ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ ಮತ್ತು ಶ್ರುತಸೇನ ಎಂಬ ಮಕ್ಕಳು (ಶ್ರುತಸೋಮಕಪ್ರಮುಖರಪ್ಪ ಪಂಚಪಾಂಡವರಂ ಪಾಂಡವರೆ ಗೆತ್ತು ಕೊಂದು ತದುತ್ತಮಾಂಗಂಗಳಂ ಕೊಂಡು: **ಪಂಪಭಾ,** ೧೩. ೧೦೬ ವ)

ಪಂಚಭೂತ – [ನಾ] ಪೃಥ್ವಿ, ಅಪ್ಪು, ತೇಜಸ್, ವಾಯು, ಆಕಾಶಗಳೆಂಬ ಪ್ರಕೃತಿಯ ಐದು ಮೂಲವಸ್ತುಗಳು (ಪರಮಾನಂದಪರಂಪರೆ ದೊರೆಕೊಂಡಂತಿತ್ತು ಪಂಚಭೂತಂಗಳೊಳಂ: **ಆದಿಪು,** ೭. ೩೭)

ಪಂಚಮಕಾಲ – [ನಾ] [ಜೈನ] ಅವಸರ್ಪಿಣಿಯ ಐದು ಕಾಲಭೇದಗಳಲ್ಲಿ ಐದನೆಯದು (ಧರಣೀಪಾಳಕ ಮುನಿವರರ್ ಪಂಚಮಕಾಲದೊಳಣಮಾಗರಲ್ತೆ ಋದ್ಧಿಪ್ರಾಪ್ತರ್: **ಆದಿಪು,** ೧೫. ೪೧)

ಪಂಚಮನಿನದ – [ನಾ] ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದಗಳೆಂಬ ಸಂಗೀತದ ಏಳು ಸ್ವರಗಳಲ್ಲಿ ಒಂದು (ನವಚೂತಾಂಕುರ ಸುರಭಿದ್ರವಮಂ ಸವಿದನಿತಱಿಂದೆ ಮದನಧನುರ್ಜ್ಯಾರವಸನ್ನಿಕಾಶಮೀಗಳ್ ಕಿವಿಯಂ ಮುಟ್ಟಿದುದು ಪಿಕದ ಪಂಚಮನಿನದಂ: **ಆದಿಪು,** ೧೧. ೮೬)

ಪಂಚಮಹಾಕಲ್ಯಾಣ – [ನಾ] [ಜೈನ] ಜಿನನಿಗೆ ನಡೆಯುವ ಗರ್ಭಾವತರಣ, ಜನ್ಮ, ಪರಿನಿಷ್ಕ್ರಮಣ, ಕೇವಲಜ್ಞಾನ ಮತ್ತು ಪರಿನಿರ್ವಾಣಗಳೆಂಬ ಐದು ಕಲ್ಯಾಣಗಳು (ಸಕಳ ಶ್ರಾವಕವ್ರತಂಗಳಂ ಷೋಡಶ ತೀರ್ಥಕರಭಾವನೆಗಳಂ ಚತುಸ್ತ್ರಿಂಶತ್ ಅತಿಶಯಂಗಳುಮಂ ಅಷ್ಟಮಹಾ ಪ್ರಾತಿಹಾರ್ಯಂಗಳುಮಂ ಪಂಚಮಹಾಕಲ್ಯಾಣಂಗಳುಮಂ: **ಆದಿಪು,** ೩. ೪೦ ವ)

ಪಂಚಮಹಾಶಬ್ದ – [ನಾ] ಐದು ವಾದ್ಯಗಳು; ಇವುಗಳ ವಿವರಗಳು ಕಾಲಕಾಲಕ್ಕೆ ಬದಲಾಗಿವೆ: ಸಾಮಾನ್ಯವಾದ ಪಟ್ಟಿಯೆಂದರೆ ಕೊಂಬು, ತಮಟೆ, ಶಂಖ, ಭೇರಿ, ವೀಣೆ, ಜಯಗಂಟೆ; ಐದು ವಾದ್ಯಗಳ ಬಾಜನೆಯ ಗೌರವ (ಇಳನ್ಮತ್ತಾಳಿನೀಗೀತ ಪಂಚಮಹಾಶಬ್ದ ವಿಜೃಂಭಿತಧ್ವನಿಲಸದ್ಗಾಂಧಾರನಾದಂ: **ಆದಿಪು,** ೧೨. ೪೮); [ನಾ] ಪಂಚವಾದ್ಯಗಳ ಗೌರವಕ್ಕೆ ಅರ್ಹರಾದ (ಸಮನೆನಿಸುವರ್ ಪ್ರಶಸ್ತಿಕ್ರಮದೊಳ್ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾ ಸಾಮಂತರೆನಲ್ ಸಮನೆನಿಪರೆ ಗುಣದೊಳ್ ಅರಿಗನೊಳ್ ಸಾಮಂತರ್: **ಪಂಪಭಾ,** ೧. ೪೯)

ಪಂಚಮಾಂಬುಧಿ – [ನಾ] ಕ್ಷೀರಸಮುದ್ರ (ಪಂಚಮಹಾಂಬುಧಿಪವಿತ್ರಜಳಪರಿಪೂರ್ಣ ಸುವರ್ಣ ಕಲಶಂಗಳಿಂದಂ ಅಭಿಷೇಕಂಗೆಯ್ದು: **ಆದಿಪು,** ೯. ೬೩ ವ)

ಪಂಚಮಿ – [ನಾ] ಶುಕ್ಲ–ಕೃಷ್ಣಪಕ್ಷಗಳಲ್ಲಿನ ಐದನೆಯ ದಿನ (ಸಿಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲನಕ್ಷತ್ರದೊಳ್ ಅನ್ವಿತಮಾಗೆ ನೆಗಟ್ದುದೀ ಮತ್ಕೃತಿ: **ಆದಿಪು,** ೧೬. ೭೭)

ಪಂಚರತುನ – [ನಾ] ಐದು ಬಗೆಯ ರತ್ನಗಳು (ಪಂಚರತುನದೊಳೆ ನೆಱಿದ ಪಸರದಿಂ ತೋರಣಂಗಳೊಳೆ ತೊಡರ್ದ ತಿಸರದಿಂ: **ಪಂಪಭಾ,** ೩. ೨೨)

ಪಂಚರತ್ನ – [ನಾ] ಐದು ರತ್ನಗಳು, ವಿವಿಧ ಆಕರಗಳಲ್ಲಿನ ವಿವರಗಳಲ್ಲಿ ವ್ಯತ್ಯಾಸಗಳಿವೆ; ಅವುಗಳಲ್ಲಿ ಒಂದು ಪಟ್ಟಿ: ಸುವರ್ಣ, ರಜತ, ಮುಕ್ತಾ, ಮಾಣಿಕ್ಯ, ಪ್ರವಾಳಕ (ಪಂಚರತ್ನದ ಕೊಡೆಯಂ ಪಿಡಿದಮರಿ ಜನದ ಮನದಡಿವಿಡಿದಳ್: **ಆದಿಪು,** ೭. ೫)

ಪಂಚರತ್ನಹಿರಣ್ಮಯ – [ನಾ] ಐದು ರತ್ನಗಳು ಹಾಗೂ ಚಿನ್ನದಿಂದ ಕೂಡಿದ (ಮಯಂ ಪಂಚರತ್ನಹಿರಣ್ಮಯಂ ಚತುರಶ್ರಂ ಮೂಱುಂ ಯೋಜನದಳವಿಯ ಸಭಾಮಂಟಪಮಂ ಒಂದು ಲಕ್ಕ ರಕ್ಕಸವಡೆಯಿಂ ಪೊತ್ತು ತರಿಸಿ: **ಪಂಪಭಾ,** ೬. ೨ ವ)

ಪಂಚರಾಯುಧ – [ನಾ] ಪಂಚರ ಎಂಬ ಆಯುಧ (ಕಕ್ಕಡೆ ಬುಂಬುಕದೊಳ್ ತಗುಳ್ದು ಪಜ್ಜಳಿಸುವ ಪಂಚರಾಯುಧಂ .. .. ಭಯಂಗೊಳಿಸೆ: **ಪಂಪಭಾ,** ೧೦. ೭೬)

ಪಂಚಲೋಹ – [ನಾ] ಕಿವಿಗೆ ಧರಿಸುವ ಓಲೆ ? (ಮುಖಚಂದ್ರನಂ ಚಂದ್ರಕವಳದಿಂ ತೊಡೆದು ಓರೊಂದೆ ವಜ್ರದ ಪಂಚಲೋಹಮುಮಂ ಅವರ್ಕೆ ಅಮರ್ಕೆವೆತ್ತ ಮುತ್ತಿನ ಮುಗುಳ್ಗಳುಮನಿಟ್ಟು: **ಆದಿಪು,** ೪. ೪೧ ವ)

ಪಂಚವರ್ಗಾಧಿಕಪಂಚಶತ – [ನಾ] ಐದು ನೂರ ಇಪ್ಪತ್ತೈದು (ಶಶಿವಿಶದಯಶಂ ನಿಜಕುಲವಿಶೇಷಕಂ ಕರುಣಿ ಪಂಚವರ್ಗಾಧಿಕಪಂಚಶತ ಶರಾಸನತನು: **ಆದಿಪು,** ೬. ೬೬)

ಪಂಚವಿಂಶತಿ – [ನಾ] ಇಪ್ಪತ್ತೈದು (ಪಂಚವಿಂಶತಿ ಯೋಜನ ಅವಗಾಹಮುಮಾಗಿ ಸಂದುತ್ತರಭರತಮಧ್ಯಮಖಂಡದ ನಟ್ಟನಡುವಣೆಡೆಯೊಳ್: **ಆದಿಪು,** ೧೩. ೬೯ ವ)

ಪಂಚವಿಂಶತ್ಯಧಿಕಷಟ್ಛತ – [ನಾ] ಆರುನೂರ ಇಪ್ಪತ್ತೈದು (ಆತನಿಂ ಬೞಿಯಂ ಅನೇಕ ಸಂವತ್ಸರಸಹಸ್ರಾತಿಕ್ರಮದೊಳ್ ಪಂಚವಿಂಶತ್ಯಧಿಕಷಟ್ಛತ ಧನುರುತ್ಸೇಧನುಂ: **ಆದಿಪು,** ೬. ೬೦ ವ)

ಪಂಚವಿಂಶತ್ಯನ್ವಿತಸಪ್ತಶತ – [ನಾ] ಏಳುನೂರ ಇಪ್ಪತ್ತೈದು (ಅನೇಕಾಬ್ದಕೋಟಿಗಳ ಕಡೆಯೊಳ್ ಪಂಚವಿಂಶತ್ಯನ್ವಿತಸಪ್ತಶತ ಬಾಣಾಸನೋಚ್ಛ್ರಯನುಂ: **ಆದಿಪು,** ೬. ೫೭ ವ)

ಪಂಚವಿಶತ್ಯುತ್ತರಪಂಚಶತ – [ನಾ] ಐನೂರ ಇಪ್ಪತ್ತೈದು (ಪಂಚವಿಂಶತ್ಯುತ್ತರಪಂಚಶತ ಶರಾಸನೋತ್ಸೇಧನಪ್ಪ ಬಾಹುಬಲಿಕುಮಾರನ ಮೇಗೆ: **ಆದಿಪು,** ೧೪. ೧೦೭ ವ)

ಪಂಚಶತ – [ನಾ] ಐನೂರು (ಭರತೇಶ್ವರಂ ಪಂಚಶತ ಶರಾಸನೋತ್ಸೇಧನಪ್ಪುದಱಿಂ: **ಆದಿಪು,** ೧೪. ೧೦೭ ವ)

ಪಂಚಶರ – [ನಾ] ಮನ್ಮಥ (ಪಂಪಂ ಧಾತ್ರೀವಳಯನಿಳಿಂಪಂ ಚತುರಂಗಭಯಭಯಂಕರಣಂ ನಿಷ್ಕಂಪಂ ಲಲಿತಾಲಂಕರಣಂ ಪಂಚಶರೈಕರೂಪಂ: **ಪಂಪಭಾ,** ೧೪. ೪೯)

ಪಂಚಷಟ್ – [ನಾ] ಐದಾರು (ಶತಯೋಜನ ವಿಷ್ಕಂಭದೊಳಂ ಪಂಚಷಡ್ಯೋಜನ ವಿಸ್ತಾರದೊಳಂ ಅಷ್ಟಯೋಜನ ಉತ್ಸೇಧದೊಳಂ: **ಆದಿಪು,** ೭. ೭೩ ವ)

ಪಂಚಸಪ್ತತ್ಯುತ್ತರಪಂಚಶತ – [ನಾ] ಐನೂರ ಎಪ್ಪತ್ತೈದು (ಅಸಂಖ್ಯೇಯ ವರ್ಷವಿರಾಮದೊಳ್ ಪಂಚಸಪ್ತತ್ಯುತ್ತರಪಂಚಶತ ಶರಾಸನೋತ್ಸೇಧಸಂಹನನುಂ: **ಆದಿಪು,** ೬. ೬೧ ವ)

ಪಂಚಸಪ್ತತ್ಯುತ್ತರಷಟ್ಛತ – [ನಾ] ಆರುನೂರ ಎಪ್ಪತ್ತೈದು (ಅಸಂಖ್ಯಾತವರ್ಷಂಗಳ್ ಸಲೆ ಪಂಚಸಪ್ತತ್ಯುತ್ತರಷಟ್ಛತ ಬಾಣಾಸನೋತ್ಸೇಧನುಂ: **ಆದಿಪು,** ೬. ೫೮ ವ)

ಪಂಚಾಂಗಮಂತ್ರ – [ನಾ] ವೇದಕ್ಕೆ ಸಂಬಂಧಿಸಿದ ಐದು ಮಂತ್ರಗಳು: ಸ್ತುತಿ, ನೈವೇದ್ಯ, ಅಭಿಷೇಕ, ತರ್ಪಣ ಮತ್ತು ಸಮಾರಾಧನೆ (ಅರಾತಿಜನಕ್ಕೆ ಕಾಳಕೂಟಾಂಕುರಗಳುಮಂ ಪೋಲ್ತು ಪಂಚಾಂಗಮಂತ್ರಸ್ವರೂಪದೊಳ್ ಮೂರ್ತಿಮಂತ್ರಂಗಳಾದಂತೆ ಸೊಗಯಿಸಿ ಬಳೆಯೆ: **ಪಂಪಭಾ,** ೨. ೩ ವ)

ಪಂಚಾಂಗವ್ಯಾಕರಣ – [ನಾ] ಸೂತ್ರಪಾತ, ಧಾತುಪಾತ, ಉಣಾದಿಪಾತ, ಗಣಪಾತ ಮತ್ತು ಲಿಂಗಾನುಶಾಸನ ಎಂಬ ಐದು ಅಂಗಗಳುಳ್ಳ ವ್ಯಾಕರಣ (ಅಂತು ಪಂಚಾಂಗವ್ಯಾಕರಣದೊಳಂ ವೃತ್ತಭೇದಮಪ್ಪ ಛಂದೋವಿಚಿತಿಯೊಳಂ ಶಬ್ದಾಲಂಕಾರ ನಿಶ್ಚಿತಮಪ್ಪ ಅಲಂಕಾರದೊಳಂ: **ಪಂಪಭಾ,** ೨. ೩೪ ವ)

ಪಂಚಾಂಶದಧಿಕಷಟ್ಛತ – [ನಾ] ಆರು ನೂರೈವತ್ತು (ಅಂತಾತನಿಂ ಬಟಿಯಂ ಕೆಲವು ಕಾಲಂ ಕಟಿಯೆ ಪಂಚಾಂಶದಧಿಕಷಟ್ಛತ ಚಾಪೋತ್ಸೇಧವಪುವುಂ: **ಆದಿಪು,** ೬. ೫೯ ವ)

ಪಂಚಾಣುವ್ರತ – [ನಾ] [ಜೈನ] ಗೃಹಸ್ಥರು ಅನುಸರಿಸಬೇಕಾದ ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ಮತ್ತು ಅಪರಿಗ್ರಹವೆಂಬ ಐದಯ ವ್ರತಗಳು (ಪಂಚಾಣುವ್ರತಾದಿ ಪ್ರವರ್ತನ ಸ್ವಭಾವಸಂಯಮಮುಂ: **ಆದಿಪು,** ೧೫. ೧೩ ವ)

ಪಂಚಾಶತ್ – [ನಾ] ಐವತ್ತು (ಪಶ್ಚಿಮಾಭಿಮುಖನಾಗಿ ಪೋಗಿ ಪಂಚಾಶದ್ಯೋಜನಾಯಾಮದೊಳಂ ದ್ವಾದಶಯೋಜನವಿಸ್ತಾರ ಅಷ್ಟಯೋಜನೋತ್ಸೇಧ ವಜ್ರಕವಾಟಪುಟಮುಂ: **ಆದಿಪು,** ೧೩. ೪೬ ವ)

ಪಂಚಾಶದಧಿಕಸಪ್ತಶತ – ಏಳುನೂರೈವತ್ತು (ಪಂಚಾಶದಧಿಕ ಸಪ್ತಶತ ಧನುರ್ವ್ಯಾಪ್ತಂಗಳುಂ ಏಕಚಾಪೋತ್ಸೇಧ ಚಿತ್ರಧರ್ಮಚಕ್ರಧರ ಯಕ್ಷಾದಿಷ್ಠಿತಂಗಳುಮಪ್ಪ: **ಆದಿಪು,** ೧೦. ೩೬ ವ)

ಪಂಚಾಶದಭ್ಯಧಿಕಸಪ್ತಶತ – [ನಾ] ಏಳುನೂರೈವತ್ತು (ಅಲ್ಲಿಂ ಬಟಿಯಂ ಅನೇಕ ಕೋಟಿ ಸಂವತ್ಸರಂಗಳ್ ಪೊಂದಿದಿಂ ಬಟಿಯಂ ಪಂಚಾಶದಭ್ಯಧಿಕಸಪ್ತಶತ ಕೋದಂಡಪ್ರಮಾಣಮೂರ್ತಿಯುಂ: **ಆದಿಪು,** ೬. ೫೬ ವ)

ಪಂಚಾಶ್ಚರ್ಯ – [ನಾ] [ಜೈನ] ಆಹಾರದಾನ ಸಮಯದಲ್ಲಿ ಆಗುವ ಐದು ಅತಿಮಾನುಷ ಸೋಜಿಗಗಳು: ದೇವದುಂದುಭಿ ಸ್ವನ, ಪುಷ್ಪವೃಷ್ಟಿ, ಸುವರ್ಣವೃಷ್ಟಿ, ಮೆಲುಗಾಳಿ, ದೇವಪ್ರಶಂಸೆ (ಸುರತೂರ್ಯಧ್ವಾನಂ ಎಯ್ದುರ್ಪ ಅಲರ ಸರಿ ಪೊದಳ್ದಿರ್ದ ರೈಧಾರೆ ದೇವೇಂದ್ರರ ಅಹೋದಾನಪ್ರಸಿದ್ಧಧ್ವನಿ ಸುರಭಿಸಮೀರಪ್ರಚಾರಂ ಜಗಕ್ಕೆ ಅಚ್ಚರಿ ಪಂಚಾಶ್ಚರ್ಯಮೆತ್ತಂ ನೆಗಟ್ದ್: **ಆದಿಪು,** ೪. ೯೮)

ಪಂಚಾಸ್ಯ – [ನಾ] ಸಿಂಹ (ಕದನಪ್ರಾರಂಭಶೌಂಡಂ ರಿಪುನೃಪಬಲ ದಾವಾನಲಂ ವೈರಿಭೂಭೃತ್ ಮದವತ್ ಮಾತಂಗಕುಂಭಸ್ಥಳ ದಳನಖರೋಗ್ರಾಸಿ ಪಂಚಾಸ್ಯಧೈರ್ಯಂ: **ಪಂಪಭಾ,** ೬. ೭೭)

ಪಂಚೇಂದ್ರಿಯ – [ನಾ] ಸ್ಪರ್ಶನ, ರಸನ, ಘ್ರಾಣ, ಚಕ್ಷು, ಶ್ರೋತ್ರ ಎಂಬ ಐದು ಇಂದ್ರಿಯಗಳು[ಳ್ಳವು] (ಸ್ಪರ್ಶನ ರಸನ ಘ್ರಾಣ ಚಕ್ಷುಃ ಶ್ರೋತ್ರೇಂದ್ರಿಯ ಸಮನ್ವಿತಂಗಳಪ್ಪ ಮನುಷ್ಯಾದಿ ಪಂಚೇಂದ್ರಿಯಂಗಳ್: **ಆದಿಪು,** ೧೦. ೬೩ ವ)

ಪಂಚೋತ್ತರಸಪ್ತತಿಯುತಸಪ್ತಶತ – [ನಾ] ಏಳುನೂರ ಎಪ್ಪತ್ತೈದು (ಆನತನಿಂ ಬಟಿಯಂ ಎನಿತಾನುಂ ಕಾಲದಿಂ ಪಂಚೋತ್ತರ ಸಪ್ತತಿಯುತಸಪ್ತಶತ ಕಾರ್ಮುಕೋತ್ಸೇಧಕಾಯನುಂ: **ಆದಿಪು,** ೬. ೫೬ ವ)

ಪಂಜಿ – [ನಾ] ಹಿಂಜಿದ ಹತ್ತಿಯ ಉಂಡೆ (ತನು ಪಂಜಿವೊಲ್ ಬೆಳರ್ತಿರ್ಪಿನೆಗಂ ಹಿಮಂ ಎಕ್ಕಿದರಲೆವೋಲ್ ಪುದಿದಿರೆಯುಂ: **ಆದಿಪು,** ೬. ೩೩)

ಪಂಡಿತ – [ನಾ] ವಿದ್ವಾಂಸ (ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗಟ್ದ ಸಬ್ಬವದವರೊಡನೆ ಅಂತು ಒಸೆದ ಅನ್ನವಾಸದೊಳ್ ಇರ್ದನಾಗಳ್ ಹರಿಗಂ: **ಪಂಪಭಾ,** ೩. ೮೦)

ಪಂಡಿತಿಕ್ಕೆ – [ನಾ] ಪಾಂಡಿತ್ಯ (ಮುಗುಳ್ನಗೆ ನಗುತ್ತುಂ ಬರ್ಪಂ ಒಂದೆಡೆಯೊಳ್ ಒಂದು ಕಂದದ ಮೊದಲುಮಂ ವೃತ್ತದ ತುದಿಯುಮಂ ಒಂದುಮಾಡಿ ಪದಮಿಕ್ಕಿ ಓದಿ ಪಂಡಿತಿಕ್ಕೆಗೆ ಮುಯ್ವಾಂತುಂ: **ಪಂಪಭಾ,** ೪. ೯೪ ವ)

ಪಂಥ – [ನಾ] ಹುರುಡು (ಆದಿದೇವಂ ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂಥಮುಂಟೇ: **ಆದಿಪು,** ೧೪. ೭೭)

ಪಂದರ್ – [ನಾ] ಚಪ್ಪರ (ಬಾಣಸಿನ ಮಜ್ಜನದ ರಾಣಿವಾಸದ ಮನೆಗಳುಮಂ ನನೆಯ ಪಂದರುಮಂ ತಳಿರ ಕಾವಣಂಗಳುಮಂ: **ಪಂಪಭಾ,** ೫. ೪೭ ವ)

ಪಂದರಿಕ್ಕು – [ಕ್ರಿ] ಚಪ್ಪರವನ್ನು ಹಾಕು (ಎರಡು ಬಲದ ಕಡುವಿಲ್ಲರ್ ಭೋರ್ಗರೆದಿಸೆ ಕೂರ್ಗಣೆಯೊಳ್ ಪಂದರಿಕ್ಕಿದಂತಾಯ್ತು ಗಗನಮಂಡಳಮೆಲ್ಲಂ: **ಪಂಪಭಾ,** ೧೦. ೭೨)

ಪಂದಲೆ – [ನಾ] [ಆಗತಾನೆ ಕತ್ತರಿಸಿದ] ಹಸಿಯ ತಲೆ (ಕರವಾಳಘಾತದೊಳ್ ಅರಾತಿಯ ಪಂದಲೆ ಪಂಚರಾಯುಧಂ ಬೆರಸು ಎಸೆವ ಅಟ್ಟೆ ತೊಟ್ಟ ಕವಚಂಬೆರಸು ಏಱೆದ ವಾಜಿ: **ಪಂಪಭಾ,** ೧೦. ೭೮); [ನಾ] ಒದ್ದೆಯಾದ ತಲೆ (ಪಸರಿಸಿ ಪಂದಲೆಯಂ ಮೆಟ್ಟಿಸಿ ವೈರಿಯ ಪಣೆಗೆಯಿಂ ಬಾರ್ಚಿ ಪೊದಳ್ದೊಸಗೆಯಿನವನ ಕರುಳ್ಗಳೆ ಪೊಸವಾಸಿಗಮಾಗೆ ಕೃಷ್ಣೆಯಂ ಮುಡಿಯಿಸಿದಂ: **ಪಂಪಭಾ,** ೧೨. ೧೫೫)

ಪಂದಳಿರ್ – [ನಾ] [ಪಚ್ಚನೆಯ ತಳಿರ್] ಹಸಿರಾದ ಚಿಗುರು (ಕೆಱಗಣ ಕೆಂದಳಿರ್ ಪುದಿದ ಮೇಗಣ ಪಂದಳಿರ್ ಒಂದಿದೊಂದು ಕೆಯ್ಗುಟಿದ ಪಸುರ್ಪುಮಂ ಪೋಳೆವ ಕೆಂಪುಮಂ ಆಳ್ದಿರೆ: **ಪಂಪಭಾ**, ೫. ೩೨)

ಪಂದಿ – [ನಾ] ಹಂದಿ, [ವಿಷ್ಣುವಿನ] ವರಾಹಾವತಾರ (ಮೀನ್ ಆವೆ ಪಂದಿ ಎಂದು ಎನಿತಾನುಂ ತೆಱನಾಗಿ ಡೊಂಬವಿದ್ಯೆಯನಾಡಲ್ ನೀನಱಿವೆ: **ಪಂಪಭಾ**, ೭. ೫೭)

ಪಂದಿವೇಂಟೆ – [ನಾ] ಹಂದಿಯ ಬೇಟೆ (ಮತ್ತಂ ಪಂದಿವೇಂಟೆಯ ಮಾತಂ ಬಿನ್ನಪಂಗೆಯ್ವೆಂ: **ಪಂಪಭಾ,** ೫. ೪೫ ವ)

ಪಂದೆ – [ನಾ] ಹೇಡಿ (ರೌದ್ರಘೋಷಮ್ ಏರ್ವಸನಮಂ ಉಂಟುಮಾಡಿದುದು ಪಂದೆಗಮಂದಿನ ವೀರಗೋಷ್ಠಿಯೊಳ್: **ಆದಿಪು**, ೧೪. ೯೦)

ಪಂದೆಯಂ ಪಾವಡರ್ – ಪುಕ್ಕಲನ ಮೇಲೆ ಹಾವು ಬೀಳು, ಮತ್ತಷ್ಟು ಗಾಬರಿಗೊಳಿಸು (ಸಭಾಸದರೆಲ್ಲಂ ಎಲೆಮಿಡುಕದೆ ಪಂದೆಯಂ ಪಾವಡರ್ದವೊಲ್ ಉಸಿರದಿರೆ: **ಪಂಪಭಾ**, ೬. ೫೯ ವ)

ಪಂಬಲ್ – [ನಾ] ಹಂಬಲ, ಆಸೆ, ನಿರೀಕ್ಷೆ (ನೀಂ ಗಳ ಪಂಬಲನೆ ಬಿಸುಡಿಂ ಇನ್ ಎನ್ನ ಎಡೆಯೊಳ್: **ಪಂಪಭಾ,** ೯. ೮೫)

ಪಂಬಲಿಸು – [ಕ್ರಿ] ಹಂಬಲಿಸು, ತವಕಿಸು (ಅಲಸದೆ ಮಾಡಿ ಬೇಸಱದೆ ಸಾಲ್ಗುಮಿದೆನ್ನದೆ ಮೆಯ್ಸೊಗಕ್ಕೆ ಪಂಬಲಿಸದೆ ನಿದ್ದೆಗೆಟ್ಟು ನಿಡುಜಾಗರದೊಳ್ ತೊಡರ್ದು: **ಪಂಪಭಾ**, ೧. ೧೩೬)

ಪಕ್ಕ – [ನಾ] ಹತ್ತಿರ (ಕಲ್ಪಮಹೀಜದ ಪಕ್ಕದ ಇರ್ಕೆಲಂಬಿಡಿದು ಮಡಲ್ತು ತೋಱುವ ಲತಾವಳಿಗಳ್ಗೆಣೆಯಾಯ್ತು: **ಆದಿಪು,** ೨. ೪); [ನಾ] ಎದುರು, ಸಮಕ್ಷಮ (ನುಡಿ ನಿನಗಂ ದಿನೇಶತನಯಂಗಂ ಅದೆನ್ನಯ ಪಕ್ಕದೆ ಆದೊಡಂ ಮಿಡುಕದೆ ಕೇಳ್ವೆಂ ಅಲ್ಲಿ ಸಮಂ ಇರ್ವರುಂ: **ಪಂಪಭಾ,** ೧೩. ೨೮)

ಪಕ್ಕರೆ – [ನಾ] [ಪಕ್ಷರಕ್ಷೆ] ಪಕ್ಕದಲ್ಲಿ ಹಾಕುವ ಗುಳ, ಜೀನು (ಪಕ್ಕರೆಯಿಕ್ಕಿ ಬಂದುವು ಹಯಂ ಘಟೆ ಪಣ್ಣಿದುವಾಯುಧಂಗಳಿಂ ತೆಕ್ಕನೆ ತೀವಿ ಬಂದುವು ರಥಂ: **ಪಂಪಭಾ**, ೩. ೬೭)

ಪಕ್ಕಾಗು – [ಕ್ರಿ] ಆಶ್ರಯಿಸು (ಕುಳಿಕೋರ್ಟ್ವಿ ನಂದನಕಂ ಚಂದನಕಂ ಪಸುರ್ಪೆಸೆವ ಬಾಟಿಸ್ಥೊಂಪಕ್ಕಂ ಒಂದೊಂದೆ ತಣ್ಬನಿಯೊಳ್ ಕೋಡಿಸುತಿರ್ಪ ಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ: **ಆದಿಪು**, ೧. ೭೫); [ಕ್ರಿ] ಗುರಿಯಾಗು (ನೂಪುರರವವಿಳಸತ್ ವಾಮಪಾದಪ್ರಹಾರಕ್ಕಿದಱಿೊಳ್ ಪಕ್ಕಾಗಿ ಗೋತ್ರಸ್ಖಲನೆ ನೆಗಟಿ: **ಆದಿಪು**, ೪. ೯)

ಪಕ್ಕುಗೊಡು – [ಕ್ರಿ] ಎಡೆ ಮಾಡಿಕೊಡು (ಮನಂ ಮಱುಕಕ್ಕೆ ನೀಳ್ದ ಕಣ್ ಒಱಿದು ಉಗುವ ಅಶ್ರುವಾರಿಗೆ ತೊದಳ್ನುಡಿ ಲಲ್ಲೆಗೆ ಪಕ್ಕುಗೊಟ್ಟು: **ಪಂಪಭಾ**, ೪. ೧೨)

ಪಕ್ಕುಮಾಡು – [ಕ್ರಿ] ಜೊತೆಮಾಡು, ಅನುಸರಿಸವಂತೆ ಮಾಡು (ಸೌಧರ್ಮೇಂದ್ರನೇಱಿದ ಐರಾವತಗಜೇಂದ್ರಕ್ಕೆ ನಿಜಗಜೇಂದ್ರಂಗಳಂ ಪಕ್ಕುಮಾಡಿ: **ಆದಿಪು**, ೭. ೪೯ ವ)

ಪಕ್ಕುವಾರ್ – [ಕ್ರಿ] ಅವಕಾಶಕ್ಕಾಗಿ ಕಾಯಿ (ಬಳಸಲಿಂ ನಿನ್ನನಾ ಕಾಂತೆಯಂತಾ ನಳಿತೋಳ್ಗಳ್ ಪಕ್ಕುವಾರ್ದಿರ್ದುವು: **ಆದಿಪು**, ೪. ೨೧)

ಪಕ್ಕೆ – [ನಾ] [ಬೇಟೆಯ ಮೃಗ] ಮಲಗುವ ಜಾಗ (ಮೃಗಮಂ ಗಾಳಿಯಂ ಇರ್ಕೆಯಂ ಪಕ್ಕೆಯಂ ಗಣಿದಮಂ ಕಂಡಿಯಂ ಮಾರ್ಕಂಡಿಯಂ: **ಪಂಪಭಾ**, ೫. ೪೩)

ಪಕ್ಷ – [ನಾ] [ಜೈನ] ಹದಿನೈದು ಅಹೋರಾತ್ರಿಗಳು ಅಥವಾ ದಿವಸಗಳು (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ); [ನಾ] ಚಂದ್ರನ ಬೆಳವಣಿಗೆ ಮತ್ತು ಕ್ಷೀಣತೆಗಳ ಹದಿನೈದು ದಿವಸಗಳ ಅವಧಿ (ಸಿತಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲನಕ್ಷತ್ರದೊಳ್ ಅನ್ವಿತಮಾಗೆ ನೆಗಟ್ದುದೀಮತ್ಕೃತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯಂ: **ಆದಿಪು**, ೧೬. ೭೮)

ಪಕ್ಷಗಜ – [ನಾ] ಪಕ್ಕದಲ್ಲಿ ಸಾಗುವ ಆನೆ (ಸೈನ್ಯಾಧಿನಾಥನ ಕೆಲದೊಳ್ ಪಕ್ಷಗಜಾಧಿರೂಢನಾಗಿ ದೇವ ನೋಡೀ ತೋರ್ಪುದು: **ಆದಿಪು**, ೧೩. ೪೫ ವ)

ಪಕ್ಷ್ಮ – [ನಾ] ಕಣ್ಣಿನ ರೆಪ್ಪೆಗೂದಲು (ಲಲಿತಮುಖಸರಸಿಜಂ ನಿಶ್ಚಳಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ: **ಆದಿಪು**, ೧೪. ೧೦೫)

ಪಕ್ಷ್ಮಪಾತ – [ನಾ] ರೆಪ್ಪೆ ಮಿಟುಕಿಸುವುದು (ವಿಸ್ಮೃತಿಪಕ್ಷ್ಮಪಾತನಂ ಅಪೂರ್ವಾಳೋಕನಾಕೌತುಕ ಆಕುಳಿತ ಅಂತಃಕರಣಂ: **ಆದಿಪು**, ೪. ೬೦)

ಪಕ್ವಫಲನಮ್ರ – [ನಾ] ಮಾಗಿದ ಹಣ್ಣುಗಳ ಭಾರದಿಂದ ಬಾಗಿದ (ಪಕ್ವಫಲನಮ್ರ ಆಮ್ರಾದಿಭೂಜಂಗಳ್ ಈ ಯುಗದೊಳ್ ಕಲ್ಪಕುಜಂಗಳಂತೆ: **ಆದಿಪು**, ೬. ೭೭)

ಪಗರಣದರಸ – [ನಾ] ನಾಟಕದ ರಾಜ, ವೇಷಧಾರಿ (ಬಗೆಗೊಂಡ ಕುಲಧನಂ ಸಮದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ಬಂ ಪಗೆವಂಗೆ ಕೊಟ್ಟು ಚೀ ಕೆಮ್ಮಗೆ ಬೆಸೆವವಂ ಅರಸದೆಂತೊ ಪಗರಣದರಸಂ: **ಆದಿಪು**, ೧೨. ೯೮)

ಪಗಿಲ್ – [ಕ್ರಿ] ಅಂಟಿಕೊ (ಬಿಗಿದೊಗೆದ ನಿನ್ನ ಮೊಲೆಗಳ ಮೃಗಮದದ ಪುಳಿಂಚುಗಳ್ ಪಗಿಲ್ತಿರಲ್: **ಪಂಪಭಾ**, ೮. ೬೭)

ಪಗೆ – [ನಾ] ಶತ್ರು (ರಸದಾನಾದಿಗಳೊಳ್ ಛಿದ್ರಿಸುವಮಪ್ಪೊಡೆ ಅವರ್ ಆಪ್ತವಂತರುಂ ಬುದ್ಧಿವಂತರುಂ ಆಗಿ ನೆಗಟ್ದಿರ್ ಇನ್ನಾವ ಮಾಟಿಕ್ಕೆಯೊಳ್ ಪಗೆಯಂ ಕೆಯ್ಗೆ ಮಾಡುವುದು ಪೇಟಿಂ: **ಪಂಪಭಾ**, ೬. ೬೭ ವ)

ಪಗೆಗೊಳ್ – [ನಾ] ದ್ವೇಷವನ್ನು ತಾಳು (ಸೊಡರ ಬೆಳಗಿನೊಳ್ ಕೊರಗುವ ಜಾದಿಯಂ ತುಂಬಿಯೊಳ್ಪಗೆಗೊಂಡ ಸಂಪಗೆಯಂ: **ಆದಿಪು,** ೧೧. ೧೦೯)

ಪಗೆಯಂ ನೆಱಪು – [ಕ್ರಿ] ಹಗೆಯನ್ನು ತೀರಿಸು (ಪಗೆ ಸಾಱುವುದುಂ ಕೊಲ್ಲೆಂ ಪಗೆ ಸಾಱಿದ ನಿನ್ನನಾರ ಮಱಿಯಂ ಪೊಕ್ಕುಂ ಪಗೆಯಂ ನೆಱಪನೆ ನೆಱಪುವ ಬಗೆಯೊಳೆ ಪೊಕ್ಕಂ ಕಡಂಗಿ ಕರ್ಣನ ದೋಣೆಯಂ: **ಪಂಪಭಾ**, ೫. ೧೦೦)

ಪಗೆಯನಭ್ಯಾಸಂಗೆಯ್ – [ಕ್ರಿ] ಹಗೆತನವನ್ನು ಕಲಿ (ಅಂತು ಕರ್ಣಂ ಗುಣಾರ್ಣವನೊಳ್ ಸೆಣಸಿ ಪಗೆಯನಭ್ಯಾಸಂಗೆಯ್ವಂತೆ ವಿದ್ಯಾಭ್ಯಾಸಂಗೆಯ್ದು: **ಪಂಪಭಾ,** ೨. ೫೮ ವ)

ಪಗೆಯಿಱಿಯ ಬಂದರ ಮೂಗನರಿ – ಶತ್ರುವನ್ನು ಕೊಲ್ಲ ಬಂದವರ ಮೂಗು ಕತ್ತರಿಸು (ಅನ್ನೆಗಂ ಪಗೆಯಿಱಿಯ ಬಂದರ ಮೂಗನರಿದರೆಂಬಂತೆ ಅನಿಬರುಂ ಬಾಯಂ ಬಿಟ್ಟು ನೋಡೆ ನೋಡೆ: **ಪಂಪಭಾ,** ೭. ೩೨ ವ)

ಪಗೆವ – [ನಾ] ಶತ್ರು (ಜವನೆಂಬಱಿಕೆಯ ಪಗೆವಂಗದೆಂತು ಪಂಗಿಗನಪ್ಪೆಂ: **ಆದಿಪು,** ೪. ೭೭); ದ್ವೇಷಿಸುವವನು (ನಿನ್ನಂ ಪಗೆವರ ಬೇರೊಳ್ ಬೆನ್ನೀರಂ ಪೊಯ್ದು ನಿನಗೆ ಮಾಟ್ಪೆಂ ಧರೆಯಂ: **ಪಂಪಭಾ,** ೮. ೩೪)

ಪಗೆವಡೆ – [ನಾ] ಶತ್ರುಸೈನ್ಯ (ಪಗೆವಡೆಯೊಡ್ಡುಗಳಂ ಒಡೆಯಲ್ಕೆ ವೇಟ್ಪೆರ್ದೆ ಧಗಮೆನೆ ಸೈರಿಸುವ ಉಪಾಯಮಾವುದು ಕಱುವೇ: **ಪಂಪಭಾ,** ೧೧. ೯೧)

ಪಗೆವಾಡಿ – [ನಾ] ಶತ್ರು ಪಾಳೆಯ (ಕೆಮ್ಮನೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ: **ಪಂಪಭಾ,** ೧೦. ೧೬)

ಪಚ್ಚ – [ನಾ] ಮೇಲುಹಾಸಿಗೆ (ಪೊಳೆವ ಪಚ್ಚದೊಳೆ ಸೊಗಯಿಸುವ ಮೃದುತಲ್ಪದೊಳ್: **ಆದಿಪು,** ೭. ೨೭ ರಗಳೆ)

ಪಚ್ಚನೆ ಪಸಿಯ ಗೋವ – [ನಾ] ಹಚ್ಚಹಸಿಯ ಗೊಲ್ಲ (ಮನೆ ನಿನಗೆ ನಂದಗೋಪನ ಮನೆ ತುಱುಗಾರ್ತಿ ನಿನಗೆ ಮನೆವೆಂಡತಿ ಪಚ್ಚನೆ ಪಸಿಯ ಗೋವನ್ನೆ: **ಪಂಪಭಾ,** ೬. ೫೨)

ಪಚ್ಚ ಪಸಿಯೆಗ್ಗ – [ನಾ] ಶುದ್ಧ ಹಸಿದಡ್ಡ (ಎಣ್ಬರೇಱಿದ ಕಟ್ಟೆಯಂತೆ ದೆಸೆದೆಸೆಗೆ ಬೆಸವ ಪಚ್ಚಪಸಿಯೆಗ್ಗರುಮಂ ಕಂಡು: **ಪಂಪಭಾ,** ೪. ೯೪ ವ)

ಪಚ್ಚವಡಿಸು – [ಕ್ರಿ] ಹೊದಿಸು (ತೊವಲ್ತು ಸೊಗಯಿಸುವ ಅಡವಿಗಳುಮಂ ಪಸಿಯ ನೇತ್ರಮಂ ಪಚ್ಚವಡಿಸಿದಂತೆ ಪಸುರ್ಪುವಡೆದ ನೆಲದೊಳ್: **ಪಂಪಭಾ,** ೭. ೨೫ ವ)

ಪಚ್ಚಿಕ್ಕು – [ಕ್ರಿ] ಭಾಗಮಾಡು (ದಿಕ್ಕರಿಯ ತಲೆಯುಂ ಆತನ ತಲೆಯುಂ ಪಚ್ಚಿಕ್ಕಿದಂತೆ ಕೆಯ್ಗಳುಂ ಅಚ್ಚರಿಯಪ್ಪಿನೆಗಂ ಒಡನೆ ಉರುಳ್ದುವು ಧರೆಯೊಳ್: **ಪಂಪಭಾ,** ೧೧. ೮೨)

ಪಚ್ಚು – [ಕ್ರಿ] ಭಾಗ ಮಾಡು (ಕರವಾಳಂ ಘರವಟ್ಟಿಸಿ ಶಿರೋಜಮಂ ಪಿಡಿದು ತೆಗೆದು ಗುರುವಂ ಪಚ್ಚಂತಿರೆ ಪಿರಿದು ಪೊಯ್ದಂ: **ಪಂಪಭಾ,** ೧೨. ೩೦)

ಪಚ್ಚುಕೊಡು – [ಕ್ರಿ] ಹಂಚಿ ಕೊಡು (ವೃಷಭನಾಥಂ ಉಟಿದಪತ್ಯವರ್ಗಕ್ಕೆಲ್ಲಂ ಇಳಾತಳವಿಭಾಗಮಂ ಪಚ್ಚುಕೊಟ್ಟು: **ಆದಿಪು,** ೯. ೭೨ ವ)

ಪಚ್ಚುಕೊಳ್ – [ಕ್ರಿ] ಹಂಚಿಕೊ (ಜಕ್ಕವಕ್ಕಿಗಳ್ ಸುರತಮಕರಧ್ವಜನ ಸುಭದ್ರೆಯ ವಿರಹಸಂತಾಪಮಂ ಪಚ್ಚುಕೊಂಡಸುಂಗೊಡಗಲೆ: **ಪಂಪಭಾ,** ೪. ೪೮ ವ)

ಪಚ್ಚುಗಂಟಿಕ್ಕು – [ಕ್ರಿ] ಕೂದಲನ್ನು ಎರಡು ಭಾಗ ಮಾಡಿ ಗಂಟುಹಾಕು (ಅಳಿನೀಳೋಜ್ವಳ ಸಹಸ್ರಕುಂತಳಂಗಳ್ ಪರಕಲಿಸಿ ಬಂದು ಪೊಱಮುಯ್ವನಳ್ಳಿಱಿಯೆ ಪಚ್ಚುಗಂಟಿಕ್ಕಿ ಗಾಂಡೀವಧನ್ವಂ ಸನ್ನದ್ಧನಾಗಿರ್ಪನ್ನೆಗಂ: **ಪಂಪಭಾ,** ೧೨. ೨೦೨ ವ)

ಪಚ್ಚೆ – [ನಾ] ನವರತ್ನಗಳಲ್ಲಿ ಒಂದು, ಹಸಿರು ಮಣಿ (ಪೊನ್ನ ಬೆಳ್ಳಿಯ ಪದ್ಮರಾಗದ ಪಚ್ಚೆಯ ಗಿಳಿಯ ಕೋಗಿಲೆಯ ಕೊಂಚೆಯ ಅಂಚೆಯ ಕುಂತಳಿಕೆಯ ಮಾಟಕ್ಕೆಯ ಸಿಪ್ಪುಗಳೊಳ್ ತೀವಿ: **ಪಂಪಭಾ,** ೪. ೮೭ ವ)

ಪಚ್ಚೆಸಾರ – [ನಾ] ಪಚ್ಚೆಯ ಹಸಿರು ಹಾರ (ಪಚ್ಚೆಸಾರದ ಹಾರದ ತೋರಣಂಗಳಂ ಉಗುಳುತ್ತುಂ ಬಂದು: **ಆದಿಪು,** ೪. ೨೫ ವ)

ಪಜ್ಜ – [ನಾ] ಮುತ್ತಜ್ಜ (ತನಯಂ ತಾಯ್ ತಂದೆ ತಮ್ಮಂ ಕೆಳೆಯಂ ಆಳ್ ಪಜ್ಜಂ ಎಮ್ಮಜ್ಜಂ ಇಷ್ಟಾಂಗನೆಯೆಂದು ಆರಾರಂ ಆವಾವಱಿಕೆಯ ಭವಸಂಬಂಧಮಂ ಕಂಡು: **ಆದಿಪು,** ೩. ೫೫)

ಪಜ್ಜಳಿಕೆ – [ನಾ] ಕಾಂತಿ (ಆತನ ಬೆಳ್ಗೊಡೆಯ ಪಜ್ಜಳಿಸುವ ಪಜ್ಜಳಿಕೆಯೆ ತನ್ನೊಳಪೊಕ್ಕಂತೆ: **ಆದಿಪು,** ೧೧. ೫ ವ)

ಪಜ್ಜಳಿಸು – [ಕ್ರಿ] [ಪ್ರಜ್ವಲಿಸು] ಹೊಳೆ, ಪ್ರಕಾಶಿಸು (ಕನಕಗಿರಿ ರತ್ನಾಂಶುನಿಕಾಯಂ ಬೆಳಗೆ ಮೊಳೆದು ಪಜ್ಜಳಿಸುತ್ತಿರ್ಪಿನಂ: **ಆದಿಪು,** ೬. ೯೦); [ಕ್ರಿ] ಕಾದು ಕೆಂಪಾಗು (ಕಾಯ್ದು ಪಜ್ಜಳಿಸುವ ಲೋಹಪಿಂಡಮನೆ ಭೋಂಕೆನೆ ನೀರೊಳಗರ್ದಿದಂತೆವೊಲ್ ಪೊಳೆಪುಡಿದಿರ್ದಂ: **ಆದಿಪು,** ೭. ೯೮)

ಪಟ – [ನಾ] ಚಿತ್ರ, ಚಿತ್ರಪಟ (ಅತಿರಹಸ್ಯಂಗಳಪ್ಪ ಕೆಲಕೆಲವು ಅವಿನಾಣಂಗಳಂ ನಾಣ್ಚಿ ಬಂಚಿಸಿ ಪಿರಿದುಮನುರಾಗದಿಂದಂ ಎನ್ನ ಬರೆದ ಪಟಮನಿದನರ್ಚಿಸಿ: **ಆದಿಪು,** ೩. ೪೩ ವ)

ಪಟಂಗೊಳ್ – [ಕ್ರಿ] ಹಾರಾಡು, ಪ್ರಸಿದ್ಧಗೊಳ್ಳು (ನನ್ನಿ ಪಟಂಗೊಳ್ವಂತೆ ವಿವಿಧ ಧ್ವಜಪಟಂಗಳಂ ಕೊಂಡು ಗೆಲ್ಲಂಗೊಂಡು ತಾನುಮುತ್ತರನುಂ ವಿರಾಟಪುರಕ್ಕೆ ಮಗುಟ್ಟು ಬರ್ಪಾಗಳ್: **ಪಂಪಭಾ,** ೮. ೧೦೯ ವ):

ಪಟಕುಟಿ – [ನಾ] ಗುಡಾರ, ಡೇರೆ (ದೇವರಮ್ಮಮೆಂಬ ಪಟಕುಟಿಯುಂ ಸಿಂಹವಿಧೃತಮಪ್ಪ ಸಿಂಹವಾಹಿನಿಯೆಂಬ ಮೃದುಶಯ್ಯೆಯುಂ: **ಆದಿಪು,** ೧೫. ೩ ವ)

ಪಟಲ – ಸಮೂಹ [ನಾ] (ಶ್ರೀಪತಿ ಸುರದಾರಕರೊಡನಾಪೊತ್ತುಂ ನೆರೆದು ರತ್ನಧೂಳೀಪಟಲವ್ಯಾಪಿತತನು ಮೃದುಮುಗ್ಧಾಳಾಪಂ ಬಳೆದಂ: **ಆದಿಪು,** ೮. ೧)

ಪಟವಾಸ – [ನಾ] ಸುಗಂಧದ ಪುಡಿ, ಬುಕ್ಕಿಯ ಹಿಟ್ಟು (ದಿಶಾಯುವತಿಕೇಳಿಕೀರ್ಣ ಪಟವಾಸಚೂರ್ಣಂ ಜಗತ್ಕುಶೇಶಯನಿವಾಸಿನೀ ಪ್ರಮದಮುಷ್ಟಿಪಿಷ್ಟಾತಕಂ: **ಆದಿಪು,** ೧೧. ೧೫)

ಪಟವಿದ್ದೆ – [ನಾ] [ಪಟವಿದ್ಯೆ] ಚಿತ್ರ ಬರೆಯುವುದು (ಪಟಮಿದೆ ಸಾಲ್ಗುಂ ಅನ್ಯಭವವಲ್ಲಭನಂ ಪಟವಿದ್ದೆಯೆತ್ತಲುಂ: **ಆದಿಪು,** ೩. ೪೫); [ಕ್ರಿ] ಗಾಳಿಪಟ ಆಡಿಸು (ಎತ್ತಿದ ತೋಳ ಮೊತ್ತಮೊದಲ್ ಅಂಗಜನ ಪಟವಿದ್ದೆಗೆತ್ತಿದಂತೆ ಎತ್ತಂ ಅಪೂರ್ವಮಾಗೆ: **ಪಂಪಭಾ,** ೪. ೮೧)

ಪಟಹ – [ನಾ] ಭೇರಿ (ಅಹಿತಮಹೀಪಾಳಹೃದಯಕವಾಟ ವಿಘಟನಪಟುಗಳಪ್ಪ ವಿಜಯಘೋಷಂಗಳೆಂಬ ಪನ್ನೆರಡು ಪಟಹಂಗಳುಂ: **ಆದಿಪು,** ೧೧. ೨೮ ವ)

ಪಟಳ – [ನಾ] ರಾಸಿ (ಎಂದು ಭಾಸ್ಕರತನೂಜೆಯಂ ಉಭಯತಟನಿಕಟ ಕುಸುಮನಿವಹ ಪತತ್ ಪರಾಗಪಟಳ

ಪಿಶಂಗತರತ್ತರಂಗ ಸರೋಜೆಯಂ: **ಪಂಪಭಾ,** ೫. ೫೮ ವ); [ನಾ] ಗುಂಪು (ಅಂತೆ ಗೆಯ್ವೆನೆಂದು ಕೂಜಜ್ಜಳಚರಕುಳ ಕಳರವದೊಳಂ ಕಮಳಕುವಳಯ ರಜಃಕಷಾಯಪರಿಮಳದ ಅಳಿಪಟಳ ಜಟಿಳಮಾಗಿ: **ಪಂಪಭಾ,** ೮. ೩೭ ವ); [ನಾ] ಪದರು (ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ ಸಂಘಟ್ಟನ ಸಮುಚ್ಚಳಿತ ಪಾಂಸುಪಟಳ ಅಂಧಕಾರ ದುರ್ಲಂಕ್ಷಾಂತರಿಕ್ಷ ಕ್ಷಿತಿದಿಗಂತರಾಳಾಂತರಮುಂ: **ಪಂಪಭಾ,** ೧೩. ೫೧ ವ)

ಪಟಳಿಕೆ – [ನಾ] [ಪಡಲಿಗೆ] ಬೆತ್ತದ ಬುಟ್ಟಿ (ಉದ್ದಾಮ ರಜೋರಂಜಿತಂಗಳಂ ಅನರ್ಘ್ಯರತ್ನಮಯ ಪಟಳಿಕೆಯೊಳಾಂತು ಕೊಂಡು ಪೋಗಿ: **ಆದಿಪು,** ೯. ೭೯ ವ)

ಪಟಿಷ್ಠ – [ಗು] ಸಮರ್ಥವಾದ (ವನಕರಿಕುಂಭ ಪಾಟನಪಟಿಷ್ಠ ಕಠೋರ ನಖಪ್ರಹಾರ ಭೇದನಗಳಿತ ಅಸ್ರ ರಕ್ತಮೌಕ್ತಿಕ ಪಙ್ತಿವಿಳಾಸ ಭಾಸುರಾನನಂ ಎನೆ: **ಪಂಪಭಾ,** ೧೩. ೫೧)

ಪಟು – [ನಾ] ಸಮರ್ಥ (ಘಟೆಯ ದಟಿದ ಉಲಿವು ಲಯಘನಘಟೆಗಳ ಮೊಟಗೆನಿಸೆ ಪೊಟ್ಟಗೆ ಒಡೆದತ್ತು ರಟತ್ ಪಟು ಪಟಹ ಶಂಖ ಭೇರಿಯ ಚಟುಳಿತದಿಂದ ಅತಳಪಟಂ ಅಂಬರಪಟಳಂ: **ಪಂಪಭಾ,** ೧೦. ೬೭)

ಪಟ್ಟ – [ನಾ] ಪಟ್ಟವಸ್ತ್ರ (ಪಂಚರತ್ನಶಿಖಾವಿರಾಜಮಾನಮಪ್ಪ ಪಟ್ಟಮನೆತ್ತಿ ಯಾದವವಂಶಸಂಭೂತೆಯುಂ ಅನೇಕಲಕ್ಷಣೋಪೇತೆಯುಂ ಅಪ್ಪ ಸುಭದ್ರೆಗೆ ಮಹಾದೇವಿಪಟ್ಟಮಂ ಕಟ್ಟಿದಾಗಳ್: **ಪಂಪಭಾ,** ೧೪. ೧೮ ವ); [ನಾ] ವೀರಪಟ್ಟ (ಜೋಳದ ಪಾಟಿ ನಿಜಾಧಿನಾಥನ ಆಹವದೊಳ್ ಅರಾತಿನಾಯಕರ ಪಟ್ಟನೆ ಪಾಱೆಸೆ ಸಂದ ಪೆಂಪು: **ಪಂಪಭಾ,** ೧೪. ೫೦)

ಪಟ್ಟಕ – [ನಾ] ಪಟ, ಬಟ್ಟೆ (ತನ್ನ ಮಗಳ್ದಿರೊಳಪ್ಪ ಸ್ನೇಹದಿಂ ಅವರ ರೂಪಂ ಪಟ್ಟಕದೊಳ್ ಬರೆಯಿಸಿ: **ಚಾವುಂಪು,** ಪು. ೪೫೧. ಸಾ. ೨೬); ಪೀಠ (ಕೃಷ್ಣದ್ವೈಪಾಯನನಂ ಕಂಡಜಾತಶತ್ರು ತನ್ನೇಱಿದ ಪಟ್ಟಕದಿಂದಿೞಿದು .. .. ಸಾಷ್ಟಾಂಗವೆಱಗಿ ಪೊಡಮಟ್ಟು: **ಪಂಪಭಾ,** ೭. ೫೯ ವ)

ಪಟ್ಟಣ – [ನಾ] ಸಮುದ್ರತೀರದ ಊರು (ಸಮುದ್ರೋತ್ತೀರ್ಣ ನಿವಾಸಂಗಳಪ್ಪ ಪಟ್ಟಣಂಗಳುಮಂ ನಿಮ್ನಗಾತಟ ನಿಕಟವರ್ತಿಗಳಪ್ಪ ಮಹಾದ್ರೋಣಾಮುಖಂಗಳುಮಂ: **ಆದಿಪು,** ೮. ೬೩ ವ)

ಪಟ್ಟಣಿಗೆ – [ನಾ] ಪಟ್ಟೆಯ ಸೀರೆ, ದುಕೂಲ (ಮುಸುಕಿಟ್ಟ ಪಟ್ಟಣಿಗೆಯುಂ ಪೊಱಪೊಣ್ಮುವ ಕಣ್ಣ ಬೆಳ್ಪುಂ ಓಪರ ಮನದೊಳ್ ತೆಱಂಬೊಳೆವ ಬಾಳೆಗಳಂತಿರೆ: **ಆದಿಪು,** ೧೧. ೪೫)

ಪಟ್ಟದ ಮೊದಲಿಗ – [ನಾ] ಅಧಿಕಾರಕ್ಕೆ ಅತ್ಯಂತ ಹಿರಿಯ ಹಕ್ಕುದಾರ (ಪಟ್ಟದ ಮೊದಲಿಗರ್ ಆಜಗೆ ಜಟ್ಟಿಗರವರೆಂದುಮಾಳ್ವ ಮುನ್ನಿನ ನೆಲನಂ ಕೊಟ್ಟು ಬಟೆಯಟ್ಟು ನಿನಗೊಡವುಟ್ಟಿದರಾ ದೊರೆಯರಾಗೆ ತೀರದುದುಂಟೇ: **ಪಂಪಭಾ,** ೯. ೪೦)

ಪಟ್ಟನೆ ಪಾಱೆಸು – [ಕ್ರಿ] ಪಟ್ ಎಂದು ಹಾರಿಹೋಗುವಂತೆ ಮಾಡು (ವೈರಿಗಳ ಪಟ್ಟನೆ ಪಾಱೆಸಿ ಕಾವುದೆನ್ನ ಬೆಳ್ಗೊಡೆಯುಮಂ ಎನ್ನ ಪಟ್ಟಮುಮಂ ಎನ್ನುಮಂ: **ಪಂಪಭಾ,** ೧೨. ೫೧)

ಪಟ್ಟಬಂಧ – [ನಾ] ಪಟ್ಟ ಕಟ್ಟುವುದು, ಪಟ್ಟಾಭಿಷೇಕ (ಮಧುಮನೋಭವರಿರ್ವರುಂ ಅಟ್ಟಿವಟ್ಟು ಮಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರಲ್ಲದೆ ಪಟ್ಟಬಂಧಮಂ: **ಆದಿಪು,** ೧೧. ೧೦೩)

ಪಟ್ಟಬಂಧ ಮಹೋತ್ಸವ – ಪಟ್ಟಾಭಿಷೇಕ ಮಹೋತ್ಸವ (ಸುತ್ತಲುಂ ಅಟ್ಟಿಱಿಂ ಪಡೆವ ಗೇಯದ ಪೆಂಪಿನ ಅಲಂಪಂ ಆರ್ಗಂ ಆರ್ತಿತ್ತುದು ಪಟ್ಟಬಂಧ ಮಹೋತ್ಸವಂ ಆ ಪಡೆಮೆಚ್ಚೆ ಗಂಡನಾ: **ಪಂಪಭಾ,** ೧೪. ೨೦)

ಪಟ್ಟವಂ ಮಾಡು – [ಕ್ರಿ] ಪಟ್ಟ ಕಟ್ಟು, ಪಟ್ಟಾಭಿಷೇಕ ಮಾಡು (ಆನರಸುಗೆಯ್ವ ಪಱುವಗೆಯನದಂ ಪರಿಹರಿಸಿದೆಂ ಆತನಂ ಈ ಕಿರೀಟಿ ಗೆಲ್ದು ಎನಗೆ ಪಟ್ಟವಂ ಮಾಡುವನೇ: **ಪಂಪಭಾ,** ೧೨. ೧೨೯)

ಪಟ್ಟವಣೆ – [ಕ್ರಿ] ಹಸೆಮಣೆ (ಬಿಡುಮುತ್ತಿನ ಬಳಸಿದ ಕಡೆ ನಡುವಣ ಚೆಂಬೊನ್ನ ಪಟ್ಟವಣೆ ರನ್ನದ ಕನ್ನಡಿವೆರಸು: **ಆದಿಪು,** ೪. ೩೩)

ಪಟ್ಟಸಾಲೆ – [ನಾ] ಪಡಸಾಲೆ, ಹಜಾರ (ಜನಸಮ್ಮೋಹನ ತಮಃಪಟಮಂ ವಿಚಿತ್ರಚಿತ್ರಪಟಮಂ ಆ ಚೈತ್ಯಾಲಯದ ಕೆಲದ ಪಟ್ಟಸಾಲೆಯ ಮುಂತೆ ನೇಱೆ: **ಆದಿಪು,** ೩. ೪೫ ವ)

ಪಟ್ಟಿಗೆ – ಪಟ್ಟಿಕೆ, ಡಾಬು (ಬೆಡಗಿನ ಸೇತಮಾಲೆ ಪಟ್ಟಿಗೆ ಕಟಿಸೂತ್ರಮೆಂಬಿವು ಮನಂಗೊಳೆ .. .. ಮೆಱೆದತ್ತು ವಿಳಾಸಿನೀಜನಂ: **ಆದಿಪು,** ೧೨. ೧೨)

ಪಟ್ಟಿರ್ – [ಕ್ರಿ] [√ಪಡು] ಮಲಗಿರು (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಮುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ)

ಪಡಣ – [ನಾ] [ಪತನ] ಬೀಳುವಿಕೆ, ನಾಶ (ರತಿ ಪಾಪಮುಂ ಪಡಣಮುಂ ಪೋಪಂತೆ ಕಾಮಂಗೆ ಮಜ್ಜನಕ್ಕೆಂದೆತ್ತಿದ ಚಂದ್ರಕಾಂತಘಟದೊಳ್: **ಪಂಪಭಾ,** ೪. ೫೧)

ಪಡಪು – [ನಾ] ಸಂಪಾದನೆ, ಪ್ರಾಪ್ತಿ (ಕಡುತಪದಿಂದೆ ನಿನ್ನ ಪಡಪಾವುದೊ ಗಾವಿಲ ಸಗ್ಗಮಲ್ತೆ: **ಪಂಪಭಾ,** ೭. ೯೩)

ಪಡಲಗೆ – [ನಾ] [ಪಟಲಿಕಾ] ಪಡಲ, ಬೆತ್ತದ ತಟ್ಟೆ (ಮುನ್ನಂ ಪೂಜಿಸಿ ಶರಮಂ ರನ್ನದ ಪಡಲಗೆಯೊಳಿಟ್ಟು ನಿಜಪರಿವಾರಂ ತನ್ನುಳ್ಳನಿತುಂ ಬೆರಸು: **ಆದಿಪು,** ೧೨. ೧೧೦)

ಪಡಲಿಡು – [ಕ್ರಿ] ಚೆದುರಿಹೋಗು (ನಿಚ್ಚಂ ಧರಾಧೀಶರಂ ಪಡಲಿಟ್ಟಂತಿರೆ ಮಾಟಿಪ್ಪಿಂ ಓವದೆ ಪಯಿಂಭಾಸಿರ್ವರಂ ಯುದ್ಧದೊಳ್: **ಪಂಪಭಾ,** ೧೦. ೨೫); ನಾಶವಾಗು (ಪವನಜನಿಂದೆ ಕೌರವಕುಲಂ ಪಡಲಿಟ್ಟವೊಲಕ್ಕುಂ: **ಪಂಪಭಾ,** ೧೦. ೬೩)

ಪಡಲ್ವಡಿಸು – [ಕ್ರಿ] ಕೆಡವು, ಕತ್ತರಿಸು (ಅತಿನಿಬಿಡ ಬಾಳಕದಳೀಷಂಡಂಗಳಂ ವನದುರ್ಗಂಗಳೆಂದೆ ಪಡಲ್ವಡಿಸಿಯುಂ: **ಆದಿಪು,** ೮. ೪೧ ವ); [ಕ್ರಿ] ಚೆಲ್ಲಾಪಿಲ್ಲಿಯಾಗಿಸು (ಭೀಕರಕರ್ಮದ್ವಿಷರಂ ಪಡಲ್ವಡಿಸಲುಂ ಭವ್ಯರ್ಕಳಂ ಘೋರಸಂಸರಣ ಅಂಭೋನಿಧಿಪಾರಮಂ ಸಲಿಸಲುಂ: **ಆದಿಪು,** ೯. ೬೧)

ಪಡಲ್ವಡು – [ಕ್ರಿ] ಧ್ವಂಸವಾಗು (ಬಲ್ವರಿಕೆಯೊಳರಿ ನೃಪರ ಪಡಲ್ವಡೆ ತಳ್ತಿಱಿದು ರಣದೊಳಾ ವಿಕ್ರಮಮಂ ಸೊಲ್ವಿನಮಾವರ್ತಿಸಿದಂ ನಾಲ್ವತ್ತೆರಡಱಿಕೆಗಾಳೆಗಂಗಳೊಳೀತಂ: **ಪಂಪಭಾ,** ೧. ೨೫);

ಪಡಿ – [ನಾ] [ಪ್ರತಿ] ಕದ (ತಮಿಸ್ರಗುಹೆಯ ವಜ್ರದ ಪಡಿ ತತ್ ಕ್ಷಿತಿಧರದರ್ದೆಯಂತೆ ಚಮೂಪತಿಯಿಂ ತೆಱೆದತ್ತು: **ಆದಿಪು,** ೧೪. ೫೭)

ಪಡಿಗ – [ನಾ] ಪೀಕದಾನಿ (ಎರಡನೆಯ ಮೊಗಸಾಲೆಯೊಳಿಟ್ಟ ಪೊನ್ನ ಪಡಿಗಂಗಳೊಳಮಿಕ್ಕಿದ ಪಟಿಯ ಸುಖಾಸನಂಗಳೊಳಂ: **ಪಂಪಭಾ,** ೪. ೪೩ ವ)

ಪಡಿಗರ್ಚ್ಚು – [ನಾ] ಮುಸುರೆ, ಕಲಗಚ್ಚು ? (ಇದಿರಾಂತ ಮಾರ್ಪಡೆಯೆಲ್ಲಮಂ ಜವನ ಪಡೆಗೆ ಪಡಿಗರ್ಚ್ಚಿಕ್ಕಿದಂತೆ ಇಕ್ಕಿ ನಿಂದ ನರನಂದನನಂ ಕಂಡು: **ಪಂಪಭಾ,** ೧೧. ೯೪ ವ)

ಪಡಿಚಂದ – [ನಾ] [ಪ್ರತಿಚ್ಛಂದ] ಪ್ರತಿಕೃತಿ, ಪ್ರತಿಬಿಂಬ (ಅಣ್ಮಿನ ಪಡೆಮಾತದೊಂದೆ ನೆವಮಾಗಿರೆ ಕೆಯ್ದುವನಿಕ್ಕಿ ಸತ್ತ ಸಾವಿನ ಪಡಿಚಂದಮಾಗಿಯುಂ ಇದೇಂ ನಿಮಗಟ್ಟೆಯೊ ಗಂಡವಾತುಗಳ್: **ಪಂಪಭಾ,** ೧೨. ೪೧); [ನಾ] ಮಾದರಿ (ನೀನುಂ ಆಜಿಗೆ ಸೆಡೆದಿರ್ದೆಯಪ್ಪೊಡೆ ಇರು ಚಕ್ರನಿಘಾತದಿಂ ಇಕ್ಕಿ ಬೀರಂ ಉರ್ವಿಗೆ ಪಡಿಚಂದಮಾಗೆ ತಱಿದೊಟ್ಟಿ ಜಯಾಂಗನೆಗೆ ಆಣ್ಮನಾದಪೆಂ: **ಪಂಪಭಾ,** ೧೨. ೨೦೮)

ಪಡಿದೆಱೆ – [ಕ್ರಿ] [ಪಡಿ+ತೆಱೆ] ಬಾಗಿಲು ತೆಗಿ (ಪಡಿದೆಱೆದಂದದಿಂದಂ ತೆಱೆದತ್ತು ಪೊದಳ್ದ ಸಂಕೆಯಿಂ ನಡುಕಂ: **ಪಂಪಭಾ,** ೫. ೧೫)

ಪಡಿಯಱ – [ನಾ] [ಪ್ರತೀಹಾರ] ಕಾವಲುಗಾರಿಕೆ (ಬನದ ಪಡಿಯಱನನಂಗಂ ನಿನಗಿತ್ತೊಡೆ ಪುಗಲಿಂ ಎಂಬುದೇಂ ದೋಷಮೆ: **ಆದಿಪು,** ೧೧. ೧೩೫);

ಪಡಿವಡೆ – [ನಾ] [ಪಡಿ+ಪಡೆ] ಪ್ರತಿ ಸೈನ್ಯ, ಶತ್ರು ಸೈನ್ಯ (ಮದಕರಿಯಂ ಹರಿಯಂ ಪಡಿವಡೆಗುರ್ಚಿದ ಕರವಾಳನೆ ತೋಱಿ ನೃಪತಿ ಗೆಲ್ಲಂಗೊಂಡಂ: **ಪಂಪಭಾ,** ೧. ೧೯)

ಪಡಿಸಣ – [ನಾ] [ಪ್ರತೀಕ್ಷಣ} ಮೇಲ್ವಿಚಾರಣೆ (ಮನೋಹರಿಯಂ ಪಡಿಸಣವಂ ನೋಡಲುಂ ಮಾಳತಿಕೆಯಂ ಬಡ್ಡಿಸಲುಂ: **ಆದಿಪು,** ೭.. ೨೧ ವ)

ಪಡು – [ಕ್ರಿ] ಬೀಳು (ಭಾನುಮತಿ ಬಾಯಟಿದು ಪುಯ್ಯಲಿಡುತುಂ ಬಂದು ಧರ್ಮನಂದನನ ಕಾಲ ಮೇಲೆ ಕವಿದು ಪಟ್ಟು: **ಪಂಪಭಾ,** ೭. ೩೩ ವ)

ಪಡುವಣ್ – [ನಾ] ಪಶ್ಚಿಮ ದಿಕ್ಕು (ಸೇತುಬಂಧಮಂ ತಾಗೆ ಗಂಗಾನದಿಯ ತೆಂಕಣ ಪಡುವಣ ನೆಲನಂ ನೀಮಾಳ್ವುದು ಮೂಡಣ ಬಡಗಣ ನೆಲನಂ ದುರ್ಯೋಧನನಾಳ್ವುದು: **ಪಂಪಭಾ,** ೪. ೮ ವ)

ಪಡುವಣದ – [ಗು] ಪಶ್ಚಿಮ ದಿಕ್ಕಿನಲ್ಲಿರುವಂಥದು (ಅದಱ ಬೆಂಕೆ ಪೋಪಿನಂ ಎಱಗಿಸು ನೀಂ ಮ್ಲೇಚ್ಛಖಂಡಮಂ ಪಡುವಣದಂ: **ಆದಿಪು,** ೧೩. ೩೩)

ಪಡುವಿಡು – [ಕ್ರಿ] ವಾಸಿಯಾಗು, ಜ್ವರವಿಳಿ (ಅಂತು ನಿಜಮದಜ್ವರಂ ಮಂತ್ರಿವರ್ಗವೈದ್ಯವಚನೌಷಧಿಗಳಿಂ ಪಡುವಿಡೆ: **ಆದಿಪು,** ೧೨. ೧೮೯ ವ) [ಎಲ್. ಬಸವರಾಜು ಅವರ ಆವೃತ್ತಿಯ ಪಾಠ]

ಪಡುವು – [ನಾ] ಪಶ್ಚಿಮದಿಕ್ಕು (ನುಡಿವಳಿಗೆ ನರನ ರಥಮಂ ಪಡುವು ಎಣ್ಗಾವುದುವರಂ ಸಿಡಿಲ್ವಿನಂ ಎಚ್ಚು ಅಚ್ಚುಡಿಯೆ ಭುಜಬಲದ ಹರಿಯ ಉರದೆಡೆಯಂ ಬಿರಿಯೆಚ್ಚು ಮೆಱೆದಂ ಅಳವಂ ಭೀಷ್ಮಂ: **ಪಂಪಭಾ,** ೧೧. ೨೦)

ಪಡೆ – [ಕ್ರಿ] [ಹುಟ್ಟುವ ಮುಂಚೆ] ವರ ಪಡೆ (ತೋಳ ಸಡಿಲಿಸದೆ ಆ ಪ್ರಾಣವಲ್ಲಭರ್ ಪ್ರಾಣಮಂ ಅಂದು ಒಡಗಳೆದರ್ ಓಪರೋಪರೊಳ್ ಒಡಸಾಯಲ್ ಪಡೆದರ್ ಇನ್ನವೇಂ ಸಯ್ಪೊಳವೇ: **ಆದಿಪು,** ೫. ೨೪); [ಕ್ರಿ] ಸಂಪಾದಿಸು (ಪಡೆಯಲ್ಕಾಗದ ನಿಧಿಯಂ ಬಡವಂ ಪಡೆದಂತೆ: **ಆದಿಪು,** ೭. ೪೬); [ಕ್ರಿ] ಸೃಷ್ಟಿಸು, ವಿಭಾಗ ಮಾಡು (ತನ್ನ ಪಡೆದ ಸಕಳಕ್ಷತ್ರಿಯವಣಿಕ್ಶೂದ್ರರೆಂಬ ಮೂಱುವರ್ಣಂಗಳೊಳಗೆ: **ಆದಿಪು,** ೮. ೬೪ ವ); [ಕ್ರಿ] ಉಂಟುಮಾಡು (ವಾಸವಂಗಾಸನಕಂಪಮಂ ಪಡೆದು ತೀರ್ಥಕರತ್ವಮನಿತ್ತು ಅನಶ್ವರಾವಾಸಮನೆಯ್ದಿಸಲ್ಕೆ ಇದುವೆ ಷೋಡಶಭಾವನೆಯಿಂದೆ ಷೋಡಶಸ್ವಾಸಮನೆಯ್ದೆ ಭಾವಿಸುಗೆ: **ಆದಿಪು,** ೧೬. ೮೧); [ನಾ] ಸೈನ್ಯ (ಶ್ವೇತ ಭೀಷ್ಮರ ಪೇಟ್ದಿ ಓಜೆಯೊಳೆರಡುಂ ಪಡೆಗಳ ಪಡೆವಳರ್ಕಳ್ ಕುರುಕ್ಷೇತ್ರದೊಳ್ ಚಿತ್ರಿಸಿದಂತೆ ಒಡ್ಡಿ ನಿಂದಾಗಳ್: **ಪಂಪಭಾ,** ೧೦. ೫೧ ವ); [ನಾ] ಗುಂಪು, ಸಮೂಹ (ತಱಿದಂ ದೇವರ ಪಡೆ ರಾಗಿಸೆ ಮನದ ಏವದಿಂ ಅವಯವದೆ ಶಕುನಿಯಂ ಸಹದೇವಂ: **ಪಂಪಭಾ,** ೧೩. ೪೧)

ಪಡೆದಂ – [ನಾ] ಹಡೆದವನು, ಬ್ರಹ್ಮ (ಪಡೆದಂ ಬ್ರಹ್ಮಂ ಜಗಮಂ ತಾನಾರ್ತನಿಲ್ಲ ಪೆಂಪಂ ನಿಮ್ಮಂ ಪಡೆದಲ್ತೆ ಪಡೆದಂ ಎನಿಸಿದ ಕಡುಪೆಂಪಿನ ಪೊಱೆಗೆ ನೀವು ಮೊದಲಿಗರಾದಿರ್: **ಪಂಪಭಾ,** ೬. ೧೨)

ಪಡೆನೋಡಲ್ ಬಂದವರಂ ಗುಡಿವೊಱೆಸಿದರ್ – ಸೈನ್ಯ ನೋಡಲು ಬಂದವರಿಗೆ ಬಾವುಟ ಹೊರುವಂತೆ ಮಾಡಿದರು ಎಂಬ ಗಾದೆಮಾತು **(**ಪಡೆನೋಡಲ್ ಬಂದವರಂ ಗುಡಿವೊಱೆಸಿದರೆಂಬುದಾಯ್ತು ನಿನ್ನನ್ನೆಡೆಯೊಳ್: **ಪಂಪಭಾ,** ೩. ೧೫)

ಪಡೆಪು – [ನಾ] ಇಷ್ಟಾರ್ಥ, ಪಡೆಯಬೇಕೆಂದಿರುವುದು (ಕಡುತಪದಿಂದೆ ನಿನ್ನ ಪಡೆಪಾವುದೊ ಗಾವಿಲ ಸಗ್ಗಮಲ್ತೆ: **ಪಂಪಭಾ,** ೭. ೯೩ ಪರಿಷತ್); ಲಾಭ (ಕನಕದ ಪೂಜೆಯ ಪಡೆಪಾದಪುದಿಲ್ಲಿ ಮುನಿಯ ದಾನದಿನಧಿಪಾ: **ಆದಿಪು,** ೫. ೬)

ಪಡೆಪುಗಿಡು – [ಕ್ರಿ] ಧೈರ್ಯಗೆಡು, ಲಾಭ ಹೋಗು (ಬಡಿದ ಕಾರಣಂ ಕೊಂಡುಯ್ವರ್ ಪಡೆಪುಗಿಡುವಿನೆಗಂ ಎಂದು: **ಆದಿಪು,** ೫. ೨೦)

ಪಡೆಮಾತು – [ನಾ] ಸುದ್ದಿ, ವಿಷಯ (ಉತ್ತರಾಪಥಧ ಹಸ್ತಿನಪುರದಿಂ ಬಂದೆಂ ಎಂದೊಡೆ ಅಲ್ಲಿ ಪಾಂಡವರ ಪಡೆಮಾತಾವುದು ಧೃತರಾಷ್ಟ್ರ ಸುಯೋಧನರ್ ಇರ್ಪಂದಮಾವುದು ಎಂದು ಬೆಸಗೊಳ್: **ಪಂಪಭಾ,** ೩. ೩೧ ವ); [ನಾ] ಕೀರ್ತಿ, ಕಂಡು ಕೇಳಿದ ಮಾತು (ಎಂದು ಎನಿತಾನುಂ ತೆಱದೊಳ್ ಅಳಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳಂ ನುಡಿದುಂ ಕಾಲ್ವಿಡಿದುಂ ಅಚಳಿತಧೈರ್ಯನ ಮನಮಂ ಚಲಿಯಿಸಲಾಱದೆ: **ಪಂಪಭಾ,** ೭. ೯೪ ವ); [ನಾ] ವಿಚಾರ, ಆಲೋಚನೆ (ಪೆಱತೇಂ ಪಡೆಮಾತೊ ನಿನ್ನದೀ ಮೇದಿನಿ

ಪಟ್ಟಮುಂ ನಿನತೆ ನೀನಿರೆ ಪೆಱರ್ ನರೇಂದ್ರರೇ: **ಪಂಪಭಾ,** ೯. ೬೪); **[ನಾ]** ಬೇರೆ ಮಾತು (ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯಲ್ಕೊಡರಿಸಿ ಬಂದಳ್ ಸುತರಂ: **ಪಂಪಭಾ,** ೯. ೭೮); **[ನಾ]** ಐತಿಹ್ಯ, ಕತೆ, ಮಹಿಮೆ (ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ: **ಪಂಪಭಾ,** ೧೨. ೨೧೭)

ಪಡೆಮಾತುಗೊಳ್ – **[ಕ್ರಿ]** ವಿಷಯ ಕೇಳು, ಪ್ರಸ್ತಾಪಿಸು (ಕಿಡುವೊಡಲ ಕಿಡುವ ರಾಜ್ಯದ ಪಡೆಮಾತುಗೊಳಲ್ಕಮೆನ್ನ ಮೈಯಗಿದಪುದು: **ಆದಿಪು,** ೧೪. ೧೨೭)

ಪಡೆಮೆಚ್ಚೆಗಂಡ – **[ನಾ]** [ಎದುರು] ಸೈನ್ಯವೂ ಮೆಚ್ಚಿಕೊಳ್ಳುವ ಶೂರ (ಮಿಕ್ಕಸುರರ ಮೆಯ್ಯೊಳಾದ ವಿರಹಾಗ್ನಿಯಂ ಆಱಿಸುತಿಂತೆ ತನ್ನ ಕೂರಸಿಯೊಳ್ ಅಡರ್ತು ಕೊಂದಸಿಯಳ್ ಇರ್ಕೆ ಅಸಿಯೊಳ್ ಪಡೆಮೆಚ್ಚೆ ಗಂಡನಾ: **ಪಂಪಭಾ,** ೧. ೬)

ಪಡೆವಂತು – ಪಡೆಯುವ ಹಾಗೆ (ಇತ್ತ ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ನೂರ್ವರ್ಮಕ್ಕಳಂ ಪಡೆವಂತು ಪರಾಶರ ಮುನೀಂದ್ರನೊಳ್ ಬರಂಬಡೆದಳ್ ಎಂಬುದಂ ಕುಂತಿ ಕೇಳ್ದು: **ಪಂಪಭಾ,** ೧. ೧೧೬ ವ)

ಪಡೆವಳ – **[ನಾ]** ಸೇನಾನಿ (ಶ್ವೇತ ಭೀಷ್ಮರ ಪೇಟ್ಟಿ ಓಜೆಯೊಳೆರಡುಂ ಪಡೆಗಳ ಪಡೆವಳರ್ಕಳ್ ಕುರುಕ್ಷೇತ್ರದೊಳ್ ಚಿತ್ರಿಸಿದಂತೆ ಒಡ್ಡಿ ನಿಂದಾಗಳ್: **ಪಂಪಭಾ,** ೧೦. ೫೧ ವ)

ಪಡೆವಳ್ಳ – **[ನಾ]** ಪಡೆವಳ (ದಂಡರತ್ನಂ ಪಡೆವಳ್ಳನ ಮುಂದೆ ನಡೆಯೆ ನಡೆದಂ ಭರತಂ: **ಆದಿಪು,** ೧೧. ೪೭)

ಪಣ್ – **[ಕ್ರಿ]** ಹಣ್ಣಾಗು, ಮಾಗು (ಎಯ್ದೆ ಮಡಲ್ತ ತಳ್ತ ಮೆಯ್ಗಳೊಳ್ ಅಡರ್ದು ಓತ ದೂತವಚನಾಮೃತದೊಳ್ ಗೊಲೆಗೊಂಡ ಬೇಟವೆಂಬ ಎಳಲತೆ ಕೂಟದೊಳ್ ಪದೆದು ಪಣ್ತು ಎರ್ದೆಗಿಂಪಿನಲಂಪನೀಯದೇ: **ಆದಿಪು,** ೧೨. ೨೦); **[ನಾ]** ಹಣ್ಣು (ಪರಿದನಿಬರುಂ ಒಡನೆ ಅಡರ್ದಿರೆ ಮಮರನಂ ಮುಟ್ಟಲ್ಕೆ ಪಡೆಯದೆ ಅನಿಬರ್ಗಂ ಕಿಂಕಿರಿವೋಗಿ ಭೀಮಸೇನಂ ಪಿಡಿದಲ್ಗೆ ಪಣ್ವೊಲ್ ಅನಿಬರುಂ ಉದಿರ್ದರ್: **ಪಂಪಭಾ,** ೨. ೩೧); **[ಕ್ರಿ]** ಮಾಡು, ಸಿದ್ಧಪಡಿಸು (ಆಗಳಾಱುಂ ಋತುಗಳ ಪೂಗಳನೊಂದು ಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದ ಓಜನ ಸಾಲೆಯಂತಿರ್ದ ಪೂವಿನ ಸಂತೆಯೊಳ್: **ಪಂಪಭಾ,** ೪. ೮೦ ವ); **[ಕ್ರಿ]** ಸಿದ್ಧಗೊಳ್ಳು (ಬೆಳಗಪ್ಪ ಜಾವದೊಳ್ ಬೀಡುವೀಡುಗಳ್ಗೆಲ್ಲಂ ತೊಟಲ್ದು ಏಕಿರ್ಪಿರಿ ಏಟೆಂ ಪಣ್ಣಿಂ ಎನೆ: **ಪಂಪಭಾ,** ೧೦. ೪೮ ವ)

ಪಣಮುಡಿ – **[ನಾ]** [ಪಣಂ+ಉಡಿ] ಪಣ[ಜೂಜು]ದಲ್ಲಿ ಸೋಲು (ಪಣಮುಡಿದರಂತೆ ಅಡ್ಡಂ ಮಾಡಲುಂ ಎಸೆದ ದೆಸೆಗಳ್ಗೋಡಿಸಲುಂ ಕುಮಾರಸ್ವಾಮಿಯ ನಿಮ್ಮಡಿಯ ಕೆಲದೊಳಾನೆ ಬಲ್ಲೆಂ: **ಪಂಪಭಾ,** ೫. ೪೩ ವ)

ಪಣವ – **[ನಾ]** ಮದ್ದಳೆ (ಆಗಳ್ ಕುರುಧ್ವಜಿನಿಯುಂ ಅನೇಕ ಶಂಖ ಕಾಹಳ ಭೇರೀ ಪಣವ ಝಲ್ಲರೀ ಮೃದಂಗ ತೂರ್ಯಂಗಳ್ .. .. ಮೊಟಗೆ: **ಪಂಪಭಾ,** ೧೧. ೩೩ ವ)

ಪಣಿಗೆ – **[ನಾ]** ಹಣಿಗೆ, ಬಾಚಣಿಗೆ (ಪಸರಿಸಿ ಪಂದಲೆಯಂ ಮೆಟ್ಟಿಸಿ ವೈರಿಯ ಪಲ್ಲ ಪಣಿಗೆಯಿಂ ಬಾರ್ಚಿ ಪೊದಲ್ದೊಸಗೆಯಿನವನ ಕರುಳ್ಗಳೆ ಪೊಸವಾಸಿಗಮಾಗೆ ಕೃಷ್ಣೆಯಂ ಮುಡಿಯಿಸಿದಂ: **ಪಂಪಭಾ,** ೧೨. ೧೫೫)

ಪಣೆ – **[ನಾ]** ಮರದ ಕಾಂಡ, ಕವಲೊಡೆಯುವ ಜಾಗ (ತೀವಿರ್ದತ್ತು ಮೊದಲ್ ಮೊದಲ್ಗೆ ಪಣೆಯುಂ ಮೂಗಯ್ಯ ಮೂಗಯ್ಯೆನಿತ್ತಾವರ್ಕೆಯ್ದೆ ಕವಲ್ಕವಲ್ತು: **ಆದಿಪು,** ೧೧. ೯೭)

ಪಣೆಕಟ್ಟು – **[ನಾ]** ಹಣೆಯ ಅಲಂಕಾರ ಪಟ್ಟಿ, ತಲೆಯ ಪಾಗು (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಜೆ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ ದಳಿವದ ತೊಟ್ಟ ಅಂಗಿಗೆ ತನ್ನೊಳ್ ಅಮರೆ ಬೇಂಟೆಯನೊರ್ವಂ; **ಪಂಪಭಾ,** ೫. ೩೬)

ಪಣ್ಗೊಲೆ – **[ನಾ]** ಹಣ್ಣಿನ ಗೊನೆ (ತೂಗಿ ಪಣ್ಗೊಲೆಯಿಂ ಬಳ್ಕುವ ಕೌಂಗು ಕಾಯ್ದುಱುಗಳ ಪೇಱಿರ್ದ ಚೆಂದೆಂಗು: **ಆದಿಪು,** ೧. ೬೭)

ಪಣ್ಣನೆ – ಸ್ವಲ್ಪಮಟ್ಟಿಗೆ (ನಿನಗಪ್ಪುದು ಈ ಅಟಿನುಡಿ ಬರ್ಕೆ ನಿನ್ನ ಪಿರಿಯಣ್ಣನೆ ಪಣ್ಣನೆ ನೋಟ್ಟಂ ಆತನ ಒಡ್ಡಟೆಯದ ಗಂಡವಾತಂ: **ಪಂಪಭಾ,** ೩. ೧೬)

ಪಣ್ಣಪಣ್ಣನೆ – **[ಗು]** ಮೆಲ್ಲ ಮೆಲ್ಲಗೆ (ಅಂತು ಎರಡು ಪಡೆಗಳುಂ ಪಣ್ಣಪಣ್ಣನೆ ಪಣ್ಣಿ ಕಾಳೆಗಕ್ಕೆ ನಡೆಯಲ್ ಒಡರಿಸಿದಾಗಳ್: **ಪಂಪಭಾ,** ೧೦. ೫೦ ವ)

ಪಣ್ಣಿಡು – **[ಕ್ರಿ]** ಸಿದ್ಧಪಡಿಸು (ಅಯ್ವರ್ ಆಲದ ಕೆಟಗಿಂ ತೊಡರ್ದರ್ ನಮ್ಮ ಭಕ್ಷದೊಳ್ ಪಣ್ಣಿಡು ಪೋಗು ನೀನುಮಾನುಂ ತಿಂಬಂ: **ಪಂಪಭಾ,** ೩. ೧೨)

ಪಣ್ಣಿದ ಜಂತ್ರ – **[ನಾ]** ಮಾಡಿದ ಅಥವಾ ಕೃತಕವಾದ ಯಂತ್ರ (ಮೌಲ, ಭೃತ್ಯ ಸುಹೃತ್ ಶ್ರೇಣಿ ಮಿತ್ರ ಆಟವಿಕ ತಂತ್ರಂಗಳ್ ಪಣ್ಣಿದ ಜಂತ್ರಂಗಳಂತೆ ಕಟಕುಟಮಾದುವು: **ಪಂಪಭಾ,** ೧೩. ೨೧ ವ)

ಪಣ್ಣಿದುವು – **[ನಾ]** ಸಿದ್ಧವಾದುವು (ಪಕ್ಕರೆಯಿಕ್ಕಿ ಬಂದುವು ಹಯಂ ಘಟೆ ಪಣ್ಣಿದುವಾಯುಧಂಗಳಿಂ ತೆಕ್ಕನೆ ತೀವಿ ಬಂದುವು ರಥಂ: **ಪಂಪಭಾ,** ೩. ೬೭)

ಪಣ್ಣು – **[ಕ್ರಿ]** ಸಜ್ಜುಮಾಡು (ಆಗಳ್ ಆಱುಂ ಋತುಗಳ ಪೂಗಳಂ ಒಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದ ಓಜನ ಸಾಲೆಯಿರ್ಪಂತಿರ್ಪ ಪೂವಿನ ಸಂತೆಯೊಳ್: **ಪಂಪಭಾ,** ೪. ೮೦ ವ); **[ಕ್ರಿ]** ಸಜ್ಜಾಗು (ಬೆಳಗಪ್ಪ ಜಾವದೊಳ್ ಬೀಡುವೀಡುಗಳ್ಗೆಲ್ಲಂ ತೊಟಲ್ದೇಕಿರ್ಪಿರಿ ಏಟೆಂ ಪಣ್ಣಿಂ ಎನೆ: **ಪಂಪಭಾ,** ೧೦. ೪೮ ವ)

ಪಣ್ಣುಗೆ – **[ನಾ]** ಮಾಡುವಿಕೆ, ಅಲಂಕರಣ (ಏಱಿದ ಪೊನ್ನ ಪಣ್ಣುಗೆಯ ಪರ್ವಿಡಿ ಕಟ್ಟಿದಿರಾಗೆ ಮುಂದೆ ಬಂದೇಱಿದ ಚೆನ್ನಗನ್ನಡಿಯ ಚೇಟಿಕೆ: **ಪಂಪಭಾ,** ೯. ೧೦೦)

ಪಣ್ತುದಾಗು – **[ಕ್ರಿ]** [ಪಣ್ತುದು+ಆಗು] ಮಾಗು, ಹಣ್ಣಾಗುವುದಾಗು (ನಲ್ಮೆಯೆಂಬ ನಂದನವನಂ ಓಪರೊಳ್ ನೆರೆದೊಡಂತು ರಸಂಬಿಡೆ ಪಣ್ತುದಾಗದೇ: **ಪಂಪಭಾ,** ೪. ೧೦೨)

ಪಣ್ತೆಱಗು – **[ಕ್ರಿ]** ಹಣ್ಣು ಬಿಟ್ಟು ಬಾಗಿದ (ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ ಪಣ್ತೆಱಗಿದ ತದಾಶ್ರಮದ ತರುಗಳ ಮೇಗಿರ್ದು ಪುಗಿಲ್ ಪುಗಿಲೆಂದಿತ್ತ ಬನ್ನಿಮಿರಿಮೆಂಬ ಪೊಂಬಣ್ಣದ ಕೋಗಿಲೆಗಳುಮಂ: **ಪಂಪಭಾ,** ೧. ೧೧೫ ವ)

ಪಣ್ಪಲ – [ನಾ] ಹಣ್ಣುಹಂಪಲ (ಒರೆದ ತಱಗೆಲೆಯೆ ಪರಿಯಣಮಾಗೆ ಪಣ್ಪಲಮೆತ್ತಿದ ಬೋನಮಾಗೆ ಸಿರಿಯ ಮಹಿಮೆಯಂ ಮೆಱೆಯಲೇನಾರ್ತುದೊ ಬನದೊಳಿರ್ಪಿರವಾ ಪಾಂಡವರಾ: **ಪಂಪಭಾ,** ೭. ೨೮)

ಪಣ್ಯಕರ್ಮ – [ನಾ] ಕ್ರಯವಿಕ್ರಯಗಳನ್ನು ನಡೆಸುವುದು, ವ್ಯಾಪಾರ (ಅಖಿಳ ಕ್ಷತ್ರಿಯಸಮೂಹಕ್ಕೆ ಶಸ್ತ್ರಕರ್ಮಮುಮಂ ವಣಿಗ್ವಂಶಕ್ಕೆ ಪಾಶುಪಾಲ್ಯ ಕೃಷಿ ಪಣ್ಯಕರ್ಮಂಗಳುಮಂ: **ಆದಿಪು,** ೮. ೬೪ ವ)

ಪಣ್ಯವನಿತೆ – [ನಾ] ಪಣ್ಯವಧು, ವೇಶ್ಯೆ (ಪಣ್ಯವನಿತೆವೋಲ್ ಕೃತಿ ಸೌಂದರ್ಯದ ಚಾತುರ್ಯದ ಕಣಿಯೆನೆ ವಿದಗ್ಧಬುಧಜನದ ಮನಮನಲೆಯಲೆವೇಡಾ: **ಆದಿಪು,** ೧. ೧೭)

ಪತಂಗ – [ನಾ] ದೀಪದ ಹುಳು (ಕೋಪಶಿಖಿಕಳಾಪಂಗಳೊಳ್ ಪುಡಪುಡನೆ ಪುಟ್ಟಿ ಸಾಯಲೆಂದು ಪಾಯ್ವ ಪತಂಗಂಗಳಂತೆ: **ಪಂಪಭಾ,** ೧೧. ೩೯ ವ); [ನಾ] ಸೂರ್ಯ (ಕನಕಗಿರಿಯಂ ಬಲಗೊಳ್ವ ಪತಂಗದಂಪತಿಯಂತೆ ಆ ದಂಪತಿಗಳ್ ಸಪ್ತಾರ್ಚಿಯಂ ಮೂಱು ಸೂಟ್ ಬಲವಂದು: **ಪಂಪಭಾ,** ೩. ೭೫ ವ)

ಪತಂಗಮಂಡಲ – [ನಾ] ಸೂರ್ಯಮಂಡಲ (ಪತಂಗಮಂಡಲಂ ಅಪರಗಿರಿತಟಮನೆಯ್ದುವುದುಂ: **ಪಂಪಭಾ,** ೧೨. ೮೮ ವ)

ಪತತ್ – [ಗು] ಬಿದ್ದ, ಉದುರಿದ (ಎಂದು ಭಾಸ್ಕರತನೂಜೆಯಂ ಉಭಯತಟನಿಕಟ ಕುಸುಮನಿವಹ ಪತತ್ ಪರಾಗಪಟಳ ಪಿಶಂಗತರತ್ತರಂಗ ಸರೋಜೆಯಂ: **ಪಂಪಭಾ,** ೫. ೫೮ ವ)

ಪತತ್ರಿ – [ನಾ] ಬಾಣ (ಒರ್ವರೊರ್ವರನೆ ಮಚ್ಚರದಿಂ ಗಜೆಸನ್ನೆಗೆಯ್ದು ಇದಿರ್ಚಿದ ಪದದೊಳ್ ಪತತ್ರಿಮಯಂ ಎಂಬಿನಿತಾಯ್ತು ಸಮಸ್ತದಿಕ್ತಟಂ: **ಪಂಪಭಾ,** ೧೦. ೮೭)

ಪತದ್ವಜ್ರ – [ನಾ] [ಪತತ್+ವಜ್ರ] ಬಡಿಯುವ ಸಿಡಿಲು (ಕುಪಿತ ಅನೇಕಪ ದಂದಶೂಕ ದವ ದೈತ್ಯ ಅರಾತಿ ಚೋರ ಅಂಧಕಾರ ಪತದ್ವಜ್ರ ವಿಷ ಅಭಿಚಾರಿಕ ಜರಾತಂಕಾದಿ ಭೇದಂಗಳಪ್ಪ: **ಆದಿಪು.** ೧೬. ೯)

ಪತಾಕಿನಿ – [ನಾ] ಸೈನ್ಯ (ಅಂತು ದ್ರೋಣಂ ಏಣಗೋಣಸಾವಂ ಸಾವುದುಂ ಭೋರ್ಗರೆದಾರ್ದ ಪಾಂಡವ ಪತಾಕಿನಿಯುಮಂ ಒಂದು ತಲೆಯಾಗೋಡುವ ಕೌರವ್ಯಧ್ವಜಿನಿಯುಮಂ: **ಪಂಪಭಾ,** ೧೨. ೩೦ ವ)

ಪತಾಕಿನೀಚಕ್ರ – [ನಾ] ಸೇನಾಸಮೂಹ (ಚಕ್ರೇಶ್ವರಂಗೆ ಚಕ್ರರತ್ನ ಸ್ಖಲನಮಂ ಪತಾಕಿನೀಚಕ್ರಪ್ರಧಾನಪ್ರಭುಗಳಱಿಯ ಬಿನ್ನಪಂಗೈದೊಡೆ: **ಆದಿಪು,** ೧೪. ೬ ವ)

ಪತಾಕಿನೀಪತಿ – [ನಾ] ಸೇನಾಧಿಪತಿ (ಆಗಳ್ ಪತಾಕಿನೀಪತಿಯ ನಿಯಮದಿಂ ಪೂರ್ವದಿಗ್ಭಾಗಸ್ಥಿತಮಂ ಖಂಡಮನಪ್ರತಿಹತ ಶಾಸನಾಂಕಿತಂ ಮಾಡಿ: **ಆದಿಪು,** ೧೩. ೮೧ ವ)

ಪತಾಕೆ – [ನಾ] ಬಾವುಟ, ಧ್ವಜ (ಪತಾಕೆಯೊಂದು ವಿಭ್ರಮಮನೆ ಪೋಲೆ ಪುರ್ವಿನ ಪೊಡರ್ಪೊಳಕೊಂಡುದವಳೆ ಗರ್ಭಚಿಹ್ನಂ: **ಪಂಪಭಾ,** ೧. ೧೨೦)

ಪತಿ – [ನಾ] ಒಡೆಯ, ಆದಿಜಿನ (ದೇವೋತ್ತರಕುರುಗಳೆ ನಾನಾವಿಧ ಕಲ್ಪಾಂಘ್ರಿಪಂಗಳಿಂದಂ ಪತಿಯಂ ತೀವಿ ಬಳಸಿರ್ದುವೆನೆ ಕಲ್ಪಾವನಿರುಹ ಭೂಮಿಭಾಗಂ ಅತಿರಮಣೀಯಂ: **ಆದಿಪು,** ೧೦. ೩೪)

ಪತಿಂವರಾ – [ನಾ] ಮದುವೆಯಾಗಲಿರುವ ಹೆಣ್ಣು (ನಿಜವಿಜಯಶ್ರೀ ಪತಿಂವರಾಪರಿಣಯನೋತ್ಸವಾಲೋಕನ ಕುತೂಹಲ ಪ್ರಚಲಿತ ಸಮಸ್ತ ಸಾಮಂತಚಕ್ರನುಂ: **ಆದಿಪು,** ೧೪. ೯೧ ವ) [ಎಲ್. ಬಸವರಾಜು ಅವರ ಆವೃತ್ತಿಯ ಪಾಠ]

ಪತಿವ್ರತಾಗುಣ – [ನಾ] ಪಾತಿವ್ರತ್ಯಗುಣ (ದಿವ್ಯಮುನಿಪುಂಗವರಂ ಬಗೆದಿರ್ಪಿನಂ ನಿಜಾತ್ಯಂತ ಪತಿವ್ರತಾಗುಣದಿನರ್ಚಿಸಿ ಮೆಚ್ಚಿಸು ನೀಂ ದಿಗಂತವಿಶ್ರಾಂತಯಶರ್ಕಳಂ ವರತನೂಭವರಂ ಪಡೆ ನೀಂ ತಳೋದರೀ: **ಪಂಪಭಾ,** ೧. ೧೧೮)

ಪತ್ತತಿಶಯ – [ನಾ] [ಜೈನ] ಕೇವಲಜ್ಞಾನಪ್ರಾಪ್ತಿಯಿಂದ ಜಿನನಿಗೆ ಒದಗುವ ಹತ್ತು ಅತಿಶಯಗಳು: ನಾಲ್ಕು ದಿಕ್ಕಿಗೆ ನೂರು ಯೋಜನ ಸೀಮೆಯಲ್ಲಿ ಸುಭಿಕ್ಷತೆ, ಪರಿಮಿತ ಪ್ರಮಾಣದ ಉಗುರು ಮತ್ತು ಕೂದಲುಗಳಿರುವ ದೇಹ, ಭೋಜನಾಭಾವ, ದೇಹಕ್ಕೆ ಯಾವುದೇ ಬಾಧೆಯಿಲ್ಲದಿರುವುದು, ನಾಲ್ಕು ಮುಖಗಳಿಂದ ಕೂಡಿರುವುದು, ಸರ್ವಶಾಸ್ತ್ರಜ್ಞತೆ, ರೆಪ್ಪೆಯಾಡದಿರುವುದು, ಆಕಾಶಗಮನಸಾಮರ್ಥ್ಯ, ಪ್ರಾಣಿಹಿಂಸೆಯಿಲ್ಲದಿರುವುದು, ದೇಹಕ್ಕೆ ನೆರಳಿಲ್ಲದರುವುದು (ಇಂತು ಪತ್ತತಿಶಯಗಳಿವೇಂ ಜಿನನೊಳ್ ಪೊದಳ್ದುವೋ: **ಆದಿಪು,** ೧೦. ೪೩)

ಪತ್ತಳೆ – [ನಾ] [ಪತ್ರಿಕಾ] ಓಲೆ, ಸಂದೇಶ (ಇಂತಿದು ಪತ್ತಳೆ ಎಂದು ಸಾಱುವಂದಂ ಮಿಗೆ ಕರ್ಚಿ ಪಾಱಿದುವು ಕೆಂದಳಿರಂ ಗಿಳಿವಿಂಡಿನೋಳಿಗಳ್: **ಪಂಪಭಾ,** ೫. ೩೧)

ಪತ್ತಱು – [ನಾ] [ಪತ್ತು+ಆಱು] ಹದಿನಾರು (ಸೆಱೆಕೋಲ್ ಸೆಱೆಕೋಲಿಂ ಪತ್ತಱುಗಾವುದ ಬಲದ ಪವಣನನಿತಿನಿತೆಂದಾನಱಿಯೆಂ: **ಪಂಪಭಾ,** ೧೦. ೩೯)

ಪತ್ತಿ – [ನಾ] ಪದಾತಿ ಸೈನ್ಯ (ಪತ್ತಿ ಶಸ್ತ್ರ ದ್ಯುತಿಪರಿಕರ ಸಾಂದ್ರೀಭವಚ್ಚಂಡರೋಚಿಃ ಕಿರಣೌಘಂ: **ಆದಿಪು,** ೪. ೨೪)

ಪತ್ತಿದ ಕಣ್ – [ನಾ] ಮೆತ್ತಿಕೊಂಡ ಕಣ್ಣು (ಆಕೆಯ ಪತ್ತಿದ ಕಣ್ಣುಮಂ ಉಟ್ಟಿಗಿದ ಮನಮುಮಂ ಜೋಲ್ದ ನಾಣ್ಪುಮಂ ನೀಳ್ದ ಸರಮುಮಂ ಅಱಿದು: **ಪಂಪಭಾ,** ೪. ೪೦ ವ)

ಪತ್ತಿಸು – [ಕ್ರಿ] ರಂಜಿಸು, ಸಂತಸಗೊಳಿಸು (ಉತ್ತಮವಿದ್ಯೆಗಳ್ಗೆ ಗುಱಿಯಾದ ತನೂಭವರೆಯ್ದೆ ಚಿತ್ತಮಂ ಪತ್ತಿಸೆ: **ಆದಿಪು,** ೮. ೬೧); [ಕ್ರಿ][ಕಾಮದ] ಬೆಂಕಿ ಹೊತ್ತಿಸು (ನಯದೊಳೆ ನೋಡಿ ನೋಟದೊಳೆ ಮೇಳಿಸಿ ಮೇಳದೊಳ್ ಅಪ್ಪುಕೆಯ್ದು ಗೊಟ್ಟಿಯೊಳ್ ಒಳಪೊಯ್ದು ಪತ್ತಿಸುವ ಸೂಳೆಯರಂದಂ: **ಪಂಪಭಾ,** ೪. ೯೪)

ಪತ್ತು – [ಕ್ರಿ] ಒಡಗೂಡು (ಸುರತಾಮೃತದೊಳ್ ತಣಿದು ಅಟ್ಟಿಜಿಂ ಜಿಗಿಲ್ತಂತಿರೆ ಪತ್ತಿ ಮೆಯ್ಯಗ್ಗಳೆರಡಾದೊಡಮೇನಸುವೊಂದೆ: **ಆದಿಪು,** ೩. ೫); [ಕ್ರಿ] ಅಂಟಿಕೊ (ಮಱಸಿರ್ದಂಬರಮೆಯ್ದೆ ನಾಂದ ತನುವಂ ಪತ್ತಿರ್ದು ಕಣ್ಗೆಲ್ಲಿಯುಂ ತೆಱಪಂ ಮಾಡಿ ಮನೋಜಚಕ್ರಿಯ ಜಯಶ್ರೀರಾಜ್ಯಚಿಹ್ನಂಗಳಂ ಮೆಱೆದು: **ಆದಿಪು,** ೧೧. ೧೫೩); [ಕ್ರಿ] ಲಭ್ಯವಾಗು (ತವೆ ಮಾಱಾಂತ ಬಲಂ ಕಱುತ್ತಿಱಿದು ತನ್ನಾಳ್ದಂ ಕರಂ ಮೆಚ್ಚೆ ಗೆಲ್ದವನಂ ಶ್ರೀವಧು ಪತ್ತುಗುಂ: **ಪಂಪಭಾ,** ೧೦. ೪೪); [ಕ್ರಿ] ಸೇರು (ಹರನೊಳೆ

ಪತ್ತಿ ತೆತ್ತಿಸಿದ ಚಿತ್ತಮಂ ಇರ್ಬಗಿಯಾಗೆ ಮೋಹಮೊತ್ತರಿಸೆ ಸುಯೋಧನನಂಗೆ: **ಪಂಪಭಾ,** ೧೩. ೬೩)

ಪತ್ತುಗೆ – [ನಾ] ಪ್ರಾಪ್ತಿ (ಮಗಳ ಮನೋರಮೆಯ ಮದುವೆಗಂ ರಾಜ್ಯದ ಪತ್ತುಗೆಗಂ ಗುರೂಪರೋಧಕ್ಕಗಿದು: **ಆದಿಪು,** ೬. ೨); [ನಾ] ಸಂಬಂಧ (ಎನ್ನ ನಿನ್ನ ಪತ್ತುಗೆಯ ತೊಡರ್ಪದಿಂದು ಪಜಿದತ್ತು ಮನಂ: **ಆದಿಪು,** ೧೨. ೩೭)

ಪತ್ತುವಿಡಿಸು – [ಕ್ರಿ] [ಪತ್ತು+ಬಿಡಿಸು] ಸಂಬಂಧ ತಪ್ಪಿಸು (ದೆಸೆಗಳ ಸಂದಂ ಪಜಿದು ಆಗಸದಿಂದಂ ಪತ್ತುವಿಡಿಸುವಂತೆವೊಲ್ ಇಳೆಯಂ: **ಆದಿಪು,** ೧೨. ೫೪)

ಪತ್ತುವಿಡು – [ಕ್ರಿ] ಸಂಬಂಧ ತಪ್ಪು (ಮೌನದೊಳಿಂತು ನೀನಿರೆ ರುವದ್ಭೃಂಗಾಳಿಯಿಂ ಪತ್ತುವಿಟ್ಟುಡುಗಿರ್ದಬ್ಜಮನೆಯ್ದೆ ಪೋಲ್ತುದು: **ಆದಿಪು,** ೩. ೩೧); [ಕ್ರಿ] ದೂರಮಾಡು (ಶ್ರೀಮತ್ಯಾರ್ಯೆಯುಂ ಸಮ್ಯಕ್ತ್ವಮಾಹಾತ್ಮ್ಯದಿಂ ಸ್ತ್ರೀರೂಪಮಂ ಪತ್ತುವಿಟ್ಟು: **ಆದಿಪು,** ೫. ೭೦ ವ); [ಕ್ರಿ] ನಿವಾರಣೆಗೊಳ್ಳು, ಪರಿಹಾರವಾಗು (ಅಂತು ನಿಜಶೌರ್ಯಮದಜ್ವರಂ ಮಂತ್ರಿವರ್ಗವೈದ್ಯವಚನೌಷಧಿಗಳಿಂ ಪತ್ತುವಿಡೆ: **ಆದಿಪು,** ೧೨, ೧೯ ವ); [ಕ್ರಿ] ಮುಗಿದುಹೋಗು (ಮಾನಕಷಾಯಮವರ್ಗಿನ್ನುಂ ಪತ್ತುವಿಟ್ಟುದಲ್ತದಜಿಂ ಕೇಲಜ್ಞಾನೋತ್ಪತ್ತಿ ಆಗದಿರ್ದುದು: **ಆದಿಪು,** ೧೪. ೧೪೩ ವ); [ಕ್ರಿ] ಬಿಟ್ಟು ಹೋಗು (ಆಗಳ್ ತನ್ನ ರಾಗರಸಮಂ ರಾಗಿಗಳ್ಗೆಲ್ಲಂ ಪಚ್ಚುಕೊಟ್ಟಂತೆ ಕೆಂಪು ಪತ್ತುವಿಡೆ: **ಪಂಪಭಾ,** ೪. ೫೦ ವ); [ಕ್ರಿ] ಅಂಟಿರುವುದನ್ನು ಕೊಡವಿಕೊ (ಸತ್ತುಂ ನೆಲನಂ ಪತ್ತುವಿಡೆಂ ಎಂಬಂತೆ ನೆಲನಂ ಪತ್ತಿ ಮೂರ್ಛಾಗತನಾಗಿರ್ದ: **ಪಂಪಭಾ,** ೧೩. ೯೭ ವ)

ಪತ್ತೆಂಟು – [ನಾ] ಅನೇಕ (ಆದರದಿಂದೆ ಕೊಂಡನವಜಿೊಳ್ ಪತ್ತೆಂಟು ರತ್ನಂಗಳಂ: **ಆದಿಪು,** ೧೨. ೧೨೦)

ಪತ್ರ – [ನಾ] ಎಲೆ (ಲಲಿತ ವಿಚಿತ್ರ ಪತ್ರಫಲಪುಷ್ಪಯುತಾಟವಿ ಸೊರ್ಕಿದಾನೆಯಂ ಬೆಳೆವುದು: **ಪಂಪಭಾ,** ೧. ೫೪)

ಪತ್ರಚ್ಛೇದ – [ನಾ] ಎಲೆಗಳ ಆಕಾರದಲ್ಲಿ ಕತ್ತರಿಸುವುದು (ಚಿತ್ರಕರ್ಮ ಪತ್ರಚ್ಛೇದ ಗ್ರಹಗಣಿತ ರತ್ನಪರೀಕ್ಷೆಗಳೊಳಂ: **ಪಂಪಭಾ,** ೨. ೩೪ ವ)

ಪತ್ರಚ್ಛೇದ್ಯ – [ನಾ] ಎಲೆಗಳಲ್ಲಿ ಚಿತ್ರ ಬಿಡಿಸುವುದು (ಹಸ್ತಕೌಶಲ ಕಳಿತಮಪ್ಪ ಚಿತ್ರಕಳಾಪ ಪತ್ರಚ್ಛೇದ್ಯಾದಿ ಸಮನ್ವಿತಮಪ್ಪ ಶಿಲ್ಪಮುಮಂ: **ಆದಿಪು,** ೮. ೬೪ ವ)

ಪತ್ರಭಂಗ – [ನಾ] ಕೆನ್ನೆ ಮೊದಲಾದವುಗಳ ಮೇಲೆ ಬರೆಯುವ ಚಿತ್ರ, ಮಕರಿಕೆ (ಶರದದ ಬಿಸಿಲಳುರೆ ಪೊಣ್ಮಿದ ಘರ್ಮಬಿಂದುಗಳಿಂ ನಾಂದು ಪುಚ್ಚಟಿದರೆವೊರೆಕನಾದ ಕುಂಕುಮಪತ್ರಭಂಗದ ಕೊರಗಿದ ನಗೆಮೊಗಂಗಳುಮಂ: **ಆದಿಪು,** ೧೧. ೭೦ ವ)

ಪತ್ರಲೇಖಾವಳಿ – [ನಾ] ಪತ್ರಭಂಗ (ಲಲಾಟಕುಂಕುಮಸ್ವೇದಜಳಂ ಕಿಡಿಸಿದುದು ಕದಪಿನೊಳ್ ಪೊಟ್ಟಿಡೆ ಬರೆದರಸಿಯರ ಪತ್ರಲೇಖಾವಳಿಯಂ: **ಆದಿಪು,** ೧೧. ೫೪)

ಪತ್ರಿಲ – [ನಾ] ಗಿಡಮರ (ಉದ್ಯಾನಕೇಳೀಚಳತ್ ಪತ್ರಿಲಶಾಖಾಕಾರ ಚೈತ್ರದ್ವಿರದಕದಳಿಕಾಡಂಬರಂ: **ಆದಿಪು,** ನರಸಿಂ. ೧೩. ೮)

ಪಥಚ್ಯುತ – [ಗು] ದಾರಿ ತಪ್ಪಿದ (ಉಪಗೂಹನಮುಂ ಸದ್ಧರ್ಮ ಪಥಚ್ಯುತ ಭವ್ಯಸಂಹತಿ ಸಂಸ್ಥಾಪನಮುಂ: **ಆದಿಪು,** ೫. ೫೮)

ಪಥಪರಿಶ್ರಮ – [ನಾ] ಪ್ರಯಾಣಿಸಿದ ಆಯಾಸ (ಮಜ್ಜನ ಭೋಜನ ತಾಂಬೂಲ ಲೇಪನಂಗಳಿಂ ಪಥಪರಿಶ್ರಮಮೆಲ್ಲಮಂ ಕಳೆದು: **ಪಂಪಭಾ,** ೩. ೧೮ ವ)

ಪದ – [ನಾ] ಸ್ಥಿತಿ (ಕ್ಷಮಿಯಿಪುದೆಂದು ಕಾಲ್ಗೆಜಗಿದ ನಿನ್ನದೊಂದುಪಶಮಮಂ ಪಡೆದತ್ತು ಮನುಷ್ಯಜನ್ಮಮಂ ಮಱುಗಿಸಿ ನಿನ್ನನೀ ಪದಕ್ಕೆ ತಂದುದು: **ಆದಿಪು,** ೩. ೪೦); [ನಾ] ಪದವಿ (ಅಟಿಪದೆ ಪದ ಗಟಿಪದೆ ಪೊಂಪುಟಿವೋಗೆ ಯಶಃಪ್ರಕಾಶಂ ಈಗಳೆ ಧರೆಯಂ ಪಟಿಕೆಯ್ದು: **ಆದಿಪು,** ೪. ೮೭); [ನಾ] ಹೆಜ್ಜೆ (ಷಟ್ಖಂಡಮಂಡಳ ವಿಜಯವಿಳಾಸ ವಿಹಾರಶೀಲಂ ಕತಿಪಯಪದಂಗಳಂ ವಿಹಾರಿಸಿ: **ಆದಿಪು,** ೧೧. ೨೭ವ); [ನಾ] ಸುರತದ್ರವ (ಅಮರ್ದಿನ ಧಾರೆಯಂತೆ ನುಡಿಯಿಂಪು ಅಮರ್ಧಂ ತಳಿದಂತೆ ಸೋಂಕಿನಿಂಪು ಅಮರ್ದಿನ ಧಾರೆಯಂತೆ ಪದದಿಂಪು: **ಆದಿಪು,** ೧೨. ೨೭); ರೀತಿ, [ನಾ] ಹದ (ನೆಲನಂ ನಿಜಗೆಯಂ ನಡೆವೊಂದು ಪದಮುಮಂ ಸೋವಳಿ ಮೇವಳಿ ಬಿಸುವಳಿಯಂ; **ಪಂಪಭಾ,** ೫. ೪೬); [ನಾ] ಸಂದರ್ಭ (ಆವುದು ಉಣ್ಬ ಉಣಿಸು ಎನೆ ಪೇಟ್ವೆನೆಂಬ ಪದದೊಳ್ ನರಕಾಂತಕಂ ಅಗ್ನಿದೇವನಂ ಕಾಣಲೊಡಂ: **ಪಂಪಭಾ,** ೫. ೭೧ ಮತ್ತು ೭೧ ವ); [ನಾ] ಸಮಂಜಸ, ಸೂಕ್ತ (ಜಳಪ್ರವೇಶಂ ಇಲ್ಲಿಗೆ ಪದನೆಂದು ನಿಶ್ಚಯಿಸಿ ವಾರಿಜನಾಥಂ ಅನಾಥನಾಗಿ ತೊಟ್ಟನೆ ಮುಳುಪಂತೆವೊಲ್ ಮುಳುಗಿದಂ: **ಪಂಪಭಾ,** ೧೩. ೧೦೬)

ಪದಂಗಳಂ ಪುಗಿಸು – [ಕ್ರಿ] ಪದವಿಗಳನ್ನು ಆರೋಪಿಸು (ಪೂರ್ವ ಭೂಮಿಪರ ಪದಂಗಳಂ ಪುಗಿಸಿ ಪೋಲಿಪೊಡೆ ಈತನುದಾತ್ತ ಪೂರ್ವ ಭೂಮಿಪರನೊಳ್ಪಿನೊಳ್ ತಗುಳೆವಂದೊಡೆ ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟ್ಟಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್: **ಪಂಪಭಾ,** ೧. ೧೪)

ಪದಂಗಾಸು – [ಕ್ರಿ] ಹದವಾಗಿ ಕಾಸು (ಉದಯಾದ್ರಿಯೊಳ್ ಪದಂಗಾಸಿದ ಪೊನ್ನ ಪುಂಜಿಯವೊಲಿರ್ದುದು ಕಣ್ಗೆ ಹಿಮಾಂಶುಮಂಡಲಂ: **ಪಂಪಭಾ,** ೩. ೮೧)

ಪದಕೊರಲ್ – [ನಾ] ಹದವಾದ ಶಾರೀರ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಳ್ ಎಟಿದಿಕ್ಕಿದಂತೆ ಸುತಿಯೊಳ್ ಸಮವಾಗಿರೆ: **ಪಂಪಭಾ,** ೭. ೮೮)

ಪದಕ್ಷೋಭ – [ನಾ] ಕಾಲು ತುಳಿತ (ಆಗಳ್ ಸರಭಸಪ್ರಚಾರಿತ ಪರಿಜನ ಪದಕ್ಷೋಭವಿಚಳಿತ ಮಹೀತಳಮುಂ: **ಆದಿಪು,** ೮. ೩೫ ವ)

ಪದನ – [ನಾ] ಹದವಾಗಿ (ಪದನಂ ಕಾಣಿಸಿಕೊಳ್ವುವಲ್ಲಿ ಮಟಿಗಳ್ ಷಡ್ಭಾಗಮಂ ಕೊಂಡು ತಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ: **ಆದಿಪು,** ೧. ೫೧

ಪದನಖ – [ನಾ] ಕಾಲುಗುರು (ಮತ್ತ ಮಾತಂಗ ಪದನಖ ಖರ್ವಿತ ಉರ್ವಿತಳಮುಂ ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಯತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ,** ೧೩. ೫೧)

ಪದನಱೆ – [ಕ್ರಿ] ಕ್ರಮವನ್ನು ಅರಿ (ಧಾನ್ಯಂಗಳಂ ಪದನಱೆದುಡುಗುವ ಕಳಂ ಮಾಡುವ ಒಕ್ಕುವ ಅಡಕುವ: **ಆದಿಪು**, ೬. ೭೭)

ಪದನ್ಯಾಸ – [ನಾ] ಹೆಜ್ಜೆಯಿಡುವಿಕೆ (ಚತುರಂತಕ್ಷಿತಿ ಗರ್ಭಸ್ಥಿತನದು ಗಡಿಮೆಂದು ಮುದ್ರಿಪಂತಾಯ್ತು ಯಶಸ್ವತಿಯ ಪದನ್ಯಾಸಂ: **ಆದಿಪು**, ೮. ೩೨)

ಪದಪಂ ಕೈಕೊಳ್ – [ಕ್ರಿ] ಚಲಿಸ ತೊಡಗು (ಮೊದಲೊಳ್ ನೀಳ್ದು ಪೊದಳ್ದು ಪರ್ಬಿ ಪದಪಂ ಕೈಕೊಂಡು ಮಂದೈಸಿ: **ಆದಿಪು**, ೫. ೨೩)

ಪದಪರಿಕ್ರಮ – [ನಾ] ವ್ಯವಸ್ಥಿತ ನಡಿಗೆ (ಕರಣಾಂಗಹಾರ ಮೃದುಪದ ಪರಿಕ್ರಮಂಗಳ ಬೆಡಂಗುಗಳ ಜತಿಯೊಳ್ ಅಳಂಕರಿಸಿದುದು: **ಆದಿಪು**, ೭. ೧೮)

ಪದಪಾಂಸು – [ನಾ] ಪಾದಧೂಳಿ (ನೀಂ ಬರೆ ಪೇಱಿತೇಂ ಕಂಸಾರೀ ಯುಷ್ಮತ್ ಪದಪಾಂಸುಗಳಿಂದೆ ಆಂ ಪವಿತ್ರಗಾತ್ರನೆಂ ಆದೆಂ: **ಪಂಪಭಾ**, ೯. ೩೨)

ಪದಪು – [ನಾ] ಉತ್ಕಂಠತೆ, ಔತ್ಸುಕ್ಯ (ಪದಪು ಮನಕ್ಕೆ ಸೊರ್ಕು ನಯನಕ್ಕೆಸೆಯುತ್ತಿರೆ ಚುಂಬನಾಭಿಲಾಷದ ತನಿಗೆತ್ತು ಬಾಯ್ಗೆ: **ಆದಿಪು**, ೪. ೧೫); [ನಾ] ಭಕ್ತಿ, ಗೌರವ (ಪದಪು ಜಿನೇಂದ್ರಪಾದಕಮಳಂಗಳೊಳ್ ಆವಗಮಾಗೆ ಕರ್ಮಬಂಧದ ಬಿಗಿಪು ಒಯ್ಯನೆ ಸಡಿಲ್ದಿರೆ: **ಆದಿಪು**, ೬. ೭); [ನಾ] ಸಂಭ್ರಮ (ಸಂಭ್ರಮದಿಂ ಪದಪೊದವೆ ಸನತ್ಕುಮಾರ ಮಾಹೇಂದ್ರರಿಕ್ಕಿದರ್ ಚಾಮರಮಂ: **ಆದಿಪು**, ೭. ೫೦)

ಪದವಡಿಸು – [ಕ್ರಿ] ಹದಕ್ಕೆ ತರು (ಸಾಮದೊಳಂ ಪದವಡದೊಡೆ ಬಟೆಕಿರ್ದಪ್ಪುದಲ್ತೆ ಪದವಡಿಸಲೆನ್ನ ಬಯಕೆಯ ದಂಡಂ: **ಆದಿಪು**, ೧೪. ೪೩)

ಪದವಡು – [ಕ್ರಿ] ಹದಗೊಳ್ಳು (ಆತನಂ ಸಾಮದಿಂದಮಳವಡಿಸಿ ನೋಡುವೆಂ ಸಾಮದೊಳಂ ಪದವಡದೊಡೆ ಬಟೆಕಿರ್ದಪುದಲ್ತೆ ಪದವಡಿಸಲೆನ್ನ ಬಯಕೆಯ ದಂಡಂ: **ಆದಿಪು**, ೧೪. ೪೩)

ಪದವಡೆ – [ಕ್ರಿ] ಹಿತಕರವಾಗು (ಮದೀಯಸಿಂಹಾಸನಾರ್ಧೈಕ ದೇಶಮನಳಂಕರಿಸಿ ಪದವಡೆದು ಸೋಂಕಿ ಕುಳ್ಳಿರ್ದ ರೂಪುಮಂ: **ಆದಿಪು**, ೪. ೯ ವ)

ಪದವಣ್ – [ನಾ] ಹದವಾದ ಹಣ್ಣು (ಸೆಳ್ಳುಗುರ್ಗಳ್ ಕುಡಿ ತೋಳ್ನಯಂ ನಯಂ ನಯಂ ನೆಲೆ ನೆಲೆ ಭಂಗಿ ಭಂಗಿ ಪದವ್ ಬೆಳರ್ವಾಯ್: **ಪಂಪಭಾ**, ೫. ೧೨)

ಪದವೞೆ – [ನಾ] ಹದವಾದ ಮಳೆ (ಅಂತು ಕೊಂಡ ಪದವೞೆಗಳೊಳ್ ಕಳಮುಷಷ್ಟಿಕಾವ್ರೀಹಿ ಯವ ಯಾವನಾಳ .. .. ಜೀರಕಧಾನ್ಯಕಾದಿ ವಿವಿಧಧಾನ್ಯಭೇದಂಗಳಂ: **ಆದಿಪು**, ೬. ೭೨ ವ)

ಪದವಿಚಾರ – [ನಾ] ವ್ಯಾಕರಣ (ಛಂದೋವಿದ್ಯಾಳಂಕಾರ ಪದವಿಚಾರ ಕಾವ್ಯ ಗೀತ ನೃತ್ಯ ಆತೋದ್ಯಾದಿ ಗೋಷ್ಠಿಗಳೊಳಂ: **ಆದಿಪು**, ೮. ೩ ವ)

ಪದವಿದ್ಯಾ – [ನಾ] ವ್ಯಾಕರಣ (ಮತ್ತಂ ಸ್ವಯಂಭುವ ಅಭಿಧಾನ ಪದವಿದ್ಯಾ ಛಂದೋವಿಚಿತಿ ಅಲಂಕಾರಂಗಳೆಂಬ ಮೂಜ್ಜಿಂ ಪೆಸರ್ವಡೆದ ವಾಙ್ಮಯಮುಮಂ: **ಆದಿಪು**, ೮. ೬೦ ವ)

ಪದವಿನ್ಯಾಸ – [ನಾ] ಹೆಜ್ಜೆಯಿಡುವ ರೀತಿ (ಪದವಿನ್ಯಾಸದ ತುಱುಗಲ್ ಪೊದಳೆ ಲಯಂಬೆರಸು ರಂಗಮಂ ಬಳಸಿದಂ ಆ ತ್ರಿದಾಧೀನಾಥಂ: **ಆದಿಪು**, ೭. ೧೧೯)

ಪದವಿಲ್ – [ನಾ] ಹದವಾದ ಬಿಲ್ಲು (ಮುನಿದೆರಡು ಅಂಬಿನೊಳ್ ರಥಮುಮಂ ಪದವಿಲ್ಲುಮಂ ಎಯ್ದೆ ಪಾರ್ದು ನೆಕ್ಕನೆ ಕಡಿದು: **ಪಂಪಭಾ**, ೧೧. ೧೯)

ಪದವೆಂಕೆ – [ನಾ] [ಪದ+ಬೆಂಕೆ] ಹದವಾದ ಉರಿ (ಮೆಯ್ಯ ಸಯ್ಯ ಪದವೆಂಕೆಗಳಂ ಬಿಗಿಯಪ್ಪಿದಪ್ಪುಗಳ್ ಕಳೆದುವು ನಾಣುಮಂ: **ಪಂಪಭಾ,** ೫. ೨೭)

ಪದಸರೋಜ – [ನಾ] ಪಾದಕಮಲ (ಭವತ್ ಪದಸರೋಜಮನಾಂ ಬಲಗೊಂಡು ಮತ್ತಮಾಜಿಗೆ ನಡೆಯಲ್ಕೆ ಬಂದೆಂ: **ಪಂಪಭಾ**, ೧೩. ೬೫)

ಪದಸ್ಥೆ – [ನಾ] ಸ್ಥಾಪಿತಗೊಂಡವಳು (ಬೆಸಕಯ್ ನಿಜವಲ್ಲಭಂ ಏನನೆಂದೊಡಂ ಕಿನಿಸದಿರ್ ಒಂದಿದ ಅಗ್ರಮಹಿಷೀ ಪದದಲ್ಲಿ ಪದಸ್ಥೆಯಾಗು: **ಆದಿಪು**, ೪. ೫೬)

ಪದಾಂಬುರುಹ – [ನಾ] ಪಾದಕಮಲ (ಪೋ ಬಿಡು ಕಟಿಸೂತ್ರಮಂ ತೊಡೆಯ ಬಿಣ್ಪು ಪದಾಂಬುರುಹಕ್ಕೆ ತಿಣ್ಣಂ ಎಂತು ಉಡಿಸುವುದಕ್ಕ ನೂಪುರಮಂ ಈ ತೊಡವುದೋ ರೂಪೆ ಸಾಲದೇ: **ಪಂಪಭಾ**, ೩. ೪೬)

ಪದಾತಿ – [ನಾ] ಕಾಲಾಳು, ಕಾಲಾಳು ಸೈನ್ಯ (ಗದಾದಿ ವಿವಿಧಾಯುಧಂಗಳುಮಂ ಗಜ ರಥ ತುರಗ ಪದಾತಿ ಯುದ್ಧಂಗಳುಮಂ ಉಪದೇಶಂಗೆಯ್ಯುತ್ತುಮಿರೆ: **ಪಂಪಭಾ**, ೨. ೫೫ ವ)

ಪದಾರ್ಥ – [ನಾ] [ಜೈನ] ಆಗಮದ ಅರ್ಥ (ಮನಂ ಬಸಮಾಡಿ ದೋಷವಿರಹಿತಂ ಆಪ್ತಂ ಕ್ರಮದೆ ಆಪ್ತನೆ ಪೇೞ್ದುದದು ಆಗಮಂ ಆಗಮದ ಅರ್ಥಮಾವುದು ಅದುವೆ ಪದಾರ್ಥಂ: **ಆದಿಪು**, ೫. ೫೪); [ನಾ] ಲಾಭ, ಪ್ರಯೋಜನ (ದುರ್ವಿಮಂತ್ರಮಂ ಪರೆಪ ಟಮಾಳಮಂ ಪಿರಿದಂ ಓದಿದೊಡೆ ಅಪ್ಪ ಪದಾರ್ಥಮಾವುದೋ: **ಪಂಪಭಾ**, ೧೩. ೬೬)

ಪದಿನಾಱನೆಯ ನೆಲೆ – [ನಾ] [ಜೈನ] ಹದಿನಾರನೆಯ ಸ್ವರ್ಗ, ಅಚ್ಯುತಸ್ವರ್ಗ (ಎನಗಿದು ಚೋದ್ಯಂ ಪನ್ನೊಂದನೆಯದು ನೆಲೆ ತನ್ನ ನೆಗೞ್ದುದಂತದು ಪದಿನಾಱನೆಯ ನೆಲೆಗುಯ್ದುದು: **ಆದಿಪು**, ೬. ೧೨)

ಪದಿನಾಲ್ – [ನಾ] ಹದಿನಾಲ್ಕು (ಪದಿನಾಲ್ಸಾಸಿರ ಮದದಾನೆಯುಮಂ ಕಳಿಂಗನಾಯಕಂ ಭಾನುದತ್ತಂ ಮೊದಲಾಗೆ ನೂರ್ವರ್ ಅರಸುಮಕ್ಕಳುಮಂ ಕೊಂದೊಡೆ: **ಪಂಪಭಾ**, ೧೧. ೬೮ ವ)

ಪದಿನಾಲ್ಕು ರತ್ನಂಗಳ್ – [ನಾ] [ಜೈನ] ಚಕ್ರವರ್ತಿಯ ಚಕ್ರ, ಛತ್ರ, ಖಡ್ಗ, ದಂಡ, ಧರ್ಮ, ಮಣಿ, ಕಾಕಿಣಿ, ಗೃಹಪತಿ, ಸೇನಾಪತಿ, ತಕ್ಷಕ, ಪುರೋಹಿತರತ್ನ, ಹಸ್ತಿರತ್ನ, ತುರಗರತ್ನ, ಸ್ತ್ರೀ ಎಂಬ ಹದಿನಾಲ್ಕು ರತ್ನಗಳು (ಆ ಮುನಿಚಕ್ರವರ್ತಿಯ ಮನದೊಳ್ ಮೂಱುರತ್ನಂಗಳ್ ಬೆಳಗಿದುವು ಈ ಸಕಳಚಕ್ರವರ್ತಿಯ ಮನೆಯೊಳ್ ಪದಿನಾಲ್ಕು ರತ್ನಂಗಳ್ ಬೆಳಗಿದುವು: **ಆದಿಪು**, ೬. ೨೪ ವ)

ಪದಿನಾಱು ಪ್ರಕೃತಿ – ಹದಿನಾರು ಕರ್ಮಪ್ರಕೃತಿಗಳು: ನಿದ್ರಾನಿದ್ರಾ, ಪ್ರಚಲಾಪ್ರಚಲಾ, ಸ್ತ್ಯಾನಗೃದ್ಧಿ, ನರಕಗತಿ, ತಿರ್ಯಗ್ಗತಿ, ಏಕೇಂದ್ರಿಯಜಾತಿ, ದ್ವೀಂದ್ರಿಯಜಾತಿ,

ತ್ರೀಂದ್ರಿಯಜಾತಿ, ಚತುರಿಂದ್ರಿಯಜಾತಿ, ನರಕಗತಿ ಪ್ರಾಯೋಗಾನುಪೂರ್ವಿ, ತಿರ್ಯಗ್ಗತಿ ಪ್ರಾಯೋಗಾನುಪೂರ್ವಿ, ಆತಪ, ಉದ್ಯೋತ, ಸ್ಥಾವರ, ಸೂಕ್ಷ್ಮ, ಸಾಧಾರಣ (ಎಂಬ ಪದಿನಾಱು ಪ್ರಕೃತಿಗಳುಮಂ ನಿರವಶೇಷಂ ಕಿಡಿಸಿ: **ಆದಿಪು,** ೧೦. ೧೪ ವ)

ಪದಿನೆಣ್ಬಾಸಿರ – [ನಾ] ಹದಿನೆಂಟು ಸಾವಿರ (ಎಟ್ಟಿತ್ತಿರ್ಛಾಸಿರ ದುರ್ಗಾಟವಿಗಳುಂ ಪದಿನೆಣ್ಬಾಸಿರ ಮ್ಲೇಚ್ಛರಾಜರುಂ: **ಆದಿಪು,** ೧೫. ೩ ವ)

ಪದಿಮೂಱುಂ ಪ್ರಕೃತಿ – [ನಾ] [ಜೈನ] ಅನ್ಯತರವೇದನೀಯ, ಮನುಷ್ಯಾಯುಷ್ಯ, ಮನುಷ್ಯಗತಿ, ಮನುಷ್ಯಗತಿ ಪ್ರಯೋಗ್ಯಾನುಪೂರ್ವ್ಯ, ಪಂಚೇಂದ್ರಿಯಜಾತಿ, ತ್ರಸನಾಮ, ಸುಭಗ, ಆದೇಯ, ಪರ್ಯಾಪ್ತ, ಬಾದರ, ಯಶಸ್ಕೀರ್ತಿ, ಉಚ್ಚೈರ್ಗೋತ್ರ, ತೀರ್ಥಂಕರನಾಮ ಎಂಬ ಹದಿಮೂರು ಪ್ರಕೃತಿಗಳು (ಎಂಬ ಪದಿಮೂಱುಂ ಪ್ರಕೃತಿಗಳುಮಂ ನಿರ್ಮೂಲಂ ಕಿಡಿಸಿ ಬೞಿಯಂ: **ಆದಿಪು,** ೧೬. ೪೯ ವ)

ಪದಿರಪಱೆ – [ನಾ] ಸಂಕೇತಸೂಚಕ ಹರೆ, ವಾದ್ಯ (ಮಹಾಸಾಮಂತರ ಪದಿರಪಱೆಗಳಿಂದಂ ಅಗುರ್ವಾಗೆ ನಡೆದ ಬೀಡಿಂಗೆ ಬೀಡುವಿಡಲ್ ನೆಲನುಂ: **ಪಂಪಭಾ,** ೯. ೧೦೪ ವ)

ಪದುಮರಾಗ – [ನಾ] ಪದ್ಮರಾಗ, ಮಾಣಿಕ್ಯ (ಮುನಿಕುಮಾರರೋದುವ ವೇದವೇದಾಂಗಂಗಳಂ ತಪ್ಪುವಿಡಿದು ಜಡಿದು ಬಗ್ಗಿಸುವ ಪದುಮರಾಗದ ಬಣ್ಣದರಳಗಿಳಿಗಳುಮಂ: **ಪಂಪಭಾ,** ೧. ೧೧೫ ವ)

ಪದುಳಂ – [ಅ] ಕ್ಷೇಮದಿಂದ, ನೆಮ್ಮದಿಯಿಂದ (ಪೆಱವೇೞು ದಿವಸದೊಳ್ ಪದುಳಂ ನಡೆದುಂ ಪೆಱವೇೞು ದಿವಸಕ್ಕೆ ತಳರ್ನಡೆನಡೆದುಂ: **ಆದಿಪು,** ೫. ೪೧ ವ)

ಪದುಳಮಾಗು – [ಕ್ರಿ] ಅನುಕೂಲಕರವಾಗು (ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ ಜತ್ತವಟ್ಟದ ಮಣಿಯಂತದೇಂ ಪದುಳಮಾದುದೊ ದಿವ್ಯಧೂಕದಂಬಕಂ: **ಆದಿಪು,** ೭. ೧೨೫)

ಪದೆ – [ಕ್ರಿ] ಕೂಡು, ಸೇರು (ನಿಜಸ್ವರ್ಗಾವತರಣೋತ್ಸವಕ್ಕೆ ಅಮರಾವಳಿ ಪದೆವಿನೆಗಂ ಇೞಿದನಿಳೆಗೆ ಮಹಾತ್ಮಂ: **ಆದಿಪು,** ೩. ೭೯); [ಕ್ರಿ] ಸಂತೋಷಪಡು (ಪದೆವ ಮನಂಬೆರಸೆಱಗಿದ ಪದದೊಳದೇಂ ಚೆಲ್ವುವಡೆದುವೋ .. .. ಕುಸುಮಂಗಳ್: **ಆದಿಪು,** ೭. ೪); [ಕ್ರಿ] ಆಸೆಪಡು (ಪದೆದು ಉತ್ತಂಸ ಅವತಂಸಶೋಭೆಗೆ ಭವದ್ಬಾಳಪ್ರವಾಳೋಲ್ಲಸತ್ ಮೃದುಪುಷ್ಪಸ್ತಬಕಂಗಳಂ ಪಱಿದೆವು: **ಆದಿಪು,** ೧೧. ೧೩೪); [ಕ್ರಿ] ಪ್ರೀತಿಸು (ಬೇಟವೆಂಬೆಳಲತೆ ಕೂಟದೊಳ್ ಪದೆದು ಪಣ್ತೆರ್ದೆಗಿಂಪಿನಲಂಪನೀಯದೇ: **ಆದಿಪು,** ೧೨. ೨೦)

ಪದೆಪು – [ನಾ] ಪ್ರೀತಿ (ಪದ್ಮವಿಷ್ಟರಮಂ ಕುಂದೇಂದು ಧವಳಾತಪತ್ರಮನಂದು ಕೃತೇಚ್ಛಂಗೆ ಪಡೆದು ಪದೆಪಂ ಮೆಱೆದಳ್: **ಆದಿಪು,** ೯. ೮೫); ಇಷ್ಟಾರ್ಥ (ಬೋನದೊಳಂ ನಾನಾವಿಧ ಪದೆಪಿನೊಳ್ ಹರಿಗಾಗಂ ಆಱಿದುದು ಪಥಪರಿಶ್ರಮಮೆಲ್ಲಂ: **ಪಂಪಭಾ,** ೯. ೨೮)

ಪದೋಚ್ಚಾರಣ – [ನಾ] ಮಂಗಳಪದಗಳ ಹೇಳುವಿಕೆ (ಪೂರ್ವರಂಗ ಪ್ರಸಂಗದೊಳ್ ಚರ್ಚರಪೂಜಾಮಂಗಳ ಪದೋಚ್ಚಾರಣ ಪುಷ್ಪಾಂಜಲಿವಿಕ್ಷೇಪಣಾದಿ ನಾಂದಿವಿಧಿಯಂ ನಿರ್ವರ್ತಿಸಿ: **ಆದಿಪು,** ೭. ೧೧೫ ವ)

ಪದ್ಮ – ರುಚಕಪರ್ವತದ ಪೂರ್ವದಿಕ್ಕಿನ ಎಂಟು ಶಿಖರಗಳಲ್ಲಿ ಒಂದು (ತನ್ಮಹೀಧರವರುಣಾಶಾವಿಶೇಷಕಮಾಗಿರ್ದ ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ: **ಆದಿಪು,** ೭. ३ ವ)

ಪದ್ಮಜ – [ನಾ] ಕಮಲದಲ್ಲಿ ಹುಟ್ಟಿದವನು, ಬ್ರಹ್ಮ (ನನೆಯಂಬಂ ತೆಗೆದೆಚ್ಚಂ ಅಂಗಜನ ತಪ್ಪು ಏನಾನುಮಂ ತೋಱೆ: **ಪಂಪಭಾ,** ४. ೬೯)

ಪದ್ಮನಿಧಿ – [ನಾ] ಚಕ್ರವರ್ತಿಯ ನವನಿಧಿಗಳಲ್ಲಿ ಒಂದು (ದಾನಸನ್ಮಾನಯೋಗ್ಯರಪ್ಪರೆಂದು ಪದ್ಮನಿಧಿಯಂ ತರಿಸಿ ತಪನೀಯಸೂತ್ರದೊಳ್ ಏಕಾದ್ಯೇಕೋತ್ತರದಶಾಂತಂಬರಂ ಅವರವರ ನೆಲೆಗಳೊಳ್ ಬ್ರಹ್ಮಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ: **ಆದಿಪು,** ೧೫. ೧೧ ವ)

ಪದ್ಮಪತ್ರ – [ನಾ] ತಾವರೆಯ ಎಲೆ (ಸರೋವರಜಲಂಗಳಂ ಪದ್ಮಪತ್ರಪುಟಂಗಳಿಂ ತಂದು ಪದಪದ್ಮಂಗಳಂ ಕರ್ಚೆ ತತ್ಪಾದಪವಿತ್ರೋದಕಂಗಳಂ ಅನಿಬರುಂ ಉತ್ತಮಾಂಗದೊಳ್ ತಳಿದುಕೊಂಡಿರ್ದಾಗಳ್: **ಪಂಪಭಾ,** ೭. ३೯ ವ)

ಪದ್ಮರಾಗ – [ನಾ] ಕೆಂಪು ರತ್ನ, ಮಾಣಿಕ್ಯ (ಪೊನ್ನ ಬೆಳ್ಳಿಯ ಪದ್ಮರಾಗದ ಪಚ್ಚೆಯ ಗಿಳಿಯ ಕೋಗಿಲೆಯ ಕೊಂಚೆಯ ಅಂಚೆಯ ಕುಂತಳಿಕೆಯ ಮಾಟಕ್ಕೆಯ ಸಿಪ್ಪುಗಳೊಳ್ ತೀವಿ: **ಪಂಪಭಾ,** ४. ೮೭ ವ)

ಪದ್ಮವಿಷ್ಟರ – [ನಾ] ಕಮಲಾಸನ (ಅಂಬುಜನಿಳಯೆ ಪದ್ಮವಿಷ್ಟರಮಂ ಕುಂದೇಂದುಧವಳಾತಪತ್ರಮನಂದು ಕೃತೇಚ್ಛಂಗೆ ಪಡೆದು ಪದೆಪಂ ಮೆಱೆದಳ್: **ಆದಿಪು,** ೯. ೮೫)

ಪದ್ಮಷಂಡ – [ನಾ] ತಾವರೆಗಳ ಸಮೂಹ [ಇರುವ] ಸರೋವರ (ಧ್ವನದಳಿಕುಳಾಕುಳೀಕೃತ ವನಂಗಳಿಂದೆಸೆವ ಪದ್ಮಷಂಡಂಗಳ ಚೆಲ್ವಿನೊಳಂ ಕಣ್ಣ ಮನಮಂ ಅನುವಿಸುವ ವಿರಾಟಪುರಮನೆಯ್ದಿದರ್ ಅವರ್ಗಳ್: **ಪಂಪಭಾ,** ೮. ೫೨)

ಪದ್ಮಾಕರ – [ನಾ] [ಪದ್ಮ+ಆಕರ} ತಾವರೆಗಳ ನೆಲೆ, ಸರೋವರ (ಪದ್ಮಾಕರಾಳಿಯೊಳ್ ತಣ್ಪುಗಳುಂಟು ಹೇಮಲತಿಕಾ ಕುಂಜಂಗಳೊಳ್ ನಮ್ಮ ನನ್ನಿಗೆ ಬನ್ನಂ ಬರಲೀಯದು: **ಪಂಪಭಾ,** ೭. ३೦)

ಪದ್ಮಾಸನ – [ನಾ] ಬ್ರಹ್ಮ (ಪದ್ಮಾಸನಂ ತಾನೆ ನೇರ್ಪಡಿಸಲ್ ಕೂಡಿದಂ ಇರ್ಪುದಲ್ತು ನಯಂ ಇನ್ನೀ ಪೊೞ್ತೆ ಪೊೞ್ತಾಗೆ: **ಪಂಪಭಾ,** ೫. ೨೦)

ಪದ್ಮಿನಿ – [ನಾ] ತಾವರೆಗೊಳ (ದೇವೇಂದ್ರಕರಸರೋಜಾಕರದೊಳ್ ಸಮುತ್ಫುಲ್ಲಮುಖಪದ್ಮಂಗಳಿಂ ಪದ್ಮಿನಿಗಳೆನಿಸಿ: **ಆದಿಪು,** ೭. ೧೨೬ ವ)

ಪದ್ಮಿನೀಚಕ್ರವಾಳ – [ನಾ] ತಾವರೆಗಳ ಸಮೂಹ (ಪ್ರಭಾಚಕ್ರಮೆಸೆಯೆ ಚೆಲ್ವುವೆತ್ತುದುದಯಮಂದು ಪದ್ಮಿನೀಚಕ್ರವಾಳ ಚಕ್ರವಾಕ ಚಕ್ರವರ್ತಿಯಾ: **ಆದಿಪು,** ೧೨. ೫೫)

ಪದ್ಮಿನೀಷಂಡ – [ನಾ] ತಾವರೆಗಳ ಸಮೂಹ ಹಾಗೂ ಪದ್ಮಿನೀ ಜಾತಿಯ ಸ್ತ್ರೀಯರ ಸಮೂಹ (ಚಂಡವಿರೋಧಿಸಾಧನ ತಮಸ್ತಮಮೋಡೆ ವಿಶಿಷ್ಟ ಪದ್ಮಿನೀಷಂಡಮರಲ್ದು ರಾಗದಿನೊಱಲ್ದಿರೆ: **ಪಂಪಭಾ,** ೧. ೩)

ಪದ್ಮೋದರ – [ನಾ] [ಪದ್ಮ+ಉದರ] ಹೊಕ್ಕಳಲ್ಲಿ ಹೂವುಳ್ಳವನು, ಶ್ರೀಕೃಷ್ಣ (ಇದರ್ಕೆ ಪದ್ಮೋದರ ನೀನೆ ಪೇೞ್ ಬಗೆದು ಕಜ್ಜಮಂ ಈಗಳೆ ದಿವ್ಯಚಿತ್ತದಿಂ: **ಪಂಪಭಾ,** ೯. ೧೮)

ಪನಪನ ಪನಿ – [ಕ್ರಿ] ಪನಪನ ಎಂದು ತೊಟ್ಟಿಕ್ಕು (ಸಹಜಕವಚ ರತ್ನಕುಂಡಲಂಗಳಂ ನೆತ್ತರ್ ಪನಪನ ಪನಿಯೆ ತಿದಿಯುಗಿವಂತೆ ಉಗಿದುಕೊಟ್ಟುದರ್ಕೆ ಮೆಚ್ಚಿ ದೇವೇಂದ್ರಂ ಆತಂಗೆ ಅಮೋಘಶಕ್ತಿಯನಿತ್ತಂ: **ಪಂಪಭಾ,** ೯. ೬೩ ವ)

ಪನಪನ ಪರಿ – [ಕ್ರಿ] ಪನಪನ ಎಂದು ಹರಿದುಹೋಗು (ತನ್ನ ಸಹಜಕವಚಮಂ ನೆತ್ತರ್ ಪನಪನ ಪರಿಯೆ ತಿದಿಯುಗಿವಂತುಗಿದು ಕೊಟ್ಟೊಡೆ ಇಂದ್ರನಾತನ ಕಲಿತನಕೆ ಮೆಚ್ಚಿ: **ಪಂಪಭಾ,** ೧. ೧೦೨ ವ)

ಪನಸ – [ನಾ] ಹಲಸು (ಚಂದನ ಪನಸ ನಾಳಿಕೇರ ತಾಂಬೂಲವಲ್ಲೀ ಪ್ರಚುರಪ್ರದೇಶಂಗಳೊಳ್ ನಿಜವಿಜಯ ಕುಂಜರಂಗಳಂ ವಿಹಾರಿಸಿ ಬಂದು: **ಆದಿಪು,** ೧೩. ೩ ವ)

ಪನಿ – [ನಾ] ತೊಟ್ಟು ಮತ್ತು [ಕ್ರಿ] ತೊಟ್ಟಿಕ್ಕು (ಕಿವಿಯೊಳಮರ್ದಿನ ಪನಿ ಪನಿವಿನಂ ಎಸೆದರರರೆಬರಳಿಕುಳರುತಿಯಿಂ: **ಆದಿಪು,** ೧೧. ೮೧)

ಪನಿಪುಲ್ – [ನಾ] ಇಬ್ಬನಿ ಕೂತ ಹುಲ್ಲು (ನರಭೋಗಮೆಂಬೀ ಪನಿಪುಲ್ಲಂ ನಕ್ಕೆ ತೃಷ್ಣೆ ಪೇೞ್ ಪೋದಪುದೇ: **ಆದಿಪು,** ೯. ೫೭)

ಪನ್ನಗ – [ನಾ] ಕಶ್ಯಪ–ಕದ್ರು ಇವರ ಸಂತತಿ, ನಾಗವಂಶ (ವಿದ್ಯಾಧರಧರರಾಗೆಯುಂ ಪನ್ನಗರ್ ಪನ್ನತಿಕೆಯಿಂ ಬಂದಾಂತೊಡೆ: **ಪಂಪಭಾ,** ೫. ೮೮ ವ); [ನಾ] ಹಾವು (ವಿಷ ಪನ್ನಗನಂ ಪನ್ನತನನೆಡೆಯೊಳ್ ಅರಿಗಂ ತನ್ನಯ ಗರುಡಾಸ್ತ್ರದಿಂದೆ ಕುಱಿದಱಿದಱಿದಂ: **ಪಂಪಭಾ,** ೧೨. ೨೦೫)

ಪನ್ನಗಕೇತನ – [ನಾ] ದುರ್ಯೋಧನ (ಅಹಿತಂ ಇಳೆಯಂ ಕುಡಂ ಆಸನ್ನಂ ಕಾಳೆಗಂ ಅಱಿಯಿರೆ ಪನ್ನಗಕೇತನನ ಚಲದ ಕಲಿತನದ ಅಳವಂ: **ಪಂಪಭಾ,** ೭. ೬೪)

ಪನ್ನಗಧ್ವಜ – [ನಾ] ದುರ್ಯೋಧನ (ಸೋಲ್ತ ತನ್ನ ಬಲಮಂ ಅಳುಂಬಮಾದ ವಿಕ್ರಮಾರ್ಜುನನ ಭುಜಬಲಮುಮಂ ಕಂಡು ಕನಕ ತಾಳಧ್ವಜಂಗೆ ಪನ್ನಗಧ್ವಜನಿಂತೆಂದಂ: **ಪಂಪಭಾ,** ೧೧. ೧೩ ವ)

ಪನ್ನಗಪತಿ – [ನಾ] ನಾಗರಾಜ, ಆದಿಶೇಷ (ಪೂಗಳೊಳ್ ಕಲ್ಪವೃಕ್ಷಂಗಳ ಪೂಗಳ್ ದೀಪದೊಳ್ ಪನ್ನಗಪತಿಯ ಫಣಾರತ್ನದೀಪಂ: **ಆದಿಪು,** ೧೬. ೨)

ಪನ್ನಗರ್ – [ನಾ] ನಾಗರು (ವಿದ್ಯಾಧರಧರರಾಗೆಯುಂ ಪನ್ನಗರ್ ಪನ್ನತಿಕೆಯಿಂ ಬಂದಾಂತೊಡೆ: **ಪಂಪಭಾ,** ೫. ೮೮ ವ)

ಪನ್ನಗವಿದ್ಯೆ – [ನಾ] [ಜೈನ] ಹಾವು ಮುಂತಾದವು ಕಚ್ಚಿದರೆ ಮದ್ದು ಮಾಡುವ ವಿದ್ಯೆ (ದಕ್ಷಿಣೋತ್ತರಶ್ರೇಣಿಗಳಂ ನಮಿವಿನಮಿಗಳ್ಗೆ ಕೊಟ್ಟು ಗಾಂಧಾರಪನ್ನಗವಿದ್ಯೆಗಳನವರ್ಗೆ ವಿಧಿಪೂರ್ವಕಂ ಇತ್ತು: **ಆದಿಪು,** ೯. ೧೨೧ ವ)

ಪನ್ನಗಶಯನ – [ನಾ] ಹಾವಿನ ಹಾಸಿಗೆಯವನು, ವಿಷ್ಣು, ಶ್ರೀಕೃಷ್ಣ (ದುರ್ಯೋಧನನಪ್ಪೊಡೆ ಶ್ವೇತಕೃಷ್ಣಕಾರಕಂ ಕೃಷ್ಣನಂ ತನಗೆ ಮಾಡದನ್ನೆಗಂ ಮುನ್ನಮೆ ಪನ್ನಗಶಯನನಂ ನಮಗೆ ಮಾಡುವುದು: **ಪಂಪಭಾ,** ೯. ೧೦ ವ)

ಪನ್ನಗೋದಾತ್ತ ಸಮಸ್ತ ಲೋಕಂ – ನಾಗಲೋಕವೇ ಮೊದಲಾದ ಎಲ್ಲ ಲೋಕ (ಅತ್ತ ಸುರೇಶ್ವರಾವಸಥಮಿತ್ತ ಮಹೀತಳಮುತ್ತ ಪನ್ನಗೋದಾತ್ತ ಸಮಸ್ತ ಲೋಕಂ: **ಪಂಪಭಾ,** ೧. ೭೫)

ಪನ್ನತ – [ನಾ] ವೀರ, ಪರಾಕ್ರಮಿ (ವಿಷಪನ್ನಗನಂ ಪನ್ನತನಂ ಎಡೆಯೊಳ್ ಅರಿಗಂ ತನ್ನಯ ಗರುಡಾಸ್ತ್ರದಿಂದೆ ಕುಱಿದಱಿದಱಿದಂ: **ಪಂಪಭಾ,** ೧೨. ೨೦೫)

ಪನ್ನಿರ್ – [ನಾ] ಹನ್ನೆರಡು (ಎರಡೆಮ್ಮೆವೋಱಿಯೊಳ್ ಪೂಡಿದ ಪನ್ನಿರ್ಕಂಡುಗದಕ್ಕಿಯ ಕೂೞುಮಂ ಅದರ್ಕೆ ತಕ್ಕ ಪರಿಕರಮುಮಂ ಒರ್ವ ಮಾನಸಂ ಕೊಂಡು ಪೋಪಂ: **ಪಂಪಭಾ,** ೩. ೨೫ ವ)

ಪನ್ನಿರ್ಛಾಸಿರಸೇೞ್ನೂರಯ್ವದಿಂಬರ್ – [ನಾ] ಹನ್ನೆರಡು ಸಾವಿರದ ಏಳ್ನೂರೈವತ್ತು ಮಂದಿ (ಪನ್ನಿರ್ಛಾಸಿರದೇೞ್ನೂರೈವದಿಂಬರ್ ಮನಃಪರ್ಯಯಜ್ಞಾನಿಗಳುಂ ಅನಿಬರೆ ವಾದಿಗಳುಂ: **ಆದಿಪು,** ೧೬. ೪೦ ವ)

ಪನ್ನಿರ್ಮತ್ತರ್ – [ನಾ] [ಪನ್ನಿರ್+ಮತ್ತರ್] ಹನ್ನೆರಡು ಮತ್ತರು (ಒಂದು ದಿವಸಂ ಮರಗೆರಸಿಯಾಡಲೆಂದು ಪನ್ನಿರ್ಮತ್ತರ್ ಪರ್ವಿದಾಲದ ಮರದ ಮೊದಲ್ಗೆ ವಂದು: **ಪಂಪಭಾ,** ೨. ೩೦ ವ)

ಪನ್ನೆರಡು – [ನಾ] ಹನ್ನೆರಡು (ಅಂತು ರಾಜಮಂದಿರಮಂ ಪೊಕ್ಕು ಧರ್ಮಪುತ್ರನಂ ಅಗಲ್ದ ಪನ್ನೆರಡು ಮಾಸದೊಳಾದ ದಿಗ್ವಿಜಯಪ್ರಪಂಚಮುಮುಮಂ .. .. ಅಱಿದು: **ಪಂಪಭಾ,** ೫. ೨೩ ವ)

ಪನ್ನೆರಡು ತಪ – [ನಾ] [ಜೈನ] ತಪಸ್ವಿಗಳು ಕೈಗೊಳ್ಳಬೇಕಾದ ಅನಶನ, ಅವಮೋದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಾವಾಸ ಎಂಬ ಆರು ಆಂತರಿಕ ತಪಸ್ಸುಗಳು ಹಾಗೂ ಕಾಯಕ್ಲೇಶ, ಪ್ರಾಯಶ್ಚಿತ್ತ ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ, ಧ್ಯಾನ ಎಂಬ ಆರು ಆಂತರಿಕ ತಪಸ್ಸಗುಳು (ಪನ್ನೆರಡು ತಪದೊಳ್ ನೆಱೆದಿರ್ಪತ್ತೆರಡು ಪರೀಷಹಂಗಳಂ ಗೆಲ್ದು: **ಆದಿಪು,** ೭. ೩೩ ವ)

ಪನ್ನೊರ್ವರ್ – [ನಾ] ಹನ್ನೊಂದು ಮಂದಿ (ಶತಾನೀಕ ಶತದ್ಯುಮ್ನ ಶತಚಂದ್ರಂ ಮೊದಲಾಗಿ ಪನ್ನೊರ್ವರ್ ತಮ್ಮಂದಿರುಂ ಬೆರಸು ನೆಲನದಿರೆ ಮುಂಗೋಳೊಳ್ ನಡೆಯೆ: **ಪಂಪಭಾ,** ೯. ೯೫ ವ)

ಪಯಃಕಲ್ಲೋಳ – [ನಾ] ನೀರಿನ ಅಲೆಗಳು (ಏಂ ಉಣ್ಮಿ ಪೊಣ್ಮಿದುದೋ ಮಂದರಕಂದರೋತ್ಥಿತ ಪಯಃಕಲ್ಲೋಳ ಕೋಳಾಹಳಂ: **ಆದಿಪು**, ೭. ೯೭)

ಪಯಃಪಯೋಧಿ – [ನಾ] ಹಾಲಿನ ಸಮುದ್ರ (ಪಯಃಪಯೋಧಿ ಫೇನಸಂಕಾಶದುಕೂಲಪ್ರಚ್ಛದಾಚ್ಛಾದಿತ ವಿಚಿತ್ರ ನೇತ್ರೋಭಯೋಪಧಾನ ಶಯ್ಯಾತಲದೊಳ್: **ಆದಿಪು**, ೫. ೨೨ ವ)

ಪಯಃಪೂರ – [ನಾ] ಹಾಲ ಹೊಳೆ (ನರಲೋಕಂಬರಂ ಉಣ್ಮಿ ಪೊಣ್ಮಿದ ಪಯಃಪೂರಂಗಳಿಂದಂ: **ಆದಿಪು**, ೭. ೧೦೧)

ಪಯಃಪೂರ್ಣ – ನೀರಿನಿಂದ ತುಬಿದ (ವಿಮಳಾರ್ಣವ ಪಯಃಪೂರ್ಣಕಳಧೌತಕಳಶಂಗಳಂ ಕಳಶೋದ್ಧಾರ ಮಂತ್ರಪೂರ್ವಕಂ: **ಆದಿಪು**, ೭. ೮೦ ವ)

ಪಯಃಪ್ಲವ – [ನಾ] [ಹಾಲಿನ] ಪ್ರವಾಹ (ಪಾಲ್ಗಡಲೊಂದುಂಟಾಗದೆ ಮೇರುವ ತುದಿಯೊಳಮೀಗಳೆನಲ್ ನೆಱೆದುದಾ ಪಯಃಪ್ಲವದೆಸಕಂ: **ಆದಿಪು**, ೭. ೮೮)

ಪಯಣಂಬೋಗು – [ನಾ] ಪ್ರವಾಸ ಹೋಗು (ತಮ್ಮಯ್ವರುಂ ಪಾಂಚಾಳಿವೆರಸು ಪೋದ ದೆಸೆಯಂ ಆರುಂ ಅಱಿಯದಂತು ದ್ವೈತವನಮಂ ಪೊಱಮಟ್ಟು ಜಗುನೆಯಂ ಪಾಯ್ದು ಮೂಡಮೊಗದೆ ಪಯಣಂಬೋಗಿ: **ಪಂಪಭಾ**, ೮. ೫೦ ವ)

ಪಯಿಂಛಾಸಿರ್ವರ್ – [ನಾ] ಹತ್ತು ಸಾವಿರ [ಮಂದಿ] (ಪಟ್ಟಂಗಟ್ಟಿದ ಇಳಾಧಿನಾಥರೆ ಪಯಿಂಛಾಸಿರ್ವರ್ ಒಳ್ಳಾನೆಗಳ್ ಪಟ್ಟಂಗಟ್ಟಿದುವು ಒಂದು ಲಕ್ಕ ತುರಗಂ ಪತ್ತೆಂಟು ಲಕ್ಕಂ: **ಪಂಪಭಾ**, ೧೦. ೧೧೭)

ಪಯೋಜಜ – [ನಾ] ಕಮಲದಲ್ಲಿ ಹುಟ್ಟಿದವನು, ಬ್ರಹ್ಮ (ರಜಂಬೊರೆದಳಿಮಾಲೆ ಮಾಲೆಯನೆ ಪೋಲೆ ಪಯೋಜಜ ಪಾರ್ವತೀಶರ ಒಳ್ವರಕೆಯನಾಂತು: **ಪಂಪಭಾ**, ೧೨. ೨೨೧)

ಪಯೋಜರಜ – [ನಾ] ತಾವರೆಯ ಪರಾಗ (ಕವಿದ ಮದಾಳಿಯಿಂ ಮಸುಳನಾಗಿ ಪಯೋಜರಜಂಗಳೊಳ್ ಕವಿಲ್ಗವಿಲನುಮಾಗಿ ಬಂದ ಮಲಯಾನಿಲಂ: **ಪಂಪಭಾ**, ೨. ೧೪)

ಪಯೋಧರಕಾಲ – [ನಾ] ಮೋಡಗಳ ಕಾಲ, ಮಳೆಗಾಲ (ಪಯೋಧರಕಾಲದೊಳ್ ಎರಡು ತಡಿಯುಮಂ ಪೊಯ್ದು ಪರಿವ ತೊಱೆಗಳುಮಂ ತೊವಲ್ತು ಸೊಗಯಿಸುವ ಅಡವಿಗಳುಮಂ: **ಪಂಪಭಾ**, ೭. ೨೫ ವ)

ಪಯೋಧರಚೂಚುಕ – [ನಾ] ಮೊಲೆತೊಟ್ಟು (ಒದವಿದ ಕರ್ಪನೆಯ್ದೆ ಪರಿವೃತ್ತ ಪಯೋಧರಚೂಚುಕಕ್ಕೆ: **ಆದಿಪು**, ೮. ೪೭)

ಪಯೋಧರಪಥಗಾಮಿನೀವಿದ್ಯೆ – [ನಾ] ಆಕಾಶದಲ್ಲಿ ಸಂಚರಿಸುವ ಸಾಮರ್ಥ್ಯ, ಆಕಾಶಗಾಮಿನೀವಿದ್ಯೆ (ಆತಂ ತನ್ನ ಪಯೋಧರಪಥಗಾಮಿನೀವಿದ್ಯೆಯಂ ಬೆಸಸಿದೊಡೆ: **ಆದಿಪು**, ೨. ೧೪ ವ)

ಪಯೋಧಿ – [ನಾ] ಸಮುದ್ರ (ಆಗಳ್ ಸುರತಮಕರಧ್ವಜಂ ಅನಂಗಾಮೃತಪಯೋಧಿಯೊಳ್ ಮೂಡಿ ಮುೞುಗಾಡಿದರಂತೆ ಕಿಱಿದು ಬೇಗಮನಿರ್ದು: **ಪಂಪಭಾ**, ೫. ೧೫ ವ)

ಪಯೋಧಿನಾದ – [ನಾ] ಸಮುದ್ರದ ಮೊರೆತ (ಪ್ರಳಯಪಯೋಧಿನಾದಮನೆ ಪೋಲ್ತು ರಣಾನಕ ಆರವಂ ಈಗಳ್ ಅಗ್ಗಳಂ ಎಸೆದಪ್ಪುದು: **ಪಂಪಭಾ**, ೧೧. ೧೧)

ಪಯೋಧಿಮಂಥನ – [ನಾ] ಸಮುದ್ರಮಥನ (ಮದಗಜ ಬೃಂಹಿತಧ್ವನಿ ತುರಂಗಮ ಹೇಷಿತಘೋಷಂ ಆದಂ ಒರ್ಮೊದಲೆ ಪಯೋಧಿಮಂಥನ ಮಹಾರವಮಂ ಗೆಲೆ: **ಪಂಪಭಾ**, ೩. ೩೮)

ಪಯೋನಿಧಿ – [ನಾ] ಸಮುದ್ರ (ಅನಿಬರುಂ ಉತ್ಪಾತಮರುದಾಭಿಘಾತ ಉದ್ಧೂತಪಯೋನಿಧಿಗಳಂತೆ ಮಸಗಿದರಾಗರ್: **ಆದಿಪು**, ೧೪. ೬)

ಪಯೋರುಹಜ – [ನಾ] ಬ್ರಹ್ಮ (ಇವರಂ ಕೂಡಿ ಪಯೋರುಹಜಂಗಕ್ಕೆ ಸಮಸಮಾಯೋಗಯಶಂ: **ಆದಿಪು**, ೪. ೨೯)

ಪಯೋರುಹವಿಳಾಸಸ್ಥಾನೆ – [ನಾ] ಕಮಲದಲ್ಲಿ ವಿಲಾಸದಿಂದ ನೆಲಸಿರುವವಳು, ಲಕ್ಷ್ಮಿ (ಪಯೋರುಹವಿಳಾಸಸ್ಥಾನೆಯಿಂ ಭೂವಧೂವರಂ ಅಬ್ಜೇಕ್ಷಣೆ ಕಲ್ಪವೃಕ್ಷದಿಂ ಇಳಾಲೋಕೈಕಕಲ್ಪದ್ರುಮಂ: **ಆದಿಪು**, ೮. ೨೭)

ಪರಂಕಲಿಸು – [ಕ್ರಿ] ವಿಸ್ತಾರವಾಗಿ ಹರಡು, ಹಬ್ಬು (ಗಜೆಸನ್ನೆಗೆಯ್ದು ತೆಗೆನೆಱೆದು ಎಱಗಿ ಪರಂಕಲಿಸಿ ಪರ್ವಿ ಕೂಕಿಱಿದು ಇಸೆ ಕೆಂಗಱಿಯ ಮೊನೆಯಂಬುಗಳ್ ಕಣ್ದೆಱೆಯಿಸಿದುವು ಪೊಣರ್ವ ಬಿಲ್ಲ ಕಡುವಿತ್ತೆಗರಂ: **ಪಂಪಭಾ**, ೧೦. ೭೩)

ಪರಂತಪ – [ನಾ] ಶತ್ರುಗಳನ್ನು ಸುಡುವವನು (ಇತ್ತ ವಿಕ್ರಮಾರ್ಜುನಂ ಪರಂತಪಂ ತಪೋನಿಯಮ ನಿಯಮಿತನಾಗಿ: **ಪಂಪಭಾ**, ೭. ೭೭ ವ)

ಪರಂಪರೆ – [ನಾ] ಸಾಲು (ಅಟ್ಟಿಱಿಂ ತನಗೆರ್ದೆಯೊಳ್ ಚೋದಿಸೆ ಪರಸಿದಂ ಆಶೀರ್ವಾದ ಪರಂಪರೆಯಿಂ ಆಗಳ್ ಅಂತಕತನಯಂ: **ಪಂಪಭಾ**, ೧೩. ೧)

ಪರಕಲಿಸು – [ಕ್ರಿ] ಹರಡು (ಅಂತು ನೂರ್ವರೊಳ್ ಒರ್ವನ ಅಗುರ್ಬು ಪರ್ಬಿ ಪರಕಲಿಸೆ: **ಪಂಪಭಾ**, ೧. ೧೩೧ ವ); [ಕ್ರಿ] ಕೆದರು (ಅಳಿನೀಳೋಜ್ವಳಸಹಸ್ರ ಕುಂತಳಂಗಳ್ ಪರಕಲಿಸಿ ಬಂದು ಪೊಱಮುಯ್ವಂ ಅಳ್ಳಿಱಿಯೆ ಪಚ್ಚುಗಂಟಿಕ್ಕಿ: **ಪಂಪಭಾ**, ೧೨. ೨೦೨ ವ)

ಪರಕೆ – [ನಾ] ಹರಕೆ, ಆಶೀರ್ವಾದ (ಅಂತು ಸೊಗಯಿಸೆ ಪಾಡುವ ಮಂಗಳರವಂಗಳುಂ ಓದುವ ಋಚೆಗಳುಂ ಪರಸುವ ಪರಕೆಗಳುಂ ಎಸೆಯೆ ಪಸೆಯೊಳಿರ್ದು: **ಪಂಪಭಾ**, ೩. ೭೬ ವ)

ಪರಕೆಯಂ ಕೊಡು – [ಕ್ರಿ] ಆಶೀರ್ವಾದ ಮಾಡು (ಅಂತು ಪೆಸರನಿಟ್ಟು ಪರಕೆಯಂ ಕೊಟ್ಟು: **ಪಂಪಭಾ**, ೧. ೧೨೨ ವ)

ಪರಗು – [ಕ್ರಿ] ಭೂಮಿ ಶುದ್ಧಿಗೊಳಿಸು, ಕುಂಟೆ ಹೊಡೆ (ಕಾಯ್ದ ಕರ್ಬೊನ್ನ ಸೂಜಿಗಳಂ ಬೆರಲ್ಗಳೊಳ್ ಬೆಟ್ಟುವರುಂ ನಟ್ಟು ಪರಗುವರುಂ: **ಆದಿಪು**, ೫. ೮೫ ವ)

ಪರಚಕ್ರ – [ನಾ] ಅನ್ಯರಾಜ್ಯ (ಪರಚಕ್ರಂಗಳನಂಜಿಸಿದ ಪರಸೈನ್ಯಭೈರವನ ಮೇಗಿಲ್ಲದ ಬಲಾಳ್ತನಮುಮಂ ಕಂಡುಂ ಕೇಳ್ದುಂ: **ಪಂಪಭಾ**, ೯. ೫೨ ವ)

ಪರಚಿಂತಾಕರ ಏಹಿ – [ನಾ] ಬೇರೆಯವರಿಗೆ ಚಿಂತೆಯನ್ನುಂಟುಮಾಡುವವನು (ಮನದೊಳ್ ನಿಷ್ಕಾರಣಂ ಕಾಯ್ವರೇಂ ಪರಚಿಂತಾಕರ ಏಹಿ ಎಂಬ ನುಡಿಯಂ ಮುಂ ಕೇಳ್ದೆನಿಲ್ಲಾಗದೇ: **ಪಂಪಭಾ,** ೭. ೩೫)

ಪರಡು – [ಕ್ರಿ] ಹರಡು, ಕೆದರು (ದಕ್ಷಿಣಚರಣದೊಳ್ ನೆಲನಂ ಪರಡಿ ಗಂಭೀರನಿನಾದದಿಂ ಹೇಷಿತಂಗೆಯ್ವ ವಿಜಯಹಯಮುಮಂ: **ಪಂಪಭಾ,** ೯. ೯೫ ವ)

ಪರತ್ರೆ – [ನಾ] ಮೋಕ್ಷ (ದುರ್ವ್ಯಸನಿಯ ಮಾಡಿದೋದೆ ನಿಮಗಾಗಮಮಾಗಿರೆ ಅಸತ್ಯವಾದಮಂ ಪೊಸಯಿಸಿ ಜೀವನಿಲ್ಲ ಮೊಱೆಯಿಲ್ಲ ಅಱನಿಲ್ಲ ಪರತ್ರೆಯಿಲ್ಲ: **ಆದಿಪು,** ೨. ೧೧)

ಪರದ – [ನಾ] ವ್ಯಾಪಾರಿ, ಹರದ (ನಾಗದತ್ತನೆಂಬ ಪರದಂಗಂ ಆತನ ಪರಿದಿತಿ ವಸುದತ್ತೆಗಂ ಪುಟ್ಟಿದ ನಂದಿಮಿತ್ರ: **ಆದಿಪು,** ೩. ೩೩ ವ)

ಪರದಿತಿ – [ನಾ] ವ್ಯಾಪಾರಿಯ ಹೆಂಡತಿ (ನಾಗದತ್ತನೆಂಬ ಒರದಂಗಂ ಆತನ ಪರದಿತಿ ವಸುದತ್ತೆಗಂ ಪುಟ್ಟಿದ ನಂದಿಮಿತ್ರ: **ಆದಿಪು,** ೩. ೩೩ ವ)

ಪರಪು – [ನಾ] ಹರಡು, ಹಬ್ಬಿಸು (ಸಮಸ್ತ ಭೂಪಟಲಮನಾಂ ತೊಟಲ್ದು ಅಱಸಿ ನಿನ್ನನೊಡಗೂಡಿ ನಿಜೇಶನಂ ಯಶಃಪಟಹ ನಿನಾದಮಂ ಪರಪುವೆಂ: **ಆದಿಪು,** ೩. ೪೫); [ನಾ] ಹರಹು, ವಿಸ್ತಾರ (ಪರಪಿನ ನೀಳದ ಕಡೆಯಂ ಮರುಳಂ ತವೆ ನೋಡಲಾಱದೆ ಅಂಬರತಳಮಂ ಕರಿದೆಂಬಂತಿರೆ ನಿನ್ನಂ ನರನೆಂಬುದೆ: **ಪಂಪಭಾ,** ೬. ೨೦)

ಪರಪುಷ್ಟ – [ನಾ] ಬೇರೆಯವರಿಂದ ಪೋಷಿಸಲ್ಪಟ್ಟದ್ದು, ಕೋಗಿಲೆ (ನೀರ್ ಸುಧಾಸಮಂ ಉದ್ಯಾನವನಂ ಮದೋತ್ಕ ಪರಪುಷ್ಟೋದ್ದಾಮಕೋಳಾಹಳಂ: **ಆದಿಪು,** ೫. ೨೯)

ಪರಬಲಾಬ್ಧಿ – [ನಾ] ಶತ್ರುಸೈನ್ಯವೆಂಬ ಸಮುದ್ರ (ಮೇಲೆಟ್ಟಿ ಬಲಂ ಕೋಟಿಗೆ ಮೇಲಪ್ಪೊಡಂ ಅನ್ಯ ವನಿತೆ ನೆಗಟ್ಟೂರ್ವಶಿಗಂ ಮೇಲಪ್ಪೊಡಂ ಅಕ್ಕೆ ಎಂದುಂ ಸೋಲವು ಕಣ್ ಪರಬಲಾಬ್ಧಿಗಂ ಪರವಧುಗಂ: **ಪಂಪಭಾ,** ೧. ೪೭)

ಪರಬಳಪ್ರಭೇದನ – [ನಾ] ಶತ್ರುರಾಜರನ್ನು ಮುರಿಯುವುದು (ಧರೆ ಪೊಗಟೆ ನೆಗಟ್ದರನಂತ ಬಳರ್ ಪರಬಳ ಪ್ರಭೇದನ ಶೌರ್ಯರ್: **ಪಂಪಭಾ,** ೧. ೬೫)

ಪರಭಾಗಂಬಡೆ – [ಕ್ರಿ] ಶೋಭೆವಡೆ (ಹರಿನೀಲಮಣಿಸ್ಫುರಿತದ ತೆರೆಗಳ ಕೆಲದೊಳ್ ಪರಭಾಗಂಬಡೆದುವು ಪಯೋಂಭೋನಿಧಿಯೊಳ್: **ಆದಿಪು,** ೯. ೮೦)

ಪರಭೃತ – [ನಾ] ಪರಪುಷ್ಟ, ಕೋಗಿಲೆ (ನಿನ್ನಿಂಚರಮನೆ ಮನದೊಳ್ ನೆನೆವೆವಾಗಳುಂ ಪರಭೃತಮೇ: **ಆದಿಪು,** ೧೧. ೧೩೫)

ಪರಮ – [ನಾ] ಜಿನ, ಆದಿದೇವ (ನಿಜಾದರದಿಂದೆ ಬಾಹುಬಲಿಗಂ ಪರಮಂ ಯುವರಾಜಪದವಿಯಂ ದಯೆಗೆಯ್ದಂ: **ಆದಿಪು,** ೯. ೬೫); [ನಾ] ಶ್ರೇಷ್ಠ (ಪರಮತಪಶ್ಚರಣನಿರತ ಯತಿಸಮಿತಿಗೆಲ್ಲಂ ಪ್ರತಿಗ್ರಹಾದಿಪುರಸ್ಸರಂ ನಿರವದ್ಯಾಹಾರಾದಿ ವಿತರಣರೂಪ ಪಾತ್ರದತ್ತಿಯುಂ: **ಆದಿಪು,** ೧೫. ೧೩ ವ)

ಪರಮಂಡಳವ್ಯಸನ – [ನಾ] ಶತ್ರುದೇಶಗಳಿಂದಾಗುವ ಉಪಟಳ (ಪರಮಂಡಳವ್ಯಸನಮಂ ಆರಯ್ವಮಪ್ಪೊಡೆ ಇತ್ತುಂ ತೆತ್ತುಂ ಬಾಟ್ವ ಮಂಡಲಮಲ್ಲದೆ ಕೀಜೆಯುಂ ಮೀಜೆಯುಂ ನೆಗಟ್ವ ಮಂಡಲಮಿಲ್ಲ: **ಪಂಪಭಾ,** ೬. ೬೭ ವ)

ಪರಮಕೋಟಿ – [ನಾ] ಪರಾಕಾಷ್ಠೆ, ತುತ್ತತುದಿ (ಕಲಿತನದ ನೆಗಟ್ದ ಕಸವರಗಲಿತನದ ಪೊದಳ್ದ ಪರಮಕೋಟಿಗೆ ಪೆಱರಾರ್ ಸಲೆ ಕರ್ಣನಲ್ಲದೆ ಎನಿಸುವ ಕಲಿತನಮಂ ಹರಿಗೆ ಕವಚಮಿತ್ತುದೆ ಪೇಟ್ಟುಗುಂ: **ಪಂಪಭಾ,** ೧೨. ೯೯)

ಪರಮಪದ – [ನಾ] ಉತ್ಕೃಷ್ಟ ಸ್ಥಿತಿ (ನೀನುಂ ಮೀನೆಂಬೀ ನೆವದೆ ಇರ್ದೆ ಇದೇನಭಿಮಾನದ ಕಲಿತನದ ಪರಮಪದಂ ಎಯ್ದಿದೆಯೋ: **ಪಂಪಭಾ,** ೧೩. ೭೯)

ಪರಮಪ್ರಸಾದಭೂಮಿ – [ನಾ] ವಿಶ್ವಾಸಪಾತ್ರ (ಆತ್ಮೀಯ ಪರಮಪ್ರಸಾದಭೂಮಿಗಳಾಗಿರ್ದ ಮಂತ್ರಿ ಸೇನಾನಾಯಕ ಪುರೋಹಿತ ಶ್ರೇಷ್ಠಿಪದನಿಯುಕ್ತರಪ್ಪ: **ಆದಿಪು,** ೫. ೨ ವ)

ಪರಮಸುಖಾಸ್ಪದ – [ಜೈನ] ಜೈನಸಂನ್ಯಾಸ (ತದ್ವೃಷಭಸೇನ ಗಣನಾಥಪುರಸ್ಸರ ಪುರುತನಯರ್ ಕ್ರಮದೊಳ್ ಪರಮಸುಖಾಸ್ಪದಮಂ ಅನಿಬರುಂ ಕೈಕೊಂಡರ್: **ಆದಿಪು,** ೧೬. ೭೬)

ಪರಮಸ್ಥಾನ – [ನಾ] ಸಜ್ಜಾತಿ, ಸದ್ಗೃಹಸ್ಥ, ಮುನಿವ್ರತಧಾರಣ, ಇಂದ್ರಪದಪ್ರಾಪ್ತಿ ಸಾಮ್ರಾಜ್ಯಪ್ರಾಪ್ತಿ ತೀರ್ಥಂಕರಪದಪ್ರಾಪ್ತಿ ಸಿದ್ಧಪದಪ್ರಾಪ್ತಿ ಎಂಬ ಏಳು ಶ್ರೇಷ್ಠಸ್ಥಾನಗಳು (ಉತ್ತಮ ಸಮ್ಯಕ್ತ್ವಫಲಂ ದಗುಂತಿ ಮಗಳೇ ನೀನಿಂತಿದಂ ನಂಬು ಅನುಕ್ರಮದಿಂದಂ ದೊರೆವೆತ್ತ ಸಪ್ತಪರಮಸ್ಥಾನಂಗಳಂ ಪೊರ್ದುರ್ವೈ: **ಆದಿಪು,** ೫. ೬೩)

ಪರಮಾಣು – [ನಾ] [ಪರಮ+ಅಣು] ಅತ್ಯಂತ ಸೂಕ್ಷ್ಮ ಕಣ (ಪರಮಾಣುವನಿತು ಬನದೊಳ್ ಚರಾಚರಂ ಪೋಗೆ ತಣಿಯಂ ಅನಲಂ ಅದರ್ಕಾಂ ನೆರಮಪ್ಪೆಂ: **ಪಂಪಭಾ,** ೫. ೮೪)

ಪರಮಾಣುಮಾರ್ಗ – [ನಾ] ಪರಮಾಣುಗಳ ಹಾದಿ, ಆಕಾಶ (ಜಡಿದುಯ್ದನಾ ಖಚರನಿರ್ವರುಮಂ ಪರಮಾಣು ಮಾರ್ಗದಿಂ: **ಪಂಪಭಾ,** ೭. ೩೩)

ಪರಮಾನಂದಚತುಷ್ಟಯ – [ನಾ] [ಜೈನ] ಅನಂತಜ್ಞಾನ ಅನಂತದರ್ಶನ ಅನಂತಸುಖ ಹಾಗೂ ಅನಂತವೀರ್ಯಗಳು (ಪರಮಾನಂದ ಚತುಷ್ಟೈಕನಿಳಯಂ ಶ್ರೀಮತ್ಸಭಾಮಂಡಳಾಂತರ ಸಿಂಹಾಸನ ಸುಸ್ಥಿತಂ: **ಆದಿಪು,** ೧೦. ೬೯)

ಪರಮಾಯು – [ನಾ] [ಜೈನ] ಒಂದು ಪೂರ್ವಕೋಟಿ ಪ್ರಮಾಣದ ಜೀವಿತಾವಧಿ (ತೊಲಗದು ಪುಬ್ಬಕೋಟಿ ಪರಿಸಂಖ್ಯೆವರಂ ಪರಮಾಯು: **ಆದಿಪು,** ೧. ೫೨)

ಪರಮಾಯುಷ್ಯ – [ನಾ] ಜೀವಮಾನಾವಧಿ (ಪರಮಾಯುಷ್ಯಾಂತಂಬರಂ ನಿರಾಕುಳಮಾಗಿರ್ಪಾಯಿರವಿನ ಜೈನಾಭಿಪ್ರಾಯಂ ಪ್ರಾಯೋಪಗಮನದಿಂ ತೊರೆಯಿಸಿದಂ: **ಆದಿಪು,** ೨. ೫೩)

ಪರಮಾರ್ಹಂತ್ಯ – [ನಾ] ಅತಿಶಯವಾದ ಅರ್ಹಂತಪದವಿ (ಪರಮಾರ್ಹಂತ್ಯಮನೆಯ್ದಲಿರ್ದುದದಱಿಂ ಮೇಲುಂಟೆ ಸತ್ತ್ವಂ: **ಆದಿಪು,** ೯. ೬೨)

ಪರಮಾವಧಿ – ದೇಶಾವಧಿ ಪರಮಾವಧಿ ಸರ್ವಾವಧಿ ಎಂಬ ಅವಧಿಜ್ಞಾನದ ಮೂರು ಭೇದಗಳಲ್ಲಿ ಒಂದು

(ಪರಮಾವಧಿಯಿಂ ಭವಮನಜೆದು ಯತಿಪತಿ ನುಡಿದಂ: **ಆದಿಪು**, ೩. ೩೭)

ಪರಮೇಶ್ವರದೀಕ್ಷೆ – [ನಾ] [ಜೈನ] ದಿಗಂಬರಸನ್ಯಾಸ (ಗುರುಪದ ಪದ್ಮಾಂತಿಕದೊಳ್ ಪರಮೇಶ್ವರದೀಕ್ಷೆಯಂ ಮನಂ ಬಿಡೆ ಕೊಂಡು ಈ ಧರೆಯಂ ಪೊಗಟೆಸಿದಂ: **ಆದಿಪು**, ೧೪. ೧೩೯)

ಪರಲ್ – [ನಾ] ಹರಳು (ಬಣ್ಣವುರಂ ತೀವಿದ ಮಾಟಿಕ್ಕೆಯಾಯ್ತು ನವಿಲಿಂ ಕುಂದಂಗಳಿಂದ ಇಂದ್ರಗೋಪವಿಳಾಸಂಗಳಿಂ ಆಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ: **ಪಂಪಭಾ**, ೭. ೨೪)

ಪರಲೋಕ ಕ್ರಿಯೆ – [ನಾ] ಅಪರ ಕರ್ಮಗಳು (ಶಂತನು ಪರಲೋಕ ಪ್ರಾಪ್ತನಾದೊಡೆ ಗಾಂಗೇಯಂ ತದುಚಿತ ಪರಲೋಕ ಕ್ರಿಯೆಗಳಂ ಮಾಡಿ: **ಪಂಪಭಾ,** ೧. ೭೩ ವ)

ಪರಲೋಕಪ್ರಾಪ್ತನಾಗು – [ಕ್ರಿ] ಸಾಯು (ವಿಚಿತ್ರವೀರ್ಯನುಂ ಅವಾರ್ಯವೀರ್ಯನಾಗಿ ಕೆಲವು ಕಾಲಂ ರಾಜ್ಯಲಕ್ಷ್ಮಿಯಂ ತಾಳ್ದಿ ರಾಜಯಕ್ಷ್ಮತಪ್ತ ಶರೀರನಾತ್ಮಜವಿಗತಜೀವಿಯಾಗಿ ಪರಲೋಕಪ್ರಾಪ್ತನಾದೊಡೆ: **ಪಂಪಭಾ,** ೧. ೮೦ ವ)

ಪರವಶ – [ನಾ] ಮೂರ್ಚೆ (ಕಣ್ ತುಮುಬ್ಬು ಉಸಿರ್ ಕಿಸಿದು ಅಂತಕಂ ಅಂತಮನೆಯ್ದೆ ಮೆಯ್ ಪರವಶವಾಗೆ ಜೋಲ್ದಂ ಅಭಿಮನ್ಯು: **ಪಂಪಭಾ**, ೧೧. ೧೦೪)

ಪರವ್ಯೂಹ – [ನಾ] ಶತ್ರುಸೈನ್ಯ (ಪರವ್ಯೂಹಭಯಂಕರಂ ನೆಗೆದು ಪಾರ್ದಾರ್ದೆಚ್ಚೊಡೆ: **ಪಂಪಭಾ,** ೧೧. ೧೭)

ಪರಶು – [ನಾ] ಕೊಡಲಿ, ಕೊಡಲಿಯಾಕಾರದ ಆಯುಧ (ಅನೇಕಾಕ್ಷರ ಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಣ ಶಕ್ತಿ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳಂ: **ಪಂಪಭಾ,** ೨. ೩೪ ವ)

ಪರಶುಪಾತಿತ – [ಗು] ಕೊಡಲಿಯಿಂದ ಸೀಳಲ್ಪಟ್ಟ (ಕೂರಿಸೆ ಗುರುಶುಶ್ರೂಷೆಯೊಳ್ ಆ ರಾಮನಂ ಉಗ್ರ ಪರಶುಪಾಟಿತರಿಪುವಂಶಾರಾಮನಂ ಇಷುವಿದ್ಯಾಪಾರಗಂ ಎನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ**, ೧. ೧೦೪)

ಪರಶುಶರ – [ನಾ] ಕೊಡಲಿಯಾಕಾರದ ಬಾಣ (ಪರಶುಶರನಿಕರದಿಂ ಕುಮ್ಮರಿಗಡಿದವೊಲ್ ಒಡನೆ ಕಡಿಯೆ ರಥಿಗಳ್ ರಥದಿಂ ಧರೆಗಿಟಿದು: **ಪಂಪಭಾ**, ೧೦. ೮೮)

ಪರಸು – [ಕ್ರಿ] ಆಶೀರ್ವದಿಸು (ನೋಟಂಬೆರಸು ಪರಸಿ ತಟಕ್ಕೈಸಿಕೊಂಡು ಅಮ್ಮ ನೀಂ ಮಮ್ಮನೆಯಪ್ಪೈ ನೋಡು ನಣ್ಪಿಂ: **ಆದಿಪು**, ೨. ೨೦); ಹರಕೆ ಮಾಡಿಕೊ (ನಿಶ್ಶೇಷಭೂಷಾರ್ಚನೆಯಂ ಸರ್ವಜ್ಞಬಿಂಬಾವಳಿಗೆ ಪರಸಿದರ್ ಮಸ್ತಕನ್ಯಸ್ತಹಸ್ತರ್: **ಆದಿಪು**, ೧೪. ೧೧೬)

ಪರಸೈನ್ಯಭೈರವ – [ನಾ] ಬೇರೆ ಸೈನ್ಯಗಳಿಗೆ ಉಗ್ರನಾದವನು (ಸೇಸೆಯಂ ಸುದತಿಯರಿಕ್ಕೆ ಚಾಮರಮಂ ಅಂಗನೆಯರ್ ನಿಜಕೀರ್ತಿ ಲೋಕಮಂ ಪುದಿದಿರೆ ಪೊಕ್ಕನಂದು ನಿಜಮಂದಿರಮಂ ಪರಸೈನ್ಯಭೈರವಂ: **ಪಂಪಭಾ**, ೫. ೧೦೫)

ಪರಾಂಗನಾರತ – [ನಾ] ಅನ್ಯಸ್ತ್ರೀವ್ಯಾಮೋಹ (ಪುಸಿಯ ಪರಾಂಗನಾರತದ ಮದ್ಯದ ಮಾಂಸದ ಮೆಯ್ಗೆ ಒಜಿಲ್ದ ದುರ್ವ್ಯಸನಿಯ ಮಾಡಿದೋದೆ ನಿಮಗಾಗಮಮಾಗಿರೆ ಅಸತ್ಯವಾದಮಂ ಪೊಸಯಿಸಿ: **ಆದಿಪು,** ೨. ೧೧)

ಪರಾಗ – [ನಾ] ಹೂವಿನ ದೂಳು (ಎತ್ತಿದ ಪರಾಗರಾಗ ಮುದಿತ ಆಶಾ ಭಾಸಂ ಉದ್ಯತ್ ಮಧು ಉನ್ಮದಭೃಂಗಧ್ವನಿ ಮಂಗಳಧ್ವನಿಯೆನಲ್: **ಪಂಪಭಾ**, ೫. ೬)

ಪರಾಙ್ಮುಖ – [ನಾ] ವಿಮುಖ, ವಿರೋಧ (ನಿಜೋಪನ್ಯಸ್ತಮಪ್ಪ ಕಾಪಿಳಸಿದ್ಧಾಂತಮುಮಂ ಯೋಗಶಾಸ್ತ್ರಮುಮಂ ತೋಜಿ ಲೋಕಮಂ ಸಮ್ಯಕ್‌ಜ್ಞಾನಪರಾಙ್ಮುಖಂ ಮಾಡಿರೆ: **ಆದಿಪು,** ೯. ೯೩ ವ)

ಪರಾಭವ – [ನಾ] ಸೋಲು (ಎನಗಮರಾತಿಗಳ್ ಒಳರ್ ಎಂಬಿನಿತು ಪರಾಭವಮನೀಗಳೀ ಚಕ್ರಂ ಸೂಚನೆಗೈದುದು: **ಆದಿಪು**, ೧೪. ೯):

ಪರಾಭವಂಬಡಿಸು – [ಕ್ರಿ] ಅವಮಾನ ಮಾಡು (ಏಕಾದಶ ಅಕ್ಷೋಹಿಣೀಪತಿಯಪ್ಪ ರಾಜಾಧಿರಾಜನಂ ಪರಾಭವಂಬಡಿಸದಿರೆಂದು ಬಲದೇವಂ ಬಾರಿಸೆ ವಾರಿಸೆ: **ಪಂಪಭಾ**, ೧೩. ೯೭ ವ)

ಪರಾಮರ್ಶನ – [ನಾ] [ಜೈನ] ಅಶುಭ ನಾಮಪ್ರಕೃತಿಗಳಲ್ಲಿ ಒಂದು (ಬಜಿಯಂ ಅಂತರ್ಮುಹೂರ್ತಕಾಲಂ ಪ್ರಮತ್ತಾಪ್ರಮತ್ತ ಪರಾವರ್ತನಸಹಸ್ರಂಗೆಯ್ದು: **ಆದಿಪು,** ೧೦. ೧೪ ವ)

ಪರಾಮೃಷ್ಟ – ಹುಡುಕಲ್ಪಟ್ಟ, ದೊರೆಯದಿದ್ದ (ಅನಂತವೀರ್ಯಂ ಈ ಕ್ಷೇತ್ರದೊಳನೇಕಕಾಲಂ ಪರಾಮೃಷ್ಟಮಾದ ಮುಕ್ತಿಮಾರ್ಗಮಂ ಮುನ್ನಮೆ ಸಮುಜುವೆನೆಂಬಂತೆ ಮೋಕ್ಷಲಕ್ಷ್ಮೀವಲ್ಲಭನಾದಂ: **ಆದಿಪು,** ೧೦. ೬೫ ವ)

ಪರಾಯಣ – [ನಾ] ಸಮರ್ಥ (ನಾಮಗ್ರಹಣಮಾತ್ರದಿಂದಮೆ ಸಮಸ್ತವಸ್ತು ವಿಸ್ತಾರಾಂತರ್ನಿಹಿತ ವಸ್ತುಸಮರ್ಪಣ ಪರಾಯಣನಪ್ಪ ಕಾಮವೃಷ್ಟಿಯೆಂಬ ಗೃಹಪತಿರತ್ನಮುಂ: **ಆದಿಪು**, ೧೧. ೩ ವ); [ನಾ] ತತ್ಪರ (ಅವರೊಳಗೆ ದೇವಾಪಿ ನವಯೌವನಪ್ರಾರಂಭದೊಳೆ ತಪಃ ಚರಣ ಪರಾಯಣನಾದಂ: **ಪಂಪಭಾ**, ೧. ೬೫ ವ); [ಗು] ತಲ್ಲೀನ (ಇದರ್ಕೆ ಕರ್ತವ್ಯಮಾವುದೆಂದೊಡೆ ಹಿಮವತ್ಪರ್ವತದೊಳ್ ತಪಶ್ಚರಣಪರಾಯಣರಾಗಿಂ: **ಪಂಪಭಾ**, ೧೩. ೧೦೭ ವ)

ಪರಾರ್ಥ್ಯ – [ಗು] ಅತ್ಯುತ್ಕೃಷ್ಟವಾದ (ಪರಮಜಿನಮಾಲೆ .. .. ನಿರಂತರಮೀಗೆ ಭವ್ಯಮಾಲೆಗೆ ಪರಾರ್ಥ್ಯಗುಣರತ್ನ ಮಾಲೆಯಂ ದಯೆಯಿಂದಂ: **ಆದಿಪು**, ೧. ೧೫)

ಪರಾಶರ – [ನಾ] ವ್ಯಾಸಮುನಿಯ ತಂದೆ, ಸ್ಮೃತಿಕಾರ (ಸತ್ಯವತಿಗೆ ಪುನಃಕನ್ಯಾಭಾವಮಂ ದಯೆಗೆಯ್ದು ಪರಾಶರಂ ಪೋದಂ: **ಪಂಪಭಾ,** ೧. ೬೯ ವ); [ನಾ] ಗಾಂಧಾರಿಗೆ ನೂರು ಮಕ್ಕಳಾಗುವಂತೆ ವರವಿತ್ತವನು (ಇತ್ತ ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ನೂರ್ವರ್ಮಕ್ಕಳಂ ಪಡೆವಂತು ಪರಾಶರ ಮುನೀಂದ್ರನೊಳ್ ಬರಂಬಡೆದಳ್ ಎಂಬುದಂ ಕುಂತಿ ಕೇಳ್ದು: **ಪಂಪಭಾ**, ೧. ೧೧೬ ವ)

ಪರಾಶರಾತ್ಮಜ – [ನಾ] ಪರಾಶರನ ಮಗ, ವ್ಯಾಸ (ಅಂಜನಗಿರಿಯಂ ಶರಜ್ಜಳಧರಂ ಕವಿದಂತಿರೆ ಚೆಲ್ವನಾಳ್ದು ಭೋಂಕನೆ ನಭದಿಂದಂ ಅಂದು ಇಟಿದಂ ಅಲ್ಲಿಗೆ ವೃದ್ಧಪರಾಶರಾತ್ಮಜಂ: **ಪಂಪಭಾ**, ೭. ೫೯)

ಪರಾಸು – [ನಾ] [ಪರ+ಅಸು] ಪ್ರಾಣ ಹೋದ (ಪುಟ್ಟಿದಾಗಳೆ ಮಾತಾಪಿತೃಯುಗಳಂಗಳ್ ಸೀಂತುಮಾಗುಳಿಸಿಯುಂ

ಪರಾಸುಗಳಾಗೆ ನಿಜಶರೀರಂಗಳ್ ಮಂಜು ಕರಗುವಂತೆ ಕರಗೆ: **ಆದಿಪು**, ೫. ೪೧ ವ)

ಪರಿ – [ಕ್ರಿ] ಮುಂದೆ ಸರಿ, ಓಡು (ಪೊಳೆದು ಪರಿವ ಪೊಳೆವುಲ್ಲೆಗಳುಮಂ ತಲೆಯಂ ಕುತ್ತಿ ವಿಶಾಲಂಬರಿವ .. .. ಪಲವನೆಚ್ಚು: **ಪಂಪಭಾ**, ೫. ೪೮ ವ)

ಪರಿಕರ – [ನಾ] ಸಾಮಗ್ರಿ (ಚೈತ್ರಲಕ್ಷ್ಮೀಪರಿಕರವಿಭವಂ ಮೇಣಿದೆಂಬಂತೆ ಲೀಲಾಪಾಂಗ ಜ್ಯೋತ್ಸ್ನಾಮೃತಾಂಭಃಪ್ಲವ ಧವಳಿತದಿಗ್ಭಿತ್ತಿ: **ಆದಿಪು**, ೧೧. ೪೪); [ನಾ] ಸಮೂಹ (ದೊರೆಕೊಳಿಸುಗೆ ನಿನಗೆ ತಡೆಯದಾ ಪುರುಪರಮೇಶ್ವರನ ನಿರತಿಶಯ ಗುಣಪರಿಕರಮುಂ ತತ್ಪ್ರಾತಿಹಾರ್ಯಮುಂ ಮಂಗಳಮಂ: **ಆದಿಪು**, ೧೨. ೫೩); [ನಾ] ಅನ್ನಕ್ಕೆ ಬಾಡಿಸಿಕೊಳ್ಳುವ ಪದಾರ್ಥಗಳು; (ಎರಡೆಮ್ಮೆವೋಜೆಯೊಳ್ ಪೂಡಿದ ಪನ್ನಿರ್ಕಂಡುಗದಕ್ಕಿಯ ಕೂಟುಮಂ ಅದರ್ಕೆ ತಕ್ಕ ಪರಿಕರಮುಮಂ ಒರ್ವ ಮಾನಸಂ ಕೊಂಡು ಪೋಪಂ: **ಪಂಪಭಾ**, ೩. ೨೫ ವ); [ನಾ] ಸಹಾಯವುಳ್ಳ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ**, ೪. ೪೯ ವ)

ಪರಿಕರಿತ – [ಗು] ವಿಭೂಷಿತವಾದ (ಒಂದೊಂದು ಗೋಪುರಂ ಪ್ರವಿರಾಜತ್ ಮರಕತಮಣಿತೋರಣಪರಿಕರಿತಂ ಪುರವಧುಗೆ ವದನಮಿರ್ಪಂತಿರ್ಕುಂ: **ಆದಿಪು**, ೬. ೧೦೬)

ಪರಿಕಲ್ಪನ – [ನಾ] ಊಹೆ, ಕಲ್ಪನೆ (ಪೆಱವುಂ ಪ್ರತ್ಯಂಗೋಚಿತಾತ್ಯಂಗಮಣಿ ಭೂಷಣಂಗಳುಮಂ ಸ್ವಮತಿಪರಿಕಲ್ಪನದಿಂ ಯುಗಾರಂಭದೊಳ್ ಪಡೆದು: **ಆದಿಪು**, ೮. ೫೪ ವ)

ಪರಿಕಾಲ್ – [ನಾ] ಕಾಲುವೆ (ಜಲಜಲನೆ ಒಟ್ಟುತಿರ್ಪ ಪರಿಕಾಲ್ ಪರಿಕಾಲೊಳ್ ಅಳುರ್ಕೆಗೊಂಡ ನೈದಿಲ ಪೂ .. .. ಸಿರಿ ನೋಡುಗುಮಾ ವನಾಂತರಾಳದೊಳ್: **ಪಂಪಭಾ**, ೧. ೫೨)

ಪರಿಕಿಸು – [ಕ್ರಿ] [ಪರೀಕ್ಷಿಸು] ಪರಿಶೀಲಿಸು (ಪರಿಕಿಪೆನೀ ಮೃಗೋದ್ಭವದ ಕಂಪುಮನೀಕೆಯ ಸುಯ್ಯ ಕಂಪುಮಂ: **ಪಂಪಭಾ**, ೮. ೬೦)

ಪರಿಕೆ – [ನಾ] ದಾಳಿ (ಬಲ್ಪರಿಕೆಯೊಳರಿ ನೃಪರ ಪಡಲ್ವಡೆ ತಳ್ತಿಱಿದು ರಣದೊಳಾ ವಿಕ್ರಮಮಂ ಸೊಲ್ವಿನಮಾವರ್ಜಿಸಿದಂ ನಾಲ್ವತ್ತೆರಡಱಿಕೆಗಾಳೆಗಂಗಳೊಳೀತಂ: **ಪಂಪಭಾ**, ೧. ೨೫)

ಪರಿಕ್ರಮ – [ನಾ] ನರ್ತನದಲ್ಲಿನ ಹೆಜ್ಜೆಯ ಗತಿ (ಕರಣ ಅಂಗಹಾರ ಮೃದುಪದ ಪರಿಕ್ರಮಂಗಳ ಬೆಡಂಗುಗಳ ಜತಿಯೊಳ್ ಅಳಂಕರಿಸಿದುದೆಂಬಿನಂ: **ಆದಿಪು**, ೭. ೧೮); ಸುತ್ತುವುದು, ಸಂಚಾರ (ಚರಣದ ಚಾರಿಯ ಚಲ್ಲಿಯ ಪರಿಕ್ರಮಕ್ರಮದ ಭಂಗಿಗಳ್ ನೆಗಟ್ವೆಡೆಯೊಳ್: **ಆದಿಪು**, ೯. ೩೯)

ಪರಿಕ್ಷಯ – [ನಾ] ವಿನಾಶ (ಕಲ್ಪವೃಕ್ಷಪರಿಕ್ಷಯದೊಳ್ ಪ್ರಜಾಜೀವನೋಪಾಯಹೇತುಗಳ್ ಅಕೃಷ್ಟಪಚ್ಯಂಗಳಾಗಿ ಬೆಳೆದೆಱಗಿರೆಯುಂ: **ಆದಿಪು**, ೬. ೭೨ ವ)

ಪರಿಕ್ಷಿಪ್ತ – [ಗು] ಜಾರಿದ (ಸಮದವಿಜಯಗಜವಿಶಾಲಕುಂಭಪರಿಕ್ಷಿಪ್ತ ಸಾಂದ್ರಸಿಂದೂರರಜಮುಂ ನೆಱಿಂಬಡೆದು: **ಆದಿಪು**, ೧೧. ೩೫ ವ); [ಕ್ರಿ] ಚೆಲ್ಲಿದ, ಹರಡಿದ (ಪರಸ್ಪರಸ್ಪರ್ಧಮಾನ ಪರಿಕ್ಷಿಪ್ತ ಮಲ್ಲಿಕಾಮುಕುಳ ಮುಕ್ತಾಫಳೋಪಶೋಭಿತದೊಳ್ ಇಂದ್ರನೀಲಮಣಿ ಕುಟ್ಟಿಮಸಂಕ್ರಾಂತ ಮೌಕ್ತಿಕಧಾಮಾಭಿರಾಮದೊಳ್: **ಆದಿಪು**, ೮. ೬೭ ವ)

ಪರಿಕ್ಷೇಪ – [ನಾ] ಪರಿಧಿ (ಮುಕ್ತಿಸಾಮ್ರಾಜ್ಯದೊಳ್ ಅತಿಪ್ರಾಜ್ಯ ಸಂಜೀವಿತ ನಿಸ್ಪೃಹನನ್ ಅವರಪಾರ ಕುಲ್ಯಾಪರಿಕ್ಷೇಪ ಪರಿಮಿತದೊಳ್: **ಆದಿಪು**, ೮. ೮ ವ) [ಎಲ್. ಬಸವರಾಜು ಅವರು ಅಂಗೀಕರಿಸಿರುವ ಪಾಠ]

ಪರಿಖಂಡಿತ – [ಗು] ತೊಡೆಯಲ್ಪಟ್ಟ (ಚಂಡಗಜಗಮನೆ ಪರಿಖಂಡಿತ ಅಘಾಳಿಯಂ ಕಂಡಳ್ ಈರೆಂಟುಂ ಒಳ್ಗನಸಿನೋಳಿಯಂ: **ಆದಿಪು**, ೭. ೨೭ ರಗಳೆ)

ಪರಿಖಾ – [ನಾ] ಕಂದಕ (ವೀಚೀಚಯಜಳಧಿನಿಭವಿಭವ ಪರಿಖಾ ಪರಿವೃತಮುಂ: **ಆದಿಪು**, ೩. ೮ ವ)

ಪರಿಗತ – [ನಾ] ಹೊಂದಿದವನು, ಕೂಡಿದವನು (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು**, ೫. ೮೭ ವ)

ಪರಿಗೊಳ್ – [ಕ್ರಿ] ಪಲಾಯನ ಮಾಡು, ಓಡು (ಆಡಲಾಡಿಸಲ್ ಪಾಟಿಯಂ ನಿಜೆಸಲುಂ ಪರಿಗೊಳಲ್ ತೊವಲಿಕ್ಕಲೊಳಗಂ ಬರಲ್: **ಪಂಪಭಾ**, ೫. ೪೧)

ಪರಿಗ್ರಹ – [ನಾ] ಸ್ವೀಕಾರ (ಪಂಚಗುರುಸಮಕ್ಷದೊಳ್ ಬಾಹ್ಯಾಭ್ಯಂತರ ಪರಿಗ್ರಹಪರಿತ್ಯಾಗಪುರಸ್ಸರಂ ವೀರಸಂಸ್ಥಾನಾರೂಢನಂ ಮಹಾಬಳನಂ: **ಆದಿಪು**, ೨. ೫೧ ವ); [ನಾ] ಸುಖಸಂಪತ್ತು (ಎನಿತು ಪರಿಗ್ರಹದ ತೊಡರ್ಪು ಅನಿತೆ ಮನೋದುಃಖಂ: **ಆದಿಪು**, ೩. ೬೨)

ಪರಿಘ – [ನಾ] ಕಬ್ಬಿಣದ ಒನಕೆ, ಒಂದು ಆಯುಧ (ವೀರವೈರಿಕ್ಷಿತಿಪ ಗಜಘಟಾಟೋಪ ಕುಂಭಸ್ಥಳೀ ಭೇದನಂ ಉದಗ್ರ ಉದ್ಧ ಅಸಿ ಭಾಸ್ವತ್ ಭುಜಪರಿಘನಂ ಆರೂಢಸರ್ವಜ್ಞನಂ: **ಪಂಪಭಾ**, ೧. ೫೧)

ಪರಿಚಾರಿಕೆ – [ನಾ] ಪರಿಚಾರಕಿ (ಮೆಲ್ಲಮೆಲ್ಲನೆ ಕೆಲಕ್ಕೆ ವಂದು ಕುಂಚದ ಅಡಪದ ಡವಕೆಯ ಪರಿಚಾರಿಕೆಯರೆಲ್ಲರುಮಂ ಕಣ್ಗೆತ್ತಿ ಕಳೆದು: **ಪಂಪಭಾ**, ೪. ೬೧ ವ)

ಪರಿಚಿತಾಶೇಷಭಾಷ – [ನಾ] ಎಲ್ಲ ದೇಶಭಾಷೆಗಳನ್ನು ಬಲ್ಲವನು (ಅನುದ್ಧತವೇಷನುಂ ಪರಿಚಿತಾಶೇಷದೇಶಭಾಷನುಂ ವಯೋವೃದ್ಧನುಂ ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್: **ಆದಿಪು**, ೧೪. ೪೩ ವ)

ಪರಿಚೆ – [ನಾ] ಹಣೆಯ ಬಟ್ಟು (ಕತ್ತುರಿಯೊಳಂಟಪರಿಚೆಯುಂ ಪರಿಚೆಯೊಳ್ ಪರಿಚಯಂಪಡೆದ ಮದವಟ್ಟೆಯುಂ: **ಆದಿಪು**, ೪. ೪೧ ವ)

ಪರಿಚ್ಛದ – [ನಾ] ಪರಿವಾರ ಮ್ಲೇಚ್ಛರಾಜ (ಸೇನಾಪತಿ ಪರಿಚ್ಛದ ಮದಾವಲೇಪ ಪರಿಲೋಪವಿಳಾಸಿಯುಂ: **ಆದಿಪು**, ೧೧. ೩ ವ)

ಪರಿಚ್ಛೇದ – [ನಾ] ನಿರ್ಣಯ, ನಿರ್ಧಾರ (ಒಱಿಯಿಂದುರ್ಚಿದ ಬಾಳ್ವೊಲಾದುದೊ ಪರಿಚ್ಛೇದಂ ಧರಾಧೀಶನಾ: **ಆದಿಪು**, ೬. ೨೩); [ನಾ] ಭಾಗ ? (ಪದಿನೆಣ್ಬಾಸಿರ ಮ್ಲೇಚ್ಛರಾಜರುಂ ಆತ್ಮೀಯಸಾಮ್ರಾಜ್ಯಪರಿಚ್ಛೇದಮಾಗೆ: **ಆದಿಪು**, ೧೫. ೩

ವ); [ನಾ] [ಹಾಡುಗಾರಿಕೆಯಲ್ಲಿ] ನಿಲ್ಲಿಸಬೇಕಾದ ಸ್ಥಳ (ಎತ್ತಿಕೊಂಡ ಶ್ರುತಿಯಂ ಪಲ್ಲಟಿಸದೆಯುಂ ಮತ್ತಂ ಪರಿಚ್ಛೇದಂಗಳಂ ಅಱಿದುಂ: **ಪಂಪಭಾ,** ೧೪. ೩೦ ವ)

ಪರಿಚ್ಛೇದರ್ – [ನಾ] ನಿರ್ಧರಿಸಿದವರು (ಎಂದು ಪರಿತ್ಯಕ್ತ ನಿಜರಾಜ್ಯಪರಿಚ್ಛೇದರಾಗಿ: **ಆದಿಪು,** ೧೪. ೩೩ ವ)

ಪರಿಚ್ಛೇದಿ – [ನಾ] ನಿರ್ಧರಿಸಿದವನು, ನಿಶ್ಚಯ ಬುದ್ಧಿಯವನು (ಇದೇಂ ಪುರುಪರಮೇಶ್ವರಸುತರ್ ಪರಿಚ್ಛೇದಿಗಳೋ: **ಆದಿಪು,** ೧೪. ೧೩೯)

ಪರಿಚ್ಛೇದಿಸು – [ಕ್ರಿ] ನಿರ್ಧರಿಸು (ಎಂದು ಪರಿಚ್ಛೇದಿಸಿ ಮನಮಱಿಯೆ ನುಡಿದು: **ಆದಿಪು,** ೨. ೪೯)

ಪರಿಚ್ಯುತ – [ಗು] ಕೆಳಗಿಳಿದವನು (ಅಂತು ಪರಿಚ್ಯುತನಾಕಲೋಕರಾಗಿ .. .. ಜಯಮತಿಗಂ ಜಯಸೇನೆಗಂ .. .. ಬಲದೇವ ವಾಸುದೇವರಾಗಿ ಪುಟ್ಟಿ: **ಆದಿಪು,** ೩. ೭೬ ವ); [ಗು] ಸುರಿಯಲ್ಪಟ್ಟ (ವಸುಧಾರೆ ನಾಡೆಯುಂ ಕಣ್ಗೆಸದಳಮಾಯ್ತು ಅಮರಕರಪರಿಚ್ಯುತಮೆತ್ತಂ: **ಆದಿಪು,** ೧೦. ೨); [ಗು] ಸೋರುತ್ತಿರುವ (ಉಗ್ರ ವೈರಿಸಂಘಾತ ಕರೀಂದ್ರರುಂದ್ರ ಕಟಕೂಟಪರಿಚ್ಯುತ ಭೃಂಗಮಾಳಿಕಾಪೀತ ಮದಾಂಬುಕಂ: **ಪಂಪಭಾ,** ೧೪. ೩)

ಪರಿಜನ – [ನಾ] ಪರಿವಾರ (ಪಾಸಱೆ ಸಿಂಹಪೀಠಂ ಅಳಿನಿರುತಿ ಮಂಗಳಗೀತಿ ಭೂತಳಂ ಪಾಸು ಮೃಗವ್ರಜಂ ಪರಿಜನಂ ಪೊದಱ್ ಓಲಗಸಾಲೆ: **ಪಂಪಭಾ,** ೭. ೨೯)

ಪರಿಜಪನ – [ನಾ] ಜಪಿಸುವಿಕೆ (ಪರಮನೊಳಗೊಳಗೊಂದಂ ಪರಿಜಪನಂಗೆಯ್ಯೆಯುಂ ನೆಗಟ್ದವ್ಯಕ್ತಾಕ್ಷರದಿಂ: **ಆದಿಪು,** ೯. ೮೬)

ಪರಿಜು – [ನಾ] ಆಕಾರ, ರೂಪು (ಸೊಗಯಿಪ ಮುನ್ನಿರ್ದ ಪರಿಜಿಂ ಕಡುಚೆಲ್ವು ಗಡಂ ಜಿನೇಂದ್ರನಂ ಬಗೆವ ಮನಂ: **ಆದಿಪು,** ೨. ೬೦)

ಪರಿಣತ – [ಗು] ಮಾಗಿದ, ಪಕ್ವವಾದ (ನೀಹಾರಶಕಲ ಪರಿಣತ ಕಪಿತ್ಥಫಳಪರಿಮಳಮಧುರದಧಿಯುಮಂ: **ಆದಿಪು,** ೧೧. ೨೬ ವ)

ಪರಿಣತವಯಸ – [ನಾ] ಹಿರಿಯ, ವಯಸ್ಸಾದವನು (ಜೈನದೀಕ್ಷೆಗೆ ಮೆಯ್ಯಂ ತರುಣಜನಂಗಳೆ ತರ್ಪರ್ ಪರಿಣತವಯಸರ್ಕಳಪ್ಪವರ್ ಮೆಯ್ದಾರರ್: **ಆದಿಪು,** ೧೫. ೪೪)

ಪರಿಣದ್ಧ – [ಗು] ವಿಶಾಲವಾದ (ಲೋಕದ ಚೆಲ್ವೆಲ್ಲಮಂ ಒಳಕೊಂಡು ರೇಖೆಗೊಂಡ ಲಾಟೀಲಲಾಮನ ಪರಿಣದ್ಧ ಕಂಧರಂ ಯುವರಾಜ ಕಂಠೀಕಾಭರಣಮಂ ಕಟ್ಟುವುದರ್ಕೆ ನೋಂತು: **ಪಂಪಭಾ,** ೨. ೩೯ ವ)

ಪರಿಣಯನ – [ನಾ] ಮದುವೆ (ಪರಿಣಯನೋತ್ಸವಂ ರತಿಗನಂಗನೊಳಾಗೆ ವಸಂತಕಾಂತೆಯರ್ ನೆರೆದು ದಿಗಂಗನಾ ಸಮಿತಿಗೆ ಅಟ್ಟಿಱೆನೊಳ್ ಕುಡುವಲ್ಲಿ: **ಆದಿಪು,** ೧೧. ೧೧೭)

ಪರಿಣಯನಗೃಹ – [ನಾ] ಮದುವೆಯ ಮನೆ, ಮದುವೆಯ ಮಂಟಪ (ಮುರಜಧ್ವನಿಯಿಂದಂ ಆ ವಧೂವರರಂ ಪೋ ಬರವೇಟು ಎಂಬಂತಿರ್ದುದು ಸುರವಾರಸ್ತ್ರೀವಿಳಾಸ ಪರಿಣಯನಗೃಹಂ: **ಆದಿಪು,** ೮. ೧೯)

ಪರಿಣಯನೋತ್ಸವ – [ನಾ] ಮದುವೆಯ ಸಮಾರಂಭ (ಪರಿಣಯನೋತ್ಸವಂ ರತಿಗನಂಗನೊಳಾಗೆ ವಸಂತಕಾಂತೆಯರ್ ನೆರೆದು: **ಆದಿಪು,** ೧೧. ೧೧೭)

ಪರಿಣಾಮಶುದ್ಧಿ – [ನಾ] [ಜೈನ] ಮನಃಪರಿಪಾಕ (ಪರಿಣಾಮಶುದ್ಧಿ ದೊರೆಕೊಳೆ ಪುರುಪರಮೇಶ್ವರಪದಾಬ್ಜಭಕ್ತಿಯ ಭರದಿಂ ಭರತಂಗೆ: **ಆದಿಪು,** ೧೫. ೨೨)

ಪರಿಣಾಮಿಸು – [ಕ್ರಿ] ಪರಿಣಮಿಸು, ಪರ್ಯವಸಾನಗೊಳ್ಳು (ಮೇರುಗಿರೀಂದ್ರಂಬರಂ ಇಂದ್ರನೀಲಶಿಲಾತಳ ಮಣಿಮಯ ಸೋಪಾನ ಪಙ್ತಿತ್ರಯರೂಪದಿನಂಬರಮೆ ಜಿನರಾಜಭಕ್ತಿಯಿಂ ಪರಿಣಾಮಿಸಿದಂತೆ: **ಆದಿಪು,** ೭. ೫೭ ವ)

ಪರಿಣಾಹ – [ನಾ] ಸುತ್ತಳತೆ (ಅದು ಜಂಬೂದ್ವೀಪೋಪಮಾನ ವಿಸ್ತಾರ ಪರಿಣಾಹಪರಿಣಾಮಮಂ ಕೈಕೊಂಡು: **ಆದಿಪು,** ೬. ೩೪ ವ)

ಪರಿತರ್ – [ಕ್ರಿ] ಧಾವಿಸು, ಆಗಮಿಸು (ಎಂದು ಗಗ್ಗರಿಕೆಗೊಳ್ವ ಸರಮಂ ಕರ್ಣಪರಂಪರೆಯಿಂ ಕೇಳ್ದು ಸಿಂಹಬಲನ ಒಡವುಟ್ಟಿದರ್ ನೂರ್ವರ್ ಕೀಚಕರುಂ ಪರಿತಂದು ಮುಳಿಸಿನೊಳ್: **ಪಂಪಭಾ,** ೮. ೭೯ ವ)

ಪರಿತಾಪ – [ನಾ] ಸಂಕಟ (ಒಱಲ್ದು ನಲ್ಲಳೊಳ್ ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋಗಿನ್ನೆನೆ ರೌದ್ರಶಾಪಪರಿತಾಪವಿಳಾಪದೊಳಾ ಮಹೀಶ್ವರಂ: **ಪಂಪಭಾ,** ೧. ೧೧೨)

ಪರಿತುಷ್ಟ – [ಗು] ತೃಪ್ತಿವಡೆದ (ಇದಂ ಪುಗಲಿಂ ಗಡಿಂ ಎಂದು ಬೇಟಕಾಱರಂ ಇರದೆ ಊಱೆ ಸಾಱೆ ಜಡಿವಂತೆ ಎಸೆಗುಂ ಸಹಕಾರಕೋಮಳ ಅಂಕುರಪರಿತುಷ್ಟ ಪರಪುಷ್ಟಗಳ ಧ್ವನಿ ನಂದನಂಗಳೊಳ್: **ಪಂಪಭಾ,** ೨. ೧೩)

ಪರಿತ್ಯಕ್ತಜೀವಿತ – [ನಾ] ಪ್ರಾಣಬಿಟ್ಟವನು, ಜೀವ ತೊರೆದವನು (ಆಯುರವಸಾನದೊಳೆ ಸಂಸಾರ ಕ್ಷಪಕನಾಗಿ ಸಮಾಧಾನ ಪುರಸ್ಸರಂ ಸನ್ಯಸನವಿಧಿಯಿಂ ಪರಿತ್ಯಕ್ತಜೀವಿತಂ: **ಆದಿಪು,** ೨. ೧೯ ವ)

ಪರಿತ್ಯಜನ – [ನಾ] ಬಿಡುವುದು (ಜೀವಂಗಳ್ .. .. ನಾನಾಶರೀರೋಪಾದಾನ ಪರಿತ್ಯಜನಪುರಸ್ಸರಂ ಪರಿಭ್ರಮಿಸುಗುಂ: **ಆದಿಪು,** ೧೬. ೫೭ ವ)

ಪರಿದಾಡು – [ಕ್ರಿ] ಓಡಾಡು, ತಿರುಗಾಡು (ಆ ಪಟವಂಗಳಿಂದೆ ಪಾಯ್ವ ಪುಲಿಗಳ ಮಱಿಗಳೊಳ್ ಪರಿದಾಡುವ ತರುಣ ಹರಿಣಂಗಳುಮಂ: **ಪಂಪಭಾ,** ೧. ೧೧೫ ವ)

ಪರಿಧಾನ – [ನಾ] ಉಡುವ ಬಟ್ಟೆ (ಕಂಬುಲತಾ ಸುಲಲಿತವಣಾಂಬುಧಿ ಪರಿಧಾನಮಾಗೆ ಚೆಲ್ವಂ ಪಡೆದೀ ಜಂಬೂದ್ವೀಪಪ್ರಭುಗೆ: **ಆದಿಪು,** ೭. ೬೨); [ನಾ] ಉಟ್ಟವನು (ನೀಲಾಂಬುಜಶ್ಯಾಮನುಂ ಕನಕಪಿಂಗಳ ಜಟಾಬಂಧ ಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣಮೃಗತ್ವಕ್ ಪರಿಧಾನನುಂ ಆಗಿ: **ಪಂಪಭಾ,** ೧. ೬೯ ವ)

ಪರಿಧ್ವಂಸಿತ – [ಗು] ನಾಶಮಾಡಲ್ಪಟ್ಟ, ಧ್ವಂಸಮಾಡಲ್ಪಟ್ಟ (ಕಂಸಾರಿಸಖಂ ಪರಿಧ್ವಂಸಿತ ರಿಪುನೃಪಸಮೂಹಂ ಒಡ್ಡಿದನಾಗಳ್ ಹಂಸವ್ಯೂಹಮಂ ಉತ್ತುಂಗಾಂಸಂ ತಾಂ ವಿಬುಧವನಜವನಕಳಹಂಸಂ: **ಪಂಪಭಾ,** ೧. ೧೧೦)

ಪರಿನಿರ್ವಾಣಪೂಜೆ – **[ನಾ]** ಕೇವಲಜ್ಞಾನಿಯ ದೇಹವಿಸರ್ಜನೆಯ ಸಂದರ್ಭದಲ್ಲಿ ಗೈಯುವ ಪೂಜೆ (ಪ್ರಭಾಕರೀಪುರಿಯೊಳ್ ವಿನಯಂಧರ ಯೋಗಿಗಳ ಪರಿನಿರ್ವಾಣಪೂಜೆಯಂ ಮಾಡಿ: **ಆದಿಪು,** ೩. ೫೮ ವ)

ಪರಿನಿರ್ವೃತಮೂರ್ತಿ – **[ನಾ]** ವೈರಾಗ್ಯಮೂರ್ತಿ (ಅಂತು ಪರಮಾತಿಶಯ ರೂಪ ರಸ ಗಂಧ ಸ್ಪರ್ಶ ಗುಣವತ್ ಪರಮಾಣು ಪರಿನಿರ್ವೃತಮೂರ್ತಿಯಪ್ಪ ಪರಮನ: **ಆದಿಪು,** ೮. ೬ ವ)

ಪರಿನಿಷ್ಕ್ರಮಣ – **[ನಾ]** [ಜೈನ] ಒಂದು ಗರ್ಭಾನ್ವಯಕ್ರಿಯೆ, ಐಹಿಕವನ್ನು ತೊರೆಯುವುದು (ಪರಿನಿಷ್ಕ್ರಮಣ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಪರಿನಿಷ್ಕ್ರಮಣಕಲ್ಯಾಣ – **[ನಾ]** [ಜೈನ] ತೀರ್ಥಂಕರನ ಪಂಚಕಲ್ಯಾಣಗಳಲ್ಲಿ ಮೂರನೆಯದು; ವೈರಾಗ್ಯದಿಂದ ಐಹಿಕತೆಯ ತೊರೆಯುವಿಕೆ (ಆದಿದೇವನ ಪರಿನಿಷ್ಕ್ರಮಣ ಕಲ್ಯಾಣಂ ಅತ್ಯಾಸನ್ನಮೆಂಬುದಂ ನಿಜಾವಧಿಬೋಧದಿಂದಂ ಅಱಿದು ಸಂಗೀತಪ್ರಸಂಗದಿಂದಂ ಓಲಗಿಸಲೆಂದು: **ಆದಿಪು,** ೯. ೮ ವ)

ಪರಿಪಠನ – **[ನಾ]** ಕ್ರಮಬದ್ಧ ಓದು (ಪರಿಪಠನ ನಟನ ಮೃದುಕೂಜಿತ ರಸಿತ ದರಹಸಿತ ಕ್ರೇಂಕಾರ ಆರೋಹಣಾದಿ ಯೋಧನಾದಿ ನಾನಾ ವಿನೋದಂಗಳೊಳ್: **ಆದಿಪು,** ೮. ೩ ವ)

ಪರಿಪೀತಾಸವ – **[ನಾ]** ತುಂಬ ಹೆಂಡ ಕುಡಿದವನು (ಆಗಳ್ ಪರಿಪೀತಾಸವನಂತಿರ್ದ ವಾಸವನುಂ ದುರ್ದಂತಂ ಅಳೋಕೋದಂತಂಗಳಿನಾಱಿಸುತ್ತಿರ್ಪುದುಂ: **ಆದಿಪು,** ೩. ೮೮ ವ)

ಪರಿಪೂರಿತ – **[ಗು]** ತುಂಬಿದ, ತುಳುಕಿದ (ಗದಾಭಿಘಾತ ಪರಿಪೂರಿತ ತೋಯಜಷಂಡಂ ಅಲ್ಲಿಗಲ್ಲಿಗೆ ಕದಡೇಟಿ: **ಪಂಪಭಾ,** ೧೩. ೮೨)

ಪರಿಪೂರ್ಣ – **[ಗು]** ತುಂಬಿದ (ಆನಂದಜಳಪರಿಪೂರ್ಣ ವಿಸ್ತೀರ್ಣವಿಲೋಚನಂಗಳಿಂದಂ ಮುಹುರ್ಮುಹುರ್ ಆಲೋಕನಂಗೆಯ್ಯುತ್ತುಂ: **ಪಂಪಭಾ,** ೪. ೩೩ ವ)

ಪರಿಪ್ರಮಾಣ – **[ನಾ]** ಸುತ್ತಳತೆ (ಕಡಿತಮಿಕ್ಕಿದಂತಿರ್ದ ಸಮಚತುರಶ್ರಂ ನಾಲ್ವತ್ತೆಣ್ಗಾವುದು ಪರಿಪ್ರಮಾಣಮೆನಿಪ ಕುರುಕ್ಷೇತ್ರಮಂ ಎಯ್ದೆವಂದು: **ಪಂಪಭಾ,** ೯. ೧೦೪ ವ)

ಪರಿಪ್ಲಾವಿತ – **[ಗು]** ತೇಲುವ (ಕರಟತಟಗಳಿತ ಮದಗಜಜಳ ಧಾರಾಪೂರ ಪರಿಪ್ಲಾವಿತ ಸಕಳಭೂತಳಮಪ್ಪ ನಾಲ್ಕು ಲಕ್ಕ ಭದ್ರಹಸ್ತಿಯನೊಂದುಮಾಡಿ: **ಪಂಪಭಾ,** ೧೦. ೫೭ ವ)

ಪರಿಪ್ಲುಷ್ಟ – **[ನಾ]** ಸುಟ್ಟುದು, ದಗ್ಧವಾದುದು (ಕಷ್ಟಂ ದುಃಖಾನಳ ಪರಿಪ್ಲುಷ್ಟಂ ಚಿಃ ಗತಿಚತುಷ್ಟಯಂ ಪ್ರಾಣಿಗೆ: **ಆದಿಪು,** ೯. ೫೧) [ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳ ಆವೃತ್ತಿಗಳು]

ಪರಿಬಂಧಿಸು – **[ಕ್ರಿ]** ಕಟ್ಟಿ ಹಾಕು (ಇಸೆ ಮುತ್ತಿ ಮುಸುಱಿ ಪರಿಬಂಧಿಸಿದುವು ನರರಥತುರಂಗಮಂಗಳಂ: **ಪಂಪಭಾ,** ೧೨. ೧೬೫)

ಪರಿಭವ – **[ನಾ]** ಅವಮಾನ (ಭರತಂಗೆಱಗುವರೆಂಬಿದೆ ಪರಿಭವಮೆಮಗಿಂತು ಮಾನಭಂಗಂ ಬರೆ ಬರ್ಪರಸೇವುದು: **ಆದಿಪು,** ೧೪. ೩೯); **[ನಾ]** ಸೋಲು (ದುರ್ಧರ ಜಳಯುದ್ಧಮುಮಾದಮೆ ಪರಿಭವಮಂ ಚಕ್ರವರ್ತಿಗಿತ್ತತ್ತಾಗಳ್: **ಆದಿಪು,** ೧೪. ೧೦೮)

ಪರಿಭವಾನಳ – **[ನಾ]** ಅವಮಾನವೆಂಬ ಬೆಂಕಿ (ದ್ರುಪದಂ ಪರಿಭವಾನಳಂ ಅಳವಲ್ಲದೆ ಅಳುರೆ ನಿನ್ನಂ ಕೊಲ್ವನ್ನನೊರ್ವ ಮಗನುಮಂ ವಿಕ್ರಮಾರ್ಜುನಂಗೆ ಪೆಂಡತಿಯಪ್ಪಳನ್ನೊರ್ವ ಮಗಳುಮಂ ಪಡೆದಲ್ಲದಿರೆಂ: **ಪಂಪಭಾ,** ೨. ೬೪ ವ)

ಪರಿಭವಾನಿಲ – **[ನಾ]** ಸೋಲೆಂಬ ಗಾಳಿ (ಪೊಯ್ದೊಡೆ ಬಱುಬಂ ಪೊಯಿಲ್ವೆತ್ತಂತೆ ಏನುಮಱಿಯದೆ ಪರಿಭವಾನಿಲನಿಂ ಶೋಕಾನಲಂ ಇರ್ಮಡಿಸೆ: **ಪಂಪಭಾ,** ೮. ೭೦ ವ)

ಪರಿಭವಿಸು – **[ಕ್ರಿ]** ಸೋಲಿಸು (ಇರುಳ್ ಶಶಿರುಚಿಯಂ ಪರಿಭವಿಸಿ ನಭಮನಡರ್ದುವು ನರೇಂದ್ರತಾಪಸ ತಪೋಮಯೂಖಾವಳಿಗಳ್: **ಪಂಪಭಾ,** ೮. ೧೦)

ಪರಿಭಾಷಣ – **[ನಾ]** ಮಾತು, ಮಾತುಗಾರಿಕೆ (ನೆರೆದ ರಾಜನ್ಯಕಮಂ ದರಹಸಿತ ಮೃದುವಿಲೋಕನ ಪರಿಭಾಷಣದಿಂದಂ ಆದಂ ಆದರಿಸುತ್ತುಂ: **ಆದಿಪು,** ೯. ೨)

ಪರಿಭಾಷಿತ – **[ಗು]** ಹೇಳಲ್ಪಟ್ಟ (ಆ ಮುಮುಕ್ಷುಗಳ ಸಮಕ್ಷದೊಳವರ ಪೇೞ್ದ ಮಾಟಿಕ್ಕೆಯೊಳೆ ಪರಮಜಿನಪತಿಪರಿಭಾಷಿತಮಪ್ಪ ಸಕಳಶ್ರಾವಕವ್ರತಂಗಳಂ: **ಆದಿಪು,** ೩. ೪೦ ವ)

ಪರಿಭ್ರಮ – **[ನಾ]** ಅಲೆದಾಟ (ಅಂತು ಕಾಳಿಂದೀಜಲಶಿಶಿರಶೀಕರ ವಾರಿಚಾರಿಯುಂ ಮೃಗಯಾಪರಿಭ್ರಮಶ್ರಮೋತ್ಥಿತ ಸ್ವೇದಜಲ ಲವಹಾರಿಯುಂ ಆಗಿ ಬಂದ ಮಂದಾನಿಲಕ್ಕೆ: **ಪಂಪಭಾ,** ೫. ೫೩ ವ)

ಪರಿಭ್ರಮಣ – **[ನಾ]** ಅಲೆದಾಟ (ಅನುಂದರಿಯೆ ಕತಿಪಯಭವ ಪರಿಭ್ರಮಣದಿಂ ಬಂದು ಬಾಹುಬಲಿಕುಮಾರನಿಂ ನೇರ್ಗಿಱಿಯಳಾಗಿ: **ಆದಿಪು,** ೮. ೫೩ ವ)

ಪರಿಮಳಿತ – **[ಗು]** ಕಂಪಿನಿಂದ ಕೂಡಿದ (ಪರಿಮಳಿತಸೌಂದರಂ ಬಂಧುರಗಂಧಂ ಮದನರಾಗವರ್ಧನಕರಂ ಈ ಮರುವಂ: **ಆದಿಪು,** ೧೧. ೧೨೭)

ಪರಿಮಿಳತ್ – **[ಗು]** ಬೆರೆತ (ಅಂತೆ ಗೆಯ್ವೆನೆಂದು ಕೂಜಜ್ಜಳಚರಕುಳ ಕಳರವದೊಳಂ ಕಮಳಕುವಳಯ ರಜಃಕಷಾಯಪರಿಮಿಳದ ಅಳಿಪಟಳಜಟಿಳಮಾಗಿ: **ಪಂಪಭಾ,** ೮. ೩೭ ವ)

ಪರಿಯಣ – **[ನಾ]** ಹರಿವಾಣ, ಊಟದ ತಟ್ಟೆ (ಪೊಸನಾರೆ ದೇವಾಂಗವಸ್ತ್ರಮಾಗೆ ಪರೆದ ತಱಗೆಲೆಯೆ ಪರಿಯಣಮಾಗೆ ಪಣ್ಣಲಮೆತ್ತಿದ ಬೋನಮಾಗೆ: **ಪಂಪಭಾ,** ೭. ೨೮)

ಪರಿಯ ತಾಣ – **[ನಾ]** ನುಗ್ಗುವ ಸ್ಥಳ (ನಾರಾಯಣನುಂ ತಾನುಂ ಪರಿವಾರಂ ಬೆರಸು ಬೇಂಟೆಗೆ ಪೋಱುಮಟ್ಟು ಪರಿಯ ತಾಣಕ್ಕೆ ವಂದು: **ಪಂಪಭಾ,** ೫. ೪೭ ವ)

ಪರಿರಂಭಣ – [ನಾ] ಆಲಿಂಗನ (ವಿಜಯಲಕ್ಷ್ಮೀ ಪರಿರಂಭಣ ಪ್ರಕಟನದಕ್ಷದಕ್ಷಿಣವಿಷಾಣವಿನ್ಯಸ್ತಹಸ್ತಂ: **ಆದಿಪು,** ೧೪. ೯೦ ವ)

ಪರಿಲಂಬಿ – [ಗು] ನೇತಾಡುತ್ತಿರುವ (ವಿನೀಲಘನಾಘನಮನಳಱಿ ಪಱೆದುದು ಮುಕ್ತಾಜಾಲಪರಿಲಂಬಿಲೋಲದುಕೂಲ ಪತಾಕಾ ವಿರಾಜಮಾನ ವಿಮಾನಂ: **ಆದಿಪು,** ೪. ೮೫)

ಪರಿಲಂಬಿತ – [ಗು] ಜೋತುಹಾಕಿರುವ (ಹಿರಣ್ಮಯ ಜಿನಬಿಂಬ ಕದಂಬಂಗಳುಂ ಪರಿಲಂಬಿತ ಹೇಮಘಂಟಾಕಿಂಕಿಣೀ ಚಾಮರಧ್ವಜಂಗಳುಂ: **ಆದಿಪು,** ೧೦. ೨೩ ವ)

ಪರಿಲೋಪ – [ಗು] ಹೋಗಲಾಡಿಸುವ (ಮ್ಲೇಚ್ಛರಾಜ ಸೇನಾಪತಿಚ್ಛದ ಮದಾವಲೇಪ ಪರಿಲೋಪ ವಿಳಾಸಿಯುಂ ಷಡ್ವಿಧ ಸೇನಾನಾಯಕ ಪರಾಯಣನುಮಪ್ಪ ಅಯೋಧ್ಯನೆಂಬ ಸೇನಾನಿರತ್ನಮುಂ: **ಆದಿಪು,** ೧೧. ೩ ವ)

ಪರಿವರ್ಜಿತ – [ಗು] ತೊರೆದವನು (ಪರಿವರ್ಜಿತಭೋಗನೊಳ್ ಇರ್ಬರುಮೀಗಳ್ ಭೋಗಕಾಂಕ್ಷೆಯಿಂ ಭೋಗಪರಂಪರೆಯಂ ಅಱಿಸುವುದೆ: **ಆದಿಪು,** ೯. ೧೦೩)

ಪರಿವರ್ತನ – [ನಾ] ಹೊರಳುವಿಕೆ (ಚಟುಳಿತ ಚಕ್ರನೇಮಿ ಪರಿವರ್ತನಘಟ್ಟನಘಾತನಿರ್ಭರ ಸ್ಫುಟಿತ ಧರಾತಳಂ: **ಪಂಪಭಾ,** ೧೧. ೧೪೭)

ಪರಿವಾದಕ – [ನಾ] ಸ್ವರ್ಗದ ಒಂದು ವಿಶಿಷ್ಟ ವಾದ್ಯ (ಆಗಳ್ ನಾಕಲೋಕವಾದ್ಯಂಗಳೊಳ್ ಅನೇಕ ಭೇದಂಗಳಪ್ಪ ಉಪವಾದಕ ಪರಿವಾದಕ ವಾದ್ಯಂಗಳೊಳ್ .. .. ನೆಗಱೆ: **ಆದಿಪು,** ೭. ೧೧೮ ವ)

ಪರಿವಾರದಪ್ಸರೋಗಣ – [ನಾ] [ಜೈನ] ಅಚ್ಯುತೇಂದ್ರನ ಒಬ್ಬೊಬ್ಬ ಮಾದೇವಿಗೂ ಇರುವ ೨೫೦ ಮಂದಿ ಪರಿವಾರದೇವಿಯರು; ಎಲ್ಲ ಸೇರಿ ಅಚ್ಯುತೇಂದ್ರನಿಗೆ ಒಟ್ಟು ೨೦೭೧ ಮಂದಿ ದೇವಿಯರು (ದೇವಿಯರೊಳೊರ್ಬರೊರ್ಬರ್ ದೇವಿಯ ಪರಿವಾರಪ್ಸರೋಗಣಮುಂ ತದ್ದೇವೀ ವಿಕಿರಣಸಂಭವ ದೇವಿಯರುಂ: **ಆದಿಪು,** ೬. ೧೫)

ಪರಿವಾರಿತ – [ಗು] ಸುತ್ತುವರಿಯಲ್ಪಟ್ಟ (ಇವಲ್ತೆ ತೋರ್ಪುವ ಮಧುಪವ್ರಜಪರಿವಾರಿತ ಮಾದ್ಯತ್ ಗಜಕಟಕರ್ಷಪ್ರಭಗ್ನ ಚಂದನತರುಗಳ್: **ಆದಿಪು,** ೨. ೨೭)

ಪರಿವಿಕಸಿತ – [ಗು] ಚೆನ್ನಾಗಿ ಅರಳಿದ (ಇದಿರೊಳ್ ತೋಱೆತ್ತು ಕೊಳಂ ಪರಿವಿಕಸಿತ ಕನಕಕಂಜಕಿಂಜಲ್ಕಪುಂಜ ಪಿಂಜರಿತಜಳಂ: **ಪಂಪಭಾ,** ೮. ೩೮)

ಪರಿವಿಡಿ – [ನಾ] ಪರಿ, ರೀತಿ (ದರಹಸಿತಂ ಹಸಿತಂ ಸುಂದರ ಮನ್ಮನಲಪಿತರುಚಿತರಂಗಿತಮೆಂಬೀ ಪರಿವಿಡಿಯ ಬಾಲಕೇಳಿಯೆ ಕರಮೆ ಮರುಳ್ಚಿದುದು ತಾಯುಮಂ ತಂದೆಯುಮಂ: **ಆದಿಪು,** ೮. ೩೮); [ನಾ] ಕ್ರಮ (ಭರತ ಯಯಾತಿ ಕುತ್ಸ ಪುರುಕುತ್ಸ ಪುರೂರವದಿಂದಂ ಇನ್ನೆಗಂ ಪರಿವಿಡಿಯಿಂದೆ ಬಂದ ಶಶಿವಂಶಂ: **ಪಂಪಭಾ,** ೭. ೧೬)

ಪರಿವಿರಚಿತ – [ಗು] ನಿರ್ಮಿತವಾದ (ಪರಿವಿರಚಿತ ಚಿತ್ರಾಂಬರವಿತಾನ ಚ್ಛಾಯಾಚ್ಛುರಿತ ರಂಗಭೂಮಿಯೊಳ್: **ಆದಿಪು,** ೮. ೬೭ ವ)

ಪರಿವೀತದೇಹಬಿಂಬತೆ – [ನಾ] [ಜೈನ] ದೇಹಕ್ಕೆ ನೆರಳು ಇಲ್ಲದಿರುವುದು (ಅನ್ವಿತಚತುರಾನನತ್ವಂ ಅಖಿಳಾಗಮವಿತ್ತ್ವಂ ಅಪಕ್ಷ್ಮತಾಸಂ ಆಯತಗಗನಪ್ರಚಾರಂ ಅಪಜೀವವಧಂ ಪರಿವೀತದೇಹಬಿಂಬತೆ: **ಆದಿಪು,** ೧೦. ೪೩)

ಪರಿವೃಢ – [ನಾ] ಒಡೆಯ, ಪ್ರಭು (ತಾಂ ತನ್ನ ಕೈಯೊಳೆ ಕಟ್ಟಿದಂ ಕುರುಪರಿವೃಢಂ ಕರ್ಣಂಗಾ ವೀರವಟ್ಟದ ಪಟ್ಟಮಂ: **ಪಂಪಭಾ,** ೧೨. ೫೨)

ಪರಿವೃತ – [ಗು] ಹೊರಳಿದ (ತರಳತರ ತುರಂಗ ದ್ರುತವೇಗಾಕೃಷ್ಟ ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ ಸಂಘಟ್ಟನ ಸಮುಚ್ಚಳಿತ ಪಾಂಸುಪಟಳ: **ಪಂಪಭಾ,** ೧೩. ೫೧ ವ)

ಪರಿವೃತ್ತ – [ಗು] ದುಂಡಾದ (ಒದವಿದ ಕರ್ಪನೆಯ್ದೆ ಪರಿವೃತ್ತ ಪಯೋಧರಚೂಚುಕಕ್ಕೆ ಮಾಡದೆ .. .. ಬಳೆದ ಗರ್ಭಮೆ ಮನಂಗೊಳಲಾರ್ತುದು: **ಆದಿಪು,** ೮. ೪೭)

ಪರಿವೆಡೆ – [ನಾ] ಓಡಾಡುವ ಜಾಗ (ಕಾರೋಹಣದ ಕಕ್ಕರವಟಿಯಿಗೆಯ ಚಿತ್ರಾವಳಿಯ ಪರಿವೆಡೆಯ ತುಳಿವೆಡೆಯ ನೆಳಲಪಾಣಿಯ: **ಆದಿಪು,** ೪. ೩೪ ವ)

ಪರಿವೆಸಗೆಯ್ – [ಕ್ರಿ] ಸೇವೆ ಮಾಡು (ಅಣಿಮಾದಿ ಗುಣಾನ್ವಿತಾಮರರ್ ಪರಿವೆಸಗೆಯ್ವರೆಂಬೆನಱೆಯೆಂ ಪೊಗಳಲ್ ಸುರಲೋಕ ಸೌಖ್ಯಮಂ: **ಆದಿಪು,** ೩. ೨)

ಪರಿವೇಷ – [ನಾ] ಪ್ರಭಾವಲಯ (ಎಕ್ಕಾವಳಿ ಕಂಧರದೊಳಮರ್ದೆಸೆಯೆ ಪೋಲ್ತುದು ಪರಿವೇಷಂಗೊಂಡ ಚಂದ್ರನಂ ಮುಖಚಂದ್ರಂ: **ಆದಿಪು,** ೪. ೩೭)

ಪರಿವ್ರಾಜಕ – [ನಾ] ಎಲ್ಲವನ್ನೂ ತೊರೆದು ಪರ್ಯಟನ ಮಾಡುವ ಸನ್ಯಾಸಿ (ಏಕದಂಡಿ ತ್ರಿದಂಡಿಗಳಪ್ಪ ಪರಿವ್ರಾಜಕರುಮಾಗಿ ತಮಗೆ ತಾವೇ ವನಪ್ರವೇಶಮಂ ಮಾಡಿ: **ಆದಿಪು,** ೯. ೯೩ ವ)

ಪರಿಶ್ರಮಾಂಬುಲವ – [ನಾ] ಆಯಾಸದ ಬೆವರ ಹನಿ (ರಣಾಯಾಸ ಪರಿಶ್ರಮಾಂಬುಲವಂ ತವೆ ಪೀರೆ ಪುರಾಂಗನಾಮುಖಾಬ್ಜ ಆಸವಗಂಧದೊಳ್ ಬೆರಸಿದೊಂದೆಲರ್ ತೀಡೆ: **ಪಂಪಭಾ,** ೮. ೧೧೦)

ಪರಿಶ್ರಾಂತ – [ಗು] ಆಯಾಸಪಟ್ಟ, ದಣಿದ (ಸೀತಾನದೀ ತರಙ್ಗ ಆಲಿಂಗಿತ ಸಂತಾನಲತಾಲತಾಂತ ಸುರಭಿತರಮಂದಾರ ವನವೀಧೀವಿಹಾರ ಪರಿಶ್ರಾಂತ ಪವಮಾನಸ್ಪರ್ಶದಿಂ: **ಆದಿಪು,** ೨. ೧೪ ವ)

ಪರಿಷತ್ – [ನಾ] ಸಮೂಹ (ನೃಸುರ ಅಸುರಪರಿಷತ್ ಸಸ್ಯಸಂಕುಳಂ ಜಿನವಚೋಮೃತಸಾರಂ ಅದು ಅಸದಳಮೆ ಬಯಸೆ ಭರತಂ ಬೆಸಗೊಂಡಂ ಜಿನನಂ ಅಖಿಳವಸ್ತುಸ್ಥಿತಿಯಂ: **ಆದಿಪು,** ೧೦. ೬೨)

ಪರಿಷೇಕ – [ನಾ] ಸಿಂಪಡಿಸುವಿಕೆ (ಅನ್ನೆಗಂ ಅತ್ತ ದುರ್ಯೋಧನಂ ಅತಿಸಂಭ್ರಮಾಕುಳಿತಪರೀತಜನ ಉಪನೀತ ಚಂದನಕರ್ಪೂರ ಮಿಶ್ರಿತ ಹಿಮಶಿಶಿರ ಧಾರಾಪರಿಷೇಕದಿಂದ ಎಂತಾನುಂ ಮೂರ್ಛೆಯಿಂದೆೞ್ಚತ್ತು: **ಪಂಪಭಾ,** ೧೩. ೨ ವ)

ಪರಿಷ್ಕೃತ – [ಗು] ಅಲಂಕಾರಗೊಂಡ (ಚಂದ್ರಾತಪ ಪಾಂಡುರ ಹರಿಚಂದನಾನುಲಿಪ್ತಗಾತ್ರನುಂ ಅಭಿನವ ವಿಳಸಿತ

ಮಾಳತೀಮಾಳಾಪರಿಷ್ಕೃತಮಕುಟನುಂ: **ಆದಿಪು**, ೧೧. ೧೦)

ಪರಿಸಂಖ್ಯೆ – [ನಾ] ಆವೃತ್ತಿ, ಬಾರಿ (ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ಮೊದಲ್ಗಿಡೆ ಮುನ್ನಮೇಕವಿಂಶತಿ ಪರಿಸಂಖ್ಯೆಯಿಂ ತವಿಸಿ: **ಪಂಪಭಾ**, ೨. ೪೫); [ನಾ] ಮೊತ್ತ (ತೊಲಗದು ಪುಬ್ಬಕೋಟಿ ಪರಿಸಂಖ್ಯೆವರಂ ಪರಮಾಯು: **ಆದಿಪು**, ೧. ೫೨); [ನಾ] ಲೆಕ್ಕ (ಅಂತು ಮಾಡಿದ ಪರಿಸಂಖ್ಯೆಯೊಳ್ ಒಂದಕ್ಷೋಹಿಣಿ ಬಲಂ ಬೆರಸು ತಲೆಬಟೆವಟೆಯೆಂದು ಅಭಿಮನ್ಯುಗೆ ಕೂಸಂ ಕೊಟ್ಟ ಜೆಟ್ಟಿಗಂ ವಿರಾಟಂ: **ಪಂಪಭಾ**, ೯. ೯೫ ವ)

ಪರಿಸ್ಖಲನ – [ನಾ] ಹೊಡೆತ, ತಾಗುವಿಕೆ (ಖರಖುರಟಂಕ ಪರಿಸ್ಖಲನಕಳಿತವಿಷಮ ವರಭೇರೀನಿಸ್ವನಮುಂ: **ಪಂಪಭಾ**, ೧೩. ೫೧ ವ)

ಪರಿಸ್ಖಳಿತ – [ಗು] ಜಾರಿ ಬಿದ್ದ (ಪೊಸಬಾಸುಟಿ ಕರರುಹರೇಖೆ ತುಱುಗಿ ರತನಾಟ್ಯಪರಿಸ್ಖಳಿತಕ್ಕೆ ಮುಳಿದು ದಂಪತಿಗಳನಂಗಜನಟನೆ ಸೆಳೆದ ಬಾಸುಟಿ‌ವೆನಿಕುಂ: **ಆದಿಪು**, ೧೨. ೧೫)

ಪರಿಸ್ರಸ್ತ – [ಗು] ಬಿದ್ದುಹೋದ (ಅನೇಕಮಕುಟಬದ್ಧಶೇಖರಸಹಸ್ರ ಪರಿಸ್ರಸ್ತ ಕುಸುಮಕೇಸರರಜಮುಂ: **ಆದಿಪು**, ೧೧. ೩೫ ವ)

ಪರಿಹರಿಸು – [ಕ್ರಿ] ಬಿಟ್ಟುಬಿಡು, ತೊರೆ (ಆನರಸುಗೆಯ್ವ ಪಟುವಗೆಯನದಂ ಪರಿಹರಿಸಿದೆಂ: **ಪಂಪಭಾ**, ೧೨. ೧೭೯)

ಪರಿಹಸಿತ – [ನಾ] ಪರಿಹಾಸ, ಹಾಸ್ಯಾಸ್ಪದ (ಬರೆಯಿಸಿದಂ ಪೂರ್ವಮಹೀಶ್ವರನಾಮಮನೆಯ್ದೆ ಕಳೆದು ವೃಷಭಾಚಲದೊಳ್ ಭರತಂ ನಿಜನಾಮಮನೆನೆ ಪರಿಹಸಿತಂ ಬುಧಜನಕ್ಕಲ್ಲದೆ ಪೆಱತೇಂ: **ಆದಿಪು**, ೧೪. ೭೩)

ಪರಿಹಾರಶುದ್ಧಿ – [ನಾ] [ಜೈನ] ಐದು ಬಗೆಯ ನಡವಳಿಕೆಗಳಲ್ಲಿ ಒಂದು, ಚಾರಿತ್ರಶುದ್ಧಿ (ಸಮ್ಯಕ್ಚಾರಿತ್ರಮೆಂಬುದು ಅದು ಸಾಮಾಯಿಕಚ್ಛೇದ ಉಪಸ್ಥಾಪನಾ ಪರಿಹಾರಶುದ್ಧಿ ಸೂಕ್ಷ್ಮಸಂಪರಾಯ ಯಥಾಖ್ಯಾತಚಾರಿತ್ರಭೇದದಿಂ ಪಂಚವಿಧಂ: **ಆದಿಪು**, ೧೦. ೬೩ ವ)

ಪರಿಹಾಸ – [ನಾ] ನಗು (ಕೆಲಂಬರ್ ಇಂದುಕಾಂತಕಳಶಕಿರಣ ದ್ವಿಗುಣಧವಳ ನಿಜದಂತಿಕಾಂತಿಬಹುಳ ಪರಿಹಾಸಚ್ಛಾಯಾ ವಿಭ್ರಮಮಂ ಪುಟ್ಟಿಸುವ ತೋಯಂಗಳಿಂದಂ: **ಆದಿಪು**, ೮. ೬೯ ವ)

ಪರಿಹಾಸಿಕ – [ನಾ] ವಿದೂಷಕ (ಗಜ ತುರಗ ರಥ ಪದಾತಿ ವೃಷಭ ಗಂಧರ್ವ ನರ್ತಕೀ ಪರಿಹಾಸಿಕಂ ಬೆರಸು ಬಂದು: **ಆದಿಪು**, ೭. ೪೨ ವ)

ಪರೀತ – [ಗು] ಸುತ್ತಲ್ಪಟ್ಟ, ಸುತ್ತುವರಿಯಲ್ಪಟ್ಟ (ಅನ್ನೆಗಂ ಅತ್ತ ದುರ್ಯೋಧನಂ ಅತಿಸಂಭ್ರಮಾಕುಳಿತಪರೀತಜನ ಉಪನೀತ ಚಂದನಕರ್ಪೂರಮಿಶ್ರಿತ ಹಿಮಶಿಶಿರ ಧಾರಾಪರಿಷೇಕದಿಂದೆ: **ಪಂಪಭಾ**, ೧೩. ೨ ವ)

ಪರೀಷಹ – [ನಾ] [ಜೈನ] ತಪಶ್ಚರಣಕ್ಕೆ ಇರುವ ಇಪ್ಪತ್ತೆರಡು ಬಗೆಯ ಅಡ್ಡಿಗಳು: ಹಸಿವು, ಬಾಯಾರಿಕೆ, ಚಳಿ, ಉಷ್ಣ, ಸೊಳ್ಳೆ ಮುಂತಾದವುಗಳ ಕಚ್ಚುವಿಕೆ, ಬತ್ತಲೆಯಿರುವುದರಿಂದಾಗುವ ತೊಂದರೆಗಳು, ಅರತಿ, ಸ್ತ್ರೀವಿರಹ, ಸಂಚಾರಬಾಧೆ, ಶಯ್ಯಾಬಾಧೆ, ಆಸನಬಾಧೆ, ಬೈಗುಳ, ಯಾಚನೆಯಿಂದಾಗುವ ತೊಂದರೆಗಳು, ಹೊಡೆತ, ಭಿಕ್ಷೆ ದೊರೆಯದ ಖೇದ, ತಪಸ್ಸಿಗೆ ತಕ್ಕ ಫಲ ಸಿಕ್ಕದಿರುವುದು, ರೋಗ, ಮುಳ್ಳುಕಲ್ಲುಗಳಿಂದ ತೊಂದರೆ, ಅಹಂಕಾರ, ಅಜ್ಞಾನದ ಕೊರಗು, ಸ್ನಾನವಿರದ್ದರಿಂದಾಗುವ ಬಾಧೆ, ಜನರಿಂದ ಪುರಸ್ಕಾರ ದೊರೆಯದಿರುವುದು (ಅಳುರ್ವ ಪರೀಷಹಾನಳಶಿಖಾವಳಿಗಳ್ ಕೊಳೆ ಧೈರ್ಯಮಂ ಪುದುಂಗೊಳಿಸಿ ಸುರುಳ್ದು ಕರ್ಗಿದ ಕಱಂಗಿದ ಖೇಚರಂ: **ಆದಿಪು**, ೨. ೭೯)

ಪರೀಷಹಸಂಹತಿ – [ನಾ] ಪರೀಷಹಗಳ ಸಮೂಹ (ದೇಹೋತ್ಪನ್ನ ಪರೀಷಹಸಂಹತಿ ತನ್ನೊಡಲಂ ನೆಱೆಯೆ ತವಿಸುತಿರ್ಪುದುಮಂ: **ಆದಿಪು**, ೨. ೫೨)

ಪರುಷ – [ಗು] ಕಠೋರವಾದ (ಗಂಭೀರ ನಾರಕ ಭೀಷಣ ಮಕರಮುಖಕುಹರನಿಪತಿತ ಆಕ್ರಂದತ್ ಆರ್ತಪರುಷಸ್ವರ ವಿರಸಭಯಂಕರೆಯುಂ: **ಆದಿಪು**, ೫. ೮೭ ವ)

ಪರುಷವಾತ – [ನಾ] ಬಿರುಗಾಳಿ (ರಜಮುಂ ದಿಗ್ಧೂಮಮುಂ ಸಂದಣಿಸೆ ಪರುಷವಾತಾಹತಿ ಪ್ರೋಚ್ಚಳತ್ಸಾಮಜಸೇನಾ ಕುಂಭಸಿಂಧೂರಮುಂ: **ಆದಿಪು**, ೧೪. ೮೯)

ಪರುಸವೇದಿ – [ನಾ] [ಸ್ಪರ್ಶವೇದಿ] ಲೋಹವನ್ನು ಚಿನ್ನವನ್ನಾಗಿಸುವ ಕಲ್ಲು, ಸ್ಪರ್ಶಶಿಲೆ (ಮೇರುವ ಪೊಂ ಕಲ್ಪಾಂಘ್ರಿಪದ ಆರವೆ ರಸದ ಒಱವು ಪರುಸವೇದಿಯ ಕಣಿ ಭಂಡಾರದೊಳ್ ಉಂಟೆನೆ ಕುಡುವ ಅನಿವಾರಿತ ದಾನಕ್ಕೆ ಪೋಲ್ವರಾರ್ ಬದ್ದೆಗನಂ: **ಪಂಪಭಾ**, ೧. ೨೮)

ಪರೆ – [ಕ್ರಿ] ಬೆಳಗಾಗು (ದುರಿತಘನತಿಮಿರಮೆತ್ತಂ ತೆರಳ್ದು ಜಿನಸವನಮಂಗಳಕ್ಕಿದಾಗಳ್ ಪರೆವಂತಾದುದು: **ಆದಿಪು**, ೭. ೭೯); [ಕ್ರಿ] ಹೋಗು (ಪರೆಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱೆ: **ಆದಿಪು**, ೧೧. ೧೧೦); [ಕ್ರಿ] ಬಿಚ್ಚಿಹೋಗು (ಪೊದಳ್ದ ಕಬರೀಭರಂ ಪರೆದು ಪರ್ವೆ ತುಂಗಸ್ತನಂ ಕದಕ್ಕದಿಸೆ: **ಆದಿಪು**, ೧೨. ೧೩); [ಕ್ರಿ] ಚೆದುರು, ಹರಡು (ಇತ್ತ ವಿಕ್ರಮಾರ್ಜುನನುಂ ಓಲಗಂ ಪರಿದಿಂ ಬಟೆಯಂ ತನ್ನ ಪವಡಿಸುವ ಮಾಡಕ್ಕೆ ಒಡನೊಡನೋಲಗಿಸುತ್ತುಂ ಬಂದ: **ಪಂಪಭಾ**, ೪. ೬೯ ವ); [ಕ್ರಿ] ವಿಸ್ತರಿಸು, ವ್ಯಾಪಿಸು (ಬಧಿರಿತ ಸಮಸ್ತ ದಿಕ್ತಟಂ ಅಧಿರಿತ ಸರ್ವ ಇಭ್ಯಗರ್ವಿತಂ ಕ್ಷುಭಿತಾಂಭೋಸಲಿಲಂ ಪರೆದುದು ಧುರವಿಧಾನ ಪಟುಪಟಹ ಕಹಳ ಭೇರೀರಭಸಂ: **ಪಂಪಭಾ**, ೧೨. ೧೭೧)

ಪರೆಪು – [ಕ್ರಿ] ಹರಡು, ವಿಸ್ತರಿಸು (ದುರ್ವಿಮಂತ್ರಮಂ ಪರೆಪ ಟಮಾಳಮಂ ಪಿರಿದಂ ಓದಿದೊಡೆ ಅಪ್ಪ ಪದಾರ್ಥಮಾವುದೋ: **ಪಂಪಭಾ**, ೧೩. ೬೬)

ಪರೇತವನ – [ನಾ] [ಪ್ರೇತವನ] ಶ್ಮಶಾನ (ಕಂಡವರೆಲ್ಲಂ ಎಟೆದು ಕಳೆಯೆ ಪರೇತವನಭೂಮಿಯೊಳ್ ಜೀರ್ಣಶೀರ್ಣ ಚೀರಂಗಳಿಂದಂ ಪುದಿದಿರಿಸಿ: **ಆದಿಪು**, ೩. ೩೪ ವ)

ಪರೋಕ್ಷ – [ನಾ] ಮರಣಾನಂತರ (ಬಲದೇವ ವಾಸುದೇವರಾಗಿ ಪುಟ್ಟಿ ನಿಜಗುರುಪರೋಕ್ಷದೊಳ್ ಧರಾಭಾರಧುರಂಧರರಾಗಿರೆ: **ಆದಿಪು**, ೩. ೭೬ ವ)

ಪರೋಪಕಾರಾರ್ಥಂ – [ನಾ] ಇತರರಿಗೆ ಸಹಾಯ ಮಾಡುವ ಕೆಲಸ (ನಮಗೀ ಪೊಟಲೊಳೊಂದು ಪರೋಪಕಾರಾರ್ಥಂ ಸಯ್ಪಿನಿಂ ದೊರೆಕೊಂಡುದೆಂದು ಇರುಳೆಲ್ಲಂ ಬಕನ

ಪಡೆಮಾತನೆ ನುಡಿಯುತ್ತುಮಿರ್ಪನ್ನೆಗಂ: **ಪಂಪಭಾ,** ೩. ೨೬ ವ)

ಪರ್ಚಿಪೇೞ್ – [ಕ್ರಿ] ಪಿಸುಗುಟ್ಟಿ ಹೇಳು (ಜಳಮಂತ್ರೋಪದೇಶಮಂ ಕಿವಿಯೊಳ್ ಪರ್ಚಿಪೇೞ್ದು ಕುರುಪಿತಾಮಹಂ: **ಪಂಪಭಾ,** ೧೩. ೭೦ ವ)

ಪರ್ದಿಂಗೆ ಬಿರ್ದಿಕ್ಕು – [ಕ್ರಿ] [ರಣ]ಹದ್ದುಗಳಿಗೆ ಔತಣ ಮಾಡಿಸು, [ಶತ್ರುಗಳನ್ನು] ಯಥೇಚ್ಛವಾಗಿ ಕೊಚ್ಚಿ ಹಾಕು (ಈ ಎಮ್ಮಯ್ಯನಿನಾದುದೊಂದು ಪಗೆಯಿಂ ಸೀಳ್ದು ಉಗ್ರಪಾಂಚಾಳ ರಾಜ ಆಯುಃಪಾರಮಂ ಅನ್ಯಭೂಪಬಲಮಂ ಪರ್ದಿಂಗೆ ಬಿರ್ದಿಕ್ಕುವೆಂ: **ಪಂಪಭಾ,** ೧೨. ೩೮)

ಪರ್ದು – [ನಾ] ಹದ್ದು, ಗೃಧ್ರ (ಭುಗಭುಗನೆ ಉರ್ಚಿಪಾಯ್ವ ಬಿಸುನೆತ್ತರ ಸುಟ್ಟುರೆಯಂ ನೆಲಕ್ಕೆ ಪರ್ದುಗಳ್ ಉಗಲೀಯದೆ ಅವ್ವಳಿಸಿ ಪೀರ್ವಿನಂ: **ಪಂಪಭಾ,** ೧೦. ೮೦)

ಪರ್ಪರಿಕೆಗಿಡು – [ಕ್ರಿ] ಗಟ್ಟಿತನವನ್ನು ಬಿಡು (ಪರ್ಪರಿಕೆಗಿಡದೆ ಕಲಿವಿಷಖರ್ಪರನಿದಿರಾಂತೊಡೆ ಆಂತು ವಲಲಂ ತಳಮಂ ಮಾರ್ಪೊಸೆದು ತಳ್ತು .. .. ಸಿಂಹನಾದದಿನಾರ್ದಂ: **ಪಂಪಭಾ,** ೮. ೫೮)

ಪರ್ಬು – [ನಾ] ಹರಡುವಿಕೆ, ಹರಹು (ಕಿಂಕಿರಾತಶೇಖರರಜದಿಂದೆ ಚಾರು ಪಟವಾಸದ ಧೂಳಿಯ ಪರ್ಬಿನಿಂದಂ: **ಆದಿಪು,** ೭. ೧೧೫); [ಕ್ರಿ] ತೆರೆ, ಬಿಚ್ಚಿಕೊ (ತನು ರೂಪ ವಿಭವ ಯೌವನ ಧನ ಸೌಭಾಗ್ಯ ಆಯುರಾದಿಗಳ್ಗೆಣೆ ಕುಡುಮಿಂಚಿನ ಪೊಳೆಪು ಮುಗಿಲ ನೆಟಿಲ್ ಇಂದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ: **ಆದಿಪು,** ೯. ೯. ೪೬); [ಕ್ರಿ] ಹಬ್ಬು, ಹರಡು (ಅಂತು ನೂರ್ವರೊಳ್ ಒರ್ವನ ಅಗುರ್ಬು ಪರ್ಬಿ ಪರಕಲಿಸೆ: **ಪಂಪಭಾ,** ೧. ೧೩೧ ವ)

ಪರ್ಯಂಕ – [ನಾ] ಮಂಚ (ಅವಿರಳ ಮುಕ್ತಾದಾಮನಿಕಾಮ ಕಮನೀಯವಿತಾನದೊಳ್ ಅಮೃತಮಣಿಪೀಠಿಕಾಧಿಷ್ಠಿತ ಪರ್ಯಂಕದೊಳ್: **ಆದಿಪು,** ೭. ೨೭ ವ)

ಪರ್ಯಂತ – [ಗು] ಹತ್ತಿರ (ಪರ್ಯಂತನಿವೇಶಿತ ವಿವಿಧಮಂಗಳದ್ರವ್ಯ ಪರಿಕರಪರಿಪೂರ್ಣದೊಳ್: **ಆದಿಪು,** ೯. ೭೬ ವ)

ಪರ್ಯಾಣ – [ನಾ] [ಪಲ್ಯಯನ] ಕುದುರೆಯ ಜೀನು (ಕಣ್ಣಿಂ ಖುರಮುಂ ತೋಱಿ ಪಕ್ಕರೆಯಿಕ್ಕಿ ಪೊಳೆವ ಪೊನ್ನ ಪರ್ಯಾಣಮಂಗಳುಮೆಸೆಯೆ: **ಪಂಪಭಾ,** ೧೦. ೫೧ ವ)

ಪರ್ಯಾಪ್ತ – [ಗು] ಸಮಗ್ರವಾದ (ಉತ್ತಮಕ್ಷಮಮಾರ್ದವ .. .. ಪರ್ಯಾಪ್ತ ದಶಧರ್ಮಂಗಳಂ ಕೈಕೊಂಡು: **ಆದಿಪು,** ೬. ೩೦ ವ)

ಪರ್ಯಾಪ್ತಿ – [ನಾ] [ಜೈನ] ನಾಮಪ್ರಕೃತಿಗಳಲ್ಲಿ ಒಂದು; ಶರೀರದ ಪುದ್ಗಲರಚನೆ ಪೂರ್ಣಗೊಂಡಿರುವುದು; ಇದರಲ್ಲಿ ಆರು ಬಗೆ: ಆಹಾರ, ಶರೀರ, ಇಂದ್ರಿಯ, ಶ್ವಾಸೋಚ್ಛ್ವಾಸ, ಭಾಷಾ, ಮನಸ್ (ಪರಾರ್ಥ್ಯರತ್ನರಚನಾ ವಿಚಿತ್ರೋಪಪಾದ ಶಯನತಳದೊಳ್ ಅಂತರ್ಮುಹೂರ್ತದೊಳ್ ಪರ್ಯಾಪ್ತಿಯಂ ಕೈಕೊಂಡು: **ಆದಿಪು,** ೬. ೩೭ ವ)

ಪರ್ಯಾಯಂದಪ್ಪು – [ಕ್ರಿ] ಕ್ರಮ ತಪ್ಪು (ಪರ್ಯಾಯಂದಪ್ಪದೇಂ ಸುತ್ತಿಜೆದುವೊ ವಲಯಾಕಾರದೊಂದೊಂದಂ ಅತ್ಯಾಶ್ಚರ್ಯಂ: **ಆದಿಪು,** ೧. ೪೦)

ಪರ್ವ – [ನಾ] ಜೋಡಣೆ (ಪಿಡಿದುದಿರ್ವ ಬಾಳ ಕಿಡಿಗಳಿಂ ಒಡನೊಡನಡೆವೊತ್ತಿ ತೊಟ್ಟ ಸನ್ನಣವುರಿಯಲ್ಕೊಡರಿಸಿದೊಡೆ ಅವಱ ಪರ್ವಂ ಬಿಡೆಯರದರಿಸಮಿತಿಯೊಡನೆ ಕಾದಿದದರೆಬರ್: **ಪಂಪಭಾ,** ೧೦. ೭೯)

ಪರ್ವತರಾಜ – [ನಾ] ಬೆಟ್ಟದ ಅರಸು (ಕಾಶ್ಮೀರ ಹಿಮವಂತ ಹೇಮಕೂಟ ಕೈಳಾಸ ಪಾರಿಯಾತ್ರ ಶ್ವೇತಶೃಂಗ ಗಂಧಮಾದನಗಿರಿ ನಿಕಟವರ್ತಿಗಳಪ್ಪ ಪರ್ವತರಾಜರಂ ಅಪಗತತೇಜರ್ಮಾಡಿ: **ಪಂಪಭಾ,** ೬. ೩೦ ವ)

ಪರ್ವತರಾಜ – [ನಾ] ಬೆಟ್ಟದ ಅರಸು (ಕಾಶ್ಮೀರ ಹಿಮವಂತ ಹೇಮಕೂಟ ಕೈಳಾಸ ಪಾರಿಯಾತ್ರ ಶ್ವೇತಶೃಂಗ ಗಂಧಮಾದನಗಿರಿ ನಿಕಟವರ್ತಿಗಳಪ್ಪ ಪರ್ವತರಾಜರಂ ಅಪಗತತೇಜರ್ಮಾಡಿ: **ಪಂಪಭಾ,** ೬. ೩೦ ವ)

ಪರ್ವು – [ಕ್ರಿ] ಹಬ್ಬು (ಪೂರ್ವಾಪರಜಳನಿಧಿಗಳ ಪರ್ವುವರಂ ನೀಳ್ದು ಶಿಖರನಿಕರಂ ನಭವಂ ಪರ್ವಿರೆ: **ಆದಿಪು,** ೯. ೧೨೧)

ಪಲಕಾಲಂ – [ನಾ] ಬಹಳ ಕಾಲದವರೆಗೆ (ಪಲಕಾಲಮಗಲ್ದ ನಲ್ಲರಿರ್ವರುಂ ಒಂದೆಡೆಯೊಳ್ ಕೂಡಿ: **ಪಂಪಭಾ,** ೪. ೧೦೮ ವ)

ಪಲಗೆ – [ನಾ] [ಫಲಕ] ಹಲಗೆ, ಆಟದ ಹಾಸು, ಒಂದು ಸಲದ ಆಟಕ್ಕೆ (ಪಲಗೆಗೆ ಪತ್ತು ಸಾಯಿರಮೆ ಗದ್ಯಣಂ ಎಂದಿರದೆ ಒಡ್ಡಿ ತಾಮ್ ಎರಟ್ಟಿಪಲಗೆಯಂ ಆಡಿ ಸೋಲ್ತೊಡೆ: **ಪಂಪಭಾ,** ೬. ೭೨); [ನಾ] ಗುರಾಣಿ (ಎರಡುಂ ಬಲದ ಕಡಿತಲೆಯ ನಾಯಕರ್ ಕೆಯ್ಕೊಂಡು ಬಳ್ಳುಗೆಡೆದು ಎಕ್ಕೆವಾಱುವಾಜೆ ಪಲಗೆವಾಜೆ ಗೂಳಿಸೊರ್ಕಿ ಮಾರ್ಕೊಂಡು ಕಾದೆ: **ಪಂಪಭಾ,** ೧೦. ೮೦ ವ)

ಪಲಗೆಯನಾಡು – [ಕ್ರಿ] ಪಗಡೆ ಆಟವಾಡು (ಪಲಗೆಗೆ ಪತ್ತು ಸಾಯಿರಮೆ ಗದ್ಯಣಂ ಎಂದಿರದೆ ಒಡ್ಡಿ ತಾಮ್ ಎರಟ್ ಪಲಗೆಯನಾಡಿ ಸೋಲ್ತೊಡೆ: **ಪಂಪಭಾ,** ೬. ೭೨)

ಪಲಗೆವಾಱು – [ಕ್ರಿ] [ಪಲಗೆ+ಪಾಱು] ಗುರಾಣೀ ಹಿಡಿದು ನೆಗೆ ? (ಎರಡುಂ ಬಲದ ಕಡಿತಲೆಯ ನಾಯಕರ್ ಕೆಯ್ಕೊಂಡು ಬಳ್ಳುಗೆಡೆದು ಎಕ್ಕೆವಾಱುವಾಜೆ ಪಲಗೆವಾಜೆ ಗೂಳಿಸೊರ್ಕಿ ಮಾರ್ಕೊಂಡು ಕಾದೆ: **ಪಂಪಭಾ,** ೧೦. ೮೦ ವ)

ಪಲರ್ಮೆ – [ನಾ] ಹಲವು ಸಲ (ನೋಂತುಂ ಓದಜೆವರ ಪೇೞ್ದ ನೋಂಪಿಗಳಂ ಒರ್ಮೆ ಪಲರ್ಮೆಯುಮಿಂತು ತಮ್ಮ ಮೆಯ್ಮಱೆವಿನಂ ಇರ್ವರುಂ ನಮೆದರ್: **ಪಂಪಭಾ,** ೧. ೧೩೫)

ಪಲವಾಡು – [ನಾ] ನಾನಾ ಮಾತುಗಳನ್ನಾಡು, ಹೊಗಳಿಕೊ (ಕುಲದ ಚಲದ ಆಯದ ಅಜೆವಿನ ಕಲಿತನದ ಉನ್ನತಿಯನಲಸದೀ ಸುರಸಭೆಯೊಳ್ ಪಲವಾಡುವೆನ್ನ ನಾಲಗೆ ಬಲಸ್ಥನೊರ್ವಂಗೆ ಜೀಯ ದೇವೆಂದಪುದೇ: **ಆದಿಪು,** ೧೨. ೧೦೧)

ಪಲಾಲ – [ನಾ] ಹುಲ್ಲು ಕಡ್ಡಿ (ನಮಗಿದು ಪಲಾಲಭಾರಂಬೊಲ್ ಈ ಮಹೀತಲಭಾರಂ: **ಆದಿಪು,** ೧೪. ೩೩)

ಪಲ್ಗರ್ಚಿ ಸೈರಿಸು – [ಕ್ರಿ] ಹಲ್ಲು ಕಚ್ಚಿಕೊಂಡು ಸಹಿಸು (ಪಸುವಂ ಮೋದುವವೊಲೆ ಮೋದೆಯುಂ ಅದಂ ಕಂಡಂತೆ ಪಲ್ಗರ್ಚಿ ಸೈರಿಸಿದೆಂ ನಿನ್ನಯ ನನ್ನಿಗಿನ್ನೆವರಂ: **ಪಂಪಭಾ,** ೭. ೫೮)

ಪಲ್ಮೊರೆ – [ಕ್ರಿ] ಹಲ್ಲು ಮಸೆ, ಹಲ್ಲು ಕಡಿ (ಬಿರಯಿಯ ಮಿಟ್ಟುವೆಂ ಮಿದಿದೊಡಲ್ಲದಣಂ ಮುಳಿಸಾಱದೆಂದು ಪಲ್ಮೊರೆದನಲ್ಲಿ ಮನ್ಮಥಂ: **ಪಂಪಭಾ,** ೨. ೧೩); [ಕ್ರಿ] ಝೇಂಕರಿಸು (ಅಳಿ ಬಿರಿದಿರ್ದ ಜಾದಿಯೊಳೆ ಪಲ್ಮೊರೆಯುತ್ತಿರೆ ಹಂಸೆ ಪೂತ ಪೂಗೊಳದೊಳೆ ರಾಗಿಸುತ್ತಿರೆ: **ಪಂಪಭಾ,** ೭. ೭೦)

ಪಲ್ಯ – [ನಾ] [ಜೈನ] ಬಹು ದೊಡ್ಡ ಸಂಖ್ಯೆಯ ಎಣಿಕೆಯ ಕಾಲಾವಧಿ; ಇದರಲ್ಲಿ ಮೂರು ಬಗೆ: ವ್ಯವಹಾರಪಲ್ಯ, ಉದ್ಧಾರಪಲ್ಯ ಹಾಗೂ ಅದ್ಧಾಪಲ್ಯ (ದಿನತ್ರಯದೊಳ್ ಬದರೀಫಳಮಾತ್ರ ಆಹಾರಿಗಳುಂ ಆರೋಗ್ಯಶರೀರಂಗಳುಂ ಸೌಂದರಾಕಾರಂಗಳುಂ ತ್ರಿಪಲ್ಯೋಪಮಜೀವಿಗಳುಂ ಆಗಿ: **ಆದಿಪು,** ೫. ೪೧ ವ)

ಪಲ್ಯಂಕಾಸನ – [ನಾ] ಒಂದು ಬಗೆಯ ಯೋಗಾಸನ, ಎಡಪಾದವನ್ನು ಬಲತೊಡೆಯ ಮೇಲೂ ಬಲಪಾದವನ್ನು ಎಡತೊಡೆಯ ಮೇಲೂ ಇರಿಸಿ ಧ್ಯಾನಕ್ಕೆ ಕುಳಿತುಕೊಳ್ಳುವ ಭಂಗಿ (ವಸ್ತ್ರಾಭರಣಮಾಲ್ಯಾದಿಗಳಂ ಮೆಯ್ಯಿಂ ತೊಲಗಿಸಿ ಪೂರ್ವಾಭಿಮುಖನುಂ ನಿಬಿಡನಿಬದ್ಧ ಪಲ್ಯಂಕಾಸನನುಮಾಗಿ: **ಆದಿಪು,** ೯. ೭೬ ವ)

ಪಲ್ಲಂ ತಿನ್ – [ಕ್ರಿ] [ಸಿಟ್ಟಿನಿಂದ] ಹಲ್ಲುಕಡಿ (ಆತಂ ಬೆರಸು ಅನಿತುಮಂ ತಿಂದು ತಣಿಯದೆ ಪಲ್ಲಂ ತಿಂಬಂ: **ಪಂಪಭಾ,** ೩. ೨೫ ವ)

ಪಲ್ಲಂ ಸುಲಿ – [ಕ್ರಿ] ಹಲ್ಲನ್ನುಜ್ಜಿ ತೊಳೆ (ತನ್ನ ಸಾವಂ ಪರಿಚ್ಛೇದಿಸಿ ಪಲ್ಲಂ ಸುಲಿಯುತ್ತುಮಿರ್ದ ಮಾದ್ರಿಯಂ ಕಂಡು: **ಪಂಪಭಾ,** ೨. ೨೪ ವ)

ಪಲ್ಲಟ – [ನಾ] ಬದಲು, ಅದಲುಬದಲು (ಮತ್ತೊಂದೆಡೆಯೊಳ್ ತೋಳಪಲ್ಲಟದೊಳ್ ಬೆದಱಿದ ಬಗೆವೆರಸು ಲಲ್ಲೆಗೆಯ್ವಳನೊರ್ವಂ ಅತಿಚದುರವಿಟಂ: **ಆದಿಪು,** ೧೨. ೩೬ ವ)

ಪಲ್ಲಟಿಸು – [ಕ್ರಿ] ಬದಲಾಯಿಸು (ಎತ್ತಿಕೊಂಡ ಶ್ರುತಿಯಂ ಪಲ್ಲಟಿಸದೆಯುಂ ಮತ್ತಂ ಪರಿಚ್ಛೇದಂಗಳಂ ಅಱಿದುಂ: **ಪಂಪಭಾ,** ೧೪. ೩೦ ವ)

ಪಲ್ಲವ – [ನಾ] ಬಟ್ಟೆಯ ಸೆರಗು (ಚಾರುಚಾಮರಜನಿತ ಮಂದಮಾರುತಾಂದೋಳಿತ ಸೂಕ್ಷ್ಮಕ್ಷೌಮಾಂಬರಪಲ್ಲವಂ: **ಆದಿಪು,** ೮. ೫೫ ವ); [ನಾ] ಚಿಗುರು (ಕುಸುಮಪ್ರಸರಮೆನಿಸುವ ತುರಂಗಮುಖ ಫೇನಪಲ್ಲವ ಸ್ತಬಕಮುಂ: **ಆದಿಪು,** ೧೩. ೪೪ ವ); [ನಾ] ಆನೆಯ ಸೊಂಡಿಲಿನ ತುದಿ (ಕಿಂಚಾಕಸ್ಮಿಕ ಪಾಂಸುಪಲ್ಲವ ಜಳಸ್ಯಂದೀ ಸದಾಸಿಂಧುರಪ್ರಾಗೇಯಂ ಪ್ರಿಯಗಳ್ಳಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ,** ೯. ೯೭)

ಪಲ್ಲವಿತ – [ಗು] ಚಿಗುರು ಬಿಟ್ಟ (ಕೋರಕಿತ ಅಂಕುರಿತ ಪಲ್ಲವಿತ ಮುಕುಳಿತ ವಿಸ್ತಾರಿತ ರಮ್ಯಾಶೋಕ ಮಹೀರುಹಮುಮಂ ಅಭವನ ಅಂಗರುಚಿ ಪುದಿದಿರ್ಕುಂ : **ಆದಿಪು,** ೯. ೧೧೧)

ಪಲ್ಲಾಱು – [ಕ್ರಿ] ಹಲ್ಲಿನ ತೇವ ಒಣಗಿಹೋಗು (ಎತ್ತಿ ಕಯ್ಯಡಿದುಂ ಆಗಳ್ ಕಾಲುಡಿದುಂ ಬಟಲ್ದು ಪಲ್ಲಾಱೆ ಪೊಡರ್ಪುಗೆಟ್ಟು ಉಸಿರಲಪ್ಪೊಡಂ ಆಱದೆ ಪೋದೊಡೆ: **ಪಂಪಭಾ,** ೩. ೫೮)

ಪಲ್ಲಿಲಿವಾಯ್ – [ನಾ] ಹಲ್ಲಿಲ್ಲದ ಬಾಯಿ, ಬೊಚ್ಚು ಬಾಯಿ (ಆ ಮುದುಪಂ ಬಿಡೆ ಬಂದು ಪೊಂಗಳಂ ಸುರಿವೊಡಂ ಆರೊ ಸೈರಿಸುವರ್ ಆತನ ಪಲ್ಲಿಲಿವಾಯ ನಾತಮಂ: **ಪಂಪಭಾ,** ೪. ೧೦೦)

ಪವಡಿಸುವ ಮಾಡ – [ನಾ] ಮಲಗುವ ಮನೆ (ಇತ್ತ ವಿಕ್ರಮಾರ್ಜುನನುಂ ಓಲಗಂ ಪರಿದಿಂ ಬಟಿಯಂ ತನ್ನ ಪವಡಿಸುವ ಮಾಡಕ್ಕೆ ಒಡನೊಡನೋಲಗಿಸುತ್ತುಂ ಬಂದ: **ಪಂಪಭಾ,** ೪. ೬೯ ವ)

ಪವಣ್ – [ನಾ] ಮಿತಿ (ದಾಯಿಗರತ್ತಣಿನಪ್ಪ ಅಪಾಯಕೋಟಿಗೆ ಪವಣಿಲ್ಲ ಕಲ್ಪಿಗೆ ಎಡೆಯಾವುದೊ ಪಾಟಿಯ ಬಟ್ಟೆದಪ್ಪಿ ಮುಂ ನೆಗಟ್ದೆಡೆಯಿಲ್ಲ ಪೋಗು ಜಯಮಕ್ಕೆ ಶುಭಂ ನಿಮಗಕ್ಕೆ ಮಂಗಳಂ: **ಪಂಪಭಾ,** ೭. ೨೧); [ನಾ] ಯೋಗ್ಯತೆ (ಬಲದ ಪವಣಂ ಅನಿತಿನಿತೆಂದಾನಱಿಯೆಂ ದೇವಾಸುರರೊಳಂ ಅಱಿಯೆಂ ಕಂಡಿನಿತು ಬಲಮಂ ಆಂ ಅವನಿಪತೀ: **ಪಂಪಭಾ,** ೧೦. ೫೯)

ಪವಣ್ಣೆಲೆ – [ನಾ] [ಪವಣ್+ನೆಲೆ] ಆಯುಸ್ಸಿನ ಹವಣು, ಪ್ರಮಾಣ (ಪಂಚ'ಧನುಶ್ಶತಂ ಪವಣ್ಣೆಲೆ ನರರ್ಗೆಂದೊಡೆ ಇನ್ನಿಮಿರೆ ಬಣ್ಣಿಸಲಾನಱಿಯೆಂ ವಿದೇಹಮಂ: **ಆದಿಪು,** ೧. ೫೨)

ಪವಣ್ಬಡೆ – [ನಾ] ಹೊಂದಿಕೆಗೊಳ್ಳು (ಚಿನ್ನದ ಸವಂಗಂ ಅಪೂರ್ವದ ಮೊಚ್ಚೆಯಂ ಪವಣ್ಬಡೆದ ಸುಪರ್ಣಪಾರಿವದ ಕುಪ್ಪಸಮೊಪ್ಪೆ .. .. ಸೂಳೆಯರೊಪ್ಪಿ ತೋಱಿದರ್: **ಪಂಪಭಾ,** ೯. ೧೦೩)

ಪವಣ್ಮಾಡು – [ಕ್ರಿ] ಪ್ರಮಾಣವೆಂದು ತಿಳಿ (ಆತನಿಂ ಮುನ್ನಂ ನೀನೀ ಕನಸುಗಳಂ ಪೇಟ ಪೇಟಲೊಡಂ ಆತಂ ನಿನ್ನ ಮಾತನೆ ಪವಣ್ಮಾಡಿ ಪೇಟ್ದುದಂ ಕೈಗೊಳ್ಳುಂ: **ಆದಿಪು,** ೨. ೫೩ ವ)

ಪವನಂಜಯ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಜೀವರತ್ನಗಳಲ್ಲಿ ಒಂದಾದ ತುರಗರತ್ನದ ಹೆಸರು (ಪವನವೇಗ ನಿವರ್ತನನಿಪುಣನುಂ ದ್ವಾದಶಯೋಜನೋಲ್ಲಂಘನ'ಹೋ ನಿವಾಸಭೂಮಿಯುಮಪ್ಪ ಪವನಂಜಯಮೆಂಬ ತುರಗರತ್ನಮುಂ : **ಆದಿಪು,** ೧೧. ೩ ವ)

ಪವನ – [ನಾ] ವಾಯು (ತಳರ್ದುದು ಕರ್ಣತಾಳ ಪವನ ಆಹತಿಯಿಂ ಜಳರಾಶಿ ಕೆಯ್ಯ ಬಳ್ವಳಿಕೆಗೆ ದಿಗ್ಗಜಂ ದೆಸೆಯಿನತ್ತ ತೆರಳ್ದುವು ಕಾಯ್ಪಿನಿಂ: **ಪಂಪಭಾ,** ೧೧. ೭೧)

ಪವನಜ – [ನಾ] ವಾಯುಪುತ್ರ, ಭೀಮ (ಪವನಜನಂತು ಪೂಣ್ದು ಯುವರಾಜನ ನೆತ್ತರನಾರ್ದು ಪೀರ್ದಂ ಇಂತು ಅವಗಡದಿಂ ದಿನೇಶಜನಂ ಅಂಕದ ಗಾಂಡಿವಿ ಕೊಂದಂ: **ಪಂಪಭಾ,** ೧೩. ೮)

ಪವನತನೂಜ – [ನಾ] ಪವನಜ (ಪವನತನೂಜನ ಕೇಸರಿಕೇತನಮಪ್ಪ ಪಟಯಿಗೆಯಂ ಕಂಡು ಮುಟ್ಟೆವರ್ಪನ್ನೆಗಂ: **ಪಂಪಭಾ,** ೧೨. ೧೨೦ ವ)

ಪವನವೇಗ – [ನಾ] ಗಾಳಿಯ ವೇಗ (ಪವನವೇಗ ನಿವರ್ತನ ನಿಪುಣಮುಂ ದ್ವಾದಶಯೋಜನೋಲ್ಲಂಘನ'ಹೋ

ನಿವಾಸಭೂಮಿಯುಮಪ್ಪ ಪವನಂಜಯಮೆಂಬ ತುರಗರತ್ನಮುಂ : **ಆದಿಪು,** ೧೧. ೩ ವ)

ಪವನಹತ – [ನಾ] ಗಾಳಿಯ ಹೊಡೆತ (ಪವನಹತಂಗಳ್ ಮುನಿಪುಂಗವನ ಜಟಾಜಾಳಲತಿಕೆಗಳ್ ನಿಮಿರ್ದುವು ಅನುಪ್ರವಿಶದ್ಧ್ಯಾನಾನಲದಗ್ಧ ವಿಸ್ಫುರಜ್ಜೀವಕ ಕನಕಕಾಳಿಕೆಗಳವೋಲ್: **ಆದಿಪು,** ೯. ೯೫)

ಪವನಹತಿ – [ನಾ] ಗಾಳಿಯ ಹೊಡೆತ (ಕಾಳಾಂತ ಪವನಹತಿ ಕಲ್ಲೋಳವಿಳ ಜಳಧಿನಿನದಮೋ ನಿರ್ಘಾತಾಭೀಳತರ ರಭಸಮೋ ಲಯಕಾಳಾಂಬುದ ಘೋಷಮೋ ನೆಲಂ ಮೊಱಗಿದುದೋ: **ಆದಿಪು,** ೧೨. ೯೧)

ಪವನಾತ್ಮಜ – [ನಾ] ಭೀಮ (ಆಂತ ಸೈಂಧವನುಮಂ ಪವನಾತ್ಮಜಂ ಓಡೆ ಕಾದಿದಂ: **ಪಂಪಭಾ,** ೧೧.೯)

ಪವಮಾನಮಾರ್ಗ – [ನಾ] ವಾಯುಮಾರ್ಗ, ಆಕಾಶ (ಬಿಟ್ಟನಂ ಇಱಿಯೆನೆಂದು ಪವಮಾನಮಾರ್ಗದೊಳ್ ಅಲ್ಪಾಂತರದೊಳ್ ಗದೆಯಂ ಬೀಸುವಾಗಳ್: **ಪಂಪಭಾ,** ೧೩. ೯೫ ವ)

ಪವಮಾನಸೂನು – [ನಾ] ಮರುತನ ಮಗ, ಭೀಮ (ನಿನ್ನಯ ತಮ್ಮನ ನೆತ್ತರಂ ಭಯಂಗೊಳೆ ಪವಮಾನಸೂನು ತವೆ ಪೀರ್ದೆಡೆಯೊಳ್ ಕಲಿ ಕರ್ಣನೇಕೆ ಪೇೞ್ ಮಿಳಮಿಳ ನೋಡುತಿರ್ದಂ: **ಪಂಪಭಾ,** ೧೩. ೨೫)

ಪವಳ – [ನಾ] [ಪ್ರವಾಳ] ಹವಳ [ಬೆರಲೊಳ್ ಬೀಣೆಯ ತಂತಿಗಳ್ ಒರಸಿದ ಕೆಂಗಲೆಗಳ್ ಅಕ್ಷಮಾಲೆಯೊಳ್ ಎಸೆದಂತಿರೆ ಪೊಸೆಯೆ ಮುತ್ತು ಪವಳಂ ಬೆರಸಿದವೊಲಾಯ್ತು ಚೆನ್ನ ತಪಸಿಯ ಕೆಯ್ಯೊಳ್: **ಪಂಪಭಾ,** ೬. ೧೦)

ಪವಿತ್ರಗಾತ್ರ – [ನಾ] ಪಾವನಕರ ದೇಹದವನು (ನೀಂ ಬರೆ ಪೆಱತೇಂ ಕಂಸಾರೀ ಯುಷ್ಮತ್ ಪದಪಾಂಸುಗಳಿಂದೆ ಆಂ ಪವಿತ್ರಗಾತ್ರನೆಂ ಆದೆಂ: **ಪಂಪಭಾ,** ೯. ೩೨)

ಪವಿತ್ರಗೋತ್ರ – [ನಾ] ಪಾವನಕರವಾಗಿ ಮಾಡಿಕೊಂಡ ಗೋತ್ರವುಳ್ಳವನು (ಅಂತಪ್ಪೊಡೆ ಶ್ರೋತ್ರಿಯರುಂ ಕ್ಷತ್ರಿಯರುಂ ಪಱಿಗುಟ್ಟಿ ಪಶುಯಾಗಂಗೆಯ್ದು ಈ ಲೋಕದೊಳ್ ಪಾತ್ರೀಭೂತರುಂ ಪವಿತ್ರಗೋತ್ರರುಂ ಆಗಿ: **ಪಂಚತಂತ್ರ,** ೧೧೭ ವ)

ಪವಿತ್ರೀಕೃತ – [ಗು] ಪಾವನವಾಗಿ ಮಾಡಿದ (ಮಹಾಋಷಿಯ ತಳಿದ ಕನಕ ಕಮಂಡಲುವಿನ ತೀರ್ಥೋದಕಂಗಳಿಂದ ಅಯ್ವರುಂ ಪವಿತ್ರೀಕೃತ ಮಸ್ತಕರಾಗಿರ್ದು: **ಪಂಪಭಾ,** ೬. ೧೧ ವ)

ಪಶ್ಚಿಮನಿಷಾದಿ – [ನಾ] ಹಿಂದಿರುವ ಮಾವತಿಗ (ಅನ್ನೆಗಮಿತ್ತಂ ಯುವರಾಜನಾ ಬಗೆದಭಿನಿಷಾದಿಯುಮಂ ಪಶ್ಚಿಮನಿಷಾದಿಯುಮಂ ನಿಜವಿಜಯಸಿಂಧೂರಮಂ ತಿಣ್ಣಂ ನೂಕಲುಂ ಬೆಸಸಿ: **ಆದಿಪು,** ೧೪. ೯೮ ವ)

ಪಸದನ – [ನಾ] [ಪ್ರಸಾಧನ] ಅಲಂಕಾರ (ಬಾಳದಿನೇಶ ಬಿಂಬದೊಂದೆಸಕದಿಂ ಆ ದ್ವಿಜನ್ಮಸಭೆಯಂ ಪೊಱಮಟ್ಟೊಡೆ ಮಾಸಿದಂದಮುಂ ಪಸದನದಂತೆ ಕಣ್ಗೆಸೆದು ತೋಱಿದುದಾ ಕದನತ್ರಿಣೇತ್ರನಾ: **ಪಂಪಭಾ,** ೩. ೬೧)

ಪಸದನಂಗೊಳಿಸು – [ಕ್ರಿ] ಅಲಂಕಾರ ಮಾಡು (ವಿಳಾಸವತಿಯಂ ಪಸದನಂಗೊಳಿಸಲು ಲವಂಗಿಕೆಯಂ ಲವಂಗಪಲ್ಲವ ರಸದೊಳ್ ವಿಳಾಸಾವಾಸಭವನಮನುತ್ತರಿಸಲುಂ: **ಆದಿಪು,** ೭. ೨೧ ವ)

ಪಸದನದ ಬಸನಿ – [ನಾ] ಅಲಂಕಾರದ ಹುಚ್ಚುಳ್ಳವಳು (ಪೊಸಮಾವಿನ ಮಿಡಿಯೊಳ್ ಪಚ್ಚೆಸಾರಮಂ ಮಾಡುವಟ್ಟೆಯಿಂ ಮತ್ತೊರ್ವಳ್ ಪಸದನದ ಬಸನಿ ನಿಜಕರಕಿಸಲಯರುಚಿ ಪಸುರೊಳೆಸೆಯೆ ಮಿಡಿಯಂ ಕೊಯ್ದಳ್: **ಆದಿಪು,** ೧೧. ೧೦೧)

ಪಸರ – [ನಾ] ರಾಶಿ (ಪೊಸಹೂನ್ಯದ ಪಸರಮೆನಿಸಲಿದು ಮದನನ ಮಂಗಳಭವನಮೆನಿಸಲಿದು: **ಆದಿಪು,** ೩೦ ರಗಳೆ); [ನಾ] ಸಲಿಗೆ (ಎಂದು ನುಡಿದ ಗಾಂಗೇಯನ ನುಡಿಯೊಳವಸರಮಂ ಪಸರಮಂ ಪಡೆಯದೆ: **ಪಂಪಭಾ,** ೧, ೭೫ ವ); [ನಾ] ಅಂಗಡಿ (ಪಂಚರತುನದೊಳೆ ನೆಱಿದ ಪಸರದಿಂ ತೋರಣಂಗಳೊಳೆ ತೊಡರ್ದ ತಿಸರದಿಂ: **ಪಂಪಭಾ,** ೩. ೨೨)

ಪಸರಂಗೆಯ್ – [ಕ್ರಿ] ಹರಡು (ರಸಭಾವಾಭಿನಯಂಗಳಂ ಭುಜಲತಾಭ್ರೂಚಾಪನೇತ್ರೋತ್ಪಲ ಪ್ರಸರಂಗಳ್ ಪಸರಂಗೆಯ್ಯುತ್ತಿರೆ: **ಆದಿಪು,** ೭. ೧೨೩)

ಪಸರಂಬಡೆ – [ಕ್ರಿ] ಹರಡಿಕೊ, ಹಬ್ಬು (ಪಲ್ಲವಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು ತುಂಬಿಯೊಳ್ ಮಿಸುಗುವ ಕರ್ಪು: **ಆದಿಪು,** ೧. ೬೬)

ಪಸರಿಸು – [ಕ್ರಿ] ಹರಡು (ಎಯ್ದೆವಂದು ನೋಟ್ಪನ್ನೆಗಂ ಅಲ್ಲಿ ಪಸರಿಸಿದ ಚಿತ್ರಪಟಮಂ ಭೋಂಕೆನೆ ಕಂಡು: **ಆದಿಪು,** ೪. ೩ ವ); [ಕ್ರಿ] ಸಿಕ್ಕು ಬಿಡಿಸು (ಪಸರಿಸಿ ಪಂದಲೆಯಂ ಮೆಟ್ಟಿಸಿ ವೈರಿಯ ಪಣಿಗೆಯಿಂ ಬಾರ್ಚಿ ಪೊದಲ್ದೊಸಗೆಯಿನವನ ಕರುಳ್ಗಳೆ ಪೊಸವಾಸಿಗಮಾಗೆ ಕೃಷ್ಣೆಯಂ ಮುಡಿಯಿಸಿದಂ: **ಪಂಪಭಾ,** ೧೨. ೧೫೫)

ಪಸಲೆ – [ನಾ] ಹಸುರು ಹುಲ್ಲು, ಹುಲ್ಲುಗಾವಲು (ಅವರ್ಕೆ ತಾಮಗಾಗಿ ಪಚ್ಚೆಯ ಪಸಲೆಯ ಪಸುರನಸಕಱಿದು ನಿಮಿರ್ದ ನೆಲೆವಡಲಿಗೆಯ ಜಾಗಂಗಳುಮಂ: **ಆದಿಪು,** ೮. ೧೫ ವ)

ಪಸವಡು – ಆಸೆಪಡು (ಪೂತ ಸುರಯಿಯ ಮುಗುಳಂ ಪಸವಟ್ಟಂತೊರ್ವಳ್ ತನಗೆ ಸರಿಗೆಗಂ ಲಂಬಣಕ್ಕಮಟ್ಟೆಯೆ ಕೊಯ್ದಳ್: **ಆದಿಪು,** ೧೧. ೧೦೩)

ಪಸವು – [ನಾ] ಬಯಕೆ (ಪೊಸಪೂವಿನ ಪೊಸದುಡುಗೆಯ ಪಸವೋಡಿದುದಿಲ್ಲ ದಿವಿಜವನಿತೆಯರ್ಗಾಗಳ್: **ಆದಿಪು,** ೭. ೭೦); [ನಾ] ಕ್ಷಾಮ (ಇಂಚೆಯ ಪಸವಿನ ಬಱಿದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡೂರ್ಗಳ್: **ಪಂಪಭಾ,** ೮. ೫೧)

ಪಸವೋಡು – [ಕ್ರಿ] ಅತ್ಯಾಸೆ ಪೂರೈಸು (ಎನ್ನ ಕಣ್ಗಳ ಪಸವೋಡೆ ನೋಡಲಣಮೀಯದೆ ನೀಳ್ದ ಕುರುಳ್ ಮದೀಯ ಕೋಮಳೆಯ ಮುಖೇಂದುವಂ ಮಱಿಸಿದ ಅಂದಿನದೊಂದಟಲಿಂದಂ: **ಆದಿಪು,** ೧೨. ೩೦)

ಪಸಾದ – [ನಾ] ಪ್ರಸಾದ (ಜೀಯ ಪಸಾದಮೆಂಬುದುಂ ನೋಡಿದ ದೃಷ್ಟಿಗಳ್ಕಿ ಸುಗಿದಿರ್ಪುದುಂ ಆದಮೆ ಮಾನಭಂಗಮಂ ಮಾಡೆ: **ಪಂಪಭಾ,** ೬. ೧೬)

ಪಸಾಯ – [ನಾ] ಬಹುಮಾನ, ಉಡುಗೊರೆ (ಗಾಯಕರ್ ಪಲರುಂ ಬಂದುಣೆ ನೋಡಿಯುಂ ನುಡಿದುಂ ಅಟ್ಟುತ್ತುಂ ಪಸಾಯಂಗಳಂ: **ಆದಿಪು,** ೧೧. ೨೭)

ಪಸಿ – [ಗು] ಹಸಿಯಾದ, ತೇವವಿರುವ (ಸಮತ್ವೀಭಾವನಂ ಪ್ರೋಷಧವ್ರತಮೆಂದುಂ ಪಸಿಯೊಂದುಮಂ ಮುಟೆಯೆನೆಂಬೀ ಪೂಣ್ಕೆ ಮಾಡೆಂ: **ಆದಿಪು,** ೬. ೧೦); [ಗು] ಹೊಚ್ಚ ಹೊಸ (ಮಿಳಿರ್ವಸಿಯ ಪಸಿಯ ಪೊಸಬಾಸುಟ ಕರರುಹರೇಖೆ ತುಱುಗಿ ರತನಾಟ್ಯಪರಿಸ್ಖಲಿತಕ್ಕೆ ಮುಳಿದು ದಂಪತಿಗಳನಂಗಜನಟನೆ ಸೆಳೆದ ಬಾಸುಟೆವೆನಿಕುಂ: **ಆದಿಪು,** ೧೨. ೧೫)

ಪಸಿಗೆವರಿ – [ಕ್ರಿ] ಅಡ್ಡಾದಿಡ್ಡಿಯಾಗಿ ಓಡಾಡು (ತ್ರಿಪುಂಡ್ರಮಿಟ್ಟುಂ ಕೂಕಿಱಿದುಂ ತೇಗಿಯುಂ ಪಸಿಗೆವರಿದುಂ ಬವಳಿವರಿದುಂ ಬಾನಂಗುಳಿಗೆವರಿದುಂ ಸೂಟ್ಟರಿದುಂ ಆಡುವಾಗಳ್: **ಪಂಪಭಾ,** ೧೨. ೧೫೮ ವ)

ಪಸಿಯ ನೇತ್ರ – [ನಾ] ಒದ್ದೆ ಬಟ್ಟೆ (ತೊವಲ್ತು ಸೊಗಯಿಸುವ ಅಡವಿಗಳುಮಂ ಪಸಿಯ ನೇತ್ರಮಂ ಪಚ್ಚವಡಿಸಿದಂತೆ ಪಸುರ್ಪುವಡೆದ ನೆಲದೊಳ್: **ಪಂಪಭಾ,** ೭. ೨೫ ವ)

ಪಸಿವು – [ನಾ] ಹಸಿವು (ಓಡಲಿ ನಿಮ್ಮ ಮೆಯ್ಯ ಪಸಿವಾಂತ ವಿರೋಧಿಗಳ್ ಎನ್ನ ಕೈಯೊಳಟ್ಟಾಡುಗೆ ಕೊಳ್ಳಿಂ ಉಣ್ಣಿಂ ಎನೆ ಕೇಳ್ದು: **ಪಂಪಭಾ,** ೫. ೮೫)

ಪಸು – [ನಾ] ಹಸು (ಅಸಿತ ಇಂದೀವರಲೋಲಲೋಚನೆಯಂ ಅಂದು ಅಂತಾ ಸಭಾಮಧ್ಯದೊಳ್ ಪಸುವಂ ಮೋದುವವೋಲೆ ಮೋದೆಯುಂ: **ಪಂಪಭಾ,** ೭. ೫೮)

ಪಸುಂಬೆ – [ನಾ] ಎರಡು ಓಡಲ ಹಸಿಬೆ ಚೀಲ (ಬಿಸುನೆತ್ತರ್ ನೆಣಂ ಅಡಗು ಎಲ್ವು ಸಮಸ್ತಂ ಸುರಿಯೆ ಕೈಗೆ ತೊವಲ್ ಉಟೆಯಲ್ ಅಗುರ್ವಿಸಿದುದು ತೀವಿದ ಗುಳ್ಳೆಯ ಪಸುಂಬೆಯಂ ಸೋರ್ಚಿದಂತೆ ತನು ಕೀಚಕನಾ: **ಪಂಪಭಾ,** ೮. ೭೭);

ಪಸುಗೂಸು – [ನಾ] ಎಳೆಯ ಮಗು, ಹಸುಗೂಸು (ಪಸರಿಸೆ ಜರಾಯುಪಟಲಂ ಪಸುಗೂಸುಗಳೊಡಲೊಳವನಗಲ್ಚುವ ಮತಿಯಂ ವಸುಮತಿಗಱಿಪಿ: **ಆದಿಪು,** ೬. ೬೫)

ಪಸುಗೆ – [ನಾ] ಪಾಲು (ಮಾತಿನ ಪಸುಗೆ ಪಸುಗೆವಡೆದತ್ತೆನೆ ನುಡಿದಂ ಮಧುರಮೃದುಗಭೀರಧ್ವನಿಯಿಂ: **ಆದಿಪು,** ೨. ೧೦); [ನಾ] ಹಂಚಿಕೆ (ಭಾವದನುಭಾವದೆಸೆವ ವಿಭಾವದ ಪಸುಗೆಗಳೊಳೊಸರ್ವ ರಸದಭಿನಯಮಂ ಭಾವಿಸುವೊಡೆ: **ಆದಿಪು,** ೯. ೨೭); [ನಾ] ವಿವೇಕ (ಎಂದು ಯುಧಿಷ್ಠಿರಂ ಪಾಟೆಯ ಪಸುಗೆಯನಱಿದು ನುಡಿದೊಡೆ: **ಪಂಪಭಾ,** ೭. ೩೬ ವ); [ನಾ] ವಿಭಾಗ (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ: **ಪಂಪಭಾ,** ೧೦. ೭೭)

ಪಸುಗೆವಡೆ – [ಕ್ರಿ] ವಿವೇಕದಿಂದ ಕೂಡು (ಮಾತಿನ ಪಸುಗೆ ಪಸುಗೆವಡೆದತ್ತೆನೆ ನುಡಿದಂ ಮಧುರಮೃದು ಗಭೀರಧ್ವನಿಯಿಂ: **ಆದಿಪು,** ೨. ೧೦

ಪಸುರ್ತ – [ಗು] ಹಸುರಾದ (ಪೊಳೆವ ಅಮರೇಂದ್ರಗೋಪದ ಪಸುರ್ತ ಎಳೆವುಲ್ಲಳ ತಳ್ತ ಕಾರ್ಮುಗಿಲ್ಗಳ್: **ಪಂಪಭಾ,** ೭. ೨೫)

ಪಸುರ್ನನೆ – [ನಾ] ಹಸುರು ಮೊಗ್ಗು, ಎಳಮೊಗ್ಗು (ಪೊಸತಲರ್ದ ಕೊಸಗು ತಳಿವೋದ ಅಸುಗೆ ಪಸುರ್ನನೆಯೊಳಿಡಿದ ಮಲ್ಲಿಗೆ ನನೆಯಿಂ ಮುಸುಕಿದ ತಳಿರಂ ಪೇಱಿದ ಪೊಸಮಾವುಗಳಿಂ: **ಆದಿಪು,** ೧೧. ೮೫)

ಪಸುರ್ಪು – [ನಾ] ಹಸಿರು ಬಣ್ಣ (ಪೊನಲ್ಗಳ ಕೆಂಪು ಪಸುರ್ಪು ಕರ್ಪು ಬೆಳ್ಪು ಒಳಕೊಳೆ ಶಕ್ರಕಾರ್ಮುಕವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ,** ೭. ೨೫)

ಪಸುರ್ಪುವಡೆ – [ಕ್ರಿ] ಹಸುರು ಬಣ್ಣವನ್ನು ತಾಳು (ಪಸಿಯ ನೇತ್ರಮಂ ಪಚ್ಚಡಿಸುವಂತೆ ಪಸುರ್ಪುವಡೆದ ನೆಲದೊಳ್ ಪದ್ಮರಾಗದ ಪರಲ್ಗಳಂ ಬಲಿಗೆದಱಿದಂತೆ: **ಪಂಪಭಾ,** ೭. ೨೫ ವ)

ಪಸುರ್ಮಣಿ – [ನಾ] ಹಸುರುಮಣಿ (ನಿಜರಥತುರಗ ದಿವ್ಯಾಸ್ತ್ರಂಗಳುಟಿಯೆ ಪಸುರ್ಮಣಿಯನಪ್ಪೊಡಂ ಉಟಿಯದಂತು ಚಾಗಂಗೆಯ್ದು: **ಪಂಪಭಾ,** ೧೨. ೧೦೮ ವ)

ಪಸುರ್ವಂದರ್ – [ನಾ] ಹಸಿರು ಚಪ್ಪರ (ಪಸೆಯಂ ಪಸುರ್ವಂದರಮಂ ಪೊಸಯಿಸಿ ಕನ್ನೆಯರನಾನಕಧ್ವನಿ ದೆಸೆಯೊಳ್ ಪಸರಿಸೆ: **ಆದಿಪು,** ೯. ೧೨೭)

ಪಸುರ್ವಂದಲ್ – [ನಾ] ಹಸಿರು ಚಪ್ಪರ (ತಳಿರ್ಗಳಸಂ ಮುಕುಂದ ರವಂ ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಙ್ಕ್ತಿ ಪಸುರ್ವಂದಲೊಳ್ ಒಲ್ದು ಎಡೆಯಾಡುವ ಎಯ್ದೆಯರ್: **ಪಂಪಭಾ,** ೧. ೧೦೭)

ಪಸೆ – [ನಾ] ಹಸೆ (ಕುಸುಮದೆಸಳ ಮಿಸುಗುವ ಪೊಸವಸೆಯೊಳ್ ಅಸದಳಮೆಸೆಯೆ ಪಸರಿಸಿ ಪೊಸಯಿಸಿದ ಪೊಸಸುಸಿಲ ಮಸಕದ ಬಸದೊಳೆ: **ಆದಿಪು,** ४. ೧೨ ವ)

ಪಳಂಚಲೆ – [ಕ್ರಿ] ಮೀರಿಸು (ಅಮರಕಾಂತೆಯರೆಲ್ಲರಂ ಪಳಂಚಲೆಯೆ ನೆಗಟ್ತೆವೆತ್ತ ಪತಿಭಕ್ತಿಯ ಮೈಮೆಯ ಮಾನಸಿಕ್ಕೆಯಗ್ಗಲದ ಪೊಗಟ್ತೆ: **ಆದಿಪು,** ೧. ೭೨); [ಕ್ರಿ] ಮುಟ್ಟು, ತಲುಪು (ಈ ನಿಜತನೂಜೆಯಂ ಉತ್ಸವಮಂಗಳಾನಕಧ್ವನಿ ದೆಸೆಯಂ ಪಳಂಚಲೆವಿನಂ ನೆರಪೀಗಳೆ ವಜ್ರಜಂಘನೊಳ್: **ಆದಿಪು,** ४. ೨೬); [ಕ್ರಿ] ಅಲ್ಲಾಡು, ಅಲುಗಾಡು (ಇಂಬಾಗಿರ್ದ ನೆಲೆವೊಟ್ಟುಂ ನೆಲೆವೊಟ್ಟಿನೊಳೊಟ್ಟೈಸಿ ಪಳಂಚಲೆವ ಕುರುಳೋಳಿಯುಂ: **ಆದಿಪು,** ४. ४೧ ವ); ತಾಗು, ಅಪ್ಪಳಿಸು (ಸೀಮಾವಿವಾದದಿಂ ತದ್ಭೂಮಿಜರೋರೊರ್ವರಂ ಪಳಂಚಲೆವೆಡೆಯೊಳ್ ಸೀಮೆಗಳ ತೊಡರನುಡುಗಿಸಿ ಸೀಮಂಕರನೆಂಬುದೊಂದು ಪೆಸರಂ ಪಡೆದಂ: **ಆದಿಪು,** ೬. ೫೭); [ಕ್ರಿ] ಸುಳಿದಾಡು, ಕಾಣಿಸಿಕೊ (ಮೇಲೆ ವಾಯ್ದು ಬಯ್ದು ಅನುವಿಸಿ ಕಾಡಿ ನೋಡಿ ತಿಳಿದಟ್ಟಿಱಿನಿಟ್ಟುಳಿಗೊಂಡ ಅಲಂಪುಗಳ್ ಕನಸಿನೊಳಂ ಪಳಂಚಲೆವುವೆನ್ನೆರ್ದೆಯೊಳ್: **ಪಂಪಭಾ,** ४. ೧೦೬); [ಕ್ರಿ] ಬೀಗು, ಗರ್ವಿಸು (ಭಾರತಂ ಕಲಹಂ ಇದಿರ್ಚುವಂ ಹರಿಗಂ ಅಪ್ಪೊಡೆ ಮೊಕ್ಕಳಮೇಕೆ ನೀಂ ಪಳಂಚಲೆದಪೆಯಣ್ಣ ಸೂಟ್ಟಿಡೆಯಲಪ್ಪುದು ಕಾಣ ಮಹಾಜಿರಂಗದೊಳ್: **ಪಂಪಭಾ,** ೧೦. ೨೩)

ಪಳಂಚು – [ಕ್ರಿ] ಉಜ್ವಲವಾಗು (ನಿರುಪಮದೇಹ ದೀಪ್ತಿಗಳೊಳೆಕ್ಕೆಯಿನೆಯ್ದೆ ಪಳಂಚಿ ಮಿಂಚುವಾ ಮಿಂಚು: **ಆದಿಪು,** ೨. ೫); [ಕ್ರಿ] ತಾಗು, ಸಂಘಟ್ಟಿಸು (ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಱುಗಲ್ಗಳೊಳ್ ಪಳಂಚದೆ ಗಗನಂಬರಂ ನೆಗೆದು ಸೂಸುವ ಬಾಹುಪರಿಭ್ರಮಂಗಳೊಳ್ ಬೆದಱದೆ: **ಆದಿಪು,** ೭. ೧೨೫); [ಕ್ರಿ] ಗಟ್ಟಿಸು (ಪಿಂಗಾಕ್ಷ ನೀನೇಕೆ ಮಿಳ್ಮಿಳ ನೋಡುತ್ತ ಉಳನೆ

ಇರ್ದ ಎಂದು ಅದಟರಂ ಭೀಮಂ ಪಳಂಚಟ್ಟಿದಂ: **ಪಂಪಭಾ,** ೧೨. ೧೫೦);

ಪಳಚ್ಚನೆ – [ಅ] ಹೊಳಪಿನಿಂದ ಕೂಡಿ (ಆತನ ತೀವ್ರಪ್ರತಾಪಮೆ ತನ್ನೊಳ್ ಸಂಕಮಿಸಿದಂತೆ ದಿನಕಿರಣಂಗಳೊಳ್ ಪಳಚ್ಚನಪ್ಪ ಪೊಳೆಪುಂ: **ಆದಿಪು,** ೧೧. ೫ ವ)

ಪಳಬದ್ದ – [ನಾ] ಪಡೆದ ಪ್ರಯೋಜನ ಅಥವಾ ನೆರವು (ಪಟಿವೆಗಂ ಪಾಗುಡಕ್ಕಂ ಪಳಬದ್ದಕ್ಕಂ .. .. ವೈವಾಹಿಕಸಂಬಂಧಕ್ಕಂ ಮೈತ್ರಕ್ಕಂ .. .. ಮಹಾನದಿಗಳ್ ಕೂಡುವಂತೆ: **ಪಂಪಭಾ,** ೯. ೯೫ ವ)

ಪಳಯಿಸು – [ಕ್ರಿ] [ಪ್ರಲಾಪಿಸು] ಸಲ್ಲದ ರೀತಿಯಲ್ಲಿ ಹೊಗಳು (ಕುಳಬಳಧೈರ್ಯಶೌರ್ಯಯುತರೆಲ್ಲರುಮಂ ಪೆಱಗಿಕ್ಕಿ ಕರ್ಣನಂ ಪಳಯಿಸುತಿರ್ಪೆಯೇನೊ ಗಳ: **ಪಂಪಭಾ,** ೧೩. ೨೫)

ಪಳಾಳ – [ನಾ] [ಪಲಾಲ] ಹುಲ್ಲುಕಡ್ಡಿ (ನಮಗಿದು ಪಳಾಳಭಾರಂಬೊಲೀ ಮಹೀತಳಭಾರಂ: **ಆದಿಪು,** ೧೪ ೩೩); ಪೊಳ್ಳು ಮಾತು (ಒಳಗಜೆಯದೆ ಪೊಱಗಱಯದೆ ಪಳಾಳಮಂ ನುಡಿವ ನಿಮ್ಮ ನುಡಿಗೆಮಗೀಗಳ್ ಮುಳಿಯಲೆಡೆಯಿಲ್ಲ: **ಆದಿಪು,** ೯. ೧೦೫); [ನಾ] ಪೊಳ್ಳು ಕೆಲಸ, ಆಗದ ಮಾತು (ಗಾಳು ಗೊರವಂ ತಗುಳ್ಚಿ ಪಳಾಳಮಂ ಏನೊಂದನಪ್ಪೊಡಂ ಗಟಿಪಿದೊಡೆ ಆ ಬೇಳುನುಡಿ ಕೇಳ್ದು ಕೆಮ್ಮನೆ ಬೇಳಲ್: **ಪಂಪಭಾ,** ೬. ೨೪)

ಪಳಾಳಭಾರ – [ನಾ] ಹೊಟ್ಟಿನ ಹೊರೆ, ವ್ಯರ್ಥವಾದ ಭಾರ (ನಮಗಿದು ಪಳಾಳಭಾರಂಬೊಲೀ ಮಹೀತಳಭಾರಂ: **ಆದಿಪು,** ೧೪. ೩೩)

ಪಳಿಕು – [ನಾ] ಸ್ಫಟಿಕ (ಪಳಿಕಿನ ಕೊಡದೊಳ್ ಸೊಡರ್ಗುಡಿ ಬೆಳಗುವವೊಲ್ ಶುದ್ಧಗರ್ಭಗೃಹದೊಳ್: **ಆದಿಪು,** ೭. ೩೩)

ಪಳಿತ – [ನಾ] ನರೆತ ಕೂದಲು (ಪಳಿತಂಗಳಂ ದರ್ಪಣದಲ್ನೋಡಿ ಕಂಡು ಪರಪತಾಕಿನೀಪತಾಕೆಯಂ ಕಂಡು ಸೆರಗಿಲ್ಲದ ಗಂಡನಂತಿನಿಸಪ್ಪೊಡಂ; **ಆದಿಪು,** ೧. ೭೯ ವ); [ನಾ] ಒಂದು ಕಾಲಮಾನ, ಬಹು ದೀರ್ಘ ಕಾಲ (ತನ್ನಯ ದೇವಿಯರ್ ಪಲರ್ ಕಟಿವಿನಂ ಆಯುರಬ್ಧಿಯೊಳ್ ಅನುಕ್ರಮದಿಂ ಪಳಿತೋಪಮಂಗಳ್ ಅಯ್ದುಟಿವಿನಂ: **ಆದಿಪು,** ೨. ೭೨)

ಪಳಿಹಸ್ತ – [ನಾ] ಆನೆಯ ಸೊಂಡಿಲಿನ ಸ್ಥೂಲಹಸ್ತವೆಂಬ ಭಾಗದ ನಡುವಿನ ಅಂಗ (ಸುಸಂಚಿತ ಪ್ರೋಹ ಪಳಿಹಸ್ತಗಾತ್ರನುಂ ಪರಿಪೂರ್ಣಶ್ಲಿಷ್ಟಪಾರ್ಷ್ಣಿಯುಂ: **ಆದಿಪು,** ೧೨. ೫೬ ವ)

ಪಳುಕಿನ ಪಾಪೆ – [ನಾ] ಸ್ಫಟಿಕದ ಬೊಂಬೆ (ಪಳುಕಿನ ಪಾಪೆಯನಮರ್ದಿಂ ತೊಳೆದಂತೊರ್ಮೊಟಿದ ದಿವ್ಯವಪು ಮಣಿಮಯಕುಂಡಳ ಮಕುಟಕಟಕ ಭೂಷಣವಿಳಾಸದಿನೇಂ ವಿಳಾಸಮಂ ತಾಳ್ದುದೋ: **ಆದಿಪು,** ೬. ೩೯)

ಪಳುಕು – [ನಾ] ಸ್ಫಟಿಕ (ಇಂದ್ರನೀಲದ ಭದ್ರದೊಳಂ ಕರ್ಕೇತನದ ಜಾಳರಿಗೆಯೊಳಂ ಪಳುಕಿನ ಚಿತ್ರಭಿತ್ತಿಯೊಳಂ ವಿವಾಹಗೇಹಮಂ ಸಮೆಯಿಸಿ: **ಪಂಪಭಾ,** ೩. ೩೪ ವ)

ಪಳ್ಕು – [ನಾ] ಹರಳು (ಸೌಧದೊಳೆ ಕೆದಱಿದ ಕಪ್ಪುರವಳ್ಕುಗಳೆಸೆಯೆ ಸಯಂಬರಸಾಲೆಯನೆಸೆವ ಲೀಲೆಯಿಂ ಪುಗುತಂದಳ್: **ಪಂಪಭಾ,** ೩. ೪೯)

ಪಳ್ಳಿರು – [ಕ್ರಿ] ಮಲಗು, ಆಶ್ರಯಿಸು (ಪಳ್ಳಿರಲ್ಕೆ ಎಂದವರ್ಗೀವುದು ಒಳ್ಪು ನಿಲೆ ಕಂಚಿ ನೆಗಟ್ತೆಯ ವಾರಣಾಸಿ ಕಾಕಂದಿ ಕುರುಸ್ಥಳಂ ವರ ವಕ್ಷಸ್ಥಳಮೆಂಬಿವನಯ್ದು ಬಾಡಮಂ: **ಪಂಪಭಾ,** ೯. ೪೩)

ಪಳ್ಳಿವೋಗು – [ಕ್ರಿ] [ಹಳ್ಳಿಯೇ] ಗುಂಪಾಗಿ ಗುಳೆ ಹೋಗು (ವನಜಾನೀಕಮೆ ಪಳ್ಳಿವೋಪ ತೆಱದಿಂ ಕಿಟ್ಟಿರ್ದು ಭೂಪಂ ತಪೋವನಮಂ ಪುತ್ರಕಳತ್ರಮಿತ್ರಸಹಿತಂ ಪೊಕ್ಕಂ: **ಆದಿಪು,** ೪. ೮೩)

ಪಱ – [ಕ್ರಿ] ಹರಿದುಹೋಗು (ಸೊರ್ಕಿದಾನೆಗೆ ಪಱವಂತಿರೆ ಇಂದು ಪಱದತ್ತು ಎನಗಂ ನಿನಗಂ ತಳೋದರೀ: **ಆದಿಪು,** ೧೨. ೩೭); [ಕ್ರಿ] ಸೀಳು (ಪಾಱುವ ವಿಮಾನದೊಂದಳ್ಳೆಱಂ ಪಱದುಗುವ ಮುಗಿಲ ನೀರ್ಗಳ ಪಲವುಂ ಪೀಱುಗಳೊಳ್ ಎಳಸಿ: **ಆದಿಪು,** ೪. ೮೭); [ಕ್ರಿ] ಕೀಳು (ಮನದ ಪರಿಚ್ಛೇದದಿನಂದು ನಮಸ್ಸಿದ್ಧೇಭ್ಯ ಎಂದು ಕರ್ಮಂಗಳ ಬೇರನೆ ಪಱವ ತೆಱದೆ ಪಱದಂ ಮನಸ್ವಿ ಚಲದಳಿವಿನೀಳಕೇಶಾವಳಿಯಂ: **ಆದಿಪು,** ೯. ೭೭); [ಕ್ರಿ] ಕಳಚು (ಉಡೆವಣಿ ಪಱಯದ ಮುನ್ನಮೆ ತೊಡಗಿ ಚಲಂ ನೆಗಟಿ ರಿಪುಬಲಂಗಳನೆ ಪಡಲ್ವಡಿಸಿ ಪರಬಲದ ನೆತ್ತರ ಕಡಲೊಳಗಣ ಜಿಗುಳೆ ಬಳೆವ ತೆಱದೊಳೆ ಬಳೆದಂ; **ಪಂಪಭಾ,** ೧. ೪೬)

ಪಱದು ಪಚ್ಚು – [ಕ್ರಿ] ಹರಿಹಂಚಾಗಿ ಮಾಡು (ನರಶರಘಾತದಿಂ ಪಱದು ಪಚ್ಚಿಸಿದಂತೆವೊಲಿರ್ದ ಮೆಯ್: **ಪಂಪಭಾ,** ೧೩. ೫೮)

ಪಱಿಪಡಿನುಡಿ – [ಕ್ರಿ] ಖಂಡತುಂಡವಾಗಿ ಮಾತಾಡು (ಎಂದು ಪಱಪಡಿ ನುಡಿದು ಗೆಂಟಾದಂ: **ಆದಿಪು,** ೧೨. ೩೭ ವ)

ಪಱಪಡು – [ಕ್ರಿ] ಕತ್ತರಿಸಿ ಹೋಗು (ಕೊಟ್ಟಸುಗಟ್ಟುಗಳಿಂದಂ ತೊಟ್ಟನೆ ಪಱಪಟ್ಟು ಬೀಟ್ಟವೊಲ್ ಬಿರ್ದು: **ಆದಿಪು,** ೫. ೮೪); [ಕ್ರಿ] ನಡುವೆ ನಿಲ್ಲು, ಮುಗಿದು ಹೋಗು (ನುಡಿಯಿಸಿ ಕೇಳ್ಗುಂ ಹರಿಗನ ಪಡೆಮಾತನೆ ಮಾತು ತಪ್ಪೊಡಂ ಮತ್ತಮದಂ ನುಡಿಯಿಸುಗುಂ ಮೊದಲಿಂದಾ ನುಡಿ ಪಱಪಡೆ ಮುಳಿದು ನೋಡುಗುಂ ಕೆಳದಿಯರಂ: **ಪಂಪಭಾ,** ೪. ೫೬); [ಕ್ರಿ] ಸಂಬಂಧ ಕಡಿದು ಹೋದ (ಪಱಪಟ್ಟ ಪಗೆವರಂ ನೆಱ ಪಱಪಡಲಣಮೀಯದವರಂ ಅವರ್ಗಳ ಬಾಟಿಯೊಳ್ ನಿಱಸಲ್ ಬಗೆದೈ: **ಪಂಪಭಾ,** ೯. ೪೫); [ಕ್ರಿ] ಖಂಡಿತವಾಗು, ನಿರ್ಣಾಯಕವಾಗು (ಪಱಪಡದಾಯ್ತು ಭಾರತಂ ಇವಂದಿರ ಕಾರಣದಿಂದಿವಂದಿರಂ ಪಱಪಡೆ ಕೊಂದು ಕರ್ಣನೊಳೆ ಕಾದಲೆವೇಟ್ಟುಂ ಅಮೋಘಂ: **ಪಂಪಭಾ,** ೧೨. ೧೧೨)

ಪಱಮಱಯಾಗು – [ಕ್ರಿ] ಸಡಗರಗೊಳ್ಳು (ನಾಳೆ ಸಯಂಬರಮನೆ ಪಾಂಚಾಳ ಮಹೀಪಾಳಂ ಅಖಿಳ ಭೂಭೃತ್ ನಿಕರಕ್ಕೆ ಓಳಿಯೆ ಸಾಱದೊಡೆ ಅವನೀಪಾಲರ್ ಕೆಯ್ಗೆಯ್ಯಲೆಂದು ಪಱಮಱಯಾದರ್: **ಪಂಪಭಾ,** ೩. ೪೨)

ಪಱಯಿಸು – [ಕ್ರಿ] [ಪಱ+ಇಸು] ಹರಿಯುವಂತೆ ಬಾಣಪ್ರಯೋಗಿಸು (ಒಂದೆ ಶರದಿಂ ಶಿರಮಂ ಪಱಯೆಚ್ಚೊಡೆ ಆತಂ ಒತ್ತಂಬದಿಂ ಆಂತೊಡೆ ಆಂ ಬಱದೆ ತಪ್ಪಿದೆಂ ಎಂದು ಕಿರೀಟಿ: **ಪಂಪಭಾ,** ೧೧. ೭೯)

ಪಱೆಯೆ ನುಡಿ – [ಕ್ರಿ] ಖಂಡತುಂಡವಾಗಿ ಮಾತಾಡು (ಮುದುಗಣ್ಗಳಾಗಿ ನಿಮ್ಮಂತು ಪಱೆಯೆ ನುಡಿವರುಮೊಳರೇ: **ಆದಿಪು**, ೯. ೧೦೫)

ಪಱಿ – [ನಾ] ಹರೆ, ಭೇರಿ (ಎನಿತಾನುಂ ಪಱಿಗಳ್ ಘನನಿನದಮನನುಕರಿಸೆ ಮನದೊಳೊದವಿದಲಂಪಿಂ: **ಆದಿಪು**, ೭. ೧೦೪)

ಪಱಿಪಡು – [ಕ್ರಿ] ನಿಂತುಹೋಗು (ಇನಿಯಂ ಮಱಸೊಂದಿದನೋ ಬಱಲ್ದನೋ ಎಂದು ಪಱಿಪಟ್ಟ ಸುಯ್ಯುಮಂ ಕೋಡುವ ಮೆಯ್ಯುಮಂ ಕಂಡು ಪರಲೋಕಪ್ರಾಪ್ತನಾದುದನಱೆತು: **ಪಂಪಭಾ,** ೨. ೧೯ ಮತ್ತು ೨. ೧೯ ವ)

ಪೞದು – [ಗು] ಹಳೆಯದು (ಪೊಸತುಂ ಪೞದುಮನಱೆದು ಪರಿಯಿಸಲ್ ನೀನೆ ಬಲ್ಲೆ: **ಪಂಪಭಾ**, ೫. ೪೬ ವ)

ಪೞನವಿರಿಕ್ಕು – [ಕ್ರಿ] ಹಳೆಯ ಕೂದಲನ್ನು ಬೀಳಿಸಿಕೊ, ಹೊಸದಾಗು (ಸುಟೆಯದು ಗಾಳಿ ಮೃಗಂ ಕೆಯ್ವೞೆಗಳ ಮೇತದೊಳ್ ತಣಿದಪುವು ಪಂದಿಗಳುಂ ಪೞನನವಿರಿದುಕ್ಕಿದುವು ಆದಂ ಪೞು ಪರಿದಾಡಲ್ ಕರಂ ಬೆಡಂಗವನಿಪತೀ: **ಪಂಪಭಾ**, ೫. ೩೮)

ಪೞಯಿಗೆ – [ನಾ] ಧ್ವಜ, ಬಾವುಟ (ಧನು ಕಾಮಂಗಿಕ್ಷುದಂಡಂ ಪೞಯಿಗೆ ಮಕರಂ ಬಾಣಸಂಘಾತಮಚ್ಚಂ ನನೆಯಂಬೀ ಚಿಹ್ನಮಿಲ್ಲೆಂಬನಿತೆ ಮನಸಿಜಾಕಾರಂ: **ಆದಿಪು**, ೩. ೯೧)

ಪೞಯಿಸು – [ಕ್ರಿ] [ಪ್ರಲಾಪಿಸು] ಶೋಕಿಸು (ನಿಚ್ಚಂ ನೆನೆವೋ ನೀನಾರ್ಗೆ ನಿನ್ನಂ ಪೞಯಿಸುವವರಾರ್ಗೆ ಏಕೆ ಶೋಕಿಪ್ಪೆ: **ಆದಿಪು**, ೩. ೫೫)

ಪೞವ – [ನಾ] ಕಾಡು (ತಮ್ಮೊಡನೆ ನಲಿದಾಡುವ ಕಿಶೋರಕೇಸರಿಗಳಂ ತೆಗೆವ ಕರಿಕಳಭಂಗಳುಮಂ ಆ ಪೞವಂಗಳಿಂದೆ ಪಾಯ್ವ ಪುಲಿಗಳ ಮಱೆಗಳೊಳ್ ಪರಿದಾಡುವ ತರುಣ ಹರಿಣಂಗಳುಮಂ: **ಪಂಪಭಾ**, ೧. ೧೧೫ ವ) ["ಇಲ್ಲಿ ಪೞುಗಳಿಂದೆ ಎಂಬ ಪಾಠವಿರಬಹುದು" – ಡಿಎಲ್‌ಎನ್]

ಪೞವಾಡ – [ನಾ] ಕುಗ್ರಾಮ (ಪೞವಾಡಯ್ದನೆ ಬೇಡೆಯುಂ ಕುಡದ ನಾನೇನೆಂದು ಸಂಧಾನಮಂ ಗಱೆಯಿಪ್ಪೆಂ: **ಪಂಪಭಾ,** ೧೩. ೨೪)

ಪೞವಿಗೆ – [ನಾ] ಧ್ವಜ, ಬಾವುಟ (ಇಸೆ ಮಸಗಿ ಭೀಮಂ ಈರಯ್ದು ಶಿತಾಸ್ತ್ರದಿಂ ಉರುಳೆ ಸೂತಂ ಉಡಿಯೆ ರಥಂ ಕೀಲಿಸೆ ಕುದುರೆ ಮುಱೆಯೆ ಪೞವಿಗೆ ಮಸಕದಿಂ ಎಚ್ಚೆಚ್ಚಂ ಒಂದೆ ಸರಲೊಳ್ ನೊಸಲಂ: **ಪಂಪಭಾ**, ೧೦. ೯೯)

ಪೞವೆ – [ನಾ] ಹಳಮೆ, ಹಳೆತನ, ಬಹುಕಾಲದ ನಂಟು (ಪೞವೆಗಂ ಪಾಗುಡಕ್ಕಂ ಪಳಬದ್ದಕ್ಕಂ .. .. ವೈವಾಹಿಕಸಂಬಂಧಕ್ಕಂ ಮೈತ್ರಕ್ಕಂ .. .. ಮಹಾನದಿಗಳ್ ಕೂಡುವಂತೆ: **ಪಂಪಭಾ**, ೯. ೯೫ ವ)

ಪೞೆ – [ಕ್ರಿ] ಬೈಯು, ದೂಷಿಸು (ಪಾಪಿಯುಂ ಅತಿಕ್ರೂರಾತ್ಮನುಂ ಸಾಧುಸಂಕುಳಮಂ ಕಂಡೊಡೆ ಕಾಯ್ವನುಂ ಪೞೆವನುಂ ಧರ್ಮಕೃತಿದ್ರೋಹನುಂ: **ಆದಿಪು**, ೫. ೮೧); [ನಾ] ದೂಷಣೆ (ಹೀನಬಲನನಧಿಕಬಲಂ ತೊತ್ತಳದುೞದನೆಂಬ ಲೋಕದ ಪೞೆ ಪೊರ್ದದೆ ಮಾಣೆ: **ಆದಿಪು**, ೧೪. ೧೦೨); [ನಾ] ವಸ್ತ್ರ, ಬಟ್ಟೆ (ಕಂಬಂಗಳೊಳೆಲ್ಲಂ ಸುಯ್ಯಾಣದ ಚಿನ್ನದ ಪೞೆಯ ಸಕಳವಟ್ಟೆಗಳಂ ಸುತ್ತಿಸಿ: **ಪಂಪಭಾ,** ೩. ೪೦ ವ)

ಪೞೆಕೆಯ್ – [ಕ್ರಿ] ಅಲ್ಲಗಳೆ (ಅೞೆಪದೆ ಪದಗೞೆಪದೆ ಪೊಂಪುೞೆವೋಗೆ ಯಶಃಪ್ರಕಾಶಂ ಈಗಳೆ ಧರೆಯಂ ಪೞೆಕೆಯ್ದು: **ಆದಿಪು**, ४. ८೭); [ಕ್ರಿ] ನಿಂದನೆ ಮಾಡು (ಮತ್ತಮೊಂದೆಡೆಯೊಳ್ ಪೞೆಕೆಯ್ದು ಬಂದು ನಲ್ಲಳ ಮುಳಿಸನೊಳಕೊಂಡು ಮುಖಮಂ ಮುಗುಳ್ನಗೆವೆರಸು ನುಡಿದು ಗೆಂಟಾದಂ: **ಆದಿಪು**, ೧೨. ೨೮ ವ)

ಪೞೆಗಾಳೆಗ – [ನಾ] ಬೈಗುಳದ ಯುದ್ಧ (ಎಂದು ಕಿಱೆದಾನುಂ ಬೇಗಂ ಅಱಿಮರುಳಾದಂತಾ ಲತೆಯೊಳ್ ಪೞೆಗಾಳೆಗಂಗಾದಿ ಬರೆವರೆ: **ಪಂಪಭಾ,** ೫. ೧೨ ವ)

ಪೞೆಯತ – [ನಾ] ಬಟ್ಟೆಯ ಕೆಲಸ (ಪೞೆ ಚಿತ್ರಾವಳಿ ಜೋನೆಗವಱೆಯಂ ದೇವಾಂಗಮೆಂಬ ವಸನಂಗಳನೇಂ ಮಡಿವಳ್ಳನ ಪೞೆಯತನನೆ ಪೋಲ್ತು ವಿಶದ ವಸನಾಂಗಕುಜಂ: **ಆದಿಪು**, ೫. ೩೪)

ಪೞು – [ನಾ] ಕಾಡು (ಸುಟೆಯದು ಗಾಳಿ ಮೃಗಂ ಕೆಯ್ವೞೆಗಳ ಮೇತದೊಳೆ ತಣಿದಪುವು ಪಂದಿಗಳುಂ ಪೞನವಿರ್ ಇಕ್ಕಿದುವು ಆದಂ ಪೞು ಪರಿದಾಡಲ್ ಕರಂ ಬೆಡಂಗವನಿಪತೀ: **ಪಂಪಭಾ**, ೫. ೩೮)

ಪೞುವಗೆ – [ನಾ] [ಪೞು+ಬಗೆ] ಕಾಡು ಬುದ್ಧಿ, ದುಷ್ಟ ಯೋಚನೆ (ಆನರಸುಗೆಯ್ವ ಪೞುವಗೆಯನದಂ ಪರಿಹರಿಸಿದೆಂ ಆತನಂ ಈ ಕಿರೀಟಿ ಗೆಲ್ದು ಎನಗೆ ಪಟ್ಟವಂ ಮಾಡುವನೇ: **ಪಂಪಭಾ,** ೧೨. ೧೨೯)

ಪೞುವಟೆ – [ನಾ] [ಪೞು+ಬಟೆ] ಕಾಡು ದಾರಿ (ಮತ್ತಮೊಂದೆಡೆಯೊಳ್ ಪೞುವಟೆಯ ಬೇಟದ ತೋಟಿಯಂ ತೊಡರ್ದಟ್ಟುವೆತ್ತ ಪೊಲವುಲ್ಲೆ ಅಳ್ಳೆವಿಳ್ಳೆಯಾದ ಮಾತಂ: **ಆದಿಪು**, ೧೨. ೨೮ ವ)

ಪಾಂಗಾಗು – ಹೊಂದಿಕೆಯಾಗು (ಬೆಳಗುವ ಮಣಿಮುಕುರಂಗಳುಂ ಅವರ್ಕೆ ಪಾಂಗಾಗಿ ಪಚ್ಚೆಯ ಪಸಲೆಯ ಪಸುರನಸಕಱೆದು ನಿಮಿರ್ದ ನೆಡಲವಡಲಿಗೆಯ ಜಾಗಂಗಳುಂ: **ಆದಿಪು,** ೮. ೧೫ ವ) [ನರಸಿಂಹಶಾಸ್ತ್ರಿಗಳ ಆವೃತ್ತಿ]

ಪಾಂಗು – [ನಾ] ಕ್ರಮ (ನಿನಗೊರ್ವಂಗಲ್ಲವವಸ್ಥಾಂತರಂ ಅಮರಜನಕ್ಕೆಲ್ಲಂ ಈ ಪಾಂಗೆ : **ಆದಿಪು**, ೩. ೬); ಮಾರ್ಗ, ಉಪಾಯ (ಆದ ವಿನೋದಂಗಳ್ ಅನಂಗರಾಗರಸ ಸಂಕೀರ್ಣಂಗಳಾದಂದು ಆಱುವ ಪಾಂಗಾವುದು: **ಆದಿಪು**, ೧೨. ೨೧); [ನಾ] ರೀತಿ (ಮನಮೆಲ್ಲಮಂ ಕವರ್ದಪಂ ತನುವಂ ಬಡಮಾಡಿ ಕಡಿ ದಂಡಿಸಿದಪಂ ಅಂಗಜನ್ನನ ಕವರ್ತೆಯ ದಂಡದ ಪಾಂಗು ಇದೆಂತುಟೋ: **ಪಂಪಭಾ**, ೫. ೧೩)

ಪಾಂಚಾಲರಾಜತನೂಜೆ – [ನಾ] ಪಾಂಚಾಲದೇಶದ ರಾಜಕುವರಿ, ದ್ರೌಪದಿ (ಪಾಂಚಾಲರಾಜತನೂಜೆ ಪಗೆವರ ಕಟುವಟ್ಟೆರ್ದ ಏಳಿದಿಕ್ಕೆಗೆ ಸಂತಸಂಬಟ್ಟು ಸೈರಿಸಲಾಱದೆ ಇಂತೆಂದಳ್: **ಪಂಪಭಾ**, ೭. ೩೮ ವ)

ಪಾಂಚಾಳರಾಜಾತ್ಮಜಾ – [ನಾ] [ಪಾಂಚಾಳರಾಜ+ಆತ್ಮಜಾ] ಪಾಂಚಾಳರಾಜನ ಮಗಳು, ದ್ರೌಪದಿ (ಅನಿತೊಂದುರ್ಕಿನೊಳ್ ಉರ್ಕಿ ಕೌರವಖಳರ್ ಪಾಂಚಾಳರಾಜಾತ್ಮಜಾ ಆನನಪದ್ಮ ಗ್ಲಪನೈಕಕಾರಣಪರರ್ತಾಮಾಗೆಯುಂ: **ಪಂಪಭಾ,** ೭. ೯)

ಪಾಂಚಾಳಿ – [ನಾ] ಪಾಂಚಾಲದೇಶದವಳು, ದ್ರೌಪದಿ (ಒತ್ತಂಬದಿಂದ ಒಳಗಂ ಪೊಕ್ಕು ಪಾಂಚಾಳಿಯಂ ಕಣ್ಗಿಡೆ ಜಡಿದು ಮುಡಿಯ ಪಿಡಿದು ತನ್ಮಧ್ಯದಿಂ ಸುಯೋಧನನ ಸಭಾಮಧ್ಯಕ್ಕೆ ತಂದು: **ಪಂಪಭಾ,** ೭. ೪ ವ)

ಪಾಂಡುಕ – [ನಾ] [ಜೈನ] ಮೇರುಪರ್ವತದ ಮೇಲಿರುವ ನಾಲ್ಕು ವನಗಳಲ್ಲಿ ಒಂದು, ಉಳಿದ ಮೂರು: ಭದ್ರಶಾಲ, ನಂದನವನ ಮತ್ತು ಸೌಮನಸ (ಇದು ಭದ್ರಶಾಲನಂದನಂ ಅದು ನನ್ದನವನಂ ಅದಲ್ತೆ ಸೌಮನಸಂ ಅದೇಂ ತುದಿಯೊಳ್ ಪಾಂಡುಕವೆಸೆದಿರ್ದುದೊ: **ಆದಿಪು,** ೨. ೨೯); **[ನಾ]** [ಜೈನ] ಪಾಂಡುಕ ಎಂಬುದು ನವನಿಧಿಗಳಲ್ಲಿ ಒಂದು [ಹದಿನೆಂಟು ಪ್ರಕಾರದ ಧಾನ್ಯಗಳನ್ನು ಒದಗಿಸುವ ನಿಧಿ] (ಶ್ರೀಗೃಹದೊಳ್ ಪುಟ್ಟಿದ ಕಾಳ ಮಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ: **ಆದಿಪು,** ೧೫. ೩ ವ)

ಪಾಂಡುಛತ್ರ – [ನಾ] ಬೆಳ್ಗೊಡೆ (ಗಗನಸಿಂಧು ಫೇನಪಟಳ ಶಂಖಸಂಕಾಶ ಪಾಂಡುಛತ್ರ ಚಾಮರಂಗಳುಂ: **ಪಂಪಭಾ,** ೧೦. ೫೭ ವ)

ಪಾಂಡುರಂ ಮಾಡು – [ಕ್ರಿ] ಬೆಳ್ಳಗಾಗಿಸಿಕೊ, ಬಿಳಿಚಿಕೊ (ಅಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಱಿಂದಾಕೆಗೆ ಪಾಂಡುರೋಗಸಂಗತನುಮನೇಕ ಭದ್ರಲಕ್ಷಣಲಕ್ಷಿತನುಂ ಅತ್ಯಂತಪ್ರತಾಪನುಮಾಗಿ ಪಾಂಡುರಾಜನೆಂಬ ಮಗನಕ್ಕುಂ: **ಪಂಪಭಾ,** ೧. ೮೫ ವ)

ಪಾಂಡುರಮಾಗು – [ಕ್ರಿ] ಕೀರ್ತಿಯಿಂದ ಬೆಳ್ಳಗಾಗು (ಪೊದಳ್ದಾಜ್ಞೆಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳ್ ಆರ್ ಆ ಪಾಂಡುರಾಜಂಬರಂ: **ಪಂಪಭಾ,** ೧. ೧೧೦)

ಪಾಂಡುರೋಗಸಂಗತ – [ಗು] ಪಾಂಡುರೋಗಪೀಡಿತ (ಅಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಱಿಂದಾಕೆಗೆ ಪಾಂಡುರೋಗಸಂಗತನುಂ ಅನೇಕ ಭದ್ರಲಕ್ಷಣಲಕ್ಷಿತನುಂ ಅತ್ಯಂತಪ್ರತಾಪನುಮಾಗಿ ಪಾಂಡುರಾಜನೆಂಬ ಮಗನಕ್ಕುಂ: **ಪಂಪಭಾ,** ೧. ೮೫ ವ)

ಪಾಂಶು – [ನಾ] ಕಾಂತಿ (ಭಾಭಾಸುರಮೊಪ್ಪಿ ತೋಱುಗುಂ ಪಂಚರತ್ನಪಾಂಶೂಚ್ಚದೀಪ್ತಿದೀಪ್ರಂ ವಪ್ರಂ: **ಆದಿಪು,** ೬. ೧೦೩); ದೂಳು (ಇಂದ್ರಿಯಲುಬ್ಧಕಸ್ವಚ್ಛಂದವಿಹಾರ ಗಹನಭೂಮಿಯುಂ ದುರ್ಯಶಃಪಾಂಶುಪ್ರಸರ ಮಹಾವಾತ್ಯೆಯುಂ: **ಆದಿಪು,** ೧೪. ೧೨೨ ವ)

ಪಾಂಸು – [ನಾ] ಧೂಳು (ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ ಸಂಘಟ್ಟನ ಸಮುಚ್ಚಳಿತ ಪಾಂಸುಪಟಳ ಅಂಧಕಾರದುರ್ಲಂಕ್ಷಾಂತರಿಕ್ಷ ಕ್ಷಿತಿದಿಗಂತರಾಳಾಂತರಮುಂ: **ಪಂಪಭಾ,** ೧೩. ೫೧ ವ)

ಪಾಂಸುಕೇಳಿ – [ನಾ] ಮಣ್ಣಾಟ (ಕರಿಕರೋದ್ಧೂತಧೂಳೀವಿಳಾಸ ಪಾಂಸುಕೇಳಿಯಿಂದಂ ಮಲ್ಲಮೇಷೋದ್ಧತ ರಾಜದಾರಕ ನಿಯುದ್ಧದಿಂದಂ: **ಆದಿಪು,** ೮. ೫೦ ವ)

ಪಾಂಸುಳ – [ನಾ] ಧೂಳಿಯಿಂದ ಕೂಡಿದುದು (ಸಮೀರಂ ಉದಾರಕದಂಬಕೇತಕೀಪ್ರಸರರಜ ಸ್ವರಪ್ರಕಟಪಾಂಸುಳಂ ಆದುದು ಮೇಘಕಾಲದೊಳ್: **ಪಂಪಭಾ,** ೭. ೨೨)

ಪಾಗುಡ – [ನಾ] ಕಪ್ಪಕಾಣಿಕೆ (ಪಟವೆಗಂ ಪಾಗುಡಕ್ಕಂ ಪಳಬದ್ದಕ್ಕಂ .. .. ವೈವಾಹಿಕಸಂಬಂಧಕ್ಕಂ ಮೈತ್ರಕ್ಕಂ .. .. ಮಹಾನದಿಗಳ್ ಕೂಡುವಂತೆ: **ಪಂಪಭಾ,** ೯. ೯೫ ವ)

ಪಾಟ – [ನಾ] ಹಾಡು (ಮದನನಲುಗಿನ ಅಲರ್ಗಳಂತೆ ಕಣ್ಣೊಳೆಳಸಿ ಬಳಸಿ ಬಂದಿರ್ದ ಪಾಟದಾಟದ ಮುದ್ದಿನ ಬರ್ದಿನ ಪರಿವಾರ ದೇವಿಯರುಮಂ: **ಆದಿಪು,** ೨. ೬೫ ವ)

ಪಾಟನ – [ನಾ] ಸೀಳುವುದು (ವರಕರಿಕುಂಭಪಾಟನ ಪಟಿಷ್ಠಕಠೋರ ನಖಪ್ರಹಾರಭೇದನ ಗಳಿತಾಸ್ರರಕ್ತ ನವಮೌಕ್ತಿಕ ವಿಳಾಸ ಭಾಸುರಾನನಂ: **ಪಂಪಭಾ,** ೧೩. ೫೦)

ಪಾಟಲ – [ನಾ] ನಸುಗೆಂಪು (ಪಾಟಲಲೋಲವಿಲೋಚನಂ ಮನಂಬುಗೆ ನಳಿತೋಳ ಕೋಳೆಸೆಯೆ: **ಪಂಪಭಾ,** ೮. ೫೯)

ಪಾಟಳಿತ – [ಗು] ಕೆಂಪೇರಿದವನಾದ (ಮಣಿಭೂಷಾ ತುಂಗರತ್ನಾಂಶು ಪಾಟಳಿತಂಗೆ ಈಗೆ ಅರಿಗಂಗೆ ಮಂಗಳಮಹಾಶ್ರೀಯಂ ಜಯಶ್ರೀಯುಮಂ: **ಪಂಪಭಾ,** ೧೪. ೩೪)

ಪಾಟಳೀ – [ನಾ] ಪಾದರಿ ಗಿಡ, ಹೂ (ಪೂಗಳ ಕಂಪಿನೊಳೇಂ ಪೊಗಟ ಪಾಟಳೀಪರಿಮಳಂ: **ಆದಿಪು,** ೧೧. ೧೧೫)

ಪಾಟಳೀಪಾಟಲದಶನವಸನೆ – [ನಾ] ಪಾದರಿ ಹೂವಿನಂತೆ ನಸುಗೆಂಪಾದ ತುಟಿಯವಳು (ಎನೆ ಮತ್ತೊರ್ವಳ್ ಸುರಭಿ ಪಾಟಳೀಪಾಟಳದಶನವಸನೆ: **ಆದಿಪು,** ೧೧. ೧೧೪ ವ)

ಪಾಟಿತ – [ಗು] ಬಿರುಕುಬಿಟ್ಟ, ಸೀಳಲ್ಪಟ್ಟ (ಕೂರಿಸೆ ಗುರುಶುಶ್ರೂಷೆಯೊಳ್ ಆ ರಾಮನಂ ಉಗ್ರ ಪರಶುಪಾಟಿತ ರಿಪುವಂಶಾರಾಮನಂ ಇಷುವಿದ್ಯಾ ಪಾರಗನೆನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ,** ೧. ೧೦೪)

ಪಾಟಿಸು – [ಕ್ರಿ] [ಪಾರಿತೋಷಕ] ನೀಡು (ಮೆಚ್ಚಂ ಪಾಟಿಸುವುವು ಮಿಥುನತತಿಗೆ ಗೃಹಮಹೀಜಾತಂ: **ಆದಿಪು,** ೫. ೩೭); ಪರಿಣತೆಯಿಂದ (ಪಾಟಿಸಿ ಮಾಡಿದ ಸೊರ್ಕಿವಳಾಟಮೆ ವಲಮೆನಿಸಿ ನೆಗಟ್ದಿ ನೀಲಾಂಜನೆ: **ಆದಿಪು,** ೯. ೩೮); [ಕ್ರಿ] ಕಿತ್ತುಹಾಕು (ಸಮಂತು ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು ತಾನೀ ನಯದಿಂದೆ ಪೆರ್ಚಿ ಪೊರೆದದಟ್ಟಿಱಿಯೊಳ್ ಅಂದೊಡನುಂಡನಲ್ಲನೇ: **ಪಂಪಭಾ,** ೯. ೬೭)

ಪಾಟ್ಯಮಾನ – [ಗು] ಸೀಳಲ್ಪಡುವ (ಭಯಂಕರಶಿಂಶುಮಾರ ವಿಕಟದಂಷ್ಟ್ರಾ ಕ್ರಕಚಪಾಟ್ಯಮಾನ ನಾರಕನಿಕರ ರುಧಿರಚ್ಛಟ ಅಚ್ಛಾರುಣಿಸಲಿಲ ಹರಿಕಾನಿಕರಕರಾಳೆಯುಂ: **ಆದಿಪು,** ೫. ೮೭ ವ)

ಪಾಠೀನಚಕ್ರ – [ನಾ] ಮೀನು[ತಿಮಿಂಗಿಲ]ಗಳ ಸಮೂಹ (ಪಾಠೀನಚಕ್ರಕ್ಷೋದಪ್ರಕ್ಷೋಭಿತಂ ವಾರಿಧಿಯೆ ಗಗನಮಂ ಮುಟ್ಟೆ ನಿಂದಂತೆ: **ಆದಿಪು,** ೧೪. ೯೭)

ಪಾಡಳಿ – [ಕ್ರಿ] ಸುಸ್ಥಿತಿಗೆಡು (ಗಟೆಯಿಸೆ ಕೆಂಪು ಕಣ್ಗಳ ಮೊದಲ್ಗಳೊಳ್ ಒಯ್ಯನೆ ತೋಱಿ ಬಾಡಿ ಪಾಡಳಿದು ಬಟಲ್ದು ಜೋಲ್ದ ಇರವು: **ಪಂಪಭಾ,** ೪. ೬೧); **[ಕ್ರಿ]** ಕಾಂತಿಗುಂದು (ನಸು ಮಾಸಿ ಪಾಡಳಿದ ರೂಪಿನೊಳ್ ಉಣ್ಮುವ ಗಾಡಿ ನಾಡೆ ಕಣ್ಗೆಡರೆ: **ಪಂಪಭಾ,** ೧೩. ೯೯)

ಪಾಡಿ – [ನಾ] ಸೈನ್ಯದ ತುಕಡಿ (ನೆರೆದನುರಾಗದಿಂ ಪಡೆಯ ಪಾಡಿಯ ಬೀರರ ಪೆಂಡಿರಟ್ಟಿಱಿಂ ಪರಸಿ ಒಱಲ್ದು ಸೇಸೆಗಳನಿಕ್ಕೆ: **ಪಂಪಭಾ,** ೧೦. ೧೨೫)

ಪಾಡುಗಾ – [ಕ್ರಿ] [ಪಾಡು+ಕಾ] ಪರಸ್ಪರರ ಕ್ಷೇಮವನ್ನು ರಕ್ಷಿಸು, ಸುಸ್ಥಿತಿಯನ್ನು ಕಾಪಾಡು (ಇಂತು ಪಾಡುಗಾದೊಡನೊಡನಿರ್ವರುಂ ಮೆಱೆಯಲೆಂದೆ ಶರಾಸನವಿದ್ಯೆಯಿಂ ಪಡಲ್ವಡಿಸಿದರ್: **ಪಂಪಭಾ,** ೧೧. ೧೮);

ಪಾಡುಗೆಯ್ – [ಕ್ರಿ] ಸಂವರಿಸು, ಹದಗೊಳಿಸು (ಒಯ್ಯನೆ ಗದೆಯನಣಂ ಪಾಡುಗೆಯ್ದಿರ್ದುರ್ ಭೋರೆಂದೆಱೆಪ ಉಗ್ರಾರಾತಿಯೂರುದ್ವಯಮನಿಡೆ: **ಪಂಪಭಾ,** ೧೩. ೯೬)

ಪಾಣಿಗ್ರಹಂಗೆಯ್ – [ಕ್ರಿ] ಮದುವೆ ಮಾಡು (ವಿಜಯಶ್ರೀಕಾಂತೆಗಂ ಕಾಂತೆಗಂ ನಿನಗಂ ದೋರ್ವಲದಿಂದಮೊಂದೆ ಪಸೆಯೊಳ್ ಪಾಣಿಗ್ರಹಂಗೆಯ್ಯನೇ: **ಪಂಪಭಾ,** ೩. ೬೫)

ಪಾಣಿಗ್ರಹಣಂಗೆಯಿಸು – [ಕ್ರಿ] ಕೈಹಿಡಿಸು, ಮದುವೆ ಮಾಡಿಸು (ಅಂತು ಕೈನೀರೆಱೆದು ಪಾಣಿಗ್ರಹಣಂಗೆಯಿಸಿದಾಗಳ್: **ಆದಿಪು,** ೪. ೪೮ ವ)

ಪಾಣಿಪಲ್ಲವ – [ನಾ] ಚಿಗುರಿನಂತಹ ಕೈ (ಘರ್ಮಜಲದಿಂ ನಡುಪ ಆಕೆಯ ಪಾಣಿಪಲ್ಲವಂಬಿಡಿದು: **ಪಂಪಭಾ,** ೩. ೭೫)

ಪಾಣಿಪಾತ್ರ – [ನಾ] ಬೊಗಸೆ (ಧವಳೇಕ್ಷುಧಾರೆ ಪುಣ್ಯಧಾರೆಯಂತೆ ಸೊಗಯಿಸುವಿನೆಗಂ ಸಮುತ್ತಾನೀಕೃತ ವಿಶಾಲ ಪಾಣಿಪಾತ್ರದೊಳ್ ಎಱೆವುದುಂ: **ಆದಿಪು,** ೧೦. ೧ ವ

ಪಾಣ್ಬ – [ನಾ] ಹಾದರಿಗ (ಆ ಪಾಣ್ಬರಂಕುಸಂ ಆ ಪಾಣ್ಬೆಯರ ಗೆಯ್ದ ಗೆಯ್ತಂಗಳುಮಂ ತೋರ್ಪ ಸನ್ನೆಗಳುಮಂ ಆಡುವ ಮಿಟ್ಟುಗೊಡ್ಡಂಗಳುಮಂ ಕಂಡು ಚೋದ್ಯಂಬಟ್ಟು: **ಪಂಪಭಾ,** ೪. ೮೩ ವ)

ಪಾಣ್ಬರಂಕುಸ – [ನಾ] ಹಾದರಿಗರಿಗೆ ಅಂಕುಶಪ್ರಾಯನಾದವನು, ಅರಿಕೇಸರಿ, ಅರ್ಜುನ (ಭೋಂಕನೆ ಮನಮಂ ಕದಡಿ ಕಲಂಕಿದಪುದು ಬಿಡದೆ ಮನಮನೊಲಿಸಿದಪುದು ಆದಂ ಕೆಳದಿ ಪಾಣ್ಬರಂಕುಸನ ಅಂಕುಸದಾ ಪೊಳಪುಂ ಅವನ ಕಣ್ಗಳ ಬೆಳ್ಪುಂ: **ಪಂಪಭಾ,** ೪. ೬೭) [**'ಪಾಣ್ಬರಂಕುಸ'** ಎಂಬುದು ಅರಿಕೇಸರಿಯ ಒಂದು ಬಿರುದು]

ಪಾಣ್ಬೆ – [ನಾ] ಹಾದರಗಿತ್ತಿ (ಆ ಪಾಣ್ಬರಂಕುಸಂ ಆ ಪಾಣ್ಬೆಯರ ಗೆಯ್ದ ಗೆಯ್ತಂಗಳುಮಂ ತೋರ್ಪ ಸನ್ನೆಗಳುಮಂ ಆಡುವ ಮಿಟ್ಟುಗೊಡ್ಡಂಗಳುಮಂ ಕಂಡು ಚೋದ್ಯಂಬಟ್ಟು: **ಪಂಪಭಾ,** ೪. ೮೩ ವ)

ಪಾತ – [ನಾ] ಬೀಳುವಿಕೆ (ಪಾತಂ ಲಕ್ಷ್ಯಂ ಶೀಘ್ರಂ ಘಾತಂ ಬಹುವೇಗಂ ಎಂಬಿವಯ್ದೇಸಿನೊಳಂ ಅಂತು ಈತನ ದೊರೆಯಲ್ಲ: **ಪಂಪಭಾ,** ೧೨. ೧೮೫)

ಪಾತಕ – [ನಾ] ಪಾಪಿ (ದುಶ್ಶಾಸನರಕ್ತಪಾನದೊಳೆ ಸೊರ್ಕಿದ ಪಾತಕನಂ ಪೊರಳ್ಚಿ ಕೊಂದು ಈ ಸಮರಾವನೀತಳದೊಳ್ ಇಂ ಬಲಿಗೆಯ್ವಿನಂ ಒಲ್ಲೆನಲ್ತೆ: **ಪಂಪಭಾ,** ೧೩. ೧೪)

ಪಾತಕಿ – [ನಾ] ಪಾಪ ಮಾಡಿದ ವ್ಯಕ್ತಿ (ಪಾತಕಿಯೊಳ್ ಲಕ್ಷ್ಮಿಯೊಳ್ ಅತಿಕಾತರಕಾಪುರುಷಗಣನೆಯೊಳ್ ನೆರೆಯಲ್ಕಿಂತೀತನೆ ಬಗೆಗೆ: **ಆದಿಪು,** ೧೪. ೧೨೩)

ಪಾತಾಳಮೂಲ – [ನಾ] ಪಾತಾಳಲೋಕದ ತಳ (ಕುಳಶೈಳೇಂದ್ರಂಗಳ್ ಅಂಭೋನಿಧಿಗಳ್ ಅಖಿಳ ದಿಗ್ದಂತಿಗಳ್ ವಿಶ್ವಧಾತ್ರೀವಳಯಂ ಪಾತಾಳಮೂಲಂ ಸಕಳಭುವನಂ ಒಂದೊಂದಱೊಳ್ ಕೇಣಿಗೊಂಡು: **ಪಂಪಭಾ,** ೧೦. ೬೫)

ಪಾತಿತ – [ಗು] ಬೀಳಿಸಲಾದ (ಸ್ಫುರಿತ ಶರನಿಕರಪಾತಿತ ನರೋತ್ತಮಾಗಂ ಕಬಂಧನಾಟಕರಂಗಂ .. .. ವೀರಭಟರಣರಂಗಂ: **ಪಂಪಭಾ,** ೧೩. ೩೭)

ಪಾತು – ಕಾಪಾಡಲಿ (ಸ ಸರ್ವಜಗತಾಂ ಗುರುರ್ಗಿರಿಸುತಾಪತಿಃ ಪಾತು ನಃ: ೪. ೨೭)

ಪಾತ್ರ – [ನಾ] ನಟಿಸುವವನು[ಳು] (ವಿಚಿತ್ರಪಾತ್ರಪರಿನರ್ತನಂ ಉಣ್ಮುವ ತೂರ್ಯನಾದದೊಳ್ ಪೊಸಯಿಸೆ: **ಆದಿಪು,** ೨. ೪೧); [ಜೈನ] ದಾನಸ್ವೀಕಾರಕ್ಕೆ ಯೋಗ್ಯ (ಅಹೋ ದಾನಿಯಹೋ ಪಾತ್ರಮಹೋ ದಾನಮಹೋ ದೇಯಮೆಂಬ ದಿವ್ಯಧ್ವನಿಗಳ್: **ಆದಿಪು,** ೧೦. ೪); [ನಾ] [ಜೈನ] ದಾನಕ್ಕೆ ಪಾತ್ರರಾಗುವವರಲ್ಲಿನ ಮೂರು ಭೇದಗಳು: ಉತ್ತಮ, ಮಧ್ಯಮ, ಕನಿಷ್ಠ (ಪಾತ್ರಂ ಉತ್ತಮ ಮಧ್ಯಮ ಜಘನ್ಯಭೇದದಿಂ ತ್ರಿವಿಧಮಕ್ಕುಂ: **ಆದಿಪು,** ೧೦. ೯ ವ); [ನಾ] ನಟ (ಆಗಾಮಿಕ ಸಂಗ್ರಾಮಕ್ಕೆ ಪಾತ್ರಂಗಳಂ ಸಮೆಯಿಸುವ ಸೂತ್ರಧರನಂತೆ: **ಪಂಪಭಾ,** ೨. ೫೯ ವ); [ನಾ] ನರ್ತಕಿ (ಬೃಹಂದಳೆಯಾಗಿ ಗಾಂಡೀವಜ್ಯಾಘಾತದೊಳ್ ಇಂದ್ರನೀಲಂಗಳನಡಸಿದಂತಿರ್ದ ಎರಡುಂ ಮುಂಗೆಯ್ಗಳ ಕರ್ಪಂ ತೀವೆ ತೊಟ್ಟ ಬಳೆಗಳ್: **ಪಂಪಭಾ,** ೮. ೫೫ ವ)

ಪಾತ್ರತ್ವ – [ನಾ] [ಜೈನ] ಜೈನನಾದವನಿಗೆ ಲಭಿಸುವ ವಿಶೇಷಗಳಲ್ಲಿ ಒಂದು, ಅರ್ಹತೆ (ಅತಿಬಾಲವಿದ್ಯಾ, ಕುಲಾವಧಿ, ವರ್ಣೋತ್ತಮತ್ವ, ಪಾತ್ರತ್ವ, ಸೃಷ್ಟ್ಯಧಿಕಾರ, ವ್ಯವಹಾರೇಶಿತ್ವ, ಅವಧ್ಯತ್ವ, ಅದಂಡತ್ವ, ಮಾನಾರ್ಹತ್ವ, ಪ್ರಜಾಸಂಬಂಧಾಕರಮೆಂಬ ಪತ್ತುಂ ಅಧಿಕಾರಂಗಳನಱಿಪಿ: **ಆದಿಪು,** ೧೫. ೧೬ ವ)

ಪಾತ್ರದತ್ತಿ – [ನಾ] [ಜೈನ] ತಪಸ್ವಿಗಳಿಗೆ ನೀಡುವ ಆಹಾರ ಮೊದಲಾದವುಗಳ ದಾನ (ಪರಮತಪಶ್ಚರಣನಿರತ ಯತಿಸಮಿತಿಗೆಲ್ಲಂ ಪ್ರತಿಗ್ರಹಾದಿಪುರಸ್ಸರಂ ನಿರವದ್ಯಾಹಾರಾದಿ ವಿತರಣರೂಪ ಪಾತ್ರದತ್ತಿಯುಂ: **ಆದಿಪು,** ೧೫. ೧೩ ವ)

ಪಾತ್ರದಾನ – [ನಾ] [ಜೈನ] ಪಾತ್ರದತ್ತಿ, ಯೋಗ್ಯರಿಗೆ ಕೊಟ್ಟ ದಾನ (ಭಕ್ತಿಪುರಸ್ಸರ ಪೂಜಾದಿವಿಚಿತ್ರವಿರಚನಾದಿ ಸಂಪದಾಸ್ಪದಮಾಗೆಯುಂ ಪಾತ್ರದಾನವಿಧಾನಮೇ ವಿನೋದಮಾಗೆಯುಂ: **ಆದಿಪು,** ೪. ೫೨ ವ)

ಪಾತ್ರದಾನಿ – ಪಾತ್ರದಾನ ಮಾಡುವವನು (ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ ಮಾಯಾಚಾರಪರಿಣತರಪ್ಪ ಪಾತ್ರದಾನಿಗಳುಂ: **ಆದಿಪು,** ೫. ೪೧ ವ)

ಪಾದಚರ – [ನಾ] ಪದಾತಿ ಸೈನಿಕ (ಕರಿಗೆಂಟು ರಥಕ್ಕನುವಾಗೆ ನಾಲ್ಕು ವಾಹಕ್ಕೆ ಎರಡು ಅಲ್ಲಿ ಪಾದಚರರ್ಗೊಂದೆನೆ ದೀವಿಗೆಗಳ್ ಜಲಕ್ಕನೆ ಎಕ್ಕೆಕ್ಕೆಯಿಂ ಇಟ್ಟಳಂ ಬೆಳಗುತಿರ್ದುವು: **ಪಂಪಭಾ,** ೧೨. ೫)

ಪಾತ್ರದಾನಿ – [ನಾ] ಪಾತ್ರದಾನ ಮಾಡುವವನು (ಕುಶೀಲ ಕತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ ಮಾಯಾಚಾರಪರಿಣತರಪ್ಪ ಪಾತ್ರದಾನಿಗಳುಂ: **ಆದಿಪು,** ೫. ೪೧ ವ)

ಪಾದಪ – [ನಾ] ಮರ, ವೃಕ್ಷ (ಉದಿತೋದಿತ ನಿಜಕುಲ ಮಂದರಾಚಳ ಮಂದಾರಪಾದಪಂ: **ಆದಿಪು,** ೧. ೭೧ ವ)

ಪಾದಪಂಕಜ – [ನಾ] ಪಾದಕಮಲ, ತಾವರೆಯಂತಹ ಪಾದ (ಈ ಜಗನಮಿದೇಕೆ ಹೇಮರಶನಾಧ್ವನಿಯಿಲ್ಲದೆ ಮೂಗುವಟ್ಟುದು ಈ ಬಗೆಯೋಲ್ ಅಲಕ್ತಕದ್ರವದೊಳೊಂದದೆ ನಿಂದುವು ಪಾದಪಂಕಜಂ: **ಪಂಪಭಾ,** ೪. ೬೨)

ಪಾದಪವಿತ್ರೋದಕ – [ನಾ] ಕಾಲು ತೊಳೆದ ಪವಿತ್ರವಾದ ನೀರು (ತತ್ ಪಾದಪವಿತ್ರೋದಕಂಗಳಿಂ ಮಹಾಋಷಿಯ ತಳಿದ ಕನಕಕಮಂಡಲುವಿನ ತೀರ್ಥೋದಕಂಗಳಿಂದ ಅಯ್ವರುಂ ಪವಿತ್ರೀಕೃತಮಸ್ತಕರಾಗಿರ್ದು: **ಪಂಪಭಾ,** ೬. ೧೧ ವ)

ಪಾದಪ್ರಕ್ಷಾಳನೋದಕ – [ನಾ] ಪಾದ ತೊಳೆದ ನೀರು (ಬಾದೇನ್ ಆ ಮದೀಯ ಕರ್ಮಫಳೋದಿತ ಸಂತಾಪರೂಪಪಾಪಕಳಾಪ ವಿಚ್ಛೇದನಕರಮಾಯ್ತು ಭವತ್ ಪಾದಪ್ರಕ್ಷಾಳನ ಉದಕದಿಂ ಮುನಿನಾಥಾ: **ಪಂಪಭಾ,** ೬. ೧೩)

ಪಾದಾತ – [ನಾ] ಕಾಲಾಳು, ಪದಾತಿಸೈನ್ಯ (ಪಾದಾಭಿಘಾತವಿಚಳತ್ ಮೇದಿನಿ ಉತ್ಪತ್ಥಿತವಿಶಾಲಧೂಳೀಪಟಲಾಚ್ಛಾದಿತಗಗನಂ ನಡೆದುದು ಪಾದಾತಂ ಚತುರಶೀತಿಕೋಟಿಪ್ರಮಿತಂ: **ಆದಿಪು,** ೧೧. ೩೩)

ಪಾದ್ಯ – [ನಾ] ಕಾಲು ತೊಳೆಯುವ ನೀರು, ಪಾದೋದಕ (ವಿಮಿಶ್ರಮುಕ್ತಾಕ್ಷತದಿಂದ ಆದ್ಯಮಹೀಪತಿಗೆತ್ತಿದ ಪಾದ್ಯಮಂ ಅನುಕರಿಪುದಾಯ್ತು ವಾರ್ಧಿವಿಳಾಸಂ: **ಆದಿಪು.** ೧೨. ೭೭)

ಪಾದ್ಯವಿಧಿ – [ನಾ] ಕಾಲು ತೊಳೆಯುವ ಕ್ರಮ (ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವಗ್ರಜನ ಅತ್ಯುನ್ನತಮಪ್ಪ ಮಸ್ತಕದ ಮೇಗೆ: **ಆದಿಪು,** ೧೪. ೧೩೩)

ಪಾಪಕಳಾಪ – [ನಾ] ಪಾಪದ ರಾಶಿ (ಬಾದೇನ್ ಆ ಮದೀಯ ಕರ್ಮಫಳೋದಿತ ಸಂತಾಪರೂಪ ಪಾಪಕಳಾಪ ವಿಚ್ಛೇದನಕರಮಾಯ್ತು ಭವತ್ ಪಾದಪ್ರಕ್ಷಾಳನ ಉದಕದಿಂ ಮುನಿನಾಥಾ: **ಪಂಪಭಾ,** ೬. ೧೩)

ಪಾಪಸತ್ವ – [ನಾ] ಕ್ರೂರಮೃಗ (ನಾಲ್ಕನೆಯ ಕುಳಧರಂ ಪುಟ್ಟಿ ಪಾಪಸತ್ವಂಗಳ್ ಕಾಡೆ ಲಕುಟಯಷ್ಟ್ಯಾದಿ ವಿಧಿಯನುಪದೇಶಂಗೆಯ್ದಾತಂ ಕ್ಷೇಮಂಧರನೆಂಬ ಪೆಸರಂ ಪಡೆದಂ: **ಆದಿಪು,** ೬. ೫೬ ವ)

ಪಾಪಾವಗ್ರಹ – [ನಾ] ಪಾಪವೆಂಬ ಬರಗಾಲ (ವಿನೇಯೋತ್ಕರ ಸಸ್ಯಾವಳಿ ಸುಗಿದಗಿದು ಕೂಡೆ ಬಾಡಿರ್ದುದು ಪಾಪಾವಗ್ರಹದಿಂ: **ಆದಿಪು,** ೧೦. ೬೬)

ಪಾಪೆ – [ನಾ] ಹಾಹೆ, ಬೊಂಬೆ (ಪಳುಕಿನ ಪಾಪೆಯನಮರ್ದಿಂ ತೊಳೆದಂತೆ ಒರ್ಮೊಟಿದ ದಿವ್ಯವಪು ಮಣಿಮಯಕುಂಡಳ ಮಕುಟ ಕಟಕ ಭೂಷಣವಿಳಾಸದಿಂದೇಂ ವಿಳಾಸಮಂ ತಾಳ್ದುದೋ: **ಆದಿಪು,** ೬. ೩೯)

ಪಾಪೋಪಚಯ – [ನಾ] ಪಾಪದ ರಾಶಿ ನಿನ್ನ ಪಾಪೋಪಚಯ ಕಾರಣದುರಾಚರಿತಮುಮಂ ನೋಡಿ: **ಆದಿಪು,** ೩. ೩೮ ವ)

ಪಾಯ್ – [ಕ್ರಿ] ಹಾಯು, ಸಂಭೋಗಿಸು (ಈ ವನೇಭಮಾಘ್ರಾಣಿಸಿ ಪೆರ್ಚಿದ ಮಸಕದಿಂದೆ ಪಾಯಲ್ಕದಿರ್ಪುಗೆಯ್ದಪುದು ನೋಡ ವನವೇದಿಕೆಯಂ: **ಆದಿಪು,** ೧೧. ೬೪); [ಕ್ರಿ] ಹಾರು (ಕರಂ ಮೇಳಿಸಿದಪ್ಪುದೆನ್ನೆರ್ದೆಯಂ ಎಂದು ಬೊದಿಲ್ಲನೆ ಪಾಯ್ದು ನೀರೊಳಾ ಬಾಳನಂ ಆದಂ ಆದರದೆ ಕಂಡೊಸೆದು ನಿಧಿಗಂಡನಂತೆವೋಲ್: **ಪಂಪಭಾ,** ೧. ೯೬); [ಕ್ರಿ] ಹರಿದುಬರು (ಭಗೀರಥಂ ನೆಗಟಿ ತಪೋನಿಯೋಗದೊಳ್ ಅವಂಗೆ ಅಮರಾಪಗೆ ಮೆಚ್ಚಿ ಪಾಯ್ದುದುಂ: **ಪಂಪಭಾ,** ೪. ೧೩); [ಕ್ರಿ] ಹಾಯಿ, ದಾಟು (ಬಿಸುಡು ನೀಂ ಬಲಗರ್ವಮಂ ಆ ಸಮುದ್ರಂ ಏಂಬಂಡಮೊ ಪಾಯ್ದೊಡೆ ಎಂದು ನಿಜಸಾಯಕದೊಳ್ ಬರೆದು ಎಚ್ಚು ಕಪ್ಪಮಂ ಕೊಂಡಂ .. .. ಪರಸೈನ್ಯಭೈರವನಂ: **ಪಂಪಭಾ,** ೬. ೩೩)

ಪಾಯಿಸು – [ಕ್ರಿ] ದಾಟಿಸು, ಮುನ್ನುಗ್ಗಿಸು (ಇಸಲೆಂದಿರ್ದ ಧನುರ್ಬಲಂ ಪೊಳೆವ ಬಾಳುಳ್ಕಂಗಳಂ ಪೋಲೆ ಪಾಯಿಸಲೆಂದಿರ್ದ ದಳಂ: **ಆದಿಪು,** ೧೪. ೧೦೦); [ಕ್ರಿ] ಹಾಯಿಸು, ನುಗ್ಗುವಂತೆ ಮಾಡು (ಇವನುಣ್ಬುದು ಖಾಂಡವಂ ಈತಂ ಅಗ್ನಿ ಮುಂ ಪುಸಿದು ಇವನಿಂತೆ ಪಾಯಿಸಿದಂ ಇಂದ್ರನೊಳ್ ಆದಿ ನರೇಂದ್ರೆಲ್ಲರಂ: **ಪಂಪಭಾ,** ೫. ೭೨)

ಪಾರ್ – [ಕ್ರಿ] ನೋಡು, ನಿರೀಕ್ಷಿಸು (ನಿಜಾಭಿಲಷಿತ ಕಾರ್ಯಸಿದ್ಧಿಯನೆ ಪಾರುತ್ತುಮಿರ್ದರ್ಳ್: **ಆದಿಪು,** ೩. ೪೫ ವ)

ಪಾರ – [ನಾ] ಆಚೆಯ ದಡ (ತದಾರಾತಿಸೈನ್ಯಕೂಪಾರದ ಪಾರಮಂ ತಡೆಯದೆ ಎಯ್ದುವೆಂ ಎಂಬುದುಂ: **ಪಂಪಭಾ,** ೮. ೯೭)

ಪಾರಗ – [ನಾ] ಪಾರಂಗತ (ಕೂರಿಸೆ ಗುರುಶುಶ್ರೂಷೆಯೊಳ್ ಆ ರಾಮನಂ ಉಗ್ರ ಪರಶುಪಾಟಿತರಿಪುವಂಶಾರಾಮನಂ ಇಷುವಿದ್ಯಾ ಪಾರಗನೆನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ,** ೧. ೧೦೪)

ಪಾರತ್ರಿಕ – [ನಾ] ಪರಲೋಕಕ್ಕೆ ಸಂಬಂಧಿಸಿದ (ಐಹಿಕಪಾರತ್ರಿಕ ಭೋಗಮಂ ಕುಡುವಿನಂ ಮಾಣಿಕ್ಯಭಟ್ಟಾರಕಾಂತಿಕಮಂ ಸಾರೆ ವಿನೇಯರಾಜಿಗೆ ಜಯಂ: **ಆದಿಪು,** ೧೬. ೮)

ಪಾರದರ – [ನಾ] ಹಾದರ (ಪೆಱತೇನೊ ಪಾರದರದೊಳ್ ಸಂಸಾರಸರ್ವಸ್ವಮಂ ಗೆಲೆವಂದಿಂಪಿನಲಂಪನಾಳ್ದ ಸವಿಯುಂಟಕ್ಕುಂ: **ಪಂಪಭಾ,** ೪. ೮೪)

ಪಾರಯಿಸು – [ಕ್ರಿ] ಹಾರೈಸು, ಇಷ್ಟಪಟ್ಟು ನಡೆಸು (ಮೇರುನಗೋಪಕಂಠವನದೊಳ್ ವನಕೇಳಿವಿಲಾಸಮಂ ಸ್ವಯಂಭೂರಮಣಾಂಬುರಾಶಿ ವಿಲಸತ್ತಟದೊಳ್ ಜಲಕೇಳಿ ಲೀಲೆಯಂ ಪಾರಯಿಸಿರ್ದುದುಂ ನೆನೆವೊ ನೀಂ: **ಆದಿಪು,** ೩. ೮೩)

ಪಾರಾವತ – [ನಾ] ಪಾರಿವಾಳ (ರಾಜಹಂಸ ಪಾರಾವತ ಮಿಥುನಂಗಳ್ ಉತ್ತುಂಗ ಪ್ರಾಸಾದಶಿಖರ ಮಣಿಗವಾಕ್ಷ

ಅಂತರಾಳ ವಿವಿಧ ಗೃಹಾಂತರಗತಂಗಳಾದುವು: **ಪಂಪಭಾ** ಪರಿಷತ್ತು, ೪. ೪೯ ವ)

ಪಾರಾವಾರ – [ನಾ] [ಜೈನ] ಸಾಗರ, ಒಂದು ದೀರ್ಘ ಅವಧಿ (ಏಕಪಾರಾವಾರೋಪಮ ಆಯುಷ್ಯನುಂ ವರ್ಷಸಹಸ್ರ ಸಂಕಲ್ಪಕಲ್ಪಿತ ಅಮೃತಾಹಾರನುಂ .. .. ಆಗಿ: **ಆದಿಪು,** ೨. ೬೯ ವ); [ನಾ] ಸಮುದ್ರ (ಪಾರಾವಾರದಂತೆ ಅಕಲುಷಿತನುಂ ಅನಿಲನಂತೆ ನಿಸ್ಸಂಗನುಂ: **ಆದಿಪು,** ೯. ೯೩ ವ)

ಪಾರಾಶರ – [ನಾ] ವೇದವ್ಯಾಸ (ಇದಂ ಮುನಿ ಪಾರಾಶರನೊಲ್ದು ಪೇೞ್: **ಪಂಪಭಾ,** ೮. ೫)

ಪಾರಿವ – [ನಾ] ಪಾರಿವಾಳದ ಬಣ್ಣ (ಪೞಗೇಱೆ ಬರ್ಪ ಕನ್ನಡಿವಿಡಿದಾಕೆ ಚಿನ್ನದ ಸವಂಗಂ ಅಪೂರ್ವದ ಮೊಚ್ಚೆಯಂ ಪವಣ್ಬಡೆದ ಸುವರ್ಣಪಾರಿವದ ಕುಪ್ಪಸಮೊಪ್ಪೆ: **ಪಂಪಭಾ,** ೯. ೧೦೩)

ಪಾರಿಷದ – [ನಾ] [ಜೈನ] ಒಂದು ದೇವತಾವರ್ಗ (ಸಾಮಾನಿಕ ತ್ರಾಯಸ್ತ್ರಿಂಶತ್ಪಾರಿಷದ ಆತ್ಮರಕ್ಷ ಲೋಕಪಾಳ ಅಭಿಯೋಗ್ಯ ಕಿಲ್ಬಿಷರೊಡನೆ: **ಆದಿಪು,** ૨. ೪೨ ವ) **'ತ್ರಾಯಸ್ತ್ರಿಂಶ'** ನರಸಿಂಹಶಾಸ್ತ್ರಿಗಳು ಅನುಮೋದಿಸಿರುವ ಪಾಠ]

ಪಾರಿಹಾರ್ಯ – [ನಾ] ಬಳೆ, ಕಂಕಣ (ವಿದ್ಯಾಧರೀರಮ್ಯನರ್ತನ ರಾಗೋತ್ಥಿತ ಪಾರಿಹಾರ್ಯ ರಶನಾ ಮಂಜೀರಕೋದ್ದಾಮ ನಿಸ್ವನದೊಳ್: **ಆದಿಪು,** ೧. ೭೦)

ಪಾರೆಯಂಬು – [ನಾ] ಹಾರೆ ಆಕಾರದ ಬಾಣ (ಯಜ್ಞಸೇನಂ ಏನುಂ ಮಾಣದೆ ಆತನ ಮೇಲೆ ಬಟ್ಟಿನಂಬಿನ ಬೆಳ್ಸರಿಯುಮಂ ಕೆಲ್ಲಂಬಿನ ತಂದಲುಮಂ ಪಾರೆಯಂಬಿನ ಸೋನೆಯುಮಂ ಸುರಿಯೆ: **ಪಂಪಭಾ,** ೧೨. ೨೧ ವ)

ಪಾರ್ಥ – [ನಾ] ಪೃಥೆಯ ಮಗ, ಅರ್ಜುನ (ಇಕ್ಕಿದಂ ಅಭವಂ ಪಾರ್ಥನಂ ಇಕ್ಕಿದನಾ ತ್ರಿಪುರಹರನಂ ಅರ್ಜುನಂ: **ಪಂಪಭಾ,** ೮. ೨೨)

ಪಾರ್ಥಿವ – [ನಾ] ಮರ (ಇತ್ತು ಬೆಳ್ಕುತ್ತಿನಿಸಿರ್ದ ಪಾರ್ಥಿವರೊಳೇಂ ದೊರೆಯಾದುದೊ ಕಲ್ಪಪಾರ್ಥಿವಂ: **ಆದಿಪು,** ೬. ೪೯); [ನಾ] ರಾಜ (ದುರ್ಯಶೋಧೂಳಿಯುಂ ಪಾರ್ಥಿವ ಸೇನಾಧೂಳಿಯುಂ ಮುಟ್ಟದು: **ಆದಿಪು,** ೧೩. ೩೨)

ಪಾರ್ವ – [ನಾ] ಹಾರುವ, ಬ್ರಾಹ್ಮಣ (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಮುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ); [ನಾ] ನಿರೀಕ್ಷಿಸುವವನು (ಸೋರ್ವ ವಸುಧಾರೆಯಂ ಕೆಯ್ಸಾರ್ವ ನಿಧಾನಮುಮಂ ಇೞಿಸಿ ತನ್ನೀವಳವಿಂ ಪಾರ್ವಂಗಂ ಅಳಿಪಿ ಬೇಡಿದ ಪಾರ್ವಂಗಂ ಪಿರಿದನಿತ್ತಂ: **ಪಂಪಭಾ,** ೯. ೭೨)

ಪಾರ್ವತೀಶ – [ನಾ] ಶಿವ (ರಜಂಬೊರೆದಳಿಮಾಲೆ ಮಾಲೆಯನೆ ಪೋಲೆ ಪಯೋಜಜ ಪಾರ್ವತೀಶರ ಒಳ್ವರಕೆಯನಾಂತು: **ಪಂಪಭಾ,** ೧೨. ೨೨೧)

ಪಾರ್ವರನೂಡು – [ಕ್ರಿ] [ಪಾರ್ವರಂ+ಊಡು] ಬ್ರಾಹ್ಮಣರಿಗೆ ಸಮಾರಾಧನೆ ಮಾಡಿಸು (ಪರಿಜನಮೆಲ್ಲಮಂ ಪಾರ್ವರನೂಡಿಸುವ ನೆವದೊಳೆ ಪೊಱಮಡಿಸಿ: **ಪಂಪಭಾ,** ೩. ೪ ವ)

ಪಾರ್ವೆಮಪ್ಪೊಡೆ – [ಪಾರ್ವೆಂ+ಅಪ್ಪೊಡೆ] ನೋಡೋಣ ಎನ್ನುವುದಾದರೆ (ಸಪ್ತವ್ಯಸನಂಗಳ್ ಅಯ್ವರುಮನೊಂದುಂ ಗೆಲ್ವವಲ್ಲವು ರಾಷ್ಟ್ರವ್ಯಸನಮಂ ಬಳವ್ಯಸನಮಂ ಪಾರ್ವೆಮಪ್ಪೊಡೆ ಅವು ಮುನ್ನಮಿಲ್ಲ: **ಪಂಪಭಾ,** ೬. ೬೭ ವ)

ಪಾರ್ಶ್ವ – [ನಾ] ಮಗ್ಗುಲ ನಿಲವಿನ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ಪಾರ್ಶ್ವಚರ – [ನಾ] ಜೊತೆಯಲ್ಲಿರುವ ಸೇವಕ (ಭರತನಾಥದೂತಂ ಆತ್ಮಪಾರ್ಶ್ವಚರಕರತಳದಿಂ ಉಪಾಯನರತ್ನಕರಂಡಕಮಂ ಕೊಂಡು: **ಆದಿಪು,** ೧೪. ೪೫ ವ)

ಪಾರ್ಷ್ಣಿ – [ನಾ] ಹಿಮ್ಮಡಿ (ಗೂಢ ಗುಲ್ಫ ಪಾರ್ಷ್ಣಿಗಳನೊಳಕೊಂಡ ಮನುಜಮಾಂಧಾತನ ಪೊಱ ಅಡಿಗಳ್ ವಿರೋಧಿ ಭೂಪಾಳರ ಅಡಿಗೆಱಗಿಸಿದ ಸಂತೋಷದೊಳ್: **ಪಂಪಭಾ,** ೨. ೩೯ ವ); ಆನೆಯ ಹಿಮ್ಮಡಿ (ಪ್ರೋಪಹಳಿಹಸ್ತಗಾತ್ರನುಂ ಪರಿಪೂರ್ಣಶ್ಲಿಷ್ಟ ಪಾರ್ಷ್ಣಿಯುಂ ಅಂಸಕಾಳಭಗನುಂ: **ಆದಿಪು,** ೧೨. ೫೬ ವ)

ಪಾರ್ಷ್ಣಿಗ್ರಾಹಕ – [ನಾ] ಹಿಂದಿನಿಂದ ಮೇಲೆ ಬೀಳುವ ಶತ್ರು (ಕಪ್ಪಮೀಯದೆ ಚಪ್ಪರಿಸುವ ಮಂಡಳಿಕರುಮಂ ಅಡಂಗದ ಆಟವಿಕರುಮಂ ಒತ್ತಿ ಬರ್ಪ ಪಾರ್ಷ್ಣಿಗ್ರಾಹಕರುಮಂ ಅೞಿದು: **ಆದಿಪು,** ೪. ೮೨ ವ)

ಪಾಲಿಸು – [ಕ್ರಿ] ಆಳ್ವಿಕೆ ಮಾಡು (ತನ್ನ ವಿಕ್ರಮಮೇ ತನ್ನ ನೆಗೞ್ತೆಯೆ ತನ್ನ ಮಾತೆ ತಾನೆಸೆವ ಜಗತ್ತ್ರಯಕ್ಕೆನಿಸಿ ಪಾಲಿಸಿದಂ ನೆಲನಂ ಗುಣಾರ್ಣವಂ: **ಪಂಪಭಾ,** ೧೪. ೩೯)

ಪಾಲೆ – [ನಾ] ಕಿವಿಯ ಹಾಲೆ (ನಸುನೇಲ್ವ ಕರ್ಣಾಟೀಕರ್ಣಪೂರನ ಪಾಲೆಗಳುಂ ಸರಸ್ವತಿಯಾಡುವ ಲೀಲಾಂದೋಳದಂತಾದುವು: **ಪಂಪಭಾ,** ೨. ೩೯ ವ)

ಪಾಲ್ಗಡಲ್ – [ನಾ] ಹಾಲಿನ ಸಮುದ್ರ (ಪೊಸೆದೊಡೆ ಪಾಲ್ಗಡಲಂ ಮಗುಟ್ದಸುರರ್ ಪೊಸೆದಲ್ಲಿ ಕಾಳಕೂಟಾಂಕುರಂ ಅಂದು ಅಸದಳಮೊಗೆದಂತೊಗೆದುವು ಬಸಿಱಿಂ ನೂಱೊಂದು ಪಿಂಡಂ ಅರುಣಾಕೀರ್ಣಂ; **ಪಂಪಭಾ,** ೧. ೧೩೦)

ಪಾಲ್ಗಡಲೊಳ್ .. ಪುಟ್ಟಿದ .. ಕುದುರೆ – [ನಾ] ಉಚ್ಚೈಶ್ರವಸ್ಸು (ಪಾಲ್ಗಡಲೊಳ್ ಪುಟ್ಟಿದಾನೆಯಂ ಆನೆಗಳ್ ಗೆಲೆವರೆ ಕುದುರೆಗಳ್ ಕುದುರೆಯಂ ಕೀೞ್ಮಾಡೆ: **ಪಂಪಭಾ,** ೫. ೨೬)

ಪಾಲ್ಗಡಲೊಳ್ ಪುಟ್ಟಿದಾನೆ – [ನಾ] ಐರಾವತ (ಪಾಲ್ಗಡಲೊಳ್ ಪುಟ್ಟಿದಾನೆಯಂ ಆನೆಗಳ್ ಗೆಲೆವರೆ ಕುದುರೆಗಳ್ ಕುದುರೆಯಂ ಕೀೞ್ಮಾಡೆ: **ಪಂಪಭಾ,** ೫. ೨೬)

ಪಾಲ್ಮಟಿ – [ನಾ] ಹಾಲಿನ ಮಳೆ (ಒಸರ್ದಪುದಮರ್ದಿನ ಪಾಲ್ಮಟಿ ಪಸರಿಸಿತೆನೆ .. .. ಅಮೃತಕಿರಣಂಗಳ್: **ಆದಿಪು,** ೧೨. ೧೧)

ಪಾವಕ – [ನಾ] ಅಗ್ನಿ (ಕವಿದು ಮುಗಿಲ್ಗಳಲ್ಲಿ ಕಱಿಯುತ್ತಿರೆ ಪಾವಕಂ ಉರ್ಕುಗೆಟ್ಟು ಇದೆಂತುವೊ ತೊದಳಾಯ್ತು ದಾನಂ ಎನೆ: **ಪಂಪಭಾ,** ೫. ೯೬)

ಪಾವನ – [ನಾ] ಪವಿತ್ರ (ಎನಗೆ ನೆಲಸಿರಲ್ ಈ ತಪೋವನಮೆ ಪಾವನಂ ಎಂದು ತಪೋವನದ ಮುನಿಜನದ ಪರಮಾನುರಾಗಮಂ ಪೆರ್ಚಿಸಿ: **ಪಂಪಭಾ,** ೧. ೧೧೬ ವ)

ಪಾವುಗೆ – [ನಾ] [ಪಾದುಕಾ] ಹಾವುಗೆ, ಪಾದರಕ್ಷೆ (ವಿಷಮೋಚಿಕೆಗಳೆಂಬ ಪಾವುಗೆಗಳುಂ ಅಭೇದ್ಯಮೆಂಬ ಕವಚಮುಂ: **ಆದಿಪು,** ೧೫. ೩ ವ)

ಪಾಶುಪತಬಾಣ – [ನಾ] ಪಾಶುಪತಾಸ್ತ್ರ (ಅವಂ ಉಗ್ರ ಪಾಶುಪತಬಾಣದಿನಲ್ಲದೆ ಸಾಯಂ: **ಪಂಪಭಾ,** ೧೧. ೧೩೦)

ಪಾಶುಪತಾಸ್ತ್ರ – ಶಿವ ಅರ್ಜುನನಿಗಿತ್ತ ಅಸ್ತ್ರ (ಪೆಱತೇನುಮನೊಲ್ಲೆಂ ನಿಮ್ಮಡಿ ಪಾಶುಪತಾಸ್ತ್ರಮಂ ದಯೆಗೆಯ್ವುದು: **ಪಂಪಭಾ,** ೮. ೨೫ ವ)

ಪಾಶುಪಾಲ್ಯ – [ನಾ] ಪಶುಪಾಲನೆ (ತನ್ನ ಪಡೆದ ಕ್ಷತ್ರಿಯವಣಿಕ್ಶೂದ್ರರೆಂಬ ಮೂಱುವರ್ಣಂಗಳೊಳಗೆ .. .. ವಣಿಗ್ವಂಶಕ್ಕೆ ಪಾಶುಪಾಲ್ಯ ಕೃಷಿ ಪಣ್ಯಕರ್ಮಂಗಳುಮಂ: **ಆದಿಪು,** ೮. ೬೪ ವ)

ಪಾಷಂಡಿ – [ನಾ] ಧರ್ಮವಿರಹಿತ (ಪಾಷಂಡಿಗಳರೆಬರ್ ಪುಟ್ಟಿಯುಮಡಂಗುವರ್: **ಆದಿಪು,** ೧೫. ೨೯)

ಪಾಷಾಣ – [ನಾ] ಕಲ್ಲು (ಅದನಾಳ್ವಂ ಅತುಳಭುಜಬಳಸಂಚೂರ್ಣಿತ ಅರಾತಿಪಾಷಾಣಂ ಶ್ರೀಷೇಣನೆಂಬರಸಂ: **ಆದಿಪು,** ೩. ೩೫ ವ)

ಪಾಸಂಗೆ – [ನಾ] [ಪಾಶಕ] ಪಗಡೆಯ ದಾಳ (ದುರ್ಯೋಧನಂ ಒಕ್ಕಲಂ ಪುಡಿಯೊಳ್ ಪೊರಳ್ಚುವಂತೆ ಪಾಸಂಗೆಯಂ ಪೊರಳ್ಚೆ ಮುನ್ನಂ ನೆತ್ತಮನಱಿಯದನಂತೆ ಅವರ ದಾಯಮನಾಡೆ: **ಪಂಪಭಾ,** ೬. ೭೧ ವ)

ಪಾಸಗೆಯ ಕಣ್ – [ನಾ] ಪಗಡೆಯ ದಾಳದ ಮೇಲಿನ ಗುರುತು (ಭಯಮಱಿಯದ ಕಲಿಯುಂ ಚಾಗಿಯುಂ ಎನಿಸದೆ ನಾಡೆ ಲೋಭಿಯುಂ ಪಂದೆಯುಂ ಆಗಿಯೆ ಬಾಳ್ವಂಗಲ್ಲದೆ ಸೂಳೆಯ ಕಣ್ ಪಾಸಗೆಯ ಕಣ್ಣುಂ ಎಂ ಉಱಗುಗುಮೇ: **ಪಂಪಭಾ,** ೬. ೭೩)

ಪಾಸಟಿ – [ನಾ] ಸಮಾನನಾದವನು (ಪವನಸುತಂಗೆ ಪಾಸಟಿಗಳೊರ್ವರುಂ ಇಲ್ಲದೞಿಂದಂ ಆಂತ ಕೌರವಬಲದ ಉರ್ಕನೊಂದಿನಿಸು ಮಾಣಿಸಿ ಪೋಪಂ: **ಪಂಪಭಾ,** ೧೨. ೧೨೧)

ಪಾಸಟಿಯಾಗು – [ಕ್ರಿ] ಸಮಾನವಾಗು (ಅವರ ಕೆಲದೊಳಗೆ ಇರ್ವರ್ ಪಾಸಟಿಯಾಗಿರ್ಪುದೆಂದು ನಿಂದ ನೆಲೆಯೊಳ್ ತಳರದೆ ನಿಲ್ವಂತಾಗಿರಿಸಿ: **ಪಂಪಭಾ,** ೧೧. ೮೬ ವ);

ಪಾಸಱಿ – [ನಾ] ಹಾಸುಬಂಡೆ (ಕಡುಪಿನೆ ಪೊತ್ತು ಪಾಸಱಿಯಂ ಎಯ್ತರೆ ಭೀಮನುಂ ಒತ್ತಿ ಕಿಟ್ಟು ಬೇರೊಡನೆ ಮಹೀಜಮೊಂದಂ: **ಪಂಪಭಾ,** ೩. ೧೮)

ಪಾಸು – [ಕ್ರಿ] ಹರಡು (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಮುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ); [ನಾ] ಹಾಸುಗೆ (ಪಾಸುಗಳೊಳ್ ನೆಲಸಿತ್ತು ಪೂತ ಗೊಜ್ಜಗೆಗಳ ಸಿಂದುರಂಗಳೊಳಗೆ ಓಗರಗಂಪನೆ ಬೀಱುತ; **ಪಂಪಭಾ,** ೫. ೩೦)

ಪಾಸುಂ ಪೊಕ್ಕುಂ – [ನಾ] ಹಾಸುಹೊಕ್ಕು, ಅಡ್ಡ–ಉದ್ದ (ನುಡಿದಂ ಪಾಸುಂ ಪೊಕ್ಕುಂ ಪರೆದು ಸಭಾಸದನಂ ತೊಳಗಿ ಬೆಳಗೆ ದಂತಪ್ರಭೆಗಳ್: **ಪಂಪಭಾ,** ೯. ೩೪)

ಪಾಳಮಿರು – [ಕ್ರಿ] ಸರದಿಯಲ್ಲಿರು (ಮುಂದಿಟ್ಟು ಚಕ್ರಮಂ ತಿರಿತಂದುದುಮಂ ಪಾಳಮಿರ್ದು ಬೈಕಂಗೊಳ್ವೊಂದಂದದೆ ಕೊಂಡುದುಮಂ ಅದೇನೆಂದುನ್ನತಿಮಾಡಿ ಪೊಗೞ್ವೆಯೊಳಗಱಿಯದುದೇ: **ಆದಿಪು,** ೧೪. ೬೭) [ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳು ಸ್ವೀಕರಿಸಿರುವ **'ಪಾಳಮಿರ್ದು ಬೈಕಂಗೊಳ್'** ಎಂಬುದರ ಬದಲು ವೆಂಕಟಾಚಲಶಾಸ್ತ್ರಿಗಳು **'ಪೂಟದಿರ್ದು ಬಯ್ತಂಗೊಳ್ವೊಂದಂದದೆ'** ಎಂಬ ಪಾಠವನ್ನು ಸ್ವೀಕರಿಸುತ್ತಾರೆ]

ಪಾಳಯ – [ನಾ] ಬೀಡು (ಆನಂದಭೇರೀಬೃಹದ್ಧ್ವನಿಯಿಂ ಪಾಳಯಮಾಯ್ತದೊಂದು ಪಿರಿದುಂ ಚೆಲ್ವಿಂಗೆ ರಾಜಾಲಯಂ: **ಆದಿಪು,** ೮. ೩೬) [ಎಲ್. ಬಸವರಾಜು ಅವರ ಆವೃತ್ತಿ]

ಪಾಳಿ – [ನಾ] ಚೂರ್ಣ (ಅತಿಸುರಭಿ ಸಹಕಾರ ಕಸ್ತೂರಿ ಕರ್ಪೂರಪಾಳಿಸಮ್ಮಿಶ್ರ ತಾಂಬೂಳರಾಗಾರಕ್ತಾಧರ ಪ್ರವಾಲ ಪ್ರಭಾಪ್ರಕಟಿತ ಪೂರ್ವಸಂಧ್ಯಾರಾಗನುಂ: **ಆದಿಪು,** ೩. ೯೦ ವ); [ನಾ] ರೆಪ್ಪೆಗೂದಲು (ಅತಿಸೂಕ್ಷ್ಮಪಾಳಿಪರಿಚ್ಯುತ ತರಳತರನಯನೋದಬಿಂದು ಸಂದೋಹ ರಸವಶಗತನಾಗಿ: **ಆದಿಪು,** ೪. ೧೫ ವ)

ಪಾಳಿಕೇತನ – [ನಾ] ಚಾಳುಕ್ಯರ ಕಾಲದ ರಾಜಚಿಹ್ನೆ (ಮುಂದೆ ಧವಳಚ್ಛತ್ರ ಚಂದ್ರಾದಿತ್ಯ ಪಾಳಿಕೇತನಾದಿ ರಾಜಚಿಹ್ನಂಗಳುಂ ಮೊಱಗುವ ಮಂಗಳತೂರ್ಯಂಗಳೆಸೆಯೆ: **ಪಂಪಭಾ,** ೩. ೪೮ ವ)

ಪಾಳೆ – [ನಾ] ಹಾಳೆ, ಪಟ್ಟಿ (ಪಸಿಯ ನೇತ್ರದ ಅಸಿಯ ಪಾಳೆಯೊಳ್ ತಲೆನವಿರಂ ಪಚ್ಚುಗಂಟಿಕ್ಕಿ ಮಣಿಮಯ ಮಕುಟಮಂ ಕವಿದು: **ಪಂಪಭಾ,** ೧೨. ೧೦೮ ವ)

ಪಾಱ್ – [ಕ್ರಿ] ವ್ಯಾಪಿಸು (ಕಪ್ಪುರದ ಪಾಱುವ ಸುಟ್ಟುರೆ ಪೂವಿನುರ್ಬು ಕತ್ತುರಿಯ ತಗುಳ್ದು ಪೊಯ್ವ ಸೊವಡು: **ಆದಿಪು,** ೨. ೫); [ನಾ] ಹಾರು ಮತ್ತು ವಿಮಾನ (ನಾಗಿಣಿಯರ ಕೆಯ್ತಮೇಂ ತೆ ಕಳೆ ಪಾಱುವ ಪಾಱಗ'ಳಂದಮಂ ಬೆಡಂಗು ಅಣಿಯರಮೀಕೆಗೆಂದು ಪೊಗೞ್ವರ್: **ಆದಿಪು,** ೪. ೪೭); [ನಾ] ಚಾಂಚಲ್ಯ (ಪಾಱನೆ ಕರಂ ಪಿಱಿದುಂ ಗಟಿಪುತ್ತುಮಿರ್಩ಳಂ ಸಾರಿಕೆಯೆಂಬರಲ್ಲದೆ ಅಭಿಸಾರಿಕೆಯೆಂಬರೆ ಬುದ್ಧಿಯುಳ್ಳವರ್: **ಪಂಪಭಾ,** ೪. ೮೩)

ಪಾಱೆ ತಿನ್ – [ಕ್ರಿ] ಹಾರಿ ತಿಂದು ಹಾಕು, ಚಕ್ಕನೆ ಕೊಲ್ಲು (ಅರಿಗನೊಳ್ ತಲೆಮಟ್ಟು ಇದಿರಾಗಿ ನಿಂದು ಸೂತಜಂ ಇಱಿವಂ ಗಡಂ ಪಗೆಯನೇಂ ಗಳ ಪಟ್ಟಮೆ ಪಾಱೆ ತಿಂಬುದೇ: **ಪಂಪಭಾ,** ೧೨. ೪೦)

ಪಾಱಿಸು – [ಕ್ರಿ] ಓಡಿಸು, ನಿವಾರಿಸು (ಗಾಣರ ಗೇಯಂ .. .. ಓಪಳ ಸೋಂಕು .. .. ಕಂಪು ಕಂಪನೊಳಕೊಂಡವೊಂದೆಲರೆಂಬಿವು ಅಂದು ಪಾಱಿಸುವುವು ಉದಗ್ರವೀರಭಟರ ಆಹವಕೇಳಿ ಪರಿಶ್ರಮಂಗಳಂ: **ಪಂಪಭಾ,** ೧೧. ೪)

ಪಾಱು – [ನಾ] ಜಾರಸ್ತ್ರೀ (ನಾಗಿಣಿಯರ ಕೆಯ್ತಮೇಂ ತೆ ಕಳೆ ಪಾಱುವ ಪಾಱುಗಳೆಂದಮಂ ಬೆಡಂಗು ಅಣಿಯರಂ ಈಕೆಗೆಂದು ಪೊಗಟ್ಟರ್: **ಆದಿಪು,** ೪. ೪೭); [ಕ್ರಿ] ಚಿಮ್ಮಿಹೋಗು (ಮೀಱುವೆವೆಂಬ ಮಾಂಡಳಿಕರ್ ಈಯದರೆಂಬ ಅದಟರ್ ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱಿ ನಭಕ್ಕೆ ಪಾಱಿದುದು: **ಪಂಪಭಾ,** ೧. ೧೧೯)

ಪಾಱುಂಬಳೆ – [ನಾ] ಹಾರುವ ಬಳೆ, ಚಕ್ರಾಯುಧ (ಪಾಱುವ ಪಾಱುಂಬಳೆ ಕೊಳೆ ಜೀಱಿಟ್ಟಂಬರಕೆ ತಲೆ ಸಿಡಿಲ್ದೊಡಂ ಆ ಕಾಯ್ಪಾಱದೆ ಹರಣಂಗೆಯ್ದುವು ಜಾಱಲ್ಲದೆ ಜೋದರ ಅಟ್ಟೆಗಳ್ ಕೆಲವಾಗಳ್: **ಪಂಪಭಾ,** ೧೦. ೯೫)

ಪಾಱಿೀಟಿ್ – [ಕ್ರಿ] ಚಿಮ್ಮಿ ಹೋಗು (ಏಟುಂ ಮಾಳವನಮಂ ಪಾಱೀಟಿ ತಗುಳ್ದಿಱಿದು ನರಗನುರಿಪಿದೊಡೆ ಕರಿಂಕೇಟಿಸಿದಾತನ ತೇಜದ ಬೀಟಲಂ ಅನುಕರಿಪುವಾದುವು ಒಗೆದುರಿಗಳ್: **ಪಂಪಭಾ,** ೧. ೩೫)

ಪಾಟ್ – [ನಾ] ಹಾಳು ಭೂಮಿ (ಇನರಶ್ಮಿಯೆಂಬ ಕಸಮಂ ಕಳೆದು ಅಂಬರಮೆಂಬ ಪಾಟನೇಱಿಸಿದುದು ಅಸಿತಾಂಬುವಾಹಕ ಕುಳಮೆಂಬ ಕುಟುಂಬಕದಂಬೋತ್ಕರಂ: **ಆದಿಪು,** ೬. ೭೧); [ನಾ] ಬರಿದಾದದ್ದು (ಅಱಿಕೆಯ ಸರಲಿಂದೂಱಿಕೊಂಡಾವ ಮೆಯ್ಯುಂ ಪಾಟೆಂಬಂತಾಗೆ ಪಾರ್ದಾರ್ದುದುಱಿಸೆ ಮುಳಿಸಿಂ ನೂರ್ವರುಂ .. .. ಬಿಟ್ಟಿರ್: **ಪಂಪಭಾ,** ೧೧. ೯೫)

ಪಾಟಿಮಿರ್ – [ಕ್ರಿ] ವ್ರತತೊಡು (ಮುಂದಿಟ್ಟು ಚಕ್ರಮಂ ತಿರಿತಂದುದುಮಂ ಪಾಟಿಮಿರ್ದು ಬೈಕಂಗೊಳ್ವೊಂದಂದದೆ ಕೊಂಡುಂ ಅದನೇನೆಂದುನ್ನತಿಮಾಡಿ ಪೊಗಟ್ವೆ: **ಆದಿಪು,** ೧೪. ೬೭) [ಎಲ್ ಬಸವರಾಜು ಸ್ವೀಕರಿಸಿದ ಪಾಠ: **'**ಪಾಳಮಿರ್**'** ಅದನ್ನಿಲ್ಲಿ ಬದಲಾಯಿಸಿದೆ]

ಪಾಟೆ – [ನಾ] ಕರ್ತವ್ಯ (ಶನಿ ನಿಲ್ವವೊಲಿಲ್ಲಿ ಪಾಟೆಗಿನ್ನೆವರಂ ಇರ್ದೆವು ಇನ್ನೆಮಗೆ ನಿತ್ತರಿಸಲ್ ನೆಱವಿಲ್ಲ: **ಆದಿಪು,** ೯. ೮೯); [ನಾ] ಧರ್ಮಕ್ರಮ (ಮಾಂಕರಿಸದಱಿವು ಗುರು ವಚನಾಂಕುಶಮಂ ಪಾಟೆಯೆಡೆಗೆ ಪೊಣರ್ದರಿಬಲಮಂ ಕಿಂಕೊಳೆ ಮಾಟ್ಪೆಡೆಗಣಮೆ ನಿರಂಕುಶಮೆನಿಸಿದುದು ಮುನಿಸು ಭದ್ರಾಂಕುಶನಾ: **ಪಂಪಭಾ,** ೧. ೩೨)

ಪಾಟೆಯ ಪಸುಗೆ – [ನಾ] ಧರ್ಮವಿವೇಕ (ಎಂದ ನೃಪಪರಮಾತ್ಮನ ಪಾಟೆಯ ಪಸುಗೆಯ ನುಡಿಗೆ ಪರಮಾರ್ತನಾಗಿ: **ಪಂಪಭಾ,** ೧೨. ೧೭೬ ವ)

ಪಾಟೆಯ ಬಟ್ಟೆ – [ನಾ] ನ್ಯಾಯಮಾರ್ಗ, ಧರ್ಮಮಾರ್ಗ (ದಾಯಿಗರತ್ತಣಿನಪ್ಪ ಅಪಾಯಕೋಟಿಗೆ ಪವಣಿಲ್ಲ ಕಲ್ಪಿಗೆ ಎಡೆಯಾವುದೊ ಪಾಟೆಯ ಬಟ್ಟೆದಪ್ಪಿ ಮುಂ ನೆಗಟ್ದೆಯಿಲ್ಲ: **ಪಂಪಭಾ,** ೭. ೨೧)

ಪಾಟ್ವಿಕ್ಕೆವಡು – [ಕ್ರಿ] [ಪಾಟ್ವಿಕ್ಕೆ+ಪಡು] ಹಾಳುಬಿದ್ದ ಮನೆಯಲ್ಲಿ ಮಲಗು, ಅಂದರೆ ವಾಸಿಸು (ಮದೀಯ ಪ್ರಾಣವಲ್ಲಭನನೆಲ್ಲಿ ಪೊಕ್ಕುಮೆಲ್ಲಂದದೊಳಮಱಸು ಎಂದಟ್ಟಿದೊಡೆ ಬಂದಿದನಿಲ್ಲಿ ಪಸರಿಸಿ ಪಾಟ್ವಿಕ್ಕೆವಟ್ಟಿರ್ದಂ: **ಆದಿಪು,** ೪. ೨೧ ವ)

ಪಿಂಗ – [ಗು] ಕಂದು ಬಣ್ಣ[ದ] (ಹಿಮಶೈಲಾಗ್ರಸ್ಸರೋರುಹರಜಃ ಪಿಂಗಾಂಗೆಯಂ: **ಆದಿಪು,** ೧೧. ೫೬)

ಪಿಂಗಳಾಕ್ಷ – [ಗು] ಕೆಂಗಣ್ಣು, ಉರಿಗಣ್ಣು (ಜಳಧರಸಮಯನಿಶಾಸಂಚಲಿತ ವಿದ್ಯುತ್ ಪಿಂಗಳಾಕ್ಷಪಾತಂಗಳಿಂ ದೆಸೆಗಳಂ ನುಂಗುವಂತೆ ಮುಳಿದು ನೋಡಿ: **ಪಂಪಭಾ,** ೧೩. ೭೫ ವ)

ಪಿಂಗಳಿತ – [ನಾ] ಕೆಂಪು ಬಣ್ಣದ ಕಾಂತಿಯನ್ನುಳ್ಳ (ಮುಳಿಸಂ ನೆಱಪಲ್ಕೆ ಅರ್ಧಾವಳೀಕಶರರೂಪದಿಂದಸುಂಗೊಳೆ ದೂಣೆಯಿಂ ಪೊಳೆದು ಬರೆ ಕೆಯ್ಗೆ ತಾಂ ವಿಸ್ಫುಳಿಂಗಪಿಂಗಳಿತ ಭುವವಭವನಾಭೋಗಂ: **ಪಂಪಭಾ,** ೧೨, ೧೯೧)

ಪಿಂಗಾಕ್ಷ – [ನಾ] ಕೆಂಪು ಕಣ್ಣುಳ್ಳವನು, ದುರ್ಯೋಧನ (ತನಗೆ ಸಾವಂ ಸಮಕಟ್ಟುವಂತೆ ಪಿಂಗಾಕ್ಷಂ ಅಕ್ಷಕ್ರೀಡೆಯಂ ಶಕುನಿಯೊಳ್ ಸಮಕಟ್ಟಿ: **ಪಂಪಭಾ,** ೬. ೬೯ ವ)

ಪಿಂಗು – [ಕ್ರಿ] ಹಿಂಗು, ಕಳೆದುಹೋಗು (ಮಗಳೆ ಮನಸ್ತಮಂ ನಿನದೀಗಳೆ ಪಿಂಗುಗೆ: **ಆದಿಪು,** ೩. ೫೦); [ಕ್ರಿ] ಸಡಿಲಾಗು (ಕುಚದ್ವಯಮಧ್ಯದಲ್ಲಿ ತಾಂ ಪಿಂಗದೆ ನಟ್ಟ ದಿಟ್ಟಿಯಂ ಅವಂ ಕೀಟಲೆಂದನುಗೆಯ್ದು ತೂಗಿದಂ: **ಆದಿಪು,** ೧೨. ೧೪)

ಪಿಂಗೋಳ್ – [ನಾ] ಹಿಂಭಾಗ (ಕೇಕಯವಿಷಯಾಧೀಶ್ವರರಪ್ಪ ಕೈಕಯರಯ್ಯರುಂ ಒಂದು ಅಕ್ಷೋಹಿಣೀ ಬಲದೊಡನೆ ಸಿಡಿಲನುರುಳಿ ಮಾಡಿದಂತು ಪಿಂಗೋಳೊಳ್ ನಡೆಯೆ: **ಪಂಪಭಾ,** ೯. ೯೫ ವ)

ಪಿಂಚು – [ಕ್ರಿ] ಹಿಂದೆ ಬೀಳು (ಇಂಚೆಯ ಪಸವಿನ ಬಱದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡ ಊರ್ಗಳ್: **ಪಂಪಭಾ,** ೮. ೫೧)

ಪಿಂಛಚ್ಛತ್ರ – [ನಾ] ನವಿಲುಗರಿಯ ಕೊಡೆ (ಉಡುಗಿ ಪಿಂಚಚ್ಛತ್ರಮಂ ಪ್ರಶ್ರಯಾಕರವೇಷೋಚಿತರ್ ಅರ್ಘ್ಯಹಸ್ತರಿದಿರಂ ಬಂದರ್: **ಆದಿಪು,** ೧೨. ೬೮)

ಪಿಂಛಾತಪತ್ರ – [ನಾ] [ಪಿಂಛ+ಆತಪತ್ರ] ಪಿಂಛಚ್ಛತ್ರ (ನಡೆಯೆ ತುರಗಂ ಪೊನ್ನ ಆಯೋಗಂಗಳಿಂ ಅಮರ್ದು ಅಟ್ಟೆಯಿಂ ಪಡೆಯೆ ನೆಳಟಂ ಚಂಚತ್ ಪಿಂಛಾತಪತ್ರಮೆ ಕೂಡೆ ತಮ್ಮೊಡನೆ ಬರೆ: **ಪಂಪಭಾ,** ೯. ೧೦೨)

ಪಿಂಜರ – [ನಾ] ಹೊಂಬಣ್ಣ (ಕೆಲಂಬರ್ ಅರುಣಮಣಿಕುಳ ಪ್ರಭಾಜಾಳ ಜಟಿಳಿತಪಿಂಜರಂಗಳಾಗಿ ನಿಜರಾಗಪ್ರವಾಹ ಶಂಕೆಯಂ ಮಾಡುವ ಜಳಂಗಳಿಂದಂ: **ಆದಿಪು,** ೮. ೬೯ ವ)

ಪಿಂಜರಿತ – [ಗು] ಕಂದುಬಣ್ಣದ, ಹೊಂಬಣ್ಣದ (ಬಕ ಕರರ ಪಕ್ಷವಿಕ್ಷಿಪ್ತ ಕಂಜಕಿಂಜಲ್ಕಪುಂಜಪಿಂಜರಿತ ಆಚ್ಛೋದ ಪರಿಪೂರ್ಣತಟಾಕ: **ಆದಿಪು,** ೧. ೫೮)

ಪಿಂಜರೀಕೃತ – [ಗು] ಹೊಂಬಣ್ಣವಾದ (ನಿರ್ಭರೋತ್ಥಿತಪಿಷ್ಟಾತಕ ಪಿಂಜರೀಕೃತ ವಿಯಚ್ಚಕ್ರಂ: **ಆದಿಪು,** ೭. ೩೮)

ಪಿಂಡ – [ನಾ] ಉಂಡೆ (ವಿಪುಳಯಶಃಪಿಂಡಂ ಪುಣ್ಯಪುಂಜಂ ಆ ಕ್ಷತ್ರಧಾಮಧಾಮಂ: **ಆದಿಪು,** ೮. ೪೪); [ನಾ] ಸಮೂಹ (ಪಲವುಂ ರಾಜಚಿಹ್ನಂಗಳಂ ಬೆಳ್ಗೊಡೆಗಳ್

ತಳ್ವೊಯ್ದು ಅದೇಂ ಕಣ್ಗೊಳಿಸಿದುದೊ ಚಳತ್ ಚಂದ್ರಕಚ್ಛತ್ರಪಿಂಡಂ: **ಪಂಪಭಾ,** ೧೩. ೩೮)

ಪಿಂಡಚ್ಛೇದ – [ನಾ] ಪಿತೃಗಳಿಗೆ ಪಿಂಡಪ್ರದಾನ ನಿಲ್ಲುವುದು (ಮಗಳಂ ಈವೆನಪ್ಪೊಡೆ ಕೊಡಗೂಸೆಂಬುದು ಪೆಱರೊಡವೆ ಮಗನಂ ಈವೆನಪ್ಪೊಡೆ ಸಂತತಿಚ್ಛೇದಮುಂ ಪಿಂಡಚ್ಛೇದಮುಂ ಅಕ್ಕುಂ ಅದಱಿಂದ ಎನ್ನನೆ ಕುಡಲ್ವೇಟ್ಕುಂ: **ಪಂಪಭಾ,** ೩. ೨೫ ವ)

ಪಿಂಡದುಗ್ಧ – [ನಾ] ಹಾಲಿನಿಂದ ಮಾಡಿದ ಸಿಹಿತಿಂಡಿ (ಅಮೃತ ಪಿಂಡಾಯಮಾನ ಪಿಂಡದುಗ್ಧ ಸ್ನಿಗ್ಧಮುಮಪ್ಪ ಮನೋಹರಾಹಾರಮುಮಂ: **ಆದಿಪು,** ೧೧. ೨೬ ವ)

ಪಿಂಡಿಪಿಟಿ – [ಕ್ರಿ] ಚೆನ್ನಾಗಿ ಹಿಂಡು, ಹಿಂಸೆ ಮಾಡು (ಒಲ್ಲಣಿಗೆಯಂ ಪಿಟಿವಂತೆ ಪಿಂಡಿಪಿಟಿವ ಪಗೆಗೆ .. .. ಈ ಪದದೊಳ್ ಕಡಿದೊಟ್ಟಿದಾಗಳ್ ಗೆಲಲಾಱಿ: **ಪಂಪಭಾ,** ೧೨. ೨೦೬ ವ)

ಪಿಂಡುಗಂಕಣ – [ನಾ] ತೋಳಿನ ಒಂದು ಆಭರಣ (ಸಿರಿಸದ ಬಾಸಿಗಮಂ ಮಾಂಕರಿಸುವ ನಳಿತೋಳ ಪಿಂಡುಗಂಕಣದ ಸರಂ ಮೊರೆವಳಿಗಳ ಸರಮಂ ಚಪ್ಪರಿಸುವಿನಂ ಚೆನ್ನೆ ಪೊನ್ನೆಯರಲಂ ಕೊಯ್ದಳ್: **ಆದಿಪು,** ೧. ೧೦೨)

ಪಿಂತಿಕ್ಕು – [ಕ್ರಿ] ಅಲಕ್ಷ್ಯಮಾಡು (ಸತ್ಕೃತಮಂ ಪಿಂತಿಕ್ಕಿ ಜೋಳಕ್ಕೆ ತಪ್ಪಯುಂ ಇಂ ಬಾಟ್ವುದೆ: **ಪಂಪಭಾ,** ೯. ೮೪)

ಪಿಂತಿರಿಸು – [ಕ್ರಿ] ಹಿಂದಕ್ಕೆ ಕುಳ್ಳಿರಿಸು (ನೂರ್ವರ್ ತಮ್ಮಂದಿರುಮಂ ಪಿಂತಿರಿಸಿ ಲಕ್ಕಣಂ ಮೊದಲಾಗೆ ನೂರ್ವರ್ ಮಕ್ಕಳುಮಂ ಮುಂತಿರಿಸಿ: **ಪಂಪಭಾ,** ೯. ೨೮ ವ)

ಪಿಂಬಡು – [ನಾ] [ಮುಳುಗಿದ] ಬಳಿಕ (ಆ ಸರಸೀಜಬಾಂಧವನ ಪಿಂಬಡಿನೊಳ್ ಕಡುವಿನ್ನನಾದುವಿಂತೀ ಸರಸೀರುಹಂಗಳ್ ಅವಂ ಈ ಪದದೊಳ್: **ಪಂಪಭಾ,** ೪. ೪೭); [ನಾ] ತರುವಾಯ, ತೀರಿಕೊಂಡ ನಂತರ (ನುಡಿ ನಿನಗಂ ದಿನೇಶತನಯಂಗಂ ಅದೆನ್ನಯ ಪಕ್ಕದೆ ಆದೊಡಂ ಮಿಡುಕದೆ ಕೇಳ್ವೆಂ ಅಲ್ಲಿ ಸಮಂ ಇರ್ವರುಂ: **ಪಂಪಭಾ,** ೧೩. ೨೮)

ಪಿಕ – [ನಾ] ಕೋಗಿಲೆ (ನವಚೂತಾಂಕುರ ಸುರಭಿದ್ರವಮಂ ಸವಿದನಿತಱಿಂದೆ ಮದನಧನುರ್ಜ್ಯಾರವಸನ್ನಿಕಾಶಮೀಗಳ್ ಕಿವಿಯಂ ಮುಟ್ಟಿದುದು ಪಿಕದ ಪಂಚಮನಿನದಂ: **ಆದಿಪು,** ೧೧. ೮೬)

ಪಿಕ್ಕು – [ಕ್ರಿ] ಬಿಡಿಸು, ಕೆದಕು (ಕುಲಮೆಂಬುದುಂಟೆ ಬೀರಮೆ ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀಂ ಒಲಿದಲ್ಲಿ ಪುಟ್ಟಿ ಬಳೆದಿರೊ ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ: **ಪಂಪಭಾ,** ೨. ೮೩)

ಪಿಡಿ – [ಕ್ರಿ] ಹಿಡಿ, ಉದ್ದಕ್ಕೂ (ಕಲ್ಪಮಹೀಜದ ಪಕ್ಕದ ಇರ್ಕೆಲಂ ಪಿಡಿದು ಮಡಲ್ತು ತೋಱುವ ಲತಾವಳಿಗಳ್ಗೆಣೆಯಾಯ್ತು: **ಆದಿಪು,** ೨. ೪); [ನಾ] ಹೆಣ್ಣಾನೆ (ವ್ಯೂಹದೊಳ್ ನಿಟ್ಟೆವಟ್ಟು ಮಣಿಮಯ ಮಂಡನಾಯೋಗದೊಳ್ಗೊಡಂಬಟ್ಟ ಪಿಡಿಗಳುಮಂ: **ಆದಿಪು,** ೪. ೫೪ ವ); [ಕ್ರಿ] ತೆಗೆದುಕೊ (ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊದನೀವೆನೆಂದನೆ ನೊಂದು ಅಃ ಎಂದನೆ ಸೆರಗಿಲ್ಲದೆ ಪಿಡಿಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ: **ಪಂಪಭಾ,** ೧. ೧೦೨); [ಕ್ರಿ] ಆಶ್ರಯಿಸು (ಪಿಡಿದರವರ್ ಅಸುರವೈರಿಯಂ ಒಡಂಬಡಿಸಿ ತೊಟ್ಟುವೆಸನದಿಂ ಆಂ ನಿಮ್ಮಡಿಯಂ ಪಿಡಿದೆಂ: **ಪಂಪಭಾ,** ೧೦. ೮)

ಪಿಡಿಕೆಯ್ – [ನಾ] ಮುಷ್ಟಿ (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒಱೆ ಕರ್ಪಿಡಿದ ಪಣೆಕಟ್ಟು ಕೆಯ್ಪಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್: **ಪಂಪಭಾ,** ೧೦. ೭೧)

ಪಿಡಿಕುತ್ತು – [ನಾ] ಹಿಡಿಯಿರುವ ತಿವಿಯುವ ಆಯುಧ (ಆ ರಸತ್ತಾರುಗರ್ ಇಡುವ ಇಟ್ಟಿಯ ಪಿಡಿಕುತ್ತಿನ ಕಕ್ಕಡೆಯ ಕೋಳ್ಗೆ ಮರಪಟಲಂ ಪಾಯ್ದು: **ಪಂಪಭಾ,** ೧೨. ೬೦ ವ)

ಪಿಡಿಯಚ್ಚುವಿಡಿ – [ಕ್ರಿ] ಪಟ್ಟುಹಿಡಿ, ಬಲವಾಗಿ ಪ್ರತಿಪಾದಿಸು (ಪುರಜನಂಗಳೆಲ್ಲಂ ಓರೋರ್ವರನೆ ಪಿಡಿಯಚ್ಚುವಿಡಿದು ನುಡಿಯೆ ಕೆಲರ್ ಅನಾಗತಮನಱಿವ ಬುದ್ಧಿಯೊಡೆಯರ್ ಇಂತೆಂಬರ್: **ಪಂಪಭಾ,** ೨. ೮೬ ವ)

ಪಿಡಿವಡು – [ಕ್ರಿ] ಹಿಡಿಯಲ್ಪಡು, ಸೆರೆಯಾಗು (ಪಿಡಿವಟ್ಟಮ್ಮ ಬಟಲ್ದಿರೆ ಕಂಡಿರೆ ನಿಮ್ಮಳವಂ ನಿಮಗಂ ಈಗಳ್ ಈ ಎಡರಾಯ್ತೇ: **ಪಂಪಭಾ,** ೭. ೩೯)

ಪಿಡುಗು – [ಕ್ರಿ] ಸಿಡಿ (ಒಡಲುರಿಗುಂ ಮನಂ ಮಱುಗುಗುಂ ಕಿವಿ ಗಿಜ್ಜಿನೆ ಪೋಕುಮತ್ತ ಕಣ್ ಪಿಡುಗುಗುಂ ಎಯ್ದೆ ಬಾಯ್ಬಿಡದೆ ಬತ್ತುಗುಂ: **ಆದಿಪು,** ೧೨. ೪೦); [ಕ್ರಿ] ಆಸ್ಫೋಟಿಸು (ಅಂತು ನುಡಿದು ಕಾಯ್ಪಿನೊಳ್ ಪಿಡುಗಿ ನಡನಡನಡುಗಿ: **ಪಂಪಭಾ,** ೬. ೫೮ ವ); [ಕ್ರಿ] ಸೀಳು (ದೆಸೆ ಮಸುಳ್ದತ್ತು ವಾರ್ಧಿ ತಳರ್ದತ್ತು ನೆಲಂ ಪಿಡುಗಿತ್ತು ತೊಟ್ಟನೆ ಆಗಸಂ ಒಡೆದತ್ತು: **ಪಂಪಭಾ,** ೧೨. ೩೨)

ಪಿಣಿಲ್ – [ನಾ] ಜಡೆ (ಇಱಿವ ಪಿಣಿಲ್ ತೆರಳ್ದೊಱಗಿದ ಕಣ್ಬನಿ ಮಾಣದೆ ಮೋದೆ ಶೋಕದಚ್ಚಿಱಿವೊಲಿರ್ದ ಬಾಸುಟಿನೊಳ್ ಅಟ್ಟು ಕನಲ್ದು ಬಟಲ್ದು ಜೋಲ್ದ ಮೆಯ್: **ಪಂಪಭಾ,** ೧೪. ೫)

ಪಿತರ – [ನಾ] [ಪಿತೃ] ಸತ್ತಿರುವ ಹಿರಿಯ (ನೆಗಟ್ತೆಯ ಬೀರರೆಲ್ಲಂ ಬಡವರ ಪಿತರರಂತೆ ಮಿಳ್ಮಿಳ ನೋಡುತ್ತಿರೆ: **ಪಂಪಭಾ,** ೭. ೩೩ ವ)

ಪಿತಾಮಹ – [ನಾ] ತಾತ, ತಂದೆಯ ತಂದೆ (ಮತ್ತಿತ್ತ ನೆಗಟ್ತೆಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆಯೆನೆ ಕುಂತಿ ಕುಂತಿಭೋಜನ ಮನೆಯೊಳ್: **ಪಂಪಭಾ,** ೧. ೮೮)

ಪಿತೃದ್ವಂದ್ವ – [ನಾ] ತಾಯ್ತಂದೆಯರು (ಎಂಬನ್ನೆಗಂ ಎಯ್ದೆವಂದ ಪಿತೃದ್ವಂದ್ವಚರಣಕ್ಕೆ ವಿನಯವಿನಮಿತೋತ್ತಮಾಂಗನಾದಂ: **ಪಂಪಭಾ,** ೧೩. ೮ ವ)

ಪಿತೃದ್ವಯ – [ನಾ] ತಾಯ್ತಂದೆಯರು (ದೊರೆ ನಿಮಗಿಲ್ಲ ಭೂಭುವನದೊಳ್ ಪೆಱರಿರ್ವರೆ ನೋಂತಿರೀ ಜಗದ್ಗುರುಗೆ ಪಿತೃದ್ವಯಂಗಳೆನಿಸಲ್: **ಆದಿಪು,** ೭. ೧೧೨)

ಪಿತೃಪಿತಾಮಹ – [ನಾ] ಮುತ್ತಜ್ಜ (ಈ ಮಹಾಬಳನ ಪಿತೃಪಿತಾಮಹಂ ಸಹಸ್ರಬಳನೆಂಬಂ ಅಂಬರಚರಂ ಆತ್ಮೀಯಶ್ರಿಯನನುಭವಿಸಿ ವಿಷಯವಿರಕ್ತನಾಗಿ: **ಆದಿಪು,** ೨. ೧೮ ವ)

ಪಿತೃವನ – [ನಾ] ಶ್ಮಶಾನ (ತಮ್ಮ ದಿವ್ಯಾಯುಧಂಗಳೆಲ್ಲಮಂ ಆ ಪುರೋಪವನದ ಪಿತೃವನದ ಕೆಲದ ಶಮೀವೃಕ್ಷದ ಮೇಲೆ ಪುರುಷಾಕೃತಿಯಾಗಿ ನೇಲ್ಗಟ್ಟಿ: **ಪಂಪಭಾ,** ೮. ೫೨ ವ)

ಪಿನದ್ಧ – [ಗು] ಕಟ್ಟಿರುವ, ಸೇರಿಸಿರುವ (ಸುರತರುನಂದನಂಗಳಿರ ರತ್ನಪಿನದ್ಧ ವಿಮಾನಕುಟ್ಟಿಮಾಂತರ ಸುರತಾಲಯಂಗಳಿರ: **ಆದಿಪು**, ೩. ೪); [ಗು] ಆವೃತವಾದ (ಘನಮಿಥ್ಯಾತ್ವ ದವಾನಳಪಿನದ್ಧಜೀವಕ್ಕೆ ದೃಷ್ಟಮೋಹಪ್ರವಿನಾಶಮಿಲ್ಲದಂದು ಪುಟ್ಟದು ಮನದೊಳ್ ಸ್ವಮೋಕ್ಷಸಾಧನಂ: **ಆದಿಪು**, ೫. ೫೨)

ಪಿಪಾಸಾ – [ನಾ] ದಾಹ, ಬಾಯಾರಿಕೆ (ಕ್ಷುತ್ಪಿಪಾಸಾಶೀತಾತಪಪ್ರಮುಖ ಪರೀಷಹಂಗಳಂ ಸೈರಿಸಲಾಱದೆ: **ಆದಿಪು**, ೯. ೮೮ ವ)

ಪಿಪೀಲಿಕ – [ನಾ] ಇರುವೆ (ಸ್ಪರ್ಶನರಸನಘ್ರಾಣೇಂದ್ರಿಯ ಸಮನ್ವಿತಂಗಳಪ್ಪ ಪಿಪೀಲಿಕಾದಿ ತ್ರೀಂದ್ರಿಯಂಗಳ್: **ಆದಿಪು**, ೧೦. ೬೩ ವ)

ಪಿಶಂಗ – [ನಾ] ನಸುಗೆಂಪು, ಕಪಿಲವರ್ಣ, ಕೆಂಪು–ಕಪ್ಪು ಮಿಶ್ರವರ್ಣ (ಎನೆಯೆನೆ ರತ್ನರಶ್ಮಿಜಟಿಳಂ ಮಕುಟಂ ಮಣಿಕುಂಡಳಂ ಕನತ್ ಕನಕ ಪಿಶಂಗ ದೇಹರುಚಿ .. .. ಇಳಾಮರಂ ಅಂದು ಅಮರೇಂದ್ರರೂಪಮಂ: **ಪಂಪಭಾ**, ೮. ೭)

ಪಿಶಂಗಿತ – [ಗು] ನಸುಗೆಂಪಾದ (ಕರಿಯೂಥಪತಿಗಳೆರಡುಂ ಸರಸೀಜಳಮಂ ವಿಳಾಸದಿಂ ಪುಗುವವೊಲಾದರದಿಂದೆ ಪೊಕ್ಕು ತುಳ್ಕಿದರ್ ಅರವಿಂದರಜಃಪಿಶಂಗಿತ ಅಚ್ಛೋದಕಮಂ: **ಆದಿಪು**, ೧೪. ೧೦೬)

ಪಿರಿದೀ – [ಕ್ರಿ] [ಪಿರಿದು+ಈ] ಹೆಚ್ಚು [ಹಣ] ಕೊಡು (ಒರ್ವಳ್ ಕುಂಟಣಿಯುಪರೋಧಕ್ಕೆ ಪಿರಿದೀವ ಮುದುಪಮಂ ಉೞಿಯಲಂಜಿ ತನ್ನ ಬೇಸಱಂ ತನ್ನ ಸಬ್ಬವದಾಕೆಗೆ ಇಂತೆಂದಳ್: **ಪಂಪಭಾ**, ೪. ೯೯ ವ)

ಪಿಶಂಗಿತ – [ಗು] ನಸುಗೆಂಪು ಬಣ್ಣದಿಂದ ಕೂಡಿದ (ಆದರದಿಂದೆ ಪೊಕ್ಕು ತುಳ್ಕಿದ ಅರವಿಂದರಜಃಪಿಶಂಗಿತ ಆಚ್ಛೋದಕಮಂ: **ಆದಿಪು**, ೧೪. ೧೦೬)

ಪಿಷ್ಟ – [ನಾ] ಹಿಟ್ಟು (ಪಿಷ್ಟೋದಕಾದಿ ದ್ರವಾನ್ವಯ ವ್ಯತಿರೇಕಾನುವಿಧಾಯಿಯಪ್ಪ ಮದಶಕ್ತಿ ಎಂತು ತತ್ಕಾರ್ಯಂ ಅಂತೆ ತಚ್ಚೈತನ್ಯಂ: **ಆದಿಪು**, ೨. ೧೦ ವ)

ಪಿಷ್ಟಪೇಷಣ – [ನಾ] ಹಿಟ್ಟನ್ನೇ ಕುಟ್ಟುವುದು, ಪುನರುಕ್ತಿ (ನಿಚ್ಚಂ ನಿಚ್ಚಮೀ ಪಿಷ್ಟಪೇಷಣ ಚರ್ವಿತಚರ್ವಣಂ ಸುಖಮಿದೇಂ ನಿನ್ನಂ ಮರುಳ್ಮಾಡಿತೋ: **ಆದಿಪು**, ೩. ೬೯)

ಪಿಷ್ಟಾತಕ – [ನಾ] ಪರಿಮಳದ ಪುಡಿ, ಬುಕ್ಕಿ ಹಿಟ್ಟು (ದಿಶಾಯುವತಿ ಕೇಳಿಕೀರ್ಣಪಟವಾಸಚೂರ್ಣಂ ಜಗತ್ಕುಶೇಶಯನಿವಾಸಿನೀ ಪ್ರಮದಮುಷ್ಟಿಪಿಷ್ಟಾತಕಂ: **ಆದಿಪು**, ೧೧. ೧೫)

ಪಿಹಿತ – [ಗು] ಮುಚ್ಚಿದ (ಅಭಿನಂದನಜಿನಮಹಿಮೆಯಂ ಮಾಡಿ ಪಿಹಿತಪಾಪಾಸ್ರವಧಾರನಾದುದಱಿಂ: **ಆದಿಪು**, ೩. ೬೫ ವ); ಮರೆಮಾಡಿದ (ಧೂಳೀಪಟಲಪಿಹಿತಕೇತು ದ್ವಿಪಾನೀಕ ಘಂಟಾನಿವಹವ್ಯಾಪಾರಂ ಅಲ್ಲಿಂ ಬೞಿಕ ಹಯಖುರಧ್ವಾನಂ ಅಲ್ಲಿಂ ಬೞಿಕ್ಕೆ: **ಆದಿಪು**, ೧೪. ೯೪)

ಪಿಳ್ಳೆ – [ನಾ] ಹುಡುಗ (ಜವನೊಳ್ ಸೆರಗಿಲ್ಲದೆ ಪೋಗಿ ತಾಗಿ ತಂದಂ ಗಡ ವಿಕ್ರಮಾರ್ಜುನನೆ ಪಾರ್ವರ ಪಿಳ್ಳೆಯ ಪೋದ ಜೀವಮಂ: **ಪಂಪಭಾ**, ೬. ೨)

ಪಿಱಿತಿನಿ – [ನಾ] ಮಾಂಸಭಕ್ಷಕಳು (ಎಲೆ ಪಿಱಿತಿನಿ ಪೋ ಮುಟ್ಟದೆ ತೊಲಗು ಈ ನಾಲ್ವರ್ಕಳ ಅಸುವಂ ಅವರ್ಗಳ ಮೆಯ್ಯಿಂ ತೊಲಗಿಸಿ: **ಪಂಪಭಾ**, ೮. ೪೩)

ಪಿೞಿ – [ನಾ] ಹಿಂಡು (ನಿನ್ನಂ ಘಾತಿಸಿ ಬಿಡದಲೆದು ಪಿೞಿದು ಪಿಂಡಿದ ದುಃಖವ್ರಾತಮಿದು ಮಗಳೆ ನಿನ್ನ ಪುರಾತನ ದುಷ್ಕರ್ಮವಿಟಪಿಕಟುಫಲಂಗಳ್: **ಆದಿಪು**, ೩. ೩೮)

ಪಿೞಿದು ಪಿಂಡು – [ಕ್ರಿ] ತುಂಬ ಹಿಂಸೆ ಕೊಡು (ಈ ತೆಱದಿಂದಂ ನಿನ್ನಂ ಘಾತಿಸಿ ಪಿೞಿದು ಪಿಂಡಿದ ದುಃಖವ್ರಾತಮಿದು ಮಗಳೆ ನಿನ್ನ ಪುರಾತದುಷ್ಕರ್ಮವಿಟಪಿಕಟುಫಲಂಗಳ್; **ಆದಿಪು**, ೩. ೩೮)

ಪಿೞಿವರ್ – [ನಾ] ಹಿಂಡುವವರು (ಓರೊರ್ವರ್ ಓರೊರ್ವರಂ ಇಕ್ಷುಯಂತ್ರಂಗಳೊಳ್ ಕಬ್ಬಂ ಪಿೞಿವಂತೆ ಪಿೞಿವರುಂ: **ಆದಿಪು**, ೫. ೮೫ ವ)

ಪೀಠಮರ್ದಕ – [ನಾ] ಸ್ತ್ರೀಬೇಟೆಯಲ್ಲಿ ನಿಪುಣ (ಮೇಳದ ನಾಗರಿಕ ವಿಟ ವಿದೂಷಕ ಪೀಠಮರ್ದಕರ್ಕಳ್ವೆರಸು ಕಾಮದೇವನೋಲಗಕ್ಕೆ ಬರ್ಪಂತೆ ಸೂಳೆಗೇರಿಯೊಳಗನೆ ಬರ್ಪುದುಂ: **ಪಂಪಭಾ**, ೪. ೭೯ ವ)

ಪೀಠಾಂಭೋಜ – [ನಾ] ಕಮಲಪೀಠ (ಒರ್ವರಂ ಒರ್ವರ್ ಎಚ್ಚು ನಿಜಪೀಠಾಂಭೋಜದಿಂ ಬ್ರಹ್ಮನುಚ್ಚಳಿಪನ್ನಂ ಪಿರಿದೊಂದು ಸಂಕಟಮನೀ ತ್ರೈಲೋಕ್ಯದೊಳ್ ಮಾಡಿದರ್: **ಪಂಪಭಾ**, ೧. ೭೯)

ಪೀಡನೆ – [ನಾ] ಹಿಂಡುವಿಕೆ (ಪುಂಡ್ರೇಕ್ಷುದಂಡಂಗಳಂ ಕಡಿಕಡಿದು ಯಂತ್ರಪೀಡನೆಯಿಂ ರಸಂಗೊಳ್ವ ತೆಱನುಮಂ ಅಱಿಯೆ ಪೇೞ್ದು: **ಆದಿಪು**, ೬. ೭೭ ವ)

ಪೀಡೆ – [ನಾ] ತೊಂದರೆ (ತಾನಿರ್ದುಂ ತಾಯ ಗರ್ಭದೊಳ್ ಪೀಡೆಯನಂತೇನಂ ಮಾಡಿದನಿಲ್ಲ ಕೃಶಾನುವ ನೆೞಲುರದಂತೆವೊಲ್ ಕನ್ನಡಿಯಂ: **ಆದಿಪು**, ೭. ೩೨)

ಪೀತ – [ಕ್ರಿ] ಹೀರಿಕೊಂಡ (ಚಳಚ್ಚಾಮರವಾತ ಪೀತನಿಜಘರ್ಮಾಂಭಃ ಕಣಂ .. .. ಇರ್ದನಂದು ಸುಖದಿಂ ವಿದ್ವಿಷ್ಟವಿದ್ರಾವಣಂ: **ಪಂಪಭಾ**, ೩. ೮೫)

ಪೀತಾಂಬರ – [ನಾ] ಪೀತಾಂಬರಧಾರಿಯಾದ ವಿಷ್ಣು (ಸ್ಫುರಿತೋದ್ಯತ್ಕನಕಪ್ರಭಾಪ್ರಸರದಿಂ ಪೀತಾಂಬರಂ ಪದ್ಮವಿಷ್ಟರದಿಂ ಪಂಕಜವಿಷ್ಟರಂ: **ಆದಿಪು**, ೧೬. ೬)

ಪೀನಂ – [ಗು] (ಲಯಮಂ ಕರ್ಮತಮಸ್ತಮಕ್ಕೆ ಜಯಮಂ ಧರ್ಮಕ್ಕೆ ಪೀನಂ ಪರಾಜಯಂ ದೋಷಗಣಕ್ಕೆ : **ಆದಿಪು**, ೬. ೧೦೯)

ಪೀನವೃಷಸ್ಕಂಧ – [ನಾ] ನೀಳವಾದ ಹಾಗೂ ದಪ್ಪವಾದ ಕೊರಳುಳ್ಳವನು (ಆ ಪುಣ್ಯವತಿಯರಿರ್ಬರುಂ ಆ ಪರಮೇಶ್ವರನ ಮನಮನಿರ್ಕುಳಿಗೊಳೆ ಮತ್ತಾ ಪೀನವೃಷಸ್ಕಂಧನುಂ ಆ ಪದ್ಮಾಸ್ಯೆಯರ ಮನಮಂ ಇರ್ಕುಳಿಗೊಂಡಂ: **ಆದಿಪು**, ೮. ೨೫)

ಪೀಯಮಾನ – [ಗು] [ವಾಸನೆ] ಹೀರಲ್ಪಡುವ, ಕುಡಿಯಲ್ಪಡುವ (ಅತಿದೂರೋಚ್ಛ್ವಾಸವಿಕಾಸ ನಾಸಾಂಜಲಿಪುಟಪೀಯಮಾನ ದುಗ್ಧಹೈಯಂಗವೀನಮುಂ: **ಆದಿಪು**, ೧೧. ೨೬ ವ)

ಪೀಯೂಷಾಬ್ಧಿ – [ನಾ] ಹಾಲ್ಗಡಲು (ಆ ಪೀಯೂಷಾಬ್ಧಿ ದುಗ್ಧಪ್ಲವ ಧವಳ ಕನತ್ ಕಂದರಾತ್ ಮಂದರಾದ್ರೇಃ **ಪಂಪಭಾ**, ೧೪. ೨೭)

ಪೀರ್ – [ನಾ] ಕುಡಿ (ಪೀರ್ದಂ ದಿವ್ಯಭೋಗಾಮೃತರಸಮಂ ಒಱಲ್ದತ್ತೆಯಿಂದಚ್ಯುತೇಂದ್ರಂ: **ಆದಿಪು,** ೬. ೧೮); [ನಾ] ಹೀರು (ಮರುದೇವೀವದನಾಂಬುಜಾತರಸಮಂ ಪೀರ್ದಂ ನೃಪಂ ತುಂಬಿ ಕೇಸರಮಂ ಮುಟ್ಟದೆ ಬಂದು ಪದ್ಮಿನಿಯ ಪದ್ಮಾಮೋದಮಂ ಪೀರ್ವವಲ್: **ಆದಿಪು,** ೭. ೩೪)

ಪೀಲಿ – [ನಾ] ನವಿಲುಗರಿ [ಕಣ್ಣು] (ಸೋಲದೊಲೆಯ್ದೆ ಪೀರ್ದ ತೆಱದಿಂದೆಮೆಯಿಕ್ಕದೆ ನೋಟ್ಪಿ ಕಣ್ ಪೀಲಿವೊಲಾಗೆ: **ಪಂಪಭಾ,** ೪. ೪೩)

ಪೀಱು – [ನಾ] ಇರಿಚಲು (ಪಾಱುವ ವಿಮಾನದೊಂದಳ್ಳೇಱಿಂ ಪಱಿದುಗುವ ಮುಗಿಲ ನೀರ್ಗಳ ಪಲವುಂ ಪೀಱುಗಳೊಳೆಳಸಿ ಖಚರರನಾಱಿಸಿದುದು ಗಗನದೊಳ್ ವಿಯತ್ತಳಪವನಂ: **ಆದಿಪು,** ೪. ೮೬)

ಪುಂಖಾನುಪುಂಖ – [ನಾ] ಒಂದನ್ನು ಇನ್ನೊಂದು ಅನುಸರಿಸುವುದು, ಪರಂಪರೆ (ನೈಷ್ಠಿಕಮೆಂಬ ಮುಷ್ಟಿಯೊಳಂ ಪುಂಖಾನುಪುಂಖಮೆಂಬ ಶರಸಂಧಾನದೊಳ್ ಅವಯವದೊಳ್ ತೆಗೆದೊಡೆ: **ಪಂಪಭಾ,** ೨. ೫೨ ವ)

ಪುಂಜ – [ನಾ] ಗೊಂಚಲು (ನನೆಯ ಕೊನೆಯ ಮುಗುಳ ವನಲತಾ ನಿಕುಂಜದಿಂ ಪ್ರಸೂನರಜದ ಪುಂಜದಿಂ: **ಪಂಪಭಾ,** ೧. ೫೮)

ಪುಂಜಿ – [ನಾ] ಉಂಡೆ (ಪದಂಗಾಸಿದ ಪೊನ್ನ ಪುಂಜಿಯವೊಲಿರ್ದುದು ಕಣ್ಗೆ ಹಿಮಾಂಶುಮಂಡಲಂ: **ಪಂಪಭಾ,** ೩. ೮೦)

ಪುಂಜಿಸು – [ಕ್ರಿ] ರಾಶಿಮಾಡು (ಅಂತು ಕನಕರೇಣುಗಳ್ ಪುಟ್ಟಿದ ಪಾಸಱೆಗಳುಮಂ ಕನಕದ ಪಿರಿಯ ಸೆಲೆಗಳುಮಂ ಬೆಟ್ಟಾಗಿ ಪುಂಜಿಸಿ: **ಪಂಪಭಾ,** ೬. ೩೧ ವ); [ಕ್ರಿ] ಕೂಡಿಹಾಕು, ಒಟ್ಟುಗೂಡಿಸು (ಇಂತೀಗಳ್ ಎಂತುಂ ತವದಂತೆ ಏಂ ಪುಣ್ಯಮಂ ಪುಂಜಿಸಿದರೊ ಪಿರಿದುಂ ಶ್ರೀಮತೀವಜ್ರಜಂಘರ್: **ಆದಿಪು,** ೪. ೬೧)

ಪುಂಡರೀಕ – [ನಾ] ಬಿಳಿಯ ತಾವರೆ (ಸಾರ್ದತ್ತು ಜಕ್ಕವಕ್ಕಿಯ ಪೊಣರುಂ ಗ್ಲಪಿತಮನಮಾಗಳುದ್ದಂಡ ಪುಂಡರೀಕೋಜ್ಜ್ವಳ ಆತಪತ್ರದ ನೆೞಲಂ: **ಆದಿಪು,** ೧೧. ೫೦)

ಪುಂಡರೀಕಷಂಡ – [ನಾ] ತಾವರೆಗಳ ಸಮೂಹ[ವುಳ್ಳ] ಕೊಳ (ಪುಂಡರೀಕಷಂಡೋಪಾಂತದೊಳ್ ವಿಗತಜೀವರಾಗಿರ್ದ ಮೂವರು ಅನುಜರಂ ಕಂಡು: **ಪಂಪಭಾ,** ೮. ೪೧ ವ)

ಪುಂಡ್ರೇಕ್ಷು – [ನಾ] ಪಟ್ಟೆಯ ಕಬ್ಬು (ಪುಂಡ್ರೇಕ್ಷುದಂಡಂಗಳಂ ಕಡಿಕಡಿದು ಯಂತ್ರಪೀಡನೆಯಿಂ ರಸಂಗೊಳ್ವ ತೆಱನುಮಂ ಅಱಿಯೆ ಪೇೞ್ದು: **ಆದಿಪು,** ೬. ೭೭ ವ)

ಪುಂಡ್ರೇಕ್ಷುವಾಟ – [ನಾ] ಬಿಳಿಯ ಕಬ್ಬಿನ ಗದ್ದೆ (ರಸಮೊಸರ್ವುವು ಪುಂಡ್ರೇಕ್ಷುವಾಟಕೋಟಿಗಳದಱೊಳ್: **ಆದಿಪು,** ೧. ೫೯)

ಪುಂವೇದ – [ನಾ] [ಜೈನ] ಒಂದು ಬಗೆಯ ನೋಕಷಾಯ; ಗಂಡುಜೀವಕ್ಕೆ ಹೆಣ್ಣಿನ ಮೋಹವುಂಟುಮಾಡುವ ಕರ್ಮ (ಕ್ರಮಕ್ರಮದೊಳೆ ನಪುಂಸಕವೇದಮುಂ ಸ್ತ್ರೀವೇದಮುಂ ಪುಂವೇದಮುಂ ಪುರಾತನ ಸತ್‌ಕರ್ಮದೊಡನೆ ಹಾಸ್ಯ ರತಿ ಅರತಿ ಶೋಕ ಭಯ ಜುಗುಪ್ಸಾಭಿಧಾನ ನವನೋಕಷಾಯ ಷಟ್ಕಮುಮಂ ಘಾತಿಸಿ: **ಆದಿಪು,** ೧೦. ೧೪ ವ)

ಪುಗಲಿಂ – ಪ್ರವೇಶಿಸಬೇಡಿರಿ (ಇದಂ ಪುಗಲಿಂ ಗಡಿಂ ಎಂದು ಬೇಟಕಾಱರಂ ಇರದೆ ಊಱೆ ಸಾಱೆ ಜಡಿವಂತೆ ಎಸೆಗುಂ ಸಹಕಾರಕೋಮಳ ಅಂಕುರಪರಿತುಷ್ಟ ಪರಪುಷ್ಟಗಳ ಧ್ವನಿ ನಂದನಂಗಳೊಳ್: **ಪಂಪಭಾ,** ೨. ೧೩)

ಪುಗಲಿಲ್ಲ – ಒಳಬರಲು ಸಾಧ್ಯವಿಲ್ಲ (ಪುಗಲಿಲ್ಲ ಈ ಬನಂ ಆರ್ಗಂ ಇಂಬು ನೆಲಸಲ್ ನಾರುಂಟು ಉಡಲ್ ಮೆಲ್ಲೆ ಕೊಂಬುಗಳೊಳ್ ಪಣ್ಪಲಮುಂಟು: **ಪಂಪಭಾ,** ೭. ೩೦ ವ)

ಪುಗವೇೞ್ – [ಕ್ರಿ] ಒಳಬರಲು ಆದೇಶಿಸು (ನೆಗೞ್ದಿರೆ ಪುಣ್ಯಾಹಸ್ವರಂ ಒಗೆದಿರೆ ಪಟುಪಟಹಕಾಹಳರವವಾಗಳ್ ಪುಗವೇೞ್ದಂ ವಿವಿಧಾಸ್ತ್ರಪ್ರಗಲ್ಭರಂ ತನ್ನ ಚಟ್ಟರಂ ಕಳಶಭವಂ: **ಪಂಪಭಾ,** ೨. ೬೯)

ಪುಗಿಲ್ – [ನಾ] [ರಂಗಕ್ಕೆ] ಬರುವುದು (ರಸಭಭಾವಾಭಿನಯಂಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆ ಎನೆ ಪೊಸಯಿಸಿದಳಾಕೆ ನಾಟ್ಯಾಗಮಮಂ: **ಆದಿಪು,** ೯. ೨೫); [ನಾ] ಬಾಗಿಲು (ಕತ್ತುರಿಮೃಗಮದದೊಳ್ ಪುದಿದೆತ್ತಂ ಮಗಮಗಿಸೆ ಕಂಪು ಪೊಂಪುೞಿ ಪುಗಿಲೊಳ್: **ಆದಿಪು,** ೯. ೧೨೦); ಪ್ರವೇಶ (ಎಳವಿಸಿಲೀಗಳೀಗಳೆ ಮುದಿರ್ದುದು .. .. ಉನ್ಮದಷಟ್ಪದವೃಂದಮೀಗಳೀಗಳೆ ಮೊರೆದತ್ತು .. .. ಪುಗಿಲದಾಗಲೆವೇಡ ವಸಂತರಾಜನಾ: **ಆದಿಪು,** ೧೩. ೫); [ನಾ] ಕೋಗಿಲೆಯ ಕೂಜನ (ಉಣ್ಮುವ ಉಯ್ಯಲ ಪೊಸಗಾವರಂ ಪುಗಿಲೊಳ್ ಏಂ ಎಸೆದತ್ತೋ ಬಸಂತಮಾಸದೊಳ್: **ಪಂಪಭಾ,** ೨. ೧೨); [ನಾ] [ಬೇಟೆಯಾಡಬೇಕಾದ ಪ್ರಾಣಿ] ಒಳಬರುವುದು (ಇರ್ಕೆಯಂ ಪಕ್ಕೆಯಂ ಗಣಿದಮಂ ಕಂಡಿಯಂ ಮಾರ್ಕಂಡಿಯಂ ಪುಗಿಲಂ ಪೋಗಂ ಬಾರಿಯಂ ಸನ್ನೆಯಂ: **ಪಂಪಭಾ,** ೫. ೪೩)

ಪುಗಿಲ್ ಪುಗಿಲ್ – ಪ್ರವೇಶ ಪ್ರವೇಶ, ಬನ್ನಿ ಬನ್ನಿ (ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ ಪಣ್ತೆಱಗಿದ ತದಾಶ್ರಮದ ತರುಗಳ ಮೇಗಿರ್ದು ಪುಗಿಲ್ ಪುಗಿಲೆಂದಿತ್ತ ಬನ್ನಿಮಿರಿಮೆಂಬ ಪೊಂಬಣ್ಣದ ಕೋಗಿಲೆಗಳುಮಂ: **ಪಂಪಭಾ,** ೧. ೧೧೫ ವ)

ಪುಗಿಲ ಪುಲ್ಲೆ – [ನಾ] ಹೊಗುವ ಹುಲ್ಲೆ (ಪುಗಿಲ ಪುಲ್ಲೆಯ ಮೊದಲ ರವಮುಮಂ ಪೆಱಗಣ ಪುಲ್ಲೆಯ ನಡುವುಮಂ ಅಯ್ದುಱೊಳ್ ಮೂಱುಮಂ ಮೂಱಱೊಳ್ ಎರಡುಮಂ ಎರಡಱೊಳ್ ಒಂದುಮಂ ಎಚ್ಚು: **ಪಂಪಭಾ,** ೫. ೪೭ ವ)

ಪುಗಿಸು – [ಕ್ರಿ] ಸೇರಿಸು (ಮುತ್ತ ತವಸಿಗಳ ಕೈಯಂ ಪಿಡಿದುಯ್ದು ಅವರ ಗುಹೆಗಳಂ ಪುಗಿಪ ಪೊಱಮಡಿಪ ಚಪಳಕಪಿಗಳುಮಂ: **ಪಂಪಭಾ,** ೧. ೧೧೫ ವ)

ಪುಗು – [ಕ್ರಿ] ಪ್ರವೇಶಿಸು (ಕಿವಿಯಿಂ ಬಗೆವುಗುವೊಡೆ ಕೊಂಕುವೆತ್ತ ಪೊಸನುಡಿಯೆ ಪುಗುಗಂ ಉೞಿದುದು ಸಱುಸೈತವಚಱನೆ ಮಾಡಿ ಸಱುಸೈತುವೋಕುಂ ಏಂ ಬಗೆಯ ಬಟ್ಟೆಯನೇಂ ಮುಟ್ಟಿಗುಮೇ: **ಆದಿಪು,** ೧. ೧೮)

ಪುಚ್ಚವಣಂ ನೋಡು – [ಕ್ರಿ] ಪರೀಕ್ಷೆಮಾಡಿ ನೋಡು (ಪುಚ್ಚವಣಂ ನೋಡುವೆನೆನ್ನೆಚ್ಚೆಯೊಳೀ ಮುನಿಯ ವರದ ಮಹಿಮೆಯಂ ಎನುತ ಅಂದು ಉಚ್ಚಸ್ತನಿ ಗಂಗೆಗೆ

ಶಫರೋಚ್ಚಳಿತ ತರತ್ತರಂಗೆಗೆ ಒರ್ವಳೆ ಬಂದಳ್: **ಪಂಪಭಾ,** ೧. ೯೦)

ಪುಚ್ಚಟಿ – [ಕ್ರಿ] ನಾಶವಾಗು (ಬಿಸಿಲಳುರೆ ಪೊಣ್ಮಿದ ಘರ್ಮಬಿಂದುಗಳಿಂ ನಾಂದು ಪುಚ್ಚಟಿದರೆವೊರೆಕನಾದ ಕುಂಕುಮಪತ್ರಭಂಗದ ಕೊರಗಿದ ನಗೆಮೊಗಂಗಳುಂ: **ಆದಿಪು,** ೧೧. ೭೦ ವ); [ಕ್ರಿ] ಕೇಡುಂಟಾಗು (ಪೊಲ್ದು ಪೊಣ್ದು ಪುಚ್ಚಟಿಯದೆ ಉರ್ಕಿದ ಕೌರವರಂ ಪೊರಳ್ಚಿ ಕೊಂದು: **ಪಂಪಭಾ,** ೧೨. ೧೬೧)

ಪುಟ – [ನಾ] ಭರಣಿ (ತಮ್ಮ ವಾಸಕ್ಕೆ ಬರ್ಪರಂ ಶ್ರೀಮತಿಯುಂ ತಾನುಂ ಕಂಡು ಸಂಭ್ರಮವೆರಸಿ ಇದಿರಂ ನಡೆದು ಬದ್ಧಾಂಜಳಿಪುಟಘಟಿತ ನಿಟಿಲರಾಗಿ: **ಆದಿಪು,** ೪. ೯೫ ವ): [ನಾ] ದೊನ್ನೆ (ಸರೋವರಜಲಂಗಳಂ ಪದ್ಮಪತ್ರ ಪುಟಂಗಳಿಂ ತಂದು ಪದಪದ್ಮಂಗಳಂ ಕರ್ಚಿ ತತ್ಪಾದಪವಿತ್ರೋದಕಂಗಳಂ ಅನಿಬರುಂ ಉತ್ತಮಾಂಗದೊಳ್ ತಳಿದುಕೊಂಡಿರ್ದಾಗಳ್: **ಪಂಪಭಾ,** ೭. ೫೯ ವ); [ನಾ] ಸಮೂಹ (ಸಿಡಿಲ್ ಪೊಯ್ವಂತೆ ಪೊಯ್ವುದುಂ ರಥಯೂಥಧ್ವಜಶಸ್ತ್ರಶಂಖಪುಟದೊಳ್ ಘಂಟಾಸಮೇತಂ: **ಪಂಪಭಾ,** ೧೧. ೬೬) ['ಶಂಖಪುಟ ಎಂಬುದರ ಬದಲು ಡಿಎಲ್‌ಎನ್ **'ಸಂಘಟನ'** ಎಂಬ ಪಾಠವನ್ನು ಸ್ವೀಕರಿಸುತ್ತಾರೆ]

ಪುಟಪಾಕ – [ನಾ] ಶುದ್ಧಿಗೊಳಿಸಲು ಬೇಯಿಸುವುದು (ಪಸಿಯ ತೊವಲ ತಿದಿಯೊಳ್ ಪುದಿದು ಪುಟಪಾಕಂ ಸುಡುವರುಂ: **ಆದಿಪು,** ೫. ೮೫ ವ)

ಪುಟ್ಟಿಗೆ – [ನಾ] ಸೀರೆ (ಈ ಪೊತ್ತಿಂಗೆ ಈ ರುತುವಿಂಗೆ ಈ ಪಸದನಂ ಇಂತುಟಪ್ಪ ಮೆಯ್ವಣ್ಣಕ್ಕೆ ಇಂತೀ ಪೂವಿನೊಳ್ ಈ ತುಡುಗೆಯೊಳ್ ಈ ಪುಟ್ಟಿಗೆಯೊಳ್ ಬೆಡಂಗುವಡೆದು ಎಸೆದಿರ್ಕುಂ: **ಪಂಪಭಾ,** ೩. ೪೫); [ನಾ] ಬಟ್ಟೆ (ನಾಗವಿಭೂಷಣ ಪ್ರತತಿ ನಾಗರಖಂಡಂ ಅಪೂರ್ವಮಪ್ಪ ಪುನ್ನಾಗದ ಬಾಸಿಗಂ ಬಗೆದ ಬಣ್ಣದ ಪುಟ್ಟಿಗೆ: **ಪಂಪಭಾ,** ೪. ೧೭)

ಪುಟ್ಟಿಸು – [ಕ್ರಿ] ಉಂಟುಮಾಡು (ವಿಪ್ರಲಬ್ಧಬುದ್ಧಗೆ ಸಂತಾನರೂಪದಿಂ ಪುಟ್ಟುತ್ತಿರ್ದ ವಿಜ್ಞಾನಲಕ್ಷಣಂಗಳ್ ಆತ್ಮಾಭಿಮಾನಮಂ ಪುಟ್ಟಿಸುಗುಂ: **ಆದಿಪು,** ೨. ೯ ವ); [ಕ್ರಿ] ಸೃಷ್ಟಿಮಾಡು (ಪುಟ್ಟಿಸುವಂ ಬಿದಿ ಪುಟ್ಟಿದಂದಿವಂಗಿದು ಬಿಯಂ ಒಟ್ಟು ಇವಂಗಿದು ವಿನೋದಮಿವಂಗಿದು ಸಾವ ಪಾಮಗಿವಂಗಿದು: **ಪಂಪಭಾ,** ೧೨. ೧೮೨)

ಪುಟ್ಟು – [ಕ್ರಿ] ಜನಿಸು (ಸತ್ತನೆ ಮತ್ತೆ ಪುಟ್ಟುವಂ ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ: **ಆದಿಪು,** ೨. ೯); [ಕ್ರಿ] ಮೂಡು, ಉತ್ಪತ್ತಿಗೊಳ್ಳು (ಪೃಥ್ವಿ ಅಪ್ ತೇಜೋ ವಾಯುಗಳತ್ತಣಿಂ ಬಂದು ಗರ್ಭಾದಿಮರಣಪರ್ಯಂತಂ ತದಾತ್ಮಕಂ ಚೈತನ್ಯಂ ಪುಟ್ಟುಗುಂ: **ಆದಿಪು,** ೨. ೯ ವ)

ಪುಟ್ಟುವಿನೆಗಂ – ಉಂಟಾಗುವ ರೀತಿಯಲ್ಲಿ (ಲತೆಗಳ್ ಜಂಗಮರೂಪದಿಂದೆ ನೆರದುವೋ ದಿವ್ಯಾಪ್ಸರೋವೃಂದಂ ಈ ಕ್ಷಿತಿಗೇಂ ಇಂದ್ರನ ಶಾಪದಿಂದ ಇಟಿದುವೋ ಪೇಟಿಂಬ ಶಂಕಾಂತರಂ ಮತಿಗಂ ಪುಟ್ಟುವಿನೆಗಂ: **ಪಂಪಭಾ,** ೪. ೩೯)

ಪುಡಪುಡನೆ – [ಅ] [ಒಂದು ಅನುಕರಣ ಶಬ್ದ] ಸರಸರನೆ (ಪೊಗೆ ಪುಗೆ ಕಣ್ಣಂ ಸಿಂಗಂಗಳ್ ಅಳುರೆ ಗರ್ಜಿಸಿ ಲಂಗಿಸಿ ಪುಡಪುಡನೆ ಪುಟ್ಗಿ ಸತ್ತುವು ಪಲವುಂ: **ಪಂಪಭಾ,** ೫. ೯೨)

ಪುಡಿ – [ನಾ] ಹಿಟ್ಟು (ಬದ್ದವಣದ ಪುಡಿವೊಳ್ ಬೆನ್ನೊಳ್ ಬಿಡದಲುಗೆ ಕುಸುಮಕುಳರಜಂ: **ಆದಿಪು,** ೭. ೭೩); [ನಾ] ಮಣ್ಣು (ಮಚ್ಚರದಿಂ ಒರ್ವರನೊರ್ವರಂ ಉಚ್ಚಳಿಸಿ ತಗುಳ್ದು ಗೋವರ್ ಆರ್ದು ಇಸೆ ಕೀಟಿಂ ಕರ್ಚಿ ಪುಡಿಯೊಳ್ ಪೊರಳ್ದುವು ನಚ್ಚಿನ ಕಾಂಭೋಜವಾಜಿಗಳ್ ಕೆಲವಾಗಳ್: **ಪಂಪಭಾ,** ೮. ೯೪)

ಪುಡಿಗತ್ತುರಿ – [ನಾ] [ಪುಡಿ+ಕತ್ತುರಿ] ಕಸ್ತೂರೀ ಪುಡಿ (ಪಾಲ್ಗಡಲ ತೆರೆಯ ನೊರೆಯ ದೊರೆಯ ದುಕೂಲಾಂಬರದೊಳ್ ಇಂಬಾಗಿ ಚಲ್ಲಣಮನುಟ್ಟು ಪುಡಿಗತ್ತುರಿಯಂ ತಲೆಯೊಳ್ ತೀವೆ ಪೊಯ್ದು: **ಪಂಪಭಾ,** ೧೨. ೧೦೮ ವ)

ಪುಣ್ – [ನಾ] ಹುಣ್ಣು, ಗಾಯ (ಎರಡುಂ ಪಡೆಯ ನಾಯಕರ್ ಅಟಿಯೆ ನೊಂದ ತಮ್ಮಣುಗಾಳ್ಗಳ ಕೊಂಡಾಟದಾನೆಗಳ ನಚ್ಚಿನ ಕುದುರೆಗಳ ಪುಣ್ಗಳಂ ಉಡಿಯಲುಂ ಓವಲುಂ: **ಪಂಪಭಾ,** ೧೧. ೨ ವ)

ಪುಣ್ಣೂರ್ – [ಕ್ರಿ] ತೀಕ್ಷ್ಣವಾಗಿ ಗಾಯವಾಗು (ಮೆಯ್ವೆರ್ಚಿ ಪೆರ್ಚಿದ ಉಮ್ಮಚ್ಚರದೊಳ್ ಅಚ್ಚರಿಯಾಗೆಚ್ಚೊಡೆ ಪುಣ್ಣೂರ್ತು: **ಪಂಪಭಾ,** ೧೨. ೨೨ ವ)

ಪುಣ್ಯತೋಯ – [ನಾ] ಪವಿತ್ರ [ತೀರ್ಥದ] ನೀರು (ಪೊಂಗಳಸಂಗಳೊಳ್ ಇರ್ದ ಪುಣ್ಯತೋಯಂಗಳೊಳ್ ಅಟ್ಟಟಿಂ ಮಿಸಿಸಿ ಕಟ್ಟಿದನಾ ವಿಭು ವೀರಪಟ್ಟಮಂ: **ಪಂಪಭಾ,** ೧೦. ೧೫)

ಪುಣ್ಯತ್ವ – [ನಾ] ಪುಣ್ಯವನ್ನು ಪಡೆದಿರುವುದು (ಚಿತ್ರಾಂಗದೇವಂ ದೇವಲೋಕದಿಂದವತರಿಸೆ ಬಂದು ಸಮಾನಪುಣ್ಯತ್ವಂ ಕಾರಣಮಾಗಿ: **ಆದಿಪು,** ೬. ೩ ವ)

ಪುಣ್ಯಪಾಠಕ – [ನಾ] ಶುಭ ನುಡಿಯುವವನು, ಸ್ವಸ್ತಿವಾಚನ ಮಾಡುವವನು (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರ ಉದ್ಭೂತರವಂ ಎಸೆಯೆ: **ಪಂಪಭಾ,** ೧೨. ೧೦೬)

ಪುಣ್ಯಯಜ್ಞ – [ನಾ] [ಜೈನ] ದೀಕ್ಷೆ ಪಡೆದವನು ಮಾಡುವ ಚತುರ್ದಶಪೂರ್ವಗಳ ಓದುವಿಕೆ ಮತ್ತು ಕೇಳುವಿಕೆ, ಆರನೆಯ ದೀಕ್ಷಾನ್ವಯಕ್ರಿಯೆ (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ)

ಪುಣ್ಯವಾಸರ – [ನಾ] ಶುಭದಿನ (ತತ್ಪೂಜಾಕರಣ ಪುಣ್ಯವಾಸರಂಗಳೊಳ್ ಉಪವಾಸನಿರತಪರಿಮಿತ .. .. ಚಂದನಕರ್ಪೂರ ಪರಿಮಳಸುರಭಿಗಂಧೋದಕಂಗಳಿಂದಂ ಅಭಿಷೇಕಂಗೆಯ್ದು: **ಆದಿಪು,** ೧೬. ೧)

ಪುಣ್ಯಾಹ – [ನಾ] ಪುಣ್ಯದಿನದಲ್ಲಿ ಹೇಳುವ ಮಂತ್ರ (ನೆಗಟ್ದಿರೆ ಪುಣ್ಯಾಹಸ್ವರಂ ಒಗೆದಿರೆ ಪಟುಪಟಹಕಾಹಳರವವಾಗಳ್ ಪುಗವೇಟ್ದಿಂ ವಿವಿಧಾಸ್ತ್ರಪ್ರಗಲ್ಭರಂ ತನ್ನ ಚಟ್ಟರಂ ಕಳಶಭವಂ: **ಪಂಪಭಾ,** ೨. ೬೯)

ಪುಣ್ಯೋದಕಸ್ನಾನ – [ನಾ] ಪವಿತ್ರವಾದ ನೀರಿನಿಂದ ಮಾಡಿಸುವ ಸ್ನಾನ (ಮೊದಲೊಳ್ ಮಾಟ್ಪಿ ನಿಯೋಗಮಿಂತಿದೆನಗೆ ಎಂದಾನಂದದಿಂ ತಾನೆ

ಮಾಡಿದನಾ ಚಕ್ರಿಗೆ .. .. ಪುಣ್ಯೋದಕಸ್ನಾನಮಂ: **ಆದಿಪು,** ೧೩. ೧೬)

ಪುಣ್ಯೋದಯ – [ನಾ] ಪುಣ್ಯದ ಆಧಿಕ್ಯ (ಭೂಭುಜನ ದೋರ್ದಂಡಕ್ಕೆ ಪುಣ್ಯೋದಯಂ ನೆರಮಕ್ಕೆಂದು ಪಲುಂಬಿ ಪಂಬಲಿಪುದಾಯ್ತಾಂತಾಕುಳವ್ಯಾಕುಳಂ: **ಆದಿಪು,** ೧೨. ೧೨೫)

ಪುತ್ತು – [ನಾ] ಹುತ್ತ, ಗೆದ್ದಲ ಗೂಡು (ಮಡಗಿಡಲೆಂದು ಪುತ್ತಿನೊಳಗೊಯ್ಯನೆ ಕುತ್ತಿದ ಕಯ್ಯಂ: **ಆದಿಪು,** ೨. ೪೦); [ನಾ] ಆಸ್ಪದವಾದುದು, ಅವಕಾಶವಿತ್ತುದು (ಇದು ಕಡುನಾಣ ಪುತ್ತು ವಲಂ ಇಂ ನೆನೆಯುತ್ತಿರಿಂ ಎಮ್ಮನೆಂಬುದು ಆವುದು ಗುಣಂ ಎಮ್ಮೊಳಾಗೆ ನೆನೆದಪ್ಪಿರಿ: **ಆದಿಪು,** ೧೧. ೧೩೧)

ಪುತ್ರ – [ನಾ] ಸಂತಾನ (ಪುತ್ರಕಳತ್ರಪರಿಗ್ರಹಕ್ಕೆ ಮಾಣದೆ ಬಗೆದರ್ಪುದು ಒಳ್ಳೆನಿದಂ ಎಂದೊಡೆ ಸೃಷ್ಟಿಯೆ ಕೆಟ್ಟುಪೋಗದೇ: **ಆದಿಪು,** ೮. ೧೧); [ನಾ] ಗಂಡುಮಗು (ನಿಮ್ಮ ತಮ್ಮಂ ವಿಚಿತ್ರವೀರ್ಯನ ಕ್ಷೇತ್ರದೊಳಂಬಿಕೆಗಮಂಬಾಲಿಕೆಗಂ ಪುತ್ರರಪ್ಪಂತು ವರಪ್ರಸಾದಮಂ ದಯೆಗೆಯ್ವುದೆನೆ: **ಪಂಪಭಾ,** ೧. ೮೪ ವ)

ಪುತ್ರಕಾಮೇಷ್ಟಿ – [ನಾ] ಮಗನನ್ನು ಬಯಸಿ ಮಾಡುವ ಯಜ್ಞ (ಪಯೋವ್ರತನೆಂಬ ದಿವ್ಯಮುನಿಪತಿಯಿಂ ಪುತ್ರಕಾಮೇಷ್ಟಿಗೆಯ್ಸಿ: **ಪಂಪಭಾ,** ೩. ೩೨ ವ)

ಪುತ್ರದೋಹಳ – [ನಾ] ಮಕ್ಕಳ ಬಯಕೆ (ನೋಂತುಂ ಓದಜೀವರ ಪೇಟ್ದ ನೋಂಪಿಗಳಂ ಒರ್ಮೆ ಪಲರ್ಮೆಯುಮಿಂತು ತಮ್ಮ ಮೆಯ್ಮಱೆವಿನಂ ಇರ್ವರುಂ ನಮೆದರ್ ಏನವರ್ಗಾದುದೊ ಪುತ್ರದೋಹಳಂ: **ಪಂಪಭಾ,** ೧. ೧೩೫)

ಪುತ್ರವರಾರ್ಥಿ – [ನಾ] [ಪುತ್ರವರ+ಅರ್ಥಿ] ಗಂಡುಮಕ್ಕಳನ್ನು ಪಡೆಯಬೇಕೆಂಬ ವರವನ್ನು ಬಯಸುವವನು/ಳು (ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫)

ಪುತ್ರಾರ್ಥಿನಿ – [ನಾ] ಗಂಡು ಮಕ್ಕಳನ್ನು ಬಯಸುವವಳು (ಗಾಂಧಾರಿ ನೂರ್ವರ್ಮಕ್ಕಳಂ ಪಡೆವಂತು ಪರಾಶರ ಮುನೀಂದ್ರನೊಳ್ ಬರಂಬಡೆದಳ್ ಎಂಬುದಂ ಕುಂತಿ ಕೇಳ್ದು ತಾನುಂ ಪುತ್ರಾರ್ಥಿನಿಯಾಗಲ್ ಬಗೆದು: **ಪಂಪಭಾ,** ೧. ೧೧೬ ವ)

ಪುತ್ರಿಕೆ – [ನಾ] ಬೊಂಬೆ (ಇಂದುಕಾಂತಕರಸಂಕುಳಂ ಒಯ್ಯನವುಂಕಿ ಸೋಂಕೆ ಸೋಂಕಿನೊಳ್ ಒಱೆವ ಇಂದುಕಾಂತ ಮಣಿಪುತ್ರಿಕೆಯಂದದಿನೊಪ್ಪಿದಳ್: **ಆದಿಪು,** ೪. ೪೯)

ಪುತ್ರೋತ್ಪತ್ತಿನಿಮಿತ್ತ – [ನಾ] ಮಕ್ಕಳು ಹುಟ್ಟುವುದಕ್ಕೆ ಕಾರಣ (ಕುಂತಿ ಕರುಣಿಸಿ ಪುತ್ರೋತ್ಪತ್ತಿನಿಮಿತ್ತಂಗಳಪ್ಪ ಮಂತ್ರಾಕ್ಷರಂಗಳಂ ಉಪದೇಶಂಗೆಯ್ದೊಡೆ: **ಪಂಪಭಾ,** ೨. ೨ ವ)

ಪುದಿ – [ಕ್ರಿ] ದಟ್ಟವಾಗು (ನಿರುದ್ಧೋಚ್ಛ್ವಾಸಮಪ್ಪನ್ನೆಗಂ ಪುದಿದಾ ದಂಪತಿಯಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂದುದು: **ಆದಿಪು,** ೫. ೨೩); [ಕ್ರಿ] ಜೊತೆಯಾಗು (ಈ ವಯಸಮನೀ ಶೀಲಮನೀ ವಿನಯಮನೆಯ್ದೆ ವಿದ್ಯೆಯಿಂ ಪುದಿದೊಡೆ ಮತ್ತೇನೇವೇಟ್ಪುದೊ: **ಆದಿಪು,** ೮. ೫೮); [ಕ್ರಿ] ಸೇರು, ಕೂಡು (ಉತ್ತಮವನಮದಕರಿಭಿತ್ತಿಗಳಿಂ ಸುರಿವ ಮದದ ಬಂಧುರಗಂಧ ಕತ್ತುರಿಮೃಗದೊಳ್ ಪುದಿದೆತ್ತಂ ಮಗಮಗಿಸೆ ಕಂಪು ಪೊಂಪುಟೆ ಪುಗಿಲೊಳ್: **ಆದಿಪು,** ೯. ೧೨೦); [ಕ್ರಿ] ಆವರಿಸು (ಕೋರಕಿತ ಅಂಕುರಿತ ಪಲ್ಲವಿತ ಮುಕುಳಿತ ವಿಸ್ತಾರಿತ ರಮ್ಯಾಶೋಕಮಹೀರುಹಮುಮಂ ಅಭವನ ಅಂಗರುಚಿ ಪುದಿದಿರ್ಕುಂ: **ಆದಿಪು,** ೧೦. ೪೧); [ಕ್ರಿ] ರಾಶಿಯಾಗು (ಪುದಿದ ತಱಿಗೆಲೆಗಳಂ ಕಂಡುದಱಿಂದಂ ಧಾನ್ಯಸಮಿತಿ ನೀರಸಮಕ್ಕುಂ: **ಆದಿಪು,** ೧೫. ೪೬); [ಕ್ರಿ] ತುಂಬು (ಕಾಚಮೇಚಕಚಯಚ್ಛಾಯಾಂಬುವಿಂ ಗುಣ್ಪಿನಿಂ ಪುದಿದಿರ್ದತ್ತು ಸರೋವರಂ ಬಕಬಳಾಕಾನೀಕರಾವಾಕುಳಂ: **ಪಂಪಭಾ,** ೧೩. ೭೨)

ಪುದಿದವ್ವಳಿಸು – [ಕ್ರಿ] ತುಂಬಿ ತುಳುಕು (ಪುದಿದವ್ವಳಿಪೆನ್ನ ಕಾಯ್ಪು ಪೋಪಿನಂ ಇರದೀಗಳ್ ಈಂಟುವೆನೊ ದಾಂಟುವೆನೊ ಲವಣಾಂಬುರಾಶಿಯಂ: **ಆದಿಪು,** ೧೨. ೭೧)

ಪುದುಂಗೊಳಿಸು – [ಕ್ರಿ] ಬೆರಸು (ಪೊಳೆವೆಳಮಿಂಚಿನಂತೆಸೆದು ಗಾಡಿಯೊಳೊಂದಿದ ತನ್ನ ರೂಪು ಕಣ್ಗೊಳೆ ಸವಿಯಂ ಪುದುಂಗೊಳಿಪ ಚಿತ್ರರತಂಗಳ ಭಂಗಿಗಳ್: **ಆದಿಪು,** ೨. ೭೧); [ಕ್ರಿ] ದಟ್ಟವಾಗಿ ಬೆಳೆ (ಪುದುಂಗೊಳಿಸಿದ ಬಿದಿರ ಸಿಡುಂಬನೆಡೆಗೊಳೆ ಕಡಿವ ಪೋಡುಂಗಾಱನಂತೆ: **ಪಂಪಭಾ,** ೧೨. ೧೬೭ ವ)

ಪುದುವಲ್ಲಳ್ – [ನಾ] [ಇನ್ನೊಬ್ಬರ] ಜೊತೆ ಇರುವವಳಲ್ಲ (ಎನಗೆ ಎಕ್ಕಬಾಗೆ ನೋಡೀಗಳ್ ಈ ಇಳಾಲತಾಂಗಿ ಪುದುವಲ್ಲಳ್ ಅದೆಂತೆನೆ ಮುನ್ನ ನೂಲ ತೋಡಾಗದೆ ಕೆಟ್ಟು ಪೋದವರಂ ಇಂ ಮಗುಟ್ದುಂ ನಿಜೆಪಂತು ಬೆಳ್ಳನೇ: **ಪಂಪಭಾ,** ೯. ೪೬)

ಪುದುವಾೞ್ – [ಕ್ರಿ] ಕೂಡಿಬಾಳು (ಉಡಿಸಿಯುಮೂಡಿಯುಂ ಅಟ್ಟಿಯಿನೆಡೆಯುಡುಗದೆ ಸಲಿಸಿ ಪಲವು ಕಾಲಂ ಪುದುವಾೞ್ದೊಡಲಾತ್ಮನೊಡನೆ ಪೋಗದೆ: **ಆದಿಪು,** ೩. ೬೧); [ನಾ] ಕೂಡಿದ ಬದುಕು (ಆ ದುಶ್ಶಾಸನನಂ ಪೊರಳ್ಚಿ ಕೊಂದ ಈ ಮರುತ್ಪುತ್ರನಿಂತಾದಂ ದಳ್ಳಿಸೆ ನೋಡಿ ನೋಡಿ ಪುದುವಾೞ್ ಎಂತಕ್ಕುಂ: **ಪಂಪಭಾ,** ೧೩. ೮೮)

ಪುದುವಾೞ್ಕೆ – [ನಾ] ಕೂಡಿ ಇರುವ ಬದುಕು (ಇದಾವುದು ಪಡೆಮಾತಂ ಇಂತು ನುಡಿದಿರ್ ಪುದುವಾೞ್ಕೆಯೊಳ್ ಎನ್ನ ಬಳ್ಕಿದ ಅಳ್ಕಿದ ಬಗೆಗಂಡಿರೇ: **ಪಂಪಭಾ,** ೧೧. ೫೦)

ಪುದುವು – [ನಾ] ರಾಶಿ, ಒಟ್ಟಿಲು (ಪೊಳೆವೆಳವಿಸಿಲೊಳ್ ಬೆಳ್ಸರಿ ತೋರವನಿಯ ಪುದುವಿನೊಳರಲ್ದ ತಿಳಿಗೊಳನೆ ನಭದೊಳಿಟೆದಂತಿರ್ಕುಂ: **ಆದಿಪು,** ೧೧. ೮); [ನಾ] ಸಮೂಹ (ಜಳದೇವತೆಗೆತ್ತಿದ ಪಚ್ಚೆಯ ಸತ್ತಿಗೆಗಳ ಪುದುವೆನಿಪುದು ವನಜವನದ ಕೊಡೆಯೆಲೆ ಪಲವುಂ: **ಆದಿಪು,** ೧೧. ೬೫); [ನಾ] ಸಾರ (ಚಕ್ರರೂಪದಿನಿರ್ದಪುದು ನಿನ್ನ ದಂಡನೀತಿಯ ಪುದುವೆ ವಲಂ ದಂಡರತ್ನಮೆಂಬುದು ಪೆಱತೇಂ: **ಆದಿಪು,** ೧೩. ೨೭); [ನಾ] ಆಶ್ರಯ (ವಿದಳಿತ ನುತಶತಪತ್ರದ

ಪುದುವಿನೊಳ್ ಇರದೆ ಅಗಲೆವೋದ ಹಂಸನನಱಸಲ್ ಪದದೆಳಸುವ ಪೆಣ್ಣಂಚೆಯ ಪದಕೊರಲಿಂಚರದ ಸರಮೆ ಸವಿ ಕಿವಿಗಿದಱ್ರೊಳ್: **ಪಂಪಭಾ**, ೫. ೫೬)

ಪುದ್ಗಲ – [ನಾ] [ಜೈನ] ಪರಮಾಣುಗಳ ಸಂಯೋಗದಿಂದ ಉಂಟಾದ ಹಾಗೂ ಸ್ಪರ್ಶ, ಗಂಧ, ಬಣ್ಣಗಳನ್ನು ಹೊಂದಿದ ಅಜೀವಸತ್ವ (ಚೇತನಾರಹಿತಮಜೀವತತ್ತ್ವಂ ಅದು ಗತಿಸ್ಥಿತ್ಯವಗಾಹ ಶರೀರಾದಿ ವರ್ತನಾಹೇತು ಧರ್ಮಾಧರ್ಮಾಕಾಶ ಪುದ್ಗಲಕಾಲಭೇದದಿಂ ಪಂಚವಿಧಂ: **ಆದಿಪು**, ೧೦. ೬೩ ವ)

ಪುನಃಪುನಃ – [ಅ] ಮತ್ತೆ ಮತ್ತೆ (ಪುನಃಪುನರಾಲಿಂಗನಂಗೆಯ್ದು ಮುಹುರ್ಮುಮುರ್ ಆಳೋಕನಂಗೆಯ್ಯುತ್ತುಂ ಬಂದು ದಿವಿಜೇಂದ್ರವಿಳಾಸದಿಂ ಪೊೞಲಂ ಪುಗೆ: **ಪಂಪಭಾ**, ೫. ೨೨ ವ)

ಪುನ್ನಾಗ – [ನಾ] ಸುರ ಹೊನ್ನೆ (ಇದೆನ್ನ ವಿಮಾನಮಂ ಬಳಸಿ ತಳ್ತ ಪುನ್ನಾಗನಾಗ ದಿವ್ಯತರುನಂದನಂ: **ಆದಿಪು**, ೪. ೮); [ನಾ] ಒಂದು ಹೂವು, ಸುರಹೊನ್ನೆಯ ಹೂ (ನಾಗವಿಭೂಷಣಪ್ರತತಿ ನಾಗರಖಂಡಂ ಅಪೂರ್ವಮಪ್ಪ ಪುನ್ನಾಗದ ಬಾಸಿಗಂ ಬಗೆದ ಬಣ್ಣದ ಪುಟ್ಟಿಗೆ ನಾಗಜಾಲಮೆಂದು: **ಪಂಪಭಾ**, ೪. ೧೭)

ಪುಬ್ಬ – [ನಾ] [ಜೈನ] [ಪೂರ್ವ] ದೀರ್ಘ ಕಾಲಾವಧಿ, ಎಪ್ಪತ್ತುಲಕ್ಷ ಮೂವತ್ತು ಸಾವಿರ ಕೋಟಿ ವರ್ಷಗಳು (ತೊಲಗದು ಪುಬ್ಬಕೋಟಿ ಪರಿಸಂಖ್ಯೆವರಂ ಪರಮಾಯು: **ಆದಿಪು**, ೧. ೫೨)

ಪುಯ್ಯಲ್ – [ನಾ] ಹುಯಿಲು (ಈ ಪುಯ್ಯಲಂ ಆರಯ್ದು ಬರ್ಪನೆಂದು ಭೀಮನನಿರಿಸಿ ಕೊಂತಿ ತಾನೆ ಪೋಗಿ: **ಪಂಪಭಾ**, ೩. ೨೪ ವ)

ಪುಯ್ಯಲಿಸು – [ಕ್ರಿ] ಹುಯಿಲಿಡು (ಈ ನೃಪನೆಂದಚ್ಚಿಗದೊಳೆ ಪುಯ್ಯಲಿಪಂತೆವೊಲೊಗೆದುದು ಚಳದನಿಲಹತ ಪಯೋನಿಧಿನಾದಂ: **ಆದಿಪು**, ೧೨. ೭೬)

ಪುರ – [ನಾ] ಪ್ರಧಾನವ್ಯಕ್ತಿಗಳು ವಾಸಿಸುವ ಊರು (ಪ್ರಧಾನಪುರುಷ ಅಧ್ಯಾಸಿತಂಗಳಪ್ಪ ಪುರಂಗಳುಮಂ: **ಆದಿಪು**, ೮. ೬೩ ವ)

ಪುರಂದರ – [ನಾ] ಹಲವಾರು ಪುರಗಳನ್ನು ನಿರ್ಮಿಸಿದ್ದರಿಂದ ಆದಿದೇವನು ಸೌಧರ್ಮೇಂದ್ರನಿಗೆ ಇಟ್ಟ ಹೆಸರು (ಗುರು ಬೆಸಸೆ ಸಮೆದು ಪಲವುಂ ಪುರಂಗಳಂ ದೇವನಿಡೆ ಪುರಂದರವೆಸರಂ ಧರಿಯಿಸಿ ಭಕ್ತಿಭರಾನತಕಿರೀಟಂ ಅಮರೇಂದ್ರಂ ಅಮರಲೋಕಕ್ಕೊಗೆದಂ: **ಆದಿಪು**, ೮. ೬೪); [ನಾ] ದೇವೇಂದ್ರ (ಪಟುವಗೆಯೊಳ್ ಭೈರವಂಬಾಯ್ವಂತೆ ಬಂದು ನಿಂದ ಪುರಂದರನಲ್ಲಿಗೆ ಸರಸಿಜಭವಂ ಬಂದು ಮಾರ್ಕೊಂಡು: **ಪಂಪಭಾ**, ೫. ೧೦೧ ವ)

ಪುರಂದರದಿಕ್ – [ನಾ] ಪೂರ್ವದಿಕ್ಕು (ಅಂತು ಪುರಂದರದಿಗ್ವಧೂ ವದನಮಂಗಳ ಮಣಿದರ್ಪಣಮುಮಂ ಇಂದ್ರಗಜೇಂದ್ರ ಧವಳಕರ್ಣಚಾಮರಮುಮಂ ಅನುಕರಿಸಿ: **ಆದಿಪು**, ೧೨. ೭ ವ)

ಪುರಂಧ್ರಿ – [ನಾ] ಸ್ತ್ರೀ, ಮಹಿಳೆ (ದುರ್ಯೋಧನನ ಸಂಕೇತದೊಳ್ ಮುನ್ನಮೆ ಸಮೆದಿರ್ದ ಪುರೋಚನಂ .. .. ಪುರಂಧ್ರಿಯರುಮಂ ಬದ್ದವಣದ ಪಱೆಗಳುಂ ಬೆರಸಿದಿರ್ವಂದು: **ಪಂಪಭಾ**, ೩. ೨ ವ)

ಪುರಗೋಪುರ – [ನಾ] ನಗರದ ದಿಡ್ಡಿ ಬಾಗಿಲು (ರಜತಗಿರಿ ಗುಹಾದ್ವಯದೆಡೆಯೊಳ್ ಪೋಪಂದಮಂ ಅಣಮೆ ತೊಡರದುದು ಈ ಪುರಗೋಪುರದೊಳೇಕೆ ತೊಡರ್ದುದೊ ಚಕ್ರಂ: **ಆದಿಪು**, ೧೪. ೮)

ಪುರಪುರಂಧ್ರೀ – [ನಾ] ಪೌರಸ್ತ್ರೀ (ಮನಸಿಜನಾವೇಶಮಂತ್ರದಿಂ ಸ್ತೋಭಂಗೊಂಡಂತೆ ಪುರಪುರಂಧ್ರೀಸ್ತ್ರೀಕ್ಷೋಭಮಾಗೆ: **ಆದಿಪು**, ೧೧. ೨೩ ವ)

ಪುರವರೇಶ – [ನಾ] ಊರ ಮುಖ್ಯಸ್ಥ (ಪುರವರೇಶನ ಮಾಡಿದ ಚೈತ್ಯಕ್ಕಿಟ್ಟಿಗೆಗಳ್ ಬರೆ ನೋಡಿ ಕಲ್ಲುರಿಗನೊಯ್ಯನೆ ಪೂರಿಗೆಗೊಟ್ಟೈದಾಱನೆ: **ಆದಿಪು**, ೫. ೧೯)

ಪುರಸ್ತ್ರೀ – [ನಾ] ನಗರವೆಂಬ ವನಿತೆ (ಕಣ್ಗೆ ವಂದುದು ಪುರಸ್ತ್ರೀ ಪಾಂಡುಪುತ್ರಂಗಂ ಉತ್ಸವದಿಂದೆ ಮುನ್ನಿಱೆದಿರ್ದು ತನ್ನ ಪಿಣಿಲಂ ಕೂರ್ತಂದು ಬಿಟ್ಟಂತೆವೋಲ್: **ಪಂಪಭಾ**, ೧೪. ೧೪)

ಪುರಸ್ಸರ – [ಗು] ಸಮೇತ, ಸಹಿತ (ನಾಲ್ವತ್ತೆಂಟು ಕೋಟಿ ಪತಾಕೆಗಳೆಸೆಯೆ ಪೂರ್ವಾಭಿಮುಖನಾಗಿ ಚಕ್ರರತ್ನಪುರಸ್ಸರಂ ಬಿಜಯಂಗೆಯ್ದಾಗಳ್: **ಆದಿಪು**, ೧೧. ೨೮ ವ)

ಪುರಾಂತಕ – [ನಾ] ತ್ರಿಪುರಗಳನ್ನು ನಾಶಮಾಡಿದವನು, ಶಿವ (ಪ್ರಳಯದುರಿ ಕಾಳಕೂಟದ ಗುಳಿಗೆ ಪುರಾಂತಕ ಲಲಾಟನೇತ್ರಾನಳನೊಂದು ಅಳವಿಗಂ ಅಗ್ಗಳಂ ಅವರ್ಗಳ ಮುಳಿಸುಗಳುಂ: **ಪಂಪಭಾ**, ೭. ೬೬)

ಪುರಾಕೃತ – [ಗು] ಹಿಂದೆ ಮಾಡಿದ (ತಣಿವರ್ ದ್ವಿಜಮುಖ್ಯರ್ ಅಪ್ಪುದು ಅಗ್ಗಳಿಕೆ ಪೊದಳ್ದು ಪರ್ವುವುದು ಕೀರ್ತಿ ಪುರಾಕೃತಪುಣ್ಯದಿಂದೆ ಸಂಗಳಿಸುವುದು: **ಪಂಪಭಾ**, ೬. ೧೯)

ಪುರಾಣ – [ಗು] ಹಳೆಯ (ನೆರೆದಿಸುತಿರೆ ತೋಲ್ವುಲ್ಲೆಯಂ ಇರದೆ ಅದು ಬಿಟಿಱ್ದೊಡೆ ಪುರಾಣ ಕೂಪದೊಳ್ ಅದಂ ಇನ್ನು ಅರಿದು ತೆಗೆವಂದಂ ಎಂದವರಿರೆ: **ಪಂಪಭಾ**, ೨. ೫೧)

ಪುರಾಣಕವಿ – [ನಾ] ಪುರಾಣ ರಚಿಸಿದ ಕವಿ (ವ್ಯಾಸಮುನಿಪ್ರಣೂತ ಕೃತಿಯಂ ಸಲೆ ಪೇೞ್ದು ಪೊದಳ್ದ ಸತ್ಕವಿ ವ್ಯಾಸಸಮಾಗಮಾನ್ವಿತನುಂ ಆದಿಪುರಾಣಮನೆಯ್ದೆ ಪೇೞ್ದು ವಾಕ್ಶ್ರೀಸುಭಗಂ ಪುರಾಣಕವಿಯುಂ ಧರೆಗಾಗಿರೆ : **ಪಂಪಭಾ**, ೧೪. ೬೨)

ಪುರಾಣಕೂಪ – [ನಾ] ಹಳೆಯ ಬಾವಿ, ಹಾಳುಬಾವಿ (ನೆರೆದಿಸುತಿರೆ ತೋಲ್ವುಲ್ಲೆಯಂ ಇರದೆ ಅದು ಬಿಟಿಱ್ದೊಡೆ ಪುರಾಣಕೂಪದೊಳ್ ಅದಂ ಇನ್ನು ಅರಿದು ತೆಗೆವಂದಂ ಎಂದವರಿರೆ ಬಳಸಿಯುಮಲ್ಲಿ ಕಂಡು ನಕ್ಕಂ ದ್ರೋಣಂ: **ಪಂಪಭಾ**, ೨. ೫೧)

ಪುರಾಣಪುರುಷ – [ನಾ] ಆದಿಪುರುಷ (ಆಗಳ್ ಪರಸೈನ್ಯಭೈರವಂ ಪುರಾಣಪುರುಷನಪ್ಪ ಪುರುಷೋತ್ತಮಂಗೆಱಗಿ ಪೊಡೆಮಟ್ಟು: **ಪಂಪಭಾ**, ೧೦. ೬೪ ವ)

ಪುರಾಣವಿದ – [ನಾ] ಪುರಾಣಗಳನ್ನು [ಪ್ರಾಚೀನವಾದುದನ್ನು] ತಿಳಿದವನು (ವಿತತಾಷಾಢದ ಬಹುಳ ಪ್ರತಿಪದ್ದಿನದಂದು ಕೀರ್ತಿ ನೆಗೞ್ದಿರೆ ಭಗವತ್ಕೃತಯುಗಮಾದುದರಿಂದಂ ಕೃತಯುಗಮೆಂಬರ್ ಪುರಾಣವಿದರಿದನೀಗಳ್: **ಆದಿಪು**, ೮. ೬೬)

ಪುರಾತನಪುರುಷ – [ನಾ] ಆದಿಪುರುಷ, ಶ್ರೀ ಕೃಷ್ಣ (ಪುರಾತನಪುರುಷಂ ಮುರಾರಿ ಕೆಲದೊಳ್ ನಿಲೆ ನೀಂ ಕೊಲಲಾರ್ಪೊಡಂ ಆಗದು: **ಪಂಪಭಾ,** ೧೩. ೧೦೫)

ಪುರಿಗಣೆ – [ನಾ] ದೇವತಾಶಕ್ತಿಯನ್ನು ಸೇರಿಸಿ ಹುರಿಗೊಳಿಸಿದ ಬಾಣ (ಪಿಡಿದನೆ ಪುರಿಗಣೆಯಂ ಎರಟ್ಟುಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ ಪಿಡಿದು ಅಟೆದಂ ಎಂದು ದೇವರ ಪಡೆ ಗಡಣದೆ ಪೊಗಟ್ದುದು ಇನತನೂಜನ ಗಂಡಂ: **ಪಂಪಭಾ,** ೧೨. ೨೧೬)

ಪುರುಡು – [ನಾ] ಅಸೂಯೆ (ಒದವಿದ ಬೇಟದತ್ತಳಗದೊಳ್ ಮುಳಿಸಂ ಪುರುಡುಂಟುಮಾಡೆ: **ಆದಿಪು,** ೪. ೧೦); [ನಾ] ಹುರುಡು, ಸ್ಪರ್ಧೆ (ರಾಗಮಿಲ್ಲದ ಸುಸಿಲ್ ಅಟ್ಕಿಜೆಲ್ಲದ ಪದಂ ನೆವಮಿಲ್ಲದ ಕಾಯ್ಪು ಬೇಟಮಿಲ್ಲದ ಪುರುಡು ಏವಮಿಲ್ಲದ ಅಟಲ್: **ಆದಿಪು,** ೧೨. ೪೫)

ಪುರುಷ – [ನಾ] ಗಂಡ (ಸಂಸ್ಕಾರಿಸಲೀ ವನಿತೆಯರ್ಗವರವರ ಪುರುಷರಂ ಕುಡವೇಟ್ಕುಂ: **ಪಂಪಭಾ,** ೧೪. ೮); ಪೌರುಷ (ಪುರುಷಮಂ ಸಮಕಟ್ಟುಮನಪ್ಪೊಡೆ ಪೊಕ್ಕಿಜೆಯಲಣ್ಮುವರಿಲ್ಲ: **ಪಂಪಭಾ,** ೬. ೬೭ ವ)

ಪುರುಷಕಾರ – [ನಾ] ಮಾನವ ಪ್ರಯತ್ನ, ಪುರುಷ ಪ್ರಯತ್ನ (ನೋಂತರ ಪಗೆವರಂ ಎಟ್ಟೆಜೆದಂತಾಯ್ತು ಎಂದಿರದೆ ಪುರುಷಕಾರದ ಪೆಂಪಂ ಚಿಂತಿಸಿ: **ಪಂಪಭಾ,** ೭. ೩೪)

ಪುರುಷಭಿಕ್ಷೆ – [ನಾ] ಗಂಡನನ್ನು ಭಿಕ್ಷೆಯಾಗಿ ನೀಡುವುದು (ಪುರುಷಕಾರದ ಪೆಂಪಂ ಚಿಂತಿಸಿ ತರಿಸಿ ಮಹೀಶನಂ ಎಂತಪ್ಪೊಡಂ ಎನಗೆ ಪುರುಷಭಿಕ್ಷಮನಿಕ್ಕಿಂ: **ಪಂಪಭಾ,** ೭. ೩೪)

ಪುರುಷವ್ರತ – [ನಾ] ಬ್ರಹ್ಮಚರ್ಯ (ಪೂಣ್ದೆನಗಾಗದಂಗಜೋತ್ಪತ್ತಿ ಸುಖಕ್ಕೆ ಸೋಲಲಟೆಗುಂ ಪುರುಷವ್ರತಂ: **ಪಂಪಭಾ,** ೧. ೭೫)

ಪುರುಷಾಯಿತ – [ನಾ] ಹೆಣ್ಣು ಮೇಲೆ ಮಲಗಿ ನಡೆಸುವ ಸಂಭೋಗದ ಒಂದು ಆಸನ (ತುಂಗಸ್ತನಂ ಕದಕ್ಕದಿಸೆ ಕಣ್ಮಲರ್ ಪೊಳೆಯೆ ಕಾಂತನಂ ಮೆಚ್ಚಿಸಲ್ ವಿದಗ್ಧಪುರುಷಾಯಿತಂ ತಗುಳೆ: **ಆದಿಪು,** ೧೨. ೧೩)

ಪುರುಷೋತ್ತಮ – [ನಾ] ಶ್ರೀಕೃಷ್ಣ (ಮತ್ತಿತ್ತ ನೆಗಟ್ತೆಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆಯೆನೆ ಕುಂತಿ: **ಪಂಪಭಾ,** ೧. ೮೮)

ಪುರುಷೋತ್ತಮನ ಪಿತಾಮಹ – [ನಾ] ಶ್ರೀಕೃಷ್ಣನ ತಾತ, ಶೂರರಾಜ (ಮತ್ತಿತ್ತ ನೆಗಟ್ತೆಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆಯೆನೆ ಕುಂತಿ: **ಪಂಪಭಾ,** ೧. ೮೮)

ಪುರುಹೂತ – [ನಾ] ಅನೇಕರಿಂದ ಪ್ರಾರ್ಥಿತನಾದವನು, ಇಂದ್ರ (ಪವಿತ್ರೀಭೂತಮಪ್ಪ ಭೂತಳೋದ್ದೇಶದೊಳುತ್ಪಸ್ಸ್ಯಮಾನ ಭಾವಿತೀರ್ಥಕರಪುಣ್ಯದೂತಾಹೂತಂ ಪುರುಹೂತಂ ಬಂದು: **ಆದಿಪು,** ೬. ೮೮ ವ)

ಪುರುಳ್ – [ನಾ] ಹುರುಳು, ಸತ್ವ (ತನುಗೆ ಪೊಱೆ ತುಡುಗೆ ನವಲೇಪನಮೆ ಮಳಂ ಗೀತಮಟಿಕ್ಕೆ ನೃತ್ಯಂ ಬಗೆಯಲ್ಕೆನಗೆ ದಲ್ ಉನ್ಮತ್ತವಿಳಾಸಂ ಇಂತಿನಿತಱೊಳಮೊಂದಱೊಳ್ ಪುರುಳುಂಟೇ: **ಆದಿಪು,** ೯. ೫೫); [ನಾ] ವಸ್ತು (ನಂಟರ್ ಈತನ ನಣ್ಪಂ ಬಿಸುಡೆಂದೊಡೆ ಆ ನುಡಿಯಂ ಏಗೊಂಡೆನೇ ನಾಣನೆಳ್ಳನಿತುಂ ಕಾದೆನೆ ಬೇಡಿದೊಂದು ಪುರುಳಂ ಮಾರ್ಕೊಂಡೆನೇ: **ಆದಿಪು,** ೧೨. ೩೬)

ಪುರುಳಿ – [ನಾ] ಹೆಣ್ಣು ಗಿಳಿ (ತುಂಬಿ ಗಿಳಿ ಪುರುಳಿ ಕೋಗಿಲೆಯೆಂಬಿವುವೆರಸು ಅಮರತರುಗಳ್ ಇಂದ್ರನ ಬೆಸದಿಂದಂ ಬಂದುವು: **ಆದಿಪು,** ೬. ೯೨)

ಪುರೋಚನ – [ನಾ] ಕೌರವರ ದುಷ್ಟ ಮಂತ್ರಿ (ಸೊಗಯಿಸುವ ಪೊಟಲೊಳ್ ಅಷ್ಟಶೋಭೆಯಂ ಮಾಡಿ ದುರ್ಯೋಧನನ ಸಂಕೇತದೊಳ್ ಮುನ್ನಮೆ ಸಮೆದಿರ್ದ ಪುರೋಚನಂ: **ಪಂಪಭಾ,** ೩. ೨ ವ)

ಪುರೋಧ – [ನಾ] ಪುರೋಹಿತ (ತ್ರಿಜಗತ್ ಸಾಶ್ಚರ್ಯದಂಡ ಸ್ಥಪತಿ ಗೃಹಪತಿ ಛತ್ರ ಯೋಷಿತ್ ಪುರೋಧ ಗಜ ನಿಸ್ತ್ರಿಂಶ ಅಶ್ವ ಕಾಕಿಣಿ ಅಜಿನ ಮಣಿ ಚಮೂನಾಥ ಚಕ್ರಾಧಿನಾಥಂಗೆ: **ಆದಿಪು,** ೧೨. ೮)

ಪುರೋಡಾಶಪವಿತ್ರೋದರ – [ನಾ] ಹುರಿದ ಹಿಟ್ಟಿನಿಂದ ಪಾವನಗೊಂಡ ಹೊಟ್ಟೆಯುಳ್ಳವನು (ಅಂತು ಪುರೋಡಾಶಪವಿತ್ರೋದರನುಂ ಸೋಮಪಾನಕಷಾಯಿತೋದರನುಂ ಆಗಿ: **ಪಂಪಭಾ,** ೬. ೩೮ ವ)

ಪುರೋಪಾಂತ – [ನಾ] ನಗರದ ಹತ್ತಿರ (ಉಗ್ರಪ್ರತಾಪೋರ್ಜಿತ ತೇಜಶ್ಚಕ್ರಂ ಇರ್ದತ್ತೊಳಪುಗದೆ ಪುರೋಪಾಂತದೊಳ್ ಚಕ್ರಿಚಕ್ರಂ: **ಆದಿಪು,** ೧೪. ೩)

ಪುರೋಹಿತರತ್ನ – [ನಾ] [ಜೈನ] ಚಕ್ರವರ್ತಿಗೆ ದೊರಕುವ ಏಳು ಜೀವರತ್ನಗಳಲ್ಲಿ ಒಂದು, ಸಾಕೇತನಗರದಲ್ಲಿ ಹುಟ್ಟಿದ್ದು (ಧರ್ಮಕಾರ್ಯದಿಕುಶಲನುಮಪ್ಪ ಬುದ್ಧಿಸಾಗರಮೆಂಬ ಪುರೋಹಿತರತ್ನಮುಂ .. .. ಎಂದಿಂತು ಜೀವಾಜೀವರತ್ನಂಗಳಂ ಪೂಜಿಸಿ: **ಆದಿಪು,** ೧೭. ೨೩)

ಪುರ್ವು – [ನಾ] ಹುಬ್ಬು (ಪರವನಿತೆಯರೆರ್ದೆಗೆ ಕೊಂಕಿಲ್ಲದೆಯುಂ ಸೊಗಯಿಸುವ ಸುರತಮಕರಧ್ವಜನ ಪುರ್ವುಗಳ್ ಕಾಮದೇವನ ವಿಜಯವೈಜಯಂತಿಗಾಳದುವು: **ಪಂಪಭಾ,** ೨. ೩೯ ವ)

ಪುಲ್ಮರುಳ್ – [ನಾ] ಕ್ಷುಲ್ಲಕ ಪಿಶಾಚಿ (ಪೇಟದೊಡೆ ಪೋಗದಿರು ಈಶ್ವರನಾಣೆ ಎಂದು ಪುಲ್ಮರುಳ್ ಇನಿಸಾನುಮಂ ತಗೆದು ಕಾಡಿದುದಲ್ಲಿ ಫಣೀಂದ್ರಕೇತುವಂ: **ಪಂಪಭಾ,** ೧೩. ೫೫)

ಪುಲ್ಲಸೂಡು – [ನಾ] ಹುಲ್ಲಿನ ಕಂತೆ (ಭೀಮನಕುಳಸಹದೇವರುಮಂ ಶಲ್ಯಂ ವಿರಥಮಾರ್ಡಿ ಪಿಡಿದುಕೊಂಡು ಪುಲ್ಲಸೂಡಂ ಈಡಾಡುವಂತೆ ತನ್ನಳಿಯಂದಿರಿರ್ವರುಮಂ ಈಡಾಡಿ: **ಪಂಪಭಾ,** ೧೩. ೪೧ ವ)

ಪುಲ್ಲೆ – [ನಾ] ಜಿಂಕೆ (ಅಂತು ನೋಡಿದ ಪೆಂಡಿರೆಲ್ಲಂ ಕಾಮದೇವನೆಂಬ ಬೇಂಟೆಕಾಱಂಗೊಡ್ಡಿದ ಪುಲ್ಲೆಗಳಂತೆ: **ಪಂಪಭಾ,** ೪. ೩೮ ವ); [ನಾ] ಹೆಣ್ಣು ಜಿಂಕೆ (ಸೂಚಮನುರ್ಚಿ ಪುಲ್ಲೆಗಾಟಿಸಿ ಮಲೆತರ್ಪರಲೆಯ ಸೋಲಮಂ ಅಟ್ತಿಯೊಳ್ ಅರಿಕೇಸರಿ ನಿಂದು ನೋಟ್ಪುದೊಂದರಸಲ್ತೇ: **ಪಂಪಭಾ,** ೫. ೪೪)

ಪುಲ್ವಗೆ – [ನಾ] [ಪುಲು+ಬಗೆ] ಕೆಟ್ಟ ಆಲೋಚನೆ (ಅವರ ಮನದ ಪುಲ್ವಗೆಯಂ ಪೊಲ್ಲಮೆಯುಮಂ ಅಜೆಯದೆ ಸಮಸ್ತಬಲೋದ್ಯುಕ್ತನಾಗಿ ಶಕುನಂಗಳ ಬಗೆಯದೆ: **ಪಂಪಭಾ,** ೬. ೬೮ ವ)

ಪುಷ್ಕರ – [ನಾ] ಸೊಂಡಿಲ ತುದಿ (ಪರಿಪೂರ್ಣೋತ್ಕಟದಾನಧಾರೆ ಕಟದಿಂ ಪಾಯ್ತುರ್ಪುದುಂ ಪೆರ್ಚಿ ಪುಷ್ಕರದಿಂ ಶೀಕರನಿರ್ಝರಂ ಸುರಿವುದುಂ: **ಆದಿಪು**, ೧೨. ೫೮); [ನಾ] ಡಮರುಗ (ನವಮೇಘಧ್ವನಿ ಪುಷ್ಕರಧ್ವನಿ ತರತ್ತಾರಾಳಿ ಪುಷ್ಪೋಪಹಾರವಿಳಾಸಂ ರುಚಿರಾಂಬುದಂ .. .. ವಿಯದ್ರಂಗದೊಳಂದದೇಂ ನಲಿದುದೋ: **ಆದಿಪು**, ೬ ೭೨)

ಪುಷ್ಕಳಾವರ್ತ – [ನಾ] ಪ್ರಳಯಕಾಲದ ಮೋಡದ ಬಗೆಗಳಲ್ಲಿ ಒಂದು (ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸಂವರ್ತಕಂಗಳೆಂಬ ಮುಗಿಲ್ಗಳಂ ಬೆಸಸಿದಾಗಳ್: **ಪಂಪಭಾ**, ೫. ೯೫ ವ)

ಪುಷ್ಟಿ – [ನಾ] ಬಲ (ತನ್ನಿಷ್ಟವಪ್ಪನ್ನಂ ಉತ್ತರಮಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಾಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ; **ಪಂಪಭಾ**, ೧೪. ೬೫)

ಪುಷ್ಪಚಾಪ – [ನಾ] ಮನ್ಮಥ (ಗಣಿಕಾಸೃಷ್ಟಿಯಂ ಪುಷ್ಪಚಾಪಂ ಪೊಸತಂ ಮಾಡಿಟ್ಟನೊ: **ಆದಿಪು**, ೧. ೮೨)

ಪುಷ್ಪದರ್ಶನ – [ನಾ] ರಜಸ್ವಲೆಯಾಗುವಿಕೆ (ಮಕ್ಕಳನೀಯದೆ ನೋಡೆ ನಾಡೆ ನೋಯಿಸಿದಪುದು ಇಕ್ಷುಪುಷ್ಪದವೊಲೆನ್ನಯ ನಿಷ್ಫಲ ಪುಷ್ಪದರ್ಶನಂ: **ಪಂಪಭಾ**, ೧. ೧೧೭)

ಪುಷ್ಪವಾಸನೆ – [ನಾ] ಹೂವಿನ ಕಂಪು ಸೇರಿಕೊಳ್ಳುವುದು (ಆ ಕಾಮಂಗೆ ಮಜ್ಜನಕೆ ಎಂದೆತ್ತಿದ ಚಂದ್ರಕಾಂತ ಘಟದೊಳ್ ತಂದು ಅಟ್ಟೆಯಿಂ ಪುಷ್ಪವಾಸನೆಗೆಂದಿಕ್ಕಿದ ನೀಳನೀರರುಹಮಂ ಪೋಲ್ದತ್ತು ಕಟ್ಟೆಂದುವಾ: **ಪಂಪಭಾ** ಪರಿಷತ್ತು, ೪. ೫೧)

ಪುಷ್ಪವೃಷ್ಟಿ – [ನಾ] ಹೂವಿನ ಮಳೆ (ಅತಿಸ್ನೇಹದಿಂ ಪುಷ್ಪವೃಷ್ಟಿಯುಮಂ ಆನಂದಬಾಷ್ಪವೃಷ್ಟಿಯುಮಂ ಒಡನೊಡನೆ ಸುರಿದು: **ಪಂಪಭಾ**, ೮. ೨೬ ವ)

ಪುಷ್ಪಾಂಜಲಿವಿಕ್ಷೇಪಣ – [ನಾ] ಬೊಗಸೆಯಲ್ಲಿ ಹೂ ತುಂಬಿಕೊಂಡು ರಂಗದ ಮೇಲೆ ಎಸೆಯುವುದು (ಪೂರ್ವರಂಗಪ್ರಸಂಗದೊಳ್ ಚರ್ಚರಪೂಜಾಮಂಗಳ ಪದೋಚ್ಚಾರಣ ಪುಷ್ಪಾಂಜಲಿ ವಿಕ್ಷೇಪಣಾದಿ ನಾಂದಿವಿಧಿಯಂ ನಿರ್ವರ್ತಿಸಿ: **ಆದಿಪು**, ೭. ೧೧೫ ವ)

ಪುಷ್ಪಾಸಾರ – [ನಾ] ಹೂಮಳೆ (ಸುರಪುಷ್ಪಾಸಾರದಿಂದಂ ಸುರಗಣಪಟಹಪ್ರಸ್ಫುರದ್ಧ್ವಾನದಿಂದಂ ಸುರವಿರಚಿತ ಮಂದಾನಿಳಾಂದೋಳದಿಂದಂ: **ಆದಿಪು**, ೧೦. ೧೮)

ಪುಷ್ಪಾಸ್ತ್ರ – [ನಾ] ಮನ್ಮಥ (ಬಂದತ್ತು ಪುಷ್ಪಾಸ್ತ್ರಂಗೆ ಏಕಚ್ಛತ್ರಮಾಯ್ತೀ ಜಗಮೆನೆ ಭರತಾಂತಃಪುರಸ್ತ್ರೀಸಮೂಹಂ: **ಆದಿಪು**, ೧೧. ೪೪)

ಪುಷ್ಪೋಪಹಾರ – [ನಾ] ಹೂವಿನ ಕಾಣಿಕೆ (ನವಮೇಘಧ್ವನಿ ಪುಷ್ಕರಧ್ವನಿ ತರತ್ತಾರಾಳಿ ಪುಷ್ಪೋಪಹಾರವಿಳಾಸಂ ರುಚಿರಾಂಬುದಂ .. .. ವಿಯದ್ರಂಗದೊಳಂದದೇಂ ನಲಿದುದೋ: **ಆದಿಪು**, ೬. ೭೨)

ಪುಷ್ಪಿತ – [ನಾ] ಹೂಬಿಟ್ಟದ್ದು (ಉನ್ನತಕುಚತಟಾಘಾತದೊಳೆ ಕುರವಕಂಗಳಂ ಪುಷ್ಪಿತಂಗಳಂ ಮಾಡಿಯುಂ: **ಆದಿಪು**, ೧೧. ೧೩೦ ವ)

ಪುಷ್ಪಿತಲತೆ – [ನಾ] ಹೂಬಿಟ್ಟ ಬಳ್ಳಿ (ರಮಣೀಯಂ ಪುಷ್ಪಿತಲತೆ ಕಮನೀಯಮಾಯ್ತು ಕಾಯ್ತುದೆನೆ: **ಆದಿಪು**, ೪. ೬೨)

ಪುಸಿ – [ಕ್ರಿ] ಸುಳ್ಳು ಹೇಳು (ಪಾರ್ವನೆಂದೆನ್ನೊಳ್ ಪುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಂ ಅವಸಾನಕಾಲದೊಳ್ ಬೆಸಕೆಯ್ಯದಿರ್ಕೆ: **ಪಂಪಭಾ**, ೧. ೧೦೫ ವ)

ಪುಸಿಬಸನ – [ನಾ] ಸುಳ್ಳು ಹೇಳುವ ಚಾಳಿ (ಪುಸಿಬಸನಮೆಂದು ಕೆಲಬರ್ ಕುಸಿವರ್ ನಾಲಗೆಯನಿಕ್ಕುಟಿಸೊಳ್: **ಆದಿಪು**, ೮. ೮೭)

ಪುಸಿವೋಗು – [ಕ್ರಿ] ವ್ಯರ್ಥವಾಗು, ಬಂಜರಾಗು (ಪಸವಿಟ್ಟ್ದಿ ಬಱಂ ಪೆಱವುಂ ಭಯಂಗಳಾಕುಳಿತೆಗಳಿಲ್ಲ ಧಾತ್ರಿ ಪುಸಿವೋಗದು: **ಆದಿಪು**, ೧. ೫೨)

ಪುಳಿ – [ನಾ] ಹುಳಿ, ಹುಳಿಯಾಗುವಿಕೆ (ಮಧು ಸೀಧು ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ತುಬರ್ಪುದು: **ಪಂಪಭಾ**, ೪. ೮೮)

ಪುಳಿಂಚು – [ನಾ] ಕಣ (ಬಿಗಿದೊಗೆದ ನಿನ್ನ ಮೊಲೆಗಳ ಮೃಗಮದದ ಪುಳಿಂಚುಗಳ್ ಪಗಿಲ್ತಿರಲ್: **ಪಂಪಭಾ**, ೮. ೬೭)

ಪುಳಿಂದಿ – [ನಾ] ಬೇಟೆಗಾರ್ತಿ (ವನಚರನಾಗಿ ಶಂಭು ಗಿರಿಜಾತೆಯಂ ಓತು ಪುಳಿಂದಿ ಮಾಡಿ ನಚ್ಚಿನ ಗುಹನಂ ಕಿರಾತಬಲನಾಯಕನಾಗಿರೆ ಮಾಡಿ: **ಪಂಪಭಾ**, ೮. ೧೪)

ಪುಳಿತ ಕಳ್ – [ನಾ] ಹುಳಿ ಹೆಂಡ (ಮಧು ಸೀಧು ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ತುಬರ್ಪುದು: **ಪಂಪಭಾ**, ೪. ೮೮)

ಪುಳಿನ – [ನಾ] [ಪುಲಿನ] ಮಳಲು ದಿಣ್ಣೆ (ಆತನಂತಃಪುರಸ್ತ್ರೀಯರ್ .. .. ತಳಿದೆಳದಳಿರ ಜೊಂಪಂಗಳೊಳಂ ಕುಳಿರ್ವ ಪುಳಿನಂಗಳೊಳಂ ಕೋಡುವ ಧಾರಾಗೃಹಂಗಳೊಳಂ: **ಆದಿಪು**, ೧೧. ೭೪ ವ)

ಪುಳಿನತಳ – [ನಾ] ಮಳಲ ದಿಣ್ಣೆ (ಭ್ರಮತ್ ಭ್ರಮರಭಗ್ನ ಮಾಧವೀಲತಾಲತಾಂತಂ ಅಧಿಕಮಕರಂದಬಿಂದುಚಿತ್ರಿತ ವಿಪುಳಪುಳಿನತಳಂಗಳೆ ವಿಶ್ರಮಣಭೂಮಿಗಳಾಗೆಯುಂ: **ಆದಿಪು**, ೪. ೫೨ ವ)

ಪುಳಿನಸ್ಥಳ – [ನಾ] ಮರಳಿರುವ ಜಾಗ (ವೇಳಾವನ ಲತಾಗೃಹೋದರ ಪುಳಿನಸ್ಥಳಪ್ರದೇಶದೊಳ್ ತೊಟಲಲುಂ ಅಟ್ಟೆಯಾಗೆ: **ಪಂಪಭಾ**, ೧. ೧೪೨ ವ)

ಪುಳಿಯೊಳ್ ಕರ್ಚು – [ಕ್ರಿ] ಹುಣಿಸೆನೀರಲ್ಲಿ ತೊಳೆ (ಪುಳಿಯೊಳ್ ಕರ್ಚಿದ ಬಾಳ ಬಣ್ಣಮನೆ ಪೋಲ್ವ ಆಕಾಶಮಂಡಳಮಂ ಪರ್ವಿದ ಬೆಳ್ಮುಗಿಲ್: **ಪಂಪಭಾ**, ೭. ೭೧)

ಪುಟಿಲ್ – [ನಾ] [ಪುಲಿನ] ತೋಪು, ಉದ್ಯಾನವನ (ಪುಟಿಲೊಳಗೆ ಸುಳಿವುದು ಉಪವನಪವನಂ: **ಆದಿಪು**, ೬. ೧೦೧); [ನಾ] ಮರಳ ದಿಣ್ಣೆ (ಪಾಡುವ ತುಂಬಿ ಕೋಡುವ ಪುಟಿಲ್ ನಡೆದಾಡುವ ರಾಜಹಂಸೆ: **ಪಂಪಭಾ**, ೩. ೩೭)

ಪುಟುವಾನಸ – [ನಾ] ಕ್ಷುದ್ರ ವ್ಯಕ್ತಿ (ಚಾಗದೊಳ್ಪಿನಮಚ್ಚೊತ್ತದೆ ಮಾಣ್ದು ಬಾಟ್ವಿ ಪುಟುವಾನಸನೆಂಬಂ ಅಜಾಂಡಮೆಂಬುದೊಂದತ್ತಿಯ ಪಣ್ಣೊಳಿರ್ಪ ಪುಟುವಲ್ಲದೆ ಮಾನಸನೇ: **ಪಂಪಭಾ**, ೫. ೭೫)

ಪುಟ್ಟು – [ಕ್ರಿ] ಸುಟ್ಟು ಹೋಗು (ಪೊಗೆ ಪುಗೆ ಕಣ್ಣಂ ಸಿಂಗಂಗಳಳುರೆ ಗರ್ಜಿಸಿ ಲಂಗಿಸಿ ಪುಡುಪುಡನೆ ಪುಟ್ಗಿ ಸತ್ತುವು ಪಲವುಂ: **ಪಂಪಭಾ**, ೫. ೯೨)

ಪೂ – [ನಾ] ಹೂವು (ಮಸಿಯೊಳ್ ಸವನಾದ ಗೊಜ್ಜಗೆಯಂ ನುಡಿಯಲಕ್ಕುಮೆ ಪೂಗಳ ಲೆಕ್ಕದೊಳ್: **ಆದಿಪು,** ೧೧. ೧೦೯); [ಕ್ರಿ] ಹೂ ಬಿಡು (ಮನದೊಳ್ ಅಲಂಪನಾಳ್ದು ಇನಿಯನಟ್ಟಿದ ದೂದರ ಸೀಯನಪ್ಪ ಮಾತಿನ ರಸದೊಳ್ ಕೊನರ್ವುದು ತಳಿರ್ವುದು ಪೂವುದು ಕಾಯ್ಪುದು: **ಪಂಪಭಾ,** ೪. ೧೦೨)

ಪೂಗ – [ನಾ] ಅಡಕೆ (ಅತಿಲಲಿತ ಪೂಗಭೂಜಾತಂ ತಾಂಬೂಲಲತೆಗೆ ಎಂಬವೊಲ್ ಸಮಲೀಲಂ ನಿಜತನಯನೆನ್ನ ತನುಜೆಗೆ ತಕ್ಕಂ: **ಆದಿಪು,** ೪. ೨೮)

ಪೂಗಣೆ – [ನಾ] ಹೂವಿನ ಬಾಣ (ಮಿಳಿರ್ವ ಕುರುಳ್ಗಳೊಳ್ ಪೊಳೆವ ಕಣ್ಗಳ ಬೆಳ್ಪು ಪಳಂಚಿ ಚಿನ್ನಪೂಗಣೆಗೆಣೆಯಾಗೆ: **ಪಂಪಭಾ,** ೪. ೩೬

ಪೂಗೀಫಲ – [ನಾ] ಅಡಕೆ ಕಾಯಿ (ಆಜ್ಯ ಕ್ಷೀರ ದಧಿ ನಾಳಿಕೇರ ಸಹಕಾರ ಪೂಗೀಫಲ ಪುಂಡ್ರೇಕ್ಷುರಸಂಗಳಿಂದಂ .. .. ಅಭಿಷೇಕಂಗೆಯ್ದು: **ಆದಿಪು,** ೧೬. ೧ ವ)

ಪೂಗೊಳ – [ನಾ] ಹೂವುಗಳಿಂದ ಕೂಡಿದ ಕೊಳ (ಬೆಳೆದೆಱಗಿರ್ದ ಕೆಯ್ವೊಲನೆ ಕೆಯ್ವೊಲನಂ ಬಳಸಿರ್ದ ಪೂತ ಪೂಗೊಳಗಳೆ ಪೂತ ಪೂಗೊಳಗಳಂ ಬಳಸಿರ್ದ ವಿಚಿತ್ರನಂದನಾವಳಿಗಳೆ: **ಪಂಪಭಾ,** ೧. ೫೩)

ಪೂಜಾರಾಧ್ಯ – [ನಾ] [ಜೈನ] ನಲವತ್ತೆಂಟು ದೀಕ್ಷಾನ್ವಯಕ್ರಿಯೆಗಳಲ್ಲಿ ಒಂದು (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ)

ಪೂಜೆ – [ನಾ] ಗೌರವ (ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗೞ್ತೆ ಲಾಭಂ ಎಂಬವೆ ವಲಂ: **ಆದಿಪು,** ೧. ೩೬)

ಪೂಜೋಪಲಂಭನ – [ನಾ] [ಜೈನ] ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ಗುರುವಿನ ಮೂಲಕ ಧರ್ಮವನ್ನು ತಿಳಿಯುವುದು (ಇಂದ್ರಾಭಿಷೇಕ ಗುರು ಪೂಜೋಪಲಂಭನ .. .. ನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ: **ಆದಿಪು,** ೧೫. ೧೫ ವ)

ಪೂಜ್ಯರಿರ್ – [ನೀವು] ಪೂಜ್ಯರಾಗಿದ್ದೀರಿ (ಜಗದ್ಗುರುಗೆ ಪಿತೃದ್ವಯಂಗಳೆನಿಸಲ್ ಮೆಱೆವರ್ ಪೆಱರಾರೊ ನೀವೆ ಪೂಜ್ಯರಿರ್ ಎಮಗೆ: **ಆದಿಪು,** ೭. ೧೧೨)

ಪೂಡು – [ಕ್ರಿ] ರಥಕ್ಕೆ ಕುದುರೆಯನ್ನು ಕಟ್ಟು (ದಿವ್ಯಸಂಭವಂಗಳಪ್ಪ ಶ್ವೇತಾಶ್ವಂಗಳೊಳ್ ಪೂಡಿದ ದಿವ್ಯರಥಮುಮಂ ದಧೀಚಿಗಂಡಸ್ಥಮಪ್ಪ ಗಾಂಡೀವಮೆಂಬ ಬಿಲ್ಲುಮಂ .. .. ಕೆಯ್ಕೊಂಡು: **ಪಂಪಭಾ,** ೫. ೭೭ ವ); [ಕ್ರಿ] ಆಟವನ್ನು ಹೂಡು (ಅಕ್ಷಕ್ರೀಡೆಯಂ ಶಕುನಿಯೊಳ್ ಸಮಕಟ್ಟಿ ಪೂಡಲ್ವೇೞ್ದು ಪುಸಿಯನೆ ಪೆಱರಂ ಮುನ್ನಂ ಆಡಲ್ವೇೞ್ದು: **ಪಂಪಭಾ,** ೬. ೬೯ ವ); [ಕ್ರಿ] ಜೋಡಿಸು, ಹೂಡು (ತನಗೆ ವಿನಾಯಕಂ ದಯೆಯಿನಿತ್ತ ಜಯಾಸ್ತ್ರಮಂ ಉರ್ಚಿಕೊಂಡು ಭೋಂಕೆನೆ ಶರಾಸನದೊಳಾಂತು ಅದನಾಗಡೆ ಪೂಡಿ .. .. ಎಚ್ಚೊಡೆ: **ಪಂಪಭಾ,** ೧೨. ೧೬೮)

ಪೂಣ್ – [ಕ್ರಿ] ಸಂಕಲ್ಪ ಮಾಡು (ಓರೊರ್ಮೆ ಚಿಂತಿಸಿದೊಂಗಂ ಪವಣಿಲ್ಲ ಪುಣ್ಯಂ ಎನೆ ಪೂಣ್ದು ಒಳ್ಪಿಂದಂ ಓರಂತೆ ಭಾವಿಸಿ: **ಆದಿಪು,** ೧. ೩೭); [ಕ್ರಿ] ಹಟ ತೊಡು (ಲಲಿತಪದಂ ಪ್ರಸನ್ನ ಕವಿತಾಗುಣಮಿಲ್ಲದೆ ಪೂಣ್ದು ಪೇೞ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೇಡು: **ಪಂಪಭಾ,** ೧. ೧೨); [ಕ್ರಿ] ಹೂಳು (ಎನಗೆಡೆವೇೞ್ಕುಮೆ ಎಂಬವೊಲ್ ಅನಿಬರುಮಂ ಪೂಣ್ದಂ ಅತನು ನನೆಯಂಬುಗಳಿಂ: **ಪಂಪಭಾ,** ೩. ೪೨); [ಕ್ರಿ] ಪ್ರತಿಜ್ಞೆ ಮಾಡು (ಇಂ ನೀನಜೆವಯ್ ಪೂಣ್ದು ಎನ್ನದೊಂದು ಈ ಪರಿಭವಮನಿದಂ ನೀಗು ನೀಂ ಭೀಮಸೇನಾ: **ಪಂಪಭಾ,** ೮. ೭೧); [ಕ್ರಿ] ಸಂಕಲ್ಪಮಾಡಿಕೊ (ಮೆಯ್ಯಸುಂಗೊಳುತಿರೆ ಪೂಣ್ದು ಪೂಣ್ದ ತೆಱದೆ ಒಂದು ಅಱುದಿಂಗಳೊಳ್ ಒಂದು ಮೂಱು ತಿಂಗಳೊಳೆ ಸಮಾಪ್ತಿಯಾದುದು: **ಪಂಪಭಾ,** ೧೪. ೬೦)

ಪೂಣಿಗ – [ನಾ] ಶಪಥ ಮಾಡಿ ಬಾಣ ಬಿಡುವವನು, ಹಟಗಾರ (ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱ್ ನಭಕ್ಕೆ ಪಾಱಿದುದು: **ಪಂಪಭಾ,** ೧. ೧೦೯)

ಪೂಣಿಸಿದ ಮುಷ್ಟಿ – [ನಾ] ಪ್ರತಿಜ್ಞೆ ಮಡಿ ಹಿಡಿದ ಹಿಡಿ (ಅದೇಂ ತಿರವೋ ಪೂಣಿಸಿದ ಮುಷ್ಟಿ ಭೂರಿಶ್ರವನಾ: **ಪಂಪಭಾ,** ೧೧. ೧೪೧)

ಪೂಣಿಸು – [ಕ್ರಿ] ನಿಷ್ಕರ್ಷೆಯಾಗುವಂತೆ ಮಾಡು (ಎಂದವರ ದೇಶನಾಮಕುಲಗೋತ್ರಂಗಳಂ ನೆಱೆಯೆ ತಿಳಿಯೆ ಬಿನ್ನಪಂಗೆಯ್ದು ಭೃತ್ಯಭಾವಮಂ ಪೂಣಿಸಿ: **ಆದಿಪು,** ೧೩. ೪೧ ವ); [ಕ್ರಿ] ಆಜ್ಞೆಗೈ (ಬೆಸನನಿರ್ಮೆ ಕೇಳದಂತ ಪೂಣಿಸಿ ಕಟ್ಟಿಪಿ: **ಆದಿಪು,** ೧೩. ೮೦ ವ) ; [ಕ್ರಿ] ಶಪಥ ಮಾಡಿಸು (ಎನ್ನನೆ ನಚ್ಚಿದಂ ಅನುವರಕೆ ಎನ್ನನೆ ಪೂಣಿಸಿದಂ ಎನಗೆ ಎರಟ್ಟಿಂಡಮುಂ ಓರನ್ನರೆ: **ಪಂಪಭಾ,** ೧೦. ೧೨); [ಕ್ರಿ] ಬಿಲ್ಲಿಗೆ ಬಾಣ ಹೂಡು (ಅದೇಂ ತಿರವೋ ಪೂಣಿಸಿದ ಮುಷ್ಟಿ ಭೂರಿಶ್ರವನಾ: **ಪಂಪಭಾ,** ೧೧. ೧೪೧)

ಪೂಣೆ ಪುಗು – [ಕ್ರಿ] ನಿರ್ಧಾರದಿಂದ ನುಗ್ಗು (ಅರಾತಿಕಾಳಾನಳಂ .. .. ದಿವ್ಯಶರಾಸನಂಗಳಂ ಕೊಂಡು ಪೂಣೆ ಪುಗುವರಾತಿಬಲಮಂ ಮಾರ್ಕೊಂಡು ತೆಗೆನೆಱೆದಿಸೆ: **ಪಂಪಭಾ,** ೩. ೬೯ ವ)

ಪೂಣ್ಕೆ – [ನಾ] ದೃಢತೆ (ತುದಿಯೆಯ್ದಿತ್ತೆನಗೆನ್ನ ಪೂಣ್ಕೆ ನಿನಗಂ ಪುಣ್ಯೋದಯಂ ಸಾರ್ಚಿ ಬಂದುದು: **ಆದಿಪು,** ೪. ೧೮); [ನಾ] ಸಾಧನೆ (ಕುಲಮಿಲ್ಲೆಯೊ ನಮಗೆ ದಾಯಿಗರಲ್ಲರೊ ಶಸ್ತ್ರವಿದ್ಯೆಯೊಳ್ ಪೂಣ್ಕೆಗಳಿಲ್ಲೆಯೋ: **ಪಂಪಭಾ,** ೨. ೯೧); [ನಾ] ಪ್ರತಿಜ್ಞೆ (ಬಗೆಯದೆ ಮೆಯ್ಸೊಕಮಂ ಬಗೆ ಪಗೆವರ ಕಡುವೆರ್ಚಂ ಎನ್ನ ಪೂಣ್ಕೆಯಂ ಎರ್ದೆಯೊಳ್ ಬಗೆ ಮುನಿಯ ಮಂತ್ರಪದಮಂ ಬಗೆ: **ಪಂಪಭಾ,** ೭. ೬೭)

ಪೂಣ್ದಿರ್ಪಂ – ಪ್ರತಿಜ್ಞಾಮಾಡಿ ಇರೋಣ (ತಲೆಯೊಳ್ ಸೀರೆಯನಿಕ್ಕಿ ಕೆಮ್ಮನೆನಿತಂ ಪೂಣ್ದಿರ್ಪಂ: **ಪಂಪಭಾ,** ೩. ೩೩)

ಪೂಣ್ದೀ – [ಕ್ರಿ] [ಪೂಣ್ದು+ಈ] ಹೇಳಿದಂತೆ [ದಾನ] ಕೊಡು, ಕೊಟ್ಟ ಮಾತಿನಂತೆ ದಾನಮಾಡು (ಅಳವುಂ ಅಮರ್ದುಂ ಒಡವುಟ್ಟಿತ್ತು ಪೂಣ್ದೀವ ಚಾಗಂ ಕರ್ಣಂಗೊಡ್ಡಿತ್ತು ದಲ್: **ಪಂಪಭಾ,** ೧೨. ೧೦೪)

ಪೊಣ್ದು ಪೇೞ್ – **[ಕ್ರಿ]** ಹಟತೊಟ್ಟು ರಚಿಸು (ಲಲಿತಪದಂ ಪ್ರಸನ್ನ ಕವಿತಾಗುಣಮಿಲ್ಲದೆ ಪೊಣ್ದು ಪೇೞ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೇಡು: **ಪಂಪಭಾ,** ೧. ೧೨)

ಪೊತ – **[ಗು]** ಹೂಬಿಟ್ಟ (ಮದಾಳಿನಾದದಿನಿದು ಪಾಡಿ ಪೊತ ಸೆಳೆಗೊಂಬುಗಳಾಟದಿನಾಡಿ ನಮ್ಮನಿಂದಿದಿರ್ಗೊಳಲ್ ಇರ್ಪವೊಲ್ ಸೊಗಯಿಸಿರ್ದುದು: **ಆದಿಪು,** ೯. ೧೧೩)

ಪೂತಗ್ರಾವ – **[ನಾ]** ಪವಿತ್ರ ಶಿಲೆ (ತುದಿಯೊಳ್ ಪಾಂಡುಕವೆಸೆದಿರ್ದುದೊ ಜಿನಪತಿಸವನವಾರಿಪೂತಗ್ರಾವಂ: **ಆದಿಪು,** ೨. ೨೯)

ಪೂತಮಾಗು – **[ಕ್ರಿ]** ಪಾವನವಾಗು (ಭುವನಸ್ತುತ್ಯಾದಿ ಚಕ್ರೇಶ್ವರಬಲ ರಜದಿಂ ಪೂತಮಾಗಿರ್ದನೆಂಬ ಉತ್ಸವದೊಳ್: **ಆದಿಪು,** ೧೨. ೭೦)

ಪೂತಿ – **[ಗು]** ಕೆಟ್ಟ ವಾಸನೆಯುಳ್ಳ (ಅವರೋದುವಾವಾಸದೊಳ್ ಸಂಕ್ಲೇಶಮಾಗೆ ಸಾರಮೇಯಪೂತಿಕಳೇವರಮಂ ಇಕ್ಕಿದೊಡೆ: **ಆದಿಪು,** ೩. ೩೮ ವ)

ಪೂತಿಗಂಧ – **[ನಾ]** ಕೆಟ್ಟ ವಾಸನೆ (ವಾನರ ವಾರಣೋಷ್ಟ್ರ ಖರಮತ್ಸ್ಯಕಳೇವರ ಪೂತಿಗಂಧಮೇನೊಳವುಳ್ಳುವು: **ಆದಿಪು,** ೫. ೯೦)

ಪೂದಂದಲ್ – **[ನಾ]** [ಪೂ+ತಂದಲ್] ಹೂ ಮಳೆ (ಪೆಣ್ದುಂಬಿಗಳ್ ಮುತ್ತುತುಂ ಮುಸುಱುತ್ತುಂ ಬರೆ ಬಂದುದಿಂದ್ರವನದಿಂ ಪೂದಂದಲ್: **ಪಂಪಭಾ,** ೯. ೯೬)

ಪೂರ – **[ನಾ]** ಪ್ರವಾಹ (ಬಿಡದೆ ಅಟಿಲ್ವ ಬಂಧುಜನದ ಒಟ್ಟುಡಿಯದ ಕಣ್ಣೀರ ಪೂರಂ ಆ ಪ್ರೇತಮಂ ಓಗಡಿಸದೆ ಸುಡುವುದು ಗಡಂ ಇನ್ನುಡುಗುವುದೀ ಶೋಕಮಂ ಸರೋಜದಳಾಯತಾಕ್ಷೀ: **ಪಂಪಭಾ,** ೨. ೨೮)

ಪೂರಿಗೆ – **[ನಾ]** ಒಂದು ಸಿಹಿ ಭಕ್ಷ್ಯ (ಪುರವರೇಶನ ಮಾಡಿದ ಚೈತ್ಯಕ್ಕಿಟ್ಟಿಗೆಗಳ್ ಬರೆ ನೋಡಿ ಕಲ್ಲುರಿಗನೊಯ್ಯನೆ ಪೂರಿಗೆಗೊಟ್ಟೈದಾಱನೆ ಕೊಂಡು: **ಆದಿಪು,** ೫. ೧೯)

ಪೂರಿಸು – **[ಕ್ರಿ]** ಶಬ್ದಮಾಡು (ಮಹಾಪ್ರಚಂಡಗಾಂಡೀವಮಂ ಕೊಂಡು ಏಱಿಸಿ ನೀವಿ ಜೇವೊಡೆದು ದೇವದತ್ತ ಶಂಖಮಂ ಪೂರಿಸಿ: **ಪಂಪಭಾ,** ೧೦. ೬೪ ವ)

ಪೂರ್ಣ – **[ನಾ]** ತುಂಬಿರುವ (ವಿವಿಧಾಯುಧಪೂರ್ಣಂಗಳ್ ಪ್ರವೀರಪುರುಷಪ್ರತತಿಪ್ರತಿಷ್ಠಿತಂಗಳ್ ಚೇತೋಜವಹರಿ ಯೋಗ್ಯಂಗಳ್ ತಳರ್ದುದು ಆಗಳ್ ಎಂಬತ್ತನಾಲ್ಕು ಲಕ್ಕೆ ರಥಂಗಳ್: **ಆದಿಪು,** ೧೧. ೩೨)

ಪೂರ್ಣಕಳಶ – **[ನಾ]** ಪೂರ್ಣಕುಂಭ (ಗೋರೋಚನಾ ಸಿದ್ಧಾರ್ಥ ದೂರ್ವಾಂಕುರ ಮಾತುಳುಂಗ ಶೃಂಗಾರದರ್ಪಣ ಪೂರ್ಣಕಳಶ ಕಳಮಾವೃತಕರಪಲ್ಲವೆಯರಪ್ಪ ಪುರಂಧ್ರಿಯರುಮಂ: **ಪಂಪಭಾ,** ೩. ೨ ವ)

ಪೂರ್ಣಕುಂಭ – **[ನಾ]** ತುಂಬಿದ ಕಳಶ (ಹಿಮಧವಳ ಆತಪತ್ರಮನೆ ಪೋಲೆ ಮುಖೇಂದುವ ಬೆಳ್ಪು ಪೂರ್ಣಕುಂಭಮನೆ ನಿರಂತರಂ ಗೆಲೆ ಕುಚಂಗಳ ತೋರ್ಪು: **ಪಂಪಭಾ,** ೧. ೧೨೦)

ಪೂರ್ವ – **[ನಾ]** [ಜೈನ] ಶ್ರುತಾಂಗವನ್ನು ವಿವರಿಸುವ ಉತ್ಪಾದ, ಅಗ್ರಾಯಣೀಯ, ವೀರ್ಯಪ್ರವಾದ, ಅಸ್ತಿನಾಸ್ತಿಪ್ರವಾದ, ಜ್ಞಾನಪ್ರವಾದ, ಸತ್ಯಪ್ರವಾದ, ಆತ್ಮಪ್ರವಾದ, ಕರ್ಮಪ್ರವಾದ, ಪ್ರತ್ಯಾಖ್ಯಾನ, ವಿದ್ಯಾನುವಾದ, ಕಲ್ಯಾಣ, ಪ್ರಾಣಾವಾಯು, ಕ್ರಿಯಾವಿಶಾಲ ಮತ್ತು ಲೋಕಬಿಂದುಸಾರ ಎಂಬ ಹದಿನಾಲ್ಕು ಭಾಗಗಳಲ್ಲಿ ಒಂದು, ಇಂತಹವು (ಪದಿನಾಲ್ಕು ಪೂರ್ವಂಗಳುಮಂ ಅಯ್ದು ಚೂಳಿಕೆಯುಮಂ ಆಱವಧಿಯುಮಂ ಪೆಸರ್ಗೊಂಡು: **ಆದಿಪು,** ೩. ೪೦ ವ); **[ಗು]** ಹಿಂದಿನ (ಈತನುದಾತ್ತ ಪೂರ್ವ ಭೂಮಿಪರನೊಳ್ಪಿನೊಳ್ ತಗುಳೆವಂದೊಡೆ ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟ್ಟಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್: **ಪಂಪಭಾ,** ೧. ೧೪)

ಪೂರ್ವಕ್ರಮ – **[ನಾ]** ಹಿಂದಿನಂತೆ, ಸಂಪ್ರದಾಯದಂತೆ (ಒಂದು ವರ್ಷಂಬರಂ ಭರಂಗೆಯ್ದು ನೋಂತು ಪೂರ್ವಕ್ರಮದೊಳ್: **ಪಂಪಭಾ,** ೧. ೧೩೬ ವ)

ಪೂರ್ವಭವಸ್ಮರಣ – **[ನಾ]** ಹಿಂದಿನ ಜನ್ಮದ ನೆನಪು (ಸೌಧೋಪರಿತಮತಳದೊಳ್ ನಿಂದ ದೇವಾಗಮನಮಂ ನೋಡಲೊಡಂ ಪೂರ್ವಭವಸ್ಮರಣಮಾಗಿ ದೇವಲೋಕದ ಲಲಿತಾಂಗದೇವನಂ ನೆನೆದು: **ಆದಿಪು,** ೩. ೨೨ ವ)

ಪೂರ್ವರಂಗ – **[ನಾ]** ನೃತ್ಯ ಅಥವಾ ನಾಟಕವು ಆರಂಭಗೊಳ್ಳುವ ಮುಂಚೆ ರಂಗಸ್ಥಳದಲ್ಲಿ ನಡೆಯಬೇಕಾದ ರಂಗಪೂಜೆ, ನಾಂದಿ ಮುಂತಾದ ಕಾರ್ಯಕ್ರಮಗಳು (ಸುರಾಸುರಸಭೆಗಂ ನಾಭಿರಾಜಾದಿ ಮನುಜಸಭೆಗಂ ಮೆಚ್ಚಿಯಲೆಂದು ಶುದ್ಧಂ ವಿಚಿತ್ರಂ ಎಂಬ ಪೂರ್ವರಂಗಪ್ರಸಂಗದೊಳ್: **ಆದಿಪು,** ೭. ೧೧೫ ವ)

ಪೂರ್ವಸಂಭಾಷಣ – **[ನಾ]** ಮಾತಿಗೆ ಮುಂಚೆ (ಭಾರದ್ವಾಜಂಗೆ ಬಟೆಯನಟ್ಟಿ ಬರಿಸಿ ಪೂರ್ವಸಂಭಾಷಣಾರ್ಘ್ಯಮೆತ್ತಿ ಮಧುಪರ್ಕ ವೇತ್ರಾಸನ ತಾಂಬೂಲಾದಿಗಳಿಂ ಸಂತಸಂಬಡಿಸಿ: **ಪಂಪಭಾ,** ೨. ೫೨ ವ)

ಪೂರ್ವಸ್ಥಿತಿ – **[ನಾ]** ಹಿಂದಿನಂತೆ (ವೇಳಾವನದೊಳ್ ಆವಾಸಿತ ವಿಜಯಕಟಕನಾಗಿ ಪೂರ್ವಸ್ಥಿತಿಯೊಳೆ ಪೋಗಿ: **ಆದಿಪು,** ೧೩. ೩ ವ)

ಪೂರ್ವಾಪರವಿದೇಹ – **[ನಾ]** ಪೂರ್ವ ಪಶ್ಚಿಮ ಮತ್ತು ನಡುವಣ ಕ್ಷೇತ್ರಗಳು (ಎಂಬುದುಂ ತದೀಯ ಕರುಣಾರಸಪ್ರೇರಿತ ಆರ್ದ್ರಾಶಯಂ ತತ್ಪ್ರಜಾಜೀವನೋಪಾಯಮಂ ಪೂರ್ವಾಪರ ವಿದೇಹಸ್ಥಿತಿ ಸಮಾನಮಾಗೆ: **ಆದಿಪು,** ೮. ೬೨ ವ)

ಪೂರ್ವೋತ್ತರಾಶೆ – **[ನಾ]** ಈಶಾನ್ಯ ದಿಕ್ಕು (ಅಂತು ಬಂದು ಪಾಂಡುಕವನದ ಪೂರ್ವೋತ್ತರಾಶಾಮುಖ ನಿವಾಸಿಯಾಗಿ: **ಆದಿಪು,** ೭. ೭೩ ವ)

ಪೂವಲಿ – **[ನಾ]** ರಂಗೋಲಿ (ನೆಲೆಮಾಡಂಗಳೊಳೋಳಿವಟ್ಟ ಗುಡಿಗಳ್ ಗಂಧಾಂಬುವಿಂದಾದ ಪೂವಲಿಯಿಂ ಚೆಲ್ವೆಸೆದಿರ್ದ ಬೀದಿಗಳ್: **ಆದಿಪು,** ೭. ೧೧೩)

ಪೂವಾಸು – **[ಕ್ರಿ]** ಹೂವಿನ ಹಾಸಿಗೆಯಂತೆ ಹರವು (ಅದಱೊಳಗೆ ಕಪ್ಪುರವಳುಕಿನ ಜಗಲಿ ಅಗಲತಾಗಿ ಸಮೆದು ಚಂದನದೆಳದಳಿರ್ಗಳಂ ಪಾಸಿ ಮಲ್ಲಿಗೆಯಲರ್ಗಳಂ ಪೂವಾಸಿ: **ಪಂಪಭಾ,** ೫. ೬ ವ)

ಪೂವಿನಂಬು – **[ನಾ]** ಹೂವಿನ ಬಾಣ (ಆಗಳ್ ಆಱುಂ ಋತುಗಳ ಪೂಗಳಂ ಒಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದ ಓಜನ

ಸಾಲೆಯಿರ್ಪಂತಿರ್ಪ ಪೂವಿನ ಸಂತೆಯೊಳ್: **ಪಂಪಭಾ,** ೪. ೮೦ ವ)

ಪೂಱ್ – [ಕ್ರಿ] ಹೂಳು, ಹೂತುಹಾಕು (ಅಂಬರಮೆಲ್ಲಮಂ ಅಂಬಿನೊಳೆ ಪೂಱ ಮಹೀಭುಜರ್ ಎತ್ತಂ ಎಚ್ಚ ಕಿತ್ತಂಬುಗಳ್ ಎತ್ತಂ ಅವ್ವಳಿಸೆ: **ಪಂಪಭಾ,** ೧೧. ೪೨); [ಕ್ರಿ] ಮುಚ್ಚಿಬಿಡು (ಆವುದು ಗುಣಂ ಎಮ್ಮೊಳಾಗೆ ನೆನೆದಪ್ಪಿರಿ ಅಶೋಕಮೆ ವಾಮಪಾದದಿಂದೊದೆದುದೊ ಕೇಸರದ್ರುಮಮೆ ನಿನ್ನುಮನಾಸವಸೀಧುವಿಂದೆ ಪೂಱ್ದುದೊ: **ಆದಿಪು,** ೧೧. ೧೩೧); [ಕ್ರಿ] ಭೂಮಿಯಲ್ಲಿ ಬೈತಿಡು (ತಕ್ಕರಂ ಕವರ್ದುಕೊಂಡಾದ ಅರ್ಥಮಂ ಪೂಱ್ದು ಮಿಳ್ಳಿಳ ನೋಡುತ್ತುಂ ಉದಗ್ರ ಲೋಭವಶದಿಂ ತನ್ನುಂಡುದಂ ತಪ್ಪುದು ಎಂದು: **ಆದಿಪು,** ೨. ೧೫)

ಪೃತನಾಜಾಳ – [ನಾ] ಸೇನೆ (ಉದ್ಭಟಭಟಪೃತನಾಜಾಳಮಂ ಚಿತ್ತದೊಳ್ ವೀರರಸಂ ಕೈಗಣ್ಮಿ ಪೊಣ್ಮುತ್ತಿರೆ ನಿಜಬಲಮಂ ನೋಡಿದಂ ಸಾರ್ವಭೌಮಂ: **ಆದಿಪು,** ೧೪. ೮೭)

ಪೃಥಕ್ತ್ವವಿತರ್ಕವಿಚಾರ – [ನಾ] [ಜೈನ] ಎಂಟನೆಯ ಗುಣಸ್ಥಾನದಿಂದ ಹನ್ನೆರಡನೆಯ ಗುಣಸ್ಥಾನದ ಕೆಲವು ಭಾಗಗಳವರೆಗೆ ನಡೆಯುವ ಶುಕ್ಲಧ್ಯಾನ; ಪ್ರಥಮಶುಕ್ಲಧ್ಯಾನ (ಪೃಥಕ್ತ್ವವಿತರ್ಕವಿಚಾರಮೆಂಬ ಮೊದಲ ಶುಕ್ಲಧ್ಯಾನದೊಳ್ ಸಮಾಹಿತಂ ಉಪಶಾಂತಗುಣಸ್ಥಾನದೊಳ್ ಪ್ರಾಣಪರಿತ್ಯಾಂಗಂಗೆಯ್ದು: **ಆದಿಪು,** ೬. ೩೪ ವ)

ಪೃಥಾತನಯ – [ನಾ] ಕುಂತಿಯ ಮಗ, ಕೌಂತೇಯ, ಪಾಂಡವ (ಮುನಿಯಲ್ ಎನಗೆ ಆಗ ಗಾಂಗೇಯನಿರ್ದಂ ಇರ್ದಂ ಘಟೋದ್ಭವಂ ನೆಗೞ್ದ ಪೃಥಾತನಯರುಮಿರ್ದರ್ ದುರ್ಯೋಧನನಿರ್ದಂ: **ಪಂಪಭಾ,** ೬. ೬೨)

ಪೃಥಾತನೂಜ – [ನಾ] ಪಾಂಡವ (ಪೃಥಾತನೂಜರಂ ನಿನ್ನ ಬಲ್ಲ ಮಾತಿನ್ಕೆಯಿಂ ನುಡಿದೊಡಗೊಂಡು ಬರ್ಪುದು: **ಪಂಪಭಾ,** ೪. ೩ ವ)

ಪೃಥಾನಂದನ– [ನಾ] ಕೌಂತೇಯ, ಪಾಂಡವ (ಮೇಗಿಲ್ಲದ ಬಲ್ಲಾಳ್ತನದ ಆಗರಮೆನೆ ನೆಗೞ್ದ ತತ್ ಪೃಥಾನಂದನರ ಉದ್ಯೋಗದ ಚಾಗದ ಯೋಗದ ಭೋಗದ ಮೈಮೆಗೆ ಸುಯೋಧನಂ ಬೆಱಗಾದಂ: **ಪಂಪಭಾ,** ೬. ೬೭)

ಪೃಥಾಪುತ್ರ – [ನಾ] ಕುಂತಿಯ ಮಗ (ಅಣ್ಣನ ಕಣ್ಸನ್ನೆಗೆ ಮೀಱಲಣ್ಮದೆ ಸಮಂತಿರ್ದರ್ ಪೃಥಾಪುತ್ರರ್ ಅಂತಿನಿತೊಂದಾದೊಡಮೇಂ ಮಹಾಪುರುಷರ್ ಆಜ್ಞಾಲಂಘನಂ ಗೆಯ್ವರೇ: **ಪಂಪಭಾ,** ೭. ೯)

ಪೃಥಾಸುತ – ಕುಂತಿಯ ಮಗ (ನಿರ್ದೋಷಿಗಳೊಳ್ ಪೃಥಾಸುತರೊಳ್ ಇಂ ಮಗುೞ್ದುಂ ಪುದುವಾೞ್ಗೆಂಬೆನೇ: **ಪಂಪಭಾ,** ೧೩. ೧೪)

ಪೃಥು – [ಗು] ವಿಶಾಲವಾದ (ಆಯತ ಪೃಥುಪಿಬಸ್ಥಾನು ಪದಿಗ್ಧಾಂದಪೂರ್ವಪೀನ ರಕ್ತಾರೋಮಾಶ್ಲಿಷ್ಟಸಮಾಸಮ ಸಗದನುಂ: **ಆದಿಪು,** ೧೨. ೫೬ ವ)

ಪೃಥ್ವ್ಯಪ್ತೇಜೋವಾಯು – [ನಾ] [ಪೃಥ್ವಿ+ಅಪ್+ತೇಜೋ+ವಾಯು] ಮಣ್ಣು, ನೀರು, ತೇಜಸ್ಸು ಮತ್ತು ಗಾಳಿ (ಪೃಥ್ವ್ಯಪ್ತೇಜೋವಾಯುಗಳತ್ತಣಿಂ ಬಂದು ಗರ್ಭಾದಿ ಮರಣಪರ್ಯಂತಂ ತದಾತ್ಮಕಂ ಚೈತನ್ಯಂ ಪುಟ್ಟುಗುಂ: **ಆದಿಪು,** ೨. ೯ ವ)

ಪೃಷತ್ಕ – [ನಾ] ಬಾಣ (ಉತ್ಕೋಪದಹನದೊಡನೆ ಪೃಷತ್ಕಂಗಳ್ ಕೋಟಿಗಣಿತದಿಂದ ಉಱುವಿನಂ ಆರ್ದ ಉತ್ಕಚದಿಂ ಉಱದೆ ಘಟೋತ್ಕಚನಂ ಬಿಟ್ಟು ಮೂರ್ಛೆವೋಪಿನಂ ಎಚ್ಚಂ: **ಪಂಪಭಾ,** ೧೧. ೮)

ಪೃಷತ್ಕಾಸನ – [ನಾ] ಬಿಲ್ಲು (ಪಂಚಸಪ್ತತ್ಯುತ್ತರ ಪಂಚಶತ ಪೃಷತ್ಕಾಸನೋತ್ಸೇಧಸಂಹನನುಂ ನವುತಾಂಗಾಯುಷ್ಯನುಂ ಆಗಿ: **ಆದಿಪು,** ೬. ೬೧ ವ) [ಎಲ್. ಬಸವರಾಜು ಆವೃತ್ತಿ]

ಪೆಂಕುಳಿಗೊಳ್ – [ಕ್ರಿ] ಆವೇಶಗೊಳ್ಳು (ಪೆಂಕುಳಿಗೊಂಡ ಮದೇಭವೈರಿವೋಲ್ ಕೆಳರ್ದು: **ಪಂಪಭಾ,** ೧೦. ೧೧೩)

ಪೆಂಡತಿ – [ನಾ] ಹೆಂಗಸು (ತನ್ನ ಕುಲಮುಂ ಚಲಮುಂ ದೊರೆಯುಂ ಕಿಡೆ ಬಾೞ್ವಂ ಗಂಡರೂಪಿನೊಳ್ ಗಂಡನಲ್ತು ಪೆಂಡತಿಯೆ ವಲಂ: **ಆದಿಪು,** ೧೨. ೯೬)

ಪೆಂಡವಾಸ – [ನಾ] ರಾಣಿವಾಸ, ಅಲ್ಲಿನ ಹೆಂಗಸರು (ಲೀಲೆಯಿಂ ಪೆಂಡವಾಸದೊಳ್ ಪೆಂಡಿರೊಯ್ಯನೊಯ್ಯನೆ ನಡೆದರ್: **ಆದಿಪು,** ೧೧. ೪೧); ವೇಶ್ಯೆ (ತಂಡತಂಡದೆ ನೆರೆದಿರ್ದ ಪೆಂಡವಾಸದ ಒಳ್ವೆಂಡಿರಂ ಕಂಡು: **ಪಂಪಭಾ,** ೪. ೮೪ ವ)

ಪೆಂಡವಾಸಗೇರಿ – [ನಾ] ಸೂಳೆಗೇರಿ (ಆ ಪೆಂಡವಾಸಗೇರಿಯೊಳಗೆ ಸೌಭಾಗ್ಯದ ಭೋಗದ ಚಾಗದ ರೂಪುಗಳ್ ಮನಸರೂಪಾದಂತೆ: **ಪಂಪಭಾ,** ೪. ೮೬ ವ)

ಪೆಂಡಿರ್ – [ನಾ] ವೇಶ್ಯೆಯರು (ಲೀಲೆಯಿಂ ಪೆಂಡವಾಸದೊಳ್ ಪೆಂಡಿರೊಯ್ಯನೊಯ್ಯನೆ ನಡೆದರ್: **ಆದಿಪು,** ೧೧. ೪೧); [ನಾ] ಹೆಂಗಸರು (ಸಂಗತದಿಂ ಈಗಳ್ ಇಂತೀ ರಂಗಮೆ ರಣರಂಗಮಾಗೆ ಕಾದುವಂ ಅಳವಂ ಪೊಂಗದಿರ್ ಇದಿರ್ಚು ಅದೇಂ ಗಳ ರಂಗಂಬೊಕ್ಕಾಡುವಂತೆ ಪೆಂಡಿರ್ ಗಂಡರ್: **ಪಂಪಭಾ,** ೨. ೮೦)

ಪೆಂಪು – [ನಾ] ಹೆಚ್ಚಿಕೆ (ಸಿಗ್ಗನುೞಿ ಮುಳಿಸಂ ನೀನೆಂದಿಂಗಂ ಬಿಸುಡು ಈ ತಮ್ಮಂರೊಳಿಂತಿಂತು ಕಡ್ಡುವಪ್ಪುದು ಪೆಂಪೇ: **ಆದಿಪು,** ೧೪. ೧೨೮); [ನಾ] ಹಿರಿಮೆ (ಮುಗಿಲಂ ಮುಟ್ಟಿದ ಪೆಂಪು ಪೆಂಪನೊಳಕೊಂಡುದ್ಯೋಗಂ: **ಪಂಪಭಾ,** ೧. ೨೭); [ನಾ] ಕೀರ್ತಿ (ಅನುಪಮ ವಿಕ್ರಮಕ್ರಮಂ ಉದಾರಗುಣಂ ಋತವಾಕ್ಯಂ ಎಂಬ ಪೆಂಪೆನಲಿವು ಮೂಱ ನಾಲ್ಕೆ ಗುಣಂ: **ಪಂಪಭಾ,** ೧೨. ೯೩)

ಪೆಗಲ್ – [ನಾ] ಹೆಗಲು, ಭುಜ (ಬಲದೇವಂ ದುರ್ಯೋಧನಂಗೆ ಆಯು ಬರ್ಪಂತೆ ಪೆಗಲೊಳ್ ಹಲಾಯುಧಮನಿಕ್ಕಿಕೊಂಡು ಜಂಗಮಪರ್ವತಮೆ ಬರ್ಪಂತೆ ಬಂದು: **ಪಂಪಭಾ,** ೧೩. ೮೮ ವ)

ಪೆಟ್ಟುವೆರ್ಚು – [ಕ್ರಿ] ಗರ್ವದಿಂದ ಕೂಡು, ಉಬ್ಬು (ಮರಗಳೆ ಮುನ್ನಿತ್ತಿನಿಸಂ ಮರವಟ್ಟುವು ಪೆಟ್ಟುವೆರ್ಚಿ ಕುದಿದಿತ್ತೊಡಮೀ ಧರಣೀತಳಕ್ಕೆ: **ಆದಿಪು,** ೬. ೫೦)

ಪೆಟ್ಟೆ – [ನಾ] ಹೆಂಟೆ (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏೞುತಿರೆ: **ಪಂಪಭಾ,** ೩. ೯)

ಪೆಡಗೆಯ್ಗಟ್ಟು – [ಕ್ರಿ] ಹೆಡಮುರಿಗೆ ಕಟ್ಟು (ನಿನ್ನ ಪೆಡಗೆಯ್ಗಟ್ಟಂ ಶರದಿಂ ಬಿಡಿಸಿದನಲ್ಲನೆ ಸರಿತ್ಸುತಂ ಬನ್ನವಿನ್ನವು ಎಂಬುವುಮೊಳವೇ: **ಪಂಪಭಾ,** ೮. ೫೩)

ಪೆಡತಲೆ – [ನಾ] ತಲೆಯ ಹಿಂಭಾಗ (ನುಡಿಯೆ ನುಡಿಯೆ ನಾಲಗೆಯಂ ಪಿಡಿದು ಪೆಡತಲೆಯಿಂದುರ್ಚುವರುಂ: **ಆದಿಪು**, ೫. ೮೫ ವ)

ಪೆಡಸಾರ್ – [ಕ್ರಿ] ಹಿಂದಕ್ಕೆ ಹೋಗು (ನೆತ್ತರಂ ಪಡೆಯದೆ ಆಕಾಶಕ್ಕೆ ಬಾಯಂ ತೆಱೆದು ಊಳ್ವ ಬಳ್ಳುಗಳುಮಂ ನರವುಮಂ ಬರಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ ತಾನೆ ಸೋದು: **ಪಂಪಭಾ**, ೧೩. ೫೬ ವ)

ಪೆಣ್ – [ನಾ] ಹೆಣ್ಣು, ಹೆಂಗಸು (ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇಱಿದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು: **ಆದಿಪು,** ೧. ೯)

ಪೆಣ – [ನಾ] ಹೆಣ, ಶವ (ತುಱು ಪರಿವಾಗಳೆಮ್ಮ ಪೆಣನಂ ತುೞಿದುಂ ಪರಿಗುಂ ದಲ್: **ಪಂಪಭಾ,** ೮. ೯೫)

ಪೆಣನನಿಱಿದು ಪಗೆಗೊಳ್ – [ಕ್ರಿ] ಹೆಣವನ್ನು ತಿವಿದು ಹಗೆ ತೀರಿಸಿಕೊ [ಎಂಬ ಗಾದೆ] (ಅಧ್ಯಾತ್ಮವಿಶಾರದನಾಗಿ ಪರಮಾತ್ಮನೊಳ್ ಕೂಡಿದಂ ಆಗಳ್ ಪೆಣನನಿಱಿದು ಪಗೆಗೊಂಡರೆಂಬ ನಾಣ್ನುಡಿಯಂ ನನ್ನಿಮಾಡಿ: **ಪಂಪಭಾ,** ೧೨. ೨೯ ವ)

ಪೆಣೆ – [ಕ್ರಿ] ಹೆಣೆ, ಸೇರಿಸು (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒಱೆ ಕರ್ಪಿಡಿದ ಪಣೆಕಟ್ಟು ಕೆಯ್ವಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್: **ಪಂಪಭಾ,** ೧೦. ೭೧)

ಪೆಣ್ಣಂಚೆ – [ನಾ] ಹೆಣ್ಣು ಹಂಸ (ವಿದಳಿತ ನುತಶತಪತ್ರದ ಪುದುವಿನೊಳ್ ಇರದೆ ಅಗಲೆವೋದ ಹಂಸನನಱಸಲ್ ಪದದೆಳಸುವ ಪೆಣ್ಣಂಚೆಯ ಪದಕೊರಲಿಂಚರದ ಸರಮೆ ಸವಿ ಕಿವಿಗಿದಱೊಳ್: **ಪಂಪಭಾ**, ೫. ೫೬)

ಪೆಣ್ತಂಡ – [ನಾ] ಹೆಂಗಸರ ಗುಂಪು (ಪೆಣ್ತಂಡಂ ಇಂದ್ರಾಣಿಯೆಂದುದನೆಂದು ಎಡೆಯಾಡುತಿರ್ಪುದೆನೆ ಮತ್ತೇನೆಂದದಂ ಬಣ್ಣಿಪೆಂ: **ಆದಿಪು**, ೮. ೨೨)

ಪೆಣ್ಬುರುಳಿ – [ನಾ] [ಪೆಣ್+ಪುರುಳಿ] ಹೆಣ್ಣು ಗಿಳಿ (ಪಾಡುವ ತುಂಬಿ ಕೋಡುವ ಪುಟಿಲ್ ನಡೆದಾಡುವ ರಾಜಹಂಸೆ ಬಂದಾಡುವ ತೊಂಡು ಪೆಣ್ಬುರುಳಿ: **ಪಂಪಭಾ**, ೩. ೩೭)

ಪೆಣ್ಮಾಡು – [ಕ್ರಿ] ಮಾಡಿದ ಹೆಣ್ಣು (ಪೊಳೆವ ಅಂಗಚ್ಛಾಯೆಯುಂ ಬೇಱೆ ತೊಟ್ಟನೆ ಮೆಯ್ದೋಱೆ ವಿಶುದ್ಧಮಪ್ಪ ಪಳಿಕಿಂ ಪೆಣ್ಮಾಡಿದಂತೊಪ್ಪಿದಳ್: **ಆದಿಪು**, ೭. ೨೩)

ಪೆತ್ತಕ್ಕ – [ನಾ] ಹೆತ್ತ ಅಕ್ಕ, ಹೆತ್ತವಳು (ಪೆತ್ತಳ್ ಕೊಂತಿಯೆ ಮಕ್ಕಳ್ವೆತ್ತರ್ ಎಂಬವರೆ ಕೊಂತಿಮಾದೇವಿಗಂ ಒಂದುತ್ತರಮಾದಳ್ ಕರ್ಣಂಬೆತ್ತಕ್ಕಳೆ: **ಪಂಪಭಾ,** ೧೨. ೧೨೫)

ಪೆತ್ತರ್ – [ನಾ] [√ಪೆಱು] ಹೆತ್ತರು, ಪಡೆದರು (ಪೆತ್ತರಂದು ಧೃತರಾಷ್ಟ್ರವಿಖ್ಯಾತಪಾಂಡುರಾಜವಿದುರರ್ಕಳಂ ಕ್ರಮದೆ ಮೂವರುಂ ಮೂವರಂ: **ಪಂಪಭಾ,** ೧, ೮೬)

ಪೆತ್ತು – ಹೆತ್ತು (ಅಂತು ಭರತಕುಲತಿಲಕರಪ್ಪ ಇರ್ವರ್ ಮಕ್ಕಳಂ ಪೆತ್ತು ಕೊಂತಿ ಸಂತಸದ ಅಂತಮನೆಯ್ದಿರ್ಪುದುಂ: **ಪಂಪಭಾ,** ೧. ೧೨೮ ವ)

ಪೆರ್ಗಡೆ – [ನಾ] ಹೆಗ್ಗಡೆ, ದೊಡ್ಡ ಅಧಿಕಾರಿ (ಶಂತನು ಪೊೞಲ್ಗೆ ಮಗುಳ್ದು ವಂದು ಅವರಯ್ಯನಪ್ಪ ದಾಶರಾಜನಲ್ಲಿಗೆ ಕೂಸಂ ಬೇಡೆ ಪೆರ್ಗಡೆಗಳಂ ಅಟ್ಟಿದೊಡೆ: **ಪಂಪಭಾ,** ೧. ೭೦ ವ); [ನಾ] ರಾಯಭಾರಿ (ಅಟ್ಟಿದ ನಿಮ್ಮ ಪೆರ್ಗಡೆ ಬರ್ದುಂಕಿದಂ ಎಂಬುದಂ ಇಂದ್ರಜಾಲಮಂ ತೊಟ್ಟನೆ ತೋಱೆ ಬಂದು ಬರ್ದುಕಾಡಿದಂ: **ಪಂಪಭಾ,** ೯. ೮೯)

ಪೆರ್ಗಡೆತನ – [ನಾ] ಮುಖ್ಯಾಧಿಕಾರಿಯ ಹುದ್ದೆ, ದೊಡ್ಡಸ್ತಿಕೆ (ನೀಮಾರ್ಗೆ ಇದೇಕೆ ಕಿಡೆನುಡಿದಪಿರ್ ಇಟ್ಟೆಡೆವೆರ್ಗಡೆತನದೊಳ್ ಇದೇವಡೆವಿರ್: **ಆದಿಪು**, ೯. ೧೦೭)

ಪೆರ್ಚಿಸು – [ಕ್ರಿ] ವೃದ್ಧಿಮಾಡು (ಬಂಧುಜನಕ್ಕೆ ಮುಗ್ಧಮುಖಚಂದ್ರಾವಲೋಕಮಾಲೋಕನೋತ್ಸವಮಂ ಪೆರ್ಚಿಸೆ ಜಾಣನಿಂತೊದವಿದಂ ಸಂಸಾರಸಾರೋದಯಂ: **ಆದಿಪು,** ೭. ೧೨೯); [ಕ್ರಿ] ಹೆಚ್ಚುಮಾಡು (ಈ ತಪೋವನದ ಮುನಿಜನದ ಪರಮಾನುರಾಗಮಂ ಪೆರ್ಚಿಸಿ ಕಾಮಾನುರಾಗಮಂ ಬೆರ್ಚಿಸಿ ತದಾಶ್ರಮದೊಳ್ ಆಶ್ರಮಕ್ಕೆ ಗುರುವಾಗಿ ಪಾಂಡುರಾಜನಿರ್ಪನ್ನೆಗಂ: **ಪಂಪಭಾ,** ೧. ೧೧೬ ವ)

ಪೆರ್ಚು – [ಕ್ರಿ] ಹೆಚ್ಚಾಗು (ಮನದೊಳ್ ತ್ರೈಭುವನಮಂ ಆಳ್ದನಿತುವರಂ ತನಗೆ ಸಂತಸಂ ಪೆರ್ಚಿಯುಂ ಅಂದು ಇನಿಸು ಅಂಧನೃಪಂ ತನ್ನಯ ಜನದೊಳ್ ಕೆಲನಱೆಯೆ ಕೃತಕಶೋಕಂಗೆಯ್ದಂ: **ಪಂಪಭಾ,** ೩. ೮); [ಕ್ರಿ] ಹೆಚ್ಚಿಕೊಳ್ಳು, ಮದಿಸು (ದಾಯಿಗರಪ್ಪೊಡೆ ಕರಂ ಪೆರ್ಚಿದರ್ ಅವರ ಪೆರ್ಚಿಂಗೇಗೆಯ್ವುಂ ಬಸನಂಗಳಂ ಸಮಕಟ್ಟುವಂ: **ಪಂಪಭಾ,** ೬. ೬೭ ವ); [ನಾ] ಆಧಿಕ್ಯ (ಕೋಪದ ಪೆರ್ಚಿನೊಳ್ ನಡುಗುವೂರುಯುಗಂ ಕಡುಪಿಂದರಲ್ವ ನಾಸಾಪುಟಂ: **ಪಂಪಭಾ,** ೭. ೬); [ನಾ] ಹಿಗ್ಗು, ಸಂತೋಷಪಡು (ಅಂದು ಇರುಳಾದೊಡೆ ರಾಜ್ಯಮಾದವೋಲ್ ಪೆರ್ಚೆ ಮನಕ್ಕೆ ಬಿಚ್ಚತಿಕೆವಂದಿರೆ: **ಪಂಪಭಾ**, ೮. ೭೫)

ಪೆರ್ಜಸ – [ನಾ] [ಪಿರಿದು ಜಸ] ಹೆಚ್ಚಿನ ಯಶಸ್ಸು (ಪೆರ್ಜಸಮನೆ ಪಿಡದೆನ್ನನೆ ರಣದೊಳೞಿವಂ: **ಪಂಪಭಾ,** ೯. ೮೭)

ಪೆರ್ಜೋಡೆ – [ನಾ] ಹಿರಿಯ ಸೂಳೆ (ದುರ್ಯೋಧನಂ .. .. ಕೞಿವು ಉೞಿವನಱಿದುಂ ರಸವಾದಿಯಂತೆ ಕಟ್ಟಿಯುಂ ಪೆರ್ಜೋಡೆಯಂತೆ ನುಣ್ಣಿತಂ ವೇೞ್ದು: **ಪಂಪಭಾ**, ೬. ೭೨ ವ)

ಪೆರ್ದುಡುಗೆ – [ನಾ] [ಪಿರಿದು ತುಡುಗೆ] ದೊಡ್ಡ ಎಂದರೆ ಬೆಲೆಬಾಳುವ ಆಭರಣ (ಪಸರಿಸಿದ ತಾರಹಾರದ ಪೊಸವೆಳ್ದಿಂಗಳುಮಂ ಅಮರ್ದ ಪೆರ್ದುಡುಗೆಗಳೊಳ್ ಮಿಸುಗುವ ಪೊಸಮಾಣಿಕದ ಎಳವಿಸಿಲುಮಂ: **ಪಂಪಭಾ,** ೧೪. ೨೬)

ಪೆರ್ಬಡೆ – [ನಾ] [ಪಿರಿದು ಪಡೆ] ದೊಡ್ಡ ಸೈನ್ಯ (ಅದಱೊಳಗೆ ಪುದಿದು ಮಂದೈಸಿದ ಕಟ್ಟಿಲೆಗಗಿದು ಸುಗಿವ ಪೆರ್ಬಡೆಯಂ ಕಂಡು ಇದು ನಡೆಯದೆ ಸೆಡೆದೇಕಿರ್ದುದು ಎಂದು ಬೆಸಸಿದೊಡೆ: **ಆದಿಪು**, ೧೩. ೪೭)

ಪೆರ್ಮರ – [ನಾ] ಹೆಮ್ಮರ, ದೊಡ್ಡ ಮರ (ಘೋಟಯಿಲರ್ ತಗುಳ್ದು ತತ್ತಱ ತಱಿದಿಕ್ಕಿ ದೇಗುಲಕೆ ಪೆರ್ಮರನಂ ಕಡಿವಂತೆ ಮಾಡಿದರ್: **ಪಂಪಭಾ**, ೮. ೯೫)

ಪೆರ್ಮಾತು – [ನಾ] ಗರ್ವದ ಮಾತು (ಭಯಮೇಕೆ ಅಕ್ಕುದದೆಂತುಟೆಂದು ಅದಟುಮಂ ಪೆರ್ಮಾತುಮಂ ಭೂತಧಾತ್ರಿಯೊಳೋರಂತೆ ನೆಗಟ್ಟೆ: **ಪಂಪಭಾ,** ೧೨.

೧೭೫); [ನಾ] ದೊಡ್ಡ ಮಾತು, ಹಿರಿಮಾತು (ಇರ್ದಾಗಳ್ ಒಳ್ಪಿನ ಪೆರ್ಮಾತಿನ ನನ್ನಿ ಬನ್ನದೊಳ್ ಒಡಂಬಟ್ಟಿರ್ಪುದಂ ಮಾಟಿಪ್ಪೆನೇ: **ಪಂಪಭಾ,** ೧೨. ೧೯೬)

ಪೆರ್ಮೊಲೆ – [ನಾ] ದೊಡ್ಡ ಮೊಲೆ (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱಿದ ನಿತಂಬ ಇಂಬುವಡೆದ ಒಳ್ನೊಡೆ ನೆಕ್ಕರವದ್ದೆ ತಾನೆ ಪೋ ಕಿಱುದೊಡೆ ಎಂದು ಧಾತ್ರಿ ಪೊಗಟ್ಟುಂ ಪೊಗಟ್ವನ್ನರೆ ಕುಂತಿ ಮಾದ್ರಿಗಳ್: **ಪಂಪಭಾ,** ೧. ೧೦೮)

ಪೆರ್ವಡೆ – [ನಾ] [ಪಿರಿದು ಪಡೆ] ದೊಡ್ಡ ಸೈನ್ಯ (ಏಂ ನಡೆದುದೊ ಪೆರ್ವಡೆ ಗಂಗೆಯ ತಡಿವಿಡಿದು ಎರಡನೆಯ ಗಂಗೆ ನಡೆವಂತಾಗಳ್: **ಆದಿಪು,** ೧೨. ೬೩)

ಪೆರ್ವಱೆ – [ನಾ] ದೊಡ್ಡ ಹರೆ [ವಾದ್ಯ] (ಎಡೆಯೊಳ್ ದೂಂಟಿಂದೆ ದೂಂಟಿಂಗೆ ಪೆರ್ವಱೆಯಂ ಪೊಯ್ಸಿ ಕೆಲಕ್ಕೆ ನಾಣ್ಚಿ ತಲೆಗುತ್ತಿರ್ಪ ಆಕೆಯೇಂ ಜೋಡೆಯೆ: **ಪಂಪಭಾ** ಪರಿಷತ್ತು, ೪. ೮೨)

ಪೆರ್ವಿಡಿ – [ನಾ] [ಪಿರಿದು ಪಿಡಿ] ದೊಡ್ಡ ಹೆಣ್ಣಾನೆ (ಏಱಿದ ಪೊನ್ನ ಪಣ್ಣುಗೆಯ ಪೆರ್ವಿಡಿ ಕಟ್ಟಿದಿರಾಗೆ ಮುಂದೆ ಬಂದೇಱಿದ ಚೆನ್ನಗನ್ನಡಿಯ ಚೇಟಿಕೆ: **ಪಂಪಭಾ,** ೯. ೧೦೦)

ಪೆರ್ವಿದಿರ್ – [ನಾ] ಹೆಬ್ಬಿದಿರು (ಒಣಗಿದುದೊಂದು ಪೆರ್ವಿದಿರ ಪೆರ್ವೊದಱಿಂ ಮೊರೆದು ಉರ್ವಿದ ಆಶುಶುಕ್ಷಿಣಿಯವೊಲ್ ಆಂತ ಖಟ್ಗಿನಿವಹಕ್ಕೆ ರಥಕ್ಕೆ ದಟಕ್ಕೆ ಮತ್ತವಾರಣನಿವಹಕ್ಕೆ: **ಪಂಪಭಾ,** ೧೧. ೯೪)

ಪೆರ್ವೆಂಡಿರ್ – [ನಾ] [ಪಿರಿದು ಪೆಂಡಿರ್] ವೃದ್ಧಸ್ತ್ರೀಯರು (ಪೆರ್ವೆಂಡಿರ್ ಸೂಸುವ ಸೇಸೆಯೊಡನೆ ರುಧಿರವರ್ಷಂ ಸುರಿಯೆಯುಂ: **ಪಂಪಭಾ,** ೨೬ ವ)

ಪೆರ್ವೇಂಟೆ – [ನಾ] ಹೆಬ್ಬೇಟೆ, ದೊಡ್ಡ ಬೇಟೆ (ಮೃಗಮುಂ ಅಱಿದು ಕಾಲಾಳೊಳಂ ಕುದುರೆಯೊಳಂ ಒಳಗಂ ಬರಲ್ ಆನೆ ಬಲ್ಲೆಂ ಇದು ಪೆರ್ವೇಂಟೆಯಂದಂ: **ಪಂಪಭಾ,** ೫. ೪೩ ವ)

ಪೆರ್ವೊದಱ್ – [ನಾ] [ಪಿರಿದು ಪೊದಱ್} ದಟ್ಟವಾಗಿ ಬೆಳೆದ ಪೊದೆ (ಒಣಗಿದುದೊಂದು ಪೆರ್ವಿದಿರ ಪೆರ್ವೊದಱಿಂ ಮೊರೆದು ಉರ್ವಿದ ಆಶುಶುಕ್ಷಿಣಿಯವೊಲ್ ಆಂತ ಖಟ್ಗಿನಿವಹಕ್ಕೆ ರಥಕ್ಕೆ ದಟಕ್ಕೆ ಮತ್ತವಾರಣನಿವಹಕ್ಕೆ: **ಪಂಪಭಾ,** ೧೧. ೯೪)

ಪೆಸರ್ – [ನಾ] ಹೆಸರು (ಪೊದಳ್ದಾಜ್ಞೆಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳಾರಾ ಪಾಂಡುರಾಜಂಬರಂ: **ಪಂಪಭಾ,** ೧. ೧೧೦); [ನಾ] ವ್ಯಕ್ತಿಯ ಹೆಸರು, ಅಂಕಿತನಾಮ (ಪುಟ್ಟುವುದುಂ ಧರ್ಮಮೊಡವುಟ್ಟಿದುದು ಈತನೊಳೆ ಧರ್ಮನಂಶದೊಳ್ ಈತಂ ಪುಟ್ಟಿದನೆಂದಾ ಶಿಶುಗೊಸೆದಿಟ್ಟುದು ಮುನಿಸಮಿತಿ ಧರ್ಮಸುತನೆನೆ ಪೆಸರಂ: **ಪಂಪಭಾ,** ೧. ೧೨೨); [ನಾ] ಬಿರುದು (ಅಮ್ಮನ ಗಂಧವಾರಣನುಂ ಪಡೆಮೆಚ್ಚೆಗಂಡನುಂ ಪರಸೈನ್ಯಭೈರವನುಂ ಎಂಬ ಪೆಸರ್ಗಳಂ ಅನ್ವರ್ಥಂ ಮಾಡಿ: **ಪಂಪಭಾ,** ೧೦. ೧೨೪ ವ)

ಪೆಸರಱಿಕೆ – [ನಾ] ಹೆಸರುವಾಸಿಯಾದ (ಸೈನ್ಯಂಗಳನಲ್ಲಕಲ್ಲೋಲಂ ಮಾಡಿ ಪೆಸರಱಿಕೆಯ ನಾಯಕರಂ ಅಱುವತ್ತುಸಾಸಿರ್ವರಂ ಒರ್ವನಂ ಕೊಲ್ವಂತೆ ಕೊಂದು: **ಪಂಪಭಾ,** ೧೨. ೧೧೬ ವ)

ಪೆಸರಾಗು – [ಕ್ರಿ] ಹೆಸರಾಗು, ಕೀರ್ತಿ ಬರು (ಕುಟೀಯೊಳ್ ತೊಟ್ಟಗೆ ನಿಧಿಗಂಡಂತೆ ವಸುಧೆಗಸದಳಮಾಯ್ತಾ ಮಗನಂದಂ ಎಂದು ಲೋಗರ್ ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್: **ಪಂಪಭಾ,** ೧. ೯೭)

ಪೆಸರಿಡು – [ಕ್ರಿ] ನಾಮಕರಣಮಾಡು (ನಡೆಯದೀ ವ್ಯವಹಾರಂ ಪೆಸರಿಲ್ಲದೊಡೆ ಎಂದು ಆ ಮನು ಪೆಸರಿಟ್ಟು ಯಶಸ್ವಿಯೆಂಬ ಪೆಸರಂ ಪಡೆದಂ: **ಆದಿಪು,** ೬. ೬೦)

ಪೆಸರ್ಗೊಳ್ – [ಕ್ರಿ] ನಾಮೋಚ್ಚಾರ ಮಾಡು (ಪೆಸಗೊಂಡಿದ್ರನರೇಂದ್ರವಂದ್ಯನಂ ಒಱಲ್ದು ಎತ್ತಾನುಂ ಓರೊರ್ಮೆ ಚಿಂತಿಸಿದೊಂಗಂ ಪವಣಿಲ್ಲ ಪುಣ್ಯಂ: **ಆದಿಪು,** ೧. ೩೭); ಹೆಸರು ಎತ್ತು (ಪೆಸರ್ಗೊಂಡನಿತಱಿಳೆನ್ನಂ ಸೈರಿಸನೆನೆ ಭರತಂಗೆಱಗಿ ಲೋಕದಿಂ ನಗಿಸುವೆನೇ: **ಆದಿಪು,** ೧೪. ೭೬)

ಪೆಸರ್ಮಾಡು – [ಕ್ರಿ] ಖ್ಯಾತಿಯುಂಟುಮಾಡು (ಭರತದೊಳದು ವಂದನಮಾಲೆಯೆಂಬ ಪೆಸರಂ ತನಗೆ ಪೆಸರ್ಮಾಡಿ ಕೂಡೆ ಸಂದಪುದಿನ್ನುಂ: **ಆದಿಪು,** ೧೬. ೩೯)

ಪೆಸರ್ವಡೆ – [ಕ್ರಿ] ಪ್ರಸಿದ್ಧವಾಗು (ಮತ್ತಂ ಸ್ವಯಂಭುವಾಭಿಧಾನ ಪದವಿದ್ಯಾ ಛಂದೋವಿಚಿತಿ ಅಲಂಕಾರಂಗಳೆಂಬ ಮೂಱುಂ ಪೆಸರ್ವಡೆದ ವಾಙ್ಮಯಮುಮಂ: ಆದಿಪು, ೮. ೬೦ ವ)

ಪೆಸರ್ವೆಸರೊಳ್ – ಹೆಸರು ಹಿಡಿದು (ನೀಂ ಪೆಸರ್ವೆಸರೊಳ್ ನಾಲ್ವರುಮಂ ಆದರಂಗೊಂಡು ಆ ನಾಲ್ಕುಂ ದೆಸೆಗೆ ಬೆಸಸಿಂ ಬೆಳ್ಕಱುವಿನಂ: **ಪಂಪಭಾ,** ೬. ೨೮)

ಪೆಳಱು – [ಕ್ರಿ] ಭಯಪಡು (ವದನಸುಧಾಸೂತಿ ಬೆಳಗೆ ಪೆಳಱಿದ ತಮಮಿಂ ಪುದಿದು ಪೆಱಗಿರ್ದುದು ಎನಿಪುದು ಮದಗಜಗಮನೆಯ ವಿನೀಳಕೇಶಕಳಾಪಂ: **ಆದಿಪು,** ೮೨)

ಪೆಳಱೆವು – [ನಾವು] ಭಯಪಡುವುದಿಲ್ಲ, ಭಯಪಡಲಾರೆವು (ಅರಿನೃಪಬಲಂಗಳ್ ಅವರಿಱಿಯೆ ಪೆಳಱೆವು ಎಂಬರುಂ ಒಳರೇ: **ಪಂಪಭಾ,** ೯. ೫೧)

ಪೆಳ್ವಳಿಸು – [ಕ್ರಿ] ಭಯಪಡು, ನಡುಗು (ತನ್ನ ಜಸದಂತೆ ಪಸರಿಸಿದ ಅಚ್ಚವೆಳ್ದಿಂಗಳಂ ಆಕೆಯ ಕಣ್ಗಳ ಬೆಳ್ಪಿನ ತಳರ್ಪುದ ಎನುತ್ತುಂ ಪೆಳ್ವಳಿಸಿ ಚಂದ್ರನಂ ನೋಡಿ: **ಪಂಪಭಾ,** ೪. ೬೯ ವ)

ಪೆಳ್ಳನೆ – [ಅ] ಅನುಕರಣಾವ್ಯ, ಒಂದೇ ಸಮನೆ (ಈ ರೂಪೆಂಬುದು ಭುವನಜನಾರಾಧ್ಯಂ ಚಕ್ರಜನನಿಷೇವಿತಂ ಇದಱೊಳ್ ಸಾರದಳಿಪೆಂದು ಪೆಳ್ಳನೆ ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್: **ಆದಿಪು,** ೯. ೯೩)

ಪೆಱಂ – [ನಾ] ಬೇರೆಯವನು (ಜೀವಮುಳ್ಳಿನಂ ಇಱಿದು ಅರ್ಥಮುಳ್ಳಿನೆಗಂ ಇತ್ತು ನೆಗಟ್ತೆಯನಾಂಪುದೆಂಬ ಪೆಂಪಿನ ಸಮಕಟ್ಟು ಕಣ್ಗೆ ದೊರೆಯಾರ್ ಅರಿಕೇಸರಿ ನಿನ್ನವೋಲ್ ಪೆಱಂ: **ಪಂಪಭಾ,** ೫. ೭೭)

ಪೆಱಂಪೆಱಂ – [ನಾ] ಇತರರು, ಅನ್ಯರು (ಚೀಃ ಪೆಱಂಪೆಱಂ ನುಡಿದೊಡೆ ಕೇಳ್ದದಂ ಎಂದು ಎನಗೆ ನೋಯನೆ ಸಗ್ಗದೊಳಿರ್ದ ಇನಾತ್ಮಜಂ: **ಪಂಪಭಾ,** ೧೩. ೨೮)

ಪೆಱಗಂ ತಗುಳ್ – [ಕ್ರಿ] ಬೆನ್ನಟ್ಟು (ಬಲದೇವನನುಮತದೊಳ್ ಪೆಱಗಂ ತಗುಳ್ವ ಯಾದವಬಲಮುಂಟಪ್ಪಡಂ

ಅಂಬುಗಾಣಿಸಲ್ ನೀನೆ ಸಾಲ್ವಯ್: **ಪಂಪಭಾ,** ೫. ೨೦ ವ)

ಪೆಱಗಣ – [ಗು] ಹಿಂಬದಿಯ (ಬೇಲಿಯ ಕೆಲದೊಳಲ್ಲದೆ ಪೆಱಗಣ ಉಲುಪಿಂಗಂ ಉಳ್ಳೊಳಕ್ಕಂ ಗೆಂಟಾಗಿ ಬೀಡಂ ಬಿಡಿಸಿ: **ಪಂಪಭಾ,** ೫, ೪೭ ವ)

ಪೆಱಗಿಕ್ಕು – [ಕ್ರಿ] ಒದಕ್ಕೆ ಸರಿಸು, ಹಿಂದಿಡು, ಅವಜ್ಞೆಮಾಡು (ಸುಯೋಧನಂ ಎನಗೆ ಒಳ್ಳಿಕೆಯ್ದ ಕೃತಮಂ ಪೆಱಗಿಕ್ಕಿ ನೆಗಟ್ಟೆ ಮಾಸೆ ನಣ್ಪಿನ ನೆವದಿಂದೆ ಪಾಂಡವರಂ ಆಂ ಒಳವೊಕ್ಕಡೆ ನೀಮೆ ಪೇಸಿರೇ: **ಪಂಪಭಾ,** ೯. ೬೮)

ಪೆಱಗಿಡು – [ಕ್ರಿ] ಹಿಂದೆ ಸರಿ (ಉದಗ್ರಭೀಕರರಥಂ ಅಟ್ಟಿ ದಂತಿಘಟೆಗಳ್ ಪೆಱಗಿಟ್ಟೊಡೆ ಕಟ್ಟೆಗಟ್ಟಿದಂತಿರೆ ತಳರ್ದತ್ತು ಅರಾತಿಬಲಂ: **ಪಂಪಭಾ,** ೩. ೭೦)

ಪೆಱಗುಗೆಯ್ – [ಕ್ರಿ] ವಿಮುಖವಾಗು (ಕೆಲರ್ ಕಾಣ್ಗುಮೆಂದು ಕುಡಿಯಲುಂ ಪೆಱಗಣಿಂ ಪೆಱಗುಗೆಯ್ದು ಜಗುಟ್ದುಂ; **ಆದಿಪು,** ೯. ೯೨ ವ)

ಪೆಱಗುಟೆ – [ಅ] ಇನ್ನುಳಿದ, ಮಿಕ್ಕ (ಈತನೆ ನಮ್ಮ ಕುಲಕ್ಕಂ ಕೇತು ದಲ್ ಆನಱಿವೆಂ ಅಲ್ಲದೆ ಏಕಿಂತು ಉತ್ಪಾತಂ ತೋರ್ಪುವು ಬಿಸುಡುವುದೀತನ ಪೆಱಗುಟೆದ ಸುತರೆ ಸಂತತಿಗಪ್ಪರ್: **ಪಂಪಭಾ,** ೧. ೧೩೩); [ಕ್ರಿ] ಹಿಂದೆ ಉಳಿ (ನೆನೆವ ಮನಂ ಪೆಱಗುಟೆದತ್ತೆನೆ ಬೆಳಗುವ ರತ್ನದೀಪ್ತಿ ಸುರಧನು ನೆಗೆದತ್ತೆನಡ ನೆಯ್ದಿಲ್ಗೊಳನಲರ್ದತ್ತೆನೆ ಕಣ್ಗಳ ಬಳಗಂ ಆಗಳ್ ಇಂದ್ರಂ ಬಂದಂ: **ಪಂಪಭಾ,** ೧೩೮)

ಪೆಱಗೆ – [ನಾ] ಹಿಂದೆ (ಪೆಱಗೆ ಏಱೆ ಬರ್ಪ ಕನ್ನಡಿವಿಡಿದಾಕೆ ಚೆನ್ನದ ಸವಂಗಂ ಅಪೂರ್ವದ ಮೊಚ್ಚೆಯಂ ಪವಣ್ಬಡೆದ ಸುವರ್ಣಪಾರಿವದ ಕುಪ್ಪಸಮೊಪ್ಪೆ: **ಪಂಪಭಾ,** ೯. ೧೦೩)

ಪೆಱತು – [ಗು] ಬೇರೆ (ಪಾರ್ವನೆಂದೆನ್ನೊಳ್ ಮುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಂ ಅವಸಾನಕಾಲದೊಳ್ ಬೆಸಕೆಯ್ಯದಿರ್ಕೆ: **ಪಂಪಭಾ,** ೧. ೧೦೫ ವ)

ಪೆಱತೇನುಮಂ – ಬೇರೇನನ್ನೂ (ಎಂದು ತನ್ನ ಮನಮನಱೆದು ಮುಟ್ಟಿ ನುಡಿದ ಕೆಳದಿಯ ನುಡಿಗೆ ಪೆಱತೇನುಮಂ ಎನಲಱೆಯದೆ: **ಪಂಪಭಾ,** ೪. ೬೪ ವ)

ಪೆಱತೇ ಮಾತು – ಬೇರೆ ಮಾತೇನು (ಭೀಮಂ ಭಯಂಕರಂ ಪೆಱತೇ ಮಾತು ಈ ಕೂಸಿನಂದಂ ಈತನ ಪೆಸರುಂ ಭೀಮನೆ ಪೋಗೆನೆ ಮುನಿಜನಮೀ ಮಾಟಕ್ಕೆಯಿಂ ಆಯ್ತು ಶಿಶುಗೆ ಪೆಸರನ್ವರ್ಥಂ: **ಪಂಪಭಾ,** ೧. ೧೨೮)

ಪೆಱತೊಂದು – [ನಾ] ಬೇರೆಯೊಂದು, ಹೆಚ್ಚಿನದು (ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊದನೀವೆನೆಂದನೆ ನೊಂದಃ ಎಂದನೆ ಸೆರಗಿಲ್ಲದೆ ಪಿಡಿಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ: **ಪಂಪಭಾ,** ೧. ೧೦೨)

ಪೆಱಪಿಂಗು – [ಕ್ರಿ] ಹಿಂಜರಿ, ಹಿಮ್ಮೆಟ್ಟು (ಮೆಯ್ಯೊಳೆ ಸಿಡಿಲ್ ತಾಪಂತೆವೋಲ್ ತಾಗೆ ಮೆಯ್ಗಲಿ ಭೀಮಂ ಪೆಱಪಿಂಗದಂತು ಪಲವುಂ ಬಂಧಂಗಳಿಂ ತಳ್ತು: **ಪಂಪಭಾ,** ೬. ೨೭)

ಪೆಱಪೆಱಗನೆ – [ಅ] ಹಿಂದುಹಿಂದೆಯೇ (ಬಟೆಯನೆ ಮಕ್ಕಳ್ ಭೋರ್ಗರೆದಟುತುಂ ಪೆಱಪೆಱಗನಂತೆ ಪರಿತರೆ: **ಪಂಪಭಾ,** ೨. ೨೪)

ಪೆಱರೊಡವೆ – [ನಾ] [ಪೆಱರ+ಒಡವೆ] ಬೇರೆಯವರ ಸ್ವತ್ತು (ಮಗಳಂ ಈವೆನಪ್ಪೊಡೆ ಕೊಡಗೂಸೆಂಬುದು ಪೆಱರೊಡವೆ ಮಗನಂ ಈವೆನಪ್ಪೊಡೆ ಸಂತತಿಚ್ಛೇದಮುಂ ಪಿಂಡಚ್ಛೇದಮುಂ ಅಕ್ಕುಂ ಅದಱಿಂದ ಎನ್ನನೆ ಕುಡಲ್ವೇೞ್ಕುಂ: **ಪಂಪಭಾ,** ೩. ೨೫ ವ)

ಪೆಱವು – [ನಾ] ಬೇರೆಯವು (ಆಲೀಢ ಪ್ರತ್ಯಾಲೀಢ ಸಮಪಾದಂಗಳೆಂಬ ಆಸನಂಗಳೊಳಂ ಪೆಱವುಂ ಶರಾಸನವಿದ್ಯೆಗಳೊಳ್ ಅತಿ ಪ್ರವೀಣರುಂ ಜಾಣರುಂ ಆಗಿ: **ಪಂಪಭಾ,** ೧೩. ೩೮ ವ)

ಪೆಱವುಂ – [ಅ] ಮುಂತಾದ, ಬೇರೆಯವೂ (ಗಗನಸಿಂಧು ಫೇನಪಟಳ ಶಂಖಸಂಕಾಶ ಪಾಂಡುಛತ್ರ ಚಾಮರಂಗಳುಂ ಪೆಱವುಂ ರಾಜಚಿಹ್ನಂಗಳುಂ ಎಸೆಯೆ: **ಪಂಪಭಾ,** ೧೦. ೫೭ ವ)

ಪೆಱಳ್ – [ನಾ] ಬೇರೆಯವಳು, ಅನ್ಯಳು (ನೀನೆಱಗಿದೆ ಎನ್ನ ಪಕ್ಕದೆ ಪೆಱಳ್ಗೆನೆ ಬೆರ್ಚಿ ಲತಾಂಗಿಗಾಗಳಾನೆಱಗಿದೆಂ: **ಆದಿಪು,** ೪. ೧೩)

ಪೆಱೆ – [ನಾ] ಬಾಲಚಂದ್ರ (ಉರದೊಳ್ ಫಣಿ ಕರದೊಳ್ ಬಿಲ್ ಶಿರದೊಳ್ ತೊಱೆ ತೊಱೆಯ ಕೆಲದೊಳ್ ಎಸೆದಿರೆ ಪೆಱೆ ಮುಂಗೊರಲೊಳ್ ಕಱೆ: **ಪಂಪಭಾ,** ೮. ೨೪)

ಪೆಱೆಯ – [ನಾ] ಒಂದು ಬಗೆಯ ಬಾಣ (ಪೆಱೆಯ ಮುಱಿಗಂ ಕಣಕೆನೆ ವೋಪಂಬು ಕವಲಂಬುವೆಂಬ ಅಂಕದ ಅಂಬು ಎತ್ತಲುಂ ತುಱುಗಿ: **ಪಂಪಭಾ,** ೧೩. ೩೯)

ಪೆಱವ – [ನಾ] ಹೆಳವನಾದ [ಅರುಣ] (ಪಟಯಿಗೆಯನುಡುಗಿ ರಥಮಂ ಪೆಱವನಂ ಎಸಗಲ್ಕೆ ವೇೞ್ದು ಸುತಶೋಕದ ಪೊಂಪುಟೆಯೊಳ್: **ಪಂಪಭಾ,** ೧೨. ೨೨೦)

ಪೇಚಕ – [ನಾ] ಆನೆಯ ಬಾಲದ ಬುಡ (ಅನುಪೂರ್ವ ದೀರ್ಘವಾಳಧಿಯುಂ ಮಾನುಷದುಗ್ಧಾವಿಳಾಸನೋಪೇತ ಪೇಚಕನುಂ: **ಆದಿಪು,** ೧೨. ೫೬ ವ)

ಪೇಟಕ – [ನಾ] ಗುಂಪು, ಸಮೂಹ (ಪರಮನನೋಲಗಿಸಿ ಕೃತಾರ್ಥರೆಂ ಅಪ್ಪೆವು ಅಮೋಘಂ ಅವಸರಂಗುಡಿಸುವುದು ಎಂದಿರದೆ ಎನ್ನಂ ಅಧಿಕಭಕ್ತಿಯೆ ತರೆ ಬಂದುದು ದೇವ ದಿವಿಜಪೇಟಕಮನಿತುಂ: **ಆದಿಪು,** ೯. ೧೦)

ಪೇಡಿ – [ನಾ] ಹೆದರುಪುಕ್ಕ (ಗೋವಳಿಗನಂ ಗೆಡೆಗೊಂಡು ಬಳೆದೊಟ್ಟ ಪೇಡಿಯೆ ನಿಮ್ಮನಿಂತಿಳಿಸಿ ಮದ್ಬಲಮೆಲ್ಲಮಂ ಕೊಲೆ ನೋಡುತಿರ್ಪುದು ಪಾಟಿಯೆ: **ಪಂಪಭಾ,** ೧೧. ೧೬)

ಪೇರರ್ವಿ – [ನಾ] [ಪಿರಿದು ಅರ್ವಿ] ದೊಡ್ಡ ಅಬ್ಬಿ, ತಡಸಲು (ಪೇರರ್ವಿಗಳ್ವೆರಸು ಜಾಜಿನ ಪರ್ವತಂಗಳಂತೆ ಕೆಡೆದು: **ಪಂಪಭಾ,** ೧೦. ೯೬ ವ)

ಪೇರಾಳ್ – [ನಾ] [ಪಿರಿಯ ಆಳ್] ಮಹಾ ಶೂರ (ಪೇರಾಳ್ ತಿಱಿದಿಕ್ಕಿದಂತೆ ತಲೆಯಂ ಪೋಗೆಚ್ಚನಾ ಶ್ವೇತನಾ: **ಪಂಪಭಾ,** ೧೦. ೧೨೩)

ಪೇರೊಟ್ಟೆ – [ನಾ] [ಪಿರಿದು ಒಟ್ಟೆ] ದೊಡ್ಡ ಒಂಟೆ (ಆ ಪಡೆಯೊಳ್ ಗಂಡನುಂ ಆ ಮೊಲಂ ದ್ರುಪದನುಂ ಪೇರೊಟ್ಟೆ ಆ ಮತ್ಸ್ಯನುಂ ಗಡಂ: **ಪಂಪಭಾ,** ೧೦. ೪)

ಪೇರೊಡಲ್ – [ನಾ] ದೊಡ್ಡ ಹೊಟ್ಟೆ, ದೇಹ (ಕಾರಿರುಳ ತಿರುಳ ಬಣ್ಣ ಕೂರಿದುವೆನೆ ತೊಳಪ ದಾಡೆ ಮಿಳಿರ್ವ ಉರಿಗೇಸಂ ಪೇರೊಡಲ್ ಎಸೆದಿರೆ ಪುಟ್ಟಿದಂ ಆರುಂ ಅಗುರ್ವಿಸೆ ಮಗಂ ಘಟೋತ್ಕಚನೆಂಬಂ: **ಪಂಪಭಾ,** ೩. ೨೦)

ಪೇಸು – [ಕ್ರಿ] ಜುಗುಪ್ಸೆಪಡು (ಸುಯೋಧನಂ ಎನಗೆ ಒಳ್ಳಿಕೆಯ್ದು ಕೃತಮಂ ಪೆಱಗಿಕ್ಕಿ ನೆಗೞ್ತೆ ಮಾಸೆ ನಣ್ಪಿನ ನೆವದಿಂದೆ ಪಾಂಡವರಂ ಆಂ ಒಳವೊಕ್ಕಡೆ ನೀಮೆ ಪೇಸಿರೇ: **ಪಂಪಭಾ,** ೯. ೬೮)

ಪೇಸೇೞ್ – [ಕ್ರಿ] ಜುಗುಪ್ಸೆಯುಂಟಾಗು (ಒಂದು ಲಕ್ಕ ಮದದಾನೆಯುಮಂ ಮೂಱು ಲಕ್ಕ ರಥಮುಮಂ ಒಂದು ಕೋಟಿ ತುರುಷ್ಕತುರಂಗಗಳುಮಂ ಪದಿನೆಂಟು ಕೋಟಿ ಪದಾತಿಯುಮಂ ಅಲಸದೆ ಪೇಸೇೞೆ ಕೊಂದು: **ಪಂಪಭಾ,** ೧೧. ೧೯ ವ)

ಪೇಱು – [ಕ್ರಿ] ಹೊರಿಸು (ನನೆಯನೆ ಪೇಱೆ ಕೆಂದಳಿರೊಳೆಯ್ದೆ ಬೞಲ್ದೆಳಮಾವು: **ಆದಿಪು,** ೧. ೬೫); [ನಾ] ಹೊರೆ, ಹೇರು (ಬಳೆಯ ಪೇಱಂ ಆನೆ ಮೆಟ್ಟಿದಂತೆ ನುರ್ಚುನೂಱಪ್ಪಿನಂ ಅವುಂಕಿ ಪಿಡಿದಡಸಿ ಅಗುರ್ವು ಪರ್ವೆ ಬೀಸಿ: **ಪಂಪಭಾ,** ೮. ೭೬ ವ)

ಪೇೞ್ – [ಕ್ರಿ] ನಿರ್ದೇಶಿಸು, ಸೂಚಿಸು (ಸಪ್ತಾರ್ಚಿಯಂ ಮೂಱು ಸೂೞ್ ಬಲವಂದು ನಿಂದಿಂ ಬೞಿಯಂ ಆಕೆ ಪುರೋಹಿತನ ಪೇೞ್ದೋಜೆಯೊಳ್ ಲಾಜೆಯಂ ಅಗ್ನಿಕುಂಡದೊಳ್ ಸುರಿದು: **ಪಂಪಭಾ,** ३. ೭೫ ವ); [ಕ್ರಿ] ಆಜ್ಞೆಮಾಡು (ಅಂತು ಭೀಮಸೇನನಂ ಇಂದ್ರನ ಮೇಲೆವೇೞ್ವಂತೆ ಪೂರ್ವದಿಶಾಭಾಗಕ್ಕೆವೇೞ್ದು: **ಪಂಪಭಾ,** ೬. ೨೮ ವ); [ಕ್ರಿ] ನಿರೂಪಿಸು (ನೀಮಿರ್ವರುಂ ಬಂದಂದಮುಮಂ ಮನೆವಾೞ್ತೆಯಂ ಪೇೞಿಂ ಎಂದೊಡೆ: **ಪಂಪಭಾ,** ೯. ೧೧ ವ)

ಪೇೞಿಸು – [ಕ್ರಿ] ಬರೆಯುವಂತೆ ಪ್ರೇರಿಸು (ತ್ರಿದಶಸ್ತುತ್ಯಮಿದು ಆದಿದೇವಚರಿತಂ ಕರ್ಣಾಮೃತಸ್ಯಂದಿಯಕ್ಕೆ ಭವ್ಯಾವಳಿಗೆಂದು ಪೇೞಿಸೆ ಬುಧರ್: **ಆದಿಪು,** ೧೬. ೭೯)

ಪೇೞೆ ಪೆಸರಿಲ್ಲದಂತು – ಹೇಳಲು ಯಾರೂ ಉಳಿಯದ ಹಾಗೆ, ಸಂಪೂರ್ಣವಾಗಿ (ಮುನ್ನೆ ಪರಶುರಾಮಂ ಈ ಲೋಕದೊಳುಳ್ಳ ಅರಸುಮಕ್ಕಳೆಲ್ಲರುಮಂ ಇರ್ಪತ್ತೊಂದು ಸೂೞ್ವರಂ ಪೇೞೆ ಪೆಸರಿಲ್ಲದಂತು ಕೊಂದು: **ಪಂಪಭಾ,** ೯. ೧೦೪ ವ)

ಪೇೞ್ಗುಂ – ಹೇಳಬೇಕು, ಹೇಳಲು ಶಕ್ತ (ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಂ: **ಪಂಪಭಾ,** ೧. ೧೧)

ಪೈತ್ತಿಕ – [ಗು] ಪಿತ್ತಸಂಬಂಧಿ ದೋಷ (ಕಂಪಿಂದೇನಲೆದುದೊ ಪೈತ್ತಿಕದಂತಿರೆ ತಲೆಗೇಱುವ ಕುಸುಮನಿಚಯಮಾ ಕಾಶ್ಮೀರಂ: **ಆದಿಪು,** ೧೧. ೧೨೮) [ಈ ಶಬ್ದಕ್ಕೆ ಬದಲು ನರಸಿಂಹಶಾಸ್ತ್ರಿಗಳು **'ಬೈತುಗ'** ಎಂಬ ರೂಪವನ್ನು ಬಳಸುತ್ತಾರೆ]

ಪೊಂಕ – [ನಾ] [√ಪೊಂಗು=ಗರ್ವಿಸು ಎಂಬ ಧಾತುವಿನ ಭಾವನಾಮ] ಉಬ್ಬಟೆ (ಅಲರ್ದರೆಗೞಿಗೆಯ ಜಾದಿಯ ಮಲೆಪುಂ ಮಲ್ಲಿಗೆಯ ಪೊಂಕಮುಂ ಬೞಿಕವಂ ಆರ್ ತಲೆಯೊಳ್ ತಾಳ್ದುವರ್: **ಆದಿಪು,** ೧೧. ೧೨೨); [ನಾ] ಗರ್ವ (ತೆರಳ್ಚಿದುವಗುರ್ವಿಂ ಪರ್ಬಿ ಬಂದಿರ್ದ ಮೇಘಮುಖಾಹೀಂದ್ರರ ಪೊಂಕಮಂ ಜಯಕುಮಾರೋನ್ಮುಕ್ತ ಬಾಣಾಳಿಗಳ್: **ಆದಿಪು,** ೧೩. ೬೧)

ಪೊಂಕಂಗಿಡಿಸು – [ಕ್ರಿ] ಗರ್ವಭಂಗ ಮಾಡು (ದಿವಿಜರ್ ವಾಯುಪಥದೊಳ್ ಶಿತಾಸ್ತ್ರಂಗಳಂ ಪೊಂಕಂಗಿಡಿಸೆ ಸುಗಿದಂ ಭಾರ್ಗವಂ ಇದೇಂ ಪ್ರತಿಜ್ಞಾಗಾಂಗೇಯಂಗೆ ಅದಿರದಿದಿರ್ ನಿಲ್ವನ್ನರೊಳರೇ: **ಪಂಪಭಾ,** ೧. ೮೦)

ಪೊಂಗು – [ಕ್ರಿ] ಉಬ್ಬು (ತನುವಳಿರೇಖೆಗಳ್' ಕಿಡೆಯುಮೆಟ್ಟಿ ಬೆಡಂಗಿನದೊಂದು ರೇಖೆಯಂ ತನಗೆಡೆಮಾಡಿ ಪೊಂಗೆ: **ಆದಿಪು,** ೮. ೪೬); [ಕ್ರಿ] ಎಗರಾಡು (ಆಂ ಅಗಿದಱಿದಿರ್ದೊಡೆ ಚಲದಿನೆನ್ನೊಳೆ ಪೊಂಗಿ ಪೊಡರ್ಪುದರ್ಪಂ: **ಆದಿಪು,** ೧೨. ३३); [ಕ್ರಿ] ಸೊಕ್ಕು (ಪೊಂಗುವ ಮಲೆಪರ ಮಲೆಗಳ ಡಂಗಂಗಳ್ ಮಲೆವ ಮಂಡಲಂಗಳ್ ಪ್ರತ್ಯಂತಗಳ್ ಎನಲ್ ಒಳವೆ ಪಾಂಡವರಂ ಗೆಡೆಗೊಳೆ ನಿನಗೆ ಕುರುಕುಳಾಂಬರಭಾನೂ: **ಪಂಪಭಾ,** ೯. ३೯)

ಪೊಂಗೇದಗೆ – [ನಾ] ಚಿನ್ನದ ಬಣ್ಣದ ಕೇದಗೆ (ಮಗಮಗಿಪ ಜಾದಿ ಪೊಂಗೇದಗೆ ಮಲ್ಲಿಗೆಯೆಂಬ ಪಲವು ಪೂಮಾಲೆಗಳಂ ಬಗೆಯದಱಿದೋಲಗಿಪುದು ಮಾಲೆಗಾಱನಂ ಪೋಲ್ತುದಗ್ರ ಮಾಲ್ಯವೃಕ್ಷಂ: **ಆದಿಪು,** ೫. ३೬)

ಪೊಂಗೊಡ – [ನಾ] ಚಿನ್ನದ ಕಳಶ (ಪೊಂಗೊಡನಂ ತಮಾಳಪಲ್ಲವದೊಳೆ ಮುಚ್ಚಿದಂದದೊಳೆ ಚೂಚುಕಂ ಆಂತುದು ಕರ್ಪನಾಕೆಯಾ: **ಪಂಪಭಾ,** ೧. ೧೨೫)

ಪೊಂಜುರಿಗೆ – [ನಾ] [ಪೊನ್+ಸುರಿಗೆ] ಚಿನ್ನದ ಕಠಾರಿ (ಹಟತ್ಕಟೀಸೂತ್ರ ಪರಿಸ್ಫುರಿತದೊಳಂ ಕಟ್ಟಿದ ಪೊಂಜುರಿಗೆಯೊಳಂ ಜನಮನೇಂ ಮನಂಗೊಳಿಸಿದುದೋ: **ಆದಿಪು,** ४. ३೬)

ಪೊಂದಾವರೆ – [ನಾ] ಹೊಂಬಣ್ಣದ ತಾವರೆ (ಕೊಂದೆನ್ನ ಮಗನಂ ಇಂ ಭಯದಿಂದಂ ರಸೆವೊಕ್ಕುಂ ಅಜನ ಗುಂಡಿಗೆವೊಕ್ಕುಂ ಮಂದರಧರನ ಈ ಪೊರ್ಕುೞ ಪೊಂದಾವರೆವೊಕ್ಕು ಮೇಣವಂ ಬರ್ದುಕುವನೇ: **ಪಂಪಭಾ,** ೧೧. ೧೨೧)

ಪೊಂದು – [ನಾ] ಸೇರು (ಬೇಟದ ಲಲ್ಲೆಯ ಬಲ್ಮೆ ಪತ್ತಿ ಸುತ್ತಿಸೆ ಪುರುಡಿಂಬಿಕ್ಕೈಸೆ ಬಿಯಮಾಗಿಸಿ ಪೊಂದದವಂ ಬೊಜಂಗನೇ: **ಆದಿಪು,** ೧೨. ೧೭); [ಕ್ರಿ] ಆಗಿ ಹೋಗು (ಅಲ್ಲಿಂ ಬೞಿಯಿಂ ಅನೇಕ ಕೋಟಿ ಸಂವತ್ಸರಂಗಳ್ ಪೊಂದಿದಿಂ ಬೞಿಯಂ: **ಆದಿಪು,** ೬. ೫೬ ವ)

ಪೊಂಪುೞಿ – [ನಾ] ಅತಿಶಯತೆ (ಚಿಂತಿಪ ಪಾರ್ವನ ಶೋಕದೊಂದು ಪೊಂಪುೞಿಯನೆ ನೋಡಿ ನಾಡೆ ಕರುಣಂ ತನಗಾಗಿರೆ ಕೊಂತಿ ಚಿಂತೆಯಿಂ: **ಪಂಪಭಾ,** ३. ೨೫)

ಪೊಂಪುೞಿವೋಗು – [ಕ್ರಿ] ಅಧಿಕವಾಗು, ಚೆನ್ನಾಗು, ವ್ಯಾಪಿಸು (ಕಡೆಗಣ್ಣೊಳ್ ತುಳುಂಕಿಯುಂ ಕದಪಿನೊಳ್ ಪೊಂಪುೞಿವೋಗಿಯುಂ ಭ್ರೂವಿಭ್ರಮದೊಳ್ ಪೊನಲ್ವರಿದುಂ: **ಆದಿಪು,** ೭. ೧೨೬ ವ)

ಪೊಂಬಣ್ಣ – [ನಾ] ಹೊನ್ನಿನ ಬಣ್ಣ (ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ ಪಣ್ತೆಱಗಿದ ತದಾಶ್ರಮದ ತರುಗಳ ಮೇಗಿರ್ದು ಪುಗಿಲ್ ಪುಗಿಲೆಂದಿತ್ತ ಬನ್ನಿಮಿರಿಮೆಂಬ ಪೊಂಬಣ್ಣದ ಕೋಗಿಲೆಗಳುಮಂ: **ಪಂಪಭಾ,** ೧. ೧೧೫ ವ)

ಪೊಂಬೆಸ – [ನಾ] ಚಿನ್ನದ ಕೆಲಸ (ಚೆಲ್ವಂ ಪಡೆದ ಈ ಜಂಬೂದ್ವೀಪಪ್ರಭುಗೆ ಇದು ಪೊಂಬೆಸದೊಳ್ ಸಮೆದ ಮಕುಟಮಿರ್ಪಂತಿರ್ಕುಂ: **ಆದಿಪು,** ೭. ೬೨)

ಪೊಕ್ಕಿಜೆ – [ಕ್ರಿ] [ಪೊಕ್ಕು+ಇಜೆ, √ಪುಗು] ಶತ್ರುಸೈನ್ಯದೊಳಕ್ಕೆ ನುಗ್ಗಿ ಹೋರಾಡು (ಪುರುಷಮಂ ಸಮಕಟ್ಟುವಮಪ್ಪೊಡೆ ಪೊಕ್ಕಿಜೆಯಲ್ ಅಣ್ಮುವರಿಲ್ಲ: **ಪಂಪಭಾ,** ೬. ೬೭ ವ)

ಪೊಗಡ – [ನಾ] ಪಗಡೆ ಮರ, ಬಕುಳ (ಪೊಗಡದ ಪೊಸವೂವಿನ ತುಡುಗೆಗಳ್ಗಂ ಅಧರದ ಪೊದಳ್ದ ತನಿಗಂಪಿಂ ಮೃಗನಯನೆಯರನೆ ಬಿಡದೋಲಗಿಸಿದವು ಅಳಿನಿಕರಂ: **ಆದಿಪು,** ೧೧. ೧೦೬)

ಪೊಗರ್ – [ನಾ] ಕಾಂತಿ (ಗಮಕಂ ಪ್ರಯೋಗ ಆಭೋಗಂ ಅಳಂಕಾರಂ ಪೊಗರ್ ನಯಂ ಮಿಱುಗು ಪೊದಳ್ದಮರೆ: **ಆದಿಪು,** ೭. ೧೬)

ಪೊಗರ್ವಡು – [ಕ್ರಿ] ಕಾಂತಿಯನ್ನು ಹೊಂದು (ಸೊಗಯಿಸೆ ತೋಳ ಮೊತ್ತಮೊದಲೊಳ್ ಪೊಗರ್ವಟ್ಟೆಸೆವ ಒಂದು ನುಣ್ಪು: **ಪಂಪಭಾ,** ೮. ೫೯)

ಪೊಗಸು – [ನಾ] ಹಗಲು (ಇಂದು ಪೇೞೇಗಳೊ ಬಯ್ಗೆಯೋ ಪೊಗಸೊ ನಾಳೆಯೊ ನಾಡಿದೊ ನಿನ್ನ ಜೀವಿತಂ: **ಆದಿಪು,** ೩. ೬೩)

ಪೊಗೞ – [ನೀನು] ಹೊಗಳು (ಎಸಳ ತುದಿಯೆಯ್ದಲೊಡಂ ಮುನ್ನಂ ಪೞಿಯವಪ್ಪ ಪೂಗಳ ಕಂಪಿನೊಳೇಂ ಪೊಗೞ ಪಾಟಳೀಪರಿಮಳಮಂ: **ಆದಿಪು,** ೧೧. ೧೧೫)

ಪೊಗೞಿಸು – [ಕ್ರಿ] ಹೊಗಳುವ ಹಾಗೆ ಮಾಡು (ಮುಂದಣ ಮಿಗಮಂ ಕಟೆಪದೆ ಸಂದಿಸಿ ಬೞಿಗೊಳ್ವ ಮಿಗಮುಮಂ ಕಟೆಪದೆ ತಾನೊಂದಳವಿದಪ್ಪದೆಚ್ಚು ಬಲಿಂದಮನಿಂ ಬಿಲ್ಲ ಬಲ್ಮೆಯಂ ಪೊಗೞಿಸಿದಂ: **ಪಂಪಭಾ,** ೫. ೪೮)

ಪೊಗೞ್ವಿನ್ನರೆ – ಹೊಗಳಿಕೆಗೆ ಅರ್ಹರಾದವರೇ (ಒಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱಿದ ನಿತಂಬ ಇಂಬುವಡೆದ ಒಳ್ತೊಡೆ ನೆಕ್ಕರವದ್ದೆ ತಾನೆ ಪೋ ಕಿಱುದೊಡೆ ಎಂದು ಧಾತ್ರಿ ಪೊಗೞ್ಗುಂ: **ಪಂಪಭಾ,** ೧. ೧೦೮)

ಪೊಗೞ್ಕೆ – [ನಾ] ಹೊಗಳಿಕೆ (ಮುಂದಿಟ್ಟು ಚಕ್ರಮಂ ತಿರಿತಂದುದುಮಂ ಪೂೞದಿರ್ದು ಬಯ್ತಂಗೊಳ್ವೊಂದಂದದೆ ಕೊಂಡುದುಮಂ ಅದೇನೆಂದುನ್ನತಿಮಾಡಿ ಪೊಗೞ್ಕೆಯೊಳಗಜೆಯದುದೇ: **ಆದಿಪು,** ೧೪. ೬೭) ['ಪೂೞದಿರ್ದು ಬಯ್ತಂಗೊಳ್ವೊಂದಂದದೆ' ಎಂಬುದರ ಬದಲು ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳು **'ಪಾಳಮಿರ್ದು ಬೈಕಂಗೊಳ್ವೊಂದಂದದೆ'** ಎಂಬ ಪಾಠವನ್ನು ಸ್ವೀಕರಿಸುತ್ತಾರೆ]

ಪೊಚ್ಚೞ – [ನಾ] ಶೂರ (ಪೊಚ್ಚೞ ಮಹಾಸಾಮಂತ ಸೀಮಂತಿನೀಪ್ರಸರಂ ಮಂಗಳತೂರ್ಯನಾದಂ ಎಸೆಯುತ್ತಿರ್ಪನ್ನೆಗಂ: **ಪಂಪಭಾ,** ೫. ೨೫)

ಪೊಚ್ಚಜೆಸು – [ಕ್ರಿ] ವೀರಾವೇಶದಿಂದ (ಆಗಳ್ ಆನೇಜೆಪೆನೆಂದು ಪೊಚ್ಚಜೆಸಿ ಬಂದು ಸುಯೋಧನನುಗ್ರಚಾಪಮಂ ಮೂಱು ಸೂೞ್ ಬಲವಂದು: **ಪಂಪಭಾ,** ೩. ೫೮ ಮತ್ತು ೫೮ ವ)

ಪೊಚ್ಚಱು – [ನಾ] ಪರಾಕ್ರಮ (ಪಾಂಚಾಳಿಯನೆೞೆವ ಅದಟೇನಾದುದೋ ಗಂಡ ಪೇೞ್ ಪೊಚ್ಚಜೆನಂತಾ ಮಾತುಮಿಂತೀಯಿರವೆನೆ ನಗೆಯಂ ಮಾಡಿದೈ: **ಪಂಪಭಾ,** ೧೩. ೭೭)

ಪೊಟ್ಟಗೆ – [ಅ] ಫಟ್ ಎಂದು (ಲಯಘನಘಟೆಗಳ ಮೊೞಗೆನಿಸೆ ಪೊಟ್ಟಗೆ ಒಡೆದತ್ತು ರಟತ್ ಪಟು ಪಟಹ ಶಂಖ ಭೇರಿಯ ಚಟುಳಿತದಿಂದ ಅತಳಪಟಂ ಅಂಬರಪಟಳಂ: **ಪಂಪಭಾ,** ೧೦. ೬೭)

ಪೊಟ್ಟನೆ – [ಅ] ಫಟ್ ಎಂದು (ಪಾರ್ಥನ ದೇವದತ್ತನಿಸ್ವನದೊಳೆ ತೀವಿ ಪೊಟ್ಟನೊಡೆವಂತೆವೊಲಾದುದು ಅಜಾಂಡಮಂಡಳಂ: **ಪಂಪಭಾ,** ೧೧. ೧೪೫)

ಪೊಟ್ಟಳಿಸು – [ಕ್ರಿ] ಉಬ್ಬು, ಗರ್ವಿಸು (ಬೀಗಿ ಪೊಟ್ಟಳಿಸಿ ನೆಗೞ್ತಿಗಾಟಿಸುವ ದುಷ್ಕವಿಯುಂ ಕವಿಯೆಂಬ ಲೆಕ್ಕಮೇ: **ಪಂಪಭಾ,** ೧. ೧೨)

ಪೊಡಮಡಿಸು – [ಕ್ರಿ] ನಮಸ್ಕರಿಸುವಂತೆ ಮಾಡು (ಕರ್ಣನಂ ಮುಂದಿಟ್ಟುಕೊಂಡು ಪೋಗಿ ಧೃತರಾಷ್ಟ್ರಂಗಂ ಗಾಂಧಾರಿಗಂ ಪೊಡಮಡಿಸಿದಾಗಳ್: **ಪಂಪಭಾ,** ೨. ೮೫ ವ)

ಪೊಡರ್ – [ಕ್ರಿ] ಪ್ರತಿಭಟಿಸು (ಕೇಶಪಾಶಮನಂತಾಗಡೆ ಪಜೆದು ತಪಂಗೊಂಡಂ ಪೊಡರ್ವ ಅರಿಯಂ ವಜ್ರನಾಭಿಯುಂ ಬೆಂಕೊಂಡಂ: **ಆದಿಪು,** ೬. ೨೪); [ಕ್ರಿ] ಹೊರಳು (ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊಡರ್ವುದಂ ಅಂತೆ ದಿಕ್ಕರಿಗಳ್ ಅಂಬುಜಪತ್ರಾಂಬುವಿಂ ಬೆಡಂಗಡಸಿರೆ ಮಜ್ಜನಂಬುಗಿಪುದಂ ಸತಿ ಕಂಡೊಸೆದಳ್ ನಿಶಾಂತದೊಳ್: **ಪಂಪಭಾ,** ೧. ೧೪೦); [ಕ್ರಿ] ಅಲುಗಾಡು, ನಡುಗು (ಪೊಳೆದು ಉಳ್ಕುವ ಕುಡುದಾಡೆಯ ಪೊಳಪು ನೊಸಲ್ಗಡರ್ದು ಪೊಡರ್ವ ಪುರ್ವಸೆವಿನಂ ಅವ್ವಳಿಸುವ ಮುಳಿಸಿನ ದಳ್ಳುರಿಗಳಂ ಉಗುೞ್ವವೊಲ್: **ಪಂಪಭಾ,** ೬. ೫೯); [ನಾ] ಸ್ಫುರಣೆ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಳ್ ಎೞಿದಿಕ್ಕಿದಂತೆ ಸುತಿಯೊಳ್ ಸಮವಾಗಿರೆ: **ಪಂಪಭಾ,** ೭. ೮೮)

ಪೊಡರ್ಪು – [ನಾ] ಪ್ರಕಾಶ, ಕಾಂತಿ (ತುಡುಗೆಯ ಮಣೀದೀಧಿತಿಗಳ ಪೊಡರ್ಪು ಮೇಗೊಗೆದು ಕೊಡೆವೊಲೆಸೆದಪುದು: **ಆದಿಪು,** ೭. ೫); [ನಾ] ಅಲುಗಾಟ (ಪುರ್ವಿನ ಪೊಡರ್ಪೊಳಕೊಂಡುದವಳ್ಗೆ ಗರ್ಭಚಿಹ್ನಮೆಗಳ ಗರ್ಭದರ್ಭಕನ ಸೂಚಿಪ ಮುಂದಣ ರಾಜ್ಯಚಿಹ್ನಮಂ: **ಪಂಪಭಾ,** ೧. ೧೨೦); [ನಾ] ಕಂಪನ (ತಪ್ಪುದಪ್ಪು ನೋಟದೊಳೆ ಪೊಡರ್ಪು ತಪ್ಪು ಬಗೆ ತಪ್ಪು: **ಪಂಪಭಾ,** ೪. ೪೧); [ನಾ] ತೀವ್ರತೆ (ಬಾಲಮಂ ಸಲೆ ಮುರಿದು ಎತ್ತಲಾಟಿಸೆ ಧರಿತ್ರಿಗೆ ಕೀಲಿಸಿದಂತುಟಾಗೆ ದೋರ್ವಲದ ಪೊಡರ್ಪುಗೆಟ್ಟು: **ಪಂಪಭಾ,** ೮. ೩೨); [ನಾ] ಉಬ್ಬುವಿಕೆ, ಆವೇಶ (ತನ್ನ ಮನದ ಪೊಡರ್ಪುಮಂ ಕೂರ್ಪುಮನುಂಟುಮಾಡಿ ನುಡಿದಂ: **ಪಂಪಭಾ,** ೧೦. ೨೩)

ಪೊಡರ್ಪುಗುಂದು – [ಕ್ರಿ] ಶೌರ್ಯಗುಂದು, ಉತ್ಸಾಹಗುಂದು (ಮನದ ಪೊಡರ್ಪುಗುಂದದೆ ಲತಾಲಯ ಕೇಳೀವಿಹಾರದಲ್ಲಿ .. .. ತಗುಳ್ದು ಬರಲಾರ್ಪಿರೆ: **ಆದಿಪು,** ೧೧. ೧೩೮)

ಪೊಡರ್ಪುದೋೞ್ – [ಕ್ರಿ] ಶಕ್ತಿ ಪ್ರದರ್ಶಿಸು (ಆನಗಿದಜೆದಿರ್ದೊಡೆ ಚಲದಿನೆನ್ನೊಳೆ ಪೊಂಗಿ ಪೊಡರ್ಪುದೋರ್ಪಂ: **ಆದಿಪು,** ೧೨. ೩೩)

ಪೊಡವಡು – [ಕ್ರಿ] ನಮಸ್ಕಾರಮಾಡು (ಧರ್ಮಪುತ್ರನಾ ಮುನೀಂದ್ರಂಗೆ ಸಾಷ್ಟಾಂಗವೆಱಗಿ ಪೊಡವಡೆ: **ಪಂಪಭಾ,** ೭. ೬೬ ವ)

ಪೊಡೆ – [ಕ್ರಿ] ಹೊಡೆ, ಅಪ್ಪಳಿಸು, ಸೋಲಿಸು (ಪೊಡೆದುದು ಬಿಲ್ಲ ಜೇವೊಡೆಯೆ ಮೀಱುವ ವೈರಿನರೇಂದ್ರರಂ: **ಪಂಪಭಾ,** ೧. ೯೯); [ಕ್ರಿ] [ಊಟ] ಹೊಡೆ, ಕಬಳಿಸು (ಕೊಲಲ್ಕೆ ಸತ್ತ್ವಮಪ್ಪಂತಿರೆ ಮುಂ ಪೊಡೆವೆಂ ಕೂೞಂ ಬೞೆಯಿಂ ಪೊಡೆವೆಂ ರಕ್ಕಸನಂ: **ಪಂಪಭಾ,** ೩. ೨೯)

ಪೊಡೆವಡು – [ಕ್ರಿ] [ಪೊಡೆ+ಪಡು] ನಮಸ್ಕರಿಸು (ಕಂಡು ಪೊಡೆವಡುವನಿತುವರಮೆನ್ನ ಮನದೊಳಱೆವಿಲ್ಲದೆಯುಂ ಅಸವಸದೊಳಾದ ಮನದೆಱಕದಿನೆಱಗಿ ಪೊಡೆವಟ್ಟು: **ಆದಿಪು,** ೩. ೩೬ ವ)

ಪೊಡೆಸೆಂಡು – [ನಾ] ಪುಟವೇಳುವ ಚೆಂಡು (ಅಂತು ಪೊಯ್ದೊಡೆ ಪೊಡೆಸೆಂಡಂ ಪೊಯ್ವಂತೆ ಮೇಗೊಗೆದು ಸೆಣಸೆ: **ಪಂಪಭಾ,** ೩. ೩೦ ವ)

ಪೊಣರ್ – [ನಾ] ಜೋಡಿ (ತಪನಕರಂ ತನುಗಳನುರ್ಚಿ ಪೋಗೆ ಸಾರ್ದತ್ತು ಜಕ್ಕವಕ್ಕಿಯ ಪೊಣರುಂ .. .. ನೆಟಿಲಂ: **ಆದಿಪು,** ೧೧. ೫೦); [ಕ್ರಿ] ಪೈಪೋಟಿ ಮಾಡು (ನೀಲನಿಷಧಗಿರಿಗಳ್ ಒಂದೊಂದಱೊಳ್ ಬಂದು ಪೊಣರ್ದು ನಿಲ್ವಂತೆ ನಿಂದು: **ಆದಿಪು,** ೧೪. ೧೦೪ ವ); [ಕ್ರಿ] ಹೋರಾಡು (ಮರಕತಮಣಿಶೈಲಮನನುಕರಿಸುವ ಭುಜಬಲಿಯೊಳಿರದೆ ಪೊಣರ್ವುದುಂ: **ಆದಿಪು,** ೧೪. ೧೧೯); [ಕ್ರಿ] ಸೇರು, ಉಂಟಾಗು (ಕಾವಂ ಪೊಣರ್ದು ಅನುವರದೊಳಮೆನೆ ಪೇೞ್ ಪವನನಂದನಂಗೆ ಅೞಿವು ಪೊಣರೆ ತಾಂ ಬಟ್ಟಪನೇ: **ಪಂಪಭಾ,** ೧೩. ೧೫); [ಕ್ರಿ] ಜೋಡಿಯಾಗು (ಚಯ್ ಚಯ್ಯೆಂಬಾಗಳ್ ಮೆಯ್ ಮೆಯ್ ಚಲದಿಂ ಮುಟ್ಟಿ ಪೊಣರ್ದು ತಳ್ತಿೞಿವ ಉರ್ಕಿಂ ಕೆಯ್ ಚೆಚ್ಚರಿಕೆಯ ಚಲದಿಂ ಕೆಯ್ ಚಳಿವಿನಂ ಇೞಿದರ್: **ಪಂಪಭಾ,** ೧೩. ೩೪)

ಪೊಣರ್ಚು – [ಕ್ರಿ] ಸಮವಾಗು (ಶಿಶುಕೇಸರಿಯೊಂದನುಳ್ಳ ಕಾನನದೊಳ್ ಅದೊಂದು ಕುಟ್ಮಲಮನುಳ್ಳ ಸರೋವರದೊಳ್ ಪೊಣರ್ಚಿ ನೆಟ್ಟನೆ ದೊರೆಯಾದುದು ಈ ಕುಲಮುಂ ಈ ಶಿಶುವೊರ್ಬನಿಂ: **ಆದಿಪು,** ೪. ೮೨); [ಕ್ರಿ] ಸ್ಪರ್ಧಿಸು (ಒರ್ವ ಗಂಧರ್ವನೊಳೆ ಚಿತ್ರಾಂಗದಂ ದ್ವಂದ್ವಯುದ್ಧಮಂ ಪೊಣರ್ಚಿ ಕುರುಕ್ಷೇತ್ರಮಂ ಕಳಂಬೇಱ್ದು: **ಪಂಪಭಾ,** ೧. ೭೩ ವ)

ಪೊಣ್ಮು – [ಕ್ರಿ] ಹೊಮ್ಮು, ಹೊರಸೂಸು (ಬಗೆಯೊಳ್ ಪೊಣ್ಮೆ ದಯಾರಸಂ ಚರಿತದೊಳ್ ಕೈಗಣ್ಮೆ ಚಾರಿತ್ರಂ: **ಆದಿಪು,** ೧. ೫)

ಪೊತ್ತಗೆ – [ನಾ] [ಪುಸ್ತಕ] ಹೊತ್ತಗೆ, ಧರ್ಮಗ್ರಂಥ (ಇರ್ದಂ ಅಟ್ಟವಣೆಕೋಲ್ಗಳ ಮೇಲೆಸೆದಿರ್ದ ವೀರಸಿದ್ಧಾಂತದ ಶಾಸನಂಬರೆದ ಪೊತ್ತಗೆಯಂತಮರಾಪಗಾತ್ಮಜಂ: **ಪಂಪಭಾ,** ೧೧. ೪೬)

ಪೊತ್ತಿಸು – [ಕ್ರಿ] ಉರಿಸು, ಉರಿಯುವಂತೆ ಮಾಡು (ಅದಂ ಕಿಡಿಪಂತೆ ಎಲೆ ಕರ್ಣ ಕೇತುವಾದುದು ನಿನಗೆ ಆ ವೃಕೋದರನ ಕಾಯ್ಪನೆ ಪೊತ್ತಿಸಿದೆನ್ನ ಕಾಳೆಗಂ: **ಪಂಪಭಾ,** ೧೩. ೬)

ಪೊತ್ತು – [ಕ್ರಿ] ಹತ್ತಿ ಉರಿ (ಕಾಯ್ಪಿನಿಂ ದಿಶಾವೆರಸಂಬರಂ ಪೊಗೆದು ಪೊತ್ತಿದುದು: **ಪಂಪಭಾ,** ೧೧. ೭೧)

ಪೊತ್ತೆತ್ತು – [ಕ್ರಿ] ಹಿಡಿದು ಮೇಲೆತ್ತು (ದಯೆ ದಮಂ ದಾನಂ ತಪಂ ಶೀಲಂ ಎಂಬಿವೆ ಮೆಯ್ಯಾಗಿರೆ ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ ಮುಕ್ತಿಪರ್ಯವಸಾನಂಬರಂ: **ಆದಿಪು,** ೨. ೭)

ಪೊದರ್ಪು – [ನಾ] ಪ್ರತಾಪ, ಸಾಮರ್ಥ್ಯ (ಇದನಾವನೆಚ್ಚಂ ಆತಂ ತ್ರಿದಶಂ ಮೇಣಕ್ಕೆ ದಾನವಂ ಮೇಣಕ್ಕೆ ಆವುದು ಗಹನಂ ಆಂತನಾತನ ಪೊದರ್ಪುಂ ಆರ್ಪುಂ ಎನಿಪುವೆಮ್ಮೊಳೇಂ ಸಂದಪುವೇ: **ಆದಿಪು,** ೧೨. ೯೩)

ಪೊದಳ್ – [ಕ್ರಿ] ಸ್ಪಷ್ಟವಾಗು (ಇದು ಕರ್ಮಭೂಮಿಯಂದಂ ಪೊದಳ್ದು ತೋಱಿದುದು: **ಆದಿಪು,** ೬. ೬೩); [ಕ್ರಿ] ಪ್ರಕಟವಾಗು (ಆಯತಿಯ ಬೀರದ ಚಾಗದ ಮಾತುಗಳ್ ಪೊದಳ್ದೊದವಿರೆ ತತ್ಪ್ರಶಸ್ತಿಗಳೊಳ್ ಅಂತವನೊಯ್ಯನೊಯ್ಯನೆ ನೋಡಿ: **ಆದಿಪು,** ೧೩. ೭೧); [ಕ್ರಿ] ವ್ಯಾಪಿಸು (ಜಸಕ್ಕೆ ಆಗರಮಾದ ಬದ್ದೆಗನಿಂ ಆ ನರಸಿಂಹನಿಂ ಅತ್ತಲ್ಲಾನ್ಲೆರ್ವರಲ್ ಮೇಗು ಪೊದಳ್ದ ಚಾಗದೊಳಂ ಒಂದಿದ ಬೀರದೊಳಂ ಗುಣಾರ್ಣವಂ: **ಪಂಪಭಾ,** ೧. ೫೦); [ಕ್ರಿ] ಉಂಟಾಗು (ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫); [ಕ್ರಿ] ಹೊಮ್ಮು (ನಿಡುಸುಯ್ದು ನಲ್ಲಳ ಮುಖಾಂಬುಜಸೌರಭದೊಳ್ ಪೊದಳ್ದು ಅದೇಂ ಮಗಮಗಿಸಿತ್ತೊ ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ: **ಪಂಪಭಾ,** ೪. ೧೦೭); [ಕ್ರಿ] ಚದುರು (ಆ ಸತಿಯಿಕ್ಕಿದ ಕಣ್ಣ ನೀರ ಧಾರೆಗಳೊಳೆ ನಾಂದು ಎಲರ್ಚಿ ಪೊದಳ್ದು ಒರ್ಮೆಯೆ ಪಾಱಿದುವು ಉನ್ಮದಾಳಿಗಳ್: **ಪಂಪಭಾ,** ೫. ೧೦)

ಪೊದಳ್ಕೆ – [ನಾ] ಹೊಂದಿಕೆ (ನುಡಿಯ ಪೊದಳ್ಕೆಯ ಒಳ್ನುಡಿ ನುಡಿದಂ ನಿಜಚಕ್ರವರ್ತಿತ್ವಕ್ಕಂದಡಿಯಿಡುವಂತೆ ನಿರಂತರಮಡಿಯಿಟ್ಟಂ: **ಆದಿಪು,** ೮. ೪೧); [ನಾ] ಮೂಡುವಿಕೆ (ಇದು ನೃಪತೇಜಶ್ಚಕ್ರದ ಪೊದಳ್ಕೆ ತಾನಲ್ತೆ ಚಕ್ರರೂಪದಿನಿರ್ದಪುದು: **ಆದಿಪು,** ೧೩. ೨೭)

ಪೊದಳ್ಕೆವಡೆ – [ಕ್ರಿ] ಪುಷ್ಟವಾಗು (ಬಂಧುಜನ ಮನೋರಥಂಗಳೊಡನೆ ಪೊದಳ್ಕೆವಡೆದ ವೃತ್ತ ಊರುಸ್ತಂಭಗಳುಂ: **ಆದಿಪು,** ೩. ವ)

ಪೊದಱ್ – [ನಾ] ಹೊದರು, ಪೊದೆ (ಪಾಸಱ್ ಸಿಂಹಪೀಠಂ ಅಳಿನಿರುತಿ ಮಂಗಳಗೀತಿ ಭೂತಳಂ ಪಾಸು ಮೃಗವ್ರಜಂ ಪರಿಜನಂ ಪೊದಱ್ ಓಲಗಸಾಲೆ: **ಪಂಪಭಾ,** ೭. ೨೯)

ಪೊದೆಯಂಬು – [ನಾ] ಪೊದರು, ಗುಂಪು ಬಾಣಗಳು (ಪಿಡಿಕೆಯ್ಯ ದೊಣೆಯ ಪೊದೆಯಂಬು ಇಡೆ ಮುಡಿವಿನಂ ಎಚ್ಚು: **ಪಂಪಭಾ,** ೧೦. ೭೫)

ಪೊನ್ – [ನಾ] ಚಿನ್ನ (ಮೇರುವ ಪೊನ್ ಕಲ್ಪಾಂಘ್ರಿಪದಾರವೆ ರಸದೊೞಿವು ಪರುಸವೇದಿಯ ಕಣಿ ಭಂಡಾರದೊಳುಂಟೆನೆ ಕುಡುವ ಅನಿವಾರಿತದಾನಕ್ಕೆ ಪೋಲ್ವರಾರ್ ಬದ್ದೆಗನಂ: **ಪಂಪಭಾ,** ೧. ೨೮); [ನಾ] ಒಂದು ಚಿನ್ನದ ನಾಣ್ಯ (ಮತ್ತಮಲ್ಲಿ ಕೋಟಿ ಪೊಂಗೆ ಘಂಟೆಯಲುಗುವ ಕಿಱುಕುಳ ಬೊಜಂಗರುಮಂ ಸುಣ್ಣದೆಲೆಯಂ ಒತ್ತೆಯಿಟ್ಟು ಮದದಾನೆಯುಮಂ ಮಾಣಿಕಮುಮಂ ಒತ್ತೆಯಿಡಿಸಲಟ್ಟುವ ಚಿಕ್ಕ ಪೋರ್ಕುಳಿಬೊಜಂಗರುಂ: **ಪಂಪಭಾ,** ೪. ೮೭ ವ)

ಪೊನಲ್ – [ನಾ] ಧಾರೆ (ನೆತ್ತರ ಪೊನಲೊಳ್ ನಾಂದು ನನೆದ ಮೆಯ್ಯುಮಂ ತೊಯ್ದು ತೞ್ಪೊಯ್ದು ಜಡೆಯುಂ:

ಪಂಪಭಾ, ೧. ೧೦೫ ವ); **[ನಾ]** ಹೊನಲು, ಪ್ರವಾಹ (ಪೊನಲ್ಗಳ ಕೆಂಪು ಪಸುರ್ಪು ಕರ್ಪು ಬೆಳ್ಪು ಒಳಕೊಳೆ ಶಕ್ರಕಾರ್ಮುಕವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ ಕಾಮನ ಕಾರ್ಮುಕದಂತೆ ಕಾರ್ಮುಕಂ: **ಪಂಪಭಾ,** ೭. ೨೫)

ಪೊನಲ್ವರಿ – [ಕ್ರಿ] ಪ್ರವಾಹವಾಗಿ ಹರಿ (ಕಡೆಗಣ್ಣೊಳ್ ತುಳುಂಕಿಯುಂ ಕದಪಿನೊಳ್ ಪೊಂಪುಟಿವೋಗಿಯುಂ ಭ್ರೂವಿಭ್ರಮದೊಳ್ ಪೊನಲ್ವರಿದುಂ: **ಆದಿಪು,** ೭. ೧೨೬ ವ)

ಪೊನ್ನತಾಟಿ್ – [ನಾ] ಹೊಂದಾಳೆ, ಹೊನ್ನ ತಾಳೆ (ಮುಳಿಸಿಂ ನೂರ್ವರುಂ ಪೊನ್ನತಾಟ್ಗಳ್ ಪಾಟಿಂಬಂತಾಗೆ ಪಾರ್ದಾರ್ದಿಸೆ: **ಪಂಪಭಾ,** ೧೧. ೯೫)

ಪೊನ್ನ ಲತೆ – [ನಾ] ಚಿನ್ನದ ಬಳ್ಳಿ (ರಸಸಿದ್ಧಮಪ್ಪ ಪೊನ್ನಲತೆಯ ಮೆಯ್ಯುಮಂ ನೀಲದ ತಲೆನವಿರುಮಂ ಪವಳದ ಬಾಯ್ದೆಱೆಯುಮಂ ಮುತ್ತಿನ ಪಲ್ಗಳುಮಂ: **ಪಂಪಭಾ,** ೪. ೭೫ ವ)

ಪೊನ್ನ ಪಾಸಱೆ – [ನಾ] ಚಿನ್ನದ ಬಂಡೆ (ಜಂಬೂನದಮೆಂಬ ತೊಱೆಯೊಳ್ ಪುಟ್ಟಿದ ಜಾಂಬೂನದಮೆಂಬ ಪೊನ್ನ ಪಾಸಱೆಗಳಂ ಕಂಡು: **ಪಂಪಭಾ,** ೬. ೩೦ ವ)

ಪೊನ್ನಾಯೋಗ – [ನಾ] ಚಿನ್ನದಿಂದ ಮಾಡಿದ ಆಭರಣ (ನಡೆಯೆ ತುರಗು ಪೊನ್ನಾಯೋಗಂಗಳಿಂದಮರ್ದಟ್ಟೆಯಿಂ: **ಪಂಪಭಾ,** ೯. ೧೦೨)

ಪೊನ್ಮಯ – [ಗು] ಚಿನ್ನದಿಂದ ತುಂಬಿರು (ರಸಸಿದ್ಧಿಯುಮಾಯ್ತೆನೆ ತನ್ನನಾಸೆವಟ್ಟು ಎರೆದರ್ಗೆ ಇತ್ತು ಪೊನ್ಮಯದೆ ಮಾಡಿದನೀ ನೆಲನಂ ಗುಣಾರ್ಣವಂ: **ಪಂಪಭಾ,** ೧೪. ೨೧)

ಪೊನ್ನೆಯರಲ್ – [ನಾ] ಹೊನ್ನೆ ಮರದ ಹೂ (ಸಿರಿಸದ ಬಾಸಿಗಮಂ ಮಾಂಕರಿಸುವ ನಳಿತೋಳ ಪಿಂಡುಗಂಕಣದ ಸರಂ ಮೊರೆವಳಿಗಳ ಸರಮಂ ಚಪ್ಪರಿಸುವಿನಂ ಚೆನ್ನೆ ಪೊನ್ನೆಯರಲಂ ಕೊಯ್ದಳ್: **ಆದಿಪು,** ೧. ೧೦೨)

ಪೊಮ್ಮರೆ – [ನಾ] [ಪೊನ್+ಮರೆ] ಚಿನ್ನದ ಜಿಂಕೆ (ಅಂದಿದು .. .. ಪೊಮ್ಮರೆಯನೆಚ್ಚೆಡೆ ತಪ್ಪದಿಪ್ಪುದು ಎಂದು: **ಪಂಪಭಾ,** ೪. ೧೯)

ಪೊಯ್ – [ನಾ] ಹೊಡೆತ (ಪೊಯ್ವ ಪೊಯ್ಗಳಿಂ ನೆಗೆದು ಮುಗಿಲ್ಗಳ ಇಟ್ಟೆಡೆಗಳೊಳ್ ತಲೆಗಳ್ ತೊಡರ್ದಿರ್ದು ಜೇನ ಪುಟ್ಟಿಗಳೆನೆ ಪೋಲ್ತುವು ಏಂ ಕಲಹಂ ಅಚ್ಚರಿಯಾಯ್ತೊ ತುರಂಗಸೈನ್ಯದೊಳ್: **ಪಂಪಭಾ,** ೧೦. ೮೦); **[ಕ್ರಿ]** ಸುರಿ (ಪೊಸಪೂವಿನೊಳ್ ಪೊರೆದು ಪೊಣ್ಮಿದ ಕಂಪು ಮೊಗಂಗಳಂ ಚಳಿಲ್ಲನೆ ಕೊಳೆ ಪೊಯ್ಯೆ ತೀಡಿದುದು ತೆಂಕಣ ಗಾಳಿ ವಸಂತಮಾಸದೊಳ್: **ಪಂಪಭಾ,** ೫. ೩೪); **[ನಾ]** ಮೃದಂಗವಾದನ (ಅತ್ತಮಿತ್ತಂ ನಿಜವ ಕರಯುಗಂಗಳ್ ಪೊಯ್ವ ದೇವಾನಕಂಗಳ್ .. .. ಬೆಡಗಂ ಮೆಱೆಯೆ: **ಪಂಪಭಾ,** ೭. ೫೨)

ಪೊಯಿಲ್ – [ನಾ] ಹೊಡೆತ (ಪೊಯ್ದೊಡೆ ಬಱುಬಂ ಪೊಯಿಲ್ವೆತ್ತಂತೆ ಏನುಂ ಅಜೆಯದೆ .. .. ನಡನಡುಗಿ: **ಪಂಪಭಾ,** ೮. ೭೦)

ಪೊಯ್ನೀರ್ – [ನಾ] ಎರೆಯುವ ನೀರು (ಅಂತವರೀರ್ವರ ಬೇಟಮೆಂಬ ಲತೆಯ ಬೆಳಸಿಂಗೆ ಪೊಯ್ನೀರೆಱೆವಂತೆ ಕೆಯ್ನೀರೆಱೆದು ಬಿಯಮಂ ಮೆಱೆದು: **ಪಂಪಭಾ,** ೫. ೨೫ ವ)

ಪೊಯ್ಲು – [ನಾ] ಅಪ್ಪಳಿಸುವಿಕೆ (ವಜ್ರಮುಷ್ಟಿಯ ಪೊಯ್ಲೊಳಂ ಬಾಳ ಕೋಳೊಳಮ್ ಉಚ್ಚಳಿಸಿದ ಕಪಾಲದ ಓಡುಗಳಂ ಗಂಗೆಗಟ್ಟುತ್ತುಂ: **ಪಂಪಭಾ,** ೧೧. ೨ ವ); **[ನಾ]** ಏರಿಳಿತ (ಮದನ ದವಾನಲಾರ್ಚಿ ತನುವಂ ಸುಡೆ ತಳ್ತೆಮೆಯೊಳ್ ಪಳಂಚಿ .. .. ತುಂಗಕುಚಂಗಳ ಪೊಯ್ಲೊಳ್ ಎತ್ತಲುಂ ಕೆದಱೆ: **ಪಂಪಭಾ,** ೫. ೯)

ಪೊರಜೆ – [ನಾ] [ಆನೆಗೆ ಕಟ್ಟಿರುವ] ಹಗ್ಗ (ಪೊರಜೆವಿಡಿದು ಕೊರಲ ಬಳೆಗಳೊಳೆ ಕಾಲ್ಗೋದು ಪರಿಯಿಸುವ ರಸತ್ತಾರುಗರುಮಂ: **ಪಂಪಭಾ,** ೧೨. ೬೦ ವ)

ಪೊರಳ್ಚು – [ಕ್ರಿ] ಹೊರಳಿಸು (ಅಸ್ತ್ರಾನಳಂ ಕಿಡಿಯಿಂ ಕೆಂಡದಿನೇಂ ಪೊರಳ್ಚಿದುವೊ ತನ್ಮೇಘಾಮರಾನೀಕಮಂ: **ಆದಿಪು,** ೧೩. ೬೬)

ಪೊರೆ – [ನಾ] ಪದರ (ದಿವ್ಯತಳ್ಪತಳದ ಪೊರೆಯೊಳಗೆ ನೆಗೆದ ಕೆಮ್ಮುಗಿಲ ತೆಗಳಿಗೆಯ ಪೊರೆಯೊಳ್ .. .. ತೊಳತೊಳಗಿ ಪೊಱಮಡುವೆಳನೆಸಱ ಬಳಗದ ಬೆಳಗಂ: **ಆದಿಪು,** ೨. ೬೧ ವ); **[ಕ್ರಿ]** ಕೂಡಿರು (ಕಪ್ಪುರದ ರಜಂಬೊರೆದ ಕರಕಾಂಬುವ ತಳಿದು ದರವುರನೆಟ್ಟಜೆಸೆ: **ಆದಿಪು,** ೪. ೧೭); **[ನಾ]** ಜವಾಬುದಾರಿ, ಹೊಣೆ (ಪೆರ್ಗಡೆತನದೊಳ್ ಇದೇವಡೆವಿರ್ ನಿಮಗೆಮ್ಮ ಕಜ್ಜದೊಳ್ ಪೊರೆಯುಂಟೇ: **ಆದಿಪು,** ೯. ೧೦೭); **[ನಾ]** ದಳ, ಪಕಳೆ (ಪರೆಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱೆ ತೆಂಬೆಲರ್ ಪೊರೆವೊರೆಯಂ ಸಡಿಲ್ಚೆ: **ಆದಿಪು,** ೧೧. ೧೧೦); **[ನಾ]** ಹೊರೆ, ಭಾರ (ಪುರುತನಯಂ ತಾನ್ ಆಮುಂ ಪುರುತನಯರೆಂ ಎಮಗೆ ತಂದೆಯಿತ್ತವನಿತಳಂ ಪೊರೆಯುಂಟೆ: **ಆದಿಪು,** ೧೪. ೧೬); **[ನಾ]** ಹತ್ತಿರ (ಆಗಳ್ ನಾರಾಯಣನ ತಂಗೆ ಸುಭದ್ರೆಯೆಂಬ ಕನ್ನೆ ಕೆಮ್ಮುಗಿಲ ತೆರೆಯ ಪೊರೆಯೊಳ್ ನೆಗೆದು ಪೊಱಮಡುವ ವಿದ್ಯಾಧರಿಯಂತೆ: **ಪಂಪಭಾ,** ೪. ೩೯ ವ); **[ಕ್ರಿ]** ವ್ಯಾಪಿಸು (ಮೃಗಭೂ ಖುದ್ಧ ವಿಳಾಸಿನೀ ಕಬರಿಕಾಬಂಧಗಳಂ ಪೊತ್ತು ಮಲ್ಲಿಗೆಯೊಳ್ ಭಾವಿಸಿ ಧೂಪದೊಳ್ ಪೊರೆದು .. .. ಸುಟಿದತ್ತು ಅಂದೊಂದು ಮಂದಾನಿಳಂ: **ಪಂಪಭಾ,** ೪. ೮೦); **[ನಾ]** ರಕ್ಷಣೆ (ಒಂದುಂ ಎಡಂಬಡುಂ ಪೊರೆಯುಂ ಇಲ್ಲ ಅವರ್ಗೆ ಎಂಬುದಂ ಎಯ್ದೆ ನಂಬಿ ನಾಡಂ ದಯೆಗೆಯ್ದು ನೀಂ ಕುಡುವಿನಂ: **ಪಂಪಭಾ,** ೯. ೪೩)

ಪೊರೆದು ಪೊಣ್ಮು – [ಕ್ರಿ] ತುಂಬಿ ತುಳುಕು (ಪೊಸಪೂವಿನೊಳ್ ಪೊರೆದು ಪೊಣ್ಮಿದ ಕಂಪು ಮೊಗಂಗಳಂ ಚಳಿಲ್ಲನೆ ಕೊಳೆ ಪೊಯ್ಯೆ ತೀಡಿದುದು ತೆಂಕಣ ಗಾಳಿ ವಸಂತಮಾಸದೊಳ್: **ಪಂಪಭಾ,** ೫. ೩೪)

ಪೊರೆದೋಱು – [ಕ್ರಿ] ಅರಳು (ಪರೆಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱೆ ತೆಂಬೆಲರಪೊರೆವೊರೆಯಂ ಸಡಿಲ್ಚೆ: **ಆದಿಪು,** ೧೧. ೧೧೦)

ಪೊರೆವೊರಕ – [ಗು] ಹತ್ತಿರ ಉದುರಿದ [ಒಱಕ?] ಹೂ [?] (ಸುರಯಿಯ ಬಿರಿಮುಗುಳ್ಗಳ ಪೊರೆವೊರೆಯೊಳ್ ಪೊರೆವೊರಕನಲ್ಲದೆ ಅಲ್ಲುಗುವ ರಜಂಬೊರೆದು ಪರಕಲಿಸಿದ ಅಳಿಕುಳಪರಿಕರಮುಮಂ ಅತನುಶಿಖಿಯ ಕಿಡಿಗಳೆ ಗೆತ್ತಳ್: **ಪಂಪಭಾ,** ೫. ೫)

ಪೊರೆವೊರೆ – [ನಾ] [ಪೊರೆ+ಪೊರೆ] ಮುಚ್ಚುಮರೆ (ಶ್ರೀಪ್ರಭವಿಮಾನದೊಳ್ ಉಪಪಾದತಳ್ಪತಳದ ಪೊರೆಯೊಳಂ ಪೊರೆವೊರೆಯಿಲ್ಲದ ಮದನರಾಗರಸದೊಳ್ ಪೊರೆದು: **ಆದಿಪು,** ೨. ೭೨ ವ); [ನಾ] ಪದರು ಪದರು (ಪರೆಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱ ತೆಂಬೆಲರರ್ಪೊರೆವೊರೆಯಂ ಸಡಿಲ್ಚೆ: **ಆದಿಪು,** ೧೧. ೧೧೦)

ಪೊರ್ಕುಟಿ – [ನಾ] ಹೊಕ್ಕುಳು (ಕೊಂದೆನ್ನ ಮಗನಂ ಇಂ ಭಯದಿಂದಂ ರಸೆವೊಕ್ಕುಂ ಅಜನ ಗುಂಡಿಗೆವೊಕ್ಕುಂ ಮಂದರಧರನ ಈ ಪೊರ್ಕುಟಿ ಪೊಂದಾವರೆವೊಕ್ಕುಂ ಮೇಣವಂ ಬರ್ದುಕುವನೇ: **ಪಂಪಭಾ,** ೧೧. ೧೨೧)

ಪೊರ್ದು – [ಕ್ರಿ] ಸೇರು (ಪೊರ್ದಲೊಡಂ ವಿನೇಯಜನಸಂಘಾತಕ್ಕೆ ಮಾಣಿಕ್ಯದೇವಪದಾಂಭೋಜ ವರಪ್ರಸಾದಮೆ ಜಯಂ ಭದ್ರಂ ಶುಭಂ ಮಂಗಳಂ: **ಆದಿಪು,** ೧೬. ೭)

ಪೊಲ್ – [ಕ್ರಿ] ಹೊಲಿಗೆ ಹಾಕು (ಅಡಿಯೊಳ್ ಪಾಸಿದ ಚರ್ಮರತ್ನಪಟಮಂ ತಚ್ಛತ್ರರತ್ನಂ ಬೆಡಂಗಿಡಿದೋರಂತಿರೆ ಮುಟ್ಟೆ ಪೊಲ್ದ ತೆಱದಿಂದಿಂಬಾಗೆ: **ಆದಿಪು,** ೧೩. ೬೦)

ಪೊಲ – [ನಾ] ಹೊಲ (ಪೊಲನುಡುಗಿ ಬಂದುದು ಉಡಿದುದು ಪುಲ್ ಕಾಡುಂ ದಲ್ ಎಲೆಯಿಕ್ಕಿ ಘಳಿಲೆನೆ ನಿಂದುವು ತಣಿದುವು ಮೃಗಂಗಳ್ ಎತ್ತಲುಮೀಗಳ್: **ಪಂಪಭಾ,** ೫. ೩೭)

ಪೊಲವುಲ್ಲೆ – [ನಾ] [ಪೊಲಬು ಪುಲ್ಲೆ] ದಾರಿಯಲ್ಲಿನ [ಓಡುವ] ಹುಲ್ಲೆ? (ಮತ್ತಮೊಂದೆಡೆಯೊಳ್ ಪಟುವಟೆಯ ಬೇಟದ ತೋಟಿಯಂ ತೊಡರ್ದಟ್ಟುವೆತ್ತ ಪೊಲವುಲ್ಲೆಯಳ್ಳೆವಿಳ್ಳಿಯಾದ: **ಆದಿಪು,** ೨೮. ವ)

ಪೊಲಸುನಾಱು – [ಕ್ರಿ] ಕೆಟ್ಟ ವಾಸನೆಯಿಂದ ಕೂಡಿರು (ಪೊಲಸುನಾಱುವ ಮೆಯ್ಯನೆ ಕರ್ಚಲೆಂದು ಚೆಚ್ಚರಂ ಅಪರಾಂಬುರಾಶಿಗೆ ಇಟಿವಂತೆ ಇಟಿದಂ ಕಮಳೈಕಬಾಂಧವಂ: **ಪಂಪಭಾ,** ೧೧. ೫೧)

ಪೊಲೆಯ – [ನಾ] ಅಯೋಗ್ಯ, ಕೊಳಕ (ಕಲಿಯನೆ ಪಂದೆ ಮಾಟ್ಟಿ ಒಗ್ಗಲಿಯಂ ಕಡುವಂದೆ ಮಾಟ್ಟಿ ತಕ್ಕನಂ ಪೊಲೆಯನೆ ಮಾಟ್ಟಿ ಮುಂ ಪೊಲೆಯನಂ ನೆಱ ತಕ್ಕನೆ ಮಾಟ್ಟಿ: **ಪಂಪಭಾ,** ೧೨. ೯೨)

ಪೊಲ್ಲಕೆಯ್ – [ಕ್ರಿ] ಕೆಟ್ಟದ್ದನ್ನು ಆಲೋಚಿಸು (ಕಳವಂ ಮಿಥ್ಯೆಯಂ ಏಜೆಸಿ ಕಳತ್ರದೊಳ್ ಪೊಲ್ಲಕೆಯ್ದುರ್ ಎಂದು ಇಲ್ಲದುದಂ ಗಟಿಪಿದೊಡೆ ದಂಡಕಂ ಕಡುಮುಳಿದಂ: **ಪಂಪರಾ,** ೯. ೯)

ಪೊಲ್ಲದುಗೆಯ್ – [ಕ್ರಿ] ಕೆಟ್ಟುದು ಮಾಡು, ತಪ್ಪು ಮಾಡು (ಒದವುಗೆ ನಿನ್ನ ಸಂತತಿಗೆ ನೂರ್ವರ್ ಉದಗ್ರ ಸುತರ್ಕಳ್ ಒಂದೆ ಗರ್ಭದೊಳ್ ಎನೆ ಕೆಮ್ಮನಿಂತು ಪೊಸೆದಿಕ್ಕಿದೆ ಪೊಲ್ಲದುಗೆಯ್ದೆ: **ಪಂಪಭಾ,** ೧, ೧೩೧)

ಪೊಲ್ಲದು ಪೂಣ್ – [ಕ್ರಿ] ಕೆಟ್ಟ ಪ್ರತಿಜ್ಞೆ ಮಾಡು (ಪೊಲ್ಲದು ಪೂಣ್ದು ಪುಚ್ಚಟಿಯದೆ ಉರ್ಕಿದ ಕೌರವರಂ ಪೊರಳ್ಚಿ ಕೊಂದು: **ಪಂಪಭಾ,** ೧೨. ೧೬೧)

ಪೊಲ್ಲಮಾನಸಂ – [ನಾ] ಕೆಟ್ಟ ಮನಸ್ಸಿನವನು (ದುರ್ಯೋಧನನಪ್ಪೊಡೆ ಪೊಲ್ಲಮಾನಸಂ ಆತನುಂ ನೀಮುಂ ಒಂದೆಡೆಯೊಳಿರೆ ಕಿಸುಱುಂ ಕಲಹಮುಂ ಎಂದುಂ ಕುಂದುಂ: **ಪಂಪಭಾ,** ೨. ೯೨ ವ)

ಪೊಲ್ಲಮೆ – [ನಾ] ಕೆಟ್ಟತನ (ಅವನೀನಾಥನ ಗೆಯ್ದ ಪೊಲ್ಲಮೆಗಂ ಎನ್ನ ಒಳ್ಪಿಂಗಂ ಇಂ ಸಕ್ಕಿಯಾಗಿ ಅವಂ ಈವಂತುಟಂ ಅದಂ ಬಲ್ಲಂತು ಕಾಲ್ಗುತ್ತಿ ನೋಡು: **ಪಂಪಭಾ,** ೯. ೨೬)

ಪೊಸಂತಿಲ್ – [ನಾ] ಹೊಸಿಲು (ಎನಗೆ ಪೊಸಂತಿಲೀ ನೆಗಟ್ದ ವಜ್ರದ ವೇದಿಕೆ ಗೋಷ್ಪದಂ ದಲೀ ವನನಿಧಿ: **ಆದಿಪು,** ೧೨. ೭೧)

ಪೊಸಕಾರ್ – [ನಾ] ಹೊಸ ಮಳೆಗಾಲ (ಪೊಸವೇಟಕಾಱರ ಎರ್ದೆಗಳ್ ಪೊಸಕಾರ ಪೊಡರ್ಪುಗಂಡು ಅದೇಂ ಕರಿತುವು ಅದೇಂ ಕಲಂಕಿದುವು: **ಪಂಪಭಾ,** ೭. ೨೩)

ಪೊಸಗಳಮೆ – [ನಾ] [ಪೊಸ+ಕಳಮೆ] ಹೊಸ ಬತ್ತ (ಪೊಸಜಾದಿಯ ಬೆಳೆದೊಱಗಿದ ಪೊಸಗಟಮೆಯ ಪೊಸತರಲ್ದ ತಾವರೆಗಳ ಕಂಪಸದಳಮೆಸೆದಿರೆ ದೆಸೆದೆಸೆಗೊಸಗೆಯೆ ಬರ್ಪಂತೆ ಕಣ್ಗೆ ವಂದುದು ಶರದಂ: **ಆದಿಪು,** ೧೧. ೬)

ಪೊಸಗಾರ್ – [ನಾ] [ಪೊಸ+ಕಾರ್] ಆರಂಭದ ಮಳೆಗಾಲ, ಮುಂಗಾರು (ನರ್ತಕೀಲೀಲೆಯಿಂದದೊಂದು ಪೊಸಗಾರ ಸೋಗೆನವಿಲಾಟಮಂ ತೋಱಿದಳ್: **ಆದಿಪು,** ೧೨. ೧೩)

ಪೊಸತಿಕ್ಕು – [ಕ್ರಿ] [ಪೊಸತು+ಇಕ್ಕು] ಮೊದಲ ಬಲಿ ಕೊಡು (ಅಂತು ಉತ್ತರನಂ ಜವಂಗೆ ಪೊಸತಿಕ್ಕುವಂತೆ ಇಕ್ಕಿ ಬಸವಟಿದ ಶಲ್ಯನಂ ಕೃತವರ್ಮಂ ತನ್ನ ರಥಮನೇಱಿಸಿಕೊಂಡು: **ಪಂಪಭಾ,** ೧೦. ೧೧೨ ವ)

ಪೊಸತು – [ನಾ] ಹೊಸತು, ನವೀನವಾದುದು (ನೆಲನುಂ ಪೊಟ್ಟುಂ ಪೊಲನುಮನಱಿದು ಬಟಿಯೊಳ್ ಪೊಸತುಂ ಪಟಿದುವಂ ಅಱಿದು ಪರಿಯಿಸಲ್ ನೀನೆ ಬಲ್ಲಯ್: **ಪಂಪಭಾ,** ೫. ೪೬ ವ)

ಪೊಸದಳಿಂಬ – [ನಾ] ಹೊಸ ವಸ್ತ್ರ (ಓಲಗಶಾಲೆಯೊಳಗಣ ಕಪ್ಪುರವಳಿಕಿನ ಜಗುಲಿಯ ಮೇಗಣ ಕುಸುಮದೆಸಳ ಮಿಸುಗುವ ಪೊಸದಳಿಂಬದ ಮೇಗೆ ಕಿಱಿದು ಬೇಗಂ ವಿಶ್ರಮಿಸಿ: **ಆದಿಪು,** ೧೧. ೭೩ ವ)

ಪೊಸದಳಿರ್ – [ನಾ] ಪೊಸತು ತಳಿರ್, ಹೊಸ ಚಿಗುರು (ರಸೆಯಿಂದಮೊಗೆದು ಪೆಡೆಗಳ್ ಪೊಸಮಾಣಿಕದ ಎಳವಿಸಿಲ್ಗಳೊಳ್ ಪೊಸದಳಿರೊಳ್ ಮುಸುಕಿದ ತೆಱಿಂದೆಸೆದಿರೆ ಪೊಸತೆನೆ ನಡೆ ನೋಡಲ್ ಉರಗರಾಜಂ ಬಂದಂ: **ಪಂಪಭಾ,** ೧೨. ೧೪೧)

ಪೊಸಪೊಚ್ಚ – [ನಾ] ಹೊಸ ತೇಜಸ್ಸು (ಪೆಸರ್ಗಳ್ಕಿತ್ತು ಸಮಸ್ತಖೇಚರಬಲಂ ತೇಜಕ್ಕೆ ಬೆರ್ಚಿತ್ತು ಮುಂ ಪೊಸಪೊಚ್ಚಂ ಬೆರಸಿರ್ಪ ಭೂಚರಬಲಂ: **ಆದಿಪು,** ೧. ೭೮)

ಪೊಸಯಿಸು – [ಕ್ರಿ] ವಿಶಾಲಗೊಳಿಸು (ಪುಸಿಯದುದು ಪರಾಂಗನೆಗಾಟಿಸದುದು ಕೊಲ್ಲದುದು ಮೋಹಮಿಲ್ಲದುದು ಅಱಿವಂ ಪೊಸಯಿಸುವುದು ವೈರಾಗ್ಯದ ದೆಸೆಗೆಸಪುದು ಧರ್ಮಂ: **ಆದಿಪು,** ೫. ೭೯); [ಕ್ರಿ] ಹೊಸತಾಗಿ ಮಾಡು (ಮೆಲ್ಪು ಮೇಳಮಂ ಪೊಸಯಿಸೆ ತನ್ನ ಮುನ್ನಟಿವು ಬೇಟದ ಲಲ್ಲೆಯ ಬಲ್ಮೆಪತ್ತಿ ಸುತ್ತಿಸೆ: **ಆದಿಪು,** ೧೨. ೧೭); [ಕ್ರಿ] ರಚನೆ ಮಾಡು (ಪುಸಿಯ ಪರಾಂಗನಾರತದ ಮದ್ಯದ ಮಾಂಸದ ಮೆಯ್ಗೊಱಲ್ದ ದುರ್ವ್ಯಸನಿಯ ಮಾಡಿದೋದೆ

ನಿಮಗಾಗರಮಾಗಿರೆ ಅಸತ್ಯವಾದಮಂ ಪೊಸಯಿಸಿ: **ಆದಿಪು**, ೨. ೧೧)

ಪೊಸವಟ್ಟ – [ನಾ] [ಪೊಸ+ಪಟ್ಟ] ಹೊಸ ಬಾಸಿಂಗ (ಅದು ಚಿತ್ತಜಂಗೆ ಕುಲದೈವಂ ಅದು ಅಂಗಜಚಕ್ರವರ್ತಿಗೆತ್ತಿದ ಪೊಸವಟ್ಟಂ ಅಂತದು ಮನೋಜನ ಕೈಪಿಡಿ: **ಆದಿಪು**, ೨. ೭೪)

ಪೊಸವಾಸಣಿಗೆ – [ನಾ] [ಪೊಸ+ಬಾಸಣಿಗೆ] ಹೊಸತಾದ ಮುಸುಕು (ಬಾಸಣಿಸಿದ ಚಿನ್ನದ ಪೊಸವಾಸಣಿಗೆಯ ಪೊಸ ಸಿವಿಗೆ ಮಣಿಮಯಕಳಶೋದ್ಭಸಿ ದೆಸೆಯೊಳೆಸೆಯೆ: **ಆದಿಪು**, ೧೧. ೪೦)

ಪೊಸವಾಸಿಗ – [ನಾ] [ಪೊಸ+ಬಾಸಿಗ] ಹೊಸ ಹೂಮಾಲೆ (ಸುರಕುಸುಮದ ಪೊಸವಾಸಿಗಮೆರಡುಂ ಕರತಳದೊಳೆಸೆಯೆ: **ಆದಿಪು**, ೧೦. ೨೦)

ಪೊಸವೆ – [ಅ] [ಪೊಸವು+ಎ] ಹೊಸದಾದವೇ ಎಂಬ ಅವಧಾರಾಣಾರ್ಥ (ರಸಭವಾಭಿನಯಂಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆ ಎನೆ ಪೊಸಯಿಸಿದಳಾಕೆ ನಾಟ್ಯಾಗಮಮಂ: **ಆದಿಪು**, ೯. ೨೫)

ಪೊಸವೆಳ್ಪು – [ನಾ] ಹೊಸ ಬಿಳುಪು, ಹೊಸ ಕಾಂತಿ (ಪಸರಿಸಿದ ಪಯಃಪೂರದ ಪೊಸವೆಳ್ಪು ನಿಜಾಂಗರುಚಿಯ ಪೊಱಪೊಱಗೆ ಪೊದಳ್ದೆಸೆದಿರೆ: **ಆದಿಪು**, ೭. ೯೨)

ಪೊಸವೇಟ – [ನಾ] [ಪೊಸ+ಬೇಟ] ಹೊಸ ಪ್ರಣಯ (ಪುದಿದಿರೆ ರಾಗಂ ಉರ್ಕೆ ಪೊಸವೇಟದಲಂಪುಗಳೆಲ್ಲಂ ಓದಿದರ್ಗೆ ಇದಱನುಯಾಯಿಗಳ್ಗೆ: **ಪಂಪಭಾ**, ೧೪. ೬೩)

ಪೊಸವೇಟಕಾಱರ್ – [ನಾ] ಹೊಸ ಪ್ರಣಯಿಗಳು (ಮತ್ತಮೊಂದೆಡೆಯೊಳ್ ಅಂದೆ ಪೊಸವೇಟಕಾಱರಪ್ಪ ಕಡುನಲ್ಲರುಮಿರ್ವರುಮಿರೆ: **ಆದಿಪು**, ೧೨. ೨೮)

ಪೊಸೆ – [ಕ್ರಿ] ಹಗ್ಗ ಹೊಸೆ (ಕೆಂಗಲೆಗಳ್ ಅಕ್ಷಮಾಲೆಯೊಳ್ ಎಸೆದಂತಿರೆ ಪೊಸೆಯೆ ಮುತ್ತು ಪವಳಂ ಬೆರಸಿದವೊಲಾಯ್ತು: **ಪಂಪಭಾ**, ೬. ೧೦); [ಕ್ರಿ] ಕಿವಿಚಿಕೊ ಮತ್ತು ಕಡೆಗೋಲಿನಿಂದ ಕಡೆ (ಪೊಸೆದೊಡೆ ಪಾಲ್ಗಡಲಂ ಮಗುಟ್ದಿಸುರರ್ ಪೊಸೆದಲ್ಲಿ ಕಾಳಕೂಟಾಂಕುರಂ ಅಂದು ಅಸದಳಮೊಗೆದಂತೊಗೆದುವು ಬಸಿಱಿಂ ನೂಱೊಂದು ಪಿಂಡಂ ಅರುಣಾಕೀರ್ಣಂ; **ಪಂಪಭಾ**, ೧. ೧೩೦)

ಪೊಸೆದಿಕ್ಕು – [ಕ್ರಿ] ಕಿವಿಚಿ ಹಾಳುಮಾಡು (ಒದವುಗೆ ನಿನ್ನ ಸಂತತಿಗೆ ನೂರ್ವರ್ ಉದಗ್ರ ಸುತರ್ಕಳ್ ಒಂದೆ ಗರ್ಭದೊಳ್ ಎನೆ ಕೆಮ್ಮನಿಂತು ಪೊಸೆದಿಕ್ಕಿದೆ ಪೊಲ್ಲದುಗೆಯ್ದೆ: **ಪಂಪಭಾ**, ೧, ೧೩೧)

ಪೊಳಪು – [ನಾ] ಹೊಳಪು, ಕಾಂತಿ (ಅಧರಮನಧರಂ ಮಾಡಿ ಪೊಳೆವ ಸುಲಿಪಲ್ಲ ಪೊಳಪುಂ ಸುಲಿಪ್ಪ ಪೊಳಪೆಂಬ ತನ್ನ ಬಾಳ ಪೊಳಪನೆ ಮೆಱೆದು: **ಆದಿಪು**, ೪. ೪೧ ವ)

ಪೊಳೆದುಳ್ಕು – [ಕ್ರಿ] ಹೊಳೆದು ಉಕ್ಕು, ಪ್ರಕಾಶಮಾನವಾಗಿ ಚಾಚಿಕೊ (ಪೊಳೆದುಳ್ಕುವ ಕುಡುದಾಡೆಯ ಪೊಳಪು ನೊಸಲ್ಗಡರ್ದು ಪೊಡರ್ವ ಪುರ್ವಸೆವಿನಂ ಅವ್ವಳಿಸುವ ಮುಳಿಸಿನ ದಳ್ಳುರಿಗಳಂ ಉಗುಟ್ವವೊಲ್ ಉಗುಟ್ದಂ ಅಸುರಂ ಉರಿವ ಪಟಿಗಳಂ: **ಪಂಪಭಾ**, ೬. ೫೯)

ಪೊಳೆಪು – [ನಾ] ಕಾಂತಿ, ಮಿರುಗು (ರಸಭಾವ ಆಲಸನಯನ ಪ್ರಸರಂಗಳ ಪೊಳೆವ ಪೊಳೆಪುಗಳ್ ಬಳ್ವಳ ನೀಳ್ದೆಸೆದುವು ರಂಗದೊಳ್: **ಆದಿಪು**, ೭. ೧೧೮)

ಪೊಳೆವುಲ್ಲೆ – [ನಾ] ಮಿರುಗುವ ಜಿಂಕೆ (ಬೆರ್ಚಿ ಪೊಳೆದು ಪರಿವ ಪೊಳೆವುಲ್ಲೆಗಳುಮಂ ತಲೆಯಂ ಕುತ್ತಿ ವಿಶಾಲಂಬರಿವ ಕರಡಿಗಳುಮಂ ಅಡಂಗಿ: **ಪಂಪಭಾ**, ೫. ೪೮ ವ)

ಪೊಳ್ಳುಮರ – [ನಾ] ತೊಸಕಲು ಮರ (ತನ್ನೆರ್ದೆಯುಂ ಪೊಳ್ಳುಮರನಂ ಕಿರ್ಚುಳುರ್ವಂತೊಳಗೊಳಗಳುರೆ: **ಪಂಪಭಾ**, ೨. ೮೮ ವ)

ಪೊಱ ಅಡಿ – [ನಾ] ಅಡಿಯ [ಹೆಜ್ಜೆಯ] ಮೇಲುಭಾಗ (ಲಲಾಟಪಟ್ಟದೊಡನೆ ಲಲಿತೋನ್ನತಂಗಳಾದ ಪೊಱ ಅಡಿಗಳುಂ ಉಗುರ್ಗಳೊಡನೆ ದೀಪ್ತಿಯೊಳ್ ಪುದಿದು: **ಆದಿಪು**, ೩. ೯ ವ)

ಪೊಱಕಣ್ – [ನಾ] ಹೊರಗಿನ ಕಣ್ಣು, ಕಾಣುವ ಕಣ್ಣು (ಪೊಱಕಣ್ಗಂ ಮುನ್ನಂ ತಾಂ ಮಱಸಿದ ನೊಸಲ ಒಂದು ಕಣ್ಣುಂ ಆಗಳ್ ನೊಸಲಿಂ ಪೊಱಮಟ್ಟಂತಿರೆ: **ಪಂಪಭಾ**, ೮. ೨೩)

ಪೊಱಗಾಗು – [ಕ್ರಿ] ಹೊರಗಾಗು, ಅಗಲಿ ಹೋಗು (ಎರ್ದೆಮುಟ್ಟಿ ಕೂರ್ತು ಪೇಟಿ್ ಮಾನಸವಾಟಿಂ ಅಂಗವಿಷಯಾಧಿಪ ನೀಂ ಪೊಱಗಾಗೆ ಬಾಟ್ವೇ: **ಪಂಪಭಾ**, ೧೩. ೩)

ಪೊಱಗು – [ನಾ] ಹೊರಗು, ಅಪವಾದ (ಎನಿಬರರಸುಗಳುಂ ಎಱಗಿದೊಡೆದೆನಗೆ ಏವಂದಪುದೊ ಬಾಹುಬಲಿ ಪೊಱಗೆನೆ ಪೇಟಿನಿತುಂ ಪುರಮೇವುದೊ ಪೌದನಪುರಮೆನ್ನಾಳ್ಕೆಗಿಂತು ಪೊಱಗೆನಿಪಾಗಳ್: **ಆದಿಪು**, ೧೪. ೨೮)

ಪೊಱಪೊಣ್ಮು – [ಕ್ರಿ] ಹೊರಹೊಮ್ಮು, ಹೊರಕ್ಕೆ ಚಿಮ್ಮು (ಗುರೂಪದೇಶಮಾವರಿಸೆ ಜಿನೇಂದ್ರಭಕ್ತಿ ಪೊಱಪೊಣ್ಮೆ ದಯಾರಸಮಿಂತು ನಾಡೆಯುಂ ಪರಿಕರದಿಂ ಮನಕ್ಕೞಿವು ಸಾರೆ: **ಆದಿಪು**, ೫. ೫೩)

ಪೊಱಪೊಱಗನೆ – [ಅ] , ಮೇಲೆ ಮೇಲೆ ಮಾತ್ರವೇ (ಎಂದು ಮುನ್ನಮೆ ಮುಟ್ಟಿ ನುಡಿಯದೆ ಪೊಱಪೊಱಗನೆ ಬಳಸಿ ಕನ್ನೆಯ ಸಂಕೆಯಂ ಕಿಡಿಸಿ: ಪಂಪಭಾ, ೪. ೬೩ ವ)

ಪೊಱಮಡಿಸು – [ಕ್ರಿ] ಹೊರಕ್ಕೆ ಕರೆತರು (ಮುತ್ತ ತವಸಿಗಳ ಕೈಯಂ ಪಿಡಿದುಯ್ದು ಅವರ ಗುಹೆಗಳಂ ಪುಗಿಪ ಪೊಱಮಡಿಪ ಚಪಳಕಪಿಗಳುಮಂ: **ಪಂಪಭಾ**, ೧. ೧೧೫ ವ); [ಕ್ರಿ] ಹೊರ ಬರುವಂತೆ ಮಾಡು (ಮುನ್ನಿನ ದಿವಸದೊಳಗಣ ಪರಿಜನಮೆಲ್ಲಮಂ ಪಾರ್ವರಂ ಊಡುವ ನೆವದೊಳೆ ಪೊಱಮಡಿಸಿ: **ಪಂಪಭಾ**, ೩. ೪ ವ)

ಪೊಱಮಡು – [ಕ್ರಿ] [ಪೊಱಗೆ ಮಡು] ಹೊರಬರು, ಜಾಗ ಬಿಟ್ಟು ಹೋಗು (ಪುಗುವ ಪೊಱಮಡುವ ತೆಱನೆರ್ದೆವುಗುವಳ್ ಪೊಱಮಡುವಳೆನಿಸೆ: **ಆದಿಪು**, ೯. ೩೦)

ಪೊಱಮಾಱು – [ಕ್ರಿ] [ಪೊಱಗು+ಮಾಱು] ಪಲಾಯನಮಾಡು (ಮದನನ ಕಾಯ್ಪು ಮಾಣ್ಗೆ ಸರಸೀರುಹಜನ್ಮನ ಮೆಚ್ಚು ತೀರ್ಗೆ ಕೋಳ್ಗುದಿ ಮನದಿಂದಂ ಇಂದು ಪೊಱಮಾಱುಗೆ: **ಪಂಪಭಾ** ಪರಿಷತ್ತು, ೫. ೧೮)

ಪೊೞಮುಯ್ವು – [ನಾ] ಹೆಗಲ ಹಿಂಭಾಗ (ನೋಟದೊಳೆಯ್ದೆ ತಳ್ತ ಪೆರ್ಮೊಲೆ ಪೊೞಮುಯ್ವು ಬೆನ್ನಿನಿತುಂ ಒರ್ಮೆಯೆ ನಾಂಬಿನಂ ಉಣ್ಮೆ ಪೊಣ್ಮೆ ಕಣ್ಮಲರ್ಗಳಿನೆಚ್ಚು ಪಾಯ್ದುವು ಅರಲಂಬುಗಳಂತೆ ವಿಲೋಚನಾಂಬುಗಳ್: **ಪಂಪಭಾ,** ೪. ೧೦೮)

ಪೊೞವೊಟಲ್ – [ನಾ] ನಗರದ ಹೊರವಲಯ (ಅದರ ಪೊೞವೊಟಲ ವಿಶಾಲ ಕನಕ ಕೃತಕ ಗಿರಿಗಳಿಂ ಫಲಪ್ರಕೀರ್ಣ ತರುಗಳಿಂ: **ಪಂಪಭಾ,** ೧. ೫೮)

ಪೊೞಸಟೆ – [ನಾ] ಪಾರಿವಾಳದ ಹಾಗಿರುವ ಅಶುಭಕರವಾದ ಒಂದು ಹಕ್ಕಿಯು ನಾಶಮಾಡುವ ಹಾಗೆ (ಜೂದಿನೊಳ್ ಪೊೞಸಟೆವಂತೆ ತಮ್ಮರಸುಗೆಟ್ಟು ಕಟಿಲ್ದು ಎರ್ದೆಗೆಟ್ಟು: **ಪಂಪಭಾ,** ೮. ೮೫)

ಪೊೞೆ – [ನಾ] ಜವಾಬುದಾರಿ, ಹೊಣೆ (ನೆೞೆದಂ ಭೂತಳರಾಜ್ಯಭೂರಿಭರಮಂ ತಾಳಲ್ಕೆ ಮತ್ಪುತ್ರನೀ ಪೊೞೆಗಿನ್ನೀತನೆ ಯೋಗ್ಯಂ: **ಆದಿಪು,** ೬. ೨೩); [ನಾ] ಭಾರ, ಹೊರೆ (ತನುಗೆ ಪೊೞೆ ತುಡುಗೆ ನವಲೇಪನಮೆ ಮಳಂ ಗೀತಮಟಿಕ್ಕೆ ನೃತ್ಯಂ ಬಗೆಯಲ್ಕೆನಗೆ ದಲ್ ಉನ್ಮತ್ತವಿಳಾಸಂ ಇಂತಿನಿತೞೊಳಮೊಂದಱೊಳ್ ಪುರುಳುಂಟೇ: **ಆದಿಪು,** ೯. ೫೫)

ಪೊೞೆಯಲ್ಲದೆ – ಭಾರವಲ್ಲದ, ಹಗುರವಾದ (ತುೞುಗೆಮೆ ನೀಳ್ದ ಪುರ್ವು ನಿಡುಗಣ್ ಪೊೞೆಯಲ್ಲದೆ ಬಟ್ಟಿತಪ್ಪ ಬಾಯ್ದೆೞೆ ತನುರೇಖೆಗೊಂಡ ಕೊರಲ್ .. .. ಎಂದು ಧಾತ್ರಿ ಪೊಗೞ್ಗುಂ ಪೊಗೞ್ವನ್ನರೆ ಕುಂತಿ ಮಾದ್ರಿಗಳ್: **ಪಂಪಭಾ,** ೧. ೧೦೮)

ಪೊಟಲ್ – [ನಾ] ಪಟ್ಟಣ (ಅಂತಾಗಲೊಂದು ಉತ್ತರಂ ಬಳೆಯೆ ಸೊಗಯಿಸುವ ಪೊಟಲೊಳ್ ಅಷ್ಟಶೋಭೆಯಂ ಮಾಡಿ: **ಪಂಪಭಾ,** ೩. ೨ ವ)

ಪೊಟ್ತಡೆ – [ನಾ]ಹೊತ್ತಾರೆ (ಲಲಾಟಕುಂಕುಮಸ್ವೇದಜಜಳಂ ಕಿಡಿಸಿದುದು ಕದಪಿನೊಳ್ ಪೊಟ್ತಡೆ ಬರೆದರಸಿಯರ ಪತ್ರಲೇಖಾವಳಿಯಂ: **ಆದಿಪು,** ೧೧. ೫೪);

ಪೊಟ್ತೞ್ – [ನಾ] ಹೊತ್ತಾರೆ, ಬೆಳಿಗ್ಗೆ (ಪೊಸತಲರ್ದ ಪದದೊಳುಣ್ಮುವ ಪೊಸಗಂಪಂ ಪಡೆದು ಪೊಟ್ತೞೊಳ್ ಜನಮಂ ಸೋಲಿಸುಗುಂ: **ಆದಿಪು,** ೧೧. ೧೧೩)

ಪೊಟ್ತು – [ನಾ] ಹೊತ್ತು (ಅದೞ ಫಲದೊಳ್ ಈಗಳ್ ಆತನಲ್ಲಿಗೆ ಇಂದ್ರಂ ನಿಚ್ಚಂ ಒಂದು ಪೊಟ್ತು ಪೋಗಿ ಪೂಜಿಸಿ ಬರ್ಪಂ: **ಪಂಪಭಾ,** ೬. ೧೭ ವ); [ನಾ] ಬಾರಿ, ಸಲ (ಓಡಿದರ್ ಒಂದು ಪೊಟ್ತುಂ ಒಂದರ್ಕಂ ಇದಿರ್ಚಲಾಱದೆ ಮನಂಗಲಿಗಳ್ ಕದನತ್ರಿಣೇತ್ರನಂ: **ಪಂಪಭಾ,** ೮. ೧೦೮)

ಪೊಟ್ತೆ ಪೊಟ್ತು – ಹೊತ್ತೇ ಹೊತ್ತು, ಇನ್ನೆಂದೂ ಸಿಕ್ಕದ ಸಮಯ (ಈ ಪೊಟ್ತೆ ಪೊಟ್ತು ನಾಳೆ ದೇವಲೋಕದ ಕನ್ಯಕೆಯರ ಓಲಗದೊಳಿರ್ಪಂ: **ಪಂಪಭಾ,** ೧೦. ೪೪ ವ)

ಪೊಟ್ತುಪೋಗು – [ಕ್ರಿ] ಹೊತ್ತು ಹೋಗು, ಕಾಲ ಕಳೆ (ಒಡ್ಡಮಂ ಪೇೞಿಂ ಎನೆ ಪೊಟ್ತುಪೋಗಿಂಗಂ ಅಟ್ಟಿಗಂ ಆಡುವ ತಮ್ಮುತಿರ್ವರ ಪಲಗೆಗೆ ಸಾಯಿರ ಗದ್ಯಾಣದ ಪೊನ್ನೆ ಸಾಲ್ಗುಂ ಅಗ್ಗಳಂ ಬೇಡ: **ಪಂಪಭಾ,** ೬. ೭೧ ವ)

ಪೋಕೆ – ಹೋಗಲಿ, ನಿಲ್ಲಲಿ (ಪೋಕೆ ಇನಿತಱೊಳ್ ಅಸವಸದಿಂದೀ ಕಲಹಂ: **ಪಂಪಭಾ,** ೧೩. ೧೩)

ಪೋಗಿಸು – [ಕ್ರಿ] [ಪೋಗೆ+ಇಸು] ಹೋಗುವಂತೆ ಬಾಣಪ್ರಯೋಗಿಸು (ಪೇರಾಳ್ ತಿಜೆದಿಕ್ಕಿದಂತೆ ತಲೆಯಂ ಪೋಗೆಚ್ಚನಾ ಶ್ವೇತನಾ: **ಪಂಪಭಾ,** ೧೦. ೧೨೩)

ಪೋಗು – [ನಾ] ಹೋಗುವಿಕೆ (ಈಗಳಿನೆಮ್ಮ ಪೋಗು ಗೆಂಟನಿತೆಡೆಯಂ ತಗುಳ್ದು ಬರಲಾರ್ಪಿರೆ ನಿಮ್ಮ ವಿಳಾಸಯಾನದಿಂ: **ಆದಿಪು,** ೧೧. ೧೩೮); [ಕ್ರಿ] ಹೋಗೋ ಎಂಬ ಉದ್ಗಾರವಾಚಿ (ಅತರ್ಕ್ಯಂ ವಿಕ್ರಾಂತಂ ಭುಜಬಲಮಸಾಮಾನ್ಯಂ ಅಧಿಕಂ ಪ್ರತಾಪಂ ಪೋಗೀತಂಗೆಣೆಯೆ: **ಪಂಪಭಾ,** ೧. ೮೦)

ಪೋಡುಂಗಾೞ – [ನಾ] [ಬೇಸಾಯಭೂಮಿ ಮಾಡುವುದಕ್ಕಾಗಿ] ಕಾಡು ಕಡಿಯುವವನು (ಪುದುಂಗೊಳಿಸಿದ ಬಿದಿರ ಸಿಡುಂಬನೆಡೆಗೊಳೆ ಕಡಿವ ಪೋಡುಂಗಾೞನಂತೆ: **ಪಂಪಭಾ,** ೧೨. ೧೬೭ ವ)

ಪೋತ – [ನಾ] ಹಡಗು, ದೋಣಿ (ಧರ್ಮಪೋತಚ್ಯುತರ್ ಅನವಧಿಸಂಸಾರವಾರಾಶಿಮಧ್ಯಾಸ್ಪದ ಸರ್ವಗ್ರಾಸಿ ಭೀಮಾಂತಕ ವದನಮಹಾಗರ್ತದೊಳ್ ಮಗ್ನರಾದರ್: **ಆದಿಪು,** ೯. ೫೮); [ನಾ] ಮರಿ (ಕೇಸರಿಣೀಸ್ತನ್ಯಮಂ ಅನ್ಯಗಜಪೋತಾನೀಕಂ ಉಂಡಾಡೆ: **ಆದಿಪು,** ೯. ೯೭)

ಪೋತರ್ – [ಕ್ರಿ] ಹೊರಬರು (ಉಸಿರೊತ್ತಿಂ ತಿದಿಯಂತಿರೊತ್ತಿರೆ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್.. .. ಪುಡಿಯೊಳ್ ಪೊರಳ್ವ ಪಗೆಯಂ ಕಣ್ಣಾರ್ವಿನಂ ನೋಡಿದಳ್: **ಪಂಪಭಾ,** ೧೨. ೧೫೧)

ಪೋದ ಪೋಗೆ ಹೋಗು – ಹೋದ ಹೋಗನ್ನೇ ಹೋಗು, ಹೋದ[ವರ] ದಾರಿಯಲ್ಲೇ ಹೋಗು (ಪೋದರನೊಡಗೊಂಡು ಬರಲ್ಪೋದರುಂ ಆ ಪೋದ ಪೋಗನೆ ಪೋದರ್: **ಪಂಪಭಾ,** ೮. ೪೫)

ಪೋದವರ್ – [ನಾ] ಆಗಿಹೋದವರು (ಏಕಟಿಯ ಪೋದವರಾದವರೊಳ್ ಸರಸ್ವತೀಮತಿ ಕವಿತಾಗುಣಕ್ಕೆ ಪದೆದೆಯ್ದೆವರಲ್ಕೆ: **ಪಂಪಭಾ,** ೧೪. ೬೧)

ಪೋಪ ಪೊಟ್ತಿರ್ – [ನಾ] ಆರುವ ಸಮಯ (ಬೆಳಗುವ ಸೊಡರ್ಗಳ ಬೆಳಗು ಅಗ್ಗಳಿಸುವವೋಲ್ ಪೋಪ ಪೊಟ್ತಿೞೊಳ್ ತೇಜಂ ಪಜ್ಜಳಿಸೆ: **ಪಂಪಭಾ,** ೧೨. ೨೧೦)

ಪೋಪಿನಂ – [ಅ] ಹೋಗುತ್ತಿರಲು, ಹೋಗಲು, ನೀಗಲು (ಆ ದಿವ್ಯವಚನಮಂ ಉಲ್ಲಂಘಿಸಿ ನೀರಟಿಕ್ಕೆ ಪೋಪಿನಂ ನೀರಂ ಕುಡಿದು: **ಪಂಪಭಾ,** ೮. ೩೯ ವ)

ಪೋಪೋಗಲ್ – [ಕ್ರಿ] ಹೋಗಬೇಡ (**ಭೀಮಾರ್ಜುನರ್** ಕಾಯ್ಪು ಕೆಯ್ಮಿಗೆ ಬೆನ್ನ ಪರಿದು ಎತ್ತ ಪೋಪೆಯೆಲವೋ ಪೋ ಪೋಗಲ್ ಎಂದೆಯ್ದಿದರ್: **ಪಂಪಭಾ,** ೭. ೩೧)

ಪೋಬರವು – [ನಾ] ಹೋಗುವುದು ಬರುವುದು (ಅರಸನ ಪುಟ್ಟಿದಿಂಬಟಿಯಮೀ ದಿವಿಜಾಳಿಗೆ ಮಾಣ್ದುದಿಲ್ಲ ಪೋಬರವು: **ಆದಿಪು,** ೯. ೭೪)

ಪೋರಿಸು – [ಕ್ರಿ] ಹೋರಾಟ ಮಾಡಿಸು (ನೆಗಟ್ದ ಮಲ್ಲರುಮಂ ಪಿಡಿದೊತ್ತಿ ಗೆಲ್ದ ಜಟ್ಟಿಗರೆನೆ ಸಂದ ಮಲ್ಲರನೆ ಪೋರಿಸಲುಂ ಪಿರಿದೊಂದು ದೋಹಳಂ ನೆಗಟ್ದುದು: **ಆದಿಪು,** ೮. ೪೮)

ಪೋರ್ಕುೞಿ – [ನಾ] [ನೀರಿನ] ಹೋರಾಟ, ನೀರಾಟ (ಸುರ್ಕಟಿದ ಉರುಳಿಗುರುಳ್ ನಸುಸುರ್ಕಿದ ಕುಚಚೂಚುಕಂ ಬೆಳರ್ತಧರಂ ನೀರ್ ಪೋರ್ಕುೞಿಯೊಳ್ ಜೋಲ್ದ ಉಳ್ಕುಡೆ: **ಆದಿಪು,** ೧೧. ೧೯೯); [ನಾ] ಜಗಳಗಂಟ (ಸುಣ್ಣದೆಲೆಯನೊತ್ತೆಯಿಟ್ಟು

ಮದದಾನೆಯುಮಂ ಮಾಣಿಕಮುಮಂ ಒತ್ತೆವಿಡಿಸಲೆಳಸುವ ಚಿಕ್ಕ ಪೋರ್ಕುಳಿ ಬೊಜಂಗರುಮಂ ನೋಡಿ: **ಪಂಪಭಾ,** ೪. ೮೭ ವ)

ಪೋಲ್ – [ಕ್ರಿ] ಹೋಲು, ಒಂದೇ ರೀತಿ ಇರು (ಆರಂದಮಲ್ಲವಂ ತ್ರಿಪುರಾರೀ ಕೇಳ್ ತ್ರಿಪುರಮಿಸುವ ನಿನ್ನನೆ ಪೋಲ್ವಂ: **ಪಂಪಭಾ,** ೮. ೧೧)

ಪೋಲಿಸು – [ಕ್ರಿ] ಹೋಲಿಸು, ಸಮೀಕರಿಸು (ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟ್ತಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್: **ಪಂಪಭಾ,** ೧. ೧೪)

ಪೋಲ್ವೆ – [ನಾ] ಹೋಲಿಕೆ (ಅಂತು ಕೊಟ್ಟ ಅಯ್ದು ಮಂತ್ರಂಗಳಂ ಆಹ್ವಾನಂಗೆಯ್ದು ನಿನ್ನ ಬಗೆಗೆ ಬಂದ ಪೋಲ್ವೆಯ ಮಕ್ಕಳಂ ಪಡೆವೆ ಎಂದು ಬೆಸಸಿದೊಡೆ: **ಪಂಪಭಾ,** ೧. ೮೯ ವ)

ಪೋಲ್ವೆವೆಱು – [ಕ್ರಿ] ಸಾಟಿಯಾಗು (ಖರಕರಬಿಂಬದಿಂ ಕಿರಣಸಂತತಿಗಳ್ ಪೊಱಮೊಣ್ಮೆದಪ್ಪುವು ಎಂಬರ ನುಡಿ ಪೋಲ್ವೆವೆತ್ತುದು ಎನೆ: **ಪಂಪಭಾ,** ೧೨. ೭೩)

ಪೋಷ್ಯವರ್ಗ – [ನಾ] ರಕ್ಷಿಸಬೇಕಾದ ಬಂಧುಬಳಗ (ಕಡಲ ತಡಿಯ ನೆಲನಂ ಪಡೆದರ್ ಭವದೀಯಪುತ್ರರ್ ಉಳ್ಳಳವಿಗಳೊಳ್ ಪಡೆದುದು ಬಂಧುಜನಂ ನಿಮ್ಮಡಿಗಾವೇಂ ಪೋಷ್ಯವರ್ಗದಿಂದಂ ಪೊಱಗೇ: **ಆದಿಪು,** ೯. ೯೮)

ಪೋಟಿ್ – [ಕ್ರಿ] ಸೀಳು, ಹೋಳು ಮಾಡು (ಮಹಾಪ್ರಳಯ ಉಲ್ಕೋಪಮ ಮತ್ ಗದಾಹತಿಯಿಂ ಅತ್ಯುಗ್ರ ಆಜಿಯೊಳ್ ಮುನ್ನಂ ಈ ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ: **ಪಂಪಭಾ,** ೭. ೧೨); [ನಾ] ಪೊಟ್ಟರೆ (ಪೆರ್ಮರಂಗಳ ಪೋೞ್ಗಳೊಳಗಣಿಂದಂ ಒಗೆದ ಕೇಸುರಿಗಳ ಬಳಗದಂತೆ ಅಟ್ಟೆಗಳಿಂದ ಅಂಬರಂಬರಂ ನೆಗೆದು ಪಾಱುವ ನೆತ್ತರ ಸುಟ್ಟುರೆ: **ಪಂಪಭಾ,** ೧೦. ೭೦ ವ)

ಪೋೞ್ದಿಡು – [ಕ್ರಿ] ಹೋಳು ಮಾಡು (ಮಹಾಪ್ರಳಯೋಲ್ಕೋಪಮ ಮದ್ಗದಾಹತಿಯಿಂ ಅತ್ಯುಗ್ರಾಜಿಯೊಳ್ ಮುನ್ನಮೀ ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ: **ಪಂಪಭಾ,** ೭. ೧೨)

ಪೌಂಡ್ರ – [ನಾ] ಭೀಮನ ಶಂಖ (ಪಗೆವರ ಗಂಟಲನೊತ್ತುವಂತೆ ಪೌಂಡ್ರಮೆಂಬ ಶಂಖಮನೊತ್ತಿ ಮುಂದೊಡ್ಡಿದ ಒಡ್ಡೆಲ್ಲಮಂ ಅಂಬಿನ ಬಂಬಲೊಳೆ ಪಡಲ್ವಡಿಸುತ್ತುಂ: **ಪಂಪಭಾ,** ೧೦. ೯೭ ವ)

ಪೌರಂದರ – [ನಾ] ಇಂದ್ರಾಸ್ತ್ರ (ಎನಗೆ ವಿದ್ಯಾಧರಮೆ ಧನಮಪ್ಪುದಱಿಂ ದಿವ್ಯಾಸ್ತ್ರಂಗಳಂ ದಯೆಗೆಯ್ವುದೆನೆ ವಾರುಣವಾಯವ್ಯಾಗ್ನೇಯ ಪೌರಂದರಾದಿ ಪ್ರಧಾನಾಸ್ತ್ರಂಗಳಂ ಕುಡೆ ಕೊಂಡು: **ಪಂಪಭಾ,** ೨. ೪೬ ವ)

ಪೌರಂಧ್ರೀ – [ನಾ] ಸ್ತ್ರೀ (ಅನೇಕಪ್ರಸಾಧನಪ್ರಯೋಗ ಪ್ರವೀಣೆಯರಪ್ಪ ಅತಿಪ್ರೌಢ ಪುರಂದ್ರಿಯರ್ ನೋಡಿ: **ಆದಿಪು,** ೪. ೪೨ ವ)

ಪೌರವ – [ನಾ] ಪುರುವಿನ ಮಗ, ಭರತ (ಮಾಗಧರಂ ಗೆಲ್ದಂತೆವೊಲಾಗಡೆ ವರತನುವನೊತ್ತಿ ಕಪ್ಪಂಗೊಂಡು ಉದ್ಯೋಗದ ಕಲಿತನಮಂ ಪೊಗೞ್ವಾಗಳ್ ಅವಾಙ್ಮಾನಸಗೋಚರಂ ಪೌರವನಾ: **ಆದಿಪು,** ೧೩. ೩)

ಪೌರವೃದ್ಧ – [ನಾ] ಊರಿನ ಹಿರಿಯ (ಪರಸುವ ಪೌರವೃದ್ಧರ ಕುಲಾಂಗನೆಯರ್ಕಳ ಸಾಧುವಾದದೊಳ್ ಬೆರಸಿ ಸಮಂತು ಸೂಸುವ ಜಲಾರ್ದ್ರಲಸದ್ಧವಳಾಕ್ಷತಂಗಳೊಳ್: **ಪಂಪಭಾ,** ೨. ೯೫)

ಪೌರ್ಣಮಾಸಿ – [ನಾ] ಪೂರ್ಣ ಚಂದ್ರನಿರುವ ದಿನ, ಹುಣ್ಣಿಮೆ (ಅನ್ನೆಗಂ ಆಷಾಢಪೌರ್ಣಮಾಸೀ ವಾಸರ ಸಾಯಂತನ ಸಮಯದೊಳ್: **ಆದಿಪು,** ೬. ೫೧ ವ)

ಪೌಲೋಮ – [ನಾ] ಪುಲೋಮೆಯ ಮಕ್ಕಳು, ಒಂದು ರಾಕ್ಷಸವರ್ಗ (ನಿವಾತಕವಚ ಕಾಳಕೇಯ ಪೌಲೋಮತಳತಾಳುಕರೆಂಬ ಅಱುವತ್ತುಕೋಟಿ ರಕ್ಕಸರೆನಗೆ ಗೆಲ್ದೀಯಲ್ವೇೞ್ಕುಂ: **ಪಂಪಭಾ,** ೮. ೨೭ ವ)

ಪೌವನೆ ಪಾಱು – [ಕ್ರಿ] ಹವ್ವನೆ ಹಾರು (ಸಕಳದಿಗ್ವಳಯಭರಿತ ಮಹಾಸಿಂಹನಾದದಿಂದ ಅಲ್ಲಿಯ ಜಳಚರಂಗಳೆರ್ದೆ ಪೌವನೆ ಪಾಱುವನ್ನೆಗಂ ಆರ್ದು: **ಪಂಪಭಾ,** ೧೩. ೭೬ ವ)

ಪೌಷ್ಟಿಕಕ್ರಿಯೆ – [ನಾ] ಮಂಗಳವರ್ಧನಕ್ಕಾಗಿ ಮಾಡುವ ಕ್ರಿಯೆ (ಉತ್ಪಾತಶಾಂತಿಪೌಷ್ಟಿಕಕ್ರಿಯೆಗಳಂ ಮಹಾಬ್ರಾಹ್ಮಣರಿಂದಂ ಬಳೆಯಿಸಿ ಬದ್ದವಣಮಂ ಬಾಜಿಸಿ ಮಂಗಳಮಂ ಪಾಡಿಸಿ: **ಪಂಪಭಾ,** ೧. ೧೩೩ ವ)

ಪೌಷ್ಯಮಾಸ – [ನಾ] ಪುಷ್ಯಮಾಸ (ಪೌಷ್ಯಮಾಸದ ಪೌರ್ಣಮೀ ದಿನದಂದು ಪಲ್ಯಂಕಾಸನದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ: **ಆದಿಪು,** ೧೬. ೪೦ ವ)

ಪೌಲೋಮೀಪತಿ – [ನಾ] ಶಚೀದೇವಿಯ ಗಂಡ ಇಂದ್ರ (ಪೌಲೋಮೀಪತಿ ತನ್ನ ದಿವ್ಯಜ್ಞಾನದೊಳ್ ನೋಡಿ ಚಕ್ರಿಯುಂ ವಿಕ್ರಮಾರ್ಜುನನುಂ ಅಪ್ಪುದನಱಿದು: **ಪಂಪಭಾ,** ೫. ೯೫ ವ)

ಪ್ರಕಂಪಿತಕರಪಲ್ಲವ – [ನಾ] ಆಡಿಸುವ ಬೆರಳು (ಅಂಜದಿರಿಂ ಎಂದು ತದಭಿಮುಖಪ್ರಕಂಪಿತಕರಪಲ್ಲವದಿಂ ಸಂತಯಿಸಿ: **ಆದಿಪು,** ೮. ೬೨ ವ)

ಪ್ರಕಟ – [ಗು] ಹೊರಬರು, ಹೊರಸೂಸು (ಉದಾರ ಕದಂಬ ಕೇತಕೀಪ್ರಸರ ರಜಸ್ವರ ಪ್ರಕಟ ಪಾಂಸುಳಮಾದುದು ಮೇಘಕಾಲದೊಳ್: **ಪಂಪಭಾ,** ೭. ೨೨)

ಪ್ರಕಟಂ ಮಾಡು – [ಕ್ರಿ] ತೋರಿಸಲು (ನಿಜಭುಜಶಕ್ತಿಯಂ ಪ್ರಕಟಂ ಮಾಡಲೆಂದು ರೇಣುಕಾನಂದನನಲ್ಲಿಗೆ ಪೋಗಿ: **ಪಂಪಭಾ,** ೧. ೧೦೩ ವ)

ಪ್ರಕಟಿಸು – [ಕ್ರಿ] ತೋರ್ಪಡಿಸು (ಸಮ್ಯಗ್ದರ್ಶನಂ .. .. ಕವಲ್ತು ಸಮ್ಯಕ್ಚರಿತ್ರಮಂ ಪ್ರಕಟಿಸುಗುಂ: **ಆದಿಪು,** ೫. ೫೯)

ಪ್ರಕರ – [ನಾ] ಸಮೂಹ (ತ್ವಚ್ಚಂಡದೋರ್ದಂಡಂ ಉಗ್ರಕುರುಕ್ಷ್ಮಾಪ ಮಹೀರುಹಪ್ರಕರಮಂ ಮತ್ತೇಭವಿಕ್ರೀಡಿತಕ್ಕೆ ಕರಂ ಪೋಲ್ವೆಗೆ ವಂದುದು: **ಪಂಪಭಾ,** ೯. ೨೫)

ಪ್ರಕರಣ – [ನಾ] ನಿರ್ಮಾಣಮಾಡಬಲ್ಲವನು (ಅನುಸ್ಮರಣಮಾತ್ರ ನಿಷ್ಪಾದಿತ ಸಪ್ತತಳಾದಿ ಪ್ರಾಸಾದಪ್ರಕರಣನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ: **ಆದಿಪು,** ೧೧. ೩ ವ)

ಪ್ರಕಾಂಡಕ – [ನಾ] ತುದಿಯಿಂದ ಬರಬರುತ್ತ ದಪ್ಪಗೊಳ್ಳುವ ಹಾರ (ಪ್ರತ್ಯೇಕ ಶೀರ್ಷಕ ಉಪಶೀರ್ಷಕ ಅವಘಾಟಕ ಪ್ರಕಾಂಡ ತರಳತರ

ಬಂಧೋಪಪದ ಪಂಚಕಸಮೇತಂಗಳಾಗಿ: **ಆದಿಪು,** ೮. ೫೪ ವ)

ಪ್ರಕೀರ್ಣ – [ಗು] ಕಿಕ್ಕಿರಿದ, ಇಡಿಕಿರಿದ (ಅದರ ಪೊಱವೊಱಲ ವಿಶಾಲ ಕನಕ ಕೃತಕ ಗಿರಿಗಳಿಂ ಫಲಪ್ರಕೀರ್ಣ ತರುಗಳಿಂ: **ಪಂಪಭಾ,** ೧. ೫೮)

ಪ್ರಕೀರ್ಣಕ – [ನಾ] [ಜೈನ] ಒಂದು ನರಕದ ಹೆಸರು (ಆ ಬಿಲಂಗಳುಂ ಇಂದ್ರಕ ಶ್ರೇಢೀಬದ್ಧ ಪ್ರಕೀರ್ಣಕಗಳೆಂದು ಮೂಱುತೆಱನಕ್ಕುಂ: **ಆದಿಪು,** ೫. ೮೩ ವ)

ಪ್ರಕುಪಿತ – [ಗು] ವಿಶೇಷವಾಗಿ ಕೋಪಗೊಂಡ (ಪ್ರಕುಪಿತಮೃಗಪತಿಶಿಶು ಸನ್ನಿಕಾಶರ್ ಅತಿ ವಿಕಟಭ್ರೂಭಂಗರ್ ನಕುಲಸಹದೇವರ್ ಇರ್ವರುಂ ಅಕಾಲಕಾಲಾಗ್ನಿರೂಪಮಂ ಕೆಯ್ಕೊಂಡರ್: **ಪಂಪಭಾ,** ೭. ೮)

ಪ್ರಕೃತಿ – [ನಾ] [ಜೈನ] ಹದಿನಾರು ಕರ್ಮಪ್ರಕೃತಿಗಳು: ನಿದ್ರಾನಿದ್ರಾ, ಪ್ರಚಲಾಪ್ರಚಲಾ, ಸ್ತ್ಯಾನಗೃದ್ಧಿ, ನರಕಗತಿ, ತಿರ್ಯಗ್ಗತಿ, ಏಕೇಂದ್ರಿಯಜಾತಿ, ದ್ವೀಂದ್ರಿಯಜಾತಿ, ತ್ರೀಂದ್ರಿಯಜಾತಿ, ಚತುರಿಂದ್ರಿಯಜಾತಿ, ನರಕಗತಿ ಪ್ರಾಯೋಗಾನುಪೂರ್ವಿ, ತಿರ್ಯಗ್ಗತಿ ಪ್ರಾಯೋಗಾನುಪೂರ್ವಿ, ಆತಪ, ಉದ್ಯೋತ, ಸ್ಥಾವರ, ಸೂಕ್ಷ್ಮ, ಸಾಧಾರಣ (ಎಂಬ ಪದಿನಾಱು ಪ್ರಕೃತಿಗಳುಮಂ ನಿರವಶೇಷಂ ಕಿಡಿಸಿ: **ಆದಿಪು,** ೧೦. ೧೪ ವ); ಸಹಜವಾದ (ಪ್ರಕೃತಿರಕ್ತಜಳಾಸವ ಮತ್ತಯೋಗಿನೀವ್ರಾತ ಪರೀತ ಭೂತಸದನಂ ಕದನಂ: **ಪಂಪಭಾ,** ೧೪. ೩)

ಪ್ರಕೋಪ – [ನಾ] ಬಿರುಗೋಪ (ಚಳತ್ ಭ್ರೂಲತಾಗ್ರವಿಭಾಗೋತ್ಕಟ ತರ್ಜನಂ ತರಳಿತಾತಾಮ್ರಾಧರಂ ಚಕ್ರಿಗಿತ್ತುವು ಅಲಂಪಂ ಪ್ರಣಯಪ್ರಕೋಪ ಸುರತಪ್ರಾರಂಭದೊಳ್ ಕಾಂತೆಯಾ: **ಆದಿಪು,** ೧೨. ೪೭)

ಪ್ರಕೋಷ್ಠ – [ನಾ] ಮೊಳಕೈಯಿಂದ ಮಣಿಕಟ್ಟಿನವರೆಗಿನ ಭಾಗ, ಮುಂಗೈ (ತಟಿದ್ವಳಯವಿಳಸಿತಂಗಳಾಗಿ ನಿಜಪ್ರಕೋಷ್ಠನಿಷ್ಠಿತಂಗಳಪ್ಪ ವೀರಾಂಗದಂಗಳೆಂಬ ಕಟಕಂಗಳುಂ: **ಆದಿಪು,** ೧೫. ೩ ವ)

ಪ್ರಕ್ರಮ – [ನಾ] ವಿಧಾನ, ಕ್ರಮ (ಜನ್ಮೋತ್ಸವಪ್ರಕ್ರಮಮೆಂದು ಆನಂದನೃತ್ಯಪ್ರಮದಮನಧಿಕಂ ಮಾಡಿ ತನ್ನಿಂದ್ರಲೋಕಕ್ಕೆ ಅಮರೇಂದ್ರಂ ಪೋದಂ: **ಆದಿಪು,** ೭. ೧೨೮)

ಪ್ರಕ್ಷಾಳನಂಗೆಯ್ – [ಕ್ರಿ] ತೊಳೆದುಕೊ (ಪರಾಕ್ರಮಧವಳಂ ಒಯ್ಯನೆ ಕೊಂಡು ಬಾಣಧಿಯೊಳಿಟ್ಟು ಪೋಗಿ ಪೂಗೊಳದೊಳ್ ಕರಚರಣಪ್ರಕ್ಷಾಳನಂಗೆಯ್ದು: **ಪಂಪಭಾ,** ೮. ೧೬ ವ)

ಪ್ರಕ್ಷಾಳಿತ – [ನಾ] ತೊಯ್ದ[ವನು] (ಅಚಳಿತಪಕ್ಷ್ಮವಿಸರನುಂ ಅಕಂಪಿತಭ್ರೂವಿಭ್ರಮನುಂ ಪ್ರಕಟಿತ ಚಿತ್ತವಿಭ್ರಮನುಂ ಅತಿಪ್ರಬಳಸ್ವೇದಪ್ರಕ್ಷಾಳಿತನುಂ: **ಆದಿಪು,** ೪. ೧೩ ವ)

ಪ್ರಗಣಿತ – [ನಾ] ಅತಿಶಯತೆ, ಸೇರುವಿಕೆ (ಕನಕಕಾಂಚೀನಿನದನಿನದ ಪ್ರಗಣಿತಮಗಲ್ದ ನಲ್ಲಳ ಜಗನಮಿದೆನ್ನೆರ್ದೆಯನೆಂತು ಪೊಕ್ಕಳಿಪುವುದೋ: **ಪಂಪಭಾ,** ೪. ೭೩)

ಪ್ರಗಲ್ಭ – [ನಾ] ಪ್ರವೀಣ (ನೆಗಟ್ದಿರೆ ಪುಣ್ಯಾಹಸ್ವರಂ ಒಗೆದಿರೆ ಪಟುಪಟಹಕಾಹಳರವಾಗಳ್ ಪುಗವೇಟ್ದಿಂ ವಿವಿಧಾಸ್ತ್ರ ಪ್ರಗಲ್ಭರಂ ತನ್ನ ಚಟ್ಟರಂ ಕಳಶಭವಂ: **ಪಂಪಭಾ,** ೨. ೬೯)

ಪ್ರಗೀತ – [ಗು] ಪ್ರಸಿದ್ಧವಾದ (ಅರಸಿಯರಂ ಅಣುಗರಂ ಬೇಟ್ಟಿರುಮಂ ಮೊನೆಗಾಱರಂ ಪ್ರಗೀತರಂ ಇಂಬಾಗಿರೆ ಚೌಪಳಿಗೆಗಳೊಳ್ ಕುಳ್ಳಿರಿಸಿದರ್ ಒಡನೆಸೆಯೆ ನೆರೆದ ಪುರಜನಸಹಿತಂ: **ಪಂಪಭಾ,** ೨. ೬೭)

ಪ್ರಗುಣೀಕೃತ – [ಗು] ಶ್ರೇಷ್ಠವಾದ (ಭಗವತ್ ಪರಿನಿಷ್ಕ್ರಮಣ ಪ್ರಗುಣೀಕೃತ ಸುರಮ್ಯದಂಗರವಮೊಂದೆಡೆಯೊಳ್ ನೆಗಟ್ದುದು: **ಆದಿಪು,** ೯. ೬೬)

ಪ್ರಘಟ್ಟ – [ನಾ] ಸಮಾರಂಭ (ಅನಿತೊಂದು ಮಹಾಪ್ರಘಟ್ಟದೊಳ್ ಅಗ್ರಪೂಜೆಯಂ ನಾರಾಯಣಂಗೆ ಕೊಟ್ಟು ಅವಭೃಥಸ್ನಾನದೊಳ್ ಪಿರಿದುಮೊಸಗೆಯಂ ಮಾಡಿ: **ಪಂಪಭಾ,** ೬. ೬೫ ವ)

ಪ್ರಘಟ್ಟಕ – [ನಾ] ಸಮಾರಂಭ, ಘಟನೆ (ಇನಿತೊಂದು ಉಗ್ರ ರಣಪ್ರಘಟ್ಟಕದೊಳ್ ಈ ಭಾರಾವತಾರಂ ಧರಾಂಗನೆಗೆ ಈ ಇರ್ವರಿಂ ಆದುದು: **ಪಂಪಭಾ,** ೧೪. ೧೧)

ಪ್ರಚಂಡ – [ಗು] ತೀಕ್ಷ್ಣವಾದ (ಮತ್ತ ಮಾತಂಗ ಪದನಖ ಖರ್ವಿತ ಉರ್ವೀತಳಮುಂ ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಧತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ,** ೧೩. ೫೧ ವ);

ಪ್ರಚಂಡ ಮಾರ್ತಾಂಡ – [ನಾ] ತೀಕ್ಷ್ಣನಾದ ಸೂರ್ಯ (ಎಸೆವ ಪ್ರಚಂಡ ಮಾರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ: **ಪಂಪಭಾ,** ೧. ೩); ['ಪ್ರಚಂಡ ಮಾರ್ತಾಂಡ' ಎಂಬುದು ಅರಿಕೇಸರಿಯ ಬಿರುದು]

ಪ್ರಚಂಡಲಯ – [ಗು] ಅತಿ ವೇಗವಾದ ತಾಳಗತಿಯುಳ್ಳ (ಪ್ರಚಂಡಲಯ ತಾಂಡವಕ್ಷುಭಿತಯಾ ಯಸ್ಯಾನಯಾ: **ಪಂಪಭಾ,** ೪. ೨೭)

ಪ್ರಚಯ – [ನಾ] ಸಮೂಹ (ಕೌರವಕುಲ ಹಿಮಕರ ಆವಿಲಪ್ರಚಯ ವರ್ಷವಾರಿದನಪ್ಪ ಪವನತನಯಂ ಬದ್ಧವಪುವಾಗಿ: **ಪಂಪಭಾ,** ೧೨. ೧೪೪ ವ)

ಪ್ರಚಳಿತ – [ಗು] ನಡೆಯುತ್ತಿರುವ (ಸಸಂಭ್ರಮಪ್ರಚಳಿತ ಸಮದ ಗಜಘಟಾಘಂಟಾರವಂಗಳಿಂದಂ .. .. ಅಗುರ್ವಾಗೆ: **ಪಂಪಭಾ,** ೯. ೧೦೪ ವ)

ಪ್ರಚಾರ – [ನಾ] ಬೀಸುವಿಕೆ (ಸುರತೂರ್ಯಧ್ವಾನಂ ಎಯ್ದುರ್ಪಲರ ಸರಿ ಪೊದಳ್ದಿರ್ದ ರೈಧಾರೆ ದೇವೇಂದ್ರರ ಅಹೋದಾನ ಪ್ರಸಿದ್ಧಧ್ವನಿ ಸುರಭಿಸಮೀರಪ್ರಚಾರಂ ಜಗಕ್ಕಚ್ಚರಿ ಪಂಚಾಶ್ಚರ್ಯಂ: **ಆದಿಪು,** ೪. ೯೮)

ಪ್ರಚುರ – [ಗು] ತುಂಬಿದ (ಅಂತು ನಾಭಿರಾಜಂ ಅನುನಯಪ್ರಚುರ ವಚನರಚನೆಗಳಿಂ ಅಂತಃಕರಣಾನುರಾಗಮಂ ಮಾಡೆಯುಂ: **ಆದಿಪು,** ೭. ೩೫ ವ)

ಪ್ರಚ್ಛದ – [ನಾ] ಹಚ್ಚಡ, ಹೊದಿಕೆ, ಮಗ್ಗುಲು ಹಾಸಿಗೆ (ತನ್ನ ಚೆಂಬೊನ್ನ ಕನ್ನೆಮಾಡದ ಓವರಿಯೊಳಗೆ ಗಂಗಾತರಙ್ಗಧವಳದುಕೂಲ ಪ್ರಚ್ಛದಾಚ್ಛಾದಿತ ಮೃದುತಳ್ಪದೊಳ್: **ಆದಿಪು,** ೩. ೨೧ ವ)

ಪ್ರಜಾಪತಿ – [ನಾ] ಪ್ರಜೆಗಳ ಒಡೆಯ, ರಾಜ (ತದನಂತರಂ ಪ್ರಜಾಪತಿಯುಂ ಪ್ರಜೋಪಜೀವನನಿಮಿತ್ತಮಾಗೆ ಸೇವಾಧರ್ಮೋಚಿತಮೆನಿಸುವ: **ಆದಿಪು,** ೮. ೬೪ ವ)

ಪ್ರಜಾಪತಿತ್ವ – **[ನಾ]** ರಾಜತ್ವ (ನಿಜಮಕುಟಮಣಿಮರೀಚಿಯಿಂ ಅಜನ ಪದಾಂಬುಜದ ಕೆಂಪನಿರ್ಮಡಿಸಿ ಕುಲಧ್ವಜ ಬೆಸಸು ನಿನ್ನವೊಲೀ ಪ್ರಜಾಪತಿತ್ವಕ್ಕೆ ಮುನ್ನ ನೋಂತರುಮೊಳರೇ: **ಆದಿಪು**, ೮. ೬೩)

ಪ್ರಜಾಪಾಲನ – **[ನಾ]** ಪ್ರಜೆಗಳನ್ನು ರಕ್ಷಿಸುವಿಕೆ (ಕ್ಷತ್ರಿಯಜಾತಿಗೆ ಸತ್ಯ ತ್ಯಾಗ ಪ್ರಜಾಪಾಲನ ಶರಣಾಗತರಕ್ಷಣ ಪ್ರಹರಣ ಕ್ಷಮಾಗುಣಾಚರಣಮುಮಂ .. .. ನಿಜೆಸಿ: **ಆದಿಪು,** ೮. ೬೩ ವ)

ಪ್ರಜಾಸಂಬಂಧಾಂತರ – **[ನಾ]** [ಜೈನ] ಅತಿಬಾಲವಿದ್ಯಾ, ಕುಲಾವಧಿ, ವರ್ಣೋತ್ತಮತ್ವ, ಪಾತ್ರತ್ವ, ಸೃಷ್ಟ್ಯಧಿಕಾರ, ವ್ಯವಹಾರೇಶಿತ್ವ, ಅವಧ್ಯತ್ವ, ಅದಂಡ್ಯತ್ವ, ಮಾನಾರ್ಹತ್ವ, ಪ್ರಜಾಸಂಬಂಧಾಂತರ ಎಂಬ ಜೈನಬ್ರಾಹ್ಮಣನ ಹತ್ತು ಅಧಿಕಾರಗಳು (ಅತಿಬಾಲವಿದ್ಯಾ .. .. ಪ್ರಜಾಸಂಬಂಧಾಂತರಮೆಂಬ ಪತ್ತುಂ ಅಧಿಕಾರಗಳುಮನರ್ಜಿಪಿ: **ಆದಿಪು,** ೧೫. ೧೬ ವ)

ಪ್ರಜ್ಞಪ್ತಿವಿದ್ಯೆ – **[ನಾ]** [ಜೈನ} ಒಂದು ಬಗೆಯ ವಿದ್ಯೆ (ಅವರ್ಗೆ ಪ್ರಜ್ಞಪ್ತಿವಿದ್ಯೆ ಮೊದಲಾಗಿ ಕುಲಜಾತಿಸಾಧಿತವಿದ್ಯೆಗಳ್ ಪಲವುಂ ಬೆಸಕೆಯ್ವುವು: **ಆದಿಪು**, ೯. ೧೨೧ ವ)

ಪ್ರಣತಾರಿ – **[ನಾ]** [ಪ್ರಣತ+ಅರೀ] ಬಾಗಿದ ಶತ್ರುಗಳುಳ್ಳವನು (ಈ ಒಳ್ಗುಣಮುಂ ಕಲಿತನಮುಂ ಇವೇಂ ಪ್ರಣತಾರೀ ಸೂತಸುತನೊಳೊಡವುಟ್ಟುಗುಮೇ: **ಪಂಪಭಾ,** ೧೨. ೯೮)

ಪ್ರಣತಿ – **[ನಾ]** ಬಾಗುವಿಕೆ, ನಮಸ್ಕಾರ (ಅದಱಿಂದಮಿವಱಿಳ್ ಅರ್ಹತ್ವದಪದ್ಮಪ್ರಣತಿ ಮುಖ್ಯಮೊಸಗೆಯುಂ ಎಮಗೆ ಇನ್ನಿದಱಿಂದಮಿಲ್ಲಿ ಮೇಲಾವುದು: **ಆದಿಪು,** ೧೦. ೫೧)

ಪ್ರಣಯ – **[ನಾ]** ಬೇಟ, ಸುರತ (ಚಳತ್ ಭ್ರೂಲತಾಗ್ರವಿಭಾಗೋತ್ಕಟ ತರ್ಜನಂ ತರಳಿತಾತಾಮ್ರಾಧರಂ ಚಕ್ರಿಗಿತ್ತುವು ಅಲಂಪಂ ಪ್ರಣಯಪ್ರಕೋಪ ಸುರತಪ್ರಾರಂಭದೊಳ್ ಕಾಂತೆಯಾ: **ಆದಿಪು,** ೧೨. ೪೭)

ಪ್ರಣಾದ – **[ನಾ]** ದೊಡ್ಡ ಶಬ್ದ, ಕೂಗು (ಘನಪಥಮಂ ಪಳಂಚಲೆವ ಸೌಧಚಯಂಗಳಿಂ ಆಡುತಿರ್ಪ ಕೇತನತತಿಯಿಂ ಕರೀಂದ್ರ ಗಳ ಗರ್ಜನೆಯಿಂ ಪಟಹಪ್ರಣಾದಮಂ ಘನರವಮೆಂದೆ ನರ್ತಿಸುವ ಕೇಕಿಗಳಿಂ: **ಪಂಪಭಾ**, ೪. ೫)

ಪ್ರಣಾಳ – **[ನಾ]** ಕಾಲುವೆ (ವಿಕಚಧವಳಕಮಳದಳ ದೀರ್ಘ ವಿಲೋಚನಂಗಳಂ ಲಾವಣ್ಯರಸಪ್ರವಾಹಕ್ಕಾಯತ ಪ್ರಣಾಳಂಗಳಂ ಪೋಲ್ತು ಗರ್ಭಂ ಬಳೆಯೆ: **ಆದಿಪು,** ೭. ೩೦ ವ)

ಪ್ರಣಾಮ – **[ನಾ]** ನಮಸ್ಕಾರ (ವಿವೇಕಮೂಕರ್ ಮೂರ್ಖರ್ ಎಮ್ಮಂದಿಗರ್ ಪ್ರಣಾಮದೊಳೆ ಪುಣ್ಯಮಂ ಪಡೆವರಾದಿತೀರ್ಥೇಶ್ವರಾ: **ಆದಿಪು**, ೧೩. ೯೦)

ಪ್ರಣಾಳಿಕೆ – **[ನಾ]** [ಜೈನ] ಕಾಲುವೆ (ಶುಭಾಶುಭಪರಿಣಾಮ ಪ್ರಣಾಳಿಕೆಯಿಂ ಬರ್ಪ ಕರ್ಮಮಂ ಬರಲೀಯದೆ ಗುಪ್ತ್ಯಾದಿಗಳಿಂ ತಗುಳ್ವುದು ಸಂವರೆಯೆಂಬುದು: **ಆದಿಪು,** ೧೦. ೬೩ ವ)

ಪ್ರಣೀತ – **[ಗು]** ರಚಿತವಾದ (ಪರಮಜಿನೇಂದ್ರಮುಖಚಂದ್ರ ವಾಕ್ಚಂದ್ರಿಕಾ ಪ್ರಸರಪ್ರಸಾದೋದೀರ್ಣ ಸೂಕ್ತಿಕಲ್ಲೋಲ ಮಾಲಾಕೀರ್ಣ ಕವಿತಾಗುಣಾರ್ಣವಪ್ರಣೀತಮಪ್ಪ ಆದಿಪುರಾಣದೊಳ್: **ಆದಿಪು,** ೧. ಆಶ್ವಾಸಾಂತ್ಯ ಗದ್ಯ); **[ಗು]** ನಿರ್ದೇಶಿಸಿದ (ನಾರದಾದಿ ಪ್ರಣೀತ ಗಾಂಧರ್ವವಿದ್ಯಾ ವಿಶೇಷಂಗಳೊಳಂ ಭರತಪ್ರಣೀತ ನೃತ್ಯಶಾಸ್ತ್ರದೊಳಂ .. .. ಅತಿಪ್ರವೀಣನುಂ: **ಪಂಪಭಾ,** ೨. ೩೪ ವ)

ಪ್ರಣುತ – **[ಗು]** ಸ್ತುತ್ಯನಾದವನು (ಅಮೂರ್ತರ್ ಚರಮತನು ಸಮಾಕಾರರ್ ಉದ್ಧೂತಲೇಪರ್ ಪ್ರಣುತರ್ .. .. ಸ್ವಕೀಯಪ್ರಭುತೆಯನೆಮಗಂ ಮಾಟಿಕ್ಕೆ ಅತಿಪ್ರೀತಿಯಿಂದಂ: **ಆದಿಪು**, ೧. ೨)

ಪ್ರಣೂತ – **[ಗು]** ಹೊಗಳಲ್ಪಟ್ಟ, ಪ್ರಸಿದ್ಧವಾದ (ವ್ಯಾಸಮುನಿಪ್ರಣೂತ ಕೃತಿಯಂ ಸಲೆ ಪೇೞ್ದು ಪೊದಳ್ದ ಸತ್ಕವಿ ವ್ಯಾಸಸಮಾಗಮಾನ್ವಿತನುಂ: **ಪಂಪಭಾ,** ೧೪. ೬೨)

ಪ್ರತತಿ – **[ನಾ]** ಸಮೂಹ, ಗುಂಪು (ಪ್ರತಿಮೆಗಳಟ್ಟು ಮೊಟಿಗಿದುದತಿರಭಸದೆ ಧಾತ್ರಿ ದೆಸೆಗಳುದುರಿದುವು ಭೂತಪ್ರತತಿಗಳಾಡಿದುವು: **ಪಂಪಭಾ,** ೧. ೧೩೩)

ಪ್ರತರಕ್ರಿಯಾ – **[ನಾ]** [ಜೈನ] ಪರಿನಿರ್ವಾಣ ಸಮಯದಲ್ಲಿ ಆತ್ಮನು ವಿಸ್ತಾರಗೊಳ್ಳುವ ಸ್ಥಿತಿ (ತದನಂತರಸಮಯದೊಳ್ ವಾತವಳಯಮುಟಿಯೆ ಜೀವಪ್ರದೇಶಂಗಳಿಂ ಲೋಕಪ್ರದೇಶಮಂ ಪರ್ವಿ ನಿರ್ವರ್ತಿತ ಪ್ರತರಕ್ರಿಯಾ ವಿಶೇಷಂ: **ಆದಿಪು**, ೧೬. ೪೯ ವ)

ಪ್ರತಾನ – **[ನಾ]** ಸಮೂಹ, ಪರಂಪರೆ (ಭಯಂಕರಮಲ್ತೇ ತಿರ್ಯಗ್ಗತಿ ದುರಂತ ದುಃಖಪ್ರತಾನಮಂ ಬಗೆವಾಗಳ್: **ಆದಿಪು**, ೯. ೪೭)

ಪ್ರತಾಪ – **[ನಾ]** ಶೌರ್ಯ (ಅತರ್ಕ್ಯಂ ವಿಕ್ರಾಂತಂ ಭುಜಬಲಮಸಾಮಾನ್ಯಂ ಅಧಿಕಂ ಪ್ರತಾಪಂ ಪೋಗೀತಂಗೆಣೆಯೆ: **ಪಂಪಭಾ,** ೧. ೮೦)

ಪ್ರತಾಪೋಷ್ಮ – **[ನಾ]** [ಪ್ರತಾಪ+ಊಷ್ಮ] ಶೌರ್ಯಪ್ರಖರತೆ (ಕುಲಕ್ರಮಾಯಾತಪ್ರತಾಪೋಷ್ಮಮಂ ಪತ್ತುವಿಡುವುಡುವ ಅರಾತಿಗಳ ಸಂಖ್ಯೆಯೊಳಂ: **ಆದಿಪು,** ೧೪. ೮೪ ವ)

ಪ್ರತಿಕೂಲ – **[ನಾ]** ಅನುಕೂಲಕರವಲ್ಲದ (ಮಗನೆ ನಿನಗಪ್ಪೊಡೆ ದೆಯ್ವಂ ಪ್ರತಿಕೂಲಂ ಎಂತುಂ ಕಾದಿ ಗೆಲಲಾರ್ಪೆಯಲ್ಲೆ: **ಪಂಪಭಾ**, ೧೩. ೬೫ ವ)

ಪ್ರತಿಕೃತಿ – **[ನಾ]** ಮೂರ್ತಿ, ಪ್ರತಿಮೆ (ಚೈತ್ಯಾಲಯಂಗಳೊಳ್ ಆದಿಭಟ್ಟಾರಕಾದಿಯಾಗೆ ಭವಿಷ್ಯತೀರ್ಥಕರ ಪ್ರತಿಕೃತಿಗಳಂ ಪಂಚರತ್ನಮಯಂಗಳಂ ಮಾಡಿಸಿ: **ಆದಿಪು**, ೧೬. ೧ ವ)

ಪ್ರತಿಗ್ರಹ – **[ನಾ]** ದಾನ ಸ್ವೀಕರಿಸುವುದು (ಅಂತು ಭವಿಷ್ಯದ್ದ್ವಿಜವರ್ಣಕ್ಕೆ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ .. .. ನಿಜೆಸಿ: **ಆದಿಪು,** ೮. ೬೩ ವ); **[ನಾ]** ಗೌರವಪೂರ್ವಕವಾಗಿ ಬರಮಾಡಿಕೊಳ್ಳುವುದು (ಪರಮತಪಶ್ಚರಣನಿರತ ಯತಿಸಮಿತಿಗೆಲ್ಲಂ ಪ್ರತಿಗ್ರಹಾದಿ ಪುರಸ್ಸರಂ ನಿರವದ್ಯಾಹಾರಾದಿ ವಿತರಣರೂಪ ಪಾತ್ರದತ್ತಿಯುಂ: **ಆದಿಪು**, ೧೫. ೧೩ ವ); **[ನಾ]** ಇವು ವೈದಿಕ ಬ್ರಾಹ್ಮಣನ ಷಟ್ಕರ್ಮಗಳು; ಪುರುದೇವನ ಇವನ್ನು ನಿಯೋಜಿಸಿದನೆಂದು ಪಂಪ ಇದನ್ನೇಕೆ ಹೇಳುತ್ತಿದ್ದಾನೋ ತಿಳಿಯದು; ಮುಂದೆ, ಭರತನು ತಾನು ಸೃಷ್ಟಿಸಿದ ದ್ವಿಜವರ್ಣಕ್ಕೆ ನಿಗದಿಪಡಿಸಿದ ಆರು ಕರ್ಮಗಳು: ಸ್ವಾಧ್ಯಾಯ, ಸಂಯಮ, ತಪ, ಇಜ್ಯಾ, ವಾರ್ತಾ, ದತ್ತಿ (ಪಂಚಾಣುವ್ರತ .. .. ಆರ್ಯಷಟ್ಕರ್ಮಂಗಳುಂ ನಿಮಗಿವು ಕುಲಾಚಾರಂಗಳ್: **ಆದಿಪು,** ೧೩. ೧೬ ವ)

ಪ್ರತಿಜ್ಞಾಗಾಂಗೇಯ – [ನಾ] ಪ್ರತಿಜ್ಞೆ ಮಾಡಿದ ಭೀಷ್ಮ (ದಿವಿಜರ್ ವಾಯುಪಥದೊಳ್ ಶಿತಾಸ್ತ್ರಂಗಳಂ ಪೊಂಕಂಗಿಡಿಸೆ ಸುಗಿದಂ ಭಾರ್ಗವಂ ಇದೇಂ ಪ್ರತಿಜ್ಞಾಗಾಂಗೇಯಂಗೆ ಅದಿರದಿದಿರ್ ನಿಲ್ವನ್ನರೊಳರೇ: **ಪಂಪಭಾ,** ೧. ೮೦) [**'**ಪ್ರತಿಜ್ಞಾಗಾಂಗೇಯ' ಎಂಬುದು ಪಂಪನ ಆಶ್ರಯದಾತ ಅರಿಕೇಸರಿಯ ಬಿರುದು]

ಪ್ರತಿಜ್ಞಾರೂಢ – [ನಾ] [ಪ್ರತಿಜ್ಞಾ+ಆರೂಢ] ಪ್ರತಿಜ್ಞೆಯನ್ನು ಹೊಂದಿದ (ಅಂತು ಅಚಲಿತಪ್ರತಿಜ್ಞಾರೂಢನಾದ ಗಾಂಗೇಯನಂ ಏಗೆಯ್ದುಮೊಡಂಬಡಿಸಲಾಱದೆ: **ಪಂಪಭಾ,** ೧. ೮೪ ವ)

ಪ್ರತಿಪಕ್ಷ – [ನಾ] ಶತ್ರುಪಕ್ಷ (ದಕ್ಷಿಣಭುಜಮಚಿರಪ್ರತಿಪಕ್ಷ ಮಹೀಪಾಲ ವಿಜಯಲಕ್ಷ್ಮೀಲಲನಾವಕ್ಷೋಜಸ್ಪರ್ಶನಮನಂ: **ಆದಿಪು,** ೧೧. ೧೧)

ಪ್ರತಿಪತ್ತಿ – [ನಾ] ಗೌರವ ಕಾಣಿಕೆ (ಬಂದ ವಿದ್ಯಾಧರರಂ ಯಥೋಚಿತ ಪ್ರತಿಪತ್ತಿಗಳಿಂ ಸಂತೋಷಂಬಡಿಸಿ: **ಆದಿಪು,** ೪. ೮೯ ವ)

ಪ್ರತಿಪದ್ದಿನ – [ನಾ] [ಪ್ರತಿಪತ್+ದಿನ] ಪಾಡ್ಯದ ದಿನ (ವಿತತಾಷಾಢದ ಬಹುಳ ಪ್ರತಿಪದ್ದಿನದಂದು ಕೀರ್ತಿ ನೆಗಟ್ದಿರೆ ಭಗವತ್ಕೃತಯುಗಮಾದುದರಿಂದಂ ಕೃತಯುಗಮೆಂಬರ್ ಪುರಾಣವಿದರಿದನೀಗಳ್: **ಆದಿಪು,** ೮. ೬೬)

ಪ್ರತಿಪಾದುಕ – [ನಾ] ಸಣ್ಣ ಪೀಠ (ಅನೇಕರತ್ನರಚಿತ ಪ್ರತಿಪಾದುಕವಿನ್ಯಸ್ತ ಕಾಂಚನಮಂಚೋಪಶೋಭಿತದೊಳ್ .. .. ನಿದ್ರಾರಸವಶಗತರಾಗಿರ್ದರ್: **ಆದಿಪು,** ೫. ೨೨ ವ)

ಪ್ರತಿಪೂರಿತ – [ಗು] ತುಂಬಿಹೋದ (ಧ್ವನತ್ತೂರ್ಯಸಂತತಿ ನಾದಪ್ರತಿಪೂರಿತ ಅಖಿಳಕುಳಕ್ಷೋಣೀಧ್ರಕುಂಜಂ: **ಆದಿಪು,** ೭. ೩೮)

ಪ್ರತಿಬದ್ಧ – [ಗು] ಸೇರಿದ, ಕೂಡಿಕೊಂಡಿರುವ (ಪೂರ್ವವಿದೇಹದ ವತ್ಸಕಾವತೀವಿಷಯದ ಪ್ರತಿಬದ್ಧ ಪ್ರಭಾಕರೀಪುರಿಯೊಳ್: **ಆದಿಪು,** ೩. ೫೮ ವ)

ಪ್ರತಿಬೋಧಿಸು – [ಕ್ರಿ] ಎಚ್ಚರಿಸು (ಎಂದು ತನ್ನಂ ಪ್ರತಿಬೋಧಿಸಿದ ನಿಜತನೂಜನ ವಚನತಿಗ್ಮರೋಚಿ ರುಚಿನಿಚಯದಿಂ ಆತ್ಮೀಯ ಚೇತೋನಿಚಿತ ಮೋಹಾಂಧ ತಮಸ್ತೋಮಮಂ ಕಳೆದು: **ಆದಿಪು,** ೨. ೧೭ ವ); **[ಕ್ರಿ]** ತಿಳಿಸು (ಎಂದವರ್ ಪ್ರತಿಬೋಧಿಸಿ ಪೋಗಲೊಡಂ ಪರಿನಿಷ್ಕ್ರಮಣಕಲ್ಯಾಣೋತ್ಸವ ಉತ್ಸುಕರಾಗಿರಲ್: **ಆದಿಪು,** ೯. ೬೩ ವ)

ಪ್ರತಿಮ – [ನಾ] ಸಮಾನ (ಮಹಾಶುಕ್ರಕ್ಕೆ ಸಂದು ಈತಂ ಇಂದ್ರಂ ಇವಂ ತತ್ ಪ್ರತಿಮಂ ಪ್ರತೀಂದ್ರನೆನೆ ಸಂದು: **ಆದಿಪು,** ೩. ೭೬)

ಪ್ರತಿಮಾಯೋಗ – [ನಾ] [ಜೈನ] ಒಂದೇ ಸ್ಥಳದಲ್ಲಿದ್ದು ತಪಸ್ಸನ್ನಾಚರಿಸುವುದು (ತದನುಮತದೊಳ್ ಬೞಿಯಂ ಏಕವಿಹಾರಿಯಾಗಿ ಸಂವತ್ಸರಾವಧಿವರಂ ಪ್ರತಿಮಾಯೋಗದೊಳ್ ನಿಲೆ: **ಆದಿಪು,** ೧೪. ೧೩೯ ವ)

ಪ್ರತಿಮೆ – [ನಾ] ವಿಗ್ರಹ, ಬೊಂಬೆ (ಪ್ರತಿಮೆಗಳಟ್ಟು ಮೊೞಗಿದುದು ಅತಿರಭಸದೆ ಧಾತ್ರಿ ದೆಸೆಗಳುರಿದುವು ಭೂತಪ್ರತತಿಗಳಾಡಿದುವು ಒಳಱಿದವು ಅತಿ ರಮ್ಯಸ್ಥಾನದೊಳ್ ಶಿವಾನಿವಹಂಗಳ್: **ಪಂಪಭಾ,** ೧. ೧೩೨)

ಪ್ರತಿವಾಸುದೇವ – ತ್ರಿಷಷ್ಟಿಶಲಾಕಾಪುರುಷರಲ್ಲಿನ ಒಂಬತ್ತು ಮಂದಿಯ ಒಂದು ವರ್ಗ, ಇವರಿಗೆ ಪ್ರತಿನಾರಾಯಣರು ಪ್ರತಿಕೇಶವರು ಎಂಬ ಹೆಸರುಗಳೂ ಇವೆ (ತನ್ನಿವಾಸಿಗಳ ದೇಹಾಯುಃಪ್ರಮಾಣಂಗಳುಮಂ ಸುಖದುಃಖಾದಿಗಳುಮಂ ತೀರ್ಥಕರ ಚಕ್ರಧರ ಬಲದೇವ ವಾಸುದೇವ ಪ್ರತಿವಾಸುದೇವ ಕಥಾಸಂಬಂಧಮುಂ ನಿರ್ಣಯಂ ಮಾಡಿದಾಗಳ್: **ಆದಿಪು,** ೧೦. ೬೩ ವ)

ಪ್ರತಿಷೇಧ – [ನಾ] ತಡೆ (ಕುರುಪಿತಾಮಹಂ ಸಂಜಯನಂ ಧೃತರಾಷ್ಟ್ರನಲ್ಲಿಗೆ ಸಂಧಾನವಾರ್ತೆಯಂ ಸಮಕೊಳಿಸುವಂತೆ ಅನಾಗತಬಾಧಾಪ್ರತಿಷೇಧಂ ಮಾಡುವಂತಟ್ಟಿ: **ಪಂಪಭಾ,** ೧೩. ೭೦ ವ)

ಪ್ರತಿಷ್ಠಿತ – [ಗು] ಸ್ಥಾಪನೆಗೊಂಡ (ಆ ಜಂಬೂದ್ವೀಪದ ನಟ್ಟನಡುವೆ .. .. ವಿಶಾಲರತ್ನಶಿಲಾಪ್ರತಿಷ್ಠಿತ ಭಗ್ವಜ್ಜನ್ಮಾಭಿಷೇಕ ಸಿಂಹಾಸನಾಲಂಕೃತಮುಂ ಆಗಿ: **ಆದಿಪು,** ೧. ೪೯ ವ); **[ಗು]** ಕುಳಿತಿರುವ (ವಿವಿಧಾಯುಧಪೂರ್ಣಂಗಳ್ ಪ್ರವೀರಪುರುಷಪ್ರತತಿ ಪ್ರತಿಷ್ಠಿತಂಗಳ್ ಚೇತೋಜವಹರಿ ಯೋಗ್ಯಂಗಳ್ ತಳರ್ದುದು ಆಗಳ್ ಎಂಬತ್ತನಾಲ್ಕು ಲಕ್ಕೆ ರಥಂಗಳ್: **ಆದಿಪು,** ೧೧. ೩೨)

ಪ್ರತಿಸಮಯಂ – [ನಾ] ಸದಾ ಕಾಲವೂ (ಪ್ರತಿಸಮಯಂ ಅನಂತ ಗುಣಶಕ್ತಿಖಚಿತೈಕಪರಿಣಾಮನಿವೃತ್ತಿಕರಣಕ್ಷಪಕನಾಗಿ: **ಆದಿಪು,** ೧೦. ೧೪ ವ)

ಪ್ರತಿಹತ – [ನಾ] ಉಡುಗಿಸಿದ (ಹತವೈರಿಕ್ಷತ್ರಚಕ್ರಂ ಭಯಚಕಿತ ಜಗದ್ವೀರಚಕ್ರಂ ವಿನಮ್ರಕ್ಷಿತಿಚಕ್ರಂ ದೀಪದೀಪ್ತಿ ಪ್ರತಿಹತ ದಿನಕೃಚ್ಚಕ್ರತೀವ್ರಾಂಶುಚಕ್ರಂ: **ಆದಿಪು,** ೧೪. ೩)

ಪ್ರತೀಂದ್ರ – [ನಾ] [ಜೈನ] ಇಂದ್ರನಂತೆಯೇ ಆಯುಷ್ಯ, ಐಶ್ವರ್ಯ, ಪರಿವಾರ, ಆಜ್ಞೆ ಮುಂತಾದವುಗಳಿರುವ ದೇವರು (ಅಲ್ಲಿ ನಾಲ್ವರುಂ ಸಹಾಯರಪ್ಪ ಸಾಮಾನಿಕದೇವರುಂ ತತ್ ಪ್ರತೀಂದ್ರನುಂ ಬೆರಸು ಅಚ್ಯುತೇಂದ್ರಂ: **ಆದಿಪು,** ೬. ೧೩ ವ)

ಪ್ರತೀಕಾರ – [ನಾ] ನಿವಾರಣೆ (ಪಿರಿದುಮನುರಾಗದಿಂದಂ ಎನ್ನ ಬರೆದ ಪಟಮನಿದನರ್ಚಿಸಿ ಕನ್ಯಾಬ್ರತದೊಳೆ ಕಾಲಮಂ ಕೞಿಪುವೆಂ ಇದಲ್ಲದೆ ಇಲ್ಲಿಗೆ ಪೆಱತೊಂದು ಪ್ರತೀಕಾರಮಿಲ್ಲ: **ಆದಿಪು,** ೩. ೪೩ ವ)

ಪ್ರತೀಕ್ಷಣ – [ನಾ] ಎದುರು ನೋಡುವುದು (ಅತಿಪುರಸ್ಸರಂ ಇದಿರ್ಗೊಂಡು ತತ್ಕ್ರಿಯಾಪರಿಸಮಾಪ್ತಿಪ್ರತೀಕ್ಷಣಪರನವರಂ ಗುರುಭಕ್ತಿಪೂರ್ವಕಂ ಬಂದಿಸಿ: **ಆದಿಪು,** ೨. ೩೩ ವ)

ಪ್ರತೀತ – [ಗು] ಪ್ರಸಿದ್ಧವಾದ (ಆಚಂದ್ರಾರ್ಕಪ್ರತೀತ ಉಭಯಗಿರಿಶಿಖರಾತ್ ಸ್ವೋದಯಸ್ಯೈಕಹೇತೋಃ: **ಪಂಪಭಾ,** ೧೪. ೨೭)

ಪ್ರತೋಳಿ – [ನಾ] ರಾಜಬೀದಿ (ಪಂಚರತ್ನತೋರಣ ದ್ಯುತಿಸಮುದ್ಯೋತಿ ಕನಕಪ್ರಾಕಾರ ಪ್ರತೋಳಿದ್ವಾರಮಂ ಎಯ್ದೆವಂದಾಗಳ್: **ಆದಿಪು,** ೧೧. ೨೩ ವ)

ಪ್ರತ್ಯಂಗ – [ನಾ] ಬೇರೆ ಬೇರೆ ಅಂಗಗಳು (ಪೆಱವುಂ ಪ್ರತ್ಯಂಗೋಚಿತಾತ್ಯಂಗಮಣಿ ಭೂಷಣಂಗಳುಮಂ ಸ್ವಮತಿಪರಿಕಲ್ಪನದಿಂ ಯುಗಾರಂಭದೊಳ್ ಪಡೆದು: **ಆದಿಪು**, ೮. ೫೪ ವ)

ಪ್ರತ್ಯಂತ – [ಗು] ಸುತ್ತಮುತ್ತಲ (ಬಳವತ್ ಪ್ರತ್ಯಂತ ಭೂಪಾಳಕನಿಕರ ಮಹಾವಾಹಿನೀವಾಹಿನೀಸಂಕುಳಂ ಅತ್ಯುತ್ಸಾಹದಿಂದಂ ಪುಗೆ: **ಆದಿಪು**, ೧೩. ೪೫); **[ನಾ]** ಗಡಿಪ್ರದೇಶ (ಪೊಂಗುವ ಮಲೆಪರ ಮಲೆಗಳ ಡಂಗಂಗಳ್ ಮಲೆವ ಮಂಡಲಂಗಳ್ ಪ್ರತ್ಯಂತಗಳ್ ಎನಲ್ ಒಳವೆ ಪಾಂಡವರಂ ಗೆಡೆಗೊಳೆ ನಿನಗೆ ಕುರುಕುಳಾಂಬರಭಾನೂ: **ಪಂಪಭಾ**, ೯. ೩೯)

ಪ್ರತ್ಯಂತಭೂಪಾಲಕ – [ನಾ] ನೆರೆರಾಜ್ಯದ ರಾಜ (ಬಲವತ್ ಪ್ರತ್ಯಂತಭೂಪಾಲಕನಿಕರ ಮಹಾವಾಹಿನೀವಾಹಿನೀಸಂಕುಲಂ ಅತ್ಯುತ್ಸಾಹದಿದ ಪುಗೆ ದೆಸೆದೆಸೆಯಂ: **ಆದಿಪು,** ೧೩. ೪೫)

ಪ್ರತ್ಯಂತವಾಸಿ – [ನಾ] ಗಡಿಯಲ್ಲಿ ವಾಸಿಸುವವನು (ಪ್ರತ್ಯಂತವಾಸಿಗಳಪ್ಪ ಏಟ್ಟೂಱು ಕುಕ್ಷಿನಿವಾಸಿಗಳುಂ ಎಟ್ಟಿತ್ತಿರ್ಛಾಸಿರ ದುರ್ಗಾಟವಿಗಳುಂ: **ಆದಿಪು**, ೧೫. ೩ ವ)

ಪ್ರತ್ಯಕ್ಷೀಕೃತ – [ಗು] ಕಣ್ಣೆದೆದುರು ಬರುವಂತೆ ಮಾಡಿಕೊಂಡ (ಜನ್ಮಾಂತರ ಅಭ್ಯಸ್ತ ಕಳಾಕುಶಳನುಂ ಪ್ರತ್ಯಕ್ಷೀಕೃತಸಕಲ ವಾಙ್ಮಯನಪ್ಪುದಱಿಂದಂ: **ಆದಿಪು**, ೮. ೩ ವ)

ಪ್ರತ್ಯಗ್ರ – [ಗು] ನವೀನವಾದ (ಪ್ರತ್ಯಗ್ರ ಚಿಂತಾಮಣಿಮಯ ರಚನಾಶ್ಚರ್ಯನಿಶ್ಶೇಷಭೂಷಾರ್ಚನೆಯಂ ಸರ್ವಜ್ಞಬಿಂಬಾವಳಿಗೆ ಪರಸಿದರ್: **ಆದಿಪು**, ೧೪. ೧೧೬)

ಪ್ರತ್ಯಭಿಜ್ಞಾನ – [ನಾ] [ಪ್ರತಿ+ಅಭಿಜ್ಞಾನ] ಅದೇ ಇದು ಎಂದು ಗುರುತಿಸುವುದು (ತದೇಕತ್ವಗ್ರಾಹಕ ಪ್ರತ್ಯಭಿಜ್ಞಾನಮುಂ ಲೂನಪುನರ್ಜಾತ ನಖಕೇಶಾದಿಗಳೊಳ್ ಪೂರ್ವಾಪರ್ಯೈಕತ್ವಂ ಇಲ್ಲದಲ್ಲಿಯುಂ ಕಾಣಲಕ್ಕುಂ: **ಆದಿಪು,** ೨. ೯ ವ)

ಪ್ರತ್ಯವಾಯ – [ನಾ] ಕೇಡು, ತೊಂದರೆ (ಅಂತೀತನ ಕಟಕಕ್ಕೆ ನಿತ್ಯಕ್ಷಯವ್ಯಯಪ್ರತ್ಯವಾಯಂಗಳಂ ಮಾಡಿ ಬೇಸಱಿಸಿ ತೆರಳ್ಚುವಂ: **ಆದಿಪು**, ೧೩. ೫೮ ವ)

ಪ್ರತ್ಯಾಖ್ಯಾನ – [ನಾ] ಸ್ಕಾರ, ತೊರೆಯುವಿಕೆ (ಮಹಾಬಳನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರ ಶರೀರಪ್ರತ್ಯಾಖ್ಯಾನಮಂ ಕೊಟ್ಟು: **ಆದಿಪು**, ೨. ೫೧ ವ)

ಪ್ರತ್ಯಾಲೀಢ – [ನಾ] ಬಿಲ್ಗಾರನು ಕುಳಿತುಕೊಳ್ಳುವ ಒಂದು ರೀತಿ (ಆಲೀಢ ಪ್ರತ್ಯಾಲೀಡ ಸಮಪಾದಂಗಳೆಂಬ ಆಸನಂಗಳೊಳಂ ಪೆಱವುಂ ಶರಾಸನವಿದ್ಯೆಗಳೊಳ್ ಅತಿ ಪ್ರವೀಣರುಂ ಜಾಣರುಂ ಆಗಿ: **ಪಂಪಭಾ**, ೧೩. ೩೮ ವ) ["ಬಲಗಾಲನ್ನು ಹಿಂದಕ್ಕೆ ಮಡಿಸಿ ಎಡಗಾಲನ್ನು ಹಿಂದಕ್ಕೆ ಮಡಿಸಿ ಕುಳ್ಳಿರುವುದು" – **ದೀಪಿಕೆ,** ಪು ೫೨೩

ಪ್ರತ್ಯಾಸನ್ನಮೃತ್ಯು – [ನಾ] ಸಮೀಪಿಸಿರುವ ಸಾವು (ಬಹ್ವಾರಂಭ ಸಂರಂಭ ರೌದ್ರಧ್ಯಾನಪರಿಣತಂ ಉಪಾರ್ಜಿತ ನರಕಾಯುಷ್ಯಂ ಪ್ರತ್ಯಾಸನ್ನಮೃತ್ಯುವಾಗಿ: **ಆದಿಪು,** ೨. ೧೧ ವ)

ಪ್ರತ್ಯುತ್ಪನ್ನಪ್ರತಿಭ – [ನಾ] ಸಮಯಾನುಸಾರವಾಗಿ [ವಿಚಾರ] ಹೊಳೆಯುವ ಪ್ರತಿಭೆಯುಳ್ಳವನು (ಜನಪದಸಮಭಿಜಾತನುಂ ಅನ್ವಯಾಗತನುಂ ಅಭಿರೂಪನುಂ ಪ್ರತ್ಯುತ್ಪನ್ನಪ್ರತಿಭನುಂ: **ಆದಿಪು**, ೧೪. ೪೩ ವ)

ಪ್ರಥಮ ಕಲ್ಪೇಶ್ವರ – [ನಾ] [ಜೈನ] ಮೊದಲನೆಯ ಕಲ್ಪದ ಇಂದ್ರ, ಸೌಧರ್ಮೇಂದ್ರ (ಕಳಶೋದ್ಧಾರ ಮಂತ್ರಪೂರ್ವಕಂ ಪ್ರಣತಿಪ್ರಸ್ತಾವಪುರಸ್ಸರಂ ಮಾಡಿ ಪ್ರಥಮಕಲ್ಪೇಶ್ವರನುಂ ಈಶಾನೇಂದ್ರನುಂ ಎತ್ತಿಕೊಂಡು: **ಆದಿಪು,** ೭. ೮೦ ವ)

ಪ್ರಥಮಕಲ್ಯಾಣ – [ನಾ] [ಜೈನ] ತೀರ್ಥಂಕರನಿಗೆ ಮಾಡುವ ಪಂಚಕಲ್ಯಾಣಗಳಲ್ಲಿ ಮೊದಲನೆಯದು, ಗರ್ಭಾವತರಣ (ದೇವೇಂದ್ರಂ .. .. ಪ್ರಥಮಕಲ್ಯಾಣಮಂ ನಿರ್ವರ್ತಿಸಿದಂ: **ಆದಿಪು,** ೭. ೩೨ ವ)

ಪ್ರಥಮಚಳಿತದಕ್ಷಿಣಚರಣ – [ನಾ] ಮೊದಲು ಬಲಗಾಲನ್ನು ಇಟ್ಟವನು (ದಿವ್ಯಚಾಪಮಂ ಪಿಡಿದು ಪ್ರಥಮ ಚಳಿತ ದಕ್ಷಿಣಚರಣನಾಗಿ ನಿಜನಿವಾಸದಿಂ ಪೊಱಮಟ್ಟು: **ಪಂಪಭಾ,** ೪. ೧೨ ವ)

ಪ್ರಥಮಾನುಯೋಗ – [ನಾ] [ಜೈನ] ತೀರ್ಥಂಕರರು ಉಪದೇಶಿಸಿದ ಶಾಸ್ತ್ರಸಮುದಾಯದಲ್ಲಿ ಮೊದಲನೆಯದು (ಎರಡು ಪರಿಕರ್ಮಮುಂ ಎಂಬತ್ತೆಂಟು ಸೂತ್ರಂಗಳುಮಂ ಪ್ರಥಮಾನುಯೋಗಮುಮಂ .. .. ಯಥೋವಿಧಿಯಿಂ ನೋಂತು: **ಆದಿಪು,** ೩. ೪೦ ವ)

ಪ್ರದಾರಿತ – [ಗು] ಸೀಳಿದ (ವಿಳೋಳ ವೀಚೀರಯಂ ಪ್ರದಾರಿತ ಕುಳಾಚಲೋದಧಿಪರೀತಮಾಗಿರ್ದ ಜಂಬೂದ್ವೀಪದೊಳಗೆ: **ಪಂಪಭಾ,** ೧. ೫೧ ವ)

ಪ್ರದೇಶ – [ನಾ] ಜಾಗ (ವಾತವಲಯಮುಱಿಯೆ ಜೀವಪ್ರದೇಶಂಗಳಿಂ ಲೋಕಪ್ರದೇಶಮಂ ಪರ್ವಿ: **ಆದಿಪು,** ೧೬. ೪೯)'; **[ನಾ]** ನೆಲೆ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ಪ್ರಧಾನಮಂತ್ರಿ – [ನಾ] ಮುಖ್ಯ ಅಮಾತ್ಯ (ನಿಜಪ್ರಿಯ ಪ್ರಧಾನಮಂತ್ರಿ ಮತಿವರನೊಳಂ .. .. ಆಲೋಚಿಸಿ: **ಆದಿಪು,** ೪. ೮೯ ವ)

ಪ್ರಧಾನಶ್ರೇಷ್ಠಿ – [ನಾ] ಮುಖ್ಯ ವರ್ತಕ (ಪ್ರಧಾನಶ್ರೇಷ್ಠಿ ಧನಮಿತ್ರನೊಳಾಲೋಚಿಸಿ: **ಆದಿಪು,** ೪. ೮೯ ವ)

ಪ್ರಧ್ವನ – [ನಾ] ಭೋರ್ಗರೆತ (ಆಗಳ್ ದೂತಾಳಾಪವಿಳಯಸಮೀರ ಪ್ರೇರಿತ ಪ್ರಳಯಜಳನಿಧಿಪ್ರಧ್ವನಾನುಕಾರಿಯಾಗಿ: **ಆದಿಪು,** ೧೪. ೮೫ ವ)

ಪ್ರಪಂಚ – [ನಾ] ವೃತ್ತಾಂತ ಮತ್ತು ವಿವರಗಳು (ಬಂದು ಖಚರಪತಿಯನೆಯ್ದಿ ತತ್ಪ್ರಪಂಚಮಂ ಸಪ್ರಪಂಚಂ ಅಱಿಪಿ: **ಆದಿಪು,** ೨. ४೫ ವ); **[ನಾ]** ಮಹಾಕಾರ್ಯ (ಖಾಂಡವ ವನದಹನಪ್ರಪಂಚದಿಂ ಬೞಿಯಂ ಅರಾತಿವನದಹನ ತೀವ್ರಪ್ರತಾಪಗಹನಕ್ಕೆ ಮುನ್ನಂ ಅಳ್ಕಿ ಪರಮಂಡಳಿಕರ್ ಇತ್ತುಂ ತೆತ್ತುಂ ಬೆಸಕೆಯ್ಯೆ: **ಪಂಪಭಾ,** ೬. ೧. ವ)

ಪ್ರಪಾತ – [ನಾ] ಕೊರಕಲು, ಜಲಪಾತ (ಹಿಮವತ್ಪರ್ವತದ ಸಿಂಧುಪ್ರಪಾತಮನೆಯ್ದಿ: **ಆದಿಪು,** ೧೩. ೬೭ ವ)

ಪ್ರಬಂಧ – [ನಾ] ಮಹಾಕಾವ್ಯ (ವರ್ಣಕಂ ಕತೆಯೊಳಂಬಡಂ ಪಡೆಯೆ ಪೇೞಲ್ಕೆವೇೞ್ವಡೆ ಪಂಪನೆ ಪೇೞ್ಗುಮೆಂದು ಪಂಡಿತರೆ ತಗುಳ್ದು ಬಿಚ್ಚಳಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ: **ಪಂಪಭಾ,** ೧. ೧೧)

ಪ್ರಬೋಧೆ – **[ನಾ]** [ನಿದ್ದೆಯಿಂದ] ಎಚ್ಚರಗೊಂಡವಳು (ಉದಯಾಚಳಚೂಡಾಮಣಿ ಮರೀಚಿನಿಚಯಚುಂಬಿತ ಅಂಬುಜವನಲಕ್ಷ್ಮಿಯೊಡನೆ ಲಬ್ಧಪ್ರಬೋಧೆಯಾಗಿ: **ಆದಿಪು,** ೮. ೨೬ ವ)

ಪ್ರಭಗ್ನ – **[ಗು]** ಮುರಿಯಲ್ಪಟ್ಟ (ಇವಲ್ತೆ ತೋರ್ಪುವ ಮಧುಪವ್ರಜ ಪರಿವಾರಿತ ಮಾದ್ಯತ್ ಗಜಕಟಕರ್ಷಪ್ರಭಗ್ನ ಚಂದನತರುಗಳ್: **ಆದಿಪು,** ೨. ೨೭)

ಪ್ರಭವ – **[ನಾ]** ಜನ್ಮಸ್ಥಾನ (ಆ ಸಕಳಾರ್ಥಸಂಯುತಂ ಅಳಂಕೃತಿಯುಕ್ತಂ ಉದಾತ್ತ ವೃತ್ತಿ ವಿನ್ಯಾಸಂ ಅನೇಕ ಲಕ್ಷಣ ಗುಣ ಪ್ರಭವಂ: **ಪಂಪಭಾ,** ೧. ೯); **[ನಾ]** (ದೀಪ್ತಕಂದರ್ಪದರ್ಪಕ್ಷುಭಿತಗಳನಿನಾದಂ ಪ್ರಸ್ಫುರತ್ ಘರ್ಮವಾರಿ ಪ್ರಭವಂ: **ಪಂಪಭಾ,** ೫. ೨೮)

ಪ್ರಭಾಕರವಿಮಾನ – ಸ್ವರ್ಗಲೋಕದ ಒಂದು ಸ್ಥಳದ ಹೆಸರು (ನಕುಳಾರ್ಯನುಂ ಪ್ರಭಾಕರವಿಮಾನದೊಳ್ ಮನೋರಥಾವಾಪ್ತದಿವ್ಯಭೋಗಂ ಮನೋರಥನೆಂಬಂ ಕಲ್ಪಜನಾದಂ: **ಆದಿಪು,** ೫. ೭೦ ವ)

ಪ್ರಭಾತ – **[ನಾ]** ಬೆಳಗು (ಆಗಳ್ ಆ ವಿಕಚಾಂಬುಜಸೌರಭಮನೊಸೆದು ಸೇವಿಸುವಾ ಪೆಣ್ದುಂಬಿಗಳ ಸರಮನೆತ್ತಿ ತಱುಂಬುತ್ತುಂ ಬಂದುದಾ ಪ್ರಭಾತಸಮೀರಂ: **ಪಂಪಭಾ,** ೧೨. ೧೦೫)

ಪ್ರಭಾತಪಟಹ – **[ನಾ]** ಅರಮನೆಗಳಲ್ಲಿ ಬೆಳಗಿನ ಹೊತ್ತು ಮೊಳಗುವ ಭೇರಿ (ಅಮರವಾದಕವಾದ್ಯಮಾನ ದುಂದುಭಿ ಶಂಖ ಕಾಹಳಾ ಪ್ರಭಾತಪಟಹಧ್ವನಿಗಳ್ ದೆಸೆದೆಸೆಗೆಸೆಯುಂ: **ಆದಿಪು,** ೮. ೨೬ ವ)

ಪ್ರಭಾಭಿದ್ – **[ಗು]** ಕಾಂತಿಯಿಂದ ಭೇದಿಸಲ್ಪಟ್ಟ (ಸಮುನ್ಮಿಷದ್ವಿವಿಧ ರತ್ನಮಾಲಾ ಪ್ರಭಾಭಿದಾರುಣ ಜಲಪ್ಲವಾವಿಳ ವಿಳೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ: **ಪಂಪಭಾ,** ೧. ೫೧ ವ)

ಪ್ರಭಾವನೆ – **[ನಾ]** [ಜೈನ] ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ಕೊನೆಯದು, ಜೈನಧರ್ಮದ ಹಿರಿಮೆಯನ್ನು ತಿಳಿಸುವುದು (ಅನೇಕ ಉಪಪತ್ತಿಗಳಿಂ ಸ್ವಪಕ್ಷಸ್ಥಾಪನಂ ಗೆಯ್ದು ಸನ್ಮಾರ್ಗಪ್ರಕಾಶನದಿಂ ಮಾರ್ಗಪ್ರಭಾವನೆಯಂ ಮಾಡಿ: **ಆದಿಪು,** ೨. ೨೨ ವ)

ಪ್ರಭಾವಳಯ – **[ನಾ]** ಕಾಂತಿಯ ಆವರಣ (ದಳಿತಕಮಲಚ್ಛಾಯಾಟೋಪಂ ಮನೋಜರಸ ಪ್ರಭಾವಳಯನಿಳಯಂ ಪ್ರೋದ್ಯತ್ ಭ್ರೂವಿಭ್ರಮಂ: **ಪಂಪಭಾ,** ೪. ೭೭)

ಪ್ರಭಿನ್ನ – **[ಗು]** ಅರಳಿದ (ಬಾಸಣಿಸಿದುದು ಉತ್ಕಟ ಕುಸುಮಾಸವ ಸೌರಭದೆ ದೆಸೆಗಳೊಡನೆ ಅಳಿಕುಳಮಂ ವಾಸವವನಿತಾ ವದನಾಬ್ಜಾಸವಸೇಕಪ್ರಭಿನ್ನ ಮುಕುಳಂ ವಕುಳಂ: **ಆದಿಪು,** ೬. ೯೭)

ಪ್ರಭುತೆ – **[ನಾ]** ದಕ್ಷತೆ (ಇತರೇಂದ್ರರ್ ಪರಿಚಾರಕಪ್ರಭುತೆಯಿಂ ಮುಂದಾಡೆ: **ಆದಿಪು,** ೭. ೮೧) [ಎಲ್. ಬಸವರಾಜು ಅವರ ಆವೃತ್ತಿ]

ಪ್ರಭು ಮಾಡು – **[ಕ್ರಿ]** ನಾಯಕನನ್ನಾಗಿ ಮಾಡು (ವಿಪುಲ ಯಶೋವಿತಾನ ಗುಣಮಿಲ್ಲದನಂ ಪ್ರಭು ಮಾಡಿ: **ಪಂಪಭಾ,** ೧. ೧೪)

ಪ್ರಭುಶಕ್ತಿ – **[ನಾ]** ಪ್ರಭುತ್ವ (ಈಶ್ವರನ ಪ್ರಭುಶಕ್ತಿಯುಮಂ ಜವನ ಬಲ್ಲಾಳ್ತನಮುಮಂ ಸಿಂಹದ ಕಲಿತನಮುಮಂ ಅವರವರ ದೆಸೆಗಳಿಂ ತೆಗೆದೊಂದುಮಾಡಿ: **ಪಂಪಭಾ,** ೧. ೧೩೯ ವ)

ಪ್ರಭೂತ – **[ಗು]** ಸಮೃದ್ಧ (ಪ್ರಭೂತ ಯವಸ ಉದಕಂಗಳುಮಂ ಸಮಸ್ತಸಸ್ಯಸಂಪತ್ಸಂಪನ್ನ ಸುಕ್ಷೇತ್ರಂಗಳುಮಂ: **ಆದಿಪು,** ೮. ೬೩ ವ); **[ಗು]** ಉಂಟಾದ (ಅಭಿಮನ್ಯು ಮರಣವಾರ್ತಾ ಪ್ರಭೂತ ಶೋಕಾಗ್ನಿ ಧರ್ಮತನಯನಂ ಇರದಂದು ಅಭಿಭವಿಸಿ ತನ್ನಂ ಅಳುರ್ದಂತೆ ಭಾಸ್ಕರಂ ಕೆಂಕಮಾದಂ ಅಸ್ತಾಚಲದೊಳ್: **ಪಂಪಭಾ,** ೧೧. ೧೦೬)

ಪ್ರಭೃತಿ – **[ನಾ]** ಜನ, ವ್ಯಕ್ತಿ (ನಂಟರಪ್ಪ ಅಶ್ವಗ್ರೀವ ವಿದ್ಯುನ್ಮಾಲಿ ನೀಲಾದಿಗಳಪ್ಪ ಪ್ರಭೃತಿಗಳ್ ಎನಿಬರಾನುಂ ಮುರಾಂತಕನಂ ಬಂದು ತಾಗಿದೊಡೆ: **ಪಂಪಭಾ,** ೬. ೬೪ ವ)

ಪ್ರಮತ್ತ – **[ನಾ]** [ಜೈನ] ಆತ್ಮನ ಎರಡು ಅವಸ್ಥೆಗಳಲ್ಲಿ ಒಂದು, ಅಶುದ್ಧಾತ್ಮನಲ್ಲಿ ಕೆಳತರಗತಿಯ ಆರು ಗುಣಸ್ಥಾನಗಳಲ್ಲಿ ಕಾಣಬರುವ ಪರಿಣಾಮ (ಅಂತರ್ಮುಹೂರ್ತಕಾಲಂ ಪ್ರಮತ್ತ ಅಪ್ರಮತ್ತ ಪರಾವರ್ತನಸಹಸ್ರಂಗೆಯ್ದು: **ಆದಿಪು,** ೧೦. ೧೪), ಇನ್ನೊಂದು **'ಅಪ್ರಮತ್ತ'**

ಪ್ರಮದಪದ – **[ನಾ]** ಆನಂದದಾಯಕ (ಇದುವೆ ಸುಕವಿಪ್ರಮೋದಪ್ರದಂ ಇದುವೆ ಸಮಸ್ತಭವ್ಯಲೋಕ ಪ್ರಮದಪ್ರದಂ ಎನೆ ನೆಗೞ್ದ ಆದಿಪುರಾಣದೊಳ್ ಅಱೆವುದು ಕಾವ್ಯಧರ್ಮಮಂ ಧರ್ಮಮುಮಂ: **ಆದಿಪು,** ೧. ೩೮)

ಪ್ರಮದಾ – **[ನಾ]** ಸ್ತ್ರೀ, ಹೆಂಗಸು (ಪ್ರಮದಾಹಸ್ತವಿನ್ಯಸ್ತ ವಾಮಕ್ರಮಕಮಳನುಂ: **ಪಂಪಭಾ,** ೯. ೨೮ ವ)

ಪ್ರಮಾಣ – **[ನಾ]** ಜೈನ] ರುಜುವಾತು (ಪ್ರಮಾಣ ನಯ ನಿಕ್ಷೇಪ ಅನುಯೋಗ ಸದಾದಿಗಳಿಂ ನಿಶ್ಚಯಿಸಿದ ಸಪ್ತತತ್ತ್ವಂಗಳೊಳಗೆ ಚೇತನಾಲಕ್ಷಣಮಪ್ಪುದು ಜೀವತತ್ತ್ವಂ: **ಆದಿಪು,** ೧೦. ೬೩ ವ)

ಪ್ರಮಾದ – **[ನಾ]** [ಜೈನ] ಹದಿನೈದು ಬಗೆಯ ದೋಷಗಳು: ಸ್ತ್ರೀಕಥೆ, ಭೋಜನಕಥೆ, ರಾಷ್ಟ್ರಕಥೆ, ಅವನೀಪಾಲಕಥೆ ಎಂಬ ನಾಲ್ಕು ವಿಕಥೆಗಳು; ಕ್ರೋಧ, ಮಾನ, ಮಾಯೆ, ಲೋಭ ಎಂಬ ನಾಲ್ಕು ಬಗೆಯ ಕಷಾಯಗಳು; ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ, ಚಕ್ಷುರಿಂದ್ರಿಯ, ಕರ್ಣೇಂದ್ರಿಯ ಎಂಬ ಐದು ಇಂದ್ರಿಯಗಳು, ನಿದ್ರೆ ಮತ್ತು **[ನಾ]** ಸ್ನೇಹ (ಮತ್ತಂ ಚತುರಶೀತಿಸಹಸ್ರ ಗುಣಮಣಿಭೂಷಣ ವಿಭೂಷಿತನುಂ ಅಷ್ಟಾದಶಸಹಸ್ರ ಶೀಲರತ್ನಾಕರನುಂ ಆಗಿ ಪಂಚದಶಪ್ರಮಾದಂಗಳಂ ಬಂಚಿಸಿ: **ಆದಿಪು,** ೬. ೨೯ ವ)

ಪ್ರಮಿತ – **[ಗು]** ಅಳತೆಯ, ಮಿತಿಯ (ಮಹೇಂದ್ರಕಲ್ಪದೊಳ್ ಸಪ್ತಸಾಗರೋಪಮಪ್ರಮಿತ ಜೀವಿತನೆಂ ಸಾಮಾನಿಕದೇವನಾಗಿ ಪುಟ್ಟಿದೆಂ: **ಆದಿಪು,** ೩. ೫೦ ವ)

ಪ್ರಮುಚ್ಯಮಾನ – **[ಗು]** ಬಿಡಲ್ಪಡುತ್ತಿದ್ದ (ಅನವರತ ಪ್ರಮುಚ್ಯಮಾನ ಪ್ರಚುರ ನಿಜನಾರಾಚರಾಜಿಯಿಂದಂ ಅವಿರಳಮದಜಳ ತೈಲಪಾಕ ದುರಾಲೋಕಂಗಳಪ್ಪ ತದ್ಬಲ ಕರಟಿಕಟ ಕಟಾಹಂಗಳಂ

ಅಪತುಚ್ಛಚ್ಛಿದ್ರಂಗಳ್ಮಾಡಲ್ಪಡದೆಯುಂ: **ಆದಿಪು,** ೧೪. ೧೦೩ ವ)

ಪ್ರಮುದಿತ – [ಗು] ಸಂತುಷ್ಟಗೊಂಡ (ನಿಜಪರಿರಕ್ಷಣಕ್ಷಮ ಕ್ಷಮಾವಲ್ಲಭ ಲಾಭಪ್ರಮುದಿತ ಮೇದಿನೀಹೃದಯದಂತೆ: **ಆದಿಪು,** ೭. ೩೬ ವ)

ಪ್ರಮೃಷ್ಟ – [ಗು] ಲೇಪಿಸಿದ (ಅಂತಾರೋಗಿಸಿದಿಂ ಬಟೆಯಂ ಆಚಮಿತ ಚಂದ್ರಕಾಂತದ್ರವಸುರಭಿಸಲಿಲನುಂ ಘನಸಾರ ಚಂದನಸಾರ ಪ್ರಮೃಷ್ಟ ಕರತಳನುಂ: **ಆದಿಪು,** ೧೧. ೨೭ ವ)

ಪ್ರಮೋದ – [ನಾ] ಸಂತೋಷ (ಇದುವೆ ಸುಕವಿಪ್ರಮೋದಪ್ರದಂ ಇದುವೆ ಸಮಸ್ತಭವ್ಯಲೋಕಪ್ರಮದಪ್ರದಂ ಎನೆ ನೆಗಟ್ದಿ **ಆದಿಪು**ರಾಣದೊಳ್ ಅಜೆವುದು ಕಾವ್ಯಧರ್ಮಮಂ ಧರ್ಮಮುಮಂ: **ಆದಿಪು,** ೧. ೩೮)

ಪ್ರಯೋಗ – [ನಾ] ಪರೀಕ್ಷೆ ಮಾಡುವುದು, ಪರಿಶೀಲನೆ (ಅದು ಸಾಧನ ದೂಷಣ ಪ್ರಯೋಗಾನ್ಯಥಾನುಪಪತ್ತಿಯಿಂ ಬಹಿರರ್ಥ ಸಿದ್ಧಿಯಕ್ಕುಂ: **ಆದಿಪು,** ೨. ೧೦ ವ); [ನಾ] ಸಂಗೀತದ ಅಭಿವ್ಯಕ್ತಿಕ್ರಮ (ಗಮಕ ಪ್ರಯೋಗಂ ಆಭೋಗಂ ಅಳಂಕಾರಂ ಪೊಗರ್ ನಯಂ ಮಿಱುಗು ಪೊದಳ್ದಮರೆ ಕೊಳೆ ಪಾಡುವ: **ಆದಿಪು,** ೭. ೧೬); [ನಾ] ಉಪಾಯ, ಮಾರ್ಗ (ಎಂತು ಧನಂಗಳಂ ಪ್ರಯೋಗಾಂತರದಿಂ ತೆರಳ್ಚಿದಪಿರಿ ಆಗದು ಇದಾದೊಡಂ ಎಂತು ರಾಜಸೂಯಾಂತಂ: **ಪಂಪಭಾ,** ೬. ೨೩)

ಪ್ರರೋಚನಾ – [ನಾ] ನಾಟಕದ ಒಂದು ಭಾಗ, ಆರಂಭದಲ್ಲಿ ಪ್ರೇಕ್ಷಕರ ಅಭಿರುಚಿಯನ್ನು ಹುಟ್ಟಿಸುವುದು (ನಾಂದೀ ಪ್ರರೋಚನಾ ಪ್ರಸ್ತಾವನಾ ಇತಿವೃತ್ತ ಸಂಧಿ ಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ: **ಪಂಪಭಾ,** ೨. ೩೪ ವ)

ಪ್ರರೋಹ – [ನಾ] ಬಿಳಲು (ಸೃಕ್ವೋಪಾಂತಪ್ರರೂಢಶ್ಮಶ್ರುಜಾಳಂ ಆಹವ ಮಹಾಹುಂಕಾರ ಕಾಳಕೂಟವಿಟಪಿಪ್ರರೋಹ ಶಂಕಾವಹ ನಾಭಿಕೂಪಾವಲಂಬಿ ಕೂರ್ಚಕಳಾಪಂ: **ಆದಿಪು,** ೧೩. ೪೫ ವ)

ಪ್ರಲಂಬ – [ಗು] ನೀಳವಾದ (ವ್ಯೂಢವಕ್ಷಸ್ಸ್ಥಳಂ ಆಜಾನುಪ್ರಲಂಬ ಪ್ರಬಲಭುಜಯುಗಂ ಚಾರುವೃತ್ತೋರುಯುಗ್ಮಂ: **ಆದಿಪು,** ೮. ೫೧); ಜೋತುಬಿದ್ದ (ಮಹೀತಳಾಶ್ಲಿಷ್ಟಜಾನುಲಲಾಟಪಟ್ಟರ್ ಪ್ರಣಾಮಾರ್ಪಣಪುರಸ್ಸರಂ ಶಿರೋವೇಷ್ಟನ ಪ್ರಲಂಬ ಚೇಳಾಂಚಳ ಪಿಹಿತವದನರಾಗಿ: **ಆದಿಪು,** ೧೦. ೪೮ ವ)

ಪ್ರಲಂಬಮಾನ – [ಗು] ತೂಗುಹಾಕಲಾದ (ಅನೇಕಕಾಮನೀಕರಪಲ್ಲವ ವಿಧೂಯಮಾನ ಚಾರುಚಾಮರಾಂದೋಳಿತ ಪ್ರಾಕಾರ ಪ್ರಲಂಬಮಾನ ಮಂದಾರಮಾಲಾವಿಳಾಸದೊಳ್: **ಆದಿಪು,** ೮. ೬೭ ವ)

ಪ್ರವರ – [ನಾ] ಅಗ್ರ ವ್ಯಕ್ತಿ (ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗಟ್ದ ಸಬ್ಬವದವರೊಡನೆ ಅಂತು ಒಸೆದ ಅನ್ನವಾಸದೊಳ್ ಇರ್ದನಾಗಳ್ ಹರಿಗಂ: **ಪಂಪಭಾ,** ೩. ೮೦)

ಪ್ರವರತರ – [ಗು] ಅತ್ಯಂತ ಶ್ರೇಷ್ಠವಾದ (ಪ್ರವರತರ ಪುರಂಧ್ರೀ ನೂಪುರಾರಾವಂ ಎತ್ತಂ ಕಿವಿಗೆ ವರೆ: **ಪಂಪಭಾ,** ೧೪. ೧೬)

ಪ್ರವರ್ತಕ – [ನಾ] ಮೂಲಪುರುಷ (ಈ ಭವಕ್ಕೆಂಟನೆಯ ಭವದೊಳ್ ಭರತದೊಳ್ ನೀನಾದಿತೀರ್ಥಪ್ರವರ್ತಕನಾದಂದು ಈ ಶ್ರೀಮತಿ ದಾನತೀರ್ಥಪ್ರವರ್ತಕಂ ಶ್ರೇಯಾಂಸನಕ್ಕುಂ: **ಆದಿಪು,** ೫. ೧೩ ವ)

ಪ್ರವರ್ತನ – [ನಾ] ಹೊರಳುವುದು (ಅನವರತ ನಿಹತ ನರ ಕರಿ ತುರಗ ನಿಕುರುಂಬ ಕೀಲಾಲ ಕಲ್ಲೋಲ ಪ್ರವರ್ತನ ಅನೇಕ ನದ ನದೀ ಪ್ರವಾಹಬಾಹುಳ್ಯ ದುಸ್ತರಾವತರಣ ಮಾರ್ಗಮುಂ: **ಪಂಪಭಾ,** ೧೩. ೫೧ ವ); [ನಾ] ತೊಡಗುವಿಕೆ (ಪಂಚಾಣುವ್ರತಾದಿ ಪ್ರವರ್ತನಸ್ವಭಾವ ಸಂಯಮುಮುಂ: **ಆದಿಪು,** ೧೫. ೧೩ ವ)

ಪ್ರವರ್ಧಮಾನ – [ಗು] ಬೆಳೆಯುವ, ಹೆಚ್ಚುವ (ಅಮರಾಧಿಪಪ್ರಹಿತ ಪ್ರತಿದಿನ ಪ್ರವರ್ಧಮಾನ ಸುರತರುಪ್ರಸೂನ ಗ್ರಥಿತ ಸುರಭಿದಾಮ: **ಆದಿಪು,** ೮. ೩ ವ)

ಪ್ರವಾಹಮಾನ – [ಗು] ಹರಿಯುವ, ಪ್ರವಹಿಸುವ (ಸೈರಿಸಲಾಱದೆ ತಡತಡಿಸಿ ಪರಿತಂದ ಅತಿದ್ರುತ ಪ್ರವಾಹಮಾನ ಆರುಷ್ಕರದ್ರವಾವರ್ತಗರ್ತ ಗಂಭೀರೆಯುಂ: **ಆದಿಪು,** ೫. ೮೭ ವ)

ಪ್ರವಾಳ – [ನಾ] ಚಿಗುರು (ಅದಜೆಂ ಪ್ರವಾಳಪತ್ರಪುಷ್ಪಾಂಕುರಂಗಳಿಂದಂ ಸಂಕೀರ್ಣಮಪ್ಪ ರಾಜಾಂಗಣಮಂ ಮೆಟ್ಟದೆ ಪೆಱತೊಂದೆ ಬಟ್ಟೆಯೊಳ್ ಬಂದೆವು: **ಆದಿಪು,** ೧೫. ೧೧ ವ); [ನಾ] ಹವಳ (ಆ ಪ್ರವಾಳಪಾಟಲಾಧರೆಯೊಳ್ ಆ ನವಾಮ್ರದ್ರುಮ ಪಲ್ಲವಾಧರಂ: **ಆದಿಪು,** ೮. ೨೩ ವ)

ಪ್ರವಾಳಪಾಟಲ – [ಗು] ಹವಳದಂತೆ ಕೆಂಪಾದ (ಆ ಪ್ರವಾಳಪಾಟಲಾಧರೆಯೊಳ್ ಆ ನವಾಮ್ರದ್ರುಮಪಲ್ಲವಾಧರಂ: **ಆದಿಪು,** ೮. ೨೩ ವ)

ಪ್ರವಿಭಾಗ – [ನಾ] ಬೇರೆ ಬೇರೆ ಭಾಗಗಳು (ಅಪಾತ್ರದಾನಂ ಭೋಗಭೂಮಿಗಳೊಳಂ ಭೋಗಭೂಮಿಪ್ರವಿಭಾಗ ದ್ವೀಪಂಗಳೊಳಂ: **ಆದಿಪು,** ೧೦. ೧೦ ವ)

ಪ್ರವಿಭಾಸಿತ – [ಗು] ಪ್ರಕಾಶಮಾನವಾದ (ತುಂಗವನ್ಯಮತಂಗಜದಂತೆ ಆಘಾತನಿಪಾತಿಸಲ್ಲಕೀಭಂಗಮಂ ಮಣಿಮೌಕ್ತಿಕ ನೀಳಸ್ಥೂಳ ಶಿಲಾಪ್ರವಿಭಾಸಿತ ಉತ್ತುಂಗಮಂ: **ಪಂಪಭಾ,** ೧. ೧೧೫)

ಪ್ರವಿಭಗ್ನ – [ಗು] ಮುರಿದುಹೋದ (ಅದು ಮದದಂತಿ ದಂತಮುಸಲ ಪ್ರವಿಭಗ್ನ ಮಹಾ ಮಹೀರುಹಾಸ್ಪದಂ: **ಪಂಪಭಾ,** ೩. ೧೦)

ಪ್ರವಿಭಾಸಿ – [ಗು] ಪ್ರಕಾಶಿಸುತ್ತಿರುವ (ಗಂಧೇಭ ಕಂಧರಬಂಧ ಪ್ರವಿಭಾಸಿಯಪ್ಪ ಅರಿಗನಂ ಕಾಣುತ್ತೆ ಕಣ್ಸೋಲ್ತು: **ಪಂಪಭಾ,** ೪. ೩೮)

ಪ್ರವಿಮಲ – [ಗು] ಪರಿಶುದ್ಧವಾದ (ಪ್ರವಿಮಲಸದ್ಗೀರ್ವಾಣದಾತವ್ಯ ಸಾಯಕ ಸಂಪೂರ್ಣ ಕಳಾಪ್ರವೀಣನಂ.. .. ಸರ್ವಲಕ್ಷಣಸಂಪೂರ್ಣಂ ಅಪ್ಪ ಮಗನಂ ಅಮೋಘಂ ಪಡೆವೆಂ: **ಪಂಪಭಾ,** ೧. ೧೩೪ ಮತ್ತು ೧೩೪ ವ)

ಪ್ರವಿಲಸತ್ – [ಗು] ಪ್ರಕಾಶಮಾನವಾದ (ಉಗ್ರವೈರಿ ಮದವನ್ಮಾತಂಗಕುಂಭ ಆರ್ದ್ರ ಮೌಕ್ತಿಕ ಲಗ್ನೋಜ್ಜ್ವಲ ಬಾಣನಂ ಪ್ರವಿಲಸತ್ ಗೀರ್ವಾಣ ದಾತವ್ಯ ಸಾಯಕ

ಸಂಪೂರ್ಣಕಳಾಪ್ರವೀಣನಂ ಇಳಾಭಾರಕ್ಷಮ ಅಕ್ಷೂಣನಂ: **ಪಂಪಭಾ,** ೧. ೧೩೪)

ಪ್ರವೀರ – [ನಾ] ಶ್ರೇಷ್ಠ ವೀರ (ಕುಂಭಸಂಭವ ನದೀಜ ಕೃಪ ಪ್ರಮುಖ ಪ್ರವೀರರ್ ಎಕ್ಕೆಕ್ಕೆಯಿಂ ಒರ್ವರೊರ್ವರೆ ಬಿಗುರ್ತಿರದೆ ಆಂತು: **ಪಂಪಭಾ,** ೮. ೧೦೮)

ಪ್ರವ್ಯಕ್ತ – [ಗು] ವೇದ್ಯವಾದುದು, ತಿಳಿದಿರುವಂಥದು (ಸೂಕ್ತಂ ಭವ್ಯಜನಪ್ರವ್ಯಕ್ತಂ ಜೈನಾಗಮೋಕ್ತಂ ಇಂ ನಿನಗೆ ಮದೀಯೋಕ್ತಂ: **ಆದಿಪು,** ೫. ೬೧)

ಪ್ರವ್ರಜ್ಯ – [ನಾ] [ಜೈನ] [ಸಂಚಾರ ಮಾಡುವ] ಸನ್ಯಾಸದೀಕ್ಷೆ (ಹೇಯಂ ಸಾಮ್ರಾಜ್ಯಂ ಉಪಾದೇಯಂ ಪ್ರವ್ರಜ್ಯಮೆಂದು ಮಾಣದೆ ರಾಜ್ಯಶ್ರೀಯಂ ಕೊಟ್ಟಂ ಮುಕ್ತಿಶ್ರೀಯಂ ಬಗೆದರ್ಕಗತಿಗಾ ಭರತೇಶಂ: **ಆದಿಪು,** ೧೬. ೬೨)

ಪ್ರಶಮನ – [ಕ್ರಿ] ಉಪಶಮನಮಾಡು, ಶಾಂತಗೊಳಿಸು (ಯುದ್ಧಾಡಂಬರೋಪಸರ್ಗದೊಳಂ ಆಕುಳವ್ಯಾಕುಳರಾಗಿ ತತ್ ಪ್ರಶಮನಪ್ರತೀಕಾರಮಾಗೆ ನಾಕಲೋಕ ಸೌಂದರಿಯರೊಡನೆ ಅನಿಮೇಷರ್: **ಆದಿಪು,** ೧೪. ೧೧೫ ವ)

ಪ್ರಶಮಿತ – [ಗು] ಅಡಗಿಸಲ್ಪಟ್ಟ (ಮೇಘಕುಮಾರ ಸಸಿಂಸಿಕ್ತ ಪ್ರಶಮಿತ ರಜಃಪ್ರಸರಧರಣೀತಳನುಂ: **ಆದಿಪು,** ೧೦. ೬೭ ವ); ಶಮನಗೊಂಡ (ಎಂಬುದುಂ ಪ್ರಚಂಡಕೋಪಪಾವಕ ಪ್ರಶಮಿತಶೋಕರಸನುಂ: **ಪಂಪಭಾ,** ೧೧. ೧೧೭ ವ)

ಪ್ರಶಮಿಸು – [ಕ್ರಿ] ಉಪಶಮನಗೊಳ್ಳು (ವಿಶದಯಶ ಧರ್ಮಂ ಅಷ್ಟಾದಶಕೋಟ್ಯನುಕೋಟಿಸಾಗರೋಪಮಕಾಲಂ ಪ್ರಶಮಿಸಿ ನಿಂದುದು: **ಆದಿಪು,** ೯. ೬೩)

ಪ್ರಶಸ್ತ – [ಗು] ಶ್ರೇಷ್ಠವಾದ, ಶುಭಕರವಾದ (ಮಱುದಿವಸಂ ಪ್ರಶಸ್ತ ಮೌಹೂರ್ತಿಕನಿರೂಪಿತ ಶುಭಲಗ್ನೋದಯದಿಂದೆ: **ಪಂಪಭಾ,** ೧೪. ೧೭ ವ)

ಪ್ರಶಸ್ತಿಕ್ರಮ – [ನಾ] ಬಿರುದುಗಳನ್ನು ಹೇಳುವ ಕ್ರಮ (ಸಮನೆನಿಸುವರ್ ಪ್ರಶಸ್ತಿಕ್ರಮದೊಳ್ ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ ಮಹಾ ಸಾಮಂತರೆನಲ್ ಸಮನೆನಿಪರೆ ಗುಣದೊಳ್ ಅರಿಗನೊಳ್ ಸಾಮಂತರ್: **ಪಂಪಭಾ,** ೧. ೪೯)

ಪ್ರಶಾಂತಿ – [ನಾ] [ಜೈನ] ಐವತ್ತಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ವೈರಾಗ್ಯ ವೃತ್ತಿ (ಗೃಹೀಶಿತ್ವ ಪ್ರಶಾಂತಿ .. .. ನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯ ಕ್ರಿಯೆಗಳುಂ: **ಆದಿಪು,** ೧೫. ೧೫ ವ)

ಪ್ರಶ್ರಯ – [ನಾ] ನಮ್ರತೆ, ವಿನಯ (ಉಡುಗಿ ಪಿಂಛಚ್ಛತ್ರಮಂ ಪ್ರಶ್ರಯಾಕರವೇಷೋಚಿತರ್ ಅರ್ಘ್ಯಹಸ್ತರ್ ಇದಿರಂ ಬಂದರ್ ಭಯಭ್ರಾಂತಿಯಿಂ: **ಆದಿಪು,** ೧೨. ೬೮)

ಪ್ರಸಂಗ – [ನಾ] ಆಚರಣೆ (ಸುರಾಸುರಸಭೆಗಂ ನಾಭಿರಾಜಾದಿ ಮನುಜಸಭೆಗಂ ಮೆಱೆಯಲೆಂದು ಶುದ್ಧಂ ವಿಚಿತ್ರಂ ಎಂಬ ಪೂರ್ವರಂಗಪ್ರಸಂಗದೊಳ್: **ಆದಿಪು,** ೭. ೧೧೫ ವ); [ನಾ] ಚಟುವಟಿಕೆ (ಆದಿದೇವನ ಪರಿನಿಷ್ಕ್ರಮಣಕಲ್ಯಾಣಂ ಅತ್ಯಾಸನ್ನಮೆಂಬುದಂ ನಿಜಾವಧಿಬೋಧದಿಂದಮಱಿದು ಸಂಗೀತಪ್ರಸಂಗದಿಂದಂ ಓಲಗಿಸಲೆಂದು: **ಆದಿಪು,** ೯. ೮ ವ), ನೋಡಿ, **'ಪೂರ್ವರಂಗ'**

ಪ್ರಸಕ್ತ – [ಗು] ತೊಡಗಿದ್ದ (ಮಂಗಳಗೀತ ನೃತ್ಯೋನ್ಮಿಶ್ರಿತ ಅನೇಕಾನಕಲಯಾನುಗತ ಲೀಲಾಲಾಸ್ಯಪ್ರಸಕ್ತ ಕಾಮಿನೀಕಮನೀಯಮಾಗಿ: **ಆದಿಪು,** ೮. ೩೫ ವ)

ಪ್ರಸರ – [ನಾ] ಹರಹು (ರಸಭಾವ ಆಲಸನಯನ ಪ್ರಸರಂಗಳ ಪೊಳೆವ ಪೊಳೆಪುಗಳ್ ಬಳ್ವಳ ನೀಳ್ದೆಸೆದುವು ರಂಗದೊಳ್: **ಆದಿಪು,** ೭. ೧೧೮); [ನಾ] ರಾಶಿ (ಬೆಸನಾವುದು ಎಮಗೆ ಬೆಸನಂ ಬೆಸಸು ಏವಾಟ್ತಿಯೆಂದು ಮುಂದಿಟ್ಟರ್ ಸ್ರಗ್ವಸನವಿಲೇಪನ ಭೂಷಾಪ್ರಸರಂಗಳಂ: **ಆದಿಪು,** ೯. ೧೨೫); [ನಾ] ಗುಂಪು (ಮದೇಭಪ್ರಸರಸಹಸ್ರಂ ಕೆಡೆದುವು ವಿಸಸನದೊಳ್ ದ್ರೋಣನಿದಿರ್ಗೆ ಮಾರ್ವಲಂ ಒಳವೇ: **ಪಂಪಭಾ,** ೧೨. ೨೬)

ಪ್ರಸರ್ಪತ್ – [ಗು] ಹರಡಿರುವ (ಅಧಃಸ್ಥಳ ಪ್ರಸರ್ಪತ್ಸಿಂಧುವಾಹ ಪ್ರವಾಹ ವಿರಾಜಿತಮುಂ: **ಆದಿಪು,** ೧೩. ೪೬ ವ)

ಪ್ರಸವ – [ನಾ] ಹೆರಿಗೆ (ಅಮರಮನೋರಮೆಯರುಂ ಮನಮಱಿದು ನಿಜಮನೋರಥಂಗಳಂ ಸಲಿಸೆಯುಂ ಅನುಕ್ರಮದೊಳ್ ಪರಿಪೂರ್ಣಪ್ರಸವಸಮಯದೊಳ್: **ಆದಿಪು,** ೭. ೩೫ ವ); [ನಾ] ಹೂವು (ಕಟ್ಟಿಲೆಯನಲೆವ ಸೊಡರ್ಗುಡಿಗಳನೀ ಅಳ್ಳಿಱಿದಲೆವುವು ಬನದೊಳಗುಳ್ಳಲರ್ದು ಉಜ್ವಳಿಪ ಚಂಪಕಪ್ರಸವಂಗಳ್: **ಆದಿಪು,** ೧೧. ೬೭)

ಪ್ರಸವಂ – [ನಾ] ಹುಟ್ಟಿದ್ದು (ಭಸಿತಂ ಕರ್ಪೂರಕಾಳಾಗರುಬಹುಳರಜಂ ವಲ್ಕಲಂ ಕಲ್ಪವೃಕ್ಷಪ್ರಸವಂ ಯಜ್ಞೋಪವೀತಂ ಕನಕಕಮಳನಾಳೋತ್ಕರಂ: **ಪಂಪಭಾ,** ೭. ೭೮)

ಪ್ರಸವಾಗಾರ – [ನಾ] ಹೆರಿಗೆ ಕೋಣೆ (ಪ್ರಸವಾಗಾರದಂತೆ ನಿಷಿದ್ಧಾನ್ಯಪ್ರವೇಶಮುಂ ರಾಜಭವನದಂತೆ ಕೃತರಕ್ಷಾ ವಿಧಿಯುಂ: **ಆದಿಪು,** ೧೩. ೪೬ ವ)

ಪ್ರಸಾಧನ – [ನಾ] ಅಲಂಕಾರ (ವಿದ್ಯಾಧರಪ್ರಸಾಧನಂ ಎನಗಿಂದಿನೊಳಿನಿತೆಂಬಂತೆ ನೆಱೆಯೆ ಕೆಯ್ಗೆಯ್ಯೆ: **ಆದಿಪು,** ೨. ೫೦ ವ)

ಪ್ರಸಾಧನಗ್ರಹಣ – [ನಾ] ಒಡವೆ ಧರಿಸುವಿಕೆ (ಮತ್ತೊರ್ಬಳ್ ಪ್ರಸಾಧನಗ್ರಹಣಪ್ರಸ್ತಾವದೊಳ್: **ಆದಿಪು,** ೧೧. ೨೧ ವ)

ಪ್ರಸಾಧನಶಾಲೆ – [ನಾ] ನೇಪಥ್ಯಗೃಹ, ಅಲಂಕಾರಗೃಹ (ಪಂಚರತ್ನ ಪ್ರಭಾಪ್ರಸಾದಿತ ಪ್ರಸಾಧನಶಾಲೆಯೊಳಗೆ ಸ್ವಯಂಪ್ರಭೆಯಂ ಆನೆ ಪಸದನಂಗೊಳಿಸುತ್ತುಮಿರ್ದು: **ಆದಿಪು,** ೪. ೧೧ ವ)

ಪ್ರಸಾಧಿತ – [ಗು] ಅಲಂಕಾರಗೊಂಡ (ಅಂತು ನಿಷ್ಪನ್ನಮಜ್ಜನಂ ವಿನಿಹಿತನೀರಾಜನನುಮಾಗಿ ಸುರರಾಜನ ಸಮರ್ಪಿತ ಸಂತಾನಕುಸುಮದಾಮಾಂಬರ ಭೂಷಣಪ್ರಸಾಧಿತಂ: **ಆದಿಪು,** ೮. ೭೧ ವ); [ಗು] ಚೆನ್ನಾಗಿ ಸಾಧಿಸಲ್ಪಟ್ಟ (ಪರಸ್ಪರವಿರೋಧ ಅಧಿಕ್ಷೇಪ ಹರ್ಷಿತ ಮಾರ್ಗ ಪ್ರಹಸ್ತ ಪ್ರಸಾಧಿತ ಘೋರಸಂಗ್ರಾಮರುಂ: **ಪಂಪಭಾ,** ೧೩. ೯೨ ವ)

ಪ್ರಸಾರ – [ನಾ] ಹರಡುವುಕೆ (ಸಾಮಂತಸೀಮಂತಿನೀ ಜನಸಮ್ಮರ್ದದಿಂ ಉತ್ಸವದ್ವಜಪಟಪ್ರಸಾರದಿಂ: **ಆದಿಪು,** ೮. ೩೬)

ಪ್ರಸೂತಿಕಾಲ – [ನಾ] ಹೆರಿಗೆಯ ಸಮಯ (ಅಂತು ಗರ್ಭನಿರ್ಭರ ಪ್ರದೇಶದೊಳ್ ಅರಾತಿಗಳ್ಗೆ ಅಂತಕಾಲಂ

ದೊರೆಕೊಳ್ವಂತೆ ಪ್ರಸೂತಿಕಾಲಂ ದೊರೆಕೊಳೆ: **ಪಂಪಭಾ,** ೧. ೧೨೬ ವ)

ಪ್ರಸೂತಿಗೃಹ – [ನಾ] ಹೆರಿಗೆಯ ಮನೆ (ಮರುದೇವೀ ವಿಳಸತ್ಪ್ರಸೂತಿಗೃಹಮಂ ರತ್ನಪ್ರಭಾಭಾರಸುರಮಂ ಪೊಕ್ಕು: **ಆದಿಪು**, ೭. ೪೪)

ಪ್ರಸೂನ – [ನಾ] ಹೂವು, ಮೊಗ್ಗು (ದೆಸೆಗಳ ಮೇರೆಯಂ ನಿಜೆಸಿ ಪೋಪುದುಂ ಆಭರಣಪ್ರಸೂನಸದ್ವಸನವಿಲೇಪನಾದಿಗಳೊಳಂ ಕೆಲವಂ ಗುಜೆಮಾಡಿಕೊಂಡು: **ಆದಿಪು**, ೬. ೮)

ಪ್ರಸ್ತಾವ – [ನಾ] ಸಂದರ್ಭ (ಎಂಬುದುಂ ಆ ಪ್ರಸ್ತಾವದೊಳ್ ಶ್ರೀಮತಿ .. .. ಮನಂಗೊಂಡು ಕೇಳಲ್ ತಗುಳ್ದಳ್: **ಆದಿಪು**, ೩. ೮೫ ವ); [ನಾ] ಸಮಯ (ಪರಶುರಾಮಂ ಮಱೆದು ಒರಗಿದಾ ಪ್ರಸ್ತಾವದೊಳ್ ಆ ಮುನಿಗೆ ಮುನಿಸಂ ಮಾಡಲೆಂದು ಇಂದ್ರಂ ಉಪಾಯದೊಳ್ ಅಟ್ಟಿದ ವಜ್ರಕೀಟಂಗಳ್: **ಪಂಪಭಾ,** ೧. ೧೦೪ ವ)

ಪ್ರಸ್ತಾವನಾ – [ನಾ] ಆರಂಭ (ಇಂ ಬೆಸಸಿಂ ಭಾರತಿಕಂಗೆ ನಾಟ್ಯಘಟನ ಪ್ರಸ್ತಾವನಾಟೋಪಮಂ: **ಆದಿಪು,** ೯. ೧೨); [ನಾ] ಸಂದರ್ಭ, ನಾಟಕದ ಒಂದು ಭಾಗ (ನಾಂದೀ ಪ್ರರೋಚನಾ ಪ್ರಸ್ತಾವನಾ ಇತಿವೃತ್ತ ಸಂಧಿ ಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ: **ಪಂಪಭಾ,** ೨. ೩೪ ವ)

ಪ್ರಸ್ಥಾನ – [ನಾ] ಪ್ರಯಾಣ (ಕಂಚ ಆಕಸ್ಮಿಕ ಪಾಂಸುಪಲ್ಲವ ಜಳಸ್ಯಂದೀ ಸದಾಸಿಂಧುರ್ ಅಪ್ರಾಗೇಯಂ ಪ್ರಿಯಗಳ್ಗಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ,** ೯. ೯೭)

ಪ್ರಸ್ಫುರತ್ – [ಗು] ಹೊಳೆಯುವ (ದೀಪ್ತಕಂದರ್ಪದರ್ಪ ಕ್ಷುಭಿತಗಳನಿನಾದಂ ಪ್ರಸ್ಫುರತ್ ಘರ್ಮವಾರಿ ಪ್ರಭವಂ: **ಪಂಪಭಾ,** ೫. ೨೮)

ಪ್ರಹನ್ಯಮಾನ – [ಗು] ನುಡಿಸುವ, ಬಾಜಿಸುವ (ಯೌವನಮದಮುದಿತ ಮಾರ್ದಳಿಕ ವಾಂಶಿಕ ಪ್ರಹನ್ಯಮಾನ ವಾದ್ಯ ಮಾನ ಮೃದಂಗ ವಂಶನಿನದಲಯಚ್ಛಂದ ಸುಂದರನಟತ್ಸುಂದರೀ ಸಂದೋಹಮುಂ: **ಆದಿಪು**, ೭. ೩೭. ವ)

ಪ್ರಹರಣ – [ನಾ] ಏಟು, ಹೊಡೆತ (ಅರವಿಂದಬಾಧ'ವತನೂಜನ ಮಹಾಪ್ರಹರಣಹತಿಯೊಳ್ ಯಮನಂದನನ ನೋವುಮಂ ಆತ್ಮೀಯಬಲದ ನಾಯಕರ ಸಾವುಮಂ ಅಱೆದು: **ಪಂಪಭಾ,** ೧೨. ೧೨೦ ವ)

ಪ್ರಹರಣಕ್ಷಮಾ – [ನಾ] ಹೊಡೆದಾಟದ ಪಟುತ್ವ (ಕ್ಷತ್ರಿಯಜಾತಿಗೆ ಸತ್ಯ ತ್ಯಾಗ' ಪ್ರಜಾಪರಿಪಾಲನ ಶರಣಾಗತರಕ್ಷಣ ಪ್ರಹರಣಕ್ಷಮಾ ಆದಿಗುಣಾಚರಣಮುಮಂ: **ಆದಿಪು,** ೮. ೭೩ ವ)

ಪ್ರಹಸ್ತ – [ನಾ] ಚಾಚಿದ ಹಸ್ತ (ಪರಸ್ಪರ ವಿರೋಧ ವಿಕ್ಷೇಪ ಹರ್ಷಿತ ಮಾರ್ಗಪ್ರಹಸ್ತಪ್ರಾಸಾಧಿತಘೋರಸಂಗ್ರಾಮರುಂ: **ಪಂಪಭಾ,** ೧೩. ೯೨ ವ)

ಪ್ರಹಿತ – [ಗು] ಕಳುಹಿಸಲ್ಪಟ್ಟ (ಅಮರಾಧಿಪಪ್ರಹಿತ ಪ್ರತಿದಿನ ಪ್ರವರ್ಧಮಾನ ಸುರತರುಪ್ರಸೂನ ಗ್ರಥಿತ ಸುರಭಿದಾಮ: **ಆದಿಪು**, ೮. ೩ ವ)

ಪ್ರಳಯ – [ನಾ] ವಿನಾಶ (ಪ್ರಳಯದ ಮೂರಿಯುಂ ಆಕಾಶದ ಕವಿಯುಂ ನೆಲದ ಕಲ್ಲೆಯುಂ ಮುನ್ನಮೆ ಮೇರೆದಪ್ಪುವುದುಮಂ: **ಪಂಪಭಾ,** ೧೨. ೧೯ ವ)

ಪ್ರಳಯದುಳ್ಕ – ವಿನಾಶಕಾರಕವಾದ ಉಲ್ಕೆ (ಆಗಳ್ ಪ್ರಳಯದುಳ್ಕಮುಳ್ಕುವಂತೆ ತನ್ನೆಚ್ಚಂಬು ಮುನಿಕುಮಾರನ ಕಣ್ಣೊಳಮೆರ್ದೆಯೊಳಂ ಉಳ್ಕೆ: **ಪಂಪಭಾ,** ೧. ೧೧೧ ವ)

ಪ್ರಳಯಾನಳ – [ನಾ] ಪ್ರಳಯಕಾಲದ ಬೆಂಕಿ (ಎಂಬತ್ತುನಾಲ್ಕು ಲಕ್ಕ ಬಂಡಿಯೊಳ್ ತಡತಂಡದೆ ತೀವಿದ ಅಕಾಂಡಪ್ರಳಯಾನಳ ವಿಸ್ಫುಲಿಂಗೋಪಮಾನಂಗಳಪ್ಪ ನಿಶಿತಕಾಂಡಂಗಳಿಂದೊಡ್ಡಿದ ಚತುರ್ಬಲಂಗಳ ಮೆಯ್ಯೊಳ್: **ಪಂಪಭಾ,** ೧೧. ೧೯ ವ)

ಪ್ರಾಂಶು – [ಗು] ಉನ್ನತ, ಎತ್ತರವಾದ (ಸಾಲ ಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಥಳಂ: **ಪಂಪಭಾ,** ೧. ೬೮)

ಪ್ರಾಕಟಂ ಮಾಡು – [ಕ್ರಿ] ಪ್ರಕಟವಾಗಿ ತೋರಿಸು (ತನ್ನ ದೋರ್ಗರ್ವದ ಅಗುರ್ವಂ ಪ್ರಾಕಟಂ ಮಾಡುವ ಬಗೆಯೊಳಿದಂ ಪತ್ತಿ ಕಿಟಿಗ್ಕೊತ್ತಿ ಪೊತ್ತು ಎತ್ತಿದೊಡೆ: **ಪಂಪಭಾ,** ೭. ೭೪)

ಪ್ರಾಗಲ್ಭ್ಯ – [ನಾ] ಪ್ರೌಢಿಮೆ (ಸುಹೃದ್ಬಲಕಂ ಮಾರ್ವಲಕಂ ಗುಣಾರ್ಣವ ಶರಪ್ರಾಗಲ್ಭ್ಯಮಂ ತೋಱುವಂ: **ಪಂಪಭಾ,** ೩. ೩೩); [ನಾ] ಪ್ರೌಢಿಮೆಯುಳ್ಳವನು (ಕೃತಶಾಸ್ತ್ರರ್ ಧೃತಶಸ್ತ್ರರ್ ಅಪ್ರತಿಹತಪ್ರಾಗಲ್ಭ್ಯರ್ ಈಗಳ್ ಪೃಥಾಸುತರ್ ಉದ್ಯೋಗಮಂ ಎತ್ತಿಕೊಳ್ವ ದೆವಸಂ ಸಾರ್ಚಿತ್ತು: **ಪಂಪಭಾ,** ೮. ೮೭)

ಪ್ರಾಗ್ಜನ್ಮ – [ನಾ] [ಪ್ರಾಕ್+ಜನ್ಮ] ಹಿಂದಿನ ಹುಟ್ಟು (ಈ ಶಾರ್ದೂಲಂ ಪ್ರಾಗ್ಜನ್ಮದೊಳ್ ಈ ವಿಷಯದ ಹಸ್ತಿನಾಪುರದ ಪರದಂ ಧನದತ್ತಂಗಂ ಆತನ ಪರದಿತಿ ಧನದತ್ತೆಗಂ ಉಗ್ರಸೇನನೆಂಬೊಂ ತನೂಜಂ: **ಆದಿಪು**, ೫. ೧೪ ವ)

ಪ್ರಾಗ್ಭಾರಭೂತಳ – [ನಾ] [ಜೈನ] ಸಿದ್ಧಕ್ಷೇತ್ರ (ಭರತಂ ದರ್ಶನದೊಳ್ ಮಂದರಮಾ ಪ್ರಾಗ್ಭಾರಭೂತಳಂಬರೆಗಂ ನೀಳ್ದಿರೆ ಕಂಡು ವಿಸ್ಮಿತಾಂತಃಕರಣಂ: **ಆದಿಪು**, ೧೬. ೪೧)

ಪ್ರಾಗ್ವಿದೇಹ – [ನಾ] ಪೂರ್ವ ವಿದೇಹ (ದೇವನಲ್ಲಿಂ ತಳರ್ದು ಜಂಬೂದ್ವೀಪದ ಪ್ರಾಗ್ವಿದೇಹದ ಸೀತಾನದಿಯ ಬಡಗಣ ತಡಿಯ ಪುಷ್ಕಳಾವತೀವಿಷಯದ ಪ್ರತಿಬದ್ಧ ಪುಂಡರೀಕಿಣಿಯೊಳ್: **ಆದಿಪು**, ೬. ೨೦ ವ)

ಪ್ರಾಙ್ಮುಖ – [ನಾ] [ಪ್ರಾಕ್+ಮುಖ] ಪೂರ್ವಾಭಿಮುಖ (ಮುನ್ನಮೆ ನಿಜೆಸಿದ ಮಣಿಖಚಿತೋನ್ನತ ಹರಿಪೀಠದೊಳ್ ಜಗತ್ಪತಿಯಂ ಮಾನೋನ್ನತಂ ಪಾಙ್ಮುಖದಿಂದಂ ನತಸುರಮೌಳಿ ಲಾಲಿತಾಂಘ್ರಿದ್ವಯನಂ: **ಆದಿಪು**, ೮. ೬೮)

ಪ್ರಾಚ್ಯಶೈಲ – [ನಾ] ಪೂರ್ವದ ಬೆಟ್ಟ (ಮನುವಂಶ ಪ್ರಾಚ್ಯಶೈಲದ್ಯುಮಣಿ .. .. ಜನಿಯಿಸಿದಂ ಚಕ್ರವರ್ತಿಪ್ರಧಾನಂ: **ಆದಿಪು**, ೮. ೩೯)

ಪ್ರಾಚ್ಯಾಚಲ – [ನಾ] ಪೂರ್ವದ ಬೆಟ್ಟ (ಆಸ್ಥಾನಮಂಡಪ ಮಂಡನೀಭೂತ ಮಣಿಮಯಾಸನ ಪ್ರಾಚ್ಯಾಚಳ ಶಿಖಂಡರತ್ನಮಾಗಿರ್ದ ಕುಮಾರನಂ: **ಆದಿಪು**, ೮. ೮ ವ)

ಪ್ರಾಚ್ಯಾರ್ಣವ – [ನಾ] ಪೂರ್ವಸಮುದ್ರ (ಮತ್ತಂ ಪ್ರಾಚ್ಯಾರ್ಣವತಟ ನಿಕಟವರ್ತಿಗಳಪ್ಪ ಪ್ರಚಂಡ ಮಂಡಳಿಕರ್ ಭರತೇಶ್ವರ ಚಕ್ರವರ್ತಿಯ ಬರವಂ ಕೇಳ್ದು: **ಆದಿಪು**, ೧೨. ೬೭ ವ)

ಪ್ರಾಜ್ಯ – **[ಗು]** ಶ್ರೇಷ್ಠ (ಮುಕ್ತಿಸಾಮ್ರಾಜ್ಯದೊಳ್ ಅತಿಪ್ರಾಜ್ಯ ಸಂಜನಿತನಿಸ್ಪೃಹನಂ ಅನವರತ ಕಲ್ಯಾಣಪರಿಮಿತದೊಳ್ .. .. ನಿಜೆಸುವುದುಂ: **ಆದಿಪು**, ೮. ೮ ವ); **[ಗು]** ಉನ್ನತವಾದ (ವಿದಿತಂ ಮೂರ್ಧಾಭಿಷಿಕ್ತರ್ ಪಲಬರರಸುಗಳ್ ಪ್ರಾಜ್ಯಸಾಮ್ರಾಜ್ಯ ಲಕ್ಷ್ಮೀಪದಮಂ ಕೈಕೊಂಡು: **ಆದಿಪು**, ೯. ೫೮); **[ಗು]** ಜನಭರಿತವಾದ, ವಿಶಾಲವಾದ (ಬೇಡಮ್ಮ ನೀನುಂ ತಪೋವನಮಂ ಸಾರ್ವುದುಂ ಆನದಾರ್ಗೆ ಮೆಱೆವೆಂ ಮತ್ ಪ್ರಾಜ್ಯಸಾಮ್ರಾಜ್ಯಮಂ: **ಆದಿಪು**, ೧೪. ೧೩೨)

ಪ್ರಾಣತ – [ನಾ] [ಜೈನ] ಹದಿನಾರು ಸ್ವರ್ಗಗಳಲ್ಲಿ ಹದಿನಾಲ್ಕನೆಯದು (ಅತಿಬಳಕೃಷ್ಣಂ ಗತಜೀವಿತನಾಗೆ ಮಹಾಬಳಂ ಮಹಾವ್ರತದಿಂದನ್ವಿತಮತಿ ಸಮಾಧಿಗುಪ್ತವ್ರತಿಯುಪದೇಶದೊಳೆ ಪುಟ್ಟಿದಂ ಪ್ರಾಣತದೊಳ್: **ಆದಿಪು**, ೩. ೭೭)

ಪ್ರಾಣದಿಂದೊಳರ್ – ಪ್ರಾಣದಿಂದ [ಕೂಡಿ] ಇದ್ದಾರೆ, ಬದುಕಿದ್ದಾರೆ (ಮುಳಿಸಂ ಮಾಡಿಯುಂ ಏವಮಂ ಪಡೆದುಂ ಇನ್ನೀ ಪಂದೆಗಳ್ ಪ್ರಾಣದಿಂದೊಳರ್: **ಪಂಪಭಾ**, ೭. ೧೪)

ಪ್ರಾಣಪರಿತ್ಯಾಗಂಗೆಯ್ – **[ಕ್ರಿ]** ಜೀವವನ್ನು ಬಿಡುವುದು, ಸಾಯುವುದು (ಎನಗೆ ಅಂತ್ಯಕಾಲಮೆಂದು ದುರ್ಯೋಧನಂ ಪ್ರಾಣಪರಿತ್ಯಾಗಂಗೆಯ್ದಂ: **ಪಂಪಭಾ**, ೧೩. ೧೦೭ ವ)

ಪ್ರಾಣವಲ್ಲಭರ್ – [ನಾ] ಪ್ರಾಣಪಿಯರು (ಒಡನಳುರೆ ಕಿರ್ಚು ತೋಳ ಸಡಿಲಿಸದೆ ಆ ಪ್ರಾಣವಲ್ಲಭರ್ ಪ್ರಾಣಮಂ ಅಂದು ಒಡಗಳೆದರ್ ಓಪರೋಪರೊಳ್ ಒಡಸಾಯಲ್ ಪಡೆದರ್ ಇನ್ನವುಂ ಸಯ್ಪೊಳವೇ: **ಪಂಪಭಾ**, ೫. ೯೩)

ಪ್ರಾಣಾಚಾರ್ಯ – [ನಾ] ಪ್ರಾಣರಕ್ಷಕ ವೈದ್ಯ (ರಾಜಹಂಸವಿಳಾಸದಿಂ ಬಿಜಯಂಗೆಯ್ದು ಜಾಂಗಳಿ ವಿದ್ಯಾಪ್ರವೀಣ ಪ್ರಾಣಾಚಾರ್ಯಪರಿವೃತಂ: **ಆದಿಪು**, ೧೧. ೨೬ ವ) [ಎಲ್. ಬಸವರಾಜು ಆವೃತ್ತಿ]

ಪ್ರಾಣೇಶೆ – [ನಾ] ಪ್ರಾಣವಲ್ಲಭಳು (ಎಲ್ಲಿ ಪುಟ್ಟಿದಳೊ ಮತ್ ಪ್ರಾಣೇಶೆ ಎಂದು ಇಲ್ಲದ ಉಬ್ಬೆಗಮಂ ಭಾವಿಸಿ ಪಲವನಾ ಶೈಲೂಷವೇಷಂಗಳಂ: **ಆದಿಪು**, ೩. ೮೮)

ಪ್ರಾತಿಹಾರ್ಯ – [ನಾ] [ಜೈನ] ಕೇವಲಜ್ಞಾನ ಪಡೆದ ತೀರ್ಥಂಕರನಿಗೆ ಒದಗುವ ಅಶೋಕವೃಕ್ಷ, ದಿವ್ಯಪುಷ್ಪ ವೃಷ್ಟಿ, ದಿವ್ಯಧ್ವನಿ, ಚಾಮರ, ಆಸನ, ಭಾಮಂಡಲ, ದೇವದುಂದುಭಿ, ಛತ್ರಗಳೆಂಬ ಎಂಟು ಸವಲತ್ತುಗಳು (ಪುರುಪರಮೇಶ್ವರ ನಂದನ ದೊರೆಕೊಳಿಸುಗೆ ನಿನಗೆ ಪುರುಪರಮೇಶ್ವರನ ನಿರತಿಶಯಗುಣಪರಿಕರಮುಂ ತತ್ ಪ್ರಾತಿಹಾರ್ಯಮುಂ ಮಂಗಳಮಂ: **ಆದಿಪು**, ೧೨. ೫೩)

ಪ್ರಾತೀತಿಕ – [ನಾ] ಅರ್ಥಪ್ರತೀತಿಯುಳ್ಳದ್ದು (ವಿದಿತಂ ಪ್ರಾತೀತಿಕಂ ಕೋಮಳಂ ಅತಿಸುಭಗಂ ಸುಂದರಂ ಸೂಕ್ತಿಗರ್ಭಂ ಮೃದುಸಂದರ್ಭಂ: **ಆದಿಪು**, ೧. ೨೬)

ಪ್ರಾದುರ್ಭಾವ – [ನಾ] ಸಫಲತೆ, ಸಿದ್ಧಿ (ಏನಾದುದೋ ಕಾರ್ಯಸಿದ್ಧಿ ಪ್ರಾದುರ್ಭಾವಕ್ಕೆ ವಿಘ್ನಂ ಪಲವೊಳವು ಅಜೆಯಲ್ಬರ್ಕುಮೇ: **ಪಂಪಭಾ**, ೮. ೩೦)

ಪ್ರಾಭಾತಿಕಕ್ರಿಯೆ – [ನಾ] ಬೆಳಗಿನ ಸಮಯದ ಕೆಲಸ (ಕೇವಲಜ್ಞಾನದಿಂ ವಿಶೇಷನಿಶ್ಚಯಮಂ ಮಾಡುವೆನೆಂದು ಸಕಳ ಪ್ರಾಭಾತಿಕ ಕ್ರಿಯೆಯಂ ನಿರ್ವರ್ತಿಸಿ: **ಆದಿಪು**, ೧೫. ೨೧ ವ)

ಪ್ರಾಭೃತ – [ನಾ] ಉಡುಗೊರೆ (ಬಾಹುಬಲಿಕುಮಾರಂಗೆ ಲೇಖಮಂ ಉನ್ಮಯೂಖರತ್ನಾಭರಣಪ್ರಾಭೃತ ಸಮೇತಮನಟ್ಟುವಂತು ಮಹಾಸಂಧಿವಿಗ್ರಹಿಗೆ ಬೆಸಸಿದೊಡೆ: **ಆದಿಪು**, ೧೪. ೪೩ ವ)

ಪ್ರಾಯಶ್ಚಿತ್ತ – [ನಾ] [ಜೈನ] ಅಭ್ಯಂತರತಪಗಳಲ್ಲಿ ಒಂದು; ತಿಳಿಯದೆ ನಡೆದಿರಬಹುದಾದ ತಪ್ಪಿನ ಪರಿಹಾರಕ್ಕೆ ನಡೆಸುವ ಚಿತ್ತಶೋಧನೆ (ಅಭ್ಯಂತರತಪಷಟ್ಕದೊಳಂ ಪ್ರಾಯಶ್ಚಿತ್ತ ವಿನಯ ವೈಪೃತ ಸ್ವಾಧ್ಯಾಯ ಧ್ಯಾನ ವ್ಯುತ್ಸರ್ಗಗಳಂ ಕೈಕೊಂಡು: **ಆದಿಪು**, ೬. ೩೩ ವ), ನೋಡಿ 'ಅಭ್ಯಂತರತಪಸ್ಸು'

ಪ್ರಾಯೋಗ್ಯ – [ನಾ] [ಜೈನ] ಕರ್ಮವು ಕಡಿಮೆಯಾಗುವುದು (ಮೋಕ್ಷಪ್ರಾಸಾದಾರೋಹಣ ನಿಶ್ರೇಣೀಭೂತ ಕ್ಷಪಕಶ್ರೇಣಿ ಪ್ರಾಯೋಗ್ಯ ಅಧಃಪ್ರವೃತ್ತಿಕರಣಪರಿಣತಂ ಅಪೂರ್ವಕರಣ ಕ್ಷಪಕಂ ಪ್ರಥಮಶುಕ್ಲಧ್ಯಾನಪರಿಣತನಾಗಿರ್ದ: **ಆದಿಪು**, ೧೦. ೧೪ ವ)

ಪ್ರಾಯೋಪಗಮನ – [ನಾ] [ಜೈನ] ರೋಗವಿದ್ದರೂ ಚಿಕಿತ್ಸೆಗೆ ಅವಕಾಶವೀಯದೆ, ನಿರಾಹಾರಿಯಾಗಿ ಮರಣವನ್ನು ಹೊಂದುವ ವ್ರತ (ಪರಮಾಯುಷ್ಯಾಂತಂಬರಂ ನಿರಾಕುಳಮಾಗಿರ್ಪಾಯಿರವಿನ ಜೈನಾಭಿಪ್ರಾಯಂ ಪ್ರಾಯೋಪಗಮನದಿಂ ತೊರೆಯಿಸಿದಂ: **ಆದಿಪು**, ೨. ೫೩)

ಪ್ರಾರಂಭ – [ನಾ] ಉದ್ಯಮ, ಕಾರ್ಯ (ಸಕಳಕ್ಷತ್ರಿಯಮೋಹದಿಂ ನಿಜಭುಜಪ್ರಾರಂಭದಿಂ ಪೋಗೆ ತಾಗಿ ಕೆಲರ್ ನೊಂದೊಡೆ: **ಪಂಪಭಾ**, ೧. ೭೪)

ಪ್ರಾರಬ್ಧ – **[ಗು]** ಪ್ರಾರಂಭಿಸಲ್ಪಟ್ಟ (ಪಟುನಟನ ಪ್ರಾರಬ್ಧಸಂಗೀತಕಂ ತಣಿದಂ ಸಂತತಮಿಂತು ದಿವ್ಯಸುಖದೊಳ್ ಸಂಸಾರಸಾರೋದಯಂ: **ಆದಿಪು**, ೨. ೭೯)

ಪ್ರಾರ್ಥಿತಾರ್ಥಪ್ರದಂ – [ನಾ] ಬಯಸಿದ ಇಷ್ಟಾರ್ಥಗಳನ್ನು ಕೊಡುವವನು (ಅಮರಗಿರಿನಿಭಂ ಪ್ರಾರ್ಥಿತಾರ್ಥಪ್ರದಂ ಮಾಣ್ದಿರದೆ ಆದಿಬ್ರಹ್ಮನೆಟ್ಟಿರ್ಪುದನೆ ಕನಸುವೇಟ್ಟಿಪ್ಪುದೆಂದು: **ಆದಿಪು**, ೯. ೧೨೯ ವ)

ಪ್ರಾರ್ಥಿಸು – **[ಕ್ರಿ]** ಬೇಡಿಕೊ (ಅಸುರಾಂತಕನುಂ ತಾನುಂ ಎಂತಾನುಂ ಪ್ರಾರ್ಥಿಸಿದೊಡೆ ಒಡಂಬಟ್ಟ ಅಜಾತಶತ್ರುಗೆ: **ಪಂಪಭಾ**, ೧೨. ೧೩೪ ವ)

ಪ್ರಾವರಣ – [ನಾ] ಉತ್ತರೀಯ (ಧಾನ್ಯನಿಚಯದೊಡನೆ ಅನೇಕ ಧಾನ್ಯಸದನಂಗಳುಂ ಕ್ಷೌಮದುಕೂಲಾದಿ ದಿವ್ಯವಸನ ವಿವಿಧ ಪ್ರಾವರಣವಿಶೇಷಂಗಳುಂ: **ಆದಿಪು**, ೧೫. ೩ ವ)

ಪ್ರಾಶ್ನಿಕ – [ನಾ] ಪ್ರಶ್ನಿಸುವವನು (ಸಭಾಪತಿಯಾಗಿರ್ದ ಮಹಾಬಳನುಮಂ ಪ್ರಾಶ್ನಿಕರಾಗಿರ್ದ ವಿದ್ವಜ್ಜನಮುಮಂ ಸಭಾಜನಮುಮಂ ತಿಳಿಪಿ: **ಆದಿಪು**, ೨. ೧೦ ವ)

ಪ್ರಾಸ – [ನಾ] ಒಂದು ಆಯುಧ, ಕೊಂತ (ನಿಬಿಡನಿಪೀಡಿತ ಪ್ರಾಸ ಮುಷ್ಟಿದುರ್ಧರ ಅಶ್ವಾರೋಹಕತುರಂಗಬಲ ಅವಗಾಢಮುಂ: **ಆದಿಪು**, ೧೪. ೯೩ ವ)

ಪ್ರಾಸಾದ – [ನಾ] ಮನೆ, ಕಟ್ಟಡ (ತನ್ನ ನುಡಿದ ನುಡಿವಳಿಯೆಂಬ ಪ್ರಾಸಾದಕ್ಕಧಿಷ್ಠಾನಂಗಟ್ಟುವಂತೆ ಚಿತ್ರಾಂಗದಂಗೆ ಪಟ್ಟಮಂ ಕಟ್ಟಿ: **ಪಂಪಭಾ,** ೧. ೭೩ ವ); [ನಾ] ಉಪ್ಪರಿಗೆ (ಆ ನೆಲೆಯ ಚೌಪಳಿಗೆಗೊಳ್ ಅನೇಕ ಪ್ರಾಸಾದದ ಮೇಲೆ ಚಿತ್ರದ ಪಟಿವಿಗೆಗಳಂ ತುಱುಗಲಂ ಬಂಬಲ್ಗಳುಮಾಗೆ ಕಟ್ಟಿಸಿ: **ಪಂಪಭಾ,** ೩. ೪೦ ವ)

ಪ್ರಾಳೇಯಾಚಲ – [ನಾ] ಹಿಮವತ್ಪರ್ವತ (ಶಿಖರನಾಮೋದ್ಯನ್ನಗಂ ಪ್ರಸ್ಫುರತ್ ಪ್ರಾಳೇಯಾಚಲಂ ಈತಂ ಎಮ್ಮವೊಳ್ ಇಳಾಭೃನ್ನಾಥಂ ಎಂದು: **ಪಂಪಭಾ,** ೧೪. ೩೩)

ಪ್ರಿಯಂಗು – [ನಾ] ನವಣೆ (ಈ ಭಾಗದೊಳ್ ಅಭಿನವ ಪ್ರಿಯಂಗು ಶ್ಯಾಮಾಂಗಂ ಅರ್ಧಚಂದ್ರ ಬುದ್ಬುದ ವ್ಯಾಕೀರ್ಣ ತ್ರಿಶೂಲ: **ಆದಿಪು,** ೧೩. ೪೫ ವ)

ಪ್ರಿಯಗಳ್ಳ – [ನಾ] ಎರಡನೆಯ ಅರಿಕೇಸರಿಯ ಬಿರುದು (ಧುರದೊಳ್ ಮೂಱುಂ ಲೋಕಂ ನೆರೆದಿರೆಯುಂ ಕುಡುವ ಪೊಟ್ಟಿಱಿಸೊಳ್ ಮೇರುವೆ ಮುಂದಿರೆಯುಂ ಬೀರದ ಬಿಯದಂತರಕ್ಕೆ ಕಿಱಿದೆಂದು ಚಿಂತಿಪಂ ಪ್ರಿಯಗಳ್ಳಂ: **ಪಂಪಭಾ,** ೧. ೪೮)

ಪ್ರಿಯದಯಿತೆ – [ನಾ] ಪ್ರಿಯಕರಳು (ಪ್ರಿಯದಯಿತೆಯೆನಾಂ ನಿನಗೆಂಬೆಯೆಂದು ನೀನೆನ್ನಿಂತಗಲ್ದಿರ್ಪುದೆ ವಿಸ್ಮಯಮಂ ಮಾಡಿದಪುದು: **ಆದಿಪು,** ೪. ೧೬)

ಪ್ರಿಯದೊಳ್ – ಪ್ರೀತಿಯಿಂದ (ಕೆಯ್ಯಂ ಪಿಡಿದು ಬಲ್ಲಿದಿರೆ ಎಂದು ಪ್ರಿಯದೊಳಂ ಬಿರ್ದಿನೊಳಂ ಸಂತಸಂಬಡಿಸಿ: **ಪಂಪಭಾ,** ೬. ೩೩ ವ)

ಪ್ರಿಯೋದ್ಭವ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಜಾತಕರ್ಮ (ಪ್ರಿಯೋದ್ಭವ .. .. ಆಗ್ರನಿರ್ವೃತಿಯೆಂಬಯ್ವತ್ತೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಪ್ರೀಣನಕರ – [ನಾ] ಸಂತೋಷದಾಯಕ (ಪ್ರಾಣಿಹಿತಮಂ ವಿನೇಯಪ್ರೀಣನಕರಮಂ ಜಗತ್ತ್ರಯಪ್ರಕಟಿತಕಲ್ಯಾಣಮಂ ನೆಗಟ್ದಿ ಆದಿಪುರಾಣಮಂ ಅಪರಿಮಿತಭಕ್ತಿಯಿಂ ವಿರಚಿಸುವೆಂ: **ಆದಿಪು,** ೧. ೪೨)

ಪ್ರೀಣಿತ – [ಗು] ಸಂತುಷ್ಟಿಗೊಂಡ (ಅಂತತಿಪ್ರಮೋದ ಪ್ರೀಣಿತಾಂತಃಕರಣನಾಗಿ: **ಆದಿಪು,** ೯. ೧೩೨ ವ)

ಪ್ರೀತಿ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಗರ್ಭವತಿಯು ಮೂರನೇ ತಿಂಗಳಲ್ಲಿ ಮಾಡುವ ಜಿನಪೂಜೆ (ಆಧಾನ ಪ್ರೀತಿ .. .. ಆಗ್ರನಿರ್ವೃತಿಯೆಂಬಯ್ವತ್ತೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಪ್ರೀತಿಕರಣ – [ನಾ] ಪ್ರೀತಿಯನ್ನುಂಟುಮಾಡುವಂಥದು (ದುರಿತಘನತಿಮಿರದಶಶತಕಿರಣಂ ಅತಿಪ್ರೀತಿಕರಣಂ ಅಖಿಳವಿನೇಯೋದ್ಧರಣಂ ಎಮಗಭವ ಭವಭಯಹರಣಂ ಭವದೀಯ ಸಮವಸರಣಂ ಶರಣಂ: **ಆದಿಪು,** ೧೪. ೩೮)

ಪ್ರೇಂಖತ್ – [ಗು] ಒಲೆದಾಡುವ (ಮಾಣಿಕ್ಯಮಾಳಾಂಶುಪಿಂಜರಿತಂ ಪ್ರೇಂಖತ್ ಅಸಂಖ್ಯವಾಜಿವಿಳಸತ್ ವೀಚೀಚಯಂ: **ಆದಿಪು,** ೧೪. ೯೨)

ಪ್ರೇಂಖೋಲ – [ನಾ] ತೂಗಾಟ (ಪ್ರೇಂಖೋಲಾನೇಕ ನೇತ್ರಪಟ್ಟಿಕಾ .. .. ಲಾಟಬಲಂ: **ಆದಿಪು,** ೧೩. ೪೫ ವ)

ಪ್ರೇಂಖೋಳಿತ – [ಗು] ತೂಗಾಡುವ (ಅತಿಪ್ರಚುರಚಳತ್ ಅವನಿಪಾಳಸಂಚಳತ್ ಚಾಮರಮರುತ್ ಪ್ರೇಂಖೋಳಿತ ಆಭರಣವಿಚಿತ್ರನೇತ್ರವೈಜಯಂತಿಕಾಂಚಳನುಂ: **ಆದಿಪು,** ೧೨. ೬೧ ವ)

ಪ್ರೇಕ್ಷಣ – [ನಾ] ನೋಟ (ಅಸಮಪ್ರೇಕ್ಷಣವೀಕ್ಷಣೈಕರಸಮ ಪಾರ್ದಿರ್ದುದೀ ರಾಜಪುತ್ರಸಮೂಹಂ: **ಆದಿಪು,** ೯. ೧೨)

ಪ್ರೇಕ್ಷಾಗೃಹ – [ನಾ] ಪ್ರದರ್ಶನಶಾಲೆ (ವರ್ಧಮಾನಮೆಂಬೀಕ್ಷಣಪ್ರಿಯ ಪ್ರೇಕ್ಷಾಗೃಹಮುಂ: **ಆದಿಪು,** ೧೫. ೩ ವ)

ಪ್ರೇತ – [ನಾ] ಹೆಣ (ಬಿಡದೆ ಅಟಿಲ್ವ ಬಂಧುಜನದ ಒಟ್ಟುಡಿಯದ ಕಣ್ಣೀರ ಪೂರಂ ಆ ಪ್ರೇತಮಂ ಓಗಡಿಸದೆ ಸುಡುವುದು ಗಡಂ ಇನ್ನುಡುಗುವುದೀ ಶೋಕಮಂ ಸರೋಜದಳಾಯತಾಕ್ಷೀ: **ಪಂಪಭಾ,** ೨. ೨೮)

ಪ್ರೋದ್ದಾಮ – [ಗು] ಅತಿಶಯವಾದ (ಅತ್ರಿಯ ಪಿರಿಯ ಮಗಂ ಭುವನತ್ರಯ ಸಂಗೀತ ಕೀರ್ತಿ ಸೋಮಂ ಸಕಲ ಕ್ಷತ್ರಕುಲ ಪೂಜ್ಯನಮಳ ಚರಿತ್ರಂ ಪ್ರೋದ್ದಾಮ ಸೋಮವಂಶ ಲಲಾಮಂ: **ಪಂಪಭಾ,** ೧. ೬೧)

ಪ್ರೋದ್ಭೇದ – [ಗು] ಮುರಿದುಹೋದ (ಮಾದ್ಯತ್ ಗಜಗಂಡಕಷಣ ಪ್ರೋದ್ಭೇದದಿಂ ಸಾರ್ದು ಬಂದು ಇದಿರೊಳ್ ಕೂಡುವುದಿಲ್ಲಿ ಚಂದನರಸಂ ಕೆಂಬೊನ್ನ ಟಂಕಂಗಳೊಳ್: **ಪಂಪಭಾ,** ೪. ೨೨)

ಪ್ರೋದ್ಯತ್ – [ಗು] ಎತ್ತರವಾದ (ಸಾಲ ಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಥಳಂ: **ಪಂಪಭಾ,** ೧. ೬೮)

ಪ್ರೋನ್ನತಾಂಸ – [ನಾ] ಎತ್ತರವಾದ ಕೊರಳುಳ್ಳವನು [ಪ್ರೋನ್ನತ+ಅಂಸ] (ಏನೊಸೆದನೊ ಮನದೊಳ್ ಸೂಕ್ತಿಕರ್ಣಾವತಂಸಂ ಶ್ರೇಯಾಂಸಂ ಪ್ರೋನ್ನತಾಂಸಂ ಸುಕವಿಜನ ಮನೋಮಾನಸೋತ್ತಂಸಹಂಸಂ: **ಆದಿಪು,** ೯. ೧೩೨)

ಪ್ರೋಹ – [ನಾ] ಆನೆಯ ಭುಜಸ್ಥಲದ ನಡುವಣ ಅಂಗಭಾಗ (ಸುಸಂಚಿತ ಪ್ರೋಹ ಪಳಿಹಸ್ತಗಾತ್ರನುಂ ಪರಿಪೂರ್ಣಶ್ಲಿಷ್ಟ ಪಾರ್ಷ್ಣಿಯುಂ: **ಆದಿಪು,** ೧೨. ೫೬ ವ)

ಪ್ಲವ – [ನಾ] ಪ್ರವಾಹ (ನಿರ್ಭರಪೂರಮಾಗಿಯುಂ ಸ್ನಿಗ್ಧಾಶ್ರುಜಳಧಾರಾ ಜಳಪ್ಲವಮುಂ ಬಾರಿಸಲೆಂತುಂ ಆಱದು ವಲಂ ಕಾಳೋರಗಗ್ರಸ್ತನಂ: **ಆದಿಪು,** ೩. ೫೪); [ನಾ] ಅರವತ್ತು ಸಂವತ್ಸರಗಳಲ್ಲಿ ಒಂದು (ಜಗತ್ಪ್ರಕಟ ಪ್ಲವಸಂವತ್ಸರದ ಕಾರ್ತಿಕಂ ಮುದಮನೀಯೆ: **ಆದಿಪು,** ೧೬. ೭೩)

ಪ್ಲೋಷ – [ಗು] ಸುಡುವ, ಬೊಬ್ಬೆಯ (ಸದ್ಯಃ ಸಂತಾಪಿತ ಲೋಹಪುತ್ರಿಕಾಪರಿರಂಭಸಂಭೃತ ಪ್ಲೋಷಚಲಜ್ಜಾಂಗಳ ಗಳತ್ ರುಧಿರ: **ಆದಿಪು,** ೫. ೮೭ ವ)

ಫ

ಫಣಾಗಣಮಣಿಕಿರಣ – [ನಾ] ಹೆಡೆಗಳ ಸಮೂಹದ ರತ್ನದ ಕಾಂತಿ (ಆಗಳ್ ಅನಂತಂ ಅನಂತ ಫಣಾಗಣಮಣಿಕಿರಣಮೆಸೆಯೆ ದುಗ್ಧಾರ್ಣವದೊಳ್ ರಾಗದಿನಿರ್ಪಂತಿರ್ದಂ ಭೋಗಿ ತಟಿತ್ತತಿಸಿ ಬೆಳಗೆ ಕೆಯ್ದೀವಿಗೆಗಳ್: **ಪಂಪಭಾ,** ೪. ೫೩)

ಫಣಾಮಣಿ – [ನಾ] ಹೆಡೆಯ ಮಣಿ (ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂದ್ರಾಳಯದಿಂದಂ ಉರ್ಚಿದ ಫಣಾಮಣಿಮಂಗಳರಶ್ಮಿಯೋ **ಪಂಪಭಾ,** ೧. ೯೬)

ಫಣಾರತ್ನ – [ನಾ] ಫಣಾಮಣಿ (ದೀಪದೊಳ್ ಪನ್ನಗಪತಿಯ ಫಣಾರತ್ನದೀಪಂ ವಿತಾನಾವಳಿಯೊಳ್ ದಿವ್ಯಂ ವಿತಾನಂ ತುಱುಗಿದುವು: **ಆದಿಪು,** ೧೬. ೨)

ಫಣಿ – [ನಾ] ಹಾವು (ಮತ್ಸ್ಯ ಮಕರ ಕುಲಿಶ ಕಲಶ ಕುಳೀರ ವರಾಹ ವಾನರ ಕಂಠೀರವ ಚಮೂರು ಮಯೂರ ಗರುಡ ಫಣಿರಾಜಚಿಹ್ನಂಗಳಪ್ಪ: **ಆದಿಪು,** ೧೧. ೨೮ ವ)

ಫಣಿಕೇತನ – [ನಾ] ೞರ್ಪಧ್ವಜ, ದುರ್ಯೋಧನ (ಎಂಬುದುಂ ಬಟಿಕ್ಕಿನ ನುಡಿಗೆ ಸೈರಿಸಲಾಱದೆ ಫಣಿಕೇತನಂ ಇಂತೆಂದಂ: **ಪಂಪಭಾ,** ೧೩. ೨೩ ವ)

ಫಣಿಗೇಹ – [ನಾ] ಫಣಿಗೃಹ (ಫಣಿಫಣಾಸ್ಫುರಿತದೀಪಿಕಾವ್ಯೂಹಮಂ ಕ್ವಣಿತಮಣಿಕಿಂಕಿಣೀನಿನದ ಫಣಿಗೇಹಮಂ .. .. ನೋಡಿ: **ಆದಿಪು,** ೭. ೨೭ ರಗಳೆ)

ಫಣಿಪ್ರಭು – [ನಾ] ಫಣಿಪತಿ (ಫಣಿಪ್ರಭುಗಂ ಎತ್ತಮತ್ತಳಗಮಲ್ತೆ ರೂಪಸ್ತವಂ ಗುಣಸ್ತವಂ ಉದಾತ್ತವೃತ್ತ ಭವದೀಯ ವಸ್ತುಸ್ತವಂ: **ಆದಿಪು,** ೧೩. ೯೦)

ಫಣಿಫಣಾ – [ನಾ] ಹಾವಿನ ಹೆಡೆ (ಫಣಿಫಣಾಸ್ಫುರಿತ ಮಣಿದೀಪಿಕಾವ್ಯೂಹಮಂ: **ಆದಿಪು,** ೭. ೨೭ ರಗಳೆ)

ಫಣಿಭೂಷಣ – [ನಾ] ಹಾವುಗಳೆಂಬ ಆಭರಣ (ಮುಳಿಸು ಲಲಾಟನೇತ್ರಶಿಖಿ ಮೆಚ್ಚೆ ವಿನೂತ ರಸಪ್ರಸಾದಂ ಉಜ್ವಳಜಸಂ ಅಂಗಸಂಗತ ಲಸತ್ ಭಸಿತಂ ಪ್ರಭುಶಕ್ತಿ ಶಕ್ತಿ ನಿರ್ಮಳಮಣಿಭೂಷಣಂ ಫಣಿಭೂಷಣಂ ಆಗೆ: **ಪಂಪಭಾ,** ೧. ೨)

ಫಣಿರಾಜಕೇತನ – [ನಾ] ಫಣಿಪತಿಕೇತನ (ಅಪರಾಂಬುರಾಶಿಯೊಳ್ ಮುಟುಗುವ ತೀವ್ರದೀಧಿತಿವೊಲ್ ಆ ಕೊಳದೊಳ್ ಫಣಿರಾಜಕೇತನಂ ಮುಟುಗಿದಂ: **ಪಂಪಭಾ,** ೧೩. ೭೪)

ಫಣಿರಾಜಕೇತು – [ನಾ] ದುರ್ಯೋಧನ (ಮುಂದೆ ಬಂದು ಏಡಿಸುವಂತಿರೆ ಆಡಿದುದೊಂದು ಮರುಳ್ ಫಣಿರಾಜಕೇತುವಂ: **ಪಂಪಭಾ,** ೧೩. ೫೪)

ಫಣಿವೈರಿ – [ನಾ] ಹಾವಿನ ಶತ್ರು, ಗರುಡ (ಗಜ ವೃಷಭ ಅಂಕುಶ ಚಕ್ರ ಅಂಬುಜ ಹಂಸ ಮಯೂರ ಮತ್ಸ್ಯ ಫಣಿವೈರಿ ಮತಂಗಜರಿಪು ಚಿಹ್ನ ವಿಶಾಲಧ್ವಜಂಗಳಿಂ ಧ್ವಜಮಹೀತಳಂ ಸೊಗಯಿಸುಗುಂ: **ಆದಿಪು,** ೧೦. ೩೩)

ಫಣೀಂದ್ರ – [ನಾ] ಆದಿಶೇಷ (ಪಡೆಮೆಚ್ಚೆ ಗಂಡನ ಗಂಡಗಾಡಿಯಂ ಕಂಡು ಫಣೀಂದ್ರನ ಕನ್ನೆ ಕನಕಲತೆಯೆಂಬ ನಾಗಕನ್ನೆ ಕಣ್ಬೇಟಗೊಂಡು: **ಪಂಪಭಾ,** ೪. ೧೫ ವ)

ಫಣೀಂದ್ರಕೇತು – [ನಾ] ಸರ್ಪಕೇತನ, ದುರ್ಯೋಧನ (ಪೇಟದೊಡೆ ಪೋಗದಿರು ಈಶ್ವರನಾಣೆ ಎಂದು ಪುಲ್ಮರುಳ್ ಇನಿಸಾನುಮಂ ತಗೆದು ಕಾಡಿದುದಲ್ಲಿ ಫಣೀಂದ್ರಕೇತುವಂ: **ಪಂಪಭಾ,** ೧೩. ೫೫)

ಫಣೀಂದ್ರಾಲಯ – [ನಾ] ನಾಗರಾಜನ ಮನೆ ಅಂದರೆ ಪಾತಾಳಲೋಕ (ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂದ್ರಾಳಯದಿಂದಮುರ್ಚಿದ ಫಣಾಮಣಿ ಮಂಗಳರಶ್ಮಿಯೋ: **ಪಂಪಭಾ,** ೧. ೯೬)

ಫಲವಿನತ – [ನಾ] ಹಣ್ಣುಗಳ ಭಾರದಿಂದ ಜಗ್ಗಿದುದು (ಧರ್ಮಾಮೃತವರ್ಷದಿಂ ಧರ್ಮಕ್ಷೇತ್ರಂಗಳೊಳ್ ಭವ್ಯಸಸ್ಯಂಗಳಂ ಅನೇಕಬ್ರತಫಲವಿನತಂಗಳ್ ಮಾಡಿ: **ಆದಿಪು,** ೧೬. ೪೦ ವ)

ಫಲಾಶಿ – [ನಾ] [ಫಲ+ಆಶಿ] ಹಣ್ಣು ತಿನ್ನುವವನು (ವಿವಿಧಮೂಲ ಫಲಾಶಿಗಳುಂ ಸರೋವರ ನದೀ ನಿರ್ಝರಾಂಬುಪಾಯಿಗಳುಂ ಅಗಿ: **ಆದಿಪು,** ೯. ೯೩ ವ)

ಫಲ್ಗುಣ – [ನಾ] ಅರ್ಜುನ (ಕೇಳಿರೆ ಕಂಕಭಟ್ಟನೆ ಯುಧಿಷ್ಠಿರಂ ಆ ವಲಲಂ ವೃಕೋದರಂ ಬಾಳೆಯರಂ ದಲಾಡಿಪ ಬೃಹಂದಳೆ ಫಲ್ಗುಣಂ: **ಪಂಪಭಾ,** ೯. ೬)

ಫಳ – [ನಾ] [ಫ‌ಲ] ಸಾರ್ಥಕ್ಯ, ಪ್ರಯೋಜನ (ಶ್ರೀಗೆ ಫಳಂ ಚಾಗಂ ವಾಕ್‌ಶ್ರೀಗೆ ಫಳಂ ಸರ್ವಶಾಸ್ತ್ರಪರಿಣತಿ ವೀರಶ್ರೀಗೆ ಫಳಂ ಆಯಂ ಎಂದಿಂತಾಗಳುಂ ಅಜೆದೆಸೆಗಿದಂ ಪರಾಕ್ರಮಧವಳಂ: **ಪಂಪಭಾ,** ೬. ೧)

ಫಳಕ – [ನಾ] ಹಲಗೆ (ಅಂತಾ ಫಣಿಕಾಂತೆಗಂ ಅರಿಕಾಂತಾಳಿಕ ಫಳಕತಿಳಕಹರನೆನಿಪ ಅರಿಗಂಗಂ ತನಯಂ ಅಧಿಕತೇಜೋವಂತಂ ಇಳಾವಂತಂ ಇಂದು ಮಂಡಳಕಾಂತಂ: **ಪಂಪಭಾ,** ೪. ೧೮)

ಫಳಕರ್ಪೂರ – [ನಾ] ಫಲಿತ ಕರ್ಪೂರದ ಮರ (ಫಳಕರ್ಪೂರ ಲವಂಗ ಲುಂಗ ಲವಳೀ ಹಿಂತಾಳ ತಾಳೀ ತಮಾಳ ಲತಾಸುಂದರನಂದನಕ್ಕುಳುರೆ ಮುಂ ತನ್ನರ್ಚಿಗಳ್: **ಪಂಪಭಾ,** ೫. ೮೬)

ಫಳಪಾಕವಿರಾಮ – [ನಾ] ಫಲ ಬಂದು ಒಣಗುವುದು (ಆ ಪ್ರಸ್ತಾವದೊಳ್ ಫಳಪಾಕವಿರಾಮಂಗಳಪ್ಪ ಗರ್ಭಷಷ್ಟಿವ್ರೀಹಿ ಯವ ಗೋಧೂಮಾದಿ ಮಹೌಷಧಂಗಳುಂ: **ಆದಿಪು,** ೮. ೬೧ ವ)

ಫಳಪಾಕಾಂತ – [ನಾ] [ಫಳಪಾಕ+ಅಂತ] ಹಣ್ಣು ಬಿಟ್ಟ ಮೇಲೆ (ಆಯುಷ್ಯಾವಸಾನದೊಳ್ ಓಷಧಿಗಳಂತೆ ಫಳಪಾಕಾಂತದೊಳ್ ಕ್ಷುತವಿಜೃಂಭಣವ್ಯಾಜದಿಂ ಲೋಕಾಂತರಿತರಾಗಿ: **ಆದಿಪು,** ೫. ೬೯ ವ); [ನಾ] ಬೆಳೆ ಬಿಟ್ಟ ಮೇಲೆ ನಾಶವಾಗುವ, ವಾರ್ಷಿಕ ಬೆಳೆ (ಫಳಪಾಕಾಂತಂಗಳಪ್ಪ ಔಷಧಿಗಳಂ ಸ್ತಂಬಕರ್ಯಾದಿ ನಾನಾವಿಧ ಧಾನ್ಯಂಗಳಂ: **ಆದಿಪು,** ೬. ೭೭ ವ)

ಫಳವಿನಮ್ರ – [ಗು] ಹಣ್ಣುಗಳ ಭಾರದಿಂದಾಗಿ ಬಾಗಿದ (ಮಹೀಭುಜನೆಯ್ದಿದಂ ಫಳವಿನಮ್ರಮಹೀಜಸಹಸ್ರಾಘಾಟಮಂ ಉತ್ಪಳಖೇಟಮಂ: **ಆದಿಪು,** ೪. ೫೮)

ಫಳಾಮೃತ – [ನಾ] ಹಣ್ಣಿನ ರಸ (ಪನಸು ಆಮ್ರ ಕದಳಿ ನಾರಂಗ ನಾಳಿಕೇರೀ ಫಳಾಮೃತಾಸ್ವಾದದೆ ತಣ್ಣನೆ ತಣಿದು: **ಆದಿಪು,** ೧೧. ೮೧)

ಫಾಲ್ಗುನ – [ನಾ] ಚಾಂದ್ರಮಾನದ ಹನ್ನೆರಡನೆಯ ತಿಂಗಳು (ವಿಶ್ವನಾಥನಾದಿಜಿನಂ ಫಾಲ್ಗುನ ಬಹುಲೈಕಾದಶಿಯೊಳಂ ಅನಂತಸುಖನಿಲಯಂ ಉತ್ತರಾರಾಷಾಢದೊಳೀ ಧ್ಯಾನಮರೀಚಿಯಿಂ ಬೆದಱೆ: **ಆದಿಪು,** ೧೦. ೧೬)

ಫುಲ್ಲಶರ – [ನಾ] ಮನ್ಮಥ (ಫುಲ್ಲಶರಂಗಿಸುವೆಡೆಗಿವೆ ನಲ್ಲಂಬುಗಳೆನಿಸಿ ತುಱುಗಿ ಮಲರ್ದಲರ್ದಸೆವೀ ಮೊಲ್ಲೆಯುಂ: **ಆದಿಪು,** ೧೧. ೧೧೪)

ಫೇನ – [ನಾ] ನೊರೆ (ಉಟ್ಟ ದುಗುಲಂ ಗಂಗಾನದೀ ಫೇನಂ ಉಜ್ಜ್ವಲಮುಕ್ತಾಭರಣಂ ತರತ್ತರಳ ತಾರೋದಾರ ಭಾ ಭಾರಂ .. .. ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೭)

ಬ

ಬಂಚಿಸು – [ಕ್ರಿ] ಮರೆಮಾಚು (ಕೆಲಕೆಲವು ಅವಿನಾಣಂಗಳಂ ನಾಣ್ಚಿ ಬಂಚಿಸಿ ಪಿರಿದುಮನುರಾಗದಿಮೆನ್ನ ಬರೆದ ಪಟಮನಿದಂ ಅರ್ಚಿಸಿ: **ಆದಿಪು,** ೩. ೪೩ ವ); [ಕ್ರಿ] ವಂಚಿಸು (ಲಸನ್ನೇತ್ರಂಗಳಂ ಕೂಡೆ ಬಂಚಿಸುತುಂ ಮೆಟ್ಟುವ ಮೆಟ್ಟಿನೊಳ್ಪು: **ಆದಿಪು,** ೭. ೧೨೩); [ಕ್ರಿ] ತಿಳಿಯದ ರೀತಿಯಲ್ಲಿ (ಎನ್ನಂ ಬಂಚಿಸಿ ಪೋದುದಱೊಳ್ ನಿನಗೆ ಪಗೆವರಿಂದ ಇನಿತೆಡಱಾಯ್ತು: **ಪಂಪಭಾ,** ೧೩. ೧೦೪)

ಬಂಟು – [ನಾ] ಮೃಗಾವಲ ಪಡೆ (ತುರಗಮುಮೊಂದು ಸತ್ತಿಗೆಯುಮೊಂದಿರೆ ಕಾಪಿನ ಬಂಟು ಸುತ್ತಲುಂ ಬರೆ: **ಆದಿಪು,** ೧೧. ೪೬)

ಬಂಡಣ – [ನಾ] [ಭಂಡನ] ಯುದ್ಧ (ಬಂಡಣದೊಳೆನ್ನನೋಡಿಸಿ ಕೊಂಡುಯ್ದಂ ನಿನ್ನನಾ ಸರಿತ್ಸುತಂ ಆನುಂ ಪೆಂಡತಿಯೆಂ: **ಪಂಪಭಾ,** ೧. ೭೬)

ಬಂಡಳಿಸು – [ಕ್ರಿ] ಕೇಕೆ ಹಾಕು (ತೂಗುಂಗೊಂಬಿನೊಳ್ ಪಾಯ್ದು ಬಂಡಳಿಸುತ್ತಿರ್ಪ ಶುಕಾಳಿ: **ಆದಿಪು,** ೧೧. ೯೬) [ಎಲ್. ಬಸವರಾಜು ಸ್ವೀಕರಿಸಿರುವ ಪಾಠ; ಟಿವಿವೆಂ ಅವರಲ್ಲಿರುವುದು **'ಮಂಡಳಿಸು'**]

ಬಂಡು – [ನಾ] ಹೂವಿನ ಮಕರಂದ (ಓಗರವೂಗಳ ಬಂಡಂ ಎಯ್ದೆ ಪೀರುತ್ತ ಒಡವಂದುವು ಇಂದ್ರವನದಿಂ ಮಱೆದುಂಬಿಗಳ್: **ಪಂಪಭಾ,** ೧೧. ೮೧)

ಬಂದ – [ಗು] [√ವರ್] ಚಿಗುರಿದ (ಮೃದುಮಧುರಸ್ವನಂ ನೆಗೞೆ ಬಂದ ಎಳಮಾವಿನೊಳಿರ್ದು ಕೂಡೆ ಪಾಡಿದುದು ಮದಾಳಿಮಾಲೆ: **ಪಂಪಭಾ,** ೧೪. ೧೨)

ಬಂದ ಕರ್ಬು – [ನಾ] [√ಬಲ್] ಬಲಿತ ಕಬ್ಬು (ಕಾಯ್ತು ಕರೆವಂತಿರ್ದತ್ತು ಚೆಂದೆಂಗು ಸಾರಲೆವಂತಿರ್ದುದು ಬಂದ ಕರ್ಬು: **ಆದಿಪು,** ೧೧. ೬೮)

ಬಂದ ಕೋಡು – [ನಾ] [√ವರ್] ಮೂಡಿದ ಕೊಂಬೆ (ಮಾವಿನ ಬಂದ ಕೋಡೆ ಕೋಡಾಗಿರೆ ಕೋಡುಗೊಂಡು ಪರಿದತ್ತು ವಸಂತಗಜಂ ವಿಯೋಗಿಯಂ: **ಪಂಪಭಾ,** ೨. ೧೫)

ಬಂದ ದೂವೆ – [ನಾ] ಚಿಗುರಿದ ಎಳೆ ಹುಲ್ಲು (ಚಂದ್ರನನಂಭೋನಿಧಿ ಬಂದ ದೂವೆ ಮಲೆಯಂ ಕಾರ್ಗಾಲಮಂ .. .. ಸೋಗೆ ನೆನೆವಂತಾಂ ನೆನೆವೆಂ ಸರೋಜಮುಖಿಯಂ: **ಆದಿಪು,** ೧೨. ३೧)

ಬಂದ ಬಟ್ಟೆಯಿನೆ ಬಿಜಯಂಗೆಯ್ – ಬಂದ ದಾರಿ ಹಿಡಿದು ಹೊರಟುಹೋಗು (ಕೆಮ್ಮಗೆ ನಿಮ್ಮಡಿ ಬಟಲಿಸಲ್ವೇಡ ಬಂದ ಬಟ್ಟೆಯಿನೆ ಬಿಜಯಂಗೆಯ್ಯಿಂ: **ಪಂಪಭಾ,** ೯. ೪೮ ವ)

ಬಂದ ಮಾವು – [ನಾ] ಹಣ್ಣುಬಿಟ್ಟ ಮಾವಿನ ಮರ (ಬಂದ ಮಾವು ಬೀಯದು ಕುಸುಮಾಸ್ತ್ರನಾಜ್ಞೆ ತವದು ಎಲ್ಲಿಯುಮಿಲ್ಲಿಯ ನಂದನಂಗಳೊಳ್: **ಪಂಪಭಾ,** ೪. ೨೧)

ಬಂದಿಕಾಱ – [ನಾ] ಸೆರೆ ಹಿಡಿಯುವವನು (ಬಂದಿಕಾಱನಂತೆ ಸೆಱೆಗೆಯ್ದುಂ ವ್ರಣವೈದ್ಯನಂತೆ ಕೊಡಸಾರಿಯಂ ಪಿಡಿದುಂ .. .. ರಸವಾದಿಯಂತೆ ಕಟ್ಟಿಯುಂ ಪೆರ್ಜೋಡೆಯಂತೆ ನುಣ್ಣಿತಂ ವೇೞ್ದು: **ಪಂಪಭಾ,** ೬. ೭೨ ವ)

ಬಂದೈ – ಬಂದೆಯಾ? (ಲಾಕ್ಷಾಗೃಹಮಂ ಪುಗಿಸಲುಂ ಅಕ್ಷಕ್ರೀಡೆಯೊಳೆ ಧರಣಿಯಂ ಕೊಳಲುಂ ಪಿಂಗಾಕ್ಷಂಗೆ ವೇೞ್ದು ಸೈರಿಸದೆ ಆಕ್ಷೇಪದಿಂ ಎಮ್ಮನಿಲ್ಲಿ ಛಿದ್ರಿಸ ಬಂದೈ: **ಪಂಪಭಾ,** ೭. ३೨)

ಬಂಧ – [ನಾ] [ಜೈನ] ಹಾಲು ನೀರು ಬೆರೆತ ರೀತಿಯ ಕರ್ಮದ ಜೀವನ (ಕರ್ಮದ ಜೀವನ ಕ್ಷೀರನೀರನ್ಯಾಯಸಂಬಂಧಂ ಬಂಧಮೆಂಬುದು: **ಆದಿಪು,** ೧೦. ೬३ ವ); [ನಾ] ಕಾವ್ಯರಚನೆ (ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದು ಒಂದಿ ದೇಸಿಯೊಳ್ ಪುಗುವುದು: **ಪಂಪಭಾ,** ೧. ೮); [ನಾ] ಚೌಕಟ್ಟು (ಅಂದು ಎಯ್ತಂದಂ ಅಸಂಚಳ ಕಾಂಚನದ್ವಾರ ಬಂಧುರಬಂಧಗೃಹ ಉದ್ಯತ್ ದ್ವಾರಾವತೀಪುರಮಂ ನರಂ: **ಪಂಪಭಾ,** ೪. ३೨); [ಕುಸ್ತಿಯ] ಪಟ್ಟು (ಮೆಯ್ಯೊಳೆ ಸಿಡಿಲ್ ತಾಪಂತೆವೋಲ್ ತಾಗೆ ಮೆಯ್ಗಲಿ ಭೀಮಂ ಪೆಱಪಿಂಗದಂತು ಪಲವುಂ ಬಂಧಂಗಳಿಂ ತಳ್ತು: **ಪಂಪಭಾ,** ೬. ೨೭)

ಬಂಧು – [ಗು] ಕೂಡಿದ, ಸಮೇತವಾದ (ಮಂದಾರವರ್ಷ ನವಮಕರಂದ ರಜೋಗಂಧಬಂಧು ವಿವಿಧಪತಾಕಾ ಸಂದೋಹಾಂದೋಳನಪಟು ಬಂದಾಜೆಸಿದತ್ತು ಸಮವಸರಣ ಸಮೀರಂ: **ಆದಿಪು,** ೧೪. ೧३೫)

ಬಂಧುಜನ – [ನಾ] ನೆಂಟರು (ಅಂತು ಕೊಂತಿಯ ಗರ್ಭಭಾರಮುಂ ತಾಪಸಾಶ್ರಮದ ಅನುರಾಗಮುಂ ಒಡನೊಡನೆ ಬಳೆಯೆ ಬಂಧುಜನದ ಮನೋರಥಂಗಳುಂ ಒಂಬತ್ತನೆಯ ತಿಂಗಳುಂ ನೆಱೆಯೆ: **ಪಂಪಭಾ,** ೧. ೧೨೦ ವ)

ಬಂಧುರ – [ಗು] ಮೋಹಕವಾದ (ಇಂತಿದುವೆ ಬಂಧುರ ಕೂಟಕುಳಂ ಹಿಮಾಚಳಂ: **ಪಂಪಭಾ,** ೪. ೧३)

ಬಂಧೂಕ – [ನಾ] ಬಂದುಗೆ, ಕೆಂಪು ಹೂ ಬಿಡುವ ಒಂದು ಮರ (ಭವ್ಯಹೃತ್ಕಮಳಕ್ಕಂ ಮುದಮಂ ಜಪಾಪ್ರಸವ ರಕ್ತಾಶೋಕ ಬಂಧೂಕ ಶೋಣಮಣಿಜ್ಯೋತಿಗಳೆಕ್ಕೆಯಿಂ ಕುಡೆ: **ಆದಿಪು,** ೧೬. ३)

ಬಂಬಲ್ – [ನಾ] ಗುಂಪು (ತುಂಬಿಯ ಬಂಬಲ್ಗಳಂ ಕೆಂದಾವರೆಯರಲ್ಗಳೊಳ್ ಪುದಿದುಯ್ವಂತೆ: **ಆದಿಪು,** ೨. ३೯ ವ); ಸುರುಳಿ (ಭ್ರಮದ್ಭ್ರಮರಸಂಕುಲಂ ಕುರುಳ ಬಂಬಲಂ ಪುಷ್ಪವಿಭ್ರಮಂ: **ಆದಿಪು,** ೧೦. ೨೭); [ನಾ] ಗೊಂಚಲು (ಅಂಗಲತಾಲಾಲಿತಸಾಂದ್ರಚಂದನರಸಂ

ಬೆಳ್ದಿಂಗಳ್ ಎಂಬೊಂದು ಪಂಬಲ ಬಂಬಲ್ಗೆಡೆಯಾಗೆ ಬೆಳ್ಪಸದನಂ ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೭)

ಬಂಬಲ ಬಾಡು – [ಕ್ರಿ] ತೀರ ಬಾಡಿಹೋಗು, ಬಂಬಾಟ ಬಾಡು (ಕಲ್ಪವೃಕ್ಷಮುಡಿದು ಕೆಡೆಯೆ ಬಂಬಲ ಬಾಡಿದ ವನಲತೆಗಳುಮಂ ಪೋಲ್ತು: **ಪಂಪಭಾ,** ೧೪. ೪ ವ)

ಬಂಬಲ್ಗುರುಳ್ – [ನಾ] ಸುರುಳುಸುರುಳಿಯಾದ ಕರುಳು (ಈ ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ ಬಂಬಲ್ಗುರುಳ್ಗಳಿಂ ಆನಲ್ತೆ ವಿಳಾಸದಿಂ ಮುಡಿಯಿಪೆಂ ಪಂಕೇಜಪತ್ರೇಕ್ಷಣೇ: **ಪಂಪಭಾ,** ೭. ೧೨)

ಬಂಬಲ್ಗುರುಳ್ – [ನಾ] ಗುಂಗುರುಗೂದಲು (ಬೀಸುವ ಚಾಮರದ ಗಾಳಿಯಲೆಪಿನೊಳಲ್ಲುಗುವ ಬಂಬಲ್ಗುರುಳ ಬಂಬಲಿಂದಂ: **ಆದಿಪು,** ೪. ೯ ವ)

ಬಂಬಲ್ದಂಬುಲ – [ನಾ] ಕಟ್ಟು ವೀಳೆಯ (ಮೆಯ್ವೋಗಂ ಆಗಡುಂ ಆರ್ಗಂ ಕುಡುತಿರ್ಪ ಕಪ್ಪುರದ ಬಂಬಲ್ದಂಬುಲಂ ರಾಗಮಂ ಪಡೆಗೆಲ್ಲಂ ಪಡೆವಂದದಿಂ: **ಪಂಪಭಾ,** ೯. ೧೦೪)

ಬಂಬಲ್ದೆರೆ – [ನಾ] ಸಾಲಾದ ಅಲೆಗಳು (ಸುರಿವ ಅಲರ್ಗಳಂ ಅಂದು ಎಡೆಗುಡದೆ ನೂಂಕಿ ಮೆಲ್ಲನೆ ತಡಿಯಂ ಸಾರ್ಚಿದಪುದಿದಱ ಬಂಬಲ್ದೆರೆಗಳ್: **ಪಂಪಭಾ,** ೫. ೫೫)

ಬಕ – [ನಾ] ಬಕಪಕ್ಷಿ (ಬಕ ಕಲಹಂಸ ಬಲಾಕ ಪ್ರಕರ ಮೃದುಕ್ವಣಿತರಮ್ಯಮಿದಿರೊಳ್ ತೋಱಿತ್ತು ಕೊಳಂ ಪರಿವಿಕಸಿತ ಕನಕ ಕಂಜಕಿಂಜಲ್ಕಪುಂಜಪಿಂಜರಿತಜಳಂ: **ಪಂಪಭಾ,** ೮. ೩೮); [ನಾ] ಒಬ್ಬ ರಾಕ್ಷಸ (ಅಯ್ವರೊಳಂ ನಾಮ್ಮಾಣದೆ ಬಕನ ಬಾರಿಗೊರ್ವನನೀವೆಂ: **ಪಂಪಭಾ,** ೩. ೨೬)

ಬಕವೇಷ – [ನಾ] ಬಕಪಕ್ಷಿಯ ರೂಪ (ಬಕಂ ಬಕವೇಷದಿಂ ಪೆಱಗಣ ದೆಸೆಗೆ ಮೆಲ್ಲನೋಸರಿಸಿ ಬಂದು: **ಪಂಪಭಾ,** ೩. ೨೯ ವ)

ಬಕವೇಷಿ – [ನಾ] ಬಕನ ವೇಷ ಧರಿಸಿದವನು, ಕಪಟಿ (ಅಱಿದು ಶರಣಾಗತಜಳನಿಧಿಯಂ ಎಯ್ದೆವಂಂ ಈ ಬಕವೇಷಿ ನಿನ್ನನೇನಂ ಬೇಡಿದಂ ನೀನೀತಂಗೇನಿತ್ತೆ: **ಪಂಪಭಾ,** ೫. ೭೧ ವ)

ಬಕ್ಕೆ – [ನಾ] ಒಂದು ವಿಧದ ಹಲಸಿನ ಹಣ್ಣು (ಗೊಲೆಯೊಳ್ಪಣ್ತುದು ಮೈಂದವಾಟಿ ಪಥಿಕರ್ಬರ್ಕೆಂದು ಭೃಂಗಂಗಳಿಂದೆ ಉಲಿವಂತಿರ್ದುದು ಪಣ್ತ ಬಕ್ಕೆ ತನಿವಣ್ಣಾಗಿರ್ದುದು: **ಆದಿಪು,** ೧೧. ೬೮)

ಬಗಿ – [ಕ್ರಿ] ತೋಡು, ಕೆತ್ತು (ಅೞ್ಗಿದ ಬಿಲ್ವಡೆ ಮಾಣದೆ ತಗ್ಗಿದ ರಥಂ ಎಯ್ದೆ ಬಗಿದ ಪುಣ್ಗಳ ಪೊಱೆಯಿಂ ಮೊೞ್ಗಿದ ಕರಿಘಟೆ ಜವಂ ಅಡುವ ಅಟ್ಟಿಗೆಯಂ ಅನುಕರಿಸೆ ವೀರಭಟರಣರಂಗಂ: **ಪಂಪಭಾ,** ೧೧. ೬೪):

ಬಗೆ – [ನಾ] ಮನಸ್ಸು (ತುಂಗ ಭವದ್ಬೋಧದ ಬೆಳಗಿಂಗೆ ಒಳಗಪ್ಪನಿತು ಎನ್ನ ಬಗೆ ಪುಗದು: **ಆದಿಪು,** ೮. ೧೦); [ಕ್ರಿ] ಚಿಂತಿಸು, ಧ್ಯಾನಿಸು (ಮುಳಿಸಿನ ದಳ್ಳುರಿಗನುಗುಟುತ್ತುಂ ಚಕ್ರರತ್ನಮಂ ಬಗೆದು ಬೆಸಸಿದಂ ಭರತೇಶಂ: **ಆದಿಪು,** ೧೪. ೧೧೫); [ಕ್ರಿ] ನಿರ್ಧರಿಸು (ಈಗಡೆ ಜೈನದೀಕ್ಷೆಯಂ ಕೊಂಡು ಅಡಿಗೆಱಗಿಸುವೆಂ ಸಮಸ್ತಸುರ ಸಮುದಯಮಂ ಎಂದಿಂತು ಬಗೆದು: **ಆದಿಪು,** ೧೪. ೧೨೭ ಮತ್ತು ೧೨೮); [ನಾ] ರೀತಿ (ಬಗೆ ಪೊಸತಪ್ಪುದಾಗೆ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು: **ಪಂಪಭಾ,** ೧. ೮); [ಕ್ರಿ] ಭಾವಿಸು (ವಸುಧೆಗಸದಳಮಾಯ್ತು ಆ ಮಗನಂದಂ ಎಂದು ಲೋಗರ್ ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್: **ಪಂಪಭಾ,** ೧. ೯೭); [ನಾ] ಚಿಂತನೆ (ಮಸಿಯಿಂದಂ ಜಗಮೆಲ್ಲಮಂ ದಿತಿಸುತಂ ಮುಂ ಪೊಟ್ಟಿನೋ ಕಾಲಮೇಘಸಮೂಹಂ ದೆಸೆಯೆಲ್ಲಮಂ ಕವಿದುದೋ: **ಪಂಪಭಾ,** ೪. ೪೯); [ನಾ] ಇಷ್ಟ (ಉಸಿರ್ದೊಡೆ ಬಗೆ ತೀರ್ಗುಂ ಬಿಸಿದುಂ ಬೆಟ್ಟಿತ್ತುಂ ಉಸಿರದೇಂ ತೀರ್ದಪುದೇ: **ಪಂಪಭಾ,** ೪. ೬೫); [ಕ್ರಿ] ಲೆಕ್ಕಿಸು (ದಿವ್ಯವಚನಮಂ ಅದಂ ಅಂತೇನುಂ ಬಗೆಯದೆ ಕುಡಿದು ಅಜ್ಞಾನತೆಯಿಂ ನಂಜುಗುಡಿದರಂತಿರೆ ಕೆಡೆದಂ: **ಪಂಪಭಾ,** ೮. ೪೦); [ಕ್ರಿ] ಪರಿಗಣಿಸು (ಶಲ್ಯನಂ ಅಂದು ಅಖಿಲ್ಯನಂ ಬಗೆವವೊಲ್ ಏಳಿದಂ ಬಗೆದು ದಂತಿಯಂ ಆಗಡೆ ತೋಱಿಕೊಟ್ಟು: **ಪಂಪಭಾ,** ೧೦. ೧೧೧); [ನಾ] ಮನೋರಥ (ಅಂತು ತನ್ನ ಪಗೆಯುಂ ಬಗೆಯುಂ ಒಡನೊಡನೆ ಮುಡಿಯೆ: **ಪಂಪಭಾ,** ೧೨. ೧೫೫ ವ); [ಕ್ರಿ] ಯೋಚನೆ ಮಾಡು (ಪಗೆಗೆ ಕಣಿಯುಂಟೇ ನಣ್ಪಿಂಗಂ ಆಗರಮುಂಟೆ ನೀಂ ಬಗೆಯ: **ಪಂಪಭಾ,** ೧೩. ೧೦)

ಬಗೆಗಲ್ – [ಕ್ರಿ] [ಬಗೆ+ಕಲ್] ಮನಸ್ಸನ್ನು ತಿಳಿ (ಈ ಕಿಱಿಯವಳ್ ನಮಗೊಂದುಮಂ ಇಂತುಟೆನ್ನಳ್ ಇನ್ನುಂ ಬಗೆಗಲ್ವಂ ಅನ್ನೆವರೆಗಂ ಉಮ್ಮಳಿಸುತ್ತಿರದಿರ್: **ಆದಿಪು,** ೩. ೨೬)

ಬಗೆಗುಂ – ಆಲೋಚಿಸುತ್ತದೆ (ಕನ್ನೆತನಂಗೆಯ್ಯಲ್ ಬಗೆಗುಂ ನಾಣ್ ಮಿಗೆ ಮನಮುಂ ಇೞ್ಚುವರಿಯಲ್ ಬಗೆಗುಂ ಕನ್ನಡಿಕುಂ ತನ್ನಳಿಪಂ ತನ್ನಲೆ ತಾನಿಂತು ಕನ್ನೆ ತಳವೆಳಗಾದಳ್: **ಪಂಪಭಾ,** ೪. ೫೫)

ಬಗೆಗೆಡು – [ಕ್ರಿ] [ಬಗೆ+ಕೆಡು] ಬುದ್ಧಿಹೀನನಾಗು (ಪೊಣರ್ದು ಗೆಲ್ವನೇ ನಿಜತನೂಭವಂ ಹರಿಗನೊಳ್ ಏಂ ಬಗೆಗೆಟ್ಟೆಯೊ ಧುರದೊಳ್ ಅವಂ ಮಿಗಿಲೆನೆ ನಿನಗೆ ಪಗಲೊಳೇಂ ಕಟ್ಟಲೆಯೇ: **ಪಂಪಭಾ,** ೧೨. ೧೪೩)

ಬಗೆಗೆ ಬರ್ – [ಕ್ರಿ] ಮನಸ್ಸಿಗೆ ತೋಱು, ಇಷ್ಟವಾಗು (ಅಂತು ಕೊಟ್ಟ ಅಯ್ದು ಮಂತ್ರಂಗಳಂ ಆಹ್ವಾನಂಗೆಯ್ದು ನಿನ್ನ ಬಗೆಗೆ ಬಂದ ಪೋಲ್ವೆಯ ಮಕ್ಕಳಂ ಪಡೆವೆ ಎಂದು ಬೆಸಸಿದೊಡೆ: **ಪಂಪಭಾ,** ೧. ೮೯ ವ)

ಬಗೆಗೆ ವರ್ – [ಕ್ರಿ] ಇಷ್ಟವಾಗು (ಎಂದು ಬಗೆಗೆ ವಂದ ಪೂಗಳೊಳ್ ಪೂದುಡುಗೆಯಂ ಮಾಡಿ ವಸಂತಕಾಂತೆಯರಂತೆ ನೆಱೆಯೆ ಕಯ್ಗೆಯ್ದಾಗಳ್: **ಆದಿಪು,** ೧೧. ೭೨೮ ವ)

ಬಗೆದ ಬಗೆ – [ನಾ] ಕಲ್ಪನೆಯ ರೀತಿ (ಆಕೆಯ ಬಗೆದ ಬಗೆಯೊಳೊಡಂಬಡುವಂತೆ ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ ಆದಿತ್ಯನ ತೇಜದಗುಂತಿಯುಮಂ .. .. ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ,** ೧. ೧೩೯ ವ); [ನಾ] ಅಂದುಕೊಂಡ ರೀತಿ (ಬಗೆಯದೆ ಮೆಯ್ಸೊಕಮಂ ಬಗೆ ಪಗೆವರ ಕಡುವೆರ್ಚಂ ಎನ್ನ ಪೂಣ್ಕೆಯಂ ಎರ್ದೆಯೊಳ್ ಬಗೆ ಮುನಿಯ ಮಂತ್ರಪದಮಂ ಬಗೆ ಕೂಡುಗೆ ನಿನ್ನ ಬಗೆದ ಬಗೆಯೊಳ್ ಪಾರ್ಥಾ: **ಪಂಪಭಾ,** ೭. ೬೭)

ಬಗೆಗೊಳ್ – [ಕ್ರಿ] ಮನಸ್ಸಿಗೆ ತೆಗೆದುಕೊ (ಬಗೆಗೊಂಡು ಅಭೀತಮನಂ ಅರ್ಚಿಸಿ ಬಂದಿಸಿ ಚೈತ್ಯಗೇಹಮುಳ್ಳನಿತುಮಂ ಆಱುಮಾಸಂ ಅದಱಿಂ ಬಳಿಕ ಅಚ್ಯುತಕಲ್ಪದೊಳ್: **ಆದಿಪು,** ೩. ೮); [ಕ್ರಿ] ಮನಸ್ಸಿನಾಳದಲ್ಲಿರು, ಸಹಜವಾಗಿರು (ಬಗೆಗೊಂಡ ಕುಲಧನಂ ಸಮದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ಬಂ ಪಗೆವಂಗೆ ಕೊಟ್ಟು ಚಿಃ ಕೆಮ್ಮಗೆ ಬೆಸೆವವಂ ಅರಸದೆಂತೊ ಪಗರಣದರಸಂ: **ಆದಿಪು,** ೧೨. ೯೮); [ಕ್ರಿ] ಆಕರ್ಷಿಸು (ಕಳಕಂಠಗೀತಂ ಬಗೆಗೊಳೆಯುಂ ವೀಣಾಕ್ವಣಂ ಮನಂಗೊಳೆಯುಂ: **ಆದಿಪು,** ೧೧. ೨೮)

ಬಗೆದರ್ – {ಬಗೆ+ತರ್] ಮನಸ್ಸನ್ನು ಕೊಡು, ಒಪ್ಪು (ಪುತ್ರಕಳತ್ರಪರಿಗ್ರಹಕ್ಕೆ ಮಾಣದೆ ಬಗೆದರ್ಪುದು ಒಲ್ಲೆನಿದಂ ಎಂದೊಡೆ ಸೃಷ್ಟಿಯೆ ಕೆಟ್ಟುಪೋಗದೇ: **ಆದಿಪು,** ೮. ೧೧)

ಬಗೆದೀರ್ – [ಬಗೆ+ತೀರ್] ತೃಪ್ತಿಹೊಂದು (ದಿವ್ಯ ಮುನಿಪುಂಗವರಂ ಬಗೆದೀರ್ಪಿನಂ .. .. ಪತಿವ್ರತಾಗುಣದಿಂ ಮೆಚ್ಚಿಸು ನೀಂ: **ಪಂಪಭಾ,** ೧. ೧೧೮)

ಬಗೆದೆಡೆ – ಇಷ್ಟಬಂದ ಜಾಗ (ಬಗೆಯೆಡೆಯನೆಯ್ದಿ ಬಗೆದ ಬಗೆಯಂ ಬಗೆದಂತೆ ತೀರ್ಚಿ ಪೋಪ ಜೋಡೆಯರಂ ಕಂಡು: **ಪಂಪಭಾ,** ೪. ೮೧ ವ)

ಬಗೆಬರ್ – [ಕ್ರಿ] ಮನಸ್ಸುಂಟಾಗು (ನಾವಾಡುವಮೆ ಬನ್ನಿಂ ಎಂಬುದುಂ ಆಡುವ ಬಗೆ ಬಂದು ನೆತ್ತಮಂ ಧರ್ಮಸುತಂ: **ಪಂಪಭಾ,** ೬. ೭೦); ಮನಸ್ಸು ಬರು, ಮನಸ್ಸುಂಟಾಗು (ನೆಲನಂ ಒಪ್ಪಿಸಿ ತಪ್ಪದೆ ಬಾಟಿಸ್ವೆಂ ಎನ್ನದೆ ಈ ಉರ್ಕಿನೊಳೆಂತು ನಿಂದು ಸೆಣಸಲ್ ಬಗೆ ಬಂದುದು: **ಪಂಪಭಾ,** ೯. ೫೦)

ಬಗೆಯಂ ತರ್ – [ಕ್ರಿ] ನಿಶ್ಚಯಿಸು (ಕ್ಷಿತಿಪತಿ ಬೇಱಿರಿಸಿ ಮಾನ್ಯರಂ ಮನ್ನಿಸೆ ತದ್ವ್ರತಹೀನರುಂ ಅಂದು ಅಖಿಳಬ್ರತಮಂ ಕೈಕೊಳ್ವ ಬಗೆಗೆ ಬಗೆಯಂ ತಂದರ್: **ಆದಿಪು,** ೧೫. ೧೩)

ಬಗೆಯಱಿ – [ಕ್ರಿ] ಇಂಗಿತವನ್ನು ತಿಳಿದುಕೊ (ಪಲವು ಪೂಮಾಲೆಗಳಂ ಬಗೆಯಱಿದು ಓಲಗಿಪುದು ಮಾಲೆಗಾಱನಂ ಪೋಲ್ತುದು ಉಗ್ರಮಾಲ್ಯಮಹೀಜಂ: **ಆದಿಪು,** ೫. ೩೬)

ಬಗೆಯಾಣ್ಮ – [ನಾ] ಮನದನ್ನ, ಪ್ರಿಯ (ಮನೆಯಾಣ್ಮನ ಕಣ್ಣೆಮೆಯ ಕಾಂಡಪಟಮಾಗೆಯುಂ ಬಗೆಯಾಣ್ಮನ ಕಣ್ಣೆಮೆಯ ದೂದವಿಯಾಗೆಯುಂ: **ಪಂಪಭಾ,** ೪. ೮೧ ವ)

ಬಗೆವೇಟ್ – [ಕ್ರಿ] ಸಮಾಧಾನಪಡಿಸು (ತನಯರನಿಟ್ಟು ಸಂತತಿಯೊಳ್ ಇಂತೆಮಗಂ ಬಗೆವೇಟದೇಕೆ ಪೋದನೊ ನೃಪಂ: **ಆದಿಪು, ಆದಿಪು,** ೯. ೭೬)

ಬಗ್ಗಿಸು – [ಕ್ರಿ] ಇಂಚರವುಂಟುಮಾಡು (ಮಾವನೆ ಮಱಿಗೊಂಡು ಬಗ್ಗಿಸುವ ಕೋಗಿಲೆ ಕೋಗಿಲೆಯಿರ್ಕೆದಾಣದೊಳ್ ಜಿನುಗುವ ತುಂಬಿ: **ಆದಿಪು,** ೧. ೬೫); [ಕ್ರಿ] ಗದರಿಸು (ಕಳಕಳಿಪ ಅಮರಿಯರಂ ಕಣ್ಣೊಳೆ ಬಗ್ಗಿಸುವಲ್ಲಿ .. .. ಕರಮೆರ್ದೆಗೊಳಿಸಿದುದಾಕೆಯ ವಿಭ್ರಮಭ್ರೂಭಂಗಂ: **ಆದಿಪು,** ೭. ೧೫); [ಕ್ರಿ] ಟೀಕಿಸು (ಮುನಿಕುಮಾರರೋದುವ ವೇದವೇದಾಂಗಂಗಳಂ ತಪ್ಪುವಿಡಿದು ಜಡಿದು ಬಗ್ಗಿಸುವ ಪದುಮರಾಗದ ಬಣ್ಣದರಳಗಿಳಿಗಳುಮಂ: **ಪಂಪಭಾ,** ೧. ೧೧೫ ವ)

ಬಚ್ಚ – [ನಾ] [ವೈಶ್ಯ] ವ್ಯಾಪಾರಿ (ಧನದ ಭವನಮೆನಿಪ ಸಿರಿಯ ಬಚ್ಚರ ಆಪಣಂಗಳಿಂ ಪೊದಳ್ದ ಕಾವಣಂಗಳಿಂ: **ಪಂಪಭಾ,** ೧. ೫೮)

ಬಜ್ಜರಿಗಟ್ಟಿ – [ನಾ] ಹೇಸರಗತ್ತೆ (ಕರಿಯ ಪಿರಿಯ ಮೆಯ್ಯ ನಿಡಿಯ ಕಿವಿಯ ಕುಣಿದು ಮೆಟ್ಟುವ ಬಜ್ಜರಿಗಟ್ಟಿಗಳುಮಂ: **ಆದಿಪು,** ೪. ೫೪ ವ) [ಎಲ್. ಬಸವರಾಜು ಅವರ ಆವೃತ್ತಿ]

ಬಜ್ಜರಿಗೆ – [ನಾ] ಹೇಸರಗತ್ತೆ (ಅವಯವದೆ ಕುಣಿದು ಮೆಟ್ಟಿವ ಸವಡಿಯ ವಜ್ಜರಿಗೆ ಪಿಡಿದ ಸತ್ತಿಗೆಯ ವಿಳಾಸವದು ಅಮರ್ದ ಲೀಲೆಯಿಂ: **ಆದಿಪು,** ೧೧. ೪೧) [ನರಸಿಂಹಶಾಸ್ತ್ರಿಗಳು **'ಬಿಜ್ಜಣಿಗೆ'** ಎಂಬ ಪಾಠವನ್ನೂ ವೆಂಕಟಾಚಲಸ್ತ್ರಿಗಳು **'**ವಜ್ಜರಿಗೆ ಎಂಬ ಪಾಠವನ್ನೂ ಸ್ವೀಕರಿಸುತ್ತಾರೆ]

ಬಟ್ಟಗೊಡೆ – [ನಾ] [ಬಟ್ಟ+ಕೊಡೆ] ಗುಂಡಾದ ಛತ್ರಿ (ಬಟ್ಟಗೊಡೆ ಚಂದ್ರಕಾಂತಿಯಂ ಅಟ್ಟುಂಬರಿಗೊಳೆ ಪೊದಳ್ದ ಕೃಷ್ಣಾಜಿನಂ ಒಂದು ಇಟ್ಟಳಮೆಸೆಯೆ ಬೆಡಂಗಂ ಪುಟ್ಟಿಸೆ ಗಾಡಿಗಳೊಳೆಸೆವ ವೀಣಾಕ್ವಣಿತಂ: **ಪಂಪಭಾ,** ೬. ೯)

ಬಟ್ಟನೆ ಬಾ – [ಕ್ರಿ] ಸುತ್ತುವರಿ (ಷೋಡಶ ಋತ್ವಿಜರ್ಗೆ ಇತ್ತುದಕ್ಕೆ ಬಾಯ್ವಿಟ್ಟರೆ ವಿಪ್ರಕೋಟಿ ಮಡಗಲ್ಕೆಡೆಯಿಲ್ಲದೆ ಪೊನ್ನ ರಾಶಿಯಂ ಬಟ್ಟನೆ ಬಂದು ಕಾಯೆ ಏಂ ತೊದಳಿಲ್ಲದಿತ್ತನೋ: **ಪಂಪಭಾ,** ೬. ೩೯)

ಬಟ್ಟಿಗೆವಲಗೆ – [ನಾ] [ಮೃತ್ತಿಕಾಫಲಕ] ಚಿತ್ರ ಬರೆಯುವ [ಮಣ್ಣಿನ] ಹಲಗೆ (ಬರೆಯಲೆಂದು ಬಟ್ಟಿಗೆವಲಗೆಯಂ ತರಿಸಿ ತಿಟ್ಟಮಿಟ್ಟು ಬರೆವನ್ನೆಗಂ: **ಆದಿಪು,** ೪. ೬೩ ವ)

ಬಟ್ಟಿತು – [ಗು] (ತುಱುಗೆಮೆ ನೀಳ್ದ ಪುರ್ವು ನಿಡುಗಣ್ ಪೊಱೆಯಲ್ಲದೆ ಬಟ್ಟಿತಪ್ಪ ಬಾಯ್ದೆಱೆ ತನುರೇಖೆಗೊಂಡ ಕೊರಲ್ .. .. ಎಂದು ಧಾತ್ರಿ ಪೊಗಟ್ಟುಂ ಪೊಗಟ್ವನ್ನರೆ ಕುಂತಿ ಮಾದ್ರಿಗಳ್: **ಪಂಪಭಾ,** ೧. ೧೦೮)

ಬಟ್ಟಿನಂಬು – [ನಾ] ದುಂಡಾದ ಅಲಗುಳ್ಳ ಬಾಣ (ಆತನ ಮೇಲೆ ಬಟ್ಟಿನಂಬಿನ ಬೆಳ್ಸರಿಯುಮಂ ಕೆಲ್ಲಂಬಿನ ತಂದಲುಮಂ ಪಾರೆಯಂಬಿನ ಸೋನೆಯುಮಂ ಸುರಿಯೆ: **ಪಂಪಭಾ,** ೧೨. ೨೧ ವ)

ಬಟ್ಟು – [ನಾ] [ವೃತ್ತ] ಬಚ್ಚದಾಟ, ಬಿಲ್ಲೆಯಾಟ (ಒಡನಾಡಿಯುಂ ಒಡನೋದಿಯುಂ ಒಡವಳೆದುಂ ಗುಳ್ಳೆಗೊಟ್ಟಿ ಬಟ್ಟು ಉಳಿಸೆಂಡುಂ ಪೊಡೆಸೆಂಡು ಇವಂ ಆಡುತ್ತ ಒಡವಳೆದರ್ ತಮ್ಮೊಳೆಳಸೆ ತಂತಂಗೆಡೆಗಳ್: **ಪಂಪಭಾ,** ೨. ೩೦)

ಬಟ್ಟೆ – [ನಾ] [ವರ್ತ್ಮ] ದಾರಿ (ನಿಜಪರಿಜನಂ ಬೆರಸು ಗಂಗೆಯಂ ಪಾಯ್ದು ಅದಱ ಪಡುವಣ ದೆಸೆಯ ಕಾಮ್ಯಕವನಕ್ಕೆ ಬಟ್ಟೆಯಂ ತಗುಳ್ದು ಪೋಗೆವೋಗೆ: **ಪಂಪಭಾ,** ೭. ೨೧ ವ)

ಬಟ್ಟೆಗಳಂ ಸೋದಿಸು – [ಕ್ರಿ] ದಾರಿ ಹುಡುಕು, ಉಪಾಯಮಾಡು (ನಾಮಿದನಱಿಯದಂತು ಬೇಂಟೆಯ ನೆವದೊಳ್ ಬಟ್ಟೆಗಳಂ ಸೋದಿಸುವಂ ಎಂದು ನಿಚ್ಚಂ ಬೇಂಟೆವೋಗೆ: **ಪಂಪಭಾ,** ೩. ೪ ವ)

ಬಟ್ಟೆದೋಱು – [ಕ್ರಿ] ತೋರಿಸು (ಗುಣಾರ್ಣವಭೂಭುಜಂಗೆ ಬಟ್ಟೆದೋಱುವವೊಲಂದು ಒಗೆದಂ ಕಮಲೈಕಬಾಂಧವಂ: **ಪಂಪಭಾ,** ೪. ೧೧೧)

ಬಟ್ಟೆಯ ಕಣ್ – [ನಾ] ದಾರಿಯೆದುರು, ದಾರಿಗೆ ಅಡ್ಡ (ಅಲ್ಲಿಂ ತಳರ್ದು ಬಟ್ಟೆಯ ಕಣ್ಣೊಳ್ ಅಡ್ಡಂಬಿಟ್ಟಿರ್ದ ವೃದ್ಧವಾನರನಂ ಕಂಡು: **ಪಂಪಭಾ,** ೮. ೩೧ ವ)

ಬಟ್ಟೆಯರ್ – [ನಾ] ದಾರಿಹೋಕರು (ವಿವಿಧ ದೇವಗೃಹದಾಟಪಾಟದಿಂ ಮಱುಗಿ ಬಟ್ಟೆಯರ ನೋಟ್ಟಿ ನೋಟದಿಂ: **ಪಂಪಭಾ,** ೩. ೨೨)

ಬಟ್ಟೆವೋಗು – [ಕ್ರಿ] ದಾರಿಯನ್ನು ಅನುಸರಿಸು (ನಿಮ್ಮ ಮುದುಗಣ್ಣನದೊಳಿದೇಂ ಉಂತೆ ಬಟ್ಟೆವೋಪೊಡೆ ಪೋಗಿಂ: **ಆದಿಪು,** ೯. ೧೦೭)

ಬಡಗಣ – **[ಗು]** ದಿಕ್ಕಿನ (ಜಂಬೂದ್ವೀಪದ ಮೇರುವಿನ ಮೂಡಣ ವಿದೇಹದ ಸೀತಾನದಿಯ ಬಡಗಣ ತಡಿಯೊಳ್: **ಆದಿಪು,** ೩. ೮ ವ)

ಬಡಗಮೊಗ – [ನಾ] ಉತ್ತರಾಭಿಮುಖ (ಬಡಗಮೊಗದಿರ್ದು ಕರ್ಮದ ತೊಡರಂ ಪಱಿವಂತೆ ಕೇಶಪಾಶಮನಂತಾಗಡೆ ಪಱಿಸು: **ಆದಿಪು,** ೬. ೨೪)

ಬಡಗು – [ನಾ] ಉತ್ತರದಿಕ್ಕು (ಅಟ್ಟುದಿಲ್ಲೆಳೆ ತೇಂಕಿರ್ದುದು ಭಾರದಿಂ ಬಡಗೆನಲ್ ಪೆಂಪಾರ್ಗಗಸ್ತ್ಯಂಬರಂ: **ಪಂಪಭಾ,** ೪. ೨೦)

ಬಡತನ – [ನಾ] ದಾರಿದ್ರ್ಯ (ಜಗದ ಬಡತನಮನೊರ್ಮೆಯೆ ಬಗೆದಂತಿರೆ ಕಿಡಿಪ ಚಕ್ರಿ: **ಆದಿಪು,** ೮. ೩೦); **[ನಾ]** ಕೃಶತೆ (ಆಕೆಯ ನಡುವಿನ ಬಡತನಮುಂ ಪಗೆವರ ಸಿರಿಯುಂ ಒಡನೊಡನೆ ಕೆಟ್ಟುವು: **ಪಂಪಭಾ,** ೧. ೧೪೧ ವ)

ಬಡಪ – [ನಾ] ಜಡಿಮಳೆ (ಬೆಳ್ಮಸೆಯಂಬಿನ ಸರಿ ಮೊನೆಯಂಬಿನ ಸೋನೆ ಪಾರೆಯಂಬಿನ ತಂದಲ್ ಘನಮಾದುದು ಅಲ್ಲಿ ಕಿತ್ತಂಬಿನ ಬಡಪಮಿದೆನಿಸಿ ಪಾಂಡ್ಯಂ ಅಂಬಂ ಕಱಿದಂ: **ಪಂಪಭಾ,** ೧೨. ೮೦)

ಬಡಪಡು – [ಕ್ರಿ] ಬಡವಾಗು (ಸುಪರ್ವಪರ್ವತದ ಕಾಂಚನರೇಣುಗಳಂ ಪರಾಕ್ರಮೋದ್ಯೋಗದಿಂ ಎತ್ತಿ ತಂದು ನಿನಗಿತ್ತ ಅದಟಂ ಬಡಪಟ್ಟು ಬೆಟ್ಟದೊಳ್ ಪೋಗಿ ತೊಱಲ್ದು: **ಪಂಪಭಾ,** ೭. ೪೭)

ಬಡಪಾರ್ವ – [ನಾ] ಬಡ ಹಾರುವ (ಸಿರಿಮೆಯ್ಯೊಳಗೆ ಅಂದು ಅಱಿವಿರೆ ನೆರವಿಯೊಳಾಱಿವರ್ ಒರ್ಮೆ ಕಂಡರಂ ಅಱಿಯಲ್ಕರಿದೆಮ್ಮಂ ಬಡಪಾರ್ವರನರಸರೆ ನೀಮೀಗಳ್ ಅಱಿವಿರಱಿಯಿರೋ ಪೇಟಿಂ: **ಪಂಪಭಾ,** ೨. ೬೩)

ಬಡವಡು – [ಕ್ರಿ] ಬಡವಾಗು, ಕೃಶವಾಗು (ಸುಭದ್ರೆಯ ರೂಪಂ ಆಪಾದಮಸ್ತಕಂಬರಂ ಎಯ್ದೆ ನೋಡಿ ತನ್ನೊಳಾದ ಬೇಟದೊಳ್ ಬಡವಟ್ಟು: **ಪಂಪಭಾ,** ೫. ೧೫ ವ)

ಬಡವಾಗ್ನಿ – [ನಾ] ಬಡಬಾಗ್ನಿ, ಸಮುದ್ರದಲ್ಲಿನ ಅಗ್ನಿ (ಪ್ರಳಯದುರಿಯಂ ಉರುಳಿಮಾಡಿದಂತಾನುಂ ಬಡವಾಗ್ನಿಯಂ ಅನುವಿಸಿದಂತಾನುಂ: **ಪಂಪಭಾ,** ೧೦. ೮೦ ವ)

ಬಡವು – [ನಾ] ಕೃಶತೆ (ನೀನುಂ ಎನ್ನನೆ ನೋಡಿ ನಭದೊಳಿರ್ದಪೆಯಪ್ಪುದಱಿಂದೆ ನಿನ್ನನಾಂ ಅನುವಿಪೆಂ ಎನ್ನ ಮೆಯ್ಬಡವೊ ನಲ್ಲನ ಮೆಯ್ಬಡವೋ ನಿಶಾಕರಾ: **ಆದಿಪು,** ೧೨. ೪೧); **[ನಾ]** ಬಡಪಾಯಿ, ಬಡಪ್ರಾಣಿ (ಕರಿಕಳಭಂಗಳ ಶಿಶುಕೇಸರಿಗಳ ಬಱಿಯಂ ತಗುಳ್ದು ಬಡವುಗಳಂ ಅವಂ ತಿರಿಪಿ ಪಿಡಿಯುತ್ತುಂ: **ಪಂಪಭಾ,** ೨. ೧೦)

ಬಡಿ – [ನಾ] ಬಡಿಗೆ, ದೊಣ್ಣೆ (ದುರ್ಯೋಧನಂ ಅದೇವಂ ಮರುಳಾದನೊ ಬಡಿಗಂಡನಿಲ್ಲ ಪಾಲನೆ ಕಂಡಂ: **ಪಂಪಭಾ,** ೭. ೧೯); **[ನಾ]** ಗದೆ (ಬಡಿಗೊಳೆ ಬಿದು ಬಿಬ್ಬರಬಿರಿದು ಒಡನುಗೆ ಪೊಸಮುತ್ತು ಕೋಡನೂಱಿ ಮದೇಭಂ ಕೆಡೆದುವು: **ಪಂಪಭಾ,** ೧೦. ೧೦೩)

ಬಡಿಗಂಡನಿಲ್ಲ ಪಾಲನೆ ಕಂಡಂ – [ಬಡಿ+ಕಂಡನಿಲ್ಲ] ಬಡಿಗೆಯನ್ನು ಕಾಣಲಿಲ್ಲ ಹಾಲನ್ನು ಮಾತ್ರ ಕಂಡ ಎಂಬ ಗಾದೆ, ಮುಂದಿನ ಅಪಾಯವನ್ನು ಅರಿಯದೆ ಇಂದಿನ ತಾತ್ಕಾಲಿಕ ಲಾಭಕ್ಕೆ ಮರುಳಾದ ಎಂಬರ್ಥ (ಜೂದಿನ ಗೆಲ್ಲದೊಳಾದೀ ಮೇದಿನಿಯಂ ಕಂಡು ಕಜ್ಜಮಂ ಕಾಣದೆ ದುರ್ಯೋಧನಂ ಅದೇನದೇಂ ಮರುಳಾದನೊ ಬಡಿಗಂಡನಿಲ್ಲ ಪಾಲನೆ ಕಂಡಂ: **ಪಂಪಭಾ,** ೭. ೧೯)

ಬಡಿಗೊಳ್ – [ಕ್ರಿ] ಪೆಟ್ಟು ತಿನ್ನು (ಬಡಿಗೊಂಡು ಮಸಗಿ ಬೈತ್ರಮನೊಡೆವ ಮಹಾಮಕರದಂತೆ ಕರಿಘಟೆಗಳಂ ಆರ್ದುಡಿಯೆ ಬಡಿದು: **ಪಂಪಭಾ,** ೧೨ ೭೮)

ಬಡಿತಂಗಾಸು – [ಕ್ರಿ] [ಲೋಹದಂತೆ] ಬಡಿಯುವುದಕ್ಕಾಗಿ ಕಾಯಿಸು (ಮಿಡುಮಿಡುಕೆ ಬಡಿತಂಗಾಸುವರುಂ ನೋಡೆ ನೋಡೆ ಕಣ್ಗಳಂ ಮೀಂಟುವರುಂ: **ಆದಿಪು,** ೫. ೮೫ ವ)

ಬಡ್ಡಿಸು – [ಕ್ರಿ] ಬಡಿಸು, ಆಹಾರವನ್ನು ಬೇಕೆಂದಾಗ ನೀಡು (ಮನೋಹರಿಯಂ ಪಡಿಸಣವಂ ನೋಡಲುಂ ಮಾಳತಿಕೆಯಂ ಬಡ್ಡಿಸಲುಂ: **ಆದಿಪು,** ೭.. ೨೧ ವ)

ಬಣಂಬೆ – [ನಾ] ಬಣಬೆ, ರಾಶಿ (ಉಬ್ಬರಮೆಂಬಿವನಱಿದು ಇಱಿದರ್ ಪೆಣಬಣಂಬೆಗಳ್ ನೆಗೆವಿನೆಗಂ: **ಪಂಪಭಾ,** ೧೦. ೮೨)

ಬಣ್ಣ – [ನಾ] ಸೀರೆ (ಪಳಂಚಿದ ಬಣ್ಣಂಗಳುಂ ಎಸೆಯೆ ಸೊಗಯಿಸುವ ನಿಜವಧೂಜನಂ ಬೆರಸು: **ಪಂಪಭಾ,** ೫. ೬೬ ವ)

ಬಣ್ಣವಣ್ಣಿಗೆ – [ನಾ] [ಬಣ್ಣ+ಪಣ್ಣಿಗೆ] ಬಣ್ಣದ ಕೆಲಸ, ಬಣ್ಣ ಹಾಕುವುದು (ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂ ನೋಡದೆ ಸೂಸಿದಾಗಳ್: **ಆದಿಪು,** ೪. ೩೪ ವ)

ಬಣ್ಣವಾಸಿಗ – [ನಾ] ಬಣ್ಣದ ಹೂಗಳ ಬಾಸಿಗ, ಕುಚ್ಚು (ನಮೇರು ಮಂದಾರ ಪಾರಿಜಾತದ ಬಣ್ಣವಾಸಿಗಂಗಳುಂ: **ಆದಿಪು,** ೨. ೬೭ ವ)

ಬಣ್ಣವುರ – [ನಾ] [ವರ್ಣಪೂರ] ಒಂದು ಬಗೆಯ ವಸ್ತ್ರ (ಕಾಮಕಾಂತೆ ಬಱಿಯಂ ತನ್ನಿಚ್ಚೆಯಿಂ ಮೆಚ್ಚಿ ಬಣ್ಣವುರಂ ತೀವಿದ ಮಾಟಕ್ಕೆಯಾಯ್ತು .. .. ಮಹೀಮಂಡಲಂ: **ಪಂಪಭಾ,** ೭. ೨೪)

ಬಣ್ಣಸರ – [ನಾ] ಬಣ್ಣಬಣ್ಣದ ಮಣಿಗಳ ಸರ ಮತ್ತು [ವರ್ಣಸ್ವರ] ಎಂದರೆ ವರ್ಣಸ್ವರಾನುಸಾರಿಯಾದ ನರ್ತನ (ಬಣ್ಣಸರಂಗೊಂಡಂತಿರೆ ಬಣ್ಣಸರಂ ಸೊಗಯಿಸಿದುದು ಏನವಳ್ ಪರಿಣತೆಯೋ: **ಆದಿಪು,** ೯. ೩೧)

ಬಣ್ಣಸರಂಗೊಳ್ – [ಕ್ರಿ] ಬಣ್ಣಬಣ್ಣದ ಸರವನ್ನು ಧರಿಸು (ಬಣ್ಣಸರಂಗೊಂಡಂತಿರೆ ಬಣ್ಣಸರಂ ಸೊಗಯಿಸಿದುದು ಏನವಳ್ ಪರಿಣತೆಯೋ: **ಆದಿಪು,** ೯. ೩೧)

ಬಣ್ಣಿಸು – [ಕ್ರಿ] ಬಣ್ಣ ಹಾಕು (ಕರ್ಣಿಕೆಯಂದಮಾಗೆ ಕೀಲಿಸಿ ಪೊಸತಪ್ಪ ಮಾಣಿಕದ ನುಣ್ಬರಲಂ ಮಧು ಮನ್ಮಥಂಗೆ ಬಣ್ಣಿಸಿ ಸಮೆದಂತೆ ತೋಱುವುದು: **ಆದಿಪು,** ೧೧. ೧೧೬)

ಬತ್ತಲೆಗ – [ನಾ] ದಿಗಂಬರ ಸನ್ಯಾಸಿ (ತಲೆವಜೆದುಟ್ಟುದಿಕ್ಕಿ ಸುರಲೋಕ ಸುಖಂಗಳನುಣ್ಬೆವೆಂಬ ಬತ್ತಲೆಗರ ಮಾತುಗೇಳದಿರು: **ಆದಿಪು**, ೨. ೯)

ಬತ್ತು – [ಕ್ರಿ] ಒಣಗು (ಪದೆವೆರ್ದೆ ಬತ್ತೆ ಕೆತ್ತುವಧರಂ ದೆಸೆಗೆಟ್ಟ ಅಲರ್ಗಣ್ಣ ನೋಟಂ ಉಣ್ಮಿದ ಬೆಮರ್ ಓಳಿವಟ್ಟ ನಿಡುಸುಯ್ ತೊದಳಿಂಗೆಡೆಗೊಂಡ ಮಾತು: **ಪಂಪಭಾ**, ೪. ೬೦)

ಬದಗುಗೆಯ್ – [ಕ್ರಿ] ಊಳಿಗತನವನ್ನು ಮಾಡು (ಪೆಱರ ಕೀಟಿಲೊಳ್ ಎಮ್ಮಬ್ಬೆಯುಂ ಮುತ್ತಬ್ಬೆಯುಂ ಸಾರ್ದು ಬದಗುಗೆಯ್ದುದಿ: **ಆದಿಪು**, ೩. ೩೪ ವ)

ಬದರೀಫಳ – [ನಾ] ಬೋರೇ ಹಣ್ಣು (ದಿನತ್ರಯದೊಳ್ ಬದರೀಫಳಮಾತ್ರ ಆಹಾರಿಗಳುಂ ಆರೋಗ್ಯಶರೀರಂಗಳುಂ ಸೌಂದರಾಕಾರಂಗಳುಂ ತ್ರಿಪಲ್ಯೋಪಮಜೀವಿಗಳುಂ ಆಗಿ: **ಆದಿಪು**, ೫. ೪೧ ವ)

ಬದ್ದವಣ – [ನಾ] [ವರ್ಧಮಾನ] ಮಂಗಳವಾದ್ಯ (ಇಡಿದಿರೆ ಪೂತಮರದ್ರುಮದ ಇಡುವುಗಳೊಳ್ ಬದ್ದವಣದ ಪುಡಿವೊಲ್: **ಆದಿಪು**, ೭. ೭೩)

ಬದ್ದೆ – [ನಾ] ಎಳವೆಯ ಚರ್ಯೆ, ಮುದ್ದು (ಪದಮುಮಂ ಇಂಬುಮಂ ಅಣಮಜೆಯದೇವುದು ಬದ್ದೆ ಬೆಳ್ಮಿಗಂ ಪಜ್ಜೆ ದಲೆಂಬುದನೆರಡುಮಂ ಅಜೆವಾತನೆ ಚದುರಂ ಚದುರಂಗೆ ಬದ್ದವಜ್ಜೆಗಳೊಳವೇ: **ಪಂಪಭಾ**, ೫. ೪೫)

ಬದ್ದೆಗ – [ನಾ] ಚಾಳುಕ್ಯ ವಂಶದ ಮೊದಲನೆಯ ನರಸಿಂಹನ ಹಿರಿಯ ಮಗ: ಭದ್ರದೇವ ಎಂಬುದರ ತದ್ಭವ (ನರಸಿಂಗಂಗತಿ ಧವಳಯಶಂ ಯುದ್ಧಮಲ್ಲನಗ್ರಸುತಂ ತದ್ಭುವನ ಪ್ರದೀಪನಾಗಿರ್ದವಾರ್ಯ ವೀರ್ಯಂಗೆ ಬದ್ದೆಗಂ ಪಿರಿಯ ಮಗಂ: **ಪಂಪಭಾ**, ೧. ೨೩)

ಬದ್ದೆದಲ್ಲಟಿ – [ನಾ] [ಬದ್ದೆ+ತಲ್ಲಟ] ಪ್ರೌಢೆಯರಿಗೆ ತಲ್ಲಣ ಉಂಟುಮಾಡುವವನು (ಕೂಟದೊಳುಣ್ಮಿದ ಬೆಚ್ಚತಟಕ್ಕಿಯೊಳ್ ಕೂಟಸುಖಂಗಳಂ ಪಡೆದನೇಂ ಚದುರಂಗಳ ಬದ್ದೆದಲ್ಲಟಿಂ: **ಪಂಪಭಾ**, ೩. ೮೨)

ಬದ್ದೆವಜ್ಜೆ – [ನಾ] [ಬದ್ದೆ+ಪಜ್ಜೆ] ಬಾಲ್ಯದ ಹೆಜ್ಜೆಗುರುತು, ಚರ್ಯೆ, (ಪದಮುಮನಿಂಬುಮನಣಮಜೆಯದೇವುದು ಬದ್ದೆ ಬೆಳ್ಮಿಗಂ ಪಜ್ಜೆ ದಲೆಂಬುದನೆರಡುಮಂ ಅಜೆವಾತನೆ ಚದುರಂ ಚದುರಂಗೆ ಬದ್ದವಜ್ಜೆಗಳೊಳವೇ: **ಪಂಪಭಾ**, ೫. ೪೫)

ಬದ್ಧ – [ನಾ] ಬದ್ದೆ, ಪ್ರೌಢೆ (ಕಾಮನ ಮಂತ್ರದೇವತೆಯೊ ಕಾಮನ ವಿದ್ಯೆಯೊ ಬದ್ಧರಂ ಗೆಲಲ್ ಕಾಮನ ನಿಚ್ಚಮರ್ಚಿಸುವ ಕೈದುವೊ: **ಆದಿಪು**, ೩. ೧೮)

ಬದ್ಧವಪು – [ನಾ] ಸ್ಥಿರವಾದ ಶರೀರ, ಗಟ್ಟಿಯಾಗಿ ನಿಲ್ಲು (ಕೌರವಕುಲ ಹಿಮಕರ ಆವಿಲಪ್ರಚಯ ವರ್ಷವಾರಿದನಪ್ಪ ಪವನತನಯಂ ಬದ್ಧವಪುವಾಗಿ: **ಪಂಪಭಾ**, ೧೨. ೧೪೪ ವ)

ಬದ್ಧಾಂಜಲಿ – [ನಾ] ಮುಚ್ಚಿದ ಬೊಗಸೆ, ಮುಗಿದ ಕೈ (ತಮ್ಮ ವಾಸಕ್ಕೆ ಬರ್ಪರಂ ಶ್ರೀಮತಿಯುಂ ತಾನುಂ ಕಂಡು ಸಂಭ್ರಮಂಬೆರಸಿ ಇದಿರಂ ನಡೆದು ಬದ್ಧಾಂಜಳಿಪುಟಘಟಿತ ನಿಟಿಲರಾಗಿ **ಆದಿಪು**, ೪. ೯೫ ವ)

ಬದ್ಧಾಯುಷ್ಯ – [ನಾ] ಅನುಗುಣವಾದ ಆಯುಷ್ಯ ಪಡೆ (ನಾಲ್ಕುಂ ಭವದ್ಧಾನಾನುಮೋದದಿಂ ಜಾತಿಸ್ಮರಂಗಳಾಗಿ ಭೋಗಭೂಮಿಗೆ ಬದ್ಧಾಯುಷ್ಯಂಗಳಾದುವು: **ಆದಿಪು**, ೫. ೨೦ ವ)

ಬಧಿರಿತ – [ಗು] ಕಿವುಡುಂಟುಮಾಡಿದ (ಅನೇಕದುಂದುಭಿಬಧಿರಿತ ಸಕಳದಿಙ್ಮಂಡಳಂ ಆಖಂಡಳನರಸಮಿತಿವೆರಸು ಅಯೋಧ್ಯಾ ಪುರಕ್ಕೆ ಅಭಿಮುಖನಾದಾಗಳ್: **ಆದಿಪು**, ೭. ೧೦೭ ವ)

ಬಧಿರೀಕೃತ – [ಗು] ತುಂಬಿದ, ಕೂಡಿದ (ಅಕೃತ್ರಿಮ ಪ್ರಣಯರಸವಿಸರ ವಶಗತ ವಿಬುಧಮಿಥುನಶತರತರಭಸ ಬಧಿರೀಕೃತ ಕೃತಕಗಿರಿಗಳೊಳಂ: **ಆದಿಪು**, ೬. ೧೦೧ ವ)

ಬನ – [ನಾ] ಕಾಡು (ಬನಕಂ ಪೊಲಕಂ (ನಡೆಯಲ್ಕಿಸಿನಾಱದೆ ಮಱುಗುವಾರ್ಯರಂ ಕಂಡು ಮನೋಜನಿತದಯಂ ಕರಿ ಹರಿ ವಾಹನಂಗಳಂ ಪಡೆದು ವಿಮಲವಾಹನನಾದಂ: **ಆದಿಪು**, ೬. ೫೮); [ನಾ] ಉದ್ಯಾನ (ಬನದ ತಳಿರ್ ಕಳಿಕೆ ಮುಗುಳ್ ನನೆ ಬಿರಿಮುಗುಳಲರೆ ಗೊಂಚಲೆಂಬಿವು ವನಜಾನನೆಯರ ಪೂದುಡುಗೆಗೆ ಮಟ್ಟನದುವೇಂ ಪಂಪೊ ಭರತನಂತಃಪುರದಾ: **ಆದಿಪು**, ೧೦. ೧೨೫)

ಬನ್ನ – [ನಾ] [ಭಗ್ನ] ಲೋಪ, ದೌರ್ಬಲ್ಯ (ನೀನ್ನಿನ್ನ ನೃಪನ ದಿಗ್ವಿಜಯೋನ್ನತಿಯಂ ಪೊಗಟ್ದು ಮೂರ್ಛೆವೋಪ್ಪೈ ಪೊಗಟ್ದುಂ ನೀನ್ನಿನ್ನ ಮನದೊಳಿಂತಿದು ಬನ್ನಮಂ ಎತ್ತುವವೊಲಾಯ್ತು ನಿನ್ನವನಿಪನಾ: **ಆದಿಪು**, ೧೪. ೬೬); [ನಾ] ಕೇಡು (ಮಗನೆಂಬಂತು ಧರಿತ್ರಿ ನಿನ್ನನುಜರಂ ಕೈಕೊಂಡು ಮುಂ ಪೂಣ್ದ ನನ್ನಿಗೆ ಬನ್ನಂ ಬರಲೀಯದೆ: **ಪಂಪಭಾ**, ೧. ೮೧); [ನಾ] ಸೋಲು (ತನ್ನೊಳಗಣ ಪನ್ನಗನಂ ಮುಂ ನೀಂ ಪಿಡಿದು ಒಗೆಯೆ ಕಾಯಲಾಱದೆ ಪಿರಿದುಂ ಬನ್ನದ ಕರ್ಪಸೆದುದು ತೊಱೆಗೆ ಇನ್ನುಂ ಹರಗಳ ತಮಾಳ ನೀಳಚ್ಛವಿಯಿಂ: **ಪಂಪಭಾ**, ೫. ೫೪); [ನಾ] ಅವಮಾನ (ನಗೆ ಪಗೆವಾಡಿ ಗೋಗ್ರಹಣದೊಳ್ ಪೋಱಮಾಜೆದ ಬನ್ನಂ ಒಂದು ನೆಟ್ಟಗೆ ಮನಮಂ ಪಳಂಚಲೆಯೆ: **ಪಂಪಭಾ**, ೧೦. ೧೧೧)

ಬನ್ನಂಬಡು – [ಕ್ರಿ] ಸೋಲನ್ನು ಅನುಭವಿಸು (ಬಿಲ್ಬಲ್ಮೆಯೊಳ್ ಮಿಗಲೆಯ್ದೆ ಬೇರ್ವರಿದ ಪಗೆಯುಂ ಬನ್ನಂಬಟ್ಟ ಮುನ್ನಿನ ಬನ್ನಮುಂ ಪಿರಿದದೆ ನೆವಂಗೊಂಡು: **ಪಂಪಭಾ**, ೧೨. ೧೯)

ಬಯ್ – [ಕ್ರಿ] ಮುಚ್ಚಿಡು (ಶ್ವಯುವಾಗಿ ಪುಟ್ಟಿ ಸುಟೆಗುಂ ಮುಂ ಬಯ್ದು ಭಂಡಾರದೊಳ್: **ಆದಿಪು**, ೨. ೧೫); [ಕ್ರಿ] ಮೀಸಲಿಡು (ದಿವಿಜಾಧೀಶನ ಕೊಟ್ಟ ಶಕ್ತಿಯನದಂ ಕರ್ಣಂ ನರಂಗೆಂದು ಬಯ್ದು ಅವಂ ಇಂದೆ ಅಟಿವೆಯ್ದೆ ವಂದೊಡೆ ಅದಜೆಂದಾತನಂ ಕೊಂದಂ: **ಪಂಪಭಾ**, ೧೨. ೧೬)

ಬಯಕೆ – [ನಾ] ಆಸೆ (ಸಾಮದೊಳಂ ಪದವಡದೊಡೆ ಬಟಿಕಿರ್ದಪ್ಪುದಲ್ತೆ ಮದವಡಿಸಲೆನ್ನ ಬಯಕೆಯ ದಂಡಂ: **ಆದಿಪು**, ೧೪. ೪೩)

ಬಯಕ್ಕೆ – [ನಾ] ಬಯಕೆ (ಸೂಡುಶಯ್ಯೆಗಳ ಬಯಕ್ಕೆ ಜೊಂಪಲರ್ದವು ಪಾಸುಗಳೊಳ್ ನೆಲಸಿತ್ತು ಪೂತ ಗೊಜ್ಜಗೆಗಳ ಸಿಂದುರಂಗಳೊಳಗೆ ಓಗರಗಂಪನೆ ಬೀಱುತ: **ಪಂಪಭಾ**, ೫. ೩೦)

ಬಯ್ಕೆ – [ನಾ] ಒಳಗಿನ ಆಸೆ (ಬಗೆಯ ಬಯ್ಕೆಯನೊಪ್ಪಿಸುವಾಗಳ್ ನೀನೆ ವಲಂ ದೊರೆ: **ಆದಿಪು**, ೩. ೩೩); ರಹಸ್ಯ (ಪಟಂ ಎಮ್ಮಯ ಕೂಸಿನ ಚಿತ್ರಂ

ಎಯ್ದೆ ಪೇೞ್ವಾಗಕೆಯ ತನ್ನ ಬಯಕೆಯವಿನಾಣಂಗಳಂ: **ಆದಿಪು,** ೩. ೮೯)

ಬಯ್ಗಿರುಳ್ – [ನಾ] ಬೆಳಗಿನ ಜಾವ (ಅದಲ್ಲದೆಯುಂ ಇಂದಿನ ಬಯ್ಗಿರುಳಿನ ಜಾವದೊಳ್ ಪದಿನಾಱು ಕನಸುಗಳಂ ಕಂಡೆಂ: **ಆದಿಪು,** ೧೫. ೨೫ ವ) [ಎಲ್. ಬಸವರಾಜು ಆವೃತ್ತಿ]

ಬಯ್ಗೆ – [ನಾ] ಬೈಗು, ಸಂಜೆ (ನಿನ್ನ ಮೊಲಗಟ್ಟಿಲೆಗಾಂ ಬೆಱಗಾದೆಂ ಇಂದು ಪೇೞ್ ಈಗಳೋ ಬಯ್ಗೆಯೋ ಪೊಗಸೊ ನಾಳೆಯೊ ನಾಡಿದೊ ನಿನ್ನ ಜೀವಿತಂ: **ಆದಿಪು,** ೩. ೬೩)

ಬಯ್ತಂಗೊಳ್ – [ಕ್ರಿ] ಬಚ್ಚಿಡು (ಮುಂದಿಟ್ಟು ಚಕ್ರಮಂ ತಿರಿತಂದುದುಮಂ ಪೂೞದಿರ್ದು ಬಯ್ತಂಗೊಳ್ವೊಂದಂದದೆ ಕೊಂಡುದುಮಂ ಅದೇನೆಂದುನ್ನತಿಮಾಡಿ ಪೊಗೞ್ವೆ ಒಳಗಜೆಯದುದೇ: **ಆದಿಪು,** ೧೪. ೬೭) [**'**ಪೂೞದಿರ್ದು ಬಯ್ತಂಗೊಳ್ವೊಂದಂದದೆ**'** ಎಂಬುದರ ಬದಲು ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳು **'**ಪಾಳಮಿರ್ದು ಬೈಕಂಗೊಳ್ವೊಂದಂದದೆ**'** ಎಂಬ ಪಾಠವನ್ನು ಸ್ವೀಕರಿಸುತ್ತಾರೆ]

ಬಯ್ತಿಡು – [ಕ್ರಿ] ಕಾಪಾಡು, ಸಂಗ್ರಹಿಸು (ನಾನಾವಿಧ ಧಾನ್ಯಂಗಳಂ ಪದನೞಿದುಡುಗುವ ಕಣಂ ಮಾಡುವ ಒಕ್ಕುವ ಅಡಕುವ ಬಯ್ತಿಡುವ ವಿವಿಧಭಾಜನಂಗಳೊಳಡುವ: **ಆದಿಪು,** ೬. ೭೭ ವ); [ಕ್ರಿ] ಅಡಗಿಸಿಡು (ಎಮೆಯಿಕ್ಕದೆ ನೋಡುವ ನರರ ಅಮರರ ಕಣ್ಗಳೊಳನಂಗರಾಜನ ಬಯ್ತಿಟ್ಟ ಅಮರ್ದಂ ಕೊಳೆ ತಳಿದುದು ನಾಭಿಮೂಳಮುಂ ಬಾಹುಮೂಳಮುಂ ಸುರವಧುವಾ: **ಆದಿಪು,** ೯. ೩೫)

ಬರ – [ನಾ] ವರ (ಮತ್ತೊರ್ವ ಮಗನಂ ಬೇಡೆಂದಂಬಿಕೆಗೆ ಪೇೞ್ದೊಡಾಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂಳೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡೆ: **ಪಂಪಭಾ,** ೧. ೮೫ ವ)

ಬರಂಬಡೆ – [ಕ್ರಿ] ವರವನ್ನು ಹೊಂದು (ಗಾಂಧಾರಿ ನೂರ್ವರ್ಮಕ್ಕಳಂ ಪಡೆವಂತು ಪರಾಶರ ಮುನೀಂದ್ರನೊಳ್ ಬರಂಬಡೆದಳ್ ಎಂಬುದಂ ಕುಂತಿ ಕೇಳ್ದು ತಾನುಂ ಪುತ್ರಾರ್ಥಿನಿಯಾಗಲ್ ಬಗೆದು: **ಪಂಪಭಾ,** ೧. ೧೧೬ ವ)

ಬರಗಲೆ – [ನಾ] ಒಂದು ಆಭರಣವಿಶೇಷ (ಸರಿಗೆಗಿವು ಲಂಬಣಕ್ಕಿವು ಬರಗಲೆಗಿವು ಮುಗುಳ್ಗಳೆಮ್ಮ ಮೇಖಳೆಗಿವು ನೂಪುರರಚನೆಗಿಂತಿವು: **ಆದಿಪು,** ೭. ೬೯)

ಬರಲೀ – [ಕ್ರಿ] [ಬರಲ್+ಈ] ಬರಲು ಅವಕಾಶ ಕೊಡು (ಮಗನೆಂಬಂತು ಧರಿತ್ರಿ ನಿನ್ನನುಜರಂ ಕೈಕೊಂಡು ಮುಂ ಪೂಣ್ದ ನನ್ನಿಗೆ ಬನ್ನಂ ಬರಲೀಯದೆ: **ಪಂಪಭಾ,** ೧. ೮೧)

ಬರವು – [ನಾ] ಬರುವಿಕೆ (ಮೆಚ್ಚಿ ಬರವಂ ಅಗ್ನಿದೇವಂ ಬೇಡಿಕೊಳ್ಳಿಂ ಎಂದೊಡೆ ಎಮ್ಮನ್ವಯಕ್ಕೆ ನೀನ್ ತಣ್ಣಿದೆಯಾಗು ಎಂದು ಬೇಡುವುದುಂ: **ಪಂಪಭಾ,** ೫. ೧೦೦ ವ)

ಬರಿ – [ನಾ] ಮಗ್ಗುಲು, ಪಕ್ಕೆ (ನೆತ್ತರಂ ಪಡೆಯದೆ ಆಕಾಶಕ್ಕೆ ಬಾಯಂ ತೆಱೆದು ಊಳ್ವ ಬಳ್ಳುಗಳುಮಂ ನರವುಮಂ ಬರಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ ತಾನೆ ಸೋದು: **ಪಂಪಭಾ,** ೧೩. ೫೬ ವ)

ಬರಿಸ – [ನಾ] ವರುಷ (ನೆಱೆದುವು ಪನ್ನೆರಡ್ಬರಿಸಂ ಉಗ್ರವಿರೋಧಿಜನಕ್ಕೆ ಮಿೞ್ತುಗಳ್ ನೆಱೆವವೊಲ್: **ಪಂಪಭಾ,** ೮. ೪೮ ವ)

ಬರಿಸು – [ಕ್ರಿ] ಬರಮಾಡಿಕೊಳ್ಳು (ಬರಿಸಿದ ಕಾರಣಮಾವುದೊ ತರುಣಿ ಮುನೀಶ್ವರನ ಮಂತ್ರಮೇದೊರೆಯೆಂದಾಂ ಮರುಳಿಯೆನೆ ಅಱಿದುಮಱಿಯದೆ ಬರಿಸಿದೆನಿನ್ನೇೞಿಮೆಂದೊಡಾಗದು ಪೋಗಲ್: **ಪಂಪಭಾ,** ೧. ೯೩)

ಬರೆ – [ನಾ] ಅಭ್ಯಾಸಕ್ಕಾಗಿ ತಿದ್ದು (ಬರೆಯದೆ ಬಂದ ಸುದ್ದಗೆಯ ಸೂತ್ರಮನೊಂದೆ ಮುಹೂರ್ತಮಾತ್ರದಿಂ ಬರಿಸಿದುದು: **ಪಂಪಭಾ,** ೭. ೩೪); [ನಾ] ಚಿತ್ರಿಸು (ಬರೆಯಲ್ ಬ್ರಹ್ಮಂಗಮೇಂ ಬರ್ಕುಮೇ ಎಂದು ಮುನ್ನಂ ವಿಚಿತ್ರ ಚಿತ್ರವಿದ್ಯಾಕೌಶಲಮಂ .. .. ಭಾವಿಸಿ ನೋಡಿ: **ಆದಿಪು,** ೪. ೪)

ಬರೆಪಕಾಱ – [ನಾ] ಬರೆಯುವವನು (ಪೂಣ್ದು ಪೇೞ್ದ ಕೃತಿಬಂಧಮುಂ ಬರೆಪಕಾಱರ ಕೈಗಳ ಕೇಡು: **ಪಂಪಭಾ,** ೧. ೧೨)

ಬರೆವರ್ – [ಕ್ರಿ] ಬರುತ್ತಿರು (ಅನ್ನೆಗಮಿತ್ತ ಸಂಸಪ್ತಕಬಳಜಳನಿಧಿಯಂ ಬಡಬಾನಳಂ ಅಳುರ್ವಂತೆ ಅಳುರ್ದು ನಿಜವಿಜಯಕಟಕಕ್ಕೆ ವಿಜಯಂ ಬರೆವರೆ: **ಪಂಪಭಾ,** ೧೧. ೧೯ ವ)

ಬರ್ಕೆ – ಬರಲಿ, ಬನ್ನಿ (ತಾಮುಂ ಆಮುಂ ಕೆಲವು ದೆವಸಂ ಗೋಷ್ಠಿಯೊಳಿರ್ಪಂ ಬರ್ಕೆ ಎಂದು ಬೞಿಯನಟ್ಟಿದೊಡೆ: **ಪಂಪಭಾ,** ೬. ೬೮ ವ)

ಬರ್ಚಿಸು – [ಕ್ರಿ] ಲೇಪಿಸು, ಬಣ್ಣ ಬಳಿ (ಬರ್ಚಿಸಿದವೊಲ್ ಬಗೆಗೊಳ್ವಿನೆಗಂ ಬಸಂತದೊಳ್ ಬಸದಿಯ ಬಾಗಿಲಂ ತೆಱೆದ ಮಾೞ್ಕೆಯೊಳಿರ್ದುವು ಬಂದ ಮಾವುಗಳ್: **ಆದಿಪು,** ೧. ೬೬); [ಕ್ರಿ] ಕೆತ್ತು, ಕಂಡರಿಸು (ಅಂದಿನ ರೂಪು ಶಾಸನಂ ಬರೆದುದು ಬರ್ಚಿಸಿತ್ತು ಅಮರ್ದುದು ಅೞ್ದುದು ಅಳಂಕಿದುದು ಉರ್ಚಿ ಪೊಕ್ಕು ಬೇರ್ವರಿದುದು: **ಆದಿಪು,** ೩. ೪೩)

ಬರ್ದಂ – [ನಾ] ಬದುಕಿದವನು (ಬರ್ದರೊಳ್ ಆನೆ ಬರ್ದಂ ಎನುತುಂ ನೇರ್ವಲ್ಲಿ ಕೆನ್ನೆತ್ತರುಂ ಬಿರಿಕಂಡಂಗಳೆ ಬೀೞಲುಣ್ಮಿ ಮನದೊಂದಣ್ಮು ಇಟ್ಟಳಂ ಪೊಣ್ಮೆ: **ಪಂಪಭಾ,** ೯. ೬೩)

ಬರ್ದು – [ನಾ] ಪ್ರೌಢಿಮೆ (ಎಳಸಿ ಬಳಸಿ ಬಂದಿರ್ದ ಪಾಟದಾಟದ ಮುದ್ದಿನ ಬರ್ದಿನ ಪರಿವಾರದೇವಿಯರುಮಂ: **ಆದಿಪು,** ೨. ೬೫ ವ); [ಕ್ರಿ] [√ಬಾೞ್] ಬೞ್ದು, ಬಾಳಿ, ಬದುಕಿ (ಅತಿಶೋಕಾಗ್ನಿಯೊಳರ್ದು ಬರ್ದು ಪುದಿದಾತ್ಮಧ್ಯಾನದಿಂ ಘೋರದುರ್ಗತಿಯಂ ಪೊಕ್ಕು: **ಆದಿಪು,** ೩. ೫೬); [ಕ್ರಿ] [√ಬರ್ದು] ಒದ್ದಾಡು (ನಾನಾವಿಷಯಂಗಳಂ ತೊೞಲ್ಚುವ ವಿಷಯಸುಖಂಗಳೊಳೆ ತೊಡರ್ದು ಬರ್ದಪುದು ಜಗಂ: **ಆದಿಪು,** ೧೪. ೧೨೪); [ನಾ] ಬದುಕು (ಭವವಾರಾಶಿಯೊಳಿಂತು ಜೀವನಿವಹಂ ಬರ್ದುತ್ತುಮಿರ್ಕುಂ: **ಆದಿಪು,** ೧೬. ೫೯)

ಬರ್ದುಂಕು – [<ಬೞ್ದುಂಕು] ಹಾರಿ ಬರು (ಸಮಱಿದ ಮದನನ ಒಡ್ಡಣದಂತೆ ಸಮಱಿದ ಪುರ್ವುಂ ಪುರ್ಬೆಂಬ

ಕರ್ಬಿನ ಬಿಲ್ಲಿಂ ಬರ್ದುಂಕಿದ ಮದನನ ಅಲರೆಂಬಿನಂ: **ಆದಿಪು**, ೪. ೪೧ ವ); [ಕ್ರಿ] ಜಾರು, ನುಸುಳು (ಕೈಯಿಂ ಬರ್ದುಂಕಿ ತೊಱೆಯೊಳಗೆ ಬಿಟ್ಟೊಡದನೊಂದು ಬಾಳೆಮೀನ್ ನುಂಗಿ ಗರ್ಭಮಂ ತಾಳ್ದಿದೊಡೆ: **ಪಂಪಭಾ**, ೧. ೬೮ ವ)

ಬರ್ದುಕಾಡು – [ಕ್ರಿ] ಪಾರಾಗು, ತಪ್ಪಿಸಿಕೊ ಮತ್ತು ಬದುಕು ಆಡು [ಮುಂದುವರಿ] (ನಲ್ಲಳ ಮುಖಾಂಬುಜಮಂ ನಡೆ ನೊಡಿ ನೋಡಿ ಸಾಯದೆ ಬರ್ದುಕಾಡಿದಂ ಜವನ ಬಾರಿಯೊಳಂ ಬರ್ದುಕಾಡದಿರ್ಕುಮೇ: **ಆದಿಪು**, ೧೨. ೨೫)

ಬರ್ದುಕು – [ಕ್ರಿ] ಬದುಕು (ಕರ್ಬಿನ ಬಿಲ್ಲಂ ಮಸೆದ ಮದನನಲರ್ಗಣೆ ಬರ್ದುಕಿತ್ತೆನಿಸುತ್ತೊಳಪೊಕ್ಕಳ್: **ಆದಿಪು**, ೯. ೧೯)

ಬರ್ದುಗೆಡು – [ಕ್ರಿ] ನಾಚಿಕೆಯನ್ನು ಬಿಡು (ಮನದಳಿಪಿಂ ತಮಾಳ ಲತಿಕಾಂಗಿಯರಾಟಿಸೆ ಬರ್ದುಗೆಟ್ಟು ಕಾಂಚನಲತಿಕಾಂಗಿಯರ್ ಬಯಸೆ ಸೋಲ್ತು: **ಆದಿಪು**, ೨. ೪೬)

ಬರ್ದೆ – [ನಾ] ಪ್ರೌಢೆ (ವ್ಯಾಳಗಜಂಗಳುಮಂ ಅಂಕದ ಬರ್ದೆಯರುಮಂ ಉಗಿಬಗಿಮಾಡಿದ ಸಂತೋಷದೊಳ್: **ಪಂಪಭಾ**, ೨. ३೯ ವ)

ಬರ್ಪವರ್ – ಬರುವವರು, ಬರುತ್ತಿದ್ದವರು (ಎನ್ನ ಕನ್ನಿಕೆಯಾ ಕಾಲದೊಳ್ ನಾನೆನ್ನ ಮಾವಂ ಕೊಂತಿಭೋಜನ ಮನೆಯೊಳ್ ಬಳೆವಂದು ದುರ್ವಾಸಮಹಾಮುನಿಯರೆಮ್ಮ ಮನೆಗೆ ನಿಚ್ಚಕ್ಕಂ ಬರ್ಪವರ್: **ಪಂಪಭಾ**, ೧. ೧೧೮ ವ)

ಬಲ್ – [ಕ್ರಿ] ಹಟದಿಂದಿರು (ಆದಿಬ್ರಹ್ಮರ ಕೊಟ್ಟೀ ಮೇದಿನಿನಿಗಾನೊಡೆಂ ಆತನರಸಿನಿವಿರಿದಿಂದಾದೊಡಂ ಏನ್ ಎನಗೆಂಬ ಮದೋದಯದೊಳ್ ದೇವ ಬಾಹುಬಲಿ ಬಲ್ದಿರ್ದಂ: **ಆದಿಪು**, ೧೪. ೧೮)

ಬಲ – [ನಾ] ಸೈನ್ಯ (ಆಱುಂಬಲಗಳ್ವರಸೊದವಿದ ಸಂಗ್ರಾಮ ಸಂರಂಭದಿಂದಂ .. .. ಆಜಿಗೆ ಬಂದೊಡ್ಡಲ್ಕೆ: **ಆದಿಪು**, ೧೪. ೮೨); [ನಾ] ದೇಹಬಲ (ಚಲದೊಳ್ ದುರ್ಯೋಧನಂ ನನ್ನಿಯೊಳ್ ಇನತನಯಂ ಗಂಡಿನೊಳ್ ಭೀಮಸೇನಂ ಬಲದೊಳ್ ಮದ್ರೇಶಂ: **ಪಂಪಭಾ**, ೧೪. ೬೪)

ಬಲಂಗೊಳ್ – [ಕ್ರಿ] ಪ್ರದಕ್ಷಿಣೆ ಹಾಕು (ವಿಜಯಗಜಮನೇಜಿ ವಿದ್ಯೋತಮಾಗಿ ದಕ್ಷಿಣಾವರ್ತಮಪ್ಪ ಹೋಮಾಗ್ನಿಯಂ ಬಲಂಗೊಂಡು: **ಪಂಪಭಾ**, ೯. ೯೫ ವ)

ಬಲಂಬೆಱು – [ಕ್ರಿ] [ಬಲಂ+ಪೆಱು] ಶಕ್ತಿಯನ್ನು ಹೆಚ್ಚಿಸಿಕೊ (ಕಥೆಯುಂ ತದಾದಿಪುರುಷಪ್ರಸ್ತುತ್ಯಜನ್ಮಾಳಿಬಂಧುರಂ ಎಂದಂದೆ ಮದೀಯವಾಗ್ವಿಭವವಿನ್ಯಾಸಂ ಬಲಂಬೆತ್ತುದು: **ಆದಿಪು**, ೧. ೨೫)

ಬಲಋದ್ಧಿ – ಎಂಟು ಬಗೆಯ ಋದ್ಧಿಗಳಲ್ಲಿ ಒಂದು, ತಪಶ್ಶಕ್ತಿಯಿಂದ ಅಮಪರಿಮಿತವಾದ ಮನೋವಾಕ್ಕಾಯ ಬಲಗಳನ್ನು ಹೊಂದುವುದು (ಬುದ್ಧಿತಪೋವಿಕ್ರಿಯೌಷಧಿ ರಸ ಬಲಾಕ್ಷೀಣಾಭಿಧಾನಗಳೊಳಂ ನೆಱೆದು: **ಆದಿಪು**, ३. ३३ ವ)

ಬಲಗೊಳ್ – [ಕ್ರಿ] ಪ್ರದಕ್ಷಿಣೆ ಹಾಕು (ಶ್ರೀಮಜ್ಜಿನಭವನಮಂ ಅಖಿಳಾಮರನರಖಚರ ಚಕ್ರವರ್ತಿಸ್ತುತಮಂ ಮೂಮೆ ಬಲಗೊಂಡು: **ಆದಿಪು**, ೪. ೧); [ಕ್ರಿ] ಸುತ್ತು ಹಾಕು (ಕನಕಗಿರಿಯಂ ಬಲಗೊಳ್ವ ಪತಂಗದಂಪತಿಯಂತೆ ಆ ದಂಪತಿಗಳ್ ಸಪ್ತಾರ್ಚಿಯಂ ಮೂಱು ಸೂೞ್ ಬಲವಂದು: **ಪಂಪಭಾ**, ३. ೭೫ ವ); [ಕ್ರಿ] ನಮಸ್ಕರಿಸು (ಭವತ್ ಪದಸರೋಜಮನಾಂ ಬಲಗೊಂಡು ಮತ್ತಮಾಜಿಗೆ ನಡೆಯಲ್ಕೆ ಬಂದೆಂ: **ಪಂಪಭಾ**, ೧३. ೬೫)

ಬಲಜಳನಿಧಿ – [ನಾ] ಸೈನ್ಯವೆಂಬ ಸಾಗರ (ಯಾದವಬಲಜಳನಿಧಿವೆರಸು ವಿಳಯಕಾಲಜಳನಿಧಿಯಂತೆ ತೆರಳಲ್ ಬಗೆದ ಬಲದೇವನಂ: **ಪಂಪಭಾ**, ೫. ೨೧ ವ)

ಬಲದೇವ – [ನಾ] [ಜೈನ] ಅರವತ್ತು ಮೂವರು ಶಲಾಕಾಪುರುಷರಲ್ಲಿನ ಒಂಬತ್ತು ಮಂದಿಯಲ್ಲಿನ ಬಲದೇವರ ಗುಂಪು; ವಿಜಯ, ಅಚಲ, ಸುಧರ್ಮ, ಸುಪ್ರಭ, ಸುದರ್ಶನ, ನಂದಿ, ನಂದಿಮಿತ್ರ, ರಾಮ, ಪದ್ಮ ಎಂಬುವವರು (ಶ್ರೀವರ್ಮನುಂ ವಿಭೀಷಣನುಂ ಎಂಬ ಪೆಸರೊಳ್ ಬಲದೇವ ವಾಸುದೇವರೆನಿಸಿ ಬಳೆಯೆ: **ಆದಿಪು**, ३. ೫೦ ವ)

ಬಲವಕ್ಕ – [ನಾ] [ಬಲ+ಪಕ್ಕ] ಬಲಭಾಗ, ಬಲಗಡೆ (ದ್ರುಪದಂ .. .. ತನ್ನ ಮಕ್ಕಳ್ವೆರಸು ನೆಲಂ ಮೂರಿವಿಟ್ಟಂತೆ ಬಲವಕ್ಕದೊಳ್ ನಡೆಯೆ: **ಪಂಪಭಾ**, ೯. ೯೫ ವ)

ಬಲವತ್ – [ಗು] ಬಲಿಷ್ಠ (ಕಾದುದು ಸರಣ್ಗೆ ವಂದರಂ ಆದುದು ಕಾಲಾಗ್ನಿ ಬಲವತ್ ಅರಿನೃಪತಿಗೆ ಕಾಪಾದುದು ನೆಲಕ್ಕೆ ತೋಳ್ವಲಂ: **ಪಂಪಭಾ**, ೭. ೨)

ಬಲವರ್ – [ಕ್ರಿ] ಪ್ರದಕ್ಷಿಣೆ ಮಾಡು (ಆಗಳ್ ಆನೇಜಿಪೆನೆಂದು ಪೊಚ್ಚಱಿಸಿ ಬಂದು ಸುಯೋಧನನುಗ್ರಚಾಪಮಂ ಮೂಱು ಸೂೞ್ ಬಲವಂದು: **ಪಂಪಭಾ**, ३. ೫೮ ಮತ್ತು ೫೮ ವ)

ಬಲಸ್ಥ – [ನಾ] ಬಲಿಷ್ಠ (ಏಂ ಬಲಸ್ಥನೊ ಭೀಮಂ: **ಪಂಪಭಾ**, ೧೧. ೬೮)

ಬಲಾಕ – [ನಾ] ಬೆಳ್ಳಕ್ಕಿ (ಬಕ ಕಲಹಂಸ ಬಲಾಕ ಪ್ರಕರ ಮೃದುಕ್ವಣಿತರಮ್ಯಮಿದಿರೊಳ್ ತೋಱಿತ್ತು ಕೊಳಂ: **ಪಂಪಭಾ**, ೮. ३೮)

ಬಲಾಧ್ಯಕ್ಷ – [ನಾ] ಬಲಾಧಿಕೃತ (ಅಂತು ಅತಿತ್ವರಿತಗಮನ ನಿಶ್ಚಿತಮನನಾಗಿ ಬಲಾಧ್ಯಕ್ಷನಂ ಬರಿಸಿ: **ಆದಿಪು**, ೪. ೯೦ ವ)

ಬಲಾಬ್ಧಿ – [ನಾ] ಸೈನ್ಯಸಾಗರ (ಬಾಹುಮಂದರದಿಂ ವೈರಿಬಲಾಬ್ಧಿ ಘೂರ್ಣಿಸೆ ಬಿಗುರ್ತೀ ಕೌರವರ್ ಕೂಡೆ ನೂರ್ವರುಮಂ ಕೊಲ್ವೆಂ ಇದೆನ್ನ ಪೂಣ್ಕೆ ನುಡಿದೆಂ ನಿಮ್ಮೀ ಸಭಾಮಧ್ಯದೊಳ್: **ಪಂಪಭಾ**, ೭. ೧೫)

ಬಲಿ – [ನಾ] [ಜೈನ] ಶಾಂತಿಕಪೌಷ್ಟಿಕಾದಿ ಕರ್ಮಗಳನ್ನೊಳಗೊಂಡ ಪೂಜೆ (ಶಾಂತಿಕಪೌಷ್ಟಿಕಾದಿಗಳುಮಂ ಬಗೆದು ಮಾಟ್ಟ ಬಲಿಯುಂ: **ಆದಿಪು**, ೧೫. ೧३ ವ); [ನಾ] ಬಲಿ ಚಕ್ರವರ್ತಿ (ಬಲಿಯಂ ವಾಮನರೂಪದಿಂದಮೆ ವಲಂ ಮುಂ ಬೇಡಿದೆಂ ಭೂರಿಭೂತಲಮಂ: **ಪಂಪಭಾ**, ೯. ೨೦); [ಕ್ರಿ] [ಜೈನ] ಗಟ್ಟಿಯಾಗು (ನೀಮುಮೀಗಳ್ ವನಸಿಂಹನ್ಯಾಯದಿಂ ದುರ್ಗದೊಳೆ ಬಲಿದು ನಿಂದಲ್ಲಿ: **ಆದಿಪು**, ೧३. ೫೮)

ಬಲಿಂದಮ – [ನಾ] ಬಲಿಯನ್ನು ದಮನಮಾಡಿದವನು, ವಾಮನ, ವಿಷ್ಣು (ಬಲಿಂದಮನಿಂ ಬಿಲ್ಲ ಬಲ್ಮೆಯಂ ಪೊಗಟೆಸಿದಂ: **ಪಂಪಭಾ,** ೫. ೪೮)

ಬಲಿಕುಸುಮ – [ನಾ] ಆಹುತಿಯರ್ಪಿಸಿ ಮಾಡುವ ಬಲಿಪೂಜೆಗಾಗಿ ಬಳಸುವ ಹೂವು (ಅಂಗಣರಚಿತಮೌಕ್ತಿಕ ರಂಗಬಲಿಯುಂ ಬಲಿಕುಸುಮ ನಿಪತದಳಿಕುಳಾರಬ್ಧಗೀತಮುಂ: **ಆದಿಪು**, ೪. ೫೮ ವ)

ಬಲಿಗೆದಱು – [ಕ್ರಿ] [ಬಲಿ+ಕೆದಱು] ಎರಚು, ಹರಡು (ಪರಲ್ಗಳಂ ಬಲಿಗೆದಱೆದಂತೆ ಪಸುರ್ಪೆಸೆವ ನೆಲದೊಳ್ ಉಪಾಶ್ರಯಂಬಡೆದಳಂಕರಿಸುವ ಇಂದ್ರಗೋಪಂಗಳುಮಂ ಕಿಸುಗಾಡ ನೆಲಂಗಳೆಳದಳಿರ ಬಣ್ಣಮಂ ಕೆಯ್ಕೊಂಡಂ: **ಪಂಪಭಾ,** ೭. ೨೫ ವ)

ಬಲಿದುಪವಾಸ – [ನಾ] ನಿಟ್ಟುಪವಾಸ (ಬಲಿದುಪವಾಸದೊಳ್ ನಮೆದು ನೋಂಪಿಗಳೊಳ್ ನಿಯಮಕ್ರಮಂಗಳಂ ಸಲಿಸಿದರಿಂತು ನೋನದೆ ಗೂರ್ಣಾವನಂ ಪಡೆಯಲ್ಕೆ ತೀರ್ಗುಮೇ: **ಪಂಪಭಾ,** ೧. ೧೩೬)

ಬಲಿಬಲಪ್ರಧ್ವಂಸಿ – [ನಾ] ಬಲಿಯ ಬಲವನ್ನು ನಾಶಮಾಡಿದವನು, ವಾಮನ, ಶ್ರೀಕೃಷ್ಣ (ಇಳಾವಿಖ್ಯಾತನಂ ಕೂರ್ತು ನೋಡಲುಂ ಅಟ್ಟಿರ್ತು ಅಮರ್ದು ಅಪ್ಪಲುಂ ಪಡೆವೆ ಇಂದು ಎಂಬಂತೆ ಕೆತ್ತಿತ್ತು ದಲ್ ಬಲಗಣ್ಣುಂ ಬಲದೋಳುಂ ಆ ಬಲಿಬಲಪ್ರಧ್ವಂಸಿಗೆ ಅಂದು ಇಟ್ಟಳಂ: **ಪಂಪಭಾ**, ೪. ೩೩)

ಬಲಿಬಲಸೂದನ – [ನಾ] ಬಲಿಯ ಬಲವನ್ನು ನಾಶಮಾಡಿದವನು (ಅಯ್ವರುಮಂ ಅಯ್ದು ಅಟೆಯೂರೊಳೆ ಬಾಳಿಸೆಂದು ಮುಂ ಬಲಿಬಲಸೂದನಂ ನುಡಿಯೆಯುಂ ಕುಡದಿರ್ದುದೆ ಪೇೞ್ಗುಂ ಎಯ್ದೆ ಮೆಯ್ಗಲಿತನಮಂ: **ಪಂಪಭಾ**, ೧೨. ೪೮)

ಬಲಿಬಂಧನ – [ನಾ] ಬಲಿಂದಮ, ವಿಷ್ಣುವಿನ ವಾಮನಾವತಾರ (ದುರ್ಯೋಧನನುಮಾಗಳೆ ಬಂದು ಬಲಿಬಂಧನನ ತಲೆದೆಸೆಯೊಳ್ ಕುಳ್ಳಿರೆ: **ಪಂಪಭಾ,** ೯. ೧೦ ವ)

ಬಲ್ಕಣಿ – [ನಾ] ಶೂರ (ಕಣಿಯಂ ಶೌರ್ಯಾಭಿಮಾನಕ್ಕೆ ಎಡಱೆದ ರಿಪುಸೈನ್ಯಕ್ಕೆ ಸಂಗ್ರಾಮದೊಳ್ ಬಲ್ಕಣಿಯಂ: **ಪಂಪಭಾ**, ೭. ೯೫)

ಬಲ್ದಡಿಗ – [ನಾ] ಮಹಾ ದಾಂಡಿಗ, ಬಲಶಾಲಿ (ಉನ್ನತ ಮಸ್ತಕಸ್ಥಳದೊಳ್ ಅಂಬುಗಳ್ ಅೞ್ದುಡಿದಿರ್ದೊಡಂ ಅತ್ತಮಿತ್ತನೆಟಿಃತಂದು ಬಲ್ದಡಿಗರ್ ಇಟ್ಟುಟೆನೊಳ್ ಕಿಟಿಃ ನೊಂದೆಂ ಎನ್ನದೆ: **ಪಂಪಭಾ**, ೧೧. ೩)

ಬಲ್ದಿರ್ – [ಕ್ರಿ] ಸೆಟೆದುಕೊ, ಬಿಗಿದುಕೊ (ಆದಿಬ್ರಹ್ಮರ ಕೊಟ್ಟೀ ಮೇದಿನಿಗಾನೊಡೆಯಂ ಅತನರಸಿನಿವಿರಿದಿಂದಾದೊಡಮೇಂ ಎನಗೆಂಬ ಮದೋದಯದೊಳ್ ದೇವ ಬಾಹುಬಲಿ ಬಲ್ದಿರ್ದಂ: **ಆದಿಪು**, ೧೪. ೧೮)

ಬಲ್ಪು – [ನಾ] ಕಾಠಿಣ್ಯ (ಸಲೆ ಮೆಲ್ಪು ಬಲ್ಪನಟೆಗುಂ ಕೈವಾರಮುಂ ಕೂಡೆ ಕೂರಿಸುಗುಂ ನಿಕ್ಕುವಂ: **ಪಂಪಭಾ,** ೯. ೧೯)

ಬಲ್ಪುದೋಱು – [ಕ್ರಿ] ಕಾಠಿಣ್ಯ ತೋರು (ಏಱನೆ ಸೂಱಿಗೊಂಡು ನುಡಿವೀ ನುಡಿಯಲ್ಲದೆ ಮತ್ತಂ ಆಸನಂದೋಱುವ ಬಲ್ಪುದೋಱುವ ಎರ್ದೆದೋಱುವ ಕಯ್ಪೆಸರಂಗಳ್ ಎಮ್ಮಂ ಉಂತೆ ಏಱವು: **ಪಂಪಭಾ,** ೮. ೨೦)

ಬಲ್ಮಿಡಿ – [ನಾ] ದೊಡ್ಡ, ಬಲಿತ ಕಾಯಿ (ತೂಗಿರ್ದ ಬಲ್ಮಿಡಿಯ ತೂಗುಂಗೊಂಬಿನೊಳ್ವಾಯ್ದು ಮಂಡಳಿಸುತ್ತಿರ್ಪ ಶುಕಾಳಿ: **ಆದಿಪು**, ೧೧. ೯೬)

ಬಲ್ಮುಗುಳ್ – [ನಾ] ದೊಡ್ಡ ಮೊಗ್ಗು (ಪರೆಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱಿ ತಂಬೆಲರ್: **ಆದಿಪು**, ೧೧. ೧೧೦)

ಬಲ್ಮೆ – [ನಾ] ಶ್ರೇಷ್ಠತೆ, ಪ್ರೌಢಿಮೆ (ಕೂರಿಸೆ ಗುರುಶುಶ್ರೂಷೆಯೊಳ್ ಆ ರಾಮನಂ ಉಗ್ರ ಪರಶು ಪಾಟಿತರಿಪುವಂಶಾರಾಮನಂ ಇಷುವಿದ್ಯಾ ಪಾರಗನೆನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ**, ೧. ೧೦೪); **[ನಾ]** ಅರಿವು (ಏರ್ವಸನದೊಳಾದ ಬಲ್ಮೆಯೊಳ್ ಒಡಂಬಡೆ ತಳ್ತಿಱೆವಲ್ಲಿ ಮಿಂಚಿನೊಳ್ ಮುಸುಕಿದ ಮಾಟಕ್ಕಿಯಾಯ್ತು ಸಮರಾಂಗಣಂ ಉಳ್ಕುವ ಬಾಳ್ಗಳ ಉಳ್ಕದಿಂ: **ಪಂಪಭಾ**, ೧೦. ೭೮)

ಬಲ್ಲಡವಿ – [ನಾ] ದೊಡ್ಡ ಕಾಡು (ಗುಡಿಯ ಗೂಂಟಕ್ಕೆ ಬಲ್ಲಡವಿಗಳುಂ ದಂಡಿಗೆಗೆ ವೇಣುವನಂಗಳುಂ ಆನೆಗಂಬಕ್ಕೆ ಪೆರ್ಮರಂಗಳುಮಂ ಆ ಪಡೆಗೆ ನೆಱಿಯವೆನಿಸಿ: **ಪಂಪಭಾ,** ೯. ೧೦೪ ವ)

ಬಲ್ಲಣಿ – [ನಾ] ಬಲವಾದ ಕಾಲಾಳುಸೈನ್ಯ (ಪಸರಿಸಿ ಪೊಕ್ಕು ಕೂಕಿಱೆದು ಕಾದುವ ಬಲ್ಲಣಿಗಳ್ ಪಳಂಚೆ: **ಪಂಪಭಾ,** ೮. ೯೩)

ಬಲ್ಲರ್ – [ನಾ] ಬಲ್ಲವರು, ತಿಳಿದವರು (ತಗುಳ್ದಿರೆ ಬಲ್ಲರ್ ನಡೆ ನೋಡಿ ಕೂಡೆ ಪಡೆದತ್ತು ಅಕ್ಷೋಹಿಣೀಸಂಖ್ಯೆಯಂ: **ಪಂಪಭಾ**, ೯. ೯೫)

ಬಲ್ಲಹ – [ನಾ] [ವಲ್ಲಭ] ಯಜಮಾನ, ರಾಷ್ಟ್ರಕೂಟ ಚಕ್ರವರ್ತಿ ವಲ್ಲಭರಾಜ (ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ ರಾಗಂಗಿಡದೆ ಕೊಂಡಾಡಿದಂ ಬಲ್ಲಹನಱೆಯೆ ಗುಣಾರ್ಣವಂ ಕವಿತಾಗುಣಾರ್ಣವನಂ: **ಪಂಪಭಾ**, ೧೪. ೫೫)

ಬಲ್ಲಾಯ – [ನಾ] ಅಧಿಕ ಸಾಮರ್ಥ್ಯ, ದಪ್ಪ (ನಿಡಿಯರ್ ಬಲ್ಲಾಯದ ಬಲ್ದಡಿಗರ್ ವಂದಿರ್ದರಯ್ವರ್: **ಪಂಪಭಾ,** ೩. ೧೨)

ಬಲ್ಲಾಳ್ತನ – [ನಾ] ಶೌರ್ಯ (ಈಶ್ವರನ ಪ್ರಭುಶಕ್ತಿಯುಮಂ ಜವನ ಬಲ್ಲಾಳ್ತನಮುಮಂ ಸಿಂಹದ ಕಲಿತನಮುಮಂ ಅವರವರ ದೆಸೆಗಳಿಂ ತೆಗೆದೊಂದುಮಾಡಿ: **ಪಂಪಭಾ,** ೧. ೧೩೯ ವ)

ಬಲ್ಲಿತ್ತಱ ಕೋಡು ಕೂರಿತು – ಬಲಿಷ್ಠರ ಕೊಂಬು ಹರಿತ, ಬಲಿಷ್ಠರನ್ನು ಅವಗಣಿಸಲಾಗದು (ಇನ್ನಿದು ಬಲ್ಲಿತ್ತರ ಕೋಡು ಕೂರಿತು ಅದನಂತಿಂತಿಂತುನಲ್ ಬರ್ಕುಮೇ: **ಆದಿಪು**, ೧. ೨೫)

ಬಲ್ಲಿದ – [ನಾ] ಶೂರ (ಬಲ್ಲಿದಂ ಸುರನಾ ಮಾಗಧನಲ್ಲಿ ಭೂಭುಜನ ದೋರ್ದಂಡಕ್ಕೆ ಪುಣ್ಯೋದಯಂ ನೆರಮಕ್ಕೆ: **ಆದಿಪು**, ೧೨. ೧೨೫)

ಬಲ್ಲಿದಿರೇ – ಸಮರ್ಥವಾಗಿದ್ದೀರಾ, ಕ್ಷೇಮವೇ (ಕೆಯ್ಯಂ ಪಿಡಿದು ಬಲ್ಲಿದಿರೆ ಎಂದು ಪ್ರಿಯದೊಳಂ ಬಿರ್ದಿನೊಳಂ ಸಂತಸಂಬಡಿಸಿ: **ಪಂಪಭಾ**, ೬. ೩೩ ವ)

ಬಲ್ವರಿಕೆ – [ನಾ] [ಬಲ್ಲಿತ್ತು+ಪರಿಕೆ] ಬಲವಾದ ದಾಳಿ (ಬಲ್ವರಿಕೆಯೊಳರಿ ನೃಪರ ಪಡಲ್ವಡೆ ತಳ್ತಿಱೆದು ರಣದೊಳಾ

ವಿಕ್ರಮಮಂ ಸೊಲ್ವಿನಮಾವರ್ಜಿಸಿದಂ ನಾಲ್ವತ್ತೆರಡು ಅಱೆಕೆಗಾಳೆಗಂಗಳೊಳೀತಂ: **ಪಂಪಭಾ,** ೧. ೨೫)

ಬಲ್ವಿಡಿವಿಡಿ – **[ಕ್ರಿ]** ಬಲವಾದ ಹಿಡಿತದಲ್ಲಿ ಹಿಡಿ (ಜಸಮದೊಂದೆ ಕಿಡದು ಅದನಾಂ ಬಲ್ವಿಡಿವಿಡಿದು ನೆಗಟ್ದಿಂ: **ಪಂಪಭಾ,** ೧೨. ೧೮೧)

ಬಲ್ಸರಿ – [ನಾ] ಜೋರಾದ ಮಳೆ (ಸರಳ ಪೊದಲ್ದ ಬಲ್ಸರಿಯ ಕೋಳ್ಗಿರಲಾಱದೆ ತೆರಳ್ದು ದುರ್ಧರ ಹಯಂ ಅಟ್ಟಿ ಸಂದಣಿಸಿ ಸಂದಣಿ ಕೋಳ್ಗುದಿಗೊಂಡು: **ಪಂಪಭಾ** ಪರಿಷತ್ತು, ೩. ೭೦)

ಬವರ – [ನಾ] ಕಾಳಗ (ಬವರದೊಳೇಂ ಬಲ್ಲಂ ಕರಂ ಒವಜುಗೆಯಲ್ ಪೆಱರ್ಗೆ ಕರಮೆ ತನಗೆ ಅಱಿಯಂ ಅದೆಂತುವೊ ನುಡಿ ತಪ್ಪದು ಕಮ್ಮರಿಯೊವಜಂ ಬಿಲ್ಲೊವಜಂ ಎಂಬುದು ಮಾಡುವೆನೇ: **ಪಂಪಭಾ,** ೧೨. ೩)

ಬವರಿಸು – **[ಕ್ರಿ]** ಸವರು (ನವವಧುವ ಶಂಕೆಯಂ ಕಳೆವ ವಿದಗ್ಧವಿಟಂಬೊಲಲೆವ ತೆರೆಗಳ್ ಮೆಲ್ಲಂ ಬವರಿಸಿ ಸೋಂಕುತ್ತುಂ ಕಳೆದುವು ಘನಕುಚಕಳಶಕುಂಕುಮಸ್ಥಾಸಕಮಂ: **ಆದಿಪು,** ೧೧. ೧೪೫)

ಬವಳಿವರಿ – [ಕ್ರಿ] ತಿರುಗು, ಸುತ್ತುಹಾಕು (ಕೂಕಿಱಿದುಂ ತೇಗಿಯುಂ ಪಸಿಗೆವರಿದುಂ ಬವಳಿವರಿದುಂ ಬಾನಂಗುಳಿಗೆವರಿದುಂ ಸೂಟ್ವರಿದುಂ ಆಡುವಾಗಳ್ ಉಭಯಬಲಂಗಳ್: **ಪಂಪಭಾ,** ೧೨. ೧೫೮ ವ)

ಬಸ – **[ನಾ]** [ವಶ] ಬಲ (ಎನ್ನ ಸುಶರೀರದೊಳಿರ್ದು ಜೀವಂ ಈ ಒಡಲ್ ಕರಗಿದುದಿಲ್ಲ ಎನ್ನ ಬಸಮಲ್ತು ಒಡಲ್: **ಆದಿಪು,** ೩. ೧೪); **[ನಾ]** ಸಾಮರ್ಥ್ಯ (ಅಮರ್ದಪ್ಪಿಕೊಂಡು ತತ್ತನುಜೆಯ ಅಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ: **ಆದಿಪು,** ೪. ೫೬); **[ನಾ]** ತೀವ್ರತೆ (ಪೊಸಸುಸಿಲ ಮಸಕದ ಬಸದೊಳೆ ಬಸದಾಗಿಯುಂ ಅಸಿಯೆಳ್ ಎನಗೆ ಅಸವಸದೊಳೆ ಬೆಸೆದು ಪೋಗಿ: **ಆದಿಪು,** ೪. ೧೨ ವ)

ಬಸಂತ – **[ನಾ]** [ವಸಂತ] ಚೈತ್ರ–ವೈಶಾಖ ತಿಂಗಳುಗಳು (ಬಸಂತದೊಳ್ ಬಸದಿಯ ಬಾಗಿಲಂ ತೆಱೆದ ಮಾಟಕ್ಕೆಯೊಳಿರ್ದುವು ಬಂದ ಮಾವುಗಳ್: **ಆದಿಪು,** ೧. ೬೬); **[ನಾ]** ಸಂತೋಷದಾಯಕ[ವಾದ] (ಧರೆ ನಿರ್ದಾಯಾದ್ಯಮೆಂದಾ ಸುಯೋಧನನಾಳುತ್ತಿರೆ ಸಂದ ಹಸ್ತಿನಪುರಂ ಸಂತಂ ಬಸಂತಂ ಕರಂ: **ಪಂಪಭಾ,** ೩. ೩೨)

ಬಸದಾಗು – **[ಕ್ರಿ]** [ಬಸದು+ಆಗು] [ಕೋಪಕ್ಕೆ] ವಶವಾಗು (ಪೊಸಸುಸಿಲ ಮಸಕದ ಬಸದೊಳೆ ಬಸದಾಗಿಯುಂ ಅಸಿಯೆಳ್ ಎನಗೆ ಅಸವಸದೊಳೆ ಬೆಸೆದು ಪೋಗಿ: **ಆದಿಪು,** ೪. ೧೨ ವ)

ಬಸನ – **[ನಾ]** [ವ್ಯಸನ] ಅತ್ಯಾಸಕ್ತಿ (ಪುಸಿ ಬಸನಮೆಂದು ಕೆಲಬರ್ ಕುಸಿವರ್ ನಾಲಗೆಯನಿಕ್ಕುಟಿಸೊಳ್: **ಆದಿಪು,** ೫. ೮೭)

ಬಸನಿ – **[ನಾ]** [ವ್ಯಸನಿ] ಬಸನವುಳ್ಳವನು[ಳು] (ಮತ್ತೊರ್ವಳ್ ಪಸದನದ ಬಸನಿ ನಿಜತರ ಕಿಸಲಯರುಚಿ ಪಸುರೊಳೆಸೆಯೆ ಮಿಡಿಯಂ ಕೊಯ್ದಳ್: **ಆದಿಪು,** ೧೧. ೧೦೧)

ಬಸನಿಗ – [ನಾ] ಬಸನಿ (ಅಡಗಿನ ಬಸನಿಗನ್ನೈ ತಿನ್ ಪಿಡಿ ಎಂದು ಅವನಡಗನವನ ಬಾಯೊಳ್ ಗಿಡಿವರ್: **ಆದಿಪು,** ೫. ೮೬)

ಬಸಮಾಡು – **[ಕ್ರಿ]** ವಶಮಾಡು (ಸಮವಾಯಮಪ್ಪುದಲ್ತೆಂದು ಬಸಮಾಡಿ ದೋಷವಿರಹಿತನಾಪ್ತಂ: **ಆದಿಪು,** ೫. ೫೪)

ಬಸವಟೆ – **[ಕ್ರಿ]** ಆಯಾಸಗೊಳ್ಳು (ಅಂತು ಗಾಂಗೇಯನೊಳ್ ಪರಶುರಾಮಂ ಕಾದಿ ಬಸವಟೆದುಸಿರಲಪ್ಪೊಡಮಾಱದೆ ಮೂರ್ಛೆವೋಗಿರ್ದನಂ ಕಂಡು: **ಪಂಪಭಾ,** ೧. ೮೦ ವ)

ಬಸವಾಗು – [ಕ್ರಿ] ಬಸಮಾಗು (ಪಸರಿಸಿ ಪೊಸಯಿಸಿದ ಪೊಸಸುಸಿಲ ಮಸಕದ ಬಸದೊಳೆ ಬಸವಾಗಿಯುಂ ಅಸಿಯಳೆನಗೆ ಅಸವಸದೊಳೆ ಬೆಸೆದು ಪೋಗಿ: **ಆದಿಪು,** ೪. ೧೨ ವ)

ಬಸಿ – [ಕ್ರಿ] ಒಸರು, ಸುರಿ (ಬೆಚ್ಚನೆ ಬಸಿವಿಂದುಕಾಂತ ಕರಸಂಕುಳಮೊಯ್ಯನವುಂಕಿ ಸೋಂಕೆ ಸೋಂಕಿನೊಳ್ ಒಱೆವಿಂದುಕಾಂತಮಣಿಪುತ್ರಿಕೆಯಂದದಿಂ ಒಪ್ಪಿ ತೋಱಿದಳ್: **ಆದಿಪು,** ೪. ೪೯)

ಬಸಿಱ್ – [ನಾ] ಹೊಟ್ಟೆ (ಈ ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ ಬಂಬಲ್ಗರುಳುಗಳಂ ಆನಲ್ತೆ ವಿಳಾಸದಿಂ ಮುಡಿಯಿಪೆಂ ಪಂಕೇಜಪತ್ರೇಕ್ಷಣೇ: **ಪಂಪಭಾ,** ೭. ೧೨); **[ನಾ]** ಅಂತರಂಗ (ಬಸಿಱೊಳ್ ಜಗತೀತ್ರಯಮಂ ಒಸೆದಿಟ್ಟು ಓರಂತೆ ಕಾದ ಪೆಂಪಿನ ನಿಮ್ಮೀ ಬಸಿಱಂ ಪೊಕ್ಕ ಅಯ್ವರಂ ಅಸುರಕುಳಾಂತಕ ಕಡಂಗಿ ಕಾವುದು ಪಿರಿದೇ: **ಪಂಪಭಾ,** ೯. ೧೬)

ಬಸಿಱಂಪೊಸೆ – [ಕ್ರಿ] ಹೊಟ್ಟೆ ಹೊಸೆ, ಹೊಟ್ಟೆಕಿಚ್ಚು ಪಡು (ಮುನ್ನಂ ಕುಂತಿಯೆ ಪಡೆದಳ್ ಗರ್ಭದ ಚಿಹ್ನೆಯದಿನ್ನೇವುದೆಂದು ಬಸಿಱಂ ಪೊಸೆದಳ್: **ಪಂಪಭಾ,** ೧. ೧೨೯)

ಬಸಿಱಾರ್ – [ಕ್ರಿ] ಹೊಟ್ಟೆ ತುಂಬು (ಪಾಪ್ವರಾತಿಯ ಮೆಯ್ಯ ನೆತ್ತರಂ ಕಂಡು ಸೂಟೆೀಸಿನೊಳಿವನ ನೆತ್ತರ್ಕೊಡಂ ತನಗೆ ಬಸಿಱಾರೆ ಕುಡಿಯಲುಂ ದ್ರೌಪದಿಯ ಕೇಶಪಾಶಮಂ ತೊಯ್ದು ಮುಡಿಯಲುಂ ನೆಱೆಯದು: **ಪಂಪಭಾ,** ೧೨. ೧೪೮ ವ)

ಬಹಳ – [ಗು] ಅಧಿಕ (ಅತಿ ಬಹಳ ದಹ್ಯಮಾನ ಕಾಳಾಗರು ಧೂಪಧೂಮಯಷ್ಟಿಘಟಿತ .. .. ಧೂಪಂಗಳಿಂದಂ: **ಆದಿಪು,** ೨. ೩೨ ವ)

ಬಹಿತ್ರ – **[ನಾ]** ಹಡಗು (ನೋಡುತ್ತಿರ್ಪನ್ನೆಗಂ ಗಗನತಳಜಳಧಿಯೊಳ್ ಬಹಿತ್ರದಂತೆ ಪರಿವ ಸೂರ್ಯಪ್ರಭನೆಂಬ ದೇವನ ವಿಮಾನಮಂ ನೋಡಿ: **ಆದಿಪು,** ೫. ೪೫ ವ)

ಬಹಿರ್ಮಂಡಳ – [ನಾ] ಪರರಾಜ್ಯ, ಶತ್ರುರಾಜ್ಯ (ನಿನಗರಸ ಬಹಿರ್ಮಂಡಳಮನೆ ಸಮಱಲ್ಕಿನಿತು ಬರಿಸಮುಂ ಪೋದುವು: **ಆದಿಪು,** ೧೪. ೧೫)

ಬಹಿರ್ಯಾನ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಮಗುವನ್ನು ಬಾಣಂತಿಮನೆಯಿಂದ ಹೊರಗೆ ಒಯ್ಯುವುದು (ಬಹಿರ್ಯಾನ .. .. ಆಗ್ರನಿರ್ವೃತಿಯೆಂಬಯ್ವತ್ತೊಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಬಹು ಚಿಂತಂ – [ನಾ] ಬಹಳ ಚಿಂತೆಗಳನ್ನು ಹೊಂದಿದವನು (ಎಂತಾನುಂ ನೆನೆದಂ ಬಹುಚಿಂತಂ ಚಕ್ರೇಶನೆಮ್ಮ: **ಆದಿಪು,** ೧೪. ೪೮)

ಬಹುವೇಗ – [ನಾ] ಅತಿಶಯ ವೇಗ (ಪಾತಂ ಲಕ್ಷ್ಯಂ ಶೀಘ್ರಂ ಘಾತಂ ಬಹುವೇಗಂ ಎಂಬಿವಯ್ದೇಸಿನೊಳಂ ಅಂತು ಈತನ ದೊರೆಯಲ್ಲ: **ಪಂಪಭಾ,** ೧೨. ೧೮೫)

ಬಹುಳ – [ನಾ] ಕೃಷ್ಣಪಕ್ಷ (ವಿತತಾಷಾಢದ ಬಹುಳ ಪ್ರತಿಪದ್ದಿನದಂದು ಕೀರ್ತಿ ನೆಗಟ್ದಿರೆ ಭಗವತ್ಕೃತಯುಗಮಾದುದರಿಂದಂ ಕೃತಯುಗಮೆಂಬರ್ ಪುರಾಣವಿದರಿದನೀಗಳ್: **ಆದಿಪು,** ೮. ೬೭); [ಗು] ಶೇಷವಾದ (ಭಸಿತಂ ಕರ್ಪೂರಕಾಳಾಗರು ಬಹುಳರಜಂ ವಲ್ಕಲಂ ಕಲ್ಪವೃಕ್ಷಪ್ರಸವಂ ಯಜ್ಞೋಪವೀತಂ ಕನಕಕಮಳನಾಳೋತ್ಕರಂ: **ಪಂಪಭಾ,** ೭. ೭೮)

ಬಹ್ವಾರಂಭ – [ನಾ] ನಾನಾ ಕಾರ್ಯಚಟುವಟಿಕೆಗಳು (ಬಹ್ವಾರಂಭ ಸಂರಂಭ ರೌದ್ರಧ್ಯಾನ ಪರಿಣತನುಂ ಉಪಾರ್ಜಿತ ನರಕಾಯುಷ್ಯಂ ಪ್ರತ್ಯಾಸನ್ನಮೃತ್ಯುವಾಗಿ: **ಆದಿಪು,** ೨. ೧೧ ವ)

ಬಹ್ವಾರಂಭಪರಿಗ್ರಹ – [ನಾ] [ಜೈನ] ಪಂಚಮಹಾಪಾತಕಗಳಲ್ಲಿ ಒಂದು, ತುಂಬ ಪ್ರಯತ್ನದಿಂದ ಹಣ ಸಂಪಾದಿಸುವುದು (ಬಹ್ವಾರಂಭಪರಿಗ್ರಹವಿಹ್ವಳಂ ಇಂದ್ರಿಯಸುಖಾರ್ಥಿ ಸಂಸಾರಗುಹಾಗಹ್ವರದೊಳಗಿರುಳಿನ ಚಕ್ರಾಹ್ವದವೊಲ್ ಮಱುಗದೇಂ ಸುಖಂಬಡೆದಪನೇ: **ಆದಿಪು,** ೩. ೬೮)

ಬಹ್ವಾರಂಭಪರಿಗ್ರಹತ್ವ – [ನಾ] [ಜೈನ] ಜೀವದ ಮೇಲಾಗುವ ಒಂದು ಅಶುಭ ಪರಿಣಾಮ (ಕೃಷ್ಣ ನೀಲ ಕಪೋತ ಲೇಶ್ಯಾ ಬಹ್ವಾರಂಭ ಪರಿಗ್ರಹತ್ವ ಆದಿ ಅಶುಭ ಪರಿಣಾಮಂಗಳಿಂ ಜೀವಂ ನೆಲಸಿ: **ಆದಿಪು,** ೫. ೮೩ ವ)

ಬಳಗ – [ನಾ] ಗುಂಪು (ಅಟಿದಟ್ಟಿದ ಕರಿಘಟೆಗಳ ಬಳಗದಿಂ ಉಚ್ಚಳಿಸಿ ಮೊರೆವ ನೆತ್ತರ ತೆರೆಗಳ್: **ಪಂಪಭಾ,** ೫. ೩೨)

ಬಳಮರ್ದುಕಾಱ – [ನಾ] ವೀರ್ಯಪುಷ್ಟಿಕರ ಮದ್ದನ್ನು ತಯಾರಿಸುವವನು (ಕಾಮದೇವನೆಂಬ ಬಳಮರ್ದುಕಾಱನ ಮಾಡಿದ ಮರ್ದಿನಂತೆ ಬಳೆದು ದಳಂಬಡೆದು: **ಪಂಪಭಾ,** ೪. ೮೭ ವ)

ಬಳವತ್ – [ಗು] ಬಲಿಷ್ಠವಾದ, ಪ್ರಬಲವಾದ (ಬಳವತ್ ಕಾಮಾಗ್ನಿ ಹೋಮಾಗ್ನಿ ಚಂದನ ಕರ್ಪೂರ ಮೃಣಾಳನಾಳಮೆ ಪೊದಳ್ದ ಇಧ್ಮಂಗಳ್ ಇಂತಾಗೆ ತಾನಿನಿತುಂ ಕಾಮನ ಬೇಳ್ವೆಯೆಂದು ಸುಗಿದಳ್ ತನ್ವಂಗಿ ಬೆಳ್ದಿಂಗಳೊಳ್; **ಪಂಪಭಾ,** ೪. ೫೯)

ಬಳವಳ ಬಳೆ – [ಕ್ರಿ] ಸರ ಸರ ಎಂದು ಹೆಚ್ಚಾಗು (ಅಳವಱಿಯದ ಎಗ್ಗು ಬಳವಳ ಬಳೆವಿನೆಗಂ ಪಚ್ಚಪಸಿಯ ತುಱುಕಾಱಂಗೆ ಅಗ್ಗಳಿಕೆಯನೆ ಮಾಡಿ: **ಪಂಪಭಾ,** ೬. ೪೬)

ಬಳವಿವಡೆ – [ಕ್ರಿ] [ಬಳವಿ+ಪಡೆ] ಬೆಳವಣಿಗೆ ಹೊಂದು, ಹೆಚ್ಚು (ಅಳವಿಗಟಿದಲಂಪುಂ ಬಳವಿಗವಡೆದಟ್ಟಿಱುಮಂ ಓರೋರ್ವರೊಳ್ ನೆಱೆದು: **ಆದಿಪು,** ೪. ೫೨ ವ)

ಬಳವ್ಯಸನ – [ನಾ] ಸೈನ್ಯದ ಪಿತೂರಿ (ಸಪ್ತವ್ಯಸನಂಗಳ್ ಅಯ್ದುರುಮನೊಂದುಂ ಗೆಲ್ವುವಲ್ಲವು ರಾಷ್ಟ್ರವ್ಯಸನಮಂ ಬಳವ್ಯಸನಮಂ ಪಾರ್ವೆಮಪ್ಪೊಡೆ ಅವು ಮುನ್ನಮಿಲ್ಲ: **ಪಂಪಭಾ,** ೬. ೬೭ ವ); [ನಾ] ಸೈನ್ಯದ [ಒಳ] ಜಗಳ (ಅಸದಳಮಾಗಿಯುಂ ಈ ನಮ್ಮ ಸೈನ್ಯಂ ಇಂತೊರ್ವರೊರ್ವರೊಳ್ ಸೆಣಸಿ ಬಳವ್ಯಸನದೊಳೆ ಕೆಟ್ಟುದು: **ಪಂಪಭಾ,** ೧೨. ೪೨)

ಬಳವ್ಯಾಘಾತ – [ನಾ] ಶೌರ್ಯದ ಕೇಡು, ಪರಾಕ್ರಮದ ಸೋಲು (ಮಟಿ ಶೌರ್ಯಾಘಾತಂ ನೆಗಟಿ ಬಳವ್ಯಾಘಾತಂ ನಿನ್ನ ಪತಿಗಾದುದು ಪುಸಿಯೇ: **ಆದಿಪು,** ೧೪. ೭೧)

ಬಳಸಂಪನ್ನ – [ನಾ] ಸೈನ್ಯಸಂಪತ್ತಿಯಿಂದ ಕೂಡಿದವನು (ಬಳಸಂಪನ್ನರಂ ಆಸೆಗೆಯ್ದ ಚತುರಂಗಾನೀಕಮಂ ಕೂಡಿ ಕೊಳ್ವುಳಮಂ ಗಂಡುಮಂ ಅಪ್ಪುಕೆಯ್ಗೆ: **ಪಂಪಭಾ,** ೯. ೯೦)

ಬಳಸಿ – [ಕ್ರಿ] ಸುತ್ತು, ಆಸುಪಾಸು (ರಿಪುನೃಪರಂ ಚಲದಲೆದು ಬಂದು ಚಾತುರ್ಬಲಯುತನಾ ನಗದೆ ಬಳಸಿ ಬೀಡಂ ಬಿಟ್ಟಂ: **ಆದಿಪು,** ೫. ೫)

ಬಳಸು – [ಕ್ರಿ] ಸುತ್ತುಗಟ್ಟು (ಬಳಸುವ ಕಣ್ ಮಿಳಿರ್ವ ಕುರುಳ್ ನಳಿಮೊಗಮೆನೆ ಸೊಬಗಿವಳ್ಗೆ ನಾಟ್ಯರ್ತನಮೇ: **ಆದಿಪು,** ೪. ೪೪); [ಕ್ರಿ] ಆವರಿಸು (ಮಗಮಗಿಸಲ್ಕೆ ಮಂದಯಿಸಿ ದಿಕ್ತಟಮಂ ಬಳಸಲ್ಕೆ ಪೀರ್ವ ತುಂಬಿಗೆ ತಣಿಪಲ್ಕೆ ನಮ್ಮ ಜಸಮಂ ಬೆಳಗಲ್ಕೆ ಇವೆ ಸಾಲ್ಗುಂ: **ಆದಿಪು,** ೧೧. ೧೦೭); [ಕ್ರಿ] ಸುತ್ತುಮುತ್ತು ಓಡಾಡು (ಅದು ಬಿಟಿಸ್ದೊಡೆ ಪುರಾಣಕೂಪದೊಳ್ ಅದಂ ಇನ್ನು ಅರಿದು ತೆಗೆವಂದಂ ಎಂದವರಿರೆ ಬಳಸಿಯುಮಲ್ಲಿ ಕಂಡು ನಕ್ಕಂ ದ್ರೋಣಂ: **ಪಂಪಭಾ,** ೨. ೫೧); [ನಾ] ಆವರಿಸುವಿಕೆ (ಆಗಳ್ ಅಶ್ವತ್ಥಾಮಂ ಭೀಮೋದ್ದಾಮ ಶ್ಯಾಮಜಳಧ್ವವಿಮುಕ್ತ ಶರಾವಳಿಯ ಬಳಸಂ ಕಂಡು ಮುಗುಳ್ನಗೆ ನಕ್ಕು: **ಪಂಪಭಾ,** ೧೨. ೬೭ ವ)

ಬಳಾಗ್ರಗಣ್ಯ – [ನಾ] ಸೇನಾಧಿಪತಿ (ಕುಂಭಸಂಭವಂ ಅನೇಕ ಶಾತಕುಂಭಕುಂಭಸಂಭೃತ ಮಂಗಳ ಗಂಗಾಜಳಂಗಳಿಂ ಪವಿತ್ರೀಕೃತಗಾತ್ರನಾಗಿ ಕೌರವಬಳಾಗ್ರಗಣ್ಯನಾಗಿರ್ದಂ: **ಪಂಪಭಾ,** ೧೧, ೫೪ ವ)

ಬಳಾರಿ – [ನಾ] [ಬಲಾರಿ] ಬಲ ಎಂಬ ರಾಕ್ಷಸನ ಶತ್ರು, ಇಂದ್ರ (ಸೌಳನೆ ಬಾರಿಸಿದಂ ದಲೆಂದೊಡೆ ಇಂ ಕೂರ್ಮೆಯ ಮಾತು ಮೆಚ್ಚುವನಿತರ್ಕೆ ಬಳಾರಿ ಮುರಾಸುರಾರಿಯೇಂ: **ಪಂಪಭಾ,** ೫. ೮೨)

ಬಳಿ – [ನಾ] ಪಕ್ಕ, ಪಾರ್ಶ್ವ (ಕೂಟಶಾಲ್ಮಲಿಗಳಂ ಅಡರವೇಟ್ದು ಇದಿರಂ ಬಟಿಯಂ ಉರ್ಚುವರುಂ: **ಆದಿಪು,** ೫. ೮೫ ವ)

ಬಳೆ – [ಕ್ರಿ] ದೊಡ್ಡದಾಗು (ಅಯ್ವರ್ ಕೂಸುಗಳುಂ ಏಟಗ್ೆವಾಡಿವದ ಚಂದ್ರನಂತೆ ಉತ್ತರಾಭಿವೃದ್ಧಿಯೊಳ್ ಸೊಗಯಿಸಿ ಬಳೆಯೆ: **ಪಂಪಭಾ,** ೨. ೩); [ನಾ] [ವಲಯ] ಕಂಕಣ, ಕಡಗ (ಬಳೆಯ ಪೇಱನಾನೆ ಮೆಟ್ಟಿದಂತೆ ನುರ್ಚುನೂಱಪ್ಪಿನಂ ಅವುಂಕಿ: **ಪಂಪಭಾ,** ೮. ೭೬ ವ); [ನಾ] ಆನೆಯ ದಂತಕ್ಕೆ ಹಾಕಿದ ಅಣಸು (ಕಟ್ಟಿದಿರೊಳೆ ನೂಂಕಿದಾನೆಗಳ ಕೋಡುಗಳಿಂ ಬಳೆವೋಗೆ ಪೊಯ್ದುಂ: **ಪಂಪಭಾ,** ೧೦. ೪೧); [ನಾ] ಗಂಟಲ ಬಳೆ, ನಾಳ (ಬಳೆ ನುರ್ಗುತ್ತಿರೆ ಮೆಟ್ಟಿ ಗಂಟಲಂ ಇವಂ ದುಶ್ಶಾಸನಂ ಭೀಮನಿಂ ಬಳಸಂಪನ್ನಂ ಅವುಂಕಿ ಕೊಂದಪೆಂ: **ಪಂಪಭಾ,** ೧೨. ೧೫೦)

ಬಳೆದೆಸಕ – [ನಾ] ಬೆಳೆದ ರೀತಿ (ಅಂತು ವಸುಷೇಣನಾ ಲೋಕಾಂತಂಬರಮಳವಿ ಬಳೆಯೆ ಬಳೆದೆಸಕಮನೋರಂತೆ ಜನಂಗಳ ಕರ್ಣೋಪಾಂತದೊಳೊಗೆದೆಸೆಯೆ ಕರ್ಣನೆಂಬನುಮಾದಂ: **ಪಂಪಭಾ,** ೧. ೯೮)

ಬಳೆದೊಡು – **[ಕ್ರಿ]** [ಬಳೆ+ತೊಡು] [ಗಂಡಸು] ಬಳೆಯನ್ನು ತೊಡು ಎಂದರೆ ಹೇಡಿಯಾಗು (ಇಂತು ಗೋವಳಿಗನ ಗೆಡೆಗೊಂಡು ಮುಂ ಬಳೆದೊಟ್ಟ ಪೇಡಿಯೆ ನಿಮ್ಮನಿಂತಿಳಿಸಿ ಮದ್ದಲಮೆಲ್ಲಮಂ ಕೊಳೆ: **ಪಂಪಭಾ**, ೧೧. ೧೪)

ಬಳೆಯಿಸು – **[ಕ್ರಿ]** ನೀಳವಾಗಿಸು (ಕಳೆದುದು ಪತ್ರಭಂಗದ ಬೆಡಂಗುಗಳಂ ಕುಟಿಲಾಲಕಂಗಳಂ ಬಳೆಯಿಸಿದತ್ತು ಕಣ್ಗೆಸೆವ ರಾಗಮನೆಯ್ದಿಸಿ ಕೇಶಹಸ್ತಮಂ ಚಳಿಯಿಸಿದತ್ತು: **ಆದಿಪು**, ೧೧. ೧೫೦); **[ಕ್ರಿ]** ಮಾಡಿಸು (ಉತ್ಪಾತಶಾಂತಿಪೌಷ್ಟಿಕ ಕ್ರಿಯೆಗಳಂ ಮಹಾಬ್ರಾಹ್ಮಣರಿಂದಂ ಬಳಿಯಿಸಿ ಬದ್ಧವಣಮಂ ಬಾಜಿಸಿ ಮಂಗಳಮಂ ಪಾಡಿಸಿ ಕೂಸಿಂಗೆ ದುರ್ಯೋಧನನೆಂದು ಪೆಸರನಿಟ್ಟು: **ಪಂಪಭಾ**, ೧. ೧೩೩ ವ)

ಬಳೆಯುತ್ತಿರ್ಪನ್ನೆಗಂ – ಬೇಳೆಯುತ್ತಿರುವಷ್ಟರಲ್ಲಿ (ಕುಂತಿ ಕುಂತಿಭೋಜನ ಮನೆಯೊಳ್ ಬಳೆಯುತ್ತಿರ್ಪನ್ನೆಗಂ ಆ ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂಗೊಳೆ ಕೊಟ್ಟಂ ದುರ್ವಾಸಂ ವಿಳಸಿತ ಮಂತ್ರಾಕ್ಷರಂಗಳಂ ದಯೆಯಿಂದಂ: **ಪಂಪಭಾ**, ೧. ೮೮ ಮತ್ತು ೧. ೮೯)

ಬಳೆಯೆ ನುಡಿ – **[ಕ್ರಿ]** ಹೆಚ್ಚಾಗಿ ಮಾತಾಡು (ಒಂದು ಮನೆವಾರ್ತೆಗಿದೇನೆಂದರಸ ಬಳೆಯೆ ನುಡಿದಪೆ: **ಆದಿಪು**, ೧೪. ೩೦)

ಬಳೆವರ್ – **[ಕ್ರಿ]** ಬೆಳೆಯುತ್ತಿರು (ನಾನೆನ್ನ ಮಾವಂ ಕೊಂತಿಭೋಜನ ಮನೆಯೊಳ್ ಬಳೆವಂದು ದುರ್ವಾಸ ಮಹಾಮುನಿಯರೆಮ್ಮ ಮನೆಗೆ ನಿಚ್ಚಕ್ಕಂ ಬರ್ಪವರ್: **ಪಂಪಭಾ**, ೧. ೧೧೮ ವ)

ಬಳೆವೋಗು – **[ಕ್ರಿ]** ಬಳೆಯು [ಅಣಸು] ಕಳಚಿ ಬೀಳು (ಕಟ್ಟಿದಿರೊಳೆ ನೂಂಕಿದಾನೆಗಳ ಕೋಡುಗಳಿಂ ಬಳೆವೋಗೆ ಪೊಯ್ದುಂ: **ಪಂಪಭಾ**, ೧೦. ೪೧)

ಬಳ್ಕು – **[ಕ್ರಿ]** ತೊನೆದಾಡು (ತ್ರಿವಳಿಗಳುಂ ವಿರೋಧಿನೃಪರುತ್ಸವಮುಂ ಕಿಡೆವಂದುವು ಆನನೇಂದುವ ಕಡುವೆಳ್ಪು ಕೂಸಿನ ನೆಗಟ್ತೆಯ ಬೆಳ್ಪುವೊಲಾಯ್ತು ಮುನ್ನೆ ಬಳ್ಕುವ ನಡು ತೋರ್ಪ ಮೆಯ್ಯನೊಳಕೊಂಡುದು: **ಪಂಪಭಾ**, ೧. ೧೨೫); **[ಕ್ರಿ]** ನಡುಗು (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏಟುತಿರೆ: **ಪಂಪಭಾ**, ೩. ೯)

ಬಳ್ವಳ – **[ಗು]** ಅತಿಶಯ (ನನೆಗಳ ಗೊಂಚಲಂ ತಳಿರ ತೊಂಗಲನಾಡುವ ಬಳ್ವಳಪ್ಪ ಕೊಂಬಿನ ಮಿಡಿಯಂ ತೆರಳ್ಚಿ ತೆಗೆದು ಓವದೆ ಕಾಯದೆ: **ಆದಿಪು**, ೧೧. ೧೩೨)

ಬಳ್ವಳನಾಗು – **[ಕ್ರಿ]** ವಿಶಾಲಗೊಳ್ಳು (ದೆಸೆಗಳನೆಂಟುಂ ನೆಱೆಯೆ ಮುನ್ನಮೆ ಮಳ್ವಳನಾಗೆ ಮಾಡದೆ ಆಗಸಮುಮಂ ಉಚ್ಚಮಾಗಿನಿಸನೆತ್ತದೆ: **ಆದಿಪು**, ೧೧. ೩೫)

ಬಳ್ವಳ ನೀಳ್ – **[ಕ್ರಿ]** ತುಂಬ ದೀರ್ಘವಾಗು (ಬಳ್ವಳ ನೀಳ್ದ ಕಣ್ಮಲರ ತಳ್ತಮೆಯಿಂ ಕರೆಗಣ್ಮಿ ಬೆಳ್ಗಡಲ್ಗಳ್ ಪರಿಯಲ್ಕಂ ಆಟಿಸಿದೊಡೆ: **ಪಂಪಭಾ**, ೭. ೬೮)

ಬಳ್ವಳ ಬಳೆ – **[ಕ್ರಿ]** ಎಲ್ಲೆಲ್ಲೂ ವ್ಯಾಪಿಸು (ಸುರಕಾಂತಾನೃತ್ಯಮೆತ್ತಂ ಪಸರಿಸಿರೆ ನಭೋಭಾಗದೊಳ್ ದೇವತೂರ್ಯಸ್ವರಂ ಆಶಾಚಕ್ರದೊಳ್ ಬಳ್ವಳಬಳೆದಿರೆ: **ಆದಿಪು**, ೮. ೬೭); **[ಕ್ರಿ]** ಬಳಬಳ ಬೆಳೆ, ಸೊಂಪಾಗಿ ಬೆಳೆಯುವುದು (ಮಾಧವೀಲತೆಯ ಬಳ್ಳವಳ್ಳಿಯ ಬಳ್ಳಿಗಾವಣದ ಮುಂದೆ ಬಳ್ವಳ ಬಳೆದೆಳದಳಿಸುವ ಪೊಸ ಕೆಂದಳಿರ ಗೊಂದಳದೊಳೆ: **ಆದಿಪು**, ೧೧. ೭೩ ವ)

ಬಳ್ವಳಾಗು – **[ಕ್ರಿ]** ವಿಸ್ತರಿಸು (ಆತನ ಪಡೆಗೆ ನಡೆಯಲೆಡೆಮಾಡಿದಂತೆ ಬಳ್ವಳಾದ ದೆಸೆಗಳುಂ: **ಆದಿಪು**, ೧೧. ೫ ವ)

ಬಳ್ವಳಿಕೆ – **[ನಾ]** ಬಳುಕಾಟ (ಮಿಸುಗುವ ತನ್ನ ಬಾಯ್ದೆಱೆಯೊಳ್ ಆಲದ ಪಣ್ಣನೆ ಮೈಯ ಬಣ್ಣದೊಳ್ ಕೊಸಗನೆ ತನ್ನ ಬಳ್ವಳಿಕೆಯೊಳ್ ಸೆಳೆಗೊಂಬನೆ ಪೋಲ್ತು: **ಆದಿಪು**, ೧೨. ೩೮); **[ನಾ]** ಅಲುಗಾಟ (ನಳಿತೋಳ ಬಳ್ವಳಿಕೆ ಕಣ್ಗೊಳ್ಗೆ ಘಟ್ಟಿಮಗುಟ್ಟುವಂದಮಲ್ತು ಅರೆದು ಮಗುಟ್ಟುವಂದಮೆ ದಲ್ ಎನ್ನೆರ್ದೆಯಂ: **ಪಂಪಭಾ**, ೮. ೬೦); **[ನಾ]** ಹೊಯ್ದಾಟ, ಬೀಸಾಟ (ತಳರ್ದುದು ಕರ್ಣತಾಳ ಪವನ ಆಹತಿಯಿಂ ಜಳರಾಶಿ ಕೆಯ್ಯ ಬಳ್ವಳಿಕೆಗೆ ದಿಗ್ಗಜಂ ದೆಸೆಯಿನತ್ತ ತೆರಳ್ದುವು ಕಾಯ್ಪಿನಿಂ: **ಪಂಪಭಾ**, ೧೧. ೭೧)

ಬಳ್ಳ – **[ನಾ]** ಧಾನ್ಯದ ಒಂದು ಅಳತೆ (ಸೆಟ್ಟಿಯ ಬಳ್ಳಂ ಕಿಱಿದು ಎಂಬುದೊಂದು ನುಡಿಯಂ ನೀಂ ನಿಕ್ಕುವಂ ಮಾಡಿದೈ: **ಪಂಪಭಾ**, ೧೨. ೧೭೫)

ಬಳ್ಳವಳ್ಳಿ – **[ನಾ]** ಹಬ್ಬುಗೆ (ಒಡೆವಳೆದ ಅಂಬರೇಚರರನ್ವಿತ ಮಂತ್ರಿಸಮೂಹಮಂ ಮನಂಬಿಡೆ ಪೊರೆದ ಇಷ್ಟಬಂಧುಜನಮಂ ಕರೆದು: **ಆದಿಪು**, ೨. ೫೦); **[ನಾ]** ಅತಿಶಯ, ಆಧಿಕ್ಯ (ಸುರತ ಸುಖದ ಬಳ್ಳವಳ್ಳಿಯೆನಿಪ ಬಳ್ಳಿಮಾಡದಿಂ ಮಹಾವಿನೋದ ನೀಡದಿಂ: **ಪಂಪಭಾ**, ೧. ೫೮)

ಬಳ್ಳಿಗವುಂಗು – **[ನಾ]** [ಬಳ್ಳಿ+ಕವುಂಗು] ಎಳೆಯ ಅಡಕೆಯ ಸಸಿ (ಬಳ್ಳಿಗವುಂಗಂ ತಳ್ತೆಲೆವಳ್ಳಿಯ ಕಟ್ಟಿಲೆಯನಲೆವ ಸೊಡರ್ಗುಡಿಗಳಂ: **ಆದಿಪು**, ೧೧. ೬೭)

ಬಳ್ಳಿಗಾವಣ – **[ನಾ]** [ಬಳ್ಳಿ+ಕಾವಣ] ಬಳ್ಳಿಯ ಚಪ್ಪರ, ಬಳ್ಳಿಮಾಡ, (ಮಾಧವೀಲತೆಯ ಬಳ್ಳವಳ್ಳಿಯ ಬಳ್ಳಿಗಾವಣದ ಮುಂದೆ ಬಳ್ವಳ ಬಳೆದೆಳದಳಿಸುವ ಪೊಸ ಕೆಂದಳಿರ ಗೊಂದಳದೊಳೆ: **ಆದಿಪು**, ೧೧. ೭೩ ವ)

ಬಳ್ಳಿಮಾಡ – **[ನಾ]** ಲತಾಕುಂಜ, ಬಳ್ಳಿಯ ಮಂಟಪ (ಸುರತ ಸುಖದ ಬಳ್ಳವಳ್ಳಿಯೆನಿಪ ಬಳ್ಳಿಮಾಡದಿಂ ಮಹಾವಿನೋದ ನೀಡದಿಂ; **ಪಂಪಭಾ**, ೧. ೫೮)

ಬಳ್ಳಿವಳ್ಳಿ – **[ನಾ]** ಬಳ್ಳಿಯಂತೆ ಹಬ್ಬಿಕೊಂಡಿರುವುದು (ಮಾಧವೀಲತೆಯ ಬಳ್ಳವಳ್ಳಿಯ ಬಳ್ಳಿಗಾವಣದ ಮುಂದೆ ಬಳ್ವಳ ಬಳೆದೆಳದಳಿಸುವ ಪೊಸ ಕೆಂದಳಿರ ಗೊಂದಳದೊಳೆ: **ಆದಿಪು**, ೧೧. ೭೩ ವ)

ಬಳ್ಳು – **[ನಾ]** ನರಿ (ನೆತ್ತರಂ ಪಡೆಯದೆ ಆಕಾಶಕ್ಕೆ ಬಾಯಂ ತೆಱೆದು ಊಳ್ವ ಬಳ್ಳುಗಳುಮಂ ನರವುಮಂ ಬರಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ ತಾನೆ ಸೋದು: **ಪಂಪಭಾ**, ೧೩. ೫೬ ವ)

ಬಳ್ಳುಗೆಡೆ – **[ಕ್ರಿ]** [ನರಿಯಂತೆ] ಕೂಗು (ಎರಡುಂ ಬಲದ ಕಡಿತಲೆಯ ನಾಯಕರ್ ಕೆಯ್ಕೊಂಡು ಬಳ್ಳುಗೆಡೆದು ಎಕ್ಕೆವಾಱುವಾಜಿ ಪಲಗೆವಾಜಿ ಗೂಳಿಸೊರ್ಕಿ ಮಾರ್ಕೊಂಡು ಕಾದೆ: **ಪಂಪಭಾ**, ೧೦. ೮೦ ವ)

ಬಱ – [ನಾ] ಕ್ಷಾಮ, ಕೊರತೆ (ಇಂಚೆಯ ಪಸವಿನ ಬಱದ ಕಳಿಂಚಿನ ಡಾವರದ ಬಾಧೆಯಿಲ್ಲದ ಪದದೊಳ್: **ಪಂಪಭಾ,** ೯. ೫೧)

ಬಱಸಿಡಿಲ್ – [ನಾ] ಮೋಡವಿಲ್ಲದೆ ಹೊಡೆಯುವ ಸಿಡಿಲು (ಎಡವಱದೊಳ್ ಎಱಗಿ ಬಱಸಿಡಿಲ್ ಇಡುಮುಡುಕನೆ ಪೊಡೆದುದೆನಿಸಿ ಪಾಂಡ್ಯನ ರಥದ ಅಚ್ಚು ಉಡಿದು ಅಟ್ಟೆಗೆಟಟ್ಗೆ ಕೊಂಡುವು: **ಪಂಪಭಾ,** ೧೨. ೮೨)

ಬಱೆಯ – [ಅ] ಕೇವಲ, ಸೀಮಿತವಾದ (ಪಂಡಿತೆಯೆಂಬ ಬಱೆಯ ಪೆಸರಲ್ಲದೆ ರಾಜಕುಳಸತತಸಂವಾಸಪ್ರಾಪ್ತ ಪ್ರಾಗಲ್ಭ್ಯತೆಯುಂ ಉಳ್ಳುದಱೆಂದಂ: **ಆದಿಪು,** ೪. ೨೧ ವ)

ಬಱುಬ – [ನಾ] ಬಡವ, ಅಸಹಾಯಕ (ಪೊಯ್ದೊಡೆ ಬಱುಬಂ ಪೊಯಿಲ್ವೆತ್ತಂತೆ ಏನುಮಱೆಯದೆ ಪರಿಭವಾನಿಲನಿಂ ಶೋಕಾನಲಂ ಇರ್ಮಡಿಸೆ: **ಪಂಪಭಾ,** ೮. ೭೦ ವ)

ಬಱುವ – [ನಾ] ಬಡವ (ಕಿಱೆಯಂ ಮುತ್ತಂ ಧನದಂ ಬಱುವಂ ತೊಱೆದಂ ಗೃಹಸ್ಥನೆನ್ನದೆ ಮುಂಬಿಟ್ಟಱಸಿ ಕೊಲುತಿರ್ಪ ಜವಂ: **ಆದಿಪು,** ೪. ೭೭); [ನಾ] ಬರಿದಾದವನು, ಬರಿಗೈಯವನು (ಬಱುವಂ ಸಾರಥಿಯಿಲ್ಲ ಮೆಯ್ಗೆ ಮಱೆಯುಂ ತಾನಿಲ್ಲ ಅದೆಂತೀಗಳ್ ಆನಿಱೆವೆಂ: **ಪಂಪಭಾ,** ೧೨. ೨೦೭)

ಬಱುವಾತು – [ನಾ] ಬಱುನುಡಿ, ವ್ಯರ್ಥ ನುಡಿ (ಮಾತಱೆಯದ ಮಾತು ತಮ್ಮ ಬಱುವಾತುಗಳೊಳ್ ಪುದಿದು: **ಪಂಪಭಾ,** ೪. ೯೫)

ಬಟ್ – [ಕ್ರಿ] ಬಾಳು (ಅಪಖ್ಯಾತಿ ಲೋಕಮನಾವರ್ತಿಸೆ ಬಟ್ಕೊಡೆನ್ನ ಕುಲಮುಂ ತಕ್ಕೂರ್ಮೆಯುಂ ಮಾಸದೇ: **ಪಂಪಭಾ,** ೧. ೭೧)

ಬಟಲ್ – [ಕ್ರಿ] ಜೋಲು (ಎಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಲ್ದು ತುಂಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್: **ಪಂಪಭಾ,** ೧. ೮); [ಕ್ರಿ] ಆಯಾಸಗೊಳ್ಳು (ಮೆಯ್ಗೊಂಡ ಒಲವಿಂದೆ ಅಗಲ್ಕೆಗೆ ಅಣಂ ಆಱದೆ ಪಕ್ಕಿಗಳೆಲ್ಲಮಂ ಮರುಳ್ಗೊಂಡವೊಲ್ ಊಳ್ದು ಕೂಡೆ ಬೆಸಗೊಂಡು ಬಟಲ್ದುವು ಜಕ್ಕವಕ್ಕಿಗಳ್: **ಪಂಪಭಾ,** ೪. ೪೮); [ಕ್ರಿ] ಶಕ್ತಿ ಕಳೆದುಕೊ (ಆ ಕಮಳಾಕರಮಂ ಪೊಕ್ಕು ಆಕಾಶಧ್ವನಿಯಂ ಉಱದೆ ಕುಡಿದು ಅರಿಭೂಪಾನೀಕ ಭಯಂಕರನುಂ ಗಡಂ ಏಕೆಂದಱೆಯೆಂ ಬಟಲ್ದು ಜೋಲ್ದಂ ಧರೆಯೊಳ್: **ಪಂಪಭಾ,** ೮. ೪೧)

ಬಟಲಿಸು – [ಕ್ರಿ] ಆಯಾಸಪಡಿಸು, ತೊಂದರೆ ಕೊಡು (ಕೆಮ್ಮಗೆ ನಿಮ್ಮಡಿ ಬಟಲಿಸಲ್ವೇಡ ಬಂದ ಬಟ್ಟೆಯಿನೆ ಬಿಜಯಂಗೆಯ್ಯಿಂ: **ಪಂಪಭಾ,** ೯. ೪೮ ವ)

ಬಟಲೆತೆಗಪು – [ಕ್ರಿ] [ಎಣ್ಣೆಯಲ್ಲಿ] ಕರಿ (ತಳ್ಳನೆ ಕುದಿವ ಕರ್ಬೊನ್ನ ಕಾಯ್ಗೊಂಡೆಣ್ಣೆಯೊಳ್ ಬಟಲೆತೆಗಪುವವರುಂ: **ಆದಿಪು,** ೫. ೮೫ ವ)

ಬಟಲ್ಮುಡಿ – [ನಾ] ಇಳಿಬಿದ್ದ ಕೇಶರಾಶಿ (ಮೃಗಮದದಣ್ಪು ಜಾದಿಯ ಬಳಲ್ಮುಡಿ ನೆಯ್ದಿಲ ಕರ್ಣಪೂರಂ: **ಆದಿಪು,** ೧೨. ೧೨)

ಬಟಿ – [ನಾ] ಪೀಳಿಗೆ, ವಂಶ (ಅವರ ಪಿಡಿವ ಬಿಲ್ ಬಿಲ್ ಎಮ್ಮಂಬುಗಳುಂ ಅವರಿತ್ತ ನಲ್ಲಂಬುಗಳೆನೆ ಬಟಿಗಾಯದಂತು ಚಲಮನೆ ಕಾವೆಂ: **ಪಂಪಭಾ,** ೧೨. ೩೯); [ನಾ] ಸಂದೇಶವಾಹಕ (ಮನುವಂಶಧ್ವಜಂ ಸೇನಾನಾಯಕಂಗೆ ಬಟಿಯನಟ್ಟಿದಾಗಳ್ ಆತಂ ಬಂದು: **ಆದಿಪು,** ೧೩. ૩೧ ವ)

ಬಟಿಕ್ಕ – [ಅ] ಆನಂತರ (ಇಂದೆ ಹಳಿಯುಂ ಗಡ ಕೂಡುವಂ ಆತನಂ ಗೆಲಲ್ ಬಂದಪುದೇ ಬಟಿಕ್ಕ ಅದುವೆ ಕಾರಣಮಾಗಿ ಉಳಿದಿರ್ದಂ ಅಂಧರಾಣ್ಣಂದನಂ: **ಪಂಪಭಾ,** ೧೩. ೭೫)

ಬಟಿಗಾಯ್ – [ಕ್ರಿ] ವಂಶರಕ್ಷಣೆ ಮಾಡು (ಅವರ ಪಿಡಿವ ಬಿಲ್ ಬಿಲ್ ಎಮ್ಮಂಬುಗಳುಂ ಅವರಿತ್ತ ನಲ್ಲಂಬುಗಳ್ ಎನೆ ಬಟಿಗಾಯದಂತು ಚಲಮನೆ ಕಾವೆಂ: **ಪಂಪಭಾ,** ೧೨. ೩೯)

ಬಟಿಗೊಳ್ – [ಕ್ರಿ] ಹಿಂದೆಯೇ ಹೋಗು (ಮುಂದಣ ಮಿಗಮಂ ಕಟಿಪದೆ ಸಂದಿಸಿ ಬಟಿಗೊಳ್ವ ಮಿಗಮುಮಂ ಕಟಿಪದೆ ತಾನೊಂದಳವಿದಪ್ಪದೆಚ್ಚು: **ಪಂಪಭಾ,** ೫. ೪೮)

ಬಟಿಯಂ – [ಅ] ಹಿಂದುಗಡೆ (ಕರಿಕಳಭಂಗಳ ಶಿಶುಕೇಸರಿಗಳ ಬಟಿಯಂ ತಗುಳ್ದು ಬಡವುಗಳಂ ಅವಂ ತಿರಿಪಿ ಪಿಡಿಯುತ್ತುಂ: **ಪಂಪಭಾ,** ೨. ೧೦); [ಅ] ಆನಂತರ (ಬಟಿಯಂ ಯಕ್ಷಕರ್ದಮದ ಕೆಯ್ಗಟ್ಟಿಯೊಳ್ ಕೆಯ್ಯಂ ತಿಮಿರ್ದು ತಂಬುಲಮಂ ಕೊಂಡು: **ಪಂಪಭಾ,** ೩. ೭೯ ವ)

ಬಟಿಯನಟ್ಟು – [ಕ್ರಿ] ಬರುವಂತೆ ಹೇಳಿಕಳಿಸು (ಮನುವಂಶಧ್ವಜಂ ಸೇನಾನಾಯಕಂಗೆ ಬಟಿಯನಟ್ಟಿದಾಗಳ್ ಆತನುಂ ಬಂದು: **ಆದಿಪು,** ೧೩. ૩೧ ವ)

ಬಟಿವಟಿ – [ಅ] [ಬಟಿ+ಬಟಿ] ಹಿಂದು ಹಿಂದೆಯೇ (ಜಾತ್ಯಶ್ವದಂತೆ ಬೇಗಮಾಗಿ ಕೋಳಿಕಾಳಿಕಾಱನಂತೆ ಬಟಿವಟಿವಿಡಿದು ತುಂಬಿನ ನೀರಂ ಉರ್ಚಿದಾಗಳಂತೆ ಪರಿದು ಅಳುರ್ದುಕೊಳ್ವುದಿದು ಪಂದಿವೇಂಟೆಯ ನಾಯ್: **ಪಂಪಭಾ,** ೫. ೪೬ ವ); [ನಾ] ಹೆಣ್ಣುಮಕ್ಕಳಿಗೆ ಕೊಡುವ ಉಡುಗೊರೆ (ಕೊಟ್ಟಂ ತಂಗಿಗೆ ಬಟಿವಟಿಯೆಂದಿಂತು ಸರ್ವಸ್ವಮೆಲ್ಲಮಂ ಪುರುಷೋತ್ತಮಂ: **ಪಂಪಭಾ,** ೫. ೨೬)

ಬಟಿವಟಿಗೊಡು – [ಕ್ರಿ] [ಮದುವೆ ಸಂಬಂಧದ] ಉಡುಗೊರೆ ಕೊಡು (ತಮ್ಮ ಮನೆಯೊಳುಳ್ಳ ಅನರ್ಘ್ಯರತ್ನಂಗಳೆಲ್ಲಮಂ ಬಟಿವಟಿಗೊಟ್ಟು ಬೀಟ್ಕೊಂಡು ಪೋದರ್: **ಆದಿಪು,** ೧೩. ೮೦ ವ)

ಬಟಿವಿಡು – [ಕ್ರಿ] ದಾರಿ ಬಿಡು, ಅವಕಾಶ ಮಾಡಿಕೊಡು (ಸುರರಾಜಿ ಕೈವಾರದಿಂ ಬಟಿವಿಟ್ಟು ನಮ್ಮನೆ ನೋಡ ನೋಡುವರ್: **ಪಂಪಭಾ,** ೧೩. ೪೫)

ಬಟಿಸಲ್ – [ಕ್ರಿ] ಅಟ್ಟಿಸಿಕೊಂಡು ಬಾ (ಮತ್ತಿನ ಉಟಿದರುಮಂ ಉಟಿಯಲೀಯದೆ ಬಟಿಸಂದಾಗಳ್: **ಪಂಪಭಾ,** ೧೧. ೯ ವ)

ಬಟ್ಟಪುದು – [√ಬಾಟ್] ಬಾಳುತ್ತದೆ (ಕುರುಬಲಮೆಂಬುದು ಈ ಸುರನದೀಜನ ತೋಳ್ವಲಂ ಎಂಬ ವಜ್ರಪಂಜರದೊಳಗಿರ್ದು ಬಟ್ಟಪುದು: **ಪಂಪಭಾ,** ೧೧. ૩೭)

ಬಟ್ಟಿರ್ – ಬಾಳಿದಿರಿ (ತೊಡರದೆ ನೀಮುಂ ಆ ನೆಗಟ್ಟ ಪಾಂಡುವುಂ ಒಂದಿಯೆ ಬಟ್ಟಿರ್: **ಪಂಪಭಾ,** ೧೩. ೧೮)

ಬಟಿಲ್ದಿಂ – ಬದುಕಿದೆ! (ಕೊಳನ ತಡಿಯೊಳ್ ಬಿಟ್ಟಿರ್ದ ನಾಲ್ವರುಮಂ ಕಂಡು ಬಾಪ್ಪು ಬಟಿಲ್ದಿಂ ಎಂದು ತಿನಲ್ ಸಾರ್ವಾಗಳ್: **ಪಂಪಭಾ,** ೮. ೪೨ ವ)

ಬಾಂದೊಱೆ – [ನಾ] ಆಕಾಶದ ನದಿ, ದೇವಗಂಗೆ (ಆತ್ಮವಿಟತ್ತ್ವಮಂ ಉಂಟೊಡೆತಾಗಿ ಮಾಡಿ ಬಾಂದೊಱೆಯನೆ ಪೊತ್ತು ಗೌರಿಗೆ ಕವಲ್ದೊಱೆಗೆಯ್ದಿದಂ ಈ ಪ್ರದೇಶದೊಳ್: **ಪಂಪಭಾ,** ೭. ೭೫)

ಬಾಗಿಲ್ವಾಡ – [ನಾ] ಊರ ಹೆಬ್ಬಾಗಿಲು (ಸಾಕೇತನಗರಮಂ ಕನಕಪ್ರಾಕಾರದ ಬಾಗಿಲ್ವಾಡಂಗಳೊಳಂ ರಾಜಮಂದಿರದ ಗೋಪುರದ್ವಾರಂಗಳೊಳಂ: **ಆದಿಪು,** ೧೬. ೩೭ ವ೦

ಬಾಗು – [ಕ್ರಿ] ಬಗ್ಗು (ದೇವೋತ್ತಮಾಂಗಂಗಳುಂ ಬಾಗಿದುವು ತ್ರೈಲೋಕ್ಯನಾಥೋದಯಮಂ ಅಱಿಪುವಂತಾ ತ್ರಿಳೋಕಕ್ಕಮಾಗಳ್: **ಆದಿಪು,** ೭. ೩೯)

ಬಾಜಿಸು – [ಕ್ರಿ] ಶಬ್ದಮಾಡು, ವಾದ್ಯ ನುಡಿಸು (ಅತಿಮಧುರೋದ್ಭಸಿತ ಗಂಭೀರನಾದದಿಂ ಬಾಜಿಸಿದಂ: **ಆದಿಪು,** ೧೪. ೪೬); [ಕ್ರಿ] [ವಾಚಿಸು] ಓದು (ಕರಮಟ್ಟರ್ತು ಸಮಸ್ತಭಾರತಕಥಾಸಂಬಂಧಮಂ ಬಾಜಿಸಲ್ ಬರೆಯಲ್ ಕೇಳಲ್ ಒಡರ್ಚುವಂಗೆ: **ಪಂಪಭಾ,** ೧೪. ೬೫)

ಬಾಡ – [ನಾ] [ವಾಟ] ಹಳ್ಳಿ (ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ ರಾಗಂಗಿಡದೆ ಕೊಂಡಾಡಿದಂ: **ಪಂಪಭಾ,** ೧೪. ೫೫)

ಬಾಡು – [ಕ್ರಿ] ಕಾಂತಿಗುಂದು (ಸಸ್ಯಾವಳಿ ಸುಗಿದಗಿದು ಕೂಡೆ ಬಾಡಿರ್ದುದು: **ಆದಿಪು,** ೧೦. ೬೬); ಬತ್ತಿಹೋಗು (ಗಟಿಯಿಸೆ ಕೆಂಪು ಕಣ್ಗಳ ಮೊದಲ್ಗಳೊಳ್ ಒಯ್ಯನೆ ತೋಱೆ ಬಾಡಿ ಪಾಡಟಿದು ಬಟಲ್ದು ಜೋಲ್ದ ಇರವು : **ಪಂಪಭಾ,** ೪. ೬೧)

ಬಾಣ – [ನಾ] ಶರ, ಅಸ್ತ್ರ (ಗುಣಾರ್ಣವಂ ಮತ್ತಂ ಐಂದ್ರ ವಾರುಣ ವಾಯವ್ಯ ಆಗ್ನೇಯಾ ಪಾರ್ವತಾದಿ ಬಾಣಂಗಳಂ ತುಡೆ: **ಪಂಪಭಾ,** ೨. ೭೬ ವ)

ಬಾಣಧಿ – [ನಾ] ಬತ್ತಳಿಕೆ (ಅಂತಮೋಘಬಾಣಂ ಬಾಣಧಿಯಿಂ ಬಾಣಮನುರ್ಚಿಕೊಂಡು: **ಆದಿಪು,** ೧೨. ೮೮)

ಬಾಣಪಾತ – [ನಾ] ಬಾಣದ ಎರಗುವಿಕೆ, ಸುರಿಯುವಿಕೆ (ಅಂತೆಯ್ದಿ ತದ್ಗದಾಘಾತದೊಳಂ ಬಾಣಪಾತದೊಳಂ ಅವನ ರಥಮಂ ಶಚಚೂರ್ಣಂ ಮಾಡಿ: **ಪಂಪಭಾ,** ೭. ೩೧ ವ)

ಬಾಣಸಿಗ – [ನಾ] ಅಡಿಗೆಯವನು (ತನ್ನ ಬಾಣಸಿಗನಾಗಿರ್ದ ವಲ್ಲಲನಂ ಕರೆದು ಪೇಟ್ದಾಗಳ್: **ಪಂಪಭಾ,** ೮. ೫೭ ವ)

ಬಾಣಸು – [ನಾ] ಅಡುಗೆ (ನಿನ್ನಂ ಆಳ್ವೆಂ ಎಂದು ಬಾಣಸಿನ ಕರಣಕ್ಕೆ ನಿರೂಪಣಂಗೆಯ್ದಂ: **ಪಂಪಭಾ,** ೮. ೫೪ ವ)

ಬಾಣಾಂತಕ – [ನಾ] ಬಾಣನೆಂಬ ರಾಕ್ಷಸನನ್ನು ಕೊಂದವನು, ಶ್ರೀ ಕೃಷ್ಣ (ದುರ್ಯೋಧನಂಗೆ ಇಂ ಪುಗಲ್ಕೆಡೆ ತ್ರೈಭೂಭುವನಂಗಳಿಂ ಪೊಱಗೆ ಮತ್ತೆಲ್ಲಿತ್ತೊ ಬಾಣಾಂತಕಾ: **ಪಂಪಭಾ,** ೧೩. ೭೬)

ಬಾಣಾವಾಸ – [ನಾ] {ಬಾಣ+ಆವಾಸ} ಬತ್ತಳಿಕೆ (ಶೋಣಾಶ್ವಂಗಳ್ ರಜತರಥಮಂ ಪೂಡೆ ಕುಂಭಧ್ವಜಂ ಗೀರ್ವಾಣಾವಾಸಂಬರಂ ಅಡರೆ ಮಾಱೊಡ್ಡು ದಲ್ ಸಾಲದು ಎನ್ನೀ ಬಾಣಾವಾಸಕ್ಕೆ ಎನುತುಂ: **ಪಂಪಭಾ,** ೧೧. ೫೬)

ಬಾಣಾಸನ – [ನಾ] [ಬಾಣ+ಆಸನ] ಬಿಲ್ಲು (ಪಂಚವಿಂಶತ್ಯನ್ವಿತ ಸಪ್ತಶತ ಬಾಣಾಸನೋಚ್ಛ್ರಿತನುಂ ನಳಿನಪ್ರಮಾಣ ಆಯುಷ್ಯನುಮಾಗಿ: **ಆದಿಪು,** ೬. ೫೭ ವ)

ಬಾಣಾಸನಬಾಣಪಾಣಿ – [ನಾ] ಬಿಲ್ಲುಬಾಣಗಳನ್ನು ಕೈಯಲ್ಲಿ ಹಿಡಿದವನು (ಕೌರವರ್ಗೆಲ್ಲಂ ಪ್ರಾಣಂ ಬರ್ಪಾಕೃತಿಯೊಳೆ ಬಾಣಾಸನ ಬಾಣಪಾಣಿ ಕರ್ಣಂ ಬಂದಂ: **ಪಂಪಭಾ,** ೨. ೫೭)

ಬಾದ – [ನಾ] ವಾದ, ಚರ್ಚೆ (ಬಾದೇನ್ ಆ ಮದೀಯ ಕರ್ಮಫಳೋದಿತ ಸಂತಾಪರೂಪಪಾಪಕಳಾಪ ವಿಚ್ಛೇದನಕರಮಾಯ್ತು ಭವತ್ ಪಾದಪ್ರಕ್ಷಾಳನ ಉದಕದಿಂ ಮುನಿನಾಥಾ: **ಪಂಪಭಾ,** ೬. ೧೩)

ಬಾದರ – [ನಾ] [ಜೈನ] ಜೀವಗಳ ಹದಿಮೂರು ಪ್ರಕೃತಿಗಳಲ್ಲಿ ಒಂದು (ಬಾದರಯಶಸ್ಕೀರ್ತಿರುಚ್ಚೈರ್ಗೋತ್ರ ತೀರ್ಥಕರನಾಮಗಳೆಂಬ ಪದಿಮೂಱುಂ ಪ್ರಕೃತಿಗಳುಮಂ ನಿರ್ಮೂಲಂ ಕಿಡಿಸಿ: **ಆದಿಪು,** ೧೬. ೪೯ ವ)

ಬಾದರರೂಪ – [ನಾ] [ಜೈನ] ಸ್ಥೂಲ ರೂಪ, ವನಸ್ಪತಿ ಮುಂತಾದವುಗಳದ್ದು ಏಕಜೀವಿಗಳಾದ ಸೂಕ್ಷ್ಮ ರೂಪ; ಕ್ರಿಮಿ ಮೊದಲಾದ ದ್ವೀಂದ್ರಿಯಾದಿ ಜೀವಗಳು ಸ್ಥೂಲ ರೂಪ (ಬಾದರರೂಪದಿಂದೆ ಕೊಲ್ಲದ ಪರನಾರಿಗಾಟಿಸದ ಕಳ್ಳದ ಅಸತ್ಯದೊಳೊಂದದ ಆಗಳುಂ ಕುದಿದಪತೃಷ್ಣೆಯಂ ಕುಸಿದು ಮಾಣಿಸುವ ಅಯ್ದುಂ ಅಣುವ್ರತಂಗಳಂ .. .. ತಾಳ್ದಿ: **ಆದಿಪು,** ೬. ೭)

ಬಾದುಗೆಯ್ – [ಕ್ರಿ] ವಾದ ಮಾಡು (ಪುರೋಪವನದೊಳಿರ್ದ ಮತಿಸಾಗರಮುನಿಪತಿಯೊಳ್ ಬಾದುಗೆಯ್ದು: **ಆದಿಪು,** ೩. ೭೫ ವ)

ಬಾಧಾವಿಘಾತ – [ನಾ] ವಿಪತ್ತಿಗೆ ಪರಿಹಾರ (ಅನಾಗತ ಬಾಧಾವಿಘಾತಮಂ ಮಾಡಲೆಂದು ಅಯ್ವರುಮಂ ನೀಲಗಿರಿಗೆಡೆಗೊಂಡು ಪೋಗುತ್ತುಂ: **ಪಂಪಭಾ,** ೧೩. ೯೮ ವ)

ಬಾಧಿತಶರೀರ – [ನಾ] ಬಾಧೆಯಿಂದ ಕೂಡಿದ ಶರೀರವುಳ್ಳವನು (ಅನಲ್ಪಕಲ್ಪಾವನಿಜಂಗಳ್ ಅಪೇತರಸವೀರ್ಯಪಾಕಂಗಳಾಗಿಯುಂ ಅಧಿವ್ಯಾಧಿಬಾಧಿತಶರೀರರ್ ಮಾನವರ್ **ಆದಿಪು,** ೮.. ೬೧ ವ)

ಬಾಧೆ – [ನಾ] ಹಿಂಸೆ, ಕಾಟ (ಇಂಚೆಯ ಪಸವಿನ ಬಱಿದ ಕಳಿಂಚಿನ ಡಾವರದ ಬಾಧೆಯಿಲ್ಲದ ಪದದೊಳ್ .. ಇರ್ದುವಾ ನಾಡೂರ್ಗಳ್: **ಪಂಪಭಾ,** ೮. ೫೧)

ಬಾನಂಗುಳಿ – [ನಾ] ನಕ್ಷತ್ರ ಮಂಡಲ (ಬವಳಿವರಿದುಂ ಬಾನಂಗುಳಿಗೆವರಿದುಂ ಸೂಟ್ವರಿದುಂ ಆಡುವಾಗಳ್ ಉಭಯಬಲಂಗಳ್: **ಪಂಪಭಾ,** ೧೨. ೧೫೮ ವ) [ಈ ಶಬ್ದದ ಬಗ್ಗೆ ದೀರ್ಘ ವಿವೇಚನೆ ಮಾಡಿ ಕೊನೆಗೆ ಡಿಎಲ್ಎನ್ **"**ಬಾನಂಗುಳಿ ಎಂಬುದು ಮೈಯ ಒಂದು ಭಾಗವಿರುವಂತೆ ತೋರುತ್ತದೆ**"** ಎನ್ನುತ್ತಾರೆ – **ದೀಪಿಕೆ**: ಪು. ೪೯೦]

ಬಾಪ್ಪು – [ಅ] ಭೇಷ್, ಮೆಚ್ಚಿಗೆಯ ಉದ್ಗಾರ (ಅರೆಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗಟ್ದಂ: **ಪಂಪಭಾ,** ೨. ೬೦)

ಬಾಯ್ – [ನಾ] [ಕತ್ತಿಯ] ಅಲಗು (ಉರ್ಕಿ ಬಂದು ಮೇಲ್ವಾಯ್ದು ಮಾರ್ವಲಂಗಳಂ ತನ್ನ ಬಾಳ ಬಾಯೊಳ್ ಅಟಿಗ್ಯಾಡಿದುದರಿಂ ಪರಸೈನ್ಯಭೈರವನುಂ: **ಪಂಪಭಾ,** ೧೪. ३೭ ವ)

ಬಾಯಂ ಬಿಡು – [ಕ್ರಿ] ಹಲುಬು (ಕಿನ್ನರರ್ ಇನ್ನಾರ ಮಱಿಯಂ ಪುಗುವಮೆನೆಯುಂ ಕಿಂಪುರುಷರ್ ಕಾಪುರುಷರಂತೆ ಬಾಯಂ ಬಿಡೆಯುಂ: **ಪಂಪಭಾ,** ೫. ೮೮ ವ)

ಬಾಯ ತಂಬುಲ – [ನಾ] ಎಂಜಲು (ನಿನ್ನಯ ಪೇಟ್ಟುದು ಗೆಯ್ದು ಪಾಟಿಯಂ ನೆಱಪೆವೆ ಬಾಯ ತಂಬುಲದೊಳಂ ಮಡಗೂಟಿಗೊಳಂ ಅಂಗವಲ್ಲಭಾ: **ಪಂಪಭಾ,** ೧೪. ೧೦)

ಬಾಯನೆ ಬಿಡು – [ಕ್ರಿ] ಗೋಳಿಡು (ಬಿಡೆ ಪಿಣಿಲಂ ಕುರುಧ್ವಜಿನಿ ತೊಟ್ಟನೆ ಬಾಯನೆ ಬಿಟ್ಟುದು ಅಂದು ಗಂಡುಡೆಯುಡೆ ಗಂಡುಗೆಟ್ಟುದು: **ಪಂಪಭಾ,** ೮. ೧೦೧)

ಬಾಯಟಿ – [ಕ್ರಿ] ಪ್ರಲಾಪಿಸು (ಛಾಯಾಲಕ್ಷ್ಯಮನೊಡ್ಡಿಯುಂ ಆಯದ ನೀರೊಳಗೆ ತನ್ನನಡಸಿದ ನೆಗೞಂ ಬಾಯಟಿವಿನಂ ಇಸಿಸಿಯುಂ: **ಪಂಪಭಾ,** ೨. ೬೦)

ಬಾಯಿನ – [ನಾ] ಕಾಣಿಕೆ, ಬಾಗಿನ (ಕೇಸರಂ ಬೆರೆಸಿದ ಪೊನ್ನ ಬಾಯಿನದ ಬಟ್ಟಲಿವೆಂಬಿನಂ ಆರ್ದ್ರಕೇಸರಂ ಬೆರೆಸಿದ ಚೆಲ್ವು ತಳ್ತೆಸಳದೇನೆಸದಿರ್ದುದೊ ಕರ್ಣಿಕಾರದಾ: **ಆದಿಪು,** ೧೧. ೧೧೭)

ಬಾಯ್ಕೇಳಿಸು – [ಕ್ರಿ] ವಶಪಡಿಸಿಕೊ, ಆಜ್ಞಾಧೀನನಾಗಿಸು (ಸೇನಾನಾಯಕಂ ಮ್ಲೇಚ್ಛಖಂಡಮಂ ಪ್ರದಕ್ಷಿಣಂಗೆಯ್ದು ಬಾಯ್ಕೇಳಿಸಿ: **ಆದಿಪು,** ೧३. ೩೯ ವ)

ಬಾಯ್ಗೂಟ – [ನಾ] [ಬಾಯ್+ಕೂಟ] ತುಟಿಗಳ ಸೇರುವಿಕೆ, ಚುಂಬನ (ಜಾಣೊಳ್ ಅಳ್ಳಾಟಮೆಲ್ಲಮಂ ಕಿಡಿಸಿ ಸೋಂಕಿನೊಳ್ ಒಯ್ಯನೆ ಮೆಯ್ವೊಣರ್ಚಿ ಬಾಯ್ಗೂಟದೊಳ್ ಅಟ್ಟಿಱಂ ಪಡೆದು: **ಪಂಪಭಾ,** ३. ೮೨)

ಬಾಯ್ಗೂಡು – [ಕ್ರಿ] ಹರಿತವಾದ ಅಲಗೆಂಬ ಬಾಯಿಯಿಂದ ಕೂಡು (ಬಾಯ್ಗೂಡಿದುದಾ ಕುಸುಮಾಸ್ತ್ರನ ಚಕ್ರಮಿದೆಂಬೆಸಕಮಂ ಆಳ್ದತ್ತು ಪಸದನದಂ ದ್ರೌಪದಿಯಾ: **ಪಂಪಭಾ,** ३. ೪೭)

ಬಾಯ್ಗೆಯ್ – [ಕ್ರಿ] ಬಾಯಿ ಮಾಡು, ಕೂಗಾಡು (ಪೊರಳೆ ವಾರಿಧಿಗಳ್ ಕಲಂಕಿದುವೆರ್ದೆ ಮೆಯ್ಯನುದಗ್ರಮಂದರಂ ಅದಂದಲುಗಿತ್ತು ಬಾಯ್ಗೆಯೆ ದಿಗ್ಗಜಂ .. .. ಪೆಂಪಿದೇಂ ಪಿರಿದಾಯ್ತೊ ದೈತ್ಯವರಾಹನಾ: **ಪಂಪಭಾ,** ೮. ೧೫)

ಬಾಯ್ದೆಱಿ – [ನಾ] [ಬಾಯ್+ತೆಱಿ] ತುಟಿ (ಮಿಸುಗುವ ತನ್ನ ಬಾಯ್ದೆಱಿಯೊಳಾಲದ ಪಣ್ಣನೆ ಮೈಯ ಬಣ್ಣದೊಳ್ ಕೊಸಗನೆ .. .. ಪೋಲ್ತು: **ಆದಿಪು,** ೧೨. ३೮); [ಕ್ರಿ] ಬಾಯಿ ತೆಗೆ, ಹಾಡಲು ತೊಡಗು (ದೊರೆವೆತ್ತು ದೂಱದೆ ಆಜೆದ ದನಿ ಮುಟ್ಟೆ ಮೇನಕೆ ಸರಸ್ವತಿ ಬಾಯ್ದೆಱಿದಂತೆ ಪಾಡಿದಳ್ **ಪಂಪಭಾ,** ೭. ೮೮)

ಬಾಯ್ಮಾಡು – [ಕ್ರಿ] ಕೂಗು, ಆರ್ಭಟಿಸು (ಹಸ್ತಿನಪುರದೊಳ್ ಪಾಂಡವರಿರ್ದರೆಗೆತ್ತುಂ ಅಲ್ಲಿಗೆ ಪೋಗಿ ನಿಟ್ಟಾಲಿಯಾಗಿ ದಾಟಿಯನಿಟ್ಟು ಬಾಯ್ಮಾಡಿ: **ಪಂಪಭಾ,** ೧३. ೧೦೬ ವ)

ಬಾಯ್ವಾತು – [ನಾ] ಬಾಯಿ ಮಾತು (ಈ ಬಾಯ್ವಾತಿನೊಳ್ ಏವಂದಪುದು ಅಮ್ಮ ಅಣ್ಮಿ ಕಾದುಕೊಳ್: **ಪಂಪಭಾ,** ೧೨. ೧೮३)

ಬಾಯ್ವಾಯೊಳ್ – ಬಾಯಿಗೆ ಬಾಯಿ ಹಚ್ಚಿ (ಕದನದಿಂ ಆಂ ಬರೆ ನಿಚ್ಚಲುಂ ಇದಿರ್ವಂದು ಕೊರಲ್ಗೆವಾಯ್ದು ಬಾಯ್ವಾಯೊಳ್ ಅಲಂಪಿದಿರ್ಗೊಳೆ ತಂಬುಲಮಂ ಕೊಳ್ಳದೆ ಮಾಣ್ದ: **ಪಂಪಭಾ,** ೧೧. ೧೧೫)

ಬಾಯ್ವಿಡು – [ಕ್ರಿ] [ಅಚ್ಚರಿಯಿಂದ] ಬಾಯಿ ಬಿಡು (ಕೆಯ್ಯಗಟ್ಟಳೆ ಕೊಳ್ಳಿಂ ಎಂದು ಕುಡೆ ಷೋಡಶ ಋತ್ವಿಜರ್ಗೆ ಇತ್ತುದರ್ಕೆ ಬಾಯ್ವಿಟ್ಟರೆ ವಿಪ್ರಕೋಟಿ: **ಪಂಪಭಾ,** ೬. ೩೯); [ಕ್ರಿ] ನೋವಿನಿಂದ ನರಳು (ಇದಿರಾನೆಯ ಕೋಟ್ಗಳ ಕೋಳ್ಗೆ ನೊಂದು ಬಾಯ್ವಿಡದೆ ಇನಿಸಪ್ಪೊಡಂ ಪೆಳಱದೆ ಅಳ್ಕದೆ ಪಾವಿನಲಿಟ್ಟವೋಲ್ ಪೊಡರ್ಪುಡುಗದೆ ಬಿಟ್ಟುವಿರ್ದ ನೆಲೆಂ ಕೆಲವುನ್ಮದಗಂಧಸಿಂಧುರಂ: **ಪಂಪಭಾ,** ೧೦. ೯೪)

ಬಾಯ್ವೂಸು – [ಕ್ರಿ] [ಬಾಯ್+ಪೂಸು] ಬಾಯಿಗೆ ಲೇಪಿಸು (ಹರಿಗೆ ಅರ್ಘ್ಯಮೆತ್ತಿ ನಿಂದಿರ್ದ ಯಜ್ಞಮದು ಮೊದಲೊಳ್ ತಾನಮರ್ದುಂ ಅದಿರದೆ ತಣಿಯುಂಡು ಅಮರ್ದಂ ಗೋಮೂತ್ರದಿಂದೆ ಬಾಯ್ವೂಸಿದವೋಲ್: **ಪಂಪಭಾ,** ೬. ೪೮)

ಬಾರ್ – [ನಾ] ಲಗಾಮು (ಅನ್ನೆಗಂ ನಕುಳನುಂ ಅಂಕವಣೆಯುಂ ಬಾಳುಂ ಬಾರುಂ ಚಮ್ಮಟಿಗೆಯುಮಂ ಒರ್ವ ಕೀಟಾಳಿಂ ಪಿಡಿಯಿಸಿಕೊಂಡು ಬಂದು: **ಪಂಪಭಾ,** ೮. ೫೪ ವ)

ಬಾರಿ – [ನಾ] ಸರದಿ (ನಾಳಿನ ಬಾರಿಯೆಮ್ಮ ಮೇಲೆ ಬಂದುದೆಮ್ಮ ಮನೆಯೊಳ್ ಆನುಂ ಎಮ್ಮ ಧರ್ಮಪತ್ನಿಯುಂ ಮಗನುಂ ಮಗಳುಂ ಇಂತೀ ನಾಲ್ವರೆ ಮಾನಸರ್: **ಪಂಪಭಾ,** ३. ೨೫ ವ); [ನಾ] ಕಾಮೋದ್ರೇಕ (ಪುಗಿಲಂ ಪೋರಿಯಂ ಬಾರಿಯಂ ಸನ್ನೆಯಂ ನೂಱುವಮರ್ಚುವ ನಿಲ್ವೆಡೆಯುಂ ಬಗೆಯಂ ತೆಗೆಯನಲ್ಲಾಟಮಂ .. .. ನೀಂ ಬಲ್ಲೆ: **ಪಂಪಭಾ,** ೫. ೪३)

ಬಾರಿಸಿ ವಾರಿಸು – [ಕ್ರಿ] ಬೇಡಬೇಡವೆಂದು ತಡೆ (ವಕ್ರಿಸದಿರಿಂ ವನವಾಸದೊಳಿರ್ಪೆಂ ಎಂದು ದುರ್ವಾರಪರಾಕ್ರಮಂ ತಳರೆ ಬಾರಿಸಿ ವಾರಿಸಿ ಕುಂತಿಮಾದ್ರಿಯರ್: **ಪಂಪಭಾ,** ೧. ೧೧೪)

ಬಾರಿಸು – [ಕ್ರಿ] ಅಲ್ಲಗಳೆ, ಕಡಿಮೆ ಮಾಡು (ಅಭಿನವನೀಹಾರದ ಬೆಳ್ಪನೆ ಬಾರಿಸಿ ಬಾರಿಸಿ ಪಾಂಡುಕಶಿಲಾತಳಂ ಸೊಗಯಿಸುಗುಂ: **ಆದಿಪು,** ೭. ೭೪); [ಕ್ರಿ] ಅಡ್ಡಿಮಾಡು (ಈ ರೂಪೆಂಬುದು ಭುವನಜನಾರಾಧ್ಯಂ ಚಕ್ರಜನಿಷೇವಿತಂ ಇದಱಿೊಳ್ ಸಾರದಳಿಪೆಂದು ಪೆಳ್ವನೆ ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್: **ಆದಿಪು,** ೯. ೯३); [ಕ್ರಿ] ಪರಿಹರಿಸು (ಭೀಮಸೇನನ ಮಹಾಪ್ರತಿಜ್ಞೆಯುಮಂ ಆರ್ಗಂ ಬಾರಿಸಲ್ಬಾರದು ಕೆಯ್ಗೆಟಿದ ಮನೆವಾಟಿಕ್ಕೆ ಬುದ್ಧವೇಟಿಲೆಡೆಯಿಲ್ಲ: **ಪಂಪಭಾ,** ೭. ೧೬ ವ)

ಬಾರು – [ನಾ] ಚರ್ಮದಪಟ್ಟಿ (ಅನ್ನೆಗಂ ನಕುಳನುಮಂಕವಣೆಯುಂ ಬಾಳುಂ ಬಾರುಂ ಚಮ್ಮಟಿಗೆಯನುಮಂ: **ಪಂಪಭಾ,** ೮. ೫೪ ವ)

ಬಾರ್ಚು – [ಕ್ರಿ] ತಲೆಬಾಚು, ತಲೆಗೂದಲು ತಿದ್ದು (ಪಸರಿಸಿ ಪಂದಲೆಯಂ ಮೆಟ್ಟಿಸಿ ವೈರಿಯ ಪಲ್ಲ ಪಣಿಗೆಯಿಂ ಬಾರ್ಚಿ ಪೊದಳ್ದೊಡಸಗೆಯಿಂ ಅವನ ಕರುಳ್ಗಳೆ ಪೊಸವಾಸಿಗಮಾಗೆ ಕೃಷ್ಣೆಯಂ ಮುಡಿಯಿಸಿದಂ: **ಪಂಪಭಾ,** ೧೨. ೧೫೫)

ಬಾರ್ತೆ – [ನಾ] ಪ್ರಯೋಜನ (ಒದವಿದ ಜಸಮಂ ಉಪಾರ್ಜಿಸದ ಅಧಮನದೇತರ್ಕೆ ಬಾರ್ತೆ ಜೀವನ್ಮೃತಕಂ: **ಆದಿಪು,** ೧೨. ೯೭); [ನಾ] ಉದ್ದೇಶ (ವಿಪಿನೋಲ್ಲಂಘನ ಸಿಂಧುಯಾನ ನಗಕೂಟಾರೋಹಣಕ್ಲೇಶ ಮಂತ್ರಪದಧ್ಯಾನ ಬಿಳಪ್ರವೇಶ ರಸವಾದ ಆಯಾಸದೊಳ್ ಬಾರ್ತೆ ತೀರ್ದಪುದೇ: **ಆದಿಪು,** ೧೬. ೭); [ನಾ] ಅಗತ್ಯ (ಚಿಂತೆಯಿದೇನೊ ಸಂತತಿಗೆ ನೆಟ್ಟನೆ ಮಕ್ಕಳೆ ಬಾರ್ತೆಯಪ್ಪೊಡೆ ಇನ್ನಿಂತಿರವೇಡ: **ಪಂಪಭಾ,** ೧. ೧೧೮)

ಬಾಲಕಮಳ – [ನಾ] ಎಳೆಯ ತಾವರೆ [ಮೊಗ್ಗು] (ಬಾಲಕಮಳಂಗಳಂ ಕಮಳಾಲಯದಿಂ ತಿಱಿದು ತರ್ಪವೊಳ್ ತಂದೈ ನೀಂ ಬಾಲಕರ ತಲೆಗಳಂ: **ಪಂಪಭಾ,** ೧೩. ೧೦೭)

ಬಾಲಕವಧದೋಷ – [ನಾ] ಮಕ್ಕಳನ್ನು ಕೊಲ್ಲುವುದರಿಂದ ಬರುವ ಪಾಪ (ತಂದೈ ನೀಂ ಬಾಲಕರ ತಲೆಗಳಂ ಅಕ್ಕಟ ಬಾಲಕವಧದೋಷಮೆಂತು ನೀಂ ನೀಗಿದಪಯ್: **ಪಂಪಭಾ,** ೧೩. ೧೦೭)

ಬಾಲಕ್ರೀಡೆ – [ನಾ] ಮಗುವಿನ ಆಟ (ಮುರಾರಿಯ ಬಾಲಕ್ರೀಡೆಯಂ ಅನುಕರಿಪುದಾದುದು ಅರಿಕೇಸರಿಯಾ: **ಪಂಪಭಾ,** ೨. ೭)

ಬಾಲಾರ್ಕ – [ನಾ] ಬಾಲ ಸೂರ್ಯ, ಬೆಳಗಿನ ಸೂರ್ಯ (ತದಂಗನಾಂಕತಳದೊಳ್ ಬಾಲಾರ್ಕನಂ ಪೋಲ್ತು ಭಾಸುರತೇಜೋಧಿಕನಪ್ಪ ಬಾಳನಂ ಅಟ್ಟಿರ್ದು ನೋಡುತ್ತುಂ: **ಆದಿಪು,** ೭. ೪೪)

ಬಾಷ್ಪಜಲ – [ನಾ] ಕಣ್ಣೀರು (ನೀಳ್ದ ಮಾವಿನ ಪೋಟಂದದ ಕಣ್ಗೆ ಬಾಷ್ಪಜಲಮಂ ಚಿತ್ತಕ್ಕೆ ಸಂತಾಪಮಂ ನಿನಗಂ ಮಾಡಿದವನಾತಂ ಆತನೆ ವಲಂ ಗಂಧೇಭವಿದ್ಯಾಧರಂ: **ಪಂಪಭಾ,** ೪. ೬೪)

ಬಾಸಣಿಗೆ – [ನಾ] ಹೊದಿಕೆ (ಎಲ್ಲಿಯುಂ ಮೆಯ್ಯನಾಱಿಸಲಾಱದೆ ಪೂತ ಚೂತಲತೆಗಳೊಳ್ ತಳ್ವೊಯ್ದು ಪೊಸಮುತ್ತಿನ ಬಾಸಣಿಗೆಯೊಳ್ ಬಾಸಣಿಸಿದ ಬಿರಿಮುಗುಳ್ಗಳೊಳ್ ತುಱುಗಿದ: **ಪಂಪಭಾ,** ೫. ೫ ವ)

ಬಾಸಣಿಸು – [ಕ್ರಿ] ಆವರಿಸು (ಬಾಸಣಿಸಿದುದು ಉತ್ಕಟ ಕುಸುಮಾಸವ ಸೌರಭದೆ ದೆಸೆಗಳೊಡನೆ ಅಳಿಕುಳಮಂ ವಾಸವವನಿತಾ ವದನಾಬ್ಜಾಸವಸೇಕಪ್ರಭಿನ್ನ ಮುಕುಳಂ ವಕುಳಂ: **ಆದಿಪು,** ೬. ೯೭); [ಕ್ರಿ] ಮುಚ್ಚು (ಬಾಸಣಿಸಿದ ಚಿನ್ನದ ಪೊಸವಾಸಣಿಗೆಯ ಪೊನ್ನ ಸಿವಿಗೆ ಮಣಿಮಯಕಳಶೋದ್ಭಾಸಿ ದೆಸೆದೆಸೆಯೊಳೆಸೆಯೆ: **ಆದಿಪು,** ೧೧. ೪೦)

ಬಾಸಿಗ – [ನಾ] ಹೂ ಮಾಲೆ, ದಂಡೆ (ಸೂಡಿದ ಪಾರಿಜಾತದ ನಮೇರುವ ಬಾಸಿಗಮೊಯ್ಯನೊಯ್ಯನಿರ್ಪೋಡಿದುದು ಅಂದಿನಂಗರುಚಿ ಕಣ್ಗೆಳಿದಾಯ್ತು: **ಆದಿಪು,** ೩. ೩)

ಬಾಸುಟಿಗ್ – [ನಾ] ಬಾಸುಂಡೆ (ಮಿಳಿರ್ವಸಿಯ ಪಸಿಯ ಪೊಸಬಾಸುಟ ಕರರುಹರೇಖೆ ತುಱುಗಿ ರತನಾಟ್ಯಪರಿಸ್ಥಲಿತಕ್ಕೆ ಮುಳಿದು: **ಆದಿಪು,** ೧೨. ೧೫)

ಬಾಸೆ – [ನಾ] ರೋಮರಾಜಿ (ಮುನ್ನಿನ ಚೆಲ್ವನಪ್ಪಸಿಯ ಬಾಸೆಗೆ ಕರ್ಪೆಸೆದತ್ತೇ ಚೋದ್ಯಮಿದೆಂದು ಮರಲ್ದು ಬಣ್ಣಿಸಿದರ್ ಇಂದ್ರನ ಕಾಂತೆಯರ್: **ಆದಿಪು,** ೭. ೩೧); [ನಾ] ಹೊಕ್ಕುಳಿಂದ ಎದೆಯವರೆಗಿನ ನೇರವಾದ ಕೂದಲ ಸಾಲು (ಆಕೆಯ ಬಾಸೆಗಳುಂ ಪಗೆವರ ಬಾಟಿಗ್ವಾಸೆಗಳುಂ ಒಡನೊಡನೆ ಅಸಿಯಾದುವು: **ಪಂಪಭಾ,** ೧. ೧೪೧ ವ); [ನಾ] [ಭಾಷಾ] ತಮ್ಮ ವಿಶಿಷ್ಟ ನುಡಿಗಟ್ಟಿನ ಮಾತು (ಒರ್ವಂ ಎಗ್ಗಂ ಗೊಟ್ಟಿಗೆ ವಂದು ಕಣ್ಣಱಿಯದೆ ಸೋಂಕೆಯುಂ ಮನಮಱಿಯದೆ ನುಡಿಯೆಯುಂ ಆತನನಾಕೆಗಳ್ ಬಾಸೆಯೊಳಿಂತೆಂದರ್: **ಪಂಪಭಾ,** ೪. ೯೫ ವ)

ಬಾಹಿಗೆ – [ನಾ] ಹೊರಭಾಗ (ಪೊಟಲಂ ಪೊಱಮಟ್ಟು ಪುರದ ಬಾಹಿಗೆಯನೆಯ್ದುವಾಗಳ್ ಗಾಂಗೇಯದ್ರೋಣಕೃಪ ವಿದುರಾದಿಗಳ್ ಕೊಂತಿವೆರಸು ಎಯ್ದೆವಂದು: **ಪಂಪಭಾ,** ೭. ೨ ವ)

ಬಾಹುಪರಿಭ್ರಮ – [ನಾ] ತೋಳ ಬೀಸಾಟ (ತೋಳ್ದುಱುಗಲ್ಗಳೊಳ್ ಪಳಂಚಿದೆ ಗಗನಂಬರಂ ನೆಗೆದು ಸೂಸುವ ಬಾಹುಪರಿಭ್ರಮಂಗಳೊಳ್ ಬೆದಱಿದೆ: **ಆದಿಪು,** ೭. ೧೨೫)

ಬಾಹುಮೂಳ – [ನಾ] ಕಂಕುಳು (ಅನಂಗರಾಜನ ಬಯ್ತಿಟ್ಟಮರ್ದಂ ಕೊಳೆ ತಳಿದುದು ನಾಭಿಮೂಳಮುಂ ಬಾಹುಮೂಳಮುಂ ಸುರವಧುವಾ: **ಆದಿಪು,** ೯. ೩೫)

ಬಾಹ್ಯಾರ್ಥಸಿದ್ಧಿ – [ನಾ] ಬೇರೆಯ ಅರ್ಥವನ್ನು ಉಂಟುಮಾಡುವುದು (ವಿಜ್ಞಾನವ್ಯತಿರಿಕ್ತ ಸಾಧನವಾಕ್ಯೋಪನ್ಯಾಸದಿಂ ಸಾಧಿಸುವೊಡಾ ವಾಕ್ಯಮೆ ಬಹಿರರ್ಥಮಪ್ಪುದಱಿಂ ಬಾಹ್ಯಾರ್ಥಸಿದ್ಧಿಯಕ್ಕುಂ: **ಆದಿಪು,** ೨. ೧೦)

ಬಾಳ್ – [ನಾ] ಕತ್ತಿ (ಕೀಱಿ ನೆತ್ತಿಯೊಳ್ ಬಾಳಂ ನಿರ್ನೆರಮೂಱಿ ಚಲದಿನೆರಗಿಸಲಿರೆ ಭರತಂಗೆಱಗುವೆಱಕಂ ಅಂಜುಮೆಯಲ್ತೇ: **ಆದಿಪು,** ೧೪. ೭೫)

ಬಾಳ – [ಗು] ಎಳೆಯದಾದ (ನೇಲ್ವ ಕರುಳೋಳಿಯೆ ಬಾಳಮೃಣಾಳಮಾಗೆ ಮಿಕ್ಕಸುರರ ಮೆಯ್ಯೊಳಾದ ವಿರಹಾಗ್ನಿಯಂ ಆಱಿಸುತಿಂತೆ ತನ್ನ ಕೂರಸಿಯೊಳ್ ಅಡರ್ತು ಕೊಂದಸಿಯಳ್ ಇರ್ಕೆ ಅಸಿಯೊಳ್ ಪಡೆಮೆಚ್ಚೆ ಗಂಡನಾ: **ಪಂಪಭಾ,** ೧. ೬); [ನಾ] ಗಂಡುಮಗು (ಅದಂ ವಿದಾರಿಸಿ ನೋಟ್ಪನ್ನೆಗಂ ಬಾಳೆಯ ಗರ್ಭದೊಳಿರ್ದ ಬಾಳೆಯಂ ಬಾಳನುಮಂ ಕಂಡು: **ಪಂಪಭಾ,** ೧. ೬೮ ವ)

ಬಾಳಕಾಲ – [ನಾ] ಕೂಸಾಗಿದ್ದ ಕಾಲ (ಬಾಳಕಾಲದೊಳೆ ತೊಟ್ಟಿಲಿಗಂ ಗಜಪ್ರಿಯನಪ್ಪುದಂ ಸಲೆ ತೋಱಿದಂ: **ಪಂಪಭಾ,** ೧. ೪೩)

ಬಾಳಕುಜ – [ನಾ] ಎಳೆಯ ಗಿಡ (ನಿಶ್ಚಲತನು ಬಾಳಕುಜಂಗಳ ಪಲವಱ ನಡುವಿರ್ದ ಕಲ್ಪಕುಜಮನೆ ಪೋಲ್ತಂ: **ಆದಿಪು,** ೯. ೮೨)

ಬಾಳಕೇಳಿ – [ನಾ] ಮಗುವಿನ ಆಟ (ತೊಡರ್ದಮರ್ದ ಬಾಳವಣ್ಣದ ತುಡುಗೆ ಪಳಂಚಲೆವ ಪಂಚಜಡೆ ನೊಸಲೊಡಂಬಡುವರ ಅಳೆಲೆಯಿವಱಿಂ ಚೆಲ್ವಿಡಿದಿರ್ದುದು ಬಾಳಕೇಳಿ ಧರ್ಮಾತ್ಮಜನಾ: **ಪಂಪಭಾ,** ೨. ೪)

ಬಾಳದಿನೇಶಬಿಂಬ – [ನಾ] ಎಳೆಯ ಸೂರ್ಯ ಮಂಡಲ (ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ

ಮೇಣ್ ಫಣೀಂದ್ರಾಳಯದಿಂದಮುರ್ಚಿದ ಫಣಾಮಣಿ ಮಂಗಳರಶ್ಮಿಯೋ: **ಪಂಪಭಾ,** ೧. ೯೬)

ಬಾಳ ನೀರ್ – [ನಾ] ಕತ್ತಿಯ ಕಾಂತಿ (ಆ ಪುಣ್ಯನದಿಯಂ ಎಯ್ದೆವಂದು ತನ್ನ ಬಾಳ ನೀರಂತೆ ಕಱಂಗಿ ಕರ್ಗಿದ ನೀರಂ ನೋಡಿ: **ಪಂಪಭಾ,** ೫. ೫೩ ವ)

ಬಾಳಪ್ರವಾಳ – [ನಾ] ಎಳೆಯ ಚಿಗುರು (ಪದೆದುತ್ತಂಸವಸಂತಶೋಭೆಗೆ ಭವತ್ ಬಾಳಪ್ರವಾಳೋಲ್ಲಸನ್ಮೃದುಪುಷ್ಪಸ್ತಬಕಂಗಳಂ ಪಱಿದೆವು: **ಆದಿಪು**, ೧೧. ೧೩೪)

ಬಾಳಮೃಣಾಳ – [ನಾ] ಎಳೆಯ ತಾವರೆಯ ದಂಟು (ತಿಸುಳದೊಳ್ ಉಚ್ಚಳಿಪ್ಪ ಪೊಸನೆತ್ತರೆ ಕೆಂದಳಿರಾಗೆ ಕಣ್ಗೆ ಅಗುರ್ವಿಸುವಿನಂ ಒಕ್ಕ ನೇಲ್ವ ಕರುಳೋಳಿಯೆ ಬಾಳಮೃಣಾಳಮಾಗೆ: **ಪಂಪಭಾ**, ೧. ೬)

ಬಾಳರವಿ – [ನಾ] ಎಳೆಯ ಸೂರ್ಯ (ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊಡರ್ವುದಂ ಅಂತೆ ದಿಕ್ಕರಿಗಳ್ ಅಂಬುಜಪತ್ರಾಂಬುವಿಂ ಬೆಡಂಗಡಸಿರೆ ಮಜ್ಜನಂಬುಗಿಪುದಂ ಸತಿ ಕಂಡೊಸೆದಳ್ ನಿಶಾಂತದೊಳ್: **ಪಂಪಭಾ**, ೧. ೧೪೦)

ಬಾಳವಣ್ಣ – [ನಾ] ಕತ್ತಿಯ ಬಣ್ಣ, ನೀಲಿ (ತೊಡರ್ದಮರ್ದ ಬಾಳವಣ್ಣದ ತುಡುಗೆ ಪಳಂಚಲೆವ ಪಂಚಜಡೆ ನೊಸಲೊಡಂಬಡುವರಳೆಲೆಯಿವಱಿಂ ಚೆಲ್ವಿಡಿದಿರ್ದುದು ಬಾಳಕೇಳಿ ಧರ್ಮಾತ್ಮಜನಾ: **ಪಂಪಭಾ,** ೨. ೪)

ಬಾಳಶಶಾಂಕಮೌಳಿ – [ನಾ] ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದವನು, ಶಿವ (ಬರಮಂ ಬಾಳಶಶಾಂಕಮೌಳಿ ಕುಡೆ ಪೆತ್ತ ಒಂದುರ್ಕಿನಿಂದ ಓವದೆ ಆಂತು ರಣೋತ್ಸಾಹದಿಂ: **ಪಂಪಭಾ**, ೧೧. ೧೧೭)

ಬಾಳಾಗಮ – [ನಾ] ಕತ್ತಿಯ ವಿದ್ಯೆ (ಚಾರಿಸಿ ಬಾಳಾಗಮಮಂ ಅವತಾರಂಗೆಯ್ದಂತೆ ಕಾಲದಂತಕನನೆ ಪೋಲ್ತು ಆರುತ್ತುಂ ಕವಿವ ಅದಟರಂ ಓರೊಂದೋರೊಂದೆ ಪೊಯ್ದು ಕೊಂದರ್ ಪಲರಂ: **ಪಂಪಭಾ**, ೧೦. ೮೩)

ಬಾಳಾತಪ – [ನಾ] ಎಳೆಬಿಸಿಲು (ನೂತನಮಣಿಭೂಷಣ ಬಾಳಾತಪ ಸಿತಮಣಿಮರೀಚಿ ಚಂದ್ರಾತಪ ಪಿಷ್ಟಾತಕಪರಾಗ ಪಿಂಜರಿತಾತಪಮಯವಾದುದು ಆ ಧರಾಧಿಪಭವನಂ: **ಆದಿಪು**, ೭. ೧೧೫)

ಬಾಳು – [ನಾ] ಕತ್ತಿ (ಅನ್ನೆಗಂ ನಕುಳನುಂ ಅಂಕವಣೆಯುಂ ಬಾಳುಂ ಬಾರುಂ ಚಮ್ಮಟಿಗೆಯುಮಂ ಒರ್ವ ಕೀೞಾಳಿಂ ಪಿಡಿಯಿಸಿಕೊಂಡು ಬಂದು: **ಪಂಪಭಾ**, ೮. ೫೪ ವ)

ಬಾಳುಡಿ – [ನಾ] ಬಾಣಗಳ ಚೂರು (ನಿರಂತರಂ ಪೊಳೆವ ಬಾಳುಡಿ ಸುಯ್ವ ನವವ್ರಣಂಗಳೊಳ್ ಪೊಡರೆ: **ಪಂಪಭಾ**. ೧೧. ೫೮)

ಬಾಳುಳ್ಕ – [ನಾ] ಕತ್ತಿಯ ಝಳಪು (ಇಸಲೆಂದಿರ್ದ ಧನುರ್ಬಲಂ ಪೊಳೆವ ಬಾಳುಳ್ಕಂಗಳಂ ಪೋಲೆ: **ಆದಿಪು,** ೧೪. ೧೦೦)

ಬಾಳೆ – [ನಾ] ಒಂದು ಬಗೆಯ ಮೀನು (ಪೊಱಪೊಣ್ಮುವ ಕಣ್ಣ ಬೆಳ್ಪುಂ ಓಪರ ಮನದೊಳ್ ತೆಱಂಬೊಳೆವ ಬಾಳೆಗಳಂತಿರೆ: **ಆದಿಪು**, ೧೧. ೪೬); [ನಾ] ಹೆಣ್ಣುಮಗು [ಬಾಲೆ] (ಅದಂ ವಿದಾರಿಸಿ ನೋಟ್ಪನ್ನೆಗಂ ಬಾಳೆಯ ಗರ್ಭದೊಳಿರ್ದ ಬಾಳೆಯಂ ಬಾಳನುಮಂ ಕಂಡು: **ಪಂಪಭಾ**, ೧. ೬೮ ವ)

ಬಾಳೇಂದುಚೂಡಾಮಣಿ – [ನಾ] ಬಾಲಚಂದ್ರನನ್ನೇ ತಲೆಮಣಿಯಾಗುಳ್ಳವನು, ಶಿವ (ತಪೋಧನರೆಲ್ಲಂ ನೆರೆದು ಬಂದು ಕೈಲಾಸದೊಳ್ ವಿಳಾಸಂಬೆರಸು ಗಿರಿಜೆಯೊಳ್ ತಳ್ತಿರ್ದ ಬಾಳೇಂದುಚೂಡಾಮಣಿಗೆ: **ಪಂಪಭಾ**, ೮. ೧೦ ವ)

ಬಾಳೇಂದುಮೌಳಿ – [ನಾ] ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದವನು, ಶಿವ (ಎಂದು ಬಾಳೇಂದುಮೌಳಿಯಂ ಸ್ತುತಿಸಿ: **ಪಂಪಭಾ**, ೪. ೨೭ ವ)

ಬಾಳೆಮೀನ್ – [ನಾ] ಬಾಳೆ, ಒಂದು ಬಗೆಯ ಮೀನು (ಕೈಯಿಂ ಬರ್ದುಂಕಿ ತೊಱೆಯೊಳಗೆ ಬಿೞ್ದೊಡದನೊಂದು ಬಾಳೆಮೀನ್ ನುಂಗಿ ಗರ್ಭಮಂ ತಾಳ್ದಿ: **ಪಂಪಭಾ**, ೧. ೬೮ ವ)

ಬಾಳ್ವೊಗೆ – [ನಾ] ಕತ್ತಿಯ ಹೊಗೆ (ಬಾಳ್ವಾಳ್ಗಳ ಘಟ್ಟಣೆಯೊಳ್ ಬಳ್ವಳ ಬಳೆದೊಗೆದು ನೆಗೆದ ಕಿಡಿಗಳ ಬಂಬಲ್ಗಳ್ವೆರಸು ಪೊಳೆದು ನೆಗೆದುದು ಬಾಳ್ವೊಗೆ ಕಾರ್ಮುಗಿಲ ಬಳ್ಳಿಮಿಂಚುಳ್ಳುವವೋಲ್: **ಪಂಪಭಾ**, ೧೦. ೮೪)

ಬಾೞ್ – [ನಾ] ಜೀವನಾಧಾರ, ಜೀವಿಕೆಯ ಸಂಪತ್ತು (ಪಱಿವಿಡಲಣಮೀಯದವರಂ ಅವರ್ಗಳ ಬಾೞೊಳ್ ನಿಱಿಸಲ್ ಬಗೆದ್ಯೆ ಕರಮೆನೆ ಉಱದೆ ಇರ್ಕುಮೆ ನಿನ್ನ ಪೇೞ್ದ ಧರ್ಮಶ್ರವಣಂ: **ಪಂಪಭಾ**, ೯. ೪೫); [ಕ್ರಿ] ಜೀವಿಸು (ಅರಾತಿಗಳ್ಗಳ್ಕಿ ತನ್ನ ಕುಲಮಂ ಚಲಮಂ ದೊರೆಯುಂ ಕಿಡೆ ಬಾೞ್ವಂತು ಗಂಡರೂಪಿನೊಳ್ ಗಂಡನಲ್ತು ಪೆಂಡತಿಯೆ ವಲಂ: **ಆದಿಪು,** ೧೨. ೯೬)

ಬಾೞೆ – [ನಾ] ಬಾಳೆಯ ಮರ (ಭೀಮಸೇನಂ .. .. ಬಾೞೆಯ ಚೆಲ್ವನಪ್ಪ ಬನಮಂ ಕಾಡಾನೆ ಪೊಯ್ದಂತೆ ಪೊಯ್ದುನಿಸುಂ ಮಾಣದೆ ನೀಚಕೀಚಕನಿಕಾಯಧ್ವಂಸನಂ ಮಾಡಿದಂ: **ಪಂಪಭಾ**, ೮. ೮೦)

ಬಾೞೆವಾೞೆ – ಬದುಕಿರುವಾಗಲೇ (ಬಾೞೆವಾೞೆ ತಿದಿಯುಗಿವರುಂ ಮಿಡುಮಿಡುಕೆ ಬಡಿತಂಗಾಸುವರುಂ: **ಆದಿಪು**, ೫. ೮೫ ವ)

ಬಾೞ್ಗೊಂಪ – [ನಾ] ಬಳ್ಳಿಮಾಡ (ಪಸುರ್ಪೆಸೆವ ಬಾೞ್ಗೊಂಪಕ್ಕಂ ಒಂದೊಂದೆ ತಣ್ಬನಿಯೊಳ್ ಕೋಡಿಸುತಿರ್ಪ ಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ: **ಆದಿಪು**, ೧. ೭೫)

ಬಾೞ್ತೆ – [ನಾ] ಪ್ರಯೋಜನ (ಮುಳಿಸಱಿದು ಅಂಜಿ ಬಾೞ್ತೆಯಱಿದಿತ್ತು ಮನಂಗೊಳೆಯುಂ ಕನಲ್ವುದರ್ಕಳವಿಯುಂ ಅಂತುಂ ಇಲ್ಲ: **ಪಂಪಭಾ**, ೪. ೯೮); [ನಾ] ಇಷ್ಟ (ನಾಲ್ಕು ವೇದಂಗಳೊಳ್ ನಾಲ್ಕುಂ ಋಚಂಗಳಂ ಪೇೞ್ದು ಸಿತ ದೂರ್ವಾಂಕುರವಿಮಿಶ್ರಂಗಳಪ್ಪ ಶೇಷಾಕ್ಷತೆಗಳಂ ಕೊಟ್ಟು ಮುಂದೆ ನಿಂದನಂ ನಿಮಗೆ ಬಾೞ್ತೆಯಪ್ಪುದಂ ಬೇಡಿಕೊಳ್ಳಿಂ ಎನೆ: **ಪಂಪಭಾ**, ೫. ೭೦ ವ); [ನಾ] ಕಾರ್ಯ, ಕೆಲಸ (ಬಾೞ್ತೆಯುಳ್ಳೊಡೆ ನೀನೆ ಬರ್ಪಂತುಟಾದುದೆ ಪೇೞ ನೀಂ ಬೞಿಯಟ್ಟಲಾಗದೆ ಕೆಮ್ಮನಿನ್ನೆಂತುಂ ಏಂ ಮನೆವಾೞ್ತೆಯಂ ಬೆಸಸಲ್ಕೆ ಬಂದೆಯಿಳಾಧಿಪಾ: **ಪಂಪಭಾ**, ೧೨. ೮೯); [ನಾ] ಗುರಿ, ಗಮ್ಯಸ್ಥಾನ (ಎನಗೆ ಇಂ ರಾಜ್ಯಮೆ ಬಾೞ್ತೆಯಲ್ತು ಹರಿಗಂಗೆ ಉತ್ಸಾಹದಿಂ ಪಟ್ಟಬಂಧಮಂ ಮಾಡುವಂ: **ಪಂಪಭಾ**, ೧೪. ೧೧)

ಬಾೞ್ತೆಯವ – [ನಾ] ಆಳು, ಸೇವಕ (ಸನ್ನಣಂದುಡುವ ಪಣ್ಣುವ ಬಾೞ್ತೆಯವಂದಿರಂ ಮರುಳ್ಗೊಂಡವೊಲ್ ಊಳ್ವ ಬಗ್ಗಿಸುವ: **ಪಂಪಭಾ,** ೧೦. ೪೯)

ಬಾೞ್ದಲೆ – [ನಾ] ಬದುಕಿರುವ ಸೆರೆ, ಅಂದರೆ ಸೆರೆಯಾಳು (ಮಲೆಪರ್ ಮಂಡಳಿಕರ್ ಕಱುಂಬರ್ ಅದಟರ್ ವೀರರ್ಕಳುಂ ತಮ್ಮ ಬಾೞ್ದಲೆಯಂ ಬೇಡಿದ ವಸ್ತುವಾಹನಮುಮಂ ಮುಂದಿಟ್ಟು **ಪಂಪಭಾ,** ೯. ೧೦);

ಬಾೞ್ಮೊದಲ್ – [ನಾ] ಬದುಕಿನ ಬಂಡವಾಳ (ಅದು ಸುಖದೊಂದು ಪಿಂಡಂ ಅದು ಪುಣ್ಯದ ಪುಂಜಂ ಅದು ಅಂಗಜಂಗೆ ಬಾೞ್ಮೊದಲ್ ಅದು ಚಿತ್ತಜಂಗೆ ಕುಲದೈವಂ: **ಆದಿಪು,** ೨. ೭೪)

ಬಾೞ್ವಿಂತು – ಬದುಕುವವಷ್ಟರಮಟ್ಟಿಗೆ (ಪೂಣ್ದು ನಿಲ್ಲದಿಕೆಯಿಂ ಬಾೞ್ವಿಂತು ವಿಖ್ಯಾತ ಕೀರ್ತಿಯವೋಲ್ ಈ ಒಡಲ್ ಅಬ್ಬೆ ಪೇೞಿಮ್ ಎನಗೇಂ ಕಲ್ಪಾಂತರಸ್ಥಾಯಿಯೇ: **ಪಂಪಭಾ,** ೯. ೮೪)

ಬಾೞ್ವೆ – [ನಾ] ಬಾಳುವೆ, ಬದುಕು (ಎಮ್ಮುಳ್ಳುದಂ ನೆಱೆ ಕೊಂಡೆಮ್ಮಯ ಬಾೞ್ವೆಯೊಳ್ ನಿಱಿಸುವಂ ನೀಂ: **ಪಂಪಭಾ,** ೬. ೩೦)

ಬಿಂಕ – [ನಾ] ಆಡಂಬರ, ಗರ್ವ (ತಮ್ಮ ಬೀರಮಂ ಬಿಂಕಮುಮಂ ತೆಱವುಂ ತೆಲ್ಲಂಟಿಯುಂ ಎಂದರಿಕೇಸರಿಗಾಗಳೀವವೋಲ್ ಬೆನ್ನಿತ್ತರ್: **ಪಂಪಭಾ,** ೩. ೭೨)

ಬಿಂದು – [ನಾ] ಆನೆಯ ಹಣೆಯ ಮೇಲಣ ಮಚ್ಚೆ (ಶಂಖ ಚಕ್ರ ನಂದ್ಯಾವರ್ತ ಸ್ವಸ್ತಿಕ ಧ್ವಜಾವರ್ತ ರಕ್ತಬಿಂದು ಉಚಿತನುಂ: **ಆದಿಪು,** ೧೨. ೫೬ ವ); [ನಾ] ಹನಿ, (ತತ್ಕಾಂತಾ ರತಿಸ್ವೇದಬಿಂದುಗಳೊಳ್ ನಾಂದು ಕುರುಳ್ಗಳೊಳ್ ಸುೞಿದು .. .. ಪಳಂಚಿ ಸುೞಿದತ್ತು ಅಂದೊಂದು ಮಂದಾನಿಳಂ: **ಪಂಪಭಾ,** ೪. ೮೦)

ಬಿಂಬ – [ನಾ] ತನ್ನ ಮಂಡಲ (ಅಪ್ಪೈಸಿ ಗಂಗೆ ಪೋಪುದುಂ ಒಪ್ಪುವ ನಿಜಬಿಂಬದೊಳಗಣಿಂದಂ ದಿನಪಂ: **ಪಂಪಭಾ,** ೯. ೭೬)

ಬಿಂಬಾಧರ – [ನಾ] ತೊಂಡೆಹಣ್ಣಿನ ತುಟಿ (ನಗೆಗಣ್ ಸೋರ್ವ ಕದುಷ್ಣವಾರಿಚಯದಿಂ ಬಿಂಬಾಧರಂ .. .. ನಾಡೆ ಬೆಡಂಗುಗೆಟ್ಟು: **ಪಂಪಭಾ,** ೪. ೬೮)

ಬಿಂಬಾಧರೆ – [ನಾ] ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಯುಳ್ಳವಳು (ಈ ಧರೆಯ ಪೆಂಡಿರುದ್ಧ ಪಯೋಧರೆಯ ಮನೋಜರಾಗ ರಸಪೂರಿತ ಬಿಂಬಾಧರೆಯ ಕಂಬುಕಮ್ರಶಿರೋಧರೆಯ ಬೆಡಂಗನಾರುಮೇನೆಯ್ದುವರೇ: **ಆದಿಪು,** ೪. ೪೬)

ಬಿಕ್ಕ – [ನಾ] [ವಿಕ್ಕ] ಆನೆಯ ಮರಿ (ಬತ್ತಲಾಟಿಸಿದುವು ಆ ವಾರಾಶಿಗಳ್ ಸುರ್ಕಿ ಬಿಕ್ಕದ ಬಾಯಂತೆ ಸುರುಳ್ದುದು ಅಂಬರಂ: **ಪಂಪಭಾ,** ೧೩. ೯೩)

ಬಿಕ್ಕನೆ – [ಅ] ಬಿಕ್ ಎಂದು, ಬಿರಬಿರನೆ (ಡೊಕ್ಕನೆ ಸುರಿಗೆಯೊಳ್ ಉರಮಂ ಬಿಕ್ಕನೆ ಬಿರಿಯಿಱಿದು ಬರಿಯಗಲನೊತ್ತಿ ಮನಂ ಕೊಕ್ಕರಿಸದೆ ಬೆಲಗಸೆಯಿಂ ಅಳುರ್ಕೆಯೆ ಮೊಗೆಮೊಗೆದು ನೆತ್ತರಂ: **ಪಂಪಭಾ,** ೧೨. ೧೫೩)

ಬಿಕ್ಕು – [ಕ್ರಿ] ಬಿಕ್ಕಳಿಸು (ಕೆಲರ್ ಕುದುಕುಳಿ ರಕ್ಕಸರ್ ಬಿಸುಗೆಗಳ್ವೆರಸು ಉಗ್ರ ಮಹಾಗಜಂಗಳಂ ಚದುರ್ಗಿಡೆ ನುಂಗಿ ಬಿಕ್ಕಿ ಕುಡಿದರ್ ಬಿಸುನೆತ್ತರ ಕಾಟ್ಪುರಂಗಳಂ: **ಪಂಪಭಾ,** ೧೨. ೮)

ಬಿಕ್ಕುಳಿಸು – [ಕ್ರಿ] ಶಬ್ದಮಾಡು (ಕೂಕಿಡುವ ಕುಕಿಲ್ವ ಬಿಕ್ಕುಳಿಪ ತೇಗುವ ತನ್ನ ತಪಡಂಕದೆಯ್ದೆ ನೂರ್ಮಡಿ ಮನದೊಳ್ ಪಳಂಚಲೆಯೆ ಡಕ್ಕೆಯೊಳಟ್ಟಿಜವಾಡಿದಳ್: **ಪಂಪಭಾ,** ೪. ೯೦)

ಬಿಗಿಪು – [ನಾ] ಬಿಗಿತ (ಕರ್ಮಬಂಧದ ಬಿಗಿಪು ಒಯ್ಯನೊಯ್ಯನೆ ಸಡಿಲ್ದಿರೆ: **ಆದಿಪು,** ೬. ೭)

ಬಿಗುರ್ – [ಕ್ರಿ] ಎದುರಿಸು, ವಿರೋಧಿಸು (ಎಂತು ಬಿಗುರ್ತುರ್ ಧೀರರನೆ ಕೊಂದಪಿರ್ ಎಂತು ಸಮಸ್ತವಾರ್ಧಿಪರ್ಯಂತ ಧರಿತ್ರಿಯಂ ವಶಕೆ ತಂದಪಿರ್: **ಪಂಪಭಾ,** ೬. ೨೩); [ಕ್ರಿ] ಗರ್ವಿಸು (ಬಿಗುರ್ತೀ ಕೌರವರ್ ಕೂಡೆ ನೂರ್ವರುಮಂ ಕೊಲ್ವೆಂ: **ಪಂಪಭಾ,** ೭. ೧೫); [ಕ್ರಿ] ಭಯಪಡಿಸು (ಆರ್ ಕಡುಕೆಯ್ದು ಪಾಂಡವರೊಳ್ ಆಂತಿಱಿಯಲ್ ನೆಱೆವನ್ನರ್ ಇಂತಿದೇತರ್ಕೆ ಬಿಗುರ್ತಪ್ಪೈ: **ಪಂಪಭಾ,** ೯. ೫೦)

ಬಿಚ್ಚತಂ – [ಅ] ನಿರ್ಬಂಧವಿಲ್ಲದೆ, ಅಧಿಕವಾಗಿ (ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ ನಲಿವುದು ಕಂಡರಾರ್ ಮಱುಭವಂಗಳಂ: **ಆದಿಪು,** ೨. ೯)

ಬಿಚ್ಚತಿಕೆ – [ನಾ] ವಿಸ್ತಾರ, ಹಿಗ್ಗುವಿಕೆ (ಅಂದು ಇರುಳಾದೊಡೆ ರಾಜ್ಯಮಾದವೋಲ್ ಪೆರ್ಚೆ ಮನಕ್ಕೆ ಬಿಚ್ಚತಿಕೆವಂದಿರೆ: **ಪಂಪಭಾ,** ೮. ೭೫)

ಬಿಚ್ಚಳಿಸು – [ಕ್ರಿ] ಧ್ವನಿಮಾಡು (ಎಳಸುವ ಪುರುಳಿಯ ಗೞಪುವ ಗಿಳಿಯ ತೆಱಂದಿರಿದು ಮೊರೆವ ಪೆಣ್ದುಂಬಿಯ ಬಿಚ್ಚಳಿಪ ಪರಭೃತದ ಕಳಕಳದೊಳೆ: **ಆದಿಪು,** ೬. ೯೪); [ಕ್ರಿ] ಹುರಿದುಂಬಿಸು (ಪಂಪನೆ ಪೇೞ್ಗುಮೆಂದು ಪಂಡಿತರ ತಗುಳ್ದು ಬಿಚ್ಚಳಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ: **ಪಂಪಭಾ,** ೧. ೧೧); [ಕ್ರಿ] ಅತಿಶಯಿಸು (ಮಹಾರಥರಾಜಿಯೊಳ್ ಅಂತಗುರ್ವಿನುಚ್ಚುಡಿದಿರೆ ಕಾದಿ ಬಿಚ್ಚಳಿಸಿದರ್ ಬಿಸುನೆತ್ತರ ಸುಟ್ಟುರೆ ಸೂಸುವನ್ನನೆಗಂ: **ಪಂಪಭಾ,** ೧೦. ೧೧೪); [ಕ್ರಿ] ಹೊಗಳು (ಅಂಬುಜೋದರಂ ಬಿಚ್ಚಳಿಸುವ ನೆವದೊಳ್ ಎಮ್ಮಂಮ್ಮಗಕ್ಕುಂ ಎಂದು ತೊಡೆಯಂ ಪೊಯ್ದಾರ್ವುದುಂ: **ಪಂಪಭಾ,** ೧೩. ೯೫ ವ)

ಬಿಜಯಂಗೆಯ್ಯಿಂ – ದಯಮಾಡಿಸಿರಿ (ನಿಮ್ಮಯ್ಯಂ ಧೃತರಾಷ್ಟ್ರನ ಬೆಸಲ್ ಮುನ್ನಮೆ ಮಾಡಮಂ ಸಮೆದಿಟ್ಟೆಂ ಅಲ್ಲಿಗೆ ಬಿಜಯಂಗೆಯ್ಯಿಂ: **ಪಂಪಭಾ,** ೩. ೨ ವ)

ಬಿಜ್ಜ – [ನಾ] ವಿಜಯಾದಿತ್ಯನೆಂಬ ರಾಜ (ತಮ್ಮಣ್ಣನಂ ಶೌರ್ಯದಿಂದಂ ಕಾದಂ ಮುಂ ಬಿಜ್ಜನಂ ಕಾದಿ ಅರಿಗಂ ಉೞಿದರಂ ಕಾವುದೇಂ ಚೋದ್ಯಮಾಯ್ತೇ: **ಪಂಪಭಾ,** ೧೧. ೬೧)

ಬಿಜ್ಜಣಿಗೆ – [ನಾ] ಬೀಸಣಿಗೆ (ಕರಿಯ ಕರ್ಬಿನ ಕಾವಿನ ಎಳ ಮೈಂದವಾೞೆಯ ಎಲೆಯ ಬಿಜ್ಜಣಿಗೆಗಳಿಂ ಬೀಸಲ್ವೇೞ್ದು ತಣ್ಪುಗೆಯ್ಯೆ: **ಪಂಪಭಾ,** ೫. ೬ ವ)

ಬಿಜ್ಜೆ – [ನಾ] [ವಿದ್ಯಾ] ಜ್ಞಾನ (ಈ ಧರಾಭರಮನಶೇಷಮಂ ನಿಜತನೂಭವಗೋರ್ವದೆ ಪಚ್ಚುಕೊಟ್ಟು ಭೋಂಕರಿಸುವ ದೇವಕೋಟಿಗಳ ಬಿಜ್ಜೆಗಳೊಳ್ ತೊಡರ್ದೇಕೆ ಪೋಪಂ: **ಆದಿಪು,** ೯. ೭೫); [ನಾ] [ಜೈನ] ದೇಹವನ್ನು ಬದಲುಮಾಡುವ ಶಕ್ತಿ, ವೈಕುರ್ವಣಶಕ್ತಿ (ದೇವಕೋಟಿಗಳ ಬಿಜ್ಜೆಗಳೊಳ್ ತೊಡರ್ದೇಕೆ ಪೋಪನೀ

ದೊರೆಯನನಾಳ್ದನಂ ಪಡೆವುಪಾಯಮಾವುದೊ ಜನ್ಮಜನ್ಮದೊಳ್: **ಆದಿಪು,** ೯. ೭೫)

ಬಿಟ್ಟಿ – [ನಾ] ಕೂಲಿಯಿಲ್ಲದ ಕೆಲಸ [ಯುದ್ಧಕಾಲದಲ್ಲಿ ಪ್ರಜೆಗಳು ಮಾಡಬೇಕಾಗಿದ್ದ ಪುಕ್ಕಟೆ ಕೆಲಸ] (ಅವನಾಳ್ವ ತೆಱಿಗೊಳ್ವ ಬಿಟ್ಟಿಬೆಸಕೆಯಿಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ: **ಆದಿಪು,** ೮. ೬೩ ವ)

ಬಿಟ್ಟಿಕ್ಕು – [ಕ್ರಿ] ಛೂಬಿಡು, ಎಲ್ಲಿ ಸಾಗಬೇಕೆಂದು ತೋರಿಸಿ ಬಿಡು (ವಿರೋಧಿಸಾಧನಘಟಾಳಿಯಂ ಓಡಿಸಲ್ ಆಗಳ್ ಆರ್ದು ಬಿಟ್ಟಿಕ್ಕಿದರ್ ಉಗ್ರಸಿಂಧುರಘಟಾಳಿಯಂ ಮುಳಿಸಿಂ ನಿಷಾದಿಗಳ್: **ಪಂಪಭಾ,** ೧೦. ೯೨)

ಬಿಟ್ಟಿಯವಂದಿರ್ – [ನಾ] ಬಿಟ್ಟಿ ಕೆಲಸದ ಆಳುಗಳು (ಬಿಟ್ಟಿಯವಂದಿರ ಕಯ್ಯಿಂದಿಟ್ಟಿಗೆಗೊಂಡವನೊಟ್ಟಿದಂ: **ಆದಿಪು,** ೫. ೧೯)

ಬಿಟ್ಟುಳಿ – [ನಾ] ? (ಅಮರೆ ಮಾಡಿದ ಬಿಟ್ಟುಳಿಯ ಕುಕ್ಕಂಬಂ ತೊಡಂಬೆಯ ಮೂಡಿಗೆಯ ಕದಲಿಕೆಯ ಕಾಂಡಪಟಂಗಳುಮಂ: **ಪಂಪಭಾ,** ೫. ೪೭ ವ)

ಬಿಟ್ಟುಟಿ – [ನಾ] [ಬಿಟ್ಟು+ಉಟಿ] ಬಿಟ್ಟುಬಿಡು (ಇಂದೆ ಕೆಟ್ಟಿತ್ತಾಗದೆ ಸೋಮವಂಶಂ ಎನಗಿಂ ಬಾಟಿಕ್ವಾಸೆಯೆಲ್ಲಿತ್ತೊ ಬಿಟ್ಟುಟಿದೆಂ ಮತ್ತಿನ ಮಕ್ಕಳಾಸೆಯುಮಂ ಆಂ: **ಪಂಪಭಾ,** ೯. ೮೬)

ಬಿಡಿಸು – [ಕ್ರಿ] ಸಂಬಂಧ ತೊರೆ (ಎನ್ನ ಪಂಬಲನಿದಂ ಬಿಸುಡಿಂ ಬಿಡಿಂ ಎಂದು ಖೇಚರಂ ಬಿಡಿಸಿದನಾಪ್ತರಂ ಬಿಡಿಸುವಂತಿರೆ ಮೋಹದ ಬಳ್ಳವಳ್ಳಿಯಂ: **ಆದಿಪು,** ೨. ೫೦); [ಕ್ರಿ] ಬೀಡು ಬಿಡುವಂತೆ ಮಾಡು (ಅಲ್ಲಿ ಚೆಲ್ವಾಗಿರೆ ಬಿಡಿಸಿದಂ ಉರ್ವೀಶ್ವರಂ ತನ್ನ ಬೀಡಂ: **ಆದಿಪು,** ೧೩. ೨೦); [ಕ್ರಿ] ಸಡಿಲಿಸು (ನಿನ್ನ ಪೆಡಗಯ್ಗಟ್ಟಂ ಶರದಿಂ ಬಿಡಿಸಿದನಲ್ಲನೆ ಸರಿತ್ಸುತಂ ಬನ್ನವಿನ್ನವೆಂಬುವುಮೊಳವೇ: **ಪಂಪಭಾ,** ೬. ೫೩); [ಕ್ರಿ] ಬಿಡುಗಡೆಮಾಡು (ನಿನ್ನಂ ಕಾವ ಗಂಧರ್ವರೆ ಬಿಡಿಸುಗೆ ಪೋಗೆಂದು ಪೊಯ್ದಂ ದುರಾತ್ಮಂ: **ಪಂಪಭಾ,** ೮. ೭೦)

ಬಿಡು – [ಕ್ರಿ] ಬೀಡುಬಿಡು, ಪಾಳೆಯ ಬಿಡು (ಹರಿಗಂ ಆ ಕುರುಕ್ಷೇತ್ರದೊಳ್ ಅಂತೇನುಂ ಮಾಣದೆ ಬಿಟ್ಟುದಂ ಆ ನೆಗಟ್ದ ಸುಯೋಧನಂಗೆ ಚರರಱಿಪುವುದುಂ: **ಪಂಪಭಾ,** ೧೦. ೧)

ಬಿಡುನಾಯ್ – ಬೀದಿ ನಾಯಿ (ಕೊರಲೊಳ್ ಕಟ್ಟಿದ ಮಾಲೆಯ ಸಿರಿಖಂಡದ ತಳ್ಕುವೆರಸು ಬಿಡುನಾಯ್ಬೆಸೆದಾದರದಿಂದೆ ಅನರ್ಘ್ಯಮಣಿವಿಷ್ಟರದೊಳ್ ಕುಳ್ಳಿರ್ದು ಸರುಗನುಣೆ ಕಂಡುದಱಿಂ: **ಆದಿಪು,** ೧೫. ೪೨)

ಬಿಡುವೆಣ್ – [ನಾ] ಸಖಿ (ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ ರಾಗಂಗಿಡದೆ ಕೊಂಡಾಡಿದಂ ಬಲ್ಲಹನಱಿಯೆ ಗುಣಾರ್ಣವಂ ಕವಿತಾಗುಣಾರ್ಣವನಂ: **ಪಂಪಭಾ,** ೧೪. ೫೫)

ಬಿಡುವೊನ್ – [ನಾ] ಬಿಡಿಯಾದ ಚಿನ್ನ[ದ] ನಾಣ್ಯ (ಅರ್ಥಿಸಂತತಿಗೀಯಲ್ ಬಿಡುವೊನ್ನುಮಂ ಆಳ್ಗಟ್ಟುವ ತೊಡರೊಳ್ ತೊಡರಿರ್ದರ್ ಅರಸುಮಕ್ಕಳ್ ಕೆಲಬರ್: **ಪಂಪಭಾ,** ೧೦. ೩೮)

ಬಿಣ್ಗುಂಡು – [ನಾ] ಲಂಗರು ಗುಂಡು (ಅಂತು ಬಿಣ್ಗುಂಡಿಕ್ಕಿದ ಬಹಿತ್ರದಂತೆ ಅಲ್ಲಿಂ ತಳರದೆ ನಿಂದ ತನ್ನ ರಥಮಂ ಕಂಡು: **ಆದಿಪು,** ೧೨. ೮೫ ವ)

ಬಿಣ್ಪು – [ನಾ] ಭಾರ (ಸಾಸಿರ್ವರ್ ಏಱಿದೊಡಲ್ಲದೆ ಈ ಓಡಂ ನಡೆಯದು ಎಂಬುದುಂ ಆಂ ಅನಿಬರ ಬಿಣ್ಪುಮಪ್ಪೆಂ ಏಱಿಸೆಂದೊಡೆ ಗೆಯ್ವೆಂ ಎಂದೊಡಂ ಏಱಿಸಿ ನಡೆಯಿಸುವಲ್ಲಿ: **ಪಂಪಭಾ,** ೧. ೬೮ ವ); [ನಾ] ಅಗಾಧತೆ (ಮುಂದಣ ಕಜ್ಜದ ಬಿಣ್ಪುಮಂ ಅಱಿದು ಅಂಭೋರುಹನಾಭಂ ಶುಂಭತ್ ಅಂಭೋಧರಧ್ವನಿಯಿನಿಂತೆಂದಂ: **ಪಂಪಭಾ,** ೬. ೨೨ ವ)

ಬಿಣ್ಪೊಱೆ – [ನಾ] [ಬಿಣ್ಪು+ಪೊಱೆ] ಭಾರ (ಎಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಲ್ದು ತುಂಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್: **ಪಂಪಭಾ,** ೧. ೮)

ಬಿತ್ತರಿಗೆ – [ನಾ] [ವಿಷ್ಟರಿಕಾ] ಪೀಠ (ಸಾರ್ಚಿದ ಲೋಹಾಸನದೊಳ್ ಅಮರ್ಚಿದ ಬೊಂದರಿಗೆ ಪಟಿಯ ಬಿತ್ತರಿಗೆ ಕರಂ ಪೆರ್ಚುವ ಮಹಿಮೆಯನೆಯ್ದೆ: **ಪಂಪಭಾ,** ೧೪. ೨೪)

ಬಿತ್ತರಿಸು – [ಕ್ರಿ] ಹೇಳು, ನಿರೂಪಿಸು (ಕೇಳ್ವಂಗೆ ಬಿತ್ತರಿಪಂಗೆ ಆದಂ ಅಳುಂಬಮಲ್ತೆ ಭಗವಜ್ಜನ್ಮಾಭಿಷೇಕೋತ್ಸವಂ: **ಆದಿಪು,** ೭. ೧೦೧); [ಕ್ರಿ] ಹರಡು, ಹಾರಿಸು (ಅಂಬರದೊಳ್ ಅಮರವೃಂದಂಗಳ್ ಬಿತ್ತರಿಸುವ ಪತಾಕೆಗಳೆನಿಸುವ ತುರಂಗಮುಖಫೇನಪಲ್ಲವ ಸ್ತಬಕಮುಮಂ: **ಆದಿಪು,** ೧೩. ೪೪ ವ); [ಕ್ರಿ] ಹೊಗಳು (ಸಕಳಾವನೀತಳಭರಮಂ ಇನಸುತನಱಿಯೆ ಹರಿಗನಿಂದೆನಗೀಗಳ್ ದೊರೆಕೊಂಡುದು ಎಂದೊಡೇಂ ಬಿತ್ತರಿಸಿದನೋ ರಿಪುಕುರಂಗಕಂಠೀರವನಂ: **ಪಂಪಭಾ,** ೧೩. ೨)

ಬಿತ್ತು – [ನಾ] ಬೀಜ (ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ಮೊದಲ್ಗಿಡೆ ಮುನ್ನಂ ಏಕವಿಂಶತಿ ಪರಿಸಂಖ್ಯೆಯಿಂ ತವಿಸಿ ಸರ್ವನಿವೇದಕಮೆಂಬ ಯಜ್ಞದೊಳ್: **ಪಂಪಭಾ,** ೨. ೪೫)

ಬಿದಿ – [ನಾ] [ವಿಧಿ] ದೈವ (ಉನ್ನತ ಧವಳಚ್ಛತ್ರಚ್ಛನ್ನ ವಿಯತ್ತಳನಂ ಇಂದುಕುಳತಿಳಕನಂ ಇಂತು ಅನ್ನೆಯದಿಂದ ಈ ಪಟುವಿನೊಳ್ ಎನ್ನರಸನಂ ಇಂತು ಬಿದಿಯೆ ತಂದಿಕ್ಕುವುದೇ: **ಪಂಪಭಾ,** ೨. ೨೨)

ಬಿದಿಗೆ – [ನಾ] [ದ್ವಿತೀಯೆ] ಚಾಂದ್ರಮಾನ ಪಕ್ಷದ ಎರಡನೆಯ ದಿನ (ಗರ್ಭಾವತರಣಂ ಆಷಾಡ ಬಹುಲ ಬಿದಿಗೆಯ ಉತ್ತರಾಷಾಢನಕ್ಷತ್ರದ ಬೆಳಗಪ್ಪ ಜಾವದೊಳ್: **ಆದಿಪು,** ೭. ೩೨ ವ)

ಬಿದಿರ್ – [ಕ್ರಿ] ಕೊಡಹು (ಭೀಮಸೇನಂ ತನ್ನ ತಲೆಯೊಳಂ ಮೆಯ್ಯೊಳಂ ಕರಗಿ ಸುರಿವ ಅರಗಿನುರಿಯ ಬಂಬಲ್ಗಳಂ ಬಿದಿರ್ದು ಕಳೆದು: **ಪಂಪಭಾ,** ೩. ೬ ವ)

ಬಿದಿವಸ – [ನಾ] ವಿಧಿವಶ (ಬಿದಿವಶದಿಂದೆ ಪುಟ್ಟುವುದು ಪುಟ್ಟಿಸುವಂ ಬಿದಿ: **ಪಂಪಭಾ,** ೧೨. ೧೮೨)

ಬಿದು – [ನಾ] [ಆನೆಯ] ಕುಂಭಸ್ಥಳ (ಬಡಿಗೊಳೆ ಬಿದು ಬಿಬ್ಬರಬಿರಿದು ಒಡನುಗೆ ಪೊಸಮುತ್ತು ಕೋಡನೂಱಿ ಮದೇಭಂ ಕೆಡೆದುವು: **ಪಂಪಭಾ,** ೧೦. ೧೦೩)

ಬಿನದ – [ನಾ] ವಿನೋದ (ಸವಿಯುಂ ಪುದುಂಗೊಳಿಪ ಚಿತ್ರರತಂಗಳಭಂಗಿಗಳ್ ಮನಂಗೊಳೆ ನಗೆ ಸಬ್ಬವಂ ಬಿನದಮೆಂಬಿಱಿಂ ಲಲಿತಾಂಗನಂ ಮನಂಗೊಳಿಸುವ: **ಆದಿಪು,** ೨. ೭೧)

ಬಿನ್ನಗಿರು – [ಕ್ರಿ] ಬರಿದಾಗಿರು (ಮೃಗಪದಪತ್ರಲೇಖೆಗಳಂ ಏಕೆಗೆ ತಾಳ್ದಿರದಾದುವು ಈ ಕದಂಪುಗಳ್ ಉರಮೇಕೆ ಹಾರಮಣಿ ಮಂಜರಿಯಿಲ್ಲದೆ ಬಿನ್ನಗಿರ್ದುದು: **ಪಂಪಭಾ,** ೪. ೬೨)

ಬಿನ್ನಣ – [ನಾ] [ವಿಜ್ಞಾನ] ವಿದ್ಯೆ (ಬಂದು ನಿಂದನಂ ಕಂಡು ವಿರಾಟಂ ನಿನ್ನ ಬಿನ್ನಣಮೇನೆಂದು ಬೆಸಗೊಳ್: **ಪಂಪಭಾ,** ೮. ೫೩ ವ);ಹೆಚ್ಚುಗಾರಿಕೆ ಬಿನ್ನಾಣ (ಎನ್ನ ಅಟ್ಟ ಅಡುಗೆಯಂ ಉಂಡೊಡೆ ಬಿನ್ನಣಂ ಏನರಸ ನರೆಗಳಾಗವು: **ಪಂಪಭಾ,** ೮. ೫೪)

ಬಿನ್ನಣವಡೆಮಾತು – [ನಾ] ಬಿನ್ನಾಣದ [ಸಾಮಾನ್ಯ] ಮಾತು (ಇಂ ಈ ಪದದಲ್ಲಿ ಪೇಟ್ದು ಗೆಯ್ವಂತು ಉಂತೇಂ ಪನ್ನಗಪತಾಕನಲ್ಲೆನೆ ಬಿನ್ನಣವಡೆಮಾತಂ ಎನ್ನೊಳಿಂ ನುಡಿಯದಿರಿಂ: **ಪಂಪಭಾ,** ೧೩. ೮೭)

ಬಿನ್ನನೆ – [ಅ] ಮೌನವಾಗಿ (ಎನ್ನಣುಗದಮ್ಮನಿಲ್ಲದೆ ಬಿನ್ನನೆ ಸಾಮ್ರಾಜ್ಯಮಿನಿತುಮಾದ ಎಱಕಮುಂ ಅತ್ಯುನ್ನತಿಯಲ್ತು ಎನಗೆ: **ಆದಿಪು,** ೧೪. ೬೨**);** [ನಾ] ಶೂನ್ಯವಾಗಿ (ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ ಕಣ್ಕೆತ್ತಿ ಕಿಱುನಗುವ ಕೂರದರ ಮೊಗಮುಮಂ ತಮ್ಮಣ್ಣನ ಬಿನ್ನನಾದ ಮೊಗಮುಮಂ ಕಂಡು: **ಪಂಪಭಾ,** ೭. ೫ ವ)

ಬಿನ್ನಪ – [ನಾ] [ವಿಜ್ಞಾಪನ] ಅರಿಕೆ (ದೇವ ಬಿನ್ನಪಂ ಇಂದು ಖಾಂಡವಮಂ ಕೃಶಾನು ತಗುಳ್ದು ನಾನಾ ವಿಧಂ ಸುಡೆ: **ಪಂಪಭಾ,** ೫. ೯೪)

ಬಿನ್ನಬಿನ್ನನೆ – [ಅ] ಮಾತನಾಡದೆ ಮೌನವಾಗಿ (ಬೆನ್ನಬೆನ್ನನೆ ಬರೆ ಬಿನ್ನಬಿನ್ನನೆ ಪೋಗಿ: **ಪಂಪಭಾ,** ೧. ೧೧೪ ವ)

ಬಿನ್ನಾಣ – [ನಾ] ವಿಷಯ, ವಿಚಾರ (ಬಂದು ನಿಂದನಂ ಕಂಡು ವಿರಾಟಂ ನಿನ್ನ ಬಿನ್ನಾಣಮೇನೆಂದು ಬೆಸಗೊಳೆ: **ಪಂಪಭಾ,** ೮. ೫೩ ವ)

ಬಿಬ್ಬರ – [ಅ] ಬಿರಿದು ಬಿರಿದು (ಪೞಯಿಗೆಯುಂ ಬಿಬ್ಬರ ಬಿರಿಯೆ ಗುರುತನೂಭವಂ ಉರಮಂ ಬಿರಿಯೆಚ್ಚು ಬೆಂಗೆ ವಂದಂ ಗಜದಾ: **ಪಂಪಭಾ,** ೧೨. ೮೩)

ಬಿಭೀಷಿಕಾ – [ನಾ] ಅಂಜಿಸುವಿಕೆ (ಕರವಾಳಚಾಳನಪ್ರಕಟಿತ ಭಟಬಿಭೀಷಿಕಾಡಂಬರಂ ಅತಿ ಅತಿಸ್ಫುಟವೀರಶೃಂಗಾರ ನಾಟಕಾಭಿನಯನಟವೃಂದಂ: **ಆದಿಪು,** ೧೩. ೪೫ ವ)

ಬಿಯ – [ನಾ] [ವ್ಯಯ] ವೆಚ್ಚ (ಚೆಂಬೊನ್ನ ನೆಲೆಯ ಚೌಪಳಿಗೆಗಳೊಳ್ ಕಟ್ಟಿಸಿ ಪೞಯಿಗೆಗಳಂ ಅಳವಟ್ಟಿರೆ ಬಿಯಂ ಅಲ್ಲಿ ಮೊಟಗೆ ಪಲವುಂ ಪೞಿಗಳ್: **ಪಂಪಭಾ,** ೨. ೬೬)

ಬಿಯಮಂ ಮೆಱಿ – [ಕ್ರಿ] ದಾನಮಾಡು (ಸಾಸಿರ ಪೊಂಗೆಯ್ದುಂ ಚೆಃ ಕಾಸಟಮೆಂದು ಒಂದು ಲಕ್ಕಗೆಯ್ಯುದಿದರ್ಕಂ ಮಾಸರಂ ಉಡಲೆಂದು ಅಧಿಕ ವಿಳಾಸದಿಂದ ಉಡಲಿಕ್ಕಿ ನೆಱಿಯೆ ಬಿಯಮಂ ಮೆಱಿದಂ: **ಪಂಪಭಾ,** ೩. ೪೪)

ಬಿಯಮಾಜಿಸು – [ಕ್ರಿ] ಅಧಿಕ ವೆಚ್ಚಮಾಡು, ದುಂದು ಮಾಡು (ಬೇಟದ ಲಲ್ಲೆಯ ಬಲ್ಮೆ ಪತ್ತಿ ಸುತ್ತಿಸೆ ಪುರುಡಿಂಬುಕ್ಕೆಸೆ ಬಿಯಮಾಜಿಸಿ ಪೊಂದದವಂ ಬೊಜಂಗನೇ: **ಆದಿಪು,** ೧೨. ೧೭)

ಬಿರಯಿ – [ನಾ] [ವಿರಹಿ] ಅಗಲಿದವ (ಸುರಯಿಯೊಳ್ಗಿಳಿ ಮಗುಟ್ವರಗಿಳಿ ಬಿರಯಿಗೆ ಮೊರೆವಂತೆ ಮೊರೆವ ಮಜಿದುಂಬಿ: **ಆದಿಪು,** ೬. ೧೦೦)

ಬಿರಯಿಸು – [ಕ್ರಿ] ವಿರಹ ವೇದನೆ ತಾಳು (ಬಿರಯಿಸಿ ಬೇಟದೊಳ್ ಬಿರಿವ ನಲ್ಲರ್ ಅಗಲ್ದು ಕನಲ್ದು ಒಲ್ದು ನಲ್ಲರ ದೆಸೆಯಿಂದಂ ಅಟ್ಟೆವರೆ: **ಪಂಪಭಾ,** ೪. ೧೦೧)

ಬಿರಿ – [ಕ್ರಿ] ಅಗಲು (ಬಿರಿವ ನಲ್ಲರಗಲ್ದು ಕನಲ್ದೊನಲ್ದು ನಲ್ಲರ ದೆಸೆಯಿಂದಮಟ್ಟು: **ಆದಿಪು,** ೩. ೮೬); [ಕ್ರಿ] ಅರಳು ಮತ್ತು ಒಡೆದು ಹೋಗು (ಮಲ್ಲಿಗೆಗಳ್ ವಸಂತದೊಳ್ ಬಿರಿದೊಡೆ ನಲ್ಲರಂ ನೆನೆದ ನಲ್ಲರ ಮೆಲ್ಲೆರ್ದೆಗಳ್ ಬಿರಿದುವು: **ಆದಿಪು,** ೧೧. ೧೧೦); [ಕ್ರಿ] ಬಿರುಕು ಬಿಡು (ಕೊರೆವೊಡೆ ಬೆಟ್ಟುಗಳ್ ಬಿರಿವುವು ಉಣ್ಮುವ ಲಾಳೆಯ ಲೋಳೆಗಳ್ ಪೊನಲ್ವರಿವುವು ಕೆಮ್ಮಿ ಕುಮ್ಮಿದೊಡೆ ತೋಳೊಳೆ ಜೀವವಿಯೋಗಮಪ್ಪುದು: **ಪಂಪಭಾ,** ೪. ೧೦೦)

ಬಿರಿಕಂಡ – [ನಾ] ಸೀಳಿದ ಮಾಂಸಖಂಡ (ಬರ್ದರೊಳ್ ಆನೆ ಬರ್ದಂ ಎನುತುಂ ನೇರ್ವಲ್ಲಿ ಕೆನ್ನೆತ್ತರುಂ ಬಿರಿಕಂಡಂಗಳೆ ಬೀಱಲುಣ್ಮೆ ಮನದೊಂದಣ್ಮು ಇಟ್ಟಳಂ ಪೊಣ್ಮೆ: **ಪಂಪಭಾ,** ೯. ೬೩)

ಬಿರಿಮುಗುಳ್ – [ನಾ] ಹಣ್ಣು ಮೊಗ್ಗು, ಇನ್ನೇನು ಅರಳಲಿರುವ ಮೊಗ್ಗು (ತಳಿರ ನಿಜೆದಳಿರ ಮುಗುಳ ಬಿರಿಮುಗುಳ ಮಿಡಿಯ ಕಿಱುಮಿಡಿಯ ಬಲ್ಮಿಡಿಗಳೊಳೆಱಗಿ: **ಪಂಪಭಾ,** ೫. ೫ ವ)

ಬಿರಿಯಿಸು – [ಕ್ರಿ] ಬೇರ್ಪಡಿಸು (ಬಿರಿಯಿಸೆ ಬೇಟದೊಳ್ ಬಿರಿವ ನಲ್ಲರಗಲ್ದು ಕನಲ್ದೊನಲ್ದು: **ಆದಿಪು,** ೩. ೮೬)

ಬಿರಿಯಿಜಿ – [ಕ್ರಿ] ಬಿರಿಯುವಂತೆ ತಿವಿ (ಡೊಕ್ಕನೆ ಸುರಿಗೆಯೊಳ್ ಉರಮಂ ಬಿಕ್ಕನೆ ಬಿರಿಯಿಜಿದು ಬರಿಯಗಲನೊತ್ತಿ ಮನಂ ಕೊಕ್ಕರಿಸದೆ ಬೆಲಗಸೆಯಿಂ ಅಳುರ್ಕೆಯೆ ಮೊಗೆಮೊಗೆದು ನೆತ್ತರಂ: **ಪಂಪಭಾ,** ೧೨. ೧೫೩)

ಬಿರುದ – [ನಾ] ಬಿರುದನ್ನು ಪಡೆದವನು (ಬಿರುದರಂ ಒತ್ತಿ ಬೀರರಂ ಅಡಂಗಿಸಿ ಕೊಂಕಿಗರಂ ಕಟಲ್ಚಿ ಚೆನ್ನರಂ ಅಡಿಗೊತ್ತಿ ಮಂಡಳಿಕರಂ ಬೆಸಕಯ್ಸಿ .. .. ಮಾಡಿರೆ ರಾಜಸೂಯಮಂ: **ಪಂಪಭಾ,** ೭. ೧೮); [ನಾ] ಗೌರವಾನ್ವಿತ (ಧನದರನ್ನರಿರಿವರೆನಿಪ ಪರದರಿಂ ದೇವರಿನ್ನರಿವರೆನಿಪ ಬಿರುದರಿಂ: **ಪಂಪಭಾ,** ೩. ೨೨)

ಬಿರುದಿನಂಕ – [ನಾ] ಬಿರುದಿನ ಮಲ್ಲ, ಭಟ (ಭವವಿಷಮವಿಷದೊಳಗೆ ಎನಿತಂ ನೀಂ ಓಲಾಡುವೆ ಎನೆ ಎಡೆಯಿಂದೋಲಾಡಿದ ಬಿರುದಿನಂಕದಂತಿರೆ ಖಚರಂ: **ಆದಿಪು,** ೩. ೬೪)

ಬಿರ್ದಿನನ್ – [ನಾ] ಅತಿಥಿ (ಈತಂ ಬಿರ್ದಿನನ್ ಈತಂ ಭೂತಳಪತಿ ಎನಿಸಿದ ಅರಿಗನೊಡೆಯಂ ಹರಿ: **ಪಂಪಭಾ,** ೪. ೪೪)

ಬಿರ್ದು – [ಕ್ರಿ] ಬಿಟ್ಟು, ಬಿದ್ದು [√ಬೀೞ್] (ಪುರಜನಂ ಅಂತಃಪುರಜನಮುಂ ಪರಿಜನಮುಂ ಅಳ್ಕೆ ತದ್ರಾಜನಿಕೇತನದಲ್ಲಿ ಬಿರ್ದು ಪಡೆದುದು ಮನಕ್ಕೆ ಕಡುಮುಳಿಸಿನೆಸಕಮಂ ಮಾಗಧನಾ: **ಆದಿಪು,** ೧೨, ೯೨); [ನಾ] ಔತಣ (ಕೊಂತಿವೆರಸು ಅಱುವರುಮಂ ತನ್ನ ಬೀಡಿಂಗೊಡಗೊಂಡು ಒದು ಅತಿಪ್ರೀತಿಯಿಂ ಬಿರ್ದನಿಕ್ಕಿ: **ಪಂಪಭಾ,** ೩. ೩೪ ವ)

ಬಿರ್ದುವು – [ಬಿಟ್ಟುವು; √ಬೀೞ್] ಕೆಳಕ್ಕುರುಳಿದುವು (ದಿಕ್ಪಾಲಲೀಲಾಭವನಂಗಳ್ ಬಿರ್ದುವು ಇಂತಾಯ್ತಖಿಳ ಮಹಿತಳಕ್ಷೋಭಮಾ ಚಕ್ರಿಯಿಂದಂ: **ಆದಿಪು,** ೧೨. ೮೮)

ಬಿಲ್ – [ನಾ] ಬಿಲ್ಗಾರರ ಸೈನ್ಯ (ಬಲ್ಸರಿಯ ಕೋಳ್ಗಿರಲಾಱದೆ ಬಿಲ್ ತೆರಳ್ದು ದುರ್ಘರಹಯಮಟ್ಟೆ ಸಂದಣಿಸಿ ಕೋಳ್ಗುದಿಗೊಂಡುದು: **ಪಂಪಭಾ,** ೩. ೭೧)

ಬಿಲ್ಗಲ್ – **[ಕ್ರಿ]** ಧನುರ್ವಿದ್ಯೆಯನ್ನು ಕಲಿ (ಅಂತು ಬಂದು ವೈರಿಗಜಾಘಟಾವಿಟನನೊಳ್ ವಿಘಟಿಸಿ ಬಿಲ್ಗಲ್ತು: **ಪಂಪಭಾ,** ೨. ೫೭ ವ)

ಬಿಲ್ಗಾಳೆಗ – **[ನಾ]** [ಬಿಲ್+ಕಾಳೆಗ] (ಸಿಂದುರದೊಳ್ ನೆಲಗಟ್ಟಿಸಿದಂತಿರ್ದ ರಣರಂಗಭೂಮಿಯೊಳ್ ಎರಡುಂ ಪಡೆಯ ನಾಯಕರ್ ಬಿಲ್ಗಾಳೆಗಂಗಾದುವಾಗಳ್: **ಪಂಪಭಾ,** ೧೦. ೭೦ ವ)

ಬಿಲ್ಬಲ್ಮೆ – [ನಾ] ಬಿಲ್ಲನ್ನು ಬಳಸುವ ಕೌಶಲ (ಮೃಗದ ಮೆಯ್ಯೊಳ್ ನಿಸದಂ ಎಸೆವುದಂ ಬಿಲ್ಲಾಳ ಬಿಲ್ಬಲ್ಮೆ ತನ್ನೊಳಮಿಸುತೆ ಲೇಸಪ್ಪುದು: **ಪಂಪಭಾ,** ೫. ೪೭)

ಬಿಲ್ಲಂ ಕೋ – [ಕ್ರಿ] ಬಿಲ್ಲಿನ ಹಗ್ಗದಿಂದ ಸುತ್ತು (ಆಂತು ಮೂರ್ಛಾಗತನಾದ ಭೀಮನ ಕೊರಲೊಳ್ ಬಿಲ್ಲಂ ಕೋದು ಮೇಗಿಲ್ಲದೆ ತೆಗೆದು: **ಪಂಪಭಾ,** ೧೧. ೧೪೩ ವ)

ಬಿಲ್ಲ ಬಿನ್ನಣ – [ನಾ] ಬಿಲ್ವಿದ್ಯೆ (ನೆಗೞ್ದುದು ಬಿಲ್ಲ ಬಿನ್ನಣಂ ಇಳಾವಳಯಕ್ಕೆ ಸಮಸ್ತ ಧಾತ್ರಿ ಕೆಯ್ಯುಗಿವುದು ನಿಮ್ಮದೊಂದು ಪೆಸರ್ಗೇೞ್ದೊಡೆ: **ಪಂಪಭಾ,** ೧೩. ೫೬)

ಬಿಲ್ಲಾಳು – [ನಾ] ಬಿಲ್ವಿದ್ಯೆಯಲ್ಲಿ ಪರಿಣತ (ಮೃಗದ ಮೆಯ್ಯೊಳ್ ನಿಸದಂ ಎಸೆವುದಂ ಬಿಲ್ಲಾಳ ಬಿಲ್ಬಲ್ಮೆ ತನ್ನೊಳಮಿಸುತೆ ಲೇಸಪ್ಪುದು: **ಪಂಪಭಾ,** ೫. ೪೭)

ಬಿಲ್ಲುಂ ಬೆಱಗುಂ – **[ಅ]** ತಳಮಳಗೊಳ್ಳು (ಅಂತಾ ಬಿಲ್ಲಂ ಪಿಡಿದವರೆಲ್ಲಂ ಬಿಲ್ಲುಂ ಬೆಱಗುಮಾಗಿ ಸಿಗ್ಗಾಗಿ ಪೋಗೆ: **ಪಂಪಭಾ,** ೩. ೬೦ ವ)

ಬಿಲ್ಲೊಡೆಯ – **[ನಾ]** [ಬಿಲ್ಲ+ಒಡೆಯ] ಧನುರ್ವಿದ್ಯೆಯ ಒಡೆಯ, ದ್ರೋಣ (ಬಿಲ್ಲೊಡೆಯನೊಡ್ಡಿದಂ ಅಂಕದ ಚಕ್ರವ್ಯೂಹಮಂ ಆಹವರಂಗದೊಳ್: **ಪಂಪಭಾ,** ೧೦. ೮೬)

ಬಿಲ್ಲೊವಜ – **[ನಾ]** ಬಿಲ್ಲೊಡೆಯ, ಧನುರ್ವಿದ್ಯಾಗುರು (ಬವರದೊಳೇಂ ಬಲ್ಲಂ ಕರಂ ಒವಜುಗೆಯಲ್ ಪೆಱರ್ಗೆ ಕರಮೆ ತನಗೆ ಅಱಿಯಂ ಅದೆಂತುವೊ ನುಡಿ ತಪ್ಪದು ಕಮ್ಮರಿಯೊವಜಂ ಬಿಲ್ಲೊವಜಂ ಎಂಬುದಂ ಮಾಡುವನೇ: **ಪಂಪಭಾ,** ೧೨. ೩)

ಬಿಲ್ವಿಡಿ – **[ಕ್ರಿ]** [ಬಿಲ್+ಪಿಡಿ] ಬಿಲ್ಲು ಹಿಡಿ, ಯುದ್ಧಮಾಡು (ಅವರ್ಗಳ ಕೆಯ್ಯೊಳ್ ಗಾಂಗೇಯಂ ಅೞಿದೊಡೆ ಅಹಿತರಂ ಆಂ ಗೆಲೆ ತಳ್ತಿಱಿವೆಂ ಅನ್ನೆಗಂ ಬಿಲ್ವಿಡಿಯೆಂ: **ಪಂಪಭಾ,** ೧೦. ೨೨)

ಬಿಲ್ವಿದ್ದೆ – **[ನಾ]** ಧನುರ್ವಿದ್ಯೆ (ಯಜ್ಞಸೇನನೆಂಬ ಬ್ರಹ್ಮರ್ಷಿಯ ಪಕ್ಕದೊಳ್ ಬಿಲ್ವಿದ್ದೆಯಂ ಕಲಲ್ವೇೞ್ದೊಡೆ: **ಪಂಪಭಾ,** ೨. ೪೩ ವ)

ಬಿಸಕಾಂಡ – **[ನಾ]** ತಾವರೆಯ ದಂಟು (ವಾಸವದಿಗ್ವನಿತಾ ಆನನಂಬೊಲಾನನರುಚಿ ಚೆಲ್ವನೇಂ ನೆಱೆಯೆ ತಾಳ್ದಿದುದೋ ಬಿಸಕಾಂಡಪಾಂಡುರಂ: **ಆದಿಪು,** ೮. ೪೬)

ಬಿಸಜಭವ – [ನಾ] ಕಮಲಸಂಭವ, ಬ್ರಹ್ಮ (ಬಿಸಜಭವನಕ್ಕೆ ಮೃಡನಕ್ಕೆ ಅಸುರಾಂತಕನಕ್ಕೆ: **ಪಂಪಭಾ,** ೧೧. ೧೨೦)

ಬಿಸವಂದ – [ನಾ] ಆಶ್ಚರ್ಯಕರ (ಇದಱಿಂದಂ ಬಿಸವಂದಂ ಇಂತಿದಮರೇಂದ್ರಾವಾಸದೊಂದಂದಂ ಇಂತಿದು ದಲ್ ದೇವವಿಮಾನದಂದಂ: **ಆದಿಪು,** ೪. ೫); **[ನಾ]** ಸಂತೋಷ (ಆಕೆಯಂ ಎನ್ನಂ ಓವೋ ಕಾಯ್ದಿಱಿಯೆ ವಿಧಾತ್ರನೇಂ ಪಡೆದನೋ ಬಿಸವಂದಮನೊಂದವಿಂದಮಂ: **ಆದಿಪು,** ೧೨. ೨೯)

ಬಿಸಿದು – [ಗು] ಬಿಸಿಯಾದುದು (ತಚ್ಛಶಿಕಾಂತಶಿಶಿಳಾತಳಂ ಸಿಡಿಲ್ದು ಅಂದೊಡೆದತ್ತು ಇದೇಂ ಬಿಸಿದೊ ಬೇಟದ ಬೆಂಕೆ ಮೃಗಾಂಕವಕ್ತ್ರೆಯಾ: **ಪಂಪಭಾ,** ೫. ೭)

ಬಿಸಿದುಂ – [ಅ] ಬಿಸಿಯಾದುದೂ (ಉಸಿರ್ದೊಡೆ ಬಗೆ ತೀರ್ಗುಂ ಬಿಸಿದುಂ ಬೆಟ್ಟಿತ್ತುಂ ಉಸಿರ್ ಅದೇಂ ತೀರ್ದಪುದೇ: **ಪಂಪಭಾ,** ೪. ೬೫)

ಬಿಸಿಯದು – [ಗು] ಬಿಸಿಯಾದುದು (ಸುರಿವ ಪಲವಂದದ ಕೂರಂಬುಗಳುಮಂ ಒಡನಳುರ್ದುವು ಅದೇಂ ಬಿಸಿಯವೊ ಜಯಕುಮಾರನನಲಶರಂಗಳ್: **ಆದಿಪು,** ೧೩. ೬೪)

ಬಿಸಿಲ್ಗುದುರೆ – [ನಾ] ಮರೀಚಿಕೆ (ಘೋಳಾಯ್ಲರ್ ಪೊಳೆಯಿಸೆ ಬಿಸಿಲ್ಗುದುರೆಗಳ್ ಪೊಳೆವಂತೆ ಪೊಳೆವ ಕಡುಗುದುರೆಗಳುಮಂ .. .. ಒಡ್ಡಿ ನಿಂದಾಗಳ್: **ಪಂಪಭಾ,** ೧೦. ೫೧ ವ)

ಬಿಸು – [ನಾ] ಬೆಸುಗೆಗೊಳ್ಳು (ರೂಪು ಶಾಸನಂ ಬರೆದುದು ಬರ್ಜಿಸಿತ್ತು ಅಮರ್ದುದು ಅಟ್ಟುದು ಅಳಂಕಿದುದು ಉರ್ಜಿ ಪೊಕ್ಕು ಬೇರ್ವರಿದುದು ಬೆಚ್ಚುದು ಅಚ್ಚಿಱಿದುದು ಎನ್ನೆರ್ದೆಯೊಳ್: **ಆದಿಪು,** ೩. ೪೩)

ಬಿಸುಗೆ – [ನಾ] ಅಂಬಾರಿ (ವಿಜಯಲಕ್ಷ್ಮೀಕರವಳಯ ವಿಭ್ರಮ ಕರಚಕ್ರಂಗಳಿಂದಂ ತೀವಿದ ಬಿಸುಗೆಯೊಳೆಸೆದು: **ಆದಿಪು,** ೧೪. ೯೦ ವ); **[ನಾ]** ಬೆಸುಗೆ, ಸೇರಿಕೆ (ಭಯಂಕರಮಾಗೆ ಬೀಸುವ ಆವುತಿಯ ಕಳಂಕಪಂಕದೊಳೆ ಪೆರ್ಚಿದ ಕಟ್ಟಿಲೆ ತೀವ್ರಶಸ್ತ್ರಸಂಹತಿಗಳ ದೀಪ್ತಿಯಿಂ ಬಿಸುಗೆಯಾಗೆ: **ಪಂಪಭಾ,** ೧೦. ೫೦) [ಬಿಸುಗೆ ಎಂಬ ಶಬ್ದ ಶಿಬಿಕಾದ ತದ್ಭವವಿರಬಹುದೇ ಎಂದು ಡಿಎಲ್‌ಎನ್ ಅನುಮಾನಿಸುತ್ತಾರೆ]

ಬಿಸುಟು – **[ಭೂನ್ಯೂ]** ಬಿಟ್ಟು (ನಿನ್ನ ಬೞಿಯನೆ ನಡೆತರ್ಪೆಂ ನಿನ್ನನರಸ ಬಿಸುಟು ಎಂತಿರ್ಪೆಂ: **ಪಂಪಭಾ,** ೨. ೨೫)

ಬಿಸುಟ್ಟು – **[ಭೂನ್ಯೂ]** ಬಿಸುಟು (ಮಧುರಾಪುರಮಂ ಬಿಸುಟ್ಟು ಪೋಗಿ ದ್ವಾರಾವತಿಯಂ ಸಮುದ್ರಮೆ ನೀರ್ಗಾದಿಗೆಯಾಗಿ ಮಾಡಿದೆಂ: **ಪಂಪಭಾ,** ೬. ೨೬ ವ)

ಬಿಸುಡಿಸು – **[ಕ್ರಿ]** ಬಿಡುವಂತೆ ಮಾಡು, ಬಿಡಿಸು (ಕುರುವಂಶಾಂಬರಭಾನುವಂ ಬಿಸುಡಿಸಲ್ಕೆ ಆಂ ಉಳ್ಳಿನಂ ತೀರದು: **ಪಂಪಭಾ,** ೧೩. ೧೦೨)

ಬಿಸುಡು – [ಕ್ರಿ] ಬಿಡು (ಭೂಪೋತ್ತಮನಂ ಬಿಸುಟ್ಟು ಇರದೆ ನಿಮ್ಮೊಳೆ ಒಕ್ಕೊಡೆ ಬೇಡನಲ್ಲನೇ: **ಪಂಪಭಾ,** ೯. ೬೯)

ಬಿಸುಡೆಂ – [ಬಿಸುಡು+ಎಂ] ಬಿಡುವುದಿಲ್ಲ (ಉತ್ತಮಕುಲಶೈಲಂ ಉನ್ನತಿಯಂ ಏಳಿದವಾಗೆ ಬಿಸಟಿಸ್ದೊಡಂ ಬಿಸುಟಿಸ್ಕಿಮ ಬಿಸುಡೆಂ ಮದೀಯ ಪುರುಷವ್ರತಮೊಂದುಮಂ: **ಪಂಪಭಾ,** ೧. ೮೩)

ಬಿಸುಪು – **[ನಾ]** ಶಾಖ (ಮನದ ಮೆಯ್ಯ ಸಂತಾಪದೊಳ್ ಬಿಸುಸುಯ್ದು ಬಿಸುಪಿನೊಳ್ ಅನಿತುಮಂ ಗೆಲ್ದು: **ಪಂಪಭಾ,** ೫. ೬ ವ)

ಬಿಸುವಳಿ – [ನಾ] ಒಟ್ಟಾಗುವಿಕೆ (ನೆಲನಂ ನಿಱುಗೆಯಂ ನಡೆವೊಂದು ಪದಮುಮಂ ಸೋವಳಿ ಮೇವಳಿ ಬಿಸುವಳಿಯಂ; **ಪಂಪಭಾ**, ೫. ೪೬)

ಬಿಸುಟಿಕ್ಕಿಮ – [√ಬಿಸುಡು] ಬಿಸುಡಲಿ (ಉತ್ತಮಕುಲಶೈಲಂ ಉನ್ನತಿಯಂ ಏಳಿದವಾಗೆ ಬಿಸಟಿಸ್ಪೊಡಂ ಬಿಸುಟಿಕ್ಕಿಮ ಬಿಸುಡೆಂ ಮದೀಯ ಪುರುಷವ್ರತಮೊಂದುಮಂ: **ಪಂಪಭಾ**, ೧. ೮೩)

ಬಿಸುಟಿಸ್ಪೊಡಂ – ಬಿಸುಡುವುದಾದರೂ, ಬಿಟ್ಟುಕೊಟ್ಟರೂ (ಉತ್ತಮಕುಲಶೈಲಂ ಉನ್ನತಿಯಂ ಏಳಿದವಾಗೆ ಬಿಸಟಿಸ್ಪೊಡಂ ಬಿಸುಟಿಕ್ಕಿಮ ಬಿಸುಡೆಂ ಮದೀಯ ಪುರುಷವ್ರತಮೊಂದುಮಂ: **ಪಂಪಭಾ**, ೧. ೮೩)

ಬಿಳಿ – [ಗು] ಬಿಳುಪು [ಬಣ್ಣದ] (ಬಿಳಿಯ ತಾವರೆಯೆಸಟಿಸೊಳ್ ಮಾಡಿದ ಬೆಳ್ಗೊಡೆ ರಯ್ಯಮಾಗೆ: **ಪಂಪಭಾ,** ೧೩. ೧೦೮)

ಬಿಱುತು – [ಭೂನ್ಯೂ] [√ಬಿಱು] ಭಯಪಟ್ಟು (ಮಗುಟ್ದುಂ ಬಿಱುತು ಓಡಿ ಬೇಡರೊಳ್ ನೆರೆದಿರಲ್ ಒಡ್ಡಯಿಸಿ ರಾಜ್ಯದೊಳೇಂ ನೆರೆಯಲ್ಕೆ ತೀರ್ಗುಮೋ: **ಪಂಪಭಾ**, ೮. ೮೫)

ಬಿಟಿಕ್ಕಿ – [ನಾ] ಬಿಕ್ಕೆ ಕಾಯಿ (ಏಟ್ಟಟ್ಟಿನೆಟಿಸಿದು ನಿಮ್ಮಂ ನಾಟ್ಕಡೆಗಟಿದೊಡೆ ಮದೀಯ ನಾಥಂ ಬೇರಂ ಬಿಟಿಕ್ಕಿಯನೆ ತಿಂದ ದೆವಸದೊಳ್ ಅಟಿಸ್ಕಾಡಿದ ಬೀರಮೀಗಳೇಂ ಪೊಸತಾಯ್ತೇ: **ಪಂಪಭಾ**, ೧೨. ೧೭೮)

ಬೀ – [ಕ್ರಿ] ನಾಶವಾಗು (ಆವ ಅಲರುಂ ಪಣ್ಣುಂ ಬೀತು ಓವುವು ಗಡ ಬೀಯವಲ್ಲಿ ಮಲ್ಲಿಗೆಗಳುಂ ಇಮ್ಮಾವುಗಳುಂ ಎಂದೊಡೆ ಇಂ ಪೆಱತಾವುದು ಸಂಸಾರಸಾರ ಸರ್ವಸ್ವಫಲಂ: **ಪಂಪಭಾ,** ೧. ೫೫); [ಕ್ರಿ] ಮುಗಿದುಹೋಗು (ಬಂದ ಮಾವು ಬೀಯದು ಕುಸುಮಾಸ್ತ್ರನಾಜ್ಞೆ ತವದು ಎಲ್ಲಿಯುಮಿಲ್ಲಿಯ ನಂದನಂಗಳೊಳ್: **ಪಂಪಭಾ**, ೪. ೨೧)

ಬೀಗು – [ಕ್ರಿ] ಉಬ್ಬು (ಮದನ ದವಾನಲಾರ್ಚಿ ತನುವಂ ಸುಡೆ ತಳ್ತ ಎಮೆಯೊಳ್ ಪಳಂಚಿ ಬೀಗಿದ ಬೆಳರ್ವಾಯೊಳ್ ಉಚ್ಚಳಿಸಿ .. .. ಎಯ್ದಿದುವು ನೇತ್ರಜಲಬಿಂದುಗಳ್ ಆಕೆಯ ನಿಮ್ನನಾಭಿಯಂ: **ಪಂಪಭಾ**, ೫. ೯); [ಕ್ರಿ] ಗರ್ವಿಸು (ಪೊಂಗಿ ಕಡಂಗಿ ಬೀರದೊಳೆ ಬೀಗುವ: **ಪಂಪಭಾ,** ೯. ೫೪)

ಬೀಡಂಬಿಡಿಸು – [ಕ್ರಿ] ಬಿಡಾರ ಹೂಡುವಂತೆ ಮಾಡು (ಕಡುಪಗಲಾದುದು ಬೀಡಂಬಿಡಿಸುವುದೀ ಪುಣ್ಯನದಿಯ ತಡಿಯೊಳ್ ದೇವರ್: **ಆದಿಪು,** ೧೧. ೬೭)

ಬೀಡು – [ನಾ] ಬಿಡಾರ, ವಾಸಸ್ಥಾನ (ತಳ್ತ ಬಣ್ಣವಣ್ಣದ ಗುಡಿ ತೊಂಬೆಗೊಂಚಲ್ ಎಲೆಯಿಕ್ಕಿದ ಕಾವಣಮಲ್ಲಿಯುಂ ಪೊದಲ್ದೊದವಿರೆ ಕಣ್ಗೆ ಕಂಡುವು ಅಖಿಳಾವನಿಪಾಳರ ಬಿಟ್ಟ ಬೀಡುಗಳ್: **ಪಂಪಭಾ**, ೩. ೩೮)

ಬೀಡುಬಿಡುವಿಂಬು – [ನಾ] [ಬೀಡುಬಿಡುವ+ಇಂಬು] ಬಿಡಾರ ಮಾಡುವ ಜಾಗ, ಶಿಬಿರ ಹಾಕುವ ಸ್ಥಳ (ಮೂಡಿಗೆ ಕುಕ್ಕಂಬಂ ಸುಟಿಸಿ ಜೊಂಪಂ ಬೀಡುಬಿಡುವಿಂಬು ಕದಳಿ ತೆಂಗಿನ ತಾಣಂ ಜಾಣಿಂ ನೀರ್ದಾಣಮೆಂದು ಎಡೆಯಟಿದುಂ: **ಪಂಪಭಾ**, ೫. ೪೧)

ಬೀಡುಮಾಡು – [ಕ್ರಿ] ನೆಲೆಯೂರು (ನೆಲೆವೀಡಂ ಬೀಡುಮಾಡಲ್ ಕೆಲವು ದಿವಸಮಂ ಮಾಟ್ಪುದು: **ಆದಿಪು**, ೧೩. ೨೦)

ಬೀಡುವಿಡು – [ಕ್ರಿ] ಬಿಡಾರ ಹೂಡು (ರಾಜತಾಂದ್ರೀಂದ್ರ ಶೋಭಾವಿಭವಕ್ಕೆ ಅಟ್ಟಿರ್ತು ತತ್ಪರ್ವತನಿಕಟ ವನೋಪಾಂತದೊಳ್ ಬೀಡುವಿಟ್ಟಂ: **ಆದಿಪು**, ೧೩. ೭೮)

ಬೀಣೆ – [ನಾ] ವೀಣೆ (ಬೆರಲೊಳ್ ಬೀಣೆಯ ತಂತಿಗಳ್ ಒರಸಿದ ಕೆಂಗಲೆಗಳ್ ಅಕ್ಷಮಾಲೆಯೊಳೆಸೆದಂತಿರೆ ಪೊಸೆಯೆ ಮುತ್ತು ಪವಳಂ ಬೆರಸಿದವೊಲಾಯ್ತು ಚೆನ್ನತಪಸಿಯ ಕೆಯ್ಯೊಳ್: **ಪಂಪಭಾ**, ೬. ೧೦)

ಬೀರ – [ನಾ] ಶೌರ್ಯ (ಚಾಗದ ಕಂಬಮಂ ನಿಜೆಸಿ ಬೀರದ ಶಾಸನಮಂ ನೆಗಟ್ಟೆ ಕೋಳ್ಪೋಗದ ಮಂಡಲಂಗಳನೆ ಕೊಂಡು: **ಪಂಪಭಾ**, ೧. ೫೦); [ನಾ] ಶೂರ (ನಿನ್ನಂ ಉಱುಗಿಸಲುಂ ಆಜಿಯೊಳ್ ಎನ್ನಂ ಬೆಂಕೊಂಡು ಕಾದಲುಂ ಬಂದು ಈಗಳ್ ಬಿನ್ನನೆ ಮೊಗದಿಂ ಬೀರರ್ ಬೆನ್ನಿತ್ತುದಂ ಇನಿಸು ನೋಡ ಸರಸಿಜಮುಖೀ: **ಪಂಪಭಾ**, ೩. ೭೩)

ಬೀರದ ಶಾಸನ – [ನಾ] ಪ್ರತಾಪಸೂಚಕ ಶಾಸನ (ಚಾಗದ ಕಂಬಮಂ ನಿಜೆಸಿ ಬೀರದ ಶಾಸನಮಂ ನೆಗಟ್ಟೆ ಕೋಳ್ಪೋಗದ ಮಂಡಲಂಗಳನೆ ಕೊಂಡು: **ಪಂಪಭಾ**, ೧. ೫೦)

ಬೀರರವ – [ನಾ] ವೀರಘೋಷ, ವೀರನ ಕೂಗು (ತೆಗೆಯೆ ಬೀರರವದೆ ಮೇಲೆ ಪರಿದ ಮದಗಜಂಗಳಿಂ ಚಳತ್ತುರಂಗಮಂಗಳಿಂದಂ: **ಪಂಪಭಾ**, ೧. ೫೮)

ಬೀರವಟ್ಟ – [ನಾ] ಸೇನಾಪತಿಯ ಪಟ್ಟ (ಬೀರವಟ್ಟಮಂ ಆನಿರೆ ನೀಂ ಈ ಸೂತಸುತಂಗೆ ಎಡೆಗೊಂಡು ಕೈವಾರದಿಂದ ಒಸೆದು ಇತ್ತೊಡಂ ಏನಾಯ್ತು: **ಪಂಪಭಾ**, ೧೨. ೪೩)

ಬೀಸು – ಸುಳಿ, ಗಾಳಿಬೀಸು (ಬೀಸುವೊಂದೆಲರೆ ಬೀಸುವುದಾಗಿರೆ ಕಾಯ್ಗಳಿಂದಮಿಂಬಾಗಿರೆ ಸೋರ್ವ ಸೋನೆ: **ಪಂಪಭಾ,** ೨. ೧೫)

ಬೀಸುವುದು – [ನಾ] ಬೀಸಣಿಗೆ (ಬೀಸುವೊಂದೆಲರೆ ಬೀಸುವುದಾಗಿರೆ ಕಾಯ್ಗಳಿಂದಮಿಂಬಾಗಿರೆ ಸೋರ್ವ ಸೋನೆ: **ಪಂಪಭಾ,** ೨. ೧೫)

ಬೀಱು – [ಕ್ರಿ] ಹೊರಸೂಸು (ವೃತ್ತೋತ್ತುಂಗಸ್ತನೆಯರ್ ಶ್ರಮಮುತ್ತುಮದೇಂ ಸುರಭಿಗಂಧಮಂ ಬೀಜಿದರೋ: **ಆದಿಪು**, ೧೧. ೭೩); [ಕ್ರಿ] ಹಬ್ಬುವಂತೆ ಮಾಡು (ಅಗರುವ ಮೆಚ್ಚು ಅಚ್ಚ ಸಿರಿಕಂಡದೊಳ್ ಅಗ್ಗಲಿಸಿತ್ತು ಸೂಡುಶಯ್ಯೆಗಳ ಬಯಕ್ಕೆ ಜೊಂಪಲರ್ದವು ಪಾಸುಗಳೊಳ್ ನೆಲಸಿತ್ತು ಪೂತ ಗೊಜ್ಜಗೆಗಳ ಸಿಂದುರಂಗಳೊಳಗೆ ಓಗರಗಂಪನೆ ಬೀಱುತ; **ಪಂಪಭಾ**, ೫. ೩೦)

ಬೀಟ್ – [ಕ್ರಿ] ಕೆಳಕ್ಕೆ ಕುಸಿ (ಬಿಟ್ಟುದು ಭರದೆ ಸಿಡಿಲ್ದತ್ತ ಕರ್ಣೋತ್ತಮಾಂಗಂ: **ಪಂಪಭಾ**, ೧೨. ೨೦೩)

ಬೀಟಲ್ – [ನಾ] ಬಿಳಲು (ಏಱುಂ ಮಾಳವಮಂ ಪಾಱೇಟಿ ತಗುಳ್ದಿಜೆದು ನರಗನುರಿಪಿದೊಡೆ ಕರಿಂಕೇಟಿಸಿದಂ ಆತನ ತೇಜದ ಬೀಟಲಂ ಅನುಕರಿಪುವಾದುವೊಗೆದು ಉರಿವುರಿಗಳ್: **ಪಂಪಭಾ**, ೧. ೩೫); [ನಾ] [√ಬೀಟ್] ಬೀಳುವಿಕೆ, ಬೀಳ್ ಎಂಬುದರ ಭಾವನಾಮ (ಬರ್ದರೊಳ್ ಆನೆ ಬರ್ದಂ ಎನುತುಂ ನೇರ್ವಲ್ಲಿ ಕೆನ್ನೆತ್ತರುಂ ಬಿರಿಕಂಡಂಗಳೆ ಬೀಟಲುಣ್ಮೆ ಮನದೊಂದಣ್ಮು ಇಟ್ಟಳಂ ಪೊಣ್ಮೆ: **ಪಂಪಭಾ**, ೯. ೬೩)

ಬೀಟವೆ – ಬೀಳವಲ್ಲ! ಅಥವಾ ಬೀಳುವುದಿಲ್ಲವೇ, ಇಲ್ಲ (ಅಸುರವೈರಿ ಮುಳಿದಿಡೆ ಪಜೆದು ಅಂಬರತಳಮನೆಯ್ದಿ

ಮೇಘದ ಪೊರೆವೊರೆಯೊಳ್ ತೊಡರ್ದು ನೆಲಕೆ ಬೀೞವೆ ತಲೆಗಳ್: **ಪಂಪಭಾ,** ೬. ೬೫)

ಬೀೞ್ಕೊಳ್ – [ಕ್ರಿ] [ಬೀಡು+ಕೊಳ್] ಹೊರಡಲು ನಿರೂಪ ಪಡೆ (ನಿಮ್ಮಡಿಯುಮನಿದೆ ಬೀೞ್ಕೊಂಡೆಂ ಇಂ ಪೋಗಿಂ ಏೞೆಂ: **ಪಂಪಭಾ,** ೧೩. ೨೦)

ಬೀೞ್ತರ್ – [ಕ್ರಿ] ಕೆಳಗೆ ಬೀಳು (ಮಹಾರಥನಿಂದಂ ಕುಳಶೈಳದಂತೆ ಕರಿಗಳ್ ಬೀೞ್ತಂದು ಉಗ್ರಾಜಿಯೊಳ್: **ಪಂಪಭಾ,** ೧೧. ೬೬)

ಬುಂಭುಕ – [ನಾ] ಕುಚ್ಚು, ಗೊಂಚಲು (ಚೆಂಬೊನ್ನ ಮಾಂಗಾಯ ಗೊಂಚಲ್ಗಳ ಪೊಂದಳಿರ ತೊಂಗಲ್ಗಳ ಸುತ್ತುಂಗೊಂಡ ಸರಿಗೆಯ ಮುತ್ತಿನ ಬುಂಭುಕಂಗಳ ನಡುವೆ: **ಆದಿಪು,** ೮. ೧೫ ವ)

ಬುಧ – [ನಾ] ವಿದ್ವಾಂಸ, ಬಲ್ಲವನು (ತ್ರಿದಶಸ್ತುತ್ಯಮಿದು ಆದಿದೇವಚರಿತಂ ಕರ್ಣಾಮೃತಸ್ಯಂದಿಯಕ್ಕೆ ಭವ್ಯಾವಳಿಗೆಂದು ಪೇೞಿಸೆ ಬುಧರ್: **ಆದಿಪು,** ೧೬. ೭೯)

ಬುಧಜನ – [ನಾ] ತಿಳಿದವರು (ಬರೆಯಿಸಿದಂ ಪೂರ್ವಮಹೀಶ್ವರ ನಾಮಮನೆಯ್ದೆ ಕಳೆದು ವೃಷಭಾಚಲದೊಳ್ ಭರತಂ ನಿಜನಾಮಮನೆನೆ ಪರಿಹಸಿತಂ ಬುಧಜನಕ್ಕಲ್ಲದೆ ಪೇೞಲೇಂ: **ಆದಿಪು,** ೧೪. ೭೩)

ಬುದ್ಧಿ – [ನಾ] [ಜೈನ] ಏಳು ಬಗೆಯ ಋದ್ಧಿಗಳಲ್ಲಿ ಒಂದು (ಬುದ್ಧಿತಪೋವಿಕ್ರಯೌಷಧಿರಸ ಬಲಾಕ್ಷೀಣಾಭಿಧಾನ ಸಪ್ತರ್ಧಿಗಳೊಳಂ ನೆೞೆದಂ: **ಆದಿಪು,** ೬. ೩೩ ವ); ಜಿನಜನನಿಯನ್ನು ಅಲಂಕರಿಸಲು ಸೌಧರ್ಮೇಂದ್ರನು ನಿಯೋಜಿಸಿದ ಒಬ್ಬ ದೇವತೆ (ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಅಱುವರುಮಂ ಆತ್ಮೀಯ ಗುಣಗಣಮಣಿವಿಭೂಷಣಂಗಳಿಂ ಜಿನಜನನಿಯಂ ಅಲಂಕರಿಸಲುಂ ... ಸೌಧರ್ಮೇಂದ್ರಂ ಬೆಸಸುವುದುಂ: **ಆದಿಪು,** ೭. ೩ ವ)

ಬುದ್ಧಿವೃದ್ಧ – [ನಾ] ಬುದ್ಧಿಯಲ್ಲಿ ಹಿರಿಯ (ಕುರುವೃದ್ಧನುಂ ಬುದ್ಧಿವೃದ್ಧನುಂ ಅಪ್ಪ ಗಾಂಗೇಯಂ ಧೃತರಾಷ್ಟ್ರಂಗಿತೆಂದಂ: **ಪಂಪಭಾ,** ೭. ೧೫ ವ)

ಬುದ್ಧಿಸಾಗರ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಜೀವರತ್ನಗಳಲ್ಲಿ ಒಂದಾದ ಪುರೋಹಿತರತ್ನದ ಹೆಸರು (ಶಾಂತಿಕ ಪೌಷ್ಟಿಕ ಕ್ರಿಯಾಕುಶಲನುಂ ಧರ್ಮಕಾರ್ಯಾದಿ ಕುಶಲನುಮಪ್ಪ ಬುದ್ಧಿಸಾಗರನೆಂಬ ಪುರೋಹಿತರತ್ನಮುಂ: **ಆದಿಪು,** ೧೧. ೩ ವ)

ಬುದ್ಬುದ – [ನಾ] ಉಬ್ಬು (ಅಭಿನವ ಪ್ರಿಯಂಗು ಶ್ಯಾಮಾಂಗ ಅರ್ಧಚಂದ್ರ ಬುದ್ಬುದವ್ಯಾಕೀರ್ಣ ತ್ರಿಶೂಲ ಕರಾಳವಿಶಾಲ ವೇತ್ರಖೇಟಕಂ: **ಆದಿಪು,** ೧೩. ೪೫ ವ); [ನಾ] ಗುಳ್ಳೆ (ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿ ಪರಿಮಳ ಮಿಳಿತೋಲ್ಲುಳಿತಾಳಿ ಜಲಮಾಯ್ತಾ ಜಳಜದೊಳೊಗೆದಂ ಹಿರಣ್ಯಗರ್ಭಬ್ರಹ್ಮಂ: **ಪಂಪಭಾ,** ೧. ೫೯)

ಬೂತಾಟ – [ನಾ] ಪಿಶಾಚಿಯ ಆಟ (ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮಂ ಮರಸರಿಗೆವಿಡಿದು ಬಿಲ್ವಿಡಿದಾಡುವ ಬೂತಾಟಂಗಳುಮಂ ನೋಡಿ: **ಪಂಪಭಾ,** ೪. ೯೦ ವ)

ಬೂತು – [ನಾ] ಭೂತ (ಈ ಪುರೋಚನನೆಂಬ ಬೂತು ಸುಯೋಧನನ ಬೆಸದಿಂ ನಮಗಿಂತಾದರಂಗೆಯ್ವುದೆಲ್ಲಂ ನಮ್ಮಂ ಮೆಟ್ಟಿಡಿಸಲೆಂದೆ ಮಾಡಿದಂ: **ಪಂಪಭಾ,** ३. ४ ವ); [ನಾ] ಸಾಮಾನ್ಯವ್ಯಕ್ತಿ (ತಲೆಯೊಳ್ ನಾಲಗೆಯುಳ್ಳ ಬೂತುಗಳ್ಗೆಲ್ಲಂ ಇಲ್ಲೆನ್ನದೆ ಈಯುತ್ತುಂ ನಿಜನಿವಾಸಕ್ಕೆ ವಂದು: **ಪಂಪಭಾ,** ೧೨. ೫೨ ವ)

ಬೂತುಗೊಳ್ – [ಕ್ರಿ] ಪಿಶಾಚಿ ಮೆಟ್ಟು, ಆವೇಶಗೊಳ್ಳು (ನೆಟ್ಟನೆ ಬೂತುಗೊಳ್ವ ತೆಱದಿಂ ದಶಕಂಧರನಾಡಿ ಪಾಡಿ ನಾಣ್ಗೆಟ್ಟಿರೆ: **ಪಂಪಭಾ,** ೯. ೫೩)

ಬೂತುತಪ – [ನಾ] ಬಡಪಾಯಿಗಳ ತಪಸ್ಸು (ಮತ್ತಿನ ಬೂತುತಪಂಗಳ್ ಎಮ್ಮ ಪುರ್ವಿನ ಕಡೆಯೊಂದು ಜರ್ವಿನೊಳೆ ತೀರ್ವುವು: **ಪಂಪಭಾ,** ೭. ೮೧)

ಬೃಂಹಿತ – [ನಾ] ಆನೆಯ ಘೀಳಿಡುವಿಕೆ (ಘನಾಘನನಿನಾದದಿಂ ಬೃಂಹಿತಂಗೆಯ್ವ ವಿಜಯಗಜಮಂ ನೆಲನಂ ಪೊಕ್ಕಡಂಗಿದ ಪಗೆವರಂ ಅಗುೞ್ದು ಕೊಲ್ವುದಂ ಉದಾಹರಿಸುವಂತೆ: **ಪಂಪಭಾ,** ೯. ೯೫ ವ)

ಬೃಹಂದಳೆ – [ನಾ] ಬೃಹನ್ನಳೆ, ನಪುಂಸಕ (ಬಾಳೆಯರಂ ದಲಾಡಿಪ ಬೃಹಂದಳೆ ಫಲ್ಗುಣಂ: **ಪಂಪಭಾ,** ೯. ೬); [ನಾ] ಅಜ್ಞಾತವಾಸ ಕಾಲದಲ್ಲಿ ಅರ್ಜುನ ತಳೆದಿದ್ದ ನಪುಂಸಕನ ವೇಷ (ಒಂದಬ್ದದೊಳೆ ಬೃಹಂದಳೆಯಾಗೆಂದು ಮುನಿದು ಶಾಪಮನಿತ್ತಳ್: **ಪಂಪಭಾ,** ೮. ೨೯)

ಬೆಂಕೆ – [ನಾ] ಉರಿ, ಬೆಂಕಿ (ಅದಱ ಬೆಂಕೆ ಪೋಪಿನಂ ಎೞಗಿಸು ನೀಂ ಮ್ಲೇಚ್ಛಖಂಡಮಂ ಪಡುವಣದಂ: **ಆದಿಪು,** ೧೩. ೩೩)

ಬೆಂಕೊಳ್ – [ಕ್ರಿ] ಹಿಂಬಾಲಿಸು, ಬೆನ್ನಟ್ಟು (ನಿನ್ನಂ ಉೞುಗಿಸಲುಂ ಆಜಿಯೊಳ್ ಎನ್ನಂ ಬೆಂಕೊಂಡು ಕಾದಲುಂ ಬಂದು ಈಗಳ್ ಬಿನ್ನನೆ ಮೊಗದಿಂ ಬೀರರ್ ಬೆನ್ನಿತ್ತುದಂ ಇನಿಸು ನೋಡ ಸರಸಿಜಮುಖೀ: **ಪಂಪಭಾ,** ೩. ೭೩)

ಬೆಂಗೀಶ – [ನಾ] ಬೆಂಗಿ [ವೆಂಗಿ] ದೇಶದ ರಾಜ (ಕನಕೋಚ್ಚಾಸನ ಸಂಸ್ಥಿತಂ ನೃಪನವಂ ಬೆಂಗೀಶಂ ಉತ್ತುಂಗಪೀನ ನಿಜಾಂಸಾರ್ಪಿತ ಲಂಬಹಾರನವಂ ಪಾಂಡ್ಯಂ: **ಪಂಪಭಾ,** ೩. ೫೪)

ಬೆಂಗೆವರ್ – [ಕ್ರಿ] ಬೆನ್ನ ಮೇಲೆ ಹತ್ತು (ದಾನಪ್ರಮೋದ ವಾಚಾಳಷಟ್ಚರಣ ಚಾರಣ ಗಣೋಚ್ಚಾರ ಝುಂಕಾರ ಜಯಾಶೀರ್ಘೋಷಮುಮಪ್ಪ ವಿಜಯಗಜದ ಬೆಂಗೆ ವಂದು: **ಆದಿಪು,** ೧೪. ೯೦ ವ)

ಬೆಂಗೆವಾಯ್ – [ಕ್ರಿ] [ಬೆಂಗೆ+ಪಾಯ್] ಹಾರಿ ಬೆನ್ನ ಮೇಲೆ ಕುಳಿತುಕೊ (ಮದಾಂಧ ಗಂಧಸಿಂಧುರಮಪ್ಪ ಪಟ್ಟವರ್ಧನನ ಬೆಂಗೆವಾಯ್ದು .. .. ಸುಯೋಧನಂ ಪೊಱಮಟ್ಟಂ: **ಪಂಪಭಾ,** ೧೦. ೨೬ ವ)

ಬೆಂಡುಮಗುೞ್ – [ನಾ] ಅಂಗಾತವಾಗು, ಅಸ್ತವ್ಯಸ್ತವಾಗು (ಮುಡಿಯ ಪೂವಿನ ರಜದಿಂ ವಾಸಿಸಿದ ನೀರ ಕದಡಿಂದಾಸವದೊಳ್ ಸೊರ್ಕಿ ಬೆಂಡುಮಗುೞ್ದುವು ಮೀಂಗಳ್: **ಪಂಪಭಾ,** ೫. ೬೫)

ಬೆಂಡುಮರಲ್ – [ನಾ] ಭಾರದಿಂದ ಬೆಂಡಾಗು (ನಿಷಾದಿತಿಯೆಂಬ ಬೇಡಿತಿಗಂ ಅಯ್ವರ್ ಮಗಂದಿರ್ಗಂ ಉಣಲಿಕ್ಕಿದೊಡೆ ತಣಿಯುಂಡು ಬೆಂಡುಮರಲ್ದು ಮಱಲುಂದಿದರ್: **ಪಂಪಭಾ,** ೩. ೪ ವ)

ಬೆಂದು – [ಅ] [√ಬೇಯ್] ಸುಟ್ಟು (ಭವಲಾಲಾಟವಿಲೋಚನಾಗ್ನಿ ಶಿಖೆಯಿಂ ಬೆಂದು ಅಳ್ಕಿ ಮತ್ತಂ ಮನೋಭವಂ ಎಟ್ಟುತ್ತೊಡೆ: **ಪಂಪಭಾ,** ೭. ೨೪)

ಬೆಂಬಲಂಬಾಯ್ – [ಕ್ರಿ] [ಬೆನ್+ಬಲಂ+ಪಾಯ್] ನೆರವಿಗೆ ಹೋಗು (ಪಾಂಚಾಳರಾಜ ತನೂಜೆಯ ಮಾತಿಂಗೆ ಬೆಂಬಲಂಬಾಯ್ವಂತೆ ಭೀಮಸೇನನಿಂತೆಂದಂ: **ಪಂಪಭಾ,** ೭. ೫೨ ವ)

ಬೆಂಬಿಡಿ – [ಕ್ರಿ] [ಬೆನ್+ಪಿಡಿ] ಹಿಂದೆ ಬರು, ಹಿಂದಿನಿಂದ ಬರು (ಮುಳಿದು ಮನಃಪ್ರಿಯಂ ಪೆಱಗುಗೆಯ್ದಿರೆ ಬೆಂಬಿಡಿದಪ್ಪಿಕೊಂಡ ನಲ್ಲಳ ಮೊಲೆಯೊತ್ತಿನೊಳ್ ತಳರ್ದುದು .. .. ಕೋಪಮೋಪನಾ: **ಆದಿಪು,** ೧೨. ೩೪);

ಬೆಂಬೀೞ್ – [ಕ್ರಿ] ಬೆನ್ನ ಮೇಲೆ ಬೀಳು, [ಶರಶಯನದ ಮೇಲೆ] ಮಲಗು (ಅದಟಂ ಸಿಂಧುತನೂಭವಂ ವಿಜಯನೊಳ್ ಮಾರ್ಕೊಂಡು ಅಣಂ ಕಾದಲಾಱದೆ ಬೆಂಬಿೞ್ದೊಡೆ: **ಪಂಪಭಾ,** ೧೧. ೫೫); [ಕ್ರಿ] ಹೊಂಚುಹಾಕು (ಕರಂ ಬೆಂಬಿಟ್ಟು ದುರ್ಯುಕ್ತಿಯಿಂದದಯಂ ಧರ್ಮಜನಿಕ್ಕಿದಂ ಗುರುವಂ: **ಪಂಪಭಾ,** ೧೨. ೩೫)

ಬೆಕ್ಕಸಂಬಡು – [ಕ್ರಿ] ಬೆರಗಾಗು (ಬಗೆಯನುೞಿ ಸೆಱೆವಿಡಿದ ವಿದ್ಯಾಧರವಿಳಾಸಕ್ಕಂ ಬೆಕ್ಕಸಂಬಟ್ಟು: **ಆದಿಪು,** ೨. ४೧ ವ)

ಬೆಗಡುಗೊಳ್ – [ಕ್ರಿ] ಭಯಪಡು (ಆಗಳದಂ ಕಂಡು ಉತ್ತರಂ ಒತ್ತರಂ ಒತ್ತಿದಂತೆ ಬೆರ್ಚಿ ಬೆಗಡುಗೊಂಡು: **ಪಂಪಭಾ,** ೮. ೯೯ ವ)

ಬೆಚ್ಚ ತಟಕ್ಕಿ – [ನಾ] ಬೆಚ್ಚನಾದ ಅಪ್ಪುಗೆ (ಬಾಯ್ಗೂಟದೊಳ್ ಅಟ್ಟುಱಿಂ ಪಡೆದು ಕೂಟದೊಳುಣ್ಮಿದ ಬೆಚ್ಚ ತಟಕ್ಕಿಯೊಳ್ ಕೂಟಸುಖಂಗಳಂ ಪಡೆದನೇಂ ಚದುರಂ ಗಳ ಬದ್ದೆದಲ್ಲಱಿಂ: **ಪಂಪಭಾ,** ೩. ೮೨)

ಬೆಚ್ಚನುಸಿರ್ – [ನಾ] ಬಿಸಿಯುಸಿರು ಬಿಡು (ನಿನ್ನನೆ ಕಾಣಲಾಗದು ಎಂದು ಆ ಲಲಿತಾಂಗಿ ಬೆಚ್ಚನುಸಿರ್ದು ಅಚ್ಚರಿವೆತ್ತಿರೆ ಮೂರ್ಛೆವೋಪುದುಂ: **ಆದಿಪು,** ३. ೨३)

ಬೆಚ್ಚನೆ – [ಅ] ಬಿಸಿಯಾಗಿ (ಆ ಲಲಿತಾಂಗಿ ಬೆಚ್ಚನುಸಿರ್ದಚ್ಚರಿವೆತ್ತಿರೆ ಮೂರ್ಛೆವೋಪುದುಂ: **ಆದಿಪು,** ३. ೨३)

ಬೆಚ್ಚಿಸು – [ಕ್ರಿ] ಹೆದರು (ಅದಟರ ಚೆನ್ನಪೊಂಗರ ಸಬಂಗಳ ತೊಟ್ಟುಟೆಯೊಳ್ ತೊಡಂಕಿ ನಿಲ್ಲದೆ ಪೊಱಮಟ್ಟ ತಮ್ಮ ಮನದೊಳ್ ಮಿಗೆ ಬೆಚ್ಚಿಸಿದಂತೆ ತೋಱುವ: **ಪಂಪಭಾ,** ೮. ೧೦४)

ಬೆಚ್ಚನುಸಿರ್ – [ನಾ] ಬಿಸಿಯುಸಿರು ಬಿಡು (ನಿನ್ನನೆ ಕಾಣಲಾಗದು ಎಂದು ಆ ಲಲಿತಾಂಗಿ ಬೆಚ್ಚನುಸಿರ್ದು ಅಚ್ಚರಿವೆತ್ತಿರೆ ಮೂರ್ಛೆವೋಪುದುಂ: **ಆದಿಪು,** ३. ೨३)

ಬೆಚ್ಚು – [ಕ್ರಿ] ಬೆಸುಗೆಗೊಳ್ಳು (ಅಂದಿನ ರೂಪು ಶಾಸನಂ ಬರೆದುದು ಬರ್ಚಿಸಿತ್ತು ಅಮರ್ದುದು ಅಟ್ಟುದು ಅಳಂಕಿದುದು ಉರ್ಚಿ ಪೊಕ್ಕು ಬೇರ್ವರಿದುದು ಬೆಚ್ಚುದು ಅಚ್ಚೊತ್ತಿದುದು: **ಆದಿಪು,** ३. ४३)

ಬೆಚ್ಚು ನೀರ್ದಳಿ – [ಕ್ರಿ] ಹೆದರಿಕೆಯನ್ನು ಹೋಗಲಾಡಿಸಲು ಮುಖಕ್ಕೆ ಬಿಸುಪುನೀರನ್ನು ಚುಮುಕಿಸು (ಮದದ ನೀರೊಳೆ ಲೋಕವಾರ್ತೆಗೆ ಬೆಚ್ಚು ನೀರ್ದಳಿದಾಗಳ್: **ಪಂಪಭಾ,** ೧. ४३)

ಬೆಜ್ಜ – [ನಾ] ವೈದ್ಯ (ಅಣುಗಾಳ್ಗಳ ಕೊಂಡಾಟದಾನೆಗಳ ನಚ್ಚಿನ ಕುದುರೆಗಳ ಪುಣ್ಗಳಂ ಉಡಿಯಲುಂ ಓವಲುಂ ಮರ್ದು ಬೆಜ್ಜರುಮಂ ಅಟ್ಟುತ್ತುಂ: **ಪಂಪಭಾ,** ೧೧. ೨ ವ)

ಬೆಟ್ಟನಾಗು – [ಕ್ರಿ] ಬಿರುಸಾಗು, ರಭಸವುಳ್ಳವನಾಗು (ನೀಮಿಂತು ಕೆಯ್ಕೊಂಡು ಕಾದೆ ಜಗತ್ಪೂಜಿತ ಬೆಟ್ಟನಾದೊಡೆ ಎಮಗಿಂ ಬಾೞ್ವಾಸೆಯಾವಾಸೆಯೋ: **ಪಂಪಭಾ,** ೧೧. ೧೨೭)

ಬೆಟ್ಟನೆ – [ಅ] ಬಿರುಸಾಗಿ, ಕಡ್ಡಿ ತುಂಡುಮಾಡಿದಂತೆ (ಅಱಿದೆಂ ನೆಟ್ಟನೆ ಬೆಟ್ಟನೆ ಇಂತು ನುಡಿವೈ ನೀಂ ಕಂದ ಪೋಗು ಇಂದೆ ಕೆಟ್ಟು ಅಱಿದತ್ತಾಗದೆ ಸೋಮವಂಶಂ: **ಪಂಪಭಾ,** ೯. ೮೬)

ಬೆಟ್ಟಾಗು – [ಕ್ರಿ] ಬೆಟ್ಟವಾಗು, ದೊಡ್ಡದಾಗು (ಅಂತು ಕನಕರೇಣುಗಳ್ ಪುಟ್ಟಿದ ಪಾಸಱೆಗಳುಮಂ ಕನಕದ ಪಿರಿಯ ಸೆಲೆಗಳುಮಂ ಬೆಟ್ಟಾಗಿ ಪುಂಜಿಸಿ: **ಪಂಪಭಾ,** ೬. ३೧ ವ)

ಬೆಟ್ಟಿತ್ತು – [ಗು] ಬಿರುಸು, ಗಾಢ (ಬಿಸಿದುಂ ಬೆಟ್ಟಿತ್ತುಂ ಉಸಿರದೇಂ ತೀರ್ದಪುದೇ: **ಪಂಪಭಾ,** ४. ६೦)

ಬೆಟ್ಟು – [ಕ್ರಿ] ಇರಿ, ಚುಚ್ಚು (ಕಾಯ್ದ ಕರ್ಬೊನ್ನ ಸೂಜಿಗಳಂ ಬೆರಲ್ಗಳೊಳ್ ಬೆಟ್ಟುವರುಂ: **ಆದಿಪು,** ೫. ೮೫ ವ); [ನಾ] ಬೆಟ್ಟ (ಇಡಿದಿರೆ ರೋಮಕೂಪದೊಳಗೆ ಉರ್ಚಿದ ಸಾಲ ಸರಲ್ಗಳುಂ ತೆಱಂಬಿಡಿದಿರೆ ಬೆಟ್ಟು ಒರ್ಗುಡಿಸಿದಂತೆ ನೆಱಿಲ್ದಿರೆ: **ಪಂಪಭಾ,** ೧३, ६२)

ಬೆಡಂಗ – [ನಾ] ಚೆಲುವ (ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್ ನೀಂ ನೀಱನೈ: **ಆದಿಪು,** ೧೦. ೯೬)

ಬೆಡಂಗು – [ನಾ] ಸೊಗಸು, ರಮ್ಯತೆ (ಕರಣಾಂಗಹಾರಮೃದುಪದ ಪರಿಕ್ರಮಂಗಳ ಬೆಡಂಗುಗಳ ಜತಿಯೊಳ್ ಅಳಂಕರಿಸಿದುದೆಂಬಿನಂ: **ಆದಿಪು,** ೭. ೧೮)

ಬೆಡಂಗುಗೆಡು – [ಕ್ರಿ] ಸೊಗಸನ್ನು ಕಳೆದುಕೊ (ನಗೆಗಣ್ ಸೋರ್ವ ಕದುಷ್ಣವಾರಿಚಯದಿಂ ಬಿಂಬಾಧರಂ ಸುಯ್ಯ ಬೆಂಕೆಗಳಿಂ ನಾಡೆ ಬೆಡಂಗುಗೆಟ್ಟ ಇರವು ಇದಿಂತೇಕಾರಣಂ: **ಪಂಪಭಾ,** ४. ६೮)

ಬೆದಬೆದ – [ಅ] ಅನುಕರಣ ಪದ, ತೀವ್ರವಾಗಿ (ಇನಿತುಮಿಲ್ಲದೆ ಗುಱುಗುಮ್ಮೆಂದು ಪಸಿದಿರ್ದು ಬೆದಬೆದ ಬೆಂದಿನಿಬರ್ ಕಟ್ಟಿಕೊಳ್ವ ಕಣಿಯೇಂ ಪೇೞಿಂ: **ಆದಿಪು,** ೯. ೯೦)

ಬೆದಱು – [ನಾ] ಅಂಜಿಕೆ (ಕಾಪುಂ ಮೇಪುಂ ತೋಡುಂ ಬೀಡುಂ ದೆಸೆಯುಂ ಕೊಸೆಯುಂ ಮೆಚ್ಚುಂ ಬೆಚ್ಚುಂ ಪೋಗುಂ ಮೇಗುಂ ಬೆದಱುಂ ಕೆದಱುಂ ಪೆರ್ಚುಂ ಕುಂದುಮನಱಿದು: **ಪಂಪಭಾ,** ೫. ४३. ವ); ಹೆದರು (ಧ್ಯಾನಮರೀಚಿಯಿಂ ಬೆದಱೆ ಘಾತಿತಮಸ್ತಮಂ: **ಆದಿಪು,** ೧೦. ೧೭)

ಬೆನ್ನಂ ಪರಿ – [ಕ್ರಿ] ಹಿಂದೆಯೇ ಓಡು (ಭೀಮಾರ್ಜುನರ್ ಕಾಯ್ಪು ಕೆಯ್ಮಿಗೆ ಬೆನ್ನ ಪರಿದು ಎತ್ತ ಪೋಪೆಯೆಲವೋ ಪೋ ಪೋಗಲ್ ಎಂದೆಯ್ದಿದರ್: **ಪಂಪಭಾ,** ೭. ३೧)

ಬೆನ್ನಟ್ಟು – [ಕ್ರಿ] ಹಿಂಬಾಲಿಸು (ಶರವ್ರಾತಂಗಳುಂ ನುರ್ಗಿ ಕಣ್ಗಿಡೆ ಬೆನ್ನಟ್ಟಿದನಂತು ನಮ್ಮ ಹರಿಗಂ ಗಂಡಂ ಪೆಱರ್ ಗಂಡರೇ: **ಪಂಪಭಾ,** ೧೧. ೧३)

ಬೆನ್ನಬೆನ್ನನೆ – [ಅ] ಹಿಂದೆ ಹಿಂದೆಯೇ (ಬೆನ್ನಬೆನ್ನನೆ ಬರೆ ಬಿನ್ನಬಿನ್ನನೆ ಪೋಗಿ: **ಪಂಪಭಾ,** ೧. ೧೧४ ವ)

ಬೆನ್ನಲೆ ನಿಲ್ – [ಕ್ರಿ] ಬೆನ್ನುಬೀಳು, ಬೆನ್ನಪೀಡೆಯಾಗು (ತೊಂಬಯ್ವಾಸಿರ್ವರ್ ನಿಮ್ಮಂಬಿನ ಬಂಬಲೊಳೆ ಮಕುಟಬದ್ಧರ್ ಮಡಿದರ್ ನಂಬಿಂ ನಂಬಲಿಂ ಇಂದಿಂಗೊಂಬತ್ತು ದಿನಂ ದಲ್ ಎಮ್ಮ ಬೆನ್ನಲೆ ನಿಂದಿರ್: **ಪಂಪಭಾ**, ೧೧. ೨೯)

ಬೆನ್ನನೆ ಬರ್ – [ಕ್ರಿ] ಹಿಂಬಾಲಿಸು (ನಿನ್ನಂ ಇನ್ನಾನುಂ ಅಗಲ್ವೆನೇ ಕೆಳೆಯ ಬೆನ್ನನೆ ಬಂದಪೆಂ ಆಂತರಂ ಯಮಸ್ಥಾನಮನೆಯ್ದಿಸುತ್ತ: **ಪಂಪಭಾ**, ೧೩. ೩)

ಬೆನ್ನೀ – [ಕ್ರಿ] [ಬೆನ್+ಈ] ಬೆನ್ನು ಕೊಡು, ಪಲಾಯನಮಾಡು (ನಿನ್ನಂ ಉಱುಗಿಸಲುಂ ಆಜಿಯೊಳ್ ಎನ್ನಂ ಬೆಂಕೊಂಡು ಕಾದಲುಂ ಬಂದು ಈಗಳ್ ಬಿನ್ನನೆ ಮೊಗದಿಂ ಬೀರರ್ ಬೆನ್ನಿತ್ತುದಂ ಇನಿಸು ನೋಡ ಸರಸಿಜಮುಖೀ: **ಪಂಪಭಾ**, ೩. ೭೩); [ಕ್ರಿ] ಬೆನ್ನು ಕೊಡು, ಆಶ್ರಯವಾಗು (ಆಯ್ತೇ ಸಾಧಿಸಿಕೊಂಡು ಪಾಂಡುಸುತರಂ ನಣ್ಪಿಂಗೆ ಬೆನ್ನಿತ್ತು ದಲ್ ಸಯ್ತಾಯ್ತು ಅಜ್ಜನ ಮಾತು: **ಪಂಪಭಾ**, ೧೧. ೫೨)

ಬೆನ್ನೀರ್ – [ನಾ] ಬಿಸಿನೀರು (ನಿನ್ನಂ ಪಗೆವರ ಬೇರೊಳ್ ಬೆನ್ನೀರಂ ಪೊಯ್ದು ನಿನಗೆ ಮಾಟಿಪ್ಪೆಂ ಧರೆಯಂ: **ಪಂಪಭಾ**, ೮. ೩೪)

ಬೆಮರ್ – [ನಾ] ಬೆವರು (ಸುರಿಯೆ ಬೆಮರ್ ಕುರುಳ್ವಿಡಿದು ಮುತ್ತುಗಳಂ ಮಱೆದುಂಬಿ ಕಾಣುವಂತಿರೆ: **ಪಂಪಭಾ**, ೮. ೬೦)

ಬೆಮರ ನೀರ್ಗಳ ಪೊನಲ್ – [ನಾ] ಬೆವರು ನೀರಿನ ಧಾರೆ (ಕೊಡಗೂಸುತನದ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಡಿಯಲೊಡಗೂಡೆ ಗಂಗೆಯ ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ: **ಪಂಪಭಾ**, ೧. ೯೨)

ಬೆರಗು – [ನಾ] ಉಪಾಯ ಅಥವಾ ವಿವೇಕ (ನೊಂದ ಸಿಂಗದ ಮೇಲೆ ಬೆರಗಱಿಯದ ಬೆಳ್ಳಾಳ್ ಪಾಯ್ವಂತೆ ಕಿಟ್ಟಿ ಬಾಳ್ವೆರಸು ಪಾಯ್ವುದುಂ: **ಪಂಪಭಾ**, ೧೧. ೧೦೩ ವ)

ಬೆರಲ್ – [ನಾ] ಬೆರಳು (ಬೆರಲ ಕೊರಲ ಕೂಟಂ ಬೆರಲಂ ಮಿಡಿಯಿಸಿದುದು: **ಆದಿಪು**, ೯. ೧೧೭)

ಬೆರಲಂ ಮಿಡಿಯಿಸು – [ಕ್ರಿ] ಸೋಜಿಗಗೊಳಿಸು (ಬೆರಲ ಕೊರಲ ಕೂಟಂ ಬೆರಲಂ ಮಿಡಿಯಿಸಿದೆನಿಸಿ ರಾಗದ ತೊಡರೊಳ್ ತೊಡರ್ದಪುವಲ್ಲಿ ಕಿನ್ನರಯುಗಳಂ: **ಆದಿಪು**, ೯. ೧೧೭)

ಬೆರಸು – [ಕ್ರಿ] ಸಂಭೋಗಿಸು (ಪೆಂಡಿರ್ ಪೆಂಡಿರೊಳ್ ಅದೆಂತು ಬೆರಸುವರಬಲೇ: **ಪಂಪಭಾ**, ೧. ೭೬)

ಬೆರ್ಚಿಸು – [ಕ್ರಿ] ಭಯಪಡಿಸು (ತಪೋವನದ ಮುನಿಜನದ ಪರಮಾನುರಾಗಮಂ ಪೆರ್ಚಿಸಿ ಕಾಮಾನುರಾಗಮಂ ಬೆರ್ಚಿಸಿ ತದಾಶ್ರಮದೊಳ್ ಆಶ್ರಮಕ್ಕೆ ಗುರುವಾಗಿ ಪಾಂಡುರಾಜನಿರ್ಪನ್ನೆಗಂ: **ಪಂಪಭಾ**, ೧. ೧೧೬ ವ)

ಬೆರ್ಚು – [ಕ್ರಿ] ಹೆದರು, ಬೆಚ್ಚು (ವಿರಾಟಸೂನು ರಥದಿಂದಿೞಿದು ಓಡಿದೊಡೆ ಎಯ್ದೆ ಪೂಣ್ದು ಬೆರ್ಚಿ ಓಡೆ: **ಪಂಪಭಾ**, ೮. ೧೦೦)

ಬೆಲಗಸೆ – [ನಾ] ಬೊಗಸೆ (ಡೊಕ್ಕನೆ ಸುರಿಗೆಯೊಳ್ ಉರಮಂ ಬಿಕ್ಕನೆ ಬಿರಿಯಿಱಿದು ಬರಿಯಗಲನೊತ್ತಿ ಮನಂ ಕೊಕ್ಕರಿಸದೆ ಬೆಲಗಸೆಯಿಂ ಅಳುರ್ಕೆಯೆ ಮೊಗೆಮೊಗೆದು ನೆತ್ತರಂ: **ಪಂಪಭಾ**, ೧೨. ೧೫೩)

ಬೆಲೆ – [ನಾ] ಮೌಲ್ಯ, ಕ್ರಯ (ನಾಕದ ಫಣಿಲೋಕದಂದದ ಪೊಟಲ್ಗಳನೀ ಪೊಟಲೊಂದು ರಮ್ಯಹರ್ಮ್ಯದ ಬೆಲೆಗಂ ಬರಲ್ ನೆಱೆಯವು: ಆದಿಪು, ೬. ೮೯) ಎಲ್. ಬಸವರಾಜು ಅವರ ಆವೃತ್ತಿಯ ಪಾಠ]

ಬೆಲೆಯಿಡು – [ಕ್ರಿ] ಬೆಲೆಗಟ್ಟು (ಬೆಲೆಯಿಡಲಱಿವೊಡೆ ಮಂಡಲಿ ಬೆಲೆಯಿಡುಗೆಮ ನೋಟಿಪ್ಪೊಡಿವರ ತೇಜದ ಮೇಲುಜ್ವಲತೇಜ ನಿನ್ನ ತೇಜಂ ನೆಲಸಿದುದೆನೆ ಪೇಟವರ್ಕೆ ಬೆಲೆಗಳುಮೊಳವೇ: **ಆದಿಪು**, ೧೩. ೩೦)

ಬೆಲೆಯಿಡುಗೆಮ – ಬೆಲೆಗಟ್ಟಲಿ (ಬೆಲೆಯಿಡಲಱಿವೊಡೆ ಮಂಡಲಿ ಬೆಲೆಯಿಡುಗೆಮ ನೋಟಿಪ್ಪೊಡಿವರ ತೇಜದ ಮೇಲುಜ್ವಲತೇಜ ನಿನ್ನ ತೇಜಂ ನೆಲಸಿದುದೆನೆ ಪೇಟವರ್ಕೆ ಬೆಲೆಗಳುಮೊಳವೇ: **ಆದಿಪು**, ೧೩. ೩೦)

ಬೆವಸಾಯಂಗೆಯ್ – [ಕ್ರಿ] ಪ್ರಯತ್ನ ಮಾಡು (ಬೆವಸಾಯಂಗೆಯಲ್ ಇನ್ನುಂಮುಂಟು ಎಡೆ ಕೃಪಾಶ್ವತ್ಥಾಮರುಳ್ಳಂತೆ ಪಾಂಡವರಂ ಗೆಲ್ವುದಸಾಧ್ಯಮಾಯ್ತೇ: **ಪಂಪಭಾ**, ೧೩. ೫೦)

ಬೆಸ – [ನಾ] ಕೆಲಸ, ಕರ್ತವ್ಯ (ಬೆಸಸೆಮ್ಮನೀಗಳಿಂತೀ ಬೆಸದೊಳ್ ಕಡೆಗಣಿಸಿ ಬೞಿಯುಮಾವೆಡೆಯೊಳ್ ನೀಂ ಬೆಸಸುವೆಯೊ ನಿನ್ನ ಕಣ್ಣೊಳ್ ಪಸರಿಸೆ ಕಡುಗೆಂಪು ನೋಡಿಯುಂ ಸೈರಿಪೆವೇ: **ಆದಿಪು**, ೧೨. ೯೪); [ನಾ] ಕಾರ್ಯ (ಯಮರಾಜನಂ ಅದ್ಭುತತೇಜನಂ ಸರೋಜಾನನೆ ಜಾನದಿಂ ಬರಿಸೆ ಬಂದು ಯಮಂ ಬೆಸನಾವುದು ಆವುದು ಆತ್ಮಾನುಗತಾರ್ಥಂ ಎಂದೊಡೆ: **ಪಂಪಭಾ**, ೧. ೧೧೯); [ನಾ] ಆದೇಶ (ಧೃತರಾಷ್ಟ್ರನ ಬೆಸದೊಳ್ ವಾರಣಾವತಕ್ಕೆ ಪೋಗಿ ತದರ್ಧದಗ್ಧ ಕಳೇವರಂಗಳಂ ಸಂಸ್ಕರಿಸಿ ಜಳದಾನಾದಿ ಕ್ರಿಯೆಗಳಂ ಮಾಡಿ: **ಪಂಪಭಾ**, ೩. ೮ ವ)

ಬೆಸಕೆಯ್ – [ಕ್ರಿ] ಹೇಳಿದ ಕೆಲಸ ಮಾಡು (ಪುಣ್ಯಕ್ಷಯದೊಳ್ ತನ್ನ ವಿದ್ಯೆಗಳುಂ ತನಗೆ ಬೆಸಕಯ್ಯದಿರೆ: **ಆದಿಪು**, ೨. ೧೪ ವ); [ಕ್ರಿ] ಸಾಧಿತವಾಗು (ಅವರ್ಗೆ ಪ್ರಜ್ಞಪ್ತಿವಿದ್ಯೆ ಮೊದಲಾಗಿ ಕುಲಜಾತಿಸಾಧಿತವಿದ್ಯೆಗಳ್ ಪಲವುಂ ಬೆಸಕೆಯ್ವುವು: **ಆದಿಪು**, ೯. ೧೨೧ ವ); [ಕ್ರಿ] ಸೇವೆ ಮಾಡು (ಬೆಸಕೆಯ್ದುತ್ತು ಸಮುದ್ರಮುದ್ರಿತ ಧರಾಚಕ್ರಂ .. .. ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳಾರಾ ಪಾಂಡುರಾಜಂಬರಂ: **ಪಂಪಭಾ**, ೧. ೧೧೦); [ಕ್ರಿ] ಆಜ್ಞಾಪಾಲನೆ ಮಾಡು (ಖಾಂಡವವನದಹನಪ್ರಪಂಚದಿಂ ಬೞಿಯಂ ಅರಾತಿವನದಹನತೀವ್ರಪ್ರತಾಪಗಹನಕ್ಕೆ ಮುನ್ನಂ ಅಳ್ಕಿ ಪರಮಂಡಳಿಕರ್ ಇತ್ತುಂ ತೆತ್ತುಂ ಬೆಸಕೆಯ್ಯೆ: **ಪಂಪಭಾ**, ೬. ೧. ವ)

ಬೆಸಕೆಯಿಸಿಕೊಳ್ – [ಕ್ರಿ] ಸೇವೆ ಮಾಡಿಸಿಕೊ (ಅವನಾಳ್ವ ತೆಱೆಗೊಳ್ವ ಬಿಟ್ಟಿಬೆಸಕೆಯಿಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ: **ಆದಿಪು**, ೮. ೬೩ ವ)

ಬೆಸಕೆಯ್ಯದಿರ್ಕೆ – ಹೇಳಿದ ಕೆಲಸ ಮಾಡದಿರಲಿ (ಪಾರ್ವನೆಂದೆನ್ನೊಳ್ ಮುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಮವಸಾನಕಾಲದೊಳ್ ಬೆಸಕೆಯ್ಯದಿರ್ಕೆ: **ಪಂಪಭಾ**, ೧. ೧೦೫ ವ)

ಬೆಸಕೆಯ್ಸು – [ಕ್ರಿ] ಅಧೀನಕ್ಕೆ ಬರುವಂತೆ ಮಾಡು (ಬಿರುದರಂ ಒತ್ತಿ ಬೀರರಂ ಅಡಂಗಿಸಿ ಕೊಂಕಿಗರಂ ಕಟಲ್ಚಿ ಚೆನ್ನರಂ

ಅಡಿಗೊತ್ತಿ ಮಂಡಳಿಕರಂ ಬೆಸಕಯ್ಸಿ .. .. ಮಾಡಿರೆ ರಾಜಸೂಯಮಮಂ: **ಪಂಪಭಾ,** ೭. ೧೮)

ಬೆಸಗೊಳ್ – [ಕ್ರಿ] ವಿಚಾರಿಸು (ಆ ಪಟದೊಳಾಕೆ ಬರೆಯದೆ ಬಂಚಿಸಿದ ಅವಿನಾಣಂಗಳನಱಿಯೆ ಬೆಸಗೊಂಡು ಪಟಮಮ ಕೈಗೊಂಡು: **ಆದಿಪು,** ೩. ೪೫ ವ)

ಬೆಸದಲ್ – ಬೆಸದಲ್ಲಿ, ಅಪ್ಪಣೆಯಲ್ಲಿ (ನಿಮ್ಮಯ್ಯಂ ಧೃತರಾಷ್ಟ್ರನ ಬೆಸದಲ್ ಮುನ್ನಮೆ ಮಾಡಮಮಂ ಸಮೆದಿಟ್ಟೆಂ: **ಪಂಪಭಾ,** ೩. ೨ ವ)

ಬೆಸನ – [ನಾ] ಕಾರ್ಯಸಾಧನೆ (ಅಱಿದೆನಿದಂ ಶಕ್ತಿಯೊಳ್ ಮುಕ್ತಿಯಂ ಸಾಧಿಸಲಕ್ಕುಂ ಮಂತ್ರಶಕ್ತಿಪ್ರಕಟನಪಟುಗಳ್ಗೆ ಏನಸಾಧ್ಯಂಗಳೋ ಪೇೞಿಮ್ ಬೆಸನಂ ಪಾರ್ದಿರ್ಪುದು: **ಆದಿಪು,** ೩. ೪೪); [ನಾ] ಆಜ್ಞೆ (ಬೆಸಸಿದೊಡದು ಮಾರ್ಕೊಳ್ಳದೆ ಬೆಸನಂ ಬಲವಂದು ಬಾಹುಬಲಿಯಂ: **ಆದಿಪು,** ೧೪. ೧೧೭);

ಬೆಸನಂಗಳ್ – [ನಾ] ವ್ಯಸನಗಳು (ಬೆಸನೆಡೆಗಳ್ಗೆ ತೊಟ್ಟು ಬೆಸನಂಗಳ್ ಅವುಂಕಿದೊಡಾಗದು ಎಂದು ಬಗ್ಗಿಸುವೆಡೆಗೆ ಆಳ್ದಂ: **ಪಂಪಭಾ,** ೧೩. ೫೮ ವ) [ಸಪ್ತವ್ಯಸನಗಳು: ಸ್ತ್ರೀ, ದ್ಯೂತ, ಬೇಟೆ, ಮದ್ಯಪಾನ, ವಾಕ್ಪಾರುಷ್ಯ, ದಂಡಪಾರುಷ್ಯ, ಅರ್ಥದೂಷಣ ಎಂಬ ಏಳು ವ್ಯಸನಗಳು; ಈ ಪಟ್ಟಿ ಬೇರೆಬೇರೆಡೆ ಬೇರೆಯಾಗುತ್ತವೆ]

ಬೆಸನಂ ಪಾರ್ – [ಕ್ರಿ] ಕಾರ್ಯಸಿದ್ಧಿಗಾಗಿ ಎದುರು ನೋಡು (ಮಂತ್ರಶಕ್ತಿಪ್ರಕಟನಪಟುಗಳ್ಗೇನಸಾಧ್ಯಂಗಳೋ ಪೇೞಿಮ್ ಬೆಸನಂ ಪಾರ್ದಿರ್ಪುದು ಆಂ ನಿನ್ನಿನಿಯನಂ ಅಱಸಲ್ ಸಾರ್ವೆಂ: **ಆದಿಪು,** ೩. ೪೪)

ಬೆಸನೇಂ – ಏನು ಕಾರ್ಯ [ಆಗಬೇಕಾಗಿದೆ] (ಬೆಸನೇಂ ಏಗೆಯ್ವುದೊ ನಿನಗೊಸೆದೇನಂ ಕುಡುವುದು ಎಂದೊಡೆ ಅವಳ್ ಮಕ್ಕಳ್ ಒಸಗೆಯನೆನಗೀವುದು ನಿನ್ನೆಸಕದ ಮಸಕಮನೆ ಪೋಲ್ವ ಮಗನಂ ಮಘವಾ: **ಪಂಪಭಾ,** ೧. ೧೩೯)

ಬೆಸವೇೞಿಮ್ – [ಕ್ರಿ] [ಬೆಸನಂ ಪೇೞಿಮ್] ಕಾರ್ಯ [ಏನೆಂದು] ಹೇಳು (ಬೆಸಸೆನೆಯುಂ ನುಡಿಯಲ್ ಶಂಕಿಸಿದಪೆಂ ಆಂ ಎಂದೊಡೆ ಏಕೆ ಶಂಕಿಸಿದಪ್ಪೆ ನೀಂ ಬೆಸವೇೞಿಮ್ ಎನೆ ಜಯವಧು ಕೂರ್ತೊಸೆದಿರ್ಕುಂ ಮಾವ ನಿಮ್ಮ ದಯೆಯಿಂದೆಮ್ಮಂ: **ಪಂಪಭಾ,** ೧೨. ೯೦)

ಬೆಸಸು – [ಕ್ರಿ] ಆಜ್ಞೆಮಾಡು (ಬೆಸಸಿದೊಡದು ಮಾರ್ಕೊಳ್ಳದೆ ಬೆಸನಂ ಬಲವಂದು ಬಾಹುಬಲಿಯಂ: **ಆದಿಪು,** ೧೪. ೧೧೭); [ಕ್ರಿ] ಹೇಳು, ತಿಳಿಸು (ಅಂತು ಕೊಟ್ಟ ಅಯ್ದು ಮಂತ್ರಂಗಳಂ ಆಹ್ವಾನಂಗೆಯ್ದು ನಿನ್ನ ಬಗೆಗೆ ಬಂದ ಪೋಲ್ವೆಯ ಮಕ್ಕಳಂ ಪಡೆವೆ ಎಂದು ಬೆಸಸಿದೊಡೆ: **ಪಂಪಭಾ,** ೧. ೮೯ ವ)

ಬೆಸೆ – [ಕ್ರಿ] ಗರ್ವಿಸು (ಪೊಸಸುಸಿಲ ಮಸಕದ ಬಸದೊಳೆ ಬಸದಾಗಿಯುಮಸಿಯಳೆನಗಸವಸದೊಳೆ ಬೆಸೆದು ಪೋಗಿ: **ಆದಿಪು,** ೪. ೧೨ ವ); [ನಾ] ಗರ್ವ (ಕುಲಧನಂ ಸಮದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ಬ ಪಗೆವಂಗೆ ಕೊಟ್ಟು ಬೆಸೆವವಂ ಅರಸದೆಂತೊ ಪಗರಣದರಸಂ: **ಆದಿಪು,** ೧೨. ೯೮)

ಬೆಸೆಕೋಲ್ – [ನಾ] ಹತ್ತಿ ಹಿಂಜುವ ಬಿಲ್ಲು (ಕುಡುವೊಡೆ ನಿಸ್ತ್ರಪಂ ಕುಡುವುದು ಏಱಿಸಿದಂ ಬೆಸೆಕೋಲನೆಂದು ಪೇೞಿಮ್ ಕುಡುವುದೆ ಕನ್ನೆಯಂ ದ್ವಿಜಕುಲಂಗೆ: **ಪಂಪಭಾ,** ೩. ೬೬)

ಬೆಳ್ – [ನಾ] ದಡ್ಡ (ಲಲಿತಪದಂ ಪ್ರಸನ್ನಕವಿತಾಗುಣಮಿಲ್ಲದೆ ಪೊಣ್ದು ಪೇೞ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೈಗಳ ಕೇಡು: **ಪಂಪಭಾ,** ೧. ೧೨)

ಬೆಳಂತಿಗೆ – [ನಾ] ಹೊಳೆಯುವ, ಶುಭ್ರವಾದ (ಕಾಂತಿಯೊಳೆ ಪುದಿದು ಬೆಳಪ ಬೆಳಂತಿಗೆ ಬೆಳ್ದಿಂಗಳಲರ್ದ ಪೊಸಜಾದಿ: **ಆದಿಪು,** ೧೧. ೯)

ಬೆಳಗು – [ಕ್ರಿ] ಪ್ರಕಟಪಡಿಸು (ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ: **ಪಂಪಭಾ,** ೧೪. ೬೦); [ನಾ] ಬೆಳಕು (ಕೊಟ್ಟ ಮಾಣಿಕಂಗಳ ಬೆಳಗಿಟ್ಟಳಂ ತನಗೊಡಂಬಡೆ: **ಪಂಪಭಾ,** ೪. ೪೦); [ನಾ] ಕಾಂತಿ (ನೀರದಪಥದೊಳ್ ಮುತ್ತಿನ ಹಾರದ ಬೆಳಗೆಸೆಯೆ ನಾರದಂ ಬಂದಿರ್ದಂ: **ಪಂಪಭಾ,** ೧೨. ೧೪೦)

ಬೆಳಪು – [ನಾ] ಬೆಳಗು, ಕಾಂತಿಯುಕ್ತವಾಗು (ಅಂಬರತಳಮೊಡನೆ ಬೆಳಗೆ ಬೆಳಪುದನ್ ಶೌರ್ಯಾಂಬುನಿಧಿ ತೊಟ್ಟಿಸಲೊಡಂ ಇರದೆ ಅಂಬರದಿಂದುಳ್ಕುವುಳ್ಕಮಂ ಪೋಲ್ತು ಶರಂ: **ಆದಿಪು,** ೧೨. ೯೦)

ಬೆಳರ್ – [ಕ್ರಿ] ಶುಭ್ರವಾಗಿರು (ತನು ಪಂಜಿವೊಲ್ ಬೆಳರ್ತಿರ್ಪಿನೆಗಂ ಹಿಮಮೆಕ್ಕಿದರಲೆವೋಲ್ ಪುದಿದಿರೆಯುಂ ತನು: **ಆದಿಪು,** ೬. ೩೩); [ಕ್ರಿ] ಬೆಳ್ಳಗಾಗು (ತೆಕ್ಕನೆ ತೀವಿದ ಮೆಯ್ಯೊಳಲರ್ದ ಸಂಪಗೆಯರಲಂತೆ ಬೆಳರ್ತ ಬಣ್ಣಂ ಗುಣಾರ್ಣವಂಗೆ ಮಾಡಿದ ಬಣ್ಣದಂತೆ ಸೊಗಯಿಸಿ ಬಳೆಯೆ: **ಪಂಪಭಾ,** ೧. ೧೪೩ ವ); [ಕ್ರಿ] ಬಿಳಿಚಿಕೊ (ಕಟಿಯಲರಾದ ಸಂಪಗೆಯ ಬಣ್ಣದವೋಲೆ ಬೆಳರ್ತ ಬಣ್ಣದೊಳ್ ಗಟಿಯಿಸೆ ಕೆಂಪು ಕಣ್ಗಳ ಮೊದಲ್ಗಳೊಳ್: **ಪಂಪಭಾ,** ೪. ೬೧)

ಬೆಳರ್ಗೆಂಪು – [ನಾ] ಹೊಳೆಯುವ ಕೆಂಪು[ಬಣ್ಣ] (ಒದವಿ ತಗುಳ್ದ ಗಗ್ಗರಿಕೆ ಸೂಸುವ ಕಣ್ಬನಿ ಕಣ್ಗಳೊಳ್ ಕಲಂಕಿದ ಬೆಳರ್ಗೆಂಪು ಕಣ್ಗೆ ವರೆ: **ಆದಿಪು,** ೧೨. ೨೫)

ಬೆಳರ್ವಾಯ್ – [ನಾ] ಬಿಳಿಚಿಕೊಂಡ ತುಟಿ (ಮದನ ದವಾನಲಾರ್ಚಿ ತನುವಂ ಸುಡೆ ತಳ್ತ ಎಮೆಯೊಳ್ ಪಳಂಚಿ ಬೀಗಿದ ಬೆಳರ್ವಾಯೊಳ್ ಉಚ್ಚಳಿಸಿ .. .. ಎಯ್ದಿದುವು ನೇತ್ರಜಲಬಿಂದುಗಳ್: **ಪಂಪಭಾ,** ೫. ೯) [ನಾ] ಬಿಳಿಚಿಕೊಂಡ ಬಾಯಿ (ಬೆಳರ್ವಾಯ್ಗಳೊಳ್ ಇಂಪಂ ತಾಳ್ದಿ ಪೊಱಮಡುವ ತಣ್ಗಂಪುಗಳುಂ ಅಮೃತಬಿಂದುಗಳಂತೆ ನೆಗಟ್ಟಿ ಬೆಮರ ಬಿಂದುಗಳುಂ ಅಳವಲ್ಲದೊಪ್ಪೆ: **ಪಂಪಭಾ,** ೪. ೮೮ ವ)

ಬೆಳಸು – [ನಾ] ಬೆಳೆಯುವಿಕೆ (ಅಂತವರೀರ್ವರ ಬೇಟಮೆಂಬ ಲತೆಯ ಬೆಳಸಿಂಗೆ ಪೊಯ್ನೀರೆಱೆವಂತೆ ಕೆಯ್ನೀರೆಱೆದು ಬಿಯಮಂ ಮೆಱೆದು: **ಪಂಪಭಾ,** ೫. ೨೫ ವ)

ಬೆಳಱಿ – [ಕ್ರಿ] ಬೆದರು (ಮಗನೆ ಮನಂ ಬೆಳಱದೆ ನೀನುಂ ಇತ್ತೆ ಆನುಂ ಪೆತ್ತೆಂ ನಂಬಿದ ನಿನ್ನನುಜರ್ ನಿನ್ನಂ ಬೆಸಕೆಯೆ ನೀನೆ ನೆಲನನಾಳ್ವುದು ಕಂದಾ: **ಪಂಪಭಾ,** ೯. ೮೨)

ಬೆಳ್ಕನೆವೋಗು – [ಕ್ರಿ] ದಿಗ್ಭ್ರಾಂತನಾಗು (ನಾಕಲೋಕಚ್ಯುತಿಯಂ ಆಗಳಱಿದು ಮನದೊಳಳ್ಕಿ ಬೆಳ್ಕನೆವೋಗಿ: **ಆದಿಪು,** ೩. ೩ ವ)

ಬೆಳ್ಕುಱು – [ಕ್ರಿ] [ಬೆಳ್ಕು+ಉಱು] ಭಯ ಹೊಂದು, ಹೆದರು (ಬೆಳ್ಕುಱ್ ರಿಪುಸೇನೆ ತೇರನೊಸೆದು ಆನೆಸಗುತ್ತಿರೆ ಕರ್ಣನಂ ಗೆಲಲ್ ನೆಱೆವರೆ ಫಲ್ಗುಣನುಂ ಅಚ್ಯುತನುಂ: **ಪಂಪಭಾ,** ೧೨. ೧೦೦)

ಬೆಳ್ಗಡಲ್ – [ನಾ] ಬಿಳಿಯ ಸಮುದ್ರ (ಬಳ್ವಳ ನೀಳ್ದ ಕಣ್ಮಲರ ತಳತಮೆಯಿಂ ಕರೆಗಣ್ಮೆ ಬೆಳ್ಗಡಲ್ಗಳ್ ಪರಿಯಲ್ಕಂ ಆಟಿಸಿದೊಡೆ: **ಪಂಪಭಾ,** ೭. ೬೮)

ಬೆಳ್ಗೊಡೆ – [ನಾ] ಅಧಿಕಾರ ಸಂಕೇತವಾದ ಬಿಳಿಯ ಕೊಡೆ (ಪೇಟ್ ಮಗನೆ ಬೇಳ್ಗೊಡೆಯೆಲ್ಲಿದುದೆತ್ತ ಪೋಯ್ತು ಸುತ್ತಿಱಿದ ಚತುರ್ಬಲಂ ನಿನಗಮೀಯಿರವಾದುದೆ ವೈರಿಭೂಪರಿಂ: **ಪಂಪಭಾ,** ೧೩. ೬೪)

ಬೆಳ್ತನ – [ನಾ] ಬೆಪ್ಪುತನ (ಸತ್ತರನೆ ಸಾಯದರಂತೆಣಿಸುತ್ತುಮಿರ್ಪ ಬೆಳ್ತನದನಿತಲ್ಲದೆ ಆ ಮರನಂ ಆ ದವದಗ್ನಿ ಬರ್ದುಂಕಲೀಗುಮೇ: **ಆದಿಪು,** ೯. ೫೯)

ಬೆಳ್ನೊರೆ – [ನಾ] ಬಿಳಿಯ ನೊರೆ (ಚಮರೀರುಹಂಗಳಂತಿರೆ ಕಳಹಂಸೆ ಬೆಳ್ಗೊಡೆಗಳಂತಿರೆ ಬೆಳ್ನೊರೆ ಗೊಟ್ಟಿಗಾಣರಂತಿರೆ ಮಱೆದುಂಬಿ: **ಪಂಪಭಾ,** ೫. ೫೮)

ಬೆಳ್ಪನಟಿ – [ಕ್ರಿ] [ಕಣ್ಣಿನ] ಬಿಳುಪು ಬಣ್ಣವನ್ನು ಹೋಗಲಾಡಿಸು (ಮಟಮಟಿಪ ರೂಪು ಕಣ್ಗಳೊಳ್ ಬೆಳ್ಪನಟಿಯೆ ಸೋಂಕುವ ಕೆಂಪುಗಳುಮಂ ತಮ್ಮ ಕೆಂಪಂ ಕಣ್ಗಳ್ಗೆ ಕೊಟ್ಟು ಕಣ್ಗಳ ಬೆಳ್ಪಂ ತಮಗೆ ಮಾಱುಗೊಂಡಂತೆ: **ಪಂಪಭಾ,** ೪. ೮೮ ವ)

ಬೆಳ್ಪಸದನ – [ನಾ] ಬಿಳಿಯ ಉಡುಗೆ (ಅಲರ್ದ ಪೊಸಜಾದಿ ದಿಶಾಕಾಂತೆಯ ಬೆಳ್ಪಸದನದ ದಗುಂತಿಯನೇಂ ನಾಡೆಯುಂ ಮಾಡಿದುದೋ: **ಅದಿಪು,** ೧೧. ೯)

ಬೆಳ್ಪು – [ನಾ] ಬಿಳಿಪು (ಹಿಮಧವಳ ಆತಪತ್ರಮನೆ ಪೋಲೆ ಮುಖೇಂದುವ ಬೆಳ್ಪು ಪೂರ್ಣಕುಂಭಮನೆ ನಿರಂತರಂ ಗೆಲೆ: **ಪಂಪಭಾ,** ೧. ೧೨೦); [ನಾ] ಕಾಂತಿ (ನೀಳ್ಪಂ ಬೆಳ್ಪುಮಂ ತಾಳ್ದಿ ಪರವನಿತೆಯರ ದೆಸೆಗೆ ಕಿಸುಗಣ್ಚಿದಂತೆ ಕಿಸುಸೆರೆವರಿದು ಸೊಗಯಿಸುವ ಶೌಚಾಂಜನೇಯನ ಕಣ್ಗಳ್: **ಪಂಪಭಾ,** ೨. ೩೯ ವ)

ಬೆಳ್ಪೇಱು – [ಕ್ರಿ] ಬಿಳಿಚಿಕೊಳ್ಳು (ಬಸಿಱ ತೆಳ್ಪಟಿದಿತ್ತೆ ಮೊಗಂ ಬೆಳ್ಪೇಱಿದುದೇ ಕುಚಚೂಚುಕಂ ಮಸುಳ್ದುವೇ ತ್ರಿವಳೀರುಚಿಯುಂ ಮೇಣ್ ಕುಂದಿತೇ: **ಆದಿಪು,** ೭. ೩೧)

ಬೆಳ್ಪೊಱಸು – [ನಾ] ಬಿಳಿಯ ಪಾರಿವಾಳ**,** [ಎಲ್. ಬಸವರಾಜು ನೀಡುವ ಅರ್ಥ] ಗೂಬೆ (ದ್ರುಪದಸುತೆಯಂ ಎಟಿದುಯ್ಯೆಯೆಯುಂ ಇಂತಿನಿತೊಂದಾದುದು ದುಶ್ಶಾಸನನಿಂದಂ ಶಕುನಿಯೆಂಬ ಬೆಳ್ಪೊಱಸಿಂದಂ: **ಪಂಪಭಾ,** ೭. ೨೦)

ಬೆಳ್ಮಸೆಯಂಬು – [ನಾ] ಬೆಳ್ಳಗೆ ಸಾಣೆ ಹಿಡಿದ ಬಾಣ (ಬೆಳ್ಮಸೆಯಂಬಿನ ಸರಿ ಮೊನೆಯಂಬಿನ ಸೋನೆ ಪಾರೆಯಂಬಿನ ತಂದಲ್ ಘನಮಾದುದು: **ಪಂಪಭಾ,** ೧೨. ೮೦)

ಬೆಳ್ಮಿಗ – [ನಾ] ಬೆಪ್ಪು ಪ್ರಾಣಿ (ಎಮ್ಮ ಪಾಸಿದ ಚತ್ರಪಟಮೆಂಬ ಬಲೆಯೊಳ್ ನಿಮ್ಮಂತಪ್ಪ ಬೆಳ್ಮಿಗಂಗಳ್ ಆಗಳೆ ತೊಡರ್ಗುಂ: **ಆದಿಪು,** ೩. ೮೮ ವ); [ನಾ] ಅಂಜುವ ಮೃಗ (ಪದಮುಮಂ ಇಂಬುಮಂ ಅಣಂ ಅಱಿಯದುದು ಏವುದು ಬದ್ದೆ ಬೆಳ್ಮಿಗಂ ಪಜ್ಜೆ ದಲ್ ಎಂಬುದಂ ಎರಡುಮನಱಿವಾತನೆ ಚದುರಂ ಚದುರಂಗೆ ಬದ್ದೆವಜ್ಜೆಗಳೊಳವೇ: **ಪಂಪಭಾ,** ೫. ೪೫)

ಬೆಳ್ಮುಗಿಲ್ – [ನಾ] ಬಿಳಿಯ ಮೋಡ (ಪೊಸಮುತ್ತಿನ ತುಡುಗೆ ಪೊದಳ್ದೆಸೆಯೆ ದುಕೂಲಾಂಬರಂ ನಿಜಾಂಗದೊಳಂ ಸಂದೆಸೆದಿರೆ ಬೆಳ್ಮುಗಿಲಿಂದಂ ಮುಸುಕಿದ ನೀಲಾದ್ರಿ ಬರ್ಪ ತೆಱದೊಳ್ ಬಂದಂ: **ಪಂಪಭಾ,** ೨. ೬೮)

ಬೆಳ್ಸರಿ – [ನಾ] ಬೆಳ್ಳಗಿನ ಇಬ್ಬನಿ (ಎಳವಿಸಿಲೊಳ್ ಬೆಳ್ಸರಿ ತೋರವನಿಯ ಪುದುವಿನೊಳ್ ಅರಲ್ದ ತಿಳಿಗೊಳನೆ ನಭದೊಳಿಱಿದಂತಿರ್ಕುಂ: **ಆದಿಪು,** ೧೧. ೮)

ಬೆಳ್ಳ – [ನಾ] ದಡ್ಡ (ಎನಗೆ ಎಕ್ಕಬಾಗೆ ನೋಡೀಗಳ್ ಈ ಇಳಾಲತಾಂಗಿ ಪುದುವಲ್ಲಳ್ ಅದೆಂತೆನೆ ಮುನ್ನ ನೂಲ ತೋಡಾಗದೆ ಕೆಟ್ಟು ಪೋದವರಂ ಇಂ ಮಗುಟ್ಟುಂ ನಿಱಿಪಂತು ಬೆಳ್ಳನೇ: **ಪಂಪಭಾ,** ೯. ೪೬)

ಬೆಳ್ಳಂಗೆಡೆ – [ಕ್ರಿ] ಪ್ರವಾಹದಂತೆ ಹರಿ (ಪೊಸತಂ ಸ್ತ್ರೀರಾಜ್ಯಮಂ ಮೇಣ್ಪಡೆದನೊ ಬಿದಿ ಲಾವಣ್ಯಸಿಂಧುಪ್ರವಾಹಂ ಪೊಸತೀಗಳ್ಬಂದು ಬೆಳ್ಳಂಗೆಡೆದುದೊ: **ಆದಿಪು,** ೧. ೮೨)

ಬೆಳ್ಳಕ್ಕರಿಗ – [ನಾ] ಬೆಪ್ಪನಾದ ಪಂಡಿತ, ಕೂಚುಭಟ್ಟ (ಶುಷ್ಕವೈಯಾಕರಣಂಗಂ ಶುಷ್ಕ ತಾರ್ಕಿಕಂಗಂ ಬೆಳ್ಳಕ್ಕರಿಗಂಗಂ ವಿಷಯಮೆ ಕಾವ್ಯಂ ಅತಿಚತುರಕವಿಕದಂಬಕವಿಷಯಂ: **ಆದಿಪು,** ೧. ೨೪)

ಬೆಳ್ಳವಾಸ – [ನಾ] [ಜೈನ] ಚಳಿಗಾಲದಲ್ಲಿ ಪ್ರವಾಹದಲ್ಲಿ ನಿಂತು ಮಾಡುವ ತಪಸ್ಸು (ತನು ತನಗಲ್ತು ಎಂದೇಕಾಂತ ನಿವಾಸದೊಳಿಂತು ಬೆಳ್ಳವಾಸದೊಳಿರ್ದಂ: **ಆದಿಪು,** ೬. ೩೩)

ಬೆಳ್ಳಾಗು – [ಕ್ರಿ] ಅವಿವೇಕಿಯಾಗು (ಈ ವಿಮೋಹದೊಳದೇಕೆ ಗಡಂ ಬಗೆಯಂ ತಗುಳ್ಚಿ ಬೆಳ್ಳಾದಪನಕ್ಕಟಾ ಖಚರಂ: **ಆದಿಪು,** ೨. ೩೫)

ಬೆಳ್ಳಾಳ್ – [ನಾ] ಅಂಜುಬುರುಕ (ಅಂತು ಕೃಷ್ಣೆಯ ಕೃಷ್ಣಕಬರಿಭಾರಮಂ ಮೇಗಿಲ್ಲದೆ ಪಿಡಿದು ತೆಗೆದು ಕೃಷ್ಣೋರಗಮಂ ಪಿಡಿದ ಬೆಳ್ಳಾಳಂತೆ ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ: **ಪಂಪಭಾ,** ೭. ೫ ವ)

ಬೆಳ್ಳುಳ್ಳಿ – [ನಾ] ಬಿಳಿಯ ಉಳ್ಳಿ, ಲಶುನ (ಕನಲ್ವ ಕೆಂಡದ ಮೇಲೆ ಪಟಿಯ ಬೇವಿನೆಣ್ಣೆಯೊಳ್ ತೊಯ್ದಿಕ್ಕಿದ ಬೆಳ್ಳುಳ್ಳಿಯ ಕಂಪಿನಂತೆ: **ಪಂಪಭಾ,** ೧೩. ೭೧ ವ)

ಬೆಳ್ಳೆ – [ನಾ] ದಡ್ಡಿ, ಮೂರ್ಖಳು (ತಾಂ ಗಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪಂ ಇಲ್ಲಿ ಮಾಣ್ಬು ಆಂ ಗಡಂ ಇರ್ಪನಂತು ಬೆಳ್ಳೆನೆ: **ಪಂಪಭಾ,** ೧೦. ೪೫)

ಬೇಂಟ – [ನಾ] ಪ್ರಣಯ (ವಿಸ್ಮಯಮಪ್ಪಿನಮಾ ಸ್ವಯಂಪ್ರಭೆ ಲಲಿತಾಂಗನಳ್ಕೆರ್ದಗೆ ತೊಟ್ಟನೆ ಬೇಂಟಮೆ ಪುಟ್ಟೆ ಪುಟ್ಟಿದಳ್: **ಆದಿಪು,** ೨. ೭೩)

ಬೇಂಟೆ – [ನಾ] ಕಾಡುಪ್ರಾಣಿಗಳನ್ನು ಕೊಲ್ಲುವುದು (ಎಂದು ಬಿನ್ನಪಂಗೆಯ್ದು ಬೇಂಟೆಯಾತಂಗೆ ಮೃಗವ್ಯಾಯಾಮ ಕಾರ್ತಿಕೇಯಂ ಮೆಚ್ಚಿ ಮೆಚ್ಚುಗೊಟ್ಟು ತೊವಲನಿಕ್ಕೆಂದು ಮುಂದೆ ಪೇಟ್ಟಿಟ್ಟಿ ನಾರಾಯಣನುಂ ತಾನುಂ .. .. ಬೇಂಟೆಗೆ ಪೊಱಮಟ್ಟು: **ಪಂಪಭಾ,** ೫. ೪೭ ವ)

ಬೇಂಟೆಕಾಱ – [ನಾ] ಬೇಟೆಗಾರ (ಅಂತು ನೋಡಿದ ಪೆಂಡಿರೆಲ್ಲಂ ಕಾಮದೇವನೆಂಬ ಬೇಂಟೆಕಾಱಂಗೊಡ್ಡಿದ ಪುಲ್ಲೆಗಳಂತೆ: **ಪಂಪಭಾ,** ೪. ೩೮ ವ)

ಬೇಂಟೆಜಾಱು – [ನಾ] ಬೇಟೆಯ ಬಗೆಗಿನ ಜಾರಿಕೆಯ ಮಾತು (ಮತ್ತಂ ಬೇಂಟೆಜಾಱಿಲ್ಲದೆ ಬೇಂಟೆಯ ಮಾತಂ ಬಿನ್ನಪಂಗೆಯ್ವೆಂ: **ಪಂಪಭಾ**, ೫. ೪೦ ವ)

ಬೇಂಟೆಯ – [ನಾ] ಬೇಡ, ಬೇಟೆಕಾರ (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱೆ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ ದಳಿವದ ತೊಟ್ಟ ಅಂಗಿಗೆ ತನ್ನೊಳ್ ಅಮರೆ ಬೇಂಟೆಯನೊರ್ವಂ: **ಪಂಪಭಾ**, ೫. ೩೬)

ಬೇಂಟೆಯಾತ – [ನಾ] ಬೇಟೆಗಾರ (ಎಂದು ಬಿನ್ನಪಂಗೆಯ್ದ ಬೇಂಟೆಯಾತಂಗೆ ಮೃಗವ್ಯಾಯಾಮ ಕಾರ್ತಿಕೇಯಂ ಮೆಚ್ಚಿ ಮೆಚ್ಚುಗೊಟ್ಟು ತೊವಲನಿಕ್ಕೆಂದು ಮುಂದೆ ಪೇೞ್ದಟ್ಟಿ: **ಪಂಪಭಾ**, ೫. ೪೭ ವ)

ಬೇಂಟೆವಸದನ – [ನಾ] [ಬೇಂಟೆ+ಪಸದನ] ಬೇಟೆಯ ಉಡುಪು (ಬೇಂಟೆವಸದನಂಗೊಂಡು ಕಂಡಿಯ ಬಾಗಿಲೊಳ್ ಉದಾತ್ತನಾರಾಯಣಂ ನಾರಾಯಣನುಮಿರ್ದು: **ಪಂಪಭಾ**, ೫. ೪೭ ವ)

ಬೇಂಟೆವಱೆ – [ನಾ] [ಬೇಂಟೆ+ಪಱೆ] ಬೇಟೆಯ ಡೋಲು (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱೆ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ ದಳಿವದ ತೊಟ್ಟ ಅಂಗಿಗೆ ತನ್ನೊಳ್ ಅಮರೆ ಬೇಂಟೆಯನೊರ್ವಂ: **ಪಂಪಭಾ**, ೫. ೩೬)

ಬೇಂಟೆವೋಗು – [ಕ್ರಿ] ಬೇಟೆಯಾಡಲು ಹೋಗು (ನಾಮಿದನಱಿಯದಂತು ಬೇಂಟೆಯ ನೆವದೊಳ್ ಬಟ್ಟೆಗಳಂ ಸೋದಿಸುವಂ ಎಂದು ನಿಚ್ಚಂ ಬೇಂಟೆವೋಗೆ: **ಪಂಪಭಾ**, ೩. ೪ ವ)

ಬೇಗ – [ನಾ] ಸಮಯ (ಆ ಮದಂ ಅವರ್ಗಂತೇನೇತಱಿೊಳಾಯ್ತು ಅದನಿನಿಸಾನುಂ ಬೇಗದೊಳೆ ಕಳೆದು ತೋಱಿನೆ ರಣದೊಳ್: **ಆದಿಪು**, ೧೪. ೨೫); [ನಾ] ಹೊತ್ತು, ಸಂದರ್ಭ (ಊರ್ಧ್ವ ಬಗ್ಗಿಸುವ ಬೇಗದೊಳಾ ಕಟಕಂಗಳೆಯ್ದೆ ಕೆಯ್ಕೊಂಡುವು ಮಂದರಕ್ಷುಭಿತ ದುಗ್ಧಪಯೋಧಿ ಗಂಭೀರನಾದಮಂ; **ಪಂಪಭಾ**, ೧೦. ೪೯)

ಬೇಗಂ – [ಅ] ತ್ವರೆ, ವೇಗ (ಇಂತು ಭರತರಾಜನ ರಥದ ಮನೋರಥದ ಬೇಗಮೊದವಿದುದಾಗಳ್: **ಆದಿಪು**, ೧೨. ೮೦)

ಬೇಗೆ – [ನಾ] ಉರಿ, ಜ್ವಾಲೆ (ಘೋರಕಾಂತಾರಮನೊಂದು ಬೇಗೆ ಪರಿವಂತು ರಥಂ ಪರಿದತ್ತು: **ಪಂಪಭಾ**, ೮. ೯೮)

ಬೇಟ – [ನಾ] [√ಬೇಡು] ಅಭಿಲಾಷೆ (ಮೇಲ್ವಾಯ್ದುಂ ಏವೈಸಿಯುಂ ಪಿರಿದುಂ ಲುಂದುವ ಬೇಟದೊಂದು ಸುಸಿಲಂ ನೋಯಿಕ್ಕುಂ: **ಆದಿಪು**, ೧೨. ೨೩); [ನಾ] ಪ್ರಣಯ (ಅಂತಾ ಬಾಲೆ ಕಾಯ್ದ ಪುಡಿಯೊಳಗೆ ಬಿಸುಟ್ಟ ಎಳವಾಳೆಯಂತೆ ಸುರತ ಮಕರಧ್ವಜನೊಳಾದ ಬೇಟದೊಳ್ ಮಮ್ಮಲ ಮಱುಗುತಿರ್ದಳ್: **ಪಂಪಭಾ**, ೫. ೧೦ ವ)

ಬೇಟಕಾಱ – [ನಾ] ಪ್ರಣಯಿ (ಇದಂ ಪುಗಲಿಂ ಗಡಿಂ ಎಂದು ಬೇಟಕಾಱರಂ ಇರದೆ ಊಱೆ ಸಾಱೆ ಜಡಿವಂತೆ ಎಸೆಗುಂ ಸಹಕಾರಕೋಮಳ ಅಂಕುರಪರಿತುಷ್ಟ ಪರಪುಷ್ಟಗಳ ಧ್ವನಿ ನಂದನಂಗಳೊಳ್: **ಪಂಪಭಾ**, ೨. ೧೩)

ಬೇಟಕಾರ್ತಿ – [ನಾ] ವೇಶ್ಯೆ (ಮತ್ತೊರ್ವ ಬೇಟಕಾರ್ತಿ ತಾಯ ಕಣ್ಣ ಬಂಚಿಸಿ ತನ್ನ ಮೋಪಿನಾಕೆಯ ಮನೆಗೆ ಪೋಪಬೇಟದಾಣ್ಮನಂ ಪಿಡಿದು: **ಪಂಪಭಾ**, ೪. ೯೮ ವ)

ಬೇಟದರಸಿ – [ನಾ] ಪ್ರೀತಿಯ ರಾಣಿ (ದುಶ್ಶಾಸನಾದಿಗಳಪ್ಪ ನೂರ್ವರ್ ತಮ್ಮಂದಿರುಂ ಭಾನುಮತಿಯುಂ ಚಂದ್ರಮತಿಯುಂ ಎಂಬ ಬೇಟದರಸಿಯರುಂ: **ಪಂಪಭಾ**, ೭. ೩೨ ವ)

ಬೇಟದಾಣ್ಮ – [ನಾ] ಪ್ರಿಯಕರ (ಒರ್ವಳ್ ತನ್ನಂ ಉಟಿದ ಪೊಸ ಬೇಟದಾಣ್ಮನಂ ಏಗೆಯ್ದುಂ ಪೋಗಲೀಯದೆ ತನ್ನಳಿಪನೆ ತೋಱೆ: **ಪಂಪಭಾ**, ೪. ೯೬ ವ)

ಬೇಡ – [ನಾ] ಬೇಟೆಯ ವೃತ್ತಿಯವನು (ಕಾಡೊಳ್ ಬೇಡರಂತೆ ತೊಱಲ್ವ ದಾಯಿಗರ ಕಂದಿ ಕುಂದಿದ ಮೊಗಂಗಳಂ ನೋಡುವುದುಂ: **ಪಂಪಭಾ**, ೭. ೩೨ ವ); [ಅ] ರಾಕರಣೆಯನ್ನು ಸೂಚಿಸುವ ಅವ್ಯಯ (ಬೇಡ ವಿರೋಧಮೆಂತುಂ ಅರಿಕೇಸರಿಯೊಳ್ ಸಮಸಂದು ಸಂಧಿಯಂ ಮಾಡು: **ಪಂಪಭಾ**, ೧೩. ೫೪)

ಬೇಡಂ – [ಅ] ಬೇಡದವನು (ಇವನಾಯ್ವುದೊ ತಪ್ಪದೆ ಪೇೞೆಂ ಎಂಬ ಭೂಪೋತ್ತಮನಂ ಬಿಸುಟ್ಟು ಇರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ: **ಆದಿಪು**, ೯. ೬೯)

ಬೇಡದ – [ಗು] ಅವಿನೀತ (ನಿನಗೀ ಷಟ್ಖಂಡಭೂಮಂಡಲಂ ಎಱಗಿದುದೇಂ ಸಾಲದೇ ಬೇಡದ ಉದ್ವೃತ್ತನೊಳ್ ಇನ್ನೇನೆಂದು ದೇವರ್ ಕಡೆಗಣಿಸಿರೇ: **ಆದಿಪು**, ೧೪. ೮೪)

ಬೇಡವಡೆ – [ನಾ] [ಬೇಡ+ಪಡೆ] ಬೇಡರ ಗುಂಪು, ಸೈನ್ಯ (ಬೇಡವಡೆ ಮುಸುಱಿಕೊಂಡೇಸಾಡೆ ಸುರುಳ್ದಗಿದು ಕೊಡೆಯ ಚರ್ಮದ ಮಱಿಯೊಳ್ ಗೂಡುಗೊಳುತಿರ್ದ ಶೌರ್ಯಕ್ರೀಡೆಯ ದಿಗ್ವಿಜಯಮೆಸೆದುದೆಮ್ಮಗ್ರಜನಾ: **ಆದಿಪು**, ೧೪. ೭೨)

ಬೇಡಿಂ ಓಡಿಂ – ಬೇಡಿರಿ ಓಡಿರಿ, ಬೇಡಿ ತೆಗೆದುಕೊಂಡು ಹೋಗಿ (ನಿರಂತರಂ ಕಡಿಕಡಿದಿತ್ತ ಪೊನ್ನೆ ಬುಧ ಮಾಗಧ ವಂದಿಜನಕ್ಕೆ ಕೊಟ್ಟ ಕೋಡೆ ಎಡಱದೆ ಬೇಡಿಂ ಓಡಿಂ ಇದು ಚಾಗದ ಬೀರದ ಮಾತು ಕರ್ಣನಾ: **ಪಂಪಭಾ**, ೧. ೯೯)

ಬೇಡಿತಿ – [ನಾ] ಬೇಡರ ಹೆಂಗಸು (ನಿಷಾದಿತಿಯೆಂಬ ಬೇಡಿತಿಗಂ ಅಯ್ವರ್ ಮಗಂದಿರ್ಗಂ ಉಣಲಿಕ್ಕಿದೊಡೆ ತಣಿಯುಂಡು ಬೆಂಡುಂ ಅರಲ್ದು ಮಱಲುಂದಿದರ್: **ಪಂಪಭಾ**, ೩. ೪ ವ)

ಬೇಡಿದಾನ್ – [ನಾ] ಬೇಡಿದವನು (ಬೇಡಿದಾನ್ ಅನಲಂ ತೀರ್ಥಸಮೀಪಂ ಅಂಬುನಿವಹವ್ಯಾಳೋಳಕಾಳಿಂದಿ ಆ ವನಮುಂ ಕೇಳ್ದುವು: **ಪಂಪಭಾ**, ೫. ೭೪) [ಇಲ್ಲಿನ **'ಬೇಡಿದಾನ್'** ಎಂಬ ಪೂರ್ವದ ಹಳಗನ್ನಡ ಪ್ರಯೋಗವನ್ನು ಗಮನಿಸಿ]

ಬೇಡು – [ಕ್ರಿ] ಯಾಚಿಸು, ಕೇಳಿಕೊ (ಅದಟಂ ಕೊಂಡಾಡದೆ ಬೇಡಿದರ್ಗೀಯದೆ ಮಱಿಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದ ಅಧಮಂ ಅದೇತರ್ಕೆ ಬಾರ್ತೆ ಜೀವನ್ಮೃತಕಂ: **ಆದಿಪು**, ೧೨. ೯೭); [ಕ್ರಿ] ಪ್ರೀತಿಸು ಮತ್ತು ಕನ್ಯಾರ್ಥಿಯಾಗಿ ಕೇಳಿಕೊ (ತತ್ಕನ್ಯಕೆ ನಾಣ್ಚೆ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ: **ಪಂಪಭಾ**, ೧. ೭೦); [ಕ್ರಿ] ಬಯಸು (ಭೀಮ ನಕುಳ ಸಹದೇವರ್ಗಳ್ಗೆ ದುರ್ಯೋಧನನ ತಮ್ಮನಪ್ಪ ಯುಯುತ್ಸುಗಂ ಅವರ್

ಬೇಡಿದ ನಾಡುಗಳನೆ ಕುಡಿಸಿ ಸಂತಸಂಬಡಿಸೆ: **ಪಂಪಭಾ,** ೧೪. ೩೬ ವ)

ಬೇರ್ – [ನಾ] ಮೂಲ, ಬುಡ (ಭೀಮನುಮೊತ್ತಿ ಕಿಟ್ಟು ಬೇರೊಡನೆ ಮಹೀಜಮೊಂದನಿಡೆಯುಂ: **ಪಂಪಭಾ,** ೩. ೧೮)

ಬೇರೂಱು – [ಕ್ರಿ] ನೆಲೆನಿಲ್ಲು (ನಭೋಭಾಗದಿಂ ಇಂದ್ರಚಾಪಮನಿತುಂ ಭೂಭಾಗದೊಳ್ ಬಂದು ತೊಟ್ಟನೆ ಬೇರೂಱಿದವೋ: **ಆದಿಪು,** ೭. ೨೪)

ಬೇರೊಳ್ ಬೆನ್ನೀರಂ ಪೊಯ್ – ಬೇರಿಗೆ ಬಿಸಿನೀರು ಸುರಿ, ಮೂಲವನ್ನೇ ಹಾಳುಮಾಡು (ನಿನ್ನಂ ಪಗೆವರ ಬೇರೊಳ್ ಬೆನ್ನೀರಂ ಪೊಯ್ದು ನಿನಗೆ ಮಾಱ್ಪಿಂ ಧರೆಯಂ: **ಪಂಪಭಾ,** ೮. ೩೪)

ಬೇರ್ವಱಿ – [ಕ್ರಿ] ಬೇರುಬಿಡು (ರೂಪು ಶಾಸನಂ ಬರೆದುದು .. .. ಉರ್ಚಿ ಪೊಕ್ಕು ಬೇರ್ವಱಿದುದು ಬೆಚ್ಚುದು ಅಚ್ಚಿಱಿದುದು ಎನ್ನದೆರ್ದೆಯೊಳ್ ಲಲಿತಾಂಗದೇವನಾ: **ಆದಿಪು,** ೩. ೪೩)

ಬೇರ್ವೆರಸು ಕೀೞ್ – [ಕ್ರಿ] ಬುಡಸಮೇತ ಕಿತ್ತುಹಾಕು (ಪಾಶುಪತಮಂ ಪಿಡಿಯಲ್ ಪಾರ್ವುದುಂ ಅರ್ಜುನನಾಗಳ್ ಬೇರ್ವೆರಸು ಕಿೞಲ್ಕೆ ಬಗೆಯೆ ಸುರರ್ ಎಡೆವೊಕ್ಕರ್: **ಪಂಪಭಾ,** ೧೧. ೨೩)

ಬೇವಸ – [ನಾ] ವ್ಯಥೆ (ಮತ್ ಪ್ರಾಗ್ಜನ್ಮ ಕಥಾವಳಿಯೆಲ್ಲಮಂ ಬಗೆದು ನೋವೆನಗಾದುದು ನೋವಂತುಂತೆನಗಾವುದು ಬೇವಸಂ: **ಆದಿಪು,** ೩. ೩೩); [ನಾ] ಪ್ರಯಾಸ, ಕಷ್ಟ (ಆವಡವಿಗಳೊಳ್ ಪಣ್ಬಲಂ ಆವಗಂ ಒಳವು ಅಲ್ಲಿಗಱಿಸಿ ಪರಿಪರಿದು ಕರಂ ತಾವಡಿಗೊಳ್ವ ಈ ಭೀಮನ ಬೇವಸಮಿದು ನಿನ್ನ ಮನಮಂ ಒನಲಿಸಿತಿಲ್ಲಾ: **ಪಂಪಭಾ,** ೭. ೪೬); [ನಾ] ಅನಾಥ ಭಾವ (ಒಂದು ಬೇವಸದೆಡೆಗೆ ಆಶ್ರಯಂ ಮನಂ ಒಪ್ಪಿಸುವೆಡೆಯೊಳ್ ಮನಂ: **ಪಂಪಭಾ,** ೧೩. ೫೯)

ಬೇಸಱು – [ನಾ] ಬೇಜಾರು (ಸುದತಿಯ ಮೃದು ಪದವಿನ್ಯಾಸಮುಮಂ ಶೇಷಂ ಆನಲಾರದೆ ಸುಯ್ದಂ ಬೇಸಱಿಂ ಎಂದೊಡೆ ಗರ್ಭದ ಕೂಸಿನ ಬಳೆದಳವಿಯಳನಳೆವರುಂ ಒಳರೇ: **ಪಂಪಭಾ,** ೧. ೧೨೬); [ಕ್ರಿ] ಬೇಜಾರುಪಟ್ಟುಕೊ (ಬೇಸಱಿ ಲೋಕಮಂ ತಗುಳ್ದು ಸುಟ್ಟ ಅೞಲಿಂದೆ ಖರಾಂಶು ನಾರಕಾವಾಸದೊಳ್ ಆಟ್ವವೋಲ್ ಅಪರವಾರ್ಧಿಯೊಳ್ ಆಟ್ಟುದುಂ: **ಪಂಪಭಾ,** ೩. ೮೧)

ಬೇಳ್ – [ನಾ] ಹೋಮ ಮಾಡು (ಗಾಳು ಗೊರವಂ ತಗುಳ್ಚಿ ಪಳಾಳಮಂ ಏನೊಂದನಪ್ಪೊಡಂ ಗೞಪಿದೊಡೆ ಆ ಬೇಳುನುಡಿ ಕೇಳ್ದು ಕೆಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ: **ಪಂಪಭಾ,** ೬. ೨೪);

ಬೇಳ – [ನಾ] ಹುಚ್ಚ, ತಿಳಿವಳಿಕೆಯಿಲ್ಲದವನು (ಭೋಗೀಂದ್ರಭೋಗಂ ಮಹೇಂದ್ರಮಹೈಶ್ವರ್ಯಂ ಇವೆಲ್ಲಂ ಅಧ್ರುವಂ ಇವಂ ಬೇಟ್ಟಿಂತು ಬೇಳನಲ್ಲೆಂ: **ಆದಿಪು,** ೧೦. ೬೧)

ಬೇಳಲ್ವೇೞ್ – [ಕ್ರಿ] [ಬೇಳಲ್+ಪೇೞ್] ಹವಿಸ್ಸನ್ನು ಅರ್ಪಿಸುವಂತೆ ನಿಯಮಿಸು (ಷೋಡಶ ಋತ್ವಿಜರ್ಕಳಿಂ ಬೇಳಲ್ವೇೞ್ದು ಧರ್ಮಪುತ್ರಂ ಸಪತ್ನಿ ಯಜಮಾನನಾಗಿರ್ದಾಗಳ್: **ಪಂಪಭಾ,** ೬. ೩೩ ವ)

ಬೇಳುನುಡಿ – [ನಾ] ಮರುಳುಗೊಳಿಸುವ ನುಡಿ (ಗಾಳು ಗೊರವಂ ತಗುಳ್ಚಿ ಪಳಾಳಮಂ ಏನೊಂದನಪ್ಪೊಡಂ ಗೞಪಿದೊಡೆ ಆ ಬೇಳುನುಡಿ ಕೇಳ್ದು ಕೆಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ: **ಪಂಪಭಾ,** ೬. ೨೪)

ಬೇಳ್ವೆ – [ನಾ] ಹೋಮ, ಯಜ್ಞ (ಬೇಳ್ವೆಗಳ್ಗೆ ಉಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತಶರಕೋಟಿಯಿಂದಂ ಉಚ್ಚಾಟಿಸಿ ಕೆಲವು ದಿವಸಮಿರ್ದು: **ಪಂಪಭಾ,** ೪. ೧೫ ವ); [ನಾ] ಮಾಟ (ಅತ್ತ ದುರ್ಯೋಧನನ ಬೆಸದೊಳ್ ಆತನ ಪುರೋಹಿತಂ ಕನಕಸ್ವಾಮಿಯೆಂಬಂ ಪಾಂಡವರ್ಗೆ ಆಭಿಚಾರಮಾಗೆ ಬೇಳ್ವ ಬೇಳ್ವೆಯ ಕೊಂಡು: **ಪಂಪಭಾ,** ೮. ೪೨ ವ)

ಬೇಱಿರಿಸು – [ಕ್ರಿ] ಪ್ರತ್ಯೇಕವಾಗಿರಿಸು (ವ್ರತಹೀನರನಿಬರುಮಂ ಕ್ಷಿತಿಪತಿ ಬೇಱಿರಿಸಿ ಮಾನ್ಯರಂ ಮನ್ನಿಸೆ: **ಆದಿಪು,** ೧೫. ೧೩)

ಬೇಱೆ – ಪ್ರತ್ಯೇಕವಾದುದು (ಮರಕತಮಣಿವಿರಚಿತ ವಿಮಲಭಿತ್ತಿ ಪೊಗೞಲ್ಕರಮರಿದದು ಬೇಱೆ ಭಿತ್ತಿ: **ಆದಿಪು,** ೪. ೩೧ ರಗಳೆ)

ಬೇಟ್ಪಂ – [ನಾ] [√ಬೇಡು] ಬೇಡುವವನು (ಬೇಟ್ಪನ ಬೇಟ್ಪವಸ್ತು ಕಾಂಚನಗಿರಿಯಿಂದ ಅಗ್ಗಳಂ ಎನಿಪ್ಪುದಾದೊಡಂ ಏನೊ: **ಪಂಪಭಾ,** ೫. ೭೭)

ಬೇಟ್ಪಿಂತು – ಬೇಡುವಷ್ಟು (ಇವೆಲ್ಲಂ ಅಧ್ರುವಂ ಇವಂ ಬೇಟ್ಪಿಂತು ಬೇಳಲ್ಲೆಂ ಉತ್ತಮದೀಕ್ಷಾವಿಧಿಯುಂ ಸಮಾಧಿಮರಣಂ ಕರ್ಮಕ್ಷಯಂ ಬೋಧಿಲಾಭಂ ಅಮೋಘಂ: **ಆದಿಪು,** ೧೦. ೬೧)

ಬೇಟ್ಪರು – [ನಾ] ಬೇಡುವವರು (ಅರಸಿಯರಂ ಅಣುಗರಂ ಬೇಟ್ಪರುಮಂ ಮೊನೆಗಾಱರಂ ಪ್ರಗೀತರಂ ಇಂಬಾಗಿರೆ ಚೌಪಳಿಗೆಗಳೊಳ್ ಕುಳ್ಳಿರಿಸಿದರ್ ಪಡನೆಸೆಯೆ ನೆರೆದ ಪುರಜನಸಹಿತಂ: **ಪಂಪಭಾ,** ೨. ೬೭)

ಬೇಟ್ಪವಸ್ತು – [ನಾ] ಬೇಡುವ ಪದಾರ್ಥ (ಬೇಟ್ಪನ ಬೇಟ್ಪವಸ್ತು ಕಾಂಚನಗಿರಿಯಿಂದ ಅಗ್ಗಳಂ ಎನಿಪ್ಪುದಾದೊಡಂ ಏನೊ: **ಪಂಪಭಾ,** ೫. ೭೭)

ಬೇಟ್ಪುದು – [ನಾ] ಇಷ್ಟವಾದುದು (ಅನಿಬರುಂ ಇರ್ದರ್ ಮೌನವ್ರತದೆ ಗುಣಾರ್ಣವಂ ಆನೀವೆಂ ನಿಮ್ಮ ಬಯಸಿ ಬೇಟ್ಪುದನೆಂದಂ: **ಪಂಪಭಾ,** ೨. ೫೪)

ಬೈಕಂಗೊಳ್ – [ಕ್ರಿ] ಭಿಕ್ಷೆ ತೆಗೆದೊಕೊ (ಮುಂದಿಟ್ಟು ಚಕ್ರಮಂ ತಿರಿತಂದುದುಮಂ ಪಾಳಮಿರ್ದು ಬೈಕಂಗೊಳ್ವೊಂದಂದದೆ ಕೊಂಡುದುಮಂ ಅದೇನೆಂದುನ್ನತಿಮಾಡಿ ಪೊಗೞ್ವೆ ಒಳಗಱಿಯದುದೇ: **ಆದಿಪು,** ೧೪. ೬೭) [ಎಲ್. ಬಸವರಾಜು ಹಾಗೂ ನರಸಿಂಹಶಾಸ್ತ್ರಿಗಳು ಸ್ವೀಕರಿಸಿರುವ **'ಪಾಳಮಿರ್ದು ಬೈಕಂಗೊಳ್ವೊಂದಂದದೆ'** ಎಂಬುದರ ಬದಲು ವೆಂಕಟಾಚಲಶಾಸ್ತ್ರಿಗಳು **'ಪೂೞದಿರ್ದು ಬಯ್ತಂಗೊಳ್ವೊಂದಂದದೆ'** ಎಂಬ ಪಾಠವನ್ನು ಸ್ವೀಕರಿಸುತ್ತಾರೆ]

ಬೈತುಗ – [ನಾ] ಪಿತ್ತರೋಗ (ಬಣ್ಣದಿಂ ಕಂಪಿಂದೇನಲೆದುದೊ ಬೈತುಗದಂತಿರೆ ತಲೆಗೇಱುವ ಕುಸುಮನಿಚಯಮಾ ಕಾಶ್ಮೀರಂ: **ಆದಿಪು,** ೧೧. ೧೨೮) [ವೆಂಕಟಾಚಲಶಾಸ್ತ್ರಿಗಳು **'ಪೈತ್ತಿಕ'** ಎಂಬ ರೂಪವನ್ನೂ ಎಲ್. ಬಸವರಾಜು **'ಪೈತಿಕ'** ಎಂಬ ರೂಪವನ್ನೂ

ಬಳಸಿದರೆ ನರಸಿಂಹಶಾಸ್ತ್ರಿಗಳು ಈ ಶಬ್ದವನ್ನು ಸ್ವೀಕರಿಸಿ ಈ ಅರ್ಥವನ್ನು ನೀಡುತ್ತಾರೆ]

ಬೈತ್ರ – [ನಾ] [ವಹಿತ್ರ] ಹಡಗು (ಚಕ್ರರತ್ನಮದಱೊಳ್ ನಿರ್ಬಾಧಿತಮಿರ್ದತ್ತು ಪೆರ್ವಡೆ ವಾರಾಶಿಯೊಳಿರ್ದ ಬೈತ್ರದೊಳಗಂದೆತ್ತಂ ತೆರಳ್ಚಿದವೊಲ್: **ಆದಿಪು,** ೧೩. ೬೦)

ಬೈದಂತುಟೆ – ಬೈದ ಹಾಗೆಯೇ (ನನೆಯಂಬಂ ತೆಗೆದೆಚ್ಚಂ ಅಂಗಜನ ತಪ್ಪು ಏನಾನುಮಂ ತೋಱಿ ಕಾಣ್ಬನಿತಂ ಮಾಡದೆ ಪದ್ಮಜಂ ಮದನನಂ ಬೈದಂತುಟೇ: **ಪಂಪಭಾ,** ೪. ೬೯)

ಬೊಂದರಿಗೆ – [ನಾ] ದಿಂಬು (ಅಡ್ಡಂ ನಿಮಿರ್ದ ಲತೆಯ ಮೇಲೆ ವಿಳಾಸಂ ನಿಲೆ ನೀಡಿ ಕಾಲನರೆಬರ್ ಮಲಂಗಿದರ್ ಪೊಳೆವ ತಳಿರ ಬೊಂದರಿಗೆಗಳೊಳ್: **ಆದಿಪು,** ೧೧. ೭೮) ; [ನಾ] ಮೆತ್ತೆ, ಲೋಡು (ಪೊನ್ನ ಪಡಿಗಂಗಳೊಳಮಿಕ್ಕಿದ ಪಟೆಯ ಸುಖಾಸನಂಗಳೊಳಂ ಕಟ್ಟಿದ ಚಿನ್ನದ ಬೊಂದರಿಗೆಯೊಳಂ: **ಪಂಪಭಾ,** ೪. ೪೩ ವ)

ಬೊಜಂಗ – [ನಾ] [ಭುಜಂಗ] ವಿಟ (ಬೇಟದ ಲಲ್ಲೆಯ ಬಲ್ಮೆ ಪತ್ತಿ ಸುತ್ತಿಸೆ ಪುರುಡಿಂಬುಕ್ಕೆಸೆ ಬಿಯಮಾಗಿಸಿ ಪೊಂದದವಂ ಬೊಜಂಗನೇ: **ಆದಿಪು,** ೧೨. ೧೭)

ಬೊಟ್ಟನಿಟ್ಟುಕೊ – [ಕ್ರಿ] ಹಣೆಯಲ್ಲಿ ತಿಲಕವಿಟ್ಟುಕೊ (ಸಿಪ್ಪುಗಳೊಳ್ ತೀವಿ ಮಧುಮಂತ್ರಂಗಳಂ ಮಂತ್ರಿಸಿ ನೆಲದೊಳೆಱೆದು ತಲೆಯೊಳ್ ತಳಿದು ಕಳ್ಳೊಳ್ ಬೊಟ್ಟನಿಟ್ಟುಕೊಂಡು ಕೆಲದರ್ಗೆಲ್ಲಂ ಬೊಟ್ಟನಿಟ್ಟು: **ಪಂಪಭಾ,** ೪. ೮೭ ವ)

ಬೊದಿಲ್ಲನೆ – [ಅ] ಬೊದಿಲ್ಲೆಂದು ಶಬ್ದವಾಗುವಂತೆ (ಕರಂ ಮೇಳಿಸಿದಪ್ಪುದೆನ್ನೆರ್ದೆಯಂ ಎಂದು ಬೊದಿಲ್ಲನೆ ಪಾಯ್ದು ನೀರೊಳಾ ಬಾಳನನಾದಮಾದರದೆ ಕಂಡೊಸೆದು ನಿಧಿಗಂಡನಂತೆವೋಲ್: **ಪಂಪಭಾ,** ೧. ೯೬)

ಬೊಬ್ಬಿಱಿ – [ಕ್ರಿ] ಬೊಬ್ಬಿಡು, ಜೋರಾಗಿ ಅರಚು (ಕೆನ್ನೆತ್ತರೊಳ್ ಒರ್ವರೊರ್ವರಂ ತಳ್ಕಿಱಿದುಂ ಬೊಬ್ಬಿಱಿದುಂ ತ್ರಿಪುಂಡ್ರಮಿಟ್ಟುಂ ಕೂಕಿಱಿದುಂ: **ಪಂಪಭಾ,** ೧೨. ೧೫೮ ವ)

ಬೊಬ್ಬುಳಿಕೆ – [ನಾ] ನೀರ ಗುಳ್ಳೆ (ಬೆಳಗುವ ತಾರನಿಕರಮಾ ಕಡಲೊಳ್ ನಸುತೇಂಕುದೇಂಕಿ ಬೊಬ್ಬುಳಿಕೆಗಳಂತೆ ತೋಱಿದುವು: **ಆದಿಪು,** ೭. ೯೮)

ಬೊಮ್ಮ – [ನಾ] ಬ್ರಹ್ಮ (ಒಡೆಗುಂ ಅಜಾಂಡಂ ಇನ್ನಿನಿಸು ಜೇವೊಡೆದಾಗಳೆ ಬೊಮ್ಮನುಂ ಮನಂಗಿಡುಗುಂ: **ಪಂಪಭಾ,** ೨. ೭೬)

ಬೋದನ – [ನಾ] ಚಾಳುಕ್ಯರ ರಾಜಧಾನಿ (ಏನಂ ಪೇೞ್ವುದೊ ಸಿರಿಯುದ್ದಾನಿಯಂ ಎಣ್ಣೆಯೊಳ್ ತೀವಿ ದೀರ್ಘಿಕೆಗಳಂ ಅಂತಾ ನೃಪತಿ ನಿಚ್ಚಲ್ ಅಯ್ನೂಱ್ ಆನೆಯಂ ಅವಗಾಹಮಿರಿಸುವಂ ಬೋದನದೊಳ್: **ಪಂಪಭಾ,** ೧. ೧೭)

ಬೋದಿಗೆ – [ನಾ] ಕಂಬದ ಮೇಲ್ಭಾಗ (ಪವಳದ ಜಂತೆಯೊಳಂ ಪದ್ಮರಾಗದ ಬೋದಿಗೆಯೊಳಂ ಇಂದ್ರನೀಲದ ಭದ್ರದೊಳಂ ಕರ್ಕೇತನದ ಜಾಳರಿಗೆಗಳೊಂ: **ಪಂಪಭಾ,** ೩. ೭೪ ವ)

ಬೋಧಾದಾಯಿ – [ನಾ] [ಬೋಧ+ಆದಾಯಿ] ಜ್ಞಾನವನ್ನು ನೀಡುವವನು (ವಿಶದಯಶೋಭಾಗಿಯಂ ಭವ್ಯಪದ್ಮಾಕರ ಬೋಧಾದಾಯಿಯಂ ತಿಗ್ಮಕರನುದಯದೊಳ್ ಪುತ್ರನಂ ಪೆತ್ತಳಾಗಳ್: **ಆದಿಪು,** ೭. ೩೬)

ಬೋಧಾವಾಪ್ತಿ – [ನಾ] ಜ್ಞಾನಲಾಭ (ಬೋಧಾವಾಪ್ತಿಯಿಂದಂ ಸುಖಾಕರನಾಗೆಂದು ಫಲಪ್ರದೋಕ್ತಿ ತಳಿದಂ ಶೇಷಾಕ್ಷತೌಘಂಗಳಂ: **ಆದಿಪು,** ೯. ೬೪)

ಬೋಧಾವಾಸಪ್ರಿಯ – ಅರ್ಹಂತ, ಜಿನ (ವಾಸವ ಆಸನಕಂಪದಿನಾ ಸಮಯದೊಳವಧಿಯಂ ಪ್ರಯೋಗಿಸಿ ಬೋಧಾವಾಸಪ್ರಿಯನ ಉದಯಮನಱಿದು ಆಸನದಿಂದೆರ್ದು ಮೂಱು ಸೂಟ್ ಪೊಡೆವಟ್ಟಂ: **ಆದಿಪು,** ೭. ೪೨)

ಬೋಧಾವಾಸಾಶಯ – [ನಾ] [ಬೋಧ+ಆವಾಸ+ಆಶಯ] ಅರ್ಹಂತ, ಜಿನ (ವಾಸವನಾಸನಕಂಪದಿನಾ ಸಮಯದೊಳ್ ಅವಧಿಯಂ ಪ್ರಯೋಗಿಸಿ ಭೋಧಾವಾಸಾಶಯನ ಉದಯಮನಱಿದು: **ಆದಿಪು,** ೭. ೪೨) ['ಬೋಧಾವಾಸಾಶಯ' – ನರಸಿಂಹಶಾಸ್ತ್ರಿಗಳು ಅನುಮೋದಿಸಿದ ಪಾಠ]

ಬೋಧಿಲಾಭ – ಕೇವಲಜ್ಞಾನಪ್ರಾಪ್ತಿ (ಸಮಾಧಿಮರಣಂ ಕರ್ಮಕ್ಷಯಂ ಬೋಧಿಲಾಭಮಮೋಘಂ ದೊರೆಕೊಳ್ವುದಕ್ಕೆಮಗೆ ಮುಕ್ತಿಶ್ರೀಮನೋವಲ್ಲಭಾ: **ಆದಿಪು,** ೧೦. ೬೧)

ಬೋಧೋದಯ – [ನಾ] ಜ್ಞಾನೋದಯ (ದೇವೇಂದ್ರಮುನಿಪದಾಬ್ಜಂ ಜಯನಂದಿಮುನಿಕ್ರಮ ಕಮಳಮೀಗೆ ಬೋಧೋದಯಮಂ: **ಆದಿಪು,** ೧. ೧೩)

ಬೋನ – [ನಾ] [ಭೋಜನ] ಆಹಾರ, ಊಟ (ಸುತ್ತಿದ ಕರಗದ ನೀರುಮನೆತ್ತಿದ ಬೋನಮುಮನಿದಿರೊಳಿಟ್ಟಿರೆ ಬನ್ನಿಂ ಇತ್ತೇಟ್ರ್ಯಾಯೆಂದರ್ ಮುನಿಪೋತ್ತಮನಂ: **ಆದಿಪು** ನರಸಿಂ, ೯. ೧೨೬)

ಬೋನಮೆತ್ತು – [ಕ್ರಿ] ಊಟ ಸಿದ್ಧಪಡಿಸು (ಅಮೃತಮತಿಯಂ ಅಮೃತಾಹಾರದ ಬೋನಮನೆತ್ತಲುಂ .. .. ಪೇೞ್ದಾಗಳ್: **ಆದಿಪು,** ೭. ೨೧ ವ)

ಬೋನವೇಳಿಗೆ – [ನಾ] [ಬೋನ+ಪೇಳಿಗೆ] ಅಡುಗೆಯ ಪಾತ್ರೆಗಳಿಡುವ ಪೆಟ್ಟಿಗೆ (ಅನ್ನೆಗಂ ಭೀಮಸೇನನುಂ ಬೋನವೇಳಿಗೆಯಂ ಸಟ್ಟುಗಮುಮಂ ಒರ್ವ ಪರಿಚಾರಕನಿಂ ಪಿಡಿಯಿಸಿಕೊಂಡು ಬಂದು: **ಪಂಪಭಾ,** ೮. ೫೩ ವ)

ಬೋರಗುದುರೆ – [ನಾ] ಕಂದುಬಣ್ಣದ ಕುದುರೆ (ವಾರುವದ ಬೋರಗುದುರೆಗಳೊಳ್ ಪೂಡಿದ ಪಸುರ್ವೊನ್ನ ರಥಮನೇಱಿ: **ಪಂಪಭಾ,** ೧೨. ೫೩ ವ)

ಬ್ರಹ್ಮಕಲ್ಪ – [ನಾ] [ಜೈನ] ಹದಿನಾರುಕಲ್ಪಗಳಲ್ಲಿ ಒಂದು, ಬ್ರಹ್ಮ ಎಂಬ ಹೆಸರಿನ ಕಲ್ಪ (ತ್ರಿಭುವನಗುರು ಪರಿನಿಷ್ಕ್ರಮಣಕಲ್ಯಾಣ ಶಾರದಾಗಮ ಪ್ರತೀಕ್ಷಣದಿವ್ಯಹಂಸರುಂ ಬ್ರಹ್ಮಕಲ್ಪಾಂತ ನಿವಾಸಿಗಳುಮಪ್ಪ: **ಆದಿಪು,** ೯. ೬೦ ವ)

ಬ್ರಹ್ಮಯೋಗ – [ನಾ] ಬ್ರಾಹ್ಮೀ ಮುಹೂರ್ತ (ಬರೆ ಚೈತ್ರಂ ಕೃಷ್ಣಪಕ್ಷಂ ದೊರೆಕೊಳೆ ನವಮೀವಾಸರಂ ಪೊರ್ದೆ ಲೋಕೋತ್ತರಮಾಗಿರ್ದ ಉತ್ತರಾಷಾಢದೊಳ್

ಅತಿಶುಭದಂ ಬ್ರಹ್ಮಯೋಗಂ ಮನಂಗೊಂಡಿರೆ: **ಆದಿಪು,** ೭. ೩೬)

ಬ್ರಹ್ಮಸಭೆ – [ನಾ] ಬ್ರಾಹ್ಮಣರ ಗುಂಪು (ಆಗಳ್ ಪಾಂಡವರ್ ತಮ್ಮಂ ಪೆಱರಱಿಯದಂತು ಬ್ರಾಹ್ಮಣವೇಷದೊಳೆ ಬ್ರಹ್ಮಸಭೆಯೊಳ್ ಬಂದಿರೆ: **ಪಂಪಭಾ,** ೩. ೫೨ ವ)

ಬ್ರಹ್ಮಸೂತ್ರ – [ನಾ] ಜನಿವಾರ (ವಿಚಿತ್ರತಿಳಕವಿಳಸಿತಲಲಾಟನುಂ ತಾರಾತರಳ ಮುಕ್ತಾಫಳಕಲಿತ ಜಾನುಲಂಬಿತ ಬ್ರಹ್ಮಸೂತ್ರನುಂ: **ಆದಿಪು,** ೧೧. ೧೦ ವ); **[ನಾ]** ಹಾರ (ತಲೆನವಿರಂ ಪಚ್ಚುಗಂಟಿಕ್ಕಿ ಮಣಿಮಯಮಕುಟಮಂ ಕವಿದು ತೋರನೆಲ್ಲಿಯ ಕಾಯಿಂ ಪಿರಿಯವಪ್ಪ ಮುತ್ತಿನ ಬ್ರಹ್ಮಸೂತ್ರಮಂ ಎಟಲಿಕ್ಕಿ: **ಪಂಪಭಾ,** ೧೨. ೧೦೮ ವ)

ಬ್ರಹ್ಮಾಂಡ – [ನಾ] [ಬ್ರಹ್ಮ+ಅಂಡ] ಬ್ರಹ್ಮನ ಮೊಟ್ಟೆ, ಬ್ರಹ್ಮ ಸೃಷ್ಟಿಸಿದ ಮೊಟ್ಟೆಯಾಕಾರದ ವಿಶ್ವ (ಅಂತು ಬ್ರಹ್ಮಾಂಡಂ ಉರಿಯೆ ಕಾದೆ: **ಪಂಪಭಾ,** ೧೧. ೧೭ ವ)

ಬ್ರಹ್ಮಾಯು – [ನಾ] ದೀರ್ಘಾಯು (ಬ್ರಹ್ಮಂ ಬ್ರಹ್ಮಾಯುವಕ್ಕೆ ಎಂದು ಪರಸಿದಂ: **ಪಂಪಭಾ,** ೫. ೧೦೩ ವ)

ಬ್ರಹ್ಮಾಸ್ತ್ರ – [ನಾ] ಬ್ರಹ್ಮನು ಅಧಿದೇವತೆಯಾಗಿರುವ ಮಂತ್ರಾಸ್ತ್ರ (ಪಾರ್ವನೆಂದೆನ್ನೊಳ್ ಪುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಮವಸಾನಕಾಲದೊಳ್ ಬೆಸಕೆಯ್ಯದಿರ್ಕೆ: **ಪಂಪಭಾ,** ೧. ೧೦೫ ವ)

ಬ್ರಹ್ಮೇಂದ್ರತೆ – [ನಾ] [ಜೈನ] ಬ್ರಹ್ಮಕಲ್ಪದ ಒಡೆತನ (ಪಡೆದಂ ಬ್ರಹ್ಮೇಂದ್ರತೆಯಂ ಗಡಂ ಆತಂ ಬಗೆದು ನೋಡೆ ನಾರಕನೆತ್ತಲ್ ಗಡ ದೇವನೆತ್ತ: **ಆದಿಪು,** ೫. ೯೭)

ಬ್ರಾತ – [ನಾ] ವ್ರಾತ, ಸಮೂಹ (ವಿರಚಿತೋದ್ದಾಮ ಸುರಪತಿಧನುಬ್ರಾತಮಂ ಸುರುಚಿರಾಂಶೂಲ್ಲಸತ್ ರತ್ನಸಂಘಾತಮಂ: **ಆದಿಪು,** ೭. ೨೭ ರಗಳೆ)

ಬ್ರಾಹಣಸಮಿತಿ – [ನಾ] ಬ್ರಾಹ್ಮಣರ ಗುಂಪು (ಗಣನಾತೀತ ಆಜ್ಯಾಹುತಿಗಣದಿಂದಂ ತಣಿಯೆ ಜಾತವೇದನುಂ ಆ ಬ್ರಾಹ್ಮಣಸಮಿತಿ ಬೇಳೆ ದೇವರ್ ತಣಿಯುಂಡರ್ ನೆರೆದು ದಿವ್ಯ ಹವ್ಯಾಮೃತಮಂ: **ಪಂಪಭಾ,** ೬. ೩೭)

ಭ

ಭಂಗ – [ನಾ] ಅವಮಾನ (ಭರತಾವನೀಶ್ವರಂ ಗುರು ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರಂ ಈ ದೊರೆಯನುಂ ಅಳವಟಿಯೆ ವಸುಂಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ: **ಆದಿಪು,** ೧೪. ೧೧೨); **[ನಾ]** ಮುರಿಯುವುದು (ತುಂಗವನ್ಯಮತಂಗಜ ದಂತಾಘಾತ ನಿಪಾತಿತಸಲ್ಲಕೀ ಭಂಗಮಂ .. .. ನೃಪನೆಯ್ದಿದಂ ಉದ್ಯತ್ಶೃಂಗಮನಾ ಶತಶೃಂಗಮಂ: **ಪಂಪಭಾ,** ೧. ೧೧೫)

ಭಂಗಿ – [ನಾ] ನಿಲವು (ಭಂಗಿಗಳೊಳೆಮ್ಮೊಳಾದೀ ಸಂಗಡಮಂ ನೀಮೆ ಮನದೆಗೊಂಡೆಮ್ಮ ಕಿಸುರ್ ಪಿಂಗುಗೆ ಅಗಲ್ವೆಡೆಯೊಳ್: **ಆದಿಪು,** ೧೧. ೧೩೩); **[ನಾ]** ತಿರುವು (ಕೆಂಪು ಕೆಂಪು ಕೊನೆ ಸೆಳ್ಳುಗುರ್ಗಳ್ ಕುಡಿ ತೋಳ್ನಯಂ ನಯಂ ನೆಲೆ ನೆಲೆ ಭಂಗಿ ಭಂಗಿ : **ಪಂಪಭಾ,** ೫. ೧೨)

ಭಂಗುರ – [ಗು] ಚಂಚಲವಾದ (ತುಂಗತರಂಗ ಭಂಗುರ ಪಯೋಧಿಪರೀತ ಮಹಾಮಹೀತಳಾಲಿಂಗಿತಕೀರ್ತಿ ಕೇಳ್ದು ಬಡಪಾರ್ವನ ಪುಯ್ಯಲಂ ಒರ್ಮೆ: **ಪಂಪಭಾ,** ೬. ೨)

ಭಂಡಾರಿಗ – [ನಾ] ಕೋಶಾಗಾರದ ಮುಖ್ಯಾಧಿಕಾರಿ, ಚಕ್ರವರ್ತಿಯ ಏಳು ಜೀವರತ್ನಗಳಲ್ಲಿ ಒಂದು (ಬುದ್ಧಿಸಾಗರನೆಂಬ ಪುರೋಹಿತನುಂ ಕಾಮವೃಷ್ಟಿಯೆಂಬ ಭಂಡಾರಿಗನುಂ: **ಆದಿಪು,** ೧೫. ೩ ವ)

ಭಕ್ಷ – [ನಾ] ಆಹಾರ (ನಿಡಿಯರ್ ಬಲ್ಲಾಯದ ಬಲ್ಲಡಿಗರ್ ವಂದಿರ್ದರಯ್ವರಾಲವ ಕೆಟಗಿಂ ತೊಡರ್ದರ್ ನಮ್ಮಯ ಭಕ್ಷದೊಳ್: **ಪಂಪಭಾ,** ೩. ೧೨)

ಭಕ್ಷ್ಯ – [ನಾ] ತಿಂಡಿ, ಆಹಾರ (ಶಾರ್ದೂಲ ವರಾಹ ಗೋಲಾಂಗೂಲ ನಕುಳಂಗಳಂ ನೋಡುತ್ತುಂ ಅವರ್ಕೆ ಭಕ್ಷ್ಯಾಪೂಪಂಗಳಂ ತರಿಸಿ ನೀಡುತ್ತುಂ ಇರ್ದು: **ಆದಿಪು,** ೫. ೨ ವ)

ಭಗವತಿಯೇಱು – [ನಾ] [ಭಗವತಿಯ+ಏಱು] ದೇವಿಯ ಯುದ್ಧ, ದೇವಿ ಮೈಮೇಲೆ ಬಂದಾಗ ಉಂಟಾಗುವ ಉರುಬು (ಭಗವತಿಯೇಱುವೆರ್ವ ತೆಱದಿನಾಯ್ತಿವರೇಱು: **ಪಂಪಭಾ,** ೧೦. ೧೩)

ಭಗವತ್ಕೃತ – [ಗು] [ಜೈನ] ತೀರ್ಥಂಕರನಿಂದ ಆದ (ವಿತತಾಷಾಢದ ಬಹುಳ ಪ್ರತಿಪದ್ದಿನದಂದು ಕೀರ್ತಿ ನೆಗಟ್ದಿರೆ ಭಗವತ್ಕೃತಯುಗಮಾದುದರಿಂದಂ ಕೃತಯುಗಮೆಂಬರ್ ಪುರಾಣವಿದರಿದನೀಗಳ್: **ಆದಿಪು,** ೮. ೬೬)

ಭಗವದ್ರೂಪ – [ನಾ] [ಜೈನ] ಗಣಧರರೂಪ (ಭಗವದರುಹನ ಸಮಕ್ಷದೊಳ್ ಅಗಣ್ಯಪುಣ್ಯಪ್ರಭಾವದಿಂದಂ ಕೊಂಡಂ ಭಗವದ್ರೂಪಮಂ ಇಂದ್ರಾದಿಗಳೆಲ್ಲಂ ಪೊಗಟ್ ಕಾಲಲಬ್ಧಿಯನಾಗಳ್: **ಆದಿಪು,** ೧೦. ೪೮)

ಭಗ್ನಮನ – [ನಾ] ಒಡೆದುಹೋದ ಮನಸ್ಸಿನವನು (ಯಮನಂದನಂ ಮೂವರ್ ತಮ್ಮಂದಿರ ಬರವಂ ಕಾಣದೆ ಭಗ್ನಮನನಾಗಿ: **ಪಂಪಭಾ,** ೮. ೪೧ ವ)

ಭಗ್ನೋತ್ಸಾಹ – [ನಾ] ಉತ್ಸಾಹವನ್ನು ಕಳೆದುಕೊಂಡವನು (ಕ್ಷುತ್ಪಿಪಾಸಾಶೀತಾತಪಪ್ರಮುಖ ಪರೀಷಹಂಗಳಂ ಸೈರಿಸಲಾಱದೆ ಭಗ್ನೋತ್ಸಾಹರುಂ ದೂರೋತ್ಸಾರಿತ ಅಭಿಮಾನಿಗಳುಂ ಆಗಿ: **ಆದಿಪು,** ೯. ೮೮ ವ)

ಭಟಖಡ್ಗಮಂಡಲ – [ನಾ] ಯೋಧರ ಕತ್ತಿಗಳ ಸಮೂಹ (ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋತ್ಪನವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ: **ಆದಿಪು,** ೧೪. ೧೩೦)

ಭಟ್ಟಾರಕ – [ನಾ] ಗುರು, ಗೌರವಸೂಚಕ ಪದ (ಎನಗೀವುದು ನಿನ್ನನೆ ಪೋಲ್ವ ಪುತ್ರನಂ ಎಂಬುದುಂ ತಥಾಸ್ತುವೆಂದು ತನ್ನಂಶಮನಾಕೆಯ ಗರ್ಭದೊಳವತರಿಸಿ ಯಮಭಟ್ಟಾರಕಂ ಅಂತರ್ಧಾನಕ್ಕೆ ಸಂದಂ : **ಪಂಪಭಾ,** ೧. ೧೧೯)

ಭದ್ರ – [ನಾ] ಉಪ್ಪರಿಗೆ (ಆಗಳ್ ದ್ರುಪದಂ ಪಚ್ಚೆಯ ನೆಲಗಟ್ಟಿನೊಳಂ .. .. ಇಂದ್ರನೀಲದ ಭದ್ರದೊಳಂ .. .. ಚಂದ್ರಕಾಂತದ ಚಂದ್ರಶಾಲೆಯೊಳಂ ಒಪ್ಪುವ ವಿವಾಹಗೇಹಮಂ ಸಮೆಯಿಸಿ: **ಪಂಪಭಾ,** ೩. ೭೪ ವ)

ಭದ್ರದೇವ – [ನಾ] ಮೊದಲನೆಯ ಅರಿಕೇಸರಿಯ ಇಬ್ಬರು ಮಕ್ಕಳಲ್ಲಿ ಒಬ್ಬ; ಮೊದಲನೆಯ ಭದ್ರದೇವ (ಅರಿಕೇಸರಿಗೆ ಆತ್ಮಜರ್ ಅರಿನೃಪಶಿರೋದಳನ ಪರಿಣತೋಗ್ರಾಸಿ ಭಯಂಕರರ್ ಆ ಇರ್ವರೊಳ್ ಆರ್ ದೊರೆಯೆನೆ ನರಸಿಂಹ ಭದ್ರದೇವರ್ ನೆಗಟ್ಟರ್: **ಪಂಪಭಾ,** ೧. ೨೨)

ಭದ್ರಮನ – [ನಾ] ಒಂದು ಜಾತಿಯ ಆನೆ (ಅನವರತ ಗಳತ್ ಮದದುರ್ದಿನಾನನಂ ವರ್ಷಜಳಸಮನ್ವಿತಂ ಅಂಭೋದ ನಿನಾದಂ ಭದ್ರಮನಂ ಮನೋಜವಂ ಚತುರಶೀತಿಲಕ್ಷ ಪ್ರಮಿತಂ: **ಆದಿಪು,** ೧೧. ೨೯)

ಭದ್ರಮುಖ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಜೀವರತ್ನಗಳಲ್ಲೊಂದಾದ ತಕ್ಷಕರತ್ನದ ಹೆಸರು (ಮಹಾನದಾವಗಾಹನ ಸಮಯ ನೌ ದ್ರೋಣಿ ಸಂಕ್ರಮಾದಿವಿಧಾನ ಪ್ರಾಗಲ್ಭ್ಯನುಂ ಅನುಸ್ಮರಣಮಾತ್ರ ನಿಷ್ಪಾದಿತ ಸಪ್ತತಳಾದಿ ಪ್ರಾಸಾದಪ್ರಕರಣನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ: **ಆದಿಪು,** ೧೧. ೩ ವ)

ಭದ್ರಲಕ್ಷಣಲಕ್ಷಿತ – [ನಾ] ಶುಭಲಕ್ಷಣಗಳಿಂದ ಕೂಡಿದವನು (ಅಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಱಿಂದಾಕೆಗೆ ಪಾಂಡುರೋಗಸಂಗತನುಮನೇಕ ಭದ್ರಲಕ್ಷಣಲಕ್ಷಿತನುಂ ಅತ್ಯಂತಪ್ರತಾಪನುಮಾಗಿ ಪಾಂಡುರಾಜನೆಂಬ ಮಗನಕ್ಕುಂ: **ಪಂಪಭಾ,** ೧. ೮೫ ವ)

ಭದ್ರಶಾಲ – [ನಾ] [ಜೈನ] ಮೇರುಪರ್ವತದ ಮೇಲಿರುವ ನಾಲ್ಕು ವನಗಳಲ್ಲಿ ಒಂದು, ಉಳಿದ ಮೂರು: ನಂದನ ಸೌಮನಸ ಮತ್ತು ಪಾಂಡುಕ (ಇದು ಭದ್ರಶಾಲನಂದನಂ ಅದು ನನ್ದನವನಂ ಅದಲ್ತೆ ಸೌಮನಸಂ ಅದೇಂ ತುದಿಯೊಳ್ ಪಾಂಡುಕವೆಸೆದಿರ್ಪುದೊ: **ಆದಿಪು,** ೨. ೨೯)

ಭದ್ರಹಸ್ತಿ – [ನಾ] ಭದ್ರಗಜ, ಶ್ರೇಷ್ಠ ಆನೆ (ಎಂಬತ್ತುನಾಲ್ಕು ಲಕ್ಕೆ ಗಂಧಸಿಂದುರಂಗಳಪ್ಪ ಭದ್ರಹಸ್ತಿಗಳುಂ: **ಆದಿಪು,** ೧೫. ೩ ವ)

ಭದ್ರಾಂಕುಶ – [ನಾ] ಭದ್ರ ಜಾತಿಯ ಆನೆಗೆ ಅಂಕುಶಸ್ವರೂಪ (ಮಾಂಕರಿಸದಱಿವು ಗುರು ವಚನಾಂಕುಶಮಂ ಪಾಟಿಯೆಡೆಗೆ ಪೊಣರ್ದರಿಬಲಮಂ ಕಿಂಕೊಳೆ ಮಾಟ್ಪೆಡೆಗಣಮೆ ನಿರಂಕುಶಮೆನಿಸಿದುದು ಮುನಿಸು ಭದ್ರಾಂಕುಶನಾ: **ಪಂಪಭಾ,** ೧. ೩೨)

ಭಯ – ಚಾರಿತ್ರಮೋಹನೀಯಕರ್ಮದ ಉತ್ತರೋತ್ತರ ಪ್ರಕೃತಿಗಳಲ್ಲಿ ಒಂದಾದ ಒಂಬತ್ತು ನೋಕಷಾಯಗಳಲ್ಲಿ ಒಂದು, ಭಯವನ್ನು ಉಂಟುಮಾಡುವುದು (ಕ್ರಮಕ್ರಮದೊಳೆ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ ಪುರಾತನ ಸತ್‌ಕರ್ಮದೊಡನೆ ಹಾಸ್ಯರತ್ಯರತಿಶೋಕಭಯ ಜುಗುಪ್ಸಾಭಿಧಾನ ನೋಕಷಾಯ ಷಟ್ಕಮುಮಂ ಘಾತಿಸಿ: **ಆದಿಪು,** ೧೦. ೧೪ ವ)

ಭಯಂಕರಕರ – [ನಾ] ಭಯ ಹುಟ್ಟಿಸುವಂತಹ ಬಾಹುಗಳುಳ್ಳವನು (ಅರಿಕೇಸರಿಗೆ ಆತ್ಮಜರ್ ಅರಿನೃಪಶಿರೋದಳನ ಪರಿಣತೋಗ್ರಾಸಿ ಭಯಂಕರರ್ ಆ ಇರ್ವರೊಳ್ ಆರ್ ದೊರೆಯೆನೆ ನರಸಿಂಹ ಭದ್ರದೇವರ್ ನೆಗಟ್ಟರ್: **ಪಂಪಭಾ,** ೧. ೨೨)

ಭಯಂಕರತರ – [ನಾ] ಹೆಚ್ಚು ಭಯಂಕರ (ಆಜಿಯೊಳ್ ಭಯಂಕರತರಮಪ್ಪಿನಂ ಪಗೆವರೊಕ್ಕಲ್ ಓವೆನೆನಲ್ ಒರ್ವರಿಲ್ಲದಂತಿರೆ: **ಪಂಪಭಾ,** ೯. ೫೭)

ಭಯರಸಕ – [ನಾ] ಭಯ, ಹೆದರಿಕೆ (ಕಸವರದ ಸವಿಯುಮಂ ಭಯರಸಕದ ಸವಿಯುಮಂ ಅದೆಂತುಂ ಆನಱಿಯದುದಂ ವಸುಮತಿಯಱಿವುದು: **ಪಂಪಭಾ,** ೧೨. ೧೮೦)

ಭರ – [ನಾ] ಭಾರ, ಹೊಣೆ, ಆಳಿಕೆ (ಸಕಳಾವನೀತಳಭರಮಂ ಇನಸುತನಟೆಯೆ ಹರಿಗನಿಂದೆನಗೀಗಳ್ ದೊರೆಕೊಂಡುದು: **ಪಂಪಭಾ,** ೧೩. ೨)

ಭರಂಗೆಯ್ – [ಕ್ರಿ] ಕಾರ್ಯಭಾರವನ್ನು ಹೊರು (ಧೃತರಾಷ್ಟ್ರಂ ನುಡಿದಾರ್ತನೇ ಹರಿ ಭರಂಗೆಯ್ದಾರ್ತನೇ ನೀಂ ಪೃಥಾಸುತರಂ ನೋಯಿಸಲಾಗದೆಂದು ನುಡಿದೇಮಾರ್ತೆಮೇ: **ಪಂಪಭಾ,** ೧೦. ೧೦); **[ಕ್ರಿ]** ಉತ್ಸಾಹಪಡು (ಭರಂಗೆಯ್ದೊಡೆ ಉರ್ಕುಳ್ಳ ಸಾಮಂತನಿಕಾಯಂ ಯಂತ್ರಮುಕ್ತಾನಳ ಶರದೃಷದಾಸಾರವಿಧ್ವಂಸಮಕ್ಕುಂ: **ಆದಿಪು,** ೧೩. ೫೮); **[ಕ್ರಿ]** ಆರ್ಭಟಿಸು (ಹರಿಯುಂ ತಾನುಂ ಭರಂಗೆಯ್ದು ತನ್ನ ಎಸಕಂ ಕಾಯದೆ ಅಧರ್ಮಯುದ್ಧದೆ ನರಂ ಕೊಲ್ವಲ್ಲಿ ಕಂಡು ಇಂತುಪೇಕ್ಷಿಸಿ ನೀಮುಂ ನಡೆ ನೋಡುತ್ತಿರ್ದಿರಿ ಎನೆ ಮತ್ತಿನ್ನಾರಂ ನಂಬುವೆಂ: **ಪಂಪಭಾ,** ೧೧. ೮೩)

ಭರತ – [ನಾ] ಒಬ್ಬ ಚಕ್ರವರ್ತಿ (ಭರತನ ವಂಶದೊಳ್ ನೆಗಟ್ದಿ ಪಾಂಡುಗೆವುಟ್ಟಿಯುಂ: **ಪಂಪಭಾ,** ೩. ೧೧); [ನಾ] ಒಂದು ಜನಪದ (ಆ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತ ಹೈಮವತ .. .. ಐರಾವತಂಗಳೆಂಬ ಏಟುಂ ಜನಪದಗಳುಂಟು: **ಆದಿಪು,** ೧. ೪೮ ವ); **[ನಾ]** [ಭರತನ] ನಾಟ್ಯಶಾಸ್ತ್ರ (ಭರತಂಗೆ ಭರತಮುಮಂ ಅರ್ಥಶಾಸ್ತ್ರಮುಮಂ ವೃಷಭಸೇನಂಗೆ ಗೀತವಾದ್ಯಾರ್ಥ ಸಂಗ್ರಹಮಪ್ಪ ಗಾಂಧರ್ವಶಾಸ್ತ್ರಮುಮಂ: **ಆದಿಪು,** ೮. ೬೦ ವ)

ಭರತಕುಲಗಗನದಿನಕರ – [ನಾ] ಭರತವಂಶವೆಂಬ ಆಕಾಶಕ್ಕೆ ಸೂರ್ಯನಂತಿರುವವನು (ಭರತಕುಲಗಗನದಿನಕರಂ ಅರಾತಿಕುಳಕಮಳಹಿಮಕರಂ ಶಿಶು ತೇಜೋವಿರಚನೆಯುಂ ಕಾಂತಿಯುಂ ಆವರಿಸಿರೆ ಗರ್ಭೋದಯಾದ್ರಿಯಿಂದ ಉದಯಿಸಿದಂ: **ಪಂಪಭಾ,** ೧. ೧೪೫)

ಭರತಕುಲತಿಲಕ – [ನಾ] ಭರತವಂಶದ ಶ್ರೇಷ್ಠ (ಅಂತು ಭರತಕುಲತಿಲಕರಪ್ಪ ಇರ್ವರ್ ಮಕ್ಕಳಂ ಪೆತ್ತು ಕೊಂತಿ ಸಂತಸದ ಅಂತಮನೆಯ್ದಿರ್ಪುದುಂ: **ಪಂಪಭಾ,** ೧. ೧೨೮ ವ)

ಭರತಕ್ಷೇತ್ರ – ಭರತಖಂಡ (ಜಿನೇಂದ್ರವಂದನಾಭಕ್ತಿಯಿಂ ಪೋದಲ್ಲಿ ಭರತಕ್ಷೇತ್ರದೊಳ್ ಯುಗದೊಳ್ ತೀರ್ಥಂಕರನುಂ ಚಕ್ರವರ್ತಿಗಳುಮಪ್ಪರೆಂದುಸರ್ವಜ್ಞರ್ ಬೆಸಸೆ: **ಆದಿಪು,** ೧೨. ೧೦೫ ವ)

ಭರತಾಗಮ – [ನಾ] ಭರತನಿಂದ ರಚಿತವಾದ ನಾಟ್ಯಶಾಸ್ತ್ರ (ಭರತಾಗಮದೊಳ್ ಮೂವತ್ತೆರಡೆನೆ ನೆಗಟ್ದಂಗಾಹಾರಮುಂ ನೂಱೆಂಟುಂ ಕರಣಮುಮಂ ಅವಳ ಡವಕೆಯ ಪರಿಚಾರಿಕೆಯಱೆಗುಂ ಆಕೆಗವು ತೊಡರ್ವಡೆಯೇ: **ಆದಿಪು,** ೯. ೨೯)

ಭರೋದ್ಧತ – [ನಾ] [ಭರ+ಉದ್ಧತ] ಸಮ್ಮರ್ದದಿಂದ ಗರ್ವಿಷ್ಠವಾದ (ಸಾಳತಮಾಳಕಾನನಭರೋದ್ಧತ ಸಿಂಧುರಕಂಠ ಗರ್ಜನಾ ಆಭೀಳಮಂ ಅಂಬರೇಚರವಧೂಕರಪಲ್ಲವ ಸಂಚಳಲ್ಲತಾಂದೋಳಮಂ: **ಪಂಪಭಾ,** ೭. ೭೬)

ಭರ್ಮ – [ನಾ] ಚಿನ್ನ (ಸಾಹಿಯಾಣದ ಚೀನದ ಧವಳವಟ್ಟದ ಭರ್ಮದ ಜೊಂಗದ ದೇವಾಂಗದ ಸಕಳವಟ್ಟಿಗೆಗಳುಮಂ: **ಆದಿಪು,** ೪. ೩೪ ವ)

ಭವ – [ನಾ] ಜೀವಿತಾವಧಿ (ಎನಿತೆನಿತು ಕಟಿದ ಭವಮಂ ನೆನದಪೆ ಎನಿತೆನಿತು ಭವದ ಬಂಧುಗಳಂ ನೀಂ ನೆನೆದಪೆ: **ಆದಿಪು,** ೨. ೬೦); [ನಾ] ಜನ್ಮ (ನಿನ್ನ ನಿರ್ನಾಮಿಕೆಯಾದ ಭವದೊಳ್ ಮದೀಯಜನನೀಚರಗುರುಗಳ್ ನಿನಗಂ ಗುರುಗಳಾದೊಡೆ: **ಆದಿಪು,** ೩. ೭೨ ವ); [ನಾ] ಸಂಸಾರ (ಇನ್ನೆಗಂ ಓರಂತೆ ತೊಟಲ್ದೆಂ ಇಂ ತಿರಿಯಲಾಱೆಂ ಭವಾಂಬೋಧಿಯೊಳ್: **ಆದಿಪು,** ೯. ೬೦); [ನಾ] ಐದು ಸಂಸಾರಭೇದಗಳಲ್ಲಿ ಒಂದು (ಅವಱೊಳ್ ದ್ರವ್ಯಕ್ಷೇತ್ರಕಾಲಭವಭಾವಭೇದದಿಂ ಪಂಚವಿಧಂ ಸಂಸಾರಂ: **ಆದಿಪು,** ೧೦. ೬೩ ವ); [ನಾ] ಶಿವ (ಭವಲಾಲಾಟವಿಲೋಚನಾಗ್ನಿ ಶಿಖೆಯಿಂ ಬೆಂದಳ್ಕಿ ಮತ್ತಂ ಮನೋಭವಂ ಎಟ್ಟಿತ್ತೊಡೆ ಕಾಮಕಾಂತೆ ಬಟಿಯಂ ತನ್ನಿಚ್ಛೆಯಿಂ ಮೆಚ್ಚಿ ಬಣ್ಣವುರಂ ತೀವಿದ ಮಾಟಿಕೆಯಾಯ್ತು: **ಪಂಪಭಾ,** ೭. ೨೪)

ಭವಂಗಿಡಿಸು – [ಕ್ರಿ] ಹಿಕತೆಯನ್ನು ನಾಶಪಡಿಸು (ಭವಂ ತವೆ ಭವತ್ಪದಾಂಬುರುಹಸೇವೆಗೆಯ್ವಾರುಮಂ ಭವಂಗಿಡಿಪೆ: **ಆದಿಪು,** ೧೩. ೮೭)

ಭವತ್ – ನಿನ್ನ (ಭವತ್ ಊರುಯುಗಂಗಳಂ ಆಜಿರಂಗದೊಳ್ ಗಿಜಿಬಿಜಿಮಾಡಲೆಂದು ಅವನ ಪೂಣ್ದುದು ನಿಕ್ಕುವಂ ಆಗದಿರ್ಕುಮೇ: **ಪಂಪಭಾ,** ೯. ೫೨); ತಮ್ಮ (ಬಾದೇನ್ ಆ ಮದೀಯ ಕರ್ಮಫಳೋದಿತ ಸಂತಾಪರೂಪಪಾಪಕಳಾಪ ವಿಚ್ಛೇದನಕರಮಾಯ್ತು ಭವತ್ ಪಾದಪ್ರಕ್ಷಾಳನ ಉದಕದಿಂ ಮುನಿನಾಥಾ: **ಪಂಪಭಾ,** ೬. ೧೩)

ಭವದೀಯ – [ಗು] ನಿನ್ನ (ಸೋಲ್ತೊಱಲ್ದು ನಡೆ ನೋಟಪ್ಪೆಡೆಯೊಳ್ ಭವದೀಯ ರೂಪಲಂಪಟವಿಟರಂ ಮರುಳ್ಗೊಳಿಸಿತು ಉತ್ಕಟಮೋಹತಮಃಪಟಂ ಪಟಂ: **ಆದಿಪು,** ೩. ೯೦)

ಭವನಕಳಹಂಸೆ – [ನಾ] ಮನೆಯಲ್ಲಿ ಸಾಕಿದ ರಾಜಹಂಸ (ಮೃಣಾಳಿಕೆಯಂ ಭವನಕಳಹಂಸೆಗೆ ಬಾಳಮೃಣಾಳ ನಾಳಂಗಳಂ ನೀಡಲುಂ: **ಆದಿಪು,** ೭. ೨೧ ವ)

ಭವನವನಜ್ಯೋತಿಃಕಲ್ಪಾವಾಸ – [ನಾ] [ಜೈನ] ಭವನವಾಸಿ, ವ್ಯಂತರ, ಜ್ಯೋತಿಷ ಮತ್ತು ಕಲ್ಪವಾಸಿಗಳೆಂಬ ನಾಲ್ಕು ಪ್ರಕಾರದ ದೇವತೆಗಳ ನಿವಾಸಗಳು (ಭವನವನಜ್ಯೋತಿಃ ಕಲ್ಪಾವಾಸದೊಳ್ ಕ್ರಮದೆ ಶಂಖ ಭೇರಿ ಕಂಠೀರವ ಘಂಟಾಧ್ವನಿಗಳ್ ನೆಗಟ್ದುವು: **ಆದಿಪು,** ೭, ೪೦)

ಭವಪ್ರತ್ಯಯಜ್ಞಾನ – [ನಾ] [ಜೈನ] ನಾರಕಿಗಳಿಗೂ ದೇವತೆಗಳಿಗೂ ಆಯಾ ಭವಗಳು ಕಾರಣವಾಗಿ ಉಂಟಾಗುವ ಜ್ಞಾನ (ಭವಪ್ರತ್ಯಯಜ್ಞಾನಂ ತೊಟ್ಟನೆ ಪುಟ್ಟೆ ಪೂರ್ವಭವದೊಳ್ ತೊಟ್ಟೊಂದು ವೃತ್ತಾಂತಮಂ: **ಆದಿಪು,** ೨. ೬೬)

ಭವಭಯಹರಣ – [ನಾ] ಸಂಸಾರದ ಕೋಟಲೆಯನ್ನು ನಾಶಮಾಡುವಂಥದು (ದುರಿತಘನತಿಮಿರದಶಶತಕಿರಣಂ ಅತಿಪ್ರೀತಿಕರಣಂ ಅಖಿಳವಿನೇಯೋದ್ಧರಣಂ ಎಮಗಭವ ಭವಭಯಹರಣಂ ಭವದೀಯ ಸಮವಸರಣಂ ಶರಣಂ: **ಆದಿಪು,** ೧೪. ೩೮)

ಭವವಾರಾಶಿ – [ನಾ] ಐಹಿಕತೆಯೆಂಬ ಸಮುದ್ರ (ಭವವಾರಾಶಿ ನಿಮಗ್ನರಂ ದಯೆ ದಮಂ ದಾನಂ ತಪಂ ಶೀಲಂ ಎಂಬಿವೆ ಮೆಯ್ಯಾಗಿರೆ ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ: **ಆದಿಪು,** ೨. ೭)

ಭವಸಂಸ್ಕಾರ – [ನಾ] ಜಾತಿಸ್ಮರಣೆ (ಚಾರಣಯುಗಳಕ್ಕೆ ವಿಧಿಪೂರ್ವಕಂ ಮಹಾದಾನಮನಿತ್ತುದಂ ಆಗಳಾಗಳೆ ಪುಟ್ಟಿದ ಭವಸಂಸ್ಕಾರದಿಂದಂ ಸವಿಸ್ತರಮಱಿದು: **ಆದಿಪು,** ೯. ೧೩೧ ವ)

ಭವಾಂಬುಧಿ – [ನಾ] ಸಂಸಾರಸಮುದ್ರ (ಅಭಯರ್ ನಿರೋಗರುಂ ಶ್ರುತವಿಭವಸಮನ್ವಿತರುಮಪ್ಪರ್ ಎಂಬುದು ಪಿರಿದಲ್ತು ಭವಾಂಬುಧಿಯುಮನೀಸುವರ್ ಅಭಯೌಷಧಶಾಸ್ತ್ರದಾನ ಫಳವಿಳಸನದಿಂ: **ಆದಿಪು,** ೧೦. ೧೧)

ಭವಾನೀಧವ – [ನಾ] ಭವಾನಿಯ ಗಂಡ, ಶಿವ (ಇದು ಕೈಲಾಸಂ ಭವಾನೀಧವನ ನೆಲೆ ಮನೋಜಾತನಂ ಬೂದಿಮಾಡಿತ್ತಿದಱೊಳ್: **ಪಂಪಭಾ,** ೭. ೭೪)

ಭವಿಷ್ಯತ್ – [ಗು] ಮುಂದೆ ಸಂಭವಿಸುವ (ಅಂತು ಭವಿಷ್ಯತ್ ದ್ವಿಜನ್ಮವರ್ಣಕೆ ಅಧ್ಯಯನಧ್ಯಾಪನ ದಾನಪ್ರತಿಗ್ರಹ ಯಜನ ಯಾಜನ ಶಿಷ್ಟವೃತ್ತಿಯುಮಂ .. .. ನಿಱೆಸಿ: **ಆದಿಪು,** ೮. ೭೩ ವ)

ಭವ್ಯ – [ನಾ] [ಜೈನ] ಜಿನಧರ್ಮದಲ್ಲಿ ನಂಬಿಕೆಯಿಟ್ಟವನು (ಅದುವೆ ಭಾವಿಸಿ ಓದುವ ಕೇಳ್ವ ಪೂಜಿಪ ಆದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದು: **ಆದಿಪು,** ೧. ೯); ಮೋಕ್ಷಕ್ಕೆ ಅರ್ಹನಾದ ಜೀವ (ಆತನಭವ್ಯನಲ್ಲಂ, ಭವ್ಯನೇ, ಭವ್ಯನಾಗಿಯುಂ ಆಸನ್ನಭವ್ಯಂ: **ಆದಿಪು,** ೨. ೩೫ ವ)

ಭವ್ಯತೆ – [ನಾ] [ಜೈನ] ಮೋಕ್ಷಾರ್ಹತೆ, ರತ್ನತ್ರಯ ಪ್ರಾಪ್ತವಾಗುವಿಕೆ (ಭವ್ಯತೆ ಪುಣ್ಯಜೀವಮಂ ಸಹಜಸುಖಾಸ್ಪದಂಬರೆಗಂ ಉಯ್ವಿನಂ ಅಲ್ಲಿ ತೊಡಂಕಲೀಗುಮೇ: **ಆದಿಪು,** ೬. ೨೫)

ಭವ್ಯಚಿಂತಾಮಣಿ – [ನಾ] ಭವ್ಯರ ಆಸೆಗಳನ್ನು ನೆರವೇರಿಸುವವನು (ಗುಣಮೆಂಟುಂ ಬಂದು ತನ್ನೊಳ್ ಪೆಣೆದಿರೆ .. .. ಭವ್ಯಚಿಂತಾಮಣಿಯುಂ ತಾನಾಗಿ: **ಆದಿಪು,** ೧. ೪)

ಭವ್ಯಪದ್ಮಾಕರಬೋಧಾದಾಯಿ – [ನಾ] ಭವ್ಯರೆಂಬ ತಾವರೆ ಕೊಳಕ್ಕೆ ಜ್ಞಾನ ನೀಡುವವನು (ನಾಭಿರಾಜಾಂಗನೆ ವಿಶದಯಶೋ ಭಾಗಿಯಂ ಭವ್ಯಪದ್ಮಾಕರ ಬೋಧಾದಾಯಿಯಂ ತಿಗ್ಮಕರನುದಯದೊಳ್ ಪುತ್ರನಂ ಪೆತ್ತಳಾಗಳ್: **ಆದಿಪು,** ೭. ೩೬)

ಭವ್ಯಾವಳಿ – [ನಾ] [ಜೈನಮತದಲ್ಲಿ] ನಂಬಿಕೆಯುಳ್ಳ ಭಾವುಕರು (ತ್ರಿದಶಸ್ತುತ್ಯಮಿದು ಆದಿದೇವಚರಿತಂ

ಕರ್ಣಾಮೃತಸ್ಯಂದಿಯಕ್ಕೆ ಭವ್ಯಾವಳಿಗೆಂದು ಪೇಟಿಸೆ ಬುಧರ್: **ಆದಿಪು,** ೧೬. ೭೯)

ಭಸಿತ – [ನಾ] ಬೂದಿ, ವಿಭೂತಿ (ಮುಳಿಸು ಲಲಾಟನೇತ್ರಶಿಖಿ ಮೆಚ್ಚೆ ವಿನೂತ ರಸಪ್ರಸಾದಂ ಉಜ್ವಳಜಸಂ ಅಂಗಸಂಗತ ಲಸತ್ ಭಸಿತಂ ಪ್ರಭುಶಕ್ತಿ ಶಕ್ತಿ: **ಪಂಪಭಾ,** ೧. ೨)

ಭಸ್ಮರಜ – [ನಾ] ವಿಭೂತಿಯ ಪುಡಿ (ಸರಿಗೆಯೊಳ್ ಸಮೆದ ಅಕ್ಷಮಾಲಿಕೆ ಪೊನ್ನ ಮುಂಜಿ ತೊಳಪ್ಪ ಕಪ್ಪುರದ ಭಸ್ಮರಜಃ ತ್ರಿಪುಂಡ್ರಕಂ ಒಪ್ಪೆ: **ಪಂಪಭಾ,** ೬. ೮)

ಭಸ್ಮೋದ್ಧೂಳಿತ – [ಗು] {ಭಸ್ಮ+ಉದ್ಧೂಳಿತ] ವಿಭೂತಿಯನ್ನು ಧರಿಸಿದ (ವಲ್ಕಲವಸನರುಂ ಕೌಪೀನಧಾರಿಗಳುಂ ಭಸ್ಮೋದ್ಧೂಳಿತಾಂಗರುಂ .. .. ಆಗಿ ತಮಗೆ ತಾವೇ ವನಪ್ರವೇಶಮಂ ಮಾಡಿ: **ಆದಿಪು,** ೯. ೯೩ ವ)

ಭಾ – [ನಾ] ಕಾಂತಿ (ಸುಲಿಪಲ್ ಮಿಂಚಿನ ಗೊಂಚಲುಟ್ಟ ದುಗುಲಂ ಗಂಗಾನದೀಫೇನಂ ಉಜ್ವಲಮುಕ್ತಾಭರಣಂ ತರತ್ತರಳ ತಾರೋದಾರ ಭಾ ಭಾರಂ .. .. ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೭)

ಭಾಗಿನೇಯ – [ನಾ] ಭಗಿನಿಯ [ಅಕ್ಕ ಅಥವಾ ತಂಗಿ] ಮಗ, ಸೋದರಳಿಯ (ನಿನ್ನ ನಲ್ಲನೆ ಗಡಂ ಮತ್ ಭಾಗಿನೇಯಂ ಮಹೋತ್ಸವದಿಂ ಬಂದಪಂ: **ಆದಿಪು,** ૩. ೮೪)

ಭಾಜನ – [ನಾ] ಪಾತ್ರೆ (ಅಂತಃಪುರಪುರಾಂಗನಾನಿಕರಕ್ಕೆ ಮಣಿಮಯ ಭಾಜನಂಗಳೊಳ್ ತೆಕ್ಕನೆ ತೀವಿದ ಪಂಚರತ್ನದ: **ಆದಿಪು,** ೪ ೩೪ ವ); [ನಾ] ಯೋಗ್ಯ (ಅನತಿಶಯಸೌಖ್ಯಭಾಜನಜನಕ್ಕೆ ಭಾಜನಮಿದಪ್ಪುವೆಂಬಂತೆ ಕನತ್ಕನಕಮಣಿಖಚಿತ ಬಹುಭಾಜನಂಗಳಂ: **ಆದಿಪು,** ೫. ೩೮)

ಭಾಜನಾಂಗ – [ನಾ] [ಜೈನ] ಕಲ್ಪಾಂಗಕುಜಗಳಲ್ಲಿ ಒಂದು, ಕೇಳಿದ ಪಾತ್ರೆಗಳನ್ನು ನೀಡುವಂಥದು (ಕಳಧೌತಘಟಂ ಮುಕ್ತಾಫಳಾಂಚಿತಗ್ರೀವಂ ಎಟೆದುಕೊಂಡುದು ತಾರಾವಳಿ ಪರಿವೃತ ನವಸಂಧ್ಯಾಜಳದದ ಗಾಡಿಯಂ: **ಆದಿಪು,** ೭. ೮೪)

ಭಾಜನಾಂಗತರು – [ನಾ] [ಜೈನ] ಪಾತ್ರೆ ಪಡುಗಗಳನ್ನು ಕೊಡುವ ಕಲ್ಪವೃಕ್ಷ (ಕನತ್ಕನಕಮಣಿಖಚಿತ ಬಹುಭಾಜನಂಗಳಂ ಭಾಜನಾಂಗತರು ಕುಡುತರ್ಕುಂ: **ಆದಿಪು,** ೫. ೩೮)

ಭಾನು – [ನಾ] ಸೂರ್ಯ (ಭವಂ ಭವನ ಗೋತ್ರದಿಂದ ಅಜಂ ಅಜಾಂಡದಿಂ ಭಾನು ಭಾನುವೀಧಿಯಿಂ ಇಳಾತಳಂ ತಳದಿನೆಯ್ದೆ ಕಿಱೆತ್ತುದು: **ಪಂಪಭಾ,** ೧೧. ೧೩೩)

ಭಾನುಮತಿ – [ನಾ] ದುರ್ಯೋಧನನ ಹೆಂಡತಿ (ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ: **ಪಂಪಭಾ,** ೯. ೬೯)

ಭಾನುವಳಯ – [ನಾ] ಸೂರ್ಯಮಂಡಲ (ಕರಂಗಳಡಂಗಿ ಕಿಲುಂಬುಗೊಂಡ ಕನ್ನಡಿಗೆಣೆಯಾಯ್ತು ಭಾನುವಳಯಂ: **ಪಂಪಭಾ,** ೬. ೩೬)

ಭಾನುವೀಧಿ – [ನಾ] ಸೂರ್ಯನ ಮಾರ್ಗ, ಆಕಾಶ (ಭವಂ ಭವನ ಗೋತ್ರದಿಂದ ಅಜಂ ಅಜಾಂಡದಿಂ ಭಾನು ಭಾನುವೀಧಿಯಿಂ ಇಳಾತಳಂ ತಳದಿನೆಯ್ದೆ ಕಿಱೆತ್ತುದು: **ಪಂಪಭಾ,** ೧೧. ೧೩೩)

ಭಾ ಭಾರ – [ನಾ] ಕಾಂತಿಪ್ರಸರ (ಉಜ್ವಲಮುಕ್ತಾಭರಣಂ ತರತ್ತರಳ ತಾರೋದಾರ ಭಾ ಭಾರಂ .. .. ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೭)

ಭಾಮಂಡಲ[ಳ] – [ನಾ] [ಜೈನ] ಪ್ರಭಾವಲಯ, ಅರ್ಹಂತನಿಗಿರುವ ಎಂಟು ಪ್ರಾತಿಹಾರ್ಯಗಳಲ್ಲಿ ಒಂದು (ಇರೆ ಭಾಮಂಡಲದೀಪ್ತಿಯ ಪರೆಪುಂ ಛತ್ರತ್ರಯ ಪ್ರಭಾಪರಿಕರಮುಂ: **ಆದಿಪು,** ೧೦. ೪೦); [ನಾ] ಕಾಂತಿಯ ಬಳಸು, ಪರಿವೇಷ (ಪ್ರಚಂಡ ಮಾರ್ತಂಡ ಮರೀಚಿ ತೀವ್ರ ಜ್ವಳನ ಆಸ್ಫಾರ ಕರಾಳ ಕರವಾಳ ಭಾಮಂಡಳ ಪರೀತ ಉದ್ಯತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ,** ೧೩. ೫೧)

ಭಾರತ – [ಗು] ಭರತವಂಶಕ್ಕೆ ಸಂಬಂಧಪಟ್ಟ (ಭರತನಪಾರಗುಣಂ ತನ್ನ ಪೆಸರೊಳಮರ್ದೆಸೆಯೆ ಯಶೋಭಾರಂ ಕುಲಮುಂ ಕಥೆಯುಂ ಭಾರತಮೆನೆ ನೆಗಳ್ದಂ: **ಪಂಪಭಾ,** ೧. ೬೩); [ನಾ] ಭಾರತ ಯುದ್ಧ (ಒಟ್ಟಜೆಯಿಂ ಭಾರತದೊಳ್ ಕಟ್ಟಾಳ್ಗಳನಿಱೆದು ತವಿಸಲ್ ಆ ಜೆಟ್ಟಿಗರಂ ಪುಟ್ಟಿದಂ ಎಂಬವೊಳ್ ಅದಟಂ ಪುಟ್ಟಿದಂ ಅಭಿಮನ್ಯು ಕಲಿತನಂ ಪುಟ್ಟುವವೋಲ್: **ಪಂಪಭಾ,** ೫. ೨೯)

ಭಾರತಿ – [ನಾ] ನಾಟ್ಯದ ವೃತ್ತಿಗಳಲ್ಲಿನ ಒಂದು ಬಗೆ, ಶೃಂಗಾರಾದಿ ಎಲ್ಲ ರಸಪ್ರತಿಪಾದಕವಾದುದು (ಭಾರತಿ ಸಾತ್ವತಿ ಕೈಶಿಕಿ ಆರಭಟಿಯುಮೆಂಬ ವೃತ್ತಿಯೊಳ್ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು: **ಆದಿಪು,** ೯. ೨೬)

ಭಾರತಿಕ – [ನಾ] ನಾಟ್ಯಪ್ರದರ್ಶನದ ಸೂತ್ರಧಾರ (ಇಂ ಬೆಸಸಿಂ ಭಾರತಿಕಂಗೆ ನಾಟ್ಯಘಟನ ಪ್ರಸ್ತಾವನಾಟೋಪಮಂ: **ಆದಿಪು,** ೯. ೧೨)

ಭಾರದ್ವಾಜ – [ನಾ] ದ್ರೋಣ (ಅನಿಬರುಂ ಚೋದ್ಯಂಬಟ್ಟು ಗಾಂಗೇಯ ಧೃತರಾಷ್ಟ್ರರ್ಗಱೆಪಿದೊಡೆ ನದೀತನೂಜಂ ಭಾರದ್ವಾಜಂಗೆ ಬಱೆಯನಟ್ಟಿ ಬರಿಸಿ: **ಪಂಪಭಾ,** ೨. ೫೨ ವ)

ಭಾರವತಾರ – [ನಾ] [ಭಾರ+ಅವತಾರ] ಭಾರ ಇಳಿಸುವುದು (ಧರಾವನಿತೆಯ ಭಾರಾವತಾರದೊಳ್ ಎನಿತಾನುಂ ಫಸಣಿ ಪೋದುದು ಅದು ಕಾರಣದಿಂ ರಾಜಸೂಯದ ಮಾತಂ ಕೇಳ್ದಲ್ಲಿಯೆ ಮಱೆವುದು: **ಪಂಪಭಾ,** ೬. ೨೪ ವ)

ಭಾರ್ಗವ – [ನಾ] ಮೊದಲನೆಯದಕ್ಕೆ ಭೃಗುವಂಶಜ, ಪರಶುರಾಮ ಮತ್ತು ಎರಡನೆಯದಕ್ಕೆ ಬಿಲ್ಲುಗಾರ (ಭಾರ್ಗವಂಗೆ ತಾನೆ ಭಾರ್ಗವನಾಗಿ ಯುವರಾಜಕಂಠಿಕಾಪರಿಕಲಿತ ಕಂಠಲುಂಠನುಂ ಆಗಿ: **ಪಂಪಭಾ,** ೧. ೬೮ ವ); [ನಾ] ಕುಂಬಾರ (ಎಲ್ಲಿಯುಂ ಬೀಡುವಿಡಲೆಡೆವಡೆಯದೆ ಒಂದು ಭಾರ್ಗವ ಪರ್ಣಶಾಲೆಯೊಳ್ ಎಡೆಮಾಡಿಕೊಂಡು: **ಪಂಪಭಾ,** ೩. ೩೯ ವ)

ಭಾವ – [ನಾ] ಇರುವಿಕೆ (ಜೀವಾದಿ ನವಪದಾರ್ಥದೊಳ್ ಆವಗಂ ಅಟ್ಟೆಯನೆ ಮಾಡು ಮೂಢತ್ರಯದೊಳ್ ಭಾವಮನೆ ಬಿಸುಡು: **ಆದಿಪು,** ೫. ೫೬); **[ನಾ]** ರಸೋತ್ಪಾದನಕರ ಚಿತ್ತವೃತ್ತಿ (ವೃತ್ತಿಯೊಳ್ ರಸಮಂ

ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು ಬೇಱೆ ನೀಲಾಂಜನೆಯಾ: **ಆದಿಪು,** ೯. ೨೬)

ಭಾವಕ – [ನಾ] ರಸಿಕ (ಭಾವಕನೆಂದೊಡಂ ಚದುರನೆಂದೊಡಂ ಅರ್ ಪೆಱರಾರೊ ನೀನೆ: **ಪಂಪಭಾ,** ೪. ೯೬)

ಭಾವನ – [ನಾ] [ಜೈನ] ನಾಲ್ಕು ಬಗೆಯ ದೇವತೆಗಳಲ್ಲಿ ಒಂದು ಬಗೆ, ಭವನವಾಸಿ (ವನವಧೂಬ್ರಾತಂ ಔತ್ಸುಕ್ಯವತ್ ಭಾವನಭಾಮಾರಾಜಿ ತದ್ಭಾವನಸುರರ್: **ಆದಿಪು,** ೧೦. ೩೬)

ಭಾವನಭಾಮಾರಾಜಿ – [ನಾ] ಭವನವಾಸಿ ದೇವಿಯರ ಸಮೂಹ (ವನವಧೂವ್ರಾತಂ ಔತ್ಸುಕ್ಯವತ್ ಭಾವನಭಾಮಾರಾಜಿ ತದ್ಭಾವನಸುರರ್ ಅಖಿಳವ್ಯಂತರರ್ ಜ್ಯೋತಿರಿಂದ್ರರ್: **ಆದಿಪು,** ೧೦. ೩೬)

ಭಾವನಸುರ – [ನಾ] ಭವನಿವಾಸಿ ದೇವತೆ (ವನವಧೂಬ್ರಾತಂ ಔತ್ಸುಕ್ಯವತ್ ಭಾವನಭಾಮಾರಾಜಿ ತದ್ಭಾವನಸುರರ್: **ಆದಿಪು,** ೧೦. ೩೬)

ಭವನಾಪರ – [ನಾ] ಅನುಸಂಧಾನಮಾಡುವವನು, ಚಿಂತಿಸುವವನು (ಜಗತ್ಕಾಯಸ್ವಭಾವಭಾವನಾಪರಂ ಸಕಳಶರೀರಗುಣಾಧಿಕ ದುಃಖಾರ್ದಿತಾವಿನೀತರೊಳ್: **ಆದಿಪು,** ೯. ೧೨೯ ವ)

ಭಾವನೆ – [ನಾ] ಗೌರವ (ಜಿನನ ನಮಸ್ಕಾರಮಂತ್ರಂಗಳೊಳ್ ಭಾವನೆಯಂ ತಾಳ್ದಟ್ಟೆಯಿಂದಂ ಜಿನಮಹಿಮೆಗಳಂ ಮಾಡು ನೀಂ ಭವ್ಯನೈ: **ಆದಿಪು,** ೩. ೭)

ಭಾವಾಭಿನಯ – [ನಾ] ಭಾವವನ್ನು ವ್ಯಕ್ತಪಡಿಸುವ ನಟನೆ (ರಸ ಭಾವಾಭಿನಯಂಗಳಂ ಭುಜಲತಾ ಭ್ರೂಚಾಪ ನೇತ್ರೋತ್ಪಲ ಪ್ರಸರಂಗಳ್ ಪಸರಂಗೆಯ್ಯುತ್ತಿರೆ: **ಆದಿಪು,** ೭. ೧೨೩)

ಭಾವಿತ – [ನಾ] ಧ್ಯಾನಿಸಲ್ಪಟ್ಟ (ಅಂತು ಭಾವಿತಾತ್ಮಂ ಅಧ್ಯಾತ್ಮವಿಶಾರದನಾಗಿ ಪರಮಾತ್ಮನೊಳ್ ಕೂಡಿದಂ: **ಪಂಪಭಾ,** ೧೨. ೨೯ ವ)

ಭಾವಿಸು – [ಕ್ರಿ] ಅನುಭವಕ್ಕೆ ತಂದುಕೊ (ಅದುವೆ ಭಾವಿಸಿ ಓದುವ ಕೇಳ್ವ ಪೂಜಿಪ ಆದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದು: **ಆದಿಪು,** ೧. ೯); [ಕ್ರಿವಿ] ಏಕಾಗ್ರತೆಯಿಂದ (ವಿಚಿತ್ರಚಿತ್ರವಿದ್ಯಾಕೌಶಲಮಂ ಅತಿಕುತೂಹಳ ಉತ್ತಾರಿತಲೋಚನನಾಗಿ ನೀಡುಂ ಭಾವಿಸಿ ನೋಡಿ: **ಆದಿಪು,** ೪. ೪ ವ); [ಕ್ರಿ] ಕಲ್ಪಿಸಿಕೊಳ್ಳು (ರಸದಭಿನಯಮಂ ಭಾವಿಸುವೊಡೆ ಆದಿದೇವನ ದೇವೇಂದ್ರನ ಬಗೆಗಂ ಅಸದಳಂ ನರ್ತಕಿಯಾ: **ಆದಿಪು,** ೯. ೨೭); [ಕ್ರಿ] ಲಾಲಿಸು (ಭೂವಲ್ಲಭ ಸೋತ್ಕ್ಷೇಪ ಭ್ರೂವಿಲಸಿತದತ್ತವಾಚನಾದೇಶಂ ಇದಂ ಭಾವಿಸಿಂ ಎಂದು ಅತಿಮಧುರೋದ್ಭಾವಿತ ಗಂಭೀರನಾದದಿಂ ಬಾಜಿಸಿದಂ: **ಆದಿಪು,** ೧೪. ೪೬); [ಕ್ರಿ] ನೆನಸು, ತೋಯುವಂತೆ ಮಾಡು (ಅಂತಲ್ತು ಅಪ್ಪಂದು ಆ ಕಾಂತೆಯಂ ವಿಧಾತ್ರಂ ಮಾಡುವಂದು ಕೊಸಗಿನ ಕೇಸರಂಗಳಂ ಅಮೃತರಸದೊಳಂ ಶೃಂಗಾರರಸದೊಳಂ ಭಾವಿಸಿ: **ಪಂಪಭಾ,** ೪. ೭೫ ವ)

ಭಾಷಾ – [ನಾ] ಮಾತು (ಬಟೆಯಂ ಅಂತರ್ಮುಹೂರ್ತದೊಳ್ ಆಹಾರ ಶರೀರ ಇಂದ್ರಿಯೋಚ್ಛ್ವಾಸ ಭಾಷಾ ಮನಃಪರ್ಯಾಪ್ತಿಗಳೊಳ್ ನೆರೆದು: **ಆದಿಪು,** ೫. ೮೩ ವ)

ಭಾಷಾವಿದರ್ – [ನಾ] ಭಾಷೆಯ ಸೂಕ್ಷ್ಮಗಳನ್ನು ಬಲ್ಲವನು (ಭಾಷಾವಿದರ್ ಕವಿತ್ವವಿಶೇಷಜ್ಞನಿಕಷರಪ್ಪೊಡಪ್ಪುದು ಸಭೆಯೊಳ್ ಮಾಷಮುಖದಂತೆ ದೋಷಗವೇಷಣಪರರಪ್ಪರ್ ಎಂದೊಡದು ತೆಗಟಲ್ತೇ: **ಆದಿಪು,** ೧. ೨೧)

ಭಾಷಿತ – ಮಾತು (ಭರತಸುತಂ ಮರೀಚಿ ಪರಿಗೃಹೀತ ಪರಿವ್ರಾಜಕಂ ಅಪಸಿದ್ಧಾಂತ ಭಾಷಿತಂಗಳಿಂ ಮಿಥ್ಯಾತ್ವವೃದ್ಧಿಯಂ ಮಾಡಿ: **ಆದಿಪು,** ೯. ೯೩ ವ)

ಭಾಸ – [ನಾ] ಪ್ರಕಾಶ (ಎತ್ತಿದ ಪರಾಗರಾಗ ಮುದಿತ ಆಶಾಭಾಸಂ ಉದ್ಯತ್ ಮಧು ಉನ್ಮದಭೃಂಗಧ್ವನಿ ಮಂಗಳಧ್ವನಿಯೆನಲ್: **ಪಂಪಭಾ,** ೫. ೬)

ಭಾಸಿ – [ನಾ] ಗೋಚರ[ವಾದುದು] (ಕಾಯಾಕಾರ ಪರಿಣತಭೂತ ಚೈತನ್ಯಂಗಳ್ ಬಹಿರಂತರ್ಮುಖಭಾಸಿಗಳ್: **ಆದಿಪು,** ೨. ೧೦ ವ)

ಭಾಸುರ – [ನಾ] ಪ್ರಕಾಶಮಾನವಾದ (ಆಸುಕರಂ ಗಡ ತಮಗತಿ ಭಾಸುರಮೃಗರಾಜನಾಮುಮಂ ಗಡಂ ಎಂದು ಆ ದೋಸಕ್ಕೆ ಮುಳಿದು: **ಪಂಪಭಾ,** ೫. ೪೯)

ಭಾಸ್ಕರಚಕ್ರ – [ನಾ] ಸೂರ್ಯಮಂಡಲ (ಪುರುದೇವಂಗಾದ ಕೈವಲ್ಯದ ಮಹಿಮೆಯಂ ಉಗ್ರಾಯುಧಾಗಾರದೊಳ್ ಭಾಸ್ಕರಚಕ್ರೋದ್ಭಾಸಿ ಚಕ್ರೋದ್ಭವದ ಪಿರಿದುಮಾಶ್ಚರ್ಯಮಂ: **ಆದಿಪು,** ೧೦. ೪೯)

ಭಾಸ್ಕರತನೂಜೆ – [ನಾ] ಸೂರ್ಯನ ಮಗಳು, ಯಮುನಾ ನದಿ (ಎಂದು ಭಾಸ್ಕರತನೂಜೆಯಂ ಉಭಯತಟನಿಕಟ ಕುಸುಮನಿವಹ ಪತತ್ಪರಾಗಪಟಳ ಪಿಶಂಗತರತ್ತರಂಗ ಸರೋಜೆಯಂ: **ಪಂಪಭಾ,** ೫. ೫೮ ವ)

ಭಾಸ್ಕರಸುತ – [ನಾ] ಸೂರ್ಯನ ಮಗ, ಕರ್ಣ (ಪಾರ್ವನೊಳ್ ಕಲಹಮಾಗದು ಚಿಃ ದೊರೆಯಲ್ತಿದು ಎಂದು ಭಾಸ್ಕರಸುತಂ ಒಯ್ಯನೋಸರಿಸೆ: **ಪಂಪಭಾ,** ೩. ೭೧)

ಭಾಸ್ವತ್ – [ಗು] ಹೊಳೆಯುವ (ವೀರವೈರಿಕ್ಷಿಪ ಗಜಘಟಾಟೋಪ ಕುಂಭಸ್ಥಳೀಭೇದನಂ ಉಗ್ರೋದ್ಭಾಸಿ ಭಾಸ್ವತ್ ಭುಜ ಪರಿಘನಂ ಆರೂಢಸರ್ವಜ್ಞನಂ: **ಪಂಪಭಾ,** ೧. ೫೧)

ಭಿಂಡಿವಾಳ – [ನಾ] ಒಂದು ಆಯುಧ, ಭಲ್ಲೆ (ಚಾಪ ಚಕ್ರ ಪರಶು ಕೃಪಾಣ ಶಕ್ತಿ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳಂ ಅತಿ ಪ್ರವೀಣನುಂ: **ಪಂಪಭಾ,** ೨. ೩೪ ವ)

ಭಿತ್ತಿ – [ನಾ] ಹಿನ್ನೆಲೆ, ಮಾನದಂಡ (ಮರಕತಮಣಿವಿರಚಿತ ವಿಮಳಭಿತ್ತಿ ಪೊಗಟಲ್ಕಮರಿದದು ಬೇಱೆ ಭಿತ್ತಿ: **ಆದಿಪು,** ೪. ೩೦ ರಗಳೆ); [ನಾ] ಗೋಡೆ (ಒಂದು ಕಾಳಾಗರುಧೂಪ ಧೂಮಮಲಿನ ಶ್ಯಾಮಲಾಲಂಕೃತ ವಿಚಿತ್ರಭಿತ್ತಿವಿರಾಜಿತ ಹರ್ಮ್ಯತಳದೊಳ್: **ಪಂಪಭಾ,** ೪. ೧೦೮ ವ)

ಭಿನ್ನಭಾಜನ – [ನಾ] ಒಡೆದ ಮಡಕೆ, ಬೋಕಿ ಬಿಂಚು (ವಿಜ್ಞಾನಮಾತ್ರಮೇ ತತ್ವಂ ಆತ್ಮಾದಿತತ್ವಮಿಲ್ಲೆಂಬ ನಿನ್ನ ಮಾತು ಭಿನ್ನಭಾಜನಸಮಾನಂ: **ಆದಿಪು,** ೨. ೧೦ ವ)

ಭಿಷಕ್ ಪರಿಷತ್ – [ನಾ] ವೈದ್ಯವೃಂದ (ಕುಶಲ ಭಿಷಕ್ ಪರಿಷತ್ ಸಂಪಾದಿತ ಕಲ್ಯಾಣಾಮೃತಾಹಾರಂಗಳಿರ್ದಂತೆ: **ಆದಿಪು,** ೮. ೩೨ ವ)

ಭೀಮ – [ನಾ] ಭೀಮ ಎಂಬ ರಾಜ (ಮೊಸಳೆಯಂ ಪಿಡಿವಂತಿರೆ ನೀರೊಳೊತ್ತಿ ಭೀಮನನತಿ ಗರ್ವದಿಂ ಪಿಡಿಯೆ

ಮೆಯ್ಗಲಿ ಬದ್ದೆಗನನ್ನನಾವನೋ: **ಪಂಪಭಾ,** ೧. ೨೬); **[ನಾ]** ಭಯಂಕರ (ಭೀಮಂ ಭಯಂಕರಂ ಪೆಱತೇ ಮಾತು ಈ ಕೂಸಿನಂದಂ ಈತನ ಪೆಸರುಂ ಭೀಮನೆ ಪೋಗೆನೆ ಮುನಿಜನಮೀ ಮಾಟಕ್ಕೆಯಿಂ ಆಯ್ತು ಶಿಶುಗೆ ಪೆಸರನ್ವರ್ಥಂ: **ಪಂಪಭಾ,** ೧. ೧೨೮); **[ನಾ]** ಪಾಂಡುವಿನ ಮಗ (ಭೀಮ ಅಶ್ವತ್ಥಾಮರಿರ್ವರುಂ ಚೇತರಿಸಿ ಸೂತಪತಾಕಾ ತುರಂಗಮೋಪೇತ ರಥಂಗಳನೇಱಿಕೊಂಡು: **ಪಂಪಭಾ,** ೧೨. ೭೭ ವ)

ಭೀಮಸೇನ – **[ನಾ]** ಪಾಂಡುವಿನ ಮಗ ಭೀಮ (ಭೀಮಸೇನ ಚರಣಪ್ರಹರಣಗಳಿತ ಶೋಣಿತಾರ್ದ್ರಮೌಳಿಯುಮಾಗಿ: **ಪಂಪಭಾ,** ೧೩. ೧೦೨ ವ)

ಭೀಷಣ – **[ನಾ]** ಭಯಂಕರವಾದ (ಪೊದಳ್ದ ಲಯಾಂತಕ ತ್ರಿಶೂಲೋಪಮ ಭೀಷಣಭ್ರುಕುಟಿ ಮುನ್ನಮೆ ರೌದ್ರ ಗದಾಯುಧಂಬರಂ ಪೋಪ ಭುಜಾರ್ಗಳಂ ರಿಪುಗಳ ಗ್ರಹಮಾದುದು ಭೀಮಸೇನನಾ: **ಪಂಪಭಾ,** ೭. ೬)

ಭೀಷ್ಮ – **[ನಾ]** ಶಂತನು–ಗಂಗೆಯರ ಮಗ (ಅಂತು ಭಿಷ್ಮಂ ಗ್ರೀಷ್ಮಕಾಲದ ಆದಿತ್ಯನಂತೆ ಕಾಯ್ದು ಅಂತಕಾಲದ ಅಂತಕನಂತೆ ಕೆಳರ್ದು: **ಪಂಪಭಾ,** ೧೧. ೪೦ ವ)

ಭುಗಭುಗನೆ – **[ಅ]** ಭುಗ ಭುಗ ಎಂದು (ಭುಗಭುಗನೆಚ್ಚು ಪಾಯ್ವ ಬಿಸುನೆತ್ತರ ಸುಟ್ಟುರೆಯಂ ನೆಲಕ್ಕೆ ಪರ್ದುಗಳ್ ಉಗಲೀದೆ ಅವ್ವಳಿಸಿ ಪೀರ್ವಿನಂ: **ಪಂಪಭಾ,** ೧೦. ೮೦)

ಭುಜ – **[ನಾ]** ತೋಳು (ವೀರವೈರಿಕ್ಷಿತಿಪ ಗಜಘಟಾಟೋಪ ಕುಂಭಸ್ಥಳೀಭೇದನಂ ಉದಗ್ರ ಉದ್ಧ ಅಸಿ ಭಾಸ್ವತ್ ಭುಜಪರಿಘನಂ ಆರೂಢಸರ್ವಜ್ಞನಂ: **ಪಂಪಭಾ,** ೧. ೫೧)

ಭುಜಂಗ – **[ನಾ]** ಹಾವು (ಮಾಗಧಾಮರಂ ವಿನಮಿತಸರ್ವಾಂಗಂ ಚಚ್ಚಾರವಕೆ ಭುಜಂಗನ ಕೊರಲಂತೆ ಬಾಗಿದಂ ಮೂಱಿಡೆಯೊಳ್: **ಆದಿಪು,** ೧೨. ೧೧೧)

ಭುಜಂಗಮ – **[ನಾ]** ಹಾವು (ಕ್ರಮದೊಳ್ ಅಸಂಜ್ಞಿಯುಂ ಸರಿಸೃಪಾಳಿಯುಂ ವಿಹಗಾಳಿಯುಂ ಭುಜಂಗಮತತಿಯುಂ ಮೃಗಾರಿಗಣಮುಂ ಲಲನಾಜನಮುಂ: **ಆದಿಪು,** ೫. ೯೩)

ಭುಜಂಗಮೂರ್ತಿ – **[ನಾ]** ಸರ್ಪಾಕಾರವುಳ್ಳವನು (ಅಂತು ಅಜಾತಶತ್ರು ಶತ್ರುಪಕ್ಷಕ್ಷಯಕರ ಕರವಾಳದಂಷ್ಟ್ರಾಭೀಳ ಭುಜಂಗಮೂರ್ತಿ .. .. ಅಪ್ಪ ಅರಿಕೇಸರಿಯ ತೋಳ್ವಲದೊಳ್: **ಪಂಪಭಾ,** ೪. ೧೦ ವ)

ಭುಜಂಗೀ – **[ನಾ]** ಸರ್ಪಿಣಿ (ವೀರಶ್ರೀಭುಜಂಗೀಸಮಾಶ್ರಯ ಶ್ರೀಖಂಡಕಾಂಡಗಳುಮಪ್ಪ ದೋರ್ದಂಡಂಗಳಿಂದಂ ಅತಿನಿಬಿಡಾಲಿಂಗನಂಗೆಯ್ದು ಕಾರ್ಯಮಮಂ ಬೆಸಸಿರ್ಕುಂ: **ಆದಿಪು,** ೧೪. ೪೬ ವ)

ಭುಜಗ – **[ನಾ]** ಹಾವು, ನಾಗ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩)

ಭುಜಗಶಿಶು – **[ನಾ]** ಹಾವಿನ ಮರಿ (ಅಸಿತ ಭುಜಶಿಶುತರಳತರವಾರಿ ಖಡ್ಗಖೇಟಕ ವ್ಯಗ್ರಕರದ್ವಯ ಉದ್ದಾಮಪದಾತಿಬಹಳಂ: **ಆದಿಪು,** ೧೩. ೪೫ ವ)

ಭುಜಪರಿಘ – **[ನಾ]** ತೋಳು ಎಂಬ ಪರಿಘಾಯುಧ (ವೀರವೈರಿಕ್ಷಿತಿಪ ಗಜಘಟಾಟೋಪ ಕುಂಭಸ್ಥಳೀಭೇದನಂ ಉಗ್ರೋದ್ಭಾಸಿ ಭಾಸ್ವತ್ ಭುಜಪರಿಘನಂ ಆರೂಢಸರ್ವಜ್ಞನಂ: **ಪಂಪಭಾ,** ೧. ೫೧)

ಭುಜಬಲಿ – **[ನಾ]** [ಜೈನ] ಆದಿತೀರ್ಥಂಕರನ ಮಗನಾದ ಬಾಹುಬಲಿ (ಪುರತನಯರ್ ಭುಜಬಲಿಯುಂ ಭರತನುಮೆನೆ ದೊರೆಗೆವಂದೊಡೆ: **ಆದಿಪು,** ೧೪. ೮೧)

ಭುಜಲತಾ – **[ನಾ]** ತೋಳೆಂಬ ಬಳ್ಳಿ (ರಸ ಭಾವಾಭಿನಯಂಗಳಂ ಭುಜಲತಾ ಭ್ರೂಚಾಪ ನೇತ್ರೋತ್ಪಲ ಪ್ರಸರಂಗಳ್ ಪಸರಂಗೆಯ್ಯುತ್ತಿರೆ: **ಆದಿಪು,** ೭. ೧೨೩)

ಭುಜಶಿಖರ – **[ನಾ]** ತೋಳಿನ ಮೇಲ್ಭಾಗ, ಹೆಗಲು (ಕುಲಶಿಖರಿ ಶಿಖರೋತ್ತುಂಗಂಗಳಾದ ಭುಜಶಿಖರಂಗಳುಂ: **ಆದಿಪು,** ३. ೯ ವ)

ಭುಜಾರ್ಗಳ – **[ನಾ]** ಅಗಳಿಯ ಹಾಗಿರುವ ಭುಜ (ಪನ್ನತರ ನಡುವಂ ಉಡಿಯಲ್ಕೆನ್ನ ಭುಜಾರ್ಗಳಮೆ ಸಾಲ್ಗುಂ ಒಸೆ ಮೇಣ್ ಮುನಿ ಮೇಣ್ ಎನ್ನ ನುಡಿ ಟಾಠಡಾಢಣಂ ಎನ್ನಂ ಬೆಸಸುವುದು ರಾಜಸೂಯಂ ಬೇಳಲ್: **ಪಂಪಭಾ,** ೬. ೨೬)

ಭುವನತ್ರಯ – **[ನಾ]** ಮೂರು ಲೋಕಗಳು (ಅತ್ರಿಯ ಪಿರಿಯ ಮಗಂ ಭುವನತ್ರಯ ಸಂಗೀತ ಕೀರ್ತಿ ಸೋಮಂ: **ಪಂಪಭಾ,** ೧. ೬೧)

ಭುವನಪ್ರದೀಪ – **[ನಾ]** ಲೋಕಕ್ಕೆ ಬೆಳಕಾದವನು (ನರಸಿಂಗಂಗತಿ ಧವಳಯಶಂ ಯುದ್ಧಮಲ್ಲನಗ್ರಸುತಂ ತದ್ಭುವನ ಪ್ರದೀಪನಾಗಿರ್ದವಾರ್ಯ ವೀರ್ಯಂಗೆ ಬದ್ದೆಗಂ ಪಿರಿಯ ಮಗಂ: **ಪಂಪಭಾ,** ೧. ೨೩)

ಭುವನಭವನ – **[ನಾ]** ಲೋಕವೆಂಬ ಮನೆ (ಚಾಗದ ನೆಗಟ್ತೆಯೊಳ್ ಬೀರದ ಏಟಗ್ಗೆಯೊಳ್ ನೆಗಟೆ ಮಗಂ ಮಗನೆನೆ ಪುಟ್ಟಲೊಡಂ ಕೋಟಿಕ್ಕೊಗಗೊಂಡುದು ಭುವನಭವನಂ ಅರಿಕೇಸರಿಯೊಳ್: **ಪಂಪಭಾ,** ೧. ೪೨)

ಭುವಾ – ಭೂಮಿಗೆ (ಸದಿಗ್ವಳಯಯಾ ಭುವಾ ಸಗಿರಿಸಾಗರದ್ವೀಪಯಾ: **ಪಂಪಭಾ,** ೪) ೨೭

ಭೂಚಕ್ರ – **[ನಾ]** ಭೂಮಂಡಲ (ನಿಮ್ಮೀ ಕ್ರಮಕಮಲಕ್ಕೆ ಎಱಗದೆ ವಕ್ರಿಸಿ ಭೂಚಕ್ರದೊಳಗೆ ಬಾಟ್ವರುಂ ಒಳರೇ: **ಪಂಪಭಾ,** ೧೧. ३೦)

ಭೂಚರಿ – **[ನಾ]** ಮನುಷ್ಯಸ್ತ್ರೀ (ಖೇಚರಿಯೋ ಭೂಚರಿಯೋ ನಿಶಾಚರಿಯೋ ರೂಪು ಬಣ್ಣಿಸಲ್ಕೆ ಅರ್ಗಂ ಅವಾಗ್ಗೋಚರಂ ಈ ಕಾನನಮುಂ ಅಗೋಚರಂ ಇವಳ್ ಇಲ್ಲಿಗೇಕೆ ಬಂದಳೊ ಪೇೞಿಂ: **ಪಂಪಭಾ,** ३. ೧೪)

ಭೂಜ – **[ನಾ]** ಮರ (ಸರಳ ತಮಾಳ ತಾಳ ಹರಿಚಂದನ ನಂದನ ಭೂಜರಾಜಿಯಿಂ ಸುರಿವ ಅಲರ್ದೋಳಿ ತದ್ವನಲತಾಂಗಿಯ ಸೂಸುವ ಸೇಸೆಯಾಯ್ತು: **ಪಂಪಭಾ,** ೫. ೫೨)

ಭೂಜಾತ – **[ನಾ]** ಮರ (ಬಾಲಸಹಕಾರತರು ನವಮಾಲಿಕೆಗೆ ಅತಿಲಲಿತ ಪೂಗಭೂಜಾತಂ ತಾಂಬೂಲಲತೆಗೆ ಎಂಬವೊಲ್ ಸ್ಮರಲೀಲಂ ನಿಜತನಯಂ ಎನ್ನ ತನುಜೆಗೆ ತಕ್ಕಂ: **ಆದಿಪು,** ೪. ೨೮)

ಭೂತಧಾತ್ರಿ – **[ನಾ]** ಭೂಮಿ (ಭಯಮೇಕಕ್ಕುಂ ಅದೆಂತೆಂದು ಅದಟುಮಂ ಪೆರ್ಮಾತುಮಂ ಭೂತಧಾತ್ರಿಯೊಳೋರಂತೆ ನೆಗಟ್ಟೆ : **ಪಂಪಭಾ,** ೧೨. ೧೭೫)

ಭೂತನಾಥ – **[ನಾ]** ಶಿವ (ಕರ್ಣಾರ್ಜುನರೇೞಿಂ ನೋಡಲ್ಕೆ ಭೂತನಾಥಂ ಬಂದಂ: **ಪಂಪಭಾ,** ೧೨. ೧೩೯)

ಭೂತವಾದಿ – [ನಾ] ನಿರೀಶ್ವರವಾದಿ (ಅನೇಕ ಯುಕ್ತ್ಯೋಕ್ತಿಗಳಿಂ ಭೂತವಾದಿಯಪ್ಪ ಮಹಾಮತಮಂ ನಿರಾಕರಿಸಿ: **ಆದಿಪು,** ೨. ೧೦ ವ)

ಭೂತಸ್ವಭಾವ – [ನಾ] [ಪಂಚ]ಭೂತಗಳ ಸಮುದಾಯ (ನಿಮ್ಮ ಮುನ್ನೆ ನುಡಿದ ಕಾಯಾಕಾರಪರಿಣತಭೂತಸ್ವಭಾವಮೆ ಚೈತನ್ಯಂ: **ಆದಿಪು,** ೨. ೧೦ ವ)

ಭೂತಳ – [ನಾ] ನೆಲ (ಪಾಸಱಿಕೆ ಸಿಂಹಪೀಠಂ ಅಳಿನಿರುತಿ ಮಂಗಳಗೀತಿ ಭೂತಳಂ ಪಾಸು ಮೃಗವ್ರಜಂ ಪರಿಜನಂ ಪೊದಱಿರ್ ಓಲಗಸಾಲೆ: **ಪಂಪಭಾ,** ೭. ೨೯)

ಭೂತಾಂಗನಾ – [ನಾ] ಪಿಶಾಚಸ್ತ್ರೀಯರು (ಭೂತಾಂಗನಾನಿಕರಂ ಶೋಣಿತವಾರಿಯಂ ಕುಡಿದು ಅಗುರ್ವಪ್ಪನ್ನೆಗಂ ಸೂಸೆ ನೋಡ ಕವಿಲ್ತಿರ್ದುದು ಕೂಡೆ ಸಂಜೆಗವಿದಂತಾ ದ್ರೋಣನಿಂ ಕೊಳ್ಗುಳಂ; **ಪಂಪಭಾ,** ೧೨. ೨೫)

ಭೂತಿ – [ನಾ] ಬೂದಿ (ಮನೋಜಾತಮಹೋತ್ಸಾಹರ್ ತದ್ಭೂತಿಯನಿಟ್ಟರ್ ತ್ರಿಪುಂಡ್ರಮಂ ದಿವಿಜೇಂದ್ರರ್: **ಆದಿಪು,** ೧೬. ೫೩)

ಭೂಧರ – [ನಾ] ಬೆಟ್ಟ, ಪರ್ವತ (ಶರಭಂಗಳ್ಗೆಡೆ ಸಿಂಹದುರ್ವ್ವನಗಂದೇಭೋತ್ಕರಕ್ಕೆಂದುಂ ಆಗರಮ್ ಈ ಭೂಧರಂ: **ಆದಿಪು,** ೧೩. ೮೨); [ನಾ] [ಕೂರ್ಮಾವತಾರದಲ್ಲಿ] ಭೂಮಿಯನ್ನು ಹೊತ್ತವನು, ವಿಷ್ಣು, ಶ್ರೀಕೃಷ್ಣ (ಏನೆಂಬೆನಾಂ ಮಱೆದೆಂ ಮುನ್ನಿನದೊಂದು ವೈರಮನಿದಿಂತೇಕಾರಣಂ ಭೂಧರಾ: **ಪಂಪಭಾ,** ೧೨. ೨೦೭)

ಭೂಪ – [ನಾ] ರಾಜ (ಪೇಟೆಂ ಎನ್ನನಾವನೆಚ್ಚಂ ಎಂಬ ಮುನಿಯ ಮುನಿದ ಸರಮಂ ಕೇಳ್ದು ಬಿಲ್ಲನಂಬುಮಂ ಈಡಾಡಿ ತನ್ನ ಮುಂದೆ ನಿಂದಿರ್ದ ಭೂಪನಂ ಮುನಿ ನೋಡಿ: **ಪಂಪಭಾ,** ೧. ೧೧೧ ವ)

ಭೂಪಟಲ – [ನಾ] ಭೂಮಂಡಲ (ಸಮಸ್ತ ಭೂಪಟಲಮನಾಂ ತೊಟಲ್ದು ಅಱಿಸಿ ನಿನ್ನನೊಡಗೂಡಿ ನಿಜೇಶನಂ ಯಶಃಪಟಹನಿನಾದಮಂ ಪರಪುವೆಂ: **ಆದಿಪು,** ೩. ೪೫)

ಭೂಪತಿ – [ನಾ] ಮಹಾರಾಜ (ನಷ್ಟಂ ನಷ್ಟಂ ಮೃತಂ ಮೃತಂ ಎಂಬುದು ಇನ್ನಟಲದಿರ್ ಮೇಲಪ್ಪುದಂ ಬಗೆ ಭೂಪತೀ: **ಪಂಪಭಾ,** ೧೩. ೨೨)

ಭೂಭಾಗ – [ನಾ] ನೆಲದ ಮೇಲೆ (ಭೂಭಾಗದೊಳ್ ತಂದು ತಾಟಿಸುತುಂ ಕೋಟಲೆಗೊಳ್ವ ರತ್ನಮಕುಟದ್ಯೋತ ಉತ್ತಮಾಂಗಂ ವಿರಾಜಿಸುವನ್ನಂ ಪೊರಳ್ವ ಪಗೆಯಂ ಕಣ್ಣಾರ್ವಿನಂ ನೋಡಿದರ್: **ಪಂಪಭಾ,** ೧೨. ೧೫೧)

ಭೂಭುಜ – [ನಾ] ರಾಜ (ಗುಣಾರ್ಣವಭೂಭುಜಂಗೆ ಬಟ್ಟೆದೋಱುವವೊಲಂದು ಒಗೆದಂ ಕಮಲೈಕಬಾಂಧವಂ: **ಪಂಪಭಾ,** ೪. ೧೧೧)

ಭೂಭೃತ್ – [ನಾ] ಪರ್ವತ (ಪತ್ತುವಿಡಲ್ ಭೂಭರತ್ಕುಳಂಗಳ್ ಬಗೆದುವು: **ಆದಿಪು,** ೧೨. ೮೮); [ನಾ] ರಾಜ (ಅಂತು ಪಾಂಡುರಾಜಂ ಅಧಿಕತೇಜನುಂ ಅವನತವೈರಿಭೂಭೃತ್ ಸಮಾಜನುಂ ಆಗಿ ನೆಗಟುತ್ತಿರ್ದೊಂದು ದಿವಸಂ: **ಪಂಪಭಾ,** ೧. ೧೧೦ ವ)

ಭೂಭೃತ್ಪತಿ – [ನಾ] ರಾಜಾಧಿರಾಜ (ಶಾಂತರೂಪದಿನಿರ್ದತ್ತು ಅಳುರುತ್ತಮಿರ್ದ ಕೋಪಾನಳನಿಂದುಪಶಾಂತನಾದ ಭೂಭೃತ್ಪತಿವೋಲ್: **ಆದಿಪು,** ೧೩. ೪೦)

ಭೂಭೃನ್ಮುಖ್ಯ – [ನಾ] [ಭೂಭೃತ್+ಮುಖ್ಯ] ರಾಜರುಗಳಲ್ಲಿ ಮುಖ್ಯ, ಸಾರ್ವಭೌಮ (ಪರಿಪೂರ್ಣೇಂದುವಿಂ ಅನ್ವಯಾಭ್ರತಿಳಕಂ ತಿಗ್ಮಾಂಶುವಿಂ ತೀವ್ರಭಾಸುರತೇಜಂ ಸುರಶೈಲದಿಂ ಸಕಳಭೂಭೃನ್ಮುಖ್ಯಂ: **ಆದಿಪು,** ೮. ೨೭)

ಭೂಮಿ – [ನಾ] ನೆಲೆ (ಆಂ ತನಗೆ ಪರಮವಿಶ್ವಾಸಭೂಮಿಯೆನಾಗಿ ಕಿಱೆಯಂದಿಂದಿತ್ತ ನಡೆಪಿದ ಓದಿಸಿದ ದಾದಿಯೆನಪ್ಪುದಱಿಂ: **ಆದಿಪು,** ೪. ೨೧ ವ)

ಭೂಮಿಭಾಗ – [ನಾ] ಭೂಪ್ರದೇಶ (ನಭೋಭಾಗದಿಂ ಭೂಮಿಭಾಗಕ್ಕಿಟಿದು ತನ್ನ ಮುಂದೆ ನಿಂದ ಅರವಿಂದ ಬಾಂಧವನಂ ನೋಡಿ ನೋಡಿ: **ಪಂಪಭಾ,** ೧. ೯೧ ವ)

ಭೂರಿ – [ನಾ] ಮಹತ್ತರವಾದ, ಹಿರಿದಾದ (ಎಱಿದಂ ಭೂತಳರಾಜ್ಯಭೂರಿಭರಮಂ ತಾಳಲ್ಕೆ ಮತ್ಪುತ್ರಂ ಈ ಪೊಱಿಗೆ ಇನ್ನೀತನೆ ಯೋಗ್ಯಂ ಎಂಬ ಬಗೆಯಿಂ: **ಆದಿಪು,** ೬. ೨೩)

ಭೂರಿಭೂತಲ – [ನಾ] ವಿಶಾಲವಾದ ಭೂಮಂಡಲ (ಬಲಿಯಂ ವಾಮನರೂಪದಿಂದಮೆ ವಲಂ ಮುಂ ಬೇಡಿದೆಂ ಭೂರಿಭೂತಲಮಂ ಕುಂದೆನಗಾಯ್ತೆ ಕೊಂಡೆನಿಳೆಯಂ: **ಪಂಪಭಾ,** ೯. ೨೦)

ಭೂರುಹ – [ನಾ] ಮರ (ಸರಿತ್ ಗಿರಿ ದರಿ ಭೂರುಹ ಸೇತು ವನ ಸೀಮೋಪಲಕ್ಷಿತಂಗಳಪ್ಪ ಖೇಡಂಗಳುಮಂ: **ಆದಿಪು,** ೮. ೬೩ ವ)

ಭೂರ್ಜ – [ನಾ] ಒಂದು ಬಗೆಯ ಮರ (ಕಕುಭ ಅಶೋಕ ಕದಂಬ ಲುಂಗ ಲವಲೀಭೂಜ ಆರ್ಜುನ ಅನೋಕಹ ಪ್ರಕರಂ: **ಪಂಪಭಾ,** ೫. ೮೦)

ಭೂವಧೂವರ – [ನಾ] ಭೂಮಿಯೆಂಬ ಹೆಣ್ಣಿನ ಒಡೆಯ (ಪಯೋರುಹವಿಳಾಸಸ್ಥಾನೆಯಿಂ ಭೂವಧೂವರಂ ಅಬ್ಜೇಕ್ಷಣೆ ಕಲ್ಪವೃಕ್ಷದಿಂ ಇಳಾಲೋಕೈಕಕಲ್ಪದ್ರುಮಂ: **ಆದಿಪು,** ೮. ೨೭)

ಭೂವಲಯ – [ನಾ] ಭೂಮಂಡಲ, ರಾಜ್ಯ (ಭೂವಲಯಮಂ ಅಯ್ಯನಿತ್ತುದುಮಂ ಆಂ ನಿನಗಿತ್ತೆಂ ಇದೇವುದಣ್ಣ ನೀನೊಲಿದ ಲತಾಂಗಿಗಂ ಧರೆಗಂ ಆಟಿಸಿದಂದು ನೆಗಟ್ತೆ ಮಾಸದೇ: **ಆದಿಪು,** ೧೪. ೧೩೦);

ಭೂಷಣ – [ನಾ] ಆಭರಣ (ಸುರತರುಪ್ರಸೂನ ಗ್ರಥಿತ ಸುರಭಿದಾಮ ದುಕೂಲಾಂಬರ ವಿಚಿತ್ರ ಭೂಷಣ ಸುರಭಿವಿಲೇಪನ ಪ್ರಮುಖ ಭೋಗೋಪಭೋಗಂಗಳೊಳಂ: **ಆದಿಪು,** ೯. ೩ ವ)

ಭೂಷಣಾಂಗ – [ನಾ] [ಜೈನ] ಒಂದು ಕಲ್ಪವೃಕ್ಷ, ಆಭರಣಗಳನ್ನು ನೀಡುವಂಥದು (ಭಾಜನಾಂಗದ ವಸ್ತ್ರಾಂಗದ ಭೂಷಣಾಂಗದ ಅಳವಂ ಚಕ್ರೇಶ್ವರಂ ತಾಳ್ದಿದಂ: **ಆದಿಪು,** ೪. ೩೫)

ಭೂಷಾ – [ನಾ] ಆಭರಣ, ಕಿವಿಯ ಆಭರಣ (ಮಕುಟಂ ಕೇಯೂರಂ ಕರ್ಣಕುಂಡಲಂ ಕೊಪ್ಪು ಸರಿಗೆ ದುಸರಂ ಮಣಿಮುದ್ರಿಕೆ ತಿಸರಮೆಂಬ ಭೂಷಾನಿಕರಮಂ ಆ ಭೂಷಣಾಂಗತರು ಕುಡುತಿರ್ಕುಂ: **ಆದಿಪು,** ೫. ೩೪)

ಭೃಂಗ – [ನಾ] ದುಂಬಿ (ಎತ್ತಿದ ಪರಾಗರಾಗ ಮುದಿತ ಆಶಾ ಭಾಸಂ ಉದ್ಯತ್ ಮಧು ಉನ್ಮದಭೃಂಗಧ್ವನಿ ಮಂಗಳಧ್ವನಿಯೆನಲ್: **ಪಂಪಭಾ,** ೫. ೬)

ಭೃಂಗರುತಿ – [ನಾ] ದುಂಬಿಗಳ ಶಬ್ದ, ಝೇಂಕಾರ (ಭೃಂಗರುತಿಗಳ್ ಮಾಂಗಲ್ಯಗೇಯಂಗಳ ಅಂದಮನೀಯೆ: **ಪಂಪಭಾ**, ೭. ೭೭)

ಭೃಂಗಾಂಗನಾ – [ನಾ] [ಭೃಂಗ+ಅಂಗನಾ] ಹೆಣ್ಣು ದುಂಬಿ (ಪುಷ್ಪಿತ ಹೇಮಪಂಕಜ ರಜಸ್ಸಂಸಕ್ತಭೃಂಗಾಂಗನಾನಿಕರಂ ಸಾರಸ ಹಂಸ ಕೋಕಿಳಕುಳಧ್ವಾನೋತ್ಕರಂ: **ಪಂಪಭಾ**, ೫. ೮೦)

ಭೃಂಗಾರ – [ನಾ] ಬಂಗಾರದ ಕಳಶ, ಪಾತ್ರೆ (ಸಾರಮಿದು ರತ್ನಮಯ ಭೃಂಗಾರಂ ಹರಿಪೀಠಮಿದು ಜಗತ್ತ್ರಿತಯಾಳಂಕಾರಂ: **ಆದಿಪು**, ೧೩. ೧೭)

ಭೃಂಗಾರು – [ನಾ] ಬಂಗಾರದ ಕಳಶ (ಎಣ್ಬರುಂ ದಿಗ್ವನಿತೆಯರುಂ ಪರಮಜಿನೋತ್ಸವದೊಳ್ ಶೃಂಗಾರಂಬೆರಸು ಭೃಂಗಾರುಧಾರಿಗಳಾಗಲುಂ: **ಆದಿಪು**, ೭.. ೩ ವ)

ಭೃತ – [ನಾ] ಹೀನವಾದುದು (ಅಮಳರುಂ ಈ ಬೇಳ್ವೆಯ ಮಾತಂ ತೆಮಳೆ ನುಡಿದೊಡೆ ಎಮ್ಮ ಗಂಡವಾತುಂ ಅಳುಂಬಂ ಭೃತಮಕ್ಕುಂ: ೬. ೨೬ ವ)

ಭೃತ್ಯ – [ನಾ] ಸೇವಕ (ಸ್ವಾಮ್ಯಾರ್ಥಂ ಸ್ವಾಮ್ಯವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಥರಾಜ್ಯಹರಂ ಭೃತ್ಯಂ ಯೋನ ಹನ್ಯಾನ್ಸಹನ್ಯತೇ: **ಪಂಪಭಾ**, ೨. ೯೦ ಶ್ಲೋಕ)

ಭೃತ್ಯಭಾವ – [ನಾ] ಸೇವಕತನ (ಅವರ ದೇಶನಾಮಕುಲಗೋತ್ರಂಗಳಂ ನೆಱೆಯೆ ತಿಳಯೆ ಬಿನ್ನಪಂಗೆಯ್ದು ಭೃತ್ಯಭಾವಮಂ ಪೂಣೆಸಿ: **ಆದಿಪು**, ೧೩. ೪೧ ವ)

ಭೇದ – [ನಾ] ವ್ಯತ್ಯಾಸ (ಪಾದರಿ ಪೂತುವು ತೋರಿದುವಾದುವು ಮಲ್ಲಿಗೆಗಳೆಯ್ದೆ ಪಣ್ತುವು ಮಾವು ಇಂಬಾದುದು ನಿದಾಘ ಮಧುವಿನ ಭೇದಂ ಅದು ಈ ಬನದೊಳಾತಪಕ್ಕೆಡೆಯುಂಟೇ: **ಆದಿಪು**, ೧೧. ೮೭); [ನಾ] ಭೇದೋಪಾಯ (ಭೇದದೊಳಲ್ಲದೆ ಗೆಲಲರಿದು ಆದಂ ಸುರಸಿಂಧುಸುತನಂ ಇಂದಿರುಳೊಳ್ ನೀಂ ಭೇದಿಸು: **ಪಂಪಭಾ**, ೧೧. ೨೭)

ಭೇದಿಸು – [ಕ್ರಿ] [ಮನಸ್ಸನ್ನು] ಒಡೆ (ಆನುಂ ಎನ್ನ ಬಲ್ಲ ಮಾಟಕ್ಕೆಯಿಂ ಭೇದಿಸಿದಪ್ಪೆಂ ನೀಮುಂ ನಿಮ್ಮ ಚೊಚ್ಚಿಲ ಮಗನಪ್ಪ ಸೂರ್ಯಸೂನುವಂ ಸೂರ್ಯದಿನದಂದು ಕಂಡು: **ಪಂಪಭಾ**, ೯. ೬೩ ವ)

ಭೇರಿ – [ನಾ] ಒಂದು ಚರ್ಮವಾದ್ಯ, ನಗಾರಿ (ದ್ವಾದಶಯೋಜನ ಸಂಸರ್ಪತ್ ಗಂಭೀರಧೀರಾರಾವಂಗಳಪ್ಪ ಆನಂದಿಗಳೆಂಬ ಪನ್ನೆರಡು ಭೇರಿಗಳುಂ: **ಆದಿಪು**, ೧೧. ೨೮ ವ)

ಭೈತ್ರ – [ನಾ] ಹಡಗು (ಅಂತು ಚಕ್ರವರ್ತಿಯ ಪುಣ್ಯಾತಿಶಯಮನಱಿಪಿ ಜಳಧಿಯಳ್ ಭೈತ್ರಂ ಪರಿವಂತೆ: **ಆದಿಪು**, ೧೨. ೫೯ ವ)

ಭೈರವ – [ನಾ] ಶಿವನ ಉಗ್ರರೂಪ (ಅಂತು ದೇವನಿಕಾಯಂ ಬೆರಸು ಯುದ್ಧಸನ್ನದ್ಧನಾಗಿ ಪರಸೈನ್ಯಭೈರವನೊಳಿಱಿವೆನೆಂಬ ಪಟುವಗೆಯೊಳ್ ಭೈರವಂಬಾಯ್ವಂತೆ ಬಂದು: **ಪಂಪಭಾ**, ೫. ೧೦೧ ವ)

ಭೈಷಜ್ಯ[ದಾನ] – [ನಾ] [ಜೈನ] ಔಷಧಿ, ದಾನದ ನಾಲ್ಕು ಬಗೆಗಳಲ್ಲಿ ಒಂದು (ಅಭಯರ್ ನಿರೋಗರುಂ ಶ್ರುತವಿಭವಸಮನ್ವಿತರುಮಪ್ಪರ್ ಎಂಬುದು ಪಿರಿದಲ್ತು ಭವಾಂಬುಧಿಯುಮನೀಸುವರ್ ಅಭಯೌಷಧಶಾಸ್ತ್ರದಾನ ಫಳವಿಳಸನದಿಂ: **ಆದಿಪು**, ೧೦. ೧೧)

ಭೋಂಕನೆ – [ಅ] ಬೇಗನೆ (ಮೆಲ್ಲನೆ ಮೃಗಮೆಂದು ಸಾರ್ದು ನೆಱಿನಂ ನಡೆ ನೋಡಿ ನರೇಂದ್ರನೆಚ್ಚು ಭೋಂಕನೆ ಮೃಗಚಾರಿಯಂ ತನಗೆ ಮಾಣದೆ ತಂದನದೊಂದು ಮಾರಿಯಂ: **ಪಂಪಭಾ**, ೧. ೧೧೧); [ಅ] ಇದ್ದಕ್ಕಿದ್ದಂತೆ (ನನೆಯಂಬನೆ ಕರ್ಚಿ ಪಾಱಿದಪುದೋ ಶೃಂಗಾರವಾರಾಶಿ ಭೋಂಕನೆ ಬೆಳ್ಳಂಗೆಡೆದತ್ತೊ ಕಾಮನ ಎಱಿ ಮೆಯ್ವೆರ್ಚಿತ್ತೊ ಪೇಟಿ್ ಈಕೆಗೆ ಎಂಬಿನಂ: **ಪಂಪಭಾ**, ೪. ೪೨)

ಭೋಂಕಲ್ – [ಅ] ಭೋಂಕನೆ, ತಟ್ಟನೆ (ಶ್ರೀನಾರೀಪತಿ ದೀಕ್ಷೆಯಂ ಕೊಳಲೊಡಂ ಭೋಂಕಲ್ ಮನಃಪರ್ಯಾಯಜ್ಞಾನಂ ಪುಟ್ಟಿದುದು: **ಆದಿಪು**, ೧೬. ೭೩)

ಭೋಗ – [ನಾ] ಹಾವಿನ ಹೆಡೆ (ತನು ರೂಪ ವಿಭವ ಯೌವನ ಧನ ಸೌಭಾಗ್ಯ ಆಯುರಾದಿಗಳ್ಗೆಣೆ ಕುಡುಮಿಂಚಿನ ಪೊಳೆಪು ಮುಗಿಲ ನೆಟಿಲ್ ಇಂದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ: **ಆದಿಪು**, ೯. ೯. ೪೬); [ನಾ] ಸುಖ (ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನಿಂಪುಗಳ್ಗಾಗರಮಾದ ಮಾನಸರೆ ಮಾನಸರ್: **ಪಂಪಭಾ**, ೨. ೨೯)

ಭೋಗತೃಷ್ಣೆ – [ನಾ] ಭೋಗಾಕಾಂಕ್ಷೆ (ಅಂತಪಗತಗುರುಶೋಕವೇಗನಾಗಿ ಗಣಧರಚರಣ ಸರಸಿಜಂಗಳ್ಗೆಱಗಿ ತನ್ನ ಭೋಗತೃಷ್ಣೆಯಂ ತಾನೆ ತನ್ನ ಮನದೊಳ್ ನಿಂದಿಸುತ್ತುಂ: **ಆದಿಪು**, ೧೬. ೬೦ ವ)

ಭೋಗನಾಯಕ – [ನಾ] ಮಂಡಲವನ್ನು ರಕ್ಷಿಸುವವನು (ಭೋಗಿಗಳ್ ಭೋಗಿಗಳೆಂಬ ಭೋಗಿಗಳೆ ಭೋಗಿಗಳಲ್ಲಿಯ ಭೋಗನಾಯಕರ್: **ಪಂಪಭಾ**, ೪. ೧೬)

ಭೋಗಭೂಮಿ – [ನಾ] [ಜೈನ] ಭೂಮಿಯ ಮೇಲೆಯೇ ಇರುವುದುದೆಂದು ಹೇಳಲಾದ, ಪುಣ್ಯವಂತರು ಹುಟ್ಟುವ ಸ್ಥಳ, ಇಲ್ಲಿ ರೋಗರುಜಿನಾದಿಗಳಿರುವುದಿಲ್ಲ (ಫಳಮುಂ ಸುಪಾತ್ರದಾನದ ಫಳಮೆ ದಲ್ ಉತ್ಕೃಷ್ಟಂ ಭೋಗಭೂಮಿಯೊಳಂ: **ಆದಿಪು**, ೧೦. ೧೦)

ಭೋಗಾಂಗ – [ನಾ] ಸುಖಸಾಧನ (ಭೋಗಾಂಗಮಾಗಿಯುಂ ಕೃಷ್ಣಾಗರುಧೂಪಂ ಮುಸುಂಕಿ ಕೊಂದಿಕ್ಕಿದುದಾ ಭೋಗಿಗಳಂ: **ಆದಿಪು**, ೫. ೨೫)

ಭೋಗಾಭೋಗ – [ನಾ] ಭೋಗಸಾಮಗ್ರಿಗಳಿಂದ ಸಿಕ್ಕುವ ಸುಖ (ವಿದ್ಯುತ್ ಕ್ಷಣಿಕಂ ನಿಟ್ಟಿಯೆ ತನುಭೃದ್ಗಣ ಯೌವನ ರೂಪ ವಿಭವ ಭೋಗಾಭೋಗಂ: **ಆದಿಪು**, ೪. ೭೫)

ಭೋಗಿ – [ನಾ] ವಿಲಾಸವತಿ (ಚರಿತಂ ಬಂದರ್ ಕಣ್ಗೊಪ್ಪಿರಲ್ ವರಭೋಗಿಯರ್: **ಪಂಪಭಾ**, ೯. ೧೦೨); [ನಾ] ನಾಗ ಮತ್ತು ಸುಖಪಡುವವ (ಭೋಗಿಗಳ್ ಭೋಗಿಗಳೆಂಬ ಭೋಗಿಗಳೆ ಭೋಗಿಗಳಲ್ಲಿಯ ಭೋಗನಾಯಕರ್: **ಪಂಪಭಾ**, ೪. ೧೬); [ನಾ] ಸರ್ಪ (ತತ್ ಭೋಗಿ ಫಣಾದ್ಯುತಿಯೆ ಕಟ್ಟಿಲೆಯಂ ತಲೆದೋಱಲೀಯದು: **ಪಂಪಭಾ**, ೪. ೧೬); [ನಾ] ಸುಖಿ [ಅರ್ಜುನ] (ಆಗಳ್ ಅನಂತಂ ಅನಂತಫಣಾಗಣಮಣಿ ಕಿರಣಂ ಎಸೆಯೆ

ದುರ್ಗಾರ್ಣವದೊಳ್ ರಾಗದಿನಿರ್ಪಂತಿರ್ದಂ ಭೋಗಿ ತಟತ್ತಟಿಸೆ ಬೆಳಗೆ ಕೆಯ್ದೀವಿಗೆಗಳ್: **ಪಂಪಭಾ,** ೪. ೫೩)

ಭೋಗಿಭೋಗ – [ನಾ] ಹಾವಿನ ಹೆಡೆ (ಇಂತು ಸಂಸೃತಿಭೋಗಂಗಳ್ ಭೋಗಿಭೋಗದಿಂ ವಿಷಮಂಗಳ್: **ಆದಿಪು,** ೨೫)

ಭೋಗಿಸು – [ಕ್ರಿ] ಅನುಭವಿಸು (ನಿಚ್ಚಲುಮಾ ಬಿಯಮಾ ವಿನೋದಮಾ ಪಸದನಮಾ ವಿಳಸದೊಳೊಡಂಬಡೆ

ಭೋಜನಭೂಮಿ – [ನಾ] ಊಟದ ಮನೆ (ಭೋಜನಭೂಮಿಗೆ ರಾಜಹಂಸ ವಿಳಾಸದಿಂ ಬಿಜಯಂಗೆಯ್ದು: **ಆದಿಪು,** ೧೧. ೨೬ ವ)

ಭೋಜನಾಂಗ – [ನಾ] [ಜೈನ] ಬಯಸಿದ ಆಹಾರ ನೀಡುವ ಕಲ್ಪವೃಕ್ಷ, ನೋಡಿ (ಅಮರ್ದಿನ ಸವಿಯೊಳಗೀಸವಿ ಸಮನೆನೆ ತೇಜೋಬಳ ಆಯುರಾರೋಗ್ಯಸಮೇತಮಂ ಅಮೃತಾನ್ನಮನೊಲ್ದೀಗುಂ ಆಗಳುಂ ಭೋಜನಾಂಗ ಕಲ್ಪಾವನಿಜಂ: **ಆದಿಪು,** ೫. ೪೯), **'ಅಂಗಕಲ್ಪಕುಜ'**

ಭೋಜ್ಯ – [ನಾ] ತಿನ್ನಬಹುದಾದುದು (ಪಕ್ವಫಲನಮ್ರ ಆಮ್ರಾದಿಭೂಜಂಗಳ್ ಈ ಯುಗದೊಳ್ ಕಲ್ಪಕುಜಂಗಳಂತೆ ಇವಱ ಪಣ್ ಭೋಜ್ಯಂಗಳ್: **ಆದಿಪು,** ೬. ೭೭)

ಭೋರ್ಗರೆ – [ಕ್ರಿ] ಭೋರ್ ಎಂದು ಶಬ್ದಮಾಡು (ಭೋರ್ಗರೆದೂದುವ ಗಾಳಿ ಸಿಡಿದು ಪೊಯ್ವ ಸಿಡಿಲ್: **ಆದಿಪು,** ೬. ೩೨)

ಭೌತಿಕ – [ಗು] ಪಂಚಭೂತಗಳಿಂದಾದ (ಈ ಧರಣೀಭಾರಮನಾಂ ಬಿಸುಟಿಪ್ಪೊಡದು ಚಿಃ ಲೋಕಕ್ಕೆ ಖಾತ್ವಾಸಮೀಕರಣಂ ಭೌತಿಕಮೋದಕವ್ಯತಿಕರಂ ತಾನೆಂಬುದಂ ಮಾಡದೇ: **ಆದಿಪು,** ೪. ೮೧)

ಭೌತಿಕಮೋದಕವ್ಯತಿಕರ – [ನಾ] ಒಂದು ಲೌಕಿಕ ನ್ಯಾಯ, ಗುಂಡಿಯನ್ನು ಅಗೆಯುವುದು ಅದನ್ನು ಮುಚ್ಚುವುದು, ನಿರರ್ಥಕ ಕೆಲಸ (ಈ ಧರಣೀಭಾರಮನಾಂ ಬಿಸುಟಿಪ್ಪೊಡದು ಚಿಃ ಲೋಕಕ್ಕೆ ಖಾತ್ವಾ ಸಮೀಕರಣಂ ಭೌತಿಕಮೋದಕ ವ್ಯತಿಕರಂ ತಾನೆಂಬುದಂ ಮಾಡದೇ: **ಆದಿಪು,** ೪. ೮೧)

ಭ್ರಮಣ – [ನಾ] ಅಲೆದಾಟ (ಯಮುನಾನದೀತರಂಗಮಂ ಅಮುಂಕಿ ವನಲತೆಯ ಮನೆಗಳಂ ಸೋಂಕಿ ವನಭ್ರಮಣ ಪರಿಶ್ರಮಮಂ ಮುನ್ನಮೆ ಕಳೆದುದು ಬಂದುದೊಂದು ಮಂದಶ್ವಸನಂ: **ಪಂಪಭಾ,** ೫. ೫೩)

ಭ್ರಮತ್ – [ಗು] ಸುತ್ತುವ (ಭ್ರಮತ್ ಭ್ರಮರಭಗ್ನ ಮಾಧವೀಲತಾ ಲತಾಂತಂ ಅಧಿಕಮಕರಂದಬಿಂದುಚಿತ್ರಿತ ವಿಪುಳಪುಳಿನ ತಳಂಗಳೆ ವಿಶ್ರಮಣಭೂಮಿಗಳಾಗೆಯುಂ: **ಆದಿಪು,** ೪. ೫೨ ವ)

ಭ್ರಮರ – [ನಾ] ದುಂಬಿ (ಭ್ರಮತ್ ಭ್ರಮರಭಗ್ನ ಮಾಧವೀಲತಾ ಲತಾಂತಂ ಅಧಿಕಮಕರಂದಬಿಂದುಚಿತ್ರಿತ ವಿಪುಳಪುಳಿನ ತಳಂಗಳೆ ವಿಶ್ರಮಣಭೂಮಿಗಳಾಗೆಯುಂ: **ಆದಿಪು,** ೪. ೫೨ ವ)

ಭ್ರಮರವಿಹ್ವಲ – [ನಾ] ಸುತ್ತಾಟದಿಂದಾಗಿ ಅಸ್ಥಿರಗೊಂಡವನು (ವಿಯತ್ತಳಭ್ರಮಣವಿಹ್ವಲನಾಗಿ ಬಟಲ್ದು ಕಾಱುವಂತೆವೊಲಿರೆ: **ಪಂಪಭಾ,** ೪. ೪೬)

ಭ್ರಮರಿ – [ನಾ] ಹೆಣ್ಣು ದುಂಬಿ (ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋತ್ಪನವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ: **ಆದಿಪು,** ೧೪. ೧೩೦)

ಭ್ರಾಂತ – [ನಾ] ಯುದ್ಧರಥವನ್ನು ನಡೆಸುವ ಒಂದು ಬಗೆ, ತಿರುಗುವ (ಆಗಳ್ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತಂಗಳೆಂಬ ರಥಕಲ್ಪ ವಿಶೇಷವಿನ್ಯಾಸಂಗಳನಱಿದು: **ಪಂಪಭಾ,** ೧೨. ೭೫ ವ); [ನಾ] ಗದೆಯನ್ನು ಮೇಲೆತ್ತಿ ತಿರುಗಿಸುವುದು (ಸವ್ಯಾಪಸವ್ಯ ಭ್ರಾಂತೋದ್ಭ್ರಾಂತ ಕರ್ಷಣ ಮಂಡಳಾವರ್ತನಾದಿಗಳಪ್ಪ ಮೂವತ್ತೆರಡು ಗದಾವಿಕ್ಷೇಪದೊಳಂ: **ಪಂಪಭಾ,** ೧೩. ೯೨ ವ)

ಭ್ರಾಂತಿಸು – [ಕ್ರಿ] ಭ್ರಮೆಗೊಳ್ಳು (ಕಂತುಶರಭವನನಾ ಪ್ರಿಯಕಾಂತಾ ಭ್ರೂವಿಭ್ರಮ ಗ್ರಹಾಗ್ರಹ ವಶದಿಂ ಭ್ರಾಂತಿಸದೆ ಉಪಶಾಂತಮನಂ ಶಂತನುಗಿತ್ತಂ ಸಮಸ್ತರಾಜ್ಯಶ್ರೀಯಂ: **ಪಂಪಭಾ,** ೧. ೬೬)

ಭ್ರಾಜಿತ – [ನಾ] ಪ್ರಕಾಶಮಾನವಾದ (ಮುಂದೊಂದು ಎಡೆಯೊಳ್ ಅದಭ್ರ ಅಭ್ರವಿಭ್ರಮ ಭ್ರಾಜಿತ ಉತ್ತುಂಗಶೈಲಮಂ ಕಂಡು: **ಪಂಪಭಾ,** ೪. ೨೫ ವ)

ಭ್ರುಕುಟಿ – [ನಾ] ಗಂಟಿಕ್ಕಿದ ಹುಬ್ಬು (ಪೊದಳ್ದ ಲಯಾಂತಕ ತ್ರಿಶೂಲೋಪಮ ಭೀಷಣಭ್ರುಕುಟಿ ಮುನ್ನಮೆ ರೌದ್ರ ಗದಾಯುಧಂಬರಂ ಪೋಪ ಭುಜಾರ್ಗಳಂ ರಿಪುಗಳ ಗ್ರಹಮಾದುದು ಭೀಮಸೇನನಾ: **ಪಂಪಭಾ,** ೭. ೬)

ಭ್ರೂಕುಟಿ – ಭ್ರುಕುಟಿ, ಹುಬ್ಬಿನ ತುದಿ (ನೋಡೀಕೆಗಳ ಭ್ರೂಕುಟಿಯೇ ಪರಮಸುಖದ ಕೋಟಿಯನೀಗುಂ: **ಪಂಪಭಾ,** ೭. ೯೪)

ಭ್ರೂಚಾಪ – [ನಾ] ಹುಬ್ಬೆಂಬ ಬಿಲ್ಲು (ರಸ ಭಾವಾಭಿನಯಂಗಳಂ ಭುಜಲತಾ ಭ್ರೂಚಾಪ ನೇತ್ರೋತ್ಪಲ ಪ್ರಸರಂಗಳ್ ಪಸರಂಗೆಯ್ಯುತ್ತಿರೆ: **ಆದಿಪು,** ೭. ೧೨೩)

ಭ್ರೂಭಂಗರ್ – [ನಾ] ಹುಬ್ಬುಗಂಟುಳ್ಳವರು (ಪ್ರಕುಪಿತ ಮೃಗಪತಿಶಿಶುಸನ್ನಿಕಾಶರ್ ಅತಿ ವಿಕಟಭ್ರೂಭಂಗರ್ ನಕುಲಸಹದೇವರ್ ಇರ್ವರುಂ ಅಕಾಲಕಾಲಾಗ್ನಿರೂಪಮಂ ಕೆಯ್ಕೊಂಡರ್: **ಪಂಪಭಾ,** ೭. ೮)

ಭ್ರೂಲತೆ – [ನಾ] ಹುಬ್ಬೆಂಬ ಬಳ್ಳಿ (ಏನೆಂದಾಂ ಬಣ್ಣಿಸುವೆನೊ ಸೌಂದರಿಯ ವಿಳಾಸವಿಭ್ರಮಭ್ರೂಲತೆಯಂ: **ಆದಿಪು,** ೯. ೩೩)

ಭ್ರೂಲಾಸ್ಯ – [ನಾ] ಹುಬ್ಬಿನ ಕುಣಿತ, ಹುಬ್ಬು ಹಾರಿಸುವುದು (ಏನೆಸೆದುದೊ ಕಟಾಕ್ಷಮಾಲಾಪ್ರಸರಂ ಭ್ರೂಲಾಸ್ಯಸೌಂದರಂ ನರ್ತಕಿಯಾ: **ಆದಿಪು,** ೯. ೩೪)

ಭ್ರೂವಿಭ್ರಮ – [ನಾ] ಹುಬ್ಬಿನ ವಿಲಾಸಹುಬ್ಬು ಹಾರಿಸುವುದು (ಕಂತುಶರಭವನನಾ ಪ್ರಿಯಕಾಂತಾ ಭ್ರೂವಿಭ್ರಮ ಗ್ರಹಾಗ್ರಹ ವಶದಿಂ: **ಪಂಪಭಾ,** ೧. ೬೬)

ಮ

ಮಂಗಳ – [ನಾ] ಮಂಗಳಕರ ಗೀತೆ (ಮಂಗಳಮನೆ ಪಾಡುತ್ತುಂ ಮಂಗಳಧಾರಿಣಿಯರಾಗಿ ಮುಂದಂ ನಡೆವಾಶಾಂಗನೆಯರಿಂದೆ: **ಆದಿಪು,** ೭. ೪೮)

ಮಂಗಳಂಗಳ್ – [ನಾ] ಮಂಗಳ ವಸ್ತುಗಳು (ತದ್ಗುಹಾಕೂಟ ನಿವಾಸಿಯಪ್ಪ ನಾಟ್ಯಮಾಲಾಮರಂ ಸುವರ್ಣಪೂರ್ಣ ಕುಂಭಾದಿ ಮಂಗಳಂಗಳಿನಿದಿರ್ಗೊಳೆ ಗುಹಾದ್ವಾರದಿಂ ಪೊಱಮಟ್ಟಾಗಳ್: **ಆದಿಪು,** ೧೩. ೮೦ ವ)

ಮಂಗಳಕಾರಣ – [ನಾ] ಶುಭಕ್ಕೆ ಕಾರಣವಾದ (ಮಂಳಕಾರಣ ಪಂಚಪದಂಗಳಂ .. .. ಅಕ್ಷಯ ಮಂತ್ರಪದಂಗಳನೋದುವುದು ನೆಱೆಯೆ ನಿಶ್ಚಲಮತಿಯಿಂ: **ಆದಿಪು,** ೨. ೫೪)

ಮಂಗಳಗೀತಿ – [ನಾ] ಮಂಗಳ ಸಂಗೀತ (ಪಾಸಱೆ ಸಿಂಹಪೀಠಂ ಅಳಿನಿರುತಿ ಮಂಗಳಗೀತಿ ಭೂತಳಂ ಪಾಸು ಮೃಗವ್ರಜಂ ಪರಿಜನಂ ಪೊದಱೆ ಓಲಗಸಾಲೆ: **ಪಂಪಭಾ,** ೭. ೨೯)

ಮಂಗಳತೂರ್ಯ – [ನಾ] ಮಂಗಳವಾದ್ಯ (ಮಂಗಳತೂರ್ಯನಾದಂ ಎಸೆಯುತ್ತಿರ್ಪನ್ನೆಗಂ ಚಕ್ರಿ ರಾಗಿಸಿ ಕೆಯ್ನೀರ್ ಎಱೆದಂ ಗುಣಾರ್ಣವ ಮಹೀಪಾಲಂಗಂ ಆ ಕನ್ನೆಯಂ: **ಪಂಪಭಾ,** ೫. ೨೫)

ಮಂಗಳಧಾರಿಣಿ – [ನಾ] ಮಂಗಳದ್ರವ್ಯಗಳನ್ನು ಹಿಡಿದವಳು (ಮಂಗಳಮನೆ ಪಾಡುತ್ತುಂ ಮಂಗಳಧಾರಿಣಿಯರಾಗಿ ಮುಂದಂ ನಡೆವಾಶಾಂಗನೆಯರಿಂದೆ: **ಆದಿಪು,** ೭. ೪೮)

ಮಂಗಳಪಾಠಕ – [ನಾ] ಹೊಗಳುಭಟ್ಟ (ಆಗಳ್ ಮಜ್ಜನಾವಸರ ಮಂಗಳಪಾಠಕ ಮಧುರನಿನದಮನಾಲಿಸುತ್ತುಂ: **ಆದಿಪು,** ೮. ೭೦ ವ)

ಮಂಗಳಭಂಗ – [ನಾ] ಶುಭಕ್ಕೆ ಉಂಟಾಗುವ ವಿಘ್ನ ಅಪಶಕುನ (ಒಯ್ಯನೆ ಮಂಗಳಭಂಗ ಭೀತಿಯಂ ತಳ್ವದೆ ಮಾಡೆ ಬಾಷ್ಪಜಳಮಂ ಕಳೆದು: **ಪಂಪಭಾ,** ೭. ೬೮)

ಮಂಗಳರಶ್ಮಿ – [ನಾ] ಮಂಗಳಕರವಾದ ಕಿರಣ (ಫಣೀಂದ್ರಾಳಯದಿಂದಂ ಉರ್ಚಿದ ಫಣಾಮಣಿ ಮಂಗಳರಶ್ಮಿಯೋ ಕರಂ ಮೇಳಿಸಿದಪ್ಪುದು ಎನ್ನೆರ್ದೆಯಂ: **ಪಂಪಭಾ,** ೧. ೯೬)

ಮಂಗಳವಸದನಂಗೊಳ್ – [ನಾ] [ಮಂಗಳ+ಪಸದನ] ಶುಭಕಾರ್ಯಕ್ಕೆ ತಕ್ಕ ಅಲಂಕಾರ ಮಾಡಿಕೊ (ಪಲ್ಲಂ ಸುಲಿದು ಅಗಣ್ಯಪುಣ್ಯ ತೀರ್ಥೋದಕಂಗಳಂ ಮಿಂದು ಮಂಗಳವಸದನಂಗೊಂಡು: **ಪಂಪಭಾ,** ೧೦. ೪೬ ವ)

ಮಂಗಳವೃತ್ತ – [ನಾ] ಮಂಗಳಗೀತ (ಎಂದು ಮಂಗಳವೃತ್ತಂಗಳನೋದೆ ಕಿಱಿದುಂ ಬೇಗಂ ಇರ್ದು ಎತ್ತಿದ ಬೋನದೊಳ್ ಕಲ್ಯಾಣಾಮೃತಮನಾರೋಗಿಸಿ: **ಪಂಪಭಾ,** ೭. ೭೯ ವ)

ಮಂಗಳಾನಕ – [ನಾ] ಶುಭಸಂದರ್ಭಗಳಲ್ಲಿ ಬಾರಿಸುವ ವಾದ್ಯ (ಈ ನಿಜತನೂಜೆಯಂ ಉತ್ಸವಮಂಗಳಾನಕ ಧ್ವನಿದೆಸೆಯಂ ಪಳಂಚಲೆವಿನಂ ನೆರಪೀಗಳೆ ವಜ್ರಜಂಘನೊಳ್: **ಆದಿಪು,** ೪. ೨೬)

ಮಂಚದ ಕಾಲೊಳ್ ಕಟ್ಟು – [ಕ್ರಿ] ಬಂಧಿಸು (ದ್ರುಪದನಂ ತನ್ನ ಮಂಚದ ಕಾಲೊಳ್ ಕಟ್ಟವೇಟ್ಟು ತಲೆಯ ಮೇಲೆ ಕಾಲನವಷ್ಟಂಭದಿಂ ನೀಡಿ: **ಪಂಪಭಾ,** ೨. ೬೨ ವ)

ಮಂಜರೀ – [ನಾ] ಗೊಂಚಲು (ಅನಂತಸಾಮಂತಮಕುಟಮಾಣಿಕ್ಯ ಮಯೂಖಮಂಜರೀಜಾಳಪಲ್ಲವಿತ ಆಸ್ಥಾನಮಂಟಪನುಂ: **ಪಂಪಭಾ,** ೯. ೨೮ ವ)

ಮಂಜೀರಕ – [ನಾ] ಒಡ್ಯಾಣ (ವಿದ್ಯಾಧರೀರಮ್ಯನರ್ತನ ರಾಗೋತ್ಥಿತ ಪಾರಿಹಾರ್ಯ ರಶನಾ ಮಂಜೀರಕೋದ್ದಾಮನಿಸ್ವನದೊಳ್: **ಆದಿಪು,** ೧. ೭೦)

ಮಂಜು – [ಗು] ಮಂಜುಳವಾದ, ಇನಿದಾದ (ಸುರವಿಳಾಸಿನೀ ಲಲಿತಮೃದುಪದವಿನ್ಯಾಸ ಮಂಜುಗುಂಜನ್ಮಂಜೀರಕ ಮನೋಹರ ಝುಂಕಾರಪ್ರವರ್ಧಮಾನ ಮದಾಳಿಕುಳ ಕೋಳಾಹಳದೊಳ್: **ಆದಿಪು,** ೮. ೬೭ ವ)

ಮಂಜುಶಿಂಜಿತ – [ನಾ] ಮಧುರ ಧ್ವನಿ (ಅತ್ತಲಿತ್ತಲೆಡೆಯಾಡುವ ದಂದುಗದಾಗಳೇಂ ಪೊದಳ್ದೆಸೆದುದೊ ಚಾರುದೇವಗಣಿಕಾ ಮಣಿನೂಪುರ ಮಂಜುಶಿಂಜಿತಂ: **ಆದಿಪು,** ೭. ೨೨)

ಮಂಡಕ – [ನಾ] ಒಂದು ಭಕ್ಷ್ಯ, ಮಂಡಿಗೆ (ಅಲ್ಪದಶನದಂಶಮಾತ್ರ ಖಂಡನೀಯ ಮಂಡಕಮುಮಂ: **ಆದಿಪು,** ೧೧. ೨೬ ವ)

ಮಂಡನ – [ನಾ] ಅಲಂಕಾರ (ವ್ಯೂಹದೊಳ್ ನಿಟ್ಟೆವಟ್ಟು ಮಣಿಮಯ ಮಂಡನಾಯೋಗದೊಳೊಡಂಬಟ್ಟ ಪಿಡಿಗಳುಮಂ: **ಆದಿಪು,** ೪. ೫೪ ವ)

ಮಂಡನವಿಧಿ – [ನಾ] ಅಲಂಕರಿಸುವ ಕೆಲಸ (ಉಪ್ಪವಡಿಸಿ ಮಜ್ಜನ ಮಂಡನವಿಧಿಯಂ ಲತಾಂಗಿ ನಿರ್ವರ್ತಿಸಿ ಭೂಮಂಡಳಪತಿಗಱಿಪಿದೊಡೆ: **ಆದಿಪು,** ೭. ೨೮)

ಮಂಡನಾಯೋಗ – [ನಾ] ಆನೆಯ ಮೇಲೆ ಅಲಂಕಾರಕ್ಕಾಗಿ ಹಾಕುವ ಜೂಲು (ಮದೇಭಗಣಕ್ಕೆ ಮಂಡನಾಯೋಗಮುಮಾದುವಾ ಕೊಳದ ಕೋಮಳನೀರಜಪುಷ್ಪಜಾತಿಗಳ್: **ಆದಿಪು,** ೪. ೯೪)

ಮಂಡನೀಭೂತ – [ಗು] ಅಲಂಕಾರಪ್ರಾಯವಾದ (ಆಸ್ಥಾನಮಂಡಪ ಮಂಡನೀಭೂತಮಣಿಮಯಾಸನ ಪ್ರಾಚ್ಯಾಚಳಶಿಖಂಡ ರತ್ನಮಾಗಿರ್ದ ಕುಮಾರನಂ ಸಾರೆವಂದು: **ಆದಿಪು,** ೮. ೮ ವ)

ಮಂಡಪ – [ನಾ] ಮಂಟಪ (ನರಶಿಲ್ಪಿಗಳಿಂ ಮಂಡಪವಿರಚನೆ ನೆಗಟುತ್ತಮಿರ್ದುದಿತ್ತೊಂದೆಡೆಯೊಳ್: **ಆದಿಪು,** ೯. ೬೮)

ಮಂಡಲ – [ನಾ] ಗುಂಪು (ಎಂದತಿಲಲಿತಸಮುಚ್ಚಳಿತ ರಶನಾಕಳಾಪ ನೂಪುರಕಿಂಕಿಣೀಕ್ವಣಿತ ಅನುಸಾರಿಯಾಗಿ ಬರ್ಪ ರಾಜಹಂಸಮಂಡಲಮಂ ಮಗುಳ್ಚಿ ಬರ್ಪಾಗಳ್: **ಆದಿಪು,** ೧೧. ೧೩೮ ವ); [ನಾ] ರಾಜ್ಯ, ರಾಜ್ಯದ ಭಾಗ (ಇತ್ತುಂ ತೆತ್ತುಂ ಬಾಟ್ವಿ ಮಂಡಲಮಲ್ಲದೆ ಕೀಱೆಯುಂ ಮೀಱೆಯುಂ ನೆಗಟ್ವಿ ಮಂಡಲಮಿಲ್ಲ: **ಪಂಪಭಾ,** ೬. ೬೭ ವ)

ಮಂಡಲಾಗ್ರ – [ನಾ] ಕತ್ತಿಯುಳ್ಳವನು (ಕೋಟಲೆಗೊಳ್ವ ಕೌರವೇಶ್ವರನಂ ಎಯ್ದೆ ಪೋಗಿ ಹಸ್ತಪ್ರಹಸ್ತಮಂಡಲಾಗ್ರನುಂ ಶೋಕವ್ಯಗ್ರನುಂ ಆಗಿ: **ಪಂಪಭಾ,** ೧೩. ೧೦೨ ವ)

ಮಂಡಲಿ – [ನಾ] ಜನಸಮೂಹ (ಬೆಲೆಯಿಡಲಱಿವೊಡೆ ಮಂಡಲಿ ಬೆಲೆಯಿಡುಗೆಮ ನೋಟಕ್ಕೊಡಿವರ ತೇಜದ ಮೇಲುಜ್ಜ್ವಲತೇಜ ನಿನ್ನ ತೇಜಂ ನೆಲಸಿದುದೆನೆ ಪೇಟವರ್ಕೆ ಬೆಲೆಗಳುಮೊಳವೇ: **ಆದಿಪು,** ೧೩. ೩೦)

ಮಂಡವಿಗೆ – [ನಾ] ಮಂಟಪ (ಕಸ್ತುರಿಯ ಸಗಣನೀರ್ ಬಿಡುಮುತ್ತಿನ ರಂಗವಲಿ ಮಿಳಿರ್ವ ದುಗುಲದ ಗುಡಿ ಸಂಪತ್ತಿನ ಬಿತ್ತರದೆತ್ತಿದ ಮುತ್ತಿನ ಮಂಡವಿಗೆ ಪೊಟಲ ಮನೆಗಳೊಳೆಲ್ಲಂ: **ಪಂಪಭಾ,** ೩. ೨)

ಮಂಡಳ – [ನಾ] ರಥವನ್ನು ನಡೆಸುವ ಒಂದು ರೀತಿ (ಮಂಡಳ ಭ್ರಾಂತ ಉದ್ಭ್ರಾಂತ ಸ್ಥಿತಚಕ್ರಮೆಂಬ ರಥಯುದ್ಧದೊಳಂ .. .. ಅತಿ ಪ್ರವೀಣರುಂ ಜಾಣರುಂ ಆಗಿ: **ಪಂಪಭಾ,** ೧೩. ೩೮ ವ)

ಮಂಡಳಾವರ್ತನ – [ನಾ] ಗದೆಯನ್ನು ಗುಂಡಾಗಿ ಚಕ್ರದಂತೆ ತಿರುಗಿಸುವುದು (ಸವ್ಯಾಪಸವ್ಯ ಭ್ರಾಂತೋದ್ಭ್ರಾಂತ ಕರ್ಷಣ ಮಂಡಳಾವರ್ತನಾದಿಗಳಪ್ಪ ಮೂವತ್ತೆರಡು ಗದಾವಿಕ್ಷೇಪದೊಳಂ: **ಪಂಪಭಾ,** ೧೩. ೯೨ ವ)

ಮಂಡಳಿಕ – [ನಾ] ಸಾಮಂತ (ನಕುಳನುಂ ತೆಂಕಣ ದೆಸೆಯ ಮಲೆಪರಂ ಮಂಡಳಿಕರುಮಂ ಅಸಿಯರಾಗೆ ಕವರ್ದುಕೊಂಡು ಲಂಕೆಯ ಮೇಗೆ ನಡೆದು: **ಪಂಪಭಾ,** ೬. ೩೨ ವ)

ಮಂಡಳಿಸು – [ಕ್ರಿ] ವೃತ್ತಾಕಾರವಾಗಿ ತಿರುಗು (ತುಱುಗಿರ್ದ ಬಲ್ಮಿಡಿಯ ತೂಗುಂಗೊಂಬಿನೊಳ್ಪಾಯ್ದು ಮಂಡಳಿಸುತ್ತಿರ್ಪ ಶುಕಾಳಿ: **ಆದಿಪು,** ೧೧. ೯೬)

ಮಂಡಿತ – [ಗು] [ಅಧಿಕಾರಕ್ಕಾಗಿ] ನೆಲೆಗೊಳಿಸಿದ (ಶೌರ್ಯಾವಷ್ಟಂಭದಿಂ ಆಳ್ದವನಾಂ ಷಟ್ಖಂಡಮಂಡಿತ ಕ್ಷಿತಿತಳಮಂ: **ಆದಿಪು,** ೧೩. ೭೬)

ಮಂತಣ – [ನಾ] ಆಲೋಚನೆ (ಅದಱಿಂದಂ ಪೆಱತು ಮಂತಣಕ್ಕೆಡೆಯಿಲ್ಲ: **ಪಂಪಭಾ,** ೧೨. ೪೮ ವ)

ಮಂತಣಮಿರ್ – [ಕ್ರಿ] ಆಲೋಚಿಸು (ಕಳಹಂಸಗಮನೆಯಾ ಸುರತಮಕರಧ್ವಜನನಲ್ಲದೆ ಪೆಱನನೇಕೆ ಬಯಸುಗುಂ ಎಂದು ಮನದೊಳೆ ಮಂತಣಮಿರ್ದು ಬಗೆಯೊಳೆ ಗುಡಿಗಟ್ಟಿ ಸಂತಸಮಿರ್ದಳ್: **ಪಂಪಭಾ,** ೬. ೬೮ ವ); [ಕ್ರಿ] ಸಮಾಲೋಚನೆ ಮಾಡು (ದುಶ್ಶಾಸನ ಕರ್ಣ ಶಕುನಿ ಸೈಂದವರೆಂಬ ದುಷ್ಟಚತುಷ್ಟಯದೊಳ್ ಮಂತಣಮಿರ್ದು: **ಪಂಪಭಾ,** ೬. ೬೭ ವ)

ಮಂತ್ರ – [ನಾ] ಸಮಾಲೋಚನೆ (ಗಾಂಗೇಯನಂ ಏಗೆಯ್ದುಂ ಒಡಂಬಡಿಸಲಾಱದೆ ಸತ್ಯವತಿ ತಾನುಂ ಆತನುಂ ಆಲೋಚಿಸಿ ನಿಶ್ಚಿತಮಂತ್ರರಾಗಿ ಕೃಷ್ಣದ್ವೈಪಾಯನನಂ ನೆನೆದು: **ಪಂಪಭಾ,** ೧. ೮೪ ವ); [ನಾ] ಆಲೋಚನೆ, ಆಸೆ (ಮಂತ್ರಾಕ್ಷರ ನಿಯಮದಿಂ ಅಭಿಮಂತ್ರಿಸಿ ಬರಿಸಿದೊಡೆ ವಾಯುದೇವಂ ಬಂದು ಏಂ ಮಂತ್ರಂ ಪೇೞ್ಎನೆ ಕುಡು ರಿಪುತಂತ್ರಕ್ಷಯಕರನಂ ಎನಗೆ ಹಿತನಂ ಸುತನಂ: **ಪಂಪಭಾ,** ೧. ೧೨೪)

ಮಂತ್ರಗುಪ್ತಿ – [ನಾ] ಸಮಾಲೋಚನೆ (ಆ ಮುನಿನಾಥಂ ತ್ರಿಗುಪ್ತಿಯೊಳ್ ನೆರೆದಂ ಈ ಮಹೀನಾಥಂ ಮಂತ್ರಗುಪ್ತಿಯೊಳ್ ನೆರೆದಂ: **ಆದಿಪು,** ೬. ೨೪ ವ)

ಮಂತ್ರದೇವತೆ – [ನಾ] ಮಂತ್ರಾಭಿಮಾನಿ ದೇವತೆ (ಬೆಸನಂ ಪಾರ್ವುವು ಮಂತ್ರದೇವತೆಗಳ್ ಆದ ಏ ಬಾರ್ತೆಗಂ: **ಆದಿಪು,** ೧. ೬೯)

ಮಂತ್ರಪದ – [ನಾ] ಮಂತ್ರಾಕ್ಷರ (ಮಂತ್ರಪದಕ್ಕೆ ಉರಗಂ ಸುಗಿವಂತೆವೊಲ್ ಅಗಿದು ಸುಗಿದು ತಲೆಗರೆದಿರ್ಪಂ: **ಪಂಪಭಾ,** ೭. ೪೩)

ಮಂತ್ರಪೂತ – [ಗು] ಮಂತ್ರದಿಂದ ಪಾವನಗೊಂಡ (ಮಂತ್ರಪೂತಾಂಗಮಂ ನೃಪನೆಯ್ದಿದಂ ಉದ್ಯಚ್ಛೃಂಗಮಂ ಆ ಶತಶೃಂಗಮಂ: **ಪಂಪಭಾ,** ೧. ೧೧೫)

ಮಂತ್ರಬಲ – [ನಾ] ಬುದ್ಧಿಬಲ (ಮಂತ್ರಬಲದೆ ಸುಟ್ಟೊಡಂ ಅವರಂ ದೆಯ್ವಬಲಮೊಂದೆ ಕಾದುದು: **ಪಂಪಭಾ,** ೪. ೩)

ಮಂತ್ರವಾದಿ – [ನಾ] ಮಂತ್ರ ಹಾಕುವವನು (ಅಂತು ಕಾಮದೇವನೆಂಬ ಮಂತ್ರವಾದಿಯ ದಿವ್ಯಮಂತ್ರದಿಂ ಸ್ತೋಭಂಗೊಂಡ ದಿವ್ಯಗ್ರಹದಂತೆ: **ಪಂಪಭಾ,** ೪. ೫೯ ವ)

ಮಂತ್ರವಿಧಿ – [ನಾ] ಮಂತ್ರಪೂರ್ವಕ (ಕರ್ಣನ ಕಳೇವರಮಂ ಅನಿಬರಿಂ ಮಿಗೆ ಮಹಾಬ್ರಾಹ್ಮಣರಿಂದಂ ಮಂತ್ರವಿಧಿಯಿಂದಿರಿಸಿ: **ಪಂಪಭಾ,** ೧೪. ೧೦ ವ)

ಮಂತ್ರಶಕ್ತಿ – [ನಾ] ಮಂತ್ರದಿಂದ ಗಳಿಸಿಕೊಂಡ ಸಾಮರ್ಥ್ಯ (ನಿನ್ನ ನಿರ್ಬೇಗಮಂ ಅಱಿದೆಂ ಇದಂ ಶಕ್ತಿಯೊಳ್ ಮುಕ್ತಿಯಂ ಸಾಧಿಸಲಕ್ಕುಂ ಮಂತ್ರಶಕ್ತಿಪ್ರಕಟನಪಟುಗಳ್ಗೆ ಏನಸಾಧ್ಯಂಗಳೋ ಪೇೞ್: **ಆದಿಪು,** ೩. ೪೪)

ಮಂತ್ರಶಾಲೆ – [ನಾ] ಸಮಾಲೋಚನಾ ಶಾಲೆ (ಸಂಗರಶ್ರಮನಾಱಿಸಿ ಮಂತ್ರಶಾಲೆಗೆ ವಂದು ಶಲ್ಯ ಶಕುನಿ ಶಾರದ್ವತ ದುಶ್ಶಾಸನಾದಿಗಳಂ ಬರಿಸಿ: **ಪಂಪಭಾ,** ೧೨. ೪೬ ವ)

ಮಂತ್ರಸಂತಾನ – [ನಾ] ಮಂತ್ರಗಳ ಸಮೂಹ (ಜ್ಞಾನದಿನಿರ್ದು ನಿಟ್ಟಿಪೊಡೆ ದಿವ್ಯಮುನೀಂದ್ರಂ ಕೊಟ್ಟ ಮಂತ್ರಸಂತಾನಮಂ ಓದಿಯೋದಿ ಯಮರಾಜನನದ್ಭುತ ತೇಜನಂ ಸರೋಜಾನನೆ ಜಾನದಿಂ ಬರಿಸೆ: **ಪಂಪಭಾ,** ೧. ೧೧೯)

ಮಂತ್ರಾಕ್ಷರ – [ನಾ] ಧ್ಯಾನಿಸಿ ವರ ಪಡೆಯಬಹುದಾದ ಮಂತ್ರ (ಆ ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂಗೊಳೆ ಕೊಟ್ಟಂ ದುರ್ವಾಸಂ ವಿಳಸಿತ ಮಂತ್ರಾಕ್ಷರಂಗಳಂ ದಯೆಯಿಂದಂ: **ಪಂಪಭಾ,** ೧. ೮೮ ಮತ್ತು ೧. ೮೯)

ಮಂತ್ರಾಕ್ಷರನಿಯಮ – [ನಾ] ಮಂತ್ರಾಕ್ಷರದ ವ್ರತ (ಮಂತ್ರಾಕ್ಷರ ನಿಯಮದಿಂ ಅಭಿಮಂತ್ರಿಸಿ ಬರಿಸಿದೊಡೆ ವಾಯುದೇವಂ ಬಂದು ಏಂ ಮಂತ್ರಂ ಪೇೞ್ಎನೆ ಕುಡು ರಿಪುತಂತ್ರಕ್ಷಯಕರನಂ ಎನಗೆ ಹಿತನಂ ಸುತನಂ: **ಪಂಪಭಾ,** ೧. ೧೨೪)

ಮಂತ್ರಾವಾಸ – [ನಾ] ಮಂತ್ರಶಾಲೆ (ಮಂತ್ರಾವಾಸದೊಳ್ ಮಂತ್ರನಿಶ್ಚಿತನಾಗು ಈಗಡೆ: **ಪಂಪಭಾ,** ೮. ೮೭)

ಮಂಥನ – [ನಾ] ಕಡೆಯುವುದು (ಮದಗಜ ಬೃಂಹಿತಧ್ವನಿ ತುರಂಗಮ ಹೇಷಿತಘೋಷಂ ಆದಂ ಒರ್ಮೊದಲೆ ಪಯೋಧಿಮಂಥನ ಮಹಾರವಮಂ ಗೆಲೆ: **ಪಂಪಭಾ,** ೩. ೩೮)

ಮಂಥರ – [ನಾ] ಮಂದವಾದ ಚಲನೆಯುಳ್ಳ (ಚಿರವಿಕ್ಷೋಭಿತ ಸಿಂಧುತೋಯಶಿಶಿರಂ ತತ್ತೀರನಾನಾಲತೋತ್ಕರ ಸಂಘಟ್ಟನ ಮಂಥರಂ .. .. ವಿಜಯಾರ್ಧೋಪಾಂತ ಮಂದಾನಿಳಂ: **ಆದಿಪು,** ೧೩. ೯)

ಮಂದಗಮನ – [ನಾ] ನಿಧಾನವಾದ ನಡಿಗೆ (ಆಕೆಯ ಮಂದಗಮನಮುಂ ಪಗೆವರ ಮನಂಗಳುಂ ಒಡನೊಡನೆ ಅಲಸಿಕೆಯಂ ಕೈಕೊಂಡುವು: **ಪಂಪಭಾ,** ೧. ೧೪೧ ವ)

ಮಂದಪವನ – [ನಾ] ಮೆಲುಗಾಳಿ (ಎಸಗಿತ್ತಂದು ಅನುಕೂಲ ಮಂದಪವನಂ: **ಪಂಪಭಾ,** ೯. ೯೬)

ಮಂದಯಿಸು – [ಕ್ರಿ] ಸಾಂದ್ರಗೊಳ್ಳು (ಪತ್ತಿತ್ತೆತ್ತಮಾಕಾಶದೊಳ್ ಆನಿಲಪಥಂ ಧಾರಿಣೀಚಕ್ರದೊಳ್ ಕಾಳಸೆಗೊಂಡತ್ತು ಎಂಬಿನಂ ಮಂದಯಿಸಿ: **ಆದಿಪು,** ೧೪. ೯೫)

ಮಂದರ – [ನಾ] [ಜೈನ] ಮೇರುಪರ್ವತ (ಭರತಂ ದರ್ಶನದೊಳ್ ಮಂದರಮಾ ಪ್ರಾಗ್ಭಾರಭೂತಳಂಬರೆಗಂ ನೀಳ್ದಿರೆ ಕಂಡು ವಿಸ್ಮಿತಾಂತಃಕರಣಂ: **ಆದಿಪು,** ೧೬. ೪೧)

ಮಂದರಕ್ಷುಭಿತ – [ನಾ] ಮಂದರಪರ್ವತದಿಂದ ಕಡೆಯಲ್ಪಟ್ಟ (ಬೇಗದೊಳಾ ಕಟಕಂಗಳೆಯ್ದೆ ಕೆಯ್ಕೊಂಡುವು ಮಂದರಕ್ಷುಭಿತ ದುಗ್ಧಪಯೋಧಿ ಗಂಭೀರನಾದಮಂ; **ಪಂಪಭಾ,** ೧೦. ೪೯)

ಮಂದರಧರ – [ನಾ] ವಿಷ್ಣು (ಕೊಂದೆನ್ನ ಮಗನಂ ಇಂ ಭಯದಿಂದಂ ರಸೆವೊಕ್ಕುಂ ಅಜನ ಗುಂಡಿಗೆವೊಕ್ಕುಂ ಮಂದರಧರನ ಈ ಪೊರ್ಕುಟಿ ಪೊಂದಾವರೆವೊಕ್ಕು ಮೇಣವಂ ಬರ್ದುಕುವನೇ: **ಪಂಪಭಾ,** ೧೧. ೧೨೧)

ಮಂದರಾಚಲ – [ನಾ] ಮಂದರಪರ್ವತ (ಅಬ್ಧಿಮಥನಪ್ರಾರಂಭದೊಳ್ ಮಂದರಾಚಲಮಂ ತಂದವನಾವಂ ಆತನೆ ವಲಂ ತಕ್ಕಂ ಪೆಱರ್ ತಕ್ಕರೇ: **ಪಂಪಭಾ,** ೬. ೪೧)

ಮಂದರಾದ್ರೀಂದ್ರಾಭಿಷೇಕ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಮಂದರಪರ್ವತದಲ್ಲಿ ಮಾಡುವ ಜಿನಶಿಶುವಿನ ಅಭಿಷೇಕ (ಮಂದರಾದ್ರೀಂದ್ರಾಭಿಷೇಕ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಮಂದಶ್ವಸನ – [ನಾ] ಮಂದಮಾರುತ (ಯಮುನಾನದೀತರಂಗಮಂ ಅಮುಂಕಿ ವನಲತೆಯ ಮನೆಗಳಂ ಸೋಂಕಿ ವನಭ್ರಮಣ ಪರಿಶ್ರಮಮಂ ಮುನ್ನಮೆ ಕಳೆದುದು ಬಂದದೊಂದು ಮಂದಶ್ವಸನಂ: **ಪಂಪಭಾ,** ೫. ೫೩)

ಮಂದಾಕಿನಿ – [ನಾ] ಗಂಗೆ (ಎಂದು ಮುಂತಪ್ಪ ಕಜ್ಜಮಂ ತನ್ನೊಳೆ ಬಗೆದು ಅವಾರ್ಯವೀರ್ಯಂ ಸೂರ್ಯದಿನದಂದು ಮಂದಾಕಿನಿಯಂ ಮೀಯಲೆಂದು ಬಂದು: **ಪಂಪಭಾ,** ೯. ೭೧ ವ)

ಮಂದಾಕಿನೀತನೂಜ – [ನಾ] ಭೀಷ್ಮ (ದುರ್ಯೋಧನಂ ಸಹಸ್ರಕಿರಣೋದಯದೊಳ್ ಅನೇಕಸಹಸ್ರ ನರಪತಿ ಪರಿವೃತನುಮಾಗಿ ಮಂದಾಕಿನೀತನೂಜಂಗೆ ಬಱಿಯನಟ್ಟಿ: **ಪಂಪಭಾ,** ೧೦. ೧೪ ವ)

ಮಂದಾನಿಳ – [ನಾ] ಮೆಲುಗಾಳಿ (ಅಂತು ಮಳಯಜರಸಶಿಶಿರ ಶೀಕರಾಸಾರಿಯಾಗಿ ಬಂದ ಮಂದಾನಿಳನ ಬಱಿಯನೆ ಬಂದು: **ಆದಿಪು,** ೧೧. ೫೫ ವ)

ಮಂದಾರ – [ನಾ] ಮಂದರ ಪರ್ವತ (ಆ ಮಂದಾರದ ಪೂರ್ವಾಪರ ದಿಗ್ವಿಭಾಗಂಗಳೊಳ್ ವಿದೇಹಂಗಳಿರ್ದುವು: **ಆದಿಪು,** ೧. ೫೦ ವ)

ಮಂದಾರಮಾಲಿಕೆ – [ನಾ] ಮಂದಾರಪುಷ್ಪದ ಹಾರ (ಉತ್ಪಳಿಕೆಯಂ ಕೈಘಟ್ಟಿ ನೀಡ'ಲುಂ ಮಂದಾರಿಕೆಯಂ ಮಂದಾರಮಾಲಿಕೆಯನೆತ್ತಲುಂ: **ಆದಿಪು,** ೬. ೨೧ ವ)

ಮಂದ್ರ – [ಗು] ಗಂಭೀರವಾದ (ಕರಿಣೀವೃಂದದ ಮೇಲೆ ತಳ್ತ ತಟಿ'ಗಳ್ ವಾರಾಂಗನಾಗೀತಮಂದ್ರರವಂಗಳ್: **ಆದಿಪು,** ೧೧. ೪೨)

ಮಕರ – [ನಾ] ಮೊಸಳೆ, ಮಹಾ ಮೀನು (ರಥಂ ಮಕರಂಗಳಂತೆ ಅಗುರ್ವುವರಿಯುತ್ತುಂ ಇರ್ಪ ಅಣಿ ಬೃಹದ್ಬಡಬಾನಳನಂತೆ: **ಪಂಪಭಾ,** ೮. ೯೯); [ನಾ] ತಿಮಿಂಗಿಲ (ಕರಿಮಕರಾಹತಿಯಿಂ ಬಿರಿದಳಱುವ ಭೈತ್ರದಂತೆ ವಿವಿಧಾಯುಧ ದಂತುರಿತಂಗಂಳಱಿದುವಾ ಸಂಗರಜಳನಿಧಿಯೊಳ್ ವರೂಥ ಕರಿ ನಿಕರಂಗಳ್: **ಪಂಪಭಾ,** ೧೩. ೩೫)

ಮಕರಂದ – [ನಾ] ಹೂಜೇನು (ಮಂದಾರವರ್ಷ ನವಮಕರಂದ ರಜೋಗಂಧಬಂಧು ವಿವಿಧಪತಾಕಾಸಂದೋಹಾಂದೋಳನ ಪಟು ಬಂದಾಱಿಸಿದತ್ತು ಸಮವಸರಣಸಮೀರಂ: **ಆದಿಪು,** ೧೪. ೧೩೫)

ಮಕರಧ್ವಜ – [ನಾ] ಮನ್ಮಥ (ಅಂತಾ ಬಾಲೆ ಕಾಯ್ದ ಪುಡಿಯೊಳಗೆ ಬಿಸುಟ್ಟ ಎಳವಾಳೆಯಂತೆ ಸುರತಮಕರಧ್ವಜನೊಳಾದ ಬೇಟದೊಳ್ ಮಮ್ಮಲ ಮಱುಗುತಿರ್ದಳ್: **ಪಂಪಭಾ,** ೫. ೧೦ ವ)

ಮಕರಮಸ್ತಕಭೂಮಿ – [ನಾ] ಮಕರವ್ಯೂಹದ ತಲೆಬದಿಯ ಜಾಗ (ಕೌರವಬಲದ ಒಡ್ಡಣದ ನಾಯಕರಿವರಾರೆಂದು ಬೆಸಗೊಳೆ ಮಕರಮಸ್ತಕಭೂಮಿಯೊಳ್ ಯುದ್ಧಸನ್ನದ್ಧನಾಗಿ: **ಪಂಪಭಾ,** ೧೦. ೫೩ ವ)

ಮಕರವ್ಯೂಹ – [ನಾ] ಮೀನಿನಾಕಾರಾದ ಸೇನಾರಚನೆ (ಕೌರವಬಲದ ಸೇನಾನಾಯಕಂ ಗಾಂಗೇಯಂ ಅಡ್ಡಮಾಗೆ ತನ್ನೊಡ್ಡಿದ ಮಕರವ್ಯೂಹದ ಮೊನೆಯೊಳ್: **ಪಂಪಭಾ,** ೧೦. ೫೨ ವ)

ಮಕರಿಕಾಪತ್ರ – [ನಾ] ಅಲಂಕಾರಕ್ಕಾಗಿ ದೇಹದ ಮೇಲೆ ಬರೆದುಕೊಳ್ಳುವ ಚಿತ್ರ (ಅಲಕಂ ಮಂದಾರಶೂನ್ಯಂ ಕದಪು ಮಕರಿಕಾಪತ್ರಶೂನ್ಯಂ ಲಲಾಟಂ ತಿಲಕಾಳಂಕಾರಶೂನ್ಯಂ: **ಆದಿಪು,** ૩. ೧૩)

ಮಕುಟ – [ನಾ] ಕಿರೀಟ (ಆತಂ ನಿಜಭುಜವಿಜಯಖ್ಯಾತಿಯನಾಳ್ದ ಆಳ್ದಂ ಅಧಿಕಬಲಂ ಅವನಿಪತಿವ್ರಾತಮಣಿಮಕುಟ ಕಿರಣದ್ಯೋತಿತಪಾದಂ: **ಪಂಪಭಾ,** ೧. ೧೬)

ಮಕುಟಬದ್ಧ – [ನಾ] ಕಿರೀಟ ಧರಿಸಿದವನು, ರಾಜ (ಮಹಾಮಂಡಳಿಕ ಪ್ರಮುಖಮಕುಟಬದ್ಧರ್ ಮಾಱ್ಪ ಚತುರ್ಮುಖಮುಂ: **ಆದಿಪು,** ೧೫. ೧೩ ವ)

ಮಕುಟಭಂಗ – [ನಾ] ಕಿರೀಟವನ್ನು ಮುರಿಯುವುದು (ಅನ್ನೆಗಂ ವೇಣೀಸಂಹಾರ ಊರುಭಂಗ ಮಕುಟಭಂಗಂಗಳೆಂಬ ತನ್ನ ಮಹಾಪ್ರತಿಜ್ಞೆಯಂ ನೆಱಪಿದ ಭೀಮಸೇನನಳವಂ ಅಳವಲ್ಲದೆ ಪೊಗೞ್ದು: **ಪಂಪಭಾ,** ೧೩. ೯೮ ವ)

ಮಕುಟಮಾಣಿಕ – [ನಾ] ಕಿರೀಟದ ಮಾಣಿಕ್ಯ (ಆಗಳಾ ತಾರಾಗಣಂಗಳ್ ದಿಶಾವನಿತೆಯರ ಮಕುಟಮಾಣಿಕಂಗಳಂತೆ ಎನಿತು ಬೆಳಗಿಯುಂ ಕಟ್ಟಲೆಯಂ ಅಲೆಯಲಾಱವಾದುವು: **ಪಂಪಭಾ,** ೪. ೪೯ ವ)

ಮಕುಟಶಿಖರ – [ನಾ] ಕಿರೀಟದ ತುದಿ (ಪುಗೆ ಪೊಱಮಡೆ ತನ್ನ ಮನಂಬುಗುವಂತಿರೆ ತನ್ನ ಮಕುಟಶಿಖರಮನವು ನೆಟ್ಟಗೆ ತಾಗುವಂತುಮಾರೆ ಜಗದಧಿಪನುದಾತ್ತಭಕ್ತಿಯಿಂ ಮಾಡಿಸಿದಂ: **ಆದಿಪು,** ೧೬. ૩೮)

ಮಕ್ಕಳೆವು – [ನಾ] ಮಕ್ಕಳಾಗಿದ್ದೇವೆ (ನಿಮ್ಮಯ ಧರ್ಮದ ಮಕ್ಕಳೆವು ಎಮ್ಮಂ ಕಡೆಗಣಿಸಿ ನಿಮಗೆ ನೆಗಟ್ಟುದು ದೊರೆಯೇ: **ಪಂಪಭಾ,** ೧೧. ೧೨೮)

ಮಖ – [ನಾ] ಯಾಗ (ಆ ಮಖದ ಮಾಹಾತ್ಮ್ಯಮಂ ಪೇೞಿಸ್ವೊಡೆ ಮುನ್ನಂ ಕೃತಯುಗದೊಳ್ ಹರಿಶ್ಚಂದ್ರನೆಂಬ ಚಕ್ರವರ್ತಿ ಶತಕ್ರತುವಂ ನಿರ್ವರ್ತಿಸಿ: **ಪಂಪಭಾ,** ೬. ೧೭ ವ)

ಮಗ – [ನಾ] ಮಗು, ಹುಡುಗ (ಮಗನೆ ಪದಿನಾಲ್ಕು ವರುಷದ ಮಗನೈ ನಿನ್ನನೊರ್ವನಂ ಪಗೆವಡೆಯೊಡ್ಡುಗಳಂ ಒಡೆಯಲ್ಕೆ ಪೇೞ್ದು: **ಪಂಪಭಾ,** ೧೧. ೯೧)

ಮಗಧನಾಯಕ – [ನಾ] ಶ್ರೇಣಿಕ ಮಹಾರಾಜ (ವರ್ಧಮಾನಜಿನ ಸನ್ನಿಧಿಯೊಳ್ ವಿಪುಳಾದ್ರಿಯೊಳ್ ನಿಜಾದರದೊಳೆ ಗೌತಮರ್ ಮಗಧನಾಯಕನುಂ ತಿಳಿವಂತು ಪೇೞ್ದುದಂ: **ಆದಿಪು,** ೧. ೪೧)

ಮಗನೆಯಿನ್ – ಮಗನೇ ಆಗಿದ್ದೀಯೆ (ಕೃತಾಂತನೆಂ ಎನಗಮ್ಮ ನೀಂ ಮಗನೆಯಿನ್ ಪೆಱತೇಂ ನಿನಗೆ ಉತ್ತರೋತ್ತರಂ: **ಪಂಪಭಾ,** ೮. ೪೮)

ಮಗಮಗಿಸು – [ನಾ] ಪರಿಮಳ ಬೀರು (ನಿಡುಸುಯ್ದು ನಲ್ಲಳ ಮುಖಾಂಬುಜಸೌರಭದೊಳ್ ಪೊದಳ್ದು ಅದೇಂ ಮಗಮಗಿಸಿತ್ತೊ ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ: **ಪಂಪಭಾ,** ೪. ೧೦೭)

ಮಗಟ್ದು – ನಲಿದು, ಸಂತೋಷದಿಂದ (ಪೊಸೆದೊಡೆ ಪಾಲ್ಗಡಲಂ ಮಗಟ್ದುಸುರರ್ ಪೊಸೆದಲ್ಲಿ ಕಾಳಕೂಟಾಂಕುರಂ ಅಂದು ಅಸದಳಮೊಗೆದಂತೊಗೆದುವು ಬಸಿಱಿಂ ನೂಱೊಂದು ಪಿಂಡಂ ಅರುಣಾಕೀರ್ಣಂ; **ಪಂಪಭಾ,** ೧. ೧೩೦) (ಟಿವಿವೆಂ 'ಮಗುಟ್ದುಸುರರ್' ಪಾಠವನ್ನು ಬಳಸಿದರೆ, ಡಿಎಲ್‌ಎನ್ 'ಮಗಟ್ದುಸುರರ್' ಎಂಬ ಪಾಠವನ್ನು ಸ್ವೀಕರಿಸುತ್ತಾರೆ. [ದೀಪಿಕೆ: ಪು. ೪೮]

ಮಗುೞ್ – [ಕ್ರಿ] ವಾಪಸಾಗು (ಅರಸರೀಗಳೆ ಬಂದಪ್ಪರ್ ಅಂಜದಿರಿಂ ಎಂದು ಆಸೆವಾತುಗಳೊಳಾಱೆಸಿ ನುಡಿದೊಡಗೊಂಡು ಮಂದಿರಕ್ಕೆ ಮಗುೞ್ದರ್: **ಆದಿಪು,** ೯. ೭೬ ವ); [ಕ್ರಿ] ಸಂತೋಷಿಸು (ಸುರಯಿಯೊಳ್ ಗಿಳಿ ಮಗುೞ್ವರಗಿಳಿ ಬಿರಯಿಗೆ ಮೊರೆವಂತೆ ಮೊರೆವ ಮಱಿದುಂಬಿ: **ಆದಿಪು,** ೬. ೧೦೦)

ಮಗುೞಿ ಕುಡಿಸು – [ಕ್ರಿ] ವಾಪಸು ಕೊಡಿಸು (ಎಮ್ಮಾಳ್ವ ನೆಲನೊತ್ತೆಯೆಂದೊಡೆ ಬಗೆದು ನೋಡಿ ಗೆಲ್ದಿಂ ಬೞಿಯಂ ಮುದುಗಣ್ಣಳ್ ಮಗುೞಿ ಕುಡಿಸುವರೆಂಬ ಬಗೆಯೊಳಂ: **ಪಂಪಭಾ,** ೭. ೩ ವ)

ಮಗುೞ್ಚು – [ಕ್ರಿ] ಹಿಂದೆ ಕಳಿಸು (ಎಂದತಿಲಲಿತಸಮುಚ್ಚಳಿತ ರಶನಾಕಳಾಪ ನೂಪುರಕಿಂಕಿಣೀಕ್ವಣಿತ ಅನುಸಾರಿಯಾಗಿ ಬರ್ಪ ರಾಜಹಂಸಮಂಡಲಮಂ ಮಗುೞ್ಚಿ ಬರ್ಪಾಗಳ್: **ಆದಿಪು,** ೧೧. ೧೩೮ ವ)

ಮಗುೞ್ದುಂ – [ಅ] ಮತ್ತೆ, ಪುನಃ (ವಿವಾಹಸಮಯದೊಳ್ ತನ್ನನಾ ಶ್ರೀಧರದೇವನೇ ಬಂದು ಮಗುೞ್ದುಂ ಮೂದಲಿಸೆ: **ಆದಿಪು,** ೫. ೯೬ ವ)

ಮಗುೞ್ದುಬರ್ – [ಕ್ರಿ] ವಾಪಸು ಬಾ (ಅಂತು ಕರ್ಣನುಂ ಶಾಪಹತನಾಗಿ ಮಗುೞ್ದು ಬಂದು ಸೂತನ ಮನೆಯೊಳಿರ್ಪನ್ನೆಗಂ ಇತ್ತಲ್ ಕುಂತಿಗವರ ಮಾವನಪ್ಪ ಕುಂತಿಭೋಜನುಂ ಸ್ವಯಂಬರಂ ಮಾಡೆ: **ಪಂಪಭಾ,** ೧. ೧೦೫ ವ)

ಮಗುೞ್ದುಮಗುೞ್ದುಂ – [ಅ] ಮತ್ತೆ ಮತ್ತೆ (ಅಂತು ಮುನಿವೃಷಭನಂ ಕಿಱಿದಂತರಮಂ ಕೞಿಪಿ ಮಗುೞ್ದುಮಗುೞ್ದುಂ ಕಾಂತಾರಾಂತರಮಂ ಪುಗುವನ್ನೆಗಂ ಅಂತವರೆಯಿಕ್ಕದಂತೆ ನೋಡಿದರಾಗಳ್: **ಆದಿಪು,** ೧೦. ೭)

ಮಗುೞ್ದುವರ್ – [ಕ್ರಿ] ವಾಪಸು ಬಾ (ಎಂದು ಚಿಂತಿಸುತ್ತುಂ ಪೊೞಲ್ಗೆ ಮಗುೞ್ದು ವಂದು ಗಾಂಗೇಯದ್ಧೃತರಾಷ್ಟ್ರವಿದುರರ್ಕಳ್ಗೆ ತದ್ವೃತ್ತಾಂತಮೆಲ್ಲಮಂ ಪೇೞ್ದು: **ಪಂಪಭಾ,** ೧. ೧೧೩ ವ)

ಮಗ್ಗು – [ಕ್ರಿ] [<ಮಟ್ಟು] ಬೀಳು (ಭವಭ್ರಮಣದುಃಖೋಗ್ರಾಗ್ನಿಯೊಳ್ ಮಗ್ಗಿದಪ್ಪುದು ಜೀವಂಗಳಂ ಎಂಬಿನಂ ಬಳಸಿದೀ ಮಿಥ್ಯಾತ್ವಬಂಧಂ: **ಆದಿಪು,** ೧೫. ೧೯)

ಮಗ್ನ – [ಗು] ಮುಳುಗಿದವನು (ಧರ್ಮಪೋತಚ್ಯುತರ್ ಅನವಧಿಸಂಸಾರವಾರಾಶಿಮಧ್ಯಾಸ್ಪದ ಸರ್ವಗ್ರಾಸಿ ಭೀಮಾಂತಕ ವದನಮಹಾಗರ್ತದೊಳ್ ಮಗ್ನರಾದರ್: **ಆದಿಪು,** ೯. ೫೮)

ಮಘ – [ನಾ] ತೃಪ್ತಿ, ಸಂತೋಷ (ಆ ಹೋಮಧೂಮದ ಗಂಧಂ ನಸುಮುಟ್ಟೆ ದಿವ್ಯ ಮಘಮಂ ಕೆಯ್ಕೊಂಡು ಸಗ್ಗಕ್ಕೆ ಪಾಱಿದುವಾ ಪಾರಿವ ಜಕ್ಕವಕ್ಕಿಗಳ್: **ಪಂಪಭಾ,** ೬. ३೮)

ಮಘಮಘಿಸು – [ಕ್ರಿ] ಪ್ರಕಾಶಿಸು (ಗಂಗಾನದಿಯ ಬಡಗಣ ತಡಿಯ ಮಘಮಘಿಸುವ ವಾರಣಾಸಿಪುರಮನಾಳ್ವ ಬೃಹದ್ದಳಂ: **ಪಂಪಭಾ,** ೬. ೨೬ ವ)

ಮಘವ – [ನಾ] ಸೌಧರ್ಮೇಂದ್ರ (ಮಘವಂ ಅಘವಿಘಾತಾರ್ಥಂ ಉದ್ಧತಾಭಿನಯಪ್ರಾಯಮುಂ ಆರಭಟೀವೃತ್ತಿಯುಕ್ತಮುಂ ಅಪ್ಪ ತಾಂಡವಮನಾಡಲ್ ಉದ್ಯೋಗಂಗೆಯ್ದು: **ಆದಿಪು,** ೭. ೧೧೫ ವ); [ನಾ] ಇಂದ್ರ (ಬೆಸನೇಂ ಏಗೆಯ್ವುದೊ ನಿನಗೊಸೆದೇನಂ ಕುಡುವುದು ಎಂದೊಡೆ ಅವಳ್ ಮಕ್ಕಳ ಒಸಗೆಯನೆನಗೀವುದು ನಿನ್ನೆಸಕದ ಮಸಕಮನೆ ಪೋಲ್ವ ಮಗನಂ ಮಘವಾ: **ಪಂಪಭಾ,** ೧. ೧೩೯)

ಮಚ್ಚರ – [ನಾ] ಅಸೂಯೆ (ಪಿರಿದುಂ ಕಾಯ್ಪಿನೊಳ್ ಎಯ್ದೆ ಕಾಯ್ವ ಸಮಕಟ್ಟಿಂ ದೋಷಮಲ್ತೆ ಅಕ್ಕ ಮಚ್ಚರಮುಂ ಮೋಘಂ ಎಡಂಬಡುಂ ಕಲುಷಮುಂ ಮುನ್ನುಳ್ಳುದು .. .. ನಿಷ್ಕಾರಣಂ ಕಾಯ್ವರೇಂ: **ಪಂಪಭಾ,** ೭. ३೫)

ಮಚ್ಚರಿಸು – [ಕ್ರಿ] ಸ್ಪರ್ಧಿಸು (ತನ್ನಿಂ ತಾನುಂ ಶರದದ ಚಂದ್ರಮನೊಳ್ ಮಚ್ಚರಿಪಂತಿರೆ ಚಂದ್ರಚರಿತಮಂ ಕೈಕೊಂಡಂ: **ಆದಿಪು,** ೧೨. ೪೬); [ಕ್ರಿ] ದ್ವೇಷಿಸು (ಮಚ್ಚರಿಪದಟಂ ಇನ್ನಾವನೊ ಭರತೇಶ್ವರಚಕ್ರವರ್ತಿಗಿನ್ನುಂ ಜಗದೊಳ್: **ಆದಿಪು,** ೧೪ ४)

ಮಚ್ಚು – ಪರಿಚಯ (ಅರಸರ ಮಚ್ಚು ತಮ್ಮ ಮನದೊಳ್ ನಿಲೆ ಸೈರಿಸದಂತನಿತ್ಯಮೀ ನರರ ವಿಭೂತಿಯೆಂಬ ಬಗೆ: **ಆದಿಪು,** ೨. ೫೧); [ನಾ] ಬಹುಮಾನ (ಪುಂಡರೀಕಿಣಿಗೆ ಮುಂದಟ್ಟಿದ ದೂತಂಗೆ ಪ್ರೀತನಾಗಿ ಮೆಚ್ಚಿ ಮಚ್ಚಿತ್ತು ವಜ್ರದಂತಚಕ್ರವರ್ತಿಯುಂ .. .. ಬಂಧುರಗಂಧ ಸಿಂಧುರಾರೂಢನುಮಾಗಿ: **ಆದಿಪು,** ೪, ೨३ ವ)

ಮಚ್ಛೌರ್ಯ – [ನಾ] [ಮತ್+ಶೌರ್ಯ] ನನ್ನ ಪ್ರತಾಪ (ಪಗೆವಂ ಬಂದುಱದಿಂತು ಮೂದ'ಲಿಸೆಯುಂ ಮಾತಂ

ಕಿವುಟಿಗ್ಗೇಳ್ದು ಕೆಮ್ಮಗೆ ನೀರೊಳ್ ಮುಳುಗಿದರ್ಪಡೆ ಕಿಡುಗುಂ ಮಚ್ಛೌರ್ಯಂ: **ಪಂಪಭಾ,** ೧೩. ೮೧)

ಮಜ್ಜನ – [ನಾ] [ಮಾರ್ಜನ] ಸ್ನಾನ (ಆ ರತಿ ಪಾಪಮುಂ ಪಡಣಮುಂ ಪೋಪಂತೆ ಕಾಮಂಗೆ ಮಜ್ಜನಕೆ ಎಂದೆತ್ತಿದ ಚಂದ್ರಕಾಂತ ಘಟದೊಳ್ ತಂದು: **ಪಂಪಭಾ** ಪರಿಷತ್ತು, ೪. ೫೧); ಸ್ನಾನಮಾಡುವ ಕ್ಷೇತ್ರ (ಪಿರಿಯ ಮರಂಗಳೆ ಮಾಡಮಾಗೆ ಪೊಳೆದೆಳೆದಳಿರ್ಗಳೆ ಸೆಜ್ಜೆಯಾಗೆ ಪಿರಿಯ ಮಡುಗಳೆ ಮಜ್ಜನಮಾಗೆ: **ಪಂಪಭಾ,** ೭. ೨೮)

ಮಜ್ಜನಂಬುಗಿಸು – [ಕ್ರಿ] ಸ್ನಾನಮಾಡಿಸು (ದಿಕ್ಕರಿಗಳ್ ಅಂಬುಜ ಪತ್ರಾಂಬುವಿಂ ಬೆಡಂಗಡಸಿರೆ ಮಜ್ಜನಂಬುಗಿಪುದಂ ಸತಿ ಕಂಡೊಸೆದಳ್ ನಿಶಾಂತದೊಳ್: **ಪಂಪಭಾ,** ೧. ೧೪೦)

ಮಜ್ಜನಂಬುಗು – [ಕ್ರಿ] ಸ್ನಾನಮಾಡು (ಉದಿತೋದಿತನಂ ದಿಗಿಭಂಗಳೆಂಟುಂ ಒಳ್ಪೊಡರಿಸಿ ಮಜ್ಜನಂಬುಗಿಸೆ ಕಂಡುದಜೆಂ ಕಮಲಾಭಿರಾಮನಂ: **ಪಂಪಭಾ,** ೧. ೧೪೧)

ಮಜ್ಜನಗೃಹ – [ನಾ] ಸ್ನಾನದ ಮನೆ (ವಸುಧಾರಕಮೆಂಬ ಕೋಶಾಗಾರಮುಂ ಜೀಮೂತವೆಂಬ ಮಜ್ಜನಗೃಹಮುಂ: **ಆದಿಪು,** ೧೫. ೩ ವ)

ಮಜ್ಜನವಳ್ಳ – [ನಾ] ಸ್ನಾನಮಾಡಿಸುವವನು (ಮಜ್ಜನಪೀಠಂ ಸುರಗಿರಿ ಮಜ್ಜನಜಳವಮೃತಜಳಧಿಜಳವು ಅಮರೇಂದ್ರಂ ಮಜ್ಜನವಳ್ಳನುಮೆನೆ ಜಿನಮಜ್ಜನಮಹಿಮೆಯ ಬೆಡಂಗಂ ಏವಣ್ಣಿಪುದೋ: **ಆದಿಪು,** ೭. ೧೦೩)

ಮಜ್ಜಾ – [ನಾ] ನೆಣ, ಕೊಬ್ಬು (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ)

ಮಟ್ಟ – [ನಾ] ಸಮಪ್ರದೇಶ (ಪಡೆಗಡ್ಡಮಿರ್ದ ಬೆಟ್ಟಿಟ್ಟೆಡೆ ಮಟ್ಟಮಿಱುಂಬಮೆಂಬಿವಂ ಸಣ್ಣಿಸಿ ಸಾರ್ವೆಡೆ ನಡೆವ ದಂಡರತ್ನಂ ಮುಂದೆ ನಡೆಯೆ: **ಆದಿಪು,** ೧೧. ೪೭)

ಮಟ್ಟಂಪರಿ – [ಕ್ರಿ] ಸಲೀಸಾಗಿ ಮುಂದೆ ಸಾಗು (ತೆರೆಗಳ ಪೊಯ್ಲುಂ ಸ್ಯಂದನತುರಂಗಂಗಳ್ ಮೊಗಮನೆತ್ತಿ ಬಂಚಿಸಿ ಮಟ್ಟಂಪರಿಯೆ ತೆರೆಯಿಲ್ಲದೆಡೆಯೊಳ್ ವರೂಥಮವಯವದೆ ತಡಿಯನೆಯ್ದಿದುದಾಗಳ್: **ಆದಿಪು,** ೧೨. ೧೨೭)

ಮಟ್ಟನಾಗು – [ಕ್ರಿ] ಖಾಲಿಯಾಗು (ಬನದ ತಳಿರ್ ಕಳಿಕೆ ಮುಗುಳ್ ನನೆ ಬಿರಿಮುಗುಳ್ ಅಲರ ಗೊಂಚಲೆಂಬಿವು ವನಜಾನನೆಯರ ಪೂದುಡುಗೆಗೆ ಮಟ್ಟನಾದುವೇಂ ಪೆಂಪೊ ಭರತನಂತಃಪುರದಾ: **ಆದಿಪು,** ೧೧. ೧೨೯)

ಮಡ – [ನಾ] ಕಾಲಿನ ಹರಡು (ಮಡದೆಡೆ ನಾಲ್ವೆರಲ್ ಅಂಗುಟದೆಡೆಯೊಳ್ ಗೇಣಾಗೆ ನಿಲ್ವುದಿಚ್ಛಾಗತಂ: **ಆದಿಪು,** ೯. ೮೪); [ನಾ] ತೇರಿನ ಪಾರಿ, ಗಾಡಿಯ ಎರಡೂ ಕಡೆ ಆಸರೆಯಾದ ಮರದ ಪಟ್ಟಿಯೇ ಪಾರಿ (ಉಡಿದಿರ್ದ ಅಚ್ಚು ಅಟೆದ ಈಸು ತಟ್ಟಿದ ನೊಗಂ ಜೀಱಿಟ್ಟಿ ಚಕ್ರಂ ಸಿಡಿಲ್ ಪೊಡೆದಂತೆ ಒರ್ಮೆಯೆ ಸೂಸಿ ಪಾಱೆದ ಮಡಂ ನುರ್ಗಾದ ಕೀಲ್: **ಪಂಪಭಾ,** ೧೦. ೯೧)

ಮಡಂಬ – [ನಾ] ಐನೂರು ಹಳ್ಳಿಗಳಿಂದ ಸುತ್ತುವರಿದ ನಗರ (ಪಂಚಶತಗ್ರಾಮ ಪರೀತಂಗಳಪ್ಪ ಮಡಂಬಂಗಳುಮಂ: **ಆದಿಪು,** ೮. ೬೩ ವ)

ಮಡಕಾಲ್ – [ನಾ] ಮಂಡಿಯಿಂದ ಕಣಕಾಲಿನವರೆಗಿನ ಭಾಗ (ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಂ ಅಲೆವ ಕಚ್ಚೆ ನಿಡಿಯಸಿಯ ಒಱೆ ಕರ್ಪಿಡಿದ ಪಣೆಕಟ್ಟು ಕೆಯ್ಪಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್: **ಪಂಪಭಾ,** ೧೦. ೭೧)

ಮಡಗಿಡು – [ಕ್ರಿ] ಮರೆಯಾಗಿರಿಸು (ಮಡಗಿಡಲೆಂದು ಪುತ್ತಿನೊಳಗೆ ಒಯ್ಯನೆ ಕುತ್ತಿದ ಕಯ್ಯಂ: **ಆದಿಪು,** ೨. ೪೦); ಸುರಕ್ಷಿತವಾಗಿರಿಸು (ಕಮ್ಮನಪ್ಪ ತುಪ್ಪದ ಕೊಡದೊಳ್ ಸಮಂತು ಮಡಗಿಟ್ಟೊಡೆ ಸೃಷ್ಟಿಗೆ ಚೋದ್ಯಮಪ್ಪಿನಂ: **ಪಂಪಭಾ,** ೧. ೧೩೧)

ಮಡಗು – [ಕ್ರಿ] ಇರಿಸು (ಕೆಯ್ಗಟ್ಟಳೆ ಕೊಳ್ಳಿಂ ಎಂದು ಕುಡೆ ಷೋಡಶ ಋತ್ವಿಜರ್ಗೆ ಇತ್ತುದಕ್ಕೆ ಬಾಯ್ವಿಟ್ಟಿರೆ ವಿಪ್ರಕೋಟಿ ಮಡಗಲ್ಕೆಡೆಯಿಲ್ಲದೆ ಪೊನ್ನ ರಾಶಿಯಂ: **ಪಂಪಭಾ,** ೬. ೩೯)

ಮಡಗೂೞ್ – [ನಾ] ಎಂಜಲನ್ನ, ಉಚ್ಚಿಷ್ಟ (ಈತನೊಳ್ ತೊಟ್ಟ ಕಿಂಕರಭಾವಂ ಎಮಗಕ್ಕಿಗೊಟ್ಟು ಮಡಗೂೞುಣ್ಬಂದಮಂ ಪೋಲದೇ: **ಆದಿಪು,** ೧೪. ೩೨)

ಮಡಲ್ – [ಕ್ರಿ] ಹಬ್ಬು (ನಿಲ್ತುವು ರಸಂಗಳಿಲ್ಲಿ ಮಡಲ್ತು ಎನೆ ಭಂಗಿಯೊಳ್ ಅನಂಗಜಂಗಮಲತೆವೊಲ್ ನಿಲ್ತು: **ಆದಿಪು,** ೯. ೨೦); [ನಾ] ಬಳ್ಳಿ (ಅಲರ್ ಕಣ್ ಮುಗುಳ್ ನಗೆ ಮಡಲ್ ತೊಡೆ ತುಂಬಿ ಕುರುಳ್ ತಳಿರ್ ತಳಂ ಗೊಲೆ ಕೆಂಪು ಕೆಂಪು ಕೊನೆ ಸೆಳ್ಳುಗುರ್ಗಳ್: **ಪಂಪಭಾ,** ೫. ೧೨)

ಮಡಿ – [ನಾ] ಪಾತಿ (ಮಡಿಗಳೊಳಗಲರ್ದ ನೆಯ್ದಿಲ ಕಡುಗಂಪುನಿವಱ ಕಂಪು ಗೆಲ್ದುವು ಸಾಸಿರ್ಮಡಿ ಎನೆ ಪೊಂಬಣ್ಣದ ಕೆಂಪಿಡಿದಿರೆ ಸೊಗಯಿಪುವು ಗಂಧಶಾಳಿವನಂಗಳ್: **ಆದಿಪು,** ೧. ೬೦); [ನಾ] ತಿರಿ, ಕೀಳು (ಮಡಿದು ತಂದಿಟ್ಟ ಪೊಸನೆಯ್ದಿಲ ಕಾವನಾವಗಂ ಗೆಲ್ದ ರತ್ನಕುಂಡಲಂಗಳ ಪೊಳಪನೊಳಕೊಂಡಂತೆ: **ಪಂಪಭಾ,** ೨. ೩೯ ವ); [ನಾ] ಒಗೆದ ಬಟ್ಟೆ (ಚಂದನದೊಳ್ ತಳಿರ್ವಾಸು ಬೆಳ್ಪನಾಳ್ದತ್ತು ದುಕೂಲದೊಂದು ಮಡಿ ಮಾಸಿದ ಮಾಟಕ್ಕೆವೊಲಾಯ್ತು: **ಪಂಪಭಾ,** ೫. ೧೭)

ಮಡಿಪು – [ಕ್ರಿ] ಕೊಲ್ಲು (ಆ ಮಾರ್ಗಣದಿಂ ಗಡ ಮತ್ತುಟೆದರಂ ಎಂತುಂ ಮಡಿಪದೆ ಗುರುತನಯಂ ಎಚ್ಚ ಶಿತನಾರಾಚಂ: **ಪಂಪಭಾ,** ೧೨. ೭೨)

ಮಡಿಮಡಿಗೆ – [ಅ] ಬಾರಿಬಾರಿಗೂ (ಮಡಿಮಡಿಗುಱುವುದುಂ ಒಂದು ಪತ್ತೆಂಟು ಪಲಗೆಯಂ ಮೆಟ್ಟಿಡಿಸಲೆಂದು ಸೋಲ್ತು ಸೋಲದೊಳೇವಯಿಸಿಯಿನ್ನೊಡ್ಡಂ ಕೊಳ್ಳಿಂ ಎಂದು: **ಪಂಪಭಾ,** ೬. ೭೧ ವ)

ಮಡಿಯಿಸು – [ಕ್ರಿ] ಸಾಯಿಸು (ಮುಡಿಯಂ ಪಿಡಿದೆೞೆದವನಂ ಮಡಿಯಿಸಿ ಮತ್ತವನ ಕರುಳ ಪೆಣಿಲಿಂದ ಎನ್ನಂ ಮುಡಿಯಿಸುವಿನೆಗಂ ಮುಡಿಯಂ ಮುಡಿಯೆಂ ಗಡ ಕೇಳಿಂ ಈಗಳ್ ಆನ್ ನುಡಿನುಡಿದೆಂ: **ಪಂಪಭಾ,** ೭. ೧೦)

ಮಡಿವಳ್ಳ – [ನಾ] ಅಗಸ, ಮಡಿವಾಳ (ಪಟ್ಟೆ ಚಿತ್ರಾವಳಿ ಜೋನೆಗವಟೆಯಂ ದೇವಾಂಗಮೆಂಬ ವಸನಂಗಳನೇಂ ಮಡಿವಳ್ಳನ ಪಟಿಯತನನೆ ಪೋಲ್ತು ವಿಶದ ವಸನಾಂಗಕುಜಂ: **ಆದಿಪು,** ೫. ೩೪)

ಮಡು – [ನಾ] ನದಿಯ ಆಳವಾದ ಜಾಗ (ಕನ್ನಿಕೆಯ ಬೆಮರ ನೀರ್ಗಳ ಪೊನಲೊಟ್ಟುಗುಡಿಯಲ್ ಒಡಗೂಡೆ ಗಂಗೆಯ ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ: **ಪಂಪಭಾ,** ೧. ೯೨); [ನಾ] ಕೊಳ (ಅರೆಮುಚ್ಚಿ ಕಣ್ಗಳಂ

ನಿಶ್ಚಳಿತಂ ತಾನಿರ್ದು ಮಱೆದು ಕೆಂದಿದ ಮೀನಂ ತಳ್ತಾಡದಿರ್ದ ಮಡುವಂ ಪೋಲ್ತಂ: **ಪಂಪಭಾ,** ೮. ೧೩)

ಮಣಲ್ – ಮರಳು (ಮುಡಿಯ ಕುಚಯುಗದ ಜಘನದ ಕಡುವಿಣ್ಪಿಂ ಮಣಲೊಳ್ ಅಟ್ಟುದಿರೆ ಮೆಲ್ಲಡಿಗಳ್: **ಪಂಪಭಾ,** ೭. ೮೫)

ಮಣಿ – [ಕ್ರಿ] ಸೋಲು (ಉಗ್ರಮಾರ್ಗಣಂ ಆ ವೀರನಿನಾದ ಸಿಂಹನಿನದಂ ತಮ್ಮಂ ಪಳಂಚಲ್ಕೆ ತತ್ಫಣಿವೃಂದಂ ಮಣಿದೋಡೆ: **ಆದಿಪು,** ೧೩. ೬೭); [ನಾ] ರತ್ನ (ಮಣಿಮೌಕ್ತಿಕ ನೀಳಸ್ಥೂಳಶಿಲಾಪ್ರವಿಭಾಸಿತ ಉತ್ತುಂಗಮಂ ಮುನಿಮುಖ್ಯ ಮುಖಾಂಭೋಜೋದರ ನಿರ್ಗತ ಮಂತ್ರಪೂತಾಂಗಮಂ ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ,** ೧. ೧೧೫); [ಕ್ರಿ] ಹೆದರು (ಅಂತಣಿ ಮಣಿಯದೆ ಸೆಣಸಿ ಪೊಣರ್ದು ಕಿಡಿದು ಪೊಟ್ಟು ಕಾದಿ ನಿಂದಾಗಳ್: **ಪಂಪಭಾ,** ೧೦. ೮೫ ವ); [ಕ್ರಿ] ಬಾಗು (ಮಣಿಕುಂಡಲಂ ಕವಚಂ ಮಣಿಯದ ಚಾರಿತ್ರಂ ಉಗ್ರತೇಜಮುಂ ಈ ಒಳ್ಗುಣಮುಂ ಕಲಿತನಮುಂ ಇವೇಂ ಪ್ರಣತಾರೀ ಸೂತಸುತನೊಳ್ ಒಡವುಟ್ಟುಗುಮೇ: **ಪಂಪಭಾ,** ೧೨. ೯೮)

ಮಣಿಕಟಕ – [ನಾ] ರತ್ನದ ಕಟಕ ಹಾಗೂ ಸಾನು ಪ್ರದೇಶ (ಮಣಿಮಕುಟಂ ಶಿಖರಂ ಲಂಬಣಿಗೆಯ ಪೊಸಮುತ್ತು ನಿರ್ಝರಂ ಮಣಿಕಟಕಂ ಮಣಿಕಟಕಮಾಗೆ ತದ್ಗಿರಿಗೆಣೆಯಾದಂ ತನ್ನ ಪೆಸರೊಳಂ ವಿಜಯಾರ್ಧಂ: **ಆದಿಪು,** ೧೩. ೧೩)

ಮಣಿಕುಂಡಲ – [ನಾ] ರತ್ನಖಚಿತವಾದ ಕವಚ (ಒಡವುಟ್ಟಿದ ಮಣಿಕುಂಡಲಂ ಒಡವುಟ್ಟಿದ ಸಹಜಕವಚಂ ಅಮರ್ದಿರೆ ತನ್ನೊಳ್ ತೊಡರ್ದಿರೆಯುಂ ಬಂದಾಕೆಯ ನಡುಕಮಂ ಒಡರಿಸಿದನಾಗಳ್: **ಪಂಪಭಾ,** ೧. ೯೫)

ಮಣಿಕುಟ್ಟಿಮ – [ನಾ] ರತ್ನಖಚಿತ ನೆಲಗಟ್ಟು (ರಂಜಿಸೆ ಚರಣಾಲಕ್ತಕ ರಂಜನೆ ಮಣಿಕುಟ್ಟಿಮಂಗಳಂ: **ಆದಿಪು,** ೮. ೧೮)

ಮಣಿಗಣ – [ನಾ] ರತ್ನದ ರಾಶಿ (ಚಳತ್ ಅನಿಳ ಆಹತ ಕ್ಷುಭಿತ ಭಂಗುರತುಂಗತರಂಗಮಾಳಿಕಾವಳನ ಸಮುಚ್ಚಳತ್ ಮಣಿಗಣ ಆತ್ತ ಮರೀಚಿಲತಾಪ್ರತಾನಸಂವಳಿಯಿತ: **ಪಂಪಭಾ,** ೪. ೨೫)

ಮಣಿದೀಪ – [ನಾ] ರತ್ನಖಚಿತ ದೀಪ (ಆಪೊತ್ತುಂ ಮಣಿದೀಪಕಳಾಪೋದ್ಯಜ್ಜ್ಯೋತಿಗಳ್ ದಿಶಾಮಂಡಲಮಂ ವ್ಯಾಪಿಸುತಿರೆ: **ಆದಿಪು,** ೫. ೪೦)

ಮಣಿನಿಚಯ – [ನಾ] ರತ್ನರಾಶಿ (ಗಂಡಸ್ಥಳಕರಿನಿಕರಂ ಬಾಟಿಸ್ತೆಯೋ ಮೆಚ್ಚುವೇಟಿಟ್ ಆಜಾನೇಯ ಅಶ್ವೋತ್ಕರಂ ಬಾಟಿಸ್ತೆಯೋ ಮಣಿನಿಚಯಂ ಬಾಟಿಸ್ತೆಯೋ: **ಪಂಪಭಾ,** ೬. ೪೦)

ಮಣಿನೂಪುರಮಂಜುಶಿಂಜಿತ – [ಗು] ರತ್ನಖಚಿತ ಕಾಲಂದುಗೆಯ ಇನಿದನಿ (ಆಗಳೇಂ ಪೊದಳ್ದೆಸೆದುದೊ ಚಾರುದೇವಗಣಿಕಾ ಮಣಿನೂಪುರಮಂಜುಶಿಂಜಿತಂ: **ಆದಿಪು,** ೭. ೨೨)

ಮಣಿಮಕುಟ – [ನಾ] ರತ್ನಖಚಿತವಾದ ಕಿರೀಟ (ಆತಂ ನಿಜವಿಜಯಖ್ಯಾತಿಯನಾಳ್ದು ಆಳ್ದನಧಿಕಬಲನವನಿಪತಿವ್ರಾತ ಮಣಿ ಮಕುಟ ಕಿರಣದ್ಯೋತಿತ ಪಾದಂ ಸಪಾದ ಲಕ್ಷಕ್ಷಿತಿಯಂ: **ಪಂಪಭಾ,** ೧. ೧೬)

ಮಣಿಮುದ್ರಿಕೆ – [ನಾ] ಹರಳುಂಗುರ (ಮಕುಟಂ ಕೇಯೂರಂ ಕರ್ಣಕುಂಡಲಂ ಕೊಪ್ಪು ಸರಿಗೆ ದುಸರಂ ಮಣಿಮುದ್ರಿಕೆ ತಿಸರಮೆಂಬ ಭೂಷಾನಿಕರಮಂ: **ಆದಿಪು,** ೫. ೩೩)

ಮಣಿರತ್ನ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲೊಂದು, ಶ್ರೀಗೃಹದಲ್ಲಿ ಹುಟ್ಟಿದ್ದು (ಎರಡಱೊಳಂ ಚಂದ್ರಾದಿತ್ಯರನಾಗಳ್ ಬರೆದು ಕಾಕಿಣೀರತ್ನದೊಳಂ ಸ್ಫುರಿತಮಣಿರತ್ನದೊಳಂ: **ಆದಿಪು,** ೧೩. ೪೯)

ಮಣಿರಶನಾ – [ನಾ] ರತ್ನದ ಡಾಬು (ಸುರಗಣಿಕಾ ಗುಂಜನ್ಮಣಿರಶನಾ ಮಣಿಮಂಜೀರ ಮಂಜುಶಿಂಜಿತಂ ರಂಜಿಸುಗುಂ: **ಆದಿಪು,** ೮. ೧೮)

ಮಣಿವಳಯ – [ನಾ] ರತ್ನಕಂಕಣ (ಮೃದುಕರತಳವದನದ ಚೆಲ್ವೊದವಿರೆ ಮಣಿವಳಯಕಳರವಂ ಸೊಗಯಿಸೆ ಚೆಲ್ವಿದಿರ್ಗೊಳೆ: **ಆದಿಪು,** ೭. ೬)

ಮಣಿವಿಷ್ಟರ – [ನಾ] ರತ್ನದ ಪೀಠ (ಆದರದಿಂದ ಅನರ್ಘ್ಯ ಮಣಿವಿಷ್ಟರದೊಳ್ ಕುಳ್ಳಿರ್ದು: **ಆದಿಪು,** ೧೫. ೪೨)

ಮತ್ – [ಗು] ನನ್ನ (ಆಜಿರಂಗದೊಳ್ ಮುಂದೆ ಸಮಾನನಾಗಿ ಬೆಸದೆ ಇರ್ಪವನುಂ ತುಱುಕಾಱನಾಗೆ ಮತ್ ಸ್ಯಂದನ ಚೋದನಕ್ರಮಮದುಂ ಪೊಲೆಯಂಗೆ ಅಮರ್ದು ಇರ್ಕುಂ: **ಪಂಪಭಾ,** ೧೨. ೯೪)

ಮತ – [ನಾ] ಇಷ್ಟ (ಅತಿಮೃದುರವದಾಯಿಗಳಂ ತತ ಘನ ಸುಷಿರ ಅವನದ್ಧ ವಾದ್ಯಂಗಳಂ ಏಂ ಮತಮಱೆದು ಓಲಗಿಪುದೊ ದಂಪತಿಗೆಂದುಂ ಅವಾರ್ಯವೀರ್ಯತೂರ್ಯಕ್ಷ್ಮಾಜಂ: **ಆದಿಪು,** ೫. ೩೫); [ನಾ] ಅಭಿಪ್ರಾಯ, ಸಲಹೆ (ಕೊಂತಿ ಹರಿಯ ಮತದಿಂ ಕಾಯಲ್ಕೊಡರಿಸಿ ಬಂದಳ್ ಸುತರಂ ಕುಡದಿರ್ ಪುರಿಗಣೆಯಂ ಎನಿತು ಲಲ್ಲೆಸಿದೊಡಂ: **ಪಂಪಭಾ,** ೯. ೭೮)

ಮತಂಗಜ – [ನಾ] ಮದ್ದಾನೆ (ಬೆಡಂಗೊಳಕೊಳೆ ಸೊರ್ಕಿದ ಅಂಗಜಮತಂಗಜದಂತಿರೆ ಬರ್ಪ ಮಾದ್ರಿಯಂ: **ಪಂಪಭಾ,** ೨. ೧೭)

ಮತಂಗಜರಿಪು – [ನಾ] ಮದ್ದಾನೆಯ ವೈರಿ, ಸಿಂಹ (ಗಜ ವೃಷಭ ಅಂಕುಶ ಚಕ್ರ ಅಂಬುಜ ಹಂಸ ಮಯೂರ ಮತ್ಸ್ಯ ಫಣಿವೈರಿ ಮತಂಗಜರಿಪು ಚಿಹ್ನ ವಿಶಾಲಧ್ವಜಂಗಳಿಂ ಧ್ವಜಮಹೀತಳಂ ಸೊಗಯಿಸುಗುಂ: **ಆದಿಪು,** ೧೦. ೩೩)

ಮತಿ – [ನಾ] ಅರಿವು, ಬುದ್ಧಿ (ಲತೆಗಳ್ ಜಂಗಮರೂಪದಿಂದೆ ನೆರೆದುವೋ ದಿವ್ಯಾಪ್ಸರೋವೃಂದಂ ಈ ಕ್ಷಿತಿಗೇಂ ಇಂದ್ರನ ಶಾಪದಿಂದ ಇೞಿದುವೋ ಪೇೞೆಂಬ ಶಂಕಾಂತರಂ ಮತಿಗಂ ಪುಟ್ಟುವಿನೆಗಂ: **ಪಂಪಭಾ,** ೪. ೩೯)

ಮತಿಜ್ಞಾನ – [ನಾ] [ಜೈನ] ಎಂಟು ವಿಧವಾದ ಜ್ಞಾನಗಳಲ್ಲಿ ಒಂದು, ಪಂಚೇಂದ್ರಿಗಳಿಂದಲೂ ಮನಸ್ಸಿನಿಂದಲೂ ಉಂಟಾಗುವ ಜ್ಞಾನ (ಇರ್ಪತ್ತೊಂದು ಮತಿಜ್ಞಾನಭೇದಮುಮಂ .. .. ಯಥೋಚಿತವಿಧಿಯಿಂ ನೋಂತು: **ಆದಿಪು,** ೩. ೪೦ ವ)

ಮತ್ತ – [ಗು] ಮದಿಸಿದ, ಸೊಕ್ಕಿದ (ಭೃಂಗರವಂ ಅದೊಂದು ಮಂಗಳರವಕ್ಕೆಣೆಯಾಯ್ತು ಮನೋನುರಾಗದಿಂ

ಕರೆವವೊಲಾಯ್ತು ಮತ್ತ ಕಳಹಂಸರವಂ: **ಪಂಪಭಾ,** ೫. ೫೨); ಅಮಲೇರಿದ (ಆಮಂತ್ರಿತ ಡಾಕಿನೀ ದಶನಘಟ್ಟನಜಾತವಿಭೀಷಣಂ ಮದೇಭ ಅಂತ್ರನಿಯಂತ್ರಿತ ಅಶ್ವಶವಮಾಂಸರಸಾಸವಮತ್ತ ಯೋಗಿನೀತಂತ್ರಂ: **ಪಂಪಭಾ,** ೧೨. ೧೨೦)

ಮತ್ತಂ – [ಅ] ಪುನಃ (ನುಡಿಯಿಸಿ ಕೇಳ್ಗುಂ ಹರಿಗನ ಪಡೆಮಾತನೆ ಮಾತು ತಪ್ಪುಳ್ದೊಡಂ ಮತ್ತಂ ಅದಂ ನುಡಿಯಿಸುಗುಂ: **ಪಂಪಭಾ,** ೪. ೫೬); **[ಅ]** ಇನ್ನೂ (ಈ ಪಂದೆಗಳ್ ಪ್ರಾಣದಿಂದೊಳರ್ ಇನ್ನುಂ ತಲೆ ಮತ್ತಂ ಅಟ್ಟೆಗಳ ಮೇಲಿರ್ದಪ್ಪುವು: **ಪಂಪಭಾ,** ೭. ೧೪); **[ಅ]** ಅಲ್ಲದೆ (ಎಂತು ಈಗಳಾನಿಜೆವೆಂ ನೋಡಿರೆ ಮತ್ತಂ ಒಂದಂ ಇಸಲುಂ ಕೈಯೇಱದು ಏಕೆಂದುಂ ಆನಜೆಯೆಂ: **ಪಂಪಭಾ,** ೧೨. ೨೦೭)

ಮತ್ತದ್ವಿಪ – [ನಾ] ಮದ್ದಾನೆ (ಮದಂ ಸುರಿಯುತ್ತಿರ್ಪುದುಂ ಒಪ್ಪೆ ಚಕ್ರಿಯ ಮನಂಗೊಡತ್ತು ಮತ್ತದ್ವಿಪಂ: **ಆದಿಪು,** ೧೨. ೫೮)

ಮತ್ತನಯರ್ – [ನಾ] [ಮತ್+ತನಯರ್] ನನ್ನ ಮಕ್ಕಳು (ಮತ್ತನಯರ್ ಕೆಯ್ಯೆಡೆ ಪಲುಂಬದಿರ್ ಪೆಱಪೆಱವಂ: **ಪಂಪಭಾ,** ೨. ೨೬)

ಮತ್ತಪ್ಪುದು – ಇನ್ನೂ ಇದೆ (ಮತ್ತಪ್ಪುದೆನಲೊಡಂ ಮಾಣ್ ಮತ್ತತ್ತಣ ಕಾರ್ಯಮಜೆಯಲಾದುದು: **ಆದಿಪು**. ೧೪. ೪೭)

ಮತ್ತರ್ – [ನಾ] ಮತ್ತರು, ಹಿಂದಿನ ಕರ್ನಾಟಕದ ಭೂಮಿಯ ಒಂದು ಅಳತೆ (ಒಂದು ದಿವಸಂ ಮರಗೆರಸಿಯಾಡಲೆಂದು ಪನ್ನಿರ್ಮತ್ತರ್ ಪರ್ವಿದಾಲದ ಮರದ ಮೊದಲ್ಗೆ ವಂದು: **ಪಂಪಭಾ,** ೨. ೩೦ ವ)

ಮತ್ತವಾರಣ – [ನಾ] ಮನೆಯ ಮುಂದಣ ಕೈಸಾಲೆ (ಮನೆಯ ಮುಂದಣ ಪಚ್ಚೆಯ ಜಗುಲಿಗಳೊಳಂ ಮಣಿಮಯ ಮತ್ತವಾರಣಂಗಳೊಳಂ: **ಪಂಪಭಾ,** ೪. ೮೪ ವ); **[ನಾ]** ಮದಿಸಿದ ಆನೆ (ಖಟ್ಟಿನಿವಹಕ್ಕೆ ರಥಕ್ಕೆ ದಟಕ್ಕೆ ಮತ್ತವಾರಣನಿವಹಕ್ಕೆ ತಕ್ಕಿನ ಅಭಿಮನ್ಯುವ ಕೂರ್ಗಣೆ ಪಾಯ್ದು ನುಂಗಲುಂ ನೊಣೆಯಲುಂ ಉರ್ಚಿಮುಕ್ಕಲುಂ ಇದೇಂ ನೆಱಿ ಕಲ್ತುವೊ ಯುದ್ಧರಂಗದೊಳ್: **ಪಂಪಭಾ** ಪರಿಷತ್ತು, ೧೧. ೯೪)

ಮತ್ತಹಸ್ತಿ – [ನಾ] ಮದ್ದಾನೆ (ಸುಖಮಿರ್ಪನ್ನೆಗಂ ಒಂದು ದೆವಸಂ ಒಂದು ಮಾಯಾಮತ್ತಹಸ್ತಿ: **ಪಂಪಭಾ,** ೮. ೩೬ ವ)

ಮತ್ತಾಲಂಬನ – [ನಾ] ಒರಗುದಿಂಬು (ರಾಜ್ಯಲಕ್ಷ್ಮೀ ಲೀಲಾಲಂಬನಂ ಎನಿಸಿದ ಬಿಸುಗೆಯ ಮತ್ತಾಲಂಬನಮಂ ಅವಳಂಬಿಸಿ: **ಆದಿಪು,** ೧೪. ೧೦೨ ವ)

ಮತ್ತಿನ – [ಅ] ಆನಂತರದ (ಮತ್ತಿನ ಕೂಸುಗಳ್ಗೆಲ್ಲಂ ದುಶ್ಶಾಸನಾದಿಯಾಗಿ ನಾಮಂಗಳನಿಟ್ಟು ಕೊಟ್ಟು ಪರಕೆಯಂ ಕೊಟ್ಟು: **ಪಂಪಭಾ,** ೧. ೧೩೩ ವ); **[ಅ]** ಉಳಿದ, ಮಿಕ್ಕ (ಇಂದೆ ಕೆಟ್ಟಿತ್ತಾಗದೆ ಸೋಮವಂಶಂ ಎನಗಿಂ ಬಾಟಿಜ್ಞಾಸೆಯೆಲ್ಲಿತ್ತೊ ಬಿಟ್ಟುಟಿದೆಂ ಮತ್ತಿನ ಮಕ್ಕಳಾಸೆಯುಮಂ ಆಂ: **ಪಂಪಭಾ,** ೯. ೮೬)

ಮತ್ತೇಭವಿಕ್ರೀಡಿತ – [ನಾ] ಮದ್ದಾನೆಯ ಆಟ (ಆಶ್ರಮಕ್ಕಿಂತು ಬೇವಸಮಂ ಮಾಡುವುದಾಯ್ತದೊಂದು ವಿಭವಂ ಮತ್ತೇಭವಿಕ್ರೀಡಿತಂ: **ಪಂಪಭಾ,** ೮. ೩೭)

ಮತ್ಪ್ರತಾಪ – [ನಾ] [ಮತ್+ಪ್ರತಾಪ] ನನ್ನ ಪರಾಕ್ರಮ (ಮತ್ಪ್ರತಾಪಕ್ಕಿದಜೆಂದಂ ನೋಡ ಅಗುರ್ವು ಉರ್ವಿದುದು ಇದುವೆ ಮಹಾಭಾರತಕ್ಕಾದಿಯಾಯ್ತು: **ಪಂಪಭಾ,** ೧೨. ೧೫೬)

ಮತ್ಸನ್ನಿಧಿ – [ನಾ] [ಮತ್+ಸನ್ನಿಧಿ] ನನ್ನ ಸಮಕ್ಷಮ (ಮನದೊಲವರದಿಂದ ಈ ಯಮತನಯನ ಕುಡುವಗ್ರಪೂಜೆ ಮತ್ಸನ್ನಿಧಿಯೊಳ್ ನಿನಗೆ ಅಶನಿಯ ಮಿಟ್ಟುವ ನಂಜಿನ ದೊರೆ ಎಂದು ಒಣರ ನಂದಗೋಪಾಲಸುತಾ: **ಪಂಪಭಾ,** ೬. ೫೧)

ಮತ್ಸ್ಯ – [ನಾ] ಮೀನು (ವಾನರ ವಾರಣ ಉಷ್ಟ್ರ ಖರ ಮತ್ಸ್ಯ ಕಳೇವರ ಪೂತಿಗಂಧಮೇನೇನೊಳವುಳ್ಳುವೊಂದೆಡೆಗೆ ಬಂದುಂ ಅವಂದಿರ ಮೆಯ್ಯ ಗಂಧುದ್ದಾನಿಗೆ ವಾರದು: **ಆದಿಪು,** ೫. ೯೦)

ಮತ್ಸ್ಯಂ – ವಿರಾಟರಾಜ (ನಮಗಿನ್ನುಂ ಪೊಕ್ಕಿರಲಿಂಬು ಮತ್ಸ್ಯಪುರಂ ಶತ್ರುಗೆ ಶತ್ರು ಮತ್ಸ್ಯಂ: **ಪಂಪಭಾ,** ೮. ೫೦)

ಮತ್ಸ್ಯಗೃಹ – ವಿರಾಟನಗರಿ (ಪಾಂಚಾಲಿಯುಂ ಗಂಧದಾಯಕಿಯಾಗಿರ್ಪಿನಂ ಅಂದು ಮತ್ಸ್ಯಗೃಹದಿಂದ ಈ ನಿಗ್ರಹಂ ಪೊಲ್ಲದೇ: **ಗದಾಯು,** ೩. ೩೪)

ಮತ್ಸ್ಯನ್ಯಾಯ – [ನಾ] ದೊಡ್ಡ ಮೀನು ಸಣ್ಣ ಮೀನನ್ನು ನುಂಗುವ ಕ್ರಮ, ದುರ್ಬಲನನ್ನು ಪ್ರಬಲನು ಪೀಡಿಸುವುದು (ಅತ್ಯಂತ ದುಷ್ಟಬಳವಜ್ಜನಗ್ರಸನದಿಂ ದುರ್ಬಲಜನಂಗಳೊಳ್ ಮತ್ಸ್ಯನ್ಯಾಯಂ ಪ್ರವರ್ತಿಸುಗುಮೆಂದು: **ಆದಿಪು,** ೮. ೭೪ ವ)

ಮತ್ಸ್ಯಪುರ – [ನಾ] ವಿರಾಟನಗರ (ನಮಗಿನ್ನುಂ ಪೊಕ್ಕಿರಲಿಂಬು ಮತ್ಸ್ಯಪುರಂ ಶತ್ರುಗೆ ಶತ್ರು ಮತ್ಸ್ಯಂ: **ಪಂಪಭಾ,** ೮. ೫೦)

ಮಥ್ಯಮಾನ – [ಗು] ಕಡೆಯಲ್ಪಟ್ಟ (ಒಳಗೆ ವೇದನಾದದಿಂ ಎತ್ತಂ ಎಯ್ದೆ ಶೋಭಿಸೆ ಸುರಮಥ್ಯಮಾನ ವನಧಿಕ್ಷುಭಿತಾರ್ಣವ ಘೋಷದಂತೆ: **ಪಂಪಭಾ,** ೧೪. ೫೭)

ಮದ – [ನಾ] ಆನೆಯ ಮದೋದಕ (ಕಾಯ್ಗಳಿಂದಮಿಂಬಾಗಿರೆ ಸೋರ್ದ ಸೋನೆ ಮದಮಾಗಿರೆ ಮಾವಿನ ಬಂದ ಕೋಡೆ ಕೋಡಾಗಿರೆ ಕೋಡುಗೊಂಡು ಪರಿದತ್ತು ವಸಂರಗಜಂ: **ಪಂಪಭಾ,** ೨. ೧೫)

ಮದಕರಿ – [ನಾ] ಮದ್ದಾನೆ (ಮದಕರಿಕರೇಣುತುರಗಾದಿ ನಾನಾ ವಿಧ ವಾಹನಂಗಳಂ ಏಱೆ ಮಯ್ದುನಂಗಿದಿರ್ವಂದು: **ಪಂಪಭಾ,** ೪. ೩೩ ವ)

ಮದಗಜಗಮನೆ – [ನಾ] ಮದಿಸಿದ ಆನೆಯ ನಡಿಗೆಯವಳು (ಮತ್ತಿತ್ತ ನೆಗಟಿತ್ತಿಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆಯೆನೆ ಕುಂತಿ: **ಪಂಪಭಾ,** ೧. ೮೮)

ಮದಗಜೇಂದ್ರಪುರ – [ನಾ] ಹಸ್ತಿನಾವತಿ (ನಿಯತಿಃ ಕೇನ ಲಂಘ್ಯತೇ ಎಂಬ ನುಡಿಯಂ ನನ್ನಿಮಾಡಿ ಮದಗಜೇಂದ್ರಪುರಮನೆಯ್ದೆ ಬರೆ: **ಪಂಪಭಾ,** ೬. ೬೮ ವ)

ಮದದಂತಿ – [ನಾ] ಮದಿಸಿದ ಆನೆ (ಅದು ಮದದಂತಿ ದಂತಮುಸಲ ಪ್ರವಿಭಗ್ನ ಮಹಾ ಮಹೀರುಹಾಸ್ಪದಂ: **ಪಂಪಭಾ**, ೩. ೧೦)

ಮದದ ನೀರು – [ನಾ] ಆನೆಯ ಮದೋದಕವೆಂಬ ನೀರು (ಮದದ ನೀರೊಳೆ ಲೋಕವಾರ್ತೆಗೆ ಬೆಚ್ಚು ನೀರ್ದಳಿದಾಗಳ್: **ಪಂಪಭಾ,** ೧. ೪೩)

ಮದನ – [ನಾ] ಮನ್ಮಥ (ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ ಆದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ ಮದನನ ಸೌಭಾಗ್ಯಮುಮಂ: **ಪಂಪಭಾ**, ೧. ೧೩೯ ವ)

ಮಂದನಡಿಂಡಮ – [ನಾ] ಆನೆಗೆ ಮದ ಬರಿಸಲು ಬಾರಿಸುವ ವಾದ್ಯ ವಿಶೇಷ (ಮಣಿಕಿಂಕಿಣಿಗಣಝುಂಕಾರಮೆ ಮದನಡಿಂಡಿಮ ರವಾಡಂಬರಂ ಆಳೋಳತುಳಾಕೋಟಿ ಕ್ವಣಿತಮೆ ನಿಗಳಾಂದುಕಾರವಮಾಗೆ: **ಆದಿಪು**, ೧೧. ೨೦ ವ)

ಮದನದವಾನಲ – [ನಾ] ಕಾಮವೆಂಬ ಕಾಳ್ಗಿಚ್ಚು (ಮದನದವಾನಲಾರ್ಚಿ ತನುವಂ ಸುಡೆ ತಳ್ತಿಮೆಯೊಳ್ ಪಳಂಚಿ ಬೀಗಿದ ಬೆಳರ್ವಾಯೊಳ್ ಉಚ್ಚಳಿಸಿ: **ಪಂಪಭಾ**, ೫. ೯)

ಮದನದ್ರವ – [ನಾ] ಮದನಜಲ, ಸಂಭೋಗಸಮಯದಲ್ಲಿ ಸ್ತ್ರೀ ಸ್ರವಿಸುವ ದ್ರವ (ತೆಗೆದಪ್ಪಿದೊಡೆ ಉನ್ನಿದ್ರಾಂಭೋಜಾಸ್ಯೆಗೆ ಮದನದ್ರವಮುಂ ಕಣ್ಣನೀರುಂ ಉಣ್ಮಿದುವಾಗಳ್: **ಆದಿಪು**, ೧೨. ೪೪)

ಮದನಭವನ – [ನಾ] ಮನ್ಮಥನ ಆವಾಸ, ಮನೆ (ಇದೆ ಮದನಭವನಂ ಇಂತಿದೆ ಮದನಾಮೃತಂ ಇದುವೆ ಮದನಸಾಯಕಂ ಪೋ ಮದನಮಹೋತ್ಸವಪದಂ ಎನಿಸಿದುದು ಕಟಾಕ್ಷೇಕ್ಷಣಂ ವಿಲೋಲೇಕ್ಷಣೆಯಾ: **ಪಂಪಭಾ**, ೮. ೬೧)

ಮದನರಸ – [ನಾ] ಮದನಜಲ (ವದನರಸಂ ಮದನರಸಂ ಪೊದಳ್ದುದೆನಿಸುವಿನಂ ಅಮರಿ ನರ್ತಿಸೆ ಚೆಲ್ವಂ ಪುದಿದುದುರಚೆಲ್ಲಿಯೊಳೆಸೆದುದು ತದುರೋಜಸರೋಜ ಮುಕುಳಯುಗಸಂಚಳನಂ: **ಆದಿಪು**, ೭. ೧೯)

ಮದನರಾಗ – [ನಾ] ಕಾಮವಾಂಛೆ (ಪರಿಮಳಿತಸೌಂದರಂ ಬಂಧುರಗಂಧಂ ಮದನರಾಗವರ್ಧನಕರಂ ಈ ಮರುವಂ: **ಆದಿಪು**, ೧೧. ೧೨೭)

ಮದನಸಾಯಕ – [ನಾ] ಮನ್ಮಥನ ಬಾಣ, ಹೂಬಾಣ (ಇದೆ ಮದನಭವನಂ ಇಂತಿದೆ ಮದನಾಮೃತಂ ಇದುವೆ ಮದನಸಾಯಕಂ ಪೋ ಮದನಮಹೋತ್ಸವಪದಂ ಎನಿಸಿದುದು ಕಟಾಕ್ಷೇಕ್ಷಣಂ ವಿಲೋಲೇಕ್ಷಣೆಯಾ: **ಪಂಪಭಾ**, ೮. ೬೧)

ಮದನಾಗ್ನಿ – [ನಾ] ಕಾಮವೆಂಬ ಬೆಂಕಿ (ತ್ರಿದಶಸ್ತ್ರೀಜನದೊಳಂ ಅಮೃತದೊಳಂ ಅಣಂ ಮಟ್ಟಿದುರಿವ ಮದನಾಗ್ನಿಯ ಕೊರ್ಬು ಉದರಾಗ್ನಿಯ ಪೆರ್ಚು: **ಆದಿಪು**, ೯. ೫೬)

ಮದನಾರಿ – [ನಾ] [ಮದನ+ಅರಿ] ಕಾಮನ ಶತ್ರು, ಶಿವ (ಶ್ವೇತನ ಬಿಲ್ಲೊಳಿರ್ದ ಮದನಾರಿಯ ರೂಪು ಎರ್ದೆಗೊಳ್ವುದುಂ ನದೀಜಾತಂ ಉದಾತ್ತಭಕ್ತಿಯೊಳೆ: **ಪಂಪಭಾ**, ೧೦. ೧೧೮)

ಮದನಾವೇಶ – [ನಾ] ಕಾಮಾವೇಶ (ಇದಱೊಳ್ ಖೇಚರ ಕಿನ್ನರ ಅಮರಯುಗಂ ನಾನಾವಿನೋದಂಗಳಿಂ ಮದನಾವೇಶಕರಂಗಳಂ ಸಲಿಸುತುಂ: **ಆದಿಪು**, ೯. ೧೧೬)

ಮದನಾಸ್ತ್ರ – [ನಾ] ಕಾಮಬಾಣ (ಮದನಾಸ್ತ್ರಂ ಖರಸಾಣೆಗಾಣಿಸಿದುದು ಎಂಬಂತಾಗೆ ನಿನ್ನೊಂದು ಕಂದಿದ ಮೆಯ್ .. .. ರಾಗದಿಂ ಎನ್ನೊಳ್ ಸುಕಮಿರ್ಪುದು: **ಪಂಪಭಾ**, ೮. ೬೬)

ಮದನೋದಯ – [ನಾ] ಕಾಮಪ್ರಚೋದನೆ (ಮಾದೇವಿಯರೆಣ್ಬರ್ ಮದನೋದಯಮಂ ಕುಡೆ ಮನಃಪ್ರವೀಚಾರದೊಳಂತಾ ದೇವಂ: **ಆದಿಪು**, ೬. ೧೪)

ಮದನೋನ್ಮತ್ತೆ – [ನಾ] ಕಾಮದಿಂದ ಮದಿಸಿದವಳು (ಮನಮಂ ಪತ್ತಿಸಿ ಜೊತ್ತಿಸೆ ಮದನೋನ್ಮತ್ತೆಯರ್ ಅವಯವದೆ ಬಂದರ್ ಅರಸಿಯರ್ ಅರೆಬರ್: **ಪಂಪಭಾ**, ೫. ೫೯)

ಮದಪಟ್ಟ – [ನಾ] ಆನೆಯ ಕಪೋಲದ ಮೇಲೆ ಮದರಸ ಇಳಿಯುವುದರಿಂದಾದ ಗೆರೆ (ಸಮದಂ ಯಾನಮೆ ಮಂದಮಂದಗಮನಂ ಕಸ್ತೂರಿಕಾಪಂಕಪಟ್ಟಮೆ ಧಾರಾಮದ ಪಟ್ಟಮಾಯ್ತು ಎನಿಪಿನಂ: **ಆದಿಪು** ನರಸಿಂ, ೧೧. ೨೧)

ಮದಪಯಃಕಂಡೂಳಗಂಡಸ್ಥಳ – [ನಾ] ಮದೋದಕದಿಂದ ನವೆಯಾಗುವ ಕಪೋಲ (ಚಿರವಿಕ್ಷೋಭಿತ ಸಿಂಧುತೋಯ ಶಿಶಿರಂ ತತ್ತೀರನಾನಾಲತೋತ್ಕರ ಸಂಘಟ್ಟನಮಂಥರಂ ಮದಪಯಃಕಂಡೂಳಗಂಡಸ್ಥಳಂ: **ಆದಿಪು**, ೧೩. ೯)

ಮದವಟ್ಟೆ – [ನಾ] [ಮದ+ಪಟ್ಟೆ] ಕಾಮದ ಸೊಕ್ಕು ತೋರಿಸುವ ಪಟ್ಟೆಯಾಕಾರದ ಗೆರೆ (ನವಧೂಮಲೇಖೆ ಚೆಲ್ವಿದಿರ್ಗೊಳೆ ಗಾಡಿವೆತ್ತು ಕತ್ತುರಿಯೊಳ್ ಮದವಟ್ಟೆಯಂ ವಿಳಾಸದೆ ತೆಗೆದಂತೆ ಕಣ್ಗೆಸೆದು ತೋಱಿದುದಾ ಕದನತ್ರಿಣೇತ್ರನಾ: **ಪಂಪಭಾ**, ೩. ೭೬)

ಮದವದ್ದಂತಿ – [ನಾ] [ಮದವತ್+ದಂತಿ] ಸೊಕ್ಕೇರಿದ ಆನೆ (ಮದವದ್ದಂತಿಗಳಂ ಕಱುತ್ತು ಅಸಗವೊಯ್ವೊಯ್ದು ಆಜಿಯೊಳ್ ಭೀಮಂ ಆರ್ದು ಒದೆದು ಈಡಾಡಿದೊಡೆ ಅತ್ತ ಅಜಾಂಡತಟಮಂ ತಾಪನ್ನೆಗಂ: **ಪಂಪಭಾ**, ೧೧. ೬೭) ['ವೊಯ್ವೊಯ್ದಾಜಿಯೊಳ್' ಎಂಬ ಪಾಠದ ಬದಲು ಪರಿಷತ್ತಿನ ಆವೃತ್ತಿಯಲ್ಲಿ 'ವೊಯ್ವೊಯ್ದಾಜಿಯೊಳ್' ಎಂಬ ಪಾಠವಿದೆ]

ಮದಲೇಖೆ – [ನಾ] ಮದಪಟ್ಟ (ಹರಜಟಾಜೂಟಕ್ಕೆ ಚಂದ್ರಲೇಖೆಯಿರ್ಪಂತೆ ದಿಕ್ಕರಿಕಟತಟಕ್ಕೆ ಮದಲೇಖೆಯಿರ್ಪಂತೆ .. .. ಸೊಗಯಿಸುತಿರ್ದುದು: **ಪಂಪಭಾ**, ೧. ೫೭ ವ)

ಮದವಟ್ಟೆ – [ನಾ] ಮದಪಟ್ಟಿಕೆ, ಕೆನ್ನೆಯ ಮೇಲೆ ಬರೆದ ರೇಖೆಗಳು (ಕಪೋಲದೊರ್ಳ ನವಧೂಮಲೇಖೆ ಚೆಲ್ವಿದಿರ್ಗೊಳೆ ಗಾಡಿವೆತ್ತು ಅಡರ್ದು ಕತ್ತುರಿಯೊಳ್ ಮದವಟ್ಟೆಯಂ ವಿಳಾಸದೆ ತೆಗೆದಂತೆ: **ಪಂಪಭಾ**, ೩. ೭೬)

ಮದವತ್ – [ಗು] ಮದಿಸಿದ, ಮದದಿಂದ ತುಂಬಿದ (ಕದನಪ್ರಾರಂಭಶೌಂಡಂ ರಿಪುನೃಪಬಲದಾವಾನಲಂ ವೈರಿಭೂಭೃತ್ ಮದವತ್ ಮಾತಂಗಕುಂಭಸ್ಥಳ ದಳನಖರೋಗ್ರಾಸಿ ಪಂಚಾಸ್ಯಧೈರ್ಯಂ: **ಪಂಪಭಾ**, ೬. ೭೭)

ಮದವನ್ಮಾತಂಗ – [ನಾ] [ಮದವತ್+ಮಾತಂಗ] ಸೊಕ್ಕಿದ ಆನೆ (ಉಗ್ರವೈರಿ ಮದವನ್ಮಾತಂಗಕುಂಭ ಆರ್ದ್ರ ಮೌಕ್ತಿಕ ಲಗ್ನೋಜ್ಜ್ವಲಬಾಣನಂ ಪ್ರವಿಲಸತ್ ಗೀರ್ವಾಣ ದಾತವ್ಯ ಸಾಯಕ ಸಂಪೂರ್ಣಕಳಾಪ್ರವೀಣನಂ ಇಳಾಭಾರಕ್ಷಮ ಅಕ್ಷೂಣನಂ: **ಪಂಪಭಾ,** ೧. ೧೩೪)

ಮದವಳಿಗೆ – [ನಾ] ಮದುವಣಗಿತ್ತಿ (ಮಂಗಳವಸದನಮಿಕ್ಕಿಯುಂ ಪೊಸಮದವಳಿಗೆಯಪ್ಪುದಱಿಂ ತುಡಿಸಲೆ ವೇೞ್ಕುಮೆಂದು ನೆೞಿಯೆ ಪಸದನಂಗೊಳಿಸೆ: **ಪಂಪಭಾ,** ೩. ೪೬ ವ)

ಮದಶಕ್ತಿ – [ನಾ] ಉನ್ಮತ್ತಗೊಳಿಸುವ ಶಕ್ತಿ (ಮನಸಿಜನ ಅಂಗನಾಜನ ವಶೀಕರಣ ಔಷಧಂ ಅಂಗಜನ್ಮನಂಬಿನ ಮದಶಕ್ತಿ ಮೋಹನಯಂತ್ರಂ ಇದಪ್ಪುದು: **ಆದಿಪು,** ೪. ೪೧)

ಮದಸ್ತಂಬೇರಮಬೃಂಹಿತ – [ನಾ] ಮದ್ದಾನೆಯ ಘೀಂಕಾರ (ಬಹುಸ್ನಿಗ್ಧಂಗಳಪ್ಪ ಮದಸ್ತಂಬೇರಮಬೃಂಹಿತಂಗಳಿಂದಂ ಯುಗಪದಾಸ್ಫಾಲಿತಾನೇಕದುಂದುಭಿಧ್ವನಿ ಮಧುರಗೀತಂಗಳಪ್ಪ ಹಯಹೇಷಿತಂಗಳಿಂದಂ: **ಆದಿಪು,** ೧೪. ೮೬ ವ)

ಮದಹಸ್ತಿ – [ನಾ] ಮದ್ದಾನೆ (ದೆಸೆಗಳ್ಗೆ ಬೆರ್ಚಿ ಮೂಂಕಿಱಿವ ವನಮಹಿಷಿಗಳಿಂ ಮದಹಸ್ತಿಯಂತೆ ಮರವಾಯ್ವ ಪುಲಿಗಳಂ ಅತಿಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು: **ಪಂಪಭಾ,** ೭. ೨೯ ವ)

ಮದಾನೇಕಪ – [ನಾ] ಮದ್ದಾನೆ (ನಾಲಕೋಕಮದಾನೇಕಪಂ ನಟ್ಟು ನಿಂದು ಬೀಸಿದೊಡೆ ಬಿಸುಡುವುದುಂ: **ಆದಿಪು,** ೩. ೪೦ ವ)

ಮದಾಲಸ – [ಗು] ಮದದಿಂದ ಅಲಸಿದ (ಇದಂದು ಲಲಿತಾಂಗನೆನೆ ಸಂದ ಮದ್ರೂಪಂ ಈ ಮದಾಲಸವಿಲೋಲಲೋಚನೆ ದಲ್ ಎನ್ನ ಮಾದೇವಿ: **ಆದಿಪು,** ೪. ೭)

ಮದಾಳಿ – [ನಾ] ಸೊಕ್ಕಿದ ದುಂಬಿ (ಮುಗುಳ್ವದನಾದ ಸಂಪಗೆ ಮಡಲ್ತ ಅದಿರ್ಮುತ್ತೆ ಮರಲ್ದರಲ್ದ ಮಲ್ಲಿಗೆ ಕಾಕಳಿಯೊಳ್ ಆಣತಿಗೆಯ್ವ ಮದಾಳಿ: **ಪಂಪಭಾ,** ೫. ೩೫)

ಮದಿರಾಮದೋನ್ಮತ್ತ – [ನಾ] ಹೆಂಡ ಕುಡಿದ ಅಮಲುಳ್ಳವನು (ದ್ರುಪದಂ ರಾಜ್ಯಮದಿರಾಮದೋನ್ಮತ್ತಂ ಗರ್ವಗ್ರಹ ವ್ಯಗ್ರಚಿತ್ತನುಮಾಗಿ ಮೇಗಿಲ್ಲದೆ: **ಪಂಪಭಾ,** ೨. ೪೬ ವ)

ಮದಿಲ್ – [ನಾ] ಕೋಟೆಯ ಗೋಡೆ (ಬಳಸಿದ ಕೆಂಬೊನ್ನ ಮದಿಲ್ಗಳೊಳಗೆ ಮಣಿಮಯ ಭವನಾಳಿ ಬೆಳಗೆ: **ಪಂಪಭಾ,** ೪. ೧೦)

ಮದೀಯ – [ಗು] ನನ್ನ, ನನಗೆ ಸಂಬಂಧಪಟ್ಟ (ಮದೀಯ ಮನೋಗತ ಕಾಮಸಾಗರದ ಒದವಿಂಗೆ ನಲ್ಲಳ ವಿಲೋಚನ ಚಂದ್ರಿಕೆಯೊಂದೆ ಸಾಲದೇ: **ಪಂಪಭಾ,** ೫. ೧೧)

ಮದುವೆಗಟಿಪು – [ಕ್ರಿ] ಮದುವೆಗೆ ಬಂದವರನ್ನು ಬೀಳ್ಕೊಡು (ಬಿನ್ನನಿರ್ದು ಸುರಶೈಳಮದೊಂದು ಮದುವೆಗಟಿಪಿದ ಮನೆವೊಲ್: **ಆದಿಪು,** ೭. ೧೦೮)

ಮದುವೆನಿಲ್ – [ಕ್ರಿ] ಮದುವೆಯಾಗು (ಆನಕಧ್ವನಿ ದೆಸೆಯೊಳ್ ಪಸರಿಸೆ ತಂದರ್ ಪಿರಿದೊಂದೊಸಗೆಯೊಳಿರದರಸ ಮದುವೆನಿಲ್ಲೆಂದರೆಬರ್: **ಆದಿಪು,** ೯. ೧೨೭)

ಮದುವೆನಿಱಿಸು – [ಕ್ರಿ] ಮದುವೆ ಮಾಡಿಕೊಡು (ಈ ಮಹೀತಳ ರಾಜ್ಯದೊಳ್ ನಿಱಿಸುವುದುಂ ಮದುವೆನಿಱಿಸುವುದುಂ ಎನಗಶಕ್ಯಾನುಷ್ಠಾನಂ: **ಆದಿಪು,** ೮. ೮ ವ)

ಮದೇಭ – [ನಾ] ಮದ್ದಾನೆ (ಪಾರಿಜಾತಂ ಅಗ್ಗಳಮೆಸೆದೊಪ್ಪುವಂತೆ ತಳಿರಿಂ ಮುಗುಳಿಂ ನವಯೌವನಂ ಮನಂಗೊಳೆ ಕರಮೊಪ್ಪಿದಂ ದಶಸಹಸ್ರಮದೇಭಬಳಂ ವೃಕೋದರಂ: **ಪಂಪಭಾ,** ೨. ೩೮)

ಮದೋತ್ಕ – [ಗು] ಅಮಲೇರಿದ, ಸೊಕ್ಕಿದ (ಮೆಲ್ಲನಲ್ಲಿ ಸುೞಗುಂ ಮಂದಾನಿಳಂ ನೀರ್ ಸುಧಾಸಮಂ ಉದ್ಯಾನವನಂ ಮದೋತ್ಕಪರಪುಷ್ಪಕೋಳಾಹಳಂ: **ಆದಿಪು,** ೫. ೨೯)

ಮದೋತ್ಕಟ – [ಗು] ಅಹಂಕಾರದಿಂದ ತೀವ್ರವಾದ (ಮಱೆವುದೆಮ್ಮ ಮದೋತ್ಕಟಚೇಷ್ಟಿತಂಗಳಂ: **ಆದಿಪು,** ೧೧. ೧೩೧)

ಮದೋದಯ – [ನಾ] ಅತಿಶಯವಾದ ಸೊಕ್ಕು (ಆತನರಸಿನಿವಿರಿದಾದೊಡಂ ಏನೆನಗೆ ಎಂಬ ಮದೋದಯದೊಳ್ ದೇವ ಬಾಹುಬಲಿ ಬಲ್ದಿರ್ದಂ: **ಆದಿಪು,** ೧೪. ೧೮)

ಮದ್ಗದಾಹತಿ – [ನಾ] [ಮತ್+ಗದಾ+ಆಹತಿ] ನನ್ನ ಗದೆಯ ಏಟು (ಮಹಾಪ್ರಳಯೋಲ್ಕೋಪಮ ಮದ್ಗದಾಹತಿಯಿಂ ಅತ್ಯುಗ್ರಾಜಿಯೊಳ್ ಮುನ್ನಮೀ ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ: **ಪಂಪಭಾ,** ೭. ೧೨)

ಮದ್ಯಾಂಗ – [ನಾ] [ಜೈನ] ಹತ್ತು ಕಲ್ಪಕುಜಗಳಲ್ಲಿ ಒಂದು, ಮದ್ಯ ನೀಡುವಂಥದು (ಮಧುಗಳನೆಡೆಯುಡುಗದೆ ಕುಡುಗುಂ ಉಚಿತ ಮದ್ಯಾಂಗಕುಜಂ: **ಆದಿಪು,** ೫. ೩೨)

ಮದ್ರಪತಿ – [ನಾ] ಮದ್ರದೇಶದ ರಾಜ, ಶಲ್ಯ (ಪೆಱತನಣಂ ಬಗೆಯದೆ ಮದ್ರಪತಿಯನೆಂದಂ: **ಪಂಪಭಾ,** ೧೨. ೧೯)

ಮದ್ರೂಪ – [ನಾ] [ಮತ್+ರೂಪ] ನನ್ನ ಆಕಾರ (ಅಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಱಿಂದೆ: **ಪಂಪಭಾ,** ೧. ೮೫ ವ)

ಮದ್ವೃತ್ತಕಂ – [ನಾ] [ಮತ್+ವೃತ್ತಕಂ] ನನ್ನ ವಿಷಯ, ನನ್ನ ಸಮಾಚಾರ (ಇದು ನಾಕಲೋಕವಿಭವಂ ಮದ್ವೃತ್ತಕಂ ತಪ್ಪದೀ ಈ ಮೃಗಶಾಬೇಕ್ಷಣೆ ಮನ್ಮನೋರಮೆ: **ಆದಿಪು,** ೩. ೮೮)

ಮಧು – [ನಾ] ಮದ್ಯ (ಕುಡಿದೊಡೆ ಸೊರ್ಕಿಸದವು ನಾಣ್ಗೆಡಿಸದವು ಮನಕ್ಕಲಂಪನೀವುವು ರತಮಂ ನಡೆಯಿಪುವೆನಿಸುವ ಮಧುಗಳನೆಡೆಯುಡುಗದೆ ಕುಡುಗುಂ: **ಆದಿಪು,** ೫. ೩೨); [ನಾ] ವಸಂತ (ಮಧುಮನೋಭವರಿರ್ವರುಮೆತ್ತಿವಟ್ಟು ಮಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರಲ್ಲರೆ ಪಟ್ಟಬಂಧಮಂ: **ಆದಿಪು,** ೧೧. ೧೦೭); [ನಾ] ಒಂದು ಬಗೆಯ ಹೆಂಡ (ಮಧು ಸೀತುಂ ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ಪುಬರ್ಪುದು: **ಪಂಪಭಾ,** ೪. ೮೮); [ನಾ] ಮಕರಂದ (ಎತ್ತಿದ ಪರಾಗರಾಗ ಮುದಿತ ಆಶಾ ಭಾಸಂ ಉದ್ಯತ್ ಮಧು ಉನ್ಮದಭೃಂಗಧ್ವನಿ ಮಂಗಳಧ್ವನಿಯೆನಲ್: **ಪಂಪಭಾ,** ೫. ೬)

ಮಧುಕರ – [ನಾ] ದುಂಬಿ (ಸ್ಪರ್ಶನ ರಸನ ಘ್ರಾಣ ಚಕ್ಷುರಿಂದ್ರಿಯಸಮನ್ವಿತಂಗಳಪ್ಪ ಮಧುಕರಾದಿ ಚತುರಿಂದ್ರಿಯಂಗಳ್: **ಆದಿಪು**, ೧೦. ೬೩ ವ)

ಮಧುಕೈಟಭಹಾರಿ – [ನಾ] ಮಧು ಮತ್ತು ಕೈಟಭ ಎಂಬ ರಾಕ್ಷಸರನ್ನು ಕೊಂದವನು, ಕೃಷ್ಣ (ಎಂದು ಅಂದು ಗುಣಾರ್ಣವಂಗೆ ಮಧುಕೈಟಭಹಾರಿ ತೊಟಿಲ್ದು ತೋಱಿದಂ: **ಪಂಪಭಾ**, ೫. ೬೮)

ಮಧುಕೈಟಭಾರಾತಿ – [ನಾ] ಮಧುಕೈಟಭಹಾರಿ (ಅಂತು ಯುಧಿಷ್ಠಿರಂ ನಿಷ್ಠಿತಾಹವವ್ಯಾಪಾರನಾಗಿ ಮಧುಕೈಟಭಾರಾತಿಯಂ ಬೀಡಿಂಗೆ ಪೋಗಲ್ವೇೞ್ದು: **ಪಂಪಭಾ**, ೧೨. ೩೨ ವ)

ಮಧುಪ – [ನಾ] ದುಂಬಿ (ತೂಗಿ ತೊನೆವ ನಾರಾಚಂ ಅದೇನೆಸೆದುದೊ ತದ್ವದನಾಂಭೋಜ ಸೌರಭಾಕೃಷ್ಟ ಮಧುಪಮಾಲಾಕೃತಿಯಿಂ: **ಪಂಪಭಾ**, ೧೨. ೭೦)

ಮಧುಪರ್ಕ – [ನಾ] ಮೊಸರು, ತುಪ್ಪ ನೀರು, ಜೇನುತುಪ್ಪ ಮತ್ತು ಸಕ್ಕರೆಗಳ ಮಿಶ್ರಣ (ಅರ್ಘ್ಯಮೆತ್ತಿ ಮಧುಪರ್ಕ ವೇತ್ರಾಸನ ತಾಂಬೂಲ ದಾನಾದಿಗಳಿಂ ಸಂತಸಂಬಡಿಸಿ: **ಪಂಪಭಾ**, ೨. ೫೨ ವ)

ಮಧುಮಂತ್ರ – [ನಾ] ಹೆಂಡ ಕುಡುಕರ ಮಂತ್ರ (ಸಿಪ್ಪುಗಳೊಳ್ ತೀವಿ ಮಧುಮಂತ್ರಂಗಳಂ ಮಂತ್ರಿಸಿ ನೆಲದೊಳೆಱಿದು ತಲೆಯೊಳ್ ತಳಿದು ಕಳ್ಳೊಳ್ ಬೊಟ್ಟನಿಟ್ಟುಕೊಂಡು ಕೆಲದರ್ಗೆಲ್ಲಂ ಬೊಟ್ಟನಿಟ್ಟು: **ಪಂಪಭಾ**, ೪. ೯೭ ವ)

ಮಧುಮಥನ – [ನಾ] ಮಧು ಎಂಬ ರಾಕ್ಷಸನನ್ನು ಕೊಂದವನು, ಕೃಷ್ಣ (ಅತ್ತ ಮನುಜಮನೋಜನುಂ ಮದನಪರಿತಾಪಕ್ಕಾಱದೆ ಉಮ್ಮಳಿಸಿ ಮಧುಮಥನನ ಕಣ್ಣಂ ಬಂಚಿಸಿ .. .. ವನಮಂ ಎಯ್ದೆವಂದು: **ಪಂಪಭಾ**, ೫. ೧೦ ವ)

ಮಧುವನಿತಾವದನಕಮಳಹಿಮಕರ – [ನಾ] ಮಧು [ರಾಕ್ಷಸ] ಎಂಬ ಹೆಣ್ಣಿನ ಮುಖಕಮಲಕ್ಕೆ ಚಂದ್ರನಂತಿರುವವನು, ಮಧುವಿನ ಶತ್ರು, ಶ್ರೀಕೃಷ್ಣ (ಏಗೆಯ್ವಂ ಪೇೞಿಂ ಎಂದು ನಾರಾಯಣನಂ ಬೆಸಗೊಳೆ ಮಧುವನಿತಾವದನಕಮಳಹಿಮಕರಂ ಇಂತೆಂದಂ: **ಪಂಪಭಾ**, ೧೩. ೭೪ ವ)

ಮಧುವ್ರತ – [ನಾ] ಮಧುವಿಹಂಗ, ದುಂಬಿ (ರತಿಗೆ ಮುಡಿಯಲ್ಕೆ ಮದನಂಗೆ ತುಱುಂಬಲ್ಕೆ ಇರ್ದುದೆಂದು ಮಧು ಸುೞಿದ ಮಧುವ್ರತಮುಮನಲೆದಪನೆಂಬೀ ಪ್ರತೀತಿಗೆ ಇರುವಂತಿಯಂತೆ ನೋಂತ ಅಲರೊಳವೇ: **ಆದಿಪು**, ೧೧. ೧೧೧)

ಮಧುಸಮಯ – [ನಾ] ವಸಂತಕಾಲ (ಆಗಳ್ ಸುತಮುಖನಿರೀಕ್ಷಣ ಮಧುಸಮಯಸಮುಪಜನಿತ ಪುಳಕಕಳಿಕಾಕಳಿತ ಕಲ್ಪವೃಕ್ಷನಪ್ಪ ನಾಭಿಮಹೀಜನುಂ: **ಆದಿಪು**, ೭. ೧೧೦ ವ) [ಎಲ್. ಬಸವರಾಜು ಆವೃತ್ತಿ]

ಮಧ್ಯ – [ನಾ] ಸೊಂಟ (ಆ ಕಾಮಕಾರ್ಮುಕ ಯಷ್ಟಿಮುಷ್ಟಿ ಸಮಾಯತ ಮಧ್ಯೆಯರೊಳ್ ಆ ರಾಜಕಂಠೀರವಮಧ್ಯಂ: **ಆದಿಪು**, ೮. ೨೩ ವ); [ನಾ] ವೇಗವೂ ಅಲ್ಲದ ನಿಧಾನವೂ ಅಲ್ಲದ ನಡುವಣ ಗತಿಯ ಲಯ (ಅತನುರಸೋಪೇತ ವಿಳಂಬಿತ ಮಧ್ಯ ದ್ರುತಲಯಂಗಳೊಳ್ ಲಕ್ಷಣಸಂಯುತ ತತ್ತ್ವಾನುಗತೌಘ ಪ್ರತೀತವಾದ್ಯಂಗಳೆಸೆದುವು: **ಆದಿಪು**, ೯. ೨೩)

ಮಧ್ಯಪ್ರದೇಶ – [ನಾ] ಸೊಂಟ, ನಡು (ಕರಮಸಿದಾದ ಪರಾಕ್ರಮಧವಳನ ಮಧ್ಯಪ್ರದೇಶಂ .. .. ಬರ್ದೆಯರ ಮನಮನಳ್ಳಾಡಿಸುವಂತಾದುದು: **ಪಂಪಭಾ**, ೨. ೩೯ ವ)

ಮಧ್ಯಮತನು – [ನಾ] ಅತಿರೇಕಗಳಿಲ್ಲದ ಹದವಾದ ದೇಹಗಾತ್ರ (ಮೃದುಮಧ್ಯಮತನು ಹಿತಮಿತಮೃದುವಚನಂ ಲಲಿತಮಧುರ ಸುಂದರವೇಷಂ: **ಆದಿಪು**, ೧. ೨೯)

ಮಧ್ಯಮನಿಷಾದಿ – [ನಾ] ಮಧ್ಯದಲ್ಲಿರುವ ಮಾವತಿಗ (ವಿಜಯಲಕ್ಷ್ಮೀವಿಲಾಸಿನೀ ಭ್ರೂಲತಾವಿಭ್ರಮಾನುಕಾರಿ ಎನಿಪುದಂ ಮಧ್ಯಮನಿಷಾದಿಯ ಕೈಯಿಂ ಕೊಂಡು: **ಆದಿಪು**, ೧೪. ೯೮ ವ)

ಮಧ್ಯಮಪಾತ್ರ – [ನಾ] [ಜೈನ] ದಾನಸ್ವೀಕರಿಸುವವರಲ್ಲಿನ ಒಂದು ಬಗೆ, ಸಮ್ಯಗ್ದರ್ಶನಶುದ್ಧನೂ ಅಣುವ್ರತಧಾರಿಯೂ ಆದವನು (ಶ್ರೀಸಮ್ಯಗ್ದರ್ಶನವಿಶುದ್ಧನುಂ ಅಣುವ್ರತಧಾರಿಯುಮಪ್ಪ ಶ್ರಾವಕಂ ಮಧ್ಯಮಪಾತ್ರಂ: **ಆದಿಪು**, ೧೦. ೯ ವ)

ಮಧ್ಯಲೋಕ – [ನಾ] ಊರ್ಧ್ವಲೋಕ ಮತ್ತು ಅಧೋಲೋಕಗಳ ನಡುವಣ ಭೂಲೋಕ (ನೆಲಸಿರ್ದಪ್ಪುದಧಸ್ಸ್ಥಳಂಬಿಡಿದ ಅಧೋಲೋಕಂ ಸಮಂತೆಯ್ದೆ ಸುತ್ತಲುಮಿರ್ದಪ್ಪುದು ಮಧ್ಯಲೋಕಂ ಎಸೆದಿರ್ದಾ ಚೂಳಿಕಾಭಾಗದಾದಲೆಯೊಳ್ ನಿಂದಪ್ಪುದೂರ್ಧ್ವಲೋಕಂ: **ಆದಿಪು**, ೧. ೫೦)

ಮಧ್ಯಸ್ಥ – [ನಾ] ಮಧ್ಯಸ್ಥಿಕೆಗಾರ (ಬಾಹುಬಲಿಕುಮಾರನ ಭರತೇಶ್ವರನ ಪಕ್ಷದ ರಾಜಲೋಕಮನೆರಡುಂ ದೆಸೆಯೊಳಂ ಮಧ್ಯಸ್ಥರಾಗಿ ಮಿಡುಕದೆ ನೋಡುತ್ತಿರ್ಪಂತು ನಿಯಮಿಸಿದಾಗಳ್: **ಆದಿಪು**, ೧೪. ೧೦೪ ವ); [ನಾ] ಮಧ್ಯಪ್ರದೇಶದಲ್ಲಿರುವ (ಮಧ್ಯಸ್ಥಂಗಳಾಗಿರ್ದುವರ್ಕಲೆಯಲ್ ತಕ್ಕುದೆ ಕೆನ್ನಂ ಆ ತ್ರಿವಳಿಗಳ್ಗೆನ್ನಂ ಸರೋಜಾಕ್ಷಿಯಾ: **ಪಂಪಭಾ**, ೪. ೭೪)

ಮನಂಗಲ್ – [ಕ್ರಿ] [ಮನಂ+ಕಲ್] ಮತ್ತೊಬ್ಬರ ಮನಸ್ಸನ್ನು ಅರಿತುಕೊ (ನಿನ್ನ ಬಲ್ಲ ಮಾಟಿ್ಕೆಯೊಳೆಲ್ಲಮೆಲ್ಲಂದದೊಳಂ ಒಡಂಬಡಿಸಿ ಮನಂಗಲ್ವುದೆಂದು ನಿಯೋಜಿಸಿ: **ಆದಿಪು**, ೩. ೨೬ ವ)

ಮನಂಗಲಿ – [ನಾ] ತಾನು ಪರಾಕ್ರಮಿ ಅಂದುಕೊಂಡವನು (ಸೆರಗಂ ಬಗೆದೋಡಿದರೊಂದು ಪೊೞ್ತುಮೊಂದರ್ಕಮಿದಿರ್ಚಲಾಱದೆ ಮನಂಗಲಿಗಳ್ ಕದನತ್ರಿಣೇತ್ರನಂ: **ಪಂಪಭಾ**, ೮. ೧೦೮)

ಮನಂಗಾಣ್ – [ಕ್ರಿ] ಮನಸ್ಸನ್ನು ಕಾಣು, ಅರ್ಥಮಾಡಿಕೊ (ಅಂತು ನಡನಡನಡುಗಿ ಜಲದೇವತೆಗಳಪ್ಪೊಡಂ ಮನಂಗಾಣ್ಬರೆಂದು ನಿಧಾನಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳ್: **ಪಂಪಭಾ**, ೧. ೯೫ ವ)

ಮನಂಗಾಪು – [ನಾ] ಮನೋನಿಗ್ರಹ, ಮನಸ್ಸಿನ ಎಚ್ಚರ (ಕೀಚಕಂ ಕಾಮದೇವಂ ಮಾಡಿದ ಯಾಚಕನಂತೆ ಕರಮೆ ನಾಣ್ಗೆಟ್ಟು ಮನಂಗಾಪು ಅೞಿದು ಅಳಿಪಿ ನೋಡಿ: **ಪಂಪಭಾ**, ೮. ೫೯ ವ)

ಮನಂಗೊಳ್ – [ಕ್ರಿ] ನೆನೆಸಿಕೊ (ಮನಂಗೊಳಲ್ಕೆನಗಂ ಅತ್ತಳಗಂ ತರಳಾಯತಾಕ್ಷಿಯಾ: **ಆದಿಪು**, ೧೨. ೩೮); [ಕ್ರಿ]

ಮನಸ್ಸಿಗೆ ಹಿಡಿಸು (ಆ ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂಗೊಳೆ ಕೊಟ್ಟಂ ದುರ್ವಾಸಂ ವಿಳಸಿತ ಮಂತ್ರಾಕ್ಷರಂಗಳಂ ದಯೆಯಿಂದಂ: **ಪಂಪಭಾ,** ೧. ೮೮ ಮತ್ತು ೧. ೮೯); **[ಕ್ರಿ]** ಮನಸ್ಸಿನಲ್ಲಿ ಹಿಗ್ಗು (ಅಂತು ಕಂಡು ಮನಂಗೊಂಡೆತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡೆ ರಾಗಿಸಿ ಸುತನ ಸೂತಕಮಂ ಕೊಂಡಾಡೆ ಅಗುಟ್ಟಿರಲ್: **ಪಂಪಭಾ,** ೧. ೯೬ ವ ಮತ್ತು ೧. ೯೭); **[ಕ್ರಿ]** ಮನಸ್ಸನ್ನು ಗೆಲ್ಲು (ಮುಳಿಸಜಿದು ಅಂಜಿ ಬಾಟಿರ್ತಿಯಜಿದಿತ್ತು ಮನಂಗೊಳೆಯುಂ ಕನಲ್ವುದರ್ಕಳವಿಯುಂ ಅಂತುಂ ಇಲ್ಲ : **ಪಂಪಭಾ,** ೪. ೯೮)

ಮನಂಗೊಳಿಸು – [ಕ್ರಿ] ಆಹ್ಲಾದವುಂಟುಮಾಡು (ತಳಿರ್ಗಳಸಂ ಮುಕುಂದ ರವಂ ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಙ್ಕ್ತಿ ಪಸುರ್ವಂದಲೊಳ್ ಒಲ್ದು ಎಡೆಯಾಡುವ ಎಯ್ದೆಯರ್: **ಪಂಪಭಾ,** ೧. ೧೦೭)

ಮನಂದರ್ – **[ಕ್ರಿ]** [ಮನಂ+ತರ್] ನಿಶ್ಚೈಸು (ನಿಮ್ಮನೆ ನೋಡಿ ಮದ್ಗುರುವಿಯೋಗಮನಾಜಿಪೆವೀಗಳೀ ತಪಕ್ಕಮ್ಮ ಮನಂದರಲ್ ನಿಮಗೆ ಸಲ್ಲದು: **ಆದಿಪು,** ೪. ೬೮); ಮನಸ್ಸು ಮಾಡು, ಒಪ್ಪು (ಮದುವೆಗಂ ರಾಜ್ಯದ ಪತ್ತುಗೆಗಂ ಗುರೂಪದೇಶಕ್ಕಗಿದು ಮನಂದಂದಂ: **ಆದಿಪು,** ೬. ೨)

ಮನಂದಳಿತಂ – **[ನಾ]** ಮನಸ್ಸನ್ನು ಬಿರಿಯುವಂಥದ್ದು (ಮುಕುಳೀಕೃತಂ ಲಳಿತಮಧುರಂ ಲಜ್ಜಾಳೋಳಂ ಸ್ಮರಾಕುಳಿತಂ ಮನಂದಳಿಪಂ ಅಪಸನ್ಮುಗ್ಧ ಸ್ನಿಗ್ಧಂ ವಿಳೋಕನಮೋಪಳಾ: **ಪಂಪಭಾ,** ೪. ೭೭)

ಮನಂಪೆರ್ಚು – [ಕ್ರಿ] ಮನಸ್ಸು ಉಬ್ಬು (ಮನಂಪೆರ್ಚಿ ಧನುರ್ಲತಾ ಗುಣನಿನಾದಮನಾಲಿಸಿ ಕೇಳಲುಂ: **ಪಂಪಭಾ,** ೧. ೧೪೨)

ಮನಂಬಡು – [ಕ್ರಿ] ಸಮ್ಮತಿಸು (ಬಂಧುಗಳ್ ಮನಂಬಡೆ ಕಡುರಯ್ಯಮಾಯ್ತು ಅಮಿತತೇಜನೊಳಂದು ವಿವಾಹಮಂಗಳಂ: **ಆದಿಪು,** ೪. ೫೩)

ಮನಂಬರ್ – **[ಕ್ರಿ]** ಮನಸ್ಸಿಗೆ ಬರು, ಒಪ್ಪು (ಇಂತೆನ್ನಂ ಕರಂ ನೋಡಿ ನಾಡೆ ಮನಂಗೊಂಡಿರೆ ತೆಂಕನಾಡ ಮಱೆಯಲ್ಕಿನ್ನೇಂ ಮನಂ ಬರ್ಕುಮೇ: **ಪಂಪಭಾ,** ೪. ೩೧)

ಮನಂಬಸು – [ಕ್ರಿ] ಇಮ್ಮನವಾಗು, ಮನಸ್ಸು ಇಬ್ಭಾಗವಾಗು (ಪ್ರಸನ್ನಗಂಭೀರಚಿತ್ತದಿಂದ ಇದನವಧಾರಿಪುದು ಯುವರಾಜ ಮನಂಬಸದೊರ್ಮೆಗೆ ಸಲಿಪುದೆಮ್ಮ ಮುದುಗಣ್ಣನಮಂ: **ಆದಿಪು,** ೧೪. ೧೦೪) [ಎಲ್. ಬಸವರಾಜು ಅವರು **'ಅರ್ಥಕೋಶ'**ದಲ್ಲಿ **'ಮನಂಬಸೆದು'** ಎಂಬ ರೂಪವನ್ನು ಕೊಟ್ಟು **'ಮನೋನಿಗ್ರಹಮಾಡಿ'** ಎಂಬ ಅರ್ಥ ನೀಡುತ್ತಾರೆ]

ಮನಂಬಿಡು – **[ಕ್ರಿ]** ಮನಮೆಚ್ಚು (ಒಡವಳೆದಂಬರೇಚರರನ್ವಿತ ಮಂತ್ರಿಸಮೂಹಮಂ ಮನಂಬಿಡೆ ಪೊರೆದಿಷ್ಟಜನಮಂ ಕರೆದು: **ಆದಿಪು,** ೨. ೫೦)

ಮನಂಬುಗು – [ಕ್ರಿ] ಮನಸ್ಸಿಗೆ ನಾಟು (ಪುಗೆ ಪೊಱಮಡೆ ತನ್ನ ಮನಂಬುಗುವಂತಿರೆ ತನ್ನ ಮಕುಟಶಿಖರಮನವು ನೆಟ್ಟಗೆ ತಾಗುವಂತುಮಾಗಿರೆ: **ಆದಿಪು,** ೧೬. ೩೮); **[ಕ್ರಿ]** ಮನಸ್ಸು ತುಂಬಿಕೊಳ್ಳು (ಬಂದ ಚೆನ್ನಿಗರುಮಂ ಆಸೆಕಾಱರುಮನೊಲ್ಲದೆ ಚೆಲ್ವಿಡಿದಿರ್ದ ರೂಪು ದೃಷ್ಟಿಗೆ ವರೆ ಪಾಂಡುರಾಜನನೆ ಕುಂತಿ ಮನಂಬುಗೆ ಮಾಲೆಸೂಡಿದಳ್: **ಪಂಪಭಾ,** ೧. ೧೦೬)

ಮನಃಕಂಪ – [ನಾ] ಎದೆನಡುಕ, ಭಯ (ಎನ್ನ ನುಡಿದ ನುಡಿಯೇ ತನಗೆ ಮನಃಕಂಪಮಂ ಪಡೆಯೆ: **ಆದಿಪು,** ೩. ೬೪ ವ)

ಮನಃಕ್ಷತ – [ನಾ] ಮನಸ್ಸಿನ ಮೇಲಾದ ಪೆಟ್ಟು (ಅತಿವಿಶದವಿಶಾಲ ಊರುಕ್ಷತದಿಂದೊಱಿದನಿತು ಜಡೆಯುಮಂ ನಾಂದಿ ಮನಃಕ್ಷತದೊಡನೆ ಎಟ್ಟಿರಿಸಿದುದು: **ಪಂಪಭಾ,** ೧. ೧೦೫)

ಮನಃಪರ್ಯಯ – **[ನಾ]** [ಜೈನ] ಮನಃಪರ್ಯಯಜ್ಞಾನ, ಮತಿ ಶ್ರುತ ಅವಧಿ ಮನಃಪರ್ಯಯ ಮತ್ತು ಕೇವಲ ಎಂಬ ಪಂಚವಿಧಜ್ಞಾನದಲ್ಲಿ ನಾಲ್ಕನೆಯದು, ಬೇರೆಯವರ ಮನಸ್ಸಿನಲ್ಲಿರುವುದನ್ನು ತಿಳಿದುಕೊಳ್ಳುವ ಜ್ಞಾನ (ನೆಗಟ್ಟುದು ದೀಕ್ಷಾನಂತರಂ ಅಗಣಿತಪುಣ್ಯೋದಯಂ ಮನಃಪರ್ಯಯಂ ಅಂತೊಗೆದಾ ಚತುರ್ಜ್ಞಾನದೊಳಾವಗಮೆಸೆದಂ ಜ್ಞಾನರೂಪನಾದಿಬ್ರಹ್ಮಂ: **ಆದಿಪು,** ೯. ೮೮)

ಮನಃಪರ್ಯಯಜ್ಞಾನಿ – [ನಾ] [ಜೈನ] ಮನಃಪರ್ಯಯಜ್ಞಾನವುಳ್ಳವನು (ಪನ್ನಿರ್ಛಾಸಿರದೇಟ್ನೂರೈವ ದಿಂಬರ್ ಮನಃಪರ್ಯಯ ಜ್ಞಾನಿಗಳುಂ ಅನಿಬರೆ ವಾದಿಗಳುಂ: **ಆದಿಪು,** ೧೬. ೪೦ ವ)

ಮನಃಪವನವೇಗ – **[ನಾ]** ಮನಸ್ಸಿನ ಗಾಳಿಯ ವೇಗ, ಮನೋವೇಗ (ಅನಲಂ ಇಷ್ಟಾರ್ಥಸಿದ್ಧಿಯಕ್ಕುಂ ಎಂದು ಪರಸಿ ಮನಃಪವನ ವೇಗದಿಂ ಪಾಲ್ಗಡಲನೆಯ್ದಿ: **ಪಂಪಭಾ,** ೫. ೭೭ ವ)

ಮನಃಪರ್ಯಾಪ್ತಿ – **[ನಾ]** ಮನಸ್ಸಿನ ತೃಪ್ತಿ (ಬೞಿಯಂ ಅಂತರ್ಮುಹೂರ್ತದೊಳ್ ಆಹಾರ ಶರೀರ ಇಂದ್ರಿಯೋಚ್ಛ್ವಾಸ ಭಾಷಾ ಮನಃಪರ್ಯಾಪ್ತಿಗಳೊಳ್ ನೆರೆದು: **ಆದಿಪು,** ೫. ೮೩ ವ)

ಮನಃಪುಸ್ತಕ – **[ನಾ]** ಮನಸ್ಸೆಂಬ ಪುಸ್ತಕ (ತರಳಾಪಾಂಗ ವಿಳಾಸಸ್ಫುರಿತಮೆ ಲೆಕ್ಕಣಿಕೆಯಾಗೆ ನಲ್ಲಳ್ ಮುನ್ನಂ ಬರೆದಿತನುಚರಿತಮೀಗಳ್ ಬರೆದಂತಿರ್ಪುದು ಮನ್ಮನಃಪುಸ್ತಕದೊಳ್: **ಆದಿಪು,** ೪. ೧೪)

ಮನಃಪ್ರವೀಚಾರ – **[ನಾ]** [ಜೈನ] ಮನಃಪ್ರವೀಚರಣ, ಮನಸ್ಸಿನಲ್ಲಿಯೇ ಮೈಥುನಸುಖವನ್ನನುಭವಿಸುವುದು (ಮಾದೇವಿಯರೆಣ್ಬರ್ ಮದನೋದಯಮಂ ಕುಡೆ ಮನಃಪ್ರವೀಚಾರದೊಳಂತಾ ದೇವಂ ಸಂಚಿತಪುಣ್ಯೋದಯದಿಂದನಿತು ಮಹಿಮೆಯಂ ಕೈಕೊಂಡಂ: **ಆದಿಪು,** ೬. ೧೪)

ಮನಃಸ್ಖಲನೆ – **[ನಾ]** ಮನಸ್ಸಿನ ಸಡಿಲಿಕೆ, ಎದೆಗುಂದುವಿಕೆ (ಬಿದಿರ ಗಂಟುಗಳಂ ಕಳೆವಂತೆ ಮನ್ಮನಃಸ್ಖಲನೆಯಂ ಉಂಟುಮಾಡಿದಪುದು ಇಲ್ಲಿಗೆ ಕಜ್ಜಮದಾವುದು ಅಚ್ಯುತಾ: **ಪಂಪಭಾ,** ೧೨. ೧೦೩)

ಮನಕತ – [ನಾ] [ಮನಃಕ್ಷತ] ಮನಸ್ತಾಪ (ಉದಯಾಸ್ತಸಮಯಮೀ ಚಂದ್ರದಿವಾಕರಮಂಡಲಕ್ಕಂ ಇಲ್ಲಿಂದಂ ತೋರ್ಪುದು ತಾರಕಾಳಿ ನಭಮಂ ಪುದಿದಿರ್ಕುಮಿದರ್ಕೆ ನಿಮಗೆ ಮನಕತಮುಂಟೇ: **ಆದಿಪು,** ೬. ೫೫); ದುಃಖ (ರಥಮಂ ಬಂದೇಱಿ ಮಗನ ಮನಕತಂ

ಒಂದುತ್ತರಮೆರ್ದೆಯನಲೆಯೆ ನರನಿಂತೆಂದಂ: **ಪಂಪಭಾ,** ೧೧. ೧೧೪)

ಮನಕ್ಕೆ ವರ್ – [ಕ್ರಿ] ನಿರ್ಧರಿಸು (ಬಳೆದ ಮುನಿಸಿನೊಳ್ ಕೆಚ್ಚನಾದ ಕಣ್ ದೆಸೆಗೆ ಕೆಂಪನೊದವಿಸಿದುದು ದಿಗ್ವನಿತೆಯರ್ಗೆ ರಕ್ತಬಲಿಯಂ ಮನಕ್ಕೆವರೆ ಬಳೆದ ಮುನಿಸೆ ಕುಡುವಂತಾಗಳ್: **ಆದಿಪು,** ೧೪. ೨೩)

ಮನದನ್ನ – [ನಾ] ಪ್ರೀತಿಪಾತ್ರ (ಗಿಳಿಯ ಬಣ್ಣದ ಕುದುರೆಗಳೊಳ್ ಪೂಡಿದಜಿತಂಜಯಮೆಂಬ ರಥಮನೇಱಿ ತನ್ನ ಮನದನ್ನನಪ್ಪ ಸಾರಥಿಯಂ ಚೋದಿಸಲ್ವೇೞ್ದು: **ಆದಿಪು**, ೧೨. ೭೪ ವ); [ನಾ] ತನ್ನಂತೆಯೇ ಮನಸ್ಸುಳ್ಳ (ದುರ್ಯೋಧನನವರ ಪೋಗನಱಿದು ಪುರೋಚನನೆಂಬ ತನ್ನ ಮನದನ್ನನಪ್ಪ ಪೆರ್ಗಡೆಯೊಳ್ ಲಾಕ್ಷಾಗೃಹೋಪಾಯಮಂ ಚರ್ಚಿಸಿ: **ಪಂಪಭಾ,** ೨. ೯೨ ವ)

ಮನದ ಶಂಕೆ – [ನಾ] ಮನಸ್ಸಿನ ಸಂದೇಹ (ಆಗಳಾದಿತ್ಯನಾಕೆಯ ಮನದ ಶಂಕೆಯುಮಂ ನಡುಗುವ ಮೆಯ್ಯ ನಡುಕಮಂ ಕಿಡೆ ನುಡಿದು: **ಪಂಪಭಾ,** ೧. ೯೨ ವ)

ಮನದೆಗೊಳ್ – [ಕ್ರಿ] ಮನಸ್ಸಿಗೆ ತಂದುಕೊಳ್ಳು (ಭಂಗಿಗಳೊಳೆಮ್ಮೊಳಾದೀ ಸಂಗಡಮಂ ನೀಮೆ ಮನದೆಗೊಂಡೆಮ್ಮ ಕಿಸುರ್ ಪಿಂಗುಗೆ ಅಗಲ್ವೆಡೆಯೊಳ್: **ಆದಿಪು**, ೧೧. ೧೩೩); [ಕ್ರಿ] ಒಪ್ಪು (ಎಂದು ನುಡಿದ ಕೃಪನ ಮಾತಂ ನೃಪಂ ಮನದೆಗೊಂಡು ಕರ್ಣನ ಮೊಗಮಂ ನೋಡಿ: **ಪಂಪಭಾ,** ೧೨. ೫೦ ವ)

ಮನದೆಗೊಳಿಸು – [ಕ್ರಿ] ಮನಸ್ಸಿಗೆ ಹಿಡಿಸು, ಆಕರ್ಷಿಸು (ವಿನಯಂ ಸಹಜಂ ಕೃತ್ರಿಮಮೆನಿಸಿದುವು ಅವು ಬೇಱಿವೇಱಿ ವಿದ್ವಜ್ಜನಮಂ ಮನದೆಗೊಳಿಸುವುವು: **ಆದಿಪು**, ೧೪. ೬೩)

ಮನದೊಳಚ್ಚೊತ್ತು – [ಕ್ರಿ] ಮನಸ್ಸಿನಲ್ಲಿದ್ದುದನ್ನು ಅಚ್ಚಿಡು (ಎಂದು ತನ್ನ ಮನದೊಳಚ್ಚೊತ್ತಿದಂತೆ ನುಡಿದ ಗಾಂಗೇಯನ ಮಾತಂ ಮನದೆಗೊಂಡು: **ಪಂಪಭಾ**, ೬. ೪೧ ವ)

ಮನನ್ನೋಡು – [ಕ್ರಿ] [ಮನಂ+ನೋಡು] ಮನಸ್ಸು ಅರಿ (ಆನ್ನೋಡೆ ನೋಡೆ ನೋಡ ಮನನ್ನೋಡುವವೊಲ್ ಶರದ್ವನಂ ಕರಗಿದುದು: **ಆದಿಪು**, ೪. ೬೬)

ಮನಮಱಿ – [ಕ್ರಿ] [ಮನಂ+ಅಱಿ] ಮನಸ್ಸು ತಿಳಿ, ಮನಸ್ಸಿಗೆ ನಾಟು (ಎಂದು ಪರಿಚ್ಛೇದಿಸಿ ಮನಮಱಿಯೆ ನುಡಿದು ನಿಜಗೃಹೋದ್ಯಾನದ ಜಿನಭವನದೊಳ್ ಎಂಟುದಿವಸಂಬರಂ ಮಹಾಮಹಮೆಂಬ ಜಿನಮಹಿಮೆಯಂ: **ಆದಿಪು**, ೨. ೪೯ ವ)

ಮನಮೆಯ್ದು – [ಕ್ರಿ] ಮನಸ್ಸಿಗೆ ಹೊಗು, ಅರ್ಥವಾಗು (ಅಯ್ದನೆಯ ಜಲಧಿವರಂ ಇರದೆಯ್ದುವ ಮೊಗೆವಂತೆ ಮೊಗೆದುಂ ಓರೊರ್ಬರ ಕೈಗೆಯ್ದಿಸುವ ಬೇಗಮಂ ಮನಮೆಯ್ದುದಿಲ್ಲ: **ಆದಿಪು,** ೭. ೮೩)

ಮನಮೊಱಲ್ – [ಕ್ರಿ] ಮನಸ್ಸು ಪ್ರೀತಿಸು, ಮನಸ್ಸಿನಲ್ಲಿ ಪ್ರೀತಿ ಉಕ್ಕು (ಅಱಿಮರುಳಂತುಟೆ ಸೊರ್ಕಿನ ತೆಱನಂತುಟೆ ಮನಮೊಱಲ್ದು ಎರ್ದೆಯುರಿವುದು ಮೆಯ್ಯೆಱಗುವುದು ಪದೆವುದು ಆನಿದನಱಿಯೆನಿದೇಕೆಂದು ಕನ್ನೆ ತಳವೆಳಗಾದಳ್; **ಪಂಪಭಾ**, ೪. ೭)

ಮನಸಿಜ – [ನಾ] [ಜೈನ] ಬಾಹುಬಲಿಯ ಹೆಸರುಗಳಲ್ಲಿ ಒಂದು (ಚಿತ್ತಜಂ ಚಿತ್ತಭವಂ ಮನಸಿಜಂ ಅನಂಗಂ ಅಂಗಜನೆನೆ ನೆಗೞ್ದುವು ಬಾಹುಬಲಿಗೆ ಪಲವುಂ ಪೆಸರ್ಗಳ್: **ಆದಿಪು,** ೮. ೫೩); [ನಾ] ಕಾಮ, ಮನ್ಮಥ (ಬೂತುತಪಂಗಳ್ ಎಮ್ಮ ಪುರ್ವಿನ ಕಡೆಯೊಂದು ಜರ್ವಿನೊಳೆ ತೀರ್ವುವು ಅವಲ್ಲದೆ ದೇವಬೆಂಬಲಂ ಮನಸಿಜನ ಈಗಳಾಱು ಋತುವುಂ ನೆರವೆಂದೊಡೆ ಸೋಲದಿರ್ಪರಾರ್: **ಪಂಪಭಾ,** ೭. ೮೧)

ಮನಸಿಜನಂಬು – [ನಾ] ಕಾಮನ ಬಾಣ (ಮನಸಿಜನಂಬು ಅರಲ್ದ ಪೊಸಮಲ್ಲಿಗೆ ತೆಂಕಣ ಗಾಳಿಯೆಂಬಿವಿಂತು ಅನುಬಲದಿಂದಂ ಎನ್ನಂ ಅಲೆದಪ್ಪುವು: **ಪಂಪಭಾ,** ೪. ೬೮)

ಮನಸ್ಖಳನ – [ನಾ] ಉತ್ಸಾಹ ಕುಗ್ಗುವುದು (ಚಕ್ರಿ .. .. ಮನಸ್ಖಳನಮಾಗೆ ವಿಸ್ಮಯಂಬಟ್ಟು: **ಆದಿಪು** ೧೪. ೬ ವ)

ಮನಸ್ತಮ – [ನಾ] ಮನಸ್ಸಿನ ಕತ್ತಲೆ, ದುಃಖ (ಮಗಳೆ ಮನಸ್ತಮಂ ನಿನದೀಗಳೆ ಪಿಂಗುಗೆ: **ಆದಿಪು**, ೩. ೫೦)

ಮನಸ್ವಿ – [ನಾ] ದೃಢಚಿತ್ತ (ಕರ್ಮದ ಬೇರನೆ ಪಱಿವ ತೆಱದೆ ಪಱಿದಂ ಮನಸ್ವಿ ಚಳದಳಿವಿನೀಳಕೇಶಾವಳಿಯಂ: **ಆದಿಪು,** ೯. ೭೭)

ಮನಸ್ಸಂಭವ – [ನಾ] ಮನಸ್ಸಿನಲ್ಲಿ ಹುಟ್ಟಿದ (ಅಂತು ಹಿರಣ್ಯಗರ್ಭ ಬ್ರಹ್ಮ ಮನಸ್ಸಂಭವದೊಳ್ ಪುಟ್ಟಿದ ಅಱುವರ್ಮಕ್ಕಳೊಳಗೆ: **ಪಂಪಭಾ,** ೧. ೬೦ ವ)

ಮನು – [ನಾ] [ಜೈನ] ಮನುಷ್ಯಕುಲ ಮಾರ್ಗದರ್ಶಕರಾದ ಹದಿನಾಲ್ಕು ಮಂದಿ: ಕುಲಧರ, ಮನುಗಳು ಪ್ರತಿಶ್ರುತಿ, ಸನ್ಮತಿ, ಕ್ಷೇಮಂಕರ, ಕ್ಷೇಮಂಧರ, ಸೀಮಂಕರ, ಸೀಮಂಧರ, ವಿಮಲವಾಹನ, ಚಕ್ಷುಷ್ಮಂತ, ಯಶಸ್ವಿ, ಅಭಿಚಂದ್ರ, ಚಂದ್ರಾಭ, ಮರುದ್ದೇವ, ಪ್ರಸೇನಜಿತ್ ಮತ್ತು ನಾಭಿರಾಜ (ಮನ್ವಂತರಾತಿಕ್ರಮದೊಳ್ ಪದಿನಾಲ್ಕನೆಯ ಮನು ಪುಟ್ಟಿದಂ: **ಆದಿಪು,** ೬. ೬೫ ವ); [ಕ್ರಿ] ಪ್ರಜೆಗಳ ಜೀವನೋಪಾಯದ ಬಗ್ಗೆ ಚಿಂತಿಸಿದವನು (ಪ್ರಜಾಜೀವನೋಪಾಯಮನನದಿಂದೆ ಮನುವುಂ ನಿಜಕುಲೋದ್ಧರಣದಿಂ ಕುಲಧರನುಂ: **ಆದಿಪು,** ೮. ೭೫ ವ)

ಮನುಜ – [ನಾ] ಮಾನವ (ಗೂಢ ಗುಲ್ಫ ಪಾರ್ಷ್ಣಿಗಳನೊಳಕೊಂಡ ಮನುಜ ಮಾಂಧಾತನ ಪೊಱ ಅಡಿಗಳ್ ವಿರೋಧಿ ಭೂಪಾಳರ ಅಡಿಗೆಱಗಿಸಿದ ಸಂತೋಷದೊಳ್: **ಪಂಪಭಾ**, ೨. ೩೯ ವ)

ಮನುಜ ಮಾಂಧಾತ – [ನಾ] ಮಾನವರಲ್ಲಿ ಮಾಂಧಾತ [ಇಂದ್ರನ ಬೆರಳು ಚೀಪಿ ಅಮೃತ ಹೀರಿದವನು] (ಪೊಟಿಲಂ ಪುಗಲೊಲ್ಲದೆ ನಿಂದ ಮನುಜಮಾಂಧಾತನಂ ಪಾಂಚಾಳರಾಜನಿಂತೆಂದಂ: **ಪಂಪಭಾ,** ೩. ೬೮ ವ) ['ಮನುಜಮಾಂಧಾತ' ಎಂಬುದು ಅರಿಕೇಸರಿಯ ಒಂದು ಬಿರುದು]

ಮನುಜ ಮಾರ್ತಾಂಡ – [ನಾ] ಮನುಷ್ಯರಲ್ಲಿ ಸೂರ್ಯ (ಅಮಿತ ಮತಿ ಗುಣದಿನತಿ ವಿಕ್ರಮ ಗುಣದಿಂ ಶಾಸ್ತ್ರಪಾರಮುಂ ರಿಪುಬಳ ಪಾರಮುಮೊಡನೆ

ಸಂದುವೆನಿಸಿದನಮೇಯ ಬಲಶಾಲಿ ಮನುಜ ಮಾರ್ತಾಂಡ ನೃಪಂ: **ಪಂಪಭಾ,** ೧. ೪೫)

ಮನುಜಾಧೀಶ – [ನಾ] ರಾಜ (ಮನುಜಾಧೀಶಸಮೂಹ ಸಂವರಣದಿಂ .. .. ಆಲಯಮಾಯ್ತದೊಂದು ಪಿರಿದುಂ ಚೆಲ್ವಿಂಗೆ ರಾಜಾಲಯಂ: **ಆದಿಪು,** ೮. ೩೬)

ಮನುಜಾಧೀಶ್ವರ – [ನಾ] ರಾಜ (ಯಜ್ಞದೊಳ್ ಈ ಮನುಜಾಧೀಶ್ವರಸಭೆಯೊಳ್ ನೆನೆಯಲುಂ ಆಗದು ದುರಾತ್ಮನಂ ಬೆಸಗೊಳ್ವಾ: **ಪಂಪಭಾ,** ೬. ೪೫)

ಮನುಮಾರ್ಗ – [ನಾ] ಲೋಕೋದ್ಧಾರಕನಾದ ಮನುವಿನ ದಾರಿ (ಮನುಮಾರ್ಗನಿಪುಣನೆನಿಸಿದ ನಿನಗಾಂ ಈ ರಾಜಮಾರ್ಗಮಂ ತೋಱೆ ಜಗಜ್ಜನಕೆ ನಗೆಯಲ್ತೆ: **ಆದಿಪು,** ೮. ೧೨)

ಮನುವಂಶಧ್ವಜ – [ನಾ] ಮನುವಿನ ವಂಶಶ್ರೇಷ್ಠ (ಮನುವಂಶಧ್ವಜಂ ಸೇನಾನಾಯಕಂಗೆ ಬಟೆಯನಟ್ಟಿದಾಗಳ್ ಆತಂ ಬಂದು: **ಆದಿಪು,** ೧೩. ೩೧ ವ)

ಮನುಷ್ಯಜಾತಿ – [ನಾ] ಮನುಕುಲ (ಆಱುಂ ವೃತ್ತಿಗಳನಿವಂ ಮೀಱೆದರಲ್ಲರ್ ದ್ವಿಜನ್ಮರ್ ಈ ವೃತ್ತಿಗಳಿಂ ಬೇಱಾದರ್ ದ್ವಿಜರ್ ಉಂತೇಂ ಬೇಱುಂಟೆ ಮನುಷ್ಯಜಾತಿ ತಾನೊಂದೆ ವಲಂ: **ಆದಿಪು,** ೧೫. ೧೪)

ಮನುಷ್ಯಲೋಕ – [ನಾ] ಭೂಲೋಕ (ಅದು ದಿವಿಜೇಂದ್ರಲೋಕಂ ಇದು ಮನ್ಮಥರೂಪದ ಮನುಷ್ಯಲೋಕಂ ಎಂಬಿದುವೆ ವಿಕಲ್ಪಂ: **ಆದಿಪು,** ೪. ೧೯)

ಮನೆದೊೞ್ತು – [ನಾ] ಮನೆ ಕೆಲಸದವಳು (ಪೋದ ಮಾರಿಯನ್ನಳೆ ಮನೆದೊೞ್ತು ಸೀರ್ಕರಡಿಯನ್ನಳೆ ನಾದುನಿ: **ಪಂಪಭಾ,** ೪. ೯೮)

ಮನೆಯ – [ನಾ] ಮನೆಯ ಯಜಮಾನ (ಮನೆಯನಿವಂ ಮನೋಭವನಿವಂ ಪೊಸಸುಗ್ಗಿಯೊಳ್ ಆದ ಅದೊಂದು ಕಿತ್ತಂ ಇವಂ: **ಪಂಪಭಾ,** ೪. ೯೭)

ಮನೆಯಾಣ್ಮ – [ನಾ] ಮನೆಯ ಯಜಮಾನ, ಗಂಡ (ನೋಡಿ ನಾಡಾಡಿಯಲ್ಲದ ಆಕೆಗಳ ಜೋಡೆಗೆಯ್ತಂಗಳಂ ಕಂಡು ಇದು ಮನೆಯಾಣ್ಮನಂ ಮಾಱುವಂದಮಲ್ಲದೆ ಪೂಮಾಱುವಂದಂ ಅಲ್ತು ಎಂದು ಮುಗುಳ್ನಗೆ ನಗುತುಂ: **ಪಂಪಭಾ,** ೪. ೮೧ ವ)

ಮನೆವಾಟಿ – [ನಾ] ಗೃಹಕೃತ್ಯ (ಭೀಮಸೇನನ ಮಹಾಪ್ರತಿಜ್ಞೆಯುಮಂ ಆರ್ಗಂ ಬಾರಿಸಲ್ಬಾರದು ಕೆಯ್ಗಟಿದ ಮನೆವಾಟಿ ಬುದ್ಧಿವೇಟಿಲೆಡೆಯಿಲ್ಲ: **ಪಂಪಭಾ,** ೭. ೧೬ ವ)

ಮನೆವೆಂಡತಿ – [ನಾ] ಮನೆಯ ಹೆಣ್ಣು, ಹೆಂಡತಿ (ಮನೆ ನಿನಗೆ ನಂದಗೋಪನ ಮನೆ ತುಱುಗಾರ್ತಿ ನಿನಗೆ ಮನೆವೆಂಡತಿ: **ಪಂಪಭಾ,** ೬. ೫೨)

ಮನೋಗತ – [ನಾ] ಆಶಯ (ಮದೀಯ ಮನೋಗತ ಕಾಮಸಾಗರದ ಒದವಿಂಗೆ ನಲ್ಲಳ ವಿಲೋಚನಚಂದ್ರಿಕೆಯೊಂದೆ ಸಾಲದೇ: **ಪಂಪಭಾ,** ೫. ೧೧)

ಮನೋಗಾರ – [ನಾ] [ಮನಃ+ಆಗಾರ] ಮನಸ್ಸೆಂಬ ಮನೆ (ಆ ಮುನಿಯ ಮನೋಗಾರದೊಳ್ ಧ್ಯಾನಚಕ್ರಂ ಪುಟ್ಟಿತ್ತು ಆ ರಾಜ್ಯಾಶ್ರಮಮುನಿಯ ಆಯುಧಾಗಾರದೊಳ್ ಚಕ್ರರತ್ನಂ ಪುಟ್ಟಿತ್ತು: **ಆದಿಪು,** ೬. ೨೪ ವ)

ಮನೋಜ – [ನಾ] ಕಾಮ, ಮನ್ಮಥ (ಚೇಟಿಕೆ ಬೀಸುವ ಕುಂಚಂ ಎಯ್ದೆ ಮೆಯ್ದೋಱುವ ಗಾಡಿ ಕಾಂಚನದ ದಂಡದ ಸೀಗುರಿ ನೋಟಿಸ್ಪೊಡೆ ಆರುಮಂ ಮಾಱೆ ಮನೋಜನ ಒಡ್ಡು ಎನಿಸಿದರ್: **ಪಂಪಭಾ,** ೯. ೧೦೦)

ಮನೋಜಕಾರ್ಮುಕ – [ನಾ] ಕಾಮನ ಬಿಲ್ಲು (ಇದಱ ದನಿ ಮದವಳಿಕುಳಮೃದುನಿನದದೊಳಂ ಮನೋಜಕಾರ್ಮುಕಗುಣ ನಾದದೊಳಂ ಸೆಣಸುವುದೆನೆ ಸುರಸುದತಿ ಪೆಱಳ್ ಮೆಱೆದು ಬೀಣೆಯಂ ಬಾಜಿಸಿದಳ್: **ಆದಿಪು,** ೭. ೨೦)

ಮನೋಜನೋಜ – [ನಾ] ಕಾಮನ ಗುರು (ಮನೋಜನುಮಂ ಗೆಲೆವಂದನಾಗಳುಂ ಸಹಜಮನೋಜನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ: **ಪಂಪಭಾ,** ೧. ೪)

ಮನೋಜರಾಗರಸ – [ನಾ] ಕಾಮರಸ, ರೇತಸ್ಸು, ವೀರ್ಯ (ಒಗೆದ ಶರಸ್ತಂಬದೊಳ್ ಇರ್ಬಗಿಯಾಗಿ ಮನೋಜರಾಗರಸಂ ಉಗುತರೆ ತೊಟ್ಟಗೆ ಬಿಸುಟು ಬಿಲ್ಲಂ ಅಂಬುಮಂ ಅಗಲ್ದಂ ಆಶ್ರಮದಿಂ ಉದಿತಲಜ್ಜಾವಶಂ: **ಪಂಪಭಾ,** ೨. ೩೩)

ಮನೋಜಶಿಖಾಳಿ – [ನಾ] ಕಾಮಾಗ್ನಿಯ ಜ್ವಾಲೆಗಳು (ಮನೋಜಶಿಖಾಳಿಗಳಟ್ವೆ ಮುನ್ನಮೆ ಎನ್ನುರಿವೆರ್ದೆ ಕಂಡು ನಿನ್ನಂ ಇನಿಸಾಱೆದುದು: **ಪಂಪಭಾ,** ೮. ೬೪)

ಮನೋಜಸುಖ – [ನಾ] ಕಾಮಸುಖ (ಇನಿಯಳನಟ್ಟೆಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ ಸೋಲ್ತಲಂಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ: **ಪಂಪಭಾ,** ೧. ೧೧೧)

ಮನೋಜಾಕೃತಿ – [ನಾ] ಮನ್ಮಥರೂಪ, ಸುಂದರ ರೂಪು (ವಜ್ರಸೇನವಿಭುಗಂ ಶ್ರೀಕಾಂತೆಗಂ ಪುತ್ರನಾಗಿ ಮನೋಜಾಕೃತಿ ವಜ್ರನಾಭಿವೆಸರಿಂದುತ್ಸಾಹಮಂ ತಾಳ್ದಿದಂ: **ಆದಿಪು,** ೬. ೨೧)

ಮನೋಜಾತ – [ನಾ] ಮನಸ್ಸಿನಲ್ಲಿ ಉಂಟಾದ (ಭೂತಿಗಳೊಳ್ ಕಲ್ಯಾಣವಿಭೂತಿಗಳೆಮಗಕ್ಕೆ ಬೇಗಮಿನ್ನೆಂದು ಮನೋಜಾತ ಮಹೋತ್ಸಾಹರ್ ತದ್ಭೂತಿಯನಿಟ್ಟರ್ ತ್ರಿಪುಂಡ್ರಮಂ ದಿವಿಜೇಂದ್ರರ್: **ಆದಿಪು,** ೧೬. ೫೩); [ನಾ] ಮನಸ್ಸಿನಲ್ಲಿ ಹುಟ್ಟಿದವನು, ಕಾಮ (ಇದು ಕೈಲಾಸಂ ಭವಾನೀಧವನ ನೆಲೆ ಮನೋಜಾತನಂ ಬೂದಿಮಾಡಿತ್ತಿದಱೊಳ್ ದಕ್ಷಾಧ್ವರ ಧ್ವಂಸಕನ ನೊಸಲ ಕಣ್: **ಪಂಪಭಾ,** ೭. ೭೪)

ಮನೋದ್ಭವ – [ನಾ] ಮನ್ಮಥ (ಕೂಸಾಟದ ಚೆಲ್ವುಗಳ್ ಕುಡೆ ಪಿತೃದ್ವಂದ್ವಕ್ಕೆ ನಿಚ್ಚಂ ಮನೋದ್ಭವನುಂ ಬಂಧುಜನಕ್ಕೆ: **ಆದಿಪು.** ೭. ೧೨೯)

ಮನೋನುರಾಗ – [ನಾ] ಮನಸ್ಸಿನಲ್ಲಾದ ಸಂತಸ (ಭೃಂಗರವಂ ಅದೊಂದು ಮಂಗಳರವಕ್ಕೆಣೆಯಾಯ್ತು ಮನೋನುರಾಗದಿಂ ಕರೆವವೊಲಾಯ್ತು ಮತ್ತ ಕಳಹಂಸರವಂ: **ಪಂಪಭಾ,** ೫. ೫೨)

ಮನೋಭವ – [ನಾ] ಮನಸ್ಸಿನಲ್ಲಿ ಹುಟ್ಟಿದ[ವನು], ಮನ್ಮಥ (ಮನೆಯನಿವಂ ಮನೋಭವನಿವಂ ಪೊಸಸುಗ್ಗಿಯೊಳ್ ಆದ ಅದೊಂದು ಕಿತ್ತಂ ಇವಂ: **ಪಂಪಭಾ,** ೪. ೯೭)

ಮನೋಭವಕೇಳಿ – [ನಾ] ಕಾಮಕೇಳಿ (ಮನೋಭವಕೇಳೀಲಂಪಟ ನಿಳಿಂಪದಂಪತಿ

ವಿದ್ಯಾಧರಮಿಥುನ ಮನ್ಮಥೋದ್ದೀಪನದೊಳ್: **ಆದಿಪು**, ೭. ೨೭ ವ)

ಮನೋಭವಧ್ವಂಸಕಾ – [ನಾ] ಮನ್ಮಥವಿನಾಶಕ, ಆದಿಜಿನ (ಅಭವ ಬೇಸಱೆಂ ಪೋಕೆ ಪೋ ಭವಂ ಭವದುಪಾಂತದಲ್ಲಿಯೆ ಮನೋಭವಧ್ವಂಸಕಾ: **ಆದಿಪು**, ೧೩. ೮೭)

ಮನೋಭಿಲಷಿತ – [ಗು] ಇಷ್ಟಪಟ್ಟ (ಮಹಾಬಲ ಖಚರೇಂದ್ರಂ .. .. ಮನೋಭಿಲಷಿತ ವಿಷಯಸುಖಾನುಭವನಿರತನುಂ ಆಗಿ: **ಆದಿಪು**, ೨. ೨೩ ವ)

ಮನೋಮಾನಸ – [ನಾ] ಮನಸ್ಸೆಂಬ ಸರೋವರ (ಇವಂ ಮುನ್ನಮೇಂ ನೋಂಪಿಯಂ ನೋಂತನೊ ಪೇೞಿಂಬಂತೆ ಬಂದಂ ಸುಕವಿಜನಮನೋಮಾನಸೋತ್ತಂಸಹಂಸಂ: **ಆದಿಪು**, ೩. ೯೧)

ಮನೋರಥ – [ನಾ] ಆಸೆ, ಇಷ್ಟಾರ್ಥ (ರಥದಿಂ ಧಾತ್ರಿಗೆ ಪಾಯ್ದು ಕೊಂಡು ಗದೆಯಂ ಕೆಯ್ಯಾರ್ದುದು ಅಸ್ಮತ್ ಮನೋರಥಂ ಇಂದು ಎಂದು ಕಡಂಗಿ: **ಪಂಪಭಾ**, ೧೧. ೬೬)

ಮನೋವೈಕಲ್ಯ – [ನಾ] ಚಿತ್ತವಿಕಲ್ಪ, ಬುದ್ಧಿಭ್ರಮಣೆ (ಕಾಮಗ್ರಹಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭಕಂಪಸ್ವೇದವೈವರ್ಣ್ಯಸಂತಾಪನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ**, ೪. ೫೯ ವ)

ಮನೋಹರಿ – [ನಾ] ಮನಸ್ಸನ್ನು ಗೆಲ್ಲುವ ಚೆಲುವೆ (ನೆಲಸುಗೆ ನಿಶ್ಚಳಮೀ ಭಟಖಡ್ಗಮಂಡಳೋತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ: **ಆದಿಪು**, ೧೪. ೧೩೦)

ಮನ್ತ್ರಪೂರ್ವಕ – [ಗು] ಮಂತ್ರಕ್ಕೆ ಅನುಗುಣವಾಗಿ (ಇದರ್ಕಿದಾಚರಣಂ ಇದಱ ವಿಧಿಯಿಂತುಟು ತಪ್ಪದೆ ಮನ್ತ್ರಪೂರ್ವಕಂ ನೆಗೞ್ವುದೆಂದು ಚಕ್ರಾಧಿಪಂ ಮನಂಗೊಳೆ ಪೇೞ್ದಂ: **ಆದಿಪು**, ೧೫. ೧೬)

ಮನ್ನಣೆ – [ನಾ] ಗೌರವ (ಮೈಮೆಯ ಮನ್ನಣೆಯೊಳೀಗಳ್ ಕರಂ ಮನಮನಲರ್ಚೆ: **ಪಂಪಭಾ**, ೧೪. ೪೫)

ಮನ್ನಿಸು – [ಕ್ರಿ] ನೆರವೇರಿಸು (ಎಂಟುಂ ತೆಱದ ಪೂಜೆಯುಮಂ ಅರ್ಕಪೂಜೆಯುಮಂ ಮನ್ನಿಸಿ: **ಆದಿಪು**, ೧೫. ೧೩ ವ); ಗೌರವಿಸು (ಗುರುಜನಮಂ ನೆಱೆ ಮನ್ನಿಸಿದುದು ಪಿರಿಯ ಸಿರಿಯೊಳೇಂ ಸುಜನತೆಯೋ: **ಪಂಪಭಾ**, ೯. ೩೬)

ಮನ್ನೆಯ – [ನಾ] ಮುಖಂಡ (ಮನ್ನೆಯರಾಳಂತೆ ಕಾದಿಯಲಸದೆ: **ಪಂಪಭಾ**, ೫. ೪೬ ವ)

ಮನ್ಮಥದ್ರವ – [ನಾ] ಮದನೋದಕ, ಕಾಮರಸ (ಗರ್ವಮಂ ಕಳೆದುದಂತಿರ್ವರ ಮನ್ಮಥದ್ರವಂ: **ಪಂಪಭಾ**, ೫. ೨೭)

ಮನ್ಮಥಮಹೀಭುಜಂ – [ನಾ] ಕಾಮನೆಂಬ ರಾಜ (ಅರಿಕೇಸರಿಯ ಒಂದು ಗಾಡಿಯ ಉದ್ದಾನಿ ತಗುಳ್ದು ಕಣ್ಣೊಳೆ ತೊಟಿಲ್ದು ಎರ್ದೆಯೊಳ್ ತಡಮಾಡೆ ಬೇಟದುದ್ದಾನಿಯನಾನೆ ಮನ್ಮಥಮಹೀಭುಜನೋವದೆ: **ಪಂಪಭಾ**, ೪. ೫೮)

ಮನ್ಮಥೋದ್ದೀಪನ – [ನಾ] ಕಾಮವನ್ನು ಉದ್ದೀಪಿಸುವಿಕೆ (ಮನೋಭವ ಕೇಳೀಲಂಪಟ ನಿಳಿಂಪದಂಪತಿ ವಿದ್ಯಾಧರಮಿಥುನ ಮನ್ಮಥೋದ್ದೀಪನದೊಳ್: **ಆದಿಪು**, ೭. ೨೭ ವ)

ಮನ್ಮನಲಪಿತ – [ನಾ] ತೊದಲು ನುಡಿ (ದರಹಸಿತಂ ಹಸಿತಂ ಸುಂದರಮನ್ಮನಲಪಿತ ರುಚಿತರಂಗಿತಮೆಂಬೀ ಪರಿವಿಡಿಯ ಬಾಲಕೇಳಿಯೆ ಕರಮೆ ಮರುಳ್ಚಿದುದು ತಾಯುಮಮಂ ತಂದೆಯುಮಮಂ: **ಆದಿಪು**, ೮. ೩೮)

ಮನ್ಮನೋವಾಸ – [ನಾ] [ಮತ್+ಮನೋವಾಸ] ನನ್ನ ಮನಸ್ಸೆಂಬ ಮನೆ (ಗುಣಾರ್ಣವನೊಳ್ಪು ಮನ್ಮನೋವಾಸಮನೆಯ್ದೆ ಪೇೞ್ದಪೆನಲ್ಲದೆ ಗರ್ವಮೆ ದೋಷಮ್ ಅಲ್ತೆಗಂ ದೋಷಮೆ: **ಪಂಪಭಾ**, ೧. ೧೩)

ಮನ್ಯು – [ನಾ] ದುಃಖ (ತನ್ನೊಡವುಟ್ಟಿದರ್ಗಾದ ಪ್ರವಾಸಾಯಸಂಗಳ್ಗಂ ದೆಸೆಗಂ ಮನ್ಯು ಮಿಕ್ಕುಬರೆ ಕಣ್ಣ ನೀರಂ ತುಂಬಿ: **ಪಂಪಭಾ**, ೩. ೧೦ ವ)

ಮನ್ವನ್ವಯ – [ಮನು+ಅನ್ವಯ] ಮನುವಿನ ವಂಶ (ಸೌಂದರಿಯರ್ ಏಕಚ್ಛತ್ರರಾಜ್ಯಾಭಿಷೇಕಮಿದೆಂಬಂತಿರೆ ಮಜ್ಜನಂಬುಗಿಸಿದರ್ ಮನ್ವನ್ವಯೋತ್ತಂಸನಂ: **ಆದಿಪು**, ೮. ೭೦)

ಮಮತ್ವ – [ನಾ] ನನ್ನದು ಎಂಬ ಅಭಿಮಾನ (ಮಮತ್ವಮಂ ಬಿಸುಟು ನೀಂ ಏಕತ್ವಮಂ ಭವ್ಯ ಭಾವಿಸು ನಿನ್ನೀ ತನುವಂ ತಪೋವನವನಕ್ರೀಡಾಸುಖಕ್ಕೊಡ್ಡಿಸು: **ಆದಿಪು**, ೨. ೪೭)

ಮಮ್ಮ – [ನಾ] ಮೊಮ್ಮಗ (ನೀಂ ಮಮ್ಮನೆಯಪ್ಪೈ ನೋಡು ನಣ್ಪಿಂ ನಿಮಗಮೆಮಗಮಾಮ್ನಾಯದಿಂ ಬಂದುದಿಂತೀ ಜಿನಧರ್ಮಂ: **ಆದಿಪು**, ೨. ೨೦)

ಮಮ್ಮಲ ಮಱುಗು – [ಕ್ರಿ] ವಿಶೇಷವಾಗಿ ದುಃಖಿಸು (ಅಂತಾ ಬಾಲೆ ಕಾಯ್ದ ಪುಡಿಯೊಳಗೆ ಬಿಸುಟ್ಟ ಎಳವಾಳೆಯಂತೆ ಸುರತ ಮಕರಧ್ವಜನೊಳಾದ ಬೇಟದೊಳ್ ಮಮ್ಮಲ ಮಱುಗುತಿರ್ದಳ್: **ಪಂಪಭಾ**, ೫. ೧೦ ವ)

ಮಮ್ಮಟಿಸು – [ಕ್ರಿ] ಆವೇಶಗೊಳ್ಳು (ಸಮರಭರಂ ಮನೋರಾಗಮಂ ಮಾಡೆಯುಂ ಮಮ್ಮಟಿಸಿ ಪಾಂಡವಕೌರವಬಲದ ಕಲಿಕೆಯ ಪ್ರಧಾನ ನಾಯಕರ್ಕಳ್: **ಪಂಪಭಾ**, ೧೩. ೩೭ ವ); [ಕ್ರಿ] ಅಲುಗಾಡು (ಮಮ್ಮಟಿಸಿದ ಪಲವುಂ ರಾಜಚಿಹ್ನಂಗಳಂ ಬೆಳ್ಗೊಡೆಗಳ್ ತಳ್ವೊಯ್ದು ಅದೇಂ ಕಣ್ಗೊಳಿಸಿದುದೊ ಚಳತ್ ಚಂದ್ರಕಚ್ಛತ್ರಪಿಂಡಂ: **ಪಂಪಭಾ**, ೧೩. ೩೮)

ಮಯೂಖಮಾಲೆ – [ನಾ] ಕಿರಣಸಂದೋಹ (ಅಶೇಷವಿದ್ಯಾನದೀ ಶೋಷಣ ಗ್ರೀಷ್ಮಾಂಶುಮಾಲಿ ಮಯೂಖಮಾಲೆಯುಂ: **ಆದಿಪು**, ೧೪. ೧೨೨ವ)

ಮಯೂಖಸಂತಾನ – [ನಾ] ಕಿರಣಗಳ ಸಮೂಹ (ವಿಲೋಲಲೋಚನ ಮಯೂಖಸಂತಾನದೊಳೆ ದೆಸೆಗಳೆಲ್ಲಂ ನೀಲೋತ್ಪಳಮಯಮುಂ: **ಆದಿಪು**, ೭. ೨೧ ವ)

ಮಯೂರ – [ನಾ] ನವಿಲು (ಮತ್ಸ್ಯ ಮಕರ ಕುಲಿಶ ಕಲಶ ಕುಳೀರ ವರಾಹ ವಾನರ ಕಂಠೀರವ ಚಮೂರು ಮಯೂರ ಗರುಡ ಫಣಿರಾಜಚಿಹ್ನಂಗಳಪ್ಪ: **ಆದಿಪು**, ೧೧. ೨೮ ವ)

ಮಯೂರಾತಪತ್ರ – [ನಾ] ನವಿಲುಗರಿಯ ಕೊಡೆ (ಸಕಲದಿಕ್ಪ್ರಚಳಿತ ರಾಜಪುತ್ರಮಯೂರಾತಪತ್ರನಿಚಯಮೆ ಸಂಚಾರೀಭೂತ ಚೂತಭೂಜಾರಾಮಮಾಗೆ: **ಆದಿಪು**, ೧೩. ೬ ವ)

ಮರಕತನಗ – [ನಾ] ಪಚ್ಚೆಯ ಬೆಟ್ಟ (ಮರಕತನಗಂ ದಿವ್ಯಂ ಮರ್ತ್ಯೋತ್ತಮಾಕೃತಿಯೆಂಬಿನಂ ವಿರಚಿಸಿದನಿಂತಾದಿಬ್ರಹ್ಮಂ ಹರಿನ್ಮಣಿವರ್ಣನಂ: **ಆದಿಪು**, ೧೪. ೪೪)

ಮರಗೆರಸಿ – [ನಾ] ಒಂದು ಮಕ್ಕಳಾಟ. ಮರಕೋತಿಯಾಟ (ಅಂತಾ ಕೂಸುಗಳ್ ಕೂಸಾಟವಾಡುತ್ತಿರ್ದೊಂದು ದಿವಸಂ ಮರಗೆರಸಿಯಾಡಲೆಂದು: **ಪಂಪಭಾ**, ೨. ೩೦ ವ)

ಮರದುಱುಗಲ್ – [ನಾ] ಮರಗಳ ತೋಪು (ಪರ್ವತದ ಮೇಲೆ ಕಱಂಗಿ ಕಟ್ಟಿಲಿಸಿದ ಮರದುಱುಗಲ ನಡುವೆ ಸುಧಾಧವಳಿತ ಉತ್ತುಂಗ ರಮ್ಯಹರ್ಮ್ಯಂಗಳಂ ಕಾಣ್ಬೆರಪ್ಪೊಡೆ ಅದು ಹಿಡಿಂಬಪುರಂ: **ಪಂಪಭಾ**, ೩. ೧೮ ವ)

ಮರಪಟಲಂ ಪಾಯ್ – ? [ಕ್ರಿ] (ಆ ರಸತ್ತಾರುಗರ್ ಇಡುವ ಇಟ್ಟಿಯ ಪಿಡಿಕುತ್ತಿನ ಕಕ್ಕಡೆಯ ಕೋಳ್ಗೆ ಮರಪಟಲಂ ಪಾಯ್ದು: **ಪಂಪಭಾ**, ೧೨. ೬೦ ವ)

ಮರಮೊದಲ್ – [ನಾ] ಮರದ ಬುಡ (ಕಾರಿರುಳೊಳಗುರ್ವಂ ಪಡೆದಿರೆ ಮರವಾನಸನೆನೆ ತಪಸ್ವಿ ಮರಮೊದಲಿರ್ದಂ: **ಆದಿಪು**, ೬. ೩೨)

ಮರಲ್ – [ಅ] ಮತ್ತೆ ಮತ್ತೆ (ಏ ಚೋದ್ಯಮಿದೆಂದು ಮರಲ್ದು ಬಣ್ಣಿಸಿದರ್ ಇಂದ್ರನ ಕಾಂತೆಯರ್ ಅಂತರ್ವತ್ನಿಯನಾ ನೃಪಪತ್ನಿಯಂ: **ಆದಿಪು**, ೭. ೩೧); [ಅ] ಅಗಲವಾಗಿ, ಬಿಡಿಸಿ (ಕರಣಗಣಂ ಕುನುಂಗಿರೆ ಮನಂ ನೊಸಲಲ್ಲಿರೆ ಲೋಚನಗಣಂ ಉಳ್ಳರೆಮುಗುಟ್ಟಿಂಬಾಗಿರೆ ಕರದ್ವಯಪಲ್ಲವಂ ಅಂಕದೊಳ್ ಮರಲ್ದಿರೆ: **ಆದಿಪು**, ೧೦. ೧೪); [ಕ್ರಿ] ಉಬ್ಬು, ಸಂತಸಪಡು (ಇನಿಯಳನಟ್ಟಿಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ ಸೋಲ್ತಲಂಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ: **ಪಂಪಭಾ**, ೧. ೧೧೧); [ಕ್ರಿ] ಹಿಂದಿರುಗು (ನೆಱೆಗೊಳೆ ಗಾಡಿ ನೋಟ್ಪಿ ಬಗೆ ಬರ್ಪುದುಂ ಆನೆ ದಲಂದು ದಂತಿಯಂ ನಿಜೆಸಿ ಮರಲ್ದು ನೋಡುವುದುಂ: **ಪಂಪಭಾ**, ೪. ೭೬)

ಮರಲ್ಚು – [ಕ್ರಿ] ಹಿಂದಿರುಗಿಸು (ತೊಲಗದ ಜವ್ವನಂ ತವದ ಮೆಚ್ಚು ಮರಲ್ಚುವ ನೋಟಮಟ್ಟಿಯಂ ಸಲಿಸುವ ಭೋಗಂ: **ಆದಿಪು**, ೫. ೪೨)

ಮರವಡು – [ಕ್ರಿ] [ಮರ+ಪಡು] ಮರದ ಹಾಗೆ ಮಲಗು, ನಿಶ್ಚೇಷ್ಟಿತವಾಗು (ಅತ್ತ ಸುಭದ್ರೆಯುಂ ಒಡಲುರಿಯುತ್ತಿರೆ ಮರವಟ್ಟು ವಿಜಯನಿರ್ದತ್ತಲೆ ನೋಡುತ್ತಿರೆ: **ಪಂಪಭಾ**, ೪. ೫೪)

ಮರವಾನಸ – [ನಾ] ಮರದಿಂದ ಮಾಡಿದ ಮನುಷ್ಯನ ಗೊಂಬೆ (ಈ ಧರಣೀತಳಕ್ಕವಿವೇಕಿಯ ಮರವಾನಸನಿತ್ತ ಚಾಗಮೇನಿರ್ದಪುದೇ: **ಆದಿಪು**, ೬. ೫೦)

ಮರವಾನಸೆ – [ನಾ] ಮರದಿಂದ ಮಾಡಿದ ಹೆಣ್ಣಿನ ಗೊಂಬೆ (ಮಾನಸೆಯಣಮಲ್ಲಳಿಂತು ಮರವಾನಸೆಯಾಗಿಯುಂ ಆದುದೊಂದು ಮಾನಸಿಕೆ: **ಆದಿಪು**, ೧೨. ೩೮)

ಮರವಾಯ್ – [ಕ್ರಿ] [ಮರ+ಪಾಯ್] ಜೋರಾಗಿ ನುಗ್ಗು (ಮದಹಸ್ತಿಯಂತೆ ಮರವಾಯ್ವ ಪುಲಿಗಳಿನತಿ ಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು: **ಪಂಪಭಾ**, ೭. ೨೯ ವ)

ಮರವಿಲ್ – [ನಾ] ಮರದ ಬಿಲ್ಲು (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱೆ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ ದಳಿವದ ತೊಟ್ಟ ಅಂಗಿಗೆ ತನ್ನೊಳ್ ಅಮರೆ ಬೇಂಟೆಯನೊರ್ವಂ; **ಪಂಪಭಾ**, ೫. ೩೬)

ಮರಸರಿಗೆ – [ನಾ] ದೊಡ್ಡಚೆಂಬು, ಮರದ ಪಾತ್ರೆ (ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮಂ ಮರಸರಿಗೆವಿಡಿದು ಬಿಲ್ವಿಡಿದಾಡುವ ಬೂತಾಟಂಗಳುಮಂ ನೋಡಿ ಗಂಧೇಭವಿದ್ಯಾಧರಂ ಇಂತೆಂದಂ: **ಪಂಪಭಾ**, ೪. ೯೦ ವ)

ಮರಾಳ – [ನಾ] ಹಂಸ (ಸಮದಾರಾತಿಮರಾಳನೀರದರವಂ ಸಂಕ್ರುದ್ಧವೈವಸ್ವತೋಪಮ ವಿದ್ವಿಷ್ಟಫಣೀಂದ್ರಚಂದ್ರಕಿರವಂ: **ಆದಿಪು**, ೧೧. ೧೦)

ಮರೀಚ – [ನಾ] ಮೆಣಸು (ಕುಸುಂಭ ಕಾರ್ಪಾಸ ಸರ್ಷಪ ಮರೀಚ ಧಾನ್ಯಕಾದಿ ವಿವಿಧ ಧಾನ್ಯಭೇದಂಗಳ್: **ಆದಿಪು**, ೬. ೭೨ ವ) [ಎಲ್. ಬಸವರಾಜು ಅವರ ಆವೃತ್ತಿಯಲ್ಲಿ; **'ಮರೀಚ'**ದ ಬದಲು ಟಿವಿವೆಂ ಆವೃತ್ತಿಯಲ್ಲಿ **'ಜೀರಕ'** ಇದೆ]

ಮರೀಚಿ – [ನಾ] ಕಿರಣ, ಕಾಂತಿ (ಧ್ಯಾನಮರೀಚಿಯಿಂ ಬೆದಱಿ ಘಾತಿತಮಸ್ತಮಂ ಎಯ್ದೆ ಭವ್ಯಸಂತಾನಸರೋಜರಾಜಿಗೆ ಅಲರ್ವಾದರಮಾದಮಳುಂಬಮಾಗೆ: **ಆದಿಪು**, ೧೦. ೧೭)

ಮರುಚ್ಚಂಚಳಮನ – [ನಾ] [ಮರುತ್+ಚಂಚಳಮನ] ಗಾಳಿಯಂತೆ ಚಂಚಲಚಿತ್ತ[ವುಳ್ಳವನು] (ಖಳಂ ಪಂಚತ್ವಮನೈದಿ ಮರುಚ್ಚಂಚಳಮನಂ ಈಗಳಲ್ತೆ ವಾನರನಾದಂ: **ಆದಿಪು**, ೫. ೧೮)

ಮರುಜ್ಜವ – [ನಾ] [ಮರುತ್+ಜವ] ವಾಯುವೇಗ (ಜಯದ್ರಥನಂ ಇಕ್ಕು ಉಟಿದಾರೊಳಂ ತೊಡಂಕವೇಡ ಎನಿತುಂ ಅಜಂ ಮರುಜ್ಜವದೆ ಚೋದಿಸೆ: **ಪಂಪಭಾ**, ೧೧. ೧೪೫)

ಮರುತ್ – [ನಾ] ಗಾಳಿ (ಲಸದ್ಗಾಂಧಾರನಾದಂ ಪ್ರಭಾತ ಮರುತ್ ಸುಂದರ ಮಂದಮಂದಗಮನ ಶಂಖಸ್ವನಂ ಪೂರ್ವದಿಗ್ರಮಣೀವಕ್ತ್ರಸರೋಜರಾಗಮಯಂ: **ಆದಿಪು**, ೧೨. ೪೮)

ಮರುತ್ತನೂಜ – [ನಾ] [ಮರುತ್+ತನೂಜ] ಮರುತನ ಮಗ, ಭೀಮ (ಮುನ್ನಡಯೊಳ್ ಉರುಳ್ದರ್ ಅಂಧನೃಪನಂದನರ್ ಅಂದು ಮರುತ್ತನೂಜನಾ: **ಪಂಪಭಾ**, ೧೧. ೧೪೨)

ಮರುತ್ತ್ರಿಕ – [ನಾ] [ಜೈನ] ಮೂರು ಬಗೆಯ ವಾಯುಗಳು: ಘನೋದಧಿ, ಘನವಾತ ಮತ್ತು ತನುವಾತಗಳು (ಅದು ಅನಾದಿ ಅನಿಧನಯುತಂ ಅದು ಅಕೃತ್ರಿಮಂ ಅದು ಮರುತ್ತ್ರಿಕಾವೇಷ್ಟಿತಂ: **ಆದಿಪು**, ೧. ೪೪)

ಮರುತ್ಸುತ – [ನಾ] ಮರುತನ ಮಗ, ಭೀಮ (ಮರುಳ್ಗೆ ಧೂಪಮಂ ತೋಱಿದ ಮಾಟಕ್ಕೆಯಿಂ ದ್ರುಪದರಾಜಸುತಾವಚನಂಗಳಲ್ಲಿ ಮೆಯ್ದೋಱಿ ಮರುತ್ಸುತಂ ನುಡಿದಂ ಆ ಸಭೆಯೊಳ್ ನವಮೇಘನಾದದಿಂ: **ಪಂಪಭಾ**, ೭. ೧೧); [ನಾ] ಹನುಮಂತ (ಬಾಲಮಂ ಸಲೆ ಮುರಿದು ಎತ್ತಲಾಟಿಸೆ

ಧರಿತ್ರಿಗೆ ಕೀಲಿಸಿದಂತುಟಾಗೆ ದೋರ್ವಲದ ಪೊಡರ್ಪುಗೆಟ್ಟು ನಡೆ ನೋಡಿ ಮರುತ್ಸುತಂ ಮರುತ್ಸತನಂ: **ಪಂಪಭಾ,** ೮. ೩೨)

ಮರುದಾತ್ಮಜ – [ನಾ] ಮರುತನ ಮಗ, ಭೀಮ (ಪಿಡಿವ ಗುರ್ದುವ ಮನೆಗೆಟಿಕೆವನಿತರ್ಕಮಲಸಿ ಮರುದಾತ್ಮಜನಾ: **ಪಂಪಭಾ,** ೨. ೬)

ಮರುದ್ವೃತ – [ನಾ] ದೇವತೆಗಳಿಂದ ಆವೃತನಾದ (ಲೋಕಾಕಾರಮಂ ಅಭಿನಯಿಪಾಕಾರಂ ನೆಗಟಿ ನಿಂದು ವೈಶಾಖಸ್ಥಾನ ಆಕಾರದೊಳ್ ಮರುದ್ವೃತನಾ ಕುಳಿಶಾಯುಧನದೊಂದು ಚೆಲ್ವಂ ಪಡೆದಂ: **ಆದಿಪು,** ೭. ೧೧೬)

ಮರುನ್ನಂದನ – [ನಾ] [ಮರುತ್+ನಂದನ] ವಾಯುವಿನ ಮಗ, ಭೀಮ (ಅಂತು ಗುರುನಂದನಂ ಮರುನ್ನಂದನವಿರಚಿತ ನಿಶಾತವಿಶಿಖಪಂಜರಮನಟಿದು ಕಟಕುಟಿಂ ಮಾಡಿಯುಂ ಅನಿತಱೊಳ್ ಮಾಣದೆ: **ಪಂಪಭಾ,** ೧೨. ೬೮ ವ)

ಮರುಮರೀಚಿಕಾ – [ನಾ] ಬಿಸಿಲುಗುದುರೆ (ಎಂತು ಮರುಮರೀಚಿಕಾ ಸ್ವಪ್ನೇಂದ್ರಜಾಲಾದಿಗಳೊಳ್ ವಿಶದದರ್ಶನಾವಗಮ್ಯ ಜಲಕರಿತುರಗನರಾದಿಗಳ್: **ಆದಿಪು,** ೨. ೯ ವ)

ಮರುವ – [ನಾ] ಮರುಗ (ಪರಿಮಳಿತಸೌಂದರಂ ಬಂಧುರಗಂಧಂ ಮದನರಾಗವರ್ಧನಕರಮೀ ಮರುವಂ: **ಆದಿಪು,** ೧೧. ೧೨೭)

ಮರುಸ್ಥಳ – [ನಾ] ಮರುಭೂಮಿ (ಮರುಸ್ಥಳದ ಮಾಳದೊಳ್ ನಡುಪಗಲ್ವರಂ ಗ್ರೀಷ್ಮದೊಳ್ ಸುರುಳ್ವಿನೆಗಮಟ್ವಿ ಬೇವವರ್ಗೆ ಜೊಂಪಂ ಇಮ್ಮಾವು ನಿರ್ಝರಾಂಬು ದೊರೆಕೊಳ್ವವೊಲ್: **ಆದಿಪು,** ೧೩. ೮೬)

ಮರುಳ್ – [ಕ್ರಿ] ಮೋಹಗೊಳ್ಳು (ಮರುಳಿಸಲ್ತಾನಾರ್ತುಂ ಅತ್ಯಂತ ಸೌಂದರಕಾಂತಾಜನಮಂ ಮರುಳ್ದುದಣಮಿಲ್ಲ ಅಂತಾಕೆಗಳ್ಗೆ: **ಆದಿಪು,** ೮. ೫); [ನಾ] ಪಿಶಾಚಿ (ಆಡುವ ಮರುಳ್ಗಳಂ ನಡೆನೋಡಿದುದಱಿನಿಂತು ಕನಸಿನೊಳ್ ಮಕ್ಕಳ್ಗಂ ಕೂಡೆ ಪೆಸರಿಟ್ಟು ಸಲೆ ಕೊಂಡಾಡಿದಪರ್ ವ್ಯಂತರರ್ಕಳಂ ಜಡಮತಿಗಳ್: **ಆದಿಪು,** ೧೫. ೩೯)

ಮರುಳ – [ನಾ] ದಡ್ಡ (ಸರೋಜಾತಾದಿ ನಿಸ್ಸಾರವಸ್ತುಗಳೊಳ್ ಪೋಲಿಸುವಂತುಟೇಂ ಮರುಳನೇ ರೂಪಂ ವಿಚಿತ್ರಾಂಗಿಯಾ: **ಆದಿಪು,** ೬. ೮೫); [ನಾ] ಹುಚ್ಚ (ಪರಪಿನ ನೀಳದ ಕಡೆಯಂ ಮರುಳಂ ತವೆ ನೋಡಲಾಱದೆ ಅಂಬರತಳಮಂ ಕರಿದೆಂಬಂತಿರೆ ನಿನ್ನಂ ನರನೆಂಬುದೆ: **ಪಂಪಭಾ,** ೬. ೨೦)

ಮರುಳಾಗು – [ಕ್ರಿ] ಬುದ್ಧಿಗೇಡಿಯಾಗು (ಮರುಳಾಗದೆ ಎನ್ನ ನುಡಿಗುತ್ತರಮಂ ಮುನ್ನಿತ್ತು ಕುಡಿಯೆ ಕಜ್ಜಂ ನಿನಗೆ: **ಪಂಪಭಾ,** ೮. ೪೭)

ಮರುಳಾಟ – [ನಾ] ಪಿಶಾಚಿಗಳ ಕಾಟ (ಕೊಳ್ಗುಳದೊಳ್ ಮರುಳಾಟವಾಡುವಾಂ ಮರುಳೆನೊ ವಿಕ್ರಮಾರ್ಜುನನೊಳೊಲ್ಲದೆ ಸಂದಿಯನುರ್ಕಿ ಕೆಟ್ಟ ನೀಂ ಮರುಳಯೋ ಪೇಟಿ: **ಪಂಪಭಾ,** ೧೩. ೫೫)

ಮರುಳಿ – [ನಾ] ತಿಳಿವಳಿಕೆಯಿಲ್ಲದವಳು (ಬರಿಸಿದ ಕಾರಣಮಾವುದೊ ತರುಣಿ ಮುನೀಶ್ವರನ ಮಂತ್ರಮೇದೊರೆಯೆಂದಾಂ ಮರುಳಿಯೆನೆ ಅಱಿದುಮಱಿಯದೆ ಬರಿಸಿದೆಂ ಇನ್ನೇಟಿಮೆಂದೊಡಾಗದು ಪೋಗಲ್: **ಪಂಪಭಾ,** ೧. ೯೩)

ಮರುಳಿಸು – [ಕ್ರಿ] ಮೋಹಗೊಳಿಸು (ಮರುಳಿಸಲ್ತಾನಾರ್ತುಂ ಅತ್ಯಂತ ಸೌಂದರಕಾಂತಾಜನಮಂ ಮರುಳ್ದುದಣಮಿಲ್ಲ ಅಂತಾಕೆಗಳ್ಗೆ: **ಆದಿಪು,** ೮. ೫);

ಮರುಳುಂಟಕ್ಕುಂ – ದೆವ್ವ ಒಳಹೊಕ್ಕಿರಬೇಕು (ಈ ಪಾರ್ವಂಗಕ್ಕಟ ಮೆಯ್ಯೊಳೊಂದು ಮರುಳುಂಟಕ್ಕುಂ: **ಪಂಪಭಾ,** ೩. ೬೨)

ಮರುಳೆನೊ – [ಮುರುಳೆಂ+ಒ] ದಡ್ಡನಾಗಿರುವೆನೊ (ಆಂ ಮರುಳೆನೊ ವಿಕ್ರಮಾರ್ಜುನನೊಳ್ ಒಲ್ಲದೆ ಸಂಧಿಯಂ ಉರ್ಕಿನಿಂ ಕೆಟ್ಟ ನೀಂ ಮರುಳೆಯೊ: **ಪಂಪಭಾ,** ೧೩. ೫೫)

ಮರುಳೆಯೊ – ದಡ್ಡನಾಗಿದ್ದೀಯೋ? (ಆಂ ಮರುಳೆನೊ ವಿಕ್ರಮಾರ್ಜುನನೊಳ್ ಒಲ್ಲದೆ ಸಂಧಿಯಂ ಉರ್ಕಿನಿಂ ಕೆಟ್ಟ ನೀಂ ಮರುಳೆಯೊ: **ಪಂಪಭಾ,** ೧೩. ೫೫)

ಮರುಳ್ಗೊಳ್ – [ಕ್ರಿ] ಪೆಚ್ಚಾಗು (ಅಂತು ಗಗನತಳಕುಸುಮಮನೆ ಬಯಸಿ ಮರುಳ್ಗೊಂಡ ಮರುಳನಂತೆ: **ಆದಿಪು,** ೩. ೧೧ ವ); [ಕ್ರಿ] ಸಡಗರಿಸು (ಜಾತಕರ್ಮೋತ್ಸವದೊಳ್ ಪರಿಜನಮುಂ ಪುರಜನಮುಮೊಸಗೆ ಮರುಳ್ಗೊಂಡು ನಿರ್ಭರಕ್ರೀಡಾರಸ ಪರವಶರಾದರ್: **ಆದಿಪು,** ೭. ೧೧೨ ವ); [ಕ್ರಿ] ಭ್ರಾಂತಿಗೊಳ್ಳು (ಪುಸಿ ನನ್ನಿಯೆಂದಱಿಯದೆ ಅದೇಂ ಲೋಕಂ ಮರುಳ್ಗೊಂಡುದೋ: **ಆದಿಪು,** ೮. ೭೩); [ಕ್ರಿ] ಹುಚ್ಚಾಗು (ಮೆಯ್ಗೊಂಡ ಒಲವಿಂದೆ ಅಗಲ್ಕೆಗೆ ಅಣಂ ಆಱದೆ ಪಕ್ಕಿಗಳೆಲ್ಲಮಂ ಮರುಳ್ಗೊಂಡವೊಲ್ ಊಳ್ದು ಕೂಡೆ ಬೆಸಗೊಂಡು ಬಟಲ್ದುವು ಜಕ್ಕವಕ್ಕಿಗಳ್: **ಪಂಪಭಾ,** ೪. ೪೮)

ಮರುಳ್ಚು – [ಕ್ರಿ] ಮರುಳು ಮಾಡು, ಆಕರ್ಷಿಸು (ಕರಂ ಒಡಂಬಡೆ ನೋಟಕರ್ಕಳಂ ಆ ತಪಸ್ವಿ ಮರುಳ್ಚಿದಂ: **ಪಂಪಭಾ,** ೬. ೮)

ಮರುಳ್ದು – [ಗು] ಮರುಳಾಗಿ, ಮೋಹಗೊಂಡವಳಾಗಿ (ಎರೆದಿಂತಟ್ಟಲೆವೇಟ್ಟ ಕನ್ನೆ ಬಟಿಯಂ ಬಂದಳ್ ಮರುಳ್ದು ಅಂಬುಜೋದರನಿಂತಟ್ಟಿದಂ: **ಪಂಪಭಾ,** ೫. ೨೪)

ಮರುಳ್ಮಾಡು – [ಕ್ರಿ] ಮೋಹಗೊಳಿಸು (ಕಾಮದೇವನಯ್ದರಲಂಬಿನ ಶಕ್ತಿಗಳುಮನೊಂದು ಮಾಡಿ ಲೋಕಮೆಲ್ಲಮಂ ಮರುಳ್ಮಾಡಲೆಂದು ಪೆಣ್ಮಾಡಿದನಕ್ಕುಂ: **ಪಂಪಭಾ,** ೪. ೭೫ ವ)

ಮರುಳ್ಮಾತು – [ನಾ] ಬುದ್ಧಿಗೇಡಿ ಮಾತು (ಮರುಳ್ಮಾತಂ ಇನ್ನುಟಿ ಗಾಂಗೇಯರ ಪೇಟ್ದುದೊಂದು ತೆಱದಿಂ ನೀಂ ಕಾದು ದುರ್ಯೋಧನಾ: **ಪಂಪಭಾ,** ೧೦. ೫)

ಮರೆ – [ನಾ] ಹುಲ್ಲೆ (ಅಡಂಗಿ ಪರಿವ ಪುಲಿಗಳುಮಂ ಸೋಂಕಿ ಪರಿವ ಎಯ್ಗಳುಮಂ ತಡಂಮೆಟ್ಟಿ ಪರಿವ ಕಡವಿನ ಕಾಡೆಮ್ಮೆಯ ಮರೆಯ ಪಿಂಡುಗಳುಮಂ: **ಪಂಪಭಾ,** ೫. ೪೮ ವ)

ಮರ್ತ್ಯ – [ನಾ] ಭೂಮಿಯವರು (ಮರ್ತ್ಯ ವಿದ್ಯಾಧರ ವ್ಯಂತರಾಧೀಶ್ವರ ಕರಸರಸಿಜಂಗಳಂ ವಕ್ತ್ರಚಂದ್ರ ಸ್ಫುರಿತೋದ್ಯತ್ಕಾಂತಿ ನಿಚ್ಚಂ ಮುಗಿಯಿಸೆ: **ಆದಿಪು,** ೩. ೪೬)

ಮರ್ದು – [ನಾ] ಔಷಧ (ಭವದವಾಗ್ನಿಯೊಳ್ ಬೇವ ಜೀವರಾಶಿಗೆ ಭವದ್ವಚೋಮೃತಮೆ ಮರ್ದು ಅನಂಗಾಂತಕಾ: **ಆದಿಪು**, ೧೩. ೮೬)

ಮರ್ದುಬೆಜ್ಜ – ಔಷಧವನ್ನು ಬಲ್ಲ ವೈದ್ಯ (ಎರಡುಂ ಪಡೆಯ ನಾಯಕರ್ ಅಱಿಯೆ ನೊಂದ ತಮ್ಮ ಅಣುಗಾಳ್ಗಳ ಕೊಂಡಾಟದಾನೆಗಳ ನಚ್ಚಿನ ಕುದುರೆಗಳ ಪುಣ್ಗಳಂ ಉಡಿಯಲುಂ ಓವಲುಂ ಮರ್ದುಬೆಜ್ಜರುಮಂ ಅಟ್ಟುತ್ತುಂ: **ಪಂಪಭಾ**, ೧೧. ೨ ವ)

ಮರ್ಬು – [ನಾ] ಮಬ್ಬು, ಕತ್ತಲೆ (ಒದವಿದ ಚಿಂತೆ ಪೆರ್ಚೆ ಪಸಿವಿಲ್ಲದೆ ಮರ್ಬೆರ್ದೆಯುರ್ಬೆ ನಿದ್ರೆಯಿಲ್ಲದೆ ಬಗೆ ಬೆರ್ಚೆ ಬುದ್ಧಿಯಣಮಿಲ್ಲದೆ: **ಆದಿಪು**, ೧೨. ೨೨)

ಮರ್ಮಜ್ಞಂ – [ನಾ] ರಹಸ್ಯಗಳನ್ನು ಬಲ್ಲವನು (ಸ್ವಾಮ್ಯಾರ್ಥಂ ಸ್ವಾಮ್ಯವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಥರಾಜ್ಯಹರಂ ಭೃತ್ಯಂ ಯೋನ ಹನ್ಯಾನ್ಸಹನ್ಯತೇ: **ಪಂಪಭಾ**, ೨. ೯೦ ಶ್ಲೋಕ)

ಮರ್ಯಾದಾವಿಪ್ರತಿಪತ್ತಿ – [ನಾ] ಗಡಿವಿವಾದ (ಆಜ್ಞೆಯ ಕುಳಧರಂ ಪುಟ್ಟಿ ಮರ್ಯಾದಾವಿಪ್ರತಿಪತ್ತಿಯಿಂದಂ ಊಳ್ವ ಆರ್ಯಜನಕ್ಕೆ ಆಘಾಟಶುದ್ಧಿಯಂ ಮಾಡಿ: **ಆದಿಪು**, ೬. ೫೭ ವ)

ಮರ್ವು – [ನಾ] ಮಂಕು (ಒದವಿದ ಚಿಂತೆ ಪೆರ್ಚೆ ಪಸಿವಿಲ್ಲದೆ ಮರ್ಬೆರ್ದೆಯುರ್ಬೆ ನಿದ್ರೆಯಿಲ್ಲದೆ ಬಗೆ ಬೆರ್ಚೆ: **ಆದಿಪು**, ೧೨. ೨೨)

ಮಲಂಗು – [ಕ್ರಿ] ಅಡ್ಡಲಾಗು, ನಿದ್ರಿಸು (ನೀಡಿ ಕಾಲನರೆಬರ್ ಮಲಂಗಿದರ್ ಪೊಳೆವ ತಳಿರ ಬೊಂದರಿಗೆಗಳೊಳ್: **ಆದಿಪು**, ೧೧. ೭೮)

ಮಲಧಾರಿ – [ನಾ] [ಜೈನ] ಸನ್ಯಾಸಿ (ಎಮಗೆ ಮಲಧಾರಿ ಸಿದ್ಧಾಂತಮುನೀಶ್ವರಚರಣಸರಸೀರುಹಮಂ .. .. ಜಯನಂದಿ ಮುನಿಕ್ರಮಕಮಳಮೀಗೆ ಬೋಧೋದಯಮಂ: **ಆದಿಪು**, ೧. ೧೩)

ಮಲಯಜ – [ನಾ] ಶ್ರೀಗಂಧ (ಮಲಯಜರಸಲುಳಿತ ಕದಳೀದಳವ್ಯಜನ ಮಂದಮಾರುತ ಆಂದೋಳನದಿಂದೆ ಎಂತಾನುಂ ಮೂರ್ಛೆಯಿಂದೆಚ್ಚರಿಸಿ: **ಆದಿಪು**, ೩. ೨೩ ವ)

ಮಲಯಾನಿಲ – [ನಾ] ಸುಗಂಧಪೂರಿತ ತಂಗಾಳಿ (ಪೊದಳ್ದ ಬಲ್ಮುಗುಳ್ಗಳ ತಂದಲಂದು ಕವಿತಂದುದು ಅದಂ ತನಿಸೋಂಕುಸೋಂಕಿ ಮೆಲ್ಲಗೆ ಮಲಯಾನಿಲಂ ಸುಟಿದೊಡೆ ಅಂದು ಜಗಂ ಪೊಸತಾದುದು: **ಪಂಪಭಾ**, ೧೪. ೧೯)

ಮಲರ್ – [ಕ್ರಿ] ಅರಳು, ವಿಕಸಿಸು (ಈಕೆಯ ಮುಖೇಂದುಬಿಂಬದಿನೀ ಕನಕಸರೋಜಮೆಂತು ಮಲರ್ದತ್ತು: **ಆದಿಪು**, ೭. ೭)

ಮಲರಹಿತ – [ನಾ] ನಿರ್ಮಲ, ಪರಿಶುದ್ಧನಾದವನು (ಭೂತಲಪತಿ ಬಟೆಯಟ್ಟಿ ಬರಿಸೆ ಪೆಱತೊಂದೆಡೆಯೊಳ್ ಮಲರಹಿತರ್ ಬಂದು ಧರಾಲಲನಾಧೀಶಂಗೆ ವಿನತಮಸ್ತಕರಾದರ್: **ಆದಿಪು**, ೧೫. ೧೦)

ಮಲಿನ – [ಗು] ಮಸಿಯಾದ, ಮಾಸಿದ (ಒಂದು ಕಾಳಾಗರು ಧೂಪಧೂಮಮಲಿನ ಶ್ಯಾಮಲಾಲಂಕೃತ ವಿಚಿತ್ರಭಿತ್ತಿವಿರಾಜಿತ ಹರ್ಮ್ಯತಳದೊಳ್: **ಪಂಪಭಾ**, ೪. ೧೦೮ ವ); [ನಾ] ಕಳಂಕ, ದೋಷ (ಶಂಖದೊಳ್ ಪಾಲೆಱೆದಂತಿರೆ ಮಲಿನಮಿಲ್ಲದ ಒಳ್ಗುಲದ ಅರಸುಗಳಿರೆ ನೀನುಂ ಅಗ್ರಪೂಜೆಯಂ ಆಂಪಾ: **ಪಂಪಭಾ**, ೬. ೫೦)

ಮಲೆ – [ನಾ] ಬೆಟ್ಟಸೀಮೆ (ಮಲೆಯುಂ ಮಂಡಲಮುಂ ಬೆಳರ್ಚುವಂತು ಕೊಂಡಾಡುವ ನಾಲ್ವರುಮನುಜರೊಳಗೆ ನೆಗೞ್ದರಿಗನ ತೇಜಮೆ ತೊಳಗಿ ಬೆಳಗೆ: **ಪಂಪಭಾ**, ೪. ೧೦); [ಕ್ರಿ] ಗರ್ವಿಸು (ಅದಿರದಿದಿರ್ಚಿ ತಳ್ತಿಱಿಯಲ್ ಈ ಮಲೆದೊಡ್ಡಿದ ಚಾತುರಂಗಬಲಮೆಂಬುದು ನಿನಗೊಡ್ಡಿ ನಿಂದುದು: **ಪಂಪಭಾ**, ೧೦. ೬೪)

ಮಲೆತರ್ – [ಕ್ರಿ] ಸೊಕ್ಕು (ಪುಲ್ಲೆಗಾಟಿಸಿ ಮಲೆತರ್ಪರಲೆಯ ಸೋಲಮನಟ್ಟೆಯೊಳರಿಕೇಸರಿನಿಂದು ನೋಟ್ಟುದೊಂದರಸಲ್ತೇ: **ಪಂಪಭಾ**, ೫. ೪೪)

ಮಲೆದುದು – [ನಾ] ಕೆರಳಿರುವುದು (ಮಲೆಯದುದಂ ಮಲೆಯಿಸಲುಂ ಮಲೆದುದಂ ತೊಲಗಿಸಲುಂ ನಂಬದುದಂ ನಂಬಿಸಲುಂ ನಂಬಿದುದಂ ಬಿಡಿಸಲುಂ: **ಪಂಪಭಾ**, ೫. ೪೩ ವ)

ಮಲೆಪರ್ – [ನಾ] ಬೆಟ್ಟಸೀಮೆಯ ಅರಸುಗಳು (ಮಲೆಪರ್ ಮಂಡಳಿಕರ್ ಕಱುಂಬರ್ ಅದಟರ್ ವೀರರ್ಕಳುಂ ತಮ್ಮ ಬಾೞ್ದಲೆಯಂ ಬೇಡಿದ ವಸ್ತುವಾಹನಮುಮಂ ಮುಂದಿಟ್ಟು **ಪಂಪಭಾ**, ೯. ೧೦); [ನಾ] ಅಹಂಕರಿಸುವವರು (ಮಲೆಪರ್ಗಭಿಚಾರಕ್ರಿಯೆ ವಲಮೆನಿಸಲ್ ಚಕ್ರಪೂಜನಂ ಸಕಳಮಹೀವಳಯಕ್ಕೆ ಶಾಂತಿಕರ್ಮಂ ವಲಮೆನಿಸಲ್ ಜಾತಕರ್ಮಮೇಂ ನೆಱೆದತ್ತೋ: **ಆದಿಪು**, ೧೧. ೫)

ಮಲೆಪು – [ನಾ] ಸೊಕ್ಕು (ಅಲರ್ದರೆಗಟೆಗೆಯೆ ಜಾದಿಯ ಮಲೆಪುಂ ಮಲ್ಲಿಗೆಯ ಪೊಂಕಮುಂ ಬಟೆಕವಂ ಆರ್ ತಲೆಯೊಳ್ ತಾಳ್ದುವರ್: **ಆದಿಪು**, ೧೧. ೧೨೨)

ಮಲೆಯದುದು – [ನಾ] ಕೆರಳದಿರುವುದು (ಮಲೆಯದುದಂ ಮಲೆಯಿಸಲುಂ ಮಲೆದುದಂ ತೊಲಗಿಸಲುಂ ನಂಬದುದಂ ನಂಬಿಸಲುಂ ನಂಬಿದುದಂ ಬಿಡಿಸಲುಂ: **ಪಂಪಭಾ**, ೫. ೪೩ ವ)

ಮಲ್ಲ – [ನಾ] ಜಟ್ಟಿ (ಮಲ್ಲಂ ವಿಷಖರ್ಪರನೆಂಬಂ ತನ್ನ ಮಲ್ಲರೆಲ್ಲರುಮಂ ಕೊಂದೊಡೆ: **ಪಂಪಭಾ**, ೮. ೫೭ ವ)

ಮಲ್ಲಂತಿಗೆ – [ನಾ] [ಮಲ್ಲವಸ್ತ್ರಿಕಾ] ಮಲ್ಲರು ಧರಿಸುವ ಬಟ್ಟೆ (ಸಾಹಸಭೀಮಂ ಮಲ್ಲಂತಿಗೆಯನಪ್ಪೊಡಂ ಸಡಿಲಿಸದವನಂ ಅವಯವದೊಳಿಂತೆಂದಂ: **ಪಂಪಭಾ**, ೩. ೧೬ ವ)

ಮಲ್ಲಮೇಷ – [ನಾ] ಹೋರಾಟದ ಟಗರು (ಕರಿಕರೋದ್ಧೂತ ಧೂಳೀವಿಳಾಸ ಪಾಂಸುಕೇಳಿಯಿಂದಂ ಮಲ್ಲಮೇಷೋದ್ಧತ ರಾಜದಾರಕನಿಯುದ್ಧದಿಂದಂ: **ಆದಿಪು**, ೮. ೫೦ ವ)

ಮಲ್ಲಾಮಲ್ಲಿ – [ನಾ] ಮಲ್ಲರ ದ್ವಂದ್ವಯುದ್ಧ, ಸ್ಪರ್ಧೆ (ಘಟೋತ್ಕಚಾದಿಗಳೊಡನೆ ಮಲ್ಲಾಮಲ್ಲಿಯಾಗಿ ಕಾದುವ ಕುಂಭಸಂಭವನಲ್ಲಿಗೆ ದುರ್ಯೋಧನಂ ಬಂದು: **ಪಂಪಭಾ**, ೧೧. ೯೬ ವ)

ಮಶಕ – [ನಾ] ಸೊಳ್ಳೆ (ದಿವ್ಯಾಸ್ತ್ರಂಗಳಿಂ ನೂಱುಯೋಜನದಳವಿಯ ಖಾಂಡವವನಮೆಲ್ಲಮಂ ತಟ್ಟಿ ಮೆಡಱೆ ಮಶಕಮಾತ್ರಮಪ್ಪೊಡಂ ಮಿಸುಕಲ್ ಛಿದ್ರಮಿಲ್ಲದಂತಾಗೆ: **ಪಂಪಭಾ**, ೫. ೯೬ ವ)

ಮಷಿ – [ನಾ] ಲೇಖನಿಕರ್ಮ, ಓದಿ ಬರೆಯುವುದು (ಸೇವಾಧರ್ಮೋಚಿತಮೆನಿಸುವ ಅಸಿಕರ್ಮಮುಮಂ ಅನೇಕ

ಲಿಪಿವಿಧಾನಂಗಳಪ್ಪ ಮಷಿಯುಮಂ ಕೃಷೀವಲ ಕುಲೋಚಿತಮಪ್ಪ ಕೃಷಿಯುಮಂ: **ಆದಿಪು,** ೮. ೬೪ ವ)

ಮಸಕ – [ನಾ] ತೀಕ್ಷ್ಣತೆ (ಕುಸುಮಿಸಿದ ಕುಸುಮದೆಸಳ ಮಿಸುಗುವ ಪೊಸವಸೆಯೊಳಸದಳಮೆಸೆಯೆ ಪಸರಿಸಿ ಪೊಸಯಿಸಿದ ಪೊಸಸುಸಿಲ ಮಸಕದ ಬಸದೊಳೆ: **ಆದಿಪು,** ೪. ೧೨ ವ); **[ನಾ]** ಉತ್ಕಂಠೆ (ಸಪ್ತಚ್ಛದಗಂಧಮನೀ ವನೇಭಮಾಘ್ರಾಣಿಸಿ ಪೆರ್ಚಿದ ಮಸಕದಿಂದೆ ಪಾಯಲ್ಕದಿರ್ಪುಗೆಯ್ದಪ್ಪದುದು ನೋಡ ವನವೇದಿಕೆಯಂ: **ಆದಿಪು,** ೧೧. ೬೪); **[ನಾ]** ಉತ್ಸಾಹ (ದೆಸೆಗಳ ಸಂದಂ ಪಡೆದಾಗಸದಿಂದಂ ಪತ್ತುವಿಡಿಸುವಂತೆವೊಲಿಳೆಯಂ ಮಸಕದೊಳೆ ಪೊತ್ತು ನೆಗೆದವೊಲೆಸೆದುವು ದಿಗ್ವಿಜಯ ಭೂರಿಭೇರೀನಿನದಂ: **ಆದಿಪು,** ೧೨. ೫೪); **[ನಾ]** ಆಧಿಕ್ಯ (ಮಕ್ಕಳ್ ಒಸಗೆಯಂ ಈವುದು ನಿನ್ನೆಸಕದ ಮಸಕಮನೆ ಪೋಲ್ವ ಮಗನಂ ಮಘವಾ: **ಪಂಪಭಾ,** ೧. ೧೩೯); **[ನಾ]** ರಭಸ (ಮಸಕಂ ಕಾಯ್ಪು ಜವಂ ಜವಂಗಂ ಇದಿರೊಳ್ ನೋಡಲ್ಕಗುರ್ವಾಗೆ ಮಾಂದಿಸಿಂ ಈ ವಂದುದು ಕೊಂದುದು ಎಂದು: **ಪಂಪಭಾ,** ೮. ೩೭); **[ನಾ]** ತೀವ್ರತೆ (ಉರುಳೆ ಸೂತಂ ಉಡಿಯೆ ರಥಂ ಕೀಲಿಸೆ ಕುದುರೆ ಮುಜಿಯೆ ಪಟಿವಿಗೆ ಮಸಕದಿಂ ಎಚ್ಚೆಚ್ಚಂ ಒಂದೆ ಸರಲೊಳ್ ನೊಸಲಂ: **ಪಂಪಭಾ,** ೧೦. ೯೯)

ಮಸಗು – [ಕ್ರಿ] ವಿಜೃಂಭಿಸು (ಮಸಗಿ ಚಿಳಾತಾವರ್ತರ ಬೆಸದಿಂದಂ ಬಂದ ಮೇಘಮುಖರಂ ತೂಳ್ದೋಡಿಸೆ: **ಆದಿಪು,** ೧೪. ೫೮); **[ಕ್ರಿ]** ರೇಗು, ಕೋಪಗೊಳ್ಳು (ಕಾಟ್ಟುಱು ಮಸಗಿದಂತೆ ಮಸಗಿದ ದುರ್ಧರ ಧನುರ್ಧರಬಲಮುಮಂ ಶ್ವೇತ ಭೀಷ್ಮರ ಪೇಟ್ದಿ ಓಜೆಯೊಳೆರಡುಂ ಪಡೆಗಳ ಪಡೆವಳರ್ಕಳ್: **ಪಂಪಭಾ,** ೧೦. ೫೧ ವ)

ಮಸಿ – [ನಾ] ಕಾಡಿಗೆ (ಸಂಪಗೆಯಂ ಮುಡಿಯೆ ಸೊಗಯಿಸದದಿರ್ಮುತ್ತೆಯಲರಂ ಮಸಿಯೊಳೆ ಸವನಾದ ಗೊಜ್ಜಗೆಯಂ: **ಆದಿಪು,** ೧೧. ೧೦೯)

ಮಸುರಿಗೆ – [ನಾ] ದಿಂಬು (ಅಲರ ಮಸುರಿಗೆಯೊಳುಸಿರ್ದುಳ್ಳಲರ್ದಡ್ಡಂ ನಿಮಿರ್ದ ಲತೆಯ ಮೇಲೆ ವಿಳಾಸಂ ನಿಲೆ ನೀಡಿ ಕಾಲಂ ಅರೆಬರ್ ಮಲಂಗಿದರ್: **ಆದಿಪು,** ೧೧. ೭೮)

ಮಸುಳ್ – [ಕ್ರಿ] ಮಂಕಾಗು (ಮಣಿಮಕುಟಂ ಅಸವಸದಿಂದಂ ಚಕ್ರಿಯ ಪೊದಳ್ದ ತೇಜಕ್ಕೆ ಮಸುಳ್ದು: **ಆದಿಪು,** ೧೩. ೧೪); **[ಕ್ರಿ]** ಕಳೆಗುಂದು (ಬೆಸಸಿದೊಡೆ ಅದು ಮಾರ್ಕೊಳ್ಳದೆ ಬೆಸನಂ ಬಲವಂದು ಬಾಹುಬಲಿಯಂ ಅಣಂ ಭೇದಿಸಲಾಱದುದಱಿಂ ಇರ್ದುದು ಮಸುಳ್ದೆಸಕಂಗೆಟ್ಟು ಬಲದ ಮುಯ್ಪಿನ ಕೆಲದೊಳ್: **ಆದಿಪು,** ೧೪. ೧೧೭)

ಮಸುಳ – [ನಾ] ಕಪ್ಪಗಿರುವವನು (ಕವಿದ ಮದಾಳಿಯಿಂ ಮಸುಳನಾಗಿ ಪಯೋಜರಜಂಗಳೊಳ್ ಕವಿಲ್ಗವಿಲನುಮಾಗಿ ಬಂದ ಮಲಯಾನಿಲಂ: **ಪಂಪಭಾ,** ೨. ೧೪)

ಮಸುಳೆವರ್ – [ಕ್ರಿ] ಮಾಸಿಹೋಗುವಂತೆ ಮಾಡು (ಕುಳಾಚಳ ಶಿಖರಂಗಳಂ ಮಸುಳೆವಂದುವು ಪರ್ವಿದ ವಕ್ಷಮೀ ಕ್ಷಮಾತಳ ಕುಳಲಕ್ಷ್ಮಿಗಾಯ್ತು ಕುಳಮಂದಿರಂ: **ಪಂಪಭಾ,** ೨. ೩೭)

ಮಸೂರಿಕಾ – [ನಾ] ಕಡಲೆಕಾಳು (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರ ತಿಳ ಅತಸಿ ಮಸೂರಿಕಾ: **ಆದಿಪು,** ೬. ೭೨ ವ)

ಮಸೃಣ – [ಗು] ಮೆತ್ತನೆಯ, ನಯವಾದ (ಅತಿ ಮಸೃಣಘಸೃಣ ಗೋಶೀರ್ಷ ಚಂದನ ಅಗುರು ಕರ್ಪೂರಸಂಮಿಶ್ರಿತ ಸುರಭಿಗಂಧಂಗಳಿಂದಂ: **ಆದಿಪು,** ೨. ೩೨ ವ)

ಮಸೃಣಿತ – [ಗು] ಹೊಳಪಾದ, ನಯವಾಗಿರುವ (ಅಂತನೇಕ ಮಕುಟಬದ್ಧ ಮಣಿಮಕುಟಮಣಿಕರ್ಷಣಮಸೃಣಿತಚರಣಂ ಆಪ್ತಾಧಿರಾಜ್ಯಂ: **ಆದಿಪು,** ೮. ೭೨ ವ)

ಮಸೆ – [ಕ್ರಿ] ಹರಿತಗೊಳಿಸು (ಬೆಳ್ಪಸೆಯೆ ಮಸೆದ ಮದನನ ಬಾಳಂತಾದುವು ಪೊಳೆವೊಳ್ದೊಡೆ ತೆಱಪಾದೆರ್ದೆಯಂ ನಟ್ಟುವಂದು ತನ್ಮುನಿಪತಿಯಾ: **ಪಂಪಭಾ,** ೨. ೪೨)

ಮಸೆಯಂಬು – [ನಾ] ಹರಿತವಾದ ಬಾಣ (ಪೊಸಮಸೆಯಂಬುಗಳ್ ದೆಸೆಗಳಂ ಮಸುಳ್ವವನ್ನಗಮೆಯ್ದೆ ಪಾಯೆ: **ಪಂಪಭಾ,** ೧೧. ೬೫)

ಮಸ್ತಕ – [ನಾ] ತಲೆ (ಮಹಾಋಷಿಯ ತಳಿದ ಕನಕ ಕಮಂಡಲುವಿನ ತೀರ್ಥೋದಕಂಗಳಿದೆ' ಅಯ್ವರುಂ ಪವಿತ್ರೀಕೃತ ಮಸ್ತಕರಾಗಿರ್ದು: **ಪಂಪಭಾ,** ೬. ೧೧ ವ)

ಮಸ್ತಕಪಿಂಡ – [ನಾ] ಆನೆಯ ಕುಂಭಸ್ಥಳ (ಉನ್ನತ ಸಮ್ಯಕ್ಸಮುದ್ಗತವ್ಯೂಢ ಮಸ್ತಕಪಿಂಡನುಂ .. .. ಅಪ್ಪ ವಿಜಯಾರ್ಧಪರ್ವತ ಗಜೇಂದ್ರಂ ಬಂದು: **ಆದಿಪು,** ೧೨. ೫೬ ವ)

ಮಹತ್ತರ – [ನಾ] ದೊಡ್ಡ ಅಧಿಕಾರಿ (ರಾಜಾಧಿರಾಜಂ ನಿಮಗಟ್ಟಿ ಮಹಾಪ್ರಸಾದಂ ಬಿನ್ನಪಮೆಂದು ಮುಂದಿಟ್ಟು ಮಹತ್ತರಂ ಮಹತ್ತರಯೋಗ್ಯ ಮಹೀನಿಹಿತಾಸನಸದೊಳಿರ್ಪುದುಂ: **ಆದಿಪು,** ೧೪. ೪೫ ವ)

ಮಹತ್ತರದೇವಿ – [ನಾ] [ಜೈನ] ಜನಸಾಮಾನಿಕ ದೇವತೆ (ಚೆಂಬೊನ್ನ ತಳಿಗೆಗಳೊಳ್ ತೆಕ್ಕನೆ ತೀವಿದ ಸೇಸೆಗಳುಂ ಬೆರಸು ಮಹತ್ತರದೇವಿಯರ್ ಬಂದು ಪೊಡವಟ್ಟು: **ಆದಿಪು,** ೨. ೬೭ ವ)

ಮಹತ್ತರಿಕೆ – [ನಾ] ಮಹತ್ತರದೇವಿ (ವಿಕಟಕೂಟಾಧೀಶೆಯರಪ್ಪ ರುಚಿಕರುಚಕಾಸ್ಯೆ ರುಚಿಕಾಂತೆ ರುಚಿಕಪ್ರಭೆಯೆಂಬೀ ನಾಲ್ವರುಂ ದಿಕ್ಕುಮಾರಿಕಾ ಮಹತ್ತರಿಕೆಯರುಮಂ .. .. ಬೆಸುವುದಂ: **ಆದಿಪು,** ೭. ೩ ವ)

ಮಹರ್ದ್ಧಿಕ – [ನಾ] ಸಪ್ತರ್ಧಿಗಳಿಂದ ವಿಭೂಷಿತನಾದವನು (ಭಾಸುರದೇವಕೋಟಿವಿಭುವಪ್ಪ ಮಹರ್ದ್ಧಿಕನಪ್ಪ ವಾಸವಂಗೆ ಆಸನಕಂಪಮಂ ಪಡೆದು ತೀರ್ಥಕರತ್ವಮನಿತ್ತಂ: **ಆದಿಪು,** ೧೬. ೮೧)

ಮಹಾಗ್ರಾವ – [ನಾ] ದೊಡ್ಡ ಕಲ್ಲು (ಪಾವುಗಳಂ ಕೊಳಿಸಿ ಮಹಾಗ್ರಾವಮಂ ಉಱದೆ ಅಡಸಿ ಕಟ್ಟಿ ಕೊರಲೊಳ್ ಗಂಗಾದೇವಿಯ ಮಡುವಿನೊಳ್ ಅಟ್ಟಿದರ್ ಏವಯಿಸದೆ ತಮ್ಮ ಕುಲಮಂ ಅಡಿಗಟ್ಟುವವೋಲ್: **ಪಂಪಭಾ,** ೨. ೩೨)

ಮಹಾಜನ – [ನಾ] ಅಗ್ರಹಾರದಲ್ಲಿ ವಾಸಿಸುವ ಬ್ರಾಹ್ಮಣರು (ಮಹಾಗ್ರಹಾರಂಗಳ ಮಹಾಜನಂಗಳ ಕೊಟ್ಟ ಪೊನ್ನ ಜನ್ನಿವಿರಂಗಳಂ ಪರಕೆಯುಮಂ ಕೆಯ್ಕೊಳುತ್ತುಂ: **ಪಂಪಭಾ,** ೨. ೯೭ ವ)

ಮಹಾದೇವಿ – [ನಾ] ಮಹಾರಾಣಿ (ಅಂಬೆಯೆಂಬ ದಂಡುರುಂಬೆ ನಿನಗೆ ವಧಾರ್ಥಮಾಗಿ ಪುಟ್ಟುವೆನಕ್ಕೆಂದು

ಕೋಪಾಗ್ನಿಯಿಂದಂ ಅಗ್ನಿಶರೀರೆಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟಿ: **ಪಂಪಭಾ,** ೧. ೮೦ ವ)

ಮಹಾದ್ರೋಣ – [ನಾ] ಪ್ರಳಯಕಾಲದ ಒಂದು ಮೋಡದ ಹೆಸರು (ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸಂವರ್ತಕಗಳೆಂಬ ಮುಗಿಲ್ಗಳಂ ಬೆಸಸಿದಾಗಳ್: **ಪಂಪಭಾ,** ೫. ೯೫ ವ)

ಮಹಾನದಿ – [ನಾ] ಹದಿನಾಲ್ಕು ಪವಿತ್ರ ನದಿಗಳು: ಸರಸ್ವತೀ, ಭಾಗೀರಥೀ, ಯಮುನಾ, ಗೋದಾವರೀ, ಕೃಷ್ಣವೇಣೀ, ತಾಮ್ರಪರ್ಣಿ, ಸುವರ್ಣಮುಖೀ, ನರ್ಮದಾ, ತುಂಗಭದ್ರಾ, ಚಂದ್ರಭಾಗಾ, ಚರ್ಮಣ್ವತೀ, ಕುಮುದ್ವತೀ, ಸರಯೂ, ಫಲ್ಗುನೀ, ಅಥವಾ ಗಂಗಾ, ಸಿಂದು, ರೋಹಿತ್, ರೋಹಿತಾಸ್ಯಾ, ಹರಿತ್, ಹರಿಕಾಂತಾ, ಸೀತಾ, ಸೀತೋದಾ, ನಾರೀ, ನರಕಾಂತಾ, ಸುವರ್ಣಕೂಲಾ, ರೂಪ್ಯಕೂಲಾ, ರಕ್ತಾ, ರಕ್ತೋದಾ (ಚತುರ್ದಶ ಮಹಾನದಿಗಳ ನೀರುಮಂ ತಟತಟ ತೊಳಗುವ ಕಳಧೌತಕಳಶಂಗಳೊಳ್ ತೆಕ್ಕನೆ ತೀವಿ ತಂದ ವಾರವನಿತಾಜನಕ್ಕಂ: **ಪಂಪಭಾ,** ೧೪. ೧೭ ವ)

ಮಹಾನಾಗ – [ನಾ] ಮಹಾಸರ್ಪ (ಸಮಸ್ತ ಉರ್ವೀಧರ ಅಶೇಷ ಶೇಷ ಮಹಾನಾಗ ಫಣಾಮಣಿ ದ್ಯುತಿಯನೇಂ ಖದ್ಯೋತದೊಳ್ ಕಾಣ್ಬರೇ: **ಪಂಪಭಾ,** ೫. ೭೬)

ಮಹಾನುಭಾವ – [ನಾ] ಹಿರಿಮೆ, ಔನ್ನತ್ಯ (ಧರಣೇಂದ್ರನವರ ಮಹಾನುಭಾವಮುಮಂ ಆದಿದೇವನೊಳಾದ ನಿರ್ಭರಭಕ್ತಿಯುಮಂ ಮೆಚ್ಚಿ ನಿಜರೂಪಂ ತೋಱಿದಾಗಳ್: **ಆದಿಪು,** ೯. ೧೦೯ ವ)

ಮಹಾಪೂಜೆ – ವ್ರತಸಮಾಪ್ತಿಯಂತಹ ವಿಶೇಷಪ್ರಸಂಗಗಳಲ್ಲಿ ಅತ್ಯಂತಸಂಭ್ರಮದಿಂದ ಮಾಡುವ ಪೂಜೆ (ಮಹಾಮಹಮೆಂಬ ಮಹಾಪೂಜೆಯುಂ ಮಹಾವಿಭೂತಿಯಿಂ ಪದಿನಾಲ್ಕು ದಿವಸಂಬರಂ ನಿರಂತರಂ ಮಾಡೆ: **ಆದಿಪು,** ೧೬. ೨೩ ವ)

ಮಹಾಪ್ರತೀಹಾರ – [ನಾ] ಮಹಾದ್ವಾರಪಾಲಕ (ಲಲಾಟತಟಘಟಿತ ಮುಕುಳಿತಕರಕಮಳನಾಗಿರ್ದ ಮಹಾಪ್ರತೀಹಾರನ ಮೊಗಮಂ ನೋಡಿ: **ಪಂಪಭಾ,** ೯. ೩೦ ವ)

ಮಹಾಪ್ರಬಂಧ – [ನಾ] ದೊಡ್ಡ ಕಾವ್ಯ, ಮಹಾಕಾವ್ಯ (ಮುನ್ನಿನ ಕಬ್ಬಮನೆಲ್ಲಮಂ ಇಕ್ಕಿಮೆಟ್ಟಿದುವು ಸಮಸ್ತಭಾರತಮುಂ ಆದಿಪುರಾಣ ಮಹಾಪ್ರಬಂಧಮುಂ: **ಪಂಪಭಾ,** ೧೪. ೫೯)

ಮಹಾಪ್ರಸಾದ – [ನಾ] ಅನುಗ್ರಹರೂಪವಾದ (ದೇವ ಭವದೀಯಾಗ್ರಜಂ ರಾಜಾಧಿರಾಜಂ ನಿಮಗಟ್ಟಿದ ಮಹಾಪ್ರಸಾದಂ ಬಿನ್ನಪಂ: **ಆದಿಪು,** ೧೪. ೪೫ ವ)

ಮಹಾಪ್ರಳಯೋಲ್ಕೋಪಮ – [ಗು] [ಮಹಾಪ್ರಳಯ+ಉಲ್ಕ+ಉಪಮ] ಮಹಾ ಪ್ರಳಯಕಾಲದ ಉಲ್ಕೆಗೆ ಸಮಾನವಾದ (ಮಹಾಪ್ರಳಯೋಲ್ಕೋಪಮ ಮದ್ಗದಾಹತಿಯಿಂ ಅತ್ಯುಗ್ರಾಜಿಯೊಳ್ ಮುನ್ನಮೀ ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ: **ಪಂಪಭಾ,** ೭. ೧೨)

ಮಹಾಪ್ರಾತಿಹಾರ್ಯ – [ನಾ] [ಜೈನ] ಜಿನನಿಗೆ ಒದಗುವ ಅಶೋಕ ವೃಕ್ಷ, ಸುರಪುಷ್ಪವೃಷ್ಟಿ, ದಿವ್ಯಧ್ವನಿ, ಚತುಃಷಷ್ಟಿ, ರತ್ನಜಡಿತ ಸುವರ್ಣಪೀಠ, ಪ್ರಭಾವಲಯ, ದೇವದುಂದುಭಿ, ಛತ್ರತ್ರಯ ಎಂಬ ಎಂಟು ಮಂಗಳ ಲಾಂಛನಗಳು (ಸಕಳ ಶ್ರಾವಕವ್ರತಂಗಳಂ ಷೋಡಶ ತೀರ್ಥಕರಭಾವನೆಗಳಂ ಚತುಸ್ತ್ರಿಂಶದತಿಶಯಂಗಳುಮಂ ಅಷ್ಟಮಹಾಪ್ರಾತಿಹಾರ್ಯಂಗಳುಮಂ: **ಆದಿಪು,** ೩. ೪೦ ವ)

ಮಹಾಭಾರತ – [ನಾ] ಮಹಾಭಾರತ ಯುದ್ಧ (ಮತ್ತ್ರತಾಪಕ್ಕಿದಱಿಂದಂ ನೋಡ ಅಗುರ್ವು ಉರ್ವಿದುದು ಇದುವೆ ಮಹಾಭಾರತಕ್ಕಾದಿಯಾಯ್ತು: **ಪಂಪಭಾ,** ೧೨. ೧೫೬)

ಮಹಾಭಾರಾವತಾರ – [ನಾ] ಭೂಮಿಯ ಭಾರದ ಇಳಿಕೆಯ [ಯುದ್ಧ], ಭೂಮಿಯ ಭಾರವನ್ನು ಇಳಿಸಲು ಮಾಡುವ ಯುದ್ಧ (ನಿನ್ನ ಒಱಂಟುತನಂ ಕೈಗಟಿವಾಯ್ತು ಅದಪ್ಪೊಡೆ ಮಹಾಭಾರಾವತಾರಂ ರಣೋದ್ಯತನಾಗು ಎಂಬುದಂ ಎಮ್ಮಂ ಅನ್ಯರವೊಲೇಂ ನೀಂ ಪ್ರಾರ್ಥಿಸಲ್ವೇೞ್ಪುದೇ: **ಪಂಪಭಾ,** ೧೦. ೧೦)

ಮಹಾಭೋಗಿ – [ನಾ] ಪರಮ ಸುಖಿ (ಆ ಮಹಾಯೋಗಿ ಗುಣಂಗಳಂ ಈ ಮಹಾಭೋಗಿ ನೆಲನಂ ಪರಿಪಾಲಿಸಿದಂ: **ಆದಿಪು,** ೬. ೨೪ ವ)

ಮಹಾಮಕರ – [ನಾ] ತಿಮಿಂಗಿಲ (ಬಡಿಗೊಂಡು ಮಸಗಿ ಬೈತ್ರಮನೊಡೆವ ಮಹಾಮಕರದಂತೆ ಕರಿಘಟೆಗಳಂ ಆರ್ದುಡಿಯೆ ಬಡಿದು: **ಪಂಪಭಾ,** ೧೨ ೭೮)

ಮಹಾಮಕುಟಬದ್ಧ – [ನಾ] ಮಹಾರಾಜ (ಕರಂ ಪೆರ್ಚುವ ಮಹಿಮೆಯನೆಯ್ದೆ ನಿಮಿರ್ಚೆ ಮಹಾಮಕುಟಬದ್ಧರ್ ಓಲಿಯೊಳಿರ್ದರ್: **ಪಂಪಭಾ,** ೧೪. ೨೪)

ಮಹಾಮಹ – [ನಾ] [ಜೈನ] ಮಹಾರಾಜನು ಚತುರ್ಮುಖ ಮಂಟಪದಲ್ಲಿ ಮಾಡುವ ಜಿನಪೂಜೆ: ಕಲ್ಪದ್ರುಮ, ಚತುರ್ಮುಖ, ಸರ್ವತೋಭದ್ರ, ಐಂಧ್ರಧ್ವಜ, ಅಷ್ಟಾಹ್ನಿಕ, ಬಲಿ, ಸವನ, ತ್ರಿಸಂಧ್ಯಾಸೇವೆ ಎಂಬ ಎಂಟು ಬಗೆಯ ಪೂಜೆಗಳು ಸೇರಿದ ಪೂಜೆ (ಜಿನಭವನದೊಳ್ ಎಂಟು ದಿವಸಂಬರಂ ಮಹಾಮಹಮೆಂಬ ಜಿನಮಹಿಮೆಯಂ .. .. ಮಾಡಿದಿಂಬಟೆಯಂ: **ಆದಿಪು,** ೨. ೪೯ ವ)

ಮಹಾಮಹಿಮೆ – [ನಾ] [ಜೈನ] ರಾಜರು ಮಾಡುವ ಮಹಾ ಜಿನಪೂಜೆ (ಸಮಸ್ತ ಧಾರ್ಮಿಕಜನಂಗಳಂ ಬರಿಸಿ ಸರ್ವತೋಭದ್ರಮೆಂಬ ಮಹಾಮಹಿಮೆಯಂ ಮಹೋತ್ಸವದಿಂದ ಎಂಟು ದಿವಸಂಬರಂ ಮಾಡಿ: **ಆದಿಪು,** ೧೬. ೬೨ ವ)

ಮಹಾರಥ – [ನಾ] ರಥದಲ್ಲೇ ಇದ್ದುಕೊಂಡು ಸಾರಥಿಯನ್ನೂ ಕುದುರೆಗಳನ್ನೂ ರಕ್ಷಿಸುತ್ತ ಹತ್ತು ಸಾವಿರ ಯೋಧರ ವಿರುದ್ಧ ಯುದ್ಧಮಾಡಬಲ್ಲ ರಥಿಕ (ಉಡಿದ ನೊಗಂ ಧ್ವಜಂ ಪಲಗೆ ಕೀಲ್ ಕವರ್ ಅಚ್ಚು ತುರಂಗಮಂ ರಥಂ ಕಿಡೆ ಕವರಿಂದಗುರ್ವಂ ಒಳಗೊಂಡಿರೆ ತಳ್ತಿಱಿದರ್ ಮಹಾರಥರ್: **ಪಂಪಭಾ,** ೧೧. ೩೮)

ಮಹಾವಾತ್ಯೆ – [ನಾ] ಬಿರುಗಾಳಿ (ಇಂದ್ರಿಯಲುಬ್ಧಕ ಸ್ವಚ್ಛಂದವಿಹಾರ ಗಹನಭೂಮಿಯುಂ ದುರ್ಯಶಃಪಾಂಶು ಪ್ರಸರ ಮಹಾವಾತ್ಯೆಯುಂ ಅಪ್ಪ ಪಾತಕಿಯೊಳ್: **ಆದಿಪು,** ೧೪ ೧೨೨ ವ)

ಮಹಾವಾಹಿನಿ – [ನಾ] ಮಹಾನದಿ (ಮೂವತ್ತನಾಲ್ಕು ವಿಜಯಾರ್ಧಪರ್ವತಂಗಳಿಂದಂ ಅನಿತೆ ವೃಷಭಾದ್ರಿಗಳಿಂದಂ ಚತುರ್ದಶ ಮಹಾವಾಹಿನಿಗಳಿಂದಂ ಎಸೆದು: **ಆದಿಪು**, ೧. ೪೮ ವ), ನೋಡಿ **'ಮಹಾನದಿ'**

ಮಹಾವ್ರತ – [ಜೈನ} ಶ್ರಾವಕನು ಆಚರಿಸುವ ಪಂಚಾಣುವ್ರತಗಳನ್ನು ಸೂಕ್ಷ್ಮರೂಪದಲ್ಲಿ ಪರಿಪೂರ್ಣವಾಗಿ ಮುನಿಗಳು ಆಚರಿಸುವುವೇ ಮಹಾವ್ರತಗಳು (ಹಿಂಸಾ ಅನೃತ ಅಸ್ತೇಯ ಬ್ರಹ್ಮ ಪರಿಗ್ರಹಪರಿತ್ಯಾಗಂ ಎಂಬಯ್ದುಂ ಮಹಾವ್ರತಂಗಳೊಳ್ ನೆರೆದು: **ಆದಿಪು**, ೬. ೨೭ ವ)

ಮಹಾಸಂಧಿವಿಗ್ರಹಿ – [ನಾ] ಯುದ್ಧ–ಸಂಧಿಗಳ ಉಸ್ತುವಾರಿ ಹೊತ್ತ ಹಿರಿಯ ಸಚಿವ (ಬಾಹುಬಲಿಕುಮಾರಂಗೆ ಲೇಖಮಂ ಉನ್ಮಯೂಖರತ್ನಾಭರಣಪ್ರಾಭೃತ ಸಮೇತಮನಟ್ಟುವಂತು ಮಹಾಸಂಧಿವಿಗ್ರಹಿಗೆ ಬೆಸಸಿದೊಡೆ: **ಆದಿಪು**, ೧೪. ೪೩ ವ)

ಮಹಾಸತ್ತ್ವ – [ನಾ] ಹೆಚ್ಚಿನ ಅಂತಃಸತ್ವವುಳ್ಳುವನು (ಸಂಸಾರ ಅಸಾರತೆಯಂ ಅಱಿದನುಂ ಮಹಾಸತ್ತ್ವನುಂ ಅಪ್ಪುದಱಿಂ ತನ್ನಂ ತಾನೆ ಸಂತೈಸಿಯುಂ ಚೇತರಿಸಿಯುಂ: **ಪಂಪಭಾ**, ೧೩. ೨೦ ವ)

ಮಹಿ – [ನಾ] ಲೋಕ, ಜಗತ್ತು (ಶ್ರೀಮಚ್ಚಳುಕ್ಯವಂಶ ವ್ಯೋಮಾಮೃತಕಿರಣನೆನಿಪ ಕಾಂತಿಯನೊಳಕೊಂಡೀ ಮಹಿಯೊಳಾತ್ಮ ವಂಶಶಿಖಾಮಣಿ ಜಸಮೆಸೆಯೆ ಯುದ್ಧಮಲ್ಲಂ ನೆಗಟ್ದಂ: **ಪಂಪಭಾ,** ೧. ೧೫)

ಮಹಿಜ – [ನಾ] ಮರ (ಕಳಿಕಾಂಕುರ ಕುಸುಮೋತ್ಕರ ಫಳಪಲ್ಲವರಹಿತ ಮಹಿಜಮಂ ಕಂಡುದಱಿಂದೆ: **ಆದಿಪು**, ೧೫. ೩೪)

ಮಹಿಧರ – [ನಾ] ಕೂರ್ಮಾವತಾರದಲ್ಲಿ ಭೂಮಿಯನ್ನು ಹೊತ್ತ ವಿಷ್ಣು (ಎಳೆಯಂ ವಿಕ್ರಮದಿಂ ತರಲ್ ಮಹಿಧರಂ ಮುನ್ ಪಂದಿಯಾದಂತೆ: **ಪಂಪಭಾ,** ೮. ೫೫)

ಮಹಿಪಾಲ – [ನಾ] ಆ ಹೆಸರಿನ ರಾಜ (ಕೆಡದೆಡೆಯೊಳ್ ಕೆಡೆಯದೆ ನಿಂದೆಡೆಯೊಳ್ ನಿಲ್ಲದೆಯುಮೋಡಿದಂ ಮಹಿಪಾಲಂ: **ಪಂಪಭಾ,** ೧. ೩೭)

ಮಹಿಮಹಿತ – [ನಾ] ಲೋಕಮಾನ್ಯ (ಶ್ರೀಮತಿವೆರಸು ಆಗಳ್ ಅತಿಪ್ರೇಮದೆ ಮುನಿಯುಗಳನಿಕಟಮಂ ಸಾರ್ದು ಇನಿತೇಕೀ ಮೋಹಂ ಇವರೊಳ್ ಎನಗೆ: **ಆದಿಪು**, ೫. ೧)

ಮಹಿಮೆ – [ನಾ] [ಜೈನ] ಪೂಜೆ (ಜಿನನ ನಮಸ್ಕಾರಮತ್ರಂಗಳೊಳ್ ಭಾವನೆಯಂ ತಾಳ್ದಟ್ತೆಯಿಂದಂ ಜಿನಮಹಿಮೆಗಳಂ ಮಾಡು: **ಆದಿಪು**, ೩. ೭); [ನಾ] ಮಟ್ಟ, ಅಂತಸ್ತು (ಪುರುಪರಮೇಶ್ವರನಿರೆ ಭರತನನೆಮ್ಮ ಮಹಿಮೆಗಂತದು ದೊರೆಯೇ: **ಆದಿಪು**, ೯. ೧೦೮); [ನಾ] ಪ್ರಭಾವಶಾಲಿತನ (ಪುಚ್ಚವಣಂ ನೋಡುವೆನೆನ್ನೆಚ್ಚೆಯೊಳೀ ಮುನಿಯ ವರದ ಮಹಿಮೆಯಂ ಎನುತ ಅಂದು ಉಚ್ಚಸ್ತನಿ ಗಂಗೆಗೆ .. .. ಬಂದಳ್: **ಪಂಪಭಾ**, ೧. ೯೦)

ಮಹೀಂದ್ರ – [ನಾ] [ಮಹಿ+ಇಂದ್ರ] ರಾಜ (ರುಂದ್ರಾಂಭೋನಿಧಿಪರೀತ ಮಹೀಂದ್ರರದಾರಿನ್ನರ್ ಈ ನರೇಂದ್ರಂ ಸಾಕ್ಷಾದಿಂದ್ರಂ ತಾನೆನೆ: **ಪಂಪಭಾ**, ೧. ೪೪)

ಮಹೀಕಾಂತೆ – [ನಾ] ಭೂದೇವಿ, ಭೂಮಿಯೆಂಬ ಹೆಣ್ಣು (ಚಿನ್ನ ಪೂಗಳಂ ಮೆಱೆವಂತೆ ಚಂದ್ರಕಬಳಮಂ ತೊಡೆವಂತೆ ಮಹೀಕಾಂತೆ ಸೊಗಯಿಸೆ: **ಆದಿಪ,** ೭. ೩೬ ವ)

ಮಹೀಜ – [ನಾ] ಮರ (ಕಡುಪಿನೆ ಪೊತ್ತು ಪಾಸಱೆಯಂ ಎಯ್ತರೆ ಭೀಮನುಂ ಒತ್ತಿ ಕಿಟ್ಟು ಬೇರೊಡನೆ ಮಹೀಜಮೊಂದಂ: **ಪಂಪಭಾ,** ೩. ೧೮)

ಮಹೀತಳ – [ನಾ] ಭೂಮಂಡಲ (ವೈರಿಗಳನೆ ಕೊಂದು ವಾರಿಧಿಪರೀತ ಮಹೀತಳಮಂ ನಿಮಿರ್ಚಿ ಜೆಟ್ಟಿಗರಂ ಅಯೋನಿಸಂಭವರಂ ಆಳ್ದು ಅರಿವರ್ಗದೊಳಾಂತು ಕಾದೆಯುಂ: **ಪಂಪಭಾ,** ೧೩. ೧೦೩)

ಮಹೀತಳಾಶ್ಲಿಷ್ಟಜಾನುಲಲಾಟಪಟ್ಟರ್ – [ನಾ] ಭೂಮಿಗೆ ಮೊಣಕಾಲು ಹಣೆಗಳನ್ನು ತಾಕಿಸಿದವರು, ಸಾಷ್ಟಾಂಗ ನಮಸ್ಕಾರ ಮಾಡಿದವರು (ಅಂತಃಪುರ ವೃದ್ಧಕಂಚುಕಿಗಳ್ ಬಂದು ಮಹೀತಳಾಶ್ಲಿಷ್ಟಜಾನುಲಲಾಟಪಟ್ಟರ್ ಪ್ರಣಾಮಾರ್ಪಣ ಪುರಸ್ಸರಂ: **ಆದಿಪು,** ೧೦. ೪೮ ವ)

ಮಹೀದಯಿತ – [ನಾ] ಮಹೀಪತಿ, ರಾಜ (ವಿಳಯಾಂಭೋದ ನಿನಾದದೆ ಮದ್ರಮಹೀದಯಿತಂ ತೊಟ್ಟನೆ ಆರ್ವುದುಂ: **ಪಂಪಭಾ,** ೧೩. ೪೬)

ಮಹೀಧರ – [ನಾ] ಪರ್ವತ (ಹಿಮವತ್ ಮಹಾಹಿಮವತ್ ನಿಷಧನೀಳರುಗ್ಮಿಶಿಖರಿಗಳೆಂಬ ವರ್ಷಧರ ಮಹೀಧರಂಗಳಿಂದಂ .. .. ಎಸೆದು: **ಆದಿಪು,** ೧. ೪೮ ವ)

ಮಹೀನಾಥ – [ನಾ] ಭೂಮಿಯ ಒಡೆಯ, ರಾಜ (ಆ ಮುನಿನಾಥಂ ತ್ರಿಗುಪ್ತಿಯೊಳ್ ನೆರೆದನೀ ಮಹೀನಾಥಂ ಮಂತ್ರಗುಪ್ತಿಯೊಳ್ ನೆರೆದಂ: **ಆದಿಪು,** ೬. ೨೪ ವ)

ಮಹೀಪತಿ – [ನಾ] ರಾಜ (ಶ್ರೀಪತಿಗೆ ಯುದ್ಧಮಲ್ಲ ಮಹೀಪತಿಗೆ ನೆಗಟ್ತೆ ಪುಟ್ಟೆ ಪುಟ್ಟಿದಂ ಅಖಿಳ ಕ್ಷ್ಮಾಪಾಲಮೌಳಿ ಮಣಿರಂಜಿತ ಕಿರಣಾಪಾಳಿತ ನಖಮಯೂಖರಂಜಿತ ಚರಣಂ: **ಪಂಪಭಾ,** ೧. ೧೮)

ಮಹೀಪಾಲ – [ನಾ] ಮಹೀಪತಿ (ಮಂಗಳತೂರ್ಯನಾದಂ ಎಸೆಯುತ್ತಿರ್ಪನ್ನೆಗಂ ಚಕ್ರಿ ರಾಗಿಸಿ ಕೆಯ್ನೀರ್ ಎಱೆದಂ ಗುಣಾರ್ಣವ ಮಹೀಪಾಲಂಗಂ ಆ ಕನ್ನೆಯಂ: **ಪಂಪಭಾ,** ೫. ೨೫)

ಮಹೀಪಾಳ – [ನಾ] ಮಹೀಪತಿ (ಮಹೀಪಾಳರೊಳಾದ ಕಾರ್ಯಗತಿಗಳ್ ಬಗೆಯಲ್ಕೆ ಬಹುಪ್ರಕಾರಮೋ ಎಂಬ ಪುರಜನ ಆಳಾಪಂಗಳ್ ನೆಗಱೆ: **ಪಂಪಭಾ,** ೯. ೬ ಮತ್ತು ೬ ವ)

ಮಹೀಭುಜ – [ನಾ] ರಾಜ (ಅಂಬರಮೆಲ್ಲಂ ಅಂಬಿನೊಳೆ ಪೂಱೆ ಮಹೀಭುಜರ್ ಎತ್ತಂ ಎಚ್ಚ ಕಿತ್ತಂಬುಗಳ್ ಎತ್ತಂ ಅವ್ವಳಿಸೆ: **ಪಂಪಭಾ,** ೧೧. ೪೨)

ಮಹೀಮಂಡಲ – [ನಾ] ಭೂಮಂಡಲ (ಬಣ್ಣವ್ವರು ತೀವಿದ ಮಾಟ್ಕೆಯಾಯ್ತು ನವಿಲಿಂ ಕುಂದುಂಗಳಿಂದ ಇಂದ್ರಗೋಪ ವಿಳಾಸಂಗಳಿಂ ಆಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ: **ಪಂಪಭಾ,** ೭. ೨೪)

ಮಹೀರುಹ – [ನಾ] ಮರ (ಅದು ಮದದಂತಿ ದಂತಮುಸಲ ಪ್ರವಿಭಗ್ನ ಮಹಾ ಮಹೀರುಹಾಸ್ಪದಂ: **ಪಂಪಭಾ,** ೩. ೧೦)

ಮಹೀವೀಥಿ – [ನಾ] ದೊಡ್ಡ ಬೀದಿ (ನಾಲ್ಕುಂ ಮಹೀವೀಥೀ ಮಧ್ಯಂಗಳೊಳ್ ರತ್ನತೋರಣಶತಾಂತರಿತಂಗಳುಂ ನಿಜೇಂದ್ರ ರುಂದ್ರ ಸಿದ್ಧಾಭ್ಯರ್ಚಿತಂಗಳುಂ: **ಆದಿಪು,** ೧೦. ೩೪ ವ)

ಮಹೀಶ – [ನಾ] [ಮಹಿ+ಈಶ] (ಪುರುಷಕಾರದ ಪೆಂಪಂ ಚಿಂತಿಸಿ ತರಿಸಿ ಮಹೀಶನಂ ಎಂತಪ್ಪೊಡಂ ಎನಗೆ ಪುರುಷಭಿಕ್ಷಮನಿಕ್ಕಿಂ: **ಪಂಪಭಾ,** ೭. ೩೪)

ಮಹೀಶ್ವರ – [ನಾ] [ಮಹೀ+ಈಶ್ವರ] (ಒಱಲ್ದು ನಲ್ಲಳೊಳ್ ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋಗಿನ್ನೆನೆ ರೌದ್ರಶಾಪಪರಿತಾಪವಿಳಾಪದೊಳಾ ಮಹೀಶ್ವರಂ: **ಪಂಪಭಾ,** ೧. ೧೧೨)

ಮಹೇಂದ್ರಕಲ್ಪ – ಹದಿನಾರು ಸ್ವರ್ಗಗಳಲ್ಲಿ ನಾಲ್ಕನೆಯದು (ಪರಿತ್ಯಕ್ತಾಹಾರಶರೀರನೆಂ ಸಮಾಧಿವಡೆದು ಮಹೇಂದ್ರಕಲ್ಪದೊಳ್ ಸಪ್ತಸಾಗರೋಪಮಪ್ರಮಿತ ಜೀವಿತನೆಂ ಸಾಮಾನಿಕ ದೇವನಾಗಿ ಪುಟ್ಟಿದೆಂ: **ಆದಿಪು,** ೩. ೫೦ ವ)

ಮಹೇಂದ್ರಕಲ್ಪಜ – ಮಹೇಂದ್ರಕಲ್ಪದಲ್ಲಿ ಹುಟ್ಟಿದವನು (ಕೃತ್ರಿಮಚೈತ್ಯಾಲಯಮಂ ಬಂದಿಸಲಾ ಮಹೇಂದ್ರಕಲ್ಪಜನುಂ ಮಹಾವಿಭೂತಿಯಿಂ ಬಂದು: **ಆದಿಪು,** ೨. ೧೯ ವ)

ಮಹೇಂದ್ರಜಾಣ – [ನಾ] ಮಹೇಂದ್ರನಂತೆ ಜಾಣ ಅಥವಾ ಮಹೇಂದ್ರಜಾಲದಲ್ಲಿ ಪ್ರವೀಣ (ಅತಿಪ್ರವೀಣನುಂ ಆರೂಢಸರ್ವಜ್ಞನುಂ ಮಹೇಂದ್ರಜಾಣನುಂ ಆಗಿ: **ಪಂಪಭಾ,** ೨. ೩೪ ವ)

ಮಹೇಂದ್ರಜಾಲಿಗ – [ನಾ] ಯಕ್ಷಿಣಿಗಾರ (ಪಲವುಂ ಚೋದ್ಯಂಗಳಂ ವಿಕ್ರಿಯಾಬಳದಿಂದಾಡಿ ಮಹೇಂದ್ರಜಾಲಿಗನುಮಂ ಪೋಲ್ತಂ ಸುರಾಧೀಶ್ವರಂ: **ಆದಿಪು,** ೭. ೧೨೨)

ಮಹೋತ್ಪಳ – [ನಾ] ಕಮಲ (ನಗೆಗಣ್ಗಳ ಬೆಡಂಗನೆ ಕಿಱುನಗೆ ನಗುವಂತೆ ಮೆಲ್ಲಮೆಲ್ಲನುಳ್ಳಲರ್ವ ಮಹೋತ್ಪಳ ನೀಳೋತ್ಪಳಂಗಳುಂ: **ಆದಿಪು,** ೧೧. ೫ ವ)

ಮಹೋತ್ಸವ – [ನಾ] ದೊಡ್ಡ ಉತ್ಸವ (ಪಿಂಗಳಿತ ಪಿಶಂಗಿತ ಅರುಣಿತ ದಿಙ್ಮುಖಮಾದುದು ತನ್ಮಹೋತ್ಸವಂ: **ಆದಿಪು,** ೭. ೧೧೪)

ಮಹೌಷಧ – [ನಾ] ಶ್ರೇಷ್ಠ ಧಾನ್ಯ (ಆ ಪ್ರಸ್ತಾವದೊಳ್ ಫಳಪಾಕವಿರಾಮಂಗಳಪ್ಪ ಗರ್ಭಷಷ್ಟಿವ್ರೀಹಿ ಯವ ಗೋಧೂಮಾದಿ ಮಹೌಷಧಂಗಳುಂ: **ಆದಿಪು,** ೮. ೬೧ ವ)

ಮಳ – [ನಾ] [ಮಲ] ಕೊಳೆ (ತನುಗೆ ಪೊಱಿ ತುಡುಗೆ ನವಲೇಪನಮೆ ಮಳಂ ಗೀತಮಟ್ಟೆ ನೃತ್ಯಂ ಬಗೆಯಲ್ಕೆನಗೆ ದಲ್ ಉನ್ಮತ್ತವಿಳಾಸಂ ಇಂತಿನಿತಱೊಳಮೊಂದಱೊಳ್ ಪುರುಳುಂಟೇ: **ಆದಿಪು,** ೯. ೫೫)

ಮಳಯಜ – [ನಾ] ಶ್ರೀಗಂಧ (ಈ ಕನ್ನೆಯಂ ಮಾಡುವಲ್ಲಿಗೆ ಚಂದ್ರಂ ಮಳಯಾನಿಳಂ ಮಳಯಜಂ ನೀರೇಜಂ ಇಮ್ಮಾವು ಮಲ್ಲಿಗೆ **ಪಂಪಭಾ,** ೪. ೭೫)

ಮಳಯಮಹೀಜ – [ನಾ] ಶ್ರೀಗಂಧದ ಮರ (ನೆಗಟ್ದೀ ಕರ್ಪೂರ ಕಾಳಾಗರು ಮಳಯಮಹೀಜಂಗಳ್ ಏಳಾಲತಾಳೀ ಸ್ಥಗಿತಂಗಳ್ ಕಣ್ಗೆವಂದಿರ್ದುವಂ: **ಪಂಪಭಾ,** ೪. ೨೩)

ಮಳಯಸಮೀರಣ – [ನಾ] ಮಲಯಮಾರುತ, ತಂಪಾದ ಗಾಳಿ (ವಾರಿಜ ಮಳಯಜ ಮಳಯಸಮೀರಣ ಚಂದ್ರಾಂಶು ಚಂದ್ರಕಾಂತದ್ರವ ಕರ್ಪೂರ ಮೃಣಾಳಾದಿಗಳುಂ: **ಆದಿಪು,** ೨. ೧೩)

ಮಳಯಾನಿಳ – [ನಾ] ಮಲಯಮಾರುತ (ಈ ಕನ್ನೆಯಂ ಮಾಡುವಲ್ಲಿಗೆ ಚಂದ್ರಂ ಮಳಯಾನಿಳಂ ಮಳಯಜಂ ನೀರೇಜಂ ಇಮ್ಮಾವು ಮಲ್ಲಿಗೆ: **ಪಂಪಭಾ,** ೪. ೭೫)

ಮಳೆಕೊಳ್ – [ಕ್ರಿ] ಮಳೆ ಸುರಿ (ಮನಂಗೊಂಡು ಒಱಲ್ದಿನಂ ಎತ್ತಂ ಕೊಳೆ ಪಾಡೆ ಜೇನ ಮಳೆ ಕೊಂಡಂತಪ್ಪ ಗೇಯಂ: **ಪಂಪಭಾ,** ೯. ೨೯)

ಮಱಕೆಂದು – [ಗು] [ಮೈಮರೆತು] ಗಾಢವಾಗಿ ನಿದ್ದೆಮಾಡು (ಮಱಕೆಂದಿದರನೆತ್ತುವಂತೆ ನಾಲ್ವರುಮನೆತ್ತಿ ತಾಂ ಮುನ್ನಂ ತಂದರಣೆಯಂ ಕೊಟ್ಟು ಕೃತಾಂತನಂತರ್ಧಾನಕ್ಕೆ ಸಂದಂ: **ಪಂಪಭಾ,** ೮. ೪೮ ವ)

ಮಱಲಿಱಿ – [ಕ್ರಿ] ಸಾಯುವಂತೆ ಇರಿ, ಹೊಡೆ (ದಂಡುವಂದ ಮಹಾಸಾಮಂತರಂ ಮಱಲಿಱಿದು ಗೆಲ್ದ ಸಾಮಂತ ಚೂಡಾಮಣಿಯ ಬೀರಮುಮಂ: **ಪಂಪಭಾ,** ೯. ೫೨ ವ)

ಮಱಲುಂದು – [ಕ್ರಿ] ಮಱಕೆಂದು, ಗಾಢವಾಗಿ ನಿದ್ದೆಮಾಡು (ನಿಷಾದಿತಿಯೆಂಬ ಬೇಡಿತಿಗಂ ಅಯ್ವರ್ ಮಗಂದಿರ್ಗಂ ಉಣಲಿಕ್ಕಿದೊಡೆ ತಣಿಯುಂಡು ಬೆಂಡುಮರಲ್ದು ಮಱಲುಂದಿದರ್: **ಪಂಪಭಾ,** ೩. ೪ ವ)

ಮಱಸು – [ಕ್ರಿ] ಮರೆಮಾಡು (ಪೊಱಕಣ್ಣಂ ಮುನ್ನಂ ತಾಂ ಮಱಸಿದ ನೊಸಲ ಒಂದು ಕಣ್ಣುಂ ಆಗಳ್ ನೊಸಲಿಂ ಪೊಱಮಟ್ಟಂತಿರೆ: **ಪಂಪಭಾ,** ೮. ೨೩)

ಮಱಸುಂದು – [ಕ್ರಿ] ಮೈಮರೆತು ನಿದ್ರಿಸು (ಮುಗುಳೊಳ್ ಮಱಸುಂದಿದ ತುಂಬಿ ಪಾಱಿ ಕೋಕನದಕುಲಂಗಳ್ ಉಳ್ಳಲರ್ದುವು ಎಂಬಿನಂ ಅಂದೊಗೆದಂ ದಿವಾಕರಂ: **ಪಂಪಭಾ,** ೩. ೮೪)

ಮಱಸೊಂದು – [ಕ್ರಿ] ಮೂರ್ಛೆ ಹೋಗು (ಇನಿಯಂ ಮಱಸೊಂದಿದನೋ ಬೞಲ್ದನೋ ಎಂದು ಪಱಿಪಟ್ಟ ಸುಯ್ಯುಮಂ ಕೋಡುವ ಮೆಯ್ಯುಮಂ ಕಂಡು ಪರಲೋಕಪ್ರಾಪ್ತನಾದುದನಱಿತು: **ಪಂಪಭಾ,** ೨. ೧೯ ಮತ್ತು ೨. ೧೯ ವ); [ಕ್ರಿ] ಗಾಢವಾಗಿ ನಿದ್ರಿಸು (ಪೊಱವೊೞಲ ಮರದ ಕೆಳಗೆ ಮಱಸೊಂದಿದ ಭೀಮನನಡಸಿ ಪಿಡಿದು ನೂರ್ವರುಂ ಗಂಟಲಂ ಮೆಟ್ಟಿ: **ಪಂಪಭಾ,** ೨. ೩೧ ವ); [ಕ್ರಿ] ಮೈಮರೆ (ದೇವರ ಮುಂದೆ ಆನಱಿಯೆಂ ಪಿರಿದುಂ ಗೞಪಲ್ ಮಱಸೊಂದಿದನಿಲ್ಲಂ ಅಹಿತಂ ಎಚ್ಚತ್ತಿರ್ದಂ: **ಪಂಪಭಾ,** ೭. ೪೪)

ಮಱಿ – [ನಾ] ಮರಿ, ಮಗು (ಕಟ್ಟಿಲೆಯೆಂಬ ಪಾಪಕರ್ಮನ ಮಱಿಗಳ್ ಕರಂ ಪಲವುಮಂ ಸೆಱಿಗೆಯ್ದೆವಿವೆಂದು ತಮ್ಮ ನಣ್ಪಿನೊಳ್ ಒಪ್ಪಿಪಂತೆ: **ಪಂಪಭಾ,** ೩. ೮೪)

ಮಱುಕ – [ನಾ] ದುಃಖ, ತಳಮಳ (ಮಱುಕಂ ಅಮಾಯಮಪ್ಪ ಅಪಮೃತ್ಯುವೆಂಬಿವಲ್ಲಿಗೆ ಪೊಱಗೆಂದೊಡಿಂ ಸುಖಮಂ ಏವೊಗಟ್ದಿಪ್ಪುದೊ ಭೋಗಭೂಮಿಯಾ: **ಆದಿಪು,** ೫. ೩೦); [ನಾ] ವಕ್ರಚೇಷ್ಟೆ (ನುಡಿ ತಡವಪ್ಪುದೊಂದು ಮೊಗದೊಳ್ ಮಱುಕಂ ದೊರೆಕೊಳ್ವುದೊಂದು ನಾಣ್ಗೆಡೆಗುಡದಿರ್ಪುದೊಂದು: **ಪಂಪಭಾ,** ೨. ೪೯)

ಮಱುಕಣಿಸು – [ಕ್ರಿ] ಮರಳಿ ಬರು (ಬಂಧುಜನನಿರೀಕ್ಷಣದಿಂ ಶೋಕಂ ಮಱುಕಣಿಸೆ ಬಾಯಟಿದು ಪಳಯಿಸುವ ಕುಂತಿಯುಮಂ: **ಪಂಪಭಾ,** ೨. ೨೯ ವ)

ಮಱುಗಿಸು – [ಕ್ರಿ] ನೋವಿಗೊಳಪಡಿಸು (ಮನುಷ್ಯಜನ್ಮಮಂ ಮಱುಗಿಸಿ ನಿನ್ನೀ ಪದಕೆ ತಂದುದು ಮುನ್ನಿನ ಗೆಯ್ದ ದೋಷಂ ಇನ್ನಱಿದು ಜಿನೇಂದ್ರಧರ್ಮಜಳದಿಂ ಕಳೆ ಕರ್ಚಿ ಕಳಂಕಪಂಕಮಂ: **ಆದಿಪು,** ೩. ೪೦)

ಮಱುಗು – [ಕ್ರಿ] ತವಕಿಸು, ಪರಿತಪಿಸು (ಮಗನಟಲೊಳ್ ಕರಂ ಮಱುಗುತ್ತಿರ್ಪಿನಂ ಎನ್ನ ತನೂಜನಾಳ್ವ ಸಾವಿಗಂ ಅೞಿವಾಗೆ ಶೋಕರಸಂ ಇರ್ಮಡಿಸಿತ್ತು: **ಪಂಪಭಾ,** ೧೩. ೧೦೫)

ಮಱುಭವ – [ನಾ] ಪುನರ್ಜನ್ಮ (ಇಂದ್ರಿಯವರ್ಗದಿಚ್ಛೆಯಂ ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ ನಲಿವುದು ಕಂಡರಾರ್ ಮಱುಭವಂಗಳಂ: **ಆದಿಪು** ೨. ೯)

ಮಱುಮಾತು – [ನಾ] ಉತ್ತರ (ತೋಯಜಷಂಡಮನಿದಂ ಆಂ ಆಯತಿಯಿಂ ಕಾವೆಂ ಎನ್ನ ಮಾತಿಂಗೆ ಎಲೆ ಕೌಂತೇಯ ಮಱುಮಾತನಿತ್ತು ಮದೀಯ ಸರೋವರದ ತೋಯಮಂ ಕುಡಿ ಕೊಂಡುಯ್: **ಪಂಪಭಾ,** ೮. ೩೯)

ಮಱುಮೆಯ್ – [ನಾ] ಮಱುಭವ (ಈ ಭವದಿಂದಮಾದ ವಾಸನೆ ಮಱುಮೆಯ್ಗಮಕ್ಕುಂ ಅದಱಿಂದೆನಗಂ ಸಮಂತು ಮುನ್ನಿನ ಭವಮೀ ಭವಂ ಮಱುಭವಂ ಸಫಲಂ: **ಆದಿಪು,** ೪. ೫೨)

ಮಱುವಕ್ಕ – [ನಾ] ಎದುರುಪಕ್ಷ (ಗುರು ಗುರುಪುತ್ರ ಶಲ್ಯ ಭಗದತ್ತ ನದೀಸುತರೆಂಬ ಸಂದ ಬೀರರೆ ಮಱುವಕ್ಕಂ ಅಣ್ಣನೊಡನೆ ಇರ್ವರೆ ಕೂಸುಗಳ್: **ಪಂಪಭಾ,** ೧೧. ೧೨)

ಮಱುವಾತು – [ನಾ] [ಮಱು+ಮಾತು] ಎದುರು ಮಾತು, ಉತ್ತರ (ಆ ಮಾತಿಂಗೆ ಮಱುವಾತು ಕುಡಲಱಿಯದೆ ಪಂದೆಯಂ ಪಾವಡರ್ದಂತೆ ಉಮ್ಮನೆ ಬೆಮರುತ್ತುಮಿರೆ: **ಪಂಪಭಾ,** ೨. ೮೨ ವ)

ಮಱೆ – [ನಾ] ಆಶ್ರಯ (ಅದಟಂ ಕೊಂಡಾಡದೆ ಬೇಡಿದರ್ಗೀಯದೆ ಮಱೆಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದ ಅಧಮನದೇತರ್ಕೆ: **ಆದಿಪು,** ೧೨. ೯೭); [ನಾ] ನೆನಪು ಕಳೆದುಕೊ (ನುಡಿಗಳ್ ಮೊಱೆಯಂ ಮಱೆಯುವುದೊಂದು ಕಳ್ಗುಡಿವರಂದಮಿಂತು ಸಿರಿ ಸಾರ್ತರೆ ಸಾರ್ವುದದರ್ಕೆ ಸಂದೆಯಂಬಡದೆ ಜಲಕ್ಕನೀಗಳಱಿದೆಂ ಸಿರಿ ಕಳ್ದೊಡವುಟ್ಟಿತೆಂಬುದಂ: **ಪಂಪಭಾ,** ೨. ೪೯); [ಕ್ರಿ] ಕಣ್ಮರೆ (ಉರದೊಳ್ ಫಣಿ ಕರದೊಳ್ ಬಿಲ್ ಶಿರದೊಳ್ ತೊಱೆ ತೊಱೆಯ ಕೆಲದೊಳ್ ಎಸೆದಿರೆ ಪೆಱೆ ಮುಂಗೊರಲೊಳ್ ಕಱೆ ಮಱೆಯಿಲ್ಲದೆ ದೊರೆಕೊಳೆ: **ಪಂಪಭಾ,** ೮. ೨೪); [ಕ್ರಿ] ಮೈಮರೆ (ಮಱೆದು ಸಾರ್ಚಿದ ನಲ್ಲಳ ತಳ್ತ ತೋಳ್ಗಳಂ ಮೆಲ್ಲಮೆಲ್ಲನೆ ಪತ್ತುವಿಡಿಸಿ: **ಪಂಪಭಾ,** ೪. ೧೨ ಮತ್ತು ೧೨ ವ); [ನಾ] ದೇಹಕ್ಕೆ ಮರೆ ಒದಗುಸುವುದು, ಕವಚ (ಎನಗೆ .. .. ಮಱೆಯಂ ಆಸೆವಡಲ್ ಎಂದು ಅದಟಂ ಅಣಂ ಕುಡನೆ ಕವಚಮಂ ರಾಧೇಯಂ: **ಪಂಪಭಾ,** ೧೨. ೧೮೯)

ಮಱೆಗೆ ವರ್ – [ಕ್ರಿ] ಶರಣಾಗತನಾಗು, ಆಶ್ರಯ ಬೇಡು (ಅದಟಂ ಕೊಂಡಾಡದೆ ಬೇಡಿದರ್ಗೀಯದೆ ಮಱೆಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದ ಅಧಮಂ ಅದೇತರ್ಕೆ ಬಾರ್ತೆ ಜೀವನ್ಮೃತಕಂ: **ಆದಿಪು,** ೧೨. ೯೭)

ಮಱೆಗೊಳ್ – [ನಾ] ಮರೆಯಾಗು, ಕಣ್ಣಿಗೆ ಕಾಣದಾಗು (ಮಱೆಗೊಳೆ ಪೂತ ಕಲ್ಪಲತೆಯಂ ಲಲಿತಾಂಗಿಯ ಗೆತ್ತು ಅಲಂಪಿನಿಂದೆಱಗುವುದುಂ: **ಆದಿಪು,** ೪. ೧೩)

ಮಱೆದ – ಮರೆತೆಯೇನು? (ಮುರನಡಸಿ ಪಿಡಿದು ಕಟ್ಟಿದ ಪರಿಭವಮಂ ಮಱೆದ ನಿನ್ನ ಪೆಡಗೆಯ್ಗಟ್ಟಂ ಶರದಿಂ ಬಿಡಿಸಿದನಲ್ಲನೆ ಸರಿತ್ಸುತಂ: **ಪಂಪಭಾ,** ೬. ೫೩)

ಮಱೆದೊಱಗು – [ಕ್ರಿ] ಮೈಮರೆತು ನಿದ್ರಿಸು (ಅಂತು ಧನುರ್ಧರಾಗ್ರಗಣ್ಯನಾಗಿರ್ದೊಂದು ದಿವಸಂ ತನ್ನ ತೊಡೆಯ ಮೇಲೆ ತಲೆಯನಿಟ್ಟು ಪರಶುರಾಮಂ ಮಱೆದೊಱಗಿದಾ ಪ್ರಸ್ತಾವದೊಳ್: **ಪಂಪಭಾ,** ೧. ೧೦೪ ವ)

ಮಱೆಯಂ ಪುಗು – [ಕ್ರಿ] ಶರಣಾಗು (ಪಗೆ ಸಾಱುವುದುಂ ಕೊಲ್ಲೆಂ ಪಗೆ ಸಾಱಿದ ನಿನ್ನನಾರ ಮಱೆಯಂ ಪೊಕ್ಕುಂ ಪಗೆಯಂ ನೆಱಪನೆ ನೆಱಪುವ ಬಗೆಯೊಳೆ ಪೊಕ್ಕಂ ಕಡಂಗಿ ಕರ್ಣನ ದೊಣೆಯಂ: **ಪಂಪಭಾ,** ೫. ೧೦೦)

ಮಱೆಯಿಸು – [ಕ್ರಿ] ಮೈಮರವೆಯನ್ನುಂಟುಮಾಡು (ಅಖಿಳಭುವನ ಜನನಿಯನಾಗಳ್ ಮಱೆಯಿಸಿ ಮಾಯಾನಿದ್ರೆಯಿಂ ಉಱೆ ಮಾಯಾಶಿಶುವನಿರಿಸಿ ಮುಂದಂಬಿಕೆಯಾ: **ಆದಿಪು,** ೭. ೪೫)

ಮಱೆವೊಗು – [ಕ್ರಿ] ಶರಣಾಗತನಾಗು (ಒತ್ತಿ ತಱುಂಬಿ ನಿಂದ ರಿಪುಭೂಜಸಮಾಜದ ಬೇರ್ಗಳಂ ನಭಕ್ಕೆತ್ತದೆ ಬಂದು ತನ್ನ ಮಱೆವೊಕ್ಕೊಡೆ ಕಾಯದೆ: **ಪಂಪಭಾ,** ೫. ೭೫)

ಮಟಮಟಿಸು – [ಕ್ರಿ] ಕೆರಳಿ ಕೆಂಪಾಗು (ವಿಕಾರಂ ಬೆರಸು ನೆಗಟ್ದಭಿನಯಂಗಳುಂ ಮಟಮಟಿಪ ರೂಪು ಕಣ್ಗಳೊಳ್ ಬೆಳ್ಪನಟಿಯೆ ಸೋಂಕುವ ಕೆಂಪುಗಳುಮಂ ತಮ್ಮ ಕೆಂಪಂ ಕಣ್ಗಳ್ಗೆ ಕೊಟ್ಟು: **ಪಂಪಭಾ,** ೪. ೮೮ ವ)

ಮಟ್ಗಿಸು – [ಕ್ರಿ] ಕಡಿಮೆಗೊಳಿಸು (ನೀನೆನ್ನ ಈ ನಿಡುದೋಳ್ಗಳ ತೀನಂ ಮಟ್ಗಿಸುವೆಯಪ್ಪೊಡೆ ಆನೊಲ್ಲದನೇ: **ಪಂಪಭಾ,** ೨. ೮೧)

ಮಟ್ಗು – [ಕ್ರಿ] ಕುಗ್ಗು (ಇದನಾದಿಪ್ರಭವಂ ಭವಭ್ರಮಣ ದುಃಖೋಗ್ರಾಗ್ನಿಯೊಳ್ ಮಟ್ಗಿದಪ್ಪುದು ಜೀವಂಗಳಂ: **ಆದಿಪು,** ೧೫. ೧೯)

ಮಾಂಕರಿಸು – [ಕ್ರಿ] ತಿರಸ್ಕರಿಸು (ಸುರ ನರ ಕಿನ್ನರ ಉರಗ ನಭಶ್ಚರಕಾಂತೆಯರ್ ಏವರ್ ಎಂದು ಮಾಂಕರಿಸುವ ಕೆಯ್ತದಂದದ ಮುರಾರಿಯ ತಂಗೆಯನಪ್ಪುಕೆಯ್ದು: **ಪಂಪಭಾ,** ೪. ೩೪)

ಮಾಂಗಲ್ಯಗೇಯ – [ನಾ] ಮಂಗಳಗಾಯನ (ಭೃಂಗರುತಿಗಳ್ ಮಾಂಗಲ್ಯಗೇಯಂಗಳ ಅಂದಮನೀಯೆ: **ಪಂಪಭಾ,** ೭. ೭೭)

ಮಾಂಗಲ್ಯವೇಷ – [ನಾ] ಮಂಗಳಕರವಾದ ಉಡುಪು (ಇದಿರೊಳ್ ಮಂಗಳತೂರ್ಯನಿನದಂ ಕೈಗಣ್ಮೆ ಮಾಂಗಲ್ಯವೇಷದ ಕಾಂತಾತತಿ ಮಂಗಳೋಪಕರಣ ದ್ರವ್ಯಂಗಳಿಂದೊಪ್ಪೆ: **ಆದಿಪು,** ೯. ೧೩೩)

ಮಾಂಗಾಯ್ – [ನಾ] ಅಲಂಕಾರಕ್ಕಾಗಿ ಹಾಕಿದ ಮಾವಿನ ಕಾಯಿ (ಚೆಂಬೊನ್ನ ಮಾಂಗಾಯ ಗೊಂಚಳ್ಗಳ

ಪೊಂದಳಿರ ತೊಂಗಲ್ಗಳ ಸುತ್ತುಂಗೊಂಡ ಸರಿಗೆಯ ಮುತ್ತಿನ ಬುಂಭುಕಂಗಳ ನಡುವೆ: **ಆದಿಪು,** ೮. ೧೫ ವ);

ಮಾಂಡಳಿಕ – [ನಾ] ಸಾಮಂತ ರಾಜ (ಮೀಱುವೆವೆಂಬ ಮಾಂಡಳಿಕರ್ ಈಯದರೆಂಬ ಅದಟರ್ ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ದಾಱಿ ನಭಕ್ಕೆ ಪಾಱಿದುದು: **ಪಂಪಭಾ,** ೧. ೧೧೯)

ಮಾಂದಿಸು – [ಕ್ರಿ] ಮಂದಗೊಳಿಸು, ಆರಿಸು (ಜ್ಯೋತ್ಸ್ನಾಮೃತ ಅಚ್ಛಜಳಪರಿಷೇಕಂ ಮಾಂದಿಸುವಂತಾದುದು ನೃಪನಂದನೆಯೆರ್ದೆಯೊಳಗೆ ಬಳೆದ ಶೋಕಾನಳನಂ: **ಆದಿಪು,** ೩. ೪೯)

ಮಾಂಸಳಿತ – [ಗು] ಪುಷ್ಟವಾದ (ಕುಳಶೈಲೋನ್ನತಂ ಉಗ್ರಶಾತ್ರವ ಶಿರೋಮಾಣಿಕ್ಯಮಾಳಾಂಶುಮಾಂಸಳಿತ ಶ್ರೀಪದಪೀಠ ರತ್ನಕಿರಣಂ: **ಆದಿಪು,** ೧೨. ೧೨೦)

ಮಾಕಂದ – [ನಾ] ಮಾವು (ನೀನುಮಾಮುಮೊಡನಿರ್ದ ಇರವಂ ನೆನೆ ಬಾಳಚೂತಮೇ ಎಂದು ಮಾಕಂದಮಹೀರುಹಮಂ ಅಪ್ಪುಕೆಯ್ದು: **ಆದಿಪು,** ೧೧. ೧೩೨ ವ)

ಮಾಗಧ – [ನಾ] ಮಗಧ ದೇಶದ ರಾಜ (ವಾಕ್ಸೌಂದರ್ಯದೆ ಪೋಲ್ತಂ ಪುರುನಂದನನನಂ ಪೊಗೞ್ವ ಮಾಗಧಂ ಮಾಗಧನಂ: **ಆದಿಪು,** ೧೨. ೧೧೫); ರಾಜರ ಕೀರ್ತಿಯನ್ನು ಹೊಗಳುವವನು (ನಿರಂತರಂ ಕಡಿಕಡಿದಿತ್ತ ಪೊನ್ನೆ ಬುಧ ಮಾಗಧ ವಂದಿಜನಕ್ಕೆ ಕೊಟ್ಟ ಕೋಡೆ ಎಡಱದೆ ಬೇಡಿಂ ಓಡಿಂ ಇದು ಚಾಗದ ಬೀರದ ಮಾತು ಕರ್ಣನಾ: **ಪಂಪಭಾ,** ೧. ೯೯);

ಮಾಟ – [ನಾ] ನಿರ್ಮಿತಿ (ಲಲಿತೋನ್ನತಮಣಿಮಯ ಕೂಟದಂದಮದು ಪಲವುಂ ದೇಸೆಯ ಮಾಟದಂದಂ: **ಆದಿಪು,** ೪. ೩೦ ಪದ್ದಳಿ ರಗಳೆ); [ನಾ] ಕೃತಕವಾದ (ಮೆಯ್ಗಲಿಯೊರ್ವಂ ಪಿಡಿದು ತಲೆಯಂ ಇಟ್ಟು ಅಟ್ಟೆಯೊಳ್ ಅಗ್ಗಲಿಸಿದ ಮುಳಿಸಿಂ ಮಾಟದ ತಲೆಯಿಟ್ಟು ಆಡುವವನಂ ಇನಿಸು ಪೋಲ್ತನುಗೆಯ್ದಂ: **ಪಂಪಭಾ,** ೧೦. ೮೫); [ಗು] ಆಕರ್ಷಕ (ವರದಿಗ್ವನಿಗೆ ಮಾಟದ ಕುರುಳ್ ಆ ತ್ರೈಭುವನಕಾಂತೆಗಂ ದಲ್ ಕಂಠಾಭರಣಂ ಎನೆ ಪರೆದ ತನ್ನಧ್ವರಧೂಮದೆ ಕರಿದು ಮಾಡಿದಂ ನಿಜಯಶಮಂ: **ಪಂಪಭಾ,** ೧೪. ೪೪)

ಮಾಡ – [ನಾ] ಮನೆ (ನಿಮ್ಮಯ್ಯಂ ಧೃತರಾಷ್ಟ್ರನ ಬೆಸದಲ್ ಮುನ್ನಮೆ ಮಾಡಮಂ ಸಮೆದಿಟ್ಟಿಂ ಅಲ್ಲಿಗೆ ಬಿಜಯಂಗೆಯ್ಯಿಂ: **ಪಂಪಭಾ,** ೩. ೨ ವ)

ಮಾಡಲಾರ್ತನಿಲ್ಲಾ – ಮಾಡಲು ಶಕ್ಯನಾಗಲಿಲ್ಲವೇ (ತೊಟಲ್ದು ನಾರ್ಗಳನುಡಲ್ ತರುತಿರ್ದಲೆ ಮಾಡಲಾರ್ತನಿಲ್ಲಾ ಆಗಳೆ ಕೋಪಮಂ ನಿನಗೆ ಸಂಚಿತಶೌರ್ಯಧನಂ ಧನಂಜಯಂ: **ಪಂಪಭಾ,** ೭. ೪೭)

ಮಾಡಿದಂ – [ನಾ] ಮಾಡಿದವನು (ನೀಳ್ದ ಮಾವಿನ ಪೋಟಱಂದದ ಕಣ್ಗೆ ಬಾಷ್ಪಜಲಮಂ ಚಿತ್ತಕ್ಕೆ ಸಂತಾಪಮಂ ನಿನಗಂ ಮಾಡಿದವನಾತಂ ಆತನೆ ವಲಂ ಗಂಧೇಭವಿದ್ಯಾಧರಂ: **ಪಂಪಭಾ,** ೪. ೬೪)

ಮಾಡು – [ಕ್ರಿ] ಸೃಷ್ಟಿಸು (ಮಾಡುವ ಕಿಡಿಸುವ ಗಸಣಿಗೆ ನಾಡೆಯುಮದು ಪೊಱಗು ಸಹಜನಿಯತಸ್ಥಿತಿ ನಾಡಾಡಿಯ ನರರ್ಗದು ಬಗೆಯಲ್ ಕೂಡದು: **ಆದಿಪು,** ೧. ೪೬); [ಕ್ರಿ] ಉಂಟಾಗಿಸು (ಇದು ನಿನ್ನೀ ಅಗಲ್ದುರದೊಳ್ ಪೊದಳ್ದು ತನತೊಂದು ಜನ್ಮಮಂ ಸಫಳಂ ಮಾಟ್ಟುದು: **ಆದಿಪು,** ೧೨. ೧೧೯)

ಮಾಣ್ – [ಕ್ರಿ] ಸುಮ್ಮನಿರು (ಕೋಟಿ ತೆಱದಿಂದಮೆಸವೀ ನಾಟಕಮಂ ತೋಱೆ ಮಾಣ್ದಳಿಲ್ಲಳ್ ಬಗೆಯೊಳ್ ನಾಟುವಿನಂ ಅಮರಿ ಸಂಸ್ಕೃತಿನಾಟಕಮುಮನೆನಗೆ ನೆಱೆಯೆ ತೋಱಿದಳೀಗಳ್: **ಆದಿಪು,** ೯. ೪೫); [ಕ್ರಿ] [ಮಾತು] ನಿಲ್ಲಿಸು (ಎಂದು ನುಡಿವನಿತುಮಂ ನುಡಿದು ಮಾಣ್ದ ಮಗಧಾಮರನಂ ದೃಷ್ಟಪರಂಪರರಪ್ಪ ಕುಲವೃದ್ಧರೆಯ್ದೆವಂದು: **ಆದಿಪು,** ೧೨. ೧೦೨ ವ); [ಕ್ರಿ] ಬೇಡ (ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊದನೀವೆನೆಂದನೆ ನೊಂದು ಅಃ ಎಂದನೆ ಸೆರಗಿಲ್ಲದೆ ಪಿಡಿಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ: **ಪಂಪಭಾ,** ೧. ೧೦೨); [ಕ್ರಿ] ನಿಂತುಹೋಗು (ಮದನನ ಕಾಯ್ಪು ಮಾಣ್ಗೆ ಸರಸೀರುಹಜನ್ಮನ ಮೆಚ್ಚು ತೀರ್ಗೆ ಕೋಳ್ಗುದಿ ಮನದಿಂದಂ ಇಂದು ಪೊಱಮಾಱುಗೆ: **ಪಂಪಭಾ** ಪರಿಷತ್ತು, ೫. ೧೮); ಸುಮ್ಮನಿರು (ಅಂತು ಗುರುನಂದನಂ ಮರುನ್ನಂದನವಿರಚಿತ ನಿಶಾತ ವಿಶಿಖಪಂಜರಮನಟೆದು ಕಟಕುಟಂ ಮಾಡಿಯುಂ ಅನಿತಱೊಳ್ ಮಾಣದೆ: **ಪಂಪಭಾ,** ೧೨. ೬೮ ವ); ತಡೆ (ಮಾಣಲ್ಕೆಡೆಯುಂಟೇ ಸಿಲ್ಕಿದೈ ಕೊಂದಪ್ಪೆಂ ಎನ್ನಂ ಮುಳಿಯಿಸಿ ನಿನಗಿಂ ದ್ರೋಹ ಬಾಟಿಸ್ವಾಸೆಯುಂಟೇ: **ಪಂಪಭಾ,** ೧೩. ೭೮)

ಮಾಣದ – [ಗು] ತಡೆಯದ (ಭುವನಕ್ಕೆ ಕುಶಲಮಂ ಮಾಡುವ ನಿನಗೇನೆಂದು ಕುಶಲಮೇ ಎಂಬೆಂ ಪೇೞ್ ಭುವನನುತ ಮಾಣದ ಅರಿನೃಪಭುವನಕ್ಕೆ ಅವ್ವಳಿಪ ತೋಳ್ಗೆ ಕುಶಲಮೆ ನಿನ್ನಾ: **ಆದಿಪು,** ೧೩. ೨೫)

ಮಾಣದೆ – ಹಿಂಜರಿಯದೆ (ಪುತ್ರಕಳತ್ರಪರಿಗ್ರಹಕ್ಕೆ ಮಾಣದೆ ಬಗೆದರ್ಪುದು ಒಲ್ಲೆನಿದಂ ಎಂದೊಡೆ ಸೃಷ್ಟಿಯೆ ಕೆಟ್ಟುಪೋಗದೇ: **ಆದಿಪು,** ೮. ೧೧)

ಮಾಣವಕ – [ನಾ] ಇಪ್ಪತ್ತು ಎಳೆಗಳ ಮುತ್ತಿನ ಹಾರ (ಗುಚ್ಛನಲಕ್ಷತ್ರಮಾಳಾ ಅರ್ಧಗುಚ್ಛ ಮಾನವಕ ಅರ್ಧಮಾಣವಕಗಳೆಂಬ ಪನ್ನೊಂದು ನಾನಾರತ್ನದ ಸುವರ್ಣಪದಕವಿರಚನಾದಿಭೇದದಿಂ: **ಆದಿಪು,** ೮. ೫೪ ವ)

ಮಾಣಿಕ – [ನಾ] ಪದ್ಮರಾಗ, ನವರತ್ನಗಳಲ್ಲಿ ಒಂದು (ಮುತ್ತಿನ ಪಚ್ಚೆ ಮಾಣಿಕದ ವಜ್ರದ ಕೇಱಿಯೊಳ್ ಒಂದಿ ಸಾಂದಿನೊಳ್ ಕತ್ತುರಿಯೊಂದು ಕೋಟಿಗೆಸಱೊಳ್ ಓಕುಳಿ ಚಂದನ ಗಂಧವಾರಿಯೊಳ್: **ಪಂಪಭಾ,** ೧೪. ೨೦)

ಮಾಣಿಕಚಟ್ಟ – [ನಾ] ರತ್ನಪರೀಕ್ಷಕ (ಮಾಣಿಕಚಟ್ಟಂ ನೀರಂಜಿಸಿ ದಳಿವಿಡಿದ ಮಹಾರತ್ನದ ದೊರೆಗೆ ವಂದುದು ಸ್ತ್ರೀರತ್ನಂ: **ಆದಿಪು,** ೪. ೪೨)

ಮಾಣಿಸಿಂ – [ಅ] ನಿಲ್ಲಿಸಿರಿ (ಸಾಲದೆ ಜೂದು ನಿಮ್ಮೊಳಗಿದೇಂ ಗಳ ಮಾಣಿಸಿಂ: **ಪಂಪಭಾ,** ೬. ೭೪)

ಮಾಣಿಸು – [ಕ್ರಿ] ತಡೆಗಟ್ಟು (ನಿನ್ನೊಡನೆ ಭೋಗಿಸಲೀಯದೆ ಕೆಮ್ಮನೆ ಎನ್ನಂ ಉಯ್ವ ಅಂತಕನೆಂಬ ಬೂತಂ ಎಲೆ ಮಾಣಿಸಲಾಗದೆ: **ಆದಿಪು,** ೩. ೫); [ಕ್ರಿ] ನಿಲ್ಲುವಂತೆ ಮಾಡು (ವ್ಯಾಳಗಜಂಗಳಂ ಅಗ್ಗದ ಸೂಳೆಯರ ಒಕ್ಕಲಂ ಅನರ್ಘ್ಯವಸ್ತುಗಳಂ ಇಳಾಪಾಲಂ ಸೋಲ್ತೊಡೆ ಜೂದಿನ

ಕೇಳಿಯಂ ಆ ಕೇಳಿಯನಿತಱೊಳ್ ಮಾಣಿಸಿದರ್: **ಪಂಪಭಾ,** ೭. ೩)

ಮಾಣ್ದಳಿಲ್ಲಳ್ – [ಅವಳು] ಸುಮ್ಮನಾಗಲಿಲ್ಲ (ಕೋಟಿತೆಱದಿಂದಂ ಎಸೆವ ನಾಟಕಮಂ ತೋಱೆ ಮಾಣ್ದಳಿಲ್ಲಳ್: **ಆದಿಪು,** ೯. ೪೫)

ಮಾಣ್ದಿರ್ – [ಕ್ರಿ] ಕೈಬಿಡು, ಕಡೆಗಣಿಸು (ಆ ಶಕ್ರಪುತ್ರನಂ ಆ ಕೊಂದೊಡೆ ಧರ್ಮಪುತ್ರನಟಿಗುಂ ತಾಯೆಂದೆ ಮುಂ ಕೊಂತಿ ಬಂದಿನಿಸಂ ಪ್ರಾರ್ಥಿಸಿ ಪೋದಳ್ ಎನ್ನಂ ಅದಂ ನಾಂ ಮಾಣ್ದಿರ್ದೆಂ: **ಪಂಪಭಾ,** ೧೨. ೧೯೬)

ಮಾಣ್ಬಾ – ತಡಮಾಡುವೆಯಾ? (ನಿನ್ನರಸನ ಅಣುಗದಮ್ಮನ ನಿನ್ನ ತನೂಭವನ ಸಾವಂ ಕಂಡುಂ ಮಾಣ್ಬಾ: **ಪಂಪಭಾ,** ೧೨. ೧೭೪)

ಮಾಣ್ಬುದು – [ನಾ] ಸಾಧ್ಯವಿಲ್ಲ ಎಂಬುದು (ಎನಗೆ ಇಂ ಮಾಣ್ಬುದು ಸೂೞ್ ಖಾಂಡವಮಂ ಆಂ ತಳ್ವಿಲ್ಲದೆ ಇಂದೂಡುವೆಂ: **ಪಂಪಭಾ,** ೫. ೭೪); [ನಾ] ಬಿಟ್ಟು ಬಿಡುವುದು (ದಂಡಮಂ ನಿನಗೆ ಮಾಡಿದ ಅಕೃತ್ಯರಂ ಅಂತು ಮಾಣ್ಬುದೇ ಬಗೆ: **ಪಂಪಭಾ,** ೮. ೮೮)

ಮಾತಂಗ – [ನಾ] ಆನೆ (ಕದನಪ್ರಾರಂಭಶೌಂಡಂ ರಿಪುನೃಪಬಲ ದಾವಾನಲಂ ವೈರಿಭೂಭೃತ್ ಮದವತ್ ಮಾತಂಗ ಕುಂಭಸ್ಥಳದಳನ ಖರ ಉಗ್ರ ಅಸಿ ಪಂಚಾಸ್ಯಧೈರ್ಯಂ: **ಪಂಪಭಾ,** ೬. ೭೭)

ಮಾತಂಗವಿರೋಧಿ – [ನಾ] ಆನೆಯ ಶತ್ರು, ಸಿಂಹ (ಏಂ ಗಾವಿಲನಯೊ ನಿನ್ನಂ ನುಂಗುವುದರ್ಕೆ ಇವರಂ ಎತ್ತವೇೞ್ಕುಮೇ ನೆರಮಂ ಸಂಗಳಿಸಲ್ವೇೞ್ಕುಮೇ ಮಾತಂಗ ವಿರೋಧಿಗೆ ಕುರಂಗಸಂಗರಧರೆಯೊಳ್: **ಪಂಪಭಾ,** ೩. ೧೭)

ಮಾತಂಗಾಸುರವೈರಿ – [ನಾ] ಮಾತಂಗನೆಂಬ ರಾಕ್ಷಸನನ್ನು ಕೊಂದವನು, ಈಶ್ವರ (ಮಾತಂಗಾಸುರವೈರಿಯಲ್ಲಿ ಪಡೆದಂ ಬಿಲ್ಲಂ ಧನುರ್ವಿದ್ಯೆಗೆ ಅಂತಾತಂಗಂ ಅಗ್ಗಳಂ ಆರುಮಿಲ್ಲ: **ಪಂಪಭಾ,** ೧೦. ೩೪)

ಮಾತಡಕು – [ಕ್ರಿ] ಸಂದೇಶ ತಲುಪಿಸು (ಒದವಿದ ಬೇಟವಪ್ಪೊಡೆನಗತ್ತಳಗಂ ಬಗೆವೇೞ್ಪೊಡೆನ್ನ ಮೇಳದ ಕೆಳೆಯರ್ಕಳಿಲ್ಲ .. .. ಓತು ಮಾತಡಕಲೊಂದಿದ ದೂದವರಿಲ್ಲ: **ಪಂಪಭಾ,** ೪. ೭೯)

ಮಾತಾಳಿ – [ನಾ] ಮಾತಿನ ಮಲ್ಲ ಮತ್ತು ಇಂದ್ರನ ಸಾರಥಿ ಮಾತಲಿ (ಆದಿತ್ಯನ ಸಾರಥಿ ಬೞಿಗಾದಂ ಮಾತಾಳಿ ಮಾತುಗೆಟ್ಟಂ: **ಪಂಪಭಾ,** ೧೨. ೧೭೨)

ಮಾತು – [ನಾ] ಪ್ರಶ್ನೆ (ಎನ್ನ ಮಾತಿಂಗೆ ಎಲೆ ಕೌಂತೇಯ ಮಱುಮಾತನಿತ್ತು ಮದೀಯ ಸರೋವರದ ತೋಯಮಂ ಕುಡಿ ಕೊಂಡುಯ್: **ಪಂಪಭಾ,** ೮. ೩೯); [ನಾ] ಗಾದೆ (ಕನಕನ ಬೇಳ್ವೆ ತಗುಳ್ದುದು ಕನಕನಂ ಎಂಬೊಂದು ಮಾತು ಧರೆಗೆಸೆಯೆ: **ಪಂಪಭಾ,** ೮. ೪೪)

ಮಾತುಲುಂಗ – [ನಾ] ಮಾದಲ ಹಣ್ಣು (ಸಿತದೂರ್ವಾಂಕುರ ಮಾತುಲುಂಗ ನಳಿನೀ ಭೃಂಗಾರ ಗೋರೋಚನಾಕ್ಷತ: **ಆದಿಪು,** ೧೬. ೧೦)

ಮಾತುಳುಂಗ – [ನಾ] ಮಾತುಲುಂಗ, ಮಾದಲ (ಫಳವ್ರಾತದಿಂ ನೆಲನಂ ಮೋದುವ ಮಾತುಳುಂಗಮೆಸೆಗುಂ ವಿದ್ಯಾಧರೋದ್ಯಾನದೊಳ್: **ಆದಿಪು,** ೧. ೬೭)

ಮಾತೃಚರ – [ನಾ] ಹಿಂದಿನ ಜನ್ಮದ ತಾಯಿ (ನೀಂ ಲಲಿತಾಂಗನೆಯಾದಂದು ಮಾತೃಚರನೆಂದಱಿದು ಉತ್ತುಂಗವಿಭವಂಗಳೆಸೆಯೆ ಮನಂಗೊಳೆ ಪೂಜಿಸಿದೆಂ: **ಆದಿಪು** ೩. ೫೯)

ಮಾದುರ – [ನಾ] [ಮಹಾಧುರ] ದೊಡ್ಡ ಯುದ್ಧ (ಬಲಿದ ಬಯಕೆಯಂ ಮಾದುರದೊಳ್ ಕಳೆವಂತನ್ನೆಗಂ ಇವನೊಳ್ ಕಳೆವೆಂ ನಿನ್ನೊಂದು ಮುಳಿಸಂ: **ಪಂಪಭಾ,** ೮. ೭೨)

ಮಾದೇವ – [ನಾ] ಮಹಾದೇವ, ಶಿವ (ಮಾದೇವನಿತ್ತ ನಿಜೋಗ್ರಾಸ್ತ್ರದೆ ದೈತ್ಯರೆಂಬ ಪೆಸರಿಲ್ಲದಂತುಟಂ ಮಾಡಿ: **ಪಂಪಭಾ,** ೮. ೨೮)

ಮಾದೇವಿ – [ನಾ] ಮಹಾದೇವಿ, ವಲ್ಲಭೆ (ಇದಂದು ಲಲಿತಾಂಗನೆನೆ ಸಂದ ಮದ್ರೂಪಂ ಈ ಮದಾಲಸವಿಲೋಲಲೋಚನೆ ದಲ್ ಎನ್ನ ಮಾದೇವಿ: **ಆದಿಪು,** ೪. ೭); [ನಾ] [ಜೈನ] ಅಚ್ಯುತೇಂದನ ಎಂಟು ಮಂದಿ ಪ್ರಧಾನದೇವಿಯರು (ಮಾದೇವಿಯರೆಣ್ಬರ್ ಮದನೋದಯಮಂ ಕುಡೆ ಮನಃಪ್ರವೀಚಾರದೊಳಂತಾ ದೇವಂ ಸಂಚಿತ ಪುಣ್ಯೋದಯದಿಂ ಮಹಿಮೆಯಂ ಕೈಕೊಂಡಂ: **ಆದಿಪು,** ೬. ೧೪); [ನಾ] ಮಹಾತಾಯಿ (ಪೆತ್ತಳ್ ಕೊಂತಿಯೆ ಮಕ್ಕಳ್ವೆತ್ತರ್ ಎಂಬವರೆ ಕೊಂತಿಮಾದೇವಿಗಂ ಒಂದುತ್ತರಮಾದಳ್ ಕರ್ಣಂಬೆತ್ತಕ್ಕಳ್: **ಪಂಪಭಾ,** ೧೨. ೧೨೫)

ಮಾದೇವರ ಮುಂದಣಾತಂ – [ನಾ] ಮಹಾದೇವ ಅಥವಾ ಶಿವನ ಮುಂದಿರುವವನು, ಬಸವ, ಎತ್ತು ಅಥವಾ ದನ (ಮಾದೇವರ ಮುಂದಣಾತಂ ಎನಲಲ್ಲದೆ ಪೇೞ್ ಪೆಱತೇನನೆಂಬುದೋ: **ಪಂಪಭಾ,** ೪. ೯೬)

ಮಾದ್ಯತ್ – [ಗು] ಮದಿಸಿದ (ಇಲ್ಲಿ ಮಾದ್ಯತ್ ರದನೀಂದ್ರ ಸ್ಥೂಳದಂತಾಹತಿವಿದಳಿತ ಗೋಶೀರ್ಷಸಾರ ದ್ರವಾಮೋದದಿಂ ಎತ್ತಂ ಗಂಧವಾಹಂ ಮಗಮಗಿಸೆ: **ಆದಿಪು,** ೧೩. ೬೮)

ಮಾದ್ಯದ್ಗಜ – [ನಾ] [ಮಾದ್ಯತ್+ಗಜ] ಮದ್ದಾನೆ (ಕಾಲ್ಗಾಪು ಕಾಲ್ಗಾಪಿನೊಳ್ ಜೋದರ್ ಜೋದರೊಳ್ ಆನೆ ಆನೆಯೊಳ್ ಅಗುರ್ವಪ್ಪನ್ನೆಗಂ ಕಾದೆ ಕಣ್ಗೆ ಆದಂ ಚೆಲ್ವೆಸೆದತ್ತು ಮೂಱು ನೆಲೆಯಿಂ ಮಾದ್ಯದ್ಗಜೇಂದ್ರಾಹವಂ: **ಪಂಪಭಾ,** ೧೦. ೯೩)

ಮಾದ್ಯದ್ರದನೀಂದ್ರ – [ನಾ] [ಮಾದ್ಯತ್+ರದನೀಂದ್ರ] ಮದ್ದಾನೆ (ಮಾದ್ಯದ್ರದನೀಂದ್ರ ಸ್ಥೂಳದಂತಾಹತಿ ವಿದಳಿತ ಗೋಶೀರ್ಷಸಾರದ್ರವಾಮೋದದಿಂ ಎತ್ತಂ ಗಂಧವಾಹಂ ಮಗಮಗಿಸೆ: **ಆದಿಪು,** ೧೩. ೬೮)

ಮಾದ್ರಿ – [ನಾ] ಪಾಂಡುವಿನ ಹೆಂಡತಿ, ಮದ್ರರಾಜನ ಮಗಳು ಹಾಗೂ ಶಲ್ಯನ ಸೋದರಿ (ಅಂತು ಸ್ವಯಂಬರದೊಳ್ ನೆೞೆದರಸುಮಕ್ಕಳೊಳ್ ಅಪ್ಪುಕೆಯ್ದ ಕುಂತಿಯೊಡನೆ ಮದ್ರರಾಜನ ಮಗಳ್ ಶಲ್ಯನನೊಡವುಟ್ಟಿದ ಮಾದ್ರಿಯುಮಂ ಒಂದೆ ಪಸೆಯೊಳಿರಿಸಿ: **ಪಂಪಭಾ,** ೧. ೧೦೬ ವ)

ಮಾಧವಸಮಯ – [ನಾ] ಮಧುಮಾಸ, ವಸಂತ (ಅವಿರಳರೋಮಾಂಚದೆ ಮಾಧವಸಮಯದೊಳಲರ್ದ ಚೂತಲತೆಯನೆ ಪೋಲ್ತಳ್: **ಆದಿಪು,** ೪. ೨೩)

ಮಾಧವೀ – [ನಾ] ವಾಸಂತಿ, ಮೊಲ್ಲೆ, ಇರುವಂತಿಗೆ (ಮತ್ತೊರ್ವಳ್ ಮಾಧವೀಲತಾಲಲಿತೆ: **ಆದಿಪು,** ೧೧. ೧೧೧ ವ)

ಮಾಧ್ಯಮಿಕಮತ – **[ನಾ]** ಶೂನ್ಯವಾದ, ಬೌದ್ಧಮತದ ಒಂದು ಪಂಗಡ (ಲೋಕಾಯತಿಕ ಯೋಗಾಚಾರ ಮಾಧ್ಯಮಿಕಮತ ವಿತಥಾಭಿಧಾಯಿಗಳ್ ಜೀವಾಭಾವಮನೆ ಪಿಡಿಯಚ್ಚುವಿಡಿದು **ಆದಿಪು,** ೨. ೭ ವ)

ಮಾಧ್ಯಸ್ಥವೃತ್ತಿ – **[ನಾ]** [ಜೈನ] ದುಷ್ಟರ ಬಗ್ಗೆ ವ್ರತಸ್ಥರು ಇರಿಸಿಕೊಳ್ಳಬೇಕಾದ ತಟಸ್ಥ ಭಾವನೆ (ಸಕಳಶರೀರಗುಣಾಧಿಕ ದುಃಖಾರ್ದಿತಾವಿನೀತರೊಳ್ ಮೈತ್ರಿಪ್ರಮೋದಕಾರುಣ್ಯ ಮಾಧ್ಯಸ್ಥವೃತ್ತಿಗಳಂ ಭಾವಿಸುತ್ತುಂ: **ಆದಿಪು,** ೯. ೧೩೦ ವ)

ಮಾನ – **[ನಾ]** ಅಹಂಕಾರ (ಮಾನಮನೆಂತುಂ ಮಿಥ್ಯಾಜ್ಞಾನಿಗಳೆರ್ದೆಯೊಳಗೆ ನೆಲಸಲೀಯದೆ ನಾಲ್ಕುಂ ಮಾನಸ್ತಂಭಂಗಳ್ ರತ್ನಾನದ್ಧಂಗಳ್ ನಿರಂತರಂ ಸೊಗಯಿಸುಗುಂ: **ಆದಿಪು,** ೧೦. ೨೩ ವ)

ಮಾನಕಷಾಯ – **[ನಾ]** [ಜೈನ] ನಾಲ್ಕು ಮಾನಸಿಕ ದೋಷಗಳಲ್ಲಿ ಒಂದು (ಅಂತಃಕರಣದೊಳಿನಿಸಾನುಂ ನಿಂದುದೊಂದು ಮಾನಕಷಾಯಂ ಮುನಿಪತಿಗೆ ಪೋಗೆ ಪುಟ್ಟಿದುದು ಅನಂತವಸ್ತುಪ್ರಕಾಶಿಕೇವಳಬೋಧಂ: **ಆದಿಪು,** ೧೪. ೧೪೫)

ಮಾನಭಂಗ – **[ನಾ]** ಅವಮಾನ (ಭರತಂಗೆಱಗುವರೆಂಬಿದೆ ಪರಿಭವಂ ಎನಗಿಂತುಂ ಮಾನಭಂಗಂ: **ಆದಿಪು,** ೧೪. ೩೯)

ಮಾನಸ – **[ಗು]** ಮಾನಸಿಕವಾದ, ಮನಸ್ಸಿನ (ದುಷ್ಕೃತಂ ಸಡಿಲ್ದೊಡೆ ಪಡೆಗುಂ ಮಾನುಷ್ಯಮನತಿದಾರುಣ ಮಾನಸ ಶಾರೀರ ದುಃಖಪೀಡಿತನಕ್ಕುಂ: **ಆದಿಪು,** ೯. ೪೮); ಮಾನಸ ಸರೋವರದಲ್ಲಿ ಹಂಸದ ಹಾಗೆ ಮನಸ್ಸಿನಲ್ಲಿ ಸರಸ್ವತಿಯು ಅರಿಕೇಸರಿಯ ಮನಸ್ಸಿನಲ್ಲಿ ಮಾನಸ ಪುತ್ರ ಎಂಬ ಭಾವನೆಯಿಂದ ಅಗಲಲಾರದೆ ನಿಲ್ಲಲು (ಮಾನಸದೊಳ್ ಹಂಸೆಯವೋಲ್ ಮಾನಸವಾಗ್ವನಿತೆ ತನ್ನ ಮಾನಸದೊಳಿವಂ ಮಾನಸವೆಂದಗಲದೆ ನಿಲೆ: **ಪಂಪಭಾ,** ೨. ೩೬); **[ನಾ]** ಮನುಷ್ಯ (ಮಾನಸಿಕೆಯೆ ದೊರೆಗಿಡೆ ನೀಂ ಮಾನಸನೆನೆ ನೀರೊಳೆಲವೊ ನೀನುಂ ಮೀನೆಂಬೀ ನೆವದಿರ್ದೆ: **ಪಂಪಭಾ,** ೧೩. ೭೯) [ಡಿಎಲ್ಎನ್ **'**ನೀಂ ಮಾನಸ**'** ಎಂಬುದರ ಬದಲು **'**ನೀರ್ಮಾನಸ**'** ಎಂಬ ಪಾಠವನ್ನೊಪ್ಪಿ ಅದಕ್ಕೆ ಜಲಚರ ಎಂದು ಅರ್ಥ ನೀಡುತ್ತಾರೆ: **'ದೀಪಿಕೆ',** ಪು. ೫೪೧)

ಮಾನಸಗತಿ – **[ನಾ]** ಮನುಷ್ಯಜನ್ಮ (ಚಿಂತಾ ಶೋಕ ವಿಷಾದ ಭ್ರಾಂತಿಸಮುದ್ಭೂತದುಃಖದಿಂ ನರಕದೊಳೊರಂತೆ ವಲಂ ಮಾನಸಗತಿ: **ಆದಿಪು,** ೯. ೪೯)

ಮಾನಸರೂಪುಗೊಳ್ – **[ಕ್ರಿ]** ಮನುಷ್ಯಾಕೃತಿಯನ್ನು ತಾಳು (ಎರಡು ಪೋಟುಮಂ ಒಂದು ಕೆಯ್ಯೊಳೆ ಪಿಡಿದೊಡೆ ಒಂದೊಂದಱೊಳ್ ಸಂದಿಸಿ ಮಾನಸರೂಪುಗೊಂಡೊಡೆ: **ಪಂಪಭಾ,** ೬. ೨೬ ವ)

ಮಾನಸರ್ಕಳ್ – **[ಗು]** ಮನಸ್ಸುಳ್ಳವರಾಗಿ (ಪರಲೋಕಪ್ರಾಪ್ತನಾದೊಡೆ ಗಾಂಗೇಯನುಂ ಸತ್ಯವತಿಯುಂ ಅತ್ಯಂತಶೋಕಾನಲ ದಹ್ಯಮಾನ ಮಾನಸರ್ಕಳಾಗಿ ಆತಂಗೆ ಪರಲೋಕಕ್ರಿಯೆಗಳಂ ಮಾಡಿ: **ಪಂಪಭಾ,** ೧. ೮೦ ವ)

ಮಾನಸವಾಟ್ – **[ನಾ]** [ಮಾನಸ+ಬಾಟ್] ಮನುಷ್ಯ ಜನ್ಮ, ಜೀವನ (ಈತನಿಲ್ಲದೆ ಪೇಟ್ ಮಾನಸವಾಟ ಮೋಹಮೆನಗಿನ್ನೇಬಾರ್ತೆ: **ಆದಿಪು,** ೩. ೫೨)

ಮಾನಸಹಂಸಿ – ಮಾನಸ ಸರೋವರದ ಹಂಸ (ರಾಜಸುತೆಡೆಯಂ ನಯದಿಂದವುಯ್ದಳ್ .. .. ಪದ್ಮಾಂತರದಿಂದಮಿಂಬಜೆದು ಮಾನಸಹಂಸಿಯನುಯ್ವ ಮಾರ್ಗದಿಂ: ಪಂಪಭಾ, ೩. ೫೭)

ಮಾನಸಿಕೆ – **[ನಾ]** ಅಂತಃಕರಣ (ಮಾನಸೆಯಣಮಲ್ಲಳಿಂತು ಮರವಾನಸೆಯಾಗಿಯುಂ ಆದುದೊಂದು ಮಾನಸಿಕೆ: **ಆದಿಪು,** ೧೨. ೩೮); **[ನಾ]** ಮಾನವೀಯತೆ (ಪಾಂಡವರ್ ತನ್ನ ಮಾನಸಿಕೆಯಂ ನಚ್ಚಿ ತನ್ನ ಪೊಟಿಲೊಳ್ ಅಜ್ಞಾತವಾಸಂ ಮಾಡಿದುದುಮಂ ದಕ್ಷಿಣೋತ್ತರ ಗೋಗ್ರಹಣದೊಳ್ ತನಗಾಗಿ ಕಾದಿ ತುಱುವಂ ಮಗುಟ್ಚುದುಮಂ ನೆನೆದು: **ಪಂಪಭಾ,** ೧೨. ೧೭ ವ)

ಮಾನಸಿಕ್ಕೆ – **[ನಾ]** ಹಿರಿಮೆ (ನೆಗಟ್ತೆವೆತ್ತ ಪತಿಭಕ್ತಿಯ ಮೈಮೆಯ ಮಾನಸಿಕ್ಕೆಯಗ್ಗಲದ ಪೊಗಟ್ತೆ ತನ್ನದೆನೆ: **ಆದಿಪು,** ೧. ೭೨)

ಮಾನಸೆ – **[ನಾ]** ಮಾನವಸ್ತ್ರೀ (ಮಾನಸೆಯಣಮಲ್ಲಳಿಂತು ಮರವಾನಸೆಯಾಗಿಯುಂ ಆದುದೊಂದು ಮಾನಸಿಕೆ: **ಆದಿಪು,** ೧೨. ೩೮)

ಮಾನಸ್ತಂಭ – **[ನಾ]** [ಜೈನ] ಸಮವಸರಣಮಂಟಪದ ನಡುವಣ ಕಂಬ (ರಾಜಚಿಹ್ನಂಗಳನಿರಿಸಿ ಧೂಳೀಶಾಳ ಮಾನಸ್ತಂಭಾಂಭಃ ಖಾತಿಕಾ ವಲ್ಲೀವನೋಪವನಪತಾಕಾವನಿ ಕಲ್ಪಭೂರುಹ: **ಆದಿಪು,** ೧೦. ೫೨ ವ)

ಮಾನಾಮಿ – **[ನಾ]** ಮಹಾನವಮಿ, ಆಲಂಕಾರಿಕಾರ್ಥದಲ್ಲಿ ಶಿಕ್ಷೆ (ಓಪಳೆ ಕೂರ್ಮೆಗೆಟ್ಟೆನಗೆ ನೀನೇನಾನುಮೊಂದೇವಮಂ ಮನದೊಳ್ ಮಾಡಿದೊಡಂದೆ ದೀವಳಿಗೆಯಂ ಮಾನಾಮಿಯುಂ ಮಾಡೆನೆ: **ಪಂಪಭಾ,** ೪. ೯೩)

ಮಾನುಷೋತ್ತರಪರ್ವತ – **[ನಾ]** [ಜೈನ] ಮಧ್ಯಮಲೋಕದ ಒಂದು ಪರ್ವತ, ಇದು ಪುಷ್ಕರದ್ವೀಪದ ನಟ್ಟನಡುವೆ ಗೋಲಾಕಾರವಾಗಿರುತ್ತದೆ; ಈ ಪರ್ವತವನ್ನು ದಾಟಿ ವಿದ್ಯಾಧರರು ಮತ್ತು ಋದ್ಧಿಮುನಿಪ್ರಾಪ್ತ ಮುನಿಗಳು ಹೋಗಲಾರರು; ಆದ್ದರಿಂದ ಇದಕ್ಕೆ ಮಾನುಷೋತ್ತರ ಎಂಬ ಹೆಸರು (ವಳಯಾಕೃತಿಯಾಗಿ ಬಳಸಿದ ಮಾನುಷೋತ್ತರ ಪರ್ವತಮನಿಳಿಸುವ ಜಾತರೂಪಮಯ ವಿಶಾಲವಳಯದೊಳಗೆ: **ಆದಿಪು,** ೧೦. ೩೩ ವ)

ಮಾನುಷ್ಯ – **[ನಾ]** ಮನುಷ್ಯ ಜನ್ಮ (ನಾನಾಯೋನಿಗಳೊಳ್ ಸುಟಿದೇನಾನುಂ ದುಷ್ಕೃತಂ ಸಡಿಲ್ದೊಡೆ ಪಡೆಗುಂ ಮಾನುಷ್ಯಮಂ ಅತಿದಾರುಣ ಮಾನಸಶಾರೀರ ದುಃಖಪೀಡಿತನಕ್ಕುಂ: **ಆದಿಪು,** ೯. ೪೮)

ಮಾನೋನ್ನತ – **[ನಾ]** ಅತಿಶಯ ಸ್ವಾಭಿಮಾನವುಳ್ಳವನು (ನಿನ್ನನುಜರನಿಬರುಂ ಮಾನೋನ್ನತರ್ ಅಣಂ ಎಱಗರ್ ಅವರೊಳಗಗ್ಗಳದಟಂ ತನ್ನಭಿಮಾನದ ಭುಜಬಲದುನ್ನತಿಯನೆ ಮೆಱೆವ ಬಾಹುಬಲಿ ಮುನ್ನೆಱಗಂ: **ಆದಿಪು,** ೧೪. ೧೭)

ಮಾಮರ – **[ನಾ]** ಮಾವಿನ ಮರ (ಸೊಗಯಿಸಿ ಬಂದ ಮಾಮರನೆ ತಳ್ತ ಎಲೆವಳ್ಳಿಯೆ ಪೂತ ಜಾತಿಸಂಪಗೆಯೆ

ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ: **ಪಂಪಭಾ,** ೪. ೨೮)

ಮಾಮಸಕಂ ಮಸಗು – [ನಾ] ಮಹಾ ಮಸಕಗೊಳ್ಳು, ಮಹಾ ಕೋಪಗೊಳ್ಳು (ಬಂದ ಬಟ್ಟೆಯಿನೆ ಬಿಜಯಂಗೆಯ್ಯಿಂ ಎನೆ ಮುರಾಂತಕಂ ಅಂತಕನಂತೆ ಮಾಮಸಕಮಂ ಮಸಗಿ: **ಪಂಪಭಾ,** ೯. ೪೮ ವ)

ಮಾಯ್ – [ಕ್ರಿ] ಮಾಗು, ಕೊಬ್ಬು (ತೆಱಪನೆ ಪಾಯ್ದಿರ್ಪಂ ಮಾಯ್ದುಱಗುಲಿ ಜವಂ ಅದಱೆನಿನಿಸು ಪೊೞ್ತುಂ ಮಱ್‌ದಿರಲಕ್ಕುಮೆ: **ಆದಿಪು,** ೪. ೭೬)

ಮಾಯಮಾಗು – [ಕ್ರಿ] [ಮಾಯಂ+ಆಗು] ಕಣ್ಣಿಗೆ ಕಾಣದಾಗು (ತೋಲ್ ನೆತ್ತರ್ ಅಡಗು ಒಂದೊಂದಱೊಳ್ ಒಂದುಮೊಂದದೆ ಗದಾನಿರ್ಘಾತದಿಂ ಮಾಯಮಾದೊಡೆ: **ಪಂಪಭಾ,** ೧೦. ೧೦೫)

ಮಾಯಾಚಾರ – [ನಾ] ಸುಳ್ಳು ಆಚಾರ, ವಾಮಾಚಾರ (ಮತ್ತಮಲ್ಲಿ ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ ಮಾಯಾಚಾರಪರಿಣತರಪ್ಪ: **ಆದಿಪು,** ೫. ೪೧ ವ)

ಮಾಯಾನಿದ್ರೆ – [ನಾ] ಮೈಮರೆಸುವ ಕೃತಕ ನಿದ್ರೆ (ಅಖಿಳಭುವನ ಜನನಿಯನಾಗಳ್ ಮಱ್‌ಯಿಸಿ ಮಾಯಾನಿದ್ರೆಯಿನುಱ್ ಮಾಯಾಶಿಶುವನಿರಿಸಿ ಮುಂದಂಬಿಕೆಯಾ: **ಆದಿಪು,** ೭. ೪೫)

ಮಾಯಾಮಂತ್ರ – [ನಾ] ಮಾಯವಾದ ಮಂತ್ರ, ಸುಳ್ಳು ಮಂತ್ರ (ರಾಜರಾಜಂ ಸೈರಿಸದೆ ಚಿತ್ತಸ್ಖಲನೆಯಾಗೆ ಜಳಸ್ತಂಭ ಮಂತ್ರಮೆಲ್ಲಂ ಮಾಯಾಮಂತ್ರಮಾಗೆ: **ಪಂಪಭಾ,** ೧೩. ೮೦ ವ)

ಮಾಯಾಶಿಶು – [ನಾ] ಅಭಿಷವನಕ್ಕಾಗಿ ಜಿನಶಿಶುವನ್ನು ಕೊಂಡೊಯ್ಯುವ ಮುನ್ನ ಶಚೀದೇವಿ ಜಿನಜನನಿಯ ಪಕ್ಕದಲ್ಲಿ ಮಲಗಿಸಿದ ತೋರಿಕೆಯ ಶಿಶು (ಅಖಿಳಭುವನ ಜನನಿಯನಾಗಳ್ ಮಱ್‌ಯಿಸಿ ಮಾಯಾನಿದ್ರೆಯಿಂ ಉಱ್ ಮಾಯಾಶಿಶುವನಿರಿಸಿ ಮುಂದಂಬಿಕೆಯಾ: **ಆದಿಪು,** ೭. ೪೫)

ಮಾರಮಥನ – [ನಾ] ಕಾಮವನ್ನು ಗೆದ್ದವನು, ಅರ್ಹಂತ (ತ್ರಿಕರಣಶುದ್ಧಿಯೊಳಾ ರಾಜಕುಮಾರಂ ಮಾರಮಥನನಂ ಸ್ತುತಿಯಿಸಿ ತತ್ಪ್ರಕಟಫಲಪ್ರಾಪ್ತಿಗೆ ಸಂಚಕರಂಗೊಳ್ವಂತೆ: **ಆದಿಪು,** ೪. ೨)

ಮಾರರಾಗ ಶಿಶುಮಾರ – [ನಾ] ಕಾಮಾಸಕ್ತಿಯೆಂಬ ಮೀನು (ನುಣ್ಣಗೆ ನುಂಗುತ್ತಿರೆ ಮಾರರಾಗಶಿಶುಮಾರಂಗಳ್ ಮಹೋಗ್ರಂಗಳಿಂ ಇನ್ನೆಗಮೋರಂತೆ ತೊಟಿಲ್ದೆಂ ಇಂ ತಿರಿಯಲಾಱ್‌ಂ ಭವಾಂಬೋಧಿಯೊಳ್: **ಆದಿಪು,** ೯. ೬೦)

ಮಾರಿ – [ನಾ] ಸಾಂಕ್ರಾಮಿಕ ರೋಗ (ಕಳ್ಳರ್ ಆಯಿಲಂ ಅಱ್‌ಯೇಱು ಮಾರಿ ಪಸವು ಇಟಿಸ್ದಿ ಬಱಂ ಪೆಱವುಂ ಭಯಂಗಳಾಕುಲಿತೆಗಳಿಲ್ಲ: **ಆದಿಪು,** ೧. ೫೨); [ನಾ] ಮೃತ್ಯು (ಮೆಲ್ಲನೆ ಮೃಗಮೆಂದು ಸಾರ್ದು ನೆಱನಂ ನಡೆ ನೋಡಿ ನರೇಂದ್ರನೆಚ್ಚು ಭೋಂಕನೆ ಮೃಗಚಾರಿಯಂ ತನಗೆ ಮಾಣದೆ ತಂದನದೊಂದು ಮಾರಿಯಂ: **ಪಂಪಭಾ,** ೧. ೧೧೧)

ಮಾರೀಚಿ – [ನಾ] ಒಂದು ಬಗೆಯ ಹೆಂಡ (ಮಧು ಸೀಧು ಕಟು ಸೀಧು ಪೋ ಪುಳಿತ ಕಳ್ಳುತ್ತುಂ ಕರಂ ಕಯ್ಯುತ್ತಿರ್ಪುದು ಮಾರೀಚಿ ತೊಡರ್ಪುಳಿಂದೆ ಸರದಿಂ ಕಂಪಿಲ್ಲ: **ಪಂಪಭಾ,** ೪. ೮೮)

ಮಾರುಡು – [ನಾ] ಉಪ್ಪಿನಕಾಯಿಗೆ ಬಳಸುವ ಒಂದು ಕಾಯಿ (ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮಾರುಡಿನ ಮೆಣಸುಗಡಲೆಯ ಪುಡಿಯೊಳಡಸಿದ ಅಲ್ಲದ ಅಲ್ಲಣಿಗೆಯ ಚಕ್ಕಣಂಗಳಂ ಸವಿಸವಿದು: **ಪಂಪಭಾ,** ೪. ೮೭ ವ) [ಬಿಲ್ವಪತ್ರೆ ಕಾಯಿಯ ತಿರುಳು ಎಂದು ಡಿಎಲ್ಎನ್]

ಮಾರುತಬಾಣ – [ನಾ] ವಾಯವ್ಯಾಸ್ತ್ರ (ಮಾರುತಬಾಣದೆ ಮೇಘಮಾಲಿಕಾನಿವಹಮಂ ಎಚ್ಚು ಕೂಡೆ ಶರಪಂಜರಮಂ ಪಡೆದಂ ಗುಣಾರ್ಣವಂ: **ಪಂಪಭಾ,** ೫. ೯೬)

ಮಾರುತಿ – [ನಾ] ಭೀಮ (ಬರ್ಪಳ ದಿಟ್ಟಿಗಳಾಗಳೆ ಪತ್ತಿದುವು ಗೆಂಟಱೊಳ್ ಮಾರುತಿಯಂ: **ಪಂಪಭಾ,** ೩. ೧೩)

ಮಾರ್ಕಂಡಿ – [ನಾ] ಕಾಡುಮೃಗಗಳ ಜಾಡು (ಮೃಗಮಂ ಗಾಳಿಯನಿರ್ಕೆಯಂ ಪಕ್ಕೆಯಂ ಗಣಿದಮಂ ಕಂಡಿಯಂ ಮಾರ್ಕಂಡಿಯಂ .. .. ನೀಂ ಬಲ್ಲೆ: **ಪಂಪಭಾ,** ೫. ೪೩)

ಮಾರ್ಕಾಡು – [ನಾ] ಕಾಡುಮೃಗಗಳ ಆಶ್ರಯದ ಕಾಡು (ಆಡಲಾಡಿಸಲ್ ಪಾಟಿಯಂ ನಿಱೆಸಲುಂ ಪರಿಗೊಳಲ್ ತೊವಲಿಕ್ಕಲೊಳಗಂ ಬರಲ್ ಕಾಡ ಬೇಲಿಯಂ ಮಾರ್ಕಾಡನಱೆಯಲುಂ .. .. ಮಾಡಲ್ ಮಾಡಿಸಲ್ .. .. ನೀನೆ ಬಲ್ಲೆ: **ಪಂಪಭಾ,** ೫. ೪೧)

ಮಾರ್ಕಿಡಿವಿಡು – [ಕ್ರಿ] ಎದುರು ಕಿಡಿಗಳನ್ನು ಸೂಸು (ಬಾಳೊಳೆ ಬಾಳ್ ಪಳಂಚಿ ಮಾರ್ಕಿಡಿವಿಡೆ ನೋಡಲಂಜಿ ದೆಸೆದೇವತೆಗಳ್ ಪೆಱಪಿಂಗೆ: **ಪಂಪಭಾ,** ೧೦. ೪೨)

ಮಾರ್ಕೊಳ್ – [ಕ್ರಿ] ಸ್ವೀಕರಿಸು, ತೆಗೆದುಕೊ (ನಂಟರ್ ಈತನ ನಣ್ಪಂ ಬಿಸುಡೆಂದೊಡೆ ಆ ನುಡಿಯಂ ಏಗೊಂಡೆನೇ ನಾಣನೆಳ್ಳನಿತುಂ ಕಾದೆನೆ ಬೇಡಿದೊಂದು ಪುರುಳಂ ಮಾರ್ಕೊಂಡೆನೇ: **ಆದಿಪು,** ೧೨. ೩೬); [ಕ್ರಿ] ಎದುರಿಸು (ಜಳಧಿದ್ವೀಪಾಂತರಾಳಂಗಳಮಿರದೆ ಪುಗಿಂ ಪೋಗಿಮುಗ್ರಾರಿಗಳ್ ಮಾರ್ಕೊಳಲಾಱೆರ್ ಚಕ್ರನಾಥಪ್ರಬಳ ಬಳಮಂ: **ಆದಿಪು,** ೧೩. ೪೪); [ಕ್ರಿ] ವಿರೋಧಿಸು (ಬೆಸಸಿದೊಡೆ ಅದು ಮಾರ್ಕೊಳ್ಳದೆ ಬೆಸನಂ ಬಲವಂದು ಬಾಹುಬಲಿಯಂ ಅಣಂ ಭೇದಿಸಲಾಱದುದಱೆಂ ಇರ್ದುದು ಮಸುಳ್ದೆಸಕಂಗೆಟ್ಟು ಬಲದ ಮುಯ್ಯಿನ ಕೆಲದೊಳ್: **ಆದಿಪು,** ೧೪. ೧೧೭); [ಕ್ರಿ] ಅಲ್ಲಗಳೆ (ಎಂದೊಡೆ ಆ ಮಾತಂ ಮಾರ್ಕೊಂಡು ಅಭಿಮನ್ಯುವಿಂತೆಂದಂ: **ಪಂಪಭಾ,** ೧. ೯೧ ವ); [ಕ್ರಿ] ಎದುರಿಗೆ ನಿಲ್ಲು (ಪಟುವಗೆಯೊಳ್ ಭೈರವಂಬಾಯ್ವಂತೆ ಬಂದು ನಿಂದ ಪುರಂದರನಲ್ಲಿಗೆ ಸರಸಿಜಸಂಭವಂ ಬಂದು ಮಾರ್ಕೊಂಡು: **ಪಂಪಭಾ,** ೫. ೧೦೧ ವ); [ಕ್ರಿ] ಆಕ್ಷೇಪಿಸು (ಎನ್ನ ಕೊಟ್ಟುದರ್ಕೆ ಮಾರ್ಕೊಳ್ಳದೆ ಕೊಳ್ಳಮೆಂದೊಡಮಂತೆ ಗೆಯ್ವೆಮೆಂದು ನಿಶ್ಚಯಿಸೆ: **ಪಂಪಭಾ,** ೬. ೩ ವ); [ಕ್ರಿ] ಪ್ರತಿಭಟಿಸಿ ತಡೆ (ಇವಂ ದುಶ್ಶಾಸನಂ ಭೀಮನಿಂ ಬಳಸಂಪನ್ನಂ ಅವುಂಕಿ ಕೊಂದಪೆಂ ಇದಂ ಮಾರ್ಕೊಳ್ವ ಬಲ್ಲಾಳ್ಗಸುಂಗೊಳೆ ಬಾಳೆತ್ತಿದೆಂ: **ಪಂಪಭಾ,** ೧೨. ೧೫೦); [ಕ್ರಿ] ನಿರಾಕರಿಸು (ಇದರ್ಕೆ ಮಾರ್ಕೊಳ್ಳದೆ ಒಡಂಬಡು ನಿನ್ನಂ ಕೆಯ್ಯನೊಡ್ಡಿ ಬೇಡಿದಪ್ಪೆಂ: **ಪಂಪಭಾ,** ೧೩. ೧೧ ವ)

ಮಾರ್ಗ – [ನಾ] ಅಭಿಜಾತ ಕಾವ್ಯ (ಬಗೆ ಪೊಸತಪ್ಪುದಾಗೆ ಮೃದುಬಂಧದೊಳೊಂದುವುದು ಒಂದಿ ದೇಸಿಯೊಳ್ ಪುಗುವುದು: **ಪಂಪಭಾ,** ೧. ೮); **[ನಾ]** ರೀತಿ (ರಾಜಸುತೆಯಂ ನಯದಿಂದವಳುಯ್ದಳ್ .. .. ಪದ್ಮಾಂತರದಿಂದಮಿಂಬಜೆದು ಮಾನಸಹಂಸಿಯನುಯ್ವ ಮಾರ್ಗದಿಂ: **ಪಂಪಭಾ,** ೩. ೫೭)

ಮಾರ್ಗಣ – [ನಾ] ಅಸ್ತ್ರ (ಗಣಬದ್ಧಾಮರಹೂಂಕೃತಂ ಜಯಕುಮಾರ ಉನ್ಮುಚ್ಯಮಾನೋಗ್ರಮಾರ್ಗಣಮಾ ವೀರನಿನಾದ ಸಿಂಹನಿನದಂ: **ಆದಿಪು,** ೧೩. ೬೭)

ಮಾರ್ಗಪ್ರಭಾವನೆ – [ನಾ] [ಜೈನ] ಜಿನಧರ್ಮವನ್ನು ಹೊಳಪುಗೊಳಿಸುವುದು (ಸನ್ಮಾರ್ಗಪ್ರಕಾಶನದಿಂ ಮಾರ್ಗಪ್ರಭಾವನೆಯಂ ಮಾಡಿ ಸಭಾಸದರಿಂ ಲಬ್ಧಪ್ರಶಂಸನಾಗಿ: **ಆದಿಪು,** ೨. ೨೨ ವ)

ಮಾರ್ಗಶ್ರಮ – [ನಾ] ಪ್ರಯಾಣದ ದಣಿವು (ರಾಜಪುತ್ರರ ಮಾರ್ಗಶ್ರಮಾತಪಾಕ್ರಾಂತಮಪ್ಪ ಮನಮೆಂಬ ಲತೆಯರಂ ಅನೇಕ ಕುಶಲಾಲಾಪ ಪ್ರಶ್ನೆಯಿಂದಂ .. .. ಫಲಿತಮುಂ ಮಾಡಿ: **ಆದಿಪು,** ೧೩. ೩೨ ವ)

ಮಾರ್ಗಸ್ಥಿತಿ – [ನಾ] ನಡೆವ ದಾರಿಯ ಸ್ವರೂಪ (ಆದಿನಾಥನ ಮುನಿರೂಪಮಂ ಕಾಣಲೊಡಂ ಜಾತಿಸ್ಮರನೆನಾಗಿ ಮಾರ್ಗಸ್ಥಿತಿಯನಜೆದು ನಿಜೆಸಿದೆಂ: **ಆದಿಪು,** ೧೦. ೮ ವ)

ಮಾರ್ತಂಡ – [ನಾ] ಸೂರ್ಯ (ಪ್ರಚಂಡ ಮಾರ್ತಂಡಮರೀಚಿ ತೀವ್ರಜ್ವಳನಾಸ್ಫಾರ ಕರಾಳ ಕರವಾಳ ಭಾಮಂಡಲಪರೀತ ಉದ್ಯತ ದೋರ್ದಂಡ ಚಂಡಪ್ರಚಂಡ ಸುಭಟ: **ಪಂಪಭಾ,** ೧೩. ೫೧ ವ)

ಮಾರ್ತಾಂಡ – [ನಾ] ಸೂರ್ಯ (ಆಗಳ್ ಮಾರ್ತಾಂಡಂ ಪ್ರಚಂಡಮಾರ್ತಾಂಡನ ಶರನಿಕರಸ್ಫುರಿತಕಿರಣಂಗಳ್ ಕವಿಯೆ ತನ್ನ ಕಿರಣಂಗಳ್ ಮಸುಳ್ದು ಅಪರಜಳನಿಧಿಗಿಟಿದಂ: **ಪಂಪಭಾ,** ೧೧. ೬೧ ವ)

ಮಾರ್ದವ – [ನಾ] [ಜೈನ] ಹತ್ತು ಕುಲಧರ್ಮಗಳಲ್ಲಿ ಒಂದು, ಮೃದುಮನಸ್ಸು ಹೊಂದುವುದು (ಎಂಬಿನಮುತ್ತಮಕ್ಷಮಾ ಮಾರ್ದವಾರ್ಜವ ಸತ್ಯ ಶೌಚ ಸಂಯಮ ತಪಸ್ತ್ಯಾಗಾಕಿಂಚನ್ಯ ಬ್ರಹ್ಮಚರ್ಯಪರ್ಯಾಯಪರ್ಯಾಪ್ತ ದಶಧರ್ಮಂಗಳುಮಂ ಕೈಕೊಂಡು: **ಆದಿಪು,** ೬. ೩೦ ವ)

ಮಾರ್ದಳಿಕ – [ನಾ] ಮದ್ದಳಿಗ (ಯೌವನಮದಮುದಿತ ಮಾರ್ದಳಿಕ ವಾಂಶಿಕ ಪ್ರಹನ್ಯಮಾನ ವಾದ್ಯಮಾನ ಮೃದಂಗವಂಶನಿನದ ಲಯಚ್ಛಂದ ಸುಂದರನಟತ್ಸುಂದರೀಸಂದೋಹಮಂ: **ಆದಿಪು,** ೭. ೩೭ ವ)

ಮಾರ್ಪೊಸೆ – [ಕ್ರಿ] ಪ್ರತಿಯಾಗಿ [ನೆಲದಲ್ಲಿ] ಹೊಸೆದು ಹಾಕು (ಪರ್ಪರಿಕೆಗಿಡದೆ ಕಲಿವಿಷಖರ್ಪರನಿದಿರಾಂತೊಡೆ ಆಂತು ವಲಲಂ ತಳಮಂ ಮಾರ್ಪೊಸೆದು ತಳ್ತು .. .. ಸಿಂಹನಾದದಿನಾರ್ದಂ: **ಪಂಪಭಾ,** ೮. ೫೮)

ಮಾರ್ಮಲೆ – [ಕ್ರಿ] ಉದ್ಧಟನಾಗಿ ವರ್ತಿಸು (ಮಾರ್ಮಲೆದುರ್ಕಿ ಭಮನೊಳ್ ಸಮರದೆ ಗರ್ವದಿಂ ಪೊಣರ್ಲ್ಪರೆ ಗಾವಿಲರ್: **ಪಂಪಭಾ,** ೮. ೭); **[ಕ್ರಿ]** ಪ್ರತಿಭಟಿಸು (ಸಾಮಂತಚೂಡಾಮಣಿಯ ಬೀರಮುಮಂ ಅತಿವರ್ತಿಯಾಗಿ ಮರ್ಮಲೆವ ಚಕ್ರವರ್ತಿಯಂ ಕಿಡಿಸಿ: **ಪಂಪಭಾ,** ೮. ೫೨ ವ)

ಮಾರ್ವಲ – [ನಾ] ಎದುರು ಸೈನ್ಯ, ಶತ್ರುಸೈನ್ಯ (ಪೊಟಿಲೊಳ್ ಸಂದಿರ್ದ ಭಾಸ್ವತ್ ಸುಹೃದ್ಬಲಕಂ ಮಾರ್ವಲಕಂ ಗುಣಾರ್ಣವಶರಪ್ರಾಗಲ್ಭ್ಯಮಂ ತೋಱುವಂ: **ಪಂಪಭಾ,** ೩. ೩೩)

ಮಾಲಾವಲಿ – [ನಾ] ಸಾಲುಗಳು (ಚಮರೀ ಲೋಲ ಲಾಂಗೂಲ ಮಾಲಾವಲಿ ವಿಕ್ಷೇಪಂಗಳಿಂ ತತ್ ಚಮರರುಹ ಮಹಾಶೋಭೆ ಕೈಗಣ್ಮೆ: **ಪಂಪಭಾ,** ೪. ೧೪)

ಮಾಲೆಗಾರ್ತಿ – [ನಾ] ಹೂವಾಡಗಿತ್ತಿ (ಚಲ್ಲವಾಡಿ ಪೂವೆತ್ತುವ ಮಾಲೆಗಾರ್ತಿಯರಂ ಅಂದು ಅರಿಕೇಸರಿ ನಿಂದು ನೋಡಿದಂ: **ಪಂಪಭಾ,** ೪. ೮೧)

ಮಾಲೆಗಾಱ – [ನಾ] ಹೂವಾಡಿಗ, ಮಾಲೆ ಕಟ್ಟುವವನು (ಪಲವು ಪೂಮಾಲೆಗಳಂ ಬಗೆಯದಜೆದೋಲಗಿಪುದು ಮಾಲೆಗಾಱನಂ ಪೋಲ್ತುದಗ್ರ ಮಾಲ್ಯವೃಕ್ಷಂ: **ಆದಿಪು,** ೫. ೩೬)

ಮಾಲೆಸೂಡು – [ಕ್ರಿ] ಸ್ವಯಂವರದಲ್ಲಿ ವರಣಮಾಲೆಯನ್ನು ಹಾಕು (ಬಂದ ಚೆನ್ನಿಗರುಮಂ ಆಸೆಕಾಱರುಮನೊಲ್ಲದೆ ಚೆಲ್ವಿಡಿದಿರ್ದ ರೂಪು ದೃಷ್ಟಿಗೆ ವರೆ ಪಾಂಡುರಾಜನನೆ ಕುಂತಿ ಮನಂಬುಗೆ ಮಾಲೆಸೂಡಿದಳ್: **ಪಂಪಭಾ,** ೧. ೧೦೬)

ಮಾಲ್ಯಮಹೀಜ – [ನಾ] [ಜೈನ] ಹತ್ತು ಕಲ್ಪಕುಜಗಳಲ್ಲಿ ಒಂದು, ಬೇಕಾದ ಹೂಮಾಲೆಯನ್ನು ನೀಡುವ ಕಲ್ಪವೃಕ್ಷ (ಮಗಮಗಿಪ ಜಾದಿ ಪೊಂಗೇದಗೆ ಮಲ್ಲಿಗೆಯೆಂಬ ಪಲವು ಪೂಮಾಲೆಗಳಂ ಬಗೆಯದಜೆದೋಲಗಿಪುದು ಮಾಲೆಗಾಱನಂ ಪೋಲ್ತುದಗ್ರ ಮಾಲ್ಯಮಹೀಜಂ: **ಆದಿಪು,** ೫. ೩೬)

ಮಾವ – [ನಾ] ತಾಯಿಯ ಸೋದರ, ಸೋದರ ಮಾವ (ಅಂತು ಕರ್ಣನುಂ ಶಾಪಹತನಾಗಿ ಮಗುಟ್ದು ಬಂದು ಸೂತನ ಮನೆಯೊಳಿರ್ಪನ್ನೆಗಂ ಇತ್ತಲ್ ಕುಂತಿಗವರ ಮಾವನಪ್ಪ ಕುಂತಿಭೋಜನುಂ ಸ್ವಯಂಬರಂ ಮಾಡೆ: **ಪಂಪಭಾ,** ೧. ೧೦೫ ವ)

ಮಾವಿನ ಪೋೞ್ – [ನಾ] ಮಾವಿನ ಹೋಳು (ನೀಳ್ದ ಮಾವಿನ ಪೋೞಂದದ ಕಣ್ಗೆ ಬಾಷ್ಪಜಲಮಂ ಚಿತ್ತಕ್ಕೆ ಸಂತಾಪಮಂ ನಿನಗಂ ಮಾಡಿದವನಾತಂ ಆತನೆ ವಲಂ ಗಂಧೇಭವಿದ್ಯಾಧರಂ: **ಪಂಪಭಾ,** ೪. ೬೪)

ಮಾವಿನ ಮಿಡಿ – [ನಾ] ಹೀಚು ಮಾವಿನಕಾಯಿ (ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮಾರುಡಿನ ಮೆಣಸುಗಡಲೆಯ ಪುಡಿಯೊಳಡಸಿದದಲ್ಲದ ಅಲಲ್ಲಣಿಗೆಯ ಚಕ್ಕಣಮಂ ಸವಿಸವಿದು: **ಪಂಪಭಾ,** ೪. ೮೭ ವ)

ಮಾಷ – [ನಾ] ಉದ್ದು (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರ ತಿಳ ಅತಸಿ ಮಸೂರಿಕಾ ಕುಳಿತ್ಥ ಮಾಷ: **ಆದಿಪು,** ೬. ೭೨ ವ)

ಮಾಷಮುಖ – [ನಾ] ನೊಣ (ಸಭೆಯೊಳ್ ಮಾಷಮುಖದಂತೆ ದೋಷಗವೇಷಣಪರರಪ್ಪರೆಂದೊಡದು ತೆಗಟಲ್ತೇ: **ಆದಿಪು,** ೧. ೨೧)

ಮಾಸ – [ನಾ] [ಜೈನ] ಎರಡು ಪಕ್ಷಗಳು ಅಥವಾ ಮೂವತ್ತು ದಿವಸಗಳು (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ)

ಮಾಸದಿಕೆ – [ನಾ] ಸದಿರುವಿಕೆ (ಮಾಸಿದ ರೂಪು ನೋಟಕ್ಕೊಡರೆಮಾಸಿದ ಚಿತ್ರದ ಪೆಣ್ಣ ರೂಪುಮಂ ಮಾಸಿಸೆ ನಾಡೆ ಮಾಸರಿಕೆಯಂ ಪಡೆದಪ್ಪುದು: **ಪಂಪಭಾ,** ೮. ೬೨) [ಪರಿಷತ್ ಪಾಠ]

ಮಾಸರಂ – [ಗು] ಅಂದವಾಗಿ (ಸಾಸಿರ ಪೊಂಗೆಯ್ದುಂ ಚೀಃ ಕಾಸಟಮೆಂದು ಒಂದು ಲಕ್ಕಗೆಯ್ದುದಿರ್ದರ್ಕಂ ಮಾಸರಂ ಉಡಲೆಂದು ಅಧಿಕ ವಿಳಾಸದಿಂದ ಉಡಲಿಕ್ಕಿ ನೆಱೆಯೆ ಬಿಯಮಂ ಮೆಱೆದಂ: **ಪಂಪಭಾ,** ೩. ೪೪)

ಮಾಸರಿಕೆ – [ನಾ] ಚೆಲುವು, ಮನೋಹರತೆ (ಮಾಸಿದ ರೂಪು ನೋಟಕ್ಕೊಡರೆಮಾಸಿದ ಚಿತ್ರದ ಪೆಣ್ಣ ರೂಪುಮಂ ಮಾಸಿಸೆ ನಾಡೆ ಮಾಸರಿಕೆಯಂ ಪಡೆದಪ್ಪುದು: **ಪಂಪಭಾ,** ೮. ೬೨)

ಮಾಸಾದಿ – [ನಾ] [ಮಹಾಸಾದಿ] ಕುದುರೆಪಾಲಕ (ಎಂತಪ್ಪ ದುಷ್ಟಾಶ್ವಂಗಳುಮಂ ಏಱಲುಂ ತಿರ್ದಲುಂ ಬಲ್ಲೆನೆಂದು ಪೇೞ್ದು ಆಳಾಗಿ ತಂತ್ರಪಾಳವೆಸರೊಳ್ ಮಾಸಾದಿಯಾಗಿರ್ದಂ: **ಪಂಪಭಾ,** ೮. ೫೪ ವ)

ಮಾಸಾಮರ್ಥ್ಯ – [ನಾ] ಮಹಾ ಸಾಮರ್ಥ್ಯ, ಮಹಾ ಸಾಹಸ (ತ್ರಿದಶೇಂದ್ರಂಗೆ ಯುಧಿಷ್ಠಿರಾಧ್ವರದ ಮಾಸಾಮರ್ಥ್ಯಂ ಸೂೞುಸೂೞಿದೆ ಪೇೞಿಲ್ ಪರಿವಂತೆ ಪೊಣ್ಮೆ ಪಲವುಂ ಧೂಮಂಗಳ್: **ಪಂಪಭಾ,** ೬. ೩೮)

ಮಾಸಿದೆಯಾಗು – [ನಾ] ಮಾಸಿದವಳಾಗು, ಕೊಳಕಾಗು (ಸಿಂಹಬಳಂ ಅಂತಿರು ಮಾಸಿದೆಯಾದೆ ಮೇಣುಡಲ್ ತರಿಪೆಂ ಎನೆ : **ಪಂಪಭಾ,** ೮. ೬೪)

ಮಾಸಿಸು – [ಕ್ರಿ] ಕಾಂತಿಗುಂದಿಸು, ಕಾಂತಿಗುಂದುವಂತೆ ಮಾಡು (ಅಳಿಕುಳಂಗಳ ಚೆಲ್ವಂ ಮಾಸಿಸಿದುವು ವಾಸವನ ವಿಳಾಸಂಬೆರಸಡರೆ ತೊಡರೆ ಬಳಸುವ ಕಣ್ಗಳ್: **ಆದಿಪು,** ೭. ೧೧೭); ಹೀಯಾಳಿಸು (ಚಿತ್ರದ ಪೆಣ್ಣ ರೂಪುಮಂ ಮಾಸಿಸೆ ನಾಡೆ ಮಾಸರಿಕೆಯಂ ಪಡೆದಪ್ಪುದು: **ಪಂಪಭಾ,** ೮. ೬೨)

ಮಾಸು – [ಕ್ರಿ] ಕಾಂತಿಹೀನವಾಗು (ಭೂವಲಯಮಂ ಅಯ್ಯನಿತ್ತುದುಮಂ ಆಂ ನಿನಗಿತ್ತೆಂ ಇದೇವುದಣ್ಣ ನೀನೊಲಿದ ಲತಾಂಗಿಗಂ ಧರೆಗಂ ಆಟಿಸಿದಂದು ನೆಗೞ್ತೆ ಮಾಸದೇ: **ಆದಿಪು,** ೧೪. ೧೩೦); [ಕ್ರಿ] ಕೊಳೆಯಾಗು (ಸುಯೋಧನಂ ಎನಗೆ ಒಳ್ಳಿಕೆಯ್ದು ಕೃತಮಂ ಪೆಱಗಿಕ್ಕಿ ನೆಗೞ್ತೆ ಮಾಸೆ ನಣ್ಪಿನ ನೆವದಿಂದೆ ಪಾಂಡವರಂ ಆಂ ಒಳವೊಕ್ಕಡೆ ನೀಮೆ ಪೇಸಿರೇ: **ಪಂಪಭಾ,** ೯. ೬೮)

ಮಾಳ – [ನಾ] ಬಯಲು (ಮರುಸ್ಥಳದ ಮಾಳದೊಳ್ ನಡುಪಗಲ್ವರಂ ಗ್ರೀಷ್ಮದೊಳ್ ಸುರುಳ್ವಿನೆಗಮಟ್ಟಿ ಬೇವವರ್ಗೆ ಜೊಂಪಮಿಮ್ಮಾವು ನಿರ್ಝರಾಂಬು ದೊರೆಕೊಳ್ವವೊಲ್: **ಆದಿಪು,** ೧೩. ೮೬)

ಮಾಳಜಿಗೆ – [ನಾ] ಒಂದು ಆಯುಧ (ಅಗುರ್ವಿಸುವ ಆವುತಿ ಪೂಸಿದಂತಿರಿಟ್ಟಳಂ ಅಮರ್ದಿರ್ದ ಮಾಳಜಿಗೆ ಪಕ್ಕರೆಯಿಕ್ಕಿದ ಜಾಯಿಲಂ ಭಯಂಗೊಳಿಸೆ: **ಪಂಪಭಾ,** ೧೦. ೭೬)

ಮಾಳತಿ – [ನಾ] ಜಾಜಿ ಹೂ (ಅಭಿನವವಿಳಸಿತ ಮಾಳತೀಮಾಳಾ ಪರಿಷ್ಕೃತ ಮಕುಟನುಂ ಅಪೂರ್ವದೂರ್ವಾ ಪ್ರವಾಳಾಲಂಕೃತ ಕರ್ಣಪೂರನುಂ**ಆದಿಪು,** ೧೧. ೧೦ ವ)

ಮಾಳಿಕಾಕುಸುಮ – [ನಾ] ಜಾಜಿಯ ಹೂ (ಆ ನವಮಾಳಿಕಾಕುಸುಮ ಕೋಮಳೆ ರಾಗರಸಪ್ರಪೂರ್ಣಂ ಚಂದ್ರನ ಆನನಲಕ್ಷ್ಮಿಯಿಂ ನಭದೊಳಿರ್ದಮೃತಾಂಶುವಿಂ ಉದ್ಧ್ವಕಾಂತಿಸಂತಾನಮಂ ಆವಗಂ ತನಗೆ ಮಾಡಿದಳ್: **ಪಂಪಭಾ,** ೪. ೭೧)

ಮಾಱಾನ್ – [ಕ್ರಿ] ಪ್ರತಿಭಟಿಸು, ಎದುರಿಸು (ಭರತಂ ನಿನ್ನಗ್ರಜಂ ಸಾಹಸಂ ಮುಗಿಲಂ ಮುಟ್ಟೆ ನಿಜಪ್ರತಾಪದಳವಂ ತೋಱಲ್ಕೆ ಮಾಱಾಂಪ ಜೆಟ್ಟಿಗರಾರಪ್ಪೊಡಮಿಲ್ಲದಂದು: **ಆದಿಪು,** ೧೪. ೫೨)

ಮಾಱು – [ಕ್ರಿ] ಸ್ವಾಧೀನಪಡಿಸಿಕೋ (ಚೇಟಿಕೆ ಬೀಸುವ ಕುಂಚಂ ಎಯ್ದೆ ಮೆಯ್ದೋಱುವ ಗಾಡಿ ಕಾಂಚನದ ದಂಡದ ಸೀಗುರಿ ನೋಟಕ್ಕೊಡೆ ಆರುಮಂ ಮಾಱೆ ಮನೋಜನ ಒಡ್ಡು ಎನಿಸಿದರ್: **ಪಂಪಭಾ,** ೯. ೧೦೦)

ಮಾಱುಗೊಳ್ – [ಕ್ರಿ] ಬದಲಾಯಿಸಿಕೊ (ಮಱಿಮಱಿಪ ರೂಪು ಕಣ್ಗಳೊಳ್ ಬೆಳ್ಪನಟಿಯೆ ಸೋಂಕುವ ಕೆಂಪುಗಳುಮಂ ತಮ್ಮ ಕೆಂಪಂ ಕಣ್ಗಳ್ಗೆ ಕೊಟ್ಟು ಕಣ್ಗಳ ಬೆಳ್ಪಂ ತಮಗೆ ಮಾಱುಗೊಂಡಂತೆ: **ಪಂಪಭಾ,** ೪. ೮೮ ವ)

ಮಾಱುರಿ – [ಕ್ರಿ] ಪ್ರತಿಯಾಗಿ ಉರಿ (ಸೂರ್ಯಕಾಂತಮೆನ್ನೀ ತೇಜಸ್ಸ್ಫುರಿತಕ್ಕೆ ಸೆಣಸಿನೊಳ್ ಮಾಱುರಿಗುಂ ಸೈರಿಸದು ತೇಜಮಾ ಭುಜಬಲಿಯಾ: **ಆದಿಪು,** ೧೪. ೪೨)

ಮಾಱೊಡ್ಡು – [ನಾ] ಶತ್ರು ಸೈನ್ಯ (ಶೋಣಾಶ್ವಂಗಳ್ ರಜತರಥಮಂ ಪೂಡೆ ಕುಂಭಧ್ವಜಂ ಗೀರ್ವಾಣಾವಾಸಂಬರಂ ಅಡರೆ ಮಾಱೊಡ್ಡು ದಲ್ ಸಾಲದು ಎನ್ನೀ ಬಾಣಾವಾಸಕ್ಕೆ ಎನುತುಂ: **ಪಂಪಭಾ,** ೧೧. ೫೬)

ಮಾಟಿಕ್ಕೆ – [ನಾ] ರೀತಿ (ಈ ಮಾಟಿಕ್ಕೆಯೊಳೆಸಗದರಂ ಹಾ ಮಾ ಧಿಕ್ಕಾರದಂಡದಿಂ ದಂಡಿಪುದು: **ಆದಿಪು,** ೮. ೭೪);

ಮಿಂದು – [ಗು] [√ಮೀ] ಸ್ನಾನ ಮಾಡಿ (ಸುರನದಿಯ ನೀರೊಳ್ ಮಿಂದು ಇನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆ ಎಂದಾಹ್ವಾನಂಗೆಯ್ಯಲೊಡಂ ದಲ್ ಧರೆಗಿಟಿದನಂದು ದಶಶತಕಿರಣಂ: **ಪಂಪಭಾ,** ೧. ೯೧)

ಮಿಕ್ಕುಬರ್ – [ಕ್ರಿ] ಮೀರಿ ಬರು, ಉಕ್ಕು (ತನ್ನೊಡವುಟ್ಟಿದರ್ಗಾದ ಪ್ರವಾಸಾಯಸಂಗಳ್ಗಂ ದೆಸೆಗಂ ಮನ್ಯು ಮಿಕ್ಕುಬರೆ ಕಣ್ಣ ನೀರಂ ತುಂಬಿ: **ಪಂಪಭಾ,** ೩. ೧೦ ವ)

ಮಿಗು – [ಕ್ರಿ] ಮೀರು, ಒತ್ತರಿಸು (ನೋಡಿರೆ ಮತ್ತಂ ಒಂದಂ ಇಸಲುಂ ಕೈಯೇಱದು ಏಕೆಂದುಂ ಆನಜೆಯೆಂ ಕೂರ್ಮೆಯೆ ಮಿಕ್ಕು ಬಂದಪುದು: **ಪಂಪಭಾ,** ೧೨. ೨೦೭)

ಮಿಟ್ಟು – [ಅ] ಮಿಟ್ ಎಂಬ ಅನುಕರಣ ಪದ (ಆಗಳಾ ಧ್ವನಿಯಂ ಕೇಳ್ದು ದೇವೇಂದ್ರಂ ಇಂದ್ರಲೋಕದೊಳ್ ಮಿಟ್ಟೆಂದು ಮಿಡುಕಲಪ್ಪೊಡಂ ದೇವರಿಲ್ಲದಂತು: **ಪಂಪಭಾ,** ೧೨. ೧೩೭ ವ)

ಮಿಟ್ಟೆ – [ನಾ] ಮಣ್ಣ ಹೆಂಟೆ (ಇಮ್ಮಾವಿನ ನನೆಯನಂಬುಗಳಮಂ ಅವಱ ಬಲ್ಮಿಡಿಯನೆ ಮಿಟ್ಟೆಯುಮಂ ಮಾಡಿ ತನ್ನನೇಸಾಡಿ ಕಾಡೆ: **ಪಂಪಭಾ,** ೫. ೧೨ ವ)

ಮಿಟ್ಟೆಗೊಳ್ – [ಕ್ರಿ] ಮಣ್ಣು ಹೆಂಟೆ ತಾಕು (ಕೊಳ್ ಕೊಳ್ಳೆಂದು ಎಚ್ಚೊಡೆ ವಿಳಯೋಳ್ಕದ ತೆಱದಿಂದೆ ಮುಸುಱಿ ದಿವ್ಯಾಸ್ತ್ರಚಯಂಗಳ್ ಕೊಳೆ ಗಾಂಧರ್ವಬಲಂಗಳ್ ಕೆಡೆದುವು ಮಿಟ್ಟೆಗೊಂಡ ಚಿಟ್ಟೆಯ ತೆಱದಿಂ: **ಪಂಪಭಾ,** ೭. ೩೮)

ಮಿಡಿ – [ಕ್ರಿ] ಚಿಟಿಕೆ ಹೊಡೆ (ಮಿಡಿದನಿತು ಬೇಗದಿಂ ಅಟಿವ ಒಡಲನಿದಂ ಪೋಗೆ ನೂಂಕಿ ಚೆಲ್ವಪ್ಪೊಡಲಂ ಪಡೆದಪೆಯೀಗಲೆ ಬಲ್ವಿಡಿವಿಡಿದು ಶರಣ್ಬುಗು ಜಿನೇಂದ್ರಪದಮಂ: **ಆದಿಪು,** ೨. ೫೮); [ನಾ] ಹೀಚುಗಾಯಿ (ಪೆಱತೊಂದು ಕೊಂಬು ಸುತ್ತಿಱಿದುದು ತಳ್ತ ಬಲ್ಮಿಡಿಯ ಕಾಯ್ಗಳ ಗೊಂಚಲಂ: **ಆದಿಪು,** ೫. ೪೫); [ಕ್ರಿ] ಮೀಟು (ಜೇವೊಡೆದಾಗಳೆ ಬೊಮ್ಮನುಂ ಮನಂಗಿಡುಗುಂ ಅದೇವುದೆಂದು ಮಿಡಿದೊಯ್ಯನೆ ಜೇವೊಡೆದಾಗಳ್: **ಪಂಪಭಾ,** ೨. ೭೬)

ಮಿಡುಕಲ್ ಈ – [ಕ್ರಿ] ಅಲುಗಾಡಲು ಅವಕಾಶ ಕೊಡು (ಓಪನಂ ಮಿಡುಕಲೀಯದೆ ಕಾಲ್ವಿಡಿದಟ್ಟು ತೋರ ಕಣ್ಬನಿಗಳನಿಕ್ಕಿದಳ್ ತರಳಲೋಚನೆ ಸಂಕಲೆಯಿಕ್ಕಿದಂತೆವೋಲ್: **ಪಂಪಭಾ,** ೪. ೯೭)

ಮಿಡುಕಲ್ ವೇಡ – ಹೆದರಬೇಡಿರಿ (ನಿಮ್ಮೀ ನಾಲ್ವರೊಳ್ ಒರ್ವರುಂ ಇಂ ಮಿಡುಕಲ್ ವೇಡ ಮಕ್ಕಳೊಳರ್ ಎನಗೆ ಅಯ್ವರ್: **ಪಂಪಭಾ,** ೩. ೨೬)

ಮಿಡುಕಿಸು – [ಕ್ರಿ] ತಳಮಳಗೊಳಿಸು (ನಲ್ಲರಂತೆ ಮಿಡುಕಿಸಲುಂ ಪಣಮುಡಿದರಂತೆ ಅಡ್ಡಂ ಮಾಡಲುಂ ಎಸೆದ ದೆಸಗಳ್ಗೋಡಿಸಲುಂ ಕುಮಾರಸ್ವಾಮಿಯ ನಿಮ್ಮಡಿಯ ಕೆಲದೊಳಾನೆ ಬಂದಪೆಂ; **ಪಂಪಭಾ,** ೫. ೪೩ ವ)

ಮಿಡುಕು – [ಕ್ರಿ] ವ್ಯಥೆಪಡಿಸು (ಸುಡುವುದರಾಗ್ನಿಯುಂ ಒಡಲಂ ಮಿಡುಕುವಿನಂ ಕಡಿವ ಕಟ್ಟಿಱುಂಪೆಗಳುಂ: **ಆದಿಪು,** ೫. ೧೩); ಸ್ಪಂದನ, ಪ್ರತಿಕ್ರಿಯೆ (ಬಾಧೆಯೊಳ್ ಮೆಯ್ಯನೊಡ್ಡಿಸಿ ಮೆಯ್ಯೊಳ್ ಮಿಡುಕುಳ್ಳ ತಾಣಮಣಮಿಲ್ಲೆಂಬಂತು ನಿಷ್ಪಂದನಾಗಿ: **ಆದಿಪು,** ೬. ೩೪); [ಕ್ರಿ] [ಶಿಸ್ತು] ಮೀರು (ಎಡೆಗೋದಿರದಿರಿಂ ಉದ್ದಂ ನುಡಿಯದಿರಿಂ ನೃಪತಿ ನುಡಿಯೆ ನುಡಿಯಿಂ ನೀಮಿರ್ಪೆಡೆಯೊಳಿರಿಂ ನೀಮಱಿವಿರ್ ಮಿಡುಕಿದೊಡೆ ಎನೆ: **ಆದಿಪು,** ೯. ೬); [ಕ್ರಿ] ಅಲುಗಾಡು (ಆಗಳಾ ಧ್ವನಿಯಂ ಕೇಳ್ದು ದೇವೇಂದ್ರಂ ಇಂದ್ರಲೋಕದೊಳ್ ಮಿಟ್ಟೆಂದು ಮಿಡುಕಲಪ್ಪೊಡಂ ದೇವರಿಲ್ಲದಂತು: **ಪಂಪಭಾ,** ೧೨. ೧೩೭ ವ); [ಕ್ರಿ] [ಕಣ್ಣು] ಮಿಟುಕಿಸು (ಇದಂ ಮಾರ್ಕೊಳ್ವ ಬಲ್ಲಾಳ್ಗಸುಂಗೊಳೆ ಬಾಳೆತ್ತಿದೆಂ ಏಕೆ ಕಣ್ಣ ಮಿಡುಕಯ್ ಪಿಂಗಾಕ್ಷ: **ಪಂಪಭಾ,** ೧೨. ೧೫೦); [ಕ್ರಿ] ಅಸಮಾಧಾನಗೊಳ್ಳು (ನುಡಿ ನಿನಗಂ ದಿನೇಶತನಯಂಗಂ ಅದೆನ್ನಯ ಪಕ್ಕದೆ ಆದೊಡಂ ಮಿಡುಕದೆ ಕೇಳ್ವೆಂ ಅಲ್ಲಿ ಸಮಂ ಇರ್ವರುಂ: **ಪಂಪಭಾ,** ೧೩. ೨೮)

ಮಿಡುಮಿಡುಕು – [ಕ್ರಿ] ತುಂಬ ಚಡಪಡಿಸು (ಬಾಟಿವಾಟಿ ತಿದಿಯುಗಿವರುಂ ಮಿಡುಮಿಡುಕೆ ಬಡಿತಂಗಾಸುವರುಂ: **ಆದಿಪು,** ೫. ೮೫ ವ)

ಮಿತ್ರಮಂಡಳ – [ನಾ] ಸೂರ್ಯಮಂಡಲ ಮತ್ತು ಸ್ನೇಹಿತರ ಗುಂಪು (ಹಿಮಕರಮಂಡಳಮಿದು ಶತ್ರುಮಂಡಳಾಭಂ ನೃಪೇಂದ್ರ ಮಸುಳ್ದುದು ಬೇಗಂ ನಿಮಿರಲ್ ಬಗೆದಪುದೀ ಮಿತ್ರಮಂಡಲಂ ಮಿತ್ರಮಂಡಳಾಭಂ ನಿನ್ನಾ: **ಆದಿಪು,** ೧೨. ೫೨)

ಮಿತ್ರಮಂಡಳಿಕ – [ನಾ] ಗೆಳೆಯರ ಗುಂಪು (ಮಲೆ ತಲೆದೋಱದೆಂದುದನೆ ಕೊಟ್ಟುದು ಡಂಗಮಡಂಗಿ ಬದುದು ಒಕ್ಕಲಿಗವೆಸರ್ಗೆ ಪೂಣ್ದುದು ಕುಱುಂಬು ತಱುಂಬದೆ ಮಿಕ್ಕ ಶತ್ರುಮಂಡಳಿಕರೆ ಮಿತ್ರಮಂಡಳಿಕರಾದರ್: **ಪಂಪಭಾ,** ೨. ೯೦)

ಮಿಥುನ – [ನಾ] ಗಂಡು ಹೆಣ್ಣು ಜೋಡಿ (ವಿವಿಧಸೌಧಂಗಳ ಕೊಂಡಾಟಮನೆ ಮೆಱೆದು ಮೆಚ್ಚಂ ಪಾಟಿಸುವುವು ಮಿಥುನತತಿಗೆ ಗೃಹಮಹೀಜಾತಂ: **ಆದಿಪು,** ೫. ೩೭)

ಮಿಥ್ಯಾಜ್ಞಾನಿ – [ನಾ] ದೇವ, ಗುರು, ಶಾಸ್ತ್ರಗಳಲ್ಲಿ ನಂಬಿಕೆಯಿರದಿರುವವನು (ನೀಂ ಭವ್ಯನೈ ಮತ್ತಿನ ಮಿಥ್ಯಾಜ್ಞಾನಿಯವೋಲ್ ನೀಂ ತರಳತೆವೆರಸು ಇಂತೇಕೆ ವಿಭ್ರಾಂತನಪ್ಪೈ: **ಆದಿಪು,** ೩. ೭)

ಮಿಥ್ಯಾತ್ವ – [ನಾ] [ಜೈನ] ದರ್ಶನಮೋಹನೀಯದಲ್ಲಿ ಒಂದು, ನಿಜವಾದ ತತ್ವಜ್ಞಾನವನ್ನು ನಂಬದಿರುವುದು, ಇದರಲ್ಲಿ ವಿಪರೀತ, ಏಕಾಂತ, ವಿನಯ, ಸಂಶಯ, ಅಜ್ಞಾನ ಎಂಬ ಐದು ಬಗೆ (ತಮಮಂ ದ್ಯುಮಣಿಮಯೂಖೋದ್ಗಮಂ ಅಲೆವವೊಲ್ ಅಲೆಗೆ ಜಗದ ಮಿಥ್ಯಾತ್ವಂ: **ಆದಿಪು,** ೧. ೧೬)

ಮಿಥ್ಯಾದೃಷ್ಟಿ – [ನಾ] [ಜೈನ] ದೇವ, ಗುರು, ಶಾಸ್ತ್ರಗಳಲ್ಲಿ ನಂಬಿಕೆಯಿರದ ಮನೋಭಾವ (ಮಿಥ್ಯಾದೃಷ್ಟಿಯಪ್ಪಂ ತನ್ನನೆಂತುಂ ಸಮಱೆ ನೆಗಟ್ಟೊಡಂ ಆತಂ ಅಪಾತ್ರಮ: **ಆದಿಪು,** ೧೦. ೯. ವ)

ಮಿದಿ – [ಕ್ರಿ] ತುಳಿ (ಬಿರಯಿಯ ಮಿಟ್ಟುವೆಂ ಮಿದಿದೊಡಲ್ಲದಣಂ ಮುಳಿಸಾಱದೆಂದು ಪಲ್ಮೊರೆದನಲ್ಲಿ ಮನ್ಮಥಂ: **ಪಂಪಭಾ,** ೨. ೧೩); [ಕ್ರಿ] ಕುಟ್ಟು (ಕುದುರೆಯ ಬಿಲ್ಲ ಬಲ್ಲಣೆಯ ಕೇಣಿಯನಲ್ಲಿ ಕೆಲರ್ ನಿಶಾಟರ್ ಉಣ್ಮಿದ ಬಿಸುನೆತ್ತರೊಳ್ ಮಿದಿದು ನುಣ್ಣನೆ ನುಂಗಿದರ್: **ಪಂಪಭಾ,** ೧೨. ೮)

ಮಿಸಿಸು – [ಕ್ರಿ] [ಮೀಯಿಸು] ಸ್ನಾನಮಾಡಿಸು (ಜಳನಿಧಿ ಪಯಃಪ್ಲವಂಗಳನೊಳಕೊಂಡಂ ಸುರರ ಮಿಸಿಸುವ ಅವಸರದಾಗಳ್: **ಆದಿಪು,** ೭. ೯೦)

ಮಿಸುಕು – [ಕ್ರಿ] ಅಲ್ಲಾಡು (ಅಜಾಂಡತಟದಿಂದತ್ತಂ ಎಲ್ಲಿ ಪೊಕ್ಕಿರ್ದುಂ ಇಂ ಮಿಸುಕಲ್ ತೀರ್ಗುಮೆ ವೈರಿಗೆ: **ಪಂಪಭಾ,** ೧೧. ೧೧೮)

ಮಿಸುಗು – [ಕ್ರಿ] ಹೊಳೆ, ಕಂಗೊಳಿಸು (ಪಲ್ಲವಪ್ರಸರದೊಳ್ ಎಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು ತುಂಬಿಯೊಳ್ ಮಿಸುಗುವ ಕರ್ಪು: **ಆದಿಪು,** ೧. ೬೬)

ಮಿಸುಪ್ಪು – [ಕ್ರಿ] ಹೊಳೆ, ಪ್ರಕಾಶಿಸು (ಪ್ರಯತ್ನದೆ ಬಿಗಿದಿರ್ದ ಎರಟಿಸ್ಟೊಡೆ ಮಿಸುಪ್ಪ ಅಸಿ ಖೇಟಕಂ ಇಂತಿವು ಒಂದುಗುಂದದೆ ನಿಲೆ ನೋಟ್ಪಿ ನೋಟಕರ್ಗೆ ಸೌಮ್ಯಭಯಂಕರನಾದಂ ಅರ್ಜುನಂ: **ಪಂಪಭಾ,** ೭. ೭೯)

ಮಿಳಮಿಳ – [ಅ] [ಅಚ್ಚರಿಯಿಂದ] ಪಿಳಿಪಿಳಿ [ನೋಡು] (ಬಳಮೆರಡುಂ ತನ್ನನೆ ಮಿಳಮಿಳ ನೋಡೆ

ನರೇಂದ್ರನೊಂದೆ ರಥದಿಂದ ಅಸುಹೃದ್ಬಳಮನಿರದೆಯ್ದಿ: **ಪಂಪಭಾ,** ೧೦. ೬೦)

ಮಿಳಿತ – [ಗು] (ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿ ಪರಿಮಳ ಮಿಳಿತೋಲ್ಲುಳಿತಾಳಿ ಜಲಮಾಯ್ತಾ ಜಳಜದೊಳೊಗೆದಂ ಹಿರಣ್ಯಗರ್ಭ ಬ್ರಹ್ಮಂ: **ಪಂಪಭಾ,** ೧. ೫೯)

ಮಿಳಿರ್ – [ಕ್ರಿ] ಅಲುಗಾಡು (ಅವಳ್ದಿರ ಮಿಳಿರ್ವೊಳ್ಗುರುಳ್ಗಳನೆ ಲೀಲೆಯಿನಾಡಿಸಿ ಪುಷ್ಪಕೇಸರಂ ತೆರಳೆ ತೆರಳ್ಚಿ ಬೀಸಿದುದು ತಂಬೆಲರೆಂಬೆಲರಪ್ಪಿಕೊಳ್ವವೋಲ್: **ಆದಿಪು,** ೨. ೬೫); **[ಕ್ರಿ]** ವಿಹರಿಸು (ನಭಂಬರಂ ಮಿಳಿರ್ದಲಂಪಿನ ದಂಪತಿಯಿರ್ಪ ಜೊಂಪಮಂ ತಳಿತಳಿದು ತಣ್ಪುವೆಸಕೆಯ್ವುದು ತೀರವನಾಂತರಾಳದೊಳ್: **ಆದಿಪು,** ೧೧. ೬೬); **[ಕ್ರಿ]** ಕಂಗೊಳಿಸು (ದಿವಮಂ ಏಳಿಪಂತು ಮಿಳಿರ್ವ ವಿವಿಧಕೇತನಂಗಳಿಂ ಸದಾನಿಕೇತನಂಗಳಿಂ: **ಪಂಪಭಾ,** ೧. ೫೮); **[ಕ್ರಿ]** ಹಾರಾಡು (ಕತ್ತುರಿಯ ಸಗಣನೀರ್ ಬಿಡುಮುತ್ತಿನ ರಂಗವಲಿ ಮಿಳಿರ್ವ ದುಗುಲದ ಗುಡಿ ಸಂಪತ್ತಿನ ಬಿತ್ತರದೆತ್ತಿದ ಮುತ್ತಿನ ಮಂಡವಿಗೆ ಪೊಟಲ ಮನೆಗಳೊಲೆಲ್ಲಂ: **ಪಂಪಭಾ,** ೩. ೨)

ಮಿಳ್ಳಿಸು – [ಕ್ರಿ] ಚಲಿಸು (ಅಂತು ಕುರುಬಲದ ಕರಿಘಟೆಗಳಂ ನುಂಗುವಂತೆ ದೆದೆಸೆಗೆ ಮಿಳಿರ್ದು ಮಿಳ್ಳಿಸಿದ ಸಿಂಗದ ಪಟವಿಗೆಯುಂ: **ಪಂಪಭಾ,** ೧೦. ೯೭ ವ)

ಮಿಱುಗು – [ಕ್ರಿ] ಹೊಳೆ, ಕಂಗೊಳಿಸು (ಮಿಱುಗುವ ರತ್ನಭಿತ್ತಿಗಳ ದೀಪ್ತಿಗಳಂ ನಿಜದೇಹದೀಪ್ತಿಗಳ್ ಮಱಿಸೆ: **ಆದಿಪು,** ೨. ೬೨); ರಾಗವಿನ್ಯಾಸದ ಕಾಂತಿ (ಗಮಕ ಪ್ರಯೋಗಂ ಆಭೋಗಂ ಅಳಂಕಾರಂ ಪೊಗರ್ ನಯಂ ಮಿಱುಗು ಪೊದಳ್ದಮರೆ ಕೊಳೆ ಪಾಡುವಮರಿ: **ಆದಿಪು,** ೭. ೧೬)

ಮಿಱುಮಿಱುಗು – [ಕ್ರಿ] ಮಿರಮಿರನೆ ಹೊಳೆ (ಚಿನ್ನಪೂಗಳೆಡೆಯೆಡೆಯೊಳ್ ನಿಮಿರ್ದು ಮಿಱುಮಿಱುಗುವ ತಲೆದುಡುಗೆಯುಂ: **ಆದಿಪು,** ೪. ೪೧ ವ)

ಮಿಱು ಮಿಱು ಮಿಱುಪು – [ಅ] ಮಿರಮಿರನೆ (ಪೆಱವುಟಿದ ಮೂಱು ಮಿಱು ಮಿಱು ಮಿಱುಪ ಶಿತಾಸ್ತ್ರಂಗಳಿಂ ದ್ವಿಜನ್ಮನ ನೊಸಲಂ ನೆಱಗೊಳ್ವಿನಂ: **ಪಂಪಭಾ,** ೧೨. ೭೪)

ಮಿಱ್ತುಗರೆ – [ಕ್ರಿ] [ಮಿಱ್ತು+ಕರೆ] ಮೃತ್ಯುವನ್ನು ಆಹ್ವಾನಿಸು (ಸಂಸಪ್ತಕರ್ ತಮಗೆ ಮಿಱ್ತುಗರೆವಂತೆ ವಿಕ್ರಮಾರ್ಜುನನಂ ಕರೆದುಯ್ದರ್: **ಪಂಪಭಾ,** ೧೧. ೮೫ ವ)

ಮಿಱ್ತುಗಳ್ – [ನಾ] ಮೃತ್ಯುಗಳು, ಸಾವುಗಳು (ನೆಱೆದುವು ಪನ್ನೆರಟ್ಬರಿಸಂ ಉಗ್ರವಿರೋಧಿಜನಕ್ಕೆ ಮಿಱ್ತುಗಳ್ ನೆಱೆವವೊಲ್: **ಪಂಪಭಾ,** ೮. ೪೮ ವ)

ಮಿಱ್ತುಗೊಡ್ಡ – [ನಾ] ಹೇಳುವ ಮೃತ್ಯುವಿನಂಥ ಚೇಷ್ಟೆಯ ಮಾತು (ಆ ಪಾಣ್ಬರಂಕುಸಂ ಆ ಪಾಣ್ಬೆಯರ ಗೆಯ್ದ ಗೆಯ್ತಂಗಳುಮಂ ತೋರ್ಪ ಸನ್ನೆಗಳುಮಂ ಆಡುವ ಮಿಱ್ತುಗೊಡ್ಡಂಗಳುಮಂ ಕಂಡು ಚೋದ್ಯಂಬಟ್ಟು: **ಪಂಪಭಾ,** ೪. ೮೩ ವ)

ಮಿಱ್ತುವೆಂ – ಮೃತ್ಯುವಾಗಿದ್ದೇನೆ (ಬಿರಯಿಯ ಮಿಱ್ತುವೆಂ ಮಿದಿದೊಡಲ್ಲದಲ್ಲಣಂ ಮುಳಿಸಾಱದೆಂದು ಪಲ್ಮೊರೆದನಲ್ಲಿ ಮನ್ಮಥಂ: **ಪಂಪಭಾ,** ೨. ೧೩)

ಮೀಂಗುಲಿಗ – [ನಾ] ಬೆಸ್ತ (ಆನಿರೆ ನೀಮಿದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ ಪೇೞಿಂ ಎಂದಾ ನರನಾಥನಂ ತಿಟಿಪೆ ತನ್ನುನಿ: **ಪಂಪಭಾ,** ೯. ೬೭)

ಮೀಂಟು – [ಕ್ರಿ] ಎಬ್ಬು, ಕೀಳು (ಮಿಡುಮಿಡುಕೆ ಬಡಿತಂಗಾಸುವರುಂ ನೋಡೆ ನೋಡೆ ಕಣ್ಗಳಂ ಮೀಂಟುವರುಂ: **ಆದಿಪು,** ೫. ೮೫ ವ)

ಮೀನ್ – [ನಾ] ಮೀನು, [ವಿಷ್ಣುವಿನ] ಮತ್ಸ್ಯಾವತಾರ (ಮೀನ್ ಆವೆ ಪಂದಿ ಎಂದು ಎನಿತಾನುಂ ತೆಱನಾಗಿ ಡೊಂಬವಿದ್ಯೆಯನಾಡಲ್ ನೀನಱೆವೆ: **ಪಂಪಭಾ,** ೭. ೫೭)

ಮೀನಕೇತನ – [ನಾ] ಮೀನಿನ ಲಾಂಛನದ ಬಾವುಟ [ಅದನ್ನುಳ್ಳವನು ಮನ್ಮಥ] (ಆಗಳಾ ಪಿಡಿದ ಬಿಲ್ಲೆ ಕರ್ಬಿನ ಬಿಲ್ಲಾಗೆಯುಂ ಅಂಬುಗಳೆ ಪೂವಿನಂಬುಗಳಾಗೆಯುಂ ಎಚ್ಚ ಮೀನೆ ಮೀನಕೇತನಮಾಗೆಯುಂ ಸಹಜಮನೋಜನಂ ಮನೋಜನೆಂದೆ ಬಗೆದು: **ಪಂಪಭಾ,** ೩. ೬೩ ವ):

ಮೀಯಿಸು – [ಕ್ರಿ] ಸ್ನಾನಮಾಡಿಸು (ಅಷ್ಟೋತ್ತರಶತ ಪೂರ್ಣಕುಂಭಂಗಳಂ ಚತುರ್ವೇದಪಾರಗರಪ್ಪ ಧರಾಮರರ್ ಎತ್ತಿಕೊಂಡು ಮಂತ್ರಪೂತಜಲಂಗಳಿಂ ಮೀಯಿಸಿ: **ಪಂಪಭಾ,** ೧೪. ೧೭ ವ)

ಮೀಸಲ್ಗಳ್ – [ನಾ] ತೆಗೆದಿಟ್ಟ ಕಳ್ಳು (ಕಿಱೆಯರ್ ಪಿಱೆಯರಱೆದು ಪೊಡೆವಟ್ಟು ಧರ್ಮಗಳ್ಗುಡಿವರ್ಗೆಲ್ಲಂ ಮೀಸಲ್ಗಳ್ಳನೆಱೆದು: **ಪಂಪಭಾ,** ೪. ೮೭ ವ)

ಮೀಸೆವೊಱು – [ಕ್ರಿ] ಮೀಸೆಯನ್ನು ಬಿಡು (ನಿನ್ನಂ ಅನಾಕುಳಂ ಎನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ **ಪಂಪಭಾ,** ೨. ೫೦)

ಮೀಱು – [ಕ್ರಿ] ಉಲ್ಲಂಘಿಸು (ಮೀಱುವೆವೆಂಬ ಮಾಂಡಳಿಕರ್ ಈಯದರೆಂಬ ಅದಟರ್ ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ದಾಱೆ ನಭಕ್ಕೆ ಪಾಱೆದುದು: **ಪಂಪಭಾ,** ೧. ೧೦೯); **[ಕ್ರಿ]** ವಿರೋಧಿಸು (ಪರಮಂಡಲವ್ಯಸನಮನಾರಯ್ವಮಪ್ಪೊಡಿತ್ತುಂ ತೆತ್ತುಂ ಬಾಟ್ವಿ ಮಂಡಲಮಲ್ಲದೆ ಕೀಱೆಯುಂ ಮೀಱೆಯುಂ ನೆಗಟ್ವ ಮಂಡಲಮಿಲ್ಲ: **ಪಂಪಭಾ,** ೬. ೬೭ ವ)

ಮುಂ – [ಅ] ಮೊದಲೇ (ಮಸಿಯಿಂದಂ ಜಗಮೆಲ್ಲಮಂ ದಿತಿಸುತಂ ಮುಂ ಪೂಟ್ದನೋ ಕಾಲಮೇಘಸಮೂಹಂ ದೆಸೆಯೆಲ್ಲಮಂ ಕವಿದುದೋ: **ಪಂಪಭಾ,** ೪. ೪೯)

ಮುಂಗುರಿ – [ನಾ] ಮುಂಗುಸಿ (ಈ ಪುಲಿ ಪಂದಿ ಕೋಡಗಂ ಮುಂಗುರಿಯೆಂಬ ನಾಲ್ಕಱ ಭವಾವಳಿಯಂ ಬೆಸಸಿಂ ಮುನೀಶ್ವರಾ: **ಆದಿಪು,** ೫. ೧೪)

ಮುಂಗೋಳ್ – [ನಾ] [ಸೈನ್ಯದ] ಮುಂಭಾಗ (ವಿರಾಟಂ ಶ್ವೇತನುತ್ತರಂ ಶಂಖನೆಂಬ ಮೂವರ್ ಮಕ್ಕಳುಂ ಶತಾನೀಕ ಶತದ್ಯುಮ್ನ ಶತಚಂದ್ರಂ ಮೊದಲಾಗಿ ಪನ್ನೊರ್ವರ್ ತಮ್ಮಂದಿರುಂ ಬೆರಸು ನೆಲನದಿರೆ ಮುಂಗೋಳೊಳ್ ನಡೆಯೆ: **ಪಂಪಭಾ,** ೯. ೯೫ ವ)

ಮುಂಚದೆ ಪಿಂಚದೆ – [ಅ] ಮುಂದಾಗದೆ ಹಿಂದಾಗದೆ, ಅಂದರೆ ಸಕಾಲದಲ್ಲಿ (ಇಂಚೆಯ ಪಸವಿನ ಬಱದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡೂರ್ಗಳ್: **ಪಂಪಭಾ,** ೮. ೫೧)

ಮುಂಚು – [ಕ್ರಿ] ಮುಂದಾಗಿ, ಮೊದಲೇ (ವೈರಿಭೂಪಬಲದ ಒಡ್ಡು ಅಲ್ಲಾಡೆ ಲೆಕ್ಕಕ್ಕೆ ತಳ್ತಿಱಿದು ಎನ್ನಾಳ್ದನಿಂ ಆನೆ ಮುಂಚಿ ನಿಱಿಪೆಂ ಕೆಯ್ಕೊಂಡು ಕಟ್ಟಾಯಮಮ: **ಪಂಪಭಾ,** ೯. ೭೧)

ಮುಂಜಿ – [ನಾ] [ಮೌಂಜಿ] ನೊದೆಹುಲ್ಲಿನ ಉಡಿದಾರ (ಸರಿಗೆಯೊಳ್ ಸಮೆದ ಅಕ್ಷಮಾಲಿಕೆ ಪೊನ್ನ ಮುಂಜಿ ತೊಳಪ್ಪ ಕಪ್ಪುರದ ಭಸ್ಮರಜಃ ತ್ರಿಪುಂಡ್ರಕಂ: **ಪಂಪಭಾ,** ೬. ೮)

ಮುಂಡಾಡು – [ಕ್ರಿ] ಮುದ್ದಾಡು, ಮೆಚ್ಚಿಕೊ (ಕುಂತಿಯೊಡನೆ ಮದ್ರರಾಜನ ಮಗಳ್ ಶಲ್ಯನನೊಡವುಟ್ಟಿದ ಮಾದ್ರಿಯುಮನೊಂದೆ ಪಸೆಯೊಳಿರಿಸಿ ಗಾಂಗೇಯಂ ವಿಧಾತ್ರಂ ಮುಂಡಾಡುವಂತೆ ತಾಂ ಮದುವೆಯಂ ಮಾಡಿ: **ಪಂಪಭಾ,** ೧. ೧೦೬ ವ)

ಮುಂತಣ್ಗೆ – [ಅ] ಎದುರಿಗೆ (ಮತ್ತೊರ್ವಂ ತನಗೆರಡಱಿಯದೆ ಒಲ್ದ ನಲ್ಲಳನೇತಱಿಸೊಳಪ್ಪೊಡಂ ಏವಮಂ ಮಾಡದೆ ಬೇಟಮಂ ಸಲಿಸುವುದರ್ಕೆ ಸಂತಸಂಬಟ್ಟು ಮುಂತಣ್ಗೆ ಕಾಪನಿಟ್ಟು: **ಪಂಪಭಾ,** ೪. ೯೨ ವ)

ಮುಂತಪ್ಪ – [ಅ] ಮುಂದಾಗುವ, ಮುಂದಿನ (ಎಂದು ಮುಂತಪ್ಪ ಕಜ್ಜಮಂ ತನ್ನೊಳೆ ಬಗೆದು ಅವಾರ್ಯವೀರ್ಯಂ ಸೂರ್ಯದಿನದಂದು ಮಂದಾಕಿನಿಯಂ ಮೀಯಲೆಂದು ಬಂದು: **ಪಂಪಭಾ,** ೯. ೭೧ ವ)

ಮುಂತಿಕ್ಕು – [ಕ್ರಿ] ಎದುರಿಗಿಡು, ಸಲಹೆ ಮಾಡು (ಸಾಮಮಂ ಮುಂ ಪ್ರಯೋಗಿಸದೆ ಏ ಕೆಟ್ಟಪುದು ಎಂದು ದಂಡಮನೆ ಮುಂತಿಕ್ಕುವಂ ಮಂತ್ರಿಯೇ: **ಪಂಪಭಾ,** ೯. ೧೯)

ಮುಂತಿಡು – [ಕ್ರಿ] ಪ್ರಧಾನವನ್ನಾಗಿ ಇರಿಸಿಕೊ (ಅಂತವರ್ಗೆ ಜಾತಕರ್ಮ ನಾಮಕರಣಾನ್ನಪ್ರಾಶನಚೌಲೋಪನಯನಾದಿ ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ: **ಪಂಪಭಾ,** ೧, ೮೭, ವ); [ಕ್ರಿ] ಸಲಹೆಮಾಡು (ಹಿಮಕೃದ್ವಂಶಜರಪ್ಪ ಪಾಂಡುಸುತರಂ ಕೆಯ್ಕೊಂಡು ನಿನ್ನಯ್ದು ಬಾಡಮನಿತ್ತುಂ ನಡಪೆಂದು ಸಾಮಮನೆ ಮುಂ ಮುಂತಿಟ್ಟೊಡೆ: **ಪಂಪಭಾ,** ೯. ೮೮)

ಮುಂತಿರಿಸು – [ಕ್ರಿ] ಮುಂದೆ ಕುಳ್ಳಿರಿಸು (ನೂರ್ವರ್ ತಮ್ಮಂದಿರುಮಂ ಪಿಂತಿರಿಸಿ ಲಕ್ಕಣಂ ಮೊದಲಾಗೆ ನೂರ್ವರ್ ಮಕ್ಕಳುಮಂ ಮುಂತಿರಿಸಿ: **ಪಂಪಭಾ,** ೯. ೨೮ ವ)

ಮುಂದಣ – [ಅ] ಮುಂದುಂಟಾಗುವ (ಆಕೆಯ ದೋಹಳಂ ಕರಂ ಪೆರ್ಚಿದುದು ಗುಣಾರ್ಣವನ ಮುಂದಣ ಬೀರಮಂ ಅಂದೆ ತೋರ್ಪವೋಲ್: **ಪಂಪಭಾ,** ೧. ೧೪೨)

ಮುಂದನೆ – [ಅ] ಮುಂದೆಯೇ, ಉದುರುಗಡೆಯೇ (ಕೊಂತಿಯಂ ಬೀಟಿಸ್ಕೊಂಡು ಪರಕೆಯಂ ಕೈಕೊಂಡು ರಥಾಂಗಧರಂ ರಥಮನೇಱಿ ಕರ್ಣನ ಮನೆಯ ಮುಂದನೆ ಬಂದು ಮೇಲೆ ಬಿಟ್ಟು: **ಪಂಪಭಾ,** ೯. ೬೩ ವ)

ಮುಂದಲೆ – [ನಾ] ತಲೆಯ ಮುಂಭಾಗ (ಶಾಂಕರಿಗೆಸೆದುದು ಮುಂದಲೆಯೊಳಗರಳೆಲೆ ಬಹುರತ್ನನೂತ್ನಕಾಂತಿಪ್ರಸರಂ: **ಗಿರಿಜಾಕ,** ೩. ೮೧); [ನಾ] ಮುಂಗೂದಲು (ಕೃಷ್ಣೆಯ ಮುಂದಲೆಯಂ ಪಿಡಿದು ಎಟಿಸಿವಲ್ಲಿಯೆ ತಲೆವಿಡಿದರ್ ನಮ್ಮ ಬೀರಮಂ ಕೌರವರುಂ: **ಪಂಪಭಾ,** ೭. ೫೬)

ಮುಂದಱಿವ ಚದುರ – [ನಾ] ಮುಂದಾಗುವುದನ್ನು ತಿಳಿಯುವುದರಲ್ಲಿ ತಜ್ಞ, ನಿಪುಣ ಭವಿಷ್ಯಜ್ಞಾನಿ (ಅಂತೊಗೆದ ಅನೇಕೋತ್ಪಾತಂಗಳಂ ಕಂಡು ಮುಂದಱಿವ ವಿದುರನಿಂತೆಂಂ: **ಪಂಪಭಾ,** ೧. ೧೩೨ ವ)

ಮುಂದಿಕ್ಕು – [ಕ್ರಿ] ಎದುರಿಗೆ ಇರಿಸು (ಸೂಟ್ಟಟ್ಟನಾಗಳ್ ಜವಂ ಪಿಡಿದೀಡಾಡುವ ಮಾಟಿಸ್ಕೆಯಂತೆ ಪಲರಂ ಕೊಂದಿಕ್ಕಿ ಮೆಯ್ಯುಟ್ಟವಂದೆಡೆಯೊಳ್ ಮಾಣದುರುಳ್ಚಿ ಕಟ್ಟಿ ರಿಪುವಂ ಮುಂದಿಕ್ಕಿದಂ: **ಪಂಪಭಾ,** ೨. ೬೨) [ಪರಿಷತ್ ಆವೃತ್ತಿ]

ಮುಂದಿಡು – [ಕ್ರಿ] ಮುಂದೆ ಇರಿಸಿಕೊ (ನಿಜವಿಜಯಗಜೇಂದ್ರಮನೇಱಿಸಿ ಮುಂದಿಟ್ಟೊಡಗೊಂಡು ಬರೆ: **ಆದಿಪು,** ೪. ೨೪ ವ); [ಕ್ರಿ] ಅರ್ಪಿಸು (ಬೆಸನಾವುದೆಮಗೆ ಬೆಸನಂ ಬೆಸಸೆನೆಯೇಬಾಟಿತ್ತೆಯೆಂದು ಮುಂದಿಟ್ಟರ್ ಸ್ರಗ್ಗಸನವಿಲೇಪನ ಭೂಷಾಪ್ರಸರಂಗಳನಲ್ಲಿ ಕೆಲರತಿ ಜಡಮತಿಗಳ್: **ಆದಿಪು,** ೯. ೧೨೫)

ಮುಂಬಗಲ್ – [ನಾ] ಬೆಳಿಗ್ಗೆ, ಪೂರ್ವಾಹ್ನ (ಅಂತು ಮುಂಬಗಲ್ವರಂ ತುಮುಟಿ ಕಾದುವ ಸಮರಭರಂ ಮನೋರಾಗಮಂ ಮಾಡೆಯುಂ ಮಮ್ಮಟಿಸಿ ಪಾಂಡವಕೌರವಬಲದ ಕಲಿಕೆಯ ಪ್ರಧಾನನಾಯಕರ್ಕಳ್: **ಪಂಪಭಾ,** ೧೩. ೩೭ ವ)

ಮುಂಬನಿ – [ನಾ] ಮೊದಲ ಹನಿ, ಮೊದಲ ಮಳೆ (ಚಂದ್ರನನಂಭೋನಿಧಿ ಬಂದ ದೂವೆ ಮಲೆಯಂ ಕಾರ್ಗಾಲಮಂ ಸೋಗೆ ಮುಂಬನಿಯಂ ಚಾದಗೆವಕ್ಕಿ .. .. ನೆನವಂತೆ ನೆನೆವೆಂ ಸರೋಜಮುಖಿಯಂ: **ಆದಿಪು,** ೧೨. ೩೧)

ಮುಂಬಯಣ – [ನಾ] ಮುಂಚಿತವಾದ ಪ್ರಯಾಣ (ನಂಬಿ ನೃಪನೆನಗೆ ಸೈಂಧವನಂ ಬಂದಪ್ಪೆಸೆ ಪೂಣ್ದೆಂ ಆದುದಂ ಆಗಲ್ಕೆ ಇಂಬು ಅಟಿದನುವರದೊಳ್ ಅವಂ ಮುಂಬಯಣಂಬೋದಂ ಎನಗೆ ಮಾಣ್ದುದು ದೊರೆಯೇ: **ಪಂಪಭಾ,** ೧೨. ೨)

ಮುಂ ಬೇಡು – [ಕ್ರಿ] ಮೊದಲು ಕೇಳು (ಮುಂ ಬೇಡಿದ ವರಮಂ ಕುಡದೆ ಅಂಬುಜಮುಖಿ ಪುತ್ರನೆನ್ನ ದೊರೆಯಂ ನಿನಗಕ್ಕೆ ಎಂಬುದುಂ ಒದವಿದ ಗರ್ಭದೊಳಂಬುಜಮಿತ್ರನನೆ ಪೋಲ್ವ ಮಗನೊಗೆತಂದಂ: **ಪಂಪಭಾ,** ೧. ೯೪)

ಮುಂಮೊನೆ – [ನಾ] ಒಂದು ಬಗೆಯ ಬಾಣ (ನೆಱಿದು ನಿರ್ವಾಯಂ ನರುವಾಯಂ ಮುಂಮೊನೆ ನೆರಕೆ ನಾರಾಚಂ ತಗರ್ತಲೆಯಂ: **ಪಂಪಭಾ,** ೧೩. ೩೯)

ಮುಕುಂದ – [ನಾ] ಭೇರಿ (ನೆಗಟ್ಟುದು ರಾಜ್ಯಸಮರ್ಪಣ ಯುಗಪತ್ಪತಿಹತ ಮುಕುಂದರವಂ ಒಂದೆಡೆಯೊಳ್: **ಆದಿಪು** ನರಸಿಂ, ೯. ೬೬)

ಮುಕುಂದರವ – [ನಾ] ತಮಟೆಯ ಸದ್ದು (ತಳಿರ್ಗಳಸಂ ಮುಕುಂದ ರವಂ ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಙ್ಕ್ತಿ ಪಸುರ್ವಂದಲೊಳ್ ಒಲ್ದು ಎಡೆಯಾಡುವ ಎಯ್ದೆಯರ್: **ಪಂಪಭಾ,** ೧. ೧೦೭)

ಮುಕುಳ – [ನಾ] ಮೊಗ್ಗು (ಅಲರ್ವ ಪದಕ್ಕೆ ಬಂದಲೆವ ತೆಂಬೆಲರಿಲ್ಲದೆ ಮಾಣ್ದ ಮಲ್ಲಿಕೋಜ್ಜ್ವಲಮುಕುಳಕ್ಕಂ: **ಆದಿಪು,** ೩. ೧೯)

ಮುಕುಳಿತ – [ಗು] ಬಿರಿಮೊಗ್ಗಾಗಿರುವ, ಮೊಗ್ಗು ಬಿಟ್ಟ (ಚಾರುವಿಟಪಾವಳೀವೃತ ಕೋರಕಿತ ಅಂಕುರಿತ ಪಲ್ಲವಿತ

ಮುಕುಳಿತ ವಿಸ್ತಾರಿತ ರಮ್ಯಾಶೋಕಮಹೀರುಹ: **ಆದಿಪು,** ೧೦. ೪೧)

ಮುಕುಳೀಕೃತ – [ಗು] ಮೊಗ್ಗಿನ ಆಕಾರವುಳ್ಳುದು (ಮುಕುಳೀಕೃತಂ ಲಳಿತಮಧುರಂ ಲಜ್ಜಾಳೋಳಂ ಸ್ಮರಾಕುಳಿತಂ ಮನಂದಳಿತಂ ಅಪಸನ್ಮುಗ್ಧಂ ಸ್ನಿಗ್ಧಂ ವಿಳೋಕನಮೋಪಳಾ: **ಪಂಪಭಾ,** ೪. ೭೭)

ಮುಕ್ಕು – [ಕ್ರಿ] ತಿನ್ನು, ಕಬಳಿಸು (ಮೊದಲಿಟ್ಟಂ ಕೊಲಲೆಂದು ಕೌರವರಂ ಇನ್ನೇಕಿರ್ಪಂ ಆರ್ದುರ್ಜಿ ಮುಕ್ಕದೆ ಇವಂಗೆ ಆಂ ಕರಮೆಯ್ದೆ ಕೂರ್ಪೆಂ: **ಪಂಪಭಾ,** ೧೧. ೧೦)

ಮುಕ್ಕುಳಿಸು – [ಕ್ರಿ] ಬಾಯಲ್ಲಿ ತುಂಬಿಕೊಂಡು ಉಗುಳು (ಮುಕ್ಕಳಿಸಿಯುಗುಚ್ಚೆ ಮಧುವಿಂ ಮಿಕ್ಕೆಸೆವಾಮೋದಮಿದಳಿ ತಣ್ಣಂಪಿನೊಳ್ವೊಕ್ಕುದೆನೆ ಮಧುವ ಕಂಪಂ ಮುಕ್ಕುಳಿಸಿದ ವಕುಳಂ: **ಆದಿಪು,** ೧೧. ೧೨೪); ತಿರಸ್ಕರಿಸು (ರಸದಾಡಿಮದ ಬಿತ್ತುಮಂ ಪೊಸಮುತ್ತುಮಂ ಮುಕ್ಕುಳಿಸಿದಂತಪ್ಪ .. .. ದಂತಪಂಙ್ಕ್ತಿ: **ಪಂಪಭಾ,** ೨. ೩೯ ವ)

ಮುಕ್ತ – [ಗು] ಬಿಡಲ್ಪಟ್ಟ, ಪ್ರಯೋಗಿಸಿದ (ತಾಗಿದ ನೆಗಟರ್ಗೊಳ್ಗಂಡರ ಗಂಡೋಡುವಿನಂ ಕೊಂದುವು ಗಾಂಡೀವ ಮುಕ್ತ ಬಾಣಗಣಂಗಳ್: **ಪಂಪಭಾ,** ೫. ೮೮)

ಮುಕ್ತಜೀವ – [ನಾ] [ಜೈನ] ಜೀವತತ್ವಮುಕ್ತ ಹಾಗೂ ಸಂಸಾರಿ ಮುಕ್ತ ಎಂಬ ಎರಡು ಬಗೆಗಳಲ್ಲಿ ಒಂದು (ಆ ಜೀವತತ್ತ್ವಮುಂ ಸಂಸಾರಿಮುಕ್ತಭೇದದಿಂ ದ್ವಿವಿಧಮಕ್ಕುಂ ಅಲ್ಲಿ ಮುಕ್ತಿಜೀವಮೇಕಪ್ರಕಾರಮೆ: **ಆದಿಪು.** ೧೦. ೬೩ ವ)

ಮುಕ್ತಾಕ್ಷತ – [ನಾ] ಮುತ್ತಿನ ಅಕ್ಷತೆ (ಪ್ರೋದ್ಯತ್ತರಂಗ ಬಾಹುಸಮುದ್ಯಚ್ಛೀಕರವಿಮಿಶ್ರ ಮುಕ್ತಾಕ್ಷತದಿಂದಾದ್ಯ ಮಹೀಪತಿಗೆತ್ತಿದ ಪಾದ್ಯಮಂ ಅನುಕರಿಪುದಾಯ್ತು ವಾರ್ಧಿವಿಳಾಸಂ: **ಆದಿಪು,** ೧೨. ೭೭)

ಮುಕ್ತಾಗಣ – [ನಾ] ಮುತ್ತುಗಳ ಸಮೂಹ (ಜಳರಾಶಿ ನಿನಗೆ ಸೇಸಿಕ್ಕುವವೋಲ್ ಸೊಗಯಿಸಿದುದು ಮುಕ್ತಾಗಣಮಿಶ್ರಿತ ತರಂಗ ಹಸ್ತೋತ್ಕರದಿಂ: **ಆದಿಪು,** ೧೨. ೧೨೧)

ಮುಕ್ತಾದಾಮ – [ನಾ] ಮುತ್ತಿನ ಹಾರ (ಎಟಲಿಕ್ಕಿದ ಮುಕ್ತಾದಾಮಶೋಭೆ ಲಕ್ಷ್ಮೀಲಲನಾದರಹಾಸಶೋಭೆ: **ಆದಿಪು,** ೪. ೩೦ ರಗಳೆ)

ಮುಕ್ತಾಪುಟೋದರ – [ನಾ] ಮುತ್ತಿನ ಚಿಪ್ಪಿನ ಒಳಭಾಗ (ಕರಿಮಕರಂಗಳ ಕಯ್ಯೇಟೆನೊಳ್ ಬಿಬ್ಬಿರಿಬಿಡಿದೊಡೆದ ಮುಕ್ತಾಪುಟೋದರಂಗಳ ಒಳಗಣಿಂದಮುಚ್ಚಳಿಸಿದ ತಾರಾತರಳಮುಕ್ತಾಫಲಂಗಳುಮಂ: **ಆದಿಪು,** ೧೨. ೭೯ ವ)

ಮುಕ್ತಾಫಲೋದ – [ನಾ] ಮುತ್ತಾಗುವ ನೀರಿನ ಹನಿ (ಕೊಂತಿಯ ದಿವ್ಯಗರ್ಭೋದರಮೆಂಬ ಶುಕ್ತಿಪುಟೋದರದೊಳ್ ತನ್ನ ದಿವ್ಯಾಂಶಮೆಂಬ ಮುಕ್ತಾಫಲೋದ ಬಿಂದುವಂ ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ,** ೧. ೧೩೯ ವ)

ಮುಕ್ತಾಫಳ – [ನಾ] ಮುತ್ತು (ಕಳಧೌತಘಟಂ ಮುಕ್ತಾಫಳಾಂಚಿತ ಗ್ರೀವಂ ಎಟೆದುಕೊಂಡುದು ತಾರಾವಳಿಪರಿವೃತ ನವಸಂಧ್ಯಾಜಳದದ ಗಾಡಿಯಂ: **ಆದಿಪು,** ೭. ೮೪)

ಮುಕ್ತಾಭರಣ – [ನಾ] ಮುತ್ತಿನ ಒಡವೆ (ಉಜ್ಜ್ವಲಮುಕ್ತಾಭರಣಂ ತರತ್ತರಳ ತಾರೋದಾರ ಭಾ ಭಾರಂ ಅಂಗಲತಾಲಾಲಿತಸಾಂದ್ರಚಂದನರಸಂ ಬೆಳ್ದಿಂಗಳ್: **ಪಂಪಭಾ,** ೧. ೧೩೭)

ಮುಕ್ತಾಮುಕ್ತ – [ನಾ] ಕೈಯಲ್ಲಿ ಹಿಡಿದು ರಭಸದಿಂದ ಎಸೆದು ಪ್ರಯೋಗಿಸುವ ಈಟಿಯಂತಹ ಆಯುಧ (ನಿಜವಿಜಯಕರ ಉನ್ಮುಕ್ತಂಗಳಪ್ಪ ಮುಕ್ತಾಮುಕ್ತ ವಿನಿರ್ದಳಿತವೀರಯೋಧ ರುಧಿರವಾರಾಶಿ ಶೀಕರಂಗಳಿಂ ಉದಗ್ರಕೋಪಾನಳನಂ ಆಟಿಸಲ್ಪಡದೆಯುಂ: **ಆದಿಪು,** ೧೪. ೧೦೩ ವ)

ಮುಕ್ತಾವಳಿತಪ – [ನಾ] [ಜೈನ] ಒಂದು ಉಪವಾಸ ಒಂದು ಪಾರಣೆ, ಎರಡು ಉಪವಾಸ ಒಂದು ಪಾರಣೆ, ಮೂರು ಉಪವಾಸ ಒಂದು ಪಾರಣೆ, ನಾಲ್ಕು ಉಪವಾಸ ಒಂದು ಪಾರಣೆ, ಐದು ಉಪವಾಸ ಒಂದು ಪಾರಣೆ, ನಾಲ್ಕು ಉಪವಾಸ ಒಂದು ಪಾರಣೆ, ಮೂರು ಉಪವಾಸ ಒಂದು ಪಾರಣೆ, ಎರಡು ಉಪವಾಸ ಒಂದು ಪಾರಣೆ, ಒಂದು ಉಪವಾಸ ಒಂದು ಪಾರಣೆ – ಹೀಗೆ ೨೫ ಉಪವಾಸ ಹಾಗೂ ೯ ಪಾರಣೆ ಮಾಡುವ ವ್ರತ (ವಿಜಯಾಖ್ಯಮುಖ್ಯಮುನಿನಿಕಟದೊಳ್ ಮುಕ್ತಾವಳೀತಪಮಂ ಕೈಕೊಂಡು ಗೆಲ್ಲಂಗೊಂಡಂ: **ಆದಿಪು,** ೩. ೫೮ ವ)

ಮುಕ್ತಿ – [ನಾ] ಪರಿಹಾರ (ಉಸಿರ್ದೌ ನೀಂ ನಿನ್ನ ನಿರ್ಬೇಗಮಂ ಅಜಿದೆನಿದಂ ಶಕ್ತಿಯೊಳ್ ಮುಕ್ತಿಯಂ ಸಾಧಿಸಲಕ್ಕುಂ: **ಆದಿಪು,** ೩. ೪೪); ಬಿಡುಗಡೆ, ಮೋಕ್ಷ (ಅನಾದಿಬಂಧನಬಂಧ ವ್ಯಭಾವಕರ್ಮವಿಗಮದಿಂ ಅನಂತಜ್ಞಾನಾದಿ ನಿಜರೂಪಮಂ ಪಡೆವುದು ಮುಕ್ತಿ: **ಆದಿಪು,** ೧೦. ೬೩ ವ)

ಮುಕ್ತಿಪದ – ಬಿಡುಗಡೆ, ಮೋಕ್ಷ (ಅನಾದಿಬಂಧನಬಂಧ ವ್ಯಭಾವಕರ್ಮವಿಗಮದಿಂ ಅನಂತಜ್ಞಾನಾದಿ ನಿಜರೂಪಮಂ ಪಡೆವುದು ಮುಕ್ತಿ: **ಆದಿಪು,** ೧೦. ೬೩ ವ)

ಮುಕ್ತಿಶ್ರೀ – [ನಾ] ಮೋಕ್ಷಲಕ್ಷ್ಮಿ (ಎಯ್ದುದಱೊಳ್ ಅಳವಡದುದುಂ ಎಯ್ದುದುದನೆ ಬಯಸುತಿರ್ಪುದುಂ ಜೀವಕ್ಕೇಗೆಯ್ದುಂ ಇದು ಸಹಜಂ ಅನ್ನೆಗಂ ಎಯ್ದುಗುಂ ಎನ್ನೆಗಂ ಉದಾತ್ತ ಮುಕ್ತಿಶ್ರೀಯಂ: **ಆದಿಪು,** ೯. ೫೨)

ಮುಕ್ತಿಸ್ಥಾನ – [ನಾ] ಮೋಕ್ಷ (ಕಷ್ಟಂ ದುಃಖಾನಳಸಂಪ್ಲುಷ್ಟಂ ಚೆಃ ಗತಿಚತುಷ್ಟಯಂ ಪ್ರಾಣಿಗೆ ಸಂತುಷ್ಟತೆಯನೆಯ್ದೆ ಪಡೆದುಮಭೀಷ್ಟಸುಖಪ್ರದಮದೊಂದೆ ಮುಕ್ತಿಸ್ಥಾನಂ: **ಆದಿಪು,** ೯. ೫೧)

ಮುಕ್ತ್ಯಂಗನಾ – [ನಾ] [ಮುಕ್ತಿ+ಅಂಗನಾ] ಮೋಕ್ಷಲಕ್ಷ್ಮಿ (ಏನದಚ್ಚರಿಯೋ ಚಿತ್ರದ ರೂಪು ರೂಪವಿಭವಂ ಮುಕ್ತ್ಯಂಗನಾಕಾಂತನಾ: **ಆದಿಪು,** ೮. ೫)

ಮುಖ – [ನಾ] ಬಾಯಿ (ಗಂಭೀರ ನಾರಕ ಭೀಷಣ ಮಕರಮುಖಕುಹರನಿಪತಿತ ಆಕ್ರಂದತ್ ಆರ್ತಪುರುಷಸ್ವರ ವಿರಸಭಯಂಕರೆಯುಂ: **ಆದಿಪು,** ೫. ೮೭ ವ); **[ನಾ]** ಪಾತ್ರೆಯ ಬಾಯಿ (ಕನಕಕುಂಭಮುಖ ವಿಗಳಿತ ಕ್ಷೀರವಾರಿಧಾರೆಯಂ ಜಯಜಯನಿನಾದಪೂರ್ವಕಂ: **ಆದಿಪು,** ೭. ೮೬ ವ)

ಮುಖಮುದ್ರೆ – [ನಾ] ಮುಖಭಾವ (ತನ್ನ ಮುನ್ನಿನ ಜನಗಳಂ ಇಂತೆಂದು ಬರೆದು ತೋರ್ಪಂತೆ ನೆಲನಂ ಬರೆಯುತ್ತಂ ಅಪಗತಮುಖಮುದ್ರೆಯಾಗಿ: **ಆದಿಪು,** ೩. ೩೨ ವ)

ಮುಖರ – [ಗು] ಭಾವವನ್ನು ಸೂಚಿಸುವ (ಧರ್ಮಾಮೃತಾಸ್ವಾದನಪರನಾಗಿ ಕಿಜೆದು ಪೊತ್ತನಿರ್ದು ನಿಜಮನೋಗತಕಾರ್ಯ ವಿಜ್ಞಾಪನಮುಖರ ಮುಖನಾಗಿ: **ಆದಿಪು,** ೧೫. ೨೨ ವ); ಶಬ್ದಮಯವಾದ (ತದ್ರಾಜಚಕ್ರಂ ಪೊದಳ್ದಬ್ಬಿಸಿದತ್ತು ಉದ್ದಾಮ ಮೌರ್ವೀರವಮುಖರ ಮಹಾಚಾಪ ಚಕ್ರಾಂಧಕಾರಂ: **ಪಂಪಭಾ,** ೧೨. ೨೦)

ಮುಖರತ – [ನಾ] ಚುಂಬನ, ಮುಖಮೈಥುನ (ರತದೊಳಗಗ್ಗಳಂ ಮುಖರತಂ ಸುರತೋತ್ಸವಕೆಂದು ಕಾಮಿನೀಪ್ರತತಿಗೆ ತೋರ್ಪಂತೆವೋಲ್: **ಆದಿಪು,** ೧೧. ೯೯)

ಮುಖರಿತ – [ಗು] ಸದ್ದಿನಿಂದ ಕೂಡಿದ (ವನಸುರಭಿ ಮದಸಾರಾಸವಾಸಕ್ತ ಭೃಂಗೀನಿನದ ಮುಖರಿತಾಶಾಚಕ್ರ ಗಂಧೇಭಚಕ್ರಂ: **ಆದಿಪು,** ೧೧. ೩೦)

ಮುಖರೀಕೃತ – [ಗು] ಗಜಬಜಿಸುವ (ಕಲ್ಪಲತಿಕಾವನಮುನ್ಮದ ಭೃಂಗಮಾಳಿಕಾರವ ಮುಖರೀಕೃತ ಆಮ್ರವನಶೋಭಿತಂ: **ಆದಿಪು,** ೧೩. ೭೦)

ಮುಖರೋಮ – [ನಾ] ಮೀಸೆ (ಆಬಾಳಶಾರ್ದೂಲ ಮುಖರೋಮ ಕರಾಲಸೃಕ್ವೋಪಾಂತಪ್ರರೂಢಶ್ಮಶ್ರುಜಾಲಂ: **ಆದಿಪು,** ೧೩. ೪೫ ವ)

ಮುಖಾಂಬುಜ – [ನಾ] ಮುಖಕಮಲ (ನಿಡುಸುಯ್ದ ನಲ್ಲಳ ಮುಖಾಂಬುಜಸೌರಭದೊಳ್ ಪೊದಳ್ದು ಅದೇಂ ಮಗಮಗಿಸಿತ್ತೊ ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ: **ಪಂಪಭಾ,** ೪. ೧೦೭)

ಮುಖಾಂಭೋಜ – [ನಾ] ಮುಖಕಮಲ (ಉತ್ತುಂಗಮಂ ಮುನಿಮುಖ್ಯ ಮುಖಾಂಭೋಜೋದರ ನಿರ್ಗತ ಮಂತ್ರಪೂತಾಂಗಮಂ ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ,** ೧. ೧೧೫)

ಮುಖಾಬ್ಜಾಸವಸಂಬಂಧಿ – [ನಾ] [ಮುಖಾಬ್ಜ+ಆಸವಸಂಬಂಧಿ] ಮುಖಕಮಲದ ಮಧುವಿನ ಸಂಪರ್ಕವುಳ್ಳ (ಕಡೆಗಣ್ಣ ಚೆಲ್ಲಂಬೆರಸು ಸೂಸುವ ವಾಸವಸ್ತ್ರೀಯರ ಮುಖಾಬ್ಜಾಸವ ಸಂಬಂಧಿಗಳಪ್ಪ ಶೇಷಾಕ್ಷತಂಗಳಂ ಈಶ್ವರನ ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ವಂತೆ: **ಪಂಪಭಾ,** ೮. ೨೭ ವ)

ಮುಖೇಂದು – [ನಾ] ಮುಖ ಎಂಬ ಚಂದ್ರ (ಹಿಮಧವಳ ಆತಪತ್ರಮನೆ ಪೋಲೆ ಮುಖೇಂದುವ ಬೆಳ್ಪು ಪೂರ್ಣಕುಂಭಮನೆ ನಿರಂತರಂ ಗೆಲೆ: **ಪಂಪಭಾ,** ೧. ೧೨೦)

ಮುಖೋದ್ಗತ – [ಗು] [ಮುಖ+ಉದ್ಗತ] ಬಾಯಲ್ಲಿರು, ಬಾಯಿಪಾಠವಾಗು (ಕನವರಿಸೆ ನಾಲ್ಕು ವೇದಮುಂ ಎನಗೆ ಮುಖೋದ್ಗತಂ ಅದಲ್ಲದೆ ಆಱಂಗದ ಮಾತನಿತೆ ಗಡ: **ಪಂಪಭಾ,** ೮. ೫೩)

ಮುಖ್ಯ ಕಾಲ – [ನಾ] [ಜೈನ] ಮಧ್ಯಮುಖಂಡದಲ್ಲಿನ ಎರಡು ಕಾಲಗಳ ಪೈಕಿ ಒಂದು: ಆದಿಮಧ್ಯಾಂತಗಳಿಲ್ಲದ, ಒಂದು ಅವಸ್ಥೆಯಿಂದ ಮತ್ತೊಂದಕ್ಕೆ ಹೊಂದಿಕೆಯಾಗಬಲ್ಲ ವರ್ತನಾಸ್ವರೂಪವುಳ್ಳ ಹಾಗೂ ತನ್ನ ಯೋಗ್ಯತಾನುಗುಣವಾಗಿ ಗುಣಪರ್ಯಾಯಗಳಿಂದ ಪರಿವರ್ತನೆಯನ್ನು ಹೊಂದುವ ಪದಾರ್ಥಗಳನ್ನು ಪರಿವರ್ತನಗೊಳಿಸಲು ಸಹಾಯಕವೂ ಲೋಕಾಕಾರಪ್ರದೇಶ ಪರಿಮಾಣವೂ ಆದ ನಮ್ಮಂಥವರಿಗೆ ಕಲ್ಪನಾಮಾತ್ರವಾದರೂ ಸರ್ವಜ್ಞರಿಗೆ ಪ್ರತ್ಯಕ್ಷಗೋಚರವಾದುದು ಮುಖ್ಯಕಾಲ (ಆದಿಮಧ್ಯಾವಸಾನವಿರಹಿತಮುಂ ವರ್ತನಾಲಕ್ಷಣಮುಂ ಪರಿಣಾಮದ್ರವ್ಯಪರಿವರ್ತನಕಾರಣಮುಂ ಲೋಕಾಕಾರಪ್ರದೇಶಪ್ರಮಾಣಪರಿಣಾಮಮುಂ ಅಸ್ಮದಾದ್ಯನುಮೇಯಮುಂ ಸರ್ವಜ್ಞಗೋಚರಮುಂ ಅಪ್ಪುದು ಮುಖ್ಯಕಾಲ: **ಆದಿಪು,** ೬. ೪೮ ವ)

ಮುಗಿ – [ಕ್ರಿ] ಮುಚ್ಚಿಕೊಳ್ಳು (ಕರ ವದನ ಹೃದಯಕಮಳದೊಳ್ ಎರಡಲರ್ದುವು ಅದೊಂದು ಮುಗಿದುದು ಭುಜಬಲಿಯಾ: **ಆದಿಪು,** ೧೪. ೧೩೭)

ಮುಗಿಯಿಸು – [ಕ್ರಿ] [ಕೈ] ಜೋಡಿಸುವಂತೆ ಮಾಡು, ನಮಸ್ಕರಿಸುವ ಹಾಗೆ ಮಾಡು (ಮರ್ತ್ಯ ವಿದ್ಯಾಧರ ವ್ಯಂತರಾಧೀಶ್ವರ ಕರಸರಸಿಜಂಗಳಂ ವಕ್ತ್ರಚಂದ್ರ ಸ್ಫುರಿತೋದ್ಯತ್ಕಾಂತಿ ನಿಚ್ಚಂ ಮುಗಿಯಿಸೆ: **ಆದಿಪು,** ೩. ೪೬)

ಮುಗಿಲ್ – [ನಾ] ಮೋಡ (ಕರಿಯ ಮುಗಿಲ್ಗಳಿಂ ಗಗನಮಂಡಳಮೊಪ್ಪಿರೆ ಸೋಗೆಯಿಂ ವನಾಂತರಮೆಸೆದೊಪ್ಪೆ ತೋರ್ಪ ಮೊಳೆವುಲ್ಗಳಿಂ ಈ ಧರಣೀವಿಭಾಗಂ ಒಪ್ಪಿರೆ: **ಪಂಪಭಾ,** ೭. ೨೩)

ಮುಗಿಲಂ ಮುಟ್ಟು – [ಕ್ರಿ] ಎತ್ತರಕ್ಕೆ ಬೆಳೆ, ಏಳಿಗೆ ಹೊಂದು (ನೆಗಟ್ದಿಕ್ಷ್ವಾಕು ಕುಲಾಂಬರೇಂದು ಭರತಂ ನಿನ್ನಗ್ರಜಂ ಸಾಹಸಂ ಮುಗಿಲಂ ಮುಟ್ಟೆ .. .. ದಿಗ್ವಿಜಯಕ್ಕೆ ಪೋಱಮಟ್ಟಾ ಪೆಂಪು ಸಾಮಾನ್ಯಮೇ: **ಆದಿಪು,** ೧೪. ೫೨); [ಕ್ರಿ] ಅತ್ಯುನ್ನತವಾಗು (ಮುಂ ಪೂಣ್ದ ನನ್ನಿಗೆ ಬನ್ನಂ ಬರಲೀಯದೆ ವಿಖ್ಯಾತಿಯುಂ ಕೀರ್ತಿಯುಂ ಮುಗಿಲಂ ಮುಟ್ಟಿದುದಲ್ತೆ: **ಪಂಪಭಾ,** ೧. ೮೧)

ಮುಗುಳ್ – [ಕ್ರಿ] ಮುಚ್ಚಿಕೊ (ಸೊಗಯಿಸುವ ಮುನ್ನಿನಿರ್ದ ಪರಿಜಿಂ ಕಡುಚೆಲ್ವು ಗಡಂ ಜಿನೇಂದ್ರನಂ ಬಗೆವ ಮನಂ ಗಡಂ ಮುಗುಳ್ದು ಜಾನಿಪ ಕಣ್: **ಆದಿಪು,** ೨. ೬೦); [ನಾ] ಮೊಗ್ಗು (ಮುತ್ತಿನ ಮುಗುಳ್ಗಳುಮನಿಟ್ಟು ಆ ಮುಗುಳನೆ ಬಿರಿಮುಗುಳ್ಗೆತ್ತೆಱಗಿದ ಮಱಿದುಂಬಿಯಂತೆ: **ಆದಿಪು,** ೪. ೪೧ ವ); [ನಾ] ಹರಳು (ಮುಖಚಂದ್ರನಂ ಚಂದ್ರಕವಳದಿಂ ತೊಡೆದು ಓರೊಂದೆ ವಜ್ರದ ಪಂಚಲೋಹಮುಮಂ ಅವರ್ಕೆ ಅಮರ್ಕೆವೆತ್ತ ಮುತ್ತಿನ ಮುಗುಳ್ಗಳುಮನಿಟ್ಟು: **ಆದಿಪು,** ೪. ೪೧ ವ)

ಮುಗುಳ್ವದ – [ನಾ] [ಮುಗುಳ್+ಪದ] ಮೊಗ್ಗಿನ ಹದ ಅಥವಾ ಹದವಾದ ಮೊಗ್ಗು (ಮುಗುಳ್ವದನಾದ ಸಂಪಗೆ ಮಡಲ್ತ ಅದಿರ್ಮುತ್ತೆ ಪರಲ್ದರಲ್ದ ಮಲ್ಲಿಗೆ ನನೆಗರ್ಚ ಕಾಕಳಿಯೊಳಾಣತಿಗೆಯ್ವ ಮದಾಳಿ: **ಪಂಪಭಾ,** ೫. ೩೫)

ಮುಗುಳ್ಸರಿಗೆ – [ನಾ] ಮೊಗ್ಗಿನ ಹಾರ (ಮೆಲ್ಲನೆ ವಕುಲ ಆಳವಾಳತಳದೊಳ್ ಸುರಿದ ಅಂಬುಜಸೂತ್ರದಿಂದೆ ಮತ್ತನಿತಱಿಸೊಳಂ ಮುಗುಳ್ಸರಿಗೆ ತೋಳ್ವಲೆ ಕಂಕಣ ವಾರಮೆಂದು ಬೆಟ್ಟಿನಿತನೆ ಮಾಡಿ: **ಪಂಪಭಾ,** ೨. ೧೬)

ಮುಗ್ಧಜಲ್ಪಿತ – [ನಾ] ಮುದ್ದು ಮಾತು (ಲಲಿತೋತ್ತಾನಶಯಿತ ದರಹಸಿತ ತರಂಗಿತ ಗತಿಸ್ಖಲಿತ ಮುಗ್ಧಜಲ್ಪಿತಾದಿ ಬಾಲ್ಯವಿಳಾಸಂಗಳಿಂದಂ: **ಆದಿಪು**, ೫೦ ವ)

ಮುಚ್ಚೆ – [ನಾ] [ಮೂರ್ಛೆ] ಪ್ರಜ್ಞಾಹೀನತೆ (ಉರಃಪ್ರದೇಶಮನಿಸೆ ನೆತ್ತರೊಕ್ಕು ಪತಿ ಮುಚ್ಚೆಯೊಳಿಚ್ಚೆಯೆ ಕೆಟ್ಟು ಜೋಲ್ದೊಡೆ: **ಪಂಪಭಾ**, ೧೨. ೧೧೭)

ಮುಟ್ಟಿ – [ನಾ] [ಮುಷ್ಟಿ] ಹಿಡಿ (ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ ಪರ್ವಿದ ಏರ್ವೆಸನದೊಳಾದ ಬಲ್ಮೆಯೊಳ್ ಒಡಂಬಡೆ ತಳ್ತಿಜೆವಲ್ಲಿ ಮಿಂಚಿನೊಳ್ ಮುಸುಕಿದ ಮಾಟಕ್ಕೆಯಾಯ್ತು ಸಮರಾಂಗಣಂ ಉಳ್ಕುವ ಬಾಳ್ಗಳ ಉಳ್ಕದಿಂ: **ಪಂಪಭಾ**, ೧೦. ೭೮)

ಮುಟ್ಟಿ ನುಡಿ – [ಕ್ರಿ] ಮನವರಿಕೆಯಾಗುವಂತೆ ಮಾತಾಡು (ಪರಿಮಿತ ಹಿತವಚನಂಗಳಿಂ ಮುಟ್ಟಿ ನುಡಿದು ತನ್ನ ಕಂಡ ಕನಸುಗಳಂ ಅನುಕ್ರಮಂದಪ್ಪದೞಿಪಿದ ಮಂತ್ರಿಮುಖ್ಯನ ನುಡಿಯೊಳ್ ಅಪಗತಕಲುಷ ಹೃದಯನಾಗಿ: **ಆದಿಪು**, ೨. ೪೮ ವ); [ಕ್ರಿ] ಇಂಗಿತವರಿತು ಮಾತಾಡು (ಎಂದು ಮುನ್ನಮೆ ಮುಟ್ಟಿ ನುಡಿಯದೆ ಪೊೞಪೊೞಗನೆ ಬಳಸಿ ಕನ್ನೆಯ ಸಂಕೆಯಂ ಕಿಡಿಸಿ: **ಪಂಪಭಾ**, ೪. ೬೩ ವ)

ಮುಟ್ಟು – [ಕ್ರಿ] ತಾಗು, ಸೇರು (ಉೞಿದುದು ಸಱುಸೈತವಚಱನೆ ಮಾಡಿ ಸಜೆಸೈತುವೋಕುಮೇಂ ಬಗೆಯ ಬಟ್ಟೆಯಂ ಮುಟ್ಟುಗುಮೇ: **ಆದಿಪು**, ೧. ೧೮); [ನಾ] ಯೋಗ್ಯ, ಅರ್ಹ (ತನ್ನಗ್ರಪುತ್ರಂ ಕ್ರಮಂಬಿಡಿದಿರ್ದಂ ಜಯವರ್ಮನಿರ್ದೊಡಮವಂ ಮುಟ್ಟಲ್ಲಂ ಎಂದು ಒಳ್ಪಡುವನ್ನಂ ಕಿಜೆಯಾತನಂ ನಿಜೆಸಿದಂ ಶ್ರೀವರ್ಮನಂ ರಾಜ್ಯದೊಳ್: **ಅದಿಪು,** ೨. ೩೮); [ನಾ] ಪ್ರಯೋಜನ (ಆತನ ತಪೋಮಯ ಶಿಖಿಗಳಿಂ ಬೆಂದು ಬೆಂದ ನುಲಿಯಂತೆ ಏತರ್ಕಂ ಮುಟ್ಟಲ್ಲದೆ ಮುಟ್ಟುಗಿಡೆ: **ಪಂಪಭಾ,** ೭. ೮೦ ವ); [ಕ್ರಿ] ಎದೆಯನ್ನು ಹೊಗು (ದೊರೆವೆತ್ತು ದೂಱದೆ ಆಜೆದ ದನಿ ಮುಟ್ಟೆ ಮೇನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್ **ಪಂಪಭಾ**, ೭. ೮೮)

ಮುಟ್ಟುಗಿಡು – [ಕ್ರಿ] ನಿಷ್ಪ್ರಯೋಜಕವಾಗು (ಆತನ ತಪೋಮಯ ಶಿಖಿಗಳಿಂ ಬೆಂದು ಬೆಂದ ನುಲಿಯಂತೆ ಏತರ್ಕಂ ಮುಟ್ಟಲ್ಲದೆ ಮುಟ್ಟುಗಿಡೆ: **ಪಂಪಭಾ**, ೭. ೮೦ ವ)

ಮುಟ್ಟುಗೆಡು – [ಕ್ರಿ] ಉಪಕರಣಗಳನ್ನು ಕಳೆದುಕೊ, ಎಂದರೆ ನಿರುಪಾಯನಾಗು (ಕೂರದರ್ ನೆಲನಂ ಒಟ್ಟಜೆಯಿಂ ಕೊಳೆ ಕೊಟ್ಟು ಮುಟ್ಟುಗೆಟ್ಟು ಇನ್ನುಂ ಅರಣ್ಯದೊಳ್ ನಮೆದಪಂ ಯಮನಂದನನಂ: **ಪಂಪಭಾ**, ೭. ೫೫)

ಮುಟ್ಟೆವರ್ – [ಕ್ರಿ] ಸಮೀಪಿಸು (ಅಶ್ವತ್ಥಾಮಂ ಕಂಡು ಮುಟ್ಟೆವರ್ಪನ್ನೆಗಂ ಶೋಣಾಶ್ವೋಪಲಕ್ಷಿತ ನಿಜಪಿತೃ ಸೂತಕೇತನ ಕಥಿತಮಾಗಿರ್ದ ರಥಮಂ ಉಪಲಕ್ಷಿಸಿ: **ಪಂಪಭಾ**, ೧೨. ೩೦ ವ)

ಮುಡಿ – [ನಾ] ದಂಡೆ (ಪದನಱಿದು ತಳಿದ ಮೃಗಮದಸಲಿಲದೊಳ್ ಮೆಲ್ಲಮೆಲ್ಲನುಳ್ಳಲರ್ದ ಚೆಲ್ವಿಂಗೆ ಮುಡಿಗವಿದಂತೆ ತೋಱುವ ತೋರಮಲ್ಲಿಗೆಯ ಮುಡಿಯುಂ: **ಆದಿಪು**, ೪. ೪೧ ವ); [ಕ್ರಿ] ತಲೆಗೂದಲಲ್ಲಿ ಧರಿಸು (ರತಿಗೆ ಮುಡಿಯಲ್ಕೆ ಮದನಂಗೆ ತುಱುಂಬಲ್ಕೆ ಇರ್ದುದೆಂದು ಮಧು ಸುೞಿವ ಮಧುವ್ರತಮುಮಂ ಅಲೆದಪಂ: **ಆದಿಪು**, ೧೧. ೧೧೧); [ನಾ] ತಲೆಗೂದಲ ಗಂಟು (ಮುಡಿಯಂ ಸೋಗೆಯೆ ಗೆತ್ತು ಸೋಗೆ ನಡೆಯಂ ಪೆಣ್ಣಂಚೆಗೆತ್ತು .. .. ಅಳಕಾನೀಕಂಗಳಂ ಸೊರ್ಕಿದ ಆಱಿಡಿಗೆತ್ತು ಆಱಿಡಿ ಸುತ್ತುತುಂ ಬರೆ: **ಪಂಪಭಾ**, ೭. ೮೬); [ಕ್ರಿ] ತೀರು, ಮುಗಿ (ಅಂತುಂ ತನ್ನ ಪಗೆಯುಂ ಬಗೆಯುಂ ಒಡನೊಡನೆ ಮುಡಿಯೆ: **ಪಂಪಭಾ,** ೧೨. ೧೫೫ ವ)

ಮುಡಿಗವಿ – [ಕ್ರಿ] ಕಿರೀಟವಿಡು (ಚೆಲ್ವಿಂಗೆ ಮುಡಿಗವಿದಂತೆ ತೋಱುವ ತೋರಮಲ್ಲಿಗೆಯ ಮುಡಿಯುಮೆಸೆಯೆ ಕೈಗೆಯ್ದಾರ್ಗಳ್: **ಆದಿಪು**, ೪. ೪೧ ವ)

ಮುಡಿಗಿಕ್ಕು – [ಕ್ರಿ] [ಮುಡಿಗೆ+ಇಕ್ಕು] ಸವಾಲು ಹಾಕು, ಪಂತ ಕಟ್ಟು (ಗೆಲ್ಲಕ್ಕೆ ಮುಡಿಗಿಕ್ಕುವಂತೆವೊಲ್ ಇಕ್ಕಿದಂ ಅವಯವದೆ ನೆಲದೊಳ್ ಅರಿಗಂ ಹರನಂ: **ಪಂಪಭಾ**, ೮. ೨೨)

ಮುಡಿಗೆಯಿಕ್ಕು – [ಕ್ರಿ] ಸವಾಲು ಒಡ್ಡು (ಕಾಮನೊಡ್ಡೋಲಗದೊಳ್ ಮುಡಿಗೆಯಿಕ್ಕಿಯುಂ ಕೈಯನೆತ್ತಿ ಪೊಗಟ್ಟುಂ ತಣಿಯನೆ ಮದನನುಂ ಮಲ್ಲಿಗೆಯಂ: **ಆದಿಪು,** ೧೧. ೧೦೯)

ಮುಡಿಪು – [ನಾ] [ಜೈನ] ವ್ರತದ ಮೂಲಕ ಮರಣಿಸು (ಘೋರವೀರತಪದೊಳ್ ತನುವಂ ಬಡಮಾಡಿ ನೋಂಪಿಯೊಳ್ ಮುಡಿಪಿ ನಿರಾಕುಳಂ: **ಆದಿಪು**, ೫. ೪೮)

ಮುಡಿಯಿಸು – [ಕ್ರಿ] ಮುಡಿಸು, ತೊಡಿಸು ಮತ್ತು ಕಟ್ಟು (ಮುಡಿಯಂ ಪಿಡಿದೆೞೆದವನಂ ಮಡಿಯಿಸಿ ಮತ್ತವನ ಕರುಳ ಪಿಣಿಲಿಂದ ಎನ್ನಂ ಮುಡಿಯಿಸುವಿನೆಗಂ ಮುಡಿಯಂ ಮುಡಿಯೆಂ ಗಡ ಕೇಳಿಂ ಈಗಳ್ ಆನ್ ನುಡಿನುಡಿದೆಂ: **ಪಂಪಭಾ**, ೭. ೧೦)

ಮುತ್ತ – [ನಾ] ಮುದುಕ (ಕಿಜೆಯಂ ಮುತ್ತಂ ಧನದಂ ಬಱುವಂ ತೊಱೆದಂ ಗೃಹಸ್ಥನೆನ್ನದೆ ಮುಂಬಿಟ್ಟಱಿಸಿ ಕೊಲುತಿರ್ಪ ಜವನೆಂಬಜೆಕೆಯ ಪಗೆವಂಗೆ ಅದೆಂತು ಪಂಗಿಗನಪ್ಪೆಂ: **ಆದಿಪು**, ೪. ೭೭); [ಗು] ಮುದಿಯಾದ (ಮುತ್ತ ತವಸಿಗಳ ಕೈಯಂ ಪಿಡಿದುಯ್ದು ಅವರ ಗುಹೆಗಳಂ ಪುಗಿಪ ಪೊಱಮಡಿಪ ಚಪಳಕಪಿಗಳುಮಂ: **ಪಂಪಭಾ,** ೧. ೧೧೫ ವ)

ಮುತ್ತಿಕೊಳ್ – [ಕ್ರಿ] ಆವರಿಸು, ದಾಳಿ ಮಾಡು (ತಂತಮ್ಮ ಚತುರ್ಬಲಂಗಳಂ ಒಂದುಮಾಡಿಕೊಂಡು ಕಾಲಾಗ್ನಿಯಂ ಕೀಡಿ ಸುತ್ತುವಂತೆ ಕರ್ಣನಂ ಸುತ್ತಿ ಮುತ್ತಿಕೊಂಡು: **ಪಂಪಭಾ,** ೧೨. ೧೧೮ ವ)

ಮುತ್ತು – [ಕ್ರಿ] ದಾಳಿಮಾಡು (ಅನಿತುಂ ಬಲಮಂ ಮುತ್ತಿ ಬಳಾಕಾವರ್ತರ್ ಸುತ್ತಲುಮೇಸಾಡಿ ಪಿರಿದ ತಿಣಿಕಂ ತಂದರ್: **ಆದಿಪು,** ೧೪. ೭೦); [ಕ್ರಿ] ಆವರಿಸು (ಒಂದೆ ದೆಸೆಯೊಳ್ ಕುಂದದೆ ದಹನಾರ್ಚಿ ಸುತ್ತಿ ಮುತ್ತುವ ಪದದೊಳ್: **ಪಂಪಭಾ,** ೫. ೯೮); [ಕ್ರಿ] ನವರತ್ನಗಳಲ್ಲಿ ಒಂದು (ಬೆರಲೊಳ್ ಬೀಣೆಯ ತಂತಿಗಳ್ ಒರಸಿದ ಕೆಂಗಲೆಗಳ್ ಅಕ್ಷಮಾಲೆಯೊಳ್ ಎಸೆದಂತಿರೆ ಪೊಸೆಯೆ ಮುತ್ತು ಪವಳಂ ಬೆರಸಿದವೊಲಾಯ್ತು ಚೆನ್ನ ತಪಸಿಯ ಕೆಯ್ಯೊಳ್: **ಪಂಪಭಾ**, ೬. ೧೦)

ಮುದ – [ನಾ] ಸಂತೋಷ (ವನಾಭ್ಯಂತರಮಂ ತೊಟಲೆ ಮನಕ್ಕಂತಿಲ್ಲದ ಮುದಮನುಂಟುಮಾಡಿದುದು ಬನಂ: **ಆದಿಪು**, ೧೧. ೮೩)

ಮುದಿತ – [ಗು] ನಲವುಗೊಂಡ (ಎತ್ತಿದ ಪರಾಗರಾಗ ಮುದಿತ ಆಶಾ ಭಾಸಂ ಉದ್ಯತ್ ಮಧು ಉನ್ಮದಭೃಂಗಧ್ವನಿ ಮಂಗಳಧ್ವನಿಯೆನಲ್: **ಪಂಪಭಾ**, ೫. ೬)

ಮುದಿರ್ – [ಕ್ರಿ] ಸೊರಗು (ಎಳೆವಿಸಿಲೀಗಳೀಗಳೆ ಮುದಿರ್ದುದು ಚೂತಕುಜಾತಮೀಗಳೀಗಳೆ ನನೆದೋಱಿತು ಇಂದೊಳದಿಂ ಉನ್ಮದಷಟ್ಪದವೃಂದಮೀಗಳೀಗಳೆ ಮೊರೆದತ್ತು: **ಆದಿಪು**, ೧೩. ೫)

ಮುದಿವರ್ದು – [ನಾ] [ಮುದಿ+ಪರ್ದು] (ದುಶ್ಶಾಸನನಂ ಕಂಡು ಆತನಂ ಸುತ್ತಿಱಿದ ಮುದುವರ್ದುಗಳುಮಂ ಅಗಲೆ ಮೆಟ್ಟಿ: **ಪಂಪಭಾ**, ೧೩. ೫೬ ವ)

ಮುದು – [ಕ್ರಿ] ಮುದಿಯಾಗು [ಮುತ್ತಂತೆ=ಮುದಿಯಾದಂತೆ] (ಮುಸು ಮುತ್ತಂತೆ ತೆರಳ್ದ ತನ್ನ ಮೊಗಮಂ ಕಂಡಳ್ಕನೋ ಕೂಡೆ ಜೋಲ್ದು ಸಡಿಲ್ದಿರ್ದ ಒಡಲಂ ಮೇಳ್ ಕಾಣನೋ: **ಆದಿಪು**, ೨. ೪೫)

ಮುದುಗಣ್ಗಳ್ – [ನಾ] ಮುದುಕರು (ಭೀಮನೊಡದಾರದಿಂ ಎಂದು ಮುದುಗಣ್ಗಳ್ ಬಾರಿಸೆ: **ಪಂಪಭಾ**, ೨. ೩೧ ವ)

ಮುದುಗಣ್ತನ – [ನಾ] ಮುದಿತನದ ಮಾತು (ಪ್ರಸನ್ನಗಂಭೀರ ಚಿತ್ತದಿಂದಿದನವಧಾರಿಸುವುದು ಯುವರಾಜ ಮನಂಬಸದೊರ್ಮೆಗೆ ಸಲಿಪುದೆಮ್ಮ ಮುದುಗಣ್ತನಮಂ: **ಆದಿಪು**, ೧೪. ೧೦೪); [ನಾ] ಯಜಮಾನಿಕೆ (ವಿನಯದಿನಾಮೀ ಭುವನೈಕನಾಥನಂ ಸಲ್ಗೆವೆರಸು ಬೇಡುತ್ತಿರೆ ಬಂದನುವಿಸುವ ನಿಮ್ಮ ಮುದುಗಣ್ತನದೊಳಿದೇನುಂತೆ ಬಟ್ಟೆವೋಪೊಡೆ ಪೋಗಿಂ: **ಆದಿಪು**, ೯. ೧೦೬)

ಮುದುಪ – [ನಾ] ಮುದುಕ (ಒರ್ವಳ್ ಕುಂಟಣಿಯುಪರೋಧಕ್ಕೆ ಪಿರಿದೀವ ಮುದುಪಮಂ ಉಱಿಯಲಂಜಿ ತನ್ನ ಬೇಸಱಿಂ ತನ್ನ ಸಬ್ಬವದಾಕೆಗೆ ಇಂತೆಂದಳ್: **ಪಂಪಭಾ**, ೪. ೯೯ ವ)

ಮುದ್ಗ – [ನಾ] ಹೆಸರುಕಾಳು (ಕುಲತ್ಥ ಮುದ್ಗ ಮಾಷ ರಾಜಮಾಷ ಜೀರಕಾಧಾನ್ಯಕಾದಿ ವಿವಿಧಧಾನ್ಯಭೇದಂಗಳುಂ: **ಆದಿಪು**, ೬. ೭೨ ವ)

ಮುದ್ಗರ – [ನಾ] ಒಂದು ಆಯುಧ (ಕಣೆಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ ವಿವಿಧಾಯುಧಂಗಳೊಳಿಟ್ಟುಂ ಇಱಿದುಂ ಅಗುರ್ವು ಅದ್ಭುತಮಾಗೆ ಕಾದುವಾಗಳ್: **ಪಂಪಭಾ**, ೧೨. ೧೧೮ ವ)

ಮುದ್ರಿಕೆ – [ನಾ] ಗುರುತು ಒತ್ತಿರುವ ಮೊಹರು (ಅದಱ ಮುದ್ರಿಕೆಯನೊಡೆದು ಅಂತಸ್ಸ್ಥಿತಕಾರ್ಯಪತ್ರಮಂ ಬಾಜಿಸಿ ನೋಡಿ ವಿಸ್ಮಯಾಕ್ರಾಂತಚಿತ್ತನಾಗಿ: **ಆದಿಪು**, ೪. ೮೬ ವ)

ಮುದ್ರಿಸು – [ಕ್ರಿ] ಮುದ್ರೆಯೊತ್ತು, ಮುದ್ರೆ ಹಾಕು (ಚತುರಂತಕ್ಷಿತಿ ಗರ್ಭಸ್ಥಿತನದು ಗಡಿಮೆಂದು ಮುದ್ರಿಪಂತಾಯ್ತು ಯಶಸ್ವತಿಯ ಪದನ್ಯಾಸಂ: **ಆದಿಪು**, ೮. ೩೨); [ಕ್ರಿವಿ] ಮುದ್ರೆಯನ್ನು ಪಡೆದು (ವಾಗ್ವಧೂಮುದ್ರೆಯೊಳ್ ಮುದ್ರಿಸಿ ನಿಂದತ್ತು ಆದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ: **ಆದಿಪು**, ೧೬. ೮೦)

ಮುದ್ರೆ – [ನಾ] ಒಪ್ಪಿಗೆಯ ಅಂಕಿತ (ವಾಗ್ವಧೂಮುದ್ರೆಯೊಳ್ ಮುದ್ರಿಸಿ ನಿಂದತ್ತು ಆದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ: **ಆದಿಪು**, ೧೬. ೮೦)

ಮುಧಾ – [ಗು] ವ್ಯರ್ಥವಾಗಿ (ಅದನಱಿಯದೆ ಅಬೋಧಬೋಧಿತ ತಪೋದಾನವಿಧಾನದಿಂ ಮುಧಾಕ್ಲೇಶಾಯಾಸನಿರತರಾಗಿ ನಮೆವರ್ **ಆದಿಪು**, ೨. ೯ ವ)

ಮುನ್ – [ಅ] ಹಿಂದೆ, ಪೂರ್ವಕಾಲದಲ್ಲಿ (ತನ್ನೊಳಗಣ ಪನ್ನಗನಂ ಮುಂ ನೀಂ ಪಿಡಿದು ಒಗೆಯೆ ಕಾಯಲಾಱದೆ ಪಿರಿದುಂ ಬನ್ನದ ಕರ್ಪೆಸೆದುದು ತೊಱೆಗೆ ಇನ್ನುಂ ಹರಗಳ ತಮಾಳ ನೀಳಚ್ಛವಿಯಿಂ: **ಪಂಪಭಾ**, ೫. ೫೪)

ಮುನಿ – [ನಾ] [ಜೈನ] ಶ್ರಮಣ, ಜೈನಸನ್ಯಾಸಿ (ಆ ಮುನಿನಾಥಂ ತ್ರಿಗುಪ್ತಿಯೊಳ್ ನೆರೆದು ಈ ಮನೋರಥಂ ಮಂತ್ರಗುಪ್ತಿಯೊಳ್ ನೆರೆದು: **ಆದಿಪು**, ೬. ೨೪ ವ); [ನಾ] [ಜೈನ] ಪಂಚ ಪರಮೇಷ್ಠಿಗಳಲ್ಲಿ ಒಬ್ಬ, ಸಿದ್ಧ (ಮುನಿಜನಮೋದಿಸಿದೋಜೆಯೊಳನುವದಿಪುದಿದೊಂದ,

ಕೊಂಡಕುಂದಾನ್ವಯನಂದನರನಶುಕಮೆಂದೆನಗಿನಿಸನನ ುಗ್ರಹಂಗೆಯ್ಗೆ ಕರುಣದಿಂ ಮುನಿನವಹಂ: **ಆದಿಪು**, ೧. ೧೪); [ಕ್ರಿ] ಕೋಪಿಸಿಕೊ (ಪೇಱಿಂ ಎನ್ನನಾವನೆಚ್ಚಂ ಎಂಬ ಮುನಿಯ ಮುನಿದ ಸರಮಂ ಕೇಳ್ದು ಬಿಲ್ಲನಂಬುಮಂ ಈಡಾಡಿ ತನ್ನ ಮುಂದೆ ನಿಂದಿರ್ದ ಭೂಪನಂ ಮುನಿ ನೋಡಿ: **ಪಂಪಭಾ**, ೧. ೧೧೧ ವ); [ನಾ] ತಪಸ್ವಿ (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ**, ೧. ೧೧೫ ವ)

ಮುನಿಗಣೇಶ್ವರ – [ನಾ] ಮುನಿಶ್ರೇಷ್ಠ (ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರ ತಪಃಪ್ರಭಾವಕ್ಕೆ ಚೋದ್ಯಂಬಟ್ಟು: **ಪಂಪಭಾ**, ೧. ೧೧೫ ವ)

ಮುನಿಜನ – [ನಾ] ಮುನಿಗಳ ಸಮೂಹ (ಭೀಮಂ ಭಯಂಕರಂ ಪೆಱತೇ ಮಾತು ಈ ಕೂಸಿನಂದಂ ಈತನ ಪೆಸರುಂ ಭೀಮನೆ ಪೋಗೆನೆ ಮುನಿಜನಮೀ ಮಾಟಕ್ಕೆಯಿಂ ಆಯ್ತು ಶಿಶುಗೆ ಪೆಸರನ್ವರ್ಥಂ: **ಪಂಪಭಾ**, ೧. ೧೨೮)

ಮುನಿಪುಂಗವ – [ನಾ] ಮುನಿಶ್ರೇಷ್ಠ (ಅಂಬಿಕೆಯ ಸೂಳೆಯಪ್ಪಾಕೆ ದರಹಸಿತ ವದನಾರವಿಂದೆಯಾಗಿ ಬರವಂ ಕೈಕೊಂಡಳಪ್ಪುದಱಿಂದಾಕೆಯ ಮಗಂ ವಿದುರನೆಂಬಂ ಅನಂಗಾಕಾರನುಮಾಚಾರವಂತನುಂ ಬುದ್ಧಿವಂತನುಮಕ್ಕುಂ: **ಪಂಪಭಾ**, ೧. ೮೫ ವ)

ಮುನಿಯಲ್ – ಕೋಪಿಸಿಕೊಳ್ಳಬೇಡ (ಮುನಿಯಲ್ ಎನಗೆ ಆಗ ಗಾಂಗೇಯನಿರ್ದಂ ಇರ್ದಂ ಘಟೋದ್ಭವಂ ನೆಗಟ್ದಿ ಪೃಥಾತನಯರುಮಿರ್ದರ್ ದುರ್ಯೋಧನನಿರ್ದಂ: **ಪಂಪಭಾ**, ೬. ೬೨)

ಮುನಿವನ – [ನಾ] ಋಷಿಗಳ ಕಾಡು (ಮುನಿವನಮನೆ ಬಿಸುಟುವು ಮುಂ ಮುನಿಯರ ಸೋಂಕಿಲೊಳೆ ಸಿಂಗಂಗಳ್: **ಪಂಪಭಾ**, ೨. ೬)

ಮುನಿಸಂ ಮಾಡು – [ಕ್ರಿ] ಕೋಪ ಬರುವಂತೆ ಮಾಡು (ಆ ಮುನಿಗೆ ಮನಿಸಂ ಮಾಡಲೆಂದು ಇಂದ್ರಂ

ಉಪಾಯದೊಳಟ್ಟಿದ ವಜ್ರಕೀಟಂಗಳ್ ಕರ್ಣನೆರಡುಂ ತೊಡೆಯುಮಂ .. .. ಉರ್ಚಿ ಪೋಗೆಯುಂ: **ಪಂಪಭಾ,** ೧. ೧೦೪ ವ)

ಮುನಿಸಮಿತಿ – [ನಾ] ಋಷಿಸಮಾಜ (ಪುಟ್ಟುವುದುಂ ಧರ್ಮಮೊಡವುಟ್ಟಿದುದು ಈತನೊಳೆ ಧರ್ಮನಂಶದೊಳ್ ಈತಂ ಪುಟ್ಟಿದನೆಂದಾ ಶಿಶುಗೊಸೆದಿಟ್ಟುದು ಮುನಿಸಮಿತಿ ಧರ್ಮಸುತನನೆ ಪೆಸರಂ: **ಪಂಪಭಾ,** ೧. ೧೨೨)

ಮುನೀಂದ್ರ – [ನಾ] ಮುನಿಶ್ರೇಷ್ಠ (ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫)

ಮುನೀಶ್ವರ – [ನಾ] ಮುನಿ ಶ್ರೇಷ್ಠ (ಬರಿಸಿದ ಕಾರಣಮಾವುದೊ ತರುಣಿ ಮುನೀಶ್ವರನ ಮಂತ್ರಮೇದೊರೆಯೆಂದಾಂ ಮರುಳಿಯೆನೆ ಅಜಿದುಮಜಿಯದೆ ಬರಿಸಿದೆನಿನ್ನೇಟಿಂ ಎಂದೊಡಾಗದು ಪೋಗಲ್: **ಪಂಪಭಾ,** ೧. ೯೩)

ಮುನ್ನಂ – [ಅ] ಮುಂಚೆಯೇ (ಸಂತತಿಗೆ ಪಿರಿಯ ಮಕ್ಕಳನಾಂ ತಡೆಯದೆ ಪಡೆವೆನೆಂದೊಡೆ ಮುನ್ನಂ ಕೊಂತಿಯೆ ಪಡೆದಳ್: **ಪಂಪಭಾ,** ೧. ೧೨೯); [ಅ] ಮೊದಲು (ಮಹಾಪ್ರಳಯೋಲ್ಕೋಪಮ ಮದ್ಗದಾಹತಿಯಿಂ ಅತ್ಯುಗ್ರಾಜಿಯೊಳ್ ಮುನ್ನಂ ಈ ಖಳ ದುಶ್ಶಾಸನನಂ ಪೊರಳ್ಚಿ ಬಸಿಜಂ ಪೋಟ್ದಿಕ್ಕಿ: **ಪಂಪಭಾ,** ೭. ೧೨)

ಮುನ್ನಿನಂತೆವೊಲ್ – ಮೊದಲಿನಂತೆಯೇ (ಸಂತಸದಿನಿರ್ದು ಮಕ್ಕಳಸಂತತಿಗೀ ದೊರೆಯರ್ ಇನ್ನುಮಾಗದೊಡೆ ಎಂತುಂ ಸಂತಸಮೆನಗಿಲ್ಲ ಎಂದಾ ಕಾಂತೆ ಸುತಭ್ರಾಂತೆ ಮುನ್ನಿನಂತೆವೊಲಿರ್ದಳ್: **ಪಂಪಭಾ,** ೧. ೧೨೩)

ಮುನ್ನುಟಿವು – [ನಾ] ಮುಂದಿನ ಬದುಕು (ತನ್ನ ಮುನ್ನುಟಿವು ಬೇಟದ ಲಲ್ಲೆಯ ಬಲ್ಮೆ ಪತ್ತಿ ಸುತ್ತಿಸೆ : **ಆದಿಪು,** ೧೨. ೧೭)

ಮುನ್ನೆ – [ಅ] ಮೊದಲು, ಮುಂಚೆ (ಆನನೇಂದುವ ಕಡುವೆಳ್ಪು ಕೂಸಿನ ನೆಗಟ್ತೆಯ ಬೆಳ್ಪುವೊಲಾಯ್ತು ಮುನ್ನೆ ಬಳ್ಕುವ ನಡು ತೋರ್ಪ ಮೆಯ್ಯನೊಳಕೊಂಡುದು: **ಪಂಪಭಾ,** ೧. ೧೨೫)

ಮುನ್ನೊತ್ತು – [ಕ್ರಿ] ಈ ಮುಂಚೆ ಒತ್ತರಿಸಿಕೊ (ಎರಡುಂ ಪಡೆಗಳ್ ಅಪಹಾರತೂರ್ಯಂಗಳಂ ಬಾಜಿಸಿ ಮುನ್ನೊತ್ತಿದ ವೇಳೆಗಳ್ ಸಮುದ್ರಂಗಳಂ ಪುಗುವಂತೆ ತಂತಮ್ಮ ಬೀಡುಗಳಂ ಪೊಕ್ಕರ್: **ಪಂಪಭಾ,** ೧೧. ೨೪ ವ)

ಮುಪ್ಪು – [ನಾ] ವೃದ್ಧಾಪ್ಯ (ಸಿಂಗದ ಮುಪ್ಪುಂ ನೆಗಟ್ದೀಗಾಂಗೇಯರ ಮುಪ್ಪುಂ ಇಟಿವಡೆಗುಮೇ: **ಪಂಪಭಾ,** ೧೦. ೧೯)

ಮುಮುಕ್ಷು – [ನಾ] ಮೋಕ್ಷಾಪೇಕ್ಷಿ (ಆ ಮುಮುಕ್ಷುಗಳ ಸಮಕ್ಷದೊಳವರ ಪೇಟ್ದ ಮಾಟ್ಕೆಯೊಳೆ ಪರಮಜಿನಪತಿಪರಿಭಾಷಿತಮಪ್ಪ ಸಕಳಶ್ರಾವಕವ್ರತಂಗಳಂ: **ಆದಿಪು,** ೩. ೪೦ ವ)

ಮುಮುಕ್ಷುವೃತ್ತಿ – [ನಾ] ತಾಪಸ ಕ್ರಮ (ಕಾಮಸುಖೋಚಿತಮತಿಗಳ್ ನಾಮೆತ್ತ ಮುಮುಕ್ಷುವೃತ್ತಿಯಂ ತಾಳ್ದಿದವರ್ ತಾಮೆತ್ತ: **ಆದಿಪು** ೫. ೬೮)

ಮುಮ್ಮಡ – [ನಾ] ಕಾಲ ಹರಡಿನ ಮುಂಭಾಗ (ಬಸಿಜ್ ತೊಳಕು ಕರ್ಜಜಿ ಮುಯ್ವು ಮುಸುಂಬು ಮೂಗು ಪೆರ್ದೊಡೆ ಕಟಿ ಮುಮ್ಮಡಂ ಪರಡು ಸಂದಿ ನೊಸಲ್ ಪಣೆ ಕದಂಪು ಎಂಬೆಡೆಯನೆ ನಟ್ಟುರ್ಚಿದುವು: **ಪಂಪಭಾ,** ೧೧. ೧೩೬)

ಮುಯ್ಪು – [ನಾ] ಭುಜ (ಬೆಸಸಿದೊಡೆ ಅದು ಮಾರ್ಕೊಳ್ಳದೆ ಬೆಸನಂ ಬಲವಂದು ಬಾಹುಬಲಿಯಂ ಅಣಂ ಭೇದಿಸಲಾಜದುದಜಿಂ ಇರ್ದುದು ಮಸುಳ್ದೆಸಕಂಗೆಟ್ಟು ಬಲದ ಮುಯ್ಪಿನ ಕೆಲದೊಳ್: **ಆದಿಪು,** ೧೪. ೧೧೭)

ಮುಯ್ಯೇಟು – [ನಾ] ಮೂರು ಬಾರಿ ಏಳು, ಏಳು ಮೂರಲ, ಇಪ್ಪತ್ತೊಂದು (ಧರಾತಳಮಂ ಒಲ್ಲಣಿಗೆಯಂ ಪಿಟಿವಂತೆ ತಳಂ ಎಯ್ದೆ ಸುರುಳ್ವಿನಂ ಮುಯ್ಯೇಟು ಸೂಟ್ ಪಿಟಿದ ಸಾಹಸಮುಂ: **ಪಂಪಭಾ,** ೧೨. ೪೮ ವ)

ಮುಯ್ವಂ ನೋಡಿಸು – [ಕ್ರಿ] ಸಂತಸಪಡಿಸು (ಅಯ್ವರ ಬಾಲಕ್ರಿಯೆಯುಂ ಮುಯ್ವಂ ನೋಡಿಸಿತು ತಾಯುಮಂ ತಂದೆಯುಮಂ: **ಪಂಪಭಾ,** ೨. ೧೧)

ಮುಯ್ವಾನ್ – [ಕ್ರಿ] ಹೆಗಲನ್ನು ಚಪ್ಪರಿಸಿಕೊ, ಬೆನ್ನು ತಟ್ಟಿಕೊ (ಮುಗುಳ್ನಗೆ ನಗುತ್ತುಂ ಬರ್ಪಂ ಒಂದೆಡೆಯೊಳ್ ಒಂದು ಕಂದದ ಮೊದಲುಮಂ ವೃತ್ತದ ತುದಿಯುಮಂ ಒಂದುಮಾಡಿ ಪದಮಿಕ್ಕಿ ಓದಿ ಪಂಡಿತಿಕ್ಕೆಗೆ ಮುಯ್ವಾಂತುಂ: **ಪಂಪಭಾ,** ೪. ೯೪ ವ)

ಮುಯ್ವು – [ನಾ] ಹೆಗಲು (ಅಡಿ ತೊಡೆ ಪೊರ್ಕುಟಂ ತೆಗಲೆ ಕೈ ಕಣೆಕಾಲ್ ಕೊರಲ್ ಎಂಬಿವುಂ ಬೆರಲ್ ನಡುವುರ ಬೆನ್ ಬಸಿಜ್ ತೊಳಕು ಕರ್ಜಜಿ ಮುಯ್ವು .. .. ಎಂಬೆಡೆಯನೆ ನಟ್ಟುರ್ಚಿದುವು .. .. ಪಾರ್ಥನಂಬುಗಳ್: **ಪಂಪಭಾ,** ೧೧. ೧೩೬); [ನಾ] ಮುಯ್ಯಿ, ಸೇಡು (ಕ್ಷಿತಿತಳದೊಳ್ ನೆಗಟ್ದಿರ್ದಪ್ರತಿಮಲ್ಲನನಿಕ್ಕಿ ಮುಯ್ವಂ ಅಣಂ ಆನದೆ: **ಆದಿಪು,** ೧೪. ೧೩೪)

ಮುರಜ – [ನಾ] ಮದ್ದಳೆ (ಮುರಜಧ್ವನಿಯಿಂದಮಾ ವಧೂವರರಂ ಪೋ ಬರವೇಟ್ಂಬತಿರ್ದುದು ಸುರವಾರಸ್ತ್ರೀ ವಿಳಾಸಪರಿಣಯನಗೃಹಂ: **ಆದಿಪು,** ೮. ೧೯)

ಮುರಜಕೇತನ – [ನಾ] ಮದ್ದಳೆಯ ಗುರುತಿನ ಬಾವುಟ (ತ್ರಿಭುವನಂಗಳ್ ಆಕಂಪಂಗೊಳೆ ಮುರಜಕೇತನ ವಿರಾಜಿತಮಪ್ಪ ತನ್ನ ರಥಮಂ ಅದಿರದೆ ಇದಿರಂ ಪರಿಯಿಸಿ: **ಪಂಪಭಾ,** ೧೩. ೪೪ ವ)

ಮುರಾಂತಕ – [ನಾ] ಮುರ ಎಂಬ ರಾಕ್ಷಸನನ್ನು ಕೊಂದವನು, ಶ್ರೀಕೃಷ್ಣ (ಜಾಗದೊಳ್ಪಿನಮಚ್ಚೊತ್ತದೆ ಮಾಣ್ದು ಬಾಟ್ವ ಪುಟುವಾನಸನೆಂಬಂ ಅಜಾಂಡಮೆಂಬುದೊಂದತ್ತಿಯ ಪಣ್ಣೊಳಿರ್ಪ ಪುಟುವಲ್ಲದೆ ಮಾನಸನೇ ಮುರಾಂತಕಾ: **ಪಂಪಭಾ,** ೫. ೭೫)

ಮುರಾಸುರಾರಿ – [ನಾ] [ಮುರ+ಅಸುರಾರಿ] ಮುರ ಎಂಬ ರಾಕ್ಷಸನ ಶತ್ರು, ಶ್ರೀಕೃಷ್ಣ (ಸೌಳನೆ ಬಾರಿಸಿದಂ ದಲೆಂದೊಡೆ ಇಂ ಕೂರ್ಮೆಯ ಮಾತು ಮೆಚ್ಚುವನಿತರ್ಕೆ ಬಳಾರಿ ಮುರಾಸುರಾರಿಯೇಂ: **ಪಂಪಭಾ,** ೫. ೮೨)

ಮುರಿ – [ಕ್ರಿ] ಬಗ್ಗಿಸು, ತಿರಿಚು (ಬಾಲಮಂ ಸಲೆ ಮುರಿದು ಎತ್ತಲಾಟಿಸೆ ಧರಿತ್ರಿಗೆ ಕೀಲಿಸಿದಂತುಟಾಗೆ: **ಪಂಪಭಾ,** ೮. ೩೨)

ಮುರುಂಟು – [ಕ್ರಿ] ಮುರುಟಿಹೋಗು (ಹಿಮದಿಂದಾಗಳೆ ಮುರುಂಟುವರ್ ಮಹಿಭಾಗದೊಳುಟಿದವಱಿಗೊಳಿನ್ನವೇಟುಂ ನರಕಂ: **ಆದಿಪು**, ೫. ೮೨)

ಮುಷ್ಟಿ – [ನಾ] ಹಿಡಿದು ಹೊಡೆಯುವ ಮಂತ್ರಾಯುಧ? (ದೇವೇಂದ್ರನಿತ್ತ ಐಂದ್ರಮೆಂಬ ದಿವ್ಯಾಸ್ತ್ರಮುಮಂ ನೈಷ್ಠಿಕಮೆಂಬ ಮುಷ್ಟಿಯುಮಂ ಕೆಯ್ಕೊಂಡು: **ಪಂಪಭಾ,** ೮. ೩೬ ವ); [ನಾ] ಮಂತ್ರಪ್ರಯೋಗ ಕ್ರಮ ? (ಅಂತು ಅದಂ ಹರಂ ಒಸೆದಿತ್ತುಂ ಏನದಱ ಮುಷ್ಟಿಯನೀಯನೆ ಬೇಡವೇಟ್ಟುದು ಆದರದಿಂ ಅದಂ: **ಪಂಪಭಾ,** ೧೧. ೧೩೦); [ನಾ] ಹಿಡಿ (ಅದೇಂ ತಿರವೋ ಪೂಣಿಸಿದ ಮುಷ್ಟಿ ಭೂರಿಶ್ರವನಾ: **ಪಂಪಭಾ,** ೧೧. ೧೪೧)

ಮುಸಲ – [ನಾ] ನಕೆ (ಮದದಂತಿದಂತ ಮುಸಲಪ್ರವಿಭಗ್ನ ಮಹಾಮಹೀರುಹಾಸ್ಪದಂ: **ಪಂಪಭಾ,** ೩. ೧೦); ಒಂದು ಆಯುಧ, ಗದೆ (ಕಣೆಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ ವಿವಿಧಾಯುಧಂಗಳೊಳಿಟ್ಟುಂ ಇಱಿದುಂ ಅಗುರ್ವು ಅದ್ಭುತಮಾಗೆ ಕಾದುವಾಗಳ್: **ಪಂಪಭಾ,** ೧೨. ೧೧೮ ವ)

ಮುಸಲಾಯುಧ – [ನಾ] ಒಬ್ಬ ರಾಕ್ಷಸ (ಅಳಂಭೂತ ಮುಸಲಾಯುಧ ಕಾಳ ನೀಳ ವಿದ್ಯುನ್ಮಾಲ್ಯಾದಿಗಳುಂ ಬಂದು ಕೂಡೆ: **ಪಂಪಭಾ,** ೧೦. ೨೭ ವ)

ಮುಸು – [ನಾ] ಕಪ್ಪುಮುಖದ ಕೋತಿ, ಗೋಲಾಂಗೂಲ (ಮುಸು ಮುತ್ತಂತೆ ತೆರಳ್ದ ತನ್ನ ಮೊಗಮಂ ಕಂಡಳ್ಕನೋ: **ಆದಿಪು**, ೨. ೪೫)

ಮುಸುಂಕು – [ಕ್ರಿ] ಹೊದೆಸು (ದೆಸೆ ಪಸುರೇಱೆ ಪಚ್ಚೆಯೊಳೆ ಮುಚ್ಚೆ ಮುದುಂಕಿದ ಮಾಟಿಕ್ಕೆಯಾದುದು .. .. ಮೇಘಕಾಲದೊಳ್: **ಪಂಪಭಾ,** ೭. ೨೨)

ಮುಸುಂಡಿ – [ನಾ] ಒಂದು ಬಗೆಯ ಆಯುಧ (ಕಣೆಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ ವಿವಿಧಾಯುಧಂಗಳೊಳಿಟ್ಟುಂ ಇಱಿದುಂ ಅಗುರ್ವು ಅದ್ಭುತಮಾಗೆ ಕಾದುವಾಗಳ್: **ಪಂಪಭಾ,** ೧೨. ೧೧೮ ವ)

ಮುಸುಂಬು – [ನಾ] ಮೂತಿ, ಮೂಗು (ಬಸಿಱ್ ತೊಳಕು ಕರ್ಜಱಿ ಮುಯ್ಯು ಮುಸುಂಬು ಮೂಗು ಪೆರ್ದೊಡೆ ಕಟಿ ಮುಮ್ಮಡಂ ಪರಡು ಸಂದಿ ನೊಸಲ್ ಪಣೆ ಕದಂಪು ಎಂಬೆಡೆಯನೆ ನಟ್ಟುರ್ಚಿದುವು: **ಪಂಪಭಾ,** ೧೧. ೧೩೬)

ಮುಸುಱಿಕೊಳ್ – [ಕ್ರಿ] ಮುತ್ತಿಕೊ, ಆವರಿಸಿಕೊ (ಮೊಟಗುವ ಸುರದುಂದುಭಿಗಳುಂ ಪರಸುವ ಜಯಜಯಧ್ವನಿಗಳುಂ ಬೆರಸು ದೇವೇಂದ್ರಂ ಬರೆ ದೇವವಿಮಾನಂಗಳೆಲ್ಲಂ ಶತಶೃಂಗಪರ್ವತಮಂ ಮುಸುಱಿಕೊಂಡು: **ಪಂಪಭಾ,** ೧, ೧೪೬ ವ)

ಮುಸುಱು – [ಕ್ರಿ] ಮುಸುಕು, ಆವರಿಸು (ಅಂತು ಪೊಱಮಡುವ ಅರಾತಿ ಕಾಲಾನಲನಂ ಕಂಡು ಕಡ್ದುವಂದ ದೊಡ್ಡರೆಲ್ಲಂ ಮುಸುಱಿ: **ಪಂಪಭಾ,** ೩. ೬೧ ವ)

ಮುಹುಃ – [ಅ] ಪುನಃ ಪುನಃ (ಗುಹಾಗಹನಗಹ್ವರ ಉದರ ವಿಶೀರ್ಣಂ ಆದಂದು ಅದೇಂ ಮುಹುಃಪ್ರಕಟಮಾದುದು ರವಿತನೂಭವಜ್ಯಾರವಂ: **ಪಂಪಭಾ,** ೧೨. ೧೩೬)

ಮುಹುರ್ಮುಹುರ್ – [ಅ] ಮತ್ತೆ ಮತ್ತೆ (ಅತ್ಯಂತವಿಸ್ಮಯ ಸ್ಮೇರಮುಖನುಂ ಅತಿರುಚಿರನ್ಯಸ್ತಹಸ್ತಪಲ್ಲವನುಂ ಮುಹುರ್ಮುಹುರ್ ಆಂದೋಳಿತ ಮಸ್ತಕನುಂ: **ಆದಿಪು,** ೧೦. ೫೨ ವ)

ಮುಹೂರ್ತ – [ನಾ] ಎರಡು ನಾಡಿಗಳ ಅವದಿ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ); [ನಾ] ಕಾಲ, ಅವಧಿ (ಶುಭತಿಥಿ ಶುಭನಕ್ಷತ್ರಂ ಶುಭವಾರಂ ಶುಭಮುಹೂರ್ತಮೆನೆ ಗಣಕಂ ಇಳಾಪ್ರಭುವೊಗೆದಂ ಉದಿತಕಾಯಪ್ರಭೆಯೊಗೆದಿರೆ ದಳಿತಶತ್ರುಗೋತ್ರಂ ಪುತ್ರಂ: **ಪಂಪಭಾ,** ೧. ೧೨೭)

ಮುಹ್ಯತ್ – [ಗು] ಮೂರ್ಛೆಹೋಗುವ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು**, ೫. ೮೭ ವ)

ಮುಳ್ – [ನಾ] ಕಂಟಕ (ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳಂ: **ಪಂಪಭಾ,** ೯. ೭೭)

ಮುಳಿ – ಕೋಪಗೊಳ್ಳು [ಕ್ರಿ] (ಮುಳಿದಿರೆ ಪಾದಪಂಕಜಮನಾಂ ತಲೆಯೊಳ್ ನಿಲೆ ತಾಳ್ದಿ ನಲ್ಲಳೇ ತಿಳಿಯೆನೆ: **ಆದಿಪು,** ೪. ೧೧); [ಕ್ರಿ] ವಿರೋಧವಾಗು (ಇನಿಯವು ಮೊದಲೊಳ್ ನಂಜಿನ ಪನಿವೊಲ್ ಬಟಿಕೆಯ್ದೆ ಮುಳಿದ ಕೊಂದಿಕ್ಕುವುವು: **ಆದಿಪು**, ೧೪. ೧೨೫)

ಮುಳಿಯಿಸು – [ಕ್ರಿ] ಕೋಪಗೊಳಿಸು (ನಿಮ್ಮಂ ಮುಳಿಯಿಸಿದ ಸುರಾಸುರರುಮಂ ಒಳರೆನಿಸೆಂ ಕರ್ಣನೆಂಬನೆನಗೇವಿರಿಯಂ: **ಪಂಪಭಾ,** ೧೨. ೧೩೧)

ಮುಳಿಸಾಱು – [ಕ್ರಿ] ಕೋಪವಿಳಿ (ಬಿರಯಿಯ ಮಿಟ್ಟುವೆಂ ಮಿದಿದೊಡಲ್ಲದಣಂ ಮುಳಿಸಾಱದೆಂದು ಪಲ್ಮೊರೆದನಲ್ಲಿ ಮನ್ಮಥಂ: **ಪಂಪಭಾ,** ೨. ೧೩)

ಮುಳಿಸು – [ನಾ] ಕೋಪ (ಭರತನ ಮುಳಿಸು ಒಸಗೆಯನನುಕರಿಸಿದುದೇಂ ಚಕ್ರವರ್ತಿವೃತ್ತಮೊ ಶರದಂ: **ಆದಿಪು,** ೧೧. ೭)

ಮುಱಿ – [ಕ್ರಿ] ತುಂಡು ಮಾಡು (ಪಗೆವರ ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ: **ಪಂಪಭಾ,** ೧೦. ೧೭)

ಮುಱಿಗಂ – [ನಾ] ಒಂದು ಬಗೆಯ ಬಾಣ (ಪೆಱಿಯ ಮುಱಿಗಂ ಕಣಕನೆ ವೋಪಂಬು ಕವಲಂಬುವೆಂಬ ಅಂಕದ ಅಂಬು ಎತ್ತಲುಂ ತುಱುಗಿ: **ಪಂಪಭಾ,** ೧೩. ೩೯)

ಮುಱುಕ – [ನಾ] ವೈಯಾರ (ಮುಱುಕದಮರಕಾಂತಾ ನರ್ತನಂಗಳ್ ಬೆಡಂಗಂ ಮೆಱಿಯೆ ದಿವಿಜವೃಂದಂ ತಂದುದಂದೊಂದು ಚೆಲ್ವಂ: **ಆದಿಪು,** ೭. ೫೨)

ಮುಱುವಿಡು – [ಕ್ರಿ] [ಬೇಯಿಸಿದ ವಿವಿಧ ಸೊಪ್ಪುಗಳ ಮುದ್ದೆಯೇ ಮುಱು – ಮುಱು+ಬಿಡು] ಮೇವು ಬಿಡು (ಮುಱುವಿಟ್ಟೀ ಹೇಷಾಸ್ವರಮಂ ತೋಱಿದಪುವಲ್ಲಿ ನೃಪತುರಗಂಗಳ್: **ಪಂಪಭಾ,** ೧೨. ೧೦೭)

ಮುೞುಂಗು – [ಕ್ರಿ] ದ್ರವದಲ್ಲಿ ಅಡಗು (ನೆತ್ತರ ಕಡಲ್ಗಳೊಳ್ ಮಿಳಿರ್ವ ಪಟವಿಗೆಗಳ್ ತಲೆದೋಱಿ ಮುೞುಂಗಿದ ರಥಂಗಳುಂ: **ಪಂಪಭಾ,** ೧೦. ೧೧೬ ವ)

ಮುೞುಗಲೀ – [ಕ್ರಿ] ಮುಳುಗಲು ಅವಕಾಶ ಕೊಡು (ಇತ್ತ ಗಂಗಾದೇವಿಯುಂ ಆ ಕೂಸಂ ಮುೞುಗಲೀಯದೆ ತನ್ನ

ತೆರೆಗಳೆಂಬ ನಳಿತೋಳ್ಗಳಿನೊಯ್ಯನೊಯ್ಯನೆ ತಟ್ಕೈಸಿ ತರೆ ಗಂಗಾತೀರದೊಳಿರ್ಪ ಸೂತನೆಂಬವಂ ಕಂಡು: **ಪಂಪಭಾ,** ೧. ೯೫ ವ)

ಮುೞುಗು – [ಕ್ರಿ] ದ್ರವದಲ್ಲಿ ಅಡಗು (ಅಪರಾಂಬುರಾಶಿಯೊಳ್ ಮುೞುಗುವ ತೀವ್ರದೀಧಿತಿವೊಲ್ ಆ ಕೊಳದೊಳ್ ಫಣಿರಾಜಕೇತನಂ ಮುೞುಗಿದಂ: **ಪಂಪಭಾ,** ೧೩. ೭೪)

ಮುೞುಗಿ ನೆಗೆ – [ಕ್ರಿ] ಮುಳುಗಿ ಮೇಲೇಳು (ಪಾವುಗಳಂ ಕೊಳಿಸಿ ಮಹಾಗ್ರಾವಮಂ ಉಱಿದೆ ಅಡಸಿ ಕಟ್ಟಿ ಕೊರಲೊಳ್ ಗಂಗಾದೇವಿಯ ಮಡುವಿನೊಳ್ ಅಟ್ಟಿದರ್ ಏವಯಿಸದೆ ತಮ್ಮ ಕುಲಮಂ ಅಡಿಗಟ್ಟುವವೋಲ್: **ಪಂಪಭಾ,** ೨. ೩೨)

ಮುೞುಪು – [ಕ್ರಿ] ಮುಳುಗು (ಜಳಪ್ರವೇಶಂ ಇಲ್ಲಿಗೆ ಪದನೆಂದು ನಿಶ್ಚಯಿಸಿ ವಾರಿಜನಾಥಂ ಅನಾಥನಾಗಿ ತೊಟ್ಟನೆ ಮುೞುಪಂತೆವೊಲ್ ಮುೞುಗಿದಂ: **ಪಂಪಭಾ,** ೧೩. ೧೦೬)

ಮುೞ್ಕಾಡು – [ಕ್ರಿ] ಮುಳುಗಾಡು, ಮುಳಗು (ಆಗಳ್ ಸುರತಮಕರಧ್ವಜಂ ಅನಂಗಾಮೃತಪಯೋಧಿಯೊಳ್ ಮೂಡಿ ಮುೞ್ಕಾಡಿದರಂತೆ ಕಿಱಿದು ಬೇಗಮನಿರ್ದು: **ಪಂಪಭಾ,** ೫. ೧೫ ವ)

ಮೂಂಕಿಱಿ – [ಕ್ರಿ] ವಾಸನೆ ನೋಡು (ದೆಸೆಗಳ್ಗೆ ಬೆರ್ಚಿ ಮೂಂಕಿಱಿವ ವನಮಹಿಷಿಗಳಿಂ ಮದಹಸ್ತಿಯಂತೆ ಮರವಾಯ್ವ ಪುಲಿಗಳಂ ಅತಿಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು: **ಪಂಪಭಾ,** ೭. ೨೯ ವ)

ಮೂಕದಾನವ – [ನಾ] ಮೂಕ ಎಂಬ ಹೆಸರಿನ ರಾಕ್ಷಸ (ಮೂಕದಾನವಂ ಆದಿವರಾಹರೂಪದೊಳಿರ್ದುದಂ ಅಱಿದು: **ಪಂಪಭಾ,** ೭. ೧೩ ವ)

ಮೂಕೆ – [ನಾ] ಮಾತನಾಡದವಳು (ಅಂತರ್ನಿಹಿತ ಗೂಢಶೋಕೋದ್ರೇಕ ಮೂಕೆಯುಂ ಆಗಿರ್ದ ನಿಜತನೂಜೆಗೆ ಬಱಿಯನಟ್ಟಿದಾಗಳ್: **ಆದಿಪು,** ೩. ೪೬ ವ)

ಮೂಗಯ್ – [ನಾ] ಮೂರು ಕೈ [ಮೊಳ] ಅಳತೆ (ತೀವಿರ್ದತ್ತು ಮೊದಲ್ಮೊದಲ್ಗೆ ಪಣೆಯುಂ ಮೂಗಯ್ಯ ಮೂಗೆಯ್ಯನಿತ್ತಾವರ್ಕೆಯ್ದೆ ಕವಲ್ಕವಲ್ತು ಪಲವುಂ ಕೊಂಬಾದುವೊಳ್ಗೊಂಬುಗಳ್: **ಆದಿಪು,** ೧೧. ೯೭)

ಮೂಗಟ್ಕಿ – [ನಾ] ಮೂಕರೋದನ (ಪೇಡಿ ಸತ್ತಂತೆ ಏನುಮನೆನಲಱಿಯದೆ ನಾಣ್ಚಿ ತನ್ನೊಳೆ ಮೂಗಟ್ಕಿಯನಟ್ಟು: **ಪಂಪಭಾ,** ೮. ೮೨ ವ)

ಮೂಗಿಱಿ – [ಕ್ರಿ] ಮೂಗು ಮುರಿ, ಜಿಗುಪ್ಸೆಪಡು (ರಿಪುಜನದ ಪೆರ್ಚಿಗಂ ಪರಾಂಗನಾಜನದ ಮೆಚ್ಚಿಂಗಂ ಮೂಗಿಱಿವಂತೆ ಸೊಗಯಿಸುವ ಗಂಡೇಭವಿದ್ಯಾಧರನ ಮೂಗು: **ಪಂಪಭಾ,** ೨. ೩೯ ವ)

ಮೂಗುದುಱಿಸು – [ಕ್ರಿ] [ಮೂಗು+ತುಱಿಸು] ಮೂಗನ್ನು ಕೆರೆ, ಪರಸ್ಪರ ಹೊಂದಾಣಿಕೆ (ಒರ್ವರೊರ್ವರೊಳ್ ಮೂಗುದುಱಿಸಲಾಗದ ಕಡ್ಡಂ ಅವರ್ಗೆಂತುಂ ಒಡಂಬಡಾಗದು: **ಪಂಪಭಾ,** ೧೨. ೧೦೩ ವ)

ಮೂಗುವಡು – [ಕ್ರಿ] ಮೂಕವಾಗು, ಮಾತಿಲ್ಲದಾಗು (ಅಂಬುದಾಗಮದ ಕೋಗಿಲೆಯಂತಿರೆ ಮೂಗುವಟ್ಟು ನೀಮೆಂಬುದುದನೆನ್ನಿಂ ಎಂದುಸಿರದಿರ್ದ ತನೂಜೆಯ ಭಾವಮಂ ಮಹೀಶಂ ಬಗೆದು: **ಆದಿಪು,** ೩. ೨೬)

ಮೂಡಣ್ – [ನಾ] ಪೂರ್ವ ದಿಕ್ಕು (ಸೇತುಬಂಧಮಂ ತಾಗೆ ಗಂಗಾನದಿಯ ತೆಂಕಣ ಪಡುವಣ ನೆಲನಂ ನೀಮಾಳ್ವುದು ಮೂಡಣ ಬಡಗಣ ನೆಲನಂ ದುರ್ಯೋಧನನಾಳ್ವುದು: **ಪಂಪಭಾ,** ೪. ೮ ವ); ಪೂರ್ವದಿಕ್ಕಿನ (ಐರಾವತ ಕರಲೂನ ಸಲ್ಲಕೀ ಶಬಳಮುಂ ಅಪ್ಪ ಉದಯಗಿರಿಯಿಂ ಸೊಗಯಿಸುವ ಮೂಡಣ ದೆಸೆಗೆ ವಂದು: **ಪಂಪಭಾ,** ೪. ೧೮ ವ)

ಮೂಡಮೊಗ – [ಗು] ಪೂರ್ವಕ್ಕೆದುರು (ತಮ್ಮಯ್ವರುಂ ಪಾಂಚಾಳಿವೆರಸು ಪೋದ ದೆಸೆಯಂ ಆರುಂ ಅಱಿಯದಂತು ದ್ವೈತವನಮಂ ಪೊಱಮಟ್ಟು ಜಗುನೆಯಂ ಪಾಯ್ದು ಮೂಡಮೊಗದ ಪಯಣಂಬೋಗಿ: **ಪಂಪಭಾ,** ೮. ೫೦ ವ)

ಮೂಡಿಗೆ – [ನಾ] ಬತ್ತಳಿಕೆ (ಮೂಡಿಗೆ ಕುಕ್ಕಂಬಂ ಸುೞಿಸಿ ಜೊಂಪಂ ಬೀಡುಬಿಡುವ ಇಂಬು ಕದಳಿ ತೆಂಗಿನ ತಾಣಂ ಜಾಣಿಂ ನೀರ್ದಾಣಮೆಂದು ಎಡೆಯಱಿದುಂ: **ಪಂಪಭಾ,** ೫. ೪೧)

ಮೂಡು – [ಕ್ರಿ] ಹುಟ್ಟು (ನೇಸಱ್ ಮೂಡಿದುದು ಬಕಂಗೆ ಮಿಟ್ಟು ಮೂಡುವ ತೆಱದಿಂ: **ಪಂಪಭಾ,** ೩. ೨೭); [ಕ್ರಿ] ಕಾಣಿಸಿಕೊ (ಜತುಗೃಹಕವಾಟಪುಟಸಂಧಿಗಳೊಳ್ ಸುರಂಗಮಂ ಗಂಗೆಯೊಳ್ ಮೂಡುವಂತಾಗೆ ಸಮೆದು: **ಪಂಪಭಾ,** ೩. ೪ ವ)

ಮೂಢತ್ರಯ – [ನಾ] [ಜೈನ] ಮೂರು ಬಗೆಯ ತಪ್ಪು ಜ್ಞಾನಗಳು: ದೇವತಾಮೂಢ ಲೋಕಮೂಢ ಮತ್ತು ಮಿಥ್ಯಾಮೂಢ (ಜೀವಾದಿ ನವಪದಾರ್ಥದೊಳ್ ಆವಗಂ ಅಟ್ಟಿಯನೆ ಮಾಡು ಮೂಢತ್ರಯದೊಳ್ ಭಾವಮನೆ ಬಿಸುಡು: **ಆದಿಪು,** ೫. ೫೬)

ಮೂದಲಿಸು – [ಕ್ರಿ] ಹೀಯಾಳಿಸು (ಈತಂ ಅಜಮುಖವ್ಯಾಘ್ರಂ ಶ್ವೇತಕೃಷ್ಣಕಾರಕಂ ಈತನ ಮಾತು ಮಾತಲ್ಲ ಎಂದೊಡೆ ತನ್ನಂ ಮೂದಲಿಸಿದಂತಾಗೆ ವಿದ್ವಿಷ್ಟವಿದ್ರಾವಣನಿಂತೆಂದಂ: **ಪಂಪಭಾ,** ೫. ೭೨ ವ))

ಮೂದೇವರ್ – [ನಾ] ತ್ರಿಮೂರ್ತಿಗಳು, ಬ್ರಹ್ಮ, ವಿಷ್ಣು ಮಹೇಶ್ವರ (ಮೂದೇವರುಂ ಪರಸಿ ನಿಜನಿವಾಸಂಗಳ್ಗೆ ಪೋದರ್: **ಪಂಪಭಾ,** ೫. ೧೦೩ ವ)

ಮೂನೆಲೆ – [ನಾ] ಮೂರಂತಸ್ತು (ಮೂಱುಲೋಕಮನೆ ಪೋಲ್ತುದು ಮೂನೆಲೆಯಿಂ ಸಯಂಬರಂ: **ಪಂಪಭಾ,** ೩. ೫೩)

ಮೂಮೆ – [ನಾ] ಮೂರು ಬಾರಿ (ಶ್ರೀಮಜ್ಜಿನಭವನಮಂ ಅಖಿಳಾಮರನರಖಚರಚಕ್ರವರ್ತಿಸ್ತುತಮಂ ಮೂಮೆ ಬಲಗೊಂಡು: **ಆದಿಪು,** ೪. ೧)

ಮೂರಿ – [ನಾ] ಮೂತಿ, ಬಾಯಿ (ಪ್ರಳಯದ ಮೂರಿಯುಂ ಆಕಾಶದ ಕವಿಯುಂ ನೆಲದ ಕಲ್ಲೆಯುಂ ಮುನ್ನಮೆ ಮೇರೆದಪ್ಪುವುದುಮಂ: **ಪಂಪಭಾ,** ೧೨. ೧೯ ವ)

ಮೂರಿವಿಡು – [ಕ್ರಿ] ಬಾಯಿಬಿಡು, ಬಿರುಕು ಬಿಡು (ನೆಲಂ ಮೂರಿವಿಟ್ಟಂತೆ ಸಭಾಕ್ಷೋಭಮಾಗೆ ತಳರ್ದು ನಾನಾವಿಧವಾಹನಂಗಳನೇಱಿ ನಿಜನಿವಾಸಂಗಳ್ಗೆ ಪೋದರ್: **ಪಂಪಭಾ,** ೨. ೮೬ ವ); [ಕ್ರಿ] ಗುಂಪಾಗು, ಒಟ್ಟಾಗು (ಪೂರ್ವದಿಗ್ಭಾಗದೊಳ್ ಪ್ರಳಯಂ ಮೂರಿವಿಟ್ಟಂತೆ ಬೀಡಂಬಿಟ್ಟು: **ಪಂಪಭಾ,** ೧೦. ೩೧ ವ)

ಮೂರ್ಛ್ಛನಾ[ನೆ] – [ನಾ] ಸಪ್ತಸ್ವರಗಳ ಆರೋಹಣ–ಅವರೋಹಣ (ಮಧುಕರತಂತ್ರೀಸಮಂಚಿತ ವಿಪಂಚೀ ಮಂದ್ರ ತಾರ ಮಧುರ ಮೂರ್ಛ್ಛನಾಸನಾಥಪ್ರಯೋಗಂಗಳುಮಂ: **ಆದಿಪು**, ೧೧. ೭೪ ವ)

ಮೂರ್ಧಾಗತ – [ನಾ] ಮೂರ್ಛೆಗೊಳಗಾಗು (ಮೂರ್ಧಾಗತನಾಗಿರ್ದ ಕುರುಕುಳಚೂಡಾಮಣಿಯಂ ಏನುಂ ಮಾಣದೆ ಕಿಮ್ಮೀರವೈರಿ ಮುಟ್ಟೆವಂದಾಗಳ್: **ಪಂಪಭಾ**, ೧೩. ೯೭ ವ)

ಮೂರ್ಛೆವೋಗು – [ಕ್ರಿ] ಮೈಮರೆ (ನೀನ್ನಿನ್ನ ನೃಪನ ದಿಗ್ವಿಜಯೋನ್ನತಿಯಂ ಪೊಗಟ್ದು ಮೂರ್ಛೆವೋಪೈ ಪೊಗಟ್ದುಂ ನೀನ್ನಿನ್ನ ಮನದೊಳಿಂತಿದು ಬನ್ನಮಂ ಎತ್ತುವವೊಲಾಯ್ತು ನಿನ್ನವನಿಪನಾ: **ಆದಿಪು**, ೧೪. ೬೬)

ಮೂರ್ತಿ – [ನಾ] ಆಕಾರ (ಕರ್ಣನೊಡಲಿಂದಾಗಳ್ ನಡೆ ನೋಡೆ ನೋಡೆ ದಿನಪನೊಳಗೂಡಿದುದು ಒಂದು ಮೂರ್ತಿ ತೇಜೋರೂಪಂ: **ಪಂಪಭಾ**, ೧೨. ೨೧೫)

ಮೂರ್ತಿಮಂತ – [ಗು] ಸಾಕಾರವಾಗು, ಆಕೃತಿಯನ್ನು ಪಡೆ (ಮಱುದಿವಸಂ ಅಱುವರುಂ ಆಱುಂ ಗುಣಂಗಳೆ ಮೂರ್ತಿಮಂತಂಗಳಾದಂತೆ ಮಂತ್ರಶಾಲೆಯಂ ಪೊಕ್ಕಿರ್ದಾಗಳ್: **ಪಂಪಭಾ**, ೯. ೧೨ ವ)

ಮೂರ್ಧಾಧಿರೂಢ – [ಗು] ಶಿಖರದವರೆಗೂ ವ್ಯಾಪಿಸಿದ (ಉದ್ವಂಶ ವಿಂಧ್ಯಾವನಿ ಭೃನ್ಮೂರ್ಧಾಧಿರೂಢ ದ್ವಿಪಭಯದ ರವಂ ರಾಜಕಂಠೀರವಂ ತಾನೆನೆ: **ಆದಿಪು**, ೧೪. ೯೮)

ಮುರ್ಧಾಭಿಷಿಕ್ತ – [ನಾ] ನೆತ್ತಿಯ ಮೇಲೆ ವಿಧಿವತ್ತಾಗಿ ಅಭಿಷೇಕಗೊಂಡ ರಾಜ (ವಿದಿತಂ ಮೂರ್ಧಾಭಿಷಿಕ್ತರ್ ಪಲಬರರಸುಗಳ್ ಪ್ರಾಜ್ಯಸಾಮ್ರಾಜ್ಯಲಕ್ಷ್ಮೀಪದಮಂ ಕೈಕೊಂಡು ತಮ್ಮಂ ಮಱ್ದು: **ಆದಿಪು,** ೯. ೫೮)

ಮೂರ್ಧಾಭಿಷೇಕ – [ನಾ] ತಲೆಯ ಮೇಲೆ ಬೀಳುವ ನೀರು (ವಿಲಸತ್ ಕಲ್ಲೋಲನಾದಂ ನೆಗಟ್ದಿರೆ ನಿಜಕೂಟಾಗ್ರದೊಳ್ ಪಾಯ್ವ ಗಂಗಾಜಲದಿಂ ಮೂರ್ಧಾಭಿಷೇಕೋನ್ನತಿ ನಿಲೆ: **ಪಂಪಭಾ,** ೪. ೧೪); [ನಾ] ಪಟ್ಟಾಭಿಷೇಕ (ನಿಜಕೂಟಾಗ್ರದೊಳ್ ಪಾಯ್ವ ಗಂಗಾಜಲದಿಂ ಮೂರ್ಧಾಭಿಷೇಕೋನ್ನತಿ ನಿಲೆ .. .. ಚಕ್ರೇಶತ್ವಮಂ ತಾಳ್ದಿದಂ ಅಖಿಳಧರಾರಮ್ಯ ಹೈಮಾಚಳೇಂದ್ರಂ: **ಪಂಪಭಾ,** ೪. ೧೪)

ಮೂಲಗುಣ – [ನಾ] [ಜೈನ] ಮುನಿಗಳಿಗೆ ಬೇಕಾದ ಇಪ್ಪತ್ತೆಂಟು ಆವಶ್ಯಕ ಗುಣಗಳು: ಪಂಚ ಮಹಾವ್ರತ, ಪಂಚ ಸಮಿತಿ, ಪಂಚೇಂದ್ರಿಯನಿಗ್ರಹ, ದಿಗಂಬರತ್ವ, ಕೇಶಲುಂಚನ ಪ್ರತಿಜ್ಞೆ, ಷಡಾವಶ್ಯಕಗಳು, ನಿರ್ಬಾಧಕತ್ವ, ಸ್ನಾನರಾಹಿತ್ಯ, ದಂತಧಾವನರಾಹಿತ್ಯ, ನಿಂತು ಮಾಡುವ ಊಟ, ಒಂದೇ ಹೊತ್ತಿನ ಊಟ (ಮತ್ತಮಿವು ಮೊದಲಾಗಿ ಇರ್ಪತ್ತೆಂಟು ಮೂಲಗುಣಂಗಳೊಳಂ ಉತ್ತರಗುಣಂಗಳೊಳಂ ಉತ್ತರೋತ್ತರಂ ನೆಗಟ್ದು: **ಆದಿಪು**, ೬. ೨೮ ವ)

ಮೂಲಿಗ – [ನಾ] ಮೊದಲಿಗ, ಕಾರಣೀಭೂತ (ಜೂದೆ ನೆವಮಾಗಿರೆ ಮೂಲಿಗನಾದೆಂ ಆನೆ ಪೂಣ್ದಿಡುವಗೆಗೆ ಎನ್ನೊಳಾದ ಕಿಸುರ್ ಎನ್ನೊಡವೋಪುದು: **ಪಂಪಭಾ,** ೧೩. ೧೮)

ಮೂಲೋಕ – ಜೈನ ಸೃಷ್ಟಿಕಲ್ಪನೆಯ ಮೂರು ಲೋಕಗಳು; ಸುಮೇರುಪರ್ವತದ ಕೆಳಗಡೆಯಲ್ಲಿ ಅಧೋಲೋಕವಿದೆ; ಅದನ್ನು ಸುತ್ತಲೂ ಆವರಿಸಿದಂತೆ ಮಧ್ಯಲೋಕವಿದೆ; ಅದರ ತಲೆದಿಸೆಯಲ್ಲಿ ಊರ್ಧ್ವಲೋಕವಿದೆ (ನೆಲಸಿರ್ದಪ್ಪುದಧಸ್ಸ್ಥಳಂಬಿಡಿದಧೋಲೋಕಂ ಸಮಂತೆಯ್ದೆ ಸುತ್ತಲುಮಿರ್ದಪ್ಪುದು ಮಧ್ಯಲೋಕ ಮೆಸೆದಿರ್ದಾ ಚೂಳಿಕಾಭಾಗದಾದಲೆ ಯೊಳ್ನಿಂದಪುದೂ ರ್ಧ್ವಲೋಕಮೆನೆ ಮೂಲೋಕಕ್ಕೆ; **ಆದಿಪು:** ೧. ೫೦)

ಮೂವತ್ತಮೂದೇವರ್ – [ನಾ] ಮೂವತ್ತಮೂರು ಮಂದಿ ದೇವತೆಗಳು: ಹನ್ನೊಂದು ಮಂದಿ ರುದ್ರರು, ಹನ್ನೆರಡು ಮಂದಿ ಆದಿತ್ಯರು, ಎಂಟು ಮಂದಿ ವಸುಗಳು, ಹಾಗೂ ಇಬ್ಬರು ಅಶ್ವಿನೀದೇವತೆಗಳು (ಏಕಾದಶರುದ್ರರುಂ ದ್ವಾದಶಾದಿತ್ಯರುಂ ಅಷ್ಟವಸುಗಳುಂ ಅಶ್ವಿನೀದೇವರುಂ ಮೊದಲಾಗೆ ಮೂವತ್ತಮೂದೇವರುಂ ಇಂದ್ರಂಬೆರಸು ವೈಮಾನಿಕದೇವರುಂ ನೆರೆದು: **ಪಂಪಭಾ**, ೧. ೧೪೭ ವ)

ಮೂವತ್ತಾರುಂ ಗುಣ – [ನಾ] ಆಚಾರ್ಯನಿಗೆ ಅಗತ್ಯವಾದ ದ್ವಾದಶ ತಪಸ್ಸು, ಷಡಾವಶ್ಯಕ, ದಶಧರ್ಮ, ಪಂಚಾಚಾರ, ತ್ರಿಗುಪ್ತಿ ಎಂಬ ಮೂಲೋತ್ತರಗುಣಗಳು (ಮೂವತ್ತಾಱುಗುಣಂಗಳ್ ತಮಗಮರ್ದಿರೆ ಸಂದೈದುಮಾಚಾರದೊಳ್ ಸದ್ಭಾವಂ ಕಯಗಣ್ಮೆ .. .. ಓಸರಿಸೆ ಕಳೆಗೆ ಸಂಸಾರಕಾಂತಾರದಿಂದಂ: **ಆದಿಪು,** ೧. ೩)

ಮೂವತ್ತಿರ್ಛಾಸಿರ್ವರ್ – [ನಾ] ಮೂವತ್ತೆರಡು ಸಾವಿರ ಜನ (ನಾಲ್ಕು ಕೋಟಿ ವೀರಭಟನಿಕರಮುಂ ಮೂವತ್ತಿರ್ಛಾಸಿರ ಮಕುಟಬದ್ಧರುಂ ಮೂವತ್ತಿರ್ಛಾಸಿರ್ವರ್ ಮೆಯ್ಗಾಪಿನ ಗಣಬದ್ಧದೇವರುಂ: **ಆದಿಪು**, ೧೫. ೩ ವ)

ಮೂವತ್ತಿರ್ವರ್ – [ನಾ] ಮೂವತ್ತೆರಡು ಮಂದಿ (ಒಂದೊಂದಱ ಮೇಲೆ ಲೀಲೆ ಮಿಗೆ ಮೂವತ್ತಿರ್ವರ್ ಓರೋರಂತೆ ನರ್ತಿಸೆ ದೇವಾಂಗನೆಯರ್: **ಆದಿಪು**, ೭. ೫೪)

ಮೂವತ್ತೆಣ್ಛಾಸಿರ – [ನಾ] ಮೂವತ್ತೆಂಟು ಸಾವಿರ (ನಿಜಾನ್ವಯ ರಾಜಧಾನಿಯಂ ಪೊಕ್ಕು ಮೂವತ್ತೆಣ್ಛಾಸಿರ ಮಕುಟಬದ್ಧರಿಂ ಮೂರ್ಧಾಭಿಷಿಕ್ತನಾಗಿ: **ಆದಿಪು**, ೩. ೪೬ ವ)

ಮೂವತ್ತೆರಡಾಯುಧ – [ನಾ] ಬತ್ತೀಸಾಯುಧ, ಮೂವತ್ತೆರಡು ಬಗೆಯ ಆಯುಧಗಳು (ಆಗಳೇಜೆಸಿದ ಬಿಸುಗೆಗಳುಂ ಇಕ್ಕಿದ ಲೋಹವಕ್ಕರೆಗಳುಂ ಉರ್ಚಿದ ಮೊಗವಡಂಗಳುಂ ಕಟ್ಟಿದ ಪಟಯಿಗೆಗಳುಂ ಒಟ್ಟಿದ ಮೂವತ್ತೆರಡಾಯುದಂಗಳುಂ: **ಪಂಪಭಾ**, ೧೦. ೫೧ ವ) [**'ವಿವೇಕಚಿಂತಾಮಣಿ'**ಯ ಪಟ್ಟಿ: ಖಡ್ಗ, ಕರಾಚುರಿ, ಕಕ್ಕಡ, ಕಡುಗತ್ತಿ, ಸಣೆಗತ್ತಿ, ಸಬಳ, ಈಟಿ, ಇದುರುಗತ್ತಿ, ಉಬ್ಬಣ, ಕಬ್ಬಿಣಕೋಲು, ಚಕ್ರ, ಚಂಡು, ವೋತಿ, ಚಲ್ಲೆಹ, ಬಲ್ಲೆಹ, ಬಂಕು, ಬಾಣ, ನೆದೆ, ನರಾದಿ, ಶೂಲ, ಶಿರಾದಿ, ಚೂರಿ, ಚಿಕ್ಕತಾರಿ, ಕಿರಸೆ, ಪರಶು, ಪಾಶ, ಪಟ್ಟೆಯ, ಮಟ್ಟ, ಅಂಕುಶ, ವಂಕಿ, ಲೌಡಿ ಮತ್ತು ಜವದಾಡೆ]

ಮೂವತ್ತೆರಡು ನಾಡು – [ನಾ] [ಜೈನ] ವಿದೇಹಕ್ಷೇತ್ರದ ನಾಡುಗಳು (ಪದನಂ ಕಾಣಿಸಿಕೊಳ್ವುವಲ್ಲಿ ಮಱಿಗಳ್ ಷಡ್ಭಾಗಮಂ ಕೊಂಡು ತಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ ಶ್ರೀಜೈನಧರ್ಮಂ ಪೊದಳ್ದೊದವುತ್ತಿರ್ಪುದು ಮತ್ತಿನ ಅನ್ಯಸಮಯಗಕ್ಕುತ್ಪತ್ತಿಯಿಲ್ಲ ಒಂದಱೊಳ್ ಪದಿನಾರಾಗಿ ನಿರಂತರಂ ಸೊಗಯಿಕುಂ ಮೂವತ್ತರೆಟ್ನಾಡುಗಳ್: **ಆದಿಪು,** ೧. ೫೧)

ಮೂವಿಟ್ಟಿ – [ನಾ] [<ವಿಷ್ಟಿ] ಯುದ್ಧಕಾಲದಲ್ಲಿ [ಅಥವಾ ಸೋತರಾಜನು] ಮಾಡಬೇಕಾಗಿದ್ದ ಶೋಧನ [ಶಿಬಿರ, ಮಾರ್ಗ, ಸೇತು, ಕೂಪ, ನೀರು – ಇವುಗಳನ್ನು ಶೋಧನೆ ಮಾಡಿ ನೇರ್ಪಡಿಸುವುದು], ವಹನ [ಆಯುಧಗಳು, ಯಂತ್ರಗಳು, ಆವರಣಗಳು, ಉಪಕರಣಗಳು, ಆಹಾರ – ಇವನ್ನು ಸಾಗಿಸಿ ಕೊಡುವುದು] ಹಾಗೂ ಅಪನಯನ [ಯುದ್ಧದಲ್ಲಿ ಗಾಯಗೊಂಡವರು ಹಾಗೂ ಸತ್ತವರನ್ನು ಅವರ ಆಯುಧ ಕವಚಗಳ ಸಮೇತ ತರುವುದು] ಎಂಬ ಮೂರು ಬಗೆಯ ಬಿಟ್ಟಿಕೆಲಸಗಳು (ಮಲೆಪರ್ ಮಂಡಳಿಕರ್ ಕಱುಂಬರ್ ಅದಟರ್ ವೀರರ್ಕಳುಂ ತಮ್ಮ ಬಾಚ್ಚಿಲೆಯಂ ಬೇಡಿದ ವಸ್ತುವಾಹನಮುಮಂ ಮುಂದಿಟ್ಟು ಮೂವಿಟ್ಟಿಯ ಒಕ್ಕಲವೋಲ್ ಇಂ ಬೆಸಕಯ್ಯೆ ಸಂತಮಿರುತುಂ: **ಪಂಪಭಾ,** ೯. ೧೦)

ಮೂವರ್ – [ನಾ] ಮೂರು ಮಂದಿ (ತನ್ನ ತಮ್ಮಂ ವಿಚಿತ್ರವೀರ್ಯಂ ಮೂವರ್ ಕನ್ನೆಯರಂ ಪಾಣಿಗ್ರಹಣಂಗೆಯ್ದಾಗಳ್: **ಪಂಪಭಾ,** ೧. ೭೪ ವ)

ಮೂಷೆ – [ನಾ] ಮೂಸೆ, ಬಂಗಾರ ಮುಂತಾದವನ್ನು ಕರಗಿಸಲು ಬಳಸುವ ಕೋವೆ (ಕಾಯ್ದ ವಜ್ರಮೂಷೆಯೊಳಿಕ್ಕಿ ಲೋಹಮಂ ಕರಗಿಸುವಂತೆ ಕರಗಿಸುವವರುಂ: **ಆದಿಪು,** ೫. ೮೫ ವ)

ಮೂಳ – [ನಾ] ಗೆಡ್ಡೆ [ಗೆಣಸು] (ಬಹುಪ್ರಕಾರವಿಟಪಿ ರಾಜಿಗಳೊಳಿರ್ದು ವಿವಿಧಮೂಲಫಲಾಶಿಗಳುಂ ಸರೋವರ ನದೀ ನಿರ್ಝರ ಅಂಬುಪಾಯಿಗಳುಂ: **ಆದಿಪು,** ೯. ೯೩ ವ)

ಮೂಱಡಿ ಮಾಡು – [ಕ್ರಿ]ಮೂರು ಹೆಜ್ಜೆಗಳಿಗೆ ಸರಿಹೊಂದಿಸು (ಮೂಱಡಿ ಮಾಡಿದಂದು ನೆಲನೆಲ್ಲನಂ ಆ ಬಲಿಗಾದ ರೂಪಮಂ ತೋಱಿದಂ: **ಪಂಪಭಾ,** ೯. ೬೦)

ಮೂಱೆರವು – [ನಾ] ಪ್ರಾಣಿಗಳ ನೀರು ಕುಡಿಯುವ, ಶತ್ರುಗಳಿರುವ, ಮರಿ ಇರುವ ಜಾಗಗಳು (ಮೃಗದ ಮೂಱೆರವುಮಂ ಆಱಯ್ಕೆಯುಂ ಗಾಳಿಯುಮಂ ಎಱಂಕೆಯುಮಂ ಬಲ್ಲನಾಗಿ: **ಪಂಪಭಾ,** ೫. ೪೩ ವ)

ಮೂಱು – [ನಾ] ಶತ್ರು ಮಿತ್ರ ಬಾಂಧವ (ಪರಿಕಿಪುದು ಒಂದಱಿಂದೆ ಎರಡಂ ಓತುಕೊಳ್ವುದು ಮೂಱ್ಱಿಂದೆ ನಾಲ್ಕರಿದಱಿದು ಅಯ್ದಱಿಂದೆ ನೆಱ ಕಲ್ವುದು ನಿರ್ಣಯಂ ಆಱ್ಱೊಳ್ ಪರಿಣತನಪ್ಪುದು ಏೞಱೊಳಂ ಒಂದದೆ ನಿಲ್ವುದು: **ಪಂಪಭಾ,** ೧೩. ೬೬)

ಮೂಱುಜಾವ – [ನಾ] ಮೂರನೆಯ ಜಾವ (ದುರ್ಧರ ಜಿನದೀಕ್ಷೆಯಂ ಅಘಕುಳಕರಚಂಡಂ ಮೂಱುಜಾವದಾಗಳ್ ಕೊಂಡಂ: **ಆದಿಪು,** ೯. ೭೯)

ಮೂಱುರತ್ನಂಗಳ್ – [ನಾ] [ಜೈನ] ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರಗಳೆಂಬ ರತ್ನತ್ರಯಗಳು (ಆ ಮುನಿಚಕ್ರವರ್ತಿಯ ಮನದೊಳ್ ಮೂಱುರತ್ನಂಗಳ್ ಬೆಳಗಿದುವು ಈ ಸಕಳಚಕ್ರವರ್ತಿಯ ಮನೆಯೊಳ್ ಪದಿನಾಲ್ಕು ರತ್ನಂಗಳ್ ಬೆಳಗಿದುವು: **ಆದಿಪು,** ೬. ೨೪ ವ)

ಮೂಱುಲಕ್ಕೆಯುಮಯ್ವತ್ತುಸಾಸಿರ – [ನಾ] ಮೂರು ಲಕ್ಷ ಐವತ್ತು ಸಾವಿರ (ಮೂಱುಲಕ್ಕೆಯುಮಯ್ವತ್ತುಸಾಸಿರ ಬ್ರಹ್ಮಿಮುಖ್ಯ ಆರ್ಯಿಯಾಯಿಕಾಗಣಮುಂ: **ಆದಿಪು,** ೧೬. ೪೦ ವ)

ಮೂಱಿಡೆ – [ನಾ] ಮೂರು ಅಂಗಗಳು [ದೇಹ ಮೂರು ಭಾಗವಾಗುವಂತೆ ಬಾಗುವುದು] (ಮೊಕ್ಕಳಮದಾರ್ ನಡೆ ನೋಟಿಸ್ವೊಡಮಿಂತುಂ ಮೂಱಿಸಿಯವು ಮೂಱು ದೊಡ್ಡಿದುವು ಮೂಱಿಡೆ ತೆಳ್ಳಿದುವಂಬುಜಾಕ್ಷಿಯಾ: **ಪಂಪಭಾ,** ೪. ೭೨)

ಮೃಗ – [ನಾ] ಜಿಂಕೆ (ಇನಿಯಳನಟ್ಟಿಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ ಸೋಲ್ತುಲಂಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ: **ಪಂಪಭಾ,** ೧. ೧೧೧); [ನಾ] ಕಾಡುಪ್ರಾಣಿ (ಸುಟಿಯದು ಗಾಳಿ ಮೃಗಂ ಕೆಯ್ವಟಿಗಳ ಮೇತದೊಳೆ ತಣಿದಪುವು ಪಂದಿಗಳುಂ ಪಟಿನವಿರ್ ಇಕ್ಕಿದುವು: **ಪಂಪಭಾ,** ೫. ೩೮); [ನಾ] ಬೇಟೆಯ ಪ್ರಾಣಿ (ಮೃಗದೊಲವರಮುಮಂ ಅರಸನ ಬಗೆಯುಮಂ ಅಱಿದು ಅಲಸದೆ ಎಳಸದೆ ಓಲಗಿಸಲ್ ನೆಟ್ಟನೆ ಬಲ್ಲನುಳ್ಳೊಡೆ: **ಪಂಪಭಾ,** ೫. ೪೨)

ಮೃಗಚಾರಿ – [ನಾ] ಜಿಂಕೆಯಾಗಿ ಸಂಚರಿಸುತ್ತಿದ್ದ ಮುನಿ (ಮೆಲ್ಲನೆ ಮೃಗಮೆಂದು ಸಾರ್ದು ನೆಱನಂ ನಡೆ ನೋಡಿ ನರೇಂದ್ರನೆಚ್ಚು ಭೋಂಕನೆ ಮೃಗಚಾರಿಯಂ ತನಗೆ ಮಾಣದೆ ತಂದನದೊಂದು ಮಾರಿಯಂ: **ಪಂಪಭಾ,** ೧. ೧೧೧)

ಮೃಗಧರ – [ನಾ] ಜಿಂಕೆಯ ಗುರುತನ್ನು ಪಡೆದವನು, ಚಂದ್ರ (ಕುರುಪಿತಾಮಹನ ಕರ್ಣೋಪಾಂತಮಂ ಸಾರ್ದು ಕುರುಕುಳಗಗನಮೃಗಧರಂ ಬಂದನೆಂದು ಬಿನ್ನಪಂಗೆಯ್ವುದುಂ: **ಪಂಪಭಾ,** ೧೩. ೬೩ ವ)

ಮೃಗನಯನೆ – [ನಾ] ಜಿಂಕೆಯಂತೆ [ಚಟುಲವಾದ] ಕಣ್ಣುಳ್ಳ ಚೆಲುವೆ (ಪೊಗಡದ ಪೊಸವೂವಿನ ತುಡುಗೆಗಳ್ಗಂ ಅಧರದ ಪೊದಳ್ದ ತನಿಗಂಪಿಂ ಮೃಗನಯನೆಯರನೆ ಬಿಡದೋಲಗಿಸಿದವು ಅಳಿನಿಕರಂ: **ಆದಿಪು,** ೧೧. ೧೦೬)

ಮೃಗನಾಭಿ – [ನಾ] ಕಸ್ತೂರಿ (ಮಗಮಗಿಸುತ್ತುಮಿರ್ಪ ಮೃಗನಾಭಿಯ ನೀರ್ದಳಿವಲ್ಲಿ ಕಂಪನಾಳ್ದು ಉಗುಟ್ಟಲರುತ್ತುಮಿರ್ಪ ಪದದೊಳ್: **ಪಂಪಭಾ,** ೭. ೮೭)

ಮೃಗಪತಿಪ್ರಧ್ವಾನ – [ನಾ] ಸಿಂಹದ ಗರ್ಜನೆ (ಮೃಗಪತಿಪ್ರಧ್ವಾನ ಗರ್ಜದ್ಗುಹಂ ಮದಿರೋನ್ಮತ್ತ ನಿಳಿಂಪ ಕಿಂಪುರುಷ ಕಾಂತಾರಬ್ಧಸಂಗೀತಂ ಒಪ್ಪಿದುದು: **ಪಂಪಭಾ,** ೭. ೭೨)

ಮೃಗಪತಿಶಿಶು – [ನಾ] ಸಿಂಹದ ಮರಿ (ಪ್ರಕುಪಿತಮೃಗಪತಿಶಿಶು ಸನ್ನಿಕಾಶರ್ ಅತಿ ವಿಕಟಭ್ರೂಭಂಗರ್ ನಕುಲಸಹದೇವರ್ ಇರ್ವರುಂ ಅಕಾಲಕಾಲಾಗ್ನಿರೂಪಮಂ ಕೆಯ್ಕೊಂಡರ್: **ಪಂಪಭಾ,** ೭. ೮)

ಮೃಗಪದಪತ್ರರೇಖೆ – [ನಾ] ಕಸ್ತೂರಿಯಿಂದ ಬರೆದ ಪತ್ರಭಂಗ (ಮೃಗಪದಪತ್ರಲೇಖೆಗಳಂ ಏಕೆಗೆ ತಾಳ್ದಿರದಾದುವು ಈ ಕದಂಪುಗಳ್ ಉರಮೇಕೆ ಹಾರಮಣಿಮಂಜರಿಯಿಲ್ಲದೆ ಬಿನ್ನಗಿರ್ದುದು: **ಪಂಪಭಾ,** ೪. ೬೨)

ಮೃಗಭೂಖುದ್ಧ – [ಗು] ಕಸ್ತೂರಿಯಿಂದ ವೃದ್ಧಿಹೊಂದಿದ, ಚೌರಿ (ಮೃಗಭೂಖುದ್ಧ ವಿಳಾಸಿನೀ ಕಬರಿಕಾಬಂಧಗಳಂ ಪೊತ್ತು ಮಲ್ಲಿಗೆಯೊಳ್ ಭಾವಿಸಿ .. .. ಸುಟೆದತ್ತು ಅಂದೊಂದು ಮಂದಾನಿಳಂ: **ಪಂಪಭಾ,** ೪. ೮೦)

ಮೃಗಮದ – [ನಾ] ಕಸ್ತೂರಿ (ವಿಜಯಾಂಗನಾರ್ಚನೋಚಿತ ಮೃಗಮದಮುಂ ನಿಜಭುಜವಿಜಯಲಕ್ಷ್ಮೀಪರಿರಂಭಣ ಪ್ರಕಟನ ದಕ್ಷದಕ್ಷಿಣವಿಷಾಣವಿನ್ಯಸ್ತಹಸ್ತನುಂ: **ಆದಿಪು,** ೧೪. ೯೦ ವ)

ಮೃಗಮದದಣ್ಪು – [ನಾ] ಕಸ್ತೂರಿ ಲೇಪನ (ಮೃಗಮದದಣ್ಪು ಜಾದಿಯ ಬಟಲ್ಮುಡಿ ನೆಯ್ದಿಲ ಕರ್ಣಪೂರಂ ಅತ್ತಲಗದ ಕಟ್ಟಿದೈಸರಂ: **ಆದಿಪು,** ೧೨. ೧೨)

ಮೃಗಮದಸಲಿಲ – [ನಾ] ಕಸ್ತೂರಿ ಸೇರಿಸಿದ ನೀರು (ಪದನಜೆದು ತಳಿದ ಮೃಗಮದಸಲಿಲದೊಳ್ ಮೆಲ್ಲಮೆಲ್ಲನುಳ್ಳಲರ್ದ ಚೆಲ್ವಿಂಗೆ ಮುಡಿಗವಿದಂತೆ: **ಆದಿಪು,** ೪. ೪೧ ವ)

ಮೃಗಯಾ – [ನಾ] ಬೇಟೆ (ಮೃಗಯಾವ್ಯಾಜದಿನೊರ್ಮೆ ಶಂತನು ತೊಟಲ್ತರ್ಪಂ ಪಳಂಚಲ್ಕೆ: **ಪಂಪಭಾ,** ೧. ೭೦)

ಮೃಗಯಾಕ್ರೀಡೆ – [ನಾ] ಬೇಟೆಯ ಆಟ (ಮೃಗಯಾಕ್ರೀಡೆಗೆ ಪಾಂಡುರಾಜತನಯರ್ ಪೋಪನ್ನೆಗಂ ಬಂದು ತೊಟ್ಟಗೆ ಪಾಂಚಾಳಿಯನೆತ್ತಿ ತನ್ನ ರಥದೊಳ್ ತಂದಿಟ್ಟುಕೊಂಡುಯ್ದಂ: **ಪಂಪಭಾ,** ೭. ೩೧)

ಮೃಗರಾಜಕಿಶೋರ – [ನಾ] ಸಿಂಹದ ಮರಿ (ಕರಿಕಳಭಪ್ರಚಂಡ ಮೃಗರಾಜಕಿಶೋರ ಕಠೋರಘೋರ ಹೂಂಕರಣಭಯಂಕರ ಅಟವಿ: **ಪಂಪಭಾ,** ೯. ೪೨) **ಮೃಗಯಾನಿಧಾನ** – [ನಾ] ಬೇಟೆಗೆ ಆಕರ, ನಿಧಿ [ಹಾಗಿದ್ದ ಕಾಡು] (ಯುಗಾಂತಪಯೋಧರಾಳಿ ಭೋಂಕೆನೆ ಕವಿವಂದದಿಂ ಕವಿದಂ ಆ ಬನಮಂ ಮೃಗಯಾನಿಧಾನಮಂ: **ಪಂಪಭಾ,** ೮. ೧೪)

ಮೃಗಯಾನಿಧಾನ – [ನಾ] ಬೇಟೆಗೆ ಆಕರ, ನಿಧಿ [ಹಾಗಿದ್ದ ಕಾಡು] (ಯುಗಾಂತಪಯೋಧರಾಳಿ ಭೋಂಕೆನೆ ಕವಿವಂದದಿಂ ಕವಿದಂ ಆ ಬನಮಂ ಮೃಗಯಾನಿಧಾನಮಂ: **ಪಂಪಭಾ,** ೮. ೧೪)

ಮೃಗರಾಜವಿಷ್ಟರ – [ನಾ] ಸಿಂಹಾಸನ (ಚತುರ್ನಿಕಾಯ ಅಮರೇಂದ್ರವೃಂದ ಸಂಕೀರ್ಣಮುಮಪ್ಪ ಶ್ರೀಮಂಟಪಮಂ ವಿರಚಿಸಿ ಮೃಗರಾಜವಿಷ್ಟರದೊಳ್ ಬಾಳಕನಂ ಪೂರ್ವಾಭಿಮುಖನಿವಿಷ್ಟನಂ ಮಾಡುವುದುಂ: **ಆದಿಪು,** ೭. ೭೬ ವ)

ಮೃಗವಿರೋಧಿ – [ನಾ] ಸಿಂಹ (ಎರಲೆಗೆ ಪಾಡುವ ಗೋರಿಯನರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ: **ಆದಿಪು,** ೧೪. ೮೦)

ಮೃಗವ್ರಜ – [ನಾ] ಪ್ರಾಣಿಸಮೂಹ (ಪಾಸಱೆ ಸಿಂಹಪೀಠಂ ಅಳಿನಿರುತಿ ಮಂಗಳಗೀತಿ ಭೂತಳಂ ಪಾಸು ಮೃಗವ್ರಜಂ ಪರಿಜನಂ ಪೊದಱ್ ಓಲಗಸಾಲೆ: **ಪಂಪಭಾ,** ೭. ೨೯)

ಮೃಗವ್ಯ – [ನಾ] ಬೇಟೆ (ಅಂತು ನರನಾರಾಯಣರಿರ್ವರುಂ .. .. ಮೃಗವ್ಯ ವ್ಯಾಪಾರದಿಂ ಬಟಲ್ದು ಪರಿವ ಜಾತ್ಯಶ್ವಂಗಳನೇಱಿ ಬರೆವರೆ: **ಪಂಪಭಾ,** ೫. ೫೦ ವ)

ಮೃಗವ್ಯಾಯಾಮಕಾರ್ತಿಕೇಯ – [ನಾ] ಮೃಗಗಳಿಗೆ ಕಸರತ್ತು ಮಾಡಿಸುವುದರಲ್ಲಿ ಕಾರ್ತಿಕೇಯನಂತಿರುವವನು, ಅರಿಕೇಸರಿ (ಎಂದು ಬಿನ್ನಪಂಗೆಯ್ದು ಬೇಂಟೆಯಾತಂಗೆ ಮೃಗವ್ಯಾಯಾಮ ಕಾರ್ತಿಕೇಯಂ ಮೆಚ್ಚಿ ಮೆಚ್ಚುಗೊಟ್ಟು ತೊವಲನಿಕ್ಕೆಂದು ಮುಂದೆ ಪೇೞ್ದಟ್ಟಿ ನಾರಾಯಣನುಂ ತಾನುಂ .. .. ಬೇಂಟೆಗೆ ಪೋಱಮಟ್ಟು: **ಪಂಪಭಾ,** ೫. ೪೭ ವ)

ಮೃಗಶಾಬಾಕ್ಷಿ – [ನಾ] [ಮೃಗಶಾಬ+ಅಕ್ಷಿ] ಜಿಂಕೆಯಮರಿಯಂತಹ ಕಣ್ಣುಳ್ಳವಳು (ತನ್ಮೃಗಶಾಬಾಕ್ಷಿಯ ಕಂಪು ತಟ್ಟಿ ಮಧುಪಂಬೊಳ್ ಸೋಲ್ತು ಕಂಡೊಲ್ದು: **ಪಂಪಭಾ,** ೧. ೭೦)

ಮೃಗಶಾಬೇಕ್ಷಣೆ – [ನಾ] [ಮೃಗಶಾಬ+ಈಕ್ಷಣೆ] ಜಿಂಕೆಯ ಮರಿಯ ಕಣ್ಣಿನಂತೆ ಕಣ್ಣುಳ್ಳವಳು (ಇದು ನಾಕಲೋಕವಿಭವಂ ಮದ್ವೃತ್ತಕಂ ತಪ್ಪದೀ ಈ ಮೃಗಶಾಬೇಕ್ಷಣೆ ಮನ್ಮನೋರಮೆ: **ಆದಿಪು,** ೩. ೮೮)

ಮೃಗಶಾಬೇಕ್ಷಾಕ್ಷಿ – [ನಾ] ಜಿಂಕೆಯ ಮರಿಯ ಕಣ್ಣಿನಂತೆ ಕಣ್ಣುಳ್ಳವಳು (ಎಮ್ಮಂ ನೆನೆದೆರ್ದೆಗಿಡದಂತಾಗೆ ಪಾಲಿಪ್ಪುದಿಂತೀ ಮೃಗಶಾಬೇಕ್ಷಾಕ್ಷಿಯಂ.. .. ವಜ್ರಜಂಘಾ: **ಆದಿಪು,** ೪. ೫೫)

ಮೃಗಶಿಶುನೇತ್ರೆ – [ನಾ] ಜಿಂಕೆಯ ಮರಿಯಂತಹ [ಚಂಚಲ] ಕಣ್ಣುಗಳುಳ್ಳವಳು (ಮೃಗಶಿಶುನೇತ್ರೆಯ ನಡುವು ಎರ್ದೆ ಉಗುರ್ಗಳ್ ಕರಂ ಅಸಿದು: **ಪಂಪಭಾ,** ೪. ೭೩)

ಮೃಗಾಂಕಬಿಂಬ – [ನಾ] ಚಂದ್ರಮಂಡಲ (ನಯನಾನಂದ ಮೃಗಾಂಕಬಿಂಬಂ ಉದಯಂಗೆಯ್ವ ಅರ್ಕಬಿಂಬಂ ಮನಃಪ್ರಿಯ ಲಕ್ಷ್ಮೀವದನೇಂದುಬಿಂಬಂ: **ಪಂಪಭಾ,** ೧೪. ೩೫)

ಮೃಗಾಂಕವಕ್ತ್ರೆ – [ನಾ] ಚಂದ್ರಮುಖಿ ಚಂದ್ರಕಾಂತಶಿಲೆಯ ಹಾಸುಗಲ್ಲು (ತಚ್ಛಶಿಕಾಂತಶಿಶಿಳಾತಳಂ ಸಿಡಿಲ್ದು ಅಂದೊಡೆದತ್ತು ಇದೇಂ ಬಿಸಿದೊ ಬೇಟದ ಬೆಂಕೆ ಮೃಗಾಂಕವಕ್ತ್ರೆಯಾ: **ಪಂಪಭಾ,** ೫. ೭)

ಮೃಗಾರಿ – [ನಾ] [ಮೃಗ+ಅರಿ] ಜಿಂಕೆಯ ವೈರಿ, ಸಿಂಹ (ಕ್ರಮದೊಳ್ ಅಸಂಜ್ಞಿಯುಂ ಸರಿಸೃಪಾಳಿಯುಂ ವಿಹಗಾಳಿಯುಂ ಭುಜಂಗಮತತಿಯುಂ ಮೃಗಾರಿಗಣಮುಂ ಲಲನಾಜನಮುಂ: **ಆದಿಪು,** ೫. ೯೩)

ಮೃಗಿ – ಹೆಣ್ಣು ಜಿಂಕೆ (ಇನಿಯಳನಟ್ಟಿಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ ಸೋಲ್ತಲಂಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ: **ಪಂಪಭಾ,** ೧. ೧೧೧)

ಮೃಗೀವ್ರಾತ – [ನಾ] ಹೆಣ್ಣುಜಿಂಕೆಗಳ ಸಮೂಹ (ಕಿನ್ನರಯುವತೀ ಮೃಗೀವ್ರಾತಮಂ ತನ್ನ ನಲ್ಲಂಬುಗಳಿಂದೆಚ್ಚೆಚ್ಚು ಮೆಚ್ಚಂ ಸಲಿಸುವನದಱಿಂ ರಮ್ಯಮಿಂತೀ ನಗೇಂದ್ರಂ; **ಪಂಪಭಾ,** ೪. ೨೩)

ಮೃಗೇಂದ್ರವಿಷ್ಟರ – [ನಾ] ಸಿಂಹಾಸನ (ಪುರುದೇವಂ ಮೃಗವಿಷ್ಟರದೊಳಿರೆ ನಾಭಿರಾಜಂ ಬೆರಸು ಬಂದು: **ಆದಿಪು,** ೮. ೭೧ ವ)

ಮೃಗೋದ್ಭವ – [ನಾ] ಮೃಗಮದ, ಕಸ್ತೂರಿ (ಪೊಸತಲ್ತು ನಿನಗೆ ಪೂವಿನ ಪೊಸಗಂಪು ಈ ಬನದೊಳ್ ಈ ಮೃಗೋದ್ಭವಗಂಧಂ ಪೊಸತು: **ಆದಿಪು,** ೧೧. ೧೩೭)

ಮೃಣಾಳ – [ನಾ] ತಾವರೆಯ ದಂಟು (ತಿಸುಳದೊಳ್ ಉಚ್ಚಳಿಪ್ಪ ಪೊಸನೆತ್ತರೆ ಕೆಂದಳಿರಾಗೆ ಕಣ್ಗೆ ಅಗುರ್ವಿಸುವಿನಂ ಒಕ್ಕು ನೇಲ್ವ ಕರುಳೋಳಿಯೆ ಬಾಳಮೃಣಾಳಮಾಗೆ: **ಪಂಪಭಾ,** ೧. ೬)

ಮೃಣಾಳನಾಳ – [ನಾ] ಮೃಣಾಳ (ಬಳವತ್ಕಾಮಾಗ್ನಿ ಹೋಮಾಗ್ನಿ ಚಂದನ ಕರ್ಪೂರ ಮೃಣಾಳನಾಳಮೆ ಪೊದಳ್ದ ಇಧ್ಮಂಗಳ್ ಇಂತಾಗೆ: **ಪಂಪಭಾ,** ೪. ೫೯)

ಮೃತ್ತಿಕಾ[ಕೆ] – [ನಾ] ಮಣ್ಣು (ಮೃತ್ತಿಕಾವಿರಚಿತಮಪ್ಪ ಚತುರಾಂತರದೊಳ್ .. .. ಗುಣಾರ್ಣವನನಾ ದ್ರುಪದಿಜೆಯನೊಡನೆ ಕುಳ್ಳಿರಿಸಿ: **ಪಂಪಭಾ,** ३. ೭೪ ವ)

ಮೃತ್ಪಾತ್ರ – [ನಾ] ಮಣ್ಣಿನ ಪಾತ್ರೆ, ಗಡಿಗೆ (ತಪೋವನಕ್ಕೆ ಪೋಪ ಭಾರ್ಗವಂ ದ್ರವ್ಯಾರ್ಥಿಯಾಗಿ ಬಂದ ಕುಂಭಸಂಭವನಂ ಕಂಡು ಕನಕಪಾತ್ರಕ್ಕುಪಾಯಮಿಲ್ಲಪ್ಪುದಱಿಂ ಮೃತ್ಪಾತ್ರದೊಳ್ ಅರ್ಘ್ಯಮೆತ್ತಿ ಪೂಜಿಸಿ: **ಪಂಪಭಾ,** ೨. ೪೫ ವ)

ಮೃತ್ಸ್ನಾವಿಲಸಿತ – [ನಾ] [ಒಳ್ಳೆಯ] ಮಣ್ಣಿನಿಂದ ಒಪ್ಪುವ (ಮಹಾನದ್ಯುಭಯತಟ ಮೃದುಮೃತ್ಸ್ನಾವಿಲಸಿತ ವೇದಿಕಾವಿರಾಜಮಾನದೊಳ್: **ಆದಿಪು,** ೮. ೬೭)

ಮೃದುಕೂಜಿತ – [ನಾ] ಮೆಲುವಾಗಿ ಕೂಗುವುದು (ಪರಿಪಠನ ನಟನ ಮೃದುಕೂಜಿತ ರಸಿತ ದರಹಸಿತ ಕ್ರೇಂಕಾರ ಆರೋಹಣಾದಿ ಯೋಧನಾದಿ ನಾನಾ ವಿನೋದಂಗಳೊಳ್: **ಆದಿಪು,** ೮. ३ ವ)

ಮೃದುಬಂಧ – [ನಾ] ಮೃದುವಾದ ಶಬ್ದಗಳ ಜೋಡಣೆ (ಬಗೆ ಪೊಸತಪ್ಪುದಾಗೆ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು: **ಪಂಪಭಾ,** ೧.೮)

ಮೆಚ್ಚವಣಿಗೆ – [ನಾ] ಮೆಚ್ಚಿಕೆಯನ್ನು ಹೊಂದಿರುವುದು (ಓಲಗವುರುಡಿಲ್ಲ ಮೆಚ್ಚವಣಿಗಿಲ್ಲ ಕರಂ ಮುಳಿಸಿಲ್ಲ ಕೆಮ್ಮಗೆ ಬಟೆಸಂದು ಕೊಂದಪನಕಾರಣದಿಂ ಮೊಱೆಯೋ ಮನೋಭವಾ: **ಆದಿಪು,** ೧೨. ३३)

ಮೆಚ್ಚು – [ನಾ] ಬಹುಮಾನ (ಮುಂದಟ್ಟಿದ ದೂತಂಗೆ ಪ್ರೀತನಾಗಿ ಮೆಚ್ಚಿ ಮೆಚ್ಚಿತ್ತು: **ಆದಿಪು,** ४. ೨३ ವ); [ನಾ] ಇಷ್ಟಾರ್ಥ (ಕಿನ್ನರಯುವತೀ ಮೃಗೀವ್ರಾತಮಂ ತನ್ನ ನಲ್ಲಂಬುಗಳಿಂದೆಚ್ಚೆಚ್ಚು ಮೆಚ್ಚಂ ಸಲಿಸುವನದಱಿಂ ರಮ್ಯಮಿಂತೀ ನಗೇಂದ್ರಂ; **ಪಂಪಭಾ,** ೪. ೨३); [ನಾ] ಅಪೇಕ್ಷೆ (ಉಗ್ರಾಜಿಯೊಳ್ ದೋರ್ವಳದಿಂದಂ ತನ್ನ ಮೆಚ್ಚಂ ಸಲಿಸಿಯೆ ನೆಲನಂ ಕೊಳ್ವೆಂ: **ಪಂಪಭಾ,** ೯. ೯३)

ಮೆಚ್ಚುಗೊಡು – [ಕ್ರಿ] ಬಹುಮಾನ ನೀಡು (ಎಂದು ಬಿನ್ನಪಂಗೆಯ್ದು ಬೇಂಟೆಯಾತಂಗೆ ಮೃಗವ್ಯಾಯಾಮ ಕಾರ್ತಿಕೇಯಂ ಮೆಚ್ಚಿ ಮೆಚ್ಚುಗೊಟ್ಟು ತೊವಲನಿಕ್ಕೆಂದು ಮುಂದೆ ಪೇಟ್ದಟ್ಟಿ ನಾರಾಯಣನುಂ ತಾನುಂ .. .. ಬೇಂಟೆಗೆ ಪೊಱಮಟ್ಟು: **ಪಂಪಭಾ,** ೫. ४೭ ವ)

ಮೆಚ್ಚುಗೊಳ್ – [ಕ್ರಿ] ಬಹುಮಾನ ಸ್ವೀಕರಿಸು (ಗಣಿಕಾತಿಳಕಮಿವಳ್ ನರ್ತನರಸದೊಳೆ ನಿಚ್ಚಂ ಮೆಚ್ಚುಗೊಳ್ವಳಿಂದ್ರನ ಕೈಯೊಳ್: **ಆದಿಪು,** ೯. ೧೮)

ಮೆಟ್ಟು – [ಕ್ರಿ] ನರ್ತನದಲ್ಲಿ ಹೆಜ್ಜೆಯಿಡು ಹಾಗು ಹೆಜ್ಜೆ (ಭುಜಲತಾಭ್ರೂಚಾಪ ನೇತ್ರೋತ್ಪಲ ಪ್ರಸರಂಗಳ್ ಪಸರಂಗೆಯ್ಯುತ್ತಿರೆ ಲಸನ್ನೇತ್ರಂಗಳಂ ಕೂಡೆ ಬಂಚಿಸುತುಂ ಮೆಟ್ಟುವ ಮೆಟ್ಟಿನೊಳ್ಪು: **ಆದಿಪು,** ೭. ೧೨३); [ಕ್ರಿ] ತುಳಿ (ಸಾವದ್ಯಭೀರುಗಳ್ ಕೆಲರ್ ಆ ವಿವಿಧ ಫಲ ಪ್ರಸೂನ ಪಲ್ಲವತತಿಯಿಂ ತೀವಿದ ರಾಜಾಂಗಣಮಂ ಇಳಾವಂದ್ಯರ್ ಮೆಟ್ಟಲೊಲ್ಲದಲ್ಲಿಯೆ ನಿಂದರ್: **ಆದಿಪು,** ೧೫. ೯); [ಕ್ರಿ] ಕುಟ್ಟು (ಶಕುನಿ ಮುನ್ನೆ ತನ್ನ ಮಾಡಿದ ನಾಟವಾಸಗೆಗಳಂ ಅರಸಾಳಂತೆ ಕಣ್ಣಱಿದು ಮೆಟ್ಟಿ ಮಟ್ಟಮಱಿದಿಕ್ಕುವಾಗಳ್: **ಪಂಪಭಾ,** ೬. ೭೧ ವ); [ನಾ] ಪಾದರಕ್ಷೆ ಧರಿಸು (ದುಕೂಲಾಂಬರಮನುಟ್ಟು ಪೊಸವಾವುಗೆಯಂ ಮೆಟ್ಟಿ: **ಪಂಪಭಾ,** ೧೨. ೧೦೮ ವ);

ಮೆಡಱು – [ಕ್ರಿ] ಹೆಣೆ (ಗಂಗಾಸುತನ ವಾಮಭಾಗದೊಳ್ ಅಂಬರಭಾಗಂ ಆ ತಟ್ಟಿ ಮೆಡಱಿದಂತಾಗಿ ತನ್ನ ರಥದೊಳೊಟ್ಟಿದ ಕೆಯ್ದುಗಳ ಬೆಳಗೆ ಬೆಳಗಾಗೆ: **ಪಂಪಭಾ,** ೧೦. ೫೬)

ಮೆಣಸುಗಡಲೆ – [ನಾ] [ಮೆಣಸು+ಕಡಲೆ] ಕಾರ ಹಚ್ಚಿದ ಕಡಲೆ (ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮಾರುಡಿನ ಮೆಣಸುಗಡಲೆಯ ಪುಡಿಯೊಳಡಸಿದದಲ್ಲದ ಅಲಲ್ಲಣಿಗೆಯ ಚಕ್ಕಣಮಂ ಸವಿಸವಿದು: **ಪಂಪಭಾ,** ४. ೮೭ ವ)

ಮೆಯ್ – [ನಾ] ಭಾಗ, ಕಡೆ (ಒಂದು ಮೆಯ್ಯೊಳ್ ಅಮರರ್ ಮತ್ತೊಂದು ಮೆಯ್ಯೊಳ್ ನರರ್ ನೆರೆದಿಂಬಾಗಿರೆ: **ಆದಿಪು,** ೮. ೨೦); [ನಾ] ಶರೀರ (ಓಡುಗೆ ನಿಮ್ಮ ಮೆಯ್ಯ ಪಸಿವು ಅಂತ ವಿರೋಧಿಗಳೆನ್ನ ಕೆಯ್ಯೊಳಟ್ಟಾಡುಗೆ: **ಪಂಪಭಾ,** ೫. ೮೫); [ನಾ] ಕಥಾವಸ್ತು (ಸಮಸ್ತಭಾರತಮುಂ ಆದಿಪುರಾಣಮುಂ ಎಂದು ಮೆಯ್ ಅಸುಂಗೊಳುತಿರೆ: **ಪಂಪಭಾ,** ೧೪. ೬೦)

ಮೆಯ್ ಮೆಯ್ಗೆ – [ಅ] ಪ್ರತಿಯೊಬ್ಬರಿಗೂ, ಪ್ರತ್ಯೇಕವಾಗಿ (ಎಮ್ಮ ಗಂಡವಾತುಂ ಅಳುಂಬಂ ಭೃತಮಕ್ಕುಮೆಂದು ಮೆಯೆ ಮೆಯ್ಗೆ ಬೆಸಸೆಂಬುದುಂ: **ಪಂಪಭಾ,** ೬. ೨೬ ವ)

ಮೆಯ್ಗರೆ – [ಕ್ರಿ] ತಪ್ಪಿಸಿಕೊ (ಕರೆದೊಡೆ ಜೂದಿಂಗಂ ಧುರಭರಕೆ ಆಖೇಟಕ್ಕೆ ಭೂಭುಜಂಗೆ ಆಗದು ಮೆಯ್ಗರೆದಿರಲ್ ಆಗದು ಎಂಬ ಪುರಾತನ ಗುರುವಚನಂ ತನಗೆ ನಿಟ್ಟೆಪಟ್ಟುದಱಿಂ: **ಪಂಪಭಾ,** ೬. ೭೧); [ಕ್ರಿ] ಮರೆಮಾಚು, ಮೈಮರೆಸು (ಒಂದು ದಿವಸಂ ದುರ್ಯೋಧನನ ಮಯ್ದುನಂ ಸಿಂಧುದೇಶಾಧೀಶ್ವರಂ ಸೈಂಧವಂ ಅವರಂ ಛಿದ್ರಿಸಲೆಂದು ಮೆಯ್ಗರೆದು ಬಂದು: **ಪಂಪಭಾ,** ೭. ३೦ ವ)

ಮೆಯ್ಗಲಿ – [ನಾ] ಶೂರ (ಮೊಸಳೆಯಂ ಪಿಡಿವಂತಿರೆ ನೀರೊಳೊತ್ತಿ ಭೀಮನನತಿ ಗರ್ವದಿಂ ಪಿಡಿಯೆ ಮೆಯ್ಗಲಿ ಬದ್ದೆಗನನ್ನನಾವನೋ: **ಪಂಪಭಾ,** ೧. ೨೬)

ಮೆಯ್ಗಾಪು – [ನಾ] ಮೈಗಾವಲು (ಕಳಭಾಷಿಣಿಗಮರಿಯರೆ ಬಳಸಿ ಮೆಯ್ಗಾಪಾದರ್: **ಆದಿಪು,** ೭. ೧३)

ಮೆಯ್ಗಿಡು – [ಕ್ರಿ] ವಸ್ತುವಿನ್ಯಾಸವು ಕೆಡು (ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ: **ಪಂಪಭಾ,** ೧. ೧೧)

ಮೆಯ್ದರ್ – [ಕ್ರಿ] [ಮೆಯ್+ತರ್] ಇಷ್ಟಪಡು (ಜೈನದೀಕ್ಷೆಗೆ ಮೆಯ್ಯಂ ತರುಣಜನಂಗಳೆ ತರ್ಪರ್ ಪರಿಣತವಯಸರ್ಕಳಪ್ಪವರ್ ಮೆಯ್ದಾರರ್: **ಆದಿಪು,** ೧೫. ४४)

ಮೆಯ್ದೋಱು – [ಕ್ರಿ] ಕಾಣಿಸಿಕೊ (ಪೊಳೆವ ಅಂಗಚ್ಛಾಯೆಯಿಯುಂ ಬೇಱೆ ತೊಟ್ಟನೆ ಮೆಯ್ದೋಱೆ ವಿಶುದ್ಧಮಪ್ಪ ಪಳಿಕಿಂ ಪೆಣ್ಮಾಡಿದಂತೊಪ್ಪಿದಳ್: **ಆದಿಪು,** ೭. ೨३); [ಕ್ರಿ] ಎದುರಿಸು (ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱೆ ನಭಕ್ಕೆ ಪಾಱಿದುದು: **ಪಂಪಭಾ,** ೧. ೧೦೯); [ಕ್ರಿ] ಪ್ರಕಟಪಡಿಸು (ಚೇಟಿಕೆ ಬೀಸುವ ಕುಂಚಮೆಯ್ದೆ ಮೆಯ್ದೋಱುವ ಗಾಡಿ

ಕಾಂಚನದ ದಂಡದ ಸೀಗುರಿ ನೋಟಕ್ಕೊಡೆ ಆರುಮಂ ಮಾಱಿ: **ಪಂಪಭಾ,** ೯. ೧೦೦)

ಮೆಯ್ಮಱ್ – [ಕ್ರಿ] ಪರವಶವಾಗು, ದೇಹದ ಅರಿವಿಲ್ಲದಾಗು (ಮೆಯ್ಮಱಿದು ಕರ್ಣನೊಳಾದ ಶೋಕಾನಲದೊಳ್ ಬಾಯಟಿದು ಧೃತರಾಷ್ಟ್ರನುಂ ಗಾಂಧಾರಿಯುಂ ಬರೆವರೆ: **ಪಂಪಭಾ,** ೧೩. ೬ ವ)

ಮೆಯ್ಮೆಯ್ಯೊಳೆ – [ಅ] ಅಕ್ಕಪಕ್ಕದಲ್ಲಿಯೇ (ಸಕಳಚಮೂಪತಿಯುಮಂ ಅಶ್ವರತ್ನಮುಮಂ ದಂಡರತ್ನಮುಮಂ ಮೆಯ್ಮೆಯ್ಯೊಳೆ ಕಾವ ದೇವತೆಗಳ್: **ಆದಿಪು,** ೧೩. ೩೯ ವ)

ಮೆಯ್ಯನಾಜಿಸು – [ಕ್ರಿ] ಮೈಯನ್ನು [ಕಾಮದ ತಾಪದಿಂದ] ನಂದಿಸು (ಎಲ್ಲಿಯುಂ ಮೆಯ್ಯನಾಜಿಸಲಾಱದೆ ಪೂತ ಚೂತಲತೆಗಳೊಳ್ ತಳ್ತೊಯ್ಯುದ್ದು ಪೊಸಮುತ್ತಿನ ಬಾಸಣಿಗೆಯೊಳ್ ಬಾಸಣಿಸಿದ ಬಿರಿಮುಗುಳ್ಗಳೊಳ್ ತುಱುಗಿದ: **ಪಂಪಭಾ,** ೫. ೫ ವ)

ಮೆಯ್ಯಲಸು – [ಕ್ರಿ] ದೈಹಿಕವಾಗಿ ದಣಿ (ಅಂಬುಜೋದರನಂ ಮೆಲ್ಲನೆ ನೋಡಿ ಮೆಯ್ಯಲಸಿದಂತೆ ಎಂತಾನುಂ ಎಟ್ದಿರ್ದು ಕೇಸರಿಪೀಠಾಗ್ರದಿನಪ್ಪಿಕೊಂಡು: **ಪಂಪಭಾ,** ೯. ೩೧)

ಮೆಯ್ಯಜಿ – [ಕ್ರಿ] ಮೈತಿಳಿ, ಎಚ್ಚರವಿರು (ಸುತಶೋಕದ ಪೊಂಪುಟಿಯೊಳ್ ಮೆಯ್ಯಜಿಯದೆ ನೀರಿಟಿವಂತೆವೊಲ್ ಇಟಿದಂ ಅಪರಜಳಧಿಗೆ ದಿನಪಂ: **ಪಂಪಭಾ,** ೧೨. ೨೨೦)

ಮೆಯ್ಯಾನ್ – [ಕ್ರಿ] ಶರೀರವನ್ನು ಒಡ್ಡು (ವಿನತಾಪುತ್ರನ ವಜ್ರ ತುಂಡಹತಿಗಂ ಮೆಯ್ಯಾಂತು ಕಂಡಂಗಳುಳ್ಳಿನಂ ಅಂಗಂಗಳಂ ಒಡ್ಡಿ ಒಡ್ಡಿ ತನುವಂ ಕೊಟ್ಟಂತು: **ಪಂಪಭಾ,** ೪. ೨೬)

ಮೆಯ್ಯಿಕ್ಕು – [ಕ್ರಿ] ನಮಸ್ಕರಿಸು (ಅಧಿವ್ಯಾಧಿತಶರೀರರ್ ಮಾನವರ್ ಅಭಿಮಾನವಂ ಬಿಸುಟು ನಾಭಿರಾಜನನುಮತದಿಂದಂ ಆದಿಬ್ರಹ್ಮನಲ್ಲಿಗೆ ವಂದು ಮೆಯ್ಯಿಕ್ಕಿ ಪೊಡೆವಟ್ಟು: **ಆದಿಪು,** ೮. ೬೧ ವ)

ಮೆಯ್ಯೊಡ್ಡು – [ಕ್ರಿ] ದೇಹವನ್ನು ಒಪ್ಪಿಸು (ಕೌರವರ್ ದ್ರುಪದನಂಬೇಜೆಂಗೆ ಮೆಯ್ಯೊಡ್ಡದೆ ಒಡ್ಡು ಒಡೆದು ಓಡುತ್ತಿರೆ: **ಪಂಪಭಾ,** ೨. ೬೨)

ಮೆಯ್ಯೊಳ್ – [ಗು] ಏಕಾಂಗಿಯಾಗಿ (ಕಲಿ ಮಾರ್ಕೊಳ್ಳದೆ ಕೊಟ್ಟು ಮೆಯ್ಯೊಳೆ ಸಿಡಿಲ್ ತಾಪಂತೆವೋಲ್ ತಾಗೆ: **ಪಂಪಭಾ,** ೬. ೨೭)

ಮೆಯ್ವಣ್ಣ – [ನಾ] ದೇಹದ ಬಣ್ಣ, ಕಾಂತಿ (ಇಂತುಟಪ್ಪ ಮೆಯ್ವಣ್ಣಕ್ಕಿಂತೀ ಪೂವಿನೊಳೀ ತುಡುಗೆಯೊಳೀ ಪುಟ್ಟಿಗೆಯೊ ಬೆಡಂಗುವಡೆದೆಸೆದಿರ್ಕುಂ: **ಪಂಪಭಾ,** ೩. ೪೫)

ಮೆಯ್ವಿಡಿ – [ಕ್ರಿ] ಸಾಕಾರಗೊಳ್ಳು, ರೂಪ ಪಡೆ (ಬಾಯಟಿದು ಎನಿತೆರೆದೊಡಮಾಹಾಯೆನ್ನಯ ಕರಮೆ ಮಱುಗಿ ಮೆಯ್ವಿಡಿದುರಿವೆಂ ಈ ಎರ್ದೆಯನಾಜಿಸಲ್ ನೀಂ ಬಾಯೊಳ್ದಂಬುಲಮನಪ್ಪೊಡಂ ದಯೆಗೆಯ್ವೊ: **ಪಂಪಭಾ,** ೮. ೬೯)

ಮೆಯ್ವಿಡು – [ಕ್ರಿ] ತಂಗು, ನೆಲಸು (ಉಷ್ಣಾಂಶುವಿನ ಊರ್ಧ್ವಗಾಂಶುನಿವಹಂ ಮೆಯ್ವಿಟ್ಟು ಅಲರ್ಚುತ್ತುಂ ಇರ್ಪುದು: **ಪಂಪಭಾ,** ೪. ೨೨); [ಕ್ರಿ] ಮೈಯನ್ನು ಹಿಡಿ (ಮೆಯ್ವಿಡಿದು ಎನ್ನ ಕಣ್ಗಳೊಳ್ ಸುಟಿದುವು ತಾಮೆ ಕನ್ನಡಿಸಿದಪ್ಪುದವು ಕನ್ನೆಯ ಕನ್ನೆವೇಟಮಂ: **ಪಂಪಭಾ,** ೪. ೬೧)

ಮೆಯ್ವೆಱು – [ಕ್ರಿ] [ಮೆಯ್+ಪೆಱು] ಸಾಕಾರಗೊಳ್ಳು (ಗಾಲಿಗಳೆತ್ತಂ ತಳರದೆ ಜಿಗಿಲ್ತು ನಿಲೆ ಧರೆಗಿಟಿದಾ ಆರ್ದು ಎತ್ತಿ ಪರಿಯಿಸಿದರ್ ಏಂ ಮೆಯ್ವೆತ್ತುದೊ ರಥಕಲ್ಪಂ ಅಲ್ಲಿ ಸೂತರ್ ಕೆಲಬರ್: **ಪಂಪಭಾ,** ೧೦. ೯೦)

ಮೆಯ್ವೆರ್ಚಿಸು – [ಕ್ರಿ] ಸಂತಸಪಡಿಸು (ಪ್ರಿಯಕುಬ್ಜವಾಮನ ಗಣಾಲಾಪಂಗಳ್ ಅತ್ಯಂತಸೌಂದರಶುದ್ಧಾಂತವಧೂ ಕದಂಬಕಮನೇಂ ಮೆಯ್ವೆರ್ಚಿಸಲ್ಕಾರ್ತುದೋ: **ಆದಿಪು,** ೧೧. ೪೨)

ಮೆಯ್ವೆರ್ಚು – [ಕ್ರಿ] ಮೈಯುಬ್ಬು (ನೀಂ ಮೆಲ್ಲಮೆಲ್ಲನೆ ಮಂದಾನಿಳ ತೀಡು ಕೋಗಿಲೆ ಸರಂದೋಱು ಎಂದು ಮೆಯ್ವೆರ್ಚಿ ತನ್ನಿನಿಯಂ ಬಂದೊಡೆ ನಲ್ಲಳೇಂ ನಲಿದಳೋ ನಾನಾವಿಳಾಸಂಗಳಂ: **ಆದಿಪು,** ೧೨. ೪೩); [ಕ್ರಿ] ಅಧಿಕವಾಗು (ನನೆಯಂಬನೆ ಕರ್ಚಿ ಪಾಜಿದಪುದೋ ಶೃಂಗಾರವಾರಾಶಿ ಭೋಂಕನೆ ಬೆಳ್ಳಂಗೆಡೆದತ್ತೊ ಕಾಮನ ಎಱ ಮೆಯ್ವೆರ್ಚಿತ್ತೊ ಪೇಟಿಲ್ ಈಕೆಗೆ ಎಂಬಿನಂ: **ಪಂಪಭಾ,** ೪. ೪೨)

ಮೆಯ್ವೋಗ – [ನಾ] [ಮೆಯ್+ಭೋಗ] ದೇಹದ ಸುಖ (ಸೀಗುರಿ ಕಾಪಿನಾಳ್ ಕುಣಿದು ಮೆಟ್ಟುವ ಗುಜ್ಜರಿಗಟ್ತಿ ಬೀರಮಂ ಚಾಗದ ಪೆಂಪುಮಂ ಪೊಗಟ್ವ ಸಂಗಡವರ್ಪವರೊಳ್ಪಿನಿಂದೆ ಮೆಯ್ವೋಗದಳುಂಬಮಪ್ಪ ಬಿಯಂ; **ಪಂಪಭಾ,** ೪. ೮೭)

ಮೆಲ್ನುಡಿ – [ನಾ] ಮೃದು ಮಾತು (ಸೂಳೆಯರ ತುಱುಂಬು ಸೂಳೆಯರ ಮೆಲ್ನುಡಿ ಸೂಳೆಯರಿರ್ಪ ಪಾಂಗು ಸೂಳೆಯರ ನೆಗಟ್ತಿ ನಾಡೆ ತನಗಟ್ತಿ ದಲ್ ಅಕ್ಕನೆ ಸೂಳೆಯಾಗಳೇ: **ಪಂಪಭಾ,** ೪. ೯೪)

ಮೆಲ್ಪಂ – [ಅ] ಮೃದುವಾಗಿ (ನವವಧುವ ಶಂಕೆಯಂ ಕಳೆವ ವಿದಗ್ಧವಿಟಂಬೊಲಲೆವ ತೆರೆಗಳ್ ಮೆಲ್ಪಂ ಬವರಿಸಿ ಸೋಂಕುತ್ತುಂ ಕಳೆದುವು ಘನಕುಚಕಳಶಕುಂಕುಮಸ್ಥಾಸಕಮಂ: **ಆದಿಪು,** ೧೧. ೧೪೫)

ಮೆಲ್ಪು – [ನಾ] ಮೃದುತೆ, ಮಾರ್ದವ (ಮೆಲ್ಪಿಂಗೆ ಮೆಚ್ಚಿತ್ತು ತನ್ನ ಸಮಸ್ತಂ ಪರಿವಾರಮೆಂಬ ಗುಣಸಂಘಾತಂಗಳಂ ತಾಳ್ದಿ: **ಆದಿಪು,** ೧. ೭೮)

ಮೆಲ್ಪು ಬಲ್ಪನಟಿಗುಂ – ಮೃದುತೆಯು ಕಾಠಿಣ್ಯವನ್ನು ನಾಶಪಡಿಸುತ್ತದೆ (ಸಲೆ ಮೆಲ್ಪು ಬಲ್ಪನಟಿಗುಂ ಕೈವಾರಮುಂ ಕೂಡೆ ಕೂರಿಸುಗುಂ ನಿಕ್ಕುವಂ: **ಪಂಪಭಾ,** ೯. ೧೯)

ಮೆಲ್ಲಡಿ – [ನಾ] ಕೋಮಲ ಪಾದ (ಕಡಕುಂ ಪೆಟ್ಟೆಯುಂ ಒತ್ತೆ ಮೆಲ್ಲಡಿಗಳಂ ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೊರ್ಮೆ ಕುಳುತ್ತುಂ ಏಟುತಿರೆ: **ಪಂಪಭಾ,** ೩. ೯)

ಮೆಲ್ಲು – [ಕ್ರಿ] ತಿನ್ನು (ಪುಗಲಿಲ್ಲ ಈ ಬನಂ ಆರ್ಗಂ ಇಂಬು ನೆಲಸಲ್ ನಾರುಂಟು ಉಡಲ್ ಮೆಲ್ಲೆ ಕೊಂಬುಗಳೊಳ್ ಪಣ್ಣಲುಮುಂಟು: **ಪಂಪಭಾ,** ೭. ೩೦ ವ)

ಮೆಲ್ಲುಲಿ – [ನಾ] ಇನಿದನಿ (ಸೊಡರ್ಗುಡಿ ಒಯ್ಯನಾಗೆ ಪೊಸಮಲ್ಲಿಗೆ ಕಂಪುನಾಱೆ ತಣ್ಪಿಡಿದ ಎಲರ್ ಊದೆ ಗಾವರದ ಮೆಲ್ಲುಲಿ ತುಂಬಿಯ ಗಾವರಂಗಳ ಗೆಡೆಗೊಳೆ: **ಪಂಪಭಾ,** ೪. ೧೧೦)

ಮೆಲ್ಲೆರ್ದೆ – [ನಾ] ಮಿದುವೆದೆ, ಮೃದು ಹೃದಯ (ಮಲ್ಲಿಗೆಗಳ್ ವಸಂತದೊಳ್ ಬಿರಿದೊಡೆ ನಲ್ಲರಂ ನೆನೆದ ನಲ್ಲರ ಮೆಲ್ಲೆರ್ದೆಗಳ್ ನಿರಂತರಂ ಬಿರಿದುವು: **ಆದಿಪು,** ೧೧. ೧೧೦)

ಮೆಱಿ – [ಕ್ರಿ] ಪ್ರಕಟಿಸು, ತೋರಿಸು (ನೆಱಿಯೆ ಧನುರ್ವಿದ್ಯೆಯ ಕಣ್ದೆಱಿವಿನೆಗಂ ಕಲ್ತ ನಿಮ್ಮ ಮಕ್ಕಳ ಮೆಯ್ಯೊಳ್ ಮೆಱಿದಪ್ಪೆಂ ಎನ್ನ ವಿದ್ದೆಯಂ: **ಪಂಪಭಾ,** ೨. ೬೫); [ಕ್ರಿ] ಪ್ರದರ್ಶಿಸು (ವನರಾಜಿಕ್ರೀಡೆಯಂ ಯೌವನದೊಳೆ ತೋಱಲ್ ಜಲಕ್ರೀಡೆಯಂ ನೂತನಲಾವಣ್ಯಾಚ್ಛ ತೋಯಾಶಯದೊಳೆ ಮೆಱಿಯಲ್: **ಆದಿಪು,** ೧. ೮೩); [ಕ್ರಿ] ವ್ಯಕ್ತಪಡಿಸು (ಅಮರೇಂದ್ರಾರ್ಚನಕ್ಕೆ ಇಂತಿದಾಯ್ತುಗ್ಗಳಮೆಂಬಂತಾಗೆ ದಿವ್ಯಾರ್ಚನೆಯೊಳೆ ಮೆಱಿದಂ ಭಕ್ತಿಯಂ ಚಕ್ರನಾಥಂ: **ಆದಿಪು,** ೧೬. ೨)

ಮೆಟಸು – [ನಾ] ಮೆಣಸು (ಮುತ್ತುಂ ಮೆಟಸುಂ ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ: **ಪಂಪಭಾ,** ೭. ೯೨)

ಮೆಟ್ಟಿಡಿತು – [ನಾ] ಮೋಸ, ಕೇಡು (ಭೀಮಸೇನಂ ಧರ್ಮಪುತ್ರಂಗೆಂದಂ ಉಪ್ಪಿಕ್ಕಿದೊಡೆ ತುಪ್ಪದ ಮೆಟ್ಟಿಡಿತೆಂಬಂತೆ ನಮ್ಮ ಕೆಮ್ಮನಿರ್ಪಿರಿದೇ ಕಾರಣಂ: **ಪಂಪಭಾ,** ೭. ೧೬ ವ)

ಮೆಟ್ಟಿಡಿಸು – [ಕ್ರಿ] ಮೋಸಪಡಿಸು (ಅದಲ್ಲದೆಯುಂ ಅತ್ಯಾದರಸ್ಸಂಭ್ರಮಮುತ್ಪಾದಯತಿ ಎಂಬುದೀ ಪುರೋಚನನೆಂಬ ಬೂತು ಸುಯೋಧನನ ಬೆಸದಿಂ .. .. ನಮ್ಮಂ ಮೆಟ್ಟಿಡಿಸಲೆಂದೆ ಮಾಡಿದಂ: **ಪಂಪಭಾ,** ೩. ೪ ವ)

ಮೆಟ್ಟಿಡು – [ನಾ] ಭ್ರಮೆ (ಪುತ್ರಕಳತ್ರಮೋಹದೆಳ್ ಇದೇಕಟ್ಟಿರ್ದಪೈ ನಿನ್ನ ಮೆಟ್ಟಿಡು ಇದೇಕಾರಣಂ ಅಂತಕಂ ಕಡುಪಿನಿಂ ಕಂಠಗ್ರಹಂಗೆಯ್ಯದಿಂ ತಡೆಯಂ: **ಆದಿಪು,** ೧. ೭೯); ಭ್ರಾಂತನಾಗು (ತಡೆಯದೆ ನಿನಗಪ್ಪುದನೀಗಡೆ ಬಗೆ ಮೆಟ್ಟಿಡದಿರು ಎಂಬುದುಂ: **ಆದಿಪು,** ೩. ೭೨); [ಕ್ರಿ] ಮರುಳಾಗು (ಇಂತು ಕಣ್ಬಿಡಿಗರಪ್ಪರೆ ಮಾನಸರಪ್ಪರ್ ಎಂದು ಮೆಟ್ಟಿಡೆ ನುಡಿದು ಎಯ್ದೆವಂದು: **ಪಂಪಭಾ,** ೮. ೭೬); [ಕ್ರಿ] ಮೋಸಹೋಗು (ನೀನುಂ ಮೆಟ್ಟಿಟ್ಟು ವಿದುರನೆಂಬೀ ತೊಟ್ಟುಟ್ಟಿಯ ಮನೆಯ ಕೂಟಿ ನುಡಿಯಿಸೆ ನುಡಿದೈ: **ಪಂಪಭಾ,** ೯. ೫೮); [ನಾ] ವ್ಯಾಮೋಹ (ಇದೊಂದೆ ಮೆಯ್ ಉಟಿದುದು ಇನ್ನೆನಗಾವುದೊ ಮೆಟ್ಟಿಡು ಎಯ್ದೆ ಮುಂದಾದ ವಿರೋಧಿಸಾಧನಮಂ ಎನ್ನ ಗದಾಶನಿತಿಂದುರುಳ್ಚುವೆಂ: **ಪಂಪಭಾ,** ೧೩. ೪೯)

ಮೇಖಳಾಭಿತ್ತಿ – [ನಾ] ಪರ್ವತಾಗ್ರದ ಗೋಡೆ (ಆ ವೃಷಭಾದ್ರಿಯ ಮೇಖಳಾಭಿತ್ತಿಯೊಳ್ ಆತ್ಮೀಯವಿಶ್ವವಿಶ್ವಂಭರಾ ವಿಜಯಪ್ರಶಸ್ತಿಯನಟ್ಟೆಯೊಳ್ ಬರೆಯಿಸುವೆನೆಂದು ಪೋಗಿ ನೋಡುವನ್ನೆಗಂ: **ಆದಿಪು,** ೧೩. ೭೦ ವ)

ಮೇಖಳೆ – [ನಾ] ಡಾಬು (ಸರಿಗೆಗಿವು ಲಂಬಣಕ್ಕಿವು ಬರಗಲೆಗಿವು ಮುಗುಳ್ಗಳೆಮ್ಮ ಮೇಖಳೆಗಿವು ನೂಪುರರಚನೆಗಿಂತಿವೆಂದು: **ಆದಿಪು,** ೭. ೬೯); [ನಾ] ಬೆಟ್ಟದ ತಪ್ಪಲು (ಕಳಧೌತೋಜ್ವಳ ಕುಂಭನಿರ್ಗತಪಯಃಪೂರಂ ಪೊದಳ್ದೆಯ್ದೆ ಮೇಖಳೆಗಳ್ ನಾಲ್ಕುಮನೀ ಈ ನಗಂ ಸುರನಗಂ ಮುನ್ನೀಗಳೆಂತೋ ಹಿಮಾಳಯಮಾಯ್ತು: **ಆದಿಪು,** ೭. ೧೦೦)

ಮೇಗಿಲ್ಲದೆ – [ಗು] ಕೀಳ್ತನದಿಂದ (ಅಂತು ಕೃಷ್ಣೆಯ ಕೃಷ್ಣಕಬರಿಭಾರಮಂ ಮೇಗಿಲ್ಲದೆ ಪಿಡಿದು ತೆಗೆದು ಕೃಷ್ಣೋರಗಮಂ ಪಿಡಿದ ಬೆಳ್ಳಾಳಂತೆ ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ: **ಪಂಪಭಾ,** ೭. ೫ ವ)

ಮೇಗು – [ನಾ] ಹೆಚ್ಚಿನ[ವನು] (ಸೆಣಸುವ ಅಹಿತರ್ ಮೇಲೆೞ್ಟೆ ಉದ್ಯೋಗಮಂ ಬಗೆದಿರ್ದರ್ ಎನ್ನಣುಗಿನ ಅಳಿಯಂಗೆ ಎನ್ನಿಂ ಮೇಗಿಲ್ಲ ಕೂರ್ಪವರ್: **ಆದಿಪು,** ४. ೯೦); [ನಾ] , ಮಿಗಿಲು (ಆ ನರಸಿಂಹನಿಂ ಅತ್ತ ನಾಲ್ವೆರಲ್ ಮೇಗು ಪೊದಳ್ದ ಚಾಗದೊಳಂ ಒಂದಿದ ಬೀರದೊಳಂ ಗುಣಾರ್ಣವಂ: **ಪಂಪಭಾ,** ೧. ೫೦); [ನಾ] ಘನತೆ (ದ್ರುಪದಂ ರಾಜ್ಯಮದಿರಾಮದೋನ್ಮತ್ತನುಂ ಗರ್ವಗ್ರಹ ವ್ಯಗ್ರಚಿತ್ತನುಮಾಗಿ ಮೇಗಿಲ್ಲದೆ: **ಪಂಪಭಾ,** ೨. ४೬ ವ); [ನಾ] ಮುಂದೆ ಸಂಭವಿಸುವುದು (ದೀವದ ಬೇಂಟೆಯಂ ಬಿನ್ನಪಂಗೆಯ್ವೊಡೆ ಗಾಳಿಯುಂ ಕಟೆವುಮುಂ ಉಟೆವುಂ ಕಾಪುಂ ಮೇಪುಂ ತೋಡುಂ ಬೀಡುಂ ದೆಸೆಯುಂ ಕೊಸೆಯುಂ ಮೆಚ್ಚುಂ ಬೆಚ್ಚುಂ ಪೋಗುಂ ಮೇಗುಂ ಬೆದಱು ಕೆದಱುಂ ಪೆರ್ಚುಂ ಕುಂದುಮನಱೆದು: **ಪಂಪಭಾ,** ೫. ४೩ ವ)

ಮೇಗುವೇಟ್ – [ಕ್ರಿ] ಮೋಸದ ನುಡಿಯನ್ನಾಡು (ಎನಗಂ ಮೇಗುವೇಟ್ದಪ್ಪೆಯಿಲ್ಲಾರ್ಪೊಡೆ ನಿನ್ನಂ ಕಾವ ಗಂಧರ್ವರ ಬಿಡಿಸುಗೆ ಪೋಗು: **ಪಂಪಭಾ,** ೮. ೭೦)

ಮೇಘಕಾಲ – [ನಾ] ಮೋಡದ ಕಾಲ, ಮಳೆಗಾಲ (ಉದಾರ ಕದಂಬ ಕೇತಕೀಪ್ರಸರ ರಜಸ್ವರ ಪ್ರಕಟ ಪ್ರಾಂಸುಳಮಾದುದು ಮೇಘಕಾಲದೊಳ್: **ಪಂಪಭಾ,** ೭. ೨೨)

ಮೇಘನಾದ – [ನಾ] ಮೋಡದ ಶಬ್ದ, ಗುಡುಗು (ಮರುಳ್ಗೆ ಧೂಪಮಂ ತೋಱಿದ ಮಾಟಿಕ್ಕೆಯಿಂ ದ್ರುಪದರಾಜಸುತಾವಚನಂಗಳಲ್ಲಿ ಮೆಯ್ದೋಱಿ ಮರುತ್ಸುತಂ ನುಡಿದಂ ಆ ಸಭೆಯೊಳ್ ನವಮೇಘನಾದದಿಂ: **ಪಂಪಭಾ,** ೭. ೧೧)

ಮೇಘಮಾಲಿಕಾ[ಕೆ] – [ನಾ] ಮೋಡಗಳ ಮಾಲೆ (ಮಾರುತಬಾಣದೆ ಮೇಘಮಾಲಿಕಾನಿವಹಮಂ ಎಚ್ಚು ಕೂಡೆ ಶರಪಂಜರಮಂ ಪಡೆದಂ ಗುಣಾರ್ಣವಂ: **ಪಂಪಭಾ,** ೫. ೯೬)

ಮೇಘಸ್ವರ – [ನಾ] ಒಂದು ಬಿರುದು (ಮೇಘನಾದಸಮಾನಮಾದ ಸಿಂಹನಾದಕ್ಕೆ ಚಕ್ರವರ್ತಿ ಮೆಚ್ಚಿ ಮೇಘಸ್ವರನಾಮಮಂ ವೀರಾಗ್ರಗಣ್ಯಪದವಿಯಂ ದಯೆಗೆಯ್ದು: **ಆದಿಪು,** ೧೩. ೬೭ ವ)

ಮೇಚಕಾಚಳ – [ನಾ] ನೀಲಪರ್ವತ (ಸಂಚಾರಿತಮೇಚಕಾಚಳ ಚಕ್ರವಾಳರುಚಿ ಹರಿಕರಟಿಘಟಾಪ್ರಪಂಚ ರಾಗಕೇತನ ಚಂಚಳಾಂಚಳನಿಚಯದಿಂ: **ಆದಿಪು,** ೧೩. ೭೭ ವ)

ಮೇಚಕಿತ – [ಗು] ದಟ್ಟ ನೀಲಿಯ (ಉತ್ತುಂಗಮಣಿಭೂಷಣ ಮರೀಚಿಮೇಚಕಿತ ದೇವಾಂಗನಾನಿಕಾಯಸಮೇತಂ: **ಆದಿಪು,** ೨. ೬೯ ವ)

ಮೇಡು – [ನಾ] ಹಿಣಿಲು (ನಿಡುಗೋಡು ಮೇಡುಂ ಅಮರುತ್ತುಮಿರೆ ಇಱುಂಕಿದ ಕೆಚ್ಚಲ್ ಎತ್ತಂ ಎತ್ತಿದ ಕುಡಿವಾಲಂ ಆಂದೆಸೆಯೆ ಕರ್ಬಸುಗಳ್ ಪರಿಗೊಂಡುವಾಜಿಯೊಳ್: **ಪಂಪಭಾ,** ೮. ೧೦४)

ಮೇಣ್ – [ಅ] ಅಥವಾ (ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂದ್ರಾಳಯದಿಂದಂ ಉರ್ಚಿದ ಫಣಾಮಣಿಮಂಗಳರಶ್ಮಿಯೋ: **ಪಂಪಭಾ,** ೧. ೯೬)

ಮೇತ – [ನಾ] ಮೇಯುವಿಕೆ (ಸುಟಿಯದು ಗಾಳಿ ಮೃಗಂ ಕೆಯ್ವಟಿಗಳ ಮೇತದೊಳೆ ತಣಿದಪುವು ಪಂದಿಗಳುಂ ಪಟಿನವಿರ್ ಇಕ್ಕಿದುವು ಆದಂ ಪಟು ಪರಿದಾಡಲ್ ಕರಂ ಬೆಡಂಗವನಿಪತೀ: **ಪಂಪಭಾ,** ೫. ೩೮)

ಮೇದಿನಿ – [ನಾ] ಭೂಮಿ, ರಾಜ್ಯ (ಜೂದಾಡಿ ಸೋಲ್ತು ನನ್ನಿಗೆ ಮೇದಿನಿಯಂ ಕೊಟ್ಟು ಪಾಂಡುನಂದನರ್ ಈಗಳ್ ಪೋದೊಡಮೇಂ ತಿಣುಕಾಗದೆ ಪೋದಪುದೇ ನಮ್ಮ ನೃಪತಿಗವು ತವುದಲೆಯೊಳ್: **ಪಂಪಭಾ,** ೭. ೧೮)

ಮೇಪು – [ನಾ] ಮೇವು (ಕಟಿವುಂ ಉಟಿವುಂ ಕಾಪುಂ ಮೇಪುಂ ತೋಡುಂ ಬೀಡುಂ ದೆಸೆಯುಂ ಕೊಸೆಯುಂ: **ಪಂಪಭಾ,** ೫. ೪೩ ವ)

ಮೇರುವ ಪೊನ್ – [ನಾ] ಮೇರುಪರ್ವತದ ಚಿನ್ನ (ಮೇರುವ ಪೊನ್ ಕಲ್ಪಾಂಘ್ರಿಪದಾರವೆ ರಸದೊಱವು ಪರುಸವೇದಿಯ ಕಣಿ ಭಂಡಾರದೊಳುಂಟೆನೆ: **ಪಂಪಭಾ,** ೧. ೨೮)

ಮೇರೆ – [ನಾ] ಎಲ್ಲೆ (ಎಮ್ಮಾಳ್ವ ಷಟ್ಖಂಡಕಿಂತಿದಱಿಂದಿತ್ತೆಯೆ ಮೇರೆ ನೋಡಿಂ ಎಮಗೀ ಶೈಲೇಂದ್ರಮೆಂದೆಂದು ತೋಱಿದಂ .. .. ಹೈಮಾದ್ರಿಯಂ: **ಆದಿಪು,** ೧೩. ೬೯)

ಮೇರೆದಪ್ಪು – [ಕ್ರಿ] ಮೇರೆ ಮೀರು (ಅಂತು ವಿಳಯಕಾಲ ಜಳನಿಧಿಗಳಂತೆ ಮೇರೆದಪ್ಪಲ್ ಬಗೆದ ತನ್ನ ನಾಲ್ವರ್ ತಮ್ಮಂದಿರ ಮುನಿದ ಮೊಗಮಂ ಕಂಡು: **ಪಂಪಭಾ,** ೭. ೮ ವ)

ಮೇರೆಯಂ ದಾಂಟು – [ಕ್ರಿ] ಎಲ್ಲೆಯನ್ನು ಮೀರು (ರಂಗತ್ತರಂಗ ವಾರ್ಧಿಚಯಂಗಳ್ ತಂತಮ್ಮ ಮೇರೆಯಂ ದಾಂಟುವೊಡಂ ಗಾಂಗೇಯನುಂ ಪ್ರತಿಜ್ಞಾಗಾಂಗೇಯನುಮೊರ್ಮೆ ನುಡಿದುದಂ ತಪ್ಪುವರೇ: **ಪಂಪಭಾ,** ೧. ೮೪)

ಮೇಲ್ – [ನಾ] ಮಿಗಿಲಾದುದು, ಶ್ರೇಷ್ಠವಾದುದು (ಪರಮಾರ್ಹಂತ್ಯಮನೆಯ್ದಲಿರ್ದುದಱಿಂ ಮೇಲುಂಟೆ ಸತ್ತ್ವಂ ಚರಾಚರಮಂ ನೆಟ್ಟನೆ ಪರ್ವಲಿರ್ದುದಱಿಂ ಮೇಲುಂಟೆ ವಿಜ್ಞಾನಂ: **ಆದಿಪು,** ೯. ೬೨)

ಮೇಲಪ್ಪ – [ಗು] ಶ್ರೇಷ್ಠವಾದ (ದಿವದೊಳ್ ಮೇಲಪ್ಪ ರತ್ನಂಗಳೆಂದನಿತಂ ಮುಂ ಮಣಿಮಾಳೆಗಿತ್ತಂ: **ಆದಿಪು,** ೨. ೧೮)

ಮೇಲಪ್ಪುದು – [ನಾ] ಮುಂದೆ ಸಂಭವಿಸುವುವು, ಮುಂದಾಗುವುವು (ನಷ್ಟಂ ನಷ್ಟಂ ಮೃತಂ ಮೃತಂ ಎಂಬುದು ಇನ್ನಟಲದಿರ್ ಮೇಲಪ್ಪುದಂ ಬಗೆ ಭೂಪತೀ: **ಪಂಪಭಾ,** ೧೩. ೨೨)

ಮೇಲಪ್ಪೊಡಂ – [ಅ] ಅತಿಶಯವಾದರೂ (ಮೇಲೆಟ್ದಿ ಬಲಂ ಕೋಟಿಗೆ ಮೇಲಪ್ಪೊಡಂ ಅನ್ಯ ವನಿತೆ ನೆಗಟ್ದೂರ್ವಶಿಗಂ ಮೇಲಪ್ಪೊಡಂ ಅಕ್ಕೆ ಎಂದುಂ ಸೋಲವು ಕಣ್ ಪರಬಲಾಬ್ಧಿಗಂ ಪರವಧುಗಂ: **ಪಂಪಭಾ,** ೧. ೪೭)

ಮೇಲುದು – [ನಾ] ಮೇಲುಹೊದಿಕೆ, ಸೆರಗು (ನೊಸಲಂ ತೊಂಗಲ್ವುರುಳ್ ಮೇಲುದನೊಗೆವ ಕುಚಂ ಬೆನ್ನನಾ ನೀಳಕೇಶಪ್ರಸರಂ: **ಆದಿಪು,** ೧೧. ೧೬); [ನಾ] ಉತ್ತರೀಯ (ರಿಪುಕುರಂಗಕಂಠೀರವನ ಕೆಯ್ಯೊಳ್ ವೈಕರ್ತನಂ ಸಾಯಲೊಡಂ ಮೇಲುದಂ ಬೀಸಿ ಬೊಬ್ಬಿಱಿದಾರ್ವ ಪಾಂಡವಪತಾಕಿನಿಯೊಳ್: **ಪಂಪಭಾ,** ೧೨. ೨೧೮)

ಮೇಲೆ ಬೀೞ್ – [ಕ್ರಿ] ಮೇಲೆ ಬೀಳು, [ಲೈಂಗಿಕಾಸಕ್ತಿಯಿಂದ] ಮುಂದುವರಿ (ಪರಾಕ್ರಮಧವಳನ ಪರಾಕ್ರಮಕ್ಕಂ ಗಂಡಗಾಡಿಗಂ ರಂಭೆ ಸೋಲ್ತು ಸೈರಿಸಲಾಱದೆ ಏಕಾಂತದೊಳ್ ಮೇಲೆ ಬಿೞ್ದೊಡೆ: **ಪಂಪಭಾ,** ೮. ೨೮ ವ)

ಮೇಲೇೞ್ – [ಕ್ರಿ] ಆಕ್ರಮಣ ಮಾಡು (ಸೆಣಸುವ ಅಹಿತರ್ ಮೇಲೇಟ್ದು ಉದ್ಯೋಗಮಂ ಬಗೆದಿರ್ದರ್ ಎನ್ನಣುಗಿನ ಅಳಿಯಂಗೆ ಎನ್ನಿಂ ಮೇಗಿಲ್ಲ ಕೂರ್ಪವರ್: **ಆದಿಪು,** ೪. ೯೦)

ಮೇಲ್ಮಲೆಗೆಯ್ – [ಕ್ರಿ] ಮೇಲೆ ಮೇಲೆ ಹುರುಡು ತೋರಿಸು, ಮನಸ್ಸಿಟ್ಟು ಹೋರಾಡದೆ (ಕುರುಪತಿಗಿಲ್ಲ ದೈವಬಲಂ ಆಜಿಗೆ ಮೇಲ್ಮಲೆಗೆಯ್ವರ್ ಆಗಳುಂ ಗುರು ಗುರುಪುತ್ರ ಸಿಂಧುಸುತರ್: **ಪಂಪಭಾ,** ೯. ೭೦)

ಮೇಲ್ವಾಯ್ – [ಕ್ರಿ] [ಮೇಲ್+ಪಾಯ್] ಮೇಲೆ ನುಗ್ಗು (ಆತನ ಮೇಲ್ವಾಯೆ ರಾಗಿಸಿ ರೋಮಾಂಕುರಂ ಒಗೆದಂತೆ ಒಗೆದ ಕಳಿಕಾಂಕುರಂಗಳುಂ: **ಪಂಪಭಾ,** ೨. ೧೨ ವ)

ಮೇವಳಿ – [ನಾ] ಮೇಯುವ ಸ್ಥಳ (ನೆಲನಂ ನಿಱುಗೆಯಂ ನಡೆವೊಂದು ಪದಮುಮಂ ಸೋವಳಿ ಮೇವಳಿ ಬಿಸುವಳಿಯಂ .. .. ನಿಱಿಸುವೆಂ ಪಂದಿಯಂ: **ಪಂಪಭಾ,** ೫. ೪೬)

ಮೇಹನ – [ನಾ] ಆನೆಯ ಜನನಾಂಗದ ಅಂಗಭಾಗ (ಪೀನಾಯತಾಮ್ರಪಲ್ಲವ ಕೋಶ ಸುಕೋಶ ಮೇಹನನುಂ: **ಆದಿಪು,** ೧೨. ೫೬ ವ)

ಮೇಳ – ಜೊತೆ (ಚಾಮರದಡಪದ ಡವಕೆಯ ಕನ್ನಡಿಯ ಪರಿಚಾರಿಕೆಯರುಂ ಒಡನಾಡಿ ಬಳೆದ ಮೇಳದ ಕೆಳದಿಯರುಂ: **ಆದಿಪು,** ೩. ೨೩ ವ); [ನಾ] ಸಮಾಗಮ, ಸೇರುವಿಕೆ (ಇನಿವಿರಿದೊಂದು ಮೇಳಮುಂ ಒಡಂಬಡು ಅಟ್ಕಱುಂ ಎನ್ನ ನಿನ್ನ ಮುನ್ನಿನ ಭವದೊಂದು ಕೂರ್ಮೆಯೊಳೆ ಕೂಡಿದುದು: **ಆದಿಪು,** ೪. ೫೨); [ನಾ] ಸ್ನೇಹ (ಸುತನೆಂಬ ಮೇಳದಿಂ ನಿನಗೆ ಅತರ್ಕ್ಯಬೋಧಂಗೆ ಯುಕ್ತಿಯಂ ತೋಱೆ: **ಆದಿಪು,** ೮. ೧೪); [ನಾ] ಸಂಬಂಧ (ನೀಂ ಕುಡೆ ಪಡೆದೆವಿಳಾತಳಮಂ ಒಡನೆ ಪುಟ್ಟಿದ ಮೇಳಕ್ಕೆ ಅಡಿಗೆಱಗಿಂ ಎಂದು ಭರತಂ ಜಡಿವಂ: **ಆದಿಪು,** ೧೪. ೩೬)

ಮೇಳಗಾಳೆಗ – [ನಾ] ಆಟಕ್ಕಾಗಿ ಆಡುವ ಯುದ್ಧ (ಕಾದುವ ಮಾಟಿಕ್ಕೆಯಲ್ಲಮಿದು ಕೆಮ್ಮನೆ ನಣ್ಪಿನ ಮೇಳಗಾಳೆಗಂಗಾದುವ ಮಾಟ್ಕೆ: **ಪಂಪಭಾ,** ೧೩. ೪೩)

ಮೇಳದಂಕ – [ನಾ] ಸ್ನೇಹದ ಯುದ್ಧ (ಮೇಳದಂಕದಂತೆ ಸುಟಿಯಱಿದುಂ ಡೊಂಬರ ಕೋಡಗದಂತಾಡಿ ಗೆಲ್ದಾಗಳ್ ತಮ್ಮಣ್ಣನ ಸೋಲಮಂ ಕಂಡಾಗಳ್ ಭೀಮಸೇನನಿಂತೆಂದಂ: **ಪಂಪಭಾ,** ೬. ೭೨ ವ)

ಮೇಳದಾಕೆ – [ನಾ] ಸಖಿ, ಪರಿಚಾರಿಕೆ (ಪೊಸದಳಿಂಬದ ಮೇಗೆ ಕಿಱಿದು ಬೇಗಂ ವಿಶ್ರಮಿಸಿ ಮೇಳದಾಕೆಗಳ್ವೆರಸು ಬಂದು ಕಾವಣಮಂ ಪುಗಲೊಡನೆ: **ಆದಿಪು,** ೧೧. ೭೩ ವ)

ಮೇಳಿಸಿದಪ್ಪುದು – ಮೋದಗೊಳಿಸುತ್ತಿದೆ (ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂದ್ರಾಳಯದಿಂದಮುರ್ಚಿದ ಫಣಾಮಣಿಮಂಗಳ ರಶ್ಮಿಯೋ ಕರಂ ಮೇಳಿಸಿದಪ್ಪುದೆನ್ನೆರ್ದೆಯಂ: **ಪಂಪಭಾ,** ೧. ೯೬)

ಮೇಳಿಸು – [ಕ್ರಿ] ಲಲ್ಲೈಸು, ಮುದ್ದುಮಾಡು (ಎರೆವ ಮರಲ್ವ ಲಲ್ಲಯಿಪ ಕಾಲ್ವಿಡಿವ ಎಂಬುದನಿಂಬುಕೆಯ್ವ ಅಳಂಕರಣವಿಳಾಸದಿಂ ಮೆಱೆವ ಮೇಳವಿಸುವಂದಿನ ರೂಪು ಶಾಸನಂ ಬರೆದುದು: **ಆದಿಪು,** ೩. ೪೩); [ಕ್ರಿ] ಜೊತೆಗೂಡು, ಸೇರಿಕೊ (ಪೆಱರಾಳಂ ಛಿದ್ರಿಸುವೆವೆಂಬ ಪಾಂಡವರೊಳ್ ನೀಂ ಮೇಳಿಸಿ ನಣ್ಪನೆ ಬಗೆದಿರ್: **ಪಂಪಭಾ,** ೧೧. ೧೫)

ಮೈಂದವಾಟಿ – [ನಾ] ಒಂದು ಬಗೆಯ ಬಾಳೆ, ಮಹೇಂದ್ರ ಬಾಳೆ (ಗೊಲೆಯೊಳ್ಪಣ್ತುದು ಮೈಂದವಾಟಿ ಪಥಿಕರ್ಬರ್ಕೆಂದು ಭೃಂಗಂಗಳಿಂದುಲಿವಂತಿರ್ದುದು ಪಣ್ತ ಬಕ್ಕೆ ತನಿವಣ್ಣಾಗಿರ್ದುದು: **ಆದಿಪು,** ೧೧. ೬೮)

ಮೈತ್ರ – [ನಾ] ಮಿತ್ರತ್ವ, ಗೆಳೆತನ (ಪೞವೆಗಂ ಪಾಗುಡಕ್ಕಂ ಪಳಬದ್ದಕ್ಕಂ .. .. ವೈವಾಹಿಕಸಂಬಂಧಕ್ಕಂ ಮೈತ್ರಕ್ಕಂ .. .. ಮಹಾನದಿಗಳ್ ಕೂಡುವಂತೆ: **ಪಂಪಭಾ,** ೯. ೯೫ ವ)

ಮೈತ್ರಾವರುಣ – [ನಾ] ಯಜ್ಞದಲ್ಲಿ ಭಾಗವಹಿಸುವ ಒಬ್ಬ ಪುರೋಹಿತ (ವ್ಯಾಸ ಕಶ್ಯಪ ವಿಶ್ವಾಮಿತ್ರ ಭರದ್ವಾಜ ಬ್ರಹ್ಮ ಅಧ್ವರ್ಯು ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ: **ಪಂಪಭಾ,** ೬. ೩೩ ವ)

ಮೈತ್ರಾಸನವೃತ್ತಿ – [ನಾ] ಸ್ನೇಹಿತರಾಗಿ ಉದಾಸೀನರಾಗಿರುವ ರೀತಿ (ಮತ್ತಮಲ್ಲಿ ಕೆಲರಂ ಮೈತ್ರಾಸನವೃತ್ತಿಯೊಳ್ ನಿಱಿಸಿ ಕೆಲರಂ ಉತ್ಖಾತಪ್ರತಿರೋಪಿತಮ್ಮಾಡಿ ಕೆಲರಂ ಉಚ್ಚಾಟಿಸಿ ಸರ್ವಹರಣಂಗೆಯ್ದು: **ಪಂಪಭಾ,** ೬. ೩೦ ವ)

ಮೈತ್ರಿ – [ನಾ] ಸ್ನೇಹ (ಜಗತ್ಕಾಯಸ್ವಭಾವ ಭಾವನಾಪರಂ ಸಕಳಶರೀರಗುಣಾಧಿಕ ದುಃಖಾರ್ದಿತ ಅವಿನೀತರೊಳ್ ಮೈತ್ರಿ ಪ್ರಮೋದ ಕಾರುಣ್ಯ ಮಾಧ್ಯಸ್ಥವೃತ್ತಿಗಳಂ ಭಾವಿಸುತ್ತುಂ: **ಆದಿಪು,** ೯. ೧೨೯ ವ)

ಮೈಮೆ – [ನಾ] [ಮಹಿಮೆ] ವೈಭವ (ಸತಿ ಯಶಸ್ವತಿ ವಿಶ್ವಮಹೀತಳಂ ಗುಣಂಗೊಳೆ ಪಡೆದಳ್ ತದಗ್ರಮಹಿಷೀಪದದೊಳ್ ಪಿರಿದೊಂದು ಮೈಮೆಯಂ: **ಆದಿಪು,** ೮. ೪೫)

ಮೈಮ್ಮೈಯೊಡಂಬಡು – [ಕ್ರಿ] ದೇಹಕ್ಕೆ ದೇಹವನ್ನು ಸೇರಿಸು (ನೆಲನಂ ಪರ್ವುವ ಬಳ್ಳಿಗಂ ಚದುರನೊಳ್ ಮೈಮ್ಮೈಯೊಡಂಬಟ್ಟು ತಳ್ತ ಲತಾಕೋಮಳೆಗಂ: **ಆದಿಪು,** ೧೨. ೧೮)

ಮೈಯನಿಕ್ಕು – [ಕ್ರಿ] ಹಾಸಿಗೆಯ ಮೇಲೆ] ದೇಹವನ್ನು ಚಾಚು, ಮಲಗಿಕೊ (ಮೆಯ್ಯನಿಕ್ಕುತ್ತಿರೆ ಪತ್ತಿ ಕೆಂದಳಿರ್ಗಳಚ್ಚುಗಳಚ್ಚಿಱಿದಂತೆ ಕಾಮನ ಬೇಟದಚ್ಚುಗಳ ಮಾಟಕ್ಕೆಯೊಳ್ ಇರ್ದುದು ಮೆಯ್ ಸುಭದ್ರೆಯಾ: **ಪಂಪಭಾ,** ೫. ೧೭)

ಮೈಯಿಕ್ಕು – [ಕ್ರಿ] ನಮಸ್ಕರಿಸು (ಮಕುಟಬದ್ಧಾಧೀಶರಾಗಳ್ ವಸುಂಧರೆಯಂ ಪರ್ವಿರೆ ಮೈಯನಿಕ್ಕೆಯುಂ ಉದಾತ್ತೋತ್ಸಾಹದಿಂ ರಾಜಮಂದಿರಮಂ ಪೊಕ್ಕನುದಾರ ಸಾರವಿಭವಂ ಸಂಸಾರಸಾರೋದಯಂ: **ಆದಿಪು,** ೧೨. ೧೨೯)

ಮೈಯೆಱಗು – [ಕ್ರಿ] ಮೈ ಬಾಗು (ಅಱೆಮರುಳಂತುಟೆ ಸೊರ್ಕಿನ ತೆಱನಂತುಟೆ ಮನಮೊಱಲ್ದು ಎರ್ದೆಯುರಿವುದು ಮೆಯ್ಯೆಱಗುವುದು ಪದೆವುದು ಆನಿದನಱಿಯನಿದೇಕೆಂದು ಕನ್ನೆ ತಳವೆಳಗಾದಳ್; **ಪಂಪಭಾ,** ೪. ೭)

ಮೆಯ್ಮಱಿ – [ಕ್ರಿ] ಮೂರ್ಛೆ ಹೋಗು (ಎಂದು ಕರ್ಣನೊಳಾದ ಶೋಕಾನಲದೊಳ್ ಬಾಯಟೆದು ಮೆಯ್ಮಱೆದು ಪಳಯಿಸುವ ನಿಜತನೂಜನ ಶೋಕಮನಾಱಿಸಲೆಂದು: **ಪಂಪಭಾ,** ೧೩. ೬ ವ)

ಮೈವಿಡಿ – [ಕ್ರಿ] [ಮೈ+ಪಿಡಿ] ಸಾಕಾರವಾಗು (ಕರಮೆ ಮಱುಗಿ ಮೆಯ್ವಿಡಿದು ಉರಿವ ಎನ್ನೀ ಎರ್ದೆಯನಾಱಿಸಲ್ ನೀಂ ಬಾಯೊಳ್ ತಂಬುಲಮನಪ್ಪೊಡಂ ದೆಗೆಯ್ವೋ: **ಪಂಪಭಾ,** ೮. ೬೯)

ಮೊಕ್ಕಳಂ – [ಅ] ವಿಶೇಷವಾಗಿ (ತೆರಳ್ದು ಸುರಭೂರುಹಪ್ರಸವ ಧೂಳಿಯಂ ಮೊಕ್ಕಳಂ ಸುರುಳ್ದು ಸರಸೀಸರೋರುಹ ದಳಂಗಳಂ: **ಆದಿಪು,** ೭. ೬೭)

ಮೊಕ್ಕುಮೊಕ್ಕೆನೆ – [ಅ] ಮೊಕ್ ಮೊಕ್ ಅಥವಾ ಪುಳುಕ್ ಪುಳುಕ್ ಎಂದು (ನಿಶಾತಶರಾಳಿಗಳ್ ಎಯ್ದೆ ಚಕ್ಕುಚಕ್ಕನೆ ಕೊಳೆ ಮೊಕ್ಕುಮೊಕ್ಕೆನೆ ಶಿರಂಗಳುಱುಳ್ದುವು ವೈರಿಭೂಪರಾ: **ಪಂಪಭಾ,** ೧೨. ೧೧೯)

ಮೊಗ – [ನಾ] ಮುಖ (ಅಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಱಿಂದೆ: **ಪಂಪಭಾ,** ೧. ೮೫ ವ)

ಮೊಗಂಗಿಡು – [ಕ್ರಿ] [ಮೊಗಂ+ಕಿಡು] ಮುಖ ಕೆಡಿಸಿಕೊ, ಅಸಹ್ಯಪಡು (ಮಿಡಿದೊಡೆ ತನಿಗರ್ವು ರಸಂ ಬಿಡುವುವು ಬಿರಿದೊಂದು ಮುಗುಳ ಕಂಪಿನೊಳೆ ಮೊಗಂಗಿಡುವುವು: **ಪಂಪಭಾ,** ೧. ೫೫)

ಮೊಗಂದಿರಿ – [ಕ್ರಿ] [ಮೊಗಂ ತಿರಿ] ಮುಖ ತಿರುಗಿಸು, ವಿಮುಖವಾಗು, ಎದುರಿಸದೆ ಇರು (ಭೀಷ್ಮಂಗೆ ಚಕ್ರಂ ಇಂತೇಕೆ ಮೊಗಂದಿರಿದುದೊ ನಿಮ್ಮಂ ಪಿಡಿದೆನಗೆರಿದೆನಲ್ ಅರಿದುಂಟೆ ಧುರದೊಳೇಂ ಅಸುರಾರೀ: **ಪಂಪಭಾ,** ೧೧. ೨೫)

ಮೊಗಂನೋಡು – [ಕ್ರಿ] ಮುಖ ನೋಡು, [ಬೆಲೆಯ] ಪರಿಗಣನೆಯಿಲ್ಲದೆ (ಪರಿವೆಡೆಯ ತುಳಿವೆಡೆಯ ನೆಳಲಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂನೋಡದೆ ಸೂಸಿದಾಗಳ್: **ಆದಿಪು,** ೪. ೩೪ ವ)

ಮೊಗಂಬುಗಿಸು – [ಕ್ರಿ] ಮುಖಕ್ಕೆ ಮುಖ ಸೇರಿಸು, ಮುಖಾಮುಖಿಯಾಗಿಸು (ಅಂತಾ ದಂತಿಘಟೆಗಳಂ ಆರೋಹಕರ್ ತೋಱಿಕೊಟ್ಟು ಒಂದೊಂದರ್ಕೆ ಮೊಗಂಬುಗಿಸಿದಾಗಳ್ **ಪಂಪಭಾ,** ೧೦. ೯೩ ವ)

ಮೊಗಂ ಮುರಿ – [ಕ್ರಿ] ಮುಖ ತಿರುಗಿಸು (ಮದ್ರರಾಜನಳಿಯನ ಪರಾಕ್ರಮಕ್ಕೊಸೆದು ಮೊಗಂಮುರಿಯದೆ ಪೆಱತುಂ ರಥಮಂ ತರಿಸಿ ಕನಲ್ದವರ್ದು ಕದನಕಾಗಳೆ ನೆಱೆದಂ: **ಪಂಪಭಾ,** ೧೦. ೧೦೭)

ಮೊಗಂ ಮುಱಿ – [ಕ್ರಿ] ಮುಖ ಗಂಟಿಕ್ಕು (ಮೊಗಂ ಮುಱಿಯದೆ ಎಲ್ಲಮಂ ತೊಱೆದು

ವಿಶ್ವವಿಶ್ವಂಭರಾದಿಗಂಬರತಟಂಬರಂ ಬಳಸೆ ಕೀರ್ತಿವಲ್ಲೀಚಯಂ: **ಆದಿಪು**, ೩. ೫೭)

ಮೊಗಂ ಸೋಲ್ – [ಕ್ರಿ] ಮುಖ ಭಗ್ನಗೊಳ್ಳು (ಬಾಹುಬಲಿಯ ಸುರಕರಿಕರಾನುಕಾರಿಯಪ್ಪ ಬಾಹುಗಳಿಂದಂ ತುಳ್ಕಿದ ನೀರ್ಗೆ ಮೊಗಮನೊಡ್ಡಿ ಮೊಗಂ ಸೋಲ್ವುದುಂ: **ಆದಿಪು**, ೧೪. ೧೦೮ ವ)

ಮೊಗಪೆ – [ನಾ] ರಾಟಾಳದಲ್ಲಿ ನಿರನ್ನು ಮೇಲೆತ್ತುವ ಪಾತ್ರೆ (ಖಳಸಂಸೃತಿಯೆಂಬುದೊಂದು ಱಾಟಣದೊಳಗಮ್ಮ ನೀಂ ಮೊಗಪೆಯಾಗದೆ ತಾಳ್ದಪವರ್ಗಮಾರ್ಗಮಂ: **ಆದಿಪು**, ೩. ೭೧)

ಮೊಗರಾಗ – [ನಾ] ಮುಖಕಾಂತಿ (ಬರವಿನೊಳಾದೊಂದು ಮೊಗರಾಗಮೆ ಸಂತಸವಾತನಂತನಕ್ಷರಂ ಅಱಿಪುತ್ತುಮಿರ್ಪಿನೆಗಂ: **ಆದಿಪು**, ೩. ೮೫)

ಮೊಗವಡ – [ನಾ] ಮುಖವಾಡ (ಆಗಳೇಱಿಸಿದ ಬಿಸುಗೆಗಳುಂ ಇಕ್ಕಿದ ಲೋಹವಕ್ಕರೆಗಳುಂ ಉರ್ಚಿದ ಮೊಗವಡಂಗಳುಂ ಕಟ್ಟಿದ ಪಟಯಿಗೆಗಳುಂ: **ಪಂಪಭಾ**, ೧೦. ೫೧ ವ)

ಮೊಗಸು – [ಕ್ರಿ] ಆವರಿಸು (ಸುಯ್ಯ ಪರಿಮಳದ ಪೊದಳ್ಕೆಗೆ ಸೋಲ್ತು ಸೂಟಿಸೂಟಿದೆ ಮೊಗಸಿದುವೆರಡೆಡೆಗಂ ಅಲಸದೆ ಅಳಿಗಳ ಬಳಗಂ: **ಆದಿಪು**, ೧೦. ೩೧); [ಕ್ರಿ] ಹಿಂದಿರುಗು (ಅಟ್ಟಿಱಿನೊಳ್ ಅಯೋಧ್ಯೆಗೆ ಮೊಗಸಿದನಱಿಕೆಯ ಪಱಿ ಪಲವುಮೆಸೆಯೆ ಭರತಮಹೀಶಂ: **ಆದಿಪು**, ೧೪. ೨); [ಕ್ರಿ] ಮುತ್ತಿಕೊ (ಸುರಿವ ಸರಯಿಯರಲ ಮುಗುಳ್ಗೆ ಮೊಗಸಿದಳಿ ಕುಳಂಗಳಿಂ ತೊದಲ್ವ ಶಿಶುಶುಕಂಗಳಿಂ: **ಪಂಪಭಾ**, ೧. ೫೮)

ಮೊಗೆ – [ಕ್ರಿ] ತುಂಬಿಕೊ, ಸೆರೆಹಿಡಿ (ಚಾರುವೀರಭಟಕೋಟಿಗೆ ರಾಗರಸಂ ಪೊದಳ್ದು ತುಳ್ಕುತ್ತಿರೆ ಬಂದು ಮೊಗೆದಂ ವಿಭು ಗೋಕುಲಮಂ ವಿರಾಟನಾ: **ಪಂಪಭಾ**, ೮. ೯೨)

ಮೊಗ್ಗು – [ಕ್ರಿ] ಸಾಧ್ಯ, ಸುಲಭ (ಶಕ್ತಿಯನದಂ ಕರ್ಣಂ ನರಂಗೆಂದು ಬಯ್ತು ಅವಂ ಇಂದೆ ಅಟಿವೆಯ್ದೆ ವಂದೊಡೆ ಅದಱಿಂದಾತನಂ ಕೊಂದಂ ಇನ್ನಿವನಂ ಕೊಲ್ವುದು ಮೊಗ್ಗು: **ಪಂಪಭಾ**, ೧೨. ೧೬)

ಮೊಗ್ಗೇ – [ಅ] [ಮೊಗ್ಗು+ಏ] ಸಾಧ್ಯವೇ, ಸುಲಭವೇ ? (ಗಾಳು ಗೊರವಂ ತಗುಳ್ಚಿ ಪಳಾಳಮಂ ಏನೊಂದನಪ್ಪೊಡಂ ಗಟಿಪಿದೊಡೆ ಆ ಬೇಳುನುಡಿ ಕೇಳ್ದು ಕೆಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ: **ಪಂಪಭಾ**, ೬. ೨೪)

ಮೊಚ್ಚೆ – [ನಾ] ಪಾದರಕ್ಷೆ (ಪೆಱಗೇಱಿ ಬರ್ಪ ಕನ್ನಡಿವಿಡಿದಾಕೆ ಚಿನ್ನದ ಸವಂಗಂ ಅಪೂರ್ವದ ಮೊಚ್ಚೆಯಂ ಪವಣ್ಬಡೆದ ಸುವರ್ಣಪಾರಿವದ ಕುಪ್ಪಸಮೊಪ್ಪೆ: **ಪಂಪಭಾ**, ೯. ೧೦೩)

ಮೊಟ್ಟನಪ್ಪಿನಂ – [ಅ] ಮಟ್ಟಸವಾಗುತ್ತಿರಲು, ನೆಲಸಮವಾಗುತ್ತಿರಲು (ದೇವಕಿನ್ನರಪನ್ನಗಾವಳಿ ಮೊಟ್ಟನಪ್ಪಿನಂ ಎಚ್ಚು ಕೊಂದು ಏವರ್ ಎಂದು ಉಱಿದಿರ್ದಂ ಒರ್ವಂ: **ಪಂಪಭಾ**, ೫. ೯೪)

ಮೊಟ್ಟನಾಗು – [ಕ್ರಿ] ಕಿರಿದಾಗು, ಕುಗ್ಗು (ದೆಸೆಗಳ್ ಪೆರ್ಚದೆ ಮೊಟ್ಟನಾದುವಗಲಕ್ಕೆಂಬನ್ನೆಗಂ .. .. ಅದ್ರೀಂದ್ರಂಗಳಂ ತಂದು ಕೀಲಿಸಿದಂ ನಿಶ್ಚಳಮಪ್ಪಿನಂ: **ಆದಿಪು**, ೧೫. ೫೦)

ಮೊತ್ತಮೊದಲ್ – [ಅ] ಎಲ್ಲಕ್ಕಿಂತ ಮೊದಲು (ನಿರಂತರಂ ಸುಖವ್ಯಾಪ್ತಿಗೆ ನೀನೆ ಮೊತ್ತಮೊದಲಾಗರಿಕೇಸರಿ ಲೋಕಮುಳ್ಳಿನಂ: **ಪಂಪಭಾ**, ೧. ೧೪೯)

ಮೊದಲ್ – [ನಾ] ನೆಲೆ (ಚದುರ ಪುಟ್ಟಿದನೆಲ್ಲಿದನೆಲ್ಲಿದಂ ವಿನೋದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದಂ: **ಆದಿಪು**, ೩. ೧೫); [ನಾ] ಆರಂಭ, ನಾಂದಿ (ಬಲಸ್ಥನೊಳ್ ಬಲಮನೆ ಪೂಣ್ದುದುಂ ಪರಿಭವಕ್ಕೆ ಮೊದಲ್ ಸುರಸೈನ್ಯನಾಯಕಾ: **ಆದಿಪು**, ೧೨. ೧೦೩); [ನಾ] ಮರದ ಬುಡ (ಒಂದು ದಿವಸಂ ಮರಗೆರಸಿಯಾಡಲೆಂದು ಪನ್ನಿರ್ಮತ್ತರ್ ಪರ್ವಿದಾಲದ ಮರದ ಮೊದಲ್ಗೆ ವಂದು: **ಪಂಪಭಾ**, ೨. ೩೦ ವ); [ನಾ] ಅಗ್ರಭಾಗ (ಅಂತು ಒರ್ವರೊರ್ವರ ಕಿಱುಕುಣಿಕೆಗಳಂ ಪಿಡಿದು ರತಿಯುಂ ಕಾಮದೇವನುಂ ಬರ್ಪಂತೆ ಬೇಳ್ವೆಯ ಕೊಂಡದ ಮೊದಲ್ಗೆ ವಂದು: **ಪಂಪಭಾ**, ೩. ೭೫ ವ)

ಮೊದಲಾಗು – [ಕ್ರಿ] ಆರಂಭಗೊಳ್ಳು (ರಾಜ್ಯಲಕ್ಷ್ಮಿ ಮೊಱೆಯಲ್ತೆನಗೆ ಅಂತದು ಪೆಂಡಿರೆಂಬರೊಳ್ ಕೂಡುವನಲ್ಲೆನಿಂದು ಮೊದಲಾಗಿರೆ ನಿಕ್ಕುವಂ: **ಪಂಪಭಾ**, ೧. ೭೩)

ಮೊದಲಿಗೆ – [ನಾ] ಆರಂಭಿಸಿದವಳು (ದೇವಲೋಕದೊಳಿನಿತಾನುಂ ಕಾಲಮನನುಭವಿಸಿದನುಭವಕ್ಕೆ ಮೊದಲಿಗೆಯೆನಿಸಿದಾ ಸ್ವಯಂಪ್ರಭೆಯಂ ನೆನೆನೆನೆದು: **ಆದಿಪು**, ೩. ೧೧ ವ)

ಮೊದಲಿಡು – [ಕ್ರಿ] ಮೊದಲಿಕ್ಕು, ಆರಂಭಿಸು (ಮೊದಲಿಟ್ಟಂ ಕೊಲಲೆಂದು ಕೌರವರಂ . .. ಪರಿತಂದು ತಾಗಿ ತಗರ್ದಂ ಗಂಗಾಸುತಂ ಭೀಮನಂ: **ಪಂಪಭಾ**, ೧೦. ೧೦)

ಮೊದಲುರ – [ನಾ] ಎದೆಯ ಕೆಳಭಾಗ (ಪುಗಿಲ ಪುಲ್ಲೆಯ ಮೊದಲ ರವಮುಮಂ ಪೆಱಗಣ ಪುಲ್ಲೆಯ ನಡುವುಮಂ ಅಯ್ದಱೊಳ್ ಮೂಱುಮಂ ಮೂಱಱೊಳ್ ಎರಡುಮಂ ಎರಡಱೊಳ್ ಒಂದುಮಂ ಎಚ್ಚು: **ಪಂಪಭಾ**, ೫. ೪೭ ವ)

ಮೊದಲ್ಗಿಡು – [ಕ್ರಿ] ಬೇರು[ಸಹಿತ] ಹಾಳಾಗು (ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ಮೊದಲ್ಗಿಡೆ ಮುನ್ನಂ ಏಕವಿಂಶತಿ ಪರಿಸಂಖ್ಯೆಯಿಂ ತವಿಸಿ: **ಪಂಪಭಾ**, ೨. ೪೫); [ಕ್ರಿ] ನಿಂತುಹೋಗು (ಘನಾಗಮಂ ಮೊದಲ್ಗಿಡೆ ಶರದಾಗಮಂ ನೆಱೆಯೆ ಪರ್ಬೆ ಸಮಸ್ತಮಹೀವಿಭಾಗಮಂ: **ಪಂಪಭಾ**, ೭. ೬೯); [ಕ್ರಿ] ಕಡಿಮೆಯಾಗು, ಕ್ಷೀಣಿಸು (ತುಂಬಿಯ ಗಾವರಂಗಳಂ ಗೆಡೆಗೊಳೆ ಚಂದ್ರಿಕಾಪ್ರಭೆ ಮೊದಲ್ಗಿಡೆ ನಾಡೆ ವಿತರ್ಕದಿಂ ಬೆರಲ್ಮಿಡಿದು ಗುಣಾರ್ಣವಂ ನೆಱೆಯೆ ನಿಟ್ಟಿಸಿದಂ ಬೆಳಗಪ್ಪ ಜಾವಮಂ **ಪಂಪಭಾ**, ೪. ೧೧೦)

ಮೊನೆ – [ನಾ] ಯುದ್ಧ (ಅಲರಂಬಿನ ಮೊನೆಗೆ ಪೂಣೆ ಪೊಕ್ಕು ಪಕ್ಕಾಗಿರೆ ಪೊಟಿಲೊಳಗಣಿಂ ಬಂದು ದಿವಿಜೇಂದ್ರ ವಿಳಾಸೋಪಹಾಸಿತಮಪ್ಪ ನಿಜಮಂದಿರಮಂ ಪುಗೆ: **ಪಂಪಭಾ**, ೪. ೩೮ ವ); [ನಾ] ಸೈನ್ಯದ ಮುಂಭಾಗ (ತನ್ನ ಪೊನ್ನ ರಥದೊಳ್ ನೆಲಸಿರ್ದು ವಿಳಾಸದಿಂದೆ ಭೀಮನ ಮೊನೆಯಂ ವನೀಪಕರಂ ಆರಯಲಟ್ಟಿ: **ಪಂಪಭಾ**, ೧೦. ೫೮); [ನಾ] ತುದಿ (ಬೇಱೊಂದು ಮೊನೆಯೊಳ್ ಕಾದುತ್ತಿರ್ದ ಅಶ್ವತ್ಥಾಮಂ ಕಂಡು ಮುಟ್ಟೆವರ್ಪನ್ನೆಗಂ: **ಪಂಪಭಾ**, ೧೨. ೩೦ ವ)

ಮೊನೆಗಾಱ – [ನಾ] ಯುದ್ಧಪ್ರವೀಣ (ಅರಸಿಯರಂ ಅಣುಗರಂ ಬೆಟ್ಟಿರುಮಂ ಮೊನೆಗಾಱರಂ ಪ್ರಗೀತರಂ ಇಂಬಾಗಿರೆ ಚೌಪಳಿಗೆಗಳೊಳ್ ಕುಳ್ಳಿರಿಸಿದರ್ ಪಡನೆಸೆಯೆ ನೆರೆದ ಪುರಜನಸಹಿತಂ: **ಪಂಪಭಾ**, ೨. ೬೭)

ಮೊನೆಯಂಬು – [ನಾ] ಒಂದು ಬಗೆಯ ಬಾಣ, ಮೊನಚಾದ ಬಾಣ ? (ಗೆಲೆಯಂಬು ಕಕ್ಕಂಬು ಕೆಲ್ಲಂಬು ಮೊನೆಯಂಬು ತೀವೆ ಕಣ್ಣಂ: **ಪಂಪಭಾ,** ೧೩. ೩೯)

ಮೊಮ್ಮ – [ನಾ] ಮೊಮ್ಮಗ (ನವನಿಧಿವಲ್ಲಭಂ ಆನತದಿವಿಜಗಣಂ ನೆಗಟ್ದ ನಾಭಿರಾಜನ ಮೊಮ್ಮಂ: **ಆದಿಪು,** ೧೩. ೭೩)

ಮೊರೆ – [ಕ್ರಿ] ಅಬ್ಬರಿಸು (ಮೊರೆದೆಱಗಿ ಕೊಳ್ವ ಮಱಿ ಭೋರ್ಗರೆದೂದುವ ಗಾಳಿ ಸಿಡಿದು ಪೊಯ್ವ ಸಿಡಿಲ್: **ಆದಿಪು,** ೬. ૩೨); [ಕ್ರಿ] ಝೇಂಕರಿಸು (ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ ಪಣ್ತೆಱಗಿದ ತದಾಶ್ರಮದ ತರುಗಳ ಮೇಗಿರ್ದು ಪುಗಿಲ್ ಪುಗಿಲೆಂದಿತ್ತ ಬನ್ನಿಮಿರಿಮೆಂಬ ಪೊಂಬಣ್ಣದ ಕೋಗಿಲೆಗಳುಮಂ: **ಪಂಪಭಾ,** ೧. ೧೧೫ ವ); [ಕ್ರಿ] ಸದ್ದುಮಾಡು (ಒಣಗಿದುದೊಂದು ಪೆರ್ವಿದಿರ ಪೆರ್ವೊದಱೆಂ ಮೊರೆದು ಉರ್ವಿದ ಆಶುಶುಕ್ಷಿಣಿಯವೊಲ್: **ಪಂಪಭಾ,** ೧೧. ೯೪)

ಮೊರ್ಮೊರಂ – [ಅ] ಚಟಪಟ, ಮರಮರ ಎಂಬ ಅನುಕರಣ ಶಬ್ದ (ಕಾಯ್ದ ಕಾವಲಿಗಳೊಳ್ ಮೊರ್ಮರನಾಗೆ ತಾಳಿಸುವರುಂ: **ಆದಿಪು,** ೫. ೮೫ ವ)

ಮೊಲಗಟ್ಟಿಲೆ – [ನಾ] ಭ್ರಮೆ, ಭ್ರಾಂತಿ (ನಿನ್ನ ಮೊಲಗಟ್ಟಿಲೆಗಾಂ ಬೆಱಗಾದೆನಿಂದು ಪೇೞ್ ಈಗಳೊ ಬಯ್ಗೆಯೊ ಪೋಗಸೊ ನಾಳೆಯೊ ನಾಡಿದೊ ನಿನ್ನ ಜೀವಿತಂ: **ಆದಿಪು,** ೩. ೬೩); [ನಾ] ಚಂದ್ರನ ಮೊಲದ ಗುರುತಿನಿಂದಾಗುವ ಕತ್ತಲೆ (ರಣಗಟ್ಟಿಲೆಯ ಮೊಲಗಟ್ಟಿಲೆಯಂ ಮಾಡೆ ನೇಸಱ್ ಪಟ್ಟುತ್ತು ವಿಜಯಂ ಸೋಲ್ತನೆಂದು ಕೌರವಬಲಂ ಆರ್ದೊಡೆ: **ಪಂಪಭಾ,** ೧೧. ೧೪೮ ವ)

ಮೊಲೆವಾಲ್ – [ಕ್ರಿ] ತಾಯಿಯ ಎದೆಹಾಲು (ಮದಮನಾಳ್ದ ಅವಿವೇಕತೆಯಿಂದಮಲ್ತೆ ತೊಟ್ಟಿನ ಮೊಲೆವಾಲನುಂಡ ಗುಣಂ ಇಂತಿವನಾರ್ ಕಿಡಿಪರ್ ನರೇಂದ್ರರೊಳ್: **ಪಂಪಭಾ,** ೧೨. ೯೩)

ಮೊಲ್ಲೆ – [ನಾ] ಮೊಲ್ಲೆ ಎಂಬ ಹೂ (ಚೆಲ್ವಿನ ಮೊಲ್ಲೆ ಮುಗುಳ್ಗಳನಿಳಿಸಿರೆ ಗುಣಾರ್ಣವಂ ಸೊಗಯಿಸಿದಂ: **ಪಂಪಭಾ,** ೨. ೯)

ಮೊಸರಣ್ಕೆ – [ನಾ] ಕಳಶಕ್ಕೆ ಮಾಡುವ ಮೊಸರ ಲೇಪನ (ರನ್ದ ಕನ್ನಡಿವೆರಸು ಸರ್ವಧಾನ್ಯದ ನಡುವಿರೆ ಮೊಸರಣ್ಕೆವೆರಸಿದ ಎಳದಳಿರ್ಗಳಸಂ: **ಆದಿಪು,** ೪. ೩೩)

ಮೊಳೆ – [ಕ್ರಿ] ಮೊಳಕೆಯೊಡೆ (ತಳತಳಿಸಿ ಬೆಳಗೆ ಬೆಳಗನೆ ಮೊಳೆತಂತೆ ಒಪ್ಪಿದುವು ತೊಳಪ ರನ್ನದ ಕೇರ್ಗಳ್: **ಆದಿಪು,** ೪. ૩೪); [ನಾ] ಮೊಳಕೆ (ತೇಜೋನಿಳಯಂ ಬೆಳಗಿದಂ ಅಜೆವಿನ ಬೆಳಗಿನ ಮೊಳೆ ಮೊಳೆತು ಬೆಳೆವುದೊಂದಚ್ಚರಿಯೇ: **ಆದಿಪು,** ೭. ೩೩); [ಕ್ರಿ] ಹದಕ್ಕೆ ಬರು (ಬಳಸುವ ಬೇಟದೊಳ್ ಮೊಳೆತ ಗೊಟ್ಟಿಯೊಳ್ ಈರೆಲೆವೋದ ಲುಂದಿನೊಳ್ ಬಳೆದ ವಿಯೋಗದೊಳ್: **ಆದಿಪು,** ೧೨. ೧೯)

ಮೊಳೆವುಲ್ – [ನಾ] ಎಳೆ ಹುಲ್ಲು (ಕರಿಯ ಮುಗಿಲ್ಗಳಿಂ ಗಗನಮಂಡಳಮೊಪ್ಪಿರೆ ಸೋಗೆಯಿಂ ವನಾಂತರಂ ಎಸೆದು ಒಪ್ಪೆ ತೋರ್ಪ ಮೊಳೆವುಲ್ಗಳಿನೀ ಧರಣೀವಿಭಾಗಂ ಒಪ್ಪಿರೆ: **ಪಂಪಭಾ,** ೭. ೨೩)

ಮೊಱಡು – [ನಾ] ದಿಣ್ಣೆ (ಮಱಿ ಕದಡಿ ಬರ್ಪ ತೊಱಿ ಬೆಟ್ಟು ತೆವರ್ ಮೊಱಡುಪಜಲಧಿಗಳೆನೆ ಜನಮಜೆಯಜೆಯೆ ದಲ್ ಉದ್ದಬಿದ್ದಮಾಯ್ತವನಿತಳಂ: **ಆದಿಪು,** ೬. ೬೨)

ಮೊಱಿ – [ನಾ] ಶರಣ್ಯ ವಸ್ತು (ದುರ್ವ್ಯಸನಿಯ ಮಾಡಿದೋದೆ ನಿಮಗಾಗಮಮಾಗಿರೆ ಸತ್ಯಮಂ ಪೊಸಯಿಸಿ ಜೀವನಿಲ್ಲ ಮೊಱಿಯಿಲ್ಲ ಅಱಿನಿಲ್ಲ ಪರತ್ರೆಯಿಲ್ಲ: **ಆದಿಪು,** ೨. ೧೧); [ಕ್ರಿ] ಶರಣು ಕಾಪಾಡು (ಕಾಯ್ದು ಕೆಮ್ಮಗೆ ಬಱಿಸಂದು ಕೊಂದಪನಕಾರಣದಿಂ ಮೊಱಿಯೋ ಮನೋಭವಾ: **ಆದಿಪು,** ೧೨. ૩૩); [ನಾ] ಸಂಬಂಧ (ಎನಗೆ ವೀರಶ್ರೀಯುಂ ಕೀರ್ತಿಶ್ರೀಯುಂ ಅಲ್ಲದೆ ಉೞಿದ ಪೆಂಡಿರ್ ಮೊಱಿಯಲ್ಲ ನೀವಿದನೇಕಾಗ್ರಹಂಗೆಯ್ವಿರಿ: **ಪಂಪಭಾ,** ೧. ೭೮ ವ);

ಮೊಱಿಯಿಡು – [ನಾ] ಆಕ್ರಂದನ ಮಾಡು (ರೌದ್ರಶರದ ದೊಣೆಗೆ ಕೆಯ್ಯಂ ನೀಡಿದಾಗಳ್ .. .. ಸುರರ್ ಮೊಱಿಯಿಟ್ಟರ್: **ಪಂಪಭಾ,** ೧೩. ೧೯೨)

ಮೊೞ – [ನಾ] ಮೊಳ, ಒಂದೂವರೆ ಅಡಿಯಷ್ಟು ಉದ್ದದ ಅಳತೆ (ದ್ವಾವಿಂಶತ್ಯಂಬುಧಿಮಿತಜೀವಿತಮುಂ ಮೂಱು ಮೊೞದ ದಿವ್ಯಾಂಗಮುಂ ಆ ದೇವಂಗಾಯ್ತು: **ಆದಿಪು,** ೬. ೧೭)

ಮೊೞಗು – [ಕ್ರಿ] ಗರ್ಜಿಸು (ಕಾಳಾಂತ ಪವನಹತಿ ಕಲ್ಲೋಳವಿಳ ಜಳಧಿನಿನದಮೋ ನಿರ್ಘಾತಾಭೀಳತರರಭಸಮೋ ಲಯಕಾಳಾಂಬುದಘೋಷಮೋ ನೆಲಂ ಮೊೞಗಿದುದೋ: **ಆದಿಪು,** ೧೨. ೯೧); [ನಾ] ಗುಡುಗು (ಸಿಡಿಲಿಂ ಮಿಂಚಿ ಮೊೞಗಿಂ ಪಡೆಗುಳ್ಕಂ ಪಡೆವಹೀಂದ್ರರೆರ್ದೆಗಿಡುವಿನೆಗಂ: **ಆದಿಪು,** ೧೩. ೬೨); [ಕ್ರಿ] ಕೂಗು (ಪ್ರತಿಮೆಗಳಟ್ಟು ಮೊೞಗಿದುದು ಅತಿರಭಸದೆ ಧಾತ್ರಿ ದೆಸೆಗಳುರಿದುವು ಭೂತಪ್ರತತಿಗಳಾಡಿದುವು ಒಳಜೆದವು ಅ'ತಿ ರಮ್ಯಸ್ಥಾನದೊಳ್ ಶಿವಾನಿವಹಂಗಳ್: **ಪಂಪಭಾ,** ೧. ೧૩૩); [ಕ್ರಿ] ಶಬ್ದಮಾಡು (ಆಗಳ್ ಕುಂಭಸಂಭವನುಲಿದ ಜನರ ಕಳಕಳರವಮುಮಂ ಮೊೞಗುವ ಪಱಿಗಳುಮಂ ಬಾರಿಸಿ: **ಪಂಪಭಾ,** ೨. ೭೪ ವ); [ನಾ] ವಾದ್ಯಘೋಷ (ಬದ್ದವಣದ ಪಱಿಗಳ್ ಕಿವಿ ಸದ್ದಂಗಿಡೆ ಮೊೞಗೆ ದೇವದುಂದುಭಿರವಂ ಒಂದು ಉದ್ಧಾನಿ ನೆಗೞಿ ಮುಗುಳ ಅಲರ ಒದ್ದೆ ಕರಂ ಸಿದ್ಧಮಾದುದು ಅಂಬರತಲದೊಳ್: **ಪಂಪಭಾ,** ೧೨. ೨೧೮)

ಮೊಟ್ಗು – [ಕ್ರಿ] ಬಾಗು (ಅಟ್ಟಿದ ಬಿಲ್ವಡೆ ಮಾಣದೆ ತಗ್ಗಿದ ರಥಂ ಎಯ್ದೆ ಬಗಿದ ಪುಣ್ಗಳ ಪೊಱಿಯಿಂ ಮೊಟ್ಗಿದ ಕರಿಘಟೆ: **ಪಂಪಭಾ,** ೧೧. ೬೪):

ಮೋಕ್ಷ – [ನಾ] [ಜೈನ] 'ಸಪ್ತತತ್ವ'ಗಳಲ್ಲಿ ಒಂದು, ಎಲ್ಲದರಿಂದ ಬಿಡುಗಡೆ ಹೊಂದಿ ಆತ್ಮ ಪರಿಶುದ್ಧಗೊಳ್ಳುವುದು (ಮೂಲೋತ್ತರಾದಿ ಭೇದಭಿನ್ನ ಕರ್ಮಪ್ರಕೃತಿಗಳ ನಿರ್ಮೂಲೋಚ್ಛಿತ್ತಿ ಮೋಕ್ಷಮೆಂಬುದು: **ಆದಿಪು,** ೧೦. ೬೩ ವ)

ಮೋಕ್ಷಪ್ರಾಸಾದ – [ನಾ] [ಜೈನ] ಮುಕ್ತಿಯ ಸ್ಥಿತಿ (ಮೋಕ್ಷಪ್ರಾಸಾದಾರೋಹಣ ನಿಶ್ರೇಣೀಭೂತ ಕ್ಷಪಕ ಶ್ರೇಣಿಪ್ರಾಯೋಗ್ಯಾಧಃಪ್ರವೃತ್ತಿಕರಣಪರಿಣತಂ ಅಪೂರ್ವಕರಣ ಕ್ಷಪಕಂ ಪ್ರಥಮಶುಕ್ಲಧ್ಯಾನಪರಿಣತನಾಗಿರ್ದ: **ಆದಿಪು,** ೧೦. ೧೪ ವ)

ಮೋಕ್ಷಮಾರ್ಗ – [ನಾ] ತಪಸ್ಸಿನ ದೀಕ್ಷೆ (ವಿಂಶತಿಸಹಸ್ರ ಸಮಾಜಂಬೆರಸು ಮಂದರಸ್ಥವಿರರೆಂಬ ಮುಮುಕ್ಷುಗಳ ಸಮಕ್ಷದೊಳ್ ಮೋಕ್ಷಮಾರ್ಗಮಂ ಕೈಕೊಂಡು: **ಆದಿಪು**, ೩. ೭೨ ವ)

ಮೋಘ – [ನಾ] ವ್ಯರ್ಥ (ಮಚ್ಚರಮುಂ ಮೋಘಂ ಎಡಂಬಡುಂ ಕಲುಷಮುಂ ಮುನ್ನುಳ್ಳುದು .. .. ನಿಷ್ಕಾರಣಂ ಕಾಯ್ವರೇಂ: **ಪಂಪಭಾ**, ೭. ೩೫)

ಮೋದ – [ನಾ] [ಜೈನ] ಐವತ್ತಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು (ಆದಾನ ಪ್ರೀತಿ ಸುಪ್ರೀತಿ ಧೃತಿ ಮೋದ .. .. ಎಂಬ ಅಯ್ವತ್ತೂಱು .. .. ಗರ್ಭಾನ್ವಯಕ್ರಿಯೆಗಳುಂ: **ಅದಿಪು**, ೧೫. ೧೫ ವ)

ಮೋದಕ – [ನಾ] ಕಡುಬು (ಅತ್ಯಂತಕೋಮಳ ತಾಳುತಳ ಸಂಘಟ್ಟಮಾತ್ರ ಕ್ಷೋದನೀಯ ಮೋದಕಮುಮಂ: **ಆದಿಪು**, ೧೧. ೨೬ ವ)

ಮೋದು – [ಕ್ರಿ] ತುಳಿ (ಫಲವ್ರಾತದಿಂ ನೆಲನಂ ಮೋದುವ ಮಾತುಳುಂಗಮೆಸೆಗುಂ ವಿದ್ಯಾಧರೋದ್ಯಾನದೊಳ್: **ಆದಿಪು**, ೧. ೬೭); [ಕ್ರಿ] ಒದೆ (ಆದಿತ್ಯನನಿಳಿಪ ತೇಜರಿರ್ ಪಾರ್ವನ ಕಾಲ್ ಮೋದೆ ನಡುತಲೆಯಲಿರ್ಪುದುಂ ಆದುದು ನಿಮಗೆಂದು ನುಡಿದು ಕಾಯ್ವಿನೊಳೊದೆದಂ: **ಪಂಪಭಾ**, ೨. ೬೪); [ಕ್ರಿ] ಹೊಡೆ (ಗೆಡೆವೆಚ್ಚೆರ್ವರ್ ಮನಗೊಂಡು ಒಡನೊಡನೋರಂತು ಮೋದಲೆಂದಿರ್ದೆಡೆಯೊಳ್ ಗುರು ತನ್ನ ಮಗನಂ ಎಡೆವುಗವೇಟ್ದಿಂ: **ಪಂಪಭಾ**, ೨. ೭೩)

ಮೋದುವೆಱು – [ಕ್ರಿ] ಪೆಟ್ಟು ತಿನ್ನು (ನೂಪುರರವವಿಳಸತ್ ವಾಮಪಾದಪ್ರಹಾರಕ್ಕಿದಱೊಳ್ ಪಕ್ಕಾಗಿ ಗೋತ್ರಸ್ಖಲನೆ ನೆಗೞ್ ಪೂಮಾಲೆಯಿಂ ಮೋದುವೆತ್ತೆಂ: **ಆದಿಪು**, ೪. ೯)

ಮೋಪು – [ನಾ] ಪ್ರೀತಿ (ಮತ್ತೊರ್ವ ಬೇಟಕಾತಿ ತಾಯ ಕಣ್ಣಂ ಬಂಚಿಸಿ ತನ್ನ ಮೋಪಿನಾಕೆಯ ಮನೆಗೆ ಪೋಪ ಬೇಟದಾಣ್ಮನಂ ಪಿಡಿದು: **ಪಂಪಭಾ**, ೪. ೯೮ ವ); [ನಾ] ಹೋರಾಡುವ ತೀಟೆ (ಅಂತು ಮುಳಿಸಿನ ಮೋಪಿನ ಗಂಡಮಚ್ಚರದ ಮೆಚ್ಚವಣಿಗೆಯ ಅಂಕಕಾಱರ ಎಕ್ಕತುಳಕ್ಕೆಕ್ಕೆಯಿಂ ಸೂಟ್ಸೇಱಿಱೆವಂತೆ ಒರ್ವರೊರ್ವರೊಳ್ ಕಾದೆ: **ಪಂಪಭಾ**, ೧೨. ೭೬ ವ); [ನಾ] ಈರ್ಷ್ಯೆ (ಅಂತು ಮುಳಿಸಿನ ಮೋಪಿನ ಗಂಡಮಚ್ಚರದ ಮೆಚ್ಚವಣಿಗೆಯ ಅಂಕಕಾಱರ್ ಎಕ್ಕತುಳಕ್ಕೆ ಎಕ್ಕೆಯಿಂ ಸೂಟ್ಸೇಱಿಱೆವಂತೆ ಒರ್ವರ್ ಒರ್ವರೊಳ್ ಕಾದೆ: **ಪಂಪಭಾ**, ೧೨. ೭೬ ವ)

ಮೋಹತಮಃಪಟ – [ನಾ] ಮೋಹವೆಂಬ ಕತ್ತಲಿಂದ ಕಟ್ಟಿಹಾಕುವ (ಭವದೀಯ ರೂಪಲಂಪಟವಿಟರಂ ಮರುಳ್ಗೊಳಿಸಿತು ಉತ್ಕಟ ಮೋಹತಮಃಪಟಂ ಪಟಂ: **ಆದಿಪು**, ೩. ೯೦)

ಮೋಹನಯಂತ್ರ – [ನಾ] ಸಮ್ಮೋಹನಗೊಳಿಸುವ ತಾಯಿತ (ಮನಸಿಜನ ಅಂಗನಾಜನವಶೀಕರಣ ಔಷಧಂ ಅಂಗಜನ್ಮನಂಬಿನ ಮದಶಕ್ತಿ ಮೋಹನಯಂತ್ರಂ ಇದಪ್ಪುದು: **ಆದಿಪು**, ೪. ೪೧)

ಮೋಹನೀಯಕರ್ಮ – [ನಾ] [ಜೈನ] ಆತ್ಮನನ್ನು ಬಂಧಿಸುವ ಎಂಟು ಮೂಲಕರ್ಮಗಳಲ್ಲಿ ಒಂದು (ಬೞಿಯಂ ಮೋಹನೀಯ ಕರ್ಮೋಪಶಮದೊಳ್ ವಿಶುದ್ಧಾತಿಶಯ ವಿಶೇಷದಿಂ ಉಪಶಮಶ್ರೇಣ್ಯಾರೋಹಣಂಗೆಯ್ದು: **ಆದಿಪು**, ೬. ೩೩ ವ), ನೋಡಿ **'ಕರ್ಮ'**

ಮೋಹಿಸು – [ಕ್ರಿ] ಆಕರ್ಷಣೆಯುಂಟುಮಾಡು (ನೀಲಾಂಜನೆ ತನ್ನಾಟಮನೊಱಲ್ದು ನೋಡುವ ನೋಟಕರಂ ತವದ ಮಾಟಕ್ಕಿಯಿಂ ಮೋಹಿಸಿದಳ್: **ಆದಿಪು**, ೯. ೩೮); [ಕ್ರಿ] ಪ್ರಜ್ಞೆ ತಪ್ಪಿಸು (ಒರ್ಮೆಯೆ ವಿಶ್ವರೂಪಮಂ ತೋಱಿದಂ ಇರ್ದರಂ ನೆಱೆಯೆ ಮೋಹಿಸಿ ವೈಷ್ಣವದಿಂ ಮುರಾಂತಕಂ: **ಪಂಪಭಾ**, ೯. ೬೦)

ಮೌಕ್ತಿಕ – [ನಾ] ನವರತ್ನಗಳಲ್ಲಿ ಒಂದು, ಮುತ್ತು (ಮಣಿಮೌಕ್ತಿಕ ನೀಳಸ್ಥೂಳ ಶಿಲಾಪ್ರವಿಭಾಸಿತ .. .. ನಿರ್ಗತ ಮಂತ್ರಪೂತಾಂಗಮಂ ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ**, ೧. ೧೧೫)

ಮೌಕ್ತಿಕದಾಮ – [ನಾ] ಮುತ್ತಿನ ಹಾರ (ಪರಸ್ಪರಸ್ಪರ್ಧಮಾನ ಪರಿಕ್ಷಿಪ್ತ ಮಲ್ಲಿಕಾಮುಕುಳ ಮುಕ್ತಾಫಳೋಪಶೋಭಿತದೊಳ್ ಇಂದ್ರನೀಲಮಣಿ ಕುಟ್ಟಿಮಸಂಕ್ರಾಂತ ಮೌಕ್ತಿಕದಾಮ ಅಭಿರಾಮದೊಳ್: **ಆದಿಪು**, ೮. ೬೭ ವ)

ಮೌನವ್ರತ – [ನಾ] ವ್ರತದಂತಹ [ಕಟ್ಟುನಿಟ್ಟಾದ] ಮೌನ (ಅನಿಬರುಂ ಇರ್ದರ್ ಮೌನವ್ರತದೆ ಗುಣಾರ್ಣವಂ ಆನೀವೆಂ ನಿಮ್ಮ ಬಯಸಿ ಬೇಟ್ಟುದನೆಂದಂ: **ಪಂಪಭಾ**, ೨. ೫೪)

ಮೌನಾಧ್ಯಯನವೃತ್ತತ್ವ – [ನಾ] [ಜೈನ] ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ಮೌನ ಶಾಸ್ತ್ರಾಭ್ಯಾಸ (ಮೌನಾಧ್ಯಯನವೃತ್ತತ್ವ .. .. ಅಗ್ರನಿರ್ವೃತಿ ಎಂಬ ಅಯ್ವತ್ತಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು**, ೧೫. ೧೫ ವ)

ಮೌರ್ವೀ – [ನಾ] ಬಿಲ್ಲಿನ ಹೆದೆ (ಸಮುದ್ಯತ್ ರಜತಗಿರಿ ತಟ ಸ್ಫಷ್ಟ ಸಂಶ್ಲಿಷ್ಟ ಮೌರ್ವೀನಿನದಂ ಪರ್ವಿತ್ತು ಅಕಾಂಡಪ್ರಳಯ ಘನಘಟಾಟೋಪ ಗಂಭೀರನಾದಂ: **ಪಂಪಭಾ**, ೧೨. ೧೩೭)

ಮೌಲ – [ನಾ] ರಾಜನ ಸೇವೆಯಲ್ಲಿರುವವನು (ಮೌಲ ಭೃತ್ಯ ಸುಹೃತ್ ಶ್ರೇಣಿ ಮಿತ್ರ ಅಟವಿಕ ತಂತ್ರಂಗಳ್ ಪಣ್ಣಿದಜಂತ್ರಂಗಳಂತೆ ಕಟಕುಟಮಾದುವು: **ಪಂಪಭಾ**, ೧೩. ೨೦ ವ)

ಮೌಹೂರ್ತಿಕ – [ನಾ] ಜೋಯಿಸ (ಆತ್ಮೀಯ ಪುತ್ರೀ ವಿವಾಹೋತ್ಸವಕ್ಕೆ ಮೌಹೂರ್ತಿಕರಂ ಕರೆದು ದಿವಸಮಂ ಬೆಸಗೊಳ್ವುದುಂ: **ಆದಿಪು**, ೪. ೩೦ ವ)

ಮೌಳಿ – [ನಾ] ಕಿರೀಟ (ಶ್ರೀಪತಿಗೆ ಯುದ್ಧಮಲ್ಲ ಮಹೀಪತಿಗೆ ನೆಗೞ್ತೆ ಪುಟ್ಟೆ ಪುಟ್ಟಿದಂ ಅಖಿಳ ಕ್ಷ್ಮಾಪಾಲಮೌಳಿ ಮಣಿರಂಜಿತ ಕಿರಣಾಪಾಳಿತ ನಖಮಯೂಖರಂಜಿತ ಚರಣಂ: **ಪಂಪಭಾ**, ೧. ೧೮); [ನಾ] ತಲೆ (ಸಕಲ ಸಾಮಂತ ಮಕುಟಬದ್ಧ ಮೌಳಿಮಾಳಾವಿಗಳಿತ ಮಕುಟಕೋಟಿ ಸಂಘಟ್ಟನ ಉಚ್ಚಳಿತ ಮಣಿಶಲಾಕಾ ಸಂಕುಳಮುಂ: **ಪಂಪಭಾ**, ೧೩. ೫೧ ವ)

ಮ್ಲೇಚ್ಛಖಂಡ – ಮನುಷ್ಯಕ್ಷೇತ್ರದಲ್ಲಿ ಬರುವ ಆರ್ಯಖಂಡ ಮತ್ತು ಮ್ಲೇಚ್ಛಖಂಡ ಎಂಬ ಎರಡು ಖಂಡಗಳಲ್ಲಿ ಒಂದು (ತೆಱೆವ ತೆಱನಿಂತುಟಿಂತೀ ತೆಱದಿಂದೆ ತಮಿಸ್ರಗುಹೆಯ ವಜ್ರದ ಪಡಿಯಂ ತೆಱೆದದಱ ಬೆಂಕೆ ಪೋಪಿನಮೆಱಗಿಸು ನೀಂ ಮ್ಲೇಚ್ಛಖಂಡಮಂ ಪಡುವಣದಂ: **ಆದಿಪು**, ೧೩. ೩೫)

ಮ್ಲೇಚ್ಛರಾಜ – [ನಾ] ಅನಾರ್ಯರ ದೊರೆ (ವಸ್ತುವಾಹನಪುರಸ್ಸರಂ ಮ್ಲೇಚ್ಛರಾಜರಂ ಲಲಾಟಘೃಷ್ಟಭೂತಳರಂ ಮಾಡಿ: **ಆದಿಪು,** ೧೩. ೪೦ ವ)

ಯ

ಯಂತ್ರ – [ನಾ] ಉಪಕರಣ (ನಾರೀರೂಪದ ಯಂತ್ರಂ ಚಾರುತರಂ ನೋಡೆ ನೋಡೆ ಕರಗಿದುದು ಈ ಸಂಸಾರದನಿತ್ಯತೆ ಮನದೊಳ್ ಬೇರೂಜಿದುದು: **ಆದಿಪು,** ೯. ೪೪)

ಯಕ್ಷಕರ್ದಮ – [ನಾ] ಪರಿಮಳ, ಲೇಪನ ದ್ರವ್ಯ (ಕಾಳಾಗರು ಕಾಶ್ಮೀರ ಕಸ್ತೂರಿ ಕರ್ಪೂರ ಯಕ್ಷಕರ್ದಮಕ್ಷೋದದೊಳಂ ನದೀತರಂಗಂಗಳಂ ವಿಚಿತ್ರವರ್ಣಂ ಮಾಡಿ: **ಆದಿಪು,** ೧೧. ೧೩೯ ವ)

ಯಜನ – [ನಾ] ಯಾಗ ಮಾಡುವಿಕೆ (ಅಂತು ಭವಿಷ್ಯದ್ ದ್ವಿಜವರ್ಣಕೆ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ: **ಆದಿಪು,** ೮. ೭೩ ವ)

ಯಜಮಾನ – [ನಾ] ಎಂಟು ಮೂರ್ತಿಗಳ ಶಿವನ ಒಂದು ಮೂರ್ತಿ (ಗೋಕರ್ಣನಾಥನಂ ಗೌರೀನಾಥನಂ ಅವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ ಮೂರ್ತಿಯಂ ತ್ರೈಲೋಕ್ಯಸಂಗೀತಕೀರ್ತಿಯಂ ಕಂಡು ಕೆಯ್ಗಳಂ ಮುಗಿದು: **ಪಂಪಭಾ,** ೪. ೨೬ ವ); [ನಾ] ಯಾಗಕರ್ತ, ದೀಕ್ಷೆವಹಿಸಿ ಯಜ್ಞ ಮಾಡುವವನು (ಧರ್ಮಪುತ್ರಂ ಸಪತ್ನಿ ಯಜಮಾನನಾಗಿರ್ದಾಗಳ್: **ಪಂಪಭಾ,** ೬. ૩૩ ವ)

ಯಜ್ಞದ್ರವ್ಯ – [ನಾ] ಯಜ್ಞ ಮಾಡಲು ಬೇಕಾದ ಸಾಮಗ್ರಿ (ಬ್ರಹ್ಮರ್ಷಿಯರುಮಂ ಅರಸುಮಕ್ಕಳಂ ಎಡೆಯೆಜಿದಿರಿಸಿ ಯಜ್ಞದ್ರವ್ಯಂಗಳೆಲ್ಲಮಂ ನೆರಪಿ: **ಪಂಪಭಾ,** ೬. ૩૩ ವ)

ಯಜ್ಞವಿದ್ಯಾ[ದ್ಯೆ] – [ನಾ] ಯಜ್ಞದ ಬಗೆಗಿನ ತಿಳಿವಳಿಕೆ (ಚಾರುತರ ಯಜ್ಞವಿದ್ಯಾಪಾರಗರ ರವಂಗಳಿಂ .. .. ನೆಗಟ್ಟುದು ಆಹುತಿಧೂಮಮಂ: **ಪಂಪಭಾ,** ೬. ૩૪)

ಯಜ್ಞಸೇನ – [ನಾ] ದ್ರುಪದರಾಜ (ತನ್ನ ಬಲಮೆಲ್ಲಮಂ ಜವನಂತೆ ಒಕ್ಕಲಿಕ್ಕಿ ಕೊಲ್ವ ಕಳಶಕೇತನನಂ ಯಜ್ಞಸೇನಂ ಏನುಂ ಮಾಣದೆ: **ಪಂಪಭಾ.** ೧೨. ೨೧ ವ)

ಯಜ್ಞಸೇನತನೂಜೆ – [ನಾ] ದ್ರೌಪದಿ (ಆ ಮಾತೆಲ್ಲಮಂ ಕೇಳ್ದು ಯಜ್ಞಸೇನತನೂಜೆ ಯಮತನೂಜಂಗಿಂತೆಂದಳ್: **ಪಂಪಭಾ,** ೭. ೪೪ ವ)

ಯಜ್ಞೋಪವೀತ – [ನಾ] [ಯಜ್ಞ+ಉಪವೀತ] ದ್ವಿಜರು ಧರಿಸುವ ಜನಿವಾರ (ಅವರವರ ನೆಲೆಗಳೊಳ್ ಬ್ರಹ್ಮಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ: **ಆದಿಪು,** ೧೫. ೧೧ ವ)

ಯತಿ – [ನಾ] ಮುನಿ (ಅನಂತಚತುಷ್ಟಯವಿಳಾಸಿ ಕೈವಲ್ಯಲಕ್ಷ್ಮಿಯಂ ಯತಿ ಪಡೆದಂ: **ಆದಿಪು,** ೧೦. ೧೫)

ಯತಿಸಮಿತಿ – [ನಾ] ಮುನಿಸಮುದಾಯ (ಪರಮತಪಶ್ಚರಣನಿರತ ಯತಿಸಮಿತಿಗೆಲ್ಲಂ ಪ್ರತಿಗ್ರಹಾದಿಪುರಸ್ಸರಂ ನಿರವದ್ಯಾಹಾರಾದಿ ವಿತರಣರೂಪ ಪಾತ್ರದತ್ತಿಯುಂ: **ಆದಿಪು,** ೧೫. ೧૩ ವ)

ಯತ್ಯಾಶ್ರಮ – [ನಾ] [ಯತಿ+ಆಶ್ರಮ] ಯತಿಯ ಸ್ಥಿತಿ (ಅಂತಾ ತ್ರಿಲೋಕಗುರು ಧರಾತಳಂ ಪೊಗೞ್ವಿನಂ ಯತ್ಯಾಶ್ರಮದೊಳ್ ನಿಂದಂ: **ಆದಿಪು,** ೬. ೨೪ ವ)

ಯಥಾಖ್ಯಾತಚಾರಿತ್ರ – [ನಾ] [ಜೈನ] ಮೋಹನೀಯ ಕರ್ಮಗಳನ್ನೆಲ್ಲ ಕಳೆದುಕೊಂಡ ಆತ್ಮನ ಸ್ಥಿತಿ, ಸಪ್ತಸಂಯಮಗಳಲ್ಲಿ ಒಂದು (ವೀತರಾಗದ್ವೇಷ ಭಾವನಾಭಾವಿತ ಯಥಾಖ್ಯಾತಚಾರಿತ್ರಕ್ಷೀಣ ಕಷಾಯ ವೀತರಾಗಛದ್ಮಸ್ಥ: **ಆದಿಪು,** ೧೦. ೧೪ ವ)

ಯಥಾಯೋಗ್ಯ – [ನಾ] ತಕ್ಕುದಾದ ಬಗೆ, ಆದಿದೇವನು ವಿಭಾಗಿಸಿದ ಮೂರುವರ್ಣಗಳಲ್ಲಿ ಕೊನೆಯದಾದ ಶೂದ್ರರಲ್ಲಿ ಒಂದು ವರ್ಗ (ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾ ನಿಯೋಗಂಗಳುಮಂ ಯಥಾಯೋಗ್ಯಂ ಉಪದೇಶಂಗೆಯ್ದು: **ಆದಿಪು,** ೮. ೬೪ ವ)

ಯಥಾ ರಾಜಾ ತಥಾ ಪ್ರಜಾ – ರಾಜನು ಹೇಗೋ ಪ್ರಜೆಗಳೂ ಹಾಗೆ (ಪ್ರಿಯಧರ್ಮನೃಪತಿಯಂ ನೋಡಿ ಯಥಾ ರಾಜಾ ತಥಾ ಪ್ರಜಾ ಎಂಬವೊಲ್ ಓಜೆಯೊಳೋಜೆಗೊಂಡು ಧರ್ಮಪ್ರಿಯರಾದರ್ ಪ್ರಜೆಗಳುಂ ಸಮಸ್ತಾವನಿಯೊಳ್: **ಆದಿಪು,** ೧೬. ೪೦)

ಯಥೋಕ್ತವಿಧಿ – [ನಾ] [ಯಥಾ+ಉಕ್ತವಿಧಿ] ಶಾಸ್ತ್ರಗಳಲ್ಲಿ ಹೇಳಿರುವ ಕ್ರಮ (ಹರಿಚಂದನಕರ್ಪೂರ ಕಾಳಾಗರು ಕಾಷ್ಠಂಗಳಿಂದಂ ಯಥೋಕ್ತವಿಧಿಯಿಂ ಸಂಸ್ಕಾರಿಸಿ ಕರ್ಣಂಗೆ ಕರ್ಣಸ್ಥಳಿಯೆಂಬ ತೀರ್ಥಮಂ ಮಾಡಿ: **ಪಂಪಭಾ,** ೧೪. ೧೦ ವ)

ಯಥೋಚಿತ – [ಗು] [ಯಥಾ+ಉಚಿತ] ಹೇಗೆ ತಕ್ಕುದೋ ಹಾಗೆ (ಪಾಂಡವರಯ್ವರುಂ ಇದಿರ್ವೋಗಿ ಯಥೋಚಿತ ಪ್ರತಿಪತ್ತಿಗಳಿಂ ಕಂಡು ಪೊಟಿಲ್ಗೊಡಗೊಂಡು ಬಂದು: **ಪಂಪಭಾ,** ೫. ೨೪ ವ)

ಯದುವಂಶೋತ್ತಮೆ – [ನಾ] ಯದುವಂಶದ ಶ್ರೇಷ್ಠ ಪುತ್ರಿ (ಮತ್ತಿತ್ತ ನೆಗಟ್ತೆಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆಯೆನೆ ಕುಂತಿ ಕುಂತಿಭೋಜನ ಮನೆಯೊಳ್: **ಪಂಪಭಾ,** ೧. ೮೮)

ಯಮನಂದನ – [ನಾ] ಯಮನ ಮಗ, ಯುಧಿಷ್ಠಿರ (ಎಂದು ತನ್ನ ಮನದೊಳಚ್ಚೊತ್ತಿದಂತೆ ನುಡಿದ ಗಾಂಗೇಯನ ಮಾತಂ ಮನದೆಗೊಂಡು ಯಮನಂದನಂ ಆನಂದಂಬೆರಸಂತೆ ಗೆಯ್ವೆನೆಂದು: **ಪಂಪಭಾ,** ೬. ೪೧ ವ)

ಯಮಸುತ – [ನಾ] ಯಮಧರ್ಮನ ಮಗ, ಯುಧಿಷ್ಠಿರ (ಯಮಸುತನುಂ ಸುರೇಂದ್ರಸುತನುಂ ಪೊಸೆದೀಗಳೆ ಮುಕ್ಕಿತೋಱರೇ: **ಪಂಪಭಾ,** ೪. ೭)

ಯಮಸ್ಥಾನ – [ನಾ] ಯಮನ ಜಾಗ, ಸಾವು (ಪತಿ ಪರಸಿ ಯಮಸ್ಥಾನಮನೆಂತೆಯ್ದಿಸಿದಿರೊ ಕಾನೀನನ ದೊರೆಯ ಕಲಿಯಂ ಉಗ್ರ ಆಹವದೊಳ್: **ಪಂಪಭಾ,** ೧೨. ೧೨೨)

ಯಮಳ – [ನಾ] ಅವಳಿ ಜವಳಿ, ನಕುಲ, ಸಹದೇವರು (ಅಡವಿಯ ಕಾಯಂ ಪಣ್ಣುಮಂ ಉದಿರ್ಪಿ ತಿಂದಗಲದೆ

ನಿಂದೀ ಯಮಳರಾದ ತೆಱದಿಂ ನೋಯಿಸರಯ್ ನಿನ್ನ ನನ್ನಿಕಾಱನ ಮನಮಂ: **ಪಂಪಭಾ,** ೭. ೪೮)

ಯವ – [ನಾ] ಗೋಧಿ (ಮಲ್ಲಿಗೆಯಲರ್ಗಳಂ ಪೂವಾಸಿ ಮೃಣಾಳನಾಳದೊಳ್ ಸಮೆದ ಸರಿಗೆಗಂಕಣಗಳುಮಂ ಯವ ಕಲಿಕೆಗಳೊಳ್ ಸಮೆದ ಕಟಿಸೂತ್ರಮಂ: **ಪಂಪಭಾ,** ೫. ೬ ವ)

ಯವನಾಳ – [ನಾ] ಜೋಳ (ಕಲಮ ಷಷ್ಟಿಕಾ ವ್ರೀಹಿ ಯವನಾಳ ಗೋಧೂಮ ಕಂಗು ಶ್ಯಾಮಕ ಕೋದ್ರವ ನೀವಾರ ತಿಲಾತಸಿ ಮಸೂರಿಕಾ ಕುಳತ್ಥ: **ಆದಿಪು,** ೬. ೭೨ ವ) [ಎಲ್. ಬಸವರಾಜು ಆವೃತ್ತಿ]

ಯವನಿಕಾ – [ನಾ] ತೆರೆ, ಪರದೆ (ನವಮೇಘಧ್ವನಿ ಪುಷ್ಕರಧ್ವನಿ ತರತ್ತರಾಳಿ ಪುಷ್ಪೋಪಹಾರವಿಳಾಸಂ ರುಚಿರಾಂಬುದಂ ಯವನಿಕಾವಿನ್ಯಾಸಮಾದಲ್ಲಿ: **ಆದಿಪು,** ೬. ೭೨)

ಯವಸ – [ನಾ] ಹುಲ್ಲು (ಅಭಿರಾಮ ಜಲಾಶಂಗಳುಮಂ ಪ್ರಭೂತ ಯವಸ ಉದಕಂಗಳುಮಂ ಸಮಸ್ತಸಸ್ಯಸಂಪತ್ಸಂಪನ್ನ ಸುಕ್ಷೇತ್ರಂಗಳುಮಂ: **ಆದಿಪು,** ೮. ೬೩ ವ)

ಯಶಃಪಿಂಡ – [ನಾ] ಜಯಗಳ ಸಾಲು (ವಿಪುಯಶಃಪಿಂಡಂ ಪುಣ್ಯಪುಂಜಂ ಆ ಕ್ಷತ್ರಧಾಮಂ ತಾನಾ ನೃಪಸುತಂ: **ಆದಿಪು,** ೮. ೪೪)

ಯಶಃಪ್ರಕಾಶ – [ನಾ] ಕೀರ್ತಿಕಾಂತಿ (ಅಟಿಪದೆ ಪದಗಟಿಪದೆ ಪೊಂಪುಟಿವೋಗೆ ಯಶಃಪ್ರಕಾಶಂ ಈಗಳೆ ಧರೆಯಂ ಪಟಿಕೆಯ್ದು: **ಆದಿಪು,** ೪. ೮೭)

ಯಶೋದುಂದುಭಿ – [ನಾ] ಗೆಲವನ್ನು ಸಾರುವ ದುಂದುಭಿಧ್ವನಿ (ಪ್ರಕಟ ಯಶೋದುಂದುಭಿ ಸಿಂಹಾಸನ ಸುರದುಂದುಭಿ ಪತಿಚರಣಕ್ಕಮಳಭೃಂಗಂ ಪಂಪಂ: **ಆದಿಪು,** ೧. ೩೩)

ಯಶೋಭದ್ರ – ರುಚಕಪರ್ವತದ ಪೂರ್ವದಿಕ್ಕಿನ ಎಂಟು ಶಿಖರಗಳಲ್ಲಿ ಒಂದು (ತನ್ಮಹೀಧರವರುಣಾಶಾವಿಶೇಷಕ ಮಾಗಿರ್ದ ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂ ಗಳೊಳಂ: **ಆದಿಪು,** ೭. ೩ ವ)

ಯಶೋಭಾಗಿ – [ನಾ] ಕೀರ್ತಿಭಾಜನ (ತಾಂ ತಂದನಂದು ಅಂಬೆಯಂಬಿಕೆಯಂಬಾಲೆಯರೆಂಬ ಬಾಲೆಯರನೇಂ ಭೀಷ್ಮಂ ಯಶೋಭಾಗಿಯೋ: **ಪಂಪಭಾ,** ೧. ೭೪)

ಯಶೋವಿತಾನ – [ನಾ] ಕೀರ್ತಿರಾಶಿ (ವಿಪುಲ ಯಶೋವಿತಾನ ಗುಣಮಿಲ್ಲದನಂ ಪ್ರಭು ಮಾಡಿ ಪೂರ್ವ ಭೂಮಿಪರ ಪದಂಗಳಂ ಪುಗಿಸಿ ಪೋಲಿಪೊಡೆ ಈತನುದಾತ್ತ **ಪಂಪಭಾ,** ೧. ೧೪)

ಯಷ್ಟಿ – [ನಾ] ಕೋಲು (ಪಾಪಸತ್ವಂಗಳ್ ಕಾಡೆ ಲಕುಟಯಷ್ಟ್ಯಾದಿ ವಿಧಿಯನುಪದೇಶಂಗೆಯ್ದಾತಂ ಕ್ಷೇಮಂಧರನೆಂಬ ಪೆಸರಂ ಪಡೆದಂ: **ಆದಿಪು,** ೬. ೫೬ ವ)

ಯಸ್ಯ – [ಗು] ಯಾರ (ಪ್ರಚಂಡಲಯತಾಂಡವಕ್ಷುಭಿತಯಾ ಯಸ್ಯಾನಯಾ: **ಪಂಪಭಾ,** ೪. ೨೭)

ಯಾಗ – [ನಾ] ಯಜ್ಞ (ಕರಂಗಳಡಂಗಿ ಕಿಲುಂಬುಗೊಂಡ ಕನ್ನಡಿಗೆಣೆಯಾಯ್ತು ಭಾನುವಳಯಂ ದಿವಿಜಾಪಗೆ ನೋಡೆ ನೋಡೆ ಕರ್ಪಡದೆಣೆಯಾದುದು ಆ ಯಮುನೆಗೆ ಅಗ್ಗದ ಯಾಗದ ಧೂಮದ ಏಟಿಗ್ಗೆಯೊಳ್: **ಪಂಪಭಾ,** ೬. ೩೬)

ಯಾಗಹಸ್ತಿ – [ನಾ] ಸವಾರಿಮಾಡುವ ಆನೆ, ಪಟ್ಟದ ಆನೆ ? (ವಿಜಯಪರ್ವತಮೆಂಬ ಯಾಗಹಸ್ತಿಯುಂ ಪವನಂಜಯಂ ಎಂಬ ತುರಗರತ್ನಮುಂ: **ಆದಿಪು,** ೧೫. ೩ ವ)

ಯಾಚಕ – [ನಾ] ಬೇಡುವವನು, ತಿರುಪೆಗಾರ (ಕೀಚಕಂ ಕಾಮದೇವಂ ಮಾಡಿದ ಯಾಚಕನಂತೆ ಕರಮೆ ನಾಣ್ಗೆಟ್ಟು ಮನಂಗಾಪು ಅಟಿದು ಅಳಿಪಿ ನೋಡಿ: **ಪಂಪಭಾ,** ೮. ೫೯ ವ)

ಯಾಜನ – [ನಾ] ಯಜ್ಞ ಮಾಡಿಸುವುದು, ಬ್ರಾಹ್ಮಣನ ಷಟ್ಕರ್ಮಗಳಲ್ಲಿ ಒಂದು (ಅಂತು ಭವಿಷ್ಯದ್ ದ್ವಿಜವರ್ಣಕೆ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನವಿಶಿಷ್ಟವೃತ್ತಿಯುಮಂ: **ಆದಿಪು,** ೮. ೭೩ ವ)

ಯಾಜಿ – [ನಾ] ಯಾಗ ಮಾಡಿದವನು (ಅಗುರ್ವು ಪರ್ವೆ ಸರ್ವಕ್ರತುಯಾಜಿಯಾದಂ ಅಳವು ಇಂತುಟು ಮಾಧವಸೋಮಯಾಜಿಯಾ: **ಪಂಪಭಾ,** ೧೪. ೪೩)

ಯಾತ್ರೋತ್ಸವ – [ನಾ] ಪ್ರವಾಸದ ಸಂಭ್ರಮ (ಮಂಗಳಾಕಾರಂ ಯಾತ್ರೋತ್ಸವಪ್ರಸ್ತುತಮೆನೆ ತಳರ್ದಂ ರಾಗದಿಂ ರಾಜರಾಜಂ: **ಆದಿಪು,** ೧೩. ೪೩)

ಯಾಥಾತ್ಮ್ಯ – [ನಾ] ಸ್ವಭಾವ (ಸಂಶಯವಿಪರ್ಯಾಯ ಸಾವದ್ಯಾನವದ್ಯವಸಾಯ ಸ್ವಭಾವರಹಿತಮಾಗಿ ಜೀವಾದಿ ಪದಾರ್ಥಯಾಥಾತ್ಮ್ಯಾವಗಂ ಸಮ್ಯಗ್‌ಜ್ಞಾನಂ: **ಆದಿಪು,** ೧೦. ೬೩ ವ)

ಯಾನ – [ನಾ] ವಾಹನ (ಆತ್ಮೀಯ ಸ್ಥಪತಿರತ್ನವಿರಚಿತ ಮಣಿಕನಕಖಚಿತ ಶಿಬಿಕಾಂದೋಳಾದಿ ಯಾನಂಗಳುಮಂ: **ಆದಿಪು,** ೪. ೫೪ ವ); [ನಾ] [ಯುದ್ಧಕ್ಕೆ] ಹೊರಡುವುದು (ಸಮದಂ ಯಾನಮೆ ಮಂದಮಂದಗಮನಂ ಕಸ್ತೂರಿಕಾ ಪಂಕಪಟ್ಟಮೆ ಧಾರಾಮದವಟ್ಟಮಾಯ್ತೆನಿಪಿನಂ: **ಆದಿಪು,** ೧೧. ೨೧)

ಯಾನಪಾತ್ರ – [ನಾ] ಹಡಗು (ದ್ರೋಣಿಯಾನಪಾತ್ರಾದಿಗಳೊಳ್ ಜಲದುರ್ಗೋತ್ತರಣಮಂ ಉಪದೇಶಂಗೆಯ್ದು: **ಆದಿಪು,** ೬. ೬೨ ವ]

ಯಾನಹಸ್ತಿ – [ನಾ] ಸವಾರಿಯ ಆನೆ (ವಿಜಯಾರ್ಧಪರ್ವತಮೆಂಬ ಯಾನಹಸ್ತಿಯುಂ ಪವನಂಜಯಮೆಂಬ ತುರಗರತ್ನಮುಂ: **ಆದಿಪು,** ೧೫. ೩ ವ)

ಯಾಮಿನಿ – [ನಾ] ರಾತ್ರಿ (ವಸುಧಾಂತರ್ವರ್ತಿಯಾಗಿರ್ದ ಅರಾತಿ ನಿಕಾಯಕ್ಕಿದು ಯಾಮಿನೀಸಮುದಿತಂ ದೇವೇಂದ್ರಚಾಪಂ ದಲೆಂಬಿನೆಗಂ: **ಆದಿಪು,** ೧೪. ೯೧)

ಯಾಮನೀವಿರಾಮಸಮಯ – [ನಾ] ರಾತ್ರಿಯ ಕೊನೆ, ಬೆಳಗಿನ ಜಾವ (ಸುಧಾರಮ್ಯಹರ್ಮ್ಯತಳದೊಳ್ ಏಟನೆಯ ನೆಲೆಯೊಳ್ ಪುರುಪರಮೇಶ್ವರನೊಡನೆ ಪವಡಿಸಿ ಯಾಮಿನೀವಿರಾಮ ಸಮಯದೊಳ್: **ಆದಿಪು,** ೮. ೨೫ ವ)

ಯಾವನಾಳ – [ನಾ] ಜೋಳ (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ .. .. ಧಾನ್ಯಕಾದಿ ವಿವಿಧಧಾನ್ಯಭೇದಂಗಳುಂ: **ಆದಿಪು,** ೬. ೭೨ ವ)

ಯುಕ್ತಾಯುಕ್ತ – ಸರಿತಪ್ಪು (ಅತಿಸುರಭಿಕುಸುಮ ಫಲ ಪವಿತ್ರಜಲಂಗಳಿಂದಂ ಆದಿಪುರುಷನ ಪದಪಯೋಜಂಗಳಂ ಅರ್ಚಿಸಿ ಯುಕ್ತಾಯುಕ್ತವಿಚಾರದೂರಮತಿಗಳಾಗಿ: **ಆದಿಪು,** ೯. ೯೭ ವ)

ಯುಗ – [ನಾ] ಒಂದು ಕಾಲಘಟ್ಟ ಹಾಗೂ ಜೋಡಿ (ಯುಗನಾಯಕನೆನೆ ಜಿನಪದಯುಗನಮಿತಸುರೇಂದ್ರನೆನೆ ಯುಗಂಧರದೇವಂ ನೆಗಟ್ದಿಪಂ: **ಆದಿಪು,** ೩. ೮೧); [ನಾ] ಜೊತೆ (ಕೇಯೂರಕಟಕಸಮಿತಿ ಯುಗಾಯತಬಾಹುಗಳಿಂ ಉನ್ಮಿಷತ್ ರತ್ನಹಟಚ್ಛಾಯೆಯೊಳೆ ಮುಸುಕಿ: **ಆದಿಪು,** ೪. ೪೦)

ಯುಗಂಧರ – [ನಾ] [ಜೈನ] ತೀರ್ಥಂಕರರ ಸಮವಸರಣ ಎಂಬ ತೀರ್ಥ (ಮಹಾಕಚ್ಛವಿಷಯದ ಅರಿಷ್ಟಪುರದಿಂದಂ ಯುಗಂಧರ ತೀರಸ್ಥ ಸರಸೀಹಂಸನಾಯಕರೆನಿಸಿದ ಗಗನಚಾರಣರ್: **ಆದಿಪು,** ೨. ೩೩ ವ); [ನಾ] ಒಬ್ಬ ದೇವನ ಹೆಸರು (ಯುಗನಾಯಕನೆನೆ ಜಿನಪದಯುಗನಮಿತ ಸುರೇಂದ್ರನೆನೆ ಯುಗಂಧರದೇವಂ ನೆಗಟ್ದಿಪಂ: **ಆದಿಪು,** ೩. ೮೧)

ಯುಗಪತ್ – [ಅ] ಏಕಕಾಲದಲ್ಲಿ (ನೆಗಟ್ದುದು ರಾಜ್ಯಸಮರ್ಪಣ ಯುಗಪತ್ ಪ್ರತಿಹತಂ ಅಮಂದರವಂ ಒಂದೆಡೆಯೊಳ್: **ಆದಿಪು,** ೯. ೬೬); [ಅ] ಒಟ್ಟಿಗೇ (ಯುಗಪತ್ ಸಕಳಪದಾರ್ಥ ಯಥಾರ್ಥಾವಭಾಸಿಯಪ್ಪ ಕೇವಲಜ್ಞಾನದಿಂ ವಿಶೇಷ ನಿಶ್ಚಯಮಂ ಮಾಡುವನೆಂದು: **ಆದಿಪು,** ೧೫. ೨೧ ವ)

ಯುಗಪ್ರಮಾಣ – [ನಾ] ಒಂದು ನೊಗದಷ್ಟು ಉದ್ದವಾದ (ಯುಗಪ್ರಮಾಣ ಕ್ಷೋಣೀನಿರೀಕ್ಷಣನಿರುತನುಂ ಅತಿದ್ರುತವಿಲಂಬಿತ ಗತಿವ್ಯಪೇತನುಂ ಆಗಿ: **ಆದಿಪು,** ೯. ೧೨೯ ವ)

ಯುಗಳ – [ನಾ] ಜೋಡಿ, ಜೊತೆ (ವಿಜಯಶ್ರೀನಿವಾಸ ಬಾಹುಬಾಹುಯುಗಳಕ್ಕೆ ಕೇಯೂರ ಹಾರ ಅಂಗದಕಟಕಾಳಂಕಾರಂ ಮಾಡಿ: **ಆದಿಪು,** ೭. ೧೦೬ ವ)

ಯುಗಾಂತ – [ನಾ] ಯುಗದ ಕೊನೆ, ಪ್ರಳಯ ಕಾಲ (ಯುಗಾಂತಪಯೋಧರಾಳಿ ಭೋಂಕೆನೆ ಕವಿವಂದದಿಂ ಕವಿದಂ ಆ ಬನಮಂ ಮೃಗಯಾನಿಧಾನಮಂ: **ಪಂಪಭಾ,** ೮. ೧೪)

ಯುಗಾಂತವಾತ – [ನಾ] ಪ್ರಳಯಕಾಲದ ಗಾಳಿ (ಅಂತು ಯುಗಾಂತ ವಾತಾಹತಿಕುಲಗಿರಿಯೆ ನೆಲೆಯಿಂ ತಳರ್ವಂತೆ ತಳರ್ದು ಧ್ವಾಂಕ್ಷಧ್ವಜಂ: **ಪಂಪಭಾ,** ೧೨. ೧೩೬ ವ)

ಯುಗಾದಿ – [ನಾ] [ಯುಗ+ಆದಿ] ಕಾಲಘಟ್ಟದ ಆರಂಭ (ಈ ಯುಗಾದಿಯೊಳ್ ಆದಿದಾನತೀರ್ಥ ಪ್ರವರ್ತನೈಕಪುಣ್ಯ ಭಾಜನನ್ನೈ ನೀಂ: **ಆದಿಪು,** ೦. ೧೩ ವ)

ಯುದ್ಧಮಲ್ಲ – [ನಾ] ಪಂಪನು ಹೇಳುವ ಚಾಳುಕ್ಯವಂಶದ ಮೊದಲ ರಾಜ (ಶ್ರೀಮಚ್ಚಳುಕ್ಯವಂಶ ವ್ಯೋಮಾಮೃತಕಿರಣನೆನಿಪ ಕಾಂತಿಯನೊಳಕೊಂಡೀ ಮಹಿಯೊಳಾತ್ಮ ವಂಶಶಿಖಾಮಣಿ ಜಸಮೆಸೆಯೆ ಯುದ್ಧಮಲ್ಲಂ ನೆಗಟ್ದಂ: **ಪಂಪಭಾ,** ೧. ೧೫)

ಯುವ – [ನಾ] ಯುವಕ (ಯುವಸಂಘಾತಮದೊಂದು ತೋಳ್ದುಜುಗಳೊಳ್ ಮತ್ತೊಂದು ತೋಳೋಳಿಯೊಳ್ ಯುವತೀವ್ರಾತಂ: **ಆದಿಪು,** ೭. ೧೨೬)

ಯುಷ್ಮತ್ – [ಗು] ನಿನ್ನ (ಯುಷ್ಮತ್ ಪದಪಾಂಸುಗಳಿಂದಾಂ ಪವಿತ್ರಗಾತ್ರನೆನಾದೆಂ: **ಪಂಪಭಾ,** ೯. ೩೨)

ಯೂಥ – [ನಾ] [ಪ್ರಾಣಿಗಳ] ಗುಂಪು, ಹಿಂಡು (ತನ್ನಳಿಯನನೆಯ್ದೆ ಪಾಲಿಸುಗೆ ಬಂದಿದನೀಗಳನಾಥಯೂಥಮಂ: **ಆದಿಪು,** ೪. ೮೪)

ಯೂಥಪತಿ – [ನಾ] ಸಲಗ (ಕಳಭಂ ವನಪಥಮಂ ಯೂಥಪತಿಗೆ ತೋರ್ಪಂತಕ್ಕುಂ: **ಆದಿಪು,** ೮. ೧೨); ಹಿಂಡಿನ ಮುಖ್ಯ ಸಲಗ (ಯೂಥಪತಿ ಕೆಡೆಯೆ ದೆಸೆದಪ್ಪಿದ ವನಕರಿರೇಣುಗಳುಮಂ: **ಪಂಪಭಾ,** ೧೪. ೪ ವ)

ಯೂಪ – [ನಾ] ಬಲಿಗಂಬ, ಯಜ್ಞಪಶುವನ್ನು ಕಟ್ಟುವ ಕಂಬ (ಮನಂ ಆರಾಧಿತ ಹೋಮಭೂಮಿ ಪಶುಗಳ್ ಕಾಮಾತುರರ್ ಬಂದ ಮಾವನಿತುಂ ಸ್ಥಾಪಿತ ಯೂಪಕೋಟಿ: **ಪಂಪಭಾ,** ೪. ೫೯)

ಯೋಗತ್ಯಾಗಾಗ್ರನಿರ್ವೃತಿ – [ನಾ] [ಜೈನ] ಒಂದು ಗರ್ಭಾನ್ವಯ ಕ್ರಿಯೆ, ಸಮವಸರಣವನ್ನು ವಿಸರ್ಜಿಸಿ ವಿಹಾರಾದಿಗಳನ್ನು ಮಾಡುವುದು (ಆರ್ಹಂತ್ಯ ವಿಹಾರ ಯೋಗತ್ಯಾಗಾಗ್ರ ನಿರ್ವೃತಿಯೆಂಬ ಅಯ್ವತ್ತಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಯೋಗದ ಬಲ – [ನಾ] ಯೋಗಶಕ್ತಿ (ತ್ರಿದಶನರಾಸುರೋರಗಗಣಪ್ರಭು ನಿಶ್ಚಿತತತ್ತ್ವಯೋಗಿ ಯೋಗದ ಬಲಮುಣ್ಮಿ ಪೊಣ್ಮಿ ನಿಲೆ: **ಪಂಪಭಾ,** ೧. ೮೫)

ಯೋಗನಿಯೋಗ – [ನಾ] ಯೋಗಾಭ್ಯಾಸ (ಪನ್ನಗಕೇತಂಗೆ ಧರಾವಿಭಾಗಮನಿತ್ತು ಸಂಪನ್ನಯೋಗನಿಯೋಗದಿಂದಂ ಅರಣ್ಯದೊಳ್ ನೆಲೆಸಿರ್ದು: **ಪಂಪಭಾ,** ೯. ೧೭)

ಯೋಗನಿರೋಧ – [ನಾ] [ಜೈನ] ಮನೋವಾಕ್ಕಾಯಗಳ ಚಂಚಲತೆಯನ್ನು ನಿಗ್ರಹಿಸುವುದು (ಪೌಷ್ಯಮಾಸದ ಪೌರ್ಣಮೀ ದಿನದಂದು ಯೋಗಪಲ್ಯಂಕಾಸನದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ: **ಆದಿಪು,** ೧೬. ೪೦ ವ)

ಯೋಗನಿರ್ವಾಣಸಂಪ್ರಾಪ್ತಿ – [ನಾ] [ಜೈನ] ಒಂದು ಗರ್ಭಾನ್ವಯ ಕ್ರಿಯೆ (ಯೋಗನಿರ್ವಾಣಸಂಪ್ರಾಪ್ತಿ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಯೋಗನಿರ್ವಾಣಸಾಧನ – [ನಾ] [ಜೈನ] ಒಂದು ಗರ್ಭಾನ್ವಯ ಕ್ರಿಯೆ (ಯೋಗ ನಿರ್ವಾಣಸಾಧನ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಯೋಗಪಲ್ಯಂಕಾಸನ – [ನಾ] [ಜೈನ] ಯೋಗದಲ್ಲಿನ ಅರ್ಧಪದ್ಮಾಸನ (ಪೌಷ್ಯಮಾಸದ ಪೌರ್ಣಮೀ ದಿನದಂದು ಯೋಗಪಲ್ಯಂಕಾಸನದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ: **ಆದಿಪು,** ೧೬. ೪೦ ವ)

ಯೋಗಪ್ರಯೋಗ – [ನಾ] ಯೋಗನಿರತತೆ (ಸ್ತಿಮಿತೇಕ್ಷಣವಭ್ರೂಭಂಗಂ ಅನಾಪಾಂಗಾವಲೋಕನಂ

ಸುಶ್ಲಿಷ್ಟೋತ್ತಮದಶನಚ್ಛದ ಮಾನಸಮಮರ್ದುದು ಯೋಗಪ್ರಯೋಗದೊಳ್ ಮುನಿಪತಿಯಾ: **ಆದಿಪು,** ೯. ೮೭)

ಯೋಗಯೋಗ್ಯ – [ನಾ] ಯೋಗಸಾಧನೆಗೆ ಸೂಕ್ತ (ಅಂಬರತಿಳಕಮೆಂಬ ಗಿರಿವರದ ನಡುವೆ ಯೋಗಯೋಗ್ಯಮೆಂದು ಅದಂ ಅಳಂಕರಿಸಿ ನೆಲಸಿದಂದು: **ಆದಿಪು**, ೩. ೭೨ ವ)

ಯೋಗಶಾಸ್ತ್ರ – [ನಾ] ಪಾತಂಜಲ ಯೋಗ (ಕಾಪಿಲಸಿದ್ಧಾಂತಮುಮಂ ಯೋಗಶಾಸ್ತ್ರಮುಮಂ ತೋಱಿ ಲೋಕಮಂ ಸಮ್ಯಗ್‌ಜ್ಞಾನಪರಾಙ್ಮುಖಂ ಮಾಡಿರೆ: **ಆದಿಪು,** ೯. ೯೩ ವ)

ಯೋಗಸಮ್ಮಹ – [ನಾ] [ಜೈನ] ಒಂದು ಗರ್ಭಾನ್ವಯ ಕ್ರಿಯೆ; ಕೇವಲಜ್ಞಾನ ಪಡೆದನಂತರ ಹೊಂದುವ ಪೂಜೆ (ಯೋಗಸಮ್ಮಹ ಆರ್ಹಂತ್ಯವಿಹಾರಯೋಗತ್ಯಾಗಾಗ್ರನಿವೃತ್ತಿ ಎಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಯೋಗಾಚಾರ – [ನಾ] ಬೌದ್ಧಮತ (ಮಹಾಮತಿ ಸಂಭಿನ್ನಮತಿ ಶತಮತಿಗಳ್ ಲೋಕಾಯತಿಕ ಯೋಗಾಚಾರ ಮಾಧ್ಯಮಿಕಮತ ನಿತಥಾಭಿಧಾಯಿಗಳ್: **ಆದಿಪು,** ೨. ೭ ವ);

ಯೋಗಿನೀತಂತ್ರ – [ನಾ] ಜೋಗಿಣಿ ಎಂಬ ಮರುಳುಗಳ ಸಮೂಹ, ಅಥವಾ ಪ್ರಾಯಶಃ ಕೌಲವೆಂಬ ಶಾಕ್ತೇಯ ಪಂಥದ ಮಾರ್ಗ (ಆಮಂತ್ರಿತ ಡಾಕಿನೀ ದಶನಘಟ್ಟನಜಾತವಿಭೀಷಣಂ ಮದೇಭ ಅಂತ್ರನಿಯಂತ್ರಿತ ಅಶ್ವಶವಮಾಂಸರಸ ಆಸವಮತ್ತ ಯೋಗಿನೀತಂತ್ರಂ: **ಪಂಪಭಾ**, ೧೨. ೧೨೦)

ಯೋಜನ – [ನಾ] ಎರಡು ಗಾವುದ ಅಥವಾ ನಾಲ್ಕು ಹರಿದಾರಿ ದೂರ (ಇಲ್ಲಿಗೆ ಅಱುವತ್ತು ಯೋಜನದೊಳ್ ಇಂದ್ರಪ್ರಸ್ಥಮೆಂಬುದು ಪೊಳಲ್ ಅಲ್ಲಿಗೆ ಪೋಗಿ ಸುಖದಿಂ ರಾಜ್ಯಂಗೆಯ್ಯುತ್ತಿರಿ: **ಪಂಪಭಾ**, ೪. ೮ ವ)

ಯೋಜನಗಂಧಿ – [ನಾ] ಮತ್ಸ್ಯಗಂಧಿಯ ದುರ್ಗಂಧತ್ವವನ್ನು ಪರಾಶರಮುನಿಯು ನಿವಾರಿಸಿದ ಬಳಿಕ ಅವಳಿಗೆ ಬಂದ ಹೆಸರು, ಮುಂದೆ ಇವಳು ಶಂತನು ಚಕ್ರವರ್ತಿಯ ರಾಣಿಯಾಗಿ ಸತ್ಯವತಿಯೆಂಬ ಮತ್ತೊಂದು ಹೆಸರು ಪಡೆಯುತ್ತಾಳೆ (ಪರಲೋಕಪ್ರಾಪ್ತನಾದೊಡೆ ಗಾಂಗೇಯನುಂ ಸತ್ಯವತಿಯುಮತ್ಯಂತಶೋಕಾನಲದಹ್ಯಮಾನ ಮಾನಸರ್ಕಳಾಗಿ ಆತಂಗೆ ಪರಲೋಕಕ್ರಿಯೆಗಳಂ ಮಾಡಿ ರಾಜ್ಯಂ ನಷ್ಟರಾಜಮಾದುದರ್ಕೆ ಮಮ್ಮಲ ಮಱುಗಿ ಯೋಜನಗಂಧಿ ಸಿಂಧುರಾಜನನಿಂತೆಂದಳ್: **ಪಂಪಭಾ,** ೧. ೮೦ ವ)

ಯೋಜನಗಂಧಿತ್ವ – [ನಾ] ಒಂದು ಯೋಜನ ದೂರ ದೇಹದ ಪರಿಮಳವನ್ನು ಸೂಸುವುದು (ಮುನೀಂದ್ರಂ ಆಕೆಯೊಡಲ ಈ ದುರ್ಗಂಧಮೋಪಂತೆ ಯೋಜನಗಂಧಿತ್ವಮನಿತ್ತು .. .. ಕೂಡುವೆಡೆಯೊಳ್ ಜ್ಞಾನಸ್ವರೂಪಂ ಮಹಾಮುನಿಪಂ ಪುಟ್ಟಿದಂ: **ಪಂಪಭಾ,** ೧. ೬೯)

ಯೋಧನ – [ನಾ] ಯುದ್ಧಮಾಡುವುದು (ಪರಿಪತನ ನಟನ ಮೃದುಕೂಜಿತ ರಸಿತ ದರಹಸಿತ ಕ್ರೇಂಕಾರ ಆರೋಹಣಾದಿ ಯೋಧನಾದಿ ನಾನಾ ವಿನೋದಂಗಳೊಳ್: **ಆದಿಪು**, ೮. ೩ ವ)

ಯೋನ ಹನ್ಯಾತ್ಸ ಹನ್ಯತೇ – [ಯಃ ನಹನ್ಯಾತ್ ಸಃ ಹನ್ಯತೇ] ಯಾರು ಕೊಲ್ಲುವುದಿಲ್ಲವೋ ಅವನು ಕೊಲ್ಲಲ್ಪಡುತ್ತಾನೆ (ಸ್ವಾಮ್ಯಾರ್ಥಂ ಸ್ವಾಮ್ಯವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಥರಾಜ್ಯಹರಂ ಭೃತ್ಯಂ ಯೋನ ಹನ್ಯಾನ್ಸಹನ್ಯತೇ: **ಪಂಪಭಾ,** ೨. ೯೦ ಶ್ಲೋಕ)

ಯೋನಿ – [ನಾ] ಜನ್ಮಸ್ಥಾನ (ನಾನಾಯೋನಿಗಳೊಳ್ ಸುಟಿದೇನಾನುಂ ದುಷ್ಕೃತಂ ಸಡಿಲ್ದೊಡೆ ಪಡೆಗುಂ ಮಾನುಷ್ಯಮಂ: **ಆದಿಪು,** ೯. ೪೮)

ಯೋಷಿತ್ – [ನಾ] ಯೋಷಾ, ಹೆಂಗಸು, ಸ್ತ್ರೀರತ್ನ (ತ್ರಿಜಗತ್ ಸಾಶ್ಚರ್ಯದಂಡ ಸ್ಥಪತಿ ಗೃಹಪತಿ ಛತ್ರ ಯೋಷಿತ್ ಪುರೋಧ ಗಜ ನಿಸ್ತ್ರಿಂಶ ಅಶ್ವ ಕಾಕಿಣಿ ಅಜಿನ ಮಣಿ ಚಮೂನಾಥ ಚಕ್ರಾಧಿನಾಥಂಗೆ: **ಆದಿಪು,** ೧೨. ೮)

ಯೌವನ – [ನಾ] ಹರಯ (ತನು ರೂಪ ವಿಭವ ಯೌವನ ಧನ ಸೌಭಾಗ್ಯ ಆಯುರಾದಿಗಳ್ಗೆಣೆ ಕುಡುಮಿಂಚಿನ ಪೊಳೆಪು ಮುಗಿಲ ನೆಟಲ್ ಇಂದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ: **ಆದಿಪು,** ೯. ೯. ೪೬)

ಯೌವರಾಜ್ಯ – [ನಾ] [ಜೈನ] ಒಂದು ಗರ್ಭಾನ್ವಯ ಕ್ರಿಯೆ, ಯುವರಾಜಪದವಿಯನ್ನು ಹೊಂದುವುದು (ಯೌವರಾಜ್ಯ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ರ

ರಂಗ – [ನಾ] ನರ್ತನರಂಗ (ಧರೆ ರಂಗಂ ಗಗನಂ ಮನೋಹರತರಂ ನಾಟ್ಯಾಲಯಂ ನರ್ತಕಂ ಸುರರಾಜಂ: **ಆದಿಪು,** ೭. ೧೨೭); [ನಾ] ವೇದಿಕೆ (ಸಂಗತದಿಂ ಈಗಳ್ ಇಂತೀ ರಂಗಮೆ ರಣರಂಗಮಾಗೆ ಕಾದುವಂ ಅಳವಂ ಪೊಂಗದಿರ್ ಇದಿರ್ಚು ಅದೇಂ ಗಳ ರಂಗಂಬೊಕ್ಕಾಡುವಂತೆ ಪೆಂಡಿರ್ ಗಂಡರ್: **ಪಂಪಭಾ,** ೨. ೮೦)

ರಂಗಂಬೊಗು – [ಕ್ರಿ] ಪ್ರದರ್ಶನ ನೀಡಲು ವೇದಿಕೆಯನ್ನು ಪ್ರವೇಶಿಸು (ನಾಟ್ಯವಿದಯಾಚಾರ್ಯನಂ ಪೋಲ್ತು ರಂಗಂಬೊಕ್ಕು ಲೋಕಾಕಾರಮಂ ಅಭಿನಯಿಪಾಕಾರಂ ನೆಗಟ್ದೆ: **ಆದಿಪು,** ೭. ೧೧೫ ವ)

ರಂಗತ್ – [ಗು] ನರ್ತಿಸುವ, ಕುಣಿಯುವ (ರಂಗತ್ತರಂಗ ವಾರ್ಧಿಚಯಂಗಳ್ ತಂತಮ್ಮ ಮೇರೆಯಂ ದಾಂಟುವೊಡಂ ಗಾಂಗೇಯನುಂ ಪ್ರತಿಜ್ಞಾಗಾಂಗೇಯನುಮೊರ್ಮೆ ನುಡಿದುದಂ ತಪ್ಪುವರೇ: **ಪಂಪಭಾ,** ೧. ೮೪)

ರಂಗಬಲಿ – [ನಾ] ರಂಗೋಲಿ (ಅಂಗಣರಚಿತಮೌಕ್ತಿಕ ರಂಗಬಲಿಯುಂ ಬಲಿಕುಸುಮ ನಿಪತದಳಿಕುಳಾರಬ್ಧಗೀತಮುಂ: **ಆದಿಪು**, ೪. ೫೮ ವ)

ರಂಗಭೂಮಿ – [ನಾ] ವೇದಿಕೆ (ರತ್ನದಿಂ ಬೆರಸಿದ ಬಣ್ಣದೊಳ್ ಮೆಱೆಯೆ ಕಟ್ಟಿಸಿ ಘಟ್ಟಿಸಿ ರಂಗಭೂಮಿಯಂ: **ಪಂಪಭಾ,** ೩. ೪೦)

ರಂಗವಲಿ – [ನಾ] ರಂಗೋಲಿ (ಕತ್ತುರಿಯ ಸಗಣನೀರ್ ಬಿಡುಮುತ್ತಿನ ರಂಗವಲಿ ಮಿಳಿರ್ವ ದೇಗುಲದ ಗುಡಿ .. .. ಮನೆಗಳೊಳೆಲ್ಲಂ: **ಪಂಪಭಾ,** ೩. ೨)

ರಂಗವಲ್ಲಿ – [ನಾ] ರಂಗೋಲಿ (ತಳ್ತು ಕಟ್ಟಿದ ಗುಡಿ ರಂಗವಲ್ಲಿಗಳೆ ದಾಂಗುಡಿಯಂತಿರೆ ಸೂಸೆ ಸೇಸೆಯಂ ಸುದತಿಯರಿಕ್ಕೆ ಚಾಮರಮಂ: **ಪಂಪಭಾ,** ೫. ೧೦೫)

ರಂಗಿತ – [ನಾ] [ಮಗುವಿನ] ಹರಿದಾಟ, ಚಲನೆ (ದರಹಸಿತಂ ಹಸಿತಂ ಸುಂದರಮನ್ಮನಲಪಿತರುಚಿತರಂಗಿತಮೆಂಬೀ ಪರಿವಿಡಿಯ ಬಾಲಕೇಳಿಯೆ ಕರಮೆ ಮರುಳ್ಚಿದುದು ತಾಯುಮಂ ತಂದೆಯುಮಂ: **ಆದಿಪು,** ೮. ೩೮)

ರಂಭಾಮೃದುಸ್ತಂಭ – [ನಾ] ಬಾಳೆಗಿಡದ ಮೃದುವಾದ ಕಾಂಡ (ಮೊಗಂ ಉತ್ಫುಲ್ಲಸರೋಜಹಾಸಿ ನಯನಂ ನೀಲಾಂಬುಜಸ್ಪರ್ಧಿ ಬಾಹುಗಳಾಜಾನುವಿಳಂಬಿಗಳ್ ತೊಡೆಗಳುಂ ರಂಭಾ ಮೃದುಸ್ತಂಭಶೋಭೆಗಳಂ ಗೆಲ್ದುವು: **ಆದಿಪು,** ೧. ೭೪)

ರಂಭಾವನ – [ನಾ] ಬಾಳೆಯ ತೋಟ (ಕೃತಕಗಿರಿಪರೀತ ನೂತಚೂತಲತಾಲಿಂಗಿತ ಶಾತಕುಂಭ ರಂಭಾವನಾಂತರ್ಗತ ಮಣಿಭವನಂಗಳೊಳಂ: **ಆದಿಪು,** ೬. ೧೦೧ ವ)

ರಂಭಾಸ್ತಂಭ – [ನಾ] ಬಾಳೆಯ ಗಿಡದ ಕಾಂಡ (ಅಲ್ಲಿ ನವಮಾಳಿಕಾ ಕುಸುಮಕುಮಾರಿಯರ್ ನವಮಾಳಿಕಾಲತೆಗಳುಮಂ ರಂಭಾಸ್ತಂಭೋಪಮಮಾನ ಊರುಯುಗಳೆಯರ್: **ಆದಿಪು,** ೧೧. ೯೫ ವ)

ರಂಹ – [ನಾ] ವೇಗ (ದ್ವಾದಶಯೋಜನೋಲ್ಲಂಘನ ರಂಹೋನಿವಾಸ ಭೂಮಿಯುಮಪ್ಪ ಪವನಂಜಯಮೆಂಬ ತುರಗರತ್ನಮಂ: **ಆದಿಪು,** ೧೧. ೩ ವ)

ರಕ್ಕಸವಡೆ – [ನಾ] [ರಕ್ಕಸ + ಪಡೆ] ರಾಕ್ಷಸ ಸೈನ್ಯ (ಮೂಱುಂ ಯೋಜನದಳವಿಯ ಸಭಾಮಂಟಪಮನೊಂದು ಲಕ್ಕ ರಕ್ಕಸವಡೆಯಿಂ ಪೊತ್ತು ತರಿ: **ಪಂಪಭಾ,** ೬. ೨ ವ)

ರಕ್ಕಸಿ – [ನಾ] ರಾಕ್ಷಸಿ (ಪೊಱಗಣ್ಗೆ ಸಯ್ದರೆನೆ ತಾವೊಳಗಂ ತವೆ ತೋಡಿ ತಿಂದು ರಕ್ಕಸಿಯರ ಕಂಡ ಕುಂಬಳದ ಮಾಟಿಕ್ಕೆವೊಲಾಗಿರೆ: **ಪಂಪಭಾ,** ೯. ೪೮)

ರಕ್ಕಸಿಯರ ಕಂಡ ಕುಂಬಳ – ರಾಕ್ಷಸಿಯರ ದೃಷ್ಟಿ ಬಿದ್ದ ಕುಂಬಳ, ಹೊರಗೆ ಸರಿಯಾಗಿ ಕಾಣಿಸಿದರೂ ರಾಕ್ಷಸಿಯ ದೃಷ್ಟಿ ಬಿದ್ದು ತಿರುಳು ಕೊಳೆತಿರುವ ಹಾಗೆ (ಪೊಱಗಣ್ಗೆ ಸಯ್ದರೆನೆ ತಾವೊಳಗಂ ತವೆ ತೋಡಿ ತಿಂದು ರಕ್ಕಸಿಯರ ಕಂಡ ಕುಂಬಳದವೊಲಾಗಿರೆ: **ಪಂಪಭಾ,** ೯. ೪೮)

ರಕ್ತಕಂಠೀಜನ – [ನಾ] ಇನಿದನಿಯ ಸ್ತ್ರೀಯರು (ಗೀತಾರಾವದಿಂದಂ ನೆಱೆಯೆ ನೆಱೆಗೊಳಲ್ ರಕ್ತಕಂಠೀಜನಂ ಬಂದಿರೆ ವಂದಿವ್ರಾತಮೆತ್ತಂ ಬಗೆಗೊಳಲಿರೆ ಚೆಲ್ವಾದುದಾಸ್ಥಾನರಂಗಂ: **ಆದಿಪು,** ೨. ೩)

ರಕ್ತತುಳುಂಕು – [ಕ್ರಿ] ಕೋಪದಿಂದ ಕೆಂಪಾಗು (ಉಮ್ಮನೆ ಬೆಮರುತ್ತುಂ ಇರ್ದ ದುಶ್ಶಾಸನನುಮಂ ಕಣ್ಕೆತ್ತಿ ಕಿಱುನಗುವ ಕೂರದರ ಮೊಗಮುಮಂ ತಮ್ಮಣ್ಣನ ಬಿನ್ನನಾದ ಮೊಗಮುಮಂ ಕಂಡು: **ಪಂಪಭಾ,** ೭. ೫ ವ)

ರಕ್ತತೆ – [ನಾ] ಕೆಂಬಣ್ಣ (ತುಂಬಿದ ರಕ್ತತೆಯಿಂ ನಿಜಬಿಂಬಂ ವಾರುಣಿಯನೊಸೆದು ಸೇವಿಸೆ ನಾಣ್ಗೆಟ್ಟಂಬೋಲ್ ತೇಜಂ ಮಸುಳ್ವಿನಂ ಅಂಬರಮಂ ಬಿಸುಟಂ ಆಗಳಂಬುಜಮಿತ್ರಂ: **ಪಂಪಭಾ,** ೩. ೨೩)

ರಕ್ತಮೋಕ್ಷ – [ನಾ] ರಕ್ತದ ಬಿಡುತೆ (ವೃಕೋದರನಿಂ ಆ ರಣರಂಗದೊಳಾದ ದುಷ್ಟದುಶ್ಶಾಸನ ರಕ್ತಮೋಕ್ಷದೊಳೆ ದೋಷವಿಮೋಕ್ಷಂ ಅದೇಕೆ ಕೊಂಡಪೈ: **ಪಂಪಭಾ,** ೧೩. ೬೮)

ರಕ್ತರುಚಿ – [ನಾ] ಕೆಂಪು ಕಾಂತಿ (ಇತ್ತ ವಂದ ಸಂಧ್ಯಾಸಮಯಾತ್ತ ರಕ್ತರುಚಿ ಪಿಂಗೆ: **ಪಂಪಭಾ,** ೩. ೮೧)

ರಕ್ತಾಂಭೋಜ – [ನಾ] [ರಕ್ತ+ಅಂಭೋಜ] ಕೆಂದಾವರೆ (ಯೋಗಾಭ್ಯಾಸದೊಳ್ ಅರೆಮುಗುಳ್ದ ರಕ್ತಾಂಭೋಜದಳ ವಿಳಾಸ ಉಪಹಾಸಿಗಳಪ್ಪ ಕಣ್ಗಳಂ ಒತ್ತಂಬದಿಂ ತೆಱೆದು: **ಪಂಪಭಾ,** ೧೩. ೬೩ ವ)

ರಕ್ತಾಶೋಕ – [ನಾ] ಕೆಂಪು ಅಶೋಕ (ಭವ್ಯಹೃತ್ಕಮಳಕ್ಕಂ ಮುದಮಂ ಜಪಾಪ್ರಸವ ರಕ್ತಾಶೋಕ ಬಂಧೂಕ ಶೋಣಮಣಿ ಜ್ಯೋತಿಗಳೆಕ್ಕೆಯಿಂ ಕುಡೆ: **ಆದಿಪು,** ೧೬. ೩)

ರಜ – [ನಾ] ಧೂಳು (ರಸರಸದ ಬಾವಿ ಮನೆಮನೆಗೆ ಬೇಱೆ ಕಿಸುಗಲ್ಗಳ ರಜದ ಕಣಿವೆರಸು ತೋಱೆ: **ಪಂಪಭಾ,** ೪. ೧೦); [ನಾ] ರಜೋಗುಣ (ಸತ್ತ್ವರಜಸ್ತಮಂಗಳುಂ ಕಾಣಲಾದುವು ಎರಡುಂ ಪಡೆಯೊಳ್: **ಪಂಪಭಾ,** ೧೦. ೬೯); ಪರಾಗ (ಸುರಿವ ಅಜರಪ್ರಸೂನರಜದಿಂ ಕವಿಲಾದ ಶಿರೋರುಹಂ: **ಪಂಪಭಾ,** ೧೨. ೨೨೧)

ರಜಂಬೊರೆ – [ಕ್ರಿ] ಧೂಳಿನಿಂದ ಕೂಡಿರು (ಪರಿಜನಮನಿತುಂ ತುರಿಪದೆ ಪರಿತಂದಿನ್ನೇವೆವೆಂದು ಕಪ್ಪುರದ ರಜಂಬೊರೆದ ಕರಕಾಂಬುವಂ ತಳಿದು: **ಆದಿಪು,** ೪. ೧೩೭)

ರಜಃಕಷಾಯ – [ನಾ] ದೂಳಿನ ಒಗರು (ಅಂತೆ ಗೆಯ್ವೆನೆಂದು ಕೂಜಜ್ಜಳಚರಕುಳ ಕಳರವದೊಳಂ ಕಮಳಕುವಳಯ ರಜಃಕಷಾಯಪರಿಮಳದ ಅಳಿಪಟಳಜಟಿಳಮಾಗಿ: **ಪಂಪಭಾ,** ೮. ೩೭ ವ)

ರಜಃಪಟಲ – [ನಾ] ದೂಳಿನ ಸಮೂಹ (ಎರಡು ರಥದ ಗಾಲಿಯ ಕೋಳಿಂದಾದ ರಜಃಪಟಲಂ ಕವಿದು ಆದಮೆ ತೀವಿದುದು ದಿವಿಜವಧುವಿರ ಕಣ್ಣೊಳ್: **ಪಂಪಭಾ,** ೫. ೭೯)

ರಜಃಪಟಾವೃತ – [ಗು] [ರಜಃಪಟ+ಆವೃತ] ದೂಳೆಂಬ ವಸ್ತ್ರದಿಂದ ಮುಚ್ಚಲ್ಪಟ್ಟ (ಅಂಭೋರುಹರಜಃಪಟಾವೃತವಾರಿಯಂ ಆ ನೃಪತಿ ಕುಡಿಯಲೊಡರಿಸಿದಾಗಳ್: **ಪಂಪಭಾ,** ೮. ೪೬)

ರಜತಗಿರಿ – [ನಾ] ಬೆಳ್ಳಿಯ ಬೆಟ್ಟ (ಸಮುದ್ಧೃತ್ ರಜತಗಿರಿ ತಟ ಸ್ಫಷ್ಟ ಸಂಶ್ಲಿಷ್ಟ ಮೌರ್ವೀನಿನದಂ ಪರ್ವಿತ್ತು ಅಕಾಂಡಪ್ರಳಯ ಘನಘಟಾಟೋಪ ಗಂಭೀರನಾದಂ: **ಪಂಪಭಾ,** ೧೨. ೧೩೭)

ರಜನೀಸಮಯ – [ನಾ] ರಾತ್ರಿಯ ಹೊತ್ತು (ಒಂದು ದಿವಸಂ ರಜನೀಸಮಯದೊಳ್ ಅನರ್ಘ್ಯ ಮರಕತಮಣಿಶಿಲಾ ಸಂಪಾದಿತ ಮೇದಿನೀವಿಭಾಗದೊಳ್: **ಆದಿಪು,** ೫. ೨೨ ವ)

ರಜಸ್ವರ – [ನಾ] ಪರಾಗ (ಸಮೀರನುದಾರಕನೆಂಬ ಕೇತಕೀಪ್ರಸರ ರಜಸ್ವರಪ್ರಕಟಪಾಂಸುಳಮಾದುದು ಮೇಘಕಾಲದೊಳ್: **ಪಂಪಭಾ,** ೭. ೨೨)

ರಜಸ್ವಲೆ – [ನಾ] ಮುಟ್ಟಾದ ಹೆಂಗಸು (ರಜಸ್ವಲೆಯಾಗಿರ್ದಂ .. .. ಮುಟ್ಟಲಾಗದು ಎನೆಯುಂ .. .. ಮುಡಿಯಂ ಪಿಡಿದು: **ಪಂಪಭಾ,** ೭. ೪ ವ)

ರಜಸ್ಸಂಸಕ್ತ – [ಗು] ಪರಾಗದಲ್ಲಿ ಆಸಕ್ತವಾದ (ಪುಷ್ಪಿತ ಹೇಮಪಂಕಜ ರಜಸ್ಸಂಸಕ್ತ ಭೃಂಗಾಂಗನಾನಿಕರಂ ಸಾರಸ ಹಂಸ ಕೋಕಿಳಕುಳಧ್ವಾನೋತ್ಕರಂ ಚೆಲ್ವನಾಯ್ತು: **ಪಂಪಭಾ,** ೫. ೮೦)

ರಜೋಗಂಧ – [ನಾ] ಪರಾಗದ ಸುವಾಸನೆ (ಮಂದಾರವರ್ಷ ನವಮಕರಂದ ರಜೋಗಂಧಬಂಧು ವಿವಿಧಪತಾಕಾ ಸಂದೋಹಾಂದೋಳನಪಟು: **ಆದಿಪು,** ೧೪. ೧೩೪)

ರಜೋಮಯ – [ಗು] ಧೂಳಿನಿಂದ ತುಂಬಿದ (ಅಂತು ಮಹೀಭಾಗಮೆಲ್ಲಂ ಚತುರಂಗಮಯಮುಂ ದಿಗ್ವಿಭಾಗಮೆಲ್ಲಂ ರಜೋಮಯಮುಂ: **ಆದಿಪು,** ೧೧. ೩೫ ವ)

ರಜ್ಜು – [ನಾ] [ಜೈನ] ಒಂದು ಉದ್ದಳತೆ, ಎಂಟು ಹಸ್ತಗಳು (ಏಕರಜ್ಜುಪ್ರಮಾಣಂ ತಿರ್ಯಗಲೋಕಂ: **ಆದಿಪು,** ೧. ೪೮)

ರಟತ್ – [ಗು] ಧ್ವನಿ ಮಾಡುವ (ಲಯಘನಘಟೆಗಳ ಮೊಟಗೆನಿಸೆ ಪೊಟ್ಟಗೆ ಒಡೆದತ್ತು ರಟತ್ ಪಟು ಪಟಹ ಶಂಖ ಭೇರಿಯ ಚಟುಳಿತದಿಂದ ಅತಳಪಟಂ ಅಂಬರಪಟಳಂ: **ಪಂಪಭಾ,** ೧೦. ೬೭)

ರಣಗಟ್ಟಿಲೆ – [ನಾ] [ರಣ+ಕಟ್ಟಿಲೆ] ಯುದ್ಧದ ಕತ್ತಲೆ (ದೆಸೆಗಾಣಲಾಗದು ದಲ್ ಆ ರಣಗಟ್ಟಿಲೆ ಮಂದಮಾದುದೋ: **ಪಂಪಭಾ,** ೧೦. ೧೧೬)

ರಣಸ್ಥಾನ – [ನಾ] ಯುದ್ಧರಂಗ (ಹರಿಯೆಂದಂದಮದಂತೆ ಪಾಂಡುತನಯರ್ ನಿರ್ದೋಷಿಗಳ್ ತಥ್ಯಂ ಇಂತು ರಣಸ್ಥಾನದೊಳ್ ಇನ್ನೆರಟ್ಟುಡಿವೆನೇ: **ಪಂಪಭಾ,** ೧೩. ೯೦)

ರಣಾಗ್ರಹಪ್ರಣಯ – [ನಾ] ಯುದ್ಧಾಪೇಕ್ಷೆಯ ಪ್ರೀತಿ (ಕೆಳರ್ದು ಅಂದುಗ್ರರಣಾಗ್ರಹಪ್ರಣಯದಿಂದಾಗಳ್ ಕುರುಕ್ಷೇತ್ರಮಂ ಕಳವೇಟ್ಟು ಇರ್ವರುಂ ಐಂದ್ರ ವಾರುಣದೆ ವಾಯವ್ಯಾದಿ ದಿವ್ಯಾಸ್ತ್ರಸಂಕುಳದಿಂದ ಒರ್ವರಂ ಒರ್ವರ್ ಎಚ್ಚು: **ಪಂಪಭಾ,** ೧. ೭೯)

ರಣಾನಂದ – [ನಾ] ಯುದ್ಧೋತ್ಸಾಹ (ಕದನೈಕದುರ್ಜಯ ಮದಸ್ಕಂಧ ಪ್ರಯಾಣಕ್ಷಮ ಅವನಿಪಾಳವ್ರಜಂ ಈಗಳ್ ಎಮ್ಮೊಡನೆ ಬರ್ಕೆಂದು ರಣಾನಂದದಿಂ: **ಆದಿಪು,** ೪. ೯೧)

ರಣಿತ – [ನಾ] ಸದ್ದು (ಮಣಿಪಾದುಕಾಪದವಿನ್ಯಾಸ ರಣಿತ ಮಣಿಕುಟ್ಟಿಮಮಂ: **ಲೀಲಾವತಿ,** ೩. ೭೮ ವ); **[ಗು]** ಸದ್ದುಮಾಡುವ (ಮೃದುಪದಂಗಳೊಳ್ ಕಳರವರಣಿತ ಮಣಿನೂಪುರಂಗಳಿಂ ತುಡಿಸಿ: **ಆದಿಪು,** ೭. ೧೦೬ ವ)

ರಣೋದ್ಯತ – [ಗು] ಯುದ್ಧಸಿದ್ಧ (ನಿನ್ನ ಒರಂಟುತನಂ ಕೈಗಟವಾಯ್ತು ಅದಪ್ಪೊಡೆ ಮಹಾಭಾರಾವತಾರಂ ರಣೋದ್ಯತನಾಗು ಎಂಬುದಂ ಎಮ್ಮಂ ಅನ್ಯರವೊಲೇಂ ನೀಂ ಪ್ರಾರ್ಥಿಸಲ್ವೇಟ್ಟುದೇ: **ಪಂಪಭಾ,** ೧೦. ೧೦)

ರತ – [ನಾ] ಸಂಭೋಗ (ಸನ್ನತದಿಂ ರತಕ್ಕೆಳಸಿ ನಲ್ಲಳೊಳೋತು ಒಡಗೂಡಿದೆನ್ನನಿಂತು ಅನ್ನೆಯಂ ಎಚ್ಚುದರ್ಕೆ ಪೆಱತಿಲ್ಲದು ದಂಡಂ: **ಪಂಪಭಾ,** ೧. ೧೧೨)

ರತಾಂತ – [ನಾ] ಸಂಭೋಗದ ಕೊನೆ (ಅಂತು ಬೆಳರ್ತ ಅಧರಂ ಕಣ್ಣಿಂ ತುಳ್ಕುವ ಕೆಂಪು ಸರದ ನಡುಕಂ ಮಿಗೆ ತನ್ನಂತಃಪುರಲಲನೆಯರ್ಗೆ ರತಾಂತದ ವಿಭವಮನೆ ಮಾಡಿ ತಾಂ ಪೊಱಮಟ್ಟಂ: **ಆದಿಪು,** ೧೧. ೧೫೧)

ರತಿ – [ನಾ] ಸಂಭೋಗ (ಮಾಡೆಂ ಪಗಲ್ ರತಿಯಂ ಸ್ತ್ರೀಯರೊಳ್ ಎಂಬುದೊಂದು ನಿಯಮಂ: **ಆದಿಪು,** ೬. ೧೦)

ರತಿತಂತ್ರ – [ನಾ] ಕಾಮಶಾಸ್ತ್ರ (ಸರಭೇದ ರತಿತಂತ್ರ ಇಂದ್ರಜಾಲ ವಿವಿಧವಿದ್ಯೆಗಳೊಳಂ: **ಪಂಪಭಾ,** ೨. ೩೪ ವ)

ರತಿಶ್ರಮ – [ನಾ] ರತಿಕ್ರೀಡೆಯಿಂದಾದ ಆಯಾಸ (ನಲ್ಲಳ ರತಿಶ್ರಮ ವಿಶ್ಲಥ ಕೇಶಪಾಶದೊಳ್ ಸವಸವನಾಗಿ ತೋಱಿದಪುದು: **ಪಂಪಭಾ,** ೫. ೫೧)

ರತಿಶ್ರೀರಮ್ಯ – [ಗು] ರತಿಕ್ರೀಡೆಯ ಸಿರಿಯಿಂದ ರಮ್ಯವಾದ (ಮದಿರೋನ್ಮತ್ತ ನಿಳಿಂಪ ಕಿಂಪುರುಷಕಾಂತಾರಬ್ಧಸಂಗೀತಂ ಒಪ್ಪಿದುದಲ್ತೆ ಸುರಸಿದ್ಧದಂಪತಿರತಿಶ್ರೀರಮ್ಯಹೈಮಾಚಳಂ: **ಪಂಪಭಾ,** ೭. ೭೨)

ರತಿಸ್ವೇದ – [ನಾ] ಸಂಭೋಗದಿಂದ ಉಂಟಾಗುವ ಆಯಾಸದ ಬೆವರು (ಮೃಗಭೂ ಖುದ್ಧ ವಿಳಾಸಿನೀ ಕಬರಿಕಾಬಂಧಗಳಂ ಪೊತ್ತು ಮಲ್ಲಿಗೆಯೊಳ್ ಭಾವಿಸಿ ಧೂಪದೊಳ್ ಪೊರೆದು ತತ್ಕಾಂತಾ ರತಿಸ್ವೇದಬಿಂದುಗಳೊಳ್ ನಾಂದು .. .. ಪಳಂಚಿ ಸುಟಿದತ್ತು ಅಂದೊಂದು ಮಂದಾನಿಳಂ: **ಪಂಪಭಾ,** ೪. ೮೦)

ರತುನ – [ನಾ] [ರತ್ನ] ಬೆಲೆಬಾಳುವ ಹರಳು (ಪಂಚರತುನದೊಳೆ ನೆಱೆದ ಪಸರದಿಂ ತೋರಣಂಗಳೊಳ್ ತೊಡರ್ದ ತಿಸರದಿಂ: **ಪಂಪಭಾ,** ೩. ೨೨)

ರತೋತ್ಸವ – [ನಾ] ಸುರತೋತ್ಸವ, ರತಿಕ್ರೀಡೆ (ಸಂದಹಿಕಟಕಪ್ರಸಾದದೆ ಮನೋಜನುಮಂ ಗೆಲೆವಂದನಾಗಳುಂ ಸಹಜಮನೋಜನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ: **ಪಂಪಭಾ:** ೧. ೪)

ರತ್ನಕರಂಡಕ – [ನಾ] ರತ್ನದ ಬುಟ್ಟಿ (ಭರತನಾಥದೂತಂ ಆತ್ಮಪಾರ್ಶ್ವಚರ ಕರತಳದಿಂ ಉಪಾಯನರತ್ನಕರಂಡಕಮಂ ಕೊಂಡು: **ಆದಿಪು,** ೧೪. ೪೫ ವ)

ರತ್ನಕುಂಡಲ – [ನಾ] ರತ್ನಗಳಿಂದ ಮಾಡಿದ ಕಿವಿಯ ಆಭರಣ (ಇವು ರತ್ನಕುಂಡಲಂ ಜಿತರವಿಮಂಡಲಂ ಇವು ತುಡಲ್ಕೆ ಯೋಗ್ಯಮೆ ನಿನಗೆ: **ಆದಿಪು,** ೧೨. ೧೦೭)

ರತ್ನತರು – [ನಾ] ರತ್ನಗಳನ್ನು ಬಿಡುವ ಮರ (ಉನ್ಮಿಷತ್ ರತ್ನ ಹಟಚ್ಛಾಯೆಯೊಳ್ ಮುಸುಕಿ ದೇಹಚ್ಛಾಯೆಯುಮಂ ಪುದಿಯೆ ರತ್ನತರುವನೆ ಪೋಲ್ತಂ: **ಆದಿಪು,** ೪. ೪೦)

ರತ್ನತ್ರಯ – ಮೋಕ್ಷಸಾಧನಗಳಾದ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರಗಳು (ಇವಱಿಂ ಸಮ್ಯಗ್ದರ್ಶನಮುಜ್ಜ್ವಳಿಕಂ ಅದುವೆ ಸಮ್ಯಜ್ಞಾನಕ್ಕೆ ಅವಕಾಶಮಕ್ಕುಂ ಅಂತದು ಕವಲ್ತು ಸಮ್ಯಕ್ಚರಿತ್ರಮಂ ಪ್ರಕಟಿಸುಗುಂ: **ಆದಿಪು,** ೫. ೫೯)

ರತ್ನತ್ರಿತಯ – [ನಾ] [ಜೈನ] ರತ್ನತ್ರಯ, ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ ಮತ್ತು ಸಮ್ಯಕ್‌ಚಾರಿತ್ರಗಳು (ಕಣಿ ರತ್ನತ್ರಿತಯಕ್ಕೆ ಇದೇಂ ಪಿರಿದೆನಲ್ ರತ್ನಾಕರಂ ರತ್ನತೋರಣರತ್ನಾಸನ ರತ್ನವಿಭ್ರಮಣ: **ಆದಿಪು,** ೧೬. ೪)

ರತ್ನದೀಪ್ತಿ – [ನಾ] ರತ್ನಗಳ ಕಾಂತಿ (ನೆನೆವ ಮನಂ ಪೆಱಗುಟಿದತ್ತೆನೆ ಬೆಳಗುವ ರತ್ನದೀಪ್ತಿ ಸುರಧನು ನೆಗೆದತ್ತೆನೆ

ನೆಯ್ದಿಲ್ಗೊಳನಲರ್ದತ್ತೆನೆ ಕಣ್ಗಳ ಬಳಗಂ ಆಗಳ್ ಇಂದ್ರಂ ಬಂದಂ: **ಪಂಪಭಾ,** ೧೩೮)

ರತ್ನಪರೀಕ್ಷೆ – [ನಾ] ರತ್ನಗಳ ಮೌಲ್ಯಮಾಪನ, ಚೌಷಷ್ಠಿಕಲೆಗಳಲ್ಲಿ ಒಂದು (ಬಾಹುಬಲಿಗೆ ಕಾಮತಂತ್ರ ಸಾಮುದ್ರಿಕ ಅಯುರ್ವೇದ .. .. ರತ್ನಪರೀಕ್ಷೆಗಳುಮಂ .. .. ಉಪದೇಶಂಗೆಯ್ದಂ: **ಆದಿಪು,** ೮. ೬೦ ವ)

ರತ್ನರಶ್ಮಿಪ್ರಕಟಮಕುಟ – [ನಾ] ರತ್ನಕಾಂತಿಯಿಂದ ಪ್ರಕಾಶಿಸುವ ಕಿರೀಟ (ಪೊಕ್ಕು ಉಡಿವೆಂ ಪಿಂಗಾಕ್ಷನ ಊರುದ್ವಯಮಂ ಉರು ಗದಾಘಾತದಿಂ ನುಚ್ಚು ನೂಱಾಗೆ ಒಡೆವೆಂ ತದ್ರತ್ನರಶ್ಮಿಪ್ರಕಟಮಕುಟಮಂ: **ಪಂಪಭಾ,** ೭. ೧೩)

ರತ್ನವಿಭ್ರಮಣ – [ನಾ] ರತ್ನದ ಬೀಸಣಿಗೆ (ಕಣಿ ರತ್ನತ್ರಯಕ್ಕಿದೇಂ ಪಿರಿದೆನಲ್ ರತ್ನಾಕರಂ ರತ್ನತೋರಣ ರತ್ನಾಸನ ರತ್ನವಿಭ್ರಮಣ ರತ್ನಾಶೋಕ ರತ್ನಪ್ರಭಾಮಣಿ: **ಆದಿಪು,** ೧೬. ೪)

ರತ್ನವಿಸ್ಫುರಿತ – [ಗು] ರತ್ನದಿಂದ ಹೊಳೆಯುತ್ತಿರುವ (ತನ್ನ ರತ್ನವಿಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿನಾಮಮಂ ಸರಸದಿಂ ಆಗಳುಚ್ಚರಿಸಿ: **ಪಂಪಭಾ,** ೫. ೧೦೩)

ರತ್ನಶುಕ್ತಿ – [ನಾ] ಮುತ್ತಿನ ಚಿಪ್ಪು (ಮದನನ ಮಣಿದರ್ಪಣಕಂ ಮದನನದೀರತ್ನಶುಕ್ತಿಗಂ ಸೆಣಸುವುದಂ: **ಆದಿಪು,** ೪. ೪೫)

ರತ್ನಾಕರ – [ನಾ] [ಜೈನ] ಸಾಗರ, ಒಂದು ನೀಳ ಅವಧಿ (ಆ ದಿವಿಜನುಂ ಏಕರತ್ನಾಕರೋಪಮಾಯುರವಸಾನದೊಳ್: **ಆದಿಪು,** ೩. ೫೮ ವ)

ರತ್ನಾವಳಿತಪ – [ನಾ] [ಜೈನ] ಒಂದು ಉಪವಾಸ ಎರಡು ಪಾರಣೆ, ಒಂದು ಉಪವಾಸ ಮೂರು ಪಾರಣೆ, ಒಂದು ಉಪವಾಸ ನಾಲ್ಕು ಪಾರಣೆ, ಒಂದು ಉಪವಾಸ ಐದು ಪಾರಣೆ, ಐದು ಉಪವಾಸ ಒಂದು ಪಾರಣೆ, ನಾಲ್ಕು ಉಪವಾಸ ಒಂದು ಪಾರಣೆ, ಮೂರು ಉಪವಾಸ ಒಂದು ಪಾರಣೆ, ಎರಡು ಉಪವಾಸ ಒಂದು ಪಾರಣೆ, ಒಂದು ಉಪವಾಸ ಒಂದು ಪಾರಣೆ – ಹೀಗೆ ೩೦ ಉಪವಾಸ ಹಾಗೂ ೩೦ ಪಾರಣೆ ಮಾಡುವ ವ್ರತ (ಪ್ರಭಾವತಿಯುಂ ಪದ್ಮಾವತಿ ಆರ್ಯಿಕಾ ಪಾದಮೂಲದೊಳ್ ಉಪಾರ್ಜಿತ ರತ್ನಾವಳಿತಪದೊಳ್ ಅಚ್ಯುತಕಲ್ಪದೊಳ್ ಪ್ರತೀಂದ್ರಪದವಿಯಂ ಪಡೆದಳ್: **ಆದಿಪು,** ೩. ೫೮ ವ)

ರಥಕಲ್ಪ – [ನಾ] ರಥದ ಚಾಲನೆಯ ಬಗೆಗಿನ ಶಾಸ್ತ್ರ (ಅನುಕೂಲ ಶೂರ ರಥಕಲ್ಪಪರಿಣತ ರಥಚೋದಕ ಪರಿಭ್ರಾಜಿತಮುಂ ಆಗಿ: **ಆದಿಪು,** ೧೧. ೧೨ ವ)

ರಥಚೋದಕ – [ನಾ] ಸಾರಥಿ (ಕುದುರೆಯ ಬಣ್ಣದಿಂ ರಥದ ತೋರ್ಕೆಯಿಂ ಎತ್ತಿದ ಚಿತ್ರಕೇತುವೃಂದದ ಕುಱುಪಿಂದ ಉದಗ್ರ ರಥಚೋದಕಚಿಹ್ನದಿಂ ಈತನೆಂಬುದಂ ಅಱಿದು: **ಪಂಪಭಾ,** ೧೦. ೮೭)

ರಥದ – ರಥದವನು (ಹರಿಕೇತು ನಭದೊಳ್ ಮಿಱುಗುವ ಚೆಂಬೊನ್ನ ರಥಧಶ್ವತ್ಥಾಮಂ: ಪಂಪಭಾ, ೧೦. ೫೭)

ರಥಾಂಗ – [ನಾ] ಚಕ್ರವಾಕ (ಕಾಶ್ಮೀರರಾಗಾರುಣಿತಕುಚ ರಥಾಂಗ ಅಭಿಧಾನೋಜ್ಜ್ವಳಂ ನೀಹಾರಪ್ರಸ್ಪರ್ಧಿ ಚಂಚಚ್ಚಮರಜ ಕಳಹಂಸಾಸ್ಪದಂ: **ಆದಿಪು,** ೧೦. ೧೯); [ನಾ] ರಥದ ಗಾಲಿ (ತನ್ನ ರಥಾಂಗಾಹತಿಯಿಂ ಮುನ್ನಮೆ ನೀರ್ ತಳರೆ ಚೆಲ್ವುವರಿದಿತ್ತು ರಥಂ: **ಆದಿಪು,** ೧೨. ೮೪)

ರಥಾಂಗಧರ – [ನಾ] ಚಕ್ರವನ್ನು ಧರಿಸಿದವನು, ವಿಷ್ಣು, ಕೃಷ್ಣ (ನಿಜರಥಮಂ ರಥಾಂಗಧರಂ ಮುನ್ನಮೇಱಿಲ್ವೆಟ್ಟು ಮೂಱುಸೂಟಿಜ್ ಬಲವಂದು ಪೊಡಮಟ್ಟು ರಥಮನೇಱೆ: **ಪಂಪಭಾ,** ೧೧. ೧೩೨ ವ)

ರಥಾಂಗಯುಗ – [ನಾ] ಚಕ್ರವಾಕದ ಜೋಡಿ (ಓಡೆ ತಮೋಬಳಂ ಅಗಿದಳ್ಳಾಡೆ ನಿಶಾಚರಬಲಂ ರಥಾಂಗಯುಗಂಗಳ್ ಕೂಡೆ ತಱತಱನೆ ನೇಸಱ್ ಮೂಡಿದುದು: **ಪಂಪಭಾ,** ೩. ೨೭)

ರಥಾಂಗಾಹತಿ – [ನಾ] ರಥಚಕ್ರದ ಹೊಡೆತ (ಇನ್ನಪ್ಪ ಚಕ್ರವರ್ತಿಗೇನ್ನೀ ಮಾರ್ಗದೊಳೆ ನಡೆಯಿಮೆಂದಱಿಪವೋಲ್ ತನ್ನ ರಥಾಂಗಾಹತಿಯಿಂ ಮುನ್ನಮೆ ನೀರ್ ತಳರೆ ಚೆಲ್ವುವರಿದಿತ್ತು ರಥಂ: **ಆದಿಪು,** ೧೨. ೮೪)

ರಥಿ – [ನಾ] ರಥವನ್ನೇರಿದವನು, ರಥದಲ್ಲಿದ್ದು ಯುದ್ಧಮಾಡುವವನು (ಪರಶುಶರನಿಕರದಿಂ ಕುಮ್ಮರಿಗಡಿದವೊಲ್ ಒಡನೆ ಕಡಿಯೆ ರಥಿಗಳ್ ರಥದಿಂ ಧರೆಗೆೞೆದು: **ಪಂಪಭಾ,** ೧೦. ೮೮)

ರಥಿನೀಪತಿ – [ನಾ] ಸೇನಾಪತಿ (ಎನೆ ರಥಿನೀಪತಿ ಚಕ್ರೇಶನ ಬೆಸನಂ ಪೂಣ್ದು ರಾಗದಿಂದೇಱೆ: **ಆದಿಪು,** ೧೩. ೩೪)

ರದ – [ನಾ] ಹಲ್ಲು, ದಂತ (ಅಜನ ಪದ್ಮವಿಷ್ಟರದ ಎಸಳ್ ಅಂದು ಅರೆಸೀದುವು ಅಖಿಳ ದಿಗ್ದ್ವಿರದರದಂಗಳ್ ಕರಮೆ ಕರಿಪುಗಾಱೆದುವಾಗಳ್: **ಪಂಪಭಾ,** ೧೦. ೩೬)

ರದನ – [ನಾ] ದಂತ (ದಕ್ಷಿಣಕಟಮನೆ ಸಿವುಱುವ ದಕ್ಷಿಣರದನದೊಳೆ ಹಸ್ತಮಂ ಪೇಱುವ ಚೆಲ್ವು ಈಕ್ಷಣಹರಂ: **ಆದಿಪು,** ೧೨. ೫೯)

ರದನೀಂದ್ರ – [ನಾ] ಸಲಗ (ಮಾದ್ಯತ್ ರದನೀಂದ್ರಸ್ಥೂಳದಂತಾಹತಿ ವಿದಳಿತ ಗೋಶೀರ್ಷ ಸಾರದ್ರವಾಮೋದದಿಂ ಎತ್ತಂ ಗಂಧವಾಹಂ ಮಗಮಗಿಸೆ: **ಆದಿಪು,** ೧೩. ೬೮)

ರಪಣ – [ನಾ] [ರೈ+ಪಣ=ರೈಪಣ>ರವಣ] ಜೂಜಿನ ಒತ್ತೆಯ ಹಣ (ರಪಣಮಂ ತೋಱೆಯುಂ ಒತ್ತೆಯಂ ಉಗ್ಗಡಿಸಿಯುಂ ಆಡಿಂ ಎನೆ ಪೆಱತೇನುಪಾಯಮಿಲ್ಲದೆ ಎಮ್ಮಾಳ್ವ ನೆಲನೊತ್ತೆಯೆಂದೊಡೆ: **ಪಂಪಭಾ,** ೭. ೩ ವ)

ರಭಸ – [ನಾ] ಜೋರು, ತೀವ್ರತೆ (ಪ್ರತಿಮೆಗಳಟ್ಟು ಮೊಱಗಿದುದತಿರಭಸದೆ ಧಾತ್ರಿ ದೆಸೆಗಳುರಿದುವು ಭೂತಪ್ರತತಿಗಳಾಡಿದುವು ಒಳಱೆದವು ಅ'ತಿ ರಮ್ಯಸ್ಥಾನದೊಳ್ ಶಿವಾನಿವಹಂಗಳ್: **ಪಂಪಭಾ,** ೧. ೧೩೩); [ನಾ] ಬೊಬ್ಬಾಟ ತೀವ್ರತೆ (ಉಭಯಬಲದ ಅರಸುಗಳ್ ರಣರಭಸಂಗಳ್ವೆರಸು ಮುಳಿದು ಕೆಯ್ವೀಸೆ: **ಪಂಪಭಾ,** ೧೧. ೩೪)

ರಮಣೀಜನ – [ನಾ] ಸುಂದರಿಯರು (ರಮಣೀಯ ರಮಣೀಜನಂ ಬೆರಸು ಪಂಚರತ್ನಂಗಳಿಂ ಕೆದಱೆಸಿ ಸಾಂದಿನ ಸೌಸವದ ಕುಂಕುಮದ ಕತ್ತುರಿಯ ಕದಡಂ ಕದಡಿ: **ಪಂಪಭಾ,** ೫. ೬೦ ವ)

ರಮಣೀಜಾತಿ – [ನಾ] ಸ್ತ್ರೀವರ್ಗ (ರಮಣೀಜಾತಿಯೊಳಲ್ತೆ ನಂಬಿದವರ್ಗಳ್ ಸಮ್ಯಕ್ತ್ವಮಂ ಪುಟ್ಟರಾಱುಂ: **ಆದಿಪು,** ೫. ೬೩)

ರಮಣೀಯ – [ಗು] ಸಂತಸವುಂಟುಮಾಡುವ (ರಮಣೀಯ ರಮಣೀಜನಂ ಬೆರಸು ಪಂಚರತ್ನಂಗಳಿಂ ಕೆದಱಿಸಿ ಸಾಂದಿನ ಸೌಸವದ ಕುಂಕುಮದ ಕತ್ತುರಿಯ ಕದಡಂ ಕದಡಿ: **ಪಂಪಭಾ,** ೫. ೬೦ ವ)

ರಮಿಯಿಸು – [ಕ್ರಿ] ಕ್ರೀಡಿಸು (ಅಲ್ಲಿಯೆ ನಿಂದಲ್ಲಿಯೆ ರಮಿಯಿಸಿದಳ್ ಆಕೆ ಮರುದಾತ್ಮಜನೊಳ್: **ಪಂಪಭಾ,** ೩. ೧೯)

ರಮ್ಯಕ – ಜಂಬೂದ್ವೀಪದ ಏಳು ಜನಪದಗಳಲ್ಲಿ, ಈ ಕ್ಷೇತ್ರದ ದಕ್ಷಿಣಕ್ಕೆ ಹಿಮವತ್ಪರ್ವತವೂ ಉತ್ತರಕ್ಕೆ ಮಹಾಹಿಮವತ್ಪರ್ವತವೂ ಪೂರ್ವಪಶ್ಚಿಮಸಮುದ್ರಗಳೂ ಇರುತ್ತವೆ; ಇದು ಜಘನ್ಯಭೋಗಭೂಮಿ ಒಂದು (ಆ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತ ಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತೈರಾವತಗಳೆಂಬೇೞು ಜನಪದಂಗಳಿಂದಂ: **ಆದಿಪು,** ೧. ೪೮ ವ)

ರಯ್ಯಮಾಗು – [ಕ್ರಿ] [ರಯ್ಯ=ರಮ್ಯ] ಮನೋಹರವಾಗು (ಚೆಲ್ವಾವೆಡೆಯುಮೆಸೆವಿನಂ ರಯ್ಯಮಾಯ್ತಿಂದ್ರಸೈನ್ಯಂ: **ಆದಿಪು,** ೭. ೫೮)

ರವ – [ನಾ] ಶಬ್ದ (ಓಲಗಕ್ಕೆ ಪುಗುವ ಪೊಱಮಡುವ ವಾರವಿಳಾಸಿನಿಯರ ನೂಪುರಂಗಳ ರವಂಗಳೊಳ್ ನೃಪಭವನೋಪವನ ದೀರ್ಘಿಕಾಹಂಸಕುಳಂಗಳ್ ತಳವೆಳಗಾದುವು: **ಪಂಪಭಾ,** ೪. ೪೯ ವ)

ರವಳಿಘೋಷಿಸು – [ಕ್ರಿ] ಸಾಮೂಹಿಕ ವಾದ್ಯ ಧ್ವನಿಮಾಡಿ ಯುದ್ಧಾರಂಭ ಸೂಚಿಸು (ಆಗಳ್ ಎರಡುಂ ಬೀಡುಂಗಳೊಳಂ ಭೋರೆಂದಾರ್ದು ರವಳಿಘೋಷಿಸಿ ಕೊಳ್ಳಿವೀಸಲ್: **ಪಂಪಭಾ,** ೧೦. ೩೫ ವ)

ರವಿತನಯ – [ನಾ] ಸೂರ್ಯನ ಮಗ, ಕರ್ಣ (ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊಂದನೀವೆನೆಂದನೆ ನೊಂದಃ ಎಂದನೆ ಸೆರಗಿಲ್ಲದೆ ಪಿಡಿಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ: **ಪಂಪಭಾ,** ೧. ೧೦೨)

ರಶನಾ – [ನಾ] ಡಾಬು (ವಿದ್ಯಾಧರೀರಮ್ಯನರ್ತನ ರಾಗೋತ್ಥಿತ ಪಾರಿಹಾರ್ಯ ರಶನಾ ಮಂಜೀರಕೋದ್ದಾಮ ನಿಸ್ವನದೊಳ್: **ಆದಿಪು,** ೧. ೭೦)

ರಶ್ಮಿಕಳಾಪ – [ನಾ] ಐವತ್ತನಾಲ್ಕು ಎಳೆಗಳ ಮುತ್ತಿನ ಹಾರ (ವಿಜಯಚ್ಛಂದಹಾರ ದೇವಚ್ಛಂದಾರ್ಧಹಾರ ರಶ್ಮಿಕಳಾಪ ಗುಚ್ಛನಕ್ಷತ್ರಮಾಳಾ ಅರ್ಧಗುಚ್ಛ ಮಾಣವಕ ಅರ್ಧಮಾಣವಕಂಗಳೆಂಬ ಪನ್ನೊಂದು ನಾನಾರತ್ನದ ಸುವರ್ಣಪದಕವಿರಚನಾಭೇದದಿಂ: **ಆದಿಪು,** ೮. ೫೪ ವ)

ರಸ – [ನಾ] ರುಚಿ (ಅಂತು ಪರಮಾತಿಶಯ ರೂಪ ರಸ ಗಂಧ ಸ್ಪರ್ಶ ಗುಣವತ್ ಪರಮಾಣುಪರಿನಿರ್ವೃತಮೂರ್ತಿಯಪ್ಪ ಪರಮನ: **ಆದಿಪು,** ೮. ೬ ವ); [ನಾ] ಸುಖದುಃಖಾದಿ ಅನುಭವಗಳು (ಜೀವಂಗಳ್ ಶುಭಾಶುಭಕರ್ಮಶೈಲೂಷ ಪ್ರೇರಿತಂಗಳಾಗಿ ಚತುರ್ಗತಿಸಂಸಾರಂಗಳೊಳ್ ಅನೇಕರಸ ಪರಿಣತಂಗಳ್: **ಆದಿಪು,** ೧೬. ೫೭ ವ); [ನಾ] ಪಾದರಸ (ಅನ್ನೆಗಂ ಇತ್ತ ಸಂಸಪ್ತಕ ನಿಕುರುಂಬದೊಳಗೆ ಒರ್ವರುಮಂ ಕಿಱುವೀೞಲೀಯದೆ ರಸಮಂ ಕೊಲ್ವಂತೆ ಎಂತಾನುಂ ಕೊಂದು: **ಪಂಪಭಾ,** ೧೨. ೧೨೦ ವ)

ರಸಜ್ಞ – [ನಾ] ರಸಿಕ (ಭೋಗಂಗಳ್ .. .. ಮನೋರಾಗಮನೊದವಿಸದವು ಹೃದ್ರೋಗಮನೊದವಿಸೆ ರಸಜ್ಞನನುಭವಿಸುಗುಮೇ: **ಆದಿಪು,** ೩. ೭೦)

ರಸತ್ತಾರುಗ – [ನಾ] ಗಜಯೋಧ, ಮಾವತಿಗರಲ್ಲದೆ ಆನೆಯ ಮೇಲೆ ಕುಳಿತ ಯೋಧ (ಪೊರಜೆವಿಡಿದು ಕೊರಲ ಬಳೆಗಳೊಳೆ ಕಾಲ್ಗೋದು ಪರಿಯಿಸುವ ರಸತ್ತಾರುಗರುಮಂ: **ಪಂಪಭಾ,** ೧೨. ೬೦ ವ)

ರಸದಾನ – [ನಾ] ವಿಷ ಪ್ರಯೋಗ (ರಸದಾನಾದಿಗಳೊಳ್ ಛಿದ್ರಿಸುವವಮಪ್ಪೊಡೆ ಅವರ್ ಆಪ್ತವಂತರುಂ ಬುದ್ಧಿವಂತರುಂ ಆಗಿ ನೆಗೞ್ದರ್ ಇನ್ನಾವ ಮಾಟಕ್ಕೆಯೊಳ್ ಪಗೆಯಂ ಕೆಯ್ಗೆ ಮಾಡುವುದು ಪೇೞಿಂ: **ಪಂಪಭಾ,** ೬. ೬೭ ವ)

ರಸಪಂಚಕ – [ನಾ] [ಜೈನ] ಸಿಹಿ, ಹುಳಿ, ಕಟು, ಕಷಾಯ, ತಿಕ್ತ ಎಂಬ ಐದು ರುಚಿಗಳು (ಪೂರ್ವಶರೀರಬಂಧನ ಸಂಘಾತವರ್ಣ ರಸಪಂಚಕ ಸಂಸ್ಥಾನ ಸಂಹನನ ಪಂಚಷಟ್ಕಾಂಗೋಪಾಂಗದ್ವಿಕಂ: **ಆದಿಪು,** ೧೬. ೪೯ ವ)

ರಸಪರಿತ್ಯಾಗ – [ನಾ] [ಜೈನ] ಹಾಲು ಮೊಸರು ತುಪ್ಪ ಉಪ್ಪು ಎಣ್ಣೆ ಮುಂತಾದವುಗಳ ರುಚಿಗಳನ್ನು ತ್ಯಜಿಸುವ ನಾಲ್ಕನೆಯ ತಪಸ್ಸು (ಕ್ಷೀರದಧಿಘೃತಲವಣತೈಲಾದಿರಸಂಗಳಂ ಪರಿತ್ಯಾಗಂಗೆಯ್ವ ರಸಪರಿತ್ಯಾಗಮೆಂಬ ನಾಲ್ಕನೆಯ ತಪದೊಳಂ: **ಆದಿಪು,** ೬. ೩೦ ವ)

ರಸಭಾವಾಭಿನಯ – [ನಾ] ರಸಾನುಭವವನ್ನುಂಟುಮಾಡುವಂತಹ ಭಾವಾಭಿನಯ (ರಸಭವಾಭಿನಯಂಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆ ಎನೆ ಪೊಸಯಿಸಿದಳಾಕೆ ನಾಟ್ಯಾಗಮಮಂ: **ಆದಿಪು,** ೯. ೨೫)

ರಸ ರಸಾಯನ – [ನಾ] ರುಚಿಕರವಾದ ಆಹಾರ (ನಾಗಕನ್ನೆಯರುಂ ತಾನುಂ ಮನಂಬುಗಿಸುವಂತೆ ಮಜ್ಜನಂಬುಗಿಸಿ ರಸರಸಾಯನಂಗಳಂ ಊಡುವಂತೆ ದಿವ್ಯಾಹಾರಂಗಳಂ ಮಾಡಿ: **ಪಂಪಭಾ,** ೪. ೧೬ ವ)

ರಸವದ್ಗೇಯ – [ನಾ] ಸಂತಸದಾಯಕವಾದ ಸಂಗೀತ (ಲಲಿತಾಲಂಕರಣಪ್ರಸನ್ನ ರಸವದ್ಗೇಯಂಗಳೊಳ್ ಮೂಡುತುಂ ಮುಬುಗುತ್ತುಂ: **ಆದಿಪು,** ೧. ೮೪)

ರಸವಾದ – [ನಾ] ಕೀಳು ಲೋಹವನ್ನು ಚಿನ್ನವನ್ನಾಗಿಸುವ ವಿದ್ಯೆ (ವಿಪಿನೋಲ್ಲಂಘನ ಸಿಂಧುಯಾನ ನಗಕೂಟಾರೋಹಣಕ್ಲೇಶ ಮಂತ್ರಪದಧ್ಯಾ ಬಿಳಪ್ರವೇಶ ರಸವಾದ ಆಯಾಸದೊಳ್: **ಆದಿಪು,** ೧೬. ೭)

ರಸವಾದಿ – [ನಾ] ರಸಜ್ಞಾನಿ, ಪಾದರಸವನ್ನು ಚಿನ್ನವನ್ನಾಗಿಸಬಲ್ಲವನು (ಸೂಳೆಯಂತೆ ಕಟಿವು ಉಟಿವನಱಿದುಂ ರಸವಾದಿಯಂತೆ ಕಟ್ಟಿಯುಂ ಪೆರ್ಜೋಡೆಯಂತೆ ನುಣ್ಣಿತಂ ವೇೞ್ದು: **ಪಂಪಭಾ,** ೬. ೭೨ ವ)

ರಸಸಿದ್ಧ – [ನಾ] ಕೀಳು ಲೋಹವನ್ನು ಚಿನ್ನವನ್ನಾಗಿಸುವ ರಸವಿದ್ಯೆಯಿಂದ ಸಿದ್ಧವಾಗಿರುವ (ರಸಸಿದ್ಧಮಪ್ಪ ಪೊನ್ನಲತೆಯ ಮೆಯ್ಯುಮಂ ನೀಲದ ತಲೆನವಿರುಮಂ ಪವಳದ ಬಾಯ್ದೆಱೆಯುಮಂ ಮುತ್ತಿನ ಪಲ್ಗಳುಮಂ: **ಪಂಪಭಾ,** ೪. ೭೫ ವ)

ರಸಸಿದ್ಧಿ – **[ನಾ]** ಕೀಳು ಲೋಹವನ್ನು ಚಿನ್ನವನ್ನಾಗಿಸುವ ವಿದ್ಯೆ ಕರಗತವಾಗು (ರಸಸಿದ್ಧಿಯುಮಾಯ್ತೆನೆ ತನ್ನನಾಸೆವಟ್ಟು ಎರೆದರ್ಗೆ ಇತ್ತು ಪೊನ್ಮಯದೆ ಮಾಡಿದನೀ ನೆಲನಂ ಗುಣಾರ್ಣವಂ: **ಪಂಪಭಾ,** ೧೪. ೨೧)

ರಸಾತಳ – **[ನಾ]** ಪಾತಾಳ (ನೀಂ ಇನಿಸು ಕಾಲ ಇರ್ದೆಯಪ್ಪೊಡೆ ಏಂ ತೊದಳೊ ಸರೋವರಾಂಬುವನಿತಂ ತವೆ ತುಳ್ಕಿ ರಸಾತಳಂಬರಂ ಬೆದಕಿಯುಂ ಎಂತುಂ ಅಪ್ಪಳಿಸಿ ಕೊಂದಪೆಂ: **ಪಂಪಭಾ,** ೧೩. ೮೦)

ರಸಿತ – **[ನಾ]** ಮಧುರಧ್ವನಿ (ಪರಿಪತಣ ನಟನ ಮೃದುಕೂಜಿತ ರಸಿತ ದರಹಸಿತ ಕ್ರೇಂಕಾರಾರೋಹಣಾಯೋಧನಾದಿ ನಾನಾ ವಿನೋದಂಗಳೊಳ್: **ಆದಿಪು,** ೮. ૩ ವ)

ರಸೆ – **[ನಾ]** ಪಾತಾಳ (ರಸೆ ಪತ್ತಿತ್ತೆತ್ತಂ ಆಕಾಶದೊಳ್ ಅನಿಲಪಥಂ ಧಾರಿಣೀಚಕ್ರದೊಳ್ ಕಾಳಸೆಗೊಂಡಿತ್ತೆಂಬಿನಂ ಮಂದಯಿಸಿ: **ಆದಿಪು,** ೧೪. ೯೫); **[ನಾ]** ಭೂಮಿ (ರಸೆಯೊಳ್ ಕಾಲಾಗ್ನಿರುದ್ರಂ ಜಲಶಯನದೊಳ್ ಅಂಭೋಜನಾಭಂ ಪೊದಳ್ದು ಆಗಸದಿಂ ಸುತ್ತಿರ್ದ ಅಜಾಂಡೋದರದೊಳ್ ಅಜಂ ಅಡಂಗಿರ್ಪವೋಲ್; **ಪಂಪಭಾ,** ೮. ೮೬)

ರಾಗ – **[ನಾ]** ಅನುರಾಗ ಹಾಗೂ ಸ್ವರಗಳ ಮೇಳೈಕೆ (ಎಸೆದಿರ್ದೆಯೊಳ್ ಪಳಂಚುವ ಕಲಧ್ವನಿಯಿಂ ಪೊಸತೊಂದು ರಾಗಮಂ ಪೊಸಯಿಸಿ: **ಆದಿಪು,** ೨. ೭೭); **[ನಾ]** ಪ್ರೀತಿ (ಭರತಂ ಷಟ್ಖಂಡಭೂವಲ್ಲಭನೆನೆ ಸಿರಿಯಂ ಗೆಂಟಱೊಳ್ ಕೇಳ್ದು ರಾಗಂ ಬೆರೆಸಿರ್ಪೀ ನಣ್ಪೆ ಸಾಲ್ಗುಂ: **ಆದಿಪು,** ೧೪. ೭೭); **[ನಾ]** ಕೆಂಬಣ್ಣ (ಎತ್ತಿದ ಪರಾಗರಾಗ ಮುದಿತ ಆಶಾ ಭಾಸಂ ಉದ್ಯತ್ ಮಧು ಉನ್ಮದಭೃಂಗಧ್ವನಿ ಮಂಗಳಧ್ವನಿಯೆನಲ್: **ಪಂಪಭಾ,** ೫. ೬); **[ನಾ]** ಸಂತೋಷ (ನಿನ್ನೊಂದು ಕಂದಿದ ಮೆಯ್ ಎನ್ನಯ ತೋಳೊಳೊಂದೆ ಸಿರಿಯಂ ನೀನುಯ್ದು ತೊಟಿಾತ್ತಳ್ದು ರಾಗದಿಂ ಎನ್ನೊಳ್ ಸುಕಮಿರ್ಪುದು: **ಪಂಪಭಾ,** ೮. ೬೬)

ರಾಗಂಗಿಡು – **[ಕ್ರಿ]** ಪ್ರೀತಿಯನ್ನು ಕಳೆದುಕೊ (ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ ರಾಗಂಗಿಡದೆ ಕೊಂಡಾಡಿದಂ ಬಲ್ಲಹನಱಿಯೆ ಗುಣಾರ್ಣವಂ ಕವಿತಾಗುಣಾರ್ಣವನಂ: **ಪಂಪಭಾ,** ೧೪. ೫೫)

ರಾಗದಿಂ – **[ಗು]** ಸಂತೋಷದಿಂದ (ಆಗಳ್ ಅನಂತಂ ಅನಂತಫಣಾಗಣಮಣಿಕಿರಣಂ ಎಸೆಯೆ ದುಗ್ಧಾರ್ಣವದೊಳ್ ರಾಗದಿನಿರ್ಪಂತಿರ್ದಂ ಭೋಗಿ ತಟತ್ತಟಿಸೆ ಬೆಳಗೆ ಕೆಯ್ದೀವಿಗೆಗಳ್: **ಪಂಪಭಾ,** ४. ೫३)

ರಾಗಧ್ವನಿ – **[ನಾ]** ರಾಗಚ್ಛಾಯೆ (ಧ್ವನಿಯೆನಿಸಿದ ಅಳಂಕಾರಧ್ವನಿಯೆಸೆವುದಲ್ಲಿ ಮಧುರವಿಪಂಚಧ್ವನಿಯೊಡನೆ ಅನೇಕರಾಗಧ್ವನಿಯೆನೆ ಸೊಗಯಿಪುದು: **ಆದಿಪು,** ೯. ೧೧೯)

ರಾಗರಸ – **[ನಾ]** ಭಕ್ತಿರಸ (ಕೆಲಂಬರ್ ಅರುಣಮಣಿಕುಳ ಪ್ರಭಾಜಾಳ ಜಟಿಳಿತಪಿಂಜರಂಗಳಾಗಿ ನಿಜರಾಗಪ್ರವಾಹಶಂಕೆಯಂ ಮಾಡುವ ಜಳಂಗಳಿಂದಂ: **ಆದಿಪು,** ೮. ೬೯ ವ)

ರಾಗರಸ – **[ನಾ]** ಪ್ರೀತಿರಸ [ಕೆಂಬಣ್ಣ] (ಆ ನವಮಾಳಿಕಾ ಕುಸುಮಕೋಮಳೆ ರಾಗರಸಪ್ರಪೂರ್ಣಂ ಚಂದ್ರನ ಆನನಲಕ್ಷ್ಮಿಯಿಂ: **ಪಂಪಭಾ,** ४. ೭೧); ಸಂತೋಷರಸ (ಚಾರುವೀರಭಟಕೋಟಿಗೆ ರಾಗರಸಂ ಪೊದಳ್ದು ತುಳ್ಕುತ್ತಿರೆ ಬಂದು ಮೊಗೆದಂ ವಿಭು ಗೋಕುಲಮಂ ವಿರಾಟನಾ: **ಪಂಪಭಾ,** ೮. ೯೨)

ರಾಗಿ – **[ನಾ]** ಪ್ರೇಮಿ (ಆಗಳ್ ತನ್ನ ರಾಗರಸಮಂ ರಾಗಿಗಳ್ಗೆಲ್ಲಂ ಪಚ್ಚುಕೊಟ್ಟಂತೆ ಕೆಂಪು ಪತ್ತುವಿಡೆ: **ಪಂಪಭಾ,** ४. ೫೦ ವ)

ರಾಗಿಸು – **[ಕ್ರಿ]** ಸಂತೋಷಿಸು (ಇದಱೊಳ್ ನೀಂ ರಾಗಿಸಲ್ ತಕ್ಕುದು ಏಕೊಳಕೊಳ್ವೆ ಜಡರಂತೆ ಶೋಕರಸಮಂ ಷಟ್ಖಂಡಧಾತ್ರೀಶ್ವರಾ: **ಆದಿಪು,** ೧೬. ೫೫)

ರಾಗೋತ್ಸವ – **[ನಾ]** [ರಾಗ+ಉತ್ಸವ] ಸಂತೋಷದ ಉತ್ಸವ (ಕೂಡಿದುದು ಶ್ರೀಮತಿಗಂ ಮನೋರಥಫಲಂ ಶ್ರೀವಜ್ರದಂತಂಗಂ ಆದುದು ರಾಗೋತ್ಸವಂ: **ಆದಿಪು,** ४. ೧೮)

ರಾಜಕಂಠೀರವ – **[ನಾ]** ರಾಜಸಿಂಹ (ಆ ಕಾಮಕಾರ್ಮುಕ ಯಷ್ಟಿಮುಷ್ಟಿಸಮಾಯತಮಧ್ಯೆಯರೊಳ್ ಆ ರಾಜಕಂಠೀರವ ಮಧ್ಯಂ: **ಆದಿಪು,** ೮. ೨३ ವ)

ರಾಜಕಂಠೀರವಮಧ್ಯ – ರಾಜಸಿಂಹದ ಹಾಗೆ ಸಣ್ಣ ನಡುವಿರುವವನು (ಆ ಕಾಮಕಾರ್ಮುಕಯಷ್ಟಿಮುಷ್ಟಿ ಸಮಾಯುತಮಧ್ಯೆಯರೊಳ್ ಆ ರಾಜಕಂಠೀರವಮಧ್ಯಂ: **ಆದಿಪು,** ೮. ೨३ ವ)

ರಾಜಕ – **[ನಾ]** ರಾಜರ ಗುಂಪು (ಕರಕಳಿತಾರ್ಘ್ಯಪಾದ್ಯನನವದ್ಯಗುಣಂಗೆ ಸಮಸ್ತ ರಾಜಕಂ ಬೆರಸಿದಿರೆಟ್ಟು ರಾಜಗೃಹದಿಂ ಪೊಱಮಟ್ಟು: **ಆದಿಪು,** ೯. ೧३೧); **[ನಾ]** ರಾಜ್ಯ (ಸಪ್ತಾಂಗಮೀ ರಾಜಕಕ್ಕೆ ಅರಸಂ ಧರ್ಮಜನಕ್ಕುಂ ಎಂದು ನಯದಿಂ ನಿಶ್ಚೈಸಿ: **ಪಂಪಭಾ,** ४. ೮)

ರಾಜಕಠೀರವಮಧ್ಯ – **[ನಾ]** ರಾಜಸಿಂಹದ ಹಾಗೆ ಸಣ್ಣ ನಡುವಿರುವವನು (ಆ ಕಾಮಕಾರ್ಮುಕಯಷ್ಟಿಮುಷ್ಟಿ ಸಮಾಯುತಮಧ್ಯೆಯರೊಳ್ ಆ ರಾಜಕಂಠೀರವಮಧ್ಯಂ: **ಆದಿಪು,** ೮. ೨३ ವ)

ರಾಜಕೀರ – **[ನಾ]** ಅರಗಿಳಿ (ಉರಿಯಿಂ ಕರಿಮುರಿಕನಾದುವು ಉನ್ಮದ ಪರಭೃತ ಷಟ್ಚರಣ ರಾಜಕೀರಕುಲಂಗಳ್: **ಪಂಪಭಾ,** ೫. ೯೦)

ರಾಜಗೇಹ – **[ನಾ]** ಅರಮನೆ (ಗೊಟ್ಟಿಗಾಣರಂತಿರೆ ಮಱಿದುಂಬಿ ಮೇಳದವರಂತಿರೆ ಸಾರಿಕೆ ರಾಜಗೇಹದಂತಿರೆ ಕೊಳಂ ಅಲ್ಲಿ ತಾಂ ಅರಸರಂತಿರೆ ತಾಮರಸಂಗಳೊಪ್ಪುಗುಂ: **ಪಂಪಭಾ,** ೫. ೫೮)

ರಾಜಚಕ್ರ – **[ನಾ]** ರಾಜರ ಸಮೂಹ (ತುಡುವ ಬಿಡುವ ಸೂಟ್ಗಿಯ್ಯ ಬೇಗಂಗಳಂ ನಿಟ್ಟಿಸಲಾರ್ಗಂ ಬಾರದಂತಾಗೆ ಅಸದಳಂ ಇಸೆ ತದ್ರಾಜಚಕ್ರಂ ಪೊದಳ್ದಬ್ಬಿಸಿದತ್ತು: **ಪಂಪಭಾ,** ೧೨. ೨೦)

ರಾಜಚಿಹ್ನ – **[ನಾ]** ರಾಜರ ಅಧಿಕಾರ ಸಂಕೇತಗಳಾದ ಛತ್ರ, ಚಾಮರ, ಸಿಂಹಾಸನ, ಮುಕುಟ ಮತ್ತು ರಾಜದಂಡ (ಅಂತು ನಿಜಧವಳಚ್ಛತ್ರಚಾಮರಸಿಂಹಾಸನಾದಿ ರಾಜಚಿಹ್ನಂಗಳುೞಿಯೆ: **ಪಂಪಭಾ,** ೬. ४೦ ವ)

ರಾಜಜಂಬೂ – [ನಾ] ಶ್ರೇಷ್ಠವಾದ ನೇರಿಳೆ, ಜಂಬು ನೇರಿಳೆ (ವಾರಾಕದಂಬ ಸುರಭಿಸಮೀರಂ ಪರಿಪಕ್ವ ರಾಜಜಂಬೂದ್ರುಮವಿಸ್ತಾರಂ: **ಆದಿಪು**, ೧೧. ೮೮)

ರಾಜತ್ – [ಗು] ಹೊಳೆಯುವ (ಅಂತು ಸೊಗಯಿಸುವ ಕುರುಜಾಂಗಣಕ್ಕೆ ರಾಜದ್ರಾಜಧಾನಿಯಾಗಿರ್ದು .. .. ಸೊಗಯಿಸುತಿರ್ದುದು ಕಸ್ತಿನಪುರಮೆಂಬುದು ಪೊೞಲ್: **ಪಂಪಭಾ**, ೧. ೫೭ ವ)

ರಾಜತಾಚಳ – [ನಾ] ಬೆಳ್ಳಿ ಬೆಟ್ಟ (ರಮ್ಯರಾಜತಾಚಳ ತಿಳಕೋಪಮಾನಮೆನೆ ಸಂದಳಕಾಪುರಂ ಒಪ್ಪಿ ತೋಱುಗುಂ: **ಆದಿಪು**, ೧. ೭೧)

ರಾಜತಾದ್ರಿ – [ನಾ] ಬೆಳ್ಳಿ ಬೆಟ್ಟ (ರಾಜತಾದ್ರೀಂದ್ರಶೋಭಾವಿಭವಕ್ಕೆ ಅಚ್ಚಿರ್ತು ತತ್ವರ್ವತನಿಕಟವನೋಪಾಂತದೊಳ್ ಬೀಡುವಿಟ್ಟಂ: **ಆದಿಪು**, ೧೩. ೭೮)

ರಾಜದಾರಕ – [ನಾ] ರಾಜಪುತ್ರ (ಸಹಪಾಂಸುಕ್ರೀಡಾನೇಕ ವಿಭ್ರಮ ಕ್ರೀಡಾರಸೋದಾರ ರಾಜದಾರಕಪರಿವೃತನಾಗಿ: **ಆದಿಪು**, ೮. ೪೧ ವ)

ರಾಜಧಾನಿ – [ನಾ] ರಾಜನ ಆವಾಸನಗರ (ಅಂತು ಕೆಲವು ಪಯಣಂಗಳಿಂದಂ ನಿಜಾನ್ವಯರಾಜಧಾನಿಯಂ ಅಯೋಧ್ಯಾಪುರಮಂ ಎಯ್ದೆವಂದಾಗಳ್: **ಆದಿಪು**, ೧೪. ೨ ವ)

ರಾಜನಾಮ – [ನಾ] ರಾಜನೆಂಬ ಹೆಸರು (ಧರೆಯಂ ಕುಡುವಂದು ಎನಗಂ ಗುರು ತನಗಂ ರಾಜನಾಮಮಂ ಕೊಟ್ಟೊಡೆ ನೋಡಿರೆ ತನಗೀಗಳ್ ರಾಜಾಧಿರಾಜನೆಂದಿಟ್ಟುಕೊಂಡಂ ಅಡಕಿಲ್ವೆಸರಂ: **ಆದಿಪು**, ೧೪. ೭೮)

ರಾಜನ್ಯಕ – [ನಾ] ರಾಜಸಮೂಹ (ಅನೇಕ ರಾಜನ್ಯಕಮಕುಟಸಂಘಟ್ಟ ಉಚ್ಚಳತ್ ಮಣಿಮರೀಚಿಗಳ್ ವಿಳಯಾನಿಳ ವಿಸ್ಫುಲಿಂಗಂಗಳಂತೆ ದೆಸೆದೆಸೆಗೆ ಕೆದಱೆ: **ಆದಿಪು**, ೧೪. ೮೨ ವ)

ರಾಜನ್ವತಿ – [ನಾ] ಒಳ್ಳೆಯ ರಾಜನಿರುವ ನಾಡು (ರಾಜವತಿಯಕ್ಕುಮಲ್ಲದೆ ರಾಜನ್ವತಿಯಾಗದಲ್ತೆ ಧರೆ ಮತ್ತೊರ್ವಂ ತೇಜಸ್ವಿ ಪೊಡವೊರ್ಡೆ ಅದಱಿಂ ರಾಜನ್ವತಿ ಮಾಡು ಧರಣಿಪತೀ: **ಆದಿಪು**, ೧೪. ೨೦)

ರಾಜಪ್ರಸೂತ – [ಗು] ಕ್ಷತ್ರಿಯನು ಹುಟ್ಟಿನಿಂದ ಪಡೆದ (ರಾಜಪ್ರಸೂತವಿಜಯಯಶಶ್ಶರೀರಮಂ ಮೆಱೆವ ರಿಪುಗಳ ರೇಖೆಯೊಳಂ: **ಆದಿಪು**, ೧೪. ೮೪ ವ)

ರಾಜಬೀಜ – ರಾಜರ ವೀರ್ಯ, ಅರಸು ಕುಲ (ಅತ್ತ ಮದಾನ್ವಿತ ರಾಜಬೀಜಸಂಜನಿತಗುಣಂ ಮದಂ: **ಪಂಪಭಾ**, ೧೨. ೯೩)

ರಾಜಮಂದಿರ – [ನಾ] ಅರಮನೆ (ಅಂತು ರಾಜಮಂದಿರಮಂ ಪೊಕ್ಕು ಧರ್ಮಪುತ್ರನಂ ಅಗಲ್ದ ಪನ್ನೆರಡು ಮಾಸದೊಳಾದ ದಿಗ್ವಿಜಯಪ್ರಪಂಚಮುಮಂ .. .. ಅಱಿದು: **ಪಂಪಭಾ**, ೫. ೨೩ ವ)

ರಾಜಮಹಿಷೀ – [ನಾ] ಪಟ್ಟದ ರಾಣಿ (ವಿಜಯರಾಜಮಹಿಷೀ ಮಯೂರಾತಪತ್ರ ಶಂಕಾವಹ ಶಂಕುಸಂಕುಳಂಗಳಿಂದಂ: **ಆದಿಪು**, ೧೪. ೯೦ ವ)

ರಾಜಮಾರ್ಗ – [ನಾ] ರಜೋಮಾರ್ಗ, ರಾಜರ ಹಾದಿ, ಹಿರಿಯ ಹಾದಿ (ಮನುಮಾರ್ಗನಿಪುಣನೆನಿಸಿದ ನಿನಗಾಂ ಈ ರಾಜಮಾರ್ಗಮಂ ತೋಱೆ ಜಗಜ್ಜನಕೆ ನಗೆಯಲ್ತೆ: **ಆದಿಪು**, ೮. ೧೨)

ರಾಜಮಾಷ – [ನಾ] ತುಡುಗುಣಿ ಕಾಳು (ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರ ತಿಳ ಅತಸಿ ಮಸೂರಿಕಾ ಕುಳಿತ್ಥ ಮಾಷ ರಾಜಮಾಷ: **ಆದಿಪು**, ೬. ೭೨ ವ)

ರಾಜಯಕ್ಷ್ಮ – [ನಾ] ಕ್ಷಯರೋಗ (ವಿಚಿತ್ರವೀರ್ಯನುಂ ಅವಾರ್ಯವೀರ್ಯನಾಗಿ ಕೆಲವು ಕಾಲಂ ರಾಜ್ಯಲಕ್ಷ್ಮಿಯಂ ತಾಳ್ದಿ ರಾಜಯಕ್ಷ್ಮತಪ್ತಶರೀರಂ ಆತ್ಮಜವಿಗತಜೀವಿಯಾಗಿ ಪರಲೋಕಪ್ರಾಪ್ತನಾದೊಡೆ: **ಪಂಪಭಾ**, ೧. ೮೦ ವ)

ರಾಜರಾಜ – [ನಾ] ಚಕ್ರವರ್ತಿ (ಮನುಕುಳತಿಳಕಂ ವೃಷಭಾಗ್ರನಂದನಂ ರಾಜರಾಜಂ ಅಧಿರಾಜಂ ಚಕ್ರನಿಧೀಶಂ ಆದಿಭೂಭುಜಂ ಎನೆ ನೆಗಟ್ಟಂ ಭರತಚಕ್ರಿ ವಿಶ್ವಂಭರಯೊಳ್: **ಆದಿಪು**, ೧೫. ೩)

ರಾಜಲೋಕ – [ನಾ] ರಾಜತಂಡ (ಬಾಹುಬಲಿಕುಮಾರನ ಭರತೇಶ್ವರನ ಪಕ್ಷದ ರಾಜಲೋಕಮನೆರಡುಂ ದೆಸೆಯೊಳಂ ಮಧ್ಯಸ್ಥರಾಗಿ ಮಿಡುಕದೆ ನೋಡುತ್ತಿರ್ಪಂತು ನಿಯಮಿಸಿದಾಗಳ್: **ಆದಿಪು**, ೧೪. ೧೦೪ ವ)

ರಾಜವತಿ – [ನಾ] ನಾಮಮಾತ್ರ ರಾಜನಿರುವ ನಾಡು (ರಾಜವತಿಯಕ್ಕುಮಲ್ಲದೆ ರಾಜನ್ವತಿಯಾಗದಲ್ತೆ ಧರೆ ಮತ್ತೊರ್ವಂ ತೇಜಸ್ವಿ ಪೊಡವೊರ್ಡೆ ಅದಱಿಂ ರಾಜನ್ವತಿ ಮಾಡು ಧರಣಿಪತೀ: **ಆದಿಪು**, ೧೪. ೨೦)

ರಾಜವಿದ್ಯೆ – [ನಾ] ರಾಜರಿಗೆ ಬೇಕಾದ ವಿದ್ಯೆ, ಸಮಯಾನುಸಾರಿಯಾಗಿ ಸಾಮ ದಾನ ಭೇದ ದಂಡಗಳನ್ನು ಬಳಸುವ ತಿಳಿವಳಿಕೆ (ನೀನಾದಿರಾಜನ್ಯೆ ನಿನಗಾ ನಾಲ್ಕುಂ ರಾಜವಿದ್ಯೆ ಪುಟ್ಟಿದುವು ಅದಱಿಂ ನೀನೆ ಬೆಸಸುವುದು ನಯಮಂ: **ಆದಿಪು**, ೧೪. ೧೦)

ರಾಜಸುತೆ – [ನಾ] ರಾಜಕುಮಾರಿ (ರಾಜಾಂತರದಿಂದೆ ರಾಜಸುತೆಯಂ ನಯದಿಂದವಳುಯ್ದಳ್: **ಪಂಪಭಾ**, ೩. ೫೭)

ರಾಜಸೂಯ – [ನಾ] ಚಕ್ರವರ್ತಿ ಮಾಡುವ ಒಂದು ಯಾಗ (ಗಾಳು ಗೊರವಂ ತಗುಳ್ದಿ ಪಳಾಳಮಂ ಏನೊಂದನಪ್ಪೊಡಂ ಗಟಪಿದೊಡೆ ಆ ಬೇಳುನುಡಿ ಕೇಳ್ದು ಕೆಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ: **ಪಂಪಭಾ**, ೬. ೨೪)

ರಾಜಾಂಗಣ – [ನಾ] ಅರಮನೆಯ ಅಂಗಳ (ವಿವಿಧಫಲಪ್ರಸೂನ ಪಲ್ಲವತತಿಯಿಂ ತೀವಿದ ರಾಜಾಂಗಣಮಂ ಇಳಾವಂದ್ಯರ್ ಮೆಟ್ಟಲೊಲ್ಲದೆ ಅಲ್ಲಿಯೆ ನಿಂದರ್: **ಆದಿಪು**, ೧೫. ೯)

ರಾಜಾಧಿರಾಜ – [ನಾ] ಚಕ್ರವರ್ತಿ (ರಾಜಾಧಿರಾಜಂ ಅಳಿಯನ ಮೊಗಮಂ ನೋಡಿ: **ಆದಿಪು**, ೪. ೫೪ ವ)

ರಾಜಾವರ್ತ – [ನಾ] ನೀಲ ರತ್ನ (ದ್ರುಪದಂ ಪಚ್ಚೆಯ ನೆಲಗಟ್ಟಿನೊಳಂ ರಾಜಾವರ್ತದ ಕಂಬದೊಳಂ .. .. ವಿವಾಹಗೇಹಮಂ ಸಮೆಯಿಸಿ: **ಪಂಪಭಾ**, ೩. ೭೪ ವ)

ರಾಜಿ – [ನಾ] ಸಾಲು (ಸರಳ ತಮಾಳ ತಾಳ ಹರಿಚಂದನ ನಂದನ ಭೂಜರಾಜಿಯಿಂ ಸುರಿವ ಅಲರೋಳಿ

ತದ್ವನಲತಾಂಗಿಯ ಸೂಸುವ ಸೇಸೆಯಾಯ್ತು: **ಪಂಪಭಾ,** ೫. ೫೨)

ರಾಜೋತ್ತರ – [ನಾ] [ರಾಜ+ಉತ್ತರ] ಚಂದ್ರನ ಹಾಗೆ ಹೆಚ್ಚುವಿಕೆ, ಅಭಿವೃದ್ಧಿ (ಅಂತುತ್ತರಂ ತನಗೆ ಅಳವುಂ ಅದಟುಂ ರಾಜೋತ್ತರಮಾಗೆ ಕಾದಿದೊಡೆ ಶಲ್ಯಂ ವಿರಥನಾಗಿ ಸಿಗ್ಗಾಗಿ: **ಪಂಪಭಾ,** ೧. ೧೧೧ ವ)

ರಾಜ್ಯವಿಳಾಸ – [ನಾ] ಆಳ್ವಿಕೆಯ ಸೊಗಸು (ಉಳ್ಳುಡೆಯಂ ಆಕೆಯೋಸರಿಸುವ ಸೂಸುವ ಹಾರಲತೆಯನಳವಡಿಸುವ ಭಂಗಿಯೆ ಮದನರಾಜರಾಜ್ಯವಿಳಾಸಂ: **ಆದಿಪು,** ೯. ೩೬)

ರಾಜ್ಯಾಶ್ರಮ – [ನಾ] ರಾಜ್ಯದ ನೆಲೆ (ತ್ರಿಲೋಕಗುರು ಧರಾತಳಂ ಪೊಗಟ್ವಿನಂ ಯತ್ಯಾಶ್ರಮದೊಳ್ ನಿಂದಂ ಈ ಧರಾಧಿಪಂ ಗುರುರಾಜ್ಯಾಶ್ರಮದೊಳ್ ನಿಂದಂ: **ಆದಿಪು,** ೬. ೨೪ ವ)

ರಾಜ್ಯೋನ್ನತಿ – [ನಾ] ಒಡೆತನದ ಆಧಿಕ್ಯ (ನಿನ್ನಿಂದಂ ತ್ರಿಭುವನ ರಾಜ್ಯೋನ್ನತಿ ಬಂದೆನಗೆ ಸಾರ್ಗುಮಪ್ಪೊಡಂ ಒಲ್ಲೆಂ: **ಪಂಪಭಾ,** ೧೩. ೨೭)

ರಾಣಿಯವಾಸ – [ನಾ] ಅಂತಃಪುರ (ಭೂಷಣಾಡಂಬರ ಉದ್ಯೋತಿಯಿಂ ಒಪ್ಪಿರ್ದುದ್ವಿಳಾಸಂ ವಿಳಸಿತಕಮಳಾವಾಸಮೀ ಬರ್ಪುದೇಂ ರಾಣಿಯವಾಸಂ: **ಆದಿಪು,** ೧೧. ೪೬)

ರಾಣಿವಾಸ – [ನಾ] ಪೆಂಡವಾಸ, ಅಂತಃಪುರ (ಬಾಣಸಿನ ಮಜ್ಜನದ ರಾಣಿವಾಸಮಂ ಮನೆಗಳುಮಂ: **ಪಂಪಭಾ,** ೫. ೪೭ ವ)

ರಾಧೆ – [ನಾ] ಬೆಸ್ತನ ಹೆಂಡತಿ, ಕರ್ಣನ ಸಾಕು ತಾಯಿ (ಅಂತು ಕಂಡು ಮನಂಗೊಂಡೆತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡೆ ರಾಗಿಸಿ ಸುತನ ಸೂತಕಮಂ ಕೊಂಡಾಡೆ ಅಗುಟ್ಟಿರಲ್: **ಪಂಪಭಾ, ೧. ೯೬ ವ ಮತ್ತು ೧. ೯೭)**

ರಾಧೇಯ – [ನಾ] ರಾಧೆಯ ಮಗ, ಕರ್ಣ (ಬೇಡಿದುದನರಿದುಕೊಳ್ಳೆನೆ ಬೇಡಿದುದಂ ಮುಟ್ಟಲಾಗದೆನಗೆನೆ ನೆಗಟ್ಟಿಲ್ಲಾಡದೆ ಕೊಳ್ಳೆಂದರಿದೀಡಾಡಿದನಿಂದ್ರಂಗೆ ಕವಚಮಂ ರಾಧೇಯಂ: **ಪಂಪಭಾ,** ೧, ೧೦೧)

ರಾಮಮುನಿ – [ನಾ] ಪರಶುರಾಮ (ಭುಜ ವೀರ್ಯ ವಿಕ್ರಮಯುತಂ ಗಂಗಾತ್ಮಜನ್ಮಂ ಜಯಶ್ರೀಲೋಲಂ ಜಮದಗ್ನಿ ರಾಮಮುನಿಯೊಳ್ ಕಲ್ತಂ ಧನುರ್ವಿದ್ಯೆಯಂ: **ಪಂಪಭಾ,** ೧. ೬೮)

ರಾಯ – [ನಾ] ರಾಜ (ರಾಯೆಂಬೀ ಪೆಸರಿಲ್ಲದಂತು ಮುಳಿಸಿಂ ಮುಯ್ಯೇಟು ಸೂಟಿ್ ಇಂತು ಕಟ್ಟಾಯಂ ಪೊಂಪುಟಿವೋಗೆ ತಂದೆಯಟಿವಿಂಗೆ ಆ ಭಾರ್ಗವಂ ಕೊಂದಂ: **ಪಂಪಭಾ,** ೧೨. ೩೮)

ರಾವ – [ನಾ] ಶಬ್ದ (ಕದನ ಆನಕರಾವಂ ಅಗುರ್ವಿನಂ ಉರ್ವು ಪರ್ವುತ್ತಿರೆ ಚಾರುವೀರಭಟಕೋಟಿಗೆ ರಾಗರಸಂ ಪೊದಳ್ದು ತುಳ್ಕುತ್ತಿರೆ: **ಪಂಪಭಾ,** ೮. ೯೨)

ರಾವಾಕುಳ – [ನಾ] ಶಬ್ದದ ಮೊರೆತ (ಕಾಚಮೇಚಕ ಚಯಚ್ಛಾಯಾಂಬುವಿಂ ಗುಣ್ಪಿನಿಂ ಪುದಿದಿರ್ದತ್ತು ಸರೋವರಂ ಬಕಬಲಾಕಾನೀಕ ರಾವಾಕುಳಂ: **ಪಂಪಭಾ,** ೧೩. ೭೨)

ರಾಹು – [ನಾ] ಗ್ರಹಣದಂದು ಸೂರ್ಯಚಂದ್ರರನ್ನು ನುಂಗುವುದೆಂದು ನಂಬಲಾದ ಒಂದು ಗ್ರಹ (ಶಾಳಿಹರಿನೀಲಮಣಿಕಿರಣಾಳಿ ಪೊದಳ್ದೆಸೆಯೆ ರಾಹುಗೆತ್ತು ಅಗಿದಿರ್ದು ಅಟ್ಟಾಳಿಕೆಗಳಲ್ಲಿ ನಾಡೆಯುಂ ಆಳೋಚಂಬೆರಸು ತಡೆದು ನಡೆವಂ ದಿನಪಂ: **ಆದಿಪು,** ೬. ೧೦೫)

ರಾಷ್ಟ್ರವ್ಯಸನ – [ನಾ] ರಾಜ್ಯದ ಆಸೆ ಎಂಬ ಪೀಡೆ (ಸಪ್ತವ್ಯಸನಂಗಳ್ ಅಯ್ವರುಮನೊಂದುಂ ಗೆಲ್ವುವಲ್ಲವು ರಾಷ್ಟ್ರವ್ಯಸನಮಂ ಬಳವ್ಯಸನಮಂ ಪಾರ್ವೆಮಪ್ಪೊಡೆ ಅವು ಮುನ್ನಮಿಲ್ಲ: **ಪಂಪಭಾ,** ೬. ೬೭ ವ)

ರಿಂಗಣ – [ನಾ] ಸಮೂಹ, ಸುತ್ತು (ತಮಂ ಪಿಂಗೆ ದಿನಪತಿಯ ಬೆಳಪ ನಭೋಂಗಣಮಂ ಜ್ಯೋತಿರಿಂಗಣಂ ಬೆಳಗುಗುಮೇ: **ಆದಿಪು,** ೮. ೧೦)

ರಿತು ವಿಮಾನ – [ನಾ] ಋತು ವಿಮಾನ, ಸೌಧರ್ಮೇಂದ್ರನ ವಿಮಾನ (ಇದು ರಿತುವಿಮಾನಮಂ ತನ್ನುದಗ್ರಚೂಳಿಕೆಯೊಳ್ ಆಂತುಕೊಂಡಿರೆ ಸಗ್ಗಕ್ಕಿದು ನಿಚ್ಚಣಿಗೆಗಿಪ್ಪವೊಲಿರ್ದುದಲ್ತೆ: **ಆದಿಪು,** ೨. ೩೧)

ರಿಪು – [ನಾ] ಶತ್ರು (ಇದಱ ಪೆಸರ್ ದೇವದತ್ತಮೆಂಬುದು ನಿನಗೆ ಅಭ್ಯುದಯಕರಂ ಶಂಖಂ ರಿಪುಹೃದಯ ಕವಾಟಪುಟ ವಿಘಟನಂ ನೋಡರಿಗಾ: **ಪಂಪಭಾ,** ೬. ೪)

ರಿಪುಕುರಂಗಕಂಠೀರವ – [ನಾ] ಶತ್ರುಗಳೆಂಬ ಜಿಂಕೆಗಳಿಗೆ ಸಿಂಹಪ್ರಾಯನಾದವನು (ರಿಪುಕುರಂಗಕಂಠೀರವನುಂ ಸಾಹಸಾಭರಣನುಂ ಎಮ್ಮನ ಗಂಧವಾರಣನುಂ ಪಡೆಮೆಚ್ಚೆ ಗಂಡನುಂ ಪರಸೈನ್ಯಭೈರವನುಂ ಎಂಬ ಪೆಸರ್ಗಳನನ್ವರ್ಥಂ ಮಾಡಿ: **ಪಂಪಭಾ,** ೧೦. ೧೨೪ ವ)

ರಿಪುಗಳಗ್ರಹ – [ನಾ] ಶತ್ರುಗಳ ಕೊರಳು ಹಿಡಿಯುವುದು (ಪೊದಳ್ದ ಲಯಾಂತಕ ತ್ರಿಶೂಲೋಪಮ ಭೀಷಣಭ್ರುಕುಟಿ ಮುನ್ನಮೆ ರೌದ್ರ ಗದಾಯುಧಂಬರಂ ಪೋಪ ಭುಜಾರ್ಗಳಂ ರಿಪುಗಳ ಗ್ರಹಮಾದುದು ಭೀಮಸೇನನಾ: **ಪಂಪಭಾ,** ೭. ೬)

ರಿಪುನೃಪಶಲಭ – [ನಾ] ಶತ್ರು ರಾಜರೆಂಬ ಪತಂಗ (ಆ ಜಾಕವ್ವೆಗಂ ವಸುಧಾಜಯ ಸದ್ವಲ್ಲಭಂಗಂ ವಿಶದ ಯಶೋರಾಜಿತನೆನಿಪ ಅರಿಕೇಸರಿ ರಾಜಂ ತೇಜೋಗ್ನಿಮಗ್ನ ರಿಪುನೃಪಶಲಭಂ: **ಪಂಪಭಾ,** ೧. ೪೧)

ರಿಪುತಂತ್ರಕ್ಷಯಕರ – [ನಾ] ವೈರಿ ಸೈನ್ಯವನ್ನು ನಾಶಮಾಡುವವನು (ಮಂತ್ರಾಕ್ಷರ ನಿಯಮದಿಂ ಅಭಿಮಂತ್ರಿಸಿ ಬರಿಸಿದೊಡೆ ವಾಯುದೇವಂ ಬಂದು ಏಂ ಮಂತ್ರಂ ಪೇೞೆನೆ ಕುಡು ರಿಪುತಂತ್ರಕ್ಷಯಕರನಂ ಎನಗೆ ಹಿತನಂ ಸುತನಂ: **ಪಂಪಭಾ,** ೧. ೧೨೪)

ರುಂದ್ರ – [ಗು] ಭಾರಿ (ಅದೊಂದು ಮಂದಾರದ ಸರಿ ವಿರುವದ್ಭೃಂಗಸಂಗೀತಿ ಚೆಲ್ವಂ ನೀಡಿತ್ತು ಆ ರುಂದ್ರದೇವಾನಕದೊಡನೆ: **ಆದಿಪು,** ೭. ೨೫); **[ಗು]** ವಿಪುಲ (ಸುರಾಸುರೇಂದ್ರಮುನೀಂದ್ರ ರುಂದ್ರಸಭೆಯ ನಡುವೆ ಸಿಂಹಾಸನಮಸ್ತಕದೊಳಿರ್ದ ಜಗತ್ತ್ರಿತಯತಿಲಕನ ಪಾದಪದ್ಮಂಗಳ್ಗೆ: **ಆದಿಪು,** ೧೩. ೮೨ ವ); **[ಗು]** ವಿಸ್ತಾರವಾದ (ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ: **ಪಂಪಭಾ,** ೧. ೧೩)

ರುಚಿ – [ನಾ] ಪ್ರಭೆ, ಕಾಂತಿ (ಪ್ರಳಯಶಿಖಿಶಿಖಾನೀಕಮಂ ವಿಸ್ಫುಲಿಂಗಳುಮಂ ಬೀಱುತ್ತುಂ ಔರ್ವಜ್ವಳನರುಚಿಯುಮಂ ತಾನೆ ತೋಱುತ್ತುಂ: **ಪಂಪಭಾ**, ೧೨. ೨೧೩)

ರುಚಿರ – [ನಾ] ಸವಿಯಾದುದು (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಚಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ**, ೪. ೪೯ ವ)

ರುಚಿರುಳಿತಾಧರಪಲ್ಲವೆ – [ನಾ] ಸುಂದರವಾಗಿ ಬಾಗಿದ ಚಿಗುರಿನಂತಹ ತುಟಿಯವಳು (ಮತ್ತೊರ್ವಳ್ ಅತಿಸಂಭ್ರಮತ್ವರಿತದಿಂ ಮೇಖಳಾಕಳಿತ ರುಚಿರಲುಳಿತಾಧರಪಲ್ಲವೆ ನೋಟ್ಟಿ ದಂಡುಗಳೊಳಂಡುಗೊಂಡು ಸೋರ್ಕಿದಾನೆ ಬರ್ಪಂತೆ ಬಂದು: **ಪಂಪಭಾ**, ೪. ೩೬ ವ)

ರುತಿ – [ನಾ] ಶಬ್ದ (ತಣ್ಣನೆ ತಣಿದು ಕಿವಿಯೊಳಮರ್ದಿನ ಪನಿ ಪನಿವಿನಂ ಎಸೆದರ್ ಅರೆಬರ್ ಅಳಿಕುಳರುತಿಯಿಂ: **ಆದಿಪು**, ೧೧. ೮೧)

ರುತು – [ನಾ] ಋತು (ಈ ಪೊಟ್ತಿಂಗೆ ಈ ರುತುವಿಂಗೆ ಈ ಪಸದನಂ ಇಂತುಟಪ್ಪ ಮೆಯ್ವಣ್ಣಕ್ಕೆ ಇಂತೀ ಪೂವಿನೊಳ್ ಈ ತುಡುಗೆಯೊಳ್ ಈ ಪುಟ್ಟಿಗೆಯೊಳ್ ಬೆಡಂಗುವಡೆದೆಸೆದಿರ್ಕುಂ: **ಪಂಪಭಾ**, ೩. ೪೫)

ರುದಿತ – [ನಾ] ರೋದನ (ಮಾತಡಕಲೊಂದಿದ ದೂದವರಿಲ್ಲ ಅರಣ್ಯರುದಿತಂ ವಲವೆನ್ನೊಲವಿಂದುವಕ್ತ್ರೆಯಾ: **ಪಂಪಭಾ**, ೪. ೭೯)

ರುದ್ರಾವತಾರ – [ನಾ] ರುದ್ರನ ಅಂಶಸಂಭೂತ, ಅಶ್ವತ್ಥಾಮ (ಆ ರುದ್ರಾವತಾರನ ಕೆಲದೊಳ್ ಕಿಕ್ಕಿಱಿಗಿಱಿದ ತಟ್ಟುಱುಗಲ ನಡುವೆ ಪೊನ್ನ ರಥಮನೇಱಿ ನಿಂದಂ: **ಪಂಪಭಾ**, ೧೦. ೫೭ ವ)

ರುಧಿರ – [ನಾ] ರಕ್ತ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ**, ೪. ೪೯ ವ)

ರುಧಿರಚ್ಛಟ – [ನಾ] [ರುಧಿರತ್+ಛಟ] ರಕ್ತರಾಶಿ (ಭಯಂಕರ ಶಿಂಶುಮಾರ ವಿಕಟದಂಷ್ಟ್ರಾ ಕ್ರಕಚಪಾಟ್ಯಮಾನ ನಾರಕನಿಕರ ರುಧಿರಚ್ಛಟ ಅಚ್ಛಾರುಣಿಸಲಿಲ ಹರಿಕಾನಿಕರಕರಾಳೆಯುಂ: **ಆದಿಪು**, ೫. ೮೭ ವ)

ರುಧಿರಮುಖಿ – [ನಾ] ಇಂದ್ರನು ಭೀಮನಿಗೆ ಕೊಟ್ಟ ಗದೆಯ ಹೆಸರು (ಗದೆ ಪೆಸರಿಂ ರುಧಿರಮುಖಿಯೆಂಬುದು ಅಂದು ಅದಂ ಅಧಿಕಬಳಸ್ಥಂಗೆ ಭೀಮಸೇನಂಗಿತ್ತಂ: **ಪಂಪಭಾ**, ೬. ೫)

ರುವತ್ – [ಗು] ಝೇಂಕರಿಸುವ (ರುವತ್ ಭೃಂಗಾಳಿಯಿಂ ಪತ್ತುವಿಟ್ಟುಡುಗಿರ್ದಬ್ಜಮನೆಯ್ದೆ ಪೋಲ್ತುದು ಭವತ್ ವಕ್ತ್ರಾಬ್ಜಂ ಅಬ್ಜಾನನೇ: **ಆದಿಪು**, ೩. ೩೧)

ರೂಕ್ಷ – [ಗು] ಒರಟಾದ, ಕೆದರಿದ (ಮನೋಭವಂಗೆ ಆಳುಮಿರ್ಪವೊಲಿರ್ದ ಅತಿರಕ್ತಾಶೋಕದ ಸುತ್ತಿನೊಳಿರ್ದ ರೂಕ್ಷಾಳಕಂಗಳಂ ಓಸರಿಸುತ್ತುಂ ಮೆಲ್ಲನೆ ಮೇಳಿಸಿ ಕನ್ನೆಯಂ ನುಡಿದಳ್: **ಆದಿಪು**, ೩. ೩೦)

ರೂಪ – [ನಾ] ಕಣ್ಣಿಗೆ ಕಾಣುವ ಆಕಾರ (ಅಂತು ಪರಮಾತಿಶಯ ರೂಪ ರಸ ಗಂಧ ಸ್ಪರ್ಶ ಗುಣವತ್ ಪರಮಾಣು ಪರಿನಿರ್ವೃತಮೂರ್ತಿಯಪ್ಪ ಪರಮನ: **ಆದಿಪು**, ೮. ೬ ವ); [ನಾ] ಚೆಲುವು (ತನು ರೂಪ ವಿಭವ ಯೌವನ ಧನ ಸೌಭಾಗ್ಯ ಆಯುರಾದಿಗಳ್ಗೆಣೆ ಕುಡುಮಿಂಚಿನ ಪೊಳೆಪು ಮುಗಿಲ ನೆಟಿಲ್ ಇಂದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ: **ಆದಿಪು**, ೯. ೪೬)

ರೂಪಗರ್ಭ – [ನಾ] ಸ್ವರೂಪವನ್ನೊಳಗೊಂಡ (ಭಗವಜ್ಜನ್ಮಾಭಿಷೇಕ ಸಂಬಂಧಿಯಾಗೆ ತನ್ನ ಪೊಸತೆ ಸಮೆದ ಸಮವಕಾರ ರೂಪಕಮುಂ ದಶಾವತಾರರೂಪಗರ್ಭ ಸಂದರ್ಭಂಗಳಪ್ಪ ಶೇಷಾಶೇಷರೂಪಕಂಗಳುಮಂ: **ಆದಿಪು,** ೭. ೧೧೫ ವ)

ರೂಪಪರಾವರ್ತನ – [ನಾ] ರೂಪವನ್ನು ಬದಲಾಯಿಸುವುದು (ರೂಪಪರಾವರ್ತನದಿಂ ವಿರಾಟಪುರಮಂ ಪೊಕ್ಕಿರ್ದು ಅದಂ ನೀಗೆಮೇ: **ಪಂಪಭಾ**, ೮. ೫೦)

ರೂಪಲಂಪಟವಿಟ – [ನಾ] ರೂಪದಲ್ಲಿ ತೀವ್ರಾಸಕ್ತಿ ಹೊಂದಿದ ರಸಿಕ (ಸೋಲ್ತೊಱಲ್ದು ನಡೆ ನೋಟ್ಪೆಡೆಯೊಳ್ ಭವದೀಯ ರೂಪಲಂಟವಿಟರಂ ಮರುಳ್ಗೊಳಿಸಿತು ಉತ್ಕಟ ಮೋಹತಮಃಪಟಂ ಪಟಂ: **ಆದಿಪು**, ೩. ೯೦)

ರೂಪಟೆ – [ಕ್ರಿ] ವಿರೂಪಗೊಳ್ಳು (ಇನರಥಹತಿಯಿಂ ನೆಗೆದ ಗಗನಧಾತುಸ್ಥಳಿರಜಂಗಳಿಂ ರೂಪಟೆದತ್ತೆನೆ ಸಂಜೆ ಕೆಂಪನುಟೆದಿರೆ: **ಆದಿಪು,** ೧೬. ೯೬)

ರೂಪಾಂತರಕ್ಕೊಯ್ – [ಕ್ರಿ] ಆಕಾರ ಬದಲಾವಣೆ ಮಾಡು, [ಬೂದಿಮಾಡು] (ರೂಪಾಂತರಕ್ಕೊಯ್ದು ಭಾಸುರದಿಂ ತತ್ಸುರರಾಜನಂದು ಪಿರಿದೊಂದುತ್ಸಾಹಮಂ ಮಾಡಿದಂ: **ಆದಿಪು,** ೧೬. ೫೨)

ರೂಪು – [ನಾ] ಆಕಾರ (ಒಲಿಸುವ ರೂಪು ಗಾಡಿಯೊಳೊಡಂಬಡೆ ಗಾಡಿ ವಿಳಾಸದೇಟ್ಗೆಯೊಳ್ ನೆಲಸೆ ವಿಳಾಸಂ: **ಆದಿಪು**, ೧. ೭೨)

ರೂಪುಗರೆ – [ಕ್ರಿ] ರೂಪ ಮರೆಸು, ವೇಷ ಹಾಕು (ಪಾಂಚಾಳರಾಜ ತನೂಜೆಯುಂ ರೂಪುಗರೆದು ಸೈರಂಧ್ರೀವೇಷದೊಳ್: **ಪಂಪಭಾ**, ೮. ೫೫ ವ)

ರೂಪುವೋಗು – [ಕ್ರಿ] ಆಕಾರವನ್ನು ಕಳೆದುಕೊ (ಪೊದಳ್ದಾಜ್ಞೆಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳಾರಾ ಪಾಂಡುರಾಜಂಬರಂ: **ಪಂಪಭಾ,** ೧. ೧೧೦)

ರೂಪ್ಯಮಹೀಧರೇಂದ್ರ – [ನಾ] ಬೆಳ್ಳಿಯ ಬೆಟ್ಟ (ಐಶ್ವರ್ಯಾವಸಥಂ ರೂಪ್ಯಮಹೀಧರೇಂದ್ರಂ ಎನೆ ಪೂಣ್ದ ಆವಂಗಂ ಅಂತೆಯ್ದೆ ಬಣ್ಣಿಸಲ್ಕೇಂ ಬರ್ಕುಮೇ: **ಆದಿಪು**, ೧. ೬೯)

ರೂಪ್ಯಾಚಲ – [ನಾ] ಬೆಳ್ಳಿ ಬೆಟ್ಟ, ಹಿಮಾಲಯ (ಇನ್ನಿಲ್ಲಿ ರೂಪ್ಯಾಚಲಮಂ ಪಾಯ್ವುತ್ತರಾರ್ಧಕ್ಕೆಮಗೆ ನಡೆವ ಸಾಮಗ್ರಿಯಂ ಮಾಡಲೀಗಳ್ ನೆಲೆ: **ಆದಿಪು**, ೧೩. ೨೦)

ರೇಖೆ – [ನಾ] ಗತ್ತು, ಠೀವಿ (ರಾಜಪ್ರಸೂತವಿಜಯಯಶಶ್ಶರೀರಮಂ ಮೆಱೆವ ರಿಪುಗಳ ರೇಖೆಯೊಳಂ ಬಗೆಯದೆ ನಿಮ್ಮ ಕಾರ್ಯಮಂ ಬಗೆಯಿಂ: **ಆದಿಪು**, ೧೪. ೮೪ ವ)

ರೇಚಕ – [ನಾ] ನೃತ್ಯದಲ್ಲಿ ಕೈಚಾಚುವುದು (ಕರಣಂ ರೇಚಕಂ ಅಂಗಹಾರಂ ಇನಿತೆಂದೋದುತ್ತುಮಿರ್ಪುದದು ಅತ್ತಿರಲಿ: **ಆದಿಪು**, ೭. ೧೨೦)

ರೇಚಕೋತ್ಥಾನಿಳ – [ನಾ] [ರೇಚಕ+ಉತ್ಥ+ಅನಿಳ] ನಿಃಶ್ವಾಸ (ತಾರಕಾಸಂಕುಳಂ ತೋಳ್ಗಳದೊಂದಳ್ಳೇಜೆರ್ನೊಳ್ ಪೂವಲಿವೊಲುದುರ್ವಿನಂ ವಾರ್ಧಿಗಳ್ ರೇಚಕೋತ್ಥಾನಿಳ ತೀವ್ರಾಘಾತದಿಂದುಚ್ಚಲಿನಂ: **ಆದಿಪು**, ೧೩. ೧೨೧);

ರೇಣುಕಾನಂದನ – [ನಾ] ಪರಶುರಾಮ (ನಿಜಭುಜಶಕ್ತಿಯಂ ಪ್ರಕಟಂ ಮಾಡಲೆಂದು ರೇಣುಕಾನಂದನನಲ್ಲಿಗೆ ಪೋಗಿ: **ಪಂಪಭಾ**, ೧. ೧೦೩ ವ)

ರೈಧಾರೆ – [ನಾ] ಚಿನ್ನದ ಮಳೆ (ಸುರತೂರ್ಯಧ್ವಾನಮೆಯ್ದುರ್ಪಲರ ಸರಿ ಪೊದಳ್ದಿರ್ದ ರೈಧಾರೆ ದೇವೇಂದ್ರಹೋದಾನಪ್ರಸಿದ್ಧಧ್ವನಿ: **ಆದಿಪು**, ೪. ೯೮)

ರೈವೃಷ್ಟಿ – [ನಾ] ಕನಕವೃಷ್ಟಿ, ಚಿನ್ನದ ಮಳೆ (ಧನದಂ ಕಾಂಚನಪಂಚರತ್ನಮಯಮಂ ರೈವೃಷ್ಟಿಯಂ ಮಾಡುವಲ್ಲಿ: **ಆದಿಪು**, ೭. ೨೪)

ರೋದೋಂತ – [ನಾ] ದಿಗಂತ (ರೋದೋಂತಂ ಕೂಡೆ ರತ್ನೋಜ್ಜ್ವಳಗಿರಿಕುಳದಿಂ ತೂಂತನಿಟ್ಟಂತೆ ನೀಲಾಂಭೋದಂಗಳ್ ಕೂಡೆ: **ಆದಿಪು**, ೧೪. ೯೭)

ರೋದೋವಿವರ – [ನಾ] ಆಕಾಶದ ಬಿಲ, ಭೂಮಿ ಆಕಾಶಗಳ ನಡುವಣ ಪ್ರದೇಶ (ಪ್ರಚಂಡಪ್ರಳಯ ಘನಘಟಾ ರಾವದಿಂದಾರ್ದು ಬಾಣಾವಲಿಯಿಂದಂ ಪೂಟಿ ರೋದೋವಿವರಮನೊದವಿತ್ತೊಂದು ಘೋರಾಂಧಕಾರಂ: **ಪಂಪಭಾ**, ೧೧. ೧೪೮)

ರೋಮಕೂಪ – [ನಾ] ಮೈಕೂದಲ ಕುಳಿ (ಇಡಿದಿರೆ ರೋಮಕೂಪದೊಳಗೆ ಉರ್ಚಿದ ಸಾಲ ಸರಲ್ಗಳುಂ ತೆಱಂಬಿಡಿದಿರೆ ಬೆಟ್ಟು ಒರ್ಗುಡಿಸಿದಂತೆ ನೆಱಿಲ್ದಿರೆ: **ಪಂಪಭಾ**, ೧೩. ೬೨)

ರೋಮಾಂಕುರ – [ನಾ] ರೋಮಾಂಚನ, ಪುಲಕ (ಆತನ ಮೇಲ್ವಾಯೆ ರಾಗಿಸಿ ರೋಮಾಂಕುರಂ ಒಗೆದಂತೆ ಒಗೆದ ಕಳಿಕಾಂಕುರಂಗಳುಂ: **ಪಂಪಭಾ**, ೨. ೧೨ ವ)

ರೋಮಾಂಚಕ – [ನಾ] ರೋಮಾಂಚನಗೊಳ್ಳುವುದು (ಕಾಮಗ್ರಹ ಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭಕಂಪಸ್ವೇದವೈವರ್ಣ್ಯಸಂತಾಪನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ**, ೪. ೫೯ ವ)

ರೌದ್ರ – [ನಾ] ಭಯಂಕರವಾದುದು (ಅಧಿಕರಿಪುನೃಪಬಳ ನವರುಧಿರಜಳಸ್ಫುರಿತರೌದ್ರಮೀ ಈ ಗದೆ: **ಪಂಪಭಾ**, ೬. ೫); ಭಯಂಕರನಾದವನು (ಏಕಾದಶರುದ್ರರೊಳಗೆ ತುತ್ತತುದಿಯ ರುದ್ರನುಂ ರೌದ್ರನುಂ ಅಪ್ಪ ಅಶ್ವತ್ಥಾಮಂ ಏವದೊಳ್ ಕಣ್ಗಾಣದೆ ಮಾರ್ಕೊಂಡು ವಿಕ್ರಮಾರ್ಜುನನಂ: **ಪಂಪಭಾ**, ೧೩. ೩೯ ವ)

ರೌದ್ರಧ್ಯಾನ – [ನಾ] [ಜೈನ] ಕೆಟ್ಟುದರಲ್ಲಿ ಕಾಣುವ ಸಂತೋಷ; ಇದರಲ್ಲಿ ಹಿಂಸಾನಂದ, ಮೃಷಾನಂದ, ಸ್ತೇಯಾನಂದ, ಪರಿಗ್ರಹಾನಂದ ಎಂಬ ನಾಲ್ಕು ಬಗೆ (ಬಹ್ವಾರಂಭ ಸುರಂಭ ರೌದ್ರಧ್ಯಾನಪರಿಣತಂ: **ಆದಿಪು**, ೨. ೧೧ ವ)

ರೌದ್ರಶರ – [ನಾ] ಭಯಂಕರ ಅಸ್ತ್ರ (ಕೊಂತಿಗೆ ತನ್ನ ನುಡಿದ ನುಡಿವಳಿಯಂ ನೆನೆದು ಪುರಿಗಣೆಯ ದೊಣೆಗೆ ಕೆಯ್ಯಂ ನೀಡದೆ ರೌದ್ರಶರದ ದೊಣೆಗೆ ಕೆಯ್ಯಂ ನೀಡಿದಾಗಳ್: **ಪಂಪಭಾ**, ೧೨. ೧೯೦ ವ)

ರೌದ್ರಶಾಪ – [ನಾ] ಭಯಂಕರವಾದ ಶಾಪ (ಒಱಲ್ದು ನಲ್ಲಳೊಳ್ ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋಗಿನ್ನೆನೆ ರೌದ್ರಶಾಪಪರಿತಾಪವಿಳಾಪದೊಳಾ ಮಹೀಶ್ವರಂ: **ಪಂಪಭಾ**, ೧. ೧೧೨)

ರೌದ್ರಸಾಧನ – [ನಾ] ಭಯಂಕರವಾದ ಸೈನ್ಯ (ತದ್ಗಿರೀಂದ್ರಕಂದರ ಕನಕಾಚಳಂಗಳ್ ಎನಿತುಂಟು ಅನಿತಂ ತವೆ ಹೇಮರೇಣುಗಳ್ವೆರಸು ಕಡಂಗಿ ಪೊತ್ತು ನಡೆದಿತ್ತು ಘಟೋತ್ಕಚ ರೌದ್ರಸಾಧನಂ: **ಪಂಪಭಾ**, ೬. ೩೨)

ರೌಪ್ಯಾಚಳ – [ನಾ] ಹಿಮತ್ಪರ್ವತ (ಇಳಾಚಕ್ರವಿಖ್ಯಾತ ಭೂಭೃತ್ಪ್ರಭು ಚಕ್ರಾಧೀಶನೊಳ್ ಮಚ್ಚರಿಪವೊಲೆಸೆದಿರ್ದತ್ತು ರೌಪ್ಯಾಚಳೇಂದ್ರಂ: **ಆದಿಪು**, ೧೩. ೪೬)

ಲ

ಲಂಕಾಧಿಪತಿ – [ನಾ] ಲಂಕೆಯ ಒಡೆಯ, ರಾವಣ (ತನ್ನ ದೋರ್ಗರ್ವದ ಅಗುರ್ವಂ ಪ್ರಾಕಟಂ ಮಾಡುವ ಬಗೆಯೊಳಿದಂ ಪತ್ತಿ ಕಿಟಿಗ್ತೊತ್ತಿ ಪೊತ್ತು ಎತ್ತಿದೊಡೆ ಇತ್ತಂ ಮೆಚ್ಚಿ ಲಂಕಾಧಿಪತಿಗೆ ಬರವಂ ರಾಗದಿಂ ನೀಳಕಂಠಂ: **ಪಂಪಭಾ**, ೭. ೭೪)

ಲಂಗಿಸು – [ಕ್ರಿ] [ಲಂಘಿಸು] ಹಾರು, ನೆಗೆ (ಪೊಗೆ ಪುಗೆ ಕಣ್ಣಂ ಸಿಂಗಂಗಳ್ ಅಳುರೆ ಗರ್ಜಿಸಿ ಲಂಗಿಸಿ ಪುಡಪುಡನೆ ಪುಟ್ಟಿ ಸತ್ತುವು ಪಲವುಂ: **ಪಂಪಭಾ**, ೫. ೯೨)

ಲಂಪಟ – [ನಾ] ಆಸಕ್ತ, ಕಾಮುಕ (ವಿಷಯಸುಖಾಸ್ವಾದನದೊಳ್ ಲಂಪಟರಿದೇಕೆಯೋ ನರಪಶುಗಳ್: **ಆದಿಪು**, ೧೪. ೧೨೫);

ಲಂಪಳ – [ನಾ] ವಿಷಯಾಸಕ್ತ (ಓವೋ ಲಂಪಳರಪ್ಪೆಮ್ಮಂದಿಗರಂ ಬಗೆವಂದದೆ ಕೊಂದಿಕ್ಕವೆ ಸಕಳವಿಯವಿಷಮವಿಷಂಗಳ್: **ಆದಿಪು**, ೪. ೭೩)

ಲಂಪಳಿಕೆ – [ನಾ] ಲಂಪಟತೆ (ಬಿಸುಡಂ ಮುನ್ನಿನ ತನ್ನ ಲಂಪಳಿಕೆಯಂ ಮತ್ತಂ ಜರಾಜರ್ಜರಂ: **ಆದಿಪು**, ೨. ೪೫)

ಲಂಬ – [ಕ್ರಿ] ಜೋಲುಬಿದ್ದಿರುವ (ಉತ್ತುಂಗ ಪೀನನಿಜಾಂಸಾರ್ಪಿತ ಲಂಬಹಾರನವನಾ ಪಾಂಡ್ಯಂ: **ಪಂಪಭಾ**, ೩. ೫೪)

ಲಂಬಣ – [ನಾ] ಹಾರ (ಸರಿಗೆಗಿವು ಲಂಬಣಕ್ಕಿವು ಬರಗಲೆಗಿವು ಮುಗುಳ್ಗಳೆಮ್ಮ ಮೇಖಳೆಗಿವು ನೂಪುರರಚನೆಗಿಂತೆವೆಂದು ಅದರದಿಂದಂ ಕೊಯ್ದರಾಯ್ದು ದಿವಿಜಾಂಗನೆಯರ್: **ಆದಿಪು**, ೭. ೬೯)

ಲಂಬಣಿಗೆ – [ನಾ] ಲಂಬಣ (ಮಣಿಮಕುಟಂ ಶಿಖರಂ ಲಂಬಣಿಗೆಯ ಪೊಸಮುತ್ತು ನಿರ್ಝರಂ ಮಣಿಕಟಕಂ ಮಣಿಕಟಕಮಾಗೆ ತದ್ಗಿರಿಗೆಣೆಯಾದಂ ತನ್ನ ಪೆಸರೊಳಂ ವಿಜಯಾರ್ಧಂ: **ಆದಿಪು**, ೧೩. ೧೩)

ಲಂಬಮಾನ – [ಗು] ಜೋತುಬಿದ್ದಿರುವ (ಅದು ಅಭ್ಯುದಯಸುಖ ನಿಳಯಂ ಅದು ಮೋಕ್ಷದ ನೆರೆಮನೆ ಲಂಬಮಾನ ಮುಕ್ತಾದಾಮಂ: **ಆದಿಪು**, ೬. ೩೬)

ಲಂಬಸ್ತನ – [ನಾ] ದೊಡ್ಡಮೊಲೆ (ನಾಭಿವಿಲಂಬಮಾನ ಲಂಬಸ್ತನವಿಸ್ರಸ್ತ ಅಂತರೀಯ ಉತ್ತರೀಯ ವೃದ್ಧಧಾತ್ರೀನರ್ತನ ನಿರೀಕ್ಷಣ ಜನತಾಜನಿತಹಾಸನಿವಾಸಮುಂ: **ಆದಿಪು**, ೮. ೩೫ ವ)

ಲಂಬಾಳಕ – [ನಾ] ನೀಳ ಕೂದಲು (ಬಂದು ಕಾಲ್ಗೆಱಗೆ ಲೀಲಾಲಂಬಿ ಲಂಬಾಳಕಾಳಿ ನಿಲುಂಬಿರ್ದುವು ಚಕ್ರವರ್ತಿಯ ಪದಾಂಭೋಜಂಗಳೊಳ್ ಕನ್ನೆಯಾ: **ಆದಿಪು**, ೩. ೪೭)

ಲಂಬೂಷ – [ನಾ] ಏಳು ಎಳೆಗಳ ಹಾರ (ಮುಕ್ತಾಫಳಲಂಬೂಷಂಗಳಂ ಬಿತ್ತರಿಸನವರತಂ ರಂಗದೊಳ್ .. ... ರಯ್ಯಮಾಯ್ತತ್ತಮಿತ್ತಂ: **ಆದಿಪು**, ೧೦. ೪೭)

ಲಕುಟ – [ನಾ] ದೊಣ್ಣೆ (ಪಾಪಸತ್ವಂಗಳ್ ಕಾಡೆ ಲಕುಟಯಷ್ಟ್ಯಾದಿ ವಿಧಿಯನುಪದೇಶಂಗೆಯ್ದಾತಂ ಕ್ಷೇಮಂಧರನೆಂಬ ಪೆಸರಂ ಪಡೆದಂ: **ಆದಿಪು**, ೬. ೫೬ ವ)

ಲಕ್ಕ – [ನಾ] ಲಕ್ಷ ಎಂಬ ಸಂಖ್ಯೆ (ಪಟ್ಟಂಗಟ್ಟಿದ ಇಳಾಧಿನಾಥರೆ ಪಯಿಂಛಾಸಿರ್ವರ್ ಒಳ್ಳಾನೆಗಳ್ ಪಟ್ಟಂಗಟ್ಟಿದುವು ಒಂದು ಲಕ್ಕ ತುರಗಂ ಪತ್ತೆಂಟು ಲಕ್ಕಂ: **ಪಂಪಭಾ**, ೧೦. ೧೧೭)

ಲಕ್ಕಣ – [ನಾ] ಲಕ್ಷಣ (ಬೂದಿ ಜೆಡೆ ಲಕ್ಕಣಂ ತಪಕೆ ಆದುವು ಎರಟಿಸ್ದೊಡೆ ಶರಾಸನಂ ಕವಚಂ ಇದೆಂತಾದುವೋ ಮುತ್ತುಂ ಮೆಟಸುಂ ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ: **ಪಂಪಭಾ**, ೭. ೯೨); [ನಾ] ದುರ್ಯೋಧನನ ಮಗನ ಹೆಸರು (ಲಕ್ಕಣಂ ಮೊದಲಾಗೆ ನೂರ್ವರ್ ಮಕ್ಕಳುಂ ಸುತ್ತಿಜೆದು ಬಳಸಿ ಬರೆ: **ಪಂಪಭಾ**, ೧೦. ೨೭ ವ)

ಲಕ್ಕೆ – [ನಾ] ಲಕ್ಷ ಎಂಬ ಸಂಖ್ಯೆ (ಒಂದೊತ್ತಂ ನಡೆಯಿಸುವುದೊಂದೊತ್ತಿನ ಲಯಕೆ ಲಕ್ಕೆ ತೆಱನಾಡುವುದೇನೆಂದಾಂ ಬಣ್ಣಿಸುವೆನೊ: **ಆದಿಪು**, ೯. ೩೩); [ನಾ] ಗುರಿ, ಉದ್ದೇಶ (ಅತಿವೇಗದಿಂ ಪರಿವ ಪಾಱುವ ಲಕ್ಕೆಯನೊಡ್ಡುವ ಒಳ್ಪು ತನ್ನನೆ ನಡೆ ನೋಡಿಸುತ್ತುಮಿರೆ: **ಆದಿಪು**, ೧೧. ೩೧)

ಲಕ್ಷ್ಮ – [ನಾ] ಕಲಂಕ, ಗುರುತು (ಧವಳಾಪಾಂಗ ವಿಲೋಕನಾಮೃತಮಯಂ ಭ್ರೂಲಕ್ಷ್ಮರಮ್ಯಂ ಮನೋಭವ ರಾಜ್ಯೋದಯಹೇತು: **ಆದಿಪು**, ೬. ೮೮)

ಲಕ್ಷ್ಮಿ – [ನಾ] ಕಾಂತಿ, ಸೊಗಸು (ಜಿನಸವನಾಂಬುವಿನೊಳ್ ಭೋಂಕೆನೆ ಚಂದ್ರಂ ತೇಂಕಿ ಹಂಸವೃದ್ಧನಂ ಇನಿಸಂ ನೆನೆಯಿಸಿ ಕೊಳದೊಳಗಣ ಸಿತವನರುಹಲಕ್ಷ್ಮಿಯುಮಂ ಇನಿಸು ತನಗೊಳಕೊಂಡಂ: **ಆದಿಪು**, ೭. ೯೯); [ನಾ] [ಜೈನ] ಜಿನಜನನಿಯನ್ನು ಅಲಂಕರಿಸಲು ಸೌಧರ್ಮೇಂದ್ರನು ನಿಯೋಜಿಸಿದ ಆರು ಮಂದಿ ದೇವತೆಗಳಲ್ಲಿ ಒಬ್ಬಳು (ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಅಱುವರುಮಂ ಆತ್ಮೀಯ ಗುಣಗಣಮಣಿ ವಿಭೂಷಣಂಗಳಿಂ ಜಿನಜನನಿಯಂ ಅಲಂಕರಿಸಲುಂ ... ಸೌಧರ್ಮೇಂದ್ರಂ ಬೆಸಸುವುದುಂ: **ಆದಿಪು**, ೭. ೩ ವ)

ಲಕ್ಷ್ಮೀದಯಿತಂ – [ನಾ] ಸಿರಿಯೊಡೆಯ (ಜಳಧಿಯುಮಂ ಲಕ್ಷ್ಮೀದಯಿತಂ ನೀರ್ವರಿಯಿಂದಾದಮೆ ಕಿಱಿದೆಂದು ಬಗೆದು ನೋಡಿದನಾಗಳ್: **ಆದಿಪು**, ೧೨. ೭೫)

ಲಕ್ಷ್ಮೀಮತಿ – [ನಾ] [ಜೈನ] ರುಚಿಕಾಚಳದಲ್ಲಿ ವಿಹರಿಸುವ ಎಂಟು ಮಂದಿ ದಿಗಂಗನೆಯರಲ್ಲಿ ಒಬ್ಬಳು (ಕೂಟಾಷ್ಟಕಂಗಳೊಳ್ ರಮಿಯಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬೆಣ್ಬರುಂ ದಿಗಂಗನೆಯರಂ: **ಆದಿಪು**, ೭. ೩ ವ)

ಲಕ್ಷ್ಯ – [ನಾ] ಗುರಿಯ ವಸ್ತು (ಭರತಕುಲತಿಳಕರಿರ್ ವರಶರಾಸನ ವ್ಯಗ್ರಹಸ್ತರಿರ್ ಬಳಯುತರಿರ್ ನೆರೆದಿನಿಬರುಂ ಇರದೆ ಈ ಲಕ್ಷ್ಯಮಂ ಇರದಕ್ಕಟ ಸರದೆ ತೆಗೆಯಲಾರ್ತರುಮಿಲ್ಲಾ: **ಪಂಪಭಾ**, ೨. ೫೨)

ಲಗ್ನ – [ನಾ] ಮದುವೆ (ವಸುಂಧರಾಸೌಂದರಿಯುಂ ತಾನುಂ ಪ್ರಿಯತನಯನ ವಿವಾಹೋತ್ಸವಲಗ್ನಚಿತ್ತರಾಗಿ ಲಗ್ನಮನೆ ಪಾರುತ್ತುಮಿರ್ದರ್: **ಆದಿಪು**, ೪. ೩೦ ವ); [ಗು] ಅಂಟಿಕೊಂಡ (ನರಕನಗರಲಗ್ನ ಆಕಸ್ಮಿಕಾಗ್ನಿ ಸ್ಫುಲಿಂಗಸ್ಫುರತ್ ಅವಿರಳ ಲಾಕ್ಷಾಗೇಹ ಪೂರ್ವೈಕಭಾವ ತ್ವರಿತವಿಚಳತ್ ಅಸ್ಥಿಗ್ರಂಥಿಸಂಸ್ಥಾನಬಂಧರ್: **ಆದಿಪು**, ೫. ೮೯); [ಗು] ಕೂಡಿದ, ಸೇರಿದ (ತತ್ಕಮಳಕಾನನಕಂಟಕಲಗ್ನಪಾದಮಾದವೊಲ್ ಉಡುಗುತ್ತುಂ ಆತ್ಮಕರಮಂ ರವಿ ಪೊರ್ದಿದಂ ಅಸ್ತಶೈಲಮಂ: **ಪಂಪಭಾ**, ೪. ೪೬)

ಲಘು – [ಗು] ಹಗುರ, ಕ್ಷುಲ್ಲಕ (ತಂದೆ ಕುಡೆ ರಾಜ್ಯಮಂ ತೃಣದಿಂದಂ ಲಘುವಾಗೆ ಬಗೆದು ಬಗೆದರ್ ತಾಮುಂ ತಂದೆಯ ಬಗೆದುದಂ: **ಆದಿಪು**, ೪. ೮೮)

ಲಜ್ಜಾಲೋಳಂ – [ನಾ] ಲಜ್ಜೆಯಲ್ಲಿ ಆಸಕ್ತವಾದ (ಮುಕುಳೀಕೃತಂ ಲಳಿತಮಧುರಂ ಲಜ್ಜಾಲೋಳಂ ಸ್ಮರಾಕುಳಿತಂ ಮನಂದಳಿತಂ ಅಪಸನ್ಮುಗ್ಧಂ ಸ್ನಿಗ್ಧಂ ವಿಲೋಕನಮೋಪಳಾ: **ಪಂಪಭಾ**, ೪. ೭೭)

ಲಟಹ – [ನಾ] ಲಾವಣ್ಯ (ಸ್ಫುಟವೈಶಾಖಸ್ಥಾನಂ ಕಟಿತಟವಿನ್ಯಸ್ತ ಹಸ್ತಯುಗನಾಗಿ ಮಹಾಲಟಹಂಬೆರಸಿರ್ದೊಪ್ಪುವ ನಟನಾಕೃತಿ ತಾನೆ ಲೋಕದೊಂದಾಕಾರಂ: **ಆದಿಪು**, ೧. ೪೫)

ಲಟಹನರ್ತನ – [ನಾ] ರಮಣೀಯ ನೃತ್ಯ (ವಾರವಿಲಾಸಿನೀ ಲಟಹನರ್ತನ ಚಂಚಳಕಾಂಚಿದಾಮಮಂ ಜೀರಕಕಿಂಕಿಣೀ ರಣಿತದಿಂ .. .. ಏಂ ಸೊಗಯಿಸಿರ್ದುದೊ: **ಆದಿಪು**, ೮. ೫೦)

ಲತಾಂಗಿ – [ನಾ] ಬಳ್ಳಿಯಂತೆ ಸಪೂರಳಾದವಳು, ಸುಂದರ ಹೆಣ್ಣು (ಮನ್ಮಥಮಹೀಭುಜನೋವದೆ ತೋಱಿಕೊಟ್ಟುದೊಂದಾನೆಯೆ

ತನ್ನನಾನೆಗೊಲೆಗೊಂದಪುದೆಂದು ಲತಾಂಗಿ ಬೆರ್ಚಿದಳ್: **ಪಂಪಭಾ,** ೪. ೫೮)

ಲತಾಂತ – [ನಾ] ಹೂ (ಅಮರಗಣಿಕೆಯರ ಮನಂ ವಿರುವತ್ ಅಳಿನಿಕರದೊಡನಿರದೆ ಎಱಗಿದುವು ಅಮರತರು ಲತಾಂತಾವಳಿಯೊಳ್: **ಆದಿಪು,** ೭. ೬೮)

ಲತಾಗೃಹೋದರ – [ಗು] ಬಳ್ಳಿಮಾಡದ ಒಳಗಡೆ (ವೇಳಾವನ ಲತಾಗೃಹೋದರ ಪುಳಿನಸ್ಥಳಪ್ರದೇಶದೊಳ್ ತೊಟಿಲಲುಂ ಅಟ್ಟೆಯಾಗೆ: **ಪಂಪಭಾ,** ೧. ೧೪೨ ವ)

ಲತಾಪ್ರತಾನ – [ನಾ] ಬಳ್ಳಿಗಳ ಗುಂಪು (ಚಳತ್ ಅನಿಳ ಆಹತ ಕ್ಷುಭಿತ ಭಂಗುರತುಂಗತರಂಗಮಾಳಿಕಾವಳನ ಸಮುಚ್ಚಳತ್ ಮಣಿಗಣ ಆತ್ತ ಮರೀಚಿಲತಾಪ್ರತಾನಸಂವಳಿಯಿತ: **ಪಂಪಭಾ,** ೪. ೨೫)

ಲತಾಭವನ – [ನಾ] ಬಳ್ಳಿಮಾಡ (ಸುರಪನ್ನಗಕಿನ್ನರಸೈನ್ಯಮೆಲ್ಲಂ ಅಂಬಿನ ಮೊನೆಯೊಳ್ ಪಡಲ್ವಡೆ ಲತಾಭವನಂ ಕೃತಕಾಚಳಂಗಳ್ ಎಂಬಿನಿತುಂ ಅವು ಅಟ್ಟೆ ತಟಿಗ್: **ಪಂಪಭಾ,** ೫. ೧೦೪)

ಲತಾಲಲಿತೆ – [ನಾ] ಬಳ್ಳಿಯಂತೆ ಕೋಮಲೆ (ಆಗಳೆ ಮಗನಂ ಪೆತ್ತವೊಲಾಗಿ ಲತಾಲಲಿತೆ ನೊಸಲ ಕಣ್ಬೆತ್ತವೊಲ್: **ಪಂಪಭಾ,** ೯. ೭೫)

ಲತಿಕಾಂಗ – [ನಾ] ಬಳ್ಳಿಮೈ (ಪದೆವೆರ್ದೆ ಬತ್ತೆ ಕೆತ್ತುವಧರಂ ದೆಸೆಗೆಟ್ಟು ಅಲರ್ಗಣ್ಣ ನೋಟಂ ಉಣ್ಮಿದ ಬೆಮರ್ ಓಳಿವಟ್ಟ ನಿಡುಸುಯ್ ತೊದಳಿಂಗೆಡೆಗೊಂಡ ಮಾತು ಕುಂದಿದ ಲತಿಕಾಂಗಂ: **ಪಂಪಭಾ,** ೪. ೬೦)

ಲತೆ – [ನಾ] ಬಳ್ಳಿ (ಲತೆಗಳ್ ಜಂಗಮರೂಪದಿಂದೆ ನೆರದುವೋ ದಿವ್ಯಾಪ್ಸರೋವೃಂದಂ ಈ ಕ್ಷಿತಿಗೇಂ ಇಂದ್ರನ ಶಾಪದಿಂದ ಇೞಿದುವೋ ಪೇೞ್ಂಬ ಶಂಕಾಂತರಂ ಮತಿಗಂ ಪುಟ್ಟುವಿನೆಗಂ: **ಪಂಪಭಾ,** ೪. ೩೯)

ಲಪನ – [ನಾ] ಮುಖಸೌಂದರ್ಯ (ನಗರಲಲನೆಯ ಲಪನಕ್ಕೆ ಕೇಳೀಲೀಲಾಲಲಾಮಲಕ್ಷ್ಮಿಯಂ ತಾಳ್ದಿ: **ಆದಿಪು,** ೬. ೧೦೬ ವ)

ಲಬ್ಧ – [ನಾ] ಸಿಕ್ಕಿದ, ಪಡೆದ (ಸ್ವಪಕ್ಷ ಸ್ಥಾಪನಂಗೆಯ್ದು ಸನ್ಮಾರ್ಗ ಪ್ರಕಾಶದಿಂ ಮಾರ್ಗಪ್ರಭಾವನೆಯಂ ಮಾಡಿ ಸಭಾಸದರಿಂ ಲಬ್ಧಪ್ರಶಂಸನಾಗಿ: **ಆದಿಪು,** ೨. ೨೨ ವ)

ಲಬ್ಧಿತ್ರಯ – [ನಾ] [ಜೈನ] ಕಾಯ, ಕರಣ, ಉಪಶಮ ಎಂಬ ಮೂರು ಲಬ್ಧಿಗಳು (ಅಂತು ತನಗೆ ಕಾಲಲಬ್ಧಿಯುಂ ಕರಣಲಬ್ಧಿಯುಂ ಉಪಶಮಲಬ್ಧಿಯುಂ ಎಂಬ ಲಬ್ಧಿತ್ರಯಂ ದೊರೆಕೊಳೆ: **ಆದಿಪು,** ೩. ೧ ವ)

ಲಬ್ಧೋಪದೇಶ – [ನಾ] ಉಪದೇಶ ಪಡೆದವನು (ನೀಂ ಪೋಗಿ ಕಾಲ್ಗೆಱಗಲೊಡಂ ಕೇವಲಜ್ಞಾನಮಕ್ಕುಂ ಎಂದು ಬೆಸಸಿದೊಡೆ ಲಬ್ಧೋಪದೇಶನಾಗಿ .. .. ಬಂದೆಱಗಿ: **ಆದಿಪು,** ೧೪. ೧೪೩ ವ)

ಲಯ – [ನಾ] ತಾಳಮಾನ (ಪದವಿನ್ಯಾಸದ ತುಱುಗಲ್ ಪೊದಳೆ ಲಯಂಬೆರಸು ರಂಗಮಂ ಬಳಸಿದನಾ ತ್ರಿದಶಾಧಿನಾಥಂ: **ಆದಿಪು,** ೭. ೧೧೯); [ನಾ] ಕೇಡು (ಯುಧಿಷ್ಠಿರಂ ಕೊಟ್ಟ ನನ್ನಿಯ ಬಲದೊಳ್ ತನಗೆ ಲಯಮಿಲ್ಲದುದನಱಿದು ಮೇಗಿಲ್ಲದ ಗೊಡ್ಡಾಟಮಾಡಲ್: **ಪಂಪಭಾ,** ೭. ೪ ವ); [ನಾ] ನಾಶ (ಆದಿತ್ಯಂ ಮಸುಳ್ವನ್ನೆಗಂ ಧ್ವಜಘಟಾಟೋಪಂಗಳಿಂದಂ ಲಯ ಅಂಭೋದಂಗಳ್ ಕವಿವಂತೆವೋಲ್ ಕವಿವುದುಂ: **ಪಂಪಭಾ,** ೧೦. ೯೩); [ನಾ] ಸಾವು (ಹರಿ ನಿಜಯೋಗದಿಂದಱಿದು ತನ್ನಳಿಯಂ ಲಯಮಾದುದಂ: **ಪಂಪಭಾ,** ೧೧. ೧೧೦)

ಲಯಕ್ರೀಡೆ – [ನಾ] ವಿನಾಶದ ಆಟ (ಅನಲಂ ಪರಸುತ್ತುಂ ಆ ಲಯಕ್ರೀಡೆಯೊಳೀ ಚರಾಚರಮುಮಂ ಸುಡುವಂದಿನ ಮೆಯ್ಗಂ ಅಗ್ಗಳಂ ಮಾಡಿ: **ಪಂಪಭಾ,** ೫. ೮೫)

ಲಯಘನಘಟೆ – [ನಾ] ಪ್ರಳಯಕಾಲದ ಮೋಡಸಮೂಹ (ಘಟೆಯ ದಟಿದ ಉಲಿವು ಲಯಘನಘಟೆಗಳ ಮೊಟಿಗೆನಿಸೆ ಪೊಟ್ಟಗೆ ಒಡೆದತ್ತು ರಟತ್ ಪಟು ಪಟಹ ಶಂಖ ಭೇರಿಯ ಚಟುಳಿತದಿಂದ ಅತಳಪಟಂ ಅಂಬರಪಟಳಂ: **ಪಂಪಭಾ,** ೧೦. ೬೭)

ಲಯಾಂತಕ – [ಗು] ಪ್ರಳಯವನ್ನುಂಟುಮಾಡುವ (ಪೊದಳ್ದ ಲಯಾಂತಕ ತ್ರಿಶೂಲೋಪಮ ಭೀಷಣಭ್ರುಕುಟಿ ಮುನ್ನಮೆ ರೌದ್ರ ಗದಾಯುಧಂಬರಂ ಪೋಪ ಭುಜಾರ್ಗಳಂ ರಿಪುಗಳ ಗ್ರಹಮಾದುದು ಭೀಮಸೇನನಾ: **ಪಂಪಭಾ,** ೭. ೬)

ಲಯಾಂತೋಗ್ರಾಗ್ನಿ – [ನಾ] [ಲಯಾಂತ+ಉಗ್ರಾಗ್ನಿ] ಪ್ರಳಯಕಾಲದ ಭಯಂಕರವಾದ ಬೆಂಕಿ (ಆತನಂ ಕೊಳ್ಳಿಯೊಳಿಟ್ಟೊಡೆ ಅಂತದು ಲಯಾಂತೋಗ್ರಾಗ್ನಿಯಂತೆ ಅಟ್ವ್ ಬಂದು: **ಪಂಪಭಾ,** ೩. ೩೪)

ಲಯಾಂಭೋದ – [ನಾ] ಪ್ರಳಯಕಾಲದ ಮೋಡ (ಆದಿತ್ಯಂ ಮಸುಳ್ವನ್ನೆಗಂ ಧ್ವಜಘಟಾಟೋಪಂಗಳಿಂದಂ ಲಯಾಂಭೋದಂಗಳ್ ಕವಿವಂತೆವೋಲ್ ಕವಿವುದುಂ: **ಪಂಪಭಾ,** ೧೦. ೯೩)

ಲಯಾಗ್ನಿ – [ನಾ] ಪ್ರಳಯಕಾಲದ ಬೆಂಕಿ (ಮೊಕ್ಕಳಂ ಕವಿದುವು ಉಗ್ರಲಯಾಗ್ನಿಗಳಂತೆ ಬೆಟ್ಟುಗಳ್ ಕವಿದುವು ಎಂಬನಿತ್ತು ಭಯಮಾಯ್ತು ಗುಣಾರ್ಣವನ ಅಸ್ತ್ರಕೌಶಲಂ: **ಪಂಪಭಾ,** ೨. ೭೭)

ಲಲಾಟ – [ನಾ] ಹಣೆ (ಮೂಱುಂ ಲೋಕದ ಮೂಱುಪಟ್ಟಮನಾಳಲ್ಕೆ ತಕ್ಕ ಸಹಜಮನೋಜನ ಲಲಾಟಂ ಪಟ್ಟಂಗಟ್ಟಿದ ನೊಸಲ್ಗೆ: **ಪಂಪಭಾ,** ೨. ೩೯ ವ)

ಲಲಾಟಂತಪ ತಪನಾಂಶು – [ನಾ] ಹಣೆ ಸುಡುತ್ತಿರುವ ಸೂರ್ಯ (ನೃಪಂ ನಡೆಯೆ ಲಲಾಟಂತಪ ತಪನಾಂಶುವಿಂ ಸರೋವರಜಲಮೋರಂತಿರೆ ದಂಡರತ್ನಂ ಕಾಯ್ಗೊಂಡದ ನೀರಂತಿರೆ ಕುದಿದತ್ತು: **ಆದಿಪು,** ೧೧. ೪೮)

ಲಲಾಟತ್ರಿಪತಾಕೆ – [ನಾ] ಹಣೆಯ ಮೂರು ಗೆರೆಗಳು (ವಿಪಕ್ಷಕ್ಷತ್ರಿಯ ಪರಾಕ್ರಮಾಕೀರ್ಣನೋದೀರ್ಣ ಕ್ರೋಧದೊಳ್ ಅಳೀಕಭ್ರುಕುಟಿಯುಂ ಅನರ್ಥಕಲಲಾಟತ್ರಿಪತಾಕೆಯುಂ: **ಆದಿಪು,** ೧೪. ೮೧ ವ)

ಲಲಾಟದ ಕಣ್ – [ನಾ] ಶಿಶುಪಾಲ ಹುಟ್ಟಿದಾಗ ಇದ್ದ ಹಣೆಯ ಮೇಲಿನ ಕಣ್ಣು (ನಿನ್ನಯ ತಾಯ್ ಸಾತ್ವತಿಯುಂ ನಿನ್ನಂ ತಂದೆನ್ನ ತೊಡೆಯ ಮೇಲಿಟಿಪುವುದುಂ ನಿನ್ನ ಲಲಾಟದ ಕಣ್ಣದು ಮುನ್ನಮೆ ಕಿಡೆ: **ಪಂಪಭಾ,** ೬. ೬೦)

ಲಲಾಟನೇತ್ರ – [ನಾ] ಹಣೆಯ ಕಣ್ಣು (ಮುಳಿಸು ಲಲಾಟನೇತ್ರಶಿಖಿ ಮೆಚ್ಚೆ ವಿನೂತ ರಸಪ್ರಸಾದಂ ಉಜ್ಜಳಜಸಂ ಅಂಗಸಂಗತ ಲಸತ್ ಭಸಿತಂ ಪ್ರಭುಶಕ್ತಿ ಶಕ್ತಿ: **ಪಂಪಭಾ,** ೧. ೨)

ಲಲಾಟನೇತ್ರಾನಳ – [ನಾ] [ಲಲಾಟನೇತ್ರ+ಅನಳ] ಹಣೆಗಣ್ಣಿನ ಬೆಂಕಿ (ಪ್ರಳಯದುರಿ ಕಾಳಕೂಟದ ಗುಳಿಗೆ ಪುರಾಂತಕ

ಲಲಾಟನೇತ್ರಾನಳನೊಂದು ಅಳವಿಗಂ ಅಗ್ಗಳಂ ಅವರ್ಗಳ ಮುಳಿಸುಗಳುಂ: **ಪಂಪಭಾ,** ೭. ೬೬)

ಲಲಾಟಪಟ್ಟ – [ನಾ] ಹಣೆ (ಮಹೀತಳಾಶ್ಲಿಷ್ಟಜಾನುಲಲಾಟಪಟ್ಟರ್ ಪ್ರಣಾಮಾರ್ಪಣಪುರಸ್ಸರಂ ಶಿರೋವೇಷ್ಟನ ಪ್ರಲಂಬ ಚೇಳಾಂಚಳ ಪಿಹಿತವದನರಾಗಿ: **ಆದಿಪು,** ೧೦. ೪೮ ವ)

ಲಲಾಟಸ್ಪೃಷ್ಟಭೂತಳ – [ನಾ] ನೆಲಕ್ಕೆ ಹಣೆಯನ್ನು ತಾಕಿಸಿದವನು (ದೂರಾವನತಮಣಿಮಕುಟನಾಗಿ ಕಂಡು ವಸ್ತುವಾಹನ ಪುರಸ್ಸರಂ ಮೇಚ್ಛರಾಜಂ ಲಲಾಟಸ್ಪೃಷ್ಟಭೂತಳರಂ ಮಾಡಿ ಕಾಣಿಸಿ: **ಆದಿಪು**, ೧೩. ೪೦ ವ)

ಲಲಾಮ – [ನಾ] ಹಣೆಯ ಆಭರಣ, ಶ್ರೇಷ್ಠ (ಭುವನತ್ರಯ ಸಂಗೀತ ಕೀರ್ತಿ ಸೋಮಂ ಸಕಲ ಕ್ಷತ್ರಕುಲ ಪೂಜ್ಯನಮಳ ಚರಿತ್ರಂ ಪ್ರೋದ್ದಾಮ ಸೋಮವಂಶ ಲಲಾಮಂ: **ಪಂಪಭಾ,** ೧. ೬೧)

ಲಲಿತ – [ನಾ] ಸುಂದರವಾದ, ಕೋಮಲವಾದ (ಅತಿಸುಭಗೆಗೆ ಸಂದ ಸರಸ್ವತಿಗೀತನ ಲಲಿತ ವಾಗ್ವಿಳಾಸಮೆ ದಲ್ ಅಲಂಕೃತಿಯವೊಲೆಸೆದಪುದು: **ಆದಿಪು,** ೧. ೨೮)

ಲಲಿತಪದ – [ನಾ] ಸುಂದರ ಶಬ್ದ (ಲಲಿತಪದಂ ಪ್ರಸನ್ನ ಕವಿತಾಗುಣಮಿಲ್ಲದೆ ಪೂಣ್ದು ಪೇೞ್ದ ಬೆಳ್ಗಳ ಕೃತಿಬಂಧಮುಂ ಬರೆಪಕಾಱರ ಕೇಡು: **ಪಂಪಭಾ,** ೧. ೧೨)

ಲಲಿತಾಂಗತೆ – [ನಾ] ಚೆಲುವಾದ ದೇಹದಿಂದ ಕೂಡಿರುವುದು (ದೇವ ರಾಗದೊಳಿರು ನೀನುಂ ಇಲ್ಲಿ ಲಲಿತಾಂಗತೆಯಿಂ ಲಲಿತಾಂಗದೇವನ್ಯೆ: **ಆದಿಪು**, ೨. ೬೮)

ಲಲಿತಾಂಗಿ – [ನಾ] ಕೋಮಲ ದೇಹದವಳು, ಸುಂದರಿ (ಸಾರಂ ಅನಂಗಜಂಗಮಲತಾ ಲಲಿತಾಂಗಿಯರಿಂದಮಲ್ತೆ ಸಂಸಾರಂ: **ಪಂಪಭಾ,** ೧೧೪)

ಲಲ್ಲೆ – [ನಾ] ಓಲೈಕೆ, ಪೂಸಿ (ನುಡಿದೊಡೆ ಲಲ್ಲೆಯೆಂಗುಂ ಎರ್ದೆವೇಟಗ್ಗೊಡೆ ಕೈತವಮೆಂಗುಂ ಆಸೆಯಿಂ ಪಿಡಿದೊಡೆ ಸೇದೆಯೆಂಗುಂ: **ಆದಿಪು**, ೧೨. ೩೨); [ನಾ] ಪ್ರೇಮ, ಸರಸ (ಎನಿತಾನುಂ ತೆಱದೊಳ್ ಅಳಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳಂ ನುಡಿದುಂ ಕಾಲ್ವಿಡಿದುಂ: **ಪಂಪಭಾ,** ೭. ೯೪ ವ)

ಲಲ್ಲೈಸು – [ಕ್ರಿ] ಪ್ರೀತಿಯ ಮಾತಾಡು (ಕುಡದಿರ್ ಪುರಿಗಣೆಯಂ ಎನಿತು ಲಲ್ಲೈಸಿದೊಡಂ: **ಪಂಪಭಾ,** ೯. ೭೮)

ಲವ – [ನಾ] ತುಂತುರು, ಹನಿ (ನೇಸಱೆಂದೊಳಗೆ ಆಂ ದಿನಕರಸುತನಂ ಇಕ್ಕಿ ಬಂದಲ್ಲದೆ ಕಾಣೆಂ ದಲ್ ಭವತ್ ಪದಾಬ್ಜಮಂ ಎಂದು ಎೞ್ದಂ ಉದಶ್ರುಜಳ ಲವ ಆರ್ದ್ರ ಕಪೋಳಂ: **ಪಂಪಭಾ,** ೧೨. ೧೩೪)

ಲವಣ – [ನಾ] ಉಪ್ಪು (ಘೃತ ಲವಣ ತೈಲ ಕ್ಷೀರ ದಧಿ ವ್ಯಂಜನಂಗಳೊಳ್ ಸಂಸ್ಕಾರಂ ಮಾಡುವ: **ಆದಿಪು**, ೬. ೭೭ ವ)

ಲವಣಜಳಧಿ – [ನಾ] ಉಪ್ಪುನೀರಿನ ಸಮುದ್ರ (ಲವಣಜಳಧಿ ಬಳಸಿದಂತೆ ಬಳಸಿದ ಅಗಟ ನೀಳದಿಂದ ಉದಗ್ರ ಕನಕಶಾಳದಿಂ: **ಪಂಪಭಾ**, ೧. ೫೮)

ಲವಣಾಂಬುರಾಶಿ – [ನಾ] ಉಪ್ಪುನೀರಿನ ಸಮುದ್ರ (ಸುಟೆಯೊಳಗಿರ್ದು ಬೆಟ್ಟು ಪೊಱಪೊಣ್ಮುವಿನಂ ಲವಣಾಂಬುರಾಶಿ ಕುಕ್ಕುಟಗುದಿವಲ್ಲಿ ಕೊಟ್ಟುಗ್ದಿಯೆ ಮೇಗೆ ಸಿಡಿಲ್ದಗುಳಂತೆ ಕೂಡೆ: **ಪಂಪಭಾ,** ೧೧. ೧೫೩)

ಲವಣೋದಧಿ – [ನಾ] ಉಪ್ಪುನೀರಿನ ಸಮುದ್ರ (ದ್ವಾದಶರಾಜಕಮೆಂಬುದಂ ಓದುಗಳೊಳ್ ಕೇಳಲಾದುದಲ್ಲದೆ ಕಾಣಲ್ಕಾದುದೆ ಲವಣೋದಧಿವೃತೆ ಮೇದಿನಿಯೊಳ್ ದೇವ ನಿನ್ನ ಪೆಸರೆಸೆವೆಡೆಯೊಳ್: **ಆದಿಪು,** ೧೪. ೧೪)

ಲವಹಾರಿ – [ನಾ] ಹನಿಗಳನ್ನು ಹೋಗಲಾಡಿಸುವ (ಅಂತು ಕಾಳಿಂದೀಜಲಶಿಶಿರಶೀಕರ ವಾರಿಚಾರಿಯುಂ ಮೃಗಯಾಪರಿಭ್ರಮಶ್ರಮ ಉತ್ಥಿತ ಸ್ವೇದಜಲಲವಹಾರಿಯುಂ ಆಗಿ ಬಂದ ಮಂದಾನಿಲಕ್ಕೆ: **ಪಂಪಭಾ,** ೫. ೫೩ ವ)

ಲವಳೀ – [ನಾ] ಅರನೆಲ್ಲಿ ಮರ (ತೀರಸ್ಥ ಲವಂಗ ಚೂತ ಲವಳೀ ಪುಷ್ಪಾಸವಾಸ್ವಾದಿತ ಉದಯುತೋನ್ಮಾದೆಯ: **ಆದಿಪು**, ೧. ೫೪)

ಲವೋದ್ಗಮ – [ನಾ] ಸಿಡಿದ ಹನಿ, ತುಂತುರುಹನಿ (ಸುಖಾಂಬು ಲವೋದ್ಗಮದೊಳ್ ವಿಚಾರಿಸಲ್ ಗಣಿದಮಿದೊಂದುಮಿಲ್ಲ: **ಆದಿಪು,** ३. ೭೧)

ಲಸತ್ – [ಗು] ಹೊಳೆಯುವ (ಮುಳಿಸು ಲಲಾಟನೇತ್ರಶಿಖಿ ಮೆಚ್ಚೆ ವಿನೂತ ರಸಪ್ರಸಾದಂ ಉಜ್ವಳಜಸಂ ಅಂಗಸಂಗತ ಲಸತ್ ಭಸಿತಂ: **ಪಂಪಭಾ,** ೧. ೨)

ಲಹರಿಕಾ – [ನಾ] ಅಲೆ, ತರಂಗ (ಜಯದ್ಘೋಷಣಂ ಮಂದಮಂದಂ ತೀಡಿತ್ತು ಆಲೋಲ ಗಂಗಾಲಲಿತಲಹರಿಕಾ ಸಾರಸಾರಂ ಸಮೀರಂ: **ಆದಿಪು**, ೭. ೨೫)

ಲಹರಿಕೆ – [ನಾ] ಅಲೆ (ಅನವರತಂ ಪುದಿದುವೊ ನಿಮಿರ್ದನೇಕ ಚಮರೀಜದುಗ್ಧಜಳಲಹರಿಕೆಗಳ್: **ಆದಿಪು,** ೯. ೮)

ಳಳಿತ – [ನಾ] ಲಾಸ್ಯ, ಒಂದು ಬಗೆಯ ನೃತ್ಯ (ಅಳಿನಿನದದ ಮದಕೋಲಿಳ ಕಳನಿನದದ ಜತಿಯೊಳಬೀನಯಮಂ ನೆಗೞ್ವೆನೆಗಂ ಳಳಿತಮನೇಡಾಡಿಸಿದನೊ ಮಳಯಾನಿಳ ನರ್ತಕಂ ಲತಾನರ್ತಕಿಯಾ: **ಆದಿಪು,** ೧೧. ೯೩); [ಗು] ಕೋಮಲ (ಮುಕುಳೀಕೃತಂ ಳಳಿತಮಧುರಂ ಲಜ್ಜಾಲೋಳಂ ಸ್ಮರಾಕುಳಿತಂ ಮನಂದಳಿಪಂ ಅಪಸನ್ಮುಗ್ಧ ಸ್ನಿಗ್ಧಂ ವಿಳೋಕನಮೋಪಳಾ: **ಪಂಪಭಾ,** ೪. ೭೭)

ಲಾಂಗಲ – [ನಾ] ನೇಗಿಲು (ಇರೆ ವಾಮಹಸ್ತದೊಳ್ ಬಿಲ್ ತಿರುವಂ ಗೋಲೆಗೊತ್ತಿ ಚಕ್ರಮಂ ಚೆಲ್ಲಿಸುವೆಂ ಬರಲೀಯೆಂದು ಲಾಂಗಲ ಶರಂಗಳಂ ಪಿಡಿದು ಪವನನಂದನನಿರ್ದಂ: **ಪಂಪರಾ,** ೧೪. ೧೮೦)

ಲಾಂಗೂಲ – [ನಾ] ಬಾಲ (ಚಮರೀ ಲೋಲ ಲಾಂಗೂಲ ಮಾಲಾವಲಿ ವಿಕ್ಷೇಪಂಗಳಿಂ ತತ್ ಚಮರರುಹ ಮಹಾಶೋಭೆ ಕೈಗಣ್ಮೆ: **ಪಂಪಭಾ,** ೪. ೧೪)

ಲಾಂಛನ – [ನಾ] ಗುರುತು (ಅನ್ನೆಗಮಿತ್ತ ಮೇರುಗಿರಿಯೆ ತನಗೆ ನಾಭಿಯಾಗೆ ಸೊಗಯಿಸುವ ಜಂಬೂಮಹೀರುಹ ಲಾಂಛನ ದ್ವೀಪಾಂತರ್ಗತ ಭರತಕ್ಷೇತ್ರ: **ಆದಿಪು,** ೬. ೪೮ ವ)

ಲಾಂಛಿತ – [ಗು] ಗುರುತಿರುವ (ಕೊಳದ ತಡಿಯೊಳ್ ಹಳಿಕುಳಿಶಶಂಖಚಕ್ರ ಲಾಂಛಿತಮಪ್ಪ ಅಡಿವಜ್ಜೆಯಂ ಕಂಡು: **ಪಂಪಭಾ**, ೧೩. ೭೬ ವ)

ಲಾಕ್ಷಾ – [ನಾ] ಅರಗು (ಉತ್ತಪ್ತಾವದಾತಲೋಹಪುತ್ರಿಕಾನದ್ಧ ಲಾಕ್ಷಾ ಹಿಂಗುಲಿಕ ಪಾಟಲಫಲಂ ಅರ್ಧಕರವಾಳಚಾಳನ ಪ್ರಕಟಿತಭಟಬಿಭೀಷಿಕಾಡಂಬರಂ: **ಆದಿಪು**, ೧೩. ೪೫ ವ)

ಲಾಕ್ಷಾಗೃಹ – [ನಾ] ಅರಗಿನ ಮನೆ (ಆ ಲಾಕ್ಷಾಗೃಹದಾಹಮೊಂದೆ ವಿಷಸಂಯುಕ್ತಾನ್ನಂ ಅಂತೊಂದೆ ಪಾಂಚಾಲೀನಿಗ್ರಹಂ ಒಂದೆ ಟಕ್ಕುವಗೆಯಿಂ ಗೆಲ್ದಿರ್ದ ಜೂದೊಂದೆ: **ಪಂಪಭಾ**, ೯. ೨೨)

ಲಾಕ್ಷಾಗೇಹ – [ನಾ] ಅರಗಿನ ಮನೆ (ನರಕನಗರಲಗ್ನ ಆಕಸ್ಮಿಕಾಗ್ನಿ ಸ್ಫುಲಿಂಗಸ್ಫುರತ್ ಅವಿರಳ ಲಾಕ್ಷಾಗೇಹಪೂರೈಕಭಾವ ತ್ವರಿತವಿಚಳತ್ ಅಸ್ಥಿಗ್ರಂಥಿಸಂಸ್ಥಾನಬಂಧರ್: **ಆದಿಪು**, ೫. ೮೯)

ಲಾಕ್ಷಾರಸ – [ನಾ] ಅರಗಿನ ರಸ (ಚತುರಂತಕ್ಷಿತಿ ಗರ್ಭಸ್ಥಿತನದು ಗಡಿಮೆಂದು ಮುದ್ರಿಪಂತಾಯ್ತು ಯಶಸ್ವತಿಯ ಪದನ್ಯಾಸಂ ವಿಳಸಿತ ಲಾಕ್ಷಾರಸಪೂರ್ವ ಮಣಿಕುಟ್ಟಿಮದೊಳ್: **ಆದಿಪು**, ೮. ೩೨)

ಲಾಜಾಂಜಲಿ – [ನಾ] [ಲಾಜ+ಅಂಜಲಿ] ಬತ್ತದ ಅರಳು ತುಂಬಿದ ಬೊಗಸೆ (ಶೀಕರನಿಕರಂಗಳಂತೆ ಸೊಗಯಿಸುವ ಧವಳಾಕ್ಷತ ಸಿತಕುಸುಮ ಮಂಗಳ ಲಾಜಾಂಜಲಿಗಳುಮನುರಾಗದಿಂ: **ಆದಿಪು**, ೧೧. ೨೩ ವ)

ಲಾಜೆ – [ನಾ] ಬತ್ತದ ಅರಳು (ಪುರೋಹಿತನ ಪೇಟಿಸ್ದೋಜೆಯೊಳ್ ಲಾಜೆಯಂ ಅಗ್ನಿಕುಂಡದೊಳ್ ಸುರಿದು: **ಪಂಪಭಾ**, ೭೫ ವ)

ಲಾಲಾಂಬು – [ನಾ] ಜೊಲ್ಲಿನ ರಸ (ಕರಿಶೀಕರಕರಮದಜಳ ತುರಂಗಲಾಲಾಂಬುಸೇಕದಿಂದಟೆದುಟೆದಿರ್ದ ರಜಂ ನರೇಂದ್ರಚಾಮರ ಮರುದಭಿಹತಿಯಿಂ ತೆರಳ್ದು ತೂಳ್ದತ್ತಾಗಳ್: **ಆದಿಪು**, ೧೧. ೩೮)

ಲಾಲಾಜಲ – [ನಾ] ಲಾಲಾಂಬು (ಜಾತ್ಯಶ್ವ ರಥ ಆಶ್ವಸಂಕುಳಖಲೀನ ಉದ್ಭೂತ ಲಾಲಾಜಲಂ ಕದಡೆಟ್ಟು: **ಪಂಪಭಾ**, ೧೦. ೩೧)

ಲಾಲಾಟ – [ನಾ] ಲಲಾಟ, ಹಣೆ (ಭವಲಾಲಾಟ ವಿಲೋಚನಾಗ್ನಿಶಿಖೆಯಿಂ ಬೆಂದಳ್ಕಿ ಮತ್ತಂ ಮನೋಭವಂ ಎಚ್ಚಿತ್ತೊಡೆ: **ಪಂಪಭಾ**, ೭. ೨೪)

ಲಾಲಿತ – [ಗು] ಪ್ರೀತಿಯಿಂದ ಕೂಡಿದ (ಗುರುಗಂ ಗುರುವೆಂದೊದವಿದ ಪೆಂಪಿದು ನಿನ್ನೊಂದುದಯದಿನಾಯ್ತು ಅಮರಮೌಳಿ ಲಾಲಿತಚರಣಾ: **ಆದಿಪು**, ೮. ೯)

ಲಾವಗೆ – [ನಾ] ಲಾವನ ಹಕ್ಕಿ (ಮಂದಪಾಲನೆಂಬ ಮುನಿಗಂ ಒಂದು ಲಾವಗೆಗಂ ಪುಟ್ಟಿದ ನಾಲ್ಕುಂ ಲಾವಗೆಗಳ್ ಅಗ್ನಿಸೂಕ್ತಂಗಳಂ ಓದುತ್ತುಂ ಅದಿರದೆ ಇದಿರಂ ಬರೆ: **ಪಂಪಭಾ**, ೫. ೧೦೦ ವ)

ಲಾಳೆ – [ನಾ] ಲಾಲಾಂಬು (ಕೊರೆವೊಡೆ ಬೆಟ್ಟುಗಳ್ ಬಿರಿವುವು ಉಣ್ಮುವ ಲಾಳೆಯ ಲೋಳೆಗಳ್ ಪೊನಲ್ವರಿವುವು ಕೆಮ್ಮಿ ಕುಮ್ಮಿದೊಡೆ ತೋಳೊಳೆ ಜೀವವಿಯೋಗಮಪ್ಪುದು: **ಪಂಪಭಾ**, ೪. ೧೦೦)

ಲಾಟಿ – [ನಾ] ಲಾಟದೇಶ (ತಜೆಸಂದು ಲಾಟದೊಳ್ ತಳ್ತಿಜೆದೇಱಿಂ ಪೇಟಿ ಕೇಳ್ದು ಮಂಡಲಮಿನ್ನುಂ ತಿಱುನೀರಿಕ್ಕುವುದೆನಿಸಿದ ತಜೆಸಲವಿನ ಚಲದ ಬಲದ ಕಲಿ ನರಸಿಂಹಂ: **ಪಂಪಭಾ,** ೧. ೩೩)

ಲಿಪಿವಿಧಾನ – [ನಾ] ಬರೆಯುವ ಕ್ರಮ (ಸೇವಾರ್ಥಮೋರ್ಜಿತಮೆನಿಸುವ ಕರ್ಮಮುಮಂ ಅನೇಕ ಲಿಪಿವಿಧಾನಾಧೀನಮಪ್ಪ ಮಷಿಯುಮಂ .. .. ಪಡೆದು: **ಆದಿಪು**, ೮. ೬೪ ವ)

ಲಿಪಿಸಂಖ್ಯಾನಸಂಗ್ರಹ – [ನಾ] [ಜೈನ] ಒಂದು ಗರ್ಭಾನ್ವಯ ಕ್ರಿಯೆ, ಅಕ್ಷರಾಭ್ಯಾಸ (ಲಿಪಿಸಂಖ್ಯಾನಸಂಗ್ರಹ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಲೀಲಾಂದೋಳ – [ನಾ] ಸೊಗಸಿನ ಉಯ್ಯಾಲೆ (ತೋಳ ನೀಳದ ಕೆಂದಳಿರಿಂದಂ ಸಂದಣಿಸಿರ್ದ ಮದಾಳಿಯಿಂದೋಳದಿಂ ಮಳಯಾನಿಳಲೀಲಾಂದೋಳದಿನೊಪ್ಪೆ: **ಆದಿಪು**, ೩. ೩೦)

ಲೀಲಾಕಿಳಕಿಂಚಿತ ಲಲಿತ ವಿಹ್ವದ್ ವಿಳಾಸ ವಿಚ್ಛಿತ್ತಿ ವಿಭ್ರಮಾದಿ ಗುಣಂಗಳ್ – [ನಾ] ಸ್ತ್ರೀಯರ ಹತ್ತು ಶೃಂಗಾರಭಾವಗಳು: ಲೀಲಾ, ವಿಲಾಸ, ವಿಚ್ಛಿತ್ತಿ, ವಿಭ್ರಮ, ಕಿಲಕಿಂಚಿತ, ಮೋಟ್ಟಾಯಿತ, ಕುಟ್ಟಮಿತ, ಬಿಬ್ಬೋಕ, ಲಲಿತ, ವಿಹೃತ (ಜಳಕೇಳಿಯೊಳ್ ಅಧಿಪನೆರ್ದೆಗೊಳಿಸಿದುವು ಅಂತಃಪುರೀ ಜನಂಗಳ ಲೀಲಾಕಿಳಕಿಂಚಿತ ಲಲಿತ ವಿಹ್ವದ್ ವಿಳಾಸ ವಿಚ್ಛಿತ್ತಿ ವಿಭ್ರಮಾದಿ ಗುಣಂಗಳ್: **ಆದಿಪು**, ೧೧. ೧೪೨)

ಲೀಲಾಜಲಾಶಯ – [ನಾ] ಆಟಕ್ಕಾಗಿ ನಿರ್ಮಿಸಿದ ಕೊಳ (ನಾನಾಭವನವಿನ್ಯಾಸ ಉದ್ಯಾನ ಲೀಲಾಜಲಾಶಯಂಗಳುಮಂ .. .. ಮಾಡಿ: **ಆದಿಪು,** ೮. ೬೩ ವ)

ಲೀಲಾಯಿತಂ – ಲೀಲೆಯುಂಟಾಯಿತೋ (ಕುಲಾಲ ಕರನಿರ್ಭರ ಭ್ರಮಿತ ಚಕ್ರ ಲೀಲಾಯಿತಂ: **ಪಂಪಭಾ**, ೪. ೨೭)

ಲೀಲಾಸರ – [ನಾ] ಲೀಲಾಜಲಾಶಯ (ಇನ್ನದಲ್ತೆ ನೆರೆದಿರ್ಬರಿರ್ದ ಕೃತಕಾಚಳಂ ಚೆಲ್ವನಪ್ಪಿದೇ ಕನಕಪದ್ಮಿನೀನಿಳಯಮೆನ್ನ ಲೀಲಾಸರಂ: **ಆದಿಪು**, ೪. ೮)

ಲೀಲೆಯೆ – [ಕ್ರಿವಿ] ಲೀಲೆಯಿಂದ (ಮೇಲಾದ ಪಾಂಡುಸುತರಂ ಉಪಾಲಂಭನಗೆಯ್ಯುತಿರ್ಪ ದುರ್ಯೋಧನನಂ ಲೀಲೆಯೆ ನುಂಗುವ ಮೃತ್ಯುವ ನಾಲಗೆಯೆನೆ ನೆಗೆದುವುರಿಯ ನಾಲಗೆ ಪಲವುಂ: **ಪಂಪಭಾ**, ೩. ೬)

ಲೀಲೋತ್ತಾರಿತ – [ಗು] ಸುಲಭವಾಗಿ ಗೆದ್ದ (ಲೀಲೋತ್ತಾರಿತ ರಿಪುನೃಪಾಲ ಸಾಮಂತ ಸೀಮಂತಿನೀ ಸೀಮಂತರಪ್ಪ ಮಹಾಸಾಮಂತರಿಂದಮವಧಾರಿತ .. .. ವಾರಣಂಗಳಿಂದಂ: **ಆದಿಪು**, ೧೪. ೪೩ ವ)

ಲುಂಗ – [ನಾ] ಮಾದಲ (ಕಕುಭ ಅಶೋಕ ಕದಂಬ ಲುಂಗ ಲವಲೀಭೂಜ ಆರ್ಜುನ ಅನೋಕಹ ಪ್ರಕರಂ: **ಪಂಪಭಾ,** ೫. ೮೦);

ಲುಂಠನ – [ನಾ] ಅಪಹರಣ, ದರೋಡೆ (ಭಾರ್ಗವಂಗೆ ತಾನೆ ಭಾರ್ಗವನಾಗಿ ಯುವರಾಜಕಂಠಿಕಾಪರಿಕಲಿತ ಕಂಠಲುಂಠನುಂ ಆಗಿ: **ಪಂಪಭಾ,** ೧. ೬೮ ವ)

ಲುಂದು – [ಕ್ರಿ] ಸಂಭೋಗಿಸು (ಮೇಲ್ವಾಯ್ದುಮೇವೈಸಿಯುಂ ಪಿರಿದುಂ ಲುಂದುವ ಬೇಟದೊಂದು ಸುಸಿಲುಂ ನೋಯಿಕ್ಕುಂ: **ಆದಿಪು**, ೧೨. ೨೩); [ನಾ] ಸಂಭೋಗ (ಅಮರ್ದಿನ ಧಾರೆಯಂತೆ ನುಡಿಯಿಂಪು ಅಮರ್ದಂ

ತಳಿದಂತೆ ಸೋಂಕಿನಿಂಪು ಅಮರ್ದಿನ ಪೂರದಂತೆ ಪದದಿಂಪು ಅಮರ್ದಂ ಕುಡಿದಂತೆ ಲುಂದಿನಿಂಪು: **ಆದಿಪು**, ೧೨. ೨೭)

ಲುಬ್ಧಕ – [ನಾ] ಬೇಡ (ವಿಷಯವಿಷದ್ರುಮಕಂದಳಿಯುಂ ಇಂದ್ರಿಯಲುಬ್ಧಕ ಸ್ವಚ್ಛಂದ ವಿಹಾರಗಹನಭೂಮಿಯುಂ: **ಆದಿಪು**, ೧೪. ೧೨೨ ವ)

ಲುಳಿತ – [ಗು] ಸಿಂಪಡಿಸಿದ (ಮಲಯಜ ರಸಲುಳಿತ ಕದಳೀದಳವ್ಯಜನ ಮಂದಮಾರುತಾಂದೋಳನದಿಂ ಎಂತಾನುಂ ಮೂರ್ಛೆಯಿಂದೆಚ್ಚೆತ್ತಿ: **ಆದಿಪು**, ೩. ೨೩ ವ); [ಗು] ಕಂಪಿಸಿದ (ನೋಡಿ ನಾಡೆ ಮನಂಗೊಂಡನಿಳೇಶ್ವರಂ ಲುಳಿತ ಮತ್ಸ್ಯಾಪಾಂಗೆಯಂ ಗಂಗೆಯಂ: **ಆದಿಪು**, ೧೧. ೫೬); [ಗು] ಕೊಂಕಾದ (ಬಳಸಿರ್ದ ಮದಾಳಿಸಂಕುಲಂ ವಿಷಯಾಂಗನಾಲುಳಿತ ಕುಂತಳದಂತೆವೊಲ್ ಒಪ್ಪಿ ತೋಱುಗುಂ: **ಪಂಪಭಾ**, ೧. ೫೩)

ಲುಳಿತಾಳಕ – [ನಾ] ಅಲುಗಾಡುವ ಮುಂಗುರುಳು (ಪಲವುಮಂದದ ಚೆಂದದ ಚಿನ್ನಪೂಗಳಿಲ್ಲದೆ ಲುಳಿತಾಳಕಂ ಕ್ವಣಿತ ನೂಪುರಮಿಲ್ಲದೆ ಪಾದಪದ್ಮಮೊಪ್ಪಿದುದು: **ಆದಿಪು**, ೩. ೪೮)

ಲುಳಿತಾಳಕಿ – [ನಾ] ಗುಂಗುರು ಕೂದಲುಳ್ಳವಳು (ತಾಳದ ಲಯಮಂ ನಿಜೆ ನೀಳಾಳಕಮಾರದ ಪೊದಳ್ದ ಮುತ್ತೆಂಬಿವು ಮುಂಮೇಳಿಸಿ ಕೈಕೊಂಡುವು ಲುಳಿತಾಳಕಿ ಕೈಕೊಂಡಳೆಂಬುದೇನಚ್ಚರಿಯೇ: **ಆದಿಪು**, ೯. ೨೪)

ಲುಳಿತಾಳಕೆ – [ನಾ] ಗುಂಗುರು ಕೂದಲಿನವಳು (ಅದಱ ಪೊದಳ್ದು ನೀಳ್ದ ಲುಳಿತಾಳಕೆ ತನ್ನ ವಕ್ತ್ರಪದ್ಮದಿನೊಸೆದಾಂತೊಡೆ: **ಪಂಪಭಾ**, ೩. ೭೬)

ಲೂನ – [ಗು] ಮುರಿಯಲ್ಪಟ್ಟ, ಕತ್ತರಿಸಲ್ಪಟ್ಟ (ತದೇಕತ್ವಗ್ರಾಹಕ ಪ್ರತ್ಯಭಿಜ್ಞಾನಮುಂ ಲೂನ ಪುನರ್ಜಾತ ನಖ ಕೇಶಾದಿಗಳೊಳ್ ಪೂರ್ವಾಪರೈಕತ್ವಮಿಲ್ಲದಲ್ಲಿಯುಂ ಕಾಣಲಕ್ಕುಂ: **ಆದಿಪು**, ೨. ೯ ವ)

ಲೆಂಕ – [ನಾ] ಸೇವಕ (ಗೊಡ್ಡಾಟಮಾಡಲ್ ಬಗೆದು ಕರ್ಣನ ಲೆಂಕಂ ಪ್ರತಿಕಾಮಿಯೆಂಬನುಮಂ ತನ್ನ ತಮ್ಮಂ ದುಶ್ಶಾಸನನುಮಂ ಪೇಟಿಸ್ಗೊಡೆ: **ಪಂಪಭಾ**, ೭. ೪ ವ)

ಲೆಕ್ಕ – [ನಾ] ಗಣನೆ (ವೈರಿಭೂಪಬಲದ ಒಡ್ಡು ಅಲ್ಲಾಡೆ ಲೆಕ್ಕಕ್ಕೆ ತಳ್ತಿಱಿದು ಎನ್ನಾಳ್ದನಿಂ ಆನೆ ಮುಂಚಿ ನಿಱಿಪೆಂ ಕೆಯ್ಕೊಂಡು ಕಟ್ಟಾಯಮಂ: **ಪಂಪಭಾ**, ೯. ೭೧)

ಲೆಕ್ಕಂಗೊಳ್ – [ಕ್ರಿ] ಎಣಿಕೆಮಾಡು (ಶಾರ್ದೂಲಾಭೀಲ ವನಂಗಳೊಳ್ ತಿರಿಪಿದೀಯುರ್ಕೊಂದೆ ಲೆಕ್ಕಂಗೊಳಲ್ ಕಾಲಂ ಸಾಲವೆ: **ಪಂಪಭಾ**, ೯. ೨೨)

ಲೆಕ್ಕಣಿಕೆ – [ನಾ] [ಲೇಖನಿಕಾ] ಬರೆಯುವ ಸಾಧನ (ತರಳಾಪಾಂಗ ವಿಳಾಸಸ್ಫುರಿತಮೆ ಲೆಕ್ಕಣಿಕೆಯಾಗೆ ನಲ್ಲಳ್ ಮುನ್ನಂ ಬರೆದತನುಚರಿತಮೀಗಳ್ ಬರೆದಂತಿರ್ಪುದು ಮನ್ಮನಃಪುಸ್ತಕದೊಳ್: **ಆದಿಪು**, ೪. ೧೪)

ಲೆಕ್ಕಮುಮಂ ಪೊಕ್ಕಮುಮಂ – [ನಾ] ಇವು ಪ್ರತಿಧ್ವನಿಪದಗಳು, ಲೆಕ್ಕಪೊಕ್ಕಗಳನ್ನು (ಉಳ್ಳ ಓದುಗಳೊಳಗೆ ಎನಿತಱಿವುಳ್ಳರ್ಗಂ ತಿಳಿಪಲರಿಯದೆನಿಪ ಎಡೆಗಳುಮಂ ತೆಳ್ಳಿಗಿರೆ ತಿಳಿಪುಗುಂ ಬೆಸಗೊಳ್ಳ ಗುಣಾರ್ಣವನ ಲೆಕ್ಕಮಂ ಪೊಕ್ಕಮುಮಂ: **ಪಂಪಭಾ**, ೨. ೩೫)

ಲೆಕ್ಕಮೇ – ಗಣನೀಯನೇ, ಅಲ್ಲ ಎಂಬರ್ಥ (ಬೀಗಿ ಪೊಟ್ಟಳಿಸಿ ನೆಗೞ್ತೆಗಾಟಿಸುವ ದುಷ್ಕವಿಯುಂ ಕವಿಯೆಂಬ ಲೆಕ್ಕಮೇ: **ಪಂಪಭಾ**, ೧. ೧೨)

ಲೇಖ – [ನಾ] ಬರೆಹ, ಪತ್ರ (ಅಪನೀತಮುದ್ರೆಯಂ ಮಾಡಿ ತದಂತಸ್ಸ್ಥಿತಂಗಳಪ್ಪ ರತ್ನಾಭರಣಂಗಳಂ ತೋಱಿ ಕೋಶಾಧ್ಯಕ್ಷಹಸ್ತವಿನ್ಯಸ್ತಂಗಳ್ಮಾಡಿ ದೇವ ಲೇಖಮಿದೆಂದು: **ಆದಿಪು**, ೧೪. ೪೫ ವ)

ಲೇಶ್ಯಾ – [ನಾ] [ಜೈನ] ಆತ್ಮವನ್ನು ಪಾಪ–ಪುಣ್ಯಗಳಿಗೆ ಅಧೀನಗೊಳಿಸುವಂಥವು; ಇವು ಆರು ಬಗೆ – ಕೃಷ್ಣ ನೀಲ ಕಪೋತ ಪೀತ ಪದ್ಮ ಮತ್ತು ಶುಕ್ಲ (ಕೃಷ್ಣ ನೀಲ ಕಪೋತ ಲೇಶ್ಯಾ ಬಹ್ವಾರಂಭ ಪರಿಗ್ರಹತ್ವ ಆದಿ ಅಶುಭ ಪರಿಣಾಮಂಗಳಿಂ ಜೀವಂ ನೆಲಸಿ: **ಆದಿಪು**, ೫. ೮೩ ವ)

ಲೇಶ್ಯಾವಿಶುದ್ಧಿ – [ನಾ] [ಜೈನ] ಲೇಶ್ಯೆಯು ಮಂದವಾಗುತ್ತ ನಡೆದು ಇಲ್ಲವಾಗುವುದು (ಜ್ಞಾನಾದಿಪರಿಣಾಮಂಗಳೊಳ್ ನಿರತಿಶಯ ಲೇಶ್ಯಾವಿಶುದ್ಧಿಯಂ ತಾಳ್ದಿ: **ಆದಿಪು**, ೧೦. ೧೪ ವ)

ಲೇಸು – [ನಾ] ಶ್ರೇಯಸ್ಕರ (ನಿಮ್ಮಡಿ ಕೊಲೆ ಸಾವುದು ಲೇಸಲ್ತೆ: **ಪಂಪಭಾ**, ೧೧. ೩೧)

ಲೋಕಪಾಲ – [ನಾ] [ಜೈನ] ಪ್ರತಿಯೊಬ್ಬ ಇಂದ್ರನಿಗೂ ಪೂರ್ವಾದಿ ದಿಕ್ಕುಗಳ ರಕ್ಷಕರಾಗಿರುವ ದಿಕ್ಪಾಲರು (ಸೋಮ ಯಮ ವರುಣ ಕುಬೇರಪ್ರಮುಖ ಲೋಕಪಾಲಾಭಿಯೋಗ್ಯ ದಿಗ್ಗಜೇಂದ್ರ ದೇವವಿಹಾರಪ್ರಾಸಾದಾಭಿರಾಮಮುಂ: **ಆದಿಪು**, ೧. ೪೯ ವ); [ನಾ] [ಜೈನ] ಒಂದು ದೇವತಾವರ್ಗ (ಸಾಮಾನಿಕ ತ್ರಾಯಸ್ತ್ರಿಂಶತ್ಪಾರಿಷದ ಆತ್ಮರಕ್ಷ ಲೋಕಪಾಳ ಅಭಿಯೋಗ್ಯ ಕಿಲ್ಬಿಷರೊಡನೆ: **ಆದಿಪು**, ೭. ೪೨ ವ) 'ತ್ರಾಯಸ್ತ್ರಿಂಶ' ನರಸಿಂಹಶಾಸ್ತ್ರಿಗಳು ಅನುಮೋದಿಸಿರುವ ಪಾಠ]

ಲೋಕಪೂಜ್ಯ – [ನಾ] ಲೌಕಿಕತೆಯ ದೃಷ್ಟಿಯಿಂದ ಹಿರಿದು (ಇವರ್ಗಳಿಂ ಈ ಭಾರತಂ ಲೋಕಪೂಜ್ಯಂ: **ಪಂಪಭಾ**, ೧೪. ೬೪)

ಲೋಕಪೂರಣಕ್ರಿಯಾ – [ನಾ] [ಜೈನ] ಕೇವಲಿಗಳ ಆತ್ಮವು ಭೂಮಂಡಲದ ವಾಯುತ್ರಯದೊಡನೆ ಬೆರೆಯುವುದು (ವ್ಯಾಪ್ತಸಪ್ತಘನರಜ್ಜುಪ್ರಮಾಣಾಶೇಷ ಜಗತ್ಪ್ರದೇಶ ಲೋಕಪೂರಣ ಕ್ರಿಯಾಪರಿಸಮಾಪ್ತಿಯಂ ಮಾಡಿ: **ಆದಿಪು**, ೧೬. ೪೯ ವ)

ಲೋಕವಾರ್ತೆ – [ನಾ] ಲೋಕರೂಢಿ (ಮದದ ನೀರೊಳೆ ಲೋಕವಾರ್ತೆಗೆ ಬೆಚ್ಚು ನೀರ್ದಳಿದಾಗಳ್: **ಪಂಪಭಾ**, ೧. ೪೩)

ಲೋಕಾಂತಂಬರಂ – [ಗು] ಲೋಕದ ಕೊನೆಯವರೆಗೂ (ಅಂತು ವಸುಷೇಣನಾ ಲೋಕಾಂತಂಬರಮಳವಿ ಬಳೆಯೆ ಬಳೆದೆಸಕಮನೋರಂತೆ ಜನಂಗಳ ಕರ್ಣೋಪಾಂತದೊಳ್ ಒಗೆದೆಸೆಯೆ ಕರ್ಣನೆಂಬನುಮಾದಂ: **ಪಂಪಭಾ**, ೧. ೯೮)

ಲೋಕಾಂತರ – [ನಾ] ಬೇರೆ ಲೋಕ (ತಲೆಯ ನೆಲೆಗೆ ಲೋಕಾಂತರಕೆ ಎಡೆಯಿಲ್ಲ ಎನಿಸೆ ಪೆರ್ಚಿದಂ ದನುತನಯಂ: **ಪಂಪಭಾ**, ೧೨. ೧೧)

ಲೋಕಾಂತರಿತ – [ಗು] ಬೇರೆ ಲೋಕಕ್ಕೆ ಹೋದವರು (ಆಯುಷ್ಯಾವಸಾನದೊಳ್ ಓಷಧಿಗಳಂತೆ ಫಳಾಪಾಕಾಂತದೊಳ್ ಕ್ಷುತ ವಿಜೃಂಭಣ ವ್ಯಾಜದಿಂ ಲೋಕಾಂತರಿತರಾಗಿ: **ಆದಿಪು**, ೫. ೬೯ ವ)

ಲೋಕಾಂತಿಕದೇವ – [ನಾ] [ಜೈನ] ಬ್ರಹ್ಮಸ್ವರ್ಗದ ಅಂತ್ಯಪಟಲದಲ್ಲಿನ ಅಷ್ಟವಿಧ ದೇವತೆಗಳು; ಇವರು ವಿಷಯವಿರಕ್ತರು, ಇವರು ಚತುರ್ದಶಪೂರ್ವಧರರು, ತೀರ್ಥಂಕರರಿಗೆ ವೈರಾಗ್ಯವುಂಟಾದಾಗ ಅವರ ಪ್ರಶಂಸೆಗಾಗಿ ಭೂಲೋಕಕ್ಕೆ ಬರುವರು (ಸಾರಸ್ವತ ಆದಿತ್ಯ ವಹ್ನಿ ಅರುಣ ಗರ್ದತೋಯ ತುಷಿತ ಅವ್ಯಾಬಾಧ ಅರಿಷ್ಟರೆಂಬೆಣ್ಬರುಂ ಲೋಕಾಂತಿಕದೇವರ್ ಬಂದು: **ಆದಿಪು,** ೯. ೬೦ ವ)

ಲೋಕಾಂತಿಕಾಮರ – [ನಾ] [ಜೈನ] ಲೋಕಾಂತಿಕದೇವ (ತದನಂತರಮೆ ಲೋಕಾಂತಿಕಾಮರವೃಂದಂ ಬಂದು ಬಿಚ್ಚಳಿಸೆ ವಜ್ರಕ್ಕೆ ಬಳಮಿತ್ತಂತೆ: **ಆದಿಪು,** ೬. ೨೩ ವ)

ಲೋಕಾಕಾರ – [ನಾ] [ಜೈನ] ಲೋಕದ ಆಕಾರವು ಸೊಂಟದ ಮೇಲೆ ಎರಡೂ ಕೈಗಳನ್ನಿಟ್ಟು ಕಿಸುಗಾಲಿನಲ್ಲಿ ನಿಂತ ವ್ಯಕ್ತಿಯನ್ನು ಹೋಲುವಂಥದು (ಲೋಕಾಕಾರಮಂ ಅಭಿನಯಿಪಾಕಾರಂ ನೆಗಟ್ಟೆ ನಿಂದು ವೈಶಾಖಸ್ಥಾನಾಕಾರದೊಳ್ ಮರುದ್ ವೃತನಾ ಕುಳಿಶಾಯುಧನದೊಂದು ಚೆಲ್ವಂ ಪಡದಂ: **ಆದಿಪು,** ೭. ೧೧೬)

ಲೋಕಾಕಾರಕಥನ – [ನಾ] [ಜೈನ] ಲೋಕಾಕಾರಗಳ ವರ್ಣನೆ, ಪುರಾಣದ ಎಂಟು ಅವಯವಗಳಲ್ಲಿ ಒಂದು (ಆ ಪುರಾಣಕ್ಕಂ ಲೋಕಾಕಾರಕಥನಂ ದೇಶನಿವೇಶೋಪ ದೇಶಮುಂ ನಗರಸಂಪತ್ಪರಿವರ್ಣನಮುಂ ರಾಜ್ಯರಮಣೀಯಥಾಖ್ಯಾತಮುಂ ತೀರ್ಥಮಹಿಮೆ ಸಮರ್ಥನಮುಂ ಚತುರ್ಗತಿಸ್ವರೂಪನಿರೂಪಣಮುಂ ತಪೋದಾನವಿಧಾನ ವರ್ಣನಮುಂ ತತ್ಫಳಪ್ರಾಪ್ತಿ ಪ್ರಕಟನಮುಮೆಂದಿಂತವಯವಂಗಳೆಂಟಕ್ಕುಂ.: **ಆದಿಪು,** ೧. ೪೨ ವ)

ಲೋಕಾಕಾಶ – [ನಾ] [ಜೈನ] 'ಷಡ್ದ್ರವ್ಯ'ಗಳನ್ನು ಹೊಂದಿರುವ ಆಕಾಶಪ್ರದೇಶ (ಲೋಕಾಕಾಶಪ್ರದೇಶಪ್ರಮಾಣಪರಿಮಾಣಮುಂ ಅಸ್ಮದಾದ್ಯನುಮೇಯಮುಂ ಸರ್ವಜ್ಞಪ್ರತ್ಯಕ್ಷಗೋಚರಮಪ್ಪುದು ಮುಖ್ಯಕಾಲಂ: **ಆದಿಪು,** ೬. ೪೮)

ಲೋಕಾಯತಿಕ – ನಾಸ್ತಿಕತೆ (ಮಹಾಮತಿ ಸಂಭಿನ್ನಮತಿ ಶತಮತಿಗಳ್ ಲೋಕಾಯತಿಕ ಯೋಗಾಚಾರ ಮಾಧ್ಯಮಿಕ ಮತವಿತಥಾಭಿಧಾಯಿಗಳ್ ಜೀವಾಭಾವಮನೆ ಪಿಡಿಯಚ್ಚುವಿಡಿದು: **ಆದಿಪು,** ೨. ೭ ವ)

ಲೋಕೈಕಚಕ್ಷು – [ನಾ] ಜಗತ್ತಿನ ಒಂದೇ ಕಣ್ಣಾಗಿರುವ (ಲೋಕೈಕಚಕ್ಷು ನವಕಮಲಾಕರಬಾಂಧವಂ ಅನೇಕ ದಿತಿಸುತ ಸಮರಾನೀಕಭಯಂಕರಂ ಎರಡುಂ ಅನೀಕಂಗಳಡರೆ ನೋಡುವಂತುದಯಿಸಿದಂ: **ಪಂಪಭಾ,** ೧೦. ೫೧)

ಲೋಗರ್ – [ನಾ] ಲೋಕದ ಜನ (ವಸುಧೆಗಸದಳಮಾಯ್ತು ಆ ಮಗನಂದಮೆಂದು ಲೋಗರ್ ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್: **ಪಂಪಭಾ,** ೧. ೮೭)

ಲೋಚನಗೋಚರಂಬರೆಗಂ: [ಗು] ಕಣ್ಣಿಗೆ ಕಾಣುವವರೆಗೂ (ಸೋಲಮನುಂಟುಮಾಡೆ ಹರಿಗಂ ಆಕರ್ಣಾಂತವಿಶ್ರಾಂತ ಲೋಚನಂ ಆ ಲೋಚನಗೋಚರಂಬರೆಗಂ ಒಲ್ದು ಆ ಕನ್ನೆಯಂ ನೋಡಿದಂ: **ಪಂಪಭಾ,** ೪. ೪೨)

ಲೋಧ್ರ – [ನಾ] ಲೊದ್ದಗೆ ಗಿಡ, ಸಾಂಬ್ರಾಣಿ ಗಿಡ (ಪ್ರಬುದ್ಧ ಲೋಧ್ರಂಗಳಿಂ ರಾಗಮಂ ಬೀಜುವಂತೆ ಮುಗುಳ್ನಗೆ ನಗುವಂತೆ: **ಆದಿಪು,** ೭. ೩೬ ವ)

ಲೋಮ – [ನಾ] [ಯಾವುದೇ ಬಗೆಯ] ರೋಮ, ಕೂದಲು (ಧಾತುಮಳದೋಷರಹಿತಂ ವೀತನಖ ಶ್ಮಶ್ರು ಕೇಶ ಲೋಮಂ ಶೋಭಾನ್ವಿತಪರಿಪೂರ್ಣಯೌವನಂ: **ಆದಿಪು,** ೬. ೩೮)

ಲೋಲನಯನ – [ನಾ] ಚಂಚಲವಾದ ಕಣ್ಣು (ಸಾಲಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಸ್ಥಳಂ: **ಪಂಪಭಾ,** ೧. ೬೮)

ಲೋಲಲಾಂಗೂಲ – [ನಾ] ಅಲ್ಲಾಡುವ ಬಾಲ (ಚಮರೀ ಲೋಲಲಾಂಗೂಲಮಾಲಾವಲಿ ವಿಕ್ಷೇಪಗಳಿಂ ತತ್ ಚಮರರುಹ ಮಹಾಶೋಭೆ ಕೈಗಣ್ಮೆ: **ಪಂಪಭಾ,** ೪. ೧೪)

ಲೋಲವಿಲೋಚನ – [ನಾ] ಚಂಚಲವಾದ ಕಣ್ಣು (ಪಾಟಲ ಲೋಲವಿಲೋಚನಂ ಮನಂಬುಗೆ ನಳಿತೋಳ ಕೋಳೆಸೆಯೆ: **ಪಂಪಭಾ,** ೮. ೫೯)

ಲೋಹಕಂಟಕ – [ನಾ] ಲೋಹ[ಕಬ್ಬಿಣ]ದ ಮುಳ್ಳು (ಜಾನುಭಂಜನಿ ಶೂಲಪ್ರಕರಪರಿವೃತಂಗಳುಂ ಕೂಪ ಕೂಟ ಅವಪಾತ ಲೋಹಕಂಟಕ ಸಂಕಟಂಗಳುಂ: **ಆದಿಪು,** ೧೩. ೫೭ ವ)

ಲೋಹಪಿಂಡ – [ನಾ] ಕಬ್ಬಿಣದ ಗುಂಡು (ಕಾಯ್ದು ಪಜ್ಜಳಿಸುವ ಲೋಹಪಿಂಡಮನೆ ಭೋಂಕೆನೆ ನೀರೊಳಗರ್ದಿದಂತೆವೊಲ್: **ಆದಿಪು,** ೭. ೯೮)

ಲೋಹಪುತ್ರಿಕಾ – [ನಾ] ಲೋಹದ [ಕಬ್ಬಿಣದ] ಬೊಂಬೆ (ಸದ್ಯಃ ಸಂತಾಪಿತ ಲೋಹಪುತ್ರಿಕಾಪರಿರಂಭಸಂಭೃತ ಪ್ಲೋಷಚಲಜ್ಜಾಂಗಳಗಳತ್ ರುಧಿರ: **ಆದಿಪು,** ೫. ೮೭ ವ)

ಲೋಹರಸ – [ನಾ] ಕರಗಿಸಿದ ಲೋಹ (ಕುಡಿ ಕಳ್ಳಂ ಎಂದು ಕರಗಿಸಿ ಕುಡಿಯಿಸುವರ್ ಲೋಹರಸಮಂ ಎರ್ದೆ ಕರಗುವಿನಂ: **ಆದಿಪು,** ೫. ೮೬)

ಲೋಹವಕ್ಕರೆ – [ನಾ] [ಲೋಹ+ಪಕ್ಕರೆ] ಲೋಹದ ಪಕ್ಷರಕ್ಷೆ ಅಥವಾ ಕವಚ (ಆಗಳೇಚಿಸಿದ ಬಿಸುಗೆಗಳುಂ ಇಕ್ಕಿದ ಲೋಹವಕ್ಕರೆಗಳುಂ ಉರ್ಚಿದ ಮೊಗವಡಂಗಳುಂ ಕಟ್ಟಿದ ಪಟಿಯಿಗೆಗಳುಂ: **ಪಂಪಭಾ,** ೧೦. ೫೧ ವ)

ಲೋಹಾಸನ – [ನಾ] ಐದು, ಏಳು ಅಥವಾ ಒಂಬತ್ತು ಕಾಲುಗಳಿರುವ, ಲೋಹದ ಹಲಗೆಯಿರುವ, ಹತ್ತಿ ಅಥವಾ ರೇಷ್ಮೆಯಿಂದ ತುಂಬಿದ ಮೆತ್ತೆಯುಳ್ಳ ಹಾಗೂ ಹೊದಿಕೆಯುಳ್ಳ ಪೀಠ (ಒಡ್ಡೋಲಗಂಗೊಟ್ಟು ಎಡೆವಜೆಯದೆ ಅವರವರ ಪಡೆದ ಪ್ರತಿಪತ್ತಿಗಳಂ ಅಜೆದಿಕ್ಕಿದ ಲೋಹಾಸನಂಗಳೊಳಂ: **ಪಂಪಭಾ,** ೯. ೨೮ ವ)

ಲೋಹಿತ – [ಗು] ಕೆಂಪಾದ (ಕ್ರೋಧೋದ್ಗಚ್ಛೇದ ಸ್ವೇದಜಳಧಾರಾಸಾರ ಭೀಕರ ಲೋಹಿತಕಪೋಳತಳಂ: **ಆದಿಪು,** ೧೪. ೬೩ ವ)

ಲೊಹಿತಾಂಗ – [ನಾ] ಕೆಂಪೇರಿದ ದೇಹವುಳ್ಳವನು (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ

ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ)

ಲೋಹಿತಾಂಬುಧಿ – [ನಾ] ರಕ್ತದ ಕಡಲು (ಸಂದ ಚೆನ್ನಪೊಂಗರ ತಲೆ ತಾಟಿಪಣ್ ಕೆದಱಿದಂತೆ ನಿರಂತರಂ ಆಜಿರಂಗದೊಳ್ ಪರೆದಿರೆ ಲೋಹಿತಾಂಬುಧಿಯೊಳ್ ಆನೆಗಳ ಅಟ್ಟೆಗಳಾಡೆ: **ಪಂಪಭಾ,** ೮. ೧೦೬)

ಲೋಹಿತಾಶ್ವ – [ನಾ] [ಜೈನ] ರುಚಕಪರ್ವತದ ಪೂರ್ವದಿಕ್ಕಿನ ಎಂಟು ಶಿಖರಗಳಲ್ಲಿ ಒಂದು (ತನ್ಮಹೀಧರವರುಣಾಶಾ ವಿಶೇಷಕಮಾಗಿರ್ದ ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ: **ಆದಿಪು,** ೭. ೩ ವ)

ಲೋಳೆ – [ನಾ] ಅಂಟುದ್ರವ (ಕೊರೆವೊಡೆ ಬೆಟ್ಟುಗಳ್ ಬಿರಿವುವು ಉಣ್ಮುವ ಲಾಳೆಯ ಲೋಳೆಗಳ್ ಪೊನಲ್ವರಿವುವು ಕೆಮ್ಮಿ ಕುಮ್ಮಿದೊಡೆ ತೋಳೊಳೆ ಜೀವವಿಯೋಗಮಪ್ಪುದು: **ಪಂಪಭಾ,** ೪. ೧೦೦)

ಲೌಕಿಕ – [ನಾ] ಲೋಕ ವ್ಯವಹಾರ, ಲೋಕ ರೂಢಿ (ಕೊಟ್ಟೈ ಕಿರ್ಚಂ ಉದಗ್ರ ಶೋಕಶಿಖಿಯಿಂ ಕಣ್ಣೀರ್ಗಳಿಂದೆಯ್ದೆ ನೀರ್ಗೊಟ್ಟೈ ಲೌಕಿಕಮನೇಂ ಇಂ ದಾಂಟಿದೈ: **ಪಂಪಭಾ,** ೧೩. ೬೧); [ಗು] ಲೋಕಕ್ಕೆ ಸಂಬಂಧಿಸಿದ (ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ: ಪಂಪಭಾ, ೧೪. ೬೦)

ವ

ವಂಚನೆ – [ನಾ] ಮೋಸ (ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಂ ಆಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ ಪರ್ವಿದ ಏರ್ವಸನದೊಳಾದ ಬಲ್ಮೆಯೊಳ್: **ಪಂಪಭಾ,** ೧೦. ೭೮)

ವಂದನಮಾಲೆ – [ನಾ] ವಂದನಮಾಲಿಕೆ (ತನ್ನ ಪುರದ ಪೋಪ ಬರ್ಪ ರಾಜಮಾರ್ಗದೊಳಂ ಚತುರ್ವಿಂಶದರ್ಹತ್ಪ್ರತಿಮಾವಿರಾಜಮಾನ ಹೇಮದಾಮ ವಿಲಂಬಿತ ಮಣಿಘಂಟಾಸಮನ್ವಿತ ವಂದನಮಾಲೆಗಳಂ: **ಆದಿಪು,** ೧೬. ೧೧ ವ)

ವಂದನಮಾಳಾ – [ನಾ] ತೋರಣ (ಸಂಛನ್ನ ವಂದನಮಾಳಾ ಲಲಿತಾಂಸುಕಧ್ವಜವಿಳಾಸಾಕೀರ್ಣಮಂ ಮೆಚ್ಚಿ ಪೊಕ್ಕಂ ಅಯೋಧ್ಯಾಪುರಮಂ: **ಆದಿಪು,** ೧೪. ೧೪೯) [ವಂದನಕ್ಕಾಗಿ ಭರತನು ಮಾಡಿಸಿದ ಕಾರಣದಿಂದ ಇದಕ್ಕೆ ವಂದನಮಾಲೆ ಎಂಬ ಹೆಸರು ಉಂಟಾಯಿತು: **ಆದಿಪು,** ೧೬. ೩೯]

ವಂದಾರು – [ನಾ] ಸ್ತುತಿಕಾರ, ಹೊಗಳುವವನು (ವಂದಾರು ಮುನೀಂದ್ರ ವೃಂದಾರಕವೃಂದಸೌಂದರಮುಂ ಆಸನ್ನಭವ್ಯ ವ್ಯೋಮಚರ ಭೂಚರನಿಚಯನಿಚಿತಮುಂ ಆಗಿ: **ಆದಿಪು,** ೩. ೪೫ ವ)

ವಂದಿ – [ನಾ] ಹೊಗಳು ಭಟ್ಟ (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರ ಉದ್ಘೂತರವಂ ಎಸೆಯೆ: **ಪಂಪಭಾ,** ೧೨. ೧೦೬)

ವಂದಿಜನ – ಹೊಗಳುಭಟ್ಟರ ಗುಂಪು (ನಿರಂತರಂ ಕಡಿಕಡಿದಿತ್ತು ಪೊನ್ನೆ ಬುಧ ಮಾಗಧ ವಂದಿಜನಕ್ಕೆ ಕೊಟ್ಟ ಕೋಡೆ ಎಡಱದೆ ಬೇಡಿಂ ಓಡಿಂ ಇದು ಚಾಗದ ಬೀರದ ಮಾತು ಕರ್ಣನಾ: **ಪಂಪಭಾ,** ೧. ೯೯);

ವಂಧ್ಯಾಸ್ತನಂಧಯಸಮಾಗಮ – ಬಂಜೆ ಮತ್ತವಳ ಮಗು ಸೇರುವುದು, ಅಸಂಭವ (ಅದಱಿಂದಮೆನ್ನ ಬಯಸಿದ ಬಯಕೆಯಪ್ಪುದು ವಂಧ್ಯಾಸ್ತನಂಧಯ ಸಮಾಗಮಸಮಾನಂ: **ಆದಿಪು,** ೩. ೪೩ ವ)

ವಂಶ – [ನಾ] ಆನೆಯ ಹೆಗಲಿನ ಬೆನ್ನುಮೂಳೆ (ಅನುಪೂರ್ವ ಧನುರಾಕಾರವಂಶನುಂ ಋಜುಪರಿಪೂರ್ಣ ಪ್ರಸ್ಗ್ರೀವನುಂ .. .. ಅಪ್ಪ ವಿಜಯಪರ್ವತ ಗಜೇಂದ್ರಂ: **ಆದಿಪು,** ೧೨ ೫೬ ವ); [ನಾ] ಬಿದಿರು (ಇಭಖಡ್ಗಿವ್ರಾತ ನಾನಾ ಹರಿಮಯ ಕಟಕಭ್ರಾಜಿತಂ ತುಂಗವಂಶಪ್ರಭವಂ ಸಿಂಹಾಸನಶ್ರೀ ಸಮುಚಿತಂ: **ಆದಿಪು,** ೧೩. ೪೬); [ನಾ] ಕುಲ (ಆತನಿಂದವ್ಯವಚ್ಛಿನ್ನಮಾಗಿ ಬಂದ ವಂಶಂ ಸೂರ್ಯವಂಶಮೆಂಬುದಾಯ್ತು: **ಪಂಪಭಾ,** ೧. ೬೦ ವ)

ವಂಶಜರಾಜ್ಯ – [ನಾ] ವಂಶಪಾರಂಪರ್ಯವಾದ ರಾಜ್ಯ (ಆತ್ಮಬಾಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂಶಜರಾಜ್ಯಾಭಿಷವೋತ್ಸವಂ ನೆಗೞ್ದುದೆಂಬ ಆಶಂಕೆಯಂ ಮಾಡಿದಂ: **ಆದಿಪು,** ೧೪. ೧೩೩)

ವಂಶಾರಾಮ – [ನಾ] [ವಂಶ+ಆರಾಮ] ಬಿದಿರ ಮೆಳೆ (ಕೂರಿಸೆ ಗುರುಶುಶ್ರೂಷೆಯೊಳ್ ಆ ರಾಮನಂ ಉಗ್ರ ಪರಶುಪಾಟಿತರಿಪುವಂಶಾರಾಮನಂ ಇಷುವಿದ್ಯಾಪಾರಗಂ ಎನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ,** ೧. ೧೦೪)

ವಂಶಾವತಾರ – [ನಾ] ಕುಲದ ಆರಂಭ (ಸಮಸ್ತವಸ್ತುವಿಸ್ತಾರಮಾಗಿರ್ದ ಹಸ್ತಿನಪುರವೆ ನಿಜವಂಶಾವಳಂಬಮಾಗೆ ನೆಗೞ್ದ ಭರತಕುಲತಿಲಕರ ವಂಶಾವತರಮೆಂತಾದುದೆಂದೊಡೆ: **ಪಂಪಭಾ,** ೧. ೫೮ ವ)

ವಕುಳ – [ನಾ] ನಾಗಕೇಸರ, ಪಗಡೆ ಗಿಡ (ಮತ್ತೊರ್ವಳ್ ವಕುಳ ಮುಕುಳಾಸವವದನಪರಿಮಳೆ: **ಆದಿಪು,** ೧೧. ೧೨೩ ವ)

ವಕ್ತ್ರಪದ್ಮ – [ನಾ] ಮುಖಕಮಲ (ಅದಱ ಪೊದಲ್ದು ನೀಳ್ದ ಲುಳಿತಾಳಕೆ ತನ್ನ ವಕ್ತ್ರಪದ್ಮದಿನೊಸೆದಾಂತೊಡೆ ಆಕೆಯ ಕಪೋಲದೊಳ್ ನವಧೂಮಲೇಖೆ ಚೆಲ್ವಿದಿರ್ಗೊಳೆ ಗಾಡಿವೆತ್ತು: **ಪಂಪಭಾ,** ೩. ೭೬)

ವಕ್ತ್ರಮಂಡನ – [ನಾ] ಮುಖಾಲಂಕಾರ (ಜಲಲವಮಂಜರಿಯಂ ಉಟುಮಾಡಿದುವು ದಿಶಾಲಲನೆಯರ ವಕ್ತ್ರಮಂಡನ ವಿಲಾಸದೊಳ್ ನೆಗೞ್ವ ಕರ್ಣಪೂರಶ್ರೀಯಂ: **ಆದಿಪು,** ೭. ೯೫)

ವಕ್ರ – [ನಾ] ತಡೆ (ಜವನಾಣೆಗಂ ಆಜ್ಞೆಗಂ ಉಂಟೆ ವಕ್ರಂ ಆ ಖಳನ ತುಟಿವುಮಂ ಸೋಂಕುಮಂ ಆರವಧರಿಪರ್: **ಆದಿಪು,** ೪. ೬೭); [ನಾ] ಅಡ್ಡಿ, ತೊಂದರೆ (ಚಕ್ರದೊಳೇಂ ಮತ್ತೇಜಶ್ಚಕ್ರಮೆ ಮುಂದಕ್ಕೆ ದಂಡರತ್ನಂಬರಂ ಆರ್

ವಕ್ರಮೆನಗೆ ಅಖಿಳ ಧರಣೀಚಕ್ರದೊಳ್: **ಆದಿಪು,** ೧೨. ೭೨)

ವಕ್ರಿಸು – **[ಕ್ರಿ]** ಅಡ್ಡಿಮಾಡು (ಅದಿನ್ನೆನಗೆ ತಪ್ಪುದು ತನ್ನುನಿಶಾಪದಿಂದಂ ಇನ್ನಾರುಮಿದರ್ಕೆ ವಕ್ರಿಸದಿರಿಂ ವನವಾಸದೊಳಿರ್ಪೆಂ: **ಪಂಪಭಾ,** ೧. ೧೧೪); **[ಕ್ರಿ]** ವಕ್ರವಾಗು, ಬೇರೆಯಾಗು (ನಿಮ್ಮೀ ಕ್ರಮಕಮಲಕ್ಕೆ ಎಱಗದೆ ವಕ್ರಿಸಿ ಭೂಚಕ್ರದೊಳಗೆ ಬಾಳ್ವರುಂ ಒಳರೇ: **ಪಂಪಭಾ,** ೧೧. ೩೦); ಪ್ರತಿಭಟಿಸು, ಎದುರಿಸು (ವೈರಿನರಾಧಿಪಸೈನ್ಯವಾರ್ಧಿಯಂ ಪೊಸೆದೊಡೆ ಪುಟ್ಟಿದೀ ನಿನಗೆ ವಕ್ರಿಸಲೆನ್ನಂ ಅದೆಂತು ತೀರ್ಗುಮೋ: **ಪಂಪಭಾ,** ೧೩. ೧೦೧)

ವಕ್ರೋಕ್ತಿ – **[ನಾ]** ಸುಂದರವಾದ ಮಾತು, ಅಲಂಕಾರಿಕ ಮಾತು (ಎಂದೆಂದು ಓರೊರ್ವರ್ ಆಕೆಯ ರೂಪಂ ವಕ್ರೋಕ್ತಿಯೊಳೆ ಪೊಗೞ್ದು: **ಪಂಪಭಾ,** ३. ४೬ ವ)

ವಕ್ರೋಕ್ತಿನಿಪುಣ – **[ನಾ]** ಚತುರತೆಯಿಂದ ಮಾತಾಡುವುದರಲ್ಲಿ ಬಲ್ಲಿದ (ಜನಪದಸಮಭಿಜಾತನುಂ ಅನ್ವಯಾಗತನುಂ ಅಭಿರೂಪನುಂ ಪ್ರತ್ಯುತ್ಪನ್ನಪ್ರತಿಭನುಂ ವಕ್ರೋಕ್ತಿನಿಪುಣನುಂ: **ಆದಿಪು,** ೧೪. ೪೩ ವ)

ವಕ್ಷೋಜ – **[ನಾ]** ಮೊಲೆ (ವಿಜಯಲಕ್ಷ್ಮೀಲಲನಾವಕ್ಷೋಜ ಸ್ಪರ್ಶನಮಂ ಅನಕ್ಷರಮಱಿಪಿದುದು ಪತಿಗಮಂದಸ್ಪಂದಂ; **ಆದಿಪು,** ೧೧. ೧೧)

ವಚಃಪ್ರಸರ – **[ನಾ]** ಮಾತುಗಳ ಸಮೂಹ (ಉಚಿತಪೀಠನಿವಿಷ್ಟಂ ಭುವನೇಶಂ ಬೆಸಗೊಳೆ ವಿನಯವಚಃಪ್ರಸರಂಗಳ್ ಎಸೆದೊಡಂಬಡೆ ನುಡಿದಂ: **ಆದಿಪು,** ೧೩. ೨೪)

ವಚನರಚನೆ – **[ನಾ]** ಮಾತಿನ ಜೋಡಣೆ (ನಿನ್ನ ಬಗೆಯಂ ಬಗೆದಂತೆ ತೀರ್ಚುವೆಂ ಎಂದು ಅನೇಕ ಪ್ರಕಾರ ವಚನರಚನೆಗಳಿಂದಾಕೆಯ ಮನಮಂ ಆಱಿ ನುಡಿಯುತ್ತಿರ್ಪಿನಂ: **ಪಂಪಭಾ,** ४. ೬೯ ವ)

ವಚನಾಮೃತವಾರ್ಧಿ – **[ನಾ]** ಕಾವ್ಯವೆಂಬ ಹಾಲ್ಗಡಲು, ಅಮೃತಸಾಗರ (ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ: **ಪಂಪಭಾ,** ೧. ೧೩)

ವಜ್ಜರಿಗಟಿಗ್ತೆ – **[ನಾ]** ಹೇಸರಗತ್ತೆ (ಕರಿಯ ಪಿರಿಯ ಮೆಯ್ಯ ನಿಡಿಯ ಕಿವಿಯ ಕುಣಿದು ಮೆಟ್ಟುವ ವಜ್ಜರಿಗಟಿಗ್ತೆಗಳುಮಂ ವ್ಯೂಹದೊಳ್ ನಿಟ್ಟೆವಟ್ಟು: **ಆದಿಪು,** ४. ೫४ ವ)

ವಜ್ಜರಿಗೆ – **[ನಾ]** ಹೇಸರಗತ್ತೆ (ಅವಯವದೆ ಕುಣಿದು ಮೆಟ್ಟಿವ ಸವಡಿಯ ವಜ್ಜರಿಗೆ ಪಿಡಿದ ಸತ್ತಿಗೆಯ ವಿಳಾಸವದು ಅಮರ್ದ ಲೀಲೆಯಿಂ: **ಆದಿಪು,** ೧೧. ४೧) [ನರಸಿಂಹಶಾಸ್ತ್ರಿಗಳು **'ಬಿಜ್ಜಣಿಗೆ'** ಎಂಬ ಪಾಠವನ್ನೂ ಎಲ್. ಬಸವರಾಜು 'ಬಜ್ಜರಿಗೆ ಎಂಬ ಪಾಠವನ್ನೂ ಸ್ವೀಕರಿಸುತ್ತಾರೆ]

ವಜ್ರ – **[ಗು]** ಗಟ್ಟಿಯಾದ (ವಿನತಾಪುತ್ರನ ವಜ್ರ ತುಂಡ ಹತಿಗಂ ಮೆಯ್ಯಾಂತು ಕಂಡಂಗಳುಳ್ಳಿನಂ ಅಂಗಂಗಳಂ ಒಡ್ಡಿ ಒಡ್ಡಿ ತನುವಂ ಕೊಟ್ಟಂತು: **ಪಂಪಭಾ,** ४. ೨೬); **[ನಾ]** ಇಂದ್ರನ ವಜ್ರಾಯುಧ (ಮಗನೆನಗೆಂದು ಪೇಟಿಱ್ ಪಿಡಿದು ಕಟ್ಟದೆ ಮಾಣ್ಬನೆ ಪಾರ್ಥನಂ ಧರಿತ್ರಿಗೆ ಗುರುವೆಂದು ವಜ್ರದೊಳ್ ಉರುಳ್ಚದೆ ಮಾಣ್ಬನೆ ಚಕ್ರಿಯಂ: **ಪಂಪಭಾ,** ೫. ೧೦೧); **[ನಾ]** ನವರತ್ನಗಳಲ್ಲಿ ಒಂದು (ಮುತ್ತಿನ ಪಚ್ಚೆ ಮಾಣಿಕದ ವಜ್ರದ ಕೇಟಿಯೊಳ್ ಒಂದಿ ಸಾಂದಿನೊಳ್ ಕತ್ತುರಿಯೊಂದು ಕೋಟಿಗ್ಸಱಿಲೊಳ್ ಓಕುಳಿ ಚಂದನ ಗಂಧವಾರಿಯೊಳ್: **ಪಂಪಭಾ,** ೧४. ೨೦)

ವಜ್ರಕವಾಟ – **[ನಾ]** ತೆಗೆಯಲಾಗದ ಬಾಗಿಲು (ಒಡೆವುದೆ ವಜ್ರಕವಾಟಮಂ ಅಡರ್ವುದೆ ವಿಜಯಾರ್ಧಗಿರಿಯಂ .. .. ಎಮ್ಮನೆ ಬೆಸಸಾ: **ಆದಿಪು,** ೧३. ೨೧)

ವಜ್ರಕೀಟ – **[ನಾ]** ಕಲ್ಲು ಮರಗಳನ್ನೂ ಕೊರೆಯಬಲ್ಲ ಮೂತಿಯುಳ್ಳ ಅಲರ್ಕ ಎಂಬ ಒಂದು ಹುಳು, ದುಂಬಿ (ಪರಶುರಾಮಂ ಮಱಿದು ಒರಗಿದಾ ಪ್ರಸ್ತಾವದೊಳ್ ಆ ಮುನಿಗೆ ಮುನಿಸಂ ಮಾಡಲೆಂದು ಇಂದ್ರಂ ಉಪಾಯದೊಳ್ ಅಟ್ಟಿದ ವಜ್ರಕೀಟಂಗಳ್: **ಪಂಪಭಾ,** ೧. ೧೦४ ವ)

ವಜ್ರತುಂಡ – **[ನಾ]** ಗಟ್ಟಿಯಾದ ಕೊಕ್ಕು (ವಿನತಾಪುತ್ರನ ವಜ್ರತುಂಡಹತಿಗಂ ಮೇಯ್ಯಾಂತು .. .. ನಾಗಾನಂದಮಂ ಮಾಡಿದಂ; **ಪಂಪಭಾ,** ४. ೨೬)

ವಜ್ರದಾಳಿ – **[ನಾ]** [ವಜ್ರ+ತಾಳಿ] ವಜ್ರಖಚಿತ ಮಾಂಗಲ್ಯ (ತಿಸರಮಿದಾವುದಕ್ಕ ಧರಣೇಂದ್ರನ ಕೊಟ್ಟುದು ವಜ್ರದಾಳಿ ಕಣ್ಗೆಸೆವುದಿದಾವುದು: **ಪಂಪಭಾ,** ४. ೮೬)

ವಜ್ರಮಯ – **[ನಾ]** [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲೊಂದಾದ ಚರ್ಮರತ್ನದ ಹೆಸರು (ಅಗಾಧಜಲದುರ್ಗಸಮುತ್ತರಣ ನಿರತ ಸಕಳ ಶಿಬಿರ ಸಂಧಾರಣಶಕ್ತಿಯುಕ್ತಮಪ್ಪ ವಜ್ರಮಯಮೆಂಬ ಚರ್ಮರತ್ನಮುಂ: **ಆದಿಪು,** ೧೧. ३ ವ)

ವಜ್ರಮುಷ್ಟಿ – **[ನಾ]** ಕೈಯಲ್ಲಿ ಹಿಡಿಯುವ ಒಂದು ಆಯುಧ (ವಜ್ರಮುಷ್ಟಿಯ ಪೊಯ್ಲೊಳಂ ಬಾಳ ಕೋಳೊಳಂ ಉಚ್ಚಳಿಸಿದ ಕಪಾಲದೋಡುಗಳಂ ಗಂಗೆಗಟ್ಟುತ್ತುಂ: **ಪಂಪಭಾ,** ೧೧. ೨ ವ)

ವಜ್ರಲೇಪ – **[ನಾ]** ವಜ್ರದ ಲೇಪನ, ಗಟ್ಟಿಗೊಳಿಸುವುದು (ವಜ್ರಲೇಪದ ತಗುಳ್ಪಂ ಪೋಲ್ವಿನಂ ವಜ್ರನಾಭಿಗೆ ಅತಿಪ್ರೀತಿಯಂ ಉಂಟುಮಾಡಿದರವರ್ ಜನ್ಮಾಂತರಸ್ನೇಹದಿಂ: **ಆದಿಪು,** ೬. ೨೨)

ವಜ್ರವೃಷಭನಾರಾಚಸಂಹನನ – **[ನಾ]** [ಜೈನ] ವಜ್ರಕ್ಕೆ ಸಮಾನವಾದ ಅಸ್ಥಿಪಂಜರವು ನಿರ್ಮಾಣವಾದ ಹಾಗೂ ವಜ್ರಸಮಾನವಾದ ಕೀಲುಗಳಿಂದ ಕೀಲಿತವಾದ ದೇಹ (ಅಂತು ನಿಸ್ವೇದ ನಿರ್ಮಲ ಕ್ಷೀರಗೌರಕ್ತಜ ಸಮಚತುರಸ್ರಸಂಸ್ಥಾನ ವಜ್ರವೃಷಭನಾರಾಚ ಸಂಹನನುಂ: **ಆದಿಪು,** ೮. ४ ವ)

ವಜ್ರಶರ – **[ನಾ]** ಸಿಡಿಲಿನಂತಹ ಬಾಣ (ಎಚ್ಚೊಡೆ ಅಸುರನಿಟ್ಟ ಬೆಟ್ಟಂ ಒಂದು ವಜ್ರಶರದಿಂ ಆರ್ದು ಎಚ್ಚು ದಿತಿಜನೆಚ್ಚ ಸಡಿಲ ಶರಮಂ ಉದಕಬಾಣದಿಂದೆಚ್ಚು: **ಪಂಪಭಾ,** ೧೨. ೧३)

ವಜ್ರಹತಿ – **[ನಾ]** ಸಿಡಿಲ ಹೊಡೆತ, ವಜ್ರಾಯುಧದ ಹೊಡೆತ (ಕುಲಿಶಾಯುಧನಿತ್ತ ಶಕ್ತಿಯಿಂದೆ ಆತನ ಉರಸ್ಥಲಮನಿಡೆ ವಜ್ರಹತಿಯಿಂ ಕುಲಗಿರಿ ಕೆಡೆವಂತೆ ಕೆಡೆದನಾ ದನುತನಯಂ: **ಪಂಪಭಾ,** ೧೨. ೧४)

ವಜ್ರಿ – **[ನಾ]** ಇಂದ್ರ (ಇದಿರೊಳ್ ನಿಂದೊಡೆ ವಜ್ರಿ ಸೈರಿಸಂ ಇರಲ್ವೇಡ ಎಮ್ಮೊಳೊಳ್ವೊಕ್ಕು ನಿಲ್ವುದು ನೀಂ ಎಂದು

ಕಡಂಗಿ ಕಾಲ್ವಿಡಿವವೋಲ್ ತನ್ನೂರ್ಮಿಗಳ್ ಬಂದುವು: **ಪಂಪಭಾ,** ೪. ೨೪)

ವಜ್ರಿಶರ – [ನಾ] ಇಂದ್ರಾಸ್ತ್ರ, ಶಕ್ತಿ (ನಿಶಾತವಜ್ರಿಶರದಿಂ ಸುರರಂಬರದೊಳ್ ತಗುಳ್ದು ಬಿಚ್ಚಳಿಸೆ ನದೀಜನುಚ್ಚಳಿಸೆ ಕಾದಿದಂ ಏಂ ಕಲಿಯೊ ಗುಣಾರ್ಣವಂ: **ಪಂಪಭಾ,** ೧೧. ೪೩)

ವಟವಿಟಪಿ – [ನಾ] ಆಲದ ಮರ (ಪುರಿಮತಾಳಪುರ ಬಹಿರ್ಭಾಗನಿಕಟ ಶಕಟೋದ್ಯಾನವಟವಿಟಪಿಯ ಕೆಟಿಗೆ ವಿಶಾಳ ನಿರಾಳ ಕುಳನಿರ್ಜಂತುಕ ನಿರ್ಮಲ ಶಿಲಾಪಟ್ಟದ ಮೇಲೆ: **ಆದಿಪು,** ೧೦. ೧೩ ವ)

ವಟು – [ನಾ] ಬ್ರಹ್ಮಚಾರಿ (ಆಗಳೆ ಕೈಗೂಡಿದ ವಟುವಾಕೃತಿಯೊಳೆ ಬೇಡಿದನಾ ಸಹಜಕವಚಮಂ ಕುಂಡಳಮಂ; **ಪಂಪಭಾ,** ೧. ೧೦೦)

ವಣಿಗ್ವಂಶ – [ನಾ] ಆದಿದೇವನು ವಿಭಾಗಿಸಿದ ಮೂರು ವರ್ಣಗಳಲ್ಲಿ ಒಂದು, ವಣಿಕರು ಎಂಬ ವರ್ಣ (ತನ್ನ ಪಡೆದ ಕ್ಷತ್ರಿಯವಣಿಕ್ಶೂದ್ರರೆಂಬ ಮೂಱುವರ್ಣಂಗಳೊಳಗೆ .. .. ವಣಿಗ್ವಂಶಕ್ಕೆ ಪಾಶುಪಾಲ್ಯ ಕೃಷಿ ಪಣ್ಯಕರ್ಮಂಗಳುಮಂ: **ಆದಿಪು,** ೮. ೬೪ ವ); [ನಾ] ವೈಶ್ಯವರ್ಣ (ವಣಿಗ್ವಂಶಕ್ಕೆ ಜಳಸ್ಥಳಯಾತ್ರಾಸಂವೃತಮರ್ಥ ಪ್ರವರ್ತನಮುಮಂ: **ಆದಿಪು,** ೮ ೭೩ ವ)

ವಣಿಗ್ವಂಶಾಗ್ರಣಿ – [ನಾ] ವ್ಯಾಪಾರಿವಂಶ ಶ್ರೇಷ್ಠ (ಆ ಪುರದೊಳ್ ವಣಿಗ್ವಂಶಾಗ್ರಣಿ ಕುಬೇರನಿಂದ ಅಧಿಕನೆನಿಸಿದ ಕುಬೇರದತ್ತಂಗಂ ಅನಂತಮತಿಗಂ ಧನದೇವನೆಂಬ ಪ್ರಿಯತನೂಭವನಾದಂ: **ಆದಿಪು,** ೬. ೨೧ ವ)

ವಣಿಗ್ವ್ಯವಹಾರ – [ನಾ] [ವಣಿಕ್+ವ್ಯವಹಾರ] ವ್ಯಾಪಾರಿಗಳ ಕಾರ್ಯ (ಸೇವಾಧರ್ಮೋಚಿತಮೆನಿಸುವ ಅಸಿಕರ್ಮಮುಮಂ ಅನೇಕ .. .. ಶಾಸ್ತ್ರಾನುಗತಮಪ್ಪ ವಿದ್ಯೆಯುಮಂ ವಣಿಗ್ವ್ಯವಹಾರಾನುಕಾರಿಯಪ್ಪ ವಾಣಿಜ್ಯಮುಮಂ: **ಆದಿಪು,** ೮. ೬೪ ವ)

ವದನ – [ನಾ] ಮುಖ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ); [ನಾ] ಬಾಯಿ (ಮಹೀತಳಾಶ್ಲಿಷ್ಟಜಾನುಲಲಾಟಪಟ್ಟರ್ ಪ್ರಣಾಮಾರ್ಪಣಪುರಸ್ಸರಂ ಶಿರೋವೇಷ್ಟನ ಪ್ರಲಂಬ ಚೇಳಾಂಚಳ ಪಿಹಿತವದನರಾಗಿ: **ಆದಿಪು,** ೧೦. ೪೮ ವ)

ವದನರಸ – [ನಾ] ಜೊಲ್ಲು (ವದನರಸಂ ಮದನರಸಂ ಪೊದಳ್ದುದೆನಿಸುವಿನಮುಮರಿ ನರ್ತಿಸೆ: **ಆದಿಪು,** ೭. ೧೯)

ವದನಾರವಿಂದೆ – [ನಾ] ಕಮಲಮುಖಿ, ಅರಳಿದ ಕಮಲದಂತಹ ಮುಖದವಳು (ಅಂಬಿಕೆಯ ಸೂಳೆಯಪ್ಪಾಕೆ ದರಹಸಿತ ವದನಾರವಿಂದೆಯಾಗಿ ಬರವಂ ಕೈಕೊಂಡಳಪ್ಪುದಱಿಂದಾಕೆಯ ಮಗಂ ವಿದುರನೆಂಬಂ ಅನಂಗಾಕಾರನುಮಾಚಾರವಂತನುಂ ಬುದ್ಧಿವಂತನುಮಕ್ಕುಂ: **ಪಂಪಭಾ,** ೧. ೮೫ ವ)

ವಧಾರ್ಥ – [ನಾ] ಕೊಲ್ಲುವ ಉದ್ದೇಶ (ಅಂಬೆಯೆಂಬ ದುಂಡುರುಂಬೆ ನಿನಗೆ ವಧಾರ್ಥಮಾಗಿ ಪುಟ್ಟುವೆನಕ್ಕೆಂದು ಕೋಪಾಗ್ನಿಯಿಂದಂ ಅಗ್ನಿಶರೀರಿಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟಿ: **ಪಂಪಭಾ,** ೧. ೮೦ ವ)

ವಧುವಿರ್ – [ನಾ] ಸ್ತ್ರೀಯರು (ಎರಡು ರಥದ ಗಾಲಿಯ ಕೋಳಿಂದಾದ ರಜಃಪಟಲಂ ಕವಿದು ಆದಮೆ ತೀವಿದುದು ದಿವಿಜವಧುವಿರ ಕಣ್ಣೊಳ್: **ಪಂಪಭಾ,** ೫. ೭೯)

ವಧೂವರ – [ನಾ] ವಧುಶ್ರೇಷ್ಠಳು (ಎಣ್ಬರುಂ ಆಶಾವಧೂವರರಂ ಆದಿಪುರುಷಾಂಬಿಕೆಗೆ ಗಾಯಕೀನಾಯಕಿಯರಾಗಿ: **ಆದಿಪು,** ೭. ೩ ವ)

ವಧೂವರತೆ – [ನಾ] ವಧುವಿಗೆ ವರನಾಗುವಿಕೆ (ಮಾಘಮಾಸಂ ಬರೆ ಕೃಷ್ಣಚತುರ್ದಶೀದಿನಂ ಸಮನಿಸೆ ತತ್ಪುರುದೇವಂ ಮುಕ್ತಿವಧೂವರತೆಯಂ ಅಭಿಜಿನ್ಮುಹೂರ್ತದೊಳ್ ಕೈಕೊಂಡಂ: **ಆದಿಪು,** ೧೬. ೫೧)

ವಧೆ – [ನಾ] ಕೊಲೆ (ಹಿಡಿಂಬವಧೆ ಬಕಾಸುರವಧೆ .. .. ಪೆಱವುಮುಪಾಖ್ಯಾನಕಥೆಗಳೊಳಮೊಂದುಂ ಕುಂದಲೀಯದೆ ಪೇೞ್ವೆಂ: **ಪಂಪಭಾ,** ೧೪. ೫೨ ವ)

ವಧ್ಯಕ್ರಮ – [ನಾ] ಕೊಲ್ಲುವ ಬಗೆ (ಒಂದೊಂದರ್ಕೆ ಮೊಗಂಬುಗಿಸಿದಾಗಳ್ ಉಭಯವ್ಯಾಳದಂತಿ ವಧ್ಯಕ್ರಮಂಗಳೊಳ್ ಭಾರ್ಗವರ್ ಸುರಿಗಿಱಿವಂತಿಱಿಯೆ: **ಪಂಪಭಾ,** ೧೦. ೯೩ ವ)

ವನ – [ನಾ] ಕಾಡು (ಎತ್ತ ವನಂ ಎತ್ತ ಮೃಗಯಾವೃತ್ತಕಂ ಈ ತಪಸಿಯೆತ್ತ ಮೃಗಂ ಎಂದು ಎಂತು ಆನೆತ್ತಚ್ಚೆನ್ ಆತ್ಮಕರ್ಮಾಯತ್ತಂ ಪೆಱತಲ್ತಿದು ಎಲ್ಲಂ ಅಘಟಿತಘಟಿತಂ: **ಪಂಪಭಾ,** ೧. ೧೧೩); [ನಾ] ನೀರು (ರಂಗತ್ತುಂಗತರಂಗ ಭಂಗುರಲಸತ್ ಗಂಗಾಜಳಂ ನರ್ಮದಾಸಂಗ ಸ್ವಚ್ಛವನಂ: **ಪಂಪಭಾ,** ೧೪. ೩೧)

ವನಕ್ರೀಡೆ – [ನಾ] ವನಕೇಳಿ (ಅಂತು ಬಂದ ಬಸಂತದೊಳ್ ಮಾದ್ರಿ ತಾಂ ಗರ್ವವ್ಯಾಲೆಯುಂ ಕ್ರೀಡಾನುಶೀಲೆಯುಂ ಅಪ್ಪುದಱಿಂ ವನಕ್ರೀಡಾನಿಮಿತ್ತದಿಂ ಪೋಗಿ: **ಪಂಪಭಾ,** ೨. ೧೫ ವ)

ವನಖಗ – [ನಾ] ಕಾಡುಹಕ್ಕಿ (ವನಖಗ ವನಮೃಗ ವನತರು ವನಚರ ವನವನಜನಿವಹಮುಳ್ಳನಿತುಂ ಸೀರನಿತುಂ ಅಣಂ ಉಟಿದುದಿಲ್ಲ: **ಪಂಪಭಾ,** ೫. ೯೭)

ವನಚರ – [ನಾ] ಕಾಡಿನಲ್ಲಿ ಓಡಾಡುವ ಪ್ರಾಣಿಗಳು (ವನಖಗ ವನಮೃಗ ವನತರು ವನಚರ ವನವನಜನಿವಹಮುಳ್ಳನಿತುಂ ಸೀರನಿತುಂ ಅಣಂ ಉಟಿದುದಿಲ್ಲ: **ಪಂಪಭಾ,** ೫. ೯೭); [ನಾ] ಬೇಟೆಗಾರ (ವನಚರನಾಗಿ ಶಂಭು ಗಿರಿಜಾತೆಯಂ ಓತು ಪುಳಿಂದಿ ಮಾಡಿ ನಚ್ಚಿನ ಗುಹನಂ ಕಿರಾತಬಲನಾಯಕನಾಗಿರೆ ಮಾಡಿ: **ಪಂಪಭಾ,** ೮. ೧೪)

ವನಜವನ – [ನಾ] ತಾವರೆಯ ವನ (ತುಱುಗಿದ ಹಿಮಬಿಂದುಗಳಿಂದೆ ಎಱಗಿದ ನವವನಜವನದವೋಲ್ ಶೋಕದಿಂ ಅಂದೊಱೆ್ವ ನಯನೋದಬಿಂದುವಿಂ ಎಱಗಿದುದೊರ್ಮೊದಲೆ ಬಂಧುಮುಖವನಜವನಂ: **ಪಂಪಭಾ,** ೨. ೨೯)

ವನಜಳಕೇಳಿ – [ನಾ] ಕಾಡಿನ ನೀರಾಟ (ಕಡುಪಗಲಾದುದು ಬೀಡಂ ಬಿಡಿಸುವುದು ಈ ಪುಣ್ಯನದಿಯ ತಡಿಯೊಳ್ ದೇವರ್ ನಡೆವುದು ವನಜಳಕೇಳಿಗೆ: **ಆದಿಪು,** ೧೧. ೬೯)

ವನತರು – [ನಾ] ಕಾಡುಮರ (ವನಖಗ ವನಮೃಗ ವನತರು ವನಚರ ವನವನಜನಿವಹಮುಳ್ಳನಿತುಂ ಸೀರನಿತುಂ ಅಣಂ ಉಟಿದುದಿಲ್ಲ: **ಪಂಪಭಾ,** ೫. ೯೭)

ವನದಂತಿ – [ನಾ] ಕಾಡಾನೆ (ಕಪಿಧ್ವಜಂ ವನದಂತಿಯಂತೆ ಧ್ವಾಂಕ್ಷಧ್ವಜಮನುಡಿದು ಕೆಡೆವಿನಂ ಎಚ್ಚಾಗಳ್: **ಪಂಪಭಾ,** ೧೨. ೨೦೮ ವ)

ವನದಹನ – [ನಾ] ಕಾಡುಗಿಚ್ಚು (ವನದಹನಂ ವನಾಂತರಮಂ ಒರ್ಬಳಸಾಗಿರೆ ಮುತ್ತಿ ಸುತ್ತಿ ನಡುವಿರ್ದುಂ ಆ ಮರನನಟ್ಟಿದುದು: **ಆದಿಪು**, ೯. ೫೯)

ವನದುರ್ಗ – [ನಾ] ಕಾಡಿನ ಮಧ್ಯದಲ್ಲಿರುವ ಕೋಟೆ (ಆ ಮಾಧವೀಮಂಟಪಮಂ ಕಾಮನ ಡಾಮರಕ್ಕೆ ಅಳ್ಕಿ ವನದುರ್ಗಂಬುಗುವಂತೆ ಪೊಕ್ಕು: **ಪಂಪಭಾ,** ೫. ೬ ವ)

ವನಧಿ – [ನಾ] ಸಮುದ್ರ (ವನಧಿಪರೀತಭೂತಳದೊಳೀತನೆ ಸೋಲದ ಗಂಡಂ: **ಪಂಪಭಾ,** ೧. ೨೬)

ವನಧಿಧ್ವಾನ – [ನಾ] ಸಮುದ್ರಘೋಷ (ವನಧಿಧ್ವಾನಮನೊಡ್ಡಿಸುತ್ತಿರೆ ನದದ್ಗಂಭೀರಭೇರೀಬೃಹದ್ಧ್ವನಿ: **ಆದಿಪು**, ೧೪. ೧೪೯)

ವನಧಿಪರೀತ – [ಗು] ಸಮುದ್ರದಿಂದ ಸುತ್ತುವರಿದ (ವನಧಿಪರೀತ ಭೂತಳದೊಳೀತನೆ ಸೋಲದ ಗಂಡಂ: **ಪಂಪಭಾ,** ೧. ೧೬)

ವನಧಿಪ್ರಧ್ವಾನ – [ನಾ] ಸಮುದ್ರಘೋಷ (ವನಧಿಪ್ರಧ್ವಾನದಿಂ ಮಂಗಳಪಟಹರವಂ ಪೆರ್ಚೆ ಮಾಂಗಲ್ಯಗೇಯಧ್ವನಿಯಿಂದೆ ಆಶಾಂತರಂ ಘೂರ್ಣಿಸಿ ಸೊಗಯಿಸೆ: **ಪಂಪಭಾ,** ೧೪. ೧೮)

ವನನಿಧಿ – [ನಾ] [ಜೈನ] ಸಾಗರದಷ್ಟು ಅವಧಿ (ಮೂವತ್ತಮೂಱು ಸಾಸಿರವರ್ಷಕ್ಕತಿಶಯಸುಧಾಶಯದೊಳ್ ವನನಿಧಿ ಮೂವತ್ತಮೂಱುಮಂ ಸಲೆ ಬಾಳ್ವಂ: **ಆದಿಪು**, ೬. ೪೭); [ನಾ] ಸಮುದ್ರ (ಎನಗೆ ಪೊಸಂತಿಲೀ ನೆಗಟ್ದಿ ವಜ್ರದ ವೇದಿಕೆ ಗೋಷ್ಪದಂ ದಲೀ ವನನಿಧಿ ಪಾಯ್ದು ಮಾಗಧನನೀಗಳೆ ಕಟ್ಟುವೆಂ: **ಆದಿಪು**, ೧೨. ೭೧)

ವನಪಥ – [ನಾ] ಕಾಡಿನ ಹಾದಿ (ಕಳಭಂ ವನಪಥಮಂ ಯೂಥಪತಿಗೆ ತೋರ್ಪಂತಕ್ಕುಂ: **ಆದಿಪು**, ೮. ೧೨)

ವನಪಾಲಕ – [ನಾ] ಉದ್ಯಾನದ ಮೇಲ್ವಿಚಾರಕ (ಶಿಖಾಕಳಾಪದ ಕೋಳುಮಂ ಎಂತಾನುಂ ಬಂಚಿಸಿ ಬಲೆಪಜೆದ ಕೋಕನಂತೆ ಒರ್ವ ವನಪಾಲಕಂ ಪೋಗಿ ದೇವೇಂದ್ರನಂ ಕಂಡು: **ಪಂಪಭಾ**, ೫. ೯೩ ವ)

ವನಭೃತ್ – [ನಾ] ಮೋಡ (ವನಭೃತ್ಕುಂತಳೆಯಾ ಶಿರೀಷ ಕುಸುಮಾಭಾಂಗಕ್ಕೆ ಕಂದಂ ಕನತ್‌ಕನಕಾಂಭೋಜ ನಿಭಾನನಕ್ಕೆ ಪಿರಿದುಂ ದೀನತ್ವಮಂ: **ಪಂಪಭಾ**, ೪. ೬೪)

ವನಮದಕರಿ – [ನಾ] ಮದಿಸಿದ ಕಾಡಾನೆ (ಉತ್ತಮ ವನಮದಕರಿ ಕರಟಭಿತ್ತಿಗಳಿಂ ಸಿರುವ ಮದದ ಬಂಧುರಗಂಧಂ ಕತ್ತುರಿಮೃಗಮದದೊಳ್ ಪುದಿದು: **ಆದಿಪು**, ೯. ೧೨೦)

ವನಮಹಿಷಿ – [ನಾ] ಕಾಡೆಮ್ಮೆ (ದೆಸೆಗಳ್ಗೆ ಬೆರ್ಚಿ ಮೂಂಕಿಜೆವ ವನಮಹಿಷಿಗಳಿಂ ಮದಹಸ್ತಿಯಂತೆ ಮರವಾಯ್ವ ಪುಲಿಗಳಂ ಅತಿಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು: **ಪಂಪಭಾ,** ೭. ೨೯ ವ)

ವನಮಾತಂಗ – [ನಾ] ಕಾಡಾನೆ (ಸಿಂಗದ ಮುಪ್ಪುಂ ನೆಗಟ್ದೀ ಗಾಂಗೇಯರ ಮುಪ್ಪುಂ ಇಳಿಕೆವಡೆಗುಮೇ ವನಮಾತಂಗಂಗಳಿಂ ಅಸುಹೃತ್ ಚತುರಂಗಬಲಂಗಳಿಂ: **ಪಂಪಭಾ**, ೧೦. ೧೯)

ವನಮೃಗ – [ನಾ] ಕಾಡುಮೃಗ (ವನಖಗ ವನಮೃಗ ವನತರು ವನಚರ ವನವನಜನಿವಹಮುಳ್ಳನಿತುಂ ಸೀರನಿತುಂ ಅಣಂ ಉಟಿದುದಿಲ್ಲ: **ಪಂಪಭಾ**, ೫. ೯೭)

ವನರಾಜಿಕ್ರೀಡೆ – [ನಾ] ವನವಿಹಾರ (ವನರಾಜಿಕ್ರೀಡೆಯಂ ಯೌವನವನದೊಳೆ ತೋಱಿಲ್ ಜಲಕ್ರೀಡೆಯಂ ನಚ್ಚಿನ ಲಾವಣ್ಯಾಚ್ಛತೋಯಾಶಯದೊಳೆ ಮೆಱೆಯಲ್: **ಆದಿಪು,** ೧. ೮೩)

ವನರುಹಗರ್ಭ – [ನಾ] ತಾವರೆಯಲ್ಲಿ ಹುಟ್ಟಿದವನು, ಬ್ರಹ್ಮ (ವನರುಹಗರ್ಭನೆಂಬವನ ಮುನ್ನಿನ ಗೆಯ್ದ ತಪಂ ತಿಲೋತ್ತಮಾಂಗನೆಯಿನದೆಂತುಟಾದುದು ಎನೆ: **ಪಂಪಭಾ,** ೭. ೮೧)

ವನಲತಾಂಗಿ – [ನಾ] ವನವೆಂಬ ಹೆಣ್ಣು, ವನದೇವತೆ (ಸರಳ ತಮಾಳ ತಾಳ ಹರಿಚಂದನ ನಂದನ ಭೂಜರಾಜಿಯಿಂ ಸುರಿವ ಅಲರೋಳಿ ತತ್ ವನಲತಾಂಗಿಯ ಸೂಸುವ ಸೇಸೆಯಾಯ್ತು: **ಪಂಪಭಾ**, ೫. ೫೨)

ವನವಧು – [ನಾ] [ಜೈನ] ವ್ಯಂತರ ದೇವತೆ (ವನವಧೂಬ್ರಾತಂ ಔತ್ಸುಕ್ಯವದ್ಭಾವನಭಾಮಾರಾಜಿ ತದ್ಭಾವನಸುರರ್ ಅಖಿಳ ವ್ಯಂತರ ಜ್ಯೋತಿರಿಂದ್ರರ್: **ಆದಿಪು**, ೧೦. ೩೬)

ವನವೀಥಿ – [ನಾ] ಕಾಡಿನ ದಾರಿ (ಉತ್ತುಂಗ ತೋರಣದ್ವಾರದಿಂದಂ ನುಗುಳ್ದು ವನವೀಥಿವಿಡಿದು ಬಂದು: **ಆದಿಪು**, ೧೩. ೧೧ ವ)

ವನಶ್ರೀ – [ನಾ] ಕಾಡಿನ ಚೆಲುವು (ಕಾಯ್ತು ಕರೆವಂತಿರ್ದುದು ಚೆಂದೆಂಗು ಸಾರಲೆವಂತಿರ್ದುದು ಬಂದ ಕರ್ಬು ಎನೆ ವನಶ್ರೀ ಬಣ್ಣಿಸಲ್ಬರ್ಕುಮೇ: **ಆದಿಪು**, ೧೧. ೬೮)

ವನಸಿಂಹನ್ಯಾಯ – [ನಾ] ಒಂದು ಲೌಕಿಕನ್ಯಾಯ: ವನ–ಸಿಂಹಗಳ ಪರಸ್ಪರ ರಕ್ಷಣೆ (ಧರಣಿಗುಹಾಸಿಂಹರ್ ನೀಮುಮೀಗಳ್ ವನಸಿಂಹನ್ಯಾಯಮಂ ದುರ್ಗದೊಳೆ ಬಲಿದು ನಿಂದಲ್ಲಿ ಬಂದೊತ್ತಿ ಚಕ್ರೇಶನ ತಂತ್ರಂ ನಿಲ್ಕುಂ: **ಆದಿಪು**, ೧೩. ೫೮)

ವನಸುಮ – [ನಾ] ಕಾಡು ಹೂ (ವನಸುಮಸ್ತಬಕದ ನೆಟಿಲಿನಿಸಚ್ಛಾಂಬುವಿನೊಳೆಸೆಯೆ ಮಧುಕರಮದು ಭೋಂಕೆನೆ ಪಾಯ್ದು ಎಱಂಕೆ ನಾಂದೊಡೆ ಜಿನುಂಗಿ ನೆಲಸಿದುದು ವಿಕಚಕನಕಾಬ್ಜಿನಿಯೊಳ್: **ಆದಿಪು**, ೧೧. ೬೨)

ವನಾಂತರ – [ನಾ] ಕಾಡಿನ ಒಳಭಾಗ (ಕರಿಯ ಮುಗಿಲ್ಗಳಿಂ ಗಗನಮಂಡಳಮೊಪ್ಪಿರೆ ಸೋಗೆಯಿಂ ವನಾಂತರಂ ಎಸೆದು ಒಪ್ಪೆ ತೋರ್ಪ ಮೊಳೆವುಲ್ಗಳಿನೀ ಧರಣೀವಿಭಾಗಂ ಒಪ್ಪಿರೆ: **ಪಂಪಭಾ**, ೭. ೨೩)

ವನಾಂತರಾಳ – [ನಾ] ವನಾಂತರ (ಜಲಜಲನೆ ಒಟ್ಟುಕಿರ್ಪ ಪರಿಕಾಲ್ ಪರಿಕಾಲೊಳ್ ಅಳುರ್ಕೆಗೊಂಡ ನೈದಿಲ ಪೂ .. .. ಸಿರಿ ನೋಡುಗುಮಾ ವನಾಂತರಾಳದೊಳ್: **ಪಂಪಭಾ,** ೧. ೫೨)

ವನಾಧೀಶ – [ನಾ] ಕಾಡಿನ ರಾಜ (ಕಸ್ತೂರಿಕಾಂಡಕಂ ವನಹಸ್ತಿರದಂ ಹಸ್ತಿಮಸ್ತಕೋದ್ಭವ ಮುಕ್ತಾವಿಸ್ತಾರಮೆಂದು ತಂದು ಸಮಸ್ತ ವನಾಧೀಶರ್ ಅವನಿಪತಿಯಂ ಕಂಡರ್: **ಆದಿಪು**, ೧೨. ೬೭)

ವನೀಪಕ – [ನಾ] ಯಾಚಕ (ಎಡಱು ಅಱಿದು ಈವ ಕಲ್ಪತರುವೆಂದು ವನೀಪಕಕೋಟಿ ಸಂತಸಂಬಡೆ ಪೊಡೆವ ಒಂದಕಾಳವಿಳಯಾಶನಿ ಎಂದು ವಿರೋಧಿಗಳ್ ಮನಂಗಿಡೆ: **ಪಂಪಭಾ,** ೨. ೯೮); [ನಾ] ಭಿಕ್ಷುಕ ವೇಷದ ಗೂಢಚಾರ (ತನ್ನ ಪೊನ್ನ ರಥದೊಳ್ ನೆಲಸಿರ್ದು ವಿಳಾಸದಿಂದೆ ಭೀಮನ ಮೊನೆಯಂ ವನೀಪಕರಂ ಆರಯಲಟ್ಟಿ: **ಪಂಪಭಾ,** ೧೦. ೫೮)

ವನೇಚರಾಧಿಪ – [ನಾ] ಬೇಟೆಗಾರರ ಮುಖಂಡ (ಅಲ್ಲಿ ಕೋಳ್ಮಿಗದ ವನೇಚರಾಧಿಪರ ದಾಯಿಗರತ್ತಣಿಂ ಅಪ್ಪ ಅಪಾಯಕೋಟಿಗೆ ಪವಣಿಲ್ಲ: **ಪಂಪಭಾ,** ೭. ೨೧)

ವನ್ಯಗಜ – [ನಾ] ಕಾಡಾನೆ (ಕೇಸರಿಣೀಸ್ತನ್ಯಮಂ ಅನ್ಯ ವನ್ಯಗಜಪೋತಾನೀಕಮುಂಡಾಡೆ: **ಆದಿಪು,** ೯. ೯೭)

ವನ್ಯಮತಂಗಜ – [ನಾ] ಕಾಡಾನೆ (ತುಂಗವನ್ಯಮತಂಗಜದಂತೆ ಆಘಾತ ನಿಪಾತಿತ ಸಲ್ಲಕೀಭಂಗಮಂ: **ಪಂಪಭಾ,** ೧. ೧೧೫)

ವಪು – [ನಾ] ದೇಹ (ಪಳುಕಿನ ಪಾಪೆಯನಮರ್ದಿಂ ತೊಳೆದಂತೆ ಒರ್ಮೊಟಿದ ದಿವ್ಯವಪು ಮಣಿಮಯಕುಂಡಳ ಮಕುಟ ಕಟಕ ಭೂಷಣವಿಳಾಸದಿಂದೇಂ ವಿಳಾಸಮಂ ತಾಳ್ದುದೋ: **ಆದಿಪು,** ೬. ೩೯)

ವಪ್ರ – [ನಾ] ಪ್ರಾಕಾರ, ಆಳುವೇರಿ (ಭಾಭಾಸುರಮೊಪ್ಪಿ ತೋಱುಗುಂ ಪಂಚರತ್ನಪಾಂಶೂಚ್ಚದೀಪ್ತಿದೀಪ್ರಂ ವಪ್ರಂ: **ಆದಿಪು,** ೬. ೧೦೩)

ವಯಲ್ – [ನಾ] [ಯುದ್ಧದ] ಬಯಲು (ವಯಲ್ಗೆ ಮೆಯ್ದೋಱುವೆವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱಿ ನಭಕ್ಕೆ ಪಾಱಿದುದು: **ಪಂಪಭಾ,** ೧. ೧೮೯)

ವಯಸ – [ನಾ] ಪ್ರಾಯ, ಹರೆಯ (ಈ ವಯಸಮನೀ ಶೀಲಮನೀ ವಿನಯಮನೆಯ್ದೆ ವಿದ್ಯೆಯಿಂ ಪುದಿದೊಡೆ ಮತ್ತೇವೇಟ್ಟುದೊ: **ಆದಿಪು,** ೮. ೫೮)

ವಯೋಧಿಕ – [ನಾ] ವಯೋವೃದ್ಧ, ಹಿರಿಯ (ಇದನ್ನೆಮಗಂ ಅನುಭೂತಂ ಅದಲ್ಲದೆಯುಂ ವಯೋಧಿಕ ವ್ಯೋಮಚರ ಪ್ರತ್ಯಕ್ಷಂ: **ಆದಿಪು,** ೨. ೧೮ ವ)

ವರ್ – [ಕ್ರಿ] ಬರು, ಆಗಮಿಸು (ಮಂಗಳಜಳಂಗಳಿಂದಂ ಮಿಸಿಸೆ ಮಿಂದು ಅಳಂಕಾರಮಂದಿರಕ್ಕೆ ವಂದು ನೆಱೆಯೆ ಕೆಯ್ಗೆಯ್ಯೆ: **ಆದಿಪು,** ೪. ೩೫ ವ)

ವರಂ – [ಅ] ವರೆವಿಗೂ (ಮನ್ಮಥನ ಮೋಹನಯಂತ್ರಮಿದಪ್ಪುದಲ್ಲದೆ ಅಂದಿನಿತುವರಂ ಮನಂಗೊಳಿಸದು: **ಆದಿಪು,** ೪. ೪೧)

ವರತೆ – [ನಾ] ವರಣ, ಪಾತ್ರತೆ (ಪುರುದೇವಂ ಮುಕ್ತಿವಧೂವರತೆಯಂ ಅಭಿಜಿನ್ಮುಹೂರ್ತದೊಳ್ ಕೈಕೊಂಡಂ: **ಆದಿಪು,** ೧೬. ೫೧)

ವರದ – [ನಾ] ವರವನ್ನು ದಯಪಾಲಿಸುವವನು (ವರಪ್ರಸಾದ ಕಾಲದೊಳೆನ್ನಂ ಕಂಡಂಬಿಕೆ ಕಣ್ಣಂ ಮುಚ್ಚಿದಳಪ್ಪುದಱಿಂದಾಕೆಗೆ ಧೃತರಾಷ್ಟ್ರನೆಂಬ ಮಗನತ್ಯಂತಸುಂದರನಾಗಿಯುಂ ಜಾತ್ಯಂಧನಕ್ಕುಂ: **ಪಂಪಭಾ,** ೧. ೮೫ ವ)

ವರಪ್ರಸಾದ – [ನಾ] ವರವನ್ನು ದಯಪಾಲಿಸುವುದು (ನಿಮ್ಮ ತಮ್ಮಂ ವಿಚಿತ್ರವೀರ್ಯನ ಕ್ಷೇತ್ರದೊಳಂಬಿಕೆಗಮಂಬಾಲಿಕೆಗಂ ಪುತ್ರರಪ್ಪಂತು ವರಪ್ರಸಾದಮಂ ದಯೆಗೆಯ್ವುದೆನೆ ಅಂತೆಗೆಯ್ವೆನೆಂದು: **ಪಂಪಭಾ,** ೧. ೮೪ ವ)

ವರಪ್ರಸಾದಕಾಲ – [ನಾ] ವರವನ್ನು ದಯಪಾಲಿಸುವ ಸಮಯ (ವರಪ್ರಸಾದಕಾಲದೊಳೆನ್ನಂ ಕಂಡಂಬಿಕೆ ಕಣ್ಣಂ ಮುಚ್ಚಿದಳಪ್ಪುದಱಿಂದಾಕೆಗೆ ಧೃತರಾಷ್ಟ್ರನೆಂಬ ಮಗಂ ಅತ್ಯಂತಸುಂದರನಾಗಿಯುಂ ಜಾತ್ಯಂಧನಕ್ಕುಂ: **ಪಂಪಭಾ,** ೧. ೮೫ ವ)

ವರಾರೋಹೆ – [ನಾ] ಸುಂದರಿ (ಮಾಣಿಕ್ಯಕಾಂಚೀರುಚಿರುಚಿರ ವರಾರೋಹೆಯರ್: **ಆದಿಪು,** ೮. ೫೬)

ವರಾಹ – [ನಾ] ಹಂದಿ (ಶಾರ್ದೂಲ ವರಾಹ ಗೋಲಾಂಗೂಲ ನಕುಳಂಗಳಂ ನೋಡುತ್ತುಂ ಅವರ್ಕೆ ಭಕ್ಷ್ಯಾಪೂಪಂಗಳಂ ತರಿಸಿ ನೀಡುತ್ತುಂ ಇರ್ದು: **ಆದಿಪು,** ೫. ೨ ವ)

ವರಿಸು – [ಕ್ರಿ] ಬರಿಸು, ಬರುವಂತೆ ಮಾಡು (ಆ ಪಾಣ್ಬನಂ ನಂಬೆ ನುಡಿದು ಆ ಪೊೞ್ತಿಂಗೆ ಎನ್ನನಲ್ಲಿಗೆ ವರಿಸು ಅವಂಗೆ ತಕ್ಕುದನಾನೆ ಬಲ್ಲೆಂ: **ಪಂಪಭಾ,** ೮. ೭೨ ವ)

ವರುಣಾನಿ – [ನಾ] ವರುಣನ ಹೆಂಡತಿ, ವಾರುಣಿ (ವರುಣನ ಮಕರಮಂ ವರುಣಾನಿಯ ಕೊರಲೊಳ್ ಅಯ್ದೆಮಿನುಗುಂ ಉೞಿಯೆ ಉೞಿದ ವಸ್ತುಗಳೆಲ್ಲಮಂ ಕವರ್ದುಕೊಂಡು: **ಪಂಪಭಾ,** ೬. ೩೨ ವ)

ವರುಣಾಶಾ – [ನಾ] ವರುಣನ ದಿಕ್ಕು, ಪಶ್ಚಿಮದಿಕ್ಕು (ತನ್ಮಹೀಧರ ವರುಣಾಶಾ ವಿಶೇಷಕಮಾಗಿರ್ದ .. .. ಎಂಬ ದ್ವಿಗುಣ ಚತುಃಕೂಟಂಗಳೊಳಂ: **ಆದಿಪು,** ೭. ೩ ವ)

ವರೂಥ – [ನಾ] ರಥ (ತೆರೆಯಿಲ್ಲದೆಡೆಯೊಳ್ ವರೂಥಮವಯವದೆ ತಡಿಯನೆಯ್ದಿದುದಾಗಳ್: **ಆದಿಪು,** ೧೨. ೧೨೭)

ವರೂಥಿನಿ – [ನಾ] ಸೈನ್ಯ (ಪುರನಿಧಿಶಯ್ಯಾಸನ ರಾಜ್ಯ ರತ್ನ ವಾಹನ ವರೂಥಿನೀ ನಾಟ್ಯ ಸಭಾಪರಿಕರಸಹಿತಂ ಭರತೇಶ್ವರಂಗೆ ಸಮಸಂದುದೀ ದಶಾಂಗಂ ಭೋಗಂ: **ಆದಿಪು,** ೧೫. ೫)

ವರೂಥಿನೀಪತಿ – [ನಾ] ಸೇನಾಪತಿ (ಪ್ರಪಾತಗುಹಾಸಮೀಪದೊಳ್ ಬೀಡಂ ಬಿಟ್ಟು ಮುನ್ನಿನ ಮಾಟಕ್ಕೆಯೊಳೆ ವರೂಥಿನೀಪತಿಯಂ ಬೆಸಸಿದೊಡೆ: **ಆದಿಪು,** ೧೩. ೭೮ ವ)

ವರ್ಣ – ಪ್ರಾಚೀನ ಸಾಮಾಜಿಕ ವ್ಯವಸ್ಥೆಯ ಒಂದು ಪಂಗಡ (ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ ಭರತನಿಂದನಿಂದಮಿನ್ನಪ್ಪ ವಿಪ್ರವರ್ಣಕ್ಕಂ ಯಥೋಚಿತ ವೃತ್ತಿಗಳಂ ಅಱುಪಲು: **ಆದಿಪು,** ೮. ೭೨ ವ); [ನಾ] ಭಾಷೆಯಲ್ಲಿನ ಧ್ವನಿ (ಅಂದು ಅಪಗತ ತಾಲು ಓಷ್ಠಸ್ಪಂದನಂ ಅಸ್ಪೃಶ್ಯಕರಣವರ್ಣಂ ಜಗದಾನಂದಕರಂ ಜಳಧರರವಸೌಂದರಂ: **ಆದಿಪು,** ೧೦. ೬೩)

ವರ್ಣಕ – [ನಾ] ವರ್ಣನೆಗಳು, ವರ್ಣನಾಪ್ರಧಾನ ಕಾವ್ಯ, ದೇಸಿ ಛಂದಸ್ಸಿನ ಕಾವ್ಯ (ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಂ: **ಪಂಪಭಾ,** ೧. ೧೧)

ವರ್ಣಕವಿತ್ವ – [ನಾ] ದೇಸೀಶೈಲಿಯ ಕಾವ್ಯ (ಬೇಟಮನೆ ವಸ್ತುಮಾಡಿಯೆ ಕವಿತ್ವ ವಸ್ತುಕವಿತ್ವ ಕಾಮತತ್ವವಿದನೆನಿಸಿದ ಅತಿವಿದಗ್ಧನೊರ್ವಂ ಇಂತೆಂದಂ: **ಆದಿಪು,** ೧೨. ೨೨ ವ)

ವರ್ಣಕ್ರಮ – [ನಾ] ಬಣ್ಣ ಹಾಕುವಿಕೆಯ ವಿನ್ಯಾಸ (ನೋಡುವಂತೆ ಉಸಿರ್ವಂತೆ ಇರ್ದುದು ರೇಖೆ ಕೋಮಲತೆಯಂ ತಾಳ್ದಿತ್ತು ವರ್ಣಕ್ರಮಮಂ: **ಆದಿಪು,** ೪. ೪)

ವರ್ಣಕ್ರಮಂಗೆಯ್ – [ಕ್ರಿ] ಬಣ್ಣ ಹಾಕು (ಸೊಗಯಿಸುವ ಸಾಮಂತಚೂಡಾಮಣಿಯ ಮೆಯ್ಯ ಬಣ್ಣಂ ವಿಧಾತ್ರನೆಂಬ ಚಿತ್ರಾರಿಯ ವರ್ಣಕ್ರಮಂಗೆಯ್ದ ಕದಳೀಗರ್ಭಶ್ಯಾಮಮೆಂಬ ಬಣ್ಣದಂತಾದುದು: **ಪಂಪಭಾ,** ೨. ೩೯ ವ)

ವರ್ಣಚತುಷ್ಕ – [ನಾ] ನಾಲ್ಕು ವರ್ಣಗಳು: ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ (ವರ್ಣಚತುಷ್ಕಮಂ ಕುಮತಿಗಳ್ ತತ್‌ಸ್ಥಾನದೊಳ್ ಮುನ್ನ ಪುಟ್ಟಿದುವೆಂಬರ್: **ಆದಿಪು,** ೮. ೭೩)

ವರ್ಣತ್ರಯ – [ನಾ] [ಜೈನ] ಆದಿದೇವನು ಸ್ಥಾಪಿಸಿದ ಕ್ಷತ್ರಿ, ವೈಶ್ಯ ಮತ್ತು ಶೂದ್ರರೆಂಬ ಮೂರು ವರ್ಣಗಳು (ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ ಭರತನಿಂದಮಿನ್ನಪ್ಪ ವಿಪ್ರವರ್ಣಕ್ಕಂ ಯಥೋಚಿತವೃತ್ತಿಗಳನಜೆಪಲೆಂದು: **ಆದಿಪು,** ೮. ೭೨ ವ)

ವರ್ಣಲಾಭ – [ನಾ] [ಜೈನ] ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ಬ್ರಾಹ್ಮಣತ್ವವನ್ನು ಪಡೆಯುವುದು (ವಿವಾಹ ವರ್ಣಲಾಭ .. .. ವಿಹಾರಯೋಗ್ಯತಾನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾಧಿನಿರ್ವಾಣಪರ್ಯಂತಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ವರ್ಣಸಂಕರ – [ನಾ] ಮದುವೆಯ ಮೂಲಕ ಜಾತಿಗಳು ಬೆರಕೆಯಾಗುವುದು (ಯಥಾಯೋಗ್ಯಮುಪದೇಶಂಗೆಯ್ದು ವರ್ಣಸಂಕರಮಾಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ: **ಆದಿಪು,** ೮. ೬೪ ವ)

ವರ್ಣಾಶ್ರಮ – [ನಾ] ವರ್ಣದಲ್ಲಿನ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸನ್ಯಾಸಗಳೆಂಬ ಬದುಕಿನ ನಾಲ್ಕು ಘಟ್ಟಗಳು (ಪೂರ್ವಾಪರ ವಿದೇಹಸ್ಥಿತಿ ಸಮಾನಮಾಗೆ ಷಟ್ಕರ್ಮಂಗಳುಮಂ ವರ್ಣಾಶ್ರಮವಿಭಾಗಂಗಳುಮಂ ಗ್ರಾಮಗೃಹಾದಿ ಭೇದಂಗಳುಮಂ: **ಆದಿಪು,** ೮. ೬೨ ವ)

ವರ್ತಿ – [ಗು] ಇರುವ (ದ್ವೈತವನಕ್ಕೆ ಬಂದು ತದ್ವನೋಪಕಂಠ ವರ್ತಿಗಳಪ್ಪ ತಾಪಸಾಶ್ರಮಂಗಳೊಳ್ ವಿಶ್ರಮಿಸಲ್ ಬಗೆದು: **ಪಂಪಭಾ,** ೭. ೨೯ ವ)

ವರ್ಪಂ – [ನಾ] ಬರುವವನು (ಅಂತು ವರ್ಪನಂ ಕಂಡು ಸಾಮಂತಚೂಡಾಮಣಿ ತನ್ನೊಳಿಂತೆಂದು ಬಗೆದಂ: **ಪಂಪಭಾ,** ೫. ೬೮ ವ)

ವರ್ಧಸ್ವ – ವರ್ಧಿಸಲಿ (ಅತಿಮಧುರಂ ಒರ್ಮೊದಲೊಗೆದುದು ಜಯ ಜೀಯ ನಂದ ವರ್ಧಸ್ವ ರವಂ: **ಆದಿಪು,** ೨. ೬೪)

ವರ್ಮ – [ನಾ] ಅಂಗರಕ್ಷಣೆಯ ಕವಚ (ಭೂತಳನಾಥಾನೀಕ ವರ್ಮೋತ್ಕರಖಚಿತ ಮಣಿಶ್ರೇಣಿರತ್ನಪ್ರದೀಪಾವಳಿದೀಪ್ತಿ ವ್ರಾತದಿಂದಂ: **ಆದಿಪು,** ೧೪. ೯೬)

ವರ್ಮಹರ – [ನಾ] ಪ್ರಾಪ್ತವಯಸ್ಕ (ಜಯವರ್ಮಂ ವರ್ಮಹರನಾದ ನಿಜತನೂಜನಜಿತಂಜಯಂಗೆ ಜಯಜಯನಿನಾದಪೂರ್ವಕಂ ಉರ್ವಿಭಾರಮಂ ಕೊಟ್ಟು: **ಆದಿಪು,** ೩. ೬೫ ವ)

ವರ್ಷ – [ನಾ] ಮಳೆ (ಶಸ್ತ್ರ ಪಾಷಾಣ ಆತಪ ವರ್ಷ ವಿಷ ಅಗ್ನಿ ಕಾಷ್ಠ ಕಂಟಕ ತ್ರಿದೋಷಸಂಭವಾಮಯ ಜರಾದಿ ಬಾಧಾವಿದೂರನುಂ: **ಆದಿಪು,** ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]

ವರ್ಷಂಬರಂ – [ಅ] ವರುಷದವರೆಗೂ, ವರುಷ ಕಾಲ (ಒಂದು ವರ್ಷಂಬರಂ ಭರಂಗೆಯ್ದು ನೋಂತು ಪೂರ್ವಕ್ರಮದೊಳ್: **ಪಂಪಭಾ,** ೧. ೧೩೬ ವ)

ವರ್ಷಧರ – [ನಾ] ನಪುಂಸಕ, ಅಂತಃಪುರದ ಸೇವಕ (ಅಂತಃಪುರ ಪರಿಜನ ನಿರ್ದಯಸಂಮರ್ದನಪತಿತ ಕುಬ್ಜ ವಾಮನ ವರ್ಷಧರನಿಕುರುಂಬಮಂ: **ಆದಿಪು,** ೮. ૩૫ ವ)

ವರ್ಷಧರ ಮಹೀಧರ – [ನಾ] ಮೋಡಗಳಿಂದ ಕೂಡಿದ ಬೆಟ್ಟಗಳು (ಆರು ಕುಲಶೈಲಗಳು ಹಿಮವನ್, ಮಹಾಹಿಮವನ್, ನಿಷಧ, ನೀಳ, ರುಗ್ಮಿ, ಶಿಖರಿಗಳೆಂಬ ವರ್ಷಧರ ಮಹೀಧರಂಗಳಿಂದಂ: **ಆದಿಪು,** ೧. ೪೮ ವ)

ವರ್ಷವರ್ಧನದಿನ – [ನಾ] ಹುಟ್ಟಿದ ಹಬ್ಬ, ವರ್ಧಂತಿ (ತನ್ನ ವರ್ಷವರ್ಧನದಿನದೊಳ್ ಆಸ್ಥಾನಮಂಡಪದೊಳ್ .. .. ಒಡ್ಡೋಲಗಂಗೊಟ್ಟಿರೆ: **ಆದಿಪು,** ೨. ೨ ಮತ್ತು ೨ ವ)

ವರ್ಷವಾರಿದ – [ನಾ] ಮಳೆಯ [ಮಳೆಗಾಲದ] ಮೋಡ ಮಳೆಗಾಲ (ಕೌರವಕುಲ ಹಿಮಕರ ಆವಿಲಪ್ರಚಯ ವರ್ಷವಾರಿದನಪ್ಪ ಪವನತನಯಂ ಬದ್ಧವಪುವಾಗಿ: **ಪಂಪಭಾ,** ೧೨. ೧೪೪ ವ)

ವರ್ಷಾವಾಸ – [ನಾ] ಮಳೆಗಾಲದಲ್ಲಿ ವಾಸಿಸುವ ಮನೆ (ಮಹಾಘರ್ಮಾಂತಮೆಂಬ ಧಾರಾಗೃಹಮುಂ ಗೃಹಕೂಟಮೆಂಬ ವರ್ಷಾವಾಸಮುಂ: **ಆದಿಪು,** ೧೫. ೩ ವ)

ವಲಂ – [ಅ] ಅಲ್ಲವೇ (ಭವದಗ್ರಜದಿಗ್ವಿಜಯೋತ್ಸವಂ ಅಧಿಕಮಹೋತ್ಸವಂ ವಲಂ ನಿನಗಾದಂ ಶ್ರವಣಸುಖಮೆಂದೆ ದಿಙ್ಮಾತ್ರವರ್ಣನಂಗೆಯ್ವಂ: **ಆದಿಪು,** ೧೪. ೫೧); [ಅ] ನಿಜವಾಗಿಯೂ (ಮಜ್ಜನಂಬುಗದೆ ಆರೋಗಿಸಲೊಲ್ಲದೆ ಇರ್ಪ ಇರವಿದೇಂ ನಾಣಳ್ಕು ಇದೇಂ ಕಾಮನಂಬುಗಳ್ ಅತ್ತಿತ್ತೆಡೆಯಾಡೆ ಸೋಂಕವೆ ವಲಂ ನಿನ್ನಂ ಸರೋಜಾನನೇ: **ಪಂಪಭಾ,** ೪. ೬೮)

ವಲ್ಕಲ – [ನಾ] ನಾರುಬಟ್ಟೆ (ಅಂತು ವಲ್ಕಲಾವೃತ ಕಟಿತಟನುಮಾಗಿರ್ದ ಜಟಾಕಲಾಪನುಂ ಆಗಿ ತಪೋವನಕ್ಕೆ ಪೋಪ ಭಾರ್ಗವಂ: **ಪಂಪಭಾ,** ೨. ४೫ ವ)

ವಲ್ಕಲವಸನ – [ನಾ] ನಾರುಮಡಿಯುಟ್ಟವನು (ವಲ್ಕಲವಸನರುಂ ಕೌಪೀನಧಾರಿಗಳುಂ ಭಸ್ಮೋದ್ಧೂಳಿತಾಂಗರುಂ .. .. ಆಗಿ ತಮಗೆ ತಾವೇ ವನಪ್ರವೇಶಮಂ ಮಾಡಿ: **ಆದಿಪು,** ೯. ೯೩ ವ)

ವಲ್ಗತ್ತುರಗ – [ನಾ] [ವಲ್ಗತ್+ತುರಗ] ಬಿರುಗುದುರೆ (ಕುಂಕುಮಾಂಭ ಸ್ಫುರಿತ ಅಂಗೋತ್ತುಂಗ ವಲ್ಗತ್ತುರಗಬಲಮದೋದ್ದಾಮಮಂ: **ಆದಿಪು,** ೧೧. ೨೪)

ವಲ್ಲಕಿ – [ನಾ] ವೀಣೆ (ಶ್ರುತಿಸೌಖ್ಯಾವಹ ವಲ್ಲಕೀಕ್ವಣಿತದೊಳ್ ಕರ್ಪೂರಪಾಳೀವಿಮಿಶ್ರಿತ ತಾಂಬೂಲರಸೋತ್ಕಟ ಪ್ರಮದದೊಳ್: **ಆದಿಪು,** ೯. ೧೧೮)

ವಲ್ಲಬಿಕಾ[ಕೆ] – [ನಾ] ಹೆಂಡತಿ (ತ್ರಿಷಷ್ಟಿಸಂಖ್ಯಾತ ವಲ್ಲಭಿಕಾ ವಿಭ್ರಮಭ್ರೂಲತಾತ್ರಿಭಾಗಭಾಜನನುಮಾಗಿ: **ಆದಿಪು,** ೬. ೧೩ ವ)

ವಲ್ಲರಿ – [ನಾ] ಗೊಂಡೆ, ತುರುಗಲು (ತಲೆಯೊಳ್ ಸೀರೆಯನಿಕ್ಕಿ ಕೆಮ್ಮನಿತಂ ಪೂಣ್ದಿರ್ಪಮುಗ್ರಾರಿ ವಂಶಲತಾವಲ್ಲರಿಗಳ್ಗೆ ದಾವಶಿಖಿವೊಲ್ ಮೆಯ್ದೋಱೆ: **ಪಂಪಭಾ,** ೩. ೩೩); [ನಾ] ಬಳ್ಳಿ (ಪೂತಚೂತಮಂ ನೆರ್ಮಿದ ಅಶೋಕವಲ್ಲರಿಯ ಪಲ್ಲವಮೊಂದನೆ ಕೊಯ್ದು ರಾಗದಿಂ ಸೋರ್ಮುಡಿಯೊಳ್ ತಗುಳ್ಚಿದೊಡೆ: **ಪಂಪಭಾ,** ೫. ೮೨)

ವಲ್ಲೀವನ – [ನಾ] ಬಳ್ಳಿಗಳ ವನ, ಬಳ್ಳಿಗಳ ಸಮೂಹ (ಭಂಗಿ ಭಂಗಿಯನೆ ಪೋಲೆ ದೇವೀವಿಳಾಸಮಂ ನಿಜವಿಳಾಸದಿಂ ನಗುವುವಲ್ಲಿ ವಲ್ಲೀವನಂ: **ಆದಿಪು,** ೧೦. ೨೭)

ವಶಮಾಗು – [ಕ್ರಿ] ಶಕ್ಯವಾಗು (ಗಂಧೇಭಚರ್ಮಂಗಳಂ ಪಸರಂಗೆಯ್ದನೊ ಶಂಭುವೆಂಬ ಬಗೆಯಿಂದೆ ತಳ್ಪೊಯ್ದು ಕಟ್ಟೇಱೆ ಸೂಚಿಸಲಾರ್ಗಂ ವಶಮಾಗದಂತು ಕವಿದತ್ತು ಉದ್ದಾಮಭೀಮಂ ತಮಂ: **ಪಂಪಭಾ,** ೪. ೪೯)

ವಶೀಕರಣ – [ನಾ] ಆಕರ್ಷಿಸುವುದು, ಮನಸ್ಸನ್ನು ಗೆಲ್ಲುವುದು (ಮನಸಿಜನ ಅಂಗನಾಜನವಶೀಕರಣ ಔಷಧಂ ಅಂಗಜನ್ಮನಂಬಿನ ಮದಶಕ್ತಿ ಮೋಹನಯಂತ್ರಂ ಇದಪ್ಪುದು: **ಆದಿಪು,** ೪. ೪೧)

ವಶ್ಯ – [ಗು] ವಶಮಾಡಿಕೊಳ್ಳಬೇಕಾದುದು, ವಶೀಕರಣ (ಜಗತ್ತಿಳಕ ಭವತ್ಪದಚಂದನತಿಳಕಂ ತ್ರೈಲೋಕ್ಯವಶ್ಯಮಕ್ಕುಂ ಅವಶ್ಯಂ: **ಆದಿಪು,** ೧೦. ೬೦)

ವಷಟ್ಕಾರ – [ನಾ] ಹವಿಸ್ಸಿನ ಅರ್ಪಣೆಯ ಕಾಲದಲ್ಲಿ ಹೇಳುವ ಮಂತ್ರ (ಚಾರುತರಯಜ್ಞವಿದ್ಯಾಪಾರಗರ ರವಂಗಳಿಂ ಸ್ವಧಾಕಾರ ವಷಟ್ಕಾರ ಸ್ವಾಹಾಕಾರ ಓಂಕಾರಧ್ವನಿ ನೆಗಟೆ ನೆಗಟ್ಟುದಾಹುತಿಧೂಮಂ: **ಪಂಪಭಾ,** ೬. ೩೪)

ವಸಂತಕ – [ನಾ] ವಸಂತ [ಮಾಸ] (ಮಲ್ಲಿಗೆ ಪಸುರ್ನನೆದೋಱಿದುದು ಎಂದು ನಾಡೆ ಬಿನ್ನವಿಸಲೊಡಂ ವಸಂತಕನದೇಂ ಗುಡಿತೋರಣಶೋಭೆ ಪೊಯ್ವ ಬದ್ದವಣಂ ಅಳುಂಬಮಾದುದೊ: **ಆದಿಪು,** ೧೧. ೧೦೮)

ವಸಂತಕಾಂತೆ – [ನಾ] ವಸಂತನ ಹೆಣ್ಣು (ಎಂದು ಬಗೆಗೆ ವಂದ ಪೂಗಳೊಳ್ ಪೂದುಡುಗೆಯಂ ಮಾಡಿ ವಸಂತಕಾಂತೆಯರಂತೆ ನೆಱೆಯೆ ಕಯ್ಗೆಯ್ದಾಗಳ್: **ಆದಿಪು,** ೧೧. ೧೨೮ ವ)

ವಸಂತದೂತಿ – [ನಾ] ಮಾಧವಿ ಪುಷ್ಪ, ಇರುವಂತಿಗೆ (ಇದಿರೊಳ್ ನನೆದೋಱೆ ವಸಂತದೂತಿಯನೆ ತಾನೆ ನೆಗಟ್ಟಿ ಮಾಧವಿಯೆನೆ ಸಂದದಿರ್ಮುತ್ತೆಯ ಪೂಗೊಂಚಲ ಪುದುವಿನೊಳೆಱಗಿದ ಮದಾಳಿಗಳ್ ಮೞ್ದಪುವೇ: **ಆದಿಪು,** ೧೧. ೧೧೨)

ವಸನ – [ನಾ] ವಸ್ತ್ರ, ಬಟ್ಟೆ (ಪರಮೌದಾರಿಕದಿವ್ಯಮೂರ್ತಿ ವಸನಾಳಂಕಾರ ಮಂದಾರಶೇಖರರಮ್ಯಂ: **ಆದಿಪು,** ೮. ೫)

ವಸನಾಂಗಕುಜ – [ನಾ] [ಜೈನ] ಬೇಕಾದ ಬಟ್ಟೆಯನ್ನು ನೀಡುವ ಕಲ್ಪಕುಜ (ಪಟೆ ಚಿತ್ರವಟೆ ಜೋಗಂ ಪಟೆಯಂ ದೇವಾಂಗಮೆಂಬ ವಸನಂಗಳನೇಂ ಫಳಿಯಿಸುವುವೋ .. .. ವಸನಾಂಗಕುಜಂ: **ಆದಿಪು,** ೫. ೩೪)

ವಸನೋಪಾಂತ – [ನಾ] ಬಟ್ಟೆಯ ಚುಂಗು, ಕೊನೆ (ನಯನಜಲಂಗಳಂ ಉತ್ತರೀಯವಲ್ಕಲ ವಸನೋಪಾಂತದೊಳ್ ಒತ್ತುತ್ತುಂ: **ಪಂಪಭಾ,** ೮. ೩)

ವಸಿಯಿಸು – [ಕ್ರಿ] ವಾಸಮಾಡು (ಇದಱೊಳ್ ಮಧ್ಯಮಕೂಟದೊಳ್ ವಸಿಯಿಪೆಂ ನಿನ್ನಾಜ್ಞೆ ಪೂಮಾಲೆಯಂದದೆ ನಿಂದಿರ್ಪುದು ಮತ್ಕಿರೀಟತಟದೊಳ್: **ಆದಿಪು,** ೧೩. ೧೬)

ವಸುಂಧರೆ – [ನಾ] ಭೂಮಿ (ಆತ್ಮೀಯ ಶಿಖಂಡ ಮಣಿಮರೀಚಿಗಳಿಂ ನಿಜಪದಕಮಳದೊಡನೆ ವಸುಂಧರೆಯುಮಂ ಅಳಂಕರಿಸಿದ ವಸುಂಧ'ರೆಯುಮಂ: **ಆದಿಪು,** ೪. ೨೪ ವ)

ವಸುಧಾಂಗನೆ – [ನಾ] ಭೂದೇವಿ (ಇದು ಪೆಱತಲ್ತು ಭೂತಲಮನಾಂ ತರಲ್ ಆದಿವರಾಹನಾದೆಂ ಅಂದು ಅದಱ ವಿಷಾಣಮಂ ಬಟೆಯಂ ಆ ವಸುಧಾಂಗನೆಗಿತ್ತೆಂ: **ಪಂಪಭಾ,** ೧೧. ೭೮)

ವಸುಧಾಜಯ – [ನಾ] ಭೂಮಿಯನ್ನೆಲ್ಲ ಗೆದ್ದಿರುವ (ಆ ಜಾಕವ್ವೆಗಂ ವಸುಧಾಜಯ ಸದ್ವಲ್ಲಭಂಗಂ ವಿಶದ ಯಶೋರಾಜಿತನೆನಿಪ ಅರಿಕೇಸರಿ ರಾಜಂ ತೇಜೋಗ್ನಿಮಗ್ನ ರಿಪುನೃಪಶಲಭಂ: **ಪಂಪಭಾ,** ೧. ೪೧)

ವಸುಧಾಭೋಗ – [ನಾ] ಭೂವಿಸ್ತಾರ (ಕೂಡಿತ್ತುದ್ದಾಮ ರತ್ನಾಂಶುಗಳೊಳೆ ವಸುಧಾಭೋಗಮಾಗಳ್ ಬೆಡಂಗು ಮಾಡಿತ್ತದೊಂದು ಮಂದಾರದ ಸರಿ: **ಆದಿಪು,** ೭. ೨೫) [ಎಲ್. ಬಸವರಾಜು ಆವೃತ್ತಿ]

ವಸುಧಾರೆ – [ನಾ] ಚಿನ್ನದ ಮಳೆ (ವಸುಧಾರೆ ನಾಡೆಯುಂ ಕಣ್ಗೆಸದಳಮಾಯ್ತು ಅಮರಕರಪರಿಚ್ಯುತಮೆತ್ತಂ: **ಆದಿಪು,** ೧೦. ೨)

ವಸುಧೆ – [ನಾ] ಭೂಮಿ (ಅಗುಟ್ದಿರಲ್ ಆ ಕುಟೆಯೊಳ್ ತೊಟ್ಟಗೆ ನಿಧಿಗಂಡಂತೆ ವಸುಧೆಗೆ ಅಸದಳಮಾಯ್ತು ಆ ಮಗನ ಅಂದಂ: **ಪಂಪಭಾ,** ೧. ೯೭)

ವಸುಮತಿ – [ನಾ] ಭೂಮಿ (ಯಮನಂದನನಲ್ತೆ ನೆತ್ತದೊಳ್ ಬಸನಿಗಂ ಆತನಂ ಬರಿಸಿ ನೆತ್ತಮನಾಡಿ ಗೆಲ್ದುಕೊಳ್ವಂ ಈ ವಸುಮತಿಯಂ: **ಪಂಪಭಾ,** ೬. ೬೮)

ವಸುಷೇಣ – [ನಾ] ಕರ್ಣನಿಗೆ ಸಾಕು ತಂದೆತಾಯಿಯರು ಇಟ್ಟ ಹೆಸರು (ವಸುಧೆಗಸದಳಮಾಯ್ತು ಆ ಮಗನಂದಂ ಎಂದು ಲೋಗರ್ ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್: **ಪಂಪಭಾ,** ೧. ೯೭)

ವಸ್ತುಕವಿತ್ವ – ವಸ್ತುಕಕಾವ್ಯ, ಮಾರ್ಗಕಾವ್ಯ, ಚಂಪೂ (ಎಂದು ಬೇಟಮನೆ ವಸ್ತುಮಾಡಿಯೆ ವಸ್ತುಕವಿತ್ವ ವರ್ಣಕವಿತ್ವ ಕಾಮತತ್ತ್ವವಿದನೆನಿಸಿದ ಅತಿವಿದಗ್ಧಂ ಒರ್ವನಿಂತೆಂದಂ: **ಆದಿಪು,** ೧೨. ೨೨ ವ)

ವಸ್ತುಕೃತಿ – [ನಾ] ವಸ್ತುಕವಿತ್ವ (ಆದಿಪುರಾಣವಸ್ತುಕೃತಿಯಂ ಪೇೞ್ದಿಂ ಬೆಡಂಗಪ್ಪ ಮಾರ್ಗದೊಳಂ ದೇಸಿಯೊಳಂ ಪೊದಳ್ದೆಸೆವಿನಂ ಸಂಸಾರಸಾರೋದಯಂ: **ಆದಿಪು,** ೧೬. ೭೯) [ಈ ಶಬ್ದಕ್ಕೆ ಎಲ್. ಬಸವರಾಜು ಅವರು **'**ತಾತ್ವಿಕ ಗ್ರಂಥ**'** ಎಂದು ಅರ್ಥ ನೀಡುತ್ತಾರೆ]

ವಸ್ತುಮಾಡು – [ಕ್ರಿ] ಕಾವ್ಯದ ವಿಷಯವಾಗಿಸಿಕೊ (ಬೇಟಮನೆ ವಸ್ತುಮಾಡಿಯೆ ಕವಿತ್ವ ವರ್ಣಕವಿತ್ವ ಕಾಯತತ್ತ್ವವಿದನೆನಿಸಿದ ಅತಿವಿದಗ್ಧನೊರ್ವನಿಂತೆಂದಂ: **ಆದಿಪು,** ೧೨. ೨೨ ವ)

ವಸ್ತುವಿದ – [ನಾ] ತತ್ವವಿದ (ಮೋಹಿಸಿದಪ್ಪೆ ನಿರ್ವಾಣಸಕ್ತಂಗೆ ವಸ್ತುವಿದರ್ ನಿನ್ನವೊಲಾರ್ ಪೆಱರ್ಭುವನದೊಳ್: **ಆದಿಪು,** ೧೬. ೫೯)

ವಸ್ತುವಿದ್ಯೆ – [ನಾ] ವಸ್ತುನಿಷ್ಠ ಕಲೆ (ಪುದಿದ ಜಸಂ ಪೊದಳ್ದ ಚಳಂ ಒಂದಿದ ಅಳಂಕೃತಿ ಕೈತ ದೇಸಿ ಎಂಬುದಂ ಎನೆ ವಸ್ತುವಿದ್ಯೆಯೆನೆ: **ಪಂಪಭಾ,** ೧೪. ೫೯)

ವಸ್ತುಸ್ತವ – [ನಾ] ಮಹಾಪುರುಷನ ಗುಣಸ್ತವ (ಗುಣಸ್ತವಮುದಾತ್ತವೃತ್ತ ಭವದೀಯ ವಸ್ತುಸ್ತವಂ: **ಆದಿಪು,** ೧೩. ೯೦)

ವಸ್ತುಸ್ಥಿತಿ – [ನಾ] ವಸ್ತುಗಳ ಸ್ವರೂಪ (ನೃಸುರ ಅಸುರಪರಿಷತ್ ಸಸ್ಯಸಂಕುಳಂ ಜಿನವಚೋಮೃತಸಾರಂ ಅದು ಅಸದಳಮೆ ಬಯಸೆ ಭರತಂ ಬೆಸಗೊಂಡಂ ಜಿನನಂ ಅಖಿಳವಸ್ತುಸ್ಥಿತಿಯಂ: **ಆದಿಪು,** ೧೦. ೬೨)

ವಸ್ತ್ರಾಂಗ – [ನಾ] [ಜೈನ] ಕಲ್ಪಕುಜಗಳಲ್ಲಿ ಒಂದು, ಬೇಕಾದ ಬಟ್ಟೆಯನ್ನು ನೀಡುವಂಥದು (ವಸ್ತ್ರಾಂಗದ ಭೂಷಣಾಂಗದಳವಂ ಚಕ್ರಶ್ವರಂ ತಾಳ್ದಿದಂ: **ಆದಿಪು,** ೪. ೩೫)

ವಹತ್ – [ಗು] ಹೊತ್ತ (ತತ್ಕುಂಜಸಂಜಾತಭೂಜ ಗಳತ್ಪುಷ್ಪಪರಾಗ ಸೌರಭವಹತ್ ಮಂದಾನಿಲಂ: **ಆದಿಪು,** ೧೩. ೧೦)

ವಳನ – [ನಾ] ಹೊರಳುವಿಕೆ (ಚಳತ್ ಅನಿಳ ಆಹತ ಕ್ಷುಭಿತ ಭಂಗುರತುಂಗತರಂಗಮಾಳಿಕಾವಳನ: **ಪಂಪಭಾ,** ೪. ೨೫)

ವಳಭಿಚ್ಛಂದ – [ನಾ] ಇಳಿಜಾರು ಚಾವಣಿ, ಉಪ್ಪರಿಗೆಗಳುಳ್ಳ ವಾಸ್ತುವಿನ್ಯಾಸ (ಛಂದೋವಿದ್ಯೆಯಂತೆ ನಾನಾಚ್ಛಂದಮಪ್ಪ ವಳಭಿಚ್ಛಂದಂಗಳೊಳಂ: **ಅದಿಪು,** ೬. ೧೦೬ ವ)

ವಳಯ – [ನಾ] ಸಮೂಹ (ಕಳಹಂಸೀಲೀಲೆ ನೀಲೋತ್ಪಳರುಚಿ ಕನಕಾಂಭೋಜಿನೀಲಕ್ಷ್ಮಿ ಭೃಂಗೀವಳಯಂ ಶ್ರೀಚಕ್ರವಾಕದ್ವಯವಿಳಸನಂ: **ಆದಿಪು,** ೧೧. ೧೪೧)

ವಳಯಾಕೃತಿ – [ನಾ] ಗುಂಡಗಿನ ಆಕಾರ (ವಳಯಾಕೃತಿಯಿಂದಿದನೇಂ ಬಳಸಿದುದೊ ಸುರೇಂದ್ರಚಾಪಮಂಡಳಮೆನೆ: **ಆದಿಪು,** ೧೦. ೨೩);

ವಳಿತ್ರಯ – [ನಾ] ಹೊಟ್ಟೆಯ ಮೇಲಿನ ಚರ್ಮದ ಮಡಿಕೆ (ಆಕೆಯ ವಳಿತ್ರಯಂಗಳುಂ ಪಗೆವರ ಶಕ್ತಿತ್ರಯಂಗಳುಂ ಒಡನೊಡನೆ ಕೆಟ್ಟುವು: **ಪಂಪಭಾ,** ೧. ೧೪೧ ವ)

ವಳಿಭಂಗ – [ನಾ] ವಳಿರೇಖೆ ಕಾಣದಂತಾಗುವುದು (ಒದವಿದ ಕರ್ಪನೆಯ್ದೆ ಪರಿವೃತ್ತಪಯೋಧರಚೂಚುಕಕ್ಕೆ ಮಾಡದೆ ವಳಿಭಂಗಮಂ ಕಟಿಯೆ ತೋರ್ಪುದನಂತೆ ತನೂದರಕ್ಕೆ ಮಾಡದೆ: **ಆದಿಪು,** ೮. ೪೭)

ವಳಿರೇಖೆ – [ನಾ] ವಳಿತ್ರಯ (ತನು ವಳಿರೇಖೆಗಳ್ ಕಿಡೆಯುಂ ಎಟ್ಟಿ ಬೆಡಂಗಿನದೊಂದು ರೇಖೆಯಂ ತನಗೆಡೆಮಾಡಿ ಪೊಂಗೆ: **ಆದಿಪು,** ೮. ೪೬)

ವಟೆಯದೇಂ – [ವಟೆ+ಅದೇಂ] ಬೇರೆ ದಾರಿ ಎಲ್ಲಿದೆ (ಎಗ್ಗರೆಯ್ದೆ ಕಣ್ದೆಱೆವಿನಂ ಆರ್ ವಟೆಯದೇಂ ಎಳೆಯಂ ಕಿಡಿಸಲ್ಕೆ ಬಲ್ಲರೋ: **ಪಂಪಭಾ,** ೪. ೯೫)

ವಾಂಶಿಕ – [ನಾ] ಕೊಳಲು ವಾದಕ (ಯೌವನಮದಮುದಿತ ಮಾರ್ದಂಗಿಕ ವಾಂಶಿಕ ಪ್ರಹನ್ಯಮಾನ ವಾದ್ಯಮಾನ ಮೃದಂಗ ವಂಶನಿನದ ಲಯಚ್ಛಂದ ಸುಂದರ ನಟತ್ಸುಂದರೀ ಸಂದೋಹಮುಂ: **ಆದಿಪು,** ೭. ೩೭ ವ)

ವಾಕ್ಚಂದ್ರಿಕಾ[ಕೆ] – [ನಾ] ಮಾತೆಂಬ ಬೆಳುದಿಂಗಳು (ಪರಮಜಿನೇಂದ್ರ ಮುಖಚಂದ್ರ ವಾಕ್ಚಂದ್ರಿಕಾ ಪ್ರಸರಪ್ರಸಾದೋದೀರ್ಣ ಸೂಕ್ತಿಕಲ್ಲೋಲ ಮಾಲಾಕೀರ್ಣ: **ಆದಿಪು,** ೧. ಆಶ್ವಾಸಾಂತ್ಯ ಗದ್ಯ)

ವಾಕ್ಶ್ರೀ – [ನಾ] [ವಾಕ್+ಶ್ರೀ] ಸರಸ್ವತಿ (ತನ್ನ ಕೈಗೊಂಡ ಬೆಳ್ವಸದನದೊಳ್ ಕೀರ್ತಿಶ್ರೀಯುಂ ವಾಕ್ಶ್ರೀಯುಮಂ ಅನುಕರಿಸಿ ಮಂತ್ರಾಕ್ಷರನಿಯಮದೊಳ್ ಇಂದ್ರನಂ ಬರಿಸಿ: **ಪಂಪಭಾ,** ೧. ೧೩೭ ವ); [ನಾ] ವಾಗ್ವಿಭೂತಿ, ವಿದ್ಯೆಯ ಆಧಿಕ್ಯ (ಶ್ರೀಗೆ ಫಳಂ ಚಾಗಂ ವಾಕ್‌ಶ್ರೀಗೆ ಫಳಂ ಸರ್ವಶಾಸ್ತ್ರಪರಿಣತಿ ವೀರಶ್ರೀಗೆ ಫಳಂ ಆಯಂ ಎಂದಿಂತಾಗಳುಂ ಅಜೆದೆಸೆಗಿದಂ ಪರಾಕ್ರಮಧವಳಂ: **ಪಂಪಭಾ,** ೬. ೧)

ವಾಕ್ಶ್ರೀಸುಭಗ – [ನಾ] [ವಾಕ್+ಶ್ರೀ] ವಾಕ್‌ಸಂಪತ್ತಿನಿಂದ ಸುಂದರವಾದ (ಆ ಸಕಳಾರ್ಥಸಂಯುತಂ ಅಳಂಕೃತಯುಕ್ತಮುದಾತ್ತ ವೃತ್ತಿ ವಿನ್ಯಾಸಮನೇಕ ಲಕ್ಷಣ ಗುಣ ಪ್ರಭವಂ ವಾಕ್ಶ್ರೀಸುಭಗಂ: **ಪಂಪಭಾ,** ೧. ೯)

ವಾಕ್ಸೌಂದರ್ಯ – [ನಾ] ಮಾತಿನ ಸೊಬಗು (ಇದು ಭರತಯಶೋದುಂದುಭಿರವಮೆನಿಸಿ ದೆಸೆಗೆ ಪೊಣ್ಮುವ ನಿಜ ವಾಕ್ಸೌಂದರ್ಯದೆ ಪೋಲ್ತಂ ಪುರುನಂದನನಂ ಪೊಗಟ್ಟಿ ಮಾಗಧಂ ಮಾಗಧನಂ: **ಆದಿಪು,** ೧೨. ೧೧೫)

ವಾಗಮಳರ್ – [ನಾ] ನಿರ್ಮಲವಾಕ್ಕುಳ್ಳವರು (ಕಮಲೋದ್ಭವನ ಅಮಳಿನ ಹೃತ್ಕಮಲದೊಳ್ ಒಗೆದರ್ ಸುರೇಂದ್ರಧಾರಕರ್ ಆ ವಾಗಮಳರ್ ನೆಗಟ್ಟಿರ್ದರ್ ಪುಲಹ ಮರೀಚಿ ಅತ್ರಿ ಅಂಗಿರಸ್ ಪುಳಸ್ತ್ಯ ಕ್ರತುಗಳ್: **ಪಂಪಭಾ,** ೧. ೬೦)

ವಾಗಾಡಂಬರ – [ನಾ] ಮಾತಿನ ಡೌಲು (ಕದನಕರ್ಕಶಕ್ಷತ್ರಿಯಂಗೆ .. .. ನಿಷ್ಕಾರಣ ಕಾಯಕಂಪನಮುಂ ನಿರಾಲಂಬನ ವಾಗಾಡಂಬರಮುಂ ತಕ್ಕುದಲ್ತು: **ಆದಿಪು,** ೧೪. ೮೧ ವ)

ವಾಗ್ಮಿ – [ನಾ] ಚಮತ್ಕಾರವಾಗಿ ಮಾತಾಡುವವನು (ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗಟ್ಟಿ ಸಬ್ಬವದವರೊಡನೆ ಅಂತು ಒಸೆದ ಅನ್ನವಾಸದೊಳ್ ಇರ್ದನಾಗಳ್ ಹರಿಗಂ: **ಪಂಪಭಾ,** ೩. ೮೦)

ವಾಗ್ವಧೂ – [ನಾ] ಸರಸ್ವತಿ (ವಾಗ್ವಧೂಮುದ್ರೆಯೊಳ್ ಮುದ್ರಿಸಿ ನಿಂದತ್ತು ಆದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ: **ಆದಿಪು,** ೧೬. ೮೦)

ವಾಗ್ವನಿತೆ – [ನಾ] [ವಾಕ್+ವನಿತೆ] ಸರಸ್ವತಿ (ತದ್ವದನಾಬ್ಜವಿಳಾಸದೊಳ್ ತಳರದೆ ನಿಂದ ವಾಗ್ವನಿತೆ ಎಂಬ ಅಭಿಶಂಕೆಯಂ ಉಂಟುಮಾಡಿದಳ್: **ಆದಿಪು,** ೭. ೨೭)

ವಾಗ್ವಿಲಾಸ – [ನಾ] [ವಾಕ್+ವಿಲಾಸ] ಮಾತಿನ ಚೆಲುವು (ಕವೀಂದ್ರರಾರ್ ಸರಸ್ವತಿಗೆ ವಿಳಾಸಮಂ ಪೊಸತುಮಾಡುವ ಪಂಪನ ವಾಗ್ವಿಲಾಸಮಂ: **ಪಂಪಭಾ,** ೧೪. ೬೧)

ವಾಚಂಯಮ – [ನಾ] ಮೌನ (ಬಾಟ್ವಿ ಮಾತೆನಗಾಗದು ಅದರ್ಕೆ ಏನನೇನೆಂಬೆಂ ಎಂದೊಳಕೊಂಡಿರ್ಪುದು ಅದಜೆಂದಂ ಆದುದೆನಗೀ ವಾಚಂಯಮಮಂ ಸಂಯಮಂ: **ಆದಿಪು,** ೩. ೪೧)

ವಾಚಂಯಮತೆ – [ನಾ] ಮೌನವಾಗಿರುವಿಕೆ (ಮಡದೆಡೆ ನಾಲ್ವೆರಲ್ ಅಂಗುಟದೆಡೆಯೊಳ್ ಗೇಣಾಗೆ ನಿಲ್ವುದಿಚ್ಛಾಗತಂ

ಅಂದೆಡೆಯೊಳ್ ವಾಚಂಯಮತೆಯೊಳ್ ಒಡಂಬಡಂ ಪಡೆದು ನಿಂದನಾದಿಬ್ರಹ್ಮಂ: **ಆದಿಪು,** ೯. ೮೪)

ವಾಚನಾಗ್ರಹಣ – **[ನಾ]** ಓದುವುದನ್ನು [ಹೇಳುವುದನ್ನು] ಅರ್ಥಮಾಡಿಕೊಳ್ಳುವ ಕ್ರಮ (ಸಿದ್ಧಕೂಟಮಂ ತ್ರಿಃಪ್ರದಕ್ಷಿಣಂಗೈದು ಜಿನೇಂದ್ರಾರ್ಚನಾ ಪುರಸ್ಸರಂ ವಾಚನಾಗ್ರಹಣಸಮೇತಂ ಆರಾಧನೆಯಿಂ ಅರ್ಚಿಸಿ: **ಆದಿಪು,** ೨. ೫೦ ವ)

ವಾಚನಾದೇಶ – **[ನಾ]** ಪತ್ರವನ್ನು ಓದಲು ಕೊಡುವ ಅಪ್ಪಣೆ (ಭ್ರೂವಲ್ಲಸೋತ್ಕ್ಷೇಪ ಭ್ರೂವಿಲಸಿತದತ್ತ ವಾಚನಾದೇಶಂ ಇದಂ ಭಾವಿಸಿಂ ಎಂದತಿ ಮಧುರೋದ್ಭಾವಿತ ಗಂಭೀರನಾದದಿಂ ಬಾಜಿಸಿದಂ: **ಆದಿಪು,** ೧೪. ೪೬)

ವಾಚಾಳ – **[ಗು]** ಶಬ್ದಮಾಡುವ (ದಾನಪ್ರಮೋದ ವಾಚಾಳಷಟ್ಚರಣ ಚಾರಣಗಣೋಚ್ಚಾರ ಝಂಕಾರಜಯಾಶೀರ್ಘೋಷಮುಮಪ್ಪ ವಿಜಯಗಜದ ಬೆಂಗೆ ವಂದು: **ಆದಿಪು,** ೧೪. ೯೦ ವ)

ವಾಚಿಕ – **[ನಾ]** ನಾಲ್ಕು ಬಗೆಯ ಅಭಿನಯಗಳಲ್ಲಿ ಒಂದು, ಮಾತಿನ ಮೂಲಕ ಭಾವನೆಯ ಪ್ರಕಟಣೆ (ಅಂಗೋಪಾಂಗಂಗಳೊಳ್ ಎಸೆವ ಆಂಗಿಕಮಂ ಗಾನಪಾಠ್ಯದೊಳ್ ವಾಚಿಕಮಂ; **ಆದಿಪು,** ೯. ೨೮]

ವಾಜಿ – **[ನಾ]** ಕುದುರೆ (ಮಚ್ಚರದಿಂ ಒರ್ವರನೊರ್ವರಂ ಉಚ್ಚಳಿಸಿ ತಗುಳ್ದು ಗೋವರ್ ಆರ್ದು ಇಸೆ ಕೀಲಿಂ ಕರ್ಚಿ ಪುಡಿಯೊಳ್ ಪೊರಳ್ದುವು ನಚ್ಚಿನ ಕಾಂಭೋಜ ವಾಜಿಗಳ್ ಕೆಲವಾಗಳ್: **ಪಂಪಭಾ,** ೮. ೯೪)

ವಾಙ್ಮಯ – **[ನಾ]** ಶಾಸ್ತ್ರಸಂಪತ್ತು (ಜನ್ಮಾಂತರ ಅಭ್ಯಸ್ತ ಕಳಾಕುಶಳನುಂ ಪ್ರತ್ಯಕ್ಷೀಕೃತಸಕಲ ವಾಙ್ಮಯನಪ್ಪುದಜೆಂದಂ: **ಆದಿಪು,** ೮. ೩ ವ); **[ನಾ]** ಸಾಹಿತ್ಯ (ತನನ್ನೊಸೆದು ಓಲಗಿಪಂಗರಿದಿಲ್ಲೆನಿಪ್ಪ ವಾಙ್ಮಯಮನಿರ್ತರ್ಕಮಂಬಿಕೆ ಸರಸ್ವತಿ .. .. ಈಗೆ ವಿಶುದ್ಧ ಬುದ್ಧಿಯಂ: **ಪಂಪಭಾ,** ೧.೫)

ವಾಙ್ಮರೀಚಿ – **[ನಾ]** [ವಾಕ್+ಮರೀಚಿ] ಮಾತೆಂಬ ಕಿರಣ (ಎಸೆವ ಪ್ರಚಂಡ ಮಾರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ: **ಪಂಪಭಾ,** ೧. ೩)

ವಾಟ – **[ನಾ]** ವಾಸಸ್ಥಾನ, ಕೇರಿ (ಆಗಳಾ ಸ್ತ್ರೀಸಮೂಹಂ ನೆರೆದಿರಲ್ ಅಲ್ಲಿ ವಿಳಾಸಿನೀವಾಟದೊಳ್ ಒಂದೆಡೆಯೊಳ್: **ಆದಿಪು,** ೧೨. ೧೨ ವ)

ವಾಣಿಜ್ಯ – **[ನಾ]** ವ್ಯಾಪಾರ (ಸೇವಾಧರ್ಮೋಚಿತಮೆನಿಸುವ .. .. ಶಾಸ್ತ್ರಾನುಗತಮಪ್ಪ ವಿದ್ಯೆಯುಮಂ ವಣಿಗ್ವ್ಯವಹಾರಾನುಕಾರಿಯಪ್ಪ ವಾಣಿಜ್ಯಮುಮಂ: **ಆದಿಪು,** ೮. ೬೪ ವ)

ವಾತ – **[ನಾ]** ಗಾಳಿ (ಅಮರೇಂದ್ರಪುತ್ರನಂ ಕರೆವವೊಲಾದುದು ಪುರದ ವಾತವಿಧೂತವಿನೂತಕೇತುಗಳ್: **ಪಂಪಭಾ,** ೪. ೩೪)

ವಾತವಲಯ – **[ನಾ]** [ಜೈನ] ಅನಂತವಾದ ಲೋಕವನ್ನು ಆವರಿಸಿರುವ ವಾಯುಸಮೂಹ (ಕವಾಟಕ್ರಿಯೆಯಂ ನೆಱಪಿ ತದನಂತರಸಮಯದೊಳ್ ವಾತವಳಯಮುಟೆಯೆ ಜೀವಪ್ರದೇಶಂಗಳಿಂ ಲೋಕಪ್ರದೇಶಮಂ ಪರ್ವಿ: **ಆದಿಪು,** ೧೬. ೪೯ ವ)

ವಾತ್ಯಾ – **[ಗು]** ಕಡುಗಾಳಿಯಿಂದ (ವಾತ್ಯಾದುರ್ಧರಗಂಧಸಿಂಧುರ ಕಟಸ್ರೋತಃ ಸಮುದ್ಯತ್ ಮದವ್ರಾತೇಂದಿಂದಿರ ಚಂಡ ತಾಂಡವ ಕಲ ಸ್ವಾಭಾವಿಕಶ್ರೇಯಸಃ: **ಪಂಪಭಾ,** ೯. ೯೭)

ವಾದಕ – **[ನಾ]** ವಾದ್ಯಗಾರ (ಅಮರವಾದಕವಾದ್ಯಮಾನ ದುಂದುಭಿ ಶಂಖ ಕಾಹಳಾ ಪ್ರಭಾತಪಟಹಧ್ವನಿಗಳ್ ದೆಸೆದೆಸೆಗೆಸೆಯುಂ: **ಆದಿಪು,** ೮. ೨೬ ವ)

ವಾದಕಿ – **[ನಾ]** ವಾದ್ಯಗಾರ್ತಿ (ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ ನಡೆಯಿಸಿ ಪುರ್ವದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಲ್: **ಆದಿಪು,** ೯. ೩೨)

ವಾದಿ – **[ನಾ]** ತಾರ್ಕಿಕ (ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗಟ್ಟಿ ಸಬ್ಬವದವರೊಡನೆ ಅಂತು ಒಸೆದ ಅನ್ನವಾಸದೊಳ್ ಇರ್ದನಾಗಳ್ ಹರಿಗಂ: **ಪಂಪಭಾ,** ೩. ೮೦)

ವಾದಿತ – **[ನಾ]** ವಾದ್ಯವಾದನ (ಗೀತವಾದಿತರವಂ ಏವೇಟ್ಟುದೋ ಸಭೆಯಂ ರಸದೊಳ್ ಪೂಟ್ಟುವೊಳ್ ಎಸೆದತ್ತು ದಿವಿಜಪೇಟಕಜನಿತಂ: **ಆದಿಪು,** ೯. ೧೪)

ವಾದಿತ್ರ – **[ನಾ]** ವಾದ್ಯ (ವಾದಿತ್ರಾರಾವಂ ವಂದಿವೃಂದಧ್ವನಿ ಜಯಜಯ ಕೋಲಾಹಲಂ ಮಂಗಳಾಳಂಕಾರಂ ಯಾತ್ರೋತ್ಸವ ಪ್ರಸ್ತುತಮೆನೆ ತಳರ್ದಂ ರಾಗದಿಂ ರಾಜರಾಜಂ: **ಆದಿಪು,** ೧೩. ೪೩)

ವಾದ್ಯಮಾನ – **[ಗು]** ಬಾರಿಸಲ್ಪಟ್ಟ, ನುಡಿಸಲ್ಪಟ್ಟ (ಅಮರವಾದಕ ವಾದ್ಯಮಾನ ದುಂದುಭಿ ಶಂಖ ಕಾಹಳಾ ಪ್ರಭಾತಪಟಹ ಧ್ವನಿಗಳ್ ದೆಸೆದೆಸೆಗೆಸೆಯುಂ: **ಆದಿಪು,** ೮. ೨೬ ವ)

ವಾನರ – **[ನಾ]** ಕಪಿ, ಕೋತಿ (ವಾನರ ವಾರಣ ಉಷ್ಟ್ರ ಖರ ಮತ್ಸ್ಯ ಕಳೇವರ ಪೂತಿಗಂಧಮೇನೇನೊಳವುಳ್ಳುವೊಂದೆಡೆಗೆ ಬಂದುಂ ಅವಂದಿರ ಮೆಯ್ಯ ಗಂಧದುದ್ವಾನಿಗೆ ವಾರದು: **ಆದಿಪು,** ೫. ೯೦)

ವಾಪಿ – **[ನಾ]** ಬಾವಿ, ಕೊಳ (ಲಾಕ್ಷಾದ್ರವಾದಿಕಾರಿತ ಮಾಯಾರುಣಜಲ ಪರಿಪೂರ್ಣ ವಾಪಿಯಂ ಸಮೆಯಿಸಿದೊಡೆ: **ಆದಿಪು,** ೨. ೧೪ ವ)

ವಾಮ – **[ನಾ]** ಎಡ (ವಾಮಂ ಕರತಳಮದು ಕೆಂದಾಮರೆಯ ಅರಲೆನಿಪುದು ಉಚಿತಪರ್ಯಂಕದೊಳುದ್ದಾಮಂ ಉಪದೇಶಹಸ್ತಮವಾಮಂ ಮಾರ್ದವಮನಭಿನಯಿಪ್ಪುದು ಮುನಿಯಾ: **ಆದಿಪು,** ೫. ೬೯)

ವಾಮಕ್ರಮ – **[ನಾ]** ಎಡಪಾದ (ಪ್ರಮದಾಹಸ್ತವಿನ್ಯಸ್ತ ವಾಮಕ್ರಮ ಕಮಳನುಂ: **ಪಂಪಭಾ,** ೯. ೨೮ ವ)

ವಾಮನ – **[ನಾ]** ಕುಳ್ಳ (ಪ್ರಿಯಕುಬ್ಜವಾಮನಗಣಾಲಾಪಂಗಳ್ ಅತ್ಯಂತಸೌಂದರ ಶುದ್ಧಾಂತವಧೂಕದಂಬಕಮನೇಂ ಮೆಯ್ವೆರ್ಚಿಸಲ್ಕಾರ್ತುದೋ: **ಆದಿಪು,** ೧೧. ೪೨ ವ)

ವಾಮಪಾದಪ್ರಹರಣ – **[ನಾ]** ಎಡಗಾಲಿನ ಒದೆತ (ಆಗಳಾಕೆಗಳ್ ಅಲಕ್ತಾರಕ್ತ ಮಣಿನೂಪುರಕ್ವಣಿತ ಸುಭಗವಾಮಪಾದ ಪ್ರಹರಣದೊಳ್ ಅಶೋಕತರುಗಳಂ ಕುಸುಮಿಸಿಯುಂ: **ಆದಿಪು,** ೧೧. ೧೩೦ ವ)

ವಾಮಪಾದಪ್ರಹಾರ – [ನಾ] ಎಡಗಾಲಿನ ಒದೆತ (ವಾಮಪಾದ ಪ್ರಹಾರಕ್ಕಿದಱಿಂ ಪಕ್ಕಾಗಿ ಗೋತ್ರಸ್ಖಲನೆ ನೆಗೞ್ ಪೂಮಾಲೆಯಿಂ ಮೋದುವೆತ್ತಂ: **ಆದಿಪು,** ೪. ೯)

ವಾಮಭಾಗ – [ನಾ] ಎಡಭಾಗ (ಗಂಗಾಸುತನ ವಾಮಭಾಗದೊಳ್ ಅಂಬರಭಾಗಂ ಆ ತಟ್ಟಿ ಮೆಡಱಿದಂತಾಗಿ ತನ್ನ ರಥದೊಳೊಟ್ಟಿದ ಕೆಯ್ದುಗಳ ಬೆಳಗೆ ಬೆಳಗಾಗೆ: **ಪಂಪಭಾ,** ೧೦. ೫೬)

ವಾಯವ್ಯ – [ನಾ] ವಾಯವ್ಯಾಸ್ತ್ರ (ಕೆಳರ್ದು ಅಂದುಗ್ರರಣಾಗ್ರಹ ಪ್ರಣಯದಿಂದಾಗಳ್ ಕುರುಕ್ಷೇತ್ರಮಂ ಕಳವೇಟ್ಟು ಇರ್ವರುಂ ಐಂದ್ರ ವಾರುಣದೆ ವಾಯವ್ಯಾದಿ ದಿವ್ಯಾಸ್ತ್ರಸಂಕುಳದಿಂದೆ ಒರ್ವರಂ ಒರ್ವರ್ ಎಚ್ಚು: **ಪಂಪಭಾ,** ೧. ೭೯)

ವಾಯುದೇವ – [ನಾ] ವಾಯುದೇವತೆ (ಮಂತ್ರಾಕ್ಷರ ನಿಯಮದಿಂ ಅಭಿಮಂತ್ರಿಸಿ ಬರಿಸಿದೊಡೆ ವಾಯುದೇವಂ ಬಂದು ಏಂ ಮಂತ್ರಂ ಪೇೞ್ನೆ ಕುಡು ರಿಪುತಂತ್ರಕ್ಷಯಕರನಂ ಎನಗೆ ಹಿತನಂ ಸುತನಂ: **ಪಂಪಭಾ,** ೧. ೧೨೪)

ವಾಯುಪಥ – [ನಾ] ಆಕಾಶ (ವಾಯುಪಥದೊಳ್ ಶಿತಾಸ್ತ್ರಂಗಳ್ ಪೊಂಕಂಗಿಡಿಸೆ ಸುಗಿದಂ ಭಾರ್ಗವನಿದೇಂ ಪ್ರತಿಜ್ಞಾಗಾಂಗೇಯಂಗೆ ಅದಿರದೆ ಇದಿರ್ವಿಲ್ಲನ್ನರೊಳರೇ: **ಪಂಪಭಾ,** ೧. ೮೦)

ವಾಯುಪುತ್ರ – [ನಾ] ಮರುತನ ಮಗ, ಭೀಮ (ಎಂದು ಮಸಗಿದ ಮದಾಂಧಗಂಧಸಿಂಧುರದಂತೆ ದೆಸೆಗೆ ಮಸಗಿದ ವಾಯುಪುತ್ರನಂ ಧರ್ಮಪುತ್ರಂ ಸಂತೈಸಿ: **ಪಂಪಭಾ,** ೯. ೨೪ ವ)

ವಾಯುಪ್ರವೇಶ – [ನಾ] ಆನೆಯ ಗುದದ್ವಾರ ? (ಸಮಸಂಕ್ಷಿಪ್ತ ಪ್ರಚ್ಛನ್ನವಾಯುಪ್ರವೇಶನುಂ ಅಪಿಂಜೋತ್ಪನ್ನಾಂಡಕೋಶನುಂ: **ಆದಿಪು,** ೧೨. ೫೬ ವ)

ವಾಯುವೇಗ – [ನಾ] ಗಾಳಿಯಷ್ಟು ವೇಗ (ಭೀಮಸೇನನಂ ನೀಂ ಪೋಗಿ ಮೂವರನೊಡಗೊಂಡು ನೀರಂ ಕೊಂಡು ಬಾಯೆಂದೊಡೆ ಅಂತೆ ಗೆಯ್ವೆನೆಂದು ವಾಯುವೇಗದಿಂ ಬಂದು: **ಪಂಪಭಾ,** ೮. ೪೧ ವ)

ವಾರ – [ನಾ] ಏಳುದಿವಸಗಳ ವಾರದ ಒಂದು ದಿನ (ಶುಭತಿಥಿ ಶುಭನಕ್ಷತ್ರಂ ಶುಭವಾರಂ ಶುಭಮುಹೂರ್ತಮೆನೆ **ಗಣಕಂ** ಇಳಾಪ್ರಭುವೊಗೆದಂ ಉದಿತಕಾಯಪ್ರಭೆಯೊಗೆದಿರೆ ದಳಿತಶತ್ರುಗೋತ್ರಂ ಪುತ್ರಂ: **ಪಂಪಭಾ,** ೧. ೧೨೭)

ವಾರಣ – [ನಾ] ಆನೆ (ಚಕ್ರಮೇವುದೊ ವಾರಣಘಟೆ ದಂಡರತ್ನಮೇಗೆಯ್ದಪುದೋ: **ಆದಿಪು,** ೧೪. ೨೬)

ವಾರಣಾವತ – [ನಾ] ಹಸ್ತಿನಾವತಿ (ವಿದುರಂ .. .. ಧೃತರಾಷ್ಟ್ರನ ಬೆಸದೊಳ್ ವಾರಣಾವತಕ್ಕೆ ಪೋಗಿ ತದರ್ಧ ದಗ್ಧ ಕಳೇವರಂಗಳಂ ಸಂಸ್ಕರಿಸಿ ಜಳದಾನಾದಿ ಕ್ರಿಯೆಗಳಂ ಮಾಡಿ ಮಗುೞ್ ವಂದಂ: **ಪಂಪಭಾ,** ೩. ೮ ವ)

ವಾರನಾರಿ – [ನಾ] ಸೂಳೆ (ಕಾಯ್ದು ಕೈವೀಸುವ ಕಾವನಂದದಿಂ ಇವಳೇಂ ಕುಲನಾರಿಯೋ ವಾರನಾರಿಯೋ: **ಪಂಪಭಾ,** ೮. ೬೨)

ವಾರವನಿತಾ[ತೆ] – [ನಾ] ಸೂಳೆ (ಚತುರ್ದಶ ಮಹಾನದಿಗಳ ನೀರುಮಂ ತಟತಟ ತೊಳಗುವ ಕಳಧೌತಕಳಶಂಗಳೊಳ್ ತೆಕ್ಕನೆ ತೀವಿ ತಂದ ವಾರವನಿತಾಜನಕ್ಕಂ: **ಪಂಪಭಾ,** ೧೪. ೧೭ ವ)

ವಾರವಿಳಾಸಿನಿ – [ನಾ] ಸೂಳೆ (ಓಲಗಕ್ಕೆ ಪುಗುವ ಪೊಱಮಡುವ ವಾರವಿಳಾಸಿನಿಯರ ನೂಪುರಂಗಳ ರವಂಗಳೊಳ್ ನೃಪಭವನೋಪವನ ದೀರ್ಘಿಕಾಹಂಸಕುಳಂಗಳ್ ತಳವೆಳಗಾದುವು: **ಪಂಪಭಾ,** ೪. ೪೯ ವ)

ವಾರಸೌಂದರಿ – [ನಾ] ಗಣಿಕೆ (ರಾಜ್ಯಲಕ್ಷ್ಮೀದೇವತೆಯ ಪರಿವಾರದೇವತೆಯರೆನಿಸುವ ವಾರಸೌಂದರಿಯರ ಸೂಸುವ ಪರಮಾನಂದಸ್ಮಿತ: **ಆದಿಪು,** ೪. ೬೧ ವ)

ವಾರಸ್ತ್ರೀ – [ನಾ] ವೇಶ್ಯೆ (ಅಮರಾವತೀಪುರದ ವಾರಸ್ತ್ರೀಯರೇನೀತನೇ ನರನಾ ಖಾಂಡವವೆಲ್ಲಮಂ ಶಿಖಿಗುಣಲ್ ಕೊಟ್ಟಾತಂ: **ಪಂಪಭಾ,** ೮. ೨೭)

ವಾರಾಂಗನೆ – [ನಾ] ವಾರನಾರಿ, ವೇಶ್ಯೆ (ಭೋರೆಂದೆಸೆಯೆ ಜಯಜಯಧ್ವಾನಂ ಓರಂತೆ ವಾರಾಂಗನೆಯರ್ ವಂದಾಡೆ: **ಪಂಪಭಾ,** ೧೪. ೧೮)

ವಾರಾಕದಂಬ – [ನಾ] ಈಚಲುಮರದ ಸಾಲು (ವಾರಾಕದಂಬ ಸುರಭಿಸಮೀರಂ ಪರಿಪಕ್ವ ರಾಜಜಂಬೂದ್ರುಮ ವಿಸ್ತಾರಂ: **ಆದಿಪು,** ೧೧. ೮೮)

ವಾರಾಶಿ – [ನಾ] ಕಡಲು, ಸಮುದ್ರ (ಬತ್ತಲಾಟಿಸಿದುವು ಆ ವಾರಾಶಿಗಳ್ ಸುರ್ಕಿ ಬಿಕ್ಕದ ಬಾಯಂತೆ ಸುರುಳ್ದುದು ಅಂಬರಂ: **ಪಂಪಭಾ,** ೧೩. ೯೩)

ವಾರಿ – [ನಾ] ಚೂರಿ (ಅಸಿತ ಭುಜಶಿಶುತರಳತರವಾರಿ ಖಡ್ಗಖೇಟಕ ವ್ಯಗ್ರಕರದ್ವಯ ಉದ್ದಾಮಪದಾತಿಬಹಳಂ: **ಆದಿಪು,** ೧೩. ೪೫ ವ); ನೀರು (ಅಂಭೋರುಹರಜಃಪಟಾವೃತವಾರಿಯಂ ಆ ನೃಪತಿ ಕುಡಿಯಲೊಡರಿಸಿದಾಗಳ್: **ಪಂಪಭಾ,** ೮. ೪೬)

ವಾರಿಚಾರಿ – [ನಾ] ನೀರಿನ ಮೇಲೆ ಸಂಚರಿಸುವ (ಅಂತು ಕಾಳಿಂದೀಜಲಶಿಶಿರಶೀಕರ ವಾರಿಚಾರಿಯುಂ ಮೃಗಯಾ ಪರಿಭ್ರಮಶ್ರಮೋತ್ಥಿತ ಸ್ವೇದಜಲಲವಹಾರಿಯುಂ ಆಗಿ ಬಂದ ಮಂದಾನಿಲಕ್ಕೆ: **ಪಂಪಭಾ,** ೫. ೫೩ ವ)

ವಾರಿಜನಾಥ – [ನಾ] ಸೂರ್ಯ (ಜಳಪ್ರವೇಶಂ ಇಲ್ಲಿಗೆ ಪದನೆಂದು ನಿಶ್ಚಯಿಸಿ ವಾರಿಜನಾಥಂ ಅನಾಥನಾಗಿ ತೊಟ್ಟನೆ ಮುೞುಪಂತೆವೊಲ್ ಮುೞುಗಿದಂ: **ಪಂಪಭಾ,** ೧೩. ೧೦೬)

ವಾರಿಜ – [ನಾ] ತಾವರೆ (ವಾರಿಜ ಮಳಯಜ ಮಳಯಸಮೀರಣ ಚಂದ್ರಾಂಶು ಚಂದ್ರಕಾಂತದ್ರವ ಕರ್ಪೂರ ಮೃಣಾಳಾದಿಗಳುಂ: **ಆದಿಪು,** ೨. ೧೩)

ವಾರಿಜನಾಭ – [ನಾ] ಕಮಲನಾಭ, ವಿಷ್ಣು, ಶ್ರೀಕೃಷ್ಣ (ವಿಜಿಗೀಷುತ್ವದೊಳ್ ಒಂದಿ ಗೋವುಳಿಗನಪ್ಪಂ ಮರ್ತ್ಯನಾಳಾಗಿ ವಾರಿಜನಾಭಂ ಹರಿಯೆಂಬ ದೊಡ್ಡಿವೆಸರಂ ಪೊತ್ತಿರ್ದ ನೀಂ ಮಂತ್ರಿಯಾಗೆ: **ಪಂಪಭಾ,** ೯. ೪೭)

ವಾರಿದ – [ನಾ] ಮೋಡ (ಕೌರವಕುಲ ಹಿಮಕರ ಆವಿಲಪ್ರಚಯ ವರ್ಷವಾರಿದನಪ್ಪ ಪವನತನಯಂ ಬದ್ಧವಪುವಾಗಿ: **ಪಂಪಭಾ,** ೧೨. ೧೪೪ ವ)

ವಾರಿಧಿ – [ನಾ] ಸಮುದ್ರ (ಅಗಾಧವಾರಿಧಿಯೆ ಗುಣ್ಪಂ ಇಳಾವಧು ತನ್ನ ತಿಣ್ಪಂ ಉತ್ತಮಕುಲಶೈಲಮುನ್ನತಿಯನೇಳಿದಮಾಗೆ ಬಿಸುಟ್ಟೊಡಂ ವಿಸುೞ್ಕೆಮ: **ಪಂಪಭಾ,** ೧. ೮೩)

ವಾರಿರಾಶಿ – [ನಾ] ಸಮುದ್ರ (ನಿನಗೀ ವಾರಿರಾಶಿತಟಂ ಅತ್ಯಾಸನ್ನಂ ಆಸನ್ನಭವ್ಯನೆಯೆಂದೆಯ್ದೆ ಮುನೀಂದ್ರದಿವ್ಯಮತದಿಂ ನಿಶ್ಚೈಸಿದೆಂ: **ಆದಿಪು,** ೨. ೪೮)

ವಾರುಣ – [ನಾ] ವರುಣಾಸ್ತ್ರ (ಕೆಳರ್ದು ಅಂದುಗ್ರರಣಾಗ್ರಹ ಪ್ರಣಯದಿಂದಾಗಳ್ ಕುರುಕ್ಷೇತ್ರಮಂ ಕಳವೇಟ್ಟು ಇರ್ವರುಂ ಐಂದ್ರ ವಾರುಣದೆ ವಾಯವ್ಯಾದಿ ದಿವ್ಯಾಸ್ತ್ರಸಂಕುಳದಿಂದೆ ಒರ್ವರಂ ಒರ್ವರ್ ಎಚ್ಚು: **ಪಂಪಭಾ,** ೧. ೭೯)

ವಾರುಣಪತ್ರಿ – [ನಾ] ವಾರುಣಾಸ್ತ್ರ (ಜ್ವಳನಪತತ್ರಿಯಂ ಕಡಿದು ವಾರುಣಪತ್ರಿಯಿಂ ಐಂದ್ರಬಾಣಮಂ ಕಳೆದು ಸಮೀರಣಾಸ್ತ್ರದಿಂ ಭೂಭುಜರೆಲ್ಲರಂ ಭಯಂಗೊಳಿಸಿ: **ಪಂಪಭಾ,** ೧೧. ೪೩)

ವಾರುಣಿ – [ನಾ] ವರುಣನ ದಿಕ್ಕು, ಪಶ್ಚಿಮ [ಮದ್ಯ] (ತುಂಬಿದ ರಕ್ತತೆಯಿಂ ನಿಜಬಿಂಬಂ ವಾರುಣಿಯನೊಸೆದು ಸೇವಿಸೆ ನಾಣ್ಗೆಟ್ಟಂಬೋಲ್ ತೇಜಂ ಮಸುಳ್ವಿನಂ ಅಂಬರಮಂ ಬಿಸುಟಂ ಆಗಳಂಬುಜಮಿತ್ರಂ: **ಪಂಪಭಾ,** ೩. ೨೩)

ವಾರುವಗುದುರೆ – [ನಾ] [ವಾರುವ+ಕುದುರೆ] ಬಾಡಬ ಜಾತಿಯ ಕುದುರೆ (ತೇರಂ ಪಾಯಿಸಿ ನೋಯಿಸಿ ವಾರುವಗುದುರೆಗಳಂ ಅರೆಬರ್ ಎರ್ದೆಯುರಿಯೆಚ್ಚರ್: **ಪಂಪಭಾ,** ೧೦. ೮೯)

ವಾರ್ತೆ – [ನಾ] [ಜೈನ] ಅಸಿ ಮಷಿ ಕೃಷಿ ವಾಣಿಜ್ಯ ಶಿಲ್ಪಕಾರ್ಯಗಳಿಂದ ಶುದ್ಧವೃತ್ತಿಗಳಿಂದ ಸಂಪಾದಿಸುವುದು (ಅಸಿ ಮಷಿ ಕೃಷಿ ವಣಿಗ್ವಿದ್ಯಾಶಿಲ್ಪಕರ್ಮಂಗಳಿಂ ಶುದ್ಧವೃತ್ತಿಯಿಂದೆ ಅರ್ಥೋಪಾರ್ಜನಂಗೆಯ್ವ ವಾರ್ತೆಯುಂ: **ಆದಿಪು,** ೧೫. ೧೩ ವ)

ವಾರ್ಧಿ – [ನಾ] ಸಮುದ್ರ (ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯಂ ಈಸುವೆಂ ಕವಿವ್ಯಾಸನೆಂ ಎಂಬ ಗರ್ವಮೆನಗಿಲ್ಲ: **ಪಂಪಭಾ,** ೧. ೧೩); [ನಾ] ಸಮುದ್ರಾಸ್ತ್ರ, ವಾರುಣಾಸ್ತ್ರ (ದನುತನೂಜನೆಚ್ಚ ವಾರ್ಧಿಗೆ ಅನಲಬಾಣದಿಂದೆಚ್ಚು ನಚ್ಚುಗಿಡಿಸೆ ಕೊಂಡು ಶೂಲಮಂ ಘಟೋತ್ಕಚಂ: **ಪಂಪಭಾ,** ೧೨. ೧೩)

ವಾರ್ಧಿಚಯ – [ನಾ] ಸಮುದ್ರಸಮೂಹ (ರಂಗತ್ತರಂಗ ವಾರ್ಧಿಚಯಂಗಳ್ ತಂತಮ್ಮ ಮೇರೆಯಂ ದಾಂಟುವೊಡಂ ಗಾಂಗೇಯನುಂ ಪ್ರತಿಜ್ಞಾಗಾಂಗೇಯನುಮೊರ್ಮೆ ನುಡಿದುದಂ ತಪ್ಪುವರೇ: **ಪಂಪಭಾ,** ೧. ೮೪)

ವಾರ್ಧಿಪರ್ಯಂತ – [ನಾ] ಸಮುದ್ರಗಳ ಕೊನೆಯವರೆಗಿನ (ಎಂತು ಬಿಗುರ್ತು ಧೀರರನೆ ಕೊಂದಪಿರಿ ಎಂತು ಸಮಸ್ತವಾರ್ಧಿಪರ್ಯಂತ ಧರಿತ್ರಿಯಂ ವಶಕೆ ತಂದಪಿರಿ: **ಪಂಪಭಾ,** ೬. ೨೩)

ವಾಸನೆ – [ನಾ] ಸಂಸ್ಕಾರ (ಈ ಭವದಿಂದಮಾದ ವಾಸನೆ ಮಱುಮೆಯ್ಗುಮಕ್ಕುಂ ಅದಱಿಂದೆನಗಂ ನಿನಗಂ ಸಮಂತು ಮುನ್ನಿನ ಭವಮೀ ಭವಂ ಮಱುಭವಂ ಸಫಲಂ: **ಆದಿಪು,** ೪. ೫೨)

ವಾಸರ – [ನಾ] ದಿನ (ಇಂದಿನ ವಾಸರಮೆ ಶೋಭನವಿಧೇಯವಾಸರಂ ಇಂದಿನ ದಿವಸಮೆ ಶುಭದಿವಸಾಗ್ರೇಸರಂ: **ಆದಿಪು,** ೪. ೩೦ ವ); [ನಾ] ತಿಥಿ (ಬರೆ ಚೈತ್ರಂ ಕೃಷ್ಣಪಕ್ಷಂ ದೊರೆಕೊಳೆ ನವಮೀವಾಸರಂ ಪೊರ್ದೆ ಲೋಕೋತ್ತರಮಾಗಿರ್ದ ಉತ್ತರಾಷಾಢದೊಳ್: **ಆದಿಪು,** ೭. ೩೬)

ವಾಸರನಾಥಾತ್ಮಜ – [ನಾ] [ವಾಸರನಾಥ=ಸೂರ್ಯ] ಸೂರ್ಯನ ಮಗ, ಕರ್ಣ (ಶರಶಯ್ಯಾಗ್ರದೊಳ್ ಇಂತು ನೀಮಿರೆ ಘಟಟಪ್ರೋದ್ಭೂತಂ ಅಂತಾಗೆ ವಾಸರನಾಥಾತ್ಮಜಂ ಅಂತು ಸಾಯೆ: **ಪಂಪಭಾ,** ೧೩. ೬೯)

ವಾಸವ – [ನಾ] [ಜೈನ] ಸೌಧರ್ಮೇಂದ್ರ (ವಾಸವನಾಸನಕಂಪದಿನಾ ಸಮಯದೊಳ್ ಅವಧಿಯಂ ಪ್ರಯೋಗಿಸಿ ಭೋಧಾವಾಸಾಶಯನ ಉದಯಮನಱಿದು: **ಆದಿಪು,** ೭. ೪೨); [ನಾ] ಇಂದ್ರ (ಪೊಕ್ಕಂ ಆ ವಾಸವನಂತೆ ಮತ್ಸ್ಯಮಹಿಪಾಳಕಮಂದಿರಮಂ ಗುಣಾರ್ಣವಂ: **ಪಂಪಭಾ,** ೮. ೧೧೦)

ವಾಸವದಿಕ್ – [ನಾ] ಇಂದ್ರದಿಕ್ಕು, ಪೂರ್ವದಿಕ್ಕು (ಪೂರ್ಣಚಂದ್ರನಂ ಒಳಕೊಂಡು ಬೆಳ್ಪೆಸೆವ ವಾಸವದಿಗ್ವನಿತಾ ಆನನಂಬೊಲ್ ಆನನರುಚಿ ಚೆಲ್ವನೇಂ ನೆಱಿಯೆ ತಾಳ್ದಿದುದೋ: **ಆದಿಪು,** ೮. ೪೭)

ವಾಸವಸ್ತ್ರೀ – [ನಾ] ಇಂದ್ರನ ವನಿತೆ, ದೇವತಾಸ್ತ್ರೀ (ಅಂತು ನೋಡಿ ಕಡೆಗಣ್ಣ ಚೆಲ್ಲಂಬೆರಸು ಸೂಸುವ ವಾಸವಸ್ತ್ರೀಯರ ಮುಖಾಬ್ಜಾಸವ ಸಂಬಂಧಿಗಳಪ್ಪ ಶೇಷಾಕ್ಷತಂಗಳಂ ಈಶ್ವರನಂ ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ವಂತೆ ಸೇಸೆಗೊಳ್ಳುತ್ತುಂ: **ಪಂಪಭಾ,** ೮. ೨೭ ವ)

ವಾಸವಾಶೆ – [ನಾ] ಇಂದ್ರನ ದಿಕ್ಕು, ಪೂರ್ವ (ಬಾಳದಿವಾಕರಗರ್ಭ ವಾಸವಾಶೆಗೆ ಕಳಹಂಸಗರ್ಭ ಕಳಹಂಸಿಗೆ ಸಿಂಹಕಿಶೋರಗರ್ಭಂ ಸಿಂಹಿಗೆ ದೊರೆಯಾಗಿ: **ಆದಿಪು,** ೮. ೩೦)

ವಾಸಿತ – [ಗು] ವಾಸನೆಯಿಂದ ಕೂಡಿದುದು (ಸ್ತ್ರೀಸಂಸರ್ಗಂ ಸುಖಮೆಂಬೀ ಸಂಸಾರಿಗಳೆ ಜಡರ್ ಅದಪ್ಪೊಡೆ ತನುಗಾಯಾಸಕರಂ ಶುಕ್ಲಾರ್ತವವಾಸಿತಂ ಆಪಾತಮಾತ್ರ ರಮಣೀಯತರಂ: **ಆದಿಪು,** ೬. ೪೪)

ವಾಸಿಸು – [ಕ್ರಿ] ಸುವಾಸನೆಯುಂಟಾಗು (ಮುಡಿಯ ಪೂವಿನ ರಜದಿಂ ವಾಸಿಸಿದ ನೀರ ಕದಡಿಂದಾಸವದೊಳ್ ಸೊರ್ಕಿ ಬೆಂಡುಮಗುಟ್ಟುವು ಮೀಂಗಳ್: **ಪಂಪಭಾ,** ೫. ೬೫)

ವಾಸುಕಿ – [ನಾ] ಆದಿಶೇಷ (ತನ್ನೃತ್ಯಫಲಂ ತ್ರಿವರ್ಗವಿಭವಂ ತಾನೆಂದೊಡೇಮಾತೊ ಸಾಸಿರಮುಂ ನಾಲಗೆಯುಳ್ಳ ವಾಸುಕಿಯುಂ ಇನ್ನೇನೆಂದದಂ ಬಣ್ಣಿಪಂ: **ಆದಿಪು,** ೭. ೧೨೭)

ವಾಸುದೇವ – [ನಾ] [ಜೈನ] ಒಬ್ಬ ಅರ್ಧಚಕ್ರವರ್ತಿ (ಸುಖದುಃಖಾದಿಗಳುಮಂ ತೀರ್ಥಕರ ಚಕ್ರಧರ ಬಲದೇವ ವಾಸುದೇವ ಪ್ರತಿವಾಸುದೇವ ಕಥಾಸಂಬಂಧಮುಮಂ ನಿರ್ಣಯಂ ಮಾಡಿದಾಗಳ್: **ಆದಿಪು,** ೧೦. ೬೩ ವ)

ವಾಸ್ತವ್ಯ – [ನಾ] ನೆಲೆಸಿದವನು (ಅವರನಲ್ಲಿಗೆ ವಾಸ್ತವ್ಯರ್ಮಾಡಿ ದಕ್ಷಿಣೋತ್ತರ ಶ್ರೇಣಿಗಳೊಳಿರ್ಪ ವಿದ್ಯಾಧರಾಧೀಶ್ವರರಂ ಬರಿಸಿ: **ಆದಿಪು,** ೯. ೧೨೧ ವ)

ವಾಸ್ತುವಿದ್ಯೆ – [ನಾ] ಕಟ್ಟಡ ಕಟ್ಟುವ ಶಾಸ್ತ್ರ (ಅನಂತವಿಜಯಂಗೆ ವಿಚಿತ್ರ ಚಿತ್ರ ಚಿತ್ರಕಳೆಯುಮಂ ವಾಸ್ತುವಿದ್ಯೆಯುಮಂ ಉಪದೇಶಂಗೆಯ್ದು: **ಆದಿಪು,** ೮. ೬೦ ವ)

ವಾಹ – [ನಾ] ವಾಹನ (ಗರುಡಂ ವಾಹಮಾಗಿರ್ಪ ಚಕ್ರೇಶ್ವರಿ ಭಾಸ್ವದ್ಧರ್ಮಚಕ್ರಾಕ್ರಮಿಗಳಂ ಅಲೆದಾಟಿಕ್ಕೆ ವಿಕ್ರಾಂತದಿಂದಂ:

ಆದಿಪು, ೧. ೭); [ನಾ] ನದಿ (ಅಧಃಸ್ಸ್ಥಳ ಪ್ರಸರ್ಪತ್ಸಿಂಧುವಾಹಪ್ರವಾಹ ವಿರಾಜಿತಮುಂ: **ಆದಿಪು,** ೧೩. ೪೬ ವ); [ನಾ] ಕುದುರೆ (ಕರಿಗೆಂಟು ರಥಕ್ಕನುವಾಗೆ ನಾಲ್ಕು ವಾಹಕ್ಕೆ ಎರಡು ಅಲ್ಲಿ ಪಾದಚರರ್ಗೊಂದೆನೆ ದೀವಿಗೆಗಳ್ ಜಲಕ್ಕನೆ ಎಕ್ಕೆಕ್ಕೆಯಿಂ ಇಟ್ಟಳಂ ಬೆಳಗುತಿರ್ದುವು: **ಪಂಪಭಾ,** ೧೨. ೫)

ವಾಹನದೇವರ್ – [ನಾ] ವಾಹನದಲ್ಲಿ ಕರೆದೊಯ್ಯುವ ದೇವತೆಗಳು (ಆವುದೊಂದಿರಲೆಡೆ ಚೆಲ್ವು ಅದರ್ಕೆ ಬಗೆದಾಗಳೆ ವಾಹನದೇವರುಯ್ವರ್: **ಆದಿಪು,** ೩. ೨)

ವಾಹಿನಿ – [ನಾ] ಸೈನ್ಯದ ತುಕಡಿ ಮತ್ತು ನದಿ (ಬಳವತ್ ಪ್ರತ್ಯಂತಭೂಪಾಳಕನಿಕರ ಮಹಾವಾಹಿನೀವಾಹಿನೀ ಸಂಕುಳಂ ಅತ್ಯುತ್ಸಾಹದಿಂ ಪುಗೆ ದೆಸೆದೆಸೆಯಂ: **ಆದಿಪು,** ೧೩. ೪೫)

ವಾಳಧಿ – [ನಾ] [ಆನೆಯ] ಬಾಲ (ಅನುಪೂರ್ವದೀರ್ಘ ವಾಳಧಿಯುಂ ಮಾನುಷದುಗ್ಧಾವಿಳಾಸನೋಪೇತಪೇಚಕನುಂ: **ಆದಿಪು,** ೧೨. ೫೬ ವ)

ವಾಳೆಮೀನ್ – [ನಾ] ಬಾಳೆಮೀನು, ಒಂದು ಬಗೆಯ ಮೀನು (ವಾಳೆಮೀನ್ ಪೊಳೆಯೆ ಧಾತ್ರಿಗೆ ವರ್ಪ ಗಂಗೆವೊಲೊಪ್ಪಿದಂ ಮುನಿಪುಂಗವಂ: **ಪಂಪಭಾ,** ೬. ೭)

ವಾರ್ತೆಗೊಳ್ – [ಕ್ರಿ] ಸುದ್ದಿಯನ್ನು ಕೇಳು (ಕಾರ್ಗಾದ ವಾರ್ತೆಗೊಂಡೊಡೆ ಪಾರ್ಗಾದುದು ಮನಮುಂ ಎರ್ದೆಯುಂ ಏನಂ ಪೇರ್ಳ್ವೆಂ: **ಪಂಪಭಾ,** ೪. ೬೬)

ವಿಂದೆ – [ನಾ] [ವೃಂದ] ಗುಂಪು (ಅತಿರಥ ಸಮರಥ ಮಹಾರಥ ಅರ್ಧರಥರ್ ಒಂದೆ ವಿಂದೆಯಲ್ಲಿ ಅದೊಂದೊರ್ವರೊಳ್ ಸಂಧಿಸಿ ಗೊಂದಣಿಸಿ ನಿಂದಾಗಳ್: **ಪಂಪಭಾ,** ೧೧. ೧೪೬ ವ)

ವಿಂಧ್ಯ – [ನಾ] ಕುಲಪರ್ವತಗಳಲ್ಲಿ ಒಂದು (ಬಳೆಯಲ್ಕಣ್ಮಿದುದಿಲ್ಲ ವಿಂಧ್ಯಗಿರಿಯುಂ ತನ್ನಾಜ್ಞೆಯಿಂದೆ: **ಪಂಪಭಾ,** ೪. ೨೦)

ವಿಂಶತಿ – [ನಾ] ಇಪ್ಪತ್ತು (ವಿಂಶತಿಸಹಸ್ರ ಸಮಾಜಂಬೆರಸು ಮಂದರಸ್ಥವಿರರೆಂಬ ಮುಮುಕ್ಷುಗಳ ಸಮಕ್ಷದೊಳ್ ಮೋಕ್ಷಮಾರ್ಗಮಂ ಕೈಕೊಂಡು: **ಆದಿಪು,** ೩. ೭೨ ವ)

ವಿಕಚ – [ಗು] ಅರಳಿದ (ಮಧುಕರಮದು ಭೋಂಕೆನೆ ಪಾಯ್ದು ಎಱಂಕೆ ನಾಂದೊಡೆ ನೆಲಸಿದುದು ವಿಕಚಕನಾಕಾಬ್ಜಿನಿಯೊಳ್: **ಆದಿಪು,** ೧೧. ೬೨)

ವಿಕಚಮೇಚಕೋತ್ಪಳಲೋಚನೆ – [ನಾ] ಅರಳಿದ ಕನ್ನೈದಿಲೆಯಂತಹ ಕಣ್ಣುಳ್ಳವಳು (ಆ ವಿಕಚಮೇಚಕೋತ್ಪಳ ಲೋಚನೆಯರೊಳ್ ಆ ವಿಮುಕುಳಕಮಳದಳವಿಲೋಚನಂ: **ಆದಿಪು,** ೮. ೨೩ ವ)

ವಿಕಟ – [ಗು] ಭಯಂಕರವಾದ (ಭಯಂಕರಶಿಂಶುಮಾರ ವಿಕಟದಂಷ್ಟ್ರಾ ಕ್ರಕಚಪಾಟ್ಯಮಾನ ನಾರಕನಿಕರ ರುಧಿರಚ್ಛಟ ಅಚ್ಛಾರುಣಿಸಲಿಲ ಹರಿಕಾನಿಕರಕರಾಳೆಯುಂ: **ಆದಿಪು,** ೫. ೮೭ ವ)

ವಿಕಟಾಟ್ಟಹಾಸ – [ನಾ] ಭಯಂಕರ ನಗು (ಆಗಳ್ ಕುರುಧ್ವಜಿನಿಯುಂ ಅನೇಕ ಶಂಖ ಕಾಹಳ ಭೇರೀ ಪಣವ ಝಲ್ಲರೀ ಮೃದಂಗ ತೂರ್ಯಂಗಳ್ ಅಂತ ಕಾಲಾಂತಕ ವಿಕಟಾಟ್ಟಹಾಸಂಗಳ್ ಎಂಬಂತೆ ಮೊಱಗೆ: **ಪಂಪಭಾ,** ೧೧. ೩೩ ವ)

ವಿಕರಣ – [ನಾ] ನಾನಾ ರೂಪಗಳನ್ನು ಧರಿಸುವ ಸಾಮರ್ಥ್ಯ (ದೇವಿಯ ಪರಿವಾರದಪ್ಸರೋಗಣಮುಂ ತದ್ದೇವೀ ವಿಕರಣಸಂಭವ ದೇವಿಯರುಂ ಪಲಬರೆನೆ ಪೊಗೞಲಳುಂಬಂ: **ಆದಿಪು,** ೬. ೧೫)

ವಿಕರ್ಣ – [ನಾ] ಕರ್ಣನ ಮಗ (ಕೊಂದನಂಕದ ವಿಕರ್ಣನಂ ಒಂದೆ ವಿಕರ್ಣದಿಂ ನರಂ: **ಪಂಪಭಾ,** ೮. ೧೦೭); [ನಾ] ಬಾಣ (ಮೆಯ್ಯೊಳ್ ಅಟ್ಟು ಇಡಿದ ವಿಕರ್ಣಕೋಟಿಯೊಳ್ ಅಣಂ ನೆಲಮುಟ್ಟದೆ ನೋಡೆ ಬಿಟ್ಟು ಒಡಂಬಡಿಸಿದಂ ಅಯ್ಯ ಶೌಚಗುಣದುನ್ನತಿಯಂ ಸುರಸಿಂಧುನಂದನಂ: **ಪಂಪಭಾ,** ೧೧. ೪೭)

ವಿಕಲ್ಪ – [ನಾ] ಭೇದ (ಅದು ದಿವಿಜಲೋಕಂ ಇದು ಮನ್ಮಥರೂಪದ ಮನುಷ್ಯಲೋಕಂ ಎಂಬಿದುವೆ ವಿಕಲ್ಪಂ: **ಆದಿಪು,** ೪. ೧೯); [ನಾ] ವ್ಯತ್ಯಾಸ (ಈಶ್ವರಂ ನೀನುದಾರ ಮಹೇಶ್ವರನಪ್ಪುದಱಿಂ ನಿನಗಂ ಎನಗಂ ಏತಱೊಳಂ ವಿಕಲ್ಪಮುಂ ವಿಚ್ಛಿನ್ನಮುಂ ಇಲ್ಲ ಎಂದಂ: **ಪಂಪಭಾ,** ೫. ೧೦೩ ವ)

ವಿಕಸತ್ – [ಗು] ಅರಳಿದ (ಆ ತ್ರಿಲೋಕತಿಲಕನ ಜನ್ಮೋತ್ಸವದೊಳ್ ಏಕಸಮಯಸಮವತೀರ್ಣ ಸರ್ವರ್ತುಕ ನಂದನ ವಿಕಸತ್ ಅಶೋಕ: **ಆದಿಪು,** ೭. ೩೬ ವ)

ವಿಕಸಿತ – [ಗು] ಅರಳಿದ (ಸರೋಜನಿಳಯೆ ಎನ್ನ ಬರ್ಪನ್ನಂ ಅರಸನಂ ಅಗಲದೆ ವಿಕಸಿತ ಶತಪತ್ರಾತಪತ್ರದ ತಣ್ಣೆೞಲುಮಂ ಕುಂದಲೀಯದಿರು ಎಂದು ನಿಯಮಿಸಿ: **ಪಂಪಭಾ,** ೧೩. ೧೦೫ ವ)

ವಿಕಾರ – [ನಾ] ಪರಿತಪಿಸುವುದು (ಕಾಮಗ್ರಹಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭ ಕಂಪ ಸ್ವೇದ ವೈವರ್ಣ್ಯಸಂತಾಪ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ,** ೪. ೫೯ ವ)

ವಿಕಿರಣಸಂಭವದೇವಿ – [ನಾ] [ಜೈನ] ಅಚ್ಯುತೇಂದ್ರನ ಪ್ರತಿ ದೇವಿಯೂ ವಿಕ್ರಿಯಾಸಾಮರ್ಥ್ಯದಿಂದ ೧೨೪೦೦೦ ದಿವ್ಯರೂಪಗಳನ್ನು ಧರಿಸುತ್ತಾಳೆ (ದೇವಿಯರೊಳ್ ಒರ್ಬರೊರ್ಬರ್ ದೇವಿಯ ಪರಿವಾರಪ್ಸರೋಗಣಮುಂ ತದ್ದೇವೀ ವಿಕಿರಣಸಂಭವ ದೇವಿಯರುಂ: **ಆದಿಪು,** ೬. ೧೫)

ವಿಕೀರ್ಣ – [ಗು] ತುಂಬಿಹೋದ (ಮಹಾವಾಹಿನೀವಾರಣೇಂದ್ರ ಘಟಾನ್ಯೋನ್ಯಸಂಘಟ್ಟ ಘಂಟಾಟಂಕಾರಾಸ್ಫಾಳನದಿಂದಂ ಉದಗ್ರಗಿರಿಗುಹಾಂತರಂಗಳುಂ ಉದೀರ್ಣವಿಕ್ರಮಾರಾತಿ ಕರ್ಣಾಂತರಂಗಳುಂ ವಿಕೀರ್ಣಂಗಳಾಗೆಯುಂ: **ಆದಿಪು,** ೧೩. ೭೭ ವ); [ನಾ] ಬಾಣ (ಆಕರ್ಣಾಕೃಷ್ಟ ಉತ್ಸೃಷ್ಟ ನಿಜ ವಿಕೀರ್ಣಟಂಕಂಗಳಿಂದಂ ತತ್ಪತಾಕಿನೀಕುಂಜರ ಶಿರಶ್ಶಿಳಾ ಪಟ್ಟಕಂಗಳಂ ಇರ್ಬಗಿಮಾಡಲ್ಪಡದೆಯುಂ: **ಆದಿಪು,** ೧೪. ೧೦೩ ವ)

ವಿಕೀರ್ಯಮಾಣ – [ಗು] ಎರಚಲ್ಪಟ್ಟ (ಅನವರತ ವಿತರಣನಿರತ ರಾಜಕುಮಾರಮುಷ್ಟಿ ವಿಕೀರ್ಯಮಾಣ ಸಂತರ್ಪಣ ಚೂರ್ಣ ಸಂಕೀರ್ಣಕರ್ಪೂರರಜಮುಂ: **ಆದಿಪು,** ೧೧. ೩೫ ವ)

ವಿಕ್ರಮ – [ನಾ] ಪರಾಕ್ರಮ (ಅನುಪಮ ವಿಕ್ರಮಕ್ರಮಂ ಉದಾರಗುಣಂ ಋತವಾಕ್ಯಂ ಎಂಬ ಪೆಂಪೆನಲಿವು ಮೂಱ್ ನಾಲ್ಕೆ ಗುಣಂ: **ಪಂಪಭಾ,** ೧೨. ೯೩)

ವಿಕ್ರಮದಾತ – [ನಾ] ಪರಾಕ್ರಮ ಹೊಂದಿದವನು (ಆಂ ವಿಕ್ರಮದಾತನೆಂ ಕ್ರಮದ ಮಾತಂತಿರ್ಕೆ ಮಾಣ್ದಿರ್ದೊಡೆ ಆಂ ಕ್ರಮಕೆಂದಿರ್ದೆನೆ: **ಪಂಪಭಾ,** ೧೧. ೯೨)

ವಿಕ್ರಮಾರ್ಜುನ – [ನಾ] ಪರಾಕ್ರಮಿಯಾದ ಅರ್ಜುನ (ಅಂತು ಉಭಯಬಲಂಗಳೊಳಂ ವೀರಜನಜನಿತಾಳಾಪಂಗಳ್ ನೆಗೞ್ ವಿಕ್ರಮಾಜುನಂ ಅನಂತನುಂ ತಾನುಂ: **ಪಂಪಭಾ,** ೧೦. ೪೬ ವ)

ವಿಕ್ರಾಂತ – [ನಾ] ಪರಾಕ್ರಮ (ಅತರ್ಕ್ಯಂ ವಿಕ್ರಾಂತಂ ಭುಜಬಲಂ ಅಸಾಮಾನ್ಯಂ ಅಧಿಕಂ ಪ್ರತಾಪಂ ಪೋಗೀತಂಗೆಣೆಯೆ: **ಪಂಪಭಾ,** ೧. ೮೦)

ವಿಕ್ರಿಯರ್ಧಿ – [ನಾ] [ಜೈನ] ವಿಕ್ರಿಯಾಋದ್ಧಿ, ಅಣಿಮಾದಿಗಳಿಂದ ಇಷ್ಟಬಂದಂತೆ ದೇಹರೂಪವನ್ನು ಬದಲಾವಣೆ ಮಾಡುವ ಶಕ್ತಿ (ಇರ್ಪತ್ತುಸಾಸಿರ್ವರ್ ಕೇವಳಜ್ಞಾನಿಗಳುಂ ಇರ್ಪತ್ತುಸಾಸಿರದಱುನೂರ್ವರ್ ವಿಕ್ರಿಯರ್ಧಿಪ್ರಾಪ್ತರುಂ: **ಆದಿಪು.** ೧೬. ೪೦ ವ)

ವಿಕ್ರಿಯಾಬಲ – [ನಾ] [ಜೈನ] ಮಾಯಾಶಕ್ತಿ, ಇಂದ್ರಜಾಲ (ಸೂಕ್ಷ್ಮಾಂಗನಾಗಿರ್ಪಂ ಆಗಳೆ ದಿಗ್ವ್ಯಾಪಕನಪ್ಪಂ ಇಂತು ಪಲವುಂ ಚೋದ್ಯಂಗಳಂ ವಿಕ್ರಿಯಾಬಳದಿಂದಾಡಿ: **ಆದಿಪು,** ೭. ೧೨೨)

ವಿಕ್ರಿಯೆ – [ನಾ] [ಜೈನ] ಶರೀರವನ್ನು ಜಡ–ಸೂಕ್ಷ್ಮ ಮೊದಲಾಗಿ ಮಾಡಲು ಸಾಧ್ಯವಾದ ಶಕ್ತಿ (ಅಧಿಪಂ ಸುಮುಖದಿಂ ಬೆಸಸಿದೊಡಲ್ಲದೊಲ್ಲೆವೆನೆ ವಿಕ್ರಿಯೆಯಿಂದಂ ಬೆಸಸುವಂತೆ ಮಾಡಿ: **ಆದಿಪು,** ೯. ೧೧೨)

ವಿಕ್ಷೇಪ – [ನಾ] ಬೀಸುವಿಕೆ, ಅಲ್ಲಾಡುವಿಕೆ (ಚಮರೀ ಲೋಲ ಲಾಂಗೂಲ ಮಾಲಾವಲಿ ವಿಕ್ಷೇಪಂಗಳಿಂ ತತ್ ಚಮರರುಹ ಮಹಾಶೋಭೆ ಕೈಗಣ್ಮೆ: **ಪಂಪಭಾ,** ೪. ೧೪)

ವಿಕ್ಷೇಪಣ – [ನಾ] ಅಲುಗಾಟ (ನಡೆ ನೋೞ್ಪವರ್ಗೆ ಅಕ್ಷಿಪಕ್ಷ್ಮ ವಿಕ್ಷೇಪಣಮೊಂದೆ ಮಾಡುವುದು ಅವಳ್ ಮನುಜಾಂಗನೆಯೆಂಬ ಭೇದಮಂ: **ಆದಿಪು,** ೩. ೨೦); [ನಾ] ಚೆಲ್ಲುವಿಕೆ, ಎರಚುವಿಕೆ (ಪೂರ್ವರಂಗಪ್ರಸಂಗದೊಳ್ ಚರ್ಚರ ಪೂಜಾಮಂಗಳ ಪದೋಚ್ಚಾರಣ ಪುಷ್ಪಾಂಜಲಿವಿಕ್ಷೇಪಣಾದಿ ನಾಂದಿವಿಧಿಯಂ ನಿರ್ವರ್ತಿಸಿ: **ಆದಿಪು,** ೭. ೧೧೫ ವ)

ವಿಕ್ಷೋಭ – [ನಾ] ಆನೆಯ ಎದೆಯ ಬದಿಯ ಭಾಗ (ಪೀನೋಪಚಿತ ಮಾಂಸವಿಕ್ಷೋಭನುಂ ನಾಭಿ ಕಪೋಲೋರೋಮಣಿಯುಂ: **ಆದಿಪು,** ೧೨. ೫೬ ವ)

ವಿಗತ – [ಗು] ಮಲಗಿದ (ಭೀಷ್ಮಂ ಶರಶಯನತಳ ವಿಗತನಾಗರ್ದಲ್ಲಿವರಂ ಎಂತಾನುಂ ಒಡಗೊಂಡು ಬಂದಾಗಳ್: **ಪಂಪಭಾ,** ೩. ೬೧ ವ)

ವಿಗತಜೀವರ್ – [ಗು] ಹೋದ ಪ್ರಾಣದವರಾಗಿ, ಸತ್ತವರು (ಪುಂಡರೀಕಷಂಡೋಪಾಂತದೊಳ್ ವಿಗತಜೀವರಾಗಿರ್ದ ಮೂವರನುಜರಂ ಕಂಡು: **ಪಂಪಭಾ,** ೮. ೪೧ ವ)

ವಿಗತನಿದ್ರೆ – [ಕ್ರಿ] ಹೋದ ನಿದ್ರೆ ಅಂದರೆ ನಿದ್ರೆಯಿಂದ ಎಚ್ಚರಗೊಳ್ಳು (ಅಂತು ಕಂಡು ಮುನಿಕುಮಾರರೋದುವ ವೇದನಿನಾದದಿಂ ವಿಗತನಿದ್ರೆಯಾಗಿ ಪಾಂಡುರಾಜಂಗಂ ಅಲ್ಲಿಯ ಮುನಿಜನಂಗಳ್ಗಂ ಅಱಿಪಿದೊಡೆ: **ಪಂಪಭಾ,** ೧. ೧೪೦ ವ)

ವಿಗಳತ್ – [ಗು] ಸುರಿಯುವ (ಇಂದು ಬಿಂಬ ವಿಗಳತ್ ಅಮೃತಬಿಂದು ದುರ್ದಿನ ಆರ್ದ್ರ ಚಂದನಾನ್ವಿತಮುಂ: **ಪಂಪಭಾ,** ೪. ೧೮ ವ)

ವಿಗಳಿತ – [ಗು] ಹೊರಬಿದ್ದ, ಸುರಿದ (ಕನಕಕುಂಭಮುಖ ವಿಗಳಿತ ಕ್ಷೀರವಾರಿಧಾರೆಯಂ ಜಯಜಯನಿನಾದಪೂರ್ವಕಂ: **ಆದಿಪು,** ೭. ೮೬ ವ); ಶಿಥಿಲವಾದ, ಹಾಳಾದ (ಚಪಳ ಕಪಿಬಳವಿಲುಪ್ತ ವಿಗಳಿತ ಲತಾಭವನಮುಂ: **ಪಂಪಭಾ,** ೪. ೧೮ ವ)

ವಿಗ್ರಹ – [ನಾ] ದೇಹ (ಜಾಜ್ವಲ್ಯಮಾನಮಕುಟಕುಂಡಳನುಂ ನಾನಾಭರಣ ಭಾಸುರೋದಾರವಿಗ್ರಹನುಂ: **ಆದಿಪು,** ೬. ೫೨ ವ); [ನಾ] ಯುದ್ಧ (ತಮ್ಮ ಬಲಮನೊಂದುಮಾಡಿ ಕೂಡಿಕೊಂಡು ಚಕ್ರವರ್ತಿಯೊಳ್ ಉಚ್ಚವಿಗ್ರಹಂಗೆಯ್ಯಲ್ ಎತ್ತಿಕೊಂಡುದಂ ಕಂಡು: **ಆದಿಪು,** ೧೩. ೫೬ ವ)

ವಿಘಟನ – [ನಾ] ಒಡೆಯುವಿಕೆ, ವಿನಾಶ (ಇದಱ ಪೆಸರ್ ದೇವದತ್ತಮೆಂಬುದು ನಿನಗೆ ಅಭ್ಯುದಯಕರಂ ಶಂಖಂ ರಿಪುಹೃದಯ ಕವಾಟಪುಟವಿಘಟನಂ: **ಪಂಪಭಾ,** ೬. ೪)

ವಿಘಟಿತ – [ಗು] ತೊರೆದುಹೋದ (ಇಂದ್ರಾಣೀವದನಚಂದ್ರ ಚಂದ್ರಿಕಾ ವಿಘಟಿತ ನಿಕೃತನಿದ್ರಾಮುದ್ರಿತ ನಯನನೀಲೋತ್ಪಳೆಯಪ್ಪ ಜಗದ್ಗುರುಜನನಿಯುಂ ಬಂದು: **ಆದಿಪು,** ೭. ೧೧೦ ವ)

ವಿಘಟಿಸು – [ಕ್ರಿ] ಸುಳ್ಳಾಗು (ಶರೀರರೂಪಪರಿಣತ ಅವನಿ ಪವನಸಖ ಪವನಂಗಳ್ಗೆ ಭೇದಮಿಲ್ಲ ಅವರ್ಕಂ ಏಕತ್ವಮಾಗಿ 'ಚತ್ವಾರ್ಯೇವ ತತ್ವಾನಿ' ಎಂಬ ನಿನ್ನ ಮಾತು ವಿಘಟಿಸುಗುಂ: **ಆದಿಪು,** ೨. ೧೦ ವ); [ಕ್ರಿ] ಪ್ರತಿಭಟಿಸು (ಅಂತು ಬಂದು ವೈರಿಗಜಾಘಟಾವಿಟನನೊಳ್ ವಿಘಟಿಸಿ ಬಿಲ್ಗಲ್ತು: **ಪಂಪಭಾ,** ೨. ೫೭ ವ); [ಕ್ರಿ] ಒಡೆದುಹೋಗು (ಈ ಸಂಧಿ ಕೌರವರ್ಕಳೊಳ್ ಎನ್ನಿಂ ಘಟಿತ ಜರಾಸಂಧ ಉರಸ್ತಟ ಸಂಧಿವೊಲ್ ಒಂದೆ ಪೊೞ್ತಱೊಳ್ ವಿಘಟಿಸದೇ: **ಪಂಪಭಾ,** ೯. ೨೩)

ವಿಘಟ್ಟಿತ – [ಗು] ಅಪ್ಪಳಿಸಲ್ಪಟ್ಟ (ವಿಳಯಕಾಳವಿಘಟ್ಟಿತ ಅಷ್ಟದಿಗ್ಭಾಗಸಂಧಿ ಬಂಧನಗಗನತಳಮೆ ಧರಾತಳಕ್ಕೆ ಪಱಿದು ಬಿೞ್ದಂತೆ: **ಪಂಪಭಾ,** ೧೩. ೭೧ ವ)

ವಿಚಕ್ಷಣ – [ನಾ] ನಿಪುಣ (ವಾಸವದುರ್ದಂತರೆಂಬರ್ ಅನೇಕ ಕ್ಷುದ್ರವಿದ್ಯಾಗರ್ವದುರ್ವಿದಗ್ಧರುಂ ಅಳೀಕವಿಚಕ್ಷಣರುಂ ಅಪ್ಪುದಱಿಂದಂ: **ಆದಿಪು,** ೩. ೮೭ ವ)

ವಿಚಳತ್ – [ಗು] ಕಳಚಿಕೊಳ್ಳುವ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ)

ವಿಚಾರಿಸು – [ಕ್ರಿ] ಆಲೋಚಿಸು (ಅಱಿಯದೆಯುಂ ವಿಚಾರಿಸದೆಯುಂ ನೃಪ ನೀಂ ನೆಗೞ್ವನ್ನನಲ್ಲಯ್ ಆನಱಿವೆಂ ಅದಂತೆ ಕರ್ಣನ ಎಣೆಗಂ ತೊಣೆಗಂ ನೃಪರಾರುಮಿಲ್ಲ: **ಪಂಪಭಾ,** ೧೨. ೧೦೦)

ವಿಚಿಕಿತ್ಸನವರ್ಜನ – [ನಾ] ಸಂಶಯವನ್ನು ತೊರೆಯುವುದು (ಭೋಗಾಕಾಂಕ್ಷೆಯೊಳ್ ವಿಮುಖತೆಯುಂ ಮುನಿಜನತನುಮಳ ವಿಚಿಕಿತ್ಸನವರ್ಜನಮುಂ ತ್ರಿಮೂಢತಾ ನಿರಸನಮುಂ: **ಆದಿಪು,** ೫. ೫೭)

ವಿಚಿತ್ರ – [ನಾ] ಪೂರ್ವರಂಗದ ಒಂದು ಪ್ರಭೇದ (ಸುರಾಸುರಸಭೆಗಂ ನಾಭಿರಾಜಾದಿ ಮನುಜಸಭೆಗಂ ಮೆಱೆಯಲೆಂದು ಶುದ್ಧಂ ವಿಚಿತ್ರಂ ಎಂಬ ಪೂರ್ವರಂಗಪ್ರಸಂಗದೊಳ್: **ಆದಿಪು,** ೭. ೧೧೫ ವ), ನೋಡಿ, **'ಪೂರ್ವರಂಗ'**; ಸುಂದರವಾದ (ಲಳಿತವಿಚಿತ್ರ ಪತ್ರಫಲಪುಷ್ಪಯುತಾಟವಿ ಸೊರ್ಕಿದಾನೆಯಂ ಬೆಳೆವುದು: **ಪಂಪಭಾ,** ೧. ೫೪); **[ಗು]** ರಮಣಿಯವಾದ, ಬಗೆಬಗೆಯಾದ (ಸಂದಹಿಕಟಕ ಪ್ರಸಾದದೆ ಮನೋಜನುಮಂ ಗೆಲೆವಂದನಾಗಳುಂ ಸಹಜಮನೋಜನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ: **ಪಂಪಭಾ:** ೧. ೪)

ವಿಚಿತ್ರಾಂಗಿ – [ನಾ] ಸುಂದರಿ (ಸರೋಜಾತಾದಿ ನಿಸ್ಸಾರವಸ್ತುಗಳೊಳ್ ಪೋಲಿಸುವಂತುಟೇಮ್ಮರುಳೆನೇ ರೂಪಂ ವಿಚಿತ್ರಾಂಗಿಯಾ: **ಆದಿಪು,** ೬. ೮೫)

ವಿಚ್ಛಾಯ – [ನಾ] ಕಾಂತಿಹೀನ (ಚತುರಂಗ ಚಕ್ರಪಾಂಸುಪಟಲದಿಂದಂ ದಿಙ್ಮುಖಂಗಳುಂ ವಿರೋಧಿನರಪಾಳಯ ಪ್ರಿಯಸಖೀ ಮುಖಂಗಳುಂ ವಿಚ್ಛಾಯಂಗಳಾಗೆಯುಂ: **ಆದಿಪು,** ೧೩. ೭೭ ವ)

ವಿಚ್ಛಾಯಂಗಳಾಗು – **[ಕ್ರಿ]** ಕಾಂತಿಹೀನವಾದವುಗಳಾಗು (ವಿರೋಧಿನರಪಾಳ ಪ್ರಿಯಸಖೀ ಮುಖಂಗಳುಂ ವಿಚ್ಚಾಯಂಗಳಾಗೆಯುಂ: **ಆದಿಪು,** ೧೩. ೭೭ ವ)

ವಿಚ್ಚಾಯತೆ – [ನಾ] ಕಾಂತಿಹೀನತೆ (ಜೀವಂ ತನುವಿಂ ತಳರಲೊಡಂ ವಿಚ್ಛಾಯತೆಗೊಳಗಾದುವು ತೊಳಗುವವರ ಸೌಂದರತನುಗಳ್: **ಆದಿಪು,** ೫. ೨೭)

ವಿಚ್ಛಿತ್ತಿ – [ನಾ] ಅಲಂಕರಿಸಿಕೊಳ್ಳುವಿಕೆ (ಜಳಕೇಳಿಯೊಳ್ ಅಧಿಪನನೆರ್ದೆಗೊಳಿಸಿದುವು ಅಂತಃಪುರೀಜನಂಗಳ ಲೀಲಾಕಿಳಕಿಂಚಿತ ಲಲಿತವಿಹೃದ್ವಿಳಾಸವಿಚ್ಛಿತ್ತಿವಿಭ್ರಮಾದಿ ಗುಣಂಗಳ್: **ಆದಿಪು,** ೧೧. ೧೪೨)

ವಿಚ್ಛಿದುರ – **[ಗು]** ಒಡೆದುಹೊದ (ಅಂತು ವಿದುರಂ ವಿಚ್ಛಿದುರ ಮನನಾಗಿ ಬಿಲ್ಲಂ ಉಡಿವುದುಂ: **ಪಂಪಭಾ,** ೯. ೫೯ ವ)

ವಿಚ್ಛಿನ್ನ – [ನಾ] ಅಗಲುವಿಕೆ (ನಿನಗಂ ಎನಗಂ ಏತಱೊಳಂ ವಿಕಲ್ಪಮುಂ ವಿಚ್ಛಿನ್ನಮುಂ ಇಲ್ಲೆಂದು ನುಡಿಯುತ್ತಿರ್ಪನ್ನೆಗಂ: **ಪಂಪಭಾ,** ೪. ೪೫ ವ); **[ಗು]** ಕತ್ತರಿಸಿದ, ನಿಂತುಹೋದ (ವಿಚ್ಛಿನ್ನವೀರರಸನುಂ ಉತ್ಪನ್ನಶೋಕರಸನುಂ ಆಗಿ ನಿಜವರೂಥಮಂ ಧರ್ಮಪುತ್ರನ ಸಮೀಪಕ್ಕುಯ್ದು: **ಪಂಪಭಾ,** ೧೨. ೨೮ ವ)

ವಿಚ್ಛೇದ – **[ಗು]** ಕತ್ತರಿಸುವ, ನಾಶಮಾಡುವ (ಜಗತ್ಸ್ವಾಮಿ ಸಂದ ಆದಿಬ್ರಹ್ಮಂ ಅಗಾಧಬೋಧನಿಳಯಂ ದುರ್ವಾರಸಂಸಾರ ವಿಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ: **ಆದಿಪು,** ೧. ೧)

ವಿಚ್ಛೇದನಕರ – [ನಾ] ಕತ್ತರಿಸುವಂಥದ್ದು (ಬಾದೇನ್ ಆ ಮದೀಯ ಕರ್ಮಫಳೋದಿತ ಸಂತಾಪರೂಪ ಪಾಪಕಳಾಪ ಚ್ಛೇದನಕರಮಾಯ್ತು ಭವತ್ ಪಾದಪ್ರಕ್ಷಾಳನ ಉದಕದಿಂ ಮುನಿನಾಥಾ: **ಪಂಪಭಾ,** ೬. ೧೩)

ವಿಜಯ – [ನಾ] ಅರ್ಜುನ (ವಿಜಯಾರಂಭ ಪುರಸ್ಸರ ವಿಜಯ ಗಜಂಗಳನೆ ಪಿಡಿದು ಘೂರ್ಜರ ರಾಜಧ್ವಜಿನಿಯನಿಱಿದೋಡಿಸಿ ಭುಜವಿಜಯದೆ ವಿಜಯಮನಿಳಿಸಿದಂ ನರಸಿಂಹಂ: **ಪಂಪಭಾ,** ೧. ೩೬)

ವಿಜಯಚ್ಛಂದ – [ನಾ] ಐನೂರನಾಲ್ಕು ಎಳೆಗಳ ರತ್ನಹಾರ (ಸಾಸಿರದೆಂಟು ತೋರಮುತ್ತಿನ ಸರದಿಂದ್ರಚ್ಛಂದಂ ಮೊದಲಾಗೆ ವಿಜಯಚ್ಛಂದಹಾರ .. .. ಎಂಬ ಪನ್ನೊಂದು ನಾನಾರತ್ನದ ಸುವರ್ಣಪದಕವಿರಚನಾದಿ ಭೆದದಿಂ: **ಆದಿಪು,** ೮. ೫೪ ವ)

ವಿಜಯಪರ್ವತ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಜೀವರತ್ನಗಳಲ್ಲಿ ಒಂದಾದ ಗಜರತ್ನದ ಹೆಸರು (ಕಾಮರೂಪಿಯುಂ ಕಾಮಚಾರಿಯುಮಪ್ಪ ವಿಜಯಪರ್ವತಂ ಎಂಬ ಯಾಗಹಸ್ತಿರತ್ನಮುಂ: **ಆದಿಪು,** ೧೧. ೩ ವ)

ವಿಜಯಪ್ರಶಸ್ತಿ – [ನಾ] ಗೆಲವಿನ ಪ್ರಶಸ್ತಿ ಪತ್ರಿಕೆ (ಆ ವೃಷಭಾದ್ರಿಯ ಮೇಖಳಾಭಿತ್ತಿಯೊಳ್ ಆತ್ಮೀಯ ವಿಶ್ವವಿಶ್ವಂಭರಾ ವಿಜಯಪ್ರಶಸ್ತಿಯಂ ಅಚ್ಚೆಯೊಳ್ ಬರೆಯಿಸುವೆವೆಂದು ಪೋಗಿ: **ಆದಿಪು,** ೧೩. ೭೦ ವ)

ವಿಜಯಪ್ರಸ್ಥಾನ – [ನಾ] ದಿಗ್ವಿಜಯಯಾತ್ರೆ (ವ್ಯೋಮಭಾಗಮಂ ಎಯ್ದಿರ್ದುದು ಚಕ್ರವರ್ತಿ ವಿಜಯಪ್ರಸ್ಥಾನ ಭೇರೀರವಂ; **ಆದಿಪು,** ೧೧. ೧೦)

ವಿಜಯವೈಜಯಂತಿ – [ನಾ] ವಿಜಯಪತಾಕೆ (ಸಮುಲ್ಲಸದಶೋಕ ಪಲ್ಲವಂಗಳನನೇಕ ವಿಜಯವೈಜಯಂತಿಗಳೆಂದೇ ಮಾಡಿಸಿಕೊಂಡೆತ್ತಿಯುಂ: **ಆದಿಪು,** ೮. ೪೧ ವ)

ವಿಜಯಾರ್ಧ – [ನಾ] [ಜೈನ] ಪೂರ್ವಪಶ್ಚಿಮವಾಗಿ ಹಬ್ಬಿರುವ ಒಂದು ಪರ್ವತ (ಇದು ವಿಜಯಾರ್ಧಂ ಎನ್ನ ಪೆಸರುಂ ವಿಜಯಾರ್ಧಂ ಅಲಂಘ್ಯಮೆಂದುಮಿಂತಿದು ಪೆಱರ್ಗಾನುಮಿನ್ನೆಗಂ ಅಲಂಘ್ಯನೆಂ: **ಆದಿಪು,** ೧೩. ೧೫)

ವಿಜುಗೀಷುತೆ – [ನಾ] ಗೆಲ್ಲುವ ಬಯಕೆ (ವಿಜುಗೀಷತೆಯಿಂ ದೇವನೆನಲ್ ದೇವ ನೀನೆ ದೇವನೆ ಅಲ್ತೇ: **ಆದಿಪು,** ೧೩. ೨೬)

ವಿಜಿಗೀಷುತ್ವ – [ನಾ] ಗೆಲ್ಲುವ ಬಯಕೆ (ವಿಜಿಗೀಷುತ್ವದೊಳ್ ಒಂದಿ ಗೋವುಳಿಗನಪ್ಪಂ ಮರ್ತ್ಯನಾಳಾಗಿ ವಾರಿಜನಾಭಂ ಹರಿಯೆಂಬ ದೊಡ್ಡವೆಸರಂ ಪೊತ್ತಿರ್ದ ನೀಂ ಮಂತ್ರಿಯಾಗೆ **ಪಂಪಭಾ,** ೯. ೪೭)

ವಿಜಿಗೀಷುವೃತ್ತ – [ನಾ] ಜಯಿಸಲಿಚ್ಛಿಸುವವನ ನಡವಳಿಕೆ (ಎಂದು ವಿಜಿಗೀಷುವೃತ್ತೋದ್ಯುಕ್ತನಾಗಲ್ ಬಗೆದು: **ಪಂಪಭಾ,** ೪. ೧೧ ವ)

ವಿಜೃಂಭಣ – [ನಾ] ಆಕಳಿಕೆ (ಆಯುಷ್ಯಾವಸಾನದೊಳ್ ಓಷಧಿಗಳಂತೆ ಫಳಾಪಾಕಾಂತದೊಳ್ ಕ್ಷುತವಿಜೃಂಭಣ ವ್ಯಾಜದಿಂ ಲೋಕಾಂತರಿತರಾಗಿ: **ಆದಿಪು,** ೫. ೬೯ ವ)

ವಿಜೃಂಭಮಾಣ – **[ಗು]** ಮೆರೆಯುವ, ಶೋಭಿಸುವ (ಅತ್ಯಂತನೇಕಮಣಿ ಮಯೂಖ ವಿಜೃಂಭಮಾಣ ಆಖಂಡಳವಿಳಂಬಿತ ಆಭೀಳಕೋದಂಡವಿಳಾಸ ವಿಭ್ರಮಸಿಂಹಾಸನಾಸೀನನುಂ: **ಪಂಪಭಾ,** ೯. ೨೮ ವ)

ವಿಜ್ಞಾನ – [ನಾ] ಜ್ಞಾನ, ತಿಳಿವಳಿಕೆ (ಪರಮಾರ್ಹಂತ್ಯಮಂ ಎಯ್ದಲಿರ್ದುದಱಿಂ ಮೇಲುಂಟೆ ಸತ್ತ್ವಂ ಚರಾಚರಮಂ ನೆಟ್ಟನೆ ಪರ್ವಲಿರ್ದುದಱಿಂ ಮೇಲುಂಟೆ ವಿಜ್ಞಾನಂ: **ಆದಿಪು,** ೯. ೬೨)

ವಿಜ್ಞಾನವಿದ – [ನಾ] ವಿದ್ಯಾವಂತ (ಪೆಱಗೇಱುದಿವಸದೊಳ್ ತೆಮಳ್ದುಂ ಪೆಱವೇಱುದಿವಸಕ್ಕೆ ತಳರ್ದಡೆನಡೆದುಂ .. ..

ಪೆಱವೇಱುದಿವಸದೊಳ್ ವಿಜ್ಞಾನವಿದಂಗಳಾಗಿಯುಂ : **ಆದಿಪು**, ೫. ೪೧ ವ)

ವಿಟ – [ನಾ] ಕಾಮುಕ (ವಿಟಜನಕ್ಕೆ ತೊಡರ್ವ ಚಾರಿಯೆನಿಪ ಸೂಳೆಗೇರಿಯಿಂ ವಿದಗ್ಧಹೃದಯಹಾರಿಯಿಂ: **ಪಂಪಭಾ,** ೧. ೫೮); **[ನಾ]** ಕಾವ್ಯನಾಯಕನಿಗೆ ಆಪ್ತನಾದ ಒಬ್ಬ ರಸಿಕ (ಮೇಳದ ನಾಗರಿಕ ವಿಟ ವಿದೂಷಕ ಪೀಠಮರ್ದಕರ್ಕಳ್ ವೆರಸು ಕಾಮದೇವನೋಲಗಕ್ಕೆ ಬರ್ಪಂತೆ ಸೂಳೆಗೇರಿಯೊಳಗನೆ ಬರ್ಪುದುಂ: **ಪಂಪಭಾ,** ೪. ೭೯ ವ)

ವಿಟಂಕ – [ನಾ] ಪರ್ವತದ ಶಿಖರಪ್ರದೇಶ (ಅಂತು ಬಂದು ವೃಷಭಾಚಲವಿಟಂಕದೊಳ್ ಅಪ್ರತಿಹತ ದಿಗ್ವಿಜಯ ಪ್ರಶಸ್ತಿಯಂ ಟಂಕೋತ್ಕೀರ್ಣಂ ಮಾಡಿ: **ಆದಿಪು**. ೧೪. ೫೯ ವ) [ಎಲ್. ಬಸವರಾಜು ಅವರ ಆವೃತ್ತಿ]

ವಿಟತತ್ತ್ವ – [ನಾ] ವಿಟವಿದ್ಯೆ (ಕಱಿಗೊರಲಾತಂ ಆತ್ಮವಿಟತತ್ತ್ವಮಂ ಉಂಟೊಡೆತಾಗಿ ಮಾಡಿ ಬಾಂದೊಱಿಯನೆ ಪೊತ್ತು ಗೌರಿಗೆ ಕವಲ್ದೊಱಿಗೆಯ್ದಿದನೀ ಪ್ರದೇಶದೊಳ್: **ಪಂಪಭಾ,** ೭. ೭೫)

ವಿಟಪ – [ನಾ] ಮರ (ಚಾರುವಿಟಪಾವಳೀವೃತ ಕೋರಕಿತ ಅಂಕುರಿತ ಪಲ್ಲವಿತ ಮುಕುಳಿತ ವಿಸ್ತಾರಿತರರಮ್ಯಾಶೋಕಂ: **ಆದಿಪು,** ೧೦. ೪೧)

ವಿಟಪಿ – [ನಾ] ಮರ (ನಿನ್ನಂ ಘಾತಿಸಿ ಬಿಡದಲೆದು ಪಿಡಿದು ಪಿಂಡಿದ ದುಃಖವ್ರಾತಮಿದು ಮಗಳೆ ನಿನ್ನ ಪುರಾತನ ದುಷ್ಕರ್ಮ ವಿಟಪಿ ಕಟುಕಫಲಂಗಳ್: **ಆದಿಪು**, ೩. ೩೮)

ವಿಟಪಿತಟಚ್ಛಾಯ – [ನಾ] ಮರದ ನೆರಳು (ತತ್ತಟೀನಂದನ ವಿಟಪಿತಟಚ್ಛಾಯವಿಶ್ರಾಂತಸೈನ್ಯಂ: **ಆದಿಪು,** ೧೧. ೧೫೫)

ವಿಟಪಿಪ್ರರೋಹ – [ನಾ] ಮರಕ್ಕೆ ಸುತ್ತಿದ ಬಳ್ಳಿ (ಮಹಾಹಂಕಾರ ಕಾಳಕೂಟ ವಿಟಪಿಪ್ರರೋಹಶಂಕಾವಹ ನಾಭಿಕೂಪಾವಲಂಬಿ ಕೂರ್ಚಕಳಾಪಂ: **ಆದಿಪು,** ೧೩. ೪೫ ವ)

ವಿಟವೃತ್ತ – [ನಾ] ಕಾಮುಕತನ (ಕಲ್ವುದಲ್ತೆ ವಿಟರಿಂ ವಿಟವೃತ್ತಮಂ ಎಮ್ಮೊಳಲ್ಲಿಗಾಮೊವಜರೆಮೆಂಬವೋಲ್ ಮೊರೆವ ಮೆಲ್ಪೆಸೆಯುತ್ತಿರೆ: **ಆದಿಪು,** ೧೧. ೧೨೭)

ವಿಡಂಬ – [ನಾ] ತೋರಿಕೆ, ಹುಸಿ (ಸಿತದೂರ್ವಾಂಕುರ ಮಾತುಲುಂಗ ನಳಿನೀ ಭೃಂಗಾರ ಗೋರೋಚನಾ ಅಕ್ಷತ ದಧ್ಯಾಧಿ ವಿಡಂಬ ಮಂಗಳದೊಳೇಂ: **ಆದಿಪು,** ೧೬. ೧೦)

ವಿತತ – [ಗು] ಶ್ರೇಷ್ಠವಾದ (ವ್ರತಸಂಸ್ಕಾರದಿನಾದರ್ ವಿತತಗುಣರ್ ಬ್ರಾಹ್ಮಣರ್ ಕ್ರಿಯಾಸಂತತಿಸಂಯುತರುಚಿ ಸತ್ಕ್ರಿಯಾವಿರಹಿತಂ ಆತಂ ನಾಮಧಾರಕಂ ದ್ವಿಜನಲ್ಲಂ: **ಆದಿಪು,** ೧೫. ೧೫)

ವಿತಥಾಭಿಧಾಯಿ – [ನಾ] ಯಥಾರ್ಥವಾದಿಗಳು (ಮಹಾಮತಿ ಸಂಭಿನ್ನಮತಿ ಶತಮತಿಗಳ್ ಲೋಕಾಯತಿಕ ಯೋಗಾಚಾರ ಮಾಧ್ಯಮಿಕಮತ ವಿತಥಾಭಿಧಾಯಿಗಳ್ ಜೀವಾಭಾವಮನೆ ಪಿಡಿಯಚ್ಚುವಿಡಿದು: **ಆದಿಪು,** ೨. ೭ ವ)

ವಿತರಣ – [ನಾ] ದಾನ (ಸಮಸ್ತಭವ್ಯಜನನಿರ್ವರ್ತ್ಯಮಾನ ಅಷ್ಟಾಹ್ನಿಕಮುಂ ಚೈತ್ಯಾಲಯನಿರ್ಮಾಣನಿರ್ಮಾಪಣ ಶಾಸನಾರೋಪಿತ ಗ್ರಾಮಕ್ಷೇತ್ರವಿತರಣಮುಂ: : **ಆದಿಪು,** ೧೫. ೧೩ ವ)

ವಿತರ್ಕ – [ನಾ] ಸಂಶಯ, ತರ್ಕರಾಹಿತ್ಯ (ತುಂಬಿಯ ಗಾವರಂಗಳಂ ಗೆಡೆಗೊಳೆ ಚಂದ್ರಿಕಾಪ್ರಭೆ ಮೊದಲ್ಗಿಡೆ ನಾಡೆ ವಿತರ್ಕದಿಂ ಬೆರಲ್ಮಿಡಿದು ಗುಣಾರ್ಣವಂ ನೆಱೆಯೆ ನಿಟ್ಟಿಸಿದಂ ಬೆಳಗಪ್ಪ ಜಾವಮಂ **ಪಂಪಭಾ,** ೪. ೧೧೦)

ವಿತಸ್ತಿಮಾತ್ರ – [ಗು] ಗೇಣುದ್ದ ಮಾತ್ರವಿರುವ (ಮಲ್ಲಿಕಾಮುಕುಳಾಕಾರ ವಿತಸ್ತಿಮಾತ್ರ ಅಸಿಧೇನುಕೋಶಮುಂ: **ಆದಿಪು,** ೧೩. ೪೫ ವ)

ವಿತಾನ – [ನಾ] ಮೇಲ್ಕಟ್ಟು (ಪನ್ನಗಪತಿಯ ಫಣಾರತ್ನದೀಪಂ ವಿತಾನಾವಳಿಯೊಳ್ ದಿವ್ಯಂ ವಿತಾನಂ ತುಱುಗಿದವು: **ಆದಿಪು,** ೧೬. ೨)

ವಿತಾನಕ – [ನಾ] ಮೇಲ್ಕಟ್ಟು (ಅದು ನಿರ್ಝರೋಚ್ಚಳಿತ ಶೀಕರಶೀತಳವಾತ ನರ್ತಿತೋನ್ಮದ ಶಬರೀಜನಾಳಕಂ ಅದು ಆಯತ ವೇತ್ರಲತಾವಿತಾನಕಂ: **ಪಂಪಭಾ,** ೩. ೧೦)

ವಿತಾನಪಙ್ಕ್ತಿ – [ನಾ] ಮೇಲ್ಕಟ್ಟುಗಳ ಸಾಲು (ತಳಿರ್ಗಳಸಂ ಮುಕುಂದ ರವಂ ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಙ್ಕ್ತಿ ಪಸುರ್ವಂದಲೊಳ್ ಒಲ್ದು ಎಡೆಯಾಡುವ ಎಯ್ದೆಯರ್: **ಪಂಪಭಾ,** ೧. ೧೦೭)

ವಿತೃಷ್ಣ – [ಗು] ಆಶಾರಹಿತ (ಅಂತು ಪರಿತ್ಯಕ್ತ ಸಕಳಸಾಮ್ರಾಜ್ಯನುಂ ದೃಷ್ಟಾನುಭೂತಶ್ರಾವಕವಿಷಯತೃಷ್ಣನುಮಾಗಿ: **ಆದಿಪು,** ೩. ೭೮ ವ)

ವಿತ್ರಸ್ತ – [ಗು] ಹೆದರಿಸಿದ, ಗೆದ್ದ (ವಿತ್ರಸ್ತಕರ್ಮರಿಪುವ ಜಗತ್ತ್ರಯದೀಪಕನ ಕಾಣ್ಕೆಗೊಳಗಾದುದು ಲೋಕತ್ರಯಂ ಅದನುಕ್ರಮದೊಳ್ ವೇತ್ರಾಸನ ಝಲ್ಲರೀ ಮೃದಂಗಸಮಾನಂ: **ಆದಿಪು,** ೧. ೪೭)

ವಿತ್ರಾಸನ – [ಗು] ಬೆದರಿಸುವ (ಘನಮಾರ್ಗವ್ಯಾಪಿ ಚೈತ್ರಧ್ವಜ ವಿಜಯಗಜಾರೂಢಂ ಉಗ್ರಾರಿ ವಿತ್ರಾಸನ ಸಂಗ್ರಾಮಾನಕೌಘಧ್ವನಿಬಧಿರಿತದಿಕ್ಚಕ್ರಂ: **ಆದಿಪು,** ೧೪. ೯೮)

ವಿದಗ್ಧ – [ನಾ] ಪ್ರೌಢ (ಪೆಱತೊಂದಪೂರ್ವರಸಮೇಂ ಕೈಸಾರ್ಗುಮೇ ಮತ್ತಂ ಆ ಉಣಿಸು ಆ ತಂಬುಲಂ ಆ ವಿದಗ್ಧಗಣಿಕಾ ಸಂಭೋಗಂ: **ಆದಿಪು,** ೩. ೬೯); **[ನಾ]** ಚದುರ (ನವವಧುವ ಶಂಕೆಯಂ ಕಳೆವ ವಿದಗ್ಧವಿಟಂಬೊಲಲೆವ ತೆರೆಗಳ್ ಮೆಲ್ಪಂ ಬವರಿಸಿ ಸೋಂಕುತ್ತುಂ: **ಆದಿಪು,** ೧೧. ೧೪೫); **[ಗು]** [ಕಾಮದಿಂದ] ಸುಡಲ್ಪಟ್ಟ (ವಿಟಜನಕ್ಕೆ ತೊಡರ್ವ ಚಾರಿಯೆನಿಪ ಸೂಳೆಗೇರಿಯಿಂ ವಿದಗ್ಧಹೃದಯಹಾರಿಯಿಂ: **ಪಂಪಭಾ,** ೧. ೫೮)

ವಿದಳಿತ – [ಗು] ಸೀಳಿದ (ಮಾದ್ಯತ್ ರದನೀಂದ್ರಸ್ಥುಲ ದಂತಾವಳಿ ವಿದಳಿತ ಗೋಶೀರ್ಷ ಸಾರದ್ರವಾಮೋದದಿಂ: **ಆದಿಪು,** ೧೩. ೬೮); **[ಗು]** ಅರಳಿದ (ವಿದಳಿತ ನುತಶತಪತ್ರದ ಪುದುವಿನೊಳ್ ಇರದೆ ಅಗಲೆವೋದ ಹಂಸನನಱಸಲ್ ಪದದೆಳಸುವ ಪೆಣ್ಣಂಚೆಯ ಪದಕೊರಲಿಂಚರದ ಸರಮೆ ಸವಿ ಕಿವಿಗಿದಱೊಳ್: **ಪಂಪಭಾ,** ೫. ೫೬)

ವಿದಾರಿತ – [ಗು] ಸೀಳಲ್ಪಟ್ಟ (ತದೀಯ ಕೌಕ್ಷೇಯಕ ಧಾರಾ ವಿದಾರಿತಶರೀರನುಂ ಆಗಿ ಬಿೞ್ದಿರ್ದ ಶರಾಚಾರ್ಯರಂ ಕಂಡು: **ಪಂಪಭಾ,** ೧೩. ೫೫ ವ)

ವಿದಾರಿಸು – [ಕ್ರಿ] ಸೀಳು, ಕತ್ತರಿಸು (ಒಂದು ದಿವಸ ಆ ಮೀನಂ ಒರ್ವ ಜಾಲಗಾಱಂ ಜಾಲದೊಳ್ ಪಿಡಿದು ಅಲ್ಲಿಗೆ ಅರಸಪ್ಪ ದಾಶನಲ್ಲಿಗೆ ಉಯ್ದು ತೋಱಿದೊಡೆ ಅದಂ ವಿದಾರಿಸಿ ನೋೞ್ಪನ್ನೆಗಂ: **ಪಂಪಭಾ,** ೧. ೬೮ ವ)

ವಿದಿತ – [ಕ್ರಿ] ಸುಪ್ರಸಿದ್ಧ (ವಿದಿತಂ ಪ್ರಾತೀತಿಕಂ ಕೋಮಳಂ ಅತಿಸುಭಗಂ ಸುಂದರಂ ಸೂಕ್ತಿಗರ್ಭಂ ಮೃದುಸಂದರ್ಭಂ: **ಆದಿಪು,** ೧. ೨೬)

ವಿದು – [ನಾ] ಆನೆಯ ಕುಂಭಸ್ಥಳದ ಮಧ್ಯಭಾಗ (ನಿರ್ರ್ಯಾಣೋನ್ನತ ಅವಗ್ರಾಹ ವಿಭಕ್ತ ವಿದುವಿಧಾನಶರೀರನುಂ .. .. ವಿಜಯಪರ್ವತಗಜೇಂದ್ರಂ ಬಂದು: **ಆದಿಪು,** ೧೨. ೫೬ ವ)

ವಿದೂರ – [ನಾ] ದೂರವಾದವನು (ಶಸ್ತ್ರ ಪಾಷಾಣ ಆತಪ ವರ್ಷ ವಿಷ ಅಗ್ನಿ ಕಾಷ್ಠ ಕಂಟಕ ತ್ರಿದೋಷಸಂಭವಾಮಯ ಜರಾದಿ ಬಾಧಾವಿದೂರನುಂ: **ಆದಿಪು,** ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]

ವಿದೂಷಕ – [ನಾ] ಹಾಸ್ಯಗಾರ (ಮೇಳದ ನಾಗರಿಕ ವಿಟ ವಿದೂಷಕ ಪೀಠಮರ್ದಕರ್ಕಳ್ ವೆರಸು ಕಾಮದೇವನೋಲಗಕ್ಕೆ ಬರ್ಪಂತೆ ಸೂಳೆಗೇರಿಯೊಳಗನೆ ಬರ್ಪುದುಂ: **ಪಂಪಭಾ,** ೪. ೭೯ ವ)

ವಿದೇಹ – [ನಾ] ಮಾಡಿದವನು (ಉತ್ತಮತಪಂಗಳಿಂದೆ ಅತ್ಯುತ್ತಮದೇಹರ್ ವಿದೇಹರಪ್ಪುದಱಿಂ ಮೆಯ್ವೆತ್ತನ್ವರ್ಥತೆಯಂ ತಾಳಿದಿತ್ತು ವಿದೇಹಂ ವಿದೇಹಮೆಂಬೀ ಪೆಸರಂ: **ಆದಿಪು,** ೧. ೫೩); [ನಾ] [ಜೈನ] ಜಂಬೂದ್ವೀಪದ ಏಳು ಜನಪದಗಳಲ್ಲಿ, ಈ ಕ್ಷೇತ್ರದ ದಕ್ಷಿಣಕ್ಕೆ ಹಿಮವತ್ಪರ್ವತವೂ ಉತ್ತರಕ್ಕೆ ಮಹಾಹಿಮವತ್ಪರ್ವತವೂ ಪೂರ್ವಪಶ್ಚಿಮ ಸಮುದ್ರಗಳೂ ಇರುತ್ತವೆ; ಇದು ಜಘನ್ಯಭೋಗಭೂಮಿ ಒಂದು (ಆ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿ ಪರಿವೃತಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತೈರಾವತಗಳೆಂಬೇೞು ಜನಪದಂಗಳಿಂದಂ: **ಆದಿಪು,** ೧. ೪೮ ವ)

ವಿದ್ದೆ – [ನಾ] ವಿದ್ಯೆ (ಪಾರ್ವನೆಂದೆನ್ನೊಳ್ ಪುಸಿದು ವಿದ್ದೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಮವಸಾನಕಾಲದೊಳ್ ಬೆಸಕೆಯ್ಯದಿರ್ಕೆ: **ಪಂಪಭಾ,** ೧. ೧೦೫ ವ)

ವಿದ್ಧ – [ನಾ] ಆಕೃತಿ (ಇದು ದಲ್ ನೋಡ ಮನುಷ್ಯವಿದ್ಧಂ ಅಣಂ ಅಲ್ತು ಈ ಗಂಡರೂಪಾವುದು ಇಂತಿದಱೊಳ್ ತಳ್ತಸೆದಿರ್ದ ಪೆಣ್ ಸುರವಧೂಬಿಂಬಂ: **ಆದಿಪು,** ೩. ೮೭); ಏಟು (ಸಂಚಳತ್ ತಾರಹಾರಂ ತಳದೊತ್ತುವೊಂದು ನೆವದಿಂದ ಅನಂಗಾಸ್ತ್ರವಿದ್ಧಮಂ ಪಡೆದು: **ಆದಿಪು,** ೧೧. ೨೦)

ವಿದ್ಯಾಧರ – [ನಾ] ದೇವತೆ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟಿ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩)

ವಿದ್ಯಾಧರಕರಣ – [ನಾ] ಗದಾಯುದ್ಧದಲ್ಲಿ ಮೇಲಕ್ಕೆ ನೆಗೆಯುವ ಒಂದು ವರಸೆ (ದುರ್ಯೋಧನಂ ವಿದ್ಯಾಧರಕರಣದೊಳ್ ಅತಿಪರಿಚಿತನಪ್ಪುದಱಿಂದೆ ಆಕಾಶಕ್ಕೆ ನೆಗೆದು: **ಪಂಪಭಾ,** ೧೩. ೯೪ ವ)

ವಿದ್ಯಾಧರಿ – [ನಾ] ವಿದ್ಯಾಧರಸ್ತ್ರೀ (ನಾರಾಯಣನ ತಂಗೆ ಸುಭದ್ರೆಯೆಂಬ ಕನ್ನೆ ಕೆಮ್ಮುಗಿಲ ತೆರೆಯ ಪೊರೆಯೊಳ್ ನೆಗೆದು ಪೋಪಮಡುವ ವಿದ್ಯಾಧರಿಯಂತೆ: **ಪಂಪಭಾ,** ೪. ೩೯ ವ)

ವಿದ್ಯಾನಿಳಯ – [ನಾ] ವಿದ್ಯೆಯ ಆಗರ (ವಿದ್ಯಾನಿಳಯನಱಿದದಂ ದೇಹಾನಿತ್ಯತೆ ಮನದೊಳ್ ಬೇರೂಱಿದುದು: **ಆದಿಪು,** ೯. ೪೪)

ವಿದ್ಯುಚ್ಚಪಳ – [ನಾ] [ವಿದ್ಯುತ್+ಚಪಳ] ಮಿಂಚಿನಂತೆ ಚಪಲನಾದ[ವನು] (ಮನಕ್ಕೆ ಬಿಚ್ಚತಿಕೆವಂದಿರೆ ನಾಟಕಶಾಲೆವೊಕ್ಕು ವಿದ್ಯುಚ್ಚಪಳಂ ಮನೋಜಪರಿತಾಪದಿಂ ಓಪಳೆ ಗೆತ್ತು: **ಪಂಪಭಾ,** ೮. ೭೫)

ವಿದ್ಯುತ್ – [ನಾ] ಮಿಂಚು (ಜಳಧರಸಮಯನಿಶಾಸಂಚಲಿತ ವಿದ್ಯುತ್ ಪಿಂಗಳಾಕ್ಷಪಾತಂಗಳಿಂ ದೆಸೆಗಳಂ ನುಂಗುವಂತೆ ಮುಳಿದು ನೋಡಿ: **ಪಂಪಭಾ,** ೧೩. ೭೫ ವ)

ವಿದ್ಯುತ್ಕುಮಾರಿ – [ನಾ] [ಜೈನ] ಜಿನಜನನಿಗೆ ಮಣಿದರ್ಪಣ ಹಿಡಿಯಲು ನಿಯೋಜಿತರಾದ ದೇವಿ (ಪರ್ವತದ ಪೂರ್ವದಿಗ್ಭಾಗದೊಳ್ ನೆಲಸಿದ ವಿಮಳ ನಿತ್ಯಾವಲೋಕ ಸ್ವಯಂಪ್ರಭ ನಿತ್ಯೋದ್ಯೋತಂಗಳೆಂಬ ನಾಲ್ಕುಂ ಕೂಟಂಗಳರಸಿಯರಪ್ಪ ಚಿತ್ರೆ ಕನಕಚಿತ್ರೆ ತ್ರಿಶಿರೆ ಸೂತ್ರಾಮಣಿಯೆಂಬ ನಾಲ್ವರು ವಿದ್ಯುತ್ಕುಮಾರಿಯರಂ: **ಆದಿಪು,** ೭. ೩ ವ)

ವಿದ್ಯುತ್ಕುಮಾರೀ ಪುರಂಧ್ರಿ – [ನಾ] [ಜೈನ] ಜಿನಜನನಿಯ ಗರ್ಭಶೋಧನ ಸಂದರ್ಭದಲ್ಲಿ ವನಿತಾಗೂಢ ವ್ಯಾಪಾರಕ್ಕೆಂದು ನಿಯೋಜಿತರಾದ ನಾಲ್ವರು ದೇವತೆಯರು (ರತ್ನಕೂಟ ರತ್ನಪ್ರಭ ಸರ್ವರತ್ನ ರತ್ನೋಚ್ಚಯಂಗಳೆಂಬ ಕೃತಕದ್ವಿಕೃತ ವಿಕಟಕೂಟಂಗಳೊಳ್ ಕೊಂಡಾಟದಿಂದಿರ್ಪ ವಿಜಯೆ ವೈಜಯಂತೆ ಜಯಂತೆ ಅಪರಾಜಿತೆಯೆಂಬ ವಿದ್ಯುತ್ಕುಮಾರೀ ಪುರಂಧ್ರಿಯರಂ: **ಆದಿಪು,** ೭. ೩ ವ)

ವಿದ್ಯುದ್ದಾಮ – [ನಾ] [ವಿದ್ಯುತ್+ದಾಮ] ಮಿಂಚಿನ ಮನೆ (ಪಳಿಕಿನ ಕಂಭಂಗಳ ಪೊಳೆವ ಪೊಳಪು ನವವಿದ್ಯುದ್ದಾಮದ ಪೊಳೆವ ಪೊಳೆಪು: **ಆದಿಪು,** ೪. ೩೦ ರಗಳೆ)

ವಿದ್ಯುದ್ವಳಯ – [ನಾ] ಮಿಂಚಿನ ವರ್ತುಲ (ರೋದೋಂತಂ ಕೂಡೆ ರತ್ನೋಜ್ಜ್ವಳ ಗಿರಿಕುಳದಿಂ ತೂಂತನಿಟ್ಟಂತೆ ನೀಲಾಂಭೋದಂಗಳ್ ಕೂಡೆ ವಿದ್ಯುದ್ವಳಯಮಂ ಒಳಕೊಂಡಂತೆ ಚೆಲ್ವಾಯ್ತು ಚಕ್ರಿದ್ವಿಪಘಟೆ: **ಆದಿಪು,** ೧೪. ೯೭)

ವಿದ್ಯುದ್ವಿಳಸಿತ – [ಗು] ಮಿಂಚಿನಿಂದ ಪ್ರಕಾಶಮಾನವಾದ (ತಮ್ಮಯ ಬೆಳಗಗ್ಗಳಿಸಿ ವಿದ್ಯುದ್ವಿಳಸಿತಮೆನಿಸಿದುವು ನರನ ದಿವ್ಯಾಸ್ತ್ರಂಗಳ್: **ಪಂಪಭಾ,** ೧೦. ೪೭)

ವಿದ್ಯುನ್ನಟಿ – [ನಾ] [ವಿದ್ಯುತ್+ನಟಿ] ಮಿಂಚೆಂಬ ನರ್ತಕಿ (ವಿಯದ್ರಂಗದೊಳಂದದೇಂ ನಲಿದುದೋ ವಿದ್ಯುನ್ನಟೀನರ್ತನಂ: **ಆದಿಪು,** ೬ ೭೨)

ವಿದ್ಯುಲ್ಲತೆ – [ನಾ] [ವಿದ್ಯುತ್+ಲತೆ] ಮಿಂಚಿನ ಬಳ್ಳಿ (ಜವನಿಕೆಯ ಮಱೆಯೊಳ್ ಪೋಲ್ತಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯಂ: **ಆದಿಪು,** ೯. ೨೦)

ವಿದ್ಯೆಯುರ್ಕು – [ನಾ] ವಿದ್ಯೆಯ ಗರ್ವ (ಕಡುಗಲಿತನಮುಂ ಚಾಗದ ಪಡೆಮಾತುಂ ವಿದ್ಯೆಯುರ್ಕುಂ ಒರ್ವನೊಳೆಂತುಂ ನಡೆಯವು: **ಆದಿಪು,** ೧೨. ೧೦೪)

ವಿದ್ಯೋತ – [ನಾ] ಕಾಂತಿ (ಶಸ್ತ್ರಜಾಳಾಂಶು ವಿದ್ಯುತ್ಕುಳ ವಿದ್ಯೋತಂಗಳಿಂದಂ .. .. ದಿಟಮುಭಯಬಲಂ ಕಂಡುದೊಂದೊಂದನಾಗಳ್: **ಆದಿಪು,** ೧೪. ೯೬); [ನಾ] ದೀಪ್ತಿ ಶೋಭೆ, (ವಿಜಯಗಜಮನೇಱೆ ವಿದ್ಯೋತಮಾಗಿ ದಕ್ಷಿಣಾವರ್ತಮಪ್ಪ ಹೋಮಾಗ್ನಿಯಂ ಬಲಂಗೊಂಡು: **ಪಂಪಭಾ,** ೯. ೯೫ ವ)

ವಿದ್ರುಮ – [ನಾ] ಹವಳ (ಲತೆಯುಂ ಕರ್ನೆಯ್ದಿಲುಂ ಸೋಗೆಯುಂ ಅತನುಧನುರ್ಲೇಖೆಯುಂ ವಿದ್ರುಮೋದ್ಯದ್ದ್ಯುತಿಯುಂ ಮುಕ್ತಾಕಳಾಪಸ್ಫುರಿತಮುಂ ಎಸೆದು: **ಆದಿಪು,** ೪. ೨೦)

ವಿದ್ರುಮದಶನಚ್ಛದೆ – [ನಾ] ಹವಳದಂತೆ [ಕೆಂಪಾದ] ತುಟಿಯುಳ್ಳವಳು (ವಿದ್ರುಮದಶನಚ್ಛದೆ ಕೋಪೋದ್ರೇಕದಿನೆರ್ದು ಪೋಗೆ ತೆಗೆದಪ್ಪಿದೊಡೆ ಉನ್ನಿದ್ರಾಂಭೋಜಸ್ಯೆಗೆ ಮದನದ್ರವಮುಂ ಕಣ್ಣ ನೀರುಂ ಉಣ್ಮಿದುವಾಗಳ್: **ಆದಿಪು,** ೧೨. ೪೪)

ವಿದ್ರುಮದ್ರುಮ – [ನಾ] ಹವಳದ ಮರ, ಹವಳದ ದಿಬ್ಬ (ಮರೀಚಿ ಲತಾಪ್ರತಾನಸಂವಳಿಯಿತ ವಿದ್ರುಮದ್ರುಮವಿಳಾಸವಿಶೇಷಿತ ಬಾಡಬಾನಳಾವಿಳಜಳಮಂ: **ಪಂಪಭಾ,** ೪. ೨೫)

ವಿದ್ರುಮಲತೆ – [ನಾ] ಹವಳದ ಬಳ್ಳಿ (ಪರಭಾಗಂಬಡೆದ ವಿದ್ರುಮಲತೆಗಳುಮಂ ಕರಿಮಕರಂಗಳ ಕಯ್ಯೇಱೆನೊಳ್ ಬಿಬ್ಬಿರಿಬಿರಿದೊಡೆದ ಮುಕ್ತಾಪುಟೋದರಂಗಳೊಳ್: **ಆದಿಪು,** ೧೨. ೭೯ ವ)

ವಿದ್ವಿಷ್ಟ – [ನಾ] ಶತ್ರು (ಸಮದಾರಾತಿ ಮರಾಳನೀರದರವಂ ಸಂಕ್ರುದ್ಧ ವೈವಸ್ವತೋಪಮ ವಿದ್ವಿಷ್ಟಫಣೀಂದ್ರಚಂದ್ರಕಿರವಂ: **ಆದಿಪು,** ೧೧. ೧೦)

ವಿದ್ವಿಷ್ಟವಿದ್ರಾವಣ – [ನಾ] ಶತ್ರುವಿನಾಶಕ (ಕದನತ್ರಿಣೇತ್ರಂ ಮನುಜಮಾಂಧಾತಂ .. .. ಶೌಚಾಂಜನೇಯಂ .. .. ವಿದ್ವಿಷ್ಟವಿದ್ರಾವಣಂ ಅರಾತಿಕಾಳಾನಳಂ ರಿಪುಕುರಂಗ ಕಂಠೀರವಂ: **ಪಂಪಭಾ,** ೧. ೧೪೮ ವ)

ವಿಧಾತೃಯೋಗ – [ನಾ] ಬ್ರಹ್ಮ ಸಂಘಟನೆ, ದೈವಯೋಗ (ವಿಧಾತೃಯೋಗದಿಂ ಕಣ್ಕುರುಡಾದೊಡೇನೊ ಕುರುಡಾಗವೇಟ್ಟುದೆ ನಿಮ್ಮ ಬುದ್ಧಿಯುಂ: **ಪಂಪಭಾ,** ೨. ೯೧)

ವಿಧಾತ್ರ – [ನಾ] ಬ್ರಹ್ಮ (ಅಂತು ಮೂಱು ಲೋಕದ ಚೆಲ್ವೆಲ್ಲಮಂ ವಿಧಾತ್ರನೊಂದೆಡೆಗೆ ತೆರಳ್ಚಿದಂತೆ: **ಪಂಪಭಾ,** ೧. ೫೮ ವ); [ನಾ] ವಿಧಿ (ಆಂತು ಕಾದೆಯುಂ ದೊರೆಕೊಂಡುದಿಲ್ಲ ಇದು ವಿಧಾತ್ರನ ದೋಷಮೋ ನಿನ್ನ ದೋಷಮೋ: **ಪಂಪಭಾ,** ೧೩. ೧೦೩)

ವಿಧಿ – [ನಾ] [ಜೈನ] ಕರ್ಮಗಳನ್ನು ನಾಶಪಡಿಸುವ ವಿಧಾನ (ಮತ್ತಿನುೞಿದ ಕರ್ಮಂಗಳಂ ಸ್ಥಿತಿ ಅನುಭಾಗ ಕಾಂಡ ಘಾತಪ್ರದೇಶ ಗುಣಶ್ರೇಣಿ ನಿರ್ಜರಾದಿ ವಿಧಿಯಿನನುಕ್ರಮಂ ಕಿಡಿಸುತ್ತುಂ: **ಆದಿಪು,** ೧೦. ೧೪ ವ); [ನಾ] ಯಥಾಕ್ರಮ (ಅಂಜಲಿಕಾಸ್ತ್ರಮಂ ಭಯಂಕರತರಮಾಗೆ ಕೊಂಡು ವಿಧಿಯಿಂದಂ ಅಭಿಮಂತ್ರಿಸಿ ಪೂಡೆ ಬೊಲ್ಲೊಳ್ ಉರ್ವರೆ ನಡುಗಿತ್ತು: **ಪಂಪಭಾ,** ೧೨. ೨೧೨)

ವಿಧಿದಾನ – [ನಾ] [ಜೈನ] ಒಂದು ಗರ್ಭಾನ್ವಯ ಕ್ರಿಯೆ, ತನ್ನನ್ನು ಪೂಜಿಸಿದ ದೇವತೆಗಳನ್ನು ಸನ್ಮಾನಿಸುವುದು (ವಿಧಿದಾನ .. .. ಯೋಗತ್ಯಾಗಾಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ವಿಧಿಪೂರ್ವಕ – [ನಾ] ಯಥಾಕ್ರಮದಿಂದ (ದಕ್ಷಿಣೋತ್ತರಶ್ರೇಣಿಗಳಂ ನಮಿವಿನಮಿಗಳ್ಗೆ ಕೊಟ್ಟು ಗಾಂಧಾರಪನ್ನಗವಿದ್ಯೆಗಳನವರ್ಗೆ ವಿಧಿಪೂರ್ವಕಮಿತ್ತು: **ಆದಿಪು,** ೯. ೧೨೧ ವ)

ವಿಧು – [ನಾ] ಚಂದ್ರ (ಶರದ್ವಿಧುವಿಶದ ತದೀಯ ಯಶಃಪ್ರಸರಕ್ಕೆ ಅವಕಾಶಂಗುಡುವಂತೆ ಜಲಧರಪಟಲ ನಿರೋಧರಹಿತಂ ಆಕಾಶಂ ಅತಿಪ್ರಕಾಶಿತಾಶಾಂತಮಾಗೆ: **ಆದಿಪು,** ೭. ೩೬ ವ)

ವಿಧುರೆ – [ನಾ] ಒಂಟಿಯಾದವಳು (ಅಂತಾ ಸ್ವಯಂಪ್ರಭಾಮಹಾದೇವಿ ನಿಜಪ್ರಾಣವಲ್ಲಭವಿಯೋಗ ವಿಧುರೆಯಾಗಿ: **ಆದಿಪು,** ೩. ೧೩ ವ)

ವಿಧೂತ – [ಗು] ಅಲ್ಲಾಡಿಸಲ್ಪಡುವ (ಅಮರೇಂದ್ರಪುತ್ರನಂ ಕರೆವವೊಲಾದುದು ಪುರದ ವಾತ ವಿಧೂತವಿನೂತಕೇತುಗಳ್: **ಪಂಪಭಾ,** ೪. ೩೪)

ವಿಧೂಯಮಾನ – [ಗು] ಬೀಸಲ್ಪಡುತ್ತಿರುವ (ಅಮರಕುಮಾರ ಕರಪಲ್ಲವವಿಧೂಯಮಾನ ಚಾರುಚಾಮರಜನಿತ ಮಂದಮಾರಿತಾಂದೋಳಿತ ಸೂಕ್ಷ್ಮಕ್ಷೌಮಾಂಬರ ಪಲ್ಲವಂ: **ಆದಿಪು,** ೮. ೫೫ ವ)

ವಿಧೃತ – [ಗು] ಹೊರಲ್ಪಟ್ಟ (ಕೇಸರಿಗಣವಿಧೃತಂ ಸಿಂಹಾಸನಂ ಅದನಲ್ಲಿ ನಾಲ್ವೆರಲ್ಮುಟ್ಟದೆ ದೇವಾಸುರ ಮಕುಟದ್ಯುತಿಭಾಸುರ ಚರಣಾರವಿಂದಂ ಆದಿಜಿನೇಂದ್ರಂ: **ಆದಿಪು,** ೧೦. ೩೯); [ಗು] ಪಡೆದ (ಅತಿವಿಳಾಸವಿಧೃತದುಕೂಲಂ ಧೃತರತ್ನಾರ್ಘ್ಯಂ ಬಂದಂ ಪತಿಗಿದಿರಂ ಶಂಖನಿಧಿಯೆ ಬರ್ಪಂತಾಗಳ್: **ಆದಿಪು,** ೧೩. ೧೨)

ವಿದ್ಧ – [ನಾ] ಆಕೃತಿ (ಇದು ದಲ್ ನೋಡ ಮನುಷ್ಯವಿದ್ಧಂ ಅಣಮಲ್ತು ಈ ಗಂಡರೂಪಾವುದಿಂತಿದಱೊಳ್ ತಳ್ತೆಸೆದಿರ್ದ ಪೆಣ್ ಸುರವಧೂಬಿಂಬಂ ದಲ್: **ಆದಿಪು,** ೩. ೮೭); [ನಾ] ಪೆಟ್ಟು (ಸಮಾಕುಳಗತಿಸ್ಖಲಚ್ಚಳನಸಂಚಳತ್ ತಾರಹಾರಮಂ ತಳದೊತ್ತುವೊಂದು ನೆವದಿಂದ ಅನಂಗಾಸ್ತ್ರವಿದ್ಧಮಂ ಪಡೆದು ಗೂಡುವಾಯ್ವೆರ್ದಯನೊತ್ತಿ: **ಆದಿಪು,** ೧೧. ೨೦)

ವಿನತಮಸ್ತಕ – [ನಾ] ಬಾಗಿದ ತಲೆ, ನಮಸ್ಕರಿಸು (ಭೂತಲಪತಿ ಬಟೆಯಟ್ಟಿ ಬರಿಸೆ ಪೆಱತೊಂದೆಡೆಯೊಳ್ ಮಲರಹಿತರ್ ಬಂದು ಧರಾಲಲನಾಧೀಶಂಗೆ ವಿನತಮಸ್ತಕರಾದರ್: **ಆದಿಪು,** ೧೫. ೧೦)

ವಿನತಾಪುತ್ರ – [ನಾ] ಗರುಡ (ವಿನತಾಪುತ್ರನ ವಜ್ರ ತುಂಡ ಹತಿಗಂ ಮೆಯ್ಯಾಂತು ಕಂಡಂಗಳುಳ್ಳಿನಂ ಅಂಗಂಗಳಂ ಒಡ್ಡಿ ಒಡ್ಡಿ ತನುವಂ ಕೊಟ್ಟಂತು: **ಪಂಪಭಾ,** ೪. ೨೬)

ವಿನತೋದರ – [ನಾ] ವಿನತೆಯ ಬಸಿರು (ವನನಿಧಿಯಿಂದಂ ಚಂದ್ರಂ ವಿನತೋದರದಿಂ ಗರುತ್ಮನುದಯಾಚಳದಿಂ

ದಿನಪನೊಗೆವಂತೆ ಪುಟ್ಟಿದಂ ಅನಿವಾರ್ಯಸುತೇಜನೆನಿಪನಿನಜನ ತನಯಂ: **ಪಂಪಭಾ,** ೧. ೧೨೧)

ವಿನಮನ್ಮಸ್ತಕ – **[ನಾ]** [ವಿನಮತ್+ಮಸ್ತಕ] ಬಾಗಿದ ತಲೆಯವನು, ತಲೆಬಾಗಿದವನು (ತ್ರೈಲೋಕ್ಯನಾಥಂ ಕಣಾ ವಿನಮನ್ಮಸ್ತಕನಾದೆಂ: **ಪಂಪಭಾ,** ೧೦. ೧೨೦)

ವಿನಮಿತೋತ್ತಮಾಂಗ – **[ನಾ]** [ವಿನಮಿತ+ಉತ್ತಮಾಂಗ] ಬಾಗಿದ ತಲೆಯುಳ್ಳ (ಎಂದು ವಿನಯವಿನಮಿತೋತ್ತಮಾಂಗನಾಗಿ ಕರಕಮಳಂಗಳಂ ಮುಗಿದು: **ಪಂಪಭಾ,** ೮. ೨೫ ವ)

ವಿನಮ್ರ – **[ಗು]** ಬಾಗಿದ (ಯುವತಿಘನ ಕಾಂಚೀರತ್ನಂ ಸ್ತನಭರ ವಿನಮ್ರಗಣಿಕಾಸ್ತನತಟಹಾರಂ ಸರಸ್ವತೀಮಣಿಹಾರಂ: **ಆದಿಪು,** ೧. ೬೧); **[ಗು]** ವಂದಿಸಲ್ಪಡುವ (ಹತವೈರಿಕ್ಷತ್ರಚಕ್ರಂ ಭಯಚಕಿತ ಜಗದ್ವೀರಚಕ್ರಂ ವಿನಮ್ರಕ್ಷಿತಿಚಕ್ರಂ .. .. ಇರ್ದತ್ತೊಳಪುಗದೆ ಪುರೋಪಾಂತದೊಳ್ ಚಕ್ರಿಚಕ್ರಂ: **ಆದಿಪು,** ೧೪. ೩)

ವಿನಯ – **[ನಾ]** ನಮ್ರತೆ (ಒಲ್ದು ಎಱಪಂತೆ ತಳ್ತ ಪೂವಿನ ಪೊಸಗೊಂಚಲಿಂ ಮರನಿದೇನೆಸೆದಿರ್ದುವೊ ಕಲ್ತುವಾಗದೇ ವಿನಯಮನೀ ತಪೋಧನರ ಕೈಯೊಳೆ ಶಾಖಿಗಳುಂ ನಗೇಂದ್ರದಾ: **ಪಂಪಭಾ,** ೧. ೧೧೬)

ವಿನಾಯಕ – **[ನಾ]** ಗಣೇಶ (ತನಗೆ ವಿನಾಯಕಂ ದಯೆಯಿನಿತ್ತ ಜಯಾಸ್ತ್ರಮಂ ಉರ್ಚಿಕೊಂಡು ಭೋಂಕೆನೆ ಶರಾಸನದೊಳಾಂತು ಅದನಾಗಡೆ ಪೂಡಿ .. .. ಎಚ್ಚೊಡೆ: **ಪಂಪಭಾ,** ೧೨. ೧೬೮)

ವಿನಾಶಿತರಿಪು – **[ನಾ]** ನಾಶಮಾಡಲ್ಪಟ್ಟ ಹಗೆಯುಳ್ಳವನು (ದಿವ್ಯಾಸ್ತ್ರಮಂ ಆ ಪಾಶುಪತಾಸ್ತ್ರಮನಿತ್ತು ವಿನಾಶಿತರಿಪುವಕ್ಕೆ ಹರಿಗನೆಂದಂ ದಯೆಯಿಂ: **ಪಂಪಭಾ,** ೮. ೨೬)

ವಿನಿರ್ಜಿತ – **[ಗು]** ಗೆಲ್ಲಲ್ಪಟ್ಟ (ವಿಜಯಸೈನ್ಯ ವಿನಿರ್ಜಿತ ಭರತಮಂಡಳಂ ಭರತೇಶ್ವರ ಚಕ್ರವರ್ತಿ ಸಿದ್ಧದಿಗ್ವಿಜಯನಾಗಿ ವಿಯಪರ್ವತಗಜಮನೇಱೆ: **ಆದಿಪು,** ೧೩. ೮೧ ವ)

ವಿನಿರ್ದಳಿತ – **[ಗು]** ಸೀಳಲ್ಪಟ್ಟ (ನಿಜವಿಜಯಗಜಕರ ಉನ್ಮುಕ್ತಂಗಳಪ್ಪ ಮುಕ್ತಾಮುಕ್ತವಿನಿರ್ದಳಿತ ವೀರಯೋಧ ರುಧಿರವಾರಾಶಿ ಶೀಕರಂಗಳಿಂ: **ಆದಿಪು,** ೧೪. ೧೦೩ ವ)

ವಿನಿಹಿತ[ನೀರಾಜನ] – **[ನಾ]** [ಆರತಿ] ಎತ್ತಿಸಿಕೊಂಡವನು (ಅಂತು ನಿಷ್ಪನ್ನಮಜ್ಜನನುಂ ವಿನಿಹಿತನೀರಾಜನನುಂ .. .. ಆಗಿ ಪುರುದೇವಂ: **ಆದಿಪು,** ೮. ೭೧ ವ)

ವಿನೀತಾಪುರ – **[ನಾ]** ಅಯೋಧ್ಯೆ (ಕಲ್ಪಾಮರೇಂದ್ರಪ್ರಬಲಬಳಸಮಿತಿ ಗಗನತಳದಿಂದಂ ಅಂದಂಬಡೆದು ವಿನೀತಾಪುರಕ್ಕವತರಿಸಿ: **ಆದಿಪು,** ೭. ೧೦೮ ವ)

ವಿನೀಳ – **[ಗು]** ಹೆಚ್ಚು ಕಪ್ಪಾದ ಮತ್ತು ಹೆಚ್ಚು ನೀಳವಾದ (ವದನಸುಧಾಸೂತಿ ಬೆಳಗೆ ಪೆಳಱಿದ ತಮಮಿಂ ಪುದಿದು ಪೆಱಗಿರ್ದುದು ಎನಿಪುದು ಮದಗಜಗಮನೆಯ ವಿನೀಳಕೇಶಕಳಾಪಂ: **ಆದಿಪು,** ೮೨)

ವಿನೂತ – **[ಗು]** ಹೊಗಳಲ್ಪಟ್ಟ, ಶ್ರೇಷ್ಠವಾದ (ಅಮರೇಂದ್ರಪುತ್ರನಂ ಕರೆವವೊಲಾದುದು ಪುರದ ವಾತವಿಧೂತ ವಿನೂತಕೇತುಗಳ್: **ಪಂಪಭಾ,** ೪. ೩೪)

ವಿನೇಯ – **[ನಾ]** [ಜೈನ] ಧರ್ಮದಲ್ಲಿ ಶ್ರದ್ಧೆಯುಳ್ಳವನು (ಪ್ರಾಣಿಹಿತಮಂ ವಿನೇಯಪ್ರೀಣನಕರಂ ಜಗತ್ತ್ರಯ ಪ್ರಕಟಿತಕಲ್ಯಾಣಮನೀ ನೆಗೞ್ದಾದಿಪುರಾಣಮಂ ಅಪರಿಮಿತಭಕ್ತಿಯಿಂ ವಿರಚಿಸುವೆಂ: **ಆದಿಪು,** ೧. ೪೨)

ವಿನ್ಯಸ್ತ – **[ಗು]** ಹಾಕಲ್ಪಟ್ಟ, ರಚಿತವಾದ (ಇಂದ್ರಾಣೀಹಸ್ತವಿನ್ಯಸ್ತ ಮರಕತಚೂರ್ಣ ರಂಗವಲ್ಲೀವಿರಾಜಿತದೊಳ್: **ಆದಿಪು,** ೯. ೭೬ ವ); ಇಡಲ್ಪಟ್ಟ (ಕೋದಂಡವಿಳಾಸವಿಭ್ರಸಿಂಹಾಸನನುಂ ಪ್ರಮದಾಹಸ್ತವಿನ್ಯಸ್ತ ವಾಮಕ್ರಮಕಮಳನುಂ: **ಪಂಪಭಾ,** ೯. ೨೮ ವ)

ವಿನ್ಯಾಸ – **[ನಾ]** ಜೋಡಣೆ (ಆ ಸಕಳಾರ್ಥಸಂಯುತಂ ಅಳಂಕೃತಯುಕ್ತಮುದಾತ್ತ ವೃತ್ತಿ ವಿನ್ಯಾಸಮನೇಕ ಲಕ್ಷಣ ಗುಣ ಪ್ರಭವಂ: **ಪಂಪಭಾ,** ೧. ೯); **[ನಾ]** ರೀತಿ, ಕ್ರಮ (ಆಗಳ್ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತಂಗಳೆಂಬ ರಥಕಲ್ಪ ವಿಶೇಷವಿನ್ಯಾಸಂಗಳಂ ಅಱಿದು ಸಾರಥಿಗಳ್ ಚೋದಿಸುವಾಗಳ್: **ಪಂಪಭಾ,** ೧೨. ೭೫ ವ)

ವಿಪಂಚೀ – **[ನಾ]** ವೀಣೆ (ಧ್ವನಿಯೆನಿಸಿದಳಂಕಾರಧ್ವನಿಯೆಸೆವಿನಂ ಎಸೆವುದಲ್ಲಿ ಮಧುರವಿಪಂಚೀಧ್ವನಿಯೊಡನೆ ಅನೇಕರಾಗಧ್ವನಿ: **ಆದಿಪು,** ೯. ೧೧೯)

ವಿಪಕ್ಷ – **[ನಾ]** ವಿರೋಧ ಪಕ್ಷ, ಶತ್ರು (ಅದಲ್ಲದೆಯುಂ ಉದಾರವೀರ ಚರಿತನಿರತ ಕದನಕರ್ಕಶಕ್ಷತ್ರಿಯಂಗೆ ವಿಪಕ್ಷಪರಾಕ್ರಮಾಕರ್ಣನ ಉದೀರ್ಣಕ್ರೋಧದೊಳ್: **ಆದಿಪು,** ೧೪. ೮೧ ವ)

ವಿಪಕ್ಷಪಾರ್ಥಿವ – **[ನಾ]** ಶತ್ರುರಾಜ (ವನದುರ್ಗಭಂಗಮುಂ ವಿಪಕ್ಷಪಾರ್ಥಿವ ಮನೋರಥಭಂಗಮುಂ ಸಿದ್ಧವಾಗೆಯುಂ: **ಆದಿಪು,** ೧೩. ೭೭ ವ)

ವಿಪತ್ತಿ – **[ನಾ]** ಕೇಡು, ತೊಂದರೆ (ಅಂತು ವಿಭೀಷಣವಿಪತ್ತಿಯೊಳ್ ಅತಿಪ್ರಳಾಪಂಗೆಯ್ವನ್ನೆಗಂ ಶೋಕಾವೇಗಮನಱಿದು: **ಆದಿಪು,** ೩. ೫೨ ವ)

ವಿಪರೀತರತ – **[ನಾ]** ಪುರುಷನಂತೆ ಸ್ತ್ರೀ ಸಂಭೋಗಿಸುವ ರೀತಿ (ಲಲಿತಲತಾಂಗಿ ನೂತವಿಪರೀತರತಕ್ಕಡಿಯಿಟ್ಟಳ್ ಕಣ್ಗಳ ಪಸವೋಡೆ ನೋಡಲ್ ಅಣಮೀಯದೆ ನೀಳ್ದ ಕುರುಳ್ ಮದೀಯ ಕೋಮಳೆಯ ಮುಖೇಂದುವಂ: **ಆದಿಪು,** ೧೨. ೩೦)

ವಿಪರೀತವೃತ್ತಿ – **[ನಾ]** ಅಸ್ತವ್ಯಸ್ತ ಸ್ವಭಾವ (ನೂಂಕೆ ಬೇಟಕಾಱನ ಮನವಟ್ಟಿ ಪತ್ತುವುದು ಬೇಟವಿದೇಂ ವಿಪರೀತವೃತ್ತಿಯೋ: **ಪಂಪಭಾ,** ೪. ೧೦೩)

ವಿಪರ್ಯಾಯ – **[ನಾ]** [ಜೈನ] ಮಿಥ್ಯಾಜ್ಞಾನ (ಸಂಶಯ ವಿಪರ್ಯಾಯ ಸಾವದ್ಯ ಅನವದ್ಯ ಅವಸಾಯ ಸ್ವಭಾವರಹಿತಮಾಗಿ ಜೀವಾದಿಪದಾರ್ಥ ಯಥಾತ್ಮ್ಯಾವಗಮಂ ಸಮ್ಯಕ್‌ಜ್ಞಾನಂ: **ಆದಿಪು,** ೧೦. ೬೩ ವ)

ವಿಪಾಕವಿಚಯ – **[ನಾ]** [ಜೈನ] ಒಂದು ಬಗೆಯ ಧರ್ಮಧ್ಯಾನ, ಕರ್ಮಫಲದ ಚಿಂತನೆ (ಆಜ್ಞಾವಿಚಯಂ ಅಪಾಯವಿಚಯ ವಿಪಾಕವಿಚಯ ಸಂಸ್ಥಾನವಿಚಯಮೆಂಬ ನಾಲ್ಕುಂ ಧರ್ಮ್ಯಧ್ಯಾನಮಂ ಧ್ಯಾನಿಸುತ್ತುಂ: **ಆದಿಪು,** ೧೦ ೧೪ ವ)

ವಿಪಿನೋಲ್ಲಂಘನ – **[ನಾ]** ಕಾಡನ್ನು ದಾಟುವುದು (ವಿಪಿನೋಲ್ಲಂಘನ ಸಿಂಧುಯಾನ ನಗಕೂಟಾರೋಹಣಕ್ಲೇಶ ಮಂತ್ರಪದಧ್ಯಾನ ಬಿಳಪ್ರವೇಶ ರಸವಾದ ಆಯಾಸದೊಳ್: **ಆದಿಪು,** ೧೬. ೭)

ವಿಪುಳ – **[ಗು]** ಅಗಲವಾದ (ಅರ್ಧೇಂದುಸೌಂದರ ಲಲಾಟೆಯರೊಳ್ ಆ ಕುಟಿಲಕುಂತಳಮಂಡಿತ ವಿಪುಳಲಲಾಟಂ: **ಆದಿಪು,** ೮. ೨೩ ವ); **[ಗು]** ವಿಸ್ತಾರವಾದ (ಆ ಪರ್ವತದ ವಿಪುಳವನ ಉಪಕಂಠಂಗಳೊಳ್ ತಾಪಸಕನ್ಯೆಯರ್ ನಡಪಿದ ಎಳಲತೆಗಳೊಳ್ ಎಱಗಿ ತುಱುಗಿ ಸಾಮವೇದಧ್ವನಿಯೊಳ್ ಮೊರೆವ ತುಂಬಿಗಳುಮಂ: **ಪಂಪಭಾ,** ೧. ೧೧೫ ವ)

ವಿಪುಳಫಲ – **[ನಾ]** [ಜೈನ] [ದಾನದಿಂದ] ಕೊಡುವವನು ಪಡೆಯುವ ಫಲ (ಕುಡುವೊಂ ಕುಡುವುದು ಪಾತ್ರಂ ಕುಡೆ ಪಡೆವುದತಿವಿಪುಳಫಲಮೆನಲ್ ನಾಲ್ಕು ತೆಱಂ ಗಡ ದಾನಂ: **ಆದಿಪು,** ೧೦. ೯)

ವಿಪುಳಾಸನ – **[ನಾ]** [ಆನೆಯ] ವಿಶಾಲವಾದ ಹೆಗಲು (ವಿಪುಳಾಸನನುಂ ಆನುಪೂರ್ವ ಧನುರಾಕಾರ ವಂಶನುಂ .. .. ಅಪವಪ ವಿಜಯಪರ್ವತಗಜೇಂದ್ರಂ ಬಂದು: **ಆದಿಪು,** ೧೨. ೫೬ ವ)

ವಿಪುಳೋರಸ್ಕ – **[ನಾ]** [ವಿಪುಳ+ಉರಸ್ಕ] ವಿಶಾಲವಾದ ಎದೆಯುಳ್ಳವನು (ಶ್ರೀರಾಮಾಲಂಗಿತ ವಿಪುಳೋರಸ್ಕಂ ಭಾಸ್ಕರಪ್ರತಾಪಂ ನಿಜದೋರ್ಮೇರುಮಥಿತ ಅರಿಬಳ ಕೂಪಾರಂ: **ಪಂಪಭಾ,** ೧೪. ೧)

ವಿಪೂರಿತ – **[ಗು]** ತುಂಬಿದ (ಸಾರೆಯೊಳ್ ಅಟ್ಟಿ ಮಹಾದ್ವಿಜನಾರಿಯ ಮಮತಾವಿಪೂರಿತ ಊರ್ಜಿತರವದಿಂ ಕಾರುಣ್ಯಾಕ್ರಂದನಂ ಅನಿವಾರಿತಮೊರ್ಮೊದಲೆ ಬಂದು ತೀಡಿತ್ತಾಗಳ್: **ಪಂಪಭಾ,** ೩. ೨೪)

ವಿಪ್ರ – **[ನಾ]** ಪುರೋಹಿತ (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರ ಉದ್ಘೂತರವಂ ಎಸೆಯೆ: **ಪಂಪಭಾ,** ೧೨. ೧೦೬)

ವಿಪ್ರಲಬ್ಧಬುದ್ಧಿ – **[ನಾ]** ಭ್ರಾಂತಿಗೊಂಡ ಮನಸ್ಸು (ಸದೃಶಾಪರಾಪರೋತ್ಪತ್ತಿಯೆಂಬಿವಱಿಂ ವಿಪ್ರಲಬ್ಧಬುದ್ಧಿಗೆ ಸಂತಾನರೂಪದಿಂ ಪುಟ್ಟುತಿರ್ದ ವಿಜ್ಞಾನಲಕ್ಷಣಂಗಳ್: **ಆದಿಪು,** ೨. ೯ ವ)

ವಿಪ್ರವರ್ಣ – **[ನಾ]** ಬ್ರಾಹ್ಮಣವರ್ಣ (ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ ಭರತನಿಂದಮಿನ್ನಪ್ಪ ವಿಪ್ರವರ್ಣಕ್ಕಂ ಯಥೋಚಿತವೃತ್ತಿಗಳನಱಿಪಲೆಂದು: **ಆದಿಪು,** ೮. ೭೨ ವ)

ವಿಬುಧ – **[ನಾ]** ದೇವತೆ (ಮತ್ತಂ ಅಕೃತ್ರಿಮಪ್ರಣಯರಸ ವಿಸರವಶಗತ ವಿಬುಧಮಿಥುನಶತರತರಭಸ ಬಧಿರೀಕೃತ ಕೃತಕಗಿರಿಗಳೊಳಂ: **ಆದಿಪು,** ೬. ೧೦೧ ವ); **[ನಾ]** ಪಂಡಿತ, ಜ್ಞಾನಿ (ಕಂಸಾರಿಸಖಂ ಪರಿಧ್ವಂಸಿತ ರಿಪುನೃಪಸಮೂಹಂ ಒಡ್ಡಿದನಾಗಳ್ ಹಂಸವ್ಯೂಹಮಂ ಉತ್ತುಂಗಾಂಸಂ ತಾಂ ವಿಬುಧವನಜವನ ಕಳಹಂಸಂ: **ಪಂಪಭಾ,** ೧. ೧೧೦)

ವಿಬುಧಮಿಥುನ – **[ನಾ]** ದೇವದಂಪತಿ (ಅಕೃತ್ರಿಮ ಪ್ರಣಯರಸವಿಸರ ವಶಗತ ವಿಬುಧಮಿಥುನಶತರ್ ಅತಶರಭಸ ಬಧಿರೀಕೃತ ಕೃತಕಗಿರಿಗಳೊಳಂ: **ಆದಿಪು,** ೬. ೧೦೧ ವ)

ವಿಭಂಗಜ್ಞಾನ – **[ನಾ]** [ಜೈನ] ಆತ್ಮನಿಗೆ ಅಹಿತವನ್ನುಂಟುಮಾಡುವ ಪದಾರ್ಥಗಳನ್ನು ತಿಳಿಯುವ ಮಿಥ್ಯಾಜ್ಞಾನ, ಇದರಲ್ಲಿ ಮೂರು ವಿಧ: ಕುಮತಿ, ಕುಶ್ರುತ ಕುಅವಧಿ (ಅರವಿಂದಂ ಕುರುವಿಂದನಂ ಕರೆದು ಉತ್ಪನ್ನವಿಭಂಗಜ್ಞಾನದಿಂ ಮೃಗಂಗಳಿರ್ದೆಡೆಯನಱಿದು: **ಆದಿಪು,** ೨. ೧೪ ವ)

ವಿಭವ – **[ನಾ]** ಸೊಗಸು (ಅಂತು ಬೆಳರ್ತ ಅಧರಂ ಕಣ್ಣಿಂ ತುಳ್ಕುವ ಕೆಂಪು ಸರದ ನಡುಕಂ ಮಿಗೆ ತನ್ನಂತಃಪುರಲಲನೆಯರ್ಗೆ ರತಾಂತದ ವಿಭವಮನೆ ಮಾಡಿ ತಾಂ ಪೊಱಮಟ್ಟಂ: **ಆದಿಪು,** ೧೧. ೧೫೧); **[ನಾ]** ವೈಭವ (ತನ್ನ ವಿಭವಮುಮಂ ವಿಳಾಸಮುಮಂ ಪಾಂಡವರ್ಗೆ ಮೆಱೆದು ಕಂದುಕಕ್ರೀಡಾದಿ ನಾನಾ ವಿನೋದಂಗಳಿಂ ಕೆಲವು ದಿವಸಮನಿರ್ದು: **ಪಂಪಭಾ,** ೬. ೬೯ ವ)

ವಿಭಾವ – **[ನಾ]** ಸ್ವರೂಪ (ಆ ಮಹಾನುಭಾವಂ ಆ ಜವಂಜವವಿಭಾವಕ್ಕೆ ಏವಯಿಸಿ: **ಆದಿಪು,** ೪. ೬೭ ವ); **[ನಾ]** ಭಾವಸ್ಫುರಣೆಯ ಕಾರಣ (ಭಾವದ ಅನುಭವದ ಎಸೆವ ವಿಭಾವದ ಪಸುಗೆಗಳೊಳೊಸರ್ವ ರಸದಭಿನಯಮಂ ಭಾವಿಸುವೊಡೆ: **ಆದಿಪು,** ೯. ೨೭)

ವಿಭಾಸಿ – **[ಗು]** ಪ್ರಕಾಶಿಸುವ (ಅಳಿನೀಳ ನೀಳಗಳಕಂಠ ತಮಾಳ ವಿನೀಳನೀರದಪ್ರಸರ ವಿಭಾಸಿಯಾದುದು ಸಮೀರಂ: **ಪಂಪಭಾ,** ೭. ೨೨)

ವಿಭೀಷಣ – **[ಗು]** ತುಂಬ ಹೆದರಿಕೆ ಉಂಟು ಮಾಡುವ (ಶಾತಶರಾಗ್ನಿ ಭಗ್ನಭಟಕೋಟಿವಿಭೀಷಣಂ .. .. ಭೂತಸದನಂ ಕದನಂ ಕದನತ್ರಿಣೇತ್ರನಾ: **ಪಂಪಭಾ,** ೧೪. ೩)

ವಿಭು – **[ನಾ]** ಸರ್ವವ್ಯಾಪಿಯಾದ (ಎತ್ತೆತ್ತ ನೋಡುವೊಡಂ ನೋಡಲನಂತಮಪ್ಪ ವಿಭುವಪ್ಪ ಆಕಾಶಪದ್ಮಕ್ಕೆ ತಾನೆ ವಲಂ ಕರ್ಣಿಕೆಯಂದಮಾಯ್ತು: **ಆದಿಪು,** ೧. ೪೩); **[ನಾ]** ಪ್ರಭು, ರಾಜ (ಪೊಂಗಳಸಂಗಳೊಳ್ ಇರ್ದ ಪುಣ್ಯತೋಯಂಗಳೊಳ್ ಅಟ್ಟಜೆಂ ಮಿಸಿಸಿ ಕಟ್ಟಿದನಾ ವಿಭು ವೀರಪಟ್ಟಮಂ: **ಪಂಪಭಾ,** ೧೦. ೧೫)

ವಿಭುತ್ವ – **[ನಾ]** ವ್ಯಾಪಕತೆ (ತನ್ನಿರ್ದೆಡೆಯದೆ ಮೇರುವಿನುನ್ನತಿ ಜಳನಿಧಿಯ ಗುಣ್ಪು ನಭದ ವಿಭುತ್ವಂ: **ಆದಿಪು,** ೧೦. ೫೬)

ವಿಭೂತಿ – **[ನಾ]** ವೈಭವ (ಪಿರಿದುಂ ವಿಭೂತಿಯಿಂದಂ ಸುರರಾಜನ ಬೆಸದೊಳ್ ಅಮರನಾಯಕರೆಲ್ಲಂ ನೆರೆದು ವಿವಾಹಮನಾಕೆಗೆ ದೊರೆಕೊಳಿಸಿದರ್: **ಆದಿಪು,** ೬. ೮೬); **[ನಾ]** ಮಹಿಮೆ (ಭೂತಿಗಳೊಳ್ ಕಲ್ಯಾಣವಿಭೂತಿಗಳೆಮಗಕ್ಕೆ ಬೇಗಮಿನ್ನೆಂದು ಮನೋಜಾತಮಹೋತ್ಸಾಹರ್ ತದ್ಭೂತಿಯನಿಟ್ಟರ್ ತ್ರಿಪುಂಡ್ರಮಂ ದಿವಿಜೇಂದ್ರರ್: **ಆದಿಪು,** ೧೬. ೫೩); ಐಶ್ವರ್ಯ (ಸೊಗಯಿಪ ತಮ್ಮ ಜವ್ವನದ ತಮ್ಮ ವಿಭೂತಿಯ ತಮ್ಮ ತಮ್ಮ ಚೆಲ್ವುಗಳ ವಿಲಾಸದೂರ್ಮೆಗಳೊಳ್ ಆವೆವಗಾಗಿಪೆವೆಂದು ಬಂದ ಚೆನ್ನಿಗರುಂ: **ಪಂಪಭಾ,** ೧. ೧೦೬)

ವಿಭೂಷಣ – **[ನಾ]** ಆಭರಣ (ಕಿಱಿದು ಪೊಟ್ತು ಕುಳ್ಳಿರ್ದು ಮಜ್ಜನಭೋಜನತಾಂಬೂಲ ಅನುಲೇಪನ ವಿಭೂಷಣ ಸುರಭಿಕುಸುಮದಾಮಾದಿಗಳಿಂ ಸಂತಸಂಬಡಿಸಿ: **ಪಂಪಭಾ,** ೪. ೪೩ ವ)

ವಿಭೇದ – **[ನಾ]** ತಾರತಮ್ಯ (ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಂ ಇನ್ನೀಗಳ್ ಆಳರಸು ಎಂಬೊಂದು ವಿಭೇದಮಾದೊಡೆ ಎಱಕಂ ಚಿಃ ಕಷ್ಟಮಲ್ತೆ: **ಆದಿಪು,** ೧೪. ೩೨)

ವಿಭ್ರಮ – **[ನಾ]** ವಿಲಾಸ (ಏನೇಂದಾಂ ಬಣ್ಣಿಸುವೆನೊ ಸುರಸೌಂದರಿಯ ವಿಳಾಸವಿಭ್ರಮ ಭ್ರೂಲತೆಯಂ: **ಆದಿಪು,** ೯. ೩೩); **[ನಾ]** ಸಡಗರದದ ಸುಳಿದಾಟ (ಜಳಕೇಳಿಯೊಳ್ ಅಧಿಪನನೆರ್ದೆಗೊಳಿಸಿದುವು ಅಂತಃಪುರೀಜನಂಗಳ ಲೀಲಾಕಿಳಕಿಂಚಿತ ಲಲಿತವಿಹೃದ್ವಿಳಾಸ ವಿಚ್ಛಿತ್ತಿ ವಿಭ್ರಮಾದಿ ಗುಣಂಗಳ್: **ಆದಿಪು,** ೧೧. ೧೪೨); **[ಗು]** ಸುತ್ತುವ, ಚಂಚಲವಾದ (ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ: **ಆದಿಪು,** ೧೪. ೧೩೦); **[ನಾ]** ಅಲುಗಾಟ (ಮುಖೇಂದುವ ಬೆಳ್ಪು ಪೂರ್ಣಕುಂಭಮನೆ ನಿರಂತರಂ ಗೆಲೆ ಕುಚಂಗಳ ತೋರ್ಪು ಪತಾಕೆಯೊಂದು ವಿಭ್ರಮಮನೆ ಪೋಲೆ: **ಪಂಪಭಾ,** ೧. ೧೨೦)

ವಿಮಾನ – **[ನಾ]** ದೇವತೆಗಳ ವಾಹನ (ವ್ಯಾಳಸುರಸೌಂದರೀ ಜನಿತಬಹುಮಾನಮಂ ಸ್ಥೂಳಮಣಿಖಚಿತ ಸುರಪರಿವೃಢ ವಿಮಾನಮಂ: **ಆದಿಪು**, ೭. ೨೭ ರಗಳೆ); **[ನಾ]** ಉಪ್ಪರಿಗೆ (ನಾಗಕನ್ನೆ ನಾಗಲೋಕದ ವಿಳಾಸಂಗಳಂ ತೋಱುತ್ತುಂ ತನ್ನ ಕೆಟಿಗಣ ನಾಗವಿಮಾನಕ್ಕೆ ವಂದು: **ಪಂಪಭಾ,** ೪. ೬ ವ)

ವಿಮಾನಾಂತರ – **[ನಾ]** ವಿಮಾನದೊಳಗು (ಅಂತೆ ಅತ್ತ ಪರಿದ ತಲೆಯಂ ಅದಂ ತಂದು ಅಟ್ಟೆಯೊಳಮರ್ಚಿ ಸುರಗಣಿಕೆಯರ್ ಅಭ್ಯಾಂತರದೊಳೆ ತಮ್ಮ ವಿಮಾನಾಂತರದೊಳಗಿಟ್ಟು ಕರ್ಣತನಯನನುಯ್ದರ್: **ಪಂಪಭಾ,** ೧೨. ೧೬೯)

ವಿಮಿಶ್ರಿತ – **[ನಾ]** ಬೆರೆಸಿದ (ಸಿತ ದೂರ್ವಾಂಕುರವಿಮಿಶ್ರಂಗಳಪ್ಪ ಶೇಷಾಕ್ಷತೆಗಳಂ ಕೊಟ್ಟು ಮುಂದೆ ನಿಂದನಂ ನಿಮಗೆ ಬಾಟಿಸ್ತೆಯಪ್ಪುದಂ ಬೇಡಿಕೊಳ್ಳಿಂ ಎನೆ: **ಪಂಪಭಾ,** ೫. ೭೦ ವ)

ವಿಮುಕುಳ – **[ಗು]** ಚೆನ್ನಾಗಿ ಅರಳಿದ (ಆ ವಿಕಚಮೇಚಕೋತ್ಪಳ ಲೋಚನೆಯರೊಳ್ ಆ ವಿಮುಕುಳಕಮಳದಳ ವಿಲೋಲಲೋಚನಂ .. .. ನೆರೆದಿರೆ: **ಆದಿಪು,** ೮. ೨೩ ವ)

ವಿಮುಕ್ತ – **[ಗು]** ಬಿಡಲ್ಪಟ್ಟ (ಆಕರ್ಣಕೃಷ್ಟ ವಿಕ್ರಮಾರ್ಜುನ ಕಾರ್ಮುಕವಿಮುಕ್ತ ನಿಶಿತಸಾಯಕಸಂಕುಳ ಶಲ್ಯನಿಪತಿತ ಅನೇಕ ಕಳಕಳಾಕಳಿತಮುಂ: **ಪಂಪಭಾ,** ೧೩. ೫೧ ವ)

ವಿಮುಖೀಭೂತ – **[ಗು]** ಮುಖ ತಿರುಗಿಸಿಕೊಂಡ (ಮದಗಜ ಗಂಡಸ್ಥಲಂಗಳೊಳೆಱಗಿ ಮೊರೆವ ತುಂಬಿಯ ಬಂಬಲ್ಗಳೆ ವಿಮುಖೀಭೂತಂಗಳಾದುವು: **ಪಂಪಭಾ,** ೪. ೪೯ ವ)

ವಿಮೋಕ್ಷ – **[ನಾ]** ವಿಮೋಚನೆ, [ದೋಷದ] ಬಿಡುಗಡೆ (ವೃಕೋದರನಿಂ ಆ ರಣರಂಗದೊಳಾದ ದುಷ್ಟದುಶ್ಶಾಸನ ರಕ್ತಮೋಕ್ಷದೊಳೆ ದೋಷವಿಮೋಕ್ಷಂ ಅದೇಕೆ ಕೊಂಡಪ್ಪೆ: **ಪಂಪಭಾ,** ೧೩. ೬೮)

ವಿಮೋಹಿಸು – **[ನಾ]** ಭ್ರಾಂತಿಗೊಳ್ಳು (ಇವರ್ ಇನ್ನುಂ ಆಂತು ಇಱಿವರ್ ಎಂದು ವಿಮೋಹಿಸಿ ವೀರಪಟ್ಟಮಂ ಬಗೆಯದೆ ಕಟ್ಟಿದೈ: **ಪಂಪಭಾ,** ೧೦. ೧೬)

ವಿಯಚ್ಚಕ್ರ – **[ನಾ]** [ವಿಯತ್+ಚಕ್ರ] ಆಕಾಶ ಮಂಡಲ (ಪ್ರತಾಪಕ್ಕೆ ಅಗುರ್ವಿಸೆ ಗೋೞುಂಡೆಗೊಳುತ್ತುಂ ಇರ್ದುದು ದಿಶಾಚಕ್ರಂ ಪೊದಳ್ದ ಆಜ್ಞೆಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ: **ಪಂಪಭಾ,** ೧. ೧೧೦)

ವಿಯಚ್ಚರ – **[ನಾ]** [ವಿಯತ್+ಚರ] ಖೇಚರ (ಪರಮೋತ್ಸಾಹದಿಂ ಆಗಳೇೞಡಿವರಂ ಭೂಪಾಲರುಯ್ದರ್ ವಿಯಚ್ಚರತ್ತೇೞಡಿಯಂ: **ಆದಿಪು,** ೯. ೭೩)

ವಿಯತ್ತಳ – **[ನಾ]** ಆಕಾಶಪ್ರದೇಶ (ಇತ್ತೆನೆಂದು ವಿಯತ್ತಳಕ್ಕೊಗೆದೊಡೆ ಆತನಂಶಮಾಕೆಯ ಗರ್ಭಸರೋವರದೊಳಗೆ ಚಂದ್ರಬಿಂಬದಂತೆ ಸೊಗಯಿಸೆ: **ಪಂಪಭಾ,** ೧. ೧೨೪ ವ)

ವಿಯದ್ಗಮನ – **[ನಾ]** [ವಿಯತ್+ಗಮನ] ಆಕಾಶಮಾರ್ಗ (ಪರಮೋತ್ಸಾಹದಿಂ ಆಗಳೇೞಡಿವರಂ ಭೂಪಾಲರುಯ್ದರ್ ವಿಯಚ್ಚರರೇೞಡಿಯಂ ವಿಯದ್ಗಮನದಿಂದಾಂತುಯ್ದರ್: **ಆದಿಪು,** ೯. ೭೩)

ವಿಯದ್ದಿಗ್ಭೂರಿ ಭೂಮಂಡಲಂ – **[ನಾ]** [ವಿಯತ್+ದಿಕ್+ಭೂರಿ ಭೂಮಂಡಲ] ಆಕಾಶ ದಿಕ್[ಪ್ರದೇಶ] ಹಾಗೂ ವಿಶಾಲ ಭೂಮಂಡಲಗಳು (ಇಂದ್ರಚಾಪಮನಿತುಂ ಭೂಭಾಗದೊಳ್ ಬಂದು ತೊಟ್ಟನೆ ಬೇರೂಱಿದುವೋ ಕವಲ್ತುವೊ ಚಳತ್ ವಿದ್ಯುಲ್ಲತಾದೀಪ್ತಿಯೆಂಬಿನಂ ಏಂ ನಾಡೆ ಬೆಡಂಗನಾಳ್ದುದೊ ವಿಯದ್ದಿಗ್ಭೂರಿ ಭೂಮಂಡಲಂ: **ಆದಿಪು,** ೭. ೨೪)

ವಿಯದ್ರಂಗ – **[ನಾ]** [ವಿಯತ್+ರಂಗ] ಆಕಾಶವೆಂಬ ರಂಗಸ್ಥಳ (ವಿಯದ್ರಂಗದೊಳಂದದೇಂ ನಲಿದುದೋ ವಿದ್ಯುನ್ನಟೀ ನರ್ತನಂ: **ಆದಿಪು,** ೬ ೭೨)

ವಿಯನ್ಮಂಡಲ – **[ನಾ]** [ವಿಯತ್+ಮಂಡಲ] ಆಕಾಶಪ್ರದೇಶ (ತ್ರಿಪುರಂಬೊತ್ತಿಸಿದಂತೆ ಪೊತ್ತಿ ಪೊಗೆದತ್ತು ಎತ್ತೆತ್ತಂ ವಿಯನ್ಮಂಡಲಂ: **ಪಂಪಭಾ,** ೧೧. ೧೭)

ವಿಯೋಗ – **[ನಾ]** ವಿರಹ (ಬಳಸುವ ಬೇಟದೊಳ್ ಮೊಳೆತ ಗೊಟ್ಟಿಯೊಳ್ ಈರೆಲೆವೋದ ಲುಂದಿನೊಳ್ ಬಳೆದ ವಿಯೋಗದೊಳ್: **ಆದಿಪು,** ೧೨. ೨೦)

ವಿಯೋಗಿ – **[ನಾ]** ವಿರಹಿ (ಮಾವಿನ ಬಂದ ಕೋಡೆ ಕೋಡಾಗಿರೆ ಕೋಡುಗೊಂಡು ಪರಿದತ್ತು ವಸಂತಗಜಂ ವಿಯೋಗಿಯಂ: **ಪಂಪಭಾ,** ೨. ೧೫)

ವಿರಚನೆ – **[ನಾ]** ಸೃಷ್ಟಿ (ನೋಟಕ್ಕೆ ಎರಡನೆಯ ನಾಕಲೋಕದ ವಿರಚನೆಯನೆ ಪಡೆವುದದಱ ರನ್ನದ ಕೇರ್ಗಳ್: **ಆದಿಪು,** ೬. ೩೭)

ವಿರಚಿಸು – **[ಕ್ರಿ]** ನಿರ್ಮಿಸು (ನಿಜರಾಜಧಾನಿಯೊಳೊಸಗೆಯಂ ಮಾಡಿ ವಿವಾಹಮಂಟಪಮಂ ಸ್ಥಪತಿರತ್ನಕ್ಕೆ ವಿರಚಿಸೆಂದು ಬೆಸಸಿದಾಗಳ್: **ಆದಿಪು,** ೪. ೩೦ ವ)

ವಿರಥ – **[ನಾ]** ರಥಹೀನ (ಮದ್ರಮಹೀಶನುಮಂ ಮರುತ್ಸುತಂ ವಿರಥನೆ ಮಾಡಿ: **ಪಂಪಭಾ,** ೩. ೭೧)

ವಿರಲ – **[ಗು]** ಅಪರೂಪವಾದ (ವಿರಲ ಫಲಂಗಳಾದುವು ಅಖಿಲೌಷಧಿಗಳ್: **ಆದಿಪು,** ೮. ೬೨)

ವಿರಹಿಸು – **[ಕ್ರಿ]** ವಿರಹ ವೇದನೆಯನ್ನನುಭವಿಸು (ಕೊಡೆಯೆಲೆಗಳ ತಿಂತಿಣಿಯಿಟ್ಟೆಡೆಗಳ ಕಟ್ಟಿಲೆಯನಿರುಳೆ ಗೆತ್ತು ಆತ್ಮೇಶಂ ತಡೆದೊಡೆ ನರೇಂದ್ರ ನೋಡೀ

ನಡುವಗಲೊಳ್ ಚಕ್ರವಾಕವಧು ವಿರಹಿಸುವಳ್: **ಆದಿಪು,** ೧೧. ೬೩)

ವಿರಳ – [ಗು] ಬೇರೆಯಾಗಿ, ದೂರ ದೂರ (ಮುನ್ನಂ ಅಕೃಷ್ಟಪಚ್ಯಂಗಪ್ಪುವಂದು ವಿರಳಂಗಳಾಗಿಯುಂ ಅನಲ್ಪಕಲ್ಪಾವನಿಜಂಗಳ್ ಅಪೇತರಸವೀರ್ಯಪಾಕಂಗಳಾಗಿಯುಂ: **ಆದಿಪು,** ೮.. ೬೧ ವ)

ವಿರಾಜಿ – [ಗು] ವಿರಾಜಮಾನವಾದ (ಶರ ಚಾಪ ಚಕ್ರ ಭೀಕರಕರವಾಳಾಯುಧ ವಿರಾಜಿ ಮತ್ಕರಯುಗಂ ಇಂದು ಒರೆಗಿಡೆ ಪೆಱಂಗೆ ಮುಗಿವುದೆ: **ಆದಿಪು,** ೧೨. ೧೦೦)

ವಿರಾಮ – [ನಾ] ಕೊನೆ (ಭೋಗಭೂಮಿವಿರಾಮದೊಳ್ ಈ ಕರ್ಮಭೂಮಿಪ್ರಾರಂಭದೊಳ್ ಎಮಗೆ ನಿಜೆಸಲ್ವೇಳ್ಕುಮೆಂದು ಮನದೊಳ್ ಬಗೆದು: **ಆದಿಪು,** ೮. ೬೨ ವ)

ವಿರಿಂಚಿ – [ನಾ] ಬ್ರಹ್ಮ (ಇಂಚೆಯ ಪಸವಿನ ಬಱದ ಕಳಂಚಿನ ಡಾವರದ ಬಾಧೆಯಿಲ್ಲದ ಪದದೊಳ್ ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡೂರ್ಗಳ್: **ಪಂಪಭಾ,** ೮. ೫೧)

ವಿರುತಿ – [ನಾ] ಧ್ವನಿ (ನೆರೆದ ಸಮಸ್ತದೇವನಿಕುರುಂಬದ ಯಾನವಿಮಾನ ಕಿಂಕಿಣೀವಿರುತಿಯ ದುಂದುಭಿಧ್ವನಿಯ ಮಂಗಳಗೇಯದ ನಾದಮಂ: **ಆದಿಪು,** ೩. ೨೨)

ವಿರುವತ್ – [ಗು] ಝೇಂಕರಿಸುವ, ಶಬ್ದಮಾಡುವ (ಅಮರಗಣಿಕೆಯರ ಮನಂ ವಿರುವತ್ ಅಳಿನಿಕರದೊಡನಿರದೆ ಎಱಗಿದುವು ಅಮರತರುಲತಾಂತಾವಳಿಯೊಳ್: **ಆದಿಪು,** ೭. ೬೮)

ವಿರೋಚನ – [ನಾ] ಸೂರ್ಯ (ಉಭಯಲೋಕವಿವೇಕ ವಿರೋಚನಾಸ್ತಮಯ ವೇಳೆಯುಂ: **ಆದಿಪು.** ೧೪. ೧೨೨ ವ)

ವಿರೋಧಿನೃಪ – [ನಾ] ಶತ್ರುರಾಜ (ತ್ರಿವಳಿಗಳುಂ ವಿರೋಧಿನೃಪರುತ್ಸವಮುಂ ಕಿಡೆವಂದುವು ಆನನೇಂದುವ ಕಡುವೆಳ್ಪು: **ಪಂಪಭಾ,** ೧. ೧೨೫)

ವಿರ್ದಾಡು – [ಕ್ರಿ] ಔತಣ ಮಾಡು (ತೋಡುವೆಂ ಒರ್ವನ ಒಳ್ಗರುಳಂ ಉರ್ವಿಗೆ ನೆತ್ತರನೆತ್ತಿ ಪೀರ್ದು ವಿರ್ದಾಡುವೆಂ ಒರ್ವನ ಊರುಗಳಂ ಎನ್ನ ಗದಾಶನಿಘಾತದಿಂದೆ ನುರ್ಗಾಡುವೆಂ: **ಪಂಪಭಾ,** ೯. ೨೪)

ವಿಲಂಬಿತ – [ಗು] ನಿಧಾನವಾದ (ಯುಗಪ್ರಮಾಣ ಕ್ಷೋಣೀನಿರೀಕ್ಷಣ ನಿರುತನುಂ ಅತಿದ್ರುತವಿಲಂಬಿತಗತಿವ್ಯಪೇತನುಂ ಆಗಿ: **ಆದಿಪು,** ೯. ೧೨೯ ವ)

ವಿಲಾಸ – [ನಾ] ಶೃಂಗಾರಚೇಷ್ಟೆ (ಸೊಗಯಿಪ ತಮ್ಮ ಜವ್ವನದ ತಮ್ಮ ವಿಭೂತಿಯ ತಮ್ಮ ತಮ್ಮ ಚೆಲ್ವುಗಳ ವಿಲಾಸದೂರ್ಮೆಗಳೊಳ್ ಆವೆವಗಾಗಿಪೆವೆಂದು ಬಂದ ಚೆನ್ನಿಗರುಂ: **ಪಂಪಭಾ,** ೧. ೧೦೬)

ವಿಲಿಖಿತ – [ಗು] ಬರೆಯಲ್ಪಟ್ಟ, ಚಿತ್ರಿತವಾದ (ಮೃಗಮದ ವಿಲಿಖಿತ ವಿಚಿತ್ರಪತ್ರಭಂಗ ಭಾಸುರಭುಜಶಿಖರನುಂ: **ಆದಿಪು,** ೩. ೯೦ ವ)

ವಿಲಿಪ್ತ – [ಗು] ಬಳಿಯಲ್ಪಟ್ಟ (ನೀಲನೀರದತನುಚ್ಛವಿ ಭಸ್ಮರಜೋ ವಿಲಿಪ್ತಂ ಅಂಜನಗಿರಿಯಂ ಶರಜ್ಜಳಧರಂ ಕವಿದಂತಿರೆ ಚೆಲ್ವನಾಳ್ದು: **ಪಂಪಭಾ,** ೭. ೫೯)

ವಿಲುಪ್ತ – [ಕ್ರಿ] ನಾಶಗೊಂಡ (ಚಪಳ ಕಪಿಬಳವಿಲುಪ್ತ ವಿಗಳಿತ ಲತಾಭವನಮುಂ: **ಪಂಪಭಾ,** ೪. ೧೮ ವ)

ವಿಲುಳಿತ – [ಗು] ತಿರುಗಿದ (ಧೃಷ್ಟದ್ಯುಮ್ನ ಕಚಗ್ರಹವಿಲುಳಿತಮೌಳಿಯುಂ ತದೀಯ ಕೌಕ್ಷೇಯಕ ಧಾರಾವಿದಾರಿತಶರೀರನುಂ ಆಗಿ ಬಿಟ್ಟಿರ್ದ ಶರಾಚಾರ್ಯರಂ ಕಂಡು: **ಪಂಪಭಾ,** ೧೩. ೫೫ ವ)

ವಿಲೇಪನ – [ನಾ] ಸುಗಂಧ (ಗುರೂಪರೋಧವಶದಿಂ ಸ್ನಾನ ಅನ್ನಪಾನಂ ವಿಲೇಪನ ಮಾಲ್ಯಾದಿಗೆ ತಾನೊಡಂಬಡುವನೇಂ ದೇವಂ ನಿರಾಪೇಕ್ಷನೋ: **ಆದಿಪು,** ೫. ೮೬)

ವಿಲೋಕನ – [ನಾ] ನೋಟ, ನೋಡುವಿಕೆ (ಅಭಿನವಸಂಗಸಮುತ್ಪನ್ನ ಸಾಧ್ವಸ ರಸರಮಣೀಯತರ ಮುಗ್ಧವಧೂವದನವಿಲೋಕನ ಸುಖಮನನುಭವಿಸಿ: **ಆದಿಪು,** ४. ೫೧ ವ)

ವಿಲೋಕನಚಂದ್ರಿಕೆ – [ನಾ] ನೋಟ ಎಂಬ ಬೆಳುದಿಂಗಳು (ಮದೀಯ ಮನೋಗತ ಕಾಮಸಾಗರದ ಒದವಿಂಗೆ ನಲ್ಲಳ ವಿಲೋಚನಚಂದ್ರಿಕೆಯೊಂದೆ ಸಾಲದೇ: **ಪಂಪಭಾ,** ೫. ೧೧) [ಪರಿಷತ್ತಿನ ಮುದ್ರಣದ ಪಾಠ]

ವಿಲೋಚನರುಚಿ – [ನಾ] ಕಣ್ಣ ಕಾಂತಿ (ಅನರ್ಥಕಲಲಾಟ ತ್ರಿಪತಾಕೆಯುಂ ವಿಲೋಹಿತ ವಿಲೋಹನರುಚಿಯುಂ ಅಳೀಕಭ್ರುಕುಟಿಯುಂ: **ಆದಿಪು,** ೧೪. ೮೧ ವ)

ವಿಲೋಚನಾಂಬು – [ನಾ] ಕಣ್ಣೀರು (ಉಣ್ಮಿಪೊಣ್ಮಿ ಕಣ್ಮಲರ್ಗಳಿಂ ಎಚ್ಚುಪಾಯ್ದುವು ಅರಲಂಬುಗಳಂತೆ ವಿಲೋಚನಾಂಬುಗಳ್: **ಪಂಪಭಾ,** ೪. ೧೦೮)

ವಿಲೋಚನಾಗ್ನಿ – [ನಾ] [ಶಿವನ] ಕಣ್ಣ ಬೆಂಕಿ (ಭವಲಾಲಾಟ ವಿಲೋಚನಾಗ್ನಿಶಿಖೆಯಿಂ ಬೆಂದಳ್ಕಿ ಮತ್ತಂ ಮನೋಭವಂ ಎಟ್ಟಿತ್ತೊಡೆ: **ಪಂಪಭಾ,** ೭. ೨೪)

ವಿಲೋಲೇಕ್ಷಣೆ – [ನಾ] [ವಿಲೋಲ+ಈಕ್ಷಣೆ] ಚಂಚಲನೇತ್ರವುಳ್ಳವಳು (ಇದೆ ಮದನಭವನಂ ಇಂತಿದೆ ಮದನಾಮೃತಂ ಇದುವೆ ಮದನಸಾಯಕಂ ಪೋ ಮದನಮಹೋತ್ಸವಪದಂ ಎನಿಸಿದುದು ಕಟಾಕ್ಷೇಕ್ಷಣಂ ವಿಲೋಲೇಕ್ಷಣೆಯಾ: **ಪಂಪಭಾ,** ೮. ೬೧)

ವಿಲೋಹಿತ – [ಗು] ಕೆಂಪಾದ (ಅಪಾರ್ಥ ವಿಲೋಹಿತ ವಿಲೋಚನರುಚಿಯುಂ ನಿರರ್ಥಕ ನಿಷ್ಠುರೋಷ್ಠಪುಟ ಸಂದಂಶಮುಂ: **ಆದಿಪು,** ೧೪. ೮೧ ವ)

ವಿವಾಹ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಮದುವೆ (ವಿವಾಹ .. .. ಯೋಗತ್ಯಾಗಾಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಮಪ್ಪ ಗರ್ಭಾನ್ವಯಕ್ರಿಯೆಗಳುಂ: **ಆದಿಪು,** ೧೫. ೧೫ ವ)

ವಿವಾಹಗೇಹ – [ನಾ] ಮದುವೆಯ ಮನೆ, ಮದುವೆಯ ಮಂಟಪ (ವಿವಾಹಗೇಹಮಂ ಸಮೆಯಿಸಿ ಅದಱ ನಡುವಣ ಆರ್ದ್ರಮೃತ್ತಿಕಾವಿರಚಿತಮಪ್ಪ ಚತುರಾಂತರದೊಳ್: **ಪಂಪಭಾ,** ೩. ೭೪ ವ)

ವಿವಾಹವಿಮುಖೆ – [ನಾ] ಮದುವೆಯನ್ನು ತೊರೆದವಳು (ಬ್ರಹ್ಮಿಯುಂ ಸೌಂದರಿಯುಂ ಅತ್ತ ನಿರ್ವೇಗೆಯರ್ ವಿವಾಹವಿಮುಖೆಯರಾಗಿ ಗುರುಪ್ರಸಾದದಿಂ ದೀಕ್ಷೆಯಂ ಕೈಕೊಂಡು: **ಆದಿಪು,** ೧೦. ೬೫ ವ)

ವಿವಿಕ್ತಾವಾಸ – [ನಾ] [ಜೈನ] ಗಂಡಸರು ಹೆಂಗಸರು ನಪುಂಸಕರು ಮೃಗಪಶುಗಳು ಇಲ್ಲದ ಸ್ಥಳದಲ್ಲಿ ವಾಸಿಸುವ ಪ್ರತಿಜ್ಞೆಯ ಐದನೆಯ ತಪಸ್ಸು (ಸ್ತ್ರೀಪುನ್ನಪುಂಸಕಮೃಗಪಶುಪರಿವರ್ಜಿತ ವಿವಿಕ್ತಸ್ಥಾನಂಗಳೊಳ್ ನೆಲಸುವ ವಿವಿಕ್ತಾವಾಸಮೆಂಬ ಅಯ್ದನೆಯ ತಪದೊಳಂ: **ಆದಿಪು**, ೬. ೩೦ ವ)

ವಿವಿಧ – [ನಾ] ನಾನಾ ಬಗೆಯ (ವಿವಿಧಾರ್ಚನೆಗಳಿನರ್ಚಿಸಿ ವಿವಿಧಸ್ತುತಿಸಹಸ್ರದಿಂ ಸ್ತುತಿಯಿಸಿ: **ಆದಿಪು**, ೫. ೨೭)

ವಿವೇಕ – [ನಾ] ಅರಿವು (ಜ್ಯೋತಿರ್ಲೋಕಮಿದೊಂದುಂಟೆಂಬ ವಿವೇಕಮಂ ಒಡರಿಸಿದುದು ಅಮರಸಮಿತಿಯ ಮನದೊಳ್: **ಆದಿಪು**, ೭. ೯೪)

ವಿಶದ – [ಗು] ಅಗಲವಾದ (ಅತಿವಿಶದ ವಿಶಾಲೋರುಕ್ಷತದಿಂದೊಱ್ದನಿತು ಜಡೆಯುಮಂ ನಾಂದಿ ಮನಃಕ್ಷತದೊಡನೆಟ್ಟಿರಿಸಿದುದುತ್ಥಿತಮಾ ವಂದಸ್ರಮಿಶ್ರಗಂಧಂ ಮುನಿಯಂ: **ಪಂಪಭಾ,** ೧. ೧೦೫); [ಗು] ಸ್ವಚ್ಛವಾದ (ಕಲ್ಹಾರಸಾರಾಮೃತ ಶಶಿ ವಿಶದಾತ್ಮೀಯವಂಶಕ್ಕೆ ಚೂಡಾಮಣಿಯಂ: **ಪಂಪಭಾ**, ೭. ೯೫)

ವಿಶದಂ ಮಾಡು – [ಕ್ರಿ] ಪ್ರಕಾಶಗೊಳಿಸು (ಅದಂ ನೀಂ ವಿಶದಂ ಮಾಟ್ಪುದು ಜಗದ್ವಿಶೇಷಕಚರಿತಾ: **ಆದಿಪು**, ೯. ೬೩)

ವಿಶದದರ್ಶನ – [ನಾ] ಸ್ಪಷ್ಟವಾಗು ಕಾಣುವಂಥದು (ಶೂನ್ಯವಾದ ಪ್ರಕಾಶನಪರಂ ಆವುದಂತರ್ಬಹೀರೂಪದಿಂ ವಿಶದದರ್ಶನಾವಗಮ್ಯಂ ಅದೆಲ್ಲಂ ಅಸತ್ಯಾವಭಾಸಿ: **ಆದಿಪು,** ೨. ೯ ವ)

ವಿಶದಯಶ – [ನಾ] ಶುಭ್ರಕೀರ್ತಿ (ವಿಶದಯಶ ಧರ್ಮಂ ಅಷ್ಟಾದಶಕೋಟ್ಯನುಕೋಟಿ ಸಾಗರೋಪಮಕಾಲಂ ಪ್ರಶಮಿಸಿ ನಿಂದುದು: **ಆದಿಪು**, ೯. ೬೩)

ವಿಶದೀಕೃತ – [ಗು] ನಿರ್ಮಲವಾದ (ದೇವಿ ಮರುದೇವಿ ವಿಶದೀಕೃತಾಶಾಂತದೊಳ್ ಭಾವಿ ಜಿನಜನನಿ ಸತಿ ಪವಡಿಸಿ ನಿಶಾಂತದೊಳ್: **ಆದಿಪು**, ೭. ೨೭ ರಗಳೆ)

ವಿಶದೋಜ್ಜೃಂಭಿತ – [ಗು] ಉಜ್ವಲವಾಗಿ ವ್ಯಾಪಿಸಿದ (ವಿಶಧೋಜ್ಜೃಂಭಿತ ಯೌವನಾಸವಮದಪ್ರೋಲ್ಲಾಸದಿಂ ಚಿತ್ತಭೂವಶೆಯೊರ್ಬಳ್: **ಆದಿಪು**, ೧೧. ೧೮)

ವಿಶರಾರು – [ನಾ] ನಾಶಗೊಳ್ಳುವಂಥದು, ನಶ್ವರವಾದುದು (ಉತ್ತರೋತ್ತರ ಚಿತ್ತಕ್ಷಣಂಗಳ್ ಉಪಾದಾನೋಪಾದೇಯಕ್ಷಣ ಸಂಪೃಕ್ತಂಗಳ್ ನಿರನ್ವಯ ಪ್ರತಿಕ್ಷಣವಿಶರಾರುಗಳ್: **ಆದಿಪು**, ೨. ೯ ವ)

ವಿಶಸನರಂಗ – [ನಾ] ಯುದ್ಧರಂಗ (ಎನ್ನ ತೊಟ್ಟುವೆಸನನೀ ವಿಶಸನರಂಗದೊಳ್ ತೋರ್ಪೆಂ: **ಪಂಪಭಾ**, ೧೨. ೬ ವ)

ವಿಶಾಪೆ – [ನಾ] ಾಪಮುಕ್ತಳಾಗು (ವರ್ಧಮಾನನೆಂಬ ಋಷಿಯ ಶಾಪದೊಳ್ ಉಗ್ರ ಗ್ರಾಹಸ್ವರೂಪದೊಳಿರ್ದ ಅಚ್ಚರಸೆಯರುಮಂ ವಿಶಾಪೆಯರ್ ಮಾಡಿ: **ಪಂಪಭಾ**, ೪. ೨೦ ವ)

ವಿಶಾಲ – [ಗು] ವಿಸ್ತಾರವಾದ (ಸಾಲಪ್ರಾಂಶುವಿಶಾಲಲೋಲನಯನಂ ಜಯಶ್ರೀಲೋಲಂ ಜಮದಗ್ನಿರಾಮಮುನಿಯೊಳ್ ಕಲ್ತಂ ಧನುರ್ವಿದ್ಯೆಯಂ: **ಪಂಪಭಾ,** ೧. ೬೮)

ವಿಶಾಲಂಬರಿ – [ಕ್ರಿ] ಎಲ್ಲೆಂದರಲ್ಲಿ ಓಡಾಡು (ಬೆರ್ಚಿ ಪೊಳೆದು ಪರಿವ ಪೊಳೆವುಲ್ಲೆಗಳುಮಂ ತಲೆಯಂ ಕುತ್ತಿ ವಿಶಾಲಂಬರಿವ ಕರಡಿಗಳುಮಂ: **ಪಂಪಭಾ**, ೫. ೪೮ ವ)

ವಿಶಿಖ – [ನಾ] ಬಾಣ (ಅಂತು ಗುರುನಂದನಂ ಮರುನ್ನಂದನವಿರಚಿತ ನಿಶಾತ ವಿಶಿಖಪಂಜರಮನಟಿದು ಕಟಿಕುಟಿಂ ಮಾಡಿಯುಂ ಅನಿತಱೊಳ್ ಮಾಣದೆ: **ಪಂಪಭಾ**, ೧೨. ೬೮ ವ)

ವಿಶಿಖಮೋಕ್ಷ – [ನಾ] ಬಾಣಪ್ರಯೋಗ (ವಿಪಕ್ಷವಿಶಿಖಮೋಕ್ಷ ಹೂಂಕಾರಮನೆ ನಿಜವಿಜಯಲಕ್ಷ್ಮಿಯುದಗ್ರವೀರ ಗ್ರಹಸ್ತೋಭನಾಕ್ಷರಮೆಂದುಂ: **ಆದಿಪು**, ೧೪. ೮೪ ವ)

ವಿಶಿಖಾಸನ – [ನಾ] ಬಿಲ್ಲು (ಆತನಿಂ ಬಟಿಯಂ ಅಸಂಖ್ಯೇಯಸಂವತ್ಸರ ಪ್ರಮಿತಮನ್ವಂತರಾವಸಾನದೊಳ್ ಅಷ್ಟಶತ ವಿಶಿಖಾಸನ ಉತ್ಸೇಧನುಂ ಅಸಂಖ್ಯೇಯ ಆಯುಷ್ಯನುಮಾಗಿ: **ಆದಿಪು**, ೬. ೫೫ ವ)

ವಿಶೀರ್ಣಂ – [ಗು] ಚೂರುಚೂರಾದ (ಗುಹಾಗಹನಗಹ್ವರ ಉದರ ವಿಶೀರ್ಣಂ ಆದಂದು ಅದೇಂ ಮುಹುಃ ಪ್ರಕಟಮಾದುದು ರವಿತನೂಭವಜ್ಯಾರವಂ: **ಪಂಪಭಾ,** ೧೨. ೧೩೬)

ವಿಶೀರ್ಣೆ – [ನಾ] ಭಂಗಿಸಿದವಳು (ವ್ಯಾಸವಚನದೊಳ್ ಸತ್ಯವತಿಯುಂ ಅಂಬಿಕೆಯುಂ ಅಂಬಾಲೆಯುಂ ಸಂಸಾರವಿಶೀರ್ಣೆಯರಾಗಿ: **ಪಂಪಭಾ,** ೨. ೨೯ ವ)

ವಿಶುದ್ಧಬುದ್ಧಿ – [ನಾ] ನಿರ್ಮಲವಾದ ಬುದ್ಧಿ (ಅಂಬಿಕೆ ಸರಸ್ವತಿ ಮತ್ ಮುಖಪದ್ಮರಂಗದ ಏಟಿಗ್ಗಿಯಂ ಎಡೆಗೊಂಡು ಕೊಂಡುಕೊನೆದು ಈಗೆ ಅರಿಗಂಗೆ ವಿಶುದ್ಧಬುದ್ಧಿಯಂ: **ಪಂಪಭಾ**, ೧. ೫)

ವಿಶೇಷಕ – [ನಾ] ಶ್ರೇಷ್ಠ (ಭುವನವಿಶೇಷಕಂ ಇಕ್ಷ್ವಾಕುವಂಶಗಗನೇಂದು ಚಕ್ರಾಧೀಶಂ ನವನಿಧಿವಲ್ಲಭಂ ಆನತ ದಿವಿಜಗಣಂ: **ಆದಿಪು**, ೧೩. ೭೩); [ನಾ] ಮುಖ್ಯಸ್ಥ (ಆಗಳ್ ಅಂತಕತನಯನುಂ ಧೃತರಾಷ್ಟ್ರತನಯನುಂ ಆರೂಢಮದಗಜರುಂ ಉಪಾರೂಢ ವಿಶೇಷಕರುಂ ಆಗಿ: **ಪಂಪಭಾ**, ೧೩. ೩೩ ವ)

ವಿಶ್ರಮಣಭೂಮಿ – [ನಾ] ವಿಶ್ರಾಂತಿಸ್ಥಾನ (ಭ್ರಮತ್ ಭ್ರಮರಭಗ್ನ ಮಾಧವೀಲತಾಲತಾಂತಂ ಅಧಿಕಮಕರಂದಬಿಂದುಚಿತ್ರಿತ ವಿಪುಳಪುಳಿನತಳಂಗಳೆ ವಿಶ್ರಮಣಭೂಮಿಗಳಾಗೆಯುಂ: **ಆದಿಪು**, ೪. ೫೨ ವ)

ವಿಶ್ರಮಿಸು – [ನಾ] ವಿಶ್ರಾಂತಿ ಪಡೆ (ಅನಂತಾನುಬಂಧಿ ಕ್ರೋಧ ಮಾನ ಮಾಯಾ ಲೋಭಂಗಳಂ ವಿಸಂಯೋಜಿಸಿ ಅಂತರ್ಮುಹೂರ್ತಮಂ ವಿಶ್ರಮಿಸಿ: **ಆದಿಪು,** ೧೦. ೧೪ ವ)

ವಿಶ್ರಾಂತ – [ಗು] ವ್ಯಾಪಿಸಿರುವ (ಆ ಬಾಹುಮೂಲ ಪರ್ಯಂತವಿಶ್ರಾಂತ ಕುಚಮಂಡಲೆಯರೊಳ್ ಆ ಲಕ್ಷ್ಮೀಲೀಲಾವಿಹಾರಾಚಳ ರುಚಿರವಕ್ಷಸ್ಸ್ಥಳಂ: **ಆದಿಪು**, ೮. ೨೩ ವ)

ವಿಶ್ರುತ – [ಗು] ವಿಖ್ಯಾತ (ಆರ್ಯನುತ ಗೃಧ್ರಪಿಂಛಾಚಾರ್ಯ ಜಟಾಚಾರ್ಯ ವಿಶ್ರುತ ಶ್ರುತಕೀರ್ತ್ಯಾಚಾರ್ಯಪುರಸ್ಸರಮಪ್ಪ ಆಚಾರ್ಯಪರಂಪರೆಯೆ ಕುಡುಗೆ ಭವ್ಯೋತ್ಸವಮಂ: **ಆದಿಪು,** ೧. ೧೨)

ವಿಶ್ಲಥ – [ಗು] ಸಡಿಲಗೊಂಡ (ಸೋಗೆನವಿಲೊಯ್ಯನೆ ಕರ್ಕಡೆಗಾಸಿಯಾಗು ಪಾಱುವುದಂ ಇದೆನ್ನ ನಲ್ಲಳ ರತಿಶ್ರಮವಿಶ್ಲಥ ಕೇಶಪಾಶದೊಳ್ ಸವಸವನಾಗಿ ತೋಱಿದಪುದು: **ಪಂಪಭಾ**, ೫. ೫೧)

ವಿಶ್ವಂಭರೆ – [ನಾ] ಭೂಮಿ (ಚಕ್ರನಿಧೀಶಂ ಆದಿಭೂಭುಜನೆನೆ ನೆಗಟ್ದಿಂ ಭರತಚಕ್ರಿ ವಿಶ್ವಂಭರೆಯೊಳ್: **ಆದಿಪು**, ೧೫. ೩)

ವಿಶ್ವಕರ್ಮ – [ನಾ] ಸೃಷ್ಟಿಕರ್ತ, ವಾಸ್ತುಶಿಲ್ಪಿ (ಮಯನೆಂಬ ದಾನವ ವಿಶ್ವಕರ್ಮಂ ನೆಗೆದುರಿವ ಉರಿಮಾಲೆಗಳಂ ಗದೆಯೊಳ್ ಬೀಸುತ್ತುಂ ಪೊಱಮಡೆ: **ಪಂಪಭಾ**, ೫. ೯೭ ವ)

ವಿಶ್ವಧಾತ್ರೀವಳಯ – [ನಾ] ಸಕಲ ಭೂಮಂಡಲ (ಕುಳಶೈಳಂಗಳ್ ಅಂಭೋನಿಧಿಗಳ್ ಅಖಿಳ ದಿಗ್ದಂತಿಗಳ್ ವಿಶ್ವಧಾತ್ರೀವಳಯಂ ಪಾತಾಳಮೂಲಂ ಸಕಲಭುವನಂ ಒಂದೊಂದಱೊಳ್ ಕೇಣಿಗೊಂಡು: **ಪಂಪಭಾ**, ೧೦. ೬೫)

ವಿಶ್ವನರೇಂದ್ರವೃಂದ – [ನಾ] ಸಮಸ್ತ ರಾಜಸಮೂಹ (ವಿಶ್ವನರೇಂದ್ರವೃಂದದೊಳ್ ತೊಡರ್ದ ಪರಾಭವಂ ದ್ರುಪದನಂ ತಱಿದೊಟ್ಟದೆ ಕೆಮ್ಮಗಾನಿದಂ ಕಡೆಗಣಿಸಿದೊಡೆ: **ಪಂಪಭಾ**, ೩. ೬೬)

ವಿಶ್ವಲೋಚನ – [ನಾ] ವಿಶ್ವದ ಕಣ್ಣು, ಜಿನ (ಚ್ಯುತನಾದನಲ್ತೆ ವಿಶ್ವಲೋಚನಂ ಅಘವೈರಿಗಲ್ಲದೆ ಉಟಿದಂ ಗೆಲಲಾರ್ಕುಮೆ ಮೃತ್ಯುರಾಜನಂ: **ಆದಿಪು**, ೩. ೮)

ವಿಶ್ವವಿದ್ಯೇಶ್ವರ – [ನಾ] ಸಕಲವಿದ್ಯಾವಿಶಾರದ (ಮಹೋತ್ಪನ್ನಮತಿ ಶ್ರುತಾವಧಿಬೋಧನಪ್ಪುದಱಿಂ ವಿಶ್ವವಿದ್ಯೇಶ್ವರನುಂ ಅಪಗತಾನೇಕ ಲೋಕವ್ಯಾಪಾರಕನುಂ .. .. ಅಪ್ಪುದಱಿಂದಂ: **ಆದಿಪು**, ೮. ೩ ವ)

ವಿಶ್ವಾಚಲಚಕ್ರೇಶತ್ವ – [ನಾ] ಎಲ್ಲ ಪರ್ವತಗಳ ಚಕ್ರವರ್ತಿ ಪದವಿ (ವಿಶ್ವಾಚಲಚಕ್ರೇಶತ್ವಮಂ ತಾಳ್ದಿದುದು ಅಖಿಳಧರಾರಮ್ಯ ಹೈಮಾಚಳಂ: **ಪಂಪಭಾ**, ೪. ೧೪)

ವಿಷ – [ನಾ] ನಂಜು (ವಿಷದ ಲಡ್ಡುಗೆಯನಿಕ್ಕಿಯುಂ ಎನಿತಾನುಂ ಉಪದ್ರವಂಗಳೊಳ್ ತೊಡರಿಕ್ಕಿಯುಂ ಗೆಲಲಾಱದೆ: **ಪಂಪಭಾ**, ೨. ೬೨ ವ)

ವಿಷಗ್ರಸ್ತ – [ನಾ] ವಿಷದಿಂದ ಹಿಡಿಯಲ್ಪಟ್ಟವನು, ಆವೃತನಾದವನು (ವಿವಿಧಾರಂಭಪರಿಗ್ರಹಂ ವಿಷಯಸೌಖ್ಯಾಯತ್ತಂ ಅತ್ಯಂತ ಲೋಭವಿಷಗ್ರಸ್ತಂ ದ್ರವಿಣಮಂ ಬಯ್ತು ಉದ್ಧತಂ: **ಆದಿಪು**, ೫. ೪)

ವಿಷಧರ – [ನಾ] ಸರ್ಪ (ವಿಷಧರನಾಗದೆ ಬೇಗಂ ವಿಷಯಾಮಿಷ ವಿಷಮನುಗುಟ್ದು ನಿರ್ವಿಷನಾಗು: **ಆದಿಪು**, ೨. ೧೭)

ವಿಷಧಿ – [ನಾ] [ವಿಷ]ಸಮುದ್ರ, ಕಡಲು (ಸಾಲದೆ ವಿಷಯಾಮಿಷ ವಿಷಲೋಲತೆ ಭವವಿಷಮವಿಷಧಿಯೊಳಗೆನಿತಂ ನೀಂ ಓಲಾಡುವೆ: **ಆದಿಪು**, ೩. ೬೪)

ವಿಷಪನ್ನಗ – [ನಾ] ವಿಷಸರ್ಪ (ನೆಗೆದು ಬರ್ಪ ವಿಷಪನ್ನಗನಂ ಪನ್ನತನಂ ಎಡೆಯೊಳ್ ಅರಿಗಂ ತನ್ನಯ ಗರುಡಾಸ್ತ್ರದಿಂದೆ ಕುಱಿದಱಿದಱಿದಂ: **ಪಂಪಭಾ**, ೧೨. ೨೦೫)

ವಿಷಮ – [ಗು] ಕೇಡುಂಟುಮಾಡುವ (ಅಂತಪ್ಪುವುದುಂ ವಿಷಮ ವಿಷವಲ್ಲಿಯನಪ್ಪಿದಂತೆ ತಳ್ತ ನಲ್ಲಳ ಮೃದುಮೃಣಾಳ ಕೋಮಲ ಬಾಹುಪಾಶಗಳೆ ಯಮಪಾಶಂಗಳಾಗೆ: **ಪಂಪಭಾ**, ೨. ೧೮ ವ); **[ಗು]** ಸಮತಟ್ಟಲ್ಲದ, ಹಳ್ಳತಗ್ಗುಗಳ (ದುರ್ನಿರೀಕ್ಷ್ಯ ನರ್ತಿತಾನೇಕ ಕಬಂಧಬಂಧುರಮುಂ ಅಪ್ಪ ವಿಷಮಪ್ರದೇಶಂಗಳೊಳ್: **ಪಂಪಭಾ**, ೧೩. ೫೧ ವ)

ವಿಷಮಮತಿ – [ನಾ] ನೀಚಬುದ್ಧಿ (ಮಾತ್ಸರ್ಯ ಮಹಾವಿಷಮ ಮತಿಯಿಂದೆ ದೋಷಾಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂಗಳ್: **ಆದಿಪು**, ೧. ೨೨)

ವಿಷಯ – [ನಾ] ಆದಿದೇವನು ವಿಂಗಡಿಸಿದ ದೇಶಗಳು (ಕಾಶಿ ಕೌಸಲ ಕಳಿಂಗ ವಂಗ ಕಾಶ್ಮೀರ ಕರಹಾಟ ಕರ್ನಾಟ ಚೋಳ ಕೇರಳ ಪಾಂಚಾಲ ಮಾಳವ ಮಹಾರಾಷ್ಟ್ರ ಸೌರಾಷ್ಟ್ರ ವನವಾಸಿ ಆಂಧ್ರ ಕಾಂಭೋಜ ಬಾಹ್ಲಿಕ ತುರುಷ್ಕ ಕೇಕಯ ಸೌವೀರ ಆಭೀರ ಚೇರ ಶೂರಸೇನ ಅಪರಾಂತಿಕ ವಿದೇಹ ಸಿಂಧು ಗಾಂಧಾರ ಕುರುಜಾಂಗಣ ವಿದರ್ಭ ವತ್ಸ ಯವನ ಚೇದಿ ಪಲ್ಲವ ದಶಾರ್ಣ ಅವಂತಿ ಕಚ್ಛ ಮಹಾಕಚ್ಛ ಮಗಧಾವನಿ ರಮ್ಯಕ ಆತ್ಮಕ ಕುರು ಸಮುದ್ರಕಾದಿ ವಿಷಯಂಗಳುಮಂ: **ಆದಿಪು**, ೮. ೬೩ ವ); **[ನಾ]** ಇಂದ್ರಿಯಸುಖ (ವಿಷಯಾನಿಳನಿಂದೆನಿತೆನಿತಂ ಮಱುಗಿದುದಿಲ್ಲ ಅನಂತಸಂಸಾರಗಹನದೊಳ್ ಜೀವಂಗಳ್: **ಆದಿಪು**, ೯. ೫೩); **[ನಾ]** ರಾಜ್ಯ (ಬಳಸಿರ್ದ ಮದಾಳಿ ಸಂಕುಲಂ ವಿಷಯಾಂಗನಾಲುಳಿತ ಕುಂತಳದಂತೆವೊಲ್ ಒಪ್ಪಿ ತೋಱುಗುಂ: **ಪಂಪಭಾ**, ೧. ೫೩)

ವಿಷಯಕಾಂಕ್ಷೆ – [ನಾ] ಭೋಗಾಕಾಂಕ್ಷೆ (ಪ್ರಿಯವಿಷಯಕಾಂಕ್ಷೆಯಿಂದ ಇಂದ್ರಿಯಂಗಳಂತೆಯ್ದೆ ಮನಮನಾಶ್ರಯಿಸುಗುಂ: **ಪಂಪಭಾ**, ೯. ೧೩); **[ನಾ]** ರಾಜ್ಯಾಭಿಲಾಷೆ (ಅಯನಯ ಪರರಯ್ವರುಮಾಶ್ರಯಿಸಿರ್ದರ್ ವಿಷಯಕಾಂಕ್ಷೆಯಿಂ ಮುರರಿಪುವಂ: **ಪಂಪಭಾ**, ೯. ೧೩)

ವಿಷಯಾಂಗನಾ – [ನಾ] ದೇಶವೆಂಬ ಹೆಣ್ಣು (ನಂದನಾವಳಿಗಳಂ ಬಳಸಿರ್ದ ಮದಾಳಿಸಂಕುಲಂಗಳೆ ವಿಷಯಾಂಗನಾ ಲುಳಿತಕುಂತಳದಂತೆವೊಲ್ ಒಪ್ಪಿ ತೋಱುಗುಂ: **ಪಂಪಭಾ**, ೧. ೫೩)

ವಿಷಯಾಂತರಾಳ – [ನಾ] ದೇಶದ ಹರಹು (ಪೊಸ ನೆಯ್ದಿಲ ಕಂಪನೆ ಬೀಱಿ ಕಾಯ್ತು ಕೆಂಗೊಲೆಯೊಳೆ ಜೋಲ್ವ ಶಾಳಿ ನವಶಾಳಿಗೆ ಪಾಯ್ವ ಶುಕಾಳಿ ತೋಱಿ ಕೆಯ್ವೊಲಗಳಿನೊಪ್ಪಿ ತೋಱಿ ಸಿರಿ ನೋಡುಗುಮಾ ವಿಷಯಾಂತರಾಳದೊಳ್: **ಪಂಪಭಾ**, ೧. ೫೨)

ವಿಷಯಾಂಬುಧಿ – [ನಾ] [ವಿಷಯ+ಅಂಬುಧಿ] ಇಂದ್ರಿಯ ಬಯಕೆಗಳ ಸಮುದ್ರ, ಅಥವಾ ರಾಜ್ಯಾಸಕ್ತಿ ಎಂಬ ಸಮುದ್ರ (ಎಳೆ ರಸೆಯೊಳ್ ಅೞ್ದುದಂ ಭುಜಬಳದಿಂ ಮುನ್ನೆತ್ತಿದಂತೆ ವಿಷಯಾಂಬುಧಿಯೊಳ್ ಮುೞುಗಿರ್ದ ಎಮ್ಮಯ್ವರುಮಂ ಬಳಿಹರ ಪಿಡಿದೆತ್ತಲೆಂದು ಬಂದೈ ಬರವಂ: **ಪಂಪಭಾ**, ೯. ೧೫)

ವಿಷಯಾರ್ಥಿ – [ನಾ] ಇಂದ್ರಿಯಸುಖಾಪೇಕ್ಷಿ (ದೂರಂ ಯುಕ್ತಾಯುಕ್ತ ವಿಚಾರಂ ವಿಷಯಾರ್ಥಿಗೆಂಬುದಂ ಮಾಡುವಿರೇ: **ಆದಿಪು**, ೯. ೧೦೨)

ವಿಷವಲ್ಲಿ – [ನಾ] ವಿಷದ ಬಳ್ಳಿ (ಅಂತಪ್ಪುವುದುಂ ವಿಷಮ ವಿಷವಲ್ಲಿಯನಪ್ಪಿದಂತೆ ತಳ್ತ ನಲ್ಲಳ ಮೃದುಮೃಣಾಳ

ಕೋಮಲ ಬಾಹುಪಾಶಗಳೆ ಯಮಪಾಶಂಗಳಾಗೆ: **ಪಂಪಭಾ,** ೨. ೧೮ ವ)

ವಿಷಸಂಯುಕ್ತಾನ್ನ – [ನಾ] ವಿಷ ಬೆರೆಸಿದ ಆಹಾರ (ಆ ಲಾಕ್ಷಾಗೃಹದಾಹಮೊಂದೆ ವಿಷಸಂಯುಕ್ತಾನ್ನಂ ಅಂತೊಂದೆ ಪಾಂಚಾಲೀನಿಗ್ರಹಂ ಒಂದೆ ಟಕ್ಕುವಗೆಯಿಂ ಗೆಲ್ದಿರ್ದ ಜೂದೊಂದೆ: **ಪಂಪಭಾ,** ೯. ೨೨)

ವಿಷಾಣಕುಲಿಶದಂಡಹತಿ – [ನಾ] ದಂತದ ವಜ್ರದಂಡಸಮಾನವಾದ ಪೆಟ್ಟು (ಉದ್ವೃತ್ತ ಮತ್ತ ವಾರಣೇಂದ್ರ ವಿಷಾಣ ಕುಲಿಶ'ದಂಡಹತಿಯಿಂ ವನದುರ್ಗಭಂಗಮುಂ ವಿಪಕ್ಷಪಾರ್ಥಿವ ಮನೋರಥ ಭಂಗಮುಂ ಸಿದ್ಧಮಾಗೆಯುಂ: **ಆದಿಪು,** ೧೩. ೭೭ ವ)

ವಿಷಾದ – [ನಾ] ವಿಷಣ್ಣತೆ (ತಪ್ತತಪನೀಯಚ್ಛಾಯನುಂ ಸಪ್ತಹಸ್ತೋಚ್ಛ್ರಯನುಂ ನಿದ್ರಾಲಸ ಅಕ್ಷಿನಿಮೇಷ ಜರಾ ಶೋಕ ವಿಷಾದ ವಿರಹಿತನುಂ: **ಆದಿಪು,** ೬. ೬೯ ವ)

ವಿಷಾಪಹರಣ – [ನಾ] ವಿಷಜಂತುಗಳು ಕಚ್ಚಿದಾಗ ಮೈಯಿಂದ ವಿಷವನ್ನಿಳಿಸುವ ವಿದ್ಯೆ (ರತ್ನಪರೀಕ್ಷೆಗಳೊಳಂ ದಾರುಕರ್ಮ ವಾಸ್ತುವಿದ್ಯಾಪೂರ್ವಯಂತ್ರಪ್ರಯೋಗ ವಿಷಾಪಹರಣ .. .. ಗದಾದಿ ವಿವಿಧಾಯುಧಂಗಳೊಳಂ ಅತಿಪ್ರವೀಣನುಂ: **ಪಂಪಭಾ,** ೨. ೩೪ ವ)

ವಿಷಾವಿಳದಂಷ್ಟ್ರ – [ನಾ] ವಿಷದ ಹಲ್ಲುಗಳಿಂದ ಕೂಡಿದುದು (ದಂಡಕನೃಪಂ ಲೋಭಾಭೀಭೂತಂ ವಿಷಾವಿಲದಂಷ್ಟ್ರಂ ಶ್ವಯುವಾಗಿ ಪುಟ್ಟಿಸುಟೆಗುಂ ಮುಂ ಬಯ್ತ ಭಂಡಾರದೊಳ್: **ಆದಿಪು,** ೨. ೧೫)

ವಿಷೋರಗ – [ನಾ] ವಿಷಸರ್ಪ (ಅಡಿವಿಡಿದಿಟ್ಟ ಪುತ್ತುಗಳ ನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗಳ್ವಿಡಿದು ವಿಷೋರಗಪ್ರತತಿ ನೋಟಕ್ಕೊಡಗುರ್ವಿಸೆ ಸುಯ್ವ ಸುಯ್ಗಳಿಂ: **ಆದಿಪು,** ೧೪. ೧೪೦)

ವಿಷ್ಕಂಭ – [ನಾ] ಸುತ್ತಳತೆ (ಅಂತು ಬಂದು ಪಾಂಡುಕವನದ ಪೂರ್ವೋತ್ತರಾಶಾಮುಖ ನಿವಾಸಿಯಾಗಿ ಶತಯೋಜನ ವಿಷ್ಕಂಭದೊಳಂ ಪಂಚಷಡ್ಯೋಜನವಿಸ್ತಾರದೊಳಂ: **ಆದಿಪು,** ೭. ೭೩ ವ)

ವಿಷ್ಟಪ – [ನಾ] ಪ್ರಪಂಚ, ಲೋಕ (ಸಮಸ್ತವಿಷ್ಟಪಾಧೀಶ್ವರ ಪುರುಪರಮೇಶ್ವರ ಚರಣಸರಸಿಜ ರಜೋರಂಜಿತ ಮಣಿಕಿರೀಟ ಮಕರಿಕಾಚಕ್ರಂ: **ಆದಿಪು,** ೧೪. ೪೬ ವ)

ವಿಷ್ಟರ – [ನಾ] ಆಸನ (ಆಗಳ್ ದೊರೆಕೊಂಡಿರೆ ದೇವಾಗಮಂ ಏಕಾತಪತ್ರಮೆಸೆದಿರೆ ಕರಮಿಂಬಾಗಿರೆ ಚಾಮರಯುಗ್ಮಂ ಅದಾಗಳೆ ನಿಲೆ ದಿವ್ಯವಿಷ್ಟರಂ ಮಣಿಖಚಿತಂ: **ಆದಿಪು,** ೧೪. ೧೪೬)

ವಿಸಂಯೋಜಿಸು – [ಕ್ರಿ] ಬಿಟ್ಟುಬಿಡು, ತ್ಯಜಿಸು (ಅನಂತಾನುಬಂಧಿ ಕ್ರೋಧ ಮಾನ ಮಾಯಾ ಲೋಭಂಗಳಂ ವಿಸಂಯೋಜಿಸಿ: **ಆದಿಪು,** ೧೦. ೧೪ ವ)

ವಿಸರ – [ನಾ] ಅತಿಶಯತೆ, ಪ್ರವಾಹ (ಪುಳಕಪ್ರೋದ್ಭೇದ ಘರ್ಮೋದಕವಿಸರಮಂ ಒತ್ತಂಬದಿಂ ತಾಗೆಯುಂ: **ಆದಿಪು,** ೪. ೫೨)

ವಿಸರ್ಜಿಸು – [ಕ್ರಿ] ಬೀಳ್ಕೊಡು (ಎಂದು ಕೋಕಿಳಕುಳಮಂ ವಿಸರ್ಜಿಸಿ: **ಆದಿಪು,** ೧೧. ೧೩೬ ವ); [ಕ್ರಿ] ಬೀಳ್ಕೊಂಡು (ಅನೇಕಾಶೀರ್ವಾದಪುರಸ್ಸರಂ ಸಿಂಹಾಸನಮಂ ಕೊಟ್ಟ ಗಂಗಾದೇವಿಯಂ ವಿಸರ್ಜಿಸಿ: **ಆದಿಪು,** ೧೩. ೭೭ ವ); [ಕ್ರಿ] ಕಳಿಸಿ ಕೊಡು (ಓಲಗಿಸುತ್ತುಂ ಬಂದ ಪಂಡಿತರ್ಕಳುಮಂ ಉಚಿತ ಪ್ರತಿಪತ್ತಿಗಳಿಂ ವಿಸರ್ಜಿಸಿ: **ಪಂಪಭಾ,** ೪. ೬೯ ವ)

ವಿಸರ್ಪಣ – [ನಾ] ಹರಡುವಿಕೆ (ಸಂಹರಣ ವಿಸರ್ಪಣಸ್ವರೂಪನುಂ .. .. ಅಪ್ಪ ಜೀವನುಂಟೆಂದು: **ಆದಿಪು,** ೨. ೧೦)

ವಿಸಸನ – [ನಾ] ಯುದ್ಧ (ವಿಸಸನದೊಳ್ ವಿರೋಧಿನೃಪರಂ ತಜೆದೊಟ್ಟಲುಂ ಅರ್ಥಿಗರ್ಥಮಂ ಕಸವಿನ ಲೆಕ್ಕಮೆಂದು ಕುಡಲುಂ: **ಪಂಪಭಾ,** ೧. ೧೧೭)

ವಿಸ್ತಾರ – [ನಾ] ಹರಹು (ದಶಯೋಜನೋಪರಿಮತಳಸಮಾನ ವಿಸ್ತಾರದೊಳಂ .. .. ನೆಱೆದು: **ಆದಿಪು,** ೧. ೬೨ ವ); ಮರದ ಕೊಂಬೆ

ವಿಸ್ತಾರಕ – [ನಾ] ಮುಂದುವರಿಸಿದವನು (ಸಕಲಜಗದ್ವಿಸ್ತಾರಿತ ಯಶಂ ಅನ್ವಯವಿಸ್ತಾರಕನಾದಿದೇವನ ಅಗ್ರತನೂಜಂ: **ಆದಿಪು,** ೧೩. ೭೨)

ವಿಸ್ತಾರಿತ – [ನಾ] ಹರಡಿದವನು (ಸಕಲಜಗದ್ವಿಸ್ತಾರಿತಯಶಂ ಅನ್ವಯವಿಸ್ತಾರಕಂ ಆದಿದೇವನ ಅಗ್ರತನೂಜಂ: **ಆದಿಪು,** ೧೩. ೭೨)

ವಿಸ್ತಾರಿಸು – [ಕ್ರಿ] ಬೆಳೆಸು, ಪ್ರತಿಪಾದಿಸು (ಭಾರತಿ ಸಾತ್ವತಿ ಕೈಶಿಕಿ ಆರಭಟಿಯುಮೆಂಬ ವೃತ್ತಿಯೊಳ್ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು ಬೇಱೆ ನೀಲಾಂಜನೆಯಾ: **ಆದಿಪು,** ೯. ೨೬)

ವಿಸ್ತೀರ್ಣ – [ನಾ] ವಿಸ್ತಾರ (ಒರ್ವ ಪಾರ್ವಂ ವಿಸ್ತೀರ್ಣ ಜೀರ್ಣ ಕರ್ಪಟಾವೃತ ಕಟಿತಟನುಂ ಆಗಿ ಬಂದು ಕಣ್ಬುಚ್ಚಲ್ ಎಡೆವೇಡೆ ತನಗವರ್ ಪಾಸಲ್ಕೊಟ್ಟ ಕೃಷ್ಣಾಜಿನಮಂ ಪಾಸಿ ಪಟ್ಟಿರ್ದನಂ: **ಪಂಪಭಾ,** ೩. ೩೧ ವ); [ಗು] ಅಗಲವಾದ (ಆನಂದಜಳಪರಿಪೂರ್ಣ ವಿಸ್ತೀರ್ಣವಿಲೋಚನಂಗಳಿಂದಂ ಮುಹುರ್ಮುಹುರಾಲೋಕನಂಗೆಯ್ಯುತ್ತುಂ: **ಪಂಪಭಾ,** ೪. ೩೩ ವ)

ವಿಸ್ಫುರತ್ – [ಗು] ಹೊಳೆಯುವ (ವಿಸ್ಫುರತ್ ದಿನಕರನಂ ಚಿತ್ರಾಂಗದಾವನೀಶಂ ಕಂಡಂ: **ಆದಿಪು,** ೧೬. ೪೮)

ವಿಸ್ಫುರಿತ – [ಗು] ವೃದ್ಧಿಗೊಂಡ (ತನ್ನ ರತ್ನವಿಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿನಾಮಮಂ ಸರಸದಿಂ ಆಗಳುಚ್ಚರಿಸಿ ಸಾಹಸಮಂ ಪೊಗಟ್ದಂ ಸುರಾಧಿಪಂ: **ಪಂಪಭಾ,** ೫. ೧೦೩); [ಗು] ಉರಿಯುವ (ಪೋಕುಂ .. .. ಮೇಣ್ ಆಂ ಅವರಿದಿರಿದೊಳ್ ಕಾದಿ ಸತ್ತಂದು ಮೇಣ್ ವಿಸ್ಫುರಿತಂ ಮತ್ಕೋಪಮುಂ: **ಪಂಪಭಾ,** ೧೩. ೨೦)

ವಿಸ್ಫುಲಿಂಗ – [ನಾ] ಬೆಂಕಿಯ ಕಿಡಿ, ಕೆಂಡ (ಅನೇಕ ರಾಜನ್ಯಕಮಕುಟ ಸಂಘಟ್ಟನೋಚ್ಚಳನ್ಮಣಿಮರೀಚಿಗಳ್ ವಿಳಯಾನಿಳ ವಿಸ್ಫುಲಿಂಗಂಗಳಂತೆ ದೆಸೆದೆಸೆಗೆ ಕೆದಱೆ: **ಆದಿಪು,** ೧೪. ೮೨ ವ)

ವಿಸ್ಮಯ – [ನಾ] ಗೊಂದಲ, ಕಕ್ಕಾವಿಕ್ಕಿ (ದಂತಿಘಟಾವಳಿಯಿಂ ಎತ್ತವೋದುದು ಆವೆಡೆಯದು ಪೇೞ್ ದಿಶಾವಳಯಮೆಂಬಿನಂ ಆದುದೊಂದು ವಿಸ್ಮಯಂ: **ಆದಿಪು,** ೧೨. ೬೨); [ನಾ] ಆಶ್ಚರ್ಯ, ಬೆರಗು (ಅಂತು ಆ ವನಗಹನಮೆಲ್ಲಂ ದಹನಮಯಮಾದ ಪ್ರಸ್ತಾವದೊಳ್ ವಿಸ್ಮಯಮಾಗೆ: **ಪಂಪಭಾ,** ೫. ೯೭ ವ)

ವಿಸ್ಮಯನೀಯ – [ಗು] ಬೆರಗುಂಟುಮಾಡುವ (ವಿಷಮ ಕಠೋರ ಕೂರ್ಮ ಘರ್ಮನಿರ್ಭರೋಚ್ಛ್ವಾಸ ಭರದ್ವೈಧೀಭವತ್ ಅಂಭಃಪ್ರಕಟಿತ ಅಗಾಧ ರಂಧ್ರಾವರ್ತಮಾನ ಜಳಚರ ಸಂಚರಣ ವಿಸ್ಮಯನೀಯ ಭಯಾನಕೆಯುಂ: **ಆದಿಪು**, ೫. ೮೭ ವ);

ವಿಸ್ಮೃತಿ – **[ನಾ]** ಮರೆವು (ಅಳಕೋತ್ಸಾರಿತ ಕೇಶಸಂಯಮನ ನೀವೀಬಂಧನಾವಿಷ್ಕೃತಸ್ಖಳಿತಂ ವಿಸ್ಮೃತಿ ಪಕ್ಷ್ಮಪಾತನಂ: **ಆದಿಪು,** ೪. ೬೦)

ವಿಸ್ರಂಭಾಳಾಪ – **[ನಾ]** ವಿಶ್ವಾಸದಿಂದ ಕೂಡಿದ ಮಾತು (ನೇತ್ರತ್ರಿಭಾಗ ಕಟಾಕ್ಷ ಸಮಗ್ರೇಕ್ಷಣ ಭ್ರೂವಿಭ್ರಮ ದರಹಸಿತ ಆಳಾಪನ ಪರಿಹಾಸ ವಿಸ್ರಂಭಾಳಾಪಂಗಳಿಂ ಸಂತಸಂಬಡಿಸುತ್ತುಂ: **ಆದಿಪು,** ೧೧. ೨೫ ವ)

ವಿಸ್ರಸ್ತ – **[ಗು]** ನೀಗಿದ (ವಿಸ್ರಸ್ತಬಹಳದೋಷತಮಿಸ್ರರಂ ಅಖಿಳರ್ಧಿಗುಣ ವಿಭೂಷಣರಂ ಪುಣ್ಯಾಸ್ರವಕಾರಣರಂ ಪಿಹಿತಾಸ್ರವ ಮುನಿಪತಿಗಳಂ ಮನಂ ಬಿಡೆ ಕಂಡೆಂ **ಆದಿಪು,** ೩. ೩೬); **[ಗು]** ಜಾರಿದ (ನಾಭಿವಿಲಂಬಮಾನ ಲಂಬಸ್ತನವಿಸ್ರಸ್ತ ಅಂತರೀಯೋತ್ತರೀಯ ವೃದ್ಧಧಾತ್ರೀ ನರ್ತನನಿರೀಕ್ಷಣ ಜನತಾಜನಿತಹಾಸನಿವಾಸಮುಂ: **ಆದಿಪು,** ೮. ೩೫ ವ)

ವಿಹಗ – [ನಾ] ಹಕ್ಕಿ (ಕ್ರಮದೊಳ್ ಅಸಂಜ್ಞಿಯುಂ ಸರಿಸೃಪಾಳಿಯುಂ ವಿಹಗಾಳಿಯುಂ ಭುಜಂಗಮತತಿಯುಂ ಮೃಗಾರಿಗಣಮುಂ ಲಲನಾಜನಮುಂ: **ಆದಿಪು**, ೫. ೯೩)

ವಿಹರಣವಿಧಿ – **[ನಾ]** [ಜೈನ] ವಿಹರಣಕ್ರಮ (ಕೃತಸಕಳ ಮೇದಿನೀವಿಹರಣನೊಂದು ತಿಂಗಳ್ ವಿಹರಣವಿಧಿಯಂ ಮಾಣ್ದು ಬಂದು: **ಆದಿಪು,** ೮. ೨೮ ವ)

ವಿಹಾಯೋಗತಿ – [ನಾ] [ಜೈನ] ಆಕಾಶಗಮನ ಸಾಮರ್ಥ್ಯ (ಅಗುರು ಲಘುಚತುಷ್ಕ ವಿಹಾಯೋಗತಿ ದ್ವಿಕಸ್ಥಿರಾಸ್ಥಿರ .. .. ನೀಚೈರ್ಗೋತ್ರಗಳೆಂಬ ದ್ವಿಸಪ್ತತಿ ಪ್ರಕೃತಿಗಳಂ ನಿರವಶೇಷಂ ಕಿಡಿಸಿ: **ಆದಿಪು,** ೧೬. ೪೯ ವ)

ವಿಹಾರ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಧರ್ಮಚಕ್ರವನ್ನು ಹಿಂಬಾಲಿಸುತ್ತ ವಿಹರಿಸುವುದು (ವಿಹಾರ ಯೋಗತ್ಯಾಗಾಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ); ಇದಕ್ಕೆ 'ವಿಹರಣ' ಎಂದೂ ಕರೆಯುತ್ತಾರೆ

ವಿಹಾರಿಸು – **[ಕ್ರಿ]** ವಿಹರಿಸುವಂತೆ ಮಾಡು (ಚಂದನ ಪನಸ ನಾಳಿಕೇರ ತಾಂಬೂಲವಲ್ಲೀ ಪ್ರಚುರಪ್ರದೇಶಂಗಳೊಳ್ ನಿಜವಿಜಯ ಕುಂಜರಂಗಳಂ ವಿಹಾರಿಸಿ ಬಂದು: **ಆದಿಪು,** ೧೩. ೩ ವ)

ವಿಹಿತೋಪಹಾರ – [ನಾ] ಸೂಕ್ತವಾದ ಪೂಜೆ (ಜಗತ್ತ್ರಯತಿಳಕನ ಪಾದಪದ್ಮಂಗಳ್ಗೆ ಭರತೇಶ್ವರಚಕ್ರವರ್ತಿ ಮಹೀತಳನಿಹಿತ ಮಣಿಕಿರೀಟರಶ್ಮಿಸಂದೋಹ ಸಾಂದ್ರಕುಂಕುಮಪಂಕದಿಂ ವಿಹಿತೋಪಹಾರನಾಗಿ: **ಆದಿಪು,** ೧೩. ೮೨ ವ)

ವಿಹೃದ್ವಿಳಾಸ – **[ನಾ]** ವಿನೋದವಿಲಾಸ (ಜಳಕೇಳಿಯೊಳ್ ಅಧಿಪನನರ್ದೆಗೊಳಿಸಿದುವು ಅಂತಃಪುರೀಜನಂಗಳ ಲೀಲಾಕಿಳಕಿಂಚಿತ ಲಲಿತವಿಹೃದ್ವಿಳಾಸವಿಚ್ಛಿತ್ತಿವಿಭ್ರಮಾದಿ ಗುಣಂಗಳ್: **ಆದಿಪು**, ೧೧. ೧೪೨)

ವಿಹ್ವಲ – [ನಾ] ಅಸ್ಥಿರನಾದವನು (ವಿಯತ್ತಳಭ್ರಮಣವಿಹ್ವಲನಾಗಿ ಬಟಿಲ್ದು ಕಾಱುವಂತೆವೊಲಿರೆ: **ಪಂಪಭಾ**, ೪. ೪೬)

ವಿಳಂಬಿ – [ನಾ] ನೀಳವಾದು[ದು] (ಬಾಹುಗಳ್ ಆಜಾನುವಿಳಂಬಿಗಳ್ ತೊಡೆಗಳುಂ ರಂಭಾಮೃದುಸ್ತಂಭ ಶೋಭೆಗಳಂ ಗೆಲ್ದವು: **ಆದಿಪು**, ೧. ೭೪)

ವಿಳಂಬಿತ – **[ನಾ]** ಮಂದಗತಿಯ ಲಯ (ಅತನುರಸೋಪೇತ ವಿಳಂಬಿತ ಮಧ್ಯ ದ್ರುತಲಯಂಗಳೊಳ್ ಲಕ್ಷಣಸಂಯುತ ತತ್ತ್ವಾನುಗತೌಘ ಪ್ರತೀತವಾದ್ಯಂಗಳೆಸೆದುವು: **ಆದಿಪು**, ೯. ೨೩); **[ಗು]** ನೀಳವಾದ, ಉದ್ದವಾದ (ಅತ್ಯಂತನೇಕಮಣಿ ಮಯೂಖ ವಿಜೃಂಭಮಾಣ ಆಖಂಡವಿಳಂಬಿತ ಆಭೀಳಕೋದಂಡವಿಳಾಸ ವಿಭ್ರಮಸಿಂಹಾಸನಾಸೀನನುಂ: **ಪಂಪಭಾ**, ೯. ೨೮ ವ)

ವಿಳಯಕಾಲ – [ನಾ] ಪ್ರಳಯದ ಸಮಯ (ಯಾದವಬಲ ಜಳನಿಧಿವೆರಸು ವಿಳಯಕಾಲಜಳನಿಧಿಯಂತೆ ತೆರಳಲ್ ಬಗೆದ ಬಲದೇವನಂ: **ಪಂಪಭಾ**, ೫. ೨೧ ವ)

ವಿಳಯಕಾಲವಾತಾಹತಿ – [ನಾ] ಪ್ರಳಯ ಕಾಲದ ಗಾಳಿಯ ಹೊಡೆತ (ಅಂತು ನಾಲ್ವರುಂ ವಿಳಯಕಾಲವಾತಾಹತಿಯಿಂ ಕೆಡೆದ ಕುಲಗಿರಿಗಳಂತೆ ಕೆಡೆದು ವಿಗತಜೀವರಾಗಿರ್ದ ಪದದೊಳ್: **ಪಂಪಭಾ**, ೮. ೪೨ ವ)

ವಿಳಯಕಾಳಾಂಬುದ – [ನಾ] ಪ್ರಳಯಕಾಲದ ಮೋಡ (ಗಜಜೆ ಗರ್ಜಿಸಿ ವಿಳಯಕಾಳಾಂಬುದದಂತೆ ಮೊಟಿಗುಮಂ ಸಿಡಿಲ ಬಳಗಮನೊಳಕೊಂಡ: **ಪಂಪಭಾ**, ೫. ೮೫ ವ)

ವಿಳಯಾನಳ – [ನಾ] ಪ್ರಳಯಕಾಲದ ಬೆಂಕಿ (ವಿಳಯಾನಳವಿಳಸನ ವಿಸ್ಫುಲಿಂಗಸಂಘಾತದಿಂ ತಗುಳ್ದಡೆ: **ಪಂಪಭಾ,** ೧೨. ೮೫)

ವಿಳಯಾಶನಿ – [ನಾ] ವಿನಾಶಕಾರಕ ಸಿಡಿಲು (ಎಡಱು ಅಜೆದು ಈವ ಕಲ್ಪತರುವೆಂದು ವನೀಪಕಕೋಟಿ ಸಂತಸಂಬಡೆ ಪೊಡೆವ ಒಂದಕಾಳ ವಿಳಯಾಶನಿ ಎಂದು ವಿರೋಧಿಗಳ್ ಮನಂಗಿಡೆ: **ಪಂಪಭಾ**, ೨. ೯೮)

ವಿಳಯೋಳ್ಕ – **[ನಾ]** [ವಿಳಯ+ಉಳ್ಕ] ಪ್ರಳಯಕಾಲದ ಉಲ್ಕೆ (ಕೊಳ್ ಕೊಳ್ಳೆಂದು ಎಚ್ಚೊಡೆ ವಿಳಯೋಳ್ಕದ ತೆಱದಿಂದೆ ಮುಸುಱಿ ದಿವ್ಯಾಸ್ತ್ರಚಯಂಗಳ್ ಕೊಳೆ ಗಾಂಧರ್ವಬಲಂಗಳ್ ಕೆಡೆದುವು ಮಿಟ್ಟೆಗೊಂಡ ಚಿಟ್ಟೆಯ ತೆಱದಿಂ: **ಪಂಪಭಾ**, ೭. ೩೮)

ವಿಳಸನ – **[ನಾ]** ಕಾಟ (ಚರಮತನು ಸಾರ್ವಭೌಮಂ ಪುರುಪರಮೇಶ್ವರ ತನೂಜಂ ಅಂತು ಅತಿಭಂಗಂ ದೊರೆಕೊಂಡುದಿಂದು ಭರತೇಶ್ವರಂಗೆ ಹುಂಡಾವಸರ್ಪಿಣೀ ವಿಳಸನದಿಂ: **ಆದಿಪು**, ೧೪. ೧೧೪); **[ನಾ]** ಸೊಗಸು, ವಿಲಾಸ (ಲಳಿತೋತ್ಸವಧ್ವಜಾಂಶುಕ ವಿಳಸನಮಂ ಮುಂದೆ ನಿನಗೆ ತೋರ್ಪಂತಿರೆ ಕಣ್ಗೊಳಿಸಿರ್ದುದು ನೋಡ ಹಿಮಾಚಳಶಿಖರದ ಮೇಲೆ ಪಾಯ್ವ ಗಂಗಾಸ್ರೋತಂ: **ಪಂಪಭಾ**, ೭. ೭೩)

ವಿಳಸಿತ – **[ಗು]** ಹೊಳೆಯುವ, ಮಹಿಮಾನ್ವಿತವಾದ (ಆ ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂಗೊಳೆ ಕೊಟ್ಟಂ ದುರ್ವಾಸಂ ವಿಳಸಿತ ಮಂತ್ರಾಕ್ಷರಂಗಳಂ ದಯೆಯಿಂದಂ: **ಪಂಪಭಾ,** ೧. ೮೮ ಮತ್ತು ೧. ೮೯)

ವಿಳಾಪ – [ನಾ] ರೋದನ (ಒಱಲ್ದು ನಲ್ಲಳೊಳ್ ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋಗಿನ್ನೆನೆ ರೌದ್ರಶಾಪಪರಿತಾಪವಿಳಾಪದೊಳಾ ಮಹೀಶ್ವರಂ: **ಪಂಪಭಾ,** ೧. ೧೧೨)

ವಿಳಾಸ – [ನಾ] ಹಾವಭಾವ (ವಿಳಾಸಂ ಅಂಬರಚರ ಅಮರಕಾಂತೆಯರೆಲ್ಲರಂ ಪಳಂಚಲೆಯೆ: **ಆದಿಪು,** ೧. ೭೨)

ವಿಳಾಸವತಿ – [ನಾ] ಒಯ್ಯಾರಿ, ಬೆಡಗಿ (ನಳಿತೋಳಿಂ ಸೆಳೆಗೊಂಬಂ ತೆಗೆದೊರ್ವಳ್ ವಿಳಾಸವತಿ ತಿಱಿದಳ್ ಆಮ್ರನವಕಿಸಲಯಮಮ: **ಆದಿಪು,** ೧೧. ೧೦೫)

ವಿಳಾಸಿ – [ನಾ] ರಸಿಕ (ತಳಿರೊಳ್ ನೀನೆ ಬೆಡಂಗನ್ಯೆ ನನೆಗಳೊಳ್ ನೀಂ ನೀಱನ್ಯೆ ಪುಷ್ಪಸಂಕುಳದೊಳ್ ನೀನೆ ವಿಳಾಸಿಯ್ಯೆ: **ಆದಿಪು,** ೧೧. ೯೮)

ವಿಳಾಸಿನಿ – [ನಾ] ರಸಿಕ ಹೆಂಗಸು, ಸೂಳೆ (ಮೃಗಭೂ ಖುದ್ಧ ವಿಳಾಸಿನೀ ಕಬರಿಕಾಬಂಧಗಳಂ ಪೊತ್ತು ಮಲ್ಲಿಗೆಯೊಳ್ ಭಾವಿಸಿ .. .. ಪಳಂಚಿ ಸುಟಿದತ್ತು ಅಂದೊಂದು ಮಂದಾನಿಳಂ: **ಪಂಪಭಾ,** ೪. ೮೦)

ವಿಳಾಸಿನೀವಾಟ – [ನಾ] ಸೂಳೆಗೇರಿ (ಆಗಳಾ ಸ್ತ್ರೀಸಮೂಹಂ ನೆರೆದಿರಲಲ್ಲಿ ವಿಳಾಸಿನೀವಾಟದೊಳ್ ಒಂದೆಡೆಯೊಳ್: **ಆದಿಪು,** ೧೨. ೧೨ ವ)

ವಿಳುಳಿತ – [ಗು] ಚೆನ್ನಾಗಿ ಸಿಂಪಡಿಸಿದ (ನೃಪೇಶ್ವರನ ಘರ್ಮಜಳ ಕಣಗಣಮಂ ಕಳೆದುದು ಚಂದನಹಿಮಕರ ವಿಳುಳಿತಜಳ ಪರಿಚಿತಂ ಜಳಾರ್ದ್ರಸಮೀರಂ: **ಆದಿಪು,** ೧೧. ೭೪)

ವಿಳೋಕನ – [ನಾ] ವಿಲೋಕನ, ನೋಟ (ಮುಕುಳೀಕೃತಂ ಲಳಿತಮಧುರಂ ಲಜ್ಜಾಳೋಳಂ ಸ್ಮರಾಕುಳಿತಂ ಮನಂದಳಿಪಂ ಅಪಸನ್ಮುಗ್ಧ ಸ್ನಿಗ್ಧಂ ವಿಳೋಕನಮೋಪಳಾ: **ಪಂಪಭಾ,** ೪. ೭೭)

ವಿಳೋಳ – [ಗು] ಚಂಚಲವಾದ (ಆ ನರಸಿಂಹ ಮಹೀಶ ಮನೋನಯನಪ್ರಿಯೆ ವಿಳೋಳ ನೀಳಾಳಕೆ ಚಂದ್ರಾನನೆ ಜಾಕವ್ವೆ ದಲಾ ಜಾನಕಿಗಗ್ಗಳಮೆ ಕುಲದೊಳಂ ಶೀಲದೊಳಂ: **ಪಂಪಭಾ,** ೧. ೩೯)

ವೀಕ್ಷಣೈಕರಸ – [ನಾ] ನೋಡುವಿಕೆಯಿಂದ ಮಾತ್ರವೇ ಸಿಕ್ಕುವ ಆನಂದ, ನೃತ್ಯ (ಅಸಮಪ್ರೇಕ್ಷಣ ವೀಕ್ಷಣೈಕರಸಮಂ ಪಾರ್ದಿರ್ದುದೀ ರಾಜಪುತ್ರಸಮೂಹಂ: **ಆದಿಪು,** ೯. ೧೨)

ವೀಚೀ – [ನಾ] ಅಲೆ (ಧವಳಮರೀಚಿವೀಚೀನಿವಹಂ ಶ್ವೇತಾತಪತ್ರ ಫೇನಪ್ರಕರಂ ವಿವಿಧಪ್ರವಾಹಮೆಸೆದುದು ವಿವಿಧಬಲಂ: **ಆದಿಪು,** ೧೩. ೮೧)

ವೀಚೀರಯ – [ನಾ] ಅಲೆಗಳ ವೇಗ (ಸಮುನ್ಮಿಷದ್ವಿವಿಧ ರತ್ನಮಾಲಾ ಪ್ರಭಾಭಿದಾರುಣ ಜಲಪ್ಲವಾವಿಳ ವಿಳೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ: **ಪಂಪಭಾ,** ೧. ೫೧ ವ)

ವೀಣಾಕ್ವಣ – [ನಾ] ವೀಣೆಯ ಧ್ವನಿ (ಕಳಕಂಠಗೀತಂ ಬಗೆಗೊಳೆಯುಂ ವೀಣಾಕ್ವಣಂ ಮನಂಗೊಳೆಯುಂ: **ಆದಿಪು,** ೧೧. ೨೮)

ವೀತ – [ಗು] ಇಲ್ಲದ, ಕಳೆದ (ಧಾತುಮಳದೋಷರಹಿತಂ ವೀತ ನಖಶ್ಮಶ್ರುಕೇಶಲೋಮಂ ಶೋಭಾನ್ವಿತ ಪರಿಪೂರ್ಣ ಯೌವನಂ: **ಆದಿಪು,** ೬. ೩೮)

ವೀತರಾಗಛದ್ಮಸ್ಥಗುಣಸ್ಥಾನ – [ನಾ] [ಜೈನ] ಜ್ಞಾನಾವರಣ ಮತ್ತು ದರ್ಶನಾವರಣಗಳು ಛದ್ಮ, ಅದರಲ್ಲಿರುವವರು ಛದ್ಮಸ್ಥ; ೪ ರಿಂದ ೧೦ ಗುಣಸ್ಥಾನವರೆಗಿನವರು ಸರಾಗಛದ್ಮಸ್ಥರು, ೧೦ ರಿಂದ ೧೨ ರವರೆಗಿನವರು ವೀತರಾಗಛದ್ಮಸ್ಥರು (ವೀತರಾಗಛದ್ಮಸ್ಥಗುಣಸ್ಥಾನಂ ಏಕತ್ವವಿತರ್ಕವಿಚಾರಾಭಿಧಾನ ಪರಿಣತಂ ಅಪರಿಮಿತಪ್ರದೇಶನಿರ್ಜರಾದಿ ಕ್ರಿಯಾಕಳಾಪಂ: **ಆದಿಪು,** ೧೦. ೧೪ ವ)

ವೀಥಿ – [ನಾ] ಬೀದಿ (ಅಂತು ನಾಲ್ಕುಂ ದೆಸೆಯ ವೀಥಿಗಳೊಳಿರ್ದ ನಾಲ್ಕುನಾಲ್ಕುಂ ಗೋಪುರಂಗಳಿಂದಂ ಪದಿನಾಱು ಧೂಪಘಟಂಗಳಿಂದಮೊಪ್ಪಿ: **ಆದಿಪು,** ೧೦. ೩೧ ವ)

ವೀರಕಾಂತಾ – [ನಾ] ಸಹಗಮನ ಮಾಡಲು ಕುಣಿಯುತ್ತ ಹೋಗುವ ವನಿತೆ? (ಆನಂದಂಬೆರಸು ಅಂಕದಚ್ಚರಸಿಯರ್ ದೇವೇಂದ್ರನ ಐರಾವತ ಆಳಾನಸ್ತಂಭಂಗಳಪ್ಪ ಭುಜಸಂದೋಹಂಗಳೊಳ್ ವೀರಕಾಂತಾನೀಕಕ್ಕೆಣೆಯಾಗಿ: **ಆದಿಪು,** ೭. ೧೨೪)

ವೀರಕ್ಷೇತ್ರ – [ನಾ] ವೀರರು ಹೋರಾಡುವ ಜಾಗ (ವೀರಕ್ಷೇತ್ರಂ ಅಗುರ್ವಿನ ಅಂಕದ ಕುರುಕ್ಷೇತ್ರಂ: **ಪಂಪಭಾ,** ೯. ೦೫)

ವೀರಗೋಷ್ಠಿ – [ನಾ] ಶೂರರ ಗುಂಪು (ಬಾಹುಬಲಿಕುಮಾರನ ವಿಜಯ ಸೈನ್ಯದೊಳ್ ಮಸೆಯಿಪ ಶಸ್ತ್ರಕೋಟಿ ಸಮಕಟ್ಟುವ ಸನ್ನಣಂ .. .. ಎಸೆವ ಉಗ್ರಕಾನಕ ರೌದ್ರಘೋಷಂ ಏರ್ವ್ಯಸನಮನುಂಟುಮಾಡಿದುದು ಪಂದೆಗಮಂದಿನ ವೀರಗೋಷ್ಠಿಯೊಳ್: **ಆದಿಪು,** ೧೪. ೯೦)

ವೀರಚರಿತ – [ನಾ] ಶೌರ್ಯದ ನಡವಳಿಕೆಯುಳ್ಳವನು (ಉದಾರ ವೀರಚರಿತನಿರತ ಕದನಕರ್ಕಶಕ್ಷತ್ರಿಯಂಗೆ .. .. ನಿಷ್ಕಾರಣ ಕಂಪನಮುಂ ನಿರಾಲಂಬನ ವಾಗಾಡಂಬರಮುಂ ತಕ್ಕುದಲ್ತು: **ಆದಿಪು,** ೧೪. ೮೧ ವ)

ವೀರಪಟ್ಟ – [ನಾ] ಸೇನಾಧಿಪತ್ಯ ಸೂಚಕ ಹಣೆಪಟ್ಟಿ (ಇವರಿನ್ನುಂ ಆಂತಿಜೆವರೆಂದು ವಿಮೋಹಿಸಿ ವೀರಪಟ್ಟಮಂ ಬಗೆಯದೆ ಕಟ್ಟಿದ್ಯೆ: **ಪಂಪಭಾ,** ೧೦. ೧೬)

ವೀರಪತ್ನಿ – [ನಾ] ಯುದ್ಧವೀರನ ಹೆಂಡತಿ (ಅಕ್ಷೌಹಿಣೀ ವೀರಕಂಠೀರವ ಸಂದೋಹಕ್ಕೆ ರೋಮಾಂಚನಮನೆ ಕವಚಮಂ ಮಾಡುತುಂ ವೀರಪತ್ನೀನಿವಹಕ್ಕೆ ಆನಂದಬಾಷ್ಪಾವಳಿಯನೆ ಕುಚದೊಳ್ ಹಾರಮಂ ಮಾಡುತುಂ: **ಆದಿಪು,** ೧೪. ೮೬)

ವೀರರಸ – [ನಾ] ಶೌರ್ಯದ ಭಾವನೆ (ವೀರರಸದ ತಿಱಿಯುಂ ನೆತ್ತರ ತೊಱೆಯುಂ ಒಡನೊಡನೆ ಬೆಳ್ಳಂಗೆಡೆದು ಪರಿಯೆ ಚತುರ್ಬಲಂಗಳ್ ಕಾದಿ ಬಸವಟೆದು ಪೆಱಪಿಂಗಿ ನಿಂದಾಗಳ್: **ಪಂಪಭಾ,** ೧೨. ೧೭ ವ)

ವೀರಶಯ್ಯಾ[ಯ್ಯೆ] – [ನಾ] [ಜೈನ] ಸಲ್ಲೇಖನ ವ್ರತಧಾರಿಗಳು ಮಲಗುವ ಜಾಗ (ಬಲ್ವಿಡಿವಿಡಿದು ಶರಣ್ಬುಗು ಜಿನೇಂದ್ರಪದಸರಸಿಜಮಂ ಎಂದಾ ಮಹಾನುಭಾವನ

ಪೇೞ್ದು ಮಾಱಿಕ್ಕೆಯೊಳಿರ್ಪತ್ತೆರಡು ದಿವಸಂಬರಂ ವೀರಶಯ್ಯಾತಳಗತನಾಗಿರೆ: **ಆದಿಪು,** ೨. ೫೮ ವ)

ವೀರಶ್ರೀ – [ನಾ] ಪ್ರತಾಪಲಕ್ಷ್ಮಿ, ಜಯಲಕ್ಷ್ಮಿ (ಎನಗೆ ವೀರಶ್ರೀಯುಂ ಕೀರ್ತಿಶ್ರೀಯುಂ ಅಲ್ಲದೆ ಉೞಿದ ಪೆಂಡಿರ್ ಮೊಱೆಯಲ್ಲ ನೀವಿದನೇಕಾಗ್ರಹಂಗೆಯ್ವಿರಿ: **ಪಂಪಭಾ,** ೧. ೭೮ ವ)

ವೀರಸಂಸ್ತರಾರೂಢ – [ನಾ] [ಜೈನ] ಸಲ್ಲೇಖನ ವ್ರತಧಾರಿಯಾಗಿ ಮಲಗಿದವನು (ಜಿನೇಂದ್ರಾರ್ಚನಾಪುರಸ್ಸರಂ ವಾಚನಾಗ್ರಹಣ ಸಮೇತಂ ಆರಾಧನೆಯಿನರ್ಚಿಸಿ ವೀರಸಂಸ್ತರಾರೂಢಂ ಆದಾಗಳ್: **ಆದಿಪು,** ೨. ೫೦ ವ) [ನರಸಿಂಹಶಾಸ್ತ್ರಿಗಳು ಸ್ವೀಕರಿಸಿರುವ ಪಾಠ]

ವೀರಸಿದ್ಧಾಂತ – [ನಾ] ಪ್ರತಾಪದ ತತ್ವ (ಇರ್ದಂ ಅಟ್ಟವಣೆಕೋಲ್ಗಳ ಮೇಲೆಸೆದಿರ್ದ ವೀರಸಿದ್ಧಾಂತದ ಶಾಸನಂ ಬರೆದ ಪೊತ್ತಗೆಯಂತಮರಾಪಗಾತ್ಮಜಂ: **ಪಂಪಭಾ,** ೧೧. ೪೬)

ವೀರ್ಯ – [ನಾ] ಶಕ್ತಿ, ಸಾಮರ್ಥ್ಯ (ಬಗೆಯಲ್ವೇಡ ಸುಧಾಮಹೀರುಹದೊಳ್ ಔದಾರ್ಯಮಂ ವೀರ್ಯಂ ಈ ಯುಗಳದೊಳ್ ತತ್ತರುಗಿಲ್ಲ: **ಆದಿಪು,** ೬. ೭೭); [ನಾ] [ಜೈನ] 'ಅಷ್ಟಗುಣ'ಗಳಲ್ಲಿ ಒಂದು, ಸಿದ್ಧಿ (ಬೞಿಯಂ ಕ್ಷಾಯಿಕ ಸಮ್ಯಕ್ತ್ವಾನಂತಜ್ಞಾನ ದರ್ಶನ ವೀರ್ಯ ಸೂಕ್ಷ್ಮಾವಗಾಹ ಅಗುರುಲಘುತಾ ವ್ಯಾಬಾಧಂಗಳೆಂಬ ಗುಣಮೆಂಟು ಬಂದು ತನ್ನೊಳ್ ಪೆಣೆದಿರೆ: **ಆದಿಪು,** ೧೬. ೪೯ ವ)

ವೀರ್ಯಾಂತರಾಯ – [ನಾ] [ಜೈನ] ಅಂತರಾಯ ಕರ್ಮಗಳಲ್ಲಿ ಒಂದು, ಒಂದು ವಿಘ್ನ (ಚಕ್ಷುರಕ್ಷುರವಧಿ ಕೇವಲದರ್ಶನಾವರಣ ಚತುಷ್ಕಮುಮಂ ದಾನಲಾಭ ಭೋಗೋಪಭೋಗ ವೀರ್ಯಾಂತರಾಯಪಂಚಕಮುಮಂ ಒರ್ಮೊದಲೆ ಕಿಡಿಸಿ: **ಆದಿಪು,** ೧೦. ೧೪ ವ)

ವೀಸ – [ನಾ] ಹಿಂದಿನ ಕಾಲದ ಒಂದು ಚಿಕ್ಕ ಬೆಲೆಯ ನಾಣ್ಯ (ಬೀರಕ್ಕೆ ಮುಯ್ವಾಂತುಂ ಒಂದು ವೀಸವನಪ್ಪೊಡಂ ಆರ್ಗಮಿತ್ತಱಿಯದೆ ಚಾಗಕ್ಕೆ ಮುಯ್ವಾಂತುಂ ತಮ್ಮಂ ನಗುವರಂ ಅಱಿಯದೆ: **ಪಂಪಭಾ,** ೪. ೯೪ ವ)

ವೃಂದ – [ನಾ] ಸಮೂಹ (ಲತೆಗಳ್ ಜಂಗಮರೂಪದಿಂದೆ ನೆರದುವೋ ದಿವ್ಯಾಪ್ಸರೋವೃಂದಂ ಈ ಕ್ಷಿತಿಗೇಂ ಇಂದ್ರನ ಶಾಪದಿಂದ ಇೞಿದುವೋ: **ಪಂಪಭಾ,** ೪. ૩೯)

ವೃಂದಾರಕ – [ನಾ] ದೇವತೆ (ಅವಿನಾಣಂಗಳನಱಿಯೆ ಬೆಸಗೊಂಡು ಪಟಮಂ ಕೈಕೊಂಡು ಪಂಡಿತೆ ಪೋಗಿ ವಂದಾರು ಮುನೀಂದ್ರ ವೃಂದಾರಕ ವೃಂದಸೌಂದರಮುಂ: **ಆದಿಪು,** ೩. ೪೫ ವ); ಶ್ರೇಷ್ಠ (ಸುರವೃಂದಾರಕರಿಂದಂ ಪರಿವೃತನಾದಂ ಚಿದಾತ್ಮನತ್ತೊಂದೆಡೆಯೊಳ್: **ಆದಿಪು,** ೯. ೭೦)

ವೃಕೋದರ – [ನಾ] ತೋಳದಂತೆ ಹೊಟ್ಟೆಯುಳ್ಳವನು, ಭೀಮಸೇನ (ಕಾದಿದೊಡಲ್ಲದೆ ಈಯೆಂ ಅಱಿದಿರ್ಕೆ .. .. ಎಂಬುದುಂ ವೃಕೋದರಂ ಮುಳಿದು ಆಸ್ಫೋಟಿಸಿ: **ಪಂಪಭಾ,** ೯. ೯೦ ಮತ್ತು ೯೦ ವ)

ವೃತ – [ಗು] ಸುತ್ತುವರಿದ (ಮಕುಟಮಣಿಕುಂಡಲ ದಿವ್ಯಾಂಬರ ಭೂಷಿತಂ ಅಮರಕದಂಬವೃತನೊರ್ವನಮರಂ: **ಆದಿಪು,** ೧೩. ೨೩)

ವೃತ್ತ – [ನಾ] ನಡತೆಯುಳ್ಳುದು (ಖರಕಿರಣಂಗಳ ಕಾಯ್ಪಿನ ಕರತನದಿಂ ಚಂದ್ರಕಿರಣದುಜ್ವಳಿಕೆಯಿಂ ಆ ಭರತನ ಮುಳಿಸೊಸಗೆಯಂ ಅನುಕರಿಸಿದುದು ಏಂ ಚಕ್ರವರ್ತಿವೃತ್ತಮೋ ಶರದಂ: **ಆದಿಪು,** ೧೧. ೭); [ಗು] ಗುಂಡಗಿರುವ (ಉದಗ್ರ ವಿರೋಧಿಮದೇಭ ಮಸ್ತಕಸ್ಥಳ ಜಳರಾಶಿಯೊಳ್ ಬಳೆದ ನಿರ್ಮಳನಿರ್ವ್ರಣವೃತ್ತ ಮೌಕ್ತಿಕಾವಳಿಯನೆ ತರ್ಪುದು: **ಪಂಪಭಾ,** ೧೦. ೪೬)

ವೃತ್ತಕ – [ನಾ] ವೃತ್ತಾಂತ (ಕರೆದು ಆಗಳ್ ನಿಜಮಂತ್ರಿಮಂಡಳ ಮಹಾಸಾಮಂತಶುದ್ಧಾಂತಮುಖ್ಯರಂ ಆ ವೃತ್ತಕಮೆಲ್ಲಮಂ ತಿಳಿಯೆ ಪೇೞ್ದು: **ಆದಿಪು,** ೧. ೮೦); [ನಾ] ಕಾರ್ಯ (ಎತ್ತ ವನಂ ಎತ್ತ ಮೃಗಯಾವೃತ್ತಕಂ ಈ ತಪಸಿಯೆತ್ತ ಮೃಗಂ ಎಂದು ಎಂತು ಆನೆತ್ತಚ್ಚೆನ್ ಆತ್ಮಕರ್ಮಾಯತ್ತಂ ಪೆಱತಲ್ತಿದು ಎಲ್ಲಂ ಅಘಟಿತಘಟಿತಂ: **ಪಂಪಭಾ,** ೧. ೧೧೩); [ನಾ] ಸಮಾಚಾರ (ಪೂರ್ವಸೂಚಿತಕ್ರಮದೊಳ್ ಕುಱುಪುವೇೞ್ದು ಸೂರ್ಯಾಸ್ತಮಯ ಸಮಯದೊಳ್ ಭೀಮಸೇನಂಗೆ ತತ್ ವೃತ್ತಕಮಂ ಅಱಿಪಿದೊಡೆ: **ಪಂಪಭಾ,** ೮. ೭૩ ವ)

ವೃತ್ತಿ – [ನಾ] ಸಂಪಾದನೆಯ ಮಾರ್ಗ (ಯಥೋಚಿತ ವೃತ್ತಿಗಳನಱಿಪಲೆಂದು .. .. ಅಜಂ ಬೇೞ್ ತೋಱಿದೊಡೆ: **ಆದಿಪು,** ೮. ೭೨ ವ); [ನಾ] ನಡತೆ, ಆಚರಣೆ (ಅವಚಱದೊಂದೆ ಪದ್ಮದೊಳೆ ನೇಲ್ದು ಒಳಗಾದ ಅಳಿಗೆ ಎಮ್ಮ ವೃತ್ತಿ ಸಂಭವಿಸದು: **ಆದಿಪು,** ೧೧. ೧૩೦); [ನಾ] ಕರ್ಮ, ಕರ್ತವ್ಯ (ಆಱುಂ ವೃತ್ತಿಗಳನಿವಂ ಮೀಱಿದರಲ್ಲರ್ ದ್ವಿಜನ್ಮರ್: **ಆದಿಪು,** ೧೫. ೧೪); [ನಾ] ರಸಪ್ರತೀತಿಯುಂಟುಮಾಡುವ ವರ್ತನಾವಿಶೇಷ (ಭಾರತಿ ಸಾತ್ವತಿ ಕೈಶಿಕಿ ಆರಭಟಿಯುಮೆಂಬ ವೃತ್ತಿಯೊಳ್ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು: **ಆದಿಪು,** ೯. ೨೬); [ನಾ] ವಿವರಣೆ ಮತ್ತು ನಡತೆ (ಸೂತ್ರಿಸಿದ ಸೂತ್ರದ ವೃತ್ತಿ ನಿಜಾತ್ಮವೃತ್ತಿವೊಲ್ ಪರಿಣಮಿಸಿತ್ತು: **ಪಂಪಭಾ,** ೨. ૩೪)

ವೃತ್ತಿಪರಿಸಂಖ್ಯಾನ – [ನಾ] [ಜೈನ] ಇಂತಹ ಕಡೆ ಇಂತಹವರನ್ನು ನಿಲ್ಲಿಸಿದರೆ ಮಾತ್ರ ನಿಲ್ಲುವೆನೆಂಬ ನಿಯಮದ ಮೂರನೆಯ ತಪಸ್ಸು (ಇಂತೆಂಬೆಡೆಯೊಳ್ ಇಂತೆಂಬವರ್ ನಿಱಿಸಿದೊಡಲ್ಲದೆ ನಿಲ್ಲೆನೆಂಬ ನಿಯಮಂ ಮೊದಲಾಗೆ ವೃತ್ತಿಪರಿಸಂಖ್ಯಾನ ನಾಮಮಾದ ಮೂಱನೆಯ ತಪದೊಳಂ: **ಆದಿಪು,** ೬. ૩೦ ವ)

ವೃತ್ತಿಲಾಭ – [ನಾ] [ಜೈನ] ನಲವತ್ತೆಂಟು ದೀಕ್ಷಾನ್ವಯಕ್ರಿಯೆಗಳಲ್ಲಿ ಒಂದು (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ)

ವೃತ್ತೋಚ್ಚಾರಣೆ – [ನಾ] ಪದ್ಯಗಳ ಪಠಣ (ಆ ಪ್ರಸ್ತಾವದೊಳ್ ಮಂಗಳಪಾಠಕರ ಮಂಗಳವೃತ್ತೋಚ್ಚಾರಣೆಗಳಿಂದಂ ಪಾಂಡವರಯ್ವರುಂ ಉನ್ಮೀಲಿತನಯನರಾಗಿ: **ಪಂಪಭಾ,** ೨. ೯૩ ವ)

ವೃದ್ಧ – [ಗು] ಮುದಿಯಾದ (ಆ ದೀನಾನಾಥರ್ಗೆ ವೃದ್ಧದ್ವಿಜಮುನಿನಿಕರಕ್ಕೆ ಅಂದು ಎಡಱು ಪೋಪಿನಂ ಕಃ

ಕೇನಾರ್ಥೀ ಕೋ ದರಿದ್ರಃ ಎನುತುಂ ಅನಿತುಮಂ ಧರ್ಮಜಂ ಸೂಱೆಗೊಟ್ಟಂ: **ಪಂಪಭಾ,** ೬. ೪೦)

ವೃದ್ಧತ್ವ – **[ನಾ]** ಮುದಿತನ, ಮುಪ್ಪು (ಮಸೆದ ಅಂಗೋದ್ಭವನ ಅಸ್ತ್ರದಂತೆಸೆವ ನಿನ್ನೀ ರೂಪು ವೃದ್ಧತ್ವದೊಳ್ ಪೊಸತೊಂದಾಯ್ತು: **ಆದಿಪು,** ೨. ೪೭)

ವೃದ್ಧಧಾತ್ರಿ – **[ನಾ]** ಮುದಿ ದಾದಿ (ನಾಭಿವಿಲಂಬಮಾನ ಲಂಬಸ್ತನವಿಸ್ರಸ್ತ ಅಂತರೀಯೋತ್ತರೀಯ ವೃದ್ಧಧಾತ್ರೀ ನರ್ತನನಿರೀಕ್ಷಣ ಜನತಾಜನಿತಹಾಸನಿವಾಸಮುಂ: **ಆದಿಪು,** ೮. ೩೫ ವ)

ವೃದ್ಧರಾಜ್ಯ – **[ನಾ]** ವೃದ್ಧಿಪಡೆದ ರಾಜ್ಯ (ಒಳ್ಗೆಗಟ್ಟಿಯೊಳ್ ತೊಡರ್ದಿರೆ ವೃದ್ಧರಾಜ್ಯಮುಮದೇನೆಸೆದತ್ತೊ ನಭಶ್ಚಂದ್ರನಾ: **ಆದಿಪು,** ೨. ೨೪)

ವೃದ್ಧವಾನರ – **[ನಾ]** ಮುದಿಕಪಿ, ಹನುಮಂತ (ಅಲ್ಲಿಂ ತಳರ್ದು ಬಟ್ಟೆಯ ಕಣ್ಣೊಳ್ ಅಡ್ಡಂಬಿಟ್ಟಿರ್ದ ವೃದ್ಧವಾನರನಂ ಕಂಡು: **ಪಂಪಭಾ,** ೮. ೩೧ ವ)

ವೃದ್ಧವೈರ – **[ನಾ]** ಹಳೆಯ ದ್ವೇಷ (ದೈತ್ಯರ್ ವೃದ್ಧವೈರಮಂ ನೆನೆದು ತ್ರಿಗರ್ತಾಧೀಶ ಸುಶರ್ಮ ಪ್ರಭೃತಿಗಳುಂ ಸಂಸಪ್ತಕರುಮಾಗಿ ಪುಟ್ಟಿ: **ಪಂಪಭಾ,** ೧೦. ೫೭)

ವೃದ್ಧೋಕ್ಷ – **[ನಾ]** [ವೃದ್ಧ+ಉಕ್ಷ] ಮುದಿ ಎತ್ತು (ಚತುರಂಗಬಲಂ ಬೆರಸು ಅಬಳಾಬಾಳವೃದ್ಧ ವೃದ್ಧೋಕ್ಷಶಕಟ ಸಂಕಟಮಪ್ಪ ಕಟಕಮಂ ಮೆಲ್ಲಮೆಲ್ಲನೊಡಗೊಡು ಬರ್ಪಂತು: **ಆದಿಪು,** ೪. ೯೧ ವ)

ವೃಷ – **[ನಾ]** ವೃಷಭ, ಗೂಳಿ (ಪರಶು ಫಳ ಅಕ್ಷ ಸೂತ್ರ ವರದೋಚಿತಚಿಹ್ನಚತುರ್ಭುಜಂ ಮನೋಹರವೃಷಲಾಂಛನಂ ವೃಷಭವಾಹನಂ: **ಆದಿಪು,** ೧. ೮); **[ನಾ]** ಧರ್ಮ (ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ: **ಆದಿಪು,** ೧. ೪೦)

ವೃಷಧ್ವಜ – **[ನಾ]** [ಜೈನ] ಆದಿ ತೀರ್ಥಂಕರ (ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ .. .. ಸಮಸ್ತ ವಿದ್ಯಾಪತಿ ನಾಭಿನಂದನನಂ ಉಪಾಶ್ರಿತ ಭವ್ಯಜನಾಭಿನಂದನಂ: **ಆದಿಪು,** ೧. ೪೦); **[ನಾ]** ಈಶ್ವರ (ಯುದ್ಧದೊಳ್ ವೃಷಧ್ವಜನುಮನಿಕ್ಕಿ ಗೆಲ್ದ ಅರಿಗನೊಳ್ ತಲೆವಟ್ಟಿದಿರಾಗಿ ನಿಂದು ಸೂತಜನಿಜೆವಂ ಗಡಂ: **ಪಂಪಭಾ,** ೧೨. ೪೦)

ವೃಷನಾಥ – **[ನಾ]** [ಜೈನ] ಆದಿತೀರ್ಥಂಕರ (ಹಿಮಶಿಖರಿಸಮವಿಗ್ರಹಸನಾಥಂ ಕುಮುದದಲಧವಲ ರುಚಿ ರುಚಿರವೃಷನಾಥನಂ : **ಆದಿಪು,** ೭. ೨೭ ರಗಳೆ)

ವೃಷಭನಾಥ – **[ನಾ]** [ಜೈನ] ಆದಿ ತೀರ್ಥಂಕರ (ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ .. .. ಸಮಸ್ತ ವಿದ್ಯಾಪತಿ ನಾಭಿನಂದನನಂ ಉಪಾಶ್ರಿತ ಭವ್ಯಜನಾಭಿನಂದನಂ: **ಆದಿಪು,** ೧. ೪೦)

ವೃಷಭಯೋಗೀಂದ್ರ – **[ನಾ]** [ಜೈನ] ಆದಿ ತೀರ್ಥಂಕರ (ಅನ್ನೆಗಮಿತ್ತ ವೃಷಭಯೋಗೀಂದ್ರನುಂ ಸಕಳ ಸಾವದ್ಯಾತಿದೂರಮಪ್ಪ ಜಿನಕಲ್ಪಿತಮೆಂಬ ಆಚರಣಮಂ ಕೈಕೊಂಡು: **ಆದಿಪು,** ೧೦. ೧೩ ವ)

ವೃಷಭೇಂದ್ರ – **[ನಾ]** [ಜೈನ] ಬಿಳಿಯ ಎತ್ತು (ರಜತಗಿರಿರುಂದ್ರನಂ ಜಿತಶರಚ್ಚಂದ್ರನಂ ನಿಜವದನವನಜಮಂ ಪುಗುವ ವೃಷಭೇಂದ್ರನಂ ನೋಡಿ ಗಜಗಮನೆ ಕನಸೆಂದು ಬಗೆವನ್ನೆಗಂ: **ಆದಿಪು,** ೭. ೨೭ ರಗಳೆ)

ವೃಷಭೇಶ್ವರ – **[ನಾ]** [ಜೈನ] ಆದಿತೀರ್ಥಂಕರ (ಮುನ್ನಂ ವೃಷಭೇಶ್ವರಂ ವಜ್ರಜಂಘನಾದ ಭವದೊಳಾ ಮಹಾತ್ಮಂಗೆ ತಂಗೆಯಾದ ಸುಂದರಿಯೆ ಕತಿಪಯಭವಪರಿಭ್ರಮಣದಿಂ ಬಂದು ... ಸುನಂದೆಗಂದು ನಂದನೆಯಾದಳ್: **ಆದಿಪು,** ೮. ೫೩ ವ)

ವೃಷಮಾರ್ಗ – **[ನಾ]** ಧರ್ಮಮಾರ್ಗ (ದುರ್ವಾರಸಂಸಾರವಿಚ್ಛೇದ ಉಪಾಯನಿಯುಕ್ತ ಸೂಕ್ತಿವೃಷಮಾರ್ಗಾಗ್ರೇಸರಂ .. .. ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ: **ಆದಿಪು,** ೧. ೧)

ವೃಷಮುಖ – **[ನಾ]** [ಜೈನ] ಒಬ್ಬ ಯಕ್ಷ (ಮನೋಹರವೃಷಲಾಂಛನಂ ವೃಷಮುಖಂ ವೃಷವಾಹನಂ ಇಂದುಕುಂದಸುಂದರತರ ವರ್ಣಂ ಈ ವೃಷಭವಾಹನ ಕಥಾರಚನೋಕ್ತಿಯಲ್ಲಿ ಮಾಟ್ಕಿರದೆ ಎಮಗಾಗಳುಂ ವೃಷಭಯಕ್ಷನವಿಘ್ನಮನಃಪ್ರವೃತ್ತಿಯಂ: **ಆದಿಪು,** ೧. ೮)

ವೃಷವಾಹನ – **[ನಾ]** [ಜೈನ] ವೃಷಭವಾಹನ (ಮನೋಹರವೃಷಲಾಂಛನಂ ವೃಷಮುಖಂ ವೃಷವಾಹನಂ ಇಂದುಕುಂದಸುಂದರತರ ವರ್ಣಂ ಈ ವೃಷಭವಾಹನ ಕಥಾರಚನೋಕ್ತಿಯಲ್ಲಿ ಮಾಟ್ಕಿರದೆ ಎಮಗಾಗಳುಂ ವೃಷಭಯಕ್ಷನವಿಘ್ನಮನಃಪ್ರವೃತ್ತಿಯಂ: **ಆದಿಪು,** ೧. ೮)

ವೃಷಸ್ಕಂಧ – **[ನಾ]** ಎತ್ತರದ ಹೆಗಲು, ವಿಶಾಲ ಭುಜ (ಸಾಲಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಸ್ಥಳಂ: **ಪಂಪಭಾ,** ೧. ೬೮)

ವೆಂಕೆ – **[ನಾ]** ಧಗೆ (ಕಡವೆಂಕೆಯಿಂ ಕಟಾಕ್ಷಂಬಿಡಿದಿಟೆವ ಲಲಾಟಕುಂಕುಮಸ್ವೇದಜಳಂ ಕಿಡಿಸಿದುದು ಕದಪಿನೊಳ್ ಪೊಟ್ಟಡೆ ಬರೆದರಸಿಯರ ಪತ್ರಲೇಖನಾವಳಿಯಂ: **ಆದಿಪು,** ೧೧. ೫೪)

ವೆಂಗಿ ವಿಷಯ – **[ನಾ]** ವೆಂಗಿಮಂಡಲವೆಂಬ ಪ್ರದೇಶ (ನಿರುಪಮ ದೇವನ ರಾಜ್ಯದೊಳ್ ಅರಿಕೇಸರಿ ವೆಂಗಿ ವಿಷಯಮಂ ತ್ರಿಕಳಿಂಗಂಬೆರಸೊತ್ತಿ ಕೊಂಡು ಗರ್ವದೆ ಬರೆಯಿಸಿದಂ ಪೆಸರನಖಿಳ ದಿಗ್ಭಿತ್ತಿಗಳೊಳ್: **ಪಂಪಭಾ,** ೧. ೨೦)

ವೇಣಿ – **[ನಾ]** ಎಳೆ (ಅಗ್ಗಳಿಸಿದುದಾ ಭುಜಬಲಿಯ ಭುಜದ್ವಯದೊಳ್ ಭುಜಂಗನಿಶ್ವಾಸಧೂಮವೇಣೀನಿಕರಂ: **ಆದಿಪು,** ೧೪. ೧೪೧)

ವೇಣಿಕಾಬಂಧ – **[ನಾ]** ಕಟ್ಟಿದ ತುರುಬು (ಅಭಿನವ ಶುಂಭತ್ ಕೌಸುಂಭವೇಣಿಕಾಬಂಧೋಲ್ಲಸತ್ ಮಲ್ಲಿಕಾಮುಕುಳಾಕಾರ ವಿತಸ್ತಿಮಾತ್ರಾಸಿಧೇನುಕೋಶಮುಂ: **ಆದಿಪು,** ೧೩. ೪೫ ವ)

ವೇಣೀಸಂಹಾರ – [ನಾ] ಬಿಚ್ಚಿದ ತುರುಬನ್ನು ಕಟ್ಟುವುದು (ಅನ್ನೆಗಂ ವೇಣೀಸಂಹಾರ ಊರುಭಂಗ ಮಕುಟಭಂಗಂಗಳೆಂಬ ತನ್ನ ಮಹಾಪ್ರತಿಜ್ಞೆಯಂ ನೆಱಪಿದ ಭೀಮಸೇನನಳವಂ ಅಳವಲ್ಲದೆ ಪೊಗಟ್ಟು: **ಪಂಪಭಾ,** ೧೩. ೯೮ ವ)

ವೇಣುವನ – [ನಾ] ಬಿದಿರ ಮೆಳೆ (ಗುಡಿಯ ಗೂಂಟಕ್ಕೆ ಬಲ್ಲಡವಿಗಳುಂ ದಂಡಿಗೆಗೆ ವೇಣುವನಂಗಳುಂ ಆನೆಗಂಬಕ್ಕೆ ಪೆರ್ಮರಂಗಳುಮಂ ಆ ಪಡೆಗೆ ನೆಱೆಯವೆನಿಸಿ: **ಪಂಪಭಾ,** ೯. ೧೦೪ ವ)

ವೇತಂಡ – [ನಾ] ಆನೆ (ಅಕ್ಷೋಹಿಣೀನಾಯಕಂ ದಂಡಧಾರಂ ಗಂಡಗುಣಕ್ಕಾಧಾರಮಾಗಿ ಮದಗಳಿತ ಗಂಡಪ್ರಚಂಡ ಮದವೇತಂಡಮಂ ಅಣೆದು ಬಿಟ್ಟಾಗಳ್: **ಪಂಪಭಾ,** ೧೨. ೮೬ ವ)

ವೇತ್ರ – [ನಾ] ಬೆತ್ತ, ಕೋಲು (ನೃಪತಿ ನುಡಿಯೆ ನುಡಿಯಿಂ ನೀಪಿರ್ಮಡೆಯೊಳಿರಿಂ ನೀವಜೆವಿರ್ ಮಿಡುಕಿದೊಡನೆ ಚಿತ್ರವೇತ್ರದಂಡಧರರ್ಕಳ್: **ಪಂಪಭಾ,** ೧೪. ೨೨)

ವೇತ್ರಖೇಟಕ – [ನಾ] ಬೆತ್ತದ ಗುರಾಣಿ (ವ್ಯಾಕೀರ್ಣ ತ್ರಿಶೂಲಕರಾಳ ವಿಶಾಲವೇತ್ರಖೇಟಕಂ: **ಆದಿಪು,** ೧೩. ೪೫ ವ)

ವೇತ್ರದಂಡಧರ – [ನಾ] ಕೋಲು ಹಿಡಿದ ದ್ವಾರಪಾಲಕ (ನೃಪತಿ ನುಡಿಯೆ ನುಡಿಯಿಂ ನೀಮಿರ್ಪಡೆಯೊಳಿರಿಂ ನೀಮಜೆವಿರ್ ಮಿಡುಕಿದೊಡನೆ ಚಿತ್ರವೇತ್ರದಂಡಧರರ್ಕಳ್: **ಆದಿಪು,** ೯. ೬)

ವೇತ್ರಲತಾ – [ನಾ] ಬೆತ್ತದ ಬಳ್ಳಿ (ಅದು ಆಯತ ವೇತ್ರಲತಾವಿತಾನಕಂ: **ಪಂಪಭಾ,** ೩. ೧೦)

ವೇತ್ರವಿಶಿಖ – [ನಾ] ಬೆತ್ತದ ಬಾಣ (ಅನೇಕರುಚಿವಿಚಿತ್ರವೇತ್ರವಿಶಿಖ ಅತಿ ರುಚಿರಪ್ರಾಂತಕುಂತಮನುತ್ತರೀಯ ಕಂಚುಕಂ ಅತಿಸುಭಟ ಮದೋತ್ಕಟಮಿದು ಕರ್ಣಾಟಬಲಂ: **ಆದಿಪು,** ೧೩. ೪೫ ವ)

ವೇತ್ರಾಸನ – [ನಾ] ಬೆತ್ತದ ಚಾಪೆ (ಭಾರದ್ವಾಜಂಗೆ ಬೞಿಯನಟ್ಟಿ ಬರಿಸಿ ಪೂರ್ವಸಂಭಾಷಣಾರ್ಘ್ಯಮೆತ್ತಿ ಮಧುಪರ್ಕ ವೇತ್ರಾಸನ ತಾಂಬೂಲಾದಿಗಳಿಂ ಸಂತಸಂಬಡಿಸಿ: **ಪಂಪಭಾ,** ೨. ೫೨ ವ)

ವೇದ – [ನಾ] ಋಕ್, ಯಜುರ್, ಸಾಮ ಮತ್ತು ಅಥರ್ವ ಎಂಬ ನಾಲ್ಕು ವೇದಗಳು (ನಾಲ್ಕು ವೇದಂಗಳೊಳ್ ನಾಲ್ಕುಂ ಋಚಂಗಳಂ ಪೇೞ್ದು ಸಿತ ದೂರ್ವಾಂಕುರವಿಮಿಶ್ರಂಗಳಪ್ಪ ಶೇಷಾಕ್ಷತೆಗಳಂ ಕೊಟ್ಟು ಮುಂದೆ ನಿಂದನಂ ನಿಮಗೆ ಬಾೞ್ಕೆಯಪ್ಪುದಂ ಬೇಡಿಕೊಳ್ಳಿಂ ಎನೆ: **ಪಂಪಭಾ,** ೫. ೭೦ ವ)

ವೇದನಿನಾದ – [ನಾ] ವೇದಘೋಷ (ಅಂತು ಕಂಡು ಮುನಿಕುಮಾರರ್ ಓದುವ ವೇದನಿನಾದದಿಂ ವಿಗತನಿದ್ರೆಯಾಗಿ ಪಾಂಡುರಾಜಂಗಂ ಅಲ್ಲಿಯ ಮುನಿಜನಂಗಳ್ಗಂ ಅಱಿಪಿದೊಡೆ ಅವರಾ ಕನಸುಗಳ್ಗೆ ಸಂತೋಷಂಬಟ್ಟು: **ಪಂಪಭಾ,** ೧. ೧೪೦ ವ)

ವೇದನೀಯ – [ನಾ] [ಜೈನ] ಸುಖದುಃಖಕಾರಕ ಕರ್ಮ (ನಿಜದ್ವಿಚರಸಮಯದೊಳ್ ಅನ್ಯತರವೇದನೀಯ ದೇವಗತಿ .. .. ನೀಚೈರ್ಗೋತ್ರಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷದಿಂ ಕಿಡಿಸಿ: **ಆದಿಪು,** ೧೬. ೪೯ ವ)

ವೇದಪಾರಗ – [ನಾ] ವೇದವಿದ (ಬಳಸಿದ ವೇದಪಾರಗರ ಸಂದಣಿಯೆಂಬಿವಱಿಂ ವಿವಾಹಮಂಗಳಮದು ಕುಂತಿಮಾದ್ರಿಗಳೊಳಚ್ಚರಿಯಾದುದು ಪಾಂಡುರಾಜನಾ: **ಪಂಪಭಾ,** ೧. ೧೦೭)

ವೇದಪಾರಗರವ – [ನಾ] ವೇದ ಪಂಡಿತರ ಉದ್ಘೋಷ (ಪಸುರ್ವಂದರ್ ಪಸೆ ವೇದಪಾರಗರವಂ ಕಣ್ಬೇಟದ ಉದ್ದಾನಿಯಂ ಪಸರಂಗೆಯ್ದುವೊಲಪ್ಪು: **ಪಂಪಭಾ,** ೫. ೨೫)

ವೇದರಹಸ್ಯ – [ನಾ] ವೇದಗಳ ಗೂಢಾರ್ಥ (ಅದಿರದಿದಿರ್ಚಿ ತಳ್ತಿಱಿಯಲ್ ಈ ಮಲೆದೊಡ್ಡಿದ ಚಾತುರಂಗಬಲಮೆಂಬುದು ನಿನಗೊಡ್ಡಿ ನಿಂದುದು ಇದಂ ಓವದೆ ಕೊಲ್ವೊಡೆ ನೀನುಂ ಎನ್ನ ಕಜ್ಜದೊಳೆಸೆಗು ಎಂದು ಸೈತು ಅಜಿತಂ ಆದಿಯ ವೇದರಹಸ್ಯದೊಳ್ .. .. ನೆಱೆಯೆ: **ಪಂಪಭಾ,** ೧೦. ೬೪)

ವೇದಾಂಗ – [ನಾ] ವೇದದ ಆರು ಅಂಗಗಳಾದ ಶಿಕ್ಷೆ, ಛಂದಸ್ಸು, ವ್ಯಾಕರಣ, ನಿರುಕ್ತ, ಜ್ಯೋತಿಷ ಮತ್ತು ಕಲ್ಪ ಎಂಬ ಶಾಸ್ತ್ರಗಳು (ಮುನಿಕುಮಾರರೋದುವ ವೇದವೇದಾಂಗಂಗಳಂ ತಪ್ಪುವಿಡಿದು ಜಡಿದು ಬಗ್ಗಿಸುವ ಪದುಮರಾಗದ ಬಣ್ಣದರಳಗಿಳಿಗಳುಮಂ: **ಪಂಪಭಾ,** ೧. ೧೧೫ ವ)

ವೇದಿ – [ನಾ] ವೇದಿಕೆ (ಹಿರಣ್ಯದಾನಂ ಮಾಡಿ ವೇದಿನಿಹಿತಂಗಳಪ್ಪ ಆಹವನೀಯ ದಕ್ಷಿಣ ಗಾರ್ಹಪತ್ಯಂಗಳೆಂಬ ಮೂಱುಂ ಕೊಂಡಂಗಳೊಳ್: **ಪಂಪಭಾ,** ೬. ೩೩ ವ)

ವೇದಿಕಾ – [ನಾ] ವೇದಿಕೆ, ಜಗುಲಿ (ಮಹಾನದ್ಯುಭಯತಟ ಮೃದುಮೃತ್ಸ್ನಾವಿಲಸಿತ ವೇದಿಕಾವಿರಾಜಮಾನದೊಳ್: **ಆದಿಪು,** ೮. ೬೭)

ವೇದ್ಯಾರೋಹಣ – [ನಾ] [ವೇದಿ+ಆರೋಹಣ] ವೇದಿಕೆಯೇರುವುದು (ವೇದ್ಯಾರೋಹಣಂ ತನಗೆ ವಿಜಯಶ್ರೀವಿವಾಹ ವೇದ್ಯಾರೋಹಣಮನೆ ಪೋಲೆ: **ಆದಿಪು,** ೧೨. ೭೪ ವ)

ವೇಮಾಱು – [ಕ್ರಿ] ಮೋಸಹೋಗು (ಅರಿಯರ್ ವೇಮಾಱಿರ್ ಇನ್ನಾರೊ ಬೇರನೆ ಕಿೞ್ತಿಕ್ಕಿದಂ ಈಗಳಾಯ್ತು ಧರೆ ನಿರ್ದಾಯಾದ್ಯಂ: **ಪಂಪಭಾ,** ೩. ೩೨)

ವೇಲಾವನ – [ನಾ] ಕರಾವಳಿಯ ಕಾಡು (ಏಲಾಲವಂಗಲವಲೀ ವೇಲಾವನಭೂಮಿಯೊಳ್ ನಿಧೀಶ್ವರಸೈನ್ಯವ್ಯಾಲಗಜಂಗಳ್ ವನಗಜಲೀಲೆಯಂ ಅನುಕರಿಸಿ ಕಣ್ಗೆ ವಂದುವು ಪಲವುಂ: **ಆದಿಪು,** ೧೩. ೨)

ವೇಲ್ಲನ – [ನಾ] ಅಲುಗಾಟ (ಸಮುಲ್ಲಾಸಮಾನ ಮಾಳತೀವ್ರತತಿವಿತಾನ ಚೂತವಲ್ಲೀವೇಲ್ಲನ ನಿಸರ್ಗಸೌಂದರ ಕ್ರೀಡಾಚಳ ಕೇಳೀಸಮಭಿರಾಮಮುಂ ಆಗಿ: **ಆದಿಪು,** ೧೦. ೨೬ ವ)

ವೇಷ್ಟನ – ಸುತ್ತುವರಿಯುವಿಕೆ (ವರ್ಷಾರಂಭದೊಳಂ ತಗುಳ್ದೀ ದ್ವೀಪದೊಳಗಣ ನದೀನದಂಗಳ ಜಲಂಗಳನೊಳಗೊಂಡ ಅಲಂಘ್ಯತ್ವದೊಳಂ ದ್ವೀಪಪರ್ಯಂತವೇಷ್ಟನದೊಳಂ: **ಆದಿಪು,** ೧೨. ೬೮ ವ)

ವೇಳಾವನ – [ನಾ] ವೇಲಾವನ (ವೇಳಾವನ ಲತಾಗೃಹೋದರ ಪುಳಿನಸ್ಥಳಪ್ರದೇಶದೊಳ್ ತೊಱಲಲುಂ ಅಟ್ಟೆಯಾಗೆ: **ಪಂಪಭಾ,** ೧. ೧೪೨ ವ)

ವೇಳಿಗೆ – [ನಾ] ಅಲೆ (ಗಗನಾಭೋಗದೊಳೊಪ್ಪಿ ಬರ್ಪ ಪಲವುಂ ಯಾನಂಗಳಂ ತೋರ್ಪ ವೇಳಿಗೆಗಳ್ಗೆತ್ತು: **ಆದಿಪು,** ೭. ೧೧೯)

ವೇಳೆ – [ನಾ] [ವೇಲಾ] ಅಲೆ, ಉಬ್ಬರ (ಪೂರ್ವಾನುಯೋಗಾಬ್ಧಿಯಿಂ ಪೊಱಪೊಣ್ಮೆತ್ತುದು ವೇಳೆಯಂತೆ ಕಥೆ ಲಂಬೋದ್ದಾಮ ವೀಚೀಚಯಂ: **ಆದಿಪು,** ೧. ೩೯)

ವೇಳೆಗೊಳ್ – [ಕ್ರಿ] ನಿಷ್ಠೆಯ ವ್ರತತೊಡು (ನಲ್ಲರ ಮೆಲ್ಲೆರ್ದೆಗಳ್ ನಿರಂತರಂ ಬಿರಿದುವು ಅದೆಂತೊ ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುದೋ: **ಆದಿಪು,** ೧೧. ೧೧೦)

ವೇಟ್ಬುದು – [ನಾ] ಬಯಸಿದುದು (ಮೆಯ್ ಪಸಿದು ಜೊಮ್ಮನೆ ಪೋದಪುದು ಎನ್ನ ವೇಟ್ಬುದಂ ತಣಿಯಲೀವೊಡೆ ಈವುದು: **ಪಂಪಭಾ,** ೫. ೭೧)

ವೈಕರ್ತನ – [ನಾ] [ವಿಕರ್ತನ] ಸೂರ್ಯನ ಮಗ, ಕರ್ಣ (ಕೂರಿಸೆ ಗುರುಶುಶ್ರೂಷೆಯೊಳಾ ರಾಮನನುಗ್ರಹಪರಶುಪಾಟಿತ ರಿಪುವಂಶಾರಾಮನಂ ಇಷುವಿದ್ಯಾಪಾರಗನೆನಿಸಿದುದು ಬಲ್ಮೆ ವೈಕರ್ತನನಾ: **ಪಂಪಭಾ,** ೧. ೧೦೪)

ವೈಕ್ರಿಯಕ – [ನಾ] [ಜೈನ] ಜೀವರುಗಳ ಒಂದು ಶರೀರಭೇದ, ತಪಶ್ಚರ್ಯೆಯ ಪ್ರಭಾವದಿಂದ ಲಭಿಸುವ ಅಣಿಮಾ, ಲಘಿಮಾ, ಗರಿಮಾ, ಮಹಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ, ಅಪ್ರತಿಘಾತ, ಅಂತರ್ಧಾನ, ಕಾಮರೂಪ ಮುಂತಾದ ಸಾಮರ್ಥ್ಯಗಳಿಂ ಸ್ಥೂಲಶರೀರದಲ್ಲಿ ಬದಲಾವಣೆ ಮಾಡುವ ಸೂಕ್ಷ್ಮಶರೀರ (ತತ್ ಭೋಗಾವನೀಭಾಗದೊಳ್ ತನುಗಳ್ ವೈಕ್ರಿಯಕಗಳಂತೆ ಕರಗುತ್ತಿರ್ಪನ್ನೆಗಂ ಪುಣ್ಯಸಂಜನಿತ ಐಶ್ವರ್ಯದಿನಿಂತು ಬಂದು ನೆಲಸಿತ್ತು ಈಶಾನಕಲ್ಪಾಗ್ರದೊಳ್: **ಆದಿಪು,** ೫. ೭೦)

ವೈಜಯಂತಿ – [ನಾ] ಪತಾಕೆ, ಬಾವುಟ (ಪರವನಿತೆಯರೆರ್ದೆಗೆ ಕೊಂಕಿಲ್ಲದೆಯುಂ ಸೊಗಯಿಸುವ ಸುರತಮಕರಧ್ವಜನ ಪುರ್ವುಗಳ್ ಕಾಮದೇವನ ವಿಜಯವೈಜಯಂತಿಗಾಳದುವು: **ಪಂಪಭಾ,** ೨. ೩೯ ವ)

ವೈಡೂರ್ಯ – [ನಾ] ನವರತ್ನಗಳಲ್ಲಿ ಒಂದು (ಅರುಣಾಶ್ಮಂ ಕಿಸುಗಲ್ ಪದ್ಮರಾಗಮಣಿ ವಾಳವಾಯಜಂ ವೈಡೂರ್ಯಂ: **ಅಭಿಧಾವ,** ೧. ೬. ೧೦); [ನಾ] [ಜೈನ] ಒಂದು ಪರ್ವತದ ಹೆಸರು (ತದವನೀಧರ ವಿದಿಜ್ಮೆಲಯಂಗಳಪ್ಪ ವೈಡೂರ್ಯ ರುಚಕ ಮಣಿಪ್ರಭ ರುಚಿಕೋತ್ತರಂಗಳೆಂಬ ವಿಕಟಕೂಟಾಧೀಶೆಯರೆ .. .. ಮಹತ್ತರಿಯರಾಗಲುಂ: **ಆದಿಪು,** ೭. ೩ ವ)

ವೈಡೂರ್ಯದಂಡ – [ನಾ] [ಜೈನ] ವೈಡೂರ್ಯಮಣಿಯನ್ನು ಹುದುಗಿಸಿದ ದಂಡ (ವೈಡೂರ್ಯದಂಡಮುಕ್ತಾಮಣಿ ಜಾಳಾಳಂಕೃತ ರತ್ನಶಲಾಕಾಶತಕಾಂಚನ ಕುಂಭಬಿಂಬ ರಜತಚ್ಛದಚ್ಛತ್ರವಿಚಿತ್ರ ಜಿನೇಂದ್ರಪ್ರತಿಕೃತಿಪ್ರಕೀರ್ಣಮುಂ: **ಆದಿಪು,** ೧. ೪೯ ವ)

ವೈತರಣಿ – [ನಾ] ನರಕದಲ್ಲಿ ಹರಿಯುವ ನದಿ (ಪ್ರವಾಹ ಅತ್ಯುಷ್ಣತಾಪಹಸಿತ ಪ್ರಳಯಕಾಲಪ್ರೌಢತರತರಣಿಯಂ ವೈತರಣಿಯಂ ಪೊಕ್ಕಾಗಳ್: **ಆದಿಪು,** ೫. ೮೭ ವ)

ವೈತಸವೃತ್ತಿ – [ನಾ] [ಬೆತ್ತದಂತೆ] ಬಾಗಿ ವರ್ತಿಸುವುದು (ನಯಮಪ್ಪೊಡೆ ವೈತಸವೃತ್ತಿಯೆ ದಲ್ ನಮಗೆ ಎಱಗಿವ ತೊಱೆಯನಿದಿರಿಸುವುದು ಅದೆಲ್ಲಿಯ ಗಾಂಪು: **ಆದಿಪು,** ೧೨. ೧೦೮)

ವೈತಾಳಿಕ – [ನಾ] ಹಾಡುವವನು (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರ ಉದ್ಘೂತರವಂ ಎಸೆಯೆ: **ಪಂಪಭಾ,** ೧೨. ೧೦೬)

ವೈಮಾನಿಕ – [ನಾ] ಒಂದು ದೇವತಾವರ್ಗ (ವೃಷಾಂಕನಂಬು ತನುವಂ ಪಚ್ಚಂತೆ ಕೊಂಡತ್ತು ವೈಮಾನಿಕಕೋಟಿಗಂದು ಪಿರಿದೊಂದುತ್ಸಾಹಮಪ್ಪನ್ನೆಗಂ: **ಪಂಪಭಾ,** ೮. ೧೬)

ವೈಮಾನಿಕ ಚಕ್ರವಾಕ – [ನಾ] ವೈಮಾನಿಕ ದೇವದಂಪತಿ (ವೈಮಾನಿಕಚಕ್ರವಾಕದೊಲವುಣ್ಮಿರೆ ಚೆಲ್ವೆಸೆದತ್ತು ಕೇವಲಜ್ಞಾನದಿನೇಶಬಿಂಬದ ಪೊದಳ್ದುದಯಂ ವೃಷಭೋದಯಾದ್ರಿಯೊಳ್: **ಆದಿಪು,** ೧೦. ೧೭)

ವೈಯಾಕರಣ – [ನಾ] ವ್ಯಾಕರಣ ಪಂಡಿತ (ಇರು ಮರುಳೆ ಶುಷ್ಕವೈಯಾಕರಣಂಗಂ ಶುಷ್ಕತಾರ್ಕಿಕಂಗಂ ಬೆಳ್ಳಕ್ಕರಿಗಂಗಂ ವಿಷಯಮೆ ಕಾವ್ಯರತ್ನಂ ಅತಿಚತುರಕವಿಕದಂಬಕವಿಷಯಂ: **ಆದಿಪು,** ೧. ೨೪)

ವೈರ – [ನಾ] ದ್ವೇಷ (ಮತ್ತಮಾ ಮುನೀಂದ್ರನ ತಪಃಪ್ರಭಾವದೊಳ್ ಅನ್ಯೋನ್ಯ ವೈರಂಗಳಂ ಮಱೆದು: **ಆದಿಪು,** ೯. ೯೬ ವ)

ವೈರಿನರೇಂದ್ರ – [ನಾ] ಶತ್ರುರಾಜ (ಪೊಡೆದುದು ಬಿಲ್ಲ ಜೇವೊಡೆಯೆ ಮೀಱುವ ವೈರಿನರೇಂದ್ರರಂ: **ಪಂಪಭಾ,** ೧. ೯೯)

ವೈರಿಭೂಭೃತ್ – [ನಾ] ಶತ್ರು ರಾಜ (ಕದನಪ್ರಾರಂಭಶೌಂಡಂ ರಿಪುನೃಪಬಲದಾವಾನಲಂ ವೈರಿಭೂಭೃತ್ ಮದವತ್ ಮಾತಂಗ ಕುಂಭಸ್ಥಳದಳನ ಖರೋಗ್ರ ಅಸಿಪಂಚಾಸ್ಯಧೈರ್ಯಂ: **ಪಂಪಭಾ,** ೬. ೭೭)

ವೈವರ್ಣ್ಯ – [ನಾ] ಬಣ್ಣಗೆಡುವುದು (ಕಾಮಗ್ರಹಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭ ಕಂಪ ಸ್ವೇದ ವೈವರ್ಣ್ಯಸಂತಾಪನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ,** ೪. ೫೯ ವ)

ವೈವಸ್ವತ – [ನಾ] ಸೂರ್ಯನ ಮಗ, ಯಮ (ಸಂಕ್ರುದ್ಧ ವೈವಸ್ವತೋಪಮ ವಿದ್ವಿಷ್ಟಫಣೀಂದ್ರಚಂದ್ರಕಿರವಂ .. .. ಎಂಬಿನಂ ವ್ಯೋಮಭಾಗಮನೆಯ್ದಿರ್ದುದು ಚಕ್ರವರ್ತಿ ವಿಜಯಪ್ರಸ್ಥಾನ ಭೇರೀರವಂ: **ಆದಿಪು,** ೧೧. ೧೦)

ವೈವಾಹ – [ನಾ] ಮದುವೆ (ಆದಿವಂಶಾವತಾರಸಂಭವಂ ರಂಗಪ್ರವೇಶಂ ಜತುಗೃಹದಾಹಂ ಹಿಡಿಂಬವಧೆ ಬಕಾಸುರವಧೆ ದ್ರೌಪತೀ ಸ್ವಯಂವರಂ ವೈವಾಹಂ: **ಪಂಪಭಾ,** ೧೪. ೫೨ ವ)

ವೈವಾಹಿಕಸಂಬಂಧ – [ನಾ] ಮದುವೆಯ ಮೂಲಕ ಏರ್ಪಟ್ಟ ನಂಟಸ್ತನ (ಪಟುವೇಗಂ ಪಾಗುಡಕ್ಕಂ ಪಳಬದ್ದಕ್ಕಂ .. .. ವೈವಾಹಿಕಸಂಬಂಧಕ್ಕಂ ಮೈತ್ರಕ್ಕಂ .. .. ಮಹಾನದಿಗಳ್ ಕೂಡುವಂತೆ: **ಪಂಪಭಾ,** ೯. ೯೫ ವ)

ವೈಶಾಖಸ್ಥಾನ – [ನಾ] ಎರಡೂ ಪಾದಗಳನ್ನು ಬಿಡಿಸಿ ಕಿಸುಗಾಲಲ್ಲಿ ನಿಲ್ಲುವ ಒಂದು ಭಂಗಿ (ಸ್ಫುಟವೈಶಾಖಸ್ಥಾನಂ ಕಟಿತಟವಿನ್ಯಸ್ತ ಹಸ್ತಯುಗನಾಗಿ ಮಹಾಲಟಹಂಬೆರಸಿರ್ದೊಪ್ಪುವ ನಟನಾಕೃತಿ ತಾನೆ ಲೋಕದೊಂದಾಕಾರಂ: **ಆದಿಪು**, ೧. ೪೫)

ವೈಷಮ್ಯ – [ನಾ] ವ್ಯತ್ಯಾಸ (ಅಂತುಭಯ ನದಿಯ ವೈಷಮ್ಯಮುಮಂ ಅಶ್ಚರ್ಯಂಬಟ್ಟು ನೋಡಿ: **ಆದಿಪು**, ೧೩. ೫೧ ವ)

ವೈಷ್ಣವ – [ನಾ] ವಿಷ್ಣುಭಕ್ತ ಪಾಂಡವರು (ಅಗ್ಗಳದ ವೈಷ್ಣವಮೋಹಮೆ ನಿನ್ನ ಮೆಯ್ಯೊಳಗ್ಗಲಿಸಿದುದಕ್ಕಂ: **ಪಂಪಭಾ**, ೯. ೪೪); [ನಾ] ವಿಷ್ಣುಮಾಯೆ, ಮಹಿಮೆ (ಒರ್ಮೆಯೆ ವಿಶ್ವರೂಪಮಂ ತೋಱಿದಂ ಇರ್ದರಂ ನೆಱೆಯೆ ಮೋಹಿಸಿ ವೈಷ್ಣವದಿಂ ಮುರಾಂತಕಂ: **ಪಂಪಭಾ**, ೯. ೬೦); [ನಾ] ಕ್ರಮವಾಗಿ ವೈಷ್ಣವಾಸ್ತ್ರ ಮತ್ತು ನಾರಾಯಣಾಸ್ತ್ರ (ಕಾದಳವಂ ಆರಳವೊಡ್ಡಿಸೆ ಕಾದಂ ಆಗಳರ್ವಿಸೆ ತೆಗೆದೆಚ್ಚ ವೈಷ್ಣವಮನೊಡ್ಡಿ ವೈಷ್ಣವದಿಂ ಮುರಾಂತಕಂ: **ಪಂಪಭಾ**, ೧೨. ೩೨)

ವ್ಯಂಜನ – [ನಾ] ಊಟದಲ್ಲಿ ಬಾಡಿಸಿಕೊಳ್ಳುವ ಪದಾರ್ಥ (ಘೃತ ಲವಣ ತೈಲ ಕ್ಷೀರ ದಧಿ ವ್ಯಂಜನಂಗಳೊಳ್ ಸಂಸ್ಕಾರಂ ಮಾಡುವ: **ಆದಿಪು**, ೬, ೭೭ ವ); [ನಾ] ಭಾಷೆಯಲ್ಲಿ ಸ್ವರದ ಸಹಾಯವಿಲ್ಲದೆ ಸ್ಪಷ್ಟವಾಗಿ ಉಚ್ಚರಿಸಲಾಗದ ವರ್ಣ (ಅಂತು ಅಕಾರಾದಿ ಹಕಾರಾಂತ ಸ್ವರವ್ಯಂಜನಭೇಧಭಿನ್ನ ಶುದ್ಧಾಕ್ಷರಂಗಳುಮಂ ಅಯೋಗವಾಹಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ: **ಆದಿಪು**, ೮. ೫೯ ವ)

ವ್ಯಂತರ – [ನಾ] ಕ್ಷುದ್ರ ದೇವತೆ (ಆಡುವ ಮರುಳ್ಗಳಂ ನಡೆನೋಡಿದುದಱಿನಿಂತು ಕನಸಿನೊಳ್ ಮಕ್ಕಳ್ಗಂ ಕೂಡೆ ಪೆಸರಿಟ್ಟು ಸಲೆ ಕೊಂಡಾಡಿದಪರ್ ವ್ಯಂತರರ್ಕಳಂ ಜಡಮತಿಗಳ್: **ಆದಿಪು**, ೧೫. ೩೯)

ವ್ಯಗ್ರ – [ಗು] ಉದ್ವೇಗಗೊಂಡ (ಜನಿತೋತ್ಸವಯುಗಳವ್ಯಗ್ರ ನಾಕನರಲೋಕ ಸಕಳಜನಕಳಕಳದಿಂದೆನಿತಾನುಂ ವಿಭವದಿನಿಂತು ನಾಡೆಯುಂ ರಮ್ಯಮಾದುದಾ ನೃಪಭವನಂ: **ಆದಿಪು**, ೯. ೭೨)

ವ್ಯಗ್ರಚಿತ್ತ – [ನಾ] ದುಡುಕು ಸ್ವಭಾವದವನು (ದ್ರುಪದಂ ರಾಜ್ಯಮದಿರಾಗಮದೋನ್ಮತ್ತನುಂ ಗರ್ವಗ್ರಹವ್ಯಗ್ರಚಿತ್ತನುಂ ಆಗಿ: **ಪಂಪಭಾ**, ೨. ೪೬ ವ)

ವ್ಯಗ್ರಹಸ್ತ – [ನಾ] ಆಸಕ್ತವಾದ ಕೈ (ಭರತಕುಲತಿಳಕರಿರ್ ವರಶರಾಸನವ್ಯಗ್ರಹಸ್ತರಿರ್ ಬಳಯುತರಿರ್ ನೆರೆದಿನಿಬರುಂ ಇರದೆ ಈ ಲಕ್ಷ್ಯಮಂ ಇರದಕ್ಕಟ ಸರದೆ ತೆಗೆಯಲಾರ್ತರುಮಿಲ್ಲಾ: **ಪಂಪಭಾ**, ೨. ೫೨)

ವ್ಯಜನ – [ನಾ] ಬೀಸಣಿಗೆ (ಮಲಯಜ ರಸಲುಳಿತ ಕದಳೀದಳವ್ಯಜನ ಮಂದಮಾರುತಾಂದೋಳನದಿಂ ಎಂತಾನುಂ ಮೂರ್ಛೆಯಿಂದೆಚ್ಚಱಿಸಿ: **ಆದಿಪು**, ೩. ೨೩ ವ)

ವ್ಯತಿಕರ – [ನಾ] ವೃತ್ತಾಂತ (ಜನ್ಮಾಭಿಷೇಕ ವ್ಯತಿಕರಮನವರ್ಗೆ ಮಹೋತ್ಸಾಹಕರಮಾಗೆ ಸವಿಸ್ತರಮಱಿಪಿ: **ಆದಿಪು**, ೭. ೧೧೨ ವ); [ನಾ] ವಿಷಯ (ಬಾಹುಬಲಿಕುಮಾರನಲ್ಲಿಗೆ ಮನ್ತ್ರಿಗಳ್ ಬಂದು ಪೂರ್ವೋಕ್ತಕ್ರಮದೊಳೆ ಧರ್ಮಯುದ್ಧ ವ್ಯತಿಕರಮಂ ಬಿನ್ನಪಂಗೆಯ್ವಾಗಳ್: **ಆದಿಪು**, ೧೪. ೧೦೨ ವ)

ವ್ಯತಿಕರಸ್ಥಿತಿ – [ನಾ] ನಿರ್ವಾಣಕ್ಷಣ, ಜೀವಿತಾಂತ್ಯದ ಸಮಯ (ಆ ಪ್ರಸ್ತಾವದೊಳ್ ಆದಿಭಟ್ಟಾರಕ ವ್ಯತಿಕರಸ್ಥಿತಿಯನಾನಂದನೆಂಬ ಧರ್ಮಕಾರ್ಯ ನಿಮಿತ್ತಂ ಬಂದಱಿಪಿದೊಡೆ: **ಆದಿಪು**, ೧೬. ೪೯ ವ)

ವ್ಯತಿಕ್ರಮ – [ನಾ] ಉಲ್ಲಂಘನೆ (ಮತಿಗೆಟ್ಟ ಮಗಳೆ ಸಂಸ್ಕೃತಿಲತೆಯೊಳ್ ತೊಡರಲ್ಕೆ ನೀನಿದಂ ನೆಗೞ್ದೈ ದುರ್ಗತಿಹೇತುಪೂಜ್ಯ ಪೂಜಾವ್ಯತಿಕ್ರಮಂ ಕಿಱಿದು ದುಃಖಮಂ ಮಾಡುಗುಮೇ: **ಆದಿಪು**, ೩. ೩೯)

ವ್ಯತಿಹಾರ – [ನಾ] ವಿನಿಮಯ, ಅದಲುಬದಲು ಮಾಡಿಕೊಳ್ಳುವುದು (ಶ್ರೀಮತಿ ವಜ್ರಜಂಘರ ಜನ್ಮಾಂತರಸ್ನೇಹರಸಾಮೃತ ಪಾತ್ರಚಿತ್ರಪಟ ವ್ಯತಿಹಾರಮಂ ವಜ್ರಜಂಘಾನುಚರರಿಂದಂ ಅಱಿದು: **ಆದಿಪು**. ೪. ೨೩ ವ)

ವ್ಯಪಾಯ – [ನಾ] ಇಲ್ಲದಾಗುವುದು, ಗೈರು (ಲಕ್ಷ್ಮೀಮತಿ ಮಹಾದೇವಿಯುಂ ಅನುಂದರಿವೆರಸು ಚಕ್ರವಲ್ಲಭ ವ್ಯಪಾಯದೊಳ್ ಪುಂಡರೀಕನಂ ಕೈಕೊಂಡಿರೆ: **ಆದಿಪು**, ೪. ೮೧ ವ)

ವ್ಯಪೇತ – [ಗು] ಅಗಲಿದ, ದೂರಾದ (ಅನ್ನೆಗಂ ಆದಿಮುನೀಶ್ವರನುಂ .. .. ಅತಿದ್ರುತವಿಲಂಬಿತಗತಿ ವ್ಯಪೇತನಾಗಿ ಸೋಮಪ್ರಭರಾಜಮಂದಿರಾಭಿಮುಖನಾಗಿ ಬರ್ಪನ್ನೆಗಂ: **ಆದಿಪು**, ೯. ೧೩೦ ವ)

ವ್ಯಯ – [ನಾ] ವೆಚ್ಚ, ನಷ್ಟ (ಈತನ ಕಟಕಕ್ಕೆ ನಿತ್ಯ ಕ್ಷಯ ವ್ಯಯ ಪ್ರತ್ಯವಾಯಂಗಳಂ ಮಾಡಿ ಬೇಸಱಿಸಿ ನೆಲದಿಂ ತೆರಳ್ಚುವಂ: **ಆದಿಪು**, ೧೩. ೫೮ ವ)

ವ್ಯವಸಾಯಿ – [ನಾ] ಕಾರ್ಯಶೀಲನಾದವನು (ಸ್ವಾಮ್ಯಾರ್ಥಂ ಸ್ವಾಮ್ಯವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಥರಾಜ್ಯಹರಂ ಭೃತ್ಯಂ ಯೋನ ಹನ್ಯಾನ್ನಹನ್ಯತೇ: **ಪಂಪಭಾ**, ೨. ೯೦ ಶ್ಲೋಕ)

ವ್ಯವಹಾರಕಾಲ – [ನಾ] [ಜೈನ] ಕಾಲದ ಒಂದು ಬಗೆ: ಮುಖ್ಯಕಾಲದಿಂದ ಪರಿವರ್ತನೆಗೊಂಡ ಕ್ರಿಯೆಯುಳ್ಳದ್ದು, ಸಮಯ, ಆವಲಿಕಾ ಉಚ್ಛ್ವಾಸ, ಸ್ತೋಕ, ನಿಮೇಷ, ನಾಡಿಕಾ, ಮುಹೂರ್ತ, ದಿವಸ, ಪಕ್ಷ, ಮಾಸ, ಋತು, ಅಯನ, ಸಂವತ್ಸರಗಳೇ ಮೊದಲಾದ ಏರಿಕೆಯ ಎಣಿಕೆಯಿಂದ ಕೂಡಿರುವುದು (ವ್ಯವಹಾರಕಾಲಮೆಂಬುದು ಮುಖ್ಯಕಾಲ ನಿರ್ವರ್ತಿತ ಕ್ರಿಯಾರೂಪಂ ಅದು ಸಮಯಾವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು**, ೬. ೪೮ ವ)

ವ್ಯಾಕೀರ್ಣ – [ಗು] ಕೂಡಿದ (ಅಭಿನವ ಪ್ರಿಯಂಗು ಶ್ಯಾಮಾಂಗ ಅರ್ಧಚಂದ್ರ ಬುದ್ಬುದವ್ಯಾಕೀರ್ಣ ತ್ರಿಶೂಲ ಕರಾಳವಿಶಾಲ ವೇತ್ರಖೇಟಕಂ: **ಆದಿಪು**, ೧೩. ೪೫ ವ)

ವ್ಯಾಘಾತ – [ನಾ] ಪೆಟ್ಟು, ಅಡ್ಡಿ (ಎಂದು ತಮ್ಮ ಭೋಗಾಕಾಂಕ್ಷೆಯನೆ ಬಗೆದು ಪರಮಯೋಗಿಗೆ ಯೋಗವ್ಯಾಘಾತಮಂ ಮಾಡುವುದುಂ: **ಆದಿಪು**, ೯. ೯೯ ವ); [ನಾ] ತೀಡುವಿಕೆ (ನವಕಾಳಾಗರು ಧೂಪಧೂಮತತಿ ಸೌಗಂಧಂಗಳಿಂ ಸಯ್ತು ನೀಳ್ದು ವಿಯಚ್ಚಕ್ರದೊಳಲ್ಲಿ

ಮಂದಮಾರುತ ವ್ಯಾಘಾತದಿಂದೆಯ್ದೆ ತೋರ್ಪವೊಲಾಗಿರ್ದುದು: **ಪಂಪಭಾ**, ೧೪. ೧೪)

ವ್ಯಾಜ – [ನಾ] ತೋರಿಕೆ (ನಿಶ್ಚಳಧೈರ್ಯವ್ಯಾಜತಿರ್ಯಗ್ವಳನತರಳಿತಂ ದೃಷ್ಟಿ ಪೇಟ್ದಿತ್ತು ನಿರ್ವ್ಯಾಕುಳಮಾಗಳ್: **ಆದಿಪು**, ೪. ೫೨); [ನಾ] ನೆಪ, ಕಾರಣ (ಮೃಗಯಾವ್ಯಾಜದಿನೊರ್ಮೆ ಶಂತನು ತೊಟಲ್ತರ್ಪಂ ಪಳಂಚಲ್ಕೆ ತನ್ಮೃಗಶಾಬಾಕ್ಷಿಯ ಕಂಪು ತಟ್ಟೆ: **ಪಂಪಭಾ**, ೧. ೭೦)

ವ್ಯಾನಪದ – [ನಾ] ಆವರಿಸಲ್ಪಟ್ಟ ಪಾದವುಳ್ಳವನು (ದಾನವಮಾನವ ಸುರೇಂದ್ರ ಮಣಿಮಕುಟತಟಾವ್ಯಾನಪದಂಗೆ ಆ ನೆಗೞ್ದುದಂ ಆನೇತಱಿ೯ೊಳ್ ಎಂತುಂ ನೀಗುವೆಂ: **ಪಂಪಭಾ**, ೮. ೨೫)

ವ್ಯಾಪಾರ – [ನಾ] ಚಟುವಟಿಕೆ, ಕಾರ್ಯ (ಅಂತು ನರನಾರಾಯಣರಿರ್ವರುಂ .. .. ಮೃಗವ್ಯ ವ್ಯಾಪಾರದಿಂ ಬೞಲ್ದು ಪರಿವ ಜಾತ್ಯಶ್ವಂಗಳನೇಱಿ ಬರೆವರೆ: **ಪಂಪಭಾ**, ೫. ೫೦ ವ)

ವ್ಯಾಪಿತ – [ಗು] ವ್ಯಾಪಿಸಿದ, ತುಂಬಿದ (ಶ್ರೀಪತಿ ಸುರದಾರಕರೊಡನೆ ಆಪೊತ್ತುಂ ನೆರೆದು ರತ್ನಧೂಳೀಪಟಲ ವ್ಯಾಪಿತತನು ಮೃದುಮುಗ್ಧಾಳಾಪಂ ಬಳೆದಂ: **ಆದಿಪು**, ೮. ೧)

ವ್ಯಾಬಾಧೆ – [ನಾ] ಕಾಟ (ದಿತಿಸುತವ್ಯಾಬಾಧೆಗಳ್ ದೇವರ್ಗಿಲ್ಲವಲಾ: **ಪಂಪಭಾ,** ೬. ೧೫)

ವ್ಯಾಭಾಸಿ – [ನಾ] ಹೊಳಪಿನಿಂದ ಕೂಡಿದುದು (ಸಸ್ಪೃಹ ಸಾನಂದ ಸಲೀಲ ಸಸ್ಮಿತಮುಖವ್ಯಾಭಾಸಿ ನೋಡಿಂತು ಸನ್ನಿಹಿತಂ ಸೌಂದರರೂಪಮಿನ್ನುಮೆರ್ದೆಯೊಳ್ ಮಜ್ಜೀವಿತಾಧೀಶನಾ: **ಆದಿಪು,** ೩. ೪೨)

ವ್ಯಾಮೋಹ – [ನಾ] ಒಂದು ಕಾಮಾವಸ್ಥೆ (ಮನೋವೈಕಲ್ಯ ರೋಮಾಂಚಕ ಸ್ತಂಭ ಕಂಪ ಸ್ವೇದ ವೈವರ್ಣ್ಯ ಸಂತಾಪನ ಆಹಾರ ವ್ಯಾಮೋಹ ಗದ್ಗದ ಅಶ್ರುಮೋಕ್ಷ ಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ**, ೪. ೫೯ ವ)

ವ್ಯಾಲಗಜ – [ನಾ] ತುಂಟ ಆನೆ, ಮದ್ದಾನೆ (ನಿಧೀಶ್ವರಸೈನ್ಯ ವ್ಯಾಲಗಜಂಗಳ್ ವನಗಜಲೀಲೆಯನನುಕರಿಸಿ ಕಣ್ಗೆವಂದುವು ಪಲವುಂ: **ಆದಿಪು**, ೧೩. ೨)

ವ್ಯಾಲಗ್ನ – [ಗು] ವಿಶೇಷವಾಗಿ ಕೂಡಿದ, ಸೇರಿದ (ಆಡುವಲ್ಲಿ ಮಕುಟ ವ್ಯಾಲಗ್ನರತ್ನಪ್ರಭಾ ಪರಿವೇಷಂ ಲಲಿತೇಂದ್ರಚಾಪ ರುಚಿಯಂ ಮಾಡಿತ್ತು ದಿಕ್ಚಕ್ರದೊಳ್: **ಆದಿಪು**, ೭. ೧೨೦)

ವ್ಯಾಸನೆನ್ – ವ್ಯಾಸನೇ ಆಗಿದ್ದೇನೆ (ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ: **ಪಂಪಭಾ,** ೧. ೧೩)

ವ್ಯಾಳ – [ನಾ] ನಾಗಿನಿ (ವ್ಯಾಳಸುರಸೌಂದರೀಜನಿತ ಬಹುಮಾನಮಂ: **ಆದಿಪು**, ೭. ೨೭ ರಗಳೆ)

ವ್ಯಾಳಗಜ – [ನಾ] ವ್ಯಾಲಗಜ (ವ್ಯಾಳಗಜಂಗಳುಮಂ ಅಂಕದ ಬರ್ದೆಯರುಮಂ ಉಗಿಬಗಿಮಾಡಿದ ಸಂತೋಷದೊಳ್: **ಪಂಪಭಾ,** ೨. ೩೯ ವ)

ವ್ಯಾಳದಂತಿ – [ನಾ] ತುಂಟ ಆನೆ (ಒಂದೊಂದರ್ಕೆ ಮೊಗಂಬುಗಿಸಿದಾಗಳ್ ಉಭಯವ್ಯಾಳದಂತಿ ವಧ್ಯಕ್ರಮಂಗಳೊಳ್ ಭಾರ್ಗವರ್ ಸುರಿಗಿಱಿವಂತಿಱಿಯೆ: **ಪಂಪಭಾ,** ೧೦. ೯೩ ವ)

ವ್ಯಾಳಿಕಾ – [ನಾ] ನಾಟಕದ ಒಂದು ಭಾಗ (ನಾಂದೀ ಪ್ರರೋಚನಾ ಪ್ರಸ್ತಾವನಾ ಇತಿವೃತ್ತ ಸಂಧಿ ಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ: **ಪಂಪಭಾ**, ೨. ૩೪ ವ)

ವ್ಯುಚ್ಛಿತ್ತಿ – [ನಾ] ವಿನಾಶ (ಘೋರಸಂಸಾರ ನಾನಾವ್ಯಸನ ವ್ಯುಚ್ಛಿತ್ತಿಯೊಳ್ ಧಾರ್ಮಿಕಜನಜನಿತಾನಂದಸಂದೋಹ ವಿದ್ಯಾರಸದೊಳ್: **ಆದಿಪು**, ೧೬. ೮೦)

ವ್ಯುಷ್ಟಿ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಮೊದಲ ವರ್ಷದ ಹುಟ್ಟುಹಬ್ಬ (ವ್ಯುಷ್ಟಿ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ವ್ಯೂಢ – [ಗು] ಹರಹಾದ (ಕೋಮಳವಂಶಶ್ಯಾಮಂ ಅಂಭೋಧರರವಂ ಅಳಿನೀಕುಂತಲಂ ವ್ಯೂಢವಕ್ಷಸ್ಸ್ಥಳಂ: **ಆದಿಪು**, ೮. ೫೧)

ವ್ಯೂಢೋರಸ್ಕ – [ನಾ] ವಿಶಾಲವಾದ ಎದೆಯುಳ್ಳುದು (ಧನುರಾಕಾರ ವಂಶನುಂ ಋಜುಪರಿಪೂರ್ಣ ಹ್ರಸ್ವಗ್ರೀವನುಂ ವ್ಯೂಢೋರಸ್ಕನುಂ ವಿಪುಳಾಂಚಿತಾಂಸನುಂ: **ಆದಿಪು**, ೧೨. ೫೬ ವ)

ವ್ಯೂಹ – [ನಾ] ಸಮೂಹ (ಪರಿಪೂರ್ಣಭಾವರಸಮಂ ಸಂಗೀತಮಂ ತೋಱೆ ಮೆಚ್ಚಿಸಲ್ ಓರಂತೆ ಸಮಸ್ತದೇವಕುಪಿತವ್ಯೂಹಂ ತೆರಳ್ದಿರ್ದುದು: **ಆದಿಪು**, ೯. ೧೨); [ನಾ] ಸೈನ್ಯ (ಪರವ್ಯೂಹಭಯಂಕರಂ ನೆಗೆದು ಪಾರ್ದಾರ್ದು ಎಚ್ಚೊಡೆ: **ಪಂಪಭಾ**, ೧೧. ೧೭); [ನಾ] ಸೇನಾ ರಚನೆ (ಇದು ಚಕ್ರವ್ಯೂಹಂ ಈ ವ್ಯೂಹಮನೊಡೆವದಟಂ ಪಾರ್ಥಂ ಅಂತಾತನುಂ ಗೆಂಟಿದಂ ಎಮ್ಮೀ ನಾಲ್ವರುಂ ಭೇದಿಸಲಱಿಯೆವು: **ಪಂಪಭಾ,** ೧೧. ೮೭)

ವ್ಯೋಮ – [ನಾ] ಆಕಾಶ (ಶ್ರೀಮಚ್ಚಳುಕ್ಯವಂಶ ವ್ಯೋಮಾಮೃತ ಕಿರಣನೆನಿಪ ಕಾಂತಿಯನೊಳಕೊಂಡೀ ಮಹಿಯೊಳಾತ್ಮ ವಂಶಶಿಖಾಮಣಿ ಜಸಮೆಸೆಯೆ ಯುದ್ಧಮಲ್ಲಂ ನೆಗೞ್ದಂ: **ಪಂಪಭಾ,** ೧. ೧೫)

ವ್ಯೋಮಗ – [ಗು] ಆಕಾಶದಲ್ಲಿನ (ಅಮರಮನೋಹಾರಿ ಹೇಮಾದ್ರಿಯಂ ವ್ಯೋಮಗಕಲ್ಲೋಲಾಬ್ಧಿಯಂ: **ಆದಿಪು**, ೮. ೨೬)

ವ್ಯೋಮಚರ – [ನಾ] ಖೇಚರ (ಇದನ್ನೆಮಗಂ ಅನುಭೂತಂ ಅದಲ್ಲದೆಯುಂ ವಯೋಧಿಕ ವ್ಯೋಮಚರಪ್ರತ್ಯಕ್ಷಂ: **ಆದಿಪು,** ೨. ೧೮ ವ)

ವ್ರಜ – [ನಾ] ಸಮೂಹ, ಗುಂಪು (ದೇವೇಂದ್ರನ ಸುರಭಿಯುಂ ಈಶ್ವರನ ನಂದಿಯುಂ ಉಟಿಯೆ ಗೋವ್ರಜಂಗಳುಮಂ ಇಂದ್ರಪ್ರಸ್ಥಕ್ಕೆ ತೆರಳ್ಚಿ: **ಪಂಪಭಾ**, ೬. ૩૩ ವ)

ವ್ರಣ – [ನಾ] ಹುಣ್ಣು, ಗಾಯ (ಕಾಲ ಸೊಪ್ಪುಳಂ ಆಲಿಸಿ ಸುರನದೀನಂದನಂ ಪೇಱಿಂ ಬಂದರಾರ್ ಎಂದು ಅನೇಕವ್ರಣ ವೇದನಾ ಪರವಶಶರೀರಂ ಬೆಸಗೊಳ್ವುದುಂ: **ಪಂಪಭಾ**, ೧೩. ೬૩ ವ)

ವ್ರಣವೈದ್ಯ – [ನಾ] ಹುಣ್ಣು ಚಿಕಿತ್ಸೆಮಾಡುವ ವೈದ್ಯ (ದುರ್ಯೋಧನಂ ಬಂದಿಕಾಱನಂತೆ ಸೆಱೆಗೆಯ್ದುಂ

ವ್ರಣವೈದ್ಯನಂತೆ ಕೊಡಸಾರಿಯಂ ಪಿಡಿದುಂ ಸೂಳೆಯಂತೆ ಕಟಿವು ಉಟಿವನಜಿದುಂ ರಸವಾದಿಯಂತೆ ಕಟ್ಟಿಯುಂ ಪೆರ್ಜೋಡೆಯಂತೆ ನುಣ್ಣಿತಂ ಪೇೞ್ದು: **ಪಂಪಭಾ,** ೬. ೭೨ ವ)

ವ್ರತಚರ್ಯೆ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಹಿಂಸಾಚಾರ ವರ್ಜಿಸಿ ಅಧ್ಯಯನ ಕೈಗೊಳ್ಳುವುದು (ವ್ರತಚರ್ಯಾ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ವ್ರತತಿ – [ನಾ] ಬಳ್ಳಿ (ಕಲ್ಪವ್ರತತೀಸಂಯುಕ್ತ ಕಲ್ಪಕ್ಷಿತಿರುಹಮನೆ ಪೋಲ್ತಿರ್ದಂ ಆ ಕಾಂತೆಯರ್ ತಮ್ಮತಿರಾಗಂ ಪೆರ್ಚಿ ತನ್ನಿರ್ಕೆಲದೊಳಿರೆ: **ಆದಿಪು,** ೮. ೨೩)

ವ್ರತಹೀನ – **[ನಾ]** ವ್ರತವಿಲ್ಲದವನು (ಕ್ಷಿತಿಪತಿ ಬೇಜೆರಿಸಿ ಮಾನ್ಯರಂ ಮನ್ನಿಸೆ ತದ್ವ್ರತಹೀನರುಂ ಅಂದು ಅಖಿಳಬ್ರತಮಂ ಕೈಕೊಳ್ವ ಬಗೆಗೆ ಬಗೆಯಂ ತಂದರ್; **ಆದಿಪು**, ೧೫. ೧೩)

ವ್ರತಾವರಣ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಬ್ರಹ್ಮಚರ್ಯವ್ರತತ್ಯಾಗ (ಬ್ರಹ್ಮಚರ್ಯವ್ರತಾವರಣ .. .. ವಿಹಾರಯೋಗತ್ಯಾಗಾಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ವ್ರಾತ – [ನಾ] ಸಮೂಹ, ಧಾರೆ (ವಾತ್ಯಾದುರ್ಧರಗಂಧಸಿಂಧುರ ಕಟಸ್ರೋತಃ ಸಮುದ್ಯತ್ ಮದವ್ರಾತೇಂದಿಂದಿರ ಚಂಡ ತಾಂಡವ ಕಲ ಸ್ವಾಭಾವಿಕಶ್ರೇಯಸಃ: **ಪಂಪಭಾ,** ೯. ೯೭)

ವ್ರೀಹಿ – [ನಾ] ಬತ್ತ (ಆ ಪ್ರಸ್ತಾವದೊಳ್ ಫಳಪಾಕವಿರಾಮಂಗಳಪ್ಪ ಗರ್ಭಷಷ್ಟಿವ್ರೀಹಿ ಯವ ಗೋಧೂಮಾದಿ ಮಹೌಷಧಂಗಳುಂ: **ಆದಿಪು,** ೮. ೬೧ ವ)

ಶ

ಶಂಕರ – [ಗು] ಶುಭಕರ (ಪ್ರೀತಿಂಕರ ಶಂಕರ ವಿದ್ಯಾತಿಶಯನಿಧಾನ ನಿನ್ನ ದಯೆವೆರಸಿದತಿಪ್ರೀತಿಯೊಳ್ ಆಂ ಅತ್ಯುತ್ತಮ ಜಾತಿಗಳೊಳ್ ಪುಟ್ಟಿ ಸುಖಮನುಣುತುಂ ಬಂದೆಂ: **ಆದಿಪು**, ೫. ೭೩)

ಶಂಕಾಂತರ – [ನಾ] ಸಂದೇಹಗಳು (ದಿವ್ಯಾಪ್ಸರೋವೃಂದಂ ಈ ಕ್ಷಿತಿಗೇಂ ಇಂದ್ರನ ಶಾಪದಿಂದ ಇೞಿದುವೋ ಪೇೞಿಂಬ ಶಂಕಾಂತರಂ ಮತಿಗಂ ಪುಟ್ಟುವಿನೆಗಂ: **ಪಂಪಭಾ,** ೪. ೩೯)

ಶಂಕಾಕುಳಿತಚಿತ್ತ – **[ನಾ]** [ಶಂಕಾ+ಆಕುಳಿತಚಿತ್ತ] ಆತಂಕದಿಂದ ವಿಕಲಗೊಂಡ ಮನಸ್ಸು (ಯಮನಂದನನಿರ್ವರ ಬರವುಮಂ ಕಾಣದೆ ಶಂಕಾಕುಳಿತಚಿತ್ತನಾಗಿ: **ಪಂಪಭಾ,** ೮. ೪೦ ವ)

ಶಂಕಾಪನಯನ – **[ನಾ]** [ಜೈನ] ಸಂದೇಹವಿಲ್ಲದಿರುವುದು (ಜಿನಮತ ಪದಾರ್ಥಶಂಕಾಪನಯನಮುಂ ಭೋಗಾಕಾಂಕ್ಷೆಯೊಳ್ ವಿಮುಖತೆಯುಂ: **ಆದಿಪು,** ೫. ೫೭)

ಶಂಕಾವಹ – [ಗು] ಸಂದೇಹವುಂಟುಮಾಡುವ (ಆಹವ ಮಹಾಹುಂಕಾರ ಕಾಳಕೂಟವಿಟಪಿಪ್ರರೋಹ ಶಂಕಾವಹ ನಾಭಿಕೂಪಾವಲಂಬಿತ ಕೂರ್ಚಕಳಾಪಂ: **ಆದಿಪು,** ೧೩. ೪೫ ವ)

ಶಂಕಿಸು – [ಕ್ರಿ] ಹೆದರು, ಹಿಂಜರಿ (ಬೆಸಸೆನೆಯುಂ ನುಡಿಯಲ್ ಶಂಕಿಸಿದಪೆಂ ಆಂ ಎಂದೊಡೆ ಏಕೆ ಶಂಕಿಸಿದಪೈ ನೀಂ ಬೆಸವೇೞ್: **ಪಂಪಭಾ,** ೧೨. ೯೦)

ಶಂಕು – [ನಾ] ಈಟಿ (ವಿಜಯರಾಜಮಹಿಷೀ ಮಯೂರಾತಪತ್ರ ಶಂಕಾವಹಶಂಕುಸಂಕುಳಂಗಳಿಂದಂ: **ಆದಿಪು**, ೧೪. ೯೦ ವ)

ಶಂಖ – [ನಾ] [ಜೈನ] ಶಂಖದ ಹುಳು, ಚರ್ಮ, ನಾಲಗೆಗಳನ್ನುಳ್ಳ ದ್ವೀಂದ್ರಿಯ ಜೀವಿ (ಸ್ಪರ್ಶನ ರಸನೇಂದ್ರಿಯೋಪೇತಂಗಳಪ್ಪ ಶಂಖಾದಿ ದ್ವೀಂದ್ರಿಯಂಗಳ್: **ಆದಿಪು**, ೧೦. ೬೩ ವ)

ಶಂಖಚಕ್ರಚಾಮರಹಳಚಿಹ್ನಿತಪದಾಕೃತಿ – [ನಾ] ಶಂಖ, ಚಕ್ರ, ಚಾಮರ, ನೇಗಿಲುಗಳ ಗುರುತಿರುವ ಪಾದದ ಆಕಾರ, ಎಂದರೆ ಚಕ್ರವರ್ತಿಯ ಪಾದ (ಅರಿನೃಪಾಲಮೌಳಿಮಣಿಯೊಳ್ ನೆಲೆಗೊಂಡುದು ಶಂಖಚಕ್ರಚಾಮರಹಳಚಿಹ್ನಿತಪದಾಕೃತಿ: **ಪಂಪಭಾ,** ೬. ೨೯)

ಶಂಖದೊಳ್ ಪಾಲೆಱೆ – [ಕ್ರಿ] ಶಂಖದಲ್ಲಿ ಹಾಲು ಹಾಕು, ಅಥವಾ ಪಾವನವಾಗು (ಶಂಖದೊಳ್ ಪಾಲೆಱೆದಂತಿರೆ ಮಲಿನಮಿಲ್ಲದ ಒಳ್ಗುಲದ ಅರಸುಗಳಿರೆ ನೀನುಂ ಅಗ್ರಪೂಜೆಯಂ ಆಂಪಾ: **ಪಂಪಭಾ,** ೬. ೫೦)

ಶಂಖಧವಳ – [ನಾ] ಶಂಖುವಿನಂತೆ ಹೊಳೆಯುವ (ಕಣ್ಗೊಪ್ಪಿ ತೋರ್ಪುದಿದು ಉತ್ತ್ರೇಂಖತ್ ಅಸಂಖ್ಯ ಶಂಖಧವಳಂ ಗಂಭೀರನೀರಾಕರಂ: **ಪಂಪಭಾ,** ೪. ೨೪)

ಶಂಖನಿಧಿ – [ನಾ] ಕುಬೇರನ ನವನಿಧಿಗಳಲ್ಲಿ ಒಂದು (ಧೃತರತ್ನಾರ್ಘ್ಯಂ ಬಂದಂ ಪತಿಗಿದಿರಂ ಶಂಖನಿಧಿಯೆ ಬರ್ಪಂತಾಗಳ್: **ಆದಿಪು,** ೧೩. ೧೨)

ಶಂಖಾಸ – **[ನಾ]** ತುಂಬೆ (ಅಪ್ರಿಣಾಕ ಭಾವಿಳಶ್ಲಿಷ್ಟಿತಚಳನುಂ ಶ್ಲಕ್ಷ್ಣ ಸ್ನಿಗ್ಧ ಮೃದು ಬಹಳಚ್ಛವಿಯುಂ ಬಂಧುಜೀವ ಶಾಕ ಪುಷ್ಪ ಸಪದ್ಮಮಹಾರಜಶಂಖಾಸತಳವೆಂಬ ಸಪ್ತದ್ವಾಸ್ಥಿತನುಂ: **ಆದಿಪು,** ೧೨. ೫೬ ವ)

ಶಂಭು – [ನಾ] ಶಿವ (ವನಚರನಾಗಿ ಶಂಭು ಗಿರಿಜಾತೆಯಂ ಓತು ಪುಳಿಂದಿ ಮಾಡಿ ನಚ್ಚಿನ ಗುಹನಂ ಕಿರಾತಬಲನಾಯಕನಾಗಿರೆ ಮಾಡಿ: **ಪಂಪಭಾ,** ೮. ೧೪)

ಶಕಟ – [ನಾ] ಬಂಡಿ, ರಥ (ಅನೇಕಶರಭರಿತ ಶಕಟಸಹಸ್ರಮನೊಂದು ಮಾಡಿ ಗಾಂಗೇಯನ ಪೆಱಗೆ ನಿಲಿಸಿದಾಗಳ್: **ಪಂಪಭಾ,** ೧೧. ೧೬ ವ)

ಶಕಟವ್ಯೂಹ – [ನಾ] ರಥದ ಆಕಾರದಲ್ಲಿ ಸೇನೆಯನ್ನು ನಿಲ್ಲಿಸುವ ಒಂದು ರಚನೆ (ಶಕಟವ್ಯೂಹದ ಪೆಱಗೆ .. .. ಅಧಿಕಬಲರಪ್ಪ ಸೌಬಲ ದುಶ್ಶಾಸನಾದಿ ಪ್ರಧಾನ ವೀರಭಟಕೋಟಿಯ ನಡುವೆ ಸಿಂಧುರಾಜನಂ ನಿರಿಸಿ: **ಪಂಪಭಾ,** ೧೧. ೧೩೨ ವ)

ಶಕಳ – [ನಾ] ಚೂರು, ತುಂಡು (ಅನೇಕ ನೃಪ ಶಿರಃ ಕಪಾಳ ಶಕಳ ಜರ್ಜರಿತಮುಂ ಪರಸ್ಪರ ಸಮರ ರಭಸಸಮುತ್ಸಾರಿತಮುಂ: **ಪಂಪಭಾ,** ೧೩. ೫೧ ವ)

ಶಕುನಂಗಳಂ ಕ್ರಮಮಂ ಬಗೆ – [ಕ್ರಿ] ಪ್ರಕೃತಿಯ ಕೆಟ್ಟ ಸೂಚನೆಗಳ ಸ್ವರೂಪವನ್ನು ಗಮನಿಸು, ಅರ್ಥಮಾಡಿಕೊ (ಅವರ ಮನದ ಪುಲ್ವಗೆಯಂ ಪೊಲ್ಲಮೆಯುಮಂ ಅಱಿಯದೆ ಸಮಸ್ತಬಳೋದ್ಯುಕ್ತನಾಗಿ ಶಕುನಂಗಳ ಕ್ರಮಮಂ ಬಗೆಯದೆ: **ಪಂಪಭಾ**, ೬. ೬೮ ವ)

ಶಕುನದ ನಯ – [ನಾ] ಶಕುನಶಾಸ್ತ್ರ (ಬಿಡೆ ತಿರ್ದಿದ ಶಕುನದ ನಯದಡಿವಿಡಿದು ಪುರೋಹಿತಂ ನೃಪಂಗೀ ನುಡಿಯಂ ನುಡಿದಂ: **ಆದಿಪು**, ೫. ೬)

ಶಕುನಿ – [ನಾ] ಗಾಂಧಾರಿಯ ಸೋದರನಾದ ಗಾಂಧಾರರಾಜ ಸೌಬಲನ ಮಗ (ಮದುವೆಯಂ ಮಾಡಲೆಂದು ಧೃತರಾಷ್ಟ್ರಂಗೆ ಗಾಂಧಾರರಾಜ ಸೌಬಲನ ಮಗಳಪ್ಪ ಗಾಂಧಾರಿಯಂ ಶಕುನಿಯೊಡವುಟ್ಟಿದಳಂ ತಂದುಕೊಟ್ಟು: **ಪಂಪಭಾ**, ೧, ೮೭, ವ)

ಶಕ್ತಿ – [ನಾ] ಒಂದು ಆಯುಧ, ಶಕ್ತ್ಯಾಯುಧ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ**, ೧. ೧೦೩)

ಶಕ್ರಕಾರ್ಮುಕ – [ನಾ] ಕಾಮನ ಬಿಲ್ಲು (ಪೊನಲ್ಗಳ ಕೆಂಪು ಪಸುರ್ಪು ಕರ್ಪು ಬೆಳ್ಪು ಒಳಕೊಳೆ ಶಕ್ರಕಾರ್ಮುಕವಿಳಾಸಮಂ ಏನೆರ್ದೆಗೊಂಡು ಬೇಟದತ್ತಳಗಮಂ ಉಂಟುಮಾಡಿದುದೋ: **ಪಂಪಭಾ**, ೭. ೨೫)

ಶಕ್ರನೃತ್ಯ – [ನಾ] [ಜೈನ] ಜಿನ ಜನ್ಮಾಭಿಷೇಕಕಾಲದಲ್ಲಿ ಸೌಧರ್ಮೇಂದ್ರನು ಮಾಡುವ ಆನಂದನೃತ್ಯ (ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ ಜತ್ತವಟ್ಟದ ಮಣಿಯಂತದೇಂ ಪದುಳಮಾದುದೊ ದಿವ್ಯವಧೂಕದಂಬಕಂ: **ಆದಿಪು,** ೭. ೧೨೫)

ಶಕ್ರಪುತ್ರ – [ನಾ] ಇಂದ್ರನ ಮಗ, ಅರ್ಜುನ (ಆ ಶಕ್ರಪುತ್ರನಂ ಆ ಕೊಂದೊಡೆ ಧರ್ಮಪುತ್ರನಟೆಗುಂ ತಾಯೆಂದೆ ಮುಂ ಕೊಂತಿ ಬಂದಿನಿಸಂ ಪ್ರಾರ್ಥಿಸಿ ಪೋದಳ್ ಎನ್ನಂ ಅದಂ ನಾಂ ಮಾಣ್ದಿರ್ದೆಂ: **ಪಂಪಭಾ**, ೧೨. ೧೯೬)

ಶತಕ್ರತು – [ನಾ] ನೂರು ಯಜ್ಞಗಳು (ಆ ಮಖದ ಮಾಹಾತ್ಮ್ಯಮಂ ಪೇಟಿಪ್ಪೊಡೆ ಮುನ್ನಂ ಕೃತಯುಗದೊಳ್ ಹರಿಶ್ಚಂದ್ರನೆಂಬ ಚಕ್ರವರ್ತಿ ಶತಕ್ರತುವಂ ನಿರ್ವರ್ತಿಸಿ: **ಪಂಪಭಾ**, ೬. ೧೭ ವ)

ಶತಚತುಷ್ಟಯ – [ನಾ] ನಾಲ್ಕು ನೂರು (ಮತ್ತಂ ಘಾತಿಗಳ ಕೇಡಿನೊಳ್ ಗವ್ಯೂತಿಶತಚತುಷ್ಟಯ ಸುಭಿಕ್ಷತೆ ಮೊದಲಾಗೆ: **ಆದಿಪು**, ೧೦. ೪೨ ವ)

ಶತಚೂರ್ಣ – [ನಾ] ನೂರು ಚೂರು, ಪುಡಿಪುಡಿ (ಅಂತೆಯ್ದಿ ತದ್ಗದಾಘಾತದೊಳಂ ಬಾಣಪಾತದೊಳಂ ಅವನ ರಥಮಂ ಶಚಚೂರ್ಣಂ ಮಾಡಿ: **ಪಂಪಭಾ**, ೭. ೩೧ ವ)

ಶತಪತ್ರ – [ನಾ] ಕಮಲ (ಸರೋಜನಿಳಯೆ ಎನ್ನ ಬರ್ಪನ್ನಂ ಅರಸನಂ ಅಗಲದೆ ವಿಕಸಿತಶತಪತ್ರ ಆತಪತ್ರದ ತಣ್ಣೆೞಲುಮಂ ಕುಂದಲೀಯದಿರು: **ಪಂಪಭಾ**, ೧೩. ೧೦೫ ವ)

ಶತಪತ್ರಿಕಾ – [ನಾ] ಸೇವಂತಿಗೆ (ಮತ್ತೊರ್ವಳ್ ಶತಪತ್ರಿಕಾ ಕುಬ್ಜಕುಸುಮಮಾಲಾಕೋಮಳೆ: **ಆದಿಪು** ೧೧. ೧೨೨ ವ) ['**ಶತಪತ್ರ**' ಎಂಬುದರ ಬದಲು ನರಸಿಂಹಶಾಸ್ತ್ರಿಗಳು ಸ್ವೀಕರಿಸಿರುವ ಪಾಠ]

ಶತಮಖ – [ನಾ] ಶತಕ್ರತು, ಇಂದ್ರ (ಶತಮಖನರಸಿಗೆ ಕರ್ಣಾವತಂಸಮಾಗಲ್ಕೆ ನೋಂತ ಪಲ್ಲವಪುಷ್ಪ ಪ್ರತತಿಯನೆ ಮೆಱೆದು ಚೆಲ್ವೆಡೆಗೆ ಅತಿಶಯಮೆನಿಸಿದುದು ಪಾರಿಜಾತಕುಜಾತಂ: **ಆದಿಪು**, ೬. ೯೯)

ಶತಶೃಂಗ – [ನಾ] ಒಂದು ಪರ್ವತದ ಹೆಸರು, ಪಾಂಡು ವನವಾಸಕ್ಕೆ ಹೋದ ಜಾಗ (ಮುನಿಮುಖ್ಯ ಮುಖಾಂಭೋಜೋದರ ನಿರ್ಗತ ಮಂತ್ರಪೂತಾಂಗಮಂ ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ**, ೧. ೧೧೫)

ಶತ್ರುಮಂಡಳಿಕ – [ನಾ] ಶತ್ರುಗಳ ಸಮೂಹ (ಮಲೆ ತಲೆದೋಱದೆಂದುದನೆ ಕೊಟ್ಟುದು ಡಂಗಮಡಂಗಿ ಬಂದುದು ಒಕ್ಕಲಿಗವೆಸರ್ಗೆ ಪೂಣ್ದುದು ಕುಱುಂಬು ತಱುಂಬದೆ ಮಿಕ್ಕ ಶತ್ರುಮಂಡಳಿಕರೆ ಮಿತ್ರಮಂಡಳಿಕರಾದರ್: **ಪಂಪಭಾ**, ೨. ೯೦)

ಶಫರ – [ನಾ] ಮೀನು (ತರಳತರಂಗತುರಂಗಂ ಕರಿಮಕರಕರೀಂದ್ರಂ ಅಖಿಳಶಫರಪದಾತತ್ಯುತ್ಕರಂ ಉಗ್ರಗ್ರಾಹರಥಂ ಭರತಂಗಿತ್ತುದು ಪಯೋಧಿಬಲ ವಿಳಸನಮಂ: **ಆದಿಪು**, ೧೨. ೭೮)

ಶಬರಖಂಡ – [ನಾ] ಬೇಡರ ಅರಸೊತ್ತು (ನಿಜವಿಜಯಕಟಕಂ ನಡೆಯೆ ವಿಜಯಾರ್ಧಾಚಳಮಂ ಪೆಱಗಿಕ್ಕಿ ಶಬರಖಂಡಂಗಳಂ ಸೇನಾನಾಯಕನೆ ಬಾಯ್ಕೇಳಿಸಿ ಬರೆ: **ಆದಿಪು**, ೧೪. ೫೭ ವ)

ಶಬರೀಜನ – [ನಾ] ಬೇಡಸ್ತ್ರೀಯರು (ಅದು ನಿರ್ಝರ ಉಚ್ಚಳಿತ ಶೀಕರಶೀತಳವಾತನರ್ತಿತ ಉನ್ಮದ ಶಬರೀಜನ ಅಳಕಂ: **ಪಂಪಭಾ**, ೩. ೧೦)

ಶಬಳ – [ನಾ] [ಶಬಲ] ಬಣ್ಣಬಣ್ಣದ (ಐರಾವತಕರಲೂನ ಸಲ್ಲಕೀಶಬಳಮುಂ: **ಪಂಪಭಾ**, ೪. ೧೮ ವ)

ಶಬಳಿತ – [ಗು] ಬಣ್ಣಬಣ್ಣವಾದ (ಭಯಾನಕೋಭಯತಟ ಗುಹಾಗಹ್ವರನಿರ್ಜ್ಜರತ್ ಅಜಗರ ಗಳಗಳಿತ ಗರಳಶಬಳಿತಸಲಿಲ ಪ್ರವಾಹೆಯುಂ: **ಆದಿಪು**, ೫. ೮೭ ವ)

ಶಮ – [ನಾ] ಶಾಂತಿ (ವಿಕ್ರಮಮಂ ಪಗೆಯಂ ಕಿಡಿಸುವ ಶಮದಿಂ ಮುನಿಗಾಯ್ತು ಸಿದ್ಧಿ ಭೂಪತಿಗಾಯ್ತೇ: **ಪಂಪಭಾ**. ೭. ೫೧)

ಶಮಂತಪಂಚಕ – [ನಾ] [ಸಮಂತಪಂಚಕ] ಪರಶುರಾಮನು ಎಲ್ಲ ಕ್ಷತ್ರಿಯರನ್ನೂ ಕೊಂದು ಅವರ ರಕ್ತದಿಂದ ನಿರ್ಮಿಸಿದ ಐದು ಮಡುಗಳು, ಕಾಲಾಂತರದಲ್ಲಿ ಈ ಜಾಗ ಕುರುಕ್ಷೇತ್ರ ಎನ್ನಿಸಿಕೊಂಡಿತು (ತಂದೆಗೆ ನೀರ್ಗುಡಲುಂ ಎಂದು ಮಾಡಿದ ಶಮಂತಪಂಚಕಗಳೆಂಬ ಅಯ್ದು ಪೆರ್ಮಡುಗಳ ಕೆಲದೊಳ್: **ಪಂಪಭಾ**, ೯. ೧೦೪ ವ)

ಶಮೀವೃಕ್ಷ – [ನಾ] ಬನ್ನಿ ಮರ (ತಮ್ಮ ದಿವ್ಯಾಯುಧಂಗಳೆಲ್ಲಮಂ ಆ ಪುರೋಪವನದ ಪಿತೃವನದ ಕೆಲದ ಶಮೀವೃಕ್ಷದ ಮೇಲೆ ಪುರುಷಾಕೃತಿಯಾಗಿ ನೇಲ್ಗಟ್ಟಿ: **ಪಂಪಭಾ**, ೮. ೫೨ ವ)

ಶಯನ – [ನಾ] ಹಾಸಿಗೆ (ಸಮಸಂದ ಅಟ್ಟಿಱಿಕ್ ಅಲಂಪನೀಯೆ ಶಯನಂ ಘರ್ಮಾಂಬುವಿಂ ನಾನೆ ಮುನ್ನಮೆ ನಾಣೊಟ್ಟುಡಿವೋಗಿ ಸೂಸುವ ಪದಂ ಗಂಗಾಂಬುವಂ ಪೋಲೆ: **ಪಂಪಭಾ**, ೪. ೧೧೯)

ಶಯನಸದನ – [ನಾ] ಮಲಗುವ ಮನೆ (ಪುಷ್ಕಳಾವತಿಯೆಂಬ ಶಯನಸದನಮುಂ ಕುಬೇರಕಾಂತಮೆಂಬ ತವದ ಭಂಡಾರಮುಂ: **ಆದಿಪು,** ೧೫. ೩ ವ)

ಶರ – [ನಾ] ಬಾಣ (ನಿನ್ನ ಪೆಡಗೆಯ್ಗಟ್ಟಂ ಶರದಿಂ ಬಿಡಿಸಿದನಲ್ಲನೆ ಸರಿತ್ಸುತಂ ಬನ್ನವಿನ್ನವು ಎಂಬುವುಮೊಳವೇ: **ಪಂಪಭಾ,** ೮. ೫೩)

ಶರಕಲ್ಪ – [ನಾ] ಬಾಣವಿದ್ಯೆಯ ತಿಳಿವಳಿಕೆ (ಇವನ ಶರಕಲ್ಪಂ ಇವನ ಅದಟು ಇವನ ಅಳವು ಇವನ ಅಣ್ಮು ನಿನಗಂ ಅಗ್ಗಳಂ ಇವನಂ ಪವನಸುತಂ ಗೆಲ್ಲಂ: **ಪಂಪಭಾ,** ೧೨. ೧೬೩)

ಶರಚ್ಚಂದ್ರ – [ನಾ] [ಶರತ್+ಚಂದ್ರ] ಶರತ್ಕಾಲದ ನಿರ್ಮಲ ಆಕಾಶದಲ್ಲಿನ ಚಂದ್ರ (ಗುರುಜನ ನಯನೇಂದೀವರಾನಂದ ಶರಚ್ಚಂದ್ರನುಂ ಆಗಿ: **ಆದಿಪು,** ೮. ೩೭ ವ)

ಶರಜ್ಜಳಧರ – [ನಾ] [ಶರತ್+ಜಳಧರ] ಶರತ್ಕಾಲದ ಮೋಡ, ಬಿಳಿ ಮೋಡ (ನೀಲನೀರದತನುಚ್ಛವಿ ಭಸ್ಮರಜೋವಿಲಿಪ್ತಂ ಅಂಜನಗಿರಿಯಂ ಶರಜ್ಜಳಧರಂ ಕವಿದಂತಿರೆ ಚೆಲ್ವನಾಳ್ದು: **ಪಂಪಭಾ,** ೭. ೫೯)

ಶರಣ್ – [ನಾ] ಶರಣಾಗತಿ, ರಕ್ಷಣೆ (ಶರಣಕ್ಕೆ ಎನಗೆ ಅರಿಕೇಸರಿಯ ಎರಡು ಪದಾಂಬುಜಂ ಈಗಳ್ ಎಂಬುದುಂ: **ಪಂಪಭಾ,** ೫. ೯೯)

ಶರಣಂ – [ನಾ] ಗತಿ (ಎಮಗೆ ಅಭವ ಭವಭಯಹರಣಂ ಭವದೀಯ ಸಮವಸರಣಂ ಶರಣಂ: **ಆದಿಪು,** ೧೪. ೩೮)

ಶರಣಾಗತ – [ನಾ] ರಕ್ಷಣೆ ಬಯಸಿ ಬಂದವನು (ಎನಗೆ ಶರಣಾಗತನಾದ ವಿಜಯಾದಿತ್ಯನಂ ಕಾದ ಬಲ್ಲಾಳ್ತನದೊಳ್: **ಪಂಪಭಾ,** ೧೪. ೩೭ ವ)

ಶರಣ್ಗೆವರ್ – [ಕ್ರಿ] ಶರಣಾಗತವಾಗು, ಮೊರೆವೊಗು (ಒಡಲ್ ಪಸಿವಾರ್ದಳುರ್ದಟಿಪ್ಪೆ ನಿಪ್ಪುಟಂ ಕರಗಿದುದು ಎಮ್ಮ ಬಾಳ್ವ ತೆಱನಾವುದು ದೇವ ಶರಣ್ಗೆ ವಂದೆವು: **ಆದಿಪು,** ೮. ೬೨)

ಶರತ್ಸಮಯ – [ನಾ] ಶರತ್ಕಾಲ (ಅಮೃತಮಯೋಕ್ತಿ ಶರತ್ಸಮಯ ಸುಧಾಂಶುವಿಶದಕೀರ್ತಿವಿತಾನಂ: **ಆದಿಪು,** ೧. ೩೦)

ಶರದ – [ನಾ] ಸೆಕೆ (ಆ ಗುಹೆಯೊಳಗಣ ಶರದದೊಳಾಗಳೆ ಬಸವಳಿದ ಬಲಮನಾಱಿಸುವವೊಲಾಯ್ತಾ ಗಿರಿಯ ಕೊಳದ ಮರಗಳ ಪೂಗಳ ಕಂಪನೆ ತೆರಳ್ಚಿ ಬೀಸುವ ಪವನಂ: **ಆದಿಪು,** ೧೩. ೫೬); [ನಾ] ಶರತ್ಕಾಲ (ಶರದದ ಚಂದ್ರನಂ ವಿಮಲಚಂದ್ರಿಕೆ ಬಾಳದಿನೇಶನಂ ತಮೋಹರಕಿರಣಂ ಕಿಶೋರಹರಿಯಂ ನವಕೇಸರಾಜಿ **ಪಂಪಭಾ,** ೨. ೩೯)

ಶರದಾಗಮ – [ನಾ] ಶರತ್ಕಾಲದ ಆರಂಭ (ಘನಾಗಮಂ ಮೊದಲ್ಗಿಡೆ ಶರದಾಗಮಂ ನೆಱೆಯೆ ಪರ್ಬೆ ಸಮಸ್ತಮಹೀವಿಭಾಗಮಂ: : **ಪಂಪಭಾ,** ೭. ೬೯)

ಶರದಾತಪ – [ನಾ] ಶರತ್ಕಾಲದ ಬಿಸಿಲು, ಮಾಗಿಯ ಬಿಸಿಲು (ಪೊಳೆವಲರ ಪಸೆಯೊಳಿರ್ದುಂ ಪುಳಿನದ ಲೋಹಾಸನಂಗಳೊಳ್ ನೆಮ್ಮಿರ್ದುಂ ಚಳದಳಕೆಯರ್ ಅರೆಬರ್ ಅದೇಂ ಕಳೆದರೊ ಶರದಾತಪಪ್ರಭೂತ ಶ್ರಮಮಂ: **ಆದಿಪು,** ೧೧. ೭೬)

ಶರದ್ಘನ – [ನಾ] ಶರತ್ಕಾಲದ ಮೋಡ, ಬೆಳ್ಮುಗಿಲು (ಆನ್ನೋಡೆ ನೋಡೆ ನೋಡ ಮನನ್ನೋಡುವವೊಲ್ ಶರದ್ಘನಂ ಕರಗಿದುದು: **ಆದಿಪು,** ೪. ೬೬)

ಶರಧಿ – [ನಾ] ಬತ್ತಳಿಕೆ (ಬಂದು ದ್ರೋಣಾಚಾರ್ಯಂಗೆ ಪೊಡೆವಟ್ಟು ಶರಧಿಯಿಂ ದಿವ್ಯಾಸ್ತ್ರಂಗಳಂ ಉರ್ಚಿಕೊಡು: **ಪಂಪಭಾ,** ೨. ೭೮ ವ)

ಶರಪಂಜರ – [ನಾ] ಬಾಣಗಳಿಂದ ಮಾಡಿದ ಪಂಜರ, ಶಯ್ಯೆ (ಅಂತು ಶರಪಂಜರದೊಳ್ ಒಱಗಿಯುಂ ಒಡಲಿಂ ಪತ್ತುವಿಟ್ಟು ಪೋಪ ಜೀವಮಂ ಪೋಗಲೀಯದೆ: **ಪಂಪಭಾ,** ೧೧. ೪೭ ವ)

ಶರಪರಿಣತಿ – [ನಾ] ಬಾಣವಿದ್ಯೆಯ ಪ್ರೌಢಿಮೆ ('ನ್ನುಮಂ ಗೆಲೆವಂದ ಸಾಮಂತಚೂಡಾಮಣಿಯ ಶರಪರಿಣತಿಯಂ ಆರಯಲೆಂದು: **ಪಂಪಭಾ,** ೨. ೫೯ ವ)

ಶರಪಾತ – [ನಾ] ಬಾಣಗಳ ಮಳೆ (ಶರಪಾತಮೆ ದೂತನವೊಲ್ ತರೆ ಮಾಗಧವರತನುಪ್ರಭಾಸಾಮರರಂ ಕರುಣಿಸಿ ಬಿಟ್ಟಂ ಕುಲಧನಪರಿಕರಮಂ ಕಯ್ಗೆಮಾಡಿ ಮನುಕುಲತಿಲಕಂ: **ಆದಿಪು,** ೧೪. ೫೫)

ಶರಪಾಶ – [ನಾ] ಬಾಣಗಳ ಹಗ್ಗ, ಬಾಣಗಳ ಬಲೆ (ನಿಮಿರ್ವ ಸುಯ್ಯೆಳಿಂ ಕುಸಿಯುತ್ತುಂ ಶರಪಾಶಂಗಳ ನಡುವಣ ಹರಿಣಿಯವೋಲ್ ಮನದೊಳಾಗಳ್ ಆಕುಳೆಯಾದಳ್: **ಆದಿಪು,** ೪. ೫೦)

ಶರಭ – [ನಾ] ಸಿಂಹಕ್ಕಿಂತ ಬಲಿಷ್ಠವಾದ ಎಂಟುಕಾಲುಗಳ ಒಂದು ಕಲ್ಪಕ ಪ್ರಾಣಿ (ಉರಿ ಕೊಳೆ ದೆಸೆಗಾಣದೆ ದೆಸೆವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂಬೆರಸು ಒಳಱೆ ನೆಗೆದುದಾ ವನ ಕರಿ ಶರಭ ಕಿಶೋರಕಂಠಗರ್ಜನೆ ಬನದೊಳ್: **ಪಂಪಭಾ,** ೫. ೯೧)

ಶರಭವನ – [ನಾ] ಬಾಣಗಳ ಮನೆ, ಬತ್ತಳಿಕೆ (ಕಂತುಶರಭವನನಾ ಪ್ರಿಯಕಾಂತಾ ಭ್ರೂವಿಭ್ರಮ ಗ್ರಹಾಗ್ರಹ ವಶದಿಂ: **ಪಂಪಭಾ,** ೧. ೬೬)

ಶರಶಯ್ಯೆ – [ನಾ] ಬಾಣಗಳ ಹಾಸಿಗೆ (ಚಿತ್ತದೊಳ್ ಮೃಡಂ ತೊಡರ್ದಿರೆ ಬಿಟ್ಟು ಅದೇಂ ಎಸೆದನೋ ಶರಶಯ್ಯೆಯೊಳ್ ಅಂದು ಸಿಂಧುಜಂ: **ಪಂಪಭಾ,** ೧೩, ೬೨)

ಶರಶಾಳಿ – [ನಾ] ನಿಪುಣ ಬಿಲ್ಗಾರ (ಶರಶಾಳಿಯೆಂ ಎಂಬುದಂ ಈ ಶರದಿಂದೆಮಗಱಿಪಲೆಚ್ಚು ಕುಲಧನಚಯಮಂ ತರಿಸಿ ಕೊಳಲ್ಬಗೆದ ಅದಟನ: **ಆದಿಪು,** ೧೨. ೯೯)

ಶರಸಂಧಾನ – [ನಾ] ಬಿಲ್ಲಿಗೆ ಬಾಣವನ್ನು ಹೂಡುವುದು (ಶರಸಂಧಾನದ ಬೇಗಂ ಅಂಬುಗಳಂ ಅಂಬು ಈಂಬಂತೆ ಮೇಣಂಬಿನಾಗರಮೆಂಬಂತೆನೆ ಪಾಯ್ದು ಅರಾತಿಶರ ಸಂಘಾತಂಗಳಂ ನುರ್ಗಿ: **ಪಂಪಭಾ,** ೧೧. ೪೦)

ಶರಸ್ತಂಬ – [ನಾ] ಲಾಳದ ಕಡ್ಡಿ, ಜೊಂಡು (ಒಗೆದ ಶರಸ್ತಂಬದೊಳ್ ಇರ್ಬಗಿಯಾಗಿ ಮನೋಜರಾಗರಸಂ ಉಗುತರೆ ತೊಟ್ಟಗೆ ಬಿಸುಟು ಬಿಲ್ಲಂ ಅಂಬುಮಂ ಅಗಲ್ದಂ ಆಶ್ರಮದಿಂ ಉದಿತಲಜ್ಜಾವಶಂ: **ಪಂಪಭಾ,** ೨. ೩೩)

ಶರಾಚಾರ್ಯ – [ನಾ] ಬಿಲ್ವಿದ್ಯೆಯ ಗುರು, ದ್ರೋಣ (ತದೀಯ ಕೌಕ್ಷೇಯಕ ಧಾರಾವಿದಾರಿತಶರೀರನುಂ ಆಗಿ ಬಿಟ್ಟಿರ್ದ ಶರಾಚಾರ್ಯರಂ ಕಂಡು: **ಪಂಪಭಾ,** ೧೩. ೫೫ ವ)

ಶರಾಸನ – [ನಾ] ಬಿಲ್ಲು (ಬೂದಿ ಜೆಡೆ ಲಕ್ಕಣಂ ತಪಕೆ ಆದುವು ಎರಟಿರ್ದೊಣೆ ಶರಾಸನಂ ಕವಚಂ ಇದೆಂತಾದುವೋ ಮುತ್ತುಂ ಮೆಟಿಸುಂ ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ: **ಪಂಪಭಾ,** ೭. ೯೨)

ಶರಾಸನಗುಣಘಾತಜಾತಕಾಳಿಕೆ – [ನಾ] ಬಿಲ್ಲಿನ ಹೆದೆಯ ಹೊಡೆತದಿಂದ ಆದ ಕಲೆ (ವಿಜಯ ಶರಾಸನಗುಣಘಾತ

ಜಾತಕಾಳಿಕೆಯನೆತ್ತಮಗ್ಗಳಿಸಿದುದು ಆ ಭುಜಬಲಿಯ ಭುಜದ್ವಯದೊಳ್ ಭುಜಂಗನಿಶ್ವಾಸ ಧೂಮವೇಣೀನಿಕರಂ: **ಆದಿಪು**, ೧೪. ೧೪೧)

ಶರಾಸನವಿದ್ಯೆ – [ನಾ] ಬಿಲ್ವಿದ್ಯೆ (ಆಲೀಢ ಪ್ರತ್ಯಾಲೀಢ ಸಮಪಾದಂಗಳೆಂಬ ಆಸನಂಗಳೊಳಂ ಪೆಱವುಂ ಶರಾಸನವಿದ್ಯೆಗಳೊಳ್ ಅತಿ ಪ್ರವೀಣರುಂ ಜಾಣರುಂ ಆಗಿ: **ಪಂಪಭಾ**, ೧೩. ೩೮ ವ)

ಶರಾಸನಾಗಮ – [ನಾ] ಧನುರ್ವಿದ್ಯೆ (ಸುರಸಿಂಧುಪುತ್ರ ಗುರು ಕರ್ಣ ಕೃಪ ಪ್ರಮುಖರ್ಕಳಿಂತು ನೇರಿದರೆ ಶರಾಸನಾಗಮದೊಳ್ ಎಂಬಿನಂ: **ಪಂಪಭಾ,** ೧೨. ೬೭)

ಶರಾಸಾರ – [ನಾ] ಬಾಣಗಳ ಮಳೆ (ಅಂತು ನರನಾರಾಯಣರಿರ್ವರುಂ ಅನವರತ ಶರಾಸಾರಶೂನ್ಯೀಕೃತ ಕಾನನಮಾಗೆಚ್ಚು: **ಪಂಪಭಾ**, ೫. ೫೦ ವ)

ಶರೀರ – [ನಾ] ಪ್ರಾಣಿ (ಜಗತ್ಕಾಯಸ್ವಭಾವಭಾವನಾಪರಂ ಸಕಳಶರೀರ ಗುಣಾಧಿಕ ದುಃಖಾರ್ದಿತಾವಿನೀತರೊಳ್: **ಆದಿಪು**, ೯. ೧೨೯ ವ)

ಶರೀರತ್ರಿಗುಣಬಹುಳತೆ – **[ನಾ]** [ಜೈನ] ಪೂರ್ವಶರೀರವನ್ನು ಬಿಡದೆ ತೈಜಸ, ಕಾರ್ಮಣ ಶರೀರಗಳನ್ನು ಹಿಗ್ಗಿಸುವುದು (ಅಂತರ್ಮುಹೂರ್ತಕಾಲದಿಂ ಶರೀರತ್ರಿಗುಣಬಹುಳತೆಯಿಂ ಚತುರ್ದಶರಜ್ಜ್ವಾಯಾಮಾತ್ಮತ್ರಿಗುಣಪ್ರಮಾಣಾತ್ಮಪ್ರದೇಶ ವಿಸರ್ಪಣದಿಂ: **ಆದಿಪು**, ೧೬. ೪೯ ವ)

ಶರೀರಭಾರಮನಿೞಿಪು – [ಕ್ರಿ] ಸಾಯಿ (ಮಹಾಬಳಖಚರೇಂದ್ರಂ ಪ್ರಾಯೋಪಗಮನವಿಧಿಯಿಂದಂ ಆತ್ಮೀಯ ಶರೀರಭಾರಮನಿೞಿಪಿ: **ಆದಿಪು**, ೨. ೬೧ ವ)

ಶರೀರಶೋಭೆ – [ನಾ] ಶವಕ್ಕೆ ಮಾಡುವ ಅಲಂಕಾರ (ಹಾಹಾಕ್ರಂದನ ಧ್ವನಿಗಳ್ ಅಂತಃಪುರಕ್ಕಂ ಪುರಕ್ಕಂ ನೆಗೞೆ ಮತಿವರಾದಿಗಳ್ ತದ್ದಂಪತಿಗಳ್ಗೆ ಶರೀರಶೋಭೆಯಂ ಮಾಡಿ: **ಆದಿಪು**, ೫. ೨೭ ವ)

ಶರೀರೋಪಾದಾನ – [ನಾ] ಹುಟ್ಟು (ಜೀವಂಗಳ್ ಶುಭಾಶುಭಕರ್ಮ ಶೈಲೂಷಪ್ರೇರಿತಂಗಳಾಗಿ .. .. ನಾನಾಕಾರಶರೀರೋಪಾದಾನ ಪರಿತ್ಯಜನಪುರಸ್ಸರಂ ಪರಿಭ್ರಮಿಸುಗುಂ: **ಆದಿಪು,** ೧೬. ೫೭ ವ)

ಶಲ್ಯ – [ನಾ] ಶಲ್ಯವೆಂಬ ಆಯುಧ, ಕಠಾರಿ (ಆಕರ್ಣಕೃಷ್ಟ ವಿಕ್ರಮಾರ್ಜುನ ಕಾರ್ಮುಕವಿಮುಕ್ತ ನಿಶಿತಸಾಯಕಸಂಕುಳ ಶಲ್ಯನಿಪತಿತ ಅನೇಕ ಕಳಕಳಾಕಳಿತಮುಂ: **ಪಂಪಭಾ,** ೧೩. ೫೧ ವ)

ಶಶಾಂಕ – **[ನಾ]** ಚಂದ್ರ (ಧವಳಹಯಂ ಧವಳರಥಂ ಧವಳ ಉಷ್ಣೀಷಂ ಶಶಾಂಕಸಂಕಾಶ ಯಶೋಧವಳಿತ ಭುವನಂ ತಾಗಿದಂ ಅವಯವದಿಂ ಬಂದು ಧರ್ಮತನಯನ ಬಲದೊಳ್: **ಪಂಪಭಾ,** ೧೧. ೩೯)

ಶಶಿಕಾಂತಶಿಳಾತಳ – **[ನಾ]** ಚಂದ್ರಕಾಂತಶಿಲೆಯ ಹಾಸುಗಲ್ಲು (ತಚ್ಛಶಿಕಾಂತ ಶಿಳಾತಳಂ ಸಿಡಿಲ್ದು ಅಂದೊಡೆದತ್ತು ಇದೇಂ ಬಿಸಿದೊ ಬೇಟದ ಬೆಂಕೆ ಮೃಗಾಂಕವಕ್ತ್ರೆಯಾ: **ಪಂಪಭಾ,** ೫. ೭)

ಶಶಿವಂಶ – **[ನಾ]** ಚಂದ್ರವಂಶ (ಭರತ ಯಯಾತಿ ಕುತ್ಸ ಪುರುಕುತ್ಸ ಪುರೂರವದಿಂದಂ ಇನ್ನೆಗಂ ಪರಿವಿಡಿಯಿಂದೆ ಬಂದ ಶಶಿವಂಶಂ: **ಪಂಪಭಾ,** ೭. ೧೬)

ಶಶಿವಿಶದ – **[ನಾ]** ಚಂದ್ರನಂತೆ ಬೆಳ್ಳಗಿನ, ನಿರ್ಮಲವಾದ (ಅಂತು ವರ ಶಶಿವಿಶದಯಶಃಪಟಂಗಳಂ ನನ್ನಿಪಟಂಗೊಳ್ವಂತೆ ವಿವಿಧ ಧ್ವಜಪಟಂಗಳಂ ಕೊಂಡು: **ಪಂಪಭಾ**, ೮. ೧೮೯ ವ)

ಶಶ್ವತ್ – [ಅ] ಪುನಃಪುನಃ (ಗುಣಮೆಂಟುಂ ಬಂದು ತನ್ನೊಳ್ ಪೆಣೆದಿೞೆ ಸುಖಸೋದ್ಭೂತನುಂ ಲೋಕಚೂಡಾಮಣಿಯುಂ ಶಶ್ವತ್ ತ್ರಿಲೋಕೀಪ್ರಣುತನುಂ: **ಆದಿಪು,** ೧೬. ೪೯ ವ); **[ಅ]** ಶಾಶ್ವತವಾದ (ಶ್ರುತದೇವೀವಚನಾಮೃತಂ ಶ್ರುತಕಥಾಳಾಪಂ ಶ್ರುತಸ್ಕಂಧಸಂತತಿ ಶಶ್ವಚ್ಛ್ರುತಪಾರಗಶ್ರುತಿ ಮಹೋಮ್ರ್ಯುಲ್ಲಾಸಿ: **ಪಂಪಭಾ,** ೧೪. ೩೨)

ಶಷ್ಪಸರೋವರ – **[ನಾ]** ದಂಡೆಯಲ್ಲಿ ಎಳೆ ಗರುಕೆ ಬೆಳೆದಿರುವ ಸರೋವರ (ಶ್ರೀಮತಿಯಾದ ಭವದೊಳ್ ವಜ್ರಜಂಘನುಂ ತಾನುಮಿರ್ದ ಶಷ್ಪಸರೋವರದೊಳ್ ಚಾರಣಯುಗಳಕ್ಕೆ ವಿಧಿಪೂರ್ವಕಂ ಮಹಾದಾನಮನಿತ್ತುದಂ: **ಆದಿಪು,** ೯. ೧೩೧ ವ)

ಶಸ್ತ್ರ – **[ನಾ]** ಆಯುಧ (ಶಸ್ತ್ರ ಪಾಷಾಣ ಆತಪ ವರ್ಷ ವಿಷ ಅಗ್ನಿ ಕಾಷ್ಠ ಕಂಟಕ ತ್ರಿದೋಷಸಂಭವಾಮಯ ಜರಾದಿ ಬಾಧಾವಿದೂರನುಂ: **ಆದಿಪು,** ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]; **[ನಾ]** ಆಯುಧಗಳ ಪ್ರಯೋಗ, ಅಂದರೆ ಯುದ್ಧ (ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ ಶಸ್ತ್ರಶಾಸ್ತ್ರಂಗಳೊಳ್ ಅತಿಪರಿಣತರಂ ಮಾಡಿ: **ಪಂಪಭಾ,** ೧, ೮೭, ವ)

ಶಸ್ತ್ರಕರ್ಮ – [ನಾ] ಶಸ್ತ್ರಗಳನ್ನು ಪ್ರಯೋಗಿಸುವ ಕಾರ್ಯ, ಕರ್ತವ್ಯ (ನಿಖಿಲಕ್ಷತ್ರಿಯಸಮೂಹಕ್ಕೆ ಶಸ್ತ್ರಕರ್ಮಮುಮಂ .. .. ಯಥಾಯೋಗ್ಯಮುಪದೇಶಂಗೆಯ್ದು: **ಆದಿಪು,** ೮. ೬೪ ವ)

ಶಸ್ತ್ರವಿದ್ಯೆ – **[ನಾ]** ಆಯುಧ ವಿದ್ಯೆ (ಈ ಕೂಸುಗಳ್ ಯೋಗ್ಯರಪ್ಪುದಂ ಇನ್ನೊಲ್ವೊಡೆ ಶಸ್ತ್ರವಿದ್ಯೆಗೊವಜಂ ನೀನಾಗು ಕುಂಭೋದ್ಭವಾ: **ಪಂಪಭಾ,** ೨. ೫೩)

ಶಾಂತರಸ – **[ನಾ]** ದ್ವೇಷರಹಿತ ಮನೋಭಾವ (ಈ ಜಗದ್ಗುರು ಬಂದಿರ್ದುದದಱಿಂದೆ ಶಾಂತರಸಮಂ ಕೈಕೊಂಡುದೀ ಪರ್ವತಂ: **ಆದಿಪು**, ೧೩. ೮೨)

ಶಾಂತಿಕಕ್ರಿಯೆ – [ನಾ] [ಜೈನ] ಶಾಂತಿಕ (ಭಗವದರ್ಹದಭಿಷೇಕ ಮುನಿಪೂಜನ ಸತ್ಪಾಶತ್ರದಾನಪ್ರಣಯಪ್ರೀಣನ ಮಾಹಾರವಿತರಣ ಗೋದೋಹಪ್ಲವಾವನೀತಳ ಸಂತರ್ಪಣಾದಿ ಶಾಂತಿಕಕ್ರಿಯೆಗಳಂ ನೆಗೞ್ದು: **ಆದಿಪು,** ೧೫. ೪೮ ವ)

ಶಾಂತಿಕಪೌಷ್ಟಿಕಕ್ರಿಯೆ – [ನಾ] [ಜೈನ] ಅನಿಷ್ಟನಿವಾರಣೆಯ ಒಂದು ಕರ್ಮ (ಪಂಚಪರಮೇಷ್ಠಿಗಳ್ಗೆ ಪೂಜೆಯಂ ಪುರೋಹಿತಂ ಮಾಡಿ ಶಾಂತಿಕಪೌಷ್ಟಿಕ್ರಿಯೆಯಂ ನಿರ್ವರ್ತಿಸಿ: **ಆದಿಪು,** ೧೨. ೭೪ ವ)

ಶಾಕವರ್ತಿಕ – [ನಾ] ತರಕಾರಿಯ ಪಲ್ಯ (ಅನಿಷ್ಟುರೋಷ್ಠಪುಟಮಧ್ಯ ಸಂಧಾರಣಮಾತ್ರ

ಚೂರ್ಣನೀಯ ಶಾಕವರ್ತಿಕಮುಮಂ: **ಆದಿಪು**, ೧೧. ೨೬ ವ)

ಶಾಕ್ವರ – [ನಾ] ಎತ್ತು (ನೆರೆದೊಂದಿ ನಿಂದ ಶಾಕ್ವರವರಯೂಥಮಂ ಅವನಿನಾಥ ಕಂಡುದಜೆಂದೊರ್ವರೆ ವಿಹರಿಪುದಂ ಬಿಸುಟಂಬಂರಾಂಬರರ್ ತಮ್ಮ ಸಮುದಯಂ ಬೆರಸಿರ್ಪರ್: **ಆದಿಪು**, ೧೫. ೩೨)

ಶಾಖಿ – [ನಾ] ಕೊಂಬೆಯನ್ನುಳ್ಳದ್ದು, ಮರ (ರಾಗದಿಂ ಅಟಾಡುವಂತಾಯ್ತು ಅನಿಲವಶಚಳತ್ ಶಾಖಿಶಾಖಾಳಿಯಿಂ: **ಆದಿಪು**, ೭. ೬೧)

ಶಾತಕುಂಭ – [ನಾ] ಚಿನ್ನ (ರಂಭಾಸ್ತಂಭೋಪಮಾನ ಊರುಯುಗಳೆಯರ್ ಶಾತಕುಂಭ ರಂಭಾವನಂಗಳುಮಂ: **ಆದಿಪು**, ೧೧. ೯೫ ವ)

ಶಾತಶರ – [ನಾ] ಹರಿತವಾದ ಬಾಣ (ಎಚ್ಚ ಶಾತಶರಸಂತತಿಯಂ ಭಗದತ್ತಂ ಎಯ್ದೆ ಖಂಡಿಸಿ ರಥಮಂ ಪಡಲ್ವಡಿಸೆ: **ಪಂಪಭಾ**, ೧೧. ೯)

ಶಾತ್ರವ – [ಗು] ಶತ್ರುಸಂಬಂಧಿ (ಕುಳಶೈಲೋನ್ನತಂ ಉಗ್ರಶಾತ್ರವ ಶಿರೋಮಾಣಿಕ್ಯಮಾಳಾಂಶುಮಾಂಸಳಿತ ಶ್ರೀಪದಪೀಠ ರತ್ನಕಿರಣಂ: **ಆದಿಪು**, ೧೨. ೧೨೦)

ಶಾಪಭ್ರಾಂತ – [ಗು] ಶಾಪದಿಂದ ತೊಳಲಾಡುವ (ವಸಿಷ್ಠನ ಶಾಪಭ್ರಾಂತಿಯೊಳೆ ಬಂದು ನಿರ್ಜಿತಕಂತುವೆನಲ್ಕಂತು ಪುಟ್ಟಿದಂ ಗಾಂಗೇಯಂ: **ಪಂಪಭಾ**, ೧. ೬೭)

ಶಾಪಹತ – [ನಾ] ಶಾಪಕ್ಕೆ ಗುರಿಯಾದವನು (ಅಂತು ಕರ್ಣನುಂ ಶಾಪಹತನಾಗಿ ಮಗುಟ್ಟು ಬಂದು ಸೂತನ ಮನೆಯೊಳಿರ್ಪನ್ನೆಗಂ: **ಪಂಪಭಾ**, ೧. ೧೦೫ ವ)

ಶಾರದ – [ನಾ] ಶರತ್ಕಾಲ (ಚಕೋರಂ ಇಂದುಮಂಡಳಗಳಿತ ಆಸವಾಮೃತಮನುಂಡುಸಿರುತ್ತಿರೆ ಚೆಲ್ವು ಶಾರದಂ: **ಪಂಪಭಾ**, ೭. ೭೦)

ಶಾರದನೀರದ – [ನಾ] ಶರತ್ಕಾಲದ ಮೋಡ (ಶಾರದನೀರದಾಕಾರ ಸುಧಾಧವಳಿತ ಉತ್ತುಂಗ ಪ್ರಾಸಾದಕೂಟಕೋಟಿ ಸಂಕೀರ್ಣಮುಂ: **ಆದಿಪು**, ೧. ೭೦ ವ)

ಶಾರದಶ್ರೀ – [ನಾ] ಶರತ್ಕಾಲವೆಂಬ ಲಕ್ಷ್ಮಿ (ಅಂತು ತನ್ನ ದಿಗ್ವಿಜಯೋದ್ಯೋಗಕ್ಕುಪಯೋಗಿಯಾಗಿ ಬಂದ ಶಾರದಶ್ರೀಯಂ ಇದಿರ್ಗೊಂಡು: **ಆದಿಪು**, ೧೧. ೯ ವ)

ಶಾರಿಕೆ – [ನಾ] ಮೈನಾ ಹಕ್ಕಿ (ಮೃದುಮಧುರವಿದಗ್ಧ ಮುಗ್ಧ ಪರಿಹಾಸ ಮನೋಹರಾಳಾಪ ಶುಕಶಾರಿಕೆಗಳಿರ್ದಂತೆ ಪಂಜರಗತ ಕುಂಜರಾರಾತಿಕಿಶೋರಕೇಸರಿಗಳನೆ ತರಿಸಿ ನೋಡುತ್ತಿರಲುಂ: **ಆದಿಪು**, ೮. ೩೨ ವ)

ಶಾರೀರ – [ಗು] ಶರೀರಕ್ಕೆ ಸಂಬಂಧಿಸಿದ, ದೈಹಿಕ (ದುಷ್ಕೃತಂ ಸಡಿಲ್ದೊಡೆ ಪಡೆಗುಂ ಮಾನುಷ್ಯಮನತಿದಾರುಣ ಮಾನಸ ಶಾರೀರ ದುಃಖಪೀಡಿತನಕ್ಕುಂ: **ಆದಿಪು**, ೯. ೪೮)

ಶಾರ್ದೂಲ – [ನಾ] ಹುಲಿ (ಭೀಕರಶಾರ್ದೂಲಕುಳಂ ಕುರಂಗ ಕುಲದೊಳ್ ತಳ್ತೊಯ್ದು ಬಂದಾಡೆ: **ಆದಿಪು**, ೯. ೯೭)

ಶಾರ್ದೂಲನಖಾಂಕುರ – [ನಾ] ಹುಲಿಯುಗುರು (ಕೊರಲೊಳ್ ಶಾರ್ದೂಲ ನಖಾಂಕುರಂಗಳುಂ ಹರಿ ನಖಾಂಕುರಂಗಳುಮಂ ಅಂದೇಂ ಕರಮೆಸೆದಿರ್ದುವೊ ಶೌರ್ಯಾಂಕುರಗಳೆಂಬಿನಂ ಆದಿದೇವಾತ್ಮಜನಾ: **ಆದಿಪು**, ೮. ೪೦)

ಶಾಲತರು – [ನಾ] ಸಾಲವೃಕ್ಷ (ಬಱಸಿಡಿಲ್ ಪೊಡೆಯೆ ಕೆಡೆದ ಶಾಲತರುಗಳಂತಿರ್ದ ನಾಲ್ವರ್ ತಮ್ಮಂದಿರುಮಂ ಕಂಡು ಬೆಕ್ಕಸಂಬಟ್ಟು: **ಪಂಪಭಾ**, ೮. ೪೫ ವ)

ಶಾಲ್ಮಲಿ – [ನಾ] ಬೂರುಗ (ಇದು ಶಾಲ್ಮಲಿಪಾದಪಂ ಇಂತಿದು ಜಂಬೂವೃಕ್ಷಂ: **ಆದಿಪು**, ೨. ೨೬)

ಶಾಶ್ವತಪದ – [ನಾ] ಮೋಕ್ಷ (ಶ್ರೀಮತ್ ಸಮಂತಭದ್ರಸ್ವಾಮಿಗಳ ಜಗತ್ ಪ್ರಸಿದ್ಧ ಕವಿಪರಮೇಷ್ಠಿಸ್ವಾಮಿಗಳ ಪೂಜ್ಯಪಾದಸ್ವಾಮಿಗಳ ಪದಂಗಳ್ ಈಗೆ ಶಾಶ್ವತಪದಮಂ: **ಆದಿಪು**, ೧. ೧೧)

ಶಾಶ್ವತಾಸ್ಪದ – [ನಾ] ಶಾಶ್ವತಪದವಿ, ಮೋಕ್ಷ (ನಿಂದಂ ಕೊಳಲ್ ಶಾಶ್ವತಾಸ್ಪದಮಂ ಯೋಗನಿಯೋಗನಿಶ್ಚಳಮನಂ ಸಂದಾಧಿಭಟ್ಟಾರಕಂ: **ಆದಿಪು**, ೯. ೧೨೩)

ಶಾಸನ – [ನಾ] ಆಜ್ಞೆ (ಮತ್ತಂ ಅಮರಾಧೀಶಶಾಸನದೊಳ್ ನಾಭಿರಾಜ ರಾಜಮಂದಿರಾಂಗಣದೊಳ್: **ಆದಿಪು**, ೭. ೨೩ ವ); [ನಾ] ಸ್ಮಾರಕ ಶಿಲೆ (ಚಾಗದ ಕಂಬಮಂ ನಿಜೆಸಿ ಬೀರದ ಶಾಸನಮಂ ನೆಗಟ್ಟೆ ಕೋಳ್ಪೋಗದ ಮಂಡಲಂಗಳನೆ ಕೊಂಡು: **ಪಂಪಭಾ**, ೧. ೫೦)

ಶಾಸನಂಬರೆ – [ಕ್ರಿ] ವಿಧಿಯನ್ನು ಬರೆ, ಕಾನೂನು ಬರೆ (ಇರ್ದಂ ಅಟ್ಟವಣೆಕೋಲ್ಗಳ ಮೇಲೆಸೆದಿರ್ದ ವೀರಸಿದ್ಧಾಂತದ ಶಾಸನಂಬರೆದ ಪೊತ್ತಗೆಯಂತಮರಾಪಗಾತ್ಮಜಂ: **ಪಂಪಭಾ**, ೧೧. ೪೬)

ಶಾಸನಹರ – [ನಾ] ಓಲೆಕಾರ, ರಾಜಾಜ್ಞೆಯನ್ನು ಹೊತ್ತೊಯ್ಯುವವನು (ಬಗೆಯೊಳಗೆ ಬಳೆದ ಭೀತಿಯೆ ಮಿಗೆ ಭವದಾಸ್ಥಾನಭೂಮಿಯಂ ಪುಗುಗೆ ವನಂಬುಗುಗೆ ಅಲ್ಲದಂದು ಪೆಱತೆಡೆ ಪುಗುವೊಡೆಯಿಲ್ಲವರ್ಗೆ ಬೆಸಸು ಶಾಸನಹರರಂ: **ಆದಿಪು**, ೧೪. ೨೨)

ಶಾಸನಾಂಕಿತ – [ನಾ] ಆಜ್ಞೆಗೊಳಪಟ್ಟದ್ದು (ಆಗಳ್ ಪತಾಕಿನೀಪತಿಯ ನಿಯಮದಿಂ ಪೂರ್ವದಿಗ್ಭಾಗಸ್ಥಿತಮಂ ಮ್ಲೇಚ್ಛಖಂಡಮಂ ಅಪ್ರತಿಹತಶಾಸನಾಂಕಿತಂ ಮಾಡಿ ಬರೆ: **ಆದಿಪು**, ೧೩. ೮೧ ವ)

ಶಾಸನಾಯತ್ತ – [ನಾ] ಆಜ್ಞೆಗೆ ಅಧೀನವಾಗಿಸುವಿಕೆ (ಆ ದಿಶಾಭಾಗಮಂ ಆತ್ಮೀಯ ಶಾಸನಾಯತ್ತಂ ಮಾಡುತ್ತುಂ ಬಂದು: **ಪಂಪಭಾ**, ೪. ೧೮ ವ)

ಶಾಸನಾರೋಪಿತ – [ಗು] ಶಾಸನಗಳಲ್ಲಿ ಬರೆಯಲ್ಪಟ್ಟ (ಸಮಸ್ತಭವ್ಯಜನ ನಿರ್ವರ್ತ್ಯಮಾನ ಅಷ್ಟಾಹ್ನಿಕಮುಂ ಚೈತ್ಯಾಲಯನಿರ್ಮಾಣ ನಿರ್ಮಾಪಣ ಶಾಸನಾರೋಪಿತ ಗ್ರಾಮಕ್ಷೇತ್ರವಿತರಣಮುಂ: : **ಆದಿಪು**, ೧೫. ೧೩ ವ)

ಶಾಸ್ತ್ರ – [ನಾ] ನಾನಾ ಬಗೆಯ ವಿಷಯಗಳ ತಿಳಿವು (ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ ಶಸ್ತ್ರಶಾಸ್ತ್ರಂಗಳೊಳ್ ಅತಿಪರಿಣತರಂ ಮಾಡಿ: **ಪಂಪಭಾ**, ೧, ೮೭, ವ)

ಶಾಸ್ತ್ರದಾನ – [ನಾ] [ಜೈನ] ನಾಲ್ಕು ದಾನಪ್ರಕಾರಗಳಲ್ಲಿ ಒಂದು, ಜೈನ ಧಾರ್ಮಿಕಗ್ರಂಥಗಳ ಪುಸ್ತಕಗಳನ್ನು ಶ್ರಾವಕರಿಗೆ ಹಂಚುವುದು (ಅಭಯರ್ ನಿರೋಗರುಂ ಶ್ರುತವಿಭವಸಮನ್ವಿತರುಮಪ್ಪರ್ ಎಂಬುದು ಪಿರಿದಲ್ತು ಭವಾಂಬುಧಿಯುಮನೀಸುವರ್ ಅಭಯೌಷಧಶಾಸ್ತ್ರದಾನಫಲ ವಿಳಸನದಿಂ: **ಆದಿಪು**, ೧೦. ೧೧)

ಶಾಸ್ತ್ರಪಾರ – [ನಾ] ಶಾಸ್ತ್ರಗಳ ಆಚೆಯ ತೀರ (ಅಮಿತ ಮತಿ ಗುಣದಿನತಿ ವಿಕ್ರಮ ಗುಣದಿಂ ಶಾಸ್ತ್ರಪಾರಮುಂ ರಿಪುಬಳ ಪಾರಮುಮೊಡನೆ ಸಂದುವೆನಿಸಿದನಮೇಯ ಬಲಶಾಲಿ ಮನುಜ ಮಾರ್ತಾಂಡ ನೃಪಂ: **ಪಂಪಭಾ,** ೧. ೪೫)

ಶಾಸ್ತ್ರಾನುಗತ – [ಗು] [ಶಾಸ್ತ್ರ+ಅನುಗತ] ಶಾಸ್ತ್ರಾನುಸಾರವಾಗಿ ಬಂದ (ಸೇವಾಧರ್ಮೋಚಿತಮೆನಿಸುವ .. .. ಶಾಸ್ತ್ರಾನುಗತಮಪ್ಪ ವಿದ್ಯೆಯುಮಂ ವಣಿಗ್ವ್ಯವಹಾರಾನುಕಾರಿಯಪ್ಪ ವಾಣಿಜ್ಯಮುಮಂ: **ಆದಿಪು,** ೮. ೬೪ ವ)

ಶಾಳ – [ನಾ] ಸರ್ಜವೃಕ್ಷ, ಸಾಲವೃಕ್ಷ (ವೇಳಾವನಸ್ಥೂಳ ಶಾಳಂಗಳೊಳ್ ಆದಿಬ್ರಹ್ಮಪುತ್ರಂ ನಿಜವಿಜಯಗಜೇಂದ್ರಂಗಳಂ ಕಟ್ಟೆ: **ಆದಿಪು,** ೧೪. ೫೩); [ನಾ] ಸಾಲ, ಕೋಟೆಯ ಗೋಡೆ (ಲವಣಜಳಧಿ ಬಳಸಿದಂತೆ ಬಳಸಿದ ಅಗಟ ನೀಳದಿಂದ ಉದಗ್ರ ಕನಕ ಶಾಳದಿಂ: **ಪಂಪಭಾ,** ೧. ೫೮)

ಶಾಳಿ – [ನಾ] [ಶಾಲಿ] ಬತ್ತ (ಪೊಸ ನೆಯ್ದಿಲ ಕಂಪನೆ ಬೀಜೆ ಕಾಯ್ತ ಕೆಂಗೊಲೆಯೊಳೆ ಜೋಲ್ವ ಶಾಳಿ ನವಶಾಳಿಗೆ ಪಾಯ್ವ ಶುಕಾಳಿ: **ಪಂಪಭಾ,** ೧. ೫೨)

ಶಾಳಿವನ – [ನಾ] ಬತ್ತದ ಗದ್ದೆ (ಶಾಳಿವನಗಧಾಂಧದ್ವಿರೇಫಾಳಿ ಕಣ್ಗೊಳಿಸಿತ್ತೊರ್ಮೆಯೆ ಬಂದುದಂದು ಶರದಂ: **ಪಂಪಭಾ,** ೭. ೭೧)

ಶಿಂಜಿತ – [ನಾ] ಧ್ವನಿ (ಸುರಗಣಿಕಾ ಗುಂಜನ್ಮಣಿ ರಶನಾಮಣಿ ಮಂಜೀರ ಮಂಜುಶಿಂಜಿತಂ ರಂಜಿಸುಗುಂ: **ಆದಿಪು,** ೮. ೧೮)

ಶಿಂಶುಮಾರ – [ನಾ] ಮೊಸಳೆ (ಭಯಂಕರಶಿಂಶುಮಾರ ವಿಕಟದಂಷ್ಟ್ರಾ ಕ್ರಕಚಪಾಟ್ಯಮಾನ ನಾರಕನಿಕರ ರುಧಿರಚ್ಛಟ ಅಚ್ಛಾರುಣಿಸಲಿಲ ಹರಿಕಾನಿಕರಕರಾಳೆಯುಂ: **ಆದಿಪು,** ೫. ೮೭ ವ)

ಶಿಕ್ಷಾವ್ರತ – [ನಾ] [ಜೈನ] ಶ್ರಾವಕರು ಅನುಸರಿಸಬೇಕಾದ ನಾಲ್ಕು ವ್ರತಗಳು: ಸಮತೆ [ಸಾಮಯಿಕ], ಪ್ರೋಷಧ [ಪ್ರೋಷಧೋಪವಾಸ], ಅತಿಥಿಸಂಗ್ರಹ [ಉಪಭೋಗಾತಿಥಿಸಂವಿಭಾಗ] ಮತ್ತು ಮರಣಕಾಲದಲ್ಲಿ ಸಂನ್ಯಾಸ ಸ್ವೀಕಾರ [ಪಶ್ಚಿಮ ಸಲ್ಲೇಖನ] (ವಿವಿಧ ಪ್ರಾಣಿಗಣಂಗಳೊಳ್ ಸಮತೆ ಸಂದಾಹಾರದಾನಂ ಜಿನಸ್ತವನಕ್ಕಂ ಜಿನಪೂಜೆಗಂ ಮನಮನೊಲ್ದೋರಂತೆ ತಂದಾದಮುತ್ಸವದಿಂ ನೋಂಪುದು ಜೀವಿತಾಂತ್ಯದೆಡೆಯೊಳ್ ಸನ್ಯಾಸ'ಮಂ ಮಾಳ್ಪುದು ಎಂಬಿವು ನೇರ್ಪಟ್ಟೆಸೆವಿನೆಗಂ ನೆಗಟ್ಟುವಂ ಶಿಕ್ಷಾವ್ರತಂ ನಾಲ್ಕುಮಂ: **ಆದಿಪು,** ೬. ೯)

ಶಿಖಂಡ – [ನಾ] ಮುಡಿ (ಆತ್ಮೀಯ ಶಿಖಂಡ ಮಣಿಮರೀಚಿಗಳಿಂ ನಿಜಪದಕಮಳದೊಡನೆ ವಸುಂಧರೆಯುಮಂ ಅಳಂಕರಿಸಿದ ವಸುಧ'ರೆಯುಮಂ: **ಆದಿಪು,** ೪. ೨೪ ವ)

ಶಿಖಂಡಮಂಡನಮಣಿ – [ನಾ] ತಲೆಯಲ್ಲಿ ಧರಿಸುವ ಆಭರಣ (ಎಂದು ಮನುನರೇಂದ್ರವೃಂದಾರಕ ಶಿಖಂಡಮಂಡನ ಮಣಿಯೆನಿಸಿದ ಬಾಹುಬಲಿಕುಮಾರಂ: **ಆದಿಪು,** ೧೪. ೮೨ ವ)

ಶಿಖಂಡಮಣಿ – [ನಾ] ಶಿಖಂಡಮಂಡನಮಣಿ (ಆತ್ಮೀಯ ಶಿಖಂಡಮಣಿ ಮರೀಚಿಗಳಿಂ ನಿಜಪದಕಮಲದೊಡನೆ ವಸುಂಧರೆಯುಮಂ ಅಳಂಕರಿಸಿದ ವಸುಂಧರೆಯುಮಂ: **ಆದಿಪು,** ೪. ೨೪ ವ)

ಶಿಖಂಡರತ್ನ – [ನಾ] ತಲೆಮಣಿ (ಆಸ್ಥಾನಮಂಡಪ ಮಂಡನೀಭೂತ ಮಣಿಮಯಾಸನ ಪ್ರಾಕ್ಯಾಚಳ ಶಿಖಂಡರತ್ನಮಾಗಿರ್ದ ಕುಮಾರನಂ: **ಆದಿಪು,** ೮. ೮ ವ)

ಶಿಖಂಡಿ – [ನಾ] ನವಿಲು (ಶುಕ ಶಿಖಂಡಿ ಹಂಸ ಸಾರಸ ಕ್ರೌಂಚ ಕರಿ ಕಳಭ ಮಲ್ಲಾದ್ಯನೇಕ ಆಕಾರವಿಕೃತಾಮರಕುಮಾರ ಪರಿಪಠನ ನಟನ ಮೃದುಕೂಜಿತ: **ಆದಿಪು,** ೮. ೩ ವ); [ನಾ] ದ್ರುಪದನ ಮಗ, ನಪುಂಸಕ, ಷಂಡ (ನಿನಗೆ ವಧಾರ್ಥಮಾಗಿ ಪುಟ್ಟುವೆನಕ್ಕೆಂದು ಕೋಪಾಗ್ನಿಯಿಂದಮಗ್ನಿಶರೀರೆಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟಿ ಕಾರಣಾಂತರದೊಳ್ ಶಿಖಂಡಿಯಾಗಿರ್ದಳ್: **ಪಂಪಭಾ,** ೧. ೮೦ ವ)

ಶಿಖಂಡಿತಾಂಡವ – [ನಾ] ನವಿಲ ಕುಣಿತ (ಪರಿಪಕ್ವ ರಾಜಜಂಬೂ ದ್ರುಮವಿಸ್ತಾರಂ ಶಿಖಂಡಿತಾಂಡವಸಾರಂ ನವಜಳದಸಮಯಂ ಏನೆಸೆದಪುದೋ: **ಆದಿಪು,** ೧೧. ೮೮)

ಶಿಖರ – [ನಾ] ತುದಿ (ತೃಣಶಿಖರ ಅಧ್ಯುಷಿತಾಂಭಃಕಣಸಂಚಳಂ ಅಮರಚಾಪಚಪಳಂ ವಿದ್ಯುತ್ ಕ್ಷಣಿಕಂ: **ಆದಿಪು,** ೪. ೭೫)

ಶಿಖರಿ – [ನಾ] ಶಿಖರವುಳ್ಳದ್ದು, ಬೆಟ್ಟ (ಗಗನತಳಮಂ ತಱುಂಬುವಂತಿರ್ದ ಶಿಖರಿಶಿಖರಂಗಳಿಂದಂ: **ಪಂಪಭಾ,** ೭. ೨೯ ವ)

ಶಿಖರಿಣಿ – [ನಾ] ಒಂದು ಭಕ್ಷ್ಯ, ಸೀಕರಣೆ (ಏಕೀಭೂತ ಸಕಳಭುವನ ಶಿಶಿರದ್ರವ್ಯಸಂಬಾರದ್ರವ್ಯಶಂಕಾಕರ ಶಿಖರಿಣೀ ರಮಣೀಯಮುಮಂ: **ಆದಿಪು,** ೧೧. ೨೬ ವ)

ಶಿಖಾಕಳಾಪ – [ನಾ] ಬೆಂಕಿಯ ನಾಲಗೆಗಳ ಸಮೂಹ (ಅಗ್ನಿದೇವನ ಶಿಖಾಕಳಾಪದ ಕೋಳುಮಂ ಎಂತಾನುಂ ಬಂಚಿಸಿ ಬಲೆಪಱಿದ ಕೋಕನಂತೆ ಒರ್ವ ವನಪಾಲಕಂ ಪೋಗಿ ದೇವೇಂದ್ರನಂ ಕಂಡು: **ಪಂಪಭಾ,** ೫. ೯೩ ವ)

ಶಿಖಾನೀಕ – [ನಾ] [ಶಿಖಾ+ಆನೀಕ] ಜ್ವಾಲೆಗಳ ಮಾಲೆ (ಮುಳಿದೆಚ್ಚಾಗಳ್ ಮಹೋಗ್ರಪ್ರಳಯ ಶಿಖಿಶಿಖಾನೀಕಮಂ ವಿಸ್ಫುಲಿಂಗಂಗಳುಮಂ ಬೀಱುತ್ತುಂ: **ಪಂಪಭಾ,** ೧೨. ೨೧೩)

ಶಿಖಾವಳ – [ನಾ] ನವಿಲು (ಪೊಳೆವಿನಕಿರಣಂ ಮೆಯ್ಗಳನಳುರೆ ಕನಲ್ದಗಿದು ಸೋಗೆಯಂ ಪರಪಿ ನೆಟಿಲ್ಗಳನಾಸೆವಡೆ ಶಿಖಾವಳಕುಳತಾಂಡವಮೆಸೆದುದು ಶರತ್ಸಮಯದೊಳ್: **ಆದಿಪು,** ೧೧. ೫೧)

ಶಿಖಿ – [ನಾ] ಬೆಂಕಿ (ಕ್ರಂದತ್ ಸ್ಯಂದನ ಜಾತ ನಿರ್ಗತ ಶಿಖಿಜ್ವಾಳಾಸಹಸ್ರಂಗಳ್ ಆಟಂದೆತ್ತಂ ಕವಿದೆಟ್ಟಿ ಬೇವ ಶವಸಂಘಾತಂಗಳಂ: **ಪಂಪಭಾ,** ೧೩. ೭೧); [ನಾ] ನವಿಲು (ಭವ್ಯನೃಪನಿಕರಮದೇನೆಂಬುತ್ಸಾಹದೆ ನಲಿದುದೊ ಸಾಂಬುಪಯೋಧರಕೆ ನಲಿವ ಶಿಖಿನಿಕರದವೊಲ್: **ಆದಿಪು,** ೧೦. ೧೨)

ಶಿಖೆ – [ನಾ] ಜ್ವಾಲೆ (ಬನಮನಿತುಂ ಶಿಖೆಗಳಲುರೆ ಬೆಂಕೆಯ ಪೊಯ್ದುರ್ವಿನೊಳೆ ಕೊರಗಿರ್ದ ಲತೆಗಳ ನನೆಕೊನೆಯನೆ ದಹನನಳುರ್ದು ಕೊನೆಗೊನೆಗೊಂಡಂ: **ಪಂಪಭಾ,** ೫. ೮೭)

ಶಿತಶರ – [ನಾ] ಹರಿತವಾದ ಬಾಣ (ಪೊಣ್ಡಂತೆ ಊಡು ಪೂಡು ಶಿತಶರಸಂತತಿಯಂ ಬಿಲ್ಲೊಳೇಕೆ ನೀಂ ತಡೆದಿರ್ಪಯ್: **ಪಂಪಭಾ,** ೫. ೮೩)

ಶಿತಾಸ್ತ್ರ – [ನಾ] ಚೂಪಾದ ಬಾಣ [ಆಯುಧ] (ದಿವಿಜರ್ ವಾಯುಪಥದೊಳ್ ಶಿತಾಸ್ತ್ರಂಗಳಂ ಪೊಂಕಂಗಿಡಿಸೆ ಸುಗಿದಂ ಭಾರ್ಗವಂ ಇದೇಂ ಪ್ರತಿಜ್ಞಾಗಾಂಗೇಯಂಗೆ ಅದಿರದಿದಿರ್ ನಿಲ್ವನ್ನರೊಳರೇ: **ಪಂಪಭಾ,** ೧. ೮೦)

ಶಿತಿಕಂಠ – [ನಾ] ಈಶ್ವರ (ಅರ್ಚಿತಶಿತಿಕಂಠನುಂ ಆಹುತಿಹುತಾಗ್ನಿಹೋತ್ರನುಂ ಪೂಜಿತಧರಾಮರನುಂ ನೀರಾಜಿತ ರಥತುರಗನುಮಾಗಿ ರಜತರಥಮನೇಱೆ: **ಪಂಪಭಾ,** ೧೧, ೧೩೨ ವ)

ಶಿಬಿಕಾ – [ನಾ] ಮೇನೆ, ಪಲ್ಲಕ್ಕಿ (ಸುರಶಿಲ್ಪಿಗಳಿಂ ಶಿಬಿಕಾವಿರಚನೆ ದೆಸೆಗೆಸೆಯುತ್ತಿರ್ದುದತ್ತೊಂದೆಡೆಯೊಳ್ ನರಶಿಲ್ಪಿಗಳಿಂ ಮಂಡಪವಿರಚನೆ ನೆಗೞುತ್ತುಮಿರ್ದುದಿತ್ತೊಂದೆಡೆಯೊಳ್: **ಆದಿಪು,** ೯. ೬೮)

ಶಿರ – [ನಾ] ತಲೆ (ಅನೇಕ ನೃಪ ಶಿರಃ ಕಪಾಳ ಶಕಳ ಜರ್ಜರಿತಮುಂ ಪರಸ್ಪರ ಸಮರ ರಭಸಸಮುತ್ಸಾರಿತಮುಂ: **ಪಂಪಭಾ,** ೧೩. ೫೧ ವ)

ಶಿರಃಕಂಪ – [ನಾ] ತಲೆಯಾಡಿಸುವಿಕೆ (ಅಮರೀಮಧುರಗೀತ ನಿನಾದಕ್ಕೆ ಆದಂ ಒಱಲ್ದಿರ್ದ ಶಿರಃಕಂಪದೊಳ್: **ಆದಿಪು,** ೪. ೯ ವ)

ಶಿರಃಪದ್ಮ – [ನಾ] ತಲೆಯೆಂಬ ತಾವರೆ (ಸೂಟಿಙ್ ಸೂಟಿನೊಳ್ ಎಚ್ಚಾಗಳ್ ಅರ್ಚಿಸಿದಂತೆ ಇರ್ದುದು ಉರುಳ್ದ ಕೌರವಶಿರಃಪದ್ಮಂಗಳಿಂ ಕೊಳ್ಗುಳಂ: **ಪಂಪಭಾ,** ೧೨. ೧೪೫)

ಶಿರೀಷಕುಸುಮ – [ನಾ] ಬಾಗೆ [ಹೂ] (ಆ ಶಿರೀಷಕುಸುಮದಾಮ ಸುಕುಮಾರ ಬಾಹುಲತೆಯರೊಳ್ ಆ ಪರಿಘಪರಿವೃತ್ತ ದೀರ್ಘಬಾಹುಯುಗಳಂ: **ಆದಿಪು,** ೮. ೨೩ ವ)

ಶಿರೀಷಕುಸುಮಾಭ – [ಗು] ಬಾಗೆ ಹೂವಿನಂತಹ [ಬಣ್ಣ] (ವನಭೃತ್ಕುಂತಳೆಯಾ ಶಿರೀಷಕುಸುಮಾಭಾಂಗಕ್ಕೆ ಕಂದಂ ಕನತ್‌ಕನಕಾಂಭೋಜನಿಭಾನನಕ್ಕೆ ಪಿರಿದುಂ ದೀನತ್ವಮಂ: **ಪಂಪಭಾ,** ೪. ೬೪)

ಶಿರೀಷಕೋಮಲೆ – [ನಾ] ಬಾಗೆ ಹೂವಿನಂತೆ ಕೋಮಲೆಯಾದವಳು (ಮಲೆಮಲೆದುರ್ಕಿ ಸೊರ್ಕಿ ಸಭೆಯೊಳ್ ಕುಲಪಾಂಸುಲಂ ಈ ಶಿರೀಷಕೋಮಲೆಯ ವಿಲೋಲ ನೀಲ ಕಬರೀಭರಮಂ ತೆಗೆವಾಗಳ್: **ಪಂಪಭಾ,** ೭. ೫೭)

ಶಿರೋಂಬುಜ – [ನಾ] ಕಮಲದಂತಿರುವ ತಲೆ (ಜವ ಅರ್ಘ್ಯಮೆತ್ತಿದಂತಿರ್ದ ಶಿಶುಪಾಲನ ಶಿರೋಂಬುಜಮಂ ಕಂಡು ಅೞಲ್ದು: **ಪಂಪಭಾ,** ೬. ೬೪ ವ)

ಶಿರೋಜ – [ನಾ] ತಲೆಗೂದಲು (ಕರವಾಳಂ ಘರವಟ್ಟಿಸಿ ಶಿರೋಜಮಂ ಪಿಡಿದು ತೆಗೆದು ಗುರುವಂ ಪಚ್ಚಂತಿರೆ ಪಿರಿದು ಪೊಯ್ದಂ ಎಂತಪ್ಪರೊಳಂ ಮುಳಿಸು ಅಱಿವಂ ಆಗಲೇನಿತ್ತಪುದೇ: **ಪಂಪಭಾ,** ೧೨. ೩೦)

ಶಿರೋದಳನ – [ನಾ] ತಲೆಯನ್ನು ಕತ್ತರಿಸುವಿಕೆ (ಅರಿಕೇಸರಿಗಾತ್ಮಜರ್ ಅರಿನರಪ ಶಿರೋದಳನಪರಿಣತ ಉಗ್ರಾಸಿ ಭಯಂಕರಕರ'ರ್: **ಪಂಪಭಾ,** ೧. ೨೨)

ಶಿರೋಧರೆ – [ನಾ] ಕೊರಳಿನವಳು (ಉದ್ವಪಯೋಧರೆಯ ಮನೋಜರಾಗರಸಪೂರಿತ ಬಿಂಬಾಧರೆಯ ಕಂಬುಕಮ್ರ ಶಿರೋಧರೆಯ ಬೆಡಂಗಂ ಆರುಮೇನೆಯ್ದುವರೇ: **ಆದಿಪು,** ೪. ೪೬)

ಶಿರೋರುಹ – [ನಾ] ಶಿರೋಜ, ತಲೆಗೂದಲು (ಕದಳೀಗರ್ಭಶ್ಯಾಮಂ ಮೃದುಕುಟಿಲ ಶಿರೋರುಹಂ ಸರೋರುಹವದನಂ ಮೃದುಮಧ್ಯಮತನು ಹಿತಮಿತಮೃದುವಚನಂ ಲಲಿತಮಧುರ ಸುಂದರವೇಷಂ: **ಆದಿಪು,** ೧. ೨೯)

ಶಿರೋವೇಷ್ಟನ – [ನಾ] ತಲೆಗೆ ಸುತ್ತುವ ವಸ್ತ್ರ (ಮಹೀತಳಾಶ್ಲಿಷ್ಟ ಜಾನು ಲಲಾಟಪಟ್ಟರ್ ಪ್ರಣಾಮಾರ್ಪಣಪುರಸ್ಸರಂ ಶಿರೋವೇಷ್ಟನ ಪ್ರಲಂಬಚೇಳಾಂಚಳಪಿಹಿತವದನರಾಗಿ: **ಆದಿಪು,** ೧೦. ೪೮ ವ)

ಶಿರೋವ್ಯೂಢ – [ನಾ] ತಲೆಯವರೆಗೆ, ಆಳುದ್ದ (ಶಿರೋವ್ಯೂಢ ಧಾನ್ಯಸಂಚಯೋಪಭೋಗಿ ಜನನಿವಾಸಿಗಳಪ್ಪ ಸಂವಾಹಂಗಳುಮಂ: **ಆದಿಪು,** ೮. ೬೩ ವ)

ಶಿಲಾ – [ನಾ] ಬಂಡೆ (ತುಂಗವನ್ಯಮತಂಗಜದಂತೆ ಆಘಾತನಿಪಾತಿ ಸಲ್ಲಕೀಭಂಗಮಂ ಮಣಿಮೌಕ್ತಿಕ ನೀಳಸ್ಥೂಳಶಿಲಾಪ್ರವಿಭಾಸಿತ ಉತ್ತುಂಗಮಂ: **ಪಂಪಭಾ,** ೧. ೧೧೫)

ಶಿಲಾಪಟ್ಟ – [ನಾ] ಕಲ್ಲಿನ ಪೀಠ (ನಿರ್ಮಲ ಶಿಲಾಪಟ್ಟದೊಳ್ ನಿಬಿಡಬದ್ಧಪಲ್ಯಂಕಾಸನನುಂ ಪೂರ್ವಾಭಿಮುಖನುಂ ಆಗಿರ್ದಾಗಳ್: **ಆದಿಪು,** ೧೦. ೧೩ ವ)

ಶಿಲಾಭೇದಿ – [ಗು] ಕಲ್ಲನ್ನೇ ಸೀಳುವ (ಕುಲಿಶನಿಭ ಶಿಲಾಭೇದಿ ಬಾಣಂಗಳುಂ ಭೇದಿಸವು ಎಂಬಂತಾಯ್ತು ಅತಿಕ್ಷೋಭದಿಂ ಉಭಯಬಲಕ್ಷೋಭ ಧೂಳೀಪ್ರತಾನಂ: **ಆದಿಪು,** ೧೪. ೯೫)

ಶಿಲೆಯೊಳ್ ಪೊಯ್ – [ನಾ] ನಾಶಮಾಡು (ಸುಧರ್ಮಮುನಿ ಪದಪದ್ಮಕ್ಕೆಱಗಿ ಜಿನರೂಪಮೆಂಬೊಂದಱ ಅಡಿವಿಡಿದು ಅಘಬಲಮಂ ಅಲೆದು ಶಿಲೆಯೊಳ್ ಪೊಯ್ದಂ: **ಆದಿಪು,** ೩. ೫೧)

ಶಿಲ್ಪ – [ನಾ] ಚಿತ್ರರಚನೆ, ಎಲೆ ಮುಂತಾದುವುಗಳನ್ನು ಕತ್ತರಿಸುವ ಕಲೆ (ಹಸ್ತಕೌಶಲಕಳಿತಮಪ್ಪ ಚಿತ್ರಕಳಾಪಪರಿಚ್ಛೇದ್ಯಾದಿ ಸಮನ್ವಿತಮಪ್ಪ ಶಿಲ್ಪಮುಮಂ: **ಆದಿಪು,** ೮. ೬೪ ವ)

ಶಿಲ್ಪಕರ್ಮ – [ನಾ] ಕುಶಲಕಲೆ (ಅಸಿ ಮಸಿ ಕೃಷಿ ವಣಿಕಗ್ವಿದ್ಯಾ ಶಿಲ್ಪಕರ್ಮಂಗಳಂ ಶುದ್ಧವೃತ್ತಿಯಿಂದ ಅರ್ಥೋಪಾರ್ಜನಂ ಗೆಯ್ವ ವಾರ್ತೆಯುಂ: **ಆದಿಪು,** ೧೫. ೧೩ ವ)

ಶಿವಪದ – [ನಾ] ಮುಕ್ತಿಸ್ಥಾನ (ಶಿವಪದಪರ್ಯಂತಂಬರಂ ಅಮೋಘಮುದ್ಧರಿಸುಗೆ ತಾತ್ಪರ್ಯದಿಂ ಅರ್ಹಂ ಸಿದ್ಧ ಆಚಾರ್ಯ ಉಪಾಧ್ಯಾಯ ಸರ್ವಸಾಧುಗಳೆಮ್ಮಂ: **ಆದಿಪು,** ೧. ೬)

ಶಿವಾ – [ನಾ] ನರಿ (ಪ್ರತಿಮೆಗಳಟ್ಟು ಮೊಬಗಿದುದತಿರಭಸದೆ ಧಾತ್ರಿ ದೆಸೆಗಳುದುರಿದುವು ಭೂತಪ್ರತತಿಗಳಾಡಿದುವು ಒಳಜೆದವು ಅ'ತಿ ರಮ್ಯಸ್ಥಾನದೊಳ್ ಶಿವಾನಿವಹಂಗಳ್: **ಪಂಪಭಾ**, ೧. ೧೩೨)

ಶಿವಾಶಿವರವ – [ನಾ] [ಶಿವಾ+ಅಶಿವರವ] ನರಿಗಳ ಅಶುಭಕರ ಊಳು (ನೀಮುಂ ಈ ಮರದಡಿಯೊಳ್ ಶಿವಾಶಿವರವಂಗಳಿಂ ಎಚ್ಚಿಜಿರುವಂತುಟಾದುದೇ: **ಪಂಪಭಾ**, ೩. ೧೧)

ಶಿಶಿರ – [ಗು] ಶೀತಲ, ತಂಪಾದ (ಅಂತು ಕಾಳಿಂದೀಜಲಶಿಶಿರಶೀಕರ ವಾರಿಚಾರಿಯುಂ ಮೃಗಯಾಪರಿಭ್ರಮಶ್ರಮೋತ್ಥಿತ ಸ್ವೇದಜಲ ಲವಹಾರಿಯುಂ ಆಗಿ ಬಂದ ಮಂದಾನಿಲಕ್ಕೆ: **ಪಂಪಭಾ**, ೫. ೫೩ ವ)

ಶಿಶಿರಕರ – [ನಾ] ತಂಪುಕಿರಣ[ವುಳ್ಳವನು], ಚಂದ್ರ (ಬಾಳಕಳಹಂಸೆ ಬಾಳಮೃಣಾಳಂಗಳ ನಡುವೆ ಶಿಶಿರಕರ ಕರಶತದಾಂದೋಳಿರ್ಪಂತಿರ್ದುದು ಲೀಲೆಯಿಂ: **ಆದಿಪು**, ೧೧. ೪೯)

ಶಿಶಿರದ್ರವ್ಯ – [ನಾ] ತಂಪು ಸಾಮಗ್ರಿ (ಏಕೀಭೂತ ಸಕಲಭುವನ ಶಿಶಿರದ್ರವ್ಯ ಸಂಬಾರದ್ರವ್ಯ ಶಂಕಾಕರ ಶಿಖರಿಣೀ ರಮಣೀಯಮುಂ: **ಆದಿಪು**, ೧೧. ೨೬ ವ)

ಶಿಶಿರಶೀಕರಾಸಾರ – [ನಾ] ತಂಪು ತುಂತುರ ಸೋನೆ (ಅಂತು ಮಳಯಜ ರಸಶಿಶಿರಶೀಕರಾಸಾರಚಾರಿಯಾಗಿ ಬಂದ ಮಂದಾನಿಳನ ಬಟೆಯನೆ ಬಂದು: **ಆದಿಪು**, ೧೧. ೫೫ ವ)

ಶಿಶು – [ನಾ] ಮಗು (ಪುಟ್ಟುವುದುಂ ಧರ್ಮಮೊಡವುಟ್ಟಿದುದು ಈತನೊಳೆ ಧರ್ಮನಂಶದೊಳ್ ಈತಂ ಪುಟ್ಟಿದನೆಂದಾ ಶಿಶುಗೊಸೆದಿಟ್ಟುದು ಮುನಿಸಮಿತಿ ಧರ್ಮಸುತನೆನೆ ಪೆಸರಂ: **ಪಂಪಭಾ**, ೧. ೧೨೨)

ಶಿಶುಮಾರ – [ನಾ] ಮೊಸಳೆ (ಬೆನ್ನಟ್ಟೆ ದುರ್ಮೋಹಮತ್ಸ್ಯಗಣಂಗಳ್ ಕಡಿದಿಕ್ಕೆ ಲೋಭಮಕರಾನೀಕಂಗಳ್ ಆಟಂದು ನುಣ್ಣಗೆ ನುಂಗುತ್ತಿರೆ ಮಾರರಾಗಶಿಶುಮಾರಂಗಳ್ ಮಹೋಗ್ರಂಗಳ್ ಇನ್ನೆಗಂ ಓರಂತೆ ತೊಟಲ್ದೆಂ: **ಆದಿಪು**, ೯. ೬೦)

ಶಿಶುಶುಕ – [ನಾ] ಗಿಳಿಯ ಮರಿ (ಸುರಿವ ಸರಯಿಯರಲ ಮುಗುಳ್ಗೆ ಮೊಗಸಿದಳಿಕುಳಂಗಳಿಂ ತೊದಲ್ವ ಶಿಶುಶುಕಂಗಳಿಂ: **ಪಂಪಭಾ**, ೧. ೫೮)

ಶಿಳಾಪಟ್ಟಕ – [ನಾ] ಕಲ್ಲುಬಂಡೆ (ಆಕರ್ಣಾಕೃಷ್ಟ ಉತ್ಸೃಷ್ಟ ನಿಜ ವಿಕೀರ್ಣಟಂಕಂಗಳಿಂದಂ ತತ್ತವಾಕಿನೀಕುಂಜರ ಶಿರಶ್ಶಿಳಾ ಪಟ್ಟಕಂಗಳಂ ಇರ್ಬಗಿಮಾಡಲ್ಪಡದೆಯುಂ: **ಆದಿಪು**, ೧೪. ೧೦೩ ವ)

ಶಿಳಾಯಂತ್ರ – [ನಾ] ಕಲ್ಲು ಚಿಮ್ಮುವ ಯಂತ್ರ (ಗಂಡಶೈಳಾಭೀಳ ಶಿಳಾಯಂತ್ರಭಯಂಕರಂಗಳುಂ: **ಆದಿಪು**, ೧೩. ೫೭ ವ)

ಶಿಳೀಮುಖ – [ನಾ] ಬಾಣ (ಕಾದಲಿದಿರ್ಚಿ ಬಂದ ಪಗೆ ಸಂಪಗೆಯಂತೆ ಶಿಳೀಮುಖಕ್ಕೆ ಗೆಂಟಾದುದು: **ಪಂಪಭಾ**, ೧೨. ೮೭)

ಶಿಳೀಮುಖಾಸನ – [ನಾ] ಬಿಲ್ಲು (ಅನೇಕವರ್ಷಕೋಟ್ಯಂತರದೊಳ್ ಸಪ್ತಶಿಳೀಮುಖಾಸನ ಉನ್ನತ ಅಪಘನನುಂ: **ಆದಿಪು**, ೬. ೫೭ ವ)

ಶೀಕರ – [ನಾ] ತುಂತುರು (ತಡಿಯ ಶೀಕರನಿಕರಂಗಳಂತೆ ಸೊಗಯಿಸುವ ಧವಳಾಕ್ಷತ ಸಿತಕುಸುಮ ಮಂಗಳಾಂಜಲಿಗಳುಮಂ: **ಆದಿಪು**, ೧೧. ೨೩ ವ)

ಶೀಘ್ರ – [ನಾ] ವೇಗ (ಪಾತಂ ಲಕ್ಷ್ಯಂ ಶೀಘ್ರಂ ಘಾತಂ ಬಹುವೇಗಂ ಎಂಬಿವಯ್ದೇಸಿನೊಳಂ ಅಂತು ಈತನ ದೊರೆಯಲ್ಲ: **ಪಂಪಭಾ**, ೧೨. ೧೮೫)

ಶೀತ – [ನಾ] ಚಳಿ (ಕ್ಷುತ್ಪಿಪಾಸಾಶೀತಾತಪಪ್ರಮುಖ ಪರೀಷಹಂಗಳಂ ಸೈರಿಸಲಾಜದೆ: **ಆದಿಪು**, ೯. ೮೮ ವ)

ಶೀತರುಚಿ – [ನಾ] ತಂಪಾದ ಕಾಂತಿ (ಹಿಮಕರಂ ಆತ್ಮ ಶೀತರುಚಿಯಂ ದಿನನಾಯಕಂ ಉಷ್ಣದೀಧಿತಿಕ್ರಮಮಂ ಅಗಾಧವಾರಿಧಿಯೆ ಗುಣ್ಪಂ ಇಳಾವಧು ತನ್ನ ತಿಣ್ಪಂ ಬಿಸುಟಿರ್ಪ್ಪೊಡಂ; **ಪಂಪಭಾ**, ೧. ೮೩)

ಶೀತಳವಾರಿ – [ನಾ] ತಂಪಾದ ನೀರು (ಸೂಸುವ ಶೀತಳವಾರಿ ಮೆಯ್ಯನೆಯ್ತಂದು ಇರದೆ ಎತ್ತ ಬತ್ತಿದುವು: **ಪಂಪಭಾ**, ೫. ೭)

ಶೀರ್ಷಕ – [ನಾ] ತಲೆಯ ಆಭರಣ (ಪ್ರತ್ಯೇಕ ಶೀರ್ಷಕ ಅವಘಾಟಕ ಪ್ರಕಾಂಡ ತರಳತರ ಬಂಧ ಉಪಪದಪಂಚಕ ಸಮೇತಂಗಳಾಗಿ: **ಆದಿಪು**, ೮. ೫೪ ವ)

ಶೀಲವ್ರತ – [ನಾ] [ಜೈನ] ಮುನಿಗಳ ವ್ರತಾಚರಣೆ (ದರ್ಶನವಿಶುದ್ಧನಾಗಿಯುಂ ಶಿಲವ್ರತಭಾವನಾರಹಿತಂ ಅಸಂಯುತಂ ಜಘನ್ಯಪಾತ್ರಂ: **ಆದಿಪು**, ೧೦. ೯ ವ)

ಶುಂಡಾಳ – [ನಾ] ಸೊಂಡಿಲು (ಕ್ರೀಡಾವಖಂಡಿತ ಉಚ್ಚಂಡ ಶುಂಡಾಳ ಗಾತ್ರ ಅಪರ ಪತಿಬಾಳ ಕದಳಿಕಾ ಕಾಂಡ ಲೀಲಾಚ್ಛಿನ್ನ: **ಆದಿಪು**, ೧೩. ೪೫ ವ)

ಶುಂಭತ್ – [ಗು] ಒಡೆಯುವ, ಸೀಳುವಂತಹ (ಮುಂದಣ ಕಜ್ಜದ ಬಿಣ್ಪುಮಂ ಅಜೆದು ಅಂಭೋರುಹನಾಭಂ ಶುಂಭತ್ ಅಂಭೋಧರಧ್ವನಿಯಿನಿಂತೆಂದಂ: **ಪಂಪಭಾ**, ೬. ೨೨ ವ)

ಶುಕ – [ನಾ] ಗಿಳಿ (ಶುಕ ಶಿಖಂಡಿ ಹಂಸ ಸಾರಸ ಕ್ರೌಂಚ ಕರಿ ಕಳಭ ಮಲ್ಲಾದ್ಯನೇಕ ಅನೇಕಾಕಾರವಿಕೃತಾಮರಕುಮಾರ: **ಆದಿಪು**, ೮. ೩ ವ)

ಶುಕಕಾಮಿನಿ – [ನಾ] ಹೆಣ್ಣುಗಿಳಿ (ಚೂಷಿತಕಮಂ ಔಪರಿಷ್ಟಕರತಂಗಳ ಭೇದದೊಳೊಂದಿದ ಆಮ್ರಚೂಷಿತಕಮನಾಮ್ರಪಕ್ವಫಳದೊಳ್ ಶುಕಕಾಮಿನಿ ಚೆಲ್ವುದೋಜೆದಳ್: **ಆದಿಪು**, ೧೧. ೯೯)

ಶುಕ್ತಿಪುಟ – [ನಾ] ಮುತ್ತಿನ ಚಿಪ್ಪು (ಯಶಸ್ವತಿ ಮಹಾದೇವಿಯ ಗರ್ಭಾವಾಸದೊಳ್ ಶುಕ್ತಿಪುಟೋದರ ವರ್ತಿಯಪ್ಪ ನಿರ್ಮಳೋದಕಬಿಂದುವಿನಂತೆ ಸಂಕ್ರಮಿಸೆ: **ಆದಿಪು**, ೮. ೨೯ ವ)

ಶುಕ್ಲ – [ನಾ] ರೇತಸ್ಸು (ಉತ್ತಮ ಪಾತ್ರದಾನಾನುಮೋದಫಲದಿಂದಲ್ಲಿ ಪುಟ್ಟುವ ಜೀವಂಗಳ್ ನಾರಿಪುರುಷಸಂಯೋಗನಿಯೋಜಿತ ಶುಕ್ಲಾರ್ತವಂಗಳೊಳ್ ಜೀವಯುಗಳಂಗಳಾಗಿ ನೆಲಸಿ: **ಆದಿಪು**, ೫. ೪೧ ವ)

ಶುಕ್ಲಧ್ಯಾನ – [ನಾ] [ಜೈನ] ಪರಿಶುದ್ಧವಾದ ಆತ್ಮಜ್ಞಾನ: ಪೃಥಕ್ತ್ವವಿತರ್ಕವಿಚಾರ, ಏಕತ್ವವಿತರ್ಕವಿಚಾರ, ಸೂಕ್ಷ್ಮಕ್ರಿಯಾ ಪ್ರತಿಪಾತಿ, ವ್ಯುಪರತ ಕ್ರಿಯಾನಿವೃತ್ತಿ ಎಂಬ ನಾಲ್ಕು ಬಗೆಯ ಶುಕ್ಲಧ್ಯಾನಗಳು (ಚತುರ್ವಿಧಶುಕ್ಲಧ್ಯಾನದೊಳ್ ಪೂರ್ವಾಪರವಿಷಯ ವಿವಿಕ್ತಾರ್ಥವ್ಯಂಜನವೀರ್ಯ

ವಿಧಿವ್ಯಂಜನಯೋಗ ಸಂಕ್ರಮಣಲಕ್ಷಣಲಕ್ಷಿತಮಪ್ಪ ಪೃಥಕ್ತ್ವವಿತರ್ಕವಿಚಾರಮೆಂಬ ಮೊದಲ ಶುಕ್ಲಧ್ಯಾನದೊಳ್: **ಆದಿಪು**, ೬. ೩೪ ವ)

ಶುಕ್ಲಲೇಶ್ಯಾ – [ನಾ] [ಜೈನ] ಕರ್ಮಸಂಬಂಧವಾದ ಬಣ್ಣಗಳಲ್ಲಿ ಒಂದು; ಅತಿನಿದ್ದೆಯ ಸಂಕೇತವಾದ ಬಿಳಿ; ಆರು ಲೇಶ್ಯೆಗಳಲ್ಲಿ ಒಂದು, ಶುಭಭಾವ (ಶುಭಭಾವಶುಕ್ಲಲೇಶ್ಯಾನುಭಾವದಿಂ ಧವಳಪುಂಡರೀಕ ನಿಕಾಶಪ್ರಭೆ ದೊರೆಕೊಂಡುದು ಪರಿಣಾಮಭೇದಮೇಂ ಚಿತ್ರವಿಧಮೊ ತನುಭೃದ್ಗಣದಾ: **ಆದಿಪು**, ೬. ೪೨)

ಶುಚಿ – [ನಾ] ಶೌಚಗುಣ (ಪೇೞ್ ಏವುದೊ ಶುಚಿಯಿಲ್ಲದವನ ಗಂಡುಂ ತೊಂಡುಂ: **ಪಂಪಭಾ**, ೮. ೮೨)

ಶುದ್ಧ – [ನಾ] ಪೂರ್ವರಂಗದ ಒಂದು ಬಗೆ (ಸುರಾಸುರಸಭೆಗಂ ನಾಭಿರಾಜಾದಿ ಮನುಜಸಭೆಗಂ ಮೆಚ್ಚಿಯಲೆಂದು ಶುದ್ಧಂ ವಿಚಿತ್ರಂ ಎಂಬ ಪೂರ್ವರಂಗಪ್ರಸಂಗದೊಳ್: **ಆದಿಪು**, ೭. ೧೧೫ ವ), ನೋಡಿ, **'ಪೂರ್ವರಂಗ'**

ಶುದ್ಧಾಂತ – [ನಾ] ಅಂತಃಪುರ (ಅತ್ಯಂತ ಸೌಂದರ ಶುದ್ಧಾಂತ ವಧೂಕದಂಬಕಮನೇಂ ಮೆಯ್ವೆರ್ಚಿಸಲ್ಕಾರ್ತುದೋ: **ಆದಿಪು**, ೧೧. ೪೨)

ಶುದ್ಧಾಕ್ಷರ – [ನಾ] ವರ್ಣಮಾಲೆಯ ಮೂಲ ಅಕ್ಷರಗಳು (ಅಂತಕಾರಾದಿ ಹಕಾರಾಂತಸ್ವರವ್ಯಂಜನಭೇದಭಿನ್ನ ಶುದ್ಧಾಕ್ಷರಂಗಳುಮಂ ಆಯೋಗವಾಹಕಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಹ್ಮಿಗೆ ದಕ್ಷಿಣಹಸ್ತದೊಳ್ ಉಪದೇಶಂಗೆಯ್ದು: **ಆದಿಪು**, ೮. ೫೯ ವ)

ಶುಭ – [ನಾ] ಮಂಗಳ (ಉತ್ತರಮಕ್ಕುಂ ಧೃತಿ ತುಷ್ಟಿ ಪುಷ್ಟಿ ಸೌಭಾಗ್ಯಂ ಇಷ್ಟಾಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ: **ಪಂಪಭಾ**, ೧೪. ೬೫)

ಶುಭತಿಥಿ – [ನಾ] ಶುಭಕರವಾದ ದಿನ (ಶುಭತಿಥಿ ಶುಭನಕ್ಷತ್ರ ಶುಭವಾರ ಶುಭಮುಹೂರ್ತಮೆನೆ **ಗಣಕಂ ಇಳಾಪ್ರಭು**ವೊಗೆದಂ: **ಪಂಪಭಾ**, ೧. ೧೨೭)

ಶುಭದ – [ನಾ] ಶುಭಕರವಾದ (ಬರೆ ಚೈತ್ರಂ ಕೃಷ್ಣಪಕ್ಷಂ ದೊರೆಕೊಳೆ ನವಮೀವಾಸರಂ ಪೊರ್ದೆ ಲೋಕೋತ್ತರಮಾಗಿರ್ದ ಉತ್ತರಾಷಾಢದೊಳ್ ಅತಿಶುಭದಂ ಬ್ರಹ್ಮಯೋಗಂ ಮನಂಗೊಂಡಿರೆ: **ಆದಿಪು**, ೭. ೩೬)

ಶುಭಲಗ್ನೋದಯ – [ನಾ] ಶುಭಲಗ್ನದ ಆರಂಭ (ಗ್ರಹಂಗಳೆಲ್ಲಂ ತಂತಮ್ಮ ಉಚ್ಚಸ್ಥಾನಂಗಳೊಳಿರ್ದು ಷಡ್ವರ್ಗಸಿದ್ಧಿಯಂ ಉಂಟುಮಾಡೆ ಶುಭಲಗ್ನೋದಯದೊಳ್: **ಪಂಪಭಾ**, ೧. ೧೪೪ ವ)

ಶುಶ್ರೂಷಾನಿಯೋಗ – [ನಾ] ಸೇವಾಕಾರ್ಯ (ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾನಿಯೋಗಂಗಳುಮಂ .. .. ಉಪದೇಶಂಗೆಯ್ದು: **ಆದಿಪು**, ೮. ೬೪ ವ)

ಶುಶ್ರೂಷೆ – [ನಾ] ಸೇವೆ (ಆ ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂಗೊಳೆ ಕೊಟ್ಟಂ ದುರ್ವಾಸಂ ವಿಳಸಿತ ಮಂತ್ರಾಕ್ಷರಂಗಳಂ ದಯೆಯಿಂದಂ: **ಪಂಪಭಾ**, ೧. ೮೮ ಮತ್ತು ೧. ೮೯)

ಶುಷ್ಕತಾರ್ಕಿಕ – [ನಾ] ಒಣಕಲು ಚರ್ಚೆ ಮಾಡುವವನು (ಇರು ಮರುಳೆ ಶುಷ್ಕವೈಯಾಕರಣಂಗಂ ಶುಷ್ಕತಾರ್ಕಿಕಂಗಂ ಬೆಳ್ಳಕ್ಕರಿಗಂಗಂ ವಿಷಯಮೆ ಕಾವ್ಯರತ್ನಂ ಅತಿಚತುರಕವಿಕದಂಬಕವಿಷಯಂ: **ಆದಿಪು**, ೧. ೨೪)

ಶುಷ್ಕಪತ್ರ – [ನಾ] ಒಣಕಲು ಎಲೆ, ತರಗೆಲೆ (ಹರಿತಾಂಕುರ ಪಲ್ಲವ ಪತ್ರರಾಜಿಯಂ ಬಿಸುಟು ಶುಷ್ಕಪತ್ರಂಗಳನಾದರದಿಂ ಮೇವ ಅಜಕುಳಮಂ: **ಆದಿಪು**, ೧೫. ೩೫)

ಶುಷ್ಯತ್ – [ಗು] ಒಣಗಿದ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು**, ೫. ೮೭ ವ)

ಶೂದ್ರ – [ನಾ] ಆದಿದೇವನು ವಿಭಾಗಿಸಿದ ಮೂರು ವರ್ಣಗಳಲ್ಲಿ ಮೂರನೆಯದು, ಕರ್ಮಕವರ್ಗ (ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾನಿಯೋಗಂಗಳುಮಂ: **ಆದಿಪು**, ೮. ೬೪ ವ)

ಶೂದ್ರಾನ್ವಯ – [ನಾ] ಶೂದ್ರವರ್ಣ (ಶೂದ್ರಾನ್ವಯಕ್ಕೆ ಬ್ರಾಹ್ಮಣಾದಿ ವರ್ಣತ್ರಯಕ್ಕಂ ಶುಶ್ರೂಷಾದ್ಯನೇಕ ಕರ್ಮಕರಣ ಉಪಜೀವನಮುಮಂ ನಿಜೆಪಿ: **ಆದಿಪು**, ೮. ೭೩)

ಶೂನ್ಯವಾದ – [ನಾ] ಬೌದ್ಧಮತ ದರ್ಶನ, ನಿರೀಶ್ವರವಾದ (ಶೂನ್ಯವಾದ ಪ್ರಕಾಶನಪರಂ ಆವುದಂತರ್ಬಹೀರೂಪದಿಂ ವಿಶದದರ್ಶನಾವಗಮ್ಯಂ ಅದೆಲ್ಲಂ ಅಸತ್ಯಾವಭಾಸಿ: **ಆದಿಪು**, ೨. ೯ ವ)

ಶೂನ್ಯಹಸ್ತ – [ನಾ] ಬರಿಗೈ, ಆಯುಧ ಹಿಡಿಯದೆ (ಶೂನ್ಯಹಸ್ತದೊಳ್ ಇರ್ವರುಂ ಪೆಣೆದು ಪಲವುಂ ಗಾಯದೊಳ್ ಆಯಂದಪ್ಪದೆ ಪಿರಿದುಂ ಪೊಟ್ಟು ಸಲ್ತರ್ಪಿನಂ ಪೋರೆ: **ಪಂಪಭಾ**, ೮. ೨೧ ವ)

ಶೂನ್ಯೀಕೃತ – [ಗು] ಬರಿದಾಗಿ ಮಾಡಲ್ಪಟ್ಟ (ಅಂತು ನರನಾರಾಯಣರಿರ್ವರುಂ ಅನವರತ ಶರಾಸಾರಶೂನ್ಯೀಕೃತ ಕಾನನಮಾಗೆಚ್ಚು: **ಪಂಪಭಾ**, ೫. ೫೦ ವ)

ಶೂರ – [ನಾ] ಶ್ರೀಕೃಷ್ಣನ ತಾತ ಶೂರಸೇನ (ಮತ್ತಿತ್ತ ನೆಗೞ್ತೆಯ ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆಯೆನೆ ಕುಂತಿ: **ಪಂಪಭಾ**, ೧. ೮೮)

ಶೂರಂ ಭೇದೇನ ಯೋಜಯೇತ್ – ಶೂರನನ್ನು ಭೇದೋಪಾಯದಿಂದ ಗೆಲ್ಲಬೇಕು (ಶೂರಂ ಭೇದೇನ ಯೋಜಯೇತ್ ಎಂಬ ನಯಮಂ ಕೆಯ್ಕೊಂಡು ವಿನಯಮನೆ ಮುಂದಿಟ್ಟು: **ಪಂಪಭಾ**, ೧೦. ೫೯ ವ)

ಶೂಲ – [ನಾ] ಈಟಿ (ಜಾನುಭಂಜನಿಶೂಲಪ್ರಕರ ಪರಿವೃತಂಗಳುಂ ಕೂಪ ಕೂಟ ಅವಪಾತ ಲೋಹಕಂಟಕ ಸಂಕಟಂಗಳುಂ: **ಆದಿಪು**, ೧೩. ೫೭ ವ)

ಶೂಲಕಪಾಲಪಾಣಿ – [ನಾ] ತ್ರಿಶೂಲ ಹಾಗೂ ತಲೆಬುರುಡೆಯನ್ನು ಹಿಡಿದವನು, ಶಿವ (ನಿನ್ನೀ ಶರಾಸನದೊಳ್ ಶೂಲಕಪಾಲಪಾಣಿ ದಯೆಯಿಂ ಬಂದು ಇರ್ದಂ: **ಪಂಪಭಾ**, ೧೦. ೧೨೦)

ಶೃಂಗ – [ನಾ] ಬೆಟ್ಟದ ಕೋಡು (ನಿರ್ಗತ ಮಂತ್ರಪೂತಾಂಗಮಂ ನೃಪನೆಯ್ದಿದಂ ಉದ್ಯತ್ ಶೃಂಗಮಂ ಶತಶೃಂಗಮಂ: **ಪಂಪಭಾ**, ೧. ೧೧೫)

ಶೃಂಗಕ – [ನಾ] ಪಿಚಕಾರಿ (ಸರಸಿಜ ನೀಲೋತ್ಪಲ ಕರಿಕರ ಹಂಸೀ ವದನರೂಪದಿಂ ನೆರೆದು ಅಂತಃಪುರ ಕಾಂತಾಕರತಳದೊಳ್ ಕರಮೆಸೆದುವು ಕನಕಶೃಂಗಕಂಗಳ್ ಪಲವುಂ: **ಆದಿಪು,** ೧೧. ೧೪೩)

ಶೃಂಗಾಟಕ – [ನಾ] ಒಂದು ಬಗೆಯ ಮುಳ್ಳುಗಿಡ (ತಾಳಪತ್ರ ಶೃಂಗಾಟಕನಿಚಿತಂಗಳುಂ ಶ್ವದಂಷ್ಟ್ರಾರ್ಗಳೋಪರಿಮ ಸಂಛನ್ನಂಗಳುಂ: **ಆದಿಪು,** ೧೩. ೫೭ ವ)

ಶೃಂಗಾಟಕವ್ಯೂಹ – [ನಾ] ಒಂದು ಸೇನಾರಚನೆ, ನಾಲ್ಕು ದಾರಿ ಸೇರುವ ಸೇರುವಂತಹ ರಚನೆ (ಸಮಭೂಮಿಯೊಳ್ ಚತುರ್ಬಲಂಗಳನೊಂದು ಮಾಡಿ ಶೃಂಗಾಟಕವ್ಯೂಹಮನೊಡ್ಡಿ ನಿಂದಾಗಳ್: **ಪಂಪಭಾ,** ೧೨. ೧೬ ವ)

ಶೃಂಗಾರವಾರಾಶಿ – [ನಾ] ಸಿಂಗಾರವೆಂಬ ಸಮುದ್ರ (ಶೃಂಗಾರವಾರಾಶಿ ಭೋಂಕನೆ ಬೆಳ್ಳಂಗೆಡೆದತ್ತೊ ಕಾಮನ ಎಱೆ ಮೆಯ್ವೆರ್ಚಿತ್ತೊ ಪೇೞ್ ಈಕೆಗೆ ಎಂಬಿನಂ: **ಪಂಪಭಾ,** ೪. ೪೨)

ಶೇಖರ – [ಗು] ಮುಡಿದ, ಧರಿಸಿದ (ಅನೇಕ ಮಕುಟಬದ್ಧ ಶೇಖರಸಹಸ್ರಪರಿಸ್ರಸ್ತ ಕುಸುಮಕೇಸರರಜಮುಂ: **ಆದಿಪು,** ೧೧. ೩೫ ವ); ಶಿರೋಭೂಷಣ (ತನು ಕಿಱಿದಾದೊಡಂ ಉದ್ಯತ್ ತನುಪ್ರಭಾಪ್ರಸರಮೆಸೆದು ಪಸರಿಸಿ ಸಿಂಹಾಸನಮಂ ಪುದಿದಿರೆ ದೇವಂ ಕನಕಕನಚ್ಛಿಖರಿಶಿಖರಶೇಖರನಾದಂ: **ಆದಿಪು,** ೭. ೭೭)

ಶೇಷ – [ನಾ] ಆದಿಶೇಷ (ಸುದತಿಯ ಮೃದು ಪದವಿನ್ಯಾಸಮುಮಂ ಶೇಷಂ ಆನಲಾರದೆ ಸುಯ್ದಂ ಬೇಸಱಿಂ ಎಂದೊಡೆ ಗರ್ಭದ ಕೂಸಿನ ಬಳೆದಳವಿಯಳನಳೆವರುಂ ಒಳರೇ: **ಪಂಪಭಾ,** ೧. ೧೨೬); (ಸಮಸ್ತ ಉರ್ವೀಧರ ಅಶೇಷ ಶೇಷ ಮಹಾನಾಗಫಣಾಮಣಿದ್ಯುತಿಯನೇಂ ಖದ್ಯೋತದೊಳ್ ಕಾಣ್ಬರೇ: **ಪಂಪಭಾ,** ೫. ೭೬)

ಶೇಷಾಕ್ಷತೆ – [ನಾ] ಆಶೀರ್ವಾದಪೂರ್ವಕ ಹಾಕುವ ಅಕ್ಷತೆ (ಸಿತ ದೂರ್ವಾಂಕುರವಿಮಿಶ್ರಂಗಳಪ್ಪ ಶೇಷಾಕ್ಷತೆಗಳಂ ಕೊಟ್ಟು ಮುಂದೆ ನಿಂದನಂ ನಿಮಗೆ ಬಾೞ್ತೆಯಪ್ಪುದಂ ಬೇಡಿಕೊಳ್ಳಿಂ ಎನೆ: **ಪಂಪಭಾ,** ೫. ೭೦ ವ)

ಶೇಷಾಶೇಷ – [ನಾ] [ಶೇಷ+ಅಶೇಷ] ಇರುವ ಮತ್ತು ಹೊಸತಾದ (ಭಗವಜ್ಜನ್ಮಾಭಿಷೇಕ ಸಂಬಂಧಿಯಾಗೆ ತನ್ನ ಪೊಸತೆ ಸಮೆದ ಸಮವಕಾರ ರೂಪಕಮುಂ ದಶಾವತಾರರೂಪಗರ್ಭ ಸಂದರ್ಭಂಗಳಪ್ಪ ಶೇಷಾಶೇಷರೂಪಕಂಗಳುಮಂ: **ಆದಿಪು,** ೭. ೧೧೫ ವ)

ಶೇಷಾಹಿ – [ನಾ] ಆದಿಶೇಷ (ಕಡಲಂ ಪೊಕ್ಕೊಡೆ ಪೀರ್ದಪೆಂ ಕಡಲಂ ಆ ಪಾತಾಳಮಂ ಪೊಕ್ಕನಪ್ಪೊಡೆ ಶೇಷಾಹಿಯ ಪಲ್ಗಳಂ ಮುಱಿದಪೆಂ: **ಪಂಪಭಾ,** ೧೩. ೭೬)

ಶೈತ್ಯ – [ಗು] ತಂಪು (ಎಸಗಿದುದು ಸಮೀರಂ ಶೈತ್ಯಸೌರಭ್ಯ ಮಾಂದ್ಯಾವಸಥಂ: **ಆದಿಪು,** ೮. ೩೫)

ಶೈಲ – [ನಾ] ಪರ್ವತ, ಬೆಟ್ಟ (ಶೈಲೇಳಾಕಲ್ಪಕಾಳಂ ಕ್ಷಿತಿವಲಯಮಿದಂ ಪಾತು ವಿಕ್ರಾಂತತುಂಗಃ: **ಪಂಪಭಾ,** ೧೪. ೨೭)

ಶೈಲೂಷ – [ನಾ] ನರ್ತಕ, ನಟ (ಜೀವಂಗಳ್ ಶುಭಾಶುಭಕರ್ಮ ಶೈಲೂಷಪ್ರೇರಿತಂಗಳಾಗಿ ಚತುರ್ಗತಿ ಸಂಸಾರಗಳೊಳ್ .. .. ಪರಿಭ್ರಮಿಸುಗುಂ: **ಆದಿಪು,** ೧೬. ೫೭ ವ)

ಶೈಲೂಷವೇಷ – [ನಾ] ನಟನೆ, ತೋರಿಕೆ (ಎಲ್ಲಿ ಪುಟ್ಟಿದಳೊ ಮತ್ ಪ್ರಾಣೇಶೆ ಎಂದು ಇಲ್ಲದ ಉಬ್ಬೆಗಮಂ ಭಾವಿಸಿ ಪಲವನಾ ಶೈಲೂಷವೇಷಂಗಳಂ: **ಆದಿಪು,** ೩. ೮೮)

ಶೈಲೇಳಾಕಲ್ಪಕಾಳ – [ನಾ] [ಶೈಲ+ಇಳಾ+ಆಕಲ್ಪಕಾಳ] ಬೆಟ್ಟ ಭೂಮಿಗಳಿರುವಷ್ಟು ಕಾಲ, ಹೆಚ್ಚು ಕಾಲ (ಶೈಲೇಳಾಕಲ್ಪಕಾಳಂ ಕ್ಷಿತಿವಲಯಮಿದಂ ಪಾತು ವಿಕ್ರಾಂತತುಂಗಃ: **ಪಂಪಭಾ,** ೧೪. ೨೭)

ಶೈಲೇಂದ್ರ – [ನಾ] ಹಿಮಾಲಯ (ಷಟ್ಖಂಡಕಿಂತಿದಱಿಂದಿತ್ತೆಯೆ ಮೇರೆ ನೋಡಿಮೆಮಗೀ ಶೈಲೇಂದ್ರಮೆಂದಂದು ತೋಱಿದನಾ ತನ್ನೊಡವಪ್ ಭೂಪನಿಕರಕ್ಕೆ ಉತ್ತುಂಗ ಹೈಮಾದ್ರಿಯಂ: **ಆದಿಪು,** ೧೩. ೬೯)

ಶೋಕ – [ನಾ] [ಜೈನ] ಚಾರಿತ್ರಮೋಹನೀಯಕರ್ಮದ ಉತ್ತರೋತ್ತರ ಪ್ರಕೃತಿಗಳಲ್ಲಿ ಒಂದಾದ ಒಂಬತ್ತು ನೋಕಷಾಯಗಳಲ್ಲಿ ಒಂದು, ದುಃಖವನ್ನು ಉಂಟುಮಾಡುವಂಥದು (ಕ್ರಮಕ್ರಮದೊಳೆ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ ಪುರಾತನ ಸತ್‌ಕರ್ಮದೊಡನೆ ಹಾಸ್ಯರತ್ಯರತಿಶೋಕಭಯಜುಗುಪ್ಸಾಭಿಧಾನ ನೋಕಷಾಯಷಟ್ಕಮುಮಂ ಘಾತಿಸಿಳ **ಆದಿಪು,** ೧೦. ೧೪ ವ); [ನಾ] ದುಃಖ (ಬಿಡದೆ ಅಟಲ್ವ ಬಂಧುಜನದ ಒಟ್ಟುಡಿಯದ ಕಣ್ಣೀರ ಪೂರಂ ಆ ಪ್ರೇತಮಂ ಓಗಡಿಸದೆ ಸುಡುವುದು ಗಡಂ ಇನ್ನುಡುಗುವುದೀ ಶೋಕಮಂ ಸರೋಜದಳಾಯತಾಕ್ಷೀ: **ಪಂಪಭಾ,** ೨. ೨೮)

ಶೋಕವ್ಯಗ್ರ – [ನಾ] ದುಃಖದಿಂದ ಕಳವಳಗೊಂಡವನು (ಕೋಟಲೆಗೊಳ್ವ ಕೌರವೇಶ್ವರನಂ ಎಯ್ದೆ ಪೋಗಿ ಹಸ್ತಪ್ರಹಸ್ತಮಂಡಲಾಗ್ರನುಂ ಶೋಕವ್ಯಗ್ರನುಂ ಆಗಿ: **ಪಂಪಭಾ,** ೧೩. ೧೦೨ ವ)

ಶೋಕಾನಲ – [ನಾ] ದುಃಖವೆಂಬ ಬೆಂಕಿ (ಪರಲೋಕ ಪ್ರಾಪ್ತನಾದೊಡೆ ಗಾಂಗೇಯನುಂ ಸತ್ಯವತಿಯುಮತ್ಯಂತ ಶೋಕಾನಲದಹ್ಯಮಾನ ಮಾನಸರ್ಕಳಾಗಿ ಆತಂಗೆ ಪರಲೋಕಕ್ರಿಯೆಗಳಂ ಮಾಡಿ: **ಪಂಪಭಾ,** ೧. ೮೦ ವ)

ಶೋಣ – [ನಾ] ಕೆಂಪು ಬಣ್ಣ (ಲೀಲಾಕಮಲಾಕರಾನೀಕ ರಕ್ತಕಮಳಂಗಳಂ ಆಸ್ಯಾನುಶೋಣಿತ ಶೋಣ ರಿಪುನೃಪ ಶಿರಂಗಳೆಂದು ತುಱಿಯಿಸಿಯುಂ: **ಆದಿಪು,** ೮. ೪೧ ವ)

ಶೋಣಮಣಿ – [ನಾ] ಮಾಣಿಕ್ಯ (ಭವ್ಯಹೃತ್ಕಮಳಕ್ಕಂ ಮುದಮಂ ಜಪಾಪ್ರಸವ ರಕ್ತಾಶೋಕ ಬಂಧೂಕ ಶೋಣಮಣಿ ಜ್ಯೋತಿಗಳಿಕ್ಕೆಯಿಂ ಕುಡೆ: **ಆದಿಪು,** ೧೬. ೩)

ಶೋಣಾಶ್ವ – [ನಾ] ಕೆಂಪು ಕುದುರೆ (ಶೋಣಾಶ್ವಂಗಳ್ ರಜತರಥಮಂ ಪೂಡೆ ಕುಂಭಧ್ವಜಂ ಗೀರ್ವಾಣಾವಾಸಂಬರಂ ಅಡರೆ ಮಾಱೊಡ್ಡು ದಲ್ ಸಾಲದು ಎನ್ನೀ ಬಾಣಾವಾಸಕ್ಕೆ ಎನುತುಂ: **ಪಂಪಭಾ,** ೧೧. ೫೬)

ಶೋಣಿತ – [ನಾ] ರಕ್ತ (ಲೀಲಾಕಮಲಾಕರಾನೀಕ ರಕ್ತಕಮಳಂಗಳಂ ಆಸ್ಯಾನುಶೋಣಿತ

ಶೋಣರಿಪುನೃಪಶಿರಂಗಳೆಂದು ತುಟಿಯಿಸಿಯುಂ: **ಆದಿಪು,** ೮. ೪೧ ವ)

ಶೋಣಿತವಾರಿ – [ನಾ] ರಕ್ತವೆಂಬ ನೀರು (ಭೂತಾಂಗನಾನಿಕರಂ ಶೋಣಿತವಾರಿಯಂ ಕುಡಿದು ಅಗುರ್ವಪ್ಪನ್ನೆಗಂ ಸೂಸೆ: **ಪಂಪಭಾ,** ೧೨. ೨೫)

ಶೋಣಿತಾರ್ದ್ರ – [ಗು] ರಕ್ತದಿಂದ ತೊಯ್ದ (ವೃಕೋದರ ಗದಾಸಂಚೂರ್ಣಿತ ಊರುಯುಗಳನುಂ ಭೀಮಸೇನಚರಣ ಪ್ರಹರಣಗಳಿತ ಶೋಣಿತಾರ್ದ್ರ ಮೌಳಿಯುಂ ಆಗಿ: **ಪಂಪಭಾ,** ೧೩. ೧೦೨ ವ)

ಶೋಭನವಿಧೇಯ – [ಗು] ಮಂಗಳಕ್ಕೆ ಅಧೀನವಾದ (ಇಂದಿನ ವಾಸರಮೆ ಶೋಭನವಿಧೇಯವಾಸರಂ ಇಂದಿನ ದಿವಸಮೆಶುಭದಿವಸಾಗ್ರೇಸರಂ: **ಆದಿಪು,** ೪. ೩೦ ವ)

ಶೋಷಣ – [ನಾ] ಒಣಗಿಸುವ (ಅಶೇಷವಿದ್ಯಾನದೀಶೋಷಣ ಗ್ರೀಷ್ಮಾಂಶುಮಾಲಿ ಮಯೂಖಮಾಲೆಯುಂ: **ಆದಿಪು,** ೧೪. ೧೨೨ವ)

ಶೌಂಡ – [ನಾ] ಆಸಕ್ತನಾದವನು, ಕುಶಲ (ಕದನಪ್ರಾರಂಭಶೌಂಡಂ ರಿಪುನೃಪಬಲದಾವಾನಲಂ ವೈರಿಭೂಭೃತ್ ಮದವತ್ ಮಾತಂಗ ಕುಂಭಸ್ಥಳದಳನ ಖರೋಗ್ರ ಅಸಿಪಂಚಾಸ್ಯಧೈರ್ಯಂ: **ಪಂಪಭಾ,** ೬. ౭౭)

ಶೌಚ – [ನಾ] [ಜೈನ] ಹತ್ತು ಕುಲಧರ್ಮಗಳಲ್ಲಿ ಒಂದು, ಲೋಭವನ್ನು ತೊರೆಯುವುದು (ಎಂಬಿನಮುತ್ತಮಕ್ಷಮಾ ಮಾರ್ದವಾರ್ಜವ ಸತ್ಯಶೌಚಸಂಯಮ ತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಪರ್ಯಾಯಪರ್ಯಾಪ್ತ ದಶಧರ್ಮಂಗಳುಮಂ ಕೈಕೊಂಡು: **ಆದಿಪು,** ೬. ೩೦ ವ); [ನಾ] ಶುಚಿತ್ವ, ಬ್ರಹ್ಮಚರ್ಯ (ನಡೆದುದು ಬಾಳಕಾಲದೊಳೆ ತೊಟ್ಟು ಎನಗೆ ಅಂಕದ ಶೌಚವೀಗಳ್ ಓಗಡಿಪುದೆ: **ಪಂಪಭಾ,** ೧೧. ೪೬)

ಶೌಚಾಂಜನೇಯ – [ನಾ] ಬ್ರಹ್ಮಚರ್ಯಪಾಲನೆಯಲ್ಲಿ ಆಂಜನೇಯನಂತಿರುವವನು (ಪುರಂದರನ ಗಣಿಕೆಯರ ಕಡೆಗಣ್ಣ ನೋಟಕ್ಕಂ ಕಾಟಕ್ಕಂ ಅಟ್ಟಿದ ಶೌಚಾಂಜನೇಯನ ಶೌಚಕ್ಕಂ: **ಪಂಪಭಾ,** ೯. ೫೨ ವ)

ಶೌರ್ಯ – [ನಾ] ಪ್ರತಾಪ (ದೇವರಂ ಅಡಿಗಡಿಗೆ ಎಱಗಿಸಿ ಸಕಳ ಅವನಿತಳದ ಅದಟರಂ ಪಡಲ್ವಡಿಸಿದ ಶೌರ್ಯ ಅವಷ್ಟಂಭದೊಳ್ ಆನಿರೆ ಗೋವಳಿಗಂಗೆ ಅಗ್ರಪೂಜೆಯಂ ನೀಂ ಕುಡುವಾ: **ಪಂಪಭಾ,** ೬. ೫౭)

ಶೌರ್ಯಮದ – [ನಾ] ಅಷ್ಟಮದಗಳಲ್ಲಿ ಒಂದು (ಅಂತು ಶೌರ್ಯಮದಜ್ವರಂ ಮಂತ್ರಿವರ್ಗವೈದ್ಯವಚನೌಷಧಿಗಳಂ ಪತ್ತುವಿಡೆ: **ಆದಿಪು,** ೧೨. ೧೧೯ ವ)

ಶೌರ್ಯಾರ್ಥಿ – [ನಾ] ಪ್ರತಾಪಾಭಿಲಾಷಿ (ನಡೆ ಕುರುಕ್ಷ್ಮಾಪಾಳನಿರ್ದಲ್ಲಿಗೆ ಎಂದು ಅರವಿಂದಾಲಯೆಯಂ ಮಗುಟ್ಚಿದಂ ಆದೇನಾ ದ್ರೌಣಿ ಶೌರ್ಯಾರ್ಥಿಯೋ: **ಪಂಪಭಾ,** ೧೩. ೧೦೨)

ಶೌರ್ಯಾವಷ್ಟಂಭ – [ನಾ] ಪರಾಕ್ರಮದ ಹಿರಿಮೆ (ಸಕಳಾವನಿತಳದ ಅದಟರಂ ಪಡಲ್ವಡಿಸಿದ ಶೌರ್ಯಾವಷ್ಟಂಭದೊಳ್ ಆನಿರೆ ಗೋವಳಿಗಂಗೆ ಅಗ್ರಪೂಜೆಯಂ ನೀನು ಕುಡುವಾ: **ಪಂಪಭಾ,** ೬. ೪౭)

ಶ್ಮಶ್ರು – [ನಾ] ಮೀಸೆ (ಅಭಿನವ ಉದ್ಭಿಜ್ಯಮಾನ ಮೃದುಕುಟಿಲ ಶ್ಮಶ್ರು ಮಧುಕರ ಪಟಳಪರಿವೃತ ಮುಗ್ಧಮುಖಸರಸಿಜನುಂ: **ಆದಿಪು,** ೩. ೯೦ ವ)

ಶ್ಯಾಮಧೂಮ – [ನಾ] ಕಪ್ಪು ಹೊಗೆ (ಪರೆವಂತಾದುದು ಕಾಳಾಗರು ಧೂಪ ಶ್ಯಾಮಧೂಮಮಾತ್ತವ್ಯೋಮಂ: **ಆದಿಪು,** ౭. ౭೯)

ಶ್ಯಾಮಲಾಲಂಕೃತ – [ಗು] ಶ್ಯಾಮಲವರ್ಣದಿಂದ ಅಲಂಕಾರಗೊಂಡ (ಒಂದು ಕಾಳಾಗರುಧೂಪಧೂಮಮಲಿನ ಶ್ಯಾಮಲಾಲಂಕೃತ ವಿಚಿತ್ರಭಿತ್ತಿವಿರಾಜಿತಹರ್ಮ್ಯತಳದೊಳ್: **ಪಂಪಭಾ,** ೪. ೧೦೮ ವ)

ಶ್ಯಾಮಳ – [ನಾ] ಕಪ್ಪು, ಕಡುನೀಲಿ (ಪದಧೂಳೀಕ್ಷೋಭದಿಂ ದಿಗ್ಯುವತಿ ವದನಮಂ ಶ್ಯಾಮಳಂ ಮಾಡಿ: **ಆದಿಪು,** ೧೪. ೮೮)

ಶ್ಯಾಮಳಿತ – [ಗು] ಕಪ್ಪಾದ (ದವದಹನಧೂಮಾಧಿಕಶ್ಯಾಮಳಿತ ಉತ್ತಾಳತಾಳಕಾಯಂ ಅತಿವಿಚಿತ್ರತ್ರಪುಮಯ ಪತ್ರಖಚಿತ ಉಚ್ಚಂಡತಾಳಚಾಪದಂಡಂ: **ಆದಿಪು,** ೧೩. ೪೫ ವ)

ಶ್ಯಾಮಾಂಗಿ – ಕಪ್ಪು ದೇಹದವಳು (ಬನಮಂ ಕೋಗಿಲೆ ಜಕ್ಕವಕ್ಕಿ ಪಗಲಂ .. .. ನೆನೆವಂತೆ ಆಂ ನೆನೆವೆಂ ಸರೋಜಮುಖಿಯಂ ಶ್ಯಾಮಾಂಗಿಯಂ ನಲ್ಲಳಂ: **ಆದಿಪು,** ೧೨. ೩೧)

ಶ್ಯಾಮಾಕ – [ನಾ] ಸಾವೆ (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರ ತಿಳ ಅತಸಿ ಮಸೂರಿಕಾ: **ಆದಿಪು,** ೬. ౭೨ ವ)

ಶ್ರಮಾಂಬುಲವ – [ನಾ] ಬೆವರ ಕಣ (ದುಗ್ಧಸಿಂಧುಪ್ಲವಂ ಶ್ರಮಾಂಬುಲವಮೊಂದುಮಂ ನಿನಗೆ ಪುಟ್ಟಿಸಲ್ಕಾರ್ತುದಿಲ್ಲ: **ಆದಿಪು,** ೧೩. ೮೩)

ಶ್ರಮಾಂಭಃಕಣ – [ನಾ] ಬೆವರ ಹನಿ (ಚಮರರುಹ ಪವನ ಪರಂಪರೆಯೊಳಂ ಆಱದೆ ನೃಪಸೌಂದರೀಶ್ರಮಾಂಭಃ ಕಣಂಗಳುಣ್ಮಿದವಾಗಳ್: **ಆದಿಪು,** ೧೧. ೫೨)

ಶ್ರಯಣೀಯ – [ನಾ] ಆಶ್ರಯಿಸಿದವನು, ಸೇರಿದವನು (ನಯಶಾಲಿ ವತ್ಸಗೋತ್ರ ಶ್ರಯಣೀಯಂ ಅನೇಕ ಸಕಳಶಾಸ್ತ್ರಾರ್ಥ ವಿನಿಶ್ಚಯಂ ಅತಿಕೃತಿ ಮಾಧವಸೋಮಯಾಜಿ ಸಲೆ ನೆಗಟ್ಟಿಂ; **ಪಂಪಭಾ,** ೧೪. ೪೨)

ಶ್ರವಣ – [ನಾ] ಶ್ರವಣೇಂದ್ರಿಯ, ಕಿವಿ (ವಾಜಿರಾಜಿಶ್ರವಣ ಚಮರಜಶ್ರೇಣಿಸಂವೀಜಿತ ಆಶಾಂಬರಭಾಗಂ: **ಆದಿಪು,** ೪. ೨೪); [ನಾ] ಕೇಳುವಿಕೆ (ಅಂತು ನಿಜತನೂಜನ ಮರಣಶ್ರವಣಾಶಘಾತನಿಘಾತದಿಂ ಕುಳಶೈಲಂ ಕೆಡೆವಂತೆ ಕೆಡೆದು: **ಪಂಪಭಾ,** ೧೧. ೧೦೬ ವ)

ಶ್ರವಣಸುಖ – [ನಾ] ಕೇಳಲು ಹಿತಕರವಾದುದು (ಭವದಗ್ರಜ ದಿಗ್ವಿಜಯೋತ್ಸವಂ ಅಧಿಕಮಹೋತ್ಸವಂ ವಲಂ ನಿನಗಾದುದು ಶ್ರವಣಸುಖಮೆಂದೆ ದಿಜಾತ್ಮಾತ್ರ ವರ್ಣನಂಗೆಯ್ವಂ ಉಂತದೇನೆನ್ನಳವೇ: **ಆದಿಪು,** ೧೪. ೫೧)

ಶ್ರವ್ಯ – [ನಾ] ಕೇಳಲು ಯೋಗ್ಯವಾದ (ವಿಚಾರಕ್ಷಮಂ ಉಚಿತಪದಂ ಶ್ರವ್ಯಂ ಅವ್ಯಾಕುಲಂ ವ್ಯಾಪ್ತದಿಗಂತಂ ಕಾವ್ಯಮೆಂದು ಅನ್ವಿತಸುಕವಿಜನಂ ಮೆಚ್ಚೆ ನಿಚ್ಚಂ: **ಆದಿಪು,** ೧. ೨೬); [ನಾ] ನಾಟಕ ಪ್ರಯೋಗದ ಒಂದು ಭಾಗ ?

(ದೃಶ್ಯಶ್ರವ್ಯ ದೃಢಸೂತ್ರಾದಿ ಪ್ರಯೋಗಂಗಳೊಳಂ ನಾನಾವಿಧ ವಾದ್ಯಂಗಳೊಳಂ: **ಆದಿಪು**, ೭. ೧೧೫ ವ)

ಶ್ರಾಂತ – [ಗು] ಬಳಲಿದ (ವಿದಿತ ಪ್ರತ್ಯಕ್ಷನಾಶಾಕರಿನಿಕಟತಟ ಶ್ರಾಂತದಾನಂ ಭರಂಗೆಯ್ದಿದಿರೊಳ್ ವಿಕ್ರಾಂತತುಂಗಂ ಹರಿಗನಿರೆ: **ಪಂಪಭಾ,** ೬. ೭೭)

ಶ್ರಾವಕ – [ನಾ] [ಜೈನ] ಜೈನ ಗೃಹಸ್ಥ (ಮೂಱುಲಕ್ಕೆ ದೃಢಬ್ರತಾದಿ ಶ್ರಾವಕರುಂ ಅಯ್ದುಲಕ್ಕೆ ಸುವ್ರತೆ ಮೊದಲಾಗೆ ಅಯ್ದು ಲಕ್ಕೆ ಪರಮಶ್ರಾವಕಿಯರುಂ: **ಆದಿಪು**, ೧೬. ೪೦ ವ)

ಶ್ರಾವಕವ್ರತ – [ನಾ] [ಜೈನ] ಜೈನ ಗೃಹಸ್ಥರು ಅನುಸರಿಸಬೇಕಾದ ಕಟ್ಟಳೆಗಳು: ಪಂಚಾಣುವ್ರತಗಳು, ಮೂರು ಗುಣವ್ರತಗಳು, ನಾಲ್ಕು ಶಿಕ್ಷಾವ್ರತಗಳು (ಆ ಮುಮುಕ್ಷುಗಳ ಸಮಕ್ಷದೊಳವರ ಪೇೞ್ದ ಮಾಟಿಕ್ಕೆಯೊಳೆ ಪರಮಜಿನಪತಿ ಪರಿಭಾಷಿತಮಪ್ಪ ಸಕಳಶ್ರಾವಕವ್ರತಂಗಳಂ: **ಆದಿಪು**, ೩. ೪೦ ವ)

ಶ್ರಾವಕಾಗ್ರಣಿ – [ನಾ] [ಜೈನ] ಶ್ರೇಷ್ಠ ಜೈನಗೃಸ್ಥ (ಕ್ರಿಯಾಮಂತ್ರಂಗಳಿಂದಂ ಆತ್ಮಸಮಾನ ಶ್ರಾವಕಾಗ್ರಣಿಗಳ್ಗೆ ಕನ್ಯಾ ಭೂಮಿ ಸುವರ್ಣ ಹಸ್ತಿ ಅಶ್ವ ರಥ ರತ್ನಾದಿಗಳಂ ಕುಡುವ ಸಮದತ್ತಿಯುಂ: **ಆದಿಪು**, ೧೫. ೧೩ ವ)

ಶ್ರಾವಕಿ – [ನಾ] [ಜೈನ] ಜೈನ ಗೃಹಸ್ಥೆ (ಮೂಱುಲಕ್ಕೆ ದೃಢಬ್ರತಾದಿ ಶ್ರಾವಕರುಂ ಅಯ್ದುಲಕ್ಕೆ ಸುವ್ರತೆ ಮೊದಲಾಗೆ ಪರಮಶ್ರಾವಕಿಯರುಂ: **ಆದಿಪು**, ೧೬. ೪೦ ವ)

ಶ್ರಾವಿಕಾ – [ನಾ] [ಜೈನ] ಶ್ರಾವಕಿ, ಗೃಹಸ್ಥಧರ್ಮಗಳನ್ನು ಪಾಲಿಸುವವಳು (ಮುನಿನಾಥರ್ ಕಲ್ಪಕಾಂತಾಜನತತಿ ಗಣಿನೀಶ್ರಾವಿಕಾಸಂಕುಳಂ ಭಕ್ತಿನಮಜ್ಜ್ಯೋತಿಷ್ಕದೇವೀಪ್ರತತಿ: **ಆದಿಪು**, ೧೦. ೩೬)

ಶ್ರೀ – [ನಾ] [ಜೈನ] ಜಿನಜನನಿಯನ್ನು ಅಲಂಕರಿಸಲು ಸೌಧರ್ಮೇಂದ್ರನು ನಿಯೋಜಿಸಿದ ಆರು ಮಂದಿ ದೇವತೆಗಳಲ್ಲಿ ಒಬ್ಬಳು (ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಅಱುವರುಮಂ ಆತ್ಮೀಯ ಗುಣಗಣಮಣಿವಿಭೂಷಣಂಗಳಿಂ ಜಿನಜನನಿಯಂ ಅಲಂಕರಿಸಲುಂ ... ಸೌಧರ್ಮೇಂದ್ರಂ ಬೆಸಸುವುದುಂ: **ಆದಿಪು,** ೭. ೩ ವ); [ನಾ] ಲಕ್ಷ್ಮಿ (ತಾಮರಸಕರಪಯೋಜಾಶ್ರಿತ ಶ್ರೀಯಂ ಆಲೋಕಗತಾಂಶುವ್ರಾತರತ್ನೋಜ್ಜ್ವಳಸುರತರುವಂ ಸ್ವಪ್ನದೊಳ್ ದೇವಿ ಕಂಡಳ್: **ಆದಿಪು**, ೮. ೨೬); [ನಾ] ಐಶ್ವರ್ಯ (ಶ್ರೀಗೆ ನೆಗೞ್ತೆಗೆ ವೀರಶ್ರೀಗಾಗರಂ ಅಪ್ಪೆನೆಂಬ ಕಳಕಳವಿಜಯೋದ್ಯೋಗದೊಳೆ ನೆಗೞ್ವೆನೆಂಬುದ್ಯೋಗಿಗೆ: **ಪಂಪಭಾ**, ೯. ೧)

ಶ್ರೀಖಂಡ – [ನಾ] ಶ್ರೀಗಂಧ (ವೀರಶ್ರೀಭುಜಂಗೀಸಮಾಶ್ರಯ ಶ್ರೀಖಂಡಕಾಂಡಗಳುಮಪ್ಪ ದೋರ್ದಂಡಂಗಳಿಂದಂ ಅತಿನಿಬಿಡಾಲಿಂಗನಂಗೆಯ್ದು ಕಾರ್ಯಮಂ ಬೆಸಸಿರ್ಕುಂ: **ಆದಿಪು**, ೧೪. ೪೬ ವ)

ಶ್ರೀಖಂಡಷಂಡ – [ನಾ] ಶ್ರೀಗಂಧದ ಮರಗಳ ತೋಪು (ಸಿದ್ಧದಂಪತಿಗಳ್ ಕ್ರೀಡಿಸುತ್ತಿರ್ಪರೀ ನಗತಟ ಶ್ರೀಖಂಡಷಂಡಂಗಳೊಳ್: **ಆದಿಪು**, ೯. ೧೧೮)

ಶ್ರೀತಾಳಿಕ – [ನಾ] ತಾಳೆಮರ (ಮನಸಿಜ ವಿಜಯಪ್ರಶಸ್ತಿ ಲೇಖನೋಚಿತಚ್ಛದ ಶ್ರೀತಾಳಿಕಮುಮಪ್ಪ ವೇಳಾವನದೊಳ್ ಆವಾಸಿತವಿಜಯಕಟಕನಾಗಿ: **ಆದಿಪು**, ೧೩. ೩ ವ)

ಶ್ರೀದಯಿತ – [ನಾ] ಲಕ್ಷ್ಮೀಪತಿ, ಭರತಚಕ್ರವರ್ತಿ (ಶ್ರೀದಯಿತಂ ಮನುಕುಲಗಗನಾದಿತ್ಯಂ ಹಿಮಮನೆಯ್ದೆ ಷಟ್ಖಂಡಮುಮಂ ಸಾಧಿಸಿ ಜಿತದಿಙ್ಮಂಡಲನಾದ ಮಹಾತ್ಮಂ ಸರಸ್ವತೀ ಮಣಿಹಾರಂ: **ಆದಿಪು,** ೧೫. ೧)

ಶ್ರೀನಾರೀವಲ್ಲಭ – [ನಾ] ಸಂಪತ್ತೆಂಬ ಸ್ತ್ರೀಗೆ ಒಡೆಯ, ಅರ್ಜುನ (ಶ್ರೀನಾರೀವಲ್ಲಭಂ ಅಭಿಮಾನಧನಂ ಹರಿಗಂ: **ಪಂಪಭಾ,** ೧೦. ೧)

ಶ್ರೀಪತಿ – [ನಾ] [ಜೈನ] ವೃಷಭಸ್ವಾಮಿ (ಶ್ರೀಪತಿ ಸುರದಾರಕರೊಡನಾಪೊತ್ತುಂ ನೆರೆದು ರತ್ನಧೂಳೀ ಪಟಲವ್ಯಾಪಿತತನು ಮೃದುಮುಗ್ಧಾಳಾಪಂ ಬಳೆದಂ: **ಆದಿಪು**, ೮. ೧)

ಶ್ರೀಪ್ರಭ – [ನಾ] [ಜೈನ] ಆ ಹೆಸರಿನ ವಿಮಾನ (ಇದು ದೇವೇಂದ್ರನಿವಾಸಂ ಎನ್ನ ನೆಲೆಯುಂ ಶ್ರೀ ಶ್ರೀಪ್ರಭಂ ಮುಂದೆ ನಿಂದಿದು ದೇವವ್ರಜಂ: **ಆದಿಪು**, ೨. ೬೭)

ಶ್ರೀಪ್ರಭವಿಮಾನ – [ನಾ] [ಜೈನ] ಹದಿನಾರುಕಲ್ಪಗಳಲ್ಲಿ ಒಂದು (ವಜ್ರಜಂಘಾರ್ಯಂ ಸುರತಸುಖನಿವಾಸದೊಳ್ ಶ್ರೀಪ್ರಭವಿಮಾನದೊಳ್ ಶ್ರೀಧರನೆಂಬ ದೇವನಾದಂ;; **ಆದಿಪು**, ೫. ೭೦ ವ)

ಶ್ರೀರಾಮಾ – [ನಾ] ಲಕ್ಷ್ಮಿ ಎಂಬ ವನಿತೆ (ಶ್ರೀರಾಮಾಲಂಗಿತ ವಿಪುಳೋರಸ್ಕಂ ಭಾಸ್ಕರಪ್ರತಾಪಂ ನಿಜದೋರ್ಮೇರುಮಥಿತ ಅರಿಬಳಕೂಪಾರಂ: **ಪಂಪಭಾ,** ೧೪. ೧)

ಶ್ರೀವಧು – [ನಾ] ಲಕ್ಷ್ಮಿ (ತವೆ ಮಾಱಾಂತ ಬಲಂ ಕಱುತ್ತಿಱಿದು ತನ್ನಾಳ್ದಂ ಕರಂ ಮೆಚ್ಚೆ ಗೆಲ್ದವನಂ ಶ್ರೀವಧು ಪತ್ತುಗುಂ: **ಪಂಪಭಾ**, ೧೦. ೪೪)

ಶ್ರುತ – [ಗು] ಕೇಳಿದ (ಅವರನೆ ತಿಳಿಪುವ ಬಗೆಯಿಂ ದೃಷ್ಟ ಶ್ರುತ ಅನುಭೂತಕಥೆಗಳಂ ತದನ್ವಯಸಂಬಂಧಿತಂಗಳಂ ಇಂತೆಂದು ಪೇೞಲ್ ತಗುಳ್ದಂ: **ಆದಿಪು**, ೨. ೧೧ ವ); [ನಾ] ವಿದ್ಯೆ (ಅಭಯರ್ ನಿರೋಗರುಂ ಶ್ರುತವಿಭವಸಮನ್ವಿತರುಮಪ್ಪರ್ ಎಂಬುದು ಪಿರಿದಲ್ತು ಭವಾಂಬುಧಿಯುಮನೀಸುವರ್ ಅಭಯೌಷಧಶಾಸ್ತ್ರದಾನಫಳವಿಳಸನದಿಂ: **ಆದಿಪು**, ೧೦. ೧೧)

ಶ್ರುತಕೀರ್ತಿ – [ನಾ] [ಜೈನ] ಒಬ್ಬ ಜೈನಮುನಿಯ ಹೆಸರು (ಆರ್ಯನುತಗೃಧ್ರಪಿಂಛಾಚಾರ್ಯ ಜಟಾಚಾರ್ಯ ವಿಶ್ರುತಶ್ರುತಕೀರ್ತ್ಯಾಚಾರ್ಯಪುರಸ್ಸರಮಪ್ಪಾಚಾರ್ಯಪ 'ರಂಪರೆಯೆ ಕುಡುಗೆ ಭವ್ಯೋತ್ಸವಮಂ: **ಆದಿಪು,** ೧. ೧೨)

ಶ್ರುತಜ್ಞಾನ – [ನಾ] [ಜೈನ] ಓದಿ ಕೇಳಿ ಪಡೆಯುವ ಜ್ಞಾನ (ನೋಂಪಿಯ ವಿಶ್ರುತಶ್ರುತಜ್ಞಾನಮುಮಂ ಯಥೋಚಿತವಿಧಿಯಿಂ ನೋಂತು ಮದೀಯ ಆಯುಷ್ಯಾವಸಾನದೊಳ್ ಈಶಾನಕಲ್ಪದೊಳ್: **ಆದಿಪು,** ೩. ೪೦ ವ)

ಶ್ರುತದೇವಿ – [ನಾ] ಸರಸ್ವತಿ (ಶ್ರುತದೇವೀವಚನಾಮೃತಂ ಶ್ರುತಕಥಾಳಾಪಂ ಶ್ರುತಸ್ಕಂಧಸಂತತಿ ಶಶ್ವಚ್ಛ್ರುತಪಾರಗಶ್ರುತಿ ಮಹೋರ್ಮ್ಯುಲ್ಲಾಸಿ: **ಪಂಪಭಾ,** ೧೪. ೩೨)

ಶ್ರುತಪಾರಗ – [ನಾ] ವೇದಪಾರಂಗತ (ಒಡಮೆಯನರ್ಥಿಗಿತ್ತೆಂ .. .. ಈಗಳೊಂದಕ್ಕೆಡೆಯಿಲ್ಲ ಕೈಯೊಳೆರೆದಂ ಶ್ರುತಪರಗನೆಂತು ಸಂತಸಂಬಡಿಸುವೆಂ .. .. ಕುಂಭಸಂಭವಾ: **ಪಂಪಭಾ,** ೨. ೪೬)

ಶ್ರುತಸ್ಕಂದ – [ನಾ] [ಜೈನ] ತೀರ್ಥಂಕರರ ಉಪದೇಶದಿಂದ ಗಣಧರರು ಬರೆದ ದ್ವಾದಶಾಂಗ ಸೂತ್ರಗಳು: ಇದರಲ್ಲಿ ನಾಲ್ಕು ವಿಭಾಗ: ತ್ರಿಷಷ್ಟಿಶಲಾಕಾಪುರುಷರ ಚರಿತ್ರೆಗಳನ್ನೊಳಗೊಂಡ ಮೊದಲ ವಿಭಾಗ [ಪ್ರಥಮಾನುಯೋಗ], ಮೂರುಲೋಕಗಳ ಪ್ರಮಾಣ ಮೊದಲಾದ ವಿವರಗಳಿರುವ ಎರಡನೆಯ ವಿಭಾಗ [ಕರಣಾನುಯೋಗ], ಜೈನಮುನಿಗಳೂ ಶ್ರಾವಕರೂ ಅನುಸರಿಸಬೇಕಾದ ಆಚಾರಗಳ ವಿವರವಿರುವ ಮೂರನೆಯ ವಿಭಾಗ [ಚರಣಾನುಯೋಗ] ಮತ್ತು ಜೀವಾದಿದ್ರವ್ಯಗಳ ವಿವರಣೆಯಿರುವ ನಾಲ್ಕನೆಯ ವಿಭಾಗ [ದ್ರವ್ಯಾನುಯೋಗ] (ಅನುಯೋಗಕುಸುಮಪಾದಪಂ ಅನೇಕನಯಲತಿಕ ಮಂಗಳಫಲಮಹೀಜಂ ಸದ್ವನಜವನಮೆಮಗೆ ವಿಶ್ರಮವನಮಕ್ಕತಿವಿಶ್ರುತ ಶ್ರುತಸ್ಕಂಧವನಂ: **ಆದಿಪು,** ೧. ೧೦)

ಶ್ರುತಿ – [ನಾ] ಕಿವಿ (ಶ್ರುತಿಸೌಖ್ಯಾವಹ ವಲ್ಲಕೀಕ್ವಣಿತದೊಳ್ ಕರ್ಪೂರಪಾಳೀವಿಮಿಶ್ರಿತ ತಾಂಬೂಳರಸೋತ್ಕಟ ಪ್ರಮದದೊಳ್: **ಆದಿಪು,** ೯. ೧೧೮)

ಶ್ರುತಿಸ್ಮೃತಿ – **[ನಾ]** ವೇದ ಮತ್ತು ಧರ್ಮಶಾಸ್ತ್ರ (ಧರ್ಮಪುತ್ರಂ ಧರ್ಮಶಾಸ್ತ್ರಂಗಳೊಳಂ ಶ್ರುತಿಸ್ಮೃತಿಗಳೊಳಂ ಪ್ರವೀಣನಾದಂ: **ಪಂಪಭಾ,** ೨. ೩೬ ವ)

ಶ್ರೇಢಿ – [ನಾ] ಶ್ರೇಣಿ, ನಾಡುಗಳ ಸಮೂಹ (ದಕ್ಷಿಣೋತ್ತರ ಶ್ರೇಢಿಗಳ್ಗೆ ರಾಜಧಾನಿಗಳಾಗಿರ್ದ ರಥನೂಪುರಚಕ್ರವಾಳ ಗಗನವಲ್ಲಭಾದಿಗಳಪ್ಪ ನೂಱೆಪತ್ತುಂ ಪೊಲ್ಗಳಂ: **ಆದಿಪು,** ೧. ೬೨ ವ)

ಶ್ರೇಢೀಬದ್ಧ – [ಜೈನ] ನರಕಬಿಲಗಳಲ್ಲಿ ಒಂದು ಬಗೆ (ಆ ಬಿಲಂಗಳುಂ ಇಂದ್ರಕ ಶ್ರೇಢೀಬದ್ಧ ಪ್ರಕೀರ್ಣಕಂಗಳೆಂದು ಮೂಱು ತೆಱನಕ್ಕುಂ: **ಆದಿಪು,** ೫. ೮೩ ವ)

ಶ್ರೇಣಕಾ[ಕೆ] – [ನಾ] ಗುಂಪು (ಬುಧಜನಪ್ರೀಣನಾಗ್ರೇಸರ ಗ್ರಾಮಣಿಯಾದಮ ದಾನಚಿಂತಾಮಣಿ ಗುಣಮಣಿ ಶ್ರೇಣಿಕಾಶ್ರೇಣಿಯಿಂದಂ: **ಆದಿಪು,** ೧೨. ೧೫)

ಶ್ರೇಣಿ – [ನಾ] ಸಾಲು, ಗುಂಪು (ವಾಜಿರಾಜಿಶ್ರವಣ ಚಮರಜಶ್ರೇಣಿ ಸಂವೀಜಿತ ಆಶಾಂಬರಭಾಗಂ: **ಆದಿಪು,** ೪. ೨೪)

ಶ್ರೇಯಸಃ – **[ಗು]** ಶುಭವನ್ನುಳ್ಳ (ವಾತ್ಯಾದುರ್ಧರಗಂಧಸಿಂಧುರ ಕಟಸ್ರೋತಃ ಸಮುದ್ಯತ್ ಮದವ್ರಾತೇಂದಿಂದಿರ ಚಂಡ ತಾಂಡವ ಕಲ ಸ್ವಾಭಾವಿಕಶ್ರೇಯಸಃ: **ಪಂಪಭಾ,** ೯. ೯೭)

ಶ್ರೇಯಾಂಸ – [ನಾ] [ಜೈನ] ಆದಿದೇವನಿಗೆ ಆಹಾರದಾನವಿತ್ತು ಅಕ್ಷಯತೃತೀಯೆಯ ಉದಯಕ್ಕೆ ಕಾರಣನಾದವನು (ಶ್ರೇಯಾಂಸಂ ನಿಜಾಗ್ರಜನಪ್ಪ ಸೋಮಪ್ರಭಂ ಬೆರಸು ಕನಕಕಳಶದೊಳ್ ತೀವಿದಮೃತರಸಸಮಾನ ಧವಳೇಕ್ಷುರಸಧಾರೆ ಪುಣ್ಯಧಾರೆಯಂತೆ ಸೊಗಯಿಸುವಿನಂ ಸಮುತ್ತಾನೀಕೃತವಿಶಾಲ ಪಾಣಿಪಾತ್ರದೊಳೆಱೆವುದುಂ: **ಆದಿಪು,** ೧೦. ೧ ವ)

ಶ್ರೇಯೋಗೃಹ – [ನಾ] ಶ್ರೇಯಾಂಸನ ಮನೆ ಮತ್ತು ಶ್ರೇಯಸ್ಸಿನ ಆಗರ (ಪೆರ್ಚಿದ ತನ್ನುತ್ತಮಭಕ್ತಿಯಿಂ ನಿಲಿಪುದುಂ ಶ್ರೇಯೋಗೃಹದ್ವಾರದೊಳ್ ನಿಧಿ ನಿಲ್ವಂತಿರೆ ನಿಂದಂ ಊರ್ಜಿತಗುಣಂ: **ಆದಿಪು,** ೯. ೧೩೩)

ಶ್ರೋತ್ರ – **[ನಾ]** ಕಿವಿ (ಶ್ರೋತ್ರಮಂ ಮುಟ್ಟಿದುದು ಎತ್ತಂ ರಾಜರಾಜಪ್ರಬಳಬಲಪಯೋರಾಶಿ ಗಂಭೀರನಾದಂ: **ಆದಿಪು,** ೧೪. ೯೩)

ಶ್ರೌತ – [ಗು] ಶ್ರಾವ್ಯ, ಕೇಳಲ್ಪಡುವ, ಶ್ರೇಷ್ಠ (ಶ್ರೌತಮಿದು ತನಗೆ ಗಂಗಾಸ್ರೋತದವೊಲ್ ಅಳುಂಬಮಾಗಿ ಗೆಡೆಗೊಳ್ಳದೆ ವಿಖ್ಯಾತ ಕವಿವೃಷಭ ವಂಶೋದ್ಭೂತಮೆನಲ್ ಬರಿಸದೊಳ್ ಸಮೆವಿನೆಗಂ: **ಪಂಪಭಾ,** ೧೪. ೫೨)

ಶ್ಲಕ್ಷ್ಣ – [ಗು] ನುಣುಪಾದ (ಅಪ್ರಿಣಾಕ ಭಾವಿಳಶ್ಲಿಸ್ಥಿತಚಳನುಂ ಶ್ಲಕ್ಷ್ಣ ಸ್ನಿಗ್ಧ ಮೃದು ಬಹಳಚ್ಛವಿಯುಂ ಬಂಧುಜೀವ ಶಾಕ ಪುಷ್ಪ ಸಪದ್ಮಮಹಾರಜಶಂಖಾಸತಳವೆಂಬ ಸಪ್ತದ್ವಾಸ್ಥಿತನುಂ: **ಆದಿಪು,** ೧೨. ೫೬ ವ)

ಶ್ವದಂಷ್ಟ್ರ – [ನಾ] ನಾಯಿಯ ಹಲ್ಲು (ಶ್ವದಂಷ್ಟ್ರಾರ್ಗಳೋಪರಿಮ ಸಂಭನ್ನಂಗಳುಂ ಅಪ್ಪ ಯಂತ್ರಾಯುಧಾವರಣೋಪಕರಣ ಪರಿಣತಂಗಳಾಗಿರ್ದ ದುರ್ಗಂಗಳೊಳ್: **ಆದಿಪು,** ೧೩. ೫೭ ವ)

ಶ್ವಭ್ರ – [ನಾ] ನರಕ (ಧರ್ಮಕೃತಿದ್ರೋಹನುಂ ಖಳನುಂ ಕಳ್ಕುಣಿಯುಂ ಘಳುಮ್ಮನಿಟೆಗುಂ ಶ್ವಭ್ರಾಂತಮಂ ತಾಪಿನಂ: **ಆದಿಪು,** ೫. ೮೧)

ಶ್ವಯು – [ನಾ] ಹೆಬ್ಬಾವು (ಶ್ವಯುವಾಗಿ ಪುಟ್ಟಿ ಸುಟೆಗುಂ ಮುಂ ಬಯ್ತ ಭಂಡಾರದೊಳ್: **ಆದಿಪು,** ೨. ೧೫)

ಶ್ವಸನ – **[ನಾ]** ಮಾರುತ, ಗಾಳಿ (ಯಮುನಾನದೀತರಂಗಮಂ ಅಮುಂಕಿ ವನಲತೆಯ ಮನೆಗಳಂ ಸೋಂಕಿ ವನಭ್ರಮಣ ಪರಿಶ್ರಮಮಂ ಮುನ್ನಮೆ ಕಳೆದುದು ಬಂದದೊಂದು ಮಂದಶ್ವಸನಂ: **ಪಂಪಭಾ,** ೫. ೫೩)

ಶ್ವೇತಕೃಷ್ಣಕಾರಕ – [ನಾ] ಬಿಳಿಯಾದುದನ್ನು ಕರಿಯದಾಗಿ ಮಾಡುವವನು, ವಂಚಕ (ಈತಂ ಅಜಮುಖವ್ಯಾಘ್ರಂ ಶ್ವೇತಕೃಷ್ಣಕಾರಕಂ ಈತನ ಮಾತು ಮಾತಲ್ಲ: **ಪಂಪಭಾ,** ೫. ೭೨ ವ)

ಶ್ವೇತಾತಪತ್ರ – **[ನಾ]** [ಶ್ವೇತ+ಆತಪತ್ರ] ಬೆಳ್ಗೊಡೆ (ಇದಱೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ ಪುದಿದಟ್ಟಾಡಿತ್ತು: **ಪಂಪಭಾ,** ೧೨. ೧೫೬)

ಶ್ವೇತಾಶ್ವ – ಬಿಳಿಯ ಕುದುರೆ (ದಿವ್ಯಸಂಭವಂಗಳಪ್ಪ ಶ್ವೇತಾಶ್ವಂಗಳೊಳ್ ಪೂಡಿದ ದಿವ್ಯರಥಮುಮಂ ದಧೀಚಿಗಂಡಸ್ಥಮಪ್ಪ ಗಾಂಡೀವಮೆಂಬ ಬಿಲ್ಲುಮಂ .. .. ಕೆಯ್ಕೊಂಡು: **ಪಂಪಭಾ,** ೫. ೭೭ ವ)

ಷ

ಷಂಡ – [ನಾ] ಗುಂಪು (ಪಲವುಂ ಭಂಗಿಯಿಂ ಕೂಡೆ ನೀಲೋತ್ಪಲಷಂಡಂ ಪದ್ಮಷಂಡಂ ಲಲಿತವನಲತಾ ಷಂಡಮುಂ ತಂಡತಂಡಂಗಳಿನೀ ಬಂದಪ್ಪುದು: **ಆದಿಪು,** ೧೧. ೧೩೯)

ಷಟ್ಕ – [ನಾ] ಆರರ ಗುಂಪು (ಮತ್ತಂ ಅಭ್ಯಂತರತಪಷ್ಷಟ್ಕದೊಳಂ ಪ್ರಾಯಶ್ಚಿತ್ತ ವಿನಯ ವೈಯಾಪತ್ಯ ಸ್ವಾಧ್ಯಾಯ ಧ್ಯಾನ ವ್ಯುತ್ಸರ್ಗಂಗಳೊಳಂ ಕೈಕೊಂಡು: **ಆದಿಪು,** ೬. ೩೩ ವ)

ಷಟ್ಕರ್ಮ – [ನಾ] ವೈದಿಕ ಬ್ರಾಹ್ಮಣನ ಆರು ಕೆಲಸಗಳು: ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ; (ಭವಿಷ್ಯದ್ದ್ವಿಜನ್ಮವರ್ಣಕ್ಕೆ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ: **ಆದಿಪು,** ೪. ೭೬ ವ); [ನಾ] ಪ್ರಜೆಗಳು ಅನುಸರಿಸಬಹುದಾದ ಆರು ವರ್ಗಗಳ ವೃತ್ತಿಗಳು: ಅಸಿ, ಮಷಿ, ಕೃಷಿ, ವಾಣಿಜ್ಯ, ವಿದ್ಯೆ ಮತ್ತು ಶಿಲ್ಪ (ಪೂರ್ವಾಪರವಿದೇಹಸ್ಥಿತಿ ಸಮಾನಮಾಗೆ ಷಟ್ಕರ್ಮಂಗಳುಮಂ ವರ್ಣಾಶ್ರಮವಿಭಾಗಂಗಳುಮಂ ಗ್ರಾಮಗೃಹಾದಿಭೇದಂಗಳುಮಂ: **ಆದಿಪು,** ೮. ೬೨ ವ); [ನಾ] [ಜೈನ] ಹೊಸತಾಗಿ ತಾನು ಸೃಷ್ಟಿಸಿದ ಬ್ರಾಹ್ಮಣರಿಗೆ ಭರತನು ನಿಗದಿಗೊಳಿಸಿದ ಆರು ಕರ್ಮಗಳು: ಪೂಜೆ, ವಾರ್ತೆ, ದತ್ತಿ, ಸ್ವಾಧ್ಯಾಯ, ಸಂಯಮ, ತಪಸ್ಸುಗಳು (ಆರ್ಯ ಷಟ್ಕರ್ಮಂಗಳಂ ನಿಮಗಿವು ಕುಲಾಚಾರಂಗಳೆಂದು ಅಱಿಯೆ ಪೇೞ್ದು ಕೈಕೊಳಿಸಿ: **ಆದಿಪು,** ೧೫. ೧೩ ವ)

ಷಟ್ಖಂಡ – [ನಾ] [ಜೈನ] ಆರು ಭೂಭಾಗಗಳು, ಹಿಮವತ್ಪರ್ವತದ ದಕ್ಷಿಣದಲ್ಲಿ ಲವಣಸಮುದ್ರದವರೆಗೂ ವ್ಯಾಪಿಸಿರುವುದು ಭರತಕ್ಷೇತ್ರ. ಇದರ ನಡುವೆ ವಿಜಯಾರ್ಧಪರ್ವತದ ಪೂರ್ವಪಶ್ಚಿಮವಾಗಿ ಹಬ್ಬಿ ಈ ಕ್ಷೇತ್ರವನ್ನು ಉತ್ತರ ಭರತ, ದಕ್ಷಿಣ ಭರತ ಎಂದು ಎರಡಾಗಿ ಒಡೆಯುತ್ತದೆ. ಹಿಮವತ್ಪರ್ವತದಲ್ಲಿ ಹುಟ್ಟಿದ ಮಹಾಸಿಂಧು ಮಹಾಗಂಗಾ ಎಂಬೆರಡು ನದಿಗಳು ಉತ್ತರದಿಂದ ದಕ್ಷಿಣಕ್ಕೆ ಹರಿದು ಲವಣ ಸಮುದ್ರವನ್ನು ಸೇರುತ್ತವೆ, ವಿಜಯಾರ್ಧಪರ್ವತ ಮತ್ತು ಗಂಗಾಸಿಂಧೂ ನದಿಗಳಿಂದ ಭರತಕ್ಷೇತ್ರ ಆರು ಖಂಡಗಳಾಗಿ ಭಾಗವಾಗಿದೆ. ಉತ್ತರ ಭರತಕ್ಷೇತ್ರದ ಮೂರು ಖಂಡಗಳ ನಡುವೆ ಆರ್ಯಖಂಡವಿವೆ, ಈ ಎರಡೂ ಕ್ಷೇತ್ರದ ಖಂಡಗಳು ಕೂಡಿ ಷಟ್ಖಂಡವೆನಿಸಿವೆ (ಅನ್ನೆಗಮಿತ್ತ ಷಟ್ಖಂಡಮಂಡಿತ ಧರಾಮಂಡಳಮಂ ಬಾಯ್ಕೇಳಿಸಿ: **ಆದಿಪು,** ೩. ೪೫ ವ)

ಷಟ್ಚರಣ – [ನಾ] ದುಂಬಿ (ದಾನಪ್ರಮೋದ ವಾಚಾಳಷಟ್ಚರಣ ಚಾರಣ ಗಣೋಚ್ಚಾರ ಝುಂಕಾರಜಯಾಶೀರ್ಘೋಷಮುಮಪ್ಪ ವಿಜಯಗಜದ ಬೆಂಗೆ ವಂದು: **ಆದಿಪು,** ೧೪. ೯೦ ವ)

ಷಟ್ಛತ – [ನಾ] [ಷಟ್+ಶತ] ಆರುನೂರು (ಅನೇಕವರ್ಷಸಹಸ್ರಂ ಸಲೆ ಷಟ್ಛತಕಾಂಡಾಸನೋತ್ಸೇಧಶರೀರನುಂ: **ಆದಿಪು,** ೬. ೬೦ ವ)

ಷಟ್ಪದ – [ನಾ] ದುಂಬಿ (ಚೂತಲತಾ ಲತಾಂತ ಮಕರಂದಾಮೋದ ಸಂಸಕ್ತ ಷಟ್ಪದದೊಳ್ ತಳ್ತಿರೆ: **ಆದಿಪು,** ೯. ೧೧೬)

ಷಡಂಗಬಲ – [ನಾ] ರಥ, ಆನೆ, ತುರಗ, ಪದಾತಿ, ದಿವಿಜ, ಖೇಚರ ಎಂಬ ಆರು ಬಗೆಯ ಸೇನೆಗಳು (ಭುವನತಳಂ ನಡೆವ ಚತುರ್ಬಲಕೆ ದಿವಿಜಖೇಚರಸೈನ್ಯಕ್ಕೆಡೆ ನೆಱೆಯದು ಗಗನಮುಮೆನೆ ಷಡಂಗಬಲಮಿಂತು ತಳರೆ ತಳರ್ದಂ ಭರತಂ: **ಆದಿಪು,** ೧೧. ೩೪)

ಷಡ್ಗುಣ – [ನಾ] ರಾಜನೀತಿಯ ಆರು ಗುಣಗಳು: ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ ಮತ್ತು ದ್ವೈಧೀಭಾವ, (ಇದು ರಾಜವಿದ್ಯೆಯೊಳಗಾವುದು ವಿದ್ಯೆಯೊ ಷಡ್ಗುಣಂಗಳೊಳಾವ ಗುಣಂ: **ಆದಿಪು,** ೯. ೯೧)

ಷಡ್ಭಾಗ – [ನಾ] ರಾಜನಿಗೆ ಸಲ್ಲಬೇಕಾದ ಆದಾಯದ ಆರನೇ ಒಂದು ಭಾಗ (ಷಡ್ಭಾಗಮಂ ಕೊಂಡು ತಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ: **ಆದಿಪು,** ೧. ೫೧)

ಷಡ್ವರ್ಗಸಿದ್ಧಿ – [ನಾ] ಜ್ಯೋತಿಷ್ಯದಲ್ಲಿ ಲಗ್ನ, ಹೋರೆ, ದ್ರೇಕ್ಕಾಣ, ನವಾಂಶ, ದ್ವಾದಶಾಂಶ ಮತ್ತು ತ್ರಿಶಾಂಶ ಇವುಗಳು (ಗ್ರಹಂಗಳೆಲ್ಲಂ ತಂತಮ್ಮ ಉಚ್ಚಸ್ಥಾನಂಗಳೊಳಿರ್ದು ಷಡ್ವರ್ಗಸಿದ್ಧಿಯಂ ಉಂಟುಮಾಡೆ ಶುಭಲಗ್ನೋದಯದೊಳ್: **ಪಂಪಭಾ,** ೧. ೧೪೪ ವ)

ಷಡ್ವಿಧಸೇನಾನಾಯಕ – [ನಾ] ರಥ ಆನೆ ತುರಗ ಪದಾತಿ ದಿವಿಜ ಖೇಚರ ಎಂಬ ಆರು ಸೈನ್ಯಗಳ ಸೇನಾನಿಗಳು (ಮ್ಲೇಚ್ಛರಾಜ ಸೇನಾಪತಿಚ್ಛದ ಮದಾವಲೇಪಪರಿಲೋಪ ವಿಳಾಸಿಯುಂ ಷಡ್ವಿಧಸೇನಾನಾಯಕ ಪರಾಯಣನುಮಪ್ಪ ಅಯೋಧ್ಯನೆಂಬ ಸೇನಾನಿರತ್ನಮುಂ: **ಆದಿಪು,** ೧೧. ೩ ವ)

ಷಣ್ಣವತಿ – [ನಾ] ತೊಂಬತ್ತಾರು (ಚೆಲ್ವೆಸೆದುದು ಷಣ್ಣವತಿಸಹಸ್ರ ಅಂತಃಪುರಮವಯವದೊಳೆ ಭರತಚಕ್ರವರ್ತಿಯ ಕೆಲದೊಳ್: **ಆದಿಪು,** ೧೧. ೩೯)

ಷಷ್ಟಿಕಾವ್ರೀಹಿ – [ನಾ] ಅರವತ್ತು ದಿನಗಳಲ್ಲಿ ಕಟಾವಿಗೆ ಬರುವ ಬತ್ತ (ಕಳಮ ಷಷ್ಟಿಕಾವ್ರೀಹಿ ಯವ ಯಾವನಾಳ .. .. ಧಾನ್ಯಕಾದಿ ವಿವಿಧಧಾನ್ಯಭೇದಂಗಳುಂ: **ಆದಿಪು,** ೬. ೭೨ ವ)

ಷಷ್ಟಿಸಹಸ್ರ – [ನಾ] ಅರುವತ್ತು ಸಾವಿರ (ಅಖಿಳಷಟ್ಖಂಡಭೂಭಾಗಮಂ ಷಷ್ಟಿಸಹಸ್ರಾಬ್ದಂಗಳಿಂ ದಿಗ್ವಿಜಯದೊಳೊಗೆದ ಆನಂದಭೇರೀ ರವಂ: **ಆದಿಪು,** ೧೪. ೧೪೮)

ಷೋಡಶ – [ನಾ] ಹದಿನಾರು (ಇಂತಿರ್ವರುಂ ಪೂಣ್ದು ಅಲಂಪಿನೊಳುಂಡರ್ ಕಡೆಯೆಯ್ದೆ ಷೋಡಶ ನದೀನಾಥೋಪಮ ಆಯುಷ್ಯಮಂ: **ಆದಿಪು,** ೩. ೭೬)

ಷೋಡಶ ಋತ್ವಿಜರ್ಕಳ್ – [ನಾ] ಯಜ್ಞಕಾರ್ಯದಲ್ಲಿ ವಿವಿಧ ಪಾತ್ರಗಳನ್ನು ವಹಿಸುವ ಹದಿನಾರು ಮಂದಿ (ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ ಉದ್ಗಾತೃ ನೇತೃ ಹೋತೃ ಜಮದಗ್ನಿ ಆದಿಗಳಪ್ಪ ಷೋಡಶರ್ ಋತ್ವಿಜರ್ಕಳಿಂ: **ಪಂಪಭಾ,** ೬. ೩೩ ವ) [**ಹೋತೃಗಣ**: ಹೋತೃ, ಮೈತ್ರಾವರುಣ, ಅಚ್ಛಾವಾಹ ಮತ್ತು ಗ್ರಾವಸ್ತುತ್; **ಅಧ್ವರ್ಯುಗಣ**: ಅಧ್ವರ್ಯು, ಪ್ರತಿಪಸ್ಥಾತಾ, ನೇಷ್ಟಾ ಮತ್ತು ಉನ್ನೇತಾ; **ಉದ್ಗಾತೃಗಣ**: ಉದ್ಗಾತೃ, ಪ್ರಸ್ತೋತೃ, ಪ್ರತಿಹರ್ತೃ ಮತ್ತು ಸುಬ್ರಹ್ಮಣ್ಯ; **ಬ್ರಹ್ಮಗಣ**: ಬ್ರಹ್ಮ, ಬ್ರಾಹ್ಮಣಾಚ್ಛಂಸಿ, ಅಗ್ನೀಧ್ರ ಮತ್ತು ಪೋತೃ]

ಷೋಡಶಕ್ರಿಯೆ – [ನಾ] ಷೋಡಶಸಂಸ್ಕಾರಗಳು (ಅಂತವರ್ಗೆ ಜಾತಕರ್ಮ ನಾಮಕರಣಾನ್ನಪ್ರಾಶನಚೌಲೋಪನಯನಾದಿ ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ: **ಪಂಪಭಾ,** ೧, ೮೭, ವ) [ಗರ್ಭಾದಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ, ಪ್ರಾಜಾಪತ್ಯ, ಸಾಮ್ಯ, ಆಗ್ನೇಯ, ವೈಶ್ವದೇವ, ಗೋದಾನ, ಸಮಾವರ್ತನ, ವಿವಾಹ, ಅಂತ್ಯೇಷ್ಟಿ]

ಷೋಡಶತೀರ್ಥಕರಭಾವನೆ – [ನಾ] [ಜೈನ] ತೀರ್ಥಂಕರನಾಗಲು ಕಾರಣವಾಗುವ ಹದಿನಾರು ಮನೋವೃತ್ತಿಗಳು (ಪರಮಜಿನಪತಿ ಪರಿಭಾಷಿತಮಪ್ಪ ಸಕಳಶ್ರಾವಕವ್ರತಂಗಳಂ ಷೋಡಶ ತೀರ್ಥಕರಭಾವನೆಗಳಂ ಚತುಸ್ತ್ರಿಂಶತ್ ಅತಿಶಯಂಗಳುಮಂ ಅಷ್ಟಮಹಾ ಪ್ರಾತಿಹಾರ್ಯಂಗಳುಮಂ: **ಆದಿಪು**, ೩. ೪೦ ವ), ನೋಡಿ, **'ಷೋಡಶಭಾವನೆ'**

ಷೋಡಶಭಾವನೆ – [ನಾ] [ಜೈನ] ತೀರ್ಥಂಕರನಾಗಲು ಕಾರಣವಾಗುವ ದರ್ಶನವಿಶುದ್ಧಿ, ವಿನಯಸಂಪನ್ನತೆ, ಅನತಿಚಾರ, ಅಭೀಕ್ಷ್ಣಜ್ಞಾನೋಪಯೋಗ, ಸಂವೇಗ, ಶಕ್ತಿತಸ್ತ್ಯಾಗ, ಶಕ್ತಿತಸ್ತಪ, ಸಾಧುಸಮಾಧಿ, ವೈಯಾವೃತ್ಯ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಉಪಾಧ್ಯಾಯಭಕ್ತಿ, ಪ್ರವಚನಭಕ್ತಿ, ಅವಶ್ಯಕಾಪರಿಹಾರಿಣಿ, ಮಾರ್ಗಪ್ರಭಾವನೆ, ಪ್ರವಚನವತ್ಸಲತ್ವ – ಎಂಬ ಹದಿನಾರು ಮನೋವೃತ್ತಿಗಳು (ತ್ರೈಲೋಕ್ಯ ಕ್ಷೋಭಕಾರಣ ತೀರ್ಥಕರಪುಣ್ಯಹೇತುಗಳಪ್ಪ ಷೋಡಶ ಭಾವನೆಗಳಂ ಭಾವಿಸಿ: **ಆದಿಪು**, ೬. ೩೩ ವ)

ಷೋಡಶರಾಜ – [ನಾ] ಪ್ರಖ್ಯಾತರಾದ ಹದಿನಾರು ಮಂದಿ ಮಹಾರಾಜರು (ಎಂದು ಷೋಢಶರಾಜೋಪಾಖ್ಯಾನಮಂ ಅಜಪಿ ಧರ್ಮಪುತ್ರನ ಶೋಕಮಂ ಆಜಿ ನುಡಿದು: **ಪಂಪಭಾ**, ೧೧. ೧೦೮ ವ) [ಈ ಮಹಾರಾಜರ ಪಟ್ಟಿಗೆ ನೋಡಿ, **'ಷೋಡಶಾವನಿಪ'**]

ಷೋಡಶವರ್ಷ – [ನಾ] ಹದಿನಾರು ವರ್ಷ (ಈಶ್ವರಕಲ್ಪಿತದಿಂ ರಾಕ್ಷಸರ್ಗೆ ಸದ್ಯೋಗರ್ಭಂ ಸದ್ಯಃಪ್ರಸೂತಿಯುಂ ಸದ್ಯೋಯೌವನಮುಮುಳ್ಳ ಕಾರಣದಿಂದೆ ಆಗಳೆ ಷೋಡಶವರ್ಷದ ಕುಮಾರನಾಗಿರೆ: **ಪಂಪಭಾ**, ೩. ೨೦ ವ)

ಷೋಡಶಸಹಸ್ರ – [ನಾ] ಹದಿನಾರು ಸಾವಿರ (ಕರಂ ಪರಕೆಗಳಂ ತಳ್ವೊಯ್ಯೆ ಸೇಸಿಕ್ಕಿತು ಇಂದ್ರತನೂಜಂಗಿದಿರ್ವಂದು ಷೋಡಶಸಹಸ್ರಾಂತಃಪುರಂ ಕೃಷ್ಣನಾ: **ಪಂಪಭಾ**, ೪. ೩೯)

ಷೋಡಶಾವನಿಪ – [ನಾ] ಕೀರ್ತಿಶಾಲಿಗಳಾದ ಮರುತ್ರ, ಸುಹೋತ್ರ, ಅಂಗ, ಶಿಬಿ, ದೌಷ್ಯಂತಿ ಭರತ, ದಾಶರಥಿರಾಮ, ಭಗೀರಥ, ದಿಲೀಪ, ಮಾಂಧಾತ, ಯಯಾತಿ, ಅಂಬರೀಷ, ಶಶಬಿಂದು, ಗಯ, ರಂತಿದೇವ, ಸಗರ, ಪೃಥು ಹದಿನಾರು ಮಂದಿ ರಾಜರು (ಸತ್ಕವಿಗಳ ಷೋಡಶಾವನಿಪರೋಳಿಯೊಳಂ ಕವಿತಾ ಗುಣಾರ್ಣವಂ ಕವಿತೆಯೊಳಗ್ಗಳಂ ಗುಣದೊಳಗ್ಗಳಂ ಎಲ್ಲಿಯುಮೀ ಗುಣಾರ್ಣವಂ: **ಪಂಪಭಾ,** ೧. ೧೦)

ಸ

ಸಂಕಟ – [ನಾ] [ಸಂಕಷ್ಟ] ಇಕ್ಕಟ್ಟಾದ, ದುರ್ಗಮವಾದ (ಜಾನುಭಂಜನೀ ಶೂಲಪ್ರಕರ ಪರಿವೃತಂಗಳುಂ ಕೂಪಕೂಟಾವಪಾತ ಲೋಹ ಕಂಟಕ ಸಂಕಟಂಗಳುಂ .. .. ಅಪ್ಪ ದುರ್ಗಂಗಳೊಳ್: **ಆದಿಪು,** ೧೩. ೫೭ ವ); [ನಾ] ವ್ಯಥೆ (ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ ಮಿಡಿವ ಬಹುಪ್ರಕಾರಸಂಕಟಮೊಪ್ಪಿದುದಾ ಪ್ರಯಾಣದೊಳ್: **ಆದಿಪು,** ೪. ೫೭); ತೊಂದರೆ (ಒರ್ವರಂ ಒರ್ವರ್ ಎಚ್ಚು ನಿಜಪೀಠಾಂಭೋಜದಿಂ ಬ್ರಹ್ಮನುಚ್ಚಳಿಪನ್ನಂ ಪಿರಿದೊಂದು ಸಂಕಟಮನೀ ತ್ರೈಲೋಕ್ಯದೊಳ್ ಮಾಡಿದರ್: **ಪಂಪಭಾ**, ೧. ೭೯)

ಸಂಕರ – [ನಾ] ಮಿಶ್ರಣ (ಎರಟ್ಟಿಡಿಯ ಪೂಮರದಿಂ ಕಟಿವೂಗಳತ್ತಮಿತ್ತ ಕವಿದಲ್ಲಿ ಮೆಲ್ಲನುಗೆ ತೆಂಕುವ ಪೂವಿನ ಸಂಕರಂಗಳಂ: **ಆದಿಪು**, ೧. ೬೧); [ನಾ] ಶಂಕರ, ಶಿವ (ಅಣ್ಣನೊಂದು ಮಾತಂ ಅಣಂ ಮೀಱದೆ ನಿಂದು ಸಂಕರನ ನೀನಾರಾಧಿಸು ಎಂದು ಇಂತಿದಂ ಮುನಿ ಪರಾಶರಂ ಒಲ್ದು ಪೇೞ್: **ಪಂಪಭಾ**, ೮. ೫)

ಸಂಕರ್ಷಣ – [ನಾ] ಬಲರಾಮ (ಎಂಬುದುಂ ಸಂಕರ್ಷಣಂ ಆತನ ಮನದ ಉತ್ಕರ್ಷತೆಯನಱಿದು ಪೆಱತಂ ಇನ್ನೆನಗೆ ನುಡಿಯಲೆಡೆಯಿಲ್ಲ: **ಪಂಪಭಾ**, ೧೩. ೯೦ ವ)

ಸಂಕಲೆ – [ನಾ] [ಶೃಂಖಲಾ] ಸಂಕೋಲೆ (ಓಪನಂ ಮಿಡುಕಲೀಯದೆ ಕಾಲ್ವಿಡಿದಟ್ಟು ತೋರ ಕಣ್ಬನಿಗಳನಿಕ್ಕಿದಳ್ ತರಳಲೋಚನೆ ಸಂಕಲೆಯಿಕ್ಕಿದಂತೆವೋಲ್: **ಪಂಪಭಾ**, ೪. ೯೭)

ಸಂಕಲ್ಪ – [ಗು] ಕಲ್ಪಿಸಿಕೊಂಡ, ಕಲ್ಪನೆಯ (ಎಂದು ತನ್ನೊಳೆ ಬಗೆದು ಸಂಕಲ್ಪಸಮಾಗಮಸುಖಮನನುಭವಿಸಿ: **ಆದಿಪು,** ೪. ೧೪ ವ); [ನಾ] ವಿದ್ಯೆ [ಶರಕಲ್ಪ] (ಶರಸಂಧಾನ ಆಕರ್ಷಣ ಹರಣಾದಿ ವಿಶೇಷವಿವಿಧಸಂಕಲ್ಪಕಳಾಪರಿಣತಿಯಂ ಮೆಱೆದುದು: **ಪಂಪಭಾ**, ೧೨. ೧೮೬)

ಸಂಕಾಶ – [ನಾ] ಹೋಲಿಕೆ, ಸದೃಶ (ಮತ್ತಮದೊಂದಿನಿಸು ಬೇಗದಿಂ ಮೃದುಮೃಣಾಳ ಸಂಕಾಶಮಾಯ್ತು: **ಆದಿಪು,** ೧೨. ೭); [ನಾ] ಸಮಾನವಾದ (ಧವಳಹಯಂ ಧವಳರಥಂ ಧವಳ ಉಷ್ಣೀಷಂ ಶಶಾಂಕಸಂಕಾಶ ಯಶೋಧವಳಿತ ಭುವನಂ ತಾಗಿದಂ ಅವಯವದಿಂ ಬಂದು ಧರ್ಮತನಯನ ಬಲದೊಳ್: **ಪಂಪಭಾ,** ೧೧. ೩೯)

ಸಂಕೀರ್ಣ – [ಗು] ತುಂಬಿಕೊಂಡ (ಅನೇಕ ಕರಿ ತುರಗ ನರ ಕಳೇವರ ಸಂಕೀರ್ಣಮುಂ ಉಭಯಪಕ್ಷಸ್ಥಿತ ಉಭಯಕುಲಶುದ್ಧ ನೃಪತಿಮಣಿಮಕುಟಮರೀಚಿ ಮೇಚಕಿತಮುಂ: **ಪಂಪಭಾ**, ೧೩. ೫೫ ವ)

ಸಂಕೀರ್ಣಂಗಳಾಗು – [ಕ್ರಿ] ದಟ್ಟವಾಗು, ಗಾಢವಾಗು (ಆದ ವಿನೋದಂಗಳ್ ಅನಂಗರಾಗರಸ ಸಂಕೀರ್ಣಂಗಳಾದಂದು ಆಱುವ ಪಾಂಗಾವುದು: **ಆದಿಪು**, ೧೨. ೨೧)

ಸಂಕು – [ನಾ] [ಶಂಕು] ಕಠಾರಿ (ನಡುವ ಸರಲ್ಗೆ ಮೆಯ್ಯೊಳ್ ಅಡಂಗುವ ಸಂಕುಗೆ ದಿಂಕುಗೊಳ್ವ ಕಕ್ಕಡೆಗೆ ಇದಿರ್ ಉರ್ಚುವ ಇಟ್ಟಿಗೆ .. .. **ಪಂಪಭಾ**, ೧೦. ೯೪)

ಸಂಕುಲ – [ನಾ] ಸಮೂಹ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟಿ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩)

ಸಂಕೆ – [ನಾ] [ಶಂಕೆ] ಅಂಜಿಕೆ (ಪದ್ಮರಾಗದ ಪೊಸಗೆಂಪಂ ಮಾಂಸಮೆಂದು ಮುಂ ಕರ್ದುಕಲ್ಕಾಟಸಿಯುಂ ಬಟೆಕದನುರಿಯೆಂಬ ಸಂಕೆಯಿಂ ಪೊರ್ದದಿರ್ದುವೀ ಮತ್ಸ್ಯಂಗಳ್: **ಆದಿಪು,** ೧೨. ೧೨೨)

ಸಂಕೆಯಂ ಕಿಡಿಸು – [ಕ್ರಿ] ಭಯವನ್ನು ಹೋಗಲಾಡಿಸು (ಎಂದು ಮುನ್ನಮೆ ಮುಟ್ಟಿ ನುಡಿಯದೆ ಪೊಱಪೊಱಗನೆ ಬಳಸಿ ಕನ್ನೆಯ ಸಂಕೆಯಂ ಕಿಡಿಸಿ: **ಪಂಪಭಾ,** ೪. ೬೩ ವ)

ಸಂಕೇತ – [ನಾ] ಗುರುತಿಸುವುದು, ಪ್ರಶಂಸಿಸುವುದು (ದುರ್ಲಲಿತ ಚರಿತ ಸಂಕೇತಗೋಷ್ಠೀನಿಕೇತಂ: **ಆದಿಪು,** ೧೪ ೧೯); ಸೂಚನೆ (ದುರ್ಯೋಧನನ ಸಂಕೇತದೊಳ್ ಮುನ್ನಮೆ ಸಮೆದಿರ್ದ ಪುರೋಚನಂ: **ಪಂಪಭಾ,** ೩. ೨ ವ)

ಸಂಕೇತನಿಕೇತನ – [ನಾ] ಸಂಕೇತಸ್ಥಾನ, ಕೂಡುವ ಜಾಗ (ನೀನೀ ವಿರಾಟನ ನಾಟಕಶಾಲೆಯನೆ ಸಂಕೇತನಿಕೇತನಂ ಮಾಡಿ ನೇಸರ್ಪಡಲೊಡಂ ಎನ್ನಿಂ ಮುನ್ನಮೆ ಪೋಗಿರ್ಪುದು: **ಪಂಪಭಾ,** ೮. ೭೨ ವ)

ಸಂಕ್ರಂದನನಂದನತನಯ – [ನಾ] ಇಂದ್ರನ ಮಗನಾದ ಅರ್ಜುನನ ಮಗ, ಅಭಿಮನ್ಯು (ಒಂದೆ ಸರಲಿಂದಮವನೆರ್ದೆಯಂ ದೊಕ್ಕನೆ ತಿಣ್ಣಮೆಚ್ಚು ಕೊಲಲೊಲ್ಲನೆ ಸಂಕ್ರಂದನನಂದನತನಯಂ ತಂದೆಯ ಪೂಣ್ಕೆಯನೆ ನೆನೆದು ದುಶ್ಶಾಸನನಂ: **ಪಂಪಭಾ,** ೧೧. ೯೬)

ಸಂಕ್ರಮ – [ನಾ] ಸೇತುವೆ (ಮಹಾನದಾವಗಾಹನಸಮಯ ನೌದ್ರೋಣಿ ಸಂಕ್ರಮಾದಿವಿಧಾನ ಪ್ರಾಗಲ್ಭ್ಯನುಂ ಅನುಸ್ಮರಣಮಾತ್ರ ನಿಷ್ಪಾದಿತ ಸಪ್ತತಳಾದಿ ಪ್ರಾಸಾದಪ್ರಕರಣನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ: **ಆದಿಪು,** ೧೧. ೩ ವ)

ಸಂಕ್ರಮಿಸು – [ಕ್ರಿ] ಸೇರು (ಯಶಸ್ವತಿ ಮಹಾದೇವಿಯ ಗರ್ಭಾವಾಸದೊಳ್ ಶುಕ್ತಿಪುಟೋದರವರ್ತಿಯಪ್ಪ ನಿರ್ಮಳೋದಕಬಿಂದುವಿನಂತೆ ಸಂಕ್ರಮಿಸೆ: **ಆದಿಪು,** ೮. ೨೯ ವ); [ಕ್ರಿ] ಸೇರಿಸು (ಕುಂತಿಯ ದಿವ್ಯಗರ್ಭೋದರಮೆಂಬ ಶುಕ್ತಿಪುಟೋದರದೊಳ್ ತನ್ನ ದಿವ್ಯಾಂಶಮೆಂಬ ಮುಕ್ತಾಫಲೋದಬಿಂದುವಂ ಇಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ: **ಪಂಪಭಾ,** ೧. ೧೩೯ ವ)

ಸಂಕ್ರಾಂತ – [ಗು] ಕೂಡಿದ (ಪರಸ್ಪರಸ್ಪರ್ಧಮಾನ ಪರಿಕ್ಷಿಪ್ತ ಮಲ್ಲಿಕಾಮುಕುಳ ಮುಕ್ತಾಫಳೋಪಶೋಭಿತದೊಳ್ ಇಂದ್ರನೀಲಮಣಿ ಕುಟ್ಟಿಮಸಂಕ್ರಾಂತ ಮೌಕ್ತಿಕದಾಮಾಭಿರಾಮದೊಳ್: **ಆದಿಪು,** ೮. ೬೭ ವ)

ಸಂಕ್ರುದ್ಧ – [ಗು] ಕೋಪೋದ್ರಿಕ್ತ (ಸಮದಾರಾತಿಮರಾಳನೀರದರವಂ ಸಂಕ್ರುದ್ಧವೈವಸ್ವತೋಪಮ ವಿದ್ವಿಷ್ಟಫಣೀಂದ್ರಚಂದ್ರಕಿರವಂ: **ಆದಿಪು,** ೧೧. ೧೦)

ಸಂಕ್ಲೇಶ – [ನಾ] ತೊಂದರೆ, ಕಷ್ಟ (ಅವರೋದುವಾವಾಸದೊಳ್ ಸಂಕ್ಲೇಶಮಾಗೆ ಸಾರಮೇಯಪೂತಿ ಕಳೇವರಮಂ ಇಕ್ಕಿದೊಡೆ: **ಆದಿಪು,** ೩. ೩೮ ವ)

ಸಂಗ – [ನಾ] ಸಮಾಗಮ (ಅಭಿನವಸಂಗಸಮುತ್ಪನ್ನ ಸಾಧ್ವಸ ರಸರಮಣೀಯತರ ಮುಗ್ಧವಧೂವದನವಿಲೋಕನ ಸುಖಮನನುಭವಿಸಿ: **ಆದಿಪು,** ೪. ೫೧ ವ); [ನಾ] ಸಂಪರ್ಕ (ಜಿನಸ್ನಪನಾಂಬು ತಜ್ಜಿನತನುಶ್ರೀಸಂಗದಿಂ ತಾನೆ ಪಾವನಮಾಯ್ತೇ: **ಆದಿಪು,** ೭. ೯೬)

ಸಂಗಡ – [ನಾ] ಸಹವಾಸ (ಎಮ್ಮೊಳಾದೀ ಸಂಗಡಮಂ ನೀಮೆ ಮನಂಗೊಂಡು ಎಮ್ಮ ಕಿಸುರ್ ಪಿಂಗುಗೆ ಅಗಲ್ವೆಡೆಯೊಳ್: **ಆದಿಪು,** ೧೧. ೧೩೩)

ಸಂಗಡಂಗೊಳ್ – [ಕ್ರಿ] ಜೊತೆಗೂಡು (ಪಚ್ಚೆಯ ಪಸಲೆಯ ಪಸುರನಸಕಳಿದು ನಿಮಿರ್ದ ನೆಲವಡಲಗೆಯ ಜಾಗಂಗಳುಮವನೆ ಸಂಗಡಂಗೊಂಡಿರ್ದ ಸತ್ತಿಸಂಗಡಂಗಳುಂ: **ಆದಿಪು,** ೮. ೧೫ ವ)

ಸಂಗಡಮಿಱು – [ನಾ] ಕೂಡಿ ಸಾಯುವುದು (ಪಡಲಿಟ್ಟಂತೆವೊಲಾಯ್ತು ಕೀಚಕಬಲಂ ಗಂಧರ್ವರಿಂದಿಂದಿರುಳ್ಗಡಿದೇಂ ಸಂಗಡಮಿಱುವಾಯ್ತೆ: **ಪಂಪಭಾ,** ೮. ೮೧)

ಸಂಗತ – [ನಾ] ಗುಂಪು (ಸಂಗತದಿಂ ಈಗಳ್ ಇಂತೀ ರಂಗಮೆ ರಣರಂಗಮಾಗೆ ಕಾದುವಂ ಅಳವಂ ಪೊಂಗದಿರ್ ಇದಿರ್ಚು ಅದೇಂ ಗಳ ರಂಗಂಬೊಕ್ಕಾಡುವಂತೆ ಪೆಂಡಿರ್ ಗಂಡರ್: **ಪಂಪಭಾ,** ೨. ೮೦); [ಗು] ಸೇರಿಕೊಂಡ (ಸಂಗತ ಧೂಮಾವಳಿಯಂ ಇಭಂಗಳೆ ಗೆತ್ತು ಒಳಱ್ ಪಾಯ್ದು ಪೊಗೆ ಪುಗೆ ಕಣ್ಣಂ: **ಪಂಪಭಾ,** ೫. ೯೨)

ಸಂಗತಂಗಳು – [ನಾ] ಹೊಂದಿಕೊಂಡವು (ಕನಕರಜತಮಯ ಅನೇಕಭಂಗಿಭೃಂಗಾರಂಗಳುಂ ಅವಱೊಳ್ ಸಂಗತಂಗಳಾಗಿ ಮಣಿವಿತಾನ ನಾನಾಮಯೂಖಂಗಳೊಳ್ ಸೆಣಸಿ ಬೆಳಗುವ: **ಆದಿಪು,** ೮. ೧೫ ವ); [ನಾ] ಆತ್ಮೀಯತೆಯಿಂದಿರುವವು (ವಿನಯಮುಂ ಎಱಕಮುಂ ಅಪ್ಪುದು ಸನಾಭಿಗಳ್ ಸಂಗತಂಗಳಪ್ಪೊಡೆ: **ಆದಿಪು,** ೧೪. ೭೬)

ಸಂಗತಿ – [ನಾ] ಕೂಡುವಿಕೆ (ನಿನ್ನಿರವಂ ತಳೆದೊಪ್ಪುತಿರ್ಪ ತತ್ಸರಸಿಗೆ ಮಾಡಲಿಂದು ನವಸಂಗತಿಯಂ ನಡೆ ಮನ್ಮನೋರಮೇ: **ರಾಜಶೇವಿ,** ೧೦. ೬೧); [ನಾ] ಸಹವಾಸ (ಆ ಜಡಧಿಸಂಗತಿಯಿಂ ಜಡಬುದ್ಧಿ ಬುದ್ಧಿಯಂ ತೊಲಗಿಸಿತಕ್ಕುಂ ಅಲ್ಲದೊಡೆ ನೀನಿನಿತಂ ನುಡಿವೈ ಪಳಾಳಮಂ: **ಪಂಪಭಾ,** ೯. ೪೪)

ಸಂಗತ್ವ – [ನಾ] ಗೆಳೆತನ, ಮೈತ್ರಿ (ಸ್ವಾಧೀನಸಂಗತ್ವಸಂತಾನಂ ಪುತ್ರ ಕಳತ್ರ ಮಿತ್ರಸಹಿತಂ ಸಾಕೇತಸಿಂಹಾಸನಾಸೀನಂ ಪಾಲಿಸಿದಂ ಮಹೀವಳಯಮಂ: **ಆದಿಪು,** ೮. ೭೭)

ಸಂಗರ – [ನಾ] ಯುದ್ಧ (ಆಜಿಗೆ ಬಂದೊಡ್ಡಲ್ಕೆ ಪೇೞ್ ಸಂಗರನಿಕಷದೊಳ್ ಎಮ್ಮಂದಮಂ ನೀನೆ ಕಾಣ್ಬೈ: **ಆದಿಪು,** ೧೪. ೮೨)

ಸಂಗರಾಜಿರ – [ನಾ] [ಸಂಗರ+ಅಜಿರ] ಸಂಗರರಂಗ (ಸಂಗರಾಜಿರದೊಳ್ ಕೌರವರೆಂಬ ಕಾಕಕುಳಕೆ ಎನ್ನ ಈ ಒಂದೆ ಬಿಲ್ ಸಾಲದೇ: **ಪಂಪಭಾ,** ೧೨. ೧೩೫)

ಸಂಗಳಿಸು – [ಕ್ರಿ] ಉಂಟಾಗು (ಭಂಗಿಗಳೊಳೆಮ್ಮೊಳಾದೀ ಸಂಗಡಮಂ ನೀಮೆ ಮನದೆಗೊಂಡೆಮ್ಮ ಕಿಸುರ್ ಪಿಂಗುಗೆ ಅಗಲ್ವೆಡೆಯೊಳ್ ಕೆಳೆ ಸಂಗಳಿಸುಗೆ ನಿಮಗಂ ಎಮಗಂ ಇಂ ಲತೆಗಳಿರಾ: **ಆದಿಪು**, ೧೧. ೧೩೩); [ಕ್ರಿ] ಉಂಟುಮಾಡು (ನಿನ್ನಂ ನುಂಗುವುದರ್ಕೆ ಇವರಂ ಎತ್ತವೇಟ್ಕುಮೇ ನೆರಮಂ ಸಂಗಳಿಸಲ್ವೇಟ್ಕುಮೇ ಮಾತಂಗವಿರೋಧಿಗೆ ಕುರಂಗಸಂಗರ ಧರೆಯೊಳ್: **ಪಂಪಭಾ**, ೩. ೧೭); [ಕ್ರಿ] ಸೇರು (ಕೀರ್ತಿ ಪುರಾಕೃತಪುಣ್ಯದಿಂದೆ ಸಂಗಳಿಸುವುದೆಂದೊಡೆ ಈ ಮಖದೊಳೇಂ ತೊದಳುಂಟೇ: **ಪಂಪಭಾ**, ೬. ೧೯)

ಸಂಗಿ – [ನಾ] ಕೂಡಿದುದು (ದಿಶಾಯುವತಿಕೇಳಿಕೀರ್ಣ ಪಟವಾಸಚೂರ್ಣಂ .. .. ವಿಶಾಲತರತುಂಗಸೌಧತಳಸಂಗಿ ಪೌರಾಂಗನಾ ವಶೀಕರಣಚೂರ್ಣಮಾದುದು ಬಳೌಘ ಧೂಳೀಚಯಂ: ಆ**ದಿಪು**, ೧೧. ೧೫)

ಸಂಗೀತಕ – [ನಾ] ಹಾಡುವಿಕೆ (ನುತಸುರವೃಂದಂ ಸಂಗೀತಕಕ್ಕೊಡರ್ಚಲೆವೇಟ್ಟಂ: **ಆದಿಪು**, ೯. ೧೩)

ಸಂಗೀತಕಸಂಗತ – [ಗು] ಹಾಡುವಿಕೆಯಿಂದ ಕೂಡಿದ (ಮೂವತ್ತಿರ್ಛಾಸಿರ ಸಂಗೀತಕಸಂಗತನಾಟ್ಯಶಾಲೆಗಳುಂ: **ಆದಿಪು**, ೧೫. ೩ ವ)

ಸಂಗೀತ ಕೀರ್ತಿ – [ನಾ] ಹಾಡಲ್ಪಟ್ಟ ಕೀರ್ತಿಯುಳ್ಳವನು (ಅತ್ರಿಯ ಪಿರಿಯ ಮಗಂ ಭುವನತ್ರಯ ಸಂಗೀತ ಕೀರ್ತಿ ಸೋಮಂ: **ಪಂಪಭಾ**, ೧. ೬೧)

ಸಂಗ್ರಹಾಕರ – [ನಾ] ಹತ್ತು ಗ್ರಾಮಗಳ ಗುಂಪಿನ ನಡುವಣ ದೊಡ್ಡ ಊರು (ಘೋಷಾಕರ ಸಂಗ್ರಹಾಕರ ಗೋವ್ರಜಂಗಳುಮಂ: **ಆದಿಪು**, ೮. ೬೩ ವ)

ಸಂಘಟ್ಟನ – [ನಾ] ಹೊಡೆತ (ಪ್ರಕುಪಿತ ಸೂತಹೂಂಕಾರ ಕಾತರಿತ ತರಳತರ ತುರಂಗ ದ್ರುತವೇಗಾಕೃಷ್ಟ ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ ಸಂಘಟ್ಟನ ಸಮುಚ್ಚಳಿತ ಪಾಂಸುಪಟಳ: **ಪಂಪಭಾ**, ೧೩. ೫೧ ವ)

ಸಂಘಾತ – [ನಾ] ಸಮೂಹ (ಎಚ್ಚೆಚ್ಚು ಸೂತ ಧ್ವಜ ಹಯ ರಥ ಸಂಘಾತಮಂ ನುರ್ಗೆ ಲೋಕಕ್ಕಂತಂ ಮಾಟ್ಪಂತೆ ಅಂತಕಂಬೋಲ್ ಗದೆವಿಡಿದು: **ಪಂಪಭಾ**, ೧೧. ೧೫೧)

ಸಂಚಕರ – [ನಾ] ಮುಂಗಡ ಹಣ (ತ್ರಿಕರಣಶುದ್ಧಿಯೊಳಾ ರಾಜಕುಮಾರಂ ಮಾರಮಥನನಂ ಸ್ತುತಿಯಿಸಿ ತತ್ಪ್ರಕಟಫಲಪ್ರಾಪ್ತಿಗೆ ಸಂಚಕರಂಗೊಳ್ವಂತೆ: **ಆದಿಪು**, ೪. ೨)

ಸಂಚಲ – [ನಾ] ಚಂಚಲ, ಅಸ್ಥಿರ (ತಮ್ಮೊಳಗ್ಗಲಿಸಿ ಪೊದಳ್ದು ಪರ್ವಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂಚಲಂ ಅದಱಿಂದಂ ಓಲಗಿಸಿ ಬಾಟ್ಪುದೆ ಕಷ್ಟಂ ಇಳಾಧಿನಾಥರಂ: **ಪಂಪಭಾ**, ೧೨. ೯೨)

ಸಂಚಲಿತ – [ನಾ] ಕಂಪಿಸುವ (ಜಳಧರಸಮಯನಿಶಾಸಂಚಲಿತ ವಿದ್ಯುತ್ ಪಿಂಗಳಾಕ್ಷಪಾತಂಗಳಿಂ ದೆಸೆಗಳಂ ನುಂಗುವಂತೆ ಮುಳಿದು ನೋಡಿ: **ಪಂಪಭಾ**, ೧೩. ೭೫ ವ)

ಸಂಚಳನ – [ನಾ] ಚಲನೆ, ಅಲುಗಾಟ (ಅಮರಿ ನರ್ತಿಸೆ ಚೆಲ್ವಂ ಪುದಿದು ಉರಚೆಲ್ಲಿಯೊಳೆಸೆದುದು ತದುರೋಜ ಸರೋಜಮುಕುಳ ಯುಗಸಂಚಳನಂ: **ಆದಿಪು**, ೭. ೧೯)

ಸಂಚಾರ್ಯಮಾಣ – [ಗು] ಲಿಸುವ (ಸಂಚಾರ್ಯಮಾಣ ಚಾರುಚಾಮರನಿಚಯ ವಿಚಳದವಿರಳಾನಿಳಂಗಳಿಂದಂ ವಿರಳವಿರಳಮಾದಾಗಳ್: **ಆದಿಪು**, ೧೪. ೯೫ ವ)

ಸಂಚಿತಶೌರ್ಯಧನ – [ನಾ] ಒಗ್ಗೂಡಿಸಿಕೊಂಡ ಶೌರ್ಯವೇ ಧನವಾಗುಳ್ಳವನು (ತೊಟಿಲ್ದು ನಾರ್ಗಳನುಡಲ್ ತರುತಿರ್ದೆಲೆ ಮಾಡಲಾರ್ತನಿಲ್ಲಾ ಆಗಳೆ ಕೋಪಮಂ ನಿನಗೆ ಸಂಚಿತಶೌರ್ಯಧನಂ ಧನಂಜಯಂ: **ಪಂಪಭಾ**, ೭. ೪೭)

ಸಂಚೂರ್ಣಿತ – [ಗು] ಪುಡಿಯಾದ, ಮುರಿದ (ವೃಕೋದರ ಗದಾಸಂಚೂರ್ಣಿತ ಊರುಯುಗಳನುಂ ಭೀಮಸೇನಚರಣ ಪ್ರಹರಣಗಳಿತ ಶೋಣಿತಾರ್ದ್ರ ಮೌಳಿಯುಂ ಆಗಿ: **ಪಂಪಭಾ**, ೧೩. ೧೦೨ ವ)

ಸಂಚೂರ್ಣಿತಮತಿ – [ನಾ] ಘಾತಕ ಬುದ್ಧಿ[ಯವನು] (ಆ ವಾಕ್ಯಮುಂ ವಿಜ್ಞಾನಮೆಂಬೆಯಪ್ಪೊಡೆ ಪೂರ್ವೋಕ್ತ ದೋಷಪಾಷಾಣ ಸಂಚೂರ್ಣಿತಮತಿಯೇ ಏನನೇತಱೊಳ್ ನಿಶ್ಚಯಿಸುವಯ್: **ಆದಿಪು**, ೨. ೧೦ ವ)

ಸಂಚೂಳಿಕಾ[ಕೆ] – [ನಾ] ಬೆಟ್ಟದ ತುದಿ (ಮಣಿಮಯಕಿರೀಟ ಉದಗ್ರವಿಸ್ಫುರಿತ ಸಂಚೂಳಿಕಾ ಕನಕಾಚಳಮನೆ ಪೋಲ್ತು: **ಆದಿಪು**, ೧೪. ೧೦೮ ವ)

ಸಂಛನ್ನ – [ಗು] ಮುಚ್ಚಿದ (ಶ್ವದಂಷ್ಟ್ರಾಗ್ರಳೋಪರಿಮ ಸಂಛನ್ನಂಗಳುಂ ಅಪ್ಪ ಯಂತ್ರಾಯುಧಾವರಣೋಪಕರಣ ಪರಿಣತಂಗಳಾಗಿರ್ದ ದುರ್ಗಂಗಳೊಳ್: **ಆದಿಪು**, ೧೩. ೫೭ ವ)

ಸಂಛಾದನ – [ಗು] ಆವರಿಸುವ (ವಿನಯಾಮೃತಮರೀಚಿ ಸಂಛಾದನ ಅಂಬೋಧಸಂತತಿಯುಭಯಲೋಕ ವಿವೇಕ ವಿಲೋಚನಾಸ್ತಮಯ ವೇಲೆಯುಂ: **ಆದಿಪು**, ೧೪. ೧೨೨ ವ)

ಸಂಛಾದಿತ – [ಗು] ಮುಸುಕಲ್ಪಟ್ಟ (ಸಿಂಹಾಸನಮಸ್ತಕಸ್ಥಿತನುಂ ವಿರಾಜಮಾನ ಧವಳಚ್ಛತ್ರಚಾಮರ ಸಹಸ್ರಸಂಛಾದಿತನುಂ ಆಗಿ ವಿಕ್ರಾಂತತುಂಗಂ ಒಡ್ಡೋಲಗಂಗೊಟ್ಟಿರೆ: **ಪಂಪಭಾ**, ೧೪. ೨೧ ವ)

ಸಂಜನಿತ – [ಗು] ಹುಟ್ಟಿದ, ಮೂಡಿದ (ಮುಕ್ತಿಸಾಮ್ರಾಜ್ಯದೊಳ್ ಅತಿಪ್ರಾಜ್ಯ ಸಂಜನಿತನಿಸ್ಪೃಹನಂ ಅನವರತ ಕಲ್ಯಾಣ ಪರಿಮಿತದೊಳ್ .. .. ನಿಱಿಸುವುದುಂ: **ಆದಿಪು**, ೮. ೮ ವ)

ಸಂಜಾತದಯ – [ನಾ] ದಯಾವಂತ (ಆತತ ಯಶೋವಿತಾನಂ ಅಜಾತಭಯಂ ಪೂರ್ವಪರಿಮಿತ ಆಯುಷ್ಯಂ ಸಂಜಾತದಯಂ: **ಆದಿಪು**, ೬. ೬೪)

ಸಂಜೆಗವಿ – [ಕ್ರಿ] [ಸಂಜೆ+ಕವಿ] ಸಾಯಂಕಾಲ ಆವರಿಸು (ಭೂತಾಂಗನಾನಿಕರಂ ಶೋಣಿತವಾರಿಯಂ ಕುಡಿದು ಅಗುರ್ವಪ್ಪನ್ನೆಗಂ ಸೂಸೆ ನೋಡ ಕವಿಲ್ತಿರ್ದುದು ಕೂಡೆ ಸಂಜೆಗವಿದಂತಾ ದ್ರೋಣನಿಂ ಕೊಳ್ಗುಳಂ; **ಪಂಪಭಾ**, ೧೨. ೨೫)

ಸಂಜ್ವಲನ – [ನಾ] [ಜೈನ] ಚಾರಿತ್ರ್ಯದ ಪರಿಪೂರ್ಣತೆಗೆ ಪೂರಕವಾದ ಕರ್ಮ (ತನ್ನ ಪರಿಣಾಮವಿಶೇಷದಿಂ ಚತುಃ ಸಂಜ್ವಲನ ನವನೋಕಷಾಯಂಗಳೆಂಬ ಪದಿಮೂಱು ಪ್ರಕೃತಿಗಳುಮಂ ಅಂತಃಕರಣಂ ಮಾಡಿ: **ಆದಿಪು**, ೧೦. ೧೪ ವ)

ಸಂತಂ – [ನಾ] ನೆಮ್ಮದಿ (ಲೋಕದೊಳಂ ನಿನ್ನಿರ್ಕೆಯ ಲೋಕಾಗ್ರಮೆ ಸಂತಂ ಅದನೆ ಮಾಡೆನಗರ್ಹಾ: **ಆದಿಪು,** ೧೦. ೫೭); [ನಾ] ಸೌಖ್ಯ (ದಿಗ್ವಿಜಯಮುಮಾದಂತೆಡರೆಯ್ದೆ ನಡೆದುದೆ ಸಂತಮೆ ದಕ್ಷಿಣಭುಜಕ್ಕೆ ಭೂವಲ್ಲಭನಾ: **ಆದಿಪು.** ೧೪. ೪೮); [ಅ] ಯಾವಾಗಲೂ (ಸುಯೋಧನನಾಳುತ್ತಿರೆ ಸಂದ ಹಸ್ತಿನಪುರಂ ಸಂತಂ ಬಸಂತಂ: **ಪಂಪಭಾ,** ೩. ೩೨)

ಸಂತತಂ – [ಅ] ನಿರಂತರವಾಗಿ (ಉಜ್ಜ್ವಳಮಂಗಳೋಪಕರಣ ದ್ರವ್ಯಂಗಳಂ ನೀಡೆ ಸಂತತಂ ಏನಂದು ಜಿನಾರ್ಭಕಂಗೆಸೆದುದೋ ಜನ್ಮಾಭಿಷೇಕೋತ್ಸವಂ: **ಆದಿಪು,** ೭. ೮೧)

ಸಂತತಿ – [ನಾ] ಕುಲ, ವಂಶ (ಚಿಂತೆಯಿದೇನೊ ಸಂತತಿಗೆ ನೆಟ್ಟನೆ ಮಕ್ಕಳೆ ಬಾರ್ತೆಯಪ್ಪೊಡೆ ಇನ್ನಿಂತಿರವೇಡ: **ಪಂಪಭಾ,** ೧. ೧೧೮); ಸಮೂಹ (ಉಡಲುಂ ತುಡಲುಂ ವಸ್ತ್ರಂ ತುಡುಗೆಯಂ ಆನೆಯುಮಂ ಅರ್ಥಿಸಂತತಗೀಯಲ್ ಬಿಡುವೊನ್ನುಮಂ: **ಪಂಪಭಾ,** ೧೦. ೩೮)

ಸಂತತಿಚ್ಛೇದ – [ನಾ] ವಂಶನಾಶ (ಮಗಳಂ ಈವೆನಪ್ಪೊಡೆ ಕೊಡಗೂಸೆಂಬುದು ಪೆಱರೊಡವೆ ಮಗನಂ ಈವೆನಪ್ಪೊಡೆ ಸಂತತಿಚ್ಛೇದಮುಂ ಪಿಂಡಚ್ಛೇದಮುಂ ಅಕ್ಕುಂ ಅದಱಿಂದ ಎನ್ನನೆ ಕುಡಲ್ವೇಟ್ಟುಂ: **ಪಂಪಭಾ,** ೩. ೨೫ ವ)

ಸಂತಪ್ತ – [ಗು] ಬಿಸಿಯಾದ (ಅಂತಸ್ಸ್ಫುರದತಿಸ್ಫಾರಸಮರೋಷ್ಮ ಸಂತಪ್ತಜಲ ಪ್ರತ್ಯೇಕಚುಳುಕಪಾನಮಾತ್ರ ಜಾನುದಘ್ನ ಜಲದುರ್ಗನುಮಾಗಿ: **ಆದಿಪು,** ೧೪. ೫೨ ವ)

ಸಂತಪ್ತಚಿತ್ತ – [ನಾ] ಬೆಂದ ಮನಸ್ಸು (ಅಜ್ಞಾನಿಯವೋಲ್ ನೀನುಂ ಶೋಕಾನಲಸಂತಪ್ತಚಿತ್ತನಪ್ಪುದು ದೊರೆಯೇ: **ಪಂಪಭಾ,** ೧೧. ೧೦೮)

ಸಂತರ್ಪಣಕರ – [ಗು] ಸಂತೋಷಕರ (ಕಂದರ್ಪಸುಖನಿಲಯಮೆನೆ ಸಂತರ್ಪಣಕರಮಖಿಲಭೋಗಭೂಮಿ ವಿಭಾಗಂ: **ಆದಿಪು,** ೫. ೨೮)

ಸಂತಸ – [ನಾ] ಸಂತೋಷ (ಮನದೊಳ್ ತ್ರೈಭುವನಮಂ ಆಳ್ದನಿತುವರಂ ತನಗೆ ಸಂತಸಂ ಪೆರ್ಚಿಯುಂ ಅಂದು ಇನಿಸು ಅಂಧನೃಪಂ ತನ್ನಯ ಜನದೊಳ್ ಕೆಲನಱಿಯೆ ಕೃತಕಶೋಕಂಗೆಯ್ದಂ: **ಪಂಪಭಾ,** ೩. ೮)

ಸಂತಸವಾತು – [ನಾ] ಸಂತೋಷದ ನುಡಿ, ವಾರ್ತೆ (ಬರವಿನೊಳಾದದೊಂದು ಮೊಗರಾಗಮೆ ಸಂತಸವಾತಂ ಅಂತು ಅನಕ್ಷರಮಱಿಪುತ್ತುಂ ಇರ್ಪಿನೆಗಂ: **ಆದಿಪು,** ೩. ೮೫)

ಸಂತಾನ – [ನಾ] ಸಾಲು, ಪಂಕ್ತಿ (ಪುರುದೇವಾದಿ ಜಿನೇಂದ್ರಮಾಳೆ ಗಣಭೃತ್ಸಂತಾನಮೆಂದೀ ಪರಂಪರೆಯಿಂ ವಿಶ್ರುತವೀರಸೇನ ಜಿನಸೇನಾಚಾರ್ಯ ಪರ್ಯಂತಮಾಗಿರೆ ಬದ ಈ ಕಥೆ: **ಆದಿಪು,** ೧. ೩೫); [ನಾ] ಅವಿಚ್ಛಿನ್ನ (ಸದೃಶಾಪರಾಪರೋತ್ಪತ್ತಿಯೆಂಬಿವಱಿಂ ವಿಪ್ರಲಬ್ಧಬುದ್ಧಿಗೆ ಸಂತಾನರೂಪದಿಂ ಪುಟ್ಟುತ್ತಿರ್ದ ವಿಜ್ಞಾನಲಕ್ಷಣಂಗಳ್ ಆತ್ಮಾಭಿಧಾನಮಂ ಪುಟ್ಟಿಸುಗುಂ: **ಆದಿಪು,** ೨. ೯ ವ); [ನಾ] ಸ್ವರ್ಗದಲ್ಲಿ ಇರುವುದೆಂದು ನಂಬಲಾದ ಮಂದಾರ, ಕಲ್ಪವೃಕ್ಷ, ಹರಿಚಂದನ, ಪಾರಿಜಾತ ಮತ್ತು ಸಂತಾನಗಳೆಂಬ ಮರಗಳಲ್ಲಿ ಒಂದು, ಅದರ ಹೂ (ಅಂತು ನಿಷ್ಪನ್ನಮಜ್ಜನಂ ವಿನಿಹಿತನೀರಾಜನನುಮಾಗಿ ಸುರರಾಜನ ಸಮರ್ಪಿತ ಸಂತಾನಕುಸುಮದಾಮಾಂಬರ ಭೂಷಣಪ್ರಸಾಧಿತಂ: **ಆದಿಪು,** ೮. ೭೧ ವ); [ನಾ] ಸಮೂಹ (ಅಧಿಕಬಳನಳಕರತಳಗಳಿತ ಕುಳಶೈಲಸಹಸ್ರ ಸಂತಾನ ಕಳಿತ ಸೇತುಬಂಧುರಮಪ್ಪ ದಕ್ಷಿಣಸಮುದ್ರದ ತಡಿವಿಡಿದು ಬಂದು: **ಪಂಪಭಾ,** ೪. ೧೮ ವ)

ಸಂತಾನರೂಪ – [ನಾ] [ಜೈನ] ಅನುಭವಕ್ಕೆ ಬಾರದ ಕ್ಷಣಗಳ ಸಮೂಹ (ವಿಪ್ರಲಬ್ಧಬುದ್ಧಿಗೆ ಸಂತಾನರೂಪದಿಂ ಪುಟ್ಟುತ್ತಿರ್ದ ವಿಜ್ಞಾನಲಕ್ಷಣಂಗಳ್ ಆತ್ಮಾಭಿಧಾನಮಂ ಪುಟ್ಟಿಸುಗುಂ: **ಆದಿಪು,** ೨. ೯ ವ)

ಸಂತಾನಸ್ರಕ್ – [ನಾ] ಸಂತಾನವೃಕ್ಷದ ಪುಷ್ಪಮಾಲೆ (ದಿವ್ಯ ಸಂತಾನಸ್ರಕ್ ಮಣಿಭೂಷಣಾಂಬರಧರಂ ಸ್ವಾಧೀನ ಸಂಗತ್ವಸಂತಾನಂ .. .. ಪಾಲಿಸಿದಂ ಮಹೀತಳಮಂ: **ಆದಿಪು,** ೮. ೭೭)

ಸಂತಾನಾಂತರ – [ನಾ] [ಜೈನ] ಒಂದಾದ ನಂತರ ಮತ್ತೊಂದು ಹುಟ್ಟುವುದರಲ್ಲಿರುವ ಭೇದ (?) (ಅನುಮಾನದಿಂ ಸಂತಾನಾಂತರಮಂ ಸಾಧಿಸುವೆನೆಂಬೆಯಪ್ಪೊಡೆ ಬಹಿರರ್ಥ ಸಿದ್ಧಿಯಕ್ಕುಂ: **ಆದಿಪು,** ೨. ೧೦ ವ)

ಸಂತಾಪ – [ನಾ] ದುಃಖ (ನೀಳ್ದ ಮಾವಿನ ಪೋೞಿಂದದ ಕಣ್ಗೆ ಬಾಷ್ಪಜಲಮಂ ಚಿತ್ತಕ್ಕೆ ಸಂತಾಪಮಂ ನಿನಗಂ ಮಾಡಿದವನಾತಂ ಆತನೆ ವಲಂ ಗಂಧೇಭವಿದ್ಯಾಧರಂ: **ಪಂಪಭಾ,** ೪. ೬೪)

ಸಂತಾಪನ – [ನಾ] ಪರಿತಪಿಸುವುದು (ಕಾಮಗ್ರಹಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭ ಕಂಪ ಸ್ವೇದ ವೈವರ್ಣ್ಯಸಂತಾಪನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ,** ೪. ೫೯ ವ); [ನಾ] ಮನ್ಮಥನ ಐದು ಬಾಣಗಳಲ್ಲಿ ಒಂದು (ಮನೋಮಥನ ಮದನ ಮೋಹನ ಸಂತಾಪನ ವಶೀಕರಣಂಗಳೆಂಬ ಕಾಮದೇವನ ಅಯ್ದರಲಂಬಿನ ಶಕ್ತಿಗಳುಮನೊಂದುಮಾಡಿ: **ಪಂಪಭಾ,** ೪. ೭೫ ವ)

ಸಂತಾಪರೂಪ – [ನಾ] ದುಃಖರೂಪವಾದ (ಬಾದೇನ್ ಆ ಮದೀಯ ಕರ್ಮಫಳೋದಿತ ಸಂತಾಪರೂಪ ಪಾಪಕಳಾಪ ವಿಚ್ಛೇದನಕರಮಾಯ್ತು ಭವತ್ ಪಾದಪ್ರಕ್ಷಾಳನ ಉದಕದಿಂ ಮುನಿನಾಥಾ: **ಪಂಪಭಾ,** ೬. ೧೩)

ಸಂತೆ – [ನಾ] [ಸಂಸ್ಥಾ] ಗುಂಪು (ಆಗಳ್ ಆಱುಂ ಋತುಗಳ ಪೂಗಳಂ ಒಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದ ಓಜನ ಸಾಲೆಯಿರ್ಪಂತಿರ್ಪ ಪೂವಿನ ಸಂತೆಯೊಳ್: **ಪಂಪಭಾ,** ೪. ೮೦ ವ)

ಸಂದಂಶ – [ನಾ] ಔಡು ಕಚ್ಚುವುದು (ಉದಾರವೀರಚರಿತನಿರತ ಕದನಕರ್ಕಶಕ್ಷತ್ರಿಯಂಗೆ .. .. ನಿರರ್ಥಕನಿಷ್ಠುರೋಷ್ಠಪುಟ ಸಂದಂಶಮುಂ .. .. ತಕ್ಕುದಲ್ತು: **ಆದಿಪು,** ೧೪. ೮೧ ವ)

ಸಂದಣಿ – [ನಾ] ಗುಂಪು (ದಂದುಗದ ಸಂದಣಿಯಿಂದಮೆ ಮತ್ ಪ್ರಾಗ್ಜನ್ಮ ಕಥಾವಳಿಯೆಲ್ಲಮಂ ಬಗೆದು ನೋವಾದುದು: **ಆದಿಪು,** ೩. ೩೩); [ನಾ] ಸಮೂಹ (ಬಳಸಿದ ವೇದಪಾರಗರ ಸಂದಣಿಯೆಂಬಿವಱಿಂ ವಿವಾಹಮಂಗಳಮದು ಕುಂತಿಮಾದ್ರಿಗಳೊಳಚ್ಚರಿಯಾದುದು ಪಾಂಡುರಾಜನಾ: **ಪಂಪಭಾ,** ೧. ೧೦೭)

ಸಂದಣಿಸು – [ಕ್ರಿ] ಗುಂಪಾಗು (ಸರಳ ಪೊದಳ್ದ ಬಲ್ಸರಿಯ ಕೋಳ್ಗಿರಲಾಱದೆ ತೆರಳ್ದು ದುರ್ಧರ ಹಯಂ ಅಟ್ಟಿ ಸಂದಣಿಸಿ ಸಂದಣಿ ಕೋಳ್ಗುದಿಗೊಂಡು: **ಪಂಪಭಾ** ಪರಿಷತ್ತು, ೩. ೭೦)

ಸಂದರ್ಭ – [ಗು] ಸೇರಿಸಿದ, ಕೂಡಿಸಿದ (ಪಂಚರತ್ನಗರ್ಭ ವಿವಿಧೌಷಧಿಸಂದರ್ಭ ಶಾತಕುಂಭಕುಂಭ ಸಂಭೃತ ಮಂಗಳಜಳಂಗಳಿಂದಂ: **ಆದಿಪು,** ೪. ೩೫ ವ)

ಸಂದಿ – [ನಾ] ಕೀಲು (ಕಟಿ ಮುಮ್ಮಡಂ ಪರಡು ಸಂದಿ ನೊಸಲ್ ಪಣೆ ಕಣ್ ಕದಂಪಿನೆಡೆಯನೆ ನಟ್ಟುವು ಉರ್ಚಿದುವು ನೇರ್ದುವು ಸೀಳ್ದುವು ಪಾರ್ಥನಂಬುಗಳ್: **ಪಂಪಭಾ,** ೧೧. ೧೩೬);

ಸಂದಿಸು – [ಕ್ರಿ] ಹಿಂಬಾಲಿಸು (ಮುಂದಣ ಮಿಗಮಂ ಕಟಿಪದೆ ಸಂದಿಸಿ ಬಟಿಗೊಳ್ವ ಮಿಗಮುಮಂ ಕಟಿಪದೆ ತಾನೊಂದಳವಿಳಿದಪ್ಪದೆಚ್ಚು ಬಲಿಂದಮನಿಂ ಬಿಲ್ಲ ಬಲ್ಮೆಯಂ ಪೊಗಟೆಸಿದಂ: **ಪಂಪಭಾ,** ೫. ೪೮); [ಕ್ರಿ] ಸೇರು (ಎರಡು ಪೋಟುಮಂ ಒಂದು ಕೆಯ್ಯೊಳೆ ಪಿಡಿದೊಡೆ ಒಂದೊಂದಱೊಳ್ ಸಂದಿಸಿ ಮಾನಸರೂಪುಗೊಂಡೊಡೆ: **ಪಂಪಭಾ,** ೬. ೨೬ ವ)

ಸಂದು – [ನಾ] ಮೂಲೆ (ದೆಸೆಗಳ ಸಂದಂ ಪಱಿದಾಗಸದಿಂದಂ ಪತ್ತುವಿಡಿಸುವಂತೆ: **ಆದಿಪು,** ೧೨. ೫೪)

ಸಂದೆಯ – [ನಾ] ಸಂದೇಹ (ನೀನುಂ ಸಂದೆಯಗುಣಮಿಲ್ಲದೆ ಇದನೆ ನಂಬಿ ಇನಿತಂ ನೀನೊಂದಿದ ನಾರೀರೂಪದ ದಂದುಗದೊಳ್ ತೊಡರ್ದು ಬಿಡದೆ ನವೆಯುತ್ತಿರ್ಪೈ: **ಆದಿಪು,** ೫. ೬೨); [ನಾ] ಗೊಂದಲ (ಪಿರಿದೊಂದು ಸಂದೆಯದೆ ನೋಡೆ ಪೋಗಿಂತಿವಳ್ ನರಾಂಗನೆಯಿವಳ್ ಸುರಾಂಗನೆ ದಲ್ ಎಂಬಿನಂ: **ಆದಿಪು,** ೮. ೨೧)

ಸಂದೋಹ – [ನಾ] ಸಮೂಹ, ರಾಶಿ (ಹಿಮಕೃದ್ಭೂಧರದಂತೆ ನಿನ್ನ ಗುಣಸಂದೋಹಂಗಳಂ ಕಾಣಲಕ್ಕುಮೆ ಮರ್ತ್ಯೋರ್ವನೊಳ್: **ಪಂಪಭಾ,** ೫. ೭೬)

ಸಂಧಾನ – [ನಾ] [ಬಾಣ] ಹೂಡುವುದು (ಶರಸಂಧಾನ ಆಕರ್ಷಣ ಹರಣಾದಿ ವಿಶೇಷವಿವಿಧಸಂಕಲ್ಪಕಳಾಪರಿಣತಿಯಂ ಮೆಱೆದುದು: **ಪಂಪಭಾ,** ೧೨. ೧೮೬)

ಸಂಧಾನಂಗೆಯ್ – [ಕ್ರಿ] ತಯಾರಿಸು (ಮೂಱುಂ ಕೊಂಡಂಗಳೊಳ್ ಉತ್ತರವೇದಿಕೆಯೊಳ್ ಅಗ್ನಿ ಸಂಧಾನಂಗೆಯ್ದು: **ಪಂಪಭಾ,** ೬. ೩೩ ವ)

ಸಂಧಾರಣ – [ನಾ] ಇಟ್ಟುಕೊಳ್ಳುವಿಕೆ (ಅನಿಷ್ಠುರೋಷ್ಠಪುಟಮಧ್ಯ ಸಂಧಾರಣಮಾತ್ರ ಚೂರ್ಣನೀಯ ಶಾಕವರ್ತಿಕಮುಮಂ: **ಆದಿಪು,** ೧೧. ೨೬ ವ); [ನಾ] ಆಧಾರವಾಗಿರುವುದು (ಅಗಾಧಜಲದುರ್ಗ ಸಮುತ್ತರಣ ನಿರತ ಸಕಳ ಶಿಬಿರ ಸಂಧಾರಣಶಕ್ತಿಯುಕ್ತಮಪ್ಪ ವಜ್ರಮಯಮೆಂಬ ಚರ್ಮರತ್ನಮುಂ: **ಆದಿಪು,** ೧೧. ೩ ವ)

ಸಂಧಾರಿತ – [ಗು] ತೊಡಿಸಿದ, ತೊಟ್ಟ (ಆರೋಪಿತಚಾಪಂ ಸಂಧಾರಿತಕವಚಂ ಧೃತೋಗ್ರಶರಧಿಯುಗಂ ತಾಂ: **ಪಂಪಭಾ,** ೮. ೧೨)

ಸಂಧಿ – [ನಾ] ನಾಟಕದ ಒಂದು ಭಾಗ (ನಾಂದೀ ಪ್ರರೋಚನಾ ಪ್ರಸ್ತಾವನಾ ಇತಿವೃತ್ತ ಸಂಧಿ ಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ: **ಪಂಪಭಾ,** ೨. ೩೪ ವ); [ನಾ] ಸೇರಿಕೆ (ಜಟಮಟಿಸಿಕೊಂಡು ನಿಮ್ಮೀ ಘಟಿಯಿಸುವ ಈ ಸಂಧಿ ಕೌರವರ್ಕಳೊಳ್ ಎನ್ನಿಂ ಘಟಿತ ಜರಾಸಂಧ ಉರಸ್ತಟ ಸಂಧಿವೊಲ್ ಒಂದೆ ಪೊಟ್ಟಱೊಳ್ ವಿಘಟಿಸದೇ: **ಪಂಪಭಾ,** ೯. ೨೩); [ನಾ] ಕೀಲು (ಅಂತು ಸಂಧಿ ಸಂಧಿಯೊಳ್ ಸಹಸ್ರಸಿಂಹಬಲನೆನಿಪ ಸಿಂಹಬಲನಂ ಅಶ್ರಮದೊಳೆ ಕೊಂದು: **ಪಂಪಭಾ,** ೮. ೭೮ ವ)

ಸಂಧಿಬಂಧ – [ನಾ] ಕೀಲ್ಕಟ್ಟು (ದೆಸೆಗಳಂ ಮುಳಿದು ನೋಡಿ ಜರಾಸಂಧಸಂಧಿಬಂಧವಿಘಟನಂ ಇಂತೆಂದಂ: **ಪಂಪಭಾ,** ೧೩. ೭೫ ವ)

ಸಂಧಿಸು – [ಕ್ರಿ] ಕೂಡಿಸು, ಸೇರಿಸು (ಬಿಲ್ ರಥಂ ಧ್ವಜಂ ಎಂಬಿವಂ ಎಯ್ದೆ ಸಂಧಿಸು ಜಸಂ ನಿಲ್ವನ್ನೆಗಂ ಕಾದುವೆಂ: **ಪಂಪಭಾ,** ೧೧. ೧೬)

ಸಂಧ್ಯಾಭ್ರ – [ನಾ] ಸಂಜೆಯ ಆಕಾಶ (ಈಶಾನಕಲ್ಪದೊಳ್ ಅಪ್ರತಿಹತ ಚಂಚತ್ ಪಂಚರತ್ನಪ್ರಭಪ್ರಸರಪ್ರಕಟಿತ ಸಂಧ್ಯಾಭ್ರ ವಿಭ್ರಮಭ್ರಾಜಿಯಪ್ಪ ದಿವ್ಯತಳ್ಪತಳದ ಪೊರೆಯೊಳಗೆ: **ಆದಿಪು,** ೨. ೬೧ ವ)

ಸಂಧ್ಯಾರಾಗ – [ನಾ] ಸಂಜೆಯ ಬಣ್ಣ (ಸಂಧ್ಯಾರಾಗಮವರ ಮನದನುರಾಗಮಂ ಅನುಕರಿಸುವಂತುಟಾಗೆ ಬಟಿಯಂ ಕ್ರಮಕ್ರಮದೊಳ್: **ಪಂಪಭಾ,** ೪. ೪೮ ವ)

ಸಂಧ್ಯಾವಂದನೆ – [ನಾ] ಉಪನಯನವಾದ ದ್ವಿಜನು ದಿನದ ಮೂರು ಹೊತ್ತುಗಳಲ್ಲಿ ಮಾಡುವ ಸೂರ್ಯನ ಪ್ರಾರ್ಥನೆ (ಆಗಳ್ ಸಂಧ್ಯಾವಂದನೆಗೆ ಧರ್ಮಪುತ್ರಾರ್ಜುನನಕುಲ ಸಹದೇವರ್ ಪೋದರ್; **ಪಂಪಭಾ,** ೩. ೨೩ ವ)

ಸಂಪೂರ್ಣ ಮನೋರಥ – [ನಾ] ಉದ್ದೇಶ ನೆರವೇರಿದವನು (ಆಗಳ್ ಸ್ವಾಹಾಂಗನಾನಾಥಂ ಸಂಪೂರ್ಣ ಮನೋರಥನಾಗಿ ಖಟ್ವಾಂಗನೆಂಬ ಅರಸನ ಯಜ್ಞದೊಳ್ ಆತನ ತಂದ ಘೃತಸಮುದ್ರಮಂ ಕುಡಿದೊಡೆ: **ಪಂಪಭಾ,** ೫. ೧೦೪ ವ)

ಸಂಪೂರ್ಣ ವಯಸ್ಕ – [ನಾ] ತುಂಬಿದ ಪ್ರಾಯದವನು (ಅಂತು ನೂರ್ವರೊಳ್ ಒರ್ವನ ಅಗುರ್ಬು ಪರ್ಬಿ ಪರಕಲಿಸೆ ಸಂಪೂರ್ಣ ವಯಸ್ಕನಾಗಿ ಘೃತಘಟವಿಘಟನನುಮಾಗಿ ಪುಟ್ಟುವುದುಂ: **ಪಂಪಭಾ,** ೧. ೧೩೧ ವ)

ಸಂಪೃಕ್ತ – [ನಾ] ಕೂಡಿಕೊಂಡದ್ದು (ಉತ್ತರೋತ್ತರಚಿತ್ತಕ್ಷಣಂಗಳ್ ಉಪಾದಾನೋಪಾದೇಯ ಕ್ಷಣಸಂಪೃಕ್ತಂಗಳ್: **ಆದಿಪು,** ೨. ೯ ವ)

ಸಂಪ್ರೀತಿ – [ನಾ] ಕಟ್ಟೊಲವು, ಬಹು ಪ್ರೀತಿ (ಆತಂಗೆ ಅರಿಕೇಸರಿ ಸಂಪ್ರೀತಿಯೆ ಬಟಿಯಟ್ಟಿ ಪಿರಿದನಿತ್ತು: **ಪಂಪಭಾ,** ೧೪. ೫೧)

ಸಂಪ್ಲುಷ್ಟ – [ಗು] ಪೂರ್ತಿ ಸುಟ್ಟುಹೋದ, ಕರಿಕಾದ (ಕಷ್ಟಂ ದುಃಖಾನಳಸಂಪ್ಲುಷ್ಟಂ ಚಿಃ ಗತಿಚತುಷ್ಟಯಂ ಪ್ರಾಣಿಗೆ: **ಆದಿಪು,** ೯. ೫೧) [ವೆಂಕಟಾಚಲಶಾಸ್ತ್ರಿಗಳ ಆವೃತ್ತಿ]

ಸಂಬಳಂಗೊಳ್ – [ಕ್ರಿ] ಬುತ್ತಿಯನ್ನು ಕಟ್ಟಿಕೊ (ಅಟ್ಟಿಟಿಂ ಈಯೆ ಸಂಬಳಂಗೊಳ್ವವೊಲ್ ಆ ತಳೋದರಿಯ ಚಿತ್ತಮಂ ಇಟ್ಟುಟಿಗೊಂಡಂ ಅರ್ಜುನಂ: **ಪಂಪಭಾ,** ೭. ೬೮)

ಸಂಬಳಿಗೆವೋಗು – [ಕ್ರಿ] ಸಂಪುಟವಾಗಿ ಹೋಗು, ಅದರಲ್ಲೇ ಅಡಗಿ ಹೋಗು (ಸಂಬಳಿಗೆವೋಯ್ತೆಂಬನ್ನೆಗಂ ಕೊಂಡುದು ಒಯ್ಯಗೆ ವೃಷಾಂಕನಂಬು: **ಪಂಪಭಾ**, ೮. ೧೬)

ಸಂಬೋಧಿಸು – [ಕ್ರಿ] ತಿಳಿವಳಿಕೆ ಹೇಳು (ಮುನ್ನ ಮಹಾಬಳನಾದಂದು ಎನ್ನಂ ಪ್ರಿಯಸಚಿವನಾಗಿ ಸಂಬೋಧಿಸಿ ಮಾನೋನ್ನತರೀಗಳ್ ಅಟ್ಟಿಜಿಸೊಳೆನ್ನಂ ಸಮಜಿಲ್ಕೆ ಬಂದರಿಂತುಟೆ: **ಆದಿಪು,** ೫. ೬೭)

ಸಂಭವ – [ನಾ] ಹುಟ್ಟಿದಂತಹ (ಉಚ್ಚೈಶ್ರವಾನ್ವಯಸಂಭವನುಂ ಅಪ್ಪ ಪ್ರಶಸ್ತಲಕ್ಷಣಲಕ್ಷಿತನುಂ ಅಪ್ಪ ತ್ರಿಭುವನತಿಲಕಮೆಂಬ ಕುದುರೆಗಂ ಪಟ್ಟಂಗಟ್ಟಿ: **ಪಂಪಭಾ**, ೧೪. ೨೦ ವ)

ಸಂಭವಾಮಯ – [ಗು] ಉಂಟಾಗುವ (ಶಸ್ತ್ರ ಪಾಷಾಣ ಆತಪ ವರ್ಷ ವಿಷ ಅಗ್ನಿ ಕಾಷ್ಠ ಕಂಟಕ ತ್ರಿದೋಷಸಂಭವಾಮಯ ಜರಾದಿ ಬಾಧಾವಿದೂರನುಂ: **ಆದಿಪು**, ೮. ೪ ವ) [ಬಸವರಾಜು ಮತ್ತು ನರಸಿಂಹಶಾಸ್ತ್ರಿ ಅವರ ಆವೃತ್ತಿಗಳಲ್ಲಿ]

ಸಂಭವಿಸು – [ಕ್ರಿ] ಸಾಧ್ಯವಾಗು (ಅವಚಜಿದೊಂದೆ ಪದ್ಮದೊಳೆ ನೇಲ್ದೊಳಗಾದಳಿಗೆಮ್ಮ ವೃತ್ತಿ ಸಂಭವಿಸದು: **ಆದಿಪು,** ೧೧. ೧೨೬)

ಸಂಭೃತ – [ಗು] ತುಂಬಿದ (ಕನಕಕಲಶ ಸಂಭೃತಶುಚಿಜಲಂಗಳಿಂದಂ ಆ ಮುನೀಶ್ವರನ ಪಾದಪದ್ಮಮಂ ಕರ್ಚಿ: **ಪಂಪಭಾ**, ೬. ೧೧ ವ)

ಸಂಭೋಗ – [ನಾ] ಕಾಮ ಕೂಟ (ಸ್ವರ್ಗಲಕ್ಷ್ಮಿಯ ಮೇಲಟ್ಟಿಜಿಸೊಳ್ ನಲಿದನೋ ಸಂಭೋಗಸಮ್ಮರ್ದ ನಿರ್ದಯ ನಿಷ್ಪೀಡಿತ ದೇವವಾರವನಿತಾ ಬಿಂಬಾಧರಂ ಶ್ರೀಧರಂ: **ಆದಿಪು,** ೫. ೭೧)

ಸಂಭೋಗ್ಯ – [ಗು] ಅನುಭವಿಸಲು ತಕ್ಕುನಾದ (ಮಿಥುನಂಗಳ್ಗೆ ಸಂಭೋಗ್ಯಮಾಗಿ ಸಲೆ ಜಘನ್ಯಭೋಗಭೂಮಿಯ ಕಡೆಯ ಪಳಿತೋಪಮದೆಂಟನೆಯ ಭಾಗಂ ಅಟೆದುದೆಂಬನ್ನೆಗಂ: **ಆದಿಪು,** ೬. ೪೮ ವ)

ಸಂಭ್ರಮ – [ನಾ] ತಾಕಲಾಟ (ಎನ್ನ ಬಗೆದ ಬಗೆಯನೊಡಂಬಡುಗುಂ ಒಡಂಬಡಂ ಎಂಬ ಸಂಭ್ರಮದೊಳ್ ಆಸ್ಥಾನಮಂಡಪ ಮಂಡನೀಭೂತ .. .. ಕುಮಾರನಂ: **ಆದಿಪು**, ೮. ೮ ವ); [ನಾ] ಸಡಗರ, ಆತುರ (ಮಹೀಪತಿನಿವೇದನ ಸಂಭ್ರಮಗಮನಸ್ಖಲಿತ ವೃದ್ಧಕಂಚುಕಿನಿಕರಮುಂ: **ಆದಿಪು**, ೮. ೩೫ ವ); [ನಾ] ಹೆದರಿಕೆ (ಅತ್ಯಾದರಃ ಸಂಭ್ರಮಂ ಉತ್ಪಾದಯತಿಯೆಂಬುದು: **ಪಂಪಭಾ,** ೩. ೪ ವ); [ನಾ] ಕಳವಳ (ಅತಿಸಂಭ್ರಮ ಆಕುಳಿತಪರೀತ ಪರಿವಾರಜನ ಉಪನೀತ ಚಂದನಕರ್ಪೂರ ಮಿಶ್ರಿತ ಹಿಮಶಿಶಿರಧಾರಾ ಪರಿಷೇಕದಿಂದೆ: **ಪಂಪಭಾ**, ೧೩. ೨ ವ)

ಸಂಮುಖ – [ನಾ] ಮುಖತಃ (ಅಧಿಪಂ ಸಂಮುಖದಿಂ ಬೆಸಸಿದೊಡಲ್ಲದೆ ಒಲ್ಲೆವು: **ಆದಿಪು**, ೯. ೧೧೨)

ಸಂಮೋಹನಾಸ್ತ್ರ – [ನಾ] ಒಂದು ಬಾಣದ ಹೆಸರು, ಮೂರ್ಚೆಗೊಳಿಸುವ ಬಾಣ (ಮನದೊಳ್ ಕರುಣಿಸಿ ಸಂಮೋಹನಾಸ್ತ್ರದಿಂದೆಚ್ಚು ಬೀರರಂ ಬೀರದ ಶಾಸನಮನೆ ನಿಜೆಸುವ ಬಗೆಯಿಂದ ಅನಿಬರ ಪಟವಿಗೆಯನೆಳೆದುಕೊಂಡಂ ಹರಿಗಂ: **ಪಂಪಭಾ**, ೮. ೧೧೯)

ಸಂಯಮ – [ನಾ] [ಜೈನ] ಶ್ರಾವಕರ ಆರ್ಯಷಟ್ಕರ್ಮಗಳಲ್ಲಿ ಒಂದು, ವ್ರತ–ಸಮಿತಿಗಳ ಧಾರಣೆ ಮತ್ತು ಅನುಪಾಲನೆ, ಕಷಾಐ, ದಂಡ, ಇಂದ್ರಿಯನಿಗ್ರಹ, ತ್ಯಾಗ, ಜಯ ಇವು ಒಟ್ಟಾಗಿ ಸಂಯಮ, ಅಣುವ್ರತಪಾಲನೆ ಮುಂತಾದವುಗಳಿಂದ ಸಾಧಿಸುವ ಸಂಯಮ (ಪಂಚಾಣುವ್ರತಾದಿಪ್ರವರ್ತನಸ್ವಭಾವಸಂಯಮಮುಂ: **ಆದಿಪು,** ೧೫. ೧೩ ವ); [ನಾ] [ಜೈನ] ಹತ್ತು ಕುಲಧರ್ಮಗಳಲ್ಲಿ ಒಂದು, (ಎಂಬಿನಮುತ್ತಮಕ್ಷಮಾ ಮಾರ್ದವಾರ್ಜವ ಸತ್ಯಶೌಚ ಸಂಯಮ ತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಪರ್ಯಾಯ ಪರ್ಯಾಪ್ತ ದಶಧರ್ಮಂಗಳುಮಂ ಕೈಕೊಂಡು: **ಆದಿಪು,** ೬. ೩೦ ವ)

ಸಂಯಮನ – [ನಾ] ನಿಯಂತ್ರಿಸುವುದು, ಸರಿಪಡಿಸಿಕೊಳ್ಳುವುದು (ಅಳಕ ಉತ್ಸಾರಿತ ಕೇಶಸಂಯಮನ ನೀವೀಬಂಧನಾವಿಷ್ಕೃತಸ್ಖಳಿತಂ: **ಆದಿಪು,** ೪. ೬೦) [**'ಕೇಶಸಂಚಯಮ'** ಎಂಬ ಭಾಗಕ್ಕೆ ಬದಲಾಗಿ ಎಲ್. ಬಸವರಾಜು **'ಕೇಶಸಂಯಮನ'** ಎಂಬ ಪಾಠ ಬಳಸುತ್ತಾರೆ]

ಸಂಯುತ – [ಗು] [ಜೈನ] ಇಂದ್ರಿಯನಿಗ್ರಹಿಯಾದವನು (ದರ್ಶನವಿಶುದ್ಧನುಂ ಶೀಲಸಂಪನ್ನನುಂ ಅಪ್ಪ ಸಂಯತಂ ಉತ್ತಮಪಾತ್ರಂ: **ಆದಿಪು**, ೧೦. ೯ ವ)

ಸಂಯೋಗ – [ನಾ] ಕೂಡುವಿಕೆ, ಸೇರುವಿಕೆ (ಅಲ್ಲಿ ಪುಟ್ಟುವ ಜೀವಂಗಳ್ ನಾರೀಪುರುಷಸಂಯೋಗನಿಯೋಜಿತ ಶುಕ್ಲಾರ್ತವಂಗಳೊಳ್ ಜೀವಯುಗಳಂಗಳಾಗಿ ನೆಲಸಿ: **ಆದಿಪು**, ೫. ೪೧ ವ)

ಸಂಯೋಗಾಕ್ಷರ – [ನಾ] ಸಂಯುಕ್ತಾಕ್ಷರ, ಒಟ್ಟಿಗೇ ಒಂದಕ್ಕಿಂತ ಹೆಚ್ಚು ವ್ಯಂಜನಗಳು ಸೇರಿ ಆಗುವ ಅಕ್ಷರ, ಸಾಮಾನ್ಯ ಮಾತಿನಲ್ಲಿ ಇದು **'ಒತ್ತಕ್ಷರ'** (ಅಂತಕಾರಾದಿ ಹಕಾರಾಂತ ಸ್ವರ ವ್ಯಂಜನ ಭೇದಭಿನ್ನ ಶುದ್ಧಾಕ್ಷರಂಗಳುಮಂ ಆಯೋಗವಾಹಕ ಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಹ್ಮಿಗೆ ದಕ್ಷಿಣಹಸ್ತದೊಳ್ ಉಪದೇಶಂಗೆಯ್ದು: **ಆದಿಪು**, ೮. ೫೯ ವ)

ಸಂರಂಭ – [ನಾ] ಉತ್ಸಾಹ, ಸಡಗರ (ಬಹ್ವಾರಂಭ ಸಂರಂಭ ರೌದ್ರಧ್ಯಾನ ಪರಿಣತನುಂ ಉಪಾರ್ಜಿತ ನರಕಾಯುಷ್ಯಂ ಪ್ರತ್ಯಾಸನ್ನಮೃತ್ಯುವಾಗಿ: **ಆದಿಪು**, ೨. ೧೧ ವ)

ಸಂರುದ್ಧ – [ನಾ] ಸುತ್ತುವರಿದ (ಗಿರಿಸರಿತ್ ಸಂರುದ್ಧಂಗಳಪ್ಪ ಖೇಡಂಗಳುಮಂ: **ಆದಿಪು**, ೮. ೬೩ ವ)

ಸಂವತ್ಸರ – [ನಾ] [ಜೈನ] ಎರಡು ಅಯನ ಅಥವಾ ಆರು ಋತುಗಳು ಅಥವಾ ಹನ್ನೆರಡು ಮಾಸಗಳ ಅವಧಿ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ)

ಸಂವರೆ – [ನಾ] [ಜೈನ] ಒಳಿತು ಕೆಟ್ಟುದೆಂಬ ಪರಿಣಾಮರೂಪವಾಗಿ ಬರವ ಕರ್ಮಗಳಿಗೆ ಗುಪ್ತಿ ಮುಂತಾದುವುಗಳಿಂದ ತಡೆಯೊಡ್ಡುವುದು

(ಶುಭಾಶುಭಪರಿಣಾಮ ಪ್ರಣಾಳಿಕೆಯಿಂ ಬರ್ಪ ಕರ್ಮಮಂ ಬರಲೀಯದೆ ಗುಪ್ತ್ಯಾದಿಗಳಿಂ ತಗುಳ್ವುದು ಸಂವರೆಯೆಂಬುದು: **ಆದಿಪು**, ೧೦. ೬೩ ವ)

ಸಂವರ್ತಕ – [ನಾ] ಪ್ರಳಯಕಾಲದ ಮೋಡಗಳಲ್ಲಿ ಒಂದು (ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸಂವರ್ತಕಂಗಳೆಂಬ ಮುಗಿಲ್ಗಳಂ ಬೆಸಸಿದಾಗಳ್: **ಪಂಪಭಾ**, ೫. ೯೫ ವ)

ಸಂವಳಯಿತ – [ಗು] ಸುತ್ತುವರಿಯಲ್ಪಟ್ಟ (ಚಳತ್ ಅನಿಳ ಆಹತ ಕ್ಷುಭಿತ ಭಂಗುರತುಂಗತರಂಗಮಾಳಿಕಾವಳನ ಸಮುಚ್ಚಳತ್ ಮಣಿಗಣ ಆತ್ತ ಮರೀಚಿಲತಾಪ್ರತಾನಸಂವಳಿಯಿತ: **ಪಂಪಭಾ**, ೪. ೨೫)

ಸಂವಾಸ –[ನಾ] ವಾಸಮಾಡುವುದು (ಪಂಡಿತೆಯೆಂಬ ಬಜೆಯ ಪೆಸರಲ್ಲದೆ ರಾಜಕುಳಸತತಸಂವಾಸಪ್ರಾಪ್ತ ಪ್ರಾಗಲ್ಭ್ಯತೆಯುಂ ಉಳ್ಳುದಜೆಂದಂ: **ಆದಿಪು**, ೪. ೨೧ ವ)

ಸಂವಾಹ – [ನಾ] ಸಮೃದ್ಧವಾದ ಬೆಳೆಯಿರುವ ಹಳ್ಳಿ (ಶಿರೋವ್ಯೂಢ ಧಾನ್ಯಸಂಚಯೋಪಭೋಗಿ ಜನ ನಿವಾಸಿಗಳಪ್ಪ ಸಂವಾಹಂಗಳುಮಂ: **ಆದಿಪು**, ೮. ೬೩ ವ)

ಸಂವಾಹನ – [ನಾ] [ಭಾರ] ಹೊರುವ ಪ್ರಾಣಿ (ಪದಿನಾಱುಸಾಸಿರ ಖೇಡಂಗಳುಂ ಪದಿನಾಱುಸಾಸಿರ ಸಂವಾಹನಂಗಳುಂ: **ಆದಿಪು**, ೧೫. ೩ ವ)

ಸಂವೀಜಿತ – [ಗು] ಬೀಸಲ್ಪಟ್ಟ (ವಾಜಿರಾಜಿಶ್ರವಣ ಚಮರಜಶ್ರೇಣಿ ಸಂವೀಜಿತ ಆಶಾಂಬರಭಾಗಂ: **ಆದಿಪು**, ೪. ೨೪)

ಸಂವೃತಿ – [ನಾ] ಮರೆಮಾಚುವಿಕೆ (ನಿಜಾಕೃತಿಸಂವೃತಿಯಿಂ ತ್ರಿಃಪ್ರದಕ್ಷಿಣಂಗೆಯ್ದು ತ್ರಿಭುವನಗುರುಗೆಱಗಿ ಪೊಡೆವಟ್ಟು: **ಆದಿಪು**, ೯. ೧೦೦ ವ)

ಸಂವೇಗ – [ನಾ] ದೃಢಸಂಕಲ್ಪ (ಶ್ರೀಧರಾಮರಂ ಅತ್ಯಂತ ಧರ್ಮಸಂವೇಗಪರಾಯಣನಾಗಿ ಸರ್ವಾಂಗಾಲಿಂಗಿತ ಮಹೀತಳಂ ಗುರೂಪದೇಶದಿಂದಾತನಂ ಪ್ರತಿಬೋಧಿಸಲ್: **ಆದಿಪು**, ೫. ೯೪ ವ)

ಸಂವ್ಯಾನ – [ನಾ] ಉತ್ತರೀಯ (ದುಕೂಲಾಂಬರಮನುಟ್ಟು ಪೊಸವಾವುಗೆಯಂ ಮೆಟ್ಟಿ ಕನಕ ಸಂವ್ಯಾನ ಸೂತ್ರಮನಾಚಮಿಸಿ: **ಪಂಪಭಾ**, ೧೨. ೧೦೮ ವ)

ಸಂಶಯ – [ನಾ] [ಜೈನ] ಜೈನತತ್ವಗಳ ಬಗೆಗಿನ ಶಂಕೆ (ಸಂಶಯ ವಿಪರ್ಯಯ ಸಾವದ್ಯ ಅನವದ್ಯ ಅವಸಾಯ ಸ್ವಭಾವರಹಿತಮಾಗಿ ಜೀವಾದಿಪದಾರ್ಥ ಯಥಾತ್ಮ್ಯಾವಗಮಂ ಸಮ್ಯಕ್‌ಜ್ಞಾನಂ: **ಆದಿಪು**, ೧೦. ೬೩ ವ)

ಸಂಶ್ಲಿಷ್ಟ – [ಗು] ಹತ್ತಿಕೊಂಡಿರುವ, ಚೆನ್ನಾಗಿ ಸೇರಿಸಿದ (ಸಮುದ್ಯತ್ ರಜತಗಿರಿ ತಟ ಸ್ಪಷ್ಟ ಸಂಶ್ಲಿಷ್ಟ ಮೌರ್ವೀನಿನದಂ ಪರ್ವಿತ್ತು ಅಕಾಂಡಪ್ರಳಯ ಘನಘಟಾಟೋಪ ಗಂಭೀರನಾದಂ: **ಪಂಪಭಾ**, ೧೨. ೧೩೭)

ಸಂಸಕ್ತ – [ನಾ] ಆಸಕ್ತವಾದ (ಚೂತಲತಾ ಲತಾಂತ ಮಕರಂದಾಮೋದ ಸಂಸಕ್ತ ಷಟ್ಪದದೊಳ್ ತಳ್ತಿರೆ: **ಆದಿಪು**, ೯. ೧೧೬)

ಸಂಸಪ್ತಕ – [ನಾ] ಶಪಥಮಾಡಿ ಯುದ್ಧಮಾಡುವ ಸುಶರ್ಮ, ಸತ್ಯೇಷು, ಸತ್ಯಕರ್ಮ, ಸತ್ಯದೇವ, ಸತ್ಯರಥ ಎಂಬ ತ್ರಿಗರ್ತರಾಜನ ಐವರು ಮಕ್ಕಳು, ಇವರನ್ನು ಸೂರ್ಯಾಸ್ತಕ್ಕೆ ಮುನ್ನ ಕೊಲ್ಲಲು ಅರ್ಜುನನು ಶಪಥಮಾಡುತ್ತಾನೆ (ದೇವದತ್ತ ಶಂಖಮಂ ಪೂರಿಸಿ ಸಂಸಪ್ತಕರೊಡ್ಡಣದತ್ತ ರಥಾಂಗಧರನಂ ರಥಮಂ ಚೋದಿಸಲ್ವೇಟ್ಟಾಗಳ್: **ಪಂಪಭಾ**, ೧೦. ೬೪ ವ)

ಸಂಸರಣ – [ನಾ] ಸಂಸಾರ, ಐಹಿಕತೆ (ಕರಣೀಯಂ ನಿನ್ನ ವಾಕ್ಯಂ ನಿಜಮತಮೆ ಮತಂ ಮೆಚ್ಚಿದಂತೆನ್ನನೀ ಸಂಸರಣಾಂಭೋರಾಶಿಯಿಂದಂ ಪೊಱಮಡಿಸು: **ಆದಿಪು**, ೨. ೪೯)

ಸಂಸರ್ಗ – [ನಾ] ಸಹವಾಸ (ಮಾಂಸಮಧುಮದ್ಯಸೇವನೆ ಹಿಂಸಾರುಚಿ ಪರಮಜಿನಮತಾರುಚಿ ಕುಲಟಾಸಂಸರ್ಗಂ ಎಂಬಿವಲ್ಲದೆ ಸಂಸಾರಭ್ರಮಣಕಾರಣಂ ಪೆಱವೊಳವೇ: **ಆದಿಪು**, ೫. ೮೦)

ಸಂಸರ್ಪತ್ – [ಗು] ಹಬ್ಬಿದ, ದೂರ ಕೇಳಿಸುವ (ದ್ವಾದಶಯೋಜನ ಸಂಸರ್ಪತ್ ನಿನಾದಂಗಳಪ್ಪ ಆನಂದಿಗಳೆಂಬ ಪನ್ನೆರಡು ಮಹಾಭೇರಿಗಳುಂ: **ಆದಿಪು**, ೧೫. ೩ ವ)

ಸಂಸಾರ – [ನಾ] [ಜೈನ] ಐದು ವಿಧವಾದ ಸಂಸಾರ (ಅವಱೊಳ್ ದ್ರವ್ಯ ಕ್ಷೇತ್ರ ಕಾಲ ಭವ ಭಾವ ಭೇದದಿಂ ಪಂಚವಿಧಂ ಸಂಸಾರಂ: **ಆದಿಪು**, ೧೦. ೬೩ ವ); ಲೋಕಜೀವನ (ಸಾರಂ ಅನಂಗಜಂಗಮಲತಾ ಲಲಿತಾಂಗಿಯರಿಂದಮಲ್ತೆ ಸಂಸಾರಂ: **ಪಂಪಭಾ**, ೧. ೧೧೪)

ಸಂಸಾರಕ್ಷಪಕ – [ನಾ] ಸಂಸಾರವನ್ನು ಪರಿತ್ಯಜಿಸಿದವನು (ಆಯುರವಸಾನದೊಳೆ ಸಂಸಾರಕ್ಷಪಕನಾಗಿ ಸಮಾಧಾನ ಪುರಸ್ಸರಂ ಸನ್ಯಸನವಿಧಾನದಿಂ ಪರಿತ್ಯಕ್ತಜೀವಿತಂ: **ಆದಿಪು**, ೨. ೧೯ ವ)

ಸಂಸಾರಸಾರೋದಯ – [ನಾ] ಬದುಕಿನಲ್ಲಿ ಸಾರವನ್ನು ಹರಡುವವನು, ಪಂಪ ತನಗೆ ತಾನೇ ಕೊಟ್ಟುಕೊಂಡ ವಿಶೇಷಣ (ಸಂಸಾರದೊಳ್ ಸಾರಮಪ್ಪುದಜೆಂ ಧರ್ಮಂ ಅದಂ ನಿಮಿರ್ಚುವುದಜೆಂ ಸಂಸಾರಸಾರೋದಯಂ: **ಆದಿಪು**, ೧. ೨೭)

ಸಂಸಾರಾಸಾರತೆ – [ನಾ] [ಸಂಸಾರ+ಅಸಾರತೆ] ಸಂಸಾರದ ಅರುಚಿ (ಪಲವು ಕಾಲಮರಸುಗೆಯ್ದು ಸಂಸಾರಾಸಾರತೆಗೆ ಪೇಸಿ: **ಪಂಪಭಾ**, ೧. ೬೫ ವ)

ಸಂಸಾರಿಜೀವ – [ನಾ] [ಜೈನ] ಜೀವತತ್ವದ ಸಂಸಾರಿ ಮುಕ್ತ ಎಂಬ ಎರಡು ಬಗೆಗಳಲ್ಲಿ ಒಂದು (ಸಂಸಾರಿಜೀವಂ ತ್ರಸ ಸ್ಥಾವರ ವಿಕಲ್ಪದಿಂ ಇರ್ತೆಱನಕ್ಕುಂ: **ಆದಿಪು**. ೧೦. ೬೩ ವ)

ಸಂಸಿಕ್ತ – [ಗು] ಎರಚುವಿಕೆಯ (ಮೇಘಕುಮಾರ ಸಸಿಂಸಿಕ್ತ ಪ್ರಶಮಿತ ರಜಃಪ್ರಸರಧರಣೀತಳನುಂ: **ಆದಿಪು**, ೧೦. ೬೭ ವ)

ಸಂಸೃತಿ – [ನಾ] ಸಂಸಾರ (ಸಂಸೃತಿಯೊಳ್ಮೆತ್ತೆ ಗಡಂ ಕಡಂಗಿ ತೊಡರ್ದಾಂ ಮಾಣ್ದಿರ್ಪೆನೆಂದಣ್ಮಿ ಘೋರ ತಪೋವೃತ್ತಿಯನಾಂತ ಪೆಂಪತಿಬಳಂಗಕ್ಕುಂ: **ಆದಿಪು**, ೧. ೮೧); [ನಾ] ಜಗತ್ತು (ಅಂತಕಸರ್ಪಂ ಕೊಳೆ ಬರ್ದುಕುವನ್ನರಾರ್ ಸಂಸೃತಿಯೊಳ್: **ಆದಿಪು**, ೩. ೬೫)

ಸಂಸೃತಿಧರ್ಮ – [ನಾ] ಸಂಸಾರಧರ್ಮ (ಇಂತುಟು ಸಂಸೃತಿಧರ್ಮಮೇಕೆ ಬಾಯಟೆವುದಿದೇಕೆ ಚಿಂತಿಸುವುದೇಕೆ: **ಪಂಪಭಾ**, ೨. ೨೭)

ಸಂಸೃತಿನಿಗಳ – [ನಾ] ಸಂಸಾರ ಬಂಧನ (ನೀನುಂ ತೃತೀಯ ಜನ್ಮದೊಳ್ ವಿಗಳಿತಸಂಸೃತಿನಿಗಳನೆಯಪ್ಪೆಯೆಂಬುದುಂ: **ಆದಿಪು**, ೨. ೪೪ ವ)

ಸಂಸೇಕ – [ನಾ] ನೀರೆರೆಚುವುದು, ಅಭಿಷೇಕ (ಅತನುಶ್ರೀಕಾಮಿನೀ ಮಣಿದರ್ಪಣಮೆನಿಸುವ ತದ್ವಕ್ತ್ರಶೀತಾಂಶು ನೇತ್ರಾಸಿತನೀರೇಜಾತಯುಗ್ಮಕ್ಕೆ ಅಮೃತಸಲಿಲಸಂಸೇಕಮಂ ಮಾಡೆ: **ಆದಿಪು**, ೮. ೨೩)

ಸಂಸ್ಕರಿಸು – [ಕ್ರಿ] [ಶವ] ಸಂಸ್ಕಾರ ಮಾಡು (ಧೃತರಾಷ್ಟ್ರನ ಬೆಸದೊಳ್ ವಾರಣಾವತಕ್ಕೆ ಪೋಗಿ ತದರ್ಧದಗ್ಧ ಕಳೇವರಂಗಳಂ ಸಂಸ್ಕರಿಸಿ: **ಪಂಪಭಾ**, ೩. ೮ ವ)

ಸಂಸ್ಕಾರವಿಧಿ – [ನಾ] ಶವಸಂಸ್ಕಾರ ಪ್ರಕ್ರಿಯೆ (ಅದಾವುದು ದೋಷಂ ಅವರ್ಗೆಲ್ಲಂ ಸಂಸ್ಕಾರವಿಧಿಯಂ ನಾನೆ ಪಕ್ಕದೊಳಿರ್ದು ಮಾಡಿಸುವೆಂ: **ಪಂಪಭಾ**, ೧೪. ೮ ವ)

ಸಂಸ್ಕಾರಂ ಮಾಡು – [ಕ್ರಿ] ಪರಿಷ್ಕರಿಸು, ಉತ್ತಮಪಡಿಸು (ಘೃತ ಲವಣ ತೈಲ ಕ್ಷೀರ ದಧಿ ವ್ಯಂಜನಂಗಳೊಳ್ ಸಂಸ್ಕಾರಂ ಮಾಡುವ: **ಆದಿಪು**, ೬. ೭೭ ವ)

ಸಂಸ್ಕಾರಿಸು – [ಕ್ರಿ] ಸಂಸ್ಕರಿಸು (ಅವಂ ನೆನೆಯೆಂ ಸಂಸ್ಕಾರಿಸಲ್ ಈ ವನಿತೆಯರ್ಗೆ ಅವರವರ ಪುರುಷರಂ ಕುಡವೇಟ್ಕುಂ: **ಪಂಪಭಾ**, ೧೪. ೮)

ಸಂಸ್ತೂಯಮಾನ – [ಗು] ಹೊಗಳಲ್ಪಡುವ (ಅನೇಕ ದಿವಿಜವಂದಿವೃಂದ ಸಂಸ್ತೂಯಮಾನ .. .. ದರಹಸಿತವದನ ಸರಸೀರುಹಂ: **ಆದಿಪು**, ೮. ೫೫ ವ)

ಸಂಸ್ಥಾನವಿಚಯ – [ನಾ] [ಜೈನ] ಧರ್ಮಧ್ಯಾನಗಳಲ್ಲಿ ಒಂದು (ಆಜ್ಞಾವಿಚಯಂ ಅಪಾಯವಿಚಯ ವಿಪಾಕವಿಚಯ ಸಂಸ್ಥಾನವಿಚಯಮೆಂಬ ನಾಲ್ಕುಂ ಧರ್ಮಧ್ಯಾನಮಂ ಧ್ಯಾನಿಸುತ್ತುಂ: **ಆದಿಪು**, ೧೦ ೧೪ ವ)

ಸಂಸ್ಥಾಪನ – [ನಾ] ನೆಲೆಗೊಳಿಸುವಿಕೆ (ಉಪಗೂಹನಮುಂ ಸದ್ಧರ್ಮಪಥಚ್ಯುತ ಭವ್ಯಸಂಹತಿ ಸಂಸ್ಥಾಪನಮುಂ: **ಆದಿಪು**, ೫. ೫೮)

ಸಂಹತಿ – [ನಾ] ಸಮೂಹ (ತನ್ನಿಂದಂ ಅಂತಕಾನನಮಂ ಎಯ್ದಿದ ಮಹಾಪ್ರಚಂಡ ಮಂಡಳಿಕ ಮಕುಟಬದ್ಧ ಸಾಮಂತಸಂಹತಿಯುಮಂ: **ಪಂಪಭಾ**, ೧೪. ೨. ವ)

ಸಂಹನನ – [ನಾ] ಕಟ್ಟುಮಸ್ತಾದ ದೇಹ (ವಜ್ರವೃಷಭನಾರಾಚ ಶರೀರಸಂಹನನಸೌಮ್ಯನುಂ ಸಮಚತುರಸ್ರಸಂಸ್ಥಾನನುಂ: **ಆದಿಪು**, ೧೫. ೩ ವ)

ಸಕಳಕಳಾಧರ – [ನಾ] ಎಲ್ಲ ಕಲೆಗಳನ್ನುಳ್ಳ, ಪೌರ್ಣಮಿಯ ಚಂದ್ರ (ಪಲಂಬರ್ ರಾಜಕುಮಾರರ ನಡುವೆ ತಾರಾಗಣಂಗಳ ನಡುವಣ ಸಕಳಕಳಾಧರನಂತೆ ಶಸ್ತಕಲಾಧರನಾಗಿ: **ಪಂಪಭಾ**, ೨. ೫೯ ವ)

ಸಕಳದತ್ತಿ – [ನಾ] [ಜೈನ] ದತ್ತಿ ಎಂಬುದು ಆರ್ಯಷಟ್ಕರ್ಮಗಳಲ್ಲಿ ಒಂದು; ಯೋಗ್ಯನಾದ ತನ್ನ ಮಗನಿಗೆ ಅಥವಾ ಅವನು ಇಲ್ಲದಿದ್ದರೆ ಯೋಗ್ಯನಾದ ಅಣ್ಣತಮ್ಮಂದಿರಲ್ಲಿ ಒಬ್ಬನಿಗೆ ತನ್ನ ವಂಶದ ಪರಂಪರೆ ಮತ್ತು ಧರ್ಮವು ನಡೆಯಬೇಕೆಂದು ತನ್ನ ಸರ್ವಸ್ವವನ್ನೂ ನೀಡುವುದು ಸಕಳದತ್ತಿ (ನಿಜಾನ್ವಯೋದ್ಧರಣಸಮರ್ಥನಪ್ಪ ಅಗ್ರತನೂಭವಂಗೆ ಆತ್ಮೀಯ ಧರ್ಮ ಧನ ಬಂಧುಗಳಂ ಸಮರ್ಪಿಪ ಸಕಳದತ್ತಿಯುಂ: **ಆದಿಪು**, ೧೫. ೧೩ ವ)

ಸಕಳರ್ತುಕರಾಜ – [ನಾ] ಎಲ್ಲ ಋತುಗಳಿಗೂ ರಾಜ, ಋತುರಾಜ (ಭರತರಾಜಂ ಸಕಳರ್ತುಕರಾಜನಪ್ಪ ಮನೋಜರಾಜಂಗೆ ಮಾಡಿದುದೆನಿಸುವ ವಿರಾಜಮಾನ ರಕ್ತಾಶೋಕಪಲ್ಲವ ಕಾಯಮಾನದೊಳ್: **ಆದಿಪು**, ೧೧. ೭೪ ವ)

ಸಕಳವಟ್ಟೆ – [ನಾ] ತುಂಡು ಬಟ್ಟೆಯ ಪಟ್ಟಿಗಳು (ಸಕಳವಟ್ಟೆಗಳುಮಂ ಮೆಟ್ಟುವೆಡೆಗಳೊಳೆಲ್ಲಂ ಪಾಸಿ: **ಆದಿಪು**, ೪. ೩೪ ವ); [ನಾ] ಬಣ್ಣಬಣ್ಣದ ಬಟ್ಟೆ (ದೆಸೆದೆಸೆಗೆ ಕೆದಱಿದ ಕೆಂಡದಿಂಡೆಗಳುಂ ನಾರಂಗ ಸಕಳವಟ್ಟೆಯ ಪಟಯಿಗೆಗಳಂತೆ ನಭಕ್ಕೆ ಮಿಳಿರ್ದು: **ಪಂಪಭಾ**, ೧೧. ೧೪೦ ವ)

ಸಕಳಾರ್ಥಸಂಯುತ – [ಗು] ಎಲ್ಲ ಅರ್ಥಗಳಿಂದ ಕೂಡಿದ (ಆ ಸಕಳಾರ್ಥಸಂಯುತ ಅಳಂಕೃತಯುಕ್ತಂ ಉದಾತ್ತ ವೃತ್ತಿ ವಿನ್ಯಾಸಂ ಅನೇಕ ಲಕ್ಷಣ ಗುಣ ಪ್ರಭವಂ: **ಪಂಪಭಾ,** ೧. ೯)

ಸಕ್ಕ – [ನಾ] [ಸೃಕ್ವ] ಕಟವಾಯಿ, ಬಾಯಿಯ ಕೊನೆ (ಭಾರ್ಗವರ್ ಸುರಿಗಿಱಿವಂತಿಱಿಯೆ ಸೂಸುವ ಕೆನ್ನೆತ್ತರ್ ಕಟಿಲ್ದುದಿರ್ವ ಸಕ್ಕದ ಸಿಪ್ಪುಗಳುಂ .. .. ಅಗುರ್ವಂ ಪಡೆಯೆ: **ಪಂಪಭಾ,** ೧೦. ೯೩ ವ)

ಸಕ್ಕಿ – [ನಾ] ಸಾಕ್ಷಿ (ಮದೀಯಾಯಾತಿಯ ದೊರೆಗೆ ನೀಂ ಸಕ್ಕಿಯೆಂಬಂತಿರೆ ನೀಳ್ದಿಂ ಪರ್ವಿ ಪೂರ್ವಾಪರಜಳಧಿಗಳಂ ಮುಟ್ಟಿ ನಿಂದತ್ತಗೇಂದ್ರಂ: **ಆದಿಪು**, ೯. ೧೧೫)

ಸಕ್ಕಿಡು – [ಕ್ರಿ] ಸಾಕ್ಷಿಯಾಗಿರಿಸಿಕೊ, ಕಣ್ಣೆದುರಿಗಿರಿಸಿ (ಸೇನಾಪದವಿಯೊಳ್ ನೀನೆ ನಿಲ್ ನಾಳೆ ದುರ್ಯೋಧನನಂ ಸಕ್ಕಿಟ್ಟು ಮಾರಾಂತು ಅದಟರೊಳಳವಂ ತೋಱುವಂ ನೀನುಂ ಆನುಂ: **ಪಂಪಭಾ**, ೧೨. ೪೫)

ಸಕ್ಕಿಮಾಡು – [ಕ್ರಿ] ಸಾಟಿಮಾಡು (ನೀಮೆ ಗಂಭೀರರಿರ್ ಅಂತಸ್ಸಾರರಿರ್ ನೀಮಿರೆ ಪೆಱರೊಳರೇ ಸಕ್ಕಿಮಾಡಲ್ಕೆ ವಿಶ್ವಂಭರೆಯೊಳ್: **ಆದಿಪು**, ೯. ೧೧೫)

ಸಕ್ತ – [ಗು] ತಲ್ಲೀನ (ಸಾರಹಂಸಕೋಕಿಳಕುಳಧ್ಯಾನೋತ್ಕರಂ ಚೆಲ್ವನಾಯ್ತು ಕರಂ ಸಕ್ತನಿಳಿಂಪದಂಪತಿಗಳಿಂದಾ ನಂದನಂ ನಂದನಂ: **ಪಂಪಭಾ,** ೫. ೮೦)

ಸಗಣನೀರ್ – [ನಾ] ಸಗಣಿಯ ನೀರು (ಕತ್ತುರಿಯ ಸಗಣನೀರ್ ಬಿಡುಮುತ್ತಿನ ರಂಗವಲಿ ಮಿಳಿರ್ವ ದುಗುಲದ ಗುಡಿ ಸಂಪತ್ತಿನ ಬಿತ್ತರದೆತ್ತಿದ ಮುತ್ತಿನ ಮಂಡವಿಗೆ ಪೊಟಲ ಮನೆಗಳೊಳೆಲ್ಲಂ: **ಪಂಪಭಾ**, ೩. ೨)

ಸಗದ – [ನಾ] ಆನೆಯ ಮುಖದಲ್ಲಿ ದವಡೆಗಳ ಕೆಳಭಾಗದ ಒಂದು ಅಂಗ (ಆಯತ ಪೃಥುಪಿಬಸ್ತಾನುಪದಿಗ್ಧಾಂದಪೂರ್ವಪೀನ ರಕ್ತಾರೋಮಾಶ್ಲಿಷ್ಟಸಮಾಸಮ ಸಗದನುಂ: **ಆದಿಪು**, ೧೨. ೫೬ ವ)

ಸಗಾಟಿಸು – [ಕ್ರಿ] ಗೆಳೆತನ ಮಾಡು (ಆಸೆದೋಱಿ ಬಗೆದೋಱಿದೊಡಂ ನೆರೆದಿರ್ದೊಡಂ ಸಗಾಟಿಸದೊಡಂ .. .. ಪೇಸದವಳ್ಗೆ ಮತ್ತಮಾಟಿಸುವುದೇ: **ಪಂಪಭಾ,** ೪. ೯೨)

ಸಗಿರಿಸಾಗರದ್ವೀಪಯಾ – [ಗು] ಪರ್ವತ ಸಾಗರ ಹಾಗೂ ದ್ವೀಪಗಳಿಂದ ಕೂಡಿದ (ಸದಿಗ್ವಳಯಯಾ ಭುವಾ ಸಗಿರಿಸಾಗರದ್ವೀಪಯಾ: **ಪಂಪಭಾ,** ೪ ೨೭)

ಸಗ್ಗ – [ನಾ] [ಸ್ವರ್ಗ] ದೇವತೆಗಳ ವಾಸಸ್ಥಳ (ಕಡುತಪದಿಂದೆ ನಿನ್ನ ಪಡೆಪಾವುದೊ ಗಾವಿಲ ಸಗ್ಗಮಲ್ತೆ ಪೋ ನುಡಿಯವೊ ಮೂರ್ಖ ಸಗ್ಗದ ಫಲಂ ಸುಖಮಲ್ತೆ: **ಪಂಪಭಾ,** ೭. ೯೩)

ಸಜ್ಜನವೆಂಡಿರ್ – [ನಾ] ಕುಲಸ್ತ್ರೀ (ತೆಱಂಬೊಳೆವ ಬಾಳೆಗಳಂತಿರೆ ನಾಟ್ಯವಿಳಾಸದೊಳ್ ಪೊರೆದಿರೆ ಬಂದುದಂದೊಡನೆ ಸಜ್ಜನವೆಂಡಿರ ತಂಡಮೋಳಿಯೊಳ್: **ಆದಿಪು,** ೧೧. ೪೬)

ಸಜ್ಜರಸ – [ನಾ] ರಾಳ ಎಂಬುದರ ರಸ (ಅರಗು ಮೊದಲಾಗೆ ಧೃತ ಸಜ್ಜರಸಂ ಬೆಲ್ಲಂ ಸಣಂಬಿವೆಂಬಿವಱಿಂ ವಿಸ್ತರಿಸಿ ಸಮೆದ ಇಂದ್ರಭವನಮೆ ಧರೆಗವತರಿಸಿರ್ದುದೆನಿಸುವ ಅರಗಿನ ಮನೆಯಂ: **ಪಂಪಭಾ,** ೩. ೩)

ಸಜ್ಜಾತಿ – [ನಾ] [ಜೈನ] ಸತ್ಕುಲದಲ್ಲಿ ಹುಟ್ಟುವ ಪರಿಶುದ್ಧ ಜನ್ಮ (ಸಜ್ಜಾತಿ ಸದ್ಗೃಹತ್ವ ಪಾರಿವ್ರಾಜ್ಯಪದ ಸುರೇಂದ್ರತ್ವ ಸಾಮ್ರಾಜ್ಯ ಪರಮಾರ್ಹಂತ್ಯ ಪರಿನಿರ್ವಾಣಮೆಂಬ ಏೞುಂ ಪರಮಸ್ಥಾನನಾಮ: **ಆದಿಪು,** ೧೫. ೧೬ ವ)

ಸಟ – [ನಾ] ಸಿಂಹದ ಕೇಸರಗಳು (ಪರೆದ ಉರಿಗೇಸಂ ಅವ್ವಳಿಪ ನಾಲಗೆ ಮಿಂಚುವ ದಾಡೆ ಬಿಟ್ಟ ಕಣ್ ತಿರುಪಿದ ಮೀಸೆ ಕೊಂಕಿದ ಸಟಂ ಕಡು ನೆಕ್ಕ ಕದಂಪು: **ಪಂಪಭಾ,** ೧೨. ೭)

ಸಟ್ಟುಗ – [ನಾ] ಸೌಟು (ಅನ್ನೆಗಂ ಭೀಮಸೇನನುಂ ಬೋನವೇಳಿಗೆಯಂ ಸಟ್ಟುಗಮುಮಂ ಒರ್ವ ಪರಿಚಾರಕನಿಂ ಪಿಡಿಯಿಸಿಕೊಂಡು ಬಂದು: **ಪಂಪಭಾ,** ೮. ೫೩ ವ)

ಸಡಹುಡ – [ನಾ] ಚುರುಕುತನ, ಲವಲವಿಕೆ, ಸಂಭ್ರಮ (ಸಡಹುಡನಪ್ಪ ಕಟಕ್ತೆ ಕೊಡೆ ಸಂತಸದಿಂ ಪೆಱಗೇಱೆ ಬರ್ಪ ಕನ್ನಡಿವಿಡಿದಾಕೆ ಚಿನ್ನದ ಸವಂಗಂ: **ಪಂಪಭಾ,** ೯. ೧೦೩)

ಸಡಿಲ್ – [ಕ್ರಿ] [ಶಿಥಿಲ] ಕಡಿಮೆಯಾಗು (ನಾನಾಯೋನಿಗಳೊಳ್ ಸುೞಿದೇನಾನುಂ ದುಷ್ಕೃತಂ ಸಡಿಲ್ದೊಡೆ ಪಡೆಗುಂ ಮಾನುಷ್ಯಮಂ: **ಆದಿಪು,** ೯. ೪೮); **[ಕ್ರಿ]** ಅಳ್ಳಕಗೊಳ್ಳು (ಬಿದಿದಮರ್ದಿರ್ದ ತೋಳ್ ಸಡಿಲೆ ಜೋಲೆ ಮೊಗಂ ಮೊಗದಿಂದಮೊಯ್ಯಗೊಯ್ಯಗೆ ನಗೆಗಣ್ಗಳ್ ಆಲಿ ಮುಗುಟ್ದಂತಿರೆ ಮುಚ್ಚಿರೆ: **ಪಂಪಭಾ,** ೨. ೧೯)

ಸಡಿಲಿಸು – [ಕ್ರಿ] ಅಳ್ಳಕಗೊಳಿಸು (ಬಿಡದೆ ಪೊಗೆ ಸುತ್ತೆ ತೋಳಂ ಅಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನಂದೊಡಗಳೆದರ್: **ಆದಿಪು,** ೫. ೨೪)

ಸಡಿಲ್ಚು – [ಕ್ರಿ] ಸಡಿಲಿಸು (ಪೊರೆಯೊಳ್ ಪೊಂಗಿರೆ ತಂಬೆಲರ್ಪೊರೆಯಂ ಸಡಿಲ್ಚೆ ನಡು ಪೊಂಗಿರೆ ಮಲ್ಲಿಗೆಗಳೊಳ್ ವಸಂತದೊಳ್ ಬಿರಿದೊಡೆ: **ಆದಿಪು,** ೧೧. ೧೦೬)

ಸಣಂಬು – [ನಾ] ಸಣಬು (ಅರಗು ಮೊದಲಾಗೆ ಧೃತ ಸಜ್ಜರಸಂ ಬೆಲ್ಲಂ ಸಣಂಬಿವೆಂಬಿವಱಿಂ ವಿಸ್ತರಿಸಿ ಸಮೆದ ಇಂದ್ರಭವನಮೆ ಧರೆಗವತರಿಸಿರ್ದುದೆನಿಸುವ ಅರಗಿನ ಮನೆಯಂ: **ಪಂಪಭಾ,** ೩. ೩)

ಸಣ್ಣಿಗೆ – [ನಾ] ಒರಳು–ರುಬ್ಬುಗುಂಡು (ತಮ್ಮ ಮುಂ ನೆರಪದಾಯುಷ್ಯಂಬರಂ ಮಾಯಮಾಗದು ಮೆಯ್ ಸಣ್ಣಿಗೆಯೊಳ್ ಮಗುೞ್ಚಿದೊಡಂ: **ಆದಿಪು,** ೫. ೯೩)

ಸಣ್ಣಿಸು – [ಕ್ರಿ] ಪುಡಿಮಾಡು (ತರಂತರದೊಳೆ ಪಾಯ್ದು ಕೂರ್ಗಣೆಗಳಂ ತಱಿದೊಟ್ಟಿ ತೆರಳ್ಚಿ ತೂಳ್ದಿಕೊಂಡು ಎರೆದು ಮಗುೞ್ಚಿ ಸಣ್ಣಿಸಿದಂ ಆಂತ ಚತುರ್ವಲಮಂ ಗುಣಾರ್ಣವಂ: **ಪಂಪಭಾ,** ೧೧. ೧೪೭)

ಸತತಗತಿ – [ನಾ] ಸದಾ ಚಲಿಸುವುದು, ಗಾಳಿ (ಸಿಂಧುವನವೇದಿಕೆಯಿಂ ಸತತಗತಿವೇಗದಿಂದೂರ್ಜಿತ ಭುಜಬಳನೆಯ್ದಿ ನಗದ ವನವೇದಿಕೆಯಂ: **ಆದಿಪು,** ೧೩. ೩೫)

ಸತಿಯರಿರ್ವರ್ – [ನಾ] ಇಬ್ಬರೂ ಹೆಂಗಸರು (ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ: **ಪಂಪಭಾ,** ೧. ೮೫)

ಸತ್ತಿ – ? (ನೆಲವಡಲಗೆಯ ಜಾಗಂಗಳುಮಂ ಅವನೆ ಸಂಗಡಂಗೊಂಡಿರ್ದ ಸತ್ತಿಸಂಗಡಂಗಳುಂ: **ಆದಿಪು,** ೮. ೧೫ ವ)

ಸತ್ತಿಗೆ – [ನಾ] [ಛತ್ರಿಕಾ] ಕೊಡೆ (ತುರಗಮುಮೊಂದು ಸತ್ತಿಗೆಯೊಂದಿರೆ ಕಾಪಿನ ಬಂಟು ಸುತ್ತಲುಂ ಬರೆ: **ಆದಿಪು,** ೧೧. ೪೬)

ಸತ್ಯ – [ನಾ] [ಜೈನ] ಹತ್ತು ಕುಲಧರ್ಮಗಳಲ್ಲಿ ಒಂದು, ಸತ್ಯವನ್ನು ಪಾಲಿಸುವುದು (ಎಂಬಿನಮುತ್ತಮಕ್ಷಮಾ ಮಾರ್ದವಾರ್ಜವ ಸತ್ಯ ಶೌಚ ಸಂಯಮ ತಪಸ್ತ್ಯಾಗಾಕಿಂಚನ್ಯ ಬ್ರಹ್ಮಚರ್ಯಪರ್ಯಾಯಪರ್ಯಾಪ್ತ ದಶಧರ್ಮ್ಮಂಗಳುಮಂ ಕೈಕೊಂಡು: **ಆದಿಪು,** ೬. ೩೦ ವ);

ಸತ್ಯವತೀನಂದನ – [ನಾ] ಸತ್ಯವತಿಯ ಮಗ, ವ್ಯಾಸ (ಸತ್ಯವತೀನಂದನಂ ತನ್ನ ಮಕ್ಕಳ ಸಾಯಸಂಗಳ್ಗೆ ಮನ್ಯುಮಿಕ್ಕು ಕಣ್ಣ ನೀರಂ ನೆಗಪೆ: **ಪಂಪಭಾ,** ೭. ೫೯ ವ)

ಸತ್ವ – [ನಾ] ಸತ್ವಗುಣ ಮತ್ತು ಬಿಳಿಪು (ಸಂತಸಮಂ ಮಱುಕಕ್ಕೆ ಮಾಣ್ದೊಡೆ ಈ ನಡೆಗಿಡೆ ಸತ್ವಮಂ ತಮಮುಮಂ ಕಡೆಗಣ್ಣೊಳೆ ಕಂಡೆನೋಪಳಾ: **ಪಂಪಭಾ,** ೪. ೭೮)

ಸತ್ತ್ವ – [ನಾ] ಶಕ್ತಿ, ಬಲ (ಕೊಲಲ್ಕೆ ಸತ್ತ್ವಮಪ್ಪಂತಿರೆ ಮುಂ ಪೊಡೆವೆಂ ಕೂಱಿಂ ಬೞಿಯಿಂ ಪೊಡೆವೆಂ ರಕ್ಕಸನಂ: **ಪಂಪಭಾ,** ೩. ೨೯); [ನಾ] ಸತ್ತ್ವಗುಣ (ಸತ್ತ್ವರಜಸ್ತಮಂಗಳುಂ ಕಾಣಲಾದುವು ಎರಡುಂ ಪಡೆಯೊಳ್: **ಪಂಪಭಾ,** ೧೦. ೬೯)

ಸತ್ಪಥಾತಿಥಿ – [ನಾ] ಆಕಾಶಗಾಮಿ (ಚಾರಣ ಮುನೀಂದ್ರರ್ ಬೆಸಸಿ ಸತ್ಪಥೋನ್ನತಿಯಂ ನನ್ನಿಮಾಡುವಂತೆ ಸತ್ಪಥಾತಿಥಿಗಳಾದರ್: **ಆದಿಪು,** ೫. ೨೦ ವ)

ಸದಾದಿ – [ನಾ] [ಜೈನ] ಸ್ಯಾದ್ವಾದ, ಪದಾರ್ಥದ ಪೂರ್ಣಜ್ಞಾನವನ್ನು ತಿಳಿಯಲೋಸುಗ ಒಂದು ಗುಣವನ್ನು ಪ್ರಧಾನವಾಗಿರಿಸಿಕೊಂಡು ಇತರ ಗುಣಗಳನ್ನು ಗೌಣವಾಗಿಸಿ ಪರೀಕ್ಷಿಸುವುದು, ಆನಂತರ ಇನ್ನೊಂದು – ಹೀಗೆ ಭಾಗಶಃ ಪರೀಕ್ಷಿಸುತ್ತ ಅದನ್ನು ಸಮಗ್ರವಾಗಿ ತಿಳಿದುಕೊಳ್ಳುವುದು

(ಪ್ರಮಾಣ ನಯ ನಿಕ್ಷೇಪ ಅನುಯೋಗ ಸದಾದಿಗಳಿಂ ನಿಶ್ಚಯಿಸಿದ ಸಪ್ತತತ್ತ್ವಂಗಳೊಳಗೆ ಚೇತನಾಲಕ್ಷಣಮಪ್ಪುದು ಜೀವತತ್ತ್ವಂ: **ಆದಿಪು,** ೧೦. ೬೩ ವ)

ಸದಾನಿ ಕೇತನ – [ನಾ] ದಾನಿಗಳಿರುವ ಮನೆ (ಸದಾನಿಕೇತನಂಗಳಿಂ ಧನದಭವನಮೆನಿಪ ಸಿರಿಯ ಬಚ್ಚರಾಪಣಂಗಳಿಂ: **ಪಂಪಭಾ** ೧. ೫೮)

ಸದಾಸಿಂಧು – [ಗು] ಯಾವಾಗಲೂ ಹರಿಯುವ (ಕಂಚ ಆಕಸ್ಮಿಕ ಪಾಂಸುಪಲ್ಲವ ಜಳಸ್ಯಂದೀ ಸದಾಸಿಂಧುರ್ ಅಪ್ರಾಗೇಯಂ ಪ್ರಿಯಗಳ್ಳಭೂಪತಿ ಚಮೂಪ್ರಸ್ಥಾನಮಾಚಕ್ಷತೇ: **ಪಂಪಭಾ,** ೯. ೯೭)

ಸದಿಗ್ವಳಯಯಾ – [ಗು] ದಿಙ್ಮಂಡಲಗಳಿಂದ ಕೂಡಿದ (ಸದಿಗ್ವಳಯಯಾ ಭುವಾ ಸಗಿರಿಸಾಗರದ್ವೀಪಯಾ: **ಪಂಪಭಾ,** ೪. ೨೭)

ಸದೆ – [ಕ್ರಿ] ಬಡಿ, ಚಚ್ಚು (ತುಱುವಂ ಮಗುಟ್ಚೆ ಮಗುೞದೆ ತನಗಿದಿರೊಡ್ಡಿ ನಿಂದ ಅರಿನೃಪಬಲಮಂ ಅರೆದು ಸದೆದು: **ಪಂಪಭಾ,** ೮. ೧೦೪ ವ)

ಸದ್ಗೃಹತ್ವ – [ನಾ] [ಜೈನ] ಏಳರಲ್ಲಿ ಒಂದು ಬಗೆಯ ಪರಮಸ್ಥಾನ, ಇಷ್ಟವಾದುದನ್ನು ತೊರೆದು ಆತ್ಮಶುದ್ಧಿಮಾಡಿಕೊಳ್ಳುವುದು (ಸಜ್ಜಾತಿ ಸದ್ಗೃಹತ್ವ ಪಾರಿವ್ರಾಜ್ಯಪದ ಸುರೇಂದ್ರತ್ವ ಸಾಮ್ರಾಜ್ಯ ಪರಮಾರ್ಹಂತ್ಯ ಪರಿನಿರ್ವಾಣಮೆಂಬ ಏೞುಂ ಪರಮಸ್ಥಾನನಾಮಂ: **ಆದಿಪು,** ೧೫. ೧೬ ವ)

ಸದ್ದ – [ನಾ] [ಶಬ್ದ] ಸದ್ದು (ಬದ್ದವಣದ ಪಱೆಗಳ್ ಕಿವಿ ಸದ್ದಂಗಿಡೆ ಮೊೞಗೆ ದೇವದುಂದುಭಿರವಂ ಒಂದು ಉದ್ದಾನಿ ನೆಗೞೆ ಮುಗುಳ ಅಲರ ಒದ್ದೆ ಕರಂ ಸಿದ್ಧಮಾದುದು ಅಂಬರತಲದೊಳ್: **ಪಂಪಭಾ,** ೧೨. ೨೧೮)

ಸದ್ಭ್ರಾಂತ – [ಗು] ಜೋರಾಗಿ ಬೀಸುತ್ತಿರುವ (ಸದ್ಭ್ರಾಂತಸಮೀರಣೋತ್ಥಿತ ವಿಶಾಳವಿಲೋಳತರಂಗರೇಖೆ: **ಪಂಪಭಾ,** ೩. ೫೭)

ಸದ್ಯಃಪ್ರಸೂತಿ – [ನಾ] ಆ ಕ್ಷಣವೇ ಹೆರಿಗೆ (ಈಶ್ವರಕಲ್ಪಿತದಿಂ ರಾಕ್ಷಸರ್ಗೆ ಸದ್ಯೋಗರ್ಭಂ ಸದ್ಯಃಪ್ರಸೂತಿಯುಂ ಸದ್ಯೋಯೌವನಮುಂ ಉಳ್ಳ ಕಾರಣದಿಂದೆ: **ಪಂಪಭಾ,** ೩. ೨೦ ವ)

ಸದ್ಯಸ್ತನ – [ನಾ] ಆಗತಾನೇ ಅರಳಿದ (ನೂತನಪ್ರಸ್ತುತ ಸುರಭಿಸುಧಾ ಕ್ಷೀರಧಾರಾಭಿಷೇಕಾರ್ಚನೆಯಂ ಸದ್ಯಸ್ತನ ಅಖಂಡಳ ವನಸುಮ ಮನೋಮಾಲಿಕಾಲಂಬ ಲೀಲಾರ್ಚನೆಯಂ: **ಆದಿಪು,** ೧೪. ೧೧೬)

ಸದ್ಯಸ್ಸಂತಾಪಿತ – [ಗು] [ಸದ್ಯಃ+ಸಂತಾಪಿತ] ಆಗ ತಾನೇ ಕಾಯಿಸಿದ (ಸದ್ಯಃ ಸಂತಾಪಿತ ಲೋಹಪುತ್ರಿಕಾಪರಿರಂಭಸಂಭೃತ ಪ್ಲೋಷಚಲಜ್ಜಾಂಗಳಗಳತ್ ರುಧಿರ: **ಆದಿಪು,** ೫. ೮೭ ವ)

ಸದ್ಯೋಗರ್ಭ – [ನಾ] ಆ ಕ್ಷಣವೇ ಗರ್ಭ ನಿಲ್ಲುವುದು (ಈಶ್ವರಕಲ್ಪಿತದಿಂ ರಾಕ್ಷಸರ್ಗೆ ಸದ್ಯೋಗರ್ಭಂ ಸದ್ಯಃಪ್ರಸೂತಿಯುಂ ಸದ್ಯೋಯೌವನಮುಮುಳ್ಳ ಕಾರಣದಿಂದೆ: **ಪಂಪಭಾ,** ೩. ೨೦ ವ)

ಸದ್ಯೋಯೌವನ – [ನಾ] ಆಕ್ಷಣವೇ ತಾರುಣ್ಯಪ್ರಾಪ್ತಿ (ಈಶ್ವರಕಲ್ಪಿತದಿಂ ರಾಕ್ಷಸರ್ಗೆ ಸದ್ಯೋಗರ್ಭಂ ಸದ್ಯಃಪ್ರಸೂತಿಯುಂ ಸದ್ಯೋಯೌವನಮುಮುಳ್ಳ ಕಾರಣದಿಂದೆ: **ಪಂಪಭಾ,** ೩. ೨೦ ವ)

ಸದ್ವನಜವನ – [ನಾ] ಸುಂದರ ತಾವರೆಗಳ ಕೊಳ (ಅನುಯೋಗ ಕುಸುಮಪಾದಪಂ ಅನೇಕ ಲತಿಕ ಮಂಗಫಳಮಹಿಜಂ ಸದ್ವನಜವನಂ: **ಆದಿಪು,** ೧. ೧೦)

ಸದ್ವಲ್ಲಭ – [ನಾ] ಒಳ್ಳೆಯ ರಾಜ ಹಾಗೂ ಒಳ್ಳೆಯ ಗಂಡ (ಆ ಜಾಕವ್ವೆಗಂ ವಸುಧಾಜಯ ಸದ್ವಲ್ಲಭಂಗಂ ವಿಶದ ಯಶೋರಾಜಿತನೆನಿಪರಿಕೇಸರಿ ರಾಜಂ ತೇಜೋಗ್ನಿಮಗ್ನ ರಿಪುನೃಪಶಲಭಂ: **ಪಂಪಭಾ,** ೧. ೪೧)

ಸನತ್ಕುಮಾರ – [ನಾ] [ಜೈನ] ಹದಿನಾರು ಬಗೆಯ ಸ್ವರ್ಗಗಳಲ್ಲಿ ಒಂದು (ತತ್ ಕರವಿಭ್ರಮದಿಂ ಪದಪೊದವೆ ಸನತ್ಕುಮಾರ ಮಾಹೇಂದ್ರರಿಕ್ಕಿದರ್ ಚಾಮರಮಂ: **ಆದಿಪು,** ೭. ೫೦)

ಸನಾಭಿ – [ನಾ] ನಂಟ (ಅಂತನುವಱೆದು ಒಸಗೆಯೊಳಮರರಾಜನುಂ ಸನಾಭಿಗಳ್ ವೆರಸು ನಾಭಿರಾಜನುಂ ಬಂದು: **ಆದಿಪು,** ೮. ೨೨ ವ); [ನಾ] ದಾಯಾದಿ (ವಿನಯಮುಂ ಎಱಕಮುಂ ಅಪ್ಪುದು ಸನಾಭಿಗಳ್ ಸಂಗತಗಳಪ್ಪೊಡೆ ಪೆಸರ್ಗೊಂಡನಿತಱೊಳ್ ಎನ್ನಂ ಸೈರಿಸನೆನೆ ಭರತಂಗೆಱಗಿ ಲೋಕದಿಂ ನಗಿಸುವೆನೇ: **ಆದಿಪು,** ೧೪. ೭೬)

ಸನಾಭಿಜನ – [ನಾ] ನೆಂಟರು (ಚರ್ಯಾಮಾರ್ಗದೊಳ್ ನಡೆವಲ್ಲಿ ಜನಪದ ಪುರ ಸನಾಭಿಜನಂಗಳ್ ಕಂಡರ್ ಕಂಡಲ್ಲಿಯೆ ಮುಸುಕಿಕೊಂಡು: **ಆದಿಪು,** ೯. ೧೨೪ ವ)

ಸನಿಯನ್ನಳ್ – [ನಾ] ಶನಿಯಂತಹವಳು (ಕನಲ್ದುವದರ್ಕೆ ಅಳವಿಯುಂ ಅಂತುಂ ಇಲ್ಲ ಸನಿಯನ್ನಳೆ ಕುಂಟಣಿ ಪೋದ ಮಾರಿಯನ್ನಳ್: **ಪಂಪಭಾ,** ೪. ೯೮)

ಸನ್ನಣ – [ನಾ] [ಸನ್ನಾಹ] ಯೋಧರ ಯುದ್ಧ ಕವಚ (ಮಸೆಯಿಪ ಶಸ್ತ್ರಕೋಟಿ ಸಮಕಟ್ಟಿನ ಸನ್ನಣಂ ಅಟ್ಟೆಯಿಂದಂ ಅರ್ಚಿಸುವ ತುರಂಗದಂತಿರಥಸಂಕುಳಂ: **ಆದಿಪು,** ೧೪. ೯೦)

ಸನ್ನಣಂದುಡು – [ಕ್ರಿ] ಕವಚವನ್ನು ಧರಿಸು (ಸನ್ನಣಂದುಡುವ ಪಣ್ಣುವ ಬಾಟೆತ್ತೆಯವಂದಿರಂ ಮರುಳ್ಗೊಂಡವೊಲ್ ಊಳ್ವ: **ಪಂಪಭಾ,** ೧೦. ೪೯)

ಸನ್ನತ – [ನಾ] ಬಾಗುವಿಕೆ (ಸನ್ನತದಿಂ ರತಕ್ಕೆಳಸಿ ನಲ್ಲಲೊಳ್ ಓತು ಒಡಗೂಡಿದೆನ್ನಂ ಇಂತೆನ್ನಯ ಮೆಚ್ಚುದರ್ಕೆ ಪೆಱತಿಲ್ಲ ಅದು ದಂಡಂ; **ಪಂಪಭಾ,** ೧. ೧೧೨)

ಸನ್ನಿಹಿತ – [ಗು] ಅಲಂಕಾರಗೊಂಡ (ಸಹಜದ ಚೆಲ್ವಿನೊಳ್ ರತಿಯ ಸೋಲದ ಕೇಳಿಕೆಯೊಳ್ ಪೊದಳ್ದು ಸನ್ನಿಹಿತವೆನಿಪ್ಪಪೂರ್ವ ಶುಭಲಕ್ಷಣ ದೇಹದೊಳೊಳ್ಪನಾಳ್ದು: **ಪಂಪಭಾ,** ೧. ೪)

ಸನ್ನಾಹಕರ್ಮ – [ನಾ] ಯುದ್ಧಕಾರ್ಯ (ಶುಭಲಕ್ಷಣಲಕ್ಷಿತನುಂ ಸನ್ನಾಹಕರ್ಮ ನಿರ್ಮಿತನುಂ ಹಸ್ತಾಯುಧಕುಶಳನುಂ ಭದ್ರಮನನುಂ ಅಪ್ಪ ವಿಜಯಗಜಮಮುಂ: **ಪಂಪಭಾ,** ೧೦. ೪೬ ವ)

ಸನ್ನಾಹಭೇರಿ – [ನಾ] ಸೈನ್ಯಸಿದ್ಧತೆಯ ಸೂಚನೆ ನೀಡಲು ಹೊಡೆಯುವ ಭೇರಿ (ಒಡೆದೊಂದು ತತ್ತಿಯವೊಲಾಯ್ತು ಎಂಬೊಂದು ಸಂದೇಹಮಂ ಪೊಸತಂ ಭೂಭವನಕ್ಕೆ ಮಾಡಿದುದು ತತ್ ಸನ್ನಾಹಭೇರೀರವಂ: **ಪಂಪಭಾ,** ೯. ೯೪)

ಸನ್ನಿಕಾಶ – [ನಾ] ಸಮಾನ (ಪ್ರಕುಪಿತಮೃಗಪತಿಶಿಶುಸನ್ನಿಕಾಶರ್ ಅತಿವಿಕಟಭೀಷಣಭ್ರೂಭಂಗರ್: **ಪಂಪಭಾ,** ೭. ೮)

ಸನ್ನೆ – [ನಾ] ಸಂಕೇತ (ಕಾಣ್ಬರಂಕುಸನಾ ಪಾಣ್ಬೆಯರ ಗೆಯ್ವ ಗೆಯ್ತಂಗಳುಮಂ ತೋರ್ಪ ಸನ್ನೆಗಳುಮಂ ಆಡುವ ಮಿಟ್ಟುಗೊಡ್ಡಂಗಳುಮಂ ಕಂಡು: **ಪಂಪಭಾ,** ೪. ೮೩ ವ)

ಸನ್ಮಾನ – [ನಾ] ಗೌರವ (ಸನ್ಮಾನದಾನಾದಿಗಳೊಳ್ ಸಂತಸಂಬಡಿಸಿ: **ಆದಿಪು,** ೧೩. ೪೧ ವ)

ಸನ್ಯಸನವಿಧಿ – [ನಾ] [ಜೈನ] ಸನ್ಯಸನದ ಮೂಲಕ ಪ್ರಾಣತ್ಯಾಗ ಮಾಡುವುದು (ಚಂದ್ರಸೇನಾಚಾರ್ಯರ ಶ್ರೀಪಾದಪದ್ಮ ಪಾರ್ಶ್ವದೊಳ್ ಸನ್ಯಸನವಿಧಿಯೊಳ್ ಪರಿತ್ಯಕ್ತಾಹಾರಶರೀರನೆಂ ಸಮಾಧಿವಡೆದು: **ಆದಿಪು,** ೩. ೫೦ ವ)

ಸಪತ್ನಿ – [ಗು] ಹೆಂಡತಿಯ ಜೊತೆ (ಷೋಡಶ ಋತ್ವಿಜರ್ಕಳಿಂ ಬೇಳಲ್ವೇಟ್ಟು ಧರ್ಮಪುತ್ರಂ ಸಪತ್ನಿ ಯಜಮಾನನಾಗಿರ್ದಾಗಳ್: **ಪಂಪಭಾ,** ೬. ೩೩ ವ)

ಸಪರ್ಯಾ[ರ್ಯೆ] – [ನಾ] ಪೂಜಾ ಸಾಮಗ್ರಿ (ಸ್ವಯಂಬುದ್ಧಂ ಅಗಣ್ಯ ಪುಣ್ಯೋಪಾರ್ಜನಕರ ಸಪರ್ಯಾಸಮೇತಂ ಅಪರಿಮಿತ ಭಕ್ತಿಯಿಂ ಪರಿಮಿತಪರಿಜನಪರಿವೃತನಾಗಿ: **ಆದಿಪು,** ೨. ೨೪ ವ); [ನಾ] ಪೂಜೆ (ಎರಡುಂ ವಿಚಾರಿಸುವ ನೃಪಂಗೆ ಆವೊಗೆದ ಪುಣ್ಯಬಂಧಮನಾವರಿಸುವ ಜಿನಸಪರ್ಯೆ ತೊಡರ್ದುದು ಬಗೆಯೊಳ್: **ಆದಿಪು,** ೩. ೨೮)

ಸಪಾದಲಕ್ಷ ಕ್ಷಿತಿ – [ನಾ] ಸಪಾದಲಕ್ಷವೆಂಬ ಪ್ರದೇಶ (ಆತಂ ನಿಜವಿಜಯಖ್ಯಾತಿಯನಾಳ್ದು ಆಳ್ದನಧಿಕಬಲನವನಿಪತಿವ್ರಾತ ಮಣಿ ಮಕುಟ ಕಿರಣದ್ಯೋತಿತ ಪಾದಂ ಸಪಾದ ಲಕ್ಷಕ್ಷಿತಿಯಂ: **ಪಂಪಭಾ,** ೧. ೧೬)

ಸಪ್ತಕಕ್ಷಾ – [ನಾ] ಏಳು ಅಂಕಣ (ಶ್ರೀಸಪ್ತಕಕ್ಷಾ ಸಮನ್ವಿತ ಆಲೋಲದುಕೂಲಕೇತನಕುಳಂ . .. ಚೆಲ್ವಾಯ್ತು ರಾಜಾಲಯಂ: **ಆದಿಪು,** ೬. ೧೦೭)

ಸಪ್ತಗುಣ – [ನಾ] [ಜೈನ] ಶ್ರದ್ಧೆ, ಶಕ್ತಿ, ಭಕ್ತಿ, ವಿಜ್ಞಾನ ಅಲುಬ್ಧಿತ, ಕ್ಷಮೆ, ತ್ಯಾಗಗಳೆಂಬ ಏಳು ಗುಣಗಳು (ಶ್ರದ್ಧಾದಿ ಸಪ್ತಗುಣಸಂಪನ್ನನುಂ ಪ್ರತಿಗ್ರಹಾದಿ ನವವಿಧಪುಣ್ಯ ಪುರಸ್ಸರನುಮಾಗಿ: **ಆದಿಪು,** ೧೦. ೧ ವ)

ಸಪ್ತಚ್ಛದ – [ನಾ] ಏಳು ಸುತ್ತಿನ ಬಾಳೆ ಗಿಡ (ಅಶೋಕ ಸಪ್ತಚ್ಛದ ಚಂಪಕ ಚೂತ ಪಾದಪ ಉಪಶೋಭಿತಮುಂ ಏಕಯೋಜನ ಪ್ರಮಾಣ ವಿಸ್ತಾರಮುಂ: **ಆದಿಪು** ೧೦. ೩೧ ವ)

ಸಪ್ತತಳ – [ನಾ] ಏಳು ಮಹಡಿ (ಅನುಸ್ಮರಣಮಾತ್ರ ನಿಷ್ಪಾದಿತ ಸಪ್ತತಳಾದಿ ಪ್ರಾಸಾದಪ್ರಕರಣನುಮಪ್ಪ ಭದ್ರಮುಖನೆಂಬ ತಕ್ಷಕರತ್ನಮುಂ: **ಆದಿಪು,** ೧೧. ೩ ವ)

ಸಪ್ತತಾಳೋತ್ತುಂಗ – [ಗು] ಏಳು ತಾಳೆಯ ಮರಗಳಷ್ಟು ಎತ್ತರವಾದ (ನವಕಿಸಲಯ ವಂದನಮಾಳಾಳಂಕೃತಮಪ್ಪ ಸಪ್ತತಾಳೋತ್ತುಂಗ ರಮ್ಯಹರ್ಮ್ಯದೆರಡನೆಯ ಮೊಗಸಾಲೆಯೊಳ್: **ಪಂಪಭಾ,** ೪. ೪೩ ವ)

ಸಪ್ತಧಾತು – [ನಾ] ಶರೀರದಲ್ಲಿನ ರಸ, ರಕ್ತ, ಮಾಂಸ, ಮೇದಸ್ಸು, ಮಜ್ಜೆ, ಅಸ್ಥಿ, ಶುಕ್ರಗಳೆಂಬ ಏಳು ಧಾತುಗಳು (ಆರಯೆ ಪುರೀಷಾಗಾರಂ ಸಂಪ್ರಾಪ್ತಸಪ್ತಧಾತುವಿಕಾರಂ: **(ಆದಿಪು,** ೨. ೫೦)

ಸಪ್ತಪರಮಸ್ಥಾನ – [ನಾ] [ಜೈನ] ಸಜ್ಜಾತಿತ್ವ, ಸದ್ಗೃಹತ್ವ, ಪಾರಿವ್ರಾಜ್ಯ, ಸುರೇಂದ್ರತ್ವ, ಸಾಮ್ರಾಜ್ಯ, ಅರ್ಹಂತ್ಯ, ನಿರ್ವಾಣ ಎಂಬ ಮೋಕ್ಷಪದವಿಯ ಏಳು ಹಂತಗಳು (ಸಜ್ಜಾತಿ ಸದ್ಗೃಹತ್ವ ಪಾರಿವ್ರಾಜ್ಯಪದ ಸುರೇಂದ್ರತ್ವ ಸಾಮ್ರಾಜ್ಯ ಪರಮಾರ್ಹಂತ್ಯ ಪರಿನಿರ್ವಾಣಮೆಂಬ ಏೞುಂ ಪರಮಸ್ಥಾನನಾಮ: **ಆದಿಪು,** ೧೫. ೧೬ ವ)

ಸಪ್ತಭೂಮಿಕ – [ನಾ] ಏಳು ಉಪ್ಪರಿಗೆಗಳುಳ್ಳದ್ದು (ಮಾಣಿಕ್ಯಹರ್ಮ್ಯ ಆವಳೀವೃತಂ ಉದ್ಯೋತಿ ಸಪ್ತಭೂಮಿಕಂ ಅನೇಕ ಉದಗ್ರಕೂಟಂ .. .. ಚೆಲ್ವಾಯ್ತು ರಾಜಾಲಯಂ: **ಆದಿಪು,** ೬. ೧೦೭)

ಸಪ್ತರ್ಧಿ – [ನಾ] [ಜೈನ] ಬುದ್ಧಿ, ತಪ, ವಿಕ್ರಿಯೆ, ಔಷಧಿ, ರಸ, ಬಲ ಮತ್ತು ಅಕ್ಷೀಣಗಳೆಂಬ ಏಳು ಋದ್ಧಿಗಳು (ಬುದ್ಧಿ ತಪೋವಿಕ್ರಿಯೌಷಧಿರಸಬಲಾಕ್ಷೀಣಾಭಿಧಾನ ಸಪ್ತರ್ಧಿಗಳೊಳಂ ನೆಱೆದು: **ಆದಿಪು,** ೬. ೩೩ ವ)

ಸಪ್ತರ್ಧಿಜ್ಞಾನ – [ನಾ] [ಜೈನ] ಏಳೂ ಬಗೆಯ ಋದ್ಧಿಗಳಿಂದ ಉಂಟಾದ ಜ್ಞಾನ (ಅಂತು ದೀಕ್ಷಾಗ್ರಹಣಾನಂತರ ಸಮಯ ಸಮುತ್ಪನ್ನಸಪ್ತರ್ಧಿಜ್ಞಾನ ಚತುಷ್ಟಯಂ ಪ್ರಥಮಗಣಧರನಾದಂ: **ಆದಿಪು,** ೧೦. ೪೮ ವ)

ಸಪ್ತವ್ಯಸನ – [ನಾ] ಏಳು ಚಟಗಳು: ಸ್ತ್ರೀ, ದ್ಯೂತ, ಬೇಟೆ, ಮದ್ಯಪಾನ, ವಾಕ್ಪಾರುಷ್ಯ, ದಂಡಪಾರುಷ್ಯ, ಅರ್ಥದೂಷಣ ಎಂಬ ಏಳು ವ್ಯಸನಗಳು (ದಾಯಿಗರಪ್ಪೊಡೆ ಕರಂ ಪೆರ್ಚಿದರ್ ಅವರ ಪೆರ್ಚಿಂಗೇಗೆಯ್ವಂ ಬಸನಂಗಳಂ ಸಮಕಟ್ಟುವಮಪ್ಪೊಡೆ ಸಪ್ತವ್ಯಸನಂಗಳ್ ಅಯ್ವರುಮನೊಂದುಂ ಗೆಲ್ವುವಲ್ಲವು: **ಪಂಪಭಾ,** ೬. ೬೭ ವ)

ಸಪ್ತಶತ – [ನಾ] ಏಳು ನೂರು (ಅನೇಕವರ್ಷಕೋಟ್ಯಂತರದೊಳ್ ಸಪ್ತಶತಶಿಳೀಮುಖಾಸನೋನ್ನತಾಪಘನನುಂ: **ಆದಿಪು,** ೬. ೫೭ ವ)

ಸಪ್ತಸಪ್ತಿ – [ನಾ] ಏಳು ಕುದುರೆಗಳನ್ನುಳ್ಳ ಸೂರ್ಯ (ನೆಲನಂ ನುಂಗವ ಮೇರುವಂ ಕೀಳ್ವ ಆಶಾಗಜೇಂದ್ರಂಗಳಂ ಚಲದಿಂ ಕಟ್ಟುವ ಸಪ್ತಸಪ್ತಿಯಂ ಇಳಾಭಾಗಕ್ಕೆ ತರ್ಪ: **ಪಂಪಭಾ,** ೭. ೭) [ಸೂರ್ಯನ ಏಳು ಕುದುರೆಗಳು: ಅಮೃತಸಂಭವ, ಬಾಷ್ಪಸಂಭವ, ವಹ್ನಿಸಂಭವ, ದೇವಸಂಭವ, ಅಂಡಸಮುದ್ಭವ, ಗರ್ಭಸಮುದ್ಭವ ಮತ್ತು ಸಾಮ್ನಾ ಎಂಬವು ಅಥವಾ ಛಂದೋರೂಪವಾದ ಗಾಯತ್ರೀ, ಬೃಹತೀ, ಉಷ್ಣಿಕ್, ಜಗತೀ, ತ್ರಿಷ್ಟುಪ್, ಅನುಷ್ಟುಪ್ ಮತ್ತು ಪಙ್ತಿ]

ಸಪ್ತಸಾಗರ – [ನಾ] ಲವಣ [ಉಪ್ಪು], ಇಕ್ಷು [ಕಬ್ಬಿನ ಹಾಲು], ಸುರಾ [ಮದ್ಯ], ಸರ್ಪಿಸ್ [ತುಪ್ಪ], ದಧಿ [ಮೊಸರು], ಕ್ಷೀರ [ಹಾಲು], ಜಲ [ನೀರು] ಎಂಬ ಏಳು ಪೌರಾಣಿಕ ಸಮುದ್ರಗಳು (ಕವಿದುವು ಸಪ್ತಸಾಗರಜಲಂಗಳೆ ಲೋಕಮನೀಗಳ್ ಎಂಬಿನಂ: **ಪಂಪಭಾ,** ೫. ೯೬)

ಸಪ್ತಾಂಗ – [ನಾ] [ರಾಜ್ಯದ] ಏಳು ಅಂಗಗಳು: ಸ್ವಾಮಿ, ಅಮಾತ್ಯ, ಸುಹೃತ್, ಕೋಶ, ರಾಷ್ಟ್ರ, ದುರ್ಗ, ಬಲ ಅಥವಾ

ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ದಂಡ', ಮಿತ್ರ (ಸಪ್ತಾಂಗಮೀ ರಾಜಕಕ್ಕೆ ಅರಸಂ ಧರ್ಮಜನಕ್ಕುಂ ಎಂದು ನಯದಿಂ ನಿಶ್ಚೈಸಿ: **ಪಂಪಭಾ,** ೪. ೮)

ಸಪ್ತಾನೀಕ – [ನಾ] ಏಳು ಬಗೆಯ ಸೈನ್ಯ (ಹಸ್ತಿ ಅಶ್ವ ರಥ ಪದಾತಿ ವೃಷಭ ಗಂಧರ್ವ ನರ್ತಕೀಪ್ರಮುಖ ಸಪ್ತಾನೀಕಸಮೇತನುಂ: **ಆದಿಪು,** ೬. ೧೩ ವ)

ಸಪ್ತಾರ್ಚಿ – [ನಾ] ಹಿರಣ್ಯಾ, ಕನಕಾ, ರಕ್ತಾ, ಕೃಷ್ಣಾ, ಸುಪ್ರಭಾ, ಬಹುರೂಪಾ ಮತ್ತು ಅತಿರಕ್ತಾ ಎಂಬ ಏಳು ನಾಲಗೆಗಳ ಹೋಮಾಗ್ನಿ (ಕನಕಗಿರಿಯಂ ಬಲಗೊಳ್ವ ಪತಂಗದಂಪತಿಯಂತೆ ಆ ದಂಪತಿಗಳ್ ಸಪ್ತಾರ್ಚಿಯಂ ಮೂಱು ಸೂೞ್ ಬಲವಂದು: **ಪಂಪಭಾ,** ೩. ೭೫ ವ)

ಸಬ – [ನಾ] [ಶವ] ಹೆಣ (ಅದಟರ ಚೆನ್ನಪೊಂಗರ ಸಬಂಗಳ ತೊಟ್ಟುೞಿಯೊಳ್ ತೊಡಂಕಿ ನಿಲ್ಲದೆ ಪೊಱಮಟ್ಟ ತಮ್ಮ ಮನದೊಳ್ ಮಿಗೆ ಬೆಚ್ಚಿಸಿದಂತೆ ತೋಱುವ: **ಪಂಪಭಾ,** ೮. ೧೦೪)

ಸಬ್ಬವ – [ನಾ] ಮೇಳ (ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗಟ್ದ ಸಬ್ಬವದವರೊಡನೆ ಅಂತು ಒಸೆದ ಅನ್ನವಾಸದೊಳ್ ಇರ್ದನಾಗಳ್ ಹರಿಗಂ: **ಪಂಪಭಾ,** ೩. ೮೦)

ಸಬ್ಬವದ ಮಾತು – [ನಾ] ವಿನೋದದ ನುಡಿ (ಓತ ದೂತರೆ ತರೆ ಬಂದ ಸಬ್ಬವದ ಮತುಗಳಂ ಗುಡಿಗಟ್ಟಿ ಕೇಳರೇ: **ಪಂಪಭಾ,** ೪. ೧೦೧)

ಸಬ್ಬವದಾಕೆ – [ನಾ] ಮೇಳದ ಕೆಳದಿ (ಮತ್ತಂ ಒಂದೆಡೆಯೊಳ್ ಕುಂಟಣಿಯ ಉಪರೋಧಕ್ಕೆ ಪಿರಿದೀವ ಮುದುಪನಂ ಉೞಿಯಲಂಜಿ ತನ್ನ ಬೇಸಱಿಂ ತನ್ನ ಸಬ್ಬವದಾಕೆಗೆ ಇಂತೆಂದಳ್: **ಪಂಪಭಾ,** ೪. ೯೯ ವ)

ಸಬ್ಬಿಸಾಸಿರ – [ನಾ] ಪಂಪನಿಗೆ ಅರಿಕೇಸರಿಯಿತ್ತ ಅಗ್ರಹಾರವಿದ್ದ ಈ ಹೆಸರಿನ ನಾಡು (ಹರಿಗನ ಧರ್ಮಭಂಡಾರದಂತೆ ಸಾರಮಾದುದು ಬಿಟ್ಟಗ್ರಹಾರಂ ಆ ಸಬ್ಬಿಸಾಸಿರದೊಳಂ ಧರ್ಮವುರಂ: **ಪಂಪಭಾ,** ೧೪. ೫೬)

ಸಭಾಕ್ಷೋಭ – [ನಾ] ಸಭೆಯಲ್ಲಿ ಗದ್ದಲ (ನೆಲಂ ಮೂರಿವಿಟ್ಟಂತೆ ಸಭಾಕ್ಷೋಭಮಾಗೆ ತಳರ್ದು ನಾನಾವಿಧವಾಹನಂಗಳನೇಱಿ ನಿಜನಿವಾಸಂಗಳ್ಗೆ ಪೋದರ್: **ಪಂಪಭಾ,** ೨. ೮೬ ವ)

ಸಮಂಚಿತ – [ಗು] ಕೂಡಿದ (ತಂತ್ರೀಸಮಂಚಿತ ವಿಪಂಚೀ ಮಂದ್ರ ತಾರಮಧುರಮೂರ್ಚ್ಛನಾಸನಾಥ ಪ್ರಯೋಗಂಗಳುಮಂ: **ಆದಿಪು,** ೧೧. ೭೪ ವ)

ಸಮಂತು – [ಗು] ಚೆಂದವಾಗಿ (ಪುದಿದೀ ಶ್ವೇತಾತಪತ್ರೋತ್ಕರದ ನಡುವಣಂ ವಜ್ರದಂತಂ ಸಮಂತು ಎತ್ತಿದ ಪಿಂಛಚ್ಛತ್ರಷಂಡಂಗಳ ನಡುವೆಸೆವಂ ವಜ್ರಬಾಹುಕ್ಷಿತೀಶಂ: **ಆದಿಪು,** ೪. ೨೫); [ಗು] ಚೆನ್ನಾಗಿ (ಪೊದಳ್ದಾಜ್ಞೆಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳಾರಾ ಪಾಂಡುರಾಜಂಬರಂ: **ಪಂಪಭಾ,** ೧. ೧೧೦); [ಗು] ಅಚ್ಚುಕಟ್ಟಾಗಿ (ಕಮ್ಮನಪ್ಪ ತುಪ್ಪದ ಕೊಡದೊಳ್ ಸಮಂತು ಮಡಗಿಟ್ಟೊಡೆ ಸೃಷ್ಟಿಗೆ ಚೋದ್ಯಮಪ್ಪಿನಂ: **ಪಂಪಭಾ,** ೧. ೧೩೧)

ಸಮಂ ಮೇಲ್ – ಸಮನಾಗಿ ಮಿಗಿಲಾದುದು, ಅಷ್ಟೇ ಅತಿಶಯವಾದುದು (ಮುಂ ಪೋದ ಜನ್ಮಾಭಿಷೇಕಕ್ಕೆ ಸಮಂ ಮೇಲೆಂಬಿನಂ ಕಣ್ಗೆಸೆದುದು ಜಗತೀರಾಜರಾಜ್ಯಾಭಿಷೇಕಂ: **ಆದಿಪು,** ೮. ೬೯)

ಸಮಕಟ್ಟು – [ಕ್ರಿ] ನಿರ್ಮಿಸು ಮತ್ತು ವ್ಯವಸ್ಥೆಮಾಡು (ಜನಪದಂಗಳನೆಯ್ದೆ ಮಾಡಿ ಪುರಂಗಳಂ ಸಮಕಟ್ಟಿ ಮೂಱನಿಸಿ ವರ್ಣಮನಿಂತು ಮುಂ ಸಮಕಟ್ಟಿಯುಂ: **ಆದಿಪು,** ೮. ೬೫); [ನಾ] ಆಸ್ತಿಯ ಭಾಗ (ಎಮಗಂ ಎಮಗಪ್ಪ ಭಾಗದ ಸಮಕಟ್ಟಂ ದೇವ ಕುಡಲೆವೇಟ್ಪುದು ನಂಟರ್ ನಿಮಗೆ ಎಮ್ಮಿಂದಂ ಅಗ್ಗಳಮಾರ್: **ಆದಿಪು,** ೯. ೯೯); [ಕ್ರಿ] ಬಿಗಿದು ಕಟ್ಟು (ಮಸೆಯಿಪ ಶಸ್ತ್ರಕೋಟಿ ಸಮಕಟ್ಟುವ ಸನ್ನಣಂ ಅಟ್ಟೆಯಿಂದಂ ಅರ್ಚಿಸುವ ತುರಗದಂತಿರಥಸಂಕುಳಂ ಏಱುವ ದರ್ಭಶಯ್ಯೆ: **ಆದಿಪು,** ೧೪. ೯೦); [ಕ್ರಿ] ನಿರ್ಧರಿಸು (ಸಮಸ್ತಜನಸಂಹರಣ ಕಾರಣಮಪ್ಪ ರಣದೊಳೇವಂದಪುದೆಂದು ಧರ್ಮಯುದ್ಧಮನೆ ತಮ್ಮೊಳ್ ಸಮಕಟ್ಟಿ: **ಆದಿಪು,** ೧೪. ೧೦೦ ವ); [ನಾ] ಸಮಾನತೆ (ನೀಂ ನಿನ್ನ ತಾಯಿ ತಂದೆಯ ದೆಸೆಯಂ ಭಾವಿಸದೆ ಕರ್ಣ ನುಡಿವಂತೆ ಆವುದು ಸಮಕಟ್ಟು ನಿನಗಂ ಅರಿಕೇಸರಿಗಂ: **ಪಂಪಭಾ,** ೨. ೮೨); [ನಾ] ವ್ಯವಸ್ಥೆ (ಈ ಸರಸೀರುಹಂಗಳ ಅವನೀಪದದೊಳ್ ಬಿಸುಟೆಂತು ಪೋಪೆವೆಂಬೀ ಸಮಕಟ್ಟಿನೊಳ್ ನೆಲಸಿದಂತೆರಗಿರ್ದುವು ಷಟ್ಪದಂಗಳ್: **ಪಂಪಭಾ,** ೪. ೪೭); [ನಾ] ಹೋಲಿಕೆ (ಸಮಕಟ್ಟಿಂಗೆ ಒರೆಗೆ ಆರುಂ ಇಲ್ಲ ಅರಿಗ ಕೇಳ್ ನಿನ್ನೊಳ್: **ಪಂಪಭಾ,** ೫. ೭೬); [ನಾ] ಕ್ರಮಬದ್ಧತೆ (ಸಮಕಟ್ಟಱಿಯದೆ ಹರಿಗೆ ಅರ್ಘ್ಯಮೆತ್ತಿ ನಿಂದಿರ್ದ ಯಜ್ಞಮದು ಮೊದಲೊಳ್ ತಾನಮರ್ದುಂ ಅದಿರದೆ ತಣಿಯುಂಡು ಅಮರ್ದಂ ಗೋಮೂತ್ರದಿಂದೆ ಬಾಯ್ಪೂಸಿದವೋಲ್: **ಪಂಪಭಾ,** ೬. ೪೮): [ಕ್ರಿ] ಏರ್ಪಡಿಸು (ದಾಯಿಗರಪ್ಪೊಡೆ ಕರಂ ಪೆರ್ಚಿದರ್ ಅವರ ಪೆರ್ಚಿಂಗೇಗೆಯ್ವಂ ಬಸನಂಗಳಂ ಸಮಕಟ್ಟುವಂ: **ಪಂಪಭಾ,** ೬. ೬೭ ವ)

ಸಮಕಟ್ಟುಗೆಡು – [ಕ್ರಿ] ಕ್ರಮ ತಪ್ಪಿಹೋಗು (ಚಾತುರ್ವಲಂಗಳ್ ಮೊದಲ ಸಮಕಟ್ಟುಗೆಟ್ಟು ತಡವರಿಸಿ ತಟ್ಟುಪೊಟ್ಟೆಂದು ಎಚ್ಚು ಮಿಟ್ಟುಂ ಇಱಿದು ತಱಿದು ಘಟ್ಟಿಸೆಯುಂ: **ಪಂಪಭಾ,** ೧೦. ೭೦ ವ)

ಸಮಕೊಳಿಸು – [ಕ್ರಿ] ಸರಿಮಾಡು (ಸಮಕೊಳಿಸಲಾರ್ತುದಿಲ್ಲ ದಲಮರೇಂದ್ರನದೊಂದು ಮುಖಪರಿಮ್ಲಾನತೆಯಂ: **ಆದಿಪು,** ೬. ೧೯)

ಸಮಕ್ಷ – [ನಾ] ಎದುರು (ಸುಪ್ರಭೆಯುಂ ಸುದರ್ಶನ ನಾಮ ಗಣಿನೀಸಮಕ್ಷದೊಳ್ ರತ್ನಾವಳಿಯಂ ನೋಂತು ಅಚ್ಯುತ ಕಲ್ಪದೊಳ್ ದೇವನಾಗಿ ಪುಟ್ಟಿದಳ್: **ಆದಿಪು,** ೩. ೬೫ ವ)

ಸಮಕ್ಷಮ – [ನಾ] ಎದುರು (ಪುರೋಹಿತಪ್ರಾಜ್ಯ ಆಜ್ಯಾಹುತಿ ಹುತವಹಸಮಕ್ಷಮದೊಳ್ ಕೆಯ್ನೀರೆಱೆದು ಪಾಣಿಗ್ರಹಂಗೆಯ್ಸೆ: **ಪಂಪಭಾ,** ೩. ೭೪ ವ)

ಸಮಗ್ರೇಕ್ಷಣ – [ನಾ] ಪೂರ್ಣ ನೋಟ (ಬಂದೆಱಗಿದ ರಾಜಚಕ್ರಮಂ ಅನುಕ್ರಮದೊಳೆ ನೇತ್ರತ್ರಿಭಾಗ ಕಟಾಕ್ಷ ಸಮಗ್ರೇಕ್ಷಣಭ್ರೂವಿಭ್ರಮ ದರಹಸಿತಾಳಾಪ: **ಆದಿಪು,** ೧೧. ೨೫ ವ)

ಸಮಗ್ರೋರಸ್ಥಳ – [ನಾ] ತುಂಬಿದ ಎದೆಯ ಪ್ರದೇಶವುಳ್ಳವನು (ಸಾಲ ಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್

ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಸ್ಥಳಂ: **ಪಂಪಭಾ,** ೧. ೬೮)

ಸಮಚತುರಸ್ರ – **[ನಾ]** ಚಚ್ಚೌಕ (ದಿಶಾಭಾಗದೊಳ್ ಸಮಚತುರಸ್ರಮಾಗೆ ನೆಲನನಳೆದು: **ಪಂಪಭಾ,** ೨. ೬೫ ವ)

ಸಮಚತುರಸ್ರಸಂಸ್ಥಾನ – **[ನಾ]** [ಜೈನ] ಒಂದು ಶರೀರಾಕೃತಿವಿಶೇಷ; ಶರೀರವು ಎಲ್ಲ ಕಡೆಗಳಲ್ಲಿಯೂ ಪ್ರಮಾಣಬದ್ಧವಾಗಿರುವುದು (ಅಂತು ನಾಲ್ವತ್ತೊಂಬತ್ತು ದಿವಸದೊಳ್ ಸಮಚತುರಸ್ರಸಂಸ್ಥಾನ ಸಂವಾಹನಂಗಳ್ ಅಱುಸಾಸಿರ ಬಿಲ್ನಿಡಿಯವಾಗಿ: **ಆದಿಪು,** ೫. ೪೧ ವ)

ಸಮಜ – **[ನಾ]** ಸಮೂಹ (ವಿಜಯಕಟಕಸಮದಗಜಸಮಜಂಗಳ ಕರ್ಪುಗಳೆಲ್ಲಮಂ ನೆರಂಬಡೆದು: **ಆದಿಪು,** ೧೨. ೪ ವ)

ಸಮದ – **[ಗು]** [ಸ+ಮದ] ಮದದಿಂದ ಕೂಡಿದ (ಸಮದಗಜಗಮನೆಯರ್ .. .. ನಡೆಯಲಾಱದೆ ಸುಟಿದರ್: **ಪಂಪಭಾ,** ೭. ೮೪)

ಸಮದಗಜ – **[ನಾ]** ಸ್ವಾಭಿಮಾನವೆಂಬ ಆನೆ (ಬಗೆಗೊಂಡ ಕುಲಧನಂ ಸಮದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ಬಂ ಪಗೆವಂಗೆ ಕೊಟ್ಟು ಚಿಃ ಕೆಮ್ಮಗೆ ಬೆಸೆವವಂ ಅರಸದೆಂತೊ ಪಗರಣದರಸಂ: **ಆದಿಪು,** ೧೨. ೯೮)

ಸಮದತ್ತಿ – **[ನಾ]** [ಜೈನ] ತನಗೆ ಸಮಾನರಾದ ಶ್ರಾವಕಶ್ರೇಷ್ಠರಿಗೆ ನೀಡುವ ದಾನ (ಕ್ರಿಯಾಮಂತ್ರಂಗಳಿಂದಂ ಆತ್ಮಸಮಾನ ಶ್ರಾವಕಾಗ್ರಣಿಗಳ್ಗೆ ಕನ್ಯಾ ಭೂಮಿ ಸುವರ್ಣ ಹಸ್ತಿ ಅಶ್ವ ರಥ ರತ್ನಾದಿಗಳಂ ಕುಡುವ ಸಮದತ್ತಿಯುಂ: **ಆದಿಪು,** ೧೫. ೧೩ ವ)

ಸಮಧಿಗತ ಪಂಚಮಹಾಶಬ್ದ – **[ಗು]** ಪಂಚ ಮಹಾಶಬ್ದಗಳ ಗೌರವವನ್ನು ಸಂಪಾದಿಸಿದ (ಸಮನೆನಿಸುವರ್ ಪ್ರಶಸ್ತಿಕ್ರಮದೊಳ್ ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ ಮಹಾ ಸಾಮಂತರೆನಲ್ ಸಮನೆನಿಪರೆ ಗುಣದೊಳ್ ಅರಿಗನೊಳ್ ಸಾಮಂತರ್: **ಪಂಪಭಾ,** ೧. ೪೯), ನೋಡಿ, 'ಪಂಚಮಹಾಶಬ್ದ'

ಸಮನಿಸು – **[ಕ್ರಿ]** ಈಡೇರು, ನೆರವೇರು (ಸಮನಿಸಲಿವರ ಮನೋರಥಂ ಅಮರೀನೃತ್ಯಪ್ರಸಂಗಕ್ಕಂ ಅಭವ: **ಆದಿಪು,** ೯. ೧೧); **[ಕ್ರಿ]** (ಉಂಟಾಗು (ದೊರೆಕೊಂಡ ಮಾಘಮಾಸಂ ಬರೆ ಕೃಷ್ಣಚತುರ್ದಶೀ ದಿನಂ ಸಮನಿಸೆ ಇತ್ತುರುದೇವಂ ಮುಕ್ತಿವಧೂವರತೆಯಂ ಅಭಿಜಿನ್ಮುಹೂರ್ತದೊಳ್ ಕೈಕೊಂಡಂ: **ಆದಿಪು,** ೧೬. ೫೧)

ಸಮನ್ವಿತ – **[ಗು]** ಹೊಂದಿದವನು (ಮೊದಲೊಳ್ ಕುಡುವಂ ಶ್ರದ್ಧಾದಿಗುಣಸಮನ್ವಿತನಕ್ಕುಂ: **ಆದಿಪು,** ೧೦. ೯)

ಸಮನ್ವೀತಮನ – **[ನಾ]** ಏಕಾಗ್ರಚಿತ್ತವುಳ್ಳವನು (ನಿಷ್ಪಂದನಾಗಿ ಸಮನ್ವೀತಮನಂ ಗುಣಂಗೊಳಿಸಿದಂ ಯೋಗೀಂದ್ರ ವೃಂದಂಗಳಂ: **ಆದಿಪು,** ೬. ೩೪)

ಸಮಪಾದ – **[ನಾ]** ಬಿಲ್ಗಾರನು ಕುಳಿತುಕೊಳ್ಳುವ ಒಂದು ಭಂಗಿ (ಆಲೀಢ ಪ್ರತ್ಯಾಲೀಢ ಸಮಪಾದಂಗಳೆಂಬ ಆಸನಂಗಳೊಳಂ ಪೆಱವುಂ ಶರಾಸನವಿದ್ಯೆಗಳೊಳ್ ಅತಿ ಪ್ರವೀಣರುಂ ಜಾಣರುಂ ಆಗಿ: **ಪಂಪಭಾ,** ೧೩. ೩೮ ವ)

["ಸಮಾನಾಂತರದಲ್ಲಿ – ೨೪ ಅಂಗುಲ – ಪಾದಗಳನ್ನಿಟ್ಟು ನಿಲ್ಲುವುದು" – **ದೀಪಿಕೆ,** ಪು. ೫೨೪]

ಸಮಪಾರ್ಶ್ವ – **[ನಾ]** ಎಲ್ಲ ಕಡೆ ಪ್ರಮಾಣಬದ್ಧವಾಗಿ ಬೆಳೆದ ಆನೆ (ಸಮಪಾರ್ಶ್ವನುಂ ಅಜಕುಕ್ಷಿಯುಂ ಗೋಧೂತ್ರಿಷ್ಟನುಂ ಮೋಹಜಘನಾಪರನುಂ .. .. ಅಪ್ಪ ವಿಜಯಪರ್ವತ ಗಜೇಂದ್ರಂ: **ಆದಿಪು,** ೧೨. ೫೬ ವ)

ಸಮಭಿಜಾತ – **[ನಾ]** ಒಳ್ಳೆಯ ಕುಲದಲ್ಲಿ ಹುಟ್ಟಿದವನು (ಜನಪದಸಮಭಿಜಾತನುಂ ಅನ್ವಯಾಗತನುಂ ಅಭಿರೂಪನುಂ ಪ್ರತ್ಯುತ್ಪನ್ನಪ್ರತಿಭನುಂ .. .. ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್: **ಆದಿಪು,** ೧೪. ೪೩ ವ)

ಸಮಯ – **[ನಾ]** [ಜೈನ] ಒಂದು ಕಾಲಪ್ರಮಾಣ, ಒಂದು ಪರಮಾಣುವು ಮಂದಗತಿಯಿಂದ ಒಂದು ಪ್ರದೇಶಕ್ಕೆ ಸರಿಯುವಷ್ಟು ಕಾಲ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾನುಕ್ರಮದಿಂ: **ಆದಿಪು,** ೬. ೪೮ ವ)

ಸಮಯಾಹೂತ – **[ಗು]** [ಸಮಯ+ಆಹೂತ] ಪದ್ಧತಿಯನ್ನು ಆರಂಭಿಸಿದ (ಆದಿದೇವಂ ಇಕ್ಷುರಸಸಂಗ್ರಹಣ ಸಮಯಾಹೂತ ಭೂತಳನಪ್ಪುದಱಿಂ ಇಕ್ಷ್ವಾಕುಕುಳತಿಳಕನುಂ: **ಆದಿಪು,** ೮. ೭೫ ವ)

ಸಮಯಿ – **[ನಾ]** ಧರ್ಮಾನುಯಾಯಿ (ಸಮಯಿಗಳುಂ ಚಾತುರ್ವರ್ಣಮುಂ ಉಚಿತಚರಿತ್ರಮಂ ಬಿಸುಟ್ಟು ಆದಂ ಪೊಲ್ಲಮೆಯೊಳ್ ಸಲೆ ನಡೆವರ್ ದುಷ್ಷಮಮೆಂಬ ಅಯ್ದನೆಯ ಕಾಲದೊಳ್: **ಆದಿಪು,** ೧೫. ೩೬)

ಸಮರ – **[ನಾ]** ಯುದ್ಧ (ಅನೇಕ ನೃಪ ಶಿರಃ ಕಪಾಳ ಶಕಳ ಜರ್ಜರಿತಮುಂ ಪರಸ್ಪರ ಸಮರ ರಭಸಸಮುತ್ಸಾರಿತಮುಂ: **ಪಂಪಭಾ,** ೧೩. ೫೧ ವ)

ಸಮರತ – **[ಗು]** ಅನುರೂಪ'ವಾದ ರತಿಯ ಅಭಿಲಾಷೆ (ಈಶ್ವರನುಂ ಪಾರ್ವತಿಯುಂ ಎನಿಸಿ ಸಮರೂಪ ಸಮಸತ್ವ ಸಮರತಂಗಳೊಳೆ ಸಮಾನಾನುರಾಗಮಂ ಪಡೆಯೆ: **ಪಂಪಭಾ,** ೫. ೨೮ ವ)

ಸಮರಥ – **[ನಾ]** ಎದುರಿನ ಬಿಲ್ಗಾರನೊಡನೆ ಸಮಸಮನಾಗಿ ಯುದ್ಧಮಾಡಬಲ್ಲ ರಥಿಕ (ಧೃತಧವಳವಸನರ್ ಆರಾಧಿತಶಿವರ್ ಅರ್ಚಿತಸಮಸ್ತಶಸ್ತ್ರರ್ ನೀರಾಜಿತತುರಗರ್ ಒಪ್ಪಿದರ್ ಕೆಲರ್ ಅತಿರಥ ಸಮರಥ ಮಹಾರಥ ಅರ್ಧರಥರ್ಕಳ್: **ಪಂಪಭಾ,** ೧೦. ೩೭)

ಸಮರೂಪ – **[ನಾ]** ಸಮಾನ ಸುಂದರ ರೂಪ (ಈಶ್ವರನುಂ ಪಾರ್ವತಿಯುಂ ಎನಿಸಿ ಸಮರೂಪ ಸಮಸತ್ವ ಸಮರತಂಗಳೊಳೆ ಸಮಾನಾನುರಾಗಮಂ ಪಡೆಯೆ: **ಪಂಪಭಾ,** ೫. ೨೮ ವ)

ಸಮರೈಕಮೇರು – **[ನಾ]** [ಸಮರ+ಏಕ+ಮೇರು] ಯುದ್ಧದಲ್ಲಿ ಮೇರುವಿನಂತೆ ಸ್ಥಿರನಾದವನು (ಕಯ್ಯೆಲೆ ಕಯ್ಯೊಳೆ ಬಾಯ ತಂಬುಲಂ ಬಾಯೊಳೆ ತೋಱೆ ಮೆಯ್ಮಱೆದು ನೋಡಿದಳ್ ಆ ಸಮರೈಕಮೇರುವಂ: **ಪಂಪಭಾ,** ೪. ೩೭)

ಸಮವಕಾರ – **[ನಾ]** ದಶರೂಪಕಗಳಲ್ಲಿ ಒಂದು ಪ್ರಭೇದ, ದೇವಾಸುರ ಯುದ್ಧವಸ್ತುವಿನ ಮೂರಂಕ ಉಳ್ಳದ್ದು

(ಭಗವಜ್ಜನ್ಮಾಭಿಷೇಕ ಸಂಬಂಧಿಯಾಗೆ ತನ್ನ ಪೊಸತೆ ಸಮೆದ ಸಮವಕಾರರೂಪಕಮಂ .. .. ಸುರಾಸುರಸಭೆಗಂ ಮೆಱೆಯಲೆಂದು: **ಆದಿಪು,** ೭. ೧೧೫ ವ)

ಸಮವತೀರ್ಣ – [ಗು] ಕಾಣಿಸಿಕೊಂಡ (ಆ ತ್ರಿಲೋಕತಿಲಕನ ಜನ್ಮೋತ್ಸವದೊಳ್ ಏಕಸಮಯಸಮವತೀರ್ಣ ಸರ್ವರ್ತುಕ ನಂದನ ವಿಕಸತ್: **ಆದಿಪು,** ೭. ೩೬ ವ)

ಸಮವಸರಣ – [ನಾ] [ಜೈನ] ತೀರ್ಥಂಕರನು ಧರ್ಮೋಪದೇಶ ಮಾಡಲು ಕುಬೇರನು ನಿರ್ಮಿಸಿದ ಮಂಟಪ (ಸೌಧರ್ಮೇಂದ್ರಂ ಬಂದು ತನ್ನ ಬೆಸದೊಳ್ ಮುನ್ನಮೆ ಧನದವಿನಿರ್ಮಿತಮಾಗಿರ್ದ ಸಮವಸರಣಮಂ ಕಂಡಂ: **ಆದಿಪು,** ೧೦. ೨೨ ವ)

ಸಮವಸೃತಿ – [ನಾ] [ಜೈನ] ಸಮವಸರಣ (ಕೈಳಾಸಗಿರೀಂದ್ರಸ್ಥಿತ ಸಮವಸೃತಿಯಂ ಸಂಸೃತಿಲತಾವಿಚ್ಛೇದಿಯಂ ಪೊಕ್ಕು: **ಆದಿಪು,** ೧೫. ೨೧ ವ)

ಸಮವಾಯ – [ಗು] ಬೇರ್ಪಡಿಸಲಾರದಂತೆ ಕೂಡಿಕೊಂಡಿರುವುದು (ಸಮವಾಯಮಪ್ಪುದಲ್ತೆಂದು ಮನಂ ಬಸಮಾಡಿ ದೋಷವಿರಹಿತಂ ಆಪ್ತಂ ಕ್ರಮದೆ ಆಪ್ತನೆ ಪೇೞ್ದುದೆ ಆಗಮಂ: **ಆದಿಪು,** ೫. ೫೪)

ಸಮವೃತ್ತ – [ನಾ] ಸಮವೂ ಗುಂಡಗಿನದೂ ಆದ ಆಕೃತಿ (ಸಮವೃತ್ತಮುಂ ಎನಿಸಿದ ಈಷತ್ಪ್ರಾಗ್ಭಾರದ ಮೇಗಣ ಘನೋದಧಿ ಘನಾನಿಳ ತನುವಾತತ್ರಿತಯಭಾಗದೊಳ್: **ಆದಿಪು,** ೧೬. ೫೧ ವ)

ಸಮಸತ್ವ – [ನಾ] ಒಂದೇ ಬಗೆಯ ಸಾಮರ್ಥ್ಯ (ಈಶ್ವರನುಂ ಪಾರ್ವತಿಯುಂ ಎನಿಸಿ ಸಮರೂಪ ಸಮಸತ್ವ ಸಮರತಂಗಳೊಳೆ ಸಮಾನಾನುರಾಗಮಂ ಪಡೆಯೆ: **ಪಂಪಭಾ,** ೫. ೨೮ ವ)

ಸಮಸಮಾಯೋಗ – [ನಾ] ಹೊಂದಾಣಿಕೆ (ಸದೃಶಾಕಾರರ್ ಇವರಂ ಕೂಡಿ ಪಯೋರುಹಜಂಗೆ ಅಕ್ಕೆ ಸಮಸಮಾಯೋಗಯಶಂ: **ಆದಿಪು,** ೪. ೨೯)

ಸಮಸಲ್ – [ಕ್ರಿ] ಸಮಾನವಾಗಿ ಕೂಡಿಕೊ, ಉಂಟಾಗು (ಸಮಸಂದುದಾ ಪರಮಯೋಗಿಗೆ ಯೋಗನಿಯೋಗ ಭಾವನಂ: **ಆದಿಪು,** ೧೦. ೧೪)

ಸಮಸ್ತಭಾರತ – [ನಾ] ಭಾರತ ಕಾವ್ಯ, ಸಮಕಾಲ ಪ್ರಸ್ತುತ ಭಾರತ (ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತಭಾರತಮಂ ಅಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ: **ಪಂಪಭಾ,** ೧. ೧೧)

ಸಮಱೆಕೊಳ್ – [ಕ್ರಿ] ನಯಗೊಳ್ಳು, ಲೆಕ್ಕಾಚಾರ ಹಾಕು (ಮುನ್ನ ಸಾಮಮನೆಮ್ಮ ಮನನ್ನೋಡಲ್ ನುಡಿದು ಭೇದಮಂ ದಂಡಮುಮಂ ನಿನ್ನಱೆವನಿತಂ ನುಡಿದೆ ಇದೇನ್ನುಡಿಗಳೊ ಸಮಱೆಕೊಂಡ ನುಡಿಗಳ್ ನಿನ್ನಾ: **ಆದಿಪು,** ೧೪. ೬೪)

ಸಮಱೆ ನೆಗಳ್ – [ಕ್ರಿ] ಆಚಾರವಂತನಾಗಿ ನಡೆದುಕೊ (ಮಿಥ್ಯಾದೃಷ್ಟಿಯಪ್ಪಂ ತನ್ನನೆಂತುಂ ಸಮಱೆ ನೆಗೞೆಲ್ದೊಡಂ ಆತಂ ಅಪಾತ್ರಮೆ: **ಆದಿಪು,** ೧೦. ೯. ವ)

ಸಮಱು – [ಕ್ರಿ] ನಯಗೊಳಿಸು (ಶ್ರುತಸ್ಕಂಧಮಾದಱೆವಿಂ ಗಣನಾಯಕರ್ ಸಮಱೆ ಭವ್ಯಶ್ರೇಣಿಗೆ ಅವ್ಯಾಜದಿಂದಱೆಯಲ್ಕೆ: **ಆದಿಪು,** ೧. ೩೯); **[ಕ್ರಿ]** ತಿದ್ದು (ಸಮಱೆದ ಮದನನ ಒಡ್ಡಣದಂತೆ ಸಮಱೆದ ಪುರ್ವುಂ ಪುರ್ವೆಂಬ ಕರ್ಬಿನ ಬಿಲ್ಲಿಂ ಬರ್ದುಂಕಿದ ಮದನನಲರೆಂಬಿನಂ: **ಆದಿಪು,** ೪. ೪೧ ವ); **[ಕ್ರಿ]** ಸರಿಪಡಿಸು (ಮಾನೋನ್ನತರ್ ಈಗಳುಂ ಅಟ್ಟಿಱೆಸೊಳ್ ಎನ್ನಂ ಸಮಱಲ್ಕೆ ಬಂದರ್ ಇಂತುಟೆ ಮೋಹಂ: **ಆದಿಪು,** ೫. ೬೭); **[ಕ್ರಿ]** ಬಾಚು, ಹಿಕ್ಕು (ಜಿನಜನನಿಯವೊಲ್ಗುರುಳಂ ಸಮಱುವ ಕನ್ಯಕೆ ಕರಮೆಸೆದಳ್ ತಳಿರೊಳಳಿಗಳಂ ಮುಚ್ಚುವವೋಲ್: **ಆದಿಪು,** ೭. ೮); **[ಕ್ರಿ]** ನಾಶಮಾಡು (ನಿನಗರಸ ಬಹಿರ್ಮಂಡಲಮನೆ ಸಮಱಲ್ಕಿನಿತು ಬರಿಸಮುಂ ಪೋದುವು: **ಆದಿಪು,** ೧೪. ೧೫); **[ಕ್ರಿ]** ಸಿದ್ಧಪಡಿಸು (ಮರುತ್ಸೂನು ಸಮಱೆದಂ ಕೊಳುಗುಳಮಂ: **ಪಂಪಭಾ,** ೧೩. ೯೨)

ಸಮಾಕರ್ಣಿತ – [ಗು] ಚೆನ್ನಾಗಿ ಕೇಳಿಸಿಕೊಂಡ (ಭರತೇಶ್ವರಂ ತಾನುಂ ಮುನ್ನೆ ಭಟ್ಟಾರಕರ ಸಮಕ್ಷದೊಳ್ ಸಮಾಕರ್ಣಿತ ಉಪಾಸಕ ಅಧ್ಯಯನನಪ್ಪುದಱೆಂದಂ: **ಆದಿಪು,** ೧೫. ೧೩ ವ)

ಸಮಾಕಾರ – [ನಾ] ಸಾಕಾರನಾದವನು (ಅಮೂರ್ತರ್ ಚರಮತನು ಸಮಾಕಾರರ್ ಉದ್ಧೂತಲೇಪರ್ ಪ್ರಣುತರ್ .. .. ಸ್ವಕೀಯಪ್ರಭುತೆಯನೆಮಗಂ ಮಾೞ್ಕೆ ಅತಿಪ್ರೀತಿಯಿಂದಂ: **ಆದಿಪು,** ೧. ೨)

ಸಮಾಜ – [ನಾ] ಸಮೂಹ (ಅಂತು ಪಾಂಡುರಾಜಂ ಅಧಿಕತೇಜನುಂ ಅವನತವೈರಿ ಭೂಭೃತ್ಸಮಾಜನುಂ ಆಗಿ ನೆಗೞುತ್ತಿರ್ದೊಂದು ದಿವಸಂ: **ಪಂಪಭಾ,** ೧. ೧೧೦ ವ)

ಸಮಾಧಿ – [ನಾ] [ಜೈನ] ಸಮಾಧಿಮರಣ (ತನುವಂ ತಂದು ಮಹಾವ್ರತಕ್ಕೆ ಉಚಿತಕಾಯಕ್ಲೇಶರ್ ಅಜಾಮ್ಲವರ್ಧನಮಂ ನೋಂತು ಸಮಾಧಿ ಕೈಕೊಳೆ: **ಆದಿಪು,** ೩. ೭೬)

ಸಮಾಧಿವಡೆ – [ಕ್ರಿ] ಸಮಾಧಿವಿಧಿಯಿಂದ ಪ್ರಾಣಬಿಡು (ಎಂದು ಧೈರ್ಯಮನೆ ಮನದೊಳವಲಂಬಿಸಿ ಸಮಾಧಿವಡೆದು ಈಶಾನಕಲ್ಪದೊಳ್ ದಿವಾಕರಪ್ರಭಮೆಂಬ ವಿಮಾನದೊಳ್: **ಆದಿಪು,** ೫. ೧೩ ವ)

ಸಮಾಧಿವಿಧಿ – [ನಾ] [ಜೈನ] ಸಮಾಧಿಮರಣ (ಪಂಚಪದಂಗಳಂ ಓದುತಿರ್ಪ ನಾಲಗೆ ಗಡಮೇಂ ಸಮಾಧಿವಿಧಿಯಂ ನೆಱೆ ತಾಳ್ದಿದನೋ ಮಹಾಬಳಂ: **ಆದಿಪು,** ೨. ೬೦)

ಸಮಾನತಳ – [ನಾ] ಸಮತಳ, [ಪಟದ] ಒಂದೇ ಮಟ್ಟ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ಸಮಾವಸ್ಥೆ – [ನಾ] ಸಮಸ್ಥಿತಿ, ಸಮಾಧಾನ ಹೊಂದು (ಪವನತನಯಂಗೆ ಅಂತಕತನಯನ ಸಮಾವಸ್ಥೆಯಂ ಪೇೞ್ದು ಇಂದಿನ ಅನುವರಮೆಲ್ಲಮಂ ನಿಮ್ಮೊರ್ವರ ಮೇಲಿಕ್ಕಿ ಪಿರಿದುಂ ಪೊೞ್ತು ತಡೆದಿರ್ಪವು ಎನೆ: **ಪಂಪಭಾ,** ೧೨. ೧೩೪ ವ)

ಸಮಾಹಿತಚಿತ್ತ – [ನಾ] ಸಮಾಧಾನದ ಮನಸ್ಸುಳ್ಳವನು (ದುಶ್ಚರ ತಪಶ್ಚರಣಪರಾಯಣಂ ಜೀವಿತಾಂತ್ಯದೊಳ್ ಸಮಾಹಿತಚಿತ್ತನಾಗಿ: **ಆದಿಪು,** ೫. ೯೬ ವ)

ಸಮಿತಿ – [ನಾ] [ಜೈನ] ಮುನಿಗಳು ಆಚರಿಸಬೇಕಾದ ಈರ್ಯಾ, ಭಾಷಾ, ಏಷಣಾ, ಆದಾನನಿಕ್ಷೇಪಣ, ಉತ್ಸರ್ಗ ಎಂಬ ಐದು ವ್ರತರೂಪದ ಪ್ರತಿಜ್ಞೆ (ನಡೆವ ನುಡಿವ ಉಣ್ಬ ಕೊಳ್ವ ಇಡುವ ಎಡೆಯೊಳ್ ತಾಂ

ಕಾಯಮಲಮನುಗುಳ್ವೆಡೆಯೊಳ್ ಎಡಂಬಡಂ ಎನಿಸದೆ ಓವಿ ಜೀವಮನಡಕಂಬೆರಸು ಅಯ್ದುಸಮಿತಿಯೊಳ್ ಮುನಿ ನೆಗೞ್ದಂ: **ಆದಿಪು,** ೬. ೨೮); **[ನಾ]** ಸಮೂಹ (ಅದನಣಮಱೆಯಲ್ಕೆ ಸುರಾಸುರ ಸಮಿತಿಗಾದುದಿಲ್ಲಾ ಕ್ಷಣದೊಳ್: **ಆದಿಪು,** ೯. ೪೨)

ಸಮೀರ – **[ನಾ]** ಗಾಳಿ (ಅಳಿನೀಳ ನೀಳಗಳಕಂಠ ತಮಾಳ ವಿನೀಳನೀರದಪ್ರಸರ ವಿಭಾಸಿಯಾದುದು ಸಮೀರಂ: **ಪಂಪಭಾ,** ೭. ೨೨)

ಸಮೀರಣ – **[ನಾ]** ಗಾಳಿ (ಸಮೀರಣಸಂಚಲನಮೆಲ್ಲಂ ಮದಗಂಧಮಯಮುಂ ಸೃಷ್ಟಿಯೆಲ್ಲಂ ಅವನಿಪಾಳಮಯಂ: **ಆದಿಪು,** ೧೧. ೩೫ ವ)

ಸಮೀರಣಾಸ್ತ್ರ – **[ನಾ]** ವಾಯವ್ಯಾಸ್ತ್ರ (ಜ್ವಳನಪತತ್ರಿಯಂ ಕಡಿದು ವಾರುಣಪತ್ರಿಯಿಂ ಐಂದ್ರಬಾಣಮಂ ಕಳೆದು ಸಮೀರಣಾಸ್ತ್ರದಿಂ ಭೂಭುಜರೆಲ್ಲರಂ ಭಯಂಗೊಳಿಸಿ: **ಪಂಪಭಾ,** ೧೧. ೪೩)

ಸಮುಚಿತ – **[ಗು]** ತಕ್ಕನಾದ, ಯೋಗ್ಯವಾದ (ಇಭಖಡ್ಗಿವ್ರಾತ ನಾನಾ ಹರಿಮಯ ಕಟಕಭ್ರಾಜಿತಂ ತುಂಗವಂಶಪ್ರಭವಂ ಸಿಂಹಾಸನಶ್ರೀ ಸಮುಚಿತಂ: **ಆದಿಪು,** ೧೩. ೪೬)

ಸಮುಚ್ಚಳತ್ – **[ಗು]** ಮೇಲಕ್ಕೆ ಚಿಮ್ಮುವ (ಚಳತ್ ಅನಿಳ ಆಹತ ಕ್ಷುಭಿತ ಭಂಗುರತುಂಗತರಂಗಮಾಳಿಕಾವಳನ ಸಮುಚ್ಚಳತ್ ಮಣಿಗಣ ಆತ್ತ ಮರೀಚಿಲತಾಪ್ರತಾನಸಂವಳಿಯಿತ: **ಪಂಪಭಾ,** ೪. ೨೫)

ಸಮುಚ್ಚಳಿತ – **[ಗು]** ಮೇಲೆದ್ದ (ತರಳತರ ತುರಂಗ ದ್ರುತವೇಗಾಕೃಷ್ಟ ಧನಂಜಯರಥ ಚಟುಳಚಕ್ರನೇಮಿ ಧಾರಾಪರಿವೃತ ಸಂಘಟ್ಟನ ಸಮುಚ್ಚಳಿತ ಪಾಂಸುಪಟಳ: **ಪಂಪಭಾ,** ೧೩. ೫೧ ವ)

ಸಮುಚ್ಛಿನ್ನಕ್ರಿಯಾಪ್ರತಿಪತ್ತಿ – **[ನಾ]** [ಜೈನ] ಇದು ಸರ್ವೋತ್ಕೃಷ್ಟವಾದ ನಾಲ್ಕನೆಯ ಶುಕ್ಲಧ್ಯಾನ; ಇದಕ್ಕೆ ಸಮುಚ್ಛಿನ್ನಕ್ರಿಯಾನಿವರ್ತಿ ಎಂಬ ಹೆಸರೂ ಇದೆ (ಸಮುಚ್ಛಿನ್ನಕ್ರಿಯಾಪ್ರತಿಪತ್ತಿ ಧ್ಯಾನಪರಿಪೂರ್ಣ ವಿಶೇಷಶಿಲಗುಣಗಣನಿಳಯಂ: **ಆದಿಪು,** ೧೬. ೪೯ ವ) [ನರಸಿಂಹಶಾಸ್ತ್ರಿಗಳು ಸ್ವೀಕರಿಸಿರುವ ಪಾಠ]

ಸಮುಚ್ಛ್ರಿತ – **[ಗು]** ಎತ್ತರವಾದ (ಆತತ ಯಶೋವಿತಾನಂ ಅಜಾತಭಯಂ ಪೂರ್ವಪರಿಮಿತಾಯುಷ್ಯಂ ಸಂಜಾತದಯಂ ಪಂಚಾಶದುಪೇತಧನುಃ ಪಂಚಶತಸಮುಚ್ಛ್ರಿತದೇಹಂ: **ಆದಿಪು,** ೬. ೬೪)

ಸಮುತ್ತರಣ – **[ನಾ]** ದಾಟಿಸುವಿಕೆ (ಅಗಾಧಜಲದುರ್ಗಸಮುತ್ತರಣ ನಿರತ ಸಕಳ ಶಿಬಿರ ಸಂಧಾರಣಶಕ್ತಿಯುಕ್ತಮಪ್ಪ ವಜ್ರಮಯಮೆಂಬ ಚರ್ಮರತ್ನಮುಂ: **ಆದಿಪು,** ೧೧. ೩ ವ)

ಸಮುತ್ತಾನೀಕೃತ – **[ಗು]** ಮೇಲ್ಮುಖವಾಗಿ ಎತ್ತಿ ಹಿಡಿದ (ಧವಳೇಕ್ಷುಧಾರೆ ಪುಣ್ಯಧಾರೆಯಂತೆ ಸೊಗಯಿಸುವಿನೆಗಂ ಸಮುತ್ತಾನೀಕೃತ ವಿಶಾಲಪಾಣಿಪಾತ್ರದೊಳ್ ಎಱೆವುದುಂ: **ಆದಿಪು,** ೧೦. ೧ ವ)

ಸಮುತ್ತೀರ್ಣ – **[ಗು]** ಪೂರ್ತಿಯಾಗಿ ತೊರೆದ (ವೃಷಭನಾಥಂ ಉಟಿದ ಅಪತ್ಯವರ್ಗಕ್ಕೆಲ್ಲಂ ಇಳಾತಳವಿಭಾಗಮಂ ಪಚ್ಚುಕೊಟ್ಟು ಸಮುತ್ತೀರ್ಣರಾಜ್ಯಭಾರನುಂ: **ಆದಿಪು,** ೯. ೭೨ ವ)

ಸಮುತ್ಥಾಪಿತ – **[ಗು]** ಎತ್ತರದಲ್ಲಿ ನೆಲೆಗೊಂಡ (ಆಗಳ್ ನಿರಂತರ ಸಮುತ್ಥಾಪಿತಂಗಳುಂ .. .. ಅಪ್ಪ ತೋರಣಂಗಳನೆ ನುಗುಳುತ್ತುಂ: **ಆದಿಪು,** ೪. ೫೮ ವ)

ಸಮುತ್ಪನ್ನ – **[ಗು]** ಉಂಟಾದ (ಅಭಿನವಸಂಗಸಮುತ್ಪನ್ನ ಸಾಧ್ವಸ ರಸರಮಣೀಯತರ ಮುಗ್ಧವಧೂವದನವಿಲೋಕನ ಸುಖಮನನುಭವಿಸಿ: **ಆದಿಪು,** ೪. ೫೧ ವ)

ಸಮುತ್ಪಾಟನ – **[ನಾ]** ಬುಡಸಹಿತ ಕೀಳುವುದು (ಆತಂ .. .. ವಿದ್ವಿಷದಿಭರದನಸ್ತಂಭ ಲೀಲಾಸಮುತ್ಪಾಟನಕಾಂಕ್ಷಾ ದುರ್ಮದಂ: **ಆದಿಪು,** ೧೪. ೧೯)

ಸಮುತ್ಸಾರಿತ – **[ಗು]** ಹೊರಡಿಸಲ್ಪಟ್ಟ (ಅನೇಕ ನೃಪ ಶಿರಃ ಕಪಾಳ ಶಕಳ ಜರ್ಜರಿತಮುಂ ಪರಸ್ಪರ ಸಮರರಭಸ ಸಮುತ್ಸಾರಿತಮುಂ: **ಪಂಪಭಾ,** ೧೩. ೫೧ ವ)

ಸಮುದಿತ – **[ಗು]** ಉಂಟಾದ (ಆಗಳ್ ಉಭಯಬಲಂಗಳೊಳಂ ಚಾತುರ್ಯಾಮಾವಸಾನಘಟಿತ ಘಂಟಿಕಾಧ್ವನಿಳುಂ ಸಂಧ್ಯಾಸಮಯ ಸಮುದಿತ ಶಂಖಧ್ವನಿಗಳುಂ: **ಪಂಪಭಾ,** ೧೦. ೩೫ ವ)

ಸಮುದ್ಭಟ – **[ಗು]** ಶ್ರೇಷ್ಠವಾದ (ನಿಸ್ಸಹಾಯಸಾಹಸೋತ್ತೀರ್ಣ ಮಹಾಹವಾರ್ಣವಪ್ರವೀರಪ್ರಾರಬ್ಧ ಆರಭಟೀ ಸಮುದ್ಭಟ ಕಥೆಗಳನೆ ಕೇಳಲುಂ: **ಆದಿಪು,** ೮. ೩೨ ವ)

ಸಮುದ್ಭವ – **[ನಾ]** ಉಂಟಾಗುವಿಕೆ, ಒದವು (ಇರುಳ್ ಕಂಡ ಕನಸಂ ಮಱುದೆವಸಂ ನೆನೆವಂತೆ ನಿರತಿಶಯಸುರಲೋಕ ಸಮುದ್ಭವಸುಖಮಂ ಆಗಳೇ ನೆನೆದು: **ಆದಿಪು,** ೪. ೫ ವ)

ಸಮುದ್ಭೂತ – **[ಗು]** ಒಗೆದ, ಹೊಮ್ಮಿದ (ಉತ್ತುಂಗ ವಸ್ತ್ರಾಂಗಕುಜ ಸಮುದ್ಭೂತ ವಸನನಿರ್ಮಿತ ವಿತಾನರಾಜಿತಮುಂ: **ಆದಿಪು,** ೭. ೭೬ ವ)

ಸಮುದ್ರಮುದ್ರಿತ – **[ಗು]** ಸಮುದ್ರಗಳಿಂದ ಸುತ್ತುವರಿದ (ಬೆಸಕೆಯ್ದತ್ತು ಸಮುದ್ರಮುದ್ರಿತ ಧರಾಚಕ್ರಂ .. .. ಸಮಂತೆಂಬಿನಂ ಜಸಮಾಪಾಂಡುರಮಾದುದು ನೃಪರೊಳಾರಾ ಪಾಂಡುರಾಜಂಬರಂ: **ಪಂಪಭಾ,** ೧. ೧೧೦)

ಸಮುದ್ಯತ್ – **[ಗು]** ಅತಿ ಎತ್ತರವಾದ (ಸಮುದ್ಯತ್ ರಜತಗಿರಿ ತಟ ಸ್ಪಷ್ಟ ಸಂಶ್ಲಿಷ್ಟ ಮೌರ್ವೀನಿನದಂ ಪರ್ವಿತ್ತು ಅಕಾಂಡಪ್ರಳಯ ಘನಘಟಾಟೋಪ ಗಂಭೀರನಾದಂ: **ಪಂಪಭಾ,** ೧೨. ೧೩೭)

ಸಮುನ್ಮಿಷತ್ – **[ಗು]** ಹೊಳೆಯುವ (ಸಮುನ್ಮಿಷದ್ವಿವಿಧ ರತ್ನಮಾಲಾ ಪ್ರಭಾಭಿದಾರುಣ ಜಲಪ್ಲವಾವಿಳ ವಿಳೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ: **ಪಂಪಭಾ,** ೧. ೫೧ ವ)

ಸಮುಪಹಿತ – **[ಗು]** ನೆಲೆಗೊಳಿಸಿದ, ಕೂಡಿದ (ದೇವತೂರ್ಯಾನುಗ ದೇವೀಗೀತ ಜೈನಸ್ತವ ಸಮುಪಹಿತ ಆತ್ಮೀಯಚಿತ್ತಂ: **ಆದಿಪು,** ೭. ೪೩)

ಸಮೆ – **[ಕ್ರಿ]** ಮಾಡು, ನಿರ್ಮಿಸು (ಉಜ್ಜ್ವಳ ಪಂಚರತ್ನಭಾಸ್ವ ಸದನಂಗಳಿಂ ನೆಱೆದುದಂ ಸಮೆದಂ ಪುರಮಂ ಪುರಂದರಂ: **ಆದಿಪು,** ೬. ೮೯); **[ಕ್ರಿ]** ರಚಿಸು (ಶ್ರೌತಮಿದು ತನಗೆ ಗಂಗಾಸ್ರೋತದವೊಲ್ ಅಳುಂಬಮಾಗಿ ಗೆಡೆಗೊಳ್ಳದೆ

ವಿಖ್ಯಾತಕವಿವೃಷಭ ವಂಶೋದ್ಭೂತಮೆನಲ್ ಬರಿಸದೊಳ್ ಸಮೆವಿನೆಗಂ: **ಪಂಪಭಾ,** ೧೪. ೫೨)

ಸಮೆತರ್ – [ಕ್ರಿ] ಮುಗಿದುಹೋಗು (ಸಮೆತಂದಪುದು ಸಮುದ್ರೋಪಮೆನೆ ಮಂದಾರಮಾಳಿಕಾಮ್ಲಾನತೆಯುಂ ಸಮಕೊಳಿಸಲಾರ್ತುದಿಲ್ಲ ದಲ್: **ಆದಿಪು,** ೬. ೧೯); [ಕ್ರಿ] ಸಿದ್ಧಪಡಿಸು (ಆಗಾಮಿಕ ಸಂಗ್ರಾಮಕ್ಕೆ ಪಾತ್ರಂಗಳಂ ಸಮೆಯಿಸುವ ಸೂತ್ರಧರನಂತೆ: **ಪಂಪಭಾ,** ೨. ೫೯ ವ); [ಕ್ರಿ] ಮುಗಿಸಿಬಿಡು (ಭಾರತಮನಿಂದೆ ಸಮೆಯಿಸುವೆಂ ಎಂದು ಕೋದಂಡಮಂ ಬಿಸುಟು ಗದಾದಂಡಮಂ ಭುಜಾದಂಡದೊಳ್ ಅಳವಡಿಸಿಕೊಂಡು: **ಪಂಪಭಾ,** ೧೦. ೧೦೦ ವ)

ಸಮೆಯಿಸು – [ಕ್ರಿ] ಕಟ್ಟಿಸು, ಸಿದ್ಧಗೊಳಿಸು (ಎರಡುಂ ದೆಸೆಯೊಳಿರ್ದ ದೇವೇಂದ್ರಶಿಲ್ಪಿಗಳ್ ಸಮೆಯಿಸಿದ ಪಂಚರತ್ನಮಯ ವಿವಾಹಮಂಟಪದೊಳ್: **ಆದಿಪು,** ೮. ೧೫ ವ)

ಸಮ್ಮದ – [ನಾ] ಸಂಬಂಧ (ಎನಗಂ ಈ ಲೋಕಕ್ಕಂ ಏಂ ಸಮ್ಮದಂ: **ಆದಿಪು,** ೨. ೬೭)

ಸಮ್ಮರ್ದ – [ನಾ] ತೀವ್ರತೆ (ಏಂ ನಲಿದನೋ ಸಂಭೋಗಸಮ್ಮರ್ದ ನಿರ್ದಯನಿಷ್ಪೀಡಿತದೇವವಾರವನಿತಾಬಿಂಬಾಧರಂ ಶ್ರೀಧರಂ: **ಆದಿಪು,** ೫. ೭೧)

ಸಮ್ಮರ್ದನ – [ನಾ] ಒತ್ತುವುದು (ಅತಿಮೃದು ರಸನಾ ಸಮ್ಮರ್ದನಮಾತ್ರ ದ್ರಾವಣೀಯ ಘೃತಪೂರಮುಮಂ: **ಆದಿಪು,** ೧೧. ೨೬ ವ)

ಸಮ್ಮಾರ್ಜಿತ – [ಕ್ರಿ] ಗುಡಿಸಲ್ಪಟ್ಟ (ಮರುತ್ಕುಮಾರ ಸಮ್ಮಾರ್ಜಿತ ಯೋಜನಾಂತರಿತ ರಮ್ಯಭೂಮಿಭಾಗನುಂ: **ಆದಿಪು,** ೧೦. ೬೭ ವ)

ಸಮ್ಮಿಶ್ರ – [ಗು] ಚೆನ್ನಾಗಿ ಬೆರೆತ (ಸಮ್ಮಿಶ್ರ ತಾಂಬೂಲರಸರಾಗ ರಕ್ತಾಧರಪ್ರವಾಲ ಪ್ರಭಾಪ್ರಕಟಪೂರ್ವಸಂಧ್ಯಾರಾಗನುಂ: **ಆದಿಪು,** ೩. ೯೦ ವ)

ಸಮ್ಯಕ್ಚರಿತ್ರ – [ನಾ] [ಜೈನ] ರತ್ನತ್ರಯಗಳಲ್ಲಿ ಒಂದು, ಒಳ್ಳೆಯ ನಡತೆ (ಅದುವೆ ಸಮ್ಯಗ್ಜ್ಞಾನಕ್ಕವಕಾಶಮಕ್ಕಂ ಅಂತದು ಕವಲ್ತು ಸಮ್ಯಕ್ಚರಿತ್ರಮಂ ಪ್ರಕಟಿಸುಗುಂ: **ಆದಿಪು,** ೫. ೫೯)

ಸಮ್ಯಕ್ಚಾರಿತ್ರ – [ಜೈನ] ಭವ್ಯಜೀವಿಗೆ ಬಾಹ್ಯಾಭ್ಯಂತರ ನಿವೃತ್ತಿ, ಅದರಲ್ಲಿ ಐದು ವಿಧ (ಸಂಸಾರಪರಿತ್ಯಾಗೋದ್ಯುಕ್ತ ಜ್ಞಾನೋಪೇತ ಭವ್ಯಜೀವನ ಬಾಹ್ಯಾಭ್ಯಂತರ ಕ್ರಿಯಾನಿವೃತ್ತಿ ಸಮ್ಯಕ್ಚಾರಿತ್ರಮೆಂಬುದು ಅದು ಸಾಮಾಯಿಕಚ್ಛೇದ ಉಪಸ್ಥಾಪನಾ ಪರಿಹಾರಶುದ್ಧಿ ಸೂಕ್ಷ್ಮಸಂಪರಾಯ ಯಥಾಖ್ಯಾತಚಾರಿತ್ರಭೇದದಿಂ ಪಂಚವಿಧಂ: **ಆದಿಪು,** ೧೦. ೬೩ ವ)

ಸಮ್ಯಕ್‌ಜ್ಞಾನ – [ನಾ] [ಜೈನ] ಜೀವಾದಿ ಪದಾರ್ಥಗಳ ಯಥಾತ್ಮತೆಯನ್ನರಿಯುವುದು (ಸಂಶಯ ವಿಪರ್ಯಯ ಸಾವದ್ಯ ಅನವದ್ಯ ಅವಸಾಯ ಸ್ವಭಾವರಹಿತಮಾಗಿ ಜೀವಾದಿಪದಾರ್ಥ ಯಥಾತ್ಮ್ಯಾವಗಮಂ ಸಮ್ಯಕ್‌ಜ್ಞಾನಂ: **ಆದಿಪು,** ೧೦. ೬೩ ವ)

ಸಮ್ಯಕ್ತ್ವ – [ನಾ] [ಜೈನ] ಧರ್ಮದ ಬಗೆಗಿನ ಅಚಲ ನಂಬಿಕೆ, ಆರು ದ್ರವ್ಯ, ಪಂಚಾಸ್ತಿಕಾಯ ಮತ್ತು ನವಪದಾರ್ಥಗಳ ಬಗ್ಗೆ ಜಿನೇಂದ್ರನ ಉಪದೇಶದಂತೆ ತಿಳಿವಳಿಕೆ ಪಡೆಯುವುದು (ನಿನಗೆ ಜಯವರ್ಮನಾದಂದಿನ ಭವದಿಂದಿತ್ತ ಭೋಗಕಾಂಕ್ಷೆಯೆ ತಿಣ್ಣಂ ಸಮ್ಯಕ್ತ್ವದ ದೆಸೆಯಿನಿತಿಲ್ಲ: **ಆದಿಪು,** ೫. ೫೧)

ಸಮ್ಯಕ್ತ್ವಪ್ರಕೃತಿ – [ನಾ] [ಜೈನ] ದರ್ಶನ ಮೋಹನೀಯ ಕರ್ಮದ ಮೂರು ಪ್ರಭೇದಗಳಲ್ಲಿ ಒಂದು (ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿಯೆಂಬ ದರ್ಶನಮೋಹನೀಯತ್ರಿಕದ ನಿರ್ಮೂಲನದಿಂ ಕ್ಷಾಯಿಕಸಮ್ಯಗ್ದೃಷ್ಟಿಯಾಗಿ: **ಆದಿಪು,** ೧೦. ೧೪ ವ)

ಸಮ್ಯಗ್ಜ್ಞಾನ – [ನಾ] [ಜೈನ] ಸಮ್ಯಕ್‌ದರ್ಶನ ಸಮ್ಯಕ್‌ಚಾರಿತ್ರ ಸಮ್ಯಕ್‌ಜ್ಞಾನ ಎಂಬ ರತ್ನತ್ರಯಗಳಲ್ಲಿ ಒಂದು, ಸಮ್ಯಗ್ದರ್ಶನದಿಂದ ಕಂಡು ಗ್ರಹಿಸಿದ್ದನ್ನು ಸ್ವಲ್ಪವೂ ಸಂಶಯ ಉಳಿಯದಂತೆ ಬುದ್ಧಿಯಿಂದ ಚೆನ್ನಾಗಿ ತಿಳಿದು ಜೀವಾದಿ ಪದಾರ್ಥಗಳ ಸ್ವರೂಪವನ್ನು ಯಥಾವತ್ತಾಗಿ ಅರಿತುಕೊಳ್ಳುವುದು (ಇವಱಿಂ ಸಮ್ಯಗ್ದರ್ಶನಮವಶ್ಯ ಮುಜ್ಜ್ವಳಿಕುಮದುವೆ ಸಮ್ಯಗ್ಜ್ಞಾನಕ್ಕವಕಾಶಮಕ್ಕುಮಂ: **ಆದಿಪು,** ೫. ೫೯)

ಸಮ್ಯಙ್ಮಿಥ್ಯಾತ್ವ – [ನಾ] [ಜೈನ] ದರ್ಶನಮೋಹನೀಯಗಳಲ್ಲಿ ಒಂದು, ರತ್ನತ್ರಯಸಾಧನೆಗೆ ಅಡ್ಡಿ (ತ್ರಿವಿಧಕರಣಪರಿಣಾಮಪರಿಣತಂ ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿ ಎಂಬ ದರ್ಶನಮೋಹನೀಯತ್ರಿಕದ ನಿರ್ಮೂಲನದಿಂ: **ಆದಿಪು,** ೧೦. ೧೪ ವ)

ಸಮ್ಯಗ್ದರ್ಶನ – [ನಾ] [ಜೈನ] ರತ್ನತ್ರಯಗಳಲ್ಲಿ ಒಂದು, ತತ್ತ್ವಾರ್ಥಶ್ರದ್ಧೆ (ತತ್ತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಂ ಆ ತತ್ತ್ವಮುಂ ಜೀವ ಅಜೀವ ಆಸ್ರವ ಬಂದ ಸಂವರ ನಿರ್ಜರಾ ಮೋಕ್ಷಭೇದದಿಂ ಸಪ್ತವಿಧಂ: **ಆದಿಪು,** ೧೦. ೬೩ ವ)

ಸಮ್ಯಗ್ದರ್ಶನಾವಯವ – [ನಾ] [ಸಮ್ಯಗ್ದರ್ಶನ+ಅವಯವ] ಸಮ್ಯಗ್ದರ್ಶನದ ನಿಶ್ಶಂಕೆ ನಿಷ್ಕಾಂಕ್ಷೆ ನಿರ್ವಿಚಿಕಿತ್ಸೆ ಅಮೂಢದೃಷ್ಟಿತ್ವ ಉಪಗೂಹನ ಸ್ಥಿತಿಕರಣ ವಾತ್ಸಲ್ಯ ಧರ್ಮಪ್ರಭಾವನೆ ಎಂಬ ಅಂಗಗಳು (ಎಂದು ಪೇೞ್ದು ಈ ಎಂಟು ಗುಣಂಗಳುಂ ಸಮ್ಯಗ್ದರ್ಶನಾವಯವಂಗಳ್: **ಆದಿಪು,** ೫. ೫೮ ವ)

ಸಯಂಬರ – [ನಾ] ಸ್ವಯಂವರ (ನಾಳೆ ಸಯಂಬರಮೆನೆ ಪಾಂಚಾಳ ಮಹೀಪಾಳಂ ಅಖಿಳ ಭೂಭೃತ್ ನಿಕರಕ್ಕೆ ಓಳಿಯೆ ಸಾಱೆದೊಡೆ ಅವನೀಪಾಲರ್ ಕೆಯ್ಗಯ್ಯಲೆಂದು ಪಱಿಮುಱಿಯಾದರ್: **ಪಂಪಭಾ,** ೩. ೪೨)

ಸಯ್ತಾಗು – [ಕ್ರಿ] ಸರಿಹೋಗು, ವ್ಯಂಗ್ಯದ ಮಾತು (ಆಯ್ತೇ ಸಾಧಿಸಿಕೊಂಡು ಪಾಂಡುಸುತರಂ ನಣ್ಪಿಂಗೆ ಬೆನ್ನಿತ್ತು ದಲ್ ಸಯ್ತಾಯ್ತು ಅಜ್ಜನ ಮಾತು: **ಪಂಪಭಾ,** ೧೧. ೫೨)

ಸಯ್ತು – [ಅ] ನೇರವಾಗಿ (ತದ್ಗಿರೀಂದ್ರ ಮಧ್ಯಮಕೂಟದಿಂದಂ ಸಯ್ತು ತೆಂಕಮೊಗದೆ ಬಂದು ವೃಷಭಾಚಳಮಂ ಕಂಡಂ: **ಆದಿಪು,** ೧೩. ೬೯ ವ); [ಅ] ಸುಮ್ಮನೆ (ಆನನಾಂಬುಜಮನೊಯ್ಯನೆ ಬಾಗಿರೆ ಕಾದಲಂಗೆ ಸಯ್ತಂತಿರು ನಾಣ್ಚದೆ ಎಂದು ಅಣುಗೆಯರ್ ಪಿಡಿದು ಅೞ್ಕಱಿಂ ಎತ್ತಿ ಬುದ್ಧಿವೇೞ್ವಂತೆ: **ಪಂಪಭಾ,** ೩. ೭೮); ಸತ್ಯ (ಸಯ್ತಾಯ್ತು ಅಜ್ಜನ ಮಾತು: **ಪಂಪಭಾ,** ೧೧. ೫೨)

ಸಯ್ತುಮಾಡು – [ಕ್ರಿ] ಸರಿಪಡಿಸಿಕೊ, ನೇರ್ಪಡಿಸಿಕೊ (ತಳರ್ವ ಜಿನ್ನಪೂಗಳಂ ಅವಯವದೊಳೆ ಸಯ್ತುಮಾಡುವ ಕೆಯ್ತುಮುಮಂ: **ಆದಿಪು**, ೪. ೯ ವ)

ಸಯ್ದ – [ನಾ] ಸತ್ಯವಂತ (ಪೊಱಗಣ್ಗೆ ಸಯ್ದರೆನೆ ತಾವೊಳಗಂ ತವೆ ತೋಡಿ ತಿಂದು ರಕ್ಕಸಿಯರ ಕಂಡ ಕುಂಬಳದ ಮಾಟಕ್ಕೆವೊಲಾಗಿರೆ: **ಪಂಪಭಾ**, ೯. ೪೮); [ನಾ] ನೇರ ನಡತೆಯುಳ್ಳವನು (ನಿನ್ನೊಳೇಂ ಸಯ್ದವನಲ್ಲನೆ ಧರ್ಮತನೂಜಂ ಪೇಱ್ದುದಂ ಇನ್ನೆಮಗಿಂಬಿಕೆಯ್ ಸಯ್ದನೆಯಾಗು: **ಪಂಪಭಾ**, ೧೩. ೮೬)

ಸಯ್ಪು – [ನಾ] ಸೈಪು, ಪುಣ್ಯ (ನಮಗೀ ಪೊಟಲೊಳೊಂದು ಪರೋಪಕಾರಾರ್ಥಂ ಸಯ್ಪಿನಿಂ ದೊರೆಕೊಂಡುದೆಂದು ಇರುಳೆಲ್ಲಂ ಬಕನ ಪಡೆಮಾತನೆ ನುಡಿಯುತ್ತುಮಿರ್ಪನ್ನೆಗಂ: **ಪಂಪಭಾ**, ೩. ೨೬ ವ)

ಸರ – [ನಾ] [ಸ್ವರ] ದನಿ (ಅಂತು ಬೆಳರ್ತ ಅಧರಂ ಕಣ್ಣಿಂ ತುಳ್ಕುವ ಕೆಂಪು ಸರದ ನಡುಕಂ ಮಿಗೆ ತನ್ನಂತಃಪುರಲಲನೆ'ಯರ್ಗೆ ರತಾಂತದ ವಿಭವಮನೆ ಮಾಡಿ ತಾಂ ಪೊಱಮಟ್ಟಂ: **ಆದಿಪು**, ೧೧. ೧೫೧); [ನಾ] [ಶರ] ಬಾಣ (ನೆರೆದಿನಿವರುಮೀ ಲಕ್ಷ್ಯಮನಿರದಕ್ಕಟ ಸರದೆ ತೆಗೆಯಲಾರ್ತರುಮಿಲ್ಲಾ: **ಪಂಪಭಾ**, ೨. ೫೨)

ಸರಂದೋಱು – [ಕ್ರಿ] ಧ್ವನಿಯನ್ನು ಮಾಡು, ಹಾಡು (ನೀಂ ಮೆಲ್ಲಮೆಲ್ಲನೆ ಮಂದಾನಿಳ ತೀಡು ಕೋಗಿಲೆ ಸರಂದೋಱು ಎಂದು ಮೆಯ್ವೆರ್ಚಿ ತನ್ನಿನಿಯಂ ಬಂದೊಡೆ ನಲ್ಲಳೇಂ ನಲಿದಳೋ ನಾನಾವಿಳಾಸಂಗಳಂ: **ಆದಿಪು**, ೧೨. ೪೩)

ಸರಣ್ಗೆವರ್ – [ಕ್ರಿ] ಶರಣಾಗತವಾಗು (ಕಾದುದು ಸರಣ್ಗೆ ವಂದರಂ ಆದುದು ಕಾಲಾಗ್ನಿ ಬಲವತ್ ಅರಿನೃಪತಿಗೆ ಕಾಪಾದುದು ನೆಲಕ್ಕೆ ತೋಳ್ವಲಂ: **ಪಂಪಭಾ**, ೭. ೨)

ಸರದ – [ನಾ] ಶರತ್ಕಾಲ (ಸರದದ ಮುಗಿಲನೆ ಬಿಡದನುಕರಿಸುವ ಧವಳಾಶ್ವದಿಂದಂ ಒಸೆದೊಪ್ಪುವ ಲೋಹರಥಂ: **ಪಂಪಭಾ**, ೧೦. ೫೬)

ಸರದು – [ನಾ] ಸರದ [ಶರದ] ಎಂಬ ಮದ್ಯ (ಮಧು ಸೀಧು ಕಟು ಸೀಧು ಪೋ ಪುಳಿತ ಕಳ್ಳುತ್ತುಂ ಕರಂ ಕಯ್ತುಬರ್ಪುದು ಮಾರೀಚಿ ತೊಡಪು'ಳಿಂದೆ ಸರದಿಂ ಕಂಪಿಲ್ಲ: **ಪಂಪಭಾ**, ೪. ೮೮)

ಸರಭೇದ – [ನಾ] ಶಕುನಶಾಸ್ತ್ರ (ಸರಭೇದ ರತಿತಂತ್ರ ಇಂದ್ರಜಾಲ ವಿವಿಧವಿದ್ಯೆಗಳೊಳಂ: **ಪಂಪಭಾ**, ೨. ೩೪ ವ)

ಸರಲ್ – [ನಾ] ಬಾಣ (ನಡುವ ಸರಲ್ಗೆ ಮೆಯ್ಯೊಳ್ ಅಡಂಗುವ ಸಂಕುಗೆ ದಿಂಕುಗೊಳ್ವ ಕಕ್ಕಡೆಗೆ ಇದಿರ್ ಉರ್ಚುವ ಇಟ್ಟಿಗೆ: **ಪಂಪಭಾ**, ೧೦. ೯೪)

ಸರವಿ – [ನಾ] ಹಗ್ಗ (ಕಟ್ಟಿದ ಪಟ್ಟಮೆ ಸರವಿಗೆ ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ: **ಪಂಪಭಾ**, ೧೦. ೧೭)

ಸರಸ್ – [ನಾ] ಸರೋವರ, ಕೊಳ (ಅದಱ ನೆಲೆಯೊಳಿರ್ದ ಅಕೃತ್ರಿಮ ಚೈತ್ಯಾಲಯಂಗಳಂ ಅಖಿಳ ಜಗತ್ಪಾವನಕರ ಸರಸ್ ಸರಸೀ ಸರಿನ್ನಾಥ ತೀರ್ಥಜಲಂಗಳಿಂದಂ: **ಆದಿಪು**, ೨. ೩೨ ವ)

ಸರಸ – [ನಾ] ಪ್ರೀತಿಯ ಚಟುವಟಿಕೆ (ತನ್ನ ರತ್ನವಿಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟನಾಮಮಂ ಸರಸದಿಂ ಆಗಳುಚ್ಚರಿಸಿ ಸಾಹಸಮಂ ಪೊಗಟ್ಟಿಂ ಸುರಾಧಿಪಂ: **ಪಂಪಭಾ**, ೫. ೧೦೩)

ಸರಸಿಜಸಂಭವ – [ನಾ] ಕಮಲದಲ್ಲಿ ಹುಟ್ಟಿದವನು, ಬ್ರಹ್ಮ (ಪಟುವಗೆಯೊಳ್ ಭೈರವಂಬಾಯ್ವಂತೆ ಬಂದು ನಿಂದ ಪುರಂದರನಲ್ಲಿಗೆ ಸರಸಿಜಸಂಭವಂ ಬಂದು ಮಾರ್ಕೊಂಡು: **ಪಂಪಭಾ**, ೫. ೧೦೧ ವ)

ಸರಸೀ – [ನಾ] ಕಲ್ಯಾಣಿ (ಅದಱ ನೆಲೆಯೊಳಿರ್ದ ಅಕೃತ್ರಿಮ ಚೈತ್ಯಾಲಯಂಗಳಂ ಅಖಿಳ ಜಗತ್ಪಾವನಕರ ಸರಸ್ ಸರಸೀ ಸರಿನ್ನಾಥ ತೀರ್ಥಜಲಂಗಳಿಂದಂ: **ಆದಿಪು**, ೨. ೩೨ ವ)

ಸರಸೀಜಬಾಂಧವ – [ನಾ] ಕಮಲಬಂಧುವಾದ ಸೂರ್ಯ (ಆ ಸರಸೀಜಬಾಂಧವನ ಪಿಂಬಡಿನೊಳ್ ಕಡುವಿನ್ನನಾದುವಿಂತೀ ಸರಸೀರುಹಂಗಳ್ ಅವನೀಪದದೊಳ್: **ಪಂಪಭಾ**, ೪. ೪೭)

ಸರಸೀರುಹ – [ನಾ] ಕಮಲ (ಆ ಸರಸೀಜಬಾಂಧವನ ಪಿಂಬಡಿನೊಳ್ ಕಡುವಿನ್ನನಾದುವಿಂತೀ ಸರಸೀರುಹಂಗಳ್ ಅವನೀಪದದೊಳ್: **ಪಂಪಭಾ**, ೪. ೪೭)

ಸರಸೀರುಹಜನ್ಮ – [ನಾ] ಬ್ರಹ್ಮ (ಮದನನ ಕಾಯ್ಪು ಮಾಣ್ಗೆ ಸರಸೀರುಹಜನ್ಮನ ಮೆಚ್ಚು ತೀರ್ಗೆ ಕೋಳ್ಗುದಿ ಮನದಿಂದಂ ಇಂದು ಪೊಱಮಾಱುಗೆ: **ಪಂಪಭಾ** ಪರಿಷತ್ತು, ೫. ೧೮)

ಸರಸೀರುಹೋದರ – [ನಾ] ವಿಷ್ಣು, ಕೃಷ್ಣ (ಎಂತುಪೇಕ್ಷಿಸುವುದೀ ಮಖಮಂ ಸರಸೀರುಹೋದರಾ: **ಪಂಪಭಾ**, ೬. ೨೫)

ಸರಸ್ವತೀ ಕಳಹಂಸಂ – [ನಾ] ಸರಸ್ವತಿಯ ವಾಹನವಾದ ಹಂಸದಂತಿರುವವನು (ಮಾನಸದೊಳ್ ಹಂಸೆಯವೋಲ್ ಮಾನಸವಾಗ್ವನಿತೆ ತನ್ನ ಮಾನಸದೊಳಿವಂ ಮಾನಸವೆಂದಗಲದೆ ನಿಲೆ ಮಾನಸನಾದಂ ಸರಸ್ವತೀಕಳಹಂಸಂ: **ಪಂಪಭಾ**, ೨. ೩೬)

ಸರಸ್ವತೀಮತಿ – [ನಾ] ಬುದ್ಧಿಯುಳ್ಳವನು (ಏಕಜೆಯ ಪೋದವರಾದವರೊಳ್ ಸರಸ್ವತೀಮತಿ ಕವಿತಾಗುಣಕ್ಕೆ ಪದೆದೆಯ್ದೆವರಲ್ಕೆ: **ಪಂಪಭಾ**, ೧೪. ೬೧)

ಸರಳ – [ನಾ] ಧೂಪದ ಮರ (ಸರಳಸಾರಾಮೋದಂ ಉದ್ದಾಮ ಭೃಂಗರವಂ ಚಕ್ರಿಯನಾಜೆಸಿತ್ತು ವಿಜಯಾರ್ಧೋಪಾಂತ ಮಂದಾನಿಳಂ: **ಆದಿಪು**, ೧೩. ೯) ದೇವದಾರು ಎಂದು ನರಸಿಂಹಶಾಸ್ತ್ರಿ] ; ತೇಗದ ಮರ [ಡಿಎಲ್ಎನ್] (ಸರಳ ತಮಾಳ ತಾಳ ಹರಿಚಂದನ ನಂದನ ಭೂಜರಾಜಿಯಿಂ ಸುರಿವ ಅಲರೋಳಿ ತದ್ವನಲತಾಂಗಿಯ ಸೂಸುವ ಸೇಸೆಯಾಯ್ತು: **ಪಂಪಭಾ**, ೫. ೫೨)

ಸರಿ – [ನಾ] ಮಳೆ (ಸಿಡಿಲಿಂ ಮಿಂಚಿಂ ಘನಧ್ವಾನದಿಂದಿಳೆ ಕಂಪಂಗೊಳೆ ಸೋನೆಯಿಂ ಸರಿಯಿಂ ತಂದಲ್ಗಳಿಂದಂಂದು ಭೂತಳಮೇಕಾರ್ಣವಮಾಗೆ: **ಆದಿಪು**, ೧೩. ೫೯); ಧಾರೆ (ದೇವರ ಪಱೆಗಳ ರವದೊಳ್ ದೇವರ ಸುರಿವರಲ ಸರಿಯ ಬೆಳ್ಸರಿಯೊಳ್ ತದ್ದೇವವಿಮಾನಾವಳಿಯೊಳ್: **ಪಂಪಭಾ**, ೧. ೧೪೭)

ಸರಿಗೆ – [ನಾ] ಒಂದು ಆಭರಣ, ಅಡ್ಡಿಗೆ (ಪೂತ ಸುರಯಿಯ ಮುಗುಳಂ ಪಸವಟ್ಟಂತೊರ್ವಳ್ ತನಗೆ ಸರಿಗೆಗಂ ಲಂಬಣಕ್ಕಂ ಅಟ್ಟಿಯೆ ಕೊಯ್ದಳ್: **ಆದಿಪು**, ೧೧. ೧೦೩); [ಚಿನ್ನದ] ನೂಲು (ಸರಿಗೆಯೊಳ್ ಸಮೆದ ಅಕ್ಷಮಾಲಿಕೆ ಪೊನ್ನ ಮುಂಜಿ ತೊಳಪ್ಪ ಕಪ್ಪುರದ ಭಸ್ಮರಜಃ ತ್ರಿಪುಂಡ್ರಕಂ ಒಪ್ಪೆ: **ಪಂಪಭಾ**, ೬. ೮)

ಸರಿಗೆಕಂಕಣ – [ನಾ] [ಸರಿಗೆ+ಕಂಕಣ] ತಂತಿಯಿಂದ ಮಾಡಿದ ಬಳೆ (ಮೃಣಾಳನಾಳದೊಳ್ ಸಮೆದ ಸರಿಗೆಕಂಕಣಂಗಳುಮಂ: **ಪಂಪಭಾ,** ೫. ೬ ವ)

ಸರಿತ್ – [ನಾ] ನದಿ (ಮಕರ ಸರಿತ್ ಜಳನಿಧಿ ಮತ್ಸ್ಯ ಕೂರ್ಮ ಚಂದ್ರಾರ್ಕಲಕ್ಷಣಂ ಪದಯುಗದೊಳ್ ಪ್ರಕಟಂ ನೆಲಸೆ: **ಆದಿಪು,** ೬. ೬೯)

ಸರಿತ್ಸುತ – [ನಾ] ಗಂಗಾನದಿಯ ಮಗ, ಭೀಷ್ಮ (ನಿನ್ನ ಪೆಡಗೆಯ್ಗಟ್ಟಂ ಶರದಿಂ ಬಿಡಿಸಿದನಲ್ಲನೆ ಸರಿತ್ಸುತಂ ಬನ್ನವಿನ್ನವು ಎಂಬುವುಮೊಳವೇ: **ಪಂಪಭಾ,** ೮. ೫೩)

ಸರಿದಧಿಪತಿ – [ನಾ] [ಸರಿತ್+ಅಧಿಪತಿ] ನದಿಗಳ ರಾಜ, ಸಮುದ್ರ (ಸರಿದಧಿಪತಿ ಮೊಟಕಾಲ್ವರಂ ಉರಂಬರಂ ಮೇರು ಮುಯ್ವುವರೆಗಂ ಅಜಾಂಡಂ ಬರೆ: **ಪಂಪಭಾ,** ೧೨. ೧೧)

ಸರಿನ್ನಾಥ – [ನಾ] [ಸರಿತ್+ನಾಥ] ನದಿಗಳ ಒಡೆಯ, ಸಮುದ್ರ (ಅದಱ ನೆಲೆಯೊಳಿರ್ದ ಅಕೃತ್ರಿಮ ಚೈತ್ಯಾಲಯಂಗಳಂ ಅಖಿಳ ಜಗತ್ಪಾವನಕರ ಸರಸ್ ಸರಸೀ ಸರಿನ್ನಾಥ ತೀರ್ಥಜಲಂಗಳಿಂದಂ: **ಆದಿಪು,** ೨. ೩೨ ವ)

ಸರಿಸೃಪ – [ನಾ] ಹಾವಿನಂತಹ ಹರಿದಾಡುವ ಜೀವಿಗಳು (ಕ್ರಮದೊಳ್ ಅಸಂಜ್ಞಿಯುಂ ಸರಿಸೃಪಾವಳಿಯುಂ ವಿಹಗಾಳಿಯುಂ ಭುಜಂಗಮತತಿಯುಂ ಮೃಗಾರಿಗಣಮುಂ ಲಲನಾಜನಮುಂ: **ಆದಿಪು,** ೫. ೯೪)

ಸರೀಸೃಪ – [ನಾ] ಸರಿಸೃಪ (ಪಕ್ಷಿ ಚತುಷ್ಪದ ಸರೀಸೃಪಾದಿ ತಿರ್ಯಗ್ಜಾತಿಗಳುಂ ಬೆರಸು: **ಆದಿಪು,** ೧೬. ೪೦ ವ)

ಸರುಗ – [ನಾ] [ಚರುಕ] ಅನ್ನ, ಚರು (ಅನರ್ಘ್ಯಮಣಿವಿಷ್ಟರದೊಳ್ ಕುಳ್ಳಿರ್ದು ಸರುಗನುಣೆ ಕಂಡುದಜೆಂ: **ಆದಿಪು,** ೧೫. ೪೨)

ಸರೋಜದಳಾಯತಾಕ್ಷಿ – [ನಾ] ತಾವರೆಯ ದಳದಂತೆ ವಿಶಾಲವಾದ ಕಣ್ಣುಳ್ಳವಳು (ಕಣ್ಣೀರ ಪೂರಂ ಆ ಪ್ರೇತಮಂ ಓಗಡಿಸದೆ ಸುಡುವುದು ಗಡಂ ಇನ್ನುಡುಗುವುದೀ ಶೋಕಮಂ ಸರೋಜದಳಾಯತಾಕ್ಷೀ: **ಪಂಪಭಾ,** ೨. ೨೮)

ಸರೋಜನಿಲಯ – [ನಾ] ಕಮಲದಲ್ಲಿ ವಾಸಿಸುವವನು, ಬ್ರಹ್ಮ (ಕುಳಗಿರಿಯಂ ಸರೋಜನಿಲಯಂ ಮನುಜಾಕೃತಿಯಾಗೆ ಮಾಡಿದಂತು ಒಳನ್ ಎನಿಪಂತುಟಪ್ಪ ಪೊಸಬಣ್ಣದೊಳ್: **ಪಂಪಭಾ,** ೨. ೩೮)

ಸರೋಜನಿಳಯೆ – [ನಾ] ಲಕ್ಷ್ಮಿ (ಎನ್ನ ಬರ್ಪನ್ನಂ ಅರಸನಂ ಅಗಲದೆ ವಿಕಸಿತಶತಪತ್ರಾತಪತ್ರದ ತಣ್ಣೆಲುಮಂ ಕುಂದಲೀಯದಿರು ಎಂದು ನಿಯಮಿಸಿ: **ಪಂಪಭಾ,** ೧೩. ೧೦೫ ವ)

ಸರೋಜಷಂಡ – [ನಾ] ತಾವರೆಗಳ ಸಮೂಹ [ನೆಲೆಗೊಂಡ] ಸರೋವರ (ತಾನುಂ ಸರೋಜಷಂಡಮಂ ಆನತರಿಪು ಪೊಕ್ಕು ದಿವ್ಯವಚನಮಂ ಅದಂ ಅಂತೇನುಂ ಬಗೆಯದೆ: **ಪಂಪಭಾ,** ೮. ೪೦)

ಸರೋಜಾನನೆ – [ನಾ] ಕಮಲಮುಖೀ (ಜ್ಞಾನದಿನಿರ್ದು ನಿಟ್ಟಿಪೊಡೆ ದಿವ್ಯಮುನೀಂದ್ರಂ ಕೊಟ್ಟ ಮಂತ್ರಸಂತಾನಮನೋದಿಯೋದಿ ಯಮರಾಜನನದ್ಭುತತೇಜನಂ ಸರೋಜಾನನೆ ಜಾನದಿಂ ಬರಿಸೆ: **ಪಂಪಭಾ,** ೧. ೧೧೯)

ಸರೋರುಹ – [ನಾ] ತಾವರೆ (ಧಾತ್ರಿ ತಿಙ್ಗನೆ ತಿರಿವನ್ನೆಗಂ ತೆಗೆದು ಕಂಧರಸಂಧಿಯಂ ಎಯ್ದೆ ನೋಡಿ ತೊಟ್ಟನೆ ನರಂ ಎಚ್ಚೊಡೆ ಉಚ್ಚಳಿಸಿ ಬಿಟ್ಟುದು ವೈರಿಶಿರಸ್ಸರೋರುಹಂ: **ಪಂಪಭಾ,** ೧೨. ೧೬೮)

ಸರೋವರನಿವಾಸಿನಿ – [ನಾ] [ಜೈನ] ಜಿನಜನನಿಯನ್ನಲಂಕರಿಸಲು ನಿಯೋಜಿತರಾದ ಆರು ಮಂದಿ ದೇವತೆಗಳು (ಪದ್ಮಾದಿಸರೋವರನಿವಾಸಿನಿಯರಪ್ಪ ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಅಱುವರುಮಂ: **ಆದಿಪು,** ೭. ೩ ವ)

ಸರ್ಪರೋಗಿ – [ನಾ] ವಿಸರ್ಪಿಯೆಂಬ ರೋಗ ಬಂದವನು (ನಡೆ ನಾರಾಚದ ನೋವಿನ ನಡುಕಂ ಪಿರಿದಾಯ್ತು ಸರ್ಪರೋಗಿಯ ಸೆರೆಯಂ ಬಿಡಿಸಿದವೊಲ್: **ಪಂಪಭಾ,** ೧೨. ೭೧)

ಸರ್ವಜ್ಞಬಿಂಬಾವಳಿ – [ನಾ] ತೀರ್ಥಂಕರ ಮೂರ್ತಿಗಳು (ಪ್ರತ್ಯಗ್ರ ಚಿಂತಾಮಣಿಮಯ ರಚನಾಶ್ಚರ್ಯನಿಶ್ಶೇಷಭೂಷಾರ್ಚನೆಯಂ ಸರ್ವಜ್ಞಬಿಂಬಾವಳಿಗೆ ಪರಸಿದರ್ ಮಸ್ತಕನ್ಯಸ್ತಹಸ್ತರ್: **ಆದಿಪು,** ೧೪. ೧೧೬)

ಸರ್ವಜಗತಾಂಮತಿಃ – ಸಮಸ್ತ ಜಗತ್ತಿಗೂ ಒಡೆಯನಾದ (ಸ ಸರ್ವಜಗತಾಂ ಗುರುರ್ಗಿರಿಸುತಾಪತಿಃ ಪಾತು ನಃ: ೪. ೨೭)

ಸರ್ವತೋಭದ್ರ – [ನಾ] [ಜೈನ] ಒಂದು ಬಗೆಯ ಉಪವಾಸವ್ರತ (ಜಿನೇಶ್ವರರೂಪಮಂ ತಾಳ್ದಿ ಸರ್ವತೋಭದ್ರ ಸಿಂಹವಿಕ್ರೀಡಿತಂಗಳೆಂಬ ತಪದೊಳ್ ನೆಗಟ್ದು: **ಆದಿಪು,** ೩. ೫೭ ವ); [ನಾ] [ಜೈನ] ಚೌಕಾಕಾರವಾದ ಅರಮನೆ ಅಥವಾ ದೇವಾಲಯ (ಸುತ್ರಾಮನೆ ಸೂತ್ರಧಾರನಾಗಿಯುಂ ಕಲ್ಪಜರೆ ಶಿಲ್ಪಿಗಳಾಗಿಯುಂ ಸಮೆದ ಚೆಲ್ವಿಂಗೆ ಸರ್ವತೋಭದ್ರಮೆನಿಸಿದ ಸರ್ವತೋಭದ್ರಂಗಳೊಳಂ: **ಆದಿಪು,** ೬. ೧೦೬ ವ); [ನಾ] [ಜೈನ] ರಾಜರು ಮಾಡುವ ಮಹಾ ಜಿನಪೂಜೆ (ಸಮಸ್ತ ಧಾರ್ಮಿಕಜನಂಗಳಂ ಬರಿಸಿ ಸರ್ವತೋಭದ್ರಮೆಂಬ ಮಹಾಮಹಿಮೆಯಂ ಮಹೋತ್ಸವದಿಂದ ಎಂಟು ದಿವಸಂಬರಂ ಮಾಡಿ: **ಆದಿಪು,** ೧೬. ೬೨ ವ)

ಸರ್ವನಿವೇದಕ – [ನಾ] ಒಂದು ಯಜ್ಞ (ಸರ್ವನಿವೇದಕಮೆಂಬ ಯಜ್ಞದೊಳ್ ಕ್ಷಿತಿ ಪೊಗೞ್ವೆನಿಮಿತ್ತು: **ಪಂಪಭಾ,** ೨. ೪೫)

ಸರ್ವರತ್ನ – [ನಾ] [ಜೈನ] ನವನಿಧಿಗಳಲ್ಲಿ ಒಂದು (ಶ್ರೀಗೃಹದೊಳ್ ಪುಟ್ಟಿದ ಕಾಳ ಮಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ: **ಆದಿಪು,** ೧೫. ೬ ವ)

ಸರ್ವರ್ತುಕನಂದನ – [ನಾ] ಎಲ್ಲ ಕಾಲದಲ್ಲಿಯೂ ಎಲ್ಲ ಋತುಗಳೂ ಇರುವ ಉದ್ಯಾನವನ (ಆ ತ್ರಿಲೋಕತಿಲಕನ ಜನ್ಮೋತ್ಸವದೊಳ್ ಏಕಸಮಯಸಮವತೀರ್ಣ ಸರ್ವರ್ತುಕ ನಂದನ ವಿಕಸತ್ ಅಶೋಕ: **ಆದಿಪು,** ೭. ೩೬ ವ)

ಸರ್ವಶಾಸ್ತ್ರಪರಿಣತಿ – [ನಾ] ಎಲ್ಲ ವಿಷಯಗಳಲ್ಲಿನ ಪಾಂಡಿತ್ಯ (ಶ್ರೀಗೆ ಫಳಂ ಚಾಗಂ ವಾಕ್‌ಶ್ರೀಗೆ ಫಳಂ ಸರ್ವಶಾಸ್ತ್ರಪರಿಣತಿ ವೀರಶ್ರೀಗೆ ಫಳಂ ಆಯಂ ಎಂದಿಂತಾಗಳುಂ ಮಱೆದೆಸೆಗಿದಂ ಪರಾಕ್ರಮಧವಳಂ: **ಪಂಪಭಾ,** ೬. ೧)

ಸರ್ವಾಂಗಪ್ರಣತ – [ನಾ] ಸಾಷ್ಟಾಂಗ ನಮಸ್ಕಾರ ಮಾಡಿದವನು (ಇಂತು ಧನದಂ ಸಮೆದ ಸಮವಸರಣಮಂ ಕ್ರಮಕ್ರಮದೊಳೆ ನೋಡುತ್ತುಂ ಬಂದು ಗಂಧಕುಟಿಯಂ ತ್ರಿಃಪ್ರದಕ್ಷಿಣಂಗೆಯ್ದು ಸರ್ವಾಂಗಪ್ರಣತನಾಗಿ: **ಆದಿಪು,** ೧೦. ೪೫ ವ)

ಸರ್ವಾರ್ಥಸಿದ್ಧಿ – [ನಾ] [ಜೈನ] ಪಂಚಾಣೂತ್ತರ ವಿಮಾನಗಳಲ್ಲಿ ತುತ್ತತುದಿಯದು (ಮೊದಲ ಶುಕ್ಲಧ್ಯಾನದೊಳ್ ಸಮಾಹಿತಂ ಉಪಶಾಂತ ಗುಣಸ್ಥಾನದೊಳ್ ಪ್ರಾಣಪರಿತ್ಯಾಗಂಗೆಯ್ದು ಸರ್ವಾರ್ಥಸಿದ್ಧಿಯೊಳ್ ಅಹಮಿಂದ್ರನಾದಂ: **ಆದಿಪು,** ೬. ೩೪ ವ)

ಸರ್ವೌಷಧಿ – [ನಾ] ಎಲ್ಲೆಡೆಯೂ ಬೆಳೆಯುವ ಸಸ್ಯ (ತಿಳಾತಸೀ ಕುಸುಂಭಾದಿ ದೀಪ್ರೌಷಧಿಗಳುಂ ಯಾವನಾಳ ಕಂಗು ಕೋದ್ರಾವಾದಿ ಸರ್ವೌಷಧಿಗಳುಂ: **ಆದಿಪು,** ೮. ೬೧ ವ)

ಸರ್ಷಪ – [ನಾ] ಸಾಸುವೆ (ರಾಜಮಾಷ ಆಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧ ಧಾನ್ಯಭೇದಂಗಳುಂ: ಆ**ದಿಪು,** ೬. ೭೨ ವ)

ಸಲ್ – [ಕ್ರಿ] ಸಲ್ಲದು (ಮಿಡುಕಲ್ ಸಲ್ ಇಲ್ಲಿಂದೊಂದಡಿಯಂ ನಿನಗೆ ಎಂದು ಲವಣರಾಶಿಯೆ ಬಲ್ವಿಡಿವಿಡಿದಂತೆ ವರೂಥಂ ಮಿಡುಕದೆ ನಿಂದತ್ತು: **ಆದಿಪು,** ೧೨. ೮೫); [ಕ್ರಿ] ಪರಿಣಾಮ ಬೀರು (ಇದನಾವನೆಚ್ಚಂ ಆತಂ ತ್ರಿದಶಂ ಮೇಣಕ್ಕೆ ದಾನವಂ ಮೇಣಕ್ಕೆ ಆವುದು ಗಹನಂ ಆಂತನಾತನ ಪೊದರ್ಪುಂ ಆರ್ಪುಂ ಎನಿಪುವೆಮ್ಮೊಳೇಂ ಸಂದಪುವೇ: **ಆದಿಪು,** ೧೨. ೯೩); [ಕ್ರಿ] ಲಭ್ಯವಾಗು (ಅಮಿತ ಮತಿ ಗುಣದಿನತಿ ವಿಕ್ರಮ ಗುಣದಿಂ ಶಾಸ್ತ್ರಪಾರಮುಂ ರಿಪುಬಳ ಪಾರಮುಮೊಡನೆ ಸಂದುವೆನಿಸಿದಂ: **ಪಂಪಭಾ,** ೧. ೪೫); [ನಾ] ಪ್ರಸಿದ್ಧಿ ಪಡೆ (ಎನ್ನ ನನ್ನಿಯ ಪೆಂಪು ನಿನ್ನ ಮಹತ್ತ್ವದಿಂದಮೆ ಸಂದುದು: **ಪಂಪಭಾ,** ೯. ೧೭)

ಸಲಗು – [ನಾ] ಸಲಾಕೆ (ದಾಹಂ ಒತ್ತರಿಸಿದುದು ಒಂದು ಪೊನ್ನ ಸಲಗಿರ್ಪವೊಳಿರ್ದುದು ಮೆಯ್ ಸುಭದ್ರೆಯಾ: **ಪಂಪಭಾ,** ೫. ೮)

ಸಲವು – [ನಾ] ಪ್ರವೇಶ (ಸೂರ್ಯಕಿರಣಾನೀಕಕ್ಕಂ ಎಂದಪ್ಪೊಡಂ ಸಲವು ಇಲ್ಲ ಉದ್ಧತಸಿದ್ಧಖೇಚರರೆ ತಾಂ ಆಳ್ವೇಲಿಯಾಗಿಂತು ನಿಚ್ಚಲುಂ ಓರಂತಿರೆ ಕಾವರ್: **ಪಂಪಭಾ,** ೫. ೮೧)

ಸಲಿಲ – [ನಾ] ನೀರು (ಅವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ ಮೂರ್ತಿಯಂ ತ್ರೈಲೋಕ್ಯ ಸಂಗೀತಕೀರ್ತಿಯಂ ಕಂಡು ಕೆಯ್ಗಳಂ ಮುಗಿದು: **ಪಂಪಭಾ,** ೪. ೨೬ ವ)

ಸಲಿಸು – [ಕ್ರಿ] ಸೇರುವಂತೆ ಮಾಡು (ದೇವ ಭೀಕರಕರ್ಮದ್ವಿಷರಂ ಪಡಲ್ವಡಿಸಲುಂ ಭವ್ಯರ್ಕಳಂ ಘೋರಸಂಸರಣಾಂಭೋನಿಧಿ ಪಾರಮಂ ಸಲಿಸಲುಂ ಸಾಲ್ಗುಂ ತ್ವದುದ್ಯೋಗಂ: **ಆದಿಪು,** ೯. ೬೧); [ಕ್ರಿ] ಸಹಿಸಿಕೊ (ಈ ಕಿಡಿಯವಂ ಅಱಿಯದೆ ಕೆಡೆನುಡಿದನಪ್ಪೊಡಂ ನೂಱುವರಂ ಎಲೆ ಸಲಿಸುವುದು ಎಂಬುದಂ ಆಂ ಮಱವೆನೆ ಬಯ್ ಬಯ್ಯೆ ಸಲಿಸುವೆಂ ನೂಱುವರಂ: **ಪಂಪಭಾ,** ೬. ೬೧)

ಸಲೀಲ – [ಗು] ಉಲ್ಲಾಸದಿಂದ ಕೂಡಿದ (ವನಕೇಳೀವಿಭವಂ ಸಲೀಲಸಲಿಲಕ್ರೀಡಾವಿಳಾಸಂ ಸಮಸ್ತನಿಜಾಂತಃಪುರದೊಳ್ ಪೊದಳ್ದೆಸೆದು: **ಆದಿಪು,** ೧೧. ೧೫೭)

ಸಲು – [ಕ್ರಿ] ನಡೆ, ಹೋಗು (ನಗರಾರಣ್ಯನಿರ್ವಿಶೇಷಂ ಉತ್ತಮ ಮಧ್ಯಮ ಜಘನ್ಯಾಗಾರಂಗಳೊಳ್ ಚಂದ್ರಗತಿಯಿಂ ಸಲುತ್ತುಂ: **ಆದಿಪು,** ೯. ೧೩೦ ವ)

ಸಲೆ – [ನಾ] ಸರಿ, ಸಮರ್ಪಕ (ಚಂದ್ರನ ಬಲಂ ಒಳ್ಳಿತ್ತಾಗಿ ಸಲೆಯಿಲ್ಲದೊಡೆ ಆವುದುಂ ಒಳ್ಳಿಕೆಯ್ಗುಗ್ಗಮೇ: **ಪಂಪಭಾ,** ೪. ೬೮)

ಸಲ್ಗೆ – [ನಾ] ಸಲಿಗೆ, ಆತ್ಮೀಯತೆ (ಈಕೆಯುಂ ಎನಗೆ ಎರಡಣೆಯದ ನಲ್ಲಮನಂದೋಱುವುದು ಸಲ್ಗೆದೋಱುವುದುಂ ಆವುದು ದೋಸಂ: **ಪಂಪಭಾ,** ೫. ೧೭ ವ)

ಸಲ್ಲ – [ಅ] [ಸಲ್ಲ=ಸಲ್ಲದು] ಆಗದು (ಈಗಳಾತಂ ಮಿಡುಕಲ್ಕೆ ಸಲ್ಲಿರದೆ ಪೋಪುದೇಕೆನೆ ಕಾಮದೇವನಿತ್ತಂ ಮಧು ಪೆತ್ತಂ ಈ ನೆಲನಂ: **ಪಂಪಭಾ,** ೫. ೩೧)

ಸಲ್ಲಕೀ – [ನಾ] ಆನೆಬೇಲ (ಸಕಟೋದ್ಧೃಷ್ಟ ವನೇಭತುಂಗಜರಠ ಸ್ಥೂಳಾರ್ಗಳಕಾರಮಾರ್ಗಕುಜಂ ವಾಜಿಖುರಾಹುತಿ ಸ್ಥಪುಟಿತಗ್ರಾವಸ್ಥಳಂ ಸೈನ್ಯದಂತಿಕರೋಚ್ಚಾಟಿತ ಸಲ್ಲಕೀ ಕಿಸಲಯಂ: **ಆದಿಪು,** ೧೩. ೫೫)

ಸಲ್ವುದು – [ಕ್ರಿ] ಸಲ್ಲಿಸು, ತೋರಿಸು (ಪಿರಿಯಣ್ಣನೇಂ ಜನಕನೇಂ ಎಂಬೊಂದು ಕೊಂಡಾಟದಿಂ ವಿನಯಂ ಸಲ್ವುದು: **ಆದಿಪು,** ೧೪. ೩೧)

ಸವ – [ನಾ] ಸಮ, ಸಮಾನ (ಸಂಪಗೆಯಂ ಮುಡಿಯೆ ಸೊಗಯಿಸದದಿರ್ಮುತ್ತೆಯಲರಂ ಮಸಿಯೊಳೆ ಸವನಾದ ಗೊಜ್ಜಗೆಯಂ: **ಆದಿಪು,** ೧೧. ೧೦೯)

ಸವಕಟ್ಟು – [ನಾ] ಏರ್ಪಾಡು (ನೀಮಱೆಯಿರಿ ಉಸಿಱದಿರಿಂ ಅದರ್ಕೆ ತಕ್ಕ ಸವಕಟ್ಟಂ ಮಾಡಿಂ: **ಪಂಪಭಾ,** ೩. ೨೬ ವ)

ಸವಂಗ – [ನಾ] ತೊಡುವ ಅಂಗಿ, ಕವಚ (ಅವಯವದಿಂ ಕುಪ್ಪಸಮಂ ಸವಂಗಮಂ ಕಳೆದು ಕಳೆದರಲ್ಲಿಂದವರಂ: **ಆದಿಪು,** ೧೧. ೭೫)

ಸವಡಿ – [ನಾ] ಜೋಡಿ (ಅವಯವದೆ ಕುಣಿದು ಮೆಟ್ಟುವ ಸವಡಿಯ ವಜ್ಜರಿಗೆ ಪಿಡಿದ ಸತ್ತಿಗೆಯ ವಿಳಾಸವಮರ್ದ ಲೀಲೆಯಿಂ ಪೆಂಡವಾದೊಳ್ ಪೆಂಡಿರೊಯ್ಯನೊಯ್ಯನೆ ನಡೆದರ್: **ಆದಿಪು,** ೧೧. ೪೧)

ಸವತಿ – [ನಾ] [ಸಪತ್ನಿ] ಗಂಡನ ಮತ್ತೊಬ್ಬ ಹೆಂಡತಿ (ಶ್ರೀಯುವತಿಯಂ ಆ ವೀರಶ್ರೀಯುವತಿಗೆ ಸವತಿ ಮಾೞ್ಪೆಂದು ಅರಿನೃಪರಂ ಉಳ್ಳಾಯವೆರಸು ಎೞ್ದುಕೊಂಡು ಧರಾಯುವತಿಗೆ ನೆಗೞ್ದ ಹರಿಗನೊರ್ವನೆ ಗಂಡಂ: **ಪಂಪಭಾ,** ೧೧. ೧)

ಸವತ್ಸ – [ಗು] ಕರುವಿನ ಸಮೇತವಾದ (ಅಂಗರಾಜಂ ತನ್ನಂ ಪರಿಚ್ಛೇದಿಸಿ ನೇಸಱ್ ಮೂಡೆ ಆಜ್ಯಾವೇಕ್ಷಣಂಗೆಯ್ದು ಸವತ್ಸಸುರಭಿಯಂ ಅಭಿವಂದಿಸಿ: **ಪಂಪಭಾ,** ೧೨. ೧೦೮ ವ)

ಸವನ – [ನಾ] [ಸ್ನಪನ] ಸ್ನಾನ, ಅಭಿಷೇಕ (ಘೃತ ಕ್ಷೀರ ದಧಿ ನಾಳಿಕೇರ ತೋಯ ಆಮ್ರರಸ ಇಕ್ಷುರಸ ಗಂಧೋದಕಾದಿಗಳಿಂ ಮಾಡುವ ಸವನಮುಂ: **ಆದಿಪು,** ೧೫. ೧೩ ವ)

ಸವನಾಗು – [ಕ್ರಿ] ಸಮನಾಗು (ಸಂಪಗೆಯಂ ಮುಡಿಯೆ ಸೊಗಯಿಸದ ಅದಿರ್ಮುತ್ತೆಯಲರಂ ಮಸಿಯೊಳೆ ಸವನಾದ ಗೊಜ್ಜಗೆಯಂ ನುಡಿಯಲಕ್ಕುಮೆ ಪೂಗಳ ಲೆಕ್ಕಮಂ: **ಆದಿಪು**, ೧೧. ೧೦೯)

ಸವಸವ – [ನಾ] ಸರಿಸಮಾನ (ನಲ್ಲಳ ರತಿಶ್ರಮವಿಶ್ಲಥ ಕೇಶಪಾಶದೊಳ್ ಸವಸವನಾಗಿ ತೋಱಿದಪುದು: **ಪಂಪಭಾ**, ೫. ೫೧)

ಸವಿ – [ನಾ] ರುಚಿ (ಪಗೆ ಪೊಲ್ಲ ಪಾಂಡುನಂದನರೊಳಹೀಂದ್ರಕೇತನನ ಜೂದಿನ ಗೆಲ್ಲಂ ಅದೆಂತುಟೆನ್ನ ನಂಜಿನ ಸವಿಯೆಂತುಟೆಂದೊಡೆ ಇನಿಸಂತದೊಳ್ ಅಂತಕನಲ್ಲಿಗಟ್ಟುಗುಂ: **ಪಂಪಭಾ,** ೬. ೭೫)

ಸವಿನೋಡು – [ಕ್ರಿ] ತಿಂದುಹಾಕು, ನುಂಗು (ಅವರುಮಂ ಅಂತಕಂ ಒಯ್ಯನೆ ಸವಿನೋಟ್ಟುದುಂ ಆನುಂ ಎನ್ನ ಪಾಪದ ಫಲಮಂ ಸವಿನೋಡೆ: **ಆದಿಪು**, ೩. ೩೫)

ಸವಿಪಾಕ – [ನಾ] [ಜೈನ] ಅವಿಪಾಕ ಮತ್ತು ಸವಿಪಾಕ ಎಂಬ ಎರಡು ಬಗೆಯ ನಿರ್ಜರೆಗಳಲ್ಲಿ ಒಂದು, ಕರ್ಮದ ಫಲವು ಕಡಿಮೆಯಾಗುವ ಕಾಲ (ಯಥಾಕಾಲಾನುಭವನ ಸವಿಪಾಕವಿಪಾಕರೂಪದಿಂ ಪೂರ್ವಾರ್ಜಿತನಿರ್ಜರಣಂ ನಿರ್ಜರೆಯೆಂಬುದು: **ಆದಿಪು,** ೧೦. ೬೩ ವ)

ಸವಿಪಾಕನಿರ್ಜರೆ – [ನಾ] [ಜೈನ] ಸವಿಪಾಕರೂಪದಿಂದ ಕರ್ಮವು ಸೋರಿಹೋಗುವುದು (ಅಂತೆತ್ತಾನುಂ ಸವಿಪಾಕನಿರ್ಜರೆಯಿಂ ದುಷ್ಕರ್ಮಫಲಂ ತವಿಸಿ ನಿಜದಿನುಪಶಮಭಾವಮಂ ಪಡೆದದಱ ಫಲದಿಂ: **ಪಂಪರಾ**, ೬. ೫೬ ವ)

ಸವ್ಯ – [ನಾ] ಎಡದಿಂದ ಬಲಭಾಗಕ್ಕೆ (ಆಗಳ್ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತಂಗಳೆಂಬ ರಥಕಲ್ಪ ವಿಶೇಷವಿನ್ಯಾಸಂಗಳಂ ಅಱಿದು ಸಾರಥಿಗಳ್ ಚೋದಿಸುವಾಗಳ್: **ಪಂಪಭಾ**, ೧೨. ೭೫ ವ)

ಸಸಂಭ್ರಮ – [ಗು] ತರಾತುರಿಯಿಂದ (ವಜ್ರದಂತಂಗಂ ಲಕ್ಷ್ಮೀಮತಿ ಮಹಾದೇವಿಗಂ ಅಱಿಪಿದೊಡೆ ಅವರಿರ್ವರುಂ ಸಸಂಭ್ರಮಂ ಬಂದು: **ಆದಿಪು**, ೩. ೨೩ ವ)

ಸ ಸರ್ವಜಗತಾಂ ಗುರುರ್ಗಿರಿಸುತಾಪತಿಃ ಪಾತು ನಃ – ಸಮಸ್ತ ಜಗತ್ತಿಗೂ ಒಡೆಯನೂ ಗುರುವೂ ಪಾರ್ವತೀಪತಿಯೂ ಶಿವನೂ ಆದ ಅವನು ನಮ್ಮನ್ನು ಕಾಪಾಡಲಿ (**ಪಂಪಭಾ**, ೪. ೨೭)

ಸಸಿ – [ಕ್ರಿ] ಹಿಂಜು (ಅಡೆವೊತ್ತದೆ ಕಿಱಿಕಿಱಿದನೆ ಸುಡದೆ ಇನಿಸು ಅರೆವೊರೆಕನಾಗದೆಯೆ ಸಸಿದು ಅಂದೊಂದೆಡೆಯೊಳಗೆ ಒಟ್ಟಿರ್ದ ಅರಳೆಯಂ ಒಡನಳುರ್ವಂತೆ ಅಳುರ್ದಂ ಅನಲಂ ಅರಗಿನ ಮನೆಯಂ: **ಪಂಪಭಾ**, ೩. ೫); [ನಾ] ಚಂದ್ರ (ಸುಭದ್ರೆಯ ರೂಪಂ ಆಪಾದಮಸ್ತಕಂಬರಂ ಎಯ್ದೆ ನೋಡಿ ತನ್ನೊಳಾದ ಬೇಟದೊಳ್ ಬಡವಟ್ಟುಂ ಏಟಗ್ಗಿವಾಡಿವದ ಸಸಿಯಂತೆ ಸೊಗಯಿಸುವ: **ಪಂಪಭಾ**, ೫. ೧೫ ವ)

ಸಸಿನೆವರಿ – [ಕ್ರಿ] ಎದುರಿಗೆ ನೇರವಾಗಿ ಹೋಗು (ಕೆನ್ನೆತ್ತರೊಳ್ ಒರ್ವರೊರ್ವರಂ ತಳ್ಕಿಱಿದುಂ ಬೊಬ್ಬಿಱಿದುಂ ತ್ರಿಪುಂಡ್ರಮಿಟ್ಟುಂ ಕೂಕಿಱಿದುಂ ತೇಗಿಯುಂ ಸಸಿನೆವರಿದುಂ ಬವಳಿವರಿದುಂ: **ಪಂಪಭಾ,** ೧೨. ೧೫೮ ವ) [ಡಿಎಲ್‌ಎನ್ ಒಪ್ಪಿದ ಪಾಠ]

ಸಸ್ಪೃಹ – [ಗು] ಬಯಕೆಯಿಂದ ಕೂಡಿದ (ಸಸ್ಪೃಹ ಸಾನಂದ ಸಲೀಲ ಸಸ್ಮಿತಮುಖವ್ಯಾಭಾಸಿ ನೋಡಿಂತು ಸನ್ನಿಹಿತಂ ಸೌಂದರರೂಪಮಿನ್ನುಮೆರ್ದೆಯೊಳ್ ಮಜ್ಜೀವಿತಾಧೀಶನಾ: **ಆದಿಪು,** ೩. ೪೨)

ಸಸ್ಮಿತ – [ಗು] ಮುಗುಳುನಗೆಯಿಂದ ಕೂಡಿದ (ಸಸ್ಮಿತಮುಖವ್ಯಾಭಾಸಿ ನೋಡಿಂತು ಸನ್ನಿಹಿತಂ ಸೌಂದರರೂಪಮಿನ್ನುಮೆರ್ದೆಯೊಳ್ ಮಜ್ಜೀವಿತಾಧೀಶನಾ: **ಆದಿಪು,** ೩. ೪೨)

ಸಹಕಾರ – [ನಾ] ಮಾವು (ಇದಂ ಪುಗಲಿಂ ಗಡಿಂ ಎಂದು ಬೇಟಕಾಱರಂ ಇರದೆ ಊಱೆ ಸಾಱೆ ಜಡಿವಂತೆ ಎಸೆಗುಂ ಸಹಕಾರಕೋಮಳ ಅಂಕುರಪರಿತುಷ್ಟ ಪರಪುಷ್ಟಗಳ ಧ್ವನಿ ನಂದನಂಗಳೊಳ್: **ಪಂಪಭಾ**, ೨. ೧೩)

ಸಹಜ – [ನಾ] ಸ್ವಾಭಾವಿಕ (ವಿನಯಂ ಸಹಜಂ ಕೃತ್ರಿಮಮೆನಿಸಿದುವವು ಬೇಱೆವೇಱೆ ವಿದ್ವಜ್ಜನಮಂ ಮನದೆಗೊಳಿಸುವುವಿವೆರಡುಂ: **ಆದಿಪು**, ೧೪. ೬೩)

ಸಹಜಕವಚ – [ನಾ] [ಸಹ+ಜ] ಜೊತೆಯಲ್ಲಿ ಹುಟ್ಟಿದ ಕವಚ (ಒಡವುಟ್ಟಿದ ಮಣಿಕುಂಡಲಂ ಒಡವುಟ್ಟಿದ ಸಹಜಕವಚಂ ಅಮರ್ದಿರೆ ತನ್ನೊಳ್ ತೊಡರ್ದಿರೆಯುಂ ಬಂದಾಕೆಯ ನಡುಕಮಂ ಒಡರಿಸಿದನಾಗಳ್: **ಪಂಪಭಾ,** ೧. ೯೫)

ಸಹಜಮನೋಜ – [ನಾ] ಹುಟ್ಟಿನಿಂದ ಮನ್ಮಥನಂಥ ಚೆಲುವ (ಮೂಱುಂ ಲೋಕದ ಮೂಱುಪಟ್ಟಮನಾಳಲ್ಕೆ ತಕ್ಕ ಸಹಜಮನೋಜನ ಲಲಾಟಂ ಪಟ್ಟಂಗಟ್ಟಿದ ನೊಸಲ್ಗೆ: **ಪಂಪಭಾ,** ೨. ೩೯ ವ)

ಸಹಜಮನೋಜನೋಜ – [ನಾ] ಸ್ವಾಭಾವಿಕ ಮನ್ಮಥನನಿಗೆ ಆಚಾರ್ಯ (ಸಹಜಮನೋಜನೋಜನೆಮಗೀಗೆ ವಿಚಿತ್ರರತೋತ್ಸವಂಗಳಂ: **ಪಂಪಭಾ,** ೧. ೪)

ಸಹಜಾತ – [ಗು] ಹುಟ್ಟಿನೊಡನೆ ಬಂದ (ಸಹಜಾತಾಂಬರ ದಿವ್ಯಭೂಷಣದಲನ್ಮಂದಾರಮಾಲಾವಿಲಾಸಿ: **ಆದಿಪು,** ೩. ೪೨)

ಸಹಪಾಂಸುಕ್ರೀಡಾ[ಡೆ] – [ನಾ] ಮಕ್ಕಳಾಡುವ ದೂಳಾಟ (ಸಹಪಾಂಸುಕ್ರೀಡಾನೇಕ ವಿಭ್ರಮ ಕ್ರೀಡಾರಸೋದಾರ ರಾಜದಾರಕಪರಿವೃತನಾಗಿ: **ಆದಿಪು**, ೮. ೪೧ ವ)

ಸಹಸ್ರಕರ – [ನಾ] ಸೂರ್ಯ (ಸಹಸ್ರಕರಪ್ರಭಾಪ್ರಸರರಥಮನೇಱಿ ಮಹಾಮಕುಟಬದ್ಧಪರಿವೃತಂ ರಾಜಭವನಮಂ ಪೊಱಮಟ್ಟು: **ಆದಿಪು**, ೧೧. ೧೪ ವ)

ಸಹಸ್ರಕಿರಣ – [ನಾ] ಸೂರ್ಯ (ಅತ್ತ ದುರ್ಯೋಧನಂ ಸಹಸ್ರಕಿರಣೋದಯದೊಳ್ ಅನೇಕ ಸಹಸ್ರ ನರಪತಿ ಪರಿವೃತನುಮಾಗಿ: **ಪಂಪಭಾ**, ೧೦. ೧೪ ವ)

ಸಹಸ್ರಾರ – [ನಾ] ಸಾವಿರ ಮೊನೆಗಳನ್ನು ಹೊಂದಿದ (ಸಹಸ್ರದಿನಕರಸ್ಪರ್ಧಿ ಸಹಸ್ರಾರಧರ್ಮಚಕ್ರರತ್ನಪುರಸ್ಸರಮಾಗಿ: **ಆದಿಪು,** ೧೦. ೬೭ ವ)

ಸಹಾಯ – **[ನಾ]** ಗೆಳೆಯ, ಜೊತೆಗಾರ (ಇಂತಿನಿಬರುಂ ಸಹಾಯರೊಡನೆ: **ಆದಿಪು**, ೫. ೭೦ ವ)

ಸಹೋತ್ಪನ್ನ – **[ನಾ]** ಸಹೋದರ (ತನ್ನಿಱಿದು ಗೆಲ್ದ ಕೊಳುಗುಳವನ್ನೋಡಲ್ ಚಕ್ರಪಾಣಿಯುಂ ತನ್ನ ಸಹೋತ್ಪನ್ನರುಮೊಡವರೆ: **ಪಂಪಭಾ,** ೧೪. ೨)

ಸಜೆ – **[ಕ್ರಿ]** ಬಂಡೆಗಲ್ಲು (ವಿಕಸಿತ ಸರಸಿಜಮಂ ಸಜೆಯೊಳಱಸುವಂತಾಗಿರ್ಕುಂ: **ಆದಿಪು**, ೯. ೧೦೩)

ಸಱುಸೈತು – **[ಗು]** ವ್ಯರ್ಥವಾಗಿ (ಕಿವಿಯಿಂ ಬಗೆವುಗುವೊಡೆ ಕೊಂಕುವೆತ್ತ ಪೊಸನುಡಿಯೆ ಪುಗುಗುಂ ಉೞಿದುದು ಸಱುಸೈತವಚಱನೆ ಮಾಡಿ ಸಱುಸೈತುವೋಕುಂ: **ಆದಿಪು**, ೧. ೧೮)

ಸಱುಸೈತುವೊಗು – **[ಕ್ರಿ]** ವ್ಯರ್ಥವಾಗಿ ಹೋಗು (ಕಿವಿಯುಂ ಬಗೆವುಗುವೊಡೆ ಕೊಂಕುವೆತ್ತ ಪೊಸನುಡಿಯೆ ಪುಗುಗುಂ ಉೞಿದುದು ಸಱುಸೈತವಚಱನೆ ಮಾಡಿ ಸಱುಸೈತುವೋಕುಮೇಂ ಬಗೆಯೆ ಬಟ್ಟೆಯಂ ಮುಟ್ಟುಗುಮೇ: **ಆದಿಪು,** ೧. ೧೮)

ಸಾಂದು – **[ನಾ]** ಸುಗಂಧದ್ರವ್ಯ, ಸಾದು (ರಮಣೀಯ ರಮಣೀಜನಂ ಬೆರಸು ಪಂಚರತ್ನಂಗಳಿಂ ಕೆದಱಿಸಿ ಸಾಂದಿನ ಸೌಸವದ ಕುಂಕುಮದ ಕತ್ತುರಿಯ ಕದಡಂ ಕದಡಿ: **ಪಂಪಭಾ**, ೫. ೬೦ ವ)

ಸಾಂದ್ರ – **[ಗು]** ಮಂದವಾದ (ಅಂಗಲತಾಲಾಲಿತಸಾಂದ್ರಚಂದನರಸಂ ಬೆಳ್ದಿಂಗಳ್ ಎಂಬೊಂದು ಪಂಬಲ ಬಂಬಲ್ಗೆಡೆಯಾಗೆ ಬೆಳ್ಪಸದನಂ ಕಣ್ಗೊಪ್ಪಿತಾ ಕಾಂತೆಯಾ: **ಪಂಪಭಾ,** ೧. ೧೩೭)

ಸಾಂದ್ರೀಭವತ್ – **[ಗು]** (ಪತ್ತಿ ಶಸ್ತ್ರ ದ್ಯುತಿಪರಿಕರ ಸಾಂದ್ರೀಭವಚ್ಚಂಡರೋಚಿಃಕಿರಣೌಘಂ: **ಆದಿಪು**, ೪. ೨೪)

ಸಾಂಪರಾಯ – **[ನಾ]** [ಜೈನ] ಲೌಕಿಕಜೀವನ, ಗೃಹಸ್ಥಜೀವನ (ಸೂಕ್ಷ್ಮಸಾಂಪರಾಯಸಮನ್ವಿತ ಸೂಕ್ಷ್ಮಸಾಂಪರಾಯ ಕಪ್ಪಕನಾಗಿ: **ಆದಿಪು**, ೧೦. ೧೪ ವ)

ಸಾಂಬುಪಯೋಧರ – **[ನಾ]** [ಸ+ಅಂಬು+ಪಯೋಧರ] ನೀರಿನಿಂದ ತುಂಬಿದ ಮೋಡ (ಭವ್ಯನೃಪನಿಕರಂ ಅದೇನೆಂಬುತ್ಸಾಹದೆ ನಲಿದುದೊ ಸಾಂಬುಪಯೋಧರಕೆ ನಲಿವ ಶಿಖಿನಿರದವೊಲ್: **ಆದಿಪು**, ೧೦. ೧೨)

ಸಾಕೇತ – **[ನಾ]** [ಸ+ಅಕೇತ] ನಾನಾ ನಿಕೇತನಗಳಿಂದ ಕೂಡಿದ (ಅಂತು ಸಮೆದ ಪುರವರಕ್ಕರಾತಿನಿಕರಕ್ಕೆ ಅಯೋಧ್ಯೆಯಪ್ಪುದಱಿಂದೆ ಅಯೋಧ್ಯೆಯುಂ ಅನೇಕ ನಿಕೇತನಸಮನ್ವಿತಮಪ್ಪುದಱಿಂ ಸಾಕೇತಮುಂ .. .. ಎಂಬ ಪೆಸರ್ಗಳನಿಟ್ಟು: **ಆದಿಪು,** ೬. ೧೦೭)

ಸಾಕ್ಷಾತ್ – **[ಗು]** ಕಣ್ಣೆದುರಿರುವ (ಈ ನರೇಂದ್ರಂ ಸಾಕ್ಷಾತ್ ಇಂದ್ರಂ ತಾನೆನೆ ಸಲೆ ನೆಗಟ್ದಿಂದ್ರನ ತೋಳೆ ತೊಟ್ಟಿಲಾಗಿರೆ ಬಳೆದಂ: **ಪಂಪಭಾ**, ೧. ೪೪)

ಸಾಗರಮೇಖಳಾವೃತಧರಿತ್ರಿ – **[ನಾ]** ಸಾಗರಗಳೆಂಬ ಡಾಬಿನಿಂದ ಆವೃತವಾದ ಭೂಮಿ (ನೀಗಿದುದೀಗಳೆಮ್ಮ ವನವಾಸ ಪರಿಶ್ರಮಂ ಆಳ್ದೆವು ಆ ಸಾಗರಮೇಖಳಾವೃತ ಧರಿತ್ರಿಯಂ: **ಪಂಪಭಾ**, ೭. ೬೦)

ಸಾಗರಾಂತಕ್ಷಿತಿ – **[ನಾ]** ಸಮುದ್ರದವರೆಗಿನ ಭೂಮಿ (ಸಿತಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲನಕ್ಷತ್ರದೊಳ್ ಅನ್ವಿತಮಾಗೆ ನೆಗಟ್ಟುದೀ ಮತ್ ಕೃತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯಂ: **ಆದಿಪು**, ೧೬. ೭೮)

ಸಾಣೆಗಟ್ಟು – **[ಕ್ರಿ]** [ಆಯುಧಗಳನ್ನು] ಹರಿತಗೊಳಿಸು (ಅಂತಪೂರ್ವಂಗಳಾಗಿ ತೊಳಗುವ ಕಿಱುದೊಡೆಗಳ್ ಉಡುವಡರ್ದನ್ನಂ ಆರೂಢಸರ್ವಜ್ಞನ ದೊಡ್ಡ ಮಾರ್ಗಂಗಳೆಳವಾಱಿಯ ದಿಂಡಿನೊಳ್ ಸಾಣೆಗಟ್ಟಿದಂತಾದುವು: **ಪಂಪಭಾ,** ೨. ೩೯ ವ)

ಸಾಣೆಗಾಣಿಸು – **[ಕ್ರಿ]** ಸಾಣೆಗೆ ಹಿಡಿಯಲ್ಪಡು (ಮದನಾಸ್ತ್ರಂ ಖರಸಾಣೆಗಾಣಿಸಿದುದು ಎಂಬಂತಾಗೆ ನಿನ್ನೊಂದು ಕಂದಿದ ಮೆಯ್: **ಪಂಪಭಾ**, ೮. ೬೬)

ಸಾತ್ವತಿ – **[ನಾ]** ನಾಟ್ಯದ ವೃತ್ತಿಗಳಲ್ಲಿ ಒಂದು ಬಗೆ, ಶೋಕರಹಿತವಾದ ಶೌರ್ಯ, ತ್ಯಾಗ, ದಯೆ ಮುಂತಾದ ಭಾವಗಳ ಅಭಿನಯದ ನಾಟ್ಯಗತಿ (ಭಾರತಿ ಸಾತ್ವತಿ ಕೈಶಿಕಿ ಆರಭಟಿಯುಮೆಂಬ ವೃತ್ತಿಯೊಳ್ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು: **ಆದಿಪು**, ೯. ೨೬)

ಸಾತ್ವಿಕ – **[ನಾ]** ನಾಲ್ಕು ಬಗೆಯ ಅಭಿನಯಗಳಲ್ಲಿ ಒಂದು, ಭಾವೋದ್ರೇಕದಿಂದ ಕಾಣಿಸಿಕೊಳ್ಳುವ ರೋಮಾಂಚ, ಬೆವರುವಿಕೆ ಮುಂತಾದ ಪ್ರತಿಕ್ರಿಯೆಗಳು (ಅಂಗೋಪಾಂಗಂಗಳೊಳೆಸೆವ ಆಂಗಿಕಮಂ ಗಾನಪಾಠ್ಯದೊಳ್ ವಾಚಿಕಮಂ ತುಂಗಕುಚೆ ಮೆಱೆದಳಾ ದಿವಿಜಾಂಗನೆಗೆ ಆಹಾರ್ಯ ಸಾತ್ವಿಕಂ ನಿಜಮೆ ವಲಂ: **ಆದಿಪು**, ೯. ೨೮)

ಸಾಧನ – **[ನಾ]** ಸಹಾಯಕ ಸಾಮಗ್ರಿ (ಬರ್ಪ ನಿಯೋಗಿಗಳಾದ ಚೆಲ್ವಂ ಆವೆಡೆಯೊಳಂ ಈಯೆ ಕಣ್ಗೊಸಗೆಯಂ ಪಡೆದತ್ತು ಸಮಸ್ತಸಾಧನಂ: **ಆದಿಪು**, ೪. ೯೨); ಸೈನ್ಯ (ಶ್ರೀಯಂ ಅರಾತಿ ಸಾಧನ ಪಯೋನಿಧಿಯೊಳ್ ಪಡೆದುಂ .. .. ಉದಾತ್ತನಾರಾಯಣನಾದ ದೇವನೆಮಗೀಗೆ ಅರಿಕೇಸರಿ ಸೌಖ್ಯಕೋಟಿಯಂ: **ಪಂಪಭಾ**, ೧. ೧)

ಸಾಧಾರಣ – **[ನಾ]** ಭೂಮಿಯ ಮೂರು ಬಗೆಗಳಲ್ಲಿ ಒಂದು, ಜವುಗುಪ್ರದೇಶ (ದೇವಮಾತೃಕ ಸಾಧಾರಣ ಅನೂಪಜಾಂಗಳ ಭೇದಂಗಳುಮಂ: **ಆದಿಪು,** ೮. ೬೩ ವ); **[ನಾ]** [ಜೈನ] ಹದಿನಾರು ಬಗೆಯ ಕರ್ಮಪ್ರಕೃತಿಗಳಲ್ಲಿ ಒಂದು (ಪೂರ್ವೋಕ್ತವಿಧಾನದಿಂ ಅನಂತರ್ಮುಹೂರ್ತದಿಂ ನಿದ್ರಾನಿದ್ರಾಪ್ರಚಲಾಪ್ರಚಲಾ .. .. ಸ್ಥವರ ಸಾಧಾರಣ ಸೂಕ್ಷ್ಮಂಗಳೆಂಬ ಪದಿನಾಱುಂ ಕರ್ಮಪ್ರಕೃತಿಗಳಂ ನಿಶ್ಶೇಷಂ ಕಿಡಿಸಿ: **ಆದಿಪು**, ೧೦. ೧೪ ವ)

ಸಾಧಿತವಿದ್ಯೆ – **[ನಾ]** ಕೈವಶಮಾಡಿಕೊಳ್ಳುವ ವಿದ್ಯೆ (ಅಲ್ಲಿ ಸಾಧಿತವಿದ್ಯೆಗಳಂ ಸಾಧಿಸುವಾಗಳ್ ಸಿದ್ಧಾಯತನಪ್ರಭೃತಿ ನವಕೂಟಂಗಳೊಳಂ ದ್ವೀಪಾದಿ ಸಮುದ್ರತೀರ ಶುಚಿಪ್ರದೇಶಂಗಳೊಳಂ ಇರ್ದು: **ಆದಿಪು**, ೯. ೧೨೧ ವ)

ಸಾಧಿಸಿಕೊಳ್ – **[ಕ್ರಿ]** ಗೆಲ್ಲು (ಆಯ್ತೇ ಸಾಧಿಸಿಕೊಂಡು ಪಾಂಡುಸುತರಂ ನಣ್ಪಿಂಗೆ ಬೆನ್ನಿತ್ತು ದಲ್ ಸಯ್ತಾಯ್ತು ಅಜ್ಜನ ಮಾತು: **ಪಂಪಭಾ**, ೧೧. ೫೨)

ಸಾಧಿಸು – **[ಕ್ರಿ]** ಕೈವಶಮಾಡಿಕೊ (ಅಲ್ಲಿ ಸಾಧಿತವಿದ್ಯೆಗಳಂ ಸಾಧಿಸುವಾಗಳ್ ಸಿದ್ಧಾಯತನಪ್ರಭೃತಿ ನವಕೂಟಂಗಳೊಳಂ ದ್ವೀಪಾದಿ ಸಮುದ್ರತೀರಶುಚಿಪ್ರದೇಶಂಗಳೊಳಂ ಇರ್ದು: **ಆದಿಪು,** ೯. ೧೨೧ ವ); **[ಕ್ರಿ]** ಒದಗಿಸು (ಪಾರ್ಥಂಗೊಸೆದು ತುಡಲುಡಲ್ ಪೊಸಲುಂ ಸಾಲ್ವಿನಂ ಸಾಧಿಸಿತು ಉದ್ಯತ್ ಭಕ್ತಿ ಭಾರಾನತವನವನಿತಾವೃಂದಂ

ಆನಂದದಿಂದಂ: **ಪಂಪಭಾ**, ೭. ೭೮); [ಕ್ರಿ] ಗೆಲ್ಲು (ಎಂತು ಪಾಂಡವರನಿದಿರ್ಚಿ ಸಾಧಿಸುವೆ ಸಂಧಿಯನೊಲ್ವುದೆ ಕಜ್ಜಂ ಈಗಳ್: **ಪಂಪಭಾ**, ೧೩. ೮)

ಸಾಧುವಾದ – [ನಾ] ಒಳ್ಳೆಯದಾಗಲಿ ಎಂಬ ಮಾತು (ಪರಸುವ ಪೌರವೃದ್ಧರ ಕುಲಾಂಗನೆಯರ್ಕಳ ಸಾಧುವಾದದೊಳ್ ಬೆರಸಿ ಸಮಂತು ಸೂಸುವ ಜಲಾರ್ದ್ರಲಸದ್ಧವಳಾಕ್ಷತಂಗಳೊಳ್: **ಪಂಪಭಾ**, ೨. ೯೫)

ಸಾಧ್ಯಂಮಾಡು – [ಕ್ರಿ] [ಗೆಲ್ಲಲು] ಸಾಧ್ಯವಾಗಿಸಿಕೊ, ನೆರವೇರಿಸಿಕೊ (ಈ ಅಂಬುಗಳೊಳ್ ಏಂ ತೀರ್ದಪುದು ದಿವ್ಯಾಸ್ತ್ರಂಗಳಿಂದೆಚ್ಚು ಪಗೆಯಂ ಸಾಧ್ಯಂಮಾಡು: **ಪಂಪಭಾ,** ೧೨. ೧೯೦ ವ)

ಸಾಧ್ವಸ – [ನಾ] ಗಾಬರಿ (ಅಭಿನವಸಂಗಸಮುತ್ಪನ್ನ ಸಾಧ್ವಸ ರಸರಮಣೀಯತರ ಮುಗ್ಧವಧೂವದನವಿಲೋಕನ ಸುಖಮನನುಭವಿಸಿ: **ಆದಿಪು**, ೪. ೫೧ ವ); [ನಾ] ಸಡಗರ (ಪಡಿದೆಱೆದಂದದಿಂದಂ ತೆಱೆದತ್ತು ಪೊದಳ್ದ ಸಂಕೆಯಿಂ ನಡುಕಮುಂ ಆಗಳುಬ್ಬದಿಗಮಾದುದು ಸಾಧ್ವಸದಿಂ: **ಪಂಪಭಾ**, ೫. ೧೫)

ಸಾಪತ್ನ – [ನಾ] ಲಸೋದರ (ಎಮ್ಮ ಸಾಪತ್ನನ ಭುಜಬಲಮಂ ನೋಟ್ಟಪೆಂದು ಆಗಳಾಸ್ಥಾನದಿನೆರ್ದಂ ಚಕ್ರಿ ರಾಜನ್ಯಕ ಮಕುಟಮಣಿ ಪ್ರೋಜ್ಜ್ವಳದ್ವ್ಯೋಮಚಕ್ರಂ: **ಆದಿಪು**, ೧೪. ೮೫)

ಸಾಭಿಜ್ಞಾನಪಟ – [ನಾ] ನೆನಪನ್ನುಂಟುಮಾಡುವ ಚಿತ್ರಪಟ (ಮನಃಪ್ರಿಯತಮನ ಬರೆದ ಸಾಭಿಜ್ಞಾನಪಟಮನೀವುದುಂ ಆಕೆಯುಂ ಅದಂ ನಿಮಿರ್ಚಿ ನೋಡಿ: **ಆದಿಪು**, ೪. ೨೨ ವ)

ಸಾಮಂತ – [ನಾ] ಮಾಂಡಲಿಕ (ಅಂತಪ್ಪ ಪೊಚ್ಚಱ ಸಾಮಂತರೆ ಪೋಗಿಮೆಂದು ಪಲರಂ ಪೇೞ್ದಾಗಳ್: **ಪಂಪಭಾ,** ೫. ೨೧)

ಸಾಮಂತಚಕ್ರ – [ನಾ] ಮಾಂಡಲಿಕಸಮೂಹ (ನಿಜವಿಜಯಶ್ರೀಪತಿಂ ವರಾಪರಿಣಯಣೋತ್ಸವನ ಆಲೋಕನ ಕುತೂಹಲಪ್ರಚಲಿತ ಸಮಸ್ತಸಾಂತಚಕ್ರನುಂ: **ಆದಿಪು,** ೧೪. ೯೧ ವ)

ಸಾಮಂತಚೂಡಾಮಣಿ – [ನಾ] ಮಾಂಡಲಿಕಶ್ರೇಷ್ಠ (ಅನ್ನೆಗಮಿತ್ತ ಬಲದೇವಂ ಸುಭದ್ರೆಯಂ ಸಾಮಂತಚೂಡಾಮಣಿ ಉಯ್ದನೆಂಬುದಂ ಕೇಳ್ದು: **ಪಂಪಭಾ,** ೫. ೨೦ ವ)

ಸಾಮಜ – [ನಾ] ಆನೆ (ಪರುಷವಾತಾಹತಿ ಪ್ರೋಚ್ಚಳತ್ ಸಾಮಜಸೇನಾಕುಂಭಸಿಂದೂರಮುಮೊದವಿರೆ ದಿಗ್ದಾಹಮುಂ ಕೂಡೆ: **ಆದಿಪು**, ೧೪. ೮೯)

ಸಾಮಾನಿಕ – [ನಾ] [ಜೈನ] ಆಜ್ಞೆ, ಐಶ್ವರ್ಯಗಳನ್ನು ಹೊರತುಪಡಿಸಿ ಉಳಿದ ಗುಣಗಳಲ್ಲಿ ಇಂದ್ರರಿಗೆ ಸಮಾನರಾಗಿ ಅವರಿಗೆ ತಾಯಿತಂದೆಗಳಂತಿರುವ ಒಂದು ದೇವತಾವರ್ಗ, ಆ ವರ್ಗದ ದೇವತೆ (ಎಂದು ಧೈರ್ಯಮಂ ಪತ್ತುವಿಟ್ಟು ಅತಿಪ್ರಲಾಪಂಗೆಯ್ವ ಲಲಿತಾಂಗದೇವನಂ ಸಾಮಾನಿಕದೇವರ್ಕೈದೆವಂದು: **ಆದಿಪು**, ೩. ೫ ವ)

ಸಾಮಾನ್ಯ – [ನಾ] ಸಾಧಾರಣ (ಬಿನ್ನಪಮಂ ನೀಮವಧಾರಿಸಿಂ ಎಂತೆನೆ ಸಾಮಾನ್ಯದ ಮನುಜನಲ್ಲಂ ಅಂಗಮಹೀಶಂ: **ಪಂಪಭಾ**, ೧೨. ೯೬)

ಸಾಮಾಯಿಕಚ್ಛೇದ – [ನಾ] [ಜೈನ] ಐದು ಬಗೆಯ ನಡವಳಿಕೆಗಳಲ್ಲಿ ಒಂದು, ಸಂಸಾರವನ್ನು ದೂರೀಕರಿಸಿ ಆತ್ಮಧ್ಯಾನದಲ್ಲಿರುವುದು (ಸಮ್ಯಕ್ಚಾರಿತ್ರಮೆಂಬುದು ಅದು ಸಾಮಾಯಿಕಚ್ಛೇದ ಉಪಸ್ಥಾಪನಾ ಪರಿಹಾರಶುದ್ಧಿ ಸೂಕ್ಷ್ಮಸಂಪರಾಯ ಯಥಾಖ್ಯಾತಚಾರಿತ್ರಭೇದದಿಂ ಪಂಚವಿಧಂ: **ಆದಿಪು**, ೧೦. ೬೩ ವ)

ಸಾಮುದ್ರಿಕ – [ನಾ] ಅಂಗೈಯ ಗೆರೆಗಳ ಆಧಾರದ ಮೇಲೆ ಭವಿಷ್ಯ ನುಡಿಯುವ ಶಾಸ್ತ್ರ (ಬಾಹುಬಲಿಗೆ ಕಾಮತಂತ್ರ ಸಾಮುದ್ರಿಕ ಆಯುರ್ವೇದ ಧನರ್ವೇದ ಹಸ್ತ್ಯಶ್ವತಂತ್ರ ರತ್ನಪರೀಕ್ಷೆಗಳುಮಂ .. .. ಉಪದೇಶಂಗೆಯ್ದಂ: **ಆದಿಪು,** ೮. ೬೦)

ಸಾಮೋದ – [ಗು] ಪರಿಮಳಭರಿತ (ಸಾಮೋದ ನಾನಾವಿಧ ಕುಸುಮರಸಾಪಾನಸಾನಂದಭೃಂಗೌಘರವಂ ತಾನಾಗೆ: **ಆದಿಪು**, ೧೩. ೭)

ಸಾಮ್ರಾಜ್ಯ – [ನಾ] ವೈಭವ, ಸೌಭಾಗ್ಯ (ಚೆಲ್ವನಗ್ಗಲಿಸುತ್ತಿತ್ತುವು ತತ್ಪುರಕ್ಕೆ ಸುರಾಜಾವಾಸಸಾಮ್ರಾಜ್ಯಮಂ: **ಆದಿಪು,** ೭. ೧೧೩); [[ನಾ] ಜೈನ] ಒಂದು ಗರ್ಭಾನ್ವಯಕ್ರಿಯೆ, ಧರ್ಮದಿಂದ ರಾಜ್ಯಭಾರ ಮಾಡುವುದು (ಸಾಮ್ರಾಜ್ಯ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ); [ನಾ] [ಜೈನ] ಮೋಕ್ಷಕ್ಕೆ ಸಂಬಂಧಿಸಿದ ಏಳು ಉತ್ತಮಸ್ಥಾನಗಳಲ್ಲಿ ಒಂದು (ಸಜ್ಜಾತಿ ಸದ್ಗೃಹತ್ವ ಪಾರಿವ್ರಾಜ್ಯಪದ ಸುರೇಂದ್ರತ್ವ ಸಾಮ್ರಾಜ್ಯ ಪರಮಾರ್ಹಂತ್ಯ ಪರಿನಿರ್ವಾಣಮೆಂಬ ಏಱುಂ ಪರಮಸ್ಥಾನನಾಮ: **ಆದಿಪು,** ೧೫. ೧೬ ವ); [ನಾ] ಪರಮಾಧಿಕಾರದ ನಾಡು (ಹೇಯಂ ಸಾಮ್ರಾಜ್ಯಂ ಉಪಾದೇಯಂ ಪ್ರವ್ರಜ್ಯಂ ಎಂದು ಮಾಣದೆ ರಾಜ್ಯಶ್ರೀಯಂ ಕೊಟ್ಟಂ ಮುಕ್ತಿಶ್ರೀಯಂ ಬಗೆದರ್ಕಕೀರ್ತಿಗಾ ಭರತಂ: **ಆದಿಪು,** ೧೬. ೬೨)

ಸಾಯಂತನ – [ನಾ] ಸಾಯಂಕಾಲ (ಅನ್ನೆಗಂ ಆಷಾಢಪೌರ್ಣಮಾಸೀ ವಾಸರ ಸಾಯಂತನಸಮಯದೊಳ್: **ಆದಿಪು**, ೬. ೫೧ ವ)

ಸಾಯಕ – [ನಾ] ಬಾಣ (ಪ್ರವಿಮಲಸದ್ಗೀರ್ವಾಣದಾತವ್ಯ ಸಾಯಕ ಸಂಪೂರ್ಣ ಕಳಾಪ್ರವೀಣನಂ ಇಳಾಭಾರಕ್ಷಮಾಕ್ಷೂಣನಂ .. .. ಸರ್ವಲಕ್ಷಣಸಂಪೂರ್ಣಂ ಅಪ್ಪ ಮಗನಂ ಅಮೋಘಂ ಪಡೆವೆಂ: **ಪಂಪಭಾ**, ೧. ೧೩೪ ಮತ್ತು ೧೩೪ ವ)

ಸಾಯಸ – [ನಾ] ಕಷ್ಟ (ಸತ್ಯವತೀನಂದನಂ ತನ್ನ ಮಕ್ಕಳ ಸಾಯಸಂಗಳ್ಗೆ ಮನ್ಯುಮಿಕ್ಕು ಕಣ್ಣ ನೀರಂ ನೆಗಪೆ: **ಪಂಪಭಾ,** ೭.. ೫೯ ವ)

ಸಾಯಿರ – [ನಾ] ಸಾವಿರ (ಪಲಗೆಗೆ ಪತ್ತು ಸಾಯಿರಮೆ ಗದ್ಯಣಂ ಎಂದಿರದೆ ಒಡ್ಡಿ ತಾಮ್ ಎರಟ್ವಿಲಗೆಯಂ ಆಡಿ ಸೋಲ್ತೊಡೆ: **ಪಂಪಭಾ**, ೬. ೭೨)

ಸಾಯೆ ಸರಸಂ ನುಡಿ – [ಕ್ರಿ] ಕ್ರೂರವಾಗಿ ಗೇಲಿ ಮಾಡು (ಎಮ್ಮಂ ಪಿಡುದೆೞ್ವಂದಿನ ನಿಮ್ಮದಟುಗಳ್ ಈಗಳೆತ್ತವೋದುವೊ .. .. ನಿಮಗಂ ಈಗಳೀಯೆಡರಾಯಿತ್ತೇ ಎಂದು ಸಾಯೆ ಸರಸಂ ನುಡಿದು: **ಪಂಪಭಾ,** ೭. ೩೯ ವ)

ಸಾರ್ – [ಕ್ರಿ] ಪ್ರಯತ್ನಿಸು (ಆಂ ನಿನ್ನಿನಿಯನಂ ಅಱಿಸಲ್ ಸಾರ್ವೆಂ ಎಲ್ಲಂದದಿಂ ಚಿಂತಿಸದಿರ್ ತಾ ತೋಱು ನಿನ್ನೀ

ಬರೆದ ಪಟಮಂ: **ಆದಿಪು,** ೩. ೪೪); **[ಕ್ರಿ]** ಹತ್ತಿರ ಹೋಗು (ಮೆಲ್ಲನೆ ಮೃಗಮೆಂದು ಸಾರ್ದು ನೆಱನಂ ನಡೆ ನೋಡಿ ನರೇಂದ್ರನೆಚ್ಚು ಭೋಂಕನೆ ಮೃಗಚಾರಿಯಂ: **ಪಂಪಭಾ,** ೧. ೧೧೧); **[ಕ್ರಿ]** ದೊರಕು, ಉಂಟಾಗು (ನಿನ್ನಳವಿಂದಂ ಇನ್ನೆನಗೆ ಸಾರ್ದುದು ಅರಾತಿಜಯಂ ಜಯದ್ರಥಾ: **ಪಂಪಭಾ,** ೧೧. ೯೯)

ಸಾರಂಗಳ್ – **[ನಾ]** ಶಕ್ತಿಯುತವಾದವು (ಸಾರಂಗಳ್ ನಿನ್ನ ಶರಾಸಾರಂಗಳ್ ಅಸಾರಂ ಉಚಿದ ಕೆಯ್ದುಗಳ್ ಎಂತುಂ: **ಪಂಪಭಾ,** ೧೨. ೪೬)

ಸಾರದಾರು – **[ನಾ]** ಮರದ ದಿಮ್ಮಿ (ನಟ್ಟ ಕಂಭಂಗಳ ಮೇಗೆ ಸಾರದಾರುಗಳನೆಡೆಗಿಱಿದಿರೆ ಪಾಸಿ ಪಸರಿಸಿ ಪಡೆಗೆ ನಡೆಯಲಪ್ಪಂತೆ ಮಾಡಿದಾಗಳ್: **ಆದಿಪು,** ೧೩. ೫೨ ವ)

ಸಾರಧನ – **[ನಾ]** ಸಾರಭೂತವಾದ ದ್ರವ್ಯ (ಕೊಟ್ಟಳವಟ್ಟ ಸಾರಧನಮಂ ಮೂವಿಟ್ಟಿಗಂ ಪೂಣ್ದು ಕಾಲ್ಗೆ ಎಱಗಿತ್ತು ಅಂತು ಅರಿಗಂಗೆ ಬೆರ್ಚಿ ಭಯದಿಂ ಗ್ರಾಮಂ ಕುಳಂ ರಾಜಕಂ: **ಪಂಪಭಾ,** ೬. ೩೦)

ಸಾರಮೇಯ – **[ನಾ]** ನಾಯಿ (ಅವರೋದುವಾವಾಸದೊಳ್ ಸಂಕ್ಲೇಶಮಾಗೆ ಸಾರಮೇಯ ಪೂತಿಕಳೇವರಮಂ ಇಕ್ಕಿದೊಡವರ್ ನಿನ್ನ ಪಾಪೋಪಚಯಕಾರಣ ದುರಾಚರಿತಮಂ ನೋಡಿ: **ಆದಿಪು,** ೩. ೩೮ ವ)

ಸಾರವಜಳ – **[ನಾ]** ಸರಯೂನದಿಯ ನೀರು (ಪೌರರ್ ಮಾಡಿದ ನಳಿನೀಪತ್ರಪುಟಪ್ರಸಾದಿತ ಸಾರವಜಳ ಪಾದಾಭಿಷೇಚನದೊಳಂ: **ಆದಿಪು,** ೮. ೬೯ ವ)

ಸಾರಸ – **[ನಾ]** ಬಕಪಕ್ಷಿ (ಸಾರಸ ಹಂಸ ಕೋಕಿಳಕುಳ ಧ್ವಾನೋತ್ಕರಂ ಚೆಲ್ವನಾಯ್ತು ಕರಂ ಸಕ್ತನಿಳಿಂಪದಂಪತಿಗಳಿಂದಾ ನಂದನಂ ನಂದನಂ: **ಪಂಪಭಾ,** ೫. ೮೦)

ಸಾರಸ್ವತ – **[ನಾ]** [ಜೈನ] ಎಂಟು ಬಗೆಯ ಲೋಕಾಂತಿಕ ದೇವರಲ್ಲಿ ಒಂದು ವರ್ಗ (ಬ್ರಹ್ಮಕಲ್ಪಾಂತವಾಸಿಗಳುಮಪ್ಪ ಸಾರಸ್ವತ ಆದಿತ್ಯ ವಹ್ನಿ ಅರುಣ ಗರ್ದತೋಯ ತುಷಿತ ಅವ್ಯಾಬಾಧಿತ ಅರಿಷ್ಟರೆಂಬೆಣ್ಬರುಂ ಲೋಕಾಂತಿಕದೇವರ್ ಬಂದು: **ಆದಿಪು,** ೯. ೬೦ ವ)

ಸಾರಾಸಾರತೆ – **[ನಾ]** ಶಕ್ತಿವಂತಿಕೆ ಮತ್ತು ಅದಿಲ್ಲದ್ದು (ಸಾರಂಗಳ್ ನಿನ್ನ ಶರಾಸಾರಂಗಳ್ ಅಸಾರಂ ಉಚಿದ ಕೆಯ್ದುಗಳ್ ಎಂತುಂ ಸಾರಾಸಾರತೆಯಂ ನಾಂ ಆರಯ್ವಂ ಇದಿರ್ಚಿದ ಅರಿನೃಪಧ್ವಜಿನಿಗಳೊಳ್: **ಪಂಪಭಾ,** ೧೨. ೪೬)

ಸಾರಿ – **[ನಾ]** ಅಂಬಾರಿ (ಕರಿಸೇನಾ ಸಾರಿನದ್ಧೋತ್ತರಳ ಕದಳಿಕಾ ಕಾನನೋಚ್ಚುಂಬ್ಯಮಾನಾಂಬರಚಕ್ರಂ: **ಆದಿಪು,** ೪. ೨೪)

ಸಾರಿಕೆ – **[ನಾ]** [ಶಾರಿಕಾ] ಹೆಣ್ಣು ಗಿಳಿ (ಗೊಟ್ಟಿಗಾಣರಂತಿರೆ ಮಱಿದುಂಬಿ ಮೇಳದವರಂತಿರೆ ಸಾರಿಕೆ ರಾಜಗೇಹದಂತಿರೆ ಕೊಳಂ ಅಲ್ಲಿ ತಾಂ ಅರಸರಂತಿರೆ ತಾಮರಸಂಗಳೊಪ್ಪುಗುಂ: **ಪಂಪಭಾ,** ೫. ೫೮)

ಸಾರೆ – **[ನಾ]** ಸಮೀಪ (ಎಳೆಯೊಳ್ ತೋಱಿದ ರೂಪನಾಗಳೆ ನಭೋಭಾಗಾಗ್ರದೊಳ್ ತೋರ್ಪಂ ಆಗಳೆ ಗೆಂಟು ಆಗಳೆ ಸಾರೆಯಾಗಿ ಪೊಳೆವಂ: **ಆದಿಪು,** ೭. ೧೨೨); **[ಕ್ರಿ]** ಹತ್ತಿರ ಬರಲು (ಚಕ್ರಿಯ ಪೊದಳ್ದ ತೇಜಕ್ಕೆ ಮಸುಳ್ದಂದೆಱಗಿ ಮುಂದೆ ನಿಲ್ವುದುಂ ಒಂದವಯವದಿಂದೆ ಸಾರೆ ಕರೆದು ನೃಪೇಂದ್ರಂ: **ಆದಿಪು,** ೧೩. ೧೪)

ಸಾರೆವರ್ – **[ಕ್ರಿ]** ಬಳಿಗೆ ಬಾ (ಮುನೀಂದ್ರರೊಳ್ ಕಮಳಸಂಭವನಂದನನೆಂದು ನೋಟಕರ್ ತಳವೆಳಗಾಗೆ ಸಾರೆವರೆ ನೀರದಮಾರ್ಗದಿನಂದು ನಾರದಂ: **ಪಂಪಭಾ,** ೬. ೬)

ಸಾರೆ ಸಾರ್ – **[ಕ್ರಿ]** ಹತ್ತಿರ ಹೋಗು (ಗಗನಾಭೋಗಮನೆಯ್ದೆ ನೀಳ್ದ ಮಣಿಕೂಟಾಟೋಪಮೆಂಬಂತೆ ದಿಟ್ಟಿಗೆ ಮುನ್ನಂ ಸಾರೆ ಸಾರೆ ತನುವಂ: **ಆದಿಪು,** ೧೩. ೧೦)

ಸಾರ್ಕೆ – **[ನಾ]** ಸಾಮೀಪ್ಯ (ಸುರ್ಕಟೆದುರುಳಿಗುರುಳ್ ನಸುಸುರ್ಕಿದ ಕುಚಚೂಚುಕಂ ಬೆಳರ್ತಧರಂ ನೀರ್ ಪೋರ್ಕುಳಿಯೊಳ್ ಜೋಲ್ದುಳ್ಳುಡೆ ಸಾರ್ಕೆಯೊಳೇಂ ನೃಪನ ಮನಮನಳವಡಿಸಿದುದೋ: **ಆದಿಪು,** ೧೧. ೧೪೯)

ಸಾರ್ಚು – **[ಕ್ರಿ]** ಇರಿಸು (ಭವನಿಗಳದ ತೊಡರಂ ಕಳೆ ಭವಜಳಧಿಯ ತಡಿಗೆ ಸಾರ್ಚು ಭವಗಹನದುಪದ್ರವಮಂ ಕಿಡಿಸು ಭವಾಂತಕ: **ಆದಿಪು,** ೧೦. ೫೮)

ಸಾರ್ತರ್ – **[ಕ್ರಿ]** ಉಂಟಾಗು (ನುಡಿಗಳ್ ಮೊಱೆಯಂ ಮಱೆಯಿಪ್ಪುದೊಂದು ಕಳ್ಗುಡಿದವರಂದಮಿಂತು ಸಿರಿ ಸಾರ್ತರೆ ಸಾರ್ವುದು: **ಪಂಪಭಾ,** ೩. ೧೯)

ಸಾರ್ಥ – **[ನಾ]** [ಯಾತ್ರಿಕರ] ಸಮೂಹ, ಸಮುದಾಯ (ಬಾಹುಬಲಿ ಕೇವಳಿಯುಂ ನಾನಾದೇಶವಿಹಾರದೊಳ್ ವಿಶ್ವಜನಮಂ ನಿಜವಚೋಮೃತದಿಂ ಭವ್ಯಜನ ಸಾರ್ಥಮಂ ತಣಿಪಲೆಂದು ಬಂದು: **ಆದಿಪು,** ೧೪. ೧೪೭ ವ)

ಸಾರ್ಥಕೋಟಿತ್ರಯ – **[ನಾ]** ಮೂರೂವರೆಕೋಟಿ (ಅಂತು ಧನದಂ ಸಾರ್ಥಕೋಟಿತ್ರಯಪ್ರಮಿತಪಂಚರತ್ನವೃಷ್ಟಿಯಂ ಪ್ರತಿದಿನಂ ಸುರಿಯೆ: **ಆದಿಪು,** ೭. ೨೫ ವ)

ಸಾರ್ವಭೌಮ – **[ನಾ]** ಅತ್ಯಂತ ಶ್ರೇಷ್ಠ (ಪಡೆವೆಂ ಶಾಶ್ವತಶ್ರೀಯಂ ಎಂಬುಜ್ಜುಗದೊಳ್ ಚಿತ್ತಂ ಕರಂ ತಣ್ಮಲೆಯೆ ನೆಱೆಯೆ ನಿಶ್ಚೈಸಿದಂ ಸಾರ್ವಭೌಮಂ: **ಆದಿಪು,** ೬. ೨೬)

ಸಾಲ್ – **[ಕ್ರಿ]** ಸಮರ್ಥನಾಗು (ಪೆಱಗಂ ತಗುಳ್ವ ಯಾದವ ಬಲಮುಂಟಪ್ಪೊಡದನಂಬುಗಾಣಿಸಲ್ ನೀನೆ ಸಾಲ್ವೆ ಉಚಿದುದಂ ಮಾಣಿಸಲ್ ಆನೆ ಸಾಲ್ವೆಂ: **ಪಂಪಭಾ,** ೫. ೨೦ ವ)

ಸಾಲ – **[ನಾ]** ಕೋಟೆ (ದ್ವಾದಶಗೋಪುರವಿರಾಜಿತ ಸಾಲತ್ರಯಪರೀತ ಕುಂಡದ್ವಯಸಮೇತ ನಂದನಾದಿಷೋಡಶ ಸರೋವರ ಪರಿವೇಷ್ಟಿತ: **ಆದಿಪು,** ೧೦. ೨೩ ವ); **[ನಾ]** ಮತ್ತಿಯ ಮರ (ಸಾಲ ಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಸ್ಥಳಂ: **ಪಂಪಭಾ,** ೧. ೬೮)

ಸಾಲಪ್ರಾಂಶು – **[ಗು]** ಸಾಲವೃಕ್ಷದಂತೆ ಎತ್ತರವಾದ (ಸಾಲ ಪ್ರಾಂಶು ವಿಶಾಲ ಲೋಲನಯನಂ ಪ್ರೋದ್ಯತ್ ವೃಷಸ್ಕಂಧಂ ಉನ್ಮೀಲತ್ ಪಂಕಜವಕ್ತ್ರಂ ಆಯತ ಸಮಗ್ರ ಉರಸ್ಸ್ಥಳಂ: **ಪಂಪಭಾ,** ೧. ೬೮)

ಸಾಲಭಂಜಿಕಾಸ್ತಂಭ – **[ನಾ]** ಬೊಂಬೆಗಳಿರುವ ಕಂಬ (ಚಿತ್ರಲೇಖೆಯಂ ಮಣಿಸ್ತಂಭ ಸಾಲಭಂಜಿಕಾಸ್ತಂಭಗಳೊಳ್ ಕುಂಕುಮರಸ ಪತ್ರಲೇಖೆಯಂ ವಿರಚಿಸಲುಂ: **ಆದಿಪು,** ೭. ೨೧ ವ)

ಸಾಲಭಂಜಿಕೆ – [ನಾ] ಬೊಂಬೆ (ಬೆಳ್ಗೊಡೆ ನೋಡೆ ನೋಡೆ ನಿಂದುರಿದುವು ಸಾಲಭಂಜಿಕೆಗಳಟ್ಟುವು ವೈರಿನರೇಂದ್ರ ಗೇಹದೊಳ್: **ಪಂಪಭಾ,** ೬. ೨೯)

ಸಾಲಸರಲ್ – [ನಾ] ಸಾಲವೃಕ್ಷದ ಮರದಿಂದ ಮಾಡಿದ ಬಾಣ (ಇಡಿದಿರೆ ರೋಮಕೂಪದೊಳಗೆ ಉರ್ಚಿದ ಸಾಲ ಸರಲ್ಗಳುಂ ತೆಱಂಬಿಡಿದಿರೆ ಬೆಟ್ಟು ಒರ್ಗುಡಿಸಿದಂತೆ ನೆಱಲ್ದಿರೆ: **ಪಂಪಭಾ,** ೧೩, ೬೨)

ಸಾಲ್ವಿನಂ – [ಅ] ಸಾಕಾಗುವಷ್ಟು (ಸಾಲ್ವಲಂ ತನ್ನ ಪರಿಭವದೊಳಾದ ಸಿಗ್ಗಂ ಸಾಲ್ವಿನಮುಂಟು ಮಾಡಿದೊಡೆ: **ಪಂಪಭಾ,** ೧. ೭೬ ವ)

ಸಾವಗಿಸು – [ಕ್ರಿ] ಸಾಂತ್ವನಗೊಳಿಸು (ತನ್ನಿಂದಂ ಪೆಱರಿಂದಂ ತನ್ನಂ ಸಾವಗಿಸುವಾಸೆಯಿಲ್ಲದೆ ದೇಹೋತ್ಪನ್ನಪರೀಷಹಸಂಹತಿ ತನ್ನೊಡಲಂ ನೆಱೆಯೆ ತವಿಸುತ್ತಿರ್ಪುದುಂ: **ಆದಿಪು,** ೨. ೫೨); [ಕ್ರಿ] ಸರಿಪಡಿಸಿಕೊಳ್ಳು (ಸಾವಗಿಸುವ ಮೇಲುದಂ ಮೊಲೆಗಳ್ ಅಳ್ಳಿಱಿಯುತ್ತಿರೆ ಪೊಣ್ಮೆ: **ಪಂಪಭಾ,** ೮. ೫೯)

ಸಾವದ್ಯ – [ನಾ] ಕಳಂಕ, ಪಾಪ (ಇತ್ತ ವೃಷಭಯೋಗೀಂದ್ರನುಂ ಸಕಳಸಾವದ್ಯಾತಿದೂರಮಪ್ಪ ಜಿನಕಲ್ಪಿತಂ ಎಂಬ ಆಚರಣಮಂ ಕೈಕೊಂಡು: **ಆದಿಪು,** ೧೦. ೧೩ ವ)

ಸಾವದ್ಯಭೀರು – [ನಾ] ಪಾಪಕ್ಕೆ ಹೆದರುವವನು (ಸಾವದ್ಯಭೀರುಗಳ್ ಕೆಲರ್ ಆ ವಿವಿಧಫಲಪ್ರಸೂನಪಲ ಯಿಂ ತೀವಿದ ರಾಜಾಂಗಣಮಂ ಇಳಾವಂದ್ಯರ್ ಮೆಟ್ಟಲೊಲ್ಲದಲ್ಲಿಯೆ ನಿಂದರ್: **ಆದಿಪು,** ೧೫. ೯)

ಸಾವು – [ನಾ] ಮರಣ (ಘಟೋತ್ಕಚನಿಳಾವಂತನ ಸಾವಂ ಕಂಡು ಸೈರಿಸದಳಂಭೂಷವನೆಟ್ಟಿಟ್ಟುವುದುಂ: **ಪಂಪಭಾ,** ೧೧. ೭ ವ); [ನಾ] ಸಾವಿನಷ್ಟು ತೀವ್ರವಾದ ಮೂರ್ಛೆ (ಸುರುಳ್ದುರುಳ್ವಿನಂ ಎಚ್ಚು ಮೂರ್ಛಾಗತನಂ ಮಾಡಿ ಸಿಂಹನಾದದಿಂ ಆರ್ದು ಮುಟ್ಟಿವರ್ಪಾಗಳ್ ಆಳ್ದನ ಸಾವಂ ನೋಡಲಾಱದೆ: **ಪಂಪಭಾ,** ೧೧. ೧೪೨ ವ)

ಸಾವೆ – ಸಾಯುತ್ತೀಯೆ (ಒಱಲ್ದು ನಲ್ಲಳೊಳ್ ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋಗಿನ್ನೆನೆ ರೌದ್ರಶಾಪಪರಿತಾಪವಿಳಾಪದೊಳಾ ಮಹೀಶ್ವರಂ: **ಪಂಪಭಾ,** ೧. ೧೧೨)

ಸಾಷ್ಟಾಂಗಮೆಱಗು – [ಕ್ರಿ] ದೀರ್ಘದಂಡ ನಮಸ್ಕಾರಮಾಡು: ಎದೆ, ಹಣೆ, ಎರಡು ಕೈಗಳು, ಎರಡು ಮಂಡಿಗಳು, ಮತ್ತು ಎರಡು ಪಾದಗಳು ಹೀಗೆ ದೇಹದ ಎಂಟು ಅಂಗಗಳಿದ ಕೂಡಿದ ನಮಸ್ಕಾರ ಮಾಡು (ನಿಮ್ಮಣ್ಣಂ ಅಣುವನೆಂ ಆನಪ್ಪೆಂ ಎಂದು ಪೇಳ್ವುದುಂ ಆಗಳ್ ಸಾಷ್ಟಾಂಗಮೆಱಗಿ: **ಪಂಪಭಾ,** ೮. ೩೩ ವ)

ಸಾಸಿಗ – [ನಾ] ಸಾಹಸಿಗ, ಪರಾಕ್ರಮಿ (ಪದಿನೆಣ್ಬಾಸಿರ್ವರ್ ಅರಸುಗಳ್ ವೆರಸು ಸಾಸಿಗಂ ಉಚಿತದೀಕ್ಷೆಯಂ ಕೈಕೊಂಡಂ: **ಆದಿಪು,** ೬. ೫)

ಸಾಸಿರ್ಮಡಿ – [ನಾ] ಸಾವಿರಪಟ್ಟು (ನೆಯ್ದಿಲ ಕಡುಗಂಪುಮನಿವಱ ಕಂಪು ಗೆಲ್ದುವು ಸಾಸಿರ್ಮಡಿಯೆನೆ ಪೊಂಬಣ್ಣದ ಕಂಪಿಡಿದಿರೆ ಸೊಗಯಿಸುವುವು ಗಂಧಶಾಲಿವನಂಗಳ್: **ಆದಿಪು,** ೧. ೬೦)

ಸಾಹಸದ ಮಹಿಮೆ – [ನಾ] ಅಪಾಯಗಳನ್ನೆದುರಿಸುವ ನಿರ್ಧಾರ (ಚಾಪವಿದ್ಯಾಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್: **ಪಂಪಭಾ,** ೧೪. ೬೪)

ಸಾಹಸರಸಿಕ – [ನಾ] ಸಾಹಸಗಳಲ್ಲಿ ಸಂತಸಪಡುವವನು (ಕೆಲದಲ್ಲಿ ನಿಂದ ಚಕ್ರಮನಾಗಳ್ ಸಾಹಸರಸಿಕಂ ಕಂಡೀ ಸಾಹಸಮಂ ನೆಗಟ್ದನೆನ್ನೊಳಂ ಭರತೇಶಂ: **ಆದಿಪು,** ೧೪. ೧೨೦)

ಸಾಹಸಾಭರಣ – [ನಾ] ಸಾಹಸವನ್ನೇ ಆಭರಣವಾಗುಳ್ಳವನು, ಅರ್ಜುನ (ಆ ಪೂಣ್ದ ಬೆಸನಂ ಕರಮಾಸೆವಟ್ಟು ತನ್ ಕೆಲದೊಳಿರ್ದ ಸಾಹಸಾಭರಣನ ಮೊಗಮಂ ನೋಡಿ: **ಪಂಪಭಾ,** ೭. ೩೬ ವ)

ಸಾಹಿಯಾಣ – [ನಾ] ಕಸೂತಿ ಕೆಲಸ, ವಸ್ತ್ರವಿಶೇಷ (ಸಾಹಿಯಾಣದ ಚೀನದ ಧವಳವಟ್ಟದ ಭರ್ಮದ ಜೊಂಗದ ದೇವಾಂಗದ ಸಕಳವಟ್ಟೆಗಳುಮಂ ಮೆಟ್ಟುವೆಡೆಯೊಳೆಲ್ಲಂ ಪಾಸಿ: **ಆದಿಪು,** ೪. ೩೪ ವ)

ಸಾಳಕಾನನ – [ನಾ] ಸಾಲವೃಕ್ಷಗಳ ಸಮೂಹ (ಸಾಳಕಾನನಂ ಸತ್ತಿಳಕಂ ಲಳಿತಲತಾಂಗ ರಮಣೀವಿಳಾಸಮಂ ವನವಿಳಾಸಮಂ ಏನಿಳಿಸಿದುದೋ: **ಆದಿಪು,** ೬. ೯೩)

ಸಾಳಕಾನನೆ – [ನಾ] [ಸ + ಅಳಕ + ಆನನೆ] ಮುಂಗುರುಳು ಸುಳಿದಾಡುವ ಮುಖವುಳ್ಳ ಸುಂದರಿ (ವಿನಿರ್ಜಿತಾಳಿಮಾಲಾವಿಳಾಸ ಸಾಳಕಾನನೆಯರ್ ಸಾಳಕಾನನಂಗಳುಮಂ; **ಆದಿಪು,** ೧೧ ೯೫ ವ)

ಸಾಳಭಂಜಿಕೆ – [ನಾ] ಬೊಂಬೆ (ಅತ್ತ ಸುಭದ್ರೆಯುಂ ಒಡಲುರಿಯುತ್ತಿರೆ ಮರವಟ್ಟು ವಿಜಯನಿರ್ದತ್ತಲೆ ನೋಡುತ್ತಿರೆ ಸುಸಾಳಭಂಜಿಕೆಗೆತ್ತುದು ಕೆಳದಿಯರ ತಂಡಮಾಕೆಯ ರೂಪಂ: **ಪಂಪಭಾ,** ೪. ೫೪)

ಸಾಱಿಯುಂ ಕೀಱಿಯುಂ – ಹತ್ತಿರ ಹೋಗಿ ಜೋರಾಗಿ ಕಿರಿಚಿಯೂ (ಎಂದೆನಿತಾನುಂ ತೆಱದೊಳೆ ಸಾಱಿಯುಂ ಕೀಱಿಯುಂ ನುಡಿದೊಡೆ ಧೃತರಾಷ್ಟ್ರಂ ಮಗನಲ್ಲಿಗೆ ವಂದು: **ಪಂಪಭಾ,** ೭. ೨ ವ)

ಸಾಱು – [ಕ್ರಿ] ಘೋಷಿಸು, ಹೇಳು (ಪಗೆ ಸಾಱುವುದುಂ ಕೊಲ್ಲೆಂ ಪಗೆ ಸಾಱಿದ ನಿನ್ನನಾರ ಮಱೆಯಂ ಪೊಕ್ಕುಂ ಪಗೆಯಂ ನೆಱಪನೆ ನೆಱಪುವ ಬಗೆಯೊಳೆ ಪೊಕ್ಕಂ ಕಡಂಗಿ ಕರ್ಣನ ದೊಣೆಯಂ: **ಪಂಪಭಾ,** ೫. ೧೦೦)

ಸಿಂಗ – [ನಾ] ಸಿಂಹ (ನೆಲಂ ಬಿರಿಯೆ ಗಜಱಿ ಗರ್ಜಿಸಿ ಪಾಯ್ವ ಸಿಂಗಂಗಳುಮಂ ಕಂಡು: **ಪಂಪಭಾ,** ೫. ೪೮ ವ)

ಸಿಂಗಬಲ – [ನಾ] [ಸಿಂಹಬಲ] ಸಿಂಹದ ಶಕ್ತಿ (ಸಿಂಗಬಲನೆಂಬಗುರ್ವಿನ ಸಿಂಹಮಸಿಧೇನು ಕಿರಣ ಕೇಸರಮಾಲಾಸಂಗತಮನಡಸಿ ನುಂಗಲ್: **ಪಂಪಭಾ,** ೮. ೭೪)

ಸಿಂದುರ – [ನಾ] ಒಂದು ಬಗೆಯ ಹೂ, ಸಿಂದುವಾರ (ಅಲರ್ದ ಪೊಸಸಿಂದುರಂಗಳಂ ಅಲೆವ ಅಳಿಕುಳಮಂ ತಳರ್ಚಿ ತಣ್ಮಲೆವ ಎಲರ್: **ಆದಿಪು,** ೧೧. ೯೦); [ನಾ] ಕೆಂಪು ಕಾವಿಕಲ್ಲು (ನವರುಧಿರಜಳಚಳತ್ ಸೇಚನದೊಳ್ ಘಟ್ಟಿಸಿ ಸಿಂದುರದೊಳ್ ನೆಲಗಟ್ಟಿಸಿದಂತಿರ್ದ ರಣರಂಗ ಭೂಮಿಯೊಳ್: **ಪಂಪಭಾ,** ೧೦. ೭೦ ವ)

ಸಿಂದೂರಪಾಂಸು – [ನಾ] ಸಿಂದೂರಚೂರ್ಣ, ಕೇಸರಿಬಣ್ಣದ ಪುಡಿ (ಸಿಂದೂರಪಾಂಸೂತ್ಕರದಿಂ ಸೀಮಂತಸಿಂದೂರದ ವಿರಚನೆಯಂ ಕೂಡೆ ಮಾಡುತ್ತುಂ: **ಆದಿಪು,** ೧೧. ೧೫೫)

ಸಿಂದೂರಿತ – **[ಗು]** ಕೇಸರಿ ಬಣ್ಣದ (ಸಿಂದೂರಿತ ಮಸ್ತಕಪಿಂಡ ಮಂಡಲಂ ಅವಿರಳಚಳತ್ಕಾಂಚೀಕಳಾಪ ಮಣಿಕಿಂಕಿಣೀಗಣ ಝುಂಕಾರಮೆ ಮದನಡಿಂಡಿಮರವಾಡಂಬರಂ: **ಆದಿಪು,** ೧೧. ೨೦ ವ)

ಸಿಂಧು – **[ನಾ]** ಸಮುದ್ರ (ಒಡೆವುದೆ ವಜ್ರಕವಾಟಮಂ ಅಡರ್ವುದೆ ವಿಜಯಾರ್ಧಗಿರಿಯಂ ಇಂತೀಗಳೆ ಪೂಣ್ದಿಡೆಗಿಡಿಪುದೇ ಸಿಂಧುವಂ: **ಆದಿಪು,** ೧೩. ೨೧)

ಸಿಂಧುಜ – **[ನಾ]** ಭೀಷ್ಮ (ಇಡಿದಿರೆ ರೋಮಕೂಪದೊಳಗೆ ಉರ್ಚಿದ ಸಾಲ ಸರಲ್ಗಳುಂ ತೆಱಂಬಿಡಿದಿರೆ ಬೆಟ್ಟು ಒರ್ಗುಡಿಸಿದಂತೆ ನೆಱಿಲ್ದಿರೆ .. .. ಬಿಟ್ಟಂ ಏನೆಸೆದನೋ ಶರಶಯ್ಯೆಯೊಳ್ ಅಂದು ಸಿಂಧುಜಂ: **ಪಂಪಭಾ,** ೧೩, ೬೨)

ಸಿಂಧುತೋಯ – **[ನಾ]** ಸಮುದ್ರದ ನೀರು (ಚಿರವಿಕ್ಷೋಭಿತ ಸಿಂಧುತೋಯಶಿಶಿರಂ .. .. ಚಕ್ರಿಯನಾಱೆಸಿತ್ತು ವಿಜಯಾರ್ಧೋಪಾಂತ ಮಂದಾನಿಳಂ: **ಆದಿಪು,** ೧೩. ೯)

ಸಿಂಧುಪುತ್ರ – **[ನಾ]** ಭೀಷ್ಮ (ರಾಜ್ಯಂ ನಷ್ಟರಾಜಮಾದುದರ್ಕೆ ಮಮ್ಮಲಮಱುಗಿ ಯೋಜನಗಂಧಿ ಸಿಂಧುಪುತ್ರನನಿಂತೆಂದಳ್: **ಪಂಪಭಾ,** ೧. ೮೦ ವ)

ಸಿಂಧುಯಾನ – **[ನಾ]** ಸಮುದ್ರಪ್ರಯಾಣ (ವಿಪಿನೋಲ್ಲಂಘನ ಸಿಂಧುಯಾನ ನಗಕೂಟಾರೋಹಣಕ್ಲೇಶ ಮಂತ್ರಪದಧ್ಯಾನ ಬಿಳಪ್ರವೇಶ ರಸವಾದ ಆಯಾಸದೊಳ್: **ಆದಿಪು,** ೧೬. ೭)

ಸಿಂಧುರಸ್ಕಂಧಪೀಠ – **[ನಾ]** ಆನೆಯ ಮೇಲಿನ ಅಂಬಾರಿ (ರಾಜ್ಯಲಕ್ಷ್ಮೀ ಲೀಲಾಲಂಬನಮೆನಿಸಿದ ಬಿಸುಗೆಯ ಮತ್ತಾಲಂಬನಮಂ ಅವಳಂಬಿಸಿ ಸಿಂಧುರಸ್ಕಂಧಪೀಠದೊಳ್ ಸುಖಾಸೀನನಾಗಿರ್ದನಾಗಳ್: **ಆದಿಪು,** ೧೪. ೧೦೨ ವ)

ಸಿಂಧುರಾರಾತಿ – **[ನಾ]** ಆನೆಯ ವೈರಿ, ಸಿಂಹ (ನೆಲಸಿರ್ದ ವಜ್ರಪಂಜರಂ ಅಲಱುವಿನಂ ಪಾಯ್ದ ಸಿಂಧುರಾರಾತಿಯಂ ಉಜ್ಜ್ವಲತನುವಂ ಅಭ್ರಪಥದತ್ತ ಲಂಘಿಸಲ್ಕಿರ್ದುದಂ ಚಮೂಪತಿ ಕಂಡಂ: **ಆದಿಪು,** ೧೬. ೪೫)

ಸಿಂಧುರಾರೂಢ – **[ಕ್ರಿ]** ಆನೆಯನ್ನೇರಿದ (ಸುರರಾಜಂ ತನ್ನ ಗಂಧೇಭದ ಕೆಲಗೆಲದೊಳ್ ಸಿಂಧುರಾರೂಢರೆತ್ತಂ ಬರೆ: **ಆದಿಪು,** ೯. ೯)

ಸಿಂಧುವಾರ – **[ನಾ]** ಒಂದು ಮರ, ಲೊಕ್ಕಿ ಗಿಡ (ಮತ್ತೊರ್ವಳ್ ಸಿಂಧುವಾರಸುರಭಿನಿಶ್ವಾಸೆ: **ಆದಿಪು,** ೧೧. ೧೨೧ ವ)

ಸಿಂಧುಬ್ರಾತ – **[ನಾ]** ನದೀಸಮೂಹ (ಗೋತ್ರನಗಂಗಳ್ ಶಿಖರಂಗಳೊಳ್ ನಿಜೆಸಿ ಸಿಂಧುಬ್ರಾತಮಂ ಪೆಂಪಿನುರ್ಬಿನೊಳಂ ಬೀಗುವುದಾನವಂ ಚರಣದೊಳ್ ತಾಳ್ದಿರ್ದಂ: **ಆದಿಪು,** ೯. ೧೧೪)

ಸಿಂಹಕಪೋತ – **[ನಾ]** ಸಿಂಹದ ಮರಿ (ಮನಂಬೆರ್ಚದೆ ಸಿಂಹಕಪೋತಮನೋವಲುಂ: **ಪಂಪಭಾ,** ೧. ೧೪೨)

ಸಿಂಹಪೀಠ – **[ನಾ]** ಸಿಂಹಾಸನ (ಪಾಸಱೆ ಸಿಂಹಪೀಠಂ ಅಳಿನಿರುತಿ ಮಂಗಳಗೀತಿ ಭೂತಳಂ ಪಾಸು ಮೃಗವ್ರಜಂ ಪರಿಜನಂ ಪೊದಱೆ ಓಲಗಸಾಲೆ: **ಪಂಪಭಾ,** ೭. ೨೯)

ಸಿಂಹಬಲ – **[ನಾ]** ಕೀಚಕ (ಸಿಂಹಬಲನಂ ಕೊಲ್ವನ್ನರಾರ್ ಭೀಮನಲ್ಲದವರ್: **ಪಂಪಭಾ,** ೮. ೮೪)

ಸಿಂಹಮಾಡುವರ ಬಾಲಮನಾಡಿದರ್ ಎಂಬ ಮಾಟಿಕ್ಕಿ – ಸಿಂಹದ ವೇಷ ಹಾಕಿ ಕುಣಿಯುವವರ ಬಾಲವನ್ನು ಹಿಡಿದುಕೊಂಡು ಕುಣಿಯುವ ರೀತಿ (ಸಭಾಲಯಮಂ .. .. ಯುಧಿಷ್ಠಿರಪ್ರಭುಗೆ ತಾನೆ ಸುಯೋಧನನುಯ್ದು ತೋಱೆದಂ ನೋಡಿರೆ ಸಿಂಹಮಾಡುವರ ಬಾಲಮನಾಡಿದರೆಂಬ ಮಾಟಿಕ್ಕೆಯಿಂ: **ಪಂಪಭಾ,** ೬. ೬೯)

ಸಿಂಹವಾಹಿನಿ – **[ನಾ]** [ಜೈನ] ಭರತ ಚಕ್ರವರ್ತಿಯ ಹಾಸಿಗೆಯ ಹೆಸರು (ಸಿಂಹವಿಧೃತಮಪ್ಪ ಸಿಂಹವಾಹಿನಿಯೆಂಬ ಮೃದುಶಯ್ಯೆಯುಂ ಅನುತ್ತರೆಯೆಂಬ ಸಿಂಹಾಸನಮುಂ: **ಆದಿಪು,** ೧೫. ೩ ವ)

ಸಿಂಹವಿಕ್ರೀಡಿತ – **[ನಾ]** [ಜೈನ] ದೀರ್ಘಕಾಲದ ಉಪವಾಸ ಮತ್ತು ಉಪವಾಸಗಳಿಂದ ಕೂಡಿದ ಒಂದು ವ್ರತ (ಜಿನೇಶ್ವರರೂಪಮಂ ತಾಳ್ದಿ ಸರ್ವತೋಭದ್ರ ಸಿಂಹವಿಕ್ರೀಡಿತಂಗಳೆಂಬ ತಪದೊಳ್ ನೆಗಟ್ಟು: **ಆದಿಪು,** ೩. ೫೭ ವ)

ಸಿಂಹವಿಷ್ಟರ – **[ನಾ]** ಸಿಂಹಾಸನ (ಸಿಂಹವಿಷ್ಟರಾರೋಹಣೋಚಿತ ಕಟಿತಟಂಗೆ ಕಟಿತಟದೊಳ್ ಮಾಣಿಕ್ಯಮಣಿಕಿಂಕಿಣೀ ದಾಮಮಂ ತಗುಳ್ಚೆ: **ಆದಿಪು,** ೭. ೧೦೬ ವ)

ಸಿಂಹಾಸಂದಿ – **[ನಾ]** [ಸಿಂಹ+ಆಸಂದಿ] ಸಿಂಹಾಸನ (ಜನಂ ಮನಂಗೊಳೆ ಮಾಡಿಟ್ಟ ವಿಚಿತ್ರಮಂಟಪದ ಸಿಂಹಾಸಂದಿಯೊಳ್ ಬಾಲನಂ ಕುಳಿಶಾಸ್ತ್ರಂ ಪಿರಿದುಂ ವಿಭೂತಿವೆರಸಿಟ್ಟು: **ಆದಿಪು,** ೭. ೧೧೦)

ಸಿಂಹಾಸನ – **[ನಾ]** ಚಕ್ರವರ್ತಿಯ ಆಸನ (ಸಿಂಹವಿಧೃತಮಪ್ಪ ಸಿಂಹವಾಹಿನಿಯೆಂಬ ಮೃದುಶಯ್ಯೆಯುಂ ಅನುತ್ತರೆಯೆಂಬ ಸಿಂಹಾಸನಮುಂ: **ಆದಿಪು,** ೧೫. ೩ ವ);

ಸಿಂಹಾಸನಸುರದುಂದುಭಿಪತಿ – **[ನಾ]** ಅಷ್ಟ ಮಹಾ ಪ್ರಾತಿಹಾರ್ಯಗಳಲ್ಲಿ ಸೇರುವ ಸ್ವರ್ಣಸಿಂಹಾಸನ ಮತ್ತು ದೇವದುಂದುಭಿಗಳಿಗೆ ಸ್ವಾಮಿ, ಅರ್ಹಂತ (ಸಿಂಹಾಸನ ಸುರದುಂದುಭಿ ಪತಿಚರಣಕಮಳಭೃಂಗಂ ಪಂಪಂ: **ಆದಿಪು,** ೧. ೩೩)

ಸಿಕ್ತ – **[ಗು]** ಸೇಚನೆಗೊಂಡ, ತೊಯ್ದ (ವಜ್ರಜಂಘಚಕ್ರವರ್ತಿ ಸೂಕ್ತಾಮೃತಸಿಕ್ತಮಪ್ಪ ನಿಜಮನೋರಥಾಮರದ್ರುಮದಿಂ ಒಗೆದಂಕುರಿಸಿದ ಅಂಕುರನಿಕರಮಂ: **ಆದಿಪು,** ೪. ೨೯ ವ)

ಸಿಕ್ಥ – **[ನಾ]** [ಅನ್ನದ] ಅಗುಳು (ಏಕಕಬಳೋನಾದ್ಯೇಕಸಿಕ್ಥ ಪ್ರಮಾಣಂಬರಂ ಬರ್ಪ ಅವಮೋದರ್ಯಮೆಂಬ ಎರಡನೆಯ ತಪದೊಳಂ: **ಆದಿಪು,** ೬. ೩೦ ವ)

ಸಿಗ್ಗಾಗು – **[ಕ್ರಿ]** ನಾಚಿಕೆಗೊಳ್ಳು, ಅವಮಾನ ಅನುಭವಿಸು (ಅಂತು ಗಳಿತಗರ್ವನಾಗಿ ಸಿಗ್ಗಾಗಿ ಪೂರ್ವಾವನಿಪಾಳ ಪ್ರಶಸ್ತಿಯೊಳ್ ಒಂದಂ ದಂಡರತ್ನದಿಂ ಸೀಂಟಿ ಕಳೆದು ನಿಜಪ್ರಶಸ್ತಿಗೆಡೆಮಾಡಿ: **ಆದಿಪು,** ೧೩. ೭೧ ವ)

ಸಿಗ್ಗು – **[ನಾ]** ನಾಚಿಕೆ (ಯುಧಿಷ್ಠಿರಂ ತಲೆಗವಿವನಲ್ಲದೆಯುಂ ಏವದೊಳ್ ತಲೆಗವಿದು ಸಿಗ್ಗಂ ಕೊಂಡಾಡಿ ನೆತ್ತಮನಾಡಿ: **ಪಂಪಭಾ,** ೭. ೨ ವ); **[ನಾ]** ಅವಮಾನ (ದ್ರೌಪದಿ ತನ್ನ ಕೇಶಪಾಶಮಂ ದುಶ್ಶಾಸನಂ ಪಿಡಿದು ತೆಗೆದನೆಂಬ ಸಿಗ್ಗು ಅಗ್ಗಳಂ ಪೆರ್ಚೆ ಸಭೆಯೊಳಿಂತೆಂದಳ್: **ಪಂಪಭಾ,** ೭. ೯ ವ)

ಸಿಚಯ – [ನಾ] ಸೆರಗು (ಅತಿಚಕಿತ ಅರಾತಿಶುದ್ಧಾಂತ ಕಾಂತಾತ್ಯಂತ ಚಿಂತಾಶ್ವಾಸ ಅನಿಲಾಂದೋಳಿತ ಕುಚಸಿಚಯಾಂಚಳನುಂ: **ಆದಿಪು**, ೧೨. ೬೧ ವ)

ಸಿಡಿ – [ಕ್ರಿ] ಚಿಮ್ಮು (ಲವಣಾಂಬುರಾಶಿ ಕುಕ್ಕುಟಿಗುದಿವಲ್ಲಿ ಕೂಟ್ಟುಗ್ಗಿದಿಯೆ ಮೇಗೆ ಸಿಡಿಲ್ದಗುಳಂತೆ ಕೂಡೆ ತತ್ತಳಗುದಿಯುತ್ತುಮಿರ್ಪ ಕುದಿಯೊಳ್ ಸಿಡಿದಲ್ಲಿಯ ಮುತ್ತುಗಳ್: **ಪಂಪಭಾ**, ೧೧. ೧೫೩)

ಸಿಡಿಂಬು – [ನಾ] ಮೆಳೆ, ಪೊದರು (ನಟ್ಟ ಕೂರ್ಗಣೆಯ ಬಿಣ್ಪೊಱೆಯಿಂದೆ ಬಟಿಲ್ದಂ ಉರ್ವಿ ಪೆರ್ವಿದಿರ ಸಿಡಿಂಬಿನೊಳ್ ಪುದಿದದೊಂದು ಕುಳಾಚಳದಂತೆ ಸಿಂಧುಜಂ: **ಪಂಪಭಾ**, ೧೧. ೪೫)

ಸಿಡಿಲ್ – [ಕ್ರಿ] ಗರ್ಜಿಸು (ನಭಂ ಮುಟ್ಟೆ ಸಿಡಿಲ್ದು ಎಡೆಗಿಡುವಿನಂ ಒಟ್ಟಿದ ಕೈದುಗಳ ಏಲೆ ಬಿರ್ದನಂ: **ಆದಿಪು**, ೫. ೮೪); [ಕ್ರಿ] ಹಾರಿ ಹೋಗು (ಮೀಱುವವೆಂಬ ಮಾಂಡಳಿಕರ್ ಈಯದರೆಂಬ ಅದಟರ್ ವಯಲ್ಗೆ ಮೆಯ್ದೋಱುವವೆಂಬ ಪೂಣಿಗರ್ ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ಪಾಱೆ ನಭಕ್ಕೆ ಪಾಜೆದುದು: **ಪಂಪಭಾ**, ೧. ೧೦೯); [ಕ್ರಿ] ಚಿಮ್ಮು (ಪಾಱುವ ಪಾಱುಂಬಳೆ ಕೊಳೆ ಜೇಱೆಟ್ದಂಬರಕೆ ತಲೆ ಸಿಡಿಲ್ದೊಡಂ ಆ ಕಾಯ್ಪಾಱದೆ ಹರಣಂಗೆಯ್ದುವು ಜಾಱಲ್ಲದೆ ಜೋದರ ಅಟ್ಟೆಗಳ್ ಕೆಲವಾಗಳ್: **ಪಂಪಭಾ**, ೧೦. ೯೫); [ಕ್ರಿ] ಬಿಟ್ಟು ಹೋಗು (ಇನಿತುವರಂ ಪರಾಭವಂ ಇಳೇಶನಿಂ ಇನ್ನೆನಗಾದುದು ಇಂ ಸಿಡಿಲ್ವೆನೆ: **ಪಂಪಭಾ**, ೧೩. ೪೪)

ಸಿಡಿಲ್ಸಿಡಿ – [ಕ್ರಿ] ಸಿಡಿಲು ಚಿಮ್ಮು (ಮಹಾವೈಷ್ಣವಾಸ್ತ್ರಮಂ ಗಾಂಗೇಯಂ ತೊಟ್ಟಿಸುವುದುಂ ಎರಡುಂ ಕಿಡಿಗುಟ್ಟಿ ಸಿಡಿಲ್ಸಿಡಿಯೆ ಪೋರ್ದುವಂಬರತಳದೊಳ್: **ಪಂಪಭಾ**, ೧೧. ೨೨)

ಸಿಡುಂಬು – [ನಾ] ಮೆಳೆ (ಪುದುಂಗೊಳಿಸಿದ ಬಿದಿರ ಸಿಡುಂಬನೆಡೆಗೊಳೆ ಕಡಿವ ಪೋಡುಂಗಾಱನಂತೆ: **ಪಂಪಭಾ**, ೧೨. ೧೬೭ ವ)

ಸಿತ – [ಗು] ಬಿಳುಪಾದ (ಸಿತ ದೂರ್ವಾಂಕುರ ಮಾತುಲುಂಗ ನಳಿನೀ ಭೃಂಗಾರ ಗೋರೋಚನ ಅಕ್ಷತ ದಧಿ ಆದಿ ವಿಡಂಬಮಂಗಳದೊಳ್: **ಆದಿಪು**, ೧೬. ೧೦)

ಸಿತಪಕ್ಷ – [ನಾ] ಶುಕ್ಲಪಕ್ಷ (ಸಿತಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲನಕ್ಷತ್ರದೊಳ್ ಅನ್ವಿತಮಾಗೆ ನೆಗಟ್ದುದೀ ಮತ್ಕೃತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯಂ: **ಆದಿಪು**, ೧೬. ೭೮)

ಸಿತವನರುಹ – [ನಾ] ಬೆಳ್ದಾವರೆ (ಜಿನಸವನಾಂಬುವಿನೊಳ್ ಭೋಂಕೆನೆ ಚಂದ್ರಂ ತೇಂಕಿ ಹಂಸವೃದ್ಧನಂ ಇನಿಸಂ ನೆನೆಯಿಸಿ ಕೊಳದೊಳಗಣ ಸಿತವನರುಹಲಕ್ಷ್ಮಿಯುಮಂ ಇನಿಸುಂ ತನಗೊಳಕೊಂಡಂ: **ಆದಿಪು**, ೭. ೯೯)

ಸಿದ್ಧ – [ನಾ] [ಜೈನ] ಪಂಚಪರಮೇಷ್ಠಿಗಳಲ್ಲಿ ಒಬ್ಬ, ಸಿದ್ಧಶಿಲೆಯಲ್ಲಿ ಶಾಶ್ವತವಾಗಿ ನೆಲೆಸಿದವನು (ಉದ್ಧೂತಲೇಪರ್ ಪ್ರಣುತರ್ ನಿತ್ಯರ್ ಜಗನ್ಮಂಗಳನಿಳಯರ್ ಅನಂತರ್ ತ್ರಿಲೋಕ ಚೂಡಾಮಣಿಗಳ್ ಸಿದ್ಧರ್: **ಆದಿಪು**, ೧. ೨); ಒಂದು ದೇವತಾವರ್ಗ (ವಿಯತ್ತಳದೊಳ್ ಅನೇಕ ಕಿಂಪುರುಷಕಿನ್ನರ ಖೇಚರ ಸಿದ್ಧಬೃಂದಂ ಅವ್ವಳಿಸಿರೆ: **ಪಂಪಭಾ**, ೩. ೫೩)

ಸಿದ್ಧಕೂಟ – [ನಾ] ಸಿದ್ಧಕ್ಷೇತ್ರ (ಕೈಳಾಸಪರ್ವತದ ಸಿದ್ಧಕೂಟದೊಳ್ ಪೌಷ್ಯಮಾಸದ ಪೌರ್ಣಮೀ ದಿನದಂದು ಪಲ್ಯಂಕಾಸನದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ: **ಆದಿಪು,** ೧೬. ೪೦ ವ)

ಸಿದ್ಧಪರಮೇಷ್ಠಿ – [ನಾ] [ಜೈನ] ಪಂಚಪರಮೇಷ್ಠಿಗಳಲ್ಲಿ ಒಬ್ಬ (ವಿದ್ಯೆಗಳಂ ಸಾಧಿಸಿ ಸಿದ್ಧಪರ'ಮೇಷ್ಠಿಗಳಷ್ಟಗುಣಂಗಳಂ ನೆನೆಯುತ್ತಂ: **ಆದಿಪು,** ೧೦. ೧೪ ವ)

ಸಿದ್ಧರಸ – [ನಾ] ಕೀಳು ಲೋಹಗಳನ್ನು ಚಿನ್ನವಾಗಿಸಲು ರಸವಾದಿಗಳು ಮಾಡುತ್ತಿದ್ದರೆಂದು ಹೇಳಲಾದ ರಸ (ಮುನ್ನಾದ ಶೋಕರಸಮೆಲ್ಲಂ ಪೋಗಿ ನಿರ್ವೇಗರಸಂ ಪುಟ್ಟಿ ಸಿದ್ಧರಸಂ ಮುಟ್ಟಿದ ಲೋಹದಂತೆ ಶುದ್ಧಾಂತರಂಗನಾಗಿ: **ಆದಿಪು**, ೩. ೫೬ ವ)

ಸಿದ್ಧಶೇಷೆ – [ನಾ] [ಜೈನ] ನಿರ್ಮಾಲ್ಯ ಮುಂತಾದ ಪೂಜಿಸಿದ ವಸ್ತುಗಳು (ಮಾರಮಥನನಂ ಸ್ತುತಿಯಿಸಿ ತತ್ಪ್ರಕಟ ಫಲಪ್ರಾಪ್ತಿಗೆ ಸಂಚಕರಂಗೊಳ್ವಂತೆ ಸಿದ್ಧಶೇಷೆಯನಾಗಳ್ ಕೊಂಡು: **ಆದಿಪು**, ೪. ೨)

ಸಿದ್ಧಾಧಿಷ್ಠಾನಪೀಠ – [ನಾ] [ಸಿದ್ಧ+ಅಧಿಷ್ಠಾನಪೀಠ] ಸಿದ್ಧರು ಮಾತ್ರ ಏರಲು ಸಾಧ್ಯವಾಗುವ ಪೀಠ (ಅಭಿಷೇಕವಿಧಿಯಂ ನಿರ್ವರ್ತಿಸಿ ವಿಶದಯಶಸ್ಸಿದ್ಧಾಧಿಷ್ಠಾನಪೀಠಮೆನಿಪ ಮಜ್ಜನಪೀಠಮಂ ಅಧಿಷ್ಠಿಸಿದಾಗಳ್: **ಆದಿಪು**, ೮. ೬೯ ವ)

ಸಿದ್ಧಾರ್ಥ – [ನಾ] ಅಕ್ಷತೆ (ಸಿದ್ಧಾರ್ಥ ದೂರ್ವಾಂಕುರ ಮಾತುಳುಂಗ ಶೃಂಗಾರದರ್ಪಣ ಪೂರ್ಣಕಳಶ ಕಳಮಾವೃತ ಕರಪಲ್ಲವೆಯರಪ್ಪ ಪುರಂಧ್ರಿಯರುಮಂ ಬದ್ದವಣದ ಪಱೆಗಳುಂ ಬೆರಸಿದಿರ್ವಂದು: **ಪಂಪಭಾ**, ೩. ೨ ವ)

ಸಿದ್ಧಾರ್ಥವೃಕ್ಷ – [ನಾ] ಕಲ್ಪವೃಕ್ಷ (ಸಿದ್ಧಾರ್ಥವೃಕ್ಷ ಪರಿಭ್ರಾಜಿತಮಪ್ಪ ಮಧ್ಯಪ್ರದೇಶಮಂ ಏಕಯೋಜನವಿಷ್ಕಂಭಮುಮಾಗಿ: **ಆದಿಪು,** ೧೦. ೩೩ ವ)

ಸಿದ್ಧಿತ್ರಯ – [ನಾ] ಮಂತ್ರಸಿದ್ಧಿ, ಪ್ರಭುಸಿದ್ಧಿ, ಉತ್ಸಾಹಸಿದ್ಧಿ ಎಂಬ ರಾಜನ ಮೂರು ಸಿದ್ಧಿಗಳು (ಅದಲ್ಲದೆಯುಂ ಸಿದ್ಧಿತ್ರಯಂಗಳ್ ನಿನಗೆ ಆತ್ಮೀಯಾಯತ್ತಸಿದ್ಧಿಯಾಗಿ ನಿಂದುದಜೆಂ ನೀನೆ ಬೀರವಟ್ಟಮಂ ತಾಳ್ದಿ ನಿಲ್ವುದು: **ಪಂಪಭಾ**, ೧೩. ೩೧ ವ)

ಸಿಪ್ಪಡಿಸು – [ಕ್ರಿ] ಚಿಪ್ಪನ್ನು ಅಳವಡಿಸು (ಒಡನೆ ದಿಗಂತದಂತಿಗಳ ಕೋಡ ಮೊದಲ್ಗಳೊಳೆಯ್ದೆ ಪೊಕ್ಕು ಸಿಪ್ಪಡಿಸಿದ ಮಾಟಿಕ್ಕೆಯಾದುವು: **ಪಂಪಭಾ**, ೬. ೩೬)

ಸಿಪ್ಪು – [ನಾ] ಭರಣಿ (ಪೊನ್ನ ಬೆಳ್ಳಿಯ ಪದ್ಮರಾಗದ ಪಚ್ಚೆಯ ಗಿಳಿಯ ಕೋಗಿಲೆಯ ಕೊಂಚೆಯ ಅಂಚೆಯ ಕುಂತಳಿಕೆಯ ಮಾಟಿಕ್ಕೆಯ ಸಿಪ್ಪುಗಳೊಳ್ ತೀವಿ: **ಪಂಪಭಾ**, ೪. ೮೭ ವ); [ನಾ] [ದಂತದ] ಚಿಪ್ಪು (ಭಾರ್ಗವರ್ ಸುರಿಗಿಜೆವಂತಿಜೆಯೆ ಸೂಸುವ ಕೆನ್ನೆತ್ತರ್ ಕಟಿಲ್ದುದಿರ್ವ ಸಕ್ಕದ ಸಿಪ್ಪುಗಳುಂ .. .. ಅಗುರ್ವಂ ಪಡೆಯೆ: **ಪಂಪಭಾ,** ೧೦. ೯೩ ವ)

ಸಿಬಿರ – [ನಾ] [ಶಿಬಿರ] ಬಿಡಾರ (ಗೆಲ್ಲದ ಸೋಲದ ಮಾತು ನಿನ್ನೊಳಂ ನರನೊಳಂ ಇರ್ದುದು ಉಯ್ಗೆ ಸಿಸುಗಳ್ ಸಿಬಿರಕ್ಕೆ ಬಟಿಲ್ದ ಭೂಪನಂ: **ಪಂಪಭಾ**, ೧೨. ೧೧೮)

ಸಿರಿ – [ನಾ] ಚೆಲುವು (ಜಲಜಲನೆ ಒಟ್ಟುತಿರ್ಪ ಪರಿಕಾಲ್ ಪರಿಕಾಲೊಳ್ ಅಳುರ್ಕೆಗೊಂಡ ನೈದಿಲ ಪೂ .. .. ಸಿರಿ

ನೋಡುಗುಮಾ ವನಾಂತರಾಳದೊಳ್: **ಪಂಪಭಾ,** ೧. ೫೨); [ನಾ] ಅಭ್ಯುದಯ (ಆಕೆಯ ನಡುವಿನ ಬಡತನಮುಂ ಪಗೆವರ ಸಿರಿಯುಂ ಒಡನೊಡನೆ ಕೆಟ್ಟುವು: **ಪಂಪಭಾ,** ೧. ೧೪೧ ವ); [ನಾ] ಲಕ್ಷ್ಮಿ (ಸಿರಿ ಸಾರ್ತರೆ ಸಾರ್ವುದು ಅದರ್ಕೆ ಸಂದೆಯಂಬಡದೆ ಜಲಕ್ಕನೆ ಈಗಳ್ ಅಜೆದೆಂ ಸಿರಿ ಕಳ್ಗೊಡವುಟ್ಟಿತೆಂಬುದಂ: **ಪಂಪಭಾ,** ೨. ೪೯)

ಸಿರಿಕಂಡ – [ನಾ] ಶ್ರೀಗಂಧ (ಮಳಯಾನಿಳನೆಂದು ಸಿರಿಕಂಡಮಂ ಪದೆದು ತೀಡುವ ಗಾಳಿಯುಮಿಲ್ಲಿ ಪುಟ್ಟಿ ಪೋಗದು: **ಪಂಪಭಾ,** ೪. ೨೧)

ಸಿರಿಖಂಡ – [ನಾ] [ಶ್ರೀಖಂಡ] ಶ್ರೀಗಂಧ (ಕೊರಳೊಳ್ ಕಟ್ಟಿದ ಮಾಲೆಯ ಸಿರಿಖಂಡದ ತಳ್ಕುವೆರಸು .. .. ಕುಳ್ಳಿರ್ದು ಸರುಗನುಣೆ ಕಂಡುದಜೆಂ: **ಆದಿಪು,** ೧೫. ೪೨)

ಸಿರಿಗನ್ನಡಿ – [ನಾ] ಶ್ರೇಷ್ಠವಾದ ಕನ್ನಡಿ (ಉನ್ನುನ್ನಂ ಸೊಗಯಿಸುತಿರೆ ಸಿರಿಗನ್ನಡಿ ಕನ್ನಡಿಪುದಾದುದಿಂದು ಶ್ರೀಯಂ: **ಆದಿಪು,** ೭. ೧೦)

ಸಿರಿಮೆಯ್ – [ನಾ] ಶ್ರೀಮಂತಿಕೆ (ಸಿರಿಮೆಯ್ಯೊಳಗೆ ಅಂದು ಅಜೆವಿರೆ ನೆರವಿಯೊಳಾಜೆವರ್ ಒರ್ಮೆ ಕಂಡರಂ ಅಜೆಯಲ್ಕರಿದೆಮ್ಮಂ ಬಡಪಾರ್ವರನರಸರೆ ನೀಮೀಗಳ್ ಅಜೆವಿರಜೆಯಿರೋ ಪೇಟೆಂ: **ಪಂಪಭಾ,** ೨. ೬೩)

ಸಿರಿಯುದ್ದಾನಿ – [ನಾ] ಐಶ್ವರ್ಯದ ಅತಿಶಯತೆ (ಏನಂ ಪೇಟ್ವುದೊ ಸಿರಿಯುದ್ದಾನಿಯಂ ಎಣ್ಣೆಯೊಳ್ ತೀವಿ ದೀರ್ಘಿಕೆಗಳಂ ಅಂತಾ ನೃಪತಿ ನಿಚ್ಚಲ್ ಅಯ್ನೂಜ್ ಆನೆಯಂ ಅವಗಾಹಮಿರಿಸುವಂ ಬೋದನದೊಳ್: **ಪಂಪಭಾ,** ೧. ೧೭)

ಸಿರಿಯೋಲಗ – [ನಾ] ವೈಭವಯುತ ಆಸ್ಥಾನ (ರಮ್ಯಹರ್ಮ್ಯಾಗ್ರದೊಳೆ ಸಿರಿಯೋಲಗಂಗೊಟ್ಟು ವಿನೋದಂಗಳೊಳ್ ವಿಕ್ರಮಾರ್ಜುನಂ ಬೆರಸು: **ಪಂಪಭಾ,** ೪. ೫೨ ವ)

ಸಿರಿಸ – [ನಾ] ಶಿರೀಷಪುಷ್ಪ, ಬಾಗೇ ಹೂ (ಸಿರಿಸದಾಮ ಕೋಮಲೆಯರ ಭುಜಲತೆಗಳೊಳ್ ಪಸರಿಸಿಯುಂ ಘನಸ್ತನಂಗಳೊಳ್ ಎಡಪಿಯುಂ: **ಆದಿಪು,** ೭. ೧೨೬ ವ)

ಸಿಲೆ – [ನಾ] [ಶಿಲಾ] ಕಲ್ಲು, ಬಂಡೆ (ಸಿಲೆಯ ಮೇಲಾದೊಡಂ ಶಕುನಮಂ ನಿಜೆಪಂತೆ ನಿಜೆಸುವೆಂ ಪಂದಿಯಂ ನೀಂ ಮೆಚ್ಚಲುಂ: **ಪಂಪಭಾ,** ೫. ೪೬)

ಸಿಲ್ಕು – [ಕ್ರಿ] ಸಿಕ್ಕಿಹಾಕಿಕೊ ಹಾಗೂ ಸಿಕ್ಕುಗಳು (ನೀರಜವನಂಗಳ ಚೆಲ್ವುಗೆಳೆಂಬುವಾ ಲತಾಂಗಿಯ ಕಡೆಗಣ್ಣ ಬೆಳ್ಪುಗಳ ಸಿಲ್ಕಿದ ಸಿಲ್ಕಿನ ಸಿಲ್ಕಿವಲ್ಲವೇ: **ಪಂಪಭಾ,** ೪. ೭೦)

ಸಿವಿಗೆ – [ನಾ] [ಶಿಬಿಕಾ] ಮೇನೆ (ಸಿವಿಗೆ ತಟಿದುಜುಗಲೊಡನಿಕ್ಕುವ ಕುಂಚಂ ಲೀಲೆವಡೆಯೆ ಚೆಲ್ವೆಸೆದುದು ಷಣ್ಣವತಿ ಸಹಸ್ರಾಂತಃಪುರಂ: **ಆದಿಪು,** ೧೧. ೩೯)

ಸಿವುಜು – [ಕ್ರಿ] ತೀಡು, ಉಜ್ಜು (ದಕ್ಷಿಣಕಟಮನೆ ಸಿವುಜುವ ದಕ್ಷಿಣರದನದೊಳೆ ಹಸ್ತಮಂ ಪೇಜುವ ಚೆಲ್ವು ಈಕ್ಷಣಹರಂ: **ಆದಿಪು,** ೧೨. ೫೯)

ಸಿಸು – [ಕ್ರಿ] [ಶಿಶು] ಮಕ್ಕಳು, ಹುಡುಗರು [ನಕುಲಸಹದೇವರು] (ಗೆಲ್ಲದ ಸೋಲದ ಮಾತು ನಿನ್ನೊಳಂ ನರನೊಳಂ ಇರ್ದುದು ಉಯ್ಗೆ ಸಿಸುಗಳ್ ಸಿಬಿರಕ್ಕೆ ಬಟಿಲ್ದ ಭೂಪನಂ: **ಪಂಪಭಾ,** ೧೨. ೧೧೮)

ಸೀಂಟಿ ಕಳೆ – [ಕ್ರಿ] ಒರೆಸಿ ಹಾಕು, ತೊಡೆದು ಹಾಕು (ಪೂರ್ವಾವನಿಪಾಳ ಪ್ರಶಸ್ತಿಯೊಳದೊಂದಂ ದಂಡರತ್ನದಿಂ ಸೀಂಟಿ ಕಳೆದು: **ಆದಿಪು,** ೧೩. ೭೧ ವ)

ಸೀಂತಂತೆ – ಸೀನು ಬಂದವನಂತೆ (ಕಾಮದೇವಂ ಏವಮಂ ಕೆಯ್ಕೊಂಡು ಸೀಂತಂತೆ ಮೊಗಂ ಮಾಡಿ ಪೋಗಿ: **ಪಂಪಭಾ,** ೭. ೯೪ ವ)

ಸೀಗುರಿ – [ನಾ] ಕೊಡೆ (ಬೀಸುವ ಕುಂಚಂ ಎಯ್ದೆ ಮೆಯ್ದೋಜುವ ಗಾಡಿ ಕಾಂಚನದ ದಂಡದ ಸೀಗುರಿ ನೋಟ್ಪೊಡೆ ಆರುಮಂ ಮಾಜ್ ಮನೋಜನ ಒಡ್ಡು ಎನಿಸಿದರ್: **ಪಂಪಭಾ,** ೯. ೧೦೦); [ನಾ] ಚಾಮರ (ಕೊಡೆ ತಟ್ ತಳ್ತ ಸೀಗುರಿ ಕರೀಂದ್ರಘಟಾಳಿ ತುರಂಗಸೈನ್ಯಂ ಉರ್ಕುಡುಗದೆ ಬರ್ಪ ನಾಯಕಬಲಂ: **ಆದಿಪು,** ೪. ೯೨)

ಸೀತು – [ನಾ] ಸಿಹಿ ಮದ್ಯ (ಮಧು ಸೀತುಂ ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ತುಬರ್ಪುದು: **ಪಂಪಭಾ,** ೪. ೮೮) [ಡಿಎಲ್ಎನ್ 'ಸೀತುಂ ಕಟು ಸೀಧು' ಬದಲಾಗಿ 'ಸೀಧು ಕಟುಸೀಧು' ಎಂಬ ಪಾಠವನ್ನು ಅಂಗೀಕರಿಸುತ್ತಾರೆ.

ಸೀತೆ – [ನಾ] ಸೀತಾದೇವಿ ಮತ್ತು [ಉತ್ತ] ಭೂಮಿ (ಸೀತೆಯ ದೂಸಜಿಂದಟಿದ ರಾಣನಂತಿರೆ ನೀನುಂ ಈಗಳೀ ಸೀತೆಯ ದೂಸಜಿಂದಟಿಯಲಾಟಿಸಿದ್ದೈ: **ಪಂಪಭಾ,** ೯. ೪೯)

ಸೀತ್ಕೃತ – [ನಾ] ಸೀತ್ಕಾರ, ಸಂತೋಷದ ಉದ್ಗಾರ (ಚೂಷಿತಮನೌಪರಿಷ್ಟ ಕರತಳಂಗಳ ಭೇದದೊಳೊಂದಿದ ಆಮ್ರಚೂಷಿತಕಮಂ ಆಮ್ರಪಕ್ವಫಳದೊಳ್ ಶುಕಕಾಮಿನಿ ಚೆಲ್ವುದೋಜಿದಳ್: **ಆದಿಪು,** ೧೧. ೯೯)

ಸೀದತ್ – [ಗು] ಬೇಯುವ, ಸೀಯುವ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ)

ಸೀಧು – [ನಾ] ಒಂದು ಮದ್ಯ ಪ್ರಭೇದ (ಮಧು ಸೀಧು ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ತುಬರ್ಪುದು: **ಪಂಪಭಾ,** ೪. ೮೮)

ಸೀನ್ – [ನಾ] ಸೀನು, ಮೂಗಿನಿಂದ ಸಶಬ್ದವಾಗಿ ಉಸಿರು ಬಿಡು (ಪುಟ್ಟಿದಾಗಳೆ ಮಾತಾಪಿತೃಯುಗಂಗಳ್ ಸೀಂತುಂ ಆಗುಳಿಸಿಯುಂ ಪರಾಸುಗಳಾಗೆ: **ಆದಿಪು,** ೫. ೪೧ ವ)

ಸೀಮಂಕರ – [ನಾ] ಸೀಮಾ ವಿವಾದವನ್ನು ಬಗೆಹರಿಸಿದವನು, ಸೀಮೆಯನ್ನು ಗುರುತಿಸಿದವನು (ಸೀಮಾವಿವಾದದಿಂ ತದ್ಭೂಮಿಜರೋರೊರ್ವರಂ ಪಳಂಚಲೆವೆಡೆಯೊಳ್ ಸೀಮೆಗಳ ತೊಡರನುಡುಗಿಸಿ ಸೀಮಂಕರನೆಂಬುದೊಂದು ಪೆಸರಂ ಪಡೆದಂ: **ಆದಿಪು,** ೬. ೫೭)

ಸೀಮಂತ – [ನಾ] ಬೈತಲೆ (ಸಿಂದೂರಪಾಂಸೂತ್ಕರದಿಂ ಸೀಮಂತ ಸಿಂದೂರದ ವಿರಚನೆಯಂ ಕೂಡೆ ಮಾಡುತ್ತುಮಿರ್ದಂ ಭರತೇಶಂ: **ಆದಿಪು,** ೧೧. ೧೫೫)

ಸೀಮಂತಿನಿ – [ನಾ] ಮುತ್ತೈದೆ (ಕೆಯ್ಗೆಯ್ದು ಸಾಮಂತ ಸೀಮಂತಿನಿಯರ್ ಮುಂದಾಡೆ: **ಪಂಪಭಾ,** ೧೪. ೧೮)

ಸೀಮಾ – [ನಾ] ಮೇರೆ, ಎಲ್ಲೆ (ಆ ಮಳಯಾಚಳಹಿಮಗಿರಿ ಸೀಮಾವನಿತಳಕೆ ಬೆಂಗಿಮಂಡಳದೊಳ್ ಚೆಲ್ವಾವಗಮೆ ತನಗೆ: **ಪಂಪಭಾ,** ೧೪. ೪೦)

ಸೀಮಾವಿವಾದ – [ನಾ] ಗಡಿಕಲಹ (ಸೀಮಾವಿವಾದದಿಂ ತದ್ಭೂಮಿಜರೋರೊರ್ವರಂ ಪಳಂಚಲೆವೆಡೆಯೊಳ್

ಸೀಮೆಗಳ ತೊಡರಿಸಿ ಸೀಮಂಕರನೆಂಬೊಂದು ಪೆಸರಂ ಪಡೆದಂ: **ಆದಿಪು,** ೬. ೫೭)

ಸೀಯನಪ್ಪ – [ಗು] ಸಿಹಿಯಾದ (ಮನದೊಳ್ ಅಲಂಪನಾಳ್ದು ಇನಿಯನಟ್ಟಿದ ದೂದರ ಸೀಯನಪ್ಪ ಮಾತಿನ ರಸದೊಳ್: **ಪಂಪಭಾ,** ೪. ೧೦೨)

ಸೀರಪಾಣಿ – [ನಾ] ನೇಗಿಲು ಹಿಡಿದವನು, ಬಲರಾಮ (ಸಾರವಸ್ತುಗಳಿಂ ನೆಱೆದ ಅಂಭೋರಾಶಿಯೆ ಕಾದಿಗೆ ಕಾವನುಂ ಸೀರಪಾಣಿ ವಿಳಾಸದಿನಾಳ್ದಂ ಚಕ್ರಧರಂ: **ಪಂಪಭಾ,** ೪. ೩೨)

ಸೀರು – **[ನಾ]** ಚಿಕ್ಕ ಹೇನು (ವನಖಗ ವನಮೃಗ ವನತರು ವನಚರ ವನವನಜನಿವಹಮುಳ್ಳನಿತುಂ ಸೀರನಿತುಂ ಅಣಂ ಉಟೆದುದಿಲ್ಲ: **ಪಂಪಭಾ,** ೫. ೯೭)

ಸೀರೆ – **[ನಾ]** [ಚೀರ] ವಸ್ತ್ರ (ತಲೆಯೊಳ್ ಸೀರೆಯನಿಕ್ಕಿ ಕೆಮ್ಮನೆನಿತಂ ಪೂಣ್ದಿರ್ಪಂ: **ಪಂಪಭಾ,** ೩. ೩೩)

ಸೀರ್ಕರಡಿ – **[ನಾ]** [ಸೀಱು+ಕರಡಿ] ಜಗಳಗಂಟ ಕರಡಿ (ಪೋದ ಮಾರಿಯನ್ನಳೆ ಮನೆದೊಟ್ಟು ಸೀರ್ಕರಡಿಯನ್ನಳೆ ನಾದುನಿ: **ಪಂಪಭಾ,** ೪. ೯೮)

ಸೀಱುಂಬುಳಾಡು – **[ಕ್ರಿ]** ಚೆಲ್ಲಾಪಿಲ್ಲಿಯಾಗಿ ಎಸೆ (ಜಟಾಸುರನೆಂಬ ಅಸುರನಂ ಆ ಗಿರೀಂದ್ರಕಂದರದೊಳ್ ಸೀಳ್ದು ಸೀಱುಂಬುಳಾಡಿ: **ಪಂಪಭಾ,** ೮. ೩೧ ವ)

ಸೀಱುಡು – **[ನಾ]** ಜೀರುಂಡೆ (ನಿಜಾಂಸಯುಗದೊಳ್ ಪೊತ್ತು ತಳ್ತೂಳ್ವ ಸೀಱುಡುವಿಂದದ್ಭುತದಾ ಹಿಡಿಂಬವನಮಂ ಪೊಕ್ಕಂ ಮರುನ್ನಂದನಂ : **ಪಂಪಭಾ,** ೩. ೯)

ಸುಂಟಗೆ – [ನಾ] ಸುಟ್ಟ ಮಾಂಸ (ಮೆಯ್ಮೆಯ್ಯೊಳ್ ಜಿಗಿಲ್ತು ಆಂತ ನಾಯಕರಂ ಸುಂಟಗೆಯಾಜೆದಂತೆ ರಥದೊಳ್ ಜೋಲ್ವನ್ನೆಗಂ ಕೋದು: **ಪಂಪಭಾ,** ೧೨. ೨೪)

ಸುಕ – [ನಾ] ಸುಖ, ಸೊಗ (ಸುಕಮಿರ್ಪನ್ನೆಗಂ ಇತ್ತ ಕುಂತಿ ಶತಶೃಂಗಾದ್ರೀಂದ್ರದೊಳ್ ದಿವ್ಯಬಾಲಕನಿನ್ನೊರ್ವನಂ: **ಪಂಪಭಾ,** ೧. ೧೩೪)

ಸುಕುಮಾರೆ – **[ನಾ]** ಕೋಮಲೆ (ಎನೆ ಮತ್ತೊರ್ವಳ್ ಮಾಳತೀನವಮಾಳಿಕಾ ಕುಸುಮಸುಕುಮಾರೆ: **ಆದಿಪು,** ೧೧. ೧೧೦ ವ)

ಸುಖನಿದ್ರೆಯಾಗು – [ಕ್ರಿ] ಸುಖವಾಗಿ ನಿದ್ರಿಸು (ಇತ್ತ ಕೊಂತಿಯುಂ ಅಂದಿನ ಬೆಳಗಪ್ಪ ಜಾವದೊಳ್ ಸುಖನಿದ್ರೆಯಾಗಿ: **ಪಂಪಭಾ,** ೧. ೧೩೯ ವ)

ಸುಖಾವಾಸ – **[ನಾ]** [ಸುಖ+ಆವಾಸ] ಸೌಲಭ್ಯಯುಕ್ತ ವಸತಿ (ಆದೇಂ ಸುಖಾವಾಸನಿಮಿತ್ತವಾಯ್ತೊ ವನವಾಸನಿವಾಸಮೆ ಪಾಂಡುಪುತ್ರರಾ: **ಪಂಪಭಾ,** ೭. ೨೯); **[ನಾ]** ಸಂತೋಷದ ನೆಲೆ (ಆಸತ್ತು ತಿರಿದ ಅರಣ್ಯಾವಾಸದ ಪರಿಭವದ ಕುದಿಪಮಂ ನೀಗಿ ಸುಖಾವಾಸಮಂ ಎಯ್ದಿಸಿದುದು ದುಶ್ಶಾಸನನಿರ್ದಿರವು ಮನದೊಳಾ ದ್ರೌಪದಿಯಾ: **ಪಂಪಭಾ,** ೧೨. ೧೫೨)

ಸುಖಸಾದ್ಭೂತ – [ನಾ] ಸುಖಸ್ವರೂಪ (ಗುಣಮೆಂಟುಂ ಬಂದು ತನ್ನೊಳ್ ಪೆಣೆದಿರೆ ಸುಖಸಾದ್ಭೂತನುಂ ಲೋಕಚೂಡಾಮಣಿಯುಂ .. .. ತಾನಾಗಿ: **ಆದಿಪು,** ೧೬. ೫೦) [ನರಸಿಂಹಶಾಸ್ತ್ರಿಗಳ ಆವೃತ್ತಿ]

ಸುಖೋದಯ – **[ನಾ]** [ಜೈನ] ಒಂದು ಗರ್ಭಾನ್ವಯಕ್ರಿಯೆ, ದೇವತೆಗಳಿಂದ ಸುತ್ತುವರಿಯಲ್ಪಟ್ಟು ದಿವ್ಯಸುಖವನ್ನು ಅನುಭವಿಸುವುದು (ಸುಖೋದಯ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಸುಗಿ – [ಕ್ರಿ] ಹೆದರು (ಮಂದ್ಯೈಸಿದ ಕಟ್ಟಿಲೆಗೆ ಅಗಿದು ಸುಗಿವ ಪೆರ್ಬಡೆಯಂ ಕಂಡು ಇದು ನಡೆಯದೆ ಸೆಡೆದೇಕಿರ್ದುದೆಂದು ಬೆಸಸಿದೊಡೆ: **ಆದಿಪು,** ೧೩. ೪೭); **[ಕ್ರಿ]** ಮುರುಟು (ಜೀಯ ಪಸಾದಮೆಂಬುದುಂ ನೋಡಿದ ದೃಷ್ಟಿಗಳ್ಕಿ ಸುಗಿದಿರ್ಪುದುಂ ಆದಮೆ ಮಾನಭಂಗಮಂ ಮಾಡೆ: **ಪಂಪಭಾ,** ೬. ೧೬)

ಸುಗ್ಗಿ – [ನಾ] ಸಂತಕಾಲ (ಎಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಲ್ದು ತುಂಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೋಪ್ಪುವಂತೆವೋಲ್; **ಪಂಪಭಾ,** ೧. ೮)

ಸುಜನತೆ – [ನಾ] ಸೌಜನ್ಯ, ಒಳ್ಳೆಯತನ (ಗುರುಜನಮಂ ನೆಱೆ ಮನ್ನಿಸಿದುದು ಪಿರಿಯ ಸಿರಿಯೊಳೇಂ ಸುಜನತೆಯೋ: **ಪಂಪಭಾ,** ೯. ೩೬)

ಸುಟ್ಟಿ ತೋಱು – [ಕ್ರಿ] ಬೆರಳಿನಿಂದ ತೋರಿಸು (ಬಲದ ನಡುವಿರ್ದ ನಾರಾಯಣಂ ಬಲದೇವಂಗೆ ಸುಟ್ಟಿ ತೋಜೆ ಭೀಮಾರ್ಜುನರ್ಕಳಿವರ್ ಅಮೋಘಮಪ್ಪರ್ ಎಂದು ಅವರ ಸಾಹಸಕ್ಕೆ ಮೆಚ್ಚಿ: **ಪಂಪಭಾ,** ೩. ೭೧ ವ)

ಸುಟ್ಟುರೆ – [ನಾ] ಸುಂಟರ ಗಾಳಿ (ಪಳಂಚಿ ಮಿಂಚುವ ಆಭರಣದ ಮಿಂಚು ಕಪ್ಪುರದ ಪಾಱುವ ಸುಟ್ಟುರೆ ಪೂವಿನುರ್ಬು ಕತ್ತುರಿಯ ತಗುಳ್ದು ಪೊಯ್ವ ಸೊವಡು: **ಆದಿಪು,** ೨. ೫); ಚಿಲುಮೆ (ಭುಗಭುಗನೆಚ್ಚು ಪಾಯ್ವ ಬಿಸುನೆತ್ತರ ಸುಟ್ಟುರೆಯಂ ನೆಲಕ್ಕೆ ಪರ್ದುಗಳ್ ಉಗಲೀಯದೆ ಅವ್ವಳಿಸಿ ಪೀರ್ವಿನಂ: **ಪಂಪಭಾ,** ೧೦. ೮೦)

ಸುಡು – [ಕ್ರಿ] ದಹಿಸು [ಬಿಡದೆ ಅಟಲ್ವ ಬಂಧುಜನದ ಒಟ್ಟುಡಿಯದ ಕಣ್ಣೀರ ಪೂರಂ ಆ ಪ್ರೇತಮಂ ಓಗಡಿಸದೆ ಸುಡುವುದು ಗಡಂ ಇನ್ನುಡುಗುವುದೀ ಶೋಕಮಂ ಸರೋಜದಳಾಯತಾಕ್ಷೀ: **ಪಂಪಭಾ,** ೨. ೨೮)

ಸುತ – **[ನಾ]** ಮಗ (ವಾಯುದೇವಂ ಬಂದು ಏಂ ಮಂತ್ರಂ ಪೇೞೆನೆ ಕುಡು ರಿಪುತಂತ್ರಕ್ಷಯಕರನಂ ಎನಗೆ ಹಿತನಂ ಸುತನಂ: **ಪಂಪಭಾ,** ೧. ೧೨೪)

ಸುತಭ್ರಾಂತೆ – **[ನಾ]** ಮಕ್ಕಳ ಭ್ರಮೆಯುಳ್ಳವಳು (ಸಂತಸದಿನಿರ್ದು ಮಕ್ಕಳಸಂತತಿಗೀ ದೊರೆಯರ್ ಇನ್ನುಮಾಗದೊಡೆ ಎಂತುಂ ಸಂತಸಮೆನಗಿಲ್ಲ ಎಂದಾ ಕಾಂತೆ ಸುತಭ್ರಾಂತೆ ಮುನ್ನಿನಂತೆವೊಲಿರ್ದಳ್: **ಪಂಪಭಾ,** ೧. ೧೨೩)

ಸುತಿ – [ನಾ] [ಶ್ರುತಿ] ಸಂಗೀತದ ಶ್ರುತಿ (ಪದಕೊರಲ್ ಇಂಪಂ ಅಪ್ಪುಕೆಯೆ ಕೊಂಕು ನಯಂ ಗಮಕಂಗಳಿಂ ಪೊಡರ್ ಕೊದಳ್ ಎಟೆದಿಕ್ಕಿದಂತೆ ಸುತಿಯೊಳ್ ಸಮವಾಗಿರೆ: **ಪಂಪಭಾ,** ೭. ೮೮)

ಸುತ್ತಿಜೆ – [ಕ್ರಿ] ಸುತ್ತಿಕೋ (ನೀಳಾಚಳಸಂಘಾತಂಗಳಿಂ ಸುತ್ತಿಜೆದವೊಲ್ ಎಸೆದತ್ತು ಆ ಸಮುದ್ರೋಪಕಂಠಂ: **ಆದಿಪು,** ೧೪. ೫೩)

ಸುತ್ತುಂಗುರುಳ್ – [ನಾ] ಗುಂಗುರು ಕೂದಲು (ನಿನ್ನನಾ ಕನ್ನೆಯ ತುಱುಗೆಮೆಗಳ್ ಸುತ್ತಲುಂ ನಿನ್ನನಾ ಕೋಮಳೆಯ

ಅಂದಂಬೆತ್ತ ಸುತ್ತುಂಗುರುಳ್ ಅಳವಡಿಸಲ್ .. .. ತೊಡರ್ಪಾದುದು: **ಆದಿಪು**, ೪. ೨೧)

ಸುತ್ತುಂಗೊಳ್ – [ಕ್ರಿ] ಆವರಿಸು (ಚೆಂಬೊನ್ನ ಮಾಂಗಾಯ ಗೊಂಚಲ್ಗಳ ಪೊಂದಳಿರ ತೊಂಗಲ್ಗಳ ಸುತ್ತುಂಗೊಂಡ ಸರಿಗೆಯ ಮುತ್ತಿನ ಬುಂಭುಕಂಗಳ ನಡುವೆ: **ಆದಿಪು**, ೮. ೧೫ ವ)

ಸುತ್ರಾಮ – **[ನಾ]** ಇಂದ್ರ (ಸುತ್ರಾಮನಂದಿಂತು ತಾಂಡವಲಾಸ್ಯಂಗಳ ಚೆಲ್ವನೊರ್ಮೆಯೆ ತದೀಯಾಸ್ಥಾನದೊಳ್ ತೋಱಿದಂ: **ಆದಿಪು**, ೭. ೧೨೬)

ಸುದತಿ – [ನಾ] ಚೆನ್ನಾದ ಹಲ್ಲುಗಳುಳ್ಳವಳು, ಸುಂದರಿ (ಬಳೆದ ನಿತಂಬದೆ ಕಾಂಚೀಕಳಾಪಮಂ ಕಟ್ಟಲಣಮೆ ನೆಱೆಯದು ಎಂದಗ್ಗಳಿಸಿ ಕುಳಿಕೆಗಳಿನೇಂ ಕಣ್ಗೊಳಿಸಿದುದೋ ಸುಭಗೆಯಾದ ಸುದತಿಯ ಗರ್ಭಂ: **ಪಂಪಭಾ**, ೧. ೧೪೩)

ಸುದರ್ಶನ – **[ನಾ]** [ಜೈನ] ಭರತ ಹದಿನಾಲ್ಕು ಅಜೀವರತ್ನಗಳಲ್ಲಿ ಒಂದಾದ ಚಕ್ರರತ್ನದ ಹೆಸರು (ಆ ಸುದರ್ಶನಮೆಂಬ ಚಕ್ರರತ್ನಮಂ ಪೂಜಿಸಿಂ ಬೞಿಯಂ: **ಆದಿಪು**, ೧೧. ೩ ವ); **[ನಾ]** ಶ್ರೀಕೃಷ್ಣನ ಚಕ್ರದ ಹೆಸರು (ಕಾವ ನಾರಾಯಣನ ಸುದರ್ಶನಮೆಂಬ ಚಕ್ರದ ಕೋಳುಮಂ ವಿಕ್ರಮಾರ್ಜುನನ ದಿವ್ಯಾಸ್ತ್ರಂಗಳ ಕೋಳುಮಂ: **ಪಂಪಭಾ**, ೫. ೯೩ ವ)

ಸುದ್ದಗೆ – **[ನಾ]** ವರ್ಣಮಾಲೆ (ಬರೆಯದೆ ಬಂದ ಸುದ್ದಗೆಯ ಸೂತ್ರಮಂ ಒಂದೆ ಮುಹೂರ್ತಮಾತ್ರದಿಂ ಬರಿಸಿದುದು: **ಪಂಪಭಾ**, ೨. ೩೪)

ಸುಧಾಂಶು – **[ನಾ]** ಚಂದ್ರ (ಸುಕವಿ ಯಶೋನಿರ್ಮತ್ಸರಂ ಅಮೃತಮಯೋಕ್ತಿ ಶರತ್ಸಮಯ ಸುಧಾಂಶು ವಿಶದಕೀರ್ತಿವಿತಾನಂ: **ಆದಿಪು**, ೧. ೩೦)

ಸುಧಾಧವಳಿತ – [ನಾ] ಸುಣ್ಣ ಬಳಿದು ಬೆಳ್ಳಗಾದ (ಶಾರದನೀರದಾಕಾರ ಸುಧಾಧವಳಿತ ಉತ್ತುಂಗ ಪ್ರಾಸಾದಕೂಟ ಕೋಟಿ ಸಂಕೀರ್ಣಮುಂ: **ಆದಿಪು**, ೧. ೭೦ ವ)

ಸುಧಾಮಹೀರುಹ – **[ನಾ]** ಕಲ್ಪವೃಕ್ಷ (ಬಗೆಯಲ್ವೇಡ ಸುಧಾಮಹೀರುಹದೊಳೌದಾರ್ಯಮಂ ವೀರ್ಯಂ ಈ ಯುಗಳದೊಳ್ ತತ್ತರುಗಿಲ್ಲ: **ಆದಿಪು**, ೬. ೭೭)

ಸುಧಾಶನ – **[ನಾ]** [ಸುಧಾ+ಅಶನ] ಅಮೃತಾನ್ನ (ನೆನೆದಹಮಿಂದ್ರಂ ತಣಿವೊಂ ಮನದೊಳ್ ಮೂವತ್ತಮೂಱುಸಾಸಿರವರ್ಷಕ್ಕೆ ಅನತಿಶಯ ಸುಧಾಶನದೊಳ್: **ಆದಿಪು**, ೬. ೪೭)

ಸುಧಾಸೂತಿ – [ನಾ] ಚಂದ್ರ (ಅದೊಂದಿನಿಸು ಬೇಗದಿಂ .. .. ಮೃದುಮೃಣಾಳಸಂಕಾಶಮಾಯ್ತು ಅದೇಂ ಬೞಿಕೆ ಬಿಂಬದುಜ್ಜಳಿಕೆಯೋ ಸುಧಾಸೂತಿಯಾ: **ಆದಿಪು**, ೧೨. ೭)

ಸುನಾಸೀರ – [ನಾ] ದೇವತೆಗಳ ಒಡೆಯ, ಇಂದ್ರ (ಪಂಚರತ್ನಚೂರ್ಣವಿರಚಿತರಂಗವಲ್ಲೀ ವಿಳಾಸವಿರಾಜಿತ ಸುನಾಸೀರಶರಾಸನದೊಳ್: **ಆದಿಪು**, ೮. ೬೭ ವ)

ಸುನಾಸೀರಶರಾಸನ – [ನಾ] ಇಂದ್ರನ ಬಿಲ್ಲು, ಕಾಮನ ಬಿಲ್ಲು (ಪಂಚರತ್ನಚೂರ್ಣವಿರಚಿತರಂಗವಲ್ಲೀ ವಿಳಾಸವಿರಾಜಿತ ಸುನಾಸೀರಶರಾಸನದೊಳ್: **ಆದಿಪು**, ೮. ೬೭ ವ)

ಸುಪಾತ್ರದಾನ – **[ನಾ]** [ಜೈನ] ಯೋಗ್ಯನಿಗೆ ನೀಡುವ ದಾನ (ಫಳಮುಂ ಸುಪಾತ್ರದಾನದ ಫಳಮೆ ದಲ್ ಉತ್ಕೃಷ್ಟಂ ಭೋಗಭೂಮಿಯೊಳಂ: **ಆದಿಪು**, ೧೦. ೧೦)

ಸುಪುಷ್ಪಪಟ್ಟ – [ನಾ] ರಾಜರೂ, ದೇವತೆಗಳೂ ಧರಿಸುವ ನಾನಾ ಬಗೆಯ ಕಿರೀಟಗಳಲ್ಲಿ ಒಂದು (ಆತ್ಮೀಯ ಸುಪುಷ್ಪಪಟ್ಟಮನೊಡಂಬಡೆ ತಾಳ್ದಿಯುಂ ಇಂತುದಾತ್ತನರಾಯಣನಾದ ದೇವನೆಮಗೀಗೆ ಅರಿಕೇಸರಿ ಸೌಖ್ಯಕೋಟಿಯಂ: **ಪಂಪಭಾ,** ೧. ೧) [ಡಿಎಲ್ಎನ್ ಅಂಗೀಕರಿಸಿರುವ ಪಾಠ ಇದು; ಟಿ.ವಿ. ವೆಂಕಟಾಚಲಶಾಸ್ತ್ರಿಗಳು 'ಸುಪುಷ್ಪದೃಷ್ಟಿ' ಎಂಬ ಪಾಠವನ್ನು ಸ್ವೀಕರಿಸುತ್ತಾರೆ)

ಸುಪ್ಪಲ್ – ಉಪ್ಪು ಹಾಕಿದ ಭಕ್ಷ್ಯ, ಚಾಕಣ (ಅರಾತಿನಾಥರಡಗಂ ಸುಪ್ಪಲ್ಗೆ ಕೆನ್ನೆತ್ತರಂ ಕೆನೆಗೊಂಡಾಱಿದ ಪಾಲ್ಗೆ ದೊಂಡೆಗರುಳಂ ಕರ್ಬಿಂಗೆ ಲೆಕ್ಕಕ್ಕೆ ತಂದು: **ಪಂಪಭಾ,** ೧೨. ೧೬೦) [ಸುಪ್ಪು ಎಂಬುದು ಪೂರ್ವದ್ರಾವಿಡದಲ್ಲಿ ಉಪ್ಪು ಎಂಬರ್ಥದ್ದು; ಆದಿ ಸಕಾರ ಲೋಪಗೊಂಡು ದಕ್ಷಿಣ ದ್ರಾವಿಡಭಾಷೆಗಳಲ್ಲಿ ಉಪ್ಪು ಎಂದಾಗುತ್ತದೆ; ಉತ್ತರ ದ್ರಾವಿಡ ಭಾಷೆಗಳಲ್ಲಿ ಸುಪ್ಪು ಎಂಬ ರೂಪ ದೊರೆಯುತ್ತದೆ – ಎಂಬ ಮಾಹಿತಿಯನ್ನು ಡಿಎಲ್ಎನ್ ಕೊಡುತ್ತಾರೆ **– ದೀಪಿಕೆ**: ಪು. ೪೯೦]

ಸುಪ್ರಣಿಧಿ – [ನಾ] [ಜೈನ] ರುಚಿಕಾಚಳದಲ್ಲಿ ವಿಹರಿಸುವ ಎಂಟು ಮಂದಿ ದಿಗಂಗನೆಯರಲ್ಲಿ ಒಬ್ಬಳು (ಕೂಟಾಷ್ಟಕಂಗಳೊಳ್ ರಮಿಯಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬೆಣ್ಬರುಂ ದಿಗಂಗನೆಯರಂ: **ಆದಿಪು**, ೭. ೩ ವ)

ಸುಪ್ರತಿಷ್ಠ – [ನಾ] [ಜೈನ] ಅರವತ್ತುಮೂರು ಇಂದ್ರಕ[ವಿಮಾನ]ಗಳಲ್ಲಿ ಒಂದು (ಚಂದ್ರ ಸುಪ್ರತಿಷ್ಠಮೆಂಬ ಕೂಟಾಷ್ಟಕಂಗಳೊಳ್ ರಮಿಯಿಸುವ .. .. ಎಣ್ಬರುಂ ದಿಗಂಗನೆಯರಂ ನಾಭಿರಾಜಾಂಗನೆಗೆ ಮಣಿದರ್ಪಣಮಂ ಪಿಡಿಯಲುಂ: **ಆದಿಪು,** ೭. ೩ ವ)

ಸುಪ್ರತಿಷ್ಠಕ – [ನಾ] [ಜೈನ] ಮೂರು ವಸ್ತ್ರಗಳಿಂದ ಸುತ್ತಲ್ಪಟ್ಟ ಮಂಗಳದ್ರವ್ಯಗಳ ಪಾತ್ರೆ (ಅದು ಅನಾದ್ಯನಿಧನಗುಣಯುತಂ ಅದು ಅಕೃತ್ರಿಮಂ ಅದು ಮರುತ್ತ್ರಿಕಾವೇಷ್ಟಿತಂ ಅಂತದು ಸುಪ್ರತಿಷ್ಠಕೋಪಮಂ ಅದು ಜಿನಮತದೊಳ್ ದ್ವಿಸಪ್ತರಜ್ಜೂತ್ಸೇಧಂ: **ಆದಿಪು**, ೧. ೪೪)

ಸುಪ್ರತಿಷ್ಠೆ – [ನಾ] [ಜೈನ] ರುಚಿಕಾಚಳದಲ್ಲಿ ವಿಹರಿಸುವ ಎಂಟು ಮಂದಿ ದಿಗಂಗನೆಯರಲ್ಲಿ ಒಬ್ಬಳು (ಕೂಟಾಷ್ಟಕಂಗಳೊಳ್ ರಮಿಯಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬೆಣ್ಬರುಂ ದಿಗಂಗನೆಯರಂ: **ಆದಿಪು**, ೭. ೩ ವ)

ಸುಪ್ರಬುದ್ಧ – **[ನಾ]** [ಜೈನ] ಅರವತ್ತುಮೂರು ಇಂದ್ರಕ[ವಿಮಾನ]ಗಳಲ್ಲಿ ಒಂದು (ಸುಪ್ರಬುದ್ಧ ರುಂದ್ರವಿಮಳ ರುಚಿ ರುಚಿಕೋತ್ತರ ಚಂದ್ರ ಸುಪ್ರತಿಷ್ಠಮೆಂಬ ಕೂಟಾಷ್ಟಕಂಗಳೊಳ್ ರಮಿಯಿಸುವ .. .. ಎಣ್ಬರುಂ

ದಿಗಂಗನೆಯರಂ ನಾಭಿರಾಜಾಂಗನೆಗೆ ಮಣಿದರ್ಪಣಮಮಂ ಪಿಡಿಯಲುಂ: **ಆದಿಪು,** ೭. ೩ ವ)

ಸುಪ್ರಬುದ್ಧೆ – [ನಾ] [ಜೈನ] ರುಚಿಕಾಚಳದಲ್ಲಿ ವಿಹರಿಸುವ ಎಂಟು ಮಂದಿ ದಿಗಂಗನೆಯರಲ್ಲಿ ಒಬ್ಬಳು (ಕೂಟಾಷ್ಟಕಂಗಳೊಳ್ ರಮಿಯಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬೆಣ್ಬರುಂ ದಿಗಂಗನೆಯರಂ: **ಆದಿಪು,** ೭. ೩ ವ)

ಸುಪ್ರೀತಿ – [ನಾ] [ಜೈನ] ಗರ್ಭಾನ್ವಯಕ್ರಿಯೆಗಳಲ್ಲಿ ಒಂದು, ಗರ್ಭಿಣಿಗೆ ಐದನೆಯ ತಿಂಗಳಲ್ಲಿ ಮಾಡುವ ಒಂದು ಸಂಸ್ಕಾರ (ಪ್ರೀತಿ ಸುಪ್ರೀತಿ ಧೃತಿ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಸುಭಗ – [ನಾ] ಸುಂದರವಾದ (ಆಗಳಾಕೆಗಳ್ ಅಲಕ್ತಾರಕ್ತ ಮಣಿನೂಪುರ ಕ್ವಣಿತ ಸುಭಗವಾಮಪಾದಪ್ರಹರಣದೊಳ್ ಅಶೋಕತರುಗಳಂ ಕುಸುಮಿಸಿಯುಂ: **ಆದಿಪು,** ೧೧. ೧೩೦ ವ)

ಸುಭಗೆ – [ನಾ] ಸೌಭಾಗ್ಯವತಿ (ಬಳೆದ ನಿತಂಬದೆ ಕಾಂಚೀಕಳಾಪಮಂ ಕಟ್ಟಲಣಮೆ ನೆಱೆಯದು ಎಂದಗ್ಗಳಿಸಿ ಕುಳಿಕೆಗಳಿನೇಂ ಕಣ್ಗೊಳಿಸಿದುದೋ ಸುಭಗೆಯಾದ ಸುದತಿಯ ಗರ್ಭಂ: **ಪಂಪಭಾ,** ೧. ೧೪೩)

ಸುಮನೋಮಾಲಿಕೆ – [ನಾ] ಸುಮನೋದಾಮ (ಸದ್ಯಸ್ತನಾಖಂಡಳವನ ಸುಮನೋಮಾಲಿಕಾಲಂಬ ಲೀಲಾರ್ಚನೆಯಂ .. .. ಸರ್ವಜ್ಞಬಿಂಬಾವಳಿಗೆ ಪರಸಿದರ್ ಮಸ್ತಕನ್ಯಸ್ತಕಸ್ತರ್: **ಆದಿಪು,** ೧೪. ೧೧೬)

ಸುಯ್ – [ಕ್ರಿ] ಉಸಿರುಬಿಡು (ಪದಿನಾಱು ತಿಂಗಳಿಂದಂ ತುದಿಯೊಳ್ ಪದಿನೈದು ದಿವಸಮಾದೊಡೆ ಸುಯ್ವಂ: **ಆದಿಪು,** ೬. ೪೩); [ಕ್ರಿ] ನಿಟ್ಟುಸಿರುಬಿಡು (ಸುದತಿಯ ಮೃದು ಪದವಿನ್ಯಾಸಮುಮಂ ಶೇಷಂ ಆನಲಾರದೆ ಸುಯ್ದಂ ಬೇಸಱಿಂ ಎಂದೊಡೆ ಗರ್ಭದ ಕೂಸಿನ ಬಳೆದಳವಿಯಳನಳೆವರುಂ ಒಳರೇ: **ಪಂಪಭಾ,** ೧. ೧೨೬); [ನಾ] ಉಸಿರಾಟ (ಪರಿಕಿಪೆನೀ ಮೃಗೋದ್ಭವದ ಕಂಪುಮಂ ಈಕೆಯ ಸುಯ್ಯ ಕಂಪುಮಂ: **ಪಂಪಭಾ,** ೮. ೬೦)

ಸುಯ್ಯತಾಣ – [ನಾ] ಕಸೂತಿ ಮಾಡಿದ ಬಟ್ಟೆ (ಬಳಿದೋರಣಮಾಯ್ತು ಹಾರದ ಪಚ್ಚೆಸಾರದ ಮಾಲೆ ಸೌಧಾಳಿಯೊಳ್ಗುಡಿಯಾಯ್ತು ಚೀನದ ಸುಯ್ಯತಾಣದ ಪಟ್ಟೆ ಹರ್ಮ್ಯಾಳಿದಪ್ಪದೆ ರಯ್ಯಮಾಯ್ತೆಸೆವ ಆಟಪಾಟದ ಗೀತಿ .. .. ತತ್ಪುರಮಧ್ಯದೊಳ್: **ಪಂಪಭಾ,** ೪. ೧೫)

ಸುಯ್ಯಾಣ – [ನಾ] ಸುಯ್ಯತಾಣ (ಕಂಬಂಗಳೊಳೆಲ್ಲಂ ಸುಯ್ಯಾಣದ ಚಿನ್ನದ ಪಟೆಯ ಸಕಳವಟ್ಟೆಗಳಂ ಸುತ್ತಿಸಿ: **ಪಂಪಭಾ,** ೩. ೪೦ ವ)

ಸುರ – [ನಾ] ದೇವತೆ (ಸುರ ದನುಜ ಭುಜಗ ವಿದ್ಯಾಧರ ನರ ಸಂಕುಲದೊಳ್ ಆರನಾದೊಡಂ ಏನೋ ಗರಮುಟ್ಟೆ ಕೊಲ್ಗುಂ ಇದು ನಿಜವಿರೋಧಿಯಂ ಧುರದೊಳ್ ಎಂದು ಶಕ್ತಿಯನಿತ್ತಂ: **ಪಂಪಭಾ,** ೧. ೧೦೩)

ಸುರಕಾಂತಾ – [ನಾ] ದೇವತಾಸ್ತ್ರೀ (ಸುರಕಾಂತಾನೃತ್ಯಮೆತ್ತಂ ಪಸರಿಸಿರೆ ನಭೋಭಾಗದೊಳ್ ದೇವತೂರ್ಯಸ್ವರಂ ಆಶಾಚಕ್ರದೊಳ್ ಬಳ್ವಳಬಳೆದಿರೆ: **ಆದಿಪು,** ೮. ೬೭)

ಸುರಕಾಮಿನಿ – [ನಾ] ದೇವತಾಸ್ತ್ರೀ (ಆ ಮಧುರಾಕಾರ ಲತಾಕೋಮಳೆ ತನಗಾಗಳ್ ಆಯುರಂತಂ ಬರೆ ಸೌದಾಮಿನಿವೊಲ್ ಭೋಂಕನೆ ಸುರಕಾಮಿನಿ ರಂಗದೊಳ್ ಅದೃಶ್ಯೆಯಪ್ಪುದುಂ: **ಆದಿಪು,** ೯. ೪೧)

ಸುರಕುಜ – [ನಾ] ದೇವತೆಗಳ ಮರ, ಕಲ್ಪವೃಕ್ಷ (ಸುರಕುಜದ ನೆಟಿಲೊಳಂಗಣದೊಳೇನುಮಲಪಿಲ್ಲದೆ ಕಟ್ಟಿರೆ ಕಾಮಧೇನು: **ಪಂಪಭಾ,** ೪. ೧೦)

ಸುರಗಿ – [ನಾ] [ಸುರಿಕಾ] ಸಣ್ಣ ಕತ್ತಿ (ತೊಟ್ಟ ಎಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱೆ ದೊರೆಯೊಳ್ ಒಡಂಬಟ್ಟ ಅಸಿಯ ಸುರಗಿ ದಳಿವದ ತೊಟ್ಟ ಅಂಗಿಗೆ ತನ್ನೊಳ್ ಅಮರೆ ಬೇಂಟೆಯನೊರ್ವಂ; **ಪಂಪಭಾ,** ೫. ೩೬)

ಸುರಗುರು – [ನಾ] ದೇವತೆಗಳ ಗುರು, ಬೃಹಸ್ಪತಿ (ಫಳದಿಂ ಕಲ್ಪದ್ರುಮಮಂ ಜಳದಿಂ ಜಳನಿಧಿಯಂ ಉಕ್ತಿಯಿಂ ಸುರಗುರುವಂ ಬೆಳಗಿಂ ದಿನಪನಂ ಅರ್ಚಿಪ ಚಳಮತಿಗಳ ತೆಱನನಾಮುಮನುಕರಿಸಿರೆವೇ: **ಆದಿಪು,** ೧೪. ೧೧)

ಸುರತ – [ನಾ] ರತಿಸುಖ (ಅಂತಾ ಬಾಲೆ ಕಾಯ್ದು ಪುಡಿಯೊಳಗೆ ಬಿಸುಟ್ಟ ಎಳವಾಳೆಯಂತೆ ಸುರತ ಮಕರಧ್ವಜನೊಳಾದ ಬೇಟದೊಳ್ ಮಮ್ಮಲ ಮಱುಗುತಿರ್ದಳ್: **ಪಂಪಭಾ,** ೫. ೧೦ ವ)

ಸುರತನಿಧಾನಿ – [ನಾ] ರತಿಸುಖಕ್ಕೆ ನಿಧಿಯಾದವಳು (ಸ್ನಾನಾರ್ಥಂ ಒಂದು ಕಳಶಮಂ ನಿಯಮನಿಧಾನಂ ಎಟಿಲೆ ಪಿಡಿದು ಅಮಳಿನ ಗಂಗಾನದಿಗೆ ವಂದು ಸುರತನಿಧಾನಿ ಅಮರೇಂದ್ರಗಣಿಕೆಯಂ ಮುನಿ ಕಂಡಂ: **ಪಂಪಭಾ,** ೨. ೪೧)

ಸುರತಭವನ – [ನಾ] ಮಲಗುವ ಮನೆ (ಮತ್ತಮೊರ್ಮೆ ಮಣಿಮಯ ಸುರತಭವನದೊಳಗೆ ನಿರ್ಭರ ಪ್ರಣಯಕಲಹ ಕಲುಷಪರವಶೆಯಾಗಿ: **ಆದಿಪು,** ೪. ೧೦)

ಸುರತಮಂದಿರ – [ನಾ] ಮಲಗುವ ಮನೆ (ಅವರ ಸುಯ್ಗಳ ಗಾಳಿಯೊಳೊಯ್ಯನಳ್ಳಾಡುವುದಾಯ್ತು ತತ್ಸುರತಮಂದಿರದ ಉಜ್ಜ್ವಳ ದೀಪಿಕಾಂಕುರಂ: **ಪಂಪಭಾ,** ೩. ೮೩)

ಸುರತಮಕರಧ್ವಜ – [ನಾ] ರತಿಸುಖಕ್ಕೆ ಮನ್ಮಥನಾಗಿರುವವನು (ಪರವನಿತೆಯರೆರ್ದೆಗೆ ಕೊಂಕಿಲ್ಲದೆಯುಂ ಸೊಗಯಿಸುವ ಸುರತಮಕರಧ್ವಜನ ಪುರ್ವುಗಳ್ ಕಾಮದೇವನ ವಿಜಯವೈಜಯಂತಿಗಾಳದುವು: **ಪಂಪಭಾ,** ೨. ೩೯ ವ) [ಇದು ಅರಿಕೇಸರಿಯ ಬಿರುದು]

ಸುರತೋತ್ಪತ್ತಿಸ್ಥಾನ – [ನಾ] ಕಾಮದ ಹುಟ್ಟಿನ ನೆಲೆ (ಮದನನ ಸಾರಸರ್ವಸ್ವಮೆನಿಸಲಿದು ಸಕಳವಿಳಾಸನಿವಾಸಮೆನಿಸಲಿದು: **ಆದಿಪು,** ೪. ೩೦ ರಗಳೆ)

ಸುರತೋತ್ಸವ – [ನಾ] ರತಿಕ್ರೀಡೆ (ರತದೊಳಗಗ್ಗಳಂ ಮುಖರತಂ ಸುರತೋತ್ಸವಕೆಂದು ಕಾಮಿನೀಪ್ರತತಿಗೆ ತೋರ್ಪವೋಲ್ ಮಧುರಸೀತ್ಕೃತನಾದದೊಳ್ ಉಣ್ಮೆ ಪೊಣ್ಮೆ: **ಆದಿಪು,** ೧೧. ೯೯)

ಸುರದಾರಕ – [ನಾ] ದೇವಬಾಲಕ (ಶ್ರೀಪತಿ ಸುರದಾರಕರೊಡನೆ ಆಪೊತ್ತುಂ ನೆರೆದು ರತ್ನಧೂಳೀಪಟಲವ್ಯಾಪಿತತನು ಮೃದುಮುಗ್ಧಾಳಾಪಂ ಬಳೆದಂ ಸರಸ್ವತೀಮಣಿಹಾರಂ: **ಆದಿಪು**, ೮. ೧)

ಸುರದುಂದುಭಿ – [ನಾ] [ಜೈನ] ಅಷ್ಟಮಹಾಪ್ರತಿಹಾರ್ಯಗಳಲ್ಲಿ ಒಂದು, ದೇವದುಂದುಭಿ (ಪ್ರಕಟಯಶೋದುಂದುಭಿ ಸಿಂಹಾಸನ ಸುರದುಂದುಭಿಪತಿಚರಣ ಕಮಲಭೃಂಗಂ ಪಂಪಂ: **ಆದಿಪು,** ೧. ೩೩); [ನಾ] ದೇವಲೋಕದ ಭೇರಿ (ಉದಯಿಸುವುದುಂ ಅಮೃತಾಂಶುವಿನ ಉದಯದೊಳ್ ಅಂಭೋಧಿವೇಲೆ ಭೋರ್ಗರೆವವೊಲ್ ಒರ್ಮೊದಲೆಸೆದುವು ಘನಪಥದೊಳ್ ತ್ರಿದಶಕರಾಹತಿಯಿನೊಡನೆ ಸುರದುಂದುಭಿಗಳ್: **ಪಂಪಭಾ,** ೧. ೧೪೬)

ಸುರಧನು – [ನಾ] ಇಂದ್ರನ ಬಿಲ್ಲು, ಕಾಮನಬಿಲ್ಲು (ನೆನೆವ ಮನಂ ಪೆಱಗುಟಿದತ್ತೆನೆ ಬೆಳಗುವ ರತ್ನದೀಪ್ತಿ ಸುರಧನು ನೆಗೆದತ್ತೆನೆ ನೆಯ್ದಿಲ್ಗೊಳನಲರ್ದತ್ತೆನೆ ಕಣ್ಗಳ ಬಳಗಂ ಆಗಳ್ ಇಂದ್ರಂ ಬಂದಂ: **ಪಂಪಭಾ,** ೧೩೮)

ಸುರನಂದನ – [ನಾ] ನಂದನೋದ್ಯಾನ (ಸುರನಂದನದಿಂ ಪೊದಳ್ದ ಬಲ್ಮುಗುಳ್ಗಳ ತಂದಲಂದು ಕವಿತಂದುದು: **ಪಂಪಭಾ,** ೧೪. ೧೯)

ಸುರನದಿ – [ನಾ] ದೇವನದಿಯಾದ ಗಂಗೆ (ಸುರನದಿಯ ನೀರೊಳ್ ಮಿಂದು ಇನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆ ಎಂದಾಹ್ವಾನಂಗೆಯ್ಯಲೊಡಂ ದಲ್ ಧರೆಗಿೞಿದನಂದು ದಶಶತಕಿರಣಂ: **ಪಂಪಭಾ,** ೧. ೯೧)

ಸುರನದೀಜ – [ನಾ] ಗಂಗೆಯ ಮಗ, ಭೀಷ್ಮ (ಕುರುಬಲಮೆಂಬುದು ಈ ಸುರನದೀಜನ ತೋಳ್ವಲಂ ಎಂಬ ವಜ್ರಪಂಜರದೊಳಗಿರ್ದು ಬಟ್ಟಿಪುದು: **ಪಂಪಭಾ,** ೧೧. ೩೭)

ಸುರನದೀನಂದನ – [ನಾ] ಭೀಷ್ಮ (ಕಾಲ ಸೊಪ್ಪುಳಂ ಆಲಿಸಿ ಸುರನದೀನಂದನಂ ಪೇೞಿಂ ಬಂದರಾರ್ ಎಂದು ಅನೇಕವ್ರಣ ವೇದನಾ ಪರವಶಶರೀರಂ ಬೆಸಗೊಳ್ವುದುಂ: **ಪಂಪಭಾ,** ೧೩. ೬೩ ವ)

ಸುರಪತಿಧನು – [ನಾ] ಕಾಮನ ಬಿಲ್ಲು (ವಿರಚಿತೋದ್ದಾಮ ಸುರಪತಿಧನುಬ್ರಾತಮಂ ಸುರುಚಿರಾಂಶೂಲ್ಲಸತ್ ರತ್ನಸಂಘಾತಮಂ: **ಆದಿಪು,** ೭. ೨೭ ರಗಳೆ)

ಸುರಭಿ – [ನಾ] ಸುವಾಸನೆ (ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿಪರಿಮಳಮಿಳಿತ ಉಲ್ಲುಳಿತ ಅಳಿ ಜಲಜಮಾಯ್ತು ಆ ಜಳಜದೊಳಗೆ ಒಗೆದಂ ಹಿರಣ್ಯಗರ್ಭಂ: **ಪಂಪಭಾ,** ೧. ೫೯); ಹಸು (ಸುರಭಿಗಳ ಮೊಲೆಗಳನುಣ್ಬ ಅವಱ ಮಱಿಗಳಂ ಪೋಗೆ ನೂಂಕಿ ಕೂಂಕಿ ಮೊಲೆಗಳನುಣ್ಬ ಕಿಶೋರಕೇಸರಿಗಳುಮಂ: **ಪಂಪಭಾ,** ೧. ೧೧೫ ವ)

ಸುರಭೂಜ – [ನಾ] ಕಲ್ಪವೃಕ್ಷ (ಸುರಭೂಜಪ್ರಸವಂಗಳಂ ಸುರಿದು ಪಾದಾಂಭೋಜದೊಳ್: **ಆದಿಪು,** ೯. ೬೧)

ಸುರಯಿ – [ನಾ] ಪುನ್ನಾಗ, ಸುರಗಿ ಗಿಡ (ಸುರಯಿಯೊಳ್ಗಿಳಿ ಮಗುಟ್ವುರಗಿಳಿ ಬಿರಯಿಗೆ ಮೊರೆವಂತೆ: **ಆದಿಪು,** ೮. ೧೦೦)

ಸುರಯೋಷಿತ್ – [ನಾ] ದೇವಸ್ತ್ರೀ (ಭೀಷಣರಮಣೀಯತೆ ಸುರಯೋಷಿತ್ ನಿಕರಕ್ಕೆ ಕಿಟ್ಟ ಬಾಳಿಂ ಭೂಷಾವೇಷದಿನಮರ್ದತ್ತೆನೆ: **ಆದಿಪು,** ೭. ೧೩)

ಸುರಶರಾಸನ – [ನಾ] ಕಾಮನ ಬಿಲ್ಲು (ಪಂಚರತ್ನಪ್ರಭಾಭಾಸುರ ವಿವಿಧಭೂಷಣವಿರಚಿತ ಸುರಶರಾಸನಂ: **ಆದಿಪು,** ೨. ೨ ವ)

ಸುರಸರಿತ್ – [ನಾ] ದೇವನದಿ (ಯುವತಿಜನಶಂಕೆಯುಂ ಮುನ್ನವಯವದೊಳೆ ಪೊಕ್ಕು ಕಳೆದು ಸುರಸರಿತ್ ಅಂಭಃಪ್ಲವದೊಳೆ ಚಕ್ರಧರಂ ದುಗ್ಧವಾರ್ಧಿಯೊಳ್ ನಿಂದ ಕನಕಗಿರಿಯನೆ ಪೋಲ್ತಂ: **ಆದಿಪು,** ೧೧. ೧೪೦)

ಸುರಸಿಂಧುನಂದನ – [ನಾ] ದೇವಗಂಗೆಯ ಮಗ, ಭೀಷ್ಮ (ಮೊನೆಯಂಬುಗಳ್ ಅಳ್ಗಿಡಿವೋಗೆಯುಂ ಮನಂಗಿಡಂ ಆಂಕೆಗೊಳ್ಳಂ ಅಗಿಯಂ ಸುಗಿಯಂ ಸುರಸಿಂಧುನಂದನಂ; **ಪಂಪಭಾ,** ೧೧. ೪೪)

ಸುರಸಿಂಧುಪ್ರಿಯಪುತ್ರ – [ನಾ] ದೇವಗಂಗೆಯ ಪ್ರೀತಿಯ ಪುತ್ರ, ಭೀಷ್ಮ (ಸುರಸಿಂಧುಪ್ರಿಯಪುತ್ರ ಕೇಳ್ ಕಳಶಜಾ ನೀಂ ಕೇಳ್ ಕೃಪಾ ಕೇಳ: **ಪಂಪಭಾ,** ೭. ೧೫)

ಸುರಾದ್ರಿ – [ನಾ] ಮಂದರ ಪರ್ವತ (ಚಕ್ರಿಗುಂಟುಮಾಡಿದುದು ಪೊಟಲ್ ಸುರಾದ್ರಿಮಥಿತ ಅಂಬುಧಿಜಾತನಿನಾದಶಂಕೆಯಂ: **ಪಂಪಭಾ,** ೯.೨೭)

ಸುರಾಧಿಪ – [ನಾ] ದೇವೇಂದ್ರ (ತನ್ನ ರತ್ನವಿಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿನಾಮಮಂ ಸರಸದಿಂ ಆಗಳುಚ್ಚರಿಸಿ ಸಾಹಸಮಂ ಪೊಗೞ್ದಂ ಸುರಾಧಿಪಂ: **ಪಂಪಭಾ,** ೫. ೧೦೩)

ಸುರಾನಕ – [ನಾ] ದೇವದುಂದುಭಿ (ಅದೊಂದೆಡೆ ಸುರಾನಕ ಪ್ರಕಟಘೋಷದಿಂ ಚೆಲ್ವುವೆತ್ತು ಅದೊಂದೆಡೆ ಸುರಾಂಗನಾ ಮಧುರಗೀತಿಯಿಂದೊಳ್ಪುವೆತ್ತು: **ಆದಿಪು,** ೭. ៥೯)

ಸುರಾಪಗಾತ್ಮಜ – [ನಾ] [ಸುರಾಪಗಾ+ಆತ್ಮಜ] ಗಂಗೆಯ ಮಗ, ಭೀಷ್ಮ (ಶಲ್ಯನಾಗಳೆ ರಣದೊಳ್ ನೆಱಲ್ದೊಡೆ ಅವನಂ ಪೆಱಗಿಕ್ಕಿ ಸುರಾಪಗಾತ್ಮಜಂ: **ಪಂಪಭಾ,** ೧೦. ೧೧೫)

ಸುರಿಗಿಱಿ – [ಕ್ರಿ] [ಸುರಿಗೆ+ಇಱಿ] ಸುರಗಿಯಿಂದ ತಿವಿ (ಕಣೆಗಳ್ಗೆ ಮೊಗಂದಿರಿಯದೆ ಇದಿರಿದಿರಂ ಅದಿರದೆ ಸುರಿಗಿಱಿವಂತೆ ಎಚ್ಚರ್ ಅಂಬಂ ಅಂಬಟ್ಟುವಿನಂ: **ಪಂಪಭಾ, ಪಂಪಭಾ,** ೧೦. ೭೪

ಸುರಿಗೆ – [ನಾ] ಕಿರುಗತ್ತಿ (ಜಾಱಿವರಿದು ಕೆಡದುರದೊಳ್ ನಟ್ಟ ಸುರಿಗೆ ಬೆನ್ನೊಳ್ಮೂಡೆ ಗತಜೀವಿತನಾಗಿ: **ಆದಿಪು,** ೨. ೧೪ ವ)

ಸುರಿಗೆಗಾಳಗ – [ನಾ] ಕಿರುಗತ್ತಿಗಳನ್ನು ಹಿಡಿದು ಮಾಡುವ ಯುದ್ಧ (ಎನ್ನ ಕಾಳಗಮಂ ಸುರಿಗೆಗಾಳಗಮಂ ನೋೞ್ಪಂತೆ ನೋೞ್ಪುದೆಂದು ಕೌರವಬಲದ ನಾಯಕರೆಲ್ಲರುಮನೊಡ್ಡಿ: **ಪಂಪಭಾ,** ೧೨. ೧೧೬ ವ)

ಸುರಿವರಲ್ – [ನಾ] ಸುರಿಯುವ ಹೂ (ಸುರಿವರಲೊಂದು ಬೆಳ್ಸರಿಯದು ಆತ್ಮತನೂಭವನುತ್ತಮಾಂಗದೊಳ್ ದೊರೆಕೊಳೆ: **ಪಂಪಭಾ,** ೫. ೧೦೩)

ಸುರುಳ್ – [ಕ್ರಿ] ಸಂಕೋಚಗೊಳ್ಳು, ಬಾಡು (ಗ್ರೀಷ್ಮದೊಳ್ ಸುರುಳ್ವಿನೆಗಂ ಅಟಿಪ್ವಿ ಬೇವವರ್ಗೆ ಜೊಂಪಮಿಮ್ಮಾವು ನಿರ್ಝರಾಂಬು ದೊರೆಕೊಳ್ವವೊಲ್: **ಆದಿಪು,** ೧೩. ೮೬);

[ಕ್ರಿ] ಸುತ್ತಿಕೊ (ಅರ್ಕಂ ಅಳುರ್ಕೆಗೆಟ್ಟು ನಭದಿಂ ತೂಳ್ದಂ ಸುರುಳ್ದು ಅಪ್ಪಿದಳ್ ಮೃಡನಂ ಗೌರಿ ಸಮಸ್ತಂ ಈ ತ್ರಿಭುವನಂ ಪಂಕೇಜಪತ್ರಾಂಬುವೋಲ್ ನಡುಗಿತ್ತು: **ಪಂಪಭಾ**, ೧೦. ೨೬); [ಕ್ರಿ] ಸುರುಟಿಕೊ (ನಡುವ ಸರಲ್ ಸರಲ್ಗೊಳೆ ಸುರುಳ್ವ ಹಯಂ ಹಯದ ಉಳ್ಗರುಳ್ಗಳೊಳ್ ತೊಡರ್ವ ಭಟರ್ ಭಟರ್ಕಳೊಳೆ .. .. ಅಡಿಗಿಡೆ: **ಪಂಪಭಾ**, ೧೦. ೧೧೪)

ಸುರೂಪವೃತ್ತಿ – [ನಾ] ಸೌಂದರ್ಯ (ಪುಷ್ಪಸಾಯಕಂಗೆ ಇಂದೊಳಸೋರ್ದುದೇಸುವೆಸನಿಂದು ಸನಾಭಿಜನಕ್ಕೆ ಒಡರ್ಚಿತಾನಂದ .. .. ಸುರೂಪವೃತ್ತಿ ದೊರೆವೆತ್ತುದು ನಾಡೆಯುಮೆಂದು ನೋಡಿದರ್: **ಚಂದ್ರಪ್ರಭು,** ೬. ೭೯)

ಸುರೇಂದ್ರಕಾಂತೆ – [ನಾ] [ಜೈನ] ದೇವೇಂದ್ರನ ಮಡದಿ, ಶಚೀದೇವಿ (ಇರ್ಬರುಮಂ ಮೂಮೆ ಸುರೇಂದ್ರಕಾಂತೆ ಬಲಗೊಂಡುದ್ಯನ್ಮನಃಪ್ರೀತಿಯಿಂ: **ಆದಿಪು**, ೭. ೪೪)

ಸುರೇಂದ್ರಚಾಪ – [ನಾ] ಇಂದ್ರಧನುಸ್ಸು, ಕಾಮನ ಬಿಲ್ಲು (ವಿಳಸತ್ ಕಿರೀಟತಟರತ್ನಾಂಶುಪ್ರಭಾರಾಶಿ ತೊಟ್ಟಗೆ ಕೆಯ್ಗಣ್ಮೆ ಸುರೇಂದ್ರಚಾಪರುಚಿಯಂ ಕೆಯ್ಕೊಂಡುದಾ ಪೂಗೊಳಂ: **ಪಂಪಭಾ**, ೧೩. ೮೧)

ಸುರೇಂದ್ರತ್ವ – [ನಾ] [ಜೈನ] ಸಪ್ತ ಪರಮಸ್ಥಾನಗಳಲ್ಲಿ ಒಂದು, ಇಂದ್ರಪದವಿ (ಸಜ್ಜಾತಿ ಸದ್ಗೃಹತ್ವ ಪಾರಿವ್ರಾಜ್ಯಪದ ಸುರೇಂದ್ರತ್ವ ಸಾಮ್ರಾಜ್ಯ ಪರಮಾರ್ಹಂತ್ಯ ಪರಿನಿರ್ವಾಣಮೆಂಬ ಏಟುಂ ಪರಮಸ್ಥಾನನಾಮ: **ಆದಿಪು,** ೧೫. ೧೬ ವ)

ಸುರೇಂದ್ರಧಾರಕ – [ನಾ] ಶ್ರೇಷ್ಠವಾದ ನೀರಿನ ಕಮಂಡಲು ಹಿಡಿದ[ವನು] (ಕಮಲೋದ್ಭವನ ಅಮಳಿನ ಹೃತ್ಕಮಲದೊಳ್ ಒಗೆದರ್ ಸುರೇಂದ್ರಧಾರಕರ್ ಆ ವಾಗಮಳರ್ ನೆಗೞ್ದಿರ್ದರ್ ಪುಲಹ ಮರೀಚಿ ಅತ್ರಿ ಅಂಗಿರಸ್ ಪುಳಸ್ತ್ಯ ಕ್ರತುಗಳ್: **ಪಂಪಭಾ**, ೧. ೬೦)

ಸುರೇಂದ್ರಸುತ – [ನಾ] ದೇವೇಂದ್ರನ ಮಗ, ಅರ್ಜುನ (ಯಮಸುತನುಂ ಸುರೇಂದ್ರಸುತನುಂ ಪೊಸೆದೀಗಳೆ ಮುಕ್ಕಿತೋಱರೇ: **ಪಂಪಭಾ**, ೪. ೭)

ಸುರೇಂದ್ರಾಚಳ – [ನಾ] ದೇವಪರ್ವತ, ಮೇರು (ಕೆಡೆದಂ ಪದ್ಮಜಂ ಆಸನಾಂಬುರುಹದಿಂದಾಗಳ್ ಸುರೇಂದ್ರಾಚಳಂ ನಡುಗಿತ್ತು: **ಪಂಪಭಾ**, ೧೦. ೨೬)

ಸುರೇಶ್ವರಶೈಲ – [ನಾ] ದೇವಶೈಲ, ಮೇರುಪರ್ವತ (ಎತ್ತಿ ಕಯ್ಯಿಂ ಸುರೇಶ್ವರಶೈಳಂ ತಳರ್ವಂತೆವೊಲ್ ತಳರ್ದಂ ಈರ್ಯಾಗೋಚರಂ ಶುದ್ಧಿ ತಳ್ತಿರೆ ತನ್ನೊಳ್: **ಆದಿಪು**, ೯. ೧೨೪)

ಸುರೇಶ್ವರಾವಸಥ – [ನಾ] [ಸುರೇಶ್ವರ+ಅವಸಥ] ಇಂದ್ರನ ವಾಸಸ್ಥಾನ, ಸ್ವರ್ಗ (ಅತ್ತ ಸುರೇಶ್ವರಾವಸಥಮಿತ್ತ ಮಹೀತಳಮುತ್ತ ಪನ್ನಗೋದಾತ್ತ ಸಮಸ್ತ ಲೋಕಂ: **ಪಂಪಭಾ**, ೧. ೭೫)

ಸುರ್ಕಟಿ – [ಕ್ರಿ] ೀರವಾಗು (ಸುರ್ಕಟಿದ ಉರುಳಿಗುರುಳ್ ನಸು ಸುರ್ಕಿದ ಕುಚಚೂಚುಕಂ ಬೆಳರ್ತಧರಂ ನೀರ್ ಪೋರ್ಕುಳಿಯೊಳ್ ಜೋಲ್ದ ಉಳ್ಪುಡೆ: **ಆದಿಪು**, ೧೧. ೧೪೯)

ಸುರ್ಕು – [ಕ್ರಿ] ಸುಕ್ಕು, ಸಂಕೋಚಗೊಳ್ಳು (ಸುರ್ಕಟಿದ ಉರುಳಿಗುರುಳ್ ನಸು ಸುರ್ಕಿದ ಕುಚಚೂಚುಕಂ ಬೆಳರ್ತಧರಂ: **ಆದಿಪು**, ೧೧. ೧೪೯); [ಕ್ರಿ] ನಿರುತ್ಸಾಹಗೊಳ್ಳು (ಸಾಯಕಂ ನಡೆ ನೊಂದೆಯ್ದೆ ಸುರುಳ್ದುರುಳ್ದ ತುರಗಂ ಸುರ್ಕಿರ್ದ ಸೂತಂ: **ಪಂಪಭಾ,** ೧೦. ೯೧); [ಕ್ರಿ] ಮುರುಟಿಕೊ (ಮಿಡುಕದೆ ಭೀಷ್ಮ ನೋಡುತಿರು ಕುಂಭಜ ಸುರ್ಕಿರು ಕಣ್ಣ ಮಿಕ್ಕು ಮಾರ್ನುಡಿಯದೆ ಮೂಗುವಟ್ಟಿರು: **ಪಂಪಭಾ**, ೭. ३३)

ಸುಲಿ – [ನಾ] ಬಿರುಕುಬಿಡು (ತಲೆಗಳ್ ಪಱಿಯೆ ಬರಿಗಳ್ ಮುಱಿಯೆ ತೊಡೆಗಳುಡಿಯೆ ಪುಣ್ಗಳ್ ಸುಲಿಯೆ: **ಪಂಪಭಾ**, ೧೧. ೫೭ ವ); [ನಾ] ಶುಭ್ರಗೊಳಿಸಲು ತಿಕ್ಕು (ವಿಕ್ರಮಾರ್ಜುನಂ ಅನಂತನುಂ ತಾನುಂ ಜಲಕ್ಕನಿರೆ ಪಲ್ಲಂ ಸುಲಿದು ಅಗಣ್ಯಪುಣ್ಯ ತೀರ್ಥೋದಕಂಗಳಂ ಮಿಂದು: **ಪಂಪಭಾ**, ೧೦. ೪೬ ವ)

ಸುಲಿಪಲ್ – [ನಾ] ಶುಭ್ರಗೊಳಿಸಿದ ಹಲ್ಲು (ಸುಲಿಪಲ್ಲ ಪೊಳಪೆಂಬ ತನ್ನ ಬಾಳ ಪೊಳಪನೆ ಮೆಱೆದು ನೆಱೆದು ಸಮೞಿದ ಮದನನೊಡ್ಡಣದಂತೆ: **ಆದಿಪು**, ४. ४೧ ವ)

ಸುವರ್ಣ – [ನಾ] ಚಿನ್ನ, ಹಣ (ಕ್ರಿಯಾಮಂತ್ರಂಗಳಿಂದಂ ಆತ್ಮಸಮಾನ ಶ್ರಾವಕಾಗ್ರಣಿಗಳ್ಗೆ ಕನ್ಯಾ ಭೂಮಿ ಸುವರ್ಣ ಹಸ್ತಿ ಅಶ್ವ ರಥ ರತ್ನಾದಿಗಳಂ ಕುಡುವ ಸಮದತ್ತಿಯುಂ: **ಆದಿಪು**, ೧೫. ೧೩ ವ); [ನಾ] ಒಳ್ಳೆಯ ಬಣ್ಣ (ಸಡಹುಡನಪ್ಪ ಕಟಿಕ್ತೆ ಕೊಡೆ ಸಂತಸದಿಂ ಪೆಱಗೇಱೆ ಬರ್ಪ ಕನ್ನಡಿವಿಡಿದಾಕೆ ಚಿನ್ನದ ಸವಂಗಂ ಅಪೂರ್ವದ ಮೊಚ್ಚೆಯಂ ಪವಣ್ಬಡೆದ ಸುವರ್ಣಪಾರಿವದ ಕುಪ್ಪಸಮೊಪ್ಪೆ: **ಪಂಪಭಾ**, ೯. ೧೦೩)

ಸುವರ್ಣಪೂರ್ಣ – [ಗು] ಚಿನ್ನ ತುಂಬಿದ (ತದ್ಗಿರಿತಟದೊಳ್ ಮುನ್ನೆ ಪೂಟ್ದ ಸುವರ್ಣಪೂರ್ಣ ಕಟಾಹಂಗಳಂಂ ತೋಱೆದಾಗಳ್ ಚೋದ್ಯಂಬಟ್ಟು: **ಆದಿಪು**, ೫. ೧೧ ವ)

ಸುಶ್ಲಿಷ್ಟ – [ಗು] ಮುಚ್ಚಿಕೊಂಡ (ಸುಶ್ಲಿಷ್ಟೋತ್ತಮ ದಶನಚ್ಛದಂ ಆನನಮುಮರ್ದುದು ಯೋಗಪ್ರಯೋಗದೊಳ್ ಮುನಿಪತಿಯಾ: **ಆದಿಪು**, ೯. ೮೭)

ಸುಷಮ – [ನಾ] [ಜೈನ] ಹರಿವರ್ಷ, ರಮ್ಯಕ್ಷೇತ್ರಗಳಿಂದ ಕೂಡಿದ ಮಧ್ಯಮಭೋಗಭೂಮಿಯ ಅವಸರ್ಪಿಣಿಯ ಒಂದು ಹಂತ, ಸಮೃದ್ಧಿಯ ಕಾಲ (ಮಧ್ಯಮಭೋಗಭೂಮಿಸ್ಥಿತಿಯೊಳ್ ಮೂಱು ಕೋಟಿಕೋಟಿ ಸಾಗರೋಪಮಪ್ರಮಾಣಂ ಸುಷಮಮೆಂಬ ಕಾಲಮುಂ: **ಆದಿಪು,** ೬. ४೮ ವ)

ಸುಷಮದುಷ್ಷಮ – [ನಾ] [ಜೈನ] ಹೈಮವತ, ಹೈರಣ್ಯವತಪ್ರದೇಶಗಳಿಂದ ಕೂಡಿದ ಜಘನ್ಯಭೋಗಭೂಮಿಯ ಅವಸರ್ಪಿಣಿಯ ಒಂದು ಹಂತ, ಕಡಿಮೆ ದುಃಖದ ಕಾಲ (ಜಘನ್ಯಭೋಗಭೂಮಿಸ್ಥಿತಿಯೊಳು ಎರಡು ಕೋಟಿಕೋಟಿ ಸಾಗರೋಪಮಪ್ರಮಾಣಂ ಸುಷಮದುಷ್ಷಮಮೆಂಬ ಕಾಲಮುಂ: **ಆದಿಪು,** ೬. ४೮ ವ)

ಸುಷಮಸುಷಮ – [ನಾ] [ಜೈನ] ದೇವಕುರು, ಉತ್ತರಕುರುಗಳಿಂದ ಕೂಡಿದ ಉತ್ತಮಭೋಗಭೂಮಿಯ ಅವಸರ್ಪಿಣಿಯ ಒಂದು ಹಂತ, ತುಂಬ ಸುಖದ ಕಾಲ (ಉತ್ತಮಭೋಗಭೂಮಿಯೊಳ್ ನಾಲ್ಕುಕೋಟಿಕೋಟಿ ಸಾಗರೋಪಮಪ್ರಮಾಣಂ ಸುಷಮಸುಷಮಮೆಂಬ ಕಾಲಮುಂ: **ಆದಿಪು**, ೬. ४೮ ವ)

ಸುಷಿರ – **[ನಾ]** ಕೊಳಲಿನಂತೆ ರಂಧ್ರವಿದ್ದು ಊದುವ ವಾದ್ಯ (ಅತಿಮೃದುರವದಾಯಿಗಳಂ ತತ ಘನ ಸುಷಿರ ಅವನದ್ಧ ವಾದ್ಯಂಗಳನೇಂ ಮತಮಜೆದು ಓಲಗಿಪುದೊ ದಂಪತಿಗೆಂದುಂ ಅವಾರ್ಯತೂರ್ಯಕ್ವಾಣಂ: **ಆದಿಪು,** ೫. ೩೫)

ಸುಷ್ಠು – **[ನಾ]** ಸಮರ್ಥ (ಸುಷ್ಠೀತಂ ಕಾವೊಡೆ ಕರ್ಣನಕ್ಕುಂ ಅದಜೆಂ ನಾಮೆಲ್ಲಮಾತಂಗೆ ನಿರ್ದೈತಂ ಬೀರದ ಬೀರವಟ್ಟಮನಿದಂ ನಿರ್ವ್ಯಾಜದಿಂ ಕಟ್ಟುವಂ: **ಪಂಪಭಾ,** ೧೦. ೫೨)

ಸುಸಿಲ್ – **[ನಾ]** ರತಿ, ಸಂಭೋಗ (ಪಸರಿಸಿ ಪೊಸಯಿಸಿದ ಪೊಸ ಸುಸಿಲ ಮಸಕದ ಬಸದೊಳೆ ಬಸದಾಗಿಯುಂ ಅಸಿಯಳೆನಗಸವಸದೊಳೆ ಬೆಸೆದು ಪೋಗಿ ಮಱಿಗೊಳೆ: **ಆದಿಪು**, ೪. ೧೨ ವ ಮತ್ತು ೧೩)

ಸುಸೂಕ್ಷ್ಮ – **[ಗು]** ಅತಿ ನವಿರಾದ (ಉತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನ ಉನ್ನತ ಪ್ರದೇಶಂಗಳಂ ಆ ಸಮಾನತಳದಲ್ಲಿಯೆ ಚಿತ್ರಕಂ ಎಯ್ದೆ ತೋರ್ಪವೋಲ್: **ಪಂಪಭಾ,** ೧೩. ೨೧)

ಸುಹೃಜ್ಜನ – **[ನಾ]** [ಸುಹೃತ್+ಜನ] ಮಿತ್ರವರ್ಗ (ಇನಿತೇಕಾದುದು ನೋವು ಇದೆಮ್ಮ ದೆಸೆಯಿಂ ಮೇಣಾದುದೋ .. .. ಮತ್ ಸುಹೃಜ್ಜನದಿಂ ಮೇಣ್ ತೊಡರ್ದತ್ತೊ: **ಆದಿಪು,** ೩. ೨೪)

ಸುಹೃದ್ಬಲ – **[ನಾ]** [ಸುಹೃತ್+ಬಲ] – ಸ್ನೇಹಿತರ ಸೈನ್ಯ (ಸಂಧಿಯಂ ಮಾಡಲೊಲ್ಲದೆ ಸುಹೃದ್ಬಲಮೆಲ್ಲಮನಿಕ್ಕಿ ಯುದ್ಧಮಂ ಮಾಡಿದ ಜಾತಿಬೆಳ್ ನಿನಗೆ ಅದೇವಿರಿದು **ಪಂಪಭಾ,** ೧೩. ೫೪)

ಸುಹೃತ್ಸಂತತಿ – **[ನಾ]** ಮಿತ್ರಸಮೂಹ (ಸುತರುಮಂ ಅವರ್ಗವರ ಅಭಿಮತಮೆಂತದನಿತ್ತು ನಿಜೆಸಿದಂ ಪ್ರಭು ನಿಜಸಂತತಿಯಂ ತಣಿಪಿ ಸುಹೃತ್ಸಂತತಿಯಂ ಪೆರ್ಚಿಪುದು ರಾಜ್ಯಫಲಮಿನಿತೆ ವಲಂ: **ಆದಿಪು**, ೮. ೭೫)

ಸುೞಿ – **[ಕ್ರಿ]** ಕಾಣಿಸಿಕೊ (ಕುರುಳ್ಗಳೊಳ್ ಸುೞಿದು ಮುಂದೊಂದಿರ್ದ ಸೌಭಾಗ್ಯಘಂಟೆಗಳೊಂದಿ ಇಂಚರದೊಳ್ ಪಳಂಚಿ ಸುೞಿದತ್ತು ಅಂದೊಂದು ಮಂದಾನಿಳಂ: **ಪಂಪಭಾ,** ೪. ೮೦); ತಿರುಗಣಿ (ಸುೞಿಯೊಳಗಿರ್ದ ಬೆಟ್ಟು ಪೊೞಪೊೞ್ಮವಿನಂ ಲವಣಾಂಬುರಾಶಿ ಕುಕ್ಕುೞಗುದಿವಲ್ಲಿ ಕೂಟ್ಟುಗದಿಯೆ ಮೇಗೆ ಸಿಡಿಲ್ದಗುಳಂತೆ ಕೂಡೆ: **ಪಂಪಭಾ,** ೧೧. ೧೫೩)

ಸುೞಿಗೊಳ್ – **[ಕ್ರಿ]** ಸುಳಿಯಂತೆ ತಿರುಗು (ಭೀತಿಯಿಂ ಮಱುಗಿ ತೆರಳ್ದು ತೂಳ್ದಿ ಸುೞಿಗೊಂಡುದು ಪಾಂಡವಸೈನ್ಯಸಾಗರಂ: **ಪಂಪಭಾ,** ೧೨. ೧೩)

ಸುೞಿಸುೞಿದು – **[ಗು]** ಸುಳಿಸುಳಿಯಾಗಿ (ಅೞಿದಟ್ಟಿದ ಕರಿಘಟೆಗಳಬಳಗದಿಂ ಉಚ್ಚಳಿಸಿ ಮೊರೆವ ನೆತ್ತರ ತೆರೆಗಳ್ ಸುೞಿಸುೞಿದು ಒಡವರಿದುವು: **ಪಂಪಭಾ,** ೧೧. ೩೬)

ಸೂಕರಿ – **[ನಾ]** ಹೆಣ್ಣು ಹಂದಿ (ಈ ಕರಿ ಸೂಕರಿಯಲ್ತೆ ಪತ್ತಿ ಗಂಟಲನೊಡೆಯೊತ್ತಿ ಕೊಂದಪೆಂ: **ಪಂಪಭಾ,** ೧೧. ೭೩)

ಸೂಕ್ಷ್ಮ – **[ಗು]** ತೆಳ್ಳಗಿನ (ಚಾರುಚಾಮರಜನಿತ ಮಂದಮಾರುತ ಆಂದೋಳಿತ ಸೂಕ್ಷ್ಮಕ್ಷೌಮಾಂಬರ ಪಲ್ಲವಂ: **ಆದಿಪು**, ೮. ೫೫ ವ)

ಸೂಕ್ಷ್ಮಕ್ರಿಯಾಪ್ರತಿಪಾತಿ – **[ನಾ]** [ಜೈನ] ಹದಿನಾಲ್ಕನೆಯ ಗುಣಸ್ಥಾನದ ಮೂರನೆಯ ಶುಕ್ಲಧ್ಯಾನ (ಯೋಗಸೂಕ್ಷ್ಮಕಾಯ ಯೋಗ ಪರಿಣತಂ ಉಪಯೋಗಪರಿಕಲ್ಪಿತ ಸೂಕ್ಷ್ಮಕ್ರಿಯಾ ಪ್ರತಿಪಾತ್ಯಭಿಧಾನ ತೃತೀಯ ಶುಕ್ಲಧ್ಯಾನ ಪರಾಯಣಂ: **ಆದಿಪು**, ೧೬. ೪೯ ವ)

ಸೂಕ್ಷ್ಮತ್ವ – **[ನಾ]** [ಜೈನ] ಸಿದ್ಧಪರಮೇಷ್ಠಿಗಳ ಅಷ್ಟಗುಣಗಳಲ್ಲಿ ಒಂದು, ಬುದ್ಧಿಯ ಚುರುಕುತನ (ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ನೆನೆಯುತ್ತುಂ: **ಆದಿಪು,** ೧೦. ೧೪ ವ)

ಸೂಕ್ಷ್ಮಬಿಂದು – **[ನಾ]** ಸಣ್ಣ ಮಚ್ಚೆ (ಮತ್ತಂ ಐರಾವಣಾನ್ವಯನುಂ ಸುರಭಿನಿಶ್ವಾಸನುಂ ಸೂಕ್ಷ್ಮಬಿಂದುರುಚಿರನುಂ: **ಪಂಪಭಾ**, ೧೪. ೨೦ ವ)

ಸೂಕ್ಷ್ಮಸಾಂಪರಾಯ – **[ನಾ]** [ಜೈನ] ಐದು ಬಗೆಯ ನಡವಳಿಕೆಗಳಲ್ಲಿ ಒಂದು, ಸೂಕ್ಷ್ಮ ಕಷಾಯನಾಶ (ಸಮ್ಯಕ್ಚಾರಿತ್ರಮೆಂಬುದು ಅದು ಸಾಮಾಯಿಕಚ್ಛೇದ ಉಪಸ್ಥಾಪನಾ ಪರಿಹಾರಶುದ್ಧಿ ಸೂಕ್ಷ್ಮಸಂಪರಾಯ ಯಥಾಖ್ಯಾತಚಾರಿತ್ರಭೇದದಿಂ ಪಂಚವಿಧಂ: **ಆದಿಪು,** ೧೦. ೬೩ ವ)

ಸೂಕ್ಷ್ಮಸಾಂಪರಾಯಕೃಷ್ಟಿ – **[ನಾ]** [ಜೈನ] ಹತ್ತನೆಯ ಗುಣಸ್ಥಾನಕ್ಕೇರಿದ ನಂತರ ಉಳಿಯುವ ಸೂಕ್ಷ್ಮಸಂಜ್ವಲನಲೋಭವೆಂಬ ಕಷಾಯವನ್ನು ನಾಶಮಾಡುವುದು (ಯಥೋಕ್ತ ಪರಿಣಾಮದಿಂ ಸೂಕ್ಷ್ಮಸಾಂಪರಾಯಕೃಷ್ಟಿಗಳಂ ಮಾಡುತ್ತುಮಂತರ್ಮುಹೂರ್ತ ಕಾಲದಿಂ ಬಾದರಲೋಭಸಂಜ್ವಲನಮಂ ಕಿಡಿಸಿ: **ಆದಿಪು,** ೧೦. ೧೪ ವ)

ಸೂಕ್ಷ್ಮಸಾಂಪರಾಯಕ್ಷಪಕ – **[ನಾ]** [ಜೈನ] ಕ್ಷಪಕಶ್ರೇಣಿಯನ್ನು ಏರಿ ಹತ್ತನೆಯ ಗುಣಸ್ಥಾನದಲ್ಲಿರುವ ಆತ್ಮ (ಶುದ್ಧಿಸಂಯಮಾನುಗತಾನುವೃತ್ತಿ ಗುಣಸ್ಥಾನನಾಗಿ ತದನಂತರಸಮಯದೊಳ್ ಸೂಕ್ಷ್ಮಸಾಂಪರಾಯ ಸಂಯಮಸಮನ್ವಿತಂ ಸೂಕ್ಷ್ಮಸಾಂಪರಾಯಕ್ಷಪಕನಾಗಿ: **ಆದಿಪು,** ೧೦. ೧೪ ವ)

ಸೂಕ್ಷ್ಮಸಾಂಪರಾಯಲೋಭ – **[ನಾ]** [ಜೈನ] ಸೂಕ್ಷ್ಮಲೋಭ (ಸೂಕ್ಷ್ಮಸಾಂಪರಾಯಕ್ಷಪಕನಾಗಿ ಯಥೋಕ್ತಪರಿಣಾಮ ಕಾಲದಿಂ ಸೂಕ್ಷ್ಮಸಾಂಪರಾಯಲೋಭಕ್ಕೆ ನಿರ್ಮೂಲ ವಿಲಯಮಂ ಮಾಡಿ: **ಆದಿಪು,** ೧೦ ೧೪ ವ)

ಸೂಕ್ಷ್ಮಾಂಗ – **[ನಾ]** ಸಣ್ಣ ಆಕಾರ (ಸೂಕ್ಷ್ಮಾಂಗನಾಗಿರ್ಪಂ ಆಗಳೆ ದಿಗ್ವ್ಯಾಪಕನಪ್ಪಂ ಇಂತು ಪಲವುಂ ಚೋದ್ಯಂಗಳಂ ವಿಕ್ರಿಯಾಬಳದಿಂದಾಡಿ: **ಆದಿಪು**, ೭. ೧೨೨)

ಸೂಚ – **[ನಾ]** ಹುಲ್ಲಿನ ಊಬು (ಸೂಚಮನುರ್ಚಿ ಪುಲ್ಲೆಗಾಟಿಸಿ ಮಲೆತರ್ಪರಲೆಯ ಸೋಲಮಂ ಅಟ್ಟಿಯೊಳ್ ಅರಿಕೇಸರಿ ನಿಂದು ನೋಟ್ಟುದೊಂದರಸಲ್ತೇ: **ಪಂಪಭಾ,** ೫. ೪೪)

ಸೂಚೀನಾಟ್ಯ – [ನಾ] ಒಂದು ಬಗೆಯ ನಾಟ್ಯ, ರಂಗಸ್ಥಳದಲ್ಲಿ ಸೂಜಿಗಳನ್ನು ಹಾಕಿ ಅದನ್ನು ಮೆಟ್ಟದ ರೀತಿಯಲ್ಲಿ ಮಾಡುವ ಕುಶಲ ನರ್ತನ (ಮತ್ತಂ ಕೆಲರ್ ನೋಡಿ ಸೂಚೀನಾಟ್ಯಂಗಳನಾಡಿದರ್ ಖರನಖಪ್ರಾಂತಂಗಳೊಳ್ ಶಕ್ರನಾ: **ಆದಿಪು**, ೭. ೧೨೪)

ಸೂಚೀನಿರ್ಭೇದ್ಯ – [ಗು] ಸೂಜಿಯನ್ನೂ ಚುಚ್ಚಲಾರದಷ್ಟು (ಮಹಾಗುಹಾಗಹ್ವರಾಂತರ ಸೂಚೀನಿರ್ಭೇದ್ಯ ತಮಸ್ತಮೋ ನಿರಸನ ಪ್ರಭಾಭೂತ ಗುಣೋಪೇತಮಪ್ಪ ಚಿಂತಾಜನನಿ ಎಂಬ ಕಾಕಿಣೀರತ್ನಮುಂ: **ಆದಿಪು**, ೧೧. ೩ ವ)

ಸೂಚೀವ್ಯೂಹ – [ನಾ] ಸೂಜಿಯ ಆಕಾರದ ಸೇನಾರಚನೆ (ಶ್ವೇತನುಂ ಆ ವ್ಯೂಹಕ್ಕೆ ಪ್ರತಿವ್ಯೂಹಮಾಗಿ ಸೂಚೀವ್ಯೂಹಮನೊಡ್ಡಿ: **ಪಂಪಭಾ**, ೧೦. ೫೨ ವ)

ಸೂಜಿ – [ನಾ] ಕೈಯಿಂದ ಹೊಲಿಯುವ ಲೋಹದ ಸಾಧನ (ಕಾಯ್ದ ಕರ್ಬೊನ್ನ ಸೂಜಿಗಳಂ ಬೆರಲ್ಗಳೊಳ್ ಬೆಟ್ಟುವರುಂ: **ಆದಿಪು**, ೫. ೮೫ ವ)

ಸೂಡು – [ಕ್ರಿ] ಧರಿಸು (ಸೂಡಿದ ಪಾರಿಜಾತದ ನಮೇರುವ ಬಾಸಿಗಮೊಯ್ಯನೊಯ್ಯನೆ ಇರ್ಪೋಡಿದುದು: **ಆದಿಪು**, ೩. ೩); [ಕ್ರಿ] ತೊಡಿಸು, ಹಾಕು (ತೋಳ್ಗಳ್ ಆಸೆಯೊಳ್ ತೊಡರ್ದಿರೆ ಪೊಣ್ಮೆ ಘರ್ಮಜಲಂ ಉಣ್ಮೆ ಭಯಂ ಕಿಡೆ ನಾಣ್ .. .. ಗುಣಾರ್ಣವನಂ ಸತಿ ಮಾಲೆ ಸೂಡಿದಳ್: **ಪಂಪಭಾ**, ೩. ೬೪); [ನಾ] ಹೊರೆ (ನಕುಳಸಹದೇವರುಮಂ ಶಲ್ಯಂ ವಿರಥರ್ಮಾಡಿ ಪಿಡಿದುಕೊಂಡು ಪುಲ್ಲ ಸೂಡನೀಡಾಡುವಂತೆ ತನ್ನಳಿಯಂದಿರಿರ್ವರುಮಂ ಈಡಾಡಿ: **ಪಂಪಭಾ**, ೧೩. ೪೧)

ಸೂಡುಶಯ್ಯೆ – [ನಾ] ಬೆಚ್ಚನೆಯ ಹಾಸಿಗೆ (ಅಗರುವ ಮೆಚ್ಚು ಅಚ್ಚ ಸಿರಿಕಂಡದೊಳ್ ಅಗ್ಗಲಿಸಿತ್ತು ಸೂಡುಶಯ್ಯೆಗಳ ಬಯಕ್ಕೆ: **ಪಂಪಭಾ**, ೫. ೩೦)

ಸೂತ – [ನಾ] ಬೆಸ್ತ (ಗಂಗೆಗೆ ಕೆಯ್ಯೆಡೆಯೆಂದುತ್ತುಂಗಸ್ತನಿ ಕೊಟ್ಟು ಪೋಗೆ ಸೂತಂ ಕಂಡಾತ್ಮಾಂಗನೆಗೆ ರಾಧೆಗಿತ್ತು: **ಪಂಪಭಾ**, ೯. ೬೫); [ನಾ] ಸಾರಥಿ (ಇಸೆ ಮಸಗಿ ಭೀಮಂ ಈರಯ್ದು ಶಿತಾಸ್ತ್ರದಿಂ ಉರುಳೆ ಸೂತಂ ಉಡಿಯೆ ರಥಂ ಕೀಲಿಸೆ ಕುದುರೆ ಮುಜಿಯೆ ಪಟವಿಗೆ ಮಸಕದಿಂ ಎಚ್ಚೆಚ್ಚಂ ಒಂದೆ ಸರಲೊಳ್ ನೊಸಲಂ: **ಪಂಪಭಾ**, ೧೦. ೯೯); [ನಾ] ಗಾಯಕ (ಸೂತ ನಟ ವಂದಿಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರ ಉದ್ಘೂತರವಂ ಎಸೆಯೆ: **ಪಂಪಭಾ**, ೧೨. ೧೦೬)

ಸೂತಕ – [ನಾ] ಮಗು ಹುಟ್ಟಿದ ಮೈಲಿಗೆ (ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿನೊಳ್ ಕೂಸನಿಟ್ಟೊಡೆ ರಾಗಿಸಿ ಸುತನ ಸೂತಕಮಂ ಕೊಂಡಾಡೆ ಅಗುಟ್ದಿರಲ್: **ಪಂಪಭಾ**, ೧. ೯೬ ವ ಮತ್ತು ೧. ೯೭)

ಸೂತಜ – [ನಾ] ಬೆಸ್ತನ ಮಗ, ಬೆಸ್ತಕುಲದಲ್ಲಿ ಹುಟ್ಟಿದವನು (ಗಂಗೆಗೆ ಕೆಯ್ಯೆಡೆಯೆಂದುತ್ತುಂಗಸ್ತನಿ ಕೊಟ್ಟು ಪೋಗೆ ಸೂತಂ ಕಂಡಾತ್ಮಾಂಗನೆಗೆ ರಾಧೆಗಿತ್ತು ಮನಂಗೊಳೆ ರಾಧೇಯನೆನಿಸಿ ಸೂತಜನಾದೈ: **ಪಂಪಭಾ**, ೯. ೬೫)

ಸೂತಸುತ – [ನಾ] ಸೂತನ ಮಗ, ಕರ್ಣ (ಬೀರವಟ್ಟಮಂ ಆನಿರೆ ನೀಂ ಈ ಸೂತಸುತಂಗೆ ಎಡೆಗೊಂಡು ಕೈವಾರದಿಂದ ಒಸೆದು ಇತ್ತೊಡಂ ಏನಾಯ್ತು: **ಪಂಪಭಾ**, ೧೨. ೪೩)

ಸೂತ್ರಂ – [ನಾ] ಜನಿವಾರವುಳ್ಳವನು (ದುಕೂಲಾಂಬರಮನುಟ್ಟು ಪೊಸವಾವುಗೆಯಂ ಮೆಟ್ಟಿ ಕನಕ ಸಂವ್ಯಾನ ಸೂತ್ರಂ ಆಚಮಿಸಿ: **ಪಂಪಭಾ**, ೧೨. ೧೦೮ ವ)

ಸೂತ್ರಧಾರ – [ನಾ] ಕಾರಣಪುರುಷ (ಅಂತು ಕೃತಯುಗಾರಂಭ ಸೂತ್ರಧಾರನೆನಿಸಿದ ಆದಿಬ್ರಹ್ಮಂಗೆ ರಾಜ್ಯಾಭಿಷೇಕಂ ಗೆಯ್ವ ಬಗೆಯಂ ಬಗೆದು: **ಆದಿಪು**, ೮. ೬೬ ವ); ನಾಟಕದ ನಿರ್ದೇಶಕ (ಆಗಾಮಿಕ ಸಂಗ್ರಾಮಕ್ಕೆ ಪಾತ್ರಂಗಳಂ ಸಮೆಯಿಸುವ ಸೂತ್ರಧರನಂತೆ: **ಪಂಪಭಾ**, ೨. ೫೯ ವ)

ಸೂತ್ರಧಾರವಿಧಿ – [ನಾ] ನರ್ತನ ನಿರ್ದೇಶಕನ ಮಾರ್ಗದರ್ಶನ (ಸೂತ್ರಧಾರವಿಧಿಯಿಂ ಸುತ್ರಾಮನಂದಿಂತು ತಾಂಡವಲಾಸ್ಯಂಗಳ ಚೆಲ್ವನೊರ್ಮೆಯೆ ತದೀಯಾಸ್ಥಾನದೊಳ್ ತೋಱಿದಂ: **ಆದಿಪು**, ೭. ೧೨೬)

ಸೂತ್ರಾನುಗತ – [ನಾ] ನೂಲಲ್ಲಿ ಪೋಣಿಸಿದ, ಶಾಸ್ತ್ರೀಯ ಸೂತ್ರಗಳಿಗನುಗುಣವಾದ (ಮುಕ್ತಿಸಾಮ್ರಾಜ್ಯಪದವಿಗಿದುವೆ ಯುವರಾಜಚಿಹ್ನಮೆನಿಸಿದ ಸೂತ್ರಾನುಗತಮಪ್ಪ ಸಮ್ಯಗ್ದರ್ಶನಮೆಂಬ ಕಂಠಿಕೆಯಂ ಕಂಠಿಕಾಬಂಧನಮಂ ಮಾಡಿ: **ಆದಿಪು**, ೫. ೬೩ ವ)

ಸೂತ್ರಿಸು – [ಕ್ರಿ] ಸೂತ್ರಪ್ರಾಯವಾಗಿ ಹೇಳು (ಅಂತು ಸೂತ್ರಿಸಿದ ಸೂತ್ರದ ವೃತ್ತಿ ನಿಜಾತ್ಮವೃತ್ತಿವೋಲ್ ಪರಿಣಮಿಸಿತ್ತು: **ಪಂಪಭಾ**, ೨. ೩೪)

ಸೂಯಿಯಾಣ – [ನಾ] [ಸೂಚೀಯಾನ] ಸುಯ್ಯಾಣ, ಕಸೂತಿ ಕೆಲಸ (ಓಳಿದೋರಣಮಾಯ್ತು ಹಾರದ ಪಚ್ಚೆಸಾರದ ಮಾಲೆ ಸೌಧಾಳಿಯ ಒಳ್ಗುಡಿಯಾಯ್ತು ಚೀನದ ಸೂಯಿಯಾಣದ ಬಟ್ಟೆ: **ಪಂಪಭಾ**, ೧೪. ೧೫)

ಸೂರುಳ್ – [ನಾ] ಪ್ರತಿಜ್ಞೆ (ಆ ತೊಱೆಯೊಳೆ ಪೋಯ್ತು ಸೂರುಳೆನೆ ಸೂರುಳವೇವುವೊ ನಂಬೆನೆಂಬುದುಂ: **ಪಂಪಭಾ**, ೭. ೭೫)

ಸೂರ್ಯಕಾಂತ – [ನಾ] ಬಿಸಿಲಿಗೆ ಕಿಡಿಕಾರುವ ಕಲ್ಲು, (ಖರಕಿರಣಸ್ಫುರಿತಕ್ಕಿದಿರುರಿವಂತಿರೆ ಸೂರ್ಯಕಾಂತಂ ಎನ್ನೀ ತೇಜಸ್ಸ್ಫುರಿತಕ್ಕೆ ಸೆಣಸಿನೊಳ್ ಮಾಱುರಿಗುಂ ಸೈರಿಸದು ತೇಜಮಾ ಭುಜಬಲಿಯಾ: **ಆದಿಪು**, ೧೪. ೪೨)

ಸೂರ್ಯಜ – [ನಾ] ಸೂರ್ಯನ ಮಗ, ಕರ್ಣ (ಆದಿತ್ಯಂಗೆ ಅರ್ಘ್ಯಮೆತ್ತಿ ಸೂರ್ಯಜಂ ಸೂರ್ಯಮಂತ್ರಂಗಳನೋದಿ ನೀರಂ ಸೂಸಿ ತ್ರಿಃಪ್ರದಕ್ಷಿಣಂಗೆಯ್ವಾಗಳ್: **ಪಂಪಭಾ**, ೯. ೭೨ ವ)

ಸೂರ್ಯತನಯ – [ನಾ] ಸೂರ್ಯನ ಮಗ, ಕರ್ಣ (ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷದ್ಬಲಮಂ ಸುಟ್ಟಂ ಉದಾತ್ತಪುಣ್ಯನವಂ ಚೈತಾಗ್ನಿಯಿಂ ಸುಟ್ಟೆನಿಲ್ಲ ಒಲವಿಂದ ಇಂದಿಂತು ಎರ್ದೆಮುಟ್ಟೆ ಕೂರ್ತನೊಳನೇ ಕರ್ಣಂಗೆ ದುರ್ಯೋಧನಂ: **ಪಂಪಭಾ**, ೧೩. ೬೦)

ಸೂರ್ಯದಿನ – [ನಾ] ಭಾನುವಾರ (ನೀಮುಂ ನಿಮ್ಮ ಚೊಚ್ಚಿಲ ಮಗನಪ್ಪ ಸೂರ್ಯಸೂನುವಂ ಸೂರ್ಯದಿನದಂದು ಕಂಡು ಕಾರ್ಯಸಿದ್ಧಿಯಂ ಮಾಡಿಬನ್ನಿಂ: **ಪಂಪಭಾ**, ೯. ೬೩ ವ)

ಸೂರ್ಯಪ್ರಭ – [ನಾ] [ಜೈನ] ಭರತನ ಹದಿನಾಲ್ಕು ಅಜೀವರತ್ನಗಳಲ್ಲೊಂದಾದ ಛತ್ರರತ್ನದ ಹೆಸರು (ಚಕ್ರವರ್ತಿಯ ಕಟಕಮಂ ತನ್ನ ನೆೞಲೊಳೆ ಕಾವ

ಸೂರ್ಯಪ್ರಭಮೆಂಬ ವಿಚಿತ್ರ ಮಣಿಮಯೂಖ ಚಿತ್ರಿತಚ್ಛತ್ರರತ್ನಮುಂ: **ಆದಿಪು,** ೧೧. ೩ ವ)

ಸೂರ್ಯಮಂತ್ರ – [ನಾ] ಸೂರ್ಯನನ್ನು ಸ್ತುತಿಸುವ ಮಂತ್ರ, ಗಾಯಿತ್ರೀ ಮಂತ್ರ (ಆದಿತ್ಯಂಗೆ ಅರ್ಘ್ಯಮೆತ್ತಿ ಸೂರ್ಯಜಂ ಸೂರ್ಯಮಂತ್ರಂಗಳನೋದಿ ನೀರಂ ಸೂಸಿ ತ್ರಿಃಪ್ರದಕ್ಷಿಣಂಗೆಯ್ವಾಗಳ್: **ಪಂಪಭಾ,** ೯. ೭೨ ವ)

ಸೂರ್ಯಸೂನು – [ನಾ] ಸೂರ್ಯನ ಮಗ, ಕರ್ಣ (ನೀಮುಂ ನಿಮ್ಮ ಚೊಚ್ಚಿಲ ಮಗನಪ್ಪ ಸೂರ್ಯಸೂನುವಂ ಸೂರ್ಯದಿನದಂದು ಕಂಡು ಕಾರ್ಯಸಿದ್ಧಿಯಂ ಮಾಡಿಬನ್ನಿಂ: **ಪಂಪಭಾ,** ೯. ೬೩ ವ)

ಸೂಸಕ – [ನಾ] ಗೆಜ್ಜೆಯ ಗೊಂಚಲು (ದೇವಾಂಗವಸ್ತ್ರದುಳ್ಳುಡೆಯೊಳ್ ಉಲಿವ ಸೂಸಕದ ತೊಂಗಲ್ವೆರಸು ಎಟಲ್ವ ಮುಂದಣ ಸೋಗೆ ಕಾರ್ಗಾಲದ ಸೋಗೆಯಂತೆ ಸೊಗಯಿಸೆ: **ಪಂಪಭಾ,** ೨. ೪೧ ವ)

ಸೂಸು – [ಕ್ರಿ] ಆ ಈ ಕಡೆ ಚಿಮ್ಮು (ಉಳ್ಳುಡೆಯಂ ಆಕೆಯೋಸರಿಸುವ ಸೂಸುವ ಹಾರಲತೆಯನಳವಡಿಸುವ ಭಂಗಿಯೆ ಮದನರಾಜರಾಜ್ಯವಿಳಾಸಂ: **ಆದಿಪು,** ೯. ೩೬); [ಕ್ರಿ] ಚೆಲ್ಲು, ಎಸೆ (ಅಂತು ನೋಡಿ ಕಡೆಗಣ್ಣ ಚೆಲ್ಲಂಬೆರಸು ಸೂಸುವ ವಾಸವಸ್ತ್ರೀಯರ ಮುಖಾಬ್ಜಾಸವ ಸಂಬಂಧಿಗಳಪ್ಪ ಶೇಷಾಕ್ಷತಂಗಳಂ: **ಪಂಪಭಾ,** ೮. ೨೭ ವ); [ಕ್ರಿ] ಹೊಮ್ಮು (ಭೂತಾಂಗನಾನಿಕರಂ ಶೋಣಿತವಾರಿಯಂ ಕುಡಿದು ಅಗುರ್ವಪ್ಪನ್ನೆಗಂ ಸೂಸೆ ನೋಡ ಕವಿಲ್ತಿರ್ದುದು ಕೂಡೆ ಸಂಜೆಗವಿದಂತಾ ದ್ರೋಣನಿಂ ಕೊಳ್ಗುಳಂ; **ಪಂಪಭಾ,** ೧೨. ೨೫); [ಕ್ರಿ] ಬೀಳು (ಧರಾತಳದೊಳ್ ಸೂಸಿದ ತನ್ನ ಗದಾದಂಡಮಂ ಭುಜಾದಂಡದೊಳ್ ಅಳವಡಿಸಿಕೊಂಡ ವೃಕೋದರಂ: **ಪಂಪಭಾ,** ೧೩. ೯೫ ವ)

ಸೂಳೆ – [ನಾ] [ಶೂಲಾ] ದಾಸಿ (ಮತ್ತೊರ್ವ ಮಗನಂ ಬೇಡೆಂದಂಬಿಕೆಗೆ ಪೇಟಿಸ್ದೊಡಾಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂಳೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡೆ: **ಪಂಪಭಾ,** ೧. ೮೫ ವ); [ನಾ] ವೇಶ್ಯೆ (ಮುಳಿಯೆ ಕಾಲ್ವಿಡಿದಿಂದ್ರನ ಕೊಟ್ಟುದಲ್ತೆ ಪೋ ಪುಸಿಯದಿರ್ ಎಂಬ ಸೂಳೆಯರೆ ಸೂಳೆಯರಲ್ಲಿಯ ಪೆಂಡವಾಸದೊಳ್: **ಪಂಪಭಾ,** ೪. ೮೬)

ಸೂಱೆಗೊಡು – [ಕ್ರಿ] ಧಾರಾಳವಾಗಿ ಕೊಡು (ಸಮಸ್ತವಸ್ತುಗಳಂ ದೀನಾನಾಥಜನಕ್ಕೆ ಸೂಱೆಗೊಟ್ಟು ನಿಜಪರಿವಾರಮಂ ಬರಿಸಿ: **ಪಂಪಭಾ,** ೧. ೧೧೩ ವ)

ಸೂಟ್ – [ನಾ] ಕ್ರಮ (ಏೞುವರಂ ತ'ದ್ದ್ವಿಗುಣಂ ಸೂಟಿನೊಳ್ ನಾರಕರ ಕಠಿನದೇಹೋತ್ಸೇಧಂ: **ಆದಿಪು,** ೫. ೯೨); [ನಾ] ಬಾರಿ, ಆವೃತ್ತಿ (ಬೋಧಾವಾಸಪ್ರಿಯಂ ಉದಯಮನಱಿದು ಆಸನದಿಂದೆರ್ದು ಮೂಱು ಸೂಟ್ ಪೊಡೆವಟ್ಟಂ: **ಆದಿಪು,** ೭. ೪೨); [ನಾ] ಸಮಂಜಸ (ದಾಯಾದನುಂ ಕೋಪದಿಂದೆನ್ನೊಳ್ ಕಾದಲೆಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂ ಮಾಣ್ಬುದು ಸೂಟಲ್ತು: **ಆದಿಪು,** ೧೪. ೮೫); [ನಾ] ಸಮಯ, ಸರದಿ (ಅಂತು ಮುಳಿಸಿನ ಮೋಪಿನ ಗಂಡಮಚ್ಚರದ ಮೆಚ್ಚವಣಿಗೆಯ ಅಂಕಕಾಱರ್ ಎಕ್ಕತುಳಕ್ಕೆ ಎಕ್ಕೆಯಿಂ ಸೂಟಿಱಿಜಿವಂತೆ ಒರ್ವರ್ ಒರ್ವರೊಳ್ ಕಾದೆ: **ಪಂಪಭಾ,** ೧೨. ೭೬ ವ)

ಸೂಟನೆ – [ಅ] ಆಗಲೇ (ಅಶೋಕವಲ್ಲರಿಯ ಪಲ್ಲವಮೊಂದನೆ ಕೊಯ್ದು ರಾಗದಿಂ ಸೋರ್ಮುಡಿಯೊಳ್ ತಗುಳ್ಚಿದೊಡೆ ಸೂಟನೆ ಬಾರಿಸಿದಂ; **ಪಂಪಭಾ,** ೫. ೮೨)

ಸೂಟಲ್ತು – ಸೂಕ್ತ ಸಮಯವಲ್ಲ (ನಿನ್ನನೆ ಪೀನಂ ನಚ್ಚಿ ನಿನ್ನಾಳ್ದನೆ ನುಡಿಯಿಸೆ ನೀನಾಡಿದ್ಯೆ ಮಾತನಾಡಲ್ಕೆನಗೀ ಸೂಟಲ್ತು: **ಪಂಪಭಾ,** ೧೨. ೪೫)

ಸೂಟಸೂಟದೆ – [ಅ] ಬಾರಿ ಬಾರಿಗೂ, ಕ್ರಮಕ್ರಮವಾಗಿ (ಪರಿಮಳದ ಪೊದಳ್ಕೆಗೆ ಸೋಲ್ತು ಸೂಟಸೂಟದೆ ಮೊಗಸಿದುವೆರಡೆಡೆಗಂ ಅಲಸದ ಅಳಿಗಳ ಬಳಗಂ: **ಆದಿಪು,** ೧೦. ೩೧)

ಸೂಟಿಱಿಜಿ – [ಕ್ರಿ] ಸರದಿಯ ಮೇಲೆ ಹೋರಾಡು (ಅಂತು ಮುಳಿಸಿನ ಮೋಪಿನ ಗಂಡಮಚ್ಚರದ ಮೆಚ್ಚವಣಿಗೆಯ ಅಂಕಕಾಱರ ಎಕ್ಕತುಳಕ್ಕೆಕ್ಕೆಯಿಂ ಸೂಟಿಱಿಜಿವಂತೆ ಒರ್ವರೊರ್ವರೊಳ್ ಕಾದೆ: **ಪಂಪಭಾ,** ೧೨. ೭೬ ವ)

ಸೂಟಿಸು – [ನಾ] ಮತ್ತೆ ಮತ್ತೆ ಮಾಡುವ ಬಾಣದ ಹೊಡೆತ (ಸೂಟಿಸಿನೊಳಿವನ ನೆತ್ತರೊಕ್ಕೊಡಂ ತನಗೆ ಬಸಿಱಾಱೆ ಕುಡಿಯಲುಂ ದ್ರೌಪದಿಯ ಕೇಶಪಾಶಮಂ ತೊಯ್ದು ಮುಡಿಯಲುಂ ನೆಱೆಯದೆಂದು: **ಪಂಪಭಾ,** ೧೨. ೧೪೮ ವ)

ಸೂಟ್ಗಿಡು – [ಕ್ರಿ] ಸರದಿ ತಪ್ಪು (ಆತ್ಮತತ್ವದೊಳ್ ಬಗೆ ಗಡಮೆಯ್ದೆ ಸೂಟ್ಗಿಡದೆ ಪಂಚಪದಂಗಳನೋದುತಿರ್ಪ ನಾಲಗೆ ಗಡಮೆಯ್ದೆ ಸಮಾಧಿವಿಧಿಯಂ ನೆಱೆ ತಾಳ್ದಿದನೋ ಮಹಾಬಳಂ: **ಆದಿಪು,** ೨. ೬೦)

ಸೂಟ್ಗಿವರ್ – [ಕ್ರಿ] ಪತಿಯೊಡನೆ ಸಂಭೋಗದ ಸರದಿಗೆ ಬರು (ಮರುದೇವಿಹಾದೇವಿ .. .. ವಾಗ್ವನಿತೆಯೆಂಬ ಅಭಿಶಂಕೆಯನುಂಟುಮಾಡಿ .. .. ಸೂಟ್ಗಿವಂದು: **ಆದಿಪು,** ೭. ೨೬ ವ, ೨೭ ಮತ್ತು ೨೭ ವ)

ಸೂಟ್ಪಿಡು – [ಕ್ರಿ] ಸರದಿಯನ್ನು ಪಡೆ (ಒಡವಂದಂಕದ ಕೌರವರ್ ದ್ರುಪದನ ಅಂಬ ಏಱೆಂಗೆ ಮೆಯ್ಯೊಡ್ಡದೆ ಒಡ್ಡುತಿರೆ ಸೂಸೆ ಬೀೞ್ವ ತಲೆಗಳ್ ಸೂಟ್ಪಿಟ್ಟಂ: **ಪಂಪಭಾ,** ೨. ೬೨)

ಸೂಟ್ಪಿಡೆ – [ಕ್ರಿ] ಸರದಿಯನ್ನು ಹೊಂದು (ಸೂಟ್ಪಿಡೆಯಲಪ್ಪುದು ಕಾಣ ಮಹಾಜಿರಂಗದೊಳ್: **ಪಂಪಭಾ,** ೧೦. ೨೩)

ಸೂಟ್ಮೆಟ್ಟು – [ನಾ] ಸರದಿಯ ತುಳಿತ (ಮೆಟ್ಟಿದ ಸೂಟ್ಮೆಟ್ಟುಗಳಂತೆ ಬೆಟ್ಟು ಕಟಲಲ್ಕಾಡೆ ಭೂಭಾಗಮಾದುದು ದುರ್ಯೋಧನ ಭೀಮಸೇನರ ಗದಾಯುದ್ಧಂ ಮಹಾಭೈರವಂ: **ಪಂಪಭಾ,** ೧೩. ೯೪)

ಸೂಟ್ವರಿ – ಸರದಿಯ ಪ್ರಕಾರ ಹೋಗು (ಬವಳಿವರಿದುಂ ಬಾನಂಗುಳಿಗೆವರಿದುಂ ಸೂಟ್ವರಿದುಂ ಆಡುವಾಗಳ್: **ಪಂಪಭಾ,** ೧೨. ೧೫೮ ವ)

ಸೃಕ್ವೋಪಾಂತಪ್ರರೂಢಶ್ಮಶ್ರುಜಾಳ – [ನಾ] [ಸೃಕ್ವ+ಉಪಾಂತ] ಕಟವಾಯಿಯ ಬಳಿ ಬೆಳೆದ ಮೀಸೆ (ಸೃಕ್ವೋಪಾಂತ ಪ್ರರೂಢಶ್ಮಶ್ರುಜಾಳಂ ಆಹವ ಮಹಾಹುಂಕಾರ ಕಾಳಕೂಟವಿಟಪಿಪ್ರರೋಹ ಶಂಕಾವಹ ನಾಭಿಕೂಪಾವಲಂಬಿ ಕೂರ್ಚಕಳಾಪಂ: **ಆದಿಪು,** ೧೩. ೪೫ ವ)

ಸೃಜಿಯಿಸು – [ಕ್ರಿ] ನಿರ್ಮಿಸು (ನೀಂ ಸೃಜಿಯಿಸಿ ನೆಗಟ್ದೀ ವಿಪ್ರಸಂತಾನದೊಂದಾಚರಣಂ ನೀನೆಂದ ಪಾಂಗಿಂ ಕೃತಯುಗದೊಳೆ ದಲ್ ಸಲ್ಗುಂ: **ಆದಿಪು,** ೧೫. ೨೬)

ಸೆಂದುರ – [ನಾ] ಸಿಂದೂರ, ಕೆಂಪು ಬಣ್ಣದ ಪುಡಿ (ಗಟ್ಟಿಸಿ ಸೆಂದುರದೊಳ್ ನೆಲಗಟ್ಟಿಸಿ ಚೆಂಬೊನ್ನ ನೆಲೆಯ ಚೌಪಳಿಗೆಗಳೊಳ್ ಕಟ್ಟಿಸಿ ಪೞಯಿಗೆಗಳಂ ಅಳವಟ್ಟಿರೆ ಬಿಯಂ ಅಲ್ಲಿ ಮೊೞಗೆ ಪಲವುಂ ಪೞಿಗಳ್: **ಪಂಪಭಾ,** ೨. ೬೬)

ಸೆಜ್ಜೆ – [ನಾ] [ಶಯ್ಯಾ] ಹಾಸಿಗೆ (ಗುಣಾರ್ಣವನಂ ಸೆಜ್ಜೆಗೆ ಬಿಜಯಂಗೆಯ್ಯಿಮೆನೆ ಕಾಮಂ ಕಳನೇಱುವಂತೆ ಸೆಜ್ಜೆಯನೇಱಿ ಸೆಡೆದಿರ್ದ ನಲ್ಲಳಂ ನೋಡಿ: **ಪಂಪಭಾ,** ೩. ೮೧ ವ)

ಸೆಜ್ಜೆವಳ – [ನಾ] ಶಯ್ಯಾಗೃಹದ ಮೇಲ್ವಿಚಾರಕ (ಧೂಪಗುಂಡಿಗೆಯೋಳ್ ಅಳವಡೆಯದೆ ಸೆಜ್ಜೆವಳನಿಕ್ಕಿದ ಕೇಶಸಂಸ್ಕಾರಕಾಳಾಗರುಧೂಪಂ: **ಆದಿಪು,** ೫. ೨೨ ವ)

ಸೆಟ್ಟಿ – [ನಾ] [ಶ್ರೇಷ್ಠಿ] ವರ್ತಕ (ಸೆಟ್ಟಿಯ ಬಳ್ಳಂ ಕಿಱಿದು ಎಂಬುದೊಂದು ನುಡಿಯಂ ನೀಂ ನಿಕ್ಕುವಂ ಮಾಡಿದೈ: **ಪಂಪಭಾ,** ೧೨. ೧೭೫)

ಸೆಡೆ – [ಕ್ರಿ] ಸಂಕೋಚಪಡು (ಗುಣಾರ್ಣವನಂ ಸೆಜ್ಜೆಗೆ ಬಿಜಯಂಗೆಯ್ಯಿಮೆನೆ ಕಾಮಂ ಕಳನೇಱುವಂತೆ ಸೆಜ್ಜೆಯನೇಱಿ ಸೆಡೆದಿರ್ದ ನಲ್ಲಳಂ ನೋಡಿ: **ಪಂಪಭಾ,** ೩. ೮೧ ವ); [ಕ್ರಿ] ಕುಗ್ಗು (ನಾಣ್ಚಿ ಸೆಡೆದಿರ್ದಪೆಂ ಇರ್ದೊಡೆ ಅವಸ್ತುಭೂತನೆಂದಾದಮೆ ಭೂತಳಂ ಪೞಿಯೆ ತೇಜಮೆ ಕೆಟ್ಟಪುದು: **ಪಂಪಭಾ,** ೯. ೧೮); [ಕ್ರಿ] ಹೆದರು (ಬೀರದೊಳೆ ಬೀಗುವ ಸೂತಸುತಂಗೆ ನೀನುಂ ಆಜಿಗೆ ಸೆಡೆದಿರ್ದೆಯಪ್ಪೊಡೆ ಇರು: **ಪಂಪಭಾ,** ೧೨. ೨೦೮)

ಸೆಣಸು – [ಕ್ರಿ] ಯುದ್ಧಮಾಡು (ಸೆಣಸುವ ಅಹಿತರ್ ಮೇಲೇಟ್ಟಿ ಉದ್ಯೋಗಮಂ ಬಗೆದಿರ್ದರ್ ಎನ್ನಣುಗಿನ ಅಳಿಯಂಗೆ ಎನ್ನಿಂ ಮೇಗಿಲ್ಲ ಕೂರ್ಪವರ್: **ಆದಿಪು,** ೪. ೯೦); [ನಾ] ಸ್ಪರ್ಧೆ (ಖರಕಿರಣಸ್ಫುರಿತಕ್ಕಿದಿರುರಿವಂತಿರೆ ಸೂರ್ಯಕಾಂತಂ ಎನ್ನೀ ತೇಜಸ್ಸ್ಫುರಿತಕ್ಕೆ ಸೆಣಸಿನೊಳ್ ಮಾಱುರಿಗುಂ ಸೈರಿಸದು ತೇಜಮಾ ಭುಜಬಲಿಯಾ: **ಆದಿಪು,** ೧೪. ೪೨); [ಕ್ರಿ] ಮತ್ಸರಿಸು (ಅಂತು ಕರ್ಣಂ ಗುಣಾರ್ಣವನೊಳ್ ಸೆಣಸಿ ಪಗೆಯನಭ್ಯಾಸಂಗೆಯ್ವಂತೆ ವಿದ್ಯಾಭ್ಯಾಸಂಗೆಯ್ದು: **ಪಂಪಭಾ,** ೨. ೫೮ ವ)

ಸೆರಗಂ ಬಗೆ – [ಕ್ರಿ] ಸಹಾಯವನ್ನು ಅಪೇಕ್ಷಿಸು, ಕೇಳು (ಉೞಿದ ಕೆಯ್ದುವಿನೊಳ್ ಇವಂ ಸಾವನೆ ಸೆರಗಂ ಬಗೆದೊಡೆ ಸಾವಾದಪುದು: **ಪಂಪಭಾ,** ೧೧. ೨೧)

ಸೆರಗಂ ಬೆರಗಂ ಬಗೆ – [ಕ್ರಿ] ಅಪಾಯ–ಉಪಾಯಗಳನ್ನು ಕುರಿತು ಆಲೋಚಿಸು (ಇಲ್ಲಿ ಸೆರಗಂ ಬೆರಗಂ ಬಗೆಯೆಂ ದ್ವಿಜೋತ್ತಮಾ: **ಪಂಪಭಾ,** ೩. ೬)

ಸೆರಗಿಲ್ಲದ ಗಂಡ – [ನಾ] ಅಸಹಾಯಶೂರ (ಪರಪತಾಕಿನೀ ಪತಾಕೆಯಂ ಕಂಡು ಸೆರಗಿಲ್ಲದ ಗಂಡನಂತಿನಿಸಪ್ಪೊಡಂ ಮಾಣದೆ ಅದುವೆ ಸಂಸಾರನಿರ್ವೇಗ ಕಾರಣಮಾಗೆ: **ಆದಿಪು,** ೧. ೭೯ ವ)

ಸೆರಗು – [ನಾ] ಭಯ (ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊದನೀವೆನೆಂದನೆ ನೊಂದು ಅಃ ಎಂದನೆ ಸೆರಗಿಲ್ಲದೆ ಪಿಡಿಯೆಂದನೆ: **ಪಂಪಭಾ,** ೧. ೧೦೨)

ಸೆರೆಯಂ ಬಿಡಿಸು – [ಕ್ರಿ] ರಕ್ತನಾಳವನ್ನು ಸೀಳು (ನಡೆ ನಾರಾಚದ ನೋವಿನ ನಡುಕಂ ಪಿರಿದಾಯ್ತು ಸರ್ಪರೋಗಿಯ ಸೆರೆಯಂ ಬಿಡಿಸಿದವೊಲ್: **ಪಂಪಭಾ,** ೧೨. ೭೧)

ಸೆಲೆ – [ನಾ] ಶಿಲೆ, ಬಂಡೆ (ಅಂತು ಕನಕರೇಣುಗಳ್ ಪುಟ್ಟಿದ ಪಾಸಱಿಗಳುಮಂ ಕನಕದ ಪಿರಿಯ ಸೆಲೆಗಳುಮಂ ಬೆಟ್ಟಾಗಿ ಪುಂಜಿಸಿ: **ಪಂಪಭಾ,** ೬. ೩೧ ವ)

ಸೆಳೆ – [ನಾ] [ಬೆತ್ತವನ್ನು] ಬೀಸು (ಮಿಳಿರ್ವಸಿಯ ಪಸಿಯ ಪೊಸಬಾಸುೞ ಕರರುಹರೇಖೆ ತುಱುಗಿ ರತನಾಟ್ಯಪರಿಸ್ಖಳಿತಕ್ಕೆ ಮುಳಿದು ದಂಪತಿಗಳನಂಗಜನಟನೆ ಸೆಳೆದ ಬಾಸುೞೆವೆನಿಕುಂ: **ಆದಿಪು,** ೧೨. ೧೫)

ಸೆಳೆಗೊಂಬು – [ನಾ] ತೆಳು ರೆಂಬೆ (ಮೈಯ ಬಣ್ಣದೊಳ್ ಕೊಸಗನೆ ತನ್ನ ಬಳ್ವಳಿಕೆಯೊಳ್ ಸೆಳೆಗೊಂಬನೆ ಪೋಲ್ತು .. .. ಮರವಾನಸೆಯಾಗಿಯುಂ: **ಆದಿಪು,** ೧೨. ೩೮)

ಸೆಳ್ಳುಗುರು – [ನಾ] ತೆಳುವಾದ ಉಗುರು (ರಾಜಾವರ್ತದ ಸೆಳ್ಳುಗುರುಮಂ ಧೂಪದ ಸುಯ್ಯುಮಂ ರತಿಯ ಸೌಭಾಗ್ಯಮುಮಂ: **ಪಂಪಭಾ,** ೪. ೭೫ ವ)

ಸೆಱಪು – [ನಾ] ಆತಿಥ್ಯ (ವಿಖ್ಯಾತಂಗೆ ನರಂಗೆ ಸೆಱಪುಗೆಯ್ದನನಂತಂ: **ಪಂಪಭಾ,** ೪. ೪೪)

ಸೆಱೆ – [ನಾ] ಬಂಧನ (ಪಿಡಿದುಯ್ದುದು ಗಂಧರ್ವರ ಪಡೆ ಗಡ ನಿಮ್ಮಣ್ಣನಂ .. .. ಬೇಗಂ ಬಿಡಿಸಿ ತರ್ಪುದಾತನ ಸೆಱೆಯಂ: **ಪಂಪಭಾ,** ೨. ೨೨); ಬಂದಿ (ಇನ್ನುಂ ಯಾದವರ ಸೆಱೆಗಳೆಲ್ಲ ಆತನಲ್ಲಿರ್ದರ್ ಆತನುಂ ಭೀಮನ ಕೆಯ್ಯೊಳಲ್ಲದೆ ಸಾಯಂ: **ಪಂಪಭಾ,** ೬. ೨೬ ವ)

ಸೆಱೆಕೋಲ್ – [ನಾ] ಸೈನ್ಯದ ಪಕ್ಕ, ತುದಿ (ಅಂತುಭಯಬಲದ ಸೆಱೆಕೋಲ್ಗಳ್ ಒಂದೊಂದಂ ಮುಟ್ಟುವಿನಂ ಅತ್ತ ರಾಜಾಧಿರಾಜನುಂ ಇತ್ತ ಯುವರಾಜನುಂ ನಿಂದಾಗಳ್: **ಆದಿಪು,** ೧೪. ೯೪ ವ)

ಸೆಱೆಕೋಲ್ ಸೆಱೆಕೋಲಿಂ – ಒಂದು ಬದಿಯ ಕೊನೆಯಿಂದ ಇನ್ನೊಂದು ಬದಿಯ ಕೊನೆಯವರೆಗೆ (ಸೆಱೆಕೋಲ್ ಸೆಱೆಕೋಲಿಂ ಪತ್ತುಱುಗಾವುದ ಬಲದ ಪವಣಂ ಅನಿತಿನಿತೆಂದು ಆನಱಿಯೆಂ: **ಪಂಪಭಾ,** ೧೦. ೫೯)

ಸೆಱೆಗೆಯ್ – [ನಾ] ಬಂಧಿಸು (ದುರ್ಯೋಧನಂ ಬಂದಿಕಾಱನಂತೆ ಸೆಱೆಗೆಯ್ದುಂ ವ್ರಣವೈದ್ಯನಂತೆ ಕೊಡಸಾರಿಯಂ ಪಿಡಿದುಂ: **ಪಂಪಭಾ,** ೬. ೭೨ ವ)

ಸೆಱೆಯಮನೆ – [ನಾ] ಸೆರೆಮನೆ, ಬಂದೀಖಾನೆ (ಕನಕಪ್ರಾಸಾದ ಪಜ್ಜೆಗಳ ಪೞಪೞನೆ ಬೆಳಗುವ ಸೊಡರ್ಗಳಂ ಆದಿತ್ಯನ ನಂಟರೆಂದು ತಮೋರಾಜಕಂ ಮುಳಿದು ಸೆಱೆಗೆಯ್ದ ಬೆಳಗಿನ ಸೆಱೆಯ ಮನೆಗಳನ್ನವಾದುವು: **ಪಂಪಭಾ,** ೪. ೪೯ ವ)

ಸೆಱೆವನೆ – [ನಾ] ಸೆರೆಮನೆ (ಸೆಱೆವನೆಯಿಂದಂ ಭೋಂಕೆನೆ ಪೊಱಮಟ್ಟವೊಲಂದು ಗರ್ಭಗೃಹದಿಂದಂ ಮೇಣ್ ಪೊಱಮಟ್ಟವೊಲ್ ಆ ಗುಹೆಯಿಂ ಪೊಱಮಟ್ಟುದು ಸೈನ್ಯಂ: **ಆದಿಪು,** ೧೩. ೫೪)

ಸೆಱೆವಿಡಿ – ಮೊರೆವೊಗು (ಇಱೆವಂತು ನಿನಗೆ ಮನದೊಳ್ ತಱಿಸಲವುಂಟಪ್ಪೊಡೆ ಎಲವೊ ದೇವೇಶನಂ ಏಂ ಸೆಱೆವಿಡಿದೆ: **ಪಂಪಭಾ,** ೧೦. ೧೨೧)

ಸೇಕ – [ನಾ] ಚಿಮುಕಿಸುವುದು (ವಾಸವವನಿತಾ ವದನಾಬ್ಜ ಆಸವ ಸೇಕ ಪ್ರಭಿನ್ನಮುಕುಳಂ ವಕುಳಂ: **ಆದಿಪು,** ೬. ೯೭); [ನಾ] [ಶಾಖ] ತಾಪ (ಕೆಂದಳಿರ್ವಾಸೆ ಸೇಕದ

ತೊವಲ್ಗೆಣೆಯಾಯ್ತು ಮೃಣಾಳನಾಳವೊಂದೆಡೆವೊತ್ತಿ ಪತ್ತಿದುವು: **ಪಂಪಭಾ,** ೫. ೭)

ಸೇಚನ – [ನಾ] ಸಿಂಪಡಣೆ, ಚಿಮುಕಿಸುವಿಕೆ (ನವರುಧಿರಜಳಚಳತ್ ಸೇಚನದೊಳ್ ಘಟ್ಟಿಸಿ ಸಿಂದುರದೊಳ್ ನೆಲಗಟ್ಟಿಸಿದಂತಿರ್ದ ರಣರಂಗಭೂಮಿಯೊಳ್: **ಪಂಪಭಾ,** ೧೦. ೭೦ ವ)

ಸೇತಮಾಲೆ – [ನಾ] {ಶ್ವೇತ+ಮಾಲಾ} ಬಿಳಿಯ [ಮುತ್ತಿನ] ಹಾರ (ಕಟ್ಟಿದ್ಯೆಸರದೊಂದು ಬೆಡಂಗಿನ ಸೇತಮಾಲೆ ಪಟ್ಟಿಗೆ ಕಟಿಸೂತ್ರಮೆಂಬಿವು ಮನಂಗೊಳೆ: **ಆದಿಪು,** ೧೨. ೧೨)

ಸೇತು – [ನಾ] ಸೇತುವೆ (ಅಧಿಕಬಳನಳಕರತಳಗಳಿತ ಕುಳಶ್ಯೆಲ ಸಹಸ್ರಸಂತಾನ ಕಳಿತ ಸೇತುಬಂಧುರಮಪ್ಪ ದಕ್ಷಿಣಸಮುದ್ರದ ತಡಿವಿಡಿದು ಬಂದು: **ಪಂಪಭಾ,** ೪. ೧೮ ವ)

ಸೇತುಬಂಧ – [ನಾ] ರಾಮಸೇತು (ಸೇತುಬಂಧಮಂ ತಾಗೆ ಗಂಗಾನದಿಯ ತೆಂಕಣ ಪಡುವಣ ನೆಲನಂ ನೀಮಾಳ್ವುದು ಮೂಡಲ ಬಡಗಣ ನೆಲನಂ ದುರ್ಯೋಧನನಾಳ್ವುದು: **ಪಂಪಭಾ,** ೪. ೮ ವ)

ಸೇದೆ – [ನಾ] [ಸ್ವೇದ] ಆಯಾಸ (ನುಡಿವೊಡೆ ಲಲ್ಲೆಯೆಂಗುಂ ಎರ್ದೆವೇಟಕ್ವೊಡೆ ಕೈತವಮೆಂಗುಂ ಆಸೆಯಿಂ ಪಿಡಿದೊಡೆ ಸೇದೆಯೆಂಗುಂ: **ಆದಿಪು,** ೧೨. ೩೨)

ಸೇದೆಗಿಡು – [ಕ್ರಿ] ದಣಿವಿನಿಂದ ಬಳಲು (ಪರಲೋಕಸುಖಾರ್ಥಂ ಆತ್ಮಾಸ್ತಿತ್ವಾಭಿನಿವೇಶದಿಂ ತನುಧನನಿಧನಂ ಮಾಡಿ ಸೇದೆಗಿಡಲ್ವೇಡ: **ಆದಿಪು,** ೨. ೯ ವ)

ಸೇನಾನಾಯಕ – [ನಾ] [ಜೈನ] ಚಕ್ರವರ್ತಿಯ ಹದಿನಾಲ್ಕು ರತ್ನಗಳಲ್ಲೊಂದು, ಸಾಕೇತನಗರದಲ್ಲಿ ಹುಟ್ಟಿದ್ದು (ಸಾಕೇತನಗರದೊಳ್ ಪುಟ್ಟಿದ ಸೇನಾನಾಯಕ ಪುರೋಹಿತ ಗೃಹಪತಿ ತಕ್ಷಕರತ್ನಂಗಳುಂ: **ಆದಿಪು,** ೧೫. ೩ ವ)

ಸೇನಾನಿರತ್ನ – [ನಾ] [ಜೈನ] ಜೀವರತ್ನಗಳಲ್ಲಿ ಒಂದು, ಚಕ್ರವರ್ತಿಯ ಸೇನಾಧಿಪತಿ (ಷಡ್ವಿಧಸೇನಾನಾಯಕ ಪರಾಯಣನುಮಪ್ಪ ಅಯೋಧ್ಯನೆಂಬ ಸೇನಾನಿರತ್ನಮುಂ: **ಆದಿಪು,** ೧೧. ೩ ವ)

ಸೇವಾಧರ್ಮ – [ನಾ] ಆದಿನಾಥನು 'ಸಕಳಕ್ಷತ್ರಿಯವಣಿಕ್ಶೂದ್ರ'ರಿಗೆ ನಿಯಮಿಸಿದ ಜೀವನೋಪಾಯದ ಕರ್ಮಗಳು: (ಸೇವಾಧರ್ಮೋಚಿತಮೆನಿಸುವ ಅಸಿಕರ್ಮಮುಮಂ ಅನೇಕ ಲಿಪಿವಿಧಾನಂಗಳಪ್ಪ ಮಷಿಯುಮಂ ಕೃಷೀವಲ ಕುಲೋಚಿತಮಪ್ಪ ಕೃಷಿಯುಮಂ ಶಾಸ್ತ್ರಾನುಗತಮಪ್ಪ ವಿದ್ಯೆಯುಮಂ ವಣಿಗ್ವ್ಯವಹಾರಾನುಕಾರಿಯಪ್ಪ ವಾಣಿಜ್ಯಮುಮಂ: **ಆದಿಪು,** ೮. ೬೪ ವ)

ಸೇವಾಮದ – [ನಾ] ಕುಡಿತದ ಅಮಲು (ಪಲಬರರಸುಗಳ್ ಪ್ರಾಜ್ಯಸಾಮ್ರಾಜ್ಯಲಕ್ಷ್ಮೀಪದಮಂ ಕೈಕೊಂಡು ತಮ್ಮಂ ಮಱೆದು ವಿಷಯಭೋಗಾಸವಾತ್ಯಂತಸೇವಾಮದದಿಂದಂ: **ಆದಿಪು,** ೯. ೫೮)

ಸೇವಿಸು – [ಕ್ರಿ] ಕುಡಿ (ತುಂಬಿದ ರಕ್ತತೆಯಿಂ ನಿಜಬಿಂಬಂ ವಾರುಣಿಯನೊಸೆದು ಸೇವಿಸೆ ನಾಣ್ಗೆಟ್ಟಂಬೋಲ್ ತೇಜಂ ಮಸುಳ್ವಿನಂ ಅಂಬರಮಂ ಬಿಸುಟಂ ಆಗಳಂಬುಜಮಿತ್ರಂ: **ಪಂಪಭಾ,** ೩. ೨೩)

ಸೇವೆ – [ನಾ] ಸೇವನೆ, ಉಣ್ಣುವಿಕೆ (ನೋಡಿ ಕಣ್ತಣಿವಿನಂ ಅಪ್ಪಿ ತೋಳ್ ತಣಿವಿನಂ ಸುರತಾಮೃತಸೇವೆಯೊಳ್ ಮನಂ ತಣಿವಿನಂ ಆದ ಅಲಂಪು ಮಿಗೆ: **ಆದಿಪು,** ೨. ೭೦)

ಸೇವ್ಯ – [ಗು] ತಿನ್ನಲು [ಅನುಭವಿಸಲು] ಯೋಗ್ಯವಾದ (ಬೆಳೆದೋರಂತೆಱಗಿರ್ದ ಶಾಳೀವನದಿಂ ಸೇವ್ಯಂ ನಗೋಪತ್ಯಕಂ: **ಆದಿಪು,** ೧. ೬೪)

ಸೇಸಿಕ್ಕು – [ಕ್ರಿ] ಸೇಸೆಗೊಡು (ನೆರೆದಂತಃಪುರಕಾತೆಯರ್ ಪಲಬರುಂ ಸೇಸಿಕ್ಕೆಯುಂ ವಾರಸೌಂದರಿಯರ್ ಚಾಮರಮಿಕ್ಕೆಯುಂ ಉದಾತ್ತೋತ್ಸಾಹದಿಂ ರಾಜಂದಿರಮಂ ಪೊಕ್ಕಂ: **ಆದಿಪು,** ೧೨. ೧೨೯)

ಸೇಸೆ – [ನಾ] ಶೇಷಾಕ್ಷತೆ (ಅಂತು ನೋಡಿ ಕಡೆಗಣ್ಣ ಚೆಲ್ಲಂಬೆರಸು ಸೂಸುವ ವಾಸವಸ್ತ್ರೀಯರ ಮುಖಾಬ್ಜಾಸವ ಸಂಬಂಧಿಗಳಪ್ಪ ಶೇಷಾಕ್ಷತಂಗಳಂ ಈಶ್ವರನಂ ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ವಂತೆ ಸೇಸೆಗೊಳ್ಳುತ್ತುಂ: **ಪಂಪಭಾ,** ೮. ೨೭ ವ)

ಸೇಸೆಗೊಳ್ – [ಕ್ರಿ] ಹಾಕಿದ ಅಕ್ಷತೆಯನ್ನು [ಮಾಡಿದ ಆಶೀರ್ವಾದವನ್ನು] ಸ್ವೀಕರಿಸು (ಅರ್ಹತ್ವದಮಂ ನೆನೆಯುತ್ತುಂ ಅನುಪ್ರೇಕ್ಷೆಯೆ ಮನದೊಳ್ ತೊಡರ್ದೊಡೆ ತಣ್ಮಲೆಯೆ ಸೇಸೆಗೊಳ್ ಖಚರಪತೀ: **ಆದಿಪು,** ೨. ೫೭)

ಸೈಕತ – [ನಾ] ಮರಳು (ಪೂತ ಅದಿರ್ಮುತ್ತೆಯ ಸುತ್ತಿಂ ಸುತ್ತಿದ ಸೈಕತಭೂತಳಂಗಳೊಳೆ ಮೆಲ್ಲನೆ ಬೀಡುವಿಡುತ್ತುಂ: **ಆದಿಪು,** ೪. ೫೮)

ಸೈತು – [ಗು] ನೇರಾಗಿ (ಇದಂ ಓವದೆ ಕೊಲ್ವೊಡೆ ನೀನುಂ ಎನ್ನ ಕಜ್ಜದೊಳ್ ಎಸಗು ಎಂದು ಸೈತು ಅಜಿತಂ ಆದಿಯ ವೇದರಹಸ್ಯದೊಳ್ .. .. ಯೋಜಿಸಿದಂ: **ಪಂಪಭಾ,** ೧೦. ೬೪)

ಸೈತಿರ್ – [ನಾ] ಸಮಾಧಾನದಿಂದಿರು (ಆ ದುಶ್ಶಾಸನ ಉರಃಸ್ಥಲ ಉಚ್ಛ್ವಸಿತ ಅಸೃಕ್ ಜಲಪಾನಮಂ ಬಯಸಿ ಬಾಯ್ ತೇರ್ಪೆಸೆ ಸೈತಿರ್ಪನೇ: **ಪಂಪಭಾ,** ೭. ೫೮)

ಸೈತು – [ಕ್ರಿ] ನೇರವಾಗಿ, ಚೆನ್ನಾಗಿ (ಇದಂ ಓವದೆ ಕೊಲ್ವೊಡೆ ನೀನುಂ ಎನ್ನ ಕಜ್ಜದೊಳೆಸಗು ಎಂದು ಸೈತು ಅಜಿತಂ ಆದಿಯ ವೇದರಹಸ್ಯದೊಳ್ .. .. ನೆಱೆಯೆ: **ಪಂಪಭಾ,** ೧೦. ೬೪)

ಸೈದ – [ನಾ] ಸಜ್ಜನ, ನೇರವಾದವನು (ಎನಗಂ ಪಾಂಡುಗಂ ಇಲ್ಲ ಭೇದಂ ಎಳೆಯಂ ಪಚ್ಚಾಳ್ವಂ ಪಾಂಡುನಂದನರುಂ ಸೈದರೆ: **ಪಂಪಭಾ,** ೧೩. ೯)

ಸೈಪು – [ನಾ] ಪುಣ್ಯ (ಕಿವಿಯಂ ಇಂದೊಳದಿಂಚರಕಾಂತುಂ ಇಂತು ಕೋಮಳೆಯಸು ಮತ್ತಮೀ ಒಡಲೊಳಿರ್ದುದು ಎಮ್ಮಯ ಸೈಪು ಭೂಪತೀ: **ಪಂಪಭಾ,** ೫. ೧೯)

ಸೈರಂಧ್ರಿ – [ನಾ] ಅಂತಃಪುರದ ದಾಸಿ, ಅಜ್ಞಾತವಾಸ ಕಾಲದಲ್ಲಿ ದ್ರೌಪದಿ ಹಾಕಿಕೊಂಡಿದ್ದ ವೇಷ (ಸೈರಂಧ್ರಿಯಂ ನೋಡಿ ಸೈರಿಸಲಾಱದೆ ಸಿಂಹಬಲಂ .. .. ತಮ್ಮಕ್ಕನಂ ಈಕೆ ಆರ್ಗೆ ಎಂದು ಬೆಸಗೊಂಡೊಡೆ: **ಪಂಪಭಾ,** ೮. ೫೫ ವ)

ಸೈರಣೆ – [ನಾ] ತಾಳ್ಮೆ (ರತಿಯ ಸೌಭಾಗ್ಯಮುಮಂ ಸೀತೆಯ ಸೈರಣೆಯುಮಂ .. .. ಒಂದು ಮಾಡಿ ಲೋಕಮೆಲ್ಲಮಂ ಮರುಳ್ಮಾಡಲೆಂದು ಪೆಣ್ಮಾಡಿದನಕ್ಕುಂ: **ಪಂಪಭಾ,** ೪. ೭೫ ವ)

ಸೈರಿಸು – ಸುಮ್ಮನಿರು (ಲತಾಂಗಿಯರ ಸುಯ್ಯ ಕಂಪಿಂಗಳಿಗಳ್ ಮೊಗಸಿ ಮುಸುಱಿದುವು ಪೊಸಗಂಪುಗಂಡು ಸೈರಿಸುವ ಮಧುಕರಂಗಳುಮೊಳವೇ: **ಆದಿಪು,** ೧೧. ೭೨); [ಕ್ರಿ]

ತಾಳಿಕೊ, ಸಹಿಸಿಕೊ (ತೇಜಃಪುಂಜಮೆ ಕಣ್ಣೊಳ್ ಉಳ್ಕುವಂತೆ ಸೈರಿಸದೆಮೆಯಿಕ್ಕಿ ದೃಷ್ಟಿಯುದ್ಧದೊಳ್ ಸೋಲೆ: **ಆದಿಪು**, ೧೪. ೧೦೫ ವ); [ಕ್ರಿ] ಸಹಿಸಿಕೊ (ಇದಿರೊಳ್ ನಿಂದೊಡೆ ವಜ್ರಿ ಸೈರಿಸಂ ಇರಲ್ವೇಡ ಎಮ್ಮ ಒಳ್ವೊಕ್ಕು ನಿಲ್ ನೀನೆಂದು ಕಡಂಗಿ ಕಾಲ್ವಿಡಿವವೊಲ್: **ಪಂಪಭಾ**, ೪. ೨೪)

ಸೊಕ್ಕಿಸು – [ಕ್ರಿ] ಮತ್ತೇರಿಸು (ಮುಕ್ಕಳಿಸಿಯುಗುಟ್ವಿ ಮಧುವಿಂ ಮಿಕ್ಕಸೆವಾಮೋದಮಿದಱ ತಣ್ಗಂಪಿನೊಳ್ವೊಕ್ಕುದೆನೆ ಮಧುವ ಕಂಪಂ ಮುಕ್ಕುಳಿಸಿದ ವಕುಳಂ ಆರುಮಂ ಸೊಕ್ಕಿಸದೇ: **ಆದಿಪು**, ೧೧. ೧೨೪)

ಸೊಗಯಿಸು – [ಕ್ರಿ] ಸುಂದರವಾಗಿ ಕಾಣು (ದೇವಾಂಗವಸ್ತ್ರದ ಉಳ್ಳುಡೆಯೊಳ್ ಉಲಿವ ಸೂಸಕದ ತೊಂಗಲ್ವೆರಸು ಎಟಿಲ್ವ ಮುಂದಣ ಸೋಗೆ ಕಾರ್ಗಾಲದ ಸೋಗೆಯಂತೆ ಸೊಗಯಿಸೆ: **ಪಂಪಭಾ**, ೨. ೪೧ ವ)

ಸೊಗಸಿಕೆ – [ನಾ] ಚೆಲುವು (ದೆಯ್ವಬಲಂ ಸೊಗಸಿಕೆ ಮುಂಗೆಯ್ವ ಬಲಂ ಬಾಳಕಾಲದೊಳ್ ತೊಡರ್ದ ಪೊಡರ್ದಯ್ವರ ಬಾಲಕ್ರಿಯೆಯುಂ ಮುಯ್ವುಂ ನೋಡಿಸಿತು ತಾಯುಮಂ ತಂದೆಯುಮಂ: **ಪಂಪಭಾ,** ೨. ೧೧)

ಸೊಡರ್ – [ನಾ] ದೀಪ (ಕನಕಪ್ರಾಸಾದಪಙ್ತಿಗಳ ಪಟಿಪಟಿನೆ ಬೆಳಗುವ ಸೊಡರ್ಗಳಂ ಆದಿತ್ಯನ ನಂಟರೆಂದು ತಮೋರಾಜಕಂ ಮುಳಿದು: **ಪಂಪಭಾ**, ೪. ೪೯ ವ)

ಸೊಡರಿಡು – [ಕ್ರಿ] ದೀಪ ಹಚ್ಚು (ಆದಿತ್ಯಂಗೆ ಸೊಡರಿಡಲುಂ ಇಂದ್ರಂಗೆ ದೇವಲೋಕಮಂ ಬಣ್ಣಿಸುವಂತೆಯುಂ ನಿನಗೇನೆಂದು ಕಜ್ಜಂಬೇಟ್ವುದು: **ಪಂಪಭಾ,** ೯. ೧೮ ವ)

ಸೊಡರ್ಗುಡಿ – [ನಾ] [ಸೊಡರ್+ಕುಡಿ] ದೀಪದ ಉರಿಯುವ ಕುಡಿ (ಬೆಳಗುವ ಸೊಡರ್ಗುಡಿ ಕಿಡೆ ಮನೆಯೊಳಗೆ ತಮಂ ಪರ್ಬುವಂತೆ ಜೀವಂ ತನುವಿಂ ತಳರಲೊಡಂ: **ಆದಿಪು**, ೫. ೨೭)

ಸೊನೆ – [ನಾ] ಮರದ ರಸ (ಸೊನೆಯ ಸೋನೆಗಳುಮಂ ಒಳಕೊಂಡು ತದಾಶ್ರಮದ ನಂದನವನಂಗಳ್ ಜನಂಗಳಂ ಅನಂಗಂಗೆ ತೊಟ್ಟುವೆಸಂಗೆಯ್ಸಿದುವು: **ಪಂಪಭಾ**, ೨. ೧೨ ವ)

ಸೊನ್ನಲಿಗೆ – [ನಾ] ಕಲಶ (ತ್ರಿದಶಶರಾಸನಂ ತಳಿತ ತೋರಣಮಾಗಿರೆ ಕುಕ್ಕಿನೋಳಿ ಚೆಲ್ವಿದಿರ್ಗೊಳೆ ಬರ್ಪ ಸೊನ್ನಲಿಗೆಯಾಗೆ ನಿಜಧ್ವನಿ ತೂರ್ಯಮಾಗೆ: **ಆದಿಪು**, ೬. ೭೧)

ಸೊಪ್ಪುಳ್ – [ನಾ] ಸಪ್ಪುಳ, ಶಬ್ದ (ಅವರಿರ್ವರ ಕಾಲ ಸೊಪ್ಪುಳಂ ಆಲಿಸಿ ಸುರನದೀನಂದನಂ ಪೇೞಿಂ ಬಂದರಾರ್ ಎಂದು: **ಪಂಪಭಾ**, ೧೩. ೬೩ ವ)

ಸೊಬಗು – [ನಾ] ಚೆಲುವು (ಎಲ್ಲಿದಂ ವಿನೋದದ ಮೊದಲೆಲ್ಲಿದಂ ಸೊಬಗಿನಾಗರಂ: **ಆದಿಪು,** ೩. ೧೫)

ಸೊಯಂಬರ – [ನಾ] [ಸ್ವಯಂವರ] ವಧು ತನ್ನ ಗಂಡನನ್ನು ಆಯ್ದುಕೊಳ್ಳುವುದು (ಸುರಕುಸುಮದ ಪೊಸವಾಸಿಗಮೆರಡುಂ ಕರತಳದೊಳೆಸೆದು ತಮ್ಮಯ ತೋಳೊಳ್ ದೊರೆಯೆನೆ ಬಂದತ್ತು ಸೊಯಂಬರಕ್ಕೆ ಬರ್ಪಂತು ದೇವಗಣಿಕಾನಿಕರಂ: **ಆದಿಪು**, ೧೦. ೨೦)

ಸೊರ್ಕನಿಕ್ಕು – [ಕ್ರಿ] ಮತ್ತನ್ನು ಸೇರಿಸು, ಮತ್ತುಂಟುಮಾಡು (ಲಯಕ್ಕೆ ಲಕ್ಕಲೆಕ್ಕದ ಜತಿ ನಾಟಕಾಭಿನಯಮಾಯ್ತೆನೆ ಗೇಯದೊಳೀಕೆ ಸೊರ್ಕನಿಕ್ಕಿದಳೆನೆ ಕಣ್ಗೆ ಚಕ್ಕಣಮೆನಿಪ್ಪುದು ಸಾಗೆನಿಸಲ್ಕೆ: **ಪಂಪಭಾ**, ೭. ೯೦)

ಸೊರ್ಕಿದಾನೆ – [ನಾ] ಮದ್ದಾನೆ (ಮತ್ತೊರ್ವಳ್ ಅತಿಸಂಭ್ರಮ ತ್ವರಿತದಿಂ ಮೇಖಳಾಕಳಿತ ರುಚಿರಲುಳಿತಾಧರಪಲ್ಲವೆ ನೋಟ್ಪಿ ದಂಡುಗಳೊಳಂಡುಗೊಂಡು ಸೊರ್ಕಿದಾನೆ ಬರ್ಪಂತೆ ಬಂದು: **ಪಂಪಭಾ**, ೪. ೩೬ ವ)

ಸೊರ್ಕಿಪ್ಪು – [ಕ್ರಿ] ಸೊಕ್ಕಿಸು, ಅಮಲು ಬರಿಸು (ಮಧು ಸೀಧು ಕಟು ಸೀಧು ಪೋ ಪುಳಿತ ಕಳ್ಳಲ್ತುಂ ಕರಂ ಕಯ್ತು ಬರ್ಪುದು ಮಾರೀಚಿ ತೊಡರ್ಪುಳಿಂದೆ ಸರದಿಂ ಕಂಪಿಲ್ಲ ಸೊರ್ಕಿಪ್ಪಲಾಱದು: **ಪಂಪಭಾ**, ೪. ೮೮)

ಸೊರ್ಕಿಸು – [ಕ್ರಿ] ಮತ್ತು ಬರಿಸು (ಕುಡಿದೊಡೆ ಸೊರ್ಕಿಸದವು ನಾಣ್ಗೆಡಿಸದವು ಮನಕ್ಕಲಂಪನೀವುವು: **ಆದಿಪು,** ೫. ೩೨)

ಸೊರ್ಕು – [ಕ್ರಿ] ಅಮಲೇರು (ಅಗರುವ ಧೂಪಧೂಮದೊಳ್ ಸೊರ್ಕಿದ ಸೊರ್ಕುಗಳಾಗಳಲ್ಲಿ ತೊಟ್ಟಗೆ ತಿಳಿದಂತೆ: **ಆದಿಪು,** ೫. ೪೨); [ನಾ] ಅಮಲು (ಪಾಟಿಸಿ ಮಾಡಿದ ಸೊರ್ಕಿವಳಾಟಮೆ ವಲಮೆನಿಸಿ ನೆಗಟ್ದಿ ನೀಲಾಂಜನೆ: **ಆದಿಪು**, ೯. ೩೮); [ಕ್ರಿ] ಮೈಮರೆ (ಅಱಿಮರುಳಂತುಟೆ ಸೊರ್ಕಿನ ತೆಱನಂತುಟೆ ಮನಮೊಱಲ್ದು ಎರ್ದೆಯುರಿವುದು ಮೆಯ್ಯೆಱಗುವುದು ಪದೆವುದು ಆನಿದನಱಿಯನಿದೇಕೆಂದು ಕನ್ನೆ ತಳವೆಳಗಾದಳ್; **ಪಂಪಭಾ**, ೪. ೭)

ಸೊಲ್ವಿನಂ – [ಅ] (ಜನರು) ಮಾತಾಡಿಕೊಳ್ಳುವಂತೆ (ಬಲ್ವರಿಕೆಯೊಳರಿ ನೃಪರ ಪಡಲ್ವಡೆ ತಳ್ತಿಱಿದು ರಣದೊಳಾ ವಿಕ್ರಮಮಂ ಸೊಲ್ವಿನಮಾವರ್ಜಿಸಿದಂ ನಾಲ್ವತ್ತೆರಡಱಿಕೆಗಾಳೆಗಂಗಳೊಳೀತಂ: **ಪಂಪಭಾ,** ೧. ೨೫)

ಸೊವಡು – [ನಾ] ಸೊಗಡು, ಕಂಪು (ಕತ್ತುರಿಯ ತಗುಳ್ದು ಪೊಯ್ವ ಸೊವಡು ಆ ಸೊವಡಿನೊಳ್ ಕಡುಸೊರ್ಕುಸೊರ್ಕಿ ಗಾವರಿಸುವ ತುಂಬಿ ಚೆಲ್ವೆಸೆಯೆ ಕಣ್ಗೆಸೆದತ್ತು ಖಗೇಂದ್ರನೋಲಗಂ: **ಆದಿಪು**, ೨. ೫)

ಸೋ – [ಕ್ರಿ] , ಓಡಿಸು (ತಿರಿವೆಸಳ್ಗಳ್ ಮುಸುಱುವ ಮಧುಕರಂಗಳಂ ಸೋಯೆ ಪರಿವ ಮಕರಂದರಸಂ ಪರಿವೇಷಂಗೊಂಡಂತಿರೆ ಕರಮೆಸೆದುದು ನೃಪನ ಕಯ್ಯ ಲೀಲಾಂಭೋಜಂ: **ಆದಿಪು**, ೪. ೭೦)

ಸೋಂಕಿಲ್ – [ನಾ] ಉಡಿ, ಮಡಿಲು (ಅಂತು ಕಂಡು ಮನಂಗೊಂಡೆತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡೆ ರಾಗಿಸಿ ಸುತನ ಸೂತಕಮಂ ಕೊಂಡಾಡೆ ಅಗುಟ್ದಿರಲ್: **ಪಂಪಭಾ,** ೧. ೯೬ ವ ಮತ್ತು ೧. ೯೭)

ಸೋಂಕು – [ನಾ] ತಾಕುವಿಕೆ, ತಾಕುವಷ್ಟು ಸನಿಹ (ಸೋಂಕಿನೊಳ್ ನಲಿವ ನಲ್ಲಳಲಂಪಮೊಡರ್ಚೆ: **ಆದಿಪು,** ೨. ೪೧); [ನಾ] ಸ್ಪರ್ಶ (ಜವನಾಣೆಗಂ ಆಜ್ಞೆಗಂ ಉಂಟೆ ವಕ್ರಂ ಆ ಖಳನ ತುಟಿವುಮಂ ಸೋಂಕುಮಂ ಆರವಧರಿಪರ್: **ಆದಿಪು**, ೪. ೬೭); [ನಾ] ಆವರಿಸು (ಭೋಂಕೆನೆ ಪಯಣದೊಳೆಮ್ಮಂ ಸೋಂಕಿದ ಶರದೃತುವೆ ಬನದೊಳವತರಿಸಿದುದೋ: **ಆದಿಪು**, ೧೧. ೮೯)

ಸೋಗಿಲ್ – [ನಾ] ಮಡಿಲು (ಕುಡಿವುದಂ ಏೞುಮಂಬುಧಿಯುಮಂ ಕುಲಶೈಲಕುಳಂಗಳುಂ ತಗುಳ್ದಡರ್ವುದನೊಂದಿ ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊಡರ್ವುದಂ: **ಪಂಪಭಾ**, ೧. ೧೪೦)

ಸೋಗೆ – [ನಾ] ನವಿಲುಗರಿ (ಮೊಗಮಂ ತಾವರೆ ಕಣ್ಣಂ ಉತ್ಪಳದಳಂ ಧಮ್ಮಿಲ್ಲಮಂ ಸೋಗೆ ಸೆಳ್ಳುಗುರಂ ಕೇದಗೆ ..

.. ಪೋಲ್ದುವೆನ್ನದೆ: **ಆದಿಪು,** ೬. ೮೫); **[ನಾ]** ತಲೆಯಲ್ಲಿ ಧರಿಸುವ ಕುಚ್ಚು (ನಿಜೆಯಂ ಎಡದ ತೋಳ್ ಸೋಗೆಯಂ ನೂಲ ತೊಂಗಲ್ ದೆಸೆಯಂ ಕಣ್ .. .. ಓರಂತಲೆಯೆ: **ಆದಿಪು,** ೧೧. ೧೬); **[ನಾ]** ನವಿಲಿನ ಪುಚ್ಛ (ಪೊಳೆವಿನಕಿರಣಂ ಮೆಯ್ಗಳನಳುರೆ ಕನಲ್ದಗಿದು ಸೋಗೆಯಂ ಪರಪಿ ನೆಟಿಲ್ಗಳನಾಸೆವಡೆ ಶಿಖಾವಳಿಕುಳ ತಾಂಡವಮೆಸೆದುದು ಆ ಶರತ್ಸಮಯದೊಳಂ: **ಆದಿಪು,** ೧೧. ೫೧); **[ನಾ]** ಕ್ರಮವಾಗಿ ಗರಿ ಮತ್ತು ಗಂಡು ನವಿಲು (ದೇವಾಂಗವಸ್ತ್ರದುಳ್ಳುಡೆಯೊಳ್ ಉಲಿವ ಸೂಸಕದ ತೊಂಗಲ್ವೆರಸು ಎಟಿಲ್ವ ಮುಂದಣ ಸೋಗೆ ಕಾರ್ಗಾಲದ ಸೋಗೆಯಂತೆ ಸೊಗಯಿಸೆ: **ಪಂಪಭಾ,** ೨. ೪೧ ವ)

ಸೋಗೆನವಿಲ್ – **[ನಾ]** ಗಂಡು ನವಿಲು (ಜವಮುಟಿದೊಂದು ಸೋಗೆನವಿಲ್ ಒಯ್ಯನೆ ಕರ್ಕಡೆಗಾಸಿಯಾಗಿ ಪಾಱುವುದುಂ: **ಪಂಪಭಾ,** ೫. ೫೧)

ಸೋತ್ಕ್ಷೇಪಭ್ರೂ – **[ನಾ]** [ಸ+ಉತ್ಕ್ಷೇಪ+ಭ್ರೂ] ಸನ್ನೆ ಮಾಡಿದ ಹುಬ್ಬು (ಭೂವಲ್ಲಭ ಸೋತ್ಕ್ಷೇಪಭ್ರೂ ವಿಲಸಿತ ದತ್ತ ವಾಚನಾದೇಶನಿದಂ ಭಾವಿಸಿಂ ಎಂದತಿ ಮಧುರೋದ್ಭಾವಿತ ಗಂಭೀರನಾದದಿಂ ಬಾಜಿಸಿದಂ: **ಆದಿಪು,** ೧೪. ೪೬)

ಸೋದನ ದೀವಿಗೆ – **[ನಾ]** [ಶೋಧನ ದೀಪಿಕಾ] ಹುಡುಕಲು ಬಳಸುವ ದೀಪ (ಮದನನ ಸೋದನದೀವಿಗೆಯೆನೆ ತೊಳಗಿ ಬೆಳಗಿದಂ ತುಹಿನಕರಂ: **ಪಂಪಭಾ,** ೪. ೫೨)

ಸೋದರಿಕೆ – **[ನಾ]** ಒಡಹುಟ್ಟಿದವರ ನಂಟು (ಎನಿತಱೆಯದಿರ್ದೊಡಂ ಸೋದರಿಕೆಯೆ ಮಿಕ್ಕು ಬರ್ಕುಮಾಗದೇ: **ಪಂಪಭಾ,** ೧೨. ೨೦೭ ವ)

ಸೋನೆ – **[ನಾ]** ಮಳೆ (ಸೋನೆಯಿಂ ಸರಿಗಳಿಂ ತಂದಲ್ಗಳಿಂದ ಅಂದು ಭೂತಳಂ ಏಕಾರ್ಣವಮಾಗೆ ಚಕ್ರಿಯ ಬಲಕ್ಕಾತಂಕಮಂ ಮಾಡಿದರ್: **ಆದಿಪು,** ೧೩. ೫೯)

ಸೋಪಾನ – **[ನಾ]** ಮೆಟ್ಟಿಲು, ಹಂತ (ನೋಯಲೀಯದೆ ನೆಲದಾಕಾಶದೆಡೆಯೊಳ್ ಅಂಬುಗಳಂ ತರತರದಿಂದೆಚ್ಚು ಸೋಪಾನಂ ಮಾಡಿ: **ಪಂಪಭಾ,** ೭. ೩೮ ವ)

ಸೋಪಾನಪದ್ಧತಿ – **[ನಾ]** ಮೆಟ್ಟಿಲುಗಳ ಮೂಲಕ ಮೇಲೇರುವ ಕ್ರಮ (ಉಪಪರ್ವತಂಗಳ್ ಅತಿಪ್ರಕಟಮಾಗೆ ಸೋಪಾನಪದ್ಧತಿಗಳೊಳ್ ಗಿರಿದುರ್ಗಾರೋಹಣಮುಮಂ: **ಆದಿಪು,** ೬. ೬೨ ವ)

ಸೋಮಪಾನಕಷಾಯಿತೋದರ – **[ನಾ]** ಸೋಮರಸ ಪಾನದಿಂದ ಕದಡಿದ ಹೊಟ್ಟೆಯುಳ್ಳವನು (ಅಂತು ಪುರೋಡಾಶ ಪವಿತ್ರೋದರನುಂ ಸೋಮಪಾನಕಷಾಯಿತೋದರನುಂ ಆಗಿ: **ಪಂಪಭಾ,** ೬. ೩೮ ವ)

ಸೋರ್ – **[ಕ್ರಿ]** ಸುರಿದು ಹೋಗು (ಸೋರ್ದುದು ಕೊಳಗೊಂಡ ಗರ್ವರಸಂ ಆ ಭರತೇಶ್ವರಚಕ್ರವರ್ತಿಯಾ: **ಆದಿಪು,** ೧೩. ೭೧)

ಸೋರ್ಮುಡಿ – **[ನಾ]** ಸಡಿಲವಾದ ತಲೆಗೂದಲು (ಬಾಡಿದ ಪೂಮಾಲೆಯೊಡನೆ ಬಟಿಲ್ದ ಸೋರ್ಮುಡಿಯುಂ ಅಡಿಗಡಿಗೆ ತಡತಡವಪ್ಪ ನಡೆಗಳುಂ ಬೆರಸು ವನದೇವತೆಗಳ್: **ಆದಿಪು,** ೧೧. ೭೦ ವ, ೭೧)

ಸೋಲ್ – **[ಕ್ರಿ]** ಮೋಹಗೊಳ್ಳು (ಮನದಳಿಪಿಂ ತಮಾಳಲತಿಕಾಂಗಿಯರಾಟಿಸೆ ಬರ್ದುಗೆಟ್ಟು ಕಾಂಚನ ಲತಿಕಾಂಗಿಯರ್ ಬಯಸೆ ಸೋಲ್ತು .. .. ಸಂದ ನಿನ್ನ ಮುನ್ನಿನ ಚರಿತಂಗಳಂ ನೆನೆಯದಿರ್: **ಆದಿಪು,** ೨. ೪೬)

ಸೋಲ – **[ನಾ]** ವ್ಯಾಮೋಹ (ಒಂದೊಂದೆ ರಸದ ಸೋಲಮದೊಂದೊಂದನೆ ಕೊಲ್ಗುಂ: **ಆದಿಪು,** ೪. ೭೩); **[ನಾ]** ಬೇಟ (ರತಿಯ ಸೋಲದ ಕೇಳಿಕೆಯೊಳ್: **ಪಂಪಭಾ,** ೧.೪); **[ನಾ]** ಮೋಹ (ಸೂಚಮನುರ್ಚಿ ಪುಲ್ಲೆಗಾಟಿಸಿ ಮಲೆತರ್ಪರಲೆಯ ಸೋಲಮಂ ಅಟ್ಟೆಯೊಳ್ ಅರಿಕೇಸರಿ ನಿಂದು ನೋಟ್ಪುದೊಂದರಸಲ್ತೇ: **ಪಂಪಭಾ,** ೫. ೪೪); **[ನಾ]** ಸೋತಾಗ ಕೊಡಬೇಕಾದ ಪಣ (ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ ಲಂಬಣಂ ಪಱೆಯೆ: **ಪಂಪಭಾ,** ೯. ೬೯); **[ನಾ]** ಸೋಲುವಿಕೆ (ಕಾಳೆಗದ ಗೆಲ್ಲದ ಸೋಲದ ಮಾತು ನಿನ್ನೊಳಂ ನರನೊಳಮಿರ್ದುದು: **ಪಂಪಭಾ,** ೧೨. ೧೧೮)

ಸೋಲದ ಕೇಳಿಕೆ – **[ನಾ]** ದಣಿವರಿಯದ ಸಂಭೋಗ ಕ್ರೀಡೆ (ರತಿಯ ಸೋಲದ ಕೇಳಿಕೆಯೊಳ್: **ಪಂಪಭಾ,** ೧.೪)

ಸೋವತಂ ಮಾಡು – **[ಕ್ರಿ]** ಆಹಾರ ನೀಡು, ಬಲಿ ಕೊಡು (ತಿರಭುಕ್ತಿ ವಿಷಯಧೀಶರಪ್ಪ ಶತಬಿಂದುವಿನ ಮಕ್ಕಳಯ್ವರಂ ಗಾಳಿಗೊಡ್ಡಿದ ಪುಲ್ಲ ಬಿಂದುಗಳಂತೆ ನಕುಲಂ ನೆಲ್ಲಕೆ ಸೋವತಂ ಮಾಡಿದಂ: **ಪಂಪಭಾ,** ೧೩. ೪೧ ವ)

ಸೋವಳಿ – **[ನಾ]** ಅಟ್ಟುವಿಕೆ (ನೆಲನಂ ನಿಱೆಗೆಯಂ ನಡೆವೊಂದು ಪದಮುಮಂ ಸೋವಳಿ ಮೇವಳಿ ಬಿಸವಳಿಯಂ: **ಪಂಪಭಾ,** ೫. ೩೬)

ಸೋವು – **[ಕ್ರಿ]** ಅಟ್ಟು (ವದನಾಬ್ಜದ ಕಂಪಂ ಆಳ್ದು ಉಣಲ್ ಬಳಸುವ ತುಂಬಿಯಂ ಪಿಡಿದ ನೆಯ್ದಿಲೊಳ್ ಒಯ್ಯನೆ ಸೋವುತುಂ: **ಪಂಪಭಾ,** ೨. ೧೭); **[ಕ್ರಿ]** ಸೋರಿಹೋಗು (ಮಾಣದೆ ಸೋವ ಇಂದ್ರಿಯಮಂ ದ್ರೋಣದೊಳಾಂತು ಅಲ್ಲಿಯೊಗೆದ ಶಿಶುವಂ ಕಂಡೀ ದ್ರೋಣದೊಳೆ ಪುಟ್ಟಿದೀತಂ ದ್ರೋಣನೆ ಪೋಗೆಂದು ಪೆಸರನಿಟ್ಟಂ ಮುನಿಪಂ: **ಪಂಪಭಾ,** ೨. ೪೩)

ಸೌಂದರ – **[ನಾ]** ಚೆಲುವು (ಏನೆಸೆದುದೊ ಕಟಾಕ್ಷಮಾಲಾಪ್ರಸರಂ ಭ್ರೂಲಾಸ್ಯಸೌಂದರಂ ನರ್ತಕಿಯಾ: **ಆದಿಪು,** ೯. ೩೪)

ಸೌಂದರಿ – **[ನಾ]** ಚೆಲುವೆ (ಏನೆಂದಾಂ ಬಣ್ಣಿಸುವೆನೊ ಸೌಂದರಿಯ ವಿಳಾಸವಿಭ್ರಮಭ್ರೂಲತೆಯಂ: **ಆದಿಪು,** ೯. ೩೩)

ಸೌಖ್ಯಾವಹ – **[ಗು]** ಇಂಪನ್ನುಂಟುಮಾಡುವ (ಶ್ರುತಿಸೌಖ್ಯಾವಹ ವಲ್ಲಕೀಕ್ವಣಿತದೊಳ್ ಕರ್ಪೂರಪಾಳೀವಿಮಿಶ್ರಿತ ತಾಂಬೂಳ ರಸೋತ್ಕಟ ಪ್ರಮದದೊಳ್: **ಆದಿಪು,** ೯. ೧೧೮)

ಸೌಗಂಧಿಕ – **[ನಾ]** ಸುಗಂಧದಿಂದ ಕೂಡಿದ, ಕುಬೇರನ ಕೊಳದ ಪರಿಮಳಯುಕ್ತ ಹೊಂದಾವರೆ (ಅಱುವತ್ತುಕೋಟಿ ಧನದಾನುಚರರಂ ಅತಿರೌದ್ರಭಯಾನಕಮಾಗೆ ಕೊಂದು ಸೌಗಂಧಿಕ ಕಾಂಚನಕಮಳಹರಣಪರಿಣತನಾದಂ: **ಪಂಪಭಾ,** ೮. ೩೧)

ಸೌದರ್ಯ – **[ನಾ]** ಸೋದರಭಾವ (ಸೌದರ್ಯಮಂ ಕಾದ ಪೆಂಪೀ ವನಧಿದ್ವೀಪಾಂತರಾಳಕ್ಷಿತಿಯೊಳೆಸೆಗುಂ ಆಕ್ಷೇಪಮಂ ಮಾಣ: **ಆದಿಪು,** ೧೪. ೮೪)

ಸೌದಾಮಿನಿ – [ನಾ] ಮಿಂಚು (ಸೌದಾಮಿನಿವೊಲ್ ಭೋಂಕೆನೆ ಸುರಕಾಮಿನಿ ರಂಗದೊಳ್ ಅದೃಶ್ಯೆಯಪ್ಪುದುಮಾಗಳ್: **ಆದಿಪು**, ೯. ೪೧)

ಸೌಧರ್ಮಕಲ್ಪ – [ನಾ] [ಜೈನ] ಹದಿನಾರು ಸ್ವರ್ಗಗಳಲ್ಲಿ ಒಂದು (ಮೋಹಾಂಧತಮಸ್ತೋಮಮಂ ಕಳೆದು ಕೃತ ಅನುಶಯಂ ಅನಶನವಿಧಾನದಿಂ ಅಸುವಂ ವಿಸರ್ಜಿಸಿ ಸೌಧರ್ಮಕಲ್ಪದೊಳ್ ದೇವನಾಗಿ: **ಆದಿಪು**, ೨. ೧೭ ವ) [ಸೌಧರ್ಮ ಈಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ ಸಹಸ್ರಾರ ಆನತ ಪ್ರಾಣತ ಅರಣ್ಯ ಅಚ್ಯುತ ಎಂಬ ಸ್ವರ್ಗಗಳು]

ಸೌಧರ್ಮೇಂದ್ರ – [ನಾ] [ಜೈನ] ಸೌಧರ್ಮವೆಂಬ ಸ್ವರ್ಗದ ಅಧಿಪತಿ, ಹದಿನಾರು ಮಂದಿ ಇಂದ್ರರಲ್ಲಿ ಒಬ್ಬ (ವಿಳಾಸಂ ಮಿಗೆ ಸೌಧರ್ಮೇಂದ್ರನಂದಾ ಶಚಿವೆರಸು ಮಹೋತ್ಸಾಹದಿಂ ಬಂದನಾಗಳ್: **ಆದಿಪು**, ೭. ೪೩)

ಸೌಧಾಳಿ – [ನಾ] ಉಪ್ಪರಿಗೆ ಮನೆಗಳ ಸಾಲು (ಓಳಿದೋರಣಮಾಯ್ತು ಹಾರದ ಪಚ್ಚೆಸಾರದ ಮಾಲೆ ಸೌಧಾಳಿಯ ಒಳ್ಗುಡಿಯಾಯ್ತು ಚೀನದ ಸೂಯಿಯಾಣದ ಬಟ್ಟೆ: **ಪಂಪಭಾ**, ೧೪. ೧೫)

ಸೌನಂದಕ – [ನಾ] [ಜೈನ] ಭರತ ಚಕ್ರವರ್ತಿಯ ಏಳು ಅಜೀವರತ್ನಗಳಲ್ಲಿ ಒಂದಾದ ಖಡ್ಗದ ಹೆಸರು (ಉತ್ಪಾತಮಾತ್ರವಿತ್ರಸ್ತ ಸಮಸ್ತಾರಿಮಂಡಲಮುಂ ವೀರಲಕ್ಷ್ಮೀ ಕರ್ಣಪೂರ ನೀಳೇಂದೀವರ ಶ್ಯಾಮಳಮುಮಪ್ಪ ಸೌನಂದಕಮೆಂಬ ಖಡ್ಗರತ್ನಮುಂ: **ಆದಿಪು,** ೧೧. ೩. ವ)

ಸೌಬಲ – [ನಾ] ಗಾಂಧಾರದ ರಾಜ ಹಾಗೂ ಗಾಂಧಾರಿ ಮತ್ತು ಶಕುನಿಯ ತಂದೆ (ಮದುವೆಯಂ ಮಾಡಲೆಂದು ಧೃತರಾಷ್ಟ್ರಂಗೆ ಗಾಂಧಾರರಾಜ ಸೌಬಲನ ಮಗಳಪ್ಪ ಗಾಂಧಾರಿಯಂ ಶಕುನಿಯೊಡವುಟ್ಟಿದಳಂ ತಂದುಕೊಟ್ಟು: **ಪಂಪಭಾ**, ೧, ೮೭, ವ)

ಸೌಭಾಗ್ಯ – [ನಾ] ಸೊಬಗು (ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ ಆದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ ಮದನನ ಸೌಭಾಗ್ಯಮುಮಂ: **ಪಂಪಭಾ**, ೧. ೧೪೯ ವ); [ನಾ] ಐಶ್ವರ್ಯ (ಇದಱೊಳ್ ತನ್ನಿಷ್ಟವಪ್ಪನ್ನಂ ಉತ್ತರಂ ಅಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ: **ಪಂಪಭಾ**, ೧೪. ೬೫)

ಸೌಮನಸ – [ನಾ] [ಜೈನ] ಮೇರುಪರ್ವತದ ಮೇಲಿರುವ ನಾಲ್ಕು ವನಗಳಲ್ಲಿ ಒಂದು, ಉಳಿದ ಮೂರು: ಭದ್ರಶಾಲ, ನಂದನವನ ಮತ್ತು ಪಾಂಡುಕ (ಇದು ಭದ್ರಶಾಲನಂದನಂ ಅದು ನನ್ದನವನಂ ಅದಲ್ತೆ ಸೌಮನಸಂ ಅದೇಂ ತುದಿಯೊಳ್ ಪಾಂಡುಕವೆಸೆದಿರ್ಪುದೊ: **ಆದಿಪು**, ೨. ೨೯); [ನಾ] [ಜೈನ] ರುಚಕಪರ್ವತದ ಪೂರ್ವದಿಕ್ಕಿನ ಎಂಟು ಶಿಖರಗಳಲ್ಲಿ ಒಂದು (ತನ್ಮಹೀಧರವರುಣಾಶಾವಿಶೇಷಕಮಾಗಿರ್ದ ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ: **ಆದಿಪು,** ೭. ೩ ವ)

ಸೌರಭ – [ನಾ] ಸುವಾಸನೆ (ನಿಡುಸುಯ್ದು ನಲ್ಲಳ ಮುಖಾಂಬುಜ ಸೌರಭದೊಳ್ ಪೊದಳ್ದು ಅದೇಂ ಮಗಮಗಿಸಿತ್ತೊ ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ: **ಪಂಪಭಾ**, ೪. ೧೦೭)

ಸೌರಭ್ಯ – [ನಾ] ಸುವಾಸನಾಯುಕ್ತತೆ (ಎಸಗಿದುದು ಸಮೀರಂ ಶೈತ್ಯಸೌರಭ್ಯಮಾಂದ್ಯಾವಸಥಂ: **ಆದಿಪು**, ೮. ೩೫)

ಸೌವಾಗ್ಯ – [ನಾ] ಸೌಭಾಗ್ಯ (ಶ್ರೀ ವೀರಶ್ರೀ ಕೀರ್ತಿಶ್ರೀ ವಾಕ್‌ಶ್ರೀ ಎಂಬ ಪೆಂಡಿರಗಲದೆ ತನ್ನೊಳ್ ಭಾವಿಸಿದ ಪೆಂಡಿರೆನಿಸಿದ ಸೌವಾಗ್ಯದ ಹರಿಗಂ ಎಮ್ಮನೇನೊಲ್ದಪನೋ: **ಪಂಪಭಾ**, ೫. ೧)

ಸೌಷ್ಠವ – [ನಾ] ಗತ್ತು, ದರ್ಪ (ಆನೆಯನೇಱೆ ಸೌಷ್ಠವದೆ ಬರ್ಪ ಅರಿಕೇಸರಿಯ ಒಂದು ಗಾಡಿಯ ಉದ್ದಾನಿ ತಗುಳ್ದು: **ಪಂಪಭಾ**, ೪. ೫೮)

ಸೌಸವ – [ನಾ] ಪರಿಮಳ (ರಮಣೀಯ ರಮಣೀಜನಂ ಬೆರಸು ಪಂಚರತ್ನಂಗಳಿಂ ಕೆದಱಿಸಿ ಸಾಂದಿನ ಸೌಸವದ ಕುಂಕುಮದ ಕತ್ತುರಿಯ ಕದಡಂ ಕದಡಿ: **ಪಂಪಭಾ**, ೫. ೬೦ ವ)

ಸೌಳಗೆವೋಗು – [ಕ್ರಿ] ಸಳ್ ಎಂಬ ಸೀಳುವ ಶಬ್ದ ಮಾಡು (ತೆಗೆದೆಚ್ಚ ಅರ್ಜುನನಂಬು ತೀವೆ ತುದಿಯಿಂ ಬಾಲಂಬರಂ ಪಂದಿ ಸೌಳಗೆವೋಪಂತಿರೆ: **ಪಂಪಭಾ**, ೮. ೧೬)

ಸೌಳನೆ – [ಅ] ಸೌಳಗೆ (ಸೌಳನೆ ಬಾರಿಸಿದಂ ದಲೆಂದೊಡೆ ಇಂ ಕೂರ್ಮೆಯ ಮಾತು ಮೆಚ್ಚುವನಿತರ್ಕೆ ಬಳಾರಿ ಮುರಾಸುರಾರಿಯೇಂ: **ಪಂಪಭಾ**, ೫. ೮೨)

ಸ್ಕಂಧ – [ನಾ] ಹೆಗಲು (ಐರಾವತಸ್ಕಂಧಗತಂ .. .. ಸೌಧರ್ಮೇಂದ್ರನಂದಾ ಶಚಿವೆರಸು ಮಹೋತ್ಸಾಹದಿಂ ಬಂದನಾಗಳ್: **ಆದಿಪು**, ೭. ೪೩)

ಸ್ಖಲಿತ – [ಗು] ಬೀಳುವ (ಮಹೀಪತಿನಿವೇದನ ಸಂಭ್ರಮಗಮನಸ್ಖಲಿತ ವೃದ್ಧಕಂಚುಕಿನಿಕರಮುಂ: **ಆದಿಪು**, ೮. ೩೫ ವ)

ಸ್ಖಳನ – [ನಾ] ಗತಿಭಂಗ (ಚಕ್ರೇಶ್ವರಂಗೆ ಚಕ್ರರತ್ನಸ್ಖಳನಮಂ ಪತಾಕಿನೀಚಕ್ರಪ್ರಧಾನಪ್ರಭುಗಳಱಿಯೆ ಬಿನ್ನಪಂಗೈದೊಡೆ: **ಆದಿಪು**, ೧೪. ೬ ವ)

ಸ್ಖಳಿತ – [ನಾ] ಮುಗ್ಗುರಿಸುವಿಕೆ (ಅಳಕೋತ್ಸಾರಿತ ಕೇಶಸಂಚಯನ ನೀವೀಬಂಧನಾವಿಷ್ಕೃತ ಸ್ಖಳಿತಂ: **ಆದಿಪು**, ೪. ೬೦)

ಸ್ತಂಬಕರಿ – [ನಾ] ಬತ್ತ (ಸ್ತಂಬಕರ್ಯಾದಿ ನಾನಾವಿಧ ಧಾನ್ಯಂಗಳಂ ಪದನಱಿದುಡುಗುವ ಕಣಂ ಮಾಡುವ ಒಕ್ಕುವ ಅಡುಕುವ ಬಯ್ತಿಡುವ ಅಕ್ಕಿ ಮಾಡುವ ವಿವಿಧ ಭಾಜನಂಗಳೊಳ್ ಅಡುವ: **ಆದಿಪು**, ೬. ೭೭ ವ)

ಸ್ತಂಬೇರಮ – [ನಾ] ಆನೆ (ಸೊಗಯಿಸಿರ್ದ ಸೋಪಾನಪಜ್ತಿ ಮಾರ್ಗಂಗಳೊಳ್ ನಿಜಸ್ತಂಬೇರಮಘಟಾಟೋಪಂ ಬೆರಸಿಂಬಾಗಿ ಪೋಗೆವೋಗೆ: **ಆದಿಪು**, ೭. ೫೭ ವ)

ಸ್ತಂಭ – [ನಾ] ಆಧಾರ (ಸುರಿಯೆ ಚತುಃಕುಂಭಂಗಳ್ ಭೂಭುವನಸ್ತಂಭಂ ಮಜ್ಜನಮನೆಯ್ದೆ ನಿರ್ವರ್ತಿಸಿದಂ; **ಆದಿಪು,** ೮. ೭೧); [ನಾ] ನಿಶ್ಚೇಷ್ಟಗೊಳ್ಳುವುದು (ಕಾಮಗ್ರಹ ಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭ ಕಂಪ ಸ್ವೇದ ವೈವರ್ಣ್ಯ ಸಂತಾಪನ ಅನಾಹಾರ ವ್ಯಾಮೋಹ

ಗದ್ಗದ ಅಶ್ರುಮೋಕ್ಷ ಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ,** ೪. ೫೯ ವ)

ಸ್ತಂಭಕ – [ನಾ] ನಿಶ್ಚಲತೆ (ಮನೋವೈಕಲ್ಯ ರೋಮಾಂಚಕ ಸ್ತಂಭಕ ಕಂಪ .. .. ಮೂರ್ಛಾದಿ ನಾನಾವಿಕಾರಂಗಳೊಡನೆ ತೋಱುವುದುಂ: **ಪಂಪಭಾ,** ೪. ೫೯ ವ)

ಸ್ತಂಭನಾಕ್ಷರ – [ನಾ] ಶತ್ರುವನ್ನು ಪ್ರತಿಬಂಧಿಸುವ ಮಂತ್ರಾಕ್ಷರ (ವಿಪಕ್ಷ ಶರಾಸಾರ ಮೋಕ್ಷ ಹೂಂಕಾರ ಸ್ತಂಭಾಕ್ಷರಸ್ತಂಭಿತ ಹೃದಯರಾಗಿ .. .. ನಿಮ್ಮ ಮಗೆದ ಕಾರ್ಯಮಂ ಬಗೆಯಿಂ: **ಆದಿಪು,** ೧೪. ೮೪ ವ)

ಸ್ತನಂಧಯ – [ನಾ] ಮೊಲೆಕುಡಿಯುವ ಶಿಶು, ಮಗು (ಎನ್ನ ಬಯಕೆಯಪ್ಪುದು ಸಂಧ್ಯಾಸ್ತನಂದಯಸಮಾಗಮಸಮಾನಂ: **ಆದಿಪು,** ೩. ೪೩ ವ)

ಸ್ತನಿತ – [ನಾ] ಗುಡುಗಿನ ಶಬ್ದ (ಅಂಭೋಧರಸ್ತನಿತ ಬಹುಳಸ್ನಿಗ್ಧಂಗಳಪ್ಪ ಮದಸ್ತಂಭೇರಮಬೃಂಹಿತಗಳಿಂದಂ: **ಆದಿಪು,** ೧೩. ೪೨ ವ)

ಸ್ತನ್ಯ – [ನಾ] ಮೊಲೆಹಾಲು (ಕೇಸರಿಣೀಸ್ತನ್ಯಮಂ ಅನ್ಯಗಜಪೋತಾನೀಕಂ ಉಂಡಾಡೆ: **ಆದಿಪು,** ೯. ೯೭)

ಸ್ತಬಕ – [ನಾ] ಗೊಂಚಲು (ವನಕುಸುಮಸ್ತಬಕದ ನೆಟಿಲ್ ಇನಿಸಚ್ಚಾಂಬುವಿನೊಳೆಸೆಯೆ ಮಧುಕರಮದು ಭೋಂಕೆನೆ ಪಾಯ್ದು ಎಱಂಕೆ ನಾಂದೊಡೆ: **ಆದಿಪು,** ೧೧. ೬೨)

ಸ್ತವ – [ನಾ] ಸ್ತುತಿ (ನಾನಾ ವಿಶೇಷಸ್ತವದಿಂದಂ ಕೀರ್ತಿಸಲ್ಕೆ ಅತ್ತಳಗಂ ಅಮರನಾಥಂಗಂ ಎಂಬನ್ನೆಗಂ: **ಆದಿಪು,** ೫. ೧೦೦)

ಸ್ತವನ – [ನಾ] ಸ್ತುತಿ (ಎಂದನೇಕ ಸ್ತವನಂಗಳಿಂ ಸ್ತುತಿಸಿ: **ಆದಿಪು,** ೧೩. ೯೦ ವ)

ಸ್ತಿಮಿತತಾರಕ – [ನಾ] ಕಣ್ಣುಗಳನ್ನು ಒಂದೇ ಕಡೆ ನಟ್ಟವನು (ನಿಶ್ಚಳಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕಣ್ಣೊಳೆ ತವೆ ಪೀರ್ವವೊಲೇ ನಿಶ್ಚಳತನು ನಡೆ ನೋಡೆ ಭರತರಾಜಂ ಸೋಲ್ತಂ: **ಆದಿಪು,** ೧೪. ೧೦೫)

ಸ್ತಿಮಿತೇಕ್ಷಣ – [ನಾ] ಸ್ತಿಮಿತತಾರಕ (ಸ್ತಿಮಿತೇಕ್ಷಣವಭ್ರೂಭಂಗಂ ಅನಾಪಾಂಗಾವಲೋಕನಂ ಸುಶ್ಲಿಷ್ಟೋತ್ತಮದಶನಚ್ಛದ ಮಾನಸಂ ಅಮರ್ದುದು ಯೋಗಪ್ರಯೋಗದೊಳ್ ಮುನಿಪತಿಯಾ: **ಆದಿಪು,** ೯. ೮೭)

ಸ್ತುತಿಸು – [ಕ್ರಿ] ಸ್ತೋತ್ರಮಾಡು (ಎಂದನೇಕ ಸ್ತವನಂಗಳಿಂ ಸ್ತುತಿಸಿ: **ಆದಿಪು,** ೧೩. ೯೦ ವ)

ಸ್ತೂಪ – ಗೋಪುರ (ಕದಳಿಕಾ ಆತಪತ್ರ ಚಾಮರ ಕನಕಘಂಟಾ ಕಿಂಕಿಣೀಮನೋಹರಂಗಳುಮಪ್ಪ ಒಂಬತ್ತೊಂಬತ್ತು ಉತ್ತುಂಗ ಸ್ತೂಪಂಗಳಮರ್ದಿರೆ: **ಆದಿಪು,** ೧೦. ೩೪ ವ)

ಸ್ತೋಕ – [ಜೈನ] ಕಾಲ ಅಳೆಯುವ ಪರಿಮಾಣ, ಏಳು ಉಚ್ಛ್ವಾಸಗಳ ಅವಧಿ (ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರಾದಿ ಗಣನಾಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು: **ಆದಿಪು,** ೬. ೬೮ ವ)

ಸ್ತೋಭಂಗೊಳ್ – [ಕ್ರಿ] ಮೈಮರೆ (ಮನಸಿಜನಾವೇಶಮಂತ್ರದಿಂ ಸ್ತೋಭಂಗೊಂಡಂತೆ ಪುರಪುರಂಧ್ರೀಕ್ಷೋಭಮಾಗೆ: **ಆದಿಪು,** ೧೧. ೨೩ ವ); [ಕ್ರಿ] ತಡೆಯಲ್ಪಡು, ಸ್ಥಗಿತಗೊಳ್ಳು (ಅಂತು ಕಾಮದೇವನೆಂಬ ಮಂತ್ರವಾದಿಯ ದಿವ್ಯಮಂತ್ರದಿಂ ಸ್ತೋಭಂಗೊಂಡ ದಿವ್ಯಗ್ರಹದಂತೆ: **ಪಂಪಭಾ,** ೪. ೫೯ ವ)

ಸ್ತೋಭನಾಕ್ಷರ – [ನಾ] ಎದುರಿಗಿರುವುದನ್ನು ಪ್ರತಿಬಂಧಿಸುವ ಮಂತ್ರ (ವಿಪಕ್ಷವಿಶಿಖಿಮೋಕ್ಷಟಂಕಾರಮನೆ ಜಗದುದಗ್ರ ನಿಜವೀರಗ್ರಹ ಸ್ತೋಬನಾಕ್ಷರಮೆಂದುಂ ಬಗೆದು: **ಆದಿಪು,** ೧೪. ೯೮ ವ)

ಸ್ನಿಗ್ಧ – [ಗು] ನಯವಾದ (ಅಪ್ರಿಣಾಕ ಭಾವಿಳಶ್ಲಿಸ್ಥಿತಚಳನುಂ ಶ್ಲಕ್ಷ್ಣ ಸ್ನಿಗ್ಧ ಮೃದು ಬಹಳಚ್ಛವಿಯುಂ ಬಂಧುಜೀವ ಶಾಕ ಪುಷ್ಪ ಸಪದ್ಮಮಹಾರಜಶಂಖಾಸತಳವೆಂಬ ಸಪ್ತದ್ವಾಸ್ಥಿತನುಂ: **ಆದಿಪು,** ೧೨. ೫೬ ವ)

ಸ್ತ್ಯಾನಗೃದ್ಧಿ – [ನಾ] [ಜೈನ] ದರ್ಶನಾವರಣೀಯ ಕರ್ಮದ ಒಂದು ಪ್ರಕಾರ (ಅಂತರ್ಮುಹೂರ್ತದಿಂ ನಿದ್ರಾನಿದ್ರಾಪ್ರಚಲಾಪ್ರಚಲಾ ಸ್ತ್ಯಾನಗೃದ್ಧಿ .. .. ಎಂಬ ಪದಿನಾಱು ಕರ್ಮಪ್ರಕೃತಿಗಳಂ ನಿರವಶೇಷಂ ಕಿಡಿಸಿ: **ಆದಿಪು,** ೧೦. ೧೪ ವ)

ಸ್ತ್ರೀರತ್ನ – [ನಾ] [ಜೈನ] ಚಕ್ರವರ್ತಿಯ ಹದಿನಾಲ್ಕು ರತ್ನಗಳಲ್ಲೊಂದು, ವಿಜಯಾರ್ಧಪರ್ವತದಲ್ಲಿ ಹುಟ್ಟಿದ್ದು (ವಿಜಯಾರ್ಧಪರ್ವತದೊಳ್ ಪುಟ್ಟಿದ ಗಜಾಶ್ವಸ್ತ್ರೀರತ್ನಂಗಳುಂ: **ಆದಿಪು,** ೧೫. ೩ ವ)

ಸ್ತ್ರೀವೇದ – [ನಾ] [ಜೈನ] ಒಂದು ಬಗೆಯ ನೋಕಷಾಯ; ಹೆಣ್ಣುಜೀವಕ್ಕೆ ಗಂಡಿನ ಬಗ್ಗೆ ಮೋಹವುಂಟುಮಾಡುವ ಕರ್ಮ (ಕ್ರಮಕ್ರಮದೊಳೆ ನಪುಂಸಕವೇದಮುಂ ಸ್ತ್ರೀವೇದಮುಂ ಪುಂವೇದಮುಂ ಪುರಾತನ ಸತ್ಕರ್ಮದೊಡನೆ ಹಾಸ್ಯ ರತಿ ಅರತಿ ಶೋಕ ಭಯ ಜುಗುಪ್ಸಾ ಅಭಿಧಾನ ನವನೋಕಷಾಯ ಷಟ್ಕಮುಮಂ ಘಾತಿಸಿ: **ಆದಿಪು,** ೧೦. ೧೪ ವ)

ಸ್ತ್ರೀಸಂಸರ್ಗ – [ನಾ] ಹೆಣ್ಣಿನ ಸಹವಾಸ (ಸ್ತ್ರೀಸಂಸರ್ಗಂ ಸುಖಮೆಂಬೀ ಸಂಸಾರಿಗಳೆ ಜಡರ್ ಅದಪ್ಪೊಡೆ ತನುಗಾಯಾಸಕರಂ ಶುಕ್ಲಾರ್ತವವಾಸಿತಂ ಆಪಾತಮಾತ್ರ ರಮಣೀಯತರಂ: **ಆದಿಪು,** ೬. ೪೪)

ಸ್ಥಗಿತ – [ಗು] ಮುಚ್ಚಿದ, ಆವರಿಸಿದ (ಐರಾವತಸ್ಕಂಧಗತಂ ನಾನಾತಪತ್ರಸ್ಥಗಿತದಶದಿಶಾಮಂಡಲಂ: **ಆದಿಪು,** ೭. ೪೩); [ಗು] ತೆತ್ತಿಸಿದ, ಜೋಡಿಸಿದ (ಇದಱೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ ಮುದಿದಟ್ಟಾಡಿತ್ತು ಅಡಂಗಿತ್ತಿದಱೊಳೆ ಕುರುರಾಜಾನ್ವಯಂ: **ಪಂಪಭಾ,** ೧೨. ೧೫೬)

ಸ್ಥಪತಿ – [ನಾ] ಶಿಲ್ಪಿ (ನಿಜ ರಾಜಧಾನಿಯೊಳೊಸಗೆಯಂ ಮಾಡಿ ವಿವಾಹಮಂಟಪಮಂ ಸ್ಥಪತಿರತ್ನಕ್ಕೆ ವಿರಚಿಸೆಂದು ಬೆಸಸಿದಾಗಳ್: **ಆದಿಪು,** ೪. ೩೦ ವ)

ಸ್ಥಪುಟಿತ – [ಗು] ಏರುತಗ್ಗುಗಳಿಂದ ಕೂಡಿದ (ವಾಜಿಖುರಾಹತಿ ಸ್ಥಪುಟಿತಗ್ರಾವಸ್ಥಳಂ .. .. ದಾಂಟಲಳುಂಬಮಪ್ಪ ವಿಜಯಾರ್ಧಾದ್ರೀಂದ್ರಮಂ ದಾಂಟಿದಂ: **ಆದಿಪು,** ೧೩. ೫೫)

ಸ್ಥಳಪಥ – [ನಾ] ನೆಲದ ಮೇಲಿನ ದಾರಿ (ಪತಿಯ ಜಳಸ್ತಂಭದ ಪರಿಣತಿ ದಲಿಲ್ಲದೊಡೆ ಜಳಪಥಂ ಸ್ಥಳಪಥದಂತೆ ಅತಿ ಸುಗಮಮಾಗದು: **ಆದಿಪು,** ೧೨. ೮೩)

ಸ್ಥಾನಕ್ರಮ – [ನಾ] ಒಂದು ಎರಡು ಮುಂತಾಗಿ ಅನುಕ್ರಮದ ಎಣಿಕೆ (ಗಣಿತಮಂ ದಳಿತೇಂದೀವರನಯನೆಗೆ ಎಡದ

ಕಯ್ಯೊಳ್ ಭವ್ಯಾನಂದಕರಂ ಸ್ಥಾನಕ್ರಮದಿಂದಂ ಪುರುದೇವನಜೆಯೆ ತೋಱೆದಿನಾಗಳ್: **ಆದಿಪು**, ೮. ೬೦)

ಸ್ಥಾನಲಾಭ – [ನಾ] [ಜೈನ] ನಲವತ್ತೆಂಟು ದೀಕ್ಷಾನ್ವಯ ಕ್ರಿಯೆಗಳಲ್ಲಿ ಒಂದು (ಅವತಾರ ವೃತ್ತಿಲಾಭ ಸ್ಥಾನಲಾಭ ಗಣಗ್ರಹಣ ಪೂಜಾರಾಧ್ಯ ಪುಣ್ಯಯಜ್ಞ ದೃಢಚರ್ಯ ಉಪಯೋಗತ್ವಮೆಂಬ ಎಂಟುಂಬೆರಸು .. .. ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ: **ಆದಿಪು** ೧೫.. ೧೬ ವ)

ಸ್ಥಾಪಿತ – [ಗು] ನೆಟ್ಟ, ನಿಲ್ಲಿಸಿರುವ (ಮನಂ ಆರಾಧಿತ ಹೋಮಭೂಮಿ ಪಶುಗಳ್ ಕಾಮಾತುರರ್ ಬಂದ ಮಾವನಿತುಂ ಸ್ಥಾಪಿತಯೂಪಕೋಟಿ: **ಪಂಪಭಾ**, ೪. ೫೯)

ಸ್ಥಾಲಿ – [ನಾ] ಪಾತ್ರೆ (ಐವತ್ತಾಱಂತರದ್ವೀಪಂಗಳು ಏಕಕೋಟಿಪ್ರಮಾಣ ಸ್ಥಾಲಿಗಳುಂ: **ಆದಿಪು**, ೧೫. ೩ ವ)

ಸ್ಥಾವರ – **[ಜೈನ]** ಇದ್ದ ಸ್ಥಳವನ್ನು ಬಿಟ್ಟು ಕದಲಲಾರದ ಏಕೇಂದ್ರಿಯ ಜೀವ, ಸ್ಪರ್ಶನೇಂದ್ರಿಯ ಮಾತ್ರವಿರುವ ಪೃಥ್ವೀಕಾಯ, ಅಪ್‌ಕಾಯ, ತೇಜೋಕಾಯ, ವಾಯುಕಾಯ ಮತ್ತು ವನಸ್ಪತಿಕಾಯ ಎಂಬ ಐದು ವಿಧವಾದ ಜೀವಗಳು (ಸ್ಪರ್ಶನೇಂದ್ರಿಯಮಾತ್ರಂಗಳ್ ಸ್ಥಾವರಂಗಳೆಂಬುವು ಅವು ಪೃಥಿವಿ, ಅಪ್, ತೇಜೋ, ವಾಯು, ವನಸ್ಪತಿಭೇದದಿಂ ಪಂಚವಿಧಂ: **ಆದಿಪು**, ೧೦. ೬೩ ವ); **[ನಾ]** [ಜೈನ] ಏಕೇಂದ್ರಿಯಜನ್ಮಕ್ಕೆ ಕಾರಣವಾದ ನಾಮಪ್ರಕೃತಿ (ತತ್ಪ್ರಾಯೋಗ್ಯಾನುಪೂರ್ವೇಕೇಂದ್ರಿಯ ವಿಕಳೇಂದ್ರಿಯ ಜಾತ್ಯಾತಪೋದ್ಯೋತ ಸ್ಥಾವರಸಾಧಾರಣಸೂಕ್ಷ್ಮಂಗಳೆಂಬ ಪದಿನಾಱು ಪ್ರಕೃತಿಗಳುಮಂ ನಿರವಶೇಷಂ ಕಿಡಿಸಿ: **ಆದಿಪು**, ೧೦. ೧೪ ವ)

ಸ್ಥಾವರನಾಮಕರ್ಮ – ಏಕೇಂದ್ರಿಯಜನ್ಮಕ್ಕೆ ಕಾರಣವಾದ ನಾಮಪ್ರಕೃತಿ (ತ್ರಸನಾಮಕರ್ಮೋದಯವಶಂಗಳ್ ತ್ರಸಕಾಯಂಗಳ್, ಸ್ಥಾವರನಾಮಕರ್ಮಪಾಕಾಧೀನಂಗಳ್ ಸ್ಥಾವರಂಗಳ್: **ಆದಿಪು**, ೧೦ ೬೩ ವ)

ಸ್ಥಾಸಕ – [ನಾ] ಸುಗಂಧಲೇಪನ (ವಿದಗ್ಧವಿಟಂಬೊಲಲೆವ ತೆರೆಗಳ್ ಮೆಲ್ಪಂ ಬವರಿಸಿ ಸೋಂಕುತ್ತುಂ ಕಳೆದುವು ಘನಕುಚಕಳಶಕುಂಕುಮಸ್ಥಾಸಕಮಂ: **ಆದಿಪು**, ೧೧. ೧೪೫)

ಸ್ಥಿತ – [ಗು] ಇರಿಸಿದ್ದ (ಮಣಿಕಿರೀಟರತ್ನಪ್ರದೀಪಗಳಿಂ ಅರ್ಚಿಸಿ ಸಿಂಹಾಸೋಪಸ್ಥಿತಕನಕಪೀಠದೊಳ್ ಕುಳ್ಳಿರ್ದು: **ಆದಿಪು**, ೯. ೯ ವ)

ಸ್ಥಿತಚಕ್ರ – [ನಾ] ಯುದ್ಧರಥವನ್ನು ನಡೆಸುವ ಒಂದು ರೀತಿ (ಮಂಡಳ ಭ್ರಾಂತ ಉದ್ಭ್ರಾಂತ ಸ್ಥಿತಚಕ್ರಮೆಂಬ ರಥಯುದ್ಧದೊಳಂ .. .. ಅತಿ ಪ್ರವೀಣರುಂ ಜಾಣರುಂ ಆಗಿ: **ಪಂಪಭಾ**, ೧೩. ३೮ ವ)

ಸ್ಥಿಮಿತಾಕ್ಷ – [ನಾ] ನೆಟ್ಟ ಕಣ್ಣು (ಸಮದಕರಿಮಕರಹತಿಯಿಂ ಸಮುಚ್ಚಳತ್ ವೀಚಿಮಾಳಿಕಾಸ್ಫಾಳಾಂತಸ್ಸ್ಥಿಮಿತಾಕ್ಷಂಗಳಿಂ ಈ ತಿಮಿ ತಿಮಿಂಗಿಳಂಗೆತ್ತು ನೋಟ್ಪುದೀ ಸ್ಯಂದನಮಂ: **ಆದಿಪು**, ೧೨. ೧೨೩)

ಸ್ಥಿರ – [ನಾ] [ಜೈನ] ನಾಮಕರ್ಮಪ್ರಕಾರಗಳಲ್ಲಿ ಒಂದು, ಇದರಿಂದ ರಸಾದಿ ಧಾತುಗಳು ಶರೀರದಲ್ಲಿ ನೆಲೆ ನಿಲ್ಲುತ್ತವೆ (ಸ್ಥಿರ ಅಸ್ಥಿರ ಶುಭ ಅಶುಭ ಸುಸ್ವರ ದುಸ್ವರ .. .. ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ: **ಆದಿಪು**, ೧೬. ೪೯ ವ)

ಸ್ಥೂರೀಪೃಷ್ಠ – [ನಾ] ನವಾರೂಢ ಅಶ್ವ, ಭಾರ ಹೊರುವ ಕುದುರೆ (ಕುಮುದದಳಧವಳ ಮನೋಜವಕಾಮಚಾರಿ ಸ್ಥೂರೀಪೃಷ್ಠಯೋಜಿತಮುಂ ಅನುಕೂಲ ಶೂರ ರಥಕಲ್ಪಪರಿಣತ ರಥಚೋದಕ ಪರಿಭ್ರಾಜಿತಮುಂ ಆಗಿ: **ಆದಿಪು**, ೧೧. ೧೨ ವ)

ಸ್ಥೂಳ – [ಗು] [ಸ್ಥೂಲ] ತೋರನಾದ (ತುಂಗವನ್ಯಮತಂಗಜದಂತೆ ಆಘಾತನಿಪಾತಿಸಲ್ಲಕೀಭಂಗಮಂ ಮಣಿಮೌಕ್ತಿಕ ನೀಳಸ್ಥೂಳಶಿಲಾ ಪ್ರವಿಭಾಸಿತ ಉತ್ತುಂಗಮಂ: **ಪಂಪಭಾ**, ೧. ೧೧೫)

ಸ್ನಾನ – **[ನಾ]** ಮೀಯುವಿಕೆ, ಜಳಕ (ಸ್ನಾನಾರ್ಥಂ ಒಂದು ಕಳಶಮಂ ನಿಯಮನಿಧಾನಂ ಎಟಲೆ ಪಿಡಿದು ಅಮಳಿನ ಗಂಗಾನದಿಗೆ ವಂದು ಸುರತನಿಧಾನಿ ಅಮರೇಂದ್ರಗಣಿಕೆಯಂ ಮುನಿ ಕಂಡಂ: **ಪಂಪಭಾ**, ೨. ೪೧)

ಸ್ನಾಯು – [ನಾ] ನರ (ಸ್ನಾಯು ಅಲಾಬೂ ದಂಡ ಅಂಗುಷ್ಠ ಅಂಗುಳಿಪ್ರಯತ್ನದಿಂ ಶ್ರವಣರಮಣೀಯ ಕ್ವಣಿತಮೆಂತು ನೆಗಟ್ದಪ್ಪುದು ಅಂತೆ: **ಆದಿಪು**, ೨. ೯ ವ)

ಸ್ನಿಗ್ಧ – [ನಾ] ನುಣುಪಾದ (ಮುಕುಳೀಕೃತಂ ಲಳಿತಮಧುರಂ ಲಜ್ಜಾಳೋಳಂ ಸ್ಮರಾಕುಳಿತಂ ಮನಂದಳಿಪಂ ಅಪಸನ್ಮುಗ್ಧಂ ಸ್ನಿಗ್ಧಂ ವಿಳೋಕನಮೋಪಳಾ: **ಪಂಪಭಾ**, ೪. ೭೭)

ಸ್ಪಂದ – [ನಾ] ಅದುರುವಿಕೆ (ದಕ್ಷಿಣಭುಜಂ ಅಚಿರಪ್ರತಿಪಕ್ಷ ಮಹೀಪಾಲ ವಿಜಯಲಕ್ಷ್ಮೀಲಲನಾ ವಕ್ಷೋಜಸ್ಪರ್ಶನಮಂ ಅನಕ್ಷರಂ ಅಱಿಪಿದುದು ಪತಿಗಮಂದಸ್ಪಂದಂ: **ಆದಿಪು**, ೧೧. ೧೧)

ಸ್ಪರ್ಶ – **[ನಾ]** ಮುಟ್ಟುವುದರಿಂದಾಗುವ ಸಂವೇದನೆ (ಅಂತು ಪರಮಾತಿಶಯ ರೂಪ ರಸ ಗಂಧ ಸ್ಪರ್ಶ ಗುಣವತ್ ಪರಮಾಣುಪರಿನಿರ್ವೃತಮೂರ್ತಿಯಪ್ಪ ಪರಮನ: **ಆದಿಪು**, ೮. ೬ ವ)

ಸ್ಪರ್ಶನ – [ನಾ] ಮುಟ್ಟುವಿಕೆ (ಅಪ್ಪಿಕೊಂಡು ಅಮೃತವರ್ಷಿ ಕರಪರಿಷೇಕದಿಂದೆ ಪುತ್ರಸ್ಪರ್ಶನಂ ಆಪ್ಯಾಯನಕೋಟಿಯಾಗೆ: **ಪಂಪಭಾ**, ೧೩. ೮ ವ)

ಸ್ಪರ್ಶನಾಮಾಷ್ಟಕ – **[ನಾ]** [ಜೈನ] ಎಂಟು ಬಗೆಯ ಸ್ಪರ್ಶನಾಮಕರ್ಮಪ್ರಕೃತಿಗಳು (ಸ್ಪರ್ಶಾಷ್ಟಕಂ ಅಗುರುಲಘುತ್ವ ಚತುಷ್ಕವಿಹಾಯೋಗತಿದ್ವಿಕ ಸ್ಥಿರಾಸ್ಥಿರಶುಭಾಶುಭ ಸುಸ್ವರದುಸ್ವರ ಸುಭಗದುರ್ಭಗ ಪ್ರತ್ಯೇಕಶರೀರಾಯಶಸ್ಕೀರ್ತಿರನಾದೇಯನಿರ್ಮಾಣ ಪರ್ಯಾಪ್ತ ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ: **ಆದಿಪು**, ೧೬. ೨೩ ವ)

ಸ್ಪೃಶ್ಯ – **[ನಾ]** ಆದಿದೇವನು ವಿಭಾಗಿಸಿದ ಮೂರುವರ್ಣಗಳಲ್ಲಿ ಕೊನೆಯದಾದ ಶೂದ್ರರಲ್ಲಿ ಒಂದು ವರ್ಗ (ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ

ಶುಶ್ರೂಷಾನಿಯೋಗಂಗಳುಮಂ .. .. ಉಪದೇಶಂಗೆಯ್ದು: **ಆದಿಪು,** ೮. ೬೪ ವ)

ಸ್ಫಾರ – **[ಗು]** ಅತಿಶಯವಾದ (ಅಂತಸ್ಸ್ಫುರದತಿಸ್ಫಾರಸಮರೋಷ್ಮ ಸಂತಪ್ತಜಲ ಪ್ರತ್ಯೇಕಚುಳುಕಪಾನಮಾತ್ರ ಜಾನುದಘ್ನ ಜಲದುರ್ಗನುಮಾಗಿ: **ಆದಿಪು,** ೧೪. ೫೨ ವ)

ಸ್ಫೀತ – **[ಗು]** ಗಾಲವಾದ (ಅಪೂರ್ವೋರ್ಜಿತಮಾಂಸಸ್ಫೀತೋಪದಿಗ್ಧ ಗಾತ್ರಾಪರನುಂ: **ಆದಿಪು,** ೧೨. ೫೬ ವ)

ಸ್ಫುರತ್ – [ಗು] ಹತ್ತಿಕೊಂಡ (ನರಕನಗರಲಗ್ನ ಆಕಸ್ಮಿಕಾಗ್ನಿ ಸ್ಫುಲಿಂಗಸ್ಫುರತ್ ಅವಿರಳ ಲಾಕ್ಷಾಗೇಹಪೂರ್ವೈಕಭಾವ ತ್ವರಿತವಿಚಳತ್ ಅಸ್ಥಿಗ್ರಂಥಿಸಂಸ್ಥಾನಬಂಧರ್: **ಆದಿಪು,** ೫. ೮೯)

ಸ್ಫುರಿತ – **[ಗು]** ಪ್ರಕಾಶಮಾನವಾದ (ಸ್ಫುರಿತತಪೋಮಯಾನಳನಿಂ ಈಯೊಡಲಂ ನೆಗಟ್ದೀ ಗಿರೀಂದ್ರಕಂದರದೊಳಗಿಂತೆ ದಲ್ ಕರಗಿಪೆಂ: **ಪಂಪಭಾ,** ೮. ೬); ನಡುಗುವ (ವಿರಥಂ ಪಾಂಡ್ಯಂ ಕೋಪಸ್ಫುರಿತಾಧರಂ ಉಡಿದು ಕೆಡೆಯೆ ಪಟಯಿಗೆಯುಂ ಬಿಬ್ಬರ ಬಿರಿಯೆ: **ಪಂಪಭಾ,** ೧೨. ೮೩)

ಸ್ಫುಲಿಂಗ – **[ನಾ]** ಕಿಡಿ, ಕೆಂಡ (ನರಕನಗರಲಗ್ನ ಆಕಸ್ಮಿಕಾಗ್ನಿ ಸ್ಫುಲಿಂಗಸ್ಫುರತ್ ಅವಿರಳ ಲಾಕ್ಷಾಗೇಹಪೂರ್ವೈಕಭಾವ ತ್ವರಿತವಿಚಳತ್ ಅಸ್ಥಿಗ್ರಂಥಿಸಂಸ್ಥಾನಬಂಧರ್: **ಆದಿಪು,** ೫. ೮೯)

ಸ್ಮರ – [ನಾ] ಮನ್ಮಥ (ಅಲರ್ಗಣ್ಣೊಳ್ ಸ್ಮರನಿರ್ದಪನಕ್ಕುಂ ಎಡೆವೋಪಾ ಜೋಡೆ ಕಾಮಂಗೆ ಕಾದಲೆಯಕ್ಕುಂ: **ಪಂಪಭಾ,** ೪. ೮೪)

ಸ್ಮರಕುಳಿಕಾಗ್ನಿ – **[ನಾ]** ಕಾಮವೆಂಬ ಸರ್ಪದ ವಿಷವೆಂಬ ಬೆಂಕಿ (ಎನ್ನಂ ಸ್ಮರಕುಳಿಕಾಗ್ನಿಯೆ ಕೊಂಡಂತಿರೆ ಕೊಂಡುದು ನೋಡ ನಿನ್ನ ನೋಡಿದ ನೋಟಂ: **ಪಂಪಭಾ,** ೮. ೬೫)

ಸ್ಮರಣಮಾತ್ರ – [ನಾ] ಬರಿಯ ನೆನಪಿನಿಂದಲೇ (ಎಂತಾನುಂ ಮೂರ್ಛೆಯಿಂದೆಟ್ಚಿತ್ತು ಕರ್ಣನಂ ನೆನೆದು ಸ್ಮರಣಮಾತ್ರದೊಳೆ ಶೋಕಸಾಗರಂ ಕರೆಗಣ್ಮೆ: **ಪಂಪಭಾ,** ೧೩. ೨ ವ)

ಸ್ಮರಾಕುಳಿತ – **[ನಾ]** [ಸ್ಮರ+ಆಕುಳಿತ] ಕಾಮದಿಂದ ಕ್ಷೋಭೆಗೊಂಡದ್ದು (ಮುಕುಳೀಕೃತಂ ಲಳಿತಮಧುರಂ ಲಜ್ಜಾಳೋಳಂ ಸ್ಮರಾಕುಳಿತಂ ಮನಂದಳಿತಂ ಅಪಸನ್ಮುಗ್ಧಂ ಸ್ನಿಗ್ಧಂ ವಿಳೋಕನಮೋಪಳಾ: **ಪಂಪಭಾ,** ೪. ೭೭)

ಸ್ಮರಿಯಿಸು – [ಕ್ರಿ] ನೆನೆಪಿಸಿಕೊ (ಸ್ಮರಿಯಿಪನಿರ್ಪತ್ತಿರ್ಚ್ಛಾಸಿರ ಬರಿಸಕ್ಕೊರ್ಮೆ ಮನದೊಳುಣಿಸಂ: **ಆದಿಪು,** ೬. ೧೬)

ಸ್ಮರೋನ್ಮಾದ – [ನಾ] ಪ್ರಣಯೋದ್ರೇಕ (ಪೋದುದು ಜೌವನಂ ಶ್ರಮದಿನಾದುದು ಮುಪ್ಪು ಇನಿಸಾದೊಡಂ ಸ್ಮರೋನ್ಮಾದದೊಳಿದೇಕೆ ಗಡಂ ಬಗೆಯಂ ತಗುಳ್ಚಿ ಬೇಳಾದಪಂ: **ಆದಿಪು,** ೨. ೩೫)

ಸ್ಮಿತ – **[ನಾ]** ಮುಗುಳ್ನಗೆ (ರಾಜಪುತ್ರಿಸ್ಮಿತ ಮಧುಮಧುರಾಪಾಂಗ ಜೈತ್ರಾಂಗಜಾಸ್ತ್ರಂಗಳ ಕೋಳಂ ನೂತನಪ್ರೇಮದೆ ನಿಮಿರ್ವೆಡೆಯೊಳ್ ಕಾವನಾವಂ: **ಆದಿಪು,** ೪. ೫೧)

ಸ್ಮೇರಮುಖ – [ನಾ] ನಗುಮುಖ (ಅತ್ಯಂತವಿಸ್ಮಯ ಸ್ಮೇರಮುಖನುಂ ಅತಿರುಚಿರನ್ಯಸ್ತಹಸ್ತಪಲ್ಲವನುಂ .. .. ಆಗಿ ನೋಡುತ್ತುಂ .. .. ಮೂಱುಸೂಟಿಗ್ ಬಲಗೊಂಡು: **ಆದಿಪು,** ೧೦. ೫೨ ವ)

ಸ್ಯಂದನ – **[ನಾ]** ರಥ (ಭರತೇಶ್ವರಂ .. .. ಇಟಿದು ಜಯಸ್ಯಂದನದಿಂದಂ ಜನಿತಾನಂದದೆ ಬನಮಂ ವಿಳಾಸದಿಂ ಪುಗುತಂದಂ: **ಆದಿಪು,** ೧೧. ೭೦)

ಸ್ಯಂದನಬಂಧನ – **[ನಾ]** ರಥದ ಗತಿಸ್ತಂಭನ, ರಥದ ಅಲುಗಾಟವನ್ನು ತಡೆಯುವುದು (ಸ್ಯಂದನಬಂಧನವೆಂಬುದಂ ಇದಂ ಇಂದೀ ವೃಷಸೇನನಿಂದಮಱಿದೆಂ ಇದಂ ಮುನ್ನೆಂದುಂ ಕಂಡಱಿಯೆಂ: **ಪಂಪಭಾ,** ೧೨. ೧೬೬)

ಸ್ಯಂದಮಾನ – [ಗು] ಸುರಿಯುತ್ತಿರುವ (ಆಕುಳವ್ಯಾಕುಳನಯನ ರಾಜತನೂಜ ಸಮಾಜ ವದನಾಭಿಮುಖಚಟುಳ ಸಂಚಾತ್ಯಮಾಣ ಚಾರುಚಾಮರ ನಿಚಯವಿಚಳತ್ ಅವಿರಳಾನಿಳಂಗಳಿಂದಂ: **ಆದಿಪು,** ೧೪. ೯೫ ವ)

ಸ್ಯಂದಿ – **[ನಾ]** ಸುರಿಸುವಂಥದು (ತ್ರಿದಶಸ್ತುತ್ಯಮಿದು ಆದಿದೇವಚರಿತಂ ಕರ್ಣಾಮೃತಸ್ಯಂದಿಯಕ್ಕೆ ಭವ್ಯಾವಳಿಗೆಂದು ಪೇಟೆಸೆ ಬುಧರ್: **ಆದಿಪು,** ೧೬. ೭೯)

ಸ್ರಕ್ – [ನಾ] ಹೂವಿನ ಹಾರ (ನಾನಾ ಭೂಷಣ ವಸ್ತ್ರ ಅನೂನ ಸ್ರಕ್ ರುಚಿ ಸನಾಥನಿಂ ಕಳೆಯಲೊಡಂ ತಾನೆಸೆದುದು: **ಆದಿಪು,** ೯. ೭೮)

ಸ್ರೋತ – [ನಾ] ನದಿ, ಪ್ರವಾಹ (ಲಳಿತೋತ್ಸವಧ್ವಜಾಂಶುಕ ವಿಳಸನಮಂ ಮುಂದೆ ನಿನಗೆ ತೋರ್ಪಂತಿರೆ ಕಣ್ಗೊಳಿಸಿರ್ದುದು ನೋಡ ಹಿಮಾಚಳಶಿಖರದ ಮೇಲೆ ಪಾಯ್ವ ಗಂಗಾಸ್ರೋತಂ: **ಪಂಪಭಾ,** ೭. ೭೩); **[ನಾ]** [ಮದ] ಧಾರೆ (ವಾತ್ಯಾದುರ್ಧರಗಂಧಸಿಂಧುರ ಕಟಸ್ರೋತಃ ಸಮುದ್ಯತ್ ಮದವ್ರಾತೇಂದಿಂದಿರ ಚಂಡ ತಾಂಡವ ಕಲ ಸ್ವಾಭಾವಿಕಶ್ರೇಯಸಃ: **ಪಂಪಭಾ,** ೯. ೯೭)

ಸ್ವಕೀಯ – **[ಗು]** ತನ್ನ (ನೀಂ ಲಲಿತಾಂಗಚರನಪ್ಪುದಱಿಂದಂ ಸ್ವಕೀಯಪ್ರಾಣೇಶ್ವರಿ ತತ್ ಸ್ವಯಂಪ್ರಭಾದೇವಿ .. .. ಶ್ರೀಮತಿಯೆಂಬ ಮಗಳಾಗಿ ಪುಟ್ಟಿದಳ್: **ಆದಿಪು,** ೪. ೧೮ ವ)

ಸ್ವಕೀಯಪ್ರಭುತೆ – **[ನಾ]** ಸ್ವಪ್ರಭುತ್ವ, ತನಗೆ ತಾನೇ ಪ್ರಭುವಾಗುವುದು (ಅಮೂರ್ತರ್ ಚರಮತನು ಸಮಾಕಾರರ್ ಉದ್ಧೂತಲೇಪರ್ ಪ್ರಣುತರ್ .. .. ಸ್ವಕೀಯಪ್ರಭುತೆಯಂ ಎಮಗಂ ಮಾಟ್ಕೆತಿಪ್ರೀತಿಯಿಂದಂ: **ಆದಿಪು,** ೧. ೨)

ಸ್ವಗುರುಸ್ಥಾನಸಂಕ್ರಾಂತಿ – **[ನಾ]** [ಜೈನ] ಒಂದು ಗರ್ಭಾನ್ವಯಕ್ರಿಯೆ, ತನ್ನ ಗುರುವಿನ ಸ್ಥಾನವನ್ನು ಹೊಂದುವುದು (ಸ್ವಗುರುಸ್ಥಾನಸಂಕ್ರಾಂತಿ **.. ..** ಅಗ್ರನಿರ್ವೃತಿ ಎಂಬ ಅಯ್ವತ್ತಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಸ್ವಚ್ಛಂದಮಿಟ್ಟು – **[ನಾ]** ಇಚ್ಛಾಮರಣ, ಬೇಕೆಂದಾಗ ಸಾಯುವುದು (ಅಂತು ಶರಪಂಜರದೊಳ್ ಒಱಗಿಯುಂ ಒಡಲಿಂ ಪತ್ತುವಿಟ್ಟು ಪೋಪ ಜೀವಮಂ ಪೋಗಲೀಯದೆ ಸ್ವಚ್ಛಂದಮಿಟ್ಟು ಅಪ್ಪುದಱಿಂ ಉತ್ತರಾಯಣಂ ಬರ್ಪನ್ನಂ ಇರಿಸಿದಂ: **ಪಂಪಭಾ,** ೧೧. ೪೭ ವ)

ಸ್ವಧಾಕಾರ – [ನಾ] ಹವಿಸ್ಸಿನ ಅರ್ಪಣೆಯ ಕಾಲದಲ್ಲಿ ಹೇಳುವ ಮಂತ್ರ (ಚಾರುತರಯಜ್ಞವಿದ್ಯಾಪಾರಗರ ರವಂಗಳಿಂ ಸ್ವಧಾಕಾರ ವಷಟ್ಕಾರ ಸ್ವಾಹಾಕಾರ ಓಂಕಾರಧ್ವನಿ ನೆಗೞೆ ನೆಗೞ್ದುದಾಹುತಿಧೂಮಂ: **ಪಂಪಭಾ,** ೬. ೩೪)

ಸ್ವಪಕ್ಷ – [ನಾ] ತನ್ನ ಗುಂಪು (ಪರಪಕ್ಷದೂಷಣಪುರಸ್ಸರಂ ಅನೇಕೋಪಪತ್ತಿಗಳಿಂ ಸ್ವಪಕ್ಷಸ್ಥಾಪನಂಗೆಯ್ದು: **ಆದಿಪು,** ೨. ೨೨ ವ)

ಸ್ವಮತಿ – [ನಾ] ಸ್ವಂತ ಬುದ್ಧಿ (ಪೆಱವುಂ ಪ್ರತ್ಯಂಗೋಚಿತಾತ್ಯಂಗ ಮಣಿಭೂಷಣಂಗಳುಮಂ ಸ್ವಮತಿಪರಿಕಲ್ಪನದಿಂ ಯುಗಾರಂಭದೊಳ್ ಪಡೆದು: **ಆದಿಪು,** ೮. ೫೪ ವ)

ಸ್ವಯಂಪ್ರಭವಿಮಾನ – [ನಾ] [ಜೈನ] ಸ್ವರ್ಗಲೋಕದಲ್ಲಿರು ಒಂದು ಸ್ಥಳದ ಹೆಸರು ಶ್ರೀಮತ್ಯಾರ್ಯೆಯು ಸಮ್ಯಕ್ತ್ವಮಾಹಾತ್ಮ್ಯದಿಂ ಸ್ತ್ರೀರೂಪಮಂ ಪತ್ತುವಿಟ್ಟು ತತ್ಸ್ವಯಂಪ್ರಭಾವಿಮಾನದೊಳ್ ಶ್ರೀಧರಂಗೆ ಸಾಮಾನಿಕದೇವಂ ಸ್ವಯಂಪ್ರಭನೆಂಬ ದಿವಿಜನಾದಂ: **ಆದಿಪು,** ೫. ೭೦ ವ)

ಸ್ವಯಂಬರ – [ನಾ] ಸ್ವಯಂವರ, ತನ್ನ ಗಂಡನನ್ನು ಕನ್ಯೆ ಆರಿಸಿಕೊಳ್ಳುವ ಪದ್ಧತಿ (ಅಂತು ಕರ್ಣನುಂ ಶಾಪಹತನಾಗಿ ಮಗುೞ್ದು ಬಂದು ಸೂತನ ಮನೆಯೊಳಿರ್ಪನ್ನೆಗಂ ಇತ್ತಲ್ ಕುಂತಿಗವರ ಮಾವನಪ್ಪ ಕುಂತಿಭೋಜನುಂ ಸ್ವಯಂಬರಂ ಮಾಡೆ: **ಪಂಪಭಾ,** ೧. ೧೦೫ ವ)

ಸ್ವರ – [ನಾ] ಧ್ವನಿ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ); [ನಾ] ಸ್ವತಂತ್ರವಾಗಿ ಉಚ್ಚರಿಸಬಲ್ಲ ವರ್ಣ (ಅಂತು ಅಕಾರಾದಿ ಹಕಾರಾಂತ ಸ್ವರವ್ಯಂಜನಭೇದಭಿನ್ನ ಶುದ್ಧಾಕ್ಷರಂಗಳುಮಂ ಅಯೋಗಹಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ: **ಆದಿಪು,** ೮. ೫೯ ವ)

ಸ್ವರಪರುಷ – [ನಾ] ಗಡಸು ಧ್ವನಿಯವನು (ದೊರೆಕೊಂಡ ಕೃಷ್ಣಲೇಶ್ಯಾ ಪರಿಣಾಮಮೆ ಕೃಷ್ಣವರ್ಣಮಂ ಪುಟ್ಟಿಸಿದಂತಿರೆ ಕರಿಕರ್ ಪೇಡಿಗಳ್ ಅತಿ ಪರುಷ ಸ್ವರಪರುಷ ನಯನಪರುಷಶರೀರರ್: **ಆದಿಪು,** ೫. ೯೧)

ಸ್ವರಾಜ್ಯ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಜಿನನಾಗುವವನಿಗೆ ಮಾಡುವ ಪಟ್ಟಾಭಿಷೇಕ (ಸ್ವರಾಜ್ಯ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಸ್ವಸ್ತಿ – [ಅ] [ಸು+ಅಸ್ತಿ] ಪತ್ರದ ಆರಂಭದಲ್ಲಿನ **'ಮಂಗಳ'** ಎಂಬ ಅರ್ಥದ ಶಬ್ದ (ಸ್ವಸ್ತಿ ಸಮಸ್ತವಿಷ್ಟಪಾಧೀಶ್ವರ ಪುರುಪರಮೇಶ್ವರಚರಣಸರಸಿಜ ರಜೋರಂಜಿತ ಮಣಿಕಿರೀಟಮಕರಿಕಾಚಕ್ರಂ: **ಆದಿಪು,** ೧೪. ೪೬ ವ)

ಸ್ವಸ್ತಿಕ – [ನಾ] [ಜೈನ] ಒಂದು ಮಂಗಳಕರ ಚಿಹ್ನೆ (ವೃಷಭಜಿನಾವತರಣ ಮಂಗಳನಿಹಿತ ಕಳಶದರ್ಪಣದಂತೆ ಪ್ರಶಸ್ತ ಸ್ವಸ್ತಿಕಾಯಮಾನಸ್ವಸ್ತಿಕಾದಿ ನಾನಾ ಮಣಿಮಯ ಪ್ರಾಸಾದಂಗಳೊಳಂ: **ಆದಿಪು,** ೬. ೧೦೬ ವ); [ನಾ] ಹೆಂಗಸರು ತಮ್ಮ ಕೈಗಳನ್ನು ಕತ್ತರಿಯಾಕಾರದಲ್ಲಿ ಮಡಿಸಿ ತೆರೆದ ಮೊಲೆಗಳನ್ನು ಮುಚ್ಚಿಕೊಳ್ಳುವ ಭಂಗಿ (ಮನಸಿಜನೃಪ ಲೀಲಾಲಾಂಛನಂ ಸ್ವಸ್ತಿಕಂ ಸ್ತ್ರೀಜನದೊಳೆಸೆದು ನಿಂದತ್ತು ಉತ್ತರೀಯಾಂತರೀಯಂ ತೊನೆಯೆ ತೊಲಗಿ: **ಆದಿಪು,** ೧೧. ೧೫೨)

ಸ್ವಸ್ತಿಕರ – ಒಳ್ಳೆಯದನ್ನು ಮಾಡುವಂಥದು (ತತ್ ತ್ರಿಷಷ್ಟಿಪಟಲದ ತುದಿಯೊಳ್ ರನ್ನದ ಕಳಶಕ್ಕೆಣೆಯೆಂಬನ್ನೆಗಂ ಅದು ಸುಖಸುಧಾಕರಂ ಸ್ವಸ್ತಿಕರಂ: **ಆದಿಪು,** ೬. ೩೫)

ಸ್ವಸ್ಥಾನ – [ನಾ] [ಜೈನ] ಜೀವಿಯ ಮೂರು ಅವಸ್ಥೆಗಳಲ್ಲಿ ಒಂದು (ನಿರವಶೇಷ ಮೋಹೋಪಶತಮೋದ್ಭೂತ ಯಥಾಖ್ಯಾತ ಚಾರಿತ್ರಸಂಪನ್ನಂ ಅಂತರ್ಮುಹೂರ್ತದಿಂ ಸ್ವಸ್ಥಾನಸ್ಥಿತನಾಗಿ: **ಆದಿಪು,** ೬. ೩೩ ವ)

ಸ್ವಾಧ್ಯಾಯ – [ನಾ] [ಜೈನ] ಶಾಸ್ತ್ರಗಳನ್ನು ತಿಳಿಹೇಳುವುದು (ಉಪಾಸಕಾಧ್ಯಯನ ಅಧ್ಯಾಪನಾನಂತರಂ ಸಕಳಶಾಸ್ತ್ರಂಗಳನೋದುವ ಓದಿಸುವ ನೆನೆವ ಬರೆವ ಪರಮಸ್ವಾಧ್ಯಾಯಮುಂ: **ಆದಿಪು,** ೧೫. ೧೩ ವ)

ಸ್ವಾಭಾವಿಕ – [ಗು] ಸಹಜವಾದ (ವಾತ್ಯಾದುರ್ಧರಗಂಧಸಿಂಧುರ ಕಟಸ್ರೋತಃ ಸಮುದ್ಯತ್ ಮದವ್ರಾತ ಇಂದಿಂದಿರ ಚಂಡ ತಾಂಡವ ಕಲ ಸ್ವಾಭಾವಿಕಶ್ರೇಯಸಃ: **ಪಂಪಭಾ,** ೯. ೯೭)

ಸ್ವಾಮ್ಯವಿಕ್ರಾಂತಂ – [ನಾ] ಆಸ್ತಿಯನ್ನು ಅಪಹರಿಸುವವನು (ಸ್ವಾಮ್ಯಾರ್ಥಂ ಸ್ವಾಮ್ಯವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಥರಾಜ್ಯಹರಂ ಭೃತ್ಯಂ ಯೋನ ಹನ್ಯಾನ್ಸಹನ್ಯತೇ: **ಪಂಪಭಾ,** ೨. ೯೦ ಶ್ಲೋಕ)

ಸ್ವಾಮ್ಯಾರ್ಥ – [ನಾ] ಸ್ವಾಮಿತ್ವವನ್ನು ಬಯಸುವವನು (ಸ್ವಾಮ್ಯಾರ್ಥಂ ಸ್ವಾಮ್ಯವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಥರಾಜ್ಯಹರಂ ಭೃತ್ಯಂ ಯೋನ ಹನ್ಯಾನ್ಸಹನ್ಯತೇ: **ಪಂಪಭಾ,** ೨. ೯೦ ಶ್ಲೋಕ)

ಸ್ವಾಹಾಂಗನಾನಾಥ – [ನಾ] ಸ್ವಾಹಾಂಗನೆಯ ಗಂಡನಾದ ಅಗ್ನಿ (ಆಗಳ್ ಸ್ವಾಹಾಂಗನಾನಾಥಂ ಸಂಪೂರ್ಣ ಮನೋರಥನಾಗಿ ಖಟ್ವಾಂಗನೆಂಬ ಅರಸನ ಯಜ್ಞದೊಳ್ ಆತನ ತಂದ ಘೃತಸಮುದ್ರಮಂ ಕುಡಿದೊಡೆ: **ಪಂಪಭಾ,** ೫. ೧೦೪ ವ)

ಸ್ವಾಹಾಕಾರ – [ನಾ] ಯಜ್ಞದ ವೇಳೆ ಹವಿಸ್ಸಿನ ಅರ್ಪಣೆಯ ಕಾಲದಲ್ಲಿ ಮಾಡುವ **'ಸ್ವಾಹಾ'** ಎಂಬ ಪದೋಚ್ಚಾರ ಮಂತ್ರ (ಚಾರುತರಯಜ್ಞವಿದ್ಯಾಪಾರಗರ ರವಂಗಳಿಂ ಸ್ವಧಾಕಾರ ವಷಟ್ಕಾರ ಸ್ವಾಹಾಕಾರ ಓಂಕಾರಧ್ವನಿ ನೆಗೞೆ ನೆಗೞ್ದುದಾಹುತಿಧೂಮಂ: **ಪಂಪಭಾ,** ೬. ೩೪)

ಸ್ವಿದ್ಯತ್ – [ಗು] ಬೆವರಿದ (ವಿಚಳತ್ ಅಸ್ಥಿ ನಿರ್ಯತ್ ಮಜ್ಜಾ ಶುಷ್ಯತ್ ಕಂಠ ಸ್ವಿದ್ಯತ್ ವದನ ನಿಮೀಳತ್ ನೇತ್ರ ಸೀದತ್ ಗಾತ್ರ ಮುಹ್ಯತ್ ಮಾನಸ ಆಕ್ರಂದತ್ ಸ್ವರ ಪರಿಗತರ್: **ಆದಿಪು,** ೫. ೮೭ ವ)

ಸ್ವೇದ – [ನಾ] ಬೆವರು (ಕಾಮಗ್ರಹಗ್ರಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭಕಂಪಸ್ವೇದವೈವರ್ಣ್ಯಸಂತಾಪನ ಅನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷಮೂರ್ಛಾದಿ ನಾನಾ ವಿಕಾರಂಗಳಂ ಒಡನೊಡನೆ ತೋಱುವುದುಂ: **ಪಂಪಭಾ,** ೪. ೫೯ ವ)

ಸ್ವೇದಜಳ – [ನಾ] ಬೆವರು (ನಿಷ್ಪ್ರಯೋಜನ ಸ್ವೇದಜಳೋದ್ಗಮಮುಂ ನಿಷ್ಪಂದನಾಸಾಸ್ಫುರಿತಮುಂ ನಿಷ್ಕಾರುಣಕಾಯಕಂಪನಮುಂ: **ಆದಿಪು,** ೧೪. ೮೧ ವ)

ಹ

ಹಂಸಕುಳ – [ನಾ] ಹಂಸಪಕ್ಷಿಗಳ ಗುಂಪು (ಓಲಗಕ್ಕೆ ಪುಗುವ ಪೊೞಮಡುವ ವಾರವಿಳಾಸಿನಿಯರ ನೂಪುರಂಗಳ ರವಂಗಳೊಳ್ ನೃಪಭವನೋಪವನ ದೀರ್ಘಿಕಾ ಹಂಸಕುಳಂಗಳ್ ತಳವೆಳಗಾದುವು: **ಪಂಪಭಾ,** ೪. ೪೯ ವ)

ಹಂಸಗತಿ – [ನಾ] ಹಂಸದಂತಹ ಮೆಲುವಾದ ನಡಿಗೆ (ಮಂಗಳಧಾರಿಣಿಯರಾಗಿ ಮುಂದಂ ನಡೆವ ಆಶಾಂಗನೆಯರಿಂದೆ ದಿವಿಜೇಂದ್ರಾಂಗನೆ ಕರಮೆಸೆದು ಹಂಸಗತಿಯೊಳ್ ಬಂದಳ್: **ಆದಿಪು,** ೭. ೪೮)

ಹಂಸಗ್ರೀವ – [ನಾ] ಹಂಸದ ಕೊರಳು (ಹಂಸಗ್ರೀವನಿಹಿತ ಏಕಪಾದಂ ಇಳಾವಂದ್ಯಂ ಅನಿಂದ್ಯಂ ಅಬ್ಜಗರ್ಭಂ ಬಂದಂ: **ಪಂಪಭಾ,** ೧೨. ೧೩೮)

ಹಂಸಗ್ರೀವನಿಹಿತ ಏಕಪಾದಂ – ಹಂಸಪಕ್ಷಿಯಲ್ಲಿ ಇಟ್ಟ ಒಂದು ಪಾದವುಳ್ಳವನು (ಹಂಸಗ್ರೀವನಿಹಿತ ಏಕಪಾದಂ ಇಳಾವಂದ್ಯಂ ಅನಿಂದ್ಯಂ ಅಬ್ಜಗರ್ಭಂ ಬಂದಂ: **ಪಂಪಭಾ,** ೧೨. ೧೩೮)

ಹಂಸಧವಳ – [ನಾ] ಹಂಸದಂತೆ ಬೆಳ್ಳಗಿರುವ (ತನ್ನ ಪವಡಿಸುವ ಮಾಡಕ್ಕೆ ವಂದು ಹಂಸಧವಳಶಯ್ಯಾತಳದೊಳ್ ಗಂಗಾನದೀಪುಳಿನಪರಿಸರಪ್ರದೇಸದೊಳ್ ಮಱೆದೊಱಗುವ ಐರಾವತದಂತೆ ಪವಡಿಸಿ: **ಪಂಪಭಾ,** ೪. ೧೧೦ ವ)

ಹಂಸವೃದ್ಧ – [ನಾ] ಮುದಿ ಹಂಸ (ಹಂಸವೃದ್ಧನಂ ಇನಿಸಂ ನೆನೆಯಿಸಿ ಕೊಳದೊಳಗಣ ಸಿತವನರುಹಲಕ್ಷ್ಮಿಯುಮನಿನಿಸುಂ ತನಗೊಳಕೊಂಡಂ: **ಆದಿಪು,** ೭. ೯೯)

ಹಟತ್ – [ಗು] ಹೊಳೆಯುವ (ಘಟಾಘಟಿತ ಹಟತ್ ವಿರೋಧಿರುಧಿರಪ್ಲವಲಂಪಟ ಸಂಕಟೋತ್ಕಟಂ: **ಪಂಪಭಾ,** ೧೧. ೧೪೬)

ಹಟತ್ಕಿರೀಟ – [ನಾ] ಹೊಳೆಯುವ ಕಿರೀಟ (ಕಟಕ ಕಟಿಸೂತ್ರ ಕುಂಡಲ ಹಟತ್ಕಿರೀಟ ಅಂಗದಾದಿ ಮಣಿಭೂಷಣ ಭಾಜಟಿಳಿತ ಮೂರ್ತ್ಯುತ್ಕರ್ಷಂ ಸ್ಫುಟಹರ್ಷಂ ತನ್ನ ವರ್ಷವರ್ಧನ ದಿನದೊಳ್: **ಆದಿಪು,** ೨. ೨)

ಹತಪ್ರತಿಜ್ಞ – [ನಾ] ಪ್ರತಿಜ್ಞಾಭಂಗರಾದವರು (ಆತ್ಮೀಯವಿದ್ಯಾ ಗರ್ವಪರ್ವತಂ ಅವರ ವಚೋನಿರ್ಘಾತದಿಂ ನುಚ್ಚುನುಱೆಯಾಗಿ ಪೋದೊಡೆ ಹತಪ್ರತಿಜ್ಞರುಂ ಗಳಿತಗರ್ವರುಂ ಆಗಿ: **ಆದಿಪು,** ೩. ೭೫ ವ)

ಹತವಿಹತ – [ನಾ] ಹೊಡೆತ ಮರುಹೊಡೆತ (ವಿದ್ವಿಷ್ಟವಿದ್ರಾವಣನ ಮೊನೆಯಂಬಿನ ಏಱೆಂಗೆ ಅಳ್ಕಿ ಹತವಿಹತ ಕೋಳಾಹಳರಾಗಿ: **ಪಂಪಭಾ,** ೫. ೮೮ ವ)

ಹತಿ – [ನಾ] ಹೊಡೆತ (ವಿನತಾಪುತ್ರನ ವಜ್ರ ತುಂಡ ಹತಿಗಂ ಮೆಯ್ಯಾಂತು ಕಂಡಂಗಳುಳ್ಳಿನಂ ಅಂಗಂಗಳಂ ಒಡ್ಡಿ ಒಡ್ಡಿ ತನುವಂ ಕೊಟ್ಟಂತು: **ಪಂಪಭಾ,** ೪. ೨೬); **[ನಾ]** ವಧೆ, ಹತ್ಯೆ (ಕರ್ಣಹತಿಯೊಳ್ ತನಗಟ್ಟುಱನೀಯೆ ಬಂದನಂದು ಅರಮನೆಗೆ ಅಚ್ಯುತಂಬೆರಸು ಅಳುರ್ಕೆಯಿಂ ಅಮ್ಮನ ಗಂಧವಾರಣಂ: **ಪಂಪಭಾ,** ೧೨. ೨೨೧)

ಹತೋಶ್ವತ್ಥಾಮಾ – [ಹತಃ+ಅಶ್ವತ್ಥಾಮಾ] ಅಶ್ವತ್ಥಾಮ ಹತನಾ[ದನು/ಯಿತು] (ಸಾಮಜಮಶ್ವತ್ಥಾಮಂ ನಾಮದಿಂದ ಒಂದಟೆದೊಡೆ ಅಲ್ಲಿ ಕಂಡು ಹತೋಶ್ವತ್ಥಾಮಾ ಎನೆ: **ಪಂಪಭಾ,** ೧೨. ೨೭)

ಹಯ – [ನಾ] ಕುದುರೆ[ಸೈನ್ಯ] (ಸರಳ ಪೊದಳ್ದ ಬಲ್ಸರಿಯ ಕೋಳ್ಗಿರಲಾಱದೆ ತೆರಳ್ದು ದುರ್ಧರ ಹಯಂ ಅಟ್ಟೆ ಸಂದಣಿಸಿ ಸಂದಣಿ ಕೋಳ್ಗುದಿಗೊಂಡು: **ಪಂಪಭಾ** ಪರಿಷತ್ತು, ೩. ೭೦)

ಹಯವಲ್ಲನ – [ನಾ] ಕುದುರೆಯ ಒಂದು ಬಗೆಯ ನಡಿಗೆ (ಅದಂ ಗುಣಾರ್ಣವನಿಡಲೊಲ್ದನಿಲ್ಲ ಹಯವಲ್ಲನ ಸಚಳರತ್ನಕುಂಡಳಂ: **ಪಂಪಭಾ,** ೫. ೫೧)

ಹಯಹೇಷಿತ – [ನಾ] ಕುದುರೆಯ ಕೆನೆತ (ಮದಸ್ತಂಭೇರಮ ಬೃಂಹಿತಂಗಳಿಂದಂ ಯುಗಪದಾಸ್ಫಾಲಿತ ಅನೇಕ ದುಂದುಭಿಧ್ವನಿ ಮಧುರಗೀತಂಗಳಪ್ಪ ಹಯಹೇಷಿತಂಗಳಿಂದಂ: **ಆದಿಪು,** ೧೪. ೯೬ ವ)

ಹಯೋಪಾಯ – [ನಾ] ಅಶ್ವವಿದ್ಯೆ (ಹಯೋಪಾಯಕುಶಲರಪ್ಪ ಗಾಂಗೇಯರ್ ಅಱಿಪಿದ ಮಾತಂ ಏಕಾಂತದೊಳ್ ಅಱಿಪುವುದುಂ: **ಪಂಪಭಾ,** ೧೨. ೮೮ ವ)

ಹಯೌಘ – [ನಾ] ಕುದುರೆ ಸೈನ್ಯ (ಮನಮುಳ್ಳುನ್ಮದ ಗಂಧಸಿಂಧುರಚಯಂ ಚಂಡಾಜಿವಿಕ್ರಾಂತಮರ್ತ್ಯನಿಳಾಕ್ರಾಂತ ಹಯೌಘಂ: **ಆದಿಪು,** ೪. ೯೧)

ಹರ – [ನಾ] ತೀರ್ಥಂಕರ (ತಮೋಹರನಾಗಿರ್ದುದಱಿಂ ಹರಂ ಭವಹರಂ ಮಾಣಿಕ್ಯದೇವಂ ವಸುಂಧರೆಗೊರ್ಬನೆ ದೇವನಾಗಿರೆ: **ಆದಿಪು,** ೧೬. ೬); **[ನಾ]** ಶಿವ (ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಟಿಕ್ತೆ ನನ್ನಿಯ ನುಡಿಯಂ ಕಿಡೆ ನೆಗೞೆ ನಾನುಮೆರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ: **ಪಂಪಭಾ,** ೧. ೮೨)

ಹರಗಳ – [ನಾ] ಶಿವನ ಕೊರಳು (ಪಿರಿದುಂ ಬನ್ನದ ಕರ್ಪಸೆದುದು ತೊಱೆಗಿನ್ನುಂ ಹರಗಳ ತಮಾಳನೀಳಚ್ಛವಿಯಿಂ: **ಪಂಪಭಾ,** ೫. ೫೪)

ಹರಣ – [ನಾ] [ಬಾಣ] ಬಿಡುವುದು (ಶರಸಂಧಾನ ಆಕರ್ಷಣ ಹರಣಾದಿ ವಿಶೇಷವಿವಿಧಸಂಕಲ್ಪಕಳಾಪರಿಣತಿಯಂ ಮೆಱೆದುದು: **ಪಂಪಭಾ,** ೧೨. ೧೮೬)

ಹರಣಂಗೆಯ್ – [ಕ್ರಿ] ಕೊಲ್ಲು (ಪಾಱುವ ಪಾಱುಂಬಳೆ ಕೊಳೆ ಜೀಱಿಟ್ಟಂಬರಕೆ ತಲೆ ಸಿಡಿಲ್ದೊಡಂ ಆ ಕಾಯ್ದಾಱದೆ ಹರಣಂಗೆಯ್ದುವು ಜಾಱಲ್ಲದೆ ಜೋದರ ಅಟ್ಟೆಗಳ್ ಕೆಲವಾಗಳ್: **ಪಂಪಭಾ,** ೧೦. ೯೫)

ಹರಬರ್ಪನ್ನಂ – ಶಿವನು ಪ್ರತ್ಯಕ್ಷನಾಗುವವರೆಗೂ (ಸಂಕರನ ನೀನಾರಾಧಿಸು ಎಂದು ಇಂತಿದಂ ಮುನಿಪರಾಶರಂ ಒಲ್ದು ಪೇೞೆ ಹರಬರ್ಪನ್ನಂ ತಪಂಗೆಯ್ದಪೆಂ: **ಪಂಪಭಾ.** ೮. ೫)

ಹರವೃಷಭ – [ನಾ] ಶಿವನ [ವಾಹನವಾದ] ಎತ್ತು (ದೇವೇಂದ್ರನಟ್ಟಿದ ಕಲ್ಪವೃಕ್ಷದ ತಳಿರ್ಗಳಂ ಐರಾವತದ ಹರವೃಷಭದ ಕೋಡ ಮಣ್ಣುಮಂ ಆಕಾಶಗಂಗೆಯ ನೀರುಮಂ: **ಪಂಪಭಾ,** ೧೪. ೧೭ ವ)

ಹರಿ – [ನಾ] ಕುದುರೆ (ಸಾರಥಿ ರಥಮಂ ಲೀಲೆಯೆ ಚೋದಿಸೆ ತೆರೆಗಳ ಮಾಲೆಯನವಯವದೆ ದಾಂಟಿ ಪರಿದುವು ಹರಿಗಳ್: **ಆದಿಪು,** ೧೨. ೮೧); **[ನಾ]** ವಿಷ್ಣು (ಕಿಡುಗುಮೆ

ರಾಜ್ಯಂ ರಾಜ್ಯದ ತೊಡರ್ಪದೇವಾಟಿಗೆ ನನ್ನಿಯ ನುಡಿಯಂ ಕಿಡೆ ನೆಗಟಿಗೆ ನಾನುಮೆರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ: **ಪಂಪಭಾ,** ೧. ೮೨); **[ನಾ]** ಸಿಂಹ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ); **[ನಾ]** ಕೃಷ್ಣ (ಪುಸಿಯೆನೆ ರಥಮಂ ಹರಿ ಚೋದಿಸುವಂತೆವೊಲಿರ್ದು ಅದೆಂತು ನರನಂ ಗೆಲಿಪಂ ವಿಸಸನದೊಳ್: **ಪಂಪಭಾ,** ೧೨. ೯೧); **[ನಾ]** ಇಂದ್ರ (ಕಸವರಗಲಿತನದ ಪೊದಲ್ದ ಪರಮಕೋಟಿಗೆ ಪೆಱರಾರ್ ಸಲೆ ಕರ್ಣನಲ್ಲದೆ ಎನಿಸುವ ಕಲಿತನಮಂ ಹರಿಗೆ ಕವಚಮಿತ್ತುದೆ ಪೇೞ್ಗುಂ: **ಪಂಪಭಾ,** ೧೨. ೯೯)

ಹರಿಕಾ – **[ನಾ]** ಅಲೆ (ಭಯಂಕರಶಿಂಶುಮಾರ ವಿಕಟದಂಷ್ಟ್ರಾ ಕ್ರಕಚಪಾಟ್ಯಮಾನ ನಾರಕನಿಕರ ರುಧಿರಚ್ಛಟ ಅಚ್ಛಾರುಣಿಸಲಿಲ ಹರಿಕಾನಿಕರಕರಾಳೆಯುಂ: **ಆದಿಪು,** ೫. ೮೭ ವ)

ಹರಿಕೇತು – **[ನಾ]** [ಅಶ್ವತ್ಥಾಮನ ರಥದ] ಸಿಂಹಧ್ವಜ (ಉಗ್ರಧನು ಕರಾಗ್ರದೊಳಿರೆ ಅಳ್ಳಿಜೆಯೆ ಹರಿಕೇತು ನಭದೊಳ್ ಮಿಱುಗುವ ಚೆಂಬೊನ್ನ ರಥಧ ಅಶ್ವತ್ಥಾಮಂ: **ಪಂಪಭಾ,** ೧೦. ೫೭)

ಹರಿಗ – **[ನಾ]** **'ಪಂಪಭಾರತ'** ದಲ್ಲಿನ ಅರ್ಜುನ (ಭಾರತಂ ಕಲಹಂ ಇದಿರ್ಚುವಂ ಹರಿಗಂ ಅಪ್ಪೊಡೆ ಮೊಕ್ಕಳಮೇಕೆ ನೀಂ ಪಳಂಚಲೆದಪೆಯಣ್ಣ: **ಪಂಪಭಾ,** ೧೦. ೨೩)

ಹರಿಚಂದನ – **[ನಾ]** ಶ್ರೀಗಂಧ (ಸರಳ ತಮಾಳ ತಾಳ ಹರಿಚಂದನ ನಂದನ ಭೂಜರಾಜಿಯಿಂ ಸುರಿವ ಅಲರೋಳಿ ತದ್ವನಲತಾಂಗಿಯ ಸೂಸುವ ಸೇಸೆಯಾಯ್ತು: **ಪಂಪಭಾ,** ೫. ೫೨)

ಹರಿಣ – **[ನಾ]** ಜಿಂಕೆ (ಉದಯಗಿರಿ ಕಟಕ ಕುಹರ ಪರಿಕರ ನಿಶಾಕರಂ ಹರಿದಳಿತ ನಿಜ ಹರಿಣ ರುಧಿರನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ: **ಪಂಪಭಾ,** ೪. ೪೯ ವ)

ಹರಿಣಿ – **[ನಾ]** ಹೆಣ್ಣು ಜಿಂಕೆ (ನಿಮಿರ್ವ ಸುಯ್ಗಳಿಂ ಕುಸಿಯುತ್ತುಂ ಶರಪಾಶಂಗಳ ನಡುವಣ ಹರಿಣಿಯವೋಲ್ ಮನದೊಳಾಗಳ್ ಆಕುಳೆಯಾದಳ್: **ಆದಿಪು,** ೪. ೫೦)

ಹರಿತಾಂಕುರ – **[ನಾ]** ಎಳೆಯ ಗರಿಕೆ, ಹಸಿರು ಮೊಳಕೆ (ಹರಿತಾಂಕುರ ಫಳಪುಷ್ಪೋತ್ಕರಂಗಳಂ ಪೊಸತೆ ಮೊಳೆತ ಧನ್ಯಂಗಳಂ ಧಾನ್ಯಂಗಳಂ ಆ ಧರಣೀಶಂ ಕೆದಱಿಸಿದಂ ರಾಜಗೇಹದೊಳಗಂ ಪೊಱಗಂ: **ಆದಿಪು,** ೧೫. ೭)

ಹರಿತಾಳಪಂಕ – **[ನಾ]** ಅರಿದಾಳದ ಗಂಧ (ಹರಿತಾಳಪಂಕ ಪಿಂಗಳ ವಿಲಂಫಿತ ಶಿಲಾಸ್ತಂಭ ವಿಭ್ರಮಭ್ರಮರಮಾನಿತಂಬ ಶಿಖರಿತರಂಗಿತ': **ಆದಿಪು,** ೧೩. ೪೫ ವ)

ಹರಿದ್ರ – **[ನಾ]** ಅರಿಸಿನ (ಸರ್ವಾಂಗೀಣ ಸಾಂದ್ರ ಹರಿದ್ರಲಿಪೇನವಿಲಿಪ್ತ ಹರಿತಾಳಪಂಕಪಿಂಗಳವಿಲಂಫಿತ: **ಆದಿಪು,** ೧೩. ೪೫ ವ)

ಹರಿನಖಾಂಕುರ – **[ನಾ]** ಸಿಂಹದ ಪಂಜ (ಕೊರಲೊಳ್ ಶಾರ್ದೂಲ ನಖಾಂಕುರಂಗಳುಂ ಹರಿನಖಾಂಕುರಂಗಳುಂ ಅಂದೇಂ ಕರಮೆಸೆದಿರ್ದುವೊ ಶೌರ್ಯಾಂಕುರಂಗಳೆಂಬಿನಂ ಆದಿದೇವಾತ್ಮಜನಾ: **ಆದಿಪು,** ೮. ೪೦)

ಹರಿನೀಲಮಣಿ – **[ನಾ]** ಹಸಿರು–ನೀಲಿಯ ಮಣಿ (ಶಾಳೀ ಹರಿನೀಲಮಣಿಕಿರಣಾಳಿ ಪೊದಳ್ದೆಸೆಯೆ ರಾಹುಗೆತ್ತು: **ಆದಿಪು,** ೬. ೧೦೫)

ಹರಿನ್ಮಣಿ – **[ನಾ]** [ಹರಿತ್+ಮಣಿ] ಪಚ್ಚೆ (ಹರಿನ್ಮಣಿವರ್ಣನಂ ನೆರೆದುದಿದು ಮೇಣ್ ಕ್ಷಾತ್ರಂ ತೇಜಂ ಧರಾಧಿಪರೂಪದಿಂ ಧರೆಗೆ: **ಆದಿಪು,** ೧೪. ೪೪)

ಹರಿಪೀಠ – **[ನಾ]** ಸಿಂಹಾಸನ (ಇರೆ ಹರಿಪೀಠದೊಳ್ ಭರತಂ ಆದರದಿಂ ಬೆಸಗೊಂಡುದಂ ಜಿನೇಶ್ವರಮತದಿಂದಂ ಆ ವೃಷಭಸೇನಗಣಾಗ್ರಣಿ ಪೇೞ್ದುದಂ: **ಆದಿಪು,** ೧. ೪೧)

ಹರಿಪೋತ – **[ನಾ]** ಸಿಂಹದ ಮರಿ (ಹರಿಪೋತಮಂ ಬೆದಱುತುಂ ಕರಿಪೋತಂ ಅವುಂಡುಗರ್ಚಿ ಕೇಸರಿಣಿಯಂ ಕೆಚ್ಚಲಂ ತುಡುಕುತಂ ಪರಿದತ್ತು: **ಪಂಪಭಾ,** ೭. ೮೦)

ಹರಿಹರಹಿರಣ್ಯಗರ್ಭ – **[ನಾ]** ವಿಷ್ಣುಶಿವಬ್ರಹ್ಮರು (ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಟಿಗೆ ನನ್ನಿಯ ನುಡಿಯಂ ಕಿಡೆ ನೆಗಟಿಗೆ ನಾನುಮೆರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ: **ಪಂಪಭಾ,** ೧. ೮೨)

ಹಲ – **[ನಾ]** ನೇಗಿಲು (ಶತಸಹಸ್ರಕೋಟಿ ಹಲಂಗಳುಂ ಮೂಱುಕೋಟಿ ಗೋಮಂಡಲಂಗಳುಂ:**ಆದಿಪು,** ೧೫. ೩ ವ)

ಹವ್ಯಾಮೃತ – **[ನಾ]** ಹವಿಸ್ಸು ಎಂಬ ಅಮೃತ (ಆ ಬ್ರಾಹ್ಮಣಸಮಿತಿ ಬೇಳೆ ದೇವರ್ ತಣಿಯುಂಡರ್ ನೆರೆದು ದಿವ್ಯ ಹವ್ಯಾಮೃತಮಂ: **ಪಂಪಭಾ,** ೬. ೩೭)

ಹಸಿತ – **[ಕ್ರಿ]** ನಗುವ (ಪ್ರವಾಹ ಅತ್ಯುಷ್ಣತಾಪಹಸಿತ ಪ್ರಳಯಕಾಲ ಪ್ರೌಢತರತರಣಿಯಂ ವೈತರಣಿಯಂ ಪೊಕ್ಕಾಗಳ್: **ಆದಿಪು,** ೫. ೮೭ ವ)

ಹಸ್ತ – **[ನಾ]** ಸೊಂಡಿಲು (ಸಲಿಲಕ್ರೀಡಾಭವೋದ್ಧೃತ್ ಜಳಕಣನಿಕರಾಕಾರ ಮತ್ತದ್ವಿಪೇಂದ್ರಾವಳಿ ಹಸ್ತಾಗ್ರೋಚ್ಚಳತ್ ಶೀಕರಸಮುದಯಂ: **ಆದಿಪು,** ೧೩. ೮)

ಹಸ್ತಕಟಕ – **[ನಾ]** ಕೈಕಡಗ, ಹಗುರ ಎಂಬ ಆಶಯ (ನಿಜಾನ್ವವಾಯ ಭೂಭರಮನದೊಂದು ಹಸ್ತಕಟಕೋಪಮಂ ಎಂಬಿನಿತಾಗೆ ತಾಳ್ದಿಕೊಂಡಿರೆ: **ಆದಿಪು,** ೩. ೭೮)

ಹಸ್ತಕೌಶಲಕಳಿತ – **[ನಾ]** ಕೈಗಳು ನಿಪುಣತೆಯಿಂದ ಮಾಡಬಹುದಾದುದು (ಹಸ್ತಕೌಶಲಕಳಿತಮಪ್ಪ ಚಿತ್ರಕಳಾಪ ಪರಿಚ್ಛೇದ್ಯಾದಿ ಸಮನ್ವಿತಮಪ್ಪ ಶಿಲ್ಪಮುಮಂ: **ಆದಿಪು,** ೮. ೬೪ ವ)

ಹಸ್ತನ್ಯಸ್ತ – ಕೈಗೊಪ್ಪಿಸಿದ (ದಂಡನಾಯಕಂ ತೋಱಿದನೇಕ ಕ್ಷತ್ರಿಯಪುತ್ರಕುಲಧನಂಗಳಂ ಕೈಕೊಂಡು ಕೋಶಾಧ್ಯಕ್ಷ ಹಸ್ತನ್ಯಸ್ತಂಗಳ್ಮಾಡಿ: **ಆದಿಪು,** ೧೩. ೮೦ ವ)

ಹಸ್ತಸ್ವಸ್ತಿಕ – **[ನಾ]** ಅಡ್ಡಡ್ಡಲಾಗಿ ಕೈಗಳನ್ನಿಡುವುದು (ಉತ್ತರಯಾಂತರೀಯಂ ಕೊನೆಯೆ ತೊಲಗಿ ನಿಂದಿರ್ದಲ್ಲಿ ತಂದಿತ್ತುದುಚ್ಚಸ್ತನದೊಳಮರ್ದ ಹಸ್ತಸ್ವಸ್ತಿಕಂಗಳ್ ಬೆಡಂಗಂ: **ಆದಿಪು,** ೧೧. ೧೪೮)

ಹಸ್ತಾವಲಂಬ – **[ನಾ]** ಕೈ ಆಸರೆ (ಮಂಗಳಾಳಮಕರಣಾಲಂಕೃತಂ ಸೌಧರ್ಮೇಂದ್ರದತ್ತ ಹಸ್ತಾವಲಂಬನಾರೂಢ ಶುಭಪರಿಣಾಮಂ .. .. ಶಿಬಿಕೆಯನೇಱಿದಾಗಳ್: **ಆದಿಪು,** ೯. ೭೨)

ಹಸ್ತಿ – [ನಾ] ಸೊಂಡಿಲಿರುವ, ಆನೆ (ಹಸ್ತಿಯ ಬೆಂಗೆ ವಂದು ಸುತ್ತಿಱಿದು ಪಗಲಂ ತಡವಿಕ್ಕಿದಂತೆ ಬೆಳಗುವ ಕೆಯ್ದೀವಿಗೆಗಳ ಬೆಳಗೆ ಬೆಳಗಾಗೆ: **ಪಂಪಭಾ,** ೧೨. ೫೨ ವ)

ಹಸ್ತಿರದ – [ನಾ] ಆನೆಯ ದಂತ (ಹಸ್ತಿರದ ಹಸ್ತಿಮಸ್ತಕೋದ್ಭವ ಮುಕ್ತಾವಿಸ್ತಾರಮೆಂದು ತಂದು ಸಮಸ್ತವನಾಧೀಶರ್ ಅವನಿಪತಿಯಂ ಕಂಡರ್: **ಆದಿಪು,** ೧೨. ೬೭)

ಹಸ್ತಿಶಾಸ್ತ್ರ – [ನಾ] ಗಜಶಾಸ್ತ್ರ, ಆನೆಗಳ ಬಗೆಗಿನ ತಿಳಿವಳಿಕೆ (ಗಜಾಗಮಜ್ಞ ರಾಜಪುತ್ರ ಗೌತಮ ವಾದ್ವಾಕಿ ಪಾಳಕಾಪ್ಯ ಸುಪತಿ ಶ್ರೀಹರ್ಷಾದಿ ಪುರಾಣಪುರುಷ ವಿರಚಿತಂಗಳಪ್ಪ ಹಸ್ತಿಶಾಸ್ತ್ರಂಗಳೊಳಂ: **ಪಂಪಭಾ,** ೨. ೩೪ ವ)

ಹಸ್ತ್ಯಶ್ವತಂತ್ರ – [ನಾ] [ಹಸ್ತಿ+ಅಶ್ವತಂತ್ರ] ಆನೆ ಕುದುರೆಗಳ ಬಗೆಗಿನ ಶಾಸ್ತ್ರಗಳು (ಬಾಹುಬಲಿಗೆ ಕಾಮತಂತ್ರ ಸಾಮುದ್ರಿಕ ಆಯುರ್ವೇದ ಧನರ್ವೇದ ಹಸ್ತ್ಯಶ್ವತಂತ್ರ ರತ್ನಪರೀಕ್ಷೆಗಳುಮಂ .. .. ಉಪದೇಶಂಗೆಯ್ದಂ: **ಆದಿಪು,** ೮. ೬೦)

ಹಳ – [ನಾ] [ಹಲ] ನೇಗಿಲು (ಅರಿನೃಪಾಲಮೌಳಿಮಣಿಯೊಳ್ ನೆಲೆಗೊಂಡುದು ಶಂಖಚಕ್ರಚಾಮರಹಳಚಿಹ್ನಿತಪದಾಕೃತಿ: **ಪಂಪಭಾ,** ೬. ೨೯)

ಹಳಿ – [ನಾ] ಬಲರಾಮ (ಇಂದೆ ಹಳಿಯುಂ ಗಡ ಕೂಡುವಂ ಆತನಂ ಗೆಲಲ್ ಬಂದಪುದೇ ಬಟಿಕ್ಕ ಅದುವೆ ಕಾರಣಮಾಗಿ ಉಳಿದಿರ್ದಂ ಅಂಧರಾಣ್ಣಂದನಂ: **ಪಂಪಭಾ,** ೧೩. ೭೫)

ಹಾಟಕಕೂಟ – [ನಾ] ಚಿನ್ನದ ಶಿಖರ (ಪೊಟಿಲಂ ಪೊಱಮಟ್ಟು ಅನೇಕ ಹಾಟಕಕೂಟಕೋಟಿಘಟಿತ ಸಿದ್ಧಕೂಟಮಂ ತ್ರಿಃಪ್ರದಕ್ಷಿಣಂಗೈದು: **ಆದಿಪು,** ೨. ೫೦ ವ)

ಹಾಟಕಘಟಿತ – [ಗು] ಚಿನ್ನದಿಂದ ಮಾಡಿದ (ಸುರತರುಪ್ರಸೂನ ಕರ್ಪೂರಪಾಂಸು ಗೋಶೀರ್ಷ ಚಂದನದ್ರವ ಪರಿಮಳ ಸುಗಂಧಿಜಲಸಂಭೃತ ಹಾಟಕಘಟಿತಘಟ ಕೋಟಿಗಳನೆತ್ತಿಕೊಂಡು: **ಆದಿಪು,** ೭. ೧೦೧ ವ)

ಹಾಟಕಪದಕ – [ನಾ] ಚಿನ್ನದ ಪದಕ (ಸುವರ್ಣಮಣಿಬದ್ಧ ಉದ್ಧುರಕಂಧರಂ ಉತ್ಕಟ ಹಾಟಕಪದಕಮಣಿ ತ್ರಿಖಂಡಕರ್ಣಾಭರಣಂ: **ಆದಿಪು,** ೧೩. ೪೫ ವ)

ಹಾಟಕಪೀಠ – [ನಾ] ಚಿನ್ನದ ಪೀಠ, ಮಣೆ (ವಿವಾಹಮಂಟಪದ ನಡುವಣ ಮಣಿಮಯ ವೇದಿಕೆಯ ಹಾಟಕಪೀಠದ ಮೇಲೆ ಪಾಸಿದ ದುಗುಲದ ದಳಿಂಬದೊಳ್ ಇರಿಸಿದಾಗಳ್: **ಆದಿಪು,** ೪. ೪೭ ವ)

ಹಾಟಕಭಿತ್ತಿ – [ನಾ] ಚಿನ್ನದ ಗೋಡೆ (ಹಾಟಕಭಿತ್ತಿಸಮನ್ವಿತ ನಾಟಕಶಾಲೆಗಳ ವಿವಿಧಸೌಧಂಗಳ ಕೊಂಡಾಟಮನೆ ಮೆಱೆದು ಮೆಚ್ಚಂ ಪಾಟಿಸುವುವು ಮಿಥುನತತಿಗೆ ಗೃಹಮಹಿಜಾತಂ: **ಆದಿಪು,** ೫. ೩೭)

ಹಾಮಾಧಿಕ್ಕಾರದಂಡ – [ನಾ] ಹಾ ಮಾ ಧಿಕ್ಕಾರ ಮತ್ತು ದಂಡ ಎಂಬ ನಾಲ್ಕು ಬಗೆಯ ದಂಡನೆಗಳು (ಈ ಮಾಟಿಕ್ಕೆಯೊಳೆಸಗದರಂ ಹಾ ಮಾ ಧಿಕ್ಕಾರದಂಡದಿಂ ದಂಡಿಪುದು: **ಆದಿಪು,** ೮. ೭೪)

ಹಾಯೆನ್ನು – [ಕ್ರಿ] [ಹಾ+ಎನ್ನು] ಪ್ರತಿಕ್ರಿಯಿಸು (ಬಾಯಟಿದು ಎನಿತು ಎರೆದೊಡಂ ಆ ಹಾ ಎನ್ನೆಯ: **ಪಂಪಭಾ,** ೮. ೬೯)

ಹಾರ – [ನಾ] ನೂರೆಂಟು ಎಳೆಗಳ ಮಾಲೆ (ವಿಜಯಚ್ಛಂದ ಹಾರ ದೇವಚ್ಛಂದ ಅರ್ಧಹಾರ ರಶ್ಮಿಕಲಾಫಗುಚ್ಛ ನಕ್ಷತ್ರಮಾಳಾ ಅರ್ಧಗುಚ್ಛ: **ಆದಿಪು,** ೮. ೫೪ ವ); [ನಾ] ಮನೋಹರವಾದ (ಸಮಸ್ತವಸ್ತುವಿಸ್ತಾರಹಾರಮಾಗಿರ್ದ ಹಸ್ತಿನಪುರವೆ ನಿಜವಂಶಾವಳಂಬಮಾಗೆ: **ಪಂಪಭಾ,** ೧. ೫೮ ವ)

ಹಾರಮಣಿಮಂಜರಿ – [ನಾ] ಹಾರದ ರತ್ನಖಚಿತವಾದ ಗೊಂಚಲು (ಮೃಗಪದಪತ್ರಲೇಖೆಗಳಂ ಏಕೆಗೆ ತಾಳ್ದಿರದಾದುವು ಈ ಕದಂಪುಗಳ್ ಉರಮೇಕೆ ಹಾರಮಣಿಮಂಜರಿಯಿಲ್ಲದೆ ಬಿನ್ನಗಿರ್ದುದು: **ಪಂಪಭಾ,** ೪. ೬೨)

ಹಾವ – [ನಾ] ಶೃಂಗಾರ ಚೇಷ್ಟೆ (ಪುರುಡುವೆರೆಸಿದ ಕೊಂಕಿಂಗಂ ಕಡ್ಡವಣೆವೆರಸಿದ ಸೋಂಕಿಗಂ ಗಾಡಿವೆರಸಿದ ಹಾವಕ್ಕಂ ನಾಣ್ವೆರಸಿದ ಭಾವಕ್ಕಂ: **ಪಂಪಭಾ,** ೪. ೧೭ ವ)

ಹಾಸ್ತಿಕ – [ನಾ] ಆನೆಗಳ ಹಿಂಡು (ಮಹಾಮಾಣಿಕ್ಯ ಗಾಣಿಕ್ಯ ಹಾಸ್ತಿಕ ರತ್ನೋರ್ಜಿತ ಚಕ್ರವರ್ತಿ ವಿಭವಂ: **ಆದಿಪು,** ೧೬. ೮)

ಹಾಸ್ತಿಕಸಾಧನ – [ನಾ] ಗಜಸೈನ್ಯ (ಧನುರ್ಧರಪ್ರಾಯರುಂ ಅಶ್ವೀಯಬಹಳಮುಂ ಹಾಸ್ತಿಕಸಾಧನಮುಮಪ್ಪ ತಮ್ಮ ಬಲಮನೊಂದು ಮಾಡಿ: **ಆದಿಪು,** ೧೩. ೫೬ ವ)

ಹಾಸ್ಯ – [ನಾ] [ಜೈನ] ಚಾರಿತ್ರಮೋಹನೀಯಕರ್ಮದ ಉತ್ತರೋತ್ತರ ಪ್ರಕೃತಿಗಳಲ್ಲಿ ಒಂದಾದ ಒಂಬತ್ತು ನೋಕಷಾಯಗಳಲ್ಲಿ ಒಂದು (ಕ್ರಮಕ್ರಮದೊಳೆ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ ಪುರಾತನ ಸತ್ಕರ್ಮದೊಡನೆ ಹಾಸ್ಯರತ್ಯರತಿಶೋಕಭಯಜುಗುಪ್ಸಾಭಿಧಾನ ನೋಕಷಾಯಷಟ್ಕಮುಮಂ ಘಾತಿಸಿ: **ಆದಿಪು,** ೧೦. ೧೪ ವ)

ಹಾಹಾರವ – [ನಾ] ಹಾಹಾಕ್ರಂದ (ಅವನೀವ್ಯೋಮಮನೆಯ್ದೆ ಪರ್ವಿ ಬಳೆದುಂ ಶೋಕಾನುಬಂಧಾಂಧಬಾಂಧವ ಹಾಹಾರವಂ ಎಂತುಮೆಯ್ದುದು ವಲಂ ಲೋಕಾಂತರಪ್ರಾಪ್ತನಪ್ಪವನಂ: **ಆದಿಪು,** ೩. ೫೪)

ಹಿಂಗುಲಿಕ – [ನಾ] ಇಂಗಳೀಕ, ಪಾದರಸದಿಂದಾದ ಒಂದು ಅದಿರು (ಉತ್ತಪ್ತಾವದಾತಲೋಹಪುತ್ರಿಕಾನದ್ಧ ಲಾಕ್ಷಾ ಹಿಂಗುಲಿಕ ಪಾಟಲಫಲಂ ಅರ್ಧಕರವಾಳಚಾಳನ ಪ್ರಕಟಿತಭಟ ಬಿಭೀಷಿಕಾಡಂಬರಂ: **ಆದಿಪು,** ೧೩. ೪೫ ವ)

ಹಿಂತಾಳ – [ನಾ] ಆ ಹೆಸರಿನ ಮರ (ಫಳಕರ್ಪೂರ ಲವಂಗ ಲುಂಗ ಲವಳೀ ಹಿಂತಾಳ ತಾಳೀ ತಮಾಳ ಲತಾಸುಂದರ ನಂದನಕ್ಕುಱೆ ಮುಂ ತನ್ನರ್ಚಿಗಳ್: **ಪಂಪಭಾ,** ೫. ೮೬)

ಹಿಂದೋಳರವ – [ನಾ] ಸಂಗೀತರವ (ಕರಿಣೀವೃಂದ ವ್ರಜೋದ್ಗಾಯನ ಸಮುದಯ ಕರ್ಣಾಮೃತಸ್ಯಂದಿ ಹಿಂದೋಳರವಂ: **ಆದಿಪು,** ೧೩. ೭)

ಹಿಂಸಾರುಚಿ – [ನಾ] ಪರರಿಗೆ ತೊಂದರೆ ಕೊಟ್ಟು ಆನಂದಿಸುವ ಸ್ವಭಾವ (ಮಾಂಸ ಮಧು ಮದ್ಯಸೇವನೆ ಹಿಂಸಾರುಚಿ .. .. ಎಂಬಿವಲ್ಲದೆ ಸಂಸಾರಭ್ರಮಣಕಾರಣಂ ಪೆಱವೊಳವೇ: **ಆದಿಪು,** ೫. ೮೦)

ಹಿತ – [ನಾ] ಸಂತೋಷದಾಯಕನಾದವನು (ಮಂತ್ರಾಕ್ಷರ ನಿಯಮದಿಂ ಅಭಿಮಂತ್ರಿಸಿ ಬರಿಸಿದೊಡೆ ವಾಯುದೇವಂ ಬಂದು ಏಂ ಮಂತ್ರಂ ಪೇೞ್ನೆ ಕುಡು ರಿಪುತಂತ್ರಕ್ಷಯಕರನಂ ಎನಗೆ ಹಿತನಂ ಸುತನಂ: **ಪಂಪಭಾ,** ೧. ೧೨೪)

ಹಿತಮಿತ – [ಗು] ಸಂತಸದಾಯಕವಾಗಿಯೂ ಹೆಚ್ಚಲ್ಲದೆಯೂ ಇರುವ (ಮೃದುಮಧ್ಯಮತನು ಹಿತಮಿತಮೃದುವಚನಂ ಲಲಿತಮಧುರ ಸುಂದರವೇಷಂ: **ಆದಿಪು,** ೧. ೨೯)

ಹಿಮ – [ನಾ] ಹಿಮಾಲಯಪರ್ವತ (ಶ್ರೀದಯಿತಂ ಮನುಕುಲಗಗನಾದಿತ್ಯಂ ಹಿಮಮನೆಯ್ದೆ ಷಟ್ಖಂಡಮುಮಂ ಸಾಧಿಸಿ ಜಿತದಿಙ್ಮಂಡಲನಾದ ಮಹಾತ್ಮಂ: **ಆದಿಪು,** ೧೫. ೧)

ಹಿಮಕರ – [ನಾ] ಚಂದ್ರ (ಹಿಮಕರಂ ಆತ್ಮ ಶೀತರುಚಿಯಂ ದಿನನಾಯಕಂ ಉಷ್ಣದೀಧೀತಿಯಕ್ರಮಮಂ ಅಗಾಧವಾರಿಧಿಯೆ ಗುಣ್ಪಂ ಇಳಾವಧು ತನ್ನ ತಿಣ್ಪಂ ಬಿಸುಟಿಲ್ವೊಡಂ; **ಪಂಪಭಾ,** ೧. ೮೩)

ಹಿಮಕಿರಣ – [ನಾ] ಚಂದ್ರ (ಬಾಲಹಿಮಕಿರಣ ದಂಷ್ಟ್ರಾನನ ಜ್ಯೋತಿಯಂ ದರದಳಿತಕರಕಳಿತ ಸರಸಿರುಹನಿಳಯೆಯಂ: **ಆದಿಪು,** ೭. ೨೭)

ಹಿಮಕೃತ್ – [ನಾ] ಚಂದ್ರ (ಹಿಮಕೃದ್ವಂಶಜರಪ್ಪ ಪಾಂಡುಸುತರಂ ಕೆಯ್ಕೊಂಡು ನಿನ್ನಯ್ದು ಬಾಡಮನಿತ್ತುಂ ನಡಪೆಂದು ಸಾಮಮನೆ ಮುಂ ಮುಂತಿಟ್ಟೊಡೆ: **ಪಂಪಭಾ,** ೯. ೮೮)

ಹಿಮಕೃದ್ಭೂಧರ – [ನಾ] [ಹಿಮಕೃತ್+ಭೂಧರ] ಹಿಮದಿಂದಾದ ಬೆಟ್ಟ, ಹಿಮಾಲಯ (ಹಿಮಕೃದ್ಭೂಧರದಂತೆ ನಿನ್ನ ಗುಣಸಂದೋಹಂಗಳಂ ಕಾಣಲಕ್ಕುಮೆ ಮತ್ತೊರ್ವನೊಳ್: **ಪಂಪಭಾ,** ೫. ೭೬)

ಹಿಮಗಿರಿ – [ನಾ] ಹಿಮಾಲಯ ಪರ್ವತ (ಹಿಮಗಿರಿಯ ಮಧ್ಯಕೂಟದಹಿಮವದ್ದಿವಿಜಮನೊತ್ತಿ ಕಪ್ಪಂಗೊಂಡು: **ಆದಿಪು,** ೧೪. ೫೯)

ಹಿಮಗೌರ – [ನಾ] ಹಿಮದಂತೆ ಬೆಳ್ಳಗಿರುವ (ಏಂ ಹಿಮಗೌರಹಾರಮೆಸೆದುದೊ ಹಿಮಶೈಲಶಿಲಾವಿಶಾಲ ವಕ್ಷಸ್ಥಳದೊಳ್: **ಆದಿಪು,** ೪. ೩೮)

ಹಿಮಧವಳ – [ನಾ] ಹಿಮದಂತೆ ಬೆಳ್ಳಗಿರುವ (ಹಿಮಧವಳ ಆತಪತ್ರಮನೆ ಪೋಲೆ ಮುಖೇಂದುವ ಬೆಳ್ಪು ಪೂರ್ಣಕುಂಭಮನೆ ನಿರಂತರಂ ಗೆಲೆ: **ಪಂಪಭಾ,** ೧. ೧೨೦)

ಹಿಮವದಚಳ – [ನಾ] [ಹಿಮವತ್+ಅಚಳ] ಹಿಮವತ್ಪರ್ವತ (ಲೀಲಾಭವನೋಪವನಕೃತಕಗಿರಿಗಳಿರ್ದಂತೆ ವಿಜಯಾರ್ಧ ಹಿಮವದಚಳಕೂಟಂಗಳೊಳ್ ವಿಹಾರಿಸಲುಂ: **ಆದಿಪು,** ೮. ೩೨ ವ)

ಹಿಮವತ್ಪರ್ವತ – [ನಾ] ಹಿಮದಿಂದ ಆವೃತವಾದ ಪರ್ವತ, ಹಿಮಾಲಯ (ಆಗಳ್ ಅಶ್ವತ್ಥಾಮನುಂ ಕೃಪನುಂ ಸಿಗ್ಗಾಗಿ ಹಿಮವತ್ಪರ್ವತಕ್ಕೆ ನಡೆಗೊಂಡರ್: **ಪಂಪಭಾ,** ೧೩. ೧೦೭ ವ)

ಹಿಮವನ್ಮಹೀಧರ – [ನಾ] [ಹಿಮವತ್+ಮಹೀಧರ] ಹಿಮವತ್ಪರ್ವತ (ಎಂದು ಗುಹ್ಯಕಂ ಹಿಮವನ್ಮಹೀಧರಮಂ ತೋಱುತ್ತುಂ ಬಂದು ಕೈಲಾಸಪರ್ವತಮಂ ಕಂಡು: **ಪಂಪಭಾ,** ೭. ೭೩ ವ)

ಹಿಮಶಿಖರಿ – [ನಾ] ಹಿಮವದ್ಗಿರಿ (ಅವಱೊಳುತ್ತರಶ್ರೇಣಿಯೊಳ್ ಉದಗ್ರಹಿಮಶಿಖರಿಶೇಖರ ಶಾರದನೀರದಾಕಾರ ಸುಧಾಧವಲಿತ ಉತ್ತುಂಗ ಪ್ರಾಸಾದಕೂಟಕೋಟಿ ಸಂಕೀರ್ಣಮುಂ .. .. ಆಗಿ: **ಆದಿಪು,** ೧. ೭೦ ವ)

ಹಿಮಶಿಶಿರ – [ಗು] ತುಂಬ ತಣ್ಣಗಿರುವ (ಅನ್ನೆಗಂ ಅತ್ತ ದುರ್ಯೋಧನಂ ಅತಿಸಂಭ್ರಮಾಕುಳಿತಪರೀತಜನ ಉಪನೀತ ಚಂದನಕರ್ಪೂರಮಿಶ್ರಿತ ಹಿಮಶಿಶಿರ ಧಾರಾಪರಿಷೇಕದಿಂದ ಎಂತಾನುಂ ಮೂರ್ಛೆಯಿಂದೆಟ್ಟಿತ್ತು: **ಪಂಪಭಾ,** ೧೩. ೨ ವ)

ಹಿಮಸೇತುಪ್ರತಿಬದ್ಧಭೂವಳಯ – [ನಾ] ಉತ್ತರದಲ್ಲಿ ಹಿಮಾಲಯ ದಕ್ಷಿಣದಲ್ಲಿ ರಾಮಸೇತು ಇವುಗಳಿಂದ ಮಿತಿಗೊಂಡ ಭೂಮಂಡಲ (ಹಿಮಸೇತುಪ್ರತಿಬದ್ಧ ಭೂವಳಯಮಂ ನಿಷ್ಕಂಟಕಂ ಮಾಡಿ ವಿಕ್ರಮಮಂ ತೋಱೆ ನಿಜಾನುಜರ್ ನೆರಪಿದೊಂದು ಐಶ್ವರ್ಯದಿಂ: **ಪಂಪಭಾ,** ೬. ೬೬)

ಹಿಮಾಂಶು – [ನಾ] ಶೀತಲ ಕಿರಣಗಳುಳ್ಳವನು, ಚಂದ್ರ (ಪಾಱುವ ಪಾಱುಗಳಂದಮಂ ಬೆಡಂಗು ಅಣಿಯರಂ ಈಕೆಗೆಂದು ಪೊಗೞ್ವರ್ ಕೆಲರಲ್ಲಿ ಹಿಮಾಂಶುವಕ್ತ್ರೆಯಂ: **ಆದಿಪು,** ೪. ೪೭)

ಹಿಮಾಂಶು ನಯನಾಗ್ನಿ ಕಷಾಯ ಹೃಷೀಕ ಷಣ್ಮುನಿ ಕ್ರಮನರಕಂಗಳ್ – ಅಸಂಜ್ಞಿಜೀವ, ಸರೀಸೃಪ, ಪಕ್ಷಿ, ಹಾವು, ಸಿಂಹ, ಲಲನಾಜನ ಹಾಗೂ ಮನುಷ್ಯರು ಮತ್ತು ದುಷ್ಟ ಮೀನುಗಳು ಕ್ರಮವಾಗಿ ಜೀವಿಸುವ ಒಂದರಿಂದ ಏಳರವರೆಗಿನ ನರಕಗಳ ಕ್ರಮ [ಚಂದ್ರ–೧ ನಯನ–೨ ಅಗ್ನಿ–೩ ಕಷಾಯ–೪ ಇಂದ್ರಿಯ–೫ ಷಟ್–೬ ಮತ್ತು ಮುನಿ–೭] (ಹಿಮಾಂಶು ನಯನಾಗ್ನಿ ಕಷಾಯ ಹೃಷೀಕ ಷಣ್ಮುನಿ ಕ್ರಮನರಕಂಗಳೊಳ್ ನೆಲಸುಗುಂ: **ಆದಿಪು,** ೫. ೯೪)

ಹಿಮಾಂಶುಮಂಡಲ – [ನಾ] ಚಂದ್ರಮಂಡಲ (ಉದಯಾದ್ರಿಯೊಳ್ ಪದಂಗಾಸಿದ ಪೊನ್ನ ಪುಂಜಿಯವೊಲಿರ್ದುದು ಕಣ್ಗೆ ಹಿಮಾಂಶುಮಂಡಲಂ: **ಪಂಪಭಾ,** ೩. ೮೧)

ಹಿರಣ್ಯಗರ್ಭ – [ನಾ] [ಜೈನ] ಆದಿ ತೀರ್ಥಂಕರ (ಧರೆ ರತ್ನಗರ್ಭಮಾದುದು ಸುರೆಲ್ಲಂ ಹರ್ಷಗರ್ಭರಾದರ್ ಪಿರಿದಚ್ಚರಿಯೆನೆ ಹಿರಣ್ಯಗರ್ಭನ ನಿರುಪಮ ಗರ್ಭಾವತರಣ ಮಂಗಳವಿಧಿಯೊಳ್: **ಆದಿಪು,** ೭. ೨೬); **[ನಾ]** ಬ್ರಹ್ಮ (ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿಪರಿಮಳಮಿಳಿತ ಉಲ್ಲುಳಿತ ಅಳಿ ಜಲಜಮಾಯ್ತು ಆ ಜಳಜದೊಳಗೆ ಒಗೆದಂ ಹಿರಣ್ಯಗರ್ಭಂ: **ಪಂಪಭಾ,** ೧. ೫೯)

ಹಿರಣ್ಯೋತ್ಕೃಷ್ಟಜನ್ಮತಾ – [ನಾ] [ಜೈನ] ಒಂದು ಗರ್ಭಾನ್ವಯಕ್ರಿಯೆ, ಜಿನಜನನಿಯ ಗರ್ಭದಲ್ಲಿ ಅವತರಿಸುವುದು (ಹಿರಣ್ಯಗರ್ಭೋತ್ಕೃಷ್ಟಜನ್ಮತಾ .. .. ಅಗ್ರನಿರ್ವೃತಿಯೆಂಬ ಅಯ್ವತ್ತುಮೂಱು ಗರ್ಭಾದಿನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ: **ಆದಿಪು,** ೧೫. ೧೫ ವ)

ಹುಂಡಸಂಸ್ಥಾನ – [ನಾ] [ಜೈನ] ದೇಹದ ಅಂಗೋಪಾಂಗಗಳನ್ನು ಅತಿ ಕುರೂಪಗೊಳಿಸುವ ಕರ್ಮಗಳ ಉದಯ (ಅದೇಂ ನೆಱೆ ಪೋಲ್ತುದೊ ಚಂಡ ಹುಂಡಸಂಸ್ಥಾನದ ದಗುಂತಿದೀವಿದ ತಡಂಗಮದಂಗದ ಪಾಂಗವಂದಿರಾ: **ಆದಿಪು,** ೫. ೯೦) [ಪದ್ಯದ ಕೊನೆಯ ಸಾಲು ಎಲ್. ಬಸವರಾಜು ಅವರ ಆವೃತ್ತಿಯದು]

ಹುಂಡಾವಸರ್ಪಿಣಿ – [ನಾ] [ಜೈನ] ಅನೇಕ ಅವಸರ್ಪಿಣಿಗಳ ನಂತರ ಬರುವ ಕಾಲಾವಧಿ (ಅತಿಭಂಗಂ ದೊರೆಕೊಂಡುದಿಂದು ಭರತೇಶ್ವರಂಗೆ ಹುಂಡಾವಸರ್ಪಿಣೀ ವಿಳಸನದಿಂ: **ಆದಿಪು,** ೧೪. ೧೧೪)

ಹುತ – [ನಾ] ಹೋಮ ಮಾಡಲ್ಪಟ್ಟ, ಹವಿಸ್ಸು (ಹಿತ ಪುರೋಹಿತ ಪ್ರಾಜ್ಯಾಹುತಿ ಹುತವಹಸಮಕ್ಷದೊಳ್ ಕೆಯ್ನೀರೆಱೆದು ಪಾಣಿಗ್ರಹಣಂಗೆಯ್ಯೆ: **ಪಂಪಭಾ,** ೩. ೭೪ ವ)

ಹುತವಹ – [ನಾ] ಅಗ್ನಿ (ಪುರೋಹಿತಪ್ರಾಜ್ಯ ಆಜ್ಯಾಹುತಿ ಹುತವಹ ಸಮಕ್ಷಮದೊಳ್ ಕೆಯ್ನೀರೆಱೆದು ಪಾಣಿಗ್ರಹಂಗೆಯ್ಸೆ: **ಪಂಪಭಾ,** ೩. ೭೪ ವ)

ಹುತಾಶನಕುಂಡ – [ನಾ] ಹೋಮಕುಂಡ (ಅಪರದಿಗ್ಭಾಗದೊಳ್ ಅನಗಾರಕೇವಲಿ ಹುತಾಶನಕುಂಡಮಂ ಸ್ಥಾಪನಂಗೆಯ್ದು: **ಆದಿಪು,** ೧೬. ೫೨ ವ)

ಹೂಂಕರಣ – [ನಾ] ಹೂಂಕಾರ, ಗರ್ಜನೆ (ಕರಿಕಳಭಪ್ರಚಂಡ ಮೃಗರಾಜಕಿಶೋರ ಕಠೋರಘೋರ ಹೂಂಕರಣಭಯಂಕರ ಅಟವಿ: **ಪಂಪಭಾ,** ೯. ೪೨)

ಹೂನ್ಯ – [ನಾ] ಪುಣ್ಯ (ಪೊಸಹೂನ್ಯದ ಪಸರಮೆನಿಸಲಿದು ಮದನನ ಮಂಗಳಭವನಮೆನಿಸಲಿದು: **ಆದಿಪು,** ೩೦ ರಗಳೆ)

ಹೃಚ್ಛಲ್ಯ – [ನಾ] [ಹೃತ್+ಶಲ್ಯ] ಹೃದಯಕ್ಕೆ ನಾಟಿದ ಮುಳ್ಳು, ಹೃದಯದ ನೋವು (ಎಂದು ಕುರುಕುಲಚೂಡಾಮಣಿ ಶಲ್ಯನ ಹೃಚ್ಛಲ್ಯಮೆಲ್ಲಮಂ ಕಟಿಲೆ ನುಡಿದೊಡೆ: **ಪಂಪಭಾ,** ೧೨. ೯೯ ವ)

ಹೃತ್ಕಂಪ – [ನಾ] ಎದೆನಡುಕ (ದೇವೇಂದ್ರಂ ತನಗಾದ ಹೃತ್ಕಂಪದೊಳಂ ಆಸನಕಂಪದೊಳಂ ನರೇಂದ್ರತಾಪಸಂ ತನ್ನಿಂದ್ರತ್ವಮಂ ಕೊಳಲೆಂದು ತಪಂಗೆಯ್ದಪಂ ಎಂಬ ಸಂಕೆಯೊಳ್: **ಪಂಪಭಾ,** ೭. ೮೦ ವ)

ಹೃತ್ಕಮಲ – [ನಾ] ಹೃದಯವೆಂಬ ಕಮಲ (ಕಮಲೋದ್ಭವನ ಅಮಳಿನ ಹೃತ್ಕಮಲದೊಳ್ ಒಗೆದರ್ ಸುರೇಂದ್ರಧಾರಕರ್ ಆ ವಾಗಮಳರ್ ನೆಗೞ್ದಿರ್ದರ್ ಪುಲಹ ಮರೀಚಿ ಅತ್ರಿ ಅಂಗಿರಸ್ ಪುಳಸ್ತ್ಯ ಕ್ರತುಗಳ್: **ಪಂಪಭಾ,** ೧. ೬೦)

ಹೃದಯಬಂಧ – [ನಾ] ಎದೆಯ ಗಟ್ಟಿತನ (ಅಂತು ದೃಢಕಠಿನ ಹೃದಯಬಂಧನಂ ಜರಾಸಂಧನಂ ಕೊಂದುಮಾತನ ಮಗಂ ಕ್ಷೇಮಧೂರ್ತಿಯಂ ರಾಜ್ಯದೊಳ್ ನಿಜೆಸಿ: **ಪಂಪಭಾ,** ೬. ೨೭ ವ)

ಹೃದಯೇಶ್ವರಿ – [ನಾ] ಮನಃಪ್ರಿಯೆ (ಮತ್ತೊಂದೆಡೆಯೊಳ್ ಒರ್ವಂ ಗರ್ಭೇಶ್ವರಂ ತನ್ನ ಹೃದಯೇಶ್ವರಿಯಂ ಅಗಲ್ದು ಬಂದು ಪೆಱರಾರುಮಂ ಮೆಚ್ಚದೆ ಆಕೆಯಂ ನೆನೆದು: **ಪಂಪಭಾ,** ೪. ೧೦೪ ವ)

ಹೃದ್ರೋಗ – [ನಾ] ಹೃದಯದ ಬೇನೆ, ನೋವು (ಈಗಳ್ ಅಡಂಗಿತು ಎಮ್ಮ ಹೃದ್ರೋಗಂ ಅನೇಕಮಂಗಳಪರಂಪರೆಗಳ್ ದೊರೆಕೊಂಡುವು: **ಪಂಪಭಾ,** ೭. ೬೦)

ಹೃದ್ಯವಿದ್ಯಾ[ದ್ಯೆ] – [ನಾ] ಆಕರ್ಷಣೆಯ ವಿದ್ಯೆ (ಗುಣರತ್ನವಾಧಿ ನಾನಾವಿಧಸೌಖ್ಯಭಾಜನಂ ಉಪಾರ್ಜಿತಖೇಚರರಾಜ ಹೃದ್ಯವಿದ್ಯಾವಿಭವಂ ಮಗಂ ಜಿನವಿರೋಧಿನರೇಂದ್ರಬಳಂ ಮಹಾಬಳಂ: **ಆದಿಪು,** ೧. ೭೩)

ಹೃಷೀಕ – [ನಾ] [ಜೈನ] ಏಳು ಬಗೆಯ ನರಕಗಳಲ್ಲಿ ಒಂದು (ಕ್ರಮದೊಳಸಂಜ್ಞಿಯಂ ಸರಿಸೃಪಾವಳಿಯುಂ .. .. ಮನುಷ್ಯದುಸ್ತಿಮಿಕುಳಮುಂ ಹಿಮಾಂಶುನಯನಾಗ್ನಿ ಕಷಾಯಹೃಷೀಕ ಷಣ್ಮುನಿಕ್ರಮ ನರಕಂಗಳೊಳ್ ನೆಲಸುಗುಂ: **ಆದಿಪು,** ೫. ೯೪)

ಹೇತಿ – [ನಾ] ಆಯುಧ (ನಾನಾ ಹೇತಿಹಸ್ತೋದ್ಭಟಭಟ ಪೃತನಾಭೀಳಮಂ ಚಿತ್ತದೊಳ್ ವೀರರಸಂ ಕೈಗಣ್ಮೆ ಪೊಣ್ಮುತ್ತಿರೆ ನಿಜಬಲಮಂ ನೋಡಿದಂ ಸಾರ್ವಭೌಮಂ: **ಆದಿಪು,** ೧೧. ೨೪)

ಹೇತಿಮುಕ್ತ – [ಗು] ಆಯುಧವನ್ನ ತೊರೆದ (ಕರಿಸಂಘಾತಮುಮಂ ಹಯವ್ರಜಮುಮಂ ಪಿಂತಿಕ್ಕಿ ತೂರ್ಯಸ್ವನೋತ್ಕರಮಂ ಮಾಣಿಸಿ ಹೇತಿಮುಕ್ತ ಭಟದೋರ್ದಂಡಾಗ್ರಶುಂಭದ್ಧ್ವಜೋತ್ಕರ ಸಂದೋಹಮಂ ಬಿಸುಟ್ಟು: **ಆದಿಪು,** ೧೨. ೬೮)

ಹೇತಿಹಸ್ತ – [ನಾ] ಆಯುಧ ಹಿಡಿದ ಕೈ (ನಾನಾ ಹೇತಿಹಸ್ತೋದ್ಭಟಭಟ ಪೃತನಾಭೀಳಮಂ ಚಿತ್ತದೊಳ್ ವೀರರಸಂ ಕೈಗಣ್ಮೆ ಪೊಣ್ಮುತ್ತಿರೆ ನಿಜಬಲಮಂ ನೋಡಿದಂ ಸಾರ್ವಭೌಮಂ: **ಆದಿಪು,** ೧೧. ೨೪)

ಹೇತು – [ನಾ] ಕಾರಣ (ಆಚಂದ್ರಾರ್ಕಪ್ರತೀತ ಉಭಯಗಿರಿ ಶಿಖರಾತ್ ಸ್ವೋದಯಸ್ಯೈಕಹೇತೋಃ: **ಪಂಪಭಾ,** ೧೪. ೨೭)

ಹೇತುತ್ವ – [ನಾ] ಕಾರಣದಿಂದ ಕೂಡಿರುವುದು (ಅದು ಶರೀರಬಳಾಯುರ್ದೇಹಪ್ರಮಾಣ ಉಪಚಯ ಅಪಚಯ ಹೇತುತ್ವದಿಂದಂ ಉತ್ಸರ್ಪಿಣಿ ಅವಸರ್ಪಿಣಿನಾಮಮಂ ಪಡೆದುದು: **ಆದಿಪು,** ೬. ೪೮ ವ)

ಹೇಮನಳಿನಿ – [ನಾ] ಹೊಂದಾವರೆ (ಭ್ರಮರೀಗೀತಸಮೇತ ಹೇಮನಳಿನೀಶ್ರೀಸಂಗೆಯಂ ನೋಡಿ: **ಆದಿಪು,** ೧೧. ೫೬)

ಹೇಮಪಂಕಜ – [ನಾ] ಹೊಂದಾವರೆ (ಪುಷ್ಪಿತ ಹೇಮಪಂಕಜ ರಜಸ್ಸಂಸಕ್ತಭೃಂಗಾಂಗನಾನಿಕರಂ ಸಾರಸ ಹಂಸ ಕೋಕಿಳಕುಳ ಧ್ವಾನೋತ್ಕರಂ ಚೆಲ್ವನಾಯ್ತು: **ಪಂಪಭಾ,** ೫. ೮೦)

ಹೇಮಪಟ್ಟಕ – [ನಾ] ಚಿನ್ನದ ಗದ್ದುಗೆ (ವಿಶಾಲ ಹೇಮಪಟ್ಟಕದೊಳ್ ಆತ್ಮಹೃತ್ಪದ್ಮೆಯಂ ಸರಸ್ವತಿಯಂ ಪೂಜಾಪೂರ್ವಕಂ ಅಧಿವಾಸಿಸಿ: **ಆದಿಪು,** ೮. ೫೮ ವ)

ಹೇಮರಶನ – [ನಾ] ಚಿನ್ನದ ಉಡಿದಾರ (ಪೋಲ್ಕುಂ ಆ ಪುರಾಗನೆಯ ಪೊದಳ್ದ ಹೇಮರಶನಾತ್ರಯಮಂ ಪರಿಖಾತಾತ್ರಯಾಂತರಂ: **ಆದಿಪು,** ೬. ೧೦೨)

ಹೇಮರಶನಾಧ್ವನಿ – [ನಾ] ಚಿನ್ನದ ಒಡ್ಯಾಣದ ಸದ್ದು (ಈ ಜಗನಮಿದೇಕೆ ಹೇಮರಶನಾಧ್ವನಿಯಿಲ್ಲದೆ ಮೂಗುವಟ್ಟುದು

ಈ ಬಗೆಯೋಲ್ ಅಲಕ್ತಕದ್ರವದೊಳೊಂದದೆ ನಿಂದುವು ಪಾದಪಂಕಜಂ: **ಪಂಪಭಾ,** ೪. ೬೨)

ಹೇಮರೇಣು – [ನಾ] ಚಿನ್ನದ ದೂಳು (ತತ್ ಗಿರೀಂದ್ರ ಕಂದರ ಕನಕಾಚಳಂಗಳಂ ಇಂತುಟನಿತಂ ತವೆ ಹೇಮರೇಣುಗಳ್ವೆರಸು ಕಡಂಗಿ ಪೊತ್ತು ನಡೆದತ್ತು ಘಟೋತ್ಕಚರೌದ್ರಸಾಧನಂ: **ಪಂಪಭಾ,** ೬. ೩೨)

ಹೇಮಲತಿಕಾಕುಂಜ – [ನಾ] ಹೊಂಬಣ್ಣದ ಬಳ್ಳಿಗಳ ಪೊದರು (ಪದ್ಮಾಕರಾಳಿಯೊಳ್ ತಣ್ಪುಗಳುಂಟು ಹೇಮಲತಿಕಾ ಕುಂಜಂಗಳೊಳ್ ನಮ್ಮ ನನ್ನಿಗೆ ಬನ್ನಂ ಬರಲೀಯದು: **ಪಂಪಭಾ,** ೭. ೩೦)

ಹೇಮಾಚಳೇಂದ್ರ – [ನಾ] ಹೇಮನಗ (ಹೇಮಾಚಳೇಂದ್ರಕ್ಕೆ ಕಲ್ಪಜರಂ ಪೋಗಲ್ಕೆ ಸನ್ನೆಗೆಯ್ಯೆ: **ಆದಿಪು,** ೭. ೪೯)

ಹೇಮಾದ್ರಿ – [ನಾ] ಚಿನ್ನದ ಬೆಟ್ಟ, ಮೇರುಪರ್ವತ (ಅಮರಮನೋಹಾರಿ ಹೇಮಾದ್ರಿಯಂ ವ್ಯೋಮಗಕಲ್ಲೋಲಾಬ್ಧಿಯಂ: **ಆದಿಪು,** ೮. ೨೬)

ಹೇಮಾಸನ – [ನಾ] ಚಿನ್ನದ ಪೀಠ (ಮಣಿಮಯಾಸನಪ್ರಾಚ್ಯಾಚಳ ಶಿಖಂಡರತ್ನಮಾಗಿರ್ದ ಕುಮಾರನಂ ಸಾರೆವಂದು ಯಥೋಚಿತ ಹೇಮಾಸನದೊಳ್ ಕುಳ್ಳಿರ್ದು: **ಆದಿಪು,** ೮. ೮ ವ)

ಹೇಯ – [ನಾ] [ಜೈನ] ತತ್ತ್ವದ ಎರಡು ಬಗೆಗಳಲ್ಲಿ ಒಂದು, ಸಂಸಾರಕಾರಣವಾದುದು (ನಿನ್ನ ಬೆಸಗೊಂಡ ತತ್ತ್ವಮುಂ ಹೇಯೋಪಾದೇಯರೂಪದಿಂ ದ್ವಿವಿಧಮಕ್ಕುಂ ಸಂಸಾರ ಕಾರಣಂಗಳ್ ಹೇಯಂಗಳ್: **ಆದಿಪು,** ೧೦. ೬೩ ವ)

ಹೇಲ – [ನಾ] ಆಟ, ಆಟದಂತೆ ಸುಲಭ (ಹೇಲೋಲ್ಲಂಘಿತ ಮಹಾವಾಹಿನೀಭೂರಿಭೈರವಾಜಿಗಳಪ್ಪ ವಾಜಿಗಳಿಂದಂ: **ಆದಿಪು,** ೧೪. ೪೩ ವ)

ಹೇಷಿತ – [ನಾ] ಕುದುರೆಯ ಕೆನೆತ (ಮದಗಜ ಬೃಂಹಿತಧ್ವನಿ ತುರಂಗಮ ಹೇಷಿತ ಘೋಷಂ ಆದಂ ಒರ್ಮೊದಲೆ ಪಯೋಧಿಮಂಥನ ಮಹಾರವಮಂ ಗೆಲೆ: **ಪಂಪಭಾ,** ೩. ೩೮)

ಹೇಷಿತಂಗೆಯ್ – [ಕ್ರಿ] ಕೆನೆ, ಶಬ್ದ ಮಾಡು (ದಕ್ಷಿಣಚರಣದೊಳ್ ನೆಲನಂ ಪರಡಿ ಗಂಭೀರನಿನಾದದಿಂ ಹೇಷಿತಂಗೆಯ್ವ ವಿಜಯಹಯಮುಮಂ: **ಪಂಪಭಾ,** ೯. ೯೫ ವ)

ಹೇಳಾಸಾಧ್ಯ – [ನಾ] [ಹೇಲಾ+ಸಾಧ್ಯ] ಆಟದಷ್ಟು ಸುಲಭವಾಗಿ ಗೆಲ್ಲಬಲ್ಲದ್ದು (ವಿರಾಟನ ಮಂಡಲಂ ಗೋಮಂಡಲದಂತೆ ಹೇಳಾಸಾಧ್ಯಮಾಗಿ ಕೈಗೆ ವರ್ಕುಂ: **ಪಂಪಭಾ,** ೮. ೮೩ ವ)

ಹೈಡಿಂಬ – [ನಾ] ಹಿಡಿಂಬನ ಮಗ, ಘಟೋತ್ಕಚ (ಇನ್ನುಮೊಳಂ ರಾವಣಂ ಎಂಬಿನಂ ನೆಗೞ್ದುದಾ ಹೈಡಿಂಬನಾಡಂಬರಂ: **ಪಂಪಭಾ,** ೧೨. ೧೦)

ಹೈಮಕ್ಷ್ಮಾಚಳೇಂದ್ರ – [ನಾ] ಹಿಮಾಲಯಪರ್ವತ (ಹೈಮಕ್ಷ್ಮಾಚಳೇಂದ್ರಂಬರೆಗಂ ಅಖಿಳಷಟ್ಖಂಡ ಭೂಭಾಗಮಂ .. .. ದಿಗ್ವಿಜಯದೊಳಗೆದು ಆನಂದಭೇರೀರವಂ ಘೂರ್ಣಿಸೆ: **ಆದಿಪು,** ೧೪. ೧೪೮)

ಹೈಮವತಕ್ಷೇತ್ರ – [ನಾ] [ಜೈನ] ಜಂಬೂದ್ವೀಪದ ಏಳು ಜನಪದಗಳಲ್ಲಿ, ಈ ಕ್ಷೇತ್ರದ ದಕ್ಷಿಣಕ್ಕೆ ಹಿಮವತ್ಪರ್ವತವೂ ಉತ್ತರಕ್ಕೆ ಮಹಾಹಿಮವತ್ಪರ್ವತವೂ ಪೂರ್ವಪಶ್ಚಿಮಸಮುದ್ರಗಳೂ ಇರುತ್ತವೆ; ಇದು ಜಘನ್ಯಭೋಗಭೂಮಿ ಒಂದು (ಆ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತೈರಾವತಗಳೆಂಬೇೞು ಜನಪದಂಗಳಿಂದಂ: **ಆದಿಪು,** ೧. ೪೮ ವ)

ಹೈಮಾಚಳ – [ನಾ] ಹಿಮವತ್ಪರ್ವತ (ಮದಿರೋನ್ಮತ್ತ ನಿಳಿಂಪ ಕಿಂಪುರುಷಕಾಂತಾರಬ್ಧಸಂಗೀತಂ ಒಪ್ಪಿದುದಲ್ತೆ ಸುರಸಿದ್ಧ ದಂಪತಿರತಿಶ್ರೀರಮ್ಯಹೈಮಾಚಳಂ: **ಪಂಪಭಾ,** ೭. ೭೨)

ಹೈಯಂಗವೀನ – [ನಾ] ಹಸುವಿನ ಬೆಣ್ಣೆಯಿಂದ ಆಗ ತಾನೆ ಕಾಯಿಸಿದ ತುಪ್ಪ (ಅತಿದೂರೋಚ್ಛ್ವಾಸವಿಕಾಸ ನಾಸಾಂಜಲಿಪುಟ ಪೀಯಮಾನ ದುಗ್ಧ ಹೈಯಂಗವೀನಮುಮಂ: **ಆದಿಪು,** ೧೧. ೨೬ ವ)

ಹೋತೃ – [ನಾ] ಹೋತಾರ, ಋಗ್ವೇದವನ್ನು ಹೇಳುವವನು (ಅಗ್ನೀಧ್ರ ಮೈತ್ರಾವರುಣ ಅಗ್ನಿಪರಿಚಾರಕ ಉದ್ಗಾತೃ ನೇತೃ ಹೋತೃ ಜಮದಗ್ನಿ ಆದಿಗಳಪ್ಪ ಷೋಡಶರ್ ಋತ್ವಿಜರ್ಕಳಿಂ: **ಪಂಪಭಾ,** ೬. ೩೩ ವ)

ಹೋಮಕುಂಡ – [ನಾ] ಯಜ್ಞದ ಬೆಂಕಿಯಿರುವ ಗುಂಡಿ (ಹೋಮಕುಂಡದಲ್ಲಿ ಧಗಧಗಿಸುವ ಜ್ವಾಲಾಮಾಲೆಗಳೊಳ್ .. .. ದೃಷ್ಟದ್ಯುಮ್ನನೆಂಬ ಮಗನುಮಂ .. .. ಪಡೆದಂ: **ಪಂಪಭಾ,** ೩. ೩೨ ವ)

ಹೋಮಭೂಮಿ – [ನಾ] ಯಜ್ಞಭೂಮಿ (ಮನಂ ಆರಾಧಿತ ಹೋಮಭೂಮಿ ಪಶುಗಳ್ ಕಾಮಾತುರರ್ ಬಂದ ಮಾವನಿತುಂ ಸ್ಥಾಪಿತಯೂಪಕೋಟಿ: **ಪಂಪಭಾ,** ೪. ೫೯)

ಹೋಮಾಗ್ನಿ – [ನಾ] ಯಜ್ಞದ ಬೆಂಕಿ (ಹೋಮಾಗ್ನಿಯಂ ಎೞಂಕೆಯ ಗಾಳಿಯಿಂ ನಂದಲೀಯದುರಿಪುವ ರಾಜಹಂಸೆಗಳುಮಂ ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಪ ಗೋಳಾಂಗೂಳಂಗಳುಮಂ: **ಪಂಪಭಾ,** ೧. ೧೧೫ ವ); (ಹ

ಹೋಮಾನಲ – [ನಾ] ಹೋಮದ ಬೆಂಕಿ (ನಿಟ್ಟಿಸೆ ಹೋಮಾನಲನೊಳ್ ಪುಟ್ಟಿದ ನಿನಗಕ್ಕ ಪರಕೆಯಾವುದೊ: **ಪಂಪಭಾ,** ೩. ೪೮)

ಹೋಯಜಬಾಪ್ – [ಅ] ಹೋ ಅಜ ಬಾಪ್, ಆಶ್ಚರ್ಯಮೆಚ್ಚಿಕೆಗಳ ಉದ್ಗಾರಗಳು ಮೊಸಳೆ (ಛಾಯಾಲಕ್ಷ್ಯಮನೊಡ್ಡಿಯುಂ ಆಯದ ನೀರೊಳಗೆ ತನ್ನನಡಸಿದ ನೆಗೞಂ ಬಾಯಟೆವಿನಂ ಇಸಿಸಿಯುಂ ಅರೆ ಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗೞ್ **ಪಂಪಭಾ,** ೨. ೬೦)

ಹ್ರಸ್ವ – [ಗು] ಕಿರಿದಾದ, ನೀಳವಲ್ಲದ (ಅನುಪೂರ್ವ ಧನುರಾಕರವಂಶನುಂ ಋಜುಪರಿಪೂರ್ಣಹ್ರಸ್ವಗ್ರೀವನುಂ ಮಹಾವ್ಯೂಢೋರಸ್ಕನುಂ: **ಆದಿಪು,** ೧೨. ೫೬ ವ)

ಹ್ರೀ – [ನಾ] [ಜೈನ] ಒಬ್ಬ ದೇವತೆ (ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಅಱುವರುಮಂ ಆತ್ಮೀಯ ಗುಣಗಣಮಣಿ ವಿಭೂಷಣಂಗಳಿಂ ಜಿನಜನನಿಯಂ ಅಲಂಕರಿಸಲುಂ .. .. ಸೌಧರ್ಮೇಂದ್ರಂ ಬೆಸಸುವುದುಂ: **ಆದಿಪು,** ೭. ೩ ವ)

ಱ

ಱಾಟಣ – [ನಾ] ನೀರನ್ನು ಮೇಲೆತ್ತುವ ಸಾಧನ, ರಾಟಾಳ (ನಿನಗೀ ಖಳಸಂಸ್ಕೃತಿಯೆಂಬುದೊಂದು ಱಾಟಣದೊಳಗಮ್ಮ ನೀಂ ಮೊಗಪೆಯಾಗದೆ ತಾಳ್ದಪವರ್ಗಮಾರ್ಗಮಂ: **ಆದಿಪು**, ೩. ೭೧)

ಱೋಡಾಡು – [ಕ್ರಿ] ಅಪಹಾಸ್ಯಮಾಡು (ಎನಗರಸಿಯಾಣೆ ನಿನ್ನೊಡನೆನಗೆ ಏಗೆಟ್ಟಪುದೆಂದು ಱೋಡಾಡಲ್: **ಪಂಪಭಾ**, ೮. ೬೮)

******